START

MICROFILMED
BY
NATIONAL ARCHIVES
OF INDIA

at the Karnataka
Stātē Archives
BANGALORE
1974

REEL NO

9

VRITTANTAPATRIKE

(IN KANNADA)

CONTINUED

ಜನಗಳು ಅಲೆಯುತ್ತಾರೆ —ಈ ಜುಲೈ ತಾ ೧೫ ನೆ ಗುರುವಾರ ರಾತ್ರಿ ತಂಜಾವೂರಿನಿಂದ ಬಂದಿದ್ದ ಸಂಗೀತ ವಿದ್ವಾಂಸರಾದ ಮ ವೇದಮೂರ್ತಿ ಶಾಸ್ತ್ರಿಗಳಿಂದ ಘನವಾದ ಸಂಗೀತವಾಯಿತು ಇಲ್ಲಿನ ವಾಸಸ್ಥರೂ, ಸರ್ಕಾರಿ ಉದ್ಯೋಗಸ್ಥರೂ, ಸ್ಕೂಲ್ ಮಾಸ್ಟರುಗಳೂ ಮೊದಲಾದ ಮಹನೀಯರೆಲ್ಲಾ ಸೇರಿ ಸಂಗೀತವನ್ನು ಕೇಳಿ ಸಂತೋಷಪಟ್ಟು, ಶಾಸ್ತ್ರಿಗಳಿಗೆ ತಮ್ಮ ಆನಂದವನ್ನು ಸೂಚಿಸಿದರು ಪೆನ್ಶನ್ ಸುಬೇದಾರ್ರವರ ಆಳು ನರಸಿಂಹನೆಂಬುವನು ೮ ೧೦ ದಿನಗಳ ಕೆಳಗೆ ಮೇಕೆಗಳಿಗೆ ಸೊಪ್ಪನ್ನು ತೀಳುವದಕ್ಕೆ ಬೀರುಗೊಂಡನ ಹಳ್ಳಿಯ ಬಳಿ ೧೫ ಅಡಿ ಎತ್ತರವಾದ ಬೇವಿನ ಮರಕ್ಕೆ ಹತ್ತಿ ಪವನ ತಪ್ಪಿ ಕೆಳಕ್ಕೆ ಬಿದ್ದನು ಆದರೆ ಅವನಿಗೆ ಅಷ್ಟೇನೂ ವಿಶೇಷವಾದ ಅಪಾಯ ಸಂಭವಿಸಲಿಲ್ಲ

ಹೆಗ್ಗಡದೇವನಕೋಟೆ —ಇಲ್ಲಿ ೭-೮ ದಿವಸಗಳಿಂದ ಮಳೆ ಹುಯ್ಯುತ್ತಿದೆ ರೈತರು ಬಿತ್ತುತ್ತಿದಾರೆ ಧಾರಣೆವಾಸಿ ಏಕರೀತಿಯಾಗಿದೆ ಈ ವಾರ ಸಂತೆಯಲ್ಲಿ ಸ್ಥಳದ ಅಕ್ಕಿ ೭ ಸೇರು, ಗುಂಟೂರು ಅಕ್ಕಿ ೬|| ಸೇರು, ರಾಗಿ ೧೬ ಸೇರು ಈ ರೀತಿ ಮಾರಲ್ಪಟ್ಟಿತು —ಈ ಊರಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮೆ|| ಡಿ ಅಣ್ಣಾಚಾರಾಯರಿಗೆ ಬಡ್ತಿಯ ಮೇಲೆ ಶ್ರೀನರಸೀಪುರಕ್ಕೆ ವರ್ಗವಾಗಿ ಹೊರಟುಹೋದರು ಇವರು ಜನಗಳಲ್ಲಿ ವಿಶ್ವಾಸವುಳ್ಳವರಾಗಿ ಇದ್ದರು ಈಗ ಬಂದಿರತಕ್ಕವರೂ ಅವರಂತೆ ನಡಕೊಳ್ಳುವರೆಂದು ನಂಬದೇನೆ ಅವರ ಸ್ನೇಹಿತರೂ ಸೇರಿ ಅವರಿಗೋಸ್ಕರ ಒಂದು ಔತನವನ್ನು ಮಾಡಿ ಸಂತೋಷಪಡಿಸಿದರು —ಇಲ್ಲಿನ ಡಾಕ್ಟರು ಜನಗಳಲ್ಲಿ ಅಭಿಮಾನವುಳ್ಳವರಾಗಿಯೂ, ಔಷಧಕ್ಕೋಸ್ಕರ ಬಂದ ರೋಗಿಗಳಿಗೆ ಉಪಚಾರದಿಂದ ಒಳ್ಳೇ ಔಷಧಿ ಕೊಟ್ಟು ಕಳುಹಿಸುತ್ತಾರೆ ಇಲ್ಲಿನ ಮುನಿಸಿಪಾಲಿಟಿ ವಿಷಯ ಅಷ್ಟು ತೃಪ್ತಿಕರವಾಗಿಲ್ಲ ಅನೇಕರು ತಮ್ಮ ಮಕ್ಕಳನ್ನು ಮನೆಯ ಮುಂದೆ ಹೇಸಿಕೆ ಮಾಡಿಸುವದರಿಂದಲೂ ಮತ್ತು ಗೊಬ್ಬರವನ್ನು ಮನೆಯ ಮುಂದೆಯೇ ಹಾಕುವುದರಿಂದಲೂ ಬೀದಿಯಲ್ಲಿ ತಿರುಗಾಡುವದು ಅಸಹ್ಯವಾಗಿದೆ ಮತ್ತು ಹೀಗೆ ಮಾಡುವುದರಿಂದ ಊರಿನಲ್ಲಿ ಚಾಡ್ಯ ಹರಡಲು ಸಂಶಯವಿಲ್ಲ ಊರಿನ ಸಾಲು ನಿವೇಶನವನ್ನು ಮುಳ್ಳುಕಳ್ಳೀ ಮುಂತಾದ ಕಾಡು ಗಿಡಗಳು ಆವರಿಸಿಕೊಂಡು ಹಾವು ಮುಂತಾದ ದುಷ್ಟ ಜಂತುಗಳಿಗೆ ಆಸರೆಯಾಗಿದೆ ಇದರ ಹತ್ತಿರವೇ ಮನೆಗಳನ್ನು ಕಟ್ಟಿರುವುದರಿಂದ ಈ ದುಷ್ಟ ಜಂತುಗಳು ಅನೇಕ ವೇಳೆ ಮನೆಗಳಿಗೆ ನುಗ್ಗಿ ಜನಗಳಿಗೆ ಭಯವುಂಟುಮಾಡಿರುವುದನ್ನು ಅನೇಕರು ಕೇಳಿರಬಹುದು ಆದದ್ದರಿಂದ ನಮ್ಮ ಅಮಲ್ದಾರರೂ, ಮುನಿಸಿಪಲ್ ಮೆಂಬರುಗಳೂ ಇದಕ್ಕೆ ಗಮನಕೊಡುವರೆಂದು ನಂಬದೇನೆ

ಚಿತ್ರದುರ್ಗ —ಇಲ್ಲಿನ ಬ್ರಾಂಚ್ ಸ್ಕೂಲಿನಲ್ಲಿ ಕಳೆದ ತಿಂಗಳು ಒಬ್ಬ ಹುಡುಗನು ಮಹಡಿಯ ಮೇಲಿನಿಂದ ಬಿದ್ದು ಹಲ್ಲು ಮುರಿದುಹೋದವೆಂದು ತಿಳಿಸಿತ್ತಷ್ಟೆ ಈಚೆಗೆ ಅಂದರೆ ಕಳೆದ ವಾರ ಅದೇ ಸ್ಕೂಲಿನಲ್ಲಿ ಟೀಚರು ಒಬ್ಬ ಹುಡುಗನನ್ನು ತಲೆಯ ಮೇಲೆ ಚಿತ್ತದ ಟುಡದಿಂದ ಹೊಡೆದದ್ದರಿಂದ ಗಾಯವಾಗಿ ರಕ್ತ ಸುರಿಯಿತೆಂದೂ, ಆ ಹುಡುಗನ ತಂದೆ ತಾಯಿಗಳು ಬಂದು ಜಗಳ ಮಾಡಿದರೆಂದೂ, ಗಲಾಟೆಗೆ ಕಾರಣವಾಯಿತೆಂದೂ ತಿಳಿದು ಬರುತ್ತ ತಂದೆ ತಾಯಿಗಳು ಹುಡುಗರನ್ನು ಈ ಸ್ಕೂಲಿಗೆ ಕಳುಹಿಸಲಿಕ್ಕೆ ಮನಸ್ಸಿಲ್ಲದೆ ಬೇರೆ ಕಡೆ ಕಳುಹಿಸುವದಕ್ಕೆ ಉಪಕ್ರಮಿಸುತ್ತಿದಾರೆಂದು ತಿಳಿದು ಬಂದಿದೆ ಹುಡುಗರು ಮರವಲ್ಲಿರುವಾಗ ಟೀಚರೇ ತಂದೆತಾಯಿಗಳ ಹಾಗೆ ಅವರನ್ನು ಪರಾಮರಿಸಬೇಕಲ್ಲವೇ ? ಇದಕ್ಕೆ ಬದಲಾಗಿ ಅವರನ್ನು ಹೊಡೆದು ಒಡಕು ತೊಂದರೆ ಮಾಡುವದು ಶುದ್ಧ ಅವಿವೇಕವಾಗಿದೆ ಮುಖ್ಯವಾಗಿ ಚಿಕ್ಕ ಹುಡುಗರನ್ನು ಓದಿಸಲಿಕ್ಕೆ ಅನುಭವಿಗಳಾದ ಸಹನವಿಲ್ಲದ ಯೌವನಸ್ಥರನ್ನು ಟೀಚರಾಗಿ ನೇಮಿಸುವದರಿಂದ ಇಂಥಾ ಅಸಂಭವಗಳಾಗುತ್ತವೆ ಅನುಭವಸ್ಥರಾದ ಸಹನಗುಣವುಳ್ಳ ಒಬ್ಬ ಟೀಚರನ್ನಾದರೂ ಇಲ್ಲಿ ನೇಮಿಸುವದು ಅವಶ್ಯಕವಾಗಿದೆ —ಇಲ್ಲಿನ ನರಸಿಂಹಯ್ಯನವರೆಂಬುವರು ಟೀಚರಾಗಿದ್ದು ತಮ್ಮ ಸರ್ವೀಸನ್ನು ಮುಗಿಸಿ ಪೆನ್ಶನ್‌ಗೆ ಶಿಫಾರಸಾಗಿ ಇಲ್ಲಿಗೆ ಬಂದು ಒಂದು ವರುಷವಾಯಿತು ಇವರು ಕೆಲಸದಿಂದ ನಿವೃತ್ತರಾದಮೇಲೆ ೧೯೦೮ ನೇ ಜೂಲೈನಲ್ಲಿ ಅನಂತರ ಇವರು ಕೈಯಿಂದ ಛಾರ್ಜ ಕೊಟ್ಟುಕೊಂಡು ಬೆಂಗಳೂರಿಗೆ ಹೋಗಿ ವಾರಕೆ ತಿಂಗಳಲ್ಲಿಯೇ ಹಿಬ್ಬಿಟ್ಟನ ಗುರುತು ಕೊಟ್ಟು ಬಂದಿದ್ದಾಗ್ಯೂ ಈಗ ಪುನಃ ದಾವಣಗೆರೆ ಸ್ಕೂಲು ಹೆಡ್ಮಾಸ್ಟರ ಮುಖಾಂತರ ಹೆಬ್ಬೆಟ್ಟಿನ ಗುರುತನ್ನು ಕೊಡಬೇಕೆಂದು ಕೇಳುವದಾಗಿಯೂ ಹೇಳಿಕೊಳ್ಳುತ್ತಾರೆ ಈ ತಿಂಗಳು ಈ ವರೆಗೂ ಅವರು ಪೆನ್ಶನ್ ಮುಖ ನೋಡಲಿಕ್ಕೆ ಸಾಧ್ಯವಾಗಲಿಲ್ಲ ಇಂಥಾ ವಿಷಯಕ್ಕೆ ಅಧಿಕಾರಿಗಳು ಬೇಗ ಗಮನ ಕೊಡ ಬೇಡವೇ ?

ಚೆನ್ನರಾಯಪಟ್ಟಣ ತಾ|| ಬೇಳೂರು —ಕಳೆದ ವಾರ ಈ ಪ್ರಾಂತ್ಯಕ್ಕೆಲ್ಲಾ ಸಾಧಾರಣ ಮಳೆ ಬಿತ್ತು ಇದರಿಂದ ವ್ಯವಸಾಯಕ್ಕೆ ಏನೂ ಪ್ರಯೋಜನವಿಲ್ಲವೆಂದು ರೈತರು ಹೇಳುತ್ತಾರೆ ಮತ್ತು ಕಳೆದ ವಾರ ತ್ರಿಂಕಲೂ ಈ ವಾರ ಧಾರಣೆಯು ಸ್ವಲ್ಪ ಅಗ್ಗವಾಗಿದೆ ಹ್ಯಾಗೆಂದರೆ ಅಕ್ಕಿ ೭ ಸೇರಿನಿಂದ ೭|| ಗೂ ರಾಗಿ ೧೩ ಯಿಂದ ೧೧ ಸೇರಿಗೂ ಬಂದಿದೆ ಇದನ್ನು ಅನೇಕ ಬಡಬಗ್ಗರು ನೋಡಿ ಬಹಳ ಸಂತೋಷ ಪಡುತ್ತಾರೆ ಆದರೆ ಪಿಟ್ಟಿಸೇರುಗಳ ವಿಷಯದಲ್ಲಿ ಗುಣುಗುಟ್ಟುವರು ಇನ್ನು ಮುಂದೆ ವರ್ತಕರು ಇದಕ್ಕೆ ಅವಕಾಶ ಕೊಡದೆ ಇದ್ದರೆ ಅನೇಕ ಜಗಳಗಳಿಗೆ ತುಂಬಾ ಉಪಕಾರಿಗಳಾಗುವರೆಂಬುದರಲ್ಲಿ ಏನೂ ಅನುಮಾನವಿಲ್ಲ —೧೬ನೇ ತಾ ಈ ಊರಿನ ಸಂತೆಯಲ್ಲಿ ಷೇಕ್ ಮಹಮ್ಮದ್ ಸಾಹೇಬರಿಂದ ಒಂದು ಮೇಕೆ ಹೋತವು ಪ್ರದರ್ಶನ ಮಾಡಲ್ಪಟ್ಟಿತು ಇದು ಆಕಾರದಲ್ಲಿ ಹೋತನ ಸ್ವಭಾವಕ್ಕೆ ಏನೂ ವ್ಯತ್ಯಾಸವಿಲ್ಲ ಆದರೆ ಹೆಣ್ಣು ಮೇಕೆಯ ಹಾಲು ಕೊಡುವ ರೀತಿಯಲ್ಲಿ ಇದು ಸಹ ಹಿಂಡಿದರೆ ಹಾಲನ್ನು ಕೊಡುತ್ತಾ ಇದೆ ಈ ಸಂಗತಿಯು ಇದನ್ನು ನೋಡಿದವರಲ್ಲೆಲ್ಲಾ ತುಂಬಾ ಆಶ್ಚರ್ಯವನ್ನುಂಟುಮಾಡಿದೆ —೧೯ ನೆ ತಾ ರಾತ್ರಿ ಈ ಊರಿಗೆ ೪|| ಮೈಲಿ ದೂರದಲ್ಲಿರುವ ಜಯಮಂಗಲವೆಂಬ ಗ್ರಾಮದಲ್ಲಿ ಸಂಜನ ಕಳ್ಳರು ನುಗ್ಗಿ ತುಂಬಾ ನಷ್ಟವನ್ನು ಮಾಡಿದ ಸಂಗತಿಯು ಇಲ್ಲಿನ ಸ್ಟೇಷನ್‌ಗೆ ರಿಪೋರ್ಟು ಆದನಂತರ ೧೫ನೇ ತಾ ಜಮಾದಾರರೂ ದಫೇದಾರರೂ ಮತ್ತು ೪ ಮಂದಿ ಪೋಲೀಸಿನವರೂ ಹೋಗಿ ತನಿಖೆ ಮಾಡಲಾಗಿ ಪಿಳ್ಳ ಗೋವಿಂದಪ್ಪನೆಂಬುವವರ ಮನೆಯವರನ್ನು ಮತ್ತು ಇವರ ಮನೆಯ ಪಕ್ಕದಲ್ಲಿರುವ ಕೆಂಚಾರ ಮುನಿಸ್ವಾಮಪ್ಪನೆಂಬುವವನು ಇವರ ಸಹಾಯಾರ್ಥವಾಗಿ ಬಂದಿದ್ದ ಕಾರಣ ಅವರಿಗೆಲ್ಲಾ ಹೆಚ್ಚಾಗಿ ಪೆಟ್ಟುಗಳು ತಿಂದಿರುವದು ತಿಳಿದು ಬಂದಿದೆ ಈಗ ಈ ಗಾಯಪಟ್ಟಿರುವವರು ಇಲ್ಲಿರುವ ಡಾಕ್ಟರಿಂದ ಚಿಕಿತ್ಸೆಯನ್ನು ಹೊಂದುತ್ತಾ ಇದಾರೆ ಆದರೆ ಕಳ್ಳರು ಪತ್ತೆ ಆಗಲಿಲ್ಲ ಈ ಸಂಗತಿಯನ್ನೆಲ್ಲಾ ಪೋಲೀಸ್ ಸೂಪರಿಂಟೆಂಡೆಂಟರವರು ನೋಡಿಕೊಂಡು ಹೋಗಿದಾರೆ ಪತ್ತೆ ತರದಾದಿನ ವಿಷಯ ಮುಂದೆ ತಿಳಿಯತಕ್ಕದಾಗಿದೆ

ಗುಂಡ್ಲುಪೇಟೆ ತಾ. ಬೊಮ್ಮಲಾಪುರ —ಈ ಗ್ರಾಮಕ್ಕೆ ೨ ತಿಂಗಳಿನಿಂದ ಲಾಗಾಯ್ತು ಮಳೆಯ ಸ್ವಪ್ನದಲ್ಲಿ ಕೂಡ ವರ್ಷಿಸದೆ ಜೋಳ ವಗೈರೆಗಳು ಒಣಗುತ್ತಾ ಇದ್ದು ವ್ಯವಸಾಯಗಾರರು ಮಳೆಯನ್ನೇ ಎದುರು ನೋಡುತ್ತಾ ಚಿಂತೆ ಪಡುತ್ತಾ ಇದ್ದರು ಹ ಪರು ೧೨ ೧೫ ದಿವಸದ ಲಾಗಾಯ್ತು ತೊತ್ತು ಮಳೆ ಹಾಕುವ ಹಾಗೆ ಕಾಣು ಮೋಡಗಳು ಕವಿದು ಕಾಣುತ್ತಾ ಇದ್ದು ಶಾ ಗಾಳಿ ಬೀಸುತ್ತಾ ಇರುವ ಮಧ್ಯ ಸವನು ನ ಗಟೆ ಮಳೆಯಾಗಿ ವ್ಯವಸಾಯದ ಕಾರ್ಯ ಬೀಳ್ಳ ವಗೈರೆ ಸರುಗಳಲ್ಲಾ ಸ್ವಲ್ಪ ನಟ್ಟಗೆ ಆಗಾಗಿರುತ್ತೆ — ಒರಗೆ ತರು ಅನ್ನಕ್ಕಾಗಿ ಪಡುವ ಶ್ರಮವನ್ನು ಹೇಳಲಶಕ್ಯವಾಗಿದೆ ಇತರ ತಾಲ್ಲೋಕುಗಳಲ್ಲಿ ನಡೆಯುವಂತೆ ಈ ತಾಲ್ಲೋಕಿನಲ್ಲಿ ಜನಗಳಿಗೆ ಸರ್ಕಾರದವರು ಯಾವ ವಿಧವಾದ ಕಾಮಗಾರಿ ಪ್ರಾರಂಭಮಾಡದೆ ಇರುವದು ... ಈ ಗ್ರಾಮಕ್ಕೆ ೮ ೯ ಮೈಲಿ ಫಾಸಲೆಯಲ್ಲಿ ಇರುವ ತೆರಕಣಾಂಬಿಯಲ್ಲಿ ಪ್ರತಿ ಗುರುವಾರ ಸಂತೆ ಕಟ್ಟುತ್ತದೆ ಇಲ್ಲಿ ರಾಗಿ ೧೩—೧೪ ಸೇರು, ಜೋಳ ೧೧—೧೧|| ಸೇರು, ಅಕ್ಕಿ ೬ ಸೇರು ಈ ರೀತಿ ಮಾರುತ್ತಿರುವುದಲ್ಲದೆ ವ್ಯಾಪಾರಸ್ಥರು ದಿನಸಿಗಳಿಗೆ ನೀರು ಬೆರಸಿ ಹೆಚ್ಚಾಗುವಂತೆ ಮಾಡಿ ಮಾರುತ್ತಾರೆ ಅಲ್ಲದೆ ವಾರಕಕ್ಕೆ ಸೇರು ಪ್ಲೇಲ್ ಸೇರಿಗೆ ಸರಿಯಾಗಿಲ್ಲ ಈ ಕಾಮಾಲದಲ್ಲಿ ಹೀಗೆ ಬಡಜನಗಳಿಗೆ ಉಪಕಾಸು ಮಾಡತಕ್ಕ ವ್ಯಾಪಾರಸ್ಥರನ್ನು ಪೋಲೀಸ್ ಇನ್ಸ್‌ಪೆಕ್ಟರು ಪ್ಲೇಲ್ ಸೇರಿನಿಂದ ಅಳೆಯುವಂತೆಯೂ ನೀರು ಬೆರಸದಂತೆಯೂ ತಾಕೀತು ಮಾಡಿ ಬಡಜನಗಳು ಪಡುವ ನಷ್ಟವನ್ನು ತಪ್ಪಿಸಿಯಾರೆಂದು ನಂಬಿದೇನೆ —ಈ ಗ್ರಾಮದಲ್ಲಿ ದೊಡ್ಡ ರೋಗವು ದನಕರುಗಳಿಗೆ ಪ್ರಾಪ್ತವಾಗಿ ಸುಮಾರು ೬ ೭ ತಿಂಗಳುಗಳಿಂದ ಲಾಗಾಯ್ತು ಈ ತಿಂಗಳ ೩ನೇ ತಾ ವರೆಗೆ ದಿನಕ್ಕೆ ೬ ೭ ರ ಪ್ರಕಾರ ಮೃತಪಡುತ್ತಾ ಇದ್ದು ಮತ್ತೆ ೧೦—೧೫ ದಿವಸಗಳು ಸ್ವಲ್ಪ ಸಮ್ಮಗೆ ಕಮ್ಮಿಯಾಗಿತ್ತು ಈಗ ೩—೪ ದಿವಸದಿಂದ ಪುನಃ ೩—೪ ರ ಪ್ರಕಾರ ಸಾಯುತ್ತಾ ಇವೆ ಅಲ್ಲದೆ ಈ ಗ್ರಾಮಕ್ಕೆ ಸಮೀಪವಾದ ಅಂಚಹಳ್ಳಿ, ಬಾಚಹಳ್ಳಿ, ಕೆಬ್ಬೇಪುರ, ಚೌಡಹಳ್ಳಿ, ಕೆಂಡಗಣ್ಣೆ ವಗೈರೆ ಗ್ರಾಮಗಳಲ್ಲಿಯೂ ಜಾನ್ವಾರುಗಳಿಗೆ ದೊಡ್ಡ ರೋಗ ಪ್ರಾಪ್ತವಾಗಿ ಬೆಲೆಯುಳ್ಳ ಎತ್ತುಗಳೂ ಎಮ್ಮೆಗಳೂ ಮೃತಪಡುತ್ತಾ ಇವೆ ಈ ತಾಲ್ಲೋಕಿಗೆ ಒಬ್ಬ ಪಶುವೈದ್ಯರನ್ನು ಸರ್ಕಾರದವರು ಏರ್ಪಡಿಸದೆ ಇರುವುದು ಶೋಚನೀಯವಾಗುತ್ತೆ —ಇಲ್ಲಿ ರಾತ್ರಿ ಕಾವಲು ನಡೆಯುವದಿಲ್ಲ ಇದಕ್ಕೆ ಇನ್ಸ್‌ಪೆಕ್ಟರು ಗಮನ ಕೊಡದೆ ಇರಲಾರರೆಂದು ನಂಬಿದೇನೆ ಗೊಬ್ಬರ ಹುಲ್ಲು ಮುಂತಾದದ್ದನ್ನು ಗ್ರಾಮದ ಮಧ್ಯೆ ಹಾಕುವುದರಿಂದ ಕೊಳಕು ದುರ್ನಾತನೆ ಉಂಟಾಗಿದೆ ಇದರಿಂದ ಅಂಟುಜಾಡ್ಯ ಪ್ರಾಪ್ತವಾಗಲು ಯಾವ ಸಂದೇಹವೂ ಇಲ್ಲ —ಇಲ್ಲಿಗೆ ಸಮೀಪವಾಗಿರುವ ಮ ಲಾಪುರ, ಪಡಗೂರು ಗುಂಡ್ಲುಪೇಟೆ ವಗೈರೆಗಳಲ್ಲಿ ಪ್ಲೇಗು ಪ್ರಾಪ್ತವಾಗಿದೆ ಈ ದಿವಸಗಳಲ್ಲಿ ವರ್ತಮಾನವಿತ್ತು ಹಾಲಿ ಗುಂಡ್ಲುಪೇಟೆಯಲ್ಲಿ ಪ್ಲೇಗು ರೋಗವು ಜಾಸ್ತಿಯಾಗಿ ದಿನಕ್ಕೆ ೩—೪ ಜನರ ಪ್ರಕಾರ ಮೃತಪಡುತ್ತಾ ಇರುವುದಲ್ಲದೆ ಕೆಲವರು ಮನೆ ಬಿಟ್ಟು ಹಾಕಿ ಕೇವಲ ಊರಲ್ಲೇ ಇರುತ್ತಾರೆ

ವಿದೇಶ ವರ್ತಮಾನಗಳು

ಆಫ್ರಿಕಕ್ಕೆ ಸೇರಿದ ಕಾಂಗೋ ಸೀಮೆಯಲ್ಲಿ ನಿದ್ರಾರೋಗವು ಹರಡಿಕೊಳ್ಳುತ್ತಿದೆ ಎಂದೂ ಅದನ್ನು ನಿಲ್ಲಿಸಲು ನಾನಾ ಮಾಡುವುದಕ್ಕೆ ವೈದ್ಯರು ನಡಿಸಿದ ಕಾರ್ಯಗಳು ಪ್ರಯೋಜನವಾಗದೆ ಹೋಗಿದೆ ಎಂದೂ ತಿಳಿದುಬಂದಿದೆ

ಡೆನ್ಮಾರ್ಕ್ ರಾಜ್ಯದ ದೊರೆ ಮತ್ತು ರಾಣಿಯವರೂ ಸ್ವೀಡನ್ ಸಹಿತ ರಷ್ಯಾ ರಾಜ್ಯಕ್ಕೆ ದಯಮಾಡಿದರು ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಜಾರ್ ಚಕ್ರವರ್ತಿಯವರ ಅತಿಥಿಗಳಾಗಿ ವಿಶೇಷ ಆದರದೊಡನೆಯೂ ಮರ್ಯಾದೆಯೊಡನೆಯೂ ಎದುರುಗೊಂಡರು ಕಳೆದ ಶನಿವಾರ ರಾತ್ರಿ ರಾಜದಂಪತಿಗಳಿಗೆ ದಿವ್ಯವಾದ ಔತನವಾಯಿತು

ಅಮೇರಿಕದಲ್ಲಿ ಪ್ರೊಫೆಸರ್ ನ್ಯೂಕಾಂಬ್ ಎಂಬ ಪ್ರಖ್ಯಾತ ಜ್ಯೋತಿಶ್ಶಾಸ್ತ್ರಜ್ಞ ಸೈಮನ್ ನ್ಯೂಕಾಂಬ್ ಎಂಬವರು ಕಳೆದ ವಾರ ಕಾಲವಾದರೆಂದು ತಂತಿವರ್ತಮಾನ ಬಂದಿದೆ ಇವರಿಗೆ ೭೪ ವರುಷ ವಯಸ್ಸಾಗಿತ್ತು ಇವರು ಜ್ಯೋತಿಶ್ಶಾಸ್ತ್ರದಲ್ಲಿ ಅನೇಕ ಶೋಧನೆಗಳನ್ನು ಮಾಡಿ ಕೆಲವು ಗ್ರಂಥಗಳನ್ನು ಬರೆದು ಪ್ರಕಟಿಸಿ, ಪ್ರಪಂಚದಲ್ಲೆಲ್ಲಾ ಹೆಸರುವಾಸಿಗೆ ಬಂದಿದ್ದರು

ವಿಲಾಯತಿ ರಾಜ್ಯದಲ್ಲಿ ಎಲ್ಲಾ ಗಂಡುಹುಡುಗರಿಗೂ ಸ್ವಂತದ ಇಲಾಖೆಯ ಕಸರತ್ತುಗಳನ್ನು ಕಲಿಸಬೇಕೆಂದು ಸ್ವಿಸ್ವಾಧಿಪತ್ಯವಾದ ಆರ್ಲ್ ರಾಬರ್ಟ್ಸ್‌ರವರು ಅಭಿಪ್ರಾಯಪಟ್ಟು ಈ ವಿಚಾರಕ್ಕೆ ಒಂದು ಕಾನೂನು ಆಗಬೇಕೆಂದು ಚರ್ಚೆಮಾಡಿದರು ಹೌಸ್ ಆಫ್ ಲಾರ್ಡ್ಸ್ ಪಾರ್ಲಿಮೆಂಟಿನಲ್ಲಿ ಈ ವಿಷಯವು ಚರ್ಚೆಯಾಗಿ, ಇಂಥಾ ಬಲಾತ್ಕಾರದ ಕಾನೂನು ಅವಶ್ಯವಿಲ್ಲವೆಂದು ತೀರ್ಮಾನ ಮಾಡಿರುತ್ತಾರೆ

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾಗಿದ್ದ ಮಿ|| ರೂಸ್‌ವೆಲ್ಟ್‌ಯವರು ತಮ್ಮ ಆಳ್ವಿಕೆಯಲ್ಲಿ ಅಲ್ಲಿನ ಅನೇಕ ಸ್ವದೇಶಿಗಳಾದ ನೀಗ್ರೋ ಜನರನ್ನು ದೊಡ್ಡ ದೊಡ್ಡ ಅಧಿಕಾರಗಳಿಗೆ ನೇಮಕ ಮಾಡಿದ್ದರು ಈಗ ಪ್ರೆಸಿಡೆಂಟರಾಗಿರುವ ಮಿ ಟಾಫ್ಟ್ ಯವರು ಕೆಲವರ ಪ್ರತಿಭಟನೆಯಿಂದ ಅಂಥಾ ೧೫೦ ಮಂದಿ ನೀಗ್ರೋ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿರುತ್ತಾರೆ ಇಲ್ಲವೇ ಅವರಿಗೆ ಪೆನ್ಶನ್ ಕೊಟ್ಟು ಕೆಲಸದಿಂದ ತೆಗೆದುಬಿಟ್ಟಿದಾರೆ

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕಳೆದ ವಾರ ಬೈಸಿಕಲ್‌ಗಳ ಜೂಜು ನಡೆಯಿತು ಸಾವಿರಾರು ಜನರು ಜೂಜಿನ ಜೋರೆಯನ್ನು ನೋಡುತ್ತಿದ್ದರು ಅಕಸ್ಮಾತ್ತಾಗಿ ಒಂದು ಮೋಟಾರ್ ಗಾಡಿಯು ಬಹು ವೇಗವಾಗಿ ಗುಂಪಿನೊಳಕ್ಕೆ ನುಗ್ಗಿ ಮಹಾ ಶಬ್ದದೊಡನೆ ಒಡೆದುಹೋಯಿತು ಜೋಕೆಯ ಚೂರುಗಳು ನೋಟಕರ ಮೇಲೆಲ್ಲಾ ಮಳೆಗರೆದಂತೆ ಸುರಿಯಿತು ಸುಮಾರು ೩೦ ಜನರ ನೌಕಾದ ಏಟುಗಳು ಹತ್ತಿ ಕೊಂಡವು ಅನೇಕಮಂದಿ ನೋಟಕರು ಗಾಬರಿಬಿದ್ದು ಹಾರಿ ಬೈಸಿಕಲ್ ಓಡುತ್ತಿದ್ದವರ ಮಧ್ಯೆ ಬಿದ್ದು ಬೈಸಿಕಲ್‌ಗಳ ಕೆಳಗೆ ಸಿಕ್ಕಿಹೋದರು ಬೈಸಿಕಲ್ ಮೇಲೆ ಇದ್ದವರು ಕೆಳಕ್ಕೆ ದೊಬ್ಬಲ್ಪಟ್ಟು ಗಾಯಗೊಂಡವು ನಾಲ್ಕು ಮಂದಿ ಬಟ್ಟೆ ಪತ್ತೆಕೊಂಡು ಉರವು ಸತ್ತುಹೋದರು ಇತರರಿಗೆ ಮೈಸುಟ್ಟು ಗಾಯಗಳಾಗಿ

ಫ್ರೆಂಚ್ ರಾಜ್ಯದ ಯುವರಾಜನು ಪೆರಿಸಿಯವರ ಸಮ್ಮತಿಯನ್ನು ಪಡೆದು ಡ್ಯೂಕ್ ಆಫ್ ಓರ್ಲಿಯನ್ಸ್ ಎಂಬ ಹೆಸರನ್ನು ಪಡೆದು ... ಮಾಡಿಕೊಂಡರು ಪೋರ್ಚುಗಲ್ ... ಯುವರಾಜ ಪದವಿಯನ್ನು ಕಿತ್ತುಕೊಂಡರೆಂದೂ, ಸ್ಪೇನ್‌ದಲ್ಲಿ ದಂಗೆ ಹುಟ್ಟಿಸುವುದನ್ನು ತಪ್ಪಿಸಿ ಬಿಟ್ಟರೆಂದೂ, ಆ ಕೆಲಸವನ್ನು ಕೋರ್ಟಿಗೆ ಕಳುಹಿಸಿ ವಿಚಾರಣೆ ಮಾಡಿಸಬಹುದೆಂದು ತಂತಿವರ್ತಮಾನ ಬಂದಿದೆ ಇದು ನಿಜವಾಗಿಯೇ ಎಂಬುದು ಬಹಳ ಸಂದೇಹ

ಗ್ರೀಸ್ ರಾಜ್ಯಕ್ಕೆ ಸೇರಿದ ಎಲಿಸ್ ಎಂಬ ಅಧಿಪತ್ಯದಲ್ಲಿ ಕಳೆದ ವಾರ ಭೂಕಂಪವು ಪ್ರಾಪ್ತವಾಯಿತು ಹಾವಾರಿ ಎಂಬ ಗ್ರಾಮದಲ್ಲಿ ೮೦೦ ಮನೆಗಳು ನಾಶಹೊಂದಿದವು ಇನ್ನೂ ಹನ್ನೆರಡು ಗ್ರಾಮಗಳಲ್ಲಿ ಬಹಳ ಕಷ್ಟ ನಷ್ಟಗಳುಂಟಾಗಿರುತ್ತವೆ ಪ್ರಾರಂಭದಲ್ಲಿ ಈ ಪ್ರದೇಶವು ಪಾಳುಬಿದ್ದಿದೆ ೩೦ ಜನರು ಮೃತಪಟ್ಟರೆಂದು ಮೊದಲು ತಂತಿ ವರ್ತಮಾನ ಬಂದಿತ್ತು ಈಚೆಗೆ ಈ ಭೂಕಂಪದ ದೆಸೆಯಿಂದ ಗಾಯಪಟ್ಟವರೂ ಪ್ರಾಣ ಕಳೆದುಕೊಂಡವರೂ ೧೦೬ ಮಂದಿ ಎಂದು ತಿಳಿದುಬಂದಿದೆ

ಹಿಂದೆ ಈ ರಾಜ್ಯದ ವೈಸ್‌ರಾಯಿಯವರಾಗಿದ್ದು ಒಬ್ಬ ಪೈದಿಯಿಂದ ಕೊಲ್ಲಲ್ಪಟ್ಟ ಲಾರ್ಡ್ ಮೇಯೋ ಪ್ರಭುಗಳ ಪತ್ನೀಯರಿಗೆ ಇಂಗ್ಲೆಂಡ್ ಗವರ್ಮೆಂಟಿನವರು ಪೆನ್ಶನ್ ದ್ರವ್ಯವನ್ನು ಕೊಟ್ಟು ಸಹಾಯ ಮಾಡಿದಂತೆ ಈಗಲೂ ಸರ್ ವಿಲ್ಲಿಯಂ ಕರ್ಜನ್ ವೈಲಿಯವರ ಪತ್ನೀಯವರಿಗೆ ಪರಿಹಾರ ದ್ರವ್ಯವನ್ನು ಕೊಡಬೇಕೆಂದು ಪಾರ್ಲಿಮೆಂಟಿನಲ್ಲಿ ಒಬ್ಬ ಮೆಂಬರ ಸೂಚಿಸಿದರು ಈ ವಿಚಾರವನ್ನು ಗವರ್ಮೆಂಟಿನವರು ಆಲೋಚನೆ ಮಾಡುತ್ತಾರೆಂದು ಸರ್ಕಾರಿ ತರಫಿನ ಮೆಂಬರು ತಿಳಿಸುತ್ತಾರೆ

ವಿಲಾಯತಿ ಪಾರ್ಲಿಮೆಂಟ್ ಮೆಂಬರಾದ ಮಿ|| ಕ್ರೆಸ್ವೆಲ್ ಎಂಬವರ ಮೇಲೆ ಮಿ ಕೀರ್ ಹಾರ್ಡಿ ಎಂಬ ಇನ್ನೊಬ್ಬ ಮೆಂಬರು ಮಾನನಷ್ಟಕ್ಕೆ ದಾವಾ ತಂದಿರುತ್ತಾರೆ ಮಿ ಕೀರ್ ಹಾರ್ಡಿಯವರು ಹಿಂದುಸ್ಥಾನದಲ್ಲಿ ಸಂಚಾರ ಮಾಡಿದಾಗ ಅವರು ರಾಜದ್ರೋಹ ಸಂಬಂಧವಾದ ಮಾತುಗಳನ್ನಾಡಿ ಅಲ್ಲಿನ ಜನರಿಗೆ ಪ್ರೋತ್ಸಾಹಕೊಟ್ಟದ್ದರಿಂದ ಸರ್ ವಿಲ್ಲಿಯಂ ಕರ್ಜನ್ ವೈಲಿಯವರು ಕೊಲ್ಲಲ್ಪಟ್ಟರೆಂಬುದಾಗಿ ಮಿ|| ಕ್ರೆಸ್ವೆಲ್ ಯವರು ಉಪನ್ಯಾಸಮಾಡಿದ ಹಾಗೆಯೂ, ಇದು ಎಲ್ಲರ ಪತ್ರಿಕೆಗಳಲ್ಲಿ ಪ್ರಕಟವಾದ ಕಾರಣ ಈ ರೀತಿ ತಮ್ಮ ಮೇಲೆ ದೋಷಾರೋಪಣೆ ಮಾಡಿದ್ದಕ್ಕಾಗಿ ಅದರಿಂದ ತನಗೆ ನಷ್ಟವಾಗಿದೆ ಎಂದೂ ಮಿ ಕೀರ್ ಹಾರ್ಡಿಯವರು ದಾವಾ ತಂದಿದಾರೆ

ರಷ್ಯಾ ರಾಜ್ಯದ ಚಕ್ರವರ್ತಿ ಜಾರ್‌ರವರು ಫ್ರಾನ್ಸ್ ರಾಜ್ಯದಲ್ಲಿ ದೇಶಸಂಚಾರ ಮಾಡುವದಕ್ಕಾಗಿ ಇರುವ ಸಂಗತಿಯಲ್ಲಿ ಸ್ಪೆಟ್ ಕೌನ್ಸಿಲರಾಗಿರುವ ಎ. ಹಾಟೆಲ್ ಎಂಬುವನನ್ನು ಫ್ರಾನ್ಸ್ ಸರ್ಕಾರದವರು ನೇಮಕ ಮಾಡಿದ್ದರು ಈಚೆಗೆ ಈ ಕೌನ್ಸಿಲರ ಮೇಲೆ ದೊಡ್ಡ ಅನುಮಾನವು ಹುಟ್ಟಿ ಸರ್ಕಾರದವರು ಆತನನ್ನು ಫ್ರಾನ್ಸ್ ಬಿಡಿ ಹೋಗ ಮಾಡಿಬಿಟ್ಟರೆಂದು ತಂತಿವರ್ತಮಾನ ಬಂದಿದೆ ಕಾರಣವೇನೆಂದರೆ ಈತನು ಕಳೆದ ೧೯೦೮ ನೇ ಇಸವಿಯಲ್ಲಿ ಜಾರ್ ಚಕ್ರವರ್ತಿಯವರನ್ನು ಕೊಲ್ಲಬೇಕೆಂಬ ಪಿತೂರಿ ಗುಂಪಿಗೆ ಸೇರಿದ್ದವನೆಂದು ಪತ್ತೆಯಾಗಿ ಬಂದದ್ದರಿಂದ ... ಈ ವಿಚಾರವು ಫ್ರಾನ್ಸ್‌ನಲ್ಲಿ ತುಂಬ ಗಲಭೆಯನ್ನುಂಟುಮಾಡಿದೆ

ಲಂಡನ್ ಪಟ್ಟಣದ ಇಂಪೀರಿಯಲ್ ಇನ್ಸ್ಟಿಟ್ಯೂಟ್ ಎಂಬ ಬಂಗಲೆಯಲ್ಲಿ ಮದನಲಾಲನು ಸರ್ ವಿಲ್ಲಿಯಂ ಕರ್ಜನ್ ವೈಲಿ ಯವರನ್ನು ಕೊಂದು ಹಾಕಿದನಷ್ಟೆ ಸಮೀಪದಲ್ಲಿ ನಿಂತಿರುವ ಸುರೇಂದ್ರನಾಥ ಬ್ಯಾನರ್ಜಿ ಎಂಬ ಬಂಗಾಳಿ ಪತ್ರಿಕಾ ಎಡಿಟರು ಒಂದು ಸಭೆಯಲ್ಲಿ ಎದ್ದು ನಿಂತು—ಪ್ಯಾರಿಸ್ ನಗರದಲ್ಲಿರುವ ಕ್ರಾಮಜಿ ಕೃಷ್ಣವರ್ಮ ಎಂಬಾತನು ಚಿತಾವಣೆ ಮಾಡಿದ ರೀತಿಯೇ ಮದನಲಾಲನು ಈ ಕೊಲೆಯನ್ನು ನಡಿಸಿದನೆಂದು ಹೇಳಿದರು ಕೃಷ್ಣವರ್ಮನು ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ದಿ ಟೈಮ್ಸ್ ಎಂಬ ಪತ್ರಿಕೆಗೆ ಬರೆದಿರುವುದೇನೆಂದರೆ—ಸುರೇಂದ್ರನಾಥ ಬ್ಯಾನರ್ಜಿ ಯವರು ಸ್ವಾರ್ಥಪರ ಭಟರಾದರೂ ಅವರು ಅನ್ಯದೇಶೀಯರ ಸೇವೆಯನ್ನು ಮಾಡಿಕೊಂಡಿದ್ದರೂ ಅವರಿಗೇ ಹೋಗತಕ್ಕವರಾಗಿದಾರೆ ಹಿಂದುಸ್ಥಾನದ ಸಾಮಾನ್ಯ ಪ್ರಜೆಗಳು ರಾಜನಿಷ್ಠೆಯುಳ್ಳವರಾಗಿದ್ದರೆಂದು ನಂಬಿಕೊಂಡಿರುವುದು ತಪ್ಪು ಹಾಗೆಂದರೆ ಅವರೆಲ್ಲಾ ಈಗಿನ ಅರಾಜಕ ಕೃತ್ಯಗಳನ್ನು ನಡಿಸುವುದಕ್ಕಾಗಿ ಏಕವಾಗುತ್ತಿದಾರೆ ಈ ಕೊಲೆಯಲ್ಲಿ ನಾನು ಎಷ್ಟುಮಾತ್ರಕ್ಕೂ ಭಾಗಿಯಾದವನಲ್ಲ ಸರ್ ವಿಲ್ಲಿಯಂ ಕರ್ಜನ್ ವೈಲಿ ಯವರ ಕೊಲೆಯು ಸಹಜವಾದದ್ದೆಂದು ನಾನು ಒಪ್ಪಿಕೊಳ್ಳುತ್ತೇನೆ ಹಿಂದುಸ್ಥಾನಕ್ಕೆ ಸ್ವತಂತ್ರಾಧಿಕಾರವನ್ನು ತರುವ ಭಾಗದಲ್ಲಿ ಮದನಲಾಲನು ಸಾಹಸಪಟ್ಟು ಈ ಕೆಲಸವನ್ನು ಮಾಡಿ ಕೀರ್ತಿ ಪಡೆದಿರುತ್ತಾನೆ, ಇಂಗ್ಲಿಷರು ಹಿಂದುಸ್ಥಾನದಿಂದ ಹೊರಟುಹೋಗದಿದ್ದರೆ ಇದ್ದ ರೋಗಗಳು ಮಹಾ ಕೆಡುಕು ಸಂಭವಿಸಿ ಪ್ರಪಂಚಕ್ಕೆಲ್ಲಾ ವಿಸ್ಮಯವನ್ನುಂಟುಮಾಡುವುದು ಎಂಬ ರೀತಿಯಾಗಿ ಬರೆದಿರುತ್ತಾನೆ ಅತ್ತಲಾಗಿ, ಇವನೇ ಕೃಷ್ಣವರ್ಮನು "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ಒಂದು ಪತ್ರಿಕೆಯನ್ನು ಪ್ರಕಟಿಸುತ್ತಿದ್ದನು ಅದನ್ನು ಲಂಡನ್ ಪಟ್ಟಣದಲ್ಲಿ ಅರ್ಥರ್ ಹಾರ್ಸ್ಲೀ ಎಂಬಾತನು ಅಚ್ಚುಹಾಕಿ ಕೊಡುತ್ತಿದ್ದನು ಗವರ್ಮೆಂಟಿನವರು ಅದನ್ನು ಪರಿಶೀಲಿಸಿ, ಅದರಲ್ಲಿ ರಾಜದ್ರೋಹಕರವಾದ ಸಂಗತಿಗಳು ಪ್ರಕಟವಾಗಿವೆ ಎಂದು ಅರ್ಥರ್ ಹಾರ್ಸ್ಲೀ ಎಂಬಾತನನ್ನು ದಸ್ತಗಿರಿ ಮಾಡಿದರು ಆತನು ತಾನು ನಿರಪರಾಧಿ ಎಂದು ಹೇಳುತ್ತಾನೆ ಈಗ ಈತನನ್ನು ಜಾಮೀನಿನ ಮೇಲೆ ಬಿಟ್ಟಿದಾರೆ

Printed and Published by the Rev H GULLIFORD,
Proprietor and Manager, Wesleyan Mission Press,
Mysore 22/7/1909

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸೆ ೧೯೦೯ ನೇ ಇಸವಿ ಜೂಲೈ ತಾರೀಖು ೨೯ ನೇ ಗುರುವಾರ. ಸಂಚಿಕೆ ೯

ದಾಳ್ಯದ ವೆಂಕಟಾಚಲ ಪಂಡಿತರ ಜ್ವರದ ಗುಳಿಗೆ.

28-24

ಈ ಗುಳಿಗೆಗಳು ಒಂದು ಜ್ವರ, ಹೊಸ ಜ್ವರ, ಚಳಿಜ್ವರ, ಪ್ಲೇಗು ಜ್ವರ, ವಿಷಮ ಜ್ವರ (ಮೂರರ ಮತ್ತು ನಾಲ್ಕರ), ಮಲೇರಿಯಾ ಜ್ವರ (ಅಸ್ಥಿಗತ ಜ್ವರ)

ಶೀತ ಜ್ವರ, ಪಿತ್ತ ಜ್ವರ, ಸನ್ನಿಪಾತ ಜ್ವರ, ಇವೆಲ್ಲವನ್ನೂ ನಿಂಡಿತವಾಗಿ ತಪ್ಪದೆ ಗುಣಪಡಿಸುತ್ತದೆ

ಇದರಲ್ಲಿ ಕ್ವಿನೈನಾಗಲೀ ಅಥವಾ ವಿಷವುಳ್ಳ ಯಾವ ಪದಾರ್ಥವಾಗಲೀ ಸೇರಿಲ್ಲವಾಗಿ ಹೆಚ್ಚು ಪಥ್ಯವಿಲ್ಲದಂತೆ ಸೇವಿಸತಕ್ಕದ್ದಾಗಿದೆ ಜ್ವರಿತರಿಗೆ ಈ ಗುಳಿಗೆಗಳು ಅಮೃತವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

೧೨ ಗುಳಿಗೆಯುಳ್ಳ ಕುಪ್ಪಿ ೮ ಆ
೩೨ „ „ ೧ ರೂ.
೧ ಡಜನ್ ದೊಡ್ಡ ಕುಪ್ಪಿ ಒಂದೇ ಸಲ ತರಿಸಿದರೆ .. ೮ ರೂ
೧ ಡಜನ್ ಸಣ್ಣ ಕುಪ್ಪಿ ೪ ರೂ.

ಪೋಸ್ಟೇಜು ಬೇರೆ

ವಿಳಾಸ —ಎಸ್. ಎಸ್. ಆರ್. ವೈದ್ಯಶಾಲಾ, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ಸಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 23]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲು ನೋವು, ಅರ್ಧಾಂಗವಾಯು ಎದೆನೋವು, ನಾಯಿ ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರೂ ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮ ೦

ಗಜಕರ್ಣದ ಮುಲಾಮು.

ಮೂರು ನಾಲ್ಕು ಹಚ್ಚುವದರೊಳಗೆ ಗಜಕರ್ಣ, ತುರಿ, ಗಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಬಟ್ಟೆಗಳು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬-೦ ೧೨ ಡಬ್ಬಿಗಳಿಗೆ ೪ ೦-೦

ಆತ್ಮಮಿತ್ರ	೨-೦-೦
ಚೇಳುಕಡಿತದ ಮದ್ದು	೦ ೨ ೦
ವಜ್ರಗುಟಿಕೆ—ಧಾತುಪುಷ್ಟಿ ಪಕ್ವಗುಟಿಕೆ	೧-೦ ೦
ಸುಂದರೀ ತೈಲ—ಮುಖ ಹಚ್ಚಿಕೆಗೆ	೦-೨-೦
ಜಾಲಾಖು ಪತ್ರೆ—ದುಲಾಬಿಗೆ	೦-೮-೦
ನೇತ್ರಾಂಜನ—ನುಂದ ದೃಷ್ಟಿಗೆ	೦-೪-೦
ಬಚ್ಚ ಮುಲಾಮು—ಮಕ್ಕಳ ಬಜಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮಿದುಳಿಗೆ	೧-೦ ೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦-೮-೦

ದಯವಿಟ್ಟು ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. ರೂ ೧—೨—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦
„ „ ೬ „ „ „ ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 10

ತಲೆನೋವು, ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸುಮುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ನಿವಾರಿಸಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ನಿವಾಸಿಗಳು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದಕಾರಣದಿಂದಲೇ ಅದನ್ನು ಅನೇಕ ಜನರು ಬಹಳ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಜಾಗ್ರತೆ ಹುಟ್ಟಿನಿಂದ ಹಾಳುಮಾಡುತ್ತದೆ

ಕ್ರಯ ಶೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರು ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮಲೆಟ್ಟಿ ಬೀದಿ, ವೇಪೇರಿ, ಮದರಾಸ್.

ಜ್ವರಹರಿ

18 26

ಇದು ಸಾಧಾರಣ ಜ್ವರ, ಚಳಿಜ್ವರ, ಮೈಲೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಟೈಫಾಯಿಡ್, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಜಿ. ಸು ೦ ಕ ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕೈಲಾಸ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆಂಡು ಸಿಮುಂ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಜೆಂಡುಮುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 29

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?
ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾವವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಎಷ್ಟು ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೧,
೧ ರೂ ೧ ಆ , ೧ ರೂ ೪ ಆ
ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧ ೧೨
ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨
ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ
ಉಣ್ಣೆಯ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10 30

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ. ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಜಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ.

"ಪ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ದಿನ್ನವಂ" ಇದು ಲೋಕಪ್ರಸಿದ್ಧವಾದ ಪುಸ್ತಕವು. ಕ್ರಿಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪವನ್ನಗೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕ್ಯಾಲಿಕೋ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ.—ಮ್ಯಾನೇಜರ್, ಸಿ ಎಲ್. ಎಸ್ ಬುಕ್ ಡಿಪೋ ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

28 25

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುದೋಷಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ಸಂಧಿನೋವು, ಸ್ತ್ರೀಯರ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉನ್ಮಾದ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಶೆ ೧ಕ್ಕೆ ೩ ರೂಪಾಯಿ

ಸಂಜೀವಿನೀ ವಜ್ರ —ನಾನಾ ಬಗೇ ಜ್ವರಗಳು, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟ ಮಲಾಂ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಶೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೆ ಏಜಂಟರುಗಳೂ ಬೇಕು ಆರ್ಡರಿಗೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ. ಸ್ವಾಮಿ,
ಪ್ರೊಪ್ರೈಟರ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಪ್ರತಿ ಘಂಟೆಗೆ ವಿಷವನ್ನು ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವದು ಅದು ಆರೋಗ್ಯವಾಗಿರುವುದು ದುರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದುರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಆಗುವುದು, ಬಿಡದೆ ಆಯಾಸ, ಚಳಲಿಕೆ, ಎದೆ ಕಲ್ಲು ಸುತ್ತುವುದು, ತಲೆನೋವು, ಗಾಬರಿ ಕಣ್ಣು ಮಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಸಂಧಿವಾತ, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಸಂಧಿವಾತ, ಮೈಬಾವು, ಉರುಮೂತ್ರ, ಮೂತ್ರಕೋಶದ ಕಲ್ಲು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ, ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69-48]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೩-೦-೦ ಅಥವಾ ೬ ಬುಡ್ಡಿಗಳಿಗೆ ರೂ ೧೬—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುತ್ತದೆ ಅಥವಾ ಡೋನ್ಸ್, ೨೦, ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಸ್ ೧೮೭೬ ರಿಂದ ೧೯೦೭ ವರೆಗೆ

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6 30
(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿ ಎನ್ನುವ ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು, ನಾನಾ ತರದ ಕೆಮ್ಮುಲು,

ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇವಲ್ಲದೆ ತಂದೆಗೂ ಮಗನಿಗೂ ಎಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕ್ರೈಸೋಕವೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯನಿರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

1 30



ಬೆನ್ನಿನ ನೋವು, ಪಕ್ಕೆಗುಳಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಇಬ್ಬಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೆ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ನೋವಿನೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆ ೨ ರೂಪಾಯಿ

JUST RECEIVED! JUST RECEIVED!!

Stead's Books for the Bairns

(Illustrated) New Numbers [5 30]

STEAD'S PENNY POPULAR TALES—Sixty-four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C L S Book Depot, Mysore City

ಬೇಕು.

59-1

ತಮ್ಮ ತಮ್ಮ ಪಟ್ಟಣಗಳಲ್ಲಿ ಯಾ ಹಳ್ಳಿಗಳಲ್ಲಿ ನಮ್ಮ ಔಷಧಗಳನ್ನು ವಿಕ್ರಯಿಸುವ ಏಜೆಂಟರುಗಳು ಬೇಕು ಮಾಹೇವಾರ ೧೫ ರೂ ಸಂಬಳ ಡಿಪಾಸಿಟ್ ಅವಶ್ಯಕವಿಲ್ಲ ೧ ರೂ ಫೀಜನ್ನು ಕಳುಹಿಸಿ - ಮ್ಯಾನೇಜರ್, ಆಯುರ್ವೇದಿಕ್ ಮೆಡಿಕಲ್ ಹಾಲ್, ೯೭ ಚೂಳೆ ಹೈರೋಡು, ಮದ್ರಾಸು, ಇವರಿಗೆ ಬರೆಯಿರಿ

ಗೃಹಕೃತ್ಯದ ನೋಟೀಸ್

58 1

ನನ್ನ ಗಂಡನು ವರ್ಷದ ಬಳಿಕ ಮತಿ ಚಾಪಲ್ಯದಿಂದ ಆಸ್ತಿ ಸಂಸಾರಗಳಲ್ಲಿ ಪರಿಜ್ಞಾನವಿಲ್ಲದೆ ಸ್ವಾತಂತ್ರ್ಯ ತಿರುಗುವವನ್ನು ಅನೇಕರು ಬಲ್ಲರು ಆಗಿನಿಂದಲಾಗಲಿ ಮುಂದಕ್ಕಾಗಲಿ ಆತನಿಂದ ನಡಸಿಕೊಳ್ಳುವ ಯಾವ ವಿನಿಯೋಗಾದಿಗಳಿಗೆ ಆತನ ಆಸ್ತಿಗಳು ಈಡಾಗಲಾರವು ೨೯ ೭ ೦೯

ಮಂಡ್ಯದ ಜಗುಂಡಿ ಬೊಡ್ಡ ಬಸವೇಗೌಡನ ಬಸವ್ವೆಯಾದ ಪಂಡಿತ ಮಲಮ್ಮ

ಗೃಹಕೃತ್ಯದ ನೋಟಿಸು

57-1

ನನ್ನ ಹಕ್ಕಿಗೆ ಒಳಪಟ್ಟ ಮೈಸೂರು ಮಂಡಿ ಮೊಹಲ್ಲಾ ಗಣೇಶ್ವರ ಗಾಡಿ ಚೌಕದ ಬಳಿ ಮ್ಯುನಿಸಿಪಲ್ ಡೋರ್ ೩೨೬ ನೇ ನಂಬರು ಮನೆಯನ್ನು ಕಂಟ್ರಾಕ್ಟರ್ ಭೋಟೂರಾಂ ಮತ್ತು ಮಾವನ್ನು ಎಂಬುವರು ಖರೀದಿ ವಗೈರೆ ಮಾಡಬೇಕೆಂಬ ತರ್ಜೋದಿನಲ್ಲಿದಾರೆ ಆದ್ದರಿಂದ ಯಾರೂ ತೆಗೆದುಕೊಳ್ಳಕೂಡದೆಂದು ಇದರಿಂದ ಎಚ್ಚರಿಸಿದೆ ಎಂ ಕೃಷ್ಣಶೆಟ್,

೨೩-೭ ೦೯ ಕ್ಲಾರ್ಕ್, ಪ್ಲೇಗ್ ಕ್ಯಾಂಪ್, ಮೈಸೂರು

ಗೃಹಕೃತ್ಯದ ನೋಟೀಸ್

60 1

ಅರಕಲಗೂಡಿನಲ್ಲಿರುವ ದಂತಿ ಸಿದ್ದರಾಮಶೆಟ್ಟರ ಮಗ ದಂತಿ ಸೀತಾರಾಮಶೆಟ್ಟಿಯು ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನಮ್ಮ ಪಿತರಾರ್ಜಿತವಾದ ಶ್ರೀರಂಗಪಟ್ಟಣದ ಟವನ್‌ನಲ್ಲಿರುವ ಮ್ಯುನಿಸಿಪಲ್ ೨೧೫ ನೆ ನಂಬರು ಮನೆಯನ್ನು ನನ್ನ ದೊಡ್ಡಪ್ಪನ ಮಗನಾದ ದಂತಿ ವೆಂಕಟೇಶ ಶೆಟ್ಟರಿಗೆ ನಮ್ಮ ಅಣ್ಣನಾದ ದಂತಿ ಶಿವರಾಮಶೆಟ್ಟಿಯು ೨೦೦ ರೂಪಾಯಿಗಳಿಗೆ ಭೋಗ್ಯವಾಡಿರುವ ಮೇಲ್ಕಂಡ ಮನೆಯನ್ನು ನಮ್ಮ ತಂದೆಯವರಾದ ದಂತಿ ಸಿದ್ದರಾಮಶೆಟ್ಟರು ನಿಪವಾತ್ರಕ್ಕೆ ಭೋಗ್ಯದಾರರಿಗೆ ಖರೀದಿಗೆ ಕೊಟ್ಟಿರುತ್ತಾರೆ ಸದರಿ ಮನೆಯನ್ನು ಡಿಟೋ ಖರೀದಿದಾರಿಂದ ಖರೀದಿ ಭೋಗ್ಯ ಆಧಾರ ವಗೈರೆ ಮಾಡಿಕೊಳ್ಳತಕ್ಕವರು ನನ್ನ ಅನುಮತಿ ಇಲ್ಲದೆ ಪಡೆಯಕೂಡದೆಂಬದಾಗಿ ಈ ಮೂಲಕ ಎಚ್ಚರಿಸಿರುತ್ತೇನೆ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 29

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗು, ಕಾಲರಾ ಸ್ಥಿತಿ

೪—7—1909 ರಿಂದ ೧೦—7—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	12	12	0	0
ಬೆಂಗಳೂರು ಡಿಸ್ಟ್ರಿಕ್ಟ್	೨	3	0	0
ಮೈಸೂರು ,,	50	36	0	1
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	*	*
ತುಂಕೂರು ಡಿಸ್ಟ್ರಿಕ್ಟ್	*	*	0	0
ಹಾಸನ ,,	2	2	0	1
ಚಿತ್ರದುರ್ಗ ,,	0	0	0	0
ಕಡೂರ್ ,	5	1	0	0
ಶಿವಮೊಗ್ಗ ,	12	9	0	0
* ಸಂಖ್ಯೆ ಕಾಣಿಸಿಲ್ಲ ಒಟ್ಟು	86	63	0	1

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಜೂಲೈ ತಾ 17 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
ಬೆಂಗಳೂರು	100	84	4	1 631	
ಕೋಲಾರ	313	177	23	4,130	
ತುಂಕೂರು	112	214		7,585	
ಮೈಸೂರು					
ಹಾಸನ	71	117	12	165	
ಶಿವಮೊಗ್ಗ					
ಕಡೂರು	39	39		190	
ಚಿತ್ರದುರ್ಗ	217	293	16	1,600	
ಮಾರಿಕಣಿವೆ	390	168	6	891	
ಸ್ಯಾನಿಟರಿ					
ಒಟ್ಟು	1,272	1,122	89	18,751	

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಅಧಿಕ ಶ್ರಾವಣ ಶುದ್ಧ ದ್ವಾದಶಿ ಗುರುವಾರದಿಂದ ಅಧಿಕ ಶ್ರಾವಣ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜೂಲೈ ಮತ್ತು ಆಗಸ್ಟ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕಟಕ ಮಾಸ
29	ಗುರು §	ದ್ವಾದಶಿ	59 2	ಜ್ಯೆ	21-52	14
30	ಶುಕ್ರ	ತ್ರಯೋದಶಿ	57 10	ಮೂ	26-34	15
31	ಶನಿವಾ	ಚತುರ್ದಶಿ	51 38	ಪೂಷಾ	25-10	16
1	ಭಾನುವಾ	ಪೌರ್ಣಮಿ	51 2	ಉತ್ತಾಷಾ	24-52	17
2	ಚಂದ್ರ *	ಪಾಡ್ಯಮಿ	46 42	ಶ್ರ	22-34	18
3	ಕುಜ ‡	ಬಿದಿಗೆ	41 31	ಧ	19 50	19
4	ಬುಧ †	ತದಿಗೆ	36 2	ಶ	16 14	20

§ ವೈಷ್ಣವಭಾಗವತ ಏಕಾದಶಿ, ಹರಿವಾಸರ ಪ್ರದೋಷ, ಆಡಿಶುಕ್ರವಾರ

* ಅಮೃತಸಿದ್ಧಿಯೋಗ

‡ ಉತ್ಪಾತಯೋಗ

† ದಗ್ಧಯೋಗ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ದೊಡ್ಡ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೮ ೦	೧೫ ೦-೦
ಬೂತಿ ಅಕ್ಕಿ ಅವಲ್	,,	೭ ೮ ೦	೧ ೭೨ ೦
,, ದುಯಂ		೭ ೦ ೦	೮ -೦
ಜಾವಾಗ್ರ ಅಕ್ಕಿ		೧ ೦ ೦	೧೪ ೮ ೦
ಸಣ್ಣಕ್ಕಿ ಅವಲ್		೧೬ ೨ ೦	೧೬-೮ ೦
,, ದುಯಂ		೧೬-೦-೦	೧೬ ೮ ೦
ಕೋಗಿರಿ ಬಿಳಿ ಪಲ್ಲಾ ೧ಕ್ಕೆ		೧೬ ೦-೦	೧೫ ೮ ೦
,, ದುಯಂ		೧೫-೦ ೦	೧೫ ೮ ೦
ಕೆಮ್ಮ ರಾಗಿ ಪಲ್ಲಾ ೧ಕ್ಕೆ		೯ ೮-೦	೯ ೦ ೦
ಕಾರಾಗಿ		೯-೦-೦	೮ ೮-೦
ಜೋಳ		೯-೪-೦	೯ ೦ ೦
ಹಲಸಂದೆ ಪಲ್ಲಾ ೧ಕ್ಕೆ		೧೩-೦-೦	೧೩ ೪-೦
ಬಿಳೀ ಅವರೆ		೧೨ ೮-೦	೧೨ ೦-೦
ಹೆಸರು		೧೫-೦ ೦	೧೨ ೦ ೦
ಉದ್ದು		೧೪ ೮ ೦	೧೨ ೧೨ ೦
ಕಡಲೆ		೧೪ ೨-೦	೧೧ ೧೨ ೦
ಎಳ್ಳು ಸೇ ೧೨೬ ಕ್ಕೆ		೨೨ ೮ ೦	೧೮-೦ ೦
ಹುರುಳಿ		೧೨ ೦ ೦	೧೨-೮ ೦
ಹರಳು ೧೨೬ ಸೇರಿಗೆ		೧೨ ೮ ೦	೯ ೧೨ ೦
ಸೀಗೇಕಾಯಿ ಮಣ ೧ಕ್ಕೆ		೨ ೮-೦	೨ ೨ ೦
ಮೆಣಸಿನಕಾಯಿ		೫ ೮ ೦	೪-೮ ೦
,, ದುಯಂ		೪ ೦ ೦	೬ ೦ ೦
ಬೆಲ್ಲ ದೊಡ್ಡ ಅಚ್ಚು		೬ ೪ ೦	೫ ೨ ೨ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೫ ೪ ೦
ಹರಳೆಣ್ಣೆ		೪ ೦	೪-೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೯ ೮ ೦	೮ ೬ ೦
ಉಪ್ಪು		೬ ೪ ೦	೫ ೮-೦
ಹುಣಸೇ ಹಣ್ಣು		೨ ೦ ೦	೧ ೧೦ ೦
ಹಳೇದು		೧ ೨ ೦	೧ ೮ ೦
ತುಪ್ಪ ಮಣ ೧ಕ್ಕೆ		೧೬ ೦	೧೩ ೮ -
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		೪ ೪	೬ ೨
ತೆಂಗಿನಕಾಯಿ ೧೦೦ ಕ್ಕೆ		೪ ೮ ೦	೪ ೬-೦
ಅಡಕೆ ... ಮಣ ೧ಕ್ಕೆ		೦ ೮ ೦	೦ ೧೬ ೦
... ಕಾಯಿ ಮಣ ೧ಕ್ಕೆ		೧ ೦ ೦	೦ ೧೬
ಚಿನ್ನ ...		೧೫ ೬ ೦	೧೫ ೭ ೦
,, ಪವನು		೧೬ ೦ ೦	೧೪ ೧೩ ೦
,, ತೊಲ ೧ಕ್ಕೆ		೨೬ ೨ ೦	೨೪ ೧
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೬-೧ ೧

ಸುಜ್ಞಾನ ಸೂರ್ಯೋದಯ

[ಕಳೆದ ವಾರದ ಶೇಷ]

ವೀರಭದ್ರಗೌಡ—ನಮ್ಮ ... ಕಾಲದಲ್ಲಿ ಕ್ರೈಸ್ತಮತವು ಎಲ್ಲಿಕೆ ಪ್ರಕಟಿಕ್ಕೆ ... ಅವನು ಕ್ರೈಸ್ತ ... ಬನೆ ಮಾಡಿದ್ದರೆ ಅವರ ... ಕ್ರೈಸ್ತಮತವೆಲ್ಲ ಒಸ ... ಕೊಂಡರೆ ತಪ್ಪೇನು ... ಅಂದನು

ಮಡಿ—ಎಲೈ ... ದೇವರ ... ನಡೆಯುತ್ತವಲ್ಲದೆ ಮನುಷ್ಯರ ಕಾರಿಕೆ ... ತಕ್ಕ ಹೋಗವರು ... ಈ ... ನಾವು ಬೀಜಗಳನ್ನು ಬಿತ್ತು ... ನಾವು ... ಕಾಲದಲ್ಲಿ ಹೊಗಬಾರದು ... ನಾವು ಹೋಗಬಾರದು ... ಈ ಕಾಲದವರು ಯಾರಾದರೂ ನೆನಸಬಹುದೋ ... ದೇವರು ... ತನ್ನ ಆಶೀರ್ವಾದವನ್ನು ಅನುಗ್ರಹಿಸುತ್ತಾನೋ ಆಗ ನಾವು ಅದನ್ನು ... ಅಂಗೀಕರಿಸಬೇಕು ದೇವರು ನಮಗೆ ಅನುಗ್ರಹಿಸುವಂಥ ಸಕಲ ... ಪರಮಗುರುವು ಬಹು ಶ್ರೇಷ್ಠ ... ವಾದವನಾಗಿದ್ದಾನೆ ... ವಂಥ ಬಾಲಕನ ಕೆಗೆ ತಂದೆ ಹಣ್ಣು ಕೊಟ್ಟು ... ನಮ್ಮ ... ದೇವರು ಮೂರ್ತಿಗಳ ಪೂಜೆ ನರ ಗುರುತ್ವಗಳ ... ಎಂಬ ಈ ... ಕಾರ್ಯಗಳಲ್ಲಿ ಮುಳುಗಿ ... ದಂಥ ನಮಗೆ ಯೇಸುಕ್ರಿಸ್ತ ... ಫಲವನ್ನು ಈಗ ಪ್ರಕಟಪಡಿಸಿದ್ದಾನೆ ಈಗ ನಾವು ಆತನನ್ನು ... ಸ್ವೀಕರಿಸಿಕೊಂಡದ್ದಾದರೆ ಮುಂದೆ ನಮ್ಮ ... ಆತನನ್ನು ... ವಾಗಿ ನಡೆದುಕೊಳ್ಳಬಹುದಲ್ಲ ಅಂದನು

ಯೇಸುಕ್ರಿಸ್ತನ ... ಗುಣಲಕ್ಷಣವೆಂದರೆ—ದೈವ, ನರ ಈ ಎರಡು ಸ್ವಭಾವಗಳೂ ... ಪಾಪಿಗಳಾದ ಮನುಷ್ಯರಿಗೆ ಆತನು ... ಬಂದೆಕಾವಾದ ಈ ಎರಡು ಸ್ವಭಾವಗಳು ಆತನಿಗೆ ಅವಶ್ಯವಾಗಿದ್ದವು ತನ್ನ ದೈವಸ್ವಭಾವದ ಪ್ರಕಾರ ಮನುಷ್ಯರಲ್ಲಿ ... ನೋಡದಂಥ ನೋಡಕೂಡದಂಥ ಅದೃಶ್ಯನಾದ ದೇವರ ... ಗುಣ ... ಗಳನ್ನು ತನ್ನ ಪವಿತ್ರವಾದ ನಡೆನುಡಿಗಳಿಂದ ಮನುಷ್ಯರಿಗೆ ಪ್ರಕಟಪಡಿಸಿದನು ಹ್ಯಾಗಂದರೆ ದೇವರು ಆತ್ಮಸ್ವರೂಪಿಯಾಗಿದ್ದಾನೆ ಆತನನ್ನು ಆರಾಧಿಸುವವರು ಆತ್ಮದ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು ... ದೇವರು ... ನೆಯಾಗಿದ್ದಾನೆ ಆತನನ್ನು ನಿಮ್ಮ ಪೂರ್ಣಮನಸ್ಸಿನಿಂದಲೂ ನಿಮ್ಮ ಪೂರ್ಣಪ್ರಾಣದಿಂದಲೂ ನಿಮ್ಮ ಪೂರ್ಣಶಕ್ತಿಯಿಂದಲೂ ನಿಮ್ಮ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ಎಂದು ಆತನು ಜನರಿಗೆ ಬೋಧಿಸಿದ್ದಲ್ಲದೆ ದೇವರ ಅಪಾರವಾದ ಪ್ರೀತಿಯನ್ನು ತನ್ನ ಸತ್ಪ್ರವರ್ತನೆಯಿಂದ ಪ್ರಕಟಮಾಡಿ ತೋರಿಸಿದನು ಹೀಗೆ ಆತನು ದೇವರ ಸ್ವಭಾವದ ಪ್ರಕಾರವು ಆತನ ಚಿತ್ರದ ಮೂರ್ತಿಯೂ ಆಗಿದ್ದು ನನ್ನನ್ನು ನೋಡಿದವನು ದೇವರನ್ನು ನೋಡಿದ್ದಾನೆಂದು ಹೇಳಿದನು

ತನ್ನ ನರಸ್ವಭಾವದ ಪ್ರಕಾರ ಆತನು ನಾನಾ ಕೊರತೆಗಳನ್ನೂ ಕಷ್ಟಗಳನ್ನೂ ಶ್ರಮೆಗಳನ್ನೂ ಅನುಭವಿಸಿದಾಗ್ಯೂ ಅವುಗಳಲ್ಲಿ ಆತನು ಗುಣುಗುಟ್ಟದೆ ಚಂಚಲಚಿತ್ತನಾಗದೆ ದೇವರಲ್ಲಿದ್ದಂಥ ಪ್ರೀತಿಯನ್ನೂ ಭಕ್ತಿಯನ್ನೂ ಬಿಟ್ಟುಬಿಡದೆ ದಾನಾಗಲೂ ದೇವರಿಗೆ ವಿಧೇಯನಾಗಿದ್ದು ದೇವರ ಚಿತ್ತದಂತೆ ನಡೆದುಕೊಳ್ಳುವದೇ ತನಗೆ ಆಹಾರವೂ ಪಾನವೂ ಆಗಿದೆ ಎಂದು ಹೇಳಿದನು ಮತ್ತು ಮನುಷ್ಯರ ವಿಷಯದಲ್ಲಿ ನಿನ್ನನ್ನು ನೀನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸುವವನಾಗು ಎಂದು ಆತನು ಇತರರಿಗೆ ಬೋಧಿಸಿದ್ದಲ್ಲದೆ ತಾನೇ ಆ ಪ್ರಕಾರ ಮಾಡಿದನು ಆತನ ಪ್ರವರ್ತನೆಗೆ ಪ್ರೀತಿಯೇ ಮೂಲಸೂತ್ರವಾಗಿತ್ತು ಇದಲ್ಲದೆ ಆತನು ಸ್ಥಾಪಿಸಿರುವಂಥ ಕ್ರೈಸ್ತಮತಕ್ಕೆ ಪ್ರೀತಿಯೇ ಮೂಲಾಧಾರವಾಗಿದೆ ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುವದೇ ನನ್ನ ಆಜ್ಞೆಯಾಗಿದೆ ಎಂದು ಆತನು ತನ್ನ ಶಿಷ್ಯರಿಗೆ ಅಪ್ಪಣೆ ಕೊಟ್ಟಿದ್ದಾನೆ ಹೀಗೆ ತನ್ನ ನರಸ್ವಭಾವದ ಪ್ರಕಾರ ಮನುಷ್ಯರು ದೇವರ ವಿಷಯದಲ್ಲಿಯೂ ತಮ್ಮ ಜತೆ ಮನುಷ್ಯರ ವಿಷಯದಲ್ಲಿಯೂ ಹ್ಯಾಗೆ ನಡೆದುಕೊಳ್ಳಬೇಕೆಂದು ತನ್ನ ನಡೆನುಡಿಗಳಿಂದ ಉತ್ತಮ ಮಾದರಿಯನ್ನು ತೋರಿಸಿಕೊಟ್ಟಿದ್ದಾನೆ

ಯೇಸುಕ್ರಿಸ್ತನಲ್ಲಿದ್ದ ಐದನೇ ಗುಣಲಕ್ಷಣವೇನೆಂದರೆ—ಮೃತ್ಯುಂಜಯನಾದನು ಹ್ಯಾಗಂದರೆ ಎಲ್ಲಾ ಭಾರಗಳಲ್ಲಿ ಮನುಷ್ಯರ ಪಾಪವೇ ದೊಡ್ಡ ಭಾರವಾಗಿದೆ ಈ ಭಾರವನ್ನು ತಾಳುವದಕ್ಕೂ ತೀರಿಸುವದಕ್ಕೂ ಮಾನವರಲ್ಲಿ ಯಾರಿಗೂ ಸಾಧ್ಯವಲ್ಲ ಆದಕಾರಣ ದೇವರಾದ ಯೇಸುಕ್ರಿಸ್ತನು ತನ್ನ ಅಮಿತವಾದ ಕರುಣೆಯಿಂದ ತಾನೇ ನರರೂಪವನ್ನೆತ್ತಿ ಈ ಲೋಕಕ್ಕೆ ಬಂದು ನರರ ಮುಕ್ತಿಕ್ಕಾಗಿ ತನ್ನಲ್ಲಿದ್ದ ನರಸ್ವಭಾವದ ಪ್ರಕಾರ ಯಜ್ಞಮರಣವನ್ನು ಹೊಂದಿ ತನ್ನಲ್ಲಿದ್ದ ದೈವಸ್ವಭಾವದ ಪ್ರಕಾರ ಮೂರು ದಿವಸಗಳಾದಮೇಲೆ ಸಮಾಧಿಯಿಂದ ಮೃತ್ಯುಂಜಯನಾಗಿ ಎದ್ದು ಬಂದು ಈಗ ಸರ್ವಾಧಿಕಾರದಿಂದ ಸದಾಕಾಲದಲ್ಲೂ ಬಾಳುತ್ತಾ ಲೋಕವನ್ನೆಲ್ಲಾ ಆಳುತ್ತಾ ತನ್ನ ನರಾವತಾರದ ಶುಭವರ್ತಮಾನವನ್ನು ತನ್ನ ಸೇವಕರಾದ ಪಾದ್ರಿಗಳ ಮುಖಾಂತ್ರವಾಗಿ ಸರ್ವಲೋಕದಲ್ಲೂ ಸಾರಿಸುತ್ತಾ ಇದ್ದಾನೆ ಯಾರು ಈ ಯೇಸುಕ್ರಿಸ್ತನೆಂಬ ಪರಮಗುರುವಿನ ವಾರ್ತೆಯನ್ನು ಕೇಳಿ ಆತನಲ್ಲಿ ಭಕ್ತಿಯಿಟ್ಟು ಆತನ ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತಾರೋ ಅಂಥವರ ಪಾಪಗಳನ್ನು ಕ್ಷಮಾಪಣೆಮಾಡಿ ಪಾಪಬಂಧನದಿಂದ ಅವರನ್ನು ಬಿಡಿಸಿ ನೀತಿವಂತರಾಗಿ ಬಾಳುವದಕ್ಕೆ ನೂತನವಾದ ಶಕ್ತಿಯನ್ನು ಅನುಗ್ರಹಿಸುತ್ತಾನೆ ಈ ವರೆಗೂ ನಾನು ಕ್ಲುಪ್ತವಾಗಿ ಹೇಳಿದಂಥ ಗುಣಲಕ್ಷಣಗಳು ಯೇಸುಕ್ರಿಸ್ತನಲ್ಲಿ ಇದ್ದವೊ ಎಂದು ನೀವೇ ಆತನ ಚರಿತ್ರೆಯನ್ನು ಓದಿ ಪರಿಶೀಲನೆ ಮಾಡಿದರೆ ನಿಮಗೆ ಮನದಟ್ಟಾಗುವದು ಅಂದನು

ವೀರಭದ್ರಗೌಡ—ಸಕಲ ಧರ್ಮಶಾಸ್ತ್ರಗಳೂ ನೀತಿಯನ್ನು ಬೋಧಿಸುತ್ತವೆ ನೀತಿವಂತರಿಗೆ ಯಾವ ಮತವಾದರೇನು ? ತಾವು ಹುಟ್ಟಿದ ಮತದಲ್ಲಿದ್ದುಕೊಂಡು ನೀತಿವಂತರಾಗಿ ಬಾಳಿದರೆ ಸಾಕಲ್ಲವೇ ? ಪರಮತದಿಂದ ಪ್ರಯೋಜನವೇನು ? ಅಂದನು

ಮಡಿ—ಸಕಲ ಧರ್ಮಶಾಸ್ತ್ರಗಳೂ ನೀತಿಯನ್ನು ಬೋಧಿಸಿದಾಗ್ಯೂ ನೀತಿವಂತರಾಗಿ ಬಾಳುವದಕ್ಕೆ ನೂತನವಾದ ಶಕ್ತಿಯನ್ನು ಹೊಂದದಿದ್ದರೆ ಆ ನೀತಿ ... ಪ್ರಯೋಜನವೇನು ? ... ಮತವು ನೀತಿಯನ್ನು ಬೋಧಿಸುವದು ಮಾತ್ರವಲ್ಲದೆ ನೀತಿವಂತರಾಗಿ ಬಾಳುವದಕ್ಕೆ ನೂತನವಾದ ಶಕ್ತಿಯನ್ನು ಕೊಡುತ್ತದೋ ಅಂಥ ಮತವೆ ಸತ್ಯಮತವಾಗಿದೆ ಕ್ರೈಸ್ತಮತಾಧಾರಕನಾದ ಯೇಸುಕ್ರಿಸ್ತನು ನೀತಿಯನ್ನು ಬೋಧಿಸುವದು ಮಾತ್ರವಲ್ಲ ನಾನು ಮೇಲೆ ಹೇಳಿದಂತೆ ಆತನಲ್ಲಿ ಭಕ್ತಿಯಿಟ್ಟು ಆತನ ಚಿತ್ತಾನುಸಾರವಾಗಿ ಯಾರು ನಡೆದುಕೊಳ್ಳುತ್ತಾರೋ ಅಂಥವರಿಗೆ ನೂತನಶಕ್ತಿಯನ್ನು ಕೊಡುತ್ತಾನೆ ಇತರ ಮತಕ್ಕೂ ಕ್ರೈಸ್ತಮತಕ್ಕೂ ಇರುವಂಥ ಭೇದಗಳಲ್ಲಿ ಈ ಶಕ್ತಿಯೇ ಮುಖ್ಯವಾದದ್ದು ಆದಕಾರಣ ಈ ಮತವು ದೇವರಿಂದ ಸ್ಥಾಪಿಸಲ್ಪಟ್ಟಂಥ ಸತ್ಯಮತವಾಗಿಯೂ ಸಕಲರಿಗೂ ಅವಶ್ಯವಾದಂಥ ಮತವಾಗಿಯೂ ಇರುತ್ತದೆ

ವೀರಭದ್ರ—ಗುಪ್ಪಿ ತನ್ನ ಮರಿಗೆ ಹುಟ್ಟುಲಿ ಎಂದು ಕರೆದರೆ ಬರುವದೇನು ? ಕ್ರೈಸ್ತಮತದವರೆಲ್ಲರೂ ನೀತಿವಂತರೋ ? ಇತರ ಮತದವರೆಲ್ಲರೂ ಅನೀತಿವಂತರೋ ? ಅಂದನು

ಮಡಿ—ಕ್ರೈಸ್ತಮತಸ್ಥರೆಲ್ಲರೂ ನೀತಿವಂತರೆಂದು ನಾನು ಹೇಳಲಿಲ್ಲ

... ಯೇಸುಕ್ರಿಸ್ತನಲ್ಲಿ ಭಕ್ತಿಯಿಟ್ಟು ಆತನ ಚಿತ್ತಾನುಸಾರವಾಗಿ ಪ್ರವರ್ತಿಸುತ್ತಾರೋ ಅಂಥವರು ನೀತಿವಂತರಾಗಿ ಬಾಳುವದಕ್ಕೆ ನೂತನವಾದ ಶಕ್ತಿ ಹೊಂದುತ್ತಾರೆಂದು ಹೇಳಿದೆನು ಕ್ರೈಸ್ತಮತಸ್ಥರೆಂದು ಅನೇಕರು ಹೇಳಿಕೊಂಡರೂ ಯೇಸುಕ್ರಿಸ್ತನಲ್ಲಿ ಅವರಿಗೆ ನಿಜಭಕ್ತಿಯಿಲ್ಲದಿದ್ದರೆ ಆ ನೂತನವಾದ ಶಕ್ತಿಯನ್ನು ಹೊಂದಲಾರರು ನೀತಿಯು ಮನಸ್ಸಿಗೆ ಸಂಬಂಧಪಟ್ಟದ್ದೇ ಹೊರತು ಹೊರಗಿನ ಕಾರ್ಯಗಳಿಗೆ ಸಂಬಂಧಪಟ್ಟದ್ದಲ್ಲ ಮತ್ತು ಕಾರ್ಯಗಳಿಗಿಂತ ಮನಸ್ಸೇ ಮುಖ್ಯವಾದದ್ದು ಆದರೆ ನೀತಿಯ ಕಾರ್ಯಗಳನ್ನು ಮಾಡುವದಕ್ಕಿಂತ ... ಮನಸ್ಸನ್ನು ಸಾಧಿಸುವದು ಬಹಳ ಕಷ್ಟ ಆದಕಾರಣ ಅನೇಕರು ಕಷ್ಟವಾದ ಮನಸ್ಸಿನ ನೀತಿಯನ್ನು ಅಲಕ್ಷ್ಯ ಮಾಡಿ ಸುಲಭವಾದ ಕಾರ್ಯಗಳಲ್ಲಿ ತೋರುವ ನೀತಿಯನ್ನು ಅನುಸರಿಸುತ್ತಾರೆ ಮುಖ್ಯವಾಗಿ ಮೊದ್ದವರಲ್ಲ ಅನೇಕರು ಅನ್ಯಾಯ, ಮೋಸ, ಲಂಚ, ಬಲಾತ್ಕಾರಗಳಿಂದ ಬಹಳ ಹಣವನ್ನು ಸಂಪಾದಿಸಿಕೊಂಡು ಅದರಲ್ಲಿ ಸಲ್ಪ ಖರ್ಚುಮಾಡಿ ಗೋದಾನ, ಭೂದಾನ, ಅನ್ನದಾನ, ವಸ್ತ್ರದಾನ ಮೊದಲಾದ ದಾನಗಳನ್ನು ಮಾಡುತ್ತಾರೆ ಇಂಥವರಿಗೆ ನೀತಿವಂತರೆಂದು ಹೇಳುವದು ಹ್ಯಾಗೆ ? ಇನ್ನೂ ಕೆಲವರಿಗೆ ತಕ್ಕ ಶಕ್ತಿಯೂ ಸಂದರ್ಭವೂ ಪ್ರೇರೇಪಣೆಯೂ ಇಲ್ಲದ ಕಾರಣ ಕೆಟ್ಟ ಕಾರ್ಯಗಳನ್ನು ಮಾಡಲಾರರು ಅಂಥವರಿಗೆ ಕೇವಲ ನೀತಿವಂತರೆಂದು ಹೇಳಬಹುದೇ ? ಶಕ್ಯವಾದ ನೀತಿಯು ಭಕ್ತಿಯ ಫಲವಾಗಿದೆ ಮರವಿಲ್ಲದೆ ಫಲವನ್ನು ಅಪೇಕ್ಷಿಸುವದು ಹ್ಯಾಗೆ ವ್ಯರ್ಥವಾದ ಕಾರ್ಯವಾಗಿದೆಯೋ ಹಾಗೆಯೇ ಭಕ್ತಿಯಿಲ್ಲದೆ ನೀತಿಯನ್ನು ಕೋರುವದು ವ್ಯರ್ಥವಾದ ಕಾರ್ಯವಾಗಿದೆ ಆದರೆ ಮರವು ಎಂಥಾದ್ದೋ ಅದರಲ್ಲಿ ಹುಟ್ಟುವಂಥ ಫಲವೂ ಕೂಡ ಅಂಥಾದ್ದೇ ಆಗಿರುತ್ತದೆ ದತ್ತೂರಿ ಗಿಡದಲ್ಲಿ ಅಂಜೂರದ ಹಣ್ಣುಗಳೂ ಗಜ್ಜುಗದ ಬಳ್ಳಿಯಲ್ಲಿ ದ್ರಾಕ್ಷೆ ಹಣ್ಣುಗಳೂ ಸಿಕ್ಕಲಾರವು ಅದರಂತೆ ಪಾಪಸ್ವಭಾವವುಳ್ಳ ನರಗುರುಗಳಲ್ಲಿ ಭಕ್ತಿಯಿಟ್ಟರೆ ನೀತಿವಂತರಾಗಿ ಬಾಳುವಂಥ ಶಕ್ತಿ ಎಂದಿಗೂ ಸಿಕ್ಕಲಾರದು ಯಥಾಗುರುಸ್ತಥಾಶಿಷ್ಯಃ ಎಂಬ ವಾಕ್ಯವು ಸುಳ್ಳಲ್ಲ ಪಾಪರಹಿತನಾದಂಥ ಪರಮ ಗುರುವಾದ ಯೇಸುಸ್ವಾಮಿಯಲ್ಲಿಡುವಂಥ ಭಕ್ತಿ ಮಾತ್ರ ನೀತಿಗೆ ಮೂಲಾಧಾರವಾಗಿದೆ ದೀಪಕ್ಕೆ ಎಣ್ಣೆಯು ಎಷ್ಟು ಅವಶ್ಯವಾದದ್ದೋ ಹಾಗೆಯೇ ನೀತಿಗೆ ಯೇಸುಕ್ರಿಸ್ತನ ಭಕ್ತಿಯು ಅಷ್ಟು ಅವಶ್ಯವಾಗಿದೆ

ಇದಲ್ಲದೆ ನೀತಿಯುಳ್ಳವನು ಖ್ಯಾತಿಪಟ್ಟನು ಎಂಬ ಮಾತು ಪುಸಿಯಲ್ಲ ನೀತಿಯು ದೇಶವನ್ನು ಉನ್ನತಿಕ್ಕೆ ತರುತ್ತದೆ ಎಂಬ ಕ್ರೈಸ್ತರ ವೇದ ವಾಕ್ಯವುಂಟು ಒಂದು ಕುಟುಂಬವನ್ನಾಗಲಿ ಅಥವಾ ಒಂದು ದೇಶವನ್ನಾಗಲಿ ಉನ್ನತ ಸ್ಥಿತಿಗೆ ತರುವಂಥಾದ್ದು ನೀತಿಯೇ ಇದಕ್ಕೆ ಅನೇಕ ದೃಷ್ಟಾಂತಗಳನ್ನು ಹೇಳಬಹುದು, ಸಮಯಕ್ಕೆ ಒಂದೆರಡನ್ನು ಮಾತ್ರ ಹೇಳುತ್ತೇನೆ ಕೆಲವು ವರುಷಗಳಿಗೆ ಮುಂಚೆ ಆಫ್ರಿಕ ಖಂಡದ ಒಬ್ಬ ರಾಜನು ಇಂಗ್ಲಾಂಡ್ ದೇಶದ ವಿಕ್ಟೋರಿಯಾ ಮಹಾರಾಣಿಯವರ ಬಳಿಗೆ ತನ ... ರಾಯಭಾರಿಯನ್ನು ಕಳುಹಿಸಿ ದೇಶಸ್ಥರು ವಿದ್ಯೆಯಲ್ಲಿಯೂ, ನಾಗರಿಕತ್ವದಲ್ಲಿಯೂ ಐಶ್ವರ್ಯದಲ್ಲಿಯೂ, ಬಲದಲ್ಲಿಯೂ ಲೋಕ ಪ್ರಖ್ಯಾತಿ ಪಡೆದಿದ್ದಾರಷ್ಟೆ ಇದಕ್ಕೆ ಕಾರಣವೇನು ? ಎಂದು ವಿಚಾರಿಸಿದನಂತೆ

ಮಹಾರಾಣಿಯವರು ಆ ರಾಯಭಾರಿಗೆ ಕ್ರೈಸ್ತರ ವೇದವನ್ನು ತೋರಿಸಿ ನನ್ನ ಪ್ರಜೆಗಳಾದ ಇಂಗ್ಲಿಷ್ ಜನರು ಈ ವೇದದ ಬೋಧನೆಯಂತೆ ನೀತಿಯುಕ್ತರಾಗಿ ಪ್ರವರ್ತಿಸುವವರಿಂದಲೇ ಇಂಥಾ ಉನ್ನತ ಸ್ಥಿತಿಗೆ ಬಂದಿದ್ದಾರೆ ಅವರ ಶ್ರೇಷ್ಠ ಸ್ಥಿತಿಗೆ ಇದೇ ಕಾರಣ ಈ ಕಾರಣವನ್ನು ನಿಮ್ಮ ರಾಜನಿಗೆ ತಿಳಿಸು ಎಂದು ಆ ರಾಯಭಾರಿಗೆ ಅಪ್ಪಣೆಕೊಟ್ಟು ಕಳುಹಿಸಿದರಂತೆ ಇದು ನಿಜವಾದ ಕಾರಣವಾಗಿದೆ ಯಾಕೆಂದರೆ ಇಂಗ್ಲಾಂಡ್ ದೇಶದ ಪೂರ್ವಿಕರ ಸ್ಥಿತಿಯು ಬಹು ಕನಿಷ್ಠವಾದದ್ದು ಅವರು ಕಾಡು ಜನರಂತೆ ಜೀವಿಸುತ್ತಿದ್ದರು ಯೇಸುಕ್ರಿಸ್ತನ ಭಕ್ತರಾಗಿ ಆತನ ಆಜ್ಞಾನುಸಾರವಾಗಿ ಪ್ರವರ್ತಿಸುವದಕ್ಕೆ ಯಾವಾಗ ಆರಂಭ ಮಾಡಿದರೋ ಆಗಿನಿಂದ ಅವರ ಸ್ಥಿತಿಯು ಮಾರ್ಪಾಟು ಹೊಂದುತ್ತಾ ಈಗಿರುವಂಥ ಉತ್ತಮ ಸ್ಥಿತಿಗೆ ಬಂದಿದ್ದಾರೆ

ನಮ್ಮ ದೇಶದಲ್ಲಿ ಈಗ ಕ್ರೈಸ್ತಮತಾವಲಂಬನೆ ಮಾಡಿರುವವರಲ್ಲಿ ಅನೇಕರು ಕೇವಲ ಬಡವರೂ ಕೀಳು ಜಾತಿಯವರೂ ಇದ್ದಾರೆ ಆದರೆ ಅವರ ಮೊದಲನೇ ಸ್ಥಿತಿಗೂ ಈಗಿನ ಸ್ಥಿತಿಗೂ ಎಷ್ಟೋ ಭೇದಯಿರುತ್ತದೆ ಕೆಲವು ವರುಷಗಳಿಗೆ ಮುಂಚೆ ನಮ್ಮ ಜಿಲ್ಲೆಯಲ್ಲಿ ಒಬ್ಬ ಡಿಪ್ಟಿ ಕಲೆಕ್ಟರು ಬಂದಿದ್ದರು ಅವರ ಪೂರ್ವಿಕರು ಕೇವಲ ಬಡವರೂ ಹೀನ ಕುಲದವರೂ ಆಗಿದ್ದಾಗ್ಯೂ ಅವರ ತಂದೆಯು ಕ್ರೈಸ್ತಮತಾವಲಂಬನೆಮಾಡಿ ಪಾದ್ರಿಗಳ ಸಹಾಯದಿಂದ ತನ್ನ ಮಕ್ಕಳಿಗೆ ವಿದ್ಯೆಯನ್ನು ಕಲಿಸಿದ ಕಾರಣ ಆ ಕುಟುಂಬವು ಇಂಥಾ ಉತ್ತಮ ಸ್ಥಿತಿಗೆ ಬಂದಿತಷ್ಟೆ ನಮ್ಮ ದೇಶದಲ್ಲಿ ಕ್ರೈಸ್ತಮತಸ್ಥರು ಎಲ್ಲೆಲ್ಲಿ ಇದ್ದಾರೋ ಅಲ್ಲಿಗೆ ನೀವು ಹೋಗಿ ವಿಚಾರಿಸಿದ್ದಾದರೆ ಇದಕ್ಕೆ ಅನುಗುಣವಾದ ಅನೇಕ ದೃಷ್ಟಾಂತಗಳನ್ನು ನೋಡಬಹುದು ಬೆಳೆಗೆ ಮಳೆಯು ಎಷ್ಟು ಅವಶ್ಯವಾಗಿದೆಯೋ ಹಾಗೆಯೇ ಮನಸ್ಸಿನ ಬೆಳೆಗೆ ಯೇಸುಕ್ರಿಸ್ತನ ಭಕ್ತಿಯು ಅಷ್ಟು ಅವಶ್ಯವಾಗಿದೆ ಮಳೆ ಸುರಿದ ಮೇಲೆ ಭೂಮಿಯ ಸ್ಥಿತಿಯು ಮಾರ್ಪಟ್ಟು ದೂಳೂ ಸೆಕೆಯೂ ಅಡಗಿಹೋಗಿ ಎಲ್ಲಿ ನೋಡಿದರೂ ಹಸುರಾಕ್ಕೆ ತಂಪು ಕಂಡಾಗಲಿಗೆ ಇಂಪು ಆದಂತೆ ... ಯೇಸುಕ್ರಿಸ್ತನ ಭಕ್ತಿಯು ಮನುಷ್ಯರ ದೇಹಾತ್ಮಗಳ ಕನಿಷ್ಠ ಸ್ಥಿತಿಯನ್ನು ಕಳೆದು ಉತ್ಕೃಷ್ಟ ಸ್ಥಿತಿಗೆ ತರುವಂಥಾದ್ದಾಗಿದೆ

ಇಷ್ಟರಲ್ಲಿ ಸೂರ್ಯಾಸ್ತಮಯವು ಸಮೀಪವಾದಕಾರಣ ಮಡಿವಾಳಯ್ಯನು ಆ ಪ್ರಸ್ತಾಪವನ್ನು ಮುಗಿಸಿ ... ಬಂದು ಈ ವರೆಗೂ ತನ್ನ ಮಾತುಗಳಿಗೆ ಲಕ್ಷ್ಯಕೊಟ್ಟು ... ನನಗೆ ಬಹಳ ಸಂತೋಷವಾಯಿತೆಂದು ಹೇಳಿದ್ದಲ್ಲದೆ ಪರಮ ಗುರುವಾದ ಯೇಸುಕ್ರಿಸ್ತನ ಚರಿತ್ರೆಯನ್ನೂ ಬೇರೆ ಕೆಲವು ಉತ್ತಮವಾದ ಪುಸ್ತಕಗಳನ್ನೂ ಅವರಿಗೆ ಸುಲಭವಾದ ಕ್ರಯಕ್ಕೆ ಕೊಟ್ಟನು ಅವರೆಲ್ಲರೂ ಆ ಪುಸ್ತಕಗಳನ್ನು ಸಂತೋಷದಿಂದ ತೆಗೆದುಕೊಂಡು ಹೊರಟರು ಮಡಿವಾಳಯ್ಯನು ಅರ್ಧ ದಾರಿಯವರೆಗೂ ಅವರನ್ನು ಸಾಗ ಕಳುಹಿಸಿ ಅವರಿಂದ ಅಪ್ಪಣೆ ತೆಗೆದುಕೊಂಡು ತಿರುಗಿ ತನ್ನ ಮನೆಗೆ ಬಂದನು

(ಸಂಪೂರ್ಣ)

ಮೈಸೂರು ದಸರಾ ಕೈಗಾರಿಕೆ ಮತ್ತೂ ಬೇಸಾಯದ ವಸ್ತುಪ್ರದರ್ಶನ ೧೯೦೮

ಕಾರ್ಯನಿರ್ವಾಹಕ ಸಂಘವು

ಪ್ರೆಸಿಡೆಂಟು

ಸರಕಾರಿ ಉದ್ಯಾನಗಳ ಸೂಪರಿಂಟೆಂಡೆಂಟರು ಮತ್ತೂ ಎಕನಾಮಿಕ್ ಬೋಟಾನಿಸ್ಟ್ ಮಿ ಜಿ ಎಚ್ ಕ್ರುಂಬಿಗಲ್‌ರವರು

ಕಮಿಟಿ ಮೆಂಬರುಗಳು

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ ಆರ್ ಎಚ್ ಕ್ಯಾಂಪ್‌ಬೆಲ್‌ರವರು ಚೀಫ್ ಇಂಜನೀಯರು ರೆವಿನ್ಯೂ ... ಮಿ ಎ ರಂಗಸ್ವಾಮ್ಯಯ್ಯಂಗಾರ್ಯರು ಸ್ಟೇಟ್ ಜಿಯಾಲಜಿಸ್ಟ್ — ಡಬ್ಲ್ಯು ಎಫ್ ಸ್ಮೀತ್‌ರವರು ನಿವ್ಯಾಭಾಸದ ... ಬಾಬುರಾಯರವರು ಸೀನಿಯರ್ ಸರ್ಜನ್ ಮತ್ತೂ ಸ್ಯಾನಿಟರಿ ಕಮಿಷನರ್ ... ರವರು ಎಕ್ಸೈಸ್ ಕಮಿಷನರ್ ಮಿ ಸ್ಲಾಕ್‌ರವರು ಮೈಸೂರು ಜಿಲ್ಲಾ ಮುನ್ಸಿಫ್ ... ಜಸ್ಟ ದಾ ಕೊಲ್‌ವಾರ್ಡ್‌ರವರ ... ದೇವರಾಜ ಅರಸಿನವರು ಫಾರೆಸ್ಟುಗಳ ಕನ್ಸರ್ವೇಟರು ... ಮುತ್ತಣ್ಣನವರು, ಮೈಸೂರು ಡಿ ... ಕಾಂತರಾಜ ಅರಸಿನವರು ಬೆಂಗಳೂರು ಡಿ ಕ॥ ಮಿ॥ ಬಿ ಜಿ ಕುಮಾರಸ್ವಾಮಿ ನಾಯುಡುರು, ಬೆಂಗಳೂರು ಸೂ॥ ಇಂಜನಿಯರ್ ಮಿ ಡಿ ಸೀತಾರಾಮರಾಯರು ಗವರ್ನಮೆಂಟ್ ಪ್ರೆಸ್ ಸೂ॥ ಮಿ॥ ಸಿ ಎಚ್ ... ರವರು, ಮೈಸೂರ್ ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್ ಮಿ ... ವೀರ್‌ರವರು, ಪಾಟರ್ ವರ್ಕ್ಸ್ ... ಇಂಜಿನಿಯರ್ ಮೈ ಎ ರಂಗಸ್ವಾಮಯ್ಯಂಗಾರ್ಯರು ದರ್ಬಾರ್ ಬಕ್ಷಿ ಮಿ ಎಚ್ ಲಿಂಗರಾಜ ಅರಸಿನವರು, ಅಮೃತಮಹಲ್ ಸೂ ಮೇ ಎಚ್ ... ಅರಸಿನವರು, ಮೈಸೂರ ಕೈಗಾರಿಕೆಯ ಶಾಖೆಯ ಸೂ ಮೈ ಜಿ ಸುಬ್ಬಸ್ವಾಮಿ ಅಯ್ಯರ್‌ರವರು (ಸೆಕ್ರೆಟರಿ), ನಜರುಬಾದ ... ನರಸಿಂಹಯ್ಯಂಗಾರ್ಯರು, ರಿಟೈರ್ಡ್ ಎ॥ ಇಂಜನೀರ್ ಮಿ॥ ಬಿ ಪಿ ರಾಘವಲುನಾಯುಡುಯ್ಯವರು, ಮೈಸೂರು ರಿಟೈರ್ಡ್ ... ಮಿ ಮಹಮದ್ ಜಾಫರ್‌ರವರು, ಮೈಸೂರು ಅಡ್ವೋಕೇಟ್ ಮಿ ಪಿ ... ಮೈಸೂರು ಮು॥ ಕಮಿಷನರ್ ಮಿ॥ ಅಂಬ್ಲೆ ಅಣ್ಣಯ್ಯಪಂಡಿತರು, ಮೈಸೂರು ವರ್ತಕರು ಮು॥ ಅನಂತರಾಜಯ್ಯನವರು, ಮೈಸೂರ ವರ್ತಕರು ಮಿ॥ ಎಂ ಎಲ್ ವಾಸುದೇವಯ್ಯನವರು

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಜೂಲೈ ತಾ|| ೨೯ ನೇ ಗುರುವಾರ

ಹಿಂದುಸ್ಥಾನದ ಜನರಲ್ಲಿ ಅರಾಜಕಕೃತ್ಯಗಳು.

ಮದನ ಲಾಲನು ಲಂಡನ್ ಪಟ್ಟಣದಲ್ಲಿ ಸರ್ ವಿಲ್ಲಿಯಂ ಕರ್ಜನ್ ವೈಲಿ ಎಂಬ ಅಧಿಕಾರಿಯನ್ನೂ, ಲಾಲ್‌ಕಾಕ ಎಂಬ ವೈದ್ಯನನ್ನೂ ಕೊಂದುಹಾಕಿದ್ದೂ, ನ್ಯಾಯಾಧಿಪತಿಯು ದಯಾದಾಕ್ಷಿಣ್ಯ ಮಾಡಿ ಆ ಕೊಲೆಗೇಡಿಗೆ ಮರಣದಂಡನೆಯನ್ನು ವಿಧಿಸಿದ್ದೂ ನೋಡಿದರೆ ನಮ್ಮ ಹಿಂದುಸ್ಥಾನದ ಜನಾಂಗಗಳಲ್ಲಿ ಅರಾಜಕ ಕೃತ್ಯಗಳನ್ನು ನಡಿಸುವ ಪಕ್ಷವು [illegible] ಎಂಬ ವಿಚಾರವು ಮನಸ್ಸಿಗೆ ಬರುತ್ತದೆ. ಅಂಥಾ ಪಕ್ಷವು ಇಲ್ಲವೇ ಇಲ್ಲವೆಂದು ಹೇಳುವದು ಎಷ್ಟುಮಾತ್ರಕ್ಕೂ ಒಪ್ಪತಕ್ಕ ಮಾತಲ್ಲ. ಇದುವರೆಗೆ ನಡಿಸಲ್ಪಟ್ಟಿರುವ ಕ್ರೂರ ಕೃತ್ಯಗಳೂ, ಧಾರಾಳವಾಗಿ ಬರೆದು ಅಚ್ಚು ಹಾಕಿ ವಿಸ್ತಾರವಾಗಿ ಪ್ರಚಾರ ಮಾಡಲ್ಪಟ್ಟಿರುವ ಬರವಣಿಗೆಗಳೂ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಎಷ್ಟೋ ದುಷ್ಟವೂ ಅತ್ಯಂತ ಹೇಯವೂ ಆದ ಅಭಿಪ್ರಾಯಗಳನ್ನು ಹಿಂದುಸ್ಥಾನದಲ್ಲಿ ಕೆಲವು ಜನರು ಅನುಮೋದಿಸಿರುತ್ತಾರೆನ್ನುವದಕ್ಕೆ ಸಂಶಯವಿಲ್ಲ. ರಾಜರುಗಳೂ ಸಮಸ್ತ ಅಧಿಪತಿಗಳೂ ಪ್ರಜಾ ಕೋಟಿಗಳ ಶತ್ರುಗಳಾಗಿರುತ್ತಾರೆಂಬುವದೂ ಅವರನ್ನು ಕ್ರೂರ ಹಿಂಸೆಗೆ ಗುರಿಪಡಿಸಿ ಕೊಂದುಹಾಕುವದು ಪಾಪ ಕೃತ್ಯವಲ್ಲವೆಂಬುವದೂ, ಅದು ಧರ್ಮವೂ ಸ್ತೋತ್ರಾರ್ಹವೂ ಆದ ಕೃತ್ಯವೆಂಬುವದೂ [illegible] ಅಭಿಪ್ರೇತವಾಗಿರುತ್ತದೆ. ಹ್ಯಾಗೂ ಇಂಥಾ ಅಭಿಪ್ರಾಯದಿಂದಲೇ ಆ ಕೊಲೆಗೇಡಿಯು ಸರ್ ಕರ್ಜನ್ ವೈಲಿಯವರನ್ನು ಕೊಂದುಹಾಕಿದನೆಂದು ಧಾರಾಳವಾಗಿ ಹೇಳಬಹುದು. ಈ ರೀತಿಯಾದ [illegible] ಶ್ಯಾಮಜಿ ಕೃಷ್ಣವರ್ಮರವರು ಪ್ರಚುರಪಡಿಸಿದ್ದರಿಂದ ಅವರ ಉದ್ದೇಶವು ನಮ್ಮ ದೇಶದ ಜನರಲ್ಲಿ ಎಷ್ಟು ಮಟ್ಟಿಗೆ ಸಾರ್ಥಕವಾಗಿರುವದೋ ನಮಗೆ ತಿಳಿಯದು. ಆದರೆ ದರ್ಪವನ್ನೂ ಪ್ರಜಾ ನಮ್ಮವರನ್ನೂ ಕಾಪಾಡಬೇಕೆಂದು ಸಾಹಸಪಡತಕ್ಕವರನ್ನು ಕೊಂದುಹಾಕಿ ಪ್ರಾಣತ್ಯಾಗ ಮಾಡುವದಕ್ಕೂ ಸಿದ್ಧರಾಗಿರುವಂಥವರು ನಮ್ಮ ಜನರಲ್ಲಿ ಕೆಲವರು ಏರ್ಪಟ್ಟಿರುತ್ತಾರೆ.

ಇಂಥಾ ಕೇಡು ಬುದ್ಧಿಯು ಕೆಲವರಲ್ಲಿರುವದೇ ಹೊರತು ಈ ರಾಷ್ಟ್ರದ ಬಹು ಪ್ರಜಾ ಕೋಟಿಗಳೆಲ್ಲಾ ಆ ಕೃತ್ಯಗಳಲ್ಲಿ ಸ್ವಲ್ಪವೂ ಸಹನಭಾವವನ್ನುಳ್ಳವರಾಗಿಲ್ಲವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಅವರು ಈ ಕೃತ್ಯಗಳನ್ನು ನೀಚವಾದವುಗಳೆಂದು ತಿಳ್ಳಗಳಾದವರಾಗಿದ್ದಾರೆ, ಅವುಗಳ ಸುದ್ದಿಯನ್ನು ಕೇಳಿ ಗಾಬರಿಪಡುವರು ಮತ್ತು ಕೊಲೆಯನ್ನು ನಡಿಸಿದ ಮದನ ಲಾಲನಿಗೆ ಆದ ಮರಣದಂಡನೆಯನ್ನೂ "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ದುಷ್ಟವಾದ ಮಾಸ ಪತ್ರಿಕೆಯನ್ನು ಅಚ್ಚು ಹಾಕಿ ಕೊಡುತ್ತಿದ್ದವನಿಗೆ ಆದ ಸಜಾ ಶಿಕ್ಷೆಯನ್ನೂ ನ್ಯಾಯವಾದವುಗಳೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೂ ನಾವೆಲ್ಲಾ ಎಚ್ಚರಿಕೆಯಿಂದ ಅಂಥಾ ಭಯಂಕರವಾದ ಸಲಹೆಗಳಿಂದ ಸಂಭವಿಸುವ ಅಪಾಯವಾದ ಕೆಡುಕನ್ನು ಪ್ರಕಾಶಪಡಿಸಿ ಕೇಡಿಗಳು ನಮ್ಮ ಮಧ್ಯ ಇದ್ದರೆ ಅವರನ್ನು ನಿರ್ಮೂಲಪಡಿಸಬೇಕಾಗಿರುತ್ತದೆ. ಯಾಕೆಂದರೆ ಅಂಥಾ ದುಷ್ಟಾಭಿಪ್ರಾಯಗಳನ್ನು ಪಡೆದಿರುವವರು ನಮ್ಮ ದೇಶಕ್ಕೆ ಮಾತ್ರವೇ ಅಲ್ಲ, ಮನುಷ್ಯ ಜಾತಿಗೇನೇ ಶತ್ರುಗಳಾಗಿರುತ್ತಾರೆ.

ಮದನಲಾಲನ ರಕ್ತಸಂಬಂಧಿಗಳ ವಿಷಯದಲ್ಲಿ ನಾವು ಅನುತಾಪಪಡುತ್ತೇವೆ. ಅವನು ಸಣ್ಣ ವಯಸ್ಸಿನಲ್ಲೇ ದುರ್ಮಾರ್ಗಕ್ಕೆ ಸಿಕ್ಕಿ ಕೆಟ್ಟು ಹೋದನು, ಅಂಥಾ ಕ್ರೂರವಾದ ಅಭಿಪ್ರಾಯವನ್ನು ಇಟ್ಟುಕೊಂಡು ಅಷ್ಟು ಹೇಯವಾದ ಕೃತ್ಯವನ್ನು ನಡಿಸಿದನಷ್ಟೆ. ಆ ಕೃತ್ಯದ ಫಲಪರಿಣಾಮವನ್ನು ಅವನು ತಿಳಿಯದೆ ಹೋದನು, ಮತ್ತು ತಿಳಿಯುವುದಕ್ಕೆ ಅವನಿಗೆ ಯೋಗ್ಯತೆಯೂ ಇರಲಿಲ್ಲ. ಅವನ ರಕ್ತ ಸಂಬಂಧಿಗಳು ಇಂಥಾ ಕೊಲೆಗೇಡಿಯು ತಮ್ಮ ಮಧ್ಯೆ ಇದ್ದನಲ್ಲಾ ಎಂದು ವಿಷಾದಿಸುವದೇನೂ ಆಶ್ಚರ್ಯವಲ್ಲ. ಅವನಿಂದ ಅವನ ಸಂಸಾರಕ್ಕೆಲ್ಲಾ ಅವಮಾನವು ಬಂದೊದಗಿತು. ವಾಚಕರೇ, ಇಂಥಾ ದುರ್ಬೋಧನೆಯು ನಮ್ಮ ನಮ್ಮ ಸಂಸಾರ ಮನೆ ಮಕ್ಕಳ ವರೆಗೂ ವ್ಯಾಪಿಸದ ಹಾಗೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಅದಕಾರಣ ನಮ್ಮ ಮಕ್ಕಳಿಗೆ ನಾವು ಸರಿಯಾದ ವಿದ್ಯೆ [illegible] ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಯೋಗ್ಯರೂ ಗುಣವಂತರೂ ಪೂಜ್ಯರೂ ಆದ ಉಪಾಧ್ಯಾಯರು [illegible] ಮನೆಗಳಿಗೂ ವಿದ್ಯಾಶಾಲೆಗಳಿಗೂ ಮಕ್ಕಳನ್ನು ಕಳುಹಿಸಬೇಕಾಗಿದೆ. ಇಷ್ಟೇ ಅಲ್ಲ. ಬಾಲಕರು ಮನೆಗಳಲ್ಲಿ ಓದುವಂಥಾ ಪುಸ್ತಕಗಳನ್ನೂ, ಹೊರಗಡೆ ಅವರ ಸಹವಾಸದಲ್ಲಿ ಇರುವ ಇತರ ಬಾಲಕರ ಶೀಲಸ್ವಭಾವಗಳನ್ನೂ ಅತ್ಯಂತ ಜಾಗರೂಕತೆಯಿಂದ ವಿಚಾರಣೆ ಇಟ್ಟು ನೋಡಿಕೊಳ್ಳುತ್ತಾ ಬರಬೇಕಾದದ್ದು ಈ ಕಾಲದಲ್ಲಿ ಪರಮಾವಶ್ಯವಾಗಿದೆ. ಅವರು ವಯಸ್ಸಿನಲ್ಲಿ ಬೆಳೆದ ಹಾಗೆಲ್ಲಾ ಸದ್ಭಕ್ತಿ ಸದ್ಗುಣ ಸದಾಚಾರ ಶೀಲರಾಗಿಯೂ ಬೆಳೆಯುವಂತೆಯೂ, ತಮ್ಮ ದೇಶಕ್ಕೂ ಮನುಷ್ಯ ಜಾತಿಗೂ ಶತ್ರುಪ್ರಾಯರಾದ ದುಷ್ಟಜನರನ್ನು ತುಚ್ಛವಾಗಿ ಕಂಡು ಅವರ ಸಲಹೆಗಳನ್ನು ಹಗೆ ಮಾಡುವಂತೆಯೂ ಆಗುವದನ್ನು ತಂದೆ ತಾಯಿಗಳೂ ಪೋಷಕರೂ ದೇಶವತ್ಸಲರೂ ಮುತುವರ್ಜಿಯಾಗಿ ನೋಡಿಕೊಳ್ಳುತ್ತಾ ಬಂದಾರೆಂದು ನಂಬಿ ಹಾರೈಸುತ್ತೇವೆ.

ಭಕ್ತಿಸಮ್ಮೇಲನ

ಕಳೆದ ಒಂದು ವಾರದಿಂದ ತುಮಕೂರಿನಲ್ಲಿ ನಡೆಯುತ್ತಿದ್ದ ಕ್ರೈಸ್ತ ಪ್ರಸಂಗಿಗಳ ಸಮ್ಮೇಲನವು ಮೊನ್ನೆ ಮಂಗಳವಾರ ಸಾಯಂಕಾಲಕ್ಕೆ ಮುಕ್ತಾಯವಾಯಿತು. ಮೊಟ್ಟಮೊದಲ ಸಮ್ಮೇಲನದಿಂದ [illegible] ವಾದೀತೆನ್ನುವದರಲ್ಲಿ ಸಂಶಯವಿರಲಿಲ್ಲ. ಸಮ್ಮೇಲನಕ್ಕೆ ವೆಸ್ಲಿಯನ್ ಮಿಷನ್ ಸಂಘದ ಉಪದೇಶಿಗಳೂ ಲಂಡನ್ ಮಿಷನ್ ಸಂಘದ ಉಪದೇಶಿಗಳಲ್ಲಿ ಕೆಲವರೂ ಕೂಡಿ ಬಂದು ಭಗವತ್ಪ್ರಾರ್ಥನೆಯಲ್ಲಿ [illegible] ಭಕ್ತಿವೃದ್ಧಿಗೂ ಆತ್ಮೀಯ ಪ್ರೇರಣೆಗೂ ಸಹಕಾರಿಗಳಾದ ಉಪನ್ಯಾಸಗಳನ್ನು ಕೇಳಿದರು.

ಸಮ್ಮೇಲನದ ವಿವಿಧ ಕೂಟಗಳು ಕಳೆದ ಗುರುವಾರ ಪ್ರಾರಂಭವಾಗಿ ಮೊನ್ನೆ ಮಂಗಳವಾರ ಸಾಯಂಕಾಲದ ವರೆಗೂ ನಡೆದವು. ಕೂಟಗಳಿಗೆ ಅನೇಕರು ಬಂದು ತಮ್ಮ ಭಕ್ತಿಯನ್ನು ಯಥೋಚಿತವಾಗಿ ವ್ಯಕ್ತಪಡಿಸಿದುದಲ್ಲದೆ ತಮ್ಮ ಅಂತರ್ಯದ ಗುಣ ಸ್ವಭಾವಗಳ ವಿಷಯ ದೀರ್ಘವಾಗಿ ಯೋಚಿಸಿದರು. ಭಗವತ್ಪ್ರಾರ್ಥನೆಯಲ್ಲಿಯೂ ದೇವರು ಮೆಚ್ಚತಕ್ಕ ಜೀವಮಾನದ ವಿಷಯದಲ್ಲಿಯೂ ಆತನ ಒಪ್ಪಿಗೆಗೆ ಅನುಸಾರವಾದ ಕೆಲಸದ ವಿಷಯದಲ್ಲಿಯೂ ಹೆಚ್ಚಿನ ಸಮಯವು ವಿನಿಯೋಗಿಸಲ್ಪಟ್ಟಿತು. ಅನೇಕರು ತಾವು ಮಾಡತಕ್ಕ ದೇವರ ಸೇವೆಯ ವಿಷಯ ಹೆಚ್ಚಿನ ತಿಳುವಳಿಕೆಯನ್ನು ಹೊಂದಿಕೊಂಡರು. ಅವರು ದೇವರ ವಿಷಯ ತಮಗಿರುವ ಕರ್ತವ್ಯವನ್ನು ಕುರಿತೂ ತಮ್ಮ ಜೊತೆ ಸೃಷ್ಟಿಗಳಾದ ಮನುಷ್ಯರಿಗೆ ಸಲ್ಲಿಸತಕ್ಕ ಹಂಗಿನ ವಿಷಯವೂ ವಿಶೇಷವಾದ ತಿಳುವಳಿಕೆಯನ್ನು ಹೊಂದಿಕೊಂಡುದುದಲ್ಲದೆ ತಮ್ಮ ಜಾತಿ ಕುಲಬಾಂಧವರ [illegible] ಸೇವೆಯ ಕೈಕೊಳ್ಳುವದುಗಳಿಂದ ಪ್ರೇರಿತರಾಗಿ ತಮ್ಮ ಊರುಗಳಿಗೆ ತೆರಳಿದರು.

ಮೈಸೂರು ದೇಶದಲ್ಲಿ ಭಕ್ತಿ ಸಾಧನೆಯು ಹೆಚ್ಚಾಗಬೇಕೆಂದು ಎಲ್ಲರು ಅಪೇಕ್ಷಿಸತಕ್ಕದ್ದು. ಮೈಸೂರು ದೇಶೀಯರೆಲ್ಲರೂ ಸತ್ಯವಂತರೂ ಸಚ್ಚರಿತ್ರರೂ ಯೋಗ್ಯರೂ ಆಗಬೇಕೆಂದು ಪ್ರಾರ್ಥಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ತುಮಕೂರಿನಲ್ಲಿ ಕೂಡಿಬಂದಿದ್ದ ಪ್ರಸಂಗಿಗಳು ದೇವರ ಆತ್ಮನು ತಮ್ಮೊಳಗೆ ಕಾಣಿಸಿಕೊಂಡು ತಮ್ಮೆಲ್ಲರನ್ನು ಪ್ರೇರಿಸುವನೆಂದು ನಿರೀಕ್ಷಿಸುತ್ತಿದ್ದರು. ಈ ನಿರೀಕ್ಷೆಯೇ ಅವರ ಮುಖ್ಯ ಕೋರಿಕೆಯಾಗಿತ್ತು. ಭಗವಂತನು ಮನುಷ್ಯರ ಹೃದಯಗಳೊಳಗೆ ವಾಸಮಾಡುತ್ತಾ ಅವರು ತನ್ನ ವಿಷಯ ನಿಜ ಜ್ಞಾನವನ್ನು ಪಡೆದುಕೊಳ್ಳುವದಕ್ಕೆ ಅವರನ್ನು ಪ್ರೇರಿಸುತ್ತಾ ಅವರು ತಮ್ಮ ಕರ್ತವ್ಯವನ್ನು ನೆರವೇರಿಸುವದಕ್ಕೂ ತನ್ನ ಕಟ್ಟಳೆಗಳನ್ನು ಕೈಕೊಳ್ಳುವದಕ್ಕೂ ತಕ್ಕ ಸಹಾಯವನ್ನು ದಯಪಾಲಿಸುತ್ತಾ ಬರುತ್ತಾನೆನ್ನುವದರಲ್ಲಿ ಸಂಶಯವೇನು. ಮೇಲ್ಕಂಡ ಪ್ರಸಂಗಿಗಳ ಸಮ್ಮೇಲನದ ಮೂಲಕ [illegible] ಅವರಿಗೆ ಉಪದೇಶಮಾಡತಕ್ಕ ಬೋಧಕರಿಗೂ ದೇವರ ಆಶೀರ್ವಾದವು ಹೆಚ್ಚಾಗಿ ಲಭಿಸಲೆಂದು ಹಾರೈಸುವೆವು.

ಮೈಸೂರು ಸರ್ಕಾರಿ ಹುಕುಮುಗಳು

ಮನೆ ಕಟ್ಟುವದಕ್ಕೆ ಅಡ್ವಾನ್ಸ್ ಕೊಡುವದು

ಸರ್ಕಾರಿ ನೌಕರರು ಯಾವ ಸ್ಥಳದಲ್ಲಿ ನೌಕರಿ ಮಾಡುತ್ತಿರುವರೋ ಅಥವಾ ಅವರು ಎಲ್ಲಿ ಇರಲಿ ಬಯಸುವರು ಸರ್ಕಾರದವರ ಅನುಮತಿಯೋ ಅಂಥಾ ಸ್ಥಳದಲ್ಲಿ ನೌಕರರು ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ಅವರಿಗೆ ಸರ್ಕಾರದವರು ಅಡ್ವಾನ್ಸನ್ನು ಕೊಡಬಹುದು. ಆದರೆ ನೌಕರರು ಒಂದು ಕಡೆ ಕೆಲಸ ಮಾಡುತ್ತಿದ್ದು [illegible] ಅವರು ಮನೆ ಕಟ್ಟಿಕೊಳ್ಳಬೇಕೆಂದು ಅಪೇಕ್ಷಿಸಿದರೆ ಅಂಥವರಿಗೆ ಅಡ್ವಾನ್ಸು ದೊರೆಯಲಾರದು. ಆದರೂ ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ ಟೌನ್‌ಗಳ ಹೊಸ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟುವಂತೆ ಪ್ರೋತ್ಸಾಹಪಡಿಸುವದಕ್ಕೋಸ್ಕರ ಮೇಲ್ಕಂಡ ನಿರ್ಬಂಧವನ್ನು ತಪ್ಪಿಸಿದೆ, ಅಂದರೆ ಸರ್ಕಾರಿ ನೌಕರರು ಆ ಮೂರು ಕಡೆಗಳಲ್ಲಿ ಹೊಸ ಮನೆಗಳನ್ನು ಕಟ್ಟುವದಕ್ಕೆ ಇಷ್ಟಪಡುವದಾದರೆ ಸರ್ಕಾರದವರು ಅಂಥವರಿಗೆ ಅಡ್ವಾನ್ಸುಗಳನ್ನು ಕೊಡುತ್ತಾರೆ.

ಕ್ಷಾಮದ ಅಲೋಯನ್ಸುಗಳು

ಪ್ರಜೆಗಳ ಆಹಾರಕ್ಕೆ ಮುಖ್ಯ ಧಾನ್ಯವಾದ ರಾಗಿಯ ಧಾರಣೆಯು ಮೈಸೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ರೂಪಾಯಿಗೆ ೧೨ ಸೇರು ಆಗಿದೆ ಎಂದೂ ಬೆಂಗಳೂರು, ಕೋಲಾರ, ತುಮಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ೧೨ ಸೇರಿಗಿಂತ ಕಡಮೆಯಾಗಿದೆ ಎಂದೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗುವ ತಖ್ತೆಗಳಿಂದ ಗೊತ್ತಾಗುತ್ತದೆ. ಧಾರಣೆಯು ೧೬ ಸೇರಿಗಿಂತ ಕಡಮೆಯಾಗಿರುವಾಗ್ಗೆ ಸರ್ಕಾರಿ ನೌಕರರಿಗೆ ಧಾನ್ಯದ ಅಲೋಯನ್ಸುಗಳನ್ನು ಕೊಡತಕ್ಕದ್ದೆಂದು ವಿಧಿಸಲ್ಪಟ್ಟಿದೆಯಾದಕಾರಣ ಗವರನ್‌ಮೆಂಟಿನಿಂದ ಹಿಂದೆ ಸ್ಯಾಂಕ್ಷನ್ ಆಗಿರುವ ಪ್ರಕಾರ ಅಲೋಯನ್ಸನ್ನು ೧೯೦೯ ನೇ ಇಸವಿ ಜೂನ್ ಒಬ್ಬರು ವರೆಗೆ ಬೆಂಗಳೂರು, ಕೋಲಾರ, ತುಮಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಪಾವತಿ ಆಗತಕ್ಕದ್ದು. ಈಗ ಪಾವತಿ ಆಗುತ್ತಿರುವ ನೌಕರರಿಗೆ ಅದೇ ದರಗಳಂತೆ ಈ ಅಲೋಯನ್ಸನ್ನು ಒಟವಾಡಿ ಮಾಡಬೇಕಾಗಿದೆ.

ಧರ್ಮಾರ್ಥವಾದ ಡಿಪಾಜಿಟ್ಟುಗಳ ಬಡ್ಡಿ.

ಪ್ರಜೆಗಳ ಪೈಕಿ ಯಾರಾದರೂ ಪರೋಪಕಾರಾರ್ಥವಾದ ಅಥವಾ ಧರ್ಮಾರ್ಥವಾದ ಇಲ್ಲವೇ ವಿದ್ಯಾಪ್ರೋತ್ಸಾಹಕರವಾದ ಕಾರ್ಯಗಳನ್ನು ನಡಿಸುವದಕ್ಕೋಸ್ಕರ ದ್ರವ್ಯವನ್ನು ಠೇವಾಗಿ ಇಟ್ಟು ಸರ್ಕಾರದವರಿಗೆ ವಹಿಸುವದಾದರೆ ಗವರನ್‌ಮೆಂಟಿನವರು ಅಂಥಾ ಹಣವನ್ನು ಅಂಗೀಕರಿಸುವರು. ಈ ಹಣವು ೩,೦೦೦ ರೂಪಾಯಿಗೆ ಕಡಮೆಯಾಗಬಾರದು ೧೦,೦೦೦ ರೂಪಾಯಿಗಿಂತ ಹೆಚ್ಚಾಗಬಾರದು. ಇಂಡಿಯಾ ಗವರ್ನ್‌ಮೆಂಟಿನವರು [illegible] ಸೆಕ್ಯೂರಿಟಿಗಳಿಗೆ ಕಾಲದ ಪ್ರಕಾರ ಬರುವ ದರದ ಪ್ರಕಾರ ಬಡ್ಡಿಯನ್ನು ಗೊತ್ತು ಮಾಡಿರುವರೋ ಆ ಬಡ್ಡಿಗಿಂತಲೂ ಶೇಕಡಾ ಅರ್ಧ ರೂಪಾಯಿ ಜಾಸ್ತಿಯಾಗಿ ಬಡ್ಡಿಯನ್ನು ಮೈಸೂರು ಸರ್ಕಾರದವರು ಮೇಲ್ಕಂಡ ಧರ್ಮಫಂಡುಗಳ ಹಣಕ್ಕೆ ಕೊಡುವರು. ಅದಕ್ಕಿಂತಲೂ ಹೆಚ್ಚು ದರವನ್ನು ಕೊಡುವದಿಲ್ಲ. ಈ ಷರತ್ತಿಗೆ ಒಪ್ಪತಕ್ಕವರು ಹಣವನ್ನು ಸರ್ಕಾರಕ್ಕೆ ವಹಿಸಿದಲ್ಲಿ ಅವರು ಸರ್ಕಾರಕ್ಕೆ ಒಂದು ಕರಾರನ್ನು ಬರೆದುಕೊಡಬೇಕಾಗಿದೆ. ಅಸಲ್ ಹಣವನ್ನಾಗಲಿ, ಅದರ ಬಡ್ಡಿ ಭಾಗವನ್ನಾಗಲಿ ವಾಪಸ್ ಕೇಳುವದಿಲ್ಲವೆಂದೂ, ಅದು ಬಡ್ಡಿಯನ್ನು ಮೊದಲೇ ಗೊತ್ತುಮಾಡಲ್ಪಟ್ಟ ಧರ್ಮಕ್ಕಲ್ಲದೆ ಅನ್ಯಥಾ ವಿನಿಯೋಗಿಸುವದಿಲ್ಲವೆಂದೂ, ಸರ್ಕಾರದವರು ನಿರ್ಧಾರಿತವಾಗುವ ರೀತಿಯಲ್ಲಿ ಆ ಧರ್ಮದ ಖರ್ಚುಬಾಬುಗಳ ಲೆಕ್ಕಗಳನ್ನು ಇಡುವದಾಗಿಯೂ, ಸರ್ಕಾರಿ ಅಧಿಕಾರಿಗಳು ಅಪೇಕ್ಷಿಸುವಲ್ಲಿ ಅಂಥಾ ಲೆಕ್ಕಗಳನ್ನು ಹಾಜರುಮಾಡುವದಾಗಿಯೂ ಒಪ್ಪಿ ಕರಾರು ಬರೆದುಕೊಡಬೇಕು. ಈ ಕರಾರು ಬರೆದುಕೊಟ್ಟದ್ದಾಗ್ಯೂ ಉದ್ದೇಶಪಟ್ಟ ಧರ್ಮಕ್ಕೆ ಬಡ್ಡಿಯು [illegible] ವಿನಿಯೋಗವಾಗಲಿಲ್ಲವೆಂದು ಕಂಡುಬಂದರೆ ಸರ್ಕಾರದವರು ಬಡ್ಡಿಯನ್ನು ಪಾವತಿಮಾಡದೆ ತಡೆದು ಬಿಡುವರು. [illegible] ತೃಪ್ತಿಕರವಾದ ಏರ್ಪಾಡು [illegible] ಎಂದು ಗೊತ್ತಾದಾಗ ಸರ್ಕಾರದವರು ಬಡ್ಡಿಯ ಹಣವನ್ನು ಪಾವತಿಮಾಡುವರು.

೧೯೦೮ ನೇ ವರುಷದ ದಸರಾ ಪ್ರದರ್ಶನದ ರಿಪೋರ್ಟು

ಕಳೆದ ೧೯೦೮ ನೇ ಇಸವಿಯ ನವರಾತ್ರಿಯಲ್ಲಿ ರಾಜಧಾನಿಯಲ್ಲಿ ನಡೆದ ಎರಡನೇ ವರ್ಷದ ಪ್ರದರ್ಶನವನ್ನು ಕುರಿತು ರಿವಿನ್ಯೂ ಕಮಿಷನರ್‌ರವರು ಬರೆದಿದ್ದ ರಿಪೋರ್ಟನ್ನು ಪರಾಂಬರಿಸಿ [illegible] ಬರೆದಿರುವ ಹುಕುಂ ಏನೆಂದರೆ — ೧೯೦೭ ನೇ ವರುಷದಲ್ಲಿ ನಡದ ಪ್ರದರ್ಶನಕ್ಕಿಂತಲೂ ೧೯೦೮ ರಲ್ಲಿ ನಡದ ಪ್ರದರ್ಶನವು ಬಹು ಉತ್ತಮವಾಗಿತ್ತೆಂದು ಹೇಳಬಹುದು. ಪ್ರದರ್ಶನ ಮಾಡಲ್ಪಟ್ಟ ವಸ್ತುಗಳ ಸಂಖ್ಯೆಯು ಹಿಂದಿನ ವರುಷಕ್ಕಿಂತ ಹೆಚ್ಚಾಗಿತ್ತು. ನಾಗಪುರದಲ್ಲಿ ಅದೇ ಸಮಯದಲ್ಲಿ ಒಂದು ಪ್ರದರ್ಶನವು ಏರ್ಪಾಡಾಗಿ ನಡೆದದ್ದರಿಂದ ಮಧ್ಯಪ್ರಾಂತಗಳ ದಲೂ ಬೊಂಬಾಯಿ ಆಧಿಪತ್ಯದಿಂದಲೂ ವಿಶೇಷ ವಸ್ತುಗಳು [illegible] ಆದರೂ ಹಿಂದಿನ ವರುಷ ಆ ಸ್ಥಳಗಳಿಂದ ಮಾತ್ರ ವಸ್ತುಗಳು ಕಳುಹಿಸಲ್ಪಟ್ಟಿದ್ದವೆಂದೂ ೧೯೦೮ ನೇ ವರುಷದ ಪ್ರದರ್ಶನಕ್ಕೆ [illegible] ಪ್ರದರ್ಶನ ಪದಾರ್ಥಗಳು [illegible] ಪ್ರದರ್ಶನವು [illegible] ದಿನಗಳ ವರೆಗೆ ತೆರೆದಿಡಲ್ಪಟ್ಟಿದ್ದರೂ [illegible] ಜನರು ಬಂದು ನೋಡಿದರು. ಎರಡನೆಯ ಪ್ರದರ್ಶನವನ್ನು [illegible] ದಿನಗಳ ವರೆಗೆ [illegible] ತೆರೆದಿದ್ದರೂ [illegible] ಜನರು ಬಂದು ವಸ್ತುಗಳನ್ನು ನೋಡಿ [illegible] ಗಿರುತ್ತಾರೆ. ೧೯೦೭ ನೇ ವರುಷದ ಪ್ರದರ್ಶನಕ್ಕೆ [illegible] ರೂಪಾಯಿ ಖರ್ಚಾಯಿತು. ೧೯೦೮ ನೇ ವರುಷದ ಪ್ರದರ್ಶನಕ್ಕಾದರೋ [illegible] ರೂಪಾಯಿ [illegible] ಗಿರುತ್ತದೆ. ಇನ್ನೂ [illegible] ಬರುವ ವೆಚ್ಚಗಳು ಉಳಿದಿರುವವು. ಇವನ್ನು ಮುಂದಕ್ಕೆ [illegible] ಒಟ್ಟಿನಲ್ಲಿ ಹುಟ್ಟುವಳಿ ಮತ್ತು [illegible] ವಜಾಮಾಡಿದಲ್ಲಿ ಈ ಎರಡನೆಯ ಪ್ರದರ್ಶನಕ್ಕೆ [illegible] ರೂಪಾಯಿ ಖರ್ಚಾಗಿರುವತೆ ಗೊತ್ತಾಗುತ್ತದೆ.

ಸರ್ಕಾರಿ ನೌಕರರಲ್ಲಿ [illegible] ಈ ಪ್ರದರ್ಶನವನ್ನು [illegible] ಸಹಾಯವಿರುತ್ತಾರಲ್ಲದೆ ಇದರಲ್ಲಿ [illegible] ಆಗಿರುತ್ತದೆ. [illegible] ಕಾಲಕ್ರಮದಲ್ಲಿ ಸರ್ಕಾರಿ ನೌಕರರನ್ನೆಲ್ಲಾ [illegible] ಹಾಕಿ ಪ್ರದರ್ಶನವನ್ನು ನಡಿಸುವ ಕಾರ್ಯವನ್ನು ಪ್ರಜೆಗಳ ವಶದಲ್ಲಿ ಈ ಪ್ರದರ್ಶನವನ್ನು ಅವರೇ ನಡೆಸಿಕೊಂಡು ಹೋಗುವಂತೆ ಆಗುವದರಲ್ಲಿ ಸಂಶಯವಿಲ್ಲ. ಗವರ್ನ್‌ಮೆಂಟಿನವರು ಈ ಉದ್ದೇಶವನ್ನು ಇಟ್ಟುಕೊಂಡು ಸಹಾಯ ಪ್ರೋತ್ಸಾಹಾದಿಗಳನ್ನು ಮಾಡುವವರಾಗಿದ್ದಾರೆ.

ಮದರಾಸ್ ಗವರ್ನ್‌ಮೆಂಟಿನವರೂ ಬೊಂಬಾಯಿ ಗವರ್ನ್‌ಮೆಂಟಿನವರೂ, ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳವರೂ ಸಾಹಸಪಟ್ಟು ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಕೊಟ್ಟದ್ದಕ್ಕಾಗಿ ಅವರನ್ನೆಲ್ಲಾ ಸರ್ಕಾರದವರು ವಂದಿಸುವರು ಮತ್ತು [illegible] ಪ್ರದರ್ಶನದ ವಸ್ತುಗಳನ್ನು [illegible] ಕೆಲಸವನ್ನೂ ವಂದಿಸುತ್ತಾರೆ.

ರವಿನ್ಯೂ ಕಮಿಷನರ್‌ರವರಿಗೆ [illegible] ಗವರ್ನ್‌ಮೆಂಟಿನವರು ಅವರಿಗೆ ಈ ಪ್ರದರ್ಶನದ [illegible] ಪ್ರದರ್ಶನದ ಕಮಿಟಿಗೆ ಮಿ [illegible] ಯವರನ್ನು ಸೆಕ್ರೆಟರಿಯನ್ನಾಗಿಯೂ, ಮಿ [illegible] ನೇಮಕ ಮಾಡಿದಾರೆ. [illegible] ಪ್ರದರ್ಶನವು ನಡೆಯಬೇಕಾಗಿರುವದರಿಂದ [illegible] ಸ್ಥಳದ [illegible] ಚಟುವಟಿಕೆಯಾಗಿಯೂ [illegible] ಕಳೆದ ವರುಷದ ಪ್ರದರ್ಶನವನ್ನು ನೆರವೇರಿಸುವದರಲ್ಲಿ ಸಹಾಯ ಮಾಡಿದ ಸರ್ಕಾರಿ ನೌಕರರಿಗೂ ಜೇರೋಜುಗಾರರಾದ ದೊಡ್ಡ ಮನುಷ್ಯರಿಗೂ ಪ್ರೆಸಿಡೆಂಟರು ಗವರ್ನ್‌ಮೆಂಟಿನವರ ವಂದನೆಗಳನ್ನು ಸಲ್ಲಿಸಬೇಕಾಗಿದೆ.

ಪುರಾತನಕಾಲದ ನಾಗರಿಕತೆಯು

ಗೌತಮ ಬುದ್ಧನ ಅಸ್ಥಿಗಳು ಸಿಕ್ಕಿದ್ದು

ಹಿಂದುಸ್ಥಾನದ ವಾಯವ್ಯ ಪ್ರಾಂತ್ಯದಲ್ಲಿರುವ ಪೆಷಾವರ್ ಪಟ್ಟಣದ ಬಳಿಯಲ್ಲಿ ಪ್ರಾಚೀನಕಾಲದ ಶಿಲ್ಪಶೋಧನ ಇಲಾಖೆಯವರು ಬೌದ್ಧರ ಒಂದು ಆಲಯವನ್ನು ಕಂಡುಹಿಡಿದಿದಾರೆ. ಅಲ್ಲಿ ಗೌತಮಬುದ್ಧನ ಸುಟ್ಟ ಮೂಳೆಗಳ ತುಂಡುಗಳು ಒಂದು ಕಲ್ಲಿನ ಪೆಟ್ಟಿಗೆಯೊಳಗೆ ಸಿಕ್ಕಿತು. ಅದಕ್ಕೆ ಬೌದ್ಧ ಚಕ್ರವರ್ತಿಯಾದ ಕಾನಿಷ್ಕನು ತನ್ನ ಮುದ್ರೆಯನ್ನು ಹಾಕಿ ಮೊಹರುಮಾಡಿರುತ್ತಾನೆ. ಪಾಲ್ಮರ್ ದೇಶದಲ್ಲಿ ಕ್ರಿಸ್ತನು ಜನಿಸಿಕೊಂಡಿದ್ದ ಕಾಲದಲ್ಲಿ ಪೆಷಾವರನೊಳಗೆ ಕಾನಿಷ್ಕನು ಚಕ್ರವರ್ತಿಯಾಗಿ ಆಳುತ್ತಿದ್ದನು. ಆ ಕಂಚಿನ ಪೆಟ್ಟಿಗೆಯೊಳಗಡೆ ಇದ್ದ ಒಂದು ಕಲ್ಲಿನ ದಬ್ಬಿಯೂ ಆ ದಬ್ಬಿಯೊಳಗೆ ಬುದ್ಧನ ಬೂದಿಯೂ ಇರುತ್ತವೆ. ಆ ಕಂಚಿನ ಪೆಟ್ಟಿಗೆಯ ಹೊರಪಾರ್ಶ್ವದಲ್ಲಿ ಬುದ್ಧನ ಮತ್ತು ಚಕ್ರವರ್ತಿ ಕಾನಿಷ್ಕನ ವಿಗ್ರಹಗಳನ್ನು ಕೆತ್ತಿದಾರೆ. ಚೀನೆಯಿಂದ ಆಗ್ಗೆ ಹಿಂದುಸ್ಥಾನಕ್ಕೆ ಯಾತ್ರಾರ್ಥಿಯಾಗಿ ಬಂದಿದ್ದ ಹ್ಯೂನ್ ತ್ಸಾಂಗ್ ಎಂಬಾತನು ಈ ಪೆಟ್ಟಿಗೆಯನ್ನು ಆ ಸ್ಥಳದಲ್ಲೇ ಇಟ್ಟಿರುವುದನ್ನು ನೋಡಿದನೆಂದು ಗೊತ್ತಾಗುತ್ತದೆ. ಈ ಪೆಟ್ಟಿಗೆಯನ್ನು ಅಲ್ಲಿ ಇಟ್ಟು ಇಲ್ಲಿಗೆ ೨,೦೦೦ ವರುಷಗಳಾಗಿವೆ ಎಂದು ತಿಳಿದು ಬರುತ್ತದೆ. ಪೆಟ್ಟಿಗೆಯ ಮೇಲೆ ಅದನ್ನು ಕೆತ್ತಿ ತಯಾರುಮಾಡಿದ ಅಗಿಸಲಾಸ್ ಎಂಬ ಶಿಲ್ಪಿಯ ಹೆಸರು ಕಾಣಿಸಲ್ಪಟ್ಟಿದೆ. ಹಿಂದೆ ನೇಪಾಳ ಸಂಸ್ಥಾನದ ಎಲ್ಲೆಯಲ್ಲಿ ಇಂಥಾದ್ದೊಂದು ಪ್ರಾಚೀನ ವಸ್ತುವು ಸಿಕ್ಕಿದಾಗ ಅದನ್ನು ಬರ್ಮಾ, ಸಯಾಂ, ಸಿಲೋನ್, ಜಪಾನ್ ಮುಂತಾದ ಕಡೆಗಳ ಬೌದ್ಧ ದೇವಸ್ಥಾನಗಳಿಗೆ ಹಂಚಿಕೊಟ್ಟರು. ಈಗಲೂ ಅದೇ ರೀತಿ ಮಾಡಬಹುದೆಂದು ತೋರುತ್ತದೆ. ಚಕ್ರವರ್ತಿಯಾದ ಕಾನಿಷ್ಕನ ಆಳ್ವಿಕೆಯಲ್ಲಿ ಗ್ರೀಕ್ ಶಿಲ್ಪಿಗಳನ್ನು ನೇಮಿಸಿಕೊಂಡಿದ್ದರೆಂದೂ ಅವನ ಕಾಲಕ್ಕೆ ಅವರ ಶಿಲ್ಪವು ಬಹುಮಟ್ಟಿಗೆ ಕ್ಷೀಣವಾಗಿತ್ತೆಂದೂ ಕಾಣುವದು. ಈಗ ಇದು ಸಿಕ್ಕಿ

ರುವ ಸ್ಥಳದಲ್ಲಿ ಭೂಮಿಯನ್ನು ಇನ್ನೂ ಶೋಧಿಸುತ್ತಿದ್ದಾರೆ ಅಲ್ಲಿ ಒಂದು ಭಾರೀ ಬೌದ್ಧ ಮಠವು ಕಂಡು ಬಂದಿದೆ ಇದು ಬಹು ಸುಂದರವಾಗಿಯೂ ಶಾಶ್ವತವಾಗಿಯೂ ಕಟ್ಟಲ್ಪಟ್ಟು ಬಹಳ ವಿಸ್ತಾರವಾಗಿರುವುದು ಅದರೊಳಗೆ ಪ್ರಾಚೀನ ಕಾಲದ ಕೆಲವು ಕಾಗದ ಪತ್ರಗಳು ದೊರಕಿರುವುವು ಅವುಗಳಲ್ಲಿ ಬರೆದಿರುವ ವಿಷಯಗಳು ... ಆಗ ಪ್ರಕಟವಾಗುವುದರಲ್ಲಿ ಬಾಕಿ ಇವೆಲ್ಲಾ ಭೂಮಟ್ಟದಿಂದ ಸುಮಾರು ೩೦ ಅಡಿ ಆಳದಲ್ಲಿ ದೊರಕಿರುತ್ತವೆ

ಚಂದ್ರವಳ್ಳಿ ಎಂಬ ಪುರಾತನ ನಗರವು

ಮೆ|| ರೈಸ್ ಸಾಹೇಬರು ಬರೆದಿರುವ ಗೆಜೆಟಿಯರ್ ಎಂಬ ಪುಸ್ತಕದಲ್ಲಿ ಚಿತ್ರದುರ್ಗದ ಪಶ್ಚಿಮ ದಿಕ್ಕಿನಲ್ಲಿ ಚಂದ್ರವಳ್ಳಿ ಎಂಬ ಪಟ್ಟಣವಿತ್ತೆಂದೂ, ಅದು ಬಹು ದೊಡ್ಡ ನಗರವಾಗಿತ್ತೆಂದೂ ಬಹು ಪುರಾತನವಾದ ಸುದ್ದಿಯುಂಟೆಂದೂ ನಮೂದಾಗಿದೆ ಕೆಲವುಕಾಲದಿಂದ ಈಚೆಗೆ ಆ ಸುತ್ತುಮುತ್ತಿನಲ್ಲಿ ವ್ಯವಸಾಯ ಕಾರ್ಯಗಳನ್ನು ನಡೆಸುತ್ತಾ ಬಂದಿರುವ ರೈತರಿಗೂ ಇತರರಿಗೂ ನಾಣ್ಯಗಳೂ, ಚಿನ್ನ ಬೆಳ್ಳಿ ನಗಗಳೂ, ಮೂಳೆಗಳೂ ಸಿಕ್ಕುತ್ತಾ ಇವೆ ಎಂದು ಪ್ರಚಾರವಾಗಿರುವುದು ಈ ಸುದ್ದಿಯು ಹಾಗೂ ಹೀಗೂ ಹರಡಿಕೊಂಡು ಮೈಸೂರು ಸರ್ಕಾರಿ ಇಲಾಖೆಗೆ ತಲಪಿತು ಆ ಇಲಾಖೆಯವರು ಅಧಿಕಾರಿಯನ್ನೂ ಕೆಲವು ಕೂಲಿಯವರನ್ನೂ ಕರೆದುಕೊಂಡು ಆ ಸ್ಥಳಕ್ಕೆ ಹೋದರು ಆ ಪುರಾತನ ನಗರವು ಹೊಳಲ್ಕೆರೆ ರಸ್ತೆಯಿಂದ ಒಂದು ಮೈಲಿ ದೂರದಲ್ಲಿ ಬೆಟ್ಟಕ್ಕೆ ಹೋಗುವ ಕಾಲುಹಾದಿಯಲ್ಲಿ ಸುಮಾರು ಎರಡು ಫರ್ಲಾಂಗಿನ ಆಚೆ ಇದ್ದಿರಬೇಕೆಂದು ಗೊತ್ತುಮಾಡಿದ್ದಾರೆ ಆ ಪ್ರಾಂತ್ಯವೆಲ್ಲಾ ಈಗ ಜಮೀನುಗಳಾಗಿ ವ್ಯವಸಾಯದಲ್ಲಿರುತ್ತದೆ ಆದರೂ ಅಲ್ಲಲ್ಲಿ ಪುರಾತನಕಾಲದ ಕಟ್ಟಡಗಳ ಪಾಳುಗೋಡೆ ಮೊದಲಾದ ಚಿಹ್ನೆಗಳು ಈಗಲೂ ಕಾಣಬರುವವು ಈ ಪಾಳು ನಿವೇಶನಗಳ ಬಳಿ ಕೂಲಿ ಆಳುಗಳನ್ನು ಬಿಟ್ಟು ಸುಮಾರು ೧೦ ಅಡಿ ಆಳವಾಗಿ ತೋಡಿ ಶೋಧನೆ ಮಾಡಿದರು ಅಲ್ಲಿ ೨ ೫ ಅಡಿ ... ಇಟ್ಟಿಗೆ ಗಾರೆ ಗೋಡೆಗಳು ಕಂಡುಬಂದವು ಗೋಡೆಗಳಿಗೆ ಹಾಕಿರುವ ಇಟ್ಟಿಗೆಗಳು ಈಗಿನ ಇಟ್ಟಿಗೆಗಳಂತೆ ಇಕ್ಕಟ್ಟಾಗಿಲ್ಲ ಅವು ಬಹಳ ಅಗಲವಾಗಿಯೂ ಗಾತ್ರವಾಗಿಯೂ ಇರುವವು ಅಂದರೆ ಒಂದೊಂದು ಇಟ್ಟಿಗೆಯು ೧೭-೧೮ ಅಂಗುಲ ಉದ್ದವೂ, ೮ ಅಂಗುಲ ಅಗಲವೂ ೪ ಅಂಗುಲ ಗಾತ್ರವೂ ಉಳ್ಳದಾಗಿದೆ ಕಾಲುವೆಗಳ ಅಂಗಳದ ... ಮಧ್ಯಸ್ಥವೆ ಕಡಲ್ಲಿ ೪ ೫ ಅಡಿ ಆಳದ ಹಳ್ಳಗಳನ್ನು ತೋಡಿ ನೋಡುವಾಗ್ಗೆ ಒಂದು ಕಡೆ ಜೋಡಿಮಣ್ಣಿನ ಮುದ್ರೆಯೂ (ಮೊಹರೂ) ... ಮತ್ತು ಬೆಳ್ಳಿಯ ಕೆಲವು ನಾಣ್ಯಗಳೂ ಸಿಕ್ಕಿದವು ಆ ಮುದ್ರೆಯು ಗುಂಡಾಗಿ ೨ ಅಂಗುಲ ಅಗಲವಾಗಿದೆ ಇದು ಆಂಧ್ರರಾಜರ ಕಾಲದ್ದೆಂದು ಕಾಣುವುದು ೬ ಸೀಸದ ನಾಣ್ಯಗಳ ಮೇಲೆ ಒಂದು ಕಡೆ ಬೌದ್ಧ ಚಿಹ್ನೆಗಳೂ, ಚೈತ್ಯ ದಾಗೋಬಾ, ಬೋಧಿ ಮರದ ಆಕೃತಿಗಳೂ, ಬುದ್ಧನು ಮರದ ಕೆಳಗೆ ಕುಳಿತಿರುವ ಹಾಗೆ ಚಿತ್ರಿಸಿರುವ ಸಕ್ಕಗಳೂ ಇರುತ್ತವೆ ಬ್ರಾಹ್ಮಿ ಲಿಪಿಯಲ್ಲಿ ಪುಲುಮಾಯಿ ಎಂಬ ಆಂಧ್ರರಾಜನ ಅಕ್ಷರಗಳು ಕೆತ್ತಲ್ಪಟ್ಟಿರುವವು ಇದನ್ನು ನೋಡಿದರೆ ಈ ನಾಣ್ಯಗಳು ಕ್ರಿಸ್ತಪೂರ್ವ ಎರಡನೆಯ ಶತಮಾನದಿಂದ ಈಚೆಗೆ ಕ್ರಿಸ್ತಶಕ ಎರಡನೆಯ ಶತಮಾನದೊಳಗೆ ಚಲಾವಣೆಯಲ್ಲಿದ್ದ ನಾಣ್ಯಗಳೆಂದು ತೋರುವುದು ಆ ಬೆಳ್ಳಿಯ ನಾಣ್ಯಗಳೆರಡರೋ ... ದೇಶದವುಗಳಾಗಿವೆ ಅವು ರೋಮನ್ ಜನರ ನಾಣ್ಯಗಳು ಅವುಗಳ ಮೇಲೆ ರೋಮನ್ ಚಕ್ರವರ್ತಿಯ ಮುದ್ರೆಯು ಒತ್ತಲ್ಪಟ್ಟಿದೆ ಸುತ್ತಲೂ ಆಗಸ್ಟಸ್ ಸೀಸರ್ ಎಂಬ ಚಕ್ರವರ್ತಿಯ ಹೆಸರು ಬರೆದಿದೆ ಈ ನಾಣ್ಯಗಳು ಕ್ರಿಸ್ತಪೂರ್ವ ೬೩ ನೇ ಇಸವಿಯಿಂದ ಕ್ರಿಸ್ತಶಕ ೧೪ ನೇ ಇಸವಿಯೊಳಗೆ ಚಲಾವಣೆಯಲ್ಲಿದ್ದವು ಕೆಂಪಿನ ೩ ೪ ದಪ್ಪನಾದ ನಾಣ್ಯಗಳೂ ಅಲ್ಲಿ ಸಿಕ್ಕಿದವು ಇವುಗಳ ಮೇಲೆ ಬುದ್ಧಲಿಪಿಯಲ್ಲಿ ಏನೋ ಬರೆದಿದೆ ಇವನ್ನು ಪರಿಶೋಧನ ಮಾಡುವುದಕ್ಕಾಗಿ ತೆಗೆದುಕೊಂಡು ಹೋಗಿದ್ದಾರೆ

ಇದಲ್ಲದೆ ಅದೇ ಸ್ಥಳದಲ್ಲಿ ಮಣ್ಣಿನ ಪಾತ್ರೆಗಳ ಮುರುಕುಗಳು ಸಿಕ್ಕಿದವು ಹೂಜಿಗಳೂ ಬಟ್ಟಲುಗಳೂ ಬಹು ನುಣುಪಾಗಿಯೂ ಗಟ್ಟಿಯಾಗಿಯೂ ಮಾಡಲ್ಪಟ್ಟಿರುತ್ತವೆ ಅವುಗಳ ಮೇಲೆ ಕೆಂಪು ಮತ್ತು ಕಪ್ಪು ಬಣ್ಣಗಳಲ್ಲಿ ಚಿತ್ರಗಳು ಬಿಡಿಸಿವೆ ಈಗ ಚೀನೀಯ ಮಣ್ಣಿನ ತಟ್ಟೆ ಬಟ್ಟಲುಗಳಿಗೆ ಎಷ್ಟು ಹೊಳಪೂ ನುಣುಪೂ ಇರುವುದೋ ಅಲ್ಲಿ ಸಿಕ್ಕಿರುವ ಪಾತ್ರೆಗಳೂ ಹಾಗೆಯೇ ಇರುವವು ಅಲ್ಲಿ ಕೆಲವು ಮಾಗಳ ಮೇಲೆ ಹೊದಿಸುವಂಥಾ ಹಂಚುಗಳೂ ದೊರಕುತ್ತವೆ ಕೆಲವು ದೊಡ್ಡ ದೊಡ್ಡ ಗೂಡುಗಳಲ್ಲಿ ಬೂದಿಯೂ ಮೂಳೆಗಳೂ ಸಿಕ್ಕಿದವು ಈ ಮೂಳೆಗಳು ಮೃಗ ಜಾತಿಯ ಎಲುಬುಗಳಾಗಿರಬೇಕು ಸಮೀಪದಲ್ಲೇ ಒಂದು ಸಣ್ಣ ಹಿಂದೂ ದೇವಸ್ಥಾನವಿದೆ ಇದರೊಳಗಿರುವ ಹನುಮಂತನ ವಿಗ್ರಹವು ವಿಸ್ತರಿಸಲ್ಪಟ್ಟಿರುವುದು ಇದು ಹಿಂದುಗಳು ೧,೦೦೦ ವರುಷಗಳ ಈಚೆಗೆ ಕಟ್ಟಿದಂಥಾ ಬಾರೀ ದೇವಸ್ಥಾನದ ಒಂದು ಭಾಗವಾಗಿರಬೇಕೆಂದು ಕಾಣುವುದು ಅದಕ್ಕೆ ಮುಂಚೆ ಬೌದ್ಧರೇ ಇದ್ದಂತೆ ಚಿಹ್ನೆಗಳು ಕಂಡುಬರುವವು

ಈ ಪ್ರಾಚೀನ ನಗರದ ಪಶ್ಚಿಮಕ್ಕೆ ಸುಮಾರು ಅರ್ಧ ಮೈಲಿ ದೂರದಲ್ಲಿ ಹಳ್ಳತಿಟ್ಟುಗಳೊಡನೆ ಕೂಡಿ ಒರಟೊರಟಾದ ಗುಡ್ಡಗಳೂ ರಮ್ಯವಾದ ಬೆಟ್ಟಗಳೂ ಇರುವವು ಇವುಗಳ ತಳಭಾಗದಲ್ಲಿ ಉದ್ದಕ್ಕೂ ಅನೇಕ ಬೌದ್ಧರ ಆಶ್ರಮಗಳೂ ಮಠಸ್ಥಾನಗಳೂ ಇದ್ದಿರಬೇಕು ಇವುಗಳನ್ನು ಬೌದ್ಧ ರಾಜರುಗಳು ಕ್ರಿಸ್ತಶಕೆಯ ಮೊದಲನೆ ಶತಮಾನದಲ್ಲಿ ಕಟ್ಟಿಸಿದರು, ಬೌದ್ಧ ಸನ್ಯಾಸಿಗಳೂ ಭಿಕ್ಷುಕರೂ ವಾಸ ಮಾಡುವುದಕ್ಕಾಗಿ ಕಟ್ಟಲ್ಪಟ್ಟವು ಕಿರಿದಾದ ಸುತ್ತಿಕೊಂಡು ಹೋಗುವ ಮೆಟ್ಟಿಲುಗಳನ್ನು ಇಳಿದು ಹೋದರೆ ಕೆಳಗಡೆ ಕತ್ತಲು ಕವಿದಿರುವ ಗುಹೆಗಳು ಸಿಕ್ಕುವವು ಅವುಗಳಲ್ಲಿ ಸಣ್ಣ ದೊಡ್ಡ ಕೊಠಡಿಗಳು ವಿಂಗಡಿಸಲ್ಪಟ್ಟಿವೆ ಸ್ನಾನದ ಕೊಠಡಿಗಳೂ ಒಡ್ಡಲುಗಳೂ ಇರುವವು ಅಲ್ಲಿಗಲ್ಲಿಗೆ ಉದ್ದಕ್ಕೂ ಎತ್ತರವಾಗಿ ಕಟ್ಟಿದ ಆಸನಗಳಿವೆ ಸನ್ಯಾಸಿಗಳು ಅವುಗಳ ಮೇಲೆ ಕುಳಿತು ಜಪದ ಧ್ಯಾನಕ್ಕೋಸ್ಕರಗಳಾಗಿ ಕಾಣಬರುವವು ಒಳಗಡೆ ಅನೇಕ ಸ್ಥಳಗಳಲ್ಲಿ ಗೋಡೆಗಳ ಮೇಲೆ ಗೂಡು ಗೂಡುಗಳೂ ಚಿತ್ರ ವಿಚಿತ್ರವಾದ ಕೆಲಸಗಳೂ ಬಣ್ಣ ಕೆಲಸಗಳೂ ಮಾಡಲ್ಪಟ್ಟಿವೆ ಪಂಚಲಿಂಗ ಗುಹೆ ಎಂಬ ಮೊದಲನೆಯ ಗುಹೆಯೊಳಗೆ ೧೨೮೬ ನೇ ಇಸವಿಯ ಒಂದು ಲಿಪಿಯು ಒಡೆಯಲ್ಪಟ್ಟಿದೆ ಹೊಯ್ಸಳ ರಾಜನಾದ ನರಸಿಂಹನ ಮಂತ್ರಿ ಪೆರುಮಾಳನು ಈ ಗುಹೆಯನ್ನು ದಾನ ಮಾಡಿದಂತೆ ಶಾಸನವಿದೆ ಈ ಗುಹೆಗೆ ಟೀಪೂ ಸುಲ್ತಾನನ ಕಾಲದಲ್ಲಿ ಮಹಮದೀಯರು ಪ್ರವೇಶಿಸಿದರೆಂದು ಅಲ್ಲಿ ಕಂಡ ಬರುವ ಚಿಹ್ನೆಗಳಿಂದ ಗೊತ್ತಾಗುತ್ತವೆ ಅವರು ಅದರಲ್ಲಿರುವ ಚಿತ್ರಗಳನ್ನೂ ಕೆತ್ತನೆ ಕೆಲಸಗಳನ್ನೂ ಹಾಳು ಮಾಡಿರುವರು ಬಹು ಸುಂದರವಾದ ವಿಗ್ರಹಗಳನ್ನು ಕತ್ತರಿಸಿ ಕೆಡಿಸಿರುತ್ತಾರೆ ಹೀಗೆಯೇ ಇನ್ನೂ ಅನೇಕ ಪ್ರಾಚೀನ ಕಾಲದ ಸಂಗತಿಗಳು ಅಲ್ಲಿ ಕಂಡುಬರುತ್ತವೆ ಸರ್ಕಾರದವರು ಈ ಸ್ಥಳದ ಸುತ್ತಲೂ ಎಲ್ಲೆಯನ್ನು ಹಾಕಿ ಯಾರೂ ಹೋಗದಂತೆ ತಡೆಯನ್ನು ಕಲ್ಪಿಸಿರುತ್ತಾರೆ ಇನ್ನು ಮುಂದೆ ಅನುಕೂಲವಾದಾಗ ಅಲ್ಲಿ ಶೋಧನೆಯ ಕೆಲಸಗಳನ್ನು ಮತ್ತೆ ಪ್ರಾರಂಭಿಸುವರೆಂದು ತಿಳಿದು ಬಂದಿದೆ

ಒಳದೇಶದ ವೃತ್ತಾಂತಗಳು

ಮೈಸೂರು ತಾಲ್ಲೂಕ್ ಕಡಕೊಳದಲ್ಲಿ ಜನರು ಸೇರಿ ಶ್ರೀ ಸೋಮೇಶ್ವರ ಸಹಾಯ ಸಂಘವೆಂಬ ಪರಸ್ಪರ ಸಹಾಯಕ ಕಂಪನಿಯನ್ನು ಮಾಡಿಕೊಂಡಿದ್ದಾರೆ ಈ ಸಂಘವು ಕಳೆದ ತಾ ೧೩ ರಲ್ಲಿ ರಿಜಿಸ್ಟರಾಗಿರುವುದು

ಈ ವರುಷದ ಅಕ್ಟೋಬರಿನಲ್ಲಿ ವೈಸ್‌ರಾಯಿಯವರು ಮೈಸೂರು ಸಂಸ್ಥಾನಕ್ಕೆ ದಯಮಾಡುವವರಾಗಿರೋಣದರಿಂದ ಅವರ ಆತಿಥ್ಯದ ಖರ್ಚಿಗಾಗಿ ನಮ್ಮ ಸರ್ಕಾರದವರು ಎರಡು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆಂದು ಪ್ರಕಟವಾಗಿದೆ

ಕಳೆದ ಡಿಸೆಂಬರ್ ತಾ ೪ ರಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಮಂಡ್ಯದ ಶ್ರೀ ಕೃಷ್ಣರಾಜ ಪರಸ್ಪರ ಸಹಾಯ ಸಂಘವನ್ನು ಕಳೆದ ಜೂಲೈ ತಾ ೧೫ ರಲ್ಲಿ ಸರ್ಕಾರದವರು ರದ್ದು ಮಾಡಿರುತ್ತಾರೆ ಈ ಸಂಘವು ಈ ರೀತಿ ಆಗಲು ಕಾರಣವೇನೋ ತಿಳಿಯಬರಲಿಲ್ಲ

ರಾಜಧಾನಿಯ ಗವರ್ನಮೆಂಟ್ ಹೌಸಿನಲ್ಲಿ ನೌಕರರಾಗಿದ್ದು ಈಚೆಗೆ ಎರಡನೇ ಕೌನ್ಸಿಲರ ಬಳಿ ಕೆಲಸಮಾಡುತ್ತಿದ್ದ ಮೆ|| ವಿಷಕಂಠಯ್ಯನವರನ್ನು ಶ್ರೀಮನ್ಮಹಾರಾಜರವರು ಅರಮನೆ ಇಲಾಖೆಗೆ ತೆಗೆದುಕೊಂಡು, ಬೆಂಗಳೂರು ಅರಮನೆಯಲ್ಲಿ ಗುರಿಕಾರ್ ಕೆಲಸಕ್ಕೆ ನೇಮಕ ಮಾಡಿದರೆಂದು ಕೇಳುತ್ತೇವೆ

ರಾಜಧಾನಿಯ ಕೋಟೆಯೊಳಗೆ ಇನ್ನೂ ಕೊಳಕಾಗಿರುವ ಮನೆಗಳನ್ನು ಒಡೆದು ಆರೋಗ್ಯಕರವಾಗಿ ಮಾಡುವುದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ ಟ್ರಸ್ಟ್ ಬೋರ್ಡಿನವರು ಇದುವರೆಗೆ ಸುಮಾರು ೮೦ ಸಾವಿರ ರೂಪಾಯಿ ಖರ್ಚುಮಾಡಿ ಅನೇಕ ಮನೆಗಳನ್ನು ಒಡೆಸಿ ಹಾಕಿದ್ದಾಯಿತು.

ಕೋಲಾರಕ್ಕೆ ಸೇರಿದ ಊರಿಗದಲ್ಲಿ ಪೋಲೀಸಿನವರು ಹದಿಮೂರು ಮಂದಿ ಜೂಜಾಡುತ್ತಿದ್ದವರನ್ನು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬನಿಗೆ ಐದು ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ ಈ ಜೂಜನ್ನು ನಿಲ್ಲಿಸುವ ಕಾನೂನು ಸಂಸ್ಥಾನದ ಇತರ ಕಡೆಗಳಲ್ಲೂ ಬೇಗನೆ ಜಾರಿಗೆ ಬಂದರೆ ಎಷ್ಟೋ ಕ್ಷೇಮವಾದೀತು

ಬೆಂಗಳೂರಿನಲ್ಲಿರುವ ಜವಳಿ ವ್ಯಾಪಾರಿ ಮೆ ದೊಡ್ಡಣ್ಣನವರು ಅಲ್ಲಿ ಒಂದು ದವಸದ ವ್ಯಾಪಾರಶಾಲೆಯನ್ನು ಕಟ್ಟಿಸಿಕೊಟ್ಟು ನಡಿಸುತ್ತಾ ಬಂದಿದ್ದಾರಷ್ಟೆ ಈಗ ಅವರು ಅದಕ್ಕೆ ಸಂಬಂಧಪಟ್ಟಂತೆ ಒಂದು ಕೈಗಾರಿಕೆ ಪಾಠಶಾಲೆಯನ್ನೂ ಕಟ್ಟಿಸಬೇಕೆಂದು ಗೊತ್ತುಮಾಡಿರುವುದಾಗಿಯೂ, ಇದಕ್ಕೆ ಸುಮಾರು ೨೦ – ೩೦ ಸಾವಿರ ರೂಪಾಯಿ ಖರ್ಚಾಗಬಹುದೆಂದೂ ತಿಳಿದುಬಂದಿದೆ

ಬೆಂಗಳೂರು ಸಿಟಿ ರೈಲ್ ಸ್ಟೇಷನ್‌ನಿಂದ ಚಾಮರಾಜ ಪೇಟೆಯ ಮೇಲೆ ಬಸವನ ಗುಡಿಯ ತನಕ ರೈಲ್ ರಸ್ತೆಯನ್ನು ಬದಲಾವಣೆ ಮಾಡಿಕೊಟ್ಟರೆ ಅಲ್ಲಿನ ಪ್ರಜೆಗಳಿಗೆ ತುಂಬಾ ಸಹಾಯವಾಗುವುದೆಂದು ಕೆಲವರು ಅರ್ಜಿ ಬರೆದು ಕೊಂಡಿದ್ದಾರೆ ಸರ್ಕಾರದವರು ಈ ವಿಚಾರವನ್ನು ಪರ್ಯಾಲೋಚಿಸಿ ಅದರಂತೆ ಬದಲಾವಣೆ ಮಾಡಿಸಿ ಕೊಟ್ಟರೆ ಪ್ರಯೋಜಕರ ಕಷ್ಟವು ನಿವಾರಣೆಯಾದೀತು.

ಕಳೆದ ರವಿವಾರವೂ ಭಾನುವಾರವೂ ರಾಜಧಾನಿಯಲ್ಲಿ ಮೋಡ ಕಟ್ಟಿ ಚನ್ನಾಗಿ ಮಳೆ ಸುರಿಯಿತು ಇನ್ನೂ ತೀಕ್ಷ್ಣವಾದ ಬಿಸಿಲು ಬೀಳುತ್ತಾ ಇಲ್ಲ ಶೀತ ಗಾಳಿಯು ಬೀಸುತ್ತಿದೆ ಪ್ಲೇಗ್ ಉಪದ್ರವು ತಲೆ ಹಾಕಿ ದಿನಾ ೩-೪ ಮರಣಗಳಾಗುತ್ತಿರುವವು ಪ್ಲೇಗ್ ಕ್ಯಾಂಪಿನಲ್ಲಿ ೫೬ ಮಂದಿ ರೋಗಿಗಳು ಚಿಕಿತ್ಸೆ ಹೊಂದುತ್ತಿದ್ದಾರೆ ಧಾರಣೆ ವಾಸಿಗಳು ಇನ್ನೂ ಇಳಿಯದೆ ಇರುವುದು ಬಡಬಗ್ಗರ ಜೀವನಕ್ಕೆ ಕಷ್ಟವಾಗಿದೆ

ಹಿಂದಿನ ಶನಿವಾರ ಸಮರಾತ್ರಿಯಲ್ಲಿ ಹೊಸೂರಿನ ಕಡೆಯಿಂದ ಚರ್ಮವನ್ನು ಭರ್ತಿ ಮಾಡಿಕೊಂಡು ಬೆಂಗಳೂರಿಗೆ ಬರುತ್ತಿದ್ದ ಒಂದು ಗಾಡಿಯನ್ನು ಕೆಲವು ಕಾಸ್ತಾರರು ತಡೆದು ಗಾಡಿಯವನನ್ನು ಚನ್ನಾಗಿ ಹೊಡೆದು ಕೆಡವಿ ಅವನ ಬಳಿ ಇದ್ದ ಹಣವನ್ನೂ ಕೆಲವು ಚರ್ಮಗಳನ್ನೂ ಅಪಹರಿಸಿಕೊಂಡು ಹೋದರು ಮರುದಿನ ಬೆಳಗ್ಗೆ ಪೋಲೀಸಿನವರು ಪತ್ತೆ ಹರಡೂದು ನಡಿಸಿ ಮಾಲ್ ಸಹಿತ ಕೆಲವು ಕಾಸ್ತಾರರನ್ನು ದಸ್ತಗಿರಿ ಮಾಡಿದರು

ಕ್ಯಾಪ್ಟನ್ ಪಿ. ಸಿ ದೇವಸಹಾಯಂ ಎಂಬಾತನು ಕಳೆದ ವಾರ ಬೆಂಗಳೂರು ದಂಡಿನಲ್ಲಿ ಕಾಲವಾದನು ಈತನು ಚೀನಾ, ಐಜಿಪ್ಟ್ ವಾಯುವ್ಯ ಸರಹದ್ದು, ಈ ಸ್ಥಳಗಳಲ್ಲಿ ನಡೆದ ಯುದ್ಧಗಳಿಗೆ ಹೋಗಿದ್ದು ಬಂದವನು ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆಯ ಉತ್ಸವಕ್ಕೆ ಈತನು ವಿಲಾಯತಿಗೆ ಕರೆಸಲ್ಪಟ್ಟು ಹೋಗಿದ್ದನು ದಂಡಿನಲ್ಲಿ ಈತನು ಸೈನಿಕರ ಮತ್ತು ಇತರ ಪ್ರಜೆಗಳ ಪ್ರೀತಿಗೌರವಗಳನ್ನು ಬಹು ನುಟ್ಟಗೆ ಸಂಪಾದಿಸಿಕೊಂಡಿದ್ದನು

ಶ್ರೀರಂಗಪಟ್ಟಣದ ಪ್ಲೀಡರ್ ಮೆ ಎಚ್ ಸುಬ್ಬರಾಯರ ಕುಮಾರರಾದ ಮೆ|| ಸುಬ್ಬರಾಯರು ಸರ್ಕಾರದ ವೇತನವನ್ನು ಪಡೆದು ಸುಮಾರು ನಾಲ್ಕು ವರುಷಗಳಿಂದ ವಿಲಾಯತಿ ಮೊದಲಾದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗಮಾಡಿ ಬಹು ಮೊಬೈಲಾಗಿ ತೇರ್ಗಡೆಹೊಂದಿ ಕಳೆದ ವಾರ ವಾಪಸು ಬಂದರು ಇವರು ಕಳೆದ ವಾರ ಶ್ರೀಮನ್ಮಹಾರಾಜರವರನ್ನು ಕಾಣುವ ಉದ್ದೇಶದಿಂದ ರಾಜಧಾನಿಯಲ್ಲಿ ೨ ೩ ದಿನಗಳ ತನಕ ಇದ್ದು, ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿರುತ್ತಾರೆ

ಬೆಂಗಳೂರು ದಂಡಿನಲ್ಲಿ ಸೈನ್ಯಾಧಿಪತಿಯಾದ ಲೆಫ್ಟಿನೆಂಟ್ ಜನರಲ್ ಸರ್ ಜೇಮ್ಸ್ ವುಲ್ಫ್ ಮರ್ರೆ ಯವರ ಪತ್ನೀರವರು ಕಳೆದ ಭಾನುವಾರ ಬೆಳಗಿನ ಝಾಮದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇವೆ ಇವರ ಉತ್ತರ ಕ್ರಿಯಾದಿಗಳು ನಡೆದಾಗ್ಗೆ ಬ್ರಿಟಿಷ್ ರೆಸಿಡೆಂಟರವರೂ ಅವರ ಪತ್ನೀರವರೂ ಬಹು ಮಂದಿ ಯೂರೋಪಿಯನ್ನರೂ ಹೋಗಿದ್ದರು ಶ್ರೀಮನ್ಮಹಾರಾಜರವರೂ ಯುವರಾಜರವರೂ ಪುಷ್ಪ ಮಾಲಿಕೆಗಳನ್ನು ಸಮಾಧಿಯ ಮೇಲೆ ಇಡುವಂತೆ ಕಳುಹಿಸಿಕೊಟ್ಟರು

ಕೋಲಾರ್ ಚಿನ್ನದ ಗಣಿಗಳಲ್ಲಿ ಒಬ್ಬ ಯೌವನಸ್ಥನು ೪೦೦ ರೂಪಾಯಿನ ಚಿನ್ನದ ಅಡ್ಡಿಕೆಯನ್ನು ಕಳುವು ಮಾಡಿ ಒಂದು ಗೋಡೆಯೊಳಗೆ ಬಚ್ಚಿಟ್ಟನು ಅವನನ್ನು ಪೋಲೀಸಿನವರು ಹಿಡಿದು ನಗವನ್ನು ತೋರಿಸುವುದಕ್ಕಾಗಿ ಕರೆದುಕೊಂಡು ಹೋಗುತ್ತಿರುವಲ್ಲಿ ಆ ಕಳ್ಳನು ತಪ್ಪಿಸಿಕೊಂಡು ಆತ್ಮಹತ್ಯ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೋ ಏನೋ ಒಂದು ಬಾವಿಯೊಳಗೆ ಬಿದ್ದುಬಿಟ್ಟನು ಆದರೆ ಪೋಲೀಸರವರು ಸಾಹಸ ಪಟ್ಟು ಅವನನ್ನು ಬಾವಿಯಿಂದ ಎತ್ತಿ ಲಾಕಪ್ಪಿನೊಳಗೆ ಇಟ್ಟುಕೊಂಡಿದ್ದಾರೆ

ಚಾಮರಾಜನಗರದ ಸುತ್ತುಮುತ್ತಿನಲ್ಲಿ ಒಂದು ಹುಲಿಯು ಸೇರಿಕೊಂಡು ಜನರನ್ನೂ ಗೋಕಾಯಿಗಳನ್ನೂ ಕೊಂದು ತಿನ್ನುತ್ತಾ ಬಹಳ ಗಾಬರಿಯನ್ನುಂಟುಮಾಡಿತ್ತು ಡಿಪ್ಯುಟಿ ಕಮಿಷನರ್ ಮೆ ಕಾಂತರಾಜೇ ಅರಸಿನವರು ಅದನ್ನು ಕೊಲ್ಲಬೇಕೆಂದು ಮೈಸೂರಿನಿಂದ ಮೆ|| ವಾಸರ್ ಯವರನ್ನು ಅಲ್ಲಿಗೆ ಕಳುಹಿಸಿಕೊಟ್ಟರು ಇವರು ಆರು ದಿನಗಳ ತನಕ ಅಲ್ಲಿದ್ದು ತಾ ೧೭ ನೇ ಶನಿವಾರ ಮಧ್ಯಾಹ್ನ ಅದನ್ನು ಸಿಡಿಸಿ ಗುಂಡು ಹೊಡೆದು ಕೊಂದುಹಾಕಿದರು ಇದಲ್ಲದೆ ಅವರು ಅದೇ ಸುತ್ತುಮುತ್ತಿನಲ್ಲಿ ಗೋಕಾಯಿಗಳನ್ನು ಕೊಂದುಹಾಕುತ್ತಿದ್ದ ಒಂದು ದೊಡ್ಡ ಚಿರತೆಯನ್ನೂ ಕೊಂದು ಇರುತ್ತಾರೆಂದು ತಿಳಿದುಬಂದಿದೆ

ಕಳೆದ ಶನಿವಾರ ಬೆಳಗ್ಗೆ ಸುಮಾರು ೭ ಗಂಟೆಗೆ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ನಂಜನಗೂಡು ಸಿಂಗೂರು ಮಾರ್ಗವಾಗಿ ದಯಮಾಡಿ ಮಧ್ಯಾಹ್ನ ೨|| ಗಂಟೆಗೆ ನೀಲಗಿರಿ ಬೆಟ್ಟವನ್ನು ತಲಪಿದರು ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು ಅವರ ಸಂಗಡ ಮೈಗಾವಲಿನ ಕ್ಯಾಂಬೆಲ್ ಯವರು, ರಾಘವೇಂದ್ರರಾಯರು ಆಗಾಮು ಜಾನ್ ಯವರು, ಸರ್ದಾರ್ ಚಾಮರಾಜ ಅರಸಿನವರು, ವೀರರಾಜ ಅರಸಿನವರ ಮೊಮ್ಮಕ್ಕಳು ಹೋಗಿರುತ್ತಾರೆ ನೀಲಗಿರಿ ಬೆಟ್ಟದಿಂದ ಮಹಾರಾಜರವರು ವಾಪಸು ಬರಲು ಸುಮಾರು ಇನ್ನು ಐದು ವಾರಗಳಾಗಬಹುದೆಂದು ಕೇಳುತ್ತೇವೆ

ಮೈಸೂರು 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಭಾ' ವೆಂಬ ರಾವ ಮ ಸುಬ್ಬರಾಯರು ಬರೆದಿರತಕ್ಕ 'ವಲೀಮುವಿಲಾಸ' ವೆಂಬ ನಾಟಕರೂಪದ ಕಲ್ಪಿತ ಕಥೆಯಲ್ಲಿ ಸಂಸಾರಬಾರವಾದ ಅನೇಕ ವಿಷಯಗಳು ಅಂದರೆ ತಿಳುವಳಿಕೆಯಿಲ್ಲದ ಸ್ತ್ರೀಪುರುಷರು ಸಂಸಾರಾಭಿವೃದ್ಧಿಗೆ ಕುಂದುಕರವಾಗತಕ್ಕಂಥಾ ಮಾರ್ಗದಲ್ಲಿ ಪ್ರವೇಶಿಸೋಣದರಿಂದ ಉಂಟಾಗುವ ಅನರ್ಥಗಳೂ, ಸನ್ಮಾರ್ಗವರ್ತನೆಗಳಿಂದ ಲಭಿಸಬಹುದಾದ ಅನುಕೂಲ್ಯಗಳೂ ಚನ್ನಾಗಿ ಬೋಧೆಯಾಗುತ್ತವೆ ಮತ್ತು ಈ ನಾಟಕದಲ್ಲಿ ಹೇಳಿರುವ ಪಾತ್ರಗಳೆಲ್ಲವೂ ಗುಣಕ್ಕೆ ತಕ್ಕ ಹೆಸರುಗಳನ್ನೇ ಹೊಂದಿರುವವು ಗದ್ಯಪದ್ಯಗಳು ಸುಲಭವಾಗಿ ಅರ್ಥವಾಗುವಹಾಗೆ ಹಿತಕರವಾದ ಸರಣಿಯಿಂದ ಕೂಡಿವೆ 'ವಲೀಮುವಿಲಾಸ' ವು ಸರ್ವರೂ ಪರಿಗ್ರಹಿಸುವದಕ್ಕೆ ಯೋಗ್ಯವಾಗಿದೆ ಎಂದು ಹೇಳಬಹುದು

ಮೈಸೂರು ದಿವಾನರಾಗಿದ್ದು ಈಗ ಪೆನ್‌ಷನ್ ಪಡೆದಿರುವ ಮೆ|| ವಿ ಪಿ. ಮಾಧವರಾಯರು ಕಳೆದ ವಾರ ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ಪೇನಕೋಟೆಗೆ ಹೋಗಿದ್ದರು ಆ ಸಂದರ್ಭದಲ್ಲಿ ಅಲ್ಲಿನ ಜಮೀನ್‌ದಾರರೂ ವರ್ತಕರೂ ಸರ್ಕಾರಿ ನೌಕರರೂ ಸೇರಿ ಅವರನ್ನು ಗೌರವದಿಂದ ಎದುರುಗೊಂಡು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು ಮೆ|| ಮಾಧವರಾಯರು ಆ ಸಂಸ್ಥಾನದಲ್ಲಿ ದಿವಾನ್‌ಗಿರಿ ಮಾಡಿದಾಗ್ಗೆ ಅಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿಕೊಟ್ಟ ವಿಷಯದಲ್ಲೂ ಧಾನ್ಯರೂಪದಲ್ಲಿ ರೈತರು ಕೊಡುತ್ತಿದ್ದ ಕಂದಾಯವನ್ನು ತಪ್ಪಿಸಿ ದ್ರವ್ಯರೂಪದಲ್ಲಿ ಕೊಡುವಂತೆ ಬದಲಾವಣೆ ಮಾಡಿಕೊಟ್ಟ ವಿಷಯದಲ್ಲೂ ಅಲ್ಲಿನ ಜನರು ತುಂಬಾ ಕೃತಜ್ಞರಾಗಿರುತ್ತೇವೆಂದು ಅವರನ್ನು ವಂದಿಸಿದರು

ಮದರಾಸ್ ಪಟ್ಟಣದ ಪಶುವೈದ್ಯ ವಿದ್ಯಾಶಾಲೆಯಲ್ಲಿ ವೈದ್ಯವನ್ನು ಕಲಿಯುತ್ತಿದ್ದ ಇಬ್ಬರು ಮಳೆಯಾಳ ಯೌವನಸ್ಥರು ಕೆಲವು ದಿನಗಳ ಹಿಂದೆ ಜ್ವರ ಒಂದರಿಂದ ರೋಗ ಒಬ್ಬ ವೈದ್ಯ ವಿದ್ಯಾರ್ಥಿಗೆ ಹೇಳಿಕೊಂಡಾಗ ಅವನು ಕ್ವಿನೀನ್ ಎಂಬ ಜ್ವರದ ಪುಡಿಯನ್ನು ಸೇವಿಸುವಂತೆ ಅವರಿಗೆ ಹೇಳಿದನು ಅವರಿಬ್ಬರೂ ಅಂಗಡಿಗೆ ಹೋಗಿ ೨|| ರೂಪಾಯಿ ತೂಕದಷ್ಟು ಕ್ವಿನೀನ್ ಪುಡಿಯನ್ನು ಕೊಂಡುತಂದು ಸಮಭಾಗಮಾಡಿ ಸೇವಿಸಿಬಿಟ್ಟರು ಇಬ್ಬರಿಗೂ ಪ್ರಾಣಸಂಕಟವುಂಟಾಗಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿದ್ದರಲ್ಲಿ ಒಬ್ಬನು ಬದುಕಿಕೊಂಡನು, ಇನ್ನೊಬ್ಬನು ಸತ್ತೇ ಹೋದನು ಕ್ವಿನೀನ್ ಎಂಬೀ ಜ್ವರದ ಪುಡಿಯನ್ನು ಮಿತವಾಗಿ ಸೇವಿಸಿದರೆ ಅದು ಜ್ವರವನ್ನು ತಡೆಯುತ್ತದೆ, ಬೇಗನೆ ವಾಸಿಯಾಗಲೆಂದು ಅವರಂತೆ ಹೆಚ್ಚಾಗಿ ಮಿತಿಮೀರಿ ಸೇವಿಸಿದರೆ ಮರಣವನ್ನೇ ಉಂಟುಮಾಡುವುದರಿಂದ ಎಚ್ಚರಿಕೆಗಾಗಿ ಈ ವಿಷಯವನ್ನು ಇಲ್ಲಿ ಪ್ರಕಟಿಸಿರುತ್ತೇವೆ

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಜೂಲೈ ತಾ|| ೨೯ ನೇ ಗುರುವಾರ.

ಹಿಂದುಸ್ಥಾನದ ಜನರಲ್ಲಿ ಅರಾಜಕಕೃತ್ಯಗಳು.

ಮದನ ಲಾಲನು ಲಂಡನ್ ಪಟ್ಟಣದಲ್ಲಿ ಸರ್ ವಿಲ್ಲಿಯಂ ಕರ್ಜನ್ ವೈಲಿ ಎಂಬ ಅಧಿಕಾರಿಯನ್ನೂ, ಲಾಲ್‌ಕಾಕ ಎಂಬ ವೈದ್ಯನನ್ನೂ ಕೊಂದುಹಾಕಿದ್ದೂ, ನ್ಯಾಯಾಧಿಪತಿಯು ದರ್ಯಾಫ್ತು ಮಾಡಿ ಆ ಕೊಲೆಗೇಡಿಗೆ ಮರಣದಂಡನೆಯನ್ನು ವಿಧಿಸಿದ್ದೂ ನೋಡಿದರೆ ನಮ್ಮ ಹಿಂದುಸ್ಥಾನದ ಜನಾಂಗಗಳಲ್ಲಿ ಅರಾಜಕ ಕೃತ್ಯಗಳನ್ನು ನಡಿಸುವ ಏರ್ಪಾಡು ಉಂಟೇ ಎಂಬ ವಿಚಾರವು ಚರ್ಚೆಗೆ ಬರುತ್ತದೆ. ಅಂಥಾ ಏರ್ಪಾಡು ಇಲ್ಲವೇ ಇಲ್ಲವೆಂದು ಹೇಳುವುದು ಎಷ್ಟುಮಾತ್ರಕ್ಕೂ ಒಪ್ಪತಕ್ಕ ಮಾತಲ್ಲ. ಇದುವರೆಗೆ ನಡಿಸಲ್ಪಟ್ಟಿರುವ ಕ್ರೂರ ಕೃತ್ಯಗಳೂ, ಧಾರಾಳವಾಗಿ ಬರೆದು ಅಚ್ಚು ಹಾಕಿ ವಿಸ್ತಾರವಾಗಿ ಪ್ರಚಾರ ಮಾಡಲ್ಪಟ್ಟಿರುವ ಬರವಣಿಗೆಗಳೂ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಬಹಳ ದುಷ್ಟವೂ ಅತ್ಯಂತ ಹೇಯವೂ ಆದ ಅಭಿಪ್ರಾಯಗಳನ್ನು ಹಿಂದುಸ್ಥಾನದಲ್ಲಿ ಕೆಲವು ಜನರು ಅನುಮೋದಿಸಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ರಾಜರುಗಳೂ ಸಮಸ್ತ ಅಧಿಪತಿಗಳೂ ಪ್ರಜಾ ಕೋಟಿಗಳ ಶತ್ರುಗಳಾಗಿರುತ್ತಾರೆಂಬುವುದೂ, ಅವರನ್ನು ಕ್ರೂರ ಹಿಂಸೆಗೆ ಗುರಿಪಡಿಸಿ ಕೊಂದುಹಾಕುವುದು ಪಾಪ ಕೃತ್ಯವಲ್ಲವೆಂಬುವದೂ, ಅದು ಧರ್ಮವೂ ಸ್ತೋತ್ರಾರ್ಹವೂ ಆದ ಕೃತ್ಯವೆಂಬುವುದೂ ಈ ಜನರ ಅಭಿಮತವಾಗಿರುತ್ತದೆ. ಹ್ಯಾಗೂ ಇಂಥಾ ಅಭಿಪ್ರಾಯದಿಂದಲೇ ಆ ಕೊಲೆಗೇಡಿಯು ಸರ್ ಕರ್ಜನ್ ವೈಲಿಯವರನ್ನು ಕೊಂದುಹಾಕಿದನೆಂದು ಧಾರಾಳವಾಗಿ ಹೇಳಬಹುದು. ಈ ರೀತಿಯಾದ ನೀಚ ಸಲಹೆಯನ್ನು ಶ್ಯಾಮಜಿ ಕೃಷ್ಣವರ್ಮರವರು ಪ್ರಚುರಪಡಿಸಿದ್ದರಿಂದ ಅವರ ಉದ್ದೇಶವು ನಮ್ಮ ದೇಶದ ಜನರಲ್ಲಿ ಎಷ್ಟು ಮಟ್ಟಿಗೆ ಸಾರ್ಥಕವಾಗಿರುವುದೋ ನಮಗೆ ತಿಳಿಯದು. ಆದರೆ ಧರ್ಮವನ್ನೂ ಪ್ರಜಾ ಸಮ್ಮತಿಯನ್ನೂ ಕಾಪಾಡಬೇಕೆಂದು ಸಾಹಸಪಡತಕ್ಕವರನ್ನು ಕೊಂದುಹಾಕಿ ಪ್ರಾಣತ್ಯಾಗ ಮಾಡುವುದಕ್ಕೂ ಸಿದ್ಧರಾಗಿರುವಂಥವರು ನಮ್ಮ ಜನರಲ್ಲಿ ಕೆಲವರು ಏರ್ಪಟ್ಟಿರುತ್ತಾರೆ.

ಇಂಥಾ ಕೇಡು ಬುದ್ಧಿಯು ಕೆಲವರಲ್ಲಿರುವುದೇ ಹೊರತು ಈ ರಾಷ್ಟ್ರದ ಬಹು ಪ್ರಜಾ ಕೋಟಿಗಳೆಲ್ಲಾ ಆ ಕೃತ್ಯಗಳಲ್ಲಿ ಸ್ವಲ್ಪವೂ ಸಹನಭಾವವನ್ನುಳ್ಳವರಾಗಿಲ್ಲವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಅವರು ಈ ಕೃತ್ಯಗಳನ್ನು ನೀಚವಾದವುಗಳೆಂದು ಅಲ್ಲಗಳೆಯುವವರಾಗಿದಾರೆ; ಅವುಗಳ ಸುದ್ದಿಯನ್ನು ಕೇಳಿ ಗಾಬರಿಪಡುವರು ಮತ್ತು ಕೊಲೆಯನ್ನು ನಡಿಸಿದ ಮದನ ಲಾಲನಿಗೆ ಆದ ಮರಣದಂಡನೆಯನ್ನೂ, "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ದುಷ್ಟವಾದ ಮಾಸ ಪತ್ರಿಕೆಯನ್ನು ಅಚ್ಚು ಹಾಕಿ ಕೊಡುತ್ತಿದ್ದವನಿಗೆ ಆದ ಸಜಾ ಶಿಕ್ಷೆಯನ್ನೂ ನ್ಯಾಯವಾದವುಗಳೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೂ ನಾವೆಲ್ಲಾ ಏಕೀಭವಿಸಿ ಅಂಥಾ ಭಯಂಕರವಾದ ಸಲಹೆಗಳಿಂದ ಸಂಭವಿಸುವ ಅಪಾಯವಾದ ಕೆಡುಕನ್ನು ಪ್ರಕಾಶಪಡಿಸಿ, ಕೇಡಿಗಳು ನಮ್ಮ ಮಧ್ಯೆ ಇದ್ದಲ್ಲಿ ಅವರನ್ನು ನಿರ್ಬಂಧಪಡಿಸಬೇಕಾಗಿರುತ್ತದೆ. ಯಾಕಂದರೆ ಅಂಥಾ ದುಷ್ಟಾಭಿಪ್ರಾಯಗಳನ್ನು ಪಡೆದಿರುವವರು ನಮ್ಮ ದೇಶಕ್ಕೆ ಮಾತ್ರವೇ ಅಲ್ಲ, ಮನುಷ್ಯ ಜಾತಿಗೇನೇ ಶತ್ರುಗಳಾಗಿರುತ್ತಾರೆ.

ಮದನಲಾಲನ ರಕ್ತಸಂಬಂಧಿಗಳ ವಿಷಯದಲ್ಲಿ ನಾವು ಅನುತಾಪಪಡುತ್ತೇವೆ. ಅವನು ಸಣ್ಣ ವಯಸ್ಸಿನಲ್ಲೇ ದುರ್ಮಾರ್ಗಕ್ಕೆ ಸಿಕ್ಕಿ ಕೆಟ್ಟು ಹೋದನು; ಅಂಥಾ ಕ್ರೂರವಾದ ಅಭಿಪ್ರಾಯವನ್ನು ಇಟ್ಟುಕೊಂಡು ಅಷ್ಟು ಹೇಯವಾದ ಕೃತ್ಯವನ್ನು ನಡಿಸಿದನಷ್ಟೆ. ಆ ಕೃತ್ಯದ ಫಲಪರಿಣಾಮವನ್ನು ಅವನು ತಿಳಿಯದೆ ಹೋದನು, ಮತ್ತು ತಿಳಿಯುವುದಕ್ಕೆ ಅವನಿಗೆ ಯೋಗ್ಯತೆಯೂ ಇರಲಿಲ್ಲ. ಅವನ ರಕ್ತಸಂಬಂಧಿಗಳು ಇಂಥಾ ಕೊಲೆಗೇಡಿಯು ತಮ್ಮ ಮಧ್ಯೆ ಇದ್ದನಲ್ಲಾ ಎಂದು ವಿಷಾದಿಸುವುದೇನೂ ಆಶ್ಚರ್ಯವಲ್ಲ. ಅವನಿಂದ ಅವನ ಸಂಸಾರಕ್ಕೆಲ್ಲಾ ಅವಮಾನವು ಬಂದೊದಗಿತು. ವಾಚಕರೇ, ಇಂಥಾ ದುರ್ಬೋಧನೆಯು ನಮ್ಮ ನಮ್ಮ ಸಂಸಾರ ಮನೆ ಮಕ್ಕಳ ವರೆಗೂ ವ್ಯಾಪಿಸಬಹುದು. ಆದಕಾರಣ ನಮ್ಮ ಮಕ್ಕಳಿಗೆ ನಾವು ಸರಿಯಾದ ವಿದ್ಯೆ ಬುದ್ಧಿಗಳನ್ನು ಕಲಿಸುತ್ತಾ ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಯೋಗ್ಯರೂ ಗುಣವಂತರೂ ಪೂಜ್ಯರೂ ಆದ ಉಪಾಧ್ಯಾಯರು ಇರುವಂಥಾ ಮಠಗಳಿಗೂ ವಿದ್ಯಾಶಾಲೆಗಳಿಗೂ ಮಕ್ಕಳನ್ನು ಕಳುಹಿಸಬೇಕಾಗಿದೆ. ಇಷ್ಟೇ ಅಲ್ಲ. ಬಾಲಕರು ಮನೆಗಳಲ್ಲಿ ಓದುವಂಥಾ ಪುಸ್ತಕಗಳನ್ನೂ, ಹೊರಗಡೆ ಅವರ ಸಹವಾಸದಲ್ಲಿ ಇರುವ ಇತರ ಬಾಲಕರ ಶೀಲಸ್ವಭಾವಗಳನ್ನೂ ಅತ್ಯಂತ ಜಾಗರೂಕತೆಯಿಂದ ವಿಚಾರಣೆ ಇಟ್ಟು ನೋಡಿಕೊಳ್ಳುತ್ತಾ ಬರಬೇಕಾದದ್ದು ಈ ಕಾಲದಲ್ಲಿ ಪರಮಾವಶ್ಯವಾಗಿದೆ. ಅವರು ವಯಸ್ಸಿನಲ್ಲಿ ಬೆಳೆಯುವಾಗುವಾಗ ಹಾಗೆಲ್ಲಾ ಸದ್ಭಕ್ತಿ ಸದ್ಗುಣ ಸದಾಚಾರಶೀಲರಾಗಿಯೂ ಬೆಳೆಯುವಂತೆಯೂ ತಮ್ಮ ದೇಶಕ್ಕೂ ಮನುಷ್ಯ ಜಾತಿಗೂ ಶತ್ರುಪ್ರಾಯರಾದ ದುಷ್ಟಜನರನ್ನು ತುಚ್ಛವಾಗಿ ಕಂಡು ಅವರ ಸಲಹೆಗಳನ್ನು ಹಗೆ ಮಾಡುವಂತೆಯೂ ಆಗುವುದನ್ನು ತಂದೆ ತಾಯಿಗಳೂ ಪೋಷಕರೂ ದೇಶವತ್ಸಲರೂ ಮುತುವರ್ಜಿಯಾಗಿ ನೋಡಿಕೊಳ್ಳುತ್ತಾ ಬಂದಾರೆಂದು ನಂಬಿ ಹಾರೈಸುತ್ತೇವೆ.

ಭಕ್ತಿಸಮ್ಮೇಲನ.

ಕಳೆದ ಒಂದು ವಾರದಿಂದ ತುಮಕೂರಿನಲ್ಲಿ ನಡೆಯುತ್ತಿದ್ದ ಕ್ರೈಸ್ತ ಪ್ರಸಂಗಿಗಳ ಸಮ್ಮೇಲನವು ಮೊನ್ನೆ ಮಂಗಳವಾರ ಸಾಯಂಕಾಲಕ್ಕೆ ಮುಕ್ತಾಯವಾಯಿತು. ಮೇಲ್ಕಂಡ ಸಮ್ಮೇಲನದಿಂದ ಈ ದೇಶೀಯರಿಗೆ ಬಹಳ ಪ್ರಯೋಜನವಾದೀತೆನ್ನುವುದರಲ್ಲಿ ಸಂಶಯವಿರಲಾರದು. ಸಮ್ಮೇಲನಕ್ಕೆ ವೆಸ್ಲಿಯನ್ ಮಿಷನ್ ಸಂಘದ ಉಪದೇಶಿಗಳೂ ಲಂಡನ್ ಮಿಷನ್ ಸಂಘದ ಉಪದೇಶಿಗಳಲ್ಲಿ ಕೆಲವರೂ ಕೂಡಿ ಬಂದು ಭಗವತ್ಪ್ರಾರ್ಥನೆಯಲ್ಲಿ ನಿರತರಾಗುವುದಲ್ಲದೆ ಶಾಸ್ತ್ರಭಿಜ್ಞರಿಗೂ ಆತ್ಮೀಯ ಪ್ರೇರಣೆಗೂ ಸಹಕಾರಿಗಳಾದ ಉಪನ್ಯಾಸಗಳನ್ನು ಕೇಳಿದರು.

ಸಮ್ಮೇಲನದ ವಿವಿಧ ಕೂಟಗಳು ಕಳೆದ ಗುರುವಾರ ಪ್ರಾರಂಭವಾಗಿ ಮೊನ್ನೆ ಮಂಗಳವಾರ ಸಾಯಂಕಾಲದ ವರೆಗೂ ಜರುಗಿದವು. ಕೂಟಗಳಿಗೆ ಅನೇಕರು ಬಂದು ತಮ್ಮ ಭಕ್ತಿಯನ್ನು ಯಥೋಚಿತವಾಗಿ ಪ್ರಕಟಿಸಿದುದಲ್ಲದೆ ತಮ್ಮ ಅಂತರ್ಯ ಗುಣ ಸ್ವಭಾವಗಳ ವಿಷಯ ದೀರ್ಘವಾಗಿ ಯೋಚಿಸಿದರು. ಭಗವತ್ಪ್ರಾರ್ಥನೆಯಲ್ಲಿಯೂ ದೇವರು ವಿಟ್ಟ ಶಕ್ತಿ ಜ್ಞಾನಮಾನದ ವಿಷಯದಲ್ಲಿಯೂ ಆತನ ಇಷ್ಟಗೆಗೆ ಅನುಸಾರವಾದ ಕೆಲಸದ ವಿಷಯದಲ್ಲಿಯೂ ಹೆಚ್ಚಿನ ಸಮಯವು ವಿನಿಯೋಗಿಸಲ್ಪಟ್ಟಿತು. ಅನೇಕರು ತಾವು ಮಾಡತಕ್ಕ ದೇವರ ಸೇವೆಯ ವಿಷಯ ಹೆಚ್ಚಿನ ತಿಳುವಳಿಕೆಯನ್ನು ಹೊಂದಿಕೊಂಡರು. ಅವರು ದೇವರ ವಿಷಯ ತಮಗಿರುವ ಕರ್ತವ್ಯವನ್ನು ಕುರಿತೂ ತಮ್ಮ ಜೊತೆ ಸೃಷ್ಟಿಗಳಾದ ಮನುಷ್ಯರಿಗೆ ಸಲ್ಲಿಸತಕ್ಕ ಹಂಗಿನ ವಿಷಯವೂ ವಿಶೇಷವಾದ ತಿಳುವಳಿಕೆಯನ್ನು ಹೊಂದಿಕೊಂಡುದುದಲ್ಲದೆ ತಮ್ಮ ಜೊತೆ ಕೆಲಸದವರ ಪ್ರಾರ್ಥನೆ, ಸಹಾಯ ಮೊದಲಾದುವುಗಳಿಂದ ಪ್ರೇರಿತರಾಗಿ ತಮ್ಮ ಊರುಗಳಿಗೆ ತೆರಳಿದರು.

ಮೈಸೂರು ದೇಶದಲ್ಲಿ ಭಕ್ತಿ ಸಾಧನೆಯು ಹೆಚ್ಚಾಗಬೇಕೆಂದು ಎಲ್ಲರು ಅಪೇಕ್ಷಿಸುತ್ತಾರಷ್ಟೆ. ಮೈಸೂರು ದೇಶೀಯರೆಲ್ಲರೂ ಸತ್ಯವಂತರೂ ಸಚ್ಚರಿತರೂ ಯೋಗ್ಯರೂ ಆಗಬೇಕೆಂದು ಪ್ರಾರ್ಥಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ತುಮಕೂರಿನಲ್ಲಿ ಕೂಡಿಬಂದಿದ್ದ ಪ್ರಸಂಗಿಗಳು ದೇವರ ಆತ್ಮನು ತಮ್ಮೊಳಗೆ ಕಾಣಿಸಿಕೊಂಡು ತಮ್ಮೆಲ್ಲರನ್ನು ಪ್ರೇರಿಸುತ್ತಾನೆಂದು ನಿರೀಕ್ಷಿಸುತ್ತಿದ್ದರು. ಈ ನಿರೀಕ್ಷೆಯೇ ಅವರ ಮುಖ್ಯ ಕೋರಿಕೆಯಾಗಿತ್ತು. ಭಗವಂತನು ಮನುಷ್ಯರ ಹೃದಯಗಳೊಳಗೆ ವಾಸಮಾಡುತ್ತಾ ಅವರು ತನ್ನ ವಿಷಯ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಅವರನ್ನು ಪ್ರೇರಿಸುತ್ತಾ ಅವರು ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೂ ತನ್ನ ಕಟ್ಟಳೆಗಳನ್ನು ಕೈಕೊಳ್ಳುವುದಕ್ಕೂ ತಕ್ಕ ಸಹಾಯವನ್ನು ದಯಪಾಲಿಸುತ್ತಾ ಬರುತ್ತಾನೆನ್ನುವುದರಲ್ಲಿ ಸಂಶಯವೇ ಇಲ್ಲ. ಮೇಲ್ಕಂಡ ಪ್ರಸಂಗಿಗಳ ಸಮ್ಮೇಲನದ ಮೂಲಕ ಈ ದೇಶೀಯರಿಗೂ ಅವರಿಗೆ ಉಪದೇಶಮಾಡತಕ್ಕ ಬೋಧಕರಿಗೂ ದೇವರ ಆಶೀರ್ವಾದವು ಹೆಚ್ಚಾಗಿ ಲಭಿಸಬೇಕೆಂದು ಹಾರೈಸುತ್ತೇವೆ.

ಮೈಸೂರು ಸರ್ಕಾರಿ ಮುಕುಮುಗಳು.

ಮನೆ ಕಟ್ಟುವುದಕ್ಕೆ ಅಡ್ವಾನ್ಸು ಕೊಡುವುದು.

ಸರ್ಕಾರಿ ನೌಕರರು ಯಾವ ಸ್ಥಳದಲ್ಲಿ ನೌಕರಿ ಮಾಡುತ್ತಿರುವರೋ ಅಥವಾ ಅವರು ಎಲ್ಲಿ ಇರಬೇಕೆಂಬುವುದು ಸರ್ಕಾರದವರ ಅಭಿಮತವೋ ಅಂಥಾ ಸ್ಥಳದಲ್ಲಿ ನೌಕರರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವರಿಗೆ ಸರ್ಕಾರದವರು ಅಡ್ವಾನ್ಸನ್ನು ಕೊಡಬಹುದು. ಆದರೆ ನೌಕರರು ಒಂದು ಕಡೆ ಕೆಲಸ ಮಾಡುತ್ತಿದ್ದು ಇನ್ನೊಂದು ಊರಿನಲ್ಲಿ ಅವರು ಮನೆ ಕಟ್ಟಿಕೊಳ್ಳಬೇಕೆಂದು ಅಪೇಕ್ಷಿಸಿದರೆ ಅಂಥವರಿಗೆ ಅಡ್ವಾನ್ಸು ದೊರೆಯಲಾರದು. ಆದರೂ ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗಾ ಟೌನ್‌ಗಳ ಹೊಸ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟುವಂತೆ ಪ್ರೋತ್ಸಾಹಪಡಿಸುವುದಕ್ಕೋಸ್ಕರ ಮೇಲ್ಕಂಡ ನಿರ್ಬಂಧವನ್ನು ತಪ್ಪಿಸಿದೆ, ಅಂದರೆ ಸರ್ಕಾರಿ ನೌಕರರು ಆ ಮೂರು ಕಡೆಗಳಲ್ಲಿ ಹೊಸ ಮನೆಗಳನ್ನು ಕಟ್ಟುವುದಕ್ಕೆ ಇಷ್ಟಪಡುವದಾದರೆ ಸರ್ಕಾರದವರು ಅಂಥವರಿಗೆ ಅಡ್ವಾನ್ಸುಗಳನ್ನು ಕೊಡುತ್ತಾರೆ.

ಕ್ಷಾಮದ ಅಲೋಯನ್ಸುಗಳು

ಪ್ರಜೆಗಳ ಆಹಾರಕ್ಕೆ ಮುಖ್ಯ ಧಾನ್ಯವಾದ ರಾಗಿಯ ಧಾರಣೆಯು ಮೈಸೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ರೂಪಾಯಿಗೆ ೧೨ ಸೇರು ಆಗಿದೆ ಎಂದೂ, ಬೆಂಗಳೂರು, ಕೋಲಾರ, ತುಂಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ೧೨ ಸೇರಿಗಿಂತ ಕಡಮೆಯಾಗಿದೆ ಎಂದೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗುವ ತಃಖ್ತೆಗಳಿಂದ ಗೊತ್ತಾಗುತ್ತದೆ. ಧಾರಣೆಯು ೧೨ ಸೇರಿಗಿಂತ ಕಡಮೆಯಾಗಿರುವಾಗ್ಗೆ ಸರ್ಕಾರಿ ನೌಕರರಿಗೆ ಧಾನ್ಯದ ಅಲೋಯನ್ಸುಗಳನ್ನು ಕೊಡತಕ್ಕದ್ದೆಂದು ವಿಧಿಸಲ್ಪಟ್ಟಿರುವದಾದಕಾರಣ ಗವರನ್‌ಮೆಂಟಿನಿಂದ ಹಿಂದೆ ಸ್ಯಾಂಕ್ಷನ್ ಆಗಿರುವ ಪ್ರಕಾರ ಅಲೋಯನ್ಸನ್ನು ೧೯೦೯ ನೇ ಇಸವಿ ಜೂನ್ ಆಖೈರು ವರೆಗೆ ಬೆಂಗಳೂರು, ಕೋಲಾರ, ತುಂಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಪಾವತಿ ಆಗತಕ್ಕದ್ದು. ಈಗ ಪಾವತಿ ಆಗುತ್ತಿರುವ ನೌಕರರಿಗೆ ಅದೇ ದರಗಳಂತೆ ಈ ಅಲೋಯನ್ಸನ್ನು ಬಟವಾಡೆ ಮಾಡಬೇಕಾಗಿದೆ.

ಧರ್ಮಾರ್ಥವಾದ ಡಿಪಾಜಿಟ್ಟುಗಳ ಬಡ್ಡಿ.

ಪ್ರಜೆಗಳ ಪೈಕಿ ಯಾರಾದರೂ ಪರೋಪಕಾರಾರ್ಥವಾದ ಅದನಾ ದರ್ಮಾರ್ಥವಾದ ಇಲ್ಲವೇ ವಿದ್ಯಾಪ್ರೋತ್ಸಾಹಕರವಾದ ಕಾರ್ಯಗಳನ್ನು ನಡಿಸುವುದಕ್ಕೋಸ್ಕರ ದ್ರವ್ಯವನ್ನು ಘಂತಾಗಿ ಇಟ್ಟು ಸರ್ಕಾರದವರಿಗೆ ಒಪ್ಪಿಸುವುದಾದರೆ ಗವರನ್‌ಮೆಂಟಿನವರು ಅಂಥಾ ಹಣವನ್ನು ಅಂಗೀಕರಿಸುವರು. ಈ ಹಣವು ೩,೦೦೦ ರೂಪಾಯಿಗಿಂತ ಕಡಮೆಯಾಗಿಲ್ಲದೆ ೧೮,೦೦೦ ರೂಪಾಯಿಗಿಂತ ಹೆಚ್ಚಾಗಿಯೂ ಇರಕೂಡದು. ಇಂಡಿಯಾ ಗವರ್ನ್‌ಮೆಂಟಿನವರು ಅವರ ಸೆಕ್ಯೂರಿಟಿಗಳೆಂಬ ಸಾಲದ ಪತ್ರಗಳಿಗೆ ಯಾವ ದರದ ಪ್ರಕಾರ ಬಡ್ಡಿಯನ್ನು ಗೊತ್ತು ಮಾಡಿರುವರೋ ಆ ಬಡ್ಡಿಗಿಂತಲೂ ಶೇಕಡಾ ಅರ್ಧ ರೂಪಾಯಿ ಜಾಸ್ತಿಯುಳ್ಳ ಬಡ್ಡಿಯನ್ನು ಮೈಸೂರು ಸರ್ಕಾರದವರು ಮೇಲ್ಕಂಡ ದರ್ಮಫಂಡುಗಳ ಹಣಕ್ಕೆ ಕೊಡುವರು. ಅದಕ್ಕಿಂತಲೂ ಹೆಚ್ಚು ದರವನ್ನು ಕೊಡುವುದಿಲ್ಲ. ಈ ಷರತ್ತಿಗೆ ಒಪ್ಪತಕ್ಕವರು ಹಣವನ್ನು ಸರ್ಕಾರಕ್ಕೆ ವಹಿಸಿದಲ್ಲಿ ಅವರು ಸರ್ಕಾರಕ್ಕೆ ಒಂದು ಕರಾರನ್ನು ಬರೆದುಕೊಡಬೇಕಾಗಿದೆ. ಅಸಲ್ ಹಣವನ್ನಾಗಲಿ, ಅದರ ಯಾವ ಭಾಗವನ್ನಾಗಲಿ ವಾಪಸ್ ಕೇಳುವುದಿಲ್ಲವೆಂದೂ, ಅದರ ಬಡ್ಡಿಯನ್ನು ಮೊದಲೇ ಗೊತ್ತುಮಾಡಲ್ಪಟ್ಟ ಧರ್ಮಕ್ಕಲ್ಲದೆ ಅನ್ಯಥಾ ವಿನಿಯೋಗಿಸುವುದಿಲ್ಲವೆಂದೂ, ಸರ್ಕಾರದವರು ವಿಧಾಯಕವಿಮಾಡುವ ರೀತಿಯಲ್ಲಿ ಆ ಧರ್ಮದ ಖರ್ಚುಬಾಬುಗಳ ಲೆಕ್ಕಗಳನ್ನು ಇಡುವುದಾಗಿಯೂ, ಸರ್ಕಾರಿ ಅಧಿಕಾರಿಗಳು ಅಪೇಕ್ಷಿಸುವಲ್ಲಿ ಅಂಥಾ ಲೆಕ್ಕಗಳನ್ನು ಹಾಜರುಮಾಡುವುದಾಗಿಯೂ ಒಪ್ಪಿ ಕರಾರು ಬರೆದುಕೊಡಬೇಕು. ಇಂಥಾ ಕರಾರು ಬರೆದುಕೊಟ್ಟ ದ್ದಾಗ್ಗೂ ಉದ್ದೇಶಪಟ್ಟ ಧರ್ಮಕ್ಕೆ ಬಡ್ಡಿಯ ಹಣವು ವಿನಿಯೋಗವಾಗಲಿಲ್ಲವೆಂದು ಕಂಡುಬಂದರೆ ಸರ್ಕಾರದವರು ಬಡ್ಡಿಯನ್ನು ಪಾವತಿಮಾಡದೆ ತಡೆದು ಬಿಡುವರು. ಮತ್ತೆ ಅಂಥಾ ಧರ್ಮದ ನಡವಳಿಕೆಗೆ ಸರಿಯಾದ ಮತ್ತು ತೃಪ್ತಿಕರವಾದ ಏರ್ಪಾಡುಮಾಡಲ್ಪಟ್ಟಿದೆ ಎಂದು ಗೊತ್ತಾದಾಗ ಸರ್ಕಾರದವರು ಬಡ್ಡಿಯ ಹಣವನ್ನು ಪಾವತಿಮಾಡುವರು.

೧೯೦೮ ನೇ ವರುಷದ ದಸರಾ ಪ್ರದರ್ಶನದ ರಿಪೋರ್ಟು

ಕಳೆದ ೧೯೦೮ ನೇ ಇಸವಿಯ ನವರಾತ್ರಿಯಲ್ಲಿ ರಾಜಧಾನಿಯಲ್ಲಿ ನಡೆದ ಎರಡನೇ ವಾರ್ಷಿಕ ಪ್ರದರ್ಶನವನ್ನು ಕುರಿತು ರೆವಿನ್ಯೂ ಕಮಿಷನರ್‌ರವರು ಬರೆದಿದ್ದ ರಿಪೋರ್ಟನ್ನು ಪರಾಂಬರಿಸಿ ಗವರನ್‌ಮೆಂಟಿನವರು ಬರೆದಿರುವ ಹುಕುಂ ಏನೆಂದರೆ:—೧೯೦೭ ನೇ ವರುಷದಲ್ಲಿ ನಡೆದ ಪ್ರದರ್ಶನಕ್ಕಿಂತಲೂ ೧೯೦೮ ರಲ್ಲಿ ನಡೆದ ಪ್ರದರ್ಶನವು ಬಹಳ ಉತ್ತಮವಾಗಿತ್ತೆಂದು ಹೇಳಬಹುದು. ಪ್ರದರ್ಶನ ಮಾಡಲ್ಪಟ್ಟ ವಸ್ತುಗಳ ಸಂಖ್ಯೆಯು ಹಿಂದಿನ ವರುಷಕ್ಕಿಂತ ಹೆಚ್ಚಾಗಿತ್ತು. ನಾಗಪುರದಲ್ಲಿ ಅದೇ ಸಮಯದಲ್ಲಿ ಒಂದು ಪ್ರದರ್ಶನವು ಏರ್ಪಾಡಾಗಿ ನಡೆದದ್ದರಿಂದ ಮಧ್ಯಪ್ರಾಂತ್ಯಗಳಿಂದಲೂ ಬೊಂಬಾಯಿ ಅಧಿಪತ್ಯದಿಂದಲೂ ವಿಶೇಷ ವಸ್ತುಗಳು ಬಾರದೆ ಹೋದುವು. ಆದರೂ ಹಿಂದಿನ ವರುಷ ೨೭ ಸ್ಥಳಗಳಿಂದ ಮಾತ್ರ ವಸ್ತುಗಳು ಕಳುಹಿಸಲ್ಪಟ್ಟದ್ದವೆಂದೂ ೧೯೦೮ ನೇ ವರುಷದ ಪ್ರದರ್ಶನಕ್ಕೆ ೬೬ ಸ್ಥಳಗಳಿಂದ ಪ್ರದರ್ಶನ ಪದಾರ್ಥಗಳು ಬಂದಿದ್ದುವೆಂದೂ ತಿಳಿಯಬರುತ್ತದೆ. ೧೯೦೭ ರ ಪ್ರದರ್ಶನವು ೨೭ ದಿನಗಳ ವರೆಗೆ ತೆರೆದಿಡಲ್ಪಟ್ಟದ್ದರೂ ೩೦,೦೦೦ ಜನರು ಮಾತ್ರ ಬಂದು ನೋಡಿದರು. ಎರಡನೆಯ ಪ್ರದರ್ಶನವನ್ನು ೧೫ ದಿನಗಳ ವರೆಗೆ ಮಾತ್ರ ತೆರೆದಿದ್ದರೂ ೪೮,೦೦೦ ಜನರು ಬಂದು ವಸ್ತುಗಳನ್ನು ನೋಡಿ ಹೋಗಿರುತ್ತಾರೆ. ೧೯೦೭ ನೇ ವರುಷದ ಪ್ರದರ್ಶನಕ್ಕೆ ೨೭,೯೨೭ ರೂಪಾಯಿ ಖರ್ಚಾಯಿತು, ೧೯೦೮ ನೇ ವರುಷದ ಪ್ರದರ್ಶನಕ್ಕಾದರೋ ೧೯,೭೪೯ ರೂಪಾಯಿ ಮಾತ್ರ ಖರ್ಚಾಗಿರುತ್ತದೆ. ಇನ್ನೂ ೧೯೫ ರೂಪಾಯಿ ಬೆಲೆ ಬಾಳುವ ಮೊದಲಾಗಿ ಉಳಿದಿರುವವು. ಇವನ್ನು ಮುಂದಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಹುಟ್ಟುವಳಿ ಮತ್ತು ಖರ್ಚು ಕಾಮಗಾರಿ ಸಾಮಾನುಗಳನ್ನು ವಜಾಮಾಡಿದಲ್ಲಿ ಈ ಎರಡನೆಯ ಪ್ರದರ್ಶನಕ್ಕೆ ಸರ್ಕಾರದಿಂದ ೭,೬೭೩ ರೂಪಾಯಿ ಖರ್ಚಾಗಿರುವಂತೆ ಗೊತ್ತಾಗುತ್ತದೆ.

ಸರ್ಕಾರಿ ನೌಕರರಲ್ಲದ ಬೇರೋಜಗಾರ ಸಂಬಳದವರು ಮುಂದಾಳುಗಳಾಗಿ ನಿಂತು ಈ ಪ್ರದರ್ಶನವನ್ನು ನಡಿಸುವುದರಲ್ಲಿ ತುಂಬಾ ಸಹಾಯ ಮಾಡಿರುತ್ತಾರಲ್ಲದೆ ಇದರಲ್ಲಿ ಅವರಿಗೆ ಸಕ್ತಿ ಶ್ರದ್ಧೆಗೆ ಅನುಭವವೂ ಉಂಟಾಗಿರುತ್ತದೆ. ಹೀಗೆಯೇ ಕಾಲಕ್ರಮದಲ್ಲಿ ಸರ್ಕಾರಿ ನೌಕರರನ್ನೆಲ್ಲಾ ತೆಗೆದುಹಾಕಿ ಬೇರೋಜಗಾರರಿಗೆ ಪ್ರದರ್ಶನವನ್ನು ನಡಿಸುವ ಕಾರ್ಯವನ್ನು ವಹಿಸಿದಲ್ಲಿ ಈ ಪ್ರದರ್ಶನವನ್ನು ಅವರೇ ನಡಿಸಿಕೊಂಡು ಹೋಗುವಂತೆ ಆಗುವುದರಲ್ಲಿ ಸಂಶಯವಿಲ್ಲ. ಗವರ್ನ್‌ಮೆಂಟಿನವರು ಈ ಉದ್ದೇಶವನ್ನು ಇಟ್ಟುಕೊಂಡು ಸಹಾಯ ಪ್ರೋತ್ಸಾಹಾದಿಗಳನ್ನು ಮಾಡುವವರಾಗಿದಾರೆ.

ಮದರಾಸ್ ಗವರ್ನ್‌ಮೆಂಟಿನವರೂ, ಬೊಂಬಾಯಿ ಗವರ್ನ್‌ಮೆಂಟಿನವರೂ, ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳವರೂ ಸಾಹಸಪಟ್ಟು ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಟ್ಟದ್ದಕ್ಕಾಗಿ ಅವರೆಲ್ಲರಿಗೂ ಸರ್ಕಾರದವರು ವಂದಿಸುವರು ಮತ್ತು ರೈಲ್ವೆ ಕಂಪನಿಯವರು ಅಂಥಾ ಪ್ರದರ್ಶನ ವಸ್ತುಗಳನ್ನು ರಿಬೇಟು ದರದಿಂದ ಸಾಗಿಸಿಕೊಟ್ಟದ್ದಕ್ಕಾಗಿ ಅವರನ್ನೂ ವಂದಿಸುತ್ತಾರೆ.

ರೆವಿನ್ಯೂ ಕಮಿಷನರರಿಗೆ ವಿಶೇಷವಾದ ಇತರ ಕೆಲಸಗಳು ಇದ್ದದ್ದರಿಂದ ಗವರ್ನ್‌ಮೆಂಟಿನವರು ಅವರಿಗೆ ಈ ಪ್ರದರ್ಶನದ ಜವಾಬ್ದಾರಿಯನ್ನು ತಪ್ಪಿಸಿ ಪ್ರದರ್ಶನದ ಕಮಿಟಿಗೆ ಮಿ ಕ್ರಂಬಿಗಲ್ ಯವರನ್ನು ಪ್ರೆಸಿಡೆಂಟರನ್ನಾಗಿಯೂ, ಮಿ ಜಿ ಸುಬ್ಬರಾವ್ ಯವರನ್ನು ಸೆಕ್ರೆಟರಿಯಾಗಿಯೂ ನೇಮಕ ಮಾಡಿದಾರೆ. ಬಾಲ್ತಿ ಸಾಲಿನ ನವರಾತ್ರಿ ಹಬ್ಬದಲ್ಲೂ ರಾಜಧಾನಿಯಲ್ಲಿ ಪ್ರದರ್ಶನವು ನಡೆಯಬೇಕಾಗಿರುವುದರಿಂದ ಕಮಿಟಿ ಮೆಂಬರುಗಳಿಗೆ ಎಲ್ಲಾ ಇಲಾಖೆಗಳ ಮುಖ್ಯಸ್ಥರೂ ಡೆಪ್ಯುಟಿ ಕಮಿಷನರುಗಳೂ ಸ್ಥಳಾಧಿಕಾರಿಗಳೂ ಸಂತೋಷದಿಂದಲೂ ಚಟುವಟಿಕೆಯಾಗಿಯೂ ಸಹಾಯ ಮಾಡುತ್ತಾರೆಂದು ನಿರೀಕ್ಷಿಸಿದೆ. ಕಳೆದ ವರುಷದ ಪ್ರದರ್ಶನವನ್ನು ನೆರವೇರಿಸುವುದರಲ್ಲಿ ಸಹಾಯ ಮಾಡಿದ ಸರ್ಕಾರಿ ನೌಕರರಿಗೂ ಬೇರೋಜುಗಾರರಾದ ದೊಡ್ಡ ಮನುಷ್ಯರಿಗೂ ಪ್ರೆಸಿಡೆಂಟರು ಗವರ್ನ್‌ಮೆಂಟಿನವರ ವಂದನೆಗಳನ್ನು ಸಲ್ಲಿಸಬೇಕಾಗಿದೆ.

ಪುರಾತನಕಾಲದ ನಾಗರಿಕತೆಯು.

ಗೌತಮ ಬುದ್ಧನ ಅಸ್ಥಿಗಳು ಸಿಕ್ಕಿದ್ದು.

ಹಿಂದುಸ್ಥಾನದ ವಾಯವ್ಯ ಪ್ರಾಂತ್ಯದಲ್ಲಿರುವ ಪೆಷಾವರ್ ಪಟ್ಟಣದ ಬಳಿಯಲ್ಲಿ ಪ್ರಾಚೀನಕಾಲದ ಲಿಪ್ಯನ್ವೇಷಣ ಶಿಲಾಶೋಧಕರು ಬೌದ್ಧರ ಒಂದು ಆಶ್ರಮವನ್ನು ಕಂಡುಹಿಡಿದಿದಾರೆ. ಅಲ್ಲಿ ಗೌತಮಬುದ್ಧನ ಸುಟ್ಟ ಮೂಳೆಗಳ ತುಂಡುಗಳು ಒಂದು ಕಲ್ಲಿನ ಪೆಟ್ಟಿಗೆಯೊಳಗೆ ಸಿಕ್ಕಿತು. ಅದಕ್ಕೆ ಬೌದ್ಧ ಚಕ್ರವರ್ತಿಯಾದ ಕಾನಿಷ್ಕನು ತನ್ನ ಮುದ್ರೆಯನ್ನು ಹಾಕಿ ಮೊಹರುಮಾಡಿರುತ್ತಾನೆ. ಪಾಲಸ್ತೀನ್ ದೇಶದಲ್ಲಿ ಕ್ರಿಸ್ತನು ಜೀವಿಸಿಕೊಂಡಿದ್ದ ಕಾಲದಲ್ಲಿ ಪೆಷಾವರಿನೊಳಗೆ ಕಾನಿಷ್ಕನು ಚಕ್ರವರ್ತಿಯಾಗಿ ಆಳುತ್ತಿದ್ದನು. ಆ ಕಂಚಿನ ಪೆಟ್ಟಿಗೆಯೊಳಗಡೆ ಇದ್ದ ಒಂದು ಕಲ್ಲಿನ ಡಬ್ಬಿಯೂ ಆ ಡಬ್ಬಿಯೊಳಗೆ ಬುದ್ಧನ ಬೂದಿಯೂ ಇರುತ್ತವೆ. ಆ ಕಂಚಿನ ಪೆಟ್ಟಿಗೆಯ ಹೊರಪಾರ್ಶ್ವದಲ್ಲಿ ಬುದ್ಧನ ಮತ್ತು ಚಕ್ರವರ್ತಿ ಕಾನಿಷ್ಕನ ವಿಗ್ರಹಗಳನ್ನು ಕೆತ್ತಿವಾರೆ. ಚೀನಿಯಿಂದ ಆಗ್ಗೆ ಹಿಂದುಸ್ಥಾನಕ್ಕೆ ಯಾತ್ರಾರ್ಥಿಯಾಗಿ ಬಂದಿದ್ದ ಹ್ಯುಎನ್ ತ್ಸಾಂಗ್ ಎಂಬಾತನು ಈ ಪೆಟ್ಟಿಗೆಯನ್ನು ಆ ಸ್ಥಳದಲ್ಲೇ ಇಟ್ಟುಹೋದನೆಂದು ಗೊತ್ತಾಗುತ್ತದೆ. ಈ ಪೆಟ್ಟಿಗೆಯನ್ನು ಅಲ್ಲಿ ಇಟ್ಟು ಇಲ್ಲಿಗೆ ೨,೦೦೦ ವರುಷಗಳಾಗಿವೆ ಎಂದು ತಿಳಿದು ಬರುತ್ತದೆ. ಪೆಟ್ಟಿಗೆಯ ಮೇಲೆ ಅದನ್ನು ಕೆತ್ತಿ ತಯಾರುಮಾಡಿದ ಆಗಿಸಲಾಸ್ ಎಂಬ ಗ್ರೀಕನ ಹೆಸರು ಕಾಣಿಸಲ್ಪಟ್ಟಿದೆ. ಹಿಂದೆ ನೇಪಾಳ ಸಂಸ್ಥಾನದ ಎಲ್ಲೆಕಟ್ಟಿನಲ್ಲಿ ಇಂಥಾದ್ದೊಂದು ಪ್ರಾಚೀನ ವಸ್ತುವು ಸಿಕ್ಕಿದಾಗ ಅದನ್ನು ಬರ್ಮಾ, ಸಯಾಂ, ಸಿಲೋನ್, ಜಪಾನ್ ಮುಂತಾದ ಕಡೆಗಳ ಬೌದ್ಧ ದೇವಸ್ಥಾನಗಳಿಗೆ ಹಂಚಿಕೊಟ್ಟರು. ಈಗಲೂ ಅದೇ ರೀತಿ ಮಾಡಬಹುದೆಂದು ತೋರುತ್ತದೆ. ಚಕ್ರವರ್ತಿಯಾದ ಕಾನಿಷ್ಕನ ಆಳ್ವಿಕೆಯಲ್ಲಿ ಗ್ರೀಕ್ ಶಿಲ್ಪಿಗಳನ್ನು ನೇಮಿಸಿಕೊಂಡಿದ್ದರೆಂದೂ, ಅವನ ಕಾಲಕ್ಕೆ ಅವರ ಶಿಲ್ಪವು ಬಹುಮಟ್ಟಿಗೆ ಕ್ಷೀಣವಾಗಿತ್ತೆಂದೂ ಕಾಣುವುದು. ಈಗ ಇದು ಸಿಕ್ಕಿ

ರುವ ಸ್ಥಳದಲ್ಲಿ ಭೂಮಿಯನ್ನು ಇನ್ನೂ ಶೋಧಿಸಮಾಡುತ್ತಿದಾರೆ ಅಲ್ಲಿ ಒಂದು ಭಾರೀ ಬೌದ್ಧ ಮಠವು ಕಂಡು ಬಂದಿದೆ ಇದು ಬಹು ಸುಂದರವಾಗಿಯೂ ಶಾಶ್ವತವಾಗಿಯೂ ಕಟ್ಟಲ್ಪಟ್ಟು ಬಹಳ ವಿಸ್ತಾರವಾಗಿರುವುದು ಅದರೊಳಗೆ ಪ್ರಾಚೀನ ಕಾಲದ ಕಲವು ಕಾಗದ ಪತ್ರಗಳು ದೊರಕಿರುವವು ಅವುಗಳಲ್ಲಿ ಬರೆದಿರುವ ಲಿಪಿಗಳನ್ನು ಇನ್ನೂ ಅರ್ಥ ಮಾಡುವುದರಲ್ಲಿದಾರೆ ಇವೆಲ್ಲಾ ಭೂಮಟ್ಟದಿಂದ ಸುಮಾರು ೪೦ ಅಡಿ ಆಳದಲ್ಲಿ ದೊರಕಿರುತ್ತವೆ

ಚಂದ್ರವಳ್ಳಿ ಎಂಬ ಪುರಾತನ ನಗರವು

ಮೆ|| ರೈಸ್ ಸಾಹೇಬರು ಬರೆದಿರುವ ಗೆಜೆಟಿಯರ್ ಎಂಬ ಪುಸ್ತಕದಲ್ಲಿ ಚಿತ್ರದುರ್ಗದ ಪಶ್ಚಿಮದ ಬಳಿ ರಾಯನ ಬಿಕ್ಕಿನಲ್ಲಿ ಚಂದ್ರವಳ್ಳಿ ಎಂಬ ಪಟ್ಟಣವಿತ್ತೆಂದೂ, ಅದು ಬಹು ದೊಡ್ಡ ನಗರವಾಗಿತ್ತೆಂದೂ ಬಹು ಪುರಾತನವಾದ ಸುದ್ದಿಯುಂಟೆಂದೂ ನಮೂದಾಗಿದೆ ಕೆಲವುಕಾಲದಿಂದ ಈಚೆಗೆ ಆ ಸುತ್ತುಮುತ್ತಿನಲ್ಲಿ ವ್ಯವಸಾಯ ಕಾರ್ಯಗಳನ್ನು ನಡಿಸುತ್ತಾ ಬಂದಿರುವ ರೈತರಿಗೂ ಇತರರಿಗೂ ನಾಣ್ಯಗಳೂ, ಚಿನ್ನ ಬೆಳ್ಳಿ ನಗಗಳೂ, ಮೂಳೆಗಳೂ ಸಿಕ್ಕುತ್ತಾ ಇವೆ ಎಂದು ಪುಕಾರಾಗಿರುವುದು ಈ ಸುದ್ದಿಯು ಹಾಗೂ ಹೀಗೂ ಹರಡಿಕೊಂಡು ಮೈಸೂರು ಸರ್ಕಾರಿ ಪುರಾತತ್ವ ಇಲಾಖೆಗೆ ತಲಪಿತು ಈ ಇಲಾಖೆಯವರು ಸ್ಥಳಾಧಿಕಾರಿಯನ್ನೂ ಕೆಲವು ಕೂಲಿಯವರನ್ನೂ ಕರೆದುಕೊಂಡು ಆ ಸ್ಥಳಕ್ಕೆ ಹೋದರು ಆ ಪುರಾತನ ನಗರವು ಹೊಳಲ್ಕೆರೆ ರಸ್ತೆಯಿಂದ ಒಂದು ಮೈಲಿ ದೂರದಲ್ಲಿ ಬೆಟ್ಟಕ್ಕೆ ಹೋಗುವ ಕಣಿವೆಯಲ್ಲಿ ಸುಮಾರು ಎರಡು ಫರ್ಲಾಂಗಿನ ಅಗಲ ಇದ್ದಿರಬೇಕೆಂದು ಗೊತ್ತುಮಾಡಿದಾರೆ ಆ ಪ್ರಾಂತ್ಯವೆಲ್ಲಾ ಈಗ ಜಮೀನುಗಳಾಗಿ ವ್ಯವಸಾಯದಲ್ಲಿರುತ್ತದೆ ಆದರೂ ಅಲ್ಲಲ್ಲಿ ಪುರಾತನಕಾಲದ ಕಟ್ಟಡಗಳ ಪಾಯಗಳೆಂಬ ಮೊದಲಾದ ಚಿಹ್ನೆಗಳು ಈಗಲೂ ಕಂಡುಬರುವವು ಈ ಸಾಲು ನಿವೇಶನಗಳ ಬಳಿ ಕೂಲಿ ಆಳುಗಳನ್ನು ಬಿಟ್ಟು ಸುಮಾರು ೧೦ ಅಡಿ ಆಳವಾಗಿ ತೋಡಿ ನೋಡುತ್ತಿದ್ದರು ಅಲ್ಲಿ ೮ ೧೧ ಅಡಿ ಎತ್ತರವಾಗ ಇಟ್ಟಿಗೆ ಗಾರೆ ಗೋಡೆಗಳು ಕಂಡುಬಂದವು ಗೋಡೆಗಳಿಗೆ ಹಾಕಿರುವ ಇಟ್ಟಿಗೆಗಳು ಈಗಿನ ಇಟ್ಟಿಗೆಗಳಂತೆ ಚಿಕ್ಕವುಗಳಲ್ಲ ಅವು ಬಹಳ ಅಗಲವಾಗಿಯೂ ಗಾತ್ರವಾಗಿಯೂ ಇರುವವು ಅಂದರೆ ಒಂದೊಂದು ಇಟ್ಟಿಗೆಯು ೧೭-೧೮ ಅಂಗುಲ ಉದ್ದವೂ, ೮ ಅಂಗುಲ ಅಗಲವೂ, ೪½ ಅಂಗುಲ ಗಾತ್ರವೂ ಉಳ್ಳದಾಗಿದೆ ಕೊಠಡಿಗಳ ಅಂಗಳಲ್ಲ ಅಂದರೆ ಮಧ್ಯಪ್ರದೇಶದಲ್ಲಿ ೪-೫ ಅಡಿ ಆಳದ ಹಳ್ಳಗಳನ್ನು ತೋಡಿ ನೋಡಲಾಗ್ಗ ಒಂದು ಕಡೆ ಜೇಡಿಮಣ್ಣಿನ ಮುದ್ರೆಯೂ (ಮೊಹರೂ), ಸೀಸದ ಮತ್ತು ಬೆಳ್ಳಿಯ ಕೆಲವು ನಾಣ್ಯಗಳೂ ಸಿಕ್ಕಿದವು ಆ ಮುದ್ರೆಯು ಗುಂಡಾಗಿ ೩ ಅಂಗುಲ ಅಗಲವಾಗಿದೆ ಇದು ಆಂಧ್ರರಾಜರ ಕಾಲದ್ದೆಂದು ಕಾಣುವುದು ಆ ಸೀಸದ ನಾಣ್ಯಗಳ ಮೇಲೆ ಒಂದು ಕಡೆ ಬೌದ್ಧ ಚಿಹ್ನೆಗಳು, ಚೈತ್ಯ ದಮ್ಮ ಚಕ್ರ ಬೋಧಿ ಮರದ ಆಕೃತಿಗಳೂ, ಬುದ್ಧನು ಮರದ ಕೆಳಗೆ ಕೂತಿರುವಹಾಗೆ ಚಿತ್ರಬಿಡಿಸಿರುವ ನಕ್ಷೆಗಳೂ ಇರುತ್ತವೆ ಬ್ರಾಂಹಿ ಲಿಪಿಯಲ್ಲಿ ಪುಲುಮಾಯಿ ಎಂಬ ಆಂಧ್ರರಾಜನ ಅಕ್ಷರಗಳು ಕೆತ್ತಲ್ಪಟ್ಟಿರುವವು ಇದನ್ನು ನೋಡಿದರೆ ಈ ನಾಣ್ಯಗಳು ಕ್ರಿಸ್ತಪೂರ್ವ ಎರಡನೆಯ ಶತಮಾನದಿಂದ ಈಚೆಗೆ ಕ್ರಿಸ್ತಶಕ ಎರಡನೆಯ ಶತಮಾನದೊಳಗೆ ಚಲಾವಣೆಯಲ್ಲಿದ್ದ ನಾಣ್ಯಗಳೆಂದು ತೋರುವುದು ಆ ಬೆಳ್ಳಿಯ ನಾಣ್ಯಗಳಾದರೋ ಅನ್ಯದೇಶದವುಗಳಾಗಿವೆ ಅವು ರೋಮನ್ ಜನರ ನಾಣ್ಯಗಳು ಅವುಗಳ ಮೇಲೆ ರೋಮನ್ ಚಕ್ರವರ್ತಿಯ ಮುದ್ರೆಯು ಒತ್ತಲ್ಪಟ್ಟಿದೆ, ಸುತ್ತಲೂ ಅಗಸ್ಟಸ್ ಸೀಸರ್ ಎಂಬ ಚಕ್ರವರ್ತಿಯ ಹೆಸರು ಬರೆದಿದೆ ಈ ನಾಣ್ಯಗಳು ಕ್ರಿಸ್ತಪೂರ್ವ ೬೩ ನೇ ಇಸವಿಯಿಂದ ಕ್ರಿಸ್ತಶಕ ೧೪ ನೇ ಇಸವಿಯೊಳಗೆ ಚಲಾವಣೆಯಲ್ಲಿದ್ದವು ಕೆಂಪಿನ ೩೪ ದಪ್ಪನಾದ ನಾಣ್ಯಗಳೂ ಅಲ್ಲಿ ಸಿಕ್ಕಿದವು ಅವುಗಳ ಮೇಲೆ ಬುದ್ಧಲಿಪಿಯಲ್ಲಿ ಏನೋ ಬರೆದಿದೆ ಇದನ್ನು ಪರೀಕ್ಷೆ ಮಾಡುವುದಕ್ಕಾಗಿ ತೆಗೆದುಕೊಂಡು ಹೋಗಿದಾರೆ

ಇದಲ್ಲದೆ ಅದೇ ಸ್ಥಳದಲ್ಲಿ ಮಣ್ಣಿನ ಪಾತ್ರೆಗಳ ಮುರುಕುಗಳು ಸಿಕ್ಕಿದವು ಹೂಜಿಗಳೂ ಬಟ್ಟಲುಗಳೂ ಬಹಳ ನುಣುಪಾಗಿಯೂ ಗಟ್ಟಿಯಾಗಿಯೂ ಮಾಡಲ್ಪಟ್ಟಿರುತ್ತವೆ ಅವುಗಳ ಮೇಲೆ ಕೆಂಪು ಮತ್ತು ಕಪ್ಪು ಬಣ್ಣಗಳಲ್ಲಿ ಚಿತ್ರಗಳು ಬಿಡಿಸಿವೆ ಈಗ ಚೀನೆಯ ಮಣ್ಣಿನ ತಟ್ಟೆ ಬಟ್ಟಲುಗಳಿಗೆ ಹ್ಯಾಗೆ ಹೊಳಪು ನುಣುಪು ಇರುವವೋ ಅಲ್ಲಿ ಸಿಕ್ಕಿರುವ ಪಾತ್ರೆಗಳೂ ಹಾಗೆಯೇ ಇರುವವು ಅಲ್ಲಿ ಕೆಲವು ಮನೆಗಳ ಮಾಳಿ ಹೊದಿಸುವಂಥಾ ಹೆಂಚುಗಳೂ ದೊರಕ್ಕಿರುತ್ತವೆ ಕೆಲವು ದೊಡ್ಡ ದೊಡ್ಡ ಗೂಡುಗಳಲ್ಲಿ ಬೂದಿಯೂ ಮೂಳೆಗಳೂ ಸಿಕ್ಕಿದವು ಈ ಮೂಳೆಗಳು ಮೃಗಜಾತಿಯ ಎಲುಬುಗಳಾಗಿರಬೇಕು ಸಮೀಪದಲ್ಲೇ ಒಂದು ಸಣ್ಣ ಹಿಂದೂ ದೇವಸ್ಥಾನವಿದೆ ಇದರೊಳಗಿರುವ ಹನುಮಂತನ ವಿಗ್ರಹವು ಭಿನ್ನಮಾಡಲ್ಪಟ್ಟಿರುವುದು ಇದು ಹಿಂದುಗಳು ೧,೦೦೦ ವರುಷಗಳ ಈಚೆಗೆ ಕಟ್ಟಿದಂಥಾ ಭಾರೀ ದೇವಸ್ಥಾನದ ಒಂದು ಭಾಗವಾಗಿರಬೇಕೆಂದು ಕಾಣುವುದು ಅದಕ್ಕೆ ಮುಂಚೆ ಬೌದ್ಧರು ಇದ್ದಂತೆ ಚಿಹ್ನೆಗಳು ಕಂಡುಬರುವವು

ಈ ಪ್ರಾಚೀನ ನಗರದ ಪಶ್ಚಿಮಕ್ಕೆ ಸುಮಾರು ಅರ್ಧ ಮೈಲಿ ದೂರದಲ್ಲಿ ಹಳ್ಳಕಿಟ್ಟುಗಳೊಡನೆ ಕೂಡಿದ ಒರಟೊರಟಾದ ಗುಡ್ಡಗಳೂ ರಮ್ಯವಾದ ಬೆಟ್ಟಗಳೂ ಇರುವವು ಇವುಗಳ ತಳಭಾಗದಲ್ಲಿ ಉದ್ದಕ್ಕೂ ಅನೇಕ ಬೌದ್ಧರ ಆಶ್ರಮಗಳೂ ಜಪಸ್ಥಾನಗಳೂ ಇದ್ದಿರಬೇಕು ಇವುಗಳನ್ನು ಬೌದ್ಧ ರಾಜರುಗಳು ಕ್ರಿಸ್ತಶಕೆಯ ಮೊದಲನೇ ಶತಮಾನದಲ್ಲಿ ಕಟ್ಟಿಸಿದರು, ಬೌದ್ಧ ಸನ್ಯಾಸಿಗಳೂ ಭಿಕ್ಷುಕರೂ ವಾಸಮಾಡುವುದಕ್ಕಾಗಿ ಕಟ್ಟಲ್ಪಟ್ಟವು ಕಿರಿದಾದ ಸುತ್ತಿಕೊಂಡು ಹೋಗುವ ಮೆಟ್ಟಿಲುಗಳನ್ನು ಇಳಿದು ಹೋದರೆ ಕೆಳಗಡೆ ಕತ್ತಲು ಕವಿದಿರುವ ಗುಹೆಗಳು ಸಿಕ್ಕುವವು ಅವುಗಳಲ್ಲಿ ಸಣ್ಣ ದೊಡ್ಡ ಕೊಠಡಿಗಳು ವಿಂಗಡಿಸಲ್ಪಟ್ಟಿವೆ ಸ್ನಾನದ ಕೊಠಡಿಗಳೂ ಬಚ್ಚಲುಗಳೂ ಇರುವವು ಅಲ್ಲಿಗಲ್ಲಿಗೆ ಉದ್ದಕ್ಕೂ ಎತ್ತರವಾಗಿ ಕಟ್ಟಿದ ಆಸನಗಳಿವೆ ಸನ್ಯಾಸಿಗಳು ಅವುಗಳ ಮೇಲೆ ಕುಳಿತು ಜಪದ ಚಿತ್ತಕ್ಕೆ ಶಮನಗಳಾಗಿ ಕಾಣಬಂದವು ಒಳಗಡೆ ಅನೇಕ ಸ್ಥಳಗಳಲ್ಲಿ ಗೋಡೆಗಳ ಮೇಲೆ ಗೂಡುಗಳೊಳಗೂ ಚಿತ್ರವಿಚಿತ್ರವಾದ ಕೆಲಸಗಳೂ ಬಣ್ಣ ಕೆಲಸಗಳೂ ಮಾಡಲ್ಪಟ್ಟಿವೆ ಪಂಚಲಿಂಗ ಗುಹೆ ಎಂಬ ಮೊದಲನೆಯ ಗುಹೆಯೊಳಗೆ ೧೨೮೬ ನೇ ಇಸವಿಯ ಒಂದು ಲಿಪಿಯು ಬರೆಯಲ್ಪಟ್ಟಿದೆ ಹೊಯ್ಸಳ ರಾಜನಾದ ಮೂರನೆ ನರಸಿಂಹನ ಮಂತ್ರಿ ಪೆರುಮಾಳನು ಈ ಗುಹೆಯನ್ನು ದಾನ ಮಾಡಿದಂತೆ ಶಾಸನವಿದೆ ಈ ಗುಡಿಗೆ ಟಿಪ್ಪೂಸುಲ್ತಾನನ ಕಾಲದಲ್ಲಿ ಮಹಮದೀಯರು ಪ್ರವೇಶಿಸಿದರೆಂದು ಅಲ್ಲಿ ಕಂಡುಬರುವ ಚಿಹ್ನೆಗಳಿಂದ ಗೊತ್ತಾಗುತ್ತದೆ ಅವರು ಅದರಲ್ಲಿರುವ ಚಿತ್ರಗಳನ್ನೂ ಕೆತ್ತನೆ ಕೆಲಸಗಳನ್ನೂ ಹಾಳು ಮಾಡಿರುವರು ಬಹು ಸುಂದರವಾದ ವೃಷಭ ವಿಗ್ರಹಗಳನ್ನು ಕತ್ತರಿಸಿ ಕೆಡಿಸಿರುತ್ತಾರೆ ಹೀಗೆಯೇ ಇನ್ನೂ ಅನೇಕ ಪ್ರಾಚೀನ ಕಾಲದ ಸಂಗತಿಗಳು ಅಲ್ಲಿ ಕಂಡುಬರುತ್ತವೆ ಸರ್ಕಾರದವರು ಈ ಸ್ಥಳದ ಸುತ್ತಲೂ ಎಲ್ಲೆಯನ್ನು ಹಾಕಿ ಯಗಲು ಹೋಗದಂತೆ ತಡೆಯನ್ನು ಕಲ್ಪಿಸಿರುತ್ತಾರೆ ಇನ್ನು ಮುಂದೆ ಅನುಕೂಲವಾದಾಗ ಅಲ್ಲಿ ಶೋಧನೆಯ ಕೆಲಸಗಳನ್ನು ಮತ್ತೆ ಪ್ರಾರಂಭಿಸುವರೆಂದು ತಿಳಿದು ಬಂದಿದೆ

ಒಳದೇಶದ ವೃತ್ತಾಂತಗಳು.

ಮೈಸೂರು ತಾಲ್ಲೂಕ್ ಕಡಕೊಳದಲ್ಲಿ ಜನರು ಸೇರಿ ಶ್ರೀ ಸೋಮೇಶ್ವರ ಸಹಾಯ ಸಂಘವೆಂಬ ಪರಸ್ಪರ ಸಹಾಯಕ ಕಂಪನಿಯನ್ನು ಮಾಡಿಕೊಂಡಿದಾರೆ ಈ ಸಂಘವು ಕಳೆದ ತಾ ೧೨ ರಲ್ಲಿ ರಿಜಿಸ್ಟರಾಗಿರುವುದು.

ಈ ವರುಷದ ಆಖೈರಿನಲ್ಲಿ ವೈಸ್‌ರಾಯಿಯವರು ಮೈಸೂರು ಸಂಸ್ಥಾನಕ್ಕೆ ದಯಮಾಡುವವರಾಗಿರೋದರಿಂದ ಅವರ ಆತಿಥ್ಯದ ಖರ್ಚಿಗಾಗಿ ನಮ್ಮ ಸರ್ಕಾರದವರು ಎರಡು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆಂದು ಪ್ರಕಟವಾಗಿದೆ

ಕಳೆದ ಡಿಸೆಂಬರ್ ತಾ ೪ ರಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಮಂಡ್ಯದ ಶ್ರೀ ಕೃಷ್ಣರಾಜ ಪರಸ್ಪರ ಸಹಾಯ ಸಂಘವನ್ನು ಕಳೆದ ಜುಲೈ ತಾ ೧೫ ರಲ್ಲಿ ಸರ್ಕಾರದವರು ರದ್ದು ಮಾಡಿರುತ್ತಾರೆ ಈ ಸಂಘವು ಈ ರೀತಿ ಆಗಲು ಕಾರಣವೇನೋ ತಿಳಿದುಬರಲಿಲ್ಲ

ರಾಜಧಾನಿಯ ಗವರ್ನ್‌ಮೆಂಟ್ ಹೌಸಿನಲ್ಲಿ ನೌಕರರಾಗಿದ್ದು ಈಚೆಗೆ ಎರಡನೇ ಕೌನ್ಸೆಲರ ಬಳಿ ಕೆಲಸಮಾಡುತ್ತಿದ್ದ ಮೆ|| ವಿಜಯರಂಗಯ್ಯನವರನ್ನು ಶ್ರೀಮನ್‌ಮಹಾರಾಜರವರು ಅರಮನೆ ಇಲಾಖೆಗೆ ತೆಗೆದುಕೊಂಡು, ಬೆಂಗಳೂರು ಅರಮನೆಯಲ್ಲಿ ಗುಮಾಸ್ತೆ ಕೆಲಸಕ್ಕೆ ನೇಮಕ ಮಾಡಿದರೆಂದು ಕೇಳುತ್ತೇವೆ

ರಾಜಧಾನಿಯ ಕೋಟೆಯೊಳಗೆ ಇನ್ನೂ ಕೊಳಕಾಗಿರುವ ಮನೆಗಳನ್ನು ಒಡೆದು ಆರೋಗ್ಯಕರವಾಗಿ ಮಾಡುವುದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಟ್ರಸ್ಟ್ ಬೋರ್ಡಿನವರು ಇದುವರೆಗೆ ಸುಮಾರು ೪೦ ಸಾವಿರ ರೂಪಾಯಿ ಖರ್ಚುಮಾಡಿ ಅನೇಕ ಮನೆಗಳನ್ನು ಒಡೆಸಿ ಹಾಕಿದ್ದಾಯಿತು

ಕೋಲಾರಕ್ಕೆ ಸೇರಿದ ಊರಿನಲ್ಲಿ ಪೊಲೀಸಿನವರು ಹದಿನೈದು ಮಂದಿ ಜೂಜಾಡುತ್ತಿದ್ದವರನ್ನು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬನಿಗೆ ಐದು ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ ಈ ಜೂಜನ್ನು ನಿಲ್ಲಿಸುವ ಕಾನೂನು ಸಂಸ್ಥಾನದ ಇತರ ಕಡೆಗಳಲ್ಲೂ ಬೇಗನೆ ಜಾರಿಗೆ ಬಂದರೆ ಎಷ್ಟೋ ಕ್ಷೇಮವಾದೀತು

ಬೆಂಗಳೂರಿನಲ್ಲಿರುವ ಜಮೀನ್ದಾರ ಮೆ|| ದೊಡ್ಡಣ್ಣನವರು ಅಲ್ಲಿ ಒಂದು ದರ್ಮಪಾಠಶಾಲೆಯನ್ನು ಕಟ್ಟಿಸಿಕೊಟ್ಟು ನಡಿಸುತ್ತಾ ಬಂದಿದಾರಷ್ಟೆ. ಈಗ ಅವರು ಅದಕ್ಕೆ ಸಂಬಂಧಪಟ್ಟಂತೆ ಒಂದು ಕೈಗಾರಿಕೆ ಪಾಠಶಾಲೆಯನ್ನೂ ಕಟ್ಟಿಸಬೇಕೆಂದು ಗೊತ್ತುಮಾಡಿರುವುದಾಗಿಯೂ, ಇದಕ್ಕೆ ಸುಮಾರು ೫೦ ಸಾವಿರ ರೂಪಾಯಿ ಖರ್ಚಾಗಬಹುದೆಂದೂ ತಿಳಿದುಬಂದಿದೆ.

ಬೆಂಗಳೂರು ಸಿಟಿ ರೈಲ್ ಸ್ಟೇಷನ್ನಿಂದ ಚಾಮರಾಜ ಪೇಟೆಯ ಮೇಲೆ ಬಸವನ ಗುಡಿಯ ತನಕ ರೈಲ್ ರಸ್ತೆಯನ್ನು ಬಡಾವಣೆ ಮಾಡಿಕೊಟ್ಟರೆ ಅಲ್ಲಿನ ಪ್ರಜೆಗಳಿಗೆ ತುಂಬಾ ಸಹಾಯವಾಗುವುದೆಂದು ಕೆಲವರು ಅರ್ಜಿಬರೆದುಕೊಂಡಿದಾರೆ ಸರ್ಕಾರದವರು ಈ ವಿಚಾರವನ್ನು ಪರ್ಯಾಲೋಚಿಸಿ ಅದರಂತೆ ಬಡಾವಣೆ ಮಾಡಿಸಿ ಕೊಟ್ಟರೆ ಪ್ರಯಾಣಿಕರ ಕಷ್ಟವು ನಿವಾರಣೆಯಾದೀತು

ಕಳೆದ ಶನಿವಾರವೂ ಭಾನುವಾರವೂ ರಾಜಧಾನಿಯಲ್ಲಿ ಜೋಡಕಟ್ಟಿ ಚನ್ನಾಗಿ ಮಳೆ ಸುರಿಯಿತು ಇನ್ನೂ ತೀಕ್ಷ್ಣವಾದ ಬಿಸಿಲು ಬೀಳುತ್ತಾ ಇಲ್ಲ ಶೀತ ಗಾಳಿಯು ಬೀಸುತ್ತಿದೆ ಪ್ಲೇಗ್ ಉಪದ್ರವು ತಲೆ ಹಾಕಿ ದಿನಾ ೩-೪ ಮರಣಗಳಾಗುತ್ತಿರುವವು ಪ್ಲೇಗ್ ಕ್ಯಾಂಪಿನಲ್ಲಿ ೫೬ ಮಂದಿ ರೋಗಿಗಳು ಚಿಕಿತ್ಸೆ ಹೊಂದುತ್ತಿದಾರೆ ಧಾರಣೆ ವಾಸಿಗಳು ಇನ್ನೂ ಇಳಿಯದೆ ಇರುವುದು ಬಡಬಗ್ಗರ ಜೀವನಕ್ಕೆ ಕಷ್ಟವಾಗಿದೆ

ಹಿಂದಿನ ಶನಿವಾರ ಸಮರಾತ್ರಿಯಲ್ಲಿ ಹೊಸೂರಿನ ಕಡೆಯಿಂದ ಚರ್ಮವನ್ನು ಬರ್ತಿ ಮಾಡಿಕೊಂಡು ಬೆಂಗಳೂರಿಗೆ ಬರುತ್ತಿದ್ದ ಒಂದು ಗಾಡಿಯನ್ನು ಕೆಲವು ಕಾಸ್ತಾರರು ತಡೆದು ಗಾಡಿಯವನನ್ನು ಚನ್ನಾಗಿ ಹೊಡೆದು ಕೆಡವಿ ಅವನ ಬಳಿ ಇದ್ದ ಹಣವನ್ನೂ ಕೆಲವು ಚರ್ಮಗಳನ್ನೂ ಅಪಹರಿಸಿಕೊಂಡು ಹೋದರು ಮರುದಿನ ಬೆಳಿಗ್ಗೆ ಪೊಲೀಸಿನವರು ಪತ್ತೆ ತಲಾಷು ನಡಿಸಿ ಮಾಲ್ ಸಹಿತ ಕೆಲವು ಕಾಸ್ತಾರರನ್ನು ದಸ್ತಗಿರಿ ಮಾಡಿದರು

ಕ್ಯಾಪ್ಟನ್ ಪಿ ಸಿ ದೇವಸಹಾಯಂ ಎಂಬಾತನು ಕಳೆದ ವಾರ ಬೆಂಗಳೂರು ದಂಡಿನಲ್ಲಿ ಕಾಲವಾದನು ಈತನು ಚೀನಾ, ಈಜಿಪ್ಟ್ ವಾಯುವ್ಯ ಸರಹದ್ದು, ಈ ಸ್ಥಳಗಳಲ್ಲಿ ನಡೆದ ಯುದ್ಧಗಳಿಗೆ ಹೋಗಿದ್ದು ಬಂದವನು ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆಯ ಉತ್ಸವಕ್ಕೆ ಈತನು ವಿಲಾಯತಿಗೆ ಕರೆಸಲ್ಪಟ್ಟು ಹೋಗಿದ್ದನು ದಂಡಿನಲ್ಲಿ ಈತನು ಸೈನಿಕರ ಮತ್ತು ಇತರ ಪ್ರಜೆಗಳ ಪ್ರೀತಿಗೌರವಗಳನ್ನು ಬಹು ಮಟ್ಟಿಗೆ ಸಂಪಾದಿಸಿಕೊಂಡಿದ್ದನು

ಶ್ರೀರಂಗಪಟ್ಟಣದ ಪ್ಲೀಡರ್ ಮೆ ಎನ್ ಸುಬ್ಬರಾಯರ ಕುಮಾರರಾದ ಮೆ|| ಸುಬ್ಬರಾಯರು ಸರ್ಕಾರದ ವೇತನವನ್ನು ಪಡೆದು ಸುಮಾರು ನಾಲ್ಕು ವರುಷಗಳಿಂದ ವಿಲಾಯತಿ ಮೊದಲಾದ ವಿದ್ಯಾಶಾಲೆಗಳಲ್ಲಿ ವ್ಯಾಸಂಗಮಾಡಿ ಬಹು ಯೋಗ್ಯರಾಗಿ ತೇರ್ಗಡೆಹೊಂದಿ ಕಳೆದ ವಾರ ವಾಪಸು ಬಂದರು ಇವರು ಕಳೆದ ವಾರ ಶ್ರೀಮನ್ ಮಹಾರಾಜರವರನ್ನು ಕಾಣುವ ಉದ್ದೇಶದಿಂದ ರಾಜಧಾನಿಯಲ್ಲಿ ೨-೩ ದಿವಸಗಳ ತನಕ ಇದ್ದು, ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿರುತ್ತಾರೆ

ಬೆಂಗಳೂರು ದಂಡಿನಲ್ಲಿ ಸೈನ್ಯಾಧಿಪತಿಯಾಗಿದ್ದ ಲೆಫ್ಟಿನೆಂಟ್ ಜನರಲ್ ಸರ್ ಜೇಂಸ್ ವುಲ್ಫ್ ಮರ‍್ರೆ ಯವರ ಪತ್ನೀಯವರು ಕಳೆದ ಭಾನುವಾರ ಬೆಳಗಿನ ಝಾಮದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ಉತ್ತರಕ್ರಿಯಾದಿಗಳು ನಡೆದಾಗ್ಗೆ ಬ್ರಿಟಿಷ್ ರೆಸಿಡೆಂಟರವರೂ ಅವರ ಪತ್ನೀಯವರೂ ಬಹು ಮಂದಿ ಯೂರೋಪ್ಯರೂ ಹೋಗಿದ್ದರು ಶ್ರೀಮನ್ ಮಹಾರಾಜರವರೂ ಯುವರಾಜರವರೂ ಪುಷ್ಪ ಮಾಲಿಕೆಗಳನ್ನು ಸಮಾಧಿಯ ಮೇಲೆ ಇಡುವಂತೆ ಕಳುಹಿಸಿಕೊಟ್ಟರು

ಕೋಲಾರ್ ಚಿನ್ನದ ಗಣಿಗಳಲ್ಲಿ ಒಬ್ಬ ಯೌವನಸ್ಥನು ೪೦೦ ರೂಪಾಯಿನ ಚಿನ್ನದ ಅಡ್ಡಿಕೆಯನ್ನು ಕಳುವು ಮಾಡಿ ಒಂದು ಗೋಡೆಯೊಳಗೆ ಬಚ್ಚಿಟ್ಟನು. ಅವನನ್ನು ಪೊಲೀಸಿನವರು ಹಿಡಿದು ನಗವನ್ನು ತೋರಿಸುವುದಕ್ಕಾಗಿ ಕರೆದುಕೊಂಡು ಹೋಗುತ್ತಿರುವಲ್ಲಿ ಆ ಕಳ್ಳನು ತಪ್ಪಿಸಿಕೊಂಡು ಆತ್ಮಹತ್ಯ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೋ ಏನೋ ಒಂದು ಬಾವಿಯೊಳಗೆ ಬಿದ್ದುಬಿಟ್ಟನು ಆಗಲೆ ಪೊಲೀಸಿನವರು ಸಾಹಸ ಪಟ್ಟು ಅವನನ್ನು ಬಾವಿಯಿಂದ ಎತ್ತಿ ಲಾಕಪ್ಪಿನೊಳಗೆ ಇಟ್ಟುಕೊಂಡಿದಾರೆ

ಚಾಮರಾಜನಗರದ ಸುತ್ತುಮುತ್ತಿನಲ್ಲಿ ಒಂದು ಹುಲಿಯು ಸೇರಿಕೊಂಡು ಜನರನ್ನೂ ಗೋಕಾಯಿಗಳನ್ನೂ ಕೊಂದು ತಿನ್ನುತ್ತಾ ಬಹಳ ಗಾಬರಿಯನ್ನುಂಟು ಮಾಡಿತ್ತು ಡೆಪ್ಯುಟಿ ಕಮಿಷನರ್ ಮೆ ಕಾಂತರಾಜೇ ಅರಸಿನವರು ಇದನ್ನು ಕೊಲ್ಲಬೇಕೆಂದು ಮೈಸೂರಿನಿಂದ ಮೆ|| ವಾಸನ್ ಯವರನ್ನು ಅಲ್ಲಿಗೆ ಕಳುಹಿಸಿಕೊಟ್ಟರು ಇವರು ಆರು ದಿನಗಳ ತನಕ ಅಲ್ಲಿದ್ದು ತಾ ೧೭ ನೇ ಶನಿವಾರ ಮಧ್ಯಾಹ್ನ ಅದನ್ನು ಸಂಧಿಸಿ ಗುಂಡು ಹೊಡೆದು ಕೊಂದುಹಾಕಿದರು ಇದಲ್ಲದೆ ಅವರು ಅದೇ ಸುತ್ತುಮುತ್ತಿನಲ್ಲಿ ಗೋಕಾಯಿಗಳನ್ನು ಕೊಂದುಹಾಕುತ್ತಿದ್ದ ಒಂದು ದೊಡ್ಡ ಚಿರತೆಯನ್ನೂ ಕೊಂದು ಇರುತ್ತಾರೆಂದು ತಿಳಿದುಬಂದಿದೆ

ಕಳೆದ ಶನಿವಾರ ಬೆಳಿಗ್ಗೆ ಸುಮಾರು ೭ ಗಂಟೆಗೆ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ನಂಜನಗೂಡು ಸೀಗೂರು ಮಾರ್ಗವಾಗಿ ದಯಮಾಡಿ ಮಧ್ಯಾಹ್ನ ೩॥ ಗಂಟೆಗೆ ನೀಲಗಿರಿ ಬೆಟ್ಟವನ್ನು ತಲಪಿದರು ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು ಅವರ ಸಂಗಡ ಮೆ|| ಗಳಾದ ಕ್ಯಾಂಬೆಲ್ ಯವರು, ರಾಘವೇಂದ್ರರಾಯರು, ಆಗಾಮಿ ಜ್ಞಾನಯವರು, ಸರ್ದಾರ್ ಚಾಮಪ್ಪಾಜಿ ಅರಸಿನವರು, ವೀರಪ್ಪಾಜಿ ಅರಸಿನವರ ಮೊಮ್ಮಕ್ಕಳು ಹೋಗಿರುತ್ತಾರೆ ನೀಲಗಿರಿ ಬೆಟ್ಟದಿಂದ ಮಹಾರಾಜರವರು ವಾಪಸು ಬರಲು ಸುಮಾರು ಇನ್ನು ಐದು ವಾರಗಳಾಗಬಹುದೆಂದು ಕೇಳುತ್ತೇವೆ

ಮೈಸೂರು ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಭಾ ಮೆಂಬರಾದ ಮ|| ಸುಬ್ಬರಾಯರು ಬರೆದಿರತಕ್ಕ "ವಲೀಮುಖವಿಲಾಸ" ವೆಂಬ ನಾಟಕರೂಪದ ಕಲ್ಪಿತ ಕಥೆಯಲ್ಲಿ ಸಂಸಾರವಿಚಾರವಾದ ಅನೇಕ ವಿಷಯಗಳು ಅಂದರೆ ತಿಳುವಳಿಕೆಯಿಲ್ಲದ ಸ್ತ್ರೀಪುರುಷರು ಸಂಸಾರಾಭಿವೃದ್ಧಿಗೆ ಕಂಟಕವನ್ನುಂಟುಮಾಡುವಂಥಾ ಮಾರ್ಗದಲ್ಲಿ ಪ್ರವೇಶಿಸೋದರಿಂದ ಉಂಟಾಗುವ ಅನರ್ಥಗಳೂ, ಸನ್ಮಾರ್ಗವರ್ತನೆಗಳಿಂದ ಲಭಿಸಬಹುದಾದ ಅನುಕೂಲ್ಯಗಳೂ ಚನ್ನಾಗಿ ಬೋಧೆಯಾಗುತ್ತವೆ ಮತ್ತು ಈ ನಾಟಕದಲ್ಲಿ ಹೇಳಿರುವ ಪಾತ್ರಗಳೆಲ್ಲವೂ ಗುಣಕ್ಕೆ ತಕ್ಕ ಹೆಸರುಗಳನ್ನೇ ಹೊಂದಿರುವವು ಗದ್ಯಪದ್ಯಗಳು ಸುಲಭವಾಗಿ ಅರ್ಥವಾಗುವಹಾಗೆ ಹಿತಕರವಾದ ಸರಣಿಯಿಂದ ಕೂಡಿವೆ "ವಲೀಮುಖವಿಲಾಸ" ವು ಸರ್ವರೂ ಪರಿಗ್ರಹಿಸುವದಕ್ಕೆ ಯೋಗ್ಯವಾಗಿದೆ ಎಂದು ಹೇಳಬಹುದು

ಮೈಸೂರು ದಿವಾನರಾಗಿದ್ದು ಈಗ ಪೆನ್‌ಷನ್ ಪಡೆದಿರುವ ಮೆ|| ವಿ ಪಿ. ಮಾಧವರಾಯರು ಕಳೆದ ವಾರ ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ಷೆನಕೋಟೆಗೆ ಹೋಗಿದ್ದರು ಆ ಸಂದರ್ಭದಲ್ಲಿ ಅಲ್ಲಿನ ಜಮೀನ್ದಾರರೂ ವರ್ತಕರೂ ಸರ್ಕಾರಿ ನೌಕರರೂ ಸೇರಿ ಅವರನ್ನು ಗೌರವದಿಂದ ಎದುರುಗೊಂಡು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು ಮೆ|| ಮಾಧವರಾಯರು ಆ ಸಂಸ್ಥಾನದಲ್ಲಿ ದಿವಾನ್‌ಗಿರಿ ಮಾಡಿದಾಗ್ಗೆ ಅಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿಕೊಟ್ಟ ವಿಷಯದಲ್ಲೂ ಧಾನ್ಯರೂಪದಲ್ಲಿ ರೈತರು ಕೊಡುತ್ತಿದ್ದ ಕಂದಾಯವನ್ನು ತಪ್ಪಿಸಿ ದ್ರವ್ಯರೂಪದಲ್ಲಿ ಕೊಡುವಂತೆ ಬದಲಾವಣೆ ಮಾಡಿಕೊಟ್ಟ ವಿಷಯದಲ್ಲೂ ಅಲ್ಲಿನ ಜನರು ತುಂಬಾ ಕೃತಜ್ಞರಾಗಿರುತ್ತೇವೆಂದು ಅವರನ್ನು ವಂದಿಸಿದರು

ಮದರಾಸ್ ಪಟ್ಟಣದ ಪಶುವೈದ್ಯ ವಿದ್ಯಾಶಾಲೆಯಲ್ಲಿ ವೈದ್ಯವನ್ನು ಕಲಿಯುತ್ತಿದ್ದ ಇಬ್ಬರು ಮಲೆಯಾಳಿ ಯೌವನಸ್ಥರು ಕೆಲವು ದಿನಗಳ ಹಿಂದೆ ಜ್ವರ ಬಂದದ್ದರಿಂದ ಹೋಗಿ ಒಬ್ಬ ವೈದ್ಯ ವಿದ್ಯಾರ್ಥಿಗೆ ಹೇಳಿಕೊಂಡಾಗ ಅವನು ಕ್ವಿನೀನ್ ಎಂಬ ಜ್ವರದ ಪುಡಿಯನ್ನು ಸೇವಿಸುವಂತೆ ಅವರಿಗೆ ಹೇಳಿದನು ಅವರಿಬ್ಬರೂ ಅಂಗಡಿಗೆ ಹೋಗಿ ೨॥ ರೂಪಾಯಿ ತೂಕದಷ್ಟು ಕ್ವಿನೀನ್ ಪುಡಿಯನ್ನು ಕೊಂಡುತಂದು ಸಮಭಾಗಮಾಡಿ ಸೇವಿಸಿಬಿಟ್ಟರು ಇಬ್ಬರಿಗೂ ಜ್ಞಾನತಪ್ಪಿತು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದ್ದರಲ್ಲಿ ಒಬ್ಬನು ಬದುಕಿಕೊಂಡನು, ಇನ್ನೊಬ್ಬನು ಸತ್ತೇ ಹೋದನು ಕ್ವಿನೀನ್ ಎಂಬೀ ಜ್ವರದ ಪುಡಿಯನ್ನು ಮಿತವಾಗಿ ಸೇವಿಸಿದರೆ ಅದು ಜ್ವರವನ್ನು ತಡೆಯುತ್ತದೆ, ಬೇಗನೆ ವಾಸಿಯಾಗಲೆಂದು ಅದರಂತೆ ಹೆಚ್ಚಾಗಿ ಮಿತಿಮೀರಿ ಸೇವಿಸಿದರೆ ಮರಣವನ್ನೇ ಉಂಟುಮಾಡುವುದಾದ್ದರಿಂದ ಎಚ್ಚರಿಕೆಗಾಗಿ ಈ ವಿಷಯವನ್ನು ಇಲ್ಲಿ ಪ್ರಕಟಿಸಿರುತ್ತೇವೆ

ವ್ಯವಸಾಯ ವಿಚಾರಗಳು

೧ ಪೈರಿಟ್ಟನಂತರ ನಡಿಸಬೇಕಾದ ವ್ಯವಸಾಯ ಕ್ರಮ

ಬಿಸಲುಕಾಲ ಮುಗಿಯುತ್ತಲೆ ರೈತರು ಭೂಮಿಯನ್ನು ಉಳುವದಕ್ಕಾಗಿ ಮೊದಲು ಮಳೆಗಳನ್ನು ಆತುರದಿಂದ ನಿರೀಕ್ಷಿಸುವರು ಭೂಮಿಯನ್ನು ಅನೇಕ ಸಲ ಉತ್ತು ಪುನಹ ಮಳೆ ಬಿದನಂತರ ಬೀಜವನ್ನು ಹಾಕುತ್ತಾರೆ

ಮಳೆ ಬಿದ ನಂತರ ಪೈರಿಗಿಂತಲೂ ಜಾಗ್ರತೆಯಾಗಿ ಭೂಮಿಯಲ್ಲಿ ಕಳೆ ಏಳುತ್ತದೆ ಆದದ್ದರಿಂದ ಭೂಮಿಯನ್ನು ಅನೇಕಾವರ್ತಿ ಅಗಿಯಬೇಕಾಗುವದು ಇದರಿಂದ ಕಳೆಗಳು ನಾಶವಾಗಿ ಸ್ವಂತ ಮೇಲೆ ಕವಿಕೊಳ್ಳುವದು ತಪ್ಪಿ ಭೂಮಿಯಲ್ಲಿನ ಸಸ್ಯಾಹಾರವು ಪೈರಿಗೆ ಒದಗುವದಕ್ಕೆ ಅನುಕೂಲಿಸುತ್ತದೆ ಪೈರಿಟ್ಟನಂತರ ಭೂಮಿಯನ್ನು ಅರಗುವದರಲ್ಲಿ ಮತ್ತೊಂದು ಮುಖ್ಯವಾದ ಅನುಕೂಲ ಉಂಟು, ಭೂಮಿಯಲ್ಲಿ ಗಾಳಿಯು ಸಲೀಸು ಆಡಲು ಅನುಕೂಲಿಸಿ ನೆಲದಲ್ಲಿ ತನುವು ನಿಲ್ಲುತ್ತದೆ ಉಷ್ಣಪ್ರದೇಶದ ಮುಖ್ಯ ಸಾಗುವಳಿಯಲ್ಲಿ ಭೂಮಿಯಲ್ಲಿ ತನುವನ್ನು ನಿಲ್ಲಿಸುವದೇ ಒಂದು ಮುಖ್ಯವಾದ ಅಂಶ ಸಸಿಗಳ ಬೇರುಗಳನ್ನು ಪರೀಕ್ಷಿಸಿದ್ದಾದರೆ ಇವು ಜಲರೂಪವಾದ ಸಾರವನ್ನೇ ತೆಗೆದುಕೊಳ್ಳುವದಕ್ಕೆ ಅನುಕೂಲಿಸುವಂತೆ ರಚಿಸಲ್ಪಟ್ಟಿರುತ್ತ ಈ ಜಲರೂಪವಾದ ಸಾರವು ಭೂಮಿಗೆ ನಾಲ್ಕು ವಿಧವಾಗಿ ಒದಗುತ್ತದೆ (೧) ಈ ಪೈಕಿ ಮುಖ್ಯವಾದ್ದು ಮಳೆ, (೨) ಹಾಯಿಸಿದ ನೀರು, (೩) ಅಂತರಿಕ್ಷದಲ್ಲಿ ಒದಗುವ ಇಬ್ಬನಿ, (೪) ಭೂಮಿಯೊಳಗಿನ ನೀರು ಇದು ಆಳದಿಂದ ನೆಲ ಮಟ್ಟಕ್ಕೆ ಕ್ರಮವಾಗಿ ಏರಿ ಪೈರುಗಳಿಗೆ ಉಪಯೋಗ ಪಡುತ್ತದೆ ಈ ರೀತಿ ಒದಗುವ ನೀರುಗಳನ್ನು ಉಪಯೋಗ ಪಡಿಸಿಕೊಳ್ಳುವದೂ ಭೂಮಿಯಲ್ಲಿ ಈ ತನುವನ್ನು ಸಾಧ್ಯವಾದಷ್ಟು ಹೆಚ್ಚು ಕಾಲ ನಿಲ್ಲಿಸುವದೂ ಪೈರಿಟ್ಟನಂತರ ವ್ಯವಸಾಯ ನೋಡುವದರಲ್ಲಿನ ಮುಖ್ಯೋದ್ದೇಶವಾಗಿರುತ್ತ

ಭೂಮಿಯಲ್ಲಿ ಮಣ್ಣಿನ ರೇಣುಗಳ ಮಧ್ಯೆ ರಂಧ್ರಗಳು ಇರುತ್ತವೆ ಇವು ಕಣ್ಣಿಗೆ ಗೋಚರವಾಗದಷ್ಟು ಸಣ್ಣಗೆ ಇರುತ್ತವೆ ಭೂಮಿಯಲ್ಲಿನ ನೀರು ಇವುಗಳಲ್ಲಿ ಹರಿದು ಹೋಗುತ್ತದಲ್ಲದೆ ಈ ಸಂದುಗಳು ಚಿಕ್ಕದಾಗಿದ್ದ ಹಾಗೆಲ್ಲಾ ನೀರು ಬಸಿದು ಹೋಗುವದು ಜಾಗ್ರತೆ ಒಂದು ಹೆಂಟೆಯನ್ನು ನೀರಿನಲ್ಲಿ ಹಾಕಿದ್ದೇ ಆದರೆ ನೀರು ಹೆಂಟೆಯ ಬುಡಕ್ಕೆ ಮಾತ್ರ ತಗಲಿದ್ದರೂ ಕೂಡ ಇದರ ಮೇಲ್ಭಾಗವು ಜಾಗ್ರತೆಯಾಗಿ ಕಪ್ಪು ತಿರುಗುತ್ತದೆ ಈ ಸಣ್ಣ ರಂಧ್ರಗಳಲ್ಲಿ ನೀರು ವ್ಯಾಪಿಸಿರುವದೇ ಇದಕ್ಕೆ ಕಾರಣ ಗಟ್ಟಿಯಾಗಿರುವ ಭೂಮಿಯಲ್ಲಿ ಈ ರಂಧ್ರಗಳು ಮೇಲಿನವರಿಗೂ ಅವಿಚ್ಛಿನ್ನವಾಗಿರುತ್ತವೆ ಭೂಮಿಯಲ್ಲಿನ ನೀರು ಈ ಸಂದುಗಳ ಮೂಲಕ ಆವಿಯಾಗಿ ಮೇಲ್ಭಾಗವು ಒಣಗಿ ಬಿರುಕು ಬಿಡುತ್ತದೆ ಈ ಸಂದುಗಳನ್ನು ತಪ್ಪಿಸಿದೆವು ಆದರೆ ಇವುಗಳಲ್ಲಿ ನೀರು ಸುಲಭವಾಗಿ ವ್ಯಾಪಿಸಲು ಸಾಧ್ಯವಿಲ್ಲದೆ ಭೂಮಿಯಲ್ಲಿಯೇ ಹೆಚ್ಚು ಕಾಲ ನಿಲ್ಲುತ್ತದೆ ಈ ಸಂದುಗಳು ಭೂಮಿಯೊಳಗಿಂದ ಗಾಳಿ ಸೋಕುವ ಮಾರ್ಗವಾಗಿಯೂ ತಡೆಯಿಲ್ಲದೆ ಇರುವದನ್ನು ತಪ್ಪಿಸಿ ತನುವು ಆರಿಹೋಗದ ರೀತಿ ಮಾಡುವದೆ ಈ ವ್ಯವಸಾಯ ಕ್ರಮಗಳ ಮುಖ್ಯೋದ್ದೇಶವಾಗಿರುತ್ತ ಭೂಮಿಯನ್ನು ಒಳ್ಳೆ ಉಳುಮೆ ಮಾಡುವದರಿಂದ ಆಡಿಯಿಂದ ಏರುವ ನೀರೂ ಮೇಲಿಂದ ಊರುವ ಮಳೆ ಅಥವಾ ಹಾಯಿಸಿದ ನೀರೂ ಭೂಮಿಯಲ್ಲಿಯೇ ನಿಲ್ಲುತ್ತವೆ ಇಷ್ಟೇ ಅಲ್ಲದೆ ಉತ್ತ ನೆಲವು ರಾತ್ರಿ ಕಾಲಗಳಲ್ಲಿ ಅಂತರಿಕ್ಷದಲ್ಲಿನ ಇಬ್ಬನಿಯನ್ನು ಹೀರಿ ಈ ವಿಧವಾಗಿಯೂ ಸಸಿಗಳಿಗೆ ಸಾರವನ್ನು ಹಗಲಿನಲ್ಲಿ ಒದಗಿಸುತ್ತದೆ

ಗುಂಟೂರು ಅನಂತಪುರಗಳಲ್ಲಿರುವ ಕರೀ ನೆಲಗಳನ್ನು ಮಳೆ ಇಲ್ಲದಿರುವ ಕಾಲಗಳಲ್ಲೆಲ್ಲಾ ಭೂಮಿಯನ್ನು ಹದಿಸುತ್ತಲೇ ಇರುವ ವಾಡಿಕೆ ಉಂಟು ಈ ರೀತಿ ಜೋಳ, ಮುಸುಕಿನ ಜೋಳ ಮೆಣಸಿನಕಾಯಿ, ಹೊಗೆಸೊಪ್ಪು ಹತ್ತಿ ಹುರಳಿ ಮುಂತಾದ ಪೈರುಗಳನ್ನು ಉತ್ಕೃಷ್ಟವಾಗಿ ಬೆಳೆಯುತ್ತಾರೆ ಬಿತ್ತನೆಯಾದನಂತರ ಒಂದು ಒಳ್ಳೆ ಮಳೆ ಬಿದ್ದರೆ ಭೂಮಿಯನ್ನು ಆಗಾಗ್ಗೆ ಅರಗಿ ನಾಲ್ಕೈದು ತಿಂಗಳ ಕಾಲ ಮಳೆ ಇಲ್ಲದಿದ್ದರೂ ಪೈರು ಬೆಳೆಯಲು ಸಾಧ್ಯವಾಗುತ್ತದೆ ನೀರು ಹಾಯಿಸುವದರಲ್ಲಿ ಕಾಲೀಗಿದನ್ನು ಇತರ ನೆಲಗಳು ಉತ್ಕೃಷ್ಟವಾಗಿಲ್ಲದಿದ್ದರೂ ಇಂಥಾ ವ್ಯವಸಾಯದಿಂದ ಅವುಗಳಿಗೂ ಅನುಕೂಲಿಸುತ್ತ

ಮಳೆ ಬಿದ್ದು ಬಿಸಲು ಬಂದನಂತರ ನೀರು ಆರಿಹೋಗದ ರೀತಿ ಜಮೀನನ್ನು ಕೆದಕುತ್ತಿರಬೇಕು ನೀರು ಹಾಯಿಸಿದ ನಂತರವೂ ಸದಾ ಮೇಲ್ಭಾಗವು ಹೆಪ್ಪು ಕಟ್ಟುತ್ತಿರುವದನ್ನು ತಪ್ಪಿಸಬೇಕು ಮಳೆ ಇಲ್ಲದೆ ಅಥವಾ ನೀರು ಹಾಯಿಸದೆ ಇದ್ದಾಗಲೂ ಸಹ ಜಮೀನನ್ನು ಒಳ್ಳೆ ಉಳುಮೆ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದಾದರೆ ಪೈರು ಅನೇಕ ದಿನಗಳು ತಡೆದು ಕೈಗೆ ಬರುವ ಸಂಭವವು ಹೆಚ್ಚುತ್ತದೆ

ನೆಲದಲ್ಲಿ ಕೆಲ ಚಿಕ್ಕದಾದ ಅಂಗರಚನೆಗಳು ಇರುವದು ಗೋಚರಕ್ಕೆ ಬಂದಿರುತ್ತದೆ ಈ ಅಂಗರಚನೆಗಳಿಗೆ ಸಾಯಿಲ್ ಬ್ಯಾಕ್ಟೀರಿಯಾ ಎಂದು ಹೆಸರು ಇವು ತಂಪಿಲ್ಲದೆ ಜೀವಿಸಲಾರವು ಇವುಗಳನ್ನು ಸೂರ್ಯರಶ್ಮಿಗೆ ತಗಲುವ ರೀತಿ ಮಾಡುವದು ಹಾನಿಕರ ಆದಕಾರಣ ಉಷ್ಣಪ್ರದೇಶಗಳಲ್ಲಿ ನೆಲವನ್ನು ಸಾಧ್ಯವಾದಷ್ಟು ಮರೆಮಾಡುವದು ಮುಖ್ಯವಿಷಯ ಇದಕ್ಕಾಗಿ ಪೈರನ್ನು ಬೆಳೆಯಬೇಕು ಇದು ಸಾಧ್ಯವಿಲ್ಲದೆ ಇದ್ದ ಸಂದರ್ಭದಲ್ಲಿ ಮೇಲೆ ಹೇಳಿದ ರೀತಿ ಅರಗಿ ಹದಿಯಾಗಿರುವ ರೀತಿ ಮಾಡಿದರೆ ಇದು ಕೆಳಭಾಗವನ್ನು ಮರೆಮಾಡುತ್ತದೆ ಇದರಿಂದ ಭೂಮಿಯಲ್ಲಿ ತನುವು ನಿಂತು ಬ್ಯಾಕ್ಟೀರಿಯಾ ಬೆಳವಳಿಕೆಗೆ ಅನುಕೂಲಿಸುವಂತೆ ನೆಲವು ತಣ್ಣಗಾಗಿರುತ್ತದೆ

---

೨ ಉಪ್ಪುಗದ್ದೆ ಸಾಗುವಳಿ

ಉಪ್ಪುಗದ್ದೆ ಸಾಗುವಳಿಗೆ ಪೂರಿ ಪೂರಿಯಾಗಿರುವ ಮಣ್ಣಿನ ಒಂದು ಜಮೀನು ಸರ್ವೋತ್ಕೃಷ್ಟವಾದುದು ನೀರು ಬಸಿದು ಹೋಗುವ ಎತ್ತರವಾದ ಜಮೀನುಗಳಲ್ಲೂ ಇದನ್ನು ಬೆಳೆಯಬಹುದು ಜಮೀನು ಮಾತ್ರ ಜಿಗುಟಾಗಿರಕೂಡದು ಹೊಸದಾಗಿ ಹುಲ್ಲು ಬೆಳೆದಿರುವ ಹುಲ್ಲು ಅಥವಾ ಕಾಡು ಬೆಳೆದಿದ್ದ ನೆಲವು ಇದಕ್ಕೆ ಲಾಯಖ್ಖಿಲ್ಲ ಏಕೆಂದರೆ, ಇದರಲ್ಲಿ ಈ ಪೈರಿಟ್ಟರೆ ಹುಳಗಳಿಂದ ಹಾಳಾಗುವ ಸಂಭವವುಂಟು ಈ ಪೈರು ಅನೇಕಾವರ್ತಿ ಉತ್ತು ಹಸನು ಮಾಡಿಟ್ಟ ಜಮೀನಿನಲ್ಲಿ ಚನ್ನಾಗಿ ಆಗುತ್ತದೆ ನೆಲವನ್ನು ಅನೇಕಾವರ್ತಿ ಉತ್ತು ಹಲುಬೆ ಹೊಡೆದು ಒಳ್ಳೆ ಉಳುಮೆಗೆ ತರಬೇಕು

ಈ ಪೈರಿಗೆ ಹೆಚ್ಚಾಗಿ ಗೊಬ್ಬರ ಹಾಕುವದು ಆವಶ್ಯಕ ಎಕರೆಗೆ ೩೦೦-೪೦೦ ಬಂಗಾಳ ಮಣವಷ್ಟು ಒಳ್ಳೆ ಮಾಗಿದ ಸಗಣಿ ಗೊಬ್ಬರವನ್ನು ಉಪಯೋಗಿಸಿದರೆ ಸಾಕು ತಕ್ಕಷ್ಟು ಸಗಣಿ ಗೊಬ್ಬರ ಒದಗದೆ ಇದ್ದಲ್ಲಿ ಇದಕ್ಕೆ ಅರ್ಧವನ್ನು ಉಪಯೋಗಿಸಿ ಇದರ ಜೊತೆಗೆ ೧೦-೨೦ ಮಣ ಹರಳು ಹಿಂಡಿಯನ್ನು ಹಾಕಬಹುದು ಬಂಗಾಳದಲ್ಲಿ ೩೦೦ ಮಣ ದನದ ಗೊಬ್ಬರ, ೩ ಮಣ ಸೂಪರ್ ಫಾಸ್ಫೇಟ್, ೨ ಮಣ ಪೊಟ್ಯಾಷ್ ಬೆರಸಿ ಉಪಯೋಗಿಸುತ್ತಾರೆ ಜಪಾನಿನಲ್ಲಿ ಮೊದಲು ಸಣ್ಣದಿನ ಪೈರಿಟ್ಟು ಉಪ್ಪುಗದ್ದೆ ಪೈರಿಡುವದಕ್ಕೆ ೨ ತಿಂಗಳ ಮುಂಚೆ ಹಸಿರು ಗೊಬ್ಬರಕ್ಕಾಗಿ ಉತ್ತು ಬಿಡುತ್ತಾರೆ ಈ ಸಂದರ್ಭದಲ್ಲಿ ದನದ ಗೊಬ್ಬರವನ್ನು ಇನ್ನೂ ಕಡಮೆ ಮಾಡಬಹುದು ಮಳೆಗಳೆಲ್ಲಾ ಪೂರೈಸಿದ ನಂತರ ಅಂದರೆ ಅಕ್ಟೋಬರ್ ಡಿಸೆಂಬರ್ ತಿಂಗಳುಗಳಲ್ಲಿ ಬಿತ್ತವನ್ನು ನೆಡುವದಕ್ಕೆ ಒಳ್ಳೆ ಕಾಲ ಸಾಮಾನ್ಯ ಗಾತ್ರದ ಗಡ್ಡೆಗಳು ಬೀಜಕ್ಕೆ ಲಾಯಖ್ಖಾಗಿರುತ್ತವೆ ದೊಡ್ಡ ಗಡ್ಡೆಗಳನ್ನು ನೆಟ್ಟರೆ ಫಲಉತ್ಪತ್ತಿಯೇನೋ ಹೆಚ್ಚುತ್ತದೆ ಆದರೆ ಇವುಗಳನ್ನು ಕತ್ತರಿಸಿ ನೆಡದೆ ಇದ್ದಲ್ಲಿ ಅಷ್ಟು ಫಾಯದೆಕರವಾಗುವದಿಲ್ಲ ನೀರು ಹಾಯಿಸದೆ ಇರುವ ಸಂದರ್ಭದಲ್ಲಿ ಗಡ್ಡೆಯನ್ನು ಕತ್ತರಿಸಿ ನೆಡುವದು ಅನುಕೂಲವಲ್ಲ ಏಕಂದರೆ, ನೆಟ್ಟನಂತರ ಮಳೆ ಬರದೆ ಇದ್ದರೆ ಬೀಜಗಳು ಅನೇಕವಾಗಿ ಮೊಳಕೆ ಇಡದೆ ಇರಬಹುದು ಅಥವಾ ಹೆಚ್ಚು ಮಳೆ ಬಂದಲ್ಲಿ ಕೊಳೆತು ನಿರುಪಯೋಗವಾಗಬಹುದು ಆದದ್ದರಿಂದ ದುಂಡುಗಡ್ಡೆ ನೆಡುವದು ಮೇಲು ಉಂಡು ಗಡ್ಡೆಗಳಲ್ಲಿ ಕಣ್ಣುಗಳು ಆಳವಾಗಿಯೂ ಕಾಣುವಂತೆಯೂ ಇರುತ್ತವೆ ಆದ್ದರಿಂದ ಇವುಗಳನ್ನು ಎರಡು ಅಥವಾ ಹೆಚ್ಚು ಹೋಳುಗಳು ಮಾಡಿ ನೆಡಬಹುದು ಉದ್ದವಾಗಿ ಮೊಟ್ಟೆಯ ಹಾಗಿರುವ ಗಡ್ಡೆಗಳಲ್ಲಿ ಕಣ್ಣುಗಳು ಒಂದು ತುದಿಯಲ್ಲಿ ಗಿಜಿಬಿಜಿಯಾಗಿ ಸೇರಿಕೊಂಡು ಚನ್ನಾಗಿ ಕಾಣಬರುವದಿಲ್ಲ ಆದದ್ದರಿಂದ ಇಂಥವುಗಳನ್ನು ಒಂದು ಹೋಳಿನಲ್ಲಿ ಒಂದು ಒಳ್ಳೆ ಕಣ್ಣು ಇರುವ ರೀತಿ ಕತ್ತರಿಸುವದು ಕಷ್ಟ ಹೋಳು ಮಾಡಿ ನೆಡುವ ಸಂದರ್ಭದಲ್ಲಿ ಕತ್ತರಿಸಿದ ಮುಖಕ್ಕೆ ಸುಣ್ಣವನ್ನು ಪುಡಿಮಾಡಿ ಒರಸಿದರೆ ಒಳ್ಳೇದು ಇದರಿಂದ ರೋಗವು ತಗಲುವದು ತಪ್ಪುತ್ತದೆ

ಸ್ಥಳೀಯ ರಕಮುಗಳು ಕೇವಲ ಚಿಕ್ಕದಾಗಿರುವ ಕಾರಣ ಒಂದು ಎಕರೆಗೆ ಬೀಜಕ್ಕಾಗಿ ಮೂರು ಮಣ ಬೇಕಾದೀತು ಉತ್ತಮ ರಕಮುಗಳನ್ನು ಉಪಯೋಗಿಸಿದ್ದಾದರೆ ಎಕರೆಗೆ ೧೫—೨೦ ಮಣ ಬೇಕಾಗುತ್ತದೆ ಬಂಗಾಳ ವ್ಯವಸಾಯಕ ಫಾರಂಗಳಲ್ಲಿ ತಿಳಿದುಬಂದಿರುವದೇನಂದರೆ, ಸ್ಥಳದಲ್ಲಿ ಬೆಳೆದ ರಕಮುಗಳ ಬೀಜವನ್ನು ವರ್ಷವರ್ಷ ಕೇವಾಡಿ ಉಪಯೋಗಿಸಿದ್ದಾದರೆ ನೈನಿಟಾಲ್ ಮತ್ತು ಡಾರ್ಜಿಲಿಂಗ್ ರಕಂ ಬೀಜಗಳನ್ನು ಪ್ರತಿವರ್ಷವೂ ಹೊರಗಿನಿಂದ ತರದು ಬೆಳೆಯುವದರಲ್ಲಾಗುವಷ್ಟು ಉತ್ಪತ್ತಿಯು ಇರುವದಿಲ್ಲ ಪ್ರತಿವರ್ಷವೂ ಬೀಜವನ್ನು ಹೊಸದಾಗಿ ಹೊರಗಿನಿಂದ ತಂದು ಉಪಯೋಗಿಸುವದು ಒಳ್ಳೇದು ಭೂಮಿಯನ್ನು ಒಳ್ಳೇ ಉಳುಮೆಗೆ ತಂದುಕೊಂಡನಂತರ ನೇಗಿಲಿನಿಂದ ೧—೨ ಅಡಿಯಷ್ಟು ದೂರದೂರವಾಗಿ ೪—೫ ಅಂಗುಲ ಆಳವಾದ ಸಾಲುಗಳನ್ನು ಮಾಡಬೇಕು ಈ ಸಾಲುಗಳಲ್ಲಿ ಸಗಣಿ ಗೊಬ್ಬರವನ್ನು ಹರಡಿ ಗೊಬ್ಬರದ ಮೇಲೆ —೧ ಅಡಿ ದೂರದೂರವಾಗಿ ಬೀಜವನ್ನು ಇಟ್ಟು ಸಾಲುಗಳನ್ನು ಮುಚ್ಚಬೇಕು ಹಿಂಡಿಯನ್ನು ಉಪಯೋಗಿಸಿದ್ದಾದರೆ ನೀರು ಹಾಯಿಸಿ ಬೆಳೆಯುವ ಸಂದರ್ಭದಲ್ಲಿ ಹಿಂಡಿಯನ್ನು ಪುಡಿಮಾಡಿ ಗೊಬ್ಬರದ ಜೊತೆಗೆ ಸಾಲುಗಳಲ್ಲಾಗಲಿ ಅಥವಾ ಮೊದಲು ಏರುಹಾಕುವಾಗ ಗಿಡದ ಬುಡಕ್ಕಾಗಲಿ ಹಾಕಬೇಕು ನೀರು ಹಾಯಿಸದ ಬೆಳೆಯುವದರಲ್ಲಿ ಮಳೆಗಳು ಪೂರೈಸುವದಕ್ಕೆ ಮುಂಚೆ ಹಿಂಡಿಯನ್ನು ಜಮೀನಿನಲ್ಲಿ ಎರಚಿ ಚನ್ನಾಗಿ ಉತ್ತು ಮಣ್ಣಿನಲ್ಲಿ ಬೆರಸಬೇಕು ಪೈರಿಟ್ಟನಂತರ ಒಂದೆರಡು ದಫಾ ಕಳೆ ಕಿತ್ತು ಸಸಿಗಳು ಅರ್ಧ ಮುಕ್ಕಾಲು ಅಡಿ ಎತ್ತರ ಬೆಳೆದಾಗ ಏರು ಹಾಕಬೇಕು ಒಂದೆರಡು ತಿಂಗಳನಂತರ ಇನ್ನೊಂದು ದಫಾ ಇದೇ ರೀತಿ ಮಾಡಬೇಕು ನೆಲವು ಒಣಗಿದ್ದರೆ ಸಾಧ್ಯವಾದಲ್ಲಿ ನೀರು ಹಾಯಿಸದರೆ ಒಳ್ಳೇದು ಹಿಂಡಿ ಅಥವಾ ತಯಾರಿಸಿದ ಗೊಬ್ಬರಗಳನ್ನು ಉಪಯೋಗಿಸಿದ ಸಂದರ್ಭಗಳಲ್ಲಿ ನೀರು ಹಾಯಿಸಿದರೆ ಅನುಕೂಲ ಇಲ್ಲವಾದರೆ ಗೊಬ್ಬರಗಳು ಕೊಳೆಯದೆ ಮಣ್ಣಿನಲ್ಲಿ ಸರಿಯಾಗಿ ಬೆರೆಯುವದಿಲ್ಲ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಗಿಡದ ಬೆಳವಳಿಕೆ ನಿಂತನಂತರ ಫಸಲನ್ನು ಕಟಾವು ಮಾಡಬಹುದು ಮೈದಾನಗಳಲ್ಲಿ ಎಕರೆಗೆ ಸರಾಸರಿ ೮೦—೧೫೦ ಮಣ (ಬಂಗಾಳ) ಉತ್ಪತ್ತಿ ಕಟ್ಟಬಹುದು ನೀರು ಹಾಯಿಸಿ ಒಳ್ಳೇ ಗೊಬ್ಬರ ಹಾಕಿದ್ದರೆ ೩೦೦ ಮಣ ಗಡ್ಡೆ ಬೆಳೆಯುವದು ಸಾಧ್ಯ

ವಿದೇಶ ವರ್ತಮಾನಗಳು

ತುರ್ಕೀ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ದಂಗೆ ಕೃತ್ಯಗಳನ್ನು ನಡಿಸಿದ್ದರಲ್ಲಿ ಭಾಗಿಗಳಾಗಿದ್ದರೆಂದು ತಿಳಿದು ಒಂದ ಹದಿನೂರು ಮಂದಿ ಹುದ್ದೆದಾರರನ್ನೂ ಅಧಿಕಾರಿಗಳನ್ನೂ ಸರ್ಕಾರದವರು ಹಿಡಿದು ವಿಚಾರಿಸಿ ನಾಡಿ ಕಳೆದ ವಾರ ಗಲ್ಲಿಗೆ ಹಾಕಿದರು

ಪೋರ್ಚುಗಲ್ ರಾಜ್ಯದ ಎಸ್ಟೊರಿಲ್‌ನಲ್ಲಿ ಕಾರ್ಟಾಚೋ ಎಂಬ ಕಲ್ಲಿದ್ದಲ ಗಣಿಯೊಳಗೆ ಭೂಮಿಯನ್ನು ಕೊರೆಯುತ್ತಿದ್ದಾಗ ಭೂಗರ್ಭದೊಳಗೆ ಹರಿಯುತ್ತಿದ್ದ ಒಂದು ನದಿಯು ಆ ಗಣಿಯೊಳಕ್ಕೆ ತುಂಬಿಕೊಂಡು ಅನಾಹುತವಾಯಿತು ಹದಿನಾಲ್ಕು ಜನಗಳನ್ನು ಹೊರಕ್ಕೆ ತೆಗೆದರು ಇನ್ನೂ ೩೬ ಮಂದಿ ಸಿಕ್ಕಿಲ್ಲ

ಪರ್ಷಿಯಾ ರಾಜ್ಯದ ಎಲ್ಲೆ ಕಟ್ಟುಗಳ ಬಳಿ ಪ್ರಜಾ ನೆಮ್ಮದಿಗೆ ಭಂಗವುಂಟಾಗಿದೆಯಾದದ್ದರಿಂದ ವ್ಯಾಪಾರಸ್ಥರು ಬಹಳ ನಷ್ಟಕಷ್ಟಗಳಿಗೆ ಗುರಿಯಾಗುತ್ತಿರುವರೆಂದೂ ಇದನ್ನು ಸಂಪೂರ್ಣವಾಗಿ ನಿಲ್ಲಿಸದೆಹೋದರೆ ರಷ್ಯಾ ಸೈನ್ಯಗಳನ್ನು ಆ ಪ್ರಾಂತ್ಯಕ್ಕೆ ಕಳುಹಿಸಬೇಕಾಗುವದೆಂದೂ ರಷ್ಯಾ ರಾಯಭಾರಿಯು ಪರ್ಷಿಯಾ ರಾಜ್ಯದ ಹೊಸ ಗವರ್ನಮೆಂಟಿಗೆ ತಿಳಿಸಿರುತ್ತಾರೆ

ಅಮೇರಿಕಕ್ಕೆ ಸೇರಿದ ಬೊಲಿವಿಯಾ ಮತ್ತು ಅರ್ಜೆಂಟೈನಾ ರಾಜ್ಯಗಳಿಗೆ ಎಲ್ಲೆಯ ವಿಚಾರವಾಗಿ ಮನಸ್ತಾಪಗಳು ಹುಟ್ಟಿದವು ಕೆಲವು ದೊಡ್ಡ ಮನುಷ್ಯರು ಮಧ್ಯಸ್ಥಗಾರರಾಗಿ ನಿಂತು ಎಲ್ಲೆಕಟ್ಟುಗಳನ್ನು ವಿಂಗಡಿಸಿಕೊಟ್ಟರು ಬೊಲಿವಿಯಾದವರು ಈ ತೀರ್ಮಾನವನ್ನು ಒಪ್ಪದೆ ಹೋದದ್ದರಿಂದ ಆವೆರಡು ರಾಜ್ಯಗಳಿಗೂ ಈಗ ಯುದ್ಧಪ್ರಾಪ್ತವಾಗುವಹಾಗಿದೆ ಎಂದು ತಂತೀವರ್ತಮಾನ ಬಂದಿದೆ

ಚೀನೆಯವರ ಮೇಲೆ ಜಪಾನವರಿಗೆ ದಿನೇ ದಿನೇ ಕೋಪವು ಹೆಚ್ಚುತ್ತಿರುವಂತೆ ಅಲ್ಲಿನ ಪತ್ರಿಕೆಯು ತಿಳಿಸುವದು ಜಪಾನವರು ಬರೆಯುವ ಕಾಗದಗಳಿಗೆ ಚೀನೆಯವರು ಜವಾಬನ್ನೇ ಕೊಡುವದಿಲ್ಲ ಜಪಾನವರು ಚೀನೆಯವರ ಕೂಡ ಸ್ನೇಹವನ್ನು ಬೆಳಸಿ ಒಬ್ಬರಿಗೊಬ್ಬರು ಅನುಕೂಲವಾಗಿರಬೇಕೆಂದು ಅಪೇಕ್ಷಿಸುತ್ತಿರುವದಾಗಿಯೂ, ಅವರ ಪ್ರಯತ್ನವೆಲ್ಲಾ ವ್ಯರ್ಥವಾಗುತ್ತದೆ ಎಂದೂ ತಿಳಿಯುವದು

ಮಹಮದೀಯರ ಯಾತ್ರಾಸ್ಥಳಗಳಾದ ಮೆಕ್ಕಾ ಮದೀನಾ ಪಟ್ಟಣಗಳಿಗೆ ರೈಲ್ ರಸ್ತೆಯನ್ನು ಹಾಕುವ ಕೆಲಸವು ನಿಂತುಹೋಗಿದೆ ಈ ಕಾಮಗಾರಿಗೆ ಬೆಡೋಯಿನ್ ಎಂಬ ಜನರನ್ನು ಬಿಟ್ಟಿದ್ದರು ಇವರು ಈಗ ಆ ಪ್ರಾಂತ್ಯದಲ್ಲಿ ಕ್ರೂರಕೃತ್ಯಗಳನ್ನು ನಡಿಸುತ್ತಾ, ಹಾಕಿದ್ದ ರೈಲ್‌ರಸ್ತೆಗಳನ್ನು ಕಿತ್ತು ಹಾಳು ಮಾಡುತ್ತಾ ಬಂದಿದ್ದಾರೆ ದೇಶವು ಶಾಂತಸ್ಥಿತಿಗೆ ಬರುವವರೆಗೆ ಈ ರೈಲ್‌ರಸ್ತೆಯ ಕಾಮಗಾರಿಯನ್ನು ಮುಂದರಿಸಕೂಡದೆಂದು ನಿಲ್ಲಿಸಿದ್ದಾರೆ

ತುರ್ಕೀ ರಾಜ್ಯದ ಹೊಸ ಪಾರ್ಲಿಮೆಂಟಿನ ೧೪ ಮಂದಿ ಮೆಂಬರುಗಳು ವಿಲಾಯತಿಯ ರಾಜ್ಯಭಾರಕ್ರಮಗಳನ್ನೂ ಪಾರ್ಲಿಮೆಂಟಿನ ಕಾರುಬಾರುಗಳನ್ನೂ ಕಣ್ಣಾರ ನೋಡಿ ಅನುಭವ ಮಾಡಿಕೊಂಡು ಬರುವ ಉದ್ದೇಶಕ್ಕಾಗಿ ಈಗ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾರೆ ಇವರಿಗೆ ಇಂಗ್ಲಿಷ್ ಪಾರ್ಲಿಮೆಂಟ್ ಮೆಂಬರುಗಳು ಔತಣವನ್ನು ಮಾಡಿದರು ಚಕ್ರವರ್ತಿ ಸಾರ್ವಭೌಮರವರು ಅವರನ್ನೆಲ್ಲಾ ಬಕಿಂಗ್‌ಹಾಂ ಎಂಬ ರಾಜಭವನಕ್ಕೆ ಕರೆಸಿಕೊಂಡು ಭೇಟಿ ಕೊಟ್ಟರು

ಶ್ಯಾಮಜಿ ಕೃಷ್ಣವರ್ಮ ಎಂಬೊಬ್ಬ ಹಿಂದೂಸ್ಥಾನದವನು ಫ್ರಾನ್ಸಿನಲ್ಲಿದ್ದುಕೊಂಡು, "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದನು ಇದರಲ್ಲಿ ರಾಜದ್ರೋಹಕರವಾದ ಸಂಗತಿಗಳು ಬರೆಯಲ್ಪಡುತ್ತಿದ್ದವೆಂದೂ, ಇಂಥಾ ಪತ್ರಿಕೆಯನ್ನು ಲಂಡನ್ ಪಟ್ಟಣದಲ್ಲೇ ಹಾರ್ಸ್ಲೀ ಎಂಬಾತನು ಅಚ್ಚುಹಾಕಿಕೊಡುತ್ತಿದ್ದನೆಂದೂ ಮೊಕದ್ದಮೆ ಬಂದು ಹಾರ್ಸ್ಲೀಯನ್ನು ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರಷ್ಟೆ ಈತನಿಗೆ ಕಳೆದ ವಾರ ನಾಲ್ಕು ತಿಂಗಳ ಸಜಾ ವಿಧಿಸಲ್ಪಟ್ಟಿದೆ

ರಷ್ಯಾ ಗವರ್ನಮೆಂಟಿನವರು ತಮ್ಮ ಪ್ರಜೆಗಳಲ್ಲಿ ದುಷ್ಟರಾದವರನ್ನು ಗಡೀಪಾರುಮಾಡಿ ಸೈಬೀರಿಯಾ ದೇಶಕ್ಕೆ ಕರೆದುಕೊಂಡು ಹೋಗಿ ಬಿಟ್ಟಿದ್ದಾರೆ ಅಂಥವರ ಹೆಂಡರು ಮಕ್ಕಳು ಅವರ ಬಳಿಯಲ್ಲೇ ಇರಬೇಕೆಂದು ಇಷ್ಟಪಡುವವಾದರೆ ಅವರಿಗೆ ರೈಲ್ ಚಾರ್ಜನ್ನು ಮುಕ್ಕಾಲುವಾಸಿ ಮಾಫ್‌ಮಾಡಿ, ಕಾಲುವಾಸಿಯನ್ನು ಮಾತ್ರ ವಸೂಲುಮಾಡುತ್ತೇವೆಂದೂ, ಅಪೇಕ್ಷೆಯುಳ್ಳವರು ಈ ರಿಯಾಯತಿಯನ್ನು ಪಡೆದು ಸೈಬೀರಿಯಾ ದೇಶಕ್ಕೆ ಹೋಗಿ ತಮ್ಮ ರಕ್ತ ಸಂಬಂಧಿಗಳ ಕೂಡ ಇರಬಹುದೆಂದೂ ಸರ್ಕಾರದವರು ಜಾಹಿರ್ ಮಾಡಿರುತ್ತಾರೆ

ಫ್ರಾನ್ಸಿನಲ್ಲಿ ಹೆನ್ರಿ ಲೀಮಾಯಿನ್ ಎಂಬ ಒಬ್ಬ ಇಂಜನಿಯರು ಸರ್ ಜೂಲಿಯಸ್ ವರ್ನರ್ ಎಂಬ ಶ್ರೀಮಂತರಿಗೆ ವಜ್ರಗಳನ್ನು ತಯಾರುಮಾಡುವದನ್ನು ಹೇಳಿಕೊಡುತ್ತೇನೆಂದು ನಂಬಿಸಿ ಆತನಿಂದ ದ್ರವ್ಯವನ್ನು ತೆಗೆದುಕೊಂಡು ಮೋಸ ಮಾಡಿದನು ಪ್ಯಾರಿಸ್ ಪಟ್ಟಣದ ನ್ಯಾಯಸ್ಥಾನದವರು ಆ ಇಂಜನಿಯರನ್ನು ದೋಷಿಯನ್ನಾಗಿ ಮಾಡಿ ಅವನಿಗೆ ೬ ವರುಷಗಳ ಕಠಿಣ ಶಿಕ್ಷೆಯನ್ನೂ, ೩೦೦೦ ರೂ ಜುಲ್ಮಾನೆಯನ್ನೂ ವಿಧಿಸಿದ್ದಲ್ಲದೆ ಅವನು ಸಜಾ ಅನುಭವಿಸಿದ ತರುವಾಯ ೫ ವರುಷಗಳ ತನಕ ಫ್ರಾನ್ಸಿನಿಂದ ಗಡೀಪಾರು ಶಿಕ್ಷೆಯನ್ನೂ ಅನುಭವಿಸತಕ್ಕದ್ದೆಂದು ತೀರ್ಮಾನ ಮಾಡಿರುತ್ತಾರೆ

ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಇರುವ ಇಂಗ್ಲಿಷ್ ಕಾಲುವೆಯನ್ನು ವಿಮಾನದಲ್ಲಿ ಕುಳಿತು ದಾಟಿಕೊಂಡು ಹೋಗುವರಿಗೆ ೧೨,೫೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಡೇಯಿಲಿ ಮೇಯಿಲ್ ಎಂಬ ವರ್ತಮಾನ ಪತ್ರಿಕಾ ಕರ್ತರು ಪ್ರಕಟಮಾಡಿದರು ಲೆಥಂ ಎಂಬೊಬ್ಬ ಉದ್ಯೋಗಸ್ಥನು ಒಂದು ವಿಮಾನವನ್ನು ತಯಾರುಮಾಡಿ ಕಳೆದ ವಾರ ಅದರಲ್ಲಿ ಕುಳಿತು ಆ ಬಹುಮಾನವನ್ನು ಪಡೆಯುವ ಉದ್ದೇಶದಿಂದ ಹೊರಟನು ಇದು ಸಮುದ್ರದ ಮೇಲೆ ೧೫೦೦ ಅಡಿ ಎತ್ತರಕ್ಕೆ ಹಾರಿಹೋಯಿತು ಗಂಟೆಗೆ ೪೫ ಮೈಲಿಯ ವೇಗ ಹೋಗುತ್ತಿತ್ತು ಆರು ಮೈಲಿ ದೂರ ಹೋಗುವಷ್ಟರಲ್ಲಿ ಅಕಸ್ಮಾತ್ತಾಗಿ ಅದರ ಶಕ್ತಿಯು ಕೆಡಿಸಿಯಾಗಿ ಸಮುದ್ರಕ್ಕೆ ಇಳಿಯಿತು ಆದರೆ ಹಿಂಬಾಲಿಸಿ ಹೋಗುತ್ತಿದ್ದ ದೋಣಿಗಳಲ್ಲಿ ಅಪಾಯವಿಲ್ಲದೆ ಬದುಕಿ ಬಂದನು ಅವನ ಉದ್ದೇಶವು ಸಫಲವಾಗಲಿಲ್ಲ

ಲಂಡನ್ ಪಟ್ಟಣದ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಬಂಗಲೆಯಲ್ಲಿ ಸರ್ ವಿಲ್ಲಿಯಂ ಕರ್ಜನ್ ವೈಲಿಯವರನ್ನು ಕೊಂದುಹಾಕಿದ ಮದನಲಾಲ ಧಿಂಗ್ರನನ್ನು ಜಡ್ಜಿಗಳು ಕಳೆದ ಬುಧವಾರ ವಿಚಾರಣೆ ಮಾಡಿದರು ಲಾರ್ಡ್ ಅಲ್ವರ್‌ಸ್ಟೋನರವರು ಚೀಫ್ ಜಡ್ಜಿಗಳಾಗಿದ್ದರು ಧಿಂಗ್ರನ ಮೇಲಿನ ಆಪಾದನೆಯು ರುಜುವಾತಾಗಿದೆ ಎಂದು ಅಭಿಪ್ರಾಯ ಪಟ್ಟರು ಇದನ್ನು ಅನುಸರಿಸಿ ಚೀಫ್ ಜಡ್ಜಿಯವರು ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರು ಮರಣ ದಂಡನೆಯನ್ನು ಕೇಳಿ ಚಂಚಲನಾಗದೆ ಜಡ್ಜಿಯವರಿಗೆ ಸಲಾಂ ಮಾಡಿ,— "ಜಡ್ಜಿಯವರೇ, ನಿಮ್ಮನ್ನು ವಂದಿಸುವೆನು ನನ್ನ ದೇಶ ಹಿತಕ್ಕಾಗಿ ಪ್ರಾಣ ಕೊಡಲು ನನಗೆ ಬಹಳ ಸಂತೋಷವಾಗಿದೆ" ಎಂದು ಹೇಳಿದನು ಇವನ ಕಡೆ ವಕೀಲರ್ಯಾರೂ ಇರಲಿಲ್ಲ ಏನೋ ಲಾಯರೇ ಬೇಡವೆಂದು ಹೇಳಿದನು ಪೋಲೀಸ್ ಕೋರ್ಟಿನಲ್ಲಿ ತನಿಖೆಮಾಡಿದಾಗ ಅವನು ಹೇಳಿ ಬರೆಸಿದ್ದ ಸ್ಟೇಟ್‌ಮೆಂಟನ್ನು ಮಾತ್ರ ಕೋರ್ಟಿನಲ್ಲಿ ಓದಿ ಹೇಳಿದರು

ಆಫ್ರಿಕದಲ್ಲಿ ಮೊರಾಕೋ ಎಂಬ ವಿಭಾಗವು ಸ್ಪೈಯಿನ್ ರಾಜ್ಯಕ್ಕೆ ಸೇರಿದ್ದಾಗಿರುತ್ತದೆ ಈಗ ಮೊರೊಕ್ಕೋದೊಳಗೆ ಮೂರ್ ಎಂಬ ಜನರು ಸ್ಪೈಯಿನ್‌ನವರ ಮೇಲೆ ದಂಗೆ ಎದ್ದಿರುವರು ಎರಡು ಕಡೆಗಳಿಂದಲೂ ಮೂರ್ ಸ್ಪೈಯಿನ್ ರಾಜ್ಯದ ಸೈನ್ಯಕ್ಕಾಗಿ ಯುದ್ಧಗಳು ನಡೆಯುತ್ತಲಿವೆ ಮೆಲಿಲ್ಲಾ ಎಂಬ ರಾಜ್ಯದಲ್ಲಿ ಕಳೆದ ೨೦ನೇ ತಾರೀಖು ಮಂಗಳವಾರ ಒಂದು ಯುದ್ಧವಾಯಿತು ಸ್ಪೈಯಿನ್ ರಾಜ್ಯದ ಸೈನ್ಯದಲ್ಲಿ ೩೩ ಮಂದಿ ಹತರಾದರು ೩೪ ಮಂದಿಗೆ ಗಾಯವಾಗಿದೆ ಈ ಸಮಾಚಾರವು ಸ್ಪೈಯಿನ್ ರಾಜ್ಯದ ಮುಖ್ಯ ಪಟ್ಟಣಗಳಲ್ಲಿ ತುಂಬಾ ಗಾಬರಿಯನ್ನುಂಟುಮಾಡಿತು ಅಲ್ಲಿಂದ ಹೊಸ ಸೈನ್ಯಗಳನ್ನು ಯುದ್ಧಭೂಮಿಗೆ ಕಳುಹಿಸುವಾಗ್ಯೆ ಪ್ರಜೆಗಳು ಅಪಕ್ಷ ವಿರೋಧಿಗಳಾಗಿ ಎಂತು ತುಂಬಾ ಗಲಭೆಮಾಡಿದರು ತಾ ೨೪ ನೇ ಶನಿವಾರ ಯುದ್ಧಭೂಮಿಯಿಂದ ತಂತೀ ವರ್ತಮಾನ ಬಂದಿರುವದೇನೆಂದರೆ— ಮೆಲಿಲ್ಲಾ ಪಟ್ಟಣದ ಸಮೀಪದಲ್ಲಿ ಒಂದು ಯುದ್ಧವಾಯಿತು ಸ್ಪೈಯಿನ್‌ನವರ ಸೈನ್ಯದಲ್ಲಿ ನಾಲ್ವರು ಹುದ್ದೇದಾರರೂ ಹದಿಮೂರು ಮಂದಿ ಸೈನಿಕರೂ ಗಾಯಪಟ್ಟರು ಮೆಲಿಲ್ಲಾ ಪಟ್ಟ

ಇದ ಮೇಲೆ ಮೂರ್ ಜನರು ಮುತ್ತಿಗೆ ಹಾಕಿಕೊಳ್ಳುತ್ತಿದಾರೆ. ಅವರನ್ನು ಓಡಿಸುತ್ತಿರುವುದು ಕಷ್ಟವಾಗಿದೆ ಎಂದೂ ಇನ್ನೂ ೪೦,೦೦೦ ಸೈನ್ಯವನ್ನು ಕಳುಹಿಸಿ ಕೊಡಬೇಕೆಂದೂ ಜನರಲ್ ಮೇರೀನಾ ಎಂಬ ಸೈನ್ಯಾಧಿಪತಿಯು ಸ್ಪೈಯಿನಿಗೆ ಬರೆಯುತ್ತಾರೆ. ಅತ್ತಲಾಗಿ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಿಂದ ಹೊಸ ಸೈನ್ಯಗಳು ಯುದ್ಧಭೂಮಿಗೆ ಕಳುಹಿಸಲ್ಪಟ್ಟಾಗ ಅಪಾರವಾದ ದೊಂಬಿ ನಡೆದು ಅನೇಕಮಂದಿ ಸ್ತ್ರೀಯರೂ ಮಕ್ಕಳೂ ಕೊಲ್ಲಲ್ಪಟ್ಟರೆಂದೂ, ಸೈನಿಕರು ಕುಳಿತಿದ್ದ ರೈಲ್ ಗಾಡಿಗಳನ್ನು ಒಡೆದುಹಾಕಬೇಕೆಂದು ದೊಂಬಿ ಜನರು ಪ್ರಯತ್ನಪಟ್ಟರೆಂದೂ, ಆಫ್ರಿಕಾಕ್ಕೆ ಹೋಗುವ ಸೈನಿಕರನ್ನು ನೋಡುವುದಕ್ಕಾಗಿ ಬಂದರು ಮನೆಗಳಿಗೆ ಹೋಗಿದ್ದಾಗ ಪ್ರಜೆಗಳು ಗುಂಪು ಸೇರಿ ತಮ್ಮ ಅಸಮಾಧಾನವನ್ನು ತೋರಿಸಿದರೆಂದೂ ತಂತೀ ವರ್ತಮಾನ ಬಂದಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಲಿಕೋಟೆ ಮತ್ತು ಅತ್ತಿಗಡಗಳ ರಾಜರು ಬಹುಮೂತ್ರರೋಗದಿಂದ ಕಳೆದ ತಿಂಗಳ ೨೦ ನೇ ತಾರೀಖು ಕಾಲವಾದರು

ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ಮಳೆಯು ಬೇಸಿಯಿಂದ ಒಂದು ದೊಡ್ಡ ಮನೆಯು ಬಿದ್ದು ಮೂರು ಜನರು ಮೃತಪಟ್ಟರು.

ಅನಂತಪುರದಲ್ಲೂ ರೈತರು ಜಮೀನ್ ಕಂದಾಯವನ್ನು ಮನ್ನಿ ಆದೇ ರಿನ ಗ್ರಾಮಕ ಕಚೇರಿಗಳಿಗೆ ಕಳುಹಿಸಬಹುದೆಂದು ಸರ್ಕಾರದವರು ರಿಯಾಯಿತಿಯನ್ನು ತೋರಿಸಿದಾರೆ

ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯನ್ನು ಬದಲಾಯಿಸಿ ಕಟ್ಟಿಸುವ ವಿಷಯದಲ್ಲಿ ಉತ್ತಮವಾದ ನಕ್ಷೆಯನ್ನು ಬರೆದು ಕೊಡುವವರಿಗೆ ೨,೫೦೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಟೌನ್ ಹಾಲ್ ಕಮಿಟಿಯವರು ಪ್ರಕಟಿಸಿದಾರೆ

ಹಿಂದೂಸ್ಥಾನದಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳಿಗೆ ವಿಲಾಯತಿಯಿಂದ ಬರುವ ತಂತೀ ವರ್ತಮಾನಗಳಿಗೆ ಈಗ ಪ್ರತಿ ಒಂದು ಮಾತಿಗೂ ೧೨ ಆಣೆ ರುಸುಂ ಕೊಡಬೇಕಾಗಿದೆ ಈ ದರವನ್ನು ಇನ್ನು ಮುಂದೆ ೯ ಆಣೆಗೆ ಇಳಿಸಬೇಕೆಂದು ಚರ್ಚೆ ನಡೆಯುತ್ತಿದೆ

ಹಿಂದೂಸ್ಥಾನದ ವಸಾಹತುಗಳ ಬಜೆಟನ್ನು ವಿಲಾಯತಿಯ ಪಾರ್ಲಿಮೆಂಟಿನ ಮೆಂಬರುಗಳು ಮುಂದಿನ ತಿಂಗಳು ೫ ನೇ ತಾರೀಖಿನಲ್ಲಿ ಚರ್ಚೆ ಮಾಡುವರೆಂದೂ, ಒಂದು ದಿನದೊಳಗಾಗಿ ಚರ್ಚೆಯೆಲ್ಲಾ ಪೂರೈಸಬೇಕೆಂದೂ ಮಂತ್ರಿ ಶ್ರೀಷ್ಟ ರಾದ ಮಿ. ಆಸ್ಕ್ವಿತ್‍ರವರು ಅಪ್ಪಣೆ ಕೊಡಿಸಿದಾರೆ.

ಈ ಮೂರು ತಿಂಗಳ ಪ್ರಾರಂಭದಿಂದ ೨೦ ದಿನಗಳಲ್ಲಿ ಹಿಂದೂಸ್ಥಾನದ ದವಸ ಧಾನ್ಯಗಳೂ ಎಣ್ಣೆ ಬೀಜಗಳೂ ಒಟ್ಟು ೩,೦೨,೮೭೩ ಟನ್ನುಗಳ ಭಾರದಷ್ಟು ಕರಾಚೀ ಪಟ್ಟಣಕ್ಕೆ ರೈಲಿನ ಮೇಲೆ ಹೋಗಿ ಇಳಿದುದಲ್ಲದೆ, ಅಲ್ಲಿಂದ ಹಡಗುಗಳ ಮೇಲೆ ವಿದೇಶಗಳಿಗೆ ಸಾಗಿಸಲ್ಪಟ್ಟವೆಂದು ಪ್ರಕಟವಾಗಿದೆ

ಅಲಹಾಬಾದ್ ಪ್ರಾಂತ್ಯದ ಪಟ್ಟಣದ ಈ ಭಾಗದ ಆಸ್ಪತ್ರಿಗೆ ಪ್ರವೇಶಿಸುವ ಮತ್ತು ಕೈಗಾರಿಕೆಗಳ ಪರೀಕ್ಷೋತ್ತೀರ್ಣವಾದ ಸಭೆಯಂತೆ ವಿಷಯ ಆಗಿದೆ ಅವರ ಖರ್ಚಿಗೆ ಸರಕಾರದವರು ಕೆಲವು ಹಣವನ್ನು ಕೊಡುವುದಾಗಿ ಹಾಗಾಗಿ ಸಭೆಯವರು ಪ್ರಜೆಗಳಿಂದಲೂ ಚಂದಾ ಕೂಡಿಸುತ್ತಿದಾರೆ

ಕಲ್ಕತ್ತೆಯಲ್ಲಿರುವ ಸೊಸೈಟಿ ಆರ್ಟ್ ಏಜೆನ್ಸಿ ಎಂಬ ಕಂಪನಿಯ ಮುದ್ರಾಪಿಸ ಪಿ ಆರ್ ಎಂಬ ವಜ್ರಪಡಿ ನಗಗಳನ್ನು ಚಿಕಿರಿ ಮಾಡುವ ಕಂಪನಿಯಿಂದ ಕೆಲವು ನಗಗಳನ್ನು ತರಿಸಿಕೊಂಡದ್ದಾಗೂ, ಆ ವ್ಯಕ್ತಿ ೨೪,೦೦೦ ರೂಪಾಯಿನ ಜವಾಹಿರಿಗಳನ್ನು ವಾಪಸು ಕೊಡದೆ ತೋರಿಸಡಿಸಿರುತ್ತಾನೆಂದೂ ಕಲ್ಕತ್ತಾ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಆತನ ಮೇಲೆ ಫಿರ್ಯಾದು ಬಂದು ವಿಚಾರಣೆ ಆಗುತ್ತಿದೆ

ಸೌಗಾಂಗ್ ಪಟ್ಟಣದಲ್ಲಿರುವ ಸರ್ಕಾರಿ ನೌಕರರು ಅನ್ಯದೇಶಗಳಿಂದಲಾಗಲಿ ಒಳದೇಶದ ಇತರ ಸ್ಥಳಗಳಿಂದಲಾಗಲಿ ಸುಂಕದ ಸಾಮಾನು ತರಿಸಿಕೊಂಡರೆ ಅಂಥಾ ಸಾಮಾನಿಗೆ ಅವರಿಂದ ಸುಂಕವನ್ನು ವಸೂಲ್ಮಾಡಬೇಕಾದದ್ದಿಲ್ಲವೆಂದೂ, ಅವರ ಸಂಬಳದ ಮೇರೆ ಪ್ರತಿ ವರುಷವೂ ಗೊತ್ತುಮಾಡಲ್ಪಡುವಷ್ಟು ಸುಂಕವನ್ನು ತೆಗೆದುಕೊಳ್ಳಬೇಕೆಂದೂ ಇಂಡಿಯಾ ಗವರ್ನ್‍ಮೆಂಟಿನವರು ಹುಕುಂ ಕೊಟ್ಟಿದಾರೆ

ಅನಂತಶಯನ (ತಿರುವನಂತಪುರ) ಸಂಸ್ಥಾನದ ನ್ಯಾಯಾಧಿಪತಿಗಳ ಸಭೆಯವರು ಮೊನ್ನೆ ಸೋಮವಾರದ ದಿನ ಒಂದು ಮೀಟಿಂಗ್ ನಡೆಸಿ ಎರಡು ಕಾನೂನುಗಳನ್ನು ಪಾಸ್ ಮಾಡಿದರು ಪ್ರಜಾ ಪಕ್ಷದ ಮೆಂಬರ ವ್ಯಕ್ತಿ ಯಾರೂ ಈ ಕಾನೂನುಗಳಿಗೆ ತಮ್ಮ ಸಮ್ಮತಿಯನ್ನು ಕೊಡದೆ ಹೋದರು ಆ ಎರಡರೊಳಗೆ ಒಂದನ್ನು ಶಿಕ್ಷಾರ್ಹವಾದ ಸ್ಪೆಷಲ್ ಪೊಲೀಸನ್ನು ನೇಮಿಸುವ ಕಾನೂನು. ಇವೆರಡನ್ನೂ ಪಾಸ್ ಮಾಡಿದರು

ಜಬಲ್ಪುರದಲ್ಲಿ ಒಬ್ಬ ಮುದುಕ ಮನುಷ್ಯನು ಹೆಂಡತಿ ಕಾಲವಾದ ಮೇಲೆ ಪ್ರೀತಿಯ ಅಸ್ತಿಯ ಮೇಲೆ ಸಾಲ ಮಾಡಿ ಹಣವನ್ನು ಕೊಟ್ಟು ಎರಡನೇ ಹೆಂಡತಿಯನ್ನು ಮದುವೆಮಾಡಿಕೊಂಡನು ಮೊದಲನೇ ಹೆಂಡತಿಯ ಮಗನು ಆ ಸಾಲ ನ್ಯಾಯವಾದ್ದಲ್ಲವೆಂದೂ ತಾನು ಕೊಡುವುದಿಲ್ಲವೆಂದೂ ಕೋರ್ಟಿನಲ್ಲಿ ಹೇಳಿದನು ಡಿಸ್ಟ್ರಿಕ್ಟ್ ಜಡ್ಜರವರು ಈ ವಿಷಯವನ್ನು ವಿಚಾರಿಸಿ, ತಂದೆಯು ತನ್ನ ಎರಡನೇ ಮದುವೆಗೆ ಸಾಲ ಮಾಡಿದ್ದು ಅಧರ್ಮವಾದ್ದಲ್ಲವಾದದ್ದರಿಂದ ಆ ಸಾಲವನ್ನು ಮಗನು ತೀರಿಸಬೇಕೆಂದು ತೀರ್ಪುಕೊಟ್ಟರು.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಸರ್ಕಾರೀ ಧರ್ಮ ಸತ್ರಗಳೊಳಗೆ ಅನೇಕ ದುಂದುವೆಚ್ಚಗಳು ನಡೆಯುತ್ತವೆಂದು ತಿಳಿದು ಬಂದದ್ದರಿಂದ ಸರ್ಕಾರದವರು ಅದನ್ನೆಲ್ಲಾ ತನಿಖೆಮಾಡಿ ಕ್ರಮಪಡಿಸಬೇಕೆಂದು ಒಂದು ಕಮಿಟಿಯನ್ನು ನಿರ್ಮಾಣಮಾಡಿದರು ಈ ಕಮಿಟಿಯವರು ಛತ್ರಗಳ ಖರ್ಚನ್ನು ಕ್ರಮಪಡಿಸುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದಾರೆ ಒಟ್ಟು ಖರ್ಚಿನಲ್ಲಿ ವರುಷಕ್ಕೆ ೨೫,೦೦೦ ರೂಪಾಯಿ ಮಿಗುವುದೆಂದು ಗೊತ್ತಾಗಿದೆ

ವಿನಾಯಕ ದಾಮೋದರ ಸವರ್ಕರ್ ಎಂಬಾತನು ಹಿಂದೂಸ್ಥಾನದ ದೊಡ್ಡ ದಂಗೆಯ ವಿಷಯವಾದ ಒಂದು ಪುಸ್ತಕವನ್ನು ಬರೆದು ಅದನ್ನು ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಚ್ಚುಹಾಕಿಸಿರುತ್ತಾನೆ. ಇದರಲ್ಲಿ ರಾಜದ್ರೋಹಕರವಾದ ಸಂಗತಿಗಳು ಬರೆಯಲ್ಪಟ್ಟಿವೆ ಎಂದೂ, ಈ ಪುಸ್ತಕಗಳನ್ನು ಅನ್ಯದೇಶಗಳಿಂದ ಹಿಂದೂಸ್ಥಾನಕ್ಕೆ ಯಾರೂ ತರಿಸಕೂಡದೆಂದೂ, ಗವರ್ನ್‍ಮೆಂಟಿನವರು ಸಮುದ್ರ ತೀರ ಪಟ್ಟಣಗಳ ಅಧಿಕಾರಿಗಳಿಗೆ ಹುಕುಂ ಕೊಟ್ಟಿರುತ್ತಾರೆ.

ಈಗ ಉತ್ತರ ದೇಶದಲ್ಲೆಲ್ಲಾ ಮಳೆಗಳು ಸುರಿದಿರೋಣದರಿಂದ ಪ್ಲೇಗ್ ಉಪದ್ರವ ಸ್ವಲ್ಪ ಕಡಿಮ್ಯಾಗಿರುವಂತೆ ತಿಳಿದುಬಂದಿದೆ ಕಳೆದ ಶನಿವಾರಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದೊಳಗೆಲ್ಲಾ ೬೧೩ ಪ್ಲೇಗ್ ಮರಣಗಳಾಗಿರುವವು ಬೊಂಬಾಯಿ ಅಧಿಪತ್ಯದಲ್ಲಿ ೧೩೫, ಸಂಯುಕ್ತ ಅಧಿಪತ್ಯಗಳು ೧೭೪, ಬರ್ಮಾ ೧೦೫, ಮದರಾಸ್ ಅಧಿಪತ್ಯ ೮೦, ಬಂಗಾಳಾ ೩೮ ಪಂಜಾಬ್ ೪೭, ಮೈಸೂರು ಸಂಸ್ಥಾನ ೩೨, ಮಧ್ಯ ಪ್ರಾಂತ್ಯಗಳು ೧, ರಾಜಪುಟಾನಾ ೧, ಈ ರೀತಿ ಹಂಚಿಕೆಯಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ತಂತೀವರ್ತಮಾನದ ಆಫೀಸಿನ ಮೂರು ಮಂದಿ ಜವಾನರು ಇಷ್ಟರವರೆಗಳಿಂದ ಅಲ್ಲಿನ ವರ್ತಕರಿಗೆ ಬರುವಂಥಾ ಧಾರಣೆವಾಸಿಗಳ ತಂತೀವರ್ತಮಾನಗಳನ್ನು ಗುಟ್ಟಾಗಿ ಒಡೆದು ತಿಳಿದುಕೊಂಡು, ಪೇಟೆಗಳಲ್ಲಿ ಅದನ್ನು ಮೊದಲೇ ಕೊಂಡುಕೊಂಡು ಅನಂತರ ಧಾರಣೆ ಹೆಚ್ಚಿದಾಗ ಮಾರಾಟ ಮಾಡುತ್ತಾ, ವರ್ತಕರನ್ನು ಮೋಸಪಡಿಸುತ್ತಾ ಇದ್ದರು ಇದು ಕಳೆದ ವಾರ ಪ್ರಕಟವಾಗಿ ಪೊಲೀಸಿನವರು ಆ ಮೂರು ಮಂದಿಯನ್ನೂ ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದಾರೆ

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಮುಧೋಳ್ ಸಂಸ್ಥಾನದ ರಾಜರಿಗೆ ಗವರ್ನ್‍ಮೆಂಟಿನವರು ೯ ಗುಂಡುಗಳ ಬಿರುದನ್ನು ದಯಪಾಲಿಸಿದರು. ಆ ಸಂಸ್ಥಾನದಲ್ಲಿ ಅದಕ್ಕಾಗಿ ಅನೇಕ ಸಂತೋಷೋತ್ಸವಗಳು ನಡೆದವು ಸಾವಿರಾರು ಪ್ರಜೆಗಳಿಗೆ ಸಮಾರಾಧನೆಯೂ, ದೀಪೋತ್ಸವವೂ, ದೇವಸ್ಥಾನ ಮಠಗಳಲ್ಲಿ ಪೂಜೆ ಅಭಿಷೇಕ ಜಪಾದಿಗಳೂ ಜರುಗಿದವು ರಾತ್ರಿ ೮ ಗಂಟೆಗೆ ರಾಜರೂ ರಾಣಿಯವರೂ ಯುವರಾಜರೂ ಮೆರವಣಿಗೆಯಲ್ಲಿ ಸಂಚಾರಮಾಡಿದರು ಬಾಣಬಿರುಸುಗಳಾದ ನಂತರ ಉತ್ಸವಗಳು ಕೊನೆಮುಟ್ಟಿದವು.

ಬಂಗಾಳಾ ಅಧಿಪತ್ಯದ ಇಂಗ್ಲಿಷ್ ವರ್ತಕ ಸಂಘದವರು ಹಿಂದೂಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚನರ್ ರವರ ಚಿತ್ರವನ್ನು ಕಲ್ಕತ್ತೆಯಲ್ಲಿ ಸ್ಥಾಪಿಸಬೇಕೆಂದು ಆಲೋಚಿಸಿ ಅವರ ಒಂದು ಪ್ರತಿಮೆಯನ್ನು ಮಾಡಿಸಿ ನಿಲ್ಲಿಸಬೇಕೆಂದು ಯೋಚಿಸಿ, ಇದಕ್ಕೆ ಮಹಾಜನರ ಅಭಿಮತವನ್ನು ದ್ರವ್ಯ ಸಹಾಯವನ್ನೂ ಪಡೆಯುವವರಾಗಿದಾರೆ ಮುಂದಿನ ತಿಂಗಳ ೩ ರಲ್ಲಿ ಕಲ್ಕತ್ತೆಯಲ್ಲಿ ಒಂದು ಮಹಾ ಸಭೆಯು ನಡೆಯುತ್ತದೆ ಹೈಕೋರ್ಟಿನ ಚೀಫ್ ಜಡ್ಜಿಯವರು ಈ ಸಭೆಯ ಅಗ್ರಾಸನವನ್ನು ವಹಿಸುವವರಾಗಿದಾರೆ

ಸುಮಾರು ಹತ್ತು ತಿಂಗಳ ಕೆಳಗೆ ಬೊಂಬಾಯಿ ಪಟ್ಟಣದ ಗೋಸ್ವಾಮಿ ಮಹಾರಾಜ ವಾಕೇಶ್ವರ ಲಾಲ್‍ಜೀಯವರ ಅರಮನೆಗೆ ಕಳ್ಳರು ನುಗ್ಗಿ ಸುಮಾರು ೩೫,೦೦೦ ರೂಪಾಯಿನ ಜವಾಹರಿಗಳನ್ನು ಕಳುವು ಮಾಡಿದ್ದರು ಪೊಲೀಸಿನವರು ಈ ಕಳುವನ್ನು ಪತ್ತೆಮಾಡಿ, ನಗಗಳನ್ನು ಕೊಂಡುಕೊಂಡಿದ್ದ ವರ್ತಕರನ್ನು ಹಿಡಿದು ಶಿಕ್ಷೆಯಾಗುವಂತೆ ಮಾಡಿದರು ಆ ವ್ಯಕ್ತಿ ಮುಂದಾಗಲಿ ಎರಡು ಸಾವಿನ ಒಡವೆಗಳು ಸಿಕ್ಕಿದವು ಗೋಸ್ವಾಮಿಯವರು ಆ ಪೊಲೀಸಿನವರಿಗೆಲ್ಲಾ ಬಹುಮಾನ ಕೊಡುವಂತೆ ಒಂದು ಸಾವಿರ ರೂಪಾಯಿ ಕಳುಹಿಸಿರುತ್ತಾರೆ

ವೈಸ್‍ರಾಯಿ ಲಾರ್ಡ್ ಮಿಂಟೋರವರ ಸಂಚಾರದ ವಿಷಯದಲ್ಲಿ ಈಗ ತಿಳಿದುಬಂದಿರುವುದೇನೆಂದರೆ—ಅವರು ನೂವೆಂಬರ್ ೧೭ಕ್ಕೆ ಬೊಂಬಾಯಿಗೆ ದಯಮಾಡುವರು ಅಲ್ಲಿಂದ ತಾ ೨೦ಕ್ಕೆ ಹೊರಡುವರು ಡಿಸೆಂಬರ್ ತಾ ೮ಕ್ಕೆ ಮದರಾಸನ್ನು ತಲುಪಿ ತಾ ೧೧ ರಲ್ಲಿ ಅಲ್ಲಿಂದ ಹಿಂತಿರುಗುತ್ತಾರೆ ವೈಸ್‍ರಾಯಿಯವರು ಬೆಂಗಳೂರಿನಿಂದ ಡಿಸೆಂಬರ್ ತಾ ೬ ರಲ್ಲಿ ಹೊರಟು ಕೋಲಾರಕ್ಕೆ ಹೋಗಿ ಚಿನ್ನದ ಗಣಿಗಳನ್ನು ಪರೀಕ್ಷಿಸುತ್ತಾರೆ ಕಾಕನಕೋಟೆಯಲ್ಲಿ ಆನೆಗಳ ಖೆಡ್ಡಾ ನಡೆಯುತ್ತವೆ ಇದು ಯಾವ ತಾರೀಖೋ ಇನ್ನೂ ತಿಳಿಯಲಿಲ್ಲ

ಗೋದಾವರಿ ಜಿಲ್ಲಾ ಜಡ್ಜ್ ಕಾರ್ಟರನ್ನು ಕಾಕಿನಾಡಾದಿಂದ ರಾಜಮಹೇಂದ್ರಕ್ಕೆ ವರ್ಗಾಯಿಸಬೇಕೆಂದು ಮದರಾಸ್ ಗವರ್ನ್‍ಮೆಂಟಿನವರು ಯೋಚಿಸುತ್ತಿದಾರೆಂಬ ಸುದ್ದಿಯನ್ನು ಕೇಳಿ, ಕಾಕಿನಾಡಾದಲ್ಲಿ ಸುಮಾರು ೧,೦೦೦ ಪ್ರಜೆಗಳು ಸಭೆ ಸೇರಿ ಆ ವಿಚಾರವನ್ನು ಚರ್ಚಿಸಿ, ಕೋರ್ಟ್ ಕಚೇರಿಗಳನ್ನು ಹಾಗೆ ವರ್ಗಾಯಿಸಕೂಡದೆಂದು ಒಂದು ಅರ್ಜಿ ಪತ್ರಿಕೆಯನ್ನು ಬರೆದು ಕೊಳ್ಳಬೇಕೆಂದು ತೀರ್ಮಾನ ಮಾಡಿದರು ಇದಲ್ಲದೆ ಮುಖಂಡರಾದ ಆರು ಮಂದಿ ದೊಡ್ಡ ಮನುಷ್ಯರು ಗವರ್ನರವರನ್ನು ಪ್ರತ್ಯಕ್ಷ ಕಂಡು ಅವರಿಗೆ ಅರಿಕೆ ಮಾಡಿಕೊಳ್ಳಬೇಕೆಂದೂ ಗೊತ್ತುಮಾಡಿದರು

ಕ್ರಿಸ್ತಿಯನ್ ಎಂಬ ಪ್ರಭೇದದ ಪುಡಿಯು ಸಿಂಕೋನಾ ಎಂಬ ಗಿಡದ ಚಕ್ಕೆಯಿಂದ ತಯಾರುಮಾಡುವರು ಮದರಾಸ್ ಗವರ್ನ್‍ಮೆಂಟಿನವರು ನೀಲಗಿರಿ ಬೆಟ್ಟದ ಮೇಲೆ ಈ ಸಿಂಕೋನಾ ಗಿಡಗಳನ್ನು ಸಾಕಿ ಬೆಳೆಯುತ್ತಾರೆ ಕಳೆದ ವರುಷ ೧,೯೩,೫೭೧ ಪೌಂಡು ತೂಕದ ಚಕ್ಕೆಗಳನ್ನು ಆ ಗಿಡಗಳಿಂದ ಬಿಡಿಸಿದರು ಇದಲ್ಲದೆ ಸಾಹುಕಾರಿ ಪ್ಲಾಂಟೇಷನ್‍ಗಳ ವ್ಯಕ್ತಿ ಕೊಡುಮುಚ್ಚೂರು ಡಿಸ್ಟ್ರಿಕ್ಟಿನಲ್ಲಿ ೫೩,೮೧೨ ಪೌಂಡುಗಳ ಚಕ್ಕೆಯೂ, ನೀಲಗಿರಿಯಲ್ಲಿ ೩,೦೬,೧೭೭ ಪೌಂಡುಗಳ ಚಕ್ಕೆಯೂ ತಿರುವಾಂಕೂರಿನಲ್ಲಿ ೧,೪೪,೭೩೨ ಪೌಂಡುಗಳ ಚಕ್ಕೆಯೂ ಉತ್ಪತ್ತಿಯಾಗಿರುತ್ತದೆ

ಕಳೆದ ವಾರ ಉತ್ತರ ದೇಶದಲ್ಲಿ ಕ್ಷಾಮಪೀಡಿತರಾಗಿದ್ದ ಪ್ರಜೆಗಳಲ್ಲಿ ೫೦,೦೦೦ ಜನರು ರಿಲೀಫ್ ಕಾಮಗಾರಿಗಳನ್ನು ಬಿಟ್ಟು ತಮ್ಮ ಗ್ರಾಮಗಳಿಗೆ ಹೊರಟುಹೋದರು ಇನ್ನೂ ೪೮,೦೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದಾರೆ ಬಂಗಾಳಾ ಅಧಿಪತ್ಯದಲ್ಲಿ ರಿಲೀಫ್ ಕಾಮಗಾರಿಗಳು ಈ ವಾರ ಮುಕ್ತಾಯ ಪಡೆಯುತ್ತವೆ ಎಲ್ಲಾ ಕಡೆಗಳಲ್ಲೂ ದವಸಗಳ ಧಾರಣೆಯು ಇನ್ನೂ ಬಹಳ ಹೆಚ್ಚಾಗಿಯೇ ಇದೆ ಪೂರ್ವ ಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯದಲ್ಲಿ ಮಸ್ತ್ರ ಕೇಜಿ ನ ೧ ಧಾರಣೆಯು. ಕೇರಳಾ ಒಂದರಲ್ಲು ಇಳಿದವು ಇತರ ಕಡೆಗಳಲ್ಲೂ ಹೀಗೆಯೇ ಇಳಿಯಬಹುದೆಂದು ಕಾಣುತ್ತಿದೆ.

ರಂಗೂನ್ ಪಟ್ಟಣದ ಸೇಟ್ ಅಬ್ದುಲ್ ಕರೀಂ ಅಬ್ದುಲ್ ಷಕೂರ್ ಜಮಾಲ್ ಎಂಬೊಬ್ಬ ಪುಣ್ಯವಂತನು ಕಳೆದ ವಾರ ಆಲಿಘಡಕ್ಕೆ ಹೋಗಿ ಅಲ್ಲಿನ ಮಹಮ್ಮದೀಯ ವಿದ್ಯಾಶಾಲೆಯನ್ನು ನೋಡಿ ತುಂಬಾ ಸಂತೋಷಪಟ್ಟು, ತನ್ನ ಹೆಸರಿನಲ್ಲಿ ಅಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಬೇಕೆಂದು ಹೇಳಿ ಅದಕ್ಕಾಗಿ ೫೦,೦೦೦ ರೂಪಾಯಿ ಕೊಟ್ಟನು ಈ ಕಟ್ಟಡಕ್ಕೆ ಅಸ್ತಿಭಾರವೂ ಹಾಕಿದ್ದಾಯಿತು ಇದಲ್ಲದೆ ರಾಂಪುರದ ನವಾಬ್ ಸಾಹೇಬರವರ ಪ್ರೇರೇಪಣೆಯಿಂದ ಒಬ್ಬ ಮಹಮ್ಮದೀಯ ದೊಡ್ಡ ಮನುಷ್ಯನು ಅದೇ ಆಲಿಘಡದ ಮಹಮ್ಮದೀಯ ವಿದ್ಯಾಶಾಲೆಯ ಸಂಬಂಧ ಒಂದು ಲಕ್ಷ ರೂಪಾಯನ್ನು ಕೊಟ್ಟಿರುತ್ತಾನೆ ಈ ಪುಣ್ಯಾತ್ಮನು ತನ್ನ ಹೆಸರನ್ನು ತಿಳಿಸಲಿಲ್ಲ

ನಾಗಪುರದಲ್ಲಿ ಅಬು ತರಾಪ್ ಕೊತ್ವಾಲ್ ಎಂಬಾತನು • ದೇಶಸೇವಕ • ಎಂಬ ತನ್ನ ಪತ್ರಿಕೆಯಲ್ಲಿ ಮಿ ಅರವಿಂದ ಘೋಷರ ಉಪನ್ಯಾಸಗಳನ್ನು ಭಾಷಾಂತರಮಾಡಿ ಪ್ರಕಟಿಸಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಅಬ್ದುತರಾಪನಿಗೆ ೧೫ ತಿಂಗಳ ಕಠಿಣ ಸಜಾ ವಿಧಿಸಿದರು ಈಗ ಬಂದೀಖಾನೆಯಲ್ಲಿ ಅಬ್ದುತರಾಪನ ಆರೋಗ್ಯವು ಕೆಟ್ಟು ಹೋಗಿದೆ ಎಂದು ಮೂರುಮಂದಿ ಡಾಕ್ಟರುಗಳು ಅಭಿಪ್ರಾಯಪಟ್ಟದ್ದರಿಂದ ಗವರ್ನ್‍ಮೆಂಟಿನವರು ಈ ವಿಚಾರವನ್ನು ತನಿಖೆ ಮಾಡಬೇಕೆಂದು ಮಧ್ಯಪ್ರಾಂತ್ಯಗಳ ಚೀಫ್ ಕಮಿಷನರವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಬರೆದುಕೊಂಡದ್ದಕ್ಕೆ ಅವರು ಆ ರೀತಿ ಮಾಡಲಿಲ್ಲ ವೆಂದು ವೈಸ್‍ರಾಯಿಯವರಿಗೇ ವಿಜ್ಞಾಪನೆಮಾಡಿಕೊಂಡಿದಾರೆ

ಮಿ. ಬಿ ಜಿ ತಿಲಕರನ್ನು ಬರ್ಮಾ ಅಧಿಪತ್ಯದ ಮಾಂಡಲೆಯಲ್ಲಿ ಇಟ್ಟಿದ್ದರಷ್ಟೆ ಆ ಬಂದೀಖಾನೆಯಲ್ಲಿ ಕಳೆದ ವಾರ ಸಾಂಕ್ರಾಮಿಕ ಜ್ವರ ಪ್ರಾಪ್ತವಾಗಿ ಕೆಲವು ಬಂದೀವಾನರು ಮೃತಪಟ್ಟದ್ದರಿಂದ ಸರ್ಕಾರದವರು ಮಿ ತಿಲಕರನ್ನು ಅಲ್ಲಿಂದ ಇನ್ನೊಂದು ಜೈಲಿಗೆ ಕರೆದುಕೊಂಡುಹೋಗಿ ಇಟ್ಟಿದಾರೆ ಇತ್ತಲಾಗಿ ಬೊಂಬಾಯಿನ ಗಿರ್ಗಾಂವದಲ್ಲಿರುವ ಎಲ್ಫಿನ್‍ಬಾಗಿನಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಅನೇಕ ಜನರು ಸಭೆ ಸೇರಿ ಮಿ. ತಿಲಕರ ಹುಟ್ಟಿದ ಹಬ್ಬವನ್ನು ವಿಜೃಂಭಣೆಯಾಗಿ ನಡಿಸಿದರು ಮಿ ಜೋಸೆಫ್ ಬ್ಯಾಪ್ಟಿಸ್ಟ್ ಎಂಬುವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಮಿ ತಿಲಕರು ದೇಶಕ್ಕಾಗಿ ಅರ್ಪಿಸಿಕೊಂಡ, ಸ್ವದೇಶೀ ಪ್ರಚಾರ ಸ್ವದೇಶೀ ಬಹಿಷ್ಕಾರ ವಿಚಾರವಾಗಿಯೂ ಉಪನ್ಯಾಸಗಳು ನಡೆದವು

ಮದರಾಸ್ ಪಟ್ಟಣದಲ್ಲಿ ಬಾಸಲ್ ಮಿಷನ್ ಸುಬ್ರಹ್ಮಣ್ಯಶೆಟ್ಟಿ ಎಂಬುವನು ತಂಜಾವೂರು ಜಿಲ್ಲೆಗೆ ಹೋಗಿ, ಅಲ್ಲಿನ ಸ್ಥಳದಲ್ಲಿ ತಾನು ಪೋಸ್ಟ್ ಮಾಸ್ಟರ್ ಇನ್‍ಸ್ಪೆಕ್ಟರೆಂದು ಹೇಳಿಕೊಂಡು ಪೋಸ್ಟ್ ಆಫೀಸಿನ ಲೆಕ್ಕಪತ್ರಗಳನ್ನು ತನಿಖೆಮಾಡಿ, ಹಾಜರಿದ್ದ ೨೦ ಟಿಕೆಟ್ ರೂಪಾಯನ್ನು ಪೋಸ್ಟ್ ಮಾಸ್ಟರಿಂದ ವಾಪತಿ ತೆಗೆದುಕೊಂಡು ತಂಜಾವೂರು ರೈಲ್ವೆ ಸ್ಟೇಷನ್‍ಗೆ ಹೋಗಿ ಅಲ್ಲಿಯೂ ಪೋಸ್ಟ್ ಆಫೀಸಿನ ತನಿಖೆ ಮಾಡಿದ್ದಲ್ಲದೆ ಮಾಡಿದನು. ಅಷ್ಟರಲ್ಲೇ ಇವನ ನಡವಳಿಕೆಯೂ. ರೈಲ್ವೆ ಪ್ಯಾಸ್ ಇಲ್ಲದೆ ಪ್ರಯಾಣಿಕರಂತೆ ಟಿಕೆಟ್ ಕೊಂಡುಕೊಂಡು ಪ್ರಯಾಣಮಾಡಿದ್ದೂ ನೋಡಿ ಅನುಮಾನ ಹುಟ್ಟಿತು. ಪೊಲೀಸಿನವರು ಅವನನ್ನು ತನಿಖೆಮಾಡಿದಾಗ ಅವನು ಸರಿಯಾದ ಉತ್ತರ ಕೊಡದೆ ಹೋದದ್ದರಿಂದ ಅವನನ್ನು ದಸ್ತಗಿರಿಮಾಡಿರುತ್ತಾರೆ

ಹಿಂದೂಸ್ಥಾನದ ರಾಜಕೀಯ ಬದಲಾವಣೆಗಳ ವಿಷಯದಲ್ಲಿ ಇಂಡಿಯಾ ಗವರ್ನ್‍ಮೆಂಟಿನವರು ತಮ್ಮ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೆ ಕಳೆದ ೨೨ ನೇ ತಾ ಗುರುವಾರ ರವಾನಿಸಿರುತ್ತಾರೆ ನ್ಯಾಯನಿರ್ಧಾರಕ ಕೌನ್ಸಿಲ್ಲುಗಳನ್ನು ಹೆಚ್ಚುಮಾಡುವುದು, ಬೇರೆ ಬೇರೆ ಮತಸ್ಥರ ಚುನಾವಣೆ, ಚುನಾವಣೆಯ ಕ್ರಮಗಳು ಯಾವ ಯಾವ ಮತಸ್ಥರ ಕಡೆಯ ಮೆಂಬರುಗಳು ಎಷ್ಟೆಷ್ಟು ಮಂದಿಯನ್ನು ಚುನಾಯಿಸುವುದು, ಈ ಮೊದಲಾದ ಸಂಗತಿಗಳನ್ನೆಲ್ಲಾ ಬರೆದು ತಿಳಿಸಿರುತ್ತಾರೆ ಸ್ಟೇಟ್ ಸೆಕ್ರೆಟರಿಯವರು ಅವನ್ನು ಸ್ಯಾಂಕ್ಷನ್ ಮಾಡಿದ ಪಕ್ಷದಲ್ಲಿ ಅವರ ಉತ್ತರವು ಇನ್ನು ಎರಡು ತಿಂಗಳೊಳಗಾಗಿ ಹಿಂದೂಸ್ಥಾನಕ್ಕೆ ತಲಪುವುದು ಆ ತರುವಾಯ ಇಂಡಿಯಾ ಗವರ್ನ್‍ಮೆಂಟಿನವರೂ ಬೇರೆ ಬೇರೆ ಅಧಿಪತ್ಯಗಳ ಸರ್ಕಾರದವರೂ ಮೆಂಬರುಗಳ ಚುನಾವಣೆಯನ್ನು ಪ್ರಾರಂಭಿಸುತ್ತಾರೆ

ಬೊಂಬಾಯಿ ಪಟ್ಟಣದಲ್ಲಿ ಕೋಟ್ಯಾಧೀಶ್ವರನಾದ ಮಿ ಸೊರಾಬ್‍ಜಿ ಪೊಚಕಾನ್‍ವಾಲಾ ಎಂಬ ಪಾರ್ಸಿ ದೊಡ್ಡ ಮನುಷ್ಯನು ೭೩ ನೇ ವಯಸ್ಸಿನಲ್ಲಿ ಕಾಲವಾದನು ಪಾರ್ಸಿ ಜನರಲ್ಲೆಲ್ಲಾ ಈತನೇ ಮಹದೈಶ್ವರ್ಯವಂತನೆಂಬ ಹೆಸರು ಪಡೆದಿದ್ದನು ಈತನಿಗೆ ಮಕ್ಕಳಿಲ್ಲ ಬಾಯಿ ಹೀರಾಬಾಯಿ ಎಂಬಾಕೆಯು ಈತನ ಪತ್ನಿಯಾಗಿರುತ್ತಾಳೆ ಈತನಿಗೆ ಸುಮಾರು ಎರಡು ಕೋಟಿ ರೂಪಾಯಿನ ಆಸ್ತಿಯುಂಟೆಂದು ಹೇಳುವರು ತನ್ನ ಪತ್ನಿಯ ಜೀವನಕ್ಕೆ ಸ್ವಲ್ಪ ಹಣವನ್ನು ಕೊಟ್ಟು ಉಳಿದ ಸ್ವತ್ತೆಲ್ಲ ಹಿಂದೂಸ್ಥಾನದ ಸಕಲ ಪ್ರಜೆಗಳ ಹಿತಕ್ಕಾಗಿ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆಂದು ವರ್ತಮಾನವಿದೆ ಉತ್ತರಕ್ರಿಯಾದಿಗಳು ನಡೆದ ದಿನ ಸಾವಿರಾರು ಜನ ಪಾರ್ಸಿ ವೈದಿಕರು ಅವನ ಮನೆಯಲ್ಲಿ ಸೇರಿದ್ದರೆಂದು ತಿಳಿಯುತ್ತದೆ. ಈತನು ಬದುಕಿದ್ದಾಗಲೇ

ಬೊಂಬಾಯಿ ಅಧಿಸಂಸ್ಥಾನದಲ್ಲಿ ಜನರು ಹೆಣ್ಣು ಮಕ್ಕಳನ್ನು ಖಂಡೋಬ ಎಂಬ ದೇವರ ಹೆಸರಿನಲ್ಲಿ ಬಸವಿಗಳನ್ನಾಗಿ ಬಿಡುವುದು ವಾಡಿಕೆ. ಇವರು ವಯಸ್ಸಾದನಂತರ ದೇವಸ್ಥಾನಗಳ ಸೇವೆ ಎಷ್ಟೋ ಇದ್ದುಕೊಂಡು ವೇಶ್ಯಾವೃತ್ತಿಯಿಂದ ಜೀವನಮಾಡುತ್ತಾರೆ. ಇನ್ನು ಕೆಲವರು ಅರಿಯದ ಹೆಣ್ಣು ಮಕ್ಕಳನ್ನು ವಿಗ್ರಹಕ್ಕೋ ಆಯುಧಗಳಿಗೋ ಮೊದಲಾದವುಗಳಿಗೂ ಕೊಟ್ಟು ಮದುವೆ ನಡೆಸುವ ಪದ್ಧತಿಯುಂಟು. ಇಂಥಾ ಕೃತ್ಯಗಳಿಂದ ಜನರಲ್ಲಿ ದುರ್ನಡತೆಯೂ ದುರಾಚಾರಗಳೂ ಹೆಚ್ಚುತ್ತವೆ ಎನ್ನುವುದಕ್ಕೆ ಸಂದೇಹವಿಲ್ಲ. ಬೊಂಬಾಯಿ ಗವರ್ನರವರು ಈ ದುಷ್ಟಪದ್ಧತಿಯನ್ನು ಆ ಅಧಿಸಂಸ್ಥಾನದಲ್ಲೆಲ್ಲಾ ನಿಲ್ಲಿಸಿಬಿಡಬೇಕೆಂದು ಈಚೆಗಷ್ಟೇ ಒಂದು ಖಂಡಿತವಾದ ಹುಕುಮನ್ನು ಕೊಟ್ಟಿದ್ದಾರೆ. ಇನ್ನು ಮುಂದೆ ೧೬ ವರುಷದೊಳಗಿರುವ ಹೆಣ್ಣು ಮಕ್ಕಳನ್ನು ಈ ರೀತಿ ದುರ್ಮಾರ್ಗಕ್ಕೆ ಒಪ್ಪಿಸತಕ್ಕ ಜನರನ್ನು ಮ್ಯಾಜಿಸ್ಟ್ರೇಟರು ಹಿಡಿಸಿ ಅವರಿಗೆ ೧೦ ವರುಷದ ತನಕ ಕಠಿಣ ಸಜಾ ವಿಧಿಸಬೇಕೆಂದು ಹುಕುಂ ಆಗಿರುತ್ತದೆ.

ಕಳೆದ ಶುಕ್ರವಾರ ಸಾಯಂಕಾಲ ಮದರಾಸ್ ಪಟ್ಟಣದ ವಿಕ್ಟೋರಿಯಾ ಪಬ್ಲಿಕ್ ಹಾಲ್ ಎಂಬ ಕಟ್ಟಡದಲ್ಲಿ ಒಂದು ಮಹಾಸಭೆಯು ನಡೆಯಿತು. ಬಹುಜನ ಹಿಂದೂ ಮಹಮದೀಯ ದೊಡ್ಡ ಮನುಷ್ಯರು ಸೇರಿದ್ದರು. ಅಗ್ರಾಸನವನ್ನು ವಹಿಸಿದ್ದ ನವಾಬ್ ಸಯ್ಯದ್ ಮಹಮದ್ ಯವರೂ ದಿವಾನ್ ಬಹದೂರ್ ಮೆ|| ಕೆ. ಕೃಷ್ಣಸ್ವಾಮಿ ಐಯರವರೂ, ಮೆ|| ವಿ. ಕೃಷ್ಣಸ್ವಾಮಿ ಐಯರವರೂ, ಮೆ|| ಜೋಸಫ್ ಸತ್ಯನಾಡಾರ್ ಯವರೂ, ಮೆ|| ಸಿ. ಕರುಣಾಕರಮೇನನ್ ರವರೂ, ಮೆ|| ಟಿ. ರಂಗಾಚಾರ್ಯರೂ, ಮೆ|| ಎ. ಸಿ. ಪಾರ್ಥಸಾರಥಿ ನಾಯ್ಡು ಯವರೂ ಉಪನ್ಯಾಸಗಳನ್ನು ಮಾಡಿ, ಹಿಂದುಸ್ಥಾನದ ವೈಸ್‌ರಾಯಿ ಪದವಿಯಲ್ಲಿದ್ದು ಸೀಮೆಯಲ್ಲಿ ವಿಶ್ರಾಂತಿಸುಖವನ್ನು ಅನುಭವಿಸುತ್ತಿದ್ದ ಲಾರ್ಡ್ ರಿಪನ್ ಪ್ರಭುಗಳು ಕಾಲವಾದ ವಿಷಯದಲ್ಲಿ ಮಹತ್ತಾದ ಸಮ್ಮವ್ಯಸನವನ್ನು ಪ್ರಕಾಶಪಡಿಸಿದ್ದಲ್ಲದೆ, ಹಿಂದುಸ್ಥಾನದಲ್ಲಿ ಅಂಥಾ ಪರೋಪಕಾರಿಗಳ ಹೆಸರನ್ನು ಶಾಶ್ವತಪಡಿಸಬೇಕಾದದ್ದು ಪ್ರಜೆಗಳ ಕರ್ತವ್ಯವಾಗಿರುತ್ತದೆಂದು ತೀರ್ಮಾನಮಾಡಿದಾರೆ. ಈ ಉದ್ದೇಶಕ್ಕೆ ಮದರಾಸ್ ಅಧಿಸಂಸ್ಥಾನದ ದೊಡ್ಡ ಮನುಷ್ಯರು ೭,೦೦೦ ರೂಪಾಯಿ ಚಂದಾ ಕೂಡಿಸಿದಾರೆಂದು ತಿಳಿದುಬಂದಿದೆ.

ಇಟಲಿ ರಾಜ್ಯದ ದಕ್ಷಿಣ ಭಾಗದಲ್ಲಿರುವ ಮೆಸ್ಸೀನಾದಲ್ಲಿ ಭೂಕಂಪವು ಪ್ರಾಪ್ತವಾಗಿ ಅಪಾರವಾದ ಸಂಕಟಗಳು ಉಂಟಾದವಷ್ಟೆ. ಅದರ ಪರಿಹಾರಕ್ಕಾಗಿ ಹಿಂದುಸ್ಥಾನದಿಂದ ಚಂದಾ ಹಣವನ್ನು ಕೂಡಿಸಿ ಕಳುಹಿಸಿದರು. ಈ ಫಂಡನ್ನು ಕಲ್ಕತ್ತಾ ಕಮಿಟಿಯವರು ಕಳೆದ ವಾರ ಮುಕ್ತಾಯಮಾಡಿರುತ್ತಾರೆ. ಆ ಕಮಿಟಿಯ ರಿಪೋರ್ಟಿನಿಂದ ತಿಳಿದು ಬರುವುದೇನೆಂದರೆ—ಸ್ವತಂತ್ರವಾಗಿದ್ದ ಸಂಯುಕ್ತ ಅಧಿಸಂಸ್ಥಾನಗಳು ವಿನಾ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಈ ಭೂಕಂಪದ ಫಂಡಿಗೆ ಚಂದಾ ಹಣ ಕೂಡಿ ಬಂದಿರುತ್ತದೆ. ಇದಕ್ಕಾಗಿ ಕೂಡಿದ ೧,೭೩,೮೭೯ ಚಿಲ್ಲರೆ ರೂಪಾಯಿನಲ್ಲಿ ೧,೬೯,೭೪೧ ರೂಪಾಯನ್ನು ಇಟಲಿಯ ಮಂತ್ರಿಯಾಗಿರುವ ಸೇನಾರ್ ಟಿಟ್ಟೋನಿಯವರ ಬಳಿಗೆ ರವಾನೆಮಾಡಲ್ಪಟ್ಟಿತು. ಅವರು ಅದನ್ನು ಸ್ವೀಕರಿಸಿ ಅಲ್ಲಿನ ಜನರ ಕಷ್ಟನಿವಾರಣೆಗೆ ವಿನಿಯೋಗಿಸಿ ಆ ಪ್ರಜೆಗಳ ಪರವಾಗಿ ಹಿಂದುಸ್ಥಾನದ ಪ್ರಜೆಗಳನ್ನು ಕೊಂಡಾಡಿರುತ್ತಾರೆ. ಇದಲ್ಲದೆ ಹೈದರಾಬಾದಿನಲ್ಲಿ ಅದೇ ಸಮಯದಲ್ಲಿ ಪ್ರವಾಹಗಳದೆಸೆಯಿಂದ ತುಂಬಾ ಕಷ್ಟನಷ್ಟಗಳು ಪ್ರಾಪ್ತವಾಗಿದ್ದರೂ ನೈಜಾಮರವರು ಇಟಲಿ ಪ್ರಜೆಗಳ ಕಷ್ಟನಿವಾರಣೆಗಾಗಿ ೭,೫೦೦ ರೂಪಾಯಿಗಳನ್ನು ಕಳುಹಿಸಿ ಕೊಟ್ಟರೆಂತಲೂ ಹೈದರಾಬಾದಿನ ಸ್ವಸ್ಥದಲ್ಲಿ ಈ ಫಂಡಿಗೆ ೩೨,೭೦೭ ರೂಪಾಯಿ ಚಂದಾ ವಸೂಲಾಯಿತೆಂದೂ ತಿಳಿದು ಬಂದಿದೆ.

* * *

ಇದೇ ಜುಲೈಯಿ ತಿಂಗಳಲ್ಲಿ ದಕ್ಷಿಣ ಸರ್ಕಲಿನ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರವರು ಡೈರೆಕ್ಟರವರ ಅನುಮತಿಯ ಮೇರೆಗೆ ಸದರಿ ಇಲಾಖೆಯ ಆಫೀಸರರಿಗೂ ಎಲ್ಲಾ ಸೆಕೆಂಡರಿ ಶಾಲೆಗಳ ಹೆಡ್ ಮಾಸ್ಟರರಿಗೂ ಒಂದು ಸರ್ಕ್ಯುಲರನ್ನು ಕಳುಹಿಸಿರುತ್ತಾರೆ. ಆ ಸರ್ಕ್ಯುಲರಿನಲ್ಲಿ ಸಂಯುಕ್ತ ಸಂಸ್ಥಾನಗಳ ಡೈರೆಕ್ಟರವರು ಆಕ್ಷೇಪಣೆಯ ರೂಪದಲ್ಲಿ ಪ್ರಕಟಿಸಿದ ಸರ್ಕ್ಯುಲರಿನ ಸಾರಾಂಶವು ಇರುತ್ತದೆ. ಈ ಸರ್ಕ್ಯುಲರಿನ ಮುಖ್ಯ ಮಾತು ಶಾಲಾಬಾಲಕರು ಹೊಗೆಸೊಪ್ಪು ಸೇದುವದನ್ನು ನಿಲ್ಲಿಸುವಂತೆಯೂ ಅವರು ಯಾವದೋ ಅಮಲು ವಸ್ತುಗಳನ್ನೂ ಸೇವಿಸದೆ ಇರುವಂತೆಯೂ ನೀತಿಯನ್ನು ಕೈಕೊಳ್ಳುವಂತೆಯೂ ಪದೇ ಪದೇ ಉಪದೇಶಿಸುತ್ತಿರಬೇಕು ಎಂಬದು. ಈ ವಿಷಯವಾಗಿ ತನಿಖೆಮಾಡಿದರಲ್ಲಿ ಈ ಕಾಲದಲ್ಲಿ ಸಣ್ಣ ಪ್ರಾಯದ ಮಕ್ಕಳಾದರೂ ಸಿಗರೆಟ್, ಬೀಡಿ ಮೊದಲಾದ ಹಂಬಾಕು ಸೇದುವ ದುರಭ್ಯಾಸವು ಹಬ್ಬುತ್ತಾ ಬಂದಿದೆ ಎಂದು ಕಂಡುಬಂತು. ಈ ದುರಭ್ಯಾಸದಿಂದ ಬಹಳ ಕೇಡು ಹುಟ್ಟುವದರಿಂದ ಉಪಾಧ್ಯಾಯರು ಇಂಥಾ ಪದ್ಧತಿಯನ್ನು ನಿಲ್ಲಿಸಲು ಶ್ರಮ ಪ್ರಯತ್ನ ಮಾಡಬೇಕು. ಹೇಳುವ ಬುದ್ಧಿಮಾತುಗಳನ್ನು ಕೇಳದ ಹುಡುಗರನ್ನು ಚನ್ನಾಗಿ ಶಿಕ್ಷಿಸಬೇಕು. ಈ ನಿರ್ಬಂಧಕ್ಕೆ ಶಾಲೆಯ ಮಕ್ಕಳು ವಿಧೇಯರಾಗಿರುತ್ತಾರೋ ಇಲ್ಲವೋ ಎಂಬದನ್ನು ಎಚ್ಚರದಿಂದ ನೋಡಿಕೊಳ್ಳಬೇಕು. ಉಪಾಧ್ಯಾಯರು ಶಾಲೆಯ ಪಟಾರಗಳಲ್ಲಿ ಹೊಗೆಸೊಪ್ಪು, ಬೀಡಿ, ಸಿಗರೇಟು ಸೇದುವದನ್ನು ನಿಲ್ಲಿಸಬೇಕು. ಉಪಾಧ್ಯಾಯರು ಆಗಿಂದಾಗ್ಗೆ ಸಂದರ್ಭ ಸಿಕ್ಕುವಲ್ಲಿ ಶಾಲೆ ಮಕ್ಕಳ ಸಂಗಡ ಮಮತೆಪೂರ್ವಕವಾಗಿ ಅಮಲಿನ ಕೇಡು, ನೀತಿಯ ಮೇಲು, ಮದ್ಯಪಾನ ನಿಷೇಧ, ಇವುಗಳನ್ನು ಕುರಿತು ವಿವೇಕಕಲಿಸುತ್ತಿರಬೇಕು ಎಂದು ಈ ಸರ್ಕ್ಯುಲರಿನಲ್ಲಿ ಹೇಳಿರುತ್ತಾರೆ.

ತಾಲ್ಲೋಕು ವರ್ತಮಾನಗಳು.

ತ್ಯಾಮಗೊಂಡ್ಲು.—ಇದೇ ಜುಲಾಯಿ ೧೯ನೇ ತಾ|| ಈ ಗ್ರಾಮದ ಕಸಬಾ ಶೇಕದಾರರ ಮನೆಯಲ್ಲಿ ಇಟ್ಟಿದ್ದ ಕೋಳಿಯ ಮೊಟ್ಟೆಗಳಲ್ಲಿ ಒಂದು ಒಡೆಯಿತು. ಅದರಲ್ಲಿದ್ದ ಮರಿಗೆ ರೆಕ್ಕೆಗಳೂ ೪ ಕಾಲುಗಳೂ ಒಂದೇ ಶರೀರವೂ ಒಂದೇ ತಲೆಯೂ ಇದ್ದವು. ಸ್ವಲ್ಪ ಹೊತ್ತಾದ ಮೇಲೆ ಮರಿಯು ಸತ್ತು ಹೋಯಿತು. ಮಾಲೀಕರು ಶಸ್ತ್ರವೈದ್ಯ ಅಸಿಸ್ಟೆಂಟರಿಗೆ ತೋರಿಸಿದರು. ಅವರು ಈ ಆಶ್ಚರ್ಯವನ್ನು ನೋಡಿ ಇದನ್ನು ಬೆಂಗಳೂರಿಗೆ ಮ್ಯೂಜಿಯಂಗೆ ಕಳುಹಿಸಬೇಕೆಂದು ಅಗಲವಾದ ಬುಡ್ಡಿಯಲ್ಲಿಟ್ಟು ದುರ್ವಾಸನೆ ಬಡಿಯದಂತೆ ಒಂದು ವಿಧದ್ರಾವಕವನ್ನು ಹಾಕಿ ಇಟ್ಟಿರುತ್ತಾರೆ. ಈ ಆಶ್ಚರ್ಯವನ್ನು ಸ್ಥಳವಂದಿಗರಾದ ಅನೇಕರು ನೋಡಿಕೊಂಡು ಹೋಗುತ್ತಾರೆ.—ಇಲ್ಲಿನ ಮ್ಯುನಿಸಿಪಲ್ ವಿಷಯವಾಗಿ ದಯಮಾಡಿ ಗೌರ್ನಮೆಂಟಿನವರು ನಿಗಾ ಕೊಡಬೇಕೆಂದು ಬೇಡುತ್ತೇವೆ. ಎಲ್ಲಿ ನೋಡಿದರೂ ಹೇಸಿಕೆ, ಗುಡಿಸಿದ ಕಸ ಎತ್ತುವದಿಲ್ಲ. ದಯಮಾಡಿ ಇವುಗಳ ಕಚರಾ ಸರಿಯಾಗಿ ಸಾಗಿಸುವಂತೆ ಮಾಡಬೇಕೆಂದು ಬೇಡುತ್ತೇವೆ.

ಅಜ್ಜಂಪುರ.—ಕಡೂರು ಡಿಸ್ಟ್ರಿಕ್ಟಿನಲ್ಲಿ ಕಳ್ಳತನ್ನು ಹಿಂದೆ ಮೆಹರ್ಬಾನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಹಿಡಿಸಿದ ವಿಷಯ ನಮ್ಮ ಪತ್ರಿಕೆಯಲ್ಲಿ ನಮೂದಿಸಿತ್ತಷ್ಟೆ. ಆಗ್ಗೆ ತಪ್ಪಿಸಿಕೊಂಡು ಹೋದ ಯಂಕ ಎಂಬುವನು ಮೊನ್ನೆ ಮೇ ತಿಂಗಳಲ್ಲಿ ಕಡೂರು ಪೋಲೀಸ್ ಲಾಕಪ್ಪಿನಿಂದ ತಪ್ಪಿಸಿಕೊಂಡು ಓಡಿ ಹೋದ ಕಳ್ಳಕೊರಮರ ತಿಂಮ, ಯಂಕ್ಟ, ಇವರನ್ನು ತಾ|| ೧೯ನೇ ರಾತ್ರಿ ಜಂಗ್ಲಿಯಲ್ಲಿ ಅಜ್ಜಂಪುರದ ಜಮೇದಾರ್ ಅಪ್ಪುರಾಯರು ದಸ್ತಗಿರಿ ಮಾಡಿ ತಂದಿರುತ್ತಾರೆ. ಇವರನ್ನು ಹಿಡಿದದ್ದು ತುಂಬಾ ಶ್ಲಾಘ್ಯವಾದದ್ದಾಗಿದೆ. ಇದೇ ಕೊರಮರು ರಾಣೆಬೆನ್ನೂರು, ಚಿತ್ರದುರ್ಗ, ಕಡೂರು ಪೋಲೀಸಿನವರಿಗೆ ಬೇಕಾಗಿದ್ದರು. ಇವರು ೨—೩ ಸಲ ಜೈಲಿನಿಂದ ಓಡಿ ಹೋದವರು. ಈ ಜಮೇದಾರ್ರು ಬಂದ ಒಂದು ವರುಷದಿಂದ ನಮ್ಮ ಗ್ರಾಮದಲ್ಲಿ ಕಳವು ನಿಂತು ಹೋಗಿರುತ್ತೆ. ಬಿಟ್ಟಿಕಾವಲ್ ಕೆರೆಯಲ್ಲಿ ನಡೆದಿರುವ ೪,೩೦೦ ರೂಪಾಯಿನ ಕಳವು ಪತ್ತೆ ಮಾಡಿ ಶಹಬಾಸ್‌ಗಿರಿ ಪಡೆಯಬೇಕೆಂದು ಬಹು ಜನರು ಕೋರುತ್ತಾರೆ. ಮಳೆ ೪ನೇ ತಾ|| ನಿಂದ ಬಿಟ್ಟಿಲ್ಲ. ಮಳೆ ಹೆಚ್ಚಾಯಿತೆಂದು ರೈತರು ಕಣ್ಣು ಬಿಡುತ್ತಿದ್ದಾರೆ. ಮುನಿಸಿಪಲ್ ಲಾಂದ್ರಗಳಿಗೆ ಗ್ರಹಣ ಹಿಡಿದಿದೆ.

ಬೀರೂರು.—ಎರಡು ವಾರಗಳಿಂದಲೂ ಇಲ್ಲಿ ಹಿಡಿದ ಮಳೆಯು ಬಿಟ್ಟಿಲ್ಲ. ಸೂರ್ಯರಶ್ಮಿಯೇ ಅಪರೂಪವಾಗಿರುವುದು. ಅಂತರಿಕ್ಷವನ್ನು ನೋಡಿದರೆ ಇನ್ನೂ ಒಂದು ವಾರ ಮಳೆ ಬಿಡಲಾರದೆಂದು ತೋರುವುದು. ಸುತ್ತುಮುತ್ತಿನ ಹಳ್ಳಿಗಳಲ್ಲಿಯೂ, ಚಿಕ್ಕಮಗಳೂರು ಪ್ರಾಂತ್ಯವೂ ಇಲಿಗಳು ಬೀಳುತ್ತಿರುವವು. ಇದಕ್ಕೆ ಅನುಕೂಲವಾಗಿ ಜಡಿಮಳೆಯೂ ಹಿಡಿದಿರುತ್ತದೆ. ಇವೆಲ್ಲಾ ಆಲೋಚಿಸಿದರೆ ಸದ್ಯದಲ್ಲಿಯೇ ಪ್ಲೇಗ್ ಬರುವದೆಂದು ತೋರುವುದು.—ಈ ಊರಿನ ಮುನಿಸಿಪಾಲಿಟಿಯ ವಿಚಾರ ಬಹು ಮಟ್ಟಿಗೆ ಚೆನ್ನಾಗಿಲ್ಲ. ನಾಯಿ, ನರಿ, ಗಾಳಿ, ಇವುಗಳಿಂದಲೇ ಪರಿಶುದ್ಧವಾಗಬೇಕು. ರಾತ್ರಿ ಕಾಲದಲ್ಲಿ ಹಚ್ಚತಕ್ಕ ಲಾಂದ್ರಗಳು ಮಿಣುಗುಟ್ಟುತ್ತವೆ.—ಇಲ್ಲಿನ ಕೆಲವು ನೌಕರರು ಬಹಳ ಉದ್ಯೋಗವಂತೆ ಕಾಣಿಸಿಕೊಂಡು ಸಂಗೀತಗಾರರೇ ಮೊದಲಾದ ವಿದ್ವಾಂಸರು ಇಲ್ಲಿಗೆ ಬಂದರೆ ಅವರನ್ನು ಚೆನ್ನಾಗಿ ಆದರಿಸಿ ಜನಗಳನ್ನು ಸೇರಿಸಿ ಸಂಗೀತ ಮೊದಲಾದದ್ದನ್ನು ಮಾಡಿಸಿ ಬಂದ ಜನಗಳಿಂದ ಯಥಾಶಕ್ತಿ ಚಂದಾ ವಸೂಲ್ ಮಾಡಿ ತಮ್ಮ ಕಷ್ಟಕ್ಕೆ ಸ್ವಲ್ಪ ಇರಿಸಿಕೊಂಡು ಉಳಿದದ್ದನ್ನು ಅವರಿಗೆ ಕೊಟ್ಟು ಮರ್ಯಾದೆಯಿಂದ ಕಳುಹಿಸುವರು.—ಈಗ ೩—೪ ದಿನಗಳ ಹಿಂದೆ ಹಗಲು ಹೊತ್ತಿನಲ್ಲಿಯೇ ಈ ಊರಿನ ಕಟ್ಟೆಯ ಸಮೀಪದಲ್ಲಿರುವ ಮನೆಯಲ್ಲಿ ಸುಮಾರು ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಒಡವೆವಸ್ತುಗಳು ಕಳವಾದವು. ಇಲ್ಲಿನ ಪೋಲೀಸ್ ಜಮೇದಾರರು ಕಳವು ನಡೆದ ೬ ಗಂಟೆ ಒಳಗಾಗಿಯೇ ಬಹಳ ಕಷ್ಟಪಟ್ಟು ಪತ್ತೆ ಮಾಡಿ ಕಳ್ಳರನ್ನು ಪದಾರ್ಥಸಮೇತವಾಗಿ ಹಿಡಿದರು. ಈ ಊರಿನಲ್ಲಿ ಅನೇಕ ಕಳ್ಳತನಗಳು ಹಿಂದೆ ನಡೆದು ಪತ್ತೆ ಆಗದೆ ಇದ್ದವು. ಈಗ ಪತ್ತೆ ಆಗಿರುವುದನ್ನು ನೋಡಿ ಈ ಪೋಲೀಸ್ ಅಧಿಕಾರಿಗಳ ಮಹತ್ತನ್ನು ಸೂಚಿಸುತ್ತದೆ.

ಚನ್ನರಾಯಪಟ್ಟಣ.—ಈ ಊರಿನಲ್ಲಿರುವ ಪಾಠಶಾಲೆಗೆ [illegible] ಅವರು ಲಾರ್ಡ್ ಮೆ|| ಅಪ್ಪಣ್ಣಯ್ಯಂಗಾರ್ರು ಒಂದು ಸ್ಕೂಲನ್ನು ಧರ್ಮಾರ್ಥವಾಗಿ ಕಟ್ಟಿಸಿ ಆ ಸ್ಕೂಲನ್ನು ಸಾರ್ವೋದ್ಧಾರವಾಗಿ ನಡಿಸುವುದಕ್ಕೆ ಹಾಸನದಲ್ಲಿರುವ ಹಣವನ್ನು ಹೊಂದಿದ ವೆಸ್ಲಿಯನ್ ಮಿಷನ್ ಸ್ವಾಮಿಗಳಾದ ರೆವ್ ಸ್ಪೆನ್ಸರ್ ಸಾಹೇಬರಿಗೆ ತಿಳಿಸಿದ್ದರು. ಮೇ|| ಸಾಹೇಬರು ಒಪ್ಪಿ ಸದರಿ ಅಮಲ್ದಾರರ ಸಮ್ಮುಖ ಈ ಊರಿಗೆ ಈ ಮಾಹೆ ೧೯ನೇ ತಾ|| ಸೋಮವಾರ ಬೆಳಗ್ಗೆ ೧೦ ಗಂಟೆಗೆ ದಯಮಾಡಿ ಇಲ್ಲಿನ ಅಮಲ್ದಾರ್ ಮೆ|| ಶ್ರೀನಿವಾಸರಾಯರು, ತಾಲ್ಲೋಕು ಶಿರಸ್ತೇದಾರ್ ಮೆ|| ಗುರುರಾಜಾಚಾರ್ಯರು, ಸಬ್ ರಿಜಿಸ್ಟ್ರಾರ್ ಮೆ|| ರಾಮಸ್ವಾಮಯ್ಯಂಗಾರ್ರು, ಡಾಕ್ಟರ್ ಮೆ|| ಮಹಮ್ಮದ್ ಮೂಸಾಸಾಹೇಬರು, ಪ್ರೀಚರ್ ಮೆ|| ದಿವಾಕರ ನಾಯಕರು, ಇಲ್ಲಿನ ಉಪದೇಶಿಗಳು, ಸ್ಕೂಲು ಮಾಸ್ಟರರು ಮೊದಲಾದವರನ್ನೆಲ್ಲಾ ಬರಮಾಡಿಕೊಂಡು ಅದೇ ೧೯ನೇ ತಾ|| ಸೋಮವಾರ ಚಪ್ಪರ ಮತ್ತು ತೋರಣ, ಕದಳೀ ಸ್ತಂಭಗಳಿಂದ ಅಲಂಕರಿಸಲ್ಪಟ್ಟಿದ್ದ ಸದರಿ ಹೊಸ ಸ್ಕೂಲಿಗೆ ಕರೆದುಕೊಂಡುಹೋದರು. ಈ ದೊಡ್ಡ ಮನುಷ್ಯರೆಲ್ಲಾ ಅಲ್ಲಿ ಅಲಂಕರಿಸಲ್ಪಟ್ಟಿದ್ದ ಕುರ್ಚಿಗಳ ಮೇಲೆ ಕುಳಿತುಕೊಂಡ ಮೇಲೆ ಸದರಿ ಪಂಚಮರನ್ನೂ ಅವರುಗಳ ಮಕ್ಕಳುಗಳನ್ನೂ ಬರಮಾಡಿಕೊಂಡು ನಮ್ಮ ಅಮಲ್ದಾರ್ ಮೆ|| ಶ್ರೀನಿವಾಸರಾಯರನ್ನು ಸಭಾಧ್ಯಕ್ಷರಾಗಬೇಕೆಂದು ಮೆ|| ಸ್ಪೆನ್ಸರ್ ಸಾಹೇಬರು ಹೇಳಿದ್ದರ ಮೇಲೆ ನಮ್ಮ ಅಮಲ್ದಾರ್ರು ಅಗ್ರಾಸನವನ್ನು ವಹಿಸಿದರು. ಇಲ್ಲಿನ ಉಪದೇಶಿಗಳು ದೇವರ ಆರಾಧನೆಯನ್ನು ನಡಿಸಿದ ಬಳಿಕ ಮೆ|| ಶ್ರೀನಿವಾಸರಾಯರು ಆ ಪಂಚಮರಿಗೆ ವಿದ್ಯೆಯ ವಿಷಯದಲ್ಲೂ, ನಡೆನುಡಿಗಳ ವಿಷಯದಲ್ಲೂ ಏಕಮತ್ಯವಾಗಿರುವುದಕ್ಕೂ ತುಂಬಾ ಬುದ್ಧಿವಾದಗಳನ್ನು ಹೇಳಿದರು. ಮೆ|| ಸ್ಪೆನ್ಸರ್ ಸಾಹೇಬರು ಆ ಪಂಚಮರನ್ನು ಕುರಿತು—ಈ ದಿನವೆ ಆಗಾಯಿತು ನಿಮ್ಮ ಊರಿನಲ್ಲಿ ಸ್ಕೂಲು ಇಟ್ಟು ನಡೆಸುತ್ತಾ ಬರಬೇಕೆಂದು ಮೆ|| ಅಪ್ಪಣ್ಣಯ್ಯಂಗಾರ್ರು ನನಗೆ ಹೇಳಿದ್ದರಿಂದ ನಾನು ಒಪ್ಪಿ ಇಲ್ಲಿ ಬಂದಿರುವ ದೊಡ್ಡ ಮನುಷ್ಯರನ್ನೆಲ್ಲಾ ಬರಮಾಡಿಕೊಂಡು ಅವರುಗಳ ಸಮಕ್ಷಮದಲ್ಲಿ ನಿಮಗಳಿಗೆ ನಾನು ಹೇಳುವ ಬುದ್ಧಿವಾದಗಳು ಯಾವವೆಂದರೆ,—ನೀವುಗಳು ನಿಮ್ಮ ಬಾಲಕರನ್ನು ಒಂದು ದಿನವೂ ತಪ್ಪದೆ ಬಹಳ ಮುತುವರ್ಜಿಯಿಂದಲೂ, ಉತ್ಸಾಹದಿಂದಲೂ ಸ್ಕೂಲಿಗೆ ಕಳುಹಿಸಿಕೊಡಬೇಕೆಂದು ತಿಳಿಸಿದರು. ಬಳಿಕ ಮೆ|| ಅಪ್ಪಣ್ಣಯ್ಯಂಗಾರ್ರು ಮೇಲ್ಕಂಡ ಜನರನ್ನು ಕುರಿತು—ನಾನು ನಿಮಗೆ ಸ್ಕೂಲು ಮನೆಯನ್ನು ಮಾತ್ರ ಕಟ್ಟಿಸಿಕೊಟ್ಟೆನು. ಅದನ್ನು ಸ್ಥಾಪಿಸಿ ಪಾಠ ವಗೈರೆ ನಡೆಯುವುದಕ್ಕೆ ಒಬ್ಬರು ಉಪಾಧ್ಯಾಯರನ್ನೂ ಮತ್ತು ಬೇಕಾದ ಸಾಮಾನುಗಳನ್ನೂ ಸಹಾ ಒದಗಿಸಿಕೊಟ್ಟದ್ದಕ್ಕಾಗಿ ರೆವ್, ಸ್ಪೆನ್ಸರ್ ಸಾಹೇಬರಿಗೆ ನಾವೆಲ್ಲಾ ತುಂಬಾ ಕೃತಜ್ಞರಾಗಿದೇವೆ. ನೀವುಗಳು ಹುಡುಗರನ್ನು ಸ್ಕೂಲಿಗೆ ಸರಿಯಾಗಿ ಕಳುಹಿಸಿ ವಿದ್ಯದಲ್ಲಿ ಅಭಿವೃದ್ಧಿಗೆ ಬಂದು ನನ್ನ ಉದ್ದೇಶವನ್ನೂ, ಮೆ|| ಸ್ಪೆನ್ಸರ್ ಸಾಹೇಬರು ಮಾಡಿರುವ ಶ್ರಮವನ್ನೂ ಸಾರ್ಥಕಪಡಿಸುತ್ತೀರೆಂದು ನಂಬಿದೇನೆ ಎಂಬ ಬುದ್ಧಿವಾದಗಳನ್ನು ಹೇಳಿದರು. ಆ ಪಂಚಮರ ಬಾಲಕರಿಗೆ ಮೆ|| ಅಪ್ಪಣ್ಣಯ್ಯಂಗಾರ್ರು ಮಿಠಾಯಿ ವಗೈರೆ ತರಿಸಿ ಹಂಚಿಸುತ್ತಾ ಇರುವಾಗ, ದೊಡ್ಡ ಮನುಷ್ಯರಿಗೆಲ್ಲಾ ಸ್ಕೂಲ್ ಮಾಸ್ಟರು ಪುಷ್ಪ, ತಾಂಬೂಲಾದಿಗಳನ್ನು ಹಂಚಿದರು. ಬಳಿಕ ಸಭೆಯು ಬರಖಾಸ್ತು ಆಗಿ ಸರ್ವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅದೇ ದಿವಸ ಮೆ|| ಸ್ಪೆನ್ಸರ್ ಸಾಹೇಬರು ಪೇಟೆಯಲ್ಲಿರುವ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲಿಗೆ ಬಂದು ಅಲ್ಲಿ [illegible] ನೋಡಿಕೊಂಡು ಆ ದಿವಸ ಹಾಸನಕ್ಕೆ ಮೆ|| ಅಪ್ಪಣ್ಣಯ್ಯಂಗಾರ್ರ ಸಮೇತ ಹೊರಟುಹೋದರು.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

ವಿದ್ಯಾರ್ಥಿಗಳ ಸಂಘ, ಪಟ್ಲಗೆರೆ, ಸಂಪಂಗಿ ರಾಮಯ್ಯ—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

—ಎಡಿ||

ಕರೆಸ್ಪಾಂಡೆನ್ಸ್

ಮದಗಿನಹಳ್ಳಿಯ ಎರಡು ಕೊರತೆಗಳು.

ಅ. ಸ್ವಾ||

ಈ ಗ್ರಾಮವು [illegible] ಜಾತಿ ಪ್ರಜೆಗಳಿಂದ ಕೂಡಿ ಸುಮಾರು ೨ ಸಾವಿರಕ್ಕೆ ಮೇಲ್ಪಟ್ಟು ಸ್ತ್ರೀ ಪ್ರಜೆಗಳುಳ್ಳದಾಗಿದೆ. ಇಲ್ಲಿ ದೊಡ್ಡ ಮ್ಯುನಿಸಿಪಾಲಿಟಿ ಇದ್ದರೂ ಒಂದು ಭಾಗದಲ್ಲಿ ಬಲು ಕೊರತೆಯಾಗಿರುವ ವಿಷಯವನ್ನು ಈ ಮೂಲಕ ಸರ್ಕಾರದವರ ಗಮನಕ್ಕೆ ತರಬೇಕೆಂಬ ಅಪೇಕ್ಷೆ ಉಂಟಾಗಿದೆ. ಏನೆಂದರೆ, ಇಂಥಾ ದೊಡ್ಡ ಗ್ರಾಮಕ್ಕೆ ಒಬ್ಬ ಸೂಲಗಿತ್ತಿಯ ಆವಶ್ಯಕತೆಯು ಅಷ್ಟಿಷ್ಟೆಂದು ಹೇಳಬೇಕಾಗಿಲ್ಲ. ಪ್ರಸವಸಂಬಂಧವಾದ ರೋಗಗಳಿಂದ ಇಲ್ಲಿ ಆಗಾಗ್ಗೆ ಅನೇಕ ಸ್ತ್ರೀಯರು ಬಹು ಕಷ್ಟಗಳನ್ನನುಭವಿಸುತ್ತಲೂ ಸಾಯುತ್ತಲೂ ಇರುವುದು ಬಹು ಶೋಚನೀಯವಾಗಿದೆ. ಇಲ್ಲಿಗೆ ೭ ಮೈಲಿ ದೂರದಲ್ಲಿ [illegible]ನಲ್ಲಿ ಸೂಲಗಿತ್ತಿ ಇದ್ದರೂ ಅವಶ್ಯವಾದ ಕಾಲ ಸಮಯದಲ್ಲಿ ಅಲ್ಲಿಂದ ಇಲ್ಲಿಗೆ ಕರೆತರುವದರೊಳಗಾಗಿ [illegible] ಆ ವಿಪತ್ತುಗಳು ನಡೆದುಹೋಗಬಹುದು. ಅಲ್ಲದೆ ಪ್ರತಿ ಒಂದು ಸಂದರ್ಭದಲ್ಲೂ ಅಲ್ಲಿಂದಲೇ ಸೂಲಗಿತ್ತಿಯನ್ನು ಕರೆತರುವ [illegible] ಸರ್ಕಾರದವರು ಇವನ್ನು [illegible] ಒಬ್ಬ ಸೂಲಗಿತ್ತಿಯನ್ನು ನೇಮಿಸಿಕೊಟ್ಟು ಬಡವರನ್ನು ಅಪಾಯದಿಂದ ತಪ್ಪಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಅಲ್ಲದೆ ಇಂತಹ ಗ್ರಾಮಕ್ಕೆ ಇಂಗ್ಲಿಷ್ ಔಷಧ ಆಸ್ಪತ್ರೆಯು ಆವಶ್ಯಕತೆ [illegible] ಡಿಸ್ಟ್ರಿಕ್ಟ್ ಸರ್ಜನರು ಇಲ್ಲಿಗೆ ದಯಮಾಡಿಸಿ [illegible] ಈ ವಿಷಯದಲ್ಲಿ ಹೆಚ್ಚಾಗಿ ಬರೆಯಬೇಕಾಗಿಲ್ಲ. ಅಂತೂ ಈ ಊರಿಗೆ ಸರ್ಕಾರದ ಈ ಎರಡು ಕೊರತೆಗಳೂ ನಿವಾರಣೆಯಾಗಬೇಕಾದದ್ದು ಅತ್ಯವಶ್ಯಕವಾಗಿದೆ.

ಚಂದಾದಾರ್

(ಈ ವಿಷಯಗಳನ್ನು ತಮ್ಮ ಕಮಿಟಿಯಲ್ಲಿ ಚರ್ಚೆಮಾಡಿ ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಗೆ ಕಳುಹಿಸಿದಲ್ಲಿ ಅಲ್ಲಿ ಮೆಂಬರುಗಳು ಆಲೋಚಿಸಿ [illegible] ನಡಿಸಿಕೊಡುವದಕ್ಕೂ ಅನುಕೂಲವಾಗುತ್ತದೆ. ಇದನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ಗಮನಕ್ಕೆ ತರಬೇಕಾಗಿರುವುದು.—ಎಡಿ|)

ಮೈಸೂರು ಗೆಜೆಟ್ ಸಂಗ್ರಹ

ಚಳ್ಳಕೆರೆ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ. ಕಮಿಷನರ್ ಮೆ|| ಟಿ. ನರಸರಾಜ ಚೆಟ್ಟಿಯವರಿಗೆ ಜೂಲೈ ತಾ|| ೨೧ರ ಆಗಾಯಿತು ಮೂರು ತಿಂಗಳ ಪ್ರಿವಿಲೇಜ್ ರಜವನ್ನು ಕೊಟ್ಟಿದೆ. ಅದರ ಜೊತೆಗೆ ಅವರು ನವರಾತ್ರಿ ಹಬ್ಬದ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅ. ಕಮಿಷನರ್ ಮೆ|| ಎ. ಮೃತ್ಯುಂಜಯ ಐಯರವರನ್ನು ಚಳ್ಳಕೆರೆ ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಿದೆ.

ಅ. ಕಮಿಷನರ್ ಮೆ|| ಆರ್. ಟಿ. ವಿ. [illegible]ರಾಜುರು ಕುಂಸಿ [illegible] ಆಕ್ಟಿಂಗ್ ಆಫೀಸರಾಗಿಯೂ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನಾ ಆಫೀಸರಾಗಿಯೂ ಇರತಕ್ಕದ್ದು.

ಚಿಕ್ಕಮಗಳೂರು ಹೈಸ್ಕೂಲಿಗೆ ವರ್ಗಮಾಡಲ್ಪಟ್ಟಿರುವ ಹೆಡ್ ಮಾಸ್ಟರ್ ಮೆ|| ಎಂ. ಬಿ. ಶ್ರೀನಿವಾಸಯ್ಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ|| ಅ|| ಕಮಿಷನರ್ ಮೆ|| ಎನ್. ಮಾಧವರಾಯರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಮತ್ತು ಟ್ರೆಜರಿ ಛಾರ್ಜನ್ನು ಡೆಪ್ಯುಟಿ ಕಮಿಷನರ್ ಮೆ|| ಎಂ. ಬಂಗಾರಯ್ಯಚೆಟ್ಟಿಯವರು ಜುಲೈ ತಾ|| ೭ ರಲ್ಲಿ ಆಕ್ಟಿಂಗ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ|| ಕೆ. ಶ್ರೀನಿವಾಸರಾಯರಿಗೆ ವಹಿಸಿಕೊಟ್ಟಿದಾರೆ.

ಅ. ಇಂಜನಿಯರ್ ಮೆ|| ಎ. ಪುಟ್ಟಸ್ವಾಮಯ್ಯನವರನ್ನು ನಾಲಾ ಕನ್‌ಸರ್ವೆನ್ಸಿ ಡಿವಿಜನಿಂದ ಚಿತ್ರದುರ್ಗದ ಡಿವಿಜನಿಗೆ ವರ್ಗಮಾಡಿದೆ.

Printed and Published by the Rev H GULLIFORD, Proprietor and Manager, Wesleyan Mission Press, Mysore 29/7/1909

REGISTERED
M. 29

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ಅಗಸ್ಟ್ ತಾರೀಖು ೫ ನೇ ಗುರುವಾರ. ಸಂಚಿಕೆ ೧೦

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ ರೂ ೧—೧೪—೦

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೆ ಸಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 11

ತಲೆನೋವು, ವಾಯುನೋವು, ಸೊಂಟ ಗಟ್ಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಹೇವಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೧ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರದವರಿಗೆ ಗುತ್ತ ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಸುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್

೩೩, ಕೋದಂಡ ಚೆಟ್ಟಿ ಬೀದಿ, ಪೇಟೆ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರೀಕ್ಷಿಸಿರಿ.

10 31

"ಬ್ರಹ್ಮಚರ್ಯ" ಎಂಬ ಮಹಾಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿ ೭ ಮಹಾ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗರೂ ಹುಡುಗಿಯರೂ ಬಿಡದೆ ಓದಿ ಕಲಿತುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ನಯಾಸಫಲದೀಪಿಕೆ" ಎಂಬ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ನಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸಸ್ವಾಮಿಗಳ ಮಹಾಯೋಗಿವರ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಆಗಸ್ಟಿನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರಿಸ್ತಮತದಲ್ಲಿ ತಿಳಿಸುವ ಮಾನಸಾಂತರ, ಸಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟಿಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 25



೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ ಹೊಟ್ಟೆಉಬ್ಬರ, ಸಂದುಗಳ ನೋವು ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ... ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ ... ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸು ... ದಿ ಸ್ತ್ರೀ ... ರ ಮುತುಕೂಲೆ, ಮಕ್ಕಳ ಎಳವು, ಜ್ವರ, ಪಚ್ಚೆಜ್ವರ ಕ್ಷೀಣತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು.

೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಆರ್.

ವೈದ್ಯಶಾಲಾ ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ

18-27



ಇದು ಸಾಧಾರಣ ಜ್ವರ, ಹಳೇಜ್ವರ, ಮೊರೆಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಯುಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ಕೆಲವು ತಿಂಗಳ ಹಿಂದೆ ಕಳುಹಿಸಿದ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಸೀಸೆ ಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—... ೧ಕ್ಕೆ ೮ ಆಣೆ, ೧ ರೂ ... ೧—೮ ರೂ ... ೨—೧೨ ಆ ... ೧೧ ರೂ, ಇವೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾ ಬಿಡಲಾಗುವದು

ಓಮುಂಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕೈಲಾಸ ಮಹಾ ಔಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕಯ್ಯದ ದರಪು ... ಜ್ವರಹರಿ ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದ

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮುಕರ್ಪೂರವನ್ನು ನಾನೂ ನನ್ನ ಜಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾವುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 24]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಗಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರೋಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಸ್ತಾಮಿಶ್ರಣ	೨-೦-೦
ಹಲ್ಲುಸಡಲದ ಮದ್ದು	೦ ೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುಖ ಬಣ್ಣಕ್ಕೆ	೦-೮-೦
ಜುಲಾಬು ಮಾತ್ರೆ—ಜುಲಾಬಿನ	೦ ೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪-೦
ಖಜ ಮುಲಾಮು—ಮಕ್ಕಳ ಪಿಚಗೆ	೦-೪-೦
ಕೇಶವರ್ಧಿನೀ ತೈಲ—ತಲೆಯ ಕೂದಲಿಗೆ	೧-೦ ೦
ಕಫನಾಶಕ ಚೂರ್ಣ—ಅಸ್ತಮಾ ರೋಗಕ್ಕೆ	೦-೨-೦

ದಯಮಾಡಿ ಈ ಟಲಾಗಿಗೆ ಬರಿಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ' ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 30

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ನುಣ್ಣಗಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಒಡನೆ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವನ್ನೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ; ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಫುಲ್ ಮೇಜೋಡು, ಅರ್ಧ ಮೇಜೋಡು, ಕೈಚೀಲ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸಂಜೀವಿನೀ ಔಷಧಾಲಯ, ಮೈಸೂರು. 28 26

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರಾವೆ ನಿರುತ್ಸಾಹ, ನಿದ್ರಾಭಂಗ, [illegible], ರಕ್ತದೋಷ, ಚರ್ಮವ್ಯಾಧಿ, [illegible] ವಾಯುನೋವುಗಳು, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನಿತ್ರಾಣ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ ಮೊದಲಾದ ರೋಗಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, [illegible] ಉತ್ಸಾಹ ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು [illegible] ಸೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, [illegible] ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ [illegible] ಗುಣಹೊಂದಿದ್ದಾರೆ [illegible] ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ವೇದನಾ [illegible] ಎಲ್ಲಾ ತರದ [illegible] ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಧಿಶೀತ್ರ ಬಿಂದು — ಉರಿಗಣ್ಣು, ಕೆಂಗಣ್ಣು, [illegible], ತಲೆನೋವು, ತಲೆಭಾರ, [illegible] ಇವುಗಳನ್ನು ಗುಣಪಡಿಸಿ, ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ [illegible] ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

[illegible] ತರಹಾವರಿ ಅತ್ತರುಗಳೂ, ಗಂಧದಬತ್ತಿ [illegible] ನಮ್ಮಲ್ಲಿ ಸಿಕ್ಕುತ್ತವೆ [illegible] ಮತ್ತು [illegible] ಟಿಯುಗಳ [illegible] ಅರ್ಜಿಗೆ [illegible] ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ನಿಮಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ [illegible] ನಿನಗೆ ಯಾವ ರೋಗ ಉಂಟಾಗಿದೆ— [illegible]



[illegible] ಬುದ್ಧಿ [illegible]

[illegible] ಅರ್ಥವೇನೆಂದರೆ [illegible] ಬಹಳ ಹೊತ್ತು [illegible] ರೋಗಗಳೆಲ್ಲಕ್ಕೂ [illegible] ಕಾರಣವಾಗಿರುವುದು [illegible] ಇದರಿಂದ [illegible] ಆ ರೋಗಗಳಾವುವೆಂದರೆ ಪಿತ್ತಕೋಶ [illegible] ಅಗ್ನಿಮಾಂದ್ಯ, ಗಾಸಿ [illegible] ತಲೆನೋವು, ಹೊಟ್ಟೆ [illegible] ಪಿತ್ತ [illegible] ಆರೋಗ್ಯವೇ [illegible]

[illegible] ಮಲವನ್ನು [illegible] ಹೊರಕ್ಕೆ [illegible] ಆರೋಗ್ಯವನ್ನುಂಟುಮಾಡುವುವು [69-49]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ [illegible] ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯೂ ದೊರೆಯುವುದು ಅಥವಾ ಡೋನ್ ಪಿ. ಓ ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

ಮಕ್ಕಳ ಹಿತಕಾರಿ
ಎಂದು
SCOTT'S EMULSION 6-31
(ಸ್ಕಾಟ್ಸ್ ಇಮಲ್‌ಷನ್)

ಎಂಟು ನೂರಾ [illegible] ತಂದೆತಾಯಿಗಳು [illegible] ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುತ್ತದೆ ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತುಮಾರಾದಮ್ಮ

ಎಲ್ಲಾ ಔಷಧವ್ಯಾಪಾರಿಗಳಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ರಸಾಯನಿಕ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ತೊಂಡುಕೊಳ್ಳಿ

CHAMBERLAIN'S COLIC CHOLERA AND DIARRHOEA REMEDY

ಚೇಂಬರ್ಲೆನ್ ಯವರ ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು 4 31



ಈ ಹೊಟ್ಟೆಯ ನೋವು, ಬಿಸಿ [illegible] ಅಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ [illegible] ಈ ಸರಪಳಿ [illegible] ಔಷಧವು ಒಸರನ್ನು ಬದು ಕಿಸಿರುವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವನ್ನು ಪ್ರಪಂಚದಲ್ಲೇ [illegible] ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ [illegible] ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

[illegible] ಕೆಯಿಂದ ಸ್ವಲ್ಪವೂ ಮುಟ್ಟದಿಲ್ಲ

ಇದು ಎಲ್ಲಿಯೂ ವಿಕರಿಯಾಗುತ್ತದೆ [illegible] ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

JUST RECEIVED! JUST RECEIVED!!

Stead's Books for the Bairns

[illegible]

STEAD'S PENNY POPULAR TALES [illegible]

[illegible] 24 [illegible]

CALENDARS FOR 1909

The Manager, C L S Book Depot Mysore City

ಬೇಕು.

59 2

[illegible] ಪಟ್ಟಣಗಳಲ್ಲಿ [illegible] ಹಳ್ಳಿಗಳಲ್ಲಿ [illegible] ವಿಕ ಯಿಸುವ [illegible] ಅವಶ್ಯಕವುಳ್ಳ [illegible] ಜತೆಗೊಡನೆ [illegible] ಚೂಳೆ ಹೈರೋಡ ಮ್ಯಾನೇಜರ್, ಇವರಿಗೆ ಬರೆಯಿರಿ

ಗ್ರಾಹಕರ ನೋಟೀಸು

[illegible] ಹಳ್ಳಿ [illegible] ಮತ್ತು [illegible] ಬೇಕಾದ ಸಮಯದಲ್ಲಿ [illegible] ಅದರಿಂದ [illegible] ಇದರಿಂದ [illegible]

[illegible]

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು,

ನಮ್ಮ ಈಗ ವರ್ತಕೆಗೆ [illegible] ಬಟ್ಟೆಗಳು [illegible] ಬಹಳ ಬಾಳಿಕೆ ಬರುವಂತವುಗಳಾಗಿವೆ [illegible] ಬಹಳ ಕಡಮೆ ಈ ಬಟ್ಟೆಗಳು [illegible] ಆದದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ಕರಿಸಿ [illegible] ಗೊತ್ತಾಗುವುದು [illegible] ಸಾಲುಗಳು, ಹಾಸಿನ ಟೋಪಿಗಳು ಮುಸುಕಿನ ಟೋಪಿಗಳು ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
[illegible] ಎಲ್ ಎಸ್ ಬುಕ್ ಡಿಪೋ, ಮೈಸೂರು

ಕ್ಷಾಮನಿವಾರಣೆಯ ಕಾರ್ಯಗಳು

೧೯೦೯ ನೇ ಜುಲೈ ತಾ 24 ಕ್ಕೆ ಮುಗಿದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಾರ್ಥ ಸಹಾಯ ಪಡೆದ ಜನರು
	ಗಂಡಸರು	ಹೆಂಗಸರು	ಮಕ್ಕಳು	ರೂ	
ಬೆಂಗಳೂರು	[illegible]	72		916	
ಕೋಲಾರ	310	[illegible]81	21	891	
ತುಮಕೂರು	123	62	30	1,883	
ಮೈಸೂರು					
ಹಾಸನ	319	371	26	745	
ಶಿವಮೊಗ್ಗ					
ಕಡೂರು	19	20		64	
ಚಿತ್ರದುರ್ಗ	163	210	10	931	
ಮಾರಿಕಣಿವೆ ಸ್ಯಾನಿಟರಿ	306	392	12	798	
ಒಟ್ಟು	1,364	1,301	103	6,318	

[illegible] ವರ್ಷದ ಶಕ ವರುಷಗಳು ೧೮೩೧ ನೇ ಸೌಮ್ಯ ನಾಮ ಸಂವತ್ಸರದ ಅಧಿಕ ಶ್ರಾವಣ [illegible] ಗುರುವಾರದಿಂದ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

[illegible] ನೇ ಅಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಮಿಳ ಕಟಕ ಮಾಸ
[illegible]	ಗುರು	[illegible]	[illegible]	[illegible]	[illegible]	21
[illegible]	ಶುಕ್ರ	[illegible]	[illegible]	[illegible]	[illegible]	22
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible] 40	[illegible]	[illegible]	24
[illegible]	[illegible]	[illegible]	[illegible]	[illegible]	[illegible]	25
10	[illegible]	[illegible]	1 39	[illegible]	[illegible]	26
11	[illegible]	[illegible]	[illegible]	[illegible]	[illegible]	27

[illegible]
[illegible] ಅಡಿಪುಕ [illegible]
[illegible]
[illegible]
[illegible]

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
[illegible] ಅಕ್ಕಿ ಪಲ್ಲ [illegible]ಕ್ಕೆ	ರೂ	[illegible]	[illegible]
ಒಣ ಅಕ್ಕಿ ಅವಲ್		[illegible]	[illegible]
ದುಯಂ		[illegible]	[illegible]
ಜಾಪ[illegible] ಅಕ್ಕಿ		[illegible]	[illegible]
[illegible] ಅವಲ್		[illegible]	[illegible]
,, ದುಯಂ		[illegible]	[illegible]
[illegible] ಪಲ್ಲ [illegible]ಕ್ಕೆ		[illegible]	[illegible]
, ದುಯಂ		[illegible]	[illegible]
ಜೈನ್ ರಾಗಿ ಪಲ್ಲ [illegible]ಕ್ಕೆ		[illegible]	[illegible]
ಕಂದ್ರಾಗಿ		[illegible]	[illegible]
ಜೋಳ		[illegible]	[illegible]
ಹುರಳಿ ಪಲ್ಲ [illegible]ಕ್ಕೆ		[illegible]	[illegible]
ಬಿಳಿ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು [illegible]ಕ್ಕೆ		[illegible]	[illegible]
ಹುರುಳಿ		[illegible]	[illegible]
ಹರಳು [illegible] ಸೇರಿಗೆ		[illegible]	[illegible]
[illegible]ಕಾಯಿ ಮಣ [illegible]ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
, ದುಯಂ		[illegible]	[illegible]
[illegible] ಮೊದ್ದ ಅಚ್ಚು		[illegible]	[illegible]
ಒಳ್ಳೆ [illegible] ಮಣ [illegible]ಕ್ಕೆ		[illegible]	[illegible]
ಹರಳೆಣ್ಣೆ		[illegible]	[illegible]
ಕೊತ್ತುಂಬರಿ ಪಲ್ಲ [illegible]ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೆ ಹಣ್ಣು		[illegible]	[illegible]
,, ಹಳೇದು		[illegible]	[illegible]
ತುಪ್ಪ ಮಣ [illegible]ಕ್ಕೆ		[illegible]	[illegible]
ಸೀಮೆಎಣ್ಣೆ ಪೆಟ್ಟಿ [illegible]ಕ್ಕೆ		[illegible]	[illegible]
ತೆಂಗಿನಕಾಯಿ [illegible]ಕ್ಕೆ		[illegible]	[illegible]
ಅಳಲೇಕಾಯಿ ಮಣ [illegible]ಕ್ಕೆ		[illegible]	[illegible]
ಅಂಟುವಾಳದ ಕಾಯಿ ಮಣ [illegible]ಕ್ಕೆ		[illegible]	[illegible]
ಚಿನ್ನ (ಪೌನ್) ಒಂದು		[illegible]	[illegible]
,, ,, ಪವನು		[illegible]	[illegible]
,, ,, ಗಟ್ಟಿ ತೊಲ [illegible]ಕ್ಕೆ		[illegible]	[illegible]
ಬೆಳ್ಳಿ ಗಟ್ಟಿ ತೊಲ [illegible]ಕ್ಕೆ		[illegible]	[illegible]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

16—7—1909 ರಿಂದ 23—7—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	11	1	0	0
ಬೆಂಗಳೂರು ಡಿಸ್ಟ್ರಿಕ್ಟ್	2	2	0	0
ಮೈಸೂರು ,,	13	9	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	2	1	0	0
ಹಾಸನ ,,	3	3	0	0
ಚಿತ್ರದುರ್ಗ ,,	0	0	•1	1
ಕಡೂರ್ ,,	10	6	0	0
ಶಿವಮೊಗ್ಗಾ ,,	12	7	8	6
• ತೊಂಗಿನದು ಜುಮ್ಲಾ	36	34	9	7

ಸುಜ್ಞಾನ ಸೂರ್ಯೋದಯ

[ಕಳೆದ ವಾರದ ಶೇಷ]

[1] ಈ ಸಂಭಾಷಣೆಯಿಂದಾದ ಫಲಗಳು

ಮಡಿವಾಳಯ್ಯನವರು ಕೊಟ್ಟಂಥ ಪುಸ್ತಕಗಳ ಅಭಿಪ್ರಾಯಗಳು ಅವರಿಗೆ ನೂತನವಾದ ಸಂಗತಿಗಳಾಗಿದ್ದ ಕಾರಣ ಅವರಲ್ಲಿ ಅವುಗಳ ಮೇಲೆ ಬಹಳ ಆಸಕ್ತಿ ಹುಟ್ಟಿದ್ದಲ್ಲದೆ ಅವುಗಳ ತಾತ್ಪರ್ಯಗಳ ವಿಷಯದಲ್ಲಿ ಒಬ್ಬರ ಸಂಗಡಲೊಬ್ಬರು ತಮ್ಮಲ್ಲಿ ತಾವೇ ಸಂಭಾಷಣೆಗಳನ್ನು ನಡೆಸುತ್ತಿದ್ದರು. ಮತ್ತು ತಮಗೆ ತಿಳಿಯದ ಸಂಗತಿಗಳನ್ನು ಕುರಿತು ಮಡಿವಾಳಯ್ಯನ ಹತ್ತಿರ ವಿಚಾರಿಸುತ್ತ ಬರು [illegible] ಆದರ್ಶದ ಕಾಯಿದೆಯಾಗಿದೆ ಎಲ್ಲವನ್ನೂ ಪರೀಕ್ಷಿಸಿ ಒಳ್ಳೆ ಯದು [illegible] ಲಕ್ಷಣ ಗಿದೆ

ಕಾಣ ಬಲ್ಲವರಿಂದ ಕಂಡು
ಕೇಳದು ಶಾಸ್ತ್ರಂಗಳಿಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು
ಕೆಲವ ಸುಜನ ಸಂಗದಿ ನೋಡುತಂ
ಕೆಲವಂ ಸಜ್ಜನ ಸಂಗದಿಂದ
ಉಳಿಯಲ್ಲವ ಸರ್ವಜ್ಞನಪ್ಪನು ಕೇಳ್

ಅಲ್ಲಮಪ್ರಭು ಸಮುದ ನೈ ಹರಹರಾ ಶ್ರೀಚೆನ್ನಸೋಮೇಶ್ವರಾ

ಮಡಿವಾಳಯ್ಯನು ಅವುಗಳ ತಾತ್ಪರ್ಯಗಳನ್ನು ಅವರಿಗೆ ತಿಳಿವಷ್ಟು ವಿವರಿಸುತ್ತಿದ್ದದ್ದಲ್ಲದೆ ಇನ್ನೂ ಬೇರೆ ಬೇರೆ ನೂತನವಾದ ಪುಸ್ತಕಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ಅವರಿಗೆ ಓದಲು ಕೊಡುತ್ತಿದ್ದನು. ಇದಲ್ಲದೆ ಮಡಿವಾಳಯ್ಯನು ಪ್ರತಿ [illegible] ವೀರಭದ್ರಗೌಡನ ಮನೆಗೆ ಹೋಗಿ ಆ ದಿವಸ ಓದಿದ ವಿಷಯಗಳನ್ನು ವಿಚಾರಿಸುತ್ತ ಅವುಗಳಲ್ಲಿ ಅವರ ಸಂಗಡ ತಾನೂ ಮಾತಾಡುತ್ತ [illegible] ಸಮಯಕ್ಕೆ ಧೈರ್ಯದ ಸಂಗತಿಗಳನ್ನೂ ಬುದ್ಧಿವಾದಗಳನ್ನೂ ಹೇಳುತ್ತಿದ್ದನು. ಹೀಗೆ ಮಡಿವಾಳಯ್ಯನು ಸತ್ಪ್ರವರ್ತನೆಯನ್ನು ನೋಡುವದರಿಂದಲೂ ಹಿತವಚನಗಳನ್ನು ಕೇಳುವದರಿಂದಲೂ [illegible] ಮೊದಲಿಗಿಂತಲೂ ಅಧಿಕವಾಗಿ ಆತನ ಮೇಲೆ ಪ್ರೀತಿಯೂ ಅಭಿಮಾನವೂ ಹುಟ್ಟಿತು. ಆತನ ಪ್ರಿಯ ಪತ್ನಿಯಾದ ಗುರುದೇವಮ್ಮನೂ ಆ ಊರಿನ [illegible] ಹೆಣ್ಣುಮಕ್ಕಳಿಗೂ ತಿಳಿವಳಿಕೆ [illegible] ಕಲಿಸುತ್ತ ಬಂತು. [illegible] ಮಕ್ಕಳಲ್ಲಿ ಕೆಲವರು ಗುರುದೇವಮ್ಮನ ಹತ್ತಿರ ಹೊಲಿಗೆಯನ್ನೂ ಕಸೂತಿ ಹಾಕುವದನ್ನೂ ಕಲಿಯುತ್ತಿದ್ದರು. ಮತ್ತು ತಮ್ಮ ಮಕ್ಕಳಿಗೆ ಕಲಿಸು [illegible] ಗುರುದೇವಮ್ಮನು ಮನೆಗಳಿಗೆ ಕರೆದುಕೊಂಡು ಹೋಗಿ ತಮ್ಮ [illegible] ಮಕ್ಕಳನ್ನು ತೋರಿಸುತ್ತಿದ್ದರು. ಗುರುದೇವಮ್ಮನು [illegible] ಮಕ್ಕಳಿಗೆ ತಕ್ಕ ಉಪದೇಶಗಳನ್ನು [illegible] ಇದಲ್ಲದೆ ಮಡಿವಾಳಯ್ಯನ ವಿಷಯದಲ್ಲಿ [illegible] ಮಕ್ಕಳು [illegible] ವಿಷಯದಲ್ಲಿಯೂ [illegible] ಎಲ್ಲಾ ಹೆಣ್ಣುಮಕ್ಕಳ ಸಂಗಡ [illegible] ತಾನು ಅವ [illegible] ಪ್ರೀತಿ [illegible]

ಅದು [illegible] ಧೊರೆಗಳು [illegible] ಆತನ [illegible] ಆ ಊರಿಗೆ ಹೊಗುತ್ತಿದ್ದರು. ಆ ಧೊರೆಗಳು [illegible] ಆ ಊರಿನ ಮನುಷ್ಯರು [illegible] ಬಳಿಗೆ ಹೋಗಿ ನಾನಾ ವಿಷಯಗಳನ್ನು ಕುರಿತು ಅವರ ಸಂಗಡ ಸಂಭಾಷಣೆಗಳನ್ನು ಮಾಡುತ್ತಿದ್ದರು. ಹೀಗೆ ಅವರಲ್ಲಿ ಪರಸ್ಪರ ಪರಿಚಯವೂ ಪ್ರೀತಿಯೂ ಉಂಟಾಯಿತು. ಒಂದು ಸಾರಿ ಆ ಧೊರೆಗಳು ಯಥಾಪ್ರಕಾರ ಆ ಊರಿಗೆ ಬಂದಾಗ ವೀರಭದ್ರಗೌಡನೂ ಸಾಹುಕಾರ ರುದ್ರಪ್ಪನೂ ಮೊದಲಾದ ಮನುಷ್ಯರೆಲ್ಲರೂ ಅವರ ಬಳಿಗೆ ಹೋಗಿ ಹೆಣ್ಣುಮಕ್ಕಳು ವಿದ್ಯೆ ಕಲಿಯುವದರಿಂದಾಗುವ ಫಲಗಳನ್ನು ಮಡಿವಾಳಯ್ಯನವರಿಂದ ಅವರು ಗ್ರಹಿಸಿಕೊಂಡಿದ್ದ [illegible] ತಮ್ಮ ಬಾಲಕಿಯರಿಗೆ ಓದುಕಲಿಸುವಂತೆಯೂ ಮಡಿವಾಳಯ್ಯನು ತಮ್ಮ ಗಂಡುಹುಡುಗರಿಗೆ ಉಪಾಧ್ಯಾಯನಾಗುವಂತೆಯೂ ಕೇಳಿಕೊಂಡರು. ಧೊರೆಗಳು ಅವರ ಇಂಥಾ ಉತ್ತಮ ಅಪೇಕ್ಷೆಯನ್ನು ತಿಳಿದು ಸಂತೋಷಪಟ್ಟು ಸ್ಕೂಲು ಮನೆಗಳ ವಿಷಯದಲ್ಲಿಯೂ ಉಪಾಧ್ಯಾಯರ ಸಂಬಳದ ವಿಷಯದಲ್ಲಿಯೂ ಅವರ ಸಂಗಡ ಆಲೋಚಿಸಿ ತಕ್ಕ ಏರ್ಪಾಟುಗಳನ್ನು ಮಾಡಿ ಆ ಎರಡು ಶಾಲೆಗಳನ್ನು ಸ್ಥಾಪಿಸಿದರು. ಕೆಲಾ [illegible] ಸ್ಕೂಲಿಗೆ ಸಮೀಪದಲ್ಲಿ ಆನೇಕ ಬಾಲಕಿಯರು ಬಾರದಿದ್ದರೂ ಕಾಲಕ್ರಮದಲ್ಲಿ ಆ ಸ್ಕೂಲಿನ ತುಂಬ ಹುಡುಗಿಯರು ಬಂದು ಸೇರಿದರು. ಗುರುದೇವಮ್ಮನು ಆ ಬಾಲಿಕಿಯರಿಗೆ ಓದುಬರಹ ಹೊಲಿಗೆ ಮೊದಲಾದವುಗಳನ್ನು ಕಲಿಸಿಕೊಡುತ್ತಿದ್ದದ್ದಲ್ಲದೆ ಭಕ್ತಿ ನೀತಿಗಳನ್ನು ಬೋಧಿಸುವಂಥ ಕಥೆಗಳುಳ್ಳ ಪುಸ್ತಕಗಳನ್ನೂ ತನ್ನ ಸಂಬಳ ಮುಖಾಂತ್ರವಾಗಿ ತರಿಸಿ ಅವರಿಗೆ ಅವುಗಳನ್ನು ಓದಿ ವಿವರಿಸುತ್ತಿದ್ದಳು. ಮಡಿವಾಳಯ್ಯನು ಹುಡುಗರಿಗೆ ವಿದ್ಯೆ ಕಲಿಸುತ್ತಿದ್ದದ್ದಲ್ಲದೆ ಗೃಹಸ್ಥರನ್ನೂ ಸ್ತ್ರೀಯರನ್ನೂ ಆಗಾಗ್ಗೆ ಕೂಡಿಸಿ ಭಕ್ತಿ ನೀತಿ ಸತ್ಪ್ರವರ್ತನೆಗಳ ಪ್ರಯೋಜನಗಳನ್ನು ಕುರಿತು ಬೋಧಿಸುತ್ತಿದ್ದನು. ಈ ಎರಡು ಶಾಲೆಗಳಲ್ಲಿ ಪ್ರತಿವರುಷ ಹುಡುಗರೂ ಹುಡುಗಿಯರೂ ಪಾಸ್ ಆಗುತ್ತಿದ್ದದ್ದಲ್ಲದೆ ನಾಲ್ಕು ವರುಷಗಳು ಗತಿಸಿದ ನಂತರ ಅವರಲ್ಲಿ ಕೆಲವರು ಪೈಮರಿ ಪಾಸ್‌ಮಾಡಿದರು.

ಇಷ್ಟು ಮಾತ್ರವಲ್ಲದೆ ಪಾದ್ರಿ ಧೊರೆಗಳ ಬೋಧನೆಯಿಂದಲೂ ಬೇರೆ ಬೇರೆ ಪುಸ್ತಕಗಳ ಸಹಾಯದಿಂದಲೂ ಮಡಿವಾಳಯ್ಯನವರ ಸಹವಾಸದಿಂದಲೂ ಕ್ರಿಸ್ತಮತದ ಮೂಲತತ್ವಗಳನ್ನು ಗ್ರಹಿಸಿಕೊಂಡ ಕಾರಣ ಅದರಲ್ಲಿ ಅವರಿಗೆ ಅಭಿರುಚಿ ಹುಟ್ಟಿ ವೀರಭದ್ರಗೌಡನ ಕುಟುಂಬದವರೂ ಇನ್ನೂ ನಾಲ್ಕಾರು ಸಾಧಕರ ಕುಟುಂಬಗಳೂ [illegible] ಸ್ನಾನದ ಮುಖಾಂತರವಾಗಿ ಕ್ರಿಸ್ತಮತವನ್ನವಲಂಬಿಸಿದರು. ಮತ್ತು ಕೆಲವು ದಿವಸಗಳು ಗತಿಸಿದನಂತರ ಆ ಕ್ರಿಸ್ತ ಕುಟುಂಬಗಳ ಭಕ್ತಿಯಭಿವೃದ್ಧಿಗಾಗಿಯೂ ಆ ಪ್ರಾಂತ್ಯದಲ್ಲಿ ಕ್ರಿಸ್ತಮತಜ್ಞಾನವನ್ನು ಇತರರಿಗೆ ಪ್ರಚುರಪಡಿಸುವದಕ್ಕಾಗಿಯೂ ಪಾದ್ರಿ ಧೊರೆಗಳು ಆ ಊರಿನಲ್ಲಿ ಒಬ್ಬ ಕ್ರಿಸ್ತ ಧರ್ಮೋಪದೇಶಕನನ್ನು ನೇಮಿಸಿದ್ದಲ್ಲದೆ ಒಂದು ಸಣ್ಣ ದೇವಾಲಯವನ್ನು ಸಹ ಕಟ್ಟಿಸಿದರು. ಆ ದೇವಾಲಯದಲ್ಲಿ ವಾರಕ್ಕೊಂದಾವರ್ತಿ ಕ್ರಮವಾಗಿ ದೇವಾರಾಧನೆ ನಡೆಯುತ್ತ ಬಂತು. ಆ ಆರಾಧನೆಗೆ ಆಲ್ಲಿದ್ದ ಕ್ರಿಸ್ತಕುಟುಂಬಗಳವರು ಮಾತ್ರವಲ್ಲ, ಆಗಾಗ್ಗೆ ಇತರ ಜನರು ಸಹ ಬಂದು ಸುಸ್ವರ ದೇವಸ್ತೋತ್ರಗಳಿಗೆ ಅವಶ್ಯವಾದಂಥ ಉತ್ತಮಬೋಧನೆಗಳನ್ನೂ ಕೇಳುತ್ತಿದ್ದರು. ಇದಲ್ಲದೆ ವೀರಭದ್ರಗೌಡನ ಮಗನನ್ನೂ ಮಡಿವಾಳಯ್ಯನ ಮಗನನ್ನೂ ಅವರ ಸಂಗಡ ಇನ್ನೂ ಮೂರು ಹುಡುಗರನ್ನೂ ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ಪಟ್ಟಣಕ್ಕೆ ಕಳುಹಿಸಿಕೊಟ್ಟರು. ಪಾದ್ರಿ ಧೊರೆಗಳು ಅವರ ಶಿಕ್ಷಣದ ವಿಷಯದಲ್ಲಿ ಅವರ ತಂದೆಗಳ ಹತ್ತಿರ ತಕ್ಕ ಏರ್ಪಾಟು ಮಾಡಿಕೊಂಡು ಅವರ ಪರಾಂಬರಿಕೆಯ ವಿಷಯದಲ್ಲಿ ತಾವೇ ಜವಾಬ್ದಾರರಾಗಿ ಕರೆದುಕೊಂಡು ಹೋದರು.

ಹೀಗೆ ಆ ಊರ ನಿವಾಸಿಗಳ ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳ ವ್ಯತ್ಯಾಸಗಳುಂಟಾದದ್ದಲ್ಲದೆ ಅವರಿಗೂ ನೂತನವಾದ ತಿಳುವಳಿಕೆಯಲ್ಲಿಯೂ ನಾಗರಿಕತ್ವದಲ್ಲಿಯೂ ಸತ್ಪ್ರವರ್ತನೆಗಳಲ್ಲಿಯೂ ಅಭಿವೃದ್ಧಿಯಾಗುತ್ತ ಬಂದರು. ಹ್ಯಾಗೆಂದರೆ ಆ ಎರಡು ಸ್ಕೂಲುಗಳಲ್ಲಿ ಪ್ರತಿ ವರುಷ ಆನೇಕ ಹುಡುಗರೂ ಹುಡುಗಿಯರೂ ಪೈಮರಿ ಪಾಸ್ ಮಾಡುತ್ತಿದ್ದದ್ದಲ್ಲದೆ ಆ ಶಾಲೆಗಳಲ್ಲಿ ತಾವು ಹೊಂದಿದಂಥ ತಿದ್ದುಪಾಟುಗಳನ್ನು ತಮ್ಮ ಬಾಳಿನಲ್ಲಿ ಅನುಭವಿಸಿಕೊಳ್ಳುತ್ತಿದ್ದರು. ಆ ಊರಿನಲ್ಲಿ ಆನೇಕ ಹೆಣ್ಣುಮಕ್ಕಳು ವಿದ್ಯೆ ಕಲಿತುಕೊಂಡು ನೂತನವಾದ ತಿಳುವಳಿಕೆ ಹೊಂದಿದ ಕಾರಣ ಸಾಧಾರಣವಾದ ಹೆಣ್ಣುಮಕ್ಕಳಲ್ಲಿರುವಂಥ [illegible], ಜಗಳ, ದೂಷಣೆ, ದುರ್ಭಾಷೆ, ಮೊದಲಾದ ದುರ್ಗುಣಗಳು ನಿಂತು ಹೋಗಿ ಒಳ್ಳೇ ಸಂಸಾರಿಗಳೂ ವಿಧೇಯರೂ [illegible] ಗಂಡಂದಿರಿಗೆ ವಿಧೇಯರೂ [illegible] ಮಕ್ಕಳನ್ನೂ ಮನೆವಾರ್ತೆಯನ್ನೂ ಸರಿಯಾಗಿ ನಡಿಸುವವರೂ ಆದರು.

ಮೊದಲು ಆ ಊರಿನಲ್ಲಿ ಎರಡು ಪಂಗಡಗಳು ಇದ್ದದರಿಂದ ಅವರಲ್ಲಿ [illegible] ಜಗಳ ದ್ವೇಷಗಳು ನಡೆಯುತ್ತ [illegible] ಇದ್ದದರಿಂದ ಬಹಳ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದರು. ಆದರೆ ಕ್ರಿಸ್ತಮತಸ್ಥರ ಸಹವಾಸದಿಂದ ಅವರು ನೂತನವಾದ ತಿಳುವಳಿಕೆಯನ್ನು ಹೊಂದಿದನಂತರ ಆ ಕಕ್ಷಿಗಳು [illegible] ಆ ಪುರವಾಸಿಗಳೆಲ್ಲರಲ್ಲಿ ಪರಸ್ಪರ ಪ್ರೀತಿಯೂ ಅಭಿಮಾನವೂ ಒಗ್ಗಟ್ಟೂ ಉಂಟಾಗಿ ಮೊದಲಿಗಿಂತಲೂ ಸುಖವಾಗಿದ್ದರು. ಒಂದು ವೇಳೆ ಅವರಲ್ಲಿ ಯಾರಿಗಾದರೂ [illegible] ವ್ಯಾಜ್ಯ ಹುಟ್ಟಿದ್ದಾಗಿದ್ದರೆ ಆ ಊರಿನ ಮುಖ್ಯಸ್ಥರು ಪಂಚಾಯತಿ ದ್ವಾರ ಆ ವ್ಯಾಜ್ಯವನ್ನು ತೀರಿಸಿಬಿಡುತ್ತಿದ್ದರು. ಆದಕಾರಣ ಆ ವ್ಯಾಜ್ಯಗಾರರಿಗೆ ಕಷ್ಟನಷ್ಟಗಳು ಸಂಭವಿಸುತ್ತಿದ್ದಿಲ್ಲ. ವಕೀಲರು ಮಾತ್ರ ಆ ಊರವರ ಇಂಥಾ ಉತ್ತಮಸ್ಥಿತಿಯನ್ನು ತಿಳಿದು ದೇವರೇ ಈ ಜನ ಪಾದ್ರಿಯವರ ಉಪದೇಶ ಕೇಳಿದರೆ ನಮ್ಮ ಗತಿ ಏನು ? ಎಂದು ಆ ಪುರವಾಸಿಗಳ ಮೇಲೆ ಆಶೆಯಿಂದ ನೋಡುತ್ತಿದ್ದರು.

ಮಳೆ ಬಾರದಂಥ ವರುಷಗಳಲ್ಲಿ ಆ ಊರಲ್ಲಿದ್ದಂಥ ಬಡವರಿಗೆ ಬಹಳ ಕಷ್ಟವಾಗುತ್ತಿತ್ತು. [illegible] ಶ್ರೀಮಂತರು ಆ [illegible] ಇಂಥಾ ಕಷ್ಟವನ್ನು [illegible] ಧಾನ್ಯಗಳನ್ನು [illegible] ಪ್ರಕಾರ ಕೂಡಿಸಿ ಆ ಬಡವರಿಗೆ ಸಾಲವಾಗಿ ಕೊಡುತ್ತಿದ್ದರು. ಶ್ರೀಮಂತರು ತಮಗೆ ತೋರಿಸಿದ ಈ ದಯವನ್ನು ಆ ಬಡವರು ನೆನಸಿ ಆಸೂಯೆ, ಮೋಸ ಮೊದಲಾದ ದುರ್ಗುಣಗಳನ್ನು ಬಿಟ್ಟುಬಿಡುವದಲ್ಲದೆ ಆ ಶ್ರೀಮಂತರ ಮೇಲೆ ವಿಶೇಷವಾದ ಅಭಿಮಾನವೂ ಕೃತಜ್ಞತೆಯೂ ಉಳ್ಳವರಾಗಿ ಆ ಬಂಗಾಲಗಳಲ್ಲಿ ಅವರ ಮನೆಗಳನ್ನು ಆ ಬಡವರೇ ಕಾಯುತ್ತಿದ್ದರು.

ಮೊದಲು ಬಡವರೂ ಸಹ ಮದುವೆ ಜಾತ್ರೆ, ಹಬ್ಬ ಮುಂತಾದ ವಿಶೇಷ ಸಮಯಗಳಲ್ಲಿ ಒಡ್ಡು [illegible] ಶಕ್ತಿಗೆ ಮೀರಿ [illegible] ನೆಂಬ ನೋಟದಿಂದ [illegible] ಇದ್ದರು. ಆದರೆ ಕ್ರಿಸ್ತಮತದ ಬೋಧನೆಯಿಂದ ನೂತನವಾದ ತಿಳುವಳಿಕೆಯನ್ನು ಹೊಂದಿದ ಮೇಲೆ [illegible] ವಿಧ ಕಟಾಕ್ಷಗಳನ್ನು ಕಡಮೆ ಮಾಡಿದ ಕಾರಣ ಸಾಲದ ಹೊರೆಯಿಂದ ಬಿಡುಗಡೆಯಾಗುತ್ತ ಬಂದರು.

ಇದಲ್ಲದೆ ಹೇಡ ಸಾರಾಯಿ ಕುಡಿಯುವದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕುರಿತು ಮಡಿವಾಳಯ್ಯನು ಆಗಾಗಲೂ ಎಲ್ಲಾ ಜನರಿಗೂ ಬುದ್ಧಿ ಹೇಳುತ್ತ ಇದ್ದದರಿಂದ ಅನೇಕರು ಆತನ ಬುದ್ಧಿವಾದಗಳನ್ನು ಲಕ್ಷ್ಯಕ್ಕೆ ತಂದು ಆ ಕೆಟ್ಟ ಚಟವನ್ನು [illegible] ಬಿಟ್ಟುಕೊಟ್ಟದ್ದರಿಂದ [illegible] ಆ [illegible] ಮುಚ್ಚಿ ಬಿಟ್ಟನು. ಇದರಿಂದ ಹೋದ ವರುಷ ಆ [illegible] ಬಿಟ್ಟು ಹೋದ ಹಾಗಾಯಿತು.

ಪ್ರಾಯಶ್ಚಿತ್ತ [illegible] ಅನೇಕರು ಬಸವಿಗಳೂ ಸೂಳೆಗಳೂ ಆಗಿ [illegible] ಕೆಟ್ಟ ರೋಗಗಳನ್ನು ಹತ್ತಿಸಿಕೊಂಡು [illegible] ತಮ್ಮ ಮಾನಮರ್ಯಾದೆಗಳನ್ನೂ ತಮ್ಮ ಧನಸಂಪತ್ತಿಗಳನ್ನೂ [illegible] ಆದರೆ ಕ್ರಿಸ್ತಧರ್ಮೋಪದೇಶಕನು ಆ [illegible] ಹೇಳಿ [illegible] ಸೂಳೆಯರ ಸಹವಾಸದಿಂದ ಆನೇಕರು ಆ ದುಷ್ಕಾರ್ಯವನ್ನು ಬಿಟ್ಟುಕೊಟ್ಟರು. ಆದಕಾರಣ ಆ ಕೆಟ್ಟ ಸ್ತ್ರೀಯರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಹೋದ ಕಾರಣ ಅವರು ಆ ಊರನ್ನೇ ಬಿಟ್ಟು ಬೇರೆ ಕಡೆಗೆ ಹೊರಟು ಹೋದರು. ಆ ಮೇಲೆ ಆ ಊರ ಪ್ರಾಯಸ್ಥರು ಆರೋಗ್ಯವುಳ್ಳವರಾಗಿಯೂ ಬಲಶಾಲಿಗಳಾಗಿಯೂ ಇದ್ದದ್ದಲ್ಲದೆ ಅವರ ಧನಸಂಪತ್ತಿಗಳು ಕೂಡ ಹೋಗುವದಕ್ಕೆ ಅವಕಾಶವಿಲ್ಲದೆ ಚಂದ್ರನಂತ [illegible] ವೃದ್ಧಿಯಾಗುತ್ತಾ ಬಂದವು. ಆ ದಂಪತಿಗಳಲ್ಲಿ ಪರಸ್ಪರ ಅನುರಾಗವೂ ಅಭಿಮಾನವೂ ಉಂಟಾಗಿ ಅವರಲ್ಲಿ ಏಕತೆ ಸದ್ವರ್ತನೆಗಳು ಬೆಳೆಯುತ್ತಾ ಇದ್ದವು. ಅವರ ಆರೋಗ್ಯವೂ ಸಂತೋಷವೂ ಉಂಟಾಗುವಂಥ ಜನಕಜನನಿಯರಿಂದ ಹುಟ್ಟುವ [illegible] ಶಿಶುಗಳು ಸುಲಕ್ಷಣಗಳಿಂದ ಭರಿತರಾಗಿಯೂ ವೃದ್ಧಿಯಾಗುತ್ತ ಬೆಳೆಯುವದನ್ನು ನೋಡಿದರೆ ಬಹಳ ಸಂತೋಷ ಆನಂದ ಹುಟ್ಟದೆ ಇದ್ದೀತು !

ಅದು ಮಾತ್ರವಲ್ಲ. ಆ ಊರಲ್ಲಿ ಬಾಲ ಬೋಗಕ್ಕನ್ಯೆಗಳಿಗೆ ಮೊಟ್ಟುವವರು ಇಲ್ಲದೆ ಕಿಂಚಿತ್ ಅಂಥಾ ಕಾರ್ಯಗಳನ್ನು ಮಾಡುವದಕ್ಕೆ ಯಾರೂ ಧೈರ್ಯ ಪಡುತ್ತಿದ್ದಿಲ್ಲ. ಒಂದು ವೇಳೆ ಅಂಥ ಕಾರ್ಯಗಳನ್ನು ಯಾರಾದರೂ ಮಾಡಿದಾದರೆ ಎಲ್ಲರೂ ಅಂಥವರನ್ನು ಬಹಳ ಹೀನೈಸುತ್ತಿದ್ದದರಿಂದ ಅಂಥವರಿಗೆ ಬಹಳ ನಾಚಿಕೆಯಾಗುತ್ತಿದ್ದದ್ದಲ್ಲದೆ ಬಹು ಶೀಘ್ರದಲ್ಲಿ ಪ್ರಕಟಕ್ಕೆ ಬರುತ್ತಿದ್ದದರಿಂದ ಅಂಥ ಕಾರ್ಯಗಳಿಗೆ ಎಲ್ಲರೂ ಭಯಪಡುತ್ತಿದ್ದರು. ಅಂಥಾ ನಿವಾಸಿಗಳ ಮಧ್ಯದಲ್ಲಿ ವಾಸ ಮಾಡುವದಕ್ಕೆ ನೆರೆಹೊರೆಯ ಗ್ರಾಮಸ್ಥರು ಬಹಳ ಅಪೇಕ್ಷೆ ಪಡುತ್ತಿದ್ದರು.

ಆ ಊರಿಗೆಲ್ಲಾ ಒಂದೇ ಒಂದು ದೊಡ್ಡ ಭಾವಿ ಇದ್ದ ಕಾರಣ ಅವರಿಗೂ ಅವರೆಲ್ಲರೂ ಅದರಲ್ಲಿಯೇ ಸ್ನಾನಮಾಡಿ ಮೈಲಿಗೆ ಬಟ್ಟೆಗಳನ್ನು ಒಗೆಯುತ್ತಿದ್ದಲ್ಲದೆ ಅದೇ ನೀರನ್ನು ಕುಡಿಯುತ್ತಿದ್ದ ಕಾರಣ ಅವರೆಲ್ಲರೂ ಬೇರೆ ಬೇರೆ ರೋಗಗಳಿಂದ ಬಹಳ ಕಷ್ಟಪಡುತ್ತಿದ್ದರು. ಆದರೆ ಅಂಥ ನೀರನ್ನು ಕುಡಿಯುವದರಿಂದಾಗುವಂಥ ಕೇಡುಗಳನ್ನು ಕುರಿತು ಆರೋಗ್ಯಶಾಸ್ತ್ರದಿಂದ ತಿಳಿದುಕೊಂಡ ಮೇಲೆ ಅವರೆಲ್ಲರೂ ಒಬ್ಬರಸಂಗಡ [illegible] ಮಾತಾಡಿಕೊಂಡು ಸ್ನಾನಕ್ಕೂ ಬಟ್ಟೆಗಳನ್ನು ಒಗೆಯುವದಕ್ಕೂ ಬೇರೆ ಏರ್ಪಾಟು ಮಾಡಿ ಆ ಭಾವಿ ನೀರನ್ನು ಕುಡಿಯುವದಕ್ಕೆ ಮಾತ್ರ ಉಪಯೋಗಿಸಿದ್ದರಿಂದ ಆ ಕೆಟ್ಟ ವ್ಯಾಧಿಗಳು ಮೊದಲಿನಷ್ಟು ಪ್ರಬಲವಾಗಲಿಲ್ಲ.

ಮೊದಲು ಊರಮಧ್ಯದಲ್ಲಿಯೇ ತಿಪ್ಪೆಗಳನ್ನು ಹಾಕುತ್ತಾ ಸ್ತ್ರೀಪುರುಷರು ಸಹಿತ ಮಲಮೂತ್ರಗಳನ್ನು ವಿಸರ್ಜನೆ ಮಾಡುತ್ತಾ ಇದ್ದದರಿಂದ ಬಹಳ ಅಸಹ್ಯವಾಗಿದ್ದದ್ದಲ್ಲದೆ ಮಳೆಗಾಲದಲ್ಲಿ ಆ ತಿಪ್ಪೆಗಳಲ್ಲಿ ನೀರು ನಿಂತು ದುರ್ವಾಸನೆ ಹುಟ್ಟಿ ಹವಕಟ್ಟು ಬೇರೆ ಬೇರೆ ಅಂಟುಜಾಡ್ಯಗಳು ಆಗಾಗ್ಗೆ ಪ್ರಬಲವಾಗುತ್ತಿದ್ದವು. ವಿಮಲತ್ವದ ಭಾಗ್ಯವನ್ನು ಈಗ ಅವರು ಗ್ರಹಿಸಿಕೊಂಡಕಾರಣ ಅಂಥ ಅಶುಚಿತ್ವಕ್ಕೆ ಅವರೇ ಅಸಹ್ಯಪಟ್ಟು ಆ ತಿಪ್ಪೆಗಳನ್ನು ಊರಿಗೆ ದೂರವಾಗಿ ಹಾಕಿದ್ದಲ್ಲದೆ ಆ ಕುಣಿಗಳನ್ನು ಮುಚ್ಚಿ, ಮಲವಿಸರ್ಜನೆಗೆ ದೂರವಾಗಿ ಸ್ತ್ರೀಪುರುಷರಿಗೆ ಬೇರೆ ಬೇರೆ ಸ್ಥಳಗಳನ್ನು ಏರ್ಪಡಿಸಿಕೊಂಡರು. ಇದರಿಂದ ಅಂಟುಜಾಡ್ಯಗಳಿಗೆ ಆಸ್ಪದವಿಲ್ಲದೆ ಆ ಊರು ನೋಡುವರಿಗೆ ಮನೋಹರವಾಗಿದ್ದು ಅಮರಾವತಿ ಎಂಬ ಕ್ರಿಸ್ತ [illegible] ಯೋಗವಾಗಿ ಹೊಳೆಯುತ್ತಿತ್ತು. ಇಂಥಾ ಮೊದಗಿನ ತಿದ್ದುಪಾಟಿನಲ್ಲಿಯೂ ನಾಗರಿಕತ್ವದಲ್ಲಿಯೂ ಆ ಊರಲ್ಲಿ ಇನ್ನೂ ಕೆಲವರು ತೃಪ್ತಿಹೊಂದದೆ ಆಂತರ್ಯದ ತಿದ್ದುಪಾಟನ್ನೂ ಮನಸ್ಸಿನ ನಿರ್ಮಲತ್ವವನ್ನೂ ತೋರಿ [illegible] ಹೊಂದುವದಕ್ಕೆ ಸಾಧಿಸುತ್ತಿದ್ದರು. ಅದರಾರೆಂದರೆ—ಸಾಹುಕಾರ ರುದ್ರಪ್ಪನೂ ನಂಜುಂಡಯ್ಯನೂ ಬೇರೆ ಇನ್ನಿಬ್ಬರು ಇತರರು ಪಾಪ ಮಾಡುವಂಥ ಬಾಹ್ಯಾಚಾರಗಳಿಂದಲೂ ಮೂರ್ತಿಗಳ ಪೂಜೆಯಿಂದಲೂ ನರಗುರುಗಳ ಸೇವೆಯಿಂದಲೂ ತಾವು ಕೋರುವಂಥ ನಿರ್ಮಲಚಿತ್ತವು ಲಭಿಸಲಾರದೆಂದು ತಮ್ಮ ಸ್ವಭಾವದಿಂದ ತಿಳಿದುಕೊಂಡದ್ದಲ್ಲದೆ ಕ್ರಿಸ್ತ ಧರ್ಮೋಪದೇಶಕನ ಸಹಾಯದಿಂದಲೂ ಅಲ್ಲಿದ್ದ ಕ್ರೈಸ್ತರ ಸಹವಾಸದಿಂದಲೂ ಪರಮಗುರುವಾದ ಯೇಸುಕ್ರಿಸ್ತನ ಬಲಿಯೇ ನಿರ್ಮಲಚಿತ್ತಕ್ಕೂ ಅಂತರಂಗದ ಸಮಾಧಾನಕ್ಕೂ ಮೂಲಕಾರಣವೆಂದು ಗ್ರಹಿಸಿಕೊಂಡದರಿಂದ ದೀಕ್ಷಾಸ್ನಾನದ ಮುಖಾಂತ್ರ ಆ ನಾಲ್ಕು ಕುಟುಂಬಗಳವರು ಕ್ರಿಸ್ತಮತಾವಲಂಬನೆ ಮಾಡಿದರು. ನಂಜುಂಡಯ್ಯನು [illegible] ಎಂಬ ನಂಜು ಪರಿಹಾರಕಾಯಿತೆಂದು ತಿಳಿದು ಗುರುವಾದವನ [illegible] ನ ನಾಮವನ್ನು ಧರಿಸಿಕೊಂಡನು. ಮತ್ತು ವೀರಭದ್ರಗೌಡನನ್ನು [illegible] ಎನು ಗೌಡರೇ, ಮೊದಲನವರು ಕಡೆಯವರಾಗಿಯೂ ಕಡೆಯವರು ಮೊದಲನೆಯವರಾಗಿಯೂ ಇರುವರೆಂಬ [illegible] ಮಿದವ ವಾಕ್ಯ ನಮ್ಮಲ್ಲಿ ನೆರವೇರಿತಲ್ಲಾ ಎಂದು ಹೇಳಿ ತಾನು ಅವರೆಲ್ಲರಿಗಿಂತ ಮುಂಚೆ ಈ ನೂತನವಾದ ಬೋಧನೆಯನ್ನು ಕೇಳಿದಾಗ್ಯೂ ಈಗ ಇಷ್ಟು ವರುಷಗಳ ತರುವಾಯ ತಡೆಮಾಡಿದ್ದಕ್ಕೆ ಬಹಳವಾಗಿ ದುಃಖಿಸುತ್ತಿದ್ದನು.

ಆ ಊರಲ್ಲಿ ಆ ಕ್ರಿಸ್ತಕುಟುಂಬಗಳವರೆಲ್ಲರೂ ಸತ್ಕುಟುಂಬದವರಾಗಿ ತಮ್ಮಲ್ಲಿ ಪರಸ್ಪರ ಪ್ರೀತಿ ಉಳ್ಳವರಾಗಿಯೂ ಭಕ್ತಿ ವೈರಾಗ್ಯದಿಂದ ಕೂಡಿದವರಾಗಿಯೂ ಶಾಂತಿ ಸಮಾಧಾನ ಧೈರ್ಯ, [illegible] ಲಾದ ಸದ್ಗುಣಗಳಲ್ಲಿ ವೃದ್ಧಿ ಹೊಂದುವವರಾಗಿಯೂ ಉಪಕಾರಗಳಲ್ಲಿ ನಂಬಿಗಸ್ಥರಾಗಿಯೂ ಇತರ ಮತಸ್ಥರನ್ನು ಯಥಾರ್ಥವಾಗಿ ಪ್ರೀತಿಸುವವರಾಗಿಯೂ ಇದ್ದದರಿಂದ ಆ ಊರಿನವರಲ್ಲಿಯೂ ನೆರೆಹೊರೆ ಗ್ರಾಮಸ್ಥರಲ್ಲಿಯೂ ಆಶ್ಚರ್ಯಹುಟ್ಟಿ ಅವರಲ್ಲಿ ಅನೇಕರು ಕ್ರಿಸ್ತಮತದ ಮೇಲೆ ಬಹಳ ಅಪೇಕ್ಷೆ ಪಟ್ಟರು. ಪಾದ್ರಿ ಧೊರೆಗಳು ಆ ಪ್ರಾಂತ್ಯದ ಜನರಿಗಿದ್ದ ಇಂಥ ಅಪೇಕ್ಷೆಯನ್ನು ತಿಳಿದು ಸಂತೋಷಪಟ್ಟದ್ದಲ್ಲದೆ ಆ ಪ್ರಾಂತ್ಯದ ಜನರು ಸಹ [illegible] ಹೊಂದುವದಕ್ಕೆ ತಕ್ಕವರೆಂದು [illegible] ಅವರೆಲ್ಲರ ಪ್ರಯೋಜನಕ್ಕಾಗಿ ಅಮರಾವತಿಯಲ್ಲಿ ಒಂದು ಸಣ್ಣ ಮಿಷನ್ ಆಸ್ಪತ್ರೆಯನ್ನೂ ಒಂದು ಇಂಗ್ಲಿಷ್ ವಿದ್ಯಾಶಾಲೆಯನ್ನೂ ಸ್ಥಾಪಿಸಿದರು. ಆಸ್ಪತ್ರೆಗೆ ವೀರಭದ್ರಗೌಡನ ಮಗನೂ ಮಡಿವಾಳಯ್ಯನ ಮಗನೂ ತಕ್ಕವರು. ಇಂಗ್ಲಿಷ್ ಕಲಿತು ಪಾಸ್ ಮಾಡಿದ್ದಲ್ಲದೆ ವೀರಭದ್ರಗೌಡನ ಮಗನು ವೈದ್ಯಶಾಸ್ತ್ರವನ್ನು ಸಹ ಅಭ್ಯಾಸಮಾಡಿ ಅದರಲ್ಲಿ ಕೂಡ ತೇರ್ಗಡೆ ಹೊಂದಿದ ಕಾರಣ ಆತನನ್ನು ಆ ಅಮರಾವತಿ ಆಸ್ಪತ್ರೆಯಲ್ಲಿ ಸಹಾಯಕ ಡಾಕ್ಟರನ್ನಾಗಿಯೂ ಮಡಿವಾಳಯ್ಯನ ಮಗನನ್ನು ಆ ಇಂಗ್ಲಿಷ್ ಶಾಲೆಗೆ ಮುಖ್ಯ ಉಪಾಧ್ಯಾಯನನ್ನಾಗಿಯೂ ನೇಮಕ ಮಾಡಿದರು. ಆ ಆಸ್ಪತ್ರೆಯಲ್ಲಿ ಬರುವವರೆಲ್ಲರಿಗೆ ಉಚ್ಚಜಾತಿ ನೀಚಜಾತಿ ಎಂಬ ಭೇದವಿಲ್ಲದೆ ಎಲ್ಲರಿಗೂ ಏಕರೀತಿಯಲ್ಲಿ ಔಷಧೋಪಚಾರಗಳು ನಡೆಯುತ್ತಿದ್ದದ್ದಲ್ಲದೆ [illegible] ರೋಗಿಗಳ ಭವರೋಗವನ್ನು ನಿವಾರಿಸುವ ಶ್ರೀಯೇಸುಸ್ವಾಮಿಯವರ ಬೋಧನೆಯು ಸಹ [illegible] ಹುತ್ತಿತ್ತು. ಮತ್ತು ಆ ಶಾಲೆಗೆ ಆ ಪುರವಾಸಿಗಳ ಮಕ್ಕಳು ಮಾತ್ರವಲ್ಲದೆ ಸುತ್ತಲಿದ್ದ ಗ್ರಾಮಸ್ಥರ ಹೊಣ್ಣವರ ಮಕ್ಕಳೆಲ್ಲರೂ ಬಂದು ವಿದ್ಯೆ ಕಲಿಯುತ್ತಿದ್ದರು. ಆ ಶಾಲೆ ಆಸ್ಪತ್ರೆಗಳಿಂದ ಆ ಪ್ರಾಂತ್ಯದವರಿಗೆ ಉಂಟಾದ ಪ್ರಯೋಜನಗಳನ್ನು [illegible] ವರ್ಣಿಸುವದು ಸಾಧ್ಯವಲ್ಲದಕಾರಣ ಒಂದು ಚಿಕ್ಕ ಸಂಗತಿಯನ್ನು ಹೇಳಿ ಮುಗಿಸುತ್ತೇನೆ.

ಮಡಿವಾಳಯ್ಯ [illegible] ಜ್ಯೇಷ್ಠ ಪುತ್ರಿಯಾದ ಕಲಾವತಿಯು ತನ್ನ [illegible] ಶೀಲ, ಸದ್ಗುಣಗಳಿಗೆ ವೀರಭದ್ರಗೌಡನ ಮಗನು ಮೆಚ್ಚಿ ಆಕೆಯನ್ನು ಲಗ್ನ ಮಾಡಿಕೊಂಡನು. ಈ ಶುಭಕಾರ್ಯವು ಕಬ್ಬಿನ ಮೇಲೆ ಜೇನಿಟ್ಟಂತಾಯಿತು. ಈ ದಂಪತಿಗಳ ಮನಸ್ಸು—ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬ ತಮ್ಮ ಗುರುವಿನ ಶ್ರೀವಾಕ್ಯವನ್ನು ಶಿರಸ್ಸಾವಹಿಸಿ ಅನುಸರಿಸುತ್ತಿದ್ದದರಿಂದ ಅವರು ಆ ಜನರ ಮಧ್ಯದಲ್ಲಿ ಕಲಿಕಾಲದ ಜೋಡಿ [illegible] ಪ್ರಕಾಶಿಸುತ್ತಿದ್ದರು. ಮಡಿವಾಳಯ್ಯನು ಕ್ರಿಸ್ತಮತಾವಲಂಬನೆ ಮಾಡಿ [illegible] ಈಗ ಇಪ್ಪತ್ತು ವರುಷಗಳು ಗತಿಸಿದವು. ಇಷ್ಟು ಸ್ವಲ್ಪ ಕಾಲದಲ್ಲಿ ಆತನ ಮುಖಾಂತ್ರವಾಗಿ ಆ ಪ್ರಾಂತ್ಯದಲ್ಲಿ ಉಂಟಾದ ಪ್ರಯೋಜನವನ್ನು ನೋಡಿದರೆ ಶ್ರೀಯೇಸುಸ್ವಾಮಿಯವರ ಸಮಯದಲ್ಲಿ ನೋಹನಂಥ ಕಾಲಜ್ಞಾನವಾಕ್ಯವು ನೆನಪಾಗುತ್ತದೆ. ಅದೇನೆಂದರೆ—ಕತ್ತಲಲ್ಲಿ ವಾಸಿಸಿದ ಈ ಜನಗಳ ಪ್ರಜೆಗೆ ದೊಡ್ಡ ಬೆಳಕು ಕಾಣಿಸಿತು. ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಜ್ಯೋತಿ ಉದಯವಾಯಿತು ಎಂಬುವದೇ.

ಪ್ರಿಯ ವಾಚಕಬಂಧುಗಳೇ! ಪರಮಗುರುವಾದ ಯೇಸುಸ್ವಾಮಿಯು ಒಂದು ದೇಶ ಒಂದು ಊರು ಒಂದು ಜಾತಿಯವರಿಗೆ ಸಂಬಂಧಪಟ್ಟವನಲ್ಲ. ಎಲ್ಲಾ ದೇಶಗಳು, ಪಟ್ಟಣಗಳ ವರಿಗೂ ಎಲ್ಲಾ ಸ್ಥಿತಿಗತಿ ಕುಲಗೋತ್ರದವರಿಗೂ ಸಂಬಂಧಪಟ್ಟವನಾಗಿದ್ದಾನೆ. ಆತನು ಎಲ್ಲರನ್ನೂ ಏಕರೀತಿಯಲ್ಲಿ ಪ್ರೀತಿಸಿ ರಕ್ಷಿಸಿ ಉದ್ಧರಿಸಬೇಕೆಂದು ಈ ಲೋಕಕ್ಕೆ ಅವತಾರ ತಾಳಿ ಬಂದನು. ಆ ಸ್ವಾಮಿಯಂಥ ಕ್ರಿಸ್ತಮತವೇ ಸತ್ಯಯುಗವಾಗಿದೆ. ಯಾರು ಕ್ರಿಸ್ತಮತ ಬೋಧನೆಯನ್ನು ಅಂಗೀಕರಿಸಿ ಅದಕ್ಕನುಸಾರವಾಗಿ ಪ್ರವರ್ತಿಸುತ್ತಾರೋ ಅಂಥವರಲ್ಲಿ ಸತ್ಯಯುಗದ ಲಕ್ಷಣಗಳು ಆರಂಭವಾಗಿ ಅವರ ದೇಹಾತ್ಮಗಳ ಸ್ಥಿತಿಗತಿಗಳು ಅಭಿವೃದ್ಧಿಯಾಗದೆ ಇರಲಾರವು. ಹಾಗಾದರೆ ಪಾದ್ರಿಗಳು ನಿಮ್ಮ ಊರಿಗೆ [illegible] ಸಾರುವಂಥ ಶ್ರೀಯೇಸುಸ್ವಾಮಿಯವರನ್ನು ಮಡಿವಾಳಯ್ಯನಂತೆ ನಿಮ್ಮ ಗುರುವರನನ್ನಾಗಿ ಅಂಗೀಕರಿಸಿ ಆತನ ಆಜ್ಞಾನುಸಾರವಾಗಿ ಪ್ರವರ್ತಿಸುವದಕ್ಕೆ ಪ್ರಯತ್ನ ಮಾಡಿರಿ. ಕರುಣಾನಿಧಿಯಾದ ದೇವರ ಕೃಪಾಕಟಾಕ್ಷವು ನಿಮ್ಮ ಮೇಲಿರಲಿ.

ಸಂಪೂರ್ಣ

ವಿಶೇಷವಾದ ಪ್ರಕಟನೆ !

ಮಹಿಳಾಸಖೀ

61-1

ಹೊಸದಾಗಿ ಹೊರಡುತ್ತಿದೆ! ಬಹು ರಸಿಕವಾದ ಕಥೆಗಳು ಪ್ರಕಟವಾಗುವವು!!
ನೂತನವಾದ ಲೇಖನಗಳು ಬರೆಯಲ್ಪಡುವುವು!!!

ಮೇಲ್ಕಂಡ ಮಾಸಪತ್ರಿಕೆಯು ಇದೇ ಆಗಸ್ಟ್ ತಿಂಗಳಿನ ಪ್ರಾರಂಭದಿಂದ ಪ್ರಕಟವಾಗುತ್ತಿರುವುದು ಬೇಕಾದವರು ತತ್‍ಕ್ಷಣವೇ ತರಿಸಿಕೊಂಡರೆ ಉತ್ತಮ ಬಿಡಿ ಪತ್ರಿಕೆಯೊಂದಕ್ಕೆ ಆರುಕಾಸುಗಳು ವಾರ್ಷಿಕ ಚಂದಾ ಸ್ಥಳದವರಿಗೆ ಆರು ಆಣೆಗಳು ಪರಸ್ಥಳದವರಿಗೆ ಚಂದಾ ಟಪ್ಪಾಲು ಹಾಸಲು ಸೇರಿ ಒಂಭತ್ತು ಆಣೆಗಳಾಗುವವು

ಮೈಸೂರಿನಲ್ಲಿರುವ ಸಿ ಎಲ್ ಎಸ್ ಬುಕ್ ಡಿಪೋ,
ಮ್ಯಾನೇಜರವರಿಗೆ ಬರೆದುಕೊಳ್ಳತಕ್ಕದು

ವೃತ್ತಾಂತ ಪತ್ರಿಕೆ.

ಶಕ ೧೮೩೧ ನೇ ಸೌಮ್ಯ ಆಗಸ್ಟ್ ತಾ|| ೫ ನೇ ಗುರುವಾರ

ಸ್ಪೈಯಿನ್ ರಾಜ್ಯದಲ್ಲಿ ಗಲಭೆಗಳು

ಈಚೆಗೆ ಸ್ಪೈಯಿನ್ ರಾಜ್ಯದಿಂದ ಬರುತ್ತಿರುವ ತಂತೀ ವರ್ತಮಾನಗಳನ್ನು ನೋಡಿದರೆ ಅಲ್ಲಿನ ವಿದ್ಯಮಾನಗಳು ಕಳವಳವನ್ನುಂಟು ಮಾಡತಕ್ಕವುಗಳಾಗಿವೆ ಸ್ಪೈಯಿನ್‌ನವರೂ ಪ್ರಾನ್ಸಿನವರೂ ಏಕೀಭವಿಸಿ ಆಫ್ರಿಕದ ಉತ್ತರ ಪಾರ್ಶ್ವಕ್ಕೆ ಸೇರಿದ ಮೊರೋಕ್ಕೋ ದೇಶದಲ್ಲಿ ನೆಮ್ಮದಿ ಸಮಾಧಾನಗಳನ್ನು ನೆಲೆಗೊಳಿಸಬೇಕೆಂದು ಸಾಹಸ ಪಡುತ್ತಾ ಬಂದಿದಾರೆ. ಒಂದು ವರುಷದ ಹಿಂದಾಯಿತು ಮೊರೋಕ್ಕೋ ದೇಶದ ಮೂರಾ ಜನರಿಗೂ ಪ್ರಾನ್ಸಿನವರಿಗೂ ಯುದ್ಧಗಳು ನಡೆಯುತ್ತಾ ಬಂದಿವೆ. ಆದರೆ ಕೆಲವು ತಿಂಗಳಿಂದೀಚೆಗೆ ಎಲ್ಲಾ ಸಮಾಧಾನವಾಗಿತ್ತು. ಈಗ ಮೂರ್ ಜನರು ಸ್ಪೈಯಿನ್‌ಗೆ ಸೇರಿದ ಭಾಗದಲ್ಲಿ ಗಲಭೆಯನ್ನೆಬ್ಬಿಸಿ ಯುದ್ಧ ಮಾಡುತ್ತಾ ಬಂದಿರುವರು. ಈ ಯುದ್ಧಗಳಲ್ಲಿ ಸ್ಪೈಯಿನ್ ಸೈನಿಕರು ಬಹು ಮಂದಿ ಹತರಾದರು ಅನೇಕರಿಗೆ ಗಾಯಗಳಾಗಿವೆ ಸ್ಪೈಯಿನ್ ರಾಜ್ಯದಲ್ಲಾದರೋ ಈ ಸುದ್ದಿಯು ಬಹಳ ಕಳವಳವನ್ನು ವಿಶೇಷ ಗಾಬರಿಯನ್ನೂ ಉಂಟು ಮಾಡಿರುವುದು

ಸ್ಪೈಯಿನ್ ರಾಜ್ಯದಲ್ಲಿ ಈಗಿರುವ ಗವರ್ನ್‌ಮೆಂಟನ್ನು ತೆಗೆದು ಹಾಕಿ ಬೇರೊಂದು ಗವರ್ನ್‌ಮೆಂಟನ್ನು ಸ್ಥಾಪಿಸಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರು ಅಲ್ಲಿ ಅನೇಕರು ಏರ್ಪಟ್ಟಿದಾರೆ ಇವರಲ್ಲಿ ಬಹು ಮಂದಿ ಅರಾಜಕ ಗುಂಪಿನವರು, ತಮ್ಮ ಉದ್ದೇಶವನ್ನು ನೆರವೇರಿಸಿ ಕೊಳ್ಳುವುದಕ್ಕೆ ಇವರು ಎಂಥಾ ಕ್ರೂರಕೃತ್ಯಗಳನ್ನಾದರೂ ಮಾಡಲು ಹಿಂಜರಿಯುವವರಾಗಿಲ್ಲ. ಹಿಂದೆ ಸ್ಪೈಯಿನ್ ರಾಜರು ಮದುವೆ ಮಾಡಿಕೊಂಡು ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಈ ಅರಾಜಕ ಗುಂಪಿನವನು ಒಂದು ಸಿಡಿಮದ್ದಿನ ಗುಂಡನ್ನು ಎಸೆದದ್ದೂ, ಅದು ಒಡೆದು ಅನಾಯಸವಾಗಿ ಹಲವರು ಹತರಾದದ್ದೂ ವಾಚಕರಿಗೆ ಜ್ಞಾಪಕವಿದ್ದೀತು. ಈ ಜನರಿಗೆ ಈಗ ಮೊರೋಕ್ಕೋದಲ್ಲಿ ಯುದ್ಧ ನಡೆಯುವುದು ಸಮ್ಮತವಾಗಿಲ್ಲ. ಸ್ಪೈಯಿನ್ ಸೈನಿಕರನ್ನು ಯುದ್ಧ ಭೂಮಿಗೆ ಸರ್ಕಾರದವರು ಕಳುಹಿಸದಂತೆ ಈ ದುಷ್ಟರು ಅಡ್ಡಿ ಮಾಡುತ್ತಾರೆ ಇವರು ಗವರ್ನ್‌ಮೆಂಟಿಗೆ ವಿರೋಧವಾಗಿ ನಿಂತಿರುವರು, ವೈದಿಕ ಗುರುಗಳನ್ನು ಕೊಂದುಹಾಕಿದರು, ದೇವಾಲಯ ಮೊದಲಾದ ಕಟ್ಟಡಗಳನ್ನು ಸುಟ್ಟುಬಿಟ್ಟರು, ಇನ್ನೂ ನಾನಾ ವಿಧವಾದ ದುಷ್ಕೃತ್ಯಗಳನ್ನು ನಡಿಸಿರುತ್ತಾರೆ ವಿಶೇಷವಾಗಿ ಬಾರ್ಸಿಲೋನಾ ನಗರದಲ್ಲಿ ಇವರ ಹಾವಳಿಯು ಅಪಾರವಾಗಿರುವುದು. ಗವರ್ನ್‌ಮೆಂಟಿನವರು ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕಾಗಿ ಸೈನಿಕರನ್ನು ಕಳುಹಿಸಿ, ಯುದ್ಧ ಕಾಲದ ಕಠಿಣವಾದ ರೂಲುಗಳನ್ನು ಜಾರಿಗೆ ತಂದಿರುತ್ತಾರೆ ಮತ್ತು ಸೈನಿಕರೂ ಪೋಲೀಸಿನವರೂ ಆ ದುಷ್ಟ ಜನರನ್ನು ಗುಂಡಿನಿಂದ ಹೊಡೆದು ಕೊಂದುಹಾಕುತ್ತಿರುವರು

ಹಿಂದೆ ಸ್ಪೈಯಿನ್ ದೇಶದ ರಾಜ್ಯಭಾರಕ್ರಮಗಳು ಅನೇಕಾವರ್ತಿ ಬದಲಾವಣೆಯಾಗಿರುತ್ತವೆ. ಈಗಲೂ ಅಲ್ಲಿನ ಅನೇಕರು ರಾಜ್ಯಭಾರವನ್ನು ಬದಲಾವಣೆಮಾಡಬೇಕೆಂಬ ಕುತೂಹಲವುಳ್ಳವರಾಗಿದಾರೆ. ಅವರಿಗೆ ಪ್ರಜೆಗಳ ಪ್ರಾಣಧನಗಳ ಮೇಲೆ ಸ್ವಲ್ಪವೂ ಚಿಂತೆಯಿಲ್ಲ, ಅವರು ತಮ್ಮ ಕೃತ್ಯಗಳಿಂದ ಒಡಬಗ್ಗರಾದ ಪ್ರಜೆಗಳಿಗೆ ಎಷ್ಟು ಕಷ್ಟನಷ್ಟ ಹಿಂಸೆಗಳು ಸಂಭವಿಸಬಹುದಾದರೂ ಲಕ್ಷ್ಯಮಾಡುವವರಾಗಿಲ್ಲ, ಮುಖ್ಯವಾಗಿ ಆ ದುಷ್ಟಜನರ ಉದ್ದೇಶವೇನೋ ತಿಳಿದು ಹೇಳುವುದು ಕಷ್ಟವಾಗಿದೆ

ಸ್ಪೈಯಿನ್ ರಾಜ್ಯವು ಬಹು ಪುರಾತನವಾದದ್ದು, ಅದರ ಪ್ರಜೆಗಳು ಬುದ್ಧಿವಂತರಾಗಿಯೂ ಪರಾಕ್ರಮಿಗಳಾಗಿಯೂ ಇದ್ದಾರೆ ಆದರೆ ಯೂರೋಪ್ ಖಂಡದ ಇತರ ರಾಜ್ಯಗಳಂತೆ ಸ್ಪೈಯಿನ್‌ನಲ್ಲಿ ವಿದ್ಯಾಭಿವೃದ್ಧಿಯೂ ಸ್ವತಂತ್ರಾಧಿಕಾರವೂ ಅಷ್ಟು ವಿಶೇಷವಾಗಿ ನಡೆದಿರುವುದಿಲ್ಲ ದೇಶದಲ್ಲಿ ಪ್ರಜಾಹಿಂಸೆಯೂ ಕಷ್ಟನಷ್ಟಗಳೂ ಇನ್ನೂ ಇದ್ದೇ ಇವೆ. ಆದರೆ ದಂಗೆಯೆದ್ದು ಕ್ರೂರಕೃತ್ಯಗಳನ್ನು ನಡಿಸಿ ದೇವಾಲಯಾದಿಗಳನ್ನು ಸುಟ್ಟಮಾತ್ರಕ್ಕೇ ದೇಶಾಭಿವೃದ್ಧಿಯು ನೆಲೆಗೊಳ್ಳಲಾರದು. ಪ್ರಜೆಗಳು ಚನ್ನಾಗಿ ವಿದ್ಯೆ ಕಲಿಯಬೇಕು, ದೇವರ ವಿಷಯದಲ್ಲೂ ಪರಸ್ಪರ ವಿಷಯದಲ್ಲೂ ತಾವು ಹೇಗೆ ನಡೆದು ಕೊಳ್ಳಬೇಕೆಂಬ ಜ್ಞಾನವು ಅವರಲ್ಲಿ ಉಂಟಾಗಬೇಕು ಸ್ಪೈಯಿನ್ ರಾಜ್ಯವನ್ನಾಳುವ ದೊರೆಯವರು ಸ್ವೇಚ್ಛಾ ಪ್ರವರ್ತನೆಯಲ್ಲಿ ಅಭಿಲಾಷೆ ಪಡುವವರಲ್ಲವೆಂದೂ, ತಮ್ಮ ಪ್ರಜೆಗಳನ್ನೂ ರಾಜ್ಯವನ್ನೂ ಅಭಿವೃದ್ಧಿಗೆ ತರುವುದರಲ್ಲಿ ಕುತೂಹಲಪಡತಕ್ಕವರಾಗಿದಾರೆಂದೂ ನಾವು ನಂಬುತ್ತೇವೆ

ಹಲವು ದೇಶಗಳಲ್ಲಿ ಈಗ ಈ ರೀತಿಯಾದ ಗಲಭೆಗಳುಂಟಾಗುತ್ತಿರುವುದನ್ನು ನೋಡಿದರೆ ಜನರು ದೇವರ ವಿಷಯದಲ್ಲಿ ತಮ್ಮ ಕರ್ತವ್ಯವೇನೆಂಬುವುದನ್ನು ಮರೆತು ಬಿಟ್ಟಿರುವರು ಅವರು ತಮ್ಮ ದುರ್ಮಾರ್ಗಗಳನ್ನು ಬಿಡರು, ತಮ್ಮ ಸಹೋದರ ವರ್ಗಕ್ಕೆ ಸೇರಿದವರ ಕಷ್ಟನಷ್ಟ ದುಃಖಾದಿಗಳಿಗೆ ಬಾಹಿರರಾಗಿದಾರೆ, ಪ್ರತಿ ಒಬ್ಬನೂ ತನ್ನ ಕ್ಷೇಮಾಭಿವೃದ್ಧಿಯಲ್ಲೇ ನಿರತನಾಗಿರುವನು ಇದರ ಪರಿಣಾಮವೇ ನನ್ನ ವಿರೋಧ ಎಲ್ಲೆಲ್ಲೂ ನೆಮ್ಮದಿಯಿಲ್ಲ, ಗಲಭೆಯೂ ದಂಗೆಗಳೂ ಸಂಕಟಗಳೂ ಪ್ರಾಪ್ತವಾಗುವವು ಆದಕಾರಣ ಜನರು ದೇವರ ವಿಷಯದಲ್ಲೂ ಸಹೋದರ ಪ್ರಾಣಿಗಳ ವಿಷಯದಲ್ಲೂ ತಮ್ಮ ಕರ್ತವ್ಯಗಳನ್ನು ತಿಳಿದುಕೊಂಡು, ತಪ್ಪದೆ ಆ ರೀತಿ ನಡೆದುಕೊಳ್ಳುತ್ತಾ ಬರಬೇಕಾಗಿದೆ ಆಗಲೀಗ ದೇಶೋನ್ನತಿಗೂ ಯಥಾರ್ಥವಾದ ಪ್ರಜಾ ಏಳಿಗೆಗೂ ಅವಕಾಶವುಂಟಾಗುವುದೆಂದು ನಿರೀಕ್ಷಿಸಬಹುದಾಗಿದೆ

ಸ್ವದೇಶದ ವೃತ್ತಾಂತಗಳು.

ಕಳೆದ ಶನಿವಾರ ಬೆಳಿಗ್ಗೆ ಶ್ರೀಮಾನ್ ಯುವರಾಜರವರು ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ, ಎರಡು ದಿನ ಇದ್ದು ಸೋಮವಾರ ಬೆಳಗಿನ ರೈಲಿನಲ್ಲಿ ವಾಪಸು ಪ್ರಯಾಣ ಬೆಳಸಿದರು

ಕಾನಕಾನಹಳ್ಳಿ ಟವುನ್‌ನಲ್ಲಿ ಹಿಂದೂ ಮುಸಲ್ಮಾನ್ ಪ್ರಜೆಗಳು ಸೇರಿ ಒಂದು ಪ್ರೀ ರೀಡಿಂಗ್ ರೂಮನ್ನು ಏರ್ಪಾಡು ಮಾಡಿಕೊಂಡಿದಾರೆಂದೂ, ಅದನ್ನು ಈ ಸಾ ಚಕ್ರವರ್ತಿಯವರ ವರ್ಧಂತಿಯ ದಿನ ಪ್ರಾರಂಭಿಸಿದಾರೆಂದೂ ಒಬ್ಬ ವಾರ್ತಾದಾರರು ಬರೆಯುತ್ತಾರೆ

ಕಳೆದ ಮಂಗಳವಾರ ಮಧ್ಯಾಹ್ನ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆ ಆಯಿತು ಬಿಸಿಲು ಬರುತ್ತಲೂ ಮೋಡವಾಡುತ್ತಲೂ ಇದೆ ಶೀತಗಾಳಿ, ಧೂಳಿ ಇವು ನಿವಾರಣೆಯಾಯಿತು. ಪ್ಲೇಗ್ ಉಪದ್ರವ ತಲೆಯೆತ್ತುತ್ತಿರುವಂತೆ ಕಾಣುವುದು ಇಲಿಗಳು ಸಾಯುವುದು ಪ್ರಬಲವಾಗಿದೆ

ಕಳೆದ ವಾರ ಪರವಾದಹಳ್ಳಿಯಲ್ಲಿ ಒಬ್ಬ ಹೆಂಗಸು ಯಾತಕ್ಕಾಗಿಯೋ ಆತ್ಮಹತ್ಯ ಮಾಡಿಕೊಂಡಳು. ಆತ್ಮಲಾಗಿ ಕೋಟೆಯಲ್ಲಿ ಒಬ್ಬ ಹುಡುಗನು ಆಡುತ್ತಾ ಒಂದು ಪಾಳು ಬಾವಿಯಲ್ಲಿ ಮಗುಚಿ ಕೊಂಡು ಸತ್ತನು ಆದರ ಮೇಲೆ ಪಾಳು ಬಾವಿಗಳನ್ನೆಲ್ಲಾ ಚಪ್ಪಡಿ ಹಾಸಿ ಮುಚ್ಚಿಸಬೇಕೆಂದು ಹುಕುಂ ಆಗಿರುತ್ತದೆ.

ಶ್ರೀಮಾನ್ ಯುವರಾಜರಿಗೋಸ್ಕರ ರಾಜಧಾನಿಯ ಒಂಟಿಕೊಪ್ಪಲಿನ ಬಡಗಪಾರ್ಶ್ವದ ದಿಣ್ಣೆಯಲ್ಲಿ ಒಂದು ಬಂಗಲೆಯನ್ನು ಕಟ್ಟಬೇಕೆಂದು ನಿಷ್ಕರ್ಷೆಯಾಗಿದೆಯಷ್ಟೆ ಕಳೆದ ಭಾನುವಾರ ಸಾಯಂಕಾಲ ಮಹಾಮಾತೃಶ್ರೀಯವರೂ, ಶ್ರೀಮಾನ್ ಯುವರಾಜರವರೂ ಆ ಸ್ಥಳಕ್ಕೆ ದಯಮಾಡಿ ಬಂಗಲೆ ಕಟ್ಟತಕ್ಕ ನಿವೇಶನ ಅದರ ವಿಸ್ತಾರ ಮೊದಲಾದವುಗಳನ್ನು ಖುದ್ದಾಗಿ ಪರಾಂಬರಿಸಿದರು ಆಗ್ ಪ್ರೈಸ್ ಪ್ರಸಿಡಂಟರು ಅವರಿಗಾಗಿ ಅಲ್ಲಿ ಡೇರಾ ಮುಂತಾದದ್ದನ್ನು ಹಾಕಿಸಿ ಕಾದಿದ್ದು ಕಡೆಯಲ್ಲಿ ಅವರಿಗೆ ಹಾರಾತುರಾಯಿಗಳನ್ನು ಒಪ್ಪಿಸಿ ಕಳುಹಿಸಿಕೊಟ್ಟರು

ಶ್ರೀರಂಗಪಟ್ಟಣದ ಶೇಟ್ ಸರಾಫ್ ವೆಂಕಟರಾಮರ ಕುಟುಂಬ ಪೌರ್ಣಮಿ ಉದ್ದಿಶ್ಯ ನೆನ್ನೆ ಭಾನುವಾರ ಕರೀಘಟ್ಟದಲ್ಲಿ ಸಮಾರಾಧನೆ ಮಾಡಿಸಲು ಬೆಳಿಗ್ಗೆ ೯ ಗಂಟೆಯಲ್ಲಿ ಮನೆಯನ್ನು ಭದ್ರಮಾಡಿಕೊಂಡು ಹೋಗಿ ಸಮಾರಾಧನ ತೀರಿಸಿಕೊಂಡು ಸಾಯಂಕಾಲ ೬ ಗಂಟೆಯಲ್ಲಿ ಬಂದು ಮನೆಯನ್ನು ತೆರೆದು ನೋಡಲು ಹಿತ್ತಲಿನಿಂದ ಕಳ್ಳರು ಕನ್ನಾ ಕೊರೆದು ಬಾಗಿಲುಗಳನ್ನು ತೆರೆದುಕೊಂಡು ಅಲ್ಲಿದ್ದ ಪೆಟ್ಟಿಗೆ ಮುಂತಾದವುಗಳನ್ನು ಒಡೆದು ಅವುಗಳಲ್ಲಿದ್ದ ಸುಮಾರು ಹತ್ತು ಸಾವಿರ ರೂಪಾಯಿನ ಆಭರಣ ವಸ್ತುಗಳನ್ನು ದೋಚಿಕೊಂಡು ಹೋಗಿರುವುದು ತಿಳಿಯಬಂದು ಪೋಲೀಸಿಗೆ ರಿಪೋರ್ಟಾಗಿದೆ

ಕ್ರೈಸ್ತರು ಮದ್ಯವನ್ನು ಕುಡಿಯುವುದೂ ಮಾಂಸಾಹಾರಗಳನ್ನು ತಿನ್ನುವುದೂ ಆಗತ್ಯವೋ ?

ಪೆರಡೂರು ರ ಮ ಎಂಬ ಹೆಸರನ್ನು ನಮೂದುಮಾಡಿರುವ ಒಬ್ಬ ವಾರ್ತಾದಾರರು ಕಳೆದ ಜೂಲೈ ಮೊದಲನೇ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟವಾಗಿರುವ ಕ್ರೈಸ್ತರು ಮದ್ಯವನ್ನು ಕುಡಿಯಬೇಕೆಂಬವಾಗಲೀ ಇಲ್ಲವೇ ಮಾಂಸವನ್ನು ಭಕ್ಷಿಸಬೇಕೆಂಬದಾಗಲೀ ವಿಧಾ ಏನಿಲ್ಲ ಎಂಬ ಸಂಗತಿಯು ನಿಜವಲ್ಲವೆಂದು ಬರೆದಿರುತ್ತಾರೆ ಅವರು ತಿಳಿಸುವುದೇನಂದರೆ, "ಕ್ರೈಸ್ತರು ಆಚರಿಸುವ ಪರಿಶುದ್ಧ ರಾತ್ರಿಭೋಜನವೆಂಬ ಸಂಸ್ಕಾರ (ಇದು ಕ್ರೈಸ್ತರಲ್ಲಿರುವ ಒಂದು ಮುಖ್ಯವಾದ ಆಚಾರ ಕ್ರೈಸ್ತನಾದವನು ವರುಷಕ್ಕೆ ಒಂದುಸಲವಾದರೂ ಇದನ್ನು ಆಚರಿಸಲೇಬೇಕಂತೆ), ಇದರಲ್ಲಿ ದ್ರಾಕ್ಷಾರಸ (ವೈನ್) ಎಂಬ ಮದ್ಯವನ್ನು ಎಲ್ಲರೂ ಪಾನಮಾಡಬೇಕು ಹೀಗೆ ಮಾಡಲೇಬೇಕೆಂತ ಯೇಸುಕ್ರಿಸ್ತನ ಆಜ್ಞೆ ಸಹಾ ಉಂಟು (ಮತ್ತಾ ೨೬ ೨೭-೨೯) 'ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ, ಅವರಿಗೆ ಕೊಟ್ಟು, ಇದರಲ್ಲಿ ನೀವೆಲ್ಲರು ಕುಡಿಯಿರಿ, ಯಾಕಂದರೆ ಇದು ಅನೇಕರಿಗೋಸ್ಕರ ಪಾಪಪರಿಹಾರಕ್ಕಾಗಿ ಹೊಯ್ಯಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನನ್ನ ರಕ್ತವಾಗಿದೆ ಇದಲ್ಲದೆ ನಿಮಗೆ ಹೇಳುತ್ತೇನೆ, ಇಂದಿನಿಂದ ನನ್ನ ತಂದೆಯ ರಾಜ್ಯದಲ್ಲಿ ನಿಮ್ಮ ಸಂಗಡ ಅದನ್ನು ಹೊಸದಾಗಿ ಕುಡಿಯುವ ಆ ದಿನದವರೆಗೂ ಈ ದ್ರಾಕ್ಷಾರಸವನ್ನು ಕುಡಿಯೆನು ಅಂದನು' (ಮಾರ್ಕ ೧೪ ೨೩-೨೫, ಲೂಕ ೨೨ ೨೦ ರಲ್ಲಿ ಸಹ ನೋಡಬಹುದು) ಆ ಪ್ರಕಾರ ಕುಡಿಯದಿದ್ದರೆ ಅವರಿಗೆ ನಿತ್ಯಜೀವವಿಲ್ಲ (ಯೋಹಾ ೬ ೫೩-೫೬) ಇಂತಾದ ಮೇಲೆ ಕ್ರೈಸ್ತರ ಸ್ವಾಮಿ ಮದ್ಯಪಾನ ಮಾಡಲಿಕ್ಕೆ ಬೋಧಿಸುತ್ತದೆಯೆಂತಲೇ ಹೇಳಬೇಕಾಗುತ್ತದಲ್ಲ" ಎಂಬುದೇ

ಕೆಲವರು ಕ್ರೈಸ್ತರ ವೇದಗ್ರಂಥವನ್ನು ಓದಿ ಅದರಲ್ಲಿ ಕಂಡುಬರುವ ಕೆಲವು ಮುಖ್ಯಾಂಶಗಳನ್ನು ಚೆನ್ನಾಗಿ ಗ್ರಹಿಸಿಕೊಳ್ಳುವುದಿಲ್ಲವೆಂಬುದಕ್ಕೆ ನಮ್ಮ ವಾರ್ತಾದಾರರ ಪತ್ರವು ಒಂದು ಉದಾಹರಣೆಯಾಗಿರುತ್ತದೆ ಅವರು ಮಾಡಿರುವ ಮೊದಲನೇ ತಪ್ಪು ಏನಾಪುದೆಂದರೆ, ದ್ರಾಕ್ಷಾರಸವನ್ನು ವೈನ್ ಎಂಬ ಮದ್ಯಕ್ಕೆ ಹೋಲಿಸುವುದು ಕೆಲವು ವೈನ್‌ಗಳನ್ನು ದ್ರಾಕ್ಷಾರಸದಿಂದಲೇ ಮಾಡುವರು ಹಾಗೆ ಮಾಡಿದ ವೈನ್‌ಗಳಲ್ಲಿ ಅಮಲೇರುವ ಗುಣವಿರುವುದು ಆದರೆ ದ್ರಾಕ್ಷೆ ಹಣ್ಣುಗಳನ್ನು ಹಿಂಡಿ ಅವುಗಳಲ್ಲಿ ಬರತಕ್ಕ ರಸವನ್ನು ಕುಡಿದರೆ ಹಾಗೆ ಕುಡಿದವನು ಮದ್ಯಪಾನದ ದೋಷಕ್ಕೆ ಗುರಿಯಾಗುವನೋ? ಎಂದಿಗೂ ಇಲ್ಲ ಜನರು ತೆಂಗಿನ ಎಳನೀರನ್ನು ಕುಡಿದು ... ಆದರೆ ... ಯೇಸು ಕ್ರಿಸ್ತನು ಮದ್ಯಪಾನ ಮಾಡಬೇಕೆಂದು ತನ್ನ ಶಿಷ್ಯರಿಗೆ ಆಜ್ಞೆ ಕೊಡಲಿಲ್ಲ ಈ ವಿಷಯ ವಾಚಕರು ಕ್ರೈಸ್ತರ ವೇದಗ್ರಂಥವನ್ನು ಓದಿದರೆ ಗೊತ್ತಾಗುವುದು ನಮ್ಮ ವಾರ್ತಾದಾರರು ಕ್ರೈಸ್ತರ ದೇವಾಲಯಗಳಿಗೆ ಒಂದು ಸಲ ಹೋದರೆ ಅಲ್ಲಿ ರಾತ್ರಿಭೋಜನ ಸಂಸ್ಕಾರವು ಆಚರಿಸಲ್ಪಡುವಾಗ ಮದ್ಯವನ್ನು ಉಪಯೋಗಿಸುವುದಿಲ್ಲ ದ್ರಾಕ್ಷೆಹಣ್ಣಿನ ರಸವು ಉಪಯೋಗಿಸಲ್ಪಡುವುದನ್ನು ನೋಡಬಹುದು ಆದ್ದರಿಂದ ಸಂಜ್ಞಾನಜ್ಯೋತಿ ಪತ್ರದಲ್ಲಿ ಪ್ರಕಟವಾಗಿರುವಂತೆ ಕ್ರೈಸ್ತರು ಮದ್ಯವನ್ನು ತೆಗೆದುಕೊಳ್ಳಬೇಕೆಂಬ ವಿಧಿಯು ಇಲ್ಲವೆಂಬ ಸಂಗತಿಯು ನಿಜವಾದುದಾಗಿದೆ

ಮಾಂಸಾಹಾರದ ವಿಷಯದಲ್ಲಿ ನಮ್ಮ ವಾರ್ತಾದಾರರು ಬರೆಯುವುದೇನಂದರೆ — ಮಾಂಸಾಹಾರದ ವಿಷಯದಲ್ಲಿ ಕ್ರೈಸ್ತಶಾಸ್ತ್ರವು (ಬೈಬಲ್) ಏನು ಹೇಳುತ್ತದೆ ಎಂತ ಸಹಾ ನೋಡುವ (ಅ ಪೊ ಕೃ ೧೦ ೯, ೧೦, ೧೧, ೧೨, ೧೩, ೧೪, ೧೫ ...) ದೇವರಾದ ಯೆಹೋವನ ಪಕ್ಷದಲ್ಲಿ ಪೇತ್ರನು ಉಪವಾಸ ಮಾಡಿ ಈ ಹಸಿವಿನಲ್ಲಿ ಒಂದು ವಸ್ತ್ರದ ಮೇಲೆ ... ಮೃಗಗಳನ್ನೂ ಪಕ್ಷಿಗಳನ್ನೂ ಕೆಳಗಿಳಿಸಿ, ಎದ್ದು ಕೊಯ್ದುಕೊಂಡು, ಕೆರೆ ಮೆಟ್ಟಿಕೊಂಡು ಕೊಲ್ಲು ತಿಂದುಕೊಂಡು, ತ್ವರೆಯಾಗಿ ಅವನ್ನು ... ಈ ಕಾರ್ಯವನ್ನು ನೀವೂ ನಿಮ್ಮ ಮಕ್ಕಳೂ ನೇಮಕವಾಗಿ ನಿತ್ಯವಾಗಿ ಕೈಕೊಳ್ಳಬೇಕು ಎಂದು ಬರೆದಿರುವ ಸಂಗತಿ ಈ ಮಡಿವಾಳಯ್ಯನಿಗೆ ಗೊತ್ತಿರುವುದಿಲ್ಲವೆಂತಾ ಕಾಣುತ್ತದೆ" ಎಂಬುದೇ ಮೇಲ್ಕಂಡ ವಚನಗಳು ಯೆಹೂದ್ಯ ಮತದವರಿಗೆ ಹೋಲುತ್ತದೆಯೇ ಹೊರತು ಕ್ರೈಸ್ತ ಮತದವರಿಗೆ ಹೋಲುವದಿಲ್ಲವೆಂಬ ಸಂಗತಿಯನ್ನು ವಾರ್ತಾದಾರರು ತಿಳಿದುಕೊಳ್ಳಲಿಲ್ಲವೆಂದು ಕಂಡು ಬರುತ್ತದೆ ಯೇಸು ಕ್ರಿಸ್ತನು ತನ್ನನ್ನೇ ಶಿಲುಬೆಯ ಮೇಲೆ ಯಜ್ಞಬಲಿಯಾಗಿ ಅರ್ಪಿಸಿ ಕೊಟ್ಟ ಮೇಲೆ ಪಸ್ಕ ಹಬ್ಬದ ಆಚರಣೆಯು ಕ್ರೈಸ್ತರಲ್ಲಿ ಸಂಪೂರ್ಣವಾಗಿ ನಿಂತುಹೋಯಿತು ಪಸ್ಕ ಹಬ್ಬವನ್ನು ಯಾವ ಕ್ರೈಸ್ತನೂ ಆಚರಿಸುವುದಿಲ್ಲ ಮತ್ತು ಆಚರಿಸುವಂತೆ ಅವನನ್ನು ಯಾರೂ ಬಲವಂತಪಡಿಸುವುದಿಲ್ಲ ಸತ್ಯವೇದದ ಹಳೇ ಒಡಂಬಡಿಕೆಯ ಗ್ರಂಥದಲ್ಲಿ ವಿಧಾಯಕವಾಗಿರುವ ಸಂಪ್ರದಾಯಗಳನ್ನು ಕ್ರೈಸ್ತರು ಕೈಕೊಳ್ಳತಕ್ಕ ಅವಶ್ಯಕತೆ ಇಲ್ಲ ಆದ್ದರಿಂದ ನಮ್ಮ ವಾರ್ತಾದಾರರು ತಿಳಿಸುವ ಪ್ರಕಾರ ಮಡಿವಾಳಯ್ಯನು ಯಾವುದನ್ನೂ ಮರೆಯದೆ ಕ್ರೈಸ್ತರ ವೇದಗ್ರಂಥವನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾನೆ

ನಮ್ಮ ವಾರ್ತಾದಾರರು ಇನ್ನೂ ಬರೆಯುವದೇನಂದರೆ — ಇದಲ್ಲದೆ (ಯೋಹಾ ೬ ೫೩, ೫೫), 'ಆಗ ಯೇಸು ಅವರಿಗೆ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಮನುಷ್ಯನ ಮಗನ ಮಾಂಸವನ್ನು ತಿನ್ನದೆ, ಅವನ ರಕ್ತವನ್ನು ಕುಡಿಯದೆಹೋದರೆ, ನಿಮ್ಮೊಳಗೆ ಜೀವವು ಇಲ್ಲದವರಾಗಿದ್ದೀರಿ, ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನಿಗೆ ನಿತ್ಯಜೀವ ಉಂಟು, ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು. ಯಾಕಂದರೆ, ನನ್ನ ಮಾಂಸವೇ ನಿಜವಾಗಿ ಆಹಾರವಾಗಿದೆ' ಎಂತಾ ಬೋಧಿಸುತ್ತಾನಲ್ಲ! ಆಹಾ! ಕ್ರೈಸ್ತಶಾಸ್ತ್ರವು ಈ ವಚನಾಧಾರದಿಂದ ಯಾರಾದರೂ ಕ್ರೈಸ್ತರನ್ನು ನರಮಾಂಸ ಭಕ್ಷಕರೆಂದು ಹೇಳಿದರಾದರೆ ಇವರು ಸುಮ್ಮನೆ ಬಾಯಿ ಮುಚ್ಚಿಕೊಂಡೇ ಕೇಳಬೇಕು" ಎಂಬುದೇ ಯೋಚನಾಪರರಾದವರು ಮೇಲ್ಕಂಡ ಭಾಗದಲ್ಲಿರುವ ವಚನಗಳನ್ನು ಓದಿದರೆ ಯೇಸು ಕ್ರಿಸ್ತನು ಅವುಗಳನ್ನು ಉಪಮಾನರೂಪವಾಗಿ ಹೇಳಿದನೆಂದು ಪರಿಷ್ಕಾರವಾಗಿ ತಿಳಿದುಕೊಳ್ಳುವರು ಆತನು ಇನ್ನೂ ಬದುಕಿರುವಾಗಲೇ ಮೇಲ್ಕಂಡ ವಚನಗಳನ್ನು ಹೇಳಿದನಲ್ಲವೇ? ಹಾಗಾದರೆ ಆತನು ಬದುಕಿರುವಾಗಲೇ ಆತನ ಮಾಂಸವನ್ನು ಹೇಗೆ ತಿನ್ನುವುದಕ್ಕಾದೀತು, ಇಲ್ಲವೇ ಆತನ ರಕ್ತವನ್ನು ಹೇಗೆ ಕುಡಿಯುವುದಕ್ಕಾದೀತು? ಯೋಚನಾಪರರಾದವರು ಯೇಸುಕ್ರಿಸ್ತನು ಮೇಲ್ಕಂಡ ಸಂಗತಿಯನ್ನು ಉಪಮಾನವಾಗಿ ಪ್ರಯೋಗಿಸಿ ತನ್ನ ಶಿಷ್ಯರು ಅತ್ಯುತ್ತಮವಾದ ಭಕ್ತಿ ಸಾಧನೆಯಲ್ಲಿ ನಿರತರಾಗಬೇಕೆಂದು ಬೋಧಿಸಿದನೆಂದು ಅರಿತುಕೊಳ್ಳುವರು

ಯಾವ ಕ್ರೈಸ್ತನಾದರೂ ಮಾಂಸವನ್ನು ತಿನ್ನಬೇಕೆಂಬದಾಗಲೀ ಮದ್ಯವನ್ನು ಕುಡಿಯಬೇಕೆಂಬದಾಗಲೀ ವಿಧಿ ಇಲ್ಲ. ಹಾಗೆ ವಿಧಿ ಇದೆ ಎನ್ನತಕ್ಕವರು ಅಜ್ಞಾನದಿಂದ ವಾದಿಸುತ್ತಾರೆಯೇ ಹೊರತು ಮತ್ತೇನೂ ಅಲ್ಲ. ಆದರೆ ನ್ಯಾಯನ್ಯಾಯಗಳನ್ನು ತಿಳಿದ ಕೆಲವರು ಕ್ರೈಸ್ತರನ್ನು ದೂಷಿಸುವುದಕ್ಕೂ ಅವರ ವಿಷಯ ದುರಭಿಪ್ರಾಯವನ್ನು ಹುಟ್ಟಿಸುವುದಕ್ಕೂ ಮೇಲ್ಕಂಡ ಸಂಗತಿಗಳನ್ನು ಮಗುಚಿ ಹಾಕಿ ವಾದಿಸುತ್ತಾರೆ. ಆದರೆ ನಮ್ಮ ಟೀಕಾಕಾರರು ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಓದಿದರೆ, ಈ ಮಾತುಗಳನ್ನು ಕಂಡುಹಿಡಿಯುತ್ತಾರೆ, ಏನಂದರೆ— "ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ, ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ. ಮಾಂಸ ತಿನ್ನುವುದನ್ನಾಗಲಿ ದ್ರಾಕ್ಷಾರಸ ಕುಡಿಯುವುದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವುದೇ ಒಳ್ಳೇದು." (ರೋಮಾ ೧೪. ೧೭, ೨೧) ಈ ಬೋಧನೆಯು ಕ್ರೈಸ್ತರು ಅನುಸರಿಸತಕ್ಕ ಬೋಧನೆಯಾಗಿದೆ.

ಗತಿಸಿದ ಕ್ಯಾಪ್ಟನ್ ಡಾಸ್, ಆರ್. ಇ. ಯವರು

ಸುಮಾರು ಒಂದೂವರೆ ತಿಂಗಳಿಂದ ಮೈಸೂರು ಸಂಸ್ಥಾನದ ಚೀಫ್ ಇಂಜನಿಯರಿಗೆ ಬದಲಿ ನೋಡುತ್ತಿದ್ದ ಕ್ಯಾಪ್ಟನ್ ಎ. ಬಿ. ಇ. ಡಾಸ್ ಯವರು ಕಳೆದ ಶುಕ್ರವಾರ ಸಾಯಂಕಾಲ ಹೊಳೆಯ ಪ್ರವಾಹದಲ್ಲಿ ಸಿಕ್ಕಿ ಅಕಾಲ ಮರಣವನ್ನು ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಯಡತೊರೆಯಿಂದ ಆಚೆ ಇರುವ ಕಟ್ಟೇಪುರದ ಬಳಿ ಕಾವೇರಿ ನದಿಯಲ್ಲಿ ಕೃಷ್ಣರಾಜ ಅಣೆಕಟ್ಟೆಯು ಎರಡು ತಿಂಗಳ ಕೆಳಗೆ ಅಕಾಲವೂ ಆಕಸ್ಮಿಕವೂ ಅಪಾಯವೂ ಆಗಿ ಬಂದ ಪ್ರವಾಹದ ದೆಸೆಯಿಂದ ನಡುವೆ ಕಿತ್ತು ಕೊಚ್ಚಿಕೊಂಡು ಹೋಯಿತು. ಇದು ಬಹು ಪುರಾತನವಾದ ಅಣೆ. ಅದರ ಕೆಳಗೆ ಸಾವಿರಾರು ಎಕರೆಗಳ ತರೀ ಜಮೀನು ವ್ಯವಸಾಯವಾಗುತ್ತಿತ್ತು. ಪ್ರಜೆಗಳಿಗೂ ಸರ್ಕಾರಕ್ಕೂ ತುಂಬಾ ಆದಾಯ ಕವಾಗಿತ್ತು. ಆದಕಾರಣ ಆ ಅಣೆಯನ್ನು ಪುನಹ ಕಟ್ಟಬೇಕೆಂದು ಕ್ಯಾಪ್ಟನ್ ಡಾಸ್ ಯವರು ಪ್ರಯತ್ನಪಡುತ್ತಿದ್ದರು. ಅವರು ಕಟ್ಟೇಪುರದಲ್ಲೇ ಹೋಗಿ ನಿಂತು ಸಾವಿರಾರು ಕೂಲಿ ಆಳುಗಳನ್ನಿಟ್ಟುಕೊಂಡು ಮುರಿದಿದ್ದ ಬೀಳುಗಳನ್ನು ಒಡೆದು ಹೋಗಿದ್ದ ಸ್ಥಳಕ್ಕೆ ಮಾತ್ರ ಸರಿಮಾಡಿಸುವಷ್ಟರೊಳಗೆ ಇನ್ನೊಂದು ಪ್ರವಾಹ ಬಂದು ಅದನ್ನೆಲ್ಲಾ ಕೊಚ್ಚಿಕೊಂಡು ಹೋಯಿತು. ಆಗ ಕ್ಯಾಪ್ಟನ್ ಡಾಸ್ ಯವರು ಧೈರ್ಯಗೆಡದೆ ಅಣೆಯನ್ನು ಬೇರೆ ರೀತಿಯಾಗಿ ಕಟ್ಟಬೇಕೆಂದು ಈ ವಿಷಯ ಸ್ಥಳ ಪರೀಕ್ಷೆ ಮಾಡಿ ಒಂದು ಪ್ಲಾನ್ ತಯಾರು ಮಾಡಲು ಸಹಾಯಕ್ಕಾಗಿ ರಿಜರ್ವಾಯರ್ ಆಫೀಸರನ್ನು ಕರೆಸಿಕೊಂಡರು. ಕಳೆದ ತಾ ೩೦ನೇ ಶುಕ್ರವಾರ ಎಂದಿನಂತೆ ಅಣೆಕಟ್ಟಿಗೆ ಹೋಗಿ ಅಲ್ಲಿ ಸಾಯಂಕಾಲದ ತನಕ ಕೆಲಸ ನೋಡಿ, ಹೊಳೆಯನ್ನು ದಾಟಿ ತಮ್ಮ ಕ್ಯಾಂಪಿಗೆ ಹೋಗಲು ದೋಣಿಯಲ್ಲಿ ಕುಳಿತು ವಾಪಸು ಬರುತ್ತಿದ್ದರು. ಆ ದೋಣಿಯಲ್ಲಿ ಹನ್ನೊಂದು ಮಂದಿ ಕುಳಿತಿದ್ದರಂತೆ ತಿಳಿದು ಬರುತ್ತದೆ. ಕೆಲವು ದೂರ ಬರುವಷ್ಟರಲ್ಲೇ ಹೊಳೆಯ ಸ್ವಲ್ಪ ನೀರು ಹೆಚ್ಚಾಗಿ ಬಂದಿತು. ಆ ದೋಣಿಯು ಬಹಳ ಅಗಲವಾಗಿರಲಿಲ್ಲ. ಸ್ವಲ್ಪ ನೀರು ತುಂಬಿಕೊಂಡಿತು. ದೋಣಿಯು ಒಂದು ಕಡೆಗೆ ಓರೆಯಾಯಿತು. ಹಾಗೇ ಅದು ಮಗುಚಿಕೊಂಡಿತು. ಒಳಗಿದ್ದವರೆಲ್ಲಾ ಹೊಳೆಯಲ್ಲಿ ಬಿದ್ದುಬಿಟ್ಟರು. ಆದರೆ ಎಲ್ಲರೂ ಈಜು ಬಲ್ಲವರಾಗಿದ್ದರಿಂದ ಪ್ರವಾಹವನ್ನು ಲಕ್ಷ್ಯಮಾಡದೆ ಈಜಿಕೊಂಡು ದಡಕ್ಕೆ ಬಂದರು. ಕ್ಯಾಪ್ಟನ್ ಡಾಸ್ ಯವರು ಹೊಳೆಯಲ್ಲೇ ಕರಿಯ ಸವಿ ಸ್ವಲ್ಪ ಹೊತ್ತು ಹಿಂತಿರುಗಿ ನೋಡಿದರು. ಹೊಳೆಯಲ್ಲಿ ಒಬ್ಬನು ಕೊಚ್ಚಿಕೊಂಡು ಹೋಗುತ್ತಿದ್ದನು. ಅವನು ಅನ್ಯಾಯವಾಗಿ ಸಾಯುತ್ತಾನೆ, ಅವನನ್ನು ಹೇಗೂ ಹಾಕಿ ಬದುಕಿಸೋಣ ಎಂದು ಯೋಚಿಸುತ್ತಿದ್ದವರ ಹಾಗೆ ಕ್ಯಾಪ್ಟನ್ ಡಾಸ್ ಯವರು ಪುನಹಾ ಈಜು ಬಿದ್ದು ಹಿಂದು ಮುಂದಾಗಿ ನಂತರ ಈಜುತ್ತಾ ಹೋದರು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಎರಡು ವೇಗವಾಗಿ ಹರಿಯುತ್ತಿದ್ದ ನೀರಿಳಿಯು ಅವರು ಸಮಾಸ ಎಂದು ಸೇರುವ ಸ್ಥಳಕ್ಕೆ ಬಂದರು. ಅಲ್ಲಿ ಎರಡು ಕಡೆಗಳ ನೀರೂ ಕೂಡಿ ಅವರನ್ನು ಒಳಕ್ಕೆ ಸೆಳೆದುಕೊಂಡು ನೀರಿನೊಳಭಾಗದಲ್ಲೇ ಇರುವ ಬಂಡೆಗೆ ಒಡೆದ ಮೇಲಕ್ಕೆದ್ದು ಮುಂದಕ್ಕೆ ಎತ್ತಿಕೊಂಡು ಹೋದಂತೆ ಗೊತ್ತಾಗುತ್ತದೆ. ಕ್ಯಾಪ್ಟನ್ ಡಾಸ್ ಯವರು ಅಲ್ಲಿಂದ ಆಚೆಗೆ ಏನಾದರೆಂಬುದು ತಿಳಿಯದೆ ಹೋಯಿತು. ಸ್ವಲ್ಪ ಹೊತ್ತಿನ ಮೇಲೆ ಸ್ಥಳದಲ್ಲಿ ಹೊಳೆಯ ಸಮೀಪದವರೆಲ್ಲಾ ಹುಡುಕುವಾಗ್ಗೆ ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದವನೊಬ್ಬನು ಸಿಕ್ಕಿದನು. ಅವನನ್ನು ಹೊರಕ್ಕೆ ಎತ್ತಿ ತಂದು ಉಪಚರಿಸಿದ ಮೇಲೆ ಈಗ ಅವನು ಸುಖವಾಗಿರುತ್ತಾನೆ. ಕ್ಯಾಪ್ಟನ್ ಡಾಸ್ ಯವರ ಸುಳಿಯೇ ಗೊತ್ತಾಗಲಿಲ್ಲ.

ಅವರ ಬಳಿ ಆ ಸಾಯಂಕಾಲ ಕೆಲಸಮಾಡುತ್ತಿದ್ದ ಮಿ. ಆನಂದಾಳ್ವಾರ್ ಎಂಬ ಇಂಜನಿಯರು ಗಾಬರಿಬಿದ್ದು ಅಲ್ಲಿಂದ ಸುಮಾರು ೮ ೧೦ ಮೈಲಿ ದೂರದಲ್ಲಿರುವ ಕ್ರಿಷ್ಣರಾಜಪೇಟೆ ಟೆಲಿಗ್ರಾಫ್ ಆಫೀಸಿನಿಂದ ಮೈಸೂರಿಗೂ ಬೆಂಗಳೂರಿಗೂ ನಡೆದ ಸಂಗತಿಯನ್ನು ಕುರಿತು ಮರುದಿನ (ಶನಿವಾರ) ಮಧ್ಯಾಹ್ನ ತಂತಿ ವರ್ತಮಾನವನ್ನು ಕಳುಹಿಸಿದರು. ಈ ಸುದ್ದಿಯು ಆ ಸಾಯಂಕಾಲದೊಳಗಾಗಿ ಹರಡಿಕೊಂಡು ರಾಜಧಾನಿಯಲ್ಲಿ ತುಂಬಾ ವ್ಯಸನವನ್ನೂ ಕಳವಳವನ್ನೂ ಉಂಟುಮಾಡಿತು. ಶನಿವಾರ ರಾತ್ರಿ ಬೆಂಗಳೂರಿನಿಂದ ಕ್ಯಾಪ್ಟನ್ ಡಾಸ್ ಯವರ ಪತ್ನಿಯವರೂ ಸಹೋದರಿಯೂ ರೈಲು ಹತ್ತಿ ಮರುದಿನ (ಭಾನುವಾರ) ಬೆಳಗ್ಗೆ ರಾಜಧಾನಿಗೆ ಬಂದಿಳಿದರು. ಇವರ ಕೂಡ ಆ ರೆಸಿಡೆಂಟ್ ಮಿ. ಕೋರ್ಟ್ಲೆಂಡ್ ಯವರೂ, ಇನ್ಸ್‌ಪೆಕ್ಟರ್ ಜನರಲ್ ಕರ್ನಲ್ ಸ್ಮಿತ್ ಯವರೂ, ಎಕ್ಸೈಸ್ ಕಮಿಷನರ್ ಮೆ|| ಸ್ಪಾರ್ಕ್ಸ್ ಯವರೂ ಬಂದರು. ಮೈಸೂರು ಡೆಪ್ಯುಟಿ ಕಮಿಷನರ್ ಮೆ|| ಕಾಂತರಾಜೇ ಅರಸಿನವರು ಅವರನ್ನೆಲ್ಲಾ ರೈಲ್ವೆ ಸ್ಟೇಷನ್‌ನಲ್ಲಿ ಎದುರುಗೊಂಡು ರೆಸಿಡೆನ್ಸಿ ಬಂಗಲೆಯಲ್ಲಿ ಬಿಟ್ಟು ಬಂದರು. ತರುವಾಯ ಸುಮಾರು ೮ ಗಂಟೆಯ ಹೊತ್ತಿಗೆ ಡೆಪ್ಯುಟಿ ಕಮಿಷನರವರು ಅವರನ್ನು ಕರೆದುಕೊಂಡು ಎರಡು ಮೋಟಾರ್ ಗಾಡಿಗಳಲ್ಲಿ ಯಡತೊರೆಯ ಮಾರ್ಗವಾಗಿ ಕಟ್ಟೇಪುರಕ್ಕೆ ಹೋಗಿ, ಅಲ್ಲಿ ನಡೆದ ವಿದ್ಯಮಾನಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿಕೊಂಡು, ಶವವನ್ನು ಹುಡುಕಬೇಕೆಂದು ಉದ್ದಕ್ಕೂ ಹುಕುಂ ಕೊಟ್ಟು, ಅವರನ್ನೆಲ್ಲಾ ಅಲ್ಲಿಂದ ವಾಪಸು ರಾಜಧಾನಿಗೆ ಆ ರಾತ್ರಿಯೇ ಸುಮಾರು ೮|| ಗಂಟೆಗೆ ಕರೆದುತಂದರು.

ಮರುದಿನ (ಸೋಮವಾರ) ಮಧ್ಯಾಹ್ನದ ಮೇಲೆ ಬನ್ನೂರಿನ ಆಚೆ ಹೊಳೆಯಲ್ಲಿ ಒಂದು ಶವ ತೇಲಿಕೊಂಡು ಹೋಯಿತೆಂಬ ಸುದ್ದಿಯು ಬಂದದ್ದನ್ನು ಕೇಳಿ ಮೆ|| ಕಾಂತರಾಜೇ ಅರಸಿನವರು ತಮ್ಮ ಮೋಟಾರ್ ಗಾಡಿಯಲ್ಲಿ ಹೊರಟು ಸಾಯಂಕಾಲದ ತನಕ ಆ ಪ್ರಾಂತ್ಯದಲ್ಲೆಲ್ಲಾ ಸಂಚಾರಮಾಡಿ ಇನ್ನಾವ ದೋ ಶವ ತೇಲಿಹೋಯಿತೆಂಬುದನ್ನು ತಿಳಿದು ಅಲ್ಲೆಲ್ಲಾ ಎಚ್ಚರಿಕೆಯಿಂದ ಹೊಳೆಯ ಬಳಿ ನೋಡುತ್ತಿರುವಂತೆಯೂ, ಕ್ಯಾಪ್ಟನ್ ಡಾಸ್ ಯವರ ಶವವನ್ನು ಕಂಡರೆ ಹಿಡಿದು ವರ್ತಮಾನ ಕೊಡುವಂತೆಯೂ ತಾಕೀತು ಮಾಡಿ, ವಾಪಸು ಬರುವಲ್ಲಿ ತಮ್ಮ ಮೋಟಾರ್ ಬಂಡಿಯು ನಡೆಯದೆಹೋದದ್ದರಿಂದ ಅದನ್ನು ಬಿಟ್ಟು ಕುದುರೇ ಗಾಡಿ ಮಾಡಿಕೊಂಡು ರಾತ್ರಿ ಸುಮಾರು ೧೨ ಗಂಟೆಗೆ ವಾಪಸು ಬಂದರು.

ಮಂಗಳವಾರ ಪ್ರಾತಃಕಾಲ ಶವವು ಕಟ್ಟೇಪುರದಿಂದ ಸುಮಾರು ೬-೭ ಮೈಲಿ ದೂರದಲ್ಲಿ ರಾಮನಾಥಪುರದ ಹತ್ತಿರ ಸಿಕ್ಕಿತೆಂಬದಾಗಿ ಸಮಾಚಾರ ಬಂದಿತು. ಕ್ಯಾಪ್ಟನ್‌ರವರ ಪತ್ನಿ ಸಹೋದರಿಯರೂ ಮೇಲ್ಕಂಡ ಸರ್ದಾರರೂ ಮೆ|| ಕಾಂತರಾಜೇ ಅರಸಿನವರೂ ಬೆಳಗ್ಗೆ ಸುಮಾರು ೮ ಗಂಟೆಗೆ ಮೋಟಾರ್ ಗಾಡಿಗಳಲ್ಲಿ ಅಲ್ಲಿಗೆ ಹೋದರು. ಸರ್ದಾರರು ಶವವನ್ನು ಪೆಟ್ಟಿಗೆಯಲ್ಲಿ ಹಾಕಿಕೊಂಡು ಅಲ್ಲಿಂದ ಹೊಳೆನರಸೀಪುರ ಸ್ಟೇಷನ್‌ಗೆ ಸಾಗಿಸಿಕೊಂಡು ಬಂದು ಮಂಗಳವಾರ ರಾತ್ರಿ ಅಲ್ಲಿ ರೈಲು ಹತ್ತಿ ಶವದ ಸಹಿತ ಬೆಂಗಳೂರಿಗೆ ಪ್ರಯಾಣವಾಗಿದ್ದರೆಂದು ತಿಳಿದುಬಂದಿದೆ.

ಗತಿಸಿದ ಕ್ಯಾಪ್ಟನ್ ಡಾಸ್ ಯವರು ಕಳೆದ ೧೮೯೭ ನೇ ಇಸವಿ ಸೆಪ್ಟೆಂಬರ್ ತಾ ೨೩ ರಲ್ಲಿ ಇಂಡಿಯಾ ಗವರನ್‌ಮೆಂಟಿನಲ್ಲಿ ಇಂಜನಿಯರ್ ಕೆಲಸವನ್ನು ಅಂಗೀಕರಿಸಿ, ಹೈದರಾಬಾದಿನ ಮಿಲ್ಟೇರಿ ಇಲಾಖೆಯಲ್ಲಿ ಇನ್‌ಜನಿಯರಾಗಿದ್ದರು. ತರುವಾಯ ೧೯೦೫ ನೇ ಇಸವಿ ನವಂಬರ್ ತಾ ೧೭ ರಲ್ಲಿ ಅವರು ನಮ್ಮ ಸಂಸ್ಥಾನಕ್ಕೆ ಡೆಪ್ಯುಟಿ ಚೀಫ್ ಇನ್‌ಜನಿಯರಾಗಿ ಬಂದು, ೧೯೦೭ ನೇ ಇಸವಿಯಲ್ಲಿ ಚೀಫ್ ಇನ್‌ಜನಿಯರಾಗಿ ಕೆಲಸಮಾಡಿದರು. ಈಚೆಗೆ ಮೆ|| ಮೆಕ್‌ಚಿನ್ ಸಾಹೇಬರು ಪೆನ್‌ಷನ್ ಪಡೆದು ಸೀಮೆಗೆ ಹೋದಾರಭ್ಯ ಕ್ಯಾಪ್ಟನ್ ಡಾಸ್ ಯವರೇ ಚೀಫ್ ಇನ್‌ಜನಿಯರಾಗಿ ಬದಲಿ ನೇಮಿಸಲ್ಪಟ್ಟಿದ್ದರು. ಇವರಿಗೆ ಈ ಆಕಸ್ಮಿಕವಾದ ಮರಣ ಪ್ರಾಪ್ತವಾದಾಗ್ಗೆ ಇನ್ನೂ ೩೭ ನೇ ವರುಷ ನಡೆಯುತ್ತಿತ್ತು. ಇವರಿಗೆ ಇನ್ನೂ ಸಣ್ಣವಯಸ್ಸಿನ ಇಬ್ಬರು ಮಕ್ಕಳಿದ್ದಾರೆ. ಇಷ್ಟು ಶಕ್ತರಾದ ಕಾರ್ಯಗಾರರಿಗೆ ಇಂಥಾ ಅಕಾಲಮರಣವು ಪ್ರಾಪ್ತವಾದುದಕ್ಕಾಗಿ ತುಂಬಾ ವಿಷಾದಪಡುತ್ತೇವೆ.

ಸರ್ಕಾರಿ ಹುಕುಮು.

ಬೆಂಗಳೂರು, ತಾ ೩ ನೇ ಆಗಸ್ಟ್, ೧೯೦೯ ನೇ ಇಸವಿ.

ಮೈಸೂರು ಗವರ್ನಮೆಂಟಿನ ಆಫಿಸಿಯೇಟಿಂಗ್ ಚೀಫ್ ಇಂಜನಿಯರ್ ಮತ್ತು ಸುರಹಮತ್ ಇಲಾಖೆಯ ಸೆಕ್ರೆಟರಿಯವರಾದ ಕ್ಯಾಪ್ಟನ್ ಬರ್ನಾರ್ಡ್ ಇ. ಡಾಸ್, ಆರ್. ಇ. ಯವರು ೧೯೦೯ ನೇ ಇಸವಿ ಜೂಲೈ ತಾ ೩೦ ನೇ ಶುಕ್ರವಾರ ಸಾಯಂಕಾಲ ಕೃಷ್ಣರಾಜಕಟ್ಟೆಯ ಬಳಿ ಕಾವೇರಿ ನದಿಯ ಅಣೆಕಟ್ಟಿನ ಕಾಮಗಾರಿಯನ್ನು ಮೇಲ್ವಿಚಾರಣೆಮಾಡುತ್ತಿದ್ದಾಗ ಕಾಲವಾದ ವರ್ತಮಾನವನ್ನು ಕೇಳಿ ಗವರ್ನಮೆಂಟಿನವರು ಬಹಳವಾಗಿ ವಿಷಾದಿಸುತ್ತಾರೆ.

೨. ಆ ಕೆಲಸದ ಬಳಿಯಿಂದ ಕೆಲವರು ಒಂದು ದೋಣಿಯಲ್ಲಿ ಕುಳಿತು ವಾಪಸು ಬರುತ್ತಿರುವಾಗ್ಗೆ ನದಿಯ ಮಧ್ಯೆ ದೋಣಿಯು ಮುಳುಗಿಹೋಯಿತು. ಒಬ್ಬ ಬೆಸ್ತರವನ ಹೊರತು ಉಳಿದವರೆಲ್ಲಾ ದಡವನ್ನು ಬಂದು ಸೇರಿದರು. ಆದರೆ ಕ್ಯಾಪ್ಟನ್ ಡಾಸ್ ಯವರು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದ ಆ ಬೆಸ್ತನನ್ನು ಬದುಕಿಸಿಕೊಳ್ಳಬೇಕೆಂದು ಪುನಃ ಹಿಂತಿರುಗಿ ಹೋದರು. ಅವರು ಬಹು ಪರಾಕ್ರಮದಿಂದ ಆ ಉದ್ದೇಶವನ್ನು ನೆರವೇರಿಸಿದರಾದಾಗ್ಯೂ, ತಾವು ಮಾತ್ರ ಪ್ರವಾಹದ ಸೆಳತದಲ್ಲಿ ಸಿಕ್ಕಿ ಮುಳುಗಿ ಕಾಲವಾದರು. ಮೂರು ದಿನಗಳ ಮೇಲೆ ಅಂದರೆ ತಾ ೨ನೇ ಸೋಮವಾರ ಅವರ ಶವವು ರಾಮನಾಥಪುರದ ಸಮೀಪದಲ್ಲಿ ದೊರಕಿತು.

೩. ಕ್ಯಾಪ್ಟನ್ ಡಾಸ್ ಯವರು ಇನ್ನೂ ಸಣ್ಣ ವಯಸ್ಸಿನವರೂ, ಮಹಾ ಉತ್ಸಾಹಶೀಲರೂ, ವಿಶೇಷ ಸಮರ್ಥರೂ, ಅವರ ದಕ್ಷತೆಗೆ ತಕ್ಕಂಥಾ ಜವಾಬ್ದಾರಿಕೆಯನ್ನೂ ಹೆಸರನ್ನೂ ಪಡೆದವರು. ಇಷ್ಟು ಮಾತ್ರವಲ್ಲದೆ ಸಮರ್ಥರೂ ಯಶೋವಂತರಾಗುವಂಥವರೂ ಆಗಿದ್ದ ಕ್ಯಾಪ್ಟನ್ ಡಾಸ್ ಯವರು ಅಂಥಾ ದುಃಖಕರವಾದ ಸಂದರ್ಭದಲ್ಲಿ ಚಿಕ್ಕ ಪ್ರಾಯದಲ್ಲಿಯೇ ಕಾಲವಾದದ್ದು ಗವರ್ನಮೆಂಟಿಗೆ ತುಂಬಾ ನಷ್ಟವುಂಟಾಯಿತೆಂದು ವಿಷಾದಪಡುವರು.

೪. ಬೆಂಗಳೂರಿನಲ್ಲಿ ಅವರ ಉತ್ತರಕ್ರಿಯೆಯು ನಡೆಯುವ ದಿನ ಅವರ ಗೌರವಾರ್ಥವಾಗಿ ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಸೆಕ್ರೆಟರಿ ಆಫೀಸುಗಳೂ ಮರಹಮತ್ ಇಲಾಖಾ ಆಫೀಸುಗಳೂ ಮುಚ್ಚಲ್ಪಡುವವು.

ಎಸ್. ಚಂದ್ರಶೇಖರ ಅಯ್ಯರವರು,
ಗವರ್ನಮೆಂಟ್ ಸೆಕ್ರೆಟರಿ.

ಮೈಸೂರು ಗೆಜೆಟ್ ಸಂಗ್ರಹ

ತಿಪಟೂರು ತಾಲ್ಲೂಕು ಸಾರ್ಥ, ಗುಬ್ಬಿ ತಾಲ್ಲೂಕು ಕಾಶತಳ್ಳಿ, ಗಗ್ಗರಿ, ನಂಜನಗೂಡು ತಾಲ್ಲೂಕು ಕಳಲೆ, ಹಾಸನ ತಾಲ್ಲೂಕು ಚೌಡವಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕು ಕನ್ನಹಳ್ಳಿ, ಹುಣಸೂರು ತಾಲ್ಲೂಕು ಬೋರೇಗೌಡನ ಹಳ್ಳಿ, ಯಡತೊರೆ—ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವವಿದೆ ಎಂದು ತಿಳಿಯತಕ್ಕದ್ದು.

ಹೊಳೇನರಸೀಪುರದ ಟೌನನ್ನು ಆಗಸ್ಟ್ ೧ ರಿಂದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿದೆ. ಈ ಮ್ಯುನಿಸಿಪಾಲಿಟಿಗೆ ಸೂರನಹಳ್ಳಿಯೂ ಸೇರಿರುವುದು.

ಕುಣಿಗಲ್ ತಾಲ್ಲೂಕ್ ಬೋರ್ಡ್ ಮೆಂಬರಾಗಿರುವ ಮೆ|| ಬೋರ್ಡ್ ರಾಮಚಂದ್ರಪ್ಪನವರನ್ನು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿ ಚುನಾವಣೆ ಮಾಡಿರುತ್ತಾರೆ.

ಹಿರೇಮಲ್ಲಿಗೆಯ ಶೇಖ್ ಮೆ| ಸುಬ್ಬರಾಯರನ್ನು ಜಗಲೂರ್ ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ತರೀಕೆರೆಯ ಮೆ|| ಮೀರ್ ಮಹಮದ್ ಯವರನ್ನು ಕಡೂರ್ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿಯೂ ನೇಮಕ ಮಾಡಿದೆ.

ಹೊಳಲ್ಕೆರೆ ತಾಲ್ಲೂಕಿಗೆ ಸೇರಿದ ತಾಳ್ಯದ ಯೂನಿಯನ್‌ಗೆ ಮೆ| ಗೌಡರ ಸಣ್ಣನಾರಪ್ಪನವರನ್ನು ಮೆಂಬರಾಗಿ ನೇಮಕ ಮಾಡಿದೆ.

ಅನರರಿ ಸಬ್ ಅ| ಸರ್ಜನ್ ಮ| ಬಿ. ಬಸಪ್ಪನವರಿಗೆ ಜೂನ್ ತಾ ೨೮ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪ್ರೊಬೇಷನರಿ ಪೋಲೀಸ್ ಅ| ಸೂಪರಿಂಟೆಂಡೆಂಟ್ ಮೆ| ಎ. ಸಿ. ಬಸವರಾಜೇ ಅರಸಿನವರಿಗೆ ಜೂನ್ ತಾ ೯ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ|| ಸಿ. ಕೃಷ್ಣಮನಾಯ್ಡು ಯವರಿಗೆ ಜೂನ್ ತಾ ೧೦ ರಿಂದ ಇಪ್ಪತ್ತಾರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ತುಮಕೂರು ಡಿಸ್ಟ್ರಿಕ್ಟ್ ಗುಮಾಸ್ತೆ ಭಾರ್ಗವನ್ನು ವಹಿಸಿರುವವರೇ ಎಕ್ಸೈಸ್ ಆಫೀಸಿನ ಭಾರ್ಗವನ್ನೂ ವಹಿಸಿರತಕ್ಕದ್ದು.

ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮೆ|| ಎ. ಕೃಷ್ಣೇ ಅರಸಿನವರಿಗೆ ಜೂಲೈ ತಾ ೫ ರಿಂದ ಎರಡು ತಿಂಗಳು ಎರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಕಂಟ್ರೋಲರ್ ಮೆ|| ಎಲ್. ಬಿಷ್ಟೋಪಂತ್ ಬಾದಾಮಿ ಯವರಿಗೆ ಜೂನ್ ತಾ ೧೨ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಂಟ್ರೋಲರವರ ಅಸಿಸ್ಟೆಂಟರಾದ ಮೆ|| ಎಂ. ಎ. ಶ್ರೀನಿವಾಸಾಚಾರ್‍ರಿಗೆ ಕೊಟ್ಟಿರುವ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ.

ಫಾರೆಸ್ಟ್ ಸರ್ವೆ ಸೂಪರಿನ್‌ಟೆಂಡೆಂಟ್ ಮೆ|| ಟಿ. ಇ. ಎಂ. ಕ್ಲಾಡಿಯಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ನಾಲ್ವತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್‌ಸರ್ವೇಟರ್ ಮೆ|| ಟಿ. ಅಬ್ದುಲ್ ಕರೀಂ ಯವರಿಗೆ ಆಗಸ್ಟ್ ತಾ ೧ ರಿಂದ ಹದಿನೈದು ದಿವಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಕನ್‌ಸರ್ವೇಟರ್ ಮೆ|| ಬಿ. ವಿ. ರಾಮೈಯಂಗಾರ್‍ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ಕೆಲಸಮಾಡತಕ್ಕದ್ದು.

ಅ| ಕನ್ಸರ್ವೇಟರ್ ಮೆ|| ಟಿ. ಧರ್ಮರಾಜ ಚೆಟ್ಟಿಯವರನ್ನು ರೆವಿನ್ಯೂ ಇಲಾಖೆ ಸರ್ವೆ ಇಲಾಖೆಗೆ ವರ್ಗಮಾಡಿದೆ. ರಜಾ ಪೂರೈಸಿದ ಕೂಡಲೆ ಅವರು ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೈಸೂರು ಭೂಗರ್ಭಶೋಧನಾ ಇಲಾಖೆಯ ಅ|| ಜಿಯಾಲಜಿಸ್ಟ್ ಮೆ|| ಬಿ. ಜಯರಾಂ ಯವರಿಗೆ ಜೂಲೈ ತಾ ೬ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇನ್‌ಜನಿಯರ್ ಇಲಾಖೆಯಲ್ಲಿ ಕೆಳಗೆ ನಮೂದಾಗುವ ಬಡ್ತಿಗಳು ಏಪ್ರಿಲ್ ತಾ ೨೦ ರಿಂದ ಜಾರಿಗೆ ಬರತಕ್ಕದ್ದು.—(೧) ಮೆ| ಎಸ್. ಶ್ರೀನಿವಾಸ ಐಯರವರೂ, (೨) ಮೆ| ವಿ. ವಿ. ಶರ್ಮಯವರೂ, (೩) ಮೆ|| ಎ. ಕಾಂಡೋಣಿ ರಾಯರೂ, (೪) ಎಂ. ಎ. ಶ್ರೀನಿವಾಸಾಚಾರ್‍ರೂ ೧ ನೇ ಕ್ಲಾಸ್ ಸಬ್ ಅ|| ಇನ್‌ಜನಿಯರಾಗಿ ಬಡ್ತಿಮಾಡಲ್ಪಟ್ಟಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಎಸ್. ಚಕ್ರಪಾಣಿ ಐಯಂಗಾರ್‍ರು ಉಪಯೋಗಿಸಿಕೊಳ್ಳದೆ ಇರುವ ರಜವನ್ನೂ, ತರೀಕೆರೆ ತಾಲ್ಲೂಕ್ ಅಮಲ್ದಾರ್ ಮೆ. ಎಂ. ಕೃಷ್ಣಸ್ವಾಮಿ ಐಯಂಗಾರ್‍ರು ಉಪಯೋಗಿಸಿಕೊಳ್ಳದೆ ಇರುವ ರಜವನ್ನೂ ರದ್ದು ಮಾಡಿದೆ.

ದೇವನಹಳ್ಳಿ ತಾಲ್ಲೂಕು ಚಾಲದ ಹೋಬಳಿ ಸೂಪಟ್ಟನೆಂಬ ಇನಾಂ ಗ್ರಾಮದ ಹೊಸ ಕಂದಾಯವನ್ನು ಗವರನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದರಿಂದ ಸಬ್ ಡಿವಿಜನ್ ಅ|| ಕಮಿಷನರವರು ಆಗಸ್ಟ್ ತಾ ೩೧ ನೇ ಮಂಗಳವಾರ ಮಧ್ಯಾಹ್ನ ಕಂದಾಯಗಳನ್ನು ಹುಣಸಮಾರನಹಳ್ಳಿಯಲ್ಲಿ ಪ್ರಕಟ ಮಾಡುವರು.

ವಿದೇಶ ವರ್ತಮಾನಗಳು

ಲಂಡನ್ ಪಟ್ಟಣದಲ್ಲಿ ನೌಕರಿಮಾಡುವಂಥಾ ಪ್ರತಿ ಒಬ್ಬ ಪೋಲೀಸಿನವನಿಗೂ ವಾರಕ್ಕೆ ಒಂದು ದಿನ ರಜಾಕೊಡಬೇಕೆಂದು ಗೊತ್ತುಮಾಡಿದ್ದಾರೆ.

ತುರ್ಕಿ ರಾಜ್ಯದಲ್ಲಿ ಪ್ರಜಾಸಮ್ಮತವಾದ ಗವರ್ನಮೆಂಟು ಸ್ಥಾಪನೆಯಾದದ್ದರ ವಾರ್ಷಿಕೋತ್ಸವವು ರಾಜಧಾನಿಯಲ್ಲಿ ಬಹು ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು. ಸುಲ್ತಾನರವರು ಮೈದಾನಿಗೆ ದಯಮಾಡಿ ಖಾತರಿದಾರನ್ನು ವಹಿಸಿದ ೧೩,೦೦೦ ಸೈನಿಕರು ನಡಿಸಿದ ಕವಾತು ಮುಂತಾದ ಕಸರತ್ತುಗಳನ್ನು ಪರಾಂಬರಿಸಿದರು. ಮೂರು ಲಕ್ಷ ಪ್ರಜೆಗಳು ಸೇರಿ ಸುಲ್ತಾನರನ್ನು ಜಯಘೋಷಗಳೊಡನೆ ಸನ್ಮಾನಮಾಡಿದರು. ಆ ದಿನ ರಾತ್ರಿ ಪಟ್ಟಣದಲ್ಲೆಲ್ಲಾ ಸಂತೋಷಾರ್ಥವಾದ ದೀಪೋತ್ಸವವನ್ನು ನಡಿಸಿದರು.

ಚಕ್ರವರ್ತಿ ಸಾರ್ವಭೌಮರವರ ಸಹೋದರರಿಂದ ಘನವನ್ನೈದಿದ ಡ್ಯೂಕ್ ಆಫ್ ಕನ್ನಾಟ್ ಯವರು ಮೆಡಿಟರೇನಿಯನ್ ಕಡಲಿನಲ್ಲಿರುವ ಇಂಗ್ಲಿಷ್ ಸೈನ್ಯದ ದಳಪತಿಯಾಗಿದ್ದರು. ಆ ಉದ್ಯೋಗದಲ್ಲಿ ಅವರಿಗೆ ಸರಿಯಾದಷ್ಟು ಕೆಲಸವಿಲ್ಲವೆಂದು ತೋರಿದ್ದರಿಂದ ಅವರು ರಾಜೀನಾಮೆ ಕೊಟ್ಟುಬಿಟ್ಟರು. ಚಕ್ರವರ್ತಿಯವರು ಅವರ ರಾಜೀನಾಮೆಯನ್ನು ಅಂಗೀಕರಿಸಿರುತ್ತಾರೆ. ಈ ಕೆಲಸಕ್ಕೆ ಹಿಂದುಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರು ನೇಮಕವಾಗಬಹುದೆಂದು ವರ್ತಮಾನವಿದೆ.

ಇಂಗ್ಲಾಂಡಿನ ಬೇರೆ ಬೇರೆ ವಿದ್ಯಾಶಾಲೆಗಳಲ್ಲಿ ಈಗ ಹಿಂದುಸ್ಥಾನದಿಂದ ಹೋಗಿ ವ್ಯಾಸಂಗಮಾಡುತ್ತಿರುವ ಯೌವನಸ್ಥರು ೭೩೦ ಮಂದಿ ಎಂದು ತಿಳಿದು ಬಂದಿದೆ. ಈ ಪೈಕಿ ೪೦೦ ಮಂದಿ ಲಂಡನ್ ಪಟ್ಟಣದಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೂ, ೧೭೦ ಮಂದಿ ಎಡಿಂಬರೋ ಮತ್ತು ಡಬ್ಲಿನ್ ಪಟ್ಟಣಗಳಲ್ಲಿ ವೈದ್ಯವನ್ನೂ, ೨೦ ಮಂದಿ ಗ್ಲಾಸ್ಗೋ ಪಟ್ಟಣದಲ್ಲಿ ಇಂಜನಿಯರ್ ವಿದ್ಯವನ್ನೂ, ೯೦ ಮಂದಿ ಗ್ಲಾಸ್ಗೋ, ಮ್ಯಾಂಚಸ್ಟರ್, ಲೀಡ್ಸ್, ಬರ್ಮಿಂಗ್ಹಾಂ ಪಟ್ಟಣಗಳಲ್ಲಿ ಕಸಬುಗಳನ್ನೂ, ೮೦ ಮಂದಿ ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ಪಟ್ಟಣಗಳಲ್ಲಿ ಸಾಮಾನ್ಯ ವಿದ್ಯೆಯನ್ನೂ ಕಲಿಯುತ್ತಲಿದ್ದಾರೆ.

ಪೋಲೀಸ್ ಇಲಾಖೆಯಲ್ಲಿ ನೌಕರಿಮಾಡುತ್ತಾ ಬಹಳ ಸಾಮರ್ಥ್ಯವನ್ನು ಪ್ರಕಾಶ ಪಡಿಸಿದ ಪೋಲೀಸಿನವರಿಗೆ ಈಗ ಬಹುಮಾನಗಳನ್ನು ಕೊಡುವರಲ್ಲದೆ ಬಿರುದುಗಳನ್ನು ಕೊಡುವುದಿಲ್ಲ. ಚಕ್ರವರ್ತಿ ಸಾರ್ವಭೌಮರವರು ಇನ್ನು ಮುಂದೆ "ದೊರೆಯವರ ಪೋಲೀಸ್ ಮೆಡಲ್" ಎಂಬ ಬಿರುದನ್ನು ಕೊಡತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ. ಅಸಾಧಾರಣವಾದ ಪರಾಕ್ರಮವನ್ನೂ ಯುಕ್ತಿ ಸಾಮರ್ಥ್ಯಾದಿಗಳನ್ನೂ ಪ್ರಕಾಶಪಡಿಸುವಂಥಾ ಪೋಲೀಸ್ ನೌಕರರಿಗೆ ಈ ಬಿರುದನ್ನು ದಯಪಾಲಿಸುವರು. ಇನ್ನು ಮೇಲೆ ವರುಷಕ್ಕೆ ಇಂಗ್ಲಿಷ್ ರಾಜ್ಯಭಾರದಲ್ಲೆಲ್ಲಾ ಇಂಥಾ ೧೨೦ ಬಿರುದುಗಳನ್ನು ಕೊಡತಕ್ಕದ್ದೆಂತಲೂ, ಈ ಪೈಕಿ ಹಿಂದುಸ್ಥಾನದ ಪೋಲೀಸ್ ಇಲಾಖೆಗೆ ೪೦ ಬಿರುದುಗಳು ಕೊಡಲ್ಪಡುವವೆಂತಲೂ ವಿಧಾಯಕವಾಗಿರುತ್ತದೆ.

ನಮ್ಮ ಪುಸ್ತಕ ಭಂಡಾರವು.

« ಪ್ರಬಂಧ ಮಂಜರಿ »

ಮೈಸೂರು ವಿದ್ಯಾಭ್ಯಾಸದ ಇಲಾಖೆಗೆ ಸೇರಿದ ಮೆ॥ ಎಸ್. . ರಾಘವಾಚಾರ್ಯ, ಬಿ. ಎ. ಯವರು « ಪ್ರಬಂಧಮಂಜರಿ » ಎಂಬ ಪುಸ್ತಕವನ್ನು ಎರಡನೆಯಾವೃತ್ತಿ ಮುದ್ರಿಸಿರುತ್ತಾರೆ. ಪ್ರಬಂಧಗಳನ್ನು ಬರೆಯುವ ವಿಧಿ, ಕ್ರಮ, ಲಕ್ಷಣಾದಿಗಳನ್ನು ಕಲಿಸುವುದಕ್ಕೆ ಇಂಗ್ಲೀಷಿನಲ್ಲಿರುವಷ್ಟು ಸೌಲಭ್ಯಗಳು ಕನ್ನಡದಲ್ಲಿ ಇರುವುದಿಲ್ಲ. ಮೆ॥ ರಾಘವಾಚಾರ್ಯರು ಈ ಕುಂದಕವನ್ನು ಹೋಗಲಾಡಿಸುವುದಕ್ಕೆ ಪಟ್ಟಿರುವ ಶ್ರಮವು ಬಹು ಮಟ್ಟಿಗೆ ಸಾರ್ಥಕವಾಗಿರುವುದು. ಇದರಲ್ಲಿ ಎರಡು ಭಾಗಗಳಿರುವುವು. ಕನ್ನಡ ಭಾಷಾ ಶೈಲಿಯ ಸ್ವರೂಪ, ಅದರಲ್ಲಿರುವ ಗುಣದೋಷ, ಶುದ್ಧವೂ ಸುಲಭವೂ ಆದ ವಾಕ್ಯಗಳ ರಚನೆ, ಈ ಮೊದಲಾದ ವಿಷಯಗಳು ಮೊದಲನೆಯ ಭಾಗದಲ್ಲೂ, ಉದಾಹರಣೆಗೋಸ್ಕರ ಪೂರ್ಣವಾಗಿ ಬರೆದು ತೋರಿಸಿರುವ ಅನೇಕ ಪ್ರಬಂಧಗಳೂ, ವಿದ್ಯಾರ್ಥಿಗಳು ಬರೆದು ಅಭ್ಯಾಸ ಮಾಡಿಕೊಳ್ಳುವುದಕ್ಕೆ ಯೋಗ್ಯವಾದ ಹಲವು ಹೊಸ ಪ್ರಬಂಧ ವಿಷಯಗಳೂ ಎರಡನೆಯ ಭಾಗದಲ್ಲೂ ಬಹಳ ಚನ್ನಾಗಿಯೂ ಸುಲಭವಾಗಿಯೂ ಗ್ರಾಹ್ಯವಾಗುವಂತೆ ಬರೆಯಲ್ಪಟ್ಟಿವೆ. ಮೈಸೂರು ದೇಶೀಯ ಪರೀಕ್ಷೆಗಳಿಗೂ ಮದರಾಸ್ ಯೂನಿವರ್ಸಿಟಿಯ ಪರೀಕ್ಷೆಗಳಿಗೂ ಓದುತ್ತಿರುವ ಕನ್ನಡ ವಿದ್ಯಾರ್ಥಿಗಳಿಗೆ ಈ ಪುಸ್ತಕವು ಬಹುತರ ಸಹಾಯಕವಾಗಿದೆಯೆಂದು ಹೇಳಬಹುದು.

« ಮಾದಿಗ. »

ಈ ಜಾತಿವಿಚಾರವಾದ ಪುಸ್ತಕವನ್ನು ಎರಡನೆಯ ಕೌನ್ಸಲರ್ ಮೆ॥ ಎಚ್. ವಿ. ನಂಜುಂಡಯ್ಯನವರು ಬರೆದು ಪ್ರಕಟಿಸಿರುತ್ತಾರೆ. ಇದಲ್ಲದೆ ಇವರು ಈ ಸಂಸ್ಥಾನದಲ್ಲಿರುವ ಇತರ ಜಾತಿಗಳ ವರ್ಣನೆಗಳನ್ನೂ ಪ್ರಕಟಮಾಡಿರುವರು. ಅವರು ಈ ರೀತಿ ಜಾತಿ ಕುಲಗೋತ್ರಗಳನ್ನು ಪರಿಪೂರ್ಣವಾಗಿ ಶೋಧನೆಯಿಂದಲೂ ವಿಚಾರಣೆಯಿಂದಲೂ ಗೊತ್ತುಮಾಡಿ ಆಯಾ ಜಾತಿಗೆ ಒಂದೊಂದು ಪುಸ್ತಕದಂತೆ ಬರೆದು ಪ್ರಕಟಿಸುತ್ತಾ ಬಂದಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ಮೈಸೂರು ಸಂಸ್ಥಾನದಲ್ಲಿ [illegible] ಮಾದಿಗ ಪ್ರಜಾಸಂಖ್ಯೆ ಇರುವುದು. ಮಾದಿಗರಲ್ಲಿರುವ ಬೇರೆ ಬೇರೆ ಪಂಗಡಗಳನ್ನೂ, ಆಯಾ ಪಂಗಡಗಳ ಪದ್ಧತಿ ಆಚಾರಾದಿಗಳನ್ನೂ ಮೆ॥ ನಂಜುಂಡಯ್ಯನವರು ಈ ಪುಸ್ತಕದಲ್ಲಿ ವಿವರಿಸಿರುತ್ತಾರೆ. ಹಿಂದುಗಳ ಪಂಕ್ತಿಗಳೊಳಗೆ ಈ ಮಾದಿಗರೇ ಕಡೆಯ ವರ್ಗದವರಾಗಿರುವರು. ಇತರ ಹಿಂದೂ ಜಾತಿಗಳ ಜನರಂತೆ ಇವರು ಕೂಡ ತಮ್ಮ ತಮ್ಮ ಹಿರಿಯರಿಂದ ಬಂದಿರುವಂಥಾ ನಡೆನುಡಿ ಆಚಾರವಿಚಾರಾದಿಗಳನ್ನು ಬಿಡದೆ ಅನುಸರಿಸುವವರಾಗಿದ್ದಾರೆ. ಸತ್ತ ಗೋಕಾಯಿಗಳನ್ನು ತಿಂದು, ಚರ್ಮಗಳಲ್ಲಿ ಕೆಲಸ ಮಾಡುವುದೇ ಇವರ ಕಸಬಾಗಿದೆ. ಆದರೆ ಈಚೆಗೆ ಕೆಲವು ಮಾದಿಗರು ತಮ್ಮ ಪದ್ಧತಿ ಆಚಾರಾದಿಗಳನ್ನು ತ್ಯಜಿಸಿ ಬಿಡುತ್ತಾ ಬಂದಿದ್ದಾರೆಂದು ಮೆ॥ ನಂಜುಂಡಯ್ಯನವರು ತಿಳಿಸುತ್ತಾರೆ. ಇವರೆಲ್ಲಾ ನಾಗರಿಕವಂತರಾಗುವುದಕ್ಕೆ ಇನ್ನೂ ಬಹು ಕಾಲ ಬೇಕಾಗುವುದೆಂದೂ, ಅವರ ವಿಷಯದಲ್ಲಿ ಆಸಕ್ತರು ಕನಿಕರಯುಕ್ತರಾಗಿ ಹಲವು ಪರೋಪಕಾರಕಕಾರ್ಯಗಳನ್ನು ಮಾಡಬೇಕಾಗಿದೆ ಎಂದೂ ನಮಗೆ ತೋರುತ್ತದೆ.

ನಮ್ಮಲ್ಲಿಗೆ ಬಂದಿರುವ ಇತರ ಪುಸ್ತಕಗಳು.—ಧಾರವಾಡ ಭರತಕಲೋತ್ತೇಜಕ ಸಂಗೀತಸಮಾಜದವರು ಪ್ರಕಟಿಸಿರುವ « ಸಂಗೀತ ಪದ್ಯಾವಳಿ » ಮತ್ತು « ಸಂಗೀತ ಸೌಭದ್ರನಾಟಕಪದ್ಯಾವಳಿ », ಅಷ್ಟಂಪುರದ ಮೆ॥ ಕೆ. ಶಂಕರಪ್ಪನವರು ರಚಿಸಿರುವ « ಜಾನಕೀಪರಿಣಯಗೀತಲಹರಿ » ಮತ್ತು « ಉಪಾಧ್ಯಾಯರ ಕರ್ತವ್ಯ, » ಧನಂಜಯ ಪುಸ್ತಕ ಮಾಲೆಯ « ರಾಜಮಾರ್ಗ, » ಮೆ॥ ಪುರೋಹಿತರಾಯರು ಬರೆದ « ಭೌಸಾಗರ »

ಮಂಗಗಳ ಚಾತುರ್ಯವು

ಕೊಲೆಯ ಪತ್ತೆ.

ಸೋಲಾಪುರ ಕೋರ್ಟಿನಲ್ಲಿ ಒಂದು ಮೊಕದ್ದಮೆಯು

ಸೋಲಾಪುರ ಜಿಲ್ಲೆಯೊಳಗಿನ ಮೆಢಾ ತಾಲ್ಲೂಕಿನಲ್ಲಿರುವ ಯೋಗಿರಾಜ ಎಂಬ ಊರಿಗೆ ಒಬ್ಬ ಡೊಂಬರವನು ಹೋದನು. ಆ ಡೊಂಬರವನ ಬಳಿಯಲ್ಲಿ ಕೆಲವು ಮಂಗಗಳೂ ಒಂದು ಕುರಿಯೂ ಇದ್ದುವು. ಈ ಮಂಗಗಳ ಮತ್ತು ಕುರಿಯ ಸಹಾಯದಿಂದ ಡೊಂಬರವನು ಕೆಲವು ಆಟಗಳನ್ನು ಆಡಿ ಅದರ ಮೇಲಿಂದ ತನ್ನ ಉದರ ನಿರ್ವಾಹವನ್ನು ಸಾಗಿಸುತ್ತಿದ್ದನು. ಯೋಗಿರಾಜ ಗ್ರಾಮವು ಪಟಿಂಗರ ಊರೆಂಬುದು ಪಾಪ ಅವನಿಗೇನು ಗೊತ್ತು ! ಕೆಲವು ಕಾಲ ಆಟವಾಡಿದನಂತರ ಆ ಡೊಂಬರನ ಹತ್ತಿರವಿರುವ ಕುರಿಯ ಮೇಲೆ ಊರವರ ದೃಷ್ಟಿಯು ಬಿತ್ತು. ಅವರು ಕುರಿಯನ್ನು ಕೊಡುವ ಬಗ್ಗೆ ಕೇಳ ಹತ್ತಿದರು. ಡೊಂಬರವನು ಕುರಿಯನ್ನು ಕೊಡವೊಲ್ಲನು. ಡೊಂಬರವನು ಕುರಿಯನ್ನು ಕೊಡುವುದಿಲ್ಲವೆಂದು ತಿಳಿದು ಊರವರು ಅದನ್ನು ಬಲುಮೆಯಿಂದ ಕಸುಕೊಂಡರು. « ಈ ಕುರಿಯನ್ನು ತೆಗೆದುಕೊಳ್ಳಬೇಡಿರಿ, ನನ್ನ ಹತ್ತಿರ ನಾಲ್ಕು ರೂಪಾಯಿಗಳಿರುವವು, ಅವನ್ನು ತೆಗೆದುಕೊಂಡು ನನ್ನನ್ನು ಬಿಡಿರಿ » ಎಂದು ಅವನು ಹೇಳಿಕೊಂಡನು. ಆದರೆ ದುಷ್ಟರಾದ ಆ ಊರವರು ಕುರಿಯನ್ನು [illegible] ಡೊಂಬರವನನ್ನು ಹೊಡೆಯಲು ಪ್ರಾರಂಭಿಸಿದರು. ಬಹಳ ಹೊತ್ತು ಹೊಡೆದ ಮೇಲೆ ಹತ್ತಿರ ಇದ್ದ ಅಡವಿಯಲ್ಲಿ ಅವನನ್ನು [illegible] ಅವನ ಕುತ್ತಿಗೆಯನ್ನು ಹಿಸುಕಿ ಕೊಂದರು. ಪ್ರಾಣೋತ್ಕ್ರಮಣವಾದನಂತರ ಅದೇ ಸ್ಥಳದಲ್ಲಿ ಅವನನ್ನು ಹೂಳಿದು ಊರವರು ತಿರುಗಿ ಬಂದರು. ಇವೆಲ್ಲವನ್ನೂ ಡೊಂಬರವನ ಮೂರು ಮಂಗಗಳು ನೋಡುತ್ತಿದ್ದುವು. ಆ ಮೂರು ಮಂಗಗಳಲ್ಲಿ ಒಂದು ಮಂಗವು ಕೊಲೆಯಾದ ಸ್ಥಳದಲ್ಲಿ ನಿಂತುಕೊಂಡಿತು. ಉಳಿದ ಎರಡು ಮಂಗಗಳೂ ಕುರಿಯ ಅವಸ್ಥೆಯು ಮುಂದೇನಾಗುವುದೋ ಎಂದು ನೋಡಲಿಕ್ಕೆ ಊರವರ ಸಂಗಡಲೇ ಗಗನ ಮಾರ್ಗದಿಂದ ಊರಿಗೆ ತಿರುಗಿಬಂದವು. ಕುರಿಯನ್ನು ಕೊಯಿದು ಮಾಂಸವನ್ನು ತಿಂದ ಮೇಲೆ ಊರವರು ಕುರಿಯ ತೊಗಲನ್ನು ಹೊರಗೆ ಇಟ್ಟುಬಿಟ್ಟಿದ್ದರು. ಒಂದು ಮಂಗವು ಅದನ್ನು ತೆಗೆದುಕೊಂಡು ಸಮೀಪದ ಒಂದು ಗಿಡದ ಮೇಲೆ ಹೋಗಿ ಕುಳಿತಿತು. ಪ್ರತಿದಿವಸ ಮುಂಜಾನೆಯಲ್ಲಿ ಪೋಲೀಸ್ ಪಟೇಲನು ಬಂದಕೂಡಲೆ ಏನಾದರೂ ಫಿರ್ಯಾದು ಇದ್ದರೆ ಹೇಳತಕ್ಕ ರೂಢಿಯು ಆ ಊರಲ್ಲಿತ್ತು. ಅದರಂತೆ ಪೋಲೀಸ್ ಪಟೇಲನು ಊರಿಗೆ ಬರುತ್ತಲೇ ಮೂರನೇ ಮಂಗವು ಅವನ ಹತ್ತಿರ ಹೋಗಿ ಅವನ ಧೋತ್ರವನ್ನು ಜಗ್ಗಹತ್ತಿತು, ಕೆಲವು ಸುದ್ದಿಯನ್ನು ಹೇಳುವದಿದ್ದು ನನ್ನ ಸಂಗಡ ಬನ್ನಿರೆಂದು ಹೇಳುವಂತೆ ಅವನನ್ನು ಜಗ್ಗಹತ್ತಿತು. ಕೊನೆಗೆ ಯಾವ ಸ್ಥಳದಲ್ಲಿ ಡೊಂಬರವನು ಹೂಳಿಯಲ್ಪಟ್ಟಿದ್ದನೋ ಆ ಸ್ಥಳದ ವರೆಗೆ ಪೋಲೀಸ್ ಪಟೇಲನನ್ನು ಮೂರನೇ ಮಂಗವು ಕರೆದೊಯ್ದು ಒಂದು ಸ್ಥಳವನ್ನು ಕೆದಕ ಹತ್ತಿತು. ಈ ಮೂರನೇ ಮಂಗಕ್ಕೆ ಮೊದಲನೇ ಮಂಗವು ಸಹಾಯಮಾಡಿ ಸ್ವಲ್ಪ ಹೊತ್ತಿನಲ್ಲಿಯೇ ತಮ್ಮ ಯಜಮಾನನ (ಡೊಂಬರವನ) ಹೆಣವನ್ನು ಹೊರಗೆ ತೆಗೆದವು. ಇದನ್ನು ನೋಡಿ ಪಟೇಲನು ಆಶ್ಚರ್ಯಚಕಿತನಾದನೆಂಬಲ್ಲಿ ಆಶ್ಚರ್ಯವೇನು ! ಹೆಣವನ್ನು ಹೊರಗೆ ತೆಗೆಯುತ್ತಲೇ ಮಂಗಗಳು ಪಟೇಲನ ಧೋತ್ರವನ್ನು ಹಲ್ಲಿನಲ್ಲಿ ಹಿಡಿದು ಈ ಕೊಲೆಯನ್ನು ಮಾಡಿದವರ ಮನೆಯ ಮುಂದೆ ಒಯ್ದು ನಿಲ್ಲಿಸಿದವು. ಇಷ್ಟರಲ್ಲಿ ಮತ್ತೊಂದು ಮಂಗವು ಬಂದು ಕುರಿಯ ತೊಗಲನ್ನು ತೋರಿಸಿ, ಕೊಲೆ ಮಾಡಿದವನನ್ನು ಕಡಿಯಲು ಪ್ರಾರಂಭಮಾಡಿತು. ಈ ರೀತಿಯಾಗಿ ಮೂರು ಮಂಗಗಳೂ ತಮ್ಮ ಯಜಮಾನನ ಕೊಲೆಯನ್ನು ಅಧಿಕಾರಿಗಳ ದೃಷ್ಟಿಗೆ ತಂದದ್ದರಿಂದ ಕೊಲೆ ಮಾಡಿದವರು ಆಗಿಂದಾಗ್ಗೆ ಹಿಡಿಯಲ್ಪಟ್ಟರು. ಸದ್ಯಕ್ಕೆ ಕೊಲೆ ಮಾಡಿದ ಆರೋಪಿತರು, ಅಂದರೆ ಮಂಗಗಳೂ, ಸೋಲಾಪುರದ ಜೈಲಿಯಲ್ಲಿವೆ. ಈ ಮಂಗಗಳನ್ನು ನೋಡಲು ಜನರು ಗುಂಪು ಗುಂಪಾಗಿ ಜೈಲಿಯಲ್ಲಿ ಹೋಗುತ್ತಿರುವರು. ಈ ಹೊತ್ತು ಈ ಕಟ್ಲೆಯು ಇಲ್ಲಿಯ ಕೋರ್ಟಿನಲ್ಲಿ ನಡೆಯತಕ್ಕದ್ದಿದ್ದು ಮಂಗಗಳ ಸಾಕ್ಷಿಯಾಗುವದೆಂದು ಪ್ರೇಕ್ಷಕರ ಗೊಂದಲವಾಗಬಹುದೆಂದು ತೋರುತ್ತದೆ.—ಕ. ವೈ.

ಶ್ಯಾಮಜಿ ಕೃಷ್ಣವರ್ಮರವರು.

ಈಗ ಪ್ಯಾರಿಸ್ ಪಟ್ಟಣದಲ್ಲಿದ್ದುಕೊಂಡು ಇದುವರೆಗೆ « ಇಂಡಿಯನ್ ಸೋಷಿಯಾಲಜಿಸ್ಟ್ » ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಶ್ಯಾಮಜಿ ಕೃಷ್ಣವರ್ಮರವರು ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಕಚ್ ದೇಶದಲ್ಲಿ ಕಳೆದ ೧೮೫೭ನೇ ಇಸವಿಯಲ್ಲಿ ಬನ್ಸಿಯಾ ಜಾತಿಯಲ್ಲಿ ಹುಟ್ಟಿದವರು. ಕ್ಷತ್ರಿಯಕುಲದವರೆನ್ನಿಸಿಕೊಳ್ಳುವುದಕ್ಕಾಗಿ ವರ್ಮ ಎಂಬ ಅಂಕಿತವನ್ನು ಇಟ್ಟುಕೊಂಡಿರುವಂತೆ ಕಾಣುತ್ತದೆ. ತಂದೆಯು ಕಾಲವಾದ ಮೇಲೆ ಇವರು ೧೮೭೪ನೇ ಇಸವಿಯಲ್ಲಿ ಕಚ್ಛನಾಡಿನಿಂದ ಬೊಂಬಾಯಿಗೆ ಬಂದು ಜನರಿಗೆ ವಿದ್ಯೆ ಹೇಳಿಕೊಡುವುದರಲ್ಲಿ ಜೀವನ ಮಾಡುತ್ತಾ ಇದ್ದರು. ಅಲ್ಲಿ ಒಬ್ಬ ಐಶ್ವರ್ಯವಂತನಾದ ಧರ್ಮಿಷ್ಠೆಯ ಮಗಳನ್ನು ಮದುವೆಮಾಡಿಕೊಂಡದ್ದರಿಂದ ಆ ಹೆಂಗಸಿನಿಂದ ಕೆಲವು ದ್ರವ್ಯವನ್ನು ತಂದರು. ಕೆಲವು ಕಾಲದ ಮೇಲೆ ಅವರು [illegible] ಎಂಬಾತನ ಶಿಷ್ಯವರ್ಗಕ್ಕೆ ಸೇರಿಕೊಂಡು [illegible] ಎಂಬ ಧರ್ಮದ ಬಗೆಯನ್ನು ಹಿಡಿದು ಆ ಸಂಘಕ್ಕಾಗಿ ಕೆಲಸಮಾಡುತ್ತಿದ್ದರು. ಆರ್ಯಸಮಾಜದ ಮೂಲಪುರುಷನ ಸ್ನೇಹವಾಗಿ ಕೃಷ್ಣವರ್ಮರವರು ಆತನಿಂದ ಸಂಸ್ಕೃತ ವಿದ್ಯೆಯನ್ನು ಕಲಿತರು. ೧೮೭೯ನೇ ಇಸವಿಯಲ್ಲಿ ಅವರು ಹ್ಯಾಗೋ ಸ್ವಲ್ಪ ದ್ರವ್ಯವನ್ನು ಕೂಡಿಸಿಕೊಂಡು ವಿಲಾಯತಿಗೆ ಹೋಗಿ ಬೇಲಿಯಲ್ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಒಂದು ಉಪಾಧ್ಯಾಯಗಿರಿಯನ್ನು ಸಂಪಾದಿಸಿಕೊಂಡು, ವಿದ್ಯಾಭ್ಯಾಸ ಮಾಡುತ್ತಾ ಬಂದು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅನಂತರ ಅಲ್ಲೇ ವ್ಯಾಸಂಗಮಾಡಿ ೧೮೮೪ರಲ್ಲಿ ಬ್ಯಾರಿಸ್ಟರ್ ಪರೀಕ್ಷೆಯನ್ನೂ ಕೊಟ್ಟು ಮಾರನೇ ವರುಷ ಹಿಂತಿರುಗಿ ಹಿಂದುಸ್ಥಾನಕ್ಕೆ ಬಂದು, ರತ್ಲಾಂ ಎಂಬ ದೇಶೀಯ ಸಂಸ್ಥಾನದ ದಿವಾನರಾದರು. ಮೂರು ನಾಲ್ಕು ವರುಷದಲ್ಲೇ ಅವರಿಗೂ ರೆಸಿಡೆಂಟರಿಗೂ ಮನಸ್ತಾಪಗಳುಂಟಾದವು. ಕೃಷ್ಣವರ್ಮರವರು ದಿವಾನ್‌ಗಿರಿಗೆ ರಾಜೀನಾಮೆ ಕೊಟ್ಟು ಬಿಟ್ಟುಬಿಟ್ಟು, ಅಜ್ಮೀರ್ ಪಟ್ಟಣಕ್ಕೆ ಹೋಗಿ ನಿಂತು ಬ್ಯಾರಿಸ್ಟರಾಗಿ ವಕಾಲತ್ತು ನಡೆಸಬೇಕೆಂದು ಪ್ರಯತ್ನಪಟ್ಟರು. ಕಕ್ಷಿಗಾರರು ದೊರಕದೆ ಹೋದದ್ದರಿಂದ ಅವರು ವ್ಯಾಪಾರಮಾಡೋಣವೆಂದು ಹೊರಟು ೧೮೯೩ರಲ್ಲಿ ಅಜ್ಮೀರವನ್ನು ಬಿಟ್ಟು ಉದಯಪುರಕ್ಕೆ ಹೋದರು. ಅಲ್ಲಿ ಹ್ಯಾಗೋ ಆ ಸಂಸ್ಥಾನದ ಕೌನ್ಸಿಲ್ ಮೆಂಬರ ಕೆಲಸವು ಇವರಿಗೆ ಲಭಿಸಿತು. ಕೃಷ್ಣವರ್ಮರವರು ಎರಡು ವರುಷಗಳತನಕ ಅಲ್ಲಿ ಮೆಂಬರಾಗಿದ್ದ ಮೇಲೆ ಜುನಾಗಢ ಸಂಸ್ಥಾನದ ದಿವಾನ್‌ಗಿರಿಯು ಖಾಲಿಯಾದಾಗ ಇವರು ಆ ಕೆಲಸಕ್ಕೆ [illegible]. ಆದರೆ ಕೆಲವು ಕಾಲದೊಳಗಾಗಿ ಅವರು ಆ ಕೆಲಸದಿಂದ ವಜಾಮಾಡಲ್ಪಟ್ಟದ್ದರಿಂದ ಅವರು ವಾಪಸು ಉದಯಪುರಕ್ಕೆ ಹೋಗಿ ಪ್ರಯತ್ನಪಟ್ಟದ್ದರಲ್ಲಿ ಯಾವ ಕೆಲಸವೂ ಇವರಿಗೆ ಅಲ್ಲಿ ದೊರಕದೆ ಹೋಯಿತು. ೧೮೯೭ನೇ ಇಸವಿಯಲ್ಲಿ ಕೃಷ್ಣವರ್ಮರವರು ಪತ್ನಿಸಹಿತ ವಿಲಾಯತಿಗೆ ಹೋಗಿ ಮತ್ತೆ ವ್ಯಾಪಾರಮಾಡೋಣವೆಂದು ಹೊರಟರು. ಈಚೆಗೆ ಅವರು « ಇಂಡಿಯನ್ ಸೋಷಿಯಾಲಜಿಸ್ಟ್ » ಎಂಬ ಇಂಗ್ಲಿಷ್ ಪತ್ರಿಕೆಯನ್ನು ಬರೆದು ಪ್ರಕಟಿಸುತ್ತಾ ಬಂದು, ಅದರಲ್ಲಿ ಇಂಗ್ಲೀಷರಮೇಲೆ ನಾನಾ ದೋಷಾರೋಪಣೆಗಳನ್ನು ಮಾಡುತ್ತಾ, ಹಿಂದೂಸ್ಥಾನದ ಪ್ರಜೆಗಳ ಮನಸ್ಸನ್ನು ಕೆಡಿಸಿ ಅವರನ್ನು ಗವರ್ನ್‌ಮೆಂಟಿನವರಮೇಲೆ ಎತ್ತಿ ಕಟ್ಟುವಂಥಾ ರಾಜದ್ರೋಹಕರವಾದ ಬರವಣಿಗೆಗಳನ್ನು ಬರೆಯುತ್ತಾ ಬಂದರು. ಲಂಡನ್ ಪಟ್ಟಣದ ಪೋಲೀಸ್ ಇಲಾಖೆಯವರು ಇವರ ಮೇಲೆ ಗುಮಾನಿ ಇಟ್ಟು ಇವರ ನಡೆನುಡಿಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಾ ಬಂದಾಗ ಅವರು ತಮ್ಮನ್ನೇನು ಮಾಡುವರೋ ಎಂಬ ಶಂಕೆಯಿಂದ ಲಂಡನ್ ಪಟ್ಟಣವನ್ನು ಬಿಟ್ಟು ಫ್ರಾನ್ಸ್ ಸಂಸ್ಥಾನದ ರಾಜಧಾನಿಯಾದ ಪ್ಯಾರಿಸ್ ನಗರಕ್ಕೆ ಹೋಗಿ ಅಲ್ಲಿ ಇದ್ದುಕೊಂಡಿದ್ದಾರೆ. ಈ ಕೃಷ್ಣವರ್ಮರವರು ಚಿತಾವಣೆ ಮಾಡಿದ್ದರಿಂದಲೇ ಮದನಲಾಲನು ಲಂಡನ್ ಪಟ್ಟಣದ ಇಂಪೀರಿಯಲ್ ಇನ್ಸ್ಟಿಟ್ಯೂಟ್ ಬಂಗಲೆಯಲ್ಲಿ ಎರಡು ಕೊಲೆಗಳನ್ನು ಮಾಡಿದನು ಎಂಬದಾಗಿ ಕೆಲವರು ಹೇಳುತ್ತಾ ಬಂದದ್ದನ್ನು ಅವರು ಕೇಳಿ ಅದಕ್ಕೆ ಪ್ರತ್ಯುತ್ತರವನ್ನು ಕೊಟ್ಟಿರುವುದೇನೆಂದರೆ—ಈ ಕೊಲೆಗಳ ವಿಚಾರವೇ ನನಗೆ ತಿಳಿಯದು. ಪತ್ರಿಕೆಗಳಲ್ಲಿ ಪ್ರಕಟವಾದಮೇಲೆಯೇ ನಾನು ಅದನ್ನು ಓದಿ ತಿಳಿದುಕೊಂಡೆನು. ಸರ್ ಕರ್ಜನ್ ವೈಲಿಯವರನ್ನು ನಾನು ಚನ್ನಾಗಿ ಬಲ್ಲೆನು. ಉದಯಪುರದಲ್ಲಿ ನಾನು ಮಂತ್ರಿಯಾಗಿದ್ದಾಗ್ಗೆ ಸರ್ ವೈಲಿಯವರು ಅಲ್ಲಿ ರೆಸಿಡೆಂಟರಾಗಿದ್ದರು. ನಾನು ದಿವಾನನಾಗಿದ್ದ ಐದು ವರುಷಗಳ ಕಾಲದಲ್ಲಿ ನಾವೂ ಅವರೂ ತುಂಬಾ ಸ್ನೇಹಿತರಾಗಿದ್ದೆವು. ಅನೇಕ ವಿಷಯಗಳನ್ನು ಕುರಿತು ನಾವು ಬಹಳ ಹೊತ್ತು ಚರ್ಚಿಸುತ್ತಿದ್ದೆವು. ನಾನು ವಿಲಾಯತಿಗೆ ಬಂದಮೇಲೆಯೂ ಅವರು ನನ್ನ ವಿಷಯದಲ್ಲಿ ಬಹಳ ಪ್ರೀತಿಯನ್ನೂ ಸ್ನೇಹವನ್ನೂ ಇಟ್ಟುಕೊಂಡಿದ್ದರು. ಮೂರು ನಾಲ್ಕು ವರುಷಗಳ ಹಿಂದೆ ಅವರು ನನಗೆ ಒಂದು ಕಾಗದವನ್ನು ಬರೆದಿರುತ್ತಾರೆ. ಕೊಲೆಗೇಡಿಯಾದ ಮದನ ಲಾಲನನ್ನು ನಾನಾಗಲಿ, ನನ್ನನ್ನು ಅವನಾಗಲಿ ಎಂದೂ ನೋಡಿದ್ದಿಲ್ಲ. ಅವನು ಈ ಕೊಲೆಯನ್ನು ಯಾತಕ್ಕಾಗಿ ನಡೆಸಿದನೋ ನನಗೆ ತಿಳಿಯದು. ಹ್ಯಾಗೂ ಈ ಕೊಲೆಯ ವಿಷಯದಲ್ಲಿ ನಾನು ನನ್ನ ಅಭಿಮತವನ್ನು ಹೊರಪಡಿಸುವುದಿಲ್ಲವೆಂದು ನಿಶ್ಚಯಿಸಿಕೊಂಡಿದ್ದೇನೆ ಎಂಬುದೇ.

ಮೈಸೂರು ಸರ್ಕಾರಿ ಹುಕುಮುಗಳು.

ಪಶುವೈದ್ಯದ ಆಸ್ಪತ್ರೆಗಳ ಖರ್ಚು

ಸಂಸ್ಥಾನದೊಳಗೆ ಗವರ್ನ್‌ಮೆಂಟಿನವರು ಸ್ಥಾಪಿಸಿರುವ ಪಶುವೈದ್ಯದ ಆಸ್ಪತ್ರೆಗಳಲ್ಲಿ ಈಗ ವರುಷಕ್ಕೆ ೧೫೦ ರೂಪಾಯಿ ಖರ್ಚಾಗುತ್ತಿರುವುದು ಸಾಲದಾದ್ದರಿಂದ ಅದನ್ನು ಹೆಚ್ಚಿಸಿ ೨೨೫ ರೂಪಾಯಿ ಮಾಡಿಕೊಡಬೇಕೆಂದೂ, ಬೆಂಗಳೂರು ಪಶುವೈದ್ಯದ ಆಸ್ಪತ್ರೆಯ ಖರ್ಚನ್ನು ೨೭೦ ರೂಪಾಯಿಯಿಂದ ೪೨೦ ರೂಪಾಯಿಗೆ ಹೆಚ್ಚು ಮಾಡಿಕೊಡಬೇಕೆಂದೂ, ಅಸಿಸ್ಟೆಂಟ್ ಪಶುವೈದ್ಯರ ಉಪಯೋಗಾರ್ಥವಾಗಿ ಕೆಲವು ವೈದ್ಯ ಪುಸ್ತಕಗಳನ್ನು ಕೊಂಡು ತರಿಸಿಕೊಳ್ಳುವುದಕ್ಕೆ ೩೫೦ ರೂಪಾಯಿ ಬೇಕಾಗಿದೆ ಎಂದೂ ರೆವಿನ್ಯೂ ಕಮಿಷನರವರು ಸರ್ಕಾರದವರಿಗೆ ತಿಳಿಸಿದರು. ಗವರ್ನ್‌ಮೆಂಟಿನವರು ಅದರ ಮೇಲೆ ಅಪ್ಪಣೆ ಕೊಡಿಸಿರುವುದೇನೆಂದರೆ—ಈಗ ಆಸ್ಪತ್ರೆಗಳಲ್ಲಿ ಖರ್ಚಾಗಿರುವ ಬಾಬುಗಳನ್ನು ನೋಡಿದರೆ ಹೆಚ್ಚು ಹಣ ಬೇಕಾಗಿರುವಂತೆ ಕಾಣುವುದಿಲ್ಲ. ಈಗ ಸ್ಯಾಂಕ್ಷನ್ ಆಗಿರುವ ೧೫೦ ರೂಪಾಯನ್ನೇ ಆಯಾ ಆಸ್ಪತ್ರೆಯ ಖರ್ಚಿಗೆ ತಕ್ಕಂತೆ ಹಂಚಿಕೊಟ್ಟಲ್ಲಿ ಸಾಕಾದೀತೆಂದು ತೋರುತ್ತಾದ್ದರಿಂದ ಹೆಚ್ಚು ಹಣವನ್ನು ಸ್ಯಾಂಕ್ಷನ್ ಮಾಡಬೇಕಾಗಿಲ್ಲ. ಬೆಂಗಳೂರು ಆಸ್ಪತ್ರೆಯ ಖರ್ಚಿಗೆ ೪೦೦ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ. ಪುಸ್ತಕಗಳನ್ನೂ ಮಾಸಿಕ ಪತ್ರಿಕೆಗಳನ್ನೂ ತರಿಸಿಕೊಳ್ಳುವುದಕ್ಕಾಗಿ ೫೦೦ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಇನ್ಸ್‌ಪೆಕ್ಟರವರು ಅವುಗಳನ್ನು ತರಿಸಿ ತಮ್ಮ ಅಸಿಸ್ಟೆಂಟರುಗಳಿಗೆ ಹಂಚಿಕೊಡತಕ್ಕದ್ದು.

ಗೋಕಾಯಿಗಳ ಮರಣವು.

ಕಳೆದ ಜನವರಿ, ಫೆಬ್ರವರಿ, ಮಾರ್ಚಿ, ಈ ಮೂರು ತಿಂಗಳಲ್ಲಿ ಈ ಸಂಸ್ಥಾನದಲ್ಲಿ ರೋಗ, ಮೃಗಬಾಧೆ, ಆಕಸ್ಮಿಕಮರಣ ಮುಂತಾದ ಕಾರಣಗಳಿಂದ ಒಟ್ಟು [illegible] ಪಶುಗಳು ಅಂದರೆ ಹಸು, ಗೂಳಿ, ಎತ್ತು, ಕೋಣ, ಎಮ್ಮೆ, ಕುರಿ, ಆಡು, ಕುದುರೆ, ಕತ್ತೆ ಸತ್ತುಹೋದವು. ಹಿಂದಿನ ವರುಷ ಅದೇ ಮೂರು ತಿಂಗಳುಗಳಲ್ಲಿ [illegible] ದನಗಳು ಕಾಲವಾದವು. ಕಡೂರು ವಿನಹ ಉಳಿದ ಎಲ್ಲಾ ಡಿಸ್ಟ್ರಿಕ್ಟುಗಳೊಳಗೂ ಕಾಲುಬಾಯಿಜ್ವರ, ದೊಡ್ಡರೋಗ, ಚಪ್ಪೆರೋಗ, ನೆರಡಿರೋಗ, ಈ ಜಾಡ್ಯಗಳು ಪ್ರಬಲವಾಗಿದ್ದವು. ಇದಲ್ಲದೆ ಹುಲ್ಲು ನೀರು ಇಲ್ಲದೆ ದುಷ್ಕಾಲಪ್ರಾಪ್ತವಾಗಿದ್ದದ್ದರಿಂದಲೂ ಗೋಕಾಯಿಗಳು ಇಷ್ಟು ವಿಶೇಷವಾಗಿ ಸಾಯಲು ಕಾರಣವಾಯಿತು. ಅದೇ ಮೂರು ತಿಂಗಳಲ್ಲಿ ಗೋಕಾಯಿಗಳ ರೋಗಚಿಕಿತ್ಸಕರಾದ ವೈದ್ಯರು ಗ್ರಾಮಾಂತರಗಳ ಮೇಲೆ ಸಂಚಾರಮಾಡಿ, ರೋಗಗಳು ಪ್ರಬಲಿಸದಂತೆ ಒಟ್ಟು [illegible] ಪಶುಗಳಿಗೆ [illegible]ಗಳನ್ನು ಹಾಕಿರುತ್ತಾರೆ. ಇದರ ವಿವರ ಹ್ಯಾಗೆಂದರೆ—ಬೆಂಗಳೂರು [illegible], ಕೋಲಾರ [illegible], ತುಮಕೂರು [illegible], ಮೈಸೂರು [illegible], ಹಾಸನ [illegible], ಶಿವಮೊಗ್ಗ [illegible], ಕಡೂರು [illegible], ಚಿತ್ರದುರ್ಗ [illegible]. ಈ ವೈದ್ಯರು [illegible] ಹೆಚ್ಚಾಗಿ ಪ್ರೋತ್ಸಾಹವನ್ನುಂಟುಮಾಡಿ ಇನ್ನೂ ಹೇರಳವಾಗಿ ದನಗಳಿಗೆ [illegible] ಹಾಕುತ್ತಾರೆಂದು ಗವರನ್‌ಮೆಂಟಿನವರು ನಿರೀಕ್ಷಿಸುವರು.

ತಕಾವಿ ಮುಂತಾದದ್ದಕ್ಕೆ ಸಾಲ ಕೊಡುವುದು.

ಕಳೆದ ೧೯೦೮-೦೯ ನೇ ಸಾಲಿನಲ್ಲಿ ಸಂಸ್ಥಾನದೊಳಗೆ ದುಷ್ಕಾಲದ ಕಷ್ಟ ಪರಿಹಾರಾರ್ಥವಾಗಿ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ ಹಣದ ಪೈಕಿ ಉಳಿದಿರುವುದನ್ನು ೧೯೦೯-೧೦ ನೇ ಸಾಲಿನಲ್ಲೂ ವಿನಿಯೋಗಿಸಿಕೊಳ್ಳಬಹುದೇ ಎಂದು ರೆವಿನ್ಯೂ ಕಮಿಷನರವರು ಕೇಳಿದ್ದರ ಮೇಲೆ ಗವರ್ನ್‌ಮೆಂಟಿನವರು ಅಪ್ಪಣೆಕೊಡಿಸಿರುವುದೇನೆಂದರೆ—ಈ ಯಾವ ಬಾಬಿನಲ್ಲಿ ಎಷ್ಟೆಷ್ಟು ಹಣ ಮಿಗತೆ ಉಳಿದಿದೆಯೋ ರೆವಿನ್ಯೂ ಕಮಿಷನರವರು ತಿಳಿಸಬೇಕಾಗಿತ್ತು. ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಲೆಕ್ಕಗಳಿಂದ ಗೊತ್ತಾಗುವುದೇನೆಂದರೆ, (೧) ತಕಾವಿ ಮತ್ತು [illegible] ಕೊಡತಕ್ಕ ಸಾಲಗಳಿಗೆ ಗವರ್ನ್‌ಮೆಂಟಿನವರು [illegible] ರೂಪಾಯಿಯಲ್ಲಿ, (೨) ನಿರ್ಗತಿಕರಿಗೆ ಆಶ್ರಯಕೊಡುವ [illegible] ಸ್ಯಾಂಕ್ಷನ್ ಆದ [illegible] ರೂಪಾಯಿಯ ಪೈಕಿ [illegible] ರೂಪಾಯಿ ಉಳಿದಿದೆ. ಆದರೆ (೩) ರೈತರಿಗೆ ಒಳ್ಳೇ ಬಿತ್ತನೆಯ ಬೀಜವನ್ನು ಕೊಂಡುತರಿಸಿ ಹಂಚುವುದಕ್ಕೆ ಸ್ಯಾಂಕ್ಷನ್ ಆದ ೧೧,೦೦೦ ರೂಪಾಯಿ [illegible], (೪) ಗೋಕಾಯಿಗಳ ಹುಲ್ಲನ್ನು ತರಿಸಿಕೊಡುವುದಕ್ಕೆ ಸ್ಯಾಂಕ್ಷನ್ ಮಾಡಲ್ಪಟ್ಟ [illegible] ರೂಪಾಯಿಯಲ್ಲಿ ಎಷ್ಟೆಷ್ಟು ಖರ್ಚಾಗಿದೆಯೋ, ಏನು ಮಿಕ್ಕಿದೆಯೋ ತಿಳಿಯಬರಲಿಲ್ಲ. ರೆವಿನ್ಯೂ ಕಮಿಷನರವರು ಈ ಉಳಿಕೆಯ ಹಣವನ್ನು ಆಯಾ ಉದ್ದೇಶಗಳಿಗೆ ವಿನಿಯೋಗಿಸಿಕೊಳ್ಳುವ ಭಾಗದಲ್ಲಿ ಗವರನ್‌ಮೆಂಟಿನವರ ಅಡ್ಡಿಯೇನೂ ಇರುವುದಿಲ್ಲ. ಮತ್ತು ಇನ್ನೂ ಹೆಚ್ಚು ಹಣ ಬೇಕಾದ ಪಕ್ಷಕ್ಕೆ ಗವರನ್‌ಮೆಂಟಿನವರು ಸ್ಯಾಂಕ್ಷನ್‌ಮಾಡಿ ಕೊಡಲು ಸಿದ್ಧರಾಗಿದ್ದಾರೆ. [illegible] ಸಾಲಗಳನ್ನು ತೀರಿಸುವುದಕ್ಕೆ ಈ ಹಣವನ್ನು ಅವರಿಗೆ ಸಾಲವಾಗಿ ಕೊಡಬೇಕೇ ವಿನಹಾ ಹೊಸ ಸಾಲಗಳನ್ನು [illegible] ಕೊಡದಂತೆ ನೋಡಿಕೊಳ್ಳಬೇಕಾಗಿದೆ.

ಸರ್ಕಾರದಿಂದ ಜೀವನ ನಡಿಸುವುದು

ಸರ್ಕಾರದವರು ದುಷ್ಕಾಲದ ನಿಮಿತ್ತ ಬಹಳ ನಿರ್ಗತಿಕರಾಗಿರತಕ್ಕವರಿಗೆ ಸಂಸ್ಥಾನದೊಳಗೆ ಜೀವನ ನಡಿಸಬೇಕೆಂದು ಹುಕುಂ ಮಾಡಿದ್ದರ ಮೇಲೆ ರೆವಿನ್ಯೂ ಕಮಿಷನರವರು ಆ ರೀತಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಏರ್ಪಾಡು ಇಟ್ಟು ಆ ವಿಷಯದ ಬಗ್ಗೆ ಡೆಪ್ಯುಟಿ ಕಮಿಷನರುಗಳಿಂದ ಬಂದ ರಿಪೋರ್ಟನ್ನು ಸಂಕ್ಷೇಪೀಕರಿಸಿ ಗವರ್ನ್‌ಮೆಂಟಿಗೆ ತಿಳಿಸಿದರು. ಸರ್ಕಾರದವರು ಈ ರಿಪೋರ್ಟನ್ನು ರಿಕಾರ್ಡು ಮಾಡಿಕೊಂಡು, ಹಾಸನ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ರಿಪೋರ್ಟು ಬಾರದೆಹೋದದ್ದಕ್ಕಾಗಿ ವಿಷಾದವನ್ನು ಸೂಚಿಸಿರುತ್ತಾರೆ. ರೆವಿನ್ಯೂ ಕಮಿಷನರವರ ರಿಪೋರ್ಟಿನಲ್ಲಿ ಕಂಡು ಬರುವ ಮುಖ್ಯಾಂಶಗಳೇನೆಂದರೆ—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ [illegible] ಜನರು, ಕೋಲಾರದಲ್ಲಿ [illegible] ಜನರು, ತುಮಕೂರಿನಲ್ಲಿ [illegible] ಜನರು, ಮೈಸೂರಿನಲ್ಲಿ [illegible] ಜನರು, ಚಿತ್ರದುರ್ಗದಲ್ಲಿ [illegible] ಜನರು, ಕಡೂರಿನಲ್ಲಿ ೩ ಜನರು ಸರ್ಕಾರದಿಂದ ಜೀವನಕ್ಕೆ ಧಾನ್ಯಾದಿಗಳನ್ನು ಪಡೆಯುತ್ತಿದ್ದರು. ಕೆಲವು ಕಡೆ ಶೇಕದಾರರ ಮೇಲ್ವಿಚಾರಣೆಯಿಂದ ಪಟೇಲ್ ಶ್ಯಾನುಭೋಗರು ರಾಗಿಯನ್ನು ಬಡವರಿಗೆ ಅಳೆದರು; ಕೆಲವು ಕಡೆ ಪಟೇಲ್ ಶ್ಯಾನುಭೋಗರೇ ಸ್ಥಳೀಯ ಮುಖಂಡರೊಡನೆ ಕಲೆತು ಧಾನ್ಯವನ್ನು ಹಂಚುತ್ತಿದ್ದರು; ಇನ್ನು ಕೆಲವು ಕಡೆ ವರ್ತಕರೇ ಧಾನ್ಯವನ್ನು ಬಡವರಿಗೆ ಅಳೆ

ಯುತ್ತಾ ಬಂದು ಅವರ ಕ್ರಯವನ್ನು ಅಮಲ್ದಾರರಿಗೆ ತಿಳಿಸಿ ಅವರಿಂದ ಹಣವನ್ನು ಪಡೆದು, ಮತ್ತೆ ಕೆಲವು ಸ್ಥಳಗಳಲ್ಲಿ ಶಾನುಭೋಗರು ಸಂತೆಗಳಲ್ಲಿ ಧಾನ್ಯವನ್ನು ಕೊಂಡುತಂದು ಗ್ರಾಮ ನೌಕರ ಸಹಾಯವನ್ನು ಪಡೆದು ಬಡಬಗ್ಗರಿಗೆ ಅಳೆಯುತ್ತಿದ್ದರು; ಶಿವಮೊಗ್ಗೆಯಲ್ಲಿ ಬಡಬಗ್ಗರಿಗೆ ಧಾನ್ಯಕ್ಕೆ ಪ್ರತಿಯಾಗಿ ವಾರ ಕ್ಕೊಂದಾವರ್ತಿ ದುಡ್ಡನ್ನೇ ಬಟವಾಡೆಮಾಡಿದರು. ಎಲ್ಲಾ ಕಡೆಗಳಲ್ಲೂ ಸರ್ಕಾರದಲಿಸಿನಲ್ಲಿ ತಂದ ದರದಂತೆ ಧಾನ್ಯವನ್ನು ಅಳೆಯಲಾಗಿದೆ. ಆದರೆ ಅರಸೀಕೆರೆಯಲ್ಲೂ ಚಿಕ್ಕನಾಯಕನಹಳ್ಳಿಯಲ್ಲೂ ಆ ದರಗಳಿಗಿಂತ ಸ್ವಲ್ಪ ಹೆಚ್ಚಾಗಿ ಕೊಟ್ಟರು ಎಂತೆ ತಿಳಿಯಬರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಮೊದಲು ಜೂನ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಯ ಹುಟ್ಟುವಳಿ ಲೆಕ್ಕ ಮುಂತಾದದ್ದನ್ನು ಓದಿ ಪಾಸ್ ಮಾಡಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೯,೫೨೪ ಚಿಲ್ಲರೆ ರೂಪಾಯಿ ಉತ್ಪತ್ತಿಯಾಯಿತು, ೩೦,೫೮೯ ಚಿಲ್ಲರೆ ರೂಪಾಯಿ ಖರ್ಚಾಯಿತು. ಈ ಪೈಕಿ ಜನರಲ್ ಆಸ್ಪತ್ರೆಯ ಎದುರಿನಲ್ಲಿ ಕಟ್ಟಲ್ಪಡುವ ಕೈದಾರಿಗೆ ಹಾಕತಾಲೆಗೆ ಅಲ್ಲಿದ್ದ ಕೆಲವು ಮನೆಗಳನ್ನು ಕೊಂಡದ್ದಕ್ಕೆ ಸುಮಾರು ೧೫,೦೦೦ ರೂಪಾಯಿ ಖರ್ಚಾಗಿದೆ ಎಂದೂ, ಈ ಹಣವು ಗವರ್ನಮೆಂಟಿನಿಂದ ಮ್ಯುನಿಸಿಪಾಲಿಟಿಗೆ ವಾಪಸು ಕೊಡಲ್ಪಡುವುದೆಂದೂ ತಿಳಿಯಿತು. ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ಜನನ ೬೧, ಮರಣ ಪ್ಲೇಗ್ ೩೩, ಸಿಡುಬು ೪೯, ಜ್ವರ ೧೪, ಇತರ ಕಾರಣಗಳು ೧೨೩, ಅಂತು ೨೧೮ ಎಂದು ಗೊತ್ತಾಯಿತು. ಈಗ ರಾಜಧಾನಿಯಲ್ಲಿ ೯೦೦ ವಿದ್ಯುಚ್ಛಕ್ತಿಯ ದೀಪಗಳನ್ನು ಇಟ್ಟಿರುವುದು ಸಾಲದಾದ್ದರಿಂದ ಇನ್ನೂ ೨೫೦ ದೀಪಗಳನ್ನು ಹೆಚ್ಚಾಗಿ ಇಡಿಸುವಂತೆ ವೈಸ್ ಪ್ರೆಸಿಡೆಂಟರು ವಿದ್ಯುಚ್ಛಕ್ತಿಯ ಇಲಾಖೆಗೆ ಬರೆದಿದಾರೆ. ಇನ್ನು ದೀಪಗಳು ಇಟ್ಟಾಗ್ಯೂ ಗಲ್ಲಿ ಮೊದಲಾದ ಇಕ್ಕಟ್ಟಾದ ಕೆಲವು ಸ್ಥಳಗಳಲ್ಲಿ ಇನ್ನೂ ೩೦೦ ಎಣ್ಣೆ ದೀಪಗಳನ್ನು ಇಡಬೇಕಾಗುವದೆಂದು ವೈಸ್ ಪ್ರೆಸಿಡೆಂಟರ ತಿಳಿಸಿದರು. ಆಡಿಟರ ರಿಪೋರ್ಟಿನ ಮೇಲೆ ಕರ್ನಲ್ ವೆಸ್ಟ್ ರವರ ಹೆಲ್ತ್ ಆಫೀಸರವರು ಇದುವರೆಗೆ ಎಷ್ಟು ವಸೂಲಾಗಿರುತ್ತೆಂಬುದಕ್ಕೆ ಅವರಿಂದ ಸರಿಯಾದ ಲೆಕ್ಕವನ್ನು ತರಿಸಬೇಕೆಂದು ಪ್ರೆಸಿಡೆಂಟರು ಹುಕುಂ ಮಾಡಿದರು.

ಮ್ಯುನಿಸಿಪಲ್ ಕೌನ್ಸಿಲಿಂದ ಇಬ್ಬರನ್ನು ಪ್ರತಿನಿಧಿಗಳಾಗಿ ಶಾಸನಸಭೆಗೆ ಚುನಾವಣೆ ಮಾಡಿ ಕಳುಹಿಸುವ ವಿಚಾರದಲ್ಲಿ ಈ ತಿಂಗಳ ಮಧ್ಯಭಾಗದಲ್ಲಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿ ಅಲ್ಲಿ ಚುನಾವಣೆ ನಡೆಸಬಹುದೆಂದು ಕೌನ್ಸಲರುಗಳು ಅಭಿಪ್ರಾಯಪಟ್ಟರು.

ಮೈಸೂರು ಪಟ್ಟಣದ ಪ್ರಜೆಗಳಲ್ಲಿ ಬಡಬಗ್ಗರನ್ನು ಹುಚ್ಚುನಾಯಿ ಕಚ್ಚಿದರೆ ಅವರು ಚಿಕಿತ್ಸೆಗಾಗಿ ಕೂನೂರಿನ ಆಸ್ಪತ್ರೆಗೆ ಹೋಗಬೇಕೆಂದು ಇಷ್ಟಪಟ್ಟರೆ ಅವರ ರೈಲ್ ಚಾರ್ಜು ಮುಂತಾದ ಖರ್ಚನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕೆಂದು ಗವರ್ನಮೆಂಟ್ ಸೆಕ್ರೆಟರಿಯವರು ಬರೆದಿದ್ದ ಕಾಗದವನ್ನು ಕೌನ್ಸಲರುಗಳು ಓದಿ, ಅಂಥ ಖರ್ಚನ್ನು ಮ್ಯುನಿಸಿಪಲ್ ಹಣದಿಂದ ಕೊಡುವುದು ನ್ಯಾಯವೆಂದು ಒಪ್ಪಿಕೊಂಡರು.

ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯಿಂದ ಸಹಾಯ ದ್ರವ್ಯವನ್ನು ಪಡೆಯುತ್ತಿರುವ ಪಾಠಶಾಲೆಗಳ ಮೇಲ್ವಿಚಾರಣೆ ನಡಿಸಿಕೊಳ್ಳುವದಕ್ಕೆ ಒಬ್ಬ ಸೂಪರಿಂಟೆಂಡೆಂಟರನ್ನು ನೇಮಿಸುವುದು ಒಳ್ಳೆಯದೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಸೂಚಿಸಿದ್ದರು. ಈ ವಿಚಾರವು ಸ್ವಲ್ಪ ಚರ್ಚೆಯಾಯಿತು. ಪ್ರೈಮರಿ ಪಾಠಶಾಲೆಗಳಿಗೆ ಈಗ ಮ್ಯುನಿಸಿಪಾಲಿಟಿಯಿಂದ ಕೊಡುತ್ತಿರುವ ೮೦೦ ರೂಪಾಯಿ ಗ್ರಾಂಟಿನಿಂದ ಮಕ್ಕಳ ವಿದ್ಯಾಭ್ಯಾಸವು ತೃಪ್ತಿಕರವಾಗಿ ನಡೆಯುವದಕ್ಕೆ ಅವಕಾಶವಿಲ್ಲವೆಂದೂ, ಸೆಕೆಂಡರಿ ಪಾಠಶಾಲೆಗಳಿಗೆ ಮ್ಯುನಿಸಿಪಲ್ ಹುಟ್ಟುವಳಿಯಿಂದ ಈಗ ಸಲ್ಲುತ್ತಿರುವ ಭಾರೀ ಗ್ರಾಂಟುಗಳನ್ನು ಗವರ್ನಮೆಂಟಿನವರು ವಹಿಸಿಕೊಂಡಲ್ಲಿ ಮ್ಯುನಿಸಿಪಾಲಿಟಿಗೆ ಈ ಬಾಬಿನಲ್ಲಿ ಉಳಿಕೆಯಾಗುವ ಹಣವನ್ನು ಪ್ರೈಮರಿ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲು ತುಂಬಾ ಸಹಾಯವಾಗುವುದೆಂತಲೂ, ಈ ವಿಚಾರವನ್ನು ಹಿಂದೆಯೇ ಮ್ಯುನಿಸಿಪಾಲಿಟಿಯವರು ಗವರ್ನಮೆಂಟಿನವರಿಗೆ ಅರಿಕೆ ಮಾಡಿಕೊಂಡಿದಾರೆಂತಲೂ, ಅವರು ಅದನ್ನು ಇತ್ಯರ್ಥಪಡಿಸಿದನಂತರ ಸೂಪರಿಂಟೆಂಡೆಂಟರನ್ನು ನೇಮಿಸುವ ವಿಚಾರವನ್ನು ಆಲೋಚಿಸಬಹುದೆಂತಲೂ ಕೌನ್ಸಲರುಗಳು ಅಭಿಪ್ರಾಯಪಟ್ಟರು.

ರಾಜಧಾನಿಯಲ್ಲಿ ಅನೇಕ ಮನೆಯವರು ನೀರಿನ ನಲ್ಲಿಗಳನ್ನು ಇಡಿಸಿಕೊಂಡಿದಾರೆ. ಅದಕ್ಕಾಗಿ ನೀರಿನ ತೆರಿಗೆಯನ್ನು ಮ್ಯುನಿಸಿಪಾಲಿಟಿಯವರು ವಸೂಲ್ಮಾಡುವರು. ನೀರಿನ ಇಲಾಖೆಯವರು ಈಗ ಅಂಥಾ ಮನೆಗಳಿಗೆಲ್ಲಾ ಮೀಟರ್ ಎಂಬ ಅಳತೆಯ ಯಂತ್ರಗಳನ್ನು ಇಡುತ್ತಿದಾರೆ. ಮನೆಯವರು ಜಾಸ್ತಿ ನೀರನ್ನು ಉಪಯೋಗಿಸಿದ ಪಕ್ಷದಲ್ಲಿ ಅವರಿಂದ ಅಂಥಾ ನೀರಿಗೆ ಹೆಚ್ಚು ದರವನ್ನು ವಸೂಲ್ಮಾಡಬೇಕಾಗುವುದೆಂದೂ, ಈ ವಸೂಲಾತಿಯನ್ನು ಮ್ಯುನಿಸಿಪಾಲಿಟಿಗಿಂತ ನೀರಿನ ಇಲಾಖೆಯವರಿಗೇ ವಹಿಸುವದು ಉತ್ತಮವೆಂದೂ ಗವರ್ನಮೆಂಟಿನವರು ಸೂಚಿಸಿದ್ದರು. ಕೌನ್ಸಲರುಗಳು ಈ ಏರ್ಪಾಡನ್ನು ಬೆಂಗಳೂರಿನಲ್ಲಿರುವಂತೆಯೇ ಮೈಸೂರಿನಲ್ಲೂ ಈ ದರವು ವಸೂಲ್ಮಾಡುವುದನ್ನು ಮ್ಯುನಿಸಿಪಾಲಿಟಿಗೇ ವಹಿಸಬೇಕೆಂದು ತೀರ್ಮಾನಿಸಿದರು.

ಕುರುಬಾರಹಳ್ಳಿಯ ಕೆರೆ ಏರಿಯು ಬಹಳ ಕಿರಿದಾಗಿರೋಣದರಿಂದ ಜನ ಜಾನುವಾರುಗಳು ಕೆರೆಯೊಳಕ್ಕೆ ಬೀಳದಂತೆ ಏರಿಯ ಉದ್ದಕ್ಕೂ ಎರಡು ಕಡೆಗಳಲ್ಲೂ ರೈಲ್ ಕಂಬಿಗಳನ್ನು ಹಾಕಿ ಕಟಕಟೆ ಕಟ್ಟಬೇಕೆಂದು ಗೊತ್ತುಮಾಡಿ, ಅದಕ್ಕೆ ತಯಾರಾಗಿದ್ದ ೧,೯೩೪ ರೂಪಾಯಿನ ಅಂದಾಜು ಪಟ್ಟಿಯನ್ನು ಪಾಸ್ ಮಾಡಿದರು.

ಚಿತ್ರದುರ್ಗದ ಡೆಪ್ಯುಟಿ ಕಮಿಷನರವರು ಆ ಡಿಸ್ಟ್ರಿಕ್ಟಿನಲ್ಲಿ ಹೊಗೆಸೊಪ್ಪನ್ನು ಉತ್ತಮ, ಮಧ್ಯಮ, ಅಧಮವೆಂಬ ಮೂರು ತರಗತಿಗಳಾಗಿ ಮಾಡಿ ಮಣ ೧ಕ್ಕೆ ೧ ರೂಪಾಯಿ, ೮ ಆಣೆ, ೪ ಆಣೆ ಪ್ರಕಾರ ಸುಂಕವನ್ನು ವಸೂಲ್ಮಾಡಬೇಕೆಂದು ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಬ್ಬ ಮೆಂಬರು ಸೂಚಿಸಿದರೆಂತಲೂ, ಇದಕ್ಕೆ ಪ್ರತಿಯಾಗಿ ಸೊಪ್ಪನ್ನು ವಿಂಗಡಿಸದೆ ಮಣಕ್ಕೆ ೮ ಆಣೆಯಂತೆ ಸಾಧಾರಣವಾಗಿ ಹಾಕಿ ವಸೂಲ್ಮಾಡುವುದು ಒಳ್ಳೆಯದೆಂತಲೂ ಗವರ್ನಮೆಂಟಿಗೆ ಬರೆದು ತಿಳಿಸಿದರು. ಗವರ್ನಮೆಂಟಿನವರು ಈ ವಿಚಾರವನ್ನು ಮ್ಯುನಿಸಿಪಲ್ ಕೌನ್ಸಿಲ್ಲಿಗೆ ತಿಳಿಸಿ, ಅವರ ಅಭಿಪ್ರಾಯವನ್ನು ಕೇಳಿದರು. ಕೌನ್ಸಲರುಗಳು ಆಲೋಚನೆ ಮಾಡಿ, ಡೆಪ್ಯುಟಿ ಕಮಿಷನರವರು ಸೂಚಿಸಿರುವ ಒಂದೇ ದರವೇ ಸಹಜವಾಗಿದೆ ಎಂದು ಗವರ್ನಮೆಂಟಿಗೆ ತಿಳಿಸುವಂತೆ ಗೊತ್ತುಮಾಡಿದರು.

ರಾಜಧಾನಿಯಲ್ಲಿರುವ ಗವರ್ನಮೆಂಟ್ ಹೌಸ್ ಬಂಗಲೆಯ ಆಫೀಸರು ಆ ಬಂಗಲೆಯ ಹೊರಪಾರ್ಶ್ವದಲ್ಲಿರುವ ರಸ್ತೆಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿಕೊಡಬೇಕೆಂದು ಕೇಳಿದ್ದಕ್ಕೆ ಮ್ಯುನಿಸಿಪಲ್ ಕೌನ್ಸಲರುಗಳು ಅದು ಅವಶ್ಯವೆಂದೂ, ಆ ಸ್ಥಳದಲ್ಲಿ ದೀಪಗಳನ್ನು ಇಡಿಸಬೇಕೆಂದೂ ಗೊತ್ತುಮಾಡಿದರು.

ಮೈಸೂರು ಪಟ್ಟಣದಲ್ಲಿರುವ ಆಸ್ಪತ್ರೆಗಳೊಳಗೆ ನೀರು ತಂದುಹಾಕುವ ಹೆಂಗಸರ ಸಂಬಳವನ್ನು ಎರಡು ರೂಪಾಯಿ ಜಾಸ್ತಿ ಮಾಡಿದೆ ಎಂದೂ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಆಸ್ಪತ್ರೆಗಳಲ್ಲಿರುವ ಅಂಥಾ ಸೇವಕಿಯವರ ಸಂಬಳವನ್ನು ಒಂದು ರೂಪಾಯಿ ಇಜಾಫೆ ಮಾಡಿದೆ ಎಂದೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದನ್ನು ಕೌನ್ಸಲರುಗಳು ಓದಿ ರೆಕಾರ್ಡು ಮಾಡಿಕೊಂಡರು.

ರಾಜಧಾನಿಯ ಚಟ್ಟಹಳ್ಳಿ ಉಕ್ಕಡದ ಟೋಲ್ ಗೇಟ್ ಕಂಟ್ರಾಕ್ಟರು ಊರು ಬಿಟ್ಟು ಹೋಗೋಣದರಿಂದ ಆತನ ಹೆಸರಿಗಿರುವ ಕಂಟ್ರಾಕ್ಟನ್ನು ಇಲವಾಲ ಟೋಲ್ ಗೇಟ್ ಕಂಟ್ರಾಕ್ಟರಿಗೆ ವರ್ಗ ಮಾಡಬಹುದೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದ್ದನ್ನು ಕೌನ್ಸಲರುಗಳು ಒಪ್ಪಿಕೊಂಡಿದಾರೆ.

ರಾಜಧಾನಿಯ ಬೇರೆ ಬೇರೆ ಮೊಹಲ್ಲೆಗಳಲ್ಲಿ ಬಾಕಿ ಇದ್ದು ವಸೂಲಾಗದೆ ಇರುವ ಕಂದಾಯಗಳನ್ನು ರಿಮಿಷನ್ ಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು. ಈ ರೀತಿ ಸುಮಾರು ೭,೦೦೦ ರೂಪಾಯಿನ ಕಂದಾಯಗಳು ರಿಮಿಷನ್ ಮಾಡಲ್ಪಟ್ಟವು.

ಹೆಲ್ತ್ ಆಫೀಸರವರೇ ಪಟ್ಟಣದ ಎಲ್ಲಾ ಮೊಹಲ್ಲೆಗಳಲ್ಲೂ ಹಿತ್ತಲುಗಳನ್ನು ಗುಡಿಸುವಂತೆ ಏರ್ಪಾಡು ಮಾಡಬೇಕೆಂತಲೂ, ಇದಕ್ಕಾಗಿ ಪ್ರತಿ ಮನೆಯವರಿಂದಲೂ ಬೆಂಗಳೂರಿನಲ್ಲಿರುವ ದರಗಳಂತೆ ತೆರಿಗೆಯನ್ನು ಹಾಕಿ ಏನುಬೇಕೆಯೋ ಅನ್ನು ವಸೂಲ್ಮಾಡಬೇಕೆಂತಲೂ ಕೌನ್ಸಲರುಗಳು ತೀರ್ಮಾನ ಮಾಡಿರುತ್ತಾರೆ. ಬೆಂಗಳೂರಿನಲ್ಲಿ ಒಂದು ರೂಪಾಯಿನೊಳಗೆ ತೆರಿಗೆ ಕೊಡತಕ್ಕ ಮನೆಗಳಿಗೆ ಕಚರಾ ಗುಡಿಸುವ ತೆರಿಗೆಯನ್ನು ಹಾಕಿಲ್ಲ. ಮೈಸೂರಿನಲ್ಲಿ ಹೀಗೆ ವಿನಾಯಿತಿ ಮಾಡಕೂಡದೆಂದೂ ಒಂದು ರೂಪಾಯಿನೊಳಗೆ ತೆರಿಗೆ ಕೊಡತಕ್ಕ ಮನೆಗಳಿಂದ ತಿಂಗಳಿಗೆ ಒಂದು ಆಣೆಯಂತೆ ವಸೂಲ್ಮಾಡಬೇಕೆಂದೂ, ಬಹಳ ಬಡವರಾಗಿದ್ದ ಪಕ್ಷದಲ್ಲಿ ಮಾಫ್ ಮಾಡಬಹುದೆಂತಲೂ ಗೊತ್ತುಮಾಡಿದಾರೆ.

ಮುಂದೆ ನವಂಬರ್ ತಿಂಗಳಲ್ಲಿ ವೈಸ್‌ರಾಯಿಯವರು ರಾಜಧಾನಿಗೆ ದಯಮಾಡುವವರಾಗಿರೋಣದರಿಂದ ಆ ಕಾಲದಲ್ಲಿ ಇಲ್ಲಿನ ಮುಖ್ಯವಾದ ರಸ್ತೆಗಳನ್ನು ದುರಸ್ತುಮಾಡಿ ಚನ್ನಾಗಿಟ್ಟಿರಬೇಕೆಂದು ಯೋಚಿಸಿ ಅದಕ್ಕೆ ಮ್ಯುನಿಸಿಪಲ್ ಇಂಜನಿಯರಿಂದ ಅಂದಾಜುಪಟ್ಟಿಗಳನ್ನು ತಯಾರ್ ಮಾಡಿಸಿದ್ದರು. ಅವರು ರಿಪೇರಿಗಾಗಿ ಒಟ್ಟು ಸುಮಾರು ೧೫,೦೦೦ ರೂಪಾಯಿ ಬೇಕಾಗುವುದೆಂದು ಸೂಚಿಸಿದರು. ವೈಸ್ ಪ್ರೆಸಿಡೆಂಟರವರು ಆ ಪೈಕಿ ಮ್ಯುನಿಸಿಪಲ್ ಹಣದಿಂದ ೫,೦೦೦ ರೂಪಾಯಿ ಕೊಡಬಹುದೆಂದು ಅಭಿಪ್ರಾಯಪಟ್ಟದ್ದರಿಂದ ಉಳಿದ ಹಣವನ್ನು ಸರ್ಕಾರದಿಂದ ಕೊಡಿಸುವಂತೆ ಕೇಳಿಕೊಳ್ಳಬೇಕೆಂದು ಕೌನ್ಸಲರುಗಳು ತೀರ್ಮಾನ ಮಾಡಿದರು.

ವಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾತ್ರಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ವಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ವಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ವಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

೮ ಮುನಿಸಾಮಿಶೆಟ್ಟರು-ಚಿಂತಾಮಣಿ. ಶ್ರೀ ಕೃಷ್ಣೋತ್ಸವ ವಿವರಣೆ ಸನಿಯ ವಿಷಯ. ಪೋಸ್ಟ್ ಆಫೀಸರ್-ಚಿತ್ರದುರ್ಗ —ಈ ವಾತ್ರಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ನಾಗಲಿಂಗಶಾಸ್ತ್ರಿಗಳು, ಬಿಡಲೂರು.—ನೀವು ವಿವರಿಸುವ ವಿಷಯವನ್ನು ಪೋಲೀಸ್ ಸೂಪರಿಂಟೆಂಡೆಂಟರಿಗೆ ಬರೆದು ತಿಳಿಸಿ.

—ಎಡಿ.]

ಕರೆಸ್‌ಪಾಂಡೆನ್ಸ್.

ಗೌರ್ನಮೆಂಟಿನವರು ವಿಚಾರಿಸಲಿಲ್ಲ.

ಅಯ್ಯಾ,

ಚಿತ್ರದುರ್ಗದ ವಾಸಿಸ್ಥ ಭಾರೀ ರೈತನೂ ಹಾಗೂ ವರ್ತಕನೂ ಆಗಿರುವ ಲಾಡರ್ ರಾಮಣ್ಣನಾದ ನಾನು ನನಗೆ ಆಗಿರತಕ್ಕ ಅನ್ಯಾಯವನ್ನು ಈ ಕೆಳಗೆ ಹೇಳುತ್ತೇನೆ. ದಯವಿಟ್ಟು ನಿಮ್ಮ ಪತ್ರಿಕೆಯಲ್ಲಿ ಪ್ರಚುರ ಮಾಡಿರಿ.

ಅನೂಚಾನವಾಗಿ ನಾನು ಈ ಚಿತ್ರದುರ್ಗದ ಸ್ಥಳದವನಾಗಿದೇನೆ. ಇದೇ ತಾಲ್ಲೂಕಿನಲ್ಲಿ ೧೦೦ ರೂಪಾಯಿನ ಮೇಲ್ಪಟ್ಟ ಕಂದಾಯ ಕೊಡತಕ್ಕ ರೈತನಾಗಿಯೂ, ವ್ಯಾಪಾರ ನಡಿಸತಕ್ಕ ವರ್ತಕನಾಗಿಯೂ ಇರುತ್ತೇನೆ. ನನಗೆ ೭೮ ವರುಷ ವಯಸ್ಸಾಗಿದೆ. ನನಗೆ ಪ್ರಾಯಸ್ಥರಾದ ೪ ಜನ ಗಂಡುಮಕ್ಕಳಿದಾರೆ. ಅವರೂ, ಅವರ ಸಂಸಾರಗಳೂ, ನಾನೂ ನನ್ನ ಕುಟುಂಬವೂ ಮೇಲಿನ ಕಸುಬಿನಿಂದ ಜೀವನಮಾಡತಕ್ಕವರಾಗಿದೇವೆ.

ಈ ದೇಶದಲ್ಲಿ ಇಂಗ್ಲೀಷ್ ಗೌರ್ನಮೆಂಟು ಇದ್ದಾಗಲೂ, ಅಲ್ಲಿಂದೀಚೆಗೆ ನಮ್ಮ ಲೇಟ್ ಮಹಾರಾಜ ರಾಜಾಸಾಹೇಬ್ ಬಹದ್ದೂರರವರು ಕಾಲವಾಗುವವರೆಗೂ ದೇಶವೂ ನಾವೂ ಎಲ್ಲರೂ ಸೌಖ್ಯವಾಗಿಯೇ ಇದ್ದೆವು. ಆದರಿಂದೀಚೆಗೆ ಏನು ವಿಷಮಕಾಲ ಬಂತೋ ದೇವರೇ ಬಲ್ಲ! ಡಿಸ್ಟ್ರಿಕ್ಟ್ ಅಧಿಕಾರಿಗಳು ಮೊದಲ್ಗೊಂಡು ಮ್ಯುನಿಸಿಪಲ್ ಮೆಂಬರುಗಳ ವರೆಗೂ ಒಂದೇ ಮತಸ್ಥರೂ, ಮತ್ತು ಒಂದೇ ತಾತ್ಪರ್ಯ ಉಳ್ಳವರೂ ಆಗಿಬಿಟ್ಟರು. ಅವರ ಇಷ್ಟದಂತೆ ನಡೆಯದೆ ಹೋದದ್ದಕ್ಕಾಗಿ ಅವರ ಆಗ್ರಹಕ್ಕೆ ಕಾರಣರಾದವರಲ್ಲಿ ನಾನು ಒಬ್ಬನಾಗಿ ಕೆಟ್ಟೆನೇನೆ.

ನನಗೆ ಆಗಿರತಕ್ಕ ಕೆಡುಕು ಏನೆಂದರೆ,—ಇದೇ ಗ್ರಾಮದ ದೊಡ್ಡ ಪೇಟೆಯಲ್ಲಿ ನನ್ನ ಅಂಗಡಿ ಇದೆ. ಆ ಅಂಗಡಿಯ ಮುಂಭಾಗದಲ್ಲಿ ೭೦—೮೦ ರೂಪಾಯಿ ಲಾಗುವದು ಮುಟ್ಟಿಸಿ ಗಾರೆಯಿಂದ ಮಸಾರೆ ಕಟ್ಟಿಸಿದ್ದೆನು. ಆ ಮಸಾರೆ ಇದ್ದದ್ದರಿಂದ ನನ್ನ ಅಂಗಡಿಯಲ್ಲಿರತಕ್ಕ ಸಾಮಾನುಗಳ ಮೇಲೆ ಮಳೆಯ ನೀರೂ, ಬೀದಿಯ ಧೂಳೂ, ಮಣ್ಣೂ ಬಂದು ಬೀಳುತ್ತಿರಲಿಲ್ಲ. ಆದದ್ದರಿಂದ ಎಲ್ಲಾ ವಿಧವಾದ ಸಾಮಾನುಗಳನ್ನೂ ಆ ಅಂಗಡಿಯಲ್ಲಿಟ್ಟುಕೊಂಡು ವ್ಯಾಪಾರ ನಡಿಸುತ್ತಿದ್ದೆನು. ಆಗ ವ್ಯಾಪಾರವೂ ಚನ್ನಾಗಿ ನಡೆಯುತ್ತಿತ್ತು. ಆದರಿಂದ ನಮ್ಮ ಜೀವನವೂ ಸೌಖ್ಯವಾಗಿ ನಡೆಯುತ್ತಿತ್ತು. ಆ ಮಸಾರೆ ತೆಗೆದರೆ ಖಾಲಿಯಿಂದ ಬಂದ ಮಣ್ಣು ಮಳೆ ನೀರೂ ಸಹಾ ನನ್ನ ಅಂಗಡಿಯಲ್ಲೆಲ್ಲಾ ತುಂಬಿಕೊಂಡು ನನ್ನ ವ್ಯಾಪಾರವನ್ನು ಕೆಡಿಸುತ್ತದೆ. ಆದದ್ದರಿಂದ ಅನೌಚಿತ್ಯಕ್ಕೆ ನನ್ನನ್ನ ಗುರಿಪಡಿಸಬೇಕೆಂದು ನಮ್ಮ ಸ್ಥಳಾಧಿಕಾರಿಗಳಿಗೆ ಉದ್ದೇಶ ಹುಟ್ಟಿ, ಆ ಮಸಾರೆ ತೆಗೆದುಬಿಡಬೇಕೆಂದು ನನಗೆ ನೋಟೀಸು ಕೊಟ್ಟರು. ಈ ಮಸಾರೆ ರೋಡಿಗೆ ಅಟಂಕವಾಗಿಲ್ಲ; ಅಥವಾ, ಆರೋಗ್ಯ ಶಾಸ್ತ್ರಕ್ಕೂ ಇತರರ ಸೌಖ್ಯಕ್ಕೂ ಅನಾನುಕೂಲವಾಗಿಯೂ ಇಲ್ಲ. ಈ ಮಸಾರೆ ಕಟ್ಟಿ ಅನೇಕ ದಿನಗಳಾಗಿವೆ. ಇದನ್ನು ತೆಗೆದರೆ ನನ್ನ ವ್ಯಾಪಾರವೇ ಕೆಟ್ಟುಹೋಗಿ ನನ್ನ ಜೀವನಕ್ಕೆ ತೊಂದರೆಯುಂಟಾಗುತ್ತದೆ. ಈ ವಿಷಯ ವಿಚಾರಿಸಿ ನನಗೆ ನ್ಯಾಯ ಕೊಡಿಸಬೇಕೆಂದು ಡಿಸ್ಟ್ರಿಕ್ಟ್ ಆಫೀಸರವರಲ್ಲಿ ಕೇಳಿಕೊಂಡೆನು. ಅವರು ಏನೊಂದೂ ಕೇಳದೆ ಸರ್ಕಾರೀ ನೌಕರರಿಂದ ನನ್ನ ಮಸಾರೆಯನ್ನು ಜುಲ್ಮಿನಿಂದ ಕೀಳಿಸಿಬಿಟ್ಟರು. ಇದು ನಡೆದದ್ದು ೧೮೯೯-೧೯೦೦ ನೇ ಇಸವಿಯಲ್ಲಿ. ಆ ಲಾಗಾಯಿತು ನನ್ನ ವ್ಯಾಪಾರವೆಲ್ಲಾ ಕೆಟ್ಟುಹೋಯಿತು. ನನಗೆ ಡಿಸ್ಟ್ರಿಕ್ಟಿನಲ್ಲಿ ನ್ಯಾಯ ಸಿಕ್ಕುವುದಿಲ್ಲವೆಂತ ತೋರಿ ಬೆಂಗಳೂರಿಗೆ ಹೋಗಿ ಸರ್ ಪಿ. ಎನ್. ಕೃಷ್ಣಮೂರ್ತಿ ಸಾಹೇಬರವರಲ್ಲಿ ಅರ್ಜಿ ಕೊಟ್ಟು, ನನ್ನ ಮಸಾರೆಯನ್ನು ಬೇಕೆಂತ ನನ್ನನ್ನು ಕೆಡಿಸಲಿಕ್ಕೆ ಕಿತ್ತುಹಾಕಿದೆಯೋ ಅಥವಾ ಅದರಿಂದ ಇತರರಿಗೆ ಯಾವುದಕ್ಕಾಗಲಿ ಅನಾನುಕೂಲವಾಗಿತ್ತೇ ಎಂಬುವುದನ್ನು ರೂಬರೂಬು ಪರಾಂಬರಿಸಿದರೆ ಗೊತ್ತಾಗುತ್ತೆ. ಮುದ್ದು ಪರಾಂಬರಿಕೆಯಿಂದ ನನಗೆ ನ್ಯಾಯ ಕೊಡಿಸಿಕೊಡಬೇಕೆಂದು ಕೇಳಿಕೊಂಡೆನು. ರೂಬರೂಬು ಬಂದು ನೋಡುತ್ತೇವೆಂತ ಅಪ್ಪಣೆ ಕೊಡಿಸಿದರು. ಕೆಲವು ದಿವಸದ ಮೇಲೆ ಅವರು ಚಿತ್ರದುರ್ಗಕ್ಕೆ ದಯಮಾಡಿಸಿದ್ದರು. ಇಲ್ಲಿಯೂ ಹೇಳಿಕೊಂಡೆನು. ಸ್ಥಳವನ್ನು ನೋಡಲೂ ಇಲ್ಲ; ಇದರ ವಿಷಯವನ್ನೇ ವಿಚಾರಿಸಲಿಲ್ಲ. ಅಲ್ಲಿಂದೀಚೆಗೆ ನನ್ನ ಅಂಗಡಿಯ ಹಿಂಭಾಗವನ್ನೂ ಕೀಳಬೇಕೆಂದು ನಮ್ಮ ಸ್ಥಳಾಧಿಕಾರಿಗಳು ಪ್ರಯತ್ನಪಟ್ಟರು.

ಹೊಸದಾಗಿ ದಿವಾನರಾಗಿ ಬಂದಿದ್ದ ವಿ. ಪಿ. ಮಾಧವರಾವ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದಾಗ ಅವರಿಗೂ ಹೇಳಿಕೊಂಡೆನು. ಅವರೂ ವಿಚಾರಿಸಲಿಲ್ಲ. ಭಾರೀ ಲಾಗವಡು ಮುಟ್ಟಿಸಿದ್ದ ನನ್ನ ಮಸಾರೆಯನ್ನೇನೋ ನಿರುಪಾಧಿಯಾಗಿ ಕಿತ್ತುಹಾಕಿಬಿಟ್ಟರು. ಆ ಲಾಗಾಯಿತು ಮಳೆಯ ನೀರೂ, ಮಣ್ಣೂ, ಧೂಳೂ ಅಂಗಡಿಯಲ್ಲಿರತಕ್ಕ ಸಾಮಾನುಗಳ ಮೇಲೆ ಬಿದ್ದು ಪದಾರ್ಥಗಳನ್ನೆಲ್ಲಾ ಕೆಡಿಸುತ್ತಿರುವುದರಿಂದ ವ್ಯಾಪಾರವೇ ಕೆಟ್ಟುಹೋಗಿದೆ.

ನಮ್ಮಕ್ಕೆ ಸ್ಯಾನಿಟರಿ ಕಮಿಷನರಾಗಿರುವ ಡಾಕ್ಟರ್ ಸಾಹೇಬರವರಾಗಲಿ, ಅವರ ಡೆಪ್ಯುಟಿ ಆಫೀಸರಾಗಲಿ ಈ ಸ್ಥಳಕ್ಕೆ ಬಂದು ನನ್ನ ಅಂಗಡಿಯ ಸ್ಥಿತಿಯನ್ನು ನೋಡಿ ನನ್ನ ಕಷ್ಟಗಳನ್ನು ವಿಚಾರಿಸಿದರೆ ಸಾಕು. ನ್ಯಾಯ ಅನ್ಯಾಯ ಎಂಬುವುದು ತನ್ನಷ್ಟಕ್ಕೆ ತಾನೇ ಅವರಿಗೆ ಗೊತ್ತಾಗುತ್ತದೆ.

ಎಡಿಟರೇ, ನನ್ನ ಈಗಿನ ಕಷ್ಟ, ನನಗಾದ ಅನ್ಯಾಯ, ಲುಕ್ಸಾನು, ಇವುಗಳನ್ನು ಯಾರಿಗೆ ಹೇಳಿಕೊಳ್ಳಬೇಕೋ ದಿಕ್ಕೇ ತೋರದ ಕಾರಣ, ತಮ್ಮಲ್ಲಿ ಹೇಳಿಕೊಂಡಿದೇನೆ. ದೇವರೇ ಗತಿ!

ಲಾಡರ್ ರಾಮಣ್ಣ.

ಪ್ರಜಾಪ್ರತಿನಿಧಿ ಮೆಂಬರುಗಳ ಅವಗಾಹನೆಗೆ ವಿಜ್ಞಾಪನೆಗಳು.

೧ ವಿದ್ಯಾಭ್ಯಾಸ ಕ್ರಮಗಳು

ಅಯ್ಯಾ,

ರೈತಾಭಿವೃದ್ಧಿಗೆ ವಿದ್ಯೆಯು ಬಹಳ ಸಹಾಯಕಾರಿಯಾದದ್ದು. ವಿದ್ಯೆಯು ಎಲ್ಲಾ ರೈತಪ್ರಜೆಗಳಿಗೆ ಲಭಿಸಬೇಕೆಂದು ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪಾಠಶಾಲೆಗಳನ್ನು ಏರ್ಪಡಿಸಿದಾರೆ. ಹದಿನಾರು ವಯಸ್ಸಿನೊಳಗಿನ ರೈತಮಕ್ಕಳು ತಾಲ್ಲೂಕ್ ಸ್ಕೂಲ್, ಹೋಬಳಿ ಸ್ಕೂಲುಗಳಲ್ಲಿ ವಿದ್ಯಾಭ್ಯಾಸಂಗ ಮಾಡಬೇಕಾಗಿರುತ್ತದೆ. ಜಾಸ್ತಿ ವಯಸ್ಸಿಗೆ ಬಂದ ಮೇಲೆ ವ್ಯವಸಾಯ ಕೆಲಸಗಳಿಗೆ ಹತ್ತಿಕೊಳ್ಳುತ್ತಾರೆ. ಆದದ್ದರಿಂದ ೧೬ ವರ್ಷ ವಯಸ್ಸಿನಲ್ಲಿಯೇ ಏನಾದರೂ ಅಲ್ಪಸ್ವಲ್ಪ ಕಲಿಯಬೇಕಾಗಿರುತ್ತದೆ. ಈಗಿನ ಸ್ಕೂಲ್ ರೂಲ್ಸುಗಳು ನಾಜೂಕಾಗಿಯೂ ಸರಿಯಾದ ಸ್ಥಿತಿಯಲ್ಲಿದ್ದು ೧೩ ವಯಸ್ಸಿಗೆ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗುವಷ್ಟು ಕ್ರಮವನ್ನು ತೋರಿಸುತ್ತವೆ. ಈ ರೀತಿ ೧೩ ವಯಸ್ಸಿನಲ್ಲಿ ವಿದ್ಯೆಯು ಸುಲಭ ರೀತಿಯಲ್ಲಿ ಲಭಿಸಬಹುದಾಗಿದ್ದರೂ ಸ್ಕೂಲಿನ ಮೇಲ್ ತನಿಖೆಯು ಅಷ್ಟು ಜೋರಾಗಿ ಇಲ್ಲದೆ ಇರುವದರಿಂದಲೂ, ರಜಾ ದಿನಗಳು ವಿಶೇಷವಾಗಿರುವದರಿಂದಲೂ, ಮಕ್ಕಳು ಆಟಪಾಟಗಳಲ್ಲಿ ಬಿದ್ದು ಕೆಡುವದರಿಂದಲೂ ವಯಸ್ಸು ಗತಿಸಿ ಸರ್ಕಾರದವರ ಮತ್ತು ಪ್ರಜೆಗಳ ಪ್ರಯತ್ನವು ವ್ಯರ್ಥವಾಗುತ್ತದೆ. ಆದದ್ದರಿಂದ ಸರ್ಕಾರದಲ್ಲಿ ಬೇಡಿಕೊಳ್ಳುವ ವಿಷಯಗಳೇನೆಂದರೆ, ತಾಲ್ಲೂಕ್ ಮತ್ತು ಹೋಬಳಿ ಸ್ಕೂಲುಗಳನ್ನು ರೇಂಜ್ ಆಫೀಸರು ಸಂಚರಿಸುವ ಕಾಲಗಳಲ್ಲಿ ತಪ್ಪದೆ ಸ್ಕೂಲ್ ತನಿಖೆ ಮಾಡುವದನ್ನೂ, ಅಮಲ್ದಾರರು ತಿಂಗಳಿಗೆ ಒಂದಾವರ್ತಿ ತನಿಖೆ ಮಾಡುವದನ್ನೂ ಮುಖ್ಯವಾದ ಕಾರ್ಯವಾಗಿ ಏರ್ಪಡಿಸಬೇಕು. ರಜಾ ದಿನಗಳನ್ನು ಸಾಧ್ಯವಾದಷ್ಟು ಕಡಮೆ ಮಾಡಬೇಕು. ಬೇಸಿಗೆ ರಜಾದಲ್ಲಿ ಹುಡುಗರು ಬಿಸಿಲಿನಲ್ಲಿ ತಿರಿಗಿ ತಿರಿಗಿ ಕಾಯಿಲೆ ಬೀಳುತ್ತಾರೆ. ಆದದ್ದರಿಂದ ಮಧ್ಯಾಹ್ನ ಸ್ಕೂಲ್ ಇಡುವಂತೆ ಅಪ್ಪಣೆ ಆಗಬೇಕು. ಪಾಠ ಹೇಳುವ ಕಾಲವನ್ನು ೫ ರಿಂದ ೬ ಘಂಟೆಗೆ ಹೆಚ್ಚಿಸಬೇಕು.

೨. ರೈತರಿಗೆ ದುಡ್ಡಿನ ಅನಾನುಕೂಲತೆಯನ್ನು ತಪ್ಪಿಸುವದು.

ವ್ಯವಸಾಯ ಕಾರ್ಯಗಳಿಗೆ ದುಡ್ಡಿನ ಅನುಕೂಲತೆ ವಿಶೇಷವಾಗಿ ಬೇಕಾಗಿರುವದರಿಂದ ಸರ್ಕಾರದವರು ತಕಾವಿ ಹಣವನ್ನು ರೈತರಿಗೆ ಕೊಡುತ್ತಿದಾರೆ. ಈ ತಕಾವಿ ಸಾಲ ಪಡೆಯುವದಕ್ಕೆ ತಿಂಗಳುಗಟ್ಟಲೆ ಓಡ್ಯಾಡಬೇಕಲ್ಲದೆ ಅಲ್ಪ ಸ್ವಲ್ಪ ದುಡ್ಡನ್ನು ಖರ್ಚುಮಾಡಿಕೊಳ್ಳಬೇಕಾಗುತ್ತದೆ. ಒಂದೊಂದು ವೇಳೆ ಈ ಸಾಲ ಕೊಡುವದರಿಂದ ಸರ್ಕಾರಕ್ಕೂ ಲುಕ್ಸಾನು ಸಂಭವಿಸಬಹುದು. ರೈತರಿಗೂ ಸಕಾಲಕ್ಕೆ ಹಣ ದೊರಿಯುವದಿಲ್ಲ. ಇದಲ್ಲದೆ ಸರ್ಕಾರದವರು ದ್ರವ್ಯಸಹಾಯ ಮಾಡಿ ಪ್ರಜೆಗಳ ಅನುಕೂಲಕ್ಕೆ ಬ್ಯಾಂಕುಗಳನ್ನು ಸಹ ಏರ್ಪಡಿಸುತ್ತಾರೆ. ಇವು ಸಹ ಕ್ಷೀಣದಶೆಯನ್ನು ಹೊಂದುತ್ತಲಿರುವದು ಸಕಲರಿಗೂ ಗೊತ್ತೇ

ಇರುತ್ತ ಮತ್ತು ವ್ಯವಸಾಯಾಭಿವೃದ್ಧಿ ಸಂಘಗಳನ್ನು ಸರ್ಕಾರದವರು ಬಹಳ ಮಟ್ಟಿಗೆ ಪ್ರೋತ್ಸಾಹಪಡಿಸಿ ರೈತರಿಗೆ ಅನುಕೂಲಪಡಿಸಬೇಕೆಂದು ಬಹಳ ಪ್ರಯತ್ನಮಾಡುತ್ತಲಿದ್ದಾರೆ ಕೆಲವು ಸಂದರ್ಭಗಳಲ್ಲಿ ಇವು ಕೂಡ ಫಲಕಾರಿಯಾಗಲಾರವು. ಏಕೆಂದರೆ ಪರಹಿತಾರ್ಥಿಗಳಾದ ಮೆಂಬರುಗಳೂ ಮ್ಯಾನೇಜರುಗಳೂ ದೊರೆಯುವದು ಕಷ್ಟ ಒಂದು ಪಕ್ಷ ಒಳ್ಳೇ ಮೆಂಬರುಗಳೂ ಮ್ಯಾನೇಜರುಗಳೂ ದೊರೆತಾಗ್ಯೂ ತಮ್ಮ ಸ್ವಂತ ಕೆಲಸ ಕಾರ್ಯಗಳನ್ನು ಬಿಟ್ಟು ತಮ್ಮ ದೇಹವನ್ನು ಪರಹಿತಾರ್ಥಕ್ಕೆ ದಂಡಿಸುವ ಮಹನೀಯರು ಅಪರೂಪವಲ್ಲವೇ? ಆದ್ದರಿಂದ ರೈತರಿಗೆ ಸುಲಭ ರೀತಿಯಲ್ಲಿ ಹಣ ದೊರೆಯುವದಕ್ಕೆ ಸಾಹುಕಾರರನ್ನು ಪ್ರೋತ್ಸಾಹಪಡಿಸಬೇಕಾಗಿರುತ್ತದೆ ಸರ್ಕಾರಕ್ಕೆ ರೈತಾಭಿವೃದ್ಧಿಯು ಎಷ್ಟು ಫಲದಾಯಕವೋ ಸಾಹುಕಾರರ ಅಭಿವೃದ್ಧಿಯೂ ಅಷ್ಟು ಫಲದಾಯಕವಾಗಿರುತ್ತದೆ ಸಾಹುಕಾರರು ರೈತರಿಗೂ ಸರ್ಕಾರಕ್ಕೂ ಮುಖ್ಯ ಸಹಾಯಕರಾಗಿರುತ್ತಾರೆ ಎಂಬುವದಕ್ಕೆ ಈಗ ಸಂಸ್ಥಾನದಲ್ಲಿ ಸಾಹುಕಾರರು ಮಾಡಿರುವ ಧರ್ಮಕಾರ್ಯಗಳೂ ಮತ್ತು ಕ್ಷಾಮ ಕಾಲದಲ್ಲಿ ರೈತರಿಗೆ ಮಾಡಿರುವ ಧನಧಾನ್ಯಗಳ ಸಹಾಯವೂ ಸಾಕ್ಷೀಭೂತಗಳಾಗಿರುತ್ತವೆ ಅಂದಮೇಲೆ ಸಾಹುಕಾರರನ್ನು ಪ್ರೋತ್ಸಾಹಪಡಿಸಿ ಇವರನ್ನು ಕಾಪಾಡತಕ್ಕದ್ದು ಸರ್ಕಾರಕ್ಕೆ ಪರಮಧರ್ಮವಾಗಿಯೂ ಶ್ರೇಷ್ಠವಾದ ಕಾರ್ಯವಾಗಿಯೂ ಇರುತ್ತದೆ ಹಾಲಿ ಸಾಹುಕಾರರಿಗೂ ರೈತರಿಗೂ ನಡೆಯತಕ್ಕ ಲೇವಾದೇವಿ ಕ್ರಮವು ಬಹಳ ಶ್ರಮಸಾಧ್ಯವಾಗಿರುತ್ತದೆ ಹ್ಯಾಗೆಂದರೆ ಒಬ್ಬ ರೈತನಿಗೆ ೧೫೦ ರೂಪಾಯಿನ ಅಡವು ಇದೆ ಇವನಿಗೆ ೫೦ ರೂಪಾಯಿ ಸಾಲಬೇಕಾದರೆ ನಾಲ್ಕು ಆಣೆ ಕಾಗದದ ಮೇಲೆ ಬರೆಕೊಡಬೇಕು, ಮತ್ತು ೧೦ ರೂಪಾಯಿ ಬೇಕಾದರೆ ೨ ಆಣೆ ಕಾಗದದ ಮೇಲೆ ಬರೆಕೊಡಬೇಕು, ಮತ್ತೊಂದಾವರ್ತಿ ೫೦ ರೂಪಾಯಿಗೆ ೪ ಆಣೆ ಕಾಗದದ ಮೇಲೆ ಬರೆಕೊಡಬೇಕು ಇನ್ನೊಂದಾವರ್ತಿ ೨೦ ರೂಪಾಯಿಗೆ ೪ ಆಣೆ ಕಾಗದದಲ್ಲಿ ಬರೆಕೊಡಬೇಕು ವರುಷಾಂತ್ಯದಲ್ಲಿ ಇವನು ವಾಪತಿ ಮಾಡಿರುವ ರೂಪಾಯಿಗಳು ಚಾಕಾ ಲೆಕ್ಕಾಚಾರ ಮಾಡಿಕೊಂಡಲ್ಲಿ ೧೫ ರೂಪಾಯಿಗಳು ಬಾಕಿ ನಿಂತದ್ದಕ್ಕೆ ಎಂಟಾಣೆ ಕಾಗದದಲ್ಲಿ ತನ್ನ ಆಸ್ತಿಯನ್ನು ತೋರಾಧಾರ ಮಾಡಿ ರಿಜಿಸ್ಟರ್ ಮಾಡಿಸಿಕೊಡಬೇಕು ಇದಕ್ಕೆ ವಿವರಿಸಲಶಕ್ಯವಾದ ವಿಶೇಷ ಶ್ರಮೆಯನ್ನು ತೆಗೆದುಕೊಳ್ಳತಕ್ಕದ್ದಲ್ಲದೆ ದುಡ್ಡನ್ನು ವ್ಯಯಮಾಡಿಕೊಳ್ಳಬೇಕು ಹೀಗಾದಮೇಲೆ ಸದರಿ ರೈತನು ತನಗೆ ಮತ್ತೇನಾದರೂ ದುಡ್ಡು ಬೇಕಾದರೆ ಸದರಿ ಸಾಹುಕಾರನನ್ನು ಕೇಳಬೇಕಾಗುತ್ತದೆ ಸಾಹುಕಾರನು ಕೈಯಲ್ಲಿ ದುಡ್ಡು ಇಲ್ಲದ್ದರಿಂದಲೋ ಇನ್ನಾವ ಕಾರಣಕ್ಕೋ ದುಡ್ಡು ಕೊಡದೆ ತಿರಸ್ಕರಿಸಿಬಿಡುತ್ತಾನೆ ಆಗ ಎರಡನೇ ಸಾಹುಕಾರನಲ್ಲಿ ಹೋದಾಗ್ಯೂ ಅವನು ತನಗೆ ರಿಜಿಸ್ಟರ್ ಮಾಡಿಸಿಕೊಟ್ಟರೆ ೨೦ ರೂಪಾಯಿ ಕೊಡುತ್ತಾನೆ ಈಗಲೂ ರಿಜಿಸ್ಟರಿಗೆ ದುಡ್ಡು ಖರ್ಚು ಮಾಡಿಕೊಳ್ಳಬೇಕಾಗುತ್ತದೆ ಹೀಗಾದಾಗ್ಯೂ ಮೊದಲಿನ ಸಾಹುಕಾರನ ಪತ್ರವಿಲ್ಲದೆ ಎರಡನೇ ಸಾಹುಕಾರನು ದುಡ್ಡು ಕೊಡುವ ಬಗೆ ಹೇಗೆ? ಆಗ ಮತ್ತೊಬ್ಬ ದೊಡ್ಡ ಮನುಷ್ಯನು ಉಭಯ ಸಾಹುಕಾರರುಗಳ ನಡುವೆ ಹೊಣೆಯಾಗಿ ನಿಲ್ಲಬೇಕು ಇಷ್ಟಾದಾಗ್ಯೂ ಸಾಹುಕಾರನಿಗೆ ಸುಖವುಂಟೋ? ಇಲ್ಲ. ರೈತನು ಹೊಲಕ್ಕೆ ಕಂಕೆಗಳ್ಳನಿಗೆ ಹಬ್ಬ ಬಿಟ್ಟು, ಸಾಪರಾ ಆದರೆ ಕಂದಾಯದ ಹಣಕ್ಕೆ ನೋಟೀಸು ಜಾರಿ, ಜಪ್ತು, ಇಸ್ತಿಹಾರು ಡಂಗೂರ, ಇದೆಲ್ಲಾ ಆದಮೇಲೆ ಸಾಹುಕಾರನು ದಿಗಿಲು ಬಿದ್ದು ಸರ್ಕಾರಕ್ಕೆ ವಿಚಾರಣೆ ಪ್ರೋನೋಟು ಕೊಡು ಆನಂತರ ಸಾಹುಕಾರನಿಗೆ ಸೇರತಕ್ಕದ್ದು ಸಾಲಬಿದ್ದ ಹೊಲ ಇದನ್ನು ವಿಕ್ರಯಿಸಿದರೆ ರೂಪಾಯಿಗೆ ನಾಲ್ಕಾಣೆ ದೊರೆಯುತ್ತದೆ ಈ ರೀತಿ ತೋರಾಧಾರದ ಲೇವಾದೇವಿಯಿಂದ ರೈತನಿಗೂ ಸಾಹುಕಾರನಿಗೂ ಇಷ್ಟು ತೊಂದರೆಯಾದಮೇಲೆ ಖಾಲೀ ಪತ್ರಗಳ ಲೇವಾದೇವಿ ನಡೆಯುವ ಬಗೆ ಹೇಗೆ? ರೈತನ ನಂಬಿಕೆ ಸಾಹುಕಾರನಿಗೆ ಯಾವ ರೀತಿ ಹುಟ್ಟೀತು? ಮದುವೆ ತಾಯಿ ಮಕ್ಕಳನ್ನು ಅಗಲಿಸತಕ್ಕದ್ದು ದುಡ್ಡಿನಿಂದ ಲೇಖನ ಐಕಮತ್ಯ ಕೊಡತಕ್ಕದ್ದು, ನಂಬಿಕೆ ಕೆಡಿಸತಕ್ಕದ್ದು, ದುಡ್ಡಿನ ಸ್ನೇಹ ವಿರೋಧ ಹುಟ್ಟಿಸತಕ್ಕದ್ದು ಮತ್ತೊಂದು ರೀತಿ ಯೋಚಿಸಿದರೆ ದುಡ್ಡು ದೊಡ್ಡಸ್ತಿಕೆ, ದುಡ್ಡಿನಿಂದಲೇ ಮರ್ಯಾದೆ, ದುಡ್ಡಿನಿಂದಲೇ ಜೀವನ, ಮತ್ತೇ ಸಕಲ ಕಾರ್ಯಗಳಿಗೂ ಬೇಕಾದದ್ದು ಆದದ್ದರಿಂದ ಸ್ವರ್ಣಮಾರ್ಗಕ್ಕೆ ದುಡ್ಡು ಸಮಯಕ್ಕೆ ಒದಗಿಸದಿದ್ದರೆ ಹೋದನೇ ಬಾಳುವೆ ತಪ್ಪುತ್ತದೆ ವ್ಯವಸಾಯವೆಂಬ ದೇಹದಲ್ಲಿ ದುಡ್ಡು ಎಂಬ ರಕ್ತವು ಎಲ್ಲಿಯೂ ಸಹ ಸರಿಯಾದ ಮಾರ್ಗದಲ್ಲಿ ಸಂಚರಿಸುವ ಹಾಗೆ ಕಾಪಾಡತಕ್ಕದ್ದು ಸರ್ಕಾರದವರ ಕರ್ತವ್ಯವಾಗಿರುತ್ತದೆ ಆವಶ್ಯಕವಾದ ಈ ವಿಷಯವಾಗಿ ಸರ್ಕಾರದವರು ಮಾಡಬೇಕಾದ ಸಹಾಯವೇನೆಂದರೆ ಈಗ ರೈತರಿಗೆ ಕೊಡತಕ್ಕ ಆಕಾರ ವರ್ಗದ ರಶೀದಿ ಪಟ್ಟಿಗಳಿಗೆ ಬದಲಾಗಿ ಆತೇ ಸ್ವಲ್ಪ ಪುಸ್ತಕಗಳನ್ನು ಮಾಡಿ ರೈತರಿಗೆ ರಶೀದಿ ಪಟ್ಟಿಗಳಾಗಿ ಕೊಡಬೇಕು ಈ ಬುಕ್ಕುಗಳಲ್ಲಿ ಸರ್ಕಾರದ ಕಂದಾಯದ ಜಮಾಖರ್ಚು ನಡಿಸಬೇಕು ಅದೇ ಬುಕ್ಕಿನ ಒಂದೊಂದು ಭಾಗದಲ್ಲಿ ಎಷ್ಟು ಜನ ಸಾಹುಕಾರರಾದರೂ ಸಾಲಕೊಟ್ಟು ಜಮಾಖರ್ಚು ನಡಿಸಬಹುದು ಆದರೆ ಆ ಪಟ್ಟಿಯಲ್ಲಿ ಕಂಡ ಸ್ವತ್ತುಗಳು ಮೊದಲು ಸರ್ಕಾರದ ಹಣಕ್ಕೂ ಆನಂತರ ಮೊದಲನೇ ಸಾಹುಕಾರನಿಗೂ ಆ ಮೇಲೆ ಎರಡನೇ ಸಾಹುಕಾರರಿಗೂ ಈಡಾಗಿರುತ್ತವೆ ಸಾಹುಕಾರನಿಗೂ ರೈತನಿಗೂ ವಿವಾದ ಹುಟ್ಟಿದರೆ ಸದರಿ ಬುಕ್ಕು ಸಾಕ್ಷಿಯಾಗಿರುತ್ತದೆ ಈ ರೀತಿ ಬುಕ್ಕುಗಳನ್ನು ಜಾರಿಗೆ ತಂದರೆ ಸಾಹುಕಾರರಿಗೆ ಪ್ರಯೋಜನಕಾರಿಯಾಗುವದಲ್ಲದೆ ರೈತನಿಗೂ ಅತ್ಯಂತ ಉಪಯುಕ್ತವಾಗಿರುತ್ತದೆ ತಾನು ಮಾಡಿದ ಸಾಲ ಎಷ್ಟೆಂಬುದು ಸದಾ ತನ್ನ ಮನೆಯವರಿಗೆ ಇರುತ್ತದೆ ಹೆಂಡತಿ ಮಕ್ಕಳಿಗೂ ಅಣ್ಣ ತಮ್ಮಂದಿರಿಗೂ ಸಹ ಗೊತ್ತಾಗಿರುತ್ತವೆ ಸಾಹುಕಾರನು ಮೋಸ ಮಾಡುವದಕ್ಕೆ ಅವಕಾಶವಿರುವದಿಲ್ಲ ಮತ್ತು ಪತ್ರಗಳಿಗೂ ರಿಜಿಸ್ಟರ್ ಖರ್ಚಿಗೂ ತಗಲುವ ಹಣವು ಸ್ವಲ್ಪವೂ ಉಳಿಯುವದಲ್ಲದೆ ಸಾಹುಕಾರನು ಯಾವಾಗ ಬೇಕಾದರೂ ರೈತರಿಗೆ ದುಡ್ಡು ಕೊಡುವದಕ್ಕೂ ತೆಗೆದುಕೊಳ್ಳುವದಕ್ಕೂ ಅನುಕೂಲವಾಗುವದಲ್ಲದೆ ನಂಬಿಕೆಯೂ, ಸ್ನೇಹವೂ ಹುಟ್ಟುತ್ತವೆ ಇಷ್ಟು ಮಾತ್ರವಲ್ಲದೆ ಅನೇಕಾನೇಕ ಒಳ್ಳೇ ಫಲಗಳು ರೈತರಿಗೂ ಸಾಹುಕಾರರಿಗೂ, ಸರ್ಕಾರಕ್ಕೂ ಉಂಟಾಗುತ್ತವೆ ಆದದ್ದರಿಂದ ಅಂಥಾ ಬುಕ್ಕುಗಳನ್ನು ಜಾರಿಯಲ್ಲಿ ತರತಕ್ಕದ್ದಕ್ಕೆ ಸರ್ಕಾರದವರು ದೀರ್ಘಾಲೋಚನೆಯಿಂದ ಪ್ರಯತ್ನಪಡಬೇಕು

೩ ತೊಂದು ಜಾನುವಾರಗಳ ತೊಂದರೆ

ವ್ಯವಸಾಯಗಾರರಲ್ಲದೆ ಇರುವ ಖುಷ್ ಬಾಷ್ ಜನರು ಹಸು ಎಮ್ಮೆ ಕುದುರೆ ಮೇಕೆಗಳನ್ನು ಇಟ್ಟುಕೊಂಡು ಇವುಗಳನ್ನು ಸರಿಯಾದ ಸ್ಥಿತಿಯಲ್ಲಿ ಪೋಷಣೆಮಾಡದೆ ಸ್ವೇಚ್ಛೆಯಾಗಿ ಬಿಟ್ಟು ಬಿಡುತ್ತಾರೆ ಹುಲ್ಲು ಕೊಂಡು ಹಾಕುವುದಕ್ಕೂ ಕಾಯುವುದಕ್ಕೂ ಜಾಸ್ತಿಯಾಗುವದು ತಗಲುತ್ತದೆ ಆದಾಗ್ಯೂ ಜಾಸ್ತಿ ಹಾಲು ಕೊಡುವದಿಲ್ಲ ಕಾಯುವುದಿಲ್ಲ ಯಾಗುವದಿಲ್ಲ ಆದದ್ದರಿಂದ ರೈತರ ಹೊಲಗಳ ಮೇಲೆ ಬಿಟ್ಟುಬಿಡುತ್ತಾರೆ ಬಹಳ ಸಾಹಸಪಟ್ಟು ದೊಡ್ಡಿಗೆ ಸೇರಿಸಿದರೂ ರೈತನ ಶ್ರಮೆ ಮರ್ಯಾದೆ ವ್ಯಯವಾಗುತ್ತದಲ್ಲದೆ ಮೇಕೆಗಳಿಗೆ ನಾಲ್ಕಾಣೆ ಕೊಡತಕ್ಕದ್ದು ಬಹಳ ಸುಲಭವಾಗಿಯೂ ಸಂತೋಷಕರವಾಗಿಯೂ ಇರುತ್ತದೆ ಈ ಮೂಲಕ ತೊಂದು ಜಾನುವಾರುಗಳು ಹೆಚ್ಚಿ ರೈತರ ವ್ಯವಸಾಯ ಕಾರ್ಯಗಳಿಗೆ ನಿಷ್ಪ್ರಯೋಜಕವಾಗಿ ಪೈರು ಪಚ್ಚೆಗಳು ನಾಶ ಹೊಂದುತ್ತಲಿವೆ ಇವರಿಂದ ರೈತರಿಗೆ ನಷ್ಟ ಹಾಗಾದರೆ ಕೊಡತಕ್ಕ ದಂಡ, ಕುದುರೆಗಳಿಗೆ ಪ್ರಸ್ತುತ ಜುಲ್ಮಾನೆ ಏರಬೇಕು ಮತ್ತು ದೊಡ್ಡಿಗೆ ದಾಖಲಾದ ದನಗಳಿಗೆ ಜುಲ್ಮಾನೆ ಜೊತೆಗೆ ಒಂದಾಣೆ ಜಾಸ್ತಿ ವಸೂಲ್ ಮಾಡಿ ದೊಡ್ಡಿಗೆ ದನಗಳನ್ನು ತಂದ ಮನುಷ್ಯನಿಗೆ ಇನಾಮು ಕೊಡಬೇಕು.

೪ ಮೇಕೆಗಳಿಂದುಂಟಾಗುವ ತೊಂದರೆ

ಮೇಕೆಗಳನ್ನು ಗೊಲ್ಲರು, ನಾಯ್ಕರು, ಕಟುಗರು, ಇತರ ಜಾತಿಯವರು ಸಹ ವಿಶೇಷವಾಗಿಟ್ಟುಕೊಂಡು ಇವುಗಳನ್ನು ಮೇವಿಗೆ ಪೈರುಗಳಮೇಲೆ ಬಿಡುತ್ತಲೂ, ಹೊಲಗಳಲ್ಲಿ ಮಾವು, ಹುಣಸೆ, ಜಾಲಿ, ಬೇವಿನಮರಗಳ ಕೊಂಬೆಗಳನ್ನೂ ರಸ್ತೆ ಪಕ್ಕದಲ್ಲಿರುವ ಮರಗಳ ಕೊಂಬೆಗಳನ್ನೂ ಕತರಾಯಿಸುತ್ತಲೂ, ತೋಟಗಳ ಬೇಲಿಯಲ್ಲಿರುವ ಗಂಧದಗಿಡ ಇತರ ಗಿಡ ಕಳ್ಳಿ ಮುಂತಾದದ್ದನ್ನು ಕತರಾಯಿಸಿ, ಬೇಲಿ ಕಿಂಡಿ ಕೆಡವಿ ತೋಟಗಳಲ್ಲಿ ನುಗ್ಗಿಸುತ್ತಲೂ, ಕಣ್ಣಿಗೆ ಕಂಡ ಗಿಡಗಳನ್ನೆಲ್ಲಾ ಕತ್ತರಿಸಿ ಹಾಕುತ್ತಲೂ ಹಾವಳಿ ಮಾಡುತ್ತಾರೆ ಈ ಮೇಕೆ ಜಾತಿಯು ಸ್ವಭಾವ ಗಿಡ ಮರಗಳನ್ನು ನಾಶಮಾಡತಕ್ಕದ್ದು ಇಂಥಾ ದನಗಳನ್ನು ದೊಡ್ಡಿಗೆ ಸೇರಿಸಲು ಸಾಧ್ಯವಿಲ್ಲ ಏಕೆಂದರೆ, ಇವುಗಳ ಮಾಲೀಕರು ತಿಪ್ಪಾಯಿಗಳಾಗಿಯೂ, ದುಡುಕು ಮನುಷ್ಯರಾಗಿಯೂ, ಮೂರ್ಖರುಗಳಾಗಿಯೂ, ಕೈಯಲ್ಲಿ ಆಯುಧ ಸನ್ನದ್ಧರಾಗಿಯೂ ಇರುವದರಿಂದ ರೈತರ ಮರ್ಯಾದೆಗೆ ಭಂಗವುಂಟುಮಾಡುತ್ತಾರೆ ಆದಕಾರಣ ರೈತರ ವ್ಯವಸಾಯಾಭಿವೃದ್ಧಿಗೆ ತುಂಬಾ ಕುಂದುಕ ಉಂಟಾಗಿರುತ್ತದೆ ಆದುದರಿಂದ ಮೇಕೆ ಮಾಲೀಕರು ಕೈಯಲ್ಲಿ ದೊಣ್ಣೆ, ಕುಡುಗೋಲು, ಕೊಡ್ಲಿ ತೆಗೆದುಕೊಂಡು ಹೋಗದಂತೆಯೂ, ಮೇಕೆ ೧ ಕ್ಕೆ ನಾಲ್ಕುವರೆ ಆಣೆ ಜುಲ್ಮಾನೆ ವಸೂಲ್ ಮಾಡಿ ದೊಡ್ಡಿಗೆ ಸೇರಿಸಿದ ಮನುಷ್ಯನಿಗೆ ೬ ಕಾಸು ಇನಾಮು ಕೊಡುವಂತೆಯೂ ಏರ್ಪಾಡಾಗುವಂತೆ ಸರ್ಕಾರದವರನ್ನು ಬೇಡಿಕೊಳ್ಳಬೇಕು

ಈ ವಿಷಯಗಳನ್ನು ಪ್ರಜಾಹಿತಚಿಂತಕರಾದ ಪ್ರಜಾಪ್ರತಿನಿಧಿಗಳು ತಮ್ಮ ಸಾವಧಾನದ ಚಿತ್ತಕ್ಕೆ ತಂದುಕೊಳ್ಳುವರೆಂದು ನಂಬಿರುತ್ತೇನೆ

ಬಡೇಸಾಬಿ, ಜಗಲೂರು

ತಾಲ್ಲೋಕು ವರ್ತಮಾನಗಳು

ನಂಜನಗೂಡು —ನಂಜನಗೂಡಿನಲ್ಲಿ ತಾ ೯ ನೇ ಶುಕ್ರವಾರ ಶ್ರೀ ಶಂಕರಾದ್ವೈತ ಸಭಾ ಎಂಬದಾಗಿ ಒಂದು ಸಭೆಯು ನಡೆಯಿತು ಅದ್ವೈತ ಮತಸ್ಥರು ಸೇರಿ ತಮ್ಮ ಮತಕ್ಕೆ ಪ್ರೋತ್ಸಾಹವಿಲ್ಲದೆ ಕ್ಷೀಣವಾಗುತ್ತಲಿದೆ ಎಂದು ಯೋಚಿಸಿ ಪ್ರತಿ ವರ್ಷವೂ ಶ್ರೀ ಶಂಕರಸ್ವಾಮಿಯ ಗಿರಿಜಾಕಲ್ಯಾಣದ ಕಾಲದಲ್ಲಿ ವೇದ ಮತ್ತು ಅದ್ವೈತ ವೇದಾಂತಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿ ಬಹುಮಾನ ಕೊಡಬೇಕೆಂದು ನಿಷ್ಕರ್ಷೆಮಾಡಿಕೊಂಡು ಚಂದಾ ಮೂಲಕ ದ್ರವ್ಯಸಂಪಾದನೆಮಾಡಿ ಮೇಲ್ಕಂಡ ದಿನ ಬಹುಮಾನಸಭಾ ನಡಿಸಿದರು ಆ ದಿನ ಸಾಯಂಕಾಲ ೬ ಘಂಟೆಗೆ ಶ್ರೀಕಂಠೇಶ್ವರ ದೇವಸ್ಥಾನದ ಮಂಟಪದಲ್ಲಿ ಸಭೆ ಸೇರಿತು ಊರಿನಲ್ಲಿರತಕ್ಕ ಎಲ್ಲಾ ಅಧಿಕಾರಿಗಳೂ ಲಾಯರುಗಳೂ ವೈದಿಕರೂ ಇತರ ದೊಡ್ಡ ಮನುಷ್ಯರೂ ಸುಮಾರು ೩೦೦ ಜನಗಳು ಸೇರಿದ್ದರು ಸಬ್ ಡಿವಿಜನ್ ಆಫೀಸರವರು ಅಗ್ರಾಸನಾಧಿಪತಿಗಳಾಗಿದ್ದರು ಅಮಲ್ದಾರ್ರು, ಮುನ್ಸಿಫರು ಮುಂತಾದವರು ಸಭಿಕರಾಗಿದ್ದರು ಪಾರುಪತ್ಯ ವೇ ಶ್ರೀಕಂಠಶಾಸ್ತ್ರಿಗಳು ಸಭಾ ರಿಪೋರ್ಟನ್ನು ಓದಿದರು ಅನಂತರ ಅಗ್ರಾಸನಾಧಿಪತಿಗಳು ೧೬ ಮಂದಿ ವಿದ್ಯಾರ್ಥಿಗಳಿಗೆ ಕ್ಲುಪ್ತವಾಗಿದ್ದ ಬಹುಮಾನಗಳನ್ನು ಸ್ವಹಸ್ತದಿಂದ ಕೊಡಿಸಿದರು. ಬಳಿಕ ವೇ ವೆಂಕಟಾಚಲ ಶಾಸ್ತ್ರಿಗಳೆಂಬ ವಿದ್ವಾಂಸರು ವೇದ ವೇದಾಂತಾಧ್ಯಯನವು ಆವಶ್ಯಕವಾದದ್ದು ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು ಅನಂತರ ಸರ್ವರೂ ಶ್ರೀಮನ್ ಮಹಾರಾಜರವರ [illegible] ಮಂಗಳವಾದ್ಯಗಳಾದವು ಸರ್ವರಿಗೂ ಗಂಧ ಪುಷ್ಪ [illegible] ಸಭೆಯು ವಿಸರ್ಜನೆ ಯಾಯಿತು

ಬೇಲೂರು —ಈ ಊರಿನ ಕೆಲವು ಸ್ತ್ರೀಗಳಿಗೆ ಬರೀ ಮಣ್ಣನ್ನೇ ಹಾಕಿ ರೋಣದಿಂದ ವೀಳೆಯಲ್ಲಿ ಅಪಾರವಾದ ಕೊಚ್ಚೆಯಾಗಿ ತಿರುಗುವವರಿಗೆ ತುಂಬಾ ಕಷ್ಟವಾಗಿದೆ ರಾತ್ರಿ ಕೆಲವು ಮ್ಯುನಿಸಿಪಲ್ ದೀಪಗಳು ಎಲ್ಲಾ ಕಡೆಗಳಲ್ಲಿ ಚನ್ನಾಗಿ ಉರಿಯುವದಿಲ್ಲ ವೈಸ್ ಪ್ರೆಸಿಡೆಂಟರು ಈ ವಿಷಯವನ್ನು ಪರಾಂಬರಿಸಿ ಕ್ರಮಪಡಿಸಬೇಕೆಂದು ಕೋರುತ್ತೇನೆ —ಈ ಊರಿನ ಮಹನೀಯರು ಸೇರಿ ಒಂದು ನಾಟಕ ಶಾಲೆಯನ್ನೂ, ಒಡನೆ ವಿದ್ಯಾಭ್ಯಾಸಕ್ಕಾಗಿ ಅಂಜುಮಾನ ಎಂಬ ಅನಾಥಾಲಯವನ್ನೂ ಕಲ್ಪಿಸಿಕೊಂಡು ಅದರಿಂದ ನಡಿಸುತ್ತಾ ಬಂದಿರುವುದು ಸಂತೋಷಕರವಾಗಿದೆ —ಈ ಊರಿನಲ್ಲಿ ಮ ಸೂರ ಸ್ವಾಮಿ ಎಂಬ ವೈದ್ಯರು ಸ್ವಂತ ಖರ್ಚಿನಿಂದ ಕರ್ನಾಟಕ ಆಸ್ಪತ್ರೆ ಇಟ್ಟು ದಿನವೂ ೫೦-೬೦ ಮಂದಿ ರೋಗಿಗಳಿಗೆ ಔಷಧಗಳನ್ನು ಕೊಡುತ್ತಿದ್ದಾರೆ ಇವರಿಗೆ ಮುನಿಸಿಪಾಲಿಟಿಯು ಮತ್ತು ಲೋಕಲ್ ಫಂಡ್ ಬೋರ್ಡು ಸ್ವಲ್ಪ ಪ್ರೋತ್ಸಾಹವಾದಲ್ಲಿ ತುಂಬಾ ಅನುಕೂಲ ವಾಗುವುದು —ಇಲ್ಲಿನ ಎ ವಿ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮ ಶ್ರೀನಿವಾಸಾಚಾರ್ಯರಿಗೆ ಬೀದರಿಗೆ ವರ್ಗವಾಗಿ, ಮೂಡುಗೆರೆಯ ಹೆ ಮ ೩ ಆಚಾರ್ಯರು ಬಂದು ಅವರ ಸ್ಥಾನಕ್ಕೆ ಬಂದಿರುತ್ತಾರೆ ಉಪಾಧ್ಯಾಯರುಗಳು ಒಂದು ಸಂತೋಷ ಸಭೆಯನ್ನು ಕಲ್ಪಿಸಿ ಉಭಯ ಮಾಸ್ಟರುಗಳನ್ನು ಬರಮಾಡಿಕೊಂಡು ಅಮಲ್ದಾರ್ ಮ ಬಿ ಕೃಷ್ಣಸಿಂಗರವರನ್ನು ಅಗ್ರಾಸನವನ್ನು ವಹಿಸುವಂತೆ ಕೇಳಿಕೊಂಡರು ಅಮಲ್ದಾರ್ರೂ, ಕಾಫಿಪ್ಲಾಂಟರ್ ಮ ತಮ್ಮಯ್ಯನವರೇ ಮುಂತಾದವರೂ ಉಪನ್ಯಾಸ ಮಾಡಿದರು ಮಾಸ್ಟರುಗಳಿಗೆ ಅಡ್ರೆಸ್ಸನ್ನು ಒಪ್ಪಿಸಿದರು ಸಭಿಕರಿಗೂ ಸಭಾನಾಯಕರಿಗೂ ಗಂಧ ಪುಷ್ಪಾದಿಗಳನ್ನು ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು

ಪ್ರೆಂಚಾರಾಕ್ಸ್ —ಜನರು ಪ್ಲೇಗ್ ರೋಗವನ್ನು ಹೊಲಗಳಲ್ಲಿ ಬೀಡಾರವು ಮಾಡಿ ಮಳೆಗೋಸ್ಕರ ನಿರೀಕ್ಷಣೆ ಮಾಡುತ್ತಿದ್ದಾರೆ ಮಳೆ ಇಲ್ಲ ಗಾಳಿ ಜೋರಾಗಿದೆ ಮೋಡಗಳಾಡುತ್ತಿವೆ ಜನಗಳು ಅಲ್ಲಲ್ಲಿ ಜ್ವರ ಕೆಮ್ಮು ಮುಂತಾದ ಕಾಯಿಲೆಗಳಿಂದ ನರಳುತ್ತಿದ್ದಾರೆ —ಈ ಮಧ್ಯೆ ಊರಿನಲ್ಲಿ ಕೆಲವು ಮನೆಗಳಲ್ಲಿ ಇಲಿ ಸತ್ತವಂತಲೂ, ಒಬ್ಬ ಹುಡುಗನಿಗೆ ಪ್ಲೇಗ್ ತಗಲಿ ಕಾಲವಾದನೆಂತಲೂ, ಇನ್ನೂ ಒಬ್ಬಿಬ್ಬರು ಅದೇ ರೋಗದಿಂದ ನರಳುತ್ತಿದ್ದಾರೆಂತಲೂ ವದಂತಿ ಇದೆ ಈ ಸಮಯದಲ್ಲಿ ನಮ್ಮ ಡೆಪ್ಯುಟಿ ಅಮಲ್ದಾರ್ರವರೂ ಡಾಕ್ಟರವರೂ ಆಗಾಗ್ಗೆ ಊರಲ್ಲಿ ಸಂಚಾರ ಮಾಡಿ ಆರೋಗ್ಯ ಕ್ರಮಗಳನ್ನು ವಿಶದಪಡಿಸಿ ಜನರಿಗೆ ತಕ್ಕ ಸಿವೇಚನೆಯನ್ನೂ ಧೈರ್ಯವನ್ನೂ ಹೇಳುತ್ತಾ ಬರುವರೆಂದು ನಿರೀಕ್ಷಿಸುತ್ತೇನೆ —ಈ ಊರಿಗೆ ಸುಮಾರು ಎರಡು ಮೈಲಿ ದೂರದಲ್ಲಿರುವ ಓರಮಳು ಎಂಬ ಗ್ರಾಮಕ್ಕೆ ಸೇರಿದ ಲಿಂಗಿ ಎಂಬಾಕೆಯನ್ನು ಅವಳ ಕೂಡುವಳಿ ಗಂಡನು ಎಲ್ಲಿಯೋ ಕೊಂದುಹಾಕಿ ಬಂದಿದ್ದಾನೆಂಬ ಗುಮಾನಿಯ ಮೇಲೆ ಇಲ್ಲಿನ ಲಾಕಪ್ಪಿನಲ್ಲಿ ತಂದ ಹಾಕಿದ್ದಾರೆಂದು ಕೇಳುತ್ತೇನೆ — ಅದೇ ಗ್ರಾಮದ ಸಮೀಪದ ತೋಟಗಳಲ್ಲಿ ಅಡಗಿಕೊಂಡಿದ್ದ ಒಂದು ದೊಡ್ಡ ಚಿರತೆಯನ್ನು ಕಳೆದ ಶುಕ್ರವಾರ ಇಲ್ಲಿನ ಕೋಯಿಲ್ ಪಿಳ್ಳೆ ಅಪ್ಪರಿ ಎಂಬಾತನು ಬಂದೂಕಿನಿಂದ ಕೊಂದು ತಂದು ಊರಿನಲ್ಲಿ ತಮಟೆಯೊಂದಿಗೆ ಮೆರವಣಿಗೆ ಮಾಡಿಸಿದನು — ಈ ಊರಿನಲ್ಲಿ ಇಂಜನಿಯರ್ ಆಫೀಸನ್ನು ವಜಾಮಾಡಿ ಕೆಲವು ಕಾಲವಾದಮೇಲೆ ತಂಗಾಮಿಯಾಗಿ ಪುನಹ ಆಫೀಸನ್ನು ಇಡಿಸಿದ್ದರು ಮತ್ತೆ ಅದನ್ನೂ ಕೂಡ ವಜಾ ಮಾಡಿಬಿಟ್ಟರು ಈ ಊರಿನ ವರ್ತಕರೇ ಮುಂತಾದವರು ಅಂಥಾ ಆಫೀಸುಗಳನ್ನು ಇಲ್ಲಿಯೇ ಖಾಯಂಮಾಡಿಸಿಕೊಟ್ಟು ಈ ಊರಿನ ಪ್ರಾಮುಖ್ಯತೆಯನ್ನು ಕಾಪಾಡಿಕೊಡಬೇಕೆಂದು ಅಹವಾಲು ಅರ್ಜಿಗಳನ್ನು ಬರೆದುಕೊಂಡು ಇಂಥಾ ರಸಂಗಳನ್ನು ಪಡೆದುಕೊಂಡಿದ್ದಾಗ್ಯೂ ಕೂಡ ಅಂಥಾ ಆಫೀಸುಗಳನ್ನು ಇಲ್ಲಿಂದ ತೆಗೆದುಬಿಡುತ್ತಿರುವದು ಇಲ್ಲಿನ ಪ್ರಜೆಗಳಿಗೆ ತುಂಬಾ ಚಿಂತೆಯಾಗಿದೆ

ತ್ಯಾಮಗೊಂಡ್ಲು —ಹೋದವಾರ ತ್ಯಾಮಗೊಂಡ್ಲು ವೃತ್ತಾಂತದಲ್ಲಿ ಆಶ್ಚರ್ಯಕರವಾದ ಕೋಳಿಗೆ ೪ ಕಾಲುಗಳೂ, ೪ ರೆಕ್ಕೆಗಳೂ, ೧ ತಲೆಯೂ ಇದೆ ಎಂದು ಬರೆಯುವುದಕ್ಕೆ ಬದಲಾಗಿ ೪ ಕಾಲುಗಳೂ, ರೆಕ್ಕೆಗಳೂ ಇವೆ ಎಂಬದಾಗಿ ಬರೆದಿರುತ್ತೆ ಇಲ್ಲದೆ ಅದನ್ನು ಸೀಸೆಯಲ್ಲಿ ದ್ರಾವಕ ಹಾಕಿ ಇಟ್ಟಿರುತ್ತಾರೆ ಎಂಬುವದಕ್ಕೆ ಬದಲಾಗಿ ಒಂದು ಬುಟ್ಟಿಯಲ್ಲಿ ಇಟ್ಟಿರುತ್ತಾರೆ ಎಂದು ತಪ್ಪು ಬರೆದಿರುತ್ತೆ ಅದನ್ನು ಈ ವಾರ ತಿದ್ದಿ ಪ್ರಕಟಿಸಬೇಕು —ಇದೇ ಗ್ರಾಮದಲ್ಲಿ ಕೋಟೆಯಲ್ಲಿರತಕ್ಕ ಬ್ರಾಹ್ಮಣರೂ ಇತರರೂ ಸೇರಿ ಸುಮಾರು ೫ ತಿಂಗಳಿಂದ ಮ ಭ ಪಂಸೇನರಾಯರಿಂದ ರಾತ್ರಿ ಕಾಲದಲ್ಲಿ ಭಾರತ ಪುರಾಣವನ್ನು ಹೇಳಿಸುತ್ತಿದ್ದಾರೆ ಈ ಕಾಲದಲ್ಲಿ ಈ ರೀತಿ ಪಾರಮಾರ್ಥಿಕ ದೃಷ್ಟಿ ಇರತಕ್ಕದ್ದು ಅಪರೂಪ —ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರಾದ ಮ| ವೆಂಕಟಾಚಾರ್ಯರು ಈ ಗ್ರಾಮದಲ್ಲಿರತಕ್ಕ ಮಕ್ಕಳಿಗೆಲ್ಲಾ ಸಿಡುಬನ್ನು (ವ್ಯಾಕ್ಸಿನೇಷನ್) ಹಾಕಿ ಅದರಿಂದ ಜನರಿಗೆ ಉಂಟಾಗುತ್ತಿದ್ದ ಭಯವನ್ನು ತಪ್ಪಿಸಿ, ಜನರ ಪ್ರೀತಿಗೆ ಪಾತ್ರರಾಗಿರುತ್ತಾರೆ — ಮೈಸೂರು ಕುದುರೆ ಮೂಗರ ಸ್ಕೂಲ್ ವಿದ್ಯಾರ್ಥಿಗಳಾದ ಮಹಮ್ಮದ್ ಜಾಫರ್ ಎಂಬವರು ಈ ಊರಿಗೆ ಜುಲೈ ೨೯ ರಲ್ಲಿ ಬಂದಿದ್ದರು ಇಲ್ಲಿನ ದೊಡ್ಡಮನುಷ್ಯರಾದ ಡಾಕ್ಟರನು, ಇಂಗ್ಲಿಷ್ ಮಾಸ್ಟರು, ಇಂಜನಿಯರ್ ಇಲಾಖಾ ಸಬ್ ಓವರ್ಸಿಯರು, ಕಂಟ್ರಾಕ್ಟರು ಮೊದಲಾದವರು ಸೇರಿ ಮೇಲ್ಕಂಡ ಸಂಗೀತಗಾರರಿಗೆ ಒಂದು ಕಚೇರಿಯನ್ನು ಮಾಡಿಸಿ, ಅವರಿಂದ ಭಾರತ ಮೊದಲಾದದ್ದನ್ನು ಬರೆಯಿಸಿ ಓದಿ, ಬಹು ಸಂತೋಷಪಟ್ಟು ಅವರಿಗೆ ಕೊಂಚ ದ್ರವ್ಯಾನುಕೂಲವು ಮಾಡಿ ಕಳುಹಿಸಿದರೆಂದು ಕೇಳಿ ಬಹು ಸಂತೋಷವಾಯಿತು ಇಂಥಾ ಅನೇಕರ ವಿಷಯದಲ್ಲಿ ನಮ್ಮ ಮಹಾರಾಜಾ ಸರ್ಕಾರದವರು ತೋರಿಸುವ ಮಹದುಪಕಾರಕ್ಕಾಗಿ ಶ್ರೀಮನ್ ಮಹಾರಾಜರವರಿಗೂ, ಅವರ ಕುಟುಂಬವರ್ಗಕ್ಕೂ ಭಗವಂತನು ಆಯುರಾರೋಗ್ಯಗಳನ್ನು ದಯಪಾಲಿಸಲಿ ಎಂದು ಕೋರುವೆವು —ಈ ಪ್ರಾಂತ್ಯ ಮಳೆ ಇಲ್ಲ ಪೈರೆಲ್ಲಾ ಬಾಡುತ್ತಿದೆ ಪ್ರತಿದಿನವೂ ಮೋಡವಾತ್ರ ಆಡುತ್ತದೆ ಯಾವ ಬಾವಿಗಳಲ್ಲಿಯೂ ನೀರು ಇಲ್ಲ ನೀರಿಗೆ ಬಹು ಕಷ್ಟವಾಗಿರುತ್ತೆ

ಹಾಸನ —ಹಾಸನದಲ್ಲಿ ಈಗ್ಗೆ ಸುಮಾರು ೧೫-೨೦ ದಿವಸಗಳಿಂದ ಜಡಿ ಮಳೆಯು ಹಿಡಿದುಕೊಂಡಿದೆ ಮತ್ತು ಎಲ್ಲಿ ನೋಡಿದರೂ ಮನಸ್ಸಿಗೆ ಮನೋಹರವಾಗಿ ಚನ್ನಾಗಿರುವ ಪೈರುಪಚ್ಚೆಗಳಿಂದ ಕೂಡಿದೆ ಕಕ್ಕಮಟ್ಟಿಗೆ ದನಗಳಿಗೆ ಹುಲ್ಲು ಒದಗುತ್ತದೆ ಪ್ರಜೆಗಳಿಗೆ ಇನ್ನು ಸಂತೋಷವಾದಾಗ್ಯೂ ಇಲ್ಲಿನ ಧಾರಣೆಗಳು ಕ್ಷಾಮಕಾಲದಲ್ಲಾದರೂ ಸುಮಾರಾಗಿದ್ದಿತು ಈಗ ಅದಕ್ಕಿಂತ ಅಧಿಕವಾಗಿದೆ ರೂಪಾಯಿಗೆ ೬-೭ ಸೇರು ಅಕ್ಕಿ ತಪ್ಪಿಲ್ಲ. ೧೧ ೧೧ ಸೇರು ರಾಗಿ ಮಾರಾಟವಾಗಿದೆ —ಇಲ್ಲಿನ ಪೋಲೀಸ್ ಉಸ್ತುವಾರಿಯು ತಪ್ಪುಗಳಿಗೆ ಬೆಸ್ತಾಗಿದೆ ಈ ಸೋನೆ ಮಳೆಯಿಂದ ಊರೊಳಗಿದ್ದ ಅನೇಕ ಹಾಳುಮನೆಗಳೂ ಅವುಗಳ ಗೋಡೆಗಳೂ ಬಿದ್ದುಹೋಗುತ್ತಾ ಇವೆ ಈ ಊರಿನ ಪೇಟೆಗಳಲ್ಲಿ ಎಲ್ಲಿ ನೋಡಿದರೂ ಪಾಳು ಮನೆಗಳೇ ವಿಶೇಷ ಇದಕ್ಕೆ ಕಾರಣವೇನೆಂದರೆ ಅನೇಕ ಜನಗಳು ಪ್ಲೇಗಿನ ಕಾಲದಲ್ಲಿ ಊರು ಬಿಟ್ಟು ಹೋದವರು ಹಳ್ಳಿಗಳಲ್ಲಿಯೂ ಊರಿಗೆ ಒಂದು ಎರಡು ಫರ್ಲಾಂಗ್ ದೂರದಲ್ಲಿಯೂ ಇದ್ದು ಕೊಂಡು ಊರಿನಲ್ಲಿರುವ ಮನೆಗಳಿಗೆ ಬಾರದೆ ಆ ಮನೆಗಳನ್ನು ಸುಮ್ಮನೆ ಬಿಟ್ಟಿರುವುದರಿಂದ ಪಾಳುಬೀಳುವುದಕ್ಕೆ ಕಾರಣವಾಗಿರುತ್ತವೆ ಮತ್ತು ಈ ಪಾಳುಮನೆಗಳು ಇರುವುದರಿಂದ ರಾತ್ರಿ ಹೊತ್ತಿನಲ್ಲಿ ಒಬ್ಬೊಬ್ಬರೇ ತಿರುಗುವುದಕ್ಕೆ ಬಹಳ ಭಯವಾಗುತ್ತದೆ ಈ ಪಟ್ಟಣದಲ್ಲಿ ಮೋಸವರು ಸಿಗಾಕೊಳ್ಳುತ್ತಾರೆಂದು ನಂಬಿರುತ್ತೇವೆ ಮತ್ತು ಈ ಊರಿನಲ್ಲಿರತಕ್ಕ ಮುನಿಸಿಪಾಲಿಟಿ ಲಾಂದ್ರಗಳ ದೀಪಗಳನ್ನು ಜಾಸ್ತಿಮಾಡಿದರೆ ಪ್ರಜೆಗಳಿಗೆ ಬಹಳ ಉಪಕಾರವಾಗುತ್ತೆ ಅರಳೀಪೇಟೆಗೆ ಸ್ವಲ್ಪ ದೂರದಲ್ಲಿರುವ ವಿಶ್ವೇಶ್ವರ ದೇವಸ್ಥಾನಕ್ಕೆ ಅನೇಕ ಜನಗಳು ರಾತ್ರಿ ಹೊತ್ತಿನಲ್ಲಿ ತಿರುಗುವುದರಿಂದ ಅಲ್ಲಿ ಬೆಳಕಿಲ್ಲದೆ ಬಹಳ ತೊಂದರೆಯಾಗಿರುತ್ತೆ ಈ ದೇವಸ್ಥಾನಕ್ಕೆ ಅನೇಕ ಮಂದಿ ಭಕ್ತರು ಬಂದು ಇಲ್ಲಿ ಇಳಿಯುತ್ತಾರೆ ಆದ್ದರಿಂದ ಮುನಿಸಿಪಾಲಿಟಿಯವರು ಅಲ್ಲಿಗೆ ಒಂದು ಲಾಂದ್ರವನ್ನು ಇಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ —ಈ ಊರು ಅಭಿವೃದ್ಧಿ ಸ್ಥಿತಿಗೆ ಬರುವ ಕಾಲ ಬೇಗನೆ ಗೊತ್ತಿಲ್ಲ ಮೈಸೂರಿಂದ ಹಾಸನಕ್ಕೆ ರೈಲ್ವೆ ಸರ್ವೆ ಮಾಡುತ್ತಿದ್ದಾರೆಂದು ಸಮಾಚಾರವಿದೆ ಅದು ಎಲ್ಲಿಯವರೆಗೆ ಆಗಬಹುದೆಂದೂ ಗೊತ್ತಾಗಲಿಲ್ಲ ಸದ್ಯದಲ್ಲೇ ರೈಲು ಬರುವುದಕ್ಕೆ ಏರ್ಪಾಡು ಮಾಡಿದರೆ ಬಹು ಸಂತೋಷ ಈ ಊರಿನಲ್ಲಿ ಬಡಬಗ್ಗರಿಗೆ ಜೀವನ ನಡೆಯುವುದೇ ಕಷ್ಟವಾಗಿರುತ್ತದೆ ಆದಕಾರಣ ಈ ರೈಲು ಸದ್ಯದಲ್ಲಿಯೇ ಬಂದರೆ ಬಡವರ ಮನೆಗೆ ಭಾಗ್ಯದ ಲಕ್ಷ್ಮಿ ಬಂದ ಹಾಗಾಗುತ್ತೆ —ಇಲ್ಲಿನ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ ತಿರುಮಲಾಚಾರ್ರಿಗೆ ವರ್ಗವೆಂಬ ಸಮಾಚಾರವು ಇಲ್ಲಿನ ಸಮಸ್ತ ಜನಗಳಲ್ಲಿಯೂ ಬಹಳ ವಿಷಾದವನ್ನು ಉಂಟುಮಾಡಿದೆ ಇಲ್ಲಿಗೆ ಬೆಂಗಳೂರ್ ಡಿಸ್ಟ್ರಿಕ್ಟಿನ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ| ಹಿರಣ್ಣಯ್ಯನವರು ಬರುತ್ತಾರೆಂಬ ಸಮಾಚಾರವಿದೆ —ಹಾಸನ ಡಿಸ್ಟ್ರಿಕ್ಟಿನ ಕೆಲಸ ಕಡೆ ರೇಷ್ಮೆ ವ್ಯವಸಾಯವು ನಡೆಯುತ್ತಿದೆ ಆದ್ದರಿಂದ ಅದು ಮುಂದೆ ಅಭಿವೃದ್ಧಿಸ್ಥಿತಿಗೆ ಬರುವಂತೆ ಜನಗಳು ಪ್ರೋತ್ಸಾಹಕೊಡುತ್ತಾರೆಂದು ನಂಬಿದೇವೆ

Printed and Published by the Rev. H GULLIFORD, Proprietor and Manager, Wesleyan Mission Press, Mysore 5/8/1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—ಸೆ ೧೯೦೯ ನೇ ಇಸವಿ ಅಗಸ್ಟ್ ತಾರೀಖು ೧೨ ನೇ ಗುರುವಾರ. | ಸಂಚಿಕೆ ೧೧

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-25]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಜಖಮು, ಇತ್ಯಾದಿ.

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ನಾಲ್ಕು ತಾಸಿನವರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವು ಗಳು ವಾಸಿಯಾಗುವವು ಇದರಿಂದ ಉರಿಯು ಬರುವದಿಲ್ಲ ಬಟ್ಟೆಯ ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಷ್ಟಾ ಮಿಶ್ರಣ	೩-೦-೦
ಪ್ರೌಢಾವಸ್ಥೆಯ ಮದ್ದು	೦-೮-೦
ವಜ್ರ ಗುಟಿಕ—ಧಾತುಪುಷ್ಟಿ ರಕ್ತಪುಷ್ಟಿ	೧-೦-೦
ಸುಂದರೀ ತೈಲ—ಮುಡಿ ಜಾಗಳಿಗೆ	೩-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೪-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಬಿಜ ಮುಲಾಮು—ಮಕ್ಕಳ ಬಿಜ್ಜಿಗೆ	೦-೩-೦
ಕಾಶವರ್ಧಿನಿ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಅಸ್ತಮಾ ರೋಗಕ್ಕೆ	೦-೮-೦

ದಯವಿಟ್ಟು ಕಾಗದಗಳಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

I 31

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೀಳುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವುಗಳು ಚನ್ನಾಗಿಲ್ಲದವು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಖಾಕಿ ಬಣ್ಣಗಳ ಟೋಪಿಗಳು ೧ ರೂ. ೨ ಆ; ೧ ರೂ ೬ ಆ; ೧ ರೂ ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೩

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ ೮ ಆ.; ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ., ೧ ರೂ. ೬ ಆ;

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ... ... ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುತ್ತಿರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೈಮೆಂಟರ ಮ್ಯಾಜಿಕ್ ಬಾಂ ತೈಲವು

27-12

ತಲೆನೋವು, ಮೈಯುನೋವು, ಸೆಳತ. ಗಂಟ್ಲನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಜೀವನಾದಿಯಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿ ಎಲ್ಲಾ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿ ಮಾಡುತ್ತದೆ ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೭, ಪೋದಮುಟ್ಟಿಯ ಬೀದಿ, ಮೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿಕೊಳ್ಳಿರಿ.

10-32

"ಬ್ರಹ್ಮಚರ್ಯ" ಎಂಬ ಮನುಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ.

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ. ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ಬಿನ್ನಹಂ" ಇದು ಲೋಕಪ್ರಸಿದ್ಧವಾದ ಪುಸ್ತಕವು. ಕ್ರೈಸ್ತ ಮತದಲ್ಲಿ ತಿಳಿಸುವ ವಿನಯಶಾಂತತೆ, ಸಾಹಸಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕ್ಯಾಲಿಕೋ ಬೈಂಡು ಪ್ರತಿ ಒಂದಕ್ಕೆ ೦—೧೦—೩

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ.—ಮ್ಯಾನೇಜರ್, ಸಿ. ಎಲ್ ಎಸ್ ಬುಕ್ ಡಿಪೋ ಮೈಸೂರು

ಬಾಳ್ಯದ ವೆಂಕಟಾಚಲ ಪಂಡಿತರ ಜ್ವರದ ಗುಳಿಗೆ.

28-26

ಈ ಗುಳಿಗೆಗಳು ದಿನಜ್ವರ, ಹೊಸ ಜ್ವರ, ಚಳಿಜ್ವರ, ಪ್ಲೇಗು ಜ್ವರ, ವರಸೇ ಜ್ವರ (ಮೂರನೆ ಮತ್ತು ನಾಲ್ಕನ), ಮಲೇರಿಯಾ ಜ್ವರ (ಅಸ್ಥಿಗತ ಜ್ವರ), ಶೀತ ಜ್ವರ, ಪಿತ್ತ ಜ್ವರ ಸನ್ನಿಪಾತ ಜ್ವರ, ಇವೆಲ್ಲವನ್ನೂ ಖಂಡಿತವಾಗಿ ತಪ್ಪದೆ ಗುಣಪಡಿಸುತ್ತದೆ

ಇದರಲ್ಲಿ ಕ್ವಿನೈನಾಗಲೀ ಅಕ್ಷೇಪಣೆಯಾದ ಯಾವ ವಸ್ತುವಾಗಲೀ ನಿಜವಾಗಿಯೂ ಸೇರಿಲ್ಲವಾಗಿ ಏನು ಪಥ್ಯವಿಲ್ಲದಂತೆ ಸೇವಿಸತಕ್ಕದ್ದಾಗಿದೆ ಜ್ವರಿತರಿಗೆ ಈ ಗುಳಿಗೆಗಳು ಅಮೃತವೆಂದೇ ಹೇಳಿದರೆ ಅತಿಶಯೋಕ್ತಿಯಾಗಲಾರದು

೧೨ ಗುಳಿಗೆಯುಳ್ಳ ಕುಪ್ಪಿ ೮ ಆ

೩೬ " " ೧ ರೂ.

೧ ಡಜನ್ ದೊಡ್ಡ ಕುಪ್ಪಿ ಒಂದೇ ಸಲ ತರಿಸಿದರೆ .. ೮ ರೂ.

೧ ಡಜನ್ ಸಣ್ಣ ಕುಪ್ಪಿ ೪ ರೂ.

ಪೋಸ್ಟೇಜು ಬೇರೆ

ವಿಳಾಸ —ಎಸ್. ಎಸ್. ಆರ್ ವೈದ್ಯಶಾಲೆ ಮೈಸೂರು.

ಜ್ವರಹರಿ 16-28

ಇದು ಸಾಧಾರಣ ಜ್ವರ, ಚಳಿಜ್ವರ, ಮೈಲಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಅನೇಕ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೩೦ ಟೇಬ್ಲೆಟ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಔಷಧಿಗೋಸ್ಕರ ಕೇಳುತ್ತಿರುವದರಿಂದ ತಡಮಾಡದೆ ಇನ್ನೊಂದು ೩೦ ಟೇಬ್ಲೆಟ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೩—೧೨ ಆ, ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕೈಲ್ಲಾ ಮಹಾ ಔಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಯವರು—ಜ್ವರಹರಿ ಓಮಂ ಕರ್ಪೂರವನ್ನು ನಾನೂ ನನ್ನ ಸಹೋದ್ಯೋಗಿಗಳೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೌಕಾರ್ ಪೇಟ್ ಲೈನ್, ಮದರಾಸ್

ಸಂಜೀವಿನೀ ಔಷಧಾಲಯ, ಮೈಸೂರು.

28 27

ಎಂ ಎಸ್. ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ ಚೋಮು, ವಾಯುನೋವುಗಳೂ ಹಳೇ ಜ್ವರ ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ ರಕ್ತವೃದ್ಧಿಗಳನ್ನು ಉಂಟುಮಾಡಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ರಯೋಗದಿಂದ ಗುಣ ಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಬ್ಬುಗಣ್ಣು ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನು ಉಂಟುಮಾಡಿ ದೃಷ್ಟಿ ಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಧಾಣೆ ಸ್ಟೇಂಪ್ ಇಟ್ಟು ಬರೆಯಿರಿ

ಡಿ ಕಾ ಸ್ವಾಮಿ,
ಪ್ರೊಪ್ರೈಟರ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮನುಷ್ಯನ ವಿಷವನ್ನು ಏರಿಸಿದಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವ [illegible] ಆರೋಗ್ಯವಾಗಿರುತ್ತವೆ ದೌರ್ಬಲ್ಯದಿಂದಲೂ ವ್ಯಾಧಿಯಿಂದಲೂ ಮೂತ್ರಕೋಶವು ಈ ಕಾರ್ಯವನ್ನು ಮಾಡಲಾರದೆ ಹೋದರೆ [illegible] ರೋಗಗಳುಂಟಾಗುವುದು

ಮೂತ್ರಕೋಶದ [illegible] ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು [illegible] ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ [illegible] ಬಿಡ ಬಾಯಾರಿಕೆ ಬಳಲಿಕೆ ಎದೆ [illegible] ಗಾಬರಿ ಕೆಲವೊಬ್ಬ [illegible] ತಿರುಗುವಿಕೆ [illegible] ಆಗುವ [illegible] ಮೂತ್ರಕೋಶ [illegible] ಸಂಬಂಧವಾದ ರೋಗಗಳಿಂದುಂಟಾದ [illegible] ರೋಗಗಳು, ಇವೆಲ್ಲಾ [illegible] ಆಗುವುವು

ಡೋನ ರವರ [illegible] ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ [illegible] ದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನು ಉಂಟುಮಾಡುವವು [69 50]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



[illegible] ಅಥವಾ [illegible] ಬುಡ್ಡಿಗಳಿಗೆ [illegible] ೧೦—೮ ೦ ಔಷಧಗಳನ್ನು ಮಾರುವವರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ [illegible] ಬೊಂಬಾಯಿ — ಇವರಲ್ಲಿ ದೊರೆಯುವುದು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 6 32

(ಸ್ಕಾಟ್ಸ್ ಇಮಲ್ಷನ್)

ಸಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೇ ದುರ್ಬಲರನ್ನೇ ಬೇಗನೆ ಹಿಡಿಯುತ್ತದೆ

ಆದ್ದರಿಂದ ನಿಮ್ಮ ದೇಹ ಮತ್ತು ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿಕೊಂಡು ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕ್ರಿಯೋಸೋಟ್ ತಯಾರಾದದ್ದು

—

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ
ಲಂಡನ್ ಇಂಗ್ಲೆಂಡ್

ಈ ಮನುಷ್ಯನು ಇರುವ ಚಿತ್ರವನ್ನೇ ಕೊಂಡುಕೊಳ್ಳಿ

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

1 33

ಶೀತದ ಕೆಮ್ಮು ಗಂಟಲು ಗರಗರಿಸುವುದು, ಹುಡಿಗೆಮ್ಮು, ನಾಯಿಗೆಮ್ಮು ಎಲ್ಲಾ ತರದ ಶೀತ ಗಂಟಲುಗಳು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲ ಈ ಔಷಧವು ಚಮತ್ಕಾರವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಸಿರಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಡೆಯುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆ ೨ ರೂಪಾಯಿ

ವಿಶೇಷ.

— 59

ತಮ್ಮ ತಮ್ಮ ಪಟ್ಟಣಗಳಲ್ಲಿ ಯಾ ಹಳ್ಳಿಗಳಲ್ಲಿ ನಮ್ಮ ಔಷಧಿಗಳನ್ನು ವಿಕ್ರಯಿಸುವ ಏಜೆಂಟರುಗಳು ಬೇಕು ಮಾಸೋಪ್ಪತ್ತ ೧೫ ರೂ ಸಂಬಳ ಡಾಪಾಜಿಟ್ ಅವಶ್ಯಕವಿಲ್ಲ ೧ ರೂ ಕಳಿಸಿದೊಡನೆ ಮ್ಯಾನೇಜರ್, ಆಯುರ್ವೇದಿಕ್ ಮೆಡಿಕಲ್ ಹಾಲ್ ೭ ಚೂಳೆ ಹೈರೋಡು ಮದ್ರಾಸು, ಇವರಿಗೆ ಬರೆಯಿರಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!

3 11

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ಕಂಡರೂ [illegible] ಬಹಳ ಬಾಳಿಕೆ ಬರುವಂತವುಗಳಾಗಿವೆ ಒಗೆದ್ರೆ ಮಾಸುಗುವದಿಲ್ಲ ಬೆಲೆ ಬಹಳ ಕಡಮೆ ಈ ಬಟ್ಟೆಗಳು ಕೈ ಮಗ್ಗದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ತರಿಸಿ ನೋಡಿದಾಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ [illegible] ಆಣೆ ವರಿವಿಗೂ ಬಿಲ್ಲೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು ಹಾಸಿಗೆ ದುಪಟಿಗಳು ಮುಸುಕಿನ ಟೋಪಿಗಳು ಹುಡುಗರ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್

ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

1[illegible]—7—1[illegible] ರಿಂದ 23—7—1[illegible] ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ		0	0	[illegible]	0
ಮೈಸೂರು ,,		11	1	[illegible]	[illegible]
ಬೆಂಗಳೂರು ಡಿಸ್ಟ್ರಿಕ್ಟು		2	2	0	0
ಮೈಸೂರು ,,		13	9	0	0
ಕೋಲಾರ್ ,,		0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		2	1	0	0
ಹಾಸನ		3	3	0	0
ಚಿತ್ರದುರ್ಗ ,,		0	0	•1	1
ಕಡೂರ್ ,,		10	6	0	0
ಶಿವಮೊಗ್ಗ ,,		12	3	8	6
* ಹೊರಗಿನದು	ಜುಮ್ಲಾ	56	31	9	7

ಕ್ಷಾಮನಿವಾರಣೆಯ ಕಾರ್ಯಗಳು

ಸನ 1909 ನೇ ಜೂಲೈ ತಾ 31 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮದ ಸಹಾಯ ಪಡೆದ ಜನರು
ಬೆಂಗಳೂರು	100	69		182	
ಕೋಲಾರ	42[illegible]	251	37	1, 53	
ತುಮಕೂರು	266	209	10	345	
ಮೈಸೂರು					
ಹಾಸನ	210	210	30	178	
ಶಿವಮೊಗ್ಗ					
ಕಡೂರು				130	
ಚಿತ್ರದುರ್ಗ	1[illegible]	136	14	340	
ಮಾಂಕಣಿವೆ ಸ್ಯಾನಿಟೇರಿ	345	388	10	8[illegible]1	
ಒಟ್ಟು	1,470	1,330	125	3,092	

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಅಧಿಕ ಶ್ರಾವಣ ಬಹುಳ ದ್ವಾದಶಿ ಗುರುವಾರದಿಂದ ನಿಜ ಶ್ರಾವಣ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಆಗಸ್ಟು

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಕಟಕ ಮಾಸ
12	ಗುರು §	ದ್ವಾದಶಿ	[illegible]	ಆರ್ದ್ರ	[illegible] 11	28
11	ಶುಕ್ರ	ತ್ರಯೋದಶಿ	[illegible]	ಪು	[illegible]1 16	29
14	ಶನಿ	ಚತುರ್ದಶಿ	12	ಪು	[illegible]	30
1	ರವಿ ‡	ಅಮಾವಾಸ್ಯೆ	1[illegible]	ಆ	[illegible] 2	31
16	ಸೋಮ	ಪಾಡ್ಯ	18	ಮ	[illegible]	1
17	ಮಂಗಳ •	ಬಿದಿಗೆ		ಪು	1 1[illegible]	
19	ಬುಧ †	ಬಿದಿಗೆ	1 [illegible]	ಉ	7 2	[illegible]

§ [illegible] ಭಗವತ್ [illegible] ಹರಿವಾಸರ
ದ್ವಿಪೋಷ ಅಧಿಕ ಶ್ರಾವಣ
‡ ಸರ್ವತ್ರ ಅಮಾವಾಸ್ಯೆ
• ಚಂದ್ರೋದಯ [illegible]
[illegible]

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಬಡಿಯ ಅಕ್ಕಿ ಪಲ್ಲಾ ೧ ಕ್ಕೆ	೧೯ ೦	[illegible] ೦
ಕೆಂಬೂತಿ ಅಕ್ಕಿ ಅವಲ್		೧೪ [illegible] ೦
ದುಯಂ		೧೪ ೦
ಬಂಗಾರಿ ಅಕ್ಕಿ	[illegible]	೧[illegible] ೦
ಸಣ್ಣಕ್ಕಿ ಅವಲ್	[illegible]	[illegible] ೦
,, ದುಯಂ	೧[illegible] ೦	೧[illegible] ೦
ತೊಗರೀ ಬೇಳೆ ಪಲ್ಲಾ ೧ ಕ್ಕೆ	೧[illegible]	೧೫ ೩ ೦
ದುಯಂ	೫ ೦	೧೫ ೦ ೦
ಹೈಕ ರಾಗಿ ಪಲ್ಲಾ ೧ ಕ್ಕೆ	[illegible] ೦	೯ ೦ ೦
ಜೋಳ್ರಾಗಿ	೯ ೦	೮ ೮ ೦
ಜೋಳ	೯ [illegible]	೯ [illegible] ೦
ಹುಲಸಂದೆ ಪಲ್ಲಾ ೧ ಕ್ಕೆ	೧೩ ೦	೧೩ ೦ ೦
ಬೇಳೆ ಅವರೆ	೧[illegible] ೦	೧೪ ೦ ೦
ಹೆಸರು	೧೩ ೦ ೦	೧೧ ೧೩ ೦
ಉದ್ದು	೧೪ ೮ ೦	[illegible] ೧೩ ೦
ಕಡಲೆ	೧೪ [illegible] ೦	೧[illegible]೪ ೦
ಎಳ್ಳು ಸೇ ೧೨೭ ಕ್ಕೆ	[illegible] ೮ ೦	೧[illegible] ೮ ೦
ಹುರುಳೀ	೧೨ ೬ ೦	೧[illegible] ೮ ೦
ಹರಳು ೧೨೭ ಸೇರಿಗೆ	೧೨ ೮ ೦	೧ [illegible] ೦
ತೆಂಗಿನಕಾಯಿ ಮಣ ೧ ಕ್ಕೆ	೨ ೮ ೦	[illegible] ೪ ೦
ಮೆಣಸಿನಕಾಯಿ	೫ ೧೨ ೦	೪ ೮ ೦
,, ದುಯಂ	೫ ೮ ೦	೬ ೦ ೦
ಬೆಲ್ಲ ದೊಡ್ಡ ಅಚ್ಚು	[illegible] ೪ ೦	[illegible] ೦
ಒಳ್ಳೆಣ್ಣೆ ಮಣ ೧ ಕ್ಕೆ	೫ ೮ ೦	೫ ೪ ೦
ಹರಳೆಣ್ಣೆ ,,	೫ ೦	೪ ೪ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ	೯ ೮ ೦	[illegible] ೮ ೦
ಉಪ್ಪು	[illegible] ೦	೫ ೮ ೦
ಹುಣಸೇ ಹಣ್ಣು	೨ [illegible] ೦	೧ ೧೦ ೦
,, ಹಳೇದು	೧ [illegible]	೧ ೯ ೦
ತುಪ್ಪ ಮಣ ೧ ಕ್ಕೆ	೧[illegible] ೦	೧೩ ೮ ೦
ಸೀಮೆಮೆಣ್ಣೆ ಪೆಟ್ಟಿ ೧ ಕ್ಕೆ	[illegible]	[illegible] ೦
ತೆಂಗಿನಕಾಯಿ ೧೦೦ ಕ್ಕೆ	೪ [illegible]	[illegible] ೮ ೦
ಅಡಿಕೆಕಾಯಿ ಮಣ ೧ ಕ್ಕೆ	೦ ೮ [illegible]	೦ [illegible] ೦
ಅಂಟ್ವಾಳದ ಕಾಯಿ ಮಣ ೧ ಕ್ಕೆ	೧ ೦ ೦	[illegible] ೦
ಚಿನ್ನ (ಪವನ್) ಕೆಂಪು	೧೫ [illegible] ೦	೧೫ ೯ ೦
,, ,, ಪಸುಮೆ	೧[illegible] ೦ ೦	೧೫ ೧೨ ೦
,, ,, ಗಟ್ಟಿ ತೊಲ ೧ ಕ್ಕೆ	[illegible]೪ ೮ ೦	[illegible]೪ ೭ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	[illegible] ೪ ೦	[illegible]೪ ೦ ೦

ಕಸಬುಗಳ ವಿಚಾರವು

ಗುಂಟೂರು ಜಿಲ್ಲೆಗೆ ಸೇರಿದ ಓಂಗೋಲಿನಲ್ಲಿ ಈ ಸಲ ನಡೆದ ಗೋವುಗಳ ಪ್ರದರ್ಶನವು ಬಹು ವಿಶೇಷವಾಗಿತ್ತೆಂದು ತಿಳಿದುಬರುತ್ತದೆ ಅನ್ಯದೇಶಗಳಿಂದ ವರ್ತಕರು ಬಂದು ರಾಸುಗಳನ್ನು ಕೊಂಡು ಸಾಗಿಸಿಕೊಂಡು ಹೋದರು ಫಿಲಿಪ್ಪೈನ್ ದ್ವೀಪಗಳಿಗೆ ೧೨, ಡಚ್ಚರ ಈಸ್ಟ್ ಇಂಡೀಸ್ ಪ್ರಾಂತ್ಯಕ್ಕೆ ೨೫೬, ಬ್ರೆಜಿಲ್ಲಿಗೆ ೩೧೪, ಈ ಪ್ರಕಾರ ದನಗಳು ಈ ಪ್ರದರ್ಶನದಿಂದ ಹೋಗಿರುತ್ತವೆ ಸುಮಾರು ೬೦,೦೦೦ ರೂಪಾಯಿ ಓಂಗೋಲಿನ ದನ ಸಾಕುವವರಿಗೆ ಸಿಕ್ಕಿತು ಜಾವಾ, ಫಿಲಿಪ್ಪೈನ್ ದ್ವೀಪಗಳವರು ನಮ್ಮ ದೇಶದ ದನಗಳನ್ನು ಅಧಿಕವಾಗಿ ಪ್ರೀತಿಸಿ ಕೊಂಡುಕೊಳ್ಳುವರು ಇಲ್ಲಿ ದನಗಳನ್ನು ಸಾಕತಕ್ಕವರು ಬೀಜದ ಹೋರಿಗಳನ್ನೂ ಹಸುಗಳನ್ನೂ ಚೆನ್ನಾಗಿ ಸಾಕಬೇಕು ಎಮ್ಮೆಗಳ ಪೋಷಣೆಯ ವಿಷಯದಲ್ಲೂ ಇನ್ನು ಎಂಟಾ ಮುಂತುವರಿಕೆಯನ್ನೂ ಉತ್ಸಾಹವನ್ನೂ ತೋರಿಸಬೇಕಾಗಿದೆ

ಅಲ್ಲಹಾಬಾದ್ ಪಟ್ಟಣದ ಬಳಿ ಇರುವ ನೈನಿ ಎಂಬ ಸ್ಥಳದಲ್ಲಿ ಕಳೆದವಾರ ಲೆಫ್ಟಿನೆಂಟ್ ಗವರ್ನರವರು ಒಂದು ಸ್ವದೇಶೀ ಸಕ್ಕರೆ ಕಾರ್ಖಾನೆಯ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು ಕೆಲವು ರಾಜರೂ, ನವಾಬರೂ, ಮಹಾರಾಜರುಗಳೂ, ಬಹು ಮಂದಿ ದೇಶೀಯ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಆ ಸಕ್ಕರೆ ಕಂಪನಿಯ ಡೈರೆಕ್ಟರುಗಳ ಪೈಕಿ ಮುಖಂಡರಾದ ರಾಯಬಹದೂರ್ ರಾಮಚರಣದಾಸ್ ಅವರು ಕಂಪನಿಯ ರಿಪೋರ್ಟನ್ನೂ ಕಟ್ಟಡದ ವಿವರವನ್ನೂ ವಿವರಿಸಿದರು ಲೆಫ್ಟಿನೆಂಟ್ ಗವರ್ನರವರು ಈ ರಾಷ್ಟ್ರದಲ್ಲಿ ಅಪಾರವಾಗಿ ಕಬ್ಬನ್ನು ಬೆಳೆ ಮಾಡುವುದಕ್ಕೂ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿ ನಡೆಸುವುದಕ್ಕೂ ತುಂಬಾ ಅವಕಾಶವಿದೆ ಎಂದೂ, ಈ ವಿಷಯದಲ್ಲಿ ಹಿಂದುಸ್ಥಾನದ ದೇಶವತ್ಸಲರು ಸಾಹಸಪಟ್ಟು ಹಣಗಾರರಿಗೆ ಪ್ರೋತ್ಸಾಹ ಕೊಡಬೇಕಾಗಿದೆ ಎಂದೂ ಹೇಳಿ, ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು

ವಿಮಾನಗಳ ವಿಚಾರವು

ಜರ್ಮನ್ ರಾಜ್ಯದ ಪ್ರಸಿದ್ಧ ಕಾರೀಗಾರನಾದ ಕೌಂಟ್ ಜೆಪ್ಪೆಲಿನ್ ಎಂಬಾತನು ಒಂದು ವಿಮಾನವನ್ನು ತಯಾರುಮಾಡಿ ಅದರಲ್ಲಿ ಕುಳಿತುಕೊಂಡು ಫ್ರೆಡ್ರಿಕ್‌ಷೇವನ್ ಪಟ್ಟಣದಿಂದ ಹೊರಟು ಅಂತರಿಕ್ಷ ಮಾರ್ಗದಲ್ಲಿ ಕಾನ್‌ಸ್ಟೆನ್ಸ್ ಎಂಬ ಕೆರೆಯನ್ನು ದಾಟಿ ಹೋಗಿ ಫ್ರಾಂಕ್‌ಫರ್ಟ್ ಪಟ್ಟಣದಲ್ಲಿ ಸುಖವಾಗಿ ಇಳಿದನು

ಅಮೇರಿಕಕ್ಕೆ ಸೇರಿದ ವಾಷಿಂಗ್‌ಟನ್ ಪಟ್ಟಣದಲ್ಲಿ ಮಿ ಆರ್ವಿಲ್ಲಿ ರೈಟ್ ಎಂಬಾತನು ತನ್ನ ವಿಮಾನದಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದು ಅಲ್ಲಿನ ಸರ್ಕಾರಿ ಅಧಿಕಾರಿಗಳಿಗೆ ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿದನು ಈತನ ವಿಮಾನವು ಒಂದು ಗಂಟೆ ಇಪ್ಪತ್ತೆರಡು ನಿಮಿಷಗಳಲ್ಲಿ ೫೦ ಮೈಲಿ ದೂರ ಪ್ರಯಾಣ ಮಾಡಿರುತ್ತದೆ

ಎಂ ಬ್ಲೇರಿಯೊ ಎಂಬೊಬ್ಬ ಫ್ರೆಂಚ್ ಕಾರೀಗಾರನು ಒಂದು ವಿಮಾನವನ್ನು ಕಟ್ಟಿ ಅದರಲ್ಲಿ ಕುಳಿತು ಪ್ಯಾರಿಸ್ ನಗರದಿಂದ ಹೊರಟು ಅಂತರಿಕ್ಷ ಮಾರ್ಗದಲ್ಲಿ ಸಂಚಾರಮಾಡಿಕೊಂಡು ಹೋಗಿ ಲಂಡನ್ ಪಟ್ಟಣದಲ್ಲಿ ಸುರಕ್ಷಿತವಾಗಿ ಇಳಿದನು ಈತನ ಪ್ರಯತ್ನವು ಸಾರ್ಥಕವಾಯಿತಲ್ಲಾ ಎಂದು ಫ್ರೆಂಚರೂ ಇಂಗ್ಲಿಷರೂ ಬಹಳ ಸಂತೋಷಪಟ್ಟರು ಇಂಗ್ಲಿಷ್ ಯುದ್ಧದ ಇಲಾಖೆಯ ಸೆಕ್ರೆಟರಿಯವರಾದ ಮಿ ಹಾಲ್ಡೇನ್‌ರವರು ಎಂ ಬ್ಲೇರಿಯೊ ಅವರನ್ನು ಕೊಂಡಾಡಿದರು

ಇಂಗ್ಲೆಂಡಿನ ಯುದ್ಧದ ಇಲಾಖೆಯ ಸೆಕ್ರೆಟರಿಯವರಾದ ಮಿ ಹಾಲ್ಡೇನ್‌ರವರು ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳನ್ನು ಕೊಂಡುಕೊಳ್ಳುವುದಕ್ಕೂ ಹೊಸದಾಗಿ ಮಾಡಿಸುವುದಕ್ಕೂ ಈ ಸಾಲಿನಲ್ಲಿ ೧೧,೭೦,೦೦೦ ರೂಪಾಯಿ ಸ್ಯಾಂಕ್ಷನ್ ಆಗಬೇಕೆಂದು ಗವರ್ನ್‌ಮೆಂಟಿನವರನ್ನು ಕೇಳಿದಾರೆ ವಿಕರ್ಸ್ ಎಂಬ ಇಂಗ್ಲಿಷ್ ಕಂಪನಿಯವರು ಇಪ್ಪತ್ತು ಮಂದಿ ಕುಳಿತು ಸಂಚರಿಸುವಂಥಾ ವಿಮಾನವನ್ನು ತಯಾರುಮಾಡುವರೆಂತಲೂ, ಅನ್ಯ ದೇಶಗಳ ಕಾರೀಗಾರರಿಂದ ನಾಲ್ಕು ವಿಮಾನಗಳನ್ನು ಕೊಂಡು ತರಿಸಿಕೊಳ್ಳಬೇಕಾಗಿದೆ ಎಂತಲೂ ಸೆಕ್ರೆಟರಿಯವರು ತಿಳಿಸಿದರು

ಮಿ ಲಾಥಂ ಎಂಬೊಬ್ಬ ಇಂಗ್ಲಿಷ್ ಕಾರೀಗಾರನು ತನ್ನ ವಿಮಾನದಲ್ಲಿ ಕುಳಿತು ಫ್ರಾನ್ಸಿನ ದಡದಲ್ಲಿರುವ ಕ್ಯಾಲೆ ಎಂಬ ಪಟ್ಟಣದಿಂದ ಹೊರಟು ಇಂಗ್ಲೆಂಡಿನ ತೀರದಲ್ಲಿರುವ ಡೋವರ್ ನಗರಕ್ಕೆ ಹೋಗಿ ಇಳಿಯಬೇಕೆಂದು ಇಂಗ್ಲಿಷ್ ಚಾನಲ್ ಎಂಬ ಕಡಲುಕಾಲುವೆಯನ್ನು ದಾಟುವುದಕ್ಕೆ ಪ್ರಯತ್ನಪಟ್ಟನು. ಡೋವರ್ ಪಟ್ಟಣವು ಎರಡು ಮೈಲಿ ದೂರದಲ್ಲಿದೆ ಎನ್ನುವಷ್ಟರೊಳಗಾಗಿ ಆ ವಿಮಾನವು ಕಳಚಿ ಸಮುದ್ರದೊಳಗೆ ಬಿದ್ದುಬಿಟ್ಟಿತು ಮಿ ಲಾಥಮನೂ ಬಿದ್ದರೂ ಅವನನ್ನು ಎತ್ತಿ ದೋಣಿಯಲ್ಲಿ ಕೂರಿಸಿ ಕರೆದುಕೊಂಡು ಹೋದರು ಆತನ ತಲೆಗೂ ಮೂಗಿಗೂ ಸ್ವಲ್ಪ ಪೆಟ್ಟು ತಗಲಿ ಗಾಯವಾದದ್ದರಿಂದ ವೈದ್ಯರು ಚಿಕಿತ್ಸೆ ಮಾಡಿದರು ಬಳಿಕ ಆವನು ಎರಡನೇ ಸಲ ಪ್ರಯತ್ನಮಾಡಿ ಅದೇ ಇಂಗ್ಲಿಷ್ ಚಾನಲನ್ನು ಬಹು ವೇಗವಾಗಿಯೂ ನಿರಾತಂಕವಾಗಿಯೂ ಗಮಂತಯೂ ದಾಟಿದನು

ಬಾಲಕರ ರಕ್ಷಣೆಯು

ಇಂಗ್ಲೆಂಡಿನಲ್ಲಿ ಕೆಲವು ವಾರಗಳ ಹಿಂದೆ ಬಾಲಕವ್ಯವಸ್ಥೆ ಎಂಬದೊಂದು ಹೊಸ ಕಾನೂನು ಪ್ರಚಾರಕ್ಕೆ ಬಂದಿದೆ ಈ ಕಾನೂನಿನಲ್ಲಿ ಹಿಂದೆ ಬಾಲಕರ ಗೋಸ್ಕರ ಏರ್ಪಡಿಸಿದ್ದ ಕಾಯಿದೆ ಕಾನೂನುಗಳನ್ನು ಸ್ಥಿರಪಡಿಸಿದ್ದಲ್ಲದೆ ಕೆಲವು ಹೊಸ ಅಂಶಗಳನ್ನೂ ಸೇರಿಸಿದಾರೆ ಮಕ್ಕಳ ಆಯುರಾರೋಗ್ಯವನ್ನು ಕಾಪಾಡುವುದು ಸರ್ಕಾರದವರ ಧರ್ಮವೆಂಬುವುದೇ ಈ ಕಾಯಿದೆ ಕಾನೂನುಗಳನ್ನು ಮಾಡಿದವರ ಅಭಿಪ್ರಾಯ ಮಕ್ಕಳ ಮೇಲೆ ತಾಯಿತಂದೆಗಳಿಗೆ ಇರುವ ಅಧಿಕಾರವು ಈ ಆಕ್ಟಿನಿಂದ ಕಡಮೆಯಾಗುವುದಿಲ್ಲ ಆದರೆ ತಾಯಿತಂದೆಗಳ ಅಧಿಕಾರವು ಅನುಪಯುಕ್ತವಾಗುವ ಅಥವಾ ಹಾನಿಕರವಾಗುವ ಪಕ್ಷಗಳಲ್ಲಿ ಈ ಆಕ್ಟಿನ ಮೂಲಕ ಸರ್ಕಾರವು ತಾನೇ ಅವರನ್ನು ಅಧಿಕರಿಸುವುದಕ್ಕೆ ಸಹಾಯವಾಗುತ್ತದೆ ಈ ನವನಾಗರಿಕ ಕಾಲದಲ್ಲಿ ಎಂಟು ಹತ್ತು ವರುಷದ ಮಕ್ಕಳನ್ನಾದರೂ ಹತೋಟಿಯಲ್ಲಿಟ್ಟುಕೊಳ್ಳುವುದು ಅನೇಕ ಮಂದಿ ಹೆತ್ತವರಿಗೆ ಕಷ್ಟಕರವಾಗಿದೆ. ಇದನ್ನು ನೋಡುವಾಗ್ಗೆ “ಬೆಳೆಯು ಸಿರಿ ಮೊಳಕೆಯಲ್ಲಿಯೇ ಕಾಣುತ್ತದೆ” ಎಂಬ ಗಾದೆಯಂತೆ ಮುಂದಿನ ಸಂತಾನವು ಎಂಥಾದ್ದಾಗುವುದೋ ಎಂಬ ಭಯಕ್ಕೆ ಕಾರಣವುಂಟಲ್ಲವೇ ? ಇಂಗ್ಲೆಂಡಿನಲ್ಲಿಯೂ ಹೀಗಾಗುವುದೆಂದು ತೋರಿದ್ದರಿಂದ ಈ ಕಾನೂನಿನಲ್ಲಿ ಬಾಲಕರು ನವನಾಗರಿಕತ್ವದ ತೊಡಗುಳಿಗೆ ಬೀಳದಂತೆ ತಡೆಯನ್ನು ಕಲ್ಪಿಸಿದಾರೆ ಕಾನೂನಿನ ಸಕಲ ಅಂಶಗಳನ್ನೂ ಇಲ್ಲಿ ಹೇಳಲು ಸಾಧ್ಯವಿಲ್ಲ. ಕೆಲವು ಅಂಶಗಳನ್ನು ಮಾತ್ರವೇ ಸೂಚಿಸುತ್ತೇವೆ (೧) ಹೆಂಡ, ಸಾರಾಯಿ ಮೊದಲಾದ ಯಾವ ತರದ ಮದ್ಯವನ್ನಾದರೂ ವೈದ್ಯರುಗಳ ಅಪ್ಪಣೆ ವಿನಹ ೫ ವರುಷದ ಕೆಳಗಿನ ಮಕ್ಕಳಿಗೆ ಕೊಡಕೂಡದು , (೨) ೧೪ ವರುಷ ಪ್ರಾಯದ ಕೆಳಗಿನ ಮಕ್ಕಳನ್ನು ಹೆಂಡ, ಸಾರಾಯಿ ಮಾರಾಟವಾಗುವ ಕಾಲದಲ್ಲಿ ಗಡಂಗುಗಳಿಗೆ ಕರೆದುಕೊಂಡು ಹೋಗಬಾರದು , (೩) ೧೬ ವರ್ಷದ ಕೆಳಗಿನ ಪ್ರಾಯದವರಿಗೆ ಅಂಗಡಿಗಾರರು ಹೊಗೆಸೊಪ್ಪು ಮಾರಕೂಡದು , ಅಂಥವರು ಸಿಗರೇಟು ಸೇದುವುದನ್ನು ಕಂಡರೆ ಉದ್ಯೋಗದ ದಿರಸಿನಲ್ಲಿರುವ ಅಧಿಕಾರಿಗಳು ಅವರ ಕೈಯಿಂದ ಸಿಗರೇಟುಗಳನ್ನೂ ಹೊಗೆಸೊಪ್ಪನ್ನೂ ಕಿತ್ತುಕೊಳ್ಳಬಹುದು , (೪) ಮಕ್ಕಳನ್ನು ಕಂಡಾಬಟ್ಟೆ ಹೊಡೆದು ಹಿಂಸಿಸಕೂಡದು , (೫) ಮಕ್ಕಳು ಹಾದಿಬೀದಿಗಳಲ್ಲಿ ಭಿಕ್ಷೆ ಬೇಡಕೂಡದು ಇವೇ ಮೊದಲಾದ ಅನೇಕ ತರದ ನಿಯಮಗಳನ್ನು ಮಾಡಿ ಪ್ರಚಾರಕ್ಕೆ ತಂದು, ಅವುಗಳನ್ನು ಮೀರಿ ನಡೆಯುವವರಿಗೆ ಇಂಥಿಂಥಾ ಶಿಕ್ಷೆಯಾಗುವುದೆಂತಲೂ ವಿಧಿಸಿರುವರು , ಈ ಕಾನೂನು ಜಾರಿಗೆ ಬಂದ ಕೆಲವು ವಾರಗಳಲ್ಲಿಯೇ ಇಂಗ್ಲೆಂಡಿನಲ್ಲಿ ಅನೇಕ ಮೊಕದ್ದಮೆಗಳು ನಡೆದು ಶಿಕ್ಷೆಗಳಾಗಿರುವವು

ಮೇಲೆ ಸಂಕ್ಷೇಪವಾಗಿ ಸೂಚಿತವಾದ ಕಾನೂನು ಈಗಿನ ಕಾಲದಲ್ಲಿ ಈ ಹಿಂದೂ ದೇಶದಲ್ಲಿಯೂ ಇದ್ದರೆ ಲೇಸೆಂದು ನಾವು ಬೇರೆ ಹೇಳಲು ಅಗತ್ಯವಿಲ್ಲ ಮಕ್ಕಳುಮರಿಗಳನ್ನು ಚೆಲೋದಾಗಿ ಶಿಕ್ಷಿಸಿ ಬೆಳೆಯಿಸುವುದು ತಾಯಿತಂದೆಗಳ ಪ್ರಥಮಧರ್ಮ ಮಕ್ಕಳ ಶಿಕ್ಷಣೆಯ ವಿಷಯದಲ್ಲಿ ತಾಯಿತಂದೆಗಳ ಕರ್ತವ್ಯವನ್ನು ಮೂರು ಭಾಗ ಮಾಡಬಹುದು ಶಾರೀರಿಕ ಶಿಕ್ಷಣೆ ಒಂದು, ಮಾನಸಿಕ ಅಥವಾ ವ್ಯಾವಹಾರಿಕ ಶಿಕ್ಷಣೆ ಒಂದು, ಪಾರಮಾರ್ಥಿಕ ಶಿಕ್ಷಣೆ ಒಂದು ಇವುಗಳಲ್ಲಿ ಪಾರಮಾರ್ಥಿಕ ಶಿಕ್ಷಣೆಯೇ ಹೆಚ್ಚಿನದು ಈ ಶಿಕ್ಷಣೆಯನ್ನು ಯಾವ ಸರ್ಕಾರವು ಪೂರಾ ಸ್ವಾತಂತ್ರ್ಯ ಮಾಡುತ್ತದೆಯೋ ಆ ಸರ್ಕಾರಕ್ಕೆ ಪ್ರಜೆಗಳಿಂದ ಸುಖ ದೊರೆಯುದು ಆದರೆ ಹಿಂದೂದೇಶದಲ್ಲಿ ಸರ್ಕಾರದವರು ಆ ಪ್ರಸ್ತಾಪವನ್ನು ಮುಟ್ಟುವುದಿಲ್ಲ , ಅದನ್ನು ಆಯಾ ಮತಸ್ಥರಿಗೇ ಬಿಟ್ಟು ಶರೀರರಕ್ಷಣೆಗೆ ಹೆಚ್ಚು ಗಮನವನ್ನು ಕೊಟ್ಟದೆ

ಶಾರೀರರಕ್ಷಣೆಯೇ ಮೊದಲನೆಯದು ದೇಹವಿಲ್ಲದವರಿಗೆ ಮಾನಸಿಕ ಮತ್ತು ಆತ್ಮೀಯ ಶಿಕ್ಷಣೆಯನ್ನು ಮಾಡುವುದು ಅಸಾಧ್ಯವಲ್ಲವೇ ? ತಾಯಿಯು ಸಹಜವಾದ ಪ್ರೀತಿಯಿಂದ ಎಳೇ ಕೂಸುಗಳನ್ನು ಹೊತ್ತು ಹೆತ್ತು ಮುದ್ದುಮಾಡಿ ಸಾಕಿ ಸಲಹುತ್ತಾಳೆ ಮಕ್ಕಳು ಬಲಿಷ್ಠರಾದರೆ ಬೇಗ ವಿದ್ಯೆ ಕಲಿತಾರು ಅಶಕ್ತರಾದರೆ ಅವರಿಂದೇನೂ ಆಗದು ಹೀಗಿರುವುದರಿಂದ ತಾಯಿತಂದೆಗಳು ಅವರ ದೇಹಪ್ರಕೃತಿಯು ಆರೋಗ್ಯಕರವಾಗಿರುವಂತೆ ನೋಡಿಕೊಳ್ಳಬೇಕಾದದ್ದು ಅಗತ್ಯ ಪ್ರಕೃತದಲ್ಲಿ ಪಟ್ಟಣಗಳಲ್ಲಿರುವ ಏಳೆಂಟು ವರುಷದ ಮಕ್ಕಳ ಬಾಯಿಯು ರೈಲ್ವೆ ಇಂಜನುಗಳಾಗಿವೆ ಅವರು ಪ್ರಾಯಸ್ಥರ ಮುಂದೆಯೂ ರಾಜಮಾರ್ಗಗಳಲ್ಲಿಯೂ ಬಾಯಿ ಮೂಗುಗಳಿಂದ ಭುಸ್ ಭುಸ್ಸೆಂದು ಹೊಗೆಯನ್ನು ಬಿಡುತ್ತಿರುವರು ಇವರನ್ನು ಕೇಳುವವರ್ಯಾರು ? ತಾಯಿತಂದೆಗಳು ಕಂಡೂ ಕಾಣದವರಂತಿರುವಾಗ ಎರಡನೆಯವರು ಬುದ್ಧಿ ಹೇಳುವ ಅವಶ್ಯವೇನು ? ಬುದ್ಧಿ ಹೇಳಿ ಹುಡುಗರಿಂದ ಬೈಸಿಕೊಳ್ಳಬೇಕೇ ಎಂದು ಗುರುಹಿರಿಯರು ಕಣ್ಣು ಮುಚ್ಚುವರು ಹೀಗೆ ಈ ತಂಬಾಕು ಸೇದುವ ದುರಭ್ಯಾಸವು ಸೋಂಕು ರೋಗದಂತೆ ಹರಡುತ್ತಲಿದೆ ಇದರಿಂದ ಮಕ್ಕಳ ಶಾರೀರಕ ಮತ್ತು ಮಾನಸಿಕ ವೃತ್ತಿಗಳಿಗೆ ಆಗುವ ಹಾನಿಗಳನ್ನು ಮಕ್ಕಳಿಗೆ ಚೆನ್ನಾಗಿ ಹೇಳಿಕೊಟ್ಟು, ಅಗತ್ಯವಿದ್ದಲ್ಲಿ ಅಂಥವರನ್ನು ಕಠಿಣವಾಗಿ ದಂಡಿಸುವುದಕ್ಕೆ ಹಿಂದುಮುಂದು ನೋಡಬಾರದು ಕಳೆದ ೧೯೦೭-೮ನೆ ಇಸವಿಯಲ್ಲಿ ಪರದೇಶಗಳಿಂದ ಬ್ರಿಟಿಷ್ ಇಂಡಿಯಾಕ್ಕೆ ೬೧,೧೯,೭೬೦ ರೂಪಾಯಿನ ಸಿಗರೇಟುಗಳೂ, ೧೯೦೮-೯ ರಲ್ಲಿ ೫೭,೭೯,೧೬೫ ರೂಪಾಯಿನ ಸಿಗರೇಟುಗಳೂ ರಫ್ತಾಗಿ ಬಂದವು ಇನ್ನು ಈ ದೇಶದಲ್ಲೇ ತಯಾರಾಗುವ ಬೀಡಿ ಸಿಗರೇಟುಗಳು ಎಷ್ಟು ಎಂಬದನ್ನು ಲಕ್ಷ್ಯಕ್ಕೆ ತಂದುಕೊಂಡರೆ, ಈ ದುರಭ್ಯಾಸವು ನಮ್ಮಲ್ಲಿ ಹೆಚ್ಚಿನಷ್ಟು ಇದೆ ಎಂದು ಕಾಣುತ್ತದಲ್ಲವೇ ?

ಕೆಲವು ತಾಯಂದಿರು ತಮ್ಮ ಕೆಲಸಕಾರ್ಯಗಳಿಗೆ ಮಕ್ಕಳಿಂದ ತೊಂದರೆ ಬಾರದಂತೆ ಅವಕ್ಕೆ ಅಫೀಮು, ಸಾರಾಯಿ ಮೊದಲಾದ ಅಮಲುಳ್ಳ ಪದಾರ್ಥಗಳನ್ನು ಕೊಟ್ಟು ಮಲಗಿಸುವರು ಮಕ್ಕಳಿಗೆ ಉಣ್ಣಿಸುವುದಕ್ಕೂ ಕೆಲವರಿಗೆ ತಿಳಿಯದು ಗಳಿಗೆ ಗಳಿಗೆಗೆ ಉಣ್ಣಿಸಿ ಹೊಟ್ಟೆ ಕೆಡಿಸಿ ಕಾಯಿಲೆ ಬರಮಾಡುವರು ಕೆಲವರು ಮಕ್ಕಳನ್ನು ತಪ್ಪುಮಾಡಿದಾಗ ನ್ಯಾಯವಾದ ಶಿಕ್ಷೆ ಮಾಡದೆ ಕಣ್ಣು ಮೂಗುಗಳಿಗೆ ಮೆಣಸಿನಪುಡಿ ಹಾಕುವರು, ಕೈಕಾಲುಗಳಿಗೆ ಬರೆಹಾಕುವರು, ಈ ಮೊದಲಾದ ಕ್ರೂರ ಶಿಕ್ಷೆಗಳಿಂದ ಹಿಂಸಿಸಿ ಪ್ರಾಣಾಪಾಯವನ್ನುಂಟುಮಾಡುವರು ಅನೇಕಾವರ್ತಿ ಮಕ್ಕಳ ಕಾಯಿಲೆಕಸಾಲೆಗಳಿಗೆ ತಿಳುವಳಿಕೆ ಸಾಲದೆ ಒಂದಕ್ಕೊಂದು ಔಷಧಮಾಡಿ ಅವುಗಳ ಅಕಾಲಮರಣಕ್ಕೆ ತಾವೇ ಕಾರಣರಾಗುವರು ಈ ಹಿಂದೂ ದೇಶದಲ್ಲಿ ಜನಸಂಖ್ಯೆಯನ್ನು ನೋಡಿದರೆ, ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಹೆಚ್ಚಾಗಿ ಹುಟ್ಟುತ್ತಾರೆ ಆದರೆ ಪ್ರಾಯಸ್ಥರ ಸಂಖ್ಯೆಯನ್ನು ನೋಡಿದರೆ ಹೆಣ್ಣುಗಳು ಕಡಮೆ ಎಂದು ಖಾನೇಷುಮಾರಿ ಲೆಕ್ಕಗಳಿಂದ ಕಂಡುಬರುತ್ತದೆ ಆದ್ದರಿಂದ ಹೆಣ್ಣು ಮಕ್ಕಳನ್ನು ಸಾಕುವುದರಲ್ಲಿ ತಾಯಿತಂದೆಯರು ಅಸಡ್ಡೆ ಮಾಡುತ್ತಾರೆಂದು ಯೋಚಿಸಬೇಕಾಗಿದೆ ಮಕ್ಕಳ ಪರಿಪಾಲನೆಯು ಸಾಂಗವಾಗಿ ನೆರವೇರುವುದಕ್ಕೆ ಸ್ತ್ರೀ ಶಿಕ್ಷಣವೇ ಅಗತ್ಯವು ಆರೋಗ್ಯಶಾಸ್ತ್ರ, ಬಾಲಚಿಕಿತ್ಸೆ ಮೊದಲಾದ ವಿದ್ಯೆಗಳನ್ನು ಹೆಣ್ಣುಮಕ್ಕಳಿಗೆ ಶಾಲೆಗಳಲ್ಲಿ ತಕ್ಕಮಟ್ಟಿಗೆ ಹೇಳಿಕೊಟ್ಟರೆ, ಅವಕ್ಕೆ ಸಂಬಂಧಪಟ್ಟ ಪುಸ್ತಕಗಳು ಆಯಾ ದೇಶಭಾಷೆಯಲ್ಲಿ ಇದ್ದರೆ, ಹೆಂಗಸರು ಜ್ಞಾನವತಿಯರಾಗಿ ಮಕ್ಕಳ ಶರೀರರಕ್ಷಣೆಯನ್ನು ಎಚ್ಚರದಿಂದ ನಡಿಸಲು ಶಕ್ತರಾಗುವರು —ಸ

ಕುರುಡಳೂ, ಕಿವುಡಳೂ ಮತ್ತು ಮೂಕಳೂ ಆದ ಹೆಲೆನ್ ಕೆಲರ್ ಎಂಬ ವಿದ್ಯಾರ್ಥಿನಿಯ ಚರಿತ್ರೆ

ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಟುಸ್ಕಂಬಿಯಾ ಎಂಬ ಒಂದು ಸಣ್ಣ ಪಟ್ಟಣದಲ್ಲಿ ಹೆಲೆನ್ ಕೆಲರ್ ಎಂಬವಳು 1881 ನೇ ಜೂನ್ 27 ರಲ್ಲಿ ಜನಿಸಿದಳು. ಅವಳ ತಂದೆಯಾದ ಕ್ಯಾಪ್ಟನ್ ಕೆಲರ್ ಎಂಬವನು ಅದೇ ಸಂಸ್ಥಾನಗಳ ದಂಡಿನ ಅಧಿಕಾರಿಯಾಗಿದ್ದನು ಅವಳು ಹುಟ್ಟಿದ ಮನೆಯನ್ನು ಗುಲಾಬಿ ಮೊದಲಾದ ಲತೆಗಳು ಸಂಪೂರ್ಣವಾಗಿ ಆವರಿಸಿದ್ದುದರಿಂದ ಅವಳು ಅದನ್ನು “ನಮ್ಮ ಸಣ್ಣ ಗುಲಾಬಿ ಲತಾಗೃಹ” ವೆಂದು ಕರೆಯುತ್ತಿರುವಳು.

ಅವಳು ಹುಟ್ಟಿದನಂತರ ಕೆಲವು ತಿಂಗಳುಗಳ ವರೆಗೆ ತನ್ನ ಸುತ್ತಮುತ್ತಲೂ ಇದ್ದ ನೋಟಗಳನ್ನೂ ಶಬ್ದಗಳನ್ನೂ ಅತಿ ಚುರುಕಾಗಿ ತಿಳಿಯುವಂತೆ ತೋರುತ್ತದೆ ಏಕೆಂದರೆ ಅಂಧಕಾರವು ಜಾಗ್ರತೆಯಾಗಿ ಆವರಿಸಿದರೂ ಆ ಎಳೇ ಪ್ರಾಯದಲ್ಲಿ ತನಗೆ ಕಂಡುಬಂದಂಥಾ ಪ್ರಪಂಚದ ನೋಟಗಳು ಆ ಅಂಧಕಾರದಿಂದ ಇದುವರೆಗೂ ಸಂಪೂರ್ಣವಾಗಿ ಮರೆಯಾಗಿಲ್ಲ

ಅವಳಿಗೆ ಇನ್ನೂ ಎರಡು ವರುಷ ತುಂಬಿಲ್ಲದೆ ಇದ್ದಾಗ ಒಂದು ಭಯಂಕರವಾದ ಜ್ವರದಿಂದ ಪೀಡಿತಳಾಗಿ, ಬದುಕುವುದೇ ಇಲ್ಲವೆಂದು ಹೇಳುವ ಮಟ್ಟಿಗೆ ಕಾಯಿಲೆಯಾಗಿದ್ದಳು ಕೊನೆಗೆ ಜ್ವರ ನಿಂತು ಅವಳಿಗೆ ಗುಣವಾದಾಗ್ಯೂ ಅಂದಿನಿಂದ ಅವಳು ಕಿವುಡಳೂ ಕುರುಡಳೂ ಆದಳು ಆಗಿನಿಂದ ಅವಳಿಗೆ ಚಿಕ್ಕಪ್ರಾಯದಲ್ಲಿ ನಡೆದಂಥಾದ್ದು ಏನೂ ಸಂಭವಿಸಲಿಲ್ಲ ಅಲ್ಲದೆ ಕ್ರಮೇಣ ತನ್ನನ್ನು ಆವರಿಸಿದ ಅಂಧಕಾರವೂ ನಿಶ್ಶಬ್ದವೂ ಬಳಕೆಯಾಗಿದ್ದುದರಿಂದ ತನ್ನ ಸ್ಥಿತಿಯು ಪೂರ್ವದಲ್ಲಿ ಬೇರೆಯಾಗಿತ್ತೆಂಬುವುದನ್ನು ಮರೆತಳು

ಹೀಗಿರುವಲ್ಲಿ ಅವಳು ತೋಟದಲ್ಲಿ ಬೇಲಿಗಳಿಂದ ತನ್ನ ಮಾರ್ಗವನ್ನು ತಿಳಿದು ತಿರುಗಾಡುತ್ತಾ, ವಾಸನೆಯಿಂದಲೂ ಸ್ಪರ್ಶದಿಂದಲೂ ವಿಧವಿಧವಾದ ಪುಷ್ಪಗಳನ್ನು ಕಂಡುಹಿಡಿಯುತ್ತಾ ಇದ್ದಳು ಹೂಗಳೆಲ್ಲೆಲ್ಲಾ ಗುಲಾಬಿ ಹೂ ಮುಖ್ಯವಾಗಿ ಅತಿ ಸುಂದರವಾದದ್ದು ಮತ್ತು ಸುವಾಸನೆಯುಳ್ಳದ್ದು ಎಂದು ಅದರಲ್ಲಿ ಹೆಚ್ಚಾಗಿ ಉಲ್ಲಾಸಪಡುತ್ತಿದ್ದಳು ಸಿಟ್ಟು ಬಂದಾಗ ತಣ್ಣಗಿದ್ದ ಎಲೆಗಳಲ್ಲಿಯೂ ಹುಲ್ಲಿನಲ್ಲಿಯೂ ಕೋಪವುಳ್ಳ ಮುಖವನ್ನು ಮರೆಮಾಡಿ ಸಮಾಧಾನ ಹೊಂದುತ್ತಿದ್ದಳು ತನ್ನ ತಾಯಿಯಲ್ಲಿ ಅವಳು ಬಹು ಪ್ರೀತಿಯುಳ್ಳವಳಾಗಿ, ಮನೆ ಕೆಲಸದಲ್ಲಿದ್ದಾಗ ಅವಳ ಹಿಂದೆ ಹೋಗಿ ಪ್ರತಿಯೊಂದು ವಸ್ತುವನ್ನೂ ಅದರ ಚಲನೆಯನ್ನೂ ಮುಟ್ಟಿ ನೋಡಿ ತಿಳಿದುಕೊಂಡು ಇದೇ ರೀತಿಯಲ್ಲಿ ಅನೇಕ ವಿಷಯಗಳನ್ನು ಗೊತ್ತುಮಾಡಿಕೊಂಡಳು ಸ್ವಲ್ಪ ಕಾಲದಲ್ಲಿ ಇತರರೊಡನೆ ಹೇಗಾದರೂ ಸಂಭಾಷಣೆ ಮಾಡುವುದಕ್ಕೆ ಇಷ್ಟಪಟ್ಟು ವಿಧವಿಧವಾದ ಸಂಜ್ಞೆಗಳನ್ನು ಮಾಡುವುದಕ್ಕೆ ಆರಂಭಿಸಿದಳು ತಲೆಯನ್ನಲ್ಲಾಡಿಸುವುದೇ “ಇಲ್ಲ” ವೆಂತಲೂ, ತಲೆಯನ್ನು ತೂಗುವುದೇ “ಹೌದು” ಎಂತಲೂ, ಎಳೆಯುವುದೇ “ಬಾ” ಎಂತಲೂ, ನೂಕುವುದೇ “ಹೋಗು” ಎಂತಲೂ ಅರ್ಥಮಾಡಿದಳು ತಾಯಿಯು ಬಹು ಸಾಮರ್ಥ್ಯದಿಂದ ತಾನು ಹೇಳತಕ್ಕ ಅನೇಕ ವಿಷಯಗಳನ್ನು ಗ್ರಹಿಸುವಂತೆ ಮಾಡಿ ತನಗೆ ಬೇಕಾದ ಪದಾರ್ಥಗಳನ್ನು ತಂದುಕೊಡುವಷ್ಟರಮಟ್ಟಿಗೆ ಅವಳನ್ನು ತಯಾರು ಮಾಡಿದಳು ಅವಳಿಗೆ ಐದು ವರುಷಗಳಾದಾಗ ಬಟ್ಟೆಗಳನ್ನು ಮಡಿಸಿ ತನ್ನವುಗಳನ್ನು ಬೇರೆ ಮಾಡಿ ತಕ್ಕ ಸ್ಥಳಗಳಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಮರ್ಥ್ಯಳಾದಳು

ಅವಳಿಗೆ ಒಬ್ಬ ಸಣ್ಣ ನೀಗ್ರೊ ಎಂಬ ಕಪ್ಪು ಹುಡುಗಿಯು ಸಂಗಾತಿಯಾಗಿದ್ದಳು ಇವರಿಬ್ಬರಿಗೆ ಕುದುರೆಗಳೂ, ಕನಕಾಂಬರ ಕೋಳಿಗಳೂ ನಾಯಿಗಳೂ ಹೆಚ್ಚು ಹಸ ಸೆಳೆಯಾಗಿದ್ದವು ಆದರೆ ಈ ಆಟಗಳಲ್ಲಿ ತೃಪ್ತರಾಗದೆ ಬೇಸ್ತಯಲ್ಲಿ ಉದ್ಯುಕ್ತರಾಗುತ್ತ ಬಂದರು ಒಂದಾನೊಂದು ದಿವಸ ಹಜಾರದಲ್ಲಿ ಆಟಮಾಡುತ್ತಿರುವಾಗ ಅವರಿಗೆ ಎಟುಕುತ್ತಿದ್ದ ಪರಿಮಳದ ಹೂಬಳ್ಳಿಯನ್ನೆಲ್ಲಾ ಕತ್ತರಿಸಿ, ಬಳಿಕ ಒಬ್ಬರ ಕೂದಲನ್ನು ಒಬ್ಬರು ಕತ್ತರಿಸಲು ಪ್ರಾರಂಭಿಸಿದರು ಆ ಸಮಯಕ್ಕೆ ಸರಿಯಾಗಿ ತಾಯಿಯು ಬಾರದೆ ಹೋಗಿದ್ದರೆ ಅವರ ಕುರುಳುಗಳೆಲ್ಲವೂ ನಾಶವಾಗುತ್ತಿದ್ದವು

ಇನ್ನೊಂದು ದಿವಸ ಹೆಲೆನಳು ಬೀಗದ ಕೈಯಿಯ ಉಪಯೋಗವನ್ನು ತಿಳಿದು ತನ್ನ ತಾಯಿಯು ಇದ್ದ ಕೋಟಡಿಗೆ ಬೀಗ ಹಾಕಿದಳು ನಂತರ ತಾಯಿಯು ಒಳಗಿನಿಂದ ಬಾಗಿಲನ್ನು ತಟ್ಟಲು ತಾನು ಹೊರಗೆ ಮೂರು ಗಂಟೆಗಳ ಕಾಲದ ವರೆಗೂ ಕೂತುಕೊಂಡು ತಟ್ಟಿದ ಆಘಾತವನ್ನು ತಿಳಿದು ಸಂತೋಷದಿಂದ ನಗುತ್ತಿದ್ದಳು

ಇದಾದ ಮೇಲೆ ತಂದೆತಾಯಿಗಳು ತಮ್ಮ ಮಗುವನ್ನು ಶಿಕ್ಷಿಸಿ ವಿದ್ಯೆ ಕಲಿಸಬೇಕೆಂದು ಬಹಳವಾಗಿ ಯೋಚಿಸಿದರು ಕೆಲರ್ ದೊರೆಸಾನಿಯು ಕುರುಡರಿಗೂ ಕಿವುಡರಿಗೂ ವಿದ್ಯಾಭ್ಯಾಸ ಮಾಡುವುದುಂಟೆಂದು ಕೇಳಿದ್ದಾಗ್ಯೂ ತಾವು ಇದ್ದ ಊರಿನಲ್ಲಿ ತನ್ನ ಮಗಳ ವಿಷಯದಲ್ಲಿ ಹೇಗೆ ಮಾಡಬೇಕೆಂಬುವುದನ್ನು ತಿಳಿಯದೆ ಹೋದಳು ಅವಳಿಗೆ ಆರು ವರುಷವಾದಾಗ ಅವಳ ತಂದೆಯು ಅವಳನ್ನು ಒಬ್ಬ ಪ್ರಸಿದ್ಧನಾದ ನೇತ್ರ ವೈದ್ಯನ ಬಳಿಗೆ ಕರೆದುಕೊಂಡು ಹೋದನು ಈ ವೈದ್ಯನು ನಿರಾಶೆಯಾಗಿದ್ದ ಅನೇಕರಿಗೆ ಕಣ್ಣು ಬರುವಂತೆ ಮಾಡಿದ್ದರೂ ಇವಳ ಕಣ್ಣಿನ ವಿಷಯದಲ್ಲಿ ಏನು ಮಾಡುವುದಕ್ಕೂ ಅವನಿಗೆ ಆಗದೆ ಹೋಯಿತು ಆದರೆ ಆ ವೈದ್ಯನು ಈ ಹುಡುಗಿಗೆ ವಿದ್ಯೆ ಕಲಿಸಬಹುದೆಂದು ಹೇಳಿದಾಗ ಅದರಂತೆ ತಂದೆತಾಯಿಗಳು ಬಾಸ್ಟನ್ ಪಟ್ಟಣದಿಂದ ಒಬ್ಬ ಉಪಾಧ್ಯಾಯಳನ್ನು ಕರೆತರಿಸಿದರು

ಮಿಸ್ ಸಲಿವನ್ ಎಂಬ ಈ ಉಪಾಧ್ಯಾಯಳೇ ಮೊದಲು ತಾನು ವಿದ್ಯಾಭ್ಯಾಸಮಾಡಿ ಪಾಂಡಿತ್ಯವನ್ನು ಹೊಂದಿದ ನಂತರವೂ ದೃಷ್ಟಿ ಬಹಳ ಕಡಮೆಯುಳ್ಳವಳಾಗಿದ್ದುದರಿಂದ ಕುರುಡರಿಗೆ ವಿದ್ಯೆ ಕಲಿಸುವುದರಲ್ಲಿ ಬಹು ಸಾಮರ್ಥ್ಯವುಳ್ಳವಳಾಗಿದ್ದಳು ಅವಳು ೧೮೮೭ ನೇ ಇಸವಿ ಮಾರ್ಚಿ ೩ನೆ ತಾರೀಖಿನ ದಿನ ಅವರ ಮನೆಗೆ ಬಂದು ಸೇರಿದಳು ಈ ದಿವಸವು ತನ್ನ ಜೀವಮಾನದ ದಿವಸಗಳೆಲ್ಲಾ ಅತ್ಯುತ್ತಮವಾದದ್ದೆಂದು ಹೆಲೆನ್ ಕೆಲರೆಂಬವಳು ಹೇಳುತ್ತಾಳೆ ಮಾರನೇ ದಿವಸವೇ ಅವಳ ಪಾಠವು ಪ್ರಾರಂಭವಾಯಿತು

ಕಣ್ಣು ಕಿವಿ ಇವೆರಡೂ ಇಲ್ಲದಂಥಾವರಿಗೆ ಸ್ಪರ್ಶೇಂದ್ರಿಯವು ಮುಖ್ಯವಾದದ್ದಾಗಿದೆ ಇದು ಸಂಭಾಷಣೆಗೂ ಕೂಡ ಉಪಯೋಗಕರವಾಗಿದೆ ಹೇಗೆಂದರೆ ಇತರರು ಮಾತನಾಡುತ್ತಿರುವಾಗ ಇಂಥವರು ಅವರ ತುಟಿಗಳನ್ನು ಸ್ಪರ್ಶಿಸಿ ಅವುಗಳ ಚಲನೆಗಳಿಂದ ಆ ಮಾತುಗಳನ್ನು ಗೊತ್ತು ಮಾಡುತ್ತಾರೆ ಇದು ಅಸಹ್ಯಕರವಾದದ್ದಲ್ಲದೆ ಅನೇಕ ಸಂದರ್ಭಗಳಲ್ಲಿ ಅಸಾಧ್ಯವಾದದ್ದಾಗಿದೆ ಈಗಲೂ ಹೆಲೆನ್ ಕೆಲರಳು ಈ ರೀತಿಯಲ್ಲಿ ಸಂಭಾಷಣೆ ಮಾಡುವಾಗ ಅನೇಕ ಸಾರಿ ಉಪಾಧ್ಯಾಯಳು ಅವಳ ಸಹಾಯಕ್ಕೆ ಬಂದು ಇದಕ್ಕಾಗಿಯೇ ಕಲ್ಪಿಸಿರುವ ಮತ್ತೊಂದು ವಿಧದಲ್ಲಿ ಅರ್ಥವನ್ನು ತಿಳಿಸಬೇಕಾಗಿರುವುದು ಆ ವಿಧವು ಯಾವುದೆಂದರೆ ಉಪಾಧ್ಯಾಯಳು ತನ್ನ ಬೆರಳುಗಳನ್ನು ಚಲಿಸಿ ಅದರಿಂದ ಅಕ್ಷರಗಳನ್ನು ಸೂಚಿಸುವಳು ಆ ಕಾಲದಲ್ಲಿ ವಿದ್ಯಾರ್ಥಿನಿಯು ತನ್ನ ಕೈಯನ್ನು ಅವಳ ಕೈಯಲ್ಲಿಟ್ಟು, ಬಹಳ ಹಗುರವಾಗಿ ಆ ಬೆರಳುಗಳ ಚಲನೆಗಳನ್ನು ಅತಿ ಸೂಕ್ಷ್ಮವಾಗಿ ಸ್ಪರ್ಶಿಸಿ ಮಾತುಗಳನ್ನು ತಿಳಿದುಕೊಳ್ಳುವಳು ಹೀಗೆ ಮಾತನಾಡುವುದು ಮೊದಲಲ್ಲಿ ಬಹಳ ನಿಧಾನವಾದರೂ ಅಭ್ಯಾಸದಿಂದ ಬಹು ಜಾಗ್ರತೆಯಾಗಿ ಮಾತನಾಡಬಹುದು ಹೆಲೆನ್ ಕೆಲರಳು ಮತ್ತು ಅವಳ ಉಪಾಧ್ಯಾಯಳು ಈ ರೀತಿಯಾಗಿ ಮಾತನಾಡುವುದರಲ್ಲಿ ಬಹು ಸಾಮರ್ಥ್ಯವುಳ್ಳವರಾಗಿದ್ದಾರೆ

[ಸಶೇಷ]

ವೃತ್ತಾಂತ ಪತ್ರಿಕೆ.

—:೦:—

ಸನ್ ೧೯೦೯ ನೇ ಇಸವಿ ಅಗಸ್ಟ್ ತಾ|| ೧೨ ನೇ ಗುರುವಾರ.

ಕಂದಾಯಕ್ಕೆ ಬೇರೇ ರಶೀತಿ ಕೊಡುವುದು.

—:—

ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ನಾವು ಪ್ರಕಟಿಸಿರುವ ಬಾತ್ಮಿಯನ್ನು ನಮ್ಮ ವಾಚಕರೂ, ಈ ವರುಷ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಬರುವಂಥಾ ದೊಡ್ಡ ಮನುಷ್ಯರೂ ಗಮನ ಕೊಟ್ಟು ಓದಿಕೊಂಡಾರೆಂದು ನಿರೀಕ್ಷಿಸುತ್ತೇವೆ. ಕಂದಾಯ ಪಾವತಿ ಆದದ್ದಕ್ಕೆ ನೌಕರರು ಅಚ್ಚಾಗಿ ನಂಬರುಳ್ಳ ಡುಪ್ಲಿಕೇಟ್ ರಶೀತಿ ಪುಸ್ತಕಗಳಲ್ಲಿ ಬರೆದು ಒಂದು ಭಾಗವನ್ನು ಹರಿದು ರೈತನಿಗೆ ಕೊಡುವಂತೆ ಗವರ್ನಮೆಂಟಿನವರು ಹುಕುಂಕೊಟ್ಟು ಜಾರಿಗೆ ತರಬೇಕೆಂದು ಆ ಬಾತ್ಮಿದಾರರು ಕೇಳುತ್ತಾರೆ. ಇದು ಅಲ್ಪವಿಷಯ; ಇದನ್ನು ನಡಿಸಿ ಕೊಡುವುದಕ್ಕೆ ಸರ್ಕಾರದವರಿಗೆ ವಿಶೇಷ ಖರ್ಚೇನೂ ಆಗುವುದಿಲ್ಲ. ಆದರೆ ಅದು ಕಂದಾಯ ಕೊಡತಕ್ಕ ರೈತನಿಗೆ ತುಂಬಾ ಪ್ರಯೋಜನಕರವಾದದ್ದಾಗಿದೆ.

ರೈತನು ಕಂದಾಯವನ್ನು ಪಾವತಿ ಮಾಡಿದ್ದಕ್ಕೆ ರಶೀತಿ ಪಡೆಯಬೇಕಾದರೆ ಅದಕ್ಕೂ ಒಂದು ರುಸುಂ ಕೊಡಬೇಕೆಂಬ ವಿಚಾರವು ಎಲ್ಲರಿಗೂ ಚೆನ್ನಾಗಿ ತಿಳಿದೇ ಇದೆ. ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬ ನೌಕರನಿಗೆ ಅಷ್ಟೋ ಇಷ್ಟೋ ಕೈಬಿಸ್ಗೆ ಮಾಡಿದಲ್ಲದೆ ರೈತನಿಗೆ ಅವನ ನ್ಯಾಯವಾದ ಕೆಲಸವನ್ನೂ ಮಾಡಿಕೊಡುವುದಿಲ್ಲ. ಇಂಥಾ ನಡವಳಿಕೆಯು ಪ್ರಜಾವಾತ್ಸಲ್ಯಯುಕ್ತವಾದ ಮತ್ತು ನವನಾಗರಿಕತೆಯನ್ನು ಪಡೆದ ಯಾವ ಗವರ್ನಮೆಂಟಿನಲ್ಲಿ ಇರಕೂಡದು. ಮೈಸೂರು ಗವರ್ನಮೆಂಟಿನವರು ತಮ್ಮ ನೌಕರವರ್ಗದವರಲ್ಲಿ ಸಕಲವಿಧವಾದ ಲಂಚಕೋರತನವನ್ನೂ ನಿಲ್ಲಿಸಿಬಿಡಬೇಕೆಂದು ಕುತೂಹಲಪಡತಕ್ಕವರಾಗಿದ್ದಾರೆಂದು ನಾವು ಚೆನ್ನಾಗಿ ತಿಳಿದಿರುತ್ತೇವೆ. ಆದರೆ ಇಷ್ಟಾರ್ಥವು ನೆರವೇರಬೇಕಾದರೆ ಕಂದಾಯಗಳನ್ನು ವಸೂಲ್ ಮಾಡತಕ್ಕ ನೌಕರರೆಲ್ಲಾ ವಸೂಲಾದಷ್ಟು ಹಣಕ್ಕೆ ತಕ್ಷಣವೇ ಕ್ರಮವಾದ ರಶೀತಿಗಳನ್ನು ಕೊಡತಕ್ಕದ್ದೆಂದು ವಿಧಿಸಬೇಕಾಗಿದೆ. ಹಾಗೆ ರಶೀತಿ ಕೊಡದಹೋದರೂ ಕೊಡಲು ತಾತ್ಸಾರಮಾಡಿದರೂ ಅಂಥಾ ನೌಕರನ ಮೇಲೆ ಮೊಕದ್ದಮೆ ಮಾಡಿ, ಅಪರಾಧ ರುಜುವಾತಾದ ಪಕ್ಷದಲ್ಲಿ ಅವನಿಗೆ ತಕ್ಕ ಶಿಕ್ಷೆಯನ್ನು ಮಾಡಿಸಬೇಕು. ಆದರೆ ನಮ್ಮ ಬಾತ್ಮಿದಾರರು ಸೂಚಿಸುವಂತೆ ಈ ಸಣ್ಣ ನೌಕರರ ದುರ್ನಡತೆಯು ಹೊರಪಟ್ಟರೂ ಅವರಿಗೆ ಶಿಕ್ಷೆಯಾಗುವುದು ಬಹಳ ಅಪರೂಪವಾಗಿದೆ.

ಪ್ರಜಾಪ್ರತಿನಿಧಿಗಳು ಈ ವಿಚಾರವನ್ನು ಈ ಸಾರಿ ಸಭೆಯಲ್ಲಿ ದಿವಾನ್‌ರವರ ಗಮನಕ್ಕೆ ತಂದು ರಶೀತಿಗಳನ್ನು ಕೊಡದ ಇರೋಣದಿಂದ ರೈತರಿಗೆ ಉಂಟಾಗುತ್ತಿರುವ ಕಷ್ಟನಷ್ಟಗಳನ್ನು ಅರಿಕೆ ಮಾಡಿಕೊಂಡ ಪಕ್ಷದಲ್ಲಿ ದಿವಾನ್‌ರವರು ಅದರ ಸಂಬಂಧ ಬಾಧಕಗಳನ್ನು ಚೆನ್ನಾಗಿ ಪರ್ಯಾಲೋಚನೆಮಾಡಿ ಅಂಥಾ ಕಷ್ಟನಷ್ಟ ಲುಕ್ಸಾನ್‌ಗಳನ್ನು ನಿವಾರಣೆ ಮಾಡಿಕೊಡುವ ವಿಷಯದಲ್ಲಿ ಸೂಕ್ತವಾದ ಹುಕುಮನ್ನು ಮಾಡದಿರಲಾರರೆಂದು ನಾವು ಹೇಳಬಲ್ಲೆವು.

ಅಸ್ತಿಯ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಪತ್ರಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ಜನರು ಗುಮಾಸ್ತರಿಗೆ ಅಷ್ಟಿಷ್ಟು ಕೊಡದಿದ್ದ ಪಕ್ಷದಲ್ಲಿ ತಡವಾಗುವುದಕ್ಕೆ ಅನೇಕ ಅಡಚಣೆಗಳುಂಟಾಗುವವೆಂದು ನಮಗೆ ತಿಳಿದುಬಂದಿದೆ. ಪತ್ರಗಳನ್ನು ರಿಜಿಸ್ಟರ್ ಮಾಡಿಸತಕ್ಕವನು ಪತ್ರಕ್ಕೆ ಹಣ ಕೊಡಬೇಕು; ತರುವಾಯ ರಿಜಿಸ್ಟ್ರೇಷನ್ ಫೀಜನ್ನು ಸಬ್ ರಿಜಿಸ್ಟ್ರಾರಿಗೆ ಕಟ್ಟಬೇಕು. ಎನ್ನಾದರೂ ಅವನ ಪತ್ರ ರಿಜಿಸ್ಟರಾಗುವುದು ಕಷ್ಟ. ಆಫೀಸಿನವರು ಅವನ ಕೆಲಸವನ್ನು ಮಾಡಿಕೊಡುವುದಕ್ಕೆ ಅವರಿಗೂ ಹಣವನ್ನು ಕೊಡಬೇಕಾದ ಪಕ್ಷದಲ್ಲಿ ಅವನಿಗೆ ತುಂಬಾ ಅನ್ಯಾಯವಾಗುವುದು. ಸಬ್ ರಿಜಿಸ್ಟ್ರಾರುಗಳೆಲ್ಲಾ ಸಾಮಾನ್ಯವಾಗಿ ಒಳ್ಳೇ ವಿದ್ಯಾವಂತರೇ ಆಗಿರುತ್ತಾರೆ. ಇವರು ತಮ್ಮ ಆಫೀಸಿಗೆ ಬರತಕ್ಕ ಕಕ್ಷಿಗಾರರನ್ನು ಮಾನವಾಗಿ ಕಾಣುವಂತೆಯೂ, ಗುಮಾಸ್ತೆಯರು ಅಂಥವರಿಂದ ಜಾಸ್ತಿ ರುಸುಮನ್ನು ವಸೂಲುಮಾಡಿಕೊಳ್ಳದಂತೆಯೂ, ಅವರ ಕೆಲಸಗಳು ಅನಾವಶ್ಯಕವಾಗಿ ತಾಪಕಾಶವಾಗದಂತೆಯೂ ನೋಡಿಕೊಳ್ಳಬೇಕಾಗಿದೆ. ಇಲ್ಲವಾದಪಕ್ಷದಲ್ಲಿ ಅಂಥಾ ಸುಲಿಗೆಗಳೂ ದುರ್ನಡತೆಗಳೂ ಮೈಸೂರು ಗವರ್ನಮೆಂಟಿನ ಮೇಲೆ ಅಸಹ್ಯವನ್ನೂ ಅಪನಂಬಿಕೆಯನ್ನೂ ಹುಟ್ಟಿಸುವುದು ಮಾತ್ರವೇ ಅಲ್ಲ; ಅವುಗಳ ದೆಸೆಯಿಂದ ಶ್ರೀಮನ್ ಮಹಾರಾಜರವರ ಕೀರ್ತಿಗೆ ಅಪಯಶಸ್ಸು ಉಂಟಾದೀತು.

ಅಮಲ್ದಾರರೂ ಡಿಪ್ಟಿ ಕಮಿಷನರುಗಳೂ ತಮ್ಮ ಕೈಕೆಳಗಿನ ನೌಕರರ ನಡವಳಿಕೆಯನ್ನು ಇನ್ನೂ ಚೆನ್ನಾಗಿ ಮೇಲ್ವಿಚಾರಣೆ ನೋಡಿಕೊಳ್ಳಬೇಕು. ಯಾವ ನೌಕರನಾಗಲಿ ಮೋಸಪಡಿಸಿದ್ದೂ, ಲಂಚ ತೆಗೆದುಕೊಂಡದ್ದೂ, ಅನ್ಯಾಯಮಾಡಿದ್ದೂ ಕಂಡುಬಂದರೆ ಇತರರಿಗೆ ಭೀತಿಯುಂಟಾಗುವಂತೆ ಅವನನ್ನು ಕೆಲಸದಿಂದ ವಜಾಮಾಡಿ ಅವನಿಗೆ ಜುಲ್ಮಾನೆಯನ್ನೂ ಸಜಸನ್ನೂ ವಿಧಿಸಬೇಕು. ಈ ರೀತಿಯಾದ ದರ್ಪವನ್ನು ಇಟ್ಟ ಹೊರತು ಮೈಸೂರು ಗವರ್ನಮೆಂಟಿನ ಬಳ್ಳೇ ಹೆಸರು ಉಳಿಯಲಾರದು.

ಹಿಂದೂ ಮತದ ಮುಂದಿನ ಸ್ಥಿತಿ.

ಉತ್ತರ ಹಿಂದೂಸ್ಥಾನದಲ್ಲಿರುವ ಒಬ್ಬ ದೊಡ್ಡ ಮನುಷ್ಯರು ಹಿಂದೂ ಮತದ ಪ್ರಕೃತಸ್ಥಿತಿಯನ್ನು ವಿಚಾರಿಸಿ ಮುಂದೆ ಅದರ ಪರ್ಯವಸಾನವು ಹೇಗಾಗಬಹುದೆಂದು ಊಹಿಸಿ ಬರೆದಿದ್ದಾರೆ. ಅವರ ಅಭಿಪ್ರಾಯಗಳನ್ನು ಮೊದಲು ಕ್ರೋಡೀಕರಿಸಿ ಹೇಳಿ ಅನಂತರ ನಾವು ಒಂದೆರಡು ವಿಷಯಗಳನ್ನು ಸೂಚಿಸುತ್ತೇವೆ. ಅವರ ಅಭಿಪ್ರಾಯವೇನಂದರೆ, ಹಿಂದೂ ಮತದ ಪ್ರಕೃತಸ್ಥಿತಿಯು ಮೊಬ್ಬಾಗಿಯೂ ನಿರುತ್ಸಾಹವಾಗಿಯೂ ಇದೆ. ಹಿಂದೂ ಮತದಲ್ಲಿ ಪರಸ್ಪರ ವಿರುದ್ಧವಾದ ಅನೇಕ ಶೋಧನೆಗಳನ್ನು ನಂಬಿದವರು ಇದ್ದಾಗ್ಯೂ ಎಲ್ಲರೂ ಮುಖ್ಯವಾಗಿ ಎರಡು ಕಟ್ಟಳೆಗಳನ್ನು ತಪ್ಪದೆ ಕೈಕೊಳ್ಳಬೇಕು. ಅವೇನಂದರೆ ಜಾತಿಯ ಕಟ್ಟಳೆಗಳಿಗೆ ಸಂಪೂರ್ಣವಾಗಿ ಒಳಪಟ್ಟು ವಿಧೇಯರಾಗಿರಬೇಕು, ಬ್ರಾಹ್ಮಣರನ್ನು ಅತಿ ಶ್ರೇಷ್ಠರೆಂದು ಎಲ್ಲರೂ ಸನ್ಮಾನಿಸಬೇಕು. ಇವೆರಡನ್ನು ಯಾವನು ತಪ್ಪದೆ ಕೈಕೊಳ್ಳುತ್ತಾನೋ ಅವನು ಹಿಂದೂ ಮತಸ್ಥನಾಗಿದ್ದಾನೆ. ಇವುಗಳನ್ನು ಕೈಕೊಂಡವರು ಮಾತ್ರ ಹಿಂದೂ ಮತಸ್ಥರೆನಿಸಿಕೊಳ್ಳುವರು. ಇವರು ಆಂತರ್ಯದಲ್ಲಿ ಯಾವ ಶೋಧನೆಗಳನ್ನಾದರೂ ನಂಬಲಿ, ಯಾವ ಆಚಾರ ಪದ್ಧತಿಗಳನ್ನಾದರೂ ಅನುಸರಿಸುತ್ತಿರಲಿ, ಅದರಿಂದೇನೂ ಬಾಧಕವಿಲ್ಲ. ಆದರೆ ಮೇಲೆ ಹೇಳಿದ ಎರಡು ವಿಷಯಗಳನ್ನು ಮಾತ್ರ ಅವರು ಚೆನ್ನಾಗಿ ಲಕ್ಷ್ಯವಿಟ್ಟು ನಡೆಸಿದರೆ ಆಯಿತು.

ಆದರೆ ಈಚೀಚೆಗೆ ಈ ಸ್ಥಿತಿಯು ಬದಲಾಗುತ್ತ ಬರುತ್ತಿದೆ. ಇಂಗ್ಲಿಷ್ ವಿದ್ಯಾಭ್ಯಾಸವು ಈ ದೇಶದಲ್ಲಿ ಹೆಚ್ಚುತ್ತ ಬಂದಹಾಗೆಲ್ಲಾ ವಿಗ್ರಹಾರಾಧನೆ, ಜಾತಿಪದ್ಧತಿ, ಬ್ರಾಹ್ಮಣನೆ ಎಲ್ಲರಿಗಿಂತ ಶ್ರೇಷ್ಠನೆಂದು, ಕೀಳು ಜಾತಿಯವರನ್ನು ಹೀಯ್ಯಾಳಿಸುವದು, ಇವು ಕ್ರಮೇಣ ಕಡಮೆಯಾಗುತ್ತ ಬಂದಿವೆ. ಯಾಕೆಂದರೆ ಪಶ್ಚಿಮಾತ್ಯರಿಂದ ನಮ್ಮ ದೇಶದವರಲ್ಲಿ ಹರಿದು ಬರುತ್ತಿರುವ ವಿದ್ಯೆಯು ಬುದ್ಧಿಗೆ ಒಪ್ಪತಕ್ಕ ಸತ್ಯಗಳನ್ನು ಮಾತ್ರ ಉಳಿಸಿ ಅಜ್ಞಾನದ ವಾಡಿಕೆಗಳನ್ನು ನೆಲಸಮ ಮಾಡುತ್ತಿದೆ. ಈಗ ಕೀಳು ಜಾತಿಯವರನ್ನು ಅಜ್ಞಾನಾಂಧಕಾರದಲ್ಲಿಯೂ ಶ್ರೇಷ್ಠ ಜಾತಿಯವರನ್ನು ಗುಲಾಮತ್ವದಲ್ಲಿಯೂ ಇಟ್ಟುಕೊಂಡು ಆಳುತ್ತಿರುವದು ಕೇವಲ ಅಸಾಧ್ಯವಾಗಿ ಪರಿಣಮಿಸಿದೆ. ಯಾಕೆಂದರೆ ಜಾತಿಭೇದವಿಲ್ಲದೆ ಸಕಲರನ್ನು ಏಕರೀತಿಯಾಗಿ ಭಾವಿಸುವ ಇಂಗ್ಲಿಷರು ತಮ್ಮ ವಿದ್ಯಾಶಾಲೆಗಳನ್ನೂ ವ್ಯತ್ಯಾಸವಿಲ್ಲದೆ ಸಕಲರಿಗೂ ತೆರೆದಿಟ್ಟಿರು. ಇದರಿಂದ ಶ್ರೇಷ್ಠ ಜಾತಿಯವರು ಮಾತ್ರವಲ್ಲ, ಕನಿಷ್ಠ ಜಾತಿಯವರಲ್ಲಿ ಸಹ ಅನೇಕರು ಓದಿ ವಿದ್ಯಾಬುದ್ಧಿಗಳನ್ನು ಸಂಪಾದಿಸಿಕೊಂಡರು. ಶೂದ್ರರು ತಿಳುವಳಿಕೆಯ ದ್ವಾರವನ್ನು ಪ್ರವೇಶಿಸಿದ ಮೇಲೆ ಶ್ರೇಷ್ಠ ಕುಲದವರು ತಮ್ಮ ಪಿತೃಗಳನ್ನು ಹಾಕಿದ ಅಜ್ಞಾನದ ಪಾಶಗಳನ್ನು ತಾವು ಸ್ವೀಕರಿಸಲೊಡಂಬಡದೆ ತಮ್ಮ ಬಂಧಗಳನ್ನು ಕತ್ತರಿಸಿಕೊಂಡು ಬಿಡುಗಡೆಯನ್ನೂ ಸ್ವಾತಂತ್ರ್ಯವನ್ನೂ ಪಡೆಯಲಪೇಕ್ಷಿಸಿದರು. ಹಿಂದೂಮತವು ಇವರು ಅಭಿಲಾಷೆಪಡುವ ಬಿಡುಗಡೆಯನ್ನೂ ಸ್ವಾತಂತ್ರ್ಯವನ್ನೂ ಕೊಡುವುದಕ್ಕೆ ಒಪ್ಪದೆಹೋದದ್ದರಿಂದ ಅವರು ಮಹಮ್ಮದೀಯ ಮತವನ್ನೋ ಕ್ರಿಸ್ತ ಮತವನ್ನೋ ಅವಲಂಬಿಸಿ ತಾವು ಅಭಿಲಷಿಸಿದ ಸೌಕರ್ಯಗಳನ್ನು ಪಡೆಯುತ್ತಿದ್ದಾರೆ. ಇದರಿಂದ ಹಿಂದೂ ಮತವು ತನ್ನ ಆಶ್ರಯದಲ್ಲಿದ್ದವರನ್ನು ಕಳೆದುಕೊಳ್ಳುತ್ತಲಿದೆ. ತನ್ನಲ್ಲಿ ಬಂದು ಸೇರಬೇಕೆಂದು ಆಶೆಪಡುವ ಅನ್ಯಮತದವರಿಗೆ ಅದರಲ್ಲಿ ಪ್ರವೇಶಿಸುವದಕ್ಕಾಸ್ಪದವಿಲ್ಲವೆಂಬುದಂತೂ ಎಲ್ಲರಿಗೂ ತಿಳಿದಿದೆ. ಹೀಗಿರುವಲ್ಲಿ ಹಿಂದೂಮತವನ್ನು ರೂಪಾಂತರಪಡಿಸಿ ಜೀರ್ಣೋದ್ಧಾರ ಮಾಡದೆ ಇದ್ದರೆ ಅದು ಇನ್ನೆರಡು ಮೂರು ಶತಮಾನಗಳು ಗತಿಸುವದರೊಳಗಾಗಿ ನಾಮಾವಶೇಷವಾಗುತ್ತದೆ. [illegible] ವಿಗ್ರಹಾರಾಧನೆಯನ್ನೂ ಹಿಂದೂಮತದಲ್ಲಿ [illegible] ಯೋಗ್ಯವಾಗಿರುವ [illegible] ಹಾಗೆ ನಿಲ್ಲಿಸುವದು ಅಸಾಧ್ಯವಾಗಿದೆ. [illegible] ಬುದ್ಧಿಯನ್ನೂ ಸತ್ಯವನ್ನೂ ಬಿಡಿಸ್ಸಲು ಇದೇ ಮೇಲ್ ಕಾಲದ ಅಭಿಪ್ರಾಯ.

ಈ ದೊಡ್ಡ ಮನುಷ್ಯರು ಹೇಳಿರುವ ಅಭಿಪ್ರಾಯಗಳು ಕಠಿಣವಾಗಿದ್ದರೂ ಅವು ಸತ್ಯವಾಗಿವೆ ಎಂಬದಕ್ಕೇನೂ ಸಂದೇಹವಿಲ್ಲ. ಇವರು ಸೂಚಿಸಿರುವ ಸ್ವಮತದ ಹಿತವನ್ನು ಬಯಸುವರು, ಅದರಿಂದ ಇವರ ಮಾತುಗಳನ್ನು ನಾವೆಲ್ಲರೂ ಗೌರವಿಸಿ ಯೋಚಿಸತಕ್ಕದ್ದು. ಆದರೆ ಅವರು ಹಿಂದೂ ಮತವನ್ನು ರೂಪಾಂತರಪಡಿಸಿ, ಜೀರ್ಣೋದ್ಧಾರ ಮಾಡುವುದಕ್ಕೆ ಹೇಳುವ ಉಪಾಯಗಳು ಮಾತ್ರ ಶಂಕಾಸ್ಪದವಾಗಿವೆ. ಸತ್ಯವಾದ ಮತದ ಮೂಲವು ಸಕಲರ ಕಲ್ಯಾಣಕ್ಕಾಗಿ [illegible] ಅನ್ನುವಾ ಇಲ್ಲ. ಅವನನ್ನು ಸಕಲ ತಂದೆಯೆಂಬದಾಗಿ ಭಾವಿಸುವದರಿಂದಲೇ ಎಲ್ಲಾ ಮನುಷ್ಯರೂ ಒಬ್ಬರಿಗೊಬ್ಬರು ಸಹೋದರರು ಎಂಬ ನಿಜಾಂಶವನ್ನು ಅಂಗೀಕರಿಸಿ ಜಾತಿಭೇದವು ತಾನಾಗಿ ಕಳಚಿ ಬಿದ್ದುಹೋಗುವದು. ಜಗದ್ರಕ್ಷಕನಾದ ಯೇಸು ಕ್ರಿಸ್ತನು ದೇವರನ್ನು ತಂದೆ ಎಂದು ತಿಳಿದು ಮನುಷ್ಯರನ್ನು ಆಧಾರವಾಗಿ [illegible] ತನ್ನ ಮತವನ್ನು ಸ್ಥಾಪಿಸಿದ್ದಾನೆ. ಹಿಂದೂಮತವು ದೇವರು ಗಮನ ಸರಿಯಾಗಿಲ್ಲದ್ದಾಗಿಯೆಂದು ಮೇಲ್ಕಂಡವರು ಒಪ್ಪಿಕೊಳ್ಳುತ್ತಾರೆ. ಈ ದೇಶದಲ್ಲಿಯೂ ಹಿಂದೂ ದೇಶದ ಹಲವು ಕಡೆಗಳಲ್ಲಿಯೂ ಇದೇ ಅಭಿಪ್ರಾಯವನ್ನು ಒಪ್ಪಿರುವವರು ನೂರಾರು ಮಂದಿ ಇದ್ದಾರೆ. ಈ ನಂಬಿಕೆಯನ್ನು ಪರಿಹರಿಸಿ ನಿರೀಕ್ಷೆಯನ್ನು ಹುಟ್ಟಿಸುವ ಮತವನ್ನು ತೋರಿಸಿ ವಿಶ್ವಾಸವಿಡುವ ಮಹಾಪುರುಷರು ಕಲ್ಪಾಂತದಲ್ಲಿ ನಡೆವ ಮತವನ್ನು ಬಿಡದಲ್ಲಿ ಉಪನ್ಯಾಸ ಹೇಳುವನ್ನು ನಾವು ನಮ್ಮ ವಾಚಕರಿಗೆ ಸೂಚನೆ ಕೊಡುತ್ತಿರುತ್ತೇವೆ. ಆಕೆ ಹಿಂದೂ ಎಲ್ಲಾ ಮನುಷ್ಯರ ಸರಮ ತಂದೆಯಾಗಿದ್ದಾನೆ; ಅದರಿಂದ ಸಕಲ ಮನುಷ್ಯರು ಒಬ್ಬರನ್ನೊಬ್ಬರು ಭೇದ ಬುದ್ಧಿ ಇಲ್ಲದೆ ಸಹೋದರರಂತೆ ಪ್ರೀತಿ ಮಾಡಬೇಕಾಗಿದೆ. ಇದೇ ಸತ್ಯವಾದ ಮತದ ಸಾರಾಂಶ.

ಹಿಂದುಸ್ಥಾನದ ಬಜೆಟ್ಟು.

ವಿಲಾಯತಿ ಪಾರ್ಲಿಮೆಂಟಿನಲ್ಲಿ ಚರ್ಚೆಯಾದದ್ದು.

ಇಂಡಿಯಾ ಸ್ಟೇಟ್ ಸೆಕ್ರಿಟರಿ ಲಾರ್ಡ್ ಮಾರ್ಲೆಯವರ ಸೆಕ್ರಿಟರಿಯಾದ ಮಾಸ್ಟರ್ ಆಫ್ ಎಲಿಬ್ಯಾಂಕ್‌ಯವರು ಕಳೆದ ಗುರುವಾರ ವಿಲಾಯತಿಯ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಹಿಂದುಸ್ಥಾನದ ಸ್ಥಿತಿಗತಿಯನ್ನೂ ಅದರ ಜಮಾ ಖರ್ಚಿನ ಅಂದಾಜುಪಟ್ಟಿಗಳನ್ನೂ ವಿವರಿಸಿ ಹೇಳಿದರು. ಆಗ ಅವರು ತಿಳಿಯಪಡಿಸಿದ ಮುಖ್ಯಾಭಿಪ್ರಾಯಗಳೇನೆಂದರೆ —ಮಾರ್ಚಿ ಆಖೈರಿನಿಂದ ಈಚೆಗೆ ಹಿಂದುಸ್ಥಾನದಲ್ಲಿ ಮಳೆಬೆಳೆಗಳು ಚೆನ್ನಾಗುತ್ತಾ ಬಂದಿವೆ. ಕಾಲಸ್ಥಿತಿಯು ಸುಭಿಕ್ಷವನ್ನು ಸೂಚಿಸುತ್ತಿರುವುದು. ಹಿಂದುಸ್ಥಾನದ ಫಿನಾನ್ಸ್ ಮೆಂಬರಾದ ಸರ್ ಫ್ಲೀಟ್‌ವುಡ್ ವಿಲ್ಸನ್‌ರವರು ಜಾಸ್ತಿ ಸಾಲಿನಲ್ಲಿ ಖರ್ಚು ಕಳೆದು ೩೪| ಲಕ್ಷ ರೂಪಾಯಿ ಶಿಲ್ಕಾದಾಯವಾಗುವುದೆಂದು ಅಂದಾಜು ಕಟ್ಟಿದ್ದಾರೆ. ಆದರೆ ಅಫೀಮಿನ ಉತ್ಪತ್ತಿಯು ಕಡಮೆಯಾಗಬಹುದಾದ್ದರಿಂದ ಅಷ್ಟು ಆದಾಯವಾಗಲಾರದೆಂದು ಕಾಣುತ್ತದೆ— ಹಿಂದುಸ್ಥಾನದ ವೈಸ್‌ರಾಯಿಯಾದ ಲಾರ್ಡ್ ಮಿಂಟೋರವರು ಸ್ವಲ್ಪದ ಅವಧಿಯಲ್ಲಿ ಅನೇಕ ಬಿಸ್ತುಗಳನ್ನು ಬಂದು ತಮ್ಮ ವಿವೇಕವನ್ನೂ ಬುದ್ಧಿಕುಶಲತೆಯನ್ನೂ ಪ್ರಕಾಶಪಡಿಸಿದಾರೆ. ಅವರ ಸಾಧನೆ ಸ್ತೋತ್ರಾರ್ಹವಾಗಿರುತ್ತದೆ. ಸಮಾಧಾನಕಾಲದಲ್ಲೂ ಯುದ್ಧಕಾಲದಲ್ಲೂ ಇಂಗ್ಲಿಷ್ ಮತ್ತು ದೇಶೀಯ ಸೈನಿಕರು ಸ್ವಾಮಿಭಕ್ತಿಯನ್ನೂ ಪರಾಕ್ರಮವನ್ನೂ ಪ್ರದರ್ಶಿಸಿದ್ದಾರೆಂಬುದು ಚರಿತ್ರಸಿದ್ಧವಾದದ್ದಾಗಿದೆ—ಗವರ್ನಮೆಂಟಿನವರ ಭೂತತ್ವ ಯ ಸ್ವಾತಂತ್ರ್ಯಯುಕ್ತವಾದ ಮತ್ತು ಆರೋಗ್ಯಜನಕವಾದ ಕಾರ್ಯಗಳ ದೆಸೆಯಿಂದ ಪ್ಲೇಗ್ ಉಪದ್ರವ ಮತ್ತು ಕ್ಷಾಮದ ಭೀಕರತೆಯು ಈಗ ಕಡಮೆಯಾಗಿದೆ. ರಾಜ್ಯಭಾರದ ನಿಮಿತ್ತವಾಗಿಯೂ ವ್ಯಾಪಾರಾರ್ಥವಾಗಿಯೂ ಹಿಂದುಸ್ಥಾನದಿಂದ ಬಹಳ ಹಣವನ್ನು ದೋಚಿಕೊಂಡು ಹೋಗಿ ಹಿಂದುಸ್ಥಾನವನ್ನು ಬಡತನಕ್ಕೆ ತಂದುಬಿಟ್ಟಿದಾರೆ ಎಂಬ ಅಪವಾದವನ್ನು ಸಪ್ರಮಾಣಿಯವರು ಖಂಡಿಸಿ ತಕ್ಕ ದೃಷ್ಟಾಂತಗಳನ್ನು ಕೊಟ್ಟಿರು. ಹಿಂದುಸ್ಥಾನಕ್ಕೆ ಕೊಟ್ಟಿರುವ ಸಾಲಗಳಿಗೂ ಇತರ ಸದುಪಯೋಗಗಳಿಗೂ ಬಡ್ಡಿ ಮತ್ತು ಪ್ರತಿಫಲವಾಗಿ ಹಣವನ್ನೂ ಧಾನ್ಯವನ್ನೂ ತೆಗೆದುಕೊಂಡು ಹೋದ ಮಾತ್ರಕ್ಕೇ ದ್ರವ್ಯವನ್ನು ದೋಚಿಕೊಂಡು ಹೋದರೆಂದು ಅಪವಾದ ಹೊರಿಸುವುದು ಹೊಟ್ಟೆಕಿಚ್ಚಿನ ಮಾತಲ್ಲದೆ ಅನ್ಯಥಾ ಅಲ್ಲವೆಂದು ಹೇಳಿದರು.

ಈ ಸಂದರ್ಭದಲ್ಲಿ ಪಾರ್ಲಿಮೆಂಟ್ ಸಭಿಕರ ಸಂತಾಪವನ್ನು ಸರ್ ಕರ್ಜನ್ ವೈಲಿಯವರ ಪತ್ನಿಯವರಿಗೆ ತಿಳಿಸಬೇಕೆಂದು ಹೇಳಿದನು. ಮತ್ತು ಡಾಕ್ಟರ್ ಲಾಲ್‌ಕಾಕಾರವರ ಪರಾಕ್ರಮವನ್ನು ನಾವೆಲ್ಲಾ ಮೆಚ್ಚತಕ್ಕದ್ದಾಗಿದೆ. ಈ ಕೊಲೆಯು ಒಬ್ಬ ಮತಿಗೆಟ್ಟ ದುಷ್ಟನು ಮಾಡಿದ್ದಾಗಿದೆಯೇ ಹೊರತು ಮತ್ತೆ ಬೇರೆ ಅಲ್ಲವು. ವಿಶೇಷವಾದ ಪಿತೂರೀ ಕೋರರ ಗುಂಪೇನೂ ಇರುವುದಿಲ್ಲ. ಅಲ್ಲಲ್ಲಿ ಕೆಲವು ಹೊಟ್ಟೆಕಿಚ್ಚುಳ್ಳ ರಾಜದ್ರೋಹಿಗಳಿದ್ದರೂ ಇವರನ್ನು ರಾಜಭಕ್ತಿಯುತರಾದ ಪ್ರಜಾ ಕೋಟಿಗಳು ಹಿಂಸಿಸಿ ಅಲ್ಲಗಳೆಯುವರು. ಪ್ರಜಾ ಕೋಟಿಗಳು ಬ್ರಿಟಿಷ್ ಆಳ್ವಿಕೆಯಿಂದುಂಟಾಗಿರುವ ಶ್ರೇಯೋಭಿವೃದ್ಧಿಯನ್ನು ತಿಳಿದು ಸ್ವಾಮಿ ಭಕ್ತಿಯಲ್ಲಿ ಅಚಂಚಲರಾಗಿರುತ್ತಾರೆ. ಅರಾಜಕ ಕೃತ್ಯಗಳನ್ನೂ ರಾಜದ್ರೋಹವನ್ನೂ ಅಡಗಿಸುವುದರಲ್ಲಿ ಇಂಡಿಯಾ ಗವರ್ನಮೆಂಟಿನವರೂ ಲಾರ್ಡ್ ಮಾರ್ಲೆಯವರೂ ಸ್ವಲ್ಪವೂ ಹಿಂತೆಗೆಯುವುದಿಲ್ಲವೆಂದು ನಿಶ್ಚಯಿಸಿಕೊಂಡಿರುವರು. ಪ್ರಜಾ ನೆಮ್ಮದಿಯನ್ನು ಕಾಪಾಡುವುದೇ ಬ್ರಿಟಿಷ್ ಗವರ್ನಮೆಂಟಿನವರ ಮುಖ್ಯವಾದ ಉದ್ದೇಶವು. ಅವಶ್ಯಬಿದ್ದಲ್ಲಿ ಗಲಭೆಯೆಬ್ಬಿಸುವವರನ್ನು ಹಿಡಿದು ದೇಶ ಕಳುಹಿಸಿಯೇ ಬಿಡುವರು. ೧೮೧೮ ನೇ ಇಸವಿಯ ಕಾನೂನನ್ನು ಜಾರಿಗೆ ತರುವುದಕ್ಕೆ ಹಿಂದುಸ್ಥಾನದಲ್ಲಿ ನಡೆದ ಕ್ರೂರಕೃತ್ಯಗಳೇ ಕಾರಣ. ಸಾಮಾನ್ಯವಾದ ಕಾನೂನಿನಿಂದ ಅಧಿಪತ್ಯವನ್ನು ತಹಬಂದಿಗೆ ತರಲು ಸಾಧ್ಯವಾಗಲಿಲ್ಲ. ಜಾಗ್ರತೆಯಾಗಿ, ಕೇಡುಂಟಾಗುವುದಕ್ಕೆ ಮುಂಚೆ, ಕಾರ್ಯ ನಡಿಸಬೇಕಾಯಿತು. ಪ್ರಜೆಗಳು ನೆಮ್ಮದಿ ಸ್ಥಿತಿಯಲ್ಲಿರುವಾಗ್ಗೆ ಸಾಮಾನ್ಯ ಕಾನೂನು ಅನ್ವಯಿಸುವುದು ಭಯೋತ್ಪಾತದಿಂದಲಾಗಲಿ ಸರ್ಕಾರದ ಮೇಲೆ ದಗೆತನದಿಂದಲಾಗಲಿ ಪ್ರಜೆಗಳು ಅಧಿಕಾರಿಗಳ ಪಕ್ಷದಲ್ಲಿ ನಿಂತು ಅವರಿಗೆ ಸಹಾಯ ಮಾಡದೆ ತಪ್ಪಿದಲ್ಲಿ ನಾವು ಇತರ ಮಾರ್ಗಗಳನ್ನು ಹುಡುಕಬೇಕು, ಇಲ್ಲವೇ, ರಾಜ್ಯಭಾರವನ್ನೇ ತ್ಯಜಿಸಬೇಕು. ವಿರೋಧಪಕ್ಷದವರಾದರೋ ನಮ್ಮನ್ನು ಈ ಎರಡನೆಯ ಕಾರ್ಯ ಮಾಡಬೇಕೆಂದು ಅಪೇಕ್ಷಿಸುವರು, ಆದರೆ ದೈವವಶಾತ್ತು ನಮಗೆ ೧೮೧೮ ನೇ ಇಸವಿಯ ಕಾನೂನು ಇತರ ಮಾರ್ಗವನ್ನು ತೋರಿಸುವಂಥಾದ್ದಾಗಿದೆ— ಇಂಡಿಯಾ ಗವರ್ನಮೆಂಟಿನವರು ನೆಮ್ಮದಿಯನ್ನು ಕಾಪಾಡುವುದರಲ್ಲಿ ಜಿತಮನಸ್ಕರಾಗಿ ನಡಿಸುತ್ತಿರುವ ಕಾರ್ಯಗಳು ಸರಿಯಾಗಿವೆ ಎಂದು ಸಾರ್ವಭೌಮ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈ ವಿಷಯವನ್ನು ಹಿಂದುಸ್ಥಾನದಲ್ಲೂ ಇಂಗ್ಲೆಂಡಿನಲ್ಲೂ ಸ್ಪಷ್ಟವಾಗಿ ತಿಳಿದುಕೊಂಡಿರುವುದು ಒಳ್ಳೇದು. ಹಿಂದುಸ್ಥಾನದಲ್ಲಿರುವ ೬,೫೦೦ ಮಂದಿ ಬ್ರಿಟಿಷ್ ಅಧಿಕಾರಿಗಳು ಅಲ್ಲಿನ ಪ್ರಜಾ ಕೋಟಿಗಳಲ್ಲಿ ಒಂದು ಹಿಡಿಯಷ್ಟಾಗುವರು. ಇಂಥಾ ವಿವೇಕಶಾಲಿಗಳು ಬಹಳ ಶ್ರಮಪಡುತ್ತಿರುವುದನ್ನು ನೋಡಿದರೆ ನನ್ನ ಮನಸ್ಸು ಕರಗುವುದು. ಈಗ ರಾಜ್ಯಭಾರ ಕ್ರಮದಲ್ಲಿ ಹೊಸ ಬಿಸ್ತುಗಳನ್ನು ಮಾಡಿರುವುದರಿಂದ ಅವುಗಳನ್ನೆಲ್ಲಾ ಆ ಅಧಿಕಾರಿಗಳು ಉತ್ಸಾಹದಿಂದಲೂ ವಿವೇಕವಾಗಿಯೂ ಐಕಮತ್ಯದಿಂದಲೂ [illegible]—ಈಗ ಹಿಂದುಸ್ಥಾನದವರಿಗೆ ತೋರಿಸುವ ರಿಯಾಯಿತಿಗಳು ಅಪೂರ್ಣವಾದವು, ಅವು ಸಜ್ಜನಾರ್ಹಗಳೇ ಅಲ್ಲವೇ ಪ್ರಜೆಗಳ ಇಷ್ಟಾರ್ಥಕ್ಕೆ ಸಹಕಾರಿಯಾಗುವುಗಳೇ ಅಲ್ಲವೇ ಎಂಬ ವಿಚಾರಗಳು ಕಾಲಕ್ರಮದಲ್ಲಿ ವ್ಯಕ್ತಪಡಬೇಕಾಗಿದೆ— [illegible] ಬಿಸ್ತುಗಳ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಕೆಲವು ರೂಲುಗಳನು ಮಾಡಿ ಲಾರ್ಡ್ ಮಾರ್ಲೆಯವರಿಗೆ ಕಳುಹಿ ಕೊಟ್ಟಿರುವರು. [illegible]

[illegible] ರಾಜ [illegible] ಹೇಳುವ [illegible] ರವರು ನಮಗೆ [illegible] ತಿಳಿದು ಬೇರೇನೂ [illegible] ಪಕ್ಷದಲ್ಲಿ [illegible] ರಾಜಭಕ್ತರಾದ ಪ್ರಜಾ ಕೋಟಿಗಳೆಲ್ಲಾ ನಮಗೆ [illegible] ಲಾರ್ಡ್ ಮಿಂಟೋ [illegible] ವಿಶೇಷವಾಗಿ ಬಲ್ಲರು.

ದೇಶೀಯ ಜನರು ವಿದ್ಯಾಭ್ಯಾಸ ಕ್ರಮವನ್ನು ಬದಲಾವಣೆಮಾಡಿ, ಬುದ್ಧಿ ಕುಶಲತೆಯುಳ್ಳವರು ಅಭಿವೃದ್ಧಿಗೆ ಬಾರದ ಹಾಗೆ ಅತ್ತಿ ಮಾಡಿದರೆಂಬ ಅಪವಾದವು ನಿರಾಧಾರವಾದದ್ದು. ಶ್ರೇಷ್ಠತರವಾದ ಸ್ವಾತಂತ್ರ್ಯವನ್ನೂ ವಿವೇಕ [illegible] ಕೊಡುವಂಥಾ ಪುಸ್ತಕಗಳನ್ನು ಅವರು ಧಾರಾಳವಾಗಿ ಓದಿ [illegible] ಕೊಡಲಾಗಿದೆ. ಅವುಗಳನ್ನು ಓದೋಣದರಿಂದ ಕೆಲವರು ದುರ್ಮಾರ್ಗಿಗಳಾಗಿ ಅವರ ಅಭಿಪ್ರಾಯಗಳು ಸಾರ್ವಭೌಮ ಸರ್ಕಾರದ [illegible] ವಿರುದ್ಧವಾಗಿವೆ. ಮತ್ತು ಕಾಲ ಅನ್ಯದೇಶೀಯರ ಅಧೀನದಲ್ಲಿರೋಣದರಿಂದ ನಾನಾ ಕಷ್ಟಗಳುಂಟೆಂಬ ತಿಳುವಳಿಕೆಯೂ ಉಂಟಾಗಬಹುದು. ಗವರ್ನಮೆಂಟಿನವರು ಅವರಿಗೆ ಯಾವುದೊಂದು ಜವಾಬ್ದಾರಿಯನ್ನೂ ಕೊಟ್ಟಿರುವದಿಲ್ಲ. ಹಿಂದುಸ್ಥಾನದ ವಿದ್ಯಾರ್ಥಿಗಳು ವಿಲಾಯತಿಗೆ ಬಂದು ಒಳ್ಳೆಯ ಸಹವಾಸ ತಪ್ಪಿ ಇಂಗ್ಲಿಷರ ಸುಗುಣ ಸದಭಿಪ್ರಾಯ ಸಚ್ಚರಿತ್ರಗಳನ್ನು ನೋಡಿ ಕಲಿತುಕೊಳ್ಳುವುದಕ್ಕೆ ಅವಕಾಶವಾಗದಿರುವುದು ಲಾರ್ಡ್ ಮಾರ್ಲೆಯವರಿಗೆ ಚಿಂತೆಯನ್ನುಂಟುಮಾಡಿದೆ. ಅವರು ವಿದ್ಯಾರ್ಥಿಗಳ ಮೇಲೆ ಸರ್ಕಾರಿಯಾಗಿ ಯಾವ ನಿರ್ಬಂಧವನ್ನೂ ಕಲ್ಪಿಸದೇನೇ ಅವರಿಗೆ ವಿವೇಕವನ್ನು ಹೇಳಿಕೊಟ್ಟು ಅಭಿವೃದ್ಧಿಗೆ ಬರುವಂತೆ ಪ್ರೋತ್ಸಾಹಪಡಿಸಿ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುವುದಕ್ಕಾಗಿ ಒಂದು ಏರ್ಪಾಡನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ. ಹಿಂದುಸ್ಥಾನದ ವಿದ್ಯಾರ್ಥಿಗಳನ್ನು ಅವರ ತಾಯಿತಂದೆಗಳು ವಿಲಾಯಿತಿಯಲ್ಲಿಗೆ ಕಳುಹಿಸಬೇಕೋ, ಅವರನ್ನು ಯಾರ ಮೇಲ್ವಿಚಾರಣೆಯಲ್ಲಿ ಬಿಡಬೇಕೋ, ಅವರ ವಿದ್ಯಾಭಿವೃದ್ಧಿ ಜೀವನಾದಿಗಳು ಹ್ಯಾಗೆ ನಡೆಯುವವೋ, ಈ ವಿಚಾರಗಳನ್ನೆಲ್ಲಾ ತಿಳಿಯುವುದಕ್ಕಾಗಿ ವಿಲಾಯತಿಯಲ್ಲಿ ಒಂದು ಕಮಿಟಿಯನ್ನು ಮಾಡಿರುವರು. ಈ ಕಮಿಟಿಯವರು ಸೇರಿ ಕೆಲಸ ಮಾಡುವುದಕ್ಕೆ ಹಿಂದುಸ್ಥಾನದ ರಾಜಾದಾಯದಿಂದ ಹಣವನ್ನು ಖರ್ಚುಮಾಡಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುವರು. ಇದೇ ರೀತಿ ಹಿಂದುಸ್ಥಾನದ ಬೇರೆ ಬೇರೆ ಅಧಿಪತ್ಯಗಳಲ್ಲೂ ಕಮಿಟಿಗಳು ಏರ್ಪಾಡಾಗುವವು — ಹಿಂದುಸ್ಥಾನದ ಪ್ರಜೆಗಳು ಬಹಳ ಮಾನಸ್ಥರು. ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕವರೂ, ಪಾರ್ಲಿಮೆಂಟ್ ಮೆಂಬರುಗಳೂ ಆ ಪ್ರಜೆಗಳ ಮತ್ತು ಅವರ ಸ್ಥಿತಿಗತಿಗಳ ವಿಚಾರವಾಗಿ ಬರೆಯುವಾಗಲೂ ಉಪನ್ಯಾಸ ಮಾಡುವಾಗಲೂ ತುಂಬಾ ಎಚ್ಚರಿಕೆಯಿಂದಿರಬೇಕು. ವೃಥಾ ಅವರ ದೇಶಾಭಿಮಾನವನ್ನು ಕೆಣಕುವಂಥಾ ಅಚಾತುರ್ಯಗಳು ನಡೆಯುವುದು ಯೋಗ್ಯವಾದದ್ದಲ್ಲ. ಹಿಂದುಸ್ಥಾನವನ್ನು ಆಳಿ ಅಭಿವೃದ್ಧಿಗೆ ತರುವುದರಲ್ಲಿ ನಮ್ಮ ಉದ್ದೇಶವು ಕಾರ್ಯಭಾರವು ಮಹಾ ಘನತರವಾದದ್ದಾಗಿದೆ. ಹೊಸ ವರುಷದಲ್ಲಿ ನಾವು ಸ್ವಲ್ಪವೂ ಹಿಮ್ಮೆಟ್ಟದ ಧೈರ್ಯಗಳಿಂದ ಆ ಉದ್ದೇಶವನ್ನೂ ಕಾರ್ಯಭಾರವನ್ನೂ ಮುಂದರಿಸಿಕೊಂಡು ಹೋಗುವೆವು ಮತ್ತು ಹಿಂದುಸ್ಥಾನವನ್ನು ಅಭಿವೃದ್ಧಿಗೆ ತರುವುದಕ್ಕೆ ನಮ್ಮಲ್ಲಿ ಉತ್ಸಾಹಪೂರ್ವವಾಗಿರತಕ್ಕ ಶಕ್ತಿ ಸಾಮರ್ಥ್ಯವನ್ನು ವಿನಿಯೋಗಿಸುತ್ತಾ ಬರುವೆವು ಎಂಬುದೇ.

ಪಾರ್ಲಿಮೆಂಟ್ ಮೆಂಬರುಗಳ ಅಭಿಪ್ರಾಯಗಳು.

ಅರ್ಲ್ ಪರ್ಸಿಯವರು—ಗವರ್ನಮೆಂಟಿನವರು ಮಹಮ್ಮದೀಯರಿಗೆ ಪ್ರಾಧಾನ್ಯ ಮಾಡಿರುವ ಹಾಗೂ, ಅದನ್ನು ಬೇಕೆಂದು ನೆರವೇರಿಸದೆ ಇರುವ ಹಾಗೂ ಆ ಜನರಲ್ಲಿ ಉಂಟಾಗಿರುವ ದುರಭಿಪ್ರಾಯವನ್ನು ನಿವಾರಿಸದೆ ಹೋಗಲಾಡಿಸಬೇಕೆಂತಲೂ, ಹಿಂದುಸ್ಥಾನ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಗವರ್ನಮೆಂಟಿನವರು ಮಾಡಿರುವ ಏರ್ಪಾಡು ಬಹಳ ತೃಪ್ತಿಕರವಾಗಿದೆ ಎಂತಲೂ, ಆದರೆ ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸದ ಕ್ರಮವನ್ನು ಬದಲಾವಣೆ ಮಾಡಿ ಒಳ್ಳೇ ಸ್ಥಿತಿಗೆ ತಂದಿಡಬೇಕಾಗಿದೆ ಎಂತಲೂ ಹೇಳಿದರು.

ಸರ್ ಛಾರಲ್ಸ್ ಡಿಲ್ಕ್‌ರವರು— ಈಗ ನಾವು ತೋರಿಸಿರುವ ರಿಯಾಯಿತಿಗಳನ್ನೂ ಮಾಡಿರುವ ಬದಲಾವಣೆಗಳನ್ನೂ ಈ ಮೊದಲೇ ಮಾಡಿಬಿಟ್ಟಿದ್ದರೆ ಹಿಂದುಸ್ಥಾನದಲ್ಲಿ ಈಗ ಉಂಟಾಗಿರುವ ಗಲಭೆಗಳ್ಯಾವೂ ಹುಟ್ಟುತ್ತಿರಲಿಲ್ಲ ಎಂದು ಹೇಳಿದರು.

ಮೆ|| ಎ ಬ್ಯಾರಿಯವರು—ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸವನ್ನು ಕ್ರಮಕ್ಕೆ ತಂದಿಡಬೇಕೆಂತಲೂ, ಸದ್ಯದಲ್ಲಿ ಬಲಾತ್ಕಾರವಾಗಿ ವಿದ್ಯೆ ಕಲಿಸುವಂತೆ ಏರ್ಪಾಡು ಮಾಡುವುದು ಅಸಾಧ್ಯವಾಗಿದೆಯಾದರೂ ಪ್ರತಿ ಒಬ್ಬ ಮಗುವಿಗೂ ವಿದ್ಯೆ

ಕಲಿಯುವುದಕ್ಕೆ ಅವಕಾಶವನ್ನು ಸರ್ಕಾರದವರು ಕಲ್ಪಿಸಬೇಕಾಗಿದೆ ಎಂತಲೂ ತಿಳಿಸಿದರು. ಈ ಅಭಿಪ್ರಾಯವನ್ನು ಪಾರ್ಲಿಮೆಂಟಿನ ಇತರ ಮೆಂಬರುಗಳ್ಯಾರೂ ಸಮ್ಮತಿಸಲಿಲ್ಲ. ಮೆ|| ಮೆಕಾರ್ನೆಸ್, ಮೆ| ಕೀರ ಹಾರ್ಡಿ, ಸರ್ ಹೆನ್ರಿ ಕಾಟನ್ ಡಾ|| ರದರ್ಫರ್ಡ್, ಈ ಮೊದಲಾದ ಪಾರ್ಲಿಮೆಂಟ್ ಮೆಂಬರುಗಳು ಹಿಂದು ಸ್ಥಾನದ ರಾಜ್ಯಭಾರ ಕ್ರಮಗಳನ್ನೂ ಅವರ ನ್ಯೂನಾತಿರಿಕ್ತಗಳನ್ನೂ ಕುರಿತು ಆಕ್ಷೇಪಣೆ ಮಾಡಿದರು.

ಸೆಕ್ರಿಟರಿಯಾದ ಮಾಸ್ಟರ್ ಆಫ ಎಲಿಬ್ಯಾಂಕ್ ಯವರು ಆ ಮೆಂಬರುಗಳು ಅಷ್ಟು ಕಠಿಣವಾದ ರೀತಿಯಲ್ಲಿ ಮಾತನಾಡಿದ್ದನ್ನು ಖಂಡಿಸಿ ಪ್ರತ್ಯುತ್ತರವಾಗಿ ಹೇಳಿದ್ದೇನೆಂದರೆ —ಹೊಸದಾಗಿ ಮಾಡಿರುವ ಕೌನ್ಸಲ್‌ಗಳ ಕಾನೂನು ಜಾರಿಗೆ ಬಂದಮೇಲೆ ಈಗ ಕಾರಾಗೃಹದಲ್ಲಿಟ್ಟುಕೊಂಡಿರುವವರನ್ನು ಬಿಡುಗಡೆ ಮಾಡ ಬೇಕೆಂದು ಇವರು ಸೂಚಿಸುತ್ತಾರೆ. ಅಂಥಾ ಶಿಕ್ಷೆಯಾದ ವಿಚಾರಗಳು ಆರು ತಿಂಗಳಿಗೆ ಒಂದುಸಲ ಪುನರಾಲೋಚನೆಗೆ ಬರುವವು. ವೈಸ್‌ರಾಯಿಯವರ ರಿಪೋರ್ಟನ್ನು ನೋಡಿಕೊಂಡು ಗವರನ್‌ಮೆಂಟಿನವರು ಕಾರ್ಯ ನಡಿಸಬೇಕಾಗು ತ್ತದೆ ಎಂಬುದೇ.

ಅಲ್ಲಿಗೆ ಈ ಚರ್ಚೆಯು ಮುಕ್ತಾಯವಾಗಿ ಬಜೆಟ್ಟು ಪಾಸಾಯಿತು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಎಡಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಹ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್.

ಸರ್ಪದ ಭಯ ಮತ್ತು ಪರಿಹಾರ

ಅಯ್ಯಾ,

[illegible] ತುಮಕೂರು ತಾಲ್ಲೂಕು [illegible] ದಾರಿಯಲ್ಲಿರುವ [illegible] ನನ್ನ [illegible] ಆ ಸರ್ಪ [illegible] ಮನೆಗೆ ಬಂದರೆ, ಇವರು ಆ ಉಪಾಯವನ್ನು [illegible] ನಡೆಯುತ್ತಿದ್ದ [illegible] ಒಂದು ದೊಡ್ಡ ಉಪಾಯವೆಂದು ಸಮಸ್ತರಿಗೂ ಇದರಿಂದ ತಿಳಿಯಬರತಕ್ಕದ್ದು.

ಮಾಗಡಿ. ವೈ. ಓರಿಯಣ್ಣಯ್ಯ

ಕಂದಾಯಕ್ಕೆ ರಶೀತಿ ಕೊಡುವದು

ಅಯ್ಯಾ,

ಪ್ರಜೆಗಳಾದ [illegible] ಅನುಭವಗಳನ್ನು ಈ ಸಂದರ್ಭದಲ್ಲಿ ಪ್ರಕಟಿಸ [illegible] ಚುನಾಯಿಸಲ್ಪಡುವವರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಕಂದಾಯಗಳನ್ನು ವಸೂಲ್ ಮಾಡುವದಕ್ಕೆ ಬರುವಂಥಾ ಶೆಕ್ದಾರ್ ಶಾನುಭೋಗ್, ಪಟೇಲರೇ ಮೊದಲಾದ ನೌಕರರು ಪೂರಾ ಕಂದಾಯ ಪಾವತಿ ಆದಾಗಲೂ, ಅಲ್ಪ ಸ್ವಲ್ಪ ಪಾವತಿ ಆದಾಗಲೂ ರೈತನಿಗೆ ಅವನ ಪಟ್ಟೆಯಲ್ಲಿ ಬರೆದು ಕೊಡುವುದೇ ವಾಡಿಕೆ. [illegible] ಅವರು ರೈತನಿಗೆ ಡುಪ್ಲಿಕೇಟ್ ರಶೀತಿ ಪುಸ್ತಕಗಳಲ್ಲಿ ಅವನಿಂದ ಪಾವತಿ ಆದ ಹಣಕ್ಕೆ ಪ್ರತ್ಯೇಕವಾದ ರಶೀತಿಯನ್ನು ಬರೆದು ಕೊಡುವಂತಾಗಬೇಕು. ಈ ರಶೀತಿಗಳಿಗೆ ಕ್ರಮವಾಗಿ ನಂಬರುಗಳು ಇರಬೇಕು. ಒಂದು ಭಾಗವನ್ನು ನೌಕರರು ಬರೆದು ರೈತನಿಗೆ ಕೊಟ್ಟಲ್ಲಿ ಇನ್ನೊಂದು ಭಾಗವು ಪುಸ್ತಕದಲ್ಲೇ ಸರ್ಕಾರದ ದಾಖಲೆಗಾಗಿ ಇರುವಂತೆ ಆಗಬೇಕು. ಈಗ ಪಟ್ಟೆಗಳಿಗೆ ಸರ್ಕಾರದವರು ಉಪಯೋಗಿಸಿರುವಂಥಾ ಕಾಗದವು ಬಹು ಅಲ್ಪವಾದದ್ದು. ಗವರ್ನ್‌ಮೆಂಟಿನ ಘನತೆಗೆ ತಕ್ಕಂತೆ ಉತ್ತಮ ತರಹಾ ಕಾಗದವನ್ನು ಉಪಯೋಗಿಸಬೇಕು. ಈಗ ನಾನು ಸೂಚಿಸಿರುವಂತೆ ನೌಕರರು ಪ್ರತ್ಯೇಕವಾದ ರಶೀತಿಯನ್ನು ರೈತರಿಗೆ ಕೊಡುವುದು ಬಹಳ ಅವಶ್ಯವಾಗಿದೆ. ಈ ರಶೀತಿ ಪುಸ್ತಕಗಳನ್ನು ನಡಿಸಿ ಕೊಡುವುದರಿಂದ ಗವರ್ನ್‌ಮೆಂಟಿಗೆ ವಿಶೇಷ ವೆಚ್ಚವೂ ಆಗುವುದಿಲ್ಲ. ಈಗ ಕಂದಾಯ ವಸೂಲ್ ಮಾಡತಕ್ಕವರು ಅನೇಕ ಸಂದರ್ಭಗಳಲ್ಲಿ ಪಟ್ಟೆಗೆ ಬರೆದು ಕೊಡುವುದಿಲ್ಲ. ರೈತರು ಪಟ್ಟೆಗಳನ್ನು ಕೆಲವು ವೇಳೆ ತೆಗೆದುಕೊಂಡು ಹೋಗುವುದೂ ಇಲ್ಲ. ಮೇಲ್ಕಂಡಂತೆ ನೌಕರರು ಹಣ ಪಾವತಿ ಆದದ್ದಕ್ಕೆ ಪ್ರತ್ಯೇಕವಾದ ರಶೀತಿಗಳನ್ನು ಎಲ್ಲಾ ಸಂದರ್ಭಗಳಲ್ಲೂ ಬರೆದು ಕೊಡುತ್ತಾ ಬಂದರೆ ರೈತನಿಗೆ ಎಷ್ಟೋ ಕ್ಷೇಮವಾಗುವುದು. ಇಂಥಾ ರಶೀತಿಗಳು ಈಗ ಇಲ್ಲದೇ ಇರೋಣದರಿಂದ ರೈತರು ಕಂದಾಯ ಕಟ್ಟಿದ್ದಕ್ಕೆ ದಾಖಲೆ ಕೊಡಲಾರರು, ನೌಕರರು ಕಂದಾಯವನ್ನು ತೆಗೆದು ಕೊಂಡು ತಿಂದುಹಾಕಿದ್ದು ಗೊತ್ತಾಗುವುದಿಲ್ಲ. ಮೈಸೂರಿನಲ್ಲಿ ಸರ್ಕಾರಿ ನೌಕರರ ಮೇಲೆ ಅಪರಾಧ [illegible] ಅವರು ತಪ್ಪಿಸಿಕೊಳ್ಳುವುದಕ್ಕೆ ಅನೇಕ ಮಾರ್ಗಗಳಿರುವವೆಂದು ನಮಗೆಲ್ಲಾ ತಿಳಿದಿದೆ. ಆದಕಾರಣ ಪ್ರಜಾಪ್ರತಿನಿಧಿಗಳು ಈ ವಿಷಯವನ್ನು ಪ್ರತಿನಿಧಿ ಸಭೆಯಲ್ಲಿ ಗವರ್ನ್‌ಮೆಂಟಿನವರ ಗಮನಕ್ಕೆ ತಂದು, ಮುಂದೆ ಕಂದಾಯ ಪಾವತಿ ಆದದ್ದಕ್ಕೆ ರೈತನಿಗೆ ಪ್ರತ್ಯೇಕವಾದ ರಶೀತಿಯು ಖಂಡಿತವಾಗಿ ದೊರಕುವಂತೆ ಮಾಡಬೇಕು. ನಾನು ಈ ಸಲ ಪ್ರತಿನಿಧಿಯಾಗುವ ಸಂಭವ ತೋರುವುದಿಲ್ಲವಾದದರಿಂದ ಈ ವಿಚಾರವನ್ನು ಪ್ರತಿನಿಧಿಗಳಾಗಿ ಹೋಗತಕ್ಕವರ ಗಮನಕ್ಕೆ ತಂದಿರುತ್ತೇನೆ

ಕಂದಾಯ ಕೊಡತಕ್ಕವನು.

ಗೌರ್ನಮೆಂಟಿನವರ ಕೃಪಾ ಬೇಕು.

ಅಯ್ಯಾ,

ಚಿತ್ರದುರ್ಗದ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕಿಗೆ ಸೇರಿದ [illegible] ಹಳ್ಳಿಯಲ್ಲಿ ೨೫-೩೦ ಮನೆಯವರು ಪಂಚಮರೆಂಬ ಬೇಗಾರಜಾತಿ [illegible] ವಿರುಕ್ತ ಅವರೆಲ್ಲಾ ರೈತರ ಕೆಲಸ ಸರ್ಕಾರದ ಬಿಟ್ಟಿ ವಗೈರೆ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಅವರಲ್ಲಿ ವಿದ್ಯಾಭ್ಯಾಸ ಮಾಡಲು ೩೦ ಚಿಕ್ಕ ಹುಡುಗರೂ ಹುಡುಗಿಯರೂ ಇರುವರು. ಅಲ್ಲಿ ಒಂದು ಕನ್ನಡ ಸ್ಕೂಲೂ ಇದೆ

ಈಗ್ಗೆ ಒಂದು ವರುಷದ ಹಿಂದೆ ಈ ಬೇಗಾರ್ ಜನಗಳು ತಮ್ಮ ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸಬೇಕೆಂದು ಗ್ರಾಮಸ್ಥರನ್ನೂ ವಿದ್ಯಾಭ್ಯಾಸದ ಇಲಾಖಾ ಡೆಪ್ಯುಟಿ ಇನ್ಸ್‌ಪೆಕ್ಟರನ್ನೂ ಕೇಳಿಕೊಂಡದ್ದರ ಮೇಲೆ ಅವರು ಅದೇ ಗ್ರಾಮದ ಹೋಬಳಿ ಸ್ಕೂಲಿನಲ್ಲಿ ಓದಿದ ಫಕರುದ್ದೀನ್ ಸಾಬಿ ಎಂಬಾತನನ್ನು ಬೇಗಾರರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ನೇಮಿಸಿ, ಆತನ ಜೀವನಕ್ಕೆ ಗ್ರಾಮಸ್ಥರೇ ಅನುಕೂಲ ಮಾಡಿಕೊಡುತ್ತಾ ಬಂದರು. ಸ್ಕೂಲಿಗಾಗಿ ಬೇಗಾರರೇ ಸ್ವಂತ ಲಾಗವಡಿನಿಂದ ಮನೆ ಕಟ್ಟಿಸಿಕೊಟ್ಟರು. ಆ ಸ್ಕೂಲಿಗೆ ೨೫ ಜನ ಬಾಲಕ ಬಾಲಕಿಯರು ಸೇರಿ ವಿದ್ಯಾಭ್ಯಾಸವೂ ನಡೆದು ಅಭಿವೃದ್ಧಿಗೆ ಬಂತು. ಈ ವಿಷಯ ಸ್ಕೂಲುಗಳ ಇನ್ಸ್‌ಪೆಕ್ಟರೂ, ತಾಲ್ಲೂಕ್ ಅಮಲ್ದಾರರೂ ಒಂದೆರಡು ಧಪ ಪರೀಕ್ಷೆ ಮಾಡಿ ತಮ್ಮ ಒಳ್ಳೇ ಅಭಿಪ್ರಾಯವನ್ನು ಬರೆದಿರುತ್ತಾರೆ. ಅದರ ನಿಮಿತ್ತವಾಗಿ ಗ್ರಾಮಸ್ಥರು ಬೇಗಾರ್ ಸ್ಕೂಲ್ ಟೀಚರಿಗೆ ಕೊಡುತ್ತಿದ್ದ ಮಾಸಾಶನವನ್ನು ನಿಲ್ಲಿಸಿ ಬಿಟ್ಟರು. ಈಚೆಗೆ ಹೊಸದಾಗಿ ಕೆಲವು ಸ್ಕೂಲುಗಳು ಸ್ಯಾಂಕ್ಷನ್ ಆಗಿ ಬಂದದ್ದರಿಂದ ಆ ಪೈಕಿ ಒಂದನ್ನು ಈ ಬೇಗಾರೀ ಸ್ಕೂಲು ಮಾಡ್ತಾರೆಂದೂ ಅದರಿಂದ ಈ ಸ್ಕೂಲ ಶಾಶ್ವತವಾಗಿ ನಡೆಯುತ್ತೆಂದೂ ನಂಬಿಕೊಂಡಿದ್ದರು. ಆದರೆ ಆ ರೀತಿ ನಡೆಯಲಿಲ್ಲ. ಟೀಚರಾಗಿರುವ ಫಕರುದ್ದೀನ್ ಸಾಬಿಗೆ ಮೂರು ತಿಂಗಳಿಂದ ಯಾವ ವರಮಾನವೂ ಇಲ್ಲದೆ ಜೀವನಕ್ಕೆ ಕಷ್ಟವಾದಾಗ್ಯೂ ತನ್ನ ಹಿಂದಲ ಮೆಹನತ್ತು ವ್ಯರ್ಥವಾಗುತ್ತೆಂಬ ಸಂಕಟದಿಂದಲೂ, ಸ್ವಂತ ಸ್ವಾಭಿಮಾನದಿಂದಲೂ ಈಗಲೂ ಕಷ್ಟಪಟ್ಟು ಬೇಗಾರ್ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿದ್ದಾನೆ. ಹೀಗಾದರೆ ವಿದ್ಯಾಭ್ಯಾಸವು ಶಾಶ್ವತವಾಗಿ ನಡೆಯಲಾರದೆಂದು ಹೇಳಬೇಕಾಗಿಲ್ಲ. ಈ ವಿಷಯದಲ್ಲಿ ಬೇಗಾರರೂ ಸಹ ಸಂಕಟಪಡುತ್ತಿದ್ದಾರೆ. ಆದಕಾರಣ ಗವರ್ನ್‌ಮೆಂಟಿನವರು ಫಕರುದ್ದೀನ್ ಸಾಬಿಗೆ ಸಂಬಳ ಮಂಜೂರು ಮಾಡಿದರೆ ಎಲ್ಲಾ ವಿಷಯದಲ್ಲೂ ಕೇವಲ ಹಿಂದೆ ಬಿದ್ದಿರತಕ್ಕ ಈ ಬೇಗಾರ್ ಜಾತಿಯವರನ್ನು ಉದ್ಧಾರ ಮಾಡಿದಂತೆ ಆಗುತ್ತೆ

ಚಿತ್ರದುರ್ಗ ಪೆನ್ಷನ್ ಆಫೀಸರ್

ಶ್ರೀರಂಗಪಟ್ಟಣದ ವಿಷಯಗಳು.

ಅಯ್ಯಾ,

[illegible] ಶ್ರೀರಂಗಪಟ್ಟಣವು ಇಷ್ಟು ದಿನವೂ [illegible] ವಾಸ ಮಾಡುವುದು ಅಸಾಧ್ಯವಾಗಿದೆ. ಮ್ಯುನಿಸಿಪಲ್ ಮೆಂಬರುಗಳಿಗೂ ಆನಾದರಣೆಯಾಗಿದೆ. ಈ ವಿಧವಾದ ದುರವಸ್ಥೆಯಿಂದಲೇ ಶ್ರೀರಂಗಪಟ್ಟಣಕ್ಕೆ [illegible] ಈ ಪಟ್ಟಣವು ನವರತ್ನಗಳಿಂದ ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು ಹೊಂದಿರುವುದರಿಂದ [illegible] ಅನೇಕ ರಾಜಾಧಿರಾಜರುಗಳೂ, ಗವರ್ನರುಗಳೂ ವೈಸ್‌ರಾಯಿ ಗವರ್ನರುಗಳೂ, ಸಮ್ರಾಟ ಚಕ್ರವರ್ತಿಗಳ ಪ್ರತಿನಿಧಿಗಳೂ ಬಂದು ನೋಡಿಕೊಂಡು ಹೋಗುತ್ತಿರುತ್ತಾರೆ. ಹೊಸ್ತಾಗಿ ಮ್ಯುನಿಸಿಪಲ್ ಕಮಿಷನರರನ್ನು ಚುನಾಯಿಸಲು [illegible] ಆಗಿ ಮೆ|| ಪ್ಲೀಡರ್ ವಿ. ನರಸಿಂಗರಾಯರು, ಮೆ|| ಪ್ಲೀಡರ್ ಪಿ. [illegible], ಮೆ|| ಕೌನ್ಸಿಲರ್ ಕೃಷ್ಣಾ [illegible] ಯರು ಚುನಾಯಿಸಲ್ಪಟ್ಟರು. ಮುಂದೆ ಈ ಮಹನೀಯರುಗಳಾದರೂ ಮ್ಯುನಿಸಿಪಾಲಿಟಿಯಲ್ಲಿ ದೊಡ್ಡ ದೊಡ್ಡ ರಸ್ತೆಗಳಲ್ಲದೆ, ಸಂದುಗೊಂದುಗಳಲ್ಲಿಯೂ ಇರುವ ಕಸ ಕಡ್ಡಿಗಳು ಸರಿಯಾಗಿ ಸಾಗುವಂತೆ ಮಾಡಿ, ಪ್ಲೇಗ್ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಅಸ್ಪದವಾಗದಂತೆ ಮಾಡಿ, ಎಲ್ಲಾ ಭಾಗದಲ್ಲೂ [illegible] ಜನರಿಗೆ ಆರೋಗ್ಯವನ್ನು ಕಲ್ಪಿಸಿಕೊಡುತ್ತಾರೆಂದು ನಂಬಿದ್ದೇನೆ

ಕಳುವು ಬಹಳ ಜಾಸ್ತಿಯಾಗಿದೆ. ಹಗಲಲ್ಲೇ ಬೀಗ ಮುರಿಯುತ್ತಾರೆ. ಪೊಲೀಸಿನವರನ್ನು ನೋಡುವುದು ಅಪರೂಪವಾಗಿದೆ. ಪೊಲೀಸ್ ಇನ್ಸ್‌ಪೆಕ್ಟರವರು ಊರಹೊರಗೆ ವಾಸ ಮಾಡುವರು. ರಾತ್ರಿ ಕಾಲದಲ್ಲಿ ಪೊಲೀಸ್ ಬೀಟು ಸರಿಯಾಗಿ ನಡಿಯುತ್ತಿಲ್ಲ. ಈಗ್ಗೆ ೫-೬ ದಿವಸದಲ್ಲಿ ಈ ತಾಲ್ಲೂಕು ಸರಾಫರಾಗಿದ್ದು ಮೃತಪಟ್ಟ ವೆಂಕಟಗಿರಿರಾಯರೆಂಬುವರ ಮನೆಯಲ್ಲಿ ಸುಮಾರು ೫-೬ ಸಾವಿರ ರೂಪಾಯಿನ ಚರ [illegible] ಕಳುವಾಗಿದೆ. ಹಗಲುಹೊತ್ತು, ಏನು ಹಾ ಳೋಣ! ಈ ವಿಷಯವನ್ನು ಇನ್ಸ್‌ಪೆಕ್ಟರಿಗೆ ತಿಳಿಸಲು "... ನಮ್ಮನ್ನು ಊರು ಬಿಟ್ಟು ಹೋಗೆಂದು ಹೇಳುವರ್‍ಯಾರು" ಎಂದು ಹೇಳಿದರಂತೆ. ಮತ್ತೆ ಕೆಲವರು ಕೇಳಿದಾಗ— "ಸಿಬ್ಬಂದಿಯೇ ಇಲ್ಲ, ನಾನೇನು ಮಾಡಲಿ?" ಎಂದು ಉತ್ತರ ಕೊಟ್ಟರಂತೆ. ಇಂಥಾದ್ದರಲ್ಲಿ ಬಡವರ ಮನೆ ನುಗ್ಗಿ ಕದಿಯುವ ಪಾತ್ರೆ ತೆಗೆದುಕೊಂಡು ಹೋದಾಗ್ಯೂ, ಬಡವರು ಕೇಳುತ್ತಾರೆ. ಈ ಪಟ್ಟಣ ೧೯೦೫ ನೇ ಇಸವಿ ಆಗಾಯ್ತು ರಾಚಕ, ದೈವಿಕ ಉಪದ್ರವಗಳನ್ನು ಅನುಭವಿಸುವುದು ಸ್ವಾಭಾವಿಕವಾಗಿ ಹೋಗಿದೆ. ಒಬ್ಬ ಬಡ ಬ್ರಾಹ್ಮಣ ಹೆಂಗಸು ನೀರು ತರಲು ಹೋದವಳು ಇದುವರೆಗೂ ಪತ್ತೆ ಇಲ್ಲ. ದಾರಣೆಪಾಸಿಗೂ ಅಂಗಡಿ ಸಾಹುಕಾರರ ಆಧೀನವಾಗಿದೆ. ಬೇಕಾದಾಗ ಒಂದೇ ಸಲ ರೂಪಾಯಿಗಟ್ಟಲೆ ಹೆಚ್ಚುತ್ತದೆ. ಬೇಡವಾದರೆ ಎರಡು ೧-೨ ಆಣೆಯ ವರಿಗೂ ಇಳಿಯುತ್ತದೆ. ಇನ್ನಾದರೂ ಸಿವಿಲ್ ಕೋರ್ಟುಗಳಿಗೆ ಬರುವ ವ್ಯಾಜ್ಯಗಳು ಮಾತ್ರ ಕಡಮೆಯಾಗಿಲ್ಲ. ಇಲ್ಲಿದ್ದ ಟೌನ್ ಪೊಲೀಸ್ ಸ್ಟೇಷನ್ ತೆಗೆದುಬಿಟ್ಟರು. ಸಿಬ್ಬಂದಿಯಲ್ಲಿ ೧೦ ಜನಗಳನ್ನು ಪ್ರೆಂಚ್‌ರಾಕ್ಸ್ ಹೆಡ್ ಕ್ವಾರ್ಟರಿಗೆ ರಿಜರ್ವ್ ಪೊಲೀಸಿಗೆ ತೆಗೆದುಕೊಂಡಿದ್ದಾರೆ. ಇದರಿಂದ ಇಲ್ಲಿ ಬಹಳ ಅನನುಕೂಲವಾಗಿದೆ. ಟೌನ್ ಸ್ಟೇಷನ್ ಇದ್ದಾಗಲೇ ಕಳುವು ಮುಂತಾದ ಅತ್ಯಾಚಾರಗಳು ನಡೆಯುತ್ತಿದ್ದವು. ಅಂಥಾದ್ದರಲ್ಲಿ ಈಗ ಕೇಳಬೇಕೇ? ಈಗ ಇರುವವರು ೪ ಜನ ಪೊಲೀಸಿನವರು, ಇವರಿಂದ ಏನು ಸಹಾಯವಾಗುತ್ತದೆ? ಬೀಟು ಮಾಡುವುದೇ ನಿಂತುಹೋಗಿದೆ. ಸರ್ಕಾರದವರು ಪ್ರಜೆಗಳಿಗೆ ಉಂಟಾಗುವ ಅನನುಕೂಲವನ್ನು ತಪ್ಪಿಸುವುದಕ್ಕಾಗಿ ಇಟ್ಟಿರುವ ಪೊಲೀಸ್ ಸಿಬ್ಬಂದಿಯನ್ನು ಕಡಮೆ ಮಾಡಿದರೆ ಪ್ರಜೆಗಳ ನೆಮ್ಮದಿಗೆ ಭಂಗವಾಗುವುದಿಲ್ಲವೇ? ರಿಜರ್ವ್ ಪೊಲೀಸಿನಿಂದ ಏನು ಪ್ರಯೋಜನ? ಯಾವ ದಂಡು ಕಡಿಯುವುದಕ್ಕೆ ಹೋಗಬೇಕು? ಇನ್ನಾದರೂ ಸರ್ಕಾರದವರು ಪೂರ್ವದಂತೆ ಟೌನ್ ಪೊಲೀಸ್ ಸ್ಟೇಷನ್ ಕೊಟ್ಟು, ಹೆಚ್ಚಾದ ಪೊಲೀಸ್ ಸಿಬ್ಬಂದಿಯನ್ನು ನೇಮಿಸಿ, ಪ್ರಜೆಗಳಿಗೆ ಉಂಟಾಗಿರುವ ಈತಿಬಾಧೆಗಳನ್ನು ತಪ್ಪಿಸಿ, ಮ್ಯುನಿಸಿಪಾಲಿಟಿ ವಿಚಾರದಲ್ಲೂ ಸರಿಯಾದ ಏರ್ಪಾಡು ಮಾಡುತ್ತಾರೆಂಬುದಾಗಿ ನಂಬಿದ್ದೇನೆ

"ದ್ವಾರಕಾನಾಥ."

ಒಳದೇಶದ ವೃತ್ತಾಂತಗಳು.

ವೈಸ್‌ರಾಯಿಯವರು ದಯಮಾಡಿದಾಗ್ಗೆ ಕೆಡ್ಡಾ ಏರ್ಪಾಡು ಮಾಡುವುದಕ್ಕೆ ಸರ್ಕಾರದವರು ಇಬ್ಬರು ಅಧಿಕಾರಿಗಳನ್ನು ನೇಮಕಮಾಡಿರುತ್ತಾರೆ.

ಕಡೂರಿನಲ್ಲಿ ಪ್ರಜೆಗಳು ಸೇರಿ ಒಂದು ಪರಸ್ಪರ ಸಹಾಯಕ ಕಂಪನಿಯನ್ನು ಮಾಡಿಕೊಂಡಿದ್ದಾರೆ. ಇದು ಕಳೆದ ಜೂಲೈ ತಾ. ೨೭ ರಲ್ಲಿ ರೆಜಿಸ್ಟರಾಗಿರುತ್ತದೆ.

ಕೊಡಗಿನ ಫಾರೆಸ್ಟು ಕನಸರ್ವೇಟರವರು ನೊವೆಂಬರ್ ತಾ. ೧೯ ಬುಧವಾರ ವೀರರಾಜೇಂದ್ರ ಪೇಟೆಯಲ್ಲಿ ೩ ಗಂಡು, ೬ ಹೆಣ್ಣು ಆನೆಗಳನ್ನು ಬಿಕರಿ ಮಾಡುವವರಾಗಿದ್ದಾರೆ.

ಮದರಾಸ್ ಗವರ್ನರವರು ಕಳೆದ ವಾರ ಶಿಕಾರಿಗಾಗಿ ಚಾಮರಾಜನಗರದ ಪ್ರಾಂತ್ಯಕ್ಕೆ ದಯಮಾಡಿದ್ದರು. ಅಗ್ಗೆ ಅಮಲ್ದಾರರೂ ಸಬ್ ಡಿವಿಜನ್ ಆಫೀಸರವರೂ ಕಾದಿದ್ದು ಅವರಿಗೆ ಆತಿಥ್ಯವನ್ನು ನಡಿಸಿದರು.

ಕಳೆದ ವಾರ ರಾಜಧಾನಿಯಲ್ಲಿ ಮೂರು ಹದ ಒಳ್ಳೇ ಮಳೆಯಾದರೂ ಪ್ಲೇಗ್ ಉಪದ್ರವು ದಿನೇ ದಿನೇ ಹೆಚ್ಚುತ್ತಿರುವಂತೆ ಕಾಣುತ್ತದೆ. ಅನೇಕರು ಪ್ಲೇಗ್ ಚುಚ್ಚುಮದ್ದನ್ನು ಹಾಕಿಸಿಕೊಳ್ಳಲಾರಂಭಿಸಿದಾರೆ.

ಮೈಸೂರು ದಸರಾ ಪ್ರದರ್ಶನವು ಈ ಸಲ ಅಕ್ಟೋಬರ್ ತಾ. ೧೮ ನೇ ಸೋಮವಾರ ಪ್ರಾರಂಭವಾಗಿ ತಾ. ೩೧ ನೇ ಭಾನುವಾರಕ್ಕೆ ಮುಕ್ತಾಯವಾಗುವುದು. ಗೋಶಾಲೆಗಳ ಪ್ರದರ್ಶನವು ತಾ. ೨೫ ನೇ ಸೋಮವಾರ ಮೊದಲಾಗಿ ನಾಲ್ಕು ದಿನಗಳ ತನಕ ನಡೆಯುತ್ತದೆ.

ಮೆ|| ಎಸ್. ಟಿ. ಬಡ್ರಿಕ್ಸ್ ಎ ಬೋಟ್ಸ್ ಸಾಹೇಬರು ರಾಜಧಾನಿಗೆ ಬಂದು, ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಭಗವದ್ಗೀತೆ ಮತ್ತು ಉಪನಿಷತ್ತುಗಳ ವಿಚಾರವಾಗಿ ದಿನವೂ ಉಪನ್ಯಾಸ ಮಾಡುತ್ತಿದಾರೆ, ಬಹು ಜನ ವಿದ್ವಾಂಸರೂ ವಿದ್ಯಾರ್ಥಿಗಳೂ ಹೋಗಿ ಈ ಉಪನ್ಯಾಸಗಳನ್ನು ಕೇಳುತ್ತಿರುವರು.

ಇಲ್ಲಿನ ದೊಡ್ಡ ಪೇಟೆಯಲ್ಲಿ ಜವಾಹಿರಿ ವ್ಯಾಪಾರ ಮಾಡುತ್ತಿದ್ದ ಮೆ|| ಸಿದ್ಧೋಜಿರಾಯರು ಸೀಮೆಗೆ ಪ್ರಯಾಣ ಮಾಡಿ ಲಂಡನ್, ಫ್ರಾನ್ಸ್, ಜರ್ಮನಿ, ಇಟಲಿ ಮೊದಲಾದ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು ಕಳೆದ ವಾರ ವಾಪಸು ಬಂದು ಬೊಂಬಾಯನ್ನು ಸೇರಿದರು. ಅವರು ಇನ್ನೂ ನಾಲ್ಕಾರು ತಿಂಗಳವರೆಗೆ ಅಲ್ಲೇ ಇದ್ದು ಬರುವರೆಂದು ಕೇಳುತ್ತೇವೆ.

ಕಳೆದ ಗುರುವಾರ ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಫಲ ಪುಷ್ಪಾದಿಗಳ ಪ್ರದರ್ಶನವು ನಡೆಯಿತು. ನೂರಾರು ಮಂದಿ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಹೋಗಿ ನೋಡಿಕೊಂಡು ಬಂದರು. ಉತ್ಕೃಷ್ಟವಾಗಿದ್ದ ಅನೇಕ ಫಲ ಪುಷ್ಪಾದಿಗಳಿಗೆ ಬಹುಮಾನಗಳೂ ಮೆಡಲುಗಳೂ ಕೊಡಲ್ಪಟ್ಟವು. ಅನೇಕಾನೇಕ ವಿದ್ಯಾರ್ಥಿಗಳನ್ನು ನೋಡುವುದಕ್ಕೆ ಬಿಡಿಸಿದ್ದರೆಂದು ತಿಳಿದುಬಂದಿದೆ.

ಬೆಂಗಳೂರಿನಲ್ಲಿ ಒಂದು ಸೆಂಟ್ರಲ್ ಕೋಆಪರೆಟಿವ್ ಬ್ಯಾಂಕು ಏರ್ಪಾಡಾಗಿದೆ. ಜಮೀನ್‌ದಾರ್‌ರಿಗೂ, ಕೈಗಾರಿಕೆಗಳನ್ನು ನಡಿಸುವವರಿಗೂ, ಮನೆ ಕಟ್ಟತಕ್ಕವರಿಗೂ ಶೇಕಡಾ ವರುಷಕ್ಕೆ ೬|| ರೂಪಾಯಿ ಬಡ್ಡಿಯ ಮೇಲೆ ಸಂಸ್ಥಾನಾ ಮತ್ತು ಇತರಕ್ಕ ಪರಸ್ಪರ ಸಹಾಯಕ ಸಂಘಗಳ ಮೂಲಕ ಸಾಲಗಳನ್ನು ಕೊಡುವುದೇ ಈ ಬ್ಯಾಂಕಿನ ಉದ್ದೇಶವು. ಸಾಲಗಳನ್ನು ಅಪೇಕ್ಷಿಸತಕ್ಕವರು ಸರ್ಕಾರದ ರೆಜಿಸ್ಟ್ರಾರವರ ಮೂಲಕ ಅರ್ಜಿ ಬರೆದುಕೊಳ್ಳಬಹುದು. ಈ ಬ್ಯಾಂಕಿನ ಮೇಲ್ವಿಚಾರಣೆ ನೋಡಿಕೊಳ್ಳತಕ್ಕವರು ಯಾರೆಂದರೆ —ಪೆನ್‌ಷನ್ ಕೌನ್ಸಿಲರ್ ರಾಜಮಂತ್ರ ಪ್ರವೀಣ ಮೆ|| ಸಿ. ಶ್ರೀನಿವಾಸಯ್ಯಂಗಾರ್ರು (ಪ್ರೆಸಿಡೆಂಟು), ಪೆನ್‌ಷನ್ ಡೆಪ್ಯುಟಿ ಕಮಿಷನರ್ ಮೆ|| ಎಂ. ಎಸ್. ನಾರಾಯಣರಾಯರು (ವೈಸ್ ಪ್ರೆಸಿಡೆಂಟ್), ಪೆನ್‌ಷನ್ ಸಬ್ ಜಡ್ಜ್ ಮೆ|| ಸಿ. ಬಿ. ಶೇಷಗಿರಿ ರಾಯರು (ಸೆಕ್ರೆಟರಿ), ಪೆನ್‌ಷನ್ ಎಗ್ಸಿಕ್ಯುಟಿವ್ ಇನ್‌ಜನಿಯರ್ ಮೆ|| ವಿ. ಅರುಣಾಚಲ ಮೊದಲಿಯಾರ್ರು, ಪೆನ್‌ಷನ್ ಸರ್ವೆ ಸೂಪರಿಂಟೆಂಡೆಂಟ್ ಮೆ|| ಡಿ. ಅಪ್ಪೂರಾಯರು.

ಮೈಸೂರು ಗೆಜೆಟ್ ಸಂಗ್ರಹ.

ಮೆ| ಗುರುಸಿದ್ದಪ್ಪನವರನ್ನು ಕೋಳಕ್ಕೆಗೆ ತಾಲ್ಲೂಕ್ ಬೋರ್ಡಿನ ಮೆಂಬರನಾಗಿ ನೇಮಕಮಾಡಿದೆ

ಸಾಗರ್ ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಎಂ. ಶ್ರೀನಿವಾಸಮೂರ್ತಿಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ದಿನ ಜಾಸ್ತಿ ಮಾಡಿದೆ

ರೆವಿನ್ಯೂ ಕಮಿಷನರ್ ರಾಜಕಾರ್ಯ ಪ್ರವೀಣ ಮೆ| ಎ. ರಂಗಸ್ವಾಮಿ ಐಯಂಗಾರ್ರು ರಜದಿಂದ ವಾಪಸು ಬಂದು ಜೂಲೈ ತಾ. ೩೦ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಶ್ರೀಮನ್ ಮಹಾರಾಜರವರು ಮೈಸೂರ್ ಇನ್‌ಫೆಂಟ್ರಿ ಎರಡನೇ ಬಟಾಲಿಯನ್ ಕಮಿಷನ್ಡ್ ರ‍್ಯಾಂಕಿನಲ್ಲಿ ಮಹಮದ್ ಅಬ್ಬಾಸ್ ಯವರನ್ನು ೨ನೇ ಗ್ರೇಡ್ ಸುಬೇದಾರಿಗೂ, ಬಿ. ಪಿ. ಚೊಕ್ಕನಾಥರಾವ್ ಯವರನ್ನು ೧ನೇ ಗ್ರೇಡ್ ಜಮೇದಾರಿಗೂ ಜೂಲೈ ತಾ. ೧೯ ರ ಆರಭ್ಯ ಬಡ್ತಿ ಮಾಡಿರುತ್ತಾರೆ

ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರಿನಲ್ಲಿರುವ ಮುಜರಾಯಿ ದೇವಸ್ಥಾನಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮುಂದೆ ಹೇಳುವವರನ್ನು ಐದು ವರುಷಗಳ ತನಕ ಧರ್ಮದರ್ಶಿಗಳನ್ನಾಗಿ [illegible] — ಮೆ|| ಗೌಡ ಪಟೇಲ್ ಶ್ರೀನಿವಾಸ ಐಯಂಗಾರ್ರು, ಪೆನ್‌ಷನ್ ಅಮಲ್ದಾರ್ ಎಚ್. ಕೇಶವಾಚಾರ್ರು, ದರೋಗ್ ಶ್ರೀನಿವಾಸ ಐಯಂಗಾರ್ರು, ಹಳೇಬೀಡಿನ ದೇಶಿಕಾಚಾರ್ರು, ನರಸಿಂಹಶೆಟ್ಟರು.

ಈ ತಿಂಗಳಿನ ತಾ. ೧೯ ನೇ ಗುರುವಾರ ಮಧ್ಯಾಹ್ನ ೧ ಗಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆಯ ಮೀಟಿಂಗ್ ನಡೆಯುವುದು

ಪೂರ್ವ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ|| ವೈ. ಶ್ರೀನಿವಾಸರಾಯರನ್ನು ಈ ತಿಂಗಳ ತಾ. ೨ ರಿಂದ ಆಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿ ನೇಮಕಮಾಡಿದೆ

ಎಗ್ಸಿಕ್ಯುಟಿವ್ ಇಂಜನಿಯರ್ ಮೆ| ಬಿ. ಸುಬ್ಬರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪೂರ್ವ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರಾಗಿ ಕೆಲಸ ನೋಡತಕ್ಕದು

ತರೀಕೆರೆ ತಾಲ್ಲೂಕ್ ಅಮಲ್ದಾರ್ ಮ|| ಎಂ. ಕೃಷ್ಣಸ್ವಾಮಿ ಐಯಂಗಾರ್ರಿಗೆ ಜೂಲೈ ತಾ. ೧೮ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಲ್ಲೂಕ್ ಶಿರಸ್ತೇದಾರ್ ಕೋನೇರಿ ರಾಯರು, ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಉತ್ತರ ದೇಶದಲ್ಲಿ ದೊಡ್ಡ ಪ್ರದರ್ಶನವಾಗುವುದು.

ಕಳೆದ ವಾರ ಅಲ್ಲಹಬಾದ್ (ಪ್ರಯಾಗ) ಪಟ್ಟಣದ ಮೇಯೋ ಹಾಲ್ ಎಂಬ ಭವನದಲ್ಲಿ ಒಂದು ಮಹಾಜನ ಸಭೆ ನಡೆಯಿತು ಸಂಯುಕ್ತ ಆಧಿಪತ್ಯಗಳ ಲೆಫ್ಟಿನೆಂಟ್ ಗವರ್ನರಾದ ಸರ್ ಜಾನ್ ಹ್ಯೂಯಟ್‌ಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ರಾಜರುಗಳೂ, ನವಾಬರುಗಳೂ, ಮುಖ್ಯರಾದ ಪ್ರಜೆಗಳೂ ಹಾಜರಾಗಿದ್ದರು ರಾಂಪುರದ ನವಾಬರು ಕಾಶೀ ಮಹಾರಾಜರವರು, ಬಲರಾಂಪುರದ ಮಹಾರಾಜರವರು, ಜಹಂಗೀರಾಬಾದಿನ ರಾಜರು, ಮಹಮ್ಮದಾಬಾದಿನ ರಾಜರು, ರಾಜಾ ಹರನಾಮ ಸಿಂಗರವರು, ಈ ಮೊದಲಾದವರೆಲ್ಲಾ ಗಣ್ಯರಾದ ಸಭಾಸದರಾಗಿದ್ದರು ಈ ಸಭಿಕರು ೧೯೧೦ ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಅಲ್ಲಹಬಾದ್ ಪಟ್ಟಣದಲ್ಲಿ ಬಹು ವಿಸ್ತಾರವಾದ ಪ್ರದರ್ಶನವನ್ನು ನಡಿಸಬೇಕೆಂದು ಗೊತ್ತುಮಾಡಿ, ಅದಕ್ಕೆ ಮೇಲ್ವಿಚಾರಣಾ ಕಮಿಟಿಯನ್ನೂ ಸೆಕ್ರೆಟರಿ ಮೊದಲಾದವರನ್ನೂ ಚುನಾಯಿಸಿದರು ಈ ಪ್ರದರ್ಶನವನ್ನು ನಡಿಸುವುದಕ್ಕೆ ಚಂದಾ ಮೂಲಕವೂ ಕೆಲವು ಹಣವನ್ನು ಕೊಡಿಸಬೇಕೆಂದು ತೀರ್ಮಾನ ಮಾಡಿದರು ಆ ಸಭೆಯು ಮುಕ್ತಾಯವಾಗುವಷ್ಟರೊಳಗೇ ೧೧೬,೦೦೦ ರೂಪಾಯಿ ಈ ಫಂಡಿಗೆ ವಸೂಲಾಗುವುದೆಂದು ತಿಳಿಯಿತು ಹ್ಯಾಗಂದರೆ ರಾಂಪುರದ ನವಾಬರೂ, ಕಾಶೀ ಮತ್ತು ಬಲರಾಂಪುರದ ಮಹಾರಾಜರುಗಳೂ, ತಲಾ ೨೦,೦೦೦ ರೂಪಾಯನ್ನೂ, ಜಹಂಗೀರಾಬಾದಿನ ರಾಜರು ೧೦,೦೦೦ ರೂಪಾಯನ್ನೂ, ಪಂಡಿತ ಸುಂದರಲಾಲ್‌ರವರು ೫,೦೦೦ ರೂಪಾಯನ್ನೂ ಮಾಳ್ಪುರ ರಾಜರು ೪,೦೦೦ ರೂಪಾಯನ್ನೂ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದಾರೆ ಸಭಾನಾಯಕರಾಗಿದ್ದ ಲೆಫ್ಟಿನೆಂಟ್ ಗವರ್ನರವರು ಆ ದಿನ ಸಭೆಯಲ್ಲಿ ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ಈ ರೀತಿ ಪ್ರದರ್ಶನಗಳನ್ನು ನಡಿಸಿದ ಪಕ್ಷದಲ್ಲಿ ಈ ರಾಷ್ಟ್ರದ ವ್ಯವಸಾಯ ಕಾರ್ಯಗಳೂ ಕೈಗಾರಿಕೆ ವಸ್ತುಗಳೂ ಬಹಳ ಅಭಿವೃದ್ಧಿಯಾಗುವವು ನಮ್ಮ ಆಧಿಪತ್ಯದ ವಸ್ತುಗಳನ್ನು ಮುಖ್ಯವಾಗಿ ಪ್ರದರ್ಶನ ಮಾಡಬೇಕು ವ್ಯವಸಾಯೋಪಕರಣಗಳನ್ನೂ ಕೈಗಾರಿಕೆಗಳ ಸಾಧನಗಳನ್ನೂ ಕೂಡಿಸಿ ತೋರಿಸಬೇಕು ಇದಕ್ಕೆ ಸುತ್ತಮುತ್ತಲೂ ಇರುವ ದೇಶೀಯ ರಾಜರುಗಳ ಮತ್ತು ಜಮೀನ್ದಾರರುಗಳ ಸಹಾಯವು ವಿಶೇಷವಾಗಿ ದೊರಕಬೇಕಾಗಿದೆ ಗವರ್ನ್‌ಮೆಂಟಿನ ವ್ಯವಸಾಯದ ಇಲಾಖೆಯವರೇ ಮುಂದಾಳಾಗಿ ನಿಂತು ಪ್ರದರ್ಶನದಲ್ಲಿ ವ್ಯವಸಾಯದ ಭಾಗವನ್ನು ಶ್ರಮಪಡಿಸುವುದು ಉತ್ತಮ ಈ ಭಾಗಕ್ಕೆ ಗವರ್ನ್‌ಮೆಂಟಿನವರೂ ಒಂದು ಲಕ್ಷ ರೂಪಾಯಿ ತನಕ ವಿನಿಯೋಗಿಸಬೇಕಾದೀತು ಫಾರೆಸ್ಟ್ ಮತ್ತು ವಿದ್ಯಾಭ್ಯಾಸದ ಭಾಗಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡಿಸುವರು ಇವೆರಡಕ್ಕೂ ಗವರ್ನ್‌ಮೆಂಟಿನ ಖರ್ಚು ಎರಡು ಲಕ್ಷ ರೂಪಾಯಿಗಿಂತ ಕಡಮೆ ಆಗಲಾರದು ಪ್ರಜೆಗಳು ಈ ಪ್ರದರ್ಶನಕ್ಕೆ ಕಡೇ ಪಕ್ಷ ಮೂರು ಲಕ್ಷ ರೂಪಾಯಿ ವರೆಗಾದರೂ ಚಂದಾ ಮೂಲಕ ಕೊಡಿಸುವರೆಂದು ನಿರೀಕ್ಷಿಸುತ್ತೇನೆ ಎಂಬುದೇ

ಬೆಂಗಳೂರು ಶ್ರೀನಿವಾಸಮಂದಿರ

ಸ್ತ್ರೀಶಾಲೆಯ ವಿಚಾರವು

ಶ್ರೀನಿವಾಸ ಮಂದಿರದಲ್ಲಿ ಜನಿಸಿರುವ ಸ್ತ್ರೀಶಾಲಾ ಶಿಶುವಿಗೆ ಎರಡು ವರುಷಗಳು ತುಂಬಿ ಮೂರನೆಯ ವರುಷ ನಡೆಯಲು ಪ್ರಾರಂಭವಾಗಿರುವುದು ಮೊದಲನೆಯ ವರುಷದಲ್ಲಿ ಶಿಶು ಬಹಳ ಬಾಧೆಯಿಲ್ಲದೆ ಬೆಳೆಯಿತು ಎರಡನೆಯ ವರುಷದಲ್ಲಿ ಮಾತ್ರ ಈ ಸಣ್ಣ ಶಿಶುವಿಗೆ ಬಹು ವಿಧವಾದ ರೋಗಗಳು ತಗಲಿ ದುಷ್ಟ ಸುಂಟರಗಾಳಿಯಲ್ಲಿ ಸಿಕ್ಕಿ ಹಾರಿ ಹೋಗುತ್ತಲಿತ್ತು ತುಫಾನಿನಲ್ಲಿ ಸಿಕ್ಕಿ ಬದುಕುವುದಿಲ್ಲವೆಂದು ಊಹಿಸಲ್ಪಟ್ಟಿತು ಶಿಶುವಾದದ್ದರಿಂದ ಸ್ವಲ್ಪ ತೊಂದರೆ ಮಾಡಿರಬಹುದು ಅದಕ್ಕಾಗಿ ಕೆಲವು ನಾರೀಮಣಿಗಳ ಆಗ್ರಹಕ್ಕೆ ಇದು ಒಳಗಾಗಿ ತಾಪಗ್ರಸ್ತವನ್ನು ಹೊಂದಿ ಮೃತಿ ಹೊಂದುತ್ತಲಿತ್ತು ಪರಂತು ಈ ಶಿಶುವನ್ನು ಹೆತ್ತ ತಾಯಿಯೂ, ಸ್ವೀಕಾರ ಮಾಡಿಕೊಂಡ ಸುಗುಣಗಳುಳ್ಳ ಕೆಲವು ಮಾತೃಗಳೂ ತಮ್ಮ ಹಾಲನ್ನು ಕೊಟ್ಟು ಬೆಳೆಸಿದ ಶಿಶುವು ಲಯವಾಗಬಾರದೆಂದು ಅನೇಕ ಚಿಕಿತ್ಸೆಗಳನ್ನೂ ಪುಣ್ಯಪುನಸ್ಕಾರಗಳನ್ನೂ ಮಾಡಿಸಿ ಈ ವರೆಗೆ ಜೀವದಿಂದ ಕಾಪಾಡಿ ಬೆಳೆಸಿಕೊಂಡು ಬಂದಿರುತ್ತಾರೆ ಮುಂದೆ ಇದರ ಆಯುಃಪರಿಮಿತಿಯು ಹ್ಯಾಗಿರುವುದೋ ಗೊತ್ತಿಲ್ಲ ಇದು ಸ್ಥಿರಜೀವಿಯೋ ಅಥವಾ ಅಲ್ಪ ಜೀವಿಯೋ ಪ್ರತ್ಯಕ್ಷ ಹೇಳಲು ಸಾಧ್ಯವಲ್ಲ ಅತಿಯೇವ ಕ್ಷಿಪ್ರದಲ್ಲಿ ಎರಡನೆಯ ವರುಷದ ಜನ್ಮೋತ್ಸವವು ಮಾಡಬೇಕಾಗಿರುತ್ತೆ ಈ ಮಗುವು ಹುಟ್ಟಿದ ಲಾಗಾಯಿತು ಇದರ ಬೆಳವಳಿಗೆಯನ್ನು ಕುರಿತು ವಾರವಾರಕ್ಕೂ ತಮ್ಮ ಪತ್ರಿಕೆಗೆ ಬರೆಯುತ್ತಲಿದ್ದೆವು ಈಚೆಗೆ ಕೆಲವು ಅಸಂದರ್ಭಗಳಿಂದ ಬರೆಯಲು ಅವಕಾಶ ಉಂಟಾಗಲಿಲ್ಲ ಹ್ಯಾಗಾದರೂ ಸರಿಯೆ, ಶಿಶುವು ಮಾತ್ರ ಭಯದಿಂದಲೇ ಬೆಳೆಯುತ್ತಲಿದೆ

ಕಳೆದ ಶನಿವಾರ ಅಂದರೆ ಈ ತಿಂಗಳು ೨ ನೇ ತಾರೀಖಿನ ದಿನ ಮೆಂಬರುಗಳು ಮತ್ತು ಇವರ ಸ್ನೇಹಿತರು ಸುಮಾರು ೭೫ ಮಂದಿ ಮಂದಿರದ ಸೌಧದಲ್ಲಿ ಸೇರಿ ಇದ್ದರು ಆ ಕಾಲದಲ್ಲಿ ಮ॥ ರಾ॥ ವೈ ಶ್ರೀನಿವಾಸರಾಯರವರ ಧರ್ಮಪತ್ನಿಗಳಾದ ಸ್ರೀ॥ ಕಮಲಾಬಾಯಮ್ಮನವರು ಪುರಾಣಪ್ರಸಿದ್ಧಳಾದ ಸುಕನ್ಯೆಯ ವಿಚಾರವಾಗಿ ಅತಿ ರಮಣೀಯವಾದ ಒಂದು ಉಪನ್ಯಾಸವನ್ನು ಮಾಡಿದರು ಆ ಸುಕನ್ಯೆಯಂತೆ ಈ ಕಾಲದ ಮಹಿಳೆಯರು ಇದ್ದರೆ ಬಹಳ ಶ್ಲಾಘ್ಯವಾಗಿರುವುದೆಂದು ಹೇಳಿದರು ಅನಂತರ ಶ್ರೀಮತಿ ಮಹಾಲಕ್ಷ್ಮಮ್ಮನವರು ಸಿಗುಣನಿರ್ಗುಣಗಳ ವಿಚಾರವಾಗಿ ಮನಸ್ಸಿಗೆ ವಿಕಾಸವನ್ನುಂಟುಮಾಡತಕ್ಕಂಥಾ ಪ್ರಶ್ನೋತ್ತರ ರೂಪಕವಾದ ಒಂದು ಪತ್ರವನ್ನು ಓದಿದರು

ಅದು ಮುಕ್ತಾಯವಾದ ಮೇಲೆ ಕಾರ್ಯದರ್ಶಿಯವರಾದ ಮೀತಿ ಹೇಳಿದ ಉಭಯ ನಾರೀಮಣಿಗಳಿಗೆ ಸಭೆಯ ವಂದನೆಗಳನ್ನು ತಿಳಿಸುವುದರಲ್ಲಿ ಮ॥ ರಾ॥ ಶ್ರೀನಿವಾಸರಾಯರಿಗೆ ದೊಡ್ಡ ಅಧಿಕಾರ ಲಭಿಸಿತೆಂಬ ವಿಷಯವನ್ನು ಸೂಚಿಸಿ—ಕ್ಯಾಪ್ಟನ್ ಡಾಸ್‌ಯವರ ಮರಣದ ವೃತ್ತಾಂತವನ್ನು ವರ್ಣಿಸಲು ಎಲ್ಲರೂ ಅಶ್ರುಮುಖಿಗಳಾಗಿ ಕಣ್ಣೀರನ್ನು ಸುರಿಸಿದರು ಈ ಮಹನೀಯರು ತಮ್ಮ ಪ್ರಾಣವನ್ನೂ ವಿಶೇಷವೆಂದು ಎಣಿಸದೆ ಮಕ್ಕಳ್ಳನ್ನು ಬದುಕುವಂತೆ ಮಾಡಿದ್ದು ಏನೆಂದು ಹೇಳಬಹುದು ಇಂಥಾ ಮಹನೀಯರು ಲೋಕದಲ್ಲಿ ಹುಟ್ಟುವರೇ। ಎಂಬ ಮಾತುಗಳನ್ನು ಹೇಳಿ ಕಾರ್ಯದರ್ಶಿಯವರಾದವರು ಸಭೆಯ ಸಂತಾಪೋಕ್ತಿಗಳನ್ನು ಕ್ಯಾಪ್ಟನ್ ಡಾಸ್‌ಯವರ ಧರ್ಮಪತ್ನಿಯವರಿಗೆ ಈ ಪತ್ರಿಕಾ ಮೂಲಕ ತಿಳಿಸುವುದಾಗಿ ಸೂಚಿಸಿದ್ದಲ್ಲದೆ, ಸದರಿಯವರಿಗೂ ಮತ್ತು ಅವರ ಮಕ್ಕಳಿಗೂ ಆಕಸ್ಮಿಕವಾಗಿ ಈ ರೀತಿ ಸಂಭವಿಸಿದ ವಿಪತ್ತನ್ನು ಸಹಿಸಲು ಬೇಕಾದ ಧೈರ್ಯವನ್ನು ಸರ್ವೇಶ್ವರನು ದಯಪಾಲಿಸುವವನಾಗಲೆಂದು ಪ್ರಾರ್ಥಿಸಿದರು

ಮುಂದಿನ ವಾರ ಅನುಕೂಲಗಳು ಸರಿಯಾಗಿದ್ದ ಪಕ್ಷದಲ್ಲಿ ಅಂದರೆ ೧೪ ನೇ ತಾ ಶನಿವಾರದ ದಿನ ಕಾರ್ಯದರ್ಶಿಯಾದಾಕೆಯು ಸ್ತ್ರೀ ಸಮಾಜಗಳ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಲು ಯೋಚಿಸಿರುತ್ತಾರೆ ಇದಕ್ಕೆ ಆರ್ಯ ಮಹಿಳೆಯರೆಲ್ಲರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತೆ

ವ್ಯವಸಾಯ ವಿಚಾರಗಳು

೧. ಓಡಿ ಮಣ್ಣು

ರೆವಿನ್ಯೂ ಕಮಿಷನರ್ ಸಾಹೇಬರವರ ಅಪ್ಪಣೆ ಮೇರೆ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಸಾಹೇಬರವರು ಅಂದರಲಹಳ್ಳಿ ಜೋಡಿ ಗ್ರಾಮದ ರೈತರು ತಮ್ಮ ಗ್ರಾಮದ ಕೆಲವು ಜಮೀನುಗಳ ಮಣ್ಣನ್ನೇ ಅಗೆದುಕೊಂಡು ಹೋಗಿ ಗೊಬ್ಬರವಾಗಿ ಉಪಯೋಗಿಸುತ್ತಾರೆಂಬ ಅಂಶವನ್ನು ಅಗ್ರಿಕಲ್ಚರಲ್ ಕೆಮಿಸ್ಟರವರಿಗೆ ತಿಳಿಸಿದರು ಕಾಲಕ್ರಮೇಣ ಈ ಅಂಶವನ್ನು ವಿಚಾರಿಸುವಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಕಾಕೋಳ, ಕಡನೂರು ರಾಜಘಟ್ಟ ಮತ್ತು ಚಿಕ್ಕಬಾಣಾವಾರ ಎಂಬ ಊರುಗಳಲ್ಲಿ ಅದೇ ತರಹವಾದ ಓಡಿಮಣ್ಣೆಂದು ಕರೆಯಲ್ಪಡುವುದನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆಂಬುದು ತಿಳಿಯಬಂತು ಹಾಗೆ ಉಪಯೋಗಿಸಲ್ಪಡುತ್ತಿರುವ ಮಣ್ಣನ್ನು ಬೆಂಗಳೂರಿನಲ್ಲಿರುವ ಅಗ್ರಿಕಲ್ಚರಲ್ ಕೆಮಿಸ್ಟರವರ ಆಫೀಸಿನಲ್ಲಿ ಪರೀಕ್ಷೆ ಮಾಡಿದ್ದರಲ್ಲಿ ಅತಿ ಸಾರವತ್ತಾಗಿರುವ ಭೂಮಿಯಲ್ಲಿ ಇರುವುದಕ್ಕಿಂತಲೂ ಬಹಳ ಹೆಚ್ಚಾದ ಸಸ್ಯಾಹಾರವು ಇದರಲ್ಲಿ ಇರುವುದೆಂತಲೂ ರೈತನು ಅಂಥಾ ಮಣ್ಣನ್ನು ಗೊಬ್ಬರವಾಗಿ ಉಪಯೋಗಿಸುವುದು ಬಹಳ ಶ್ಲಾಘ್ಯವಾದದ್ದೆಂತಲೂ ತಿಳಿದುಬಂದಿದೆ ಮೂಳೆಯ ಗೊಬ್ಬರದಲ್ಲಿ ವಿಶೇಷವಾಗಿರುವ ಸುಣ್ಣ ಮತ್ತು ರಂಜಕಾಮ್ಲವೆಂಬ ಸಸ್ಯಾಹಾರಗಳೇ ಈ ಮಣ್ಣಿನಲ್ಲೂ ಬಹಳವಾಗಿರುವವು ಫಸಲಿಗೆ ಬೇಕಾದಷ್ಟು ಮೇಲೆ ಹೇಳಿದ ಸಸ್ಯಾಹಾರಗಳು ದನದ ಗೊಬ್ಬರದಿಂದಲೇ ದೊರೆಯುವುದಿಲ್ಲವಾದ್ದರಿಂದ ದನದ ಗೊಬ್ಬರದೊಂದಿಗೆ ಆ ಮಣ್ಣನ್ನು ಸೇರಿಸಿ ಉಪಯೋಗಿಸಿದರೆ ಬಹಳ ಅನುಕೂಲವಾಗುವುದು ಹಸಿ ಸೊಪ್ಪು ಗೊಬ್ಬರದೊಂದಿಗೆ ಅದನ್ನು ಬೆರಸಿ ಉಪಯೋಗಿಸಿದರೆ ಬೆಳೆಯೂ ಚೆನ್ನಾಗಿ ಆಗಬಹುದು

೨. ಬಿತ್ತದ ಪ್ರಮಾಣ.

ಪೈರು ಹುಲುಸಾಗಿ ಬೆಳೆಯಲು ಅನೇಕ ಅಂಶಗಳು ಕಾರಣವಾಗುವುದರಿಂದ ಇಷ್ಟೇ ಬೀಜವನ್ನುಪಯೋಗಿಸುವುದು ಸರಿಯೆಂದು ನಿರ್ಣಯಿಸುವುದು ಅಸಾಧ್ಯ ಬಿತ್ತುವ ಪ್ರತಿ ಬೀಜವು ಫಲವತ್ತಾದ್ದೆಂದೂ ಮತ್ತು ಬಿತ್ತನೇ ಕಾಲವು ಸಕಾಲವೆಂದೂ ಇಟ್ಟುಕೊಂಡರೂ ಬೀಜವನ್ನು ಯಾವ ಪ್ರಮಾಣದಲ್ಲಿ ಬಿತ್ತಬೇಕೆಂಬುದು ಇತರ ಕಾರಣಗಳಿಂದ ಅನೇಕವಾಗಿ ಬದಲಾಯಿಸಬಹುದು ನಾರಿಗೋಸ್ಕರ ಪುಂಡಿ ಗಿಡವನ್ನು ಬೆಳೆದಲ್ಲಿ ಬಿತ್ತದ ಪ್ರಮಾಣವು ಜಾಸ್ತಿಯಾಗುತ್ತೆ ಹೇಗಂದರೆ ತರಕಾರಿಗಾಗಿ ಬೆಳೆವಾಗ ಒಂದು ಪೌಂಡು ಬಿತ್ತ ಬೇಕಾಗುವುದು ನಾರಿಗಾಗಿ ಬೆಳೆವಾಗ ೮ ಪೌಂಡನ್ನು ಬೇಕಾಗುತ್ತೆ ಜೋಳವನ್ನು ಧಾನ್ಯಕ್ಕಾಗಿ ಬೆಳೆದಾಗ ಎರಡು ಪಡಿ ಮದ್ರಾಸ್ ಬಿತ್ತ ಬೇಕಾಗುತ್ತೆ ಇದನ್ನೇ ಮೇವಿಗೋಸ್ಕರ ಒತ್ತಾಗಿ ಚಲ್ಲಿ ಸಣ್ಣ ದಂಟಿನ ಕಡ್ಡಿಗಳನ್ನು ಬೆಳೆದಲ್ಲಿ ೩೦ ಪಡಿಯಷ್ಟು ಬೇಕಾಗುತ್ತೆ

ಪೈರು ಮಾಡುವುದರಲ್ಲಿ ಅನೇಕ ಕ್ರಮಗಳುಂಟು ಬಿತ್ತವನ್ನು ಅಗೆಗಳಲ್ಲಿ ಚಲ್ಲಿ ಅನಂತರ ಸಸಿಗಳನ್ನು ಗದ್ದೆಗಳಲ್ಲಿ ನಾಟುತ್ತಾರೆ ಬದ್ನೆ, ಮೆಣಸಿನಕಾಯಿ ಹೊಗೆಸೊಪ್ಪು ಇವುಗಳ ಬೆಳೆಗಳಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಾರೆ ಇದು ಒಳ್ಳೆ ಕ್ರಮವೇ ಸರಿ ಹೇಗಂದರೆ ಬೀಜ ಮಿಗುವುದು ಒಂದಲ್ಲದೆ ಇತರ ಅನುಕೂಲತೆಗಳೂ ಉಂಟು ಕೂರಿಗೆಯಿಂದ ಸಾಲುಸಾಲಾಗಿ ಬಿತ್ತುವುದು ಮತ್ತೊಂದು ಕ್ರಮ ಇದರಲ್ಲಿ ಬಿತ್ತವು ಉಳಿತಾಯವಾಗುವುದಲ್ಲದೆ ಬೀಜವು ಕ್ರಮವಾಗಿ ಒಂದೇ ಮಟ್ಟದಲ್ಲಿ ಬಿತ್ತನೆಯಾಗುತ್ತದೆ ಬಿತ್ತವನ್ನು ಚಲ್ಲಿ ಅನಂತರ ಉಳುವುದು ಮೂರನೇ ಕ್ರಮ, ಇದು ಕೆಲವು ವೇಳೆ ಸಮರ್ಪಕವಾಗಿದ್ದರೂ ಕಾಳನ್ನು ಚಲ್ಲುವವನು ಬುದ್ಧಿವಂತನಾಗಿಲ್ಲದಿದ್ದರೆ ಅದು ಸಮನಾಗಿ ಹರಡುವುದಿಲ್ಲ ಕಾಳು ಒಂದೇ ಮಟ್ಟದಲ್ಲಿ ಬಿತ್ತನೆಯಾಗುವುದಿಲ್ಲವಾದಕಾರಣ ಮೊಳಕೆಯು ಏಕಕಾಲದಲ್ಲಿ ಬಾರದೆ ಅನಾನುಕೂಲವಾಗುತ್ತೆ ಕೆಲವು ಪ್ರಾಂತಗಳಲ್ಲಿಯೂ ಮತ್ತು ಕೆಲವು ತರಹೆ ಜಮೀನುಗಳಲ್ಲಿಯೂ ಬಿತ್ತದ ಪ್ರಮಾಣವು ಅಲ್ಲಿನ ಹವಾ ಅನುಸರಿಸಿ ಹೆಚ್ಚು ಕಡಮೆಯಾಗುತ್ತೆ ಹೇಗಂದರೆ ಕೆಲವು ಕಡೆಗಳಲ್ಲಿ ಎರಡನೇ ಸಲ ಬಿತ್ತುವುದಕ್ಕೆ ಅವಕಾಶವಿರುವುದಿಲ್ಲವಾದಕಾರಣ ಕಾಳು ಮೊಳಕೆಯೇಳುವ ಸಂಭವವು ಕಡಮೆ ಇಂಥಾ ಸಂದರ್ಭಗಳಲ್ಲಿ ಬಿತ್ತದ ಖರ್ಚು ಹೆಚ್ಚಾಗಲು ಕಾರಣವಾಗುತ್ತೆ ಗಟ್ಟಿಯಾಗಿರುವ ಕಂದ್ರ್ಯಾಗದ ಭೂಮಿಯಲ್ಲಿ ಹತ್ತಿ ಪೈರಿಡುವುದರಲ್ಲಿ ರೈತರಿಗೆ ಸಂಭವಿಸುವ ಅನಾನುಕೂಲವೇನೆಂದರೆ, ಮುಂದಿನ ಮಳೆಗಳು ಬೀಳದಿದ್ದರೆ ಆಳವಾಗಿ ಊರಿದ ಬೀಜಗಳು ಮೊಳಕೆ ಇಡುವುದಿಲ್ಲ ಅಥವಾ ಬಿತ್ತನೆಯಾದನಂತರ ಚೆನ್ನಾಗಿ ಬಿಸಿಲುಕಾಲದಲ್ಲಿ ಮೇಲೆ ಮೇಲೆ ಊರಿದ ಬೀಜಗಳೂ ಮೊಳಕೆ ಇಡುವುದಿಲ್ಲ ಆದ್ದರಿಂದ ತಿನ್ನವೆಲ್ಲಿ ಜಿಲ್ಲಾದಲ್ಲಿ ರೈತರು ಭೂಮಿಯಲ್ಲಿ ಮೊದಲು ರೂಢಿಯು ಮೇಲೆಗೆ ಕಾಳನ್ನು ಚಲ್ಲಿ ಉಳುವುದು ಪೂರೈಸಿದನಂತರ ಪುನಃ ಎರಡನೇ ಸಲ ಮೇಲೆ ಮೇಲೆಯೇ ಪೂರಾ ಬಿತ್ತನೆಮಾಡುತ್ತಾರೆ ಬಿತ್ತನೆ ಮಳೆಗಳು ಕಾಲದಲ್ಲಿ ಒಂದೆರಡುಸಲ ಬರುವುದರಿಂದಲೂ, ಹತ್ತಿಬೀಜ ಅಗ್ಗವಾಗಿರುವುದರಿಂದಲೂ ಮೇಲೆ ಹೇಳಿದ ಅನಾನುಕೂಲಗಳುಂಟಾಗದ ರೀತಿ ಹೆಚ್ಚು ಬೀಜವನ್ನು ಬಿತ್ತುವುದು ತಪ್ಪಲ್ಲ ಬಿತ್ತನೆಯು ಆಗದಿದ್ದು ಜಾರಿಯಾಗುವುದೆಂದು ಪೈರು ಉಳ್ಳಾಸುವಗೂಡಿ ಕೊಳ್ಳಬಾರದು

ಹೀಗಿರುವಲ್ಲಿ ಬಿತ್ತನೆ ಮಾಡಿದನಂತರ ಪೈರನ್ನು ವಿರಳಪಡಿಸುವುದರಲ್ಲಿ ರೈತರು ಗಮನಕೊಡದೇ ಇರುವುದು ಬಹಳ ಶೋಚನೀಯವಾಗಿದೆ ಏಕೆಂದರೆ ಒಂದುವೇಳೆ ಮೊಳಕೆಗಳು ಚೆನ್ನಾಗಿ ಬಂದರೂ ಸಸಿಗಳು ಒತ್ತಾಗಿ ಬೆಳೆದು ಅನೇಕ ಅನಾನುಕೂಲಗಳುಂಟಾಗುವವು ಹೇಗಂದರೆ ಮಳೆ ಕಮ್ಮಿಯಾದ ಪ್ರದೇಶಗಳಲ್ಲಿ ಭೂಮಿಯಲ್ಲಿನ ತೇವವು ಜಾಗ್ರತೆಯಾಗಿ ಉಪಯೋಗಿಸಲ್ಪಟ್ಟು ಪೈರು ಒಣಗಲಾರಂಭಿಸಿ ಕೇವಲ ನಿಂದಾಗಿಯೇ ಬಲಿಯುತ್ತದೆ ಸೀಡೆಡ್ ಡಿಸ್ಟ್ರಿಕ್ಟುಗಳ ಹತ್ತಿ ಬೆಳೆಯಲ್ಲಿ ಇದು ಚೆನ್ನಾಗಿ ಗೋಚರಕ್ಕೆ ಬಂದಿತ್ತು ಅಲ್ಲಿ ಕೂರಿಗೆಯಿಂದ ಬಿತ್ತನೆಮಾಡಿ ಅನಂತರ ವಿರಳಪಡಿಸದೆ ಉರುವಲಾದ ಹವಾದಲ್ಲಿ ಉಷ್ಣ ಹೆಚ್ಚಾದ ಮೇಲೆ ಗಿಡ ಬಲಿತು ನರಟಿಹೋಗಿ ಸಣ್ಣ ಎಲೆಯ ಹತ್ತಿ ಉತ್ಪತ್ತಿಯಾಗುತ್ತೆ ವಿರಳಪಡಿಸಿದ್ದಲ್ಲಿ ಹೀಗಾಗದೆ ಹತ್ತಿಯ ಉತ್ಪತ್ತಿಯೂ ಅದರ ಗುಣವೂ ಉತ್ತಮವಾಗಿಯೇ ಇರುತ್ತಿತ್ತು ಮಳೆಗಳು ಕಮ್ಮಿಯಾದಾಗ ವಿರಳವಾಗಿ ಪೈರಿಟ್ಟಲ್ಲಿ ಉತ್ಪತ್ತಿಯು ಹೆಚ್ಚುವುದೆಂದು ರೈತನಿಗೆ ತಿಳಿದಿದ್ದರೂ, ಮಳೆ ಹೆಚ್ಚಾದ ಸಂವತ್ಸರದಲ್ಲಿಯೂ ಈ ರೀತಿ ಪೈರಿಟ್ಟಲ್ಲಿ ಉತ್ಪತ್ತಿಯು ಹೆಚ್ಚುವುದೆಂದು ಅವನು ಅರಿಯನು ಹೀಗೆ ಮಾಡುವುದರಿಂದ ಗಿಡಗಳು ಚೆನ್ನಾಗಿ ಆಗುವುವೆಂದು ತಿಳಿಯದೆ, ಭೂಮಿಯಲ್ಲಿ ದೊರೆಯುವ ತೇವವೂ ಸಸ್ಯಾಹಾರವೂ ಸಾಲದೇಬರುವ ರೀತಿ ಹೆಚ್ಚು ಗಿಡಗಳನ್ನು ಚಲ್ಲಿಸಬಿಡುತ್ತಾನೆ ಜೋಳದ ಬೆಳವಳಿಗೆಯ ಕಾಲದಲ್ಲಿ ಪ್ರತಿ ರೈತನೂ ಸಣ್ಣ ಸಸಿಗಳನ್ನು ಕಿತ್ತು ವಿರಳಪಡಿಸಿ ಕಾಳಾಗುವ ಸಸಿಗಳಿಗೆ ಹೆಚ್ಚು ಅವಕಾಶಕೊಡುತ್ತಾನೆ ಹತ್ತಿ ಬೆಳೆಯಲ್ಲಿಯೂ ಹೀಗೆಯೇ ಮಾಡಬೇಕು ತಮಿಳು ಡಿಸ್ಟ್ರಿಕ್ಟುಗಳಲ್ಲಿ ಜೋಳ ಮತ್ತು ಸಜ್ಜೆಯ ಪೈರು ೨ ಅಡಿ ಬೆಳೆದಾಗ ಭೂಮಿಯನ್ನು ಉತ್ತು ಪೈರನ್ನು ವಿರಳಪಡಿಸಿ ನೆಲವನ್ನು ಸಡಲಿಸುತ್ತಾರೆ ಈ ದೇಶದ ಹತ್ತಿಗಳಲ್ಲಿ ಬ್ರೋಚ್ ಹತ್ತಿಗೆ ಒಳ್ಳೇ ಬೆಲೆ ದೊರಕುವುದಕ್ಕೆ ಈ ವ್ಯವಸಾಯವೇ ಕಾರಣ ತರಿ ಮತ್ತು ಬಾಗಾಯಿತು ವ್ಯವಸಾಯದಲ್ಲಿ ಹುಟ್ಟು ಬಿತ್ತ ಉಪಯೋಗಿಸಬೇಕಾದ ಅವಶ್ಯಕತೆ ಕಡಮೆ ಆದರೂ ಹೆಚ್ಚು ಬಿತ್ತವನ್ನು ಉಪಯೋಗಿಸುವುದುಂಟು ಅಗೆಗಳಲ್ಲಿ ಒತ್ತಾಗಿ ಚಲ್ಲುವುದಲ್ಲದೆ ಗದ್ದೆಗಳಲ್ಲಿಯೂ ಸಸಿಗಳನ್ನು ಒತ್ತಾಗಿ ನಾಟುಹಾಕುತ್ತಾರೆ ಅಗೆಗಳಲ್ಲಿ ವಿರಳವಾಗಿ ಚಲ್ಲಿದರೆ ಸಸಿಗಳು ಬಲವಾಗಿ ಬೆಳೆದು ನಾಟುಹಾಕುವಾಗ ವಿರಳವಾಗಿ ನೆಡುವುದಕ್ಕೆ ಅನುಕೂಲ ಉಂಟಾಗುವುದು ಒಂದು ಎಕರೆಯಲ್ಲಿ ಬಿತ್ತವನ್ನು ಅಗೆ ಮಾಡಿದರೆ ಆ ಸಸಿಗಳನ್ನು ೨೫ ಎಕರೆಗಳಿಗೆ ನಾಟುಹಾಕಬಹುದು ಪ್ರತಿ ಬೀಜವೂ ಫಲವತ್ತಾಗಿದ್ದಲ್ಲಿ ಅಗೆಯಲ್ಲಿ ಅರ್ಧ ಪಡಿ (ಮದ್ರಾಸ್) ಬೀಜವನ್ನು ಚಲ್ಲಿ, ಬೆಳೆದ ಸಸಿಗಳನ್ನು ಒಂದೊಂದೇ ಸಸಿಯಂತೆ ಮುಕ್ಕಾಲು ಅಡಿ ದೂರ ದೂರವಾಗಿ ನಾಟುಮಾಡಿದರೆ ಒಂದು ಎಕರೆಗೆ ಸರಿಹೋಗುತ್ತೆ ಈಗ ರೂಢಿಯಲ್ಲಿ ಉಪಯೋಗಿಸುವ ಪ್ರಮಾಣವನ್ನು ನೋಡಿದರೆ ಎಷ್ಟು ಕಾಳು ಪೋಲಾಗುತ್ತೆಂಬುವುದು ವ್ಯಕ್ತಪಡುತ್ತದೆ ಆದ್ದರಿಂದ ಪ್ರತಿ ಒಬ್ಬ ರೈತನೂ ಅಗೆಗಳಲ್ಲಿ ಚಲ್ಲುವ ಪ್ರಮಾಣವನ್ನು ಕಡಮೆ ಮಾಡಬೇಕಲ್ಲದೆ ವಿರಳವಾಗಿ ನಾಟಿ ಹಾಕುವುದನ್ನು ಅಭ್ಯಾಸಮಾಡಬೇಕು ಈಚರೆಗೆ ತಂದರೆ ಒಳ್ಳೇದು ಕಷ್ಟಿನ ವ್ಯವಸಾಯದಲ್ಲಿಯೂ ಒತ್ತಾಗಿ ಬೆಳೆಯುವುದರಿಂದ ಲುಕ್ಸಾನ ಉಂಟಾಗುತ್ತದೆ ಇದನ್ನು ಅಜಮಾಯಿಷಿಮಾಡಲು ಸಾಮಲ್ ಕೋಟಾದಲ್ಲಿ ೨೦೦ ಪೌಂಡು ಬೀಜವನ್ನು ಒಂದು ತಾಕಿಗೂ, ಸಮನಾದ ಮತ್ತೊಂದು ತಾಕಿಗೆ ೨೦೦೦ ಪೌಂಡನ್ನೂ ಹಾಕಿ ಬೆಳೆದದ್ದರಲ್ಲಿ ಹೆಚ್ಚಾಗಿ ಹಾಕಿದ್ದ ತಾಕಿನಲ್ಲಿ ಜಾಸ್ತಿ ಬೆಳೆಯಾದರೂ, ಬಿತ್ತದ ಖರ್ಚಿಗೆ ಉತ್ಪತ್ತಿಯು ಸರಿಹೋಯಿತು

ಇಂಡಿಯಾ ದೇಶದ ವೃತ್ತಾಂತಗಳು

ದರ್ಬಾಂಗ ಸಂಸ್ಥಾನದಲ್ಲಿ ರಿಲೀಫ್ ಕಾಮಗಾರಿಗಳು ನಿಲ್ಲಿಸಲ್ಪಟ್ಟವು ವ್ಯವಸಾಯಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆ

ಹಿಂದುಸ್ತಾನದ ಎಲ್ಲಾ ಕಡೆಗಳಲ್ಲೂ ರಿಲೀಫ್ ಕಾಮಗಾರಿಗಳನ್ನು ನಿಲ್ಲಿಸಿಬಿಟ್ಟರು ಆದರೆ ಬಂಗಾಳಾ ಮತ್ತು ಸಂಯುಕ್ತ ಆಧಿಪತ್ಯಗಳಲ್ಲಿ ಸರ್ಕಾರದವರು ೪೦,೦೦೦ ಪ್ರಜೆಗಳಿಗೆ ಧರ್ಮಾರ್ಥವಾಗಿ ಜೀವನ ನಡಿಸುತ್ತಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿರುವ ಸ್ವದೇಶೀ ಪಂಡಿತ ಕಮಿಟಿಯವರು ಕಳೆದ ವಾರ ಮೂವರು ವಿದ್ಯಾರ್ಥಿಗಳಿಗೆ ವೇತನ ಕೊಡುವುದಾಗಿ ಗೊತ್ತುಮಾಡಿ, ಅವರನ್ನು ಕಳಬುಗಳನ್ನು ಕಲಿತು ಬರುವುದಕ್ಕಾಗಿ ಸೀಮೆಗೆ ಕಳುಹಿಸಿಕೊಟ್ಟರು

ಲಾಹೋರ್ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಲ್ಲಿ ತಿಲಕರ ಹೆಸರಿನ ಮೇಲೆ ಇಟ್ಟು ನಡೆಸುತ್ತಿದ್ದ ಒಂದು ಛಾಪಖಾನೆಯನ್ನು ಮುಚ್ಚಿಸಿಬಿಟ್ಟು, ಅದರಲ್ಲಿದ್ದ ಸಾಮಾನುಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು

ಕಳೆದ ಸೋಮವಾರ ಸಾಯಂಕಾಲ ೬ ಗಂಟೆ ಹೊತ್ತಿನಲ್ಲಿ ಸಿಂಲಾ ಪಟ್ಟಣದಲ್ಲಿಟ್ಟಿರುವ ಭೂಕಂಪಗಳನ್ನು ಸೂಚಿಸುವ ಯಂತ್ರವು ಅಲ್ಲಿಂದ ಒಂದು ಸಾವಿರ ಮೈಲಿ ದೂರದಲ್ಲಿ ಭೂಕಂಪವಾಗಿರುವಂತೆ ತೋರಿಸಿತು

ಬೊಂಬಾಯಿ ಆಧಿಪತ್ಯದ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರಾಗಿರುವ ಮಾ। ಗೋಪಾಲಕೃಷ್ಣ ಗೋಖಲೆಯವರನ್ನು ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಬೊಂಬಾಯಿ ಪಕ್ಷದ ಮೆಂಬರಾಗಿ ನೇಮಕಮಾಡಿಕೊಂಡರು

ಬರ್ಮಾ ಆಧಿಪತ್ಯದಲ್ಲಿ ಜಾಲೂ ಎಂಬ ಸ್ಥಳದಲ್ಲಿ ಸರ್ಕಾರದವರು ಕಟ್ಟಿಸಿದ್ದ ಅಡ್ಡಕಟ್ಟೆಯು ಪ್ರವಾಹದ ದೆಸೆಯಿಂದ ಕಿತ್ತುಹೋಗಿ ನೀರು ಊರಿನ ಮೇಲೆ ಹೊರಳಿ ಎಲ್ಲಾ ಕಡೆಗಳಲ್ಲೂ ಆರು ಅಡಿಗಳ ಪ್ರಮಾಣ ನಿಂತಿದೆ ಎಂದು ತಂತೀ ವರ್ತಮಾನ ಬಂದಿದೆ

ಬಂಗಾಳಾದಲ್ಲಿ ಕಳೆದ ವರುಷ ನಾಲ್ಕು ವಿಮಾ (ಇನ್ಶೂರೆನ್ಸ್) ಕಂಪನಿಗಳೂ, ಮೂರು ಹಡಗುಗಳ ಕಂಪನಿಗಳೂ ಹೊಸದಾಗಿ ಪ್ರಾರಂಭವಾದವು ಇವೆಲ್ಲಾ ಸ್ವದೇಶೀ ವ್ಯಾಪಾರಗಳೆಂದೂ, ದೇಶೀಯ ಜನರೇ ಸೇರಿ ಹಣ ಹಾಕಿ ನಡಿಸುತ್ತಿದ್ದಾರೆಂದೂ ತಿಳಿದು ಬಂದಿದೆ

ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಆಹಾರ ದಿನಸಿಗಳ ಬೆಲೆಯು ಬಹಳ ಹೆಚ್ಚಿರುವುದನ್ನು ನೋಡಿ, ಅದಕ್ಕೆ ಕಾರಣ ಏನಾದದ್ದನ್ನು ತನಿಖೆಯಿಂದ ಗೊತ್ತುಮಾಡಿ ರಿಪೋರ್ಟು ಕೊಡಬೇಕೆಂದು ಹೇಳಿ ಗವರ್ನ್‌ಮೆಂಟಿನವರು ಒಬ್ಬ ಅಧಿಕಾರಿಯನ್ನು ಅದಕ್ಕಾಗಿ ನೇಮಿಸಿರುತ್ತಾರೆ

ಕಲ್ಕತ್ತೆಯಲ್ಲಿ ಫಾಡಿಸ್ ಹಾರ್ವೆ ಎಂಬೊಬ್ಬ ನಾಡಿನ ವರ್ತಕನ ಐದು ನಾಯಿಗಳು ಏಳು ವರುಷದ ಮುಖರ್ಜಿ ಎಂಬ ಬಂಗಾಳಿ ಹುಡುಗನ ಮೇಲೆ ಬಿದ್ದು ಬಲವಾಗಿ ಕಚ್ಚಿ ತುಂಬಾ ಗಾಯಮಾಡಿದ್ದರಿಂದ ಆ ಹುಡುಗನ ತಂದೆಗೆ ಆ ವರ್ತಕನಿಂದ ೧,೦೦೦ ರೂಪಾಯಿ ಡಾಮಿಾಜು ಕೊಡಿಸಿರುತ್ತಾರೆ.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಭಾವನಗರದಲ್ಲಿ ಒಬ್ಬ ಬ್ರಾಹ್ಮಣ ಹುಡುಗಿಯು ತನ್ನ ಮನೆಯಲ್ಲಿ ಕೀರೋಸೀನ್ ಎಣ್ಣೆಯ ದೀಪದ ಮುಂದೆ ಕುಳಿತು ಪಾಠಗಳನ್ನು ಓದಿಕೊಳ್ಳುತ್ತಿದ್ದಾಗ ಆ ದೀಪವು ಅವಳ ಅಂಗಿಗೆ ಹತ್ತಿಕೊಂಡು ಉರಿದು ಅವಳು ಸತ್ತುಹೋದಳು

* * *

ಕಳೆದ ವಾರ ಹಿಂದುಸ್ಥಾನದಲ್ಲಿ ೭೦೯ ಪ್ಲೇಗ್ ಮರಣಗಳಾದವು ಈ ಪೈಕಿ ಬೊಂಬಾಯಿ ಆಧಿಪತ್ಯ ೨೮೯, ಬರ್ಮ ೧೩೩, ಸಂಯುಕ್ತ ಆಧಿಪತ್ಯಗಳು ೧೨೪, ಮದರಾಸ್ ಆಧಿಪತ್ಯ ೧೦೯, ಮೈಸೂರು ಸಂಸ್ಥಾನ ೬೫, ಮಧ್ಯಪ್ರಾಂತ್ಯಗಳು ೩೬ ಬಂಗಾಳಾ ೨೦, ಪಂಜಾಬ್ ೨

* * *

ಬಾಬು ಸುರೇಂದ್ರನಾಥ ಬಾನರ್ಜಿಯವರು ಕಳೆದ ಗುರುವಾರ ಬೆಳಗ್ಗೆ ಕೀವು ಯಿಂದ ಬೊಂಬಾಯಿಗೆ ಬಂದು ಇಳಿದರು ಆ ದಿನ ಸಾಯಂಕಾಲ ಆ ಪಟ್ಟಣದಲ್ಲಿ ಒಂದು ಸ್ವದೇಶೀ ವಸ್ತುಗಳ ಅಂಗಡಿಯನ್ನು ಪ್ರತಿಷ್ಠೆ ಮಾಡಿ, ಆ ರಾತ್ರಿಯೇ ರೈಲು ಹತ್ತಿ ಕಲ್ಕತ್ತೆಗೆ ಪ್ರಯಾಣ ಮಾಡಿದರು

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಕ್ವೆಟ್ಟಾ ನಗರದಲ್ಲಿ ಮೋಟಾರ್‌ಗಾಡಿಗಳೂ ವಿದ್ಯುಚ್ಛಕ್ತಿಯ ಉಪಕರಣಗಳೂ ಮೊದಲಾದ ವ್ಯಾಪಾರ ಸರಕುಗಳನ್ನು ಇಟ್ಟು ಬಿಕರಿಮಾಡುತ್ತಿದ್ದ ನಾರಾಯಣದಾಸ್ ಎಂಬ ವರ್ತಕನ ಅಂಗಡಿಗೆ ಕಳೆದ ವಾರ ಬೆಂಕಿ ಬಿದ್ದು ೧೦,೦೦೦ ರೂಪಾಯಿನ ಸಾಮಾನುಗಳು ಸುಟ್ಟುಹೋದವು

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸುಂದರ್‌ಬನ್ಸ್ ಎಂಬ ಪ್ರಾಂತ್ಯದಲ್ಲಿ ಹುಲಿಗಳ ಕಾಟವು ಈಚೆಗೆ ಬಹಳವಾಗಿದೆ ಕಳೆದ ವರುಷ ೧೨೦ ಜನರು ಆ ಹುಲಿಗಳ ಬಾಯಿಗೆ ತುತ್ತಾದರೆಂತಲೂ, ಸರಕಾರದವರು ೨೩,೦೦೦ ರೂಪಾಯಿನ ಹಣವ ಖರ್ಚುಮಾಡಿದರೂ ಅವುಗಳ ಹಾವಳಿಯು ಇನ್ನೂ ಕಡಮೆಯಾಗಲಿಲ್ಲವೆಂದೂ ತಿಳಿದುಬಂದಿದೆ

* * *

ಹಿಂದುಸ್ಥಾನದ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್ ರವರ ಹೆಸರನ್ನು ಶಾಶ್ವತಪಡಿಸಬೇಕೆಂದು ಜ್ಞಾಪಕಾರ್ಥವಾಗಿ ಅದಕ್ಕಾಗಿ ಒಂದು ಫಂಡು ಏರ್ಪಾಡಾಗಿದೆ ಈ ಫಂಡಿಗೆ ನೈಜಾಮರವರು ೭೫೦ ರೂಪಾಯಿ ಕೊಟ್ಟರು ಮೊದಲನೆಯ ದಿನ ಕಲ್ಕತ್ತೆಯಲ್ಲಿ ನಡೆದ ಸಭೆಯಲ್ಲಿ ೯,೦೦೦ ರೂಪಾಯಿ ಚಂದಾ ವಸೂಲಾಯಿತು

* * *

ಕಲ್ಕತ್ತಾ ಪಟ್ಟಣದಲ್ಲಿ ಸರ್ ಸ್ಟುವರ್ಟ್ ಹಾಗ್ ಯವರ ಹೆಸರಿನ ಮೇಲೆ ಕಟ್ಟಿಸುವ ಮಾರ್ಕೆಟ್ಟನ್ನು ಬಡಾವಣೆ ಮಾಡಿದರು ಇದಕ್ಕೆ ೧೧ ಲಕ್ಷ ರೂಪಾಯಿ ಖರ್ಚಾಯಿತು ಇನ್ನೂ ಎರಡು ಲಕ್ಷ ರೂಪಾಯಿನ ಕಾಮಗಾರಿ ಆಗಬೇಕಾಗಿದೆ ಆ ಹೊಸ ಬಡಾವಣೆಯನ್ನು ಕಳೆದ ವಾರ ಸರ್ ಚಾರ್ಲ್ಸ್ ಅಲೆನ್ ರವರು ಪ್ರತಿಷ್ಠೆ ಮಾಡಿದರು

* * *

ಕಳೆದ ಜೂನ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ೫೩ ಲಕ್ಷ ರೂಪಾಯಿನ ಚಿನ್ನವೂ ೧೩೯ ಲಕ್ಷ ರೂಪಾಯಿನ ಬೆಳ್ಳಿಯೂ ರವಾನಾಗಿ ಬಂದಿರುತ್ತವೆ ಅದೇ ತಿಂಗಳಲ್ಲಿ ಹಿಂದುಸ್ಥಾನದ ಟಂಕಸಾಲೆಗಳು ೧೪ ಲಕ್ಷ ರೂಪಾಯಿನ ಬೆಳ್ಳಿ ನಾಣ್ಯಗಳನ್ನು ಛಾಪಾ ಮಾಡಿದವು ಮತ್ತು ಆ ತಿಂಗಳೊಳಗೆ ೫೦ ಲಕ್ಷ ರೂಪಾಯಿಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ರವರಿಗೆ ಕಳುಹಿಸಿರುತ್ತಾರೆ

* * *

ಮದರಾಸ್ ಆಧಿಪತ್ಯಕ್ಕೆ ಸೇರಿದ ನೆಲ್ಲೂರು, ಗುಂಟೂರು ಕೃಷ್ಣಾ, ಕರ್ನೂಲು, ಈ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಕಳೆದ ಐದು ವರುಷಗಳಿಂದಲೂ ಅನೇಕ ದರೋಡೆ ಮೊದಲಾದ ಕ್ರೂರ ಕೃತ್ಯಗಳನ್ನು ನಡೆಸುತ್ತಾ ಪ್ರಜಾ ಕಂಟಕರಾಗಿದ್ದ ಹದಿನೈದು ಮಂದಿ ಕಳ್ಳರು ಸಿಕ್ಕಿಬಿದ್ದರು ಗುಂಟೂರಿನ ಸೆಷನ್ಸ್ ಜಡ್ಜಿಯವರು ಅವರಿಗೆ ತಲಾ ಏಳು ವರುಷದಂತೆ ಕಠಿಣ ಸಜಾ ವಿಧಿಸಿರುತ್ತಾರೆ

* * *

ಪಂಜಾಬ್ ಆಧಿಪತ್ಯದಲ್ಲಿ ಮಲೇರಿಯಾ ಒಂದರಲ್ಲೇ ಕಳೆದ ವರುಷ ೬೯೬,೦೩೮ ಜನರು ಕಾಲವಾದರೆಂದು ತಿಳಿದು ಬಂದಿದೆ ಗುರ್ಗಾಂವ್, ದೆಹಲಿ, ಕರ್ನಾಲ್, ಲೂಧಿಯಾನಾ, ಫಿರೋಸ್‌ಪುರ್, ಗುಜರಾತ್ ಡಿಸ್ಟ್ರಿಕ್ಟುಗಳಲ್ಲಿ ಈ ಜ್ವರವನ್ನು ಅಡಗಿಸುವುದಕ್ಕಾಗಿ ಸರಕಾರದವರೂ ಮ್ಯುನಿಸಿಪಾಲಿಟಿಯವರೂ ೧,೨೧೩ ಪೌಂಡುಗಳ ತೂಕದಷ್ಟು ಕ್ವಿನೈನ್ ಎಂಬ ಜ್ವರದ ಪುಡಿಯನ್ನು ಕೊಂಡು, ಪ್ರಜೆಗಳಿಗೆ ಹಂಚಿದರು

* * *

ಮೆ। ಬಾಲಗಂಗಾಧರ ತಿಲಕರ ಮತ್ತು ಮೆ ಎಸ್ ಎಂ ಪರಾಂಜಪೆಯವರ ಉಪನ್ಯಾಸಗಳನ್ನು ಧನಪ್ಪ ಸಿದ್ಧರಾಮಪ್ಪನೆಂಬಾತನು ನಾಸಿಕದ ಒಂದು ಛಾಪಖಾನೆಯಲ್ಲಿ ಅಚ್ಚುಹಾಕಿಸಿ ಪ್ರಕಟಿಸಿದನು ಪೋಲೀಸಿನವರು ಆ ಅಚ್ಚಿನ ಕಾರ್ಖಾನೆಯನ್ನು ಶೋಧನೆ ಮಾಡಿ ಅಲ್ಲಿದ್ದ ಪತ್ರಗಳನ್ನು ಹೊತ್ತುಕೊಂಡು ಹೋದದ್ದಲ್ಲದೆ ಧನಪ್ಪ ಸಿದ್ಧರಾಮಪ್ಪನೆಂಬಾತನನ್ನು ಹಿಡಿದು ಆತನ ಮೇಲೆ ಮೊಕದ್ದಮೆ ಮಾಡಿದಾರೆ ಥಾಣಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಣೆ ಮಾಡುವರು

* * *

ಮೆ॥ ಬಿಪಿನ್ ಚಂದ್ರಪಾಲ್ ರವರು "ಸ್ವರಾಜ್ಯ" ವೆಂಬ ಪತ್ರಿಕೆಯನ್ನು ವಿಲಾಯತಿಯಲ್ಲಿ ಅಚ್ಚು ಹಾಕಿಸಿ, ಪ್ರಕಟ ಮಾಡುವುದಕ್ಕಾಗಿ ಬೊಂಬಾಯಿಗೆ ಗಣೇಶ ಬಲವಂತ ಮೋದಕ್ ಎಂಬಾತನಿಗೆ ಕಳುಹಿಸಿಕೊಟ್ಟರು ಬೊಂಬಾಯಿನ ಪೋಲೀಸಿನವರು ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಿಷಯಗಳುಂಟೆಂದು ಹೇಳಿ, ಗಣೇಶ ಬಲವಂತನನ್ನು ದಸ್ತಗಿರಿ ಮಾಡಿ ಆತನ ಮೇಲೆ ಮೊಕದ್ದಮೆ ತಂದರು ಮ್ಯಾಜಿಸ್ಟ್ರೇಟರು ಆತನನ್ನು ಜಾಮೀನಿನ ಮೇಲೆ ಖುಲಾಸ್ ಮಾಡಿ, ಮೊಕದ್ದಮೆಯನ್ನು ದರ್ಯಾಪ್ತಿ ಮಾಡುತ್ತಿದಾರೆ

* * *

ಸಿಲೋನ್ ದ್ವೀಪದಲ್ಲಿ ರತ್ನಗಳನ್ನು ಗಣಿಗಳಿಂದ ತೆಗೆಯುವುದಕ್ಕೆ ಒಂದು ಕಂಪನಿಯು ಏರ್ಪಾಡಾಯಿತು ರತ್ನಪುರಿ ಮೊದಲಾಗ ರತ್ನ ಸಿಕ್ಕುವ ಪ್ರಾಂತ್ಯದಲ್ಲಿ ಈ ಕಂಪನಿಯವರು ೬,೦೦೦ ಎಕರೆ ಜಮೀನನ್ನು ಪಡೆದುಕೊಂಡಿದಾರೆ ಆ ದ್ವೀಪದಿಂದ ಪ್ರತಿ ತಿಂಗಳಲ್ಲೂ ಮೂರು ಲಕ್ಷ ರೂಪಾಯಿನ ರತ್ನಗಳು ಸೀಮೆಗೆ ರಫ್ತಾಗುತ್ತವೆ ಇದುವರೆಗೆ ಗಣಿಗಳಿಂದ ತೆಗೆದ ರತ್ನಗಳನ್ನು ಸೀಮೆಗೆ ಕಳುಹಿಸಿ ಅಲ್ಲಿ ಸಾಣೆ ಹಿಡಿಸುತ್ತಿದ್ದರು ಈಗ ಸೀಮೆಯಿಂದ ಸಾಣೆ ಹಿಡಿಯುವ ಯಂತ್ರಗಳನ್ನು ತರಿಸಿಕೊಂಡು ಸಿಲೋನ್‌ನಲ್ಲೇ ರತ್ನಗಳನ್ನು ಶುದ್ಧಿ ಮಾಡಿ ಬಿಕರಿಗೆ ಸಿದ್ಧಪಡಿಸಿ ತರುವಾಯ ಸೀಮೆಗೆ ಕಳುಹಿಸಿಕೊಡುವಂತೆ ಏರ್ಪಾಡು ಮಾಡುವರು

* * *

ಪುದುಕೋಟೆ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಕಳೆದ ವಾರ ನಡೆಯಿತು ಈಚೆಗೆ ರಾಜರವರು ಆಯಾಸಿಯಾಗಿ ವೈದ್ಯರ ಅಭಿಪ್ರಾಯದಂತೆ ವಿಲಾಯತಿ ಮೊದಲಾದ ಕಡೆಗಳಲ್ಲಿದ್ದು ಬರುವಂತೆ ಪ್ರಯಾಣ ಮಾಡಿದರು ಸಂಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುವುದರಲ್ಲಿ ಅವರ ಸಹೋದರರಾದ ದೊರೈರಾಜರು ದಿವಾನ್‌ರಾಗಿಯೂ, ಮೆ॥ ಬ್ರಾಕೆನ್‌ರವರು ಸೂಪರಿಂಟೆಂಡೆಂಟರಾಗಿಯೂ, ಸಂಸ್ಥಾನದ ಚೀಫ್ ಜಡ್ಜರವರು ಕೌನ್ಸಿಲ್ ಮೆಂಬರಾಗಿಯೂ ನೇಮಕವಾಗಿರುತ್ತಾರೆ ಕೆಲವರು ಈ ಸಲ ಪ್ರತಿನಿಧಿ ಸಭೆಯೇ ನಡೆಯುವುದಿಲ್ಲವೆಂದು ಅನುಮಾನ ಪಡುತ್ತಿದ್ದರು ಆದರೆ ಮೆ॥ ಬ್ರಾಕೆನ್‌ರವರು ಅದನ್ನು ತಪ್ಪಿಸದೆ ನಡೆಸಿದರು ದಿವಾನ್‌ರವರು ಸಂಸ್ಥಾನದ ಜಮಾಖರ್ಚುಗಳನ್ನೂ ಸರಕಾರದವರು ಮುಂದೆ ನಡೆಸಬೇಕೆಂದಿರುವ ಕಾರುಕರ್ದಿಗಳನ್ನೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿ ತಿಳಿಸಿದರು. ಮೆಂಬರುಗಳು ಮರುದಿನ ತಮ್ಮ ಕೊರತೆಗಳನ್ನು ಸರ್ಕಾರಕ್ಕೆ ಹೇಳಿಕೊಂಡರು ಕಳೆದ ವರುಷ ಹುಟ್ಟುವಳಿಗಿಂತಲೂ ಖರ್ಚು ೧। ಲಕ್ಷ ರೂಪಾಯಿ ಜಾಸ್ತಿಯಾದೀತೆಂದು ಅಂದಾಜು ಕಟ್ಟಿದ್ದರು ಆದರೆ ವರುಷಾಂತ್ಯದಲ್ಲಿ ಖರ್ಚು ಕಳೆದು ೩। ಲಕ್ಷ ರೂಪಾಯಿ ನಿವ್ವಳ ಆದಾಯವಾಗಿರುತ್ತದೆ

ತಾಲ್ಲೋಕು ವರ್ತಮಾನಗಳು.

ದಾವಣಗೆರೆ — ಈ ಊರಿಗೆ ತಾ ೬ನೇ ಶುಕ್ರವಾರ ಶ್ರೀಮಾನ್ ನಿರಂಜನ ಜಗದ್ಗುರು ಜಯ ಮುರುಘ ರಾಜೇಂದ್ರ ಸ್ವಾಮಿಗಳವರು ಶ್ರೀಕಚೇರಿ ಛತ್ರಿ ಚಾಮರಗಳ ಸಮೇತ ಅಲಂಕಾರಯುಕ್ತವಾದ ಪಾಲಕಿಯಲ್ಲಿ ಕುಳಿತು ವಾದ್ಯಘೋಷಗಳ ಆರ್ಭಟದೊಡನೆ ದಯಮಾಡಿ, ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಪಟ್ಟಣ ವೀಧಿಗಳಲ್ಲಿ ಮೆರವಣಿಗೆ ಹೊರಟು, ದಾರಿಯುದ್ದಕ್ಕೂ ಬೇರೆ ಬೇರೆ ಪಂಗಡಗಳವರು ಒಪ್ಪಿಸಿದ ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಅವುಲ್ಲಾ ದರ್ ವೇದಲಾದ ಪುರ ನಿವಾಸಿಗಳ ಕೊಠಡಿ ವಿರಕ್ತ ಮಠಕ್ಕೆ ಸೇರಿದರು ಆ ದಿನ ಸುಮಾರು ೬,೦೦೦ ಪ್ರಜೆಗಳು ಈ ಉತ್ಸವವನ್ನು ನೋಡುವುದಕ್ಕೆ ಕೂಡಿ ಬಂದಿದ್ದರು ಈ ಪರಿಷಯು ಒಳಗೆ ಮಠದಲ್ಲೂ ಬಕ್ಕಾಯರ ಚೌಕಿಯಲ್ಲಿಯೂ ಊಟ ಉಪಚಾರಗಳು ನಡೆಸಲ್ಪಟ್ಟವು

ಪಾಂಕ್ತ್ಯ — ಕಳೆದ ಒಂದು ವಾರದಿಂದ ಈ ಪರಿವೆಗೂ ಇಲ್ಲಿ ಒಳ್ಳೇ ಮಳೆ ಆಗಿರುತ್ತದೆ ಜೋಳದ ಪೈರುಗಳು ತಕ್ಕ ಮಟ್ಟಿಗೂ ಉತ್ತಮ ಸ್ಥಿತಿಯಲ್ಲಿವೆ ರೈತರು ತಮ್ಮ ಹೊಲದಲ್ಲಿ ರಾಗಿ ಪೈರನ್ನು ಬಿತ್ತುತ್ತಾರೆ ಧಾರಣೆ ವಾಸಿಗಳು ಇನ್ನೂ ಇಳಿಯಲಿಲ್ಲ ಈ ಕಾಲದಲ್ಲಿ ಪ್ರಜೆಗಳಿಗೆ ಆರೋಗ್ಯ ಕಮ್ಮಿ, ಛಳಿ, ಜ್ವರ ನೆಗಡಿ ಮುಂತಾದವುಗಳಿಂದ ನರಳುತ್ತಾ ಇದಾರೆ ಗಾಳಿ ಹವಾ ಅಷ್ಟು ಚೆನ್ನಾಗಿಲ್ಲ — ಕಳೆದ ಎರಡೂವರೆ ವರುಷಗಳಿಂದ ಈ ತಾಲ್ಲೂಕಿನಲ್ಲಿ "ಸಬ್ ರೆಜಿಸ್ಟ್ರಾರ್"ಗಿದ್ದ ಮೆ। ಎಂ ಚಕ್ರಪಾಣಿರಾವ್, ಬಿ ಎ , ಬಿ ಎಲ್ ಯವರನ್ನು ಪಾಸನಕ್ಕೆ ವರ್ಗಮಾಡಿದ್ದಾರೆ ಇವರು ಇಲ್ಲಿ ಸರ್ಕಾರಿ ಕೆಲಸವನ್ನು ಬಹು ಮುತುವರ್ಜಿಯಿಂದ ನಡೆಸುತ್ತಾ, ಜನರಿಗೆ ತಮ್ಮಲ್ಲಿರುವ ಸಹಜಗುಣವನ್ನೂ ಪ್ರೀತಿ ವಾತ್ಸಲ್ಯವನ್ನೂ ತೋರಿಸುತ್ತಾ ಬಂದದ್ದರಿಂದ ಎಲ್ಲರೂ ಇವರ ವರ್ಗವಾದ ವಿಷಯವನ್ನು ತಿಳಿದು ಬಹಳ ವ್ಯಸನಪಡುತ್ತಾರೆ ಇವರು ಎಲ್ಲರಲ್ಲಿಯೂ ಬಹಳ ಸ್ನೇಹದಿಂದಿದ್ದರು ಇವರಿಗೆ ನಾಳೆ ದಿನ ಸಾಯಂಕಾಲ ಇವರ ಸ್ನೇಹಿತರಲ್ಲಿ ಕೆಲವರು ಮಂದಿ ಪಾರ್ಟಿಯನ್ನು ಕೊಡಬೇಕೆಂದು ಯೋಚಿಸಿರುತ್ತಾರೆ ಇವರಿಗೆ ಬದಲಾಗಿ ಬರುವ ಮೆ ಎಂ ನಾರಾಯಣರಾಯರೂ ಇವರ ಹಾಗೆ ಪ್ರಜೆಗಳ ಪ್ರೀತಿಗೆ ಪಾತ್ರರಾಗಲಿ ಕೆಂದು ಹಾರೈಸುತ್ತೇವೆ

ಚಿಕ್ಕಾಪುರ — ಇಲ್ಲಿ ಮಳೆ ವಿಶೇಷವಾಗಿದೆ ಪೈರುಗಳು ಬಹು ರಮ್ಯವಾಗಿವೆ ಆದರೆ ಧಾರಣೆವಾಸಿಗಳು ಮಾತ್ರ ಕ್ರಮವಾಗಿ ಏರುತ್ತಿವೆ ಆಗಿವೆ — ಇಲ್ಲಿ ಸುಮಾರು ೫-೬ ವರುಷಗಳಿಂದ ಹಾರೇಸ್ ರೇಂಜರಾಗಿದ್ದ ಮೆ ಉತ್ತಯ್ಯನವರು ವರ್ಗವಾದದ್ದು ನಮಗೆಲ್ಲಾ ವ್ಯಸನಕರವಾಗಿದೆ ಇವರು ಸದ್ಗುಣಿಗಳು, ಸಮರ್ಥರು, ಬಹುಜನ ಪ್ರಿಯರೂ ಆಗಿದ್ದರು ಇವರು ಆಂಬೂರಿನಲ್ಲಿ ಬಂಗಲೆ ಕಟ್ಟಿಸಿರುವುದು ಇವರ ಹೆಸರನ್ನು ನಿರಂತರವೂ ಸ್ಮರಿಸುವಂತಾಗಿದೆ — ಈ ಊರಿನಲ್ಲಿ ಇತರ ಮತಸ್ಥರಿಗಿಂತಲೂ ಲಿಂಗಾಯಿತ ಭಾರೀ ಪಂಗಡದವರೇ ಅಪಾರವಾಗಿರುತ್ತಾರೆ ಇವರಲ್ಲಿ ಅನೇಕರು ವಿದ್ಯಾವಂತರು, ವರ್ತಕರು, ಅಧಿಕ ಸಂಪತ್ತುಳ್ಳವರು, ಭಾರೀ ಕಂದಾಯ ಕೊಡತಕ್ಕವರೂ ಆಗಿರೋಣದರಿಂದ ಈ ಪಂಗಡದ ಪ್ರತಿನಿಧಿಗಳನ್ನು ಇತರ ಮತಸ್ಥರಿಗಿಂತಲೂ ಹೆಚ್ಚಾಗಿ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸರ್ಕಾರದವರು ಮೆಂಬರಾಗಿ ಮಾಡುವುದು ಸರ್ವ ಸಮ್ಮತವಾಗಿರುತ್ತದೆ ಸರ್ಕಾರದವರು ಈ ವಿಷಯಕ್ಕೆ ಗಮನಕೊಡಬೇಕಾಗಿರುವುದು [ಸರ್ಕಾರದವರು ಹೊಸ ಕಾನೂನುಗಳನ್ನು ಜಾರಿಗೆ ತಂದು ಪ್ರಜೆಗಳೇ ತಮ್ಮ ಮನಸ್ಸೊಪ್ಪುವಂಥಾ ಮೆಂಬರುಗಳನ್ನು ಚುನಾಯಿಸಿಕೊಳ್ಳಬಹುದೆಂದು ವಿಧಾಯಕ ಮಾಡಿರುತ್ತಾರೆ ಆದಕಾರಣ ಪ್ರಜೆಗಳು ಚುನಾವಣೆಯ ಕಾಲದಲ್ಲಿ ತಮ್ಮ ಅಭಿಪ್ರಾಯವನ್ನು ಓಟುಕೊಡುವುದರ ಮೂಲಕ ಪ್ರಕಾಶಪಡಿಸಬಹುದು — ಎಡಿಟರ್]

ಚನ್ನಪಟ್ಣ — ಚನ್ನಪಟ್ಣದಲ್ಲಿ ಈಗ್ಗೆ ಸುಮಾರು ೧೫-೨೦ ದಿವಸಗಳಿಂದ ಮಳೆಯಿಲ್ಲದೆ ರೈತರೆಲ್ಲ ಬಾಡಿದ ಮುಖವುಳ್ಳವರಾಗಿ ಆಕಾಶವನ್ನೇ ನೋಡುತ್ತಿದ್ದರು ಭಗವದನುಗ್ರಹದಿಂದ ಕಳೆದ ತಾ ೪ ರಿಂದ ೯ ರ ವರೆಗೂ ಸುಮಾರು ೫-೬ ಹದ ಒಳ್ಳೆ ಮಳೆಯಾಗಿರುತ್ತದೆ ತಂಗಾಳಿ ಬೀಸುತ್ತಿದೆ ಎತ್ತ ನೋಡಿದರೂ ಮನೋಹರವಾದ ಪಚ್ಚೆ ಪೈರುಗಳು ಕಾಣುತ್ತಿವೆ ಧಾರಣೆವಾಸಿಗಳು ಮಾತ್ರ ಕೇವಲ ತುಟ್ಟಿಯಾಗಿರುವವು ಅನೇಕ ಬಡವರು ಗೆಡ್ಡೆ ಎಂಬ ಒಂದು ತರದ ಗಡ್ಡೆಗಳನ್ನು ಕೆರೆಯ ಅಂಗಳದಲ್ಲಿ ಅಗೆದು ತಂದು ತಿಂದು ಜೀವನಮಾಡುತ್ತಿರುವರು ಈಗ ಸುರಿಯುತ್ತಿರುವ ಮಳೆಯನ್ನು ನೋಡಲು ಮುಂದೆ ದವಸದ ಧಾರಣೆ ಅಗ್ಗವಾದೀತೆಂಬ ನಿರೀಕ್ಷಣೆ ಇದೆ — ಟೌನಿನಲ್ಲಿ ರಾತ್ರಿಕಾಲದ ದೀಪಗಳು ಸಾಕಾದಷ್ಟು ಬೆಳಕು ಕೊಡಲಾರವು ಟೌನಿನ ಪೇಟೆಯಲ್ಲಿ ಯಾವಾಗಲೂ ಮೋಟಾರ್ ಗಾಡಿಗಳು ತಿರುಗಾಡುವದಾದ್ದರಿಂದಲೂ ಜೊಡ್ಡ ವರ ದೃಷ್ಟಿಗೆ ಬೀಳುವದಾದ್ದರಿಂದಲೂ ಈಗ ಮರಸ್ತಾಗುತ್ತಲಿವೆ ಕೆಲವು ಗಲ್ಲಿಗಳ ರಸ್ತೆಗಳ ಕಡೆಗೂ ಮುನಿಸಿಪಾಲಿಟಿಯ ದೃಷ್ಟಿ ಬಿದ್ದರೆ ಉತ್ತಮವಾಗಿರುವದು — ಕಳೆದ ವಾರ ಕ್ಯಾಸಾಪುರದ ಗ್ರಾಮದಲ್ಲಿ ತೆಂಗಿನ ಕಾಯಿ ಕದ್ದು ಕೀಳುವುದಕ್ಕಾಗಿ ಹೋದ ಒಬ್ಬನು ಖೂನಿಮಾಡಲ್ಪಟ್ಟನೆಂಬದಾಗಿಯೂ, ಈಗ ಪೋಲೀಸ್ ವಿಚಾರಣೆಯಲ್ಲಿರುವುದಾಗಿಯೂ ಸಮಾಚಾರ ತಿಳಿಯಬರುತ್ತೆ — ಈ ಊರು ಕೆರೆ ಕುಸ್ಸೀರು ಕಟ್ಟೆಯು ನೀರಿಲ್ಲಾ ಬತ್ತಿ ಹೋಗುತ್ತಾ, ಕುಡಿಯುವ ನೀರಿಗೆ ಚಿಂತಹತ್ತಿತ್ತು ಸದ್ಯಕ್ಕೆ ಬರುತ್ತಿರುವ ಮಳೆಯು ಜನರ ತೊಂದರೆಯನ್ನು ತಪ್ಪಿಸೀತೆಂದು ನಿರೀಕ್ಷಿಸಬಹುದಾಗಿದೆ

ದೇವನಹಳ್ಳಿ — ಈ ಊರಲ್ಲಿ ಕೆರೆ ಕುಂಟೆಗಳಿಗೆ ನೀರು ಬಾರದಿದ್ದರೂ ಪೈರು ಪಚ್ಚೆಗಳಿಗೆ ತಕ್ಕಮಟ್ಟಿಗೆ ಮಳೆ ಬಂದು ಮಿಸ್ಕಿ ಪೈರುಗಳೆಲ್ಲಾ ಚೆನ್ನಾಗಿರುತ್ತವೆ ಆದರೆ ಕುಡಿಯುವುದಕ್ಕೆ ನೀರು ಬಾವಿಗಳಲ್ಲಿಲ್ಲದೆ, ಜನರು ಬಹಳ ಕಷ್ಟಪಡುತ್ತಿದಾರೆ ಅಲ್ಲದೆ ಬಡಬಗ್ಗರ ಕ್ರಮವೊಂದೂ ಹೇಳತೀರದು ಧಾರಣೆ ವಾಸಿಗಳು ದಿನೇ ದಿನೇ ಹೆಚ್ಚುತ್ತಲೇ ಇವೆಯೇ ಹೊರತು ಕಡಮೆಯಾಗಲಿಲ್ಲ — ಈ ಗ್ರಾಮದ ನೌಕರರು ಸಂತೆಯಲ್ಲಿ ಸುಂಕ ಎತ್ತುವ ರೀತಿಯಾಗಿ ಬಂದು ಮೊದಲಿನಂತೆಯೇ ಪಸಿಗೆ ಎತ್ತುತ್ತಿದ್ದಾರೆ ಕಾಯಿಪಲ್ಯಗಳನ್ನು ತಂದ ಜನರನ್ನು ಯಾಕೆ ಅವರಿಗೆ ಕೊಡುತ್ತೀರೆಂದು ಕೇಳಿದರೆ ಕಂದಾಯದ ಕಾಲದಲ್ಲಿ ಬಹಳ ಹಿಂಸೆ ಕೊಡುತ್ತಾರೆಂದು ಹೇಳುತ್ತಾ ವ್ಯಸನಪಡುತ್ತಾರೆ ಈ ನೌಕರರ ಹಿಂಸೆಯನ್ನು ತಪ್ಪಿಸ್ತಾರೆಂದು ಪ್ರಜೆಗಳು ಗೌರ್ನಮೆಂಟಿನವರನ್ನು ಪ್ರಾರ್ಥಿಸಿ ಎದುರು ನೋಡುತ್ತಿದಾರೆ — ಈಗ್ಗೆ ೧೦-೧೨ ದಿನಗಳ ಕೆಳಗೆ ಸರೋವರ ಬೀದಿಯಲ್ಲಿ ಬೇದರ ೧೩ ೧೪ ವರ್ಷಗಳ ಸಾಯಕ್ ಲಗುಮನೆಂಬುವನು ಯಾವ ಕಾರಣದಿಂದಲೋ ಉರುಲುಹಾಕಿಕೊಂಡು ಆತ್ಮಹತ್ಯವನ್ನು ಮಾಡಿಕೊಂಡನು ಈ ವಿಚಾರವನ್ನು ಪೋಲೀಸ್ ಇಲಾಖೆಯವರು ತನಿಖೆಮಾಡಿ ಏನುಮಾಡಿದರೋ ಗೊತ್ತಾಗಲಿಲ್ಲ — ಮರಳು ಬಾಗಲಿನಲ್ಲಿ ವಾಸವಾಗಿರುವ ಗೊಲ್ಲರ ಆದೆಪ್ಪನ ಮನೆಯಲ್ಲಿ ಇದೇ ತಿಂಗಳು ೪ನೇ ತಾ ಬುಧವಾರ ಬೆಳಗ್ಗೆ ೯ ಗಂಟೆ ಸಮಯದಲ್ಲಿ ಯಾರೋ ಹಗಲು ಕಳ್ಳರು ಇಳಿಬಿದ್ದು ಸುಮಾರು ೪೦೦ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು ಪೋಲೀಸಿನವರು ಪತ್ತೆ ತರದೊಡನೆ ನಡಿಸುತ್ತಲಿದ್ದಾರೆಂದು ಕೇಳುತ್ತೇವೆ — ತಂಜಾವೂರಿನಿಂದ ವೇದನಾಯಗಂ ಶಾಸ್ತ್ರಿಗಳ ಮೊಮ್ಮಕ್ಕಳು ವೇದಮಣಿ ಶಾಸ್ತ್ರಿಗಳು ಬಂದು ಇಲ್ಲಿನ ಸಬ್ ಪೋಸ್ಟ್ ಮಾಸ್ಟರಾದ ಮೆ ಪೊನ್ನಸಾಮಿ ಪಿಳ್ಳೆಯವರ ಸಹಾಯದಿಂದ ಹಳೇ ಪೋಸ್ಟಾಫೀಸಿನಲ್ಲಿ ೫ನೇ ತಾ ಭಗವಂತನ ವಿಚಾರವನ್ನು ಭಜನೆ ಕಾಲಕ್ಷೇಪ ಮಾಡಿದರು ಆಗ್ಗೆ ಅನುಲ್ಲಾ ದರ್ ಮುಂತಾಗಿ ವರ್ತಕ ಮಂಡಲಿಯವರು ಬಂದು ಕರ್ಣಾನಂದವನ್ನು ಹೊಂದಿದರು

ಮೂಡಿಗೆರೆ — ಇಲ್ಲಿನ ಹೆಡ್ ಮಾಸ್ಟರ್ ಮೆ॥ ನೀಲಕಂಠರಾಯರಿಗೆ ಬೇಲೂರಿಗೆ ವರ್ಗವಾಯ್ತು ಈ ಮಾಸ್ತರು ನಿಧಾನಿಗಳಾಗಿಯೂ, ವಿದ್ಯಾರ್ಥಿಗಳನು ಶ್ರೇಯೋಭಿವೃದ್ಧಿಗೆ ತರುವವರಾಗಿಯೂ, ಜನರ ಅನುರಾಗಕ್ಕೆ ಪಾತ್ರರಾಗಿಯೂ ಇದ್ದದ್ದಲ್ಲದೆ ಇವರು ಈ ಸ್ಕೂಲಿಗೆ ವರ್ಗ ಪಟ್ಟು ಬಂದ ಒಂದು ಸಂವತ್ಸರದಲ್ಲಿ ಸ್ಕೂಲನ್ನು ತಕ್ಕ ಮಟ್ಟಿಗೆ ಅಭಿವೃದ್ಧಿಗೆ ತಂದಿದ್ದರು ಇವರು ಚನ್ನರಾಯಪಟ್ಟಣದಿಂದ ವರ್ಗಪಟ್ಟು ಬಂದ ಮೆ ರಾಮಚಂದ್ರಯ್ಯನವರಿಗೆ ಸ್ಕೂಲಿನ ಛಾರ್ಜನ್ನು ವಹಿಸಿದರು ಇಲ್ಲಿನ ಮಾಸ್ತರುಗಳೂ ವಿದ್ಯಾರ್ಥಿಗಳೂ ಸೇರಿ ಗೌರವಾರ್ಥವಾಗಿ ಆ ದಿನ ಸಾಯಂಕಾಲ ಅವರಿಗೆ ಔತನಮಾಡಿದರು ಅನೇಕ ಮಹನೀಯರೂ ಬಾಲಕ ಬಾಲಕಿಯರೂ ಸೇರಿದ್ದರು ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಮೆ॥ ಬಿ ಕೃಷ್ಣಮೂರ್ತಿರಾಯರು ಸಭೆಯ ಅಗ್ರಾಸನವನ್ನು ವಹಿಸಿದರು ಬಾಲಕಿಯರು ಸಭಿಕರ ಕಿವಿಗಿಂಪಾಗುವಂತೆ ಗಾನ ಮಾಡಿದರು ಗ್ರಾಮೊಫೋನ್ ಸಂಗೀತವು ನಡೆಯಿತು ಮೆ ಬಿ ಕೃಷ್ಣಮೂರ್ತಿರಾಯರು ಹೋಸನಲ್ಲೆಲ್ಲಾ ವಿದ್ಯೆ ಹೋಗದ್ದೆಂದೂ, ಅದನ್ನು ಸಕಲ ಬಾಲಕ ಬಾಲಕಿಯರೂ ಅಭ್ಯಾಸಿಸಬೇಕೆಂದೂ, ಉಪಾಧ್ಯಾಯರೆಲ್ಲರೂ ಯಾವಾಗಲೂ ಶ್ರೇಯೋಭಿವೃದ್ಧಿಯನ್ನು ಕೋರುತ್ತಿರಬೇಕೆಂದೂ, ವರ್ಗ ಪಟ್ಟಿರುವ ಮೆ। ನೀಲಕಂಠರಾಯರು ಶ್ರದ್ಧೆಯಿಂದ ಕೆಲಸ ಮಾಡಿ ಕೇವಲ ಹೀನಸ್ಥಿತಿಯಲ್ಲಿದ್ದ ಸ್ಕೂಲನ್ನು ಅಭಿವೃದ್ಧಿ ಸ್ಥಿತಿಗೆ ತಂದರೆಂದೂ, ಈಗ ಬಂದಿರುವ ಮೆ। ರಾಮಚಂದ್ರಯ್ಯನವರೂ ಶ್ರದ್ಧೆಯಿಂದ ಕೆಲಸ ಮಾಡಿ ಇನ್ನೂ ಏಳಿಗೆಗೆ ತರುತ್ತಾರೆಂದು ನಂಬುತ್ತೇವೆಂದೂ ತಿಳಿಸಿದರು ಬಳಿಕ ಸುಬ್ರಹ್ಮಣ್ಯಯ್ಯನವರು ಒಂದು ಅಡ್ರಸ್ಸನ್ನು ಓದಿದರು ಬಾಲಕಿಯರಿಂದಲೂ ಗ್ರಾಮೊಫೋನಿನಿಂದಲೂ ಮಂಗಳವು ಹಾಡಲ್ಪಟ್ಟಿತು ಬಾಲಕರು ನಮ್ಮ ದೇಶವನ್ನಾಳುವ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರಿಗೂ ಸಭಿಕರಿಗೂ ಮಂಗಳವನ್ನು ಕೋರಿ, ಸಭಿಕರಿಗೆ ಗಂಧ, ಪುಷ್ಪ, ತಾಂಬೂಲಾದಿಗಳೂ ಬಾಲಕ ಬಾಲಕಿಯರಿಗೆ ಸಕ್ಕರೆಯೂ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಹೊಳೆನರಸೀಪುರ — ಈ ಪ್ರಾಂತ್ಯ ಮಳೆ ಬೆಳೆ ಚೆನ್ನಾಗಿವೆ ಗಿಡ್ಡರಾಗಿ ಪೈರೆಲ್ಲಾ ಹೊಡೆಯಾಗಿದೆ ೧-೨ ಹದ ಮಳೆಯಾದರೆ ಪೂರಾ ಬೆಳೆಯಾಗುತ್ತದೆಂದೂ ಕ್ಷಾಮ ನಿವರ್ತಿಯಾಗುವುದೆಂದೂ ಜನರು ಹೇಳುತ್ತಾರೆ ಧಾರಣೆ ಸ್ವಲ್ಪ ಮಟ್ಟಿಗೆ ಇಳುಮುಖವಾಗಿದೆ ರಾಗಿ ರೂಪಾಯಿಗೆ ೧೫ ಸೇರು, ಅಕ್ಕಿ ೮ ಸೇರು ಮಾರುತ್ತಾರೆ ಬಡಬಗ್ಗರ ಜೀವನಕ್ಕೆ ಸ್ವಲ್ಪ ಅನುಕೂಲವಾಗಿದೆ — ಈ ಊರಿನ ಸಂತೆಯಲ್ಲಿ ವ್ಯಾಪಾರಿಗಳು ಜನರ ತಿರುಗಾಟಕ್ಕೆ ದಾರಿಯನ್ನು ವಿಸ್ತಾರವಾಗಿ ಬಿಡದೆ ಬಹಳ ಇಕ್ಕಟ್ಟಾಗಿ ಅಂಗಡಿಗಳನ್ನು ಇಡುವದರಿಂದ ತಿರುಗಾಡುವ ಜನರಿಗೆ ಬಹಳ ತೊಂದರೆಯಾದಕಾರಣ ಅಮಲ್ದಾರರಾದರೂ ಪೋಲೀಸ್ ಇನ್ಸ್‌ಪೆಕ್ಟರಾದರೂ ತಕ್ಕ ಏರ್ಪಾಡು ಮಾಡುವದಾದರೆ ತುಂಬಾ ಕ್ಷೇಮವಾದೀತು ಮತ್ತು ಸಂತೆಯಲ್ಲಿ ಯಾವ ಗಲಾಟೆಯಾದರೂ ಪೋಲೀಸ್ ಉಸ್ತುವಾರಿ ಇರುವದಿಲ್ಲ ಇದನ್ನು ಕ್ರಮಪಡಿಸಬೇಕು — ಇಲ್ಲಿ ಜೂಜುಕೋರರ ಕಾಟ ಹೆಚ್ಚಾಗಿದೆ ಇವರ ಗುಂಪು ಸಂದುಗೊಂದುಗಳಲ್ಲಿ ಸೇರಿಕೊಂಡು ಬಡವರನ್ನೂ ಐಶ್ವರ್ಯವಂತರನ್ನೂ ಮೋಸ ಮಾಡುತ್ತಾ, ಕೈಯಲ್ಲಿದ್ದದ್ದನ್ನೆಲ್ಲಾ ಕಸುಕೊಂಡು ಬಡ ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುತ್ತಾ ಇದಾರೆ ಪೋಲೀಸ್ ಇನ್ಸ್‌ಪೆಕ್ಟರವರು ಈ ಗುಂಪನ್ನು ಚದರಿಸಿಬಿಡುವದಾದರೆ ಅನೇಕ ಬಡ ಜನರಿಗೆ ಬಹಳ ಪ್ರಯೋಜನ ಉಂಟಾಗುತ್ತದೆ.— ಮುನಿಸಿಪಲ್ ಲಾಂದ್ರಗಳು ರಾತ್ರಿ ಕಾಲದಲ್ಲಿ ಸರಿಯಾಗಿ ಉರಿಯುವದಿಲ್ಲ ಕೆಲವು ಲಾಂದ್ರಗಳ ಬೆಳಕು ೮ ೯ ಗಂಟೆವರೆಗೂ ಉರಿಯದೆ ಹೊಗೆ ತುಂಬಿಕೊಂಡು ಆರಿಹೋಗುತ್ತದೆ ಇದಕ್ಕೆ ಕಾರಣ ಕಂಟ್ರಾಕ್ಟುದಾರರೋ ಇಲ್ಲವೆ ಎಣ್ಣೆಯ ತಪ್ಪೋ ತಿಳಿಯುವದು ಕಷ್ಟ ಲಾಂದ್ರಗಳು ಬಹಳ ದೂರ ಫಾಸಲೆ ಉಂಟು ಕೆಲವು ಸ್ಥಳಗಳಲ್ಲಿ ಹಾಕಿಕೆಯಾಗಿದ್ದ ಲಾಂದ್ರಗಳನ್ನು ತೆಗೆದುಬಿಟ್ಟಿದಾರೆ ಚನ್ನರಾಯಪಟ್ಟಣದ ರಸ್ತೆ ಬೀದಿ, ಜೈನರ ಬೀದಿಗಳಿಗೆ ಸುತರಾಂ ಬೆಳಕಿಲ್ಲದೆ ಕೃಷ್ಣಪಕ್ಷದಲ್ಲಿ ತಿರುಗಾಡುವ ಜನರು ಒಬ್ಬರಿಗೊಬ್ಬರು ಡಿಕ್ಕಿ ಹೊಡೆಯಬೇಕಾಗಿದೆ ಈ ವಿಷಯಕ್ಕೆ ವೈಸ್ ಪ್ರೆಸಿಡೆಂಟರೂ ಮೆಂಬರುಗಳೂ ಗಮನಕೊಟ್ಟು ತಕ್ಕ ಏರ್ಪಾಡು ಮಾಡುವದಾದರೆ ಜನರಿಗೆ ಉಂಟಾಗುವ ತೊಂದರೆ ಪರಿಹಾರವಾಗುತ್ತದೆ ಸದ್ಯದಲ್ಲಿ ಟೌನ್ ಶುಚಿಯಾಗಿರುವದರಿಂದ ಬರತಕ್ಕ ಸಾಂಕ್ರಾಮಿಕ ರೋಗಗಳಿಗೆ ತಡೆಯಾಗಿರುತ್ತೆ

ಚಿತ್ರದುರ್ಗ — ಈಗ ಸುಮಾರು ೧ ವಾರದಿಂದ ಮೋಡ ಕವಿದುಕೊಂಡು ಬಿಸಿಲಿನ ಬೇಗೆ ಕಡಿಮೆಯಾಗಿ ಉಪಶಾಂತಿಯಾಗಿದ್ದರೂ ಸಾಗುವಳಿಗೆ ತಕ್ಕ ಮಳೆ ಇನ್ನೂ ಬೀಳಲಿಲ್ಲ. ಈ ವರುಷದ ಆದಿಯಿಂದ ಈ ಊರಿನಲ್ಲಿ ಮುನಿಸಿಪಾಲಿಟಿಯವರು ನಲ್ಲಿಗಳ ಮೂಲಕ ಊರಿಗೆ ನೀರು ಸರಬರಾಜು ಮಾಡುತ್ತಿದ್ದಾರೆ. ನೀರಿನ ಕೊರತೆ ಈ ಊರಿಗೆ ಈಗ ಅಷ್ಟಾಗಿ ಇಲ್ಲವೆಂದು ಬಹು ಜನರಿಗೆ ಸಂತೋಷವಾಗಿದೆ. ಬೇಸಗೆ ಹೋಗಿ ಮಳೆಗಾಲ ಬಂದು ನಿಂತಿದೆ. ಈಗ ಹೊಲಗಳಲ್ಲಿ ಒಳ್ಳೆ ಮಳೆ ಬೇಕಾಗಿದೆ. ಇಲ್ಲವಾದರೆ ಹೋದ ವರುಷದಂತೆ ಎಲ್ಲವೂ ಒಣಗಿಹೋಗುವದು. ಅಕ್ಕಿ, ಬೇಳೆ, ರಾಗಿ ಜೋಳ ಮೊದಲಾದವುಗಳ ಬೆಲೆ ಏರುತ್ತಿದೆ. ಬಡಬಗ್ಗರಿಗೆ ಈಗಲೂ ಗೆಡ್ಡೆ ಗೆಣಸು ಸೊಪ್ಪು ಸದೆಯೇ ಆಹಾರವಾಗಿಯೂ, ಕಟ್ಟಿಗೆ ಹೊರುವುದೇ ಕಸಬಾಗಿಯೂ ಇದೆ. ಅನೇಕರು ಒಪ್ಪತ್ತೇ ಊಟ ಮಾಡುತ್ತಾರೆ — ಇಲ್ಲಿನ ಕೋಟೆಯ ಬಾವಿಯನ್ನು ಕಲ್ಲು ಕಟ್ಟಡದಿಂದ ಭದ್ರಪಡಿಸಿದ್ದು ಊರಿಗೆ ದೊಡ್ಡ ಉಪಕಾರವಾಯಿತು. ಆದರೂ ಇನ್ನೂ ಸ್ವಲ್ಪ ಕೆಲಸ ಬಾಕಿ ಇದೆ. ಅದನ್ನು ಪೂರೈಸಿದರೆ ನೀರು ಸಾರ್ವಜನಿಕರಿಗೆ ಉಪಯೋಗವಾಗಿ ನಿಲ್ಲುವುದು — ಇಲ್ಲಿ ಹವಾ ಈಗ ತಕ್ಕಮಟ್ಟಿಗೆ ಚೆನ್ನಾಗಿದೆ. ಆದರೂ ಕಣ್ಣುಬೇನೆ, ಜ್ವರ, ನೆಗಡಿಗಳಿಂದ ಕೆಲವರು ಕಷ್ಟಪಡುತ್ತಿರುವರು.

ತ್ಯಾಮಗೊಂಡ್ಲು — ಜೂಲೈ ೩೧ನೇ ತಾ ನಿಂದ ಇದುವರೆವಿಗೆ ಊರಲ್ಲಿ ಸುಮಾರು ೪ ಹದ ಮಳೆ ಆಗಿ, ಬಾಡಿಹೋಗುತ್ತಿದ್ದ ಪೈರಿಗೆ ತುಂಬ ಅನುಕೂಲವಾಯಿತು. ಕೆರೆ, ಕಟ್ಟೆಗಳಿಗೆ ಅಲ್ಪಸ್ವಲ್ಪ ನೀರು ಬಂದಿರುತ್ತೆ. ಸಕಾಲದಲ್ಲಿ ಮಳೆ ಬಂದದ್ದರಿಂದ ಜನರ ಸಂತೋಷಕ್ಕೆ ಪಾರವೇ ಇಲ್ಲ — ಇಲ್ಲಿಯ ವರ್ತಕರ ಪೈಕಿ ಕೆಲವರು ತಮ್ಮ ಸೇರುಗಳಿಂದ ಧಾನ್ಯವನ್ನು ಅಳೆದು ಜನರಿಗೆ ಮಾರುತ್ತಿರುವುದಾಗಿ ತಿಳಿಯಬರುತ್ತೆ. ಇದಕ್ಕೆ ಸರ್ಕಾರದ ಅಧಿಕಾರಿಗಳು ಗಮನಕೊಡಬೇಕಾಗಿದೆ — ಇದೇ ಊರಲ್ಲಿ ನಾಲ್ಕು ವರ್ಷಗಳಿಂದಲೂ ಇದ್ದ ಮಿ ಸಿ ಡಬ್ಲ್ಯು ಸಬ್ ಓವರಸಿಯರ್ ಮೈ ಎ ಬಾಪೂರಾಯರಿಗೆ ನೀಲಗಿರಿಗೆ ವರ್ಗವಾಗಿರುವುದಾಗಿ ಹುಕುಂ ಬಂದಿರುತ್ತೆ. ಇವರ ಬದಲಿ ಬೇರೆ ಒಬ್ಬರನ್ನು ಸರ್ಕಾರದವರು ಕಳುಹಿಸುತ್ತಾರೆ. ಅವರೆ ಸದರಿ ರಾಯರವರು ತಮ್ಮ ಕೆಲಸವನ್ನು ಬಹು ಭಕ್ತಿಯಿಂದಲೂ, ಚಟುವಟಿಕೆಯಾಗಿಯೂ ಮಾಡುತ್ತಾ, ಸರ್ಕಾರದವರ ಮತ್ತು ಜನರ ಪ್ರೀತಿಗೆ ಪಾತ್ರರಾಗಿದ್ದರು — ಈಚೆಗೆ ನಮ್ಮ ಮಹಾರಾಜಾ ಸರ್ಕಾರದವರು ಡಾಕ್ಟರುಗಳನ್ನು ವಿದ್ಯಾಶಾಲೆಗಳಿಗೆ ಕಳುಹಿಸಿ ವಿದ್ಯಾರ್ಥಿಗಳ ದೇಹಸ್ಥಿತಿಯನ್ನು ಪರೀಕ್ಷೆ ಮಾಡಿ, ಅವರನ್ನು ಆರೋಗ್ಯಸೂತ್ರಕ್ಕೆ ಸರಿಯಾಗಿ ಇರುವಂತೆ ಮಾಡಲು ಗೊತ್ತುಮಾಡಿರುವಂತೆ ಡಾಕ್ಟರುಗಳು ಆಗಾಗ ಸ್ಕೂಲುಗಳಿಗೆ ಬಂದು ಮಕ್ಕಳ ದೇಹಸ್ಥಿತಿಯನ್ನು ನೋಡುತ್ತಿರುವರು. ಈ ಮಹದುಪಕಾರವನ್ನು ಮಾಡಿದ್ದಕ್ಕಾಗಿ, ಸರ್ಕಾರದವರನ್ನು ಎಷ್ಟು ಸ್ತೋತ್ರಮಾಡಿದರೂ ಸಾಲದು. ಅವರೆ ವಿದ್ಯಾರ್ಥಿಗಳನ್ನು ಮಾತ್ರವೇ ಅಲ್ಲ, ಉಪಾಧ್ಯಾಯರ ದೇಹಸ್ಥಿತಿಯನ್ನೂ ವಿಚಾರಿಸುವಂತೆ ಏರ್ಪಾಡಾದರೆ ಬಹು ಉಪಕಾರವಾಗುತ್ತೆ. ನೀಲ್ಗಿರಿಯ ರೂಲಸು ಜಾರಿಯಲ್ಲಿ ಬಂದಕೂಡಲೇ ಇಲ್ಲಿ ರಕ್ಷಕ ಡಾಕ್ಟರ್ ಮಿ। ವೆಂಕಟಾಚಾರ್ಯರು ಈ ಊರಿನಲ್ಲಿರತಕ್ಕ ಸ್ಕೂಲುಗಳಿಗೆಲ್ಲಾ ಬಂದು ಬಾಲಕರ ದೇಹಸ್ಥಿತಿಯನ್ನು ಬಹು ಆದರದಿಂದ ವಿಚಾರಿಸಿ, ಅನಾರೋಗ್ಯವಂತರಾದ ಬಾಲಕರನ್ನು ದಿನವೂ ಆಸ್ಪತ್ರೆಗೆ ಬರಮಾಡಿಕೊಂಡು ಅವರಿಗೆ ಔಷಧಕೊಟ್ಟು ಉಪಚರಿಸುತ್ತಿರುವರು — ಇಲ್ಲಿನ ಎ ವಿ ಸ್ಕೂಲಿನಿಂದ ಈ ದಫಾ ನವಂಬರ್ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗೆ ಇಂಗ್ಲೀಷಿಗೆ ಇಪ್ಪತ್ತು, ಕನ್ನಡಕ್ಕೆ ೧೨ ಮಂದಿ, ಸಂಸ್ಕೃತಕ್ಕೆ ೫ ಮಂದಿ, ಈ ರೀತಿ ವಿದ್ಯಾರ್ಥಿಗಳು ಅಪ್ಲಿಕೇಷನ್ ಮಾಡಿರುತ್ತಾರೆ — ಈ ಸ್ಕೂಲಿನ ವಿದ್ಯಾರ್ಥಿಗಳ ಅಂಗಸಾಧನೆ ವಿಷಯದಲ್ಲಿ ಉಪಾಧ್ಯಾಯರುಗಳು ವಿಶೇಷ ಲಕ್ಷ್ಯಕೊಡುತ್ತಾರೆಂದು ನಂಬುತ್ತೆ.

ದೊಡ್ಡಬಳ್ಳಾಪುರ — ಕಳೆದ ವಾರ ಈ ಕಡೆಯಲ್ಲಿ ಚೆನ್ನಾಗಿ ಮಳೆ ಸುರಿಯಿತು. ಕೆರೆಗಳಿಗೆ ೩ ೪ ತಿಂಗಳ ನೀರು ಬಂದಿದೆ. ಧಾರಣೆಗಳು ಮಾತ್ರ ಇಳಿಯಲಿಲ್ಲ. ರಾಗಿ ರೂಪಾಯಿಗೆ ೧೧ ಸೇರ, ಅಕ್ಕಿ ೬ ೭ ಸೇರು ಮಾರಾಟವಾಗುತ್ತೆ — ಹುಚ್ಚುನಾಯಿ ಕಡಿದ ನಾಲ್ಕು ಜನರನ್ನು ನಮ್ಮ ಅಮಲ್ದಾರರು ಮತ್ತು ಮುನಿಸಿಪಲ್ ಮೆಂಬರುಗಳು ಸಹ ಸಭೆ ಸೇರಿ ಕೂನ್ನೂರು ಆಸ್ಪತ್ರೆಗೆ ಸುಮಾರು ೩೦ ರೂಪಾಯಿ ಖರ್ಚುಕೊಟ್ಟು ಕಳುಹಿಸಿದ್ದರು. ಆ ನಾಲ್ಕು ಮಂದಿಯೂ ಕೆಲವು ವಾರ ಅಲ್ಲಿದ್ದು ಗುಣಹೊಂದಿ ವಾಪಸು ಇಲ್ಲಿಗೆ ಬಂದರು — ಮುನಿಸಿಪಲ್ ದಫೇದಾರರು ಮತ್ತು ಜವಾನರು ಊರನ್ನು ಶುಚಿಯಾಗಿಡುವುದಕ್ಕೆ ಬಹಳ ಪ್ರಯಾಸ ಪಡುತ್ತಾರೆ. ಜನರ ಸ್ವಂತ ಸವೇಕನದ ಪಾಳು ಗೋಡೆಗಳಲ್ಲಿರುವ ಕಬರಾವನ್ನು ನೋಟಿಸ್ ಕೊಟ್ಟು ಸಾಫ್ ಮಾಡಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆಂದು ತಿಳಿದು ಸಂತೋಷವಾಗಿದೆ. ಹೀಗೆ ಮಾಡಿದರೆ ಬಹಳ ಒಳ್ಳೇದು. ಸುಂಕದ ವಸೂಲಿಗೆ ಹೊಸದಾಗಿ ದಫೇದಾರ್ ಗುಮಾಸ್ತರು ಮತ್ತು ಗುಮಾಸ್ತೆ ನೇಮಕವಾಗಿ ಸುಂಕವನ್ನು ಮುತುವರ್ಜಿಯಿಂದ ವಸೂಲ್ ಮಾಡಿ, ಆದಾಯವನ್ನು ಮೊದಲಿಗಿಂತ ಹೆಚ್ಚು ಮಾಡಿದ್ದಾರೆಂದು ತಿಳಿದು ಬರುತ್ತೆ — ಊರಿಗೆ ನೀರಿನ ನಲ್ಲಿ ಯಾವಾಗ ಏರ್ಪಾಡಾಗುತ್ತದೋ ಎಂದು ಜನರು ಬಹು ಆತುರದಿಂದ ಎದುರು ನೋಡುತ್ತಾ ಇದ್ದಾರೆ. ರೈಲ್ವೆ ಟ್ರಾಫಿಕ್ ಇನ್‌ಸ್ಪೆಕ್ಟರು ಜುಲೈ ತಾ ೧೨ರಲ್ಲಿ ಈ ಬಳ್ಳಾಪುರದ ಸ್ಟೇಷನ್ ವೆಯಿಟಿಂಗ್ ರೂಮಿನಲ್ಲಿ ರಾತ್ರಿ ಮಲಗಿ ನಿದ್ದೆಮಾಡುವಾಗ ಯಾರೋ ಕಳ್ಳರು ನುಗ್ಗಿ ಅವರ ಸಂದೂಕವನ್ನು ಒಡೆದುಹಾಕಿ ೧೯ ಚಿಲ್ಲರೆ ರೂಪಾಯನ್ನು ತಗೆದುಕೊಂಡು, ಅವರ ಚರ್ಮದ ಚೀಲವನ್ನು ಕತ್ತರಿಸಿ ದುಡ್ಡು ಏನೂ ಸಿಕ್ಕದೆ ಹೋದದ್ದನ್ನು ನೋಡಿ ಒಳಗಿದ್ದ ಬಟ್ಟೆಗಳನ್ನು ಬಿಸಾಟು ಹೋಗಿದ್ದರು. ಅವರು ಒಳಗೆ ನಿದ್ದೆ ಮಾಡುವಾಗ ಇಷ್ಟು ಕೆಲಸವನ್ನು ಮಾಡಿರುವಾಗ್ಗೆ ಕಳ್ಳರ ಸಾಹಸವು ಎಷ್ಟೆಂದು ಹೇಳೋಣ — ಚಾಲಗೆರೆ ಒಡ್ಡರ ವೆಂಕಟ ಎಂಬುವನಿಗೆ ಗಂಡು ಮಕ್ಕಳು ಇಲ್ಲದ್ದರಿಂದ ಗಂಗನೆಂಬುವನನ್ನು ಮನೆ ಅಳಿಯತನಕ್ಕೆ ಇಟ್ಟುಕೊಂಡು, ಮಗಳನ್ನು ಮದುವೆ ಮಾಡಿಕೊಟ್ಟಿದ್ದನು. ಹೀಗೆ ಇರುವಾಗ ಏನೋ ಕಾರಣದಿಂದ ಮಾವನಾದ ವೆಂಕಟನನ್ನು ಎರಡು ತಿಂಗಳ ಹಿಂದೆ ಉಜ್ಜನಿ ಹೊಸಳ್ಳಿ ಗುಡ್ಡದ ಹಾಲು ಚಿಲುಮೆಯ ಬಳಿ ಖೂನ್‌ಮಾಡಿ ಗದಿಯಂತೆ ಇದ್ದ ಒಂದು ಬಂಡೆಯ ಸಂದಿನಲ್ಲಿ ದುಪಟಿಯಲ್ಲಿ ಗಂಟುಕಟ್ಟಿ ತುರುಕಿ ಅದ್ದಲಾಗಿ ಒಂದು ಬಂಡೆಯನ್ನು ಮುಚ್ಚಿದ್ದನು. ಇದು ಒಂದು ತಿಂಗಳ ತನಕ ಯಾರಿಗೂ ಪತ್ತೆ ಇಲ್ಲದೆ ಇತ್ತು. ನಮ್ಮ ಅಮಲ್ದಾರರು ಆ ಕಡೆ ಸರ್ಕೀಟು ಹೋಗಿದ್ದಾಗ ಇದನ್ನು ಪತ್ತೆ ಮಾಡಿ ಖೈದಿಯನ್ನು ಇಲ್ಲಿನ ಲಾಕಪ್ಪಿನಲ್ಲಿ ಇಡಿಸಿ, ಇನ್ನೊಬ್ಬ ಮಂದಿಯನ್ನು ಜಾಮೀನಮೇಲೆ ಬಿಟ್ಟಿದ್ದಾರೆ. ಇದನ್ನು ಪತ್ತೆ ಮಾಡುವವರಲ್ಲಿ ಜಮಾದಾರ್ ಗುಡಿಯಪ್ಪನವರು ಸಾಹಸ ಪಟ್ಟಿದ್ದಾರೆ. ಇಷ್ಟು ಕಷ್ಟಪಟ್ಟು ಪತ್ತೆ ಮಾಡಿ ಲಾಕಪ್ಪಿನಲ್ಲಿ ಇಟ್ಟಿದ್ದ ಖೂನ್‌ಖೈದಿಯು ೮ ದಿನಗಳ ಹಿಂದೆ ತಪ್ಪಿಸಿಕೊಂಡು ಹೋದನು. ತಪ್ಪಿಸಿಕೊಂಡ ಎರಡು ದಿನದಲ್ಲೇ ಸಾರ್ಜೆಂಟ್ ಪಟೇಲರು ಇವನನ್ನು ಅಕಸ್ಮಾತ್ತಾಗಿ ಕಂಡು ಹಿಡಿದರೆಂದು ತಿಳಿಯಿತು. ಈ ಪೋಲೀಸರ ಶ್ರದ್ಧೆಯಿಂದ ಪೋಲೀಸ ಇಲಾಖೆಗೆ ಮರ್ಯಾದೆ ಬಂದಂತಾಯಿತು.

ಅರಸೀಕೆರೆ — ಕಳೆದ ಎರಡು ವಾರಗಳಿಂದಲೂ ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ಇದ್ದಾಗ್ಯೂ ನೆಲ ಹಸಿಯಾಗಿರುವ ಕಡೆಗಳಲ್ಲಿ ಹಿಂದೆ ಬಿತ್ತಿದ ರಾಗಿ ಬೆಳೆಯು ವಯಸ್ಸಿಂದ ರಾಗಿ ಪೈರು ಚೆನ್ನಾಗಿದೆ. ಜೋಳ ಮತ್ತು ಎಳ್ಳಿನ ಪೈರುಗಳು ಕೊಯ್ಲಿಕ್ಕೆ ಸಿದ್ಧವಾಗುತ್ತವೆ. ಅಕ್ಕಿ, ರಾಗಿಗಳ ಧಾರಣೆ ಏನೂ ಕಮ್ಮಿಯಾಗಲಿಲ್ಲ. ಬೆಲ್ಲ, ಮೆಣಸಿನಕಾಯಿ, ತುಪ್ಪ, ಮಸಾಲೆಗಳ ಧಾರಣೆಗಳೆಲ್ಲಾ ಏರುತ್ತಾ ಇರುವುದರಿಂದ ಪ್ರತಿ ತಿಂಗಳಲ್ಲೂ ಮಾಮೂಲ್ ಖರ್ಚಿಗೆ ಇಮ್ಮಡಿಯಾಗಿ, ಕಳೆದ ೫ ವರ್ಷಗಳಿಂದಲೂ ಜನರು ತುಂಬಾ ಕಷ್ಟಪಡುತ್ತಿದ್ದಾರೆ — ಕಳೆದ ಮೇ ತಿಂಗಳ ಅಂತ್ಯದಲ್ಲಿ ಸರ್ಕಾರಿ ಗೆಜೆಟ್ಟಿನಲ್ಲಿ ತಿಳಿಸಿರುವಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ವಿಷಯ ಅನೇಕರಿಗೆ ಚೆನ್ನಾಗಿ ಗೊತ್ತಿಲ್ಲವಾದದ್ದರಿಂದ ಅದನ್ನು ವಿವರಿಸುವಂತೆ ಪ್ರಾರ್ಥಿಸುತ್ತೇನೆ. ಅದೇನೆಂದರೆ, ಮೈಸೂರು ಸಂಸ್ಥಾನದೊಳಗೆ ಎಲ್ಲಾ ತಾಲ್ಲೂಕುಗಳಲ್ಲೂ ಬಗರ್ ರೈತನಿಗಾದರೂ ಖುಷ್ಕಿ ಫಸಲು ಗತಸಾಲಿನಲ್ಲಿ ೪ ಆಣೆಯಷ್ಟಾಗಲೀ, ಅದಕ್ಕಿಂತ ಕಡಮೆಯಾಗಲೀ ಆಗಿದ್ದರೆ ಅಂಥವನಿಗೆ ಅರ್ಧ ಕಂದಾಯ ರಿಮಿಷನ್ ಮಾಡಲ್ಪಡುವದೆಂದು ನಮೂದಾಗಿದೆ. ಅದು ನಿಜವೆಂದರೆ ಈ ಅರಸೀಕೆರೆಯ ಎಲ್ಲಾ ರೈತರಿಂದ ಕಳೆದ ಸಾಲಿನ ಪೂರಾ ಕಂದಾಯಗಳನ್ನು ವಸೂಲ್ಮಾಡಿದ್ದಾರೆ. ಈ ಪ್ರಾಂತ್ಯದಲ್ಲಿ ಅನೇಕರಿಗೆ ಎರಡಾಣೆ ಪೈರು ಸಹ ಆಗಿಲ್ಲವಾದರೂ ಅವರಿಂದ ಕಂದಾಯ ಬೇಬಾಕಿ ವಸೂಲ್ಮಾಡಿದ್ದಾರೆ. ಈ ವಿಷಯ ನಾನು ಅಮಲ್ದಾರರವರಲ್ಲಿ ಮಾತಾಡಿದಾಗ್ಗೆ ಅವರು — ಖುಷ್ಕಿ ಫಸಲು ಆಗದೆ ಇದ್ದಾಗ್ಯೂ ಪೂರಾ ಕಂದಾಯ ವಸೂಲ್ಮಾಡಬೇಕೆಂದು ಸರ್ಕಾರರು ಇದೆ ಎಂಬದಾಗಿಯೂ, ಮೇ ೩೧ನೇ ತಾರೀಖಿನ ಗೆಜೆಟ್ಟಿನಲ್ಲಿ ತರಿ ಜಮೀನುಗಳಿಗೆ ಅರ್ಧ ರಿಮಿಷನ್ ರಿಯಾಯಿತಿ ತೋರಿಸಬೇಕೆಂದು ವಿವರಿಸಿದೆ ಎಂಬದಾಗಿಯೂ ಹೇಳಿದರು. ಪತ್ರಿಕೆಯಲ್ಲಿ ಪ್ರಕಟಿಸಿರುವ ಸರ್ಕಾರಿ ಹುಕುಮಿನಲ್ಲಿ ಖುಷ್ಕಿ ಜಮೀನುಗಳಿಗೂ ಈ ರಿಯಾಯಿತಿಯುಂಟು ಎಂಬದಾಗಿ ಕಾಣಿಸುವೆ. [ಹೀಗೆ ವಾಸ್ತವಾಂಶ ಕಂದಾಯದ ರಿಮಿಷನ್ ವಿಷಯವಾಗಿ ಗವರ್ನ್‌ಮೆಂಟಿನವರು ಕೊಟ್ಟಿರುವ ಹುಕುಮಿನ ೬ನೇ ಪ್ಯಾರಾದಲ್ಲಿ — ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ — ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳಲ್ಲಿ ಖುಷ್ಕಿ ಬೆಳೆ ಸಂಪೂರ್ಣವಾಗಿ ಆಗದಿದ್ದರೂ ಅಥವಾ ಆ ಬೆಳೆ ಸಾಧಾರಣ ಸಾಲಿನ ಬೆಳೆಯ ಶೇಕಡಾ ೨೫ ರಷ್ಟಕ್ಕೆ ಕಡಿಮೆಯಾಗಿದ್ದರೂ (ಅಂದರೆ ಸಾಧಾರಣ ೧೬ ಆಣೆ ಪೈರಿಗೆ ೪ ಆಣೆಗೆ ಕಡಿಮೆ ಬೆಳೆ ಆಗಿದ್ದರೆ) ಅರ್ಧ ಕಂದಾಯವನ್ನು ಬಿಟ್ಟು ಬಾಕಿ ಅರ್ಧವನ್ನು ವಸೂಲ್ಮಾಡಬೇಕು ಎಂದು ನಮೂದಾಗಿದೆ. ಅದ ಕಾರಣ ಕಂದಾಯವನ್ನು ಆರೇವಾರಿ ನಿಲ್ಲಿಸಬೇಕೆಂದು ಹುಕುಂ ಆಗಿದೆಯೋ ಶಾಶ್ವತ ಅದನ್ನು ರಿಮಿಷನ್ ಮಾಡಬೇಕೆಂದು ತಿಳಿಯಲ್ಲ. ಹೀಗೆ ಬೆಳೆ ತಪ್ಪಿಹೋದ ರೈತರು ಅರ್ಧವನ್ನು ನಿಲ್ಲಿಸಿಕೊಂಡು ಮುಂದೆ ಪಾವತಿ ಮಾಡಬಹುದು. ಅನುಕೂಲಸ್ಥರು ಪಾವತಿ ಮಾಡುವುದೇ ಒಳ್ಳೆಯದು. ಅಮಲ್ದಾರರು ನಿರ್ಗತಿಕರಾದ ರೈತರಿಂದಲೂ ಪೂರಾ ಕಂದಾಯವನ್ನು ವಸೂಲ್ಮಾಡಿದ್ದರೆ ತಪ್ಪೆಂದು ನಮಗೆ ತೋರುತ್ತೆ — ಎಡಿಟರ್] — ಇಲ್ಲಿನ ಮುನಿಸಿಪಲ್ ಲಾಂದ್ರಗಳಲ್ಲಿ ಬೇಕಾದ ಕಳೆದ ರಾತ್ರಿ ಒಬ್ಬ ಯೌವನಸ್ಥನು ಕಳ್ಳನೆಂದು ಬಳಿ ಕತ್ತಲೆಯಲ್ಲಿ ಚರಂಡಿಯಲ್ಲಿ ಬಿದ್ದು ಪೆಟ್ಟು ತಿಂದು ಗಾಯಪಟ್ಟನು. ಬಹಳ ರಕ್ತಸ್ರಾವ ಸುರಿಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಾರೆ. ನಮ್ಮ ಅಮಲ್ದಾರ್ರವರು ಮುನಿಸಿಪಲ್ ಲಾಂದ್ರಗಳ ವಿಷಯದಲ್ಲಿ ತಕ್ಕ ಮುತುವರ್ಜಿ ತೋರಿಸುವರಾದರೆ ಕತ್ತಲೆಯಲ್ಲಿ ಅನೇಕರಿಗೆ ಉಂಟಾಗುವ ಈ ರೀತಿಯ ಕಷ್ಟಗಳು ತಪ್ಪುವವು. ಈ ಅರಸೀಕೆರೆ — ಅನೇಕ ಕಡೆ ಕತ್ತಲ ಕಾಲದಲ್ಲಿ ದೀಪವಿರುವುದೇ ಇಲ್ಲ. ಇದನ್ನು ಅವರೇ ನೋಡಿ ಪರಿಹರಿಸುವುದರಿಂದ ಮುಂದೆಯಾದರೂ ಎಲ್ಲಾ ದೀಪಗಳ ಏರ್ಪಾಟು ಜನರಿಗೆ ಸುಖಕರವಾಗುವುದೆಂದು ನಿರೀಕ್ಷಿಸಲಾಗಿದೆ.

ಮದ್ದಗಿರಿ — ಆಶ್ರಿತ ಹೊಲಗಳನ್ನು ಬಿತ್ತಿದ ಮೇಲೆ ಆದರೆ ಮಳೆ ಕೊಂಚ ಬಿದ್ದು ಬೀಜ ಹುಟ್ಟಲು ಸಹಾಯವಾಯಿತೇ ಹೊರತು ಹದ ಮಳೆ ಆಗಲೇ ಇಲ್ಲ. ಇಂಥದ್ದರಲ್ಲೂ ಪೈರುಗಳು ಚೆನ್ನಾಗಿದ್ದರೂ ಈಚಿಗೆ ಮಳೆ ಸಂಪೂರ್ಣವಾಗಿ ನಿಂತೇ ಹೋಯಿತು. ೪ ನೇ ತಾ ಬುಧವಾರ ರಾತ್ರಿ ಸೋನೆ ಮಳೆ ಆಯಿತು. ಇದರಿಂದ ಬಾಡಿ ಹೋಗಿದ್ದ ಪೈರಿಗೆ ಕೊಂಚ ಕಳೆ ಬರಲು ಅನುಕೂಲವಾಯಿತೆಂದು ಧಾರಾಳವಾಗಿ ಹೇಳಬೇಕು. ಮುಂದೆಯಾದರೂ ಕ್ರಮವಾಗಿ ಮಳೆ ನಡೆಸುತ್ತಾ ಬಂದರೆ ತಕ್ಕಷ್ಟು ಬೆಳೆ ಆಗುವುದರಲ್ಲಿ ಅಡ್ಡಿಯಿಲ್ಲ. ಅಷ್ಟು ಬೆಳೆ ಆಗದಿದ್ದರೆ ಈಗಿರುವ ಬಡ ಜನರ ತೊಂದರೆಗಳು ಹತ್ತರಷ್ಟು ಜಾಸ್ತಿಯಾಗುವದು ಖಂಡಿತವೆಂದು ಹೇಳುವದಕ್ಕೆ ಕೆಲವು ಕಾರಣಗಳುಂಟು — ೫ ೬ ಮೈಲಿಗಳಿಂದ ಹೊರದಲ್ಲಿರುವ ಗೊರವನಹಳ್ಳಿಗೆ ಹೆಂಗಸರೂ, ಹುಡುಗರೂ, ಹುಡುಗಿಯರೂ ಗುಂಪು ಗುಂಪಾಗಿ ಹೋಗುವರು. ಕೆರೆಗಳಲ್ಲಿರುವ ಕುಂಕಲುಗಡ್ಡೆಗಳನ್ನು ಅಗೆದುಕೊಂಡು ಬರುವದಕ್ಕೂ ಅನೇಕರು ಹೋಗುವರು. ಈಚಲುಗಡ್ಡೆಯನ್ನೂ ಹುಣಸೆ ಬೀಜವನ್ನೂ ಬಹು ಜನರು ತಿನ್ನುತ್ತಿರುವರು. ಒಂದು ವೇಳೆ ಒಂದು ನಿಂಬೇಕಾಯಿ ಗಾತ್ರ ಹಿಟ್ಟು ತಿಂದರೆ ೩—೪ ಹೊತ್ತಿನ ವರೆಗೂ ಇತರ ಪದಾರ್ಥಗಳಿಂದ ಹೊಟ್ಟೆ ತುಂಬಿಸಿಕೊಳ್ಳುವರು. ಆನೆಗಳಂತೆ ಇದ್ದ ಆಳುಗಳು ಯಾವ ಶಕ್ತಿಯೂ ಇಲ್ಲದೇನೇ ಕೇವಲ ಬಲಹೀನರಾಗಿರುವವನ್ನು ನೋಡಬಹುದು. ಇದು ಅನೇಕ ವಾಚಕರಿಗೆ ಗೊತ್ತಾದ ಸಂಗತಿಯೇ ಆಗಿದೆ — ಮದ್ದಗಿರಿ ಸಂತೆಗೆ ಹೋಗುತ್ತಿದ್ದ ಗಾಡಿಗಳಲ್ಲಿದ್ದ ರಾಗಿ ಚೀಲಗಳನ್ನು ಕೊಂಡಗದಾಳದ ಹತ್ತಿರ ಇರುವ ವಡ್ಡರಿಬ್ಬರು ಕೊಯಿದು ರಾಗಿಯನ್ನು ಸುರಿಸಿಕೊಳ್ಳುತ್ತಿದ್ದದ್ದನ್ನು ಗಾಡಿಯವರು ಹಿಡಿದು ಮೊಕದ್ದಮೆ ಮಾಡಲಾಗಿ ಅವರಿಬ್ಬರಿಗೆ ಸಜಾ ಆಯಿತೆಂದು ಕೇಳಿದೆವು. ಮದ್ದಗಿರಿಗೆ ಸುಮಾರು ೫ ಮೈಲಿ ದೂರದಲ್ಲಿರುವ ದಬ್ಬೆಗಟ್ಟವೆಂಬ ಗ್ರಾಮದಲ್ಲಿ ಹಗಲಿನಲ್ಲೇ ಬೆಂಗಳೂರು ಸಿದ್ದಪ್ಪನೆಂಬಾತನ ಮನೆಗೆ ನುಗ್ಗಿ ಸುಮಾರು ೬೦೦—೫೦೦ ರೂಪಾಯಿಗಳೂ ನಗಗಳೂ ಕಳುವಾದವು. ಗುಮಾಸ್ತರ ಮೇಲೆ ಇದ್ದರು. ಆ ಸ್ಥಳದ ನಾಯ್ಕರನ್ನು ಪೋಲೀಸಿನವರು ಮದ್ದಗಿರಿಗೆ ಹಿಡಿದುಕೊಂಡು ಹೋದರು. ಮಾಲುಗಳು ಇನ್ನೂ ಪತ್ತೆ ಆಗಿಲ್ಲ. ಮುಂದೆ ಪೋಲೀಸಿನವರು ಪತ್ತೆ ಮಾಡಿಯಾರು. ಗುಮಾಸ್ತೆಯವರ ಮೇಲೆ ಕಳುವು ಸಾಬೀತಾಗುತ್ತೋ ಇಲ್ಲವೋ ಗೊತ್ತಿಲ್ಲ. ಈಚೀಚಿಗೆ ಕಳ್ಳತನಗಳು ಅಲ್ಲಲ್ಲಿ ನಡೆಯುತ್ತವೆಂದು ಸಮಾಚಾರಗಳು ಬರುತ್ತಿವೆ. ಹೀಗಲ್ಲಾ ಇದ್ದರೂ ಗ್ರಾಮಕಾವಲುಗಳ ವಿಷಯದಲ್ಲಿ ಪೋಲೀಸಿನವರೂ ಮುಖ್ಯ ಪಟೇಲರೂ ಮುತುವರ್ಜಿಯಾಗಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ಇನ್ನು ಮುಂದೆ ಪೋಲೀಸಿನವರೂ ಪಟೇಲರೂ ಎಚ್ಚರಿಕೆಯಿಂದ ತಮ್ಮ ಕೆಲಸಗಳನ್ನು ಮಾಡಿದಲ್ಲಿ ಅನೇಕರ ಪ್ರಾಣ ಮಾನ ಧನಗಳನ್ನು ಕಾಪಾಡುವದರಲ್ಲಿ ಯಾವ ಅಡ್ಡಿಯೂ ಇರುವದಿಲ್ಲ — ಮದ್ದಗಿರಿ ತಾಲ್ಲೂಕಿನ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಈ ಸಲ ಹೋಗತಕ್ಕವರು ಬರಗಾಲ ಈ ಸೀಮೆ ಅನುಭವಿಸುವ ಸಂಗತಿಗಳ ವಿಚಾರದಲ್ಲಿ ಚರ್ಚಿಸಬೇಕಾಗಿದೆ. ಏನೆಂದರೆ ಪ್ರತಿ ಒಬ್ಬ ರೈತನಿಗೂ ಒಂದೊಂದು ಖಾತೆ ಇರಬೇಕು ಎಂದು ಕೆಲ ಕಾಲಗಳ ಹಿಂದೆ — ಎಂದರೆ ಒಬ್ಬ ಖಾತೆದಾರನಿಗೆ ೪ ಮಂದಿ ಸಿಕ್ಮಿದಾರರು ಇರುವರು. ಇವರಿಗೆ ನೋಟೀಸು ಬಂದರೆ ಕಂದಾಯ ಕೊಡರು. ಹಾಗೆ ಕೊಡದಿದ್ದಲ್ಲಿ ಪಟೇಲ್ ಶಾನುಭೋಗರು ಖಾತೆದಾರನನ್ನು ಕೇಳುವರು. ಆಗ ಖಾತೆದಾರನು ಬಹು ಕಷ್ಟದಿಂದ ಎಲ್ಲಿಯಾದರೂ ಸಾಲ ಮಾಡಿ ತಂದು ಕಂದಾಯ ಕೊಡಬೇಕು. ಸಿಕ್ಮಿದಾರನಿಗೆ ಮನೆ ಕಂದಾಯ ಹಾಕುವರು. ಕೊಡದಿದ್ದಲ್ಲಿ ಇವನಿಗೆ ನೋಟೀಸು ಬರುತ್ತೆ. ಈ ವಿಚಾರವನ್ನು ಅಮಲ್ದಾರರಲ್ಲಿ ಹೇಳಿಕೊಂಡರೆ ಅವರು ಸಿವಿಲ್ ಕೋರ್ಟಿಗೆ ಹೋಗೆನ್ನುತ್ತಾರೆ. ಸಿಕ್ಮಿದಾರನು ತನ್ನ ಹೆಸ್ರಿಗೆ ಜಮಾಬಂದಿ ಖಾತೆ ಮಾಡಿಸಿ ತೆಗೆದುಕೊಳ್ಳುವವನು ಪಟ್ಟೆದಾರನ ಸಮ್ಮತಿ ರುಜು ಬೇಕೆನ್ನುವನು. ಸಿಕ್ಮಿದಾರನು ಸರ್ಕಾರಕ್ಕೆ ಸುಮಾರು ೧೦ ರೂಪಾಯಿ ಕೊಡುತ್ತಾನೆಂದು ಇಟ್ಟುಕೊಳ್ಳೋಣ. ಅಂಥವನು ಬಂದೂಕದ ಲೈಸೆನ್ಸಿಗೆ ಅರ್ಜಿ ಬರೆದುಕೊಂಡು ಕ್ರಮಪ್ರಕಾರ ಎಲ್ಲಾ ಅನುಕೂಲವಾದರೂ ಕೂಡ ಇವನಿಗೆ ಸ್ವಂತ ಖಾತೆ ಇಲ್ಲದ್ದರಿಂದ ಲೈಸೆನ್ಸು ಕೊಡಲಾಗುವದಿಲ್ಲವೆಂದು ಅಧಿಕಾರಿಗಳು ತಿರಸ್ಕರಿಸುವರು. ಈ ಪ್ರಕಾರವಾಗಿ ರೈತರು ಅನುಭವಿಸುತ್ತಿರುವದು ನಿಜವೆಂದು ಅನೇಕರ ಅನುಭವಕ್ಕೆ ಬಂದಿರುವದು. ಈ ಸಂಗತಿಗಳನ್ನು ಮೆಂಬರುಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಸೂಚಿಸಿ ರೈತರಿಗೆ ಇದರಿಂದುಂಟಾಗಿರುವ ತೊಂದರೆಯನ್ನು ಪರಿಹರಮಾಡುವರೆಂದು ಪ್ರಾರ್ಥನೆ.

ವಿದೇಶ ವರ್ತಮಾನಗಳು.

ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರು ಕೌಸ್ ಕಳುಹಿಸಿದ್ದ ಪೋರ್ಚುಗಲ್ ದೊರೆಯವರು ಇಷ್ಟರಲ್ಲೇ ಇಂಗ್ಲಾಂಡಿಗೆ ಹೋಗಿ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸುವವರಾಗಿದ್ದಾರೆ.

* * *

ಬರುವ ತಿಂಗಳಲ್ಲಿ ತುರ್ಕಿ ಸುಲ್ತಾನರವರು ರಷ್ಯಾ ರಾಜ್ಯಕ್ಕೆ ದಯಮಾಡಿ ಲಿವಾಡಿಯಾ ಎಂಬ ಪಟ್ಟಣದಲ್ಲಿ ಜಾರ್ ಚಕ್ರವರ್ತಿಯವರನ್ನು ಕಂಡು ಬರುತ್ತಾರೆಂದೂ, ಆ ತರುವಾಯ ಚಕ್ರವರ್ತಿಯವರು ತುರ್ಕಿ ಸುಲ್ತಾನರವರಿಗೆ ಮರು ಭೇಟಿಯನ್ನು ಕೊಡುವರೆಂದೂ ಪ್ರಕಟವಾಗಿದೆ.

* * *

ಚೀನಾ ರಾಜ್ಯದಿಂದ ೫,೦೦೦ ಹಂದಿಗಳ ಮಾಂಸವನ್ನು ಕೆಡದಂತೆ ಮಂಜುಗಡ್ಡೆಗಳಲ್ಲಿ ಸೇರಿಸಿ ಲಂಡನ್ ಪಟ್ಟಣಕ್ಕೆ ವ್ಯಾಪಾರಾರ್ಥವಾಗಿ ಕಳುಹಿಸಿದರು. ಆ ಮಾಂಸವು ಆರೋಗ್ಯಕರವಾಗಿದೆಯೋ ಇಲ್ಲವೋ ಎಂದು ಅಲ್ಲಿನ ಹೆಲ್ತ್ ಆಫೀಸರನವರು ಶೋಧನೆ ಮಾಡಿದರು. ಚೀನಾ ರಾಜ್ಯದಿಂದ ಈ ಸರಕು ವಿಲಾಯಿತಿಗೆ ರವಾನೆಯಾದದ್ದು ಇದೇ ಪ್ರಾರಂಭವಾಗಿದೆ.

* * *

ವಿಲಾಯಿತಿಗೆ ಸೇರಿದ ಲಿವರ್‌ಪೂಲ್ ಪಟ್ಟಣದಲ್ಲಿ ಹಿಂದೆ ಹತ್ತಿ ಕಾರ್ಖಾನೆಗಳ ಪೈಕಿ ಒಂದು ೨೦ ಲಕ್ಷ ರೂಪಾಯಿ ಬೆಲೆಯುಳ್ಳದ್ದು ಸುಟ್ಟುಹೋಯಿತು. ಯಾರೋ ದುಷ್ಕರ್ಮಿಗಳು ಈ ಅಕೃತ್ಯವನ್ನು ನಡೆಸಿರುವಂತೆ ಕಂಡುಬಂದಿರುವ ಕಾರಣ ಆ ಮನುಷ್ಯರನ್ನು ಹಿಡಿದುಕೊಡುವವರಿಗೆ ೭,೫೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಆ ಕಾರ್ಖಾನೆಯವರು ಪ್ರಕಟಿಸಿದ್ದಾರೆ.

* * *

ಸರ್ ಕರ್ಜನ್ ವೈಲಿಯವರ ಕೊಲೆ ನಡೆಸಿದ ಮದನಲಾಲ್ ಡಿಂಗ್ರನಿಗೆ ಮರಣದಂಡನೆಯ ಶಿಕ್ಷೆಯಾಯಿತು. ಅವನನ್ನು ಈ ತಿಂಗಳ ತಾ ೧೭ರಲ್ಲಿ ಗಲ್ಲಿಗೆ ಹಾಕುವಂತೆ ಗೊತ್ತಾಗಿದೆ. ಅಲ್ಲದೆ ಸರ್ ವೈಲಿಯವರ ಪತ್ನಿಯವರಿಗೆ ಹಿಂದೂಸ್ಥಾನದ ರಾಜ್ಯದಿಂದ ವರ್ಷಕ್ಕೆ ... ರೂಪಾಯಿ ಪೆನ್ಷನ್ ಸಲ್ಲಿಸಬೇಕೆಂದು ... ಹುಕುಂ ಕೊಟ್ಟಿದ್ದಾರೆ.

* * *

ಮೆಕ್ಸಿಕೊ ದೇಶಕ್ಕೆ ಸೇರಿದ ಮೊಂಟೆರೆ ಪಟ್ಟಣದಲ್ಲಿ ಸುತ್ತುಮುತ್ತಿನ ಪ್ರಾಂತ್ಯಗಳಲ್ಲೂ ಭಯಂಕರವಾದ ಭೂಕಂಪ ಪ್ರಾಪ್ತವಾಯಿತು. ಚಿಲ್ಪಾನ್ಸಿಂಗೊ, ಅಕಾಪೊ ಎಂಬ ಸ್ಥಳಗಳು ನಾಶಹೊಂದಿದವು. ಅಕಪಲ್ಕೋದಲ್ಲೂ ಅರ್ಧ ಭಾಗ ಹಾಳಾಯಿತು. ನೂರಾರು ಜನರು ಮೃತಪಟ್ಟರು. ಇಗುಲಾಲಾ ಮತ್ತು ಗುಪ್ಪೋರೊಗಳಲ್ಲಿ ಅನೇಕಾನೇಕ ಕಟ್ಟಡಗಳೂ ಮನೆಗಳೂ ನೆಲಸಮನಾದವು.

* * *

ಜಪಾನ್ ರಾಜ್ಯಕ್ಕೆ ಸೇರಿದ ಒಸಾಕಾ ಪಟ್ಟಣದಲ್ಲಿ ಬೆಂಕಿ ಬಿದ್ದು ಸುಮಾರು ನಾಲ್ಕು ಚದರಮೈಲಿ ವ್ಯಾಪ್ತಿಯೊಳಗಿದ್ದ ಕಟ್ಟಡಗಳೂ ಮನೆಗಳೂ ಸುಟ್ಟು ಬೂದಿಯಾದವು. ೧೩,೦೦೦ ಸಾವಿರ ಮನೆಗಳೂ ಬೌದ್ಧರ ಪ್ರಸಿದ್ಧವಾದ ಒಂದು ದೇವಾಲಯವೂ ನಾಶಹೊಂದಿದವು. ಅನೇಕರು ಬೆಂಕಿಯಲ್ಲಿ ಸಿಕ್ಕಿ ಮೃತಪಟ್ಟರೆಂದೂ ಸಾವಿರಾರು ಪ್ರಜೆಗಳು ಅಲೆಯುತ್ತಿದ್ದಾರೆಂದೂ ತಂತಿ ವರ್ತಮಾನ ಬಂದಿದೆ.

* * *

ಸ್ವೀಡನ್ ರಾಜ್ಯದಲ್ಲಿ ಕೂಲಿಕಾರರಾದ ಪ್ರಜೆಗಳು ಸುಮಾರು ಒಂದೂವರೆ ಲಕ್ಷ ಮಂದಿ ತಮ್ಮ ತಮ್ಮ ಕೆಲಸಗಳ ಮೇಲೆ ಹೋಗದೆ ನಿಂತುಬಿಟ್ಟಿದ್ದಾರೆ. ವ್ಯಾಪಾರ ಕಾರ್ಖಾನೆ ಕೆಲಸ, ರೈಲ್ವೆ, ಟೆಲಿಗ್ರಾಫ್, ಮ್ಯುನಿಸಿಪಲ್ ಮೊದಲಾದ ಕಡೆಗಳಲ್ಲಿ ಕೆಲಸಗಳು ನಡೆಯಲು ಬಹಳ ಕಷ್ಟವಾಗಿದೆ. ಸರ್ಕಾರದವರು ಕೋರ್ಟು ಕಚೇರಿಗಳನ್ನು ಸೈನಿಕರ ಸಹಾಯದಿಂದ ಉಸ್ತುವಾರಿ ಮಾಡುತ್ತಿರುವುದಾಗಿಯೂ, ಆ ಕೂಲಿಕಾರರು ಮಿಮ್ಮ ಗುಂಡನ್ನು ಒದಗಿಸಿಕೊಳ್ಳುತ್ತಿರುವುದಾಗಿಯೂ ಸಮಾಚಾರ ಬಂದಿದೆ.

* * *

ಸ್ಪೈಯಿನ್ ರಾಜ್ಯದಲ್ಲಿ ಅರ ಜನ ಗುಂಪಿನವರು ರಾಜ್ಯಭಾರವನ್ನು ತಪ್ಪಿಸಬೇಕೆಂದು ನಾನಾ ದುಷ್ಟ ಕೃತ್ಯಗಳನ್ನು ನಡೆಸುತ್ತಿದ್ದರಷ್ಟೆ. ಈ ರೀತಿ ದಂಗೆಯೆದ್ದವರು ಸುಮಾರು ೩೦,೦೦೦ ಮಂದಿ ಎಂತಲೂ, ಇವರು ಐದು ದಿನಗಳ ತನಕ ಅನೇಕ ಕ್ರೂರ ಕೃತ್ಯಗಳನ್ನು ನಡೆಸಿದರೆಂತಲೂ, ಸರ್ಕಾರದವರು ಫಿರಂಗಿಗಳನ್ನು ಕಳುಹಿಸಿ ಆ ದಂಗೆಕೋರರ ಹಾವಳಿಯನ್ನು ಅಡಗಿಸಿ ನೂರಾರು ಜನರನ್ನು ಹಿಡಿದು ಸೆರೆಮನೆಯಲ್ಲಿ ಹಾಕಿದ್ದಾರೆಂತಲೂ ತಂತಿ ವರ್ತಮಾನ ಬಂದಿದೆ. ಈ ದಂಗೆಕೋರರ ಹಾವಳಿಯಿಂದ ೩೫ ದೇವಾಲಯಗಳು ನಾಶಹೊಂದಿದವು. ಎಷ್ಟು ಮಂದಿ ಹತರಾದರೋ ಇನ್ನೂ ಪ್ರಕಟವಾಗಲಿಲ್ಲ.

Printed and Published by the Rev H Gulliford, Proprietor and Manager, Wesleyan Mission Press, Mysore 12/8/1909

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸೆ ೧೯೦೯ ನೇ ಇಸವಿ ಅಗಸ್ಟ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೧೨

ವೈದ್ಯರ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 27

೧ ಬಾಲಕಾಮೃತ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರಸ, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈ ಕಾಲು ಕೊಸತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ಸಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತ ಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ ನೀರು ಹನಾಗಳ ಬದಲಾವಣೆಯನ್ನು ಸರಿಪಡಿಸಿ, ದೇಹದಲ್ಲಿ ರಕ್ತವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುವುದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ ಸೆಟ್ಟುಸ್ತ್ರಿ ಕ್ರಿಮಿತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿ ವರ್ಧಕವಾಗಿದೆ

ಅನುಪಾನವು ಔಷಧದ ಸಂಗಡಲೇ ಇರುತ್ತದೆ

ಒಂದು ಮಾತ್ರೆಯು ೪ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟ್ ಖರ್ಚು ೪ ಆಣೆ

ವಿಳಾಸ — ವೈದ್ಯ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಪತು ಆಗುವ ಪತ್ರಿಕೆಯ ಹಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು , 130 26,

ತಲೆನೋವು, ಗಂಟಲು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಜೀ ಗಂಟು, ಗಂಟು ನೋವು, ಅರ್ಧಾಂಗವಾಯು, ಎದೆಶೀತ, ಛಾಯ, ಜಜ್ಜು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ. ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ. ಬಟ್ಟೆಯ ಕಲ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ತಾಮಿಶ್ರಣ	೨-೦-೦
ಬೇಲುಗದಕದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿ ಬಗಳಿಗೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಮಿಜಿ ಮುಲಾಮು—ಮಕ್ಕಳ ಸಿಬ್ಬಿಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಹೊಟ್ಟಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ

ಜ್ವರಹರಿ.

18-29

ಇದು ಸಾಧಾರಣ ಜ್ವರ, ಚಳಿಜ್ವರ, ಮರುಕಳಿಸುವ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಜ್ವರ ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿ ಕೊಟ್ಟ ಜ್ವರಹರಿಯ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ಡಜನ್ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ಕ್ಕೆ ೬ ಆಣೆ, ೧ ರೂ , — ೧ ರೂ ೨—೧೨ ಆ ೧೧ ರೂ, ಮೂರರ ಮೇಲ್ಪಟ್ಟು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾಬಿಡಲಾಗುವದು

ಓಮಂಕರ್ಪೂರ



ಈ ಔಷಧ ಅಜೀರ್ಣ, ಆಶ್ಚರ್ಯ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ಸ್ಥಾನಾಂತರದ ಕಾಹಿಲೆಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಯ ಓಮಂಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿವೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹನುಮಯ್ಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 13

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಮುಕ್ಕಾಲು ನಿಮಿಷದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿಕೊಂಡಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿ ಬಹು ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಶುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸನ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10-33

"ಬ್ರಹ್ಮಚರ್ಯ" ಎಂಬ ಮಹಾಶಾಸ್ತ್ರ. ಇದು ಲೋಕಪ್ರಸಿದ್ಧವಾದ ಪುಸ್ತಕ. ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು. ಕ್ರಯ ಮೂರಾಣೆ ವಿ. ಪಿ. ಪಿ. ... ಕ. ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ. ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು. ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆ"ಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಜಾಗಿ ನಿಯಮಿಸಿರುತ್ತಾರೆ. ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು. ಕ್ರಯ ನಾಲ್ಕಾಣೆ ವಿ. ಪಿ. ಪಿ. ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾತ್ರೆಯ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು. ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ. ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ. ಪಿ. ಪಿ. ಮೂಲಕ ಮೂರಾಣೆ

"ಆಗಸ್ಟೀನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಪಾಪಸಾಂತರ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ. ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು

THE P... FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 32

ಒಳ್ಳೇ ಟೋಪಿಗಳು ಯಾವವು? ಯಾ... ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಸಿದ್ಧವಾಗುವ ಟೋಪಿಗಳ ದಾರವೆಲ್ಲಾ ಸಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುದ್ದಾಗಿ ನಾನೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆಯದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ., ೧ ರೂ ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ದಾರದ ಟೋಪಿಗಳು ೧ ರೂ. ೧೨ ಆ. ೧ ರೂ ೮ ಆ, ೧ ರೂ ೬ ಆ.

ಉಣ್ಣೆಯ ಟೋಪಿಗಳು ೧ ರೂ ೮ ಆ., ೧ ರೂ ೬ ಆ.,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸಂಜೀವಿನೀ ಔಷಧಾಲಯ, ಮೈಸೂರು.

23 28

ಎಂ. ಎಸ್. ಕುಮಾರಯ್ಯನವರ ದಿವ್ಯೌಷಧಗಳು.

ಸಂಜೀವಿನೀ ಬಿಂದು:—ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷಯ, ವಾಯುರೋಗಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು. ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉಂಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಶುದ್ಧಿಗಳನ್ನು ಹುಟ್ಟಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ:—ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿರುವ [illegible] ಕ್ರಯ ಡಬ್ಬಿ ೧ಕ್ಕೆ ೧ ರೂಪಾಯಿ.

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು:—ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಕೊಡುತ್ತ ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಾವರಿ ಅತ್ತರುಗಳೂ, ಗಂಧವಟಿಕೆಗಳೂ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಅಧಾಗನೆ ಲೇಬಲ್ ಇಟ್ಟು ಬರೆಯಿರಿ

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ನಿನಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ, ನಿನಗೆ ಯಾವ ರೋಗ ಉಂಟಾಗಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ

(೧೨ ಆಣೆ ಬುದ್ಧಿ ಪರಿಮಾಣ)

ಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಹೋಗದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವು ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಈ ಸಂಬಂಧದಿಂದ ರೋಗಗಳೇಳೆ ಉಂಟಾಗುತ್ತವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ; ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಚಿರಿ, ಅಶಕ್ತಿ, ಎದೆಯುರಿ ಕಲ್ಲಣಿಸುವದು, ತಲೆತಿರುಗುವದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆ ನೋವು, ಹೊಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ಕ್ರಮವಾಗಿ ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಸ್ತುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-51]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುವು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿದೆ ಯುಳ್ಳವರಾದರೆಂದು ಕಂಡ ಕೂಡಲೇ

SCOTT'S EMULSION. 6 33

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ದ್ರವವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ಕೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸಹೊಂದುವದು.

ಅದು ಸಂತೋಷವೂ ಆನಂದವೂ ಪಡುವ ದಾಗಿ ಆಹಾರದ ರುಚಿ ಹೊಂದಿ ಸುಖಿಸುತ್ತದೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತವೆ
ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮಾನುಷ್ಯನು ಇರುವ ಔಷಧವನ್ನೇ ಕೊಂಡುಕೊಳ್ಳಿ.

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು.

4-33



ಬೆನ್ನುಉಳುಕಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಹಿಂದಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದೂ, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಹಿಂದಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವವೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

[illegible] ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸಕಾರಕತ್ವ ಆಯ್ತೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇ ಇಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಬೇಕು.

59-4

ತಮ್ಮ ತಮ್ಮ ಪಟ್ಟಣಗಳಲ್ಲಿ ಯಾ ಹಳ್ಳಿಗಳಲ್ಲಿ ನಮ್ಮ ಔಷಧಿಗಳನ್ನು ವಿಕ್ರಯಿಸುವ ಏಜೆಂಟರುಗಳು ಬೇಕು ಮಾಹೆಯಾನ ೧೫ ರೂ ಸಂಬಳ ಜಾಮೀನ್ ಆವಶ್ಯಕವಿಲ್ಲ. ೧ ರೂ. ಫೀಜಿನೊಡನೆ ಮ್ಯಾನೇಜರ್, ಆಯುರ್ವೇದಿಕ್ ಮೆಡಿಕಲ್ ಹಾಲ್, ೯೭ ಚೂಳೆ ಹೈರೋಡು, ಮದ್ರಾಸು, ಇವರಿಗೆ ಬರಯಿರಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 32

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯವು ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೭ ಆಣೆ ವರಿವಿಗೂ ಬೆಲ್ಲರವಾಗಿ ಸಿಗಲೀ ಬಟ್ಟೆಗಳಿಗನುಸಾರವಾಗಿ ಸಿಗಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮಖಮಲಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ನೋಟೀಸು

63-1

ಬೇಲೂರು ಉಪಾಸನಾ ಸಮಾಜ ಮತ್ತು ಶ್ರೀ ಮಂಜನಾಥ ಅನಾಥಾಲಯವು.

ಇದರಿಂದ ಅನಾಥ ಬಾಲಕರಿಗೆ ತಿಳಿಯಪಡಿಸುವದೇನೆಂದರೆ, ಇದರ ಪೋಷಕರಾದ ಮ ರಾರಾ ಗೋವಿಂದಪ್ಪಶೆಟ್ಟರವರು, ಇವರ ಮಕ್ಕಳು ನಾಗೇಶ ಶೆಟ್ಟರವರ ಸಂಕಲ್ಪದಂತೆ ಅನಾಥಬಾಲಕರ ಸಂಖ್ಯೆಯು ಭರ್ತಿಯಾಗದೆ ಪರನ್ಸಿಪಲ್ ದಿಂದ ಬರುವ ಅನಾಥಬಾಲಕರು ಇಲ್ಲಿಯ ಪ್ರೆಸಿಡೆಂಟರಾದ ಮ|| ಬಂಗಲೆ ಐಯಂಗಾರ್ಯರ ಹವಾಲು ನಿಜ ಬಂದ ವಿಷಯ ಖಂಡಿತವಾಗಿ ಸ್ಥಳ ದೊರೆಯಲಾರದು.

ಬೇಲೂರು ತಾರೀಖು ೫—೮—೦೯

ಅಭಿಮಾನಿಗಳು

ಎಂ. ಟಿ. ವಲ್ಲಭಯ್ಯಂಗಾರ್, | ಟಿ. ಆರ್. ಸುಬ್ಬಣ್ಣನವರು,
ಯಜ್. ಡಿ. ಗುಂಡಪ್ಪನವರು, | ಎ. ದೇವರಪ್ಪನವರು,
ಎ. ಟೆಂಡರ್ ಶೇಷಾದ್ರಯ್ಯಂಗಾರ್. | ಜಾಯಿಂಟ್ ಸೆಕ್ರೆಟರಿಗಳು.

೧೯೦೯ನೇ ಸಂವತ್ಸರದ ಮೈಸೂರು ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಪ್ರದರ್ಶನವು.

63-1

ಪ್ರದರ್ಶನ ಪ್ರಾರಂಭ ಮತ್ತು ಅಖೈರು ತಾರೀಖು—೧೯ನೇ ಅಕ್ಟೋಬರಿಂದಾಯಿತು ೩೧ ಅಕ್ಟೋಬರವರಿಗೆ.

ಈ ಸಂವತ್ಸರ ಮೇಲ್ಕಂಡ ಪ್ರದರ್ಶನದ ಪ್ರಕಟನೆ ಮತ್ತು ಬಹುಮಾನದ ಪಟ್ಟಿಯು ಬಹಳ ವಿಸ್ತರಿಸಲ್ಪಟ್ಟಿವೆ. ನೇಯುವವರಲ್ಲಿಯೂ, ಉಳುವವರಲ್ಲಿಯೂ ಮತ್ತು ಮಡಿಕೆ ಮಾಡುವವರಲ್ಲಿಯ ೬ ಪ್ರೋತ್ಸಾಹಗಳು ಏರ್ಪಡಿಸಲ್ಪಟ್ಟಿವೆ.

ಇಷ್ಟ ಉಳ್ಳವರು ಪ್ರದರ್ಶಕರಾಗಿ ಆಗಲಿ ಅಥವಾ ಬೈಪ್ರೋಟಿದಾರರಾಗಿ ಆಗಲಿ ಬರಬಹುದು

ಸ್ಥಳ ಮತ್ತು ಇತರ ತಪ್ಸೀಲುಗಳಿಗೆ ಮೈಸೂರಲ್ಲಿರುವ ಎಗ್ಜಿಬಿಷನ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು. ಈ ಪ್ರದರ್ಶನದ ಪ್ರಕಟನೆಯನ್ನು ಎಲ್ಲಾ ಕಮಿಷನರುಗಳಲ್ಲಿ ಯಾಗಲಿ ಅಥವಾ ಸ್ಥಳೀಯ ಗವರ್ನಮೆಂಟಿನಿಂದಾಗಲಿ ಹೊಂದಬಹುದು.

ಶಾಲಿವಾಹನ ಶಕ ವರುಷಂಗಳು ೧೮೩೧ನೇ ಸೌಮ್ಯನಾಮ ಸಂವತ್ಸರದ ನಿಜ ಶ್ರಾವಣ ಶುದ್ಧ ಷಷ್ಠಿಗೆ ಗುರುವಾರದಿಂದ ನಿಜ ಶ್ರಾವಣ ಶುದ್ಧ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ಶೇಧಿ ಚಟಳ ಮಾ
19	ಗುರು §	ಷಷ್ಠಿ	6-2	ಹ	13-18	4
20	ಶುಕ್ರ .	ಸಪ್ತಮಿ	11-11	ಹ	19-46	5
21	ಶನಿ	ಪಂಚಮಿ	16-18	ಚಿ	26-15	6
22	ರವಿ ‡	ಷಷ್ಠಿ	20-11	ಸ್ವಾ	32-2	7
23	ಚಂದ್ರ †	ಸಪ್ತಮಿ	24-18	ವಿ	36-56	8
24	ಕುಜ *	ಅಷ್ಟಮಿ	26-18	ಅ	40-50	9
25	ಬುಧ	ನವಮಿ	27-59	ಜ್ಯೆ	43-32	10

§ ಸಂಪದ್ಗೌರೀವ್ರತ ನಾಗರಚತುರ್ಥೀ, ಸಾಮಗೋಪಾಕರ್ಮ, ಸಂತಾನ ಶುಕ್ರವಾರ, ಋಗ್ವೇದಿನಾಂ ಪ್ರಥಮೋಪಾಕರ್ಮ ... ಗರುಡಪಂಚಮಿ ಶ್ರಾವಣವಾರ, ಷಷ್ಠಿ ತಿಥಿ. ‡ ಮಹಾವ್ಯತೀಪಾತ, ಶೂನ್ಯತಿಥಿ. † ಸಪ್ತಮೀ ತಿಥಿ, * ಮಂಗಳಗೌರೀವ್ರತ

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ... ರೂ	೧೫-೦-೦	೧೪-೧೨-೦
ಕೆಂಬೂತಿ ಅಕ್ಕಿ ಅವಲ್	೧೬-೮-೦	೧೪-೮-೦
,, ದುಂಡು	೧೬-೦-೦	೧೪-೦-೦
ಜಾವಾಣಿ ಅಕ್ಕಿ .	೧೭-೦-೦	೧೫-೮-೦
ಸಣ್ಣಕ್ಕಿ ಅವಲ್	೧೭-೦-೦	೧೭-೦-೦
,, ದುಂಡು .. .	೧೬-೦-೦	೧೬-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೬-೦-೦	೧೫-೮-೦
,, ದುಂಡು .. .	೧೫-೦-೦	೧೫-೦-೦
ಪೈರ್ ರಾಗಿ ಪಲ್ಲಾ ೧ಕ್ಕೆ .	೯-೮-೦	೯-೦-೦
ಜಾವಾರಿ	೯-೨-೦	೮-೮-೦
ಜೋಳ	೯-೪-೦	೯-೦-೦
ಹಲಸಂದೆ ಪಲ್ಲಾ ೧ಕ್ಕೆ	೧೩-೮-೦	೧೨-೦-೦
ಬೇಳೆ ಅವರೆ	೧೨-೮-೦	೧೪-೦-೦
ಹೆಸರು . . .	೧೮-೦-೦	೧೧-೧೨-೦
ಉದ್ದು	೧೪-೮-೦	೧೨-೧೨-೦
ಕಡಲೆ	೧೪-೦-೦	೧೦-೪-೦
ಎಳ್ಳು ಸೇ ೧೨೭ಕ್ಕೆ . ..	೨೨-೮-೦	೧೭-೮-೦
ಹುರುಳಿ	೧೨-೦-೦	೧೨-೮-೦
ಹರಳು ೧೨೭ ಸೇರಿಗೆ	೧೩-೮-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	೨-೮-೦	೨-೪-೦
ಮೆಣಸಿನಕಾಯಿ	೫-೧೨-೦	೪-೮-೦
,, ದುಂಡು .. .	೫-೮-೦	೪-೦-೦
ಬೆಲ್ಲ ಮೊದ್ದ ಅಚ್ಚು .	೬-೪-೦	ಮ ೨-೬-೦
ಒಳ್ಳೆಣ್ಣೆ ಮಣ ೧ಕ್ಕೆ	೫-೦-೦	೫-೪-೦
ಹರಳೆಣ್ಣೆ ,, ...	೫-೦-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೯-೮-೦	೮-೮-೧
ಉಪ್ಪು ,, ...	೬-೪-೦	೫-೦-೦
ಹುಣಸೇ ಹಣ್ಣು	೨-೦-೦	೧-೧೦-೦
,, ಹಳೇದು	೧-೫-೦	೧-೯-೦
ತುಪ್ಪ ಮಣ ೧ಕ್ಕೆ	೧೬-೦-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೧	೪-೨-೦
ತೆಂಗಿನಕಾಯಿ ೧೦೦ಕ್ಕೆ	೪-೮-೦	೪-೮-೦
ಅಳಬೇಕಾಯಿ ಮಣ ೧ಕ್ಕೆ	೦-೮-೦	೦-೧೩-೦
ಆಂಟ್ವಾಳದ ಕಾಯಿ ಮಣ ೧ಕ್ಕೆ ...	೧-೭-೦	೦-೧೨-೦
ಚಿನ್ನ (ಪೌನ್) ಕೆಂಪು	೧೫-೬-೦	೧೫-೯-೦
,, ,, ಪಸಿಮೆ	೧೬-೦-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ ...	೨೪-೮-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೭೭-೪-೦	೬೪-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

6—8—1909 ರಿಂದ 30—7—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	1	0	0
ಮೈಸೂರು ,,	40	35	0	0
ಬೆಂಗಳೂರು ಡಿಸ್ಟ್ರಿಕ್ಟ್	1	0	0	0
ಮೈಸೂರು ,,	35	29	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿ ಸು	0	0	0	0
ತುಮಕೂರು ಡಿಸ್ಟ್ರಿಕ್ಟ್	*	*	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	12	9	0	0
ಶಿವಮೊಗ್ಗ ,,	7	2	9	4
* ಹೊರಗಿನವು ಜುಮ್ಲಾ	105	76	9	1

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಆಗಸ್ಟ್ ತಾ 7 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ: ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಾರ್ಥ ಸಹಾಯ ಪಡೆದ ಜನರು
ಬೆಂಗಳೂರು	94	?7		816	
ಕೋಲಾರ	436	2?0	53	1,287	
ತುಮಕೂರು	2?0	79	5?	402	
ಮೈಸೂರು				2,136	
ಹಾಸನ	285	330	60	398	
ಶಿವಮೊಗ್ಗ				75	
ಕಡೂರು					
ಚಿತ್ರದುರ್ಗ	2?3	221	13	115	
ಮಾರಿಕಣಿವೆ	3?7	390		748	
ಸ್ಯಾನಿಟರಿ					
ಒಟ್ಟು	1,6??	1,490	183	6,377	

ಕುರುಡಳೂ ಕಿವುಡಳೂ ಮತ್ತು ಮೂಕಳೂ ಆದ ಹೆಲೆನ್ ಕೆಲರ್ ಎಂಬ ವಿದ್ಯಾರ್ಥಿನಿಯ ಚರಿತ್ರೆ

[ಕಳೆದ ವಾರದ ಶೇಷ]

ಹೆಲೆನಳ ಪಾಠವು ಪ್ರಾರಂಭವಾದದ್ದು ಹೇಗೆಂದರೆ ಉಪಾಧ್ಯಾಯಿನಿಯು ಒಂದು ಬೊಂಬೆಯನ್ನು ಅವಳ ಕೈಗೆ ಕೊಟ್ಟು ಕಳೆದ ವಾರದ ಪತ್ರಿಕೆಯಲ್ಲಿ ಹೇಳಿರುವ ರೀತಿಯಲ್ಲಿ ತನ್ನ ಬೆರಳುಗಳಿಂದ ಅವಳ ಕೈಯಲ್ಲಿ "ಡಾಲ್" ಎಂಬ ಅದರ ಹೆಸರನ್ನು ತಿಳಿಯಪಡಿಸಿದಳು. ಹೀಗೆ ತನ್ನ ಉಪಾಧ್ಯಾಯಿನಿಯು ಈ ಕೈ ಮಾತನ್ನು ಪ್ರಾರಂಭಮಾಡಿದಾಗ ಅವಳ ಬೆರಳುಗಳ ಚಲನೆಗೆ ಸಂತೋಷಪಟ್ಟು ತಾನೂ ಅದರಂತೆಯೇ ಮಾಡುವದಕ್ಕೆ ಪ್ರಯತ್ನಪಟ್ಟಳು. ಆ ಚಲನೆಗಳನ್ನು ಸರಿಯಾಗಿ ಮಾಡಿದಾಗ ಉಲ್ಲಾಸದಿಂದ ಅವಳ ಮುಖವು ಕೆಂಪಾಗುತ್ತಿತ್ತು. ಈ ರೀತಿಯಾಗಿ ಕೆಲವು ದಿವಸಗಳಲ್ಲಿ ಸೂಜಿ, ಟೋಪಿ, ಬಟ್ಟಲು ಮೊದಲಾದ ಪದಾರ್ಥಗಳ ಹೆಸರುಗಳನ್ನು ಕಲಿತುಕೊಂಡಳು. ಆದರೆ ವಸ್ತುಗಳಿಗೆಲ್ಲಾ ಹೀಗೆ ಹೆಸರುಗಳುಂಟೆಂದು ಕೆಲವು ವಾರಗಳ ವರೆಗೆ ತಿಳಿದುಕೊಳ್ಳಲಿಲ್ಲ. ಅದನ್ನು ತಿಳಿದುಕೊಂಡನಂತರ ಮೊದಲು ಮಾಡುತ್ತಿದ್ದ ಸಂಜ್ಞೆಗಳನ್ನು ಬಿಟ್ಟು ಜಾಗ್ರತೆಯಾಗಿ ಅಭಿವೃದ್ಧಿ ಹೊಂದಿ ಹೊಸ ಹೊಸ ಮಾತುಗಳನ್ನು ಪಾಠಮಾಡಿ ಅಧಿಕವಾಗಿ ಉತ್ಸಾಹಪಟ್ಟಳು. ತಿಳುವಳಿಕೆಯೂ ದಿನದಿನಕ್ಕೆ ಹೆಚ್ಚಿ ಅವಳ ಮುಖಭಾವದಲ್ಲಿ ಕಾಣಬರುತ್ತಿತ್ತು. ಇದಲ್ಲದೆ ಮಣಿಗಳನ್ನು ಪೋಣಿಸುವುದು, ರಟ್ಟು ಕಾಗದದಲ್ಲಿ ಚಿತ್ರಗಳನ್ನು ಹೊಲಿಯುವುದೂ ಇದೇ ಮೊದಲಾದ ಕೈ ಕೆಲಸಗಳಲ್ಲಿ ಸಾಮರ್ಥ್ಯವುಳ್ಳವಳಾಗಿ ಸಂತೋಷದಿಂದ ಕಾಲಕ್ಷೇಪ ಮಾಡುತ್ತಿದ್ದಳು.

ಚಿಕ್ಕಂದಿನಿಂದಲೂ ಹೆಲೆನಳು ಕೋಪಿಷ್ಠಳಾಗಿದ್ದಳು. ಉಪಾಧ್ಯಾಯಿನಿಯು ಬರುವುದಕ್ಕೆ ಮೊದಲು ಯಾರ ಅಂಕೆಯೂ ಇಲ್ಲದೆ ಎಲ್ಲರನ್ನು ಪೀಡಿಸುತ್ತಾ ಸ್ವೇಚ್ಛೆಯಿಂದ ಇದ್ದಳು. ಅವಳಿಗೆ ಬೇಡವಾದ ಕೆಲಸವು ಸಂಭವಿಸಿದಾಗೆಲ್ಲಾ ಸಿಟ್ಟುಗೊಂಡು ಒದ್ದಾಡಿ ಅರಚಿ ಹತ್ತಿರದಲ್ಲಿದ್ದ ಗಾಜಿನ ಪಾತ್ರೆಯನ್ನಾಗಲಿ ದೀಪಸ್ತಂಭವನ್ನಾಗಲಿ ತನ್ನ ಬೊಂಬೆಯನ್ನಾಗಲಿ ಅಂತು ಯಾವ ವಸ್ತುವನ್ನಾಗಲಿ ಕೆಳಕ್ಕೆ ಎಸೆದು ಒಡೆದುಹಾಕುವುದು ಅವಳ ಪದ್ಧತಿಯಾಗಿತ್ತು. ಈ ಹಟಮಾರಿತನದ ಕೋಪವನ್ನು ತಿದ್ದುಪಾಟು ಮಾಡುವುದು ಅವಶ್ಯವೆಂದು ತಿಳಿದು, ಇದಕ್ಕಾಗಿ ಮಿಸ್ ಸಲಿವನ್ ಎಂಬುವಳು ಬಹಳ ಪ್ರಯಾಸಪಟ್ಟಳು. ಮತ್ತು ಅವಳನ್ನು ತಕ್ಕಂತೆ ಶಿಕ್ಷಿಸುವುದಕ್ಕೆ ತಂದೆತಾಯಿಗಳೂ ಕೂಡ ಅನೇಕ ಸಾರಿ ಒಪ್ಪದೆ ಅಡ್ಡಿಮಾಡಿದರು. ಇದರಿಂದ ಉಪಾಧ್ಯಾಯಿನಿಯ ಪ್ರಿಯ ಸಖಿ ಇನ್ನೂ ಹಟಮಾರಿಯಾಗಿ ಕೆಲವು ದಿವಸಗಳಲ್ಲಿ ಆ ಪ್ರಯತ್ನವು ನಿರರ್ಥಕವಾಯಿತು. ಅವಳನ್ನು ಸ್ಥಿರವಾಗಿ ಎಡೆಬಿಡದೆ ಶಿಕ್ಷಿಸುವುದಕ್ಕಾಗಿ ಇಬ್ಬರೂ ಪ್ರತ್ಯೇಕವಾದ ಒಂದು ಸ್ಥಳದಲ್ಲಿ ಇರಬೇಕೆಂದು ಮಿಸ್ ಸಲಿವನಳು ಹೇಳಿದ ಪ್ರಕಾರ ತಾಯಿತಂದೆ ಮನೆಗೆ ಸಮೀಪದ ತೋಟದಲ್ಲಿ ಅವರಿಗೆ ಒಂದು ಸಣ್ಣ ಮನೆಯನ್ನು ಕಟ್ಟಿಸುವುದಕ್ಕೆ ಏರ್ಪಾಡಾಯಿತು. ಹೆಲೆನಳು ಕೆಲವು ದಿವಸ ಮಾತ್ರ ಅಲ್ಲಿ ಉಪಾಧ್ಯಾಯಿನಿಯ ಸಂಗಡ ಇದ್ದು ಬಹಳ ಮಟ್ಟಿಗೆ ವಿಧೇಯಳಾದಳು. ತಂದೆ ತಾಯಿಗಳು ಪುನಃ ಅವಳನ್ನು ತಮ್ಮ ಮನೆಗೆ ಬರಮಾಡಿದಾಗ ಈ ವಿಧೇಯತ್ವವನ್ನು ಕಂಡು ಅಂದಿನಿಂದ ಆ ಶಿಕ್ಷೆಗೆ ಸಂಪೂರ್ಣವಾಗಿ ಒಪ್ಪಿಕೊಂಡು ತುಂಬಾ ಕೃತಜ್ಞತೆಯಿಂದಲೂ ಆನಂದದಿಂದಲೂ ಉಪಾಧ್ಯಾಯಿನಿಯ ಪ್ರಯಾಸದಲ್ಲಿ ತಾವೇ ಸಹಾಯಕರಾದರು. ಕೊನೆಗೆ ಈ ಒರಟಾಗಿದ್ದ ಹುಡುಗಿಯು ಸಾಧುವಾಗಿಯೂ ವಿಧೇಯಳಾಗಿಯೂ ಆದಳು. ಮತ್ತು ತಿಳುವಳಿಕೆಯು ಹೆಚ್ಚಿದ ಹಾಗೆಲ್ಲಾ ಪಾಠಹೇಳುವುದೂ ಸುಲಭವಾಯಿತು.

ಇಲ್ಲಿಂದ ಮುಂದೆ ಹೆಲೆನಳು ಜಾಗ್ರತೆಯಾಗಿ ಅಭಿವೃದ್ಧಿಗೆ ಬಂದು ದಿನಂಪ್ರತಿಯಲ್ಲಿಯೂ ಹೊಸ ಮಾತುಗಳನ್ನು ಕಲಿತುಕೊಂಡಳು. ಮಿಸ್ ಸಲಿವನಳು ಮೊದಲು ನಾಮಪದಗಳನ್ನೂ ನಂತರ ಪೂರ್ಣವಾಕ್ಯಗಳನ್ನೂ ಕೈಯಿಂದ ಕಲಿಸಿದಳು. ಆದರೆ ಇದುವರೆಗೂ ಹೆಲೆನಳು ಓದುವುದನ್ನು ಕಲಿತಿರಲಿಲ್ಲ. ಕೆಲವು ಕಾಲಾನಂತರ ಇದೂ ಪ್ರಾರಂಭವಾಯಿತು. ಹೇಗೆಂದರೆ ದಪ್ಪ ಕಾಗದದಲ್ಲಿ ಉಬ್ಬಿದ ಅಕ್ಷರಗಳನ್ನು ಸ್ಪರ್ಶಿಸಿ ಅವುಗಳ ಆಕಾರಗಳನ್ನು ಗೊತ್ತುಮಾಡಿಕೊಂಡು ಮಾತುಗಳನ್ನು ಓದಲಾರಂಭಿಸಿದಳು. ಹೀಗೆ ಅಕ್ಷರಮಾಲೆಯಿಂದ ಸಣ್ಣ ಮತ್ತು ದೊಡ್ಡ ಅಕ್ಷರಗಳನ್ನು ಒಂದು ದಿವಸದಲ್ಲಿಯೇ ಕಲಿತುಕೊಂಡು ನಂತರ ಅಕ್ಷರಗಳನ್ನು ಕೂಡಿಸಿ ಮೊದಲು ಸಣ್ಣ ಮಾತುಗಳನ್ನೂ ನಂತರ ಪೂರ್ಣವಾಕ್ಯಗಳನ್ನೂ ಜಾಗ್ರತೆಯಿಂದ ಓದಲಾರಂಭಿಸಿದಳು. ಪ್ರತಿಯೊಂದು ಮಾತೂ ಒಂದು ವಸ್ತುವನ್ನಾಗಲಿ, ಒಂದು ಗುಣವನ್ನಾಗಲಿ ಅಥವಾ ಒಂದು ಕೆಲಸವನ್ನಾಗಲಿ ಸೂಚಿಸುವುದೆಂದು ತಿಳಿಸುವಂತೆ ಆ ಉಪಾಧ್ಯಾಯಿನಿಯು ಆಯಾ ಪದಾರ್ಥಗಳ ಮೇಲೆ ಆಯಾ ಹೆಸರುಗಳುಳ್ಳ ಚೀಟಿಗಳನ್ನು ಅಂಟಿಸುತ್ತಿದ್ದಳು. ಉದಾಹರಣೆಗಾಗಿ "ಬೊಂಬೆಯು ಮಂಚದ ಮೇಲೆ ಇದೆ" ಎಂಬುವುದನ್ನು ತೋರಿಸುವುದಕ್ಕೆ "ಬೊಂಬೆ," "ಮಂಚ" ಎಂದಿರುವ ಚೀಟಿಗಳನ್ನು ಅವುಗಳಿಗೆ ತಗಲಿಹಾಕಿ, "ಮೇಲೆ," "ಇದೆ" ಎಂಬ ಚೀಟಿಗಳನ್ನು ಅವುಗಳ ಹತ್ತಿರದಲ್ಲಿಟ್ಟಳು. ಇದಲ್ಲದೆ ಒಂದು ತರವಾದ ಚೌಕಟ್ಟಿನಲ್ಲಿ ಅಂಥಾ ಚೀಟಿಗಳನ್ನು ಕ್ರಮದಿಂದ ಕೂಡಿಸುತ್ತಾ ವಾಕ್ಯಗಳನ್ನು ರಚಿಸುತ್ತಿದ್ದಳು.

ಇಷ್ಟರಮಟ್ಟಿಗೆ ಪಾಠಮಾಡಿದ ಮೇಲೆ ಉಬ್ಬಿದ ಅಕ್ಷರಗಳುಳ್ಳ ಪುಸ್ತಕಗಳನ್ನು ಓದುವುದಕ್ಕೆ ತೊಡಗಿದಳು. ಆದರೆ ಇಂಥಾ ಪುಸ್ತಕಗಳು ಸಿಕ್ಕುವುದು ಕಷ್ಟವಾದದ್ದರಿಂದ ಬಹಳ ದಿವಸಗಳ ವರೆಗೆ ಪಾಠದ ಪುಸ್ತಕಗಳಲ್ಲದೆ "ಮಕ್ಕಳ ಕಥೆಗಳು" ಮತ್ತು "ನಮ್ಮ ಭೂಮಿಯು" ಎಂಬ ಎರಡು ಪುಸ್ತಕಗಳು ಮಾತ್ರ ಅವಳಲ್ಲಿದ್ದುವು. ಅನಂತರ ಹೆಚ್ಚಾಗಿ ಪುಸ್ತಕಗಳನ್ನು ಹೊಂದಿ ಅತಿ ಆಸೆಯಿಂದ ಓದುತ್ತಾ ಬಂದಳು. ಉಪಾಧ್ಯಾಯಿನಿಯು ಅನೇಕ ಸಣ್ಣ ಕಥೆಗಳನ್ನೂ ಪದ್ಯಗಳನ್ನೂ ಕೈ ಮೂಲಕ ತಿಳಿಸಿದಳು. ಆದರೆ ತನ್ನಷ್ಟಕ್ಕೆ ತಾನೇ ಓದುವುದು ಉತ್ತಮವೆಂದು ಅಭಿಪ್ರಾಯಪಟ್ಟಳು. ಕೆಲವು ಕಾಲದ ಮೇಲೆ ಪುಸ್ತಕಗಳೇ ತನ್ನ ಸ್ನೇಹಿತರು ಎಂತಲೂ, ಅವುಗಳ ಸಂಗಾತದ ಸಲ್ಲಾಪಕ್ಕೆ ತನ್ನಲ್ಲಿದ್ದ ಇಂದ್ರಿಯಗಳ ಕೊರತೆಯು ಅಡ್ಡಿ ಬಾರದೆಂತಲೂ ಹೇಳಿದಳು.

ಓದಿದ ವಾಕ್ಯಗಳನ್ನೂ ಮತ್ತು ಮನಸ್ಸಿನಲ್ಲಿದ್ದ ಅಭಿಪ್ರಾಯಗಳನ್ನೂ ತಾನೇ ಕಾಗದದಲ್ಲಿ ಬರೆಯಬಹುದೆಂದು ತಿಳಿದುಕೊಂಡ ಮೇಲೆ ದಿನಂಪ್ರತಿಯಲ್ಲಿಯೂ ಬಣ್ಣರಗೊಳ್ಳದ ಸೀಸದ ಕಡ್ಡಿಯಿಂದ ಬರೆದು ಬರೆದು ಅಭ್ಯಾಸಮಾಡಿದಳು. ಆದರೆ ಇದರಲ್ಲಿ ಎರಡು ಅನನುಕೂಲಗಳಿದ್ದುವು. ಮೊದಲನೆಯದು, ತಾನು ಬರೆದ ಸಾಲುಗಳು ತನಗೆ ಕಾಣದೆ ಇರುವುದರಿಂದ ಎಲ್ಲವೂ ಕಲಸಿಹೋಗುತ್ತಿದ್ದುವು. ಇದಕ್ಕಾಗಿ ಗೀಟುಗಳ ಕೆತ್ತಿದ ಒಂದು ಹಲಿಗೆಯ ಮೇಲೆ ಕಾಗದವನ್ನಿಟ್ಟು ಅದನ್ನು ಸ್ಪರ್ಶಿಸಿ ಆ ಗೀಟುಗಳ ಪ್ರಕಾರ ಬರೆಯುತ್ತಿದ್ದಳು. ಎರಡನೆಯದು ಬರೆದದ್ದನ್ನು ತಾನು ಓದುವುದಕ್ಕೆ ಆಗುತ್ತಿರಲಿಲ್ಲ. ಇದಕ್ಕಾಗಿ ಕೆಲವು ಕಾಲಾನಂತರ ಕುರುಡರಿಗೋಸ್ಕರ ಕಲ್ಪಿಸಿರುವ ಬೇರೊಂದು ವಿಧವಾದ ಬರಹವನ್ನು ಕಲಿತಳು.

ಈ ವಿಧವು ಯಾವುದೆಂದರೆ ಕಾಗದವನ್ನು ತಿರುಪು ಹಾಕಿ ಅದರ ಕೆಳಭಾಗದಿಂದ ಕಡ್ಡಿಯಲ್ಲಿ ಚುಕ್ಕೆಗಳನ್ನು ಒತ್ತಿ, ಆ ಚುಕ್ಕೆಗಳ ಸವರಣೆಯಿಂದ ಅಕ್ಷರಗಳನ್ನು ಸೂಚಿಸತಕ್ಕದ್ದು. ಕಾಗದದ ಮುಂದುಗಡೆಯಲ್ಲಿ ಆ ಚುಕ್ಕೆಗಳು ಉಬ್ಬಿಕೊಂಡಿರುವುದರಿಂದ ಕುರುಡರು ಅದನ್ನು ಸ್ಪರ್ಶಿಸಿ ಓದಲು ಅನುಕೂಲವುಳ್ಳದ್ದಾಗಿದೆ. ಇದನ್ನು ಕಲಿತ ಮೇಲೆ ಹೆಲೆನಳು ತನ್ನ ಮನಸ್ಸಿಗೆ ತೋಚಿದ ಎಲ್ಲಾ ವಿಷಯಗಳನ್ನೂ ಬರೆಯುತ್ತಾ ಬಂದಳು.

[ಸಶೇಷ]

ನಮ್ಮ ಜನಗಳು ತಿಳಿಯಬೇಕಾದ ಎರಡು ಮುಖ್ಯ ವಿಷಯಗಳು

(೧) ಸೋಮಾರಿತನವು

ಕೆಲಸಮಾಡುತ್ತಿರಬೇಕಾದ ಕಾಲದಲ್ಲಿ ಕೆಲಸಮಾಡದೆ ಸುಮ್ಮನಿರುವುದಕ್ಕೆ ಸೋಮಾರಿತನವೆಂದು ಹೆಸರು. ಸೋಮಾರಿತನದಿಂದ ಹಲವು ಕೆಡುಕುಗಳುಂಟಾಗುವುವೆನ್ನುವುದಕ್ಕೆ ಏನು ಸಂದೇಹವಿಲ್ಲ. ವಿದ್ಯಾರ್ಥಿಯು ಸೋಮಾರಿತನದಿಂದ ವ್ಯರ್ಥವಾಗಿ ಕಾಲಕಳೆವುದನ್ನು ಕಲಿತರೆ ಮುಂದೆ ದುಃಖಕ್ಕೂ ಕೊರತೆಗೂ ಗುರಿಯಾಗುವನು. ಸರಿಯಾಗಿ ಬಾಳುವುದಕ್ಕೆ ಯೋಗ್ಯತೆಯನ್ನು ಕೊಡುವ ವಿದ್ಯೆಯನ್ನು ಸೋಮಾರಿತನದಿಂದ ಸಂಪಾದಿಸಿಕೊಳ್ಳಲಾರದೆ ಕೆಡುವನು. ಬಾಲ್ಯದಲ್ಲಿ ಕಲಿತ ಸೋಮಾರಿತನವು ಅವನಿಗೆ ಸ್ವಭಾವವಾಗಿ, ಅವನು ದೊಡ್ಡವನಾದಾಗ ಯಾವ ಕಸಬನ್ನವಲಂಬಿಸಿದರೂ ಚೆನ್ನಾಗಿ ಕಷ್ಟಪಟ್ಟು ಕೆಲಸಮಾಡಲಾಗುವುದಿಲ್ಲ. "ನಿಜವಾಗಿ ಬೆಳೆದದ್ದು ಮರವಾಗಿ ಹೋಗುತ್ತೆ". ಒಬ್ಬ ಹುಡುಗನು ಬುದ್ಧಿವಂತನಾಗಿರಬಹುದು, ಆದರೆ ಅವನು ಸೋಮಾರಿಯಾಗಿದ್ದರೆ, ಅವನಿಗಿಂತ ಬುದ್ಧಿಯಲ್ಲಿ ಕೀಳಾಗಿದ್ದರೂ ಕಷ್ಟಪಟ್ಟು ಆಸಕ್ತಿಯಿಂದ ಕೆಲಸಮಾಡುವವನಿಗೆ ಹಿಂದೆಬೀಳುವನು. ಸೋಮಾರಿಯು ಮುಂದೆ ಭಯಪ್ರಾಯವು ಕೆಲಸಮಾಡುವುದನ್ನು ದ್ವೇಷಿಸುವುದು. ಇದರಿಂದ ಅವನ ಕೀರ್ತಿಗೆ ಕುಂದು ಬರುವುದು. ಯಾವನು ಕೆಲಸಮಾಡುತ್ತಿರಬೇಕಾದ ವೇಳೆಯಲ್ಲಿ ಕೆಲಸಮಾಡದೆ ಕಾಲಕಳೆವನೋ ಅವನು ಬಹಳ ಕೆಲಸವನ್ನು ಒಟ್ಟಿಗೆ ಮಾಡಬೇಕಾಗಿ ಬರುವುದು. ಪ್ರತಿದಿನವೂ ಸ್ಕೂಲಿನಲ್ಲಿ ಹೇಳಿಕೊಡುವ ಪಾಠವನ್ನು ಒಬ್ಬ ವಿದ್ಯಾರ್ಥಿಯು ಅದೇ ದಿನವೇ ಓದದೆ ಸೋಮಾರಿತನದಿಂದ ಉಪೇಕ್ಷಿಸಿದರೆ, ಕೊನೆಗೆ ಪರೀಕ್ಷೆ ಸಮೀಪಿಸಿದಾಗ ಹಿಂದಿನ ಪಾಠಗಳನ್ನೆಲ್ಲಾ ಒಟ್ಟಿಗೆ ಸ್ವಲ್ಪ ಕಾಲದಲ್ಲಿಯೇ ಕಲಿಯಬೇಕಾಗಿ ಬರುವುದು. ಒಬ್ಬ ಅಧಿಕಾರಿಯು ಬಂದ ಕಾಗದಗಳಿಗೆ ಆಯಾ ದಿನವೇ ಯೋಚಿಸಿ ಉತ್ತರಕೊಡುವುದನ್ನು ಉದಾಸೀನಮಾಡಿದರೆ ಕೊನೆಗೆ ನೂರಾರು ಕಾಗದಗಳಿಗೆ ಒಂದೇ ಸಲ ಉತ್ತರ ಕೊಡಬೇಕಾಗಿ ಬಂದು ತೊಂದರೆಯಾಗಬಹುದು.

ಹಣಗಾರರು ಕೆಲಸಮಾಡುವ ಆವಶ್ಯಕತೆಯೇನೂ ಇಲ್ಲವೆಂದು ಕೆಲವರು ಯೋಚಿಸಬಹುದು. ಹಣಗಾರರಿಗೂ ಸೋಮಾರಿತನದಿಂದ ಕೇಡುಗಳಾಗುವುವೇ ಹೊರತು ಯಾವ ಲಾಭವೂ ಇಲ್ಲ. ಇವರು ಇಲ್ಲಿದ್ದ ಹುಲ್ಲು ಕಡ್ಡಿಯನ್ನು ಅಲ್ಲಿ ಎತ್ತಿಹಾಕದೆ ಸುಮ್ಮನೆ ಕುಳಿತಿರುವುದಕ್ಕೆ ಯಾರ ಅಡ್ಡಿಯೂ ಇಲ್ಲ. ಆದರೆ ಹೀಗೆ ಸ್ವಲ್ಪವೂ ಕೆಲಸಮಾಡದಿರುವುದು ಅಸೌಖ್ಯಕ್ಕೆ ಕಾರಣವು. ಒಂದು ಕೆಲಸಮಾಡಿ ಜುಗುಪ್ಸೆಯಾದರೆ ಮತ್ತೊಂದನ್ನು ತೊಡಗುವುದು ಸಾಮಾನ್ಯವಾಗಿ ಎಲ್ಲರ ವಾಡಿಕೆ. ಧನಿಕರು ಯಾವ ಕೆಲಸವನ್ನೂ ಮಾಡದೆ ಬದುಕುವುದಕ್ಕೆ ಹೋಗುವರೋ ಅವರು ಸೋಮಾರಿಗಳೆಂದು ಹೀಯಾಳಿಸಲ್ಪಟ್ಟು ಮರ್ಯಾದೆಯನ್ನು ಕಳೆದುಕೊಳ್ಳುವರು. ಉಂಡನ್ನವು ಅರಗದೆ ಹೊಟ್ಟೆ ಬೆಳೆದು, ತಮ್ಮ ಮೈಯನ್ನು ತಾವೇ ಎತ್ತುವುದಕ್ಕೆ ಆಗದಷ್ಟು ಸ್ಥೂಲರಾಗಿ ಹಲವು ಬಗೆಯ ಬೇನೆಗಳಿಗೆ ಗುರಿಯಾಗುವರು. ಮಾಡುವುದಕ್ಕೆ ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕುಳಿತಿರುವುದರಿಂದ ಮನಸ್ಸಿಗೆ ಬೇಸರಿಕೆಯಾಗುವುದು ಎಲ್ಲರಿಗೂ ತಿಳಿದೇ ಇದೆ. ಇದಲ್ಲದೆ ಯಾವ ಕೆಲಸವನ್ನೂ ಮಾಡದೆ ಕುಳಿತಿರುವ ಅನೇಕರ ಮನಸ್ಸು ದುರ್ವ್ಯಾಪಾರಗಳಲ್ಲಿ ಓಡುವುದು. ಇದರಿಂದ ಅವರಿಗೆ ಕಷ್ಟವು ಸಿದ್ಧವು. "ಜನರು ಅನುಭವಿಸುವಂಥಾ ಕಷ್ಟಗಳ ಹತ್ತರಲ್ಲಿ ಒಂಬತ್ತುಪಾಲು ಸೋಮಾರಿತನದಿಂದಲೇ ಉಂಟಾಗುವುವು" ಎಂದು ಒಬ್ಬ ಆಂಗ್ಲೇಯ ಪಂಡಿತನು ಹೇಳುವನು.

ಸೋಮಾರಿತನವು ಮನುಷ್ಯರ ಮೈಯಲ್ಲಿಯೇ ಇರುವ ದೊಡ್ಡ ಶತ್ರುವು. ಕೆಲಸಮಾಡುವುದಕ್ಕೆ ಸಮಾನವಾದ ನೆಂಟನು ಅವರಿಗೆ ಯಾರೂ ಇಲ್ಲ. ಕೆಲಸಮಾಡಿ ಕೆಟ್ಟವನಿಲ್ಲ. ಕೆಲಸಗಾರನನ್ನು ಸಿರಿಯೊಲಿವುದು. ಸೌಖ್ಯವನ್ನು ಬಯಸುವವರು ಕೆಲಸಮಾಡುವುದಾವಶ್ಯಕ. "ಕೈ ಕೆಸರಾದರೆ ಬಾಯಿ ಮೊಸರಾಗುವುದು," "ಕೂತುಂಬವನಿಗೆ ಕುಡಿಕೆಹಣ ಸಾಲದು" ಎಂದು ವಾಡಿಕೆಯಾಗಿ ಹೇಳುತ್ತಾರಲ್ಲವೇ? ಊಟದಿಂದ ನಮಗೆ ಸಂತೋಷವಾಗಬೇಕಾದರೆ, ಊಟಕ್ಕೆ ಮುಂಚೆ ಸ್ವಲ್ಪ ಹೊತ್ತಿನವರೆಗೂ ಹೀಗೆ ತಿಂಡಿಯಿಲ್ಲದಿರುವುದಾವಶ್ಯಕವೋ ಹಾಗೆಯೇ ವಿಶ್ರಾಂತಿ ವಿನೋದಗಳಿಂದ ನಮಗೆ ಸಂತೋಷವುಂಟಾಗಬೇಕಾದರೆ, ಮೊದಲು ಕಷ್ಟಪಟ್ಟು ಕೆಲಸಮಾಡಿ ದಣಿದಿರಬೇಕು. ಯಾವ ಸೋಮಾರಿಯು ಯಾವಾಗಲೂ ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದರೆ ಬಲು ಸುಖವುಂಟಾದೀತೆಂದು ಯೋಚಿಸುವನೋ ಅವನು, ಬೆಳಗಿನಿಂದ ಸಂಜೆಯವರೆಗೂ ಎಡೆಬಿಡದೆ ಮಿಠಾಯಿಯನ್ನು ತಿನ್ನುವುದು ಒಳ್ಳೆಯದೆಂದು ಯೋಚಿಸುವ ಹುಡುಗನಂತೆ ಬುದ್ಧಿಹೀನನೆಂಬುದರಲ್ಲಿ ಸಂದೇಹವಿಲ್ಲ.

(೨) ಐಶ್ವರ್ಯವು

ಈ ಪ್ರಪಂಚದಲ್ಲಿ ಐಶ್ವರ್ಯವನ್ನೊಲ್ಲದ ಮನುಷ್ಯರೇ ಅಪೂರ್ವ. "ಹಣವೆಂದರೆ ಹೆಣವೂ ಬಾಯಿಬಿಡುವುದು" ಎಂಬಂತೆ ಎಲ್ಲರೂ ಹಣದಲ್ಲಿ ಸರತರಾಗಿದ್ದಾರೆ. "ಹಣದಿಂದ ಎಲ್ಲಾ ಸುಖಗಳೂ ದೊರೆವುವು, ಬೇಕಾದುದನ್ನೆಲ್ಲಾ ಕಷ್ಟಪಡದೆ ಹಣದಿಂದ ಸಂಪಾದಿಸಿಕೊಳ್ಳಬಹುದು" ಎಂದೆಣಿಸುವುದೇ ಇದಕ್ಕೆ ಮುಖ್ಯಕಾರಣ. ಚೆನ್ನಾಗಿ ಯೋಚಿಸಿದಲ್ಲಿ ಐಶ್ವರ್ಯವು ಬಗೆಬಗೆಯ ತೊಂದರೆಗಳಿಗೆ ಕಾರಣವಾಗಿದೆ. ಮೊದಲು ಅದನ್ನು ಸಂಪಾದಿಸುವುದೇ ಎಷ್ಟೋ ಕಷ್ಟ. ಸಂಪಾದಿಸಿದ ಮೇಲೆ ಅದನ್ನು ಕಳೆಯದೆ ಕಾಪಾಡಿಕೊಳ್ಳುವುದು ಇನ್ನೂ ಕಷ್ಟ. ಮನಸ್ಸಿಗೆ ಬಲು ಚಿಂತೆಯೂ, ಭಯವೂ, ಕಳವಳವೂ ಉಂಟಾಗುವುವು. ಪ್ರಪಂಚದಲ್ಲಿ ಉಂಟಾಗುವ ಎಲ್ಲಾ ವಿಧವಾದ ತೊಂದರೆಗಳಿಗೂ, ಗಲಾಟೆಗಳಿಗೂ ಹಣವೇ ಮೂಲ. ಐಶ್ವರ್ಯವು ಹೆಚ್ಚಿದ ಹಾಗೆಲ್ಲಾ ಜನರಲ್ಲಿ ಅತಿ ಕಾಮವೂ ಜಂಭವೂ ಹೆಚ್ಚುತ್ತವೆ. ಸೋಂಬೇರಿತನ, ವಿಷಯಾಸಕ್ತಿಯೂ ಹುಟ್ಟುತ್ತವೆ. ಪರರನ್ನು ಜರೆವ, ಬಡವರನ್ನು ಹಾಸ್ಯಮಾಡುವ ದುರ್ಗುಣಗಳು ಬಂದೊದಗುವುವು. ಅಗರ್ಭಶ್ರೀಮಂತನಾದವನಿಗೆ ಎಷ್ಟರ ಕಷ್ಟಸುಖಗಳೇ ತಿಳಿಯುವುದಿಲ್ಲ. ಬಡವರು ಯಾರಾದರೂ ಕಷ್ಟದಲ್ಲಿ ನರಳುತ್ತಿದ್ದರೆ ಸ್ವಲ್ಪ ಕನಿಕರಪಡುವುದು ಕೂಡ ಅವರಿಗೆ ಬರುವುದಿಲ್ಲ. ಕುರುಡನಿಗೆ ಹಿಡ್ಡ ಮುಂದೆ ಇರುವುದು ಹೇಗೆ ಕಾಣುವುದಿಲ್ಲವೋ ಹಾಗೆಯೇ ಧನಾಢ್ಯನಿಗೆ ಎದುರಾಗಿರುವುದೂ ಕಣ್ಣಿಗೆ ಬೀಳದು. ಮದಾಂಧತೆ ಹುಟ್ಟಿ ತನ್ನ ಮೈ ಮೇಲೆ ಕೂಡ ಜ್ಞಾನತಪ್ಪುವುದು. ಸಿರಿ ಹೆಚ್ಚಿದ ಹಾಗೆಲ್ಲಾ ಹಣದ ಆಸೆಯು ಹೆಚ್ಚುವುದು. ಈ ದುರಾಶೆಯನ್ನು ಪೂರೈಸಿಕೊಳ್ಳಲು, ಕೆಲವು ವೇಳೆ ಮನುಷ್ಯನು ದುರ್ಮಾರ್ಗಕ್ಕೆ ಬಿದ್ದು ಹಣವನ್ನು ಸಂಪಾದಿಸುವುದುಂಟು.

ಆದರೆ ಹಣವು ಯಾವಾಗಲೂ ಕೇಡನ್ನೇ ಮಾಡುವುದೆಂದು ಹೇಳಲಾಗದು. ಅದನ್ನುಪಯೋಗಿಸುವ ರೀತಿ ಕೆಟ್ಟದಾದರೆ ಹಣವೂ ಕೆಟ್ಟದಾಗುವುದು. ಸರಿಯಾದ ರೀತಿಯಲ್ಲಿ ಬಳಸಿದರೆ, ಹಣದಿಂದ ಲೋಕಕ್ಕೆ ಎಷ್ಟೋ ಉಪಕಾರವುಂಟು. ಹಣವಿದ್ದವರು ಪುಸ್ತಕಭಂಡಾರ, ಸ್ಕೂಲು, ಆಸ್ಪತ್ರೆ, ಛತ್ರ ಮುಂತಾದುವನ್ನು ಕಟ್ಟಿಸಬಹುದು, ಅನಾಥರಿಗೆ ಸಹಾಯಮಾಡಬಹುದು. ಬಡಹುಡುಗರಿಗೆ ವೇತನಗಳನ್ನೂ ಬಹುಮಾನಗಳನ್ನೂ ಕೊಟ್ಟು ವಿದ್ಯಾಭಿವೃದ್ಧಿ ಮಾಡಬಹುದು. ಹಣಗಾರರಿಗೆ ಹೊಟ್ಟೆಪಾಡಿನ ಯೋಚನೆಯೇ ಇಲ್ಲದಿರುವುದರಿಂದ ಬೇಕಾದಷ್ಟು ಕಾಲವು ಅವರ ಅಧೀನವಾಗಿರುವುದು. ಅವರು ಪುಸ್ತಕಗಳನ್ನೋದುವುದರಿಂದಲೂ ದೇಶಸಂಚಾರದಿಂದಲೂ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಬಂಡವಾಳವಿಲ್ಲದವರಿಗೆ ಸಾಲವನ್ನು ಕೊಟ್ಟು ದೇಶದಲ್ಲಿ ವ್ಯಾಪಾರವನ್ನೂ ಕೈಗಾರಿಕೆಯನ್ನೂ ವ್ಯವಸಾಯವನ್ನೂ ಉನ್ನತಸ್ಥಿತಿಗೆ ತರಬಹುದು.

ನಮ್ಮ ದೇಶದಲ್ಲಿ ಉದಾರವಾದ ದೊಡ್ಡ ಮನುಷ್ಯರನೇಕರು ಹಲವು ಬಗೆಗಳಲ್ಲಿ ಲೋಕೋಪಕಾರವಾಗುವಂತೆ ತಮ್ಮ ಹಣವನ್ನು ಸತ್ಕಾರ್ಯಗಳಲ್ಲಿ ವೆಚ್ಚಮಾಡಿರುತ್ತಾರೆ. ಕೆಲವರು ವಾಸಕ್ಕೆ ಮನೆಗಳನ್ನು ಕಟ್ಟಿಸಿ ಬಡ ಪ್ರಜೆಗಳಿಗೆ ದಾನಮಾಡಿರುವರು. ಇನ್ನು ಕೆಲವರು ಸ್ಕೂಲುಗಳನ್ನೂ ಕಾಲೇಜುಗಳನ್ನೂ ಆಸ್ಪತ್ರೆಗಳನ್ನೂ ಕಟ್ಟಿಸಿ ತಮ್ಮ ಆಸ್ತಿಯನ್ನು ಸರ್ಕಾರದವರ ವಶಮಾಡಿ, ಆ ಆಸ್ತಿಯಿಂದ ಬಂದ ಆದಾಯದಿಂದ ಅವುಗಳನ್ನು ನಡೆಸಿಕೊಂಡು ಬರುವಂತೆ ಅವರನ್ನು ಪ್ರಾರ್ಥಿಸಿರುವರು, ಮತ್ತೆ ಕೆಲವರು ಛತ್ರ, ದೇವಾಲಯ, ದನ ಮುಂತಾದುವು ನೀರು ಕುಡಿವ ಕಲ್ಲುತೊಟ್ಟಿ ಇವುಗಳನ್ನು ಕಟ್ಟಿಸಿರುತ್ತಾರೆ. ಹಿಂದೂದೇಶದಲ್ಲಿ ಇಂತಹ ಛತ್ರಗಳಿಲ್ಲದ ದೊಡ್ಡ ಪಟ್ಟಣಗಳೇ ಅತಿ ವಿರಳ. ಬೇರೆ ಕೆಲವರು ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದಲ್ಲಿಟ್ಟು, ಅದರಿಂದ ಬಂದ ಬಡ್ಡಿಯಿಂದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ವಿದ್ಯೆಗೆ ಪ್ರೋತ್ಸಾಹಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಇಂತಹ ಮಹೋಪಕಾರಿಗಳಲ್ಲಿ ಮೊದಲನೆಯವರಾಗಿಯೂ ಬೊಂಬಾಯಿ ಪಟ್ಟಣದ ಪಾರಸಿ ಜನರಿಗೆ ತಿಲಕಪ್ರಾಯರಾಗಿಯೂ ಇದ್ದ ಮ॥ ರಾ॥ ತಾತಾ ಸಾಹೇಬರೆಂಬ ಕೋಟೀಶ್ವರರನ್ನು ಎಂದಿಗೂ ಮರೆಯಲಾಗುವುದಿಲ್ಲ.

ಪರ್ಷಿಯಾ ರಾಜ್ಯದ ಸುಲ್ತಾನರನ್ನು ಅಲ್ಲಿನ ಪ್ರಜಾಪಕ್ಷದವರು ಸಿಂಹಾಸನದಿಂದ ಇಳಿಸಿ, ಬೇರೊಬ್ಬ ಬಾಲಕನಿಗೆ ಪಟ್ಟ ಕಟ್ಟಿದರಷ್ಟೆ. ಆ ಸುಲ್ತಾನರನ್ನು ಈಗ ಅಲ್ಲಿಂದ ಬೇರೆ ಸ್ಥಳಕ್ಕೆ ಕಳುಹಿಸಿಬಿಡಬೇಕೆಂದು ನಿಶ್ಚಯಿಸಿ ಅವರಿಗೆ ದೇಶಬಿಟ್ಟು ಹೊರಗೆ ಹೋಗುವುದಾದರೆ ವರುಷಕ್ಕೆ ೭೫,೦೦೦ ರೂಪಾಯಿ ಸಂತ ಪೆನ್ಶನ್ ಕೊಡುತ್ತೇವೆಂದು ಹೇಳಿದರು. ಈಗ ಆ ಸುಲ್ತಾನರು ಹೋಗುವಂತೆ ಅಡ್ಡಿಯುಂಟಾಗಿರುವುದು. ಅವರ ಬಳಿ ಎಲ್ಲಾ ರಾಜ್ಯದ ಕೆಲವು ಜವಾಹಿರಿಗಳು ಇರುತ್ತವೆ. ಅವನ್ನು ಕೊಟ್ಟು ಹೋಗಬೇಕೆಂದು ಕೇಳಿದಾಗ ಅವರು ಆ ಆಭರಣಗಳೆಲ್ಲಾ ತಮ್ಮ ಸ್ವಂತ ಜಿನಸಿ ಎಂದು ಹೇಳಿ ಕೊಡದೆ ಇರುತ್ತಾರೆ. ಪ್ರಸಿದ್ಧವಾದ ಕೋಹಿನೂರೆಂಬ ವಜ್ರಕ್ಕೆ ಎರಡನೆಯದಾದ ದರಿಯಾನೂರೆಂಬ ವಜ್ರವನ್ನು ಸುಲ್ತಾನರು ಈಗಿನ ಸುಲ್ತಾನರಿಗೆ ಕೊಟ್ಟುಬಿಟ್ಟರು.

ಮೂರು ಹೊಸ ಪುಸ್ತಕಗಳು—ಬೇಗ ನೋಡಿ

111

ಇಂಗ್ಲೀಷು ಕಲಿಯುವ ಪುಸ್ತಕ-ಕ್ರಯ ೧-೮-೦ ಇಂಗ್ಲೀಷ್ ಭಾಷೆಯನ್ನು ವ್ಯಾಕರಣಾನುಸಾರವಾಗಿ ಓದುವದಕ್ಕೂ, ಬರೆಯುವದಕ್ಕೂ, ಮಾತನಾಡುವದಕ್ಕೂ, ಭಾಷಾಂತರ ಮಾಡುವದು ಮೊದಲಾದ ಅನೇಕ ವಿಷಯವನ್ನು ಸುಲಭವಾಗಿ ಸರ್ವರಿಗೂ ತಿಳಿಯುವಂತೆ ಕಲಿಸುವ ಪುಸ್ತಕವಿದು

ಸಾಗರದ ಎ ವಿ ಸ್ಕೂಲ್ ಹೆಡ್ ಮಾಸ್ಟರಾಗಿದ್ದ [illegible] ಮ|| ರಾ|| ಎಚ್ ಶ್ರೀಕಂಠಯ್ಯನವರಿಂದ ರಚಿಸಲ್ಪಟ್ಟ ಮ|| ರಾ|| ಭಾರತ ಸಂಗ್ರಹಾ [illegible] ಮಯ್ಯನವರಿಂದ ಹೊರಟಂಥ ಪುಸ್ತಕಗಳು —

ಕನ್ನಡ ಕಥಾಸರಿತ್ಸಾಗರ-ಕ್ರಯ ರೂ ೧-೮-೦. ನವರಸ ಯುಕ್ತವಾಗಿ, ಪೂರ್ವಕವಿ ಸೋಮದೇವನಿಂದ ರಚಿಸಿ, ಈಗ ಓದುತ್ತಿದಕ್ಕೆ ಪ್ರಚಾರದಲ್ಲಿರುವ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದ ಎಲ್ಲಕ್ಕಿಂತ ಲೂ ಅತ್ಯಂತ ಸ್ವಾರಸ್ಯವಾಗಿ, ಯಾವ ಹೊಳೆಯ ನೀರು ಎಲ್ಲಿ ಹರಿದು ಕೊನೆಗೆ ಸಮುದ್ರವನ್ನೇ ಸೇರುವಂತೆ ಯಾವ ಪುಸ್ತಕದ ಸಂಗತಿಯೇ ಆಗಲಿ ಬಂದು ಈ ಪುಸ್ತಕವನ್ನೇ ಸೇರುತ್ತ

ತಾಪಾಂಗಿ ಇಂಗ್ಲೀಷ್ ಕಲಿಯುವಿಕೆ-ಕ್ರಯ ರೂ ೧-೮-೦ ಇಂಗ್ಲೀಷ್ ಭಾಷೆಯನ್ನು ಕಲಿಯಲು ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ೧—೨ ತಿಂಗಳಲ್ಲಿ ಓದುವುದಕ್ಕೂ, ಬರೆಯುವುದಕ್ಕೂ ಮಾತನಾಡುವುದಕ್ಕೂ ಕಲಿಸುವ ಅತ್ಯುತ್ತಮ ಪುಸ್ತಕವಿದು

ಶ್ರೀಗೀತಾಮೃತಸಾರೋದಧಿ-ಕ್ರಯ ೮ ಆಣೆ. ಶ್ರೀ ಕೃಷ್ಣಾರ್ಜುನ ಸಂವಾದವೆಂಬ ಗೀತಾಮೃತ ಪುಸ್ತಕವು

ವಿಳಾಸ —ಬಿ. ಕೆ ಮಯ್ಯ ಕಂಪನಿ, ಲಕ್ಷ್ಮೀ ಪ್ರೆಸ್ಸು, ಪಾಲೂರ್—ಬೋಲಾರ್

ವೃತ್ತಾಂತ ಪತ್ರಿಕೆ

ಶಕೆ ೧೮೩೧ ನೇ ಇಸವಿ ಆಗಸ್ಟ್ ತಾ|| ೧೯ ನೇ ಗುರುವಾರ

ಮೈಸೂರು ನವರಾತ್ರಿ ಪ್ರದರ್ಶನವು

ಕಳೆದ ವರುಷ ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ನಡಿಸಲ್ಪಟ್ಟ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನದ ರಿಪೋರ್ಟನ್ನು ಸರ್ಕಾರದವರು ಈಗತಾನೇ ಪ್ರಕಟಮಾಡಿರುತ್ತಾರೆ. ಇದನ್ನು ಇನ್ನೂ ಮೊದಲೇ ಪ್ರಕಟಿಸುತ್ತಿದ್ದರೆ ಚನ್ನಾಗಿತ್ತು. ಆದರೆ ಈ ವರುಷದ ಪ್ರದರ್ಶನಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿ ಬಂದದ್ದರಿಂದ ಅದು ಸಾವಕಾಶವಾಯಿತು. ಈ ರಿಪೋರ್ಟುಗಳನ್ನು ಬೇಗನೆ ಪ್ರಕಟಮಾಡಿದ್ದರೆ ಅವುಗಳ ಸ್ವಾರಸ್ಯವೇ ಕಡಮೆಯಾಗುವುದು. ಅಧಿಕಾರಿಗಳಿಗೆ ಕೆಲಸಗಳ ಗಲಾಟೆ ಹೆಚ್ಚು ವಿಶೇಷವಾಗಿರುವದು, ಆದರೂ ಅಕ್ಟೋಬರಿನಲ್ಲಿ ನಡೆದ ಈ ಪ್ರದರ್ಶನದ ರಿಪೋರ್ಟನ್ನು ವರುಷಾಂತ್ಯದೊಳಗಾಗಿ ಪ್ರಕಟಮಾಡಬೇಕಾಗಿದ್ದಿತು.

ಈ ಪ್ರದರ್ಶನವು ವರುಷೇ ವರುಷ ಅಭಿವೃದ್ಧಿಯೊಂದುತ್ತಾ ಪ್ರಚಾರಕ್ಕೆ ಬರುತ್ತಾ ಇರುತ್ತಿರುವುದು ಸಂತೋಷಪ್ರದವಾಗಿದೆ. ಕಳೆದ ವರುಷದ ಪ್ರದರ್ಶನಕ್ಕೆ ೨,೩೦೯ ಜನರು ನಾನಾ ಜಾತಿಯ ೧೫,೨೭೭ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದರು. ಕಡೇ ಗಳಿಗೆಯಲ್ಲಿ ಅನೇಕ ಪ್ರದರ್ಶನ ವಸ್ತುಗಳು ಕಳುಹಿಸಲ್ಪಟ್ಟದ್ದರಿಂದ ಅವುಗಳಿಗೆಲ್ಲಾ ಕ್ರಮವಾದ ಮತ್ತು ಯೋಗ್ಯವಾದ ಸ್ಥಳವನ್ನು ಒದಗಿಸುವುದು ಮ್ಯಾನೇಜರುಗಳಿಗೆ ಬಹಳ ಕಷ್ಟಸಾಧ್ಯವಾಗಿರಬೇಕು. ಆದರೂ ಅವರು ಈ ಕಾರ್ಯವನ್ನು ಬಹು ತೃಪ್ತಿಕರವಾಗಿ ನೆರವೇರಿಸಿರುವಂತೆ ತೋರುತ್ತದೆ. ಪ್ರದರ್ಶನಕ್ಕೆ ಶಾಶ್ವತವಾದ ಕಟ್ಟಡವು ಇದ್ದುದರಿಂದ ಪ್ರದರ್ಶನದ ವಿಷಯ, ಕಮಿಟಿಯವರ ಶ್ರಮವು [illegible] ಕಡಮೆಯಾಯಿತೆಂದು ಹೇಳಬಹುದು. ಆದರೂ ಈ ಪ್ರದರ್ಶನದ ಕಾರ್ಯದಲ್ಲಿ ಅವರು ಬಹಳ ಕಷ್ಟಪಟ್ಟಿರುವದರಿಂದ ಅವರು ಪ್ರಜೆಗಳ ಕೃತಜ್ಞತಾಪೂರ್ವಕವಾದ ವಂದನೆಗಳಿಗೆ ಪಾತ್ರರಾಗಿರುತ್ತಾರೆ.

ಕಳೆದ ವರುಷ ೩೦,೦೦೦ ಪ್ರಜೆಗಳು ಹೋಗಿ ಪ್ರದರ್ಶನದ ವಸ್ತು ವಿಶೇಷಗಳನ್ನು ನೋಡಿಬಂದಿದ್ದಾರೆಂದೂ, ಅ ಪೈಕಿ ೧೯ ಸಾವಿರ ಮಂದಿ ತಲಾ ೨ ಆಣೆಯಂತೆ ಫೀಜು ಕೊಟ್ಟಿದ್ದಾರೆಂದೂ ತಿಳಿಯುತ್ತದೆ. ಪ್ರದರ್ಶನವು ಸೆಪ್ಟೆಂಬರ್ ೩೦ ಕ್ಕೆ ಪ್ರಾರಂಭವಾಗಿ ಅಕ್ಟೋಬರ್ ೧೪ ಕ್ಕೆ ಮುಕ್ತಾಯ ಮಾಡಲ್ಪಟ್ಟಿತಾದರೂ, ಹಿಂದಿನ ವರುಷ ಒಂದು ತಿಂಗಳ ವರೆಗೆ ತೆರೆದಿಟ್ಟಿದ್ದಾಗ್ಗೆ ಎಷ್ಟು ಮಂದಿ ಹೋಗಿದ್ದರೋ ಅದಕ್ಕಿಂತಲೂ ಸುಮಾರು ೧೦,೦೦೦ ಹೆಚ್ಚು ಜನರು ಪ್ರದರ್ಶನ ವಸ್ತುಗಳನ್ನು ನೋಡಿಬಂದರು. ಈ ಪ್ರದರ್ಶನವನ್ನು ನಡಿಸುವುದರಲ್ಲಿ ವಿದ್ಯಾರ್ಥಿಗಳು ಮ್ಯಾನೇಜರುಗಳಿಗೆ ತುಂಬಾ ಸಹಾಯಮಾಡಿದರು. ಅದಕ್ಕಾಗಿ ಅವರನ್ನು ವಂದಿಸತಕ್ಕದ್ದಾಗಿದೆ.

ಕಳೆದ ವರುಷದ ಪ್ರದರ್ಶನಕ್ಕಾಗಿ ರೂ. ೧೪,೭೪೭-೧೧-೭ ಖರ್ಚಾಯಿತೆಂದೂ ಈ ಪೈಕಿ ಫೀಜು ಮುಂತಾದವುಗಳ ಮೂಲಕ ರೂ. ೩,೧೧-೧೩-೧೧ ವಸೂಲಾಯಿತೆಂದೂ ತಿಳಿಯುತ್ತದೆ. ಸರ್ಕಾರಕ್ಕೆ ಈ ಪ್ರದರ್ಶನಕ್ಕಾಗಿ ವರುಷಕ್ಕೆ ಸುಮಾರು ೧೦,೦೦೦ ರೂಪಾಯಿ ವೆಚ್ಚ [illegible] ಆಗುವುದೆಂದು ತೋರುತ್ತದೆ. ಇದರಿಂದ ಈ ವಿಷಯ [illegible] ನಿಷ್ಪ್ರಯೋಜಕವಾದದ್ದೆಂದಾಗಲಿ ಹೇಳುವ [illegible] ಇದರಿಂದ ವ್ಯವಸಾಯಮಾಡತಕ್ಕ ರೈತಪ್ರಜೆಗಳಿಗೂ, ಮನೆಗಳಿಗೆ ಬೇಕಾಗುವ ಅವಶ್ಯವಾದ ಪದಾರ್ಥಗಳನ್ನು ತಯಾರುಮಾಡತಕ್ಕ ಕಸಬುದಾರರಿಗೂ ಬುದ್ಧಿ ಕುಶಲತೆಯು ಬಹಳ [illegible] ಪ್ರೋತ್ಸಾಹವುಂಟಾಗುತ್ತದೆಂದು ಧಾರಾಳವಾಗಿ ಹೇಳಬಹುದು.

ಪ್ರದರ್ಶನಶಾಲೆಯಲ್ಲಿ ಒಂದೇ ಜಾತಿಯ ವಸ್ತುಗಳು ಅನೇಕವಿರುವಲ್ಲಿ ಉತ್ತಮ ಮಧ್ಯಮಾಧಮಗಳನ್ನು ಪರೀಕ್ಷಿಸಿ ವಿಂಗಡ ಮಾಡುವುದು ಸುಲಭವಲ್ಲ. ಇದಕ್ಕಾಗಿ ನೇಮಕವಾಗಿದ್ದ ಕಮಿಟಿಯವರು ತುಂಬಾ ಶ್ರಮಪಟ್ಟಿರಬೇಕು. ಭತ್ತ, ರಾಗಿ, ಜೋಳ, ಈ ಮೊದಲಾದವುಗಳನ್ನು ಪರೀಕ್ಷಿಸುವುದಕ್ಕೆ ಅನುಭವವುಳ್ಳವರನ್ನೇ ಗೊತ್ತು ಮಾಡಬೇಕಾಗುವುದು. ಇದಲ್ಲದೆ ಯಂತ್ರ ವಿಶೇಷಗಳನ್ನೂ ಕೈಗಾರಿಕೆಗಳ ಸಾಧನಗಳನ್ನೂ ಚಿತ್ರ ಕೆಲಸ ಇವುಗಳನ್ನೂ ಅಜಮಾಯಿಷಿ ಮಾಡುವುದಕ್ಕೆ ಆಯಾ ಭಾಗಗಳಲ್ಲಿ ನಿಪುಣರಾದವರೇ ಇರಬೇಕಾಗುತ್ತದೆ.

ಬಹುಮಾನಗಳ ಪಟ್ಟಿಯು ಬಹು ದೊಡ್ಡದೆಂದೂ, ಅಷ್ಟೊಂದು ಬಹುಮಾನಗಳನ್ನು ಕೊಡಬೇಕಾದ ಅಗತ್ಯವಿಲ್ಲವೆಂದೂ ನಮಗೆ ತೋರುತ್ತಿದೆ. ಯಾವ ಧಾನ್ಯ ಮತ್ತು ವಸ್ತುಗಳಿಂದ ನಮ್ಮ ಸಂಸ್ಥಾನವು ಅಭಿವೃದ್ಧಿಗೆ ಬರುವುದೋ ಅಂಥಾ ಧಾನ್ಯ ಮತ್ತು ವಸ್ತುಗಳಿಗೆ ಗಣ್ಯವಾದ ಬಹು [illegible] ಬಹುಮಾನಗಳನ್ನು ಕೊಡಬೇಕಾದದ್ದು ನ್ಯಾಯವಾಗಿದೆ. ಪ್ರಯೋಜನಾಂಶವು ಕಡಮೆ ಇಂದಾಗಲಿ, ಸಂಶಯಾಸ್ಪದವಾದದ್ದೆಂದಾಗಲಿ ತೋರಿಬರುವಂಥಾ ವಸ್ತುಗಳಿಗೂ ಧಾನ್ಯಾದಿಗಳಿಗೂ [illegible] ಕೊಡುವುದೂ ಪ್ರೋತ್ಸಾಹಿಸುವುದೂ ಹಿತಕರವಾದದ್ದಲ್ಲ. ರೈತರಿಗೆ ಕಸಬುದಾರರಿಗೂ ಕಷ್ಟಪಟ್ಟು ಬುದ್ಧಿ ಕುಶಲತೆಯನ್ನು ಉಪಯೋಗಿಸಿ ಮಾಡುವಂಥಾ ಕೆಲಸಗಳಿಗೆ ವಿಶೇಷವಾದ ಪ್ರೋತ್ಸಾಹವನ್ನು [illegible], ಮತ್ತು [illegible] ಧಾನ್ಯಗಳನ್ನು ಬೆಳೆ ಮಾಡ [illegible] ಗಳನ್ನು ಪುಷ್ಟಿ [illegible] ಗಿ ಸಾಕಿ ಅಭಿವೃದ್ಧಿ ಪಡಿಸುವುದಕ್ಕೂ ಗವರ್ನಮೆಂಟಿನವರು ವಿಶೇಷವಾಗಿ ಸಹಾಯ ಪಡಬೇಕಾಗಿರುತ್ತದೆ. ಉತ್ತಮವಾಗಿ ಬಡಗಿ, ಅಕ್ಕಸಾಲಿಗ ಮತ್ತು ದೇವಾಂಗ, ಈ ಕಸಬುದಾರರನ್ನೂ ಅವರ ಕೆಲಸಗಳಿಗೆ ಶ್ರೇಯಸ್ಸುಂಟಾಗುವಂತೆ ಸಹಾಯಮಾಡಿ ಪ್ರೋತ್ಸಾಹಪಡಿಸಬೇಕು. ಕುಶಲ ವಿದ್ಯೆಗಳು ಅಂದರೆ ಗಂಧದ ಮರದ ಕೆಲಸ, ಕತ್ತಿನೆಯ ಕಲಸ [illegible] ಚಿತ್ರಗಳನ್ನು ಬರೆಯುವ ಕೆಲಸ, ಚಿನ್ನ ಬೆಳ್ಳಿಯ [illegible] ಕೆಲಸ, ಬಣ್ಣ ಸಾಮಾನಿನ ಕೆಲಸ ಈ ಮೊದಲಾದವುಗಳಿಗೂ ಪ್ರೋತ್ಸಾಹ ದೊರೆಯುವುದು ಅಗತ್ಯವಾಗಿದೆ. ಮುಖ್ಯವಾಗಿ ನಮ್ಮ ದೇಶದ ಪ್ರಜೆಗಳಿಗೆ [illegible] ಬರುವುದಕ್ಕೆ [illegible] ಭಾಗಗಳಲ್ಲಿ ಪ್ರೋತ್ಸಾಹವೂ ಪ್ರ[illegible]ವೂ ಉಂಟು. ಮತ್ತೆ [illegible] ಗಳಿಗೆ ಪ್ರತಿಸ್ಪರ್ಧೆಯುಂಟಾಗುವುದು ಹಿತಕರವಾದದ್ದಲ್ಲ. ಆದರೆ [illegible] ವುಗಳಿಂದ ಕಾರ್ಖಾನೆ [illegible] ಅಭಿವೃದ್ಧಿಗೆ ಬರತಕ್ಕ ಸಂದರ್ಭಗಳು ಕಂಡುಬಂದ ಪಕ್ಷದಲ್ಲಿ ಅವುಗಳಿಗೆ ಪ್ರೋತ್ಸಾಹ ಕೊಡುವದು ಯುಕ್ತವಾದದ್ದು.

ಈ ವರುಷ ಪ್ರದರ್ಶನವು ರಾಜಧಾನಿಯಲ್ಲಿ ನವರಾತ್ರಿ ಕಾಲದಲ್ಲಿ ನಡಿಸಲ್ಪಡುವುದೆಂದು ಗವರ್ನಮೆಂಟಿನವರು ಸೂಚಿಸಿರುವುದನ್ನು ಕಾಣಬಹುದು. ಈ ಪ್ರದರ್ಶನಕ್ಕೆ [illegible] ರೂ ಕಂಟ್ರಾಕ್ಟರೂ ೧೯ ನೇ ಸೆಪ್ಟೆಂಬರ್ [illegible] ವಸ್ತುಗಳನ್ನು [illegible] ಕಳುಹಿಸಿಕೊಡಬೇಕೆಂದು [illegible] ಪ್ರದರ್ಶನ [illegible] ೧೦ ಕ್ಕೆ [illegible] ವಾಗುವುದು. ದನಗಳ ಪ್ರದರ್ಶನವು ಅಕ್ಟೋಬರ [illegible] ವಾಗಿ [illegible] ನಾನಾ ಜಾತಿಯ [illegible] ವಸ್ತುಗಳಿಗೆ ಬಹುಮಾನಗಳನ್ನೂ ಪದಕಗಳನ್ನೂ ಕೊಡುವುದಾಗಿ ಗೊತ್ತು ಮಾಡಿರುವರು. ಈ ಪ್ರದರ್ಶನವನ್ನು ನಡಿಸುವ [illegible] ದಾಯ ಕಮಿಟಿಗೆ ಗವರ್ನಮೆಂಟ್ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮಿ|| ಜಿ ಎಚ್ ಕ್ರುಂಬೀಗಲ್ ಅವರು ಪ್ರೆಸಿಡೆಂಟರಾಗಿದ್ದಾರೆ. ಈ ವರುಷದ ಪ್ರದರ್ಶನವು ಹೋದ ವರುಷದ ಪ್ರದರ್ಶನಕ್ಕಿಂತಲೂ ಇನ್ನೂ ಚನ್ನಾಗಿಯೂ ಜಯಪ್ರದವಾಗಿಯೂ ನಡೆಯಲೆಂದು, ಇದರ ದೆಸೆಯಿಂದ ಈ [illegible] ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಇನ್ನೂ ಹೆಚ್ಚು ಪ್ರೋತ್ಸಾಹವುಂಟಾಗಿ ಅಭಿವೃದ್ಧಿ ಹೊಂದಲೆಂದೂ ನಾವು ನಿರೀಕ್ಷಿಸುತ್ತೇವೆ.

ಕ್ಯಾಪ್ಟನ್ ದಾಸ್ ಮೆಮೋರಿಯಲ್ ಫಂಡು

ಪ್ರಸಿದ್ಧ ರಾಜಭಕ್ತರಾದ ಮ|| ಎಸ್ ಎಂ ಶ್ರೀಧರ್, ಸಿ ಐ ಇ ಅವರು ಹೊದಲಾದ ಕೆಲವು ಮಹನೀಯರು ಮುಂದಾಳುಗಳಾಗಿ ಒಂದು ಚಿಕ್ಕ ಸ್ಮಾರಕ ನಿಧಿಯನ್ನು [illegible] ಆದ ಸಂದರ್ಭದ [illegible] ಪ್ರಾಣಹಾನಿ [illegible] ಕ್ಯಾಪ್ಟನ್ ದಾಸ್ ರವರ [illegible] ಜ್ಞಾಪಕಾರ್ಥವಾಗಿ [illegible] ಬೇಕೆಂದು ನಿಶ್ಚಯಿಸಿ ಅದಕ್ಕಾಗಿ ಒಂದು ಫಂಡನ್ನು ಪ್ರಾರಂಭಿಸಿರುತ್ತಾರೆ. ಇಂಥಾ ಕೀರ್ತಿಪ್ರದವಾದ ಕಾರ್ಯಕ್ಕೆ ಸಹಾಯಮಾಡುವುದರಲ್ಲಿ ಅನೇಕರಾನೇಕರು ಉತ್ಸಾಹಪಡುವರೆಂದು ನಂಬಿರುವ [illegible] ಮೈಸೂರು ಸ್ಟೇಟ್ ಪ್ರಜೆಗಳ ಹಿತಾರ್ಥವಾಗಿ ಕ್ಯಾಪ್ಟನ್ ದಾಸ್ ರವರು [illegible] ಕೆಲಸವನ್ನು ಮಾಡುವುದರಲ್ಲಿ [illegible] ದಾರಿಯಲ್ಲಿ ಪ್ರಾಣವನ್ನು ಒಡ್ಡಿಸುವುದಕ್ಕೆ ಹೋಗಿ ತಮ್ಮ ಪ್ರಾಣವನ್ನೇ ಕೊಟ್ಟಿದ್ದರು. ಈ ಫಂಡಿಗೆ ಯಾರೊಬ್ಬರೇ ಆಗಲಿ ೧೦ ರೂಪಾಯಿಗಿಂತ ಹೆಚ್ಚು ಚಂದಾ ಕೊಡಬೇಕಾದದ್ದಿಲ್ಲ. ಎಲ್ಲರೂ [illegible] ಕಡಮೆಯಾಗಿ [illegible] ಕೊಟ್ಟಲ್ಲಿ ಬಹು ಸಂತೋಷಿಸುವಂತಹದಾಗುವುದು. ಈ ಚಂದಾ ಹಣವನ್ನು [illegible] ಮಿ|| [illegible] ಕವಿಂಷನರ್ [illegible] ಅವರ ವಶಕ್ಕೆ ಕಳುಹಿಸಬಹುದಾಗಿದೆ.

ನಮ್ಮ ವಾಚಕರಲ್ಲಿ ಯಾರಾದರೂ ಈ ಫಂಡಿಗೆ ಚಂದಾ ಕೊಡಲು ಅಪೇಕ್ಷಿಸುವದಾದರೆ ಅದನ್ನು ನಮ್ಮಲ್ಲಿಗೆ [illegible] ನಂತರ ಈ ಪತ್ರಿಕೆಯ ಮೂಲಕ ಅಂಗೀಕರಿಸಿ ಮೇಲ್ಕಂಡ ಸಕ್ರೆಟರಿಯವರಿಗೆ ರವಾನೆ ಮಾಡುವೆವು. ಈ ಚಂದಾ ಹಣವನ್ನು [illegible] ಆರ್ಡರ್ [illegible] «ಮ್ಯಾನೇಜರ್, 'ವೃತ್ತಾಂತ ಪತ್ರಿಕೆ,' ಮೈಸೂರು' ಎಂಬ ವಿಳಾಸಕ್ಕೆ ಕಳುಹಿಸತಕ್ಕದ್ದು.

ಬೇರೆ ಬೇರೆ ವೃತ್ತಾಂತಗಳು

ಮೈಸೂರು ನ್ಯಾಯಾಧಿಪತಿಗಳ [illegible] ಆಗಸ್ಟ್ ೧೯ ಕ್ಕೆ [illegible] ಮುಂದೆ [illegible] ಪ್ರಕಟವಾಗಿತ್ತು. ಈಗ [illegible] ಸೆಪ್ಟೆಂಬರ್ ತಾ. ೩ ನೇ ಗುರುವಾರ ನಡೆಯುವಂತೆ ಗೊತ್ತು ಮಾಡಿದ್ದಾರೆ.

ಮೈಸೂರಾಯಿಯವರನ್ನು ನಡೆಯಿಸುವದಕ್ಕಾಗಿ ಬೇಕಾದ ವಿಚಾರಣೆಗಳನ್ನೆಲ್ಲಾ ಮಾಡುವ ಉದ್ದೇಶ [illegible] ದವರು ಕರ್ನಲ್ ಜರ್ಮನ್ ಯವರನ್ನು ನೇಮಕ ಮಾಡಿರುತ್ತಾರೆ.

•

ರಾಜಧಾನಿಯ ಮ್ಯಾಜಿಸ್ಟ್ರೇಟ್ ಕಚೇರಿಯಲ್ಲಿ ಕಂದಾಯ ಮೊತ್ತವನ್ನು ವಸೂಲ್ಮಾಡುವ ಕಾರ್ಯಕ್ಕೆ ಸರ್ಕಾರದವರು ಪ್ರತ್ಯೇಕವಾದ ಒಬ್ಬ [illegible] ನೇಮಿಸಿ [illegible] ರುತ್ತಾರೆ.

•

ಮಡಿಕೇರಿಯಲ್ಲಿ ಸಬ್ ಜಡ್ಜಿಯಾಗಿದ್ದ ಮ|| ಕೆ. ಸ ಚಪ್ಪನವರು ಕಳೆದ [illegible] ವಾರ [illegible] ರೋಗದಲ್ಲಿ ಕಾಲವಾದರೆಂದೂ, ಅವರಿಗೆ ಇನ್ನೂ ೪೭ ವರುಷ ವಯಸ್ಸಾಗಿತ್ತೆಂದೂ ತಿಳಿದು ಬಂದಿದೆ.

•

ಜಲತರಂಗ್ ವಾದ್ಯದಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವ ಮ|| ಅಪ್ಪಾಸ್ವಾಮಿ ಐಯ್ಯಂಗಾರ್ ರವರನ್ನು ಶ್ರೀಮನ್ ಮಹಾರಾಜರವರು ಅರಮನೆ ಇಲಾಖೆಯಲ್ಲಿ ಸಂಗೀತ ವಿದ್ವಾಂಸರಾಗಿ ಸೇರಿಸಿಕೊಂಡಿರುತ್ತಾರೆ.

•

ನಮ್ಮ ದಿವಾನರವರಾದ ಮ|| ಟಿ ಆನಂದರಾಯರವರಿಗೆ ಎರಡು ವಾರಗಳಿಂದ ಕಣ್ಣಿನ ಉಪದ್ರವ ಉಂಟಾಗಿರುವಂತೆ ತಿಳಿದು ಬಂದಿದೆ. ಅವರು ಆದಷ್ಟು ಬೇಗ ವಾಸಿಮಾಡಿಕೊಳ್ಳುವರೆಂದು ಮಾತ್ರ ಇಲ್ಲಿ ನಿರೀಕ್ಷಿಸುವಂತೆ ತೋರುವುದಿಲ್ಲ.

•

ಶ್ರೀಮಾನ್ ಯುವರಾಜರವರು ನೆನ್ನೆ ಬೆಂಗಳೂರಿಂದ ನೀಲಗಿರಿಗೆ ದಯಮಾಡಿಸುವವರಾಗಿದ್ದರು. ಇವರೂ ಶ್ರೀಮನ್ ಮಹಾರಾಜರವರೂ ಈ ತಿಂಗಳ ಕಡೇ ವಾರದಲ್ಲಿ ಪೂನಾ ಪಟ್ಟಣದಲ್ಲಿ ನಡೆಯುವ ಪೋಲೋ ಪಂದ್ಯಕ್ಕಾಗಿ ಪ್ರಯಾಣ ಮಾಡುವರೆಂದು ವರ್ತಮಾನವಿದೆ.

•

ಕೋಲಾರ್ ಮೈನ್ಸ್ [illegible] ನಿಂದ ಕೆಲವು ಮೈಲು ದೂರ ಮೊತ್ತದಲ್ಲಿ [illegible] ಮಂತ್ರಗಳನ್ನು ನಡಿಸುತ್ತಿದ್ದಾರೆಂದೂ, ಇದುವರೆಗೆ [illegible] ಒಂದೂ ಪತ್ತೆ ಆಗಲಿಲ್ಲವೆಂದೂ ಪೋಲೀಸ್ [illegible] ಅವನನ್ನು ಹಿಡಿಯುವುದಕ್ಕೆ ಶಾಸ [illegible] ಪ್ರಯತ್ನ [illegible] ಬಂದಿದೆ.

•

ಕೆಲವು ವಾರಗಳ ಹಿಂದೆ ರಾಜಧಾನಿಯಲ್ಲಿ [illegible] ಮಳೆ [illegible] ಜೋರಾಗಿತ್ತು. ಇನ್ನೂ ಸ್ವಲ್ಪ ಪ್ಲೇಗ್ [illegible] ಬೆಳೆಯು [illegible] ಆಗಿದೆ. ಸೌಖ್ಯ ಜನಗಳಿಗೆ [illegible] ಜನರು [illegible] ಗಳಿಗೆ ಸ್ಥಳಾಂತರ ಮಾಡಿ ಇನ್ನೂ ಹಾಕುವುದರಿಂದ ಇರಲಿ ಅಲ್ಲಿಲ್ಲದ ಮನೆಗಳು ಆರೋಗ್ಯಕರವಾದ [illegible] ಚಿಂತಿಸುತ್ತಿದ್ದಾರೆ.

•

ಕೆಲವು ದಿವಸದ ಹಿಂದೆ ಬೆಂಗಳೂರಿಗೆ ಸಂಚಾರ್ ಕಡೆಯಿಂದ ಬರುತ್ತಿದ್ದ ರೈಲ್ ಗಾಡಿಗೆ ಅಪಾಯವನ್ನು [illegible] ಕುಳ್ಳಿರಿಸಿ [illegible] ಸ್ಟೇಷನ್ ರೈಲ್ ಕಂಬಿಗಳನ್ನು ತೆಗೆದು ಹಾಕಿದರು. ಅದರ [illegible] ಗಾಡಿಯು ಮುಂದಾಗಕ್ಕೆ [illegible] ಅಲ್ಲಿ ಒಂದು [illegible] ಹೋಗಿ ತನಿಖೆ ಮಾಡುತ್ತಿದ್ದಾರೆ.

•

ಬೆಂಗಳೂರಿನ ಅಧಿಕಾರಿಗಳು [illegible] ಸಂಚಾರ ಮಾಡುತ್ತಿದ್ದಾಗ [illegible] ಆಯುಧಗಳು ಬಚ್ಚಿಡಲ್ಪಟ್ಟಿವೆ ಎಂದು ಕೇಳಿ [illegible] ಹೋಗಿ [illegible] ಶೋಧ ಮಾಡಲು ಪೂರ್ವಕಾಲದ ಕತ್ತಿಗಳೂ, ಒಂದು [illegible], ಒಂದು [illegible] ಸಿಕ್ಕಿದವು. ಈ ಮನೆಯ ಯಜಮಾನನ್ನು [illegible] ಆದರೆ [illegible] ಪಾಳೆಗಾರರಾಗಿದ್ದರೆಂದೂ ಆಗಿನ ಈ ಆಯುಧಗಳು ಅವರ ಮನೆಯಲ್ಲಿದ್ದುವೆಂದೂ ಗೊತ್ತಾಯಿತು.

•

ಚಿಕ್ಕಮಗಳೂರಿನಲ್ಲಿ ಪ್ಲೇಗ್ ಉಪದ್ರವನ್ನು ಶಮನ ಮಾಡುವುದಕ್ಕಾಗಿ ಅಲ್ಲಿನ ಡೆ. ಕಮಿಷನರ್ ರವರು [illegible] ಪ್ರಜೆಗಳಿಗೆ ಪ್ಲೇಗ್ [illegible] ಹಾಕುತ್ತಿದ್ದಾರೆಂದೂ, ಇದುವರೆಗೆ [illegible] ಜನರು [illegible] ಹಾಕಿಸಿ ಕೊಂಡಿದ್ದಾರೆಂದೂ ಇದರ ದೆಸೆಯಿಂದ ಪ್ಲೇಗ್ ಉಪದ್ರವ ಕಡಿಮೆಯಾಗಿ ಇರುವದನ್ನು [illegible] ಜನರು [illegible] ಹಾಕಿಸಿ ಕೊಳ್ಳುತ್ತಿದ್ದಾರೆಂದೂ ಒಬ್ಬ [illegible] ತಿಳಿಸುತ್ತಾರೆ.

•

[illegible] ರವರು ರಾಜಧಾನಿಗೆ ದಯಮಾಡಿ [illegible] ಮೈಸೂರ [illegible] ಕೈಗಾರಿಕೆಗಳ [illegible] ವನ್ನು ಕಟ್ಟಿಸಬೇಕೆಂದು [illegible] ಕಟ್ಟಡಕ್ಕೆ ಅವರಿಂದ ಶಂಕುಸ್ಥಾಪನ [illegible] ಪ್ರತಿಷ್ಠೆ [illegible] ಭಾಗವಾಯಿತು. [illegible] ವರೆಗೂ ಅದರ ಕೆಲಸಗಳನ್ನು ಪ್ರಾರಂಭಿಸಿರಲಿಲ್ಲ. ಈಗ ಇದನ್ನು ಪ್ರಾರಂಭಿಸಿ [illegible] ಯವರು ಮಾಡುವದಕ್ಕೂ [illegible] ಸರ್ಕಾರದ [illegible] ಅಪ್ಪಣೆ ಕೊಟ್ಟಿದ್ದಾರೆ.

•

ಕ್ಯಾಪ್ಟನ್ ದಾಸ್ ರವರ [illegible] ದುಃಖಕರವಾದ ವೃತ್ತಾಂತವನ್ನು ಸಂಗ್ರಹಮಾಡಿ [illegible] ರಾಮನಾಥಪುರ, ಕಟ್ಟೇಪುರಗಳ ನಾಡುಗಳ ಉದ್ದಕ್ಕೂ ಇರುವ ಗ್ರಾಮಗಳ ಪ್ರಜೆಗ

ಟ್ಟಿಗೆ ತಿಳಿಯಪಡಿಸಬೇಕೆಂದು, ಆ ಹೋಬಳಿಗಳ ಶೇಕ್ದಾರರಿಗೂ ಪಟೇಲ್ ಶ್ಯಾನುಭೋಗರುಗಳಿಗೂ ಕಳುಹಿಸಿಕೊಟ್ಟಿರುತ್ತಾರೆ. ಆ ವೃತ್ತಾಂತವು ನಮ್ಮ ಈ ಪತ್ರಿಕೆಯಲ್ಲಿ ಪ್ರಕಟವಾದದ್ದೇ. ಇದನ್ನು ಆಯಾ ಗ್ರಾಮಾಧಿಕಾರಿಗಳು ರೈತ ಪ್ರಜೆಗಳನ್ನು ಕೂಡಿಸಿ ಎಲ್ಲರಿಗೂ ತಿಳಿಯುವಂತೆ ಓದಿ ಹೇಳಬೇಕೆಂದೂ ಆಜ್ಞೆಕೊಡಿಸಿರುವರು. ಹೀಗೆ ಮಾಡೋಣದರಿಂದ ಕ್ಯಾಪ್ಟನ್ ಡಾಸ್ ಯವರು ರೈತರಿಗೆ ಉಪಕಾರ ಮಾಡಬೇಕೆಂಬ ಉದ್ದೇಶವುಳ್ಳವರಾಗಿ ಯ್ಯಾಗೆ ಆಣೆಕಟ್ಟಿನ ಕಾಮಗಾರಿಯನ್ನು ಮಾಡಿಸುತ್ತಾ ಒಂದಾನೊಂದು ಸಂದರ್ಭದಲ್ಲಿ ಅವರು ಹ್ಯಾಗೆ ತಮ್ಮ ಪ್ರಾಣವನ್ನೇ ಒಪ್ಪಿಸಿ ಬಿಟ್ಟರೋ ಆ ರೈತ ಪ್ರಜೆಗಳಿಗೆಲ್ಲಾ ಸ್ಪಷ್ಟವಾಗಿ ತಿಳಿದು ಬರುವುದು. ದಿವಾನರವರು ಇಂಥಾ ಶ್ರೇಷ್ಠ ಕಾರ್ಯವನ್ನು ಮಾಡಿರುವುದನ್ನು ನೋಡಿ ಸಂತೋಷಪಟ್ಟು ಅವರನ್ನು ವಂದಿಸುತ್ತೇವೆ. ಶೇಕ್ದಾರರೂ, ಶ್ಯಾನುಭೋಗ ಪಟೇಲರುಗಳೂ ದಿವಾನರವರ ಉದ್ದೇಶವನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ.

ಕ್ರೈಸ್ತರ ಬೋಧನೆಯು ದುರ್ಬೋಧನೆಯೋ ?

ಒಂದು ವರ್ತಮಾನ ಪತ್ರಿಕೆಯು "ಕ್ರೈಸ್ತರ ಸಾಹಸ" ಎಂಬ ಹೆಸರಿನಿಂದ ಕೆಲವು ಲೇಖನಗಳನ್ನು ಬರೆಯಲು ತೊಡಗಿರುತ್ತೆ. ಹೋದ ವಾರದ ಲೇಖನದಲ್ಲಿ ಅದನ್ನು ಬರೆದವರು "ಕ್ರೈಸ್ತರ ದುರ್ಬೋಧನೆ" ಎಂಬ ಪದವನ್ನು ಅಲ್ಲಲ್ಲಿ ಉಪಯೋಗಿಸಿರುತ್ತಾರೆ. ಆದರೆ ಆ "ದುರ್ಬೋಧನೆಯು" ಏನೆಂಬುದನ್ನು ಮಾತ್ರ ಅವರು ತಿಳಿಸಿಲ್ಲವೆ. ಪ್ರಾಯಶಃ ಮುಂದಕ್ಕೇನಾದರು ತಿಳಿಸುವರೋ ಏನೋ ನೋಡೋಣ.

ಅಷ್ಟರೊಳಗಾಗಿ ಅವರು ಕ್ರೈಸ್ತರ ಬೋಧನೆಯ ವಿಷಯ ಮಾಡಿರತಕ್ಕ ದೋಷಾರೋಪಣವು ಸರಿಯಲ್ಲವೆಂಬುದನ್ನು ತಿಳಿಸಲು ಅದೇ ಪುಟದಲ್ಲಿ ಒಂದು ಸಂಗತಿಯನ್ನು ತಾವೇ ಪ್ರಕಟಿಸಿರುವರು. ಸದರಿ ಲೇಖನ ಕರ್ತರು ಮರಹಮತ್ ಇಲಾಖೆಯ ಸೆಕ್ರೆಟರಿಗಳಾಗಿಯೂ ಆಕ್ಟಿಂಗ್ ಚೀಫ್ ಎಂಜಿನಿಯರಾಗಿಯೂ ಇದ್ದ ಕ್ಯಾಪ್ಟನ್ ಡಾಸ್ ಯವರು ಕಾಲವಾದ ದುಃಖ ಸಮಾಚಾರವನ್ನು ವಿವರಿಸಿ ತಿಳಿಸುವಾಗ್ಗೆ ಕ್ರೈಸ್ತರ ಬೋಧನೆಯು ದುರ್ಬೋಧನೆಯೋ ಅಥವಾ ಸುಬೋಧನೆಯೋ ಎಂಬುದಕ್ಕೆ ತಾವೇ ಉತ್ತರವನ್ನು ಕೊಡುತ್ತಾರೆ. ಗತಿಸಿದ ಕ್ಯಾಪ್ಟನ್ ಡಾಸ್ ಯವರು ಹಿಸ್ತುರ ಜಾತಿಗೆ ಸೇರಿದ ಒಬ್ಬ ಕೂಲಿಯವನ ಪ್ರಾಣವನ್ನು ಉಳಿಸುವ ಪ್ರಯತ್ನದಲ್ಲಿ ತಮ್ಮ ಸ್ವಂತ ಪ್ರಾಣವನ್ನೇ ಕಳೆದುಕೊಂಡರೆಂಬುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿದೆಯಷ್ಟೆ. ತನ್ನ ಸ್ವಂತ ಪ್ರಾಣದ ಮೇಲೆ ಮಮತೆ ಇಡದೆ ತಮ್ಮ ಜೊತೆ ಮನುಷ್ಯನಾದ ಒಬ್ಬ ಬಡ ಕೂಲಿಯವನನ್ನು ಬದುಕಿಸಬೇಕೆಂಬ ಉನ್ನತ ಪ್ರಯತ್ನದಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿಬಿಟ್ಟ ಕ್ಯಾಪ್ಟನ್ ಡಾಸ್ ಯವರು ಧೀರರೂ ಎಲ್ಲರ ಪ್ರಶಂಸೆಗೆ ಪಾತ್ರರೂ ಲೋಕದ ಚರಿತ್ರೆಯಲ್ಲಿ ಚಿರಕಾಲ ಸ್ಮರಿಸಲ್ಪಡತಕ್ಕವರೂ ಆಗಿರುತ್ತಾರೆನ್ನುವುದರಲ್ಲಿ ಸಂಶಯವೇ ಇಲ್ಲ. ಕಾವೇರಿ ನದಿಯು ಪ್ರವಾಹವಾಗಿ ಹರಿಯುತ್ತಿತ್ತು. ತಾವು ಬರುತ್ತಿದ್ದ ದೋಣಿಯು ಅಂಥಾ ಪ್ರಳಯದ ನದಿಯಲ್ಲಿ ಮಗುಚಿ ಹೋಗಲು ಕ್ಯಾಪ್ಟನ್ ಡಾಸ್ ಯವರು ಕಷ್ಟಪಟ್ಟು ಸಾಹಸದಿಂದ ಈಜಿಕೊಂಡು ನದಿಯ ತೀರಕ್ಕೆ ಬಂದುಬಿಟ್ಟರು. ತಮ್ಮ ಸಂಗಡ ದೋಣಿಯಲ್ಲಿದ್ದ ಕೂಲಿಗಳೆಲ್ಲರು ಸುರಕ್ಷಿತವಾಗಿ ದಡವನ್ನು ಸೇರಿದರೋ ಇಲ್ಲವೋ ಎಂಬುದನ್ನು ತಿಳಿಯಲು ಹಿಂತಿರುಗಿ ನೋಡಿದಾಗ್ಗೆ ಒಬ್ಬ ಕೂಲಿಯವನು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದದನ್ನು ಕಂಡು ಅಯ್ಯೋ! ಅವನನ್ನು ಬದುಕಿಸದೆ ಇರುವುದು ತರವೇ ಎಂದು ಧುಮುಕಿ ಅವನನ್ನು ಹಿಂಬಾಲಿಸಿದರು. ಈ ಪ್ರಯತ್ನದಲ್ಲಿ ಕ್ಯಾಪ್ಟನ್ ಡಾಸ್ ಯವರು ಬಲಶಾಲಿಗಳಾದರೂ ತಾವೇ ಪ್ರವಾಹದ ಸೆಳೆತಕ್ಕೆ ಸಿಕ್ಕಿ ಇನ್ನೂ ಯೌವನ ಪ್ರಾಯದಲ್ಲಿಯೇ ಮೃತರಾದರು. ಇದರ ವಿಷಯ ಮೇಲ್ಕಂಡ ಪತ್ರಿಕೆಯು ತಿಳಿಸುವುದೇನೆಂದರೆ — ಕ್ಯಾಪ್ಟನ್ ಡಾಸ್‍ರವರು ಎಂಥಾ ಸಾಹಸಿಗಳೂ, ತಮ್ಮ ಪ್ರಾಣದ ಮೇಲೆ ಆಸೆಯನ್ನಿಡದೆ ಸಮುದ್ಯೋಗಿಯಾಗಿದ್ದವನನ್ನು ಬದುಕಿಸಬೇಕೆಂಬ ದಯಾಪೂರಿತವಾದ ಚಿತ್ತವುಳ್ಳವರೂ ಎಂಬುದು ಅವರ ಕೃತ್ಯದಿಂದ ಚೆನ್ನಾಗಿ ಲೋಕಕ್ಕೆ ತಿಳಿಸಿ ನಮ್ಮ ದೇಶೀಯರಿಗೆ ಸದುಪಾಧ್ಯಯವನ್ನುಂಟುಮಾಡಿರುತ್ತದೆ" ಎಂಬುದೇ.

ಕ್ಯಾಪ್ಟನ್ ಡಾಸ್ ಯವರು ಒಬ್ಬ ಹಿಸ್ತುರ ಕೂಲಿಯವನ ಪ್ರಾಣವನ್ನು ಉಳಿಸುವುದಕ್ಕೋಸ್ಕರ ತಮ್ಮ ಪ್ರಾಣವನ್ನು ಅರ್ಪಿಸುವಂತೆ ಅವರನ್ನು ಪ್ರೇರಿಸಿದಂಥಾ ಬೋಧನೆಯು ದುರ್ಬೋಧನೆಯಾಗಿರಬಹುದೋ ? ಹಾಗೆನ್ನುವುದಕ್ಕೆ ಯಾರಿಗಾದರೂ ಮನಸ್ಸು ಬರುವುದೇ ? ವಾಚಕ ಮಹಾಶಯರೇ ನೀವೇ ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ.

ಕ್ಯಾಪ್ಟನ್ ಡಾಸ್ ಯವರು ಕ್ರೈಸ್ತರಾಗಿದ್ದರು. ಕ್ರೈಸ್ತರ ಬೋಧನೆಯನ್ನು ಅವರು ಕಲಿತಿದ್ದರು. ಇಂಥಾ ಬೋಧನೆಯಿಂದಲೇ ಅವರು ಸ್ವಾರ್ಥವನ್ನು ಚಿಂತಿಸದೆ ಪರಾರ್ಥದ ಮೇಲೆ ದೃಷ್ಟಿ ಇಟ್ಟು ಆ ಹಿಸ್ತುರವನನ್ನು ಬದುಕಿಸಲು ಪ್ರಯತ್ನಪಟ್ಟರು. ಕ್ರೈಸ್ತ ಮತಸ್ಥಾಪಕನಾದ ಯೇಸು ಕ್ರಿಸ್ತನ ಬೋಧನೆಯೂ ಆತನ ಸಾಧನೆಯೂ ಕ್ಯಾಪ್ಟನ್ ಡಾಸ್ ಯವರನ್ನು ಪ್ರೇರಿಸಿ ಒಬ್ಬ ಜೊತೆ ಮನುಷ್ಯನ ಪ್ರಾಣವನ್ನು ಉಳಿಸುವುದಕ್ಕೆ ತನ್ನ ಪ್ರಾಣವನ್ನೇ ಅರ್ಪಿಸುವಂತೆ ಮಾಡಿತು. ಲೋಕದಲ್ಲಿ ಮನುಷ್ಯನಿಗೆ ಅತಿ ಶ್ರೇಷ್ಠವೂ ಗಂಭೀರವೂ ಆದ ಕೆಲಸವು ಯಾವುದೆಂದರೆ ಅನ್ಯರಿಗೆ ಸಹಾಯ ಮಾಡುವುದೇ. ಈ ಬೋಧನೆಯನ್ನು ಕ್ಯಾಪ್ಟನ್ ಡಾಸ್ ಯವರು ಕ್ರೈಸ್ತ ಮತದಲ್ಲಿ ಕಂಡುಕೊಂಡು ಅದನ್ನು ತಮ್ಮ ನಡತೆಯಲ್ಲಿ ಸಾಧಿಸುತ್ತಿದ್ದರು. ಯೇಸು ಕ್ರಿಸ್ತನು ಭೂಲೋಕಕ್ಕೆ ಅವತಾರಿಯಾಗಿ ಬಂದು ಜನರನ್ನು ಪಾಪಬಂಧನದಿಂದ ರಕ್ಷಿಸಿ ಅವರಿಗೆ ಮೋಕ್ಷಪ್ರಾಪ್ತಿಯಾಗುವುದಕ್ಕೋಸ್ಕರ ಆತನು ಬಹು ಕ್ರೂರತರವಾದ ಶಿಲುಬೆಯ ಮರಣವನ್ನು ಹೊಂದಿದನು. ಈ ವಿಷಯವನ್ನು ಕ್ಯಾಪ್ಟನ್ ಡಾಸ್ ಯವರು ಚೆನ್ನಾಗಿ ತಿಳಿದುಕೊಂಡಿದ್ದರು. ಹಾಗಾದರೆ ಇಂಥಾ ಬೋಧನೆಯನ್ನು ದುರ್ಬೋಧನೆಯೆಂದು ಹೇಳುವಿರಾ ? ಕ್ರೈಸ್ತ ಮತವು ಜನರನ್ನು ನೀತಿವಂತರನ್ನಾಗಿಯೂ ಪರೋಪಕಾರದಲ್ಲಿ ಧೀರರನ್ನಾಗಿಯೂ ಮಾಡುವುದಕ್ಕೆ ಪ್ರೇರಿಸುತ್ತದೆ. ಕ್ಯಾಪ್ಟನ್ ಡಾಸ್‍ರಂತೆ ಎಲ್ಲಾ ಕ್ರೈಸ್ತರೂ ಇರುತ್ತಾರೆಂದು ಭಾವಿಸಲಾಗದು. ಯಾರೋ ಕೆಲವು ಕ್ರೈಸ್ತರು ಸಚ್ಚರಿತರಾಗಿಯೂ ಧೀರರಾಗಿಯೂ ಇಲ್ಲದಿದ್ದರೆ ಕ್ರೈಸ್ತ ಮತದ ಬೋಧನೆಯನ್ನು ದುರ್ಬೋಧನೆಯೆಂದು ಹೇಳಬಹುದೇ ?

ಎಲ್ಲಾ ಜನರೂ ಕ್ರೈಸ್ತ ಮತದ ಬೋಧನೆಯನ್ನು ನ್ಯಾಯವಾಗಿ ಅನುಸರಿಸುತ್ತಾ ಬಂದರೆ ಮನುಷ್ಯನಲ್ಲಿರುವ ಎಲ್ಲಾ ತರವಾದ ಅಹಂಕಾರ, ಹಗೆ, ಹೊಟ್ಟೆಕಿಚ್ಚು, ಕೊಲೆ, ಕಳ್ಳತನ, ಹಾದರ ಮೊದಲಾದ ಪಾಪಗಳೆಲ್ಲವೂ ನಿರ್ನಾಮವಾಗುವವು. ಯೇಸುಕ್ರಿಸ್ತನ ಬೋಧನೆಯಂತೆ ನಡೆದರೆ ಭೂಲೋಕವೆಲ್ಲಾ ನೀತಿಯಿಂದಲೂ ಮನೋಶುದ್ಧತೆಯಿಂದಲೂ ಸಖ್ಯದಿಂದಲೂ ಧೀರತೆಯಿಂದಲೂ ಎಲ್ಲಾ ವಿಧವಾದ ಒಳ್ಳೆಯತನದಿಂದಲೂ ತುಂಬಲ್ಪಡುವುದು. ಹಾಗಾದರೆ ಹೀಗೆ ಮಾಡತಕ್ಕ ಬೋಧನೆಯನ್ನು ದುರ್ಬೋಧನೆಯೆಂದು ಕರೆಯಬಹುದೋ ?

ಯೇಸು ಕ್ರಿಸ್ತನ ಬೋಧನೆಯನ್ನು ಚೆನ್ನಾಗಿ ಓದಿ ಆತನ ಸಾಧನೆಯನ್ನು ಚೆನ್ನಾಗಿ ತಿಳಿದಿರುವವರು ಆತನನ್ನು ಭೂಲೋಕದ ಪ್ರಮುಖನಾದ ಬೋಧಕನೆಂದು ಕರೆಯುವರು. ಯೇಸು ಕ್ರಿಸ್ತನ ಬೋಧನೆಯು ಭೂಲೋಕದವರನ್ನು ಎಷ್ಟೋ ಉನ್ನತ ಸ್ಥಿತಿಗೆ ತಂದಿದೆಯೆಂಬುದು ತಿಳಿದುಕೊಂಡಿರುವವರು ಅದನ್ನೆಂದಿಗೂ ದುರ್ಬೋಧನೆಯೆಂದು ಕರೆಯಲಾರರು. ಆತನ ಬೋಧನೆಯ ಪ್ರತಿ ಫಲವು ಗೋಚರವಾಗಿರುವಲ್ಲಿ ಅದನ್ನು ದುರ್ಬೋಧನೆಯೆಂದು ಕರೆಯುವುದು ಅಸಾಧ್ಯವೇ ಸರಿ. ಅನ್ಯರನ್ನು ರಕ್ಷಿಸುವ ಪ್ರಯತ್ನದಲ್ಲಿ ತನ್ನ ಪ್ರಾಣವನ್ನು ಅರ್ಪಿಸಬೇಕೆಂದು ದುರ್ಬೋಧನೆಯು ಎಂದಿಗಾದರೂ ಪ್ರೇರಿಸುವುದಿಲ್ಲ.

ಗತಿಸಿದ ಕ್ಯಾಪ್ಟನ್ ಡಾಸ್‍ಯವರು.

ಗವರ್ನ್‌ಮೆಂಟಿನವರು ಪ್ರಕಟಿಸಿರುವ ಇಸ್ತಿಹಾರ್‌ನಾಮೆಯು.

ಕಳೆದ ೧೨ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಕ್ಯಾಪ್ಟನ್ ಡಾಸ್‍ಯವರ ವಿಷಯವಾಗಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್‌ನಾಮೆಯ ಮುಖ್ಯಾಭಿಪ್ರಾಯವೇನಂದರೆ —

ಶ್ರೀಮನ್ಮಹಾರಾಜರವರು ಮೈಸೂರು ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯ ಆಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿದ್ದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ. ಯವರಿಗೆ ಪರಿತಾಪಕರವಾದ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಂಭವಿಸಿದ ಮರಣ ವಾರ್ತೆಯನ್ನು ಕೇಳಿ ತಮಗುಂಟಾದ ಮಹದ್ದುಃಖವನ್ನೂ, ಪರಾಕ್ರಮಯುಕ್ತವಾದ ಕಾರ್ಯವನ್ನು ನಡಿಸಿ ಅವರು ಪ್ರಾಣತ್ಯಾಗ ಮಾಡಿದ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಉಂಟಾದ ಮೆಚ್ಚಿಕೆಯಾದ ಮೆಚ್ಚಿಕೆಯನ್ನೂ ಸರ್ಕಾರಿ ರಿಕಾರ್ಡಿನಲ್ಲಿ ಇಟ್ಟಿರಬೇಕೆಂದು ಕುತೂಹಲಪಡುತ್ತಾರೆ. ಕ್ಯಾಪ್ಟನ್ ಡಾಸ್‍ಯವರು ಬಹಳ ಸಮರ್ಥರೂ, ಕಾರ್ಯದಕ್ಷರೂ, ಪಂಡಿತರೂ ಆದ ಅಧಿಕಾರಿಯಾಗಿದ್ದರು. ಅವರನ್ನು ಕಳೆದುಕೊಂಡದ್ದರಿಂದ ಪಬ್ಲಿಕ್ ಸರ್ವಿಸಿಗೆ ಅಪಾರವಾದ ನಷ್ಟ ಉಂಟಾಗಿರುತ್ತದೆ. ಅವರು ಕಾವೇರಿ ನದಿಯಲ್ಲಿ ಮುಳುಗಿ ಸಾಯುತ್ತಿದ್ದ ಒಬ್ಬ ಕೂಲಿಯವನನ್ನು ಬದುಕಿಸುವುದಕ್ಕೆ ಹೋಗಿ ತಮ್ಮ ಪ್ರಾಣವನ್ನೊಪ್ಪಿಸಿ ಚಿರಸ್ಮರಣೀಯರಾದರು. ಅಪೂರ್ವವಾದ ಶೌರ್ಯವನ್ನೂ ಪರಹಿತವನ್ನೂ ಮಾಡುವುದರಲ್ಲಿ ಅವರ ಹೆಸರು ಎಂದೆಂದಿಗೂ ಮೇಲ್ಪಂಕ್ತಿಯಾಗಿ ಶಾಶ್ವತವಾಗಿರಲಿ.

ಬೈ ಆರ್ಡರ್,
ಕೆ. ಎಸ್. ಚಂದ್ರಶೇಖರ ಐಯರ್,
ಗವರ್ನ್‌ಮೆಂಟ್ ಸೆಕ್ರೆಟರಿ.

ಅವರ ಹೆಸರನ್ನು ಶಾಶ್ವತಪಡಿಸುವ ಕಾರ್ಯವು.

ಅಂಥಾ ಪರಾಕ್ರಮಯುಕ್ತವಾದ ಸಂದರ್ಭದಲ್ಲಿ ಪ್ರಾಣವನ್ನು ತ್ಯಾಗ ಮಾಡಿದ ಕ್ಯಾಪ್ಟನ್ ಡಾಸ್‍ಯವರ ಹೆಸರನ್ನು ಶಾಶ್ವತ ಪಡಿಸಬೇಕೆಂದು ಪ್ರೆಸಿಡೆಂಟರಾದ ಮೆ ಎಸ್. ಎಂ. ಫ್ರೇಸರ್‍ಯವರೂ, ಮೈಸೂರು ಸಂಸ್ಥಾನದ ದಿವಾನರವರಾದ ಮೆ ಟಿ ಆನಂದರಾಯರವರೂ, ಮೈಸೂರು ಚೀಫ್ ಜಡ್ಜರಾದ ಮೆ|| ಎಸ್. ಇಕ್ಬಯವರೂ, ಸಾಪರ್ ಮೈನರ್ ಸೈನಿಕರ ಕಮ್ಯಾಂಡರಾದ ಮೆ|| ? ರೋ, ಆರ್ ಇ ಯವರೂ ಪ್ರಯತ್ನಪಟ್ಟು ಒಂದು ಫಂಡನ್ನು ಕೂಡಿಸಲಾರಂಭಿಸಿರುತ್ತಾರೆ. ಈ ಮಹನೀಯರುಗಳು ರುಜು ಮಾಡಿ ಪ್ರಕಟಪಡಿಸಿರುವ ವಿಷಯವೇನೆಂದರೆ —

ಕಳೆದ ಜೂಲೈ ತಾ ೩೦ ರಲ್ಲಿ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ಆರ್ ಇ ಯವರು ತಮ್ಮ ಪ್ರಾಣವನ್ನೇ ದಾನಮಾಡಿದ ವಿಚಾರವು ನಿಮ್ಮ ವಾಚಕರಿಗೆ ಚೆನ್ನಾಗಿ ತಿಳಿದಿರುತ್ತದೆ. ಕಾವೇರಿಗೆ ಹಾಕಿರುವ ಕೃಷ್ಣರಾಜ ಕಟ್ಟೆ ಎಂಬ ಅಣೆಕಟ್ಟೆಯು ಒಡೆದು ಹೋಯಿತು. ಮಳೆಗಾಲದಲ್ಲಿ, ಪ್ರವಾಹ ಬರುತ್ತಿರುವಾಗಲೇ, ಅದನ್ನು ದುರಸ್ತು ಮಾಡಿ ಕಟ್ಟುವುದು ಬಹಳ ಕಷ್ಟ. ಮತ್ತು ಬಹು ಅಪಾಯಕರವಾದದ್ದು. ಇತರ ಅಧಿಕಾರಿಗಳಾಗಿದ್ದರೆ ಈ ಕಾರ್ಯವನ್ನು ಮಾಡಲಾಗದು ಎಂದು ಬಿಟ್ಟುಬಿಡುತ್ತಿದ್ದರು. ಮೈಸೂರು ಮರಹಮ್ಮತ್ ಇಲಾಖೆಯ ಆಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿದ್ದ ಕ್ಯಾಪ್ಟನ್ ಡಾಸ್ ಯವರಾದರೋ ಅಧೈರ್ಯಪಡದೆ, ಅದು ಮನುಷ್ಯಮಾತ್ರದವನಿಂದಲೇ ಆಗತಕ್ಕದ್ದೆಂದು ತಿಳಿದು, ಈ ವರುಷ ಆ ಪ್ರಾಂತದ ರೈತರ ತರೀ ಜಮೀನುಗಳಿಗೆ ನೀರನ್ನು ಒದಗಿಸಿಕೊಡಬೇಕೆಂದು ಖಂಡಿತವಾಗಿ ನಿಶ್ಚಯಿಸಿದು, ತಾವೇ ಮುಂದಾಳಾಗಿ ನಿಂತು ಕಾಮಗಾರಿಯನ್ನು ನಡಿಸುತ್ತಾ ಬಂದರು. ಹೀಗೆ ಅವರು ಕೆಲಸ ಮಾಡಿಸಿ ಆ ದಿನ ಸಾಯಂಕಾಲ ದೋಣಿಯಲ್ಲಿ ಕುಳಿತು ವಾಪಸು ಕ್ಯಾಂಪಿಗೆ ಹೋಗಬೇಕೆಂದು ಬರುತ್ತಿರುವಲ್ಲಿ ಆ ದೋಣಿಯು ಮಗುಚಿಕೊಂಡಿತು. ಕ್ಯಾಪ್ಟನ್ ಡಾಸ್ ಯವರೂ ಅವರ ಸಂಗಡ ಇದ್ದ ಕೆಲಸದವರೂ ಪ್ರವಾಹದ ನದಿಯಲ್ಲಿ ಬಿದ್ದು ಈಜಿಕೊಂಡು ಬರಬೇಕಾಯಿತು. ನದಿಯಲ್ಲಿ ಒಂದು ಗಡ್ಡೆಯಿಂದ ೧೦ ಅಡಿಯ ಸಮೀಪಕ್ಕೆ ಕ್ಯಾಪ್ಟನ್ ಡಾಸ್ ಯವರು ಬಂದು ನೀರಿನಲ್ಲಿ ನಿಂತು ಸದರಿ ಕಡೆ ತಿರುಗಿ ನೋಡಿ ತಮ್ಮ ಕೂಡ ಇದ್ದವರೆಲ್ಲಾ ಬಂದರೋ ಎಂದು ಲೆಕ್ಕಮಾಡುತ್ತಾ ಇದ್ದರು. ಒಬ್ಬ ದೋಣಿಯವನು ಮಾತ್ರ ನಡು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾ ಇದ್ದದ್ದನ್ನು ಕ್ಯಾಪ್ಟನ್ ಡಾಸ್‍ಯವರು ನೋಡಿ ಥಟ್ಟನೆ ಮತ್ತೆ ಈಜು ಬಿದ್ದು ಅವನನ್ನು ಬದುಕಿಸಲು ನುಗ್ಗಿ ಹೋದರು. ಅವರು ಈಜುತ್ತಿರುವಲ್ಲಿ ಪ್ರಯಾಣಿಸಿಕೊಂಡಿದ್ದರು. ಆದರೂ ಹೊಳೆಯ ಸೆಳತದಿಂದ ಅವರು ಆನೆಯ ಬಾಯಿಗೆ ಕೊಚ್ಚಲ್ಪಟ್ಟು ಮುಳುಗಿಕೊಂಡರು. ಕ್ಯಾಪ್ಟನ್ ಡಾಸ್ ಯವರ ಪರಾಕ್ರಮವನ್ನು ವರ್ಣಿಸಬೇಕಾದ ಆಗತ್ಯವಿಲ್ಲ. ಅವರ ಪರಾಕ್ರಮಯುಕ್ತವಾದ ಕಾರ್ಯವನ್ನು ಮೈಸೂರಿನಲ್ಲಿ ಶಾಶ್ವತಪಡಿಸಬೇಕಾದದ್ದು ಸಹಜವೂ ಯೋಗ್ಯವೂ ಆಗಿರುವುದು. ಅವರ ಸ್ನೇಹಿತರೂ ಮೈಸೂರು ಸಂಸ್ಥಾನದ ಉದ್ಯೋಗಸ್ಥರೂ ಪ್ರಜೆಗಳೂ ಈ ಘನವಾದ ಕಾರ್ಯದಲ್ಲಿ ಸಹಾಯಕರಾಗಲು ಅವಕಾಶವನ್ನುಂಟುಮಾಡಿದೆ. "ಡಾಸ್ ಮೆಮೋರಿಯಲ್ ಫಂಡ್" ಎಂಬ ಫಂಡನ್ನು ಪ್ರಾರಂಭಿಸಿರುತ್ತೇವೆ. ಇದಕ್ಕೆ ಯಾರೊಬ್ಬರೇ ಆಗಲಿ ೧೦ ರೂಪಾಯಿಗಿಂತ ಹೆಚ್ಚು ಚಂದಾ ಕೊಡಬೇಕಾದದ್ದಿಲ್ಲವೆಂದೂ, ಅದಕ್ಕಿಂತ ಕಡಮೆಯಾದ ಚಂದಾವನ್ನು ಎಷ್ಟು ಜನರು ಬೇಕಾದರೂ ಕೊಡಬಹುದೆಂದೂ ವಿಧಾಯಕಮಾಡಲಾಗಿದೆ. ಈ ಫಂಡಿಗೆ ಬೆಂಗಳೂರಿನಲ್ಲಿರುವ ಎಕ್ಸೈಸ್ ಕಮಿಷನರ್ ಮೆ|| ಸ್ಟ್ಯಾಕ್ಸ್ ಯವರೂ, ಆಫಿಸಿಯೇಟಿಂಗ್ ಚೀಫ್ ಇಂಜನಿಯರ್ ಮೆ|| ಶ್ರೀನಿವಾಸರಾಯರವರೂ ಟ್ರೆಜರರುಗಳಾಗಲು ಒಪ್ಪಿಕೊಂಡಿರುವರು. ಚಂದಾ ಕೊಡತಕ್ಕವರು ಈ ಟ್ರೆಜರರುಗಳ ಹೆಸರಿಗಾಗಲಿ, ಬೆಂಗಳೂರಿನಲ್ಲಿರುವ ಎಬರಾಸ್ ಬ್ಯಾಂಕಿಗಾಗಲಿ ಕಳುಹಿಸಬಹುದೆಂದು ಈ ಮೂಲಕ ಪ್ರಕಟಪಡಿಸಿದೆ.

ಮೈಸೂರು ಗೆಜೆಟ್ ಸಂಗ್ರಹ.

ಆನರರಿ ಸಬ್ ಅ|| ಸರ್ಜನ್ ಮೆ|| ಡಿ. ಬಸಪ್ಪನವರಿಗೆ ಕೊಟ್ಟಿರುವ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ನಾಲ್ವತ್ತೈದು ದಿನಗಳಿಗೆ ಜಾಸ್ತಿ ಮಾಡಿದೆ.

ಸಬ್ ಅ|| ಸರ್ಜನ್ ಮೆ|| ಜಿ. ವಿ. ವನಸ್ಕಾರ್ಡ್ ಹಾಸ್‍ಯವರಿಗೆ ಕೊಟ್ಟಿರುವ ಮೂವತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ದಿನ ಜಾಸ್ತಿಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಎಂ. ಶಾಂತರಾಜೇ ಅರಸಿನವರಿಗೆ ಆಗಸ್ಟ್ ತಾ ೧೬ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ವಾಪಸು ಬರುವ ತನಕ ಇಲ್ಲವೇ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ|| ಕಮಿಷನರ್ ಮೆ|| ಕೆ. ಚಾಂಡಿಯವರು ಮೈಸೂರು ಡೆಪ್ಯುಟಿ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಚಳ್ಳಕೆರೆ ತಾಲ್ಲೂಕು ಅಮಲ್ದಾರ್ ಮೆ|| ಎಂ ಎಸ್ ರಾಮಚಂದ್ರರಾಯರಿಗೆ ಆಗಸ್ಟ್ ತಾ. ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಿರಿಯೂರ್ ತಾಲ್ಲೂಕು ಶಿರಸ್ತೇದಾರ್ ಟಿ. ನರಸಿಂಗರಾಯರು ಚಳ್ಳಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮಧುಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ|| ಕಮಿಷನರ್ ಮೆ|| ಎಂ. ಎ. ನಾರಾಯಣ ಐಯಂಗಾರ್ರಿಗೆ ಆಗಸ್ಟ್ ತಾ ೯ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ|| ಕಮಿಷನರ್ ಮೆ|| ಟಿ ಬೊಕ್ಕಣ್ಣನವರನ್ನು ತುಂಕೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿದೆ.

ಮೆ ಟಿ. ರಾಯಲು ಚೆಟ್ಟಿಯವರು ತಮ್ಮ ಇತರ ಕೆಲಸಗಳೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಅ|| ಕಮಿಷನರ್ ಮೆ|| ಆರ್ ನಾರಾಯಣಸ್ವಾಮಿ ರಾಯರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾದ ಜೊತೆಗೆ ಮೂರು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ.

ತೀರ್ಥಹಳ್ಳಿ ಮತ್ತು ನಗರ್ ತಾಲ್ಲೂಕುಗಳ ಆಕ್ಟಿಂಗ್ ಅಮಲ್ದಾರ್ರುಗಳಾದ ಮೆ ಶ್ರೀನರಸಿಂಹಶಾಸ್ತ್ರಿಯವರಿಗೂ, ಮೆ ಎಂ ರಾಮಚಂದ್ರರಾಯರಿಗೂ ಫಾರೆಸ್ಟ್ ತಕ್ಸೀರುಗಳನ್ನು ಓದಿದು ದರ್ಯಾಫ್ತು ಮಾಡುವ ಅಧಿಕಾರವನ್ನು ವಹಿಸಿದೆ.

ಕಡೂರ್ ಡಿಸ್ಟ್ರಿಕ್ಟ್ ಪೊಲೀಸ್ ಅ ಸೂಪರಿಂಟೆಂಡೆಂಟ್ ಮೆ|| ಟಿ. ಎಫ್. ಪಿಲ್ಕಿಂಗ್ಟನ್‍ರವರನ್ನು ಮೇ ತಾ. ೩೧ ರಿಂದ ಅ|| ಕಮಿಷನರ ವರ್ಗದಲ್ಲಿ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೆ ಟಿ ಎಸ್. ಡಿಕ್ರೂಸ್‍ಯವರು ಮೂರು ವರುಷ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ಮಾಡಿರುತ್ತಾರಾದ್ದರಿಂದ ಅವರನ್ನು ಜೂಲೈ ತಾ. ೧ ರಿಂದ ೧ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಅ ಕಮಿಷನರ್ ಮೆ|| ಎಚ್. ಸೀತಾರಾಮೈಯನವರನ್ನು ಜೂನ್ ತಾ ೧೮ ರಿಂದ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಎಕ್ಸೈಸ್ ಕಮಿಷನರವರ ಆಫೀಸ್ ಅಸಿಸ್ಟೆಂಟರಾದ ಅ|| ಕಮಿಷನರ್ ಮೆ|| ಬಿ ತಿಮ್ಮಣ್ಣನವರನ್ನು ಜೂಲೈ ತಾ. ೧ ರಿಂದ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಮಾಂಡ್ ರ್ಯಾಂಕಿನಲ್ಲಿ ತ್ಯಾಗರಾಜನನ್ನು ಡಿವಿಜನ್ ಕಮ್ಯಾಂಡರನ್ನಾಗಿಯೂ, ಮಹಮದ್ ಈಸಾಕ್‍ಯವರನ್ನು ಕ್ವಾರ್ಟರ್ ಮಾಸ್ಟರ್ ಜಮೇದಾರರನ್ನಾಗಿಯೂ ಬಡ್ತಿ ಮಾಡಲಾಗಿದೆ.

ಸಬ್ ಅ ಇಂಜನಿಯರ್ ಮೆ|| ತಿಮ್ಮೋಜಿರಾಯರನ್ನು ನಾಲಾ ಕನ್ಸರ್ವೆನ್ಸಿ ಇಲಾಖೆಯಿಂದ ಬೆಂಗಳೂರು ಡಿವಿಜನ್‍ಗೆ ವರ್ಗ ಮಾಡಿದೆ.

ನೀರಿನ ಸರಬರಾಯಿ ಮತ್ತು ಸ್ಟೋರ್ ಇಲಾಖೆಯ ಅ|| ಇಂಜನಿಯರ್ ಮೆ|| ಕೆ ಶ್ರೀನಿವಾಸ ಐಯಂಗಾರ್ರು ಮೇ ತಾ ೩೧ ರಿಂದ ಜೂನ್ ತಾ. ೮ ರ ವರೆಗೆ ಸ್ಯಾನಿಟರಿ ಇಂಜನಿಯರಾಗಿ ಕೆಲಸ ಮಾಡಿರುತ್ತಾರೆ.

ನಾಲಾ ಕನ್ಸರ್ವೆನ್ಸಿ ಡಿವಿಜನ್ ಆ ಎಕ್ಸಿಕ್ಯುಟಿವ್ ಇಂಜನಿಯರ್ ಮೆ|| ಎಫ್. ಎ. ಸ್ಟೀಲ್ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತರೀಕೆರೆ ತಾಲ್ಲೂಕು ಅಮಲ್ದಾರ್ ಎಂ ಕೃಷ್ಣಸ್ವಾಮಿ ಐಯಂಗಾರ್ರಿಗೆ ಕೊಟ್ಟಿರುವ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ದಿನ ಜಾಸ್ತಿ ಮಾಡಿದೆ.

ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ|| ಟಿ ವೆಂಕಟರಾಮೈಯನವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ವಾರ ಜಾಸ್ತಿ ಮಾಡಿದೆ. ಹರಿಹರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರವರೇ ದಾವಣಗೆರೆ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಮೂರು ಹೊಸ ಪುಸ್ತಕಗಳು—ಬೇಗ ನೋಡಿ.

೬೧೩

ಇಂಗ್ಲೀಷು ಕಲಿಯುವ ಪುಸ್ತಕ—ಕ್ರಯ ೧-೮-೦ ಇಂಗ್ಲೀಷ್ ಭಾಷೆಯನ್ನು ವ್ಯಾಕರಣಾನುಸಾರವಾಗಿ ಓದುವದಕ್ಕೂ, ಬರೆಯುವದಕ್ಕೂ, ಮಾತನಾಡುವದಕ್ಕೂ, ಭಾಷಾಂತರ ಮಾಡುವದು ಮೊದಲಾದ ಅನೇಕ ವಿಷಯ ವನ್ನು ಸುಲಭವಾಗಿ ಸಮಸ್ತರಿಗೂ ತಿಳಿಯುವಂತೆ ಕಲಿಸುವ ಪುಸ್ತಕವಿದು

ಸಾಗರದ ಎ ವಿ ಸ್ಕೂಲ್ ಹೆಡ್‌ಮಾಸ್ತರಾಗಿದ್ದು ಗತಿಸಿದ ಮ|| ರಾ| ಎಚ್ ಶ್ರೀಕಂಠಯ್ಯನವರಿಂದ ರಚಿಸಲ್ಪಟ್ಟು ಮ|| ರಾ|| ಭಾರತಿ ಕಂಪೆನಿ ಮುಖ್ಯನವರಿಂದ ಹೊರಬಂದ ಪುಸ್ತಕಗಳು —

ಕನ್ನಡ ಕಥಾಸರಿತ್ಸಾಗರ—ಕ್ರಯ ರೂ ೧-೮-೦. ನವರಸ ಯುಕ್ತವಾಗಿ, ಪೂರ್ವಕವಿ ಸೋಮದೇವನಿಂದ ರಚಿಸಿ, ಈಗ ಓದುವುದಕ್ಕೆ ಪ್ರಚಾರದಲ್ಲಿರುವ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದ ಎಲ್ಲಕ್ಕಿಂತಲೂ ಅತ್ಯಂತ ಸ್ವಾರಸ್ಯವಾಗಿ, ಯಾವ ಹೊಳೆಯ ನೀರೇ ಆಗಲಿ ಹರಿದು ಕೊನೆಗೆ ಸಮುದ್ರವನ್ನೇ ಸೇರುವಂತೆ ಯಾವ ಪುಸ್ತಕದ ಸಂಗತಿಯೇ ಆಗಲಿ ಬಂದು ಈ ಪುಸ್ತಕವನ್ನೇ ಸೇರುತ್ತ

ತಾವಾಗಿ ಇಂಗ್ಲೀಷ್ ಕಲಿಯುವಿಕೆ—ಕ್ರಯ ರೂ ೧-೮-೦ ಇಂಗ್ಲೀಷ್ ಭಾಷೆಯನ್ನು ಕಲಿಯಲು ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ೧—೨ ತಿಂಗಳಲ್ಲಿ ಓದುವುದಕ್ಕೂ, ಬರೆಯುವುದಕ್ಕೂ, ಮಾತನಾಡುವುದಕ್ಕೂ ಕಲಿಸುವ ಅತ್ಯುತ್ತಮ ಪುಸ್ತಕವಿದು

ಶ್ರೀ ಗೀತಾಮೃತಮಹೋದಧಿ—ಕ್ರಯ ೮ ಆಣೆ ಶ್ರೀ ಕೃಷ್ಣಾರ್ಜುನ ಸಂವಾದವೆಂಬ ಗೀತಾಮೃತ ಪುಸ್ತಕವು

ವಿಳಾಸ —ಬಿ ಕೆ ಮೂರ್ತಿ ಕಂಪನಿ, ಲಕ್ಷ್ಮೀ ಪ್ರೆಸ್ಸು,
ಬೆಳಗಾವ್—ಬೆಂಗಳೂರ್

ವೃತ್ತಾಂತ ಪತ್ರಿಕೆ.

ಸನ ೧೯೦೯ ನೇ ಇಸವಿ ಅಗಸ್ಟ್ ತಾ|| ೧೯ ನೇ ಗುರುವಾರ

ಮೈಸೂರು ನವರಾತ್ರಿ ಪ್ರದರ್ಶನವು

ಕಳೆದ ವರುಷ ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ನಡಿಸಲ್ಪಟ್ಟ ವ್ಯವಸಾಯ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನದ ರಿಪೋರ್ಟನ್ನು ಸರ್ಕಾರದವರು ಈಗತಾನೇ ಪ್ರಕಟಮಾಡಿರುತ್ತಾರೆ ಇದನ್ನು ಇನ್ನೂ ಮೊದಲೇ ಪ್ರಕಟಮಾಡಿದ್ದರೆ ಚನ್ನಾಗಿತ್ತು ಏಕೆಂದರೆ ಈ ವರುಷದ ಪ್ರದರ್ಶನಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿ ಬಂದಿದ್ದರಿಂದ ಅದು ಸಹಾಯಕಾರಿಯಾಯಿತು ಇಂಥಾ ರಿಪೋರ್ಟುಗಳನ್ನು ಬೇಗನೆ ಪ್ರಕಟಮಾಡಿದ್ದರೆ ಅವುಗಳ ಸ್ವಾರಸ್ಯವೇ ಕಡಮೆಯಾಗುವುದು ಅಧಿಕಾರಿಗಳಿಗೆ ಕೆಲಸಗಳ ಗಲಾಟೆಯೇನೋ ವಿಶೇಷವಾಗಿರುವನ್ನ ಆದರೂ ಅಕ್ಟೋಬರಿನಲ್ಲಿ ನಡದ ಈ ಪ್ರದರ್ಶನದ ರಿಪೋರ್ಟನ್ನು ವರುಷಾಂತ್ಯದೊಳಗಾಗಿ ಪ್ರಕಟಮಾಡಬೇಕಾಗಿದ್ದಿತು

ಈ ಪ್ರದರ್ಶನವು ವರುಷೇ ವರುಷ ಅಭಿವೃದ್ಧಿಹೊಂದುತ್ತಾ ಪ್ರಚಾರಂಚಕವಾಗುತ್ತಾ ಬರುತ್ತಿರುವದು ಸಂತೋಷಪ್ರದವಾಗಿದೆ ಕಳೆದ ವರುಷದ ಪ್ರದರ್ಶನಕ್ಕೆ ೩,೪೦೯ ಜನರು ನಾನಾ ಜಾತಿಯ ೧೫,೬೭೭ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದರು ಕಡೇ ಗಳಿಗೆಯಲ್ಲಿ ಅನೇಕ ಪ್ರದರ್ಶನ ವಸ್ತುಗಳು ಕಳುಹಿಸಲ್ಪಟ್ಟದ್ದರಿಂದ ಅವುಗಳಿಗೆಲ್ಲಾ ಕ್ರಮವಾದ ಮತ್ತು ಯುಕ್ತವಾದ ಸ್ಥಳವನ್ನು ಒದಗಿಸುವುದು ಮ್ಯಾನೇಜರುಗಳಿಗೆ ತುಂಬಾ ಕಷ್ಟಸಾಧ್ಯವಾಗಿದ್ದಿರಬೇಕು ಆದರೂ ಅವರು ಈ ಕಾರ್ಯವನ್ನು ಬಹು ತೃಪ್ತಿಕರವಾಗಿ ನೆರವೇರಿಸಿರುವಂತೆ ತೋರುತ್ತದೆ ಪ್ರದರ್ಶನಕ್ಕೆ ಶಾಶ್ವತವಾದ ಕಟ್ಟಡವು ಇದ್ದದ್ದರಿಂದ ಪ್ರದರ್ಶನದ ಮ್ಯಾನೇಜರ್, ಕಮಿಟಿಯವರ ಶ್ರಮವೂ ಬಹು ಮಟ್ಟಿಗೆ ಕಡಮೆಯಾಯಿತೆಂದು ಹೇಳಬಹುದು ಆದರೂ ಈ ಪ್ರದರ್ಶನದ ಕಾರ್ಯದಲ್ಲಿ ಕೆಲವರು ತುಂಬಾ ಕಷ್ಟಪಟ್ಟಿರೋಣದರಿಂದ ಅವರು ಪ್ರಜೆಗಳ ಕೃತಜ್ಞತಾಪೂರ್ವಕವಾದ ವಂದನೆಗಳಿಗೆ ಪಾತ್ರರಾಗಿರುತ್ತಾರೆ

ಕಳೆದ ವರುಷ ೪೦,೦೦೦ ಪ್ರಜೆಗಳು ಹೋಗಿ ಪ್ರದರ್ಶನದ ವಸ್ತು ವಿಶೇಷಗಳನ್ನು ನೋಡಿಬಂದಿದಾರೆಂದೂ, ಅ ಪೈಕಿ ೧೯,೩೬೩ ಮಂದಿ ತಲಾ ೨ ಆಣೆಯಂತೆ ಫೀಜು ಕೊಟ್ಟಿದಾರೆಂದೂ ತಿಳಿದುಬರುತ್ತದೆ. ಪ್ರದರ್ಶನವು ಸೆಪ್ಟಂಬರ್ ೩೦ ಕ್ಕೆ ಪ್ರಾರಂಭವಾಗಿ ಅಕ್ಟೋಬರ್ ೧೪ ಕ್ಕೆ ಮುಕ್ತಾಯ ಮಾಡಲ್ಪಟ್ಟಿತಾದರೂ, ಹಿಂದಿನ ವರುಷ ಒಂದು ತಿಂಗಳ ವರೆಗೆ ತೆರೆದಿಟ್ಟಿದ್ದಾಗ್ಗೆ ಎಷ್ಟು ಮಂದಿ ಹೋಗಿದ್ದರೋ ಅಷ್ಟಕ್ಕಿಂತಲೂ ಸುಮಾರು ೧೦,೦೦೦ ಹೆಚ್ಚು ಜನರು ಪ್ರದರ್ಶನ ವಸ್ತುಗಳನ್ನು ನೋಡಿಬಂದರು ಈ ಪ್ರದರ್ಶನವನ್ನು ನಡಿಸುವುದರಲ್ಲಿ ವಿದ್ಯಾರ್ಥಿಗಳು ಮ್ಯಾನೇಜರುಗಳಿಗೆ ತುಂಬಾ ಸಹಾಯಮಾಡಿದರು ಅದಕ್ಕಾಗಿ ಅವರನ್ನು ವಂದಿಸತಕ್ಕದ್ದಾಗಿದೆ

ಕಳೆದ ವರುಷದ ಪ್ರದರ್ಶನಕ್ಕಾಗಿ ರೂ ೧೪,೭೫೬-೧೧-೮ ಖರ್ಚಾಯಿತೆಂದೂ ಈ ಪೈಕಿ ಫೀಜು ಮುಂತಾದವುಗಳ ಪ್ರಯುಕ್ತ ರೂ ೩,೪೧೯-೧೩-೧೧ ಪೈ ವಜಾ ಬಂದಿತೆಂದೂ ತಿಳಿಯುತ್ತದೆ ಸರ್ಕಾರಕ್ಕೆ ಈ ಪ್ರದರ್ಶನಕ್ಕಾಗಿ ವರುಷಕ್ಕೆ ಸುಮಾರು ೧೦,೦೦೦ ರೂಪಾಯಿನಂತೆ ಖರ್ಚಾಗುವುದೆಂದು ಕಾಣುತ್ತದೆ ಆದರೂ ಈ ಖರ್ಚು ಏನಾ ಏಕೋವಾಗಲಿ ಅಪ್ರಯೋಜಕವಾದದ್ದೆಂದಾಗಲಿ ಹೇಳಕೂಡದು ಇದರಿಂದ ವ್ಯವಸಾಯಮಾಡತಕ್ಕ ರೈತಪ್ರಜೆಗಳಿಗೂ, ಜನಸ್ವಾಮಿಗೆ ಬೇಕಾಗುವ ಅವಶ್ಯವಾದ ಪದಾರ್ಥಗಳನ್ನು ತಯಾರುಮಾಡಿಕೊಡುವ ಕಸಬುದಾರರಿಗೂ ಬುದ್ಧಿ ಕುಶಲತೆಯುಂಟಾಗಲು ವಿಶೇಷ ಪ್ರೋತ್ಸಾಹವುಂಟಾಗುತ್ತದೆಂದು ಧಾರಾಳವಾಗಿ ಹೇಳಬಹುದು

ಪ್ರದರ್ಶನದಲ್ಲಿ ಒಂದೇ ಜಾತಿಯ ವಸ್ತುಗಳು ಅನೇಕವಿರುವಲ್ಲಿ ಉತ್ತಮ ಮಧ್ಯಮಾಧಮಗಳನ್ನು ಪರೀಕ್ಷಿಸಿ ವಿಂಗಡ ಮಾಡುವುದು ಸುಲಭವಲ್ಲ. ಇದಕ್ಕಾಗಿ ನೇಮಕವಾಗಿದ್ದ ಕಮಿಟಿಯವರು ತುಂಬಾ ಶ್ರಮಪಟ್ಟಿರಬೇಕು ಭತ್ತ, ರಾಗಿ, ಜೋಳ, ಈ ಮೊದಲಾದವುಗಳನ್ನು ಪರೀಕ್ಷಿಸುವುದಕ್ಕೆ ಅನುಭವವುಳ್ಳವರನ್ನೇ ಗೊತ್ತು ಮಾಡಬೇಕಾಗುವುದು. ಇದಲ್ಲದೆ ಯಂತ್ರ ವಿಶೇಷಗಳನ್ನೂ ಕೈಗಾರಿಕೆಗಳ ಸಾಧನಗಳನ್ನೂ ಚಿತ್ರ ಕೆಲಸಗಳನ್ನೂ ಅಜಮಾಯಿಷಿ ಮಾಡುವುದಕ್ಕೆ ಆಯಾ ಭಾಗಗಳಲ್ಲಿ ನಿಪುಣರಾದವರೇ ಇರಬೇಕಾಗುತ್ತದೆ

ಬಹುಮಾನಗಳ ಪಟ್ಟಿಯು ಬಹು ದೊಡ್ಡದೆಂದೂ, ಅಷ್ಟೊಂದು ಬಹುಮಾನಗಳನ್ನು ಕೊಡಬೇಕಾದ ಅಗತ್ಯವಿಲ್ಲವೆಂದೂ ನಮಗೆ ತೋರುತ್ತಿದೆ ಯಾವ ಧಾನ್ಯ ಮತ್ತು ವಸ್ತುಗಳಿಂದ ನಮ್ಮ ಸಂಸ್ಥಾನವು ಅಭಿವೃದ್ಧಿಗೆ ಬರಬಹುದೋ ಅಂಥಾ ಧಾನ್ಯ ಮತ್ತು ವಸ್ತುಗಳಿಗೆ ಗಣ್ಯವಾದ ಬಹಳ ಬಹುಮಾನಗಳನ್ನು ಕೊಡಬೇಕಾದದ್ದು ಸರ್ವಥಾ ಅವಶ್ಯವಾಗಿದೆ ಪ್ರಯೋಜನಾಂಶವು ಕಡಮೆ ಎಂದಾಗಲಿ, ಸಂಶಯಾಸ್ಪದವಾದದ್ದೆಂದಾಗಲಿ ತೋರಿಬರುವಂಥಾ ವಸ್ತುಗಳಿಗೂ ಧಾನ್ಯಾದಿಗಳಿಗೂ ಬಹುಮಾನಗಳನ್ನು ಕೊಡುವುದೂ ಪ್ರೋತ್ಸಾಹಪಡಿಸುವುದೂ ಹಿತಕರವಾದದ್ದಲ್ಲ ರೈತರಿಗೆ ಕಸಬುದಾರರೂ ಕಷ್ಟ ಪಟ್ಟು ಬುದ್ಧಿ ಕುಶಲತೆಯನ್ನು ಉಪಯೋಗಿಸಿ ಮಾಡುವಂಥಾ ಕೆಲಸಗಳಿಗೆ ವಿಶೇಷವಾದ ಪ್ರೋತ್ಸಾಹವನ್ನು ಕೊಡಬೇಕು, ಮತ್ತು ಬಹಳ ಉಪಕಾರ ಧಾನ್ಯಗಳನ್ನು ಬೆಳೆ ಮಾಡುವುದಕ್ಕೂ ಗೋವುಗಳನ್ನು ಪುಷ್ಟಿಯಾಗಿ ಸಾಕಿ ಅಭಿವೃದ್ಧಿ ಪಡಿಸುವುದಕ್ಕೂ ಗವರ್ನಮೆಂಟಿನವರು ವಿಶೇಷವಾಗಿ ಸಾಹಸ ಪಡಬೇಕಾಗಿರುತ್ತದೆ ಕತ್ತಲಾಗಿ ಬಡಗಿ, ಕಮ್ಮಾರ ಮತ್ತು ದೇವಾಂಗ, ಈ ಕಸಬುದಾರರನ್ನೂ ಅವರ ಕೆಲಸಗಳಿಗೆ ಶ್ರೇಯಸ್ಸುಂಟಾಗುವಂತೆ ಸಹಾಯಮಾಡಿ ಪ್ರೋತ್ಸಾಹಪಡಿಸಬೇಕು ಕುಶಲ ವಿದ್ಯೆಗಳು ಅಂದರೆ ಗಂಧದ ಮರದ ಕೆಲಸ, ಕೆತ್ತನೆಯ ಕೆಲಸ, ಚಿತ್ರಗಳನ್ನು ಬಿಡಿಸುವ ಕೆಲಸ, ಚಿನ್ನ ಬೆಳ್ಳಿಯ ಸಣ್ಣ ಕೆಲಸ, ಬಣ್ಣ ಸಾಮಾನಿನ ಕೆಲಸ ಈ ಮೊದಲಾದವುಗಳಿಗೂ ಪ್ರೋತ್ಸಾಹ ದೊರಕುವುದು ಅಗತ್ಯವಾಗಿದೆ, ಮುಖ್ಯವಾಗಿ ನಮ್ಮ ದೇಶವೂ ಪ್ರಜೆಗಳೂ ಏಳಿಗೆಗೆ ಬರುವುದಕ್ಕೆ ಅರ್ಹವಾದಂಥಾ ಭಾಗಗಳಲ್ಲಿ ಪ್ರೋತ್ಸಾಹವೂ ಪುರಸ್ಕಾರವೂ ಉಂಟಾಗುವಂತೆ, ಹೊರತು ಪರದೇಶಿಯ ವಸ್ತು ವಿಶೇಷಗಳಿಗೆ ಪ್ರಾಶಸ್ತ್ಯವುಂಟಾಗುವುದು ಹಿತಕರವಾದದ್ದಲ್ಲ ಆದರೆ ಇಂದವುಗಳಿಂದ ಕಾರ್ಖಾನೆಗಳು ಸ್ವಲ್ಪವಾಗಿ ಕಸಬು ಅಭಿವೃದ್ಧಿಗೆ ಬರತಕ್ಕ ಸಂದರ್ಭಗಳು ಕಂಡುಬಂದ ಪಕ್ಷದಲ್ಲಿ ಅವುಗಳಿಗೆ ಪ್ರೋತ್ಸಾಹ ಕೊಡುವದು ವಿಹಿತವಾದದ್ದೇ ಸರಿ

ಈ ವರುಷ ಪ್ರದರ್ಶನವು ರಾಜಧಾನಿಯಲ್ಲಿ ನವರಾತ್ರಿ ಕಾಲದಲ್ಲಿ ನಡಿಸಲ್ಪಡುವುದೆಂದು ಗವರ್ನಮೆಂಟಿನವರು ಸೂಚನೆಯನ್ನು ಕೊಟ್ಟಿದಾರೆ ಈ ಪ್ರದರ್ಶನಕ್ಕೆ ರೈತರೂ ಕಾರ್ಖಾನೆದಾರರೂ ೧೯ ನೇ ಸೆಪ್ಟಂಬರ್ ಒಳಗಾಗಿ ವಸ್ತುಗಳನ್ನು ಮೈಸೂರಿಗೆ ಕಳುಹಿಸಿ ಕೊಡಬೇಕೆಂದು ವಿಧಾಯಕ ಮಾಡಲ್ಪಟ್ಟಿದೆ ಪ್ರದರ್ಶನವು ಅಕ್ಟೋಬರ್ ೧೭ ಕ್ಕೆ ಪ್ರಾರಂಭವಾಗಿ ಅಕ್ಟೋಬರ್ ೩೧ ಕ್ಕೆ ಮುಕ್ತಾಯವಾಗುವುದು ನಗರದ ಪ್ರದರ್ಶನವು ಅಕ್ಟೋಬರ್ ೨೫ ಕ್ಕೆ ಶುರುವಾಗಿ ೩೦ ಕ್ಕೆ ಪೂರೈಸುತ್ತದೆ ನಾನಾ ಜಾತಿಯ ಅನೇಕ ವಸ್ತುಗಳಿಗೆ ಬಹುಮಾನಗಳನ್ನೂ ಮೆಡಲುಗಳನ್ನೂ ಕೊಡುವುದಾಗಿ ಗೊತ್ತು ಮಾಡಿರುವರು ಈ ಸಲ ಈ ಪ್ರದರ್ಶನವನ್ನು ನಡಿಸುವ ಮೇಲ್ವಿಚಾರಣೆಯ ಕಮಿಟಿಗೆ ಗವರ್ನಮೆಂಟ್ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮ|| ಜಿ ಎಚ್ ಕ್ರುಂಬೀಗಲ್‌ಯವರು ಪ್ರೆಸಿಡೆಂಟರಾಗಿದಾರೆ ಈ ವರುಷದ ಪ್ರದರ್ಶನವು ಹೋದ ವರುಷದ ಪ್ರದರ್ಶನಕ್ಕಿಂತಲೂ ಇನ್ನೂ ಚನ್ನಾಗಿಯೂ ಜನರಂಜಕವಾಗಿಯೂ ನಡೆಯಲೆಂದೂ, ಇದರ ದೆಸೆಯಿಂದ ಈ ಸಂಸ್ಥಾನದ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಇನ್ನೂ ಹೆಚ್ಚು ಪ್ರೋತ್ಸಾಹವುಂಟಾಗಿ ಅಭಿವೃದ್ಧಿ ಹೊಂದಲಿ ಎಂದೂ ನಾವು ನಿರೀಕ್ಷಿಸುತ್ತೇವೆ

ಕ್ಯಾಪ್ಟನ್ ಡಾಸ್ ಮೆಮೋರಿಯಲ್ ಫಂಡು

ಬ್ರಿಟಿಷ್ ರೆಸಿಡೆಂಟರವರಾದ ಮ|| ಎಸ್ ಎಂ ಫ್ರೇಸರ್, ಸಿ ಐ ಇ ಅವರೇ ಮೊದಲಾದ ಕೆಲವು ಮಹನೀಯರು ಮುಂದಾಳುಗಳಾಗಿ ನಿಂತು, ಬಹು ಸ್ತೋತ್ರಾರ್ಹವೂ ದುಃಖಕರವೂ ಆದ ಸಂದರ್ಭದಲ್ಲಿ ಪ್ರಾಣವಾಸವನ್ನು ಮಾಡಿ ಚಿರಸ್ಮರಣೀಯರಾದ ಕ್ಯಾಪ್ಟನ್ ಬರ್ನಾರ್ಡ್ ಡಾಸ್‌ಯವರ ಹೆಸರನ್ನು ಈ ಸಂಸ್ಥಾನದಲ್ಲಿ ಶಾಶ್ವತಪಡಿಸಬೇಕೆಂದು ನಿಶ್ಚಯಿಸಿ ಅದಕ್ಕಾಗಿ ಒಂದು ಫಂಡನ್ನು ಪ್ರಾರಂಭಿಸಿರುತ್ತಾರೆ ಇಂಥಾ ಕೀರ್ತಿಪ್ರದವಾದ ಕಾರ್ಯಕ್ಕೆ ಸಹಾಯಮಾಡುವುದರಲ್ಲಿ ಅನೇಕಾನೇಕರು ಕುತೂಹಲಪಡುವರೆಂದು ಧಾರಾಳವಾಗಿ ಹೇಳಬಹುದು ಮೈಸೂರಿನ ರೈತ ಪ್ರಜೆಗಳ ಹಿತಾರ್ಥವಾಗಿ ಕ್ಯಾಪ್ಟನ್ ಡಾಸ್ ಯವರು ಶ್ರಮಪಟ್ಟು, ಆ ಕೆಲಸವನ್ನು ಮಾಡುವುದರಲ್ಲಿ ಒಬ್ಬ ರೋಗಿಯ ಪ್ರಾಣವನ್ನು ಉಳಿಸುವುದಕ್ಕೆ ಹೋಗಿ ತಮ್ಮ ಪ್ರಾಣವನ್ನೇ ಕೊಟ್ಟುಬಿಟ್ಟರು ಈ ಫಂಡಿಗೆ ಯಾರೊಬ್ಬರೇ ಆಗಲಿ ೧೦ ರೂಪಾಯಿಗಿಂತ ಹೆಚ್ಚು ಚಂದಾ ಕೊಡಬೇಕಾದದಿಲ್ಲ, ಎಲ್ಲರೂ ಅದಕ್ಕಿಂತ ಕಡಮೆಯಾಗಿ ಅಲ್ಪಸ್ವಲ್ಪವನ್ನು ಕೊಟ್ಟಲ್ಲಿ ಬಹು ಸಂತೋಷದಿಂದ ಅಂಗೀಕರಿಸಲಾಗುವುದು ಈ ಚಂದಾ ಹಣವನ್ನು ಬೆಂಗಳೂರಿನಲ್ಲಿರುವ ಬ್ಯಾಂಕ್ ಆಫ್ ಮದ್ರಾಸ್ ಏಜೆಂಟರ ಮ|| ಎಚ್ ಎಚ್. ಸ್ಪಾರ್ಕ್ಸ್‌ರವರಿಗೆ ಕಳುಹಿಸಬಹುದಾಗಿದೆ

ನಮ್ಮ ವಾಚಕರಲ್ಲಿ ಯಾರಾದರೂ ಈ ಫಂಡಿಗೆ ಚಂದಾ ಕೊಡಲು ಅಪೇಕ್ಷಿಸುವುದಾದರೆ ಹಣವನ್ನು ನಮ್ಮಲ್ಲಿಗೆ ಕಳುಹಿಸಿದಲ್ಲಿ ನಾವು ಈ ಪತ್ರಿಕೆಯ ಮೂಲಕ ಅಂಗೀಕರಿಸಿ ಮೇಲ್ಕಂಡ ಸಕ್ರೆಟರಿಯವರಿಗೆ ರವಾನಿಸಿ ಮಾಡುವೆವು ಈ ಚಂದಾ ಹಣವನ್ನು ಕಳುಹಿಸುವಾಗ "ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು" ಎಂಬ ವಿಳಾಸಕ್ಕೆ ಕಳುಹಿಸತಕ್ಕದ್ದು

ಬಿಳಿದೇಶದ ವೃತ್ತಾಂತಗಳು

ಮೈಸೂರು ನ್ಯಾಯವಿಧಾಯಕ ಸಭೆಯು ಅಗಸ್ಟ್ ೧೯ ಕ್ಕೆ ಸೇರುವುದೆಂದು ಮೊದಲು ಪ್ರಕಟವಾಗಿತ್ತು ಈಗ ಅದು ತಪ್ಪಿ ಸೆಪ್ಟಂಬರ್ ತಾ. ೩ ನೇ ಗುರುವಾರ ಸೇರುವಂತೆ ಗೊತ್ತು ಮಾಡಿದಾರೆ

ವೈಸ್‌ರಾಯಿಯವರನ್ನು ಸತ್ಕರಿಸುವುದಕ್ಕಾಗಿ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿಸುವ ಉದ್ದೇಶ ಸರ್ಕಾರದವರು ಕರ್ನಲ್ ಜೋನ್ಸ್ ಯವರನ್ನು ನೇಮಕ ಮಾಡಿರುತ್ತಾರೆ

ರಾಜಧಾನಿಯ ಮ್ಯುನಿಸಿಪಲ್ ಇಲಾಖೆಯಲ್ಲಿ ಕಂದಾಯ ಮುಂತಾದದ್ದನ್ನು ವಸೂಲ್ಮಾಡುವ ಬಾಬಿಗೆ ಸರ್ಕಾರದವರು ಪ್ರತ್ಯೇಕವಾದ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಕಳುಹಿಸುತ್ತಾರೆ.

ಮಡಕೇರಿಯಲ್ಲಿ ಸಬ್ ಜಡ್ಜಿಯಾಗಿದ್ದ ಮ|| ಕೆ ನಂಜಪ್ಪನವರು ಕಳೆದ ಶನಿವಾರ ಪಾರ್ಶ್ವವಾಯು ರೋಗದಲ್ಲಿ ಕಾಲವಾದರೆಂದೂ, ಅವರಿಗೆ ಇನ್ನೂ ೪೭ ವರುಷ ವಯಸ್ಸಾಗಿತ್ತೆಂದೂ ತಿಳಿದು ಬಂದಿದ

ಜಲತರಂಗ ವಾದ್ಯದಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವ ಮ|| ಅಸ್ಸಾಹೂರೆ ಐಯಂಗಾರ್ರೆಂಬುವರನ್ನು ಶ್ರೀಮನ್ಮಹಾರಾಜರವರು ಅರಮನೆ ಇಲಾಖೆಯಲ್ಲಿ ಸಂಗೀತ ವಿದ್ವಾಂಸರಾಗಿ ಸೇರಿಸಿಕೊಂಡಿರುತ್ತಾರೆ.

ನಮ್ಮ ದಿವಾನರವರಾದ ಮ|| ಟಿ ಆನಂದರಾಯರವರಿಗೆ ಎರಡು ವಾರಗಳಿಂದ ಕಣ್ಣಿನ ಉಪದ್ರವ ಉಂಟಾಗಿರುವಂತೆ ತಿಳಿದು ಬಂದಿದೆ ಅವರು ಅದಕ್ಕಾಗಿ ರಜಾ ಪಡೆದುಕೊಳ್ಳುವರೆಂಬ ಮಾತಿನಲ್ಲಿ ನಿಜವಿರುವಂತೆ ತೋರುವುದಿಲ್ಲ

ಶ್ರೀಮಾನ್ ಯುವರಾಜರವರು ನೆನ್ನ ಬೆಂಗಳೂರಿಂದ ನೀಲಗಿರಿಗೆ ದಯಮಾಡುವವರಾಗಿದ್ದರು ಇವರೂ ಶ್ರೀಮನ್ಮಹಾರಾಜರವರೂ ಈ ತಿಂಗಳ ಕಡೇ ವಾರದಲ್ಲಿ ಪೂನಾ ಪಟ್ಟಣದಲ್ಲಿ ನಡೆಯುವ ಪೋಲೋ ಪಂದ್ಯಕ್ಕಾಗಿ ಪ್ರಯಾಣ ಮಾಡುವರೆಂದ ವರ್ತಮಾನವಿದೆ

ಕೋಲಾರ್ ಚಿನ್ನದಗಣಿಯಲ್ಲಿ ಕೆಲವು ದಿನಗಳಿಂದ ಕಳ್ಳರು ಹಗಲು ಹೊತ್ತಿನಲ್ಲೇ ದರೋಡೆ ಮುಂತಾದ ಕೃತ್ಯಗಳನ್ನು ನಡಿಸುತ್ತಿದಾರೆಂದೂ, ಇದುವರೆಗೆ ಹಲವು ಡಕಾಯಿತಿಗಳು ನಡೆದಿದ್ದರೂ ಒಂದೂ ಪತ್ತೆ ಆಗಿಲ್ಲವೆಂದೂ, ಪೊಲೀಸ್ ಇಲಾಖೆಯವರು ಅವರನ್ನು ಹಿಡಿಯುವುದಕ್ಕೆ ಸಾಹಸ ಪಡುತ್ತಿರಾರೆಂದೂ ತಿಳಿದು ಬಂದಿದ

ಕಳೆದ ವಾರವು ರಾಜಧಾನಿಯಲ್ಲಿ ಒಂದೆರಡು ದಿನ ಮಳೆ ಸುರಿಯಿತು ಮೋಡವಾಡುವುದು ಇನ್ನೂ ತಪ್ಪಲಿಲ್ಲ ಪ್ಲೇಗ್ ರೋಗದ ಭೀತಿಯು ಸ್ವಲ್ಪ ಕಡಮೆಯಾಗಿರುತ್ತದ ಮತ್ತು ಜಿಹಿಸರವರು ಅನೇಕ ಪ್ರಜೆಗಳಿಗೆ ಪ್ಲೇಗ್ ಚುಚ್ಚನ್ನು ಹಾಕಿಯೂ, ಇನ್ನೂ ಹಾಕುವುದರಲ್ಲೂ ಇದಾರ ಇಲಿಬಿದ್ದ ಮನೆಗಳವರು ಆರೋಗ್ಯಕರವಾದ ಕಡೆ ಹೋಗಿರಲು ಗುಡಿಸಲುಗಳನ್ನು ಕಟ್ಟದೆ ಚಿಂತೆಪಡುತ್ತಿದಾರೆ

ಕಳೆದ ಭಾನುವಾರ ಬೆಂಗಳೂರಿಗೆ ಮದರಾಸ್ ಕಡೆಯಿಂದ ಬರುತ್ತಿದ್ದ ರೈಲ್ ಗಾಡಿಗೆ ಅಪಾಯವನ್ನು ಕಲ್ಪಿಸಬೇಕೆಂದು ತುಸ್ಸಂ ಎಂಬ ಸ್ಟೇಷನ್ ಬಳಿ ಯಾರೋ ರೈಲು ಕಂಬಿಗಳನ್ನು ಕಿತ್ತು ಹಾಕಿದ್ದರು ಇದರ ಅಪಾಯವೇನೂ ಸಂಭವಿಸಲಿಲ್ಲ ಎಂಜಿನ್ ಗಾಡಿಯ ಮುಂಭಾಗಕ್ಕೆ ಕಂಬಿಗಳಿಂದ ಸ್ವಲ್ಪ ಮಟ್ಟಿಗೆ ಜಖಂ ಆಗಿ ಅಲ್ಲಿ ಒಂದು ಗಂಟೆಯ ಹೊತ್ತು ನಿಲ್ಲಬೇಕಾಯಿತು ಪೊಲೀಸಿನವರು ಅಲ್ಲಿಗೆ ಹೋಗಿ ತನಿಖೆ ಮಾಡುತ್ತಿದಾರೆ

ಅರಸೀಕೆರೆಯ ಅಮಲ್ದಾರರು ಆ ತಾಲ್ಲೂಕಿನಲ್ಲಿ ಸಂಚಾರ ಮಾಡುತ್ತಿದ್ದಾಗ ಒಬ್ಬರ ಮನೆಯಲ್ಲಿ ಆಯುಧಗಳು ಬಚ್ಚಿಡಲ್ಪಟ್ಟಿವೆ ಎಂದು ಕೇಳಿ ಅಲ್ಲಿಗೆ ಹೋಗಿ ಅಜಮಾಯಿಷಿ ಮಾಡಿದಾಗ ಪೂರ್ವಕಾಲದ ಕತ್ತಿಗಳೂ, ಬಂದೂಕುಗಳೂ, ಒಂದು ಪಿರಂಗಿಯೂ ಸಿಕ್ಕಿದವು ಆ ಮನೆಯ ಯಜಮಾನನು ಕೇಳಿದಾಗ ಅವರ ಹಿರಿಯರು ಪಾಳೇಗಾರರಾಗಿದ್ದರೆಂದೂ, ಅಗಿನಿಂದ ಈ ಆಯುಧಗಳು ಅವರ ಮನೆಯಲ್ಲಿದ್ದವೆಂದೂ ಗೊತ್ತಾಯಿತು.

ಚಿಕ್ಕಮಗಳೂರಿನಲ್ಲಿ ಪ್ಲೇಗ್ ಉಪದ್ರವನ್ನು ಶಮನ ಮಾಡುವುದಕ್ಕಾಗಿ ಅಲ್ಲಿನ ಡಾಕ್ಟರಾದ ಮ|| ಮುತ್ತುಸ್ವಾಮಿದಾಸ್ ಯವರು ಬಹಳ ಸಾಹಸಪಟ್ಟು ಪ್ರಜೆಗಳಿಗೆ ಪ್ಲೇಗ್ ಚುಚ್ಚನ್ನು ಹಾಕುತ್ತಿದಾರೆಂದೂ, ಇದುವರೆಗೆ ಎರಡು ಸಾವಿರ ಜನರ ತನಕ ಚುಚ್ಚು ಹಾಕಿಸಿ ಕೊಂಡಿದಾರೆಂದೂ, ಇದರ ದೆಸೆಯಿಂದ ಪ್ಲೇಗ್ ಉಪದ್ರವು ಹರಡಿಕೊಳ್ಳದ ಇರುವುದನ್ನು ನೋಡಿ ಜನರು ಇನ್ನೂ ಆತುರಪಟ್ಟು ಚುಚ್ಚು ಹಾಕಿಸಿ ಕೊಳ್ಳುತ್ತಿದಾರೆಂದೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡಿದ್ದಾಗ್ಗೆ ನಮ್ಮ ಸರ್ಕಾರದಿಂದ ಲೇಟ್ ಮಹಾರಾಜರವರ ಜನನ ಪ್ರೀತಿ ಮೈಸೂರು ಪಟ್ಟಣದಲ್ಲಿ ಕೈಗಾರಿಕೆಗಳ ಪಾಠಶಾಲೆಯನ್ನು ಕಟ್ಟಿಸಬೇಕೆಂದು ಗೊತ್ತುಮಾಡಿ ಆ ಕಟ್ಟಡಕ್ಕೆ ಅವರಿಂದ ಅಸ್ತಿಭಾರ ಕಲ್ಲನ್ನು ಹಾಕಿಸಿ ಪ್ರತಿಷ್ಠೆ ಮಾಡಿಸಿದರು ಆ ಕಾಲವಾಯಿತು ಇದುವರೆಗೂ ಅದರ ಕಾಮಗಾರಿಯನ್ನು ಪ್ರಾರಂಭಿಸಿರಲಿಲ್ಲ ಈಗ ಇದನ್ನು ಪ್ರಾರಂಭಿಸಿ ವೈಸ್‌ರಾಯಿ ಯವರು ದಯಮಾಡುವುದರೊಳಗಾಗಿ ಸ್ವಲ್ಪ ಮಟ್ಟಿಗಾದರೂ ಕೆಲಸ ನಡೆಯಬೇಕೆಂದು ಸರ್ಕಾರದವರು ಅಪ್ಪಣೆ ಕೊಟ್ಟಿದಾರೆ.

ಕ್ಯಾಪ್ಟನ್ ಡಾಸ್ ಯವರು ತೀರಿಹೋದ ದುಃಖಕರವಾದ ವೃತ್ತಾಂತವನ್ನು ಸಂಗ್ರಹಮಾಡಿ ದಿವಾನರವರು ರಾಮನಾಥಪುರ, ಕಟ್ಟೇಪುರಗಳ ನಾಲೆಗಳ ಅಚ್ಚುಕಟ್ಟು ಇರುವ ಗ್ರಾಮಗಳ ಪ್ರಜೆಗ

ಳಿಗೆ ತಿಳಿಯಪಡಿಸಬೇಕೆಂದು, ಆ ಹೋಬಳಿಗಳ ಶೇಕ್ದಾರರಿಗೂ ಪಟೇಲ್ ಶ್ಯಾನುಭೋಗರುಗಳಿಗೂ ಕಳುಹಿಸಿಕೊಟ್ಟಿರುತ್ತಾರೆ. ಆ ವೃತ್ತಾಂತವು ನಮ್ಮ ಈ ಪತ್ರಿಕೆಯಲ್ಲಿ ಪ್ರಕಟವಾದದ್ದೇ. ಇದನ್ನು ಆಯಾ ಗ್ರಾಮಾಧಿಕಾರಿಗಳು ರೈತ ಪ್ರಜೆಗಳನ್ನು ಕೂಡಿಸಿ ಎಲ್ಲರಿಗೂ ತಿಳಿಯುವಂತೆ ಓದಿ ಹೇಳಬೇಕೆಂದೂ ಅಪ್ಪಣೆಕೊಡಿಸಿರುವರು ಹೀಗೆ ಮಾಡೋಣದರಿಂದ ಕ್ಯಾಪ್ಟನ್ ಡಾಸ್ ಯವರು ರೈತರಿಗೆ ಉಪಕಾರ ಮಾಡಬೇಕೆಂಬ ಉದ್ದೇಶವುಳ್ಳವರಾಗಿ ಹ್ಯಾಗೆ ಆಣೆಕಟ್ಟಿನ ಕಾಮಗಾರಿಯನ್ನು ಮಾಡಿಸುತ್ತಾ ಒಂದಲ್ಲೊ ಆ ಸಂದರ್ಭದಲ್ಲಿ ಅವರು ಹ್ಯಾಗೆ ತಮ್ಮ ಪ್ರಾಣವನ್ನೇ ಒಪ್ಪಿಸಿ ಬಿಟ್ಟರೋ ಆ ರೈತ ಪ್ರಜೆಗಳಿಗೆಲ್ಲಾ ಸ್ಪಷ್ಟವಾಗಿ ತಿಳಿದು ಬರುವುದು. ದಿವಾನರವರು ಇಂಥಾ ಶ್ರೇಷ್ಠ ಕಾರ್ಯವನ್ನು ಮಾಡಿರುವುದನ್ನು ನೋಡಿ ಸಂತೋಷಪಟ್ಟು ಅವರನ್ನು ವಂದಿಸುವೆವು. ಶೇಕ್ದಾರರೂ, ಶ್ಯಾನುಭೋಗ ಪಟೇಲರುಗಳೂ ದಿವಾನರವರ ಉದ್ದೇಶವನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ

ಕ್ರೈಸ್ತರ ಬೋಧನೆಯು ದುರ್ಬೋಧನೆಯೋ?

ಒಂದು ವರ್ತಮಾನ ಪತ್ರಿಕೆಯು « ಕ್ರೈಸ್ತರ ಸಾಹಸ » ಎಂಬ ಹೆಸರಿನಿಂದ ಕೆಲವು ಲೇಖನಗಳನ್ನು ಬರೆಯಲು ತೊಡಗಿರುತ್ತೆ. ಹೋದ ವಾರದ ಲೇಖನದಲ್ಲಿ ಅದನ್ನು ಬರೆದವರು « ಕ್ರೈಸ್ತರ ದುರ್ಬೋಧನೆ » ಎಂಬ ಪದವನ್ನು ಅಲ್ಲಲ್ಲಿ ಉಪಯೋಗಿಸಿರುತ್ತಾರೆ ಆದರೆ ಆ « ದುರ್ಬೋಧನೆಯು » ಏನಾದರೆ ಅದನ್ನು ಮಾತ್ರ ಅವರು ತಿಳಿಸಿಲ್ಲವು. ಪ್ರಾಯಶಃ ಮುಂದಕ್ಕೆ ನಾವರು ತಿಳಿಸುವರೋ ಏನೋ ನೋಡೋಣ.

ಆಶ್ಚರ್ಯ ವಶಾತ್ ಅವರು ಕ್ರೈಸ್ತರ ಬೋಧನೆಯ ವಿಷಯ ಮಾಡಿದ ತಕ್ಕ ದೋಷಾರೋಪಣವು ಸರಿಯಲ್ಲವೆಂಬುದನ್ನು ತಿಳಿಸಲು ಅದೇ ಪುಟದಲ್ಲಿ ಒಂದು ಸಂಗತಿಯನ್ನು ತಾವೇ ಪ್ರಕಟಿಸಿರುವರು. ಸದರಿ ಲೇಖನ ಕರ್ತರು ಮರಾಮತ್ ಇಲಾಖೆಯ ಸೆಕ್ರೆಟರಿಗಳಾಗಿಯೂ ಆಕ್ಟಿಂಗ್ ಚೀಫ್ ಎಂಜನಿಯರಾಗಿಯೂ ಇದ್ದ ಕ್ಯಾಪ್ಟನ್ ಡಾಸ್ ಯವರು ಕಾಲವಾದ ದುಃಖ ಸಮಾಚಾರವನ್ನು ವಿವರಿಸಿ ತಿಳಿಸುವಾಗ್ಗೆ ಕ್ರೈಸ್ತರ ಬೋಧನೆಯು ದುರ್ಬೋಧನೆಯೋ ಅಥವಾ ಸುಬೋಧನೆಯೋ ಎಂಬುದಕ್ಕೆ ತಾವೇ ಉತ್ತರವನ್ನು ಕೊಡುತ್ತಾರೆ ಗತಿಸಿದ ಕ್ಯಾಪ್ಟನ್ ಡಾಸ್ ಯವರು ಐಸ್ತರ ಜಾತಿಗೆ ಸೇರಿದ ಒಬ್ಬ ಕೂಲಿಯವನ ಪ್ರಾಣವನ್ನು ಉಳಿಸುವ ಪ್ರಯತ್ನದಲ್ಲಿ ತಮ್ಮ ಸ್ವಂತ ಪ್ರಾಣವನ್ನೇ ಕಳೆದುಕೊಂಡರೆಂಬುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿರುತ್ತೆ. ತಮ್ಮ ಸ್ವಂತ ಪ್ರಾಣದ ಮೇಲೆ ಮಮತೆ ಇಡದೆ ತಮ್ಮ ಜೊತೆ ಮನುಷ್ಯನಾದ ಒಬ್ಬ ಬಡ ಕೂಲಿಯವನನ್ನು ಬದುಕಿಸಬೇಕೆಂಬ ಉನ್ನತ ಪ್ರಯತ್ನದಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿಬಿಟ್ಟ ಕ್ಯಾಪ್ಟನ್ ಡಾಸ್ ಯವರು ದೀರರೂ ಎಲ್ಲರ ಶ್ಲಾಘನೆಗೆ ಪಾತ್ರರೂ ಭೂಲೋಕದ ಚರಿತ್ರೆಯಲ್ಲಿ ದೀರ್ಘಕಾಲ ಸ್ಮರಿಸಲ್ಪಡತಕ್ಕವರೂ ಆಗಿರುತ್ತಾರೆನ್ನುವುದರಲ್ಲಿ ಸಂಶಯವೇನಿದೆ ಕಾವೇರಿ ನದಿಯು ಪ್ರವಾಹವಾಗಿ ಹರಿಯುತ್ತಿತ್ತು ತಾವು ಬರುತ್ತಿದ್ದ ದೋಣಿಯು ಅಂಥಾ ಪ್ರಳಯದ ನದಿಯಲ್ಲಿ ಮಗುಚಿ ಹೋಗಲು ಕ್ಯಾಪ್ಟನ್ ಡಾಸ್ ಯವರು ಕಷ್ಟಪಟ್ಟು ಸಾಹಸದಿಂದ ಈಜಿಕೊಂಡು ನದಿಯ ತೀರಕ್ಕೆ ಬಂದುಬಿಟ್ಟರು ತಮ್ಮ ಸಂಗಡ ದೋಣಿಯಲ್ಲಿದ್ದ ಕೂಲಿಗಳೆಲ್ಲರು ಸುರಕ್ಷಿತವಾಗಿ ದಡವನ್ನು ಸೇರಿದರೋ ಇಲ್ಲವೋ ಎಂಬುದನ್ನು ತಿಳಿಯಲು ಹಿಂತಿರುಗಿ ನೋಡಿದಾಗ್ಗೆ ಒಬ್ಬ ಕೂಲಿಯವನು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದವನನ್ನು ಕಂಡು ಅಯ್ಯೋ ಅವನನ್ನು ಬದುಕಿಸಬೇಕೆಂದು ತಕ್ಷಣವೇ ನೀರಿನಲ್ಲಿ ಧುಮುಕಿ ಅವನನ್ನು ಹಿಂದಟ್ಟಿ ಹೋದರು ಈ ಪ್ರಯತ್ನದಲ್ಲಿ ಕ್ಯಾಪ್ಟನ್ ಡಾಸ್ ಯವರು ಬಲಶಾಲಿಗಳಾದರೂ ತಾವೇ ಪ್ರವಾಹದ ಸೆಳತಕ್ಕೆ ಸಿಕ್ಕಿ ಇನ್ನೂ ಯೌವನ ಪ್ರಾಯದಲ್ಲಿಯೇ ಮೃತರಾದರು ಇವರ ವಿಷಯ ಮೇಲ್ಕಂಡ ಪತ್ರಿಕೆಯು ತಿಳಿಸುವುದೇನೆಂದರೆ— ಕ್ಯಾಪ್ಟನ್ ಡಾಸ್‌ರವರು ಎಂಥಾ ಸಾಹಸಿಗಳೂ, ತಮ್ಮ ಪ್ರಾಣದ ಮೇಲೆ ಆಸೆಯನ್ನಿಡದೆ ಸತ್ತುಹೋಗುತ್ತಲಿದ್ದವನನ್ನು ಬದುಕಿಸಬೇಕೆಂಬ ದಯಾಪೂರಿತವಾದ ಒಳ್ಳೇ ಮನಸ್ಸುಳ್ಳವರೂ ಎಂಬುದು ಅವರ ಕೃತ್ಯದಿಂದ ವ್ಯಕ್ತವಾಗಿ ಲೋಕಕ್ಕೆ ತತ್ಕಾಲ ನಮ್ಮ ದೇಶೀಯರಿಗೆ ಪರಮಾಶ್ಚರ್ಯವನ್ನುಂಟುಮಾಡಿರುತ್ತದೆ ಎಂಬುದೇ

ಕ್ಯಾಪ್ಟನ್ ಡಾಸ್ ಯವರು ಒಬ್ಬ ಐಸ್ತರ ಕೂಲಿಯವನ ಪ್ರಾಣವನ್ನು ಉಳಿಸುವುದಕ್ಕೋಸ್ಕರ ತಮ್ಮ ಪ್ರಾಣವನ್ನು ಅರ್ಪಿಸುವಂತೆ ಅವರನ್ನು ಪ್ರೇರಿಸಿದಂಥಾ ಬೋಧನೆಯು ದುರ್ಬೋಧನೆಯಾಗಿರಬಹುದೋ? ಹೌದೆನ್ನುವುದಕ್ಕೆ ಯಾರಿಗಾದರೂ ಮನಸ್ಸು ಬರುವುದೇ? ವಾಚಕ ಮಹಾಶಯರೇ ನೀವೇ ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ

ಕ್ಯಾಪ್ಟನ್ ಡಾಸ್ ಯವರು ಕ್ರೈಸ್ತರಾಗಿದ್ದರು ಕ್ರೈಸ್ತರ ಬೋಧನೆಯನ್ನು ಅವರು ಕಲಿತಿದ್ದರು ಇಂಥಾ ಬೋಧನೆಯಿಂದಲೇ ಅವರು ಸ್ವಾರ್ಥವನ್ನು ಜಯಿಸಿ ಪರಾರ್ಥದ ಮೇಲೆ ದೃಷ್ಟಿ ಇಟ್ಟು ಆ ಐಸ್ತರವನನ್ನು ಬದುಕಿಸಲು ಪ್ರಯತ್ನಪಟ್ಟರು ಕ್ರೈಸ್ತ ಮತಸ್ಥಾಪಕನಾದ ಯೇಸು ಕ್ರಿಸ್ತನ ಬೋಧನೆಯೂ ಆತನ ಸಾಧನೆಯೂ ಕ್ಯಾಪ್ಟನ್ ಡಾಸ್ ಯವರನ್ನು ಪ್ರೇರಿಸಿ ಒಬ್ಬ ಜೊತೆ ಮನುಷ್ಯನ ಪ್ರಾಣವನ್ನು ಉಳಿಸುವುದಕ್ಕೆ ತನ್ನ ಪ್ರಾಣವನ್ನೇ ಅರ್ಪಿಸುವಂತೆ ಮಾಡಿದುವು ಲೋಕದಲ್ಲಿ ಮನುಷ್ಯನಿಗೆ ಅತಿ ಶ್ರೇಷ್ಠವೂ ಗಾಂಭೀರ್ಯವೂ ಆದ ಕೆಲಸವು ಯಾವುದೆಂದರೆ ಅನ್ಯರಿಗೆ ಸಹಾಯ ಮಾಡುವುದೇ ಈ ಬೋಧನೆಯನ್ನು ಕ್ಯಾಪ್ಟನ್ ಡಾಸ್ ಯವರು ಕ್ರೈಸ್ತ ಮತದಲ್ಲಿ ಕಂಡುಕೊಂಡು ಅದನ್ನು ತಮ್ಮ ನಡತೆಯಲ್ಲಿ ಸಾಧಿಸುತ್ತಿದ್ದರು ಯೇಸು ಕ್ರಿಸ್ತನು ಭೂಲೋಕಕ್ಕೆ ನರಾವತಾರಿಯಾಗಿ ಬಂದು ಜನರನ್ನು ಪಾಪ ಬಂಧನದಿಂದ ರಕ್ಷಿಸಿ ಅವರಿಗೆ ಮೇಲ್ಪಟ್ಟಯನಾಗಿರುವುದಕ್ಕೋಸ್ಕರ ಆತನು ಬಹು ಕ್ರೂರತರವಾದ ಶಿಲುಬೆಯ ಮರಣವನ್ನು ಹೊಂದಿದನು ಈ ವಿಷಯವನ್ನು ಕ್ಯಾಪ್ಟನ್ ಡಾಸ್ ಯವರು ಚನ್ನಾಗಿ ತಿಳಿದುಕೊಂಡಿದ್ದರು ಹಾಗಾದರೆ ಇಂಥಾ ಬೋಧನೆಯನ್ನು ದುರ್ಬೋಧನೆಯೆಂದು ಹೇಳುವಿರಾ? ಕ್ರೈಸ್ತ ಮತವು ಜನರನ್ನು ಲೋಕೋಪಕಾರಿಗಳನ್ನಾಗಿಯೂ ಪರೋಪಕಾರದಲ್ಲಿ ಧೀರರನ್ನಾಗಿಯೂ ಮಾಡುವುದಕ್ಕೆ ಪ್ರೇರಿಸುತ್ತದೆ ಕ್ಯಾಪ್ಟನ್ ಡಾಸ್‌ರಂತೆ ಎಲ್ಲಾ ಕ್ರೈಸ್ತರೂ ಇರುತ್ತಾರೆಂದು ಭಾವಿಸಬಾರದು ಯಾರೋ ಕೆಲವು ಕ್ರೈಸ್ತರು ಸಚ್ಚರಿತರಾಗಿಯೂ ಧೀರರಾಗಿಯೂ ಇಲ್ಲದಿದ್ದರೆ ಕ್ರೈಸ್ತ ಮತದ ಬೋಧನೆಯನ್ನು ದುರ್ಬೋಧನೆಯೆಂದು ಹೇಳಬಹುದೇ?

ಎಲ್ಲಾ ಜನರೂ ಕ್ರೈಸ್ತ ಮತದ ಬೋಧನೆಯನ್ನು ನ್ಯಾಯವಾಗಿ ಅನುಸರಿಸುತ್ತಾ ಬಂದರೆ ಮನುಷ್ಯನಲ್ಲಿರುವ ಎಲ್ಲಾ ಕೆಟ್ಟದಾದ ಅಹಂಕಾರ, ಹಗೆ, ಹೊಟ್ಟೆಕಿಚ್ಚು, ಕೊಲೆ, ಕಳ್ಳತನ, ಹಾದರ ಮೊದಲಾದ ಪಾಪಗಳೆಲ್ಲವೂ ನಿರ್ನಾಮವಾಗುವವು ಯೇಸುಕ್ರಿಸ್ತನ ಬೋಧನೆಯಂತೆ ನಡೆದರೆ ಭೂಲೋಕವೆಲ್ಲಾ ಶಾಂತಿಯಿಂದಲೂ ಮನೋಶುಭ್ರತೆಯಿಂದಲೂ ಸತ್ಯದಿಂದಲೂ ಧೀರತೆಯಿಂದಲೂ ಎಲ್ಲಾ ವಿಧವಾದ ಒಳ್ಳೆಯತನದಿಂದಲೂ ತುಂಬಲ್ಪಡುವುದು ಹಾಗಾದರೆ ಹೀಗೆ ಮಾಡತಕ್ಕ ಬೋಧನೆಯನ್ನು ದುರ್ಬೋಧನೆಯೆಂದು ಕರೆಯಬಹುದೋ?

ಯೇಸು ಕ್ರಿಸ್ತನ ಬೋಧನೆಯನ್ನು ಚೆನ್ನಾಗಿ ಓದಿ ಆತನ ಸಾಧನೆಯನ್ನು ಚೆನ್ನಾಗಿ ತಿಳಿದಿರುವವರು ಆತನನ್ನು ಭೂಲೋಕದ ಪ್ರಮುಖನಾದ ಬೋಧಕನೆಂದು ಕರೆಯುವರು ಯೇಸು ಕ್ರಿಸ್ತನ ಬೋಧನೆಯು ಭೂಲೋಕದವರನ್ನು ಎಷ್ಟೋ ಎಷ್ಟೋ ಉನ್ನತ ಸ್ಥಿತಿಗೆ ತಂದಿದೆಯೆಂದು ತಿಳಿದುಕೊಂಡಿರುವವರು ಅದನ್ನೆಂದಿಗೂ ದುರ್ಬೋಧನೆಯೆಂದು ಕರೆಯಲಾರರು. ಆತನ ಬೋಧನೆಯ ಪ್ರತಿ ಫಲವು ಗೋಚರವಾಗಿರುವಲ್ಲಿ ಅದನ್ನು ದುರ್ಬೋಧನೆಯೆಂದು ಕರೆಯುವುದು ಅಸಾಧ್ಯವೇ ಸರಿ ಅನ್ಯರನ್ನು ರಕ್ಷಿಸುವ ಪ್ರಯತ್ನದಲ್ಲಿ ತನ್ನ ಪ್ರಾಣವನ್ನು ಅರ್ಪಿಸಬೇಕೆಂದು ದುರ್ಬೋಧನೆಯು ಎಂದಿಗಾದರೂ ಪ್ರೇರಿಸುವುದಿಲ್ಲ.

ಗತಿಸಿದ ಕ್ಯಾಪ್ಟನ್ ಡಾಸ್‌ಯವರು.

ಗವರ್ನ್‌ಮೆಂಟಿನವರು ಪ್ರಕಟಿಸಿರುವ ಇಸ್ತಿಹಾರ್‌ನಾಮೆಯು.

ಕಳೆದ ೧೨ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಕ್ಯಾಪ್ಟನ್ ಡಾಸ್ ಯವರ ವಿಷಯವಾಗಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್‌ನಾಮೆಯ ಮುಖ್ಯಾಭಿಪ್ರಾಯವೇನಾದರೆ —

ಶ್ರೀಮನ್ಮಹಾರಾಜರವರು ಮೈಸೂರು ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯ ಆಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿದ್ದ ಕ್ಯಾಪ್ಟನ್ ಬನಾರ್ಡ್ ಡಾಸ್, ಆರ್ ಇ ಯವರಿಗೆ ಪರಿತಾಪಕರವಾದ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಂಭವಿಸಿದ ಮರಣ ವಾರ್ತೆಯನ್ನು ಕೇಳಿ ತಮ್ಮ ಗುಂಟಾದ ಮಹದ್ವ್ಯಸನವನ್ನೂ, ಪರಾಕ್ರಮಯುಕ್ತವಾದ ಕಾರ್ಯವನ್ನು ನಡಿಸಿ ಅವರು ಪ್ರಾಣತ್ಯಾಗ ಮಾಡಿದ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಉಂಟಾದ ಮೆಚ್ಚಿಕೆಯಾದ ಮೆಚ್ಚಿಕೆಯನ್ನೂ ಸರ್ಕಾರಿ ರಿಕಾರ್ಡಿನಲ್ಲಿ ಇಟ್ಟಿರಬೇಕೆಂದು ಕುತೂಹಲ ಪಡುತ್ತಾರೆ ಕ್ಯಾಪ್ಟನ್ ಡಾಸ್‌ಯವರು ಬಹಳ ಸಮರ್ಥರೂ, ಕಾರ್ಯದಕ್ಷರೂ, ಪಂಡಿತರೂ ಆದ ಅಧಿಕಾರಿಯಾಗಿದ್ದರು, ಅವರನ್ನು ಕಳೆದುಕೊಂಡದ್ದರಿಂದ ಪಬ್ಲಿಕ್ ಸರ್ವಿಸಿಗೆ ಅಪಾರವಾದ ನಷ್ಟ ಉಂಟಾಗಿರುತ್ತದೆ. ಅವರು ಕಾವೇರಿ ನದಿಯಲ್ಲಿ ಮುಳುಗಿ ಸಾಯುತ್ತಿದ್ದ ಒಬ್ಬ ಕೂಲಿಯವನನ್ನು ಬದುಕಿಸುವುದಕ್ಕೆ ಹೋಗಿ ತಮ್ಮ ಪ್ರಾಣವನ್ನೊಪ್ಪಿಸಿ ಚಿರಸ್ಮರಣೀಯರಾದರು. ಯಥಾರ್ಥವಾದ ಶೌರ್ಯವನ್ನೂ ಪರಹಿತವನ್ನೂ ಮಾಡುವುದರಲ್ಲಿ ಅವರ ಹೆಸರು ಎಂದೆಂದಿಗೂ ಮೇಲ್ಪಂಕ್ತಿಯಾಗಿ ಶಾಶ್ವತವಾಗಿರಲಿ.

ಪ್ರಿ ಆರ್ಡರ್,
ಕೆ. ಎಸ್ ಚಂದ್ರಶೇಖರ ಐಯರ್,
ಗವರ್ನ್‌ಮೆಂಟ್ ಸೆಕ್ರೆಟರಿ

ಅವರ ಹೆಸರನ್ನು ಶಾಶ್ವತಪಡಿಸುವ ಕಾರ್ಯವು.

ಅಂಥಾ ಪರಾಕ್ರಮಯುಕ್ತವಾದ ಸಂದರ್ಭದಲ್ಲಿ ಪ್ರಾಣವನ್ನು ತ್ಯಾಗ ಮಾಡಿದ ಕ್ಯಾಪ್ಟನ್ ಡಾಸ್‌ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಬ್ರಿಟಿಷ್ ರೆಸಿಡೆಂಟರಾದ ಮಿ ಎಸ್ ಎಂ ಫ್ರೇಸರ್‌ಯವರೂ, ಮೈಸೂರು ಸಂಸ್ಥಾನದ ದಿವಾನರವರಾದ ಮಿ ಟಿ ಆನಂದರಾಯರವರೂ, ಮೈಸೂರು ಚೀಫ್ ಜಡ್ಜರಾದ ಮಿ। ಎಸ್ ಇನ್ಸ್‌ಯವರೂ, ಸಾಪರ್ ಮೈನರ್ ಸ್ಕೂಲ್ ಕಮ್ಯಾಂಡರಾದ ಮಿ ... ರೋ, ಆರ್ ಇ ಯವರೂ ಪ್ರಯತ್ನಪಟ್ಟು ಒಂದು ಫಂಡನ್ನು ಕೂಡಿಸಲಾರಂಭಿಸಿರುತ್ತಾರೆ ಈ ಮಹನೀಯರುಗಳು ರುಜು ಮಾಡಿ ಪ್ರಕಟಪಡಿಸಿರುವ ವಿಷಯವೇನೆಂದರೆ —

ಕಳೆದ ಜೂಲೈ ತಾ ೩೦ ರಲ್ಲಿ ಕ್ಯಾಪ್ಟನ್ ಬನಾರ್ಡ್ ಡಾಸ್, ಆರ್ ಇ ಯವರು ತಮ್ಮ ಪ್ರಾಣವನ್ನೇ ದಾನಮಾಡಿದ ವಿಚಾರವು ನಮ್ಮ ವಾಚಕರಿಗೆ ಚನ್ನಾಗಿ ತಿಳಿದಿರುತ್ತದೆ ಕಾವೇರಿಗೆ ಹಾಕಿರುವ ಕೃಷ್ಣರಾಜ ಕಟ್ಟೆ ಎಂಬ ಅಣೆಕಟ್ಟೆಯು ಒಡೆದು ಹೋಯಿತು ಮಳೆಗಾಲದಲ್ಲಿ, ಪ್ರವಾಹ ಬರುತ್ತಿರುವಾಗಲೇ, ಅದನ್ನು ದುರಸ್ತು ಮಾಡಿ ಕಟ್ಟುವುದು ಬಹಳ ಕಷ್ಟ ಮತ್ತು ಬಹು ಅಪಾಯಕರವಾದದ್ದು ಇತರ ಅಧಿಕಾರಿಗಳಾಗಿದ್ದರೆ ಈ ಕಾರ್ಯವನ್ನು ಮಾಡಲಾಗದು ಎಂದು ಹಿಮ್ಮೆಟ್ಟುತ್ತಿದ್ದರು. ಮೈಸೂರು ಮರಾಮತ್ ಇಲಾಖೆಯ ಆಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿದ್ದ ಕ್ಯಾಪ್ಟನ್ ಡಾಸ್ ಯವರಾದರೋ ಧೈರ್ಯ ಪಡದೆ, ಅದು ಮನುಷ್ಯಮಾತ್ರದವನಿಂದಲೇ ಆಗತಕ್ಕದ್ದೆಂದು ತಿಳಿದು, ಈ ವರುಷ ಆ ಪ್ರಾಂತ್ಯದ ರೈತರ ತರೀ ಜಮೀನುಗಳಿಗೆ ನೀರನ್ನು ಒದಗಿಸಿಕೊಡಬೇಕೆಂದು ಹಿಂದಿರುಗಿ ನಿಶ್ಚಯಿಸಿಕೊಂಡು, ತಾವೇ ಮುಂದಾಳಾಗಿ ನಿಂತು ಕಾಮಗಾರಿಯನ್ನು ಮಾಡಿಸ ಹತ್ತಿದರು. ಹೀಗೆ ಅವರು ಕೆಲಸ ಮಾಡಿಸಿ ಆ ದಿನ ಸಾಯಂಕಾಲ ದೋಣಿಯಲ್ಲಿ ಕುಳಿತು ವಾಪಸು ಕ್ಯಾಂಪಿಗೆ ಹೋಗಬೇಕೆಂದು ಬರುತ್ತಿರುವಲ್ಲಿ ಆ ದೋಣಿಯು ಮಗುಚಿಕೊಂಡಿತು ಕ್ಯಾಪ್ಟನ್ ಡಾಸ್ ಯವರೂ ಅವರ ಸಂಗಡ ಇದ್ದ ಕೆಲಸದವರೂ ಪ್ರವಾಹವಿದ್ದ ನದಿಯಲ್ಲಿ ಬಿದ್ದು ಈಜಿಕೊಂಡು ಬರಬೇಕಾಯಿತು ನದಿಯಲ್ಲಿ ಒಂದು ಗಡ್ಡೆಯಿಂದ ೧೦ ಅಡಿಯ ಸಮೀಪಕ್ಕೆ ಕ್ಯಾಪ್ಟನ್ ಡಾಸ್ ಯವರು ಒಂದು ನೀರಿನಲ್ಲಿ ನಿಂತು ನದಿ ಆ ಕಡೆ ಹಿಂತಿರುಗಿ ನೋಡಿ ತಮ್ಮ ಕೂಡ ಇದ್ದವರೆಲ್ಲಾ ಬಂದರೇ ಎಂದು ಲೆಕ್ಕಮಾಡುತ್ತಾ ಇದ್ದರು ಒಬ್ಬ ದೋಣಿಯವನು ಮಾತ್ರ ನಡು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾ ಇದ್ದದ್ದನ್ನು ಕ್ಯಾಪ್ಟನ್ ಡಾಸ್‌ಯವರು ನೋಡಿ ಥಟ್ಟನೆ ಮತ್ತೆ ಈಜು ಬಿದ್ದು ಅವನನ್ನು ಬದುಕಿಸಲು ನುಗ್ಗಿ ಹೋದರು. ಅವರು ಈಜುವುದರಲ್ಲಿ ಪ್ರವೀಣರೆನಿಸಿಕೊಂಡಿದ್ದರು ಆದರೂ ಹೊಳೆಯ ಸೆಳತದಿಂದ ಅವರು ಅಣೆಯ ಬಾಯಿಗೆ ಕೊಚ್ಚಲ್ಪಟ್ಟು ಮುಳುಗಿಹೋದರು ಕ್ಯಾಪ್ಟನ್ ಡಾಸ್ ಯವರ ಪರಾಕ್ರಮವನ್ನು ವರ್ಣಿಸಬೇಕಾದ ಅಗತ್ಯವಿಲ್ಲ ಅವರ ಪರಾಕ್ರಮಯುಕ್ತವಾದ ಕಾರ್ಯವನ್ನು ಮೈಸೂರಿನಲ್ಲಿ ಶಾಶ್ವತಪಡಿಸಬೇಕಾದದ್ದು ಸಹಜವೂ ಯೋಗ್ಯವೂ ಆಗಿರುವುದು ಅವರ ಸ್ನೇಹಿತರೂ ಮೈಸೂರು ಸಂಸ್ಥಾನದ ಉದ್ಯೋಗಸ್ಥರೂ ಪ್ರಜೆಗಳೂ ಈ ಘನವಾದ ಕಾರ್ಯದಲ್ಲಿ ಸಹಾಯಕರಾಗಲು ಅವಕಾಶವನ್ನು ಉಂಟುಮಾಡಿದೆ. « ಡಾಸ್ ಮೆಮೋರಿಯಲ್ ಫಂಡ್ » ಎಂಬ ಫಂಡನ್ನು ಪ್ರಾರಂಭಿಸಿರುತ್ತೇವೆ. ಇದಕ್ಕೆ ಯಾರೊಬ್ಬರೇ ಆಗಲಿ ೧೦ ರೂಪಾಯಿಗಿಂತ ಹೆಚ್ಚು ಚಂದಾ ಕೊಡಬೇಕಾದದ್ದಿಲ್ಲವೆಂದೂ, ಅದಕ್ಕಿಂತ ಕಡಮೆಯಾದ ಚಂದಾವನ್ನು ಎಷ್ಟು ಜನರು ಬೇಕಾದರೂ ಕೊಡಬಹುದೆಂದೂ ವಿಧಾಯಕಮಾಡಲಾಗಿದೆ ಈ ಫಂಡಿಗೆ ಬೆಂಗಳೂರಿನಲ್ಲಿರುವ ಎಕ್ಸೈಸ್ ಕಮಿಷನರ್ ಮೆ॥ ಸ್ಪಾರ್ಕ್ಸ್ ಯವರೂ, ಆಫಿಸಿಯೇಟಿಂಗ್ ಚೀಫ್ ಇಂಜನಿಯರ್ ಮೆ॥ ಶ್ರೀನಿವಾಸರಾಯರೂ ಟ್ರೆಜರರಾಗಿರಲು ಒಪ್ಪಿಕೊಂಡಿರುವರು. ಚಂದಾ ಕೊಡತಕ್ಕವರು ಈ ಟ್ರೆಜರರುಗಳ ಹೆಸರಿಗಾಗಲಿ, ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಕಳುಹಿಸಬಹುದೆಂದು ಈ ಮೂಲಕ ಪ್ರಕಟಪಡಿಸಿದೆ.

ಮೈಸೂರು ಗೆಜೆಟ್ ಸಂಗ್ರಹ.

ಆನರೆರಿ ಸಬ್ ಅ। ಸರ್ಜನ್ ಮೆ॥ ಬಿ ಬಸಪ್ಪನವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ನಾಲ್ವತ್ತೈದು ದಿನಗಳಿಗೆ ಜಾಸ್ತಿ ಮಾಡಿದೆ.

ಸಬ್ ಅ॥ ಸರ್ಜನ್ ಮೆ॥ ಜಿ ಬಿ ಮಾಸ್ಕರೇನ್‌ಹಾಸ್‌ಯವರಿಗೆ ಕೊಟ್ಟಿರುವ ಮೂವತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ದಿನ ಜಾಸ್ತಿಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೇ ಅರಸಿನವರಿಗೆ ಆಗಸ್ಟ್ ತಾ ೧೬ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ವಾಪಸು ಬರುವ ತನಕ ಇಲ್ಲವೇ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ॥ ಕಮಿಷನರ್ ಮೆ। ಕೆ. ಚಾಂಡಿಯವರು ಮೈಸೂರು ಡೆಪ್ಯುಟಿ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ

ಚಳ್ಳಕೆರೆ ತಾಲೂಕು ಅಮಲ್ದಾರ್ ಮ॥ ಎಂ. ಎಸ್. ರಾಮಚಂದ್ರರಾಯರಿಗೆ ಆಗಸ್ಟ್ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಿರಿಯೂರ್ ತಾಲೂಕು ಶಿರಸ್ತೇದಾರ್ ಟಿ ನರಸಿಂಗರಾಯರು ಚಳ್ಳಕೆರೆ ತಾಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮದ್ದಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ॥ ಕಮಿಷನರ್ ಮೆ॥ ಎಂ ಎ ನಾರಾಯಣ ಐಯಂಗಾರ್ರಿಗೆ ಆಗಸ್ಟ್ ತಾ ೯ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ ಕಮಿಷನರ್ ಮೆ। ಟಿ ಚೊಕ್ಕಣ್ಣನವರನ್ನು ತುಂಕೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿದೆ.

ಮೆ ಟಿ. ರಾಯಲು ಚೆಟ್ಟಿಯವರು ತಮ್ಮ ಇತರ ಕೆಲಸಗಳೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಖಾಸೆಯ ಛಾರ್ಜನ್ನೂ ವಹಿಸತಕ್ಕದ್ದು

ಬೆಂಗಳೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ ಆರ್ ನಾರಾಯಣಸ್ವಾಮಿ ರಾಯರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾದ ಜೊತೆಗೆ ಮೂರು ತಿಂಗಳ ಫರ್ಲೋರಜವನ್ನೂ ಕೊಟ್ಟಿದೆ

ತೀರ್ಥಹಳ್ಳಿ ಮತ್ತು ನಗರ್ ತಾಲೂಕುಗಳ ಆಕ್ಟಿಂಗ್ ಅಮಲ್ದಾರ್ರುಗಳಾದ ಮೆ ಶ್ರೀನರಸಿಂಹಶಾಸ್ತ್ರಿಯವರಿಗೂ, ಮೆ ಎಂ ರಾಮಚಂದ್ರರಾಯರಿಗೂ ಫಾರೆಸ್ಟ್ ತಕ್ಸೀರುಗಳನ್ನು ಹಿಡಿದು ದಸ್ತಾವೇಜು ಮಾಡುವ ಅಧಿಕಾರವನ್ನು ವಹಿಸಿದೆ

ಕಡೂರ್ ಡಿಸ್ಟ್ರಿಕ್ಟ್ ಪೋಲೀಸ್ ಅ ಸೂಪರಿಂಟೆಂಡೆಂಟ್ ಮ್ಮಿ ಟಿ. ಎಚ್ ವಿಲ್ಕಿನ್ಸನ್‌ರವರನ್ನು ಮೇ ತಾ ೨೩ ರಿಂದ ಆ ಕಮಿಷನರ್ ದರ್ಜೆಯಲ್ಲಿ ೪ ನೇ ಕ್ಲಾಸಿಗೆ ಬಡ್ತಿಮಾಡಿದೆ

ಮೆ ಟಿ ಎಸ್ ಡಿಕ್ರೂಜ್‌ಯವರು ಮೂರು ವರುಷ ೨ ನೇ ಕ್ಲಾಸ್ ಮ್ಯಾನೇಜರಾಗಿ ಕೆಲಸ ಮಾಡುತ್ತಾರಾದ್ದರಿಂದ ಅವರನ್ನು ಜೂಲೈ ತಾ ೧ ರಿಂದ ೧ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಅ ಕಮಿಷನರ್ ಮೆ ಎಚ್. ಸೀತಾರಾಮಯ್ಯನವರನ್ನು ಜೂನ್ ತಾ ೧೮ ರಿಂದ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಎಕ್ಸೈಸ್ ಕಮಿಷನರವರ ಆಫೀಸ್ ಅಸಿಸ್ಟೆಂಟರಾದ ಅ॥ ಕಮಿಷನರ್ ಮೆ। ಬಿ ರಾಮಣ್ಣನವರನ್ನು ಜೂಲೈ ತಾ. ೧ ರಿಂದ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಮಿಷನ್ ರ್‍ಯಾಂಕಿಯಲ್ಲಿ ತ್ಯಾಗರಾಜರನ್ನು ಡಿವಿಜನ್ ಕಮ್ಯಾಂಡರಾಗಿಯೂ, ಮಹಮದ್ ಈಷಾಕ್‌ಯವರನ್ನು ಕ್ವಾರ್ಟರ್ ಮಾಸ್ಟರ್ ಜಮಾದಾರರಾಗಿಯೂ ಬಡ್ತಿ ಮಾಡಲಾಗಿದೆ.

ಸಬ್ ಅ ಇಂಜನಿಯರ್ ಮೆ ಎ ತಿಂಮೋಜಿರಾಯರನ್ನು ನಾಲಾ ಕನ್ಸರ್ವೆನ್ಸಿ ಇಲಾಖೆಯಿಂದ ಬೆಂಗಳೂರು ಡಿವಿಜನ್‌ಗೆ ವರ್ಗ ಮಾಡಿದೆ.

ನೀರಿನ ಸರಬರಾಯಿ ಮತ್ತು ಸ್ಟೋರ್ ಇಲಾಖೆಯ ಅ। ಇಂಜನಿಯರ್ ಮೆ॥ ಕೆ ಶ್ರೀನಿವಾಸ ಐಯಂಗಾರ್ರು ಮೇ ತಾ. ೩೧ ರಿಂದ ಜೂನ್ ತಾ. ೮ ರವರೆಗೆ ಸ್ಯಾನಿಟರಿ ಇಂಜನಿಯರಾಗಿ ಕೆಲಸ ಮಾಡಿರುತ್ತಾರೆ

ನಾಲಾ ಕನ್ಸರ್ವೆನ್ಸಿ ಡಿವಿಜನ್ ಆ ಎಗ್ಸಿಕ್ಯುಟಿವ್ ಇಂಜನಿಯರ್ ಮೆ॥ ಹೆಚ್. ಎ ಸ್ಕೆಲ್ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತುಂಕೆರೆ ತಾಲೂಕು ಅಮಲ್ದಾರ್ ಎಂ ಕೃಷ್ಣಸ್ವಾಮಿ ಐಯಂಗಾರ್ರಿಗೆ ಕೊಟ್ಟಿರುವ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ದಿನ ಜಾಸ್ತಿ ಮಾಡಿದೆ

ದಾವಣಗೆರೆ ತಾಲೂಕ್ ಅಮಲ್ದಾರ್ ಮೆ ಟಿ. ವೆಂಕಟರಾಮಯ್ಯನವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ವಾರ ಜಾಸ್ತಿಮಾಡಿದೆ. ಹರಿಹರ ಸಬ್ ತಾಲೂಕಿನ ಡಿಪ್ಟಿ ಅಮಲ್ದಾರ್ರವರೇ ದಾವಣಗೆರೆ ತಾಲೂಕಿನ ಛಾರ್ಜನ್ನು ವಹಿಸತಕ್ಕದ್ದು

ಎರಡು ತರಹಾ ಗೊಬ್ಬರಗಳು.

ಸಗಣಿಯ ಗೊಬ್ಬರ

ಸಗಣಿ ಗೊಬ್ಬರವು ಎಲ್ಲಾ ಗೊಬ್ಬರಕ್ಕಿಂತಲೂ ಉತ್ತಮವಾದದ್ದು. ದನದ ಗಂಜಳವು ಸಗಣಿಗಿಂತಲೂ ೪—೫ ಪಾಲು ಹೆಚ್ಚು ಉಪಯೋಗಕರವಾದದ್ದು. ಗಂಜಳಕ್ಕೆ ೨೦ರಷ್ಟು ನೀರನ್ನು ಬೆರಸಿ ಹೊಲಗಳ ಮೇಲೆ ಚೆಲ್ಲಬಹುದು. ಕೊಟ್ಟಿಗೆ ಕಸವನ್ನೂ ಬೂದಿಯನ್ನೂ ಗಂಜಳದಲ್ಲಿ ನೆನಸಿ ಗೊಬ್ಬರದ ಗುಂಡಿಗಳಲ್ಲಿ ಕೂಡಿಸಿಡುವುದು ಆದಾಯಕರವಾಗಿದೆ. ಗೊಬ್ಬರವನ್ನು ಕೂಡಿಸುವ ಕ್ರಮವೇನೆಂದರೆ—ಒಂದು ಗುಂಡಿಯನ್ನು ತೆಗೆದು ಅದರ ನೆಲವನ್ನು ಚೆನ್ನಾಗಿ ದಮ್ಮಸ್ಸು ಮಾಡಿ ಪಕ್ಕಗಳನ್ನೆಲ್ಲಾ ಜೇಡಿಯಿಂದ ಚೆನ್ನಾಗಿ ಸಾರಿಸಿ ಸಮಮಾಡಬೇಕು. ಇಲ್ಲವಾದರೆ ಒಂದು ಪಕ್ಕಾ ಗುಂಡಿಯನ್ನು ಕಲ್ಪಿಸಿದರೂ ಸರಿಯೆ. ಇಂಥಾ ಗುಂಡಿಯಲ್ಲಿ ಸಗಣಿ ಗಂಜಳ ಬೆರಕೆಯಾಗಿರುವ ಕಸ, ಬೂದಿ, ಮನೇ ಕಸ ಮುಂತಾದವುಗಳನ್ನು ಹಾಕಬೇಕು. ಇದನ್ನು ಆಗಾಗ್ಗೆ ತಿರುವಿಹಾಕುತ್ತಾ ಬಂದರೆ ಗೊಬ್ಬರವೆಲ್ಲ ಒಂದೇ ಸಮನಾಗಿ ಕೊಳೆಯುವುದಕ್ಕೆ ಅವಕಾಶವಾಗುತ್ತದೆ. ಗುಂಡಿಯು ತುಂಬಿದ ಮೇಲೆ ಇದನ್ನು ಮಣ್ಣಿನಿಂದ ಮುಚ್ಚಿ ಮೇಲ್ಗಡೆಯಲ್ಲಿ ಒಂದು ಕವೆಗೆ ಮಳೆಯ ನೀರು ಸಲೀಸು ಹರಿದುಹೋಗುವಹಾಗೆ ಮಾಡಬೇಕು. ಗುಂಡಿಯ ಮೇಲೆ ಒಂದು ಜೋಪಡಿ ಹಾಕಿದರೆ ಉತ್ತಮ. ಹೀಗೆ ಮಾಡಿದರೆ ಗುಂಡಿಯಲ್ಲಿನ ಗೊಬ್ಬರವು ೫ ೬ ತಿಂಗಳನಂತರ ಉಪಯೋಗಿಸುವುದಕ್ಕೆ ಹದವಾಗುತ್ತದೆ. ಮುಂಗಾರು ಫಸಲಿಡತಕ್ಕದ್ದಕ್ಕೆ ಏಪ್ರೆಲ್, ಮೇ ತಿಂಗಳಲ್ಲಿಯೂ, ಹಿಂಗಾರು ಫಸಲಿಡತಕ್ಕದ್ದಕ್ಕೆ ಆಕ್ಟೋಬರ್ ತಿಂಗಳಲ್ಲಿಯೂ ಗೊಬ್ಬರವನ್ನು ಹಾಕಬೇಕು.

೨. ಎಲುಬಿನ ಪುಡಿ ಮತ್ತು ಪೆಟ್ಲುಪ್ಪು

ಬಂಗಾಳಾ ವ್ಯವಸಾಯದ ಇಲಾಖೆಯವರು, ಭತ್ತದ ಸಾಗುವಳಿಯಲ್ಲಿ ಎಲುಬಿನ ಪುಡಿ ಮತ್ತು ಪೆಟ್ಲುಪ್ಪನ್ನು ಗೊಬ್ಬರವನ್ನಾಗಿ ಉಪಯೋಗಿಸುವುದು ಆದಾಯಕರವೆಂದು ತಿಳಿದು ಕಳೆದ ವರುಷ ಬರ್ಡ್ವಾನ್, ಹೂಗ್ಲಿ ಮತ್ತು ಬೀರ್ಭಮ್ ಡಿಸ್ಟ್ರಿಕ್ಟುಗಳಲ್ಲಿನ ಕೆಲವು ರೈತರಿಗೆ ಇವುಗಳನ್ನು ಉಪಯೋಗಿಸುವಂತೆ ಹೇಳಿ ಮುಫತ್ತಾಗಿ ಹಂಚಿದರು. ಒಂದು ಬೈಗವಷ್ಟು (ಸುಮಾರು ಅರ್ಧ ಎಕರೆ) ಜಮೀನಿನಲ್ಲಿ ಎಲುಬಿನ ಪುಡಿ ಮತ್ತು ಪೆಟ್ಲುಪ್ಪನ್ನು ಗೊಬ್ಬರವನ್ನಾಗಿ ಉಪಯೋಗಿಸಿ ಬೆಳೆದದ್ದರಲ್ಲಿ ಸರಾಸರಿ ೧೩॥ ಬಂಗಾಳಾ ಮಣ ಬತ್ತವೂ ೧೮ ಮಣ ಹುಲ್ಲೂ ಆಗಿರುವುದಾಗಿಯೂ ಇವುಗಳನ್ನು ಉಪಯೋಗಿಸದೇ ಬೆಳೆದದ್ದರಲ್ಲಿ ಸುಮಾರು ಸರಾಸರಿ ೬೪ ಮಣ ಬತ್ತವೂ ೧೦ ಮಣ ಹುಲ್ಲೂ ಆಯಿತೆಂತಲೂ, ಒಂದು ಬೈಗಕ್ಕೆ ಸುಮಾರು ನಾಲ್ಕು ರೂಪಾಯಿನ ಮೇಲೆ ಹೇಳಿದ ಗೊಬ್ಬರವನ್ನು ಉಪಯೋಗಿಸಿದ್ದರಿಂದ ೬೫ ರೂಪಾಯಿನಷ್ಟು ಜಾಸ್ತಿ ಫಸಲು ಉತ್ಪತ್ತಿಯಾಯಿತೆಂತಲೂ ತಿಳಿದುಬರುತ್ತದೆ.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಮಾಜ

[ಒಬ್ಬ ಬಾತ್ಮಿದಾರರಿಂದ]

ಪದ್ಧತಿಯ ಪ್ರಕಾರ ಮಂದಿರದ ಸೌಧದಲ್ಲಿ ಮಹಿಳೆಯರ ಸಭೆಯು ಕಳೆದ ತಾ ೧೪ ನೇ ಶನಿವಾರ ಕೂಡಿ ಇತ್ತು. ಮೆಂಬರುಗಳು ಇತರ ನಾರೀಮಣಿಗಳ ಸಹಿತ ಸುಮಾರು ೪೦ ಮಂದಿ ಬಂದು ಇದ್ದರು. ಈ ಪೈಕಿ ಕೆಲವರು ದೊಡ್ಡ ಕುಟುಂಬದವರಾಗಿದ್ದರು. ಈ ರೀತಿ ಪ್ರಖ್ಯಾತರಾದವರು ತಮ್ಮ ಬಳಸೋದರಿಗಳೊಡನೆ ತಿಂಗಳಿಗೊಂದಾವರ್ತಿ ಯಾದರೂ ಸೇರಿದ್ದೇ ಆದರೆ ಈ ಸ್ತ್ರೀ ಸಮಾಜವು ಫಲಕಾರಿಯಾಗಲಿಕ್ಕೆ ಯಾವ ಸಂದೇಹವೂ ಇಲ್ಲ. ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿಯಬಹುದು. ಸೋದರಿ ಭಾವವನ್ನು ಬೆಳಸಬಹುದು. ಶ್ರೀಮತಿ ಮಹಾಲಕ್ಷ್ಮಮ್ಮನವರು "ಆಸುಖವಚಿಂತನೆ" ಎಂಬುದೆ ವಿಷಯವನ್ನು ಕುರಿತು ಉಪನ್ಯಾಸವನ್ನು ಮಾಡಿದರು. ಇದು ಗೂಢವಾದ ವಿಷಯವಾದದ್ದರಿಂದ ಸಾಧಾರಣವಾಗಿ ಎಲ್ಲರಿಗೂ ತಿಳಿಯಲು ಸಾಧ್ಯವಾಗಿರಲಿಲ್ಲ. ಇಂಥಾ ಪತ್ರಿಕೆಗಳನ್ನು ಸುಲಭ ಶೈಲಿಯಲ್ಲಿ ಬರೆದರೆ ಎಲ್ಲರಿಗೂ ತಿಳಿಯಲು ಅವಕಾಶವುಂಟಾಗುತ್ತೆ. ಮಿತ್ರರಾದ ಈ ಲಕ್ಷ್ಮಮ್ಮನವರು ವಾರವಾರವೂ ಒಂದು ಪ್ರಶ್ನೋತ್ತರ ಪತ್ರವನ್ನು ಓದುತ್ತಾರೆ. ಇದರಲ್ಲಿ ಪ್ರಶಂಸಾಸ್ಪದವಾದ ವಿಷಯಗಳನ್ನು ಎಡತಕ್ಕದ್ದು ಉತ್ತಮವಾಗಿರುತ್ತೆ. ಸ್ತ್ರೀಸಮಾಜದ ಇಬ್ಬರು ಮೆಂಬರುಗಳು ಹಾರ್ಮೋನಿಯಂ ಮೇಲೆ ಕರ್ಣಾನಂದವಾಗಿ ಕೆಲವು ಹಾಡುಗಳನ್ನು ನುಡಿಸಿದರು. ಸಭೆಯ ಮುಕ್ತಾಯದಲ್ಲಿ ಮೆಸರ್ಸ್ ಸುಭರ್ಬ್ ಕಂಪನಿಯ ಪ್ರತಿನಿಧಿಗಳೊಬ್ಬರು ಕಾಲುಚೀಲ, ಟೋಪಿ, ಜುಬ್ಬ ವಗೈರೆ ಉಡಿಗೆಗಳನ್ನು ಹೆಣೆಯುವ ಒಂದು ಯಂತ್ರವನ್ನು ಮಂದಿರದಲ್ಲಿ ನಾರೀಮಣಿಗಳಿಗೆ ಪ್ರದರ್ಶನಪಡಿಸಿದರು. ಈ ಯಂತ್ರಸಹಾಯದಿಂದ ಅನೇಕ ವಿಧವಾದ ಉಡಿಗೆಗಳನ್ನು ಬಹು ಸುಲಭದಿಂದ ಮಾಡಬಹುದು. ಈ ಯಂತ್ರದ ಎಲ್ಲಾ ಭಾಗಗಳನ್ನೂ ಅವರು ವಿವರಿಸಿ ಹೇಳಿ ಅದರ ಪ್ರಯೋಜನವನ್ನು ತೋರಿಸಿಕೊಟ್ಟರು. ಈ ಯಂತ್ರ ನಡಿಸುವದನ್ನು ಒಂದೆರಡು ವಾರಗಳಲ್ಲಿ ಕಲಿತುಕೊಳ್ಳಬಹುದು. ಆಪೇಕ್ಷಿಸತಕ್ಕವರು ಮೇಲೆ ಹೇಳಿದ ಕಂಪನಿಯವರಿಗಾಗಲಿ ಅಥವಾ ಸ್ತ್ರೀ ಸಮಾಜ ಕಾರ್ಯದರ್ಶಿಯವರಿಗಾಗಲಿ ಬರೆದು ವಿವರವನ್ನು ತಿಳಿದುಕೊಳ್ಳಬಹುದು. ಇದರ ಖರೀದಿಯು ಸಹ ಸಾಧ್ಯವಾಗಿರುತ್ತದೆಯೇ ಹೊರತು ಅಷ್ಟು ಹೆಚ್ಚಾಗಿಲ್ಲ. ಬಡ ಹೆಂಗಸರು ಇದರಿಂದ ಜೀವಿಸಬಹುದು. ಇಬ್ಬರು ನಾರೀಮಣಿಗಳು ಒಂದು ಭಗವತ್ ಸ್ತೋತ್ರವನ್ನು ಮುದ್ರಿಸಿ ಎಲ್ಲರಿಗೂ ಹಂಚಿದರು.

೨೧ ನೇ ತಾರೀಖು ಶನಿವಾರ ಕ್ರಮಪ್ರಕಾರ ಸಭೆಯು ನಡೆಯುವದಾದ್ದರಿಂದ ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತೆ.

ವೈಸ್‌ರಾಯಿಯವರ ದೇಶಸಂಚಾರವು

ಅವರು ಪ್ರಯಾಣಮಾಡುವ ಪ್ರೋಗ್ರಾಂ

ಈಗ ಪ್ರಕಟವಾಗಿರುವ ಪ್ರಕಾರ ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳವರು ಪತ್ನಿ ಪರಿವಾರ ಸಹಿತ ಮುಂದಣ ಅಕ್ಟೋಬರ್ ತಾ ೨೫ ರಲ್ಲಿ ಸಿಂಲಾ ಪಟ್ಟಣದಿಂದ ದೇಶ ಸಂಚಾರಾರ್ಥವಾಗಿ ಹೊರಡುವವರಾಗಿದ್ದಾರೆ. ತಾ ೨೬ ನೇ ಬೆಳಗ್ಗೆ ಅಲ್ವಾರ್ ಸಂಸ್ಥಾನಕ್ಕೆ ದಯಮಾಡುವರು. ಅಲ್ಲಿ ಒಂದು ದಿನ ಇದ್ದು ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ತಾ ೨೭ ನೇ ಸಾಯಂಕಾಲ ಅಲ್ಲಿಂದ ಹೊರಟು ಮರುದಿನ ಬೆಳಗ್ಗೆ ಜಯಪುರಕ್ಕೆ ಬರುವರು. ಈ ಸಂಸ್ಥಾನದಲ್ಲಿ ಅವರಿಗೆ ಎರಡು ದಿನ ಆತಿಥ್ಯಗಳು ನಡೆಯುವವು. ಮೋಟಾರಿನಲ್ಲಿ ಜಯಪುರದಿಂದ ಹೊರಟು ಟಾಂಕ್ ಎಂಬ ಸ್ಥಳವನ್ನು ನೋಡಿಕೊಂಡು ಬಂದು, ತಾ ೩೧ ನೇ ಸಾಯಂಕಾಲ ಉದಯಪುರವನ್ನು ತಲಪುವರು. ಅಲ್ಲಿ ಆರು ದಿನಗಳ ತನಕ ಇರುತ್ತಾರೆಂದೂ, ಆ ಎರವಾಯ ನವಂಬರ್ ೬ ನೇ ಮಧ್ಯಾಹ್ನದ ಮೇಲೆ ಗ್ವಾಲಿಯರ್ ಸಂಸ್ಥಾನಕ್ಕೆ ದಯಮಾಡುತ್ತಾರೆಂದೂ ತಿಳಿಯುವುದು. ಈ ಸಂಸ್ಥಾನದಲ್ಲಿ ಅವರಿಗೆ ಮೂರು ದಿನಗಳ ವರೆಗೆ ಆತಿಥ್ಯಗಳು ನಡೆಯುತ್ತವೆ. ನವಂಬರ್ ತಾ ೧೦ ನೇ ಬೆಳಗ್ಗೆ ವೈಸ್‌ರಾಯಿ ಪ್ರಭುಗಳ ಸವಾರಿಯು ಭೂಪಾಲಕ್ಕೆ ಚಿತ್ತೈಸುವುದು. ಈ ಸಂಸ್ಥಾನದಲ್ಲಿ ಅವರು ಎರಡು ದಿನ ಇದ್ದು ಮುಂದಕ್ಕೆ ಹೊರಟು ಅಹಮದಾಬಾದನ್ನು ನೋಡಿಕೊಂಡು ೧೩ ನೇ ತಾ ಸಾಯಂಕಾಲ ಬರೋಡಾ ಸಂಸ್ಥಾನಕ್ಕೆ ದಯಮಾಡುವರು. ಬರೋಡೆಯೊರಗೆ ಮಹಾರಾಜರವರು ಅವರನ್ನು ಎರಡು ದಿನ ಇಟ್ಟುಕೊಂಡು ಉಪಚಾರಮಾಡಿ ಮುಂದಕ್ಕೆ ಸಾಗ ಕಳುಹಿಸುತ್ತಾರೆ. ವೈಸ್‌ರಾಯಿಯವರು ಅಲ್ಲಿಂದ ಹೊರಟು ತಾ ೧೬ ರಲ್ಲಿ ಬೊಂಬಾಯಿ ಪಟ್ಟಣವನ್ನು ತಲಪಿ ಅಲ್ಲಿ ನಾಲ್ಕು ದಿನ ಇದ್ದು ತಾ ೨೦ ನೇ ಸಾಯಂಕಾಲ ಪ್ರಯಾಣಮಾಡಿ ತಾ ೨೧ ಕ್ಕೆ ಬಿಜಾಪುರ, ತಾ ೨೨ ಮರ್ಮುಗೋವೆ ತಾ ೨೪ ಗರ್ಸೊಪ್ಪ, ಈ ಸ್ಥಳಗಳನ್ನು ನೋಡಿಕೊಂಡು, ತಾ ೨೫ ನೇ ಬೆಳಗ್ಗೆ ಮೈಸೂರು ಪಟ್ಟಣವನ್ನು ತಲಪುವರು. ಇಲ್ಲಿ ಕಾಕನಕೋಟೆ ಜಂಗಲಿನಲ್ಲಿ ಖೆಡ್ಡಾ ಕೆಲಸ (ಆನೆಗಳನ್ನು ಹಿಡಿಯುವುದು) ವನ್ನು ಪರಾಂಬರಿಸಿಕೊಂಡು, ಡಿಸೆಂಬರ್ ತಾ ೪ ರಲ್ಲಿ ಮೈಸೂರಿನಿಂದ ಹೊರಟು ಶ್ರೀರಂಗಪಟ್ಟಣವನ್ನು ನೋಡಿಕೊಂಡು, ಆ ಸಾಯಂಕಾಲವೇ ಬೆಂಗಳೂರು ಪಟ್ಟಣವನ್ನು ತಲಪುತ್ತಾರೆ. ಬೆಂಗಳೂರಿನಿಂದ ಕೋಲಾರಕ್ಕೆ ಹೋಗಿ ಚಿನ್ನದ ಗಣಿಗಳನ್ನು ನೋಡಿಕೊಂಡು ಬರುವರು. ಲಾರ್ಡ್ ಮಿಂಟೋರವರು ತಾ ೬ ನೇ ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ಮಧುರೆ, ತಿರುಚನಾಪಳ್ಳಿ, ತಂಜಾವೂರುಗಳನ್ನು ನೋಡಿಕೊಂಡು, ಡಿಸೆಂಬರ್ ತಾ ೯ ನೇ ಬೆಳಗ್ಗೆ ಮದರಾಸ್ ಪಟ್ಟಣಕ್ಕೆ ಚಿತ್ತೈಸುತ್ತಾರೆ. ಅಲ್ಲಿ ತಾ ೧೩ ರ ವರೆಗೆ ಇರುವರು. ಆ ದಿನ ಸಾಯಂಕಾಲ ಮದರಾಸನ್ನು ಬಿಟ್ಟು ತಾ ೧೫ ನೇ ಮಧ್ಯಾಹ್ನ ಕಲ್ಕತ್ತಾ ಪಟ್ಟಣವನ್ನು ಸೇರುತ್ತಾರೆ. ಬಳಿಕ ವೈಸ್‌ರಾಯಿಯವರು ಕಲ್ಕತ್ತೆಯಿಂದ ಡಾರ್ಜೀಲಿಂಗ್ ನಗರಕ್ಕೆ ಹೋಗಿಬರಬಹುದೆಂದು ಕಾಣುವುದು.

ನಮ್ಮ ಪುಸ್ತಕ ಭಂಡಾರವು

ಮೈಸೂರಿನಲ್ಲಿರುವ ಮೆ॥ ಕೆ ನರಸಿಂಹಯ್ಯ ಮತ್ತು ಕಂಪನಿಯವರು ೧ ನೇ ಭಾಗದ ಬಾಲಗಣಿತವೆಂಬ ೧ ಆಣೆ ಕ್ರಯದ ಪುಸ್ತಕವನ್ನೂ ಅರ್ಥಸಹಿತವಾದ ನಾಮಲಿಂಗಾನುಶಾಸನ ೧ ನೇ ಕಾಂಡವೆಂಬ ೨ ಆಣೆ ಕ್ರಯದ ಪುಸ್ತಕವನ್ನೂ ಪ್ರಕಟಿಸಿರುತ್ತಾರೆ. ಈ ಬಾಲಗಣಿತದಲ್ಲಿ ಅಂಕೆಗಳನ್ನು ಹಿಂದಕ್ಕೂ ಮುಂದಕ್ಕೂ ಎಣಿಕೆಮಾಡುವುದು, ಅಂಕಗಳು ವ್ಯತ್ಯಾಸಬರುವಂತೆ ಎಣಿಸುವದು, ಮಗ್ಗಿ, ಮುಸ್ಸಾರ್ ಆರ್ನ ವೀಸ ಮೊದಲಾದವುಗಳನ್ನು ಅಚ್ಚುಹಾಕಿರುವರು.—ಪಾಠಶಾಲೆಗಳಲ್ಲಿ ಮಕ್ಕಳಿಗೆ ಅಮರವನ್ನು ಕಲಿಸಬೇಕೆಂದು ಸರ್ಕಾರದವರು ನಿರ್ಧರಿಸಿ ಮಾಡಿರೋದರಿಂದ ಗ್ರಂಥಕರ್ತರು ಅರ್ಥಸಹಿತವಾಗಿ ಮೊದಲನೇ ಕಾಂಡವನ್ನು ಅಚ್ಚುಹಾಕಿ ಪ್ರಕಟಿಸಿದಾರೆ. ಉಪಾಧ್ಯಾಯರು ಇದನ್ನು ಪಾಠಶಾಲೆಗಳಲ್ಲಿ ಉಪಯೋಗಿಸಲು ಅರ್ಹವಾಗಿರುತ್ತದೆಂದು ತೋರುವುದು.

"ಅಡುಗೂಲಜ್ಜಿಯ ಕಥೆಗಳು"

ಒಬ್ಬಾನೊಬ್ಬ ಹಿಂದೂ ಸ್ತ್ರೀಯು ಈ ಕಥೆಗಳನ್ನು ಬರೆದಿರುತ್ತಾಳೆ. ಆಕೆ ಮೊದಲು ಈ ಕಥೆಗಳನ್ನು ಮಕ್ಕಳಿಗೆ ಸಂತೋಷವನ್ನುಂಟುಮಾಡಿ ಅವರು ಚೇಷ್ಟೆ ಮಾಡದೆ ಇರಲೆಂದು ಹೇಳಿಕೊಟ್ಟು, ತರುವಾಯ ಅವುಗಳನ್ನು ಬರೆದು ಪ್ರಕಟಿಸಿರುವರು. ಈ ಕಥೆಗಳು ಬಹಳ ಸ್ವಾರಸ್ಯವಾಗಿವೆ. ಮಕ್ಕಳು ವ್ಯರ್ಥವಾಗಿ ಕಾಲಕ್ಷೇಪ ಮಾಡುವಾಗ ಅವರಿಗೆ ಇವುಗಳನ್ನು ಹೇಳಿದರೆ ಅವರು ಆತುರದಿಂದ ಕೇಳಲು ಅನುಮಾನವಿಲ್ಲ. ಈ ಕಥೆಗಳನ್ನು ಎರಡು ಭಾಗಗಳಾಗಿ ಪ್ರಕಟಿಸಿ ಒಂದಕ್ಕೆ ೧॥ ಆಣೆ, ಇನ್ನೊಂದಕ್ಕೆ ೪ ಆಣೆ ಕ್ರಯವಿಟ್ಟಿದಾರೆ. ಅಪೇಕ್ಷೆಯುಳ್ಳವರು ಅವನ್ನು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಸಿಟಿ ಮಾರ್ಟ್ ಎಂಬ ಅಂಗಡಿಗೆ ಬರೆದು ತರಿಸಿಕೊಳ್ಳಬಹುದು. ಹಿಂದೂ ಸ್ತ್ರೀಯು ಶ್ರಮಪಟ್ಟು ಈ ಕಥೆಗಳನ್ನು ಬರೆದಿರುವುದು ನಮಗೆ ತುಂಬಾ ಸಂತೋಷವಾಗಿದೆ. ಇದನ್ನು ಮಕ್ಕಳಿಗೆ ಹೇಳಿದರೆ ಅವರು ಉತ್ಸಾಹದಿಂದ ಕೇಳುವರೆಂದು ನಂಬುತ್ತೇವೆ. ಉದಾಹರಣೆಗಾಗಿ ಅದರಲ್ಲಿರುವ ಒಂದು ಪುಟ್ಟ ಕಥೆಯನ್ನು ಎತ್ತಿ ಬರೆಯುವೆವು.

"ಕಡುಬಿನ ಕಥೆ,—ಒಬ್ಬ ಬ್ರಾಹ್ಮಣನು ಅವನ ಅತ್ತೆಯ ಮನೆಗೆ ಹೋದನು. ಅತ್ತೆಯು ಅಳಿಯನಿಗೆ ಬಹಳ ಉಪಚಾರವನ್ನು ಮಾಡಿ ಊಟಕ್ಕಿಟ್ಟಳು. ಅತ್ತೆಯ ಮನೆಯಲ್ಲಿ ಅಳಿಯನು ಎರಡುಮೂರು ದಿನಗಳಿದ್ದು ತರುವಾಯ ತನ್ನ ಊರಿಗೆ ಹೊರಡಲು ಸಿದ್ಧನಾದನು. ಅತ್ತೆಯು ಅಳಿಯನಿಗೆ ಔತಣಕ್ಕೆ ಕಡುಬನ್ನು ಮಾಡಿಟ್ಟಳು. ಅಳಿಯನು ಹುಟ್ಟಿದಾರಭ್ಯ ಕಡುಬನ್ನು ತಿಂದಿರಲಿಲ್ಲ. ಆದುದರಿಂದ ಅದರ ಹೆಸರನ್ನು ತಾನು ಊರಿಗೆ ಹೊರಟ ಸಮಯದಲ್ಲಿ ಕೇಳಿ ತಿಳಿದುಕೊಂಡು ದಾರಿಯು ಉದ್ದಕ್ಕೂ ಕಡುಬು ಕಡುಬು ಎಂದು ಹೇಳುತ ಬಂದನು. ಮಾರ್ಗದಲ್ಲಿ ಒಂದು ಹಳ್ಳವು ಸಿಕ್ಕಲು ಅದನ್ನು ಕಷ್ಟದಿಂದ ದಾಟುವಾಗ ಸ್ವಾಭಾವಿಕವಾಗಿ ಅಬ್ಬಬ್ಬಾ ಎಂದು ಹೇಳಿ ಕಡುಬೆನ್ನುವುದನ್ನು ಮರೆತನು. ಆ ಮೇಲೆ ಅವನು ಅಬ್ಬಬ್ಬಾ ಎಂದು ಪಾಠವನ್ನು ಮಾಡುತ ಊರನ್ನು ಸೇರಿ ಮನೆಗೆ ಹೋಗಿ ತೊಟ್ಟಿಯಲ್ಲಿರುವ ಹೆಂಡತಿಯನ್ನು ಕಡುಬು ಮಾಡೆಂದು ಹೇಳುವುದಕ್ಕೆ ಬದಲಾಗಿ ಅಬ್ಬಬ್ಬಾ ಮಾಡು ಅಬ್ಬಬ್ಬಾ ಮಾಡು ಎಂದು ಹೇಳಿದನು. ಹೆಂಡತಿಯು ಹಾಗೆಂದರೇನು ಎಂದು ನಕ್ಕಳು. ನನ್ನನ್ನು ಹಾಸ್ಯ ಮಾಡುತ್ತಾಳೆಂದು ಬ್ರಾಹ್ಮಣನು ಕೋಪಗೊಂಡು ಹೆಂಡತಿಯನ್ನು ಬೆತ್ತದಿಂದ ಹೊಡೆಯುತ್ತಿರಲು ಆಕೆಯ ಮೈಮೇಲೆಲ್ಲಾ ಬಾಸುಂಡೆಗಳೆದ್ದವು. ಆಗ ಬಂತೆಂದು ನೆರೆಮನೆಯಾಕೆಯು ಬರಲು ಹೆಂಡತಿಯನ್ನು ಹೊಡೆಯುತ್ತಿರುವುದನ್ನೂ ಆಕೆಯ ಮೈಮೇಲೆಲ್ಲಾ ಬಾಸುಂಡೆಗಳು ಕಟ್ಟಿರುವುದನ್ನೂ ಕಂಡು ಪಶ್ಚಾತ್ತಾಪದಿಂದ—"ಅವೇನಯ್ಯಾ" ಹೆಂಡತಿಯ ಪಟ್ಟಕ್ಕೇ ಹೀಗೆಲ್ಲಾ ಹೊಡೆಯುವುದುಂಟೇ ? ಮೈಯೆಲ್ಲಾ ಕಡುಬಿನ ಹಾಗೆ ಊದಿಕೋಯಿತಲ್ಲಾ" ಎಂದು ಅವನನ್ನು ಕೇಳಿದಳು. ಬ್ರಾಹ್ಮಣನು ಕಡುಬು ಎಂಬ ಮಾತು ಕಿವಿಗೆ ಬಿದ್ದ ಕೂಡಲೇ—ಅವೇ, ಅವೆ. ಮತ್ತೊಂದಾವರ್ತಿ ಹೇಳಿ ಎಂದು ಹೆಂಡತಿಯನ್ನು ಹೊಡೆಯುವುದು ಬಿಟ್ಟು ಹಾರಿಎಂದು ಅವಳೆದುರಿಗೆ ನಿಂತು—ಈಗ ನೀವು ಹೇಳಿದುದಕ್ಕೋಸ್ಕರವೇ ಹೊಡೆದದ್ದು, ಮತ್ತೊಂದಾವೃತ್ತಿ ಹೇಳಿ ಎಂದು ಕೇಳಲು, ಹೆಂಡತಿಯು ಅವನ ಅಭಿಪ್ರಾಯವನ್ನು ಅರಿತು ಅವನ ದಡ್ಡತನಕ್ಕೆ ವ್ಯಸನಪಟ್ಟು—ಇದಕ್ಕೇ ನನ್ನನ್ನು ಹೊಡೆದದ್ದು ? ಮುಂಚೆಯೇ ಹೇಳಿದ್ದರೆ ಮಾಡಿ ಕೊಡುತ್ತಿದ್ದೆನಲ್ಲಾ ಎಂದಳು. ನೆರೆಮನೆಯಾಕೆಯು ನಕ್ಕು ಮನೆಗೆ ಹೋದಳು.

ಕೈಮಗ್ಗದ ಕಸಬನ್ನು ಅಭಿವೃದ್ಧಿಪಡಿಸುವುದು

ಇಂಡಿಯಾ ದೇಶದಲ್ಲಿ ಜನರ ಉಪಯೋಗಕ್ಕೆ ಬೇಕಾಗುವ ಬಟ್ಟೆ ಬರೆಗಳನ್ನೆಲ್ಲಾ ದೇಶಿಯರೇ ತಯಾರುಮಾಡಿಕೊಳ್ಳಲು ತಕ್ಕ ಕೌಶಲ್ಯವನ್ನು ಅವರ ಕೈಗೆ ತರುವ ವಿಚಾರದಲ್ಲಿ ಮೆ॥ ಇ ಬಿ ಹಾವೆಲ್ ಯವರು ಬರೆದಿರುವುದೇನೆಂದರೆ—ಈ ಉದ್ದೇಶವನ್ನು ನೆರವೇರಿಸಿಕೊಳ್ಳಲು ಮೊಟ್ಟಮೊದಲು ನೇಗೆಯುವರನ್ನು ಸಾಹುಕಾರರ ಹಿಡಿತದಿಂದ ತಪ್ಪಿಸಿ ಸ್ವತಂತ್ರರನ್ನಾಗಿ ಮಾಡಬೇಕು.

ಈ ದೇಶದಲ್ಲಿ ನೆಯಿಗೆಯವರು ಸಾಧಾರಣವಾಗಿ ತಮ್ಮ ಕಸಬಿಗೆ ಬೇಕಾದ ನೂಲು ಮುಂತಾದವುಗಳನ್ನು ತಮ್ಮ ಗ್ರಾಮದ ಸಾಹುಕಾರರಿಂದ ಪಡೆದುಕೊಂಡು ನೆಯಿದ ವಸ್ತ್ರಗಳನ್ನು ಸಾಹುಕಾರರು ಸಾ [illegible] ಹೀನ ಬೆಲೆಗೆ ಅವನಿಗೇನೆ ಮಾರುತ್ತಾರೆ. ಸೋಲಾಪುರದ ಕಲೆಕ್ಟರಾದ ಮೆ॥ ಮೊಕಾನಕಿಯವರು ಈ ಕಷ್ಟವನ್ನು ಹೋಗಲಾಡಿಸುವ ಉದ್ದೇಶ ಮಾಡಿರುವ ಏರ್ಪಾಡೇನೆಂದರೆ— ನೂಲು ಮುಂತಾದ ಈ ಕಸಬಿಗೆ ಬೇಕಾದ ಸಾಮಗ್ರಿಗಳನ್ನು ಒಟ್ಟಾಗಿ ಕೊಂಡುಕೊಂಡು ಸ್ವಲ್ಪ ಸಹಿಗೆ ಚಿಲ್ಲರೆಯಾಗಿ ಮೆಂಬರುಗಳಿಗೆ ಕಡದ ಪಾವತಿಗೆ ವಾಯಿದೆ ಕೊಟ್ಟು ಮಾರುವ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಬೇಕು. ಹೀಗೆ ಏರ್ಪಟ್ಟ ಸಂಘಗಳು ತಮ್ಮ ಮೆಂಬರುಗಳು ನೆಯಿದ ಪದಾರ್ಥಗಳಿಗೆ ಗಿರಾಕಿ ಕಡಮೆಯಾದ ಕಾಲದಲ್ಲಿ ಅವುಗಳನ್ನು ಆಧಾರವಾಗಿಟ್ಟುಕೊಂಡು ನೆಯಿಗೆಯವರಿಗೆ ಅವಶ್ಯವಾಗಿರುವಷ್ಟು ಸಾಲಗಳನ್ನು ಕೊಟ್ಟು ಪುನಃ ಒಳ್ಳೆ ಕಾಲದಲ್ಲಿ ಒಳ್ಳೆ ಗಿರಾಕಿಯಾಗುವಾಗ ಅದನ್ನಿಟ್ಟು ಸಾಲಗಳನ್ನು ಬಿಡಿಸಿಕೊಳ್ಳಲು ಅನುಕೂಲಪಡಿಸಿಕೊಡಬೇಕು. ಹೀಗೆ ಮಾಡಿದಲ್ಲಿ ಕಸಬಿಗೆ ಬೇಕಾಗುವ ಪದಾರ್ಥಗಳು ನ್ಯಾಯವಾದ ಬೆಲೆಗೆ ಒದಗುವುದಲ್ಲದೆ ನೆಯಿದ ಮಾಲುಗಳಿಗೂ ಒಳ್ಳೇ ಬೆಲೆಯು ದೊರೆಯುತ್ತದೆ. ೧೯೦೮ರಲ್ಲಿ ಸೋಲಾಪುರ ಡಿಸ್ಟ್ರಿಕ್ಟಿನಲ್ಲಿ ನಡೆದ ಸಂಘಗಳ ಮೆಂಬರುಗಳಾಗಿ ೩೦೦ ಜನ ನೆಯಿಗೆ ಕಸಬಿನವರಿದ್ದರು. ಇವರಲ್ಲಿ ೨೫ ಜನರು ತಾವು ಹಿಂದೆ ಮಾಡಿದ ತಮ್ಮ ಸಾಲಗಳನ್ನೆಲ್ಲಾ ತೀರಿಸಿಕೊಂಡು ಸಾಹುಕಾರರಿಗೆ ಬಿಡುವಾಗಿದ್ದ ಆಸ್ತಿಗಳನ್ನು ಬಿಡಿಸಿಕೊಂಡರು. ನೆಯಿಗೆಯವರು ಸಂಘಗಳಿಂದ ಪಡೆದಿದ್ದ ಮುಂಗಡಗಳನ್ನು ವಾಯಿದೆಯೊಳಗೆ ಪಾವತಿಮಾಡಿದರು. ಸದರಿ ಮುಂಗಡಗಳನ್ನು ಬರಮಾಡಿಕೊಳ್ಳುವುದಕ್ಕೆ ಯಾರೂ ಕೋರ್ಟಿಗೆ ಹೋಗುವ ಅವಶ್ಯಕತೆಯೇ ಬೀಳಲಿಲ್ಲ. [illegible] ಸ್ಥಿತಿಯು ಮೊದಲಿಗಿಂತಲೂ ಎಷ್ಟೋ ಉತ್ತಮವಾಯಿತಲ್ಲದೆ ಈ [illegible] ಸಹ ಆದಾಯಕರವಾಯಿತು.

ಮೇಲ್ಕಂಡ ರೀತಿಯಲ್ಲಿ ನೆಯಿಗೆಯವರನ್ನು ಸಾಹುಕಾರರ ಹಿಡಿತದಿಂದ ಬಿಡಿಸಿದರೆ ಅವರು ತಮಗೆ ಒದಗಿಸಿಕೊಡುವ ಹೊಸ ಯಂತ್ರಗಳಿಂದ ಕೆಲಸಮಾಡಲು ಅವಕಾಶಕೊಟ್ಟಂತಾಗುತ್ತದೆ. [illegible] ಸಂಘಗಳನ್ನು ಏರ್ಪಡಿಸುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳು, ಮುನಿಸಿಪಾಲಿಟಿಗಳು, ದೊಡ್ಡ ದೊಡ್ಡ ಜಮೀನುದಾರರು, ದೊಡ್ಡಮನುಷ್ಯರು ಪ್ರಯತ್ನ ಮಾಡಬೇಕು. ಮೈಸೂರು ಸರ್ಕಾರದವರು [illegible] ಒಂದು [illegible] ಪರಸ್ಪರ ಸಹಾಯಕ ಸಂಘವನ್ನು ಏರ್ಪಾಡುಮಾಡಿ [illegible] ರೂಪಾಯನ್ನು ಸಂಘಕ್ಕೆ ಸಾಲವಾಗಿ ಕೊಟ್ಟಿರುತ್ತಾರೆ. ಸಂಘದ ಮೆಂಬರುಗಳು ಸ್ವತಃ ಆಡಳಿತವನ್ನು ಮಾಡಿ [illegible] ಸಂಘಕ್ಕೆ ಒದಗಿಸಿಕೊಡುವುದಾಗಿ [illegible] ನೆಯಿಗೆಯವರ ಮಕ್ಕಳಿಗೆ ಕೆಲಸ [illegible] ತಮ್ಮ ಕಸಬನ್ನು ಕಲಿಸುವದಕ್ಕೆ ಅನುಕೂಲಪಡಿಸುವುದಾಗಿಯೂ ಅಪ್ಪಣೆ ಮಾಡಿರುತ್ತಾರೆ.

ನೆಯಿಗೆ ಕಸಬಿನಲ್ಲಿ ತಿಳಿಯಬೇಕಾದ ಇನ್ನೊಂದು ವಿಷಯವೇನೆಂದರೆ— ಬಂಗಾಳಾ ಆಡಳಿತಕ್ಕೆ ಸೇರಿದ ಸೀರಾಂಪುರದ ನೆಯಿಗೆ ಪದ್ಧತಿಗಳನ್ನು ಅನುಸರಿಸಿ ರೂಢಿಯಲ್ಲಿರುವ ಮಗ್ಗಗಳಿಗೆ ೧೫ ರೂಪಾಯಿಗೆ ಕಡಿಮೆಯಾದ ಖರ್ಚಿನಿಂದ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ಸದರಿ ಮಗ್ಗದವರು [illegible] ಬಟ್ಟೆಗಳನ್ನು ತಯಾರುಮಾಡಿ ಎರಡರಷ್ಟು ಸಂಪಾದನೆ ಮಾಡಿಕೊಳ್ಳಬಹುದು. ಹಳೆಯ ಲಾಳಿಯೇ ಮುಂತಾದ ಬದಲಾವಣೆಗಳನ್ನು ರೂಢಿಯಲ್ಲಿ ತರುವುದು ಅನುಕೂಲವಾಗಿದ್ದಾಗ್ಯೂ, ನೆಯಿಗೆ ಕೆಲಸದಲ್ಲಿ ಮೊಟ ಮೊದಲು ಮಾಡಬೇಕಾದ ಹಾಸುಹೊಕ್ಕುಗಳನ್ನು ತಯಾರು ಮಾಡುವುದರಲ್ಲಿ ಸೀರಾಂಪುರದ ಮಗ್ಗಗಳಲ್ಲಿ ಮಾಡಿರುವ ಕೆಲವು ಹೊಸ ಬದಲಾವಣೆಗಳನ್ನು ಎಲ್ಲಾ ವಿಧವಾದ ನೆಯಿಗೆ ಕಸಬಿನಲ್ಲಿಯೂ ರೂಢಿಯಲ್ಲಿ ತರಬಹುದು. ಇದರ ಮುಖ್ಯವಾದವು ಯಾವುವೆಂದರೆ—ಸುಮಾರು ಎರಡು ಅಥವಾ ಮೂರು ರೂಪಾಯಿ ಮಾತ್ರ ಬಾಳುವ ಒಂದು ಯಂತ್ರವನ್ನು ನೂಲನ್ನು ಸುತ್ತುವುದಕ್ಕೆ ಉಪಯೋಗಿಸಿದರೆ ಪೂರ್ವ ಪದ್ಧತಿಯ ಪ್ರಕಾರ ನೂಲನ್ನು ಸುತ್ತುವುದರಲ್ಲಾಗಿ ಪಡುತ್ತಿರುವ ಕಷ್ಟವು ಇಪ್ಪತ್ತರಷ್ಟು ಕಡಮೆಯಾಗುತ್ತದೆ. ಪೂರ್ವಪದ್ಧತಿ ಅನ್ವಯಿಸಿ ಒಂದು ಸಾದಾ ಬಟ್ಟೆಯನ್ನು ತಯಾರುಮಾಡಬೇಕಾದರೆ ಹಾಸುಹೊಕ್ಕುಗಳನ್ನು ತಯಾರುಮಾಡುವುದಕ್ಕೇನೇ ಅರ್ಧ ಭಾಗವು ತಗಲುತ್ತದೆ. ಅಲ್ಲದೆ ಇಂಥಾ ಮೊಟ್ಟಮೊದಲು ಮಾಡಬೇಕಾದ ಕೆಲಸಗಳಲ್ಲಿ ಅನುಕೂಲವಾದ ಬದಲಾವಣೆಗಳನ್ನು ಮಾಡಿಕೊಳ್ಳದಿದ್ದರೆ ಉತ್ತಮವಾದ ಮಗ್ಗಗಳನ್ನು ಉಪಯೋಗಿಸಿದರೂ ಆದಾಯಕರವಲ್ಲವೆಂಬ ಅಂಶಗಳನ್ನು ತಿಳಿದುಕೊಂಡರೆ ಮೇಲೆ ಹೇಳಿದ ನೂಲನ್ನು ಸುತ್ತುವ ಯಂತ್ರದ ಪ್ರಾಮುಖ್ಯತೆಯು ಚೆನ್ನಾಗಿ ಸ್ಪಷ್ಟಪಡುವುದು. ಸೀರಾಂಪುರ ಮತ್ತು ಆಸುಪಾಸು ಡಿಸ್ಟ್ರಿಕ್ಟುಗಳಲ್ಲಿ ಉಪಯೋಗದಲ್ಲಿರುವ ಯಂತ್ರಸಾಧನಗಳಿಂದಲೇ ಇಂಗ್ಲೀಷರು ೧೮ನೇ ಶತಮಾನದ ಅಂತ್ಯದಲ್ಲಿ ತಮ್ಮ ಸಂಪಾದನೆಯನ್ನು ಮೂರರಷ್ಟು ಹೆಚ್ಚಿಸಿದರು. ಇಂಡಿಯಾ ದೇಶದ ನೆಯಿಗೆಯವರೆಲ್ಲಾ ಹೀಗೆ ಮಾಡಿದರು. ಆದದ್ದರಿಂದ ನಮ್ಮ ನೆಯಿಗೆಯವರು ಸೀರಾಂಪುರದಲ್ಲಿ ರೂಢಿಯಲ್ಲಿರುವ ಹೊಸ ಪದ್ಧತಿಗಳನ್ನನುಸರಿಸಿದರೆ ಕೈಮಗ್ಗದ ಕಸಬು ಉತ್ತಮ ಸ್ಥಿತಿಗೆ ಬರುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು

೧೯೦೯ ನೇ ನವರಾತ್ರಿಯಲ್ಲಿ ನಡೆಯುವುದು

(೧) ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಪ್ಪಣೆ ಅನುಸರಿಸಿ ಮೈಸೂರು ಪಟ್ಟಣದಲ್ಲಿ ೧೯೦೯ ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ನಡೆಯುವ ದಸರಾ ಮಹೋತ್ಸವದಲ್ಲಿ ಕೈಗಾರಿಕೆಯ, ವ್ಯವಸಾಯದ ಮತ್ತು ದನಗಳ ಪ್ರದರ್ಶನವು ನಡೆಯಲ್ಪಡುವುದಕ್ಕೆ ಬಗ್ಗೆ ಕೆಳಗೆ ವಿವರಿಸುವ ವಿಷಯಗಳನ್ನು ಕಮಿಟಿಯವರು ಸಂಸ್ಥಾನದ ಪ್ರಜೆಗಳ ತಿಳುವಳಿಕೆಗಾಗಿ ಪ್ರಕಟಿಸುತ್ತಾರೆ. (೨) ಪ್ರದರ್ಶನದ ಪ್ರಾರಂಭ — ಈ ವರುಷ ಪ್ರದರ್ಶನವು

ಅಕ್ಟೋಬರ್ ೧೧ ನೇ ತಾರೀಖು ಸೋಮವಾರ ಪ್ರಾರಂಭವಾಗಿ ಅಕ್ಟೋಬರು ೧೯ ನೇ ತಾರೀಖು ಮಂಗಳವಾರ ಮುಕ್ತಾಯವಾಗುವುದು. ರಾಸುಗಳ ಪ್ರದರ್ಶನವು ಅಕ್ಟೋಬರು ತಿಂಗಳ ೨೫ ನೇ ತಾರೀಖು ಸೋಮವಾರ ಪ್ರಾರಂಭವಾಗಿ ೨೮ ನೇ ತಾರೀಖು ಗುರುವಾರ ಪೂರೈಸಲ್ಪಡುವುದು. ಮೈಸೂರು ಸೀಮೆಯ ಉತ್ತಮ ತರಹ ರಾಸುಗಳನ್ನು ಖರೀದಿಗೆ ತೆಗೆದುಕೊಳ್ಳಲು ಅಪೇಕ್ಷಿಸತಕ್ಕ ಜನಗಳಿಗೆ ಈ ಪ್ರದರ್ಶನ ಸಮಯವು ಅನುಕೂಲವಾದ ಕಾಲವೆಂದು ತೋರಿಬರುತ್ತೆ. (೨) ಪ್ರದರ್ಶನದ ಉದ್ದೇಶ—ಕಮಿಟಿಯವರು ಈ ಪ್ರದರ್ಶನದ ಮೂಲಕವಾಗಿ ರೈತರು, ಶಿಲ್ಪಿಕಾರರು, ಮುಂತಾದ ಸಂಸ್ಥಾನದ ಪ್ರಜೆಗಳ ಸಮಕ್ಷಮ ವಿಧವಿಧವಾದ ಪದಾರ್ಥಗಳನ್ನೂ, ಯಂತ್ರಗಳನ್ನೂ ಮತ್ತು ಆಯುಧಗಳನ್ನೂ ಜನರಿಗೆ [illegible], ಅವುಗಳ ಪ್ರಯೋಜನಗಳನ್ನೂ ಮತ್ತು ತಯಾರಾಗುವ ರೀತಿಗಳನ್ನೂ ತಿಳಿಸಿ, ಅವುಗಳನ್ನು ವಿಚಾರಪರರನ್ನಾಗಿ ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ. ಪ್ರದರ್ಶಿಸತಕ್ಕ ಸಾಮಾನುಗಳ ಒಂದೊಂದು ನಮೂನೆ [illegible] ವಾಗಿ ಸಾಲದಷ್ಟು [illegible] ಗಳೆಂದೂ ಮತ್ತು [illegible] ರದೆಂದೂ ತಿಳಿದು, ವಿಕ್ರಯದ ಬಗ್ಗೆ ತರಬಹುದಾದ ಸಾಮಾನುಗಳನ್ನು ಸಹ ಅಂಗೀಕರಿಸುತ್ತಾರೆ. ಮಾರಾಟದ ಸಾಮಾನುಗಳು ಮತ್ತು ನಮೂನೆಗಳು—ವಿಕ್ರಯಿಸುವುದಕ್ಕೆ ಮಾತ್ರ [illegible] ವ ವಿಶೇಷವಾದ ಸಾಮಾನುಗಳು ಬೇರೆ ಕೊಠಡಿಗಳಲ್ಲಿ ಪ್ರದರ್ಶಕರ ಅಥವಾ ಅವರ ಏಜಂಟರ ಸುಪರ್ದಿನಲ್ಲಿಡಲ್ಪಡುವವು. ನಮೂನೆಗೋಸ್ಕರ ಕಳುಹಿಸಿದ ಸಾಮಾನುಗಳನ್ನು ಮಾರುವುದಕ್ಕೆ ಆಕ್ಷೇಪಣೆ ಇಲ್ಲವು. ಆದರೆ ಅವುಗಳನ್ನು ಪ್ರದರ್ಶನ ಮುಗಿಯುವವರೆಗೆ ಸಾಗಿಸಕೂಡದು. ಮಾರುವ ಉದ್ದೇಶದಿಂದಲೇ ಕಳುಹಿಸುವ ಸಾಮಾನುಗಳನ್ನು ಮಾರಾಟವಾದ ತಕ್ಷಣವೇ ಸಾಗಿಸಬಹುದು. ಪ್ರದರ್ಶನದ ರೀತಿಯಿಂದ ಯಾವ ಸಾಮಾನನ್ನೂ ಅಪ್ಪಣೆ ಇಲ್ಲದೆ ಹೊರಗೆ ಸಾಗಿಸಕೂಡದು. (೪) ಪ್ರದರ್ಶನಶಾಲೆಯ ನಕ್ಷೆ—ಪ್ರದರ್ಶನದ [illegible] ಮತ್ತು [illegible] ಭಾವನೆಯುಳ್ಳ ಮತ್ತು ಇಲ್ಲದ ಪ್ರದೇಶಗಳನ್ನು ತೋರಿಸುವ ನಕ್ಷೆಯು ಇದರಲ್ಲಿ [illegible] ಸಾಮಾನುಗಳನ್ನು ಪ್ರದರ್ಶಿಸಬೇಕೆಂದುಳ್ಳವರು ಮತ್ತು ಪದಾರ್ಥಗಳು [illegible] ಪ್ರತ್ಯೇಕವಾಗಿ ತೋರಿಸಬೇಕೆಂದುಳ್ಳವರು [illegible] ಕಮಿಟಿ [illegible] ಬರೆದುಕೊಳ್ಳಬೇಕು. (೫) ಫಲ, ಪುಷ್ಪ, ಇತ್ಯಾದಿ ಪ್ರದರ್ಶನ—ಈ [illegible] ಪ್ರದರ್ಶನವು ೧೯೦೯ ನೇ ಇಸವಿ ಅಕ್ಟೋಬರ್ ೨೫ [illegible] ಪ್ರಾರಂಭಿಸಲ್ಪಟ್ಟು ೨೭ ನೇ ತಾರೀಖಿನ ಸಾಯಂಕಾಲದವರೆಗೆ [illegible] ಸಾಮಾನುಗಳ ತಪ್ಸೀಲು ಪ್ರಕಟಿಸಿ [illegible] ದೊರೆಯುವುದು. [illegible] ಸಾಮಾನುಗಳು ಮತ್ತು [illegible]—ಇಂಗ್ಲೀಷು ಮತ್ತು ಕನ್ನಡ ಭಾಷೆಗಳಲ್ಲಿ ಸಕಲ ಅರ್ಹತೆಯನ್ನು [illegible] ಕೈಗಾರಿಕೆ ಯಂತ್ರ ಉಪಯೋಗಗಳ ಪ್ರಯೋಜನ [illegible] ಮತ್ತು ರೀತಿಗಳ ವಿಷಯವಾಗಿ ಉಪನ್ಯಾಸಗಳು ಸಹ [illegible] ಏರ್ಪಾಡು ಮಾಡಲ್ಪಡುತ್ತೆ. [illegible] ಮತ್ತು [illegible] ಫೋಟೋಗ್ರಾಫಿ ಪ್ರದರ್ಶನವೂ ನಡೆಸಲ್ಪಡುವುದಕ್ಕೆ [illegible] ಮಾಡಲಾಗುತ್ತೆ. ಉಪನ್ಯಾಸ [illegible] ಮುಂತಾದವುಗಳು ನಡೆಯತಕ್ಕ [illegible] ಕಾಲ ಮುಂದೆ [illegible] ಮೂಲಕ ತಿಳುಹಿಸಲ್ಪಡುತ್ತೆ. [illegible] ಬಹುಮಾನ [illegible] ಗಾಡಿಕೆ ಮತ್ತು [illegible] ಬಹುಮಾನಗಳನ್ನು ಮತ್ತು [illegible] ಕೊಡುವುದಕ್ಕಾಗಿ ಯಾರಾದರೂ ದಾನಗಳನ್ನು [illegible] ಕಮಿಟಿಯವರು ಅವುಗಳನ್ನು ವಂದನಾಪೂರ್ವಕವಾಗಿ ಅಂಗೀಕರಿಸುತ್ತಾರೆ. [illegible] ದು—ಈ [illegible] ಬಹುಮಾನ [illegible] ಸಾಮಾನುಗಳ [illegible] ಬಹುಮಾನವಾಗಿ [illegible] ಆಯಾಯ [illegible] ಕೆ ಪ್ರತ್ಯೇಕವಾಗಿ ನಮೂದಿಸಬೇಕು. (೯) ಇಂಡಿಯಾದ ಎಲ್ಲಾ [illegible] ಸಂಸ್ಥಾನದ [illegible] ಮತ್ತು ಹೊರಗಿನಿಂದಲೂ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಬೇಕೆಂದು ಕೋರುತ್ತಾರೆ. ಅಲ್ಲದೆ ಈ ಡಿಪಾರ್ಟ್‌ಮೆಂಟುಗಳು ಮತ್ತು [illegible] ಎಲ್ಲಾ ಸರ್ಕಾರದ ಡಿಪಾರ್ಟ್‌ಮೆಂಟು ಗಳು ಮತ್ತು [illegible] ಪ್ರದರ್ಶನಕ್ಕೆ ವಸ್ತುಗಳನ್ನು ಮತ್ತು ಸಲಹೆಗಳನ್ನು ಕಳುಹಿಸಿ [illegible] ಸಹಕರಿಸಬೇಕೆಂದು ಕೋರುತ್ತಾರೆ. (೧೦) ಪಂಚಾಯಿತರು—ಪ್ರದರ್ಶನಕ್ಕೆ ಬರುವ ವಸ್ತುಗಳ ಯೋಗ್ಯತೆಯನ್ನು ಪರೀಕ್ಷೆ ಮಾಡಿ ಬಹುಮಾನ [illegible] ನಿರ್ಣಯಿಸುವ ವಿಷಯದಲ್ಲಿ ಬಾರಿ ರೈತರ ಮತ್ತು ಸರ್ಕಾರಿ ನೌಕರರಲ್ಲದ ಇತರ ದೊಡ್ಡ ಮನುಷ್ಯರ ಸಹಾಯವನ್ನು ಕಮಿಟಿಯವರು ಪಡೆಯಲು ನಿಶ್ಚಯಿಸಿರುತ್ತಾರೆ. (೧೧) ನೋಟಿಕಾರಿಗೆ ಏರ್ಪಡಿಸಿದ ರುಸುಂ—ಕೋಟೆಕರಿಂದ ಒಂದು ದಫಾಕ್ಕೆ ಇಸ ೧ ಕ್ಕೆ ಎರಡಾಣೆ ಪ್ರಕಾರ ರುಸುಂ ವಸೂಲ್ಮಾಡಲ್ಪಡುವುದು. ಸೀಜನ್ ಟಿಕೆಟ್ಟುಗಳು ಇಸಂ ೧ ಕ್ಕೆ ಒಂದು ರೂಪಾಯಿ ಮತ್ತೆ ಕೊಡಲ್ಪಡುವವು. ಇವುಗಳು ಅವಗೀಯಗಳು. ಆದರೆ ಎಂಟು ಟಿಕೆಟ್ಟುಗಳುಳ್ಳ ಒಂದು ಪುಸ್ತಕವು ಒಂದು ರೂಪಾಯಿಗೆ ಮಾರಲ್ಪಡುವುದು. ಅನುಕೂಲವಾದರೆ, ಬೆಂಗಳೂರಿಂದ ಮೈಸೂರಿಗೆ [illegible] ಸೀಜನ್ ಟಿಕೆಟುಗಳನ್ನು ಮಾರತಕ್ಕ ಬಗ್ಗೆ ರೈಲ್ವೇ ಇಲಾಖೆಯವರೊಂದಿಗೆ ಏರ್ಪಡುವ [illegible] ವುದು. ಇಂಥಾ ಸೀಜನ್ ಟಿಕೆಟ್ಟುಗಳನ್ನು ತೆಗೆದುಕೊಂಡವರು ಪ್ರದರ್ಶನಶಾಲೆಗೆ ಪ್ರವೇಶಿಸಲು ಅಡ್ಡಿ ಇರುವದಿಲ್ಲ.

ಮೈಸೂರು ಸರ್ಕಾರಿ ಹುಕುಮುಗಳು

ಕಷ್ಟಕಾಲದ ನಿಮಿತ್ತ ಇಟ್ಟಿದ್ದ ಶಿಬ್ಬಂದಿ

ದುರ್ಭಿಕ್ಷ ನಿವಾರಣಾರ್ಥವಾದ ಕೆಲಸಗಳನ್ನು ನಡೆಸುವುದಕ್ಕೆ ಕೆಲವು ಗವರ್ನ್‌ಮೆಂಟ್, ಟೆಂಪೊರರಿ [illegible] ನಾಲ್ಕು ತಿಂಗಳ ವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದರು. [illegible] ಗವರ್ನ್‌ಮೆಂಟಿನವರು ಕಳೆದ ಫೆಬ್ರವರಿಯಲ್ಲಿ ಸ್ಯಾಂಕ್ಷನ್ ಮಾಡಿದರು. ಈಚೆಗೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಅಂಥಾ ಗುಮಾಸ್ತೆಯವರನ್ನು ಇಟ್ಟುಕೊಳ್ಳಬೇಕಾದದ್ದಿಲ್ಲವೆಂದೂ ಕೆಲವು ತಾಲ್ಲೂಕುಗಳಿಗೆ ಒಂಬತ್ತು ಮಂದಿ ಅಸಿಸ್ಟೆಂಟ್ ಶೇಕ್ದಾರರನ್ನು ನೇಮಕ ಮಾಡಿಕೊಳ್ಳಬಹುದೆಂದೂ ಅಪ್ಪಣೆಯಾಯಿತು. ತರುವಾಯ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಈ ಹಂಗಾಮಿ ಶಿಬ್ಬಂದಿಯನ್ನು ಇನ್ನೂ ಕೆಲವು ಕಾಲ ಇಟ್ಟಿರಬೇಕೆಂದು ರೆವಿನ್ಯೂ ಕಮಿಷನರವರು ಶಿಫಾರಸು ಮಾಡಿದರು. ಅದರ ಮೇಲೆ ಸರ್ಕಾರದವರು ಅಪ್ಪಣೆ ಕೊಡಿಸಿರುವುದೇನೆಂದರೆ—ಈ ಶಿಬ್ಬಂದಿ ಇರಬಹುದೆಂದು ವಿಧಿಸಿದ ಅವಧಿಯು ಜೂನ್ ತಿಂಗಳಿಗೆ ಪೂರೈಸಿತು. ಆದರೂ ಸಂಸ್ಥಾನದ ಕೆಲವು ಭಾಗಗಳಲ್ಲಿ ಕ್ಷಾಮಸ್ಥಿತಿಯು ಗಾಬರಿಯು ಇನ್ನೂ ನಿವಾರಣೆಯಾಗದೆ ಇರೋಣದರಿಂದ ಕೋಲಾರ, ತುಮಕೂರು, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಅವಶ್ಯವಾದಷ್ಟು ಹೆಚ್ಚು ಶಿಬ್ಬಂದಿಯನ್ನು ಸೆಪ್ಟೆಂಬರ್ ಆಖೈರು ವರೆಗೆ ಇಟ್ಟುಕೊಂಡು, ಉಳಿದ ಶಿಬ್ಬಂದಿಯನ್ನು ತೆಗೆದು ಹಾಕಬೇಕು. ಚಿತ್ರದುರ್ಗದ ಡಿಸ್ಟ್ರಿಕ್ಟಿನ ವಿಷಯದಲ್ಲೂ ಇದೇ ಅರ್ಥಕ್ಕೆ ಹುಕುಂ ಕೊಡಲಾಗಿದೆ.

ಸರ್ಕಾರಿ ಕಟ್ಟಡಗಳು

ಮೈಸೂರು ಸಂಸ್ಥಾನದಲ್ಲಿ ಯಾವ ಕಡೆ ಎಂಥಾ ಸರ್ಕಾರಿ ಕಟ್ಟಡಗಳು ಕಟ್ಟಬೇಕಾಗಿರುವವೋ ಅದನ್ನು ತನಿಖೆಯಿಂದ ತಿಳಿಸಬೇಕೆಂದು ಸರ್ಕಾರದವರು ಒಂದು ಕಮಿಟಿಯನ್ನು ಗೊತ್ತು ಮಾಡಿದರು. ಈ ಕಮಿಟಿಗೆ ರೆವಿನ್ಯೂ ಕಮಿಷನರವರೂ, ಚೀಫ್ ಇಂಜನಿಯರವರೂ, ಡೆಪ್ಯುಟಿ ಕಮಿಷನರುಗಳೂ ಮೆಂಬರುಗಳಾಗಿದ್ದರು. ಇವರು ಈ ಸಲ ವರ್ಧಂತಿ ಉತ್ಸವ ಕಾಲದಲ್ಲಿ ಮೈಸೂರಿನಲ್ಲಿ ಸಭೆ ಸೇರಿ ಆಲೋಚನೆ ಮಾಡಿ, ಮುಂದೆ ಹತ್ತು ವರುಷಗಳಲ್ಲಿ ಸಂಸ್ಥಾನದೊಳಗೆ ಕಟ್ಟಬೇಕಾದ ಸರ್ಕಾರಿ ಕೋರ್ಟು ಕಚೇರಿಗಳ ಪಟ್ಟಿಯನ್ನು ತಯಾರುಮಾಡಿ ಗವರ್ನ್‌ಮೆಂಟಿಗೆ ಒಪ್ಪಿಸಿದರು. ಅದನ್ನು ಪರಾಂಬರಿಸಿ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಈ ಕಮಿಟಿಯವರು ಸೂಚಿಸಿರುವ ಸಲಹೆಗಳು ಸಾಮಾನ್ಯವಾಗಿ [illegible] ತೋರುತ್ತದೆ. ತಾಲ್ಲೂಕ್ ಕಚೇರಿ ಕಟ್ಟಡಗಳನ್ನು ಹೊಸ ರೀತಿಯಲ್ಲಿ ಕಟ್ಟುವುದಕ್ಕೆ ಎರಡು ಮೂರು ತರಹಾ ನಕ್ಷೆಗಳನ್ನು ಚೀಫ್ ಇಂಜನಿಯರವರು ತಯಾರುಮಾಡಿ ಕಳುಹಿಸಬೇಕಾಗಿದೆ. ಅವಶ್ಯವಿದ್ದ ಕಡೆ ಆ ಕಟ್ಟಡಗಳಲ್ಲೇ ಸಬ್ ರಿಜಿಸ್ಟ್ರಾರ್ ಆಫೀಸನ್ನೂ, ಮುನ್ಸಿಫ್ ಕೋರ್ಟನ್ನೂ ಸೇರಿಸುವುದಕ್ಕೆ ಅನುಕೂಲವಾಗುವಂತಿರಬೇಕು. ಮಾಗಡಿ ಹೊಸಕೋಟೆ ಚಿತ್ರದುರ್ಗ ಈ ಸ್ಥಳಗಳಲ್ಲಿ ಹೊಸದಾಗಿ ತಾಲ್ಲೂಕ್ ಕಚೇರಿಗಳನ್ನು ಕಟ್ಟಬೇಕಾದದ್ದು ಬಹಳ ಅವಶ್ಯವಾಗಿದೆ ಎಂದು ತಿಳಿಯಬಂದಿರೋಣದರಿಂದ ಸಾಧ್ಯವಾದರೆ ಇದನ್ನು ಬಾಕಿ ಸಾಲಿನಲ್ಲೇ ಪ್ರಾರಂಭಿಸಬೇಕು. ಚೀಫ್ ಇಂಜನಿಯರವರು ಒಡನೆಯೇ ಅವುಗಳ ನಕ್ಷೆಯನ್ನು ಮಾಡಿ ಕಳುಹಿಸತಕ್ಕದ್ದು.

ಹೋಬಳಿಗಳಲ್ಲಿ ಸೇವಿಂಗ್ಸ್ ಬ್ಯಾಂಕುಗಳನ್ನು ಏರ್ಪಡಿಸುವ ವಿಚಾರವು

[illegible] ಜನಗಳಲ್ಲಿ ಮಿತವಾಗಿ ಖರ್ಚು ಮಾಡುವ ಅಭ್ಯಾಸವನ್ನು ಹೆಚ್ಚಿಸುವ ಉದ್ದೇಶದಿಂದ, ಅವರಿಗೆ ಉಳಿಯುವ ಹಣವನ್ನು ಭಾಷಿತ ಸ್ಥಳದಲ್ಲಿ ಡಿಪಾಜಿಟು ಇಟ್ಟದ್ದು ತಮಗೆ ಬೇಕಾದಾಗ ಸುಲಭವಾಗಿ ವಾಪಸು ತೆಗೆದುಕೊಳ್ಳುವಂತೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂಬ ವಿಷಯವು ಸರ್ಕಾರದವರ ಸಮಾಲೋಚನೆಯಲ್ಲಿರುತ್ತದೆ. ಅಂಥಾ ಅನುಕೂಲತೆಗಳನ್ನು ಉಂಟುಮಾಡಿಕೊಡಬೇಕಾದರೆ ಪ್ರತಿ ಹೋಬಳಿ ಕಸಬೆಯಲ್ಲಿಯೂ ಸರ್ಕಾರೀ ಸೇವಿಂಗ್ಸ್ ಬ್ಯಾಂಕುಗಳನ್ನು ಏರ್ಪಡಿಸುವುದೇ ಅತ್ಯುತ್ತಮವಾದ ಏರ್ಪಾಡು. ಆದರೆ ಅಂಥಾ ಬ್ಯಾಂಕುಗಳನ್ನು ಏರ್ಪಡಿಸುವುದರಲ್ಲಿ ವಾಸ್ತವವಾಗಿ ಅನೇಕ ಕಷ್ಟಗಳಿರುವುದು ಮಾತ್ರವೇ ಅಲ್ಲದೆ ಅದಕ್ಕೆ ತಗಲುವ ಖರ್ಚು ಬಹಳ ದುಬಾರಿಯಾಗಿರುತ್ತದೆ. ಕೆಲವು ಹೋಬಳಿ ಕಸಬೆಗಳಲ್ಲಿ ಪೋಸ್ಟ್ ಆಫೀಸು ಸೇವಿಂಗ್ಸ್ ಬ್ಯಾಂಕುಗಳಿರುತ್ತವೆ. ಈ ಬ್ಯಾಂಕುಗಳ ಉಪಯೋಗವು ಜನಗಳಿಗೆ ಚೆನ್ನಾಗಿ ತಿಳಿದಿಲ್ಲವಾದ ಪ್ರಯುಕ್ತ, ರೈತರು ಇವುಗಳ ಪ್ರಯೋಜನವನ್ನು ಕೂಡ ಸಂಪೂರ್ಣವಾಗಿ ಹೊಂದಿಲ್ಲವೆಂದು ಹೇಳಬಹುದು. ಪೋಸ್ಟ್ ಆಫೀಸು ಸೇವಿಂಗ್ಸ್ ಬ್ಯಾಂಕುಗಳಲ್ಲದೆ, ಸ್ವದೇಶೀ ಸಂಬಂಧಪಟ್ಟ ಬ್ಯಾಂಕುಗಳೂ ಅನ್ಯೋನ್ಯ ಸಹಾಯಕ ಸಂಘಗಳೂ ಇರುತ್ತವೆ. ಇವುಗಳಿಂದಲೂ ಸೇವಿಂಗ್ಸ್ ಬ್ಯಾಂಕಿನಿಂದುಂಟಾಗುವ ಪ್ರಯೋಜನವೇ ಸ್ವಲ್ಪ ಮಟ್ಟಿಗೆ ಇರುತ್ತದೆ. ಅನ್ಯೋನ್ಯ ಸಹಾಯಕ ಸಂಘಗಳಲ್ಲಿ ನಾನಾ ವಿಧವಾದ ಕಷ್ಟಗಳು ಇದ್ದಾಗ್ಯೂ ಈ ಸಂಘಗಳು ಇಷ್ಟರ ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ಬಂದಿರುವುದನ್ನು ನೋಡಿದರೆ, ಅನೇಕ ಅನ್ಯೋನ್ಯ ಸಹಾಯಕ ಸಂಘಗಳೂ ಬ್ಯಾಂಕುಗಳೂ ಶೀಘ್ರದಲ್ಲಿಯೇ ಏರ್ಪಟ್ಟು ಕಸಬೆ ಪ್ರಾಂತರ ಹಣವನ್ನು ಭದ್ರವಾಗಿ ಡಿಪಾಜಿಟು ಮಾಡುವುದಕ್ಕೆ ತಕ್ಕ ಅನುಕೂಲತೆಯು ಸಿಕ್ಕಬಹುದೆಂದು ನಿರೀಕ್ಷಿಸಬಹುದು. ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಿಂದಲೂ, ಅನ್ಯೋನ್ಯ ಸಹಾಯಕ ಸಂಘಗಳಿಂದಲೂ ವ್ಯವಸಾಯ ಬ್ಯಾಂಕುಗಳಿಂದಲೂ, ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಸಬೆಗಳಲ್ಲಿರುವ ಸರ್ಕಾರೀ ಸೇವಿಂಗ್ಸ್ ಬ್ಯಾಂಕುಗಳಿಂದಲೂ ಉಂಟಾಗಿರುವ ಅನುಕೂಲವೇ ಪ್ರಕೃತಕ್ಕೆ ಸಾಕಾಗಿರುವಂತೆ ತೋರುತ್ತದೆ. ಆದರೆ ಮಿತವಾಗಿ ವ್ಯಯಮಾಡತಕ್ಕ ಅಭ್ಯಾಸವು ಜನಗಳಲ್ಲಿ ಅಭಿವೃದ್ಧಿ ಹೊಂದಿ ಈ ವಿಷಯದಲ್ಲಿ ಇನ್ನೂ ಹೆಚ್ಚಾದ ಅನುಕೂಲತೆಗಳು ಆಗಬೇಕೆಂದು ಜನಗಳು ಕೇಳಿದರೆ, ಮೇಲೆ ನಮೂದಿಸಿದ ಕಷ್ಟಗಳು ಇದ್ದರೂ ಕೂಡ, ಹೆಚ್ಚಾದ ಅನುಕೂಲತೆಗಳನ್ನು ಉಂಟುಮಾಡಿಕೊಡುವುದಕ್ಕೆ ಬೇಕಾದ ಉಪಾಯವನ್ನು ಸರ್ಕಾರದವರು [illegible] ವಿಶೇಷವಾಗಿ ಸದರಿ ಬ್ಯಾಂಕುಗಳಿಂದಲೂ ಸಂಘಗಳಿಂದಲೂ ಉಂಟಾಗುವ ಪ್ರಯೋಜನವನ್ನು ಹಳ್ಳಿಗಳಲ್ಲಿರುವ ಜನಗಳಿಗೆ ತಿಳಿಯಪಡಿಸಿದರೆ ಬಹಳ ಪ್ರಯೋಜನವುಂಟು. ಆದಕಾರಣ ರೈತರು ಖರ್ಚು ಹೋಗಿ ಉಳಿಯುವ ಹಣವನ್ನು ಅಂಥಾ ಬ್ಯಾಂಕುಗಳಲ್ಲಿಯೂ ಸಂಘಗಳಲ್ಲಿಯೂ ಡಿಪಾಜಿಟ್ ಇಡುವುದರ ಪ್ರಯೋಜನವನ್ನು ರೆವಿನ್ಯೂ ಆಫೀಸರುಗಳು ಜಮಾಬಂದಿ ಮಾಡುವಾಗ್ಗೆ ಅವರಿಗೆ ವಿವರಿಸಿ ಹೇಳಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಬಂದೀಖಾನೆಗಳ ವಾರ್ಷಿಕ ರಿಪೋರ್ಟು

ಮೈಸೂರು ಸಂಸ್ಥಾನದ ಬಂದೀಖಾನೆ ಮತ್ತು ಲಾಕಪ್ಪುಗಳ ಸ್ಥಿತಿಗತಿಯ ವಿಷಯವಾಗಿ ಇನ್ಸ್‌ಪೆಕ್ಟರ್ ಜನರಲ್‌ರವರು ೧೯೦೮ ನೇ ಇಸವಿಯ ವಾರ್ಷಿಕ ರಿಪೋರ್ಟನ್ನು ಕಳೆದ ಮೇ ತಿಂಗಳಲ್ಲಿ ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟರು. ಗವರ್ನ್‌ಮೆಂಟಿನವರು ಅದನ್ನು ಪರಿಶೀಲಿಸಿ ವರದಿ ಮಾಡಿ ಕಡೇ ವಾರದಲ್ಲಿ ಅದರ ಮೇಲೆ ಹುಕುಂ ಬರೆದಿರುವುದೇನೆಂದರೆ—೧೯೦೮ ನೇ ವರುಷದಲ್ಲಿ ಕೆಲವು ಕಾಲ ಡಾ॥ ಸ್ಮಿತ್ ಎಂಬುವವರೂ ಕೆಲವು ಕಾಲ ಡಾ॥ ಸ್ಮಿತ್‌ರವರೂ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದರು. ಸಂಸ್ಥಾನದಲ್ಲಿ ಜೈಲ್ ಮತ್ತು ಲಾಕಪ್ಪುಗಳ ಸಂಖ್ಯೆಯು ಹೆಚ್ಚಾಗಲೂ ಇಲ್ಲ, ಕಡಮೆಯಾಗಲೂ ಇಲ್ಲ. ಕಟ್ಟಡಗಳು ಒಳ್ಳೇ ಸ್ಥಿತಿಯಲ್ಲಿರುತ್ತವೆ. ಒಳಗೆ ಸ್ಥಳವು ಸಾಕಾಗಿರುವಂತೆ ತಿಳಿಯುವುದು. ಕೆಲವು ಲಾಕಪ್ಪುಗಳಲ್ಲಿ ಅಡಿಗೆ ಮನೆ [illegible] ಮನೆಗಳು ಇಲ್ಲದ್ದರಿಂದ ಅವನ್ನು ಕಟ್ಟಿಸುವಂತೆ ಹುಕುಂ ಕೊಡಲಾಗಿದೆ. ಕಳೆದ ವರುಷ ಜೈಲ್ ಮತ್ತು ಲಾಕಪ್ಪುಗಳಲ್ಲಿದ್ದ ಬಂದೀವಾನರ ಸಂಖ್ಯೆಯು ಹಿಂದಿನ ವರುಷಕ್ಕಿಂತ ಹೆಚ್ಚಾಗಿತ್ತು. ಇದಕ್ಕೆ ದುಷ್ಕಾಲ ಪ್ರಾಪ್ತವಾಗಿದ್ದದ್ದೂ ದಿನಸಿಗಳ ಧಾರಣೆ ಹೆಚ್ಚಿದ್ದದ್ದೂ ಮುಖ್ಯ ಕಾರಣಗಳಾಗಿರುತ್ತದೆ. ೧೯೦೮ ನೇ ವರುಷದ ಆರಂಭದಲ್ಲಿ ೧,೧೪೨ ಮಂದಿಯೂ, ವರುಷಾಂತ್ಯದಲ್ಲಿ ೧೧,೯೧೨ ಮಂದಿಯೂ ಬಂದೀಖಾನೆ ಮತ್ತು ಲಾಕಪ್ಪುಗಳಲ್ಲಿದ್ದರು. ಆ ವರುಷ ೧೦,೭೪೯ ಜನರು ಬಿಡುಗಡೆ ಹೊಂದಿ, ೧,೨೦೩ ಜನರು ಉಳಿದಿದ್ದರು. ಈ ಸ್ಥಿತಿ ಒಂದಾವರ್ತಿಗಿಂತ ಹೆಚ್ಚು ಶಿಕ್ಷೆಯಾಗಿದ್ದ ಖೈದಿಗಳು ೪೦೦ ಜನರೆಂದು ತಿಳಿಯುತ್ತದೆ. ಬಾಲ್ಯ ಮೆಯಿಸ್ಟಿನ ಖೈದಿಗಳು ೪೮ ಮಂದಿ ಇದ್ದರು. ಇವರಲ್ಲೂ ಒಂದಾವರ್ತಿಗಿಂತ ಹೆಚ್ಚಾಗಿ ಶಿಕ್ಷೆ ಹೊಂದಿದವರು ಯಾರಾದರೂ ಇದ್ದರೋ ಇಲ್ಲವೋ ಗೊತ್ತಾಗುವುದಿಲ್ಲ. ಕಳೆದ ವರುಷ ೮ ಮಂದಿ ಖೈದಿಗಳು ಸೆರೆಯಿಂದ ತಪ್ಪಿಸಿಕೊಂಡು ಹೋದರು. ಈ ಸ್ಥಿತಿ ಇಬ್ಬರು ಬಂದೀವಾನರು, ೬ ಮಂದಿ ಅಪರಾಧಗಳನ್ನು ಮಾಡಿ [illegible] ಬ್ರಿಟಿಷ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವಂತೆ ತಿಳಿಯಲಾಗಿದೆ. ದಂಡ ಕಸ್ಟಡಿಯಲ್ಲಿದ್ದು ತಪ್ಪಿಸಿಕೊಂಡು ಹೋಗಿರುವ ಆರು ಜನ ಖೈದಿಗಳ ಪೈಕಿ ಇದುವರೆಗೆ ಒಬ್ಬ ಮಾತ್ರ ಸಿಕ್ಕಿ, ಉಳಿದವರು ಸಿಕ್ಕಲಿಲ್ಲವೆನ್ನುವುದು ಗವರ್ನ್‌ಮೆಂಟಿಗೆ ವಿಷಾದವನ್ನುಂಟುಮಾಡಿದೆ. ಆ ವರುಷ ಜೈಲ್ ಮತ್ತು ಲಾಕಪ್ಪುಗಳಿಗಾಗಿ ೧,೦೫,೯೧೧ ಚಿಲ್ಲರೆ ರೂಪಾಯಿ ಖರ್ಚಾಯಿತು. ಬಂದೀಖಾನೆಗಳಲ್ಲಿ ಖೈದಿಗಳು ೫,೦೦೦ ರೂಪಾಯಿನಷ್ಟು ನಗದಿಯಾಗುವ ಹುಟ್ಟುವಳಿ ಮಾಡಿದರೆಂದು ಕೇಳಿ ಸರ್ಕಾರದವರು ಸಂತೋಷಪಡುತ್ತಾರೆ. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಒಂದೆರಡು ಕಸಬುಗಳನ್ನು ಪ್ರಾರಂಭಿಸಿ ನಡಿಸಬೇಕೆಂದು ಗವರ್ನ್‌ಮೆಂಟಿನವರು ಉದ್ದೇಶಪಟ್ಟು, ಸೂಪರಿಂಟೆಂಡೆಂಟ್ ಮೆ॥ ಅಟ್ಕಿನ್ಸನ್‌ರವರನ್ನು ಫತೆಪೂರ್, ಔರಂಗಾಬಾದ್, ಪೂನಾ, ಗುಲ್ಬರ್ಗ ಮೊದಲಾದ ಪಟ್ಟಣಗಳ ಜೈಲ್‌ಖಾನೆಗಳಿಗೆ ಕಳುಹಿಸಿದ್ದರು. ಅವರು ಇನ್ನೂ ರಿಪೋರ್ಟನ್ನು ಬರೆದು ಕಳುಹಿಸಲಿಲ್ಲ. ಬಂದೀವಾನರ ಆರೋಗ್ಯವು ಚೆನ್ನಾಗಿತ್ತು. ೭೮೧ ಖೈದಿಗಳು ಕಾಯಿಲೆಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದರು. ೧೬ ಮಂದಿ ತೀರಿಹೋದರು. ಜೈಲುಗಳಲ್ಲಾಗಲಿ ಲಾಕಪ್ಪುಗಳಲ್ಲಾಗಲಿ ಅಂಟು ಜಾಡ್ಯಗಳ್ಯಾವೂ ಪ್ರಾಪ್ತವಾಗಲಿಲ್ಲ.

ತಾಲ್ಲೋಕು ವರ್ತಮಾನಗಳು

ಗುಂಡ್ಲುಪೇಟೆ ತಾ॥ ಬೊಂಬಲಾಪುರ—ಈ ಗ್ರಾಮಕ್ಕೆ ಈ ಮಾಹೆ ೬ ನೇ ತಾ ಹಿಡಿದ ಮಳೆ ಒಂದೇ ಸಮನಾಗಿ ಈ ವರೆಗೂ ಹುಯ್ಯುತ್ತಾ ಇದೆ. ದನ ಜನಗಳು ಹೊರಗೆ ಪ್ರವೇಶ ಮಾಡಲು ಮಳೆಯ ದೆಸೆಯಿಂದ ಆಗದೆ ಇದೆ. ಇಲ್ಲಿ ಜಾನುವಾರುಗಳಿಗೆ ಪ್ರಾಪ್ತವಾಗಿದ್ದ ದೊಡ್ಡ ರೋಗವು ಸ್ವಲ್ಪ ಮಟ್ಟಿಗೆ ಶಮನವಾದಂತೆ ತೋರುತ್ತೆ. ಆದರೆ ಇನ್ನೂ ಅಲ್ಲಲ್ಲಿ ದಿನಕ್ಕೆ ೧ ರಂತೆ ಮೃತಪಡುತ್ತವೆ. ರೈತರೆಲ್ಲಾ ಹಸನ್ಮುಖಿಗಳಾಗಿ ತಮ್ಮ ತಮ್ಮ ಜಮೀನುಗಳಿಗೆ ರಾಗಿ ಮುಂತಾದ ಬೀಜಗಳನ್ನು ಬಿತ್ತುತ್ತಾ ಇದಾರೆ. ಇನ್ನು ಕೆಲವರು ಎಳ್ಳು ಕಟಾವು ಮಾಡುವುದರಲ್ಲಿದೆ. ೫-೬ ದಿವಸಗಳಲ್ಲಿ ಈ ತಾಲ್ಲೋಕುಗಳ ಗ್ರಾಮಾಂತ್ರಗಳಲ್ಲೆಲ್ಲಾ ಜೋಳ ಕುಯ್ಲು, ಒಕ್ಕಣೆ ಮಾಡುತ್ತಾರೆ. ಈ ಮಾಹೆ ೧೨ ನೇ ತಾ ಚಿಕ್ಕಮ್ಮ ಸಂತೆಯಲ್ಲಿ ದಿನಸಿಗಳು ಸ್ವಲ್ಪ ಅಗ್ಗವಾಗಿತ್ತು. ರಾಗಿ ಪಲ್ಲ ಒಂದಕ್ಕೆ ೫—೬ ರೂ, ಜೋಳ ೭—೭ ರೂ ಪ್ರಕಾರ ಮಾರಾಟವಾಯಿತು. ಇದರಿಂದ ಬಡ ಜನರಿಗೆ ಸ್ವಲ್ಪ ಅನುಕೂಲವಾಯಿತು.

ತ್ಯಾಮಗೊಂಡ್ಲು—ಇದು ಪೋಲೀಸ್ ಇನ್ಸ್‌ಪೆಕ್ಟರ್ ಸೆಂಟರ್ ಆಗಿರುತ್ತೆ. ಇಲ್ಲಿಗೆ ಸರ್ಕಾರದವರು ಒಬ್ಬ ೧ ನೇ ಕ್ಲಾಸ್ ಜಮಾದಾರರನ್ನು ಕಳುಹಿಸಿರುವುದಾಗಿ ಹುಕುಂ ಬಂದಿರುತ್ತೆ. ಇಲ್ಲಿದ್ದ ದಫೇದಾರ್ರಿಗೆ ಹೊಸ ದೊರೆಸಿನ ತೆ ಎರಡು ರೂಪಾಯಿ ಇಜಾಫಾ ಬಂದಿರುತ್ತೆ. ಆದರೆ ಜಮಾದಾರರು ಯಾವಾಗ ಬರುತ್ತಾರೋ ತಿಳಿಯದು. ಈ ರೀತಿ ಈ ತ್ಯಾಮಗೊಂಡ್ಲು ಗ್ರಾಮವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಬರತಕ್ಕದ್ದು ತುಂಬಾ ಸಂತೋಷಕರ— ಈ ಪ್ರಾಂತ್ಯ ಕೆಲವು ತುಂಟರು ಸೇರಿಕೊಂಡು ಆಗಾಗ್ಗೆ ದನಗಳನ್ನು ಚೋರಿ ಮಾಡಿ ಕೊಯ್ದು ತಿಂದು ಚರ್ಮವನ್ನು ಸುಲಭ ಕ್ರಯಕ್ಕೆ ಈ ಊರಲ್ಲಿ ಚಮಾರದ ಮಂಡಿಗೆ ಬಿಕರಿ ಮಾಡುತ್ತಾರೆ. ಈಗ ಇಂಥಾ ಒಂದು ಮೊಕದ್ದಮೆ ನಡೆಯುತ್ತಿದೆ. ಫಲಕಾರಿ ಮುಂದೆ ತಿಳಿಯಬೇಕು. ಇಲ್ಲಿ ಪೋಲೀಸ್ ಶಿಬ್ಬಂದಿ ಹೆಚ್ಚಿದ್ದರಿಂದ ಇತಃಪರ ಇಂಥಾ ಬಂಟರ ಹಾವಳಿ ನಡೆಯಲಾರದೆಂದು ತೋರುತ್ತೆ— ಇಲ್ಲಿ ಮ್ಯುನಿಸಿಪಲ್ ಲಾಂದ್ರಗಳ ವಿಚಾರವಂತೂ ಹೇಳಲು ಅಸಾಧ್ಯವಾಗಿದೆ. ಈ ಊರಲ್ಲಿ ೩೦ ಲಾಂದ್ರಗಳು ಇರುವವು. ಇವೆಲ್ಲವನ್ನೂ ಪ್ರತಿ ದಿವಸವೂ ಹಚ್ಚುವುದೇ ಇಲ್ಲ. ಊರಿನ ಮುಖ್ಯವಾದ ಭಾಗಗಳಲ್ಲಿಯೂ ಮಾತ್ರ ಹಚ್ಚುತ್ತಾರೆ. ಅವುಗಳ ಬೆಳಕು ಕೂಡಾ ಮಿಣುಕು ಹುಳಗಳನ್ನು ಹೋಲುತ್ತಾ ಇರುತ್ತವೆ. ಇದಕ್ಕೆ ಕಾರಣವೇನಂದರೆ ಈ ಲಾಂದ್ರಗಳಲ್ಲಿ ದೀಪ ಹಚ್ಚುವದನ್ನು ಪ್ರತಿವರ್ಷವೂ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು ಹರಾಜು ಹಾಕುತ್ತಾರೆ. ಕಮ್ಮಿ ದರಕ್ಕೆ ಒಪ್ಪಿದವರಿಗೆ ಕಂಟ್ರಾಕ್ಟು ಕೊಡುತ್ತಾ ಇದಾರೆ. ಈಗ್ಗೆ ೨ ವರುಷಗಳ ಕೆಳಗೆ ಲಾಂದ್ರ ೧ ಕ್ಕೆ ತಿಂಗಳಿಗೆ ೧೧ ಆಣೆ ಕೊಡುತ್ತಾ ಇದ್ದರು. ಆಗ್ಗೆ ದೀಪಗಳನ್ನು ಸರಿಯಾಗಿ ಹಚ್ಚುತ್ತಿದ್ದರು. ಈಗ ಲಾಂದ್ರ ೧ ಕ್ಕೆ ೭ ಆಣೆಗೆ ಇಳಿದಿರುತ್ತೆ. ಈ ರೀತಿ ದರ ಕಮ್ಮಿ ಆದರೆ ಕೆಲಸ ಹೇಗೆ ನಡೆಯುತ್ತದೆಂಬುದನ್ನು ಮ್ಯುನಿಸಿಪಲ್ ಅಧಿಕಾರಿಗಳು ಆಲೋಚಿಸತಕ್ಕದ್ದಾಗಿದೆ. ಮತ್ತು ಈ ವಿಚಾರವನ್ನು ಸರಿಪಡಿಸಿ ಪ್ರಜೆಗಳಿಗೆ ಅನುಕೂಲಮಾಡಿ ಕೊಡುತ್ತಾರೆಂತ ಈ ಮೂಲಕ ಕೋರಲ್ಪಟ್ಟಿದೆ—ಈ ಊರ ಮುಂದೆ ಇರುವ ಗುಪ್ಪ ನವರ ಛತ್ರದ ಮಗ್ಗುಲಲ್ಲಿ ಸರ್ಕಾರಿ ತೆರೆಡಿಯು ಬಹಳ ಆಳವಾಗಿರುವುದರಿಂದ ಇಂಜನಿಯರ್ ಇಲಾಖೆಯವರು ಒಂದು ಸಿಲ್ಟ್ ಟ್ರ್ಯಾಪ್ (ತಡೆ)ಯನ್ನು ಕಟ್ಟಿರತ್ತಾರೆ. ಇದು ಉತ್ತರೋತ್ತರ ಪ್ರಯೋಜನಕಾರಿಯಾಗಬಹುದು. ಈಗ ಮಳೆಯ ನೀರು ಮತ್ತು ಗ್ರಾಮಸಾರವೆಲ್ಲಾ ಅಲ್ಲಿಗೆ ಹರಿದುಬಂದು ನಿಂತು ಬಹು ವಾಸನೆಯಾಗಿ ಅನಾರೋಗ್ಯಕ್ಕೆ ಕಾರಣವಾಗಿರುತ್ತೆ. ಆದ್ದರಿಂದ ಅಲ್ಲಿ ನಿಲ್ಲತಕ್ಕ ನೀರನ್ನು ಮ್ಯುನಿಸಿಪಲ್ ರೂಪಾಯಿಗಳ ಆಚೆಗೆ ತೆಗೆದುಹಾಕುವಂತೆ ನಮ್ಮ ವೈಸ್ ಪ್ರೆಸಿಡೆಂಟರವರು ಏರ್ಪಾಡು ಮಾಡ್ಯಾರೆ ಕಲೂ, ಊರಿಗೆ ತಿಂಗಳಿಗೆ ಒಂದು ಸಲ ವಿಸಿಟಿಂಗಿಗೆ ದಯಮಾಡಿಸಬೇಕೆಂದರೂ ಟೈನ್ ಇನ್ಸ್‌ಪೆಕ್ಟರ್ ಮಾಡಿದಲ್ಲಿ ಊರಲ್ಲಿ ಗಲೀಜು ತಪ್ಪುತ್ತೆ ಎಂತಲೂ ಆಶಿಸಿಕೊಂಡಿರುತ್ತೇವೆ.

ಬೇವಿಂಗಾಪೇಟೆ ತಾ ಬೇತಮಂಗಲ—ಕಳೆದ ತಿಂಗಳು ೨೨ ನೇ ತಾ ಈ ಪ್ರಾಂತ್ಯದಲ್ಲಿ ಸ್ವಲ್ಪ ಮಳೆ ಮಾತ್ರ ಬಿತ್ತು. ಆ ವೇಳೆಗೆ ಅನೇಕ ರೈತರು ತಮ್ಮ ಹೊಲಗಳನ್ನೆಲ್ಲಾ ಬಿತ್ತಿ ಆಚೆಗೆ ಮಳೆ ಇಲ್ಲದೆ ನಿರಾಶೆಯಿಂದ ಇದ್ದರು. ಆದರೆ

೪ನೇ ತಾ ಮಳೆ ಶುರುವಾಗಿ ೮ನೇ ತಾ ವರೆಗೂ ದಿನವೂ ಸರಾಸರಿ ೧ ಇಂಚಿನ ಪ್ರಕಾರ ಮಳೆ ಬೀಳುತ್ತಾ ಇರುವದರಿಂದ ಎಲ್ಲಾ ಜನರಲ್ಲಿಯೂ ತುಂಬಾ ಸಂತೋಷದ ವರ್ತಮಾನಗಳು ಕೇಳಬರುತ್ತಾ ಇವೆ. ಕ್ಷಾಮಕಾಲದ ಭೀತಿ ತಕ್ಕಮಟ್ಟಿಗೆ ನಿವಾರಣೆಹೊಂದುತ್ತಾ ಇದೆ ಮತ್ತು ಧಾರಣೆವಾಸಿಗಳು ಇಳಿದ ವರ್ಷಗಳಿಂದ ತುಂಬಾ ತುಟ್ಟಿಯಾಗಿ ಮಾರಲ್ಪಡುವ ಈ ಕಾಲಕ್ಕೆ ಸರಿಯಾಗಿ ಧಾರಣೆಗಳಲ್ಲಿ ಹೆಚ್ಚು ಲಾಭವನ್ನು ಅಪೇಕ್ಷಿಸದೆ ಸಾಧಾರಣವಾಗಿ ಮಾರುತ್ತಾ ಇರುವದರಿಂದ ಅನೇಕರು ತುಂಬಾ ಸಂತೋಷ ಪಡುತ್ತಾರೆ. ಇಲ್ಲಿನ ವರ್ತಕರಲ್ಲಿ ಮೆ|| ವೆಂಕಟರಮಣಪ್ಪನವರು ಎರಡು ವಾಗಿನ್ ಅಕ್ಕಿ ಮತ್ತು ರಾಗಿಯನ್ನು ತರಿಸಿ ಚಿಲ್ಲರೆ ವರ್ತಕರಿಗೆ ಸಾಧಾರಣ ಲಾಭಕ್ಕೆ ಕೊಡುತ್ತಾ ಇರುವದರಿಂದ ಅನೇಕರು ಸಂತೋಷ ಪಡುತ್ತಾರೆ.—ಈ ತಿಂಗಳು ೧ನೇ ತಾ ಕ್ಯಾಂಪಿಗೆ ಕೋಳಿಗಳನ್ನು ಮಾರಿಕೊಂಡುಬರಲು ಹೋಗಿದ್ದ ಮುಳಬಾಗಲ ಮುಸ್ತಾಕ್ ಸಾಹೇಬನನ್ನೂ, ಈತನ ಇಬ್ಬರು ಮಕ್ಕಳನ್ನೂ ಈ ಊರಿಗೆ ... ರುವ ಸಂತೆ ಕುಂಟೆ ಹಳ್ಳದ ಬಳಿಯಲ್ಲಿ ಚೆನ್ನಾಗಿ ಹೊಡೆದು ಅವರ ಬಳಿಯಲ್ಲಿದ್ದ ರೂಪಾಯಿಗಳನ್ನೂ ಸಾಮಾನುಗಳನ್ನೂ ಕಿತ್ತುಕೊಂಡು ಪರಾರಿಯಾಗಿರುತ್ತಾರೆ. ಇವರು ಇಲ್ಲಿರುವ ಡಾಕ್ಟರ್ ಸಾಹೇಬರಿಂದ ಚಿಕಿತ್ಸೆಯನ್ನು ಹೊಂದುತ್ತಾ ಇದ್ದು ಪೋಲೀಸ್ ಸೂಪರಿಂಟೆಂಡೆಂಟರ ಅಪ್ಪಣೆಯಂತೆ ಮುಳುಬಾಗಲಿಗೆ ಹೊರಟು ಹೋದರು. ಆದರೆ ಕಳ್ಳರಲ್ಲಿ ಇಂದಿನ ವರೆಗೂ ಒಬ್ಬರೂ ಪತ್ತೆ ಇಲ್ಲ. ಮತ್ತು ಕೆಲವು ದಿನಗಳ ಹಿಂದೆ ಈ ಊರಿನಲ್ಲಿ ಕಳುವಾಗಿದ್ದ ಪದಗೂರು ಮುನಿಪುಕ್ಕನ ಮಗನ ಮತ್ತು ಮುಳಬಾಗಲ ಜಮಾಲ ಸಾಹೇಬರ ಮಗನ ಒಡವೆಗಳ ಸಮೇತ ಪೋಲೀಸ್ ಸೂಪರಿಂಟೆಂಡೆಂಟರವರು ಕಳ್ಳರನ್ನು ಭಂಗಾರದ ಗಣಿಯಲ್ಲಿ ಖುದ್ದು ತಾವೇ ಹಿಡಿದರೆಂದು ತಿಳಿದು ತುಂಬಾ ಸಂತೋಷಿಸುತ್ತೇವೆ.—ಮತ್ತು ಈ ಊರಿನ ಪೋಲೀಸ್ ಸ್ಟೇಷನ್ನಲ್ಲಿ ಒಂದು ಟೆಲಿಫೋನ್ ಇಡಲ್ಪಟ್ಟರೆ ತುಂಬಾ ಅನುಕೂಲವಾಗಿರುವದೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಯಾಕೆಂದರೆ ಗಣಿಯು ಇಲ್ಲಿಗೆ ಸಮೀಪ ಇರುವದರಿಂದಲೂ, ಕೆಲವು ತಿಂಗಳುಗಳಿಂದ ಈ ಪ್ರಾಂತ್ಯ ಕಳ್ಳತನಗಳು ವಿಶೇಷವಾಗಿರುವದರಿಂದಲೂ ಇದರ ಮೂಲಕ ಪತ್ತೆ ತರಡೊರಿಗೆ ತುಂಬಾ ಸಹಾಯವಾಗುವದು.—ಮತ್ತು ಇಲ್ಲಿನ ಡಾಕ್ಟರು ಮೆ ಸದಾಶಿವ ಅಯ್ಯರವರು ಮಕ್ಕಳಿಗೆ ಬಹು ಮುತುವರ್ಜಿಯಿಂದ ಸಿಡುಬು ಹಾಕುತ್ತಾ ಇರುವದರಿಂದ ಈ ಬಾಧೆಯು ವಿಶೇಷ ಪ್ರಾಬಲ್ಯಕ್ಕೆ ಬರಲಿಲ್ಲ.—ಈ ಊರಿನ ಸಂತೆಯಲ್ಲಿ ವಡೆ ಚಕ್ಕುಲಿ ವಗೈರೆ ತಿಂಡೀ ಸಾಮಾನುಗಳನ್ನು ಕ್ಯಾಂಪಿನಿಂದ ತಂದು ರಾಗಿ ಬೀಸುವ ಇಟ್ಟಿಗೆ ಕಸಿಗಲ್ಲಿಯೂ ಮತ್ತು ಬಾಗಲಿಗೆ ಮುಚ್ಚುವ ಬಿದರು ತಟ್ಟೆಗಳ ತಡಿಕೆಗಳ ಮೇಲೆಯೂ ಮಾರುತ್ತಾರೆ. ಇದು ಆರೋಗ್ಯಕ್ಕೆ ವಿರೋಧವಾಗಿದೆ. ಯಾಕೆಂದರೆ ಇವುಗಳಲ್ಲಿ ಸಗಣಿಯು ಮತ್ತು ಗಂಜಲವು ಮೆತ್ತಿಕೊಂಡಿರುವದರಿಂದ ಇಂಥವುಗಳಲ್ಲಿ ತಿಂಡಿಯು ಸಾಮಾನುಗಳನ್ನು ಇಡದ ಹಾಗೆ ಸ್ಥಳಾಧಿಕಾರಿಗಳು ನಿಗಾ ಕೊಟ್ಟರೆ ಅನಾರೋಗ್ಯಕ್ಕೆ ಅವಕಾಶವಾಗಲಾರದು.—ಈ ಊರಿನಲ್ಲಿ ಒಬ್ಬ ಹೆಂಗಸಿಗೆ ಮೂಗನ್ನೆಲ್ಲಾ ಹುಳ ತಿಂದು ಬಹು ವಿಕಾರಸ್ವರೂಪಿಯಾಗಿ ಕೀವು ರಕ್ತದಿಂದ ತುಂಬಿದವಳಾಗಿ ಸ್ವಜನರಿಂದ ಪೋಷಿಸಲ್ಪಡದೆ ಮನೆಗಳ ಬಳಿಯಲ್ಲಿ ಬಂದು ಅನ್ನವನ್ನು ... ದುಃಖ ... ಕಷ್ಟ ಪಡುತ್ತಿದ್ದಳು. ನಮ್ಮ ಅಮಲ್ದಾರರು ದಯವಿಟ್ಟು ಈ ಸಹೋದರಿಗೆ ಸರ್ಕಾರದಿಂದ ಜೀವನೋಪಾಯವನ್ನು ನಡೆಸಿಕೊಟ್ಟರೆ ತುಂಬಾ ಕೃತಜ್ಞರೆಂದು ಅನೇಕರು ಕೊಂಡಾಡುವರು.

ಚೆನ್ನರಾಯಪಟ್ಟಣ.—ಈಚೆಗೆ ಈ ಊರಿನಲ್ಲಿ ಸತತವಾಗಿ ಮಳೆ ಇಲ್ಲದೆ ಹೊಲಗಳಲ್ಲಿ ಬಿತ್ತಿದ್ದ ರಾಗಿ ಪೈರೆಲ್ಲಾ ಬಾಡುತ್ತಾ ಇರುವುದನ್ನು ಕಂಡು ರೈತರೆಲ್ಲಾ ಬಹಳ ವ್ಯಾಕುಲ ಪಡುತ್ತಿದ್ದಾರೆ.—ಸಂತೆಯಲ್ಲಿ ವರ್ತಕರು ಹೆಚ್ಚು ಸೇರುಗಳಲ್ಲಿ ದಿನಸಿ ಅಳತೆ ಮಾಡುವುದು ಇನ್ನೂ ತಪ್ಪಲಿಲ್ಲ. ಸರ್ಕಾರದವರು ಇಂಥಾವರ ವಿಷಯದಲ್ಲಿ ನಿಗಾ ಇಟ್ಟು ಬಡ ಜನರ ತೊಂದರೆಯನ್ನು ತಪ್ಪಿಸುತ್ತಾರೆಂದು ನಂಬಿದೇವೆ.—ಇಲ್ಲಿನ ಸಬ್ ರಿಜಿಸ್ಟ್ರಾರಾಗಿ ಕಳೆದ ೩ ವರ್ಷಗಳ ಲಾಗಾಯಿತು ಇದ್ದು ಹಾಲಿ ದೊಡ್ಡಬಳ್ಳಾಪುರಕ್ಕೆ ವರ್ಗವಾಗಿ ಹೋದ ಮ ಬಿ ಟಿ ರಾಮಸ್ವಾಮಿಯ್ಯಂಗಾರ‍್ರು ಅವರು ಇಲ್ಲಿಗೆ ಬಂದ ಲಾಗಾಯಿತು ಸರ್ಕಾರದ ಕೆಲಸದಲ್ಲಿ ಬಹಳ ಚಟುವಟಿಕೆಯುಳ್ಳವರಾಗಿದ್ದರು. ಕಸಬೆ ಮತ್ತು ಇತರ ಹೋಬಳಿಗಳಿಂದ ಬರುವ ಪತ್ರಗಳ ರಿಜಿಸ್ಟರು ಕೆಲಸಗಳಿಗೆ ಸ್ವಲ್ಪವೂ ತಾಮಸ ಮಾಡುತ್ತಿರಲಿಲ್ಲ. ಜನಗಳೆಲ್ಲರೂ ಬಹಳ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಅದೇ ದಿವಸವೇ ಹೊರಟು ಹೋಗುತ್ತಿದ್ದರು. ಇವರ ಸಜ್ಜನತೆಯನ್ನು ಕಂಡು ಈ ಊರಿನ ದೊಡ್ಡ ಮನುಷ್ಯರೂ ಶೆಟ್ಟಿ ವರ್ತಕರೂ ಸೇರಿ ಇವರನ್ನು ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಫಲ ತಾಂಬೂಲಾದಿಗಳನ್ನು ಕೊಟ್ಟದ್ದು ಅಲ್ಲದೆ ನಮ್ಮ ಅಮಲ್ದಾರ್ ಮ ಶ್ರೀನಿವಾಸರಾಯರ ಮುಂತಾದ ದೊಡ್ಡ ಮನುಷ್ಯರೆಲ್ಲರು ಸೇರಿ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿ ಫಲಾಹಾರ ದಿಗಳಾದ ಅನಂತರ ಮ ಬಿ ಟಿ ರಾಮಸ್ವಾಮಿಯ್ಯಂಗಾರ‍್ರು ಸಭೆಯವರನ್ನು ಕೃತಜ್ಞತೆಯೊಡನೆ ವಂದಿಸಿದರು. ಹೊಸ ಸಬ್ ರಿಜಿಸ್ಟ್ರಾರು ಇನ್ನೂ ಬಂದಿಲ್ಲ.

ಕುಲೀನ್‌ಪೇಟೆ.—ಇಲ್ಲಿ ಕಳೆದ ವಾರದಲ್ಲಿ ಪೂರಾ ಮಳೆಯಾಗಿ ರೈತರು ಹರ್ಷಕರಾಗಿ ಹೊಟ್ಟೆತುಂಬ ಊಟಮಾಡಿ ರಾತ್ರಿ ಕಣ್ಣುತುಂಬ ನಿದ್ರೆ ಮಾಡಲು ಮಾರ್ಗವಾಗಿ ಪೈರುಗಳೆಲ್ಲಾ ಚೆನ್ನಾಗಿವೆ.—ಕಳೆದ ಒಂಬತ್ತು ವರ್ಷಗಳಿಂದಲೂ ಇಲ್ಲಿರುತ್ತಾ ರಾಜಭಕ್ತಿಯುತರೂ ಪ್ರಜೆಗಳನ್ನು ತಮ್ಮ ಸ್ವಂತ ಮಕ್ಕಳಂತೆ ನೋಡುತ್ತಾ, ಕಳೆದ ಪ್ಲೇಗ್ ಕಾಲದಲ್ಲಿಯೂ ಕಳೆದ ಕ್ಷಾಮಕಾಲದಲ್ಲಿಯೂ ಸರ್ಕಾರದಿಂದ ಮುಂಡಿ ಇಡಿಸಿ ರೂಪಾಯಿಗೆ ೧೨ ಸೇರು ರಾಗಿ ಮಾರುವಂತೆ ಮಾಡಿದ್ದು ಮಾತ್ರವಲ್ಲದೆ ಕಳೆದ ಪ್ಲೇಗ್ ಕಾಲದಲ್ಲಿ ಹೊಲಗಳಲ್ಲಿ ಅನೇಕ ಕಡೆಗಳಲ್ಲಿ ಚಪ್ಪರಗಳನ್ನು ತೋಡಿಸಿ ಮಹದುಪಕಾರಗಳನ್ನು ಮಾಡುತ್ತಾ ಬರುವಂಥ ನಮ್ಮ ಅಮಲ್ದಾರ್ ಮ ಸ್ವಾಮಿನಾಥ ಶಾಸ್ತ್ರಿಗಳನ್ನು ಸರ್ಕಾರದವರು ಪ್ರಮೋಷನ್ ಮೇಲೆ ಬೇರೆ ಸ್ಥಳಕ್ಕೆ ವರ್ಗಾಯಿಸುತ್ತಾರೆಂಬುವ ವರ್ತಮಾನವನ್ನು ಕೇಳಿ ಜನರೆಲ್ಲರೂ ವ್ಯಸನಪಡುತ್ತಾ ಇದ್ದಾರೆ.—ಕಳೆದ ಒಂದು ವರ್ಷದಿಂದಲೂ ಜನರ ಪ್ರೀತಿಗೆ ಪಾತ್ರರಾಗಿದ್ದ ಪೋಲೀಸ್ ಇನ್ಸ್‌ಪೆಕ್ಟರಿಗೆ ಕುಣಿಗಲಿಗೆ ವರ್ಗವಾಗಿ ಅವರ ಸ್ಥಳಕ್ಕೆ ಮೈಸೂರು ಕಡೆಯಿಂದ ಮ ... ಅಗಬರೆಂಬುವವರು ಬರುತ್ತಾರಂತೆ.—ಕಳೆದ ಬುಧವಾರ ಇಲ್ಲಿನ ರೈಲಿನ ಹತ್ತಿರವಿರುವ ಒಂದು ಭಾವಿಗೆ ನೀರಿಗಾಗಿ ಹೋಗಿದ್ದ ಒಬ್ಬ ೧೫ ವರ್ಷದ ಹೊಲೆಯರ ಹುಡುಗನು ಆ ಭಾವಿಯೊಳಗೆ ಬಿದ್ದ ಕೂಡಲೇ ದಡದ ಮಣ್ಣು ಆತನ ಮೇಲೆ ಕವಿಚಿಕೊಳ್ಳಲು, ತತ್‌ಕ್ಷಣವೇ ಅಮಲ್ದಾರರು ಹೋಗಿ ಆ ಮಣ್ಣನ್ನು ತೆಗಿಸಿ ಆ ಹುಡುಗನನ್ನು ತಮ್ಮ ಸ್ವಂತ ಖರ್ಚಿನಿಂದ ಪೋಷಿಸಿ ಆರೈಕೆ ಮಾಡಲು, ಆ ಹುಡುಗನು ಬದುಕಿಕೊಂಡು ಕರುಣೆತೋರಿಸಿದ ಅಮಲ್ದಾರರನ್ನು ಕೊಂಡಾಡುತ್ತಾನೆ.

ಹೆಗ್ಗಡದೇವನಕೋಟೆ ತಾ ಸರಗೂರು.—... ಮಳೆ ಸರಿಯಾಗಿ ಹೊಯ್ದು ಬೆಳೆ ಚೆನ್ನಾಗಿ ಪೈರುಗಳು ಕೊಯ್ಲಿಗೆ ಬಂದಿರುತ್ತವೆ.—ಈಗ್ಗೆ ೧೫ ದಿನದಲ್ಲಿ ಇಲ್ಲಿಗೆ ಬಿಸಾವನಹಳ್ಳಿಯ ಮಗು ಹೋ... ಒಬ್ಬ ಪ್ರಯಾಣಿಕನು ಆಚೇ ಪದದಿಂದ ಈಚೇ ದಡಕ್ಕೆ ಗಾಡಿಯ ಮೇಲೆ ಹೊರಟು ಬರತಕ್ಕ ಕಾಲದಲ್ಲಿ ಅಕಸ್ಮಾತ್ ನೀರು ಜೆಚ್ಚಾಗಿ ಬಂದು ಗಾಡಿ ಎನ್ನು ವೇಗಬತು ಚಕ್ರಗಳು ಮಾತ್ರ ... ಒಳಗಿದ್ದವನನ್ನು ಹತ್ತಿರ ಇದ್ದವರು ಎಳೆದುಕೊಂಡರು. ಹೀಗೆ ಪದೇ ಪದೇ ನಡೆಯುತ್ತಲೇ ಇರುತ್ತೆ. ಹೀಗಿದ್ದಾಗ್ಯೂ ನಮ್ಮ ಘನವನ್ನೈದಿದ ಸರ್ಕಾರದವರ ಮನಸ್ಸಿಗೆ ಗೋಚರವಾಗದೆ ತುಂಬಾ ನಷ್ಟವುಂಟಾಗಿರುತ್ತೆ.—ಇಲ್ಲಿಯ ಲಾಂದ್ರಗಳು ಹತ್ತು ಗಂಟೆಯ ಮೇಲೆ ಉರಿಯುವ ಪದ್ಧತಿ ಇಲ್ಲ. ಜನಸಂಚಾರವಿರುವಾಗಲೇ ಆರಿಹೋಗುತ್ತವೆ. ಕೆಲವು ಲಾಂದ್ರಗಳನ್ನು ಯಾವಾಗಲೂ ಹಚ್ಚುವುದೇ ಇಲ್ಲ. ರಸ್ತೆಗಳ ಕಟರವನ್ನು ಗುಡಿಸಿ ಗಲ್ಲಿಗಳಿಗೆ ಭರ್ತಿಮಾಡುತ್ತಾರೆಯೇ ಹೊರ್ತು ಅಲ್ಲಿಯ ಕಸವನ್ನು ತೆಗೆಯುವುದು ... ಆಗಿದೆ.—ಈ ತಿಂಗಳ ಆದಿಯಿಂದ ಈ ಊರಿಗೆ ಹೊಸ ಜಮೇದಾರ್ರನ್ನು ಸರ್ಕಾರದವರು ಕಳುಹಿಸಿದರು. ಇವರು ನೆನ್ನೆ ವಾರದ ಸಂತೆಗೆ ಬಂದು ವರ್ತಕರ ಸೇರು ಪಾವುಗಳನ್ನು ಅಜಮಾಯಿಸಿ ಮಾಡಿದರು. ಹೀಗೆ ಪ್ರತಿ ವಾರವೂ ಅಜಮಾಯಿಸಿ ಮಾಡುತ್ತಾ ಬಂದಲ್ಲಿ ಬಡವರಿಗೆ ತುಂಬಾ ಉಪಕಾರ ಮಾಡಿದಂತಾಗುತ್ತೆ. ಅವರು ಸಂತೆಗೆ ಬಂದ ಮೇಲೆ ಮೊದಲು ಅಳೆಯುತ್ತಿದ್ದ ತಮ್ಮ ಸೇರನ್ನು ಬಚ್ಚಿಟ್ಟು ಖರಾರನ್ನು ಉಪಯೋಗಿಸುತ್ತಾರೆ. ಕಣ್ಣಿಗೆ ಮರೆಯಾದ ಮೇಲೆ ಪೂರ್ವದಂತೆಯೇ ಈಚೆಗೆ ತೆಗೆಯುತ್ತಾರೆ. ಈ ರೀತಿ ಅವರ ಹತ್ತಿರವಿರುವದನ್ನೆಲ್ಲಾ ಶೋಧಿಸಿ ಸಿಕ್ಕಿದವರಿಗೆ ಜುಲ್ಮಾನೆ ಮೊದಲಾದ್ದು ಮಾಡಿಸಿದರೆ ನ ತರ ಬದುತ್ತಾರೆ. ಈ ರೀತಿ ಮಾಡಿದರೆ ಉತ್ತಮ.—ಇಲ್ಲಿನ ಅಂಗಡೀಬೀದಿಯ ಮಧ್ಯೆ ಕೊಟ್ಟಿಗೆ ಇರುತ್ತೆ. ಅಲ್ಲಿಂದ ಹೊರಡತಕ್ಕ ದುರ್ಗಂಧ ... ಗುವವರಿಗೂ ಅಜುಬಾಜು ಅಂಗಡಿಯವರಿಗೂ ಬಹು ಅಸಹ್ಯಕರವಾಗಿರುತ್ತೆ. ನಮ್ಮ ಜಮೇದಾರ್ರು ಇದನ್ನು ತಪ್ಪಿಸುವರೆಂದು ನಂಬಿದೇವೆ. ಇಲ್ಲಿನ ದಫೇದಾರ್ರಿಗೆ ಚಾಮರಾಜನಗರಕ್ಕೆ ವರ್ಗವೆಂದು ತಿಳಿಯುತ್ತೆ. ಇವರು ಬಡವರಿಗೆ ತುಂಬಾ ಉಪಕಾರಿಗಳಾಗಿದ್ದರು.

ಖಾತ್ರಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಜಾಗಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅ ಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕೇವಲ ಬಡ ನೌಕರ ಚಿತ್ರದುರ್ಗ.—ನೀವು ಹೇಳುವ ವಿಚಾರವನ್ನು ಕುರಿತು ಸಿ ಸಿ ಕಮಾಂಡರ್ ರವರಿಗೂ ಕಮಾಂಡಿಂಗ್ ಆಫೀಸರವರಿಗೂ ಬರೆದುಕೊಂಡರೆ ಅವರೇ ಅದನ್ನು ಪರಿಹಾರ ಮಾಡಿಕೊಡುವರು.—ಎಡಿ।

ಕರೆಸ್ಪಾಂಡೆನ್ಸ್

ಯಡತೊರೆ ತಾ|| ಮಿರ್ಲೆಯ ಕಷ್ಟವು

ಅಯ್ಯಾ,

ಈ ಮಿರ್ಲೆ ಗ್ರಾಮವು ಭಾರೀ ರೆವಿನ್ಯೂ ಜಮಾಬಂದಿಯುಳ್ಳದ್ದಾಗಿಯೂ ಸುಮಾರು ೩,೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ, ಗ್ರಾಮದ ಸುತ್ತಲೂ ನಾಲೆಯ ನೀರಿನಿಂದ ಆವರಿಸಲ್ಪಟ್ಟು ಪ್ರಜೆಗಳ ಅನಾರೋಗ್ಯಕ್ಕೆ ಮಾತೃಸ್ಥಾನವಾಗಿಯೂ ಇದೆ. ಆಗಾಗ ಸಂಭವಿಸಬಹುದಾದ ಇಲ್ಲಿಯ ಪ್ರಜೆಗಳ ಅನಾರೋಗ್ಯಕ್ಕೆ ಚಿಕಿತ್ಸೆಗೆ ಅವಕಾಶವಿಲ್ಲದೆ ಅನೇಕ ವರ್ಷಗಳಿಂದಲೂ ನಾನಾ ರೋಗಗಳಿಗೆ ಅನೇಕ ಪ್ರಜೆಗಳು ತುತ್ತಾದರು. ಇದೇ ಸಂಗತಿ ಎಲ್ಲಿ ನಮ್ಮ ತಾಲ್ಲೋಕು ವೆಸ್ಟ್ ಪ್ರೆಸಿಡೆಂಟರವರು ಅಮಲ್ದಾರ್ ಮ ... ಶ್ರೀನಿವಾಸರಾಯರೂ ಮುನಿಸಿಪಲ್ ಮೆಂಬರುಗಳೂ ಪ್ರಜಾ ... ತಕ್ಕಂತೆ ಇಂಗ್ಲೀಷ್ ಮತ್ತು ಕನ್ನಡ ವೈದ್ಯವನ್ನು ತಿಳಿದ ಒಬ್ಬ ವೈದ್ಯರನ್ನು ಇದರಲ್ಲಿ ಏರ್ಪಾಡು ಮಾಡಿಕೊಡಬೇಕೆಂದು ಆಗಾಗ್ಗೆ ನಡೆಯುವ ಮೀಟಿಂಗಿನಲ್ಲಿ ಚರ್ಚೆ ನಡಿಸುತ್ತಿರುವ ಅಂಶವು ಘನವೊಂದಿದ ಸರ್ಕಾರದವರ ಕೃಪೆಗೆ ಪಾತ್ರವಾಗದೆ ಇರುವುದು ಈ ... ದ ಪ್ರಜೆಗಳ ದೌರ್ಭಾಗ್ಯವೆಂದು ಬಗೆದಿರು. ಆದನು ಈ ಗ್ರಾಮದ ಸ್ಥಿತಿಯನ್ನು ನಮ್ಮ ತಾಲ್ಲೋಕು ವೈಸ್ ಪ್ರೆಸಿಡೆಂಟರವರನ್ನು ವಿಚಾರವಿಡಿದ್ದಿ ಆದರೆ ಸರ್ವರೂ ಪ್ರಸನ್ನವಾಗಬಹುದು. ಪ್ರಜಾ ಕ್ಷೇಮವನ್ನು ಕಾಪಾಡುವದಕ್ಕೆ ಮಾತೃಸ್ಥಾನವಾದ ಸರ್ಕಾರವು ಪ್ರಜೆಗಳ ಮೇಲೆ ಪೂರ್ಣ ಕೃಪೆಯನ್ನು ಇಟ್ಟು ಈ ಗ್ರಾಮಕ್ಕೆ ಲೋಕಲ್ ಫಂಡು ಆಸ್ಪತ್ರೆಯನ್ನೂ, ಒಬ್ಬ ಸೂಲಗಿತ್ತಿಯನ್ನೂ ನೇಮಕ ಮಾಡಿಕೊಟ್ಟು ಈ ಗ್ರಾಮದ ಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡಿ ಉಪಕಾರಿಗಳಾಗಿ ಬೇಡುತ್ತೇವೆ.

ಪ್ರಜಾ ಹಿತೈಷಿ

ಮಿಷನ್ ಸ್ಕೂಲುಗಳ ಉಪಾಧ್ಯಾಯರ ಸಂಬಳವ.

ಅಯ್ಯಾ,

ತಾವು ಒಂದುವೇಳೆ ಮಿಷನ್ ಸ್ಕೂಲುಗಳ ಬಡ ಮಾಸ್ಟರುಗಳ ಅಲ್ಪ ಸಂಬಳದ ವಿಷಯವಾಗಿ ಪ್ರಕಟಿಸಿರುತ್ತೀರಿ. ಅದನ್ನು ಇದುವರೆವಿಗೂ ಮಿಷನ್ ಅಧಿಕಾರಿಗಳು ಲಕ್ಷ್ಯಕ್ಕೆ ತರಲಿಲ್ಲ. ಹಿರಿಯರು ಧಾತು ಈಶ್ವರ ಸಂವತ್ಸರದಲ್ಲಿ ವಿರೆಕ್ಷಾಮವು ಪ್ರಾಪ್ತವಾಗಿ ಅನ್ನವಿಲ್ಲದೆ ಸಾಂಕ್ರಾಮಿಕ ರೋಗದಿಂದ ಅನೇಕ ಜನಗಳು ಸತ್ತರೆಂದು ಹೇಳುತ್ತಿದ್ದರು. ಈಗಲೂ ಅದೇ ಕ್ಷಾಮವೆಂದು ಹೇಳಬಹುದು. ಆದರೆ ರೋಗಗಳು ಮಾತ್ರ ವಿಶೇಷವಾಗಿ ಕಾಣುವುದಿಲ್ಲ. ಧಾನ್ಯ ವಾಸಿಗಳಾದರೋ ಹೇಳತೀರದು. ರೂಪಾಯಿಗೆ ೯ ೧೦ ಸೇರು ರಾಗಿ, ೬-೭ ಸೇರು ಅಕ್ಕಿ, ೫-೬ ಸೇರು ಬೇಳೆ, ಈ ರೀತಿಯಾಗಿ ಮಾರುತ್ತದೆ. ಉಪ್ಪು ಒಂದು ವಿನಹ ಬಾಕಿ ದಿನಸುಗಳು ತುಂಬಾ ಪ್ರಿಯವಾಗಿರುವವು. ಇದನ್ನು ನೋಡಿ ಈ ದುರ್ಭಿಕ್ಷ ಕಾಲದಲ್ಲಿ ದಯಾಳುಗಳಾದ ಗವರ್ನಮೆಂಟಿನವರು ಎಲ್ಲಾ ಸ್ಕೂಲ್ ಮಾಸ್ಟರುಗಳಿಗೂ ೭ ರೂಪಾಯಿ ತಲೆಯು ಇದ್ದದ್ದನ್ನು ೧೦ ರೂಪಾಯಿಗೆ ಬಡ್ತಿ ಮಾಡಿದ್ದಲ್ಲದೆ, ಕ್ಷಾಮದ ಅಲೋವೆನ್ಸನ್ನು ಕೆಲವು ತಿಂಗಳು ಕೊಡುತ್ತಾ ಬಂದು, ಈಚೆಗೆ ನಿಲ್ಲಿಸಿದ್ದನ್ನು ಪುನಃ ಕೊಡುವಂತೆ ಅಪ್ಪಣೆಯಾಗಿದೆಯಂತೆ. ಮಿಷನ್ ಸ್ಕೂಲ್ ಮಾಸ್ಟರುಗಳಿಗೆ ಇದುವರೆವಿಗೂ ಯಾವ ರಿಯಾಯತಿಯನ್ನೂ ತೋರಿಸದೆ ಮಿಷನ್ ಅಧಿಕಾರಿಗಳು ಬಡ ಮಾಸ್ಟರುಗಳನ್ನು ಸವತಿ ಮಕ್ಕಳಂತೆ ಕಂಡುಕೊಂಡು, ೫ ೬-೭-೮-೯ ರೂಪಾಯಿ ಸಂಬಳ ಕೊಡುತ್ತಾ ಬರುತ್ತಾರೆ. ಅವರು ಈ ಅಲ್ಪ ಸಂಬಳದಿಂದ ಹ್ಯಾಗೆ ಜೀವನ ಮಾಡುತ್ತಾರೆಂಬುವದು ದರ್ಶನದಿಂದಲೆ ತಾವೇ ಯೋಚಿಸಬೇಕು. ಈ ವರುಷವೋ ನಾಳೆ ವರುಷವೋ ಬಡ್ತಿ ಕೊಟ್ಟಾರೆಂದು ಬಹುದಿನಕ್ಕೆ ಗಿಣಿ ಕಾದಂತೆ ಕಾದು ಎದ್ದು ಮಿಷನ್ ಶಿಂಗರ ... ಅರ್ಜಿಗಳನ್ನು ಬರೆದುಕೊಂಡರೆ ಅವುಗಳು ಬೂದಿ ಮುಚ್ಚಿದ ಕೆಂಡದಂತೆ ಮಾಯವಾಗುತ್ತವೇ ಹೊರತು ಬದಲು ಉತ್ತರವೇ ಕೊಡುವದಿಲ್ಲವೆಂದು ಹೇಳುತ್ತಾರೆ. ನಾನು ಒಬ್ಬ ಮಾಸ್ಟರನ್ನು ಸಂಬಳದ ವಿಷಯವಾಗಿ ವಿಚಾರಿಸಲು ಆತನು ಗುಣುಗುಟ್ಟುತ್ತ ಏನುಮಾಡಲಿ? ನನಗೆ ಬರುವ ೫ ರೂಪಾಯಿನಲ್ಲಿ ಬಟ್ಟೆಬರೆ ಜೀವನ ಆಗಬೇಕು. ಕಷ್ಟ ಮಧ್ಯಾಹ್ನ ಹೇಗೋ ಅಕ್ಕಿ ಗಂಜಿ ಕುಡಿದು ರಾತ್ರಿಕಾಲದಲ್ಲಿ ಬಟ್ಟೆ ಬಿಗಿದುಕೊಂಡು ಮಲಗಿಕೊಳ್ಳುತ್ತೇನೆ ಎಂದು ಹೇಳಿದನು. ಹೀಗೆ ಅಂಬಲಿ ಕುಡಿದು ಮಕ್ಕಳಿಗೆ ವಿದ್ಯೆ ಹೇಳುವನು ಹೇಗೆ? ಮನಸ್ಸಿಗೆ ಉಲ್ಲಾಸ ಹುಟ್ಟುತ್ತಿದ್ದರಲ್ಲವೇ ಒಬ್ಬರ ಎದೆಯಲ್ಲಿರುವ ವಿದ್ಯೆ ಇನ್ನೊಬ್ಬರಿಗೆ ಬರುವದು? ಸುಮ್ಮನೆ ಬರುತ್ತದೆಯೇ? ಎಷ್ಟು ಕ್ರಮ ಎಂಬುವದನ್ನು ಯೋಚಿಸಿ ಬಡ ಮಾಸ್ಟರ ಕಷ್ಟವನ್ನು ಪರಿಹರ ಮಾಡುತ್ತಾರೆಂದು ಈ ಮೂಲಕ ಶೃತಪಡಿಸಿಕೊಂಡಿದ್ದೇನೆ. ಅಲ್ಲದೆ ನಾಳೆ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸೇರತಕ್ಕ ಧರ್ಮವಂತರಾದ ಮೆಂಬರುಗಳಲ್ಲಿ ಪುಣ್ಯಾತ್ಮರು ಯಾರಾದರೂ ಮಿಷನ್ ಇಲಾಖೆಯ ಬಡ ಮಾಸ್ಟರುಗಳ ವಿಷಯವನ್ನು ದಿವಾನ್ ಬಹದೂರ್ ಸಾಹೇಬರವರ ಸನ್ನಿಧಿಯಲ್ಲಿ ವಿಜ್ಞಾಪಿಸಿ, ಈ ಕೊರತೆಯನ್ನು ಪರಿಹರಿಸುತ್ತಾರೆಂದು ಕೇಳಿಕೊಳ್ಳುತ್ತೇನೆ. ಮಾಸ್ಟರುಗಳು ಎಂದರೆ ಎಲ್ಲರೂ ಒಂದೇ ಅಲ್ಲದೆ ಬೇರೆಯೋ? ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಾಕುವದು ಧರ್ಮವೋ? ಹೀಗಾದರೆ ವಿದ್ಯಾಭಿವೃದ್ಧಿ ಉಂಟಾದೀತೇ? ಮಿಷನ್ ಅಧಿಕಾರಿಗಳು ಕಿವಿಯಲ್ಲಿ ಏನು ತೀರ್ಪು ಮಾಡಿಕೊಂಡಿದ್ದಾರೆಯೋ ನಿಮ್ಮ ಪತ್ರಿಕೆಯ ಮೂಲಕ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬಡ ಮಾಸ್ಟರುಗಳ ಹಿತಚಿಂತಕ

(ಗವರ್ನಮೆಂಟಿನವರು ಮಿಷನ್ ಸ್ಕೂಲುಗಳನ್ನು ನಡಿಸತಕ್ಕವರಿಗೆ ಸ್ಕೂಲ್ ಫೀ ಮಾಫ್ ಮಾಡಿದರಿಂದುಂಟಾಗುತ್ತಿರುವ ನಷ್ಟವನ್ನು ಪರಿಹರಿಸಿಕೊಟ್ಟು, ಸ್ಕೂಲುಗಳ ಗ್ರಾಂಟನ್ನು ಬಡ್ತಿಮಾಡುವುದಾದರೆ ಮಿಷನ್ ಸಂಘದವರು ಮಾಸ್ಟರುಗಳ ಸಂಬಳವನ್ನು ಬಹು ಸಂತೋಷದಿಂದ ಹೆಚ್ಚುಮಾಡಿಯಾರೆಂದು ನಂಬುತ್ತೇವೆ.—ಎಡಿಟರ್)

ವಿದೇಶ ವರ್ತಮಾನಗಳು

ರಷ್ಯಾ ದೇಶದ ಉತ್ತರ ಭಾಗದಲ್ಲಿ ಮ್ಯಾಂಚೂರಿಯಾ ಸೀಮೆಗೆ ಸೇರಿದ ಚೇರ್‌ಚಿನ್ ಎಂಬ ವಿಭಾಗದಲ್ಲಿ ಪ್ರವಾಹದ ಸಲುವಾಗಿ ಅನಾಹುತವಾಯಿತು. ನೂರಾರು ಮಂದಿ ಸತ್ತು ಹೋದರು.

* * *

ಟರ್ಕಿ ಗವರ್ನಮೆಂಟಿನವರು ಕ್ರೀಟ್ ಎಂಬ ದ್ವೀಪದ ಮೇಲೆ ತಮಗಿರುವ ಅಧಿಕಾರವನ್ನು ಬಿಟ್ಟು ಕೊಡುವವರಲ್ಲ. ಇದರ ವಿಷಯದಲ್ಲಿ ಅವರಿಗೂ ಗ್ರೀಕ್ ರಾಜ್ಯದವರಿಗೂ ಕದನಗಳು ಸಂಭವಿಸುವವೋ ಏನೋ ಎಂದು ಅನುಮಾನ ಉಂಟಾಗಿದೆ. ಗ್ರೀಕ್ ರಾಜ್ಯದವರು ತಮ್ಮ ಸೈನ್ಯಗಳನ್ನು ಆ ದ್ವೀಪಕ್ಕೆ ಕಳುಹಿಸಿದ್ದನ್ನು ನೋಡಿ ಅವನ್ನು ವಾಪಸು ಕರೆಸಿಕೊಳ್ಳಬೇಕೆಂದು ತುರ್ಕಿಯವರು ತಿಳಿಸಿದರು. ಅದಕ್ಕೆ ಗ್ರೀಕ್ ಸರ್ಕಾರದವರು ತಾವಾಗಿ ತಮ್ಮ ಸೈನ್ಯವನ್ನು ಅಲ್ಲಿಗೆ ಕಳುಹಿಸಲಿಲ್ಲವೆಂದೂ ಪರರಾಜ್ಯಗಳವರ ಸಮ್ಮತಿಯ ಪ್ರಕಾರ ಕಳುಹಿಸಿದೇವೆಂದೂ ಜವಾಬು ಕೊಟ್ಟಿದ್ದಾರೆಂದೂ ಅವರು ತಮ್ಮ ಸೈನ್ಯವನ್ನು ಕ್ರೀಟ್ ದ್ವೀಪದಿಂದ ವಾಪಸು ಕರೆಸಿಕೊಳ್ಳದೆಹೋದರೆ ತುರ್ಕಿಯವರು ಇನ್ನೂ ಬಲವಂತವಾದುವವರಾಗಿದ್ದಾರೆಂದೂ ಅಲ್ಲಿಗೆ ತಮ್ಮ ಹಡಗಿನ ಸೈನ್ಯಗಳನ್ನು ಕಳುಹಿಸಿಕೊಡುವವರಾಗಿದ್ದಾರೆಂದೂ ತಂತಿ ವರ್ತಮಾನ ಬಂದಿದೆ.

* * *

ರಷ್ಯಾ ರಾಜ್ಯದ ಜಾರ್ ಚಕ್ರವರ್ತಿಯವರು ಪರಿವಾರ ಸಹಿತ ಕಳೆದ ವಾರ ವಿಲಾಯತಿಗೆ ದಯಮಾಡಿದ್ದರು. ವಿಲಾಯಿತಿಯ ಚಕ್ರವರ್ತಿಯವರು ಜಹಜಿನಲ್ಲಿ ದಯಮಾಡಿ ಕೌಸ್ ಎಂಬ ರೇವಿನಲ್ಲಿ ರಷ್ಯಾ ಚಕ್ರವರ್ತಿಯವರನ್ನು ಎದುರುಗೊಂಡರು. ಭೋಜನ ನಂತರ ಪರಸ್ಪರ ಸ್ನೇಹ ಪ್ರೀತಿಗಳನ್ನು ಸೂಚಿಸುವ ... ರಷ್ಯಾ ಚಕ್ರವರ್ತಿಯವರು ಇಂಗ್ಲಿಷ್ ಹಡಗಿನ ಸೈನ್ಯವನ್ನು ನೋಡಿ ಬಹಳ ಸಂತೋಷಪಟ್ಟುಕೊಂಡರು. ರಷ್ಯಾ ಚಕ್ರವರ್ತಿಯವರಿಗೆ ಇಂಗ್ಲೆಂಡಿನಲ್ಲಿ ಇರುವ ಕಾಲದಲ್ಲಿ ಕಿಡಿಗೇಡಿಗಳ್ಯಾರೂ ಯಾವ ವಿಧವಾದ ಕೇಡುಕನ್ನೂ ಮಾಡದಂತೆ ಇಂಗ್ಲಿಷ್ ಗವರ್ನಮೆಂಟಿನವರು ಬಹಳವಾಗಿ ಎಚ್ಚರಿಕೆಯನ್ನು ವಹಿಸಿದ್ದರು. ಉಭಯ ದೊರೆಗಳೂ ಕಳೆದ ಬುಧವಾರ ಬ್ರಿಟಾನಿಯಾ ಎಂಬ ಜಹಜಿನಲ್ಲಿ ಕುಳಿತು ಪ್ರಯಾಣ ಮಾಡಿ ವಿಜಯ ಪ್ರದೇಶವಾದ ಒಂದು ರೇವಿನಲ್ಲಿ ಹೋಗಿ ಇಳಿದು ಮರುದಿನ ಅಲ್ಲಿಂದ ಮೋಟಾರ್ ಗಾಡಿಯಲ್ಲಿ ಹೊರಟು ಲಂಡನ್ ಪಟ್ಟಣದಲ್ಲಿರುವ ಆಸ್ಬೋರ್ನ್ ಎಂಬ ರಾಜ ಭವನಕ್ಕೆ ತೆರಳಿದರು. ರಷ್ಯಾ ಚಕ್ರವರ್ತಿಯವರಿಗೆ ಇಂಗ್ಲಾಂಡಿನಲ್ಲಿ ಬಹು ಅಪೂರ್ವವಾದ ಅನೇಕ ಸಂತೋಷೋತ್ಸವಗಳು ನಡೆದಿರುತ್ತವೆ.

* * *

ಫ್ರಾನ್ಸ್ ಸರ್ಕಾರದವರು ಅಲ್ಲಿನ ಪ್ರಜಾ ಸಂಖ್ಯೆಯನ್ನು ಹೆಚ್ಚಿಸುವದಕ್ಕಾಗಿ ಜನರಿಗೆ ಬಹುಮಾನಗಳನ್ನು ಕೊಡುವ ವಿಷಯದಲ್ಲಿ ಒಂದು ಕಾನೂನನ್ನು ಮಾಡಿ ಜಾರಿಗೆ ತರಬೇಕೆಂದು ಆಲೋಚಿಸುತ್ತಿದ್ದಾರೆ. ಹಿರೀ ಮಗುವನ್ನು ಬಿಟ್ಟು ಎರಡನೇ ಮಗು ಹುಟ್ಟಿದಲ್ಲಿ ಸರ್ಕಾರದಿಂದ ಆ ಮನೆಯವರಿಗೆ ೩೦೦ ರೂಪಾಯಿಯೂ ನಂತರದೇ ನಾಲ್ಕನೇ ಮಕ್ಕಳು ಹುಟ್ಟಿದರೆ ಕಲಾ ೬೦೦ ರೂಪಾಯಿಯೂ ಬಹುಮಾನ ಕೊಡುವಂತೆ ಸೂಚನೆ ಕೊಡಲ್ಪಟ್ಟಿದೆ. ಹೀಗೆ ಬಹುಮಾನಗಳನ್ನು ಕೊಡಲು ವರುಷಕ್ಕೆ ೧೬ ಕೋಟಿ ರೂಪಾಯಿ ಖರ್ಚಾಗುವುದೆಂದು ಅಂದಾಜು ಆಗಿರುವುದು. ಮೃತಪಟ್ಟವರ ಆಸ್ತಿಯ ಮೇಲೆ ಈಗ ಸರ್ಕಾರಕ್ಕೆ ವಸೂಲಾಗುತ್ತಿರುವ ಕಂದಾಯವನ್ನು ಇನ್ನೂ ಶೇಕಡಾ ೫೦ ರಂತೆ ಹೆಚ್ಚು ಮಾಡಬೇಕೆಂದೂ ಒಬ್ಬನೇ ಮಗನಿದ್ದು ತಂದೆಯ ಆಸ್ತಿಯನ್ನು ಪಡೆಯುವುದಾದರೆ ಅಂಥಾ ಆಸ್ತಿಯ ಮೇಲೂ ಹೆಚ್ಚಾದ ಕಂದಾಯವನ್ನು ಹಾಕಿ ವಸೂಲಾ ಮಾಡಬೇಕೆಂದೂ ಯೋಚಿಸುತ್ತಾರೆ. ಇದಲ್ಲದೆ ಇನ್ನು ಮುಂದೆ ಮೂರು ಮಕ್ಕಳನ್ನಾದರೂ ಪಡೆಯದೆ ಇರುವಂಥಾ ಜನರನ್ನು ಸರ್ಕಾರಿ ಅಥವಾ ಮ್ಯುನಿಸಿಪಲ್ ಕೋರ್ಟು ಕಚೇರಿಗಳಲ್ಲಿ ನೌಕರಿಗಳಿಗೆ ಸೇರಿಸಿಕೊಳ್ಳಕೂಡದೆಂದು ನಿಷ್ಕರ್ಷ ಮಾಡಬೇಕೆಂದಿರುವರು.

Printed and Pu..li..d by the Rev H GULLIFORD, Propr..e..or and M..ager, Wesleyan Mission Press, My..re 19/8/1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು ೧೯೧೫ ನೇ ಇಸವಿ ಆಗಸ್ಟ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೧೩

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 30 27

ತಲೆನೋವು, ಗಂಟು ಊದುವದು, ವಾತ, ಸಂಧಿವಾತ, ಉಳುಕು ಅಬಲು ಗಂಟು, ಗಂಟು ನೋವು ಅಥವಾ ಗಾಯ, ಎದೆಶೀತ, ಛಾಯ ಜಡಿಯು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೈಯ ಮೇಲೆ ತಾಗಿಸುವದರೊಳಗೆ ಗಜಕರ್ಣ ತುರಿ ಕಜ್ಜಿ ಮುಂತಾದವು ಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬಿ ಒಂದರ ಕಿಮ್ಮತ್ತು ೦ ೬ ೦ ೩ ಡಬ್ಬಿಗಳಿಗೆ ೧ ೦ ೦

ಆರ್ ಎರಗ	೧ ೦ ೦
ಶೀಲುಗಡತದ ಮದು	೦ ೩ ೦
ವಜ ಗುಟಿಕ ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುವರ್ಣ ತೈಲ ಮುಡಿ ರೋಗಗಳಿಗೆ	೦ ೬ ೦
ಬಾಲ ಬಂಧ ತೈಲ ಬಾಲುವಿಗೆ	೦ ೮ ೦
ನೇತ್ರಾಂಜನ ಮಂದದೃಷ್ಟಿಗೆ	೪-೦
ಬಿಜ ಮುದ್ರಣ ಮಕ್ಕಳ ಬಿಜಗೆ	೦ ೩-೦
ಕೇಶವರ್ಧನ ತೈಲ ತಲೆಯ ಮೆದುಳಿಗೆ	೧ ೦ ೦
ಕದನ ರಕ ಕರ್ಣ ರೋಗಕ್ಕೆ	೮

ಎಲ್ಲಾ ವಿಧ ಕಂಟಲುಗಳಿಗೆ ಬರೆಯಿರಿ ಫೋರ್ಟ್

ವಿಲಿಯಂ ಮತ್ತು ಕಂಪೆನಿ ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು ಅಮೃತಾಂಜನ ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆ ಹರಡಿತೋ ಅದು ನಿಂತಿತವಾಗಿಯೂ ಹಾಸನವಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಮಾಡುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು ಆದರೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ ೧೦ ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಹೆಣಿಗೆ ವಿಲಾಯತಿಯಿಂದಲೇ ಬರುವದು ಈ ಟೋಪಿಗಳನ್ನು ಮಿಷನ್ನಾಗಿ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಒಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆಯದು, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಪಿ ಬಣ್ಣಗಳ ಟೋಪಿಗಳು ೧ ರೂ ೮ ೦, ೧ ರೂ ೬ ೦ ೧ ರೂ ೪ ೦

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ಜರಿಯ ಟೋಪಿಗಳು ೧ ರೂ ೧೨ ೦ , ೧ ರೂ ೮ ೦ , ೧ ರೂ ೬ ೦

ಉಸುಕಿನ ಟೋಪಿಗಳು ೧ ರೂ ೮ ೦ , ೧ ರೂ ೬ ೦ ,

ಕೂಸುಗಳ ಟೋಪಿ, ಪೂರ್ಣ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಶಾಸ್ತ್ರಿ ವೆಂಕಟಾಚಲ ಪಂಡಿತರ

ಜ್ವರದ ಗುಳಿಗೆ

26 25

ಈ ಗುಳಿಗೆಗಳು ದಿನಜ್ವರ, ಹೊಸ ಜ್ವರ, ಚಳಿಜ್ವರ, ಪ್ಲೇಗು ಜ್ವರ, ವರಸೆ ಜ್ವರ ಮೂರರ ಮತ್ತು ನಾಲ್ಕರ ಮಲೇರಿಯಾ ಜ್ವರ ಅಸ್ಥಿಗತ ಜ್ವರ, ಶೀತ ಜ್ವರ ಪಿತ್ತ ಜ್ವರ ಸನ್ನಿಪಾತ ಜ್ವರ, ಇವೆಲ್ಲವನ್ನೂ ನಿಂತಿತವಾಗಿ ತಪ್ಪದೆ ಗುಣಪಡಿಸುತ್ತವೆ



ಇವರ ಶ್ರೇಷ್ಠತೆಯನ್ನಾಗಲೀ ಅತ್ಯುತ್ತಮ ಗುಣದ ಮತ್ತಾರೆ ನಮ್ಮವಾಗಲೀ ಜನಾಗಿಯೂ ಸರಿಯಲ್ಲವಾಗಿ ಹೇಳ ಬೇಕಾದ್ದಿಲ್ಲವಂತೆ ಸಮಸ್ತಕ್ಕೂ ಗೊತ್ತಿದೆ ಒಂದು ಸಾರಿ ಈ ಗುಳಿಗೆಗಳನ್ನು ಪ್ರಯೋಗ ಮಾಡಿದರೆ ಅವರಿಗೇ ಗೊತ್ತಾಗುವದು

೧೦ ಗುಳಿಗೆಯುಳ್ಳ ಕುಪ್ಪಿ ೮ ಆ

೩೦ ,, , ೧ ರೂ.

೧ ಡಜನ್ ದೊಡ್ಡ ಕುಪ್ಪಿ ಒಂದೇ ಸಲ ತರಿಸಿದರ ೮ ರೂ

೧ ಡಜನ್ ಸಣ್ಣ ಕುಪ್ಪಿ ೬ ರೂ.

ಪ್ರೊಪ್ರೈಟರ

ಏಜಂಟ —ಎಸ್ ಎಸ್ . ವೈದ್ಯಶಾಲಾ, ಮೈಸೂರು.

ಜ್ವರಹರಿ 15 10

ಇದು ಸಾಧಾರಣ ಜ್ವರ, ಹೊಸ ಜ್ವರ ಮಲೇರಿಯಾ ಜ್ವರ ಪಿತ್ತ ಜ್ವರ ಶೀತ ಜ್ವರ, ವಾತಜ್ವರ ಚಳಿಜ್ವರ ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಕಛೇರಿಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಶ್ರೀನಿವಾಸರಾವ್ ಅಯ್ಯರವರು— ನಾವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೬ ಸೀಸೆಗಳ ಔಷಧಿಯು ತೀರಿತು ಮತ್ತು ಇನ್ನು ಸ್ವಲ್ಪ ಕಳುಹಿಸಿ ಔಷಧಿ ಅನೇಕ ಮಂದಿ ಜ್ವರ ಪೀಡಿತರು ಬೇಗನೆ ಗುಣಹೊಂದಿರುವರು ಇನ್ನೂ ಜನಗಳು ಕೇಳುತ್ತಿರುವರು ಬೇಗನೆ ಕಳುಹಿಸಿ ಎಂದು ಬರೆದಿದ್ದಾರೆ

ಕ್ರಯ ಸೀಸೆ ಒಂದಕ್ಕೆ ಆಣೆ ೧೦ ರೂ ೧೦ ರೂ ರ ೧೦ ರೂ ಸಂ ಸೀಸೆ ತರಿಸಿಕೊಂಡರೆ ಪೋಸ್ಟೇಜು ಖರ್ಚು ವಜಾ ಮಾಡಲಾಗುವದು

ಓಮಂ ಕರ್ಪೂರ

Omum-Carpoor

ಈ ಔಷಧವು ಅಜೀರ್ಣ ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ವಾಂತಿ ಮತ್ತು ಹೊಟ್ಟೆ ನೋವುಗಳು— ಮುಂತಾದವುಗಳಿಗೆ ಮಹಾ ಶೀಘ್ರವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ಹೆರಿಗೆಯ ಕಾಲದಲ್ಲಿ ಉಪಯೋಗಿಸಿದರೆ ಹೊಟ್ಟೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು " ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸರುಳ್ಳ ಓಮಂ ಕರ್ಪೂರವನ್ನು ನಾನೂ ನನ್ನ ಡಾಕ್ಟರರು ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

'ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ ೧—೦—೦

ವರುಷ ಲವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

, , , ,, ೨ ೧೧—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೈಮಂಟಿರ ಮ್ಯಾಜಿಕ್ ಬಾಂ ತೈಲವು

47 11

ತಲೆನೋವು ವಾಯುನೋವು ಸೆಳತ ಗಂಟಿನೋವು ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಮಂತ್ರಿಸಿದಂತೆ ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಡಾಕ್ಟರರು ಪರಿಕ್ಷೆಮಾಡಿ, ನಿಶ್ಚಿತವಾಗಿಯೂ ಬೇಗನೆ ಗುಣಕೊಡುತ್ತದೆ ಎಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದ ಅದನ್ನು ಅನ್ನು ಹೊಗಳಿ ಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರಿಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುತ್ತಾರೆ ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡಸಹಿತ ನಾಶಮಾಡುತ್ತದೆ

ಕ್ರಯ ಸೀಸೆ ಒಂದಕ್ಕೆ ೧೨ ಆಣೆ ವಿ. ಪಿ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪಾರ್ಸಲ್ ಖರ್ಚು ಮಾಫಿಯಾಗುವುದು ಈ ಔಷಧವು ಸ್ವಲ್ಪ ಡಾಕ್ಟರುಗಳಿಗೆ ೧೦ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ರಿಯಾಯಿತಿ ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ಬಿಕರಿಯ ದುಕಾನುದಾರರು ಮುಂತಾದ ಏಜಂಟರು ವಿಳಾಸ—

ಎಸ್ ಪೀಟರ್ಸ್

೩೩, ಪೇದಮುಲ್ಲಿಪಳ್ಳಿ ಬೀದಿ, ಪೇಟೆ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಜರೂರಾಗಿ ಓದಿರಿ.

10 11

" ಬ್ರಹ್ಮಚರ್ಯ " ನೆಂಬ ಮನೋಹರವಾದ ಇದು ಹೊಸತಾಗಿ ಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಓದಬೇಕು ಈ ಪುಸ್ತಕದಲ್ಲಿ ಬಿವರ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ ಐದಾಣೆ

" ಸ್ವಪ್ನಯೋಗವಿಲಾಸದೀಪಿಕೆ " ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ಭಾಷಾಂತರವನ್ನು ಮಾಡಿರುತ್ತಾರೆ ಪರ್ಷಿಯನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿರುವರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ನಯೋಗವಿಲಾಸದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇವನ್ನು ಬಾಲಕರು ಓದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

" ವ್ಯಾಸಸ್ತೋಂಡಿಗಾಮನಯಾನದ ಚರಿತ್ರೆ " ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

" ಅಗಸ್ತ್ಯ ವಿನ್ನಪಂ " ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ದೇವಸಾಕ್ಷಾತ್ಕಾರ, ಪಾಪವಿಮೋಚನೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮರ ಜೀವನಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೨—೧೦—೦

ಓಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

೪ನೇ ತಾ ಮಳೆ ಶುರುವಾಗಿ ೮ನೇ ತಾ ವರೆಗೂ ದಿನವೂ ಸರಾಸರಿ ೧ ಇಂಚಿನ ಪ್ರಕಾರ ಮಳೆ ಬೀಳುತ್ತಾ ಇರುವದರಿಂದ ಎಲ್ಲಾ ಜನರಲ್ಲಿಯೂ ತುಂಬಾ ಸಂತೋಷದ ವರ್ತಮಾನಗಳು ತೋರುತ್ತಾ, ಕ್ಷಾಮಕಾಲದ ಭೀತಿ ಕೆಲ್ಸಮಟ್ಟಿಗೆ ನಿವಾರಣೆಹೊಂದುತ್ತಾ ಇವೆ ಮತ್ತು ಧಾರಣೆವಾಸಿಗಳು ಇಲ್ಲಿನ ವರ್ತಕರಿಂದ ತುಂಬಾ ತುಟ್ಟಿಯಾಗಿ ಮಾರಲ್ಪಡುವ ಈ ಕಾಲಕ್ಕೆ ಸರಿಯಾಗಿ ಧಾರಣೆಗಳಲ್ಲಿ ಹೆಚ್ಚು ಲಾಭವನ್ನು ಅಪೇಕ್ಷಿಸದೆ ಸಾಧಾರಣವಾಗಿ ಮಾರುತ್ತಾ ಇರುವದರಿಂದ ಅನೇಕರು ತುಂಬಾ ಸಂತೋಷ ಪಡುತ್ತಾರೆ ಇಲ್ಲಿನ ವರ್ತಕರಲ್ಲಿ ಮ॥ ವೆಂಕಟರಮಣಪ್ಪನವರು ಎರಡು ವಾಗಿನ್ ಅಕ್ಕಿ ಮತ್ತು ರಾಗಿಯನ್ನು ತರಿಸಿ ಚಿಲ್ಲರೆ ವರ್ತಕರಿಗೆ ಸಾಧಾರಣ ಲಾಭಕ್ಕೆ ಕೊಡುತ್ತಾ ಇರುವದರಿಂದ ಅನೇಕರು ಸಂತೋಷ ಪಡುತ್ತಾರೆ — ಈ ತಿಂಗಳು ೧ನೇ ತಾ. ಕ್ಯಾಂಪಿಗೆ ಕೋಳಿಗಳನ್ನು ಮಾರಿಕೊಂಡುಬರಲು ಹೋಗಿದ್ದ ಮುಳಬಾಗಲ ಮಸ್ತಾನ್ ಸಾಹೇಬನನ್ನೂ ಅವನ ಇಬ್ಬರು ಮಕ್ಕಳನ್ನೂ ಈ ಊರಿಗೆ ಸಮೀಪದಲ್ಲಿರುವ ಸಂತೆಕುಂಟೆ ಹಳ್ಳದ ಬಳಿಯಲ್ಲಿ ಚೆನ್ನಾಗಿ ಹೊಡೆದು ಅವರ ಬಳಿಯಲ್ಲಿದ್ದ ರೂಪಾಯಿಗಳನ್ನೂ ಸಾಮಾನುಗಳನ್ನೂ ಕಿತ್ತುಕೊಂಡು ಪರಾರಿಯಾಗಿರುತ್ತಾರೆ ಇವರು ಇಲ್ಲಿರುವ ಡಾಕ್ಟರ್ ಸಾಹೇಬರಿಂದ ಚಿಕಿತ್ಸೆಯನ್ನು ಹೊಂದುತ್ತಾ ಇದ್ದು ಪೋಲೀಸ್ ಸೂಪರಿಂಟೆಂಡೆಂಟರ ಅಪ್ಪಣೆಯಂತೆ ಮುಳಬಾಗಲಿಗೆ ಹೊರಟು ಹೋದರು. ಆದರೆ ಕಳ್ಳರಲ್ಲಿ ಇಂದಿನ ವರೆಗೂ ಒಬ್ಬರೂ ಪತ್ತೆ ಇಲ್ಲ ಮತ್ತು ಕೆಲವು ದಿನಗಳ ಹಿಂದೆ ಈ ಊರಿನಲ್ಲಿ ಕಳುವಾಗಿದ್ದ ವಡಗೂರು ಮುನಿಯಪ್ಪನ ಮಗನ ಮತ್ತು ಮುಳಬಾಗಲ ಜವಾಲ ಸಾಹೇಬರ ಮಗನ ಒಡವೆಗಳ ಸಮೇತ ಪೋಲೀಸ್ ಸೂಪರಿಂಟೆಂಡೆಂಟರವರು ಕಳ್ಳರನ್ನು ಭಂಗಾರದ ಗಣಿಯಲ್ಲಿ ಖುದ್ದು ತಾವೇ ಹಿಡಿದರೆಂದು ತಿಳಿದು ತುಂಬಾ ಸಂತೋಷಿಸುತ್ತೇವೆ — ಮತ್ತು ಈ ಊರಿನ ಪೋಲೀಸ್ ಸ್ಟೇಷನ್ನಲ್ಲಿ ಒಂದು ಟೆಲಿಫೋನ್ ಇಡಲ್ಪಟ್ಟರೆ ತುಂಬಾ ಅನುಕೂಲವಾಗಿರುವುದೆಂದು ಅನೇಕರು ಅಭಿಪ್ರಾಯ ಪಡುತ್ತಾರೆ ಯಾಕೆಂದರೆ ಗಣಿಯು ಇಲ್ಲಿಗೆ ಸಮೀಪ ಇರುವದರಿಂದಲೂ, ಕೆಲವು ತಿಂಗಳುಗಳಿಂದ ಈ ಪ್ರಾಂತ್ಯ ಕಳ್ಳತನಗಳು ವಿಶೇಷವಾಗಿರುವುದರಿಂದಲೂ ಇದರ ಮೂಲಕ ಪತ್ತೆ ತರಲೊಡನೆ ತುಂಬಾ ಸಹಾಯವಾಗುವದು — ಮತ್ತು ಇಲ್ಲಿನ ಡಾಕ್ಟರು ಮೆ॥ ಸದಾಶಿವ ಅಯ್ಯರವರು ಮಕ್ಕಳಿಗೆ ಬಹು ಮುತುವರ್ಜಿಯಿಂದ ಸಿಡುಬು ಹಾಕುತ್ತಾ ಇರುವದರಿಂದ ಈ ಬಾಧೆಯು ವಿಶೇಷ ಪ್ರಾಬಲ್ಯಕ್ಕೆ ಬರಲಿಲ್ಲ — ಈ ಊರಿನ ಸಂತೆಯಲ್ಲಿ ವಡೆ, ಚಕ್ಕುಲಿ ಸಕ್ಕರೆ ತಿಂಡೀ ಸಾಮಾನುಗಳನ್ನು ಕ್ಯಾಂಪಿನಿಂದ ತಂದು ರಾಗಿ ಬೀಸುವ ಇಟ್ಟಿಗೆ ಕಸಿಗಳಲ್ಲಿಯೂ ಮತ್ತು ಬಾಗಲಿಗೆ ಮುಚ್ಚುವ ಬಿದಿರು ದಬ್ಬೆಗಳ ತಡಿಕೆಗಳ ಮೇಲೆಯೂ ಮಾರುತ್ತಾರೆ ಇದು ಆರೋಗ್ಯಕ್ಕೆ ವಿರೋಧವಾಗಿದೆ ಯಾಕೆಂದರೆ ಇವುಗಳಲ್ಲಿ ಸಗಣಿಯು ಮತ್ತು ಗಂಜಲವು ಮೆತ್ತಿಕೊಂಡಿರುವುದರಿಂದ ಇಂಥವುಗಳಲ್ಲಿ ತಿಂಡಿಯ ಸಾಮಾನುಗಳನ್ನು ಇಡದ ಹಾಗೆ ಸ್ಥಳಾಧಿಕಾರಿಗಳು ನಿಗಾ ಕೊಟ್ಟರೆ ಅನಾರೋಗ್ಯಕ್ಕೆ ಅವಕಾಶವಾಗಲಾರದು — ಈ ಊರಿನಲ್ಲಿ ಒಬ್ಬ ಹೆಂಗಸಿಗೆ ಮೂಗನ್ನೆಲ್ಲಾ ಹುಳ ತಿಂದು ಬಹು ವಿಕಾರಸ್ವರೂಪಿಯಾಗಿ ತೀವ್ರ ರಕ್ತದಿಂದ ತುಂಬಿದವಳಾಗಿ ಸ್ವಜನರಿಂದ ಪೋಷಿಸಲ್ಪಡದೆ ಮನೆಗಳ ಒಳಬಾಯಲ್ಲಿ ಬಂದು ಅನ್ನವನ್ನು ಬೇಡುತ್ತಾ ತುಂಬಾ ಕಷ್ಟ ಪಡುತ್ತಿದ್ದಾಳೆ ನಮ್ಮ ಅಮಲ್ದಾರರು ದಯವಿಟ್ಟು ಈ ಸಹೋದರಿಗೆ ಸರ್ಕಾರದಿಂದ ಜೀವನೋಪಾಯವನ್ನು ನಡಿಸಿಕೊಟ್ಟರೆ ತುಂಬಾ ಕೃತಜ್ಞತೆಯಿಂದ ಅನೇಕರು ಕೊಂಡಾಡುವರು

ಚನ್ನರಾಯಪಟ್ಟಣ — ಈಚೆಗೆ ಈ ಊರಿನಲ್ಲಿ ಸುತರಾಂ ಮಳೆ ಇಲ್ಲದೆ ಹೊಲಗಳಲ್ಲಿ ಬಿತ್ತಿದ್ದ ರಾಗಿ ಪೈರೆಲ್ಲಾ ಬಾಡುತ್ತಾ ಇರುವುದನ್ನು ಕಂಡು ರೈತರೆಲ್ಲಾ ಬಹಳ ವ್ಯಾಕುಲ ಪಡುತ್ತಿದ್ದಾರೆ — ಸಂತೆಯಲ್ಲಿ ವರ್ತಕರು ಕೊಳ್ಳುವ ಸೇರುಗಳಲ್ಲಿ ದಿನಸಿ ಅಳತೆ ಮಾಡುವುದು ಇನ್ನೂ ತಪ್ಪಲಿಲ್ಲ ಸರ್ಕಾರದವರು ಇಂಥವರ ವಿಷಯದಲ್ಲಿ ನಿಗಾ ಇಟ್ಟು ಬಡ ಜನರ ತೊಂದರೆಯನ್ನು ತಪ್ಪಿಸುತ್ತಾರೆಂದು ನಂಬಿದೇವೆ — ಇಲ್ಲಿನ ಸಬ್ ರಿಜಿಸ್ಟ್ರಾರಾಗಿ ಕಳೆದ ೩ ವರ್ಷಗಳ ಲಾಗಾಯಿತು ಇದ್ದು ಹಾಲಿ ದೊಡ್ಡಬಳ್ಳಾಪುರಕ್ಕೆ ವರ್ಗಾಯಿಸಲ್ಪಟ್ಟು ಹೋದ ಮೆ॥ ಬಿ ಟಿ ರಾಮಸ್ವಾಮ್ಯಯ್ಯಂಗಾರ್ಯ ಅವರು ಇಲ್ಲಿಗೆ ಬಂದ ಲಾಗಾಯಿತು ಸರ್ಕಾರದ ಕೆಲಸದಲ್ಲಿ ಬಹಳ ಚಟುವಟಿಕೆಯುಳ್ಳವರಾಗಿದ್ದರು. ಕಸಬೆ ಮತ್ತು ಇತರ ಹೋಬಳಿಗಳಿಂದ ಬರುವ ಪತ್ರಗಳ ರಿಜಿಸ್ಟರು ಕೆಲಸಗಳಿಗೆ ಸ್ವಲ್ಪವೂ ಸಾವಕಾಶ ಮಾಡುತ್ತಿರಲಿಲ್ಲ ಜನಗಳೆಲ್ಲರೂ ಬಹಳ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಅದೇ ದಿವಸವೇ ಹೊರಟು ಹೋಗುತ್ತಿದ್ದರು ಇವರ ಸಜ್ಜನಿಕೆಯನ್ನು ಕಂಡು ಈ ಊರಿನ ದೊಡ್ಡ ಮನುಷ್ಯರೂ ಶೆಟ್ಟಿ ವರ್ತಕರೂ ಸೇರಿ ಇವರನ್ನು ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಫಲ ತಾಂಬೂಲಾದಿಗಳನ್ನು ಕೊಟ್ಟದ್ದು ಅಲ್ಲದೆ ನಮ್ಮ ಅಮಲ್ದಾರ್ ಮೆ॥ ಶ್ರೀನಿವಾಸರಾಯರೇ ಮುಂತಾದ ದೊಡ್ಡ ಮನುಷ್ಯರೆಲ್ಲರು ಸೇರಿ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿದ್ದರು. ಫಲಹಾರಾದಿಗಳಾದ ಅನಂತರ ಮೆ॥ ಬಿ ಟಿ ರಾಮಸ್ವಾಮ್ಯಯ್ಯಂಗಾರ್ಯ ಅವರು ಸಭೆಯವರನ್ನು ಕೃತಜ್ಞತೆಯೊಡನೆ ವಂದಿಸಿದರು ಹೊಸ ಸಬ್ ರಿಜಿಸ್ಟ್ರಾರು ಇನ್ನೂ ಬಂದಿಲ್ಲ

ಕೊಲ್ಲೆಗಾಲ (?) — ಇಲ್ಲಿ ಕಳೆದ ವಾರವೆಲ್ಲಾ ಪೂರಾ ಮಳೆಯಾಗಿ ರೈತರು ಹರ್ಷಿತರಾಗಿ ಹೊಟ್ಟೆತುಂಬ ಊಟಮಾಡಿ ರಾತ್ರಿ ಕಣ್ಣುತುಂಬ ನಿದ್ದೆ ಮಾಡಲು ಮಾರ್ಗವಾಗಿ ಪೈರುಗಳೆಲ್ಲಾ ಚನ್ನಾಗಿವೆ — ಕಳೆದ ಒಂದುವರೆ ವರ್ಷಗಳಿಂದಲೂ ಇಲ್ಲಿರುತ್ತಾ, ರಾಜಭಕ್ತಿಯುತರೂ ಪ್ರಜೆಗಳನ್ನು ತಮ್ಮ ಸ್ವಂತಮಕ್ಕಳಂತೆ ನೋಡುತ್ತಾ, ಕಳೆದ ಪ್ಲೇಗ್ ಕಾಲದಲ್ಲಿಯೂ ಕಳೆದ ಕ್ಷಾಮಕಾಲದಲ್ಲಿಯೂ ಸರ್ಕಾರದಿಂದ ಮುಂಗಡ ಕೊಡಿಸಿ ರೂಪಾಯಿಗೆ ೧೨ ಸೇರು ರಾಗಿ ಮಾರುವಂತೆ ಮಾಡಿದ್ದು ಮಾತ್ರವಲ್ಲದೆ ಕಳೆದ ಬೇಸಿಗೆ ಕಾಲದಲ್ಲಿ ಹೊಳೆಯಲ್ಲಿ ಅನೇಕ ಕಡೆಗಳಲ್ಲಿ ಬಲುಮೆಗಳನ್ನು ತೋಡಿಸಿ ಮಹದುಪಕಾರಗಳನ್ನು ಮಾಡುತ್ತಾ ಬರುವಂಥ ನಮ್ಮ ಅಮಲ್ದಾರ್ ಮೆ॥ ಸ್ವಾಮಿನಾಥ ಶಾಸ್ತ್ರಿಗಳನ್ನು ಸರ್ಕಾರದವರು ಪ್ರಮೋಷನ್ ಮೇಲೆ ಬೇರೆ ಸ್ಥಳಕ್ಕೆ ವರ್ಗಾಯಿಸುತ್ತಾರೆಂಬುವ ವದಂತಿಯನ್ನು ಕೇಳಿ ಜನರೆಲ್ಲರೂ ವ್ಯಸನಪಡುತ್ತಾ ಇದ್ದಾರೆ — ಕಳೆದ ಒಂದು ವರ್ಷದಿಂದಲೂ ಜನರ ಪ್ರೀತಿಗೆ ಪಾತ್ರರಾಗಿದ್ದ ಪೋಲೀಸ್ ಇನ್ಸ್‌ಪೆಕ್ಟರಿಗೆ ಕುಣಿಗಲಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಮೈಸೂರು ಕಡೆಯಿಂದ ಮೆ॥ ಅನಬರೆಂಬುವವರು ಬರುತ್ತಾರಂತೆ — ಕಳೆದ ಬುಧವಾರ ಇಲ್ಲಿನ ರೈಲಿನ ಹತ್ತಿರವಿರುವ ಒಂದು ಭಾವಿಗೆ ನೀರಿಗಾಗಿ ಹೋಗಿದ್ದ ಒಬ್ಬ ೧೮ ವರ್ಷದ ಹೊಲೆಯರ ಹುಡುಗನು ಆ ಭಾವಿಯೊಳಗೆ ಬಿದ್ದುಕೊಂಡೇ ದಡದ ಮಣ್ಣು ಅತನ ಮೇಲೆ ಕವಿಚಿಕೊಳ್ಳಲು, ತತ್‌ಕ್ಷಣವೇ ಅಮಲ್ದಾರ್ ಹೋಗಿ ಆ ಮಣ್ಣನ್ನು ತೆಗಿಸಿ ಆ ಹುಡುಗನನ್ನು ತಮ್ಮ ಸ್ವಂತ ಖರ್ಚಿನಿಂದ ಪೋಷಿಸಿ ಚಿಕಿತ್ಸೆ ಮಾಡಲು, ಆ ಹುಡುಗನು ಬದುಕಿಕೊಂಡು ಕರುಣೆತೋರಿಸಿದ ಅಮಲ್ದಾರರನ್ನು ಕೊಂಡಾಡುತ್ತಾನೆ

ಹೆಗ್ಗಡದೇವನಕೋಟೆ ತಾ ಸರಗೂರು — ಇಲ್ಲಿ ಎಲ್ಲ ಕಡೆಯೂ ಮಳೆ ಸರಿಯಾಗಿ ಹೊಯ್ದು ಬೆಳೆ ಚೆನ್ನಾಗಿ, ಪೈರುಗಳು ಹೊಯ್ದು ಬಂದಿರುವೆ — ಈಗೆ ೧೫ ದಿನದಲಿ ಇಲ್ಲಿಗೆ ಸಮೀಪದಲ್ಲಿರುವ ಪಟ್ಟು ಹೊಸ ಲ್ಲಿ

ಒಬ್ಬ ಸ್ತ್ರೀಪ್ರಯಾಣಿಕನು ಆಟೀ ದಡದಿಂದ ಈಚೆ ದಡಕ್ಕೆ ಗಾಡಿಯ ಮೇಲೆ ಹೋಗುವ ಕಾಲದಲ್ಲಿ ಅಕಸ್ಮಾತ್ ನೀರು ಹೆಚ್ಚಾಗಿ ಬಂದು ಗಾಡಿಯನ್ನು ವೇಗದಿಂದ ಚಕ್ರಗಳು ಮಾತ್ರ ಎಳೆದು ಒಳಗಿದ್ದವನನ್ನು ಹತ್ತಿರ ಇದ್ದವರು ಎಳೆದುಕೊಂಡರು ಹೀಗೆ ಪದೇ ಪದೇ ನಡೆಯುತ್ತಲೇ ಇರುತ್ತೆ ಹೀಗಿದ್ದಾಗ್ಯೂ ನಮ್ಮ ಘನವಾಸ್ಮಿತಿದ ಸರ್ಕಾರದವರ ಮನಸ್ಸಿಗೆ ಗೋಚರವಾಗದೆ ತುಂಬಾ ನಷ್ಟವುಂಟಾಗಿರುತ್ತೆ — ಇಲ್ಲಿಯ ಲಾಂದ್ರಗಳು ಹತ್ತು ಗಂಟೆಯಮೇಲೆ ಉರಿಯುವ ರೂಢಿಯೇ ಇಲ್ಲ ಜನಸಂಚಾರವಿರುವಾಗಲೇ ಆರಿಹೋಗುತ್ತವೆ ಕೆಲವು ಲಾಂದ್ರಗಳನ್ನು ಯಾವಾಗಲೂ ಹಚ್ಚುವುದೇ ಇಲ್ಲ ರಸ್ತೆಗಳ ಕಸವನ್ನು ಗುಡಿಸಿ ಗಲ್ಲಿಗಳಿಗೆ ಭರ್ತಿಮಾಡುತ್ತಾರೆಯೇ ಹೊರ್ತು ಅಲ್ಲಿಯ ಕಸವನ್ನು ತೆಗೆಯುವುದು ಅಪರೂಪವಾಗಿದೆ — ಈ ತಿಂಗಳ ಆದಿಯಿಂದ ಈ ಊರಿಗೆ ಹೊಸ ಜಮೇದಾರರನ್ನು ಸರ್ಕಾರದವರು ಕಳುಹಿಸಿದರು ಇವರು ನೆನ್ನೇ ವಾರದ ಸಂತೆಗೆ ಬಂದು ವರ್ತಕರ ಸೇರು ಪಾವುಗಳನ್ನು ಅಜಮಾಯಿಷಿ ಮಾಡಿದರು ಹೀಗೆ ಪ್ರತಿ ಸಾರವೂ ಅಜಮಾಯಿಷಿ ಮಾಡುತ್ತಾ ಬಂದಲ್ಲಿ ಬಡವರಿಗೆ ತುಂಬಾ ಉಪಕಾರ ಮಾಡಿದಂತಾಗುತ್ತೆ ಅವರು ಸಂತೆಗೆ ಬಂದ ಮೇಲೆ ನೋಡಲು ಅಳೆಯುತ್ತಿದ್ದ ಕಪ್ಪು ಸೇರನ್ನು ಬಚ್ಚಿಟ್ಟು ಖರಾರನ್ನು ಉಪಯೋಗಿಸುತ್ತಾರೆ ಕತ್ತಲೆ ಆದ ಮೇಲೆ ಪೂರ್ವದಂತೆಯೇ ಈಚೆಗೆ ತೆಗೆಯುತ್ತಾರೆ ಈ ರೀತಿ ಅವರ ಹತ್ತಿರವಿರುವದನ್ನೆಲ್ಲಾ ಶೋಧಿಸಿ ಸಿಕ್ಕಿದವರಿಗೆ ಜುಲ್ಮಾನೆ ಮೊದಲಾದ್ದು ಮಾಡಿಸಿದರೆ ನಂತರ ಬಿಡುತ್ತಾರೆ ಈ ರೀತಿ ಮಾಡಿದರೆ ಉತ್ತಮ — ಇಲ್ಲಿನ ಅಂಗಡಿಬೀದಿಯು ಮಧ್ಯೆ ಕೊಟ್ಟಿಗೆ ಇರುತ್ತೆ ಅಲ್ಲಿಂದ ಹೊರಡತಕ್ಕ ದುರ್ಗಂಧವು ತಿರುಗುವವರಿಗೂ ಅಕ್ಕಪಕ್ಕ ಅಂಗಡಿಯವರಿಗೂ ಬಹಳ ಅಸಹ್ಯಕರವಾಗಿರುತ್ತೆ ನಮ್ಮ ಜಮೇದಾರ್ರು ಇದನ್ನು ತಪ್ಪಿಸುವರೆಂದು ನಂಬಿದೇವೆ ಇಲ್ಲಿನ ಜಮೇದಾರ್ರಿಗೆ ಚಾಮರಾಜನಗರಕ್ಕೆ ವರ್ಗವೆಂದು ತಿಳಿಯುತ್ತೆ ಇವರು ಬಡವರಿಗೆ ತುಂಬಾ ಉಪಕಾರಿಗಳಾಗಿದ್ದರು

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕೇವಲ ಬಡ ನೌಕರ ಚಿತ್ರದುರ್ಗ — ನೀವು ಹೇಳುವ ವಿಚಾರವನ್ನು ಕುರಿತು ಡೆಪ್ಯುಟಿ ಕಮಿಷನರವರಿಗೂ ಕಮ್ಯಾಂಡಿಂಗ್ ಆಫೀಸರವರಿಗೂ ಬರೆದುಕೊಂಡರೆ ಅವರೇ ಅದನ್ನು ಪರಿಹರ ಮಾಡಿಕೊಡುವರು — ಎಡಿ]

ಕರೆಸ್ಪಾಂಡೆನ್ಸ್

ಯಡತೊರೆ ತಾ॥ ಮಿರ್ಲೆಯ ಕಷ್ಟವು

ಅಯ್ಯಾ,

ಈ ಮಿರ್ಲೇ ಗ್ರಾಮವು ಭಾರೀ ರವೆನ್ಯೂ ಜಮಾಬಂದಿಯುಳ್ಳದ್ದಾಗಿಯೂ, ಸುಮಾರು ೩,೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ, ಗ್ರಾಮದ ಸುತ್ತಲೂ ನಾಲೆಯ ನೀರಿನಿಂದ ಆವರಿಸಲ್ಪಟ್ಟು ಪ್ರಜೆಗಳ ಅನಾರೋಗ್ಯಕ್ಕೆ ಮಾತೃಸ್ಥಾನವಾಗಿಯೂ ಇದೆ ಆಗಾಗ್ಗೆ ಸಂಭವಿಸಬಹುದಾದ ಇಲ್ಲಿಯ ಪ್ರಜೆಗಳ ಅನಾರೋಗ್ಯಕ್ಕೆ ಚಿಕಿತ್ಸೆಗೆ ಅವಕಾಶವಿಲ್ಲದೆ ಅನೇಕ ವರ್ಷಗಳಿಂದಲೂ ನಾನಾ ರೋಗಗಳಿಗೆ ಅನೇಕ ಪ್ರಜೆಗಳು ತುತ್ತಾದರು ಇದೇ ಸಂಗತಿಯಲ್ಲಿ ನಮ್ಮ ತಾಲ್ಲೋಕು ವೈಸ್ ಪ್ರೆಸಿಡೆಂಟರವರು ಅಮಲ್ದಾರ್ ಮೆ॥ ಎನ್ ಶ್ರೀನಿವಾಸರಾಯರೂ ಯೂನಿಯನ್ ಮೆಂಬರುಗಳೂ ಪ್ರಜಾಸೌಖ್ಯಕ್ಕೆ ತಕ್ಕಂತೆ ಇಂಗ್ಲೀಷ್ ಮತ್ತು ಕನ್ನಡ ವೈದ್ಯವನ್ನು ತಿಳಿದ ಒಬ್ಬ ವೈದ್ಯರನ್ನು ಸದ್ಯದಲ್ಲಿ ಏರ್ಪಾಡು ಮಾಡಿಸಿಕೊಡಬೇಕೆಂದು ಆಗಾಗ್ಗೆ ನಡೆಯುವ ಮೀಟಿಂಗಿನಲ್ಲಿ ಚರ್ಚೆ ನಡಿಸುತ್ತಿರುವ ಅಂಶವು ಘನವುಳ್ಳಂಥ ಸರ್ಕಾರದವರ ದೃಷ್ಟಿಗೆ ಬಾರದೆ ಇರುವುದು ಈ ಗ್ರಾಮದ ಪ್ರಜೆಗಳ ದೌರ್ಭಾಗ್ಯವೆಂದು ಭಾವಿಸಿರುವ ಅವರು ಈ ಗ್ರಾಮದ ಸ್ಥಿತಿಯನ್ನು ನಮ್ಮ ತಾಲ್ಲೋಕು ವೈಸ್ ಪ್ರೆಸಿಡೆಂಟರವರನ್ನು ವಿಚಾರಮಾಡಿದ್ದೇ ಆದರೆ ಸರ್ವಸ್ಪಷ್ಟವಾಗಬಹುದು ಪ್ರಜಾಕ್ಷೇಮವನ್ನು ಕಾಪಾಡುವದಕ್ಕೆ ಮನಸ್ಸಿನವಾದ ಸರ್ಕಾರವು ಪ್ರಜೆಗಳ ಮೇಲೆ ಪೂರ್ಣ ಕೃಪೆಯನ್ನು ಇಟ್ಟು ಈ ಗ್ರಾಮಕ್ಕೆ ಲೋಕಲ್ ಫಂಡು ಆಸ್ಪತ್ರೆಯನ್ನೂ, ಒಬ್ಬ ಸೂಲಗಿತ್ತಿಯನ್ನೂ ನೇಮಕ ಮಾಡಿಕೊಟ್ಟು ಈ ಗ್ರಾಮದ ಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡಿ ಕಾಪಾಡಬೇಕಾಗಿ ಬೇಡುತ್ತೇವೆ

ಪ್ರಜಾ ಹಿತೈಷಿ

ಮಿಷನ್ ಸ್ಕೂಲುಗಳ ಉಪಾಧ್ಯಾಯರ ಸಂಬಳವು

ಅಯ್ಯಾ,

ತಾವು ಒಂದಾವರ್ತಿ ಮಿಷನ್ ಸ್ಕೂಲುಗಳ ಬಡ ಮಾಸ್ತರುಗಳ ಅಲ್ಪ ಸಂಬಳದ ವಿಷಯವಾಗಿ ಪ್ರಕಟಿಸಿರುತ್ತೀರಿ ಅದನ್ನು ಇದುವರಿವಿಗೂ ಮಿಷನ್ ಅಧಿಕಾರಿಗಳು ವ್ಯವಸ್ಥೆ ಮಾಡಲಿಲ್ಲ ಹಿರಿಯರು ಧಾತು ಈಶ್ವರ ಸಂವತ್ಸರದಲ್ಲಿ ವೀರಕ್ಷಾಮವು ಪ್ರಾಪ್ತವಾಗಿ ಅನ್ನವಿಲ್ಲದೆ ಸಾಂಕ್ರಾಮಿಕ ರೋಗದಿಂದ ಅನೇಕ ಜನಗಳು ಸತ್ತರೆಂದು ಹೇಳುತ್ತಿದ್ದರು ಈಗಲೂ ಅದೇ ಕ್ಷಾಮವೆಂದು ತೋರಬಹುದು ಆದರೆ ರೋಗಾದಿಗಳು ಮಾತ್ರ ವಿಶೇಷವಾಗಿ ಕಾಣುವುದಿಲ್ಲ ಗ್ರಾಮವಾಸಿಗಳಾದವರೋ ಹೇಳತೀರದು ರೂಪಾಯಿಗೆ ೯-೧೦ ಸೇರು ರಾಗಿ, ೬ ೭ ಸೇರು ಅಕ್ಕಿ, ೫ ೫॥ ಸೇರು ಬೇಳೆ, ಈ ರೀತಿಯಾಗಿ ಮಾರುತ್ತದೆ ಉಪ್ಪು ಒಂದು ಬಿಟ್ಟು ಬಾಕಿ ದಿನಸುಗಳು ತುಂಬಾ ಪ್ರಿಯವಾಗಿರುವವು ಇದನ್ನು ನೋಡಿ ಈ ದುರ್ಭಿಕ್ಷ ಕಾಲದಲ್ಲಿ ದಯಾಳುಗಳಾದ ಗವರ್ನಮೆಂಟಿನವರು ಎಲ್ಲಾ ಸ್ಕೂಲ್ ಮಾಸ್ತರುಗಳಿಗೂ ೭ ರೂಪಾಯಿ ಸಂಬಳ ಇದ್ದದ್ದನ್ನು ೧೦ ರೂಪಾಯಿಗೆ ಬಡ್ತಿ ಮಾಡಿದ್ದಲ್ಲದೆ ಕ್ಷಾಮದ ಅಲೋವೆನ್ಸನ್ನು ಕೆಲವು ತಿಂಗಳು ಕೊಡುತ್ತಾ ಬಂದು, ಈಚೆಗೆ ನಿಲ್ಲಿಸಿದ್ದನ್ನು ಪುನಃ ಕೊಡುವಂತೆ ಅಪ್ಪಣೆಯಾಗಿದೆಯಂತೆ ಮಿಷನ್ ಸ್ಕೂಲ್ ಮಾಸ್ತರುಗಳಿಗೆ ಇದುವರಿವಿಗೂ ಯಾವ ರಿಯಾಯಿತಿಯನ್ನೂ ತೋರಿಸದೆ ಮಿಷನ್ ಅಧಿಕಾರಿಗಳು ಬಡ ಮಾಸ್ತರುಗಳನ್ನು ಸವತಿ ಮಕ್ಕಳಂತೆ ಕಂಡುಕೊಂಡು, ೩-೬-೭ ೮-೯ ರೂಪಾಯಿ ಸಂಬಳ ಕೊಡುತ್ತಾ ಬರುತ್ತಾರೆ ಅವರು ಈ ಅಲ್ಪ ಸಂಬಳದಿಂದ ಹ್ಯಾಗೆ ಜೀವನ ಮಾಡುತ್ತಾರೆಂಬುವದು ಧರ್ಮವಂತರಾದ ತಾವೇ ಯೋಚಿಸಬೇಕು ಈ ಮಿಷನ್ನಿನವರು ತಿಂಗಳೊಂದಕ್ಕೆ ಹೆಚ್ಚಿನವರಿಗೆ ಬಡ್ತಿ ಕೊಟ್ಟಾರೆಂದು ಒಂದುವರ್ಷಕ್ಕೆ ಗಿಣಿ ಕಾದಂತೆ ಕಾದಿದ್ದು, ಮಾರ್ಚಿ ತಿಂಗಳಲ್ಲಿ ಒಟ್ಟಿಗೆ ಅರ್ಜಿಗಳನ್ನು ಬರೆದುಕೊಂಡರೆ ಅವರು ಬೂದಿ ಮುಚ್ಚಿದ ಕೆಂಡದಂತೆ ಮಾಯವಾಗುತ್ತವೆಯಲ್ಲದೆ ಬದಲು ಉತ್ತರ ಕೊಡುವದಿಲ್ಲವೆಂದು ಹೇಳುತ್ತಾರೆ ನಾನು ಒಬ್ಬ ಮಾಸ್ತರನ್ನು ಈ ವಿಷಯವಾಗಿ ವಿಚಾರಿಸಿದೆನು ಅತನು ಗೋಳುಗುಟ್ಟುತ್ತ ಏನುಮಾಡಲಿ! ನಮಗೆ ಬರುವ ೫ ರೂಪಾಯಿನಲ್ಲಿ ಬಟ್ಟೆಬರೆ ಜೀವನ ಆಗಬೇಕು ಕಷ್ಟ ಮಧ್ಯಾಹ್ನ ತಿಳಿಮೇ ಅಕ್ಕಿ ಗಂಜಿ ಕುಡಿದು ರಾತ್ರಿಕಾಲದಲ್ಲಿ ಬಟ್ಟೆ ಬಿಗಿದುಕೊಂಡು ಮಲಗಿಕೊಳ್ಳುತ್ತೇನೆ ಎಂದು ಹೇಳಿದನು ಹೀಗೆ ಅಂಬಲಿ ಕುಡಿದು ಮಕ್ಕಳಿಗೆ ಪಾಠ ಹೇಳುವದು ಹೇಗೆ? ಮನಸ್ಸಿಗೆ ಉಲ್ಲಾಸ ಹುಟ್ಟುತ್ತಿದ್ದರಲ್ಲವೇ ಒಬ್ಬರ ತಲೆಯಲ್ಲಿರುವ ವಿದ್ಯೆ ಇನ್ನೊಬ್ಬರಿಗೆ ಬರುವದು? ಸುಮ್ಮನೆ ಬರುತ್ತದೆಯೇ? ಎಷ್ಟು ಶ್ರಮ ಎಂಬುವದನ್ನು ಯೋಚಿಸಿ ಬಡ ಮಾಸ್ತರ ಕಷ್ಟವನ್ನು ಪರಿಹಾರ ಮಾಡುತ್ತಾರೆಂದು ಈ ಮೂಲಕ ಕೃತಪಡಿಸಿಕೊಂಡಿರುತ್ತೇನೆ ಅಲ್ಲದೆ ಈಗ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸೇರತಕ್ಕ ಧರ್ಮವಂತರಾದ ಮೆಂಬರುಗಳಲ್ಲಿ ಪುಣ್ಯಾತ್ಮರು ಯಾರಾದರೂ ಮಿಷನ್ ಇಲಾಖೆಯ ಬಡ ಮಾಸ್ತರುಗಳ ಸ್ಥಿತಿಯನ್ನು ದಿವಾನ್ ಬಹದೂರ್ ಸಾಹೇಬರವರ ಸನ್ನಿಧಿಯಲ್ಲಿ ವಿಜ್ಞಾಪಿಸಿ, ಈ ಕೊರತೆಯನ್ನು ಪರಿಹರಿಸುತ್ತಾರೆಂದು ಕೇಳಿಕೊಳ್ಳುತ್ತೇನೆ ಮಾಸ್ತರುಗಳು ಅಂದರೆ ಎಲ್ಲರೂ ಒಂದೇ ಅಲ್ಲವೆ ಬೇರೆಯೇ? ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಇದು ಏನು ಧರ್ಮವೋ? ಹೀಗಾದರೆ ಏನು ತಾನೇ ಸೌಖ್ಯ ಉಂಟಾದೀತು ಮಿಷನ್ ಅಧಿಕಾರಿಗಳು ಕಮಿಟಿಗಳಲ್ಲಿ ಏನು ತೀರ್ಪು ಮಾಡಿಕೊಂಡಿದಾರೆಯೋ ನಿಮ್ಮ ಪತ್ರಿಕೆಯ ಮೂಲಕ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ

ಬಡ ಮಾಸ್ತರುಗಳ ಹಿತಚಿಂತಕ,

[ಗವರ್ನಮೆಂಟಿನವರು ಮಿಷನ್ ಸ್ಕೂಲುಗಳನ್ನು ನಡಿಸತಕ್ಕವರಿಗೆ ಸ್ಕೂಲ್ ಫೀ ಮಾಫ್‌ಮಾಡಿದರಿಂದುಂಟಾಗುತ್ತಿರುವ ನಷ್ಟವನ್ನು ಪರಿಹರಿಸಿಕೊಳ್ಳಲು ಸ್ಕೂಲುಗಳ ಗ್ರಾಂಟನ್ನು ಬಡ್ತಿಮಾಡುವುದಾದರೆ ಮಿಷನ್ ಸಂಘದವರು ಮಾಸ್ತರುಗಳ ಸಂಬಳವನ್ನು ಬಹು ಸಂತೋಷದಿಂದ ಹೆಚ್ಚುಮಾಡಿಯಾರೆಂದು ನಂಬುತ್ತೇವೆ — ಎಡಿಟರ್]

ವಿದೇಶ ವರ್ತಮಾನಗಳು

ಏಷ್ಯಾ ಖಂಡದ ಉತ್ತರ ಭಾಗದಲ್ಲಿ ವಲ್ಲಂತೂರಿಯಾ ಸೀಮೆಗೆ ಸೇರಿದ ಟೇರ್‌ಟಿಕ್ ಎಂಬ ವಿಭಾಗದಲ್ಲಿ ಪ್ರವಾಹದ ರಭಸದಿಂದ ಅನಾಹುತವಾಯಿತು ನೂರಾರು ಮಂದಿ ನೀರಿನ ಪಾಲಾದರು

* * *

ಟರ್ಕಿ ಗವರ್ನಮೆಂಟಿನವರು ಕ್ರೀಟ್ ಎಂಬ ದ್ವೀಪದ ಮೇಲೆ ತಮಗಿರುವ ಅಧಿಕಾರವನ್ನು ಬಿಟ್ಟು ಕೊಡುವವರಲ್ಲ ಅದರ ವಿಷಯದಲ್ಲಿ ಅವರಿಗೂ ಗ್ರೀಸ್ ರಾಜ್ಯದವರಿಗೂ ಕದನವು ನಡೆಯುವದೋ ಏನೋ ಎಂದು ಅನುಮಾನ ಉಂಟಾಗಿದೆ ಗ್ರೀಸ್ ರಾಜ್ಯದವರು ತಮ್ಮ ಸೈನ್ಯಗಳನ್ನು ಆ ದ್ವೀಪಕ್ಕೆ ಕಳುಹಿಸಿದ್ದನ್ನು ನೋಡಿ ಅವರನ್ನು ವಾಪಸು ಕರೆಸಿಕೊಳ್ಳಬೇಕೆಂದು ತುರ್ಕಿಯವರು ತಿಳಿಸಿದರು ಅದಕ್ಕೆ ಗ್ರೀಸ್ ಸರ್ಕಾರದವರು ಗ್ರೀಕರು ತಮ್ಮ ಸೈನ್ಯವನ್ನು ಅಲ್ಲಿಗೆ ಕಳುಹಿಸಲಿಲ್ಲವೆಂದೂ ಪರರಾಜ್ಯಗಳವರ ಸಮ್ಮತಿಯ ಪ್ರಕಾರ ಕಳುಹಿಸಿದೇವೆಂದೂ ಜವಾಬು ಕೊಟ್ಟಿದಾರೆಂದೂ ಅವರು ತಮ್ಮ ಸೈನ್ಯವನ್ನು ಕ್ರೀಟ್ ದ್ವೀಪದಿಂದ ವಾಪಸು ಕರೆಸಿಕೊಳ್ಳದೆಹೋದರೆ ತುರ್ಕಿಯವರು ಇನ್ನೂ ಬಲವಂತಮಾಡುವವರಾಗಿದಾರೆಂದೂ ಅಲ್ಲಿಗೆ ತಮ್ಮ ಹಡಗಿನ ಸೈನ್ಯಗಳನ್ನು ಕಳುಹಿಸಿಕೊಡುವವರಾಗಿದಾರೆಂದೂ ತಂತಿ ವರ್ತಮಾನ ಬಂದಿದೆ

* * *

ರಷ್ಯಾ ರಾಜ್ಯದ ಜಾರ್ ಚಕ್ರವರ್ತಿಯವರು ಪರಿವಾರ ಸಹಿತ ಕಳೆದ ವಾರ ವಿಲಾಯತಿಗೆ ದಯಮಾಡಿದ್ದರು ವಿಲಾಯತಿಯ ಚಕ್ರವರ್ತಿಯವರು ಜಹಜಿನಲ್ಲಿ ದಯಮಾಡಿ ಕೌಸ್ ಎಂಬ ರೇವಿನಲ್ಲಿ ರಷ್ಯಾ ಚಕ್ರವರ್ತಿಗಳವರನ್ನು ಎದುರುಗೊಂಡರು ಭೋಜನಾನಂತರ ಪರಸ್ಪರ ಸ್ನೇಹ ಪ್ರೀತಿಗಳನ್ನು ಸೂಚಿಸುವ ಸಂಭಾಷಣೆಗಳ ನಡೆದವು ರಷ್ಯಾ ಚಕ್ರವರ್ತಿಯವರು ಇಂಗ್ಲಿಷ್ ಹಡಗಿನ ಸೈನ್ಯವನ್ನು ನೋಡಿ ಬಹಳ ಸಂತೋಷಪಟ್ಟುಕೊಂಡರು ರಷ್ಯಾ ಚಕ್ರವರ್ತಿಯವರಿಗೆ ಇಂಗ್ಲಿಷರ ಮಧ್ಯೆಯಿರುವ ಕಾಲದಲ್ಲಿ ಕಿಡಿಗೇಡಿಗಳ್ಯಾರೂ ಯಾವ ವಿಧವಾದ ಕೆಡುಕನ್ನೂ ಮಾಡದಂತೆ ಇಂಗ್ಲಿಷ್ ಗವರ್ನಮೆಂಟಿನವರು ಬಹಳವಾಗಿ ಉಸ್ತುವಾರಿಯನ್ನು ವಹಿಸಿದ್ದರು ಉಭಯ ದೊರೆಗಳೂ ಕಳೆದ ಬುಧವಾರ ಬ್ರಿಟಾನಿಯಾ ಎಂಬ ಜಹಜಿನಲ್ಲಿ ಕುಳಿತು ಪ್ರಯಾಣ ಮಾಡಿ ಜನ ಪ್ರದೇಶವಾದ ಒಂದು ರೇವಿನಲ್ಲಿ ಹೋಗಿ ಇಳಿದು ಮರುದಿನ ಅಲ್ಲಿಂದ ಮೋಟಾರ್ ಗಾಡಿಯಲ್ಲಿ ಹೊರಟು ಲಂಡನ್ ಪಟ್ಟಣದಲ್ಲಿರುವ ಆಸ್ಬೋರ್ನ್ ಎಂಬ ರಾಜ ಭವನಕ್ಕೆ ತೆರಳಿದರು ರಷ್ಯಾ ಚಕ್ರವರ್ತಿಯವರಿಗೆ ಇಂಗ್ಲಾಂಡಿನಲ್ಲಿ ಬಹು ಅಪೂರ್ವವಾದ ಅನೇಕ ಸಂತೋಷೋತ್ಸವಗಳು ನಡೆದಿರುತ್ತವೆ

* * *

ಫ್ರಾನ್ಸ್ ಸರ್ಕಾರದವರು ಅಲ್ಲಿನ ಪ್ರಜಾ ಸಂಖ್ಯೆಯನ್ನು ಹೆಚ್ಚಿಸುವದಕ್ಕಾಗಿ ಜನರಿಗೆ ಬಹುಮಾನಗಳನ್ನು ಕೊಡುವ ವಿಷಯದಲ್ಲಿ ಒಂದು ಕಾನೂನನ್ನು ಮಾಡಿ ಜಾರಿಗೆ ತರಬೇಕೆಂದು ಆಲೋಚಿಸುತ್ತಿದಾರೆ ಹಿರೀ ಮಗುವನ್ನು ಬಿಟ್ಟು ಎರಡನೇ ಮಗು ಹುಟ್ಟಿದಲ್ಲಿ ಸರ್ಕಾರದಿಂದ ಆ ಮನೆಯವರಿಗೆ ೩೦೦ ರೂಪಾಯಿಯೂ ಮೂರನೇ ಸಾಕ್ಯನೇ ಮಕ್ಕಳು ಹುಟ್ಟಿದರೆ ತಲಾ ೭೦೦ ರೂಪಾಯಿಯೂ ಬಹುಮಾನ ಕೊಡುವಂತೆ ಸಲಹೆ ಕೊಡಲ್ಪಟ್ಟಿದೆ ಹೀಗೆ ಬಹುಮಾನಗಳನ್ನು ಕೊಡಲು ವರುಷಕ್ಕೆ ೧೮ ಕೋಟಿ ರೂಪಾಯಿ ಖರ್ಚಾಗುವುದೆಂದು ಅಂದಾಜು ಆಗಿರುವುದು ಮೃತಪಟ್ಟವರ ಆಸ್ತಿಯ ಮೇಲೆ ಈಗ ಸರ್ಕಾರಕ್ಕೆ ವಸೂಲಾಗುತ್ತಿರುವ ಕಂದಾಯವನ್ನು ಇನ್ನೂ ಶೇಕಡಾ ೫೦ ರಂತೆ ಹೆಚ್ಚು ಮಾಡಬೇಕೆಂದೂ ಒಬ್ಬನೇ ಮಗನಿದ್ದು ತಂದೆಯ ಆಸ್ತಿಯನ್ನು ಪಡೆಯುವುದಾದರೆ ಅಂಥಾ ಆಸ್ತಿಯ ಮೇಲೂ ಹೆಚ್ಚಿದ ಕಂದಾಯವನ್ನು ಬಾಕಿ ವಸೂಲ್ಮಾಡಬೇಕೆಂದೂ ಯೋಚಿಸಿರುತ್ತಾರೆ ಇದಲ್ಲದೆ ಇನ್ನು ಮುಂದೆ ಮೂರು ಮಕ್ಕಳನ್ನಾದರೂ ಪಡೆಯದೆ ಇರುವಂಥಾ ಜನರನ್ನು ಸರ್ಕಾರಿ ಅಥವಾ ಮ್ಯುನಿಸಿಪಲ್ ಕೋರ್ಟು ಕಚೇರಿಗಳಲ್ಲಿ ನೌಕರಿಗಳಿಗೆ ಸೇರಿಸಿಕೊಳ್ಳಕೂಡದೆಂದು ನಿಷ್ಕರ್ಷೆ ಮಾಡಬೇಕೆಂದಿರುವರು

Printed and Pu[bli]shed by the Rev H GULLIFORD
Propri[et]or and M[an]ager, Wesley[a]n Mission Press
My[so]re 19/8/19[09]

REGISTERED M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೩೩ ಮೈಸೂರು ಸನ್ ೧೯೧೯ ನೇ ಇಸವಿ ಆಗಸ್ಟ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೧೩

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ಎಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 130 27

ತಲೆನೋವು, ಗಂಟು ಉಬ್ಬುವದು ... ಸಂಧಿವಾತ ಉಳುಕು ... ಗಂಟು, ಗಂಟ್ಲು ನೋವು ಅರ್ಧಾಂಗವಾಯು ಎದೆಶೀತ, ಘಾಯ ... ಇತ್ಯಾದಿ

ಇದರ ಓಷಧುವಾಗಿ ಸರ್ವಜನರು ಕೊಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೮ ೦

ಗಜಕರ್ಣದ ಮುಲಾಮು.

... ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗು ... ಡಬ್ಬಿ ಒಂದರ ಕಿಮ್ಮತ್ತು ... ೨ ಡಬ್ಬಿಗಳಿಗೆ ೪ ೦

ಅ...	೬ ೦
...	೬ ೮
... ಧಾತುಪುಷ್ಟಿ ರಕ್ತಪುಷ್ಟಿ	
... ಮುದ್ರಿ...	೬
... ಮುಲಾಮಿಗೆ	೬ ೮ ೦
... ಮುಂಚ ದೃಷ್ಟಿಗೆ	೪
... ಮುಲಾಮು ಮಕ್ಕಳ ...	೬ ೪ ೦
... ತೈಲ ...	೧
... ರೋಗಕ್ಕೆ	೮

... ಟಪಾಲಿಗೆ ಬರಿಯಿರಿ ... ವಿಳಾಸ

... ಮತ್ತು ಕಂಪೆನಿ ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು ಅಮೃತಾಂಜನ ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು ? ಯಾಕೆ ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

... ಟೋಪಿಗಳು ಮೊದಲು ... ಎಲ್ಲಿಂದ ಇತರ ಕಡೆಗಳಿಗೆ ... ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ... ಟೋಪಿಗಳ ... ಅವೇ ಹಾಸನದ ಟೋಪಿಗಳೆಂದು ... ಕೊಂಡುಕೊಂಡು ಮೋಸಹೋಗುವರು

ಆದರೆ ... ನಮ್ಮಲ್ಲಿ ತಯಾರಾಗುವ ಟೋಪಿಗಳ ... ಬರುವದು ... ಟೋಪಿಗಳನ್ನು ಮುದ್ದಾಗಿ ... ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೆ ಆರಿಸಿ ಕಳುಹಿಸುತ್ತೇವೆ

ಒಳ್ಳೆ ... ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕಪ್ಪು, ಬಿಳಿ, ಕಾಪಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮ ರೂ ೧-೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ... ಆ

ಉಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತರ

ಜ್ವರದ ಗುಳಿಗೆ

28 21

ಈ ಗುಳಿಗೆಗಳು ದಿನಜ್ವರ ಹೊಸ ಜ್ವರ, ಚಳಿಜ್ವರ, ಪ್ಲೇಗು ಜ್ವರ, ವರ್ಷ ಜ್ವರ ಮಲೇರಿಯ ಮತ್ತು ಸಂಧ್ವರ, ಮಲೇರಿಯಾ ಜ್ವರ ಅಸ್ಥಿಗತಜ್ವರ, ಶೀತ ಜ್ವರ ಪಿತ್ತ ಜ್ವರ, ಸನ್ನಿಪಾತ ಜ್ವರ, ಇವೆಲ್ಲವನ್ನೂ ನಿಶ್ಚಿತವಾಗಿ ತಪ್ಪದೆ ಗುಣಪಡಿಸುತ್ತದೆ

ಇವರಲ್ಲಿ ಕ್ವಿನೈನಾಗಲೀ ಅಕ್ಷೇಪಣೆಯಾದ ಮತ್ತಾವ ವಸ್ತುವಾಗಲೀ ನಿಜವಾಗಿಯೂ ಸೇರಿಲ್ಲವಾಗಿ ಹೆಚ್ಚು ಪಥ್ಯವಿಲ್ಲದಂತೆ ... ಜ್ವರಗಳಿಗೆ ಈ ಗುಳಿಗೆಗಳು ... ಹೇಳುವದೆ ಅತಿಶಯೋಕ್ತಿಯಾಗಲಾರದು

೧೨ ಗುಳಿಗೆಯುಳ್ಳ ಕುಪ್ಪಿ ೮ ಆ

... ,, ೧ ರೂ.

೧ ಡಜನ್ ದೊಡ್ಡ ಕುಪ್ಪಿ ಒಂದೇ ಸಲ ತರಿಸಿದರೆ ೮ ರೂ

೧ ಡಜನ್ ಸಣ್ಣ ಕುಪ್ಪಿ ೪ ರೂ.

ಪೋಸ್ಟ್ ... ಬೇರೆ.

... ಎಸ್ ಎಸ್ ... ವೈದ್ಯಶಾಲೆ, ಮೈಸೂರು.

ಜ್ವರಹರಿ 18 10



ಇದು ಸಾಧಾರಣ ಜ್ವರ ಹಳೆ ಜ್ವರ ಮೊರೆ ಜ್ವರ ಪಿತ್ತಜ್ವರ ಶೀತ ಜ್ವರ ವಾತಜ್ವರ, ಚಳಿಹಿಡಿಯುವ ... ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

... ಕೆರೆಯಲ್ಲಿರುವ ಮದರಾಸ್ ... ಸಬ್ ಡಿವಿಜನ್ ಆಫೀಸರ್ ... ಅಯ್ಯರವರು — ... ಕಳುಹಿಸಿ ... ತರಿಸಿದೆ ... ಮತ್ತು ... ಕಾಲದ ... ಔಷಧಿ ... ಅನೇಕ ಮಂದಿ ಉಗ್ರ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ... ಇನ್ನೊಂದು ... ಮತ್ತು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ ಎಂದು ಬರೆದಿದ್ದಾರೆ

ಕ್ರಯ ... ೧ ರೂ ... ರೂ ... ೧೨ ಆ ... ರೂ ... ತರಿಸಿಕೊಂಡರೆ ಪೋಸ್ಟೇಜು ವಾಸಿಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ ಶೀತಭೇದಿ ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು ಮುಂತಾದ್ದಕ್ಕೆಲ್ಲಾ ಮಹಾ ಔಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ... ಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು, ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಆಡವದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

ಅಡ್ವಾನ್ಸು	ರೂ ೧-೦-೦
ಪರಸ್ಥಳದವರು ಆಫೀಸಿನ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧-೧೪-೦
,, ,, ,,	-೧೫-೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟು ವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ಸೂಚಿಸತಕ್ಕದ್ದು

ನಮ್ಮ ವಿಳಾಸ ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೈಮಂಟರ ಮ್ಯಾಜಿಕ್ ಬಾಂ ತೈಲವು

4 11

ತಲೆನೋವು ವಾಯುನೋವು ಸೆಳತ ಗಂಟಿನೋವು ಪಾರ್ಶ್ವವಾಯು, ನಾನಾವಿಧವಾದ ನರರೋಗಗಳು ಶೀತರೋಗಗಳು ... ಕೀಲುಗಳ ಸಂದುಕಟ್ಟುಗಳ ನೋವು ... ಕಡಿದ ನೋವು ... ನೋವು ಇವುಗಳಿಗೆ ಈ ತೈಲವನ್ನು ಹಚ್ಚಿದರೆ ... ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ... ಎಲ್ಲಾ ಭಾಗಗಳ ... ಜನರು ಪರೀಕ್ಷೆಮಾಡಿ ... ಗುಣಕೊಡುತ್ತದೆ ... ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ... ಅದನ್ನು ... ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷಿಸಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡು ... ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದನ್ನು ... ಮಾಡುತ್ತದೆ

ಕ್ರಯ ... ಆಣೆ ... ಆಣೆ ಅದರ ... ಅಥವಾ ... ಬಾಟ್ಲು ... ತರಿಸಿಕೊಳ್ಳುವವರಿಗೆ ... ಚಾರ್ಜು ... ಯಾಗುವದು ... ಡಜನು ಕೊಂಡವರಿಗೆ ... ಸಲ ತರಿಸಿಕೊಳ್ಳುವವರಿಗೆ ... ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ... ಮಾರುತ್ತಾರೆ ಮುಖ್ಯ, ಏಜೆಂಟರ ವಿಳಾಸ— ...

ಎಸ್ ಪೀಟರ್ಸ್

೩೩ ವೇದಾಮುಲಿಪಿಳ್ಳೆ ಬೀದಿ, ವೇಪೇರಿ ಮದರಾಸ್

ಪ್ರಸಿದ್ಧವಾದ ಕೆಲವು ಪುಸ್ತಕಗಳನ್ನು ಓದಿರಿ.

10 11

"ಬ್ರಹ್ಮಚರ್ಯ" ... ಇದು ... ವಾದ ಪುಸ್ತಕ ... ಗಳನ್ನು ... ಹುಡುಗರೂ ... ಓದಿ ತಿಳಿದುಕೊಳ್ಳಬೇಕು ಕ್ರಯ ... ವಿ ಪಿ ... ಕ ...

"ಸ್ವಪ್ರಯತ್ನಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶದವರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ... ಸಂಘದವರು "ಸ್ವಪ್ರಯತ್ನಸಫಲದೀಪಿಕೆ"ಯನ್ನು ... ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರಿಗೂ ಓದತಕ್ಕದ್ದು ಕ್ರಯ ... ವಿ ಪಿ ಪಿ ಮೂಲಕ ಆರಾಣೆ

ವ್ಯಾಸ್ಕೋಡಿಗಾಮನಯಾನದ ಚರಿತ್ರೆ ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೈನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಪರಿಶುದ್ಧ ..., ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 44

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಮಿಂಚಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ನೋಟೀಸ್

63 2

ಬೇಲೂರು ಉಪಾಸನಾ ಸಮಾಜ ಮತ್ತು ಶ್ರೀ ಮಂಜುನಾಥ ಅನಾಥಾಲಯವು

ಇದರಿಂದ ಅನಾಥ ಬಾಲಕರಿಗೆ ತಿಳಿಯಪಡಿಸುವದೇನಂದರೆ, ಇದರ ಪೋಷಕರಾದ ಮ ಮಿಂಚಿ ಗೋವಿಂದಪ್ಪ ಶೆಟ್ಟರವರು, ಇವರ ಮಕ್ಕಳು ನಾಗೇಶ ಶೆಟ್ಟರವರ ಸಂಕಲ್ಪದಂತೆ ಅನಾಥಬಾಲಕರ ಸಂಖ್ಯೆಯು ಭರ್ತಿಯಾಗಿದೆ ಪರಸ್ಥಳದಿಂದ ಬರುವ ಅನಾಥಬಾಲಕರು ಇಲ್ಲಿ [illegible] ಮೆ[illegible]ಟರಾದ ಮಾ॥ ಶಂಗಲಿಸ ಐಯ್ಯಂಗಾರರ [illegible] ಬರದ [illegible] ಮುಂಚಿತವಾಗಿ [illegible] ದೊರೆಯಲಾರದು

ಬೇಲೂರು ತಾರೀಖು [illegible]

ಅಧಿವಾಸಿಗಳು

ಎಂ ಟಿ ವಲ್ಲಭಯ್ಯಂಗಾರ್	ಟಿ ಆರ್ ಸುಬ್ಬಣ್ಣನವರು
ಯಂ ಡಿ ಗುಂಡಪ್ಪನವರು,	ಎ ದೇವರಪ್ಪನವರು
ಎ ಟಿಂಡರ್ [illegible] ಯ್ಯಂಗಾರ್	ಜಾಯಿಂಟ್ ಸೆಕ್ರಟರಿಗಳು

ಸಂಜೀವಿನಿ ಔಷಧಾಲಯ, ಮೈಸೂರು.

23 21

ಎ. ಎಸ್ ಕುಮಾರ್ಯವರ ದಿವ್ಯೌಷಧಗಳು

[illegible] —ಮೇಹ, ನಿಮಿತ್ತಕ ಏಮ್ಯಾಧಿಗಳ, ನಿಶ್ಶಕ್ತಿ, ರಕ್ತದೋಷ ಚರ್ಮವ್ಯಾಧಿ ಜೋಮು ವಾಯುರೋಗಗಳೂ ಹಳೇ ಜ್ವರ ಕ್ಷಯ, ಅಜೀರ್ಣ [illegible] ನಿದ್ರಾಭಂಗ, ತಲೆಭಾರ, ಮಲಬಂಧ, ಬಾಧಿ [illegible] ಮುಂತಾದ [illegible] ಗುಣಪಡಿಸಿ, ದೇಹದಲ್ಲಿ [illegible] ರಕ್ತಪುಷ್ಟಿಗಳನ್ನು ಹೆಚ್ಚಿಸಿ [illegible] ಇಂದ್ರಿಯ [illegible] ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

[illegible] ಜ್ವರಗಳೂ, ಪ್ಲೇಗು ಉಷ್ಣವಾಯು [illegible], ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದ್ದಾರೆ [illegible] ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ [illegible] ರೂಪಾಯಿ

[illegible] ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ [illegible] ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

[illegible] —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು ತಲೆನೋವು [illegible] ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ [illegible] ದೃಷ್ಟಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ [illegible] ೧ಕ್ಕೆ ೪ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ವಿಷಯಗಳೂ [illegible] ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ [illegible] ಮತ್ತು [illegible] ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ

ಡಿ. ಕೆ ಸ್ವಾಮಿ,

ಪ್ರೊಪ್ರೈಟರ್

ಆಹಾಯದ ಕುರುಹುಗಳು

ಸ್ವಾಭಾವಿಕವಾಗಿ [illegible] ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು [illegible]

[illegible] ಇದರ [illegible] ಅವನು ಬೇಗನೆ [illegible]

SCOTT'S EMULSION 6 31

(ಸ್ಕಾಟ್ಸ್ ಎಮಲ್ಷನ್)

[illegible] ಕುರುಹುಗಳನ್ನು ಹೋಗಲಾಡಿಸುವದು

[illegible] ಬಲ [illegible] ಕೊಡುತ್ತದೆ

ಕೈಮೀನ್ ಮತ್ಸ್ಯ ತಯಾರಿಸಲ್ಪಟ್ಟಿದೆ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S COLIC CHOLERA

AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



ಈ ಹೊಟ್ಟೆಯ ನೋವು, ಒರ[illegible] ಬೇದಿಯಾಗುವುದು ಆಮಶಂಕೆ, ವಾಂತಿಭೇದಿ ಉಪದ್ರ [illegible] ಕರುಳುಗಳ ನೋವು, ಹೊಟ್ಟೆ ಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ತೊಟ್ಟು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಾ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರವು [illegible] ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ ಬೆನ್ನಲ್ಲಿ ಛಳುಕು [illegible] ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಣ್ಣವಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು ಶಕ್ತಿಹೀನ, ಗಾಬರಿ ಕಣ್ಣು ಮಬ್ಬು ತಲೆ ತಿರುಗುವಿಕೆ, ಮೈ[illegible] ಕೀಲುನೋವು [illegible] ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರ[illegible] ವಾಯು ಮೈಬಾವು ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ಥಿಯುರ್[illegible] [illegible] ರೋಗಗಳಿಂದ ಸಂಬಂಧಪಟ್ಟಿರುವ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸಂಪಡಿ[illegible] ರಕ್ತದಿಂದ ಮೂತ್ರದ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69 12]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨ ೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦ ೮ ೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ೩೦ ಪಿ ಒ ಬಾಕ್ಸ್ ಬೊಂಬಾಯಿ ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible] 1909 ರಿಂದ [illegible] —7—1909 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ		–	1	0	0
ಮೈಸೂರು		15	11	1	0
ಬೆಂಗಳೂರು ಡಿಸ್ಟ್ರಿಕ್ಟು		1	0	1	0
ಮೈಸೂರು	,,	35	21	1	0
ಕೋಲಾರ್	,,	1	0	1	0
ಕೋಲಾರ್ ಚಿನ್ನದ ಗಣಿಗಳು		1	0	0	1
ತುಮಕೂರು ಡಿಸ್ಟ್ರಿಕ್ಟು		•	•	1	0
ಹಾಸನ		0	0	1	0
ಚಿತ್ರದುರ್ಗ	,,	0	1	1	1
ಕಡೂರ್	,	12	9	0	0
ಶಿವಮೊಗ್ಗಾ	,,	7	2	9	1
• ಕೂಡಿಸಿದ್ದು	ಜುಮ್ಲಾ	105	76	9	4

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಆಗಸ್ಟು ತಾ 14 ಕ್ಕೆ ಮುಗಿದ ಒಂದು ವಾರದ ರಿಪೋರ್ಟ್

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಾರ್ಥ ಹಾಯ ಪಡೆದ ಜನರು
ಬೆಂಗಳೂರು	80	67		295	
ಕೋಲಾರ	182	225	19	908	
ತುಮಕೂರು	61	59	11	278	
ಮೈಸೂರು					
ಹಾಸನ	251	301	8	1,649	
ಶಿವಮೊಗ್ಗ					
ಕಡೂರು				35	
ಚಿತ್ರದುರ್ಗ	116	205	18	117	
ಮಾಗಡಿ [illegible]	415	345		701	
ಸ್ಯಾನಿಟರಿ					
ಒಟ್ಟು	1,162	1,203	733	9,381	

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ [illegible] ಗುರುವಾರದಿಂದ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಆಗಸ್ಟು ಮತ್ತು ಸಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ [illegible]
26	ಗುರು	[illegible]	26 [illegible]	ಮೂ	11 2	11
27	ಶುಕ್ರ	ಏಕಾದಶಿ	26 18	[illegible]	11 2	12
28	ಶನಿ	ದ್ವಾದಶಿ	21 18	[illegible]	11 18	13
29	ರವಿ	[illegible]	21 18	[illegible]	12 3	14
30	ಸೋಮ	ಚತುರ್ದಶಿ	17 [illegible]	[illegible]	[illegible]	15
31	ಕುಜ	[illegible]	12 [illegible]	[illegible]	[illegible]	16
1	ಬುಧ	[illegible]	[illegible]	[illegible]	[illegible]	17

[illegible]

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	[illegible]	[illegible]
ಕೆಂಪುಬತ್ತ ಅಕ್ಕಿ ಅವಲ್		[illegible]	[illegible]
,, ದುಯಂ		[illegible]	[illegible]
ಜಾಬ್ರಾನೆ ಅಕ್ಕಿ		[illegible]	[illegible]
ಸಣ್ಣಕ್ಕಿ ಅವಲ್		[illegible]	[illegible]
,, ದುಯಂ		[illegible]	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ		[illegible]	[illegible]
,, ದುಯಂ		[illegible]	[illegible]
ಹೈಕ ರಾಗಿ ಪಲ್ಲಾ ೧ಕ್ಕೆ		[illegible]	[illegible]
ಕಾರಾಗಿ		[illegible]	[illegible]
ಜೋಳ		[illegible]	[illegible]
ಹುಲಸಂದೆ ಪಲ್ಲಾ ೧ಕ್ಕೆ		[illegible]	[illegible]
ಬಿಳೀ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು ಸೇರು ೧೦೦ಕ್ಕೆ		[illegible]	[illegible]
ಹುರುಳಿ		[illegible]	[illegible]
ಹರಳು ೧೦೦ ಸೇರಿಗೆ		[illegible]	[illegible]
ಸೀಗೆ ಕಾಯಿ ಮಣ ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
,, ದುಯಂ		[illegible]	[illegible]
ಬೆಲ್ಲ ದೊಡ್ಡ ಅಚ್ಚು		[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ		[illegible]	[illegible]
ಹರಳೆಣ್ಣೆ		[illegible]	[illegible]
ಕೊತ್ತಂಬರಿ ಪಲ್ಲಾ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೇ ಹಣ್ಣು		[illegible]	[illegible]
,, ಹಳೇದು		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		[illegible]	[illegible]
ತೆಂಗಿನಕಾಯಿ ೧೦೦ ಕ್ಕೆ		[illegible]	[illegible]
ಅಳಲೇಕಾಯಿ ಮಣ ೧ಕ್ಕೆ		[illegible]	[illegible]
ಅಂಟ್ವಾಳಗ ಕಾಯಿ ಮಣ ೧ಕ್ಕೆ		[illegible]	[illegible]
ಚಿನ್ನ (ಪವನ್) ಕೆಂಪು		[illegible]	[illegible]
,, ,, ಪಸಿಮೆ		[illegible]	[illegible]
,, ,, ಗಟ್ಟಿ ತೊಲ ೧ಕ್ಕೆ	..	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	[illegible]	[illegible]

ಕುರುಡಳೂ, ಕಿವುಡಳೂ ಮತ್ತು ಮೂಕಳೂ ಆದ ಹೆಲೆನ್ ಕೆಲರ್ ಎಂಬ ವಿದ್ಯಾರ್ಥಿನಿಯ ಚರಿತ್ರೆ

[ಕಳೆದ ವಾರದ ಶೇಷ]

ಇದಲ್ಲದೆ ಹೆಲೆನ್ ಇತರ ಪಾಠಗಳನ್ನೂ ಸಹಾ ಆರಂಭಿಸಿದಳು. ಭೂಗೋಳ ಪಾಠವನ್ನು ಸಮೀಪದಲ್ಲಿದ್ದ ನದಿಯ ಹತ್ತರ ಆಟದಲ್ಲಿಯೇ ಕಲಿತುಕೊಂಡಳು. ಜಣಜುಕಲ್ಲುಗಳಿಂದ ಕಟ್ಟೆಗಳನ್ನು ಕಟ್ಟುತ್ತಾ, ಮಣ್ಣಿನಲ್ಲಿ ದ್ವೀಪಗಳನ್ನು ಮತ್ತು ಸರೋವರಗಳನ್ನು ಮಾಡುತ್ತಾ, ನದಿಯ ಪಾತ್ರಗಳನ್ನು ತೆಗೆಯುತ್ತಾ, ಜೇಡಿ ಮಣ್ಣಿನಲ್ಲಿ ಸ್ಪರ್ಶಕ್ಕೆ ತಿಳಿಯುವಂತೆ ಸಾಲುಪರ್ವತಗಳನ್ನು ಮತ್ತು ಕಣಿವೆಗಳನ್ನು ರೂಪಿಸುತ್ತಾ, ಕಿತ್ತಲೆ ಹಣ್ಣಿನ ಮೂಲಕ ಧೃವಗಳನ್ನೂ ವಲಯಗಳನ್ನೂ ಕೂಡ ಕಲಿತುಕೊಳ್ಳುತ್ತಾ, ಇದು ಪಾಠವೆಂದು ಭಾವಿಸದೇನೇ ಉಪಾಧ್ಯಾಯಳ ಸಂಗಡ ಸಂತೋಷವಾಗಿ ಕಾಲಕ್ಷೇಪಮಾಡುತ್ತಿದ್ದಳು. ಉಪಾಧ್ಯಾಯಳು ಅಗ್ನಿಪರ್ವತಗಳೂ, ನೆಲದಲ್ಲಿ ಮುಚ್ಚಿಹೋದ ಪಟ್ಟಣಗಳೂ, ಹಿಮದ ಗಡ್ಡೆಯ ನದಿಗಳೂ ಇವೇ ಮೊದಲಾದ ಆಶ್ಚರ್ಯಗಳೊಡನೆ ಕೂಡಿದ ನಮ್ಮ ಆಧಾರವಾದ ಭೂಮಂಡಲವನ್ನು ವರ್ಣಿಸುತ್ತಿದ್ದಳು. ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳನ್ನೂ ಕೂಡಾ ಇದೇ ಸಂತೋಷವಾದ ರೀತಿಯಲ್ಲಿ ಪಾಠವಹಿಸಿದಳು. ಗಣಿತ ಮಾತ್ರ ಅವಳಿಗೆ ಇಷ್ಟವಿರಲಿಲ್ಲ. ಆದರೆ ಇದರಲ್ಲಿಯೂ ಕೂಡಾ ಉಪಾಧ್ಯಾಯಳ ಅನುರಾಗದಿಂದಲೂ ವಿವೇಕದಿಂದಲೂ ಕಷ್ಟವೆಲ್ಲವೂ ಕಡಮೆಯಾಯಿತು.

ಮಿಸ್ ಸಲಿವನಳು ಬಂದ ಮೂರು ವರುಷಗಳವರಿವಿಗೆ ಹೆಲೆನಳು ಬಾಯಿಯಿಂದ ಮಾತನಾಡಲಿಲ್ಲ. ಕಾರಣವೇನಂದರೆ, ಅವಳು ಚಿಕ್ಕಂದಿನಿಂದ ಕಿವುಡಳಾಗಿ ಇತರರು ಉಚ್ಚರಿಸಿದಂಥಾ ಶಬ್ದಗಳನ್ನು ಕೇಳದೆ ಇದ್ದುದರಿಂದ ತಾನೇ ಆ ಶಬ್ದಗಳನ್ನು ಉಚ್ಚರಿಸುವುದಕ್ಕೆ ಆಗದೆ ಹೋಯಿತು. ಆದರೆ ಮಾತನಾಡತಕ್ಕ ಶಕ್ತಿಯು ಅವಳಿಗೆ ಇಲ್ಲದೆ ಇರಲಿಲ್ಲ. ಇತರರು ಬಾಯಿಯಿಂದ ಹೊರತು ತನ್ನಹಾಗೆ ಕೈಯಿಂದ ಸಂಭಾಷಣೆ ಮಾಡುವುದಿಲ್ಲವೆಂದು ತಿಳಿದ ಕೂಡಲೆ ತಾನೇ ಹೇಗಾದರೂ ಬಾಯಿಯಿಂದ ಮಾತನಾಡಬೇಕೆಂದು ದೃಢವಾಗಿ ಮನಸ್ಸುಮಾಡಿದಳು. ಕಿವುಡರಿಗೆ ಮಾತನಾಡುವುದನ್ನು ಕಲಿಸುವುದಕ್ಕೆ ತನಗೆ ಆಗಲಾರದೆಂದು ತಿಳಿದುಕೊಂಡು ಮಿಸ್ ಸಲಿವನಳು ೧೮೯೦ ನೇ ಇಸವಿಯ ಪ್ರಾರಂಭದಲ್ಲಿ ತನ್ನ ವಿದ್ಯಾರ್ಥಿನಿಯನ್ನು ಬಾಸ್ಟನ್ ಪಟ್ಟಣಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಹೆಲೆನಳು ಕಿವುಡರಿಗೆ ಸ್ಥಾಪಿಸಿದ್ದಂಥ ಒಂದು ಪಾಠಶಾಲೆಯಲ್ಲಿ ಕೆಲವು ದಿವಸ ಮಾತ್ರ ಇದ್ದು ಶಬ್ದವಿಶೇಷಗಳನ್ನೆಲ್ಲಾ ಅಭ್ಯಾಸಮಾಡಿದಳು. ಇದು ಬಹು ಪ್ರಯಾಸಕರವಾದಾಗ್ಯೂ ಧೈರ್ಯದಿಂದಲೂ ಮತ್ತು ದೃಢಮನಸ್ಸಿನಿಂದಲೂ ಸ್ವಲ್ಪಕಾಲದಲ್ಲಿಯೇ ಸಾರ್ಥಕವಾಯಿತು. ಇನ್ನು ಮೇಲೆ ತನ್ನ ಪ್ರಿಯಳಾದ ತಾಯಿಯೊಡನೆ ಮಾತನಾಡಿ ಆಕೆಯು ಹೇಳಿದ ಉತ್ತರಗಳನ್ನು ತಾನು ಬಾಯಿಯನ್ನು ಸ್ಪರ್ಶಿಸಿ ತಿಳಿದುಕೊಳ್ಳಬಹುದೆಂತಲೂ ತನ್ನ ತಂಗಿಯೂ ಕೂಡಾ ತಾನು ಹೇಳಿದ್ದನ್ನು ತಿಳಿಯುವಳೆಂತಲೂ ಅವಳು ಅರಿತದ್ದೇ ಈ ಮಿತಿಯಿಲ್ಲದ ಪ್ರಯಾಸಕ್ಕೆ ಆಧಾರವಾಯಿತು. ಬಾಯಿ ಮಾತನ್ನು ಕಲಿತುಕೊಂಡ ಮೇಲೆ ಇದೇ ಸುಲಭವೆಂದು ತಿಳಿದುಕೊಂಡು ಕೈಮಾತನ್ನು ಬಹುಮಟ್ಟಿಗೆ ಬಿಟ್ಟುಬಿಟ್ಟಳು.

ಬಾಸ್ಟನ್ ಪಟ್ಟಣದಲ್ಲಿ ಮಾತನಾಡುವ ಅಭ್ಯಾಸಮಾಡಿ ಎಷ್ಟೋ ಸಂತೋಷದಿಂದ ಪುನಃ ಮನೆಗೆ ಬಂದಳು. ಈ ವಿಷಯದಲ್ಲಿ ತಾನೇ ಹೇಳುವುದೇನಂದರೆ "ಕೊನೆಗೆ ಅತ್ಯಂತ ಸಂತೋಷವಾದ ಕಾಲವು ಒದಗಿತು. ಮನೆಗೆ ಬಂದು ಸೇರುವ ಪ್ರಯಾಣಾಂತರವೂ ಮಾತನಾಡುವುದನ್ನು ಅಭ್ಯಾಸ ಮಾಡಿ ಅಭಿವೃದ್ಧಿ ಹೊಂದಿದೆನು. ಮಿಸ್ ಸಲಿವನಳೊಡನೆ ಎಡೆಬಿಡದೆ ಸಂಭಾಷಣೆ ಮಾಡುವುದರಲ್ಲಿಯೇ ನನ್ನ ಪ್ರಯಾಣವೆಲ್ಲಾ ಕಳೆಯಿತು. ಇದ್ದಕ್ಕಿದ್ದಹಾಗೆ ರೈಲ್ ಬಂಡಿಯು ಟಸ್ಕಂಬಿಯಕ್ಕೆ ಬಂತು. ನಮ್ಮ ಕುಟುಂಬದವರೆಲ್ಲರೂ ಕಾದುಕೊಂಡಿದ್ದರು. ನನ್ನ ತಾಯಿಯು ನಾನು ಹೇಳಿದ ಪ್ರತಿಯೊಂದು ಮಾತನ್ನೂ ಗ್ರಹಿಸಿ, ಅತ್ಯಾನಂದವಿವಶಳಾಗಿ ಸುಮ್ಮನೆ ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡಳು. ನನ್ನ ತಂಗಿಯಾದ ಚಿಕ್ಕ ಮಿಲ್ಡ್ರೆಡಳು ನನ್ನ ಕೈಹಿಡಿದು ಅದಕ್ಕೆ ಮುತ್ತಿಕ್ಕಿ ಕುಣಿದಾಡಿದಳು. ನನ್ನ ತಂದೆಯು ತನ್ನ ಕೋರಿಕೆ ನೆರವೇರಿತೆಂದು ಮಮತೆಯುಳ್ಳವನಾಗಿ ಏನೂ ಹೇಳದೆ ಬಹಳ ಹೊತ್ತಿನವರೆಗೂ ಮೌನದಲ್ಲಿದ್ದನು. ಈ ವಿಷಯಗಳನ್ನು ನೆನೆಸಿಕೊಂಡಾಗೆಲ್ಲಾ ನನಗೆ ಕಣ್ಣೀರು ಬರುತ್ತದೆ. 'ಬೆಟ್ಟಗಳೂ ಗುಡ್ಡಗಳೂ ನಿಮ್ಮ ಮುಂದೆ ಹರ್ಷಧ್ವನಿ ಎತ್ತುವುವು, ಕಾಡಿನ ಮರಗಳೆಲ್ಲಾ ಕೈತಟ್ಟುವುವು' ಎಂದು ಪ್ರವಾದಿಯಾದ ಯೆಶಾಯನು ಹೇಳಿದ್ದು ನನ್ನ ವಿಷಯದಲ್ಲಿ ನೆರವೇರಿದ ಹಾಗಾಯಿತು" ಎಂಬುವುದೇ.

ಆಗಿನಿಂದ ಓದುವುದರಲ್ಲಿಯೂ ಪದ್ಯಗಳನ್ನು ಬಾಯಿಯಲ್ಲಿ ಹೇಳುವುದರಲ್ಲಿಯೂ ಅಭ್ಯಾಸ ಮಾಡಿ ಮಾಡಿ, ಮಾತನಾಡುವುದರಲ್ಲಿ ಅಭಿವೃದ್ಧಿಹೊಂದುತ್ತಾ ಬಂದಳು.

ಅವಳಿಗೆ ಹದಿಮೂರು ವರುಷಗಳಾದಾಗ ತಂದೆ ತಾಯಿಗಳು ಅವಳಿಗೆ ಪಾಠಗಳನ್ನು ಕಮ್ಮಿಪಡಿಸಿ, ಮುಂದಿನ ವರುಷ ಅವಳನ್ನು ನ್ಯೂಯಾರ್ಕ್ ಪಟ್ಟಣದ ಕಿವುಡರ ಪಾಠಶಾಲೆಗೆ ಕಳುಹಿಸಿದರು. ಎರಡು ವರುಷಗಳ ವರೆಗೆ ಅಲ್ಲಿ ಓದಿ, ಅಲ್ಲಿಂದ ಒಂದು ಸಾಧಾರಣವಾದ ಪಾಠಶಾಲೆಗೆ ಹೋಗಿ ಹೇಳಕೂಡದಷ್ಟು ತೊಂದರೆಗಳನ್ನು ಜಯಿಸಿ ಎಲ್ಲಾ ಪರೀಕ್ಷೆಗಳಲ್ಲಿಯೂ ತೇರ್ಗಡೆ ಹೊಂದಿದಳು. ಕೊನೆಗೆ ೧೯೦೦ ನೇ ಇಸವಿಯಲ್ಲಿ ರಾಡ್‌ಕ್ಲಿಫ್ ಕಾಲೇಜಿನಲ್ಲಿ ಸೇರಿಕೊಂಡು, ಇನ್ನೂ ಅನೇಕ ತರಹವಾದ ವಿದ್ಯೆಗಳನ್ನು ಕಲಿತು ತನಗೆ ಚಿಕ್ಕಂದಿನಿಂದ ಇದ್ದ ಇಚ್ಛೆಯನ್ನು ನೆರವೇರಿಸಿಕೊಂಡಳು. ಗಣಿತ, ಕಾವ್ಯ, ಚರಿತ್ರೆ, ತತ್ವಜ್ಞಾನ ಈ ಮುಂತಾದವುಗಳನ್ನು ಮಾತ್ರವಲ್ಲದೆ ಜರ್ಮನ್, ಫ್ರೆಂಚ್, ಲಾಟಿನ್, ಗ್ರೀಕ್ ಭಾಷೆಗಳನ್ನೂ ಕೂಡಾ ಕಲಿತಿರುವಳು.

ಇದರಕ್ಕೆಲ್ಲಾ ಮಿಸ್ ಸಲಿವನಳು ಯಾವಾಗಲೂ ಅವಳಿಗೆ ಸಹಾಯಕಳಾಗಿದ್ದಳು. ಕಾಲೇಜಿನಲ್ಲಿ ತಾನು ಪಂಡಿತರ ಉಪನ್ಯಾಸಗಳನ್ನು ಕೇಳಿ ಕೈ ಅಕ್ಷರಗಳಲ್ಲಿ ತನ್ನ ವಿದ್ಯಾರ್ಥಿನಿಗೆ ತಿಳಿಸುವುದು ಮಾತ್ರವಲ್ಲದೆ ಪಾಠದ ಪುಸ್ತಕಗಳನ್ನು ಸಹ ತಾನು ಓದಿ ಅವುಗಳ ವಿಷಯಗಳನ್ನು ತಿಳಿಯಪಡಿಸಬೇಕಾಯಿತು.

ಹೆಲೆನ್ ಕೆಲರಳ ದೈವ ಭಕ್ತಿಯ ವಿಷಯದಲ್ಲಿ ತಿಳಿಸುವುದು ಕಷ್ಟ. ಆದರೆ ದೇವರ ಒಳ್ಳೇ ಪ್ರೇರಣೆಯು ಅವಳಿಗೆ ಪ್ರಾಪ್ತವಾಗಿರುವುದರಲ್ಲಿಯೂ, ಇದರಿಂದ ಅವಳ ಸ್ವಭಾವವು ಬಹಳ ಮಟ್ಟಿಗೆ ಬದಲಾವಣೆಯಾಗಿರುವುದರಲ್ಲಿಯೂ ಏನೇನೂ ಸಂದೇಹವಿಲ್ಲ. ಪುಸ್ತಕಗಳನ್ನು ಓದುವುದರಿಂದಲೂ ಇತರರೊಡನೆ ಮಾತನಾಡುವುದರಿಂದಲೂ ತಿಳುವಳಿಕೆಯು ಉಂಟಾದಾಗಿನಿಂದ ದೇವರ ಮತ್ತು ಆತನ ಸೃಷ್ಟಿಯ ವಿಷಯದಲ್ಲಿ ಬಹಳವಾಗಿ ಯೋಚನೆ ಮಾಡಿ ಅನೇಕಾನೇಕ ಪ್ರಶ್ನೆಗಳನ್ನು ಮಾಡುತ್ತಾ ಬಂದಳು. ಹತ್ತು ವರುಷಗಳಾದಾಗ ಈ ಕೆಳಗಿರುವ ಚಮತ್ಕಾರವಾದ ಪ್ರಶ್ನೆಗಳನ್ನು ಬರೆದಳು —

1 ಭೂಮಿ, ಸಮುದ್ರ ಮತ್ತು ಎಲ್ಲವನ್ನು ಉಂಟುಮಾಡಿದವರು ಯಾರು?

2 ಸೂರ್ಯನು ಬಿಸಿಯಾಗಿರುವುದಕ್ಕೆ ಕಾರಣವೇನು?

3 ನಾನು ತಾಯಿಯ ಬಳಿಗೆ ಬರುವುದಕ್ಕೆ ಮುಂಚೆ ಎಲ್ಲಿದ್ದೆನು?

4 ಭೂಮಿಯು ಅಪಾರ ವಿಸ್ತಾರವುಳ್ಳದ್ದಾಗಿಯೂ ಭಾರವುಳ್ಳದ್ದಾಗಿಯೂ ಇದೆಯಲ್ಲವೇ? ಅದು ಬೀಳದೆ ನಿಂತಿರುವುದು ಏತಕ್ಕೆ?

5 ಸೃಷ್ಟಿಕರ್ತನಾದ ತಂದೆಯು ಮಾಡುವುದು ಏನನ್ನಾದರೂ ನನಗೆ ತಿಳಿಸಬೇಕು.

6 ಬೈಬಲ್ ಪುಸ್ತಕವನ್ನು ನಾನು ಓದ ಬಹುದೋ?

ಈ ಪ್ರಶ್ನೆಗಳ ಜೊತೆಗೆ "ನಿಮಗೆ ಹೆಚ್ಚಾಗಿ ಪುರಸತ್ತು ಇರುವಾಗ ದಯವಿಟ್ಟು ನಿಮ್ಮ ಚಿಕ್ಕ ವಿದ್ಯಾರ್ಥಿನಿಯಾದ ನನಗೆ ಅನೇಕ ಸಂಗತಿಗಳನ್ನು ತಿಳಿಸಬೇಕು" ಎಂದು ಬರೆದಳು. ಇಷ್ಟಾದ ಮೇಲೆ ಅವಳಿಗೆ ಮತವಿಚಾರವನ್ನು ಸ್ಪಷ್ಟವಾಗಿ ಉಪದೇಶಿಸುವುದಕ್ಕೆ ತೊಡಗಿದರು.

[ಸಶೇಷ]

ವ್ಯವಸಾಯ ವಿಚಾರಗಳು.

೧ ಮುಸುಕಿನ ಜೋಳ.

ಮುಸುಕಿನ ಜೋಳ ಮೊದಲು ಇಂಡಿಯಾ ದೇಶದಲ್ಲಿ ಇರಲಿಲ್ಲ. ಅಮೆರಿಕಾ ದೇಶವನ್ನು ಕಂಡುಹಿಡಿದ ಮೇಲೆ, ಅಲ್ಲಿಂದ ಇದರ ಬೀಜವನ್ನು ತಂದು ಇಂಡಿಯಾ ದೇಶದಲ್ಲೆಲ್ಲಾ ಪ್ರಚಾರ ಮಾಡಿದ್ದಾಗಿ ತಿಳಿಯಬರುತ್ತದೆ. ಈ ಪಸಲು ಬ್ರಿಟಿಷ್ ಇಂಡಿಯಾದಲ್ಲಿ ೬೦ ಲಕ್ಷ ಎಕರೆಗಳಲ್ಲಿ ಬೆಳೆಯುತ್ತಾರೆ. ಉತ್ತರದೇಶ ಅಂದರೆ ಬಂಗಾಳಾ ಮೊದಲಾದ ದೇಶಗಳಲ್ಲಿ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಈ ಜೋಳವನ್ನು ಜನರು ಮುಖ್ಯ ಆಹಾರವನ್ನಾಗಿ ಉಪಯೋಗಿಸುತ್ತಾರೆ. ಈ ಫಸಲನ್ನು ವೈಶಾಖ ಕಾರ್ತೀಕ ಮಾಸಗಳಲ್ಲಿ ಬೆಳೆಯುವುದುಂಟು. ಈ ಎರಡು ಬಗೆಯಲ್ಲಿಯೂ ಕೆಂಪು, ಅರಿಸಿನಬಣ್ಣ, ಮತ್ತೂ ಬಿಳುಪು ಎಂಬ ಮೂರು ವಿಧಗಳು ಇರುತ್ತವೆ. ಅಲ್ಲದೆ ಕರೀಬಣ್ಣದ ಮುಸುಕಿನ ಜೋಳ ಸಹಾ ಉಂಟು. ಈ ಪಸಲನ್ನು ಅತಿ ಉಷ್ಣ ದೇಶದಲ್ಲಿಯೂ ಮತ್ತೂ ಶೀತ ರಾಜ್ಯದಲ್ಲಿಯೂ ಬೆಳೆಯುತ್ತಾರೆ. ಈ ಮುಸುಕಿನ ಜೋಳದ ಶ್ರೇಷ್ಠವಾದ ಬೀಜವು ಅಮೆರಿಕಾ ದೇಶದಲ್ಲಿ ದೊರೆಯುವುದು. ಆದರೆ ಅಲ್ಲಿಂದ ತಂದ ಬಿತ್ತವನ್ನು ಇಂಡಿಯಾ ದೇಶದಲ್ಲಿ ಹಾಕಿದರೆ ಅದು ಕೆಲವು ದಿವಸಗಳಲ್ಲಿ ಇಂಡಿಯಾ ದೇಶದಲ್ಲಿ ಬೆಳೆಯುವ ಮುಸುಕಿನ ಜೋಳದಂತೆ ಆಗುತ್ತದೆ. ಆದ್ದರಿಂದ ಈ ಬಿತ್ತವನ್ನು ಅಮೆರಿಕಾ ದೇಶದಿಂದ ತರುವುದು ಅಷ್ಟೇನೂ ಉಪಯುಕ್ತವಾಗಿ ಕಾಣುವುದಿಲ್ಲ. ಈ ಜೋಳದಲ್ಲಿ ವಿಶೇಷವಾಗಿ ಎಣ್ಣೆ ಉಂಟು. ಇದು ಸಾಮಾನ್ಯವಾಗಿ ಸಿಹಿ ಗುಣವುಳ್ಳದ್ದು. ಇದರಲ್ಲಿ ಸುಟ್ಟು ತಿನ್ನುವುದಕ್ಕೆ ಯೋಗ್ಯವಾದದ್ದು ಬಿಳೀ ಜೋಳ. ಈ ಪಸಲು ಹಾಕಿದ ಮೂರು ತಿಂಗಳ ಲಾಗಾಯ್ತು ಆರು ತಿಂಗಳವರಿಗೂ ಕೈಗೂಡುತ್ತೆ. ಒಂದು ತಾಳಿನಲ್ಲಿ ಒಂದರ ಲಾಗಾಯ್ತು ೪-೫ ರ ವರಿಗೆ ತೆನೆಗಳು ಬಿಡುವುದುಂಟು. ಇದರ ಕಡ್ಡಿಯನ್ನು ಒಣಗಿದ ಮೇಲೆ ದನಗಳು ತಿನ್ನುವುದಿಲ್ಲ. ಈ ಕಡ್ಡಿಯನ್ನು ಯಂತ್ರಗಳ ಮೂಲಕ ಪುಡಿಮಾಡಿ ಇದರಲ್ಲಿ ಒಂದು ತರಹ ಕಾಗದವನ್ನು ತಯಾರುಮಾಡುತ್ತಾರೆ.

ಮುಸುಕಿನ ಜೋಳವನ್ನ ಬೇಯಿಸಿ ಅನ್ನ ಮಾಡುವುದುಂಟು. ಮತ್ತೂ ಇದನ್ನು ಬೀಸಿ ಹಿಟ್ಟು ಮಾಡಿ ಅನಂತರ ರೊಟ್ಟಿಸುಟ್ಟು ಜನಗಳು ತಿನ್ನುತ್ತಾರೆ. ಇದನ್ನು ದನಗಳಿಗೆ ಹಿಟ್ಟು ರೂಪವಾಗಿ ಕೊಡುವುದುಂಟು. ಈ ಪಸಲು ಭೂಮಿಯಿಂದ ಬಹಳ ಸಾರವನ್ನು ಎಳೆಯುತ್ತವೆ. ಆದ್ದರಿಂದ ಯಾವಾಗ್ಯೂ ಈ ಫಸಲನ್ನು ಬಹಳ ಶಕ್ತಿಯಾಗಿರುವ ಭೂಮಿಯಲ್ಲಿ ಅಥವಾ ಗೊಬ್ಬರವನ್ನು ಬಹಳವಾಗಿ ಹಾಕಿ ಬೆಳೆಯಬೇಕು. ಕೆಲವು ಸೀಮೆಗಳಲ್ಲಿ ಈ ಪಸಲನ್ನು ಒಂದೇ ಜಮೀನಿನಿಂದ ಒಂದು ವರ್ಷಕ್ಕೆ ಮೂರು ಸಲ ತೆಗೆಯುತ್ತಾರೆ.

ಈ ಫಸಲು ಸಾಮಾನ್ಯವಾಗಿ ಕೆಲ್ಲು ಅಥವಾ ಗ್ರಾವಲು ಜಮೀನಿನಲ್ಲಿ ಬಹಳ ಚನ್ನಾಗಿ ಬೆಳೆಯುತ್ತದೆ. ಈ ಪಸಲಿಗೆ ಹೆಚ್ಚಾಗಿ ನೀರು ಬೇಕಿಲ್ಲ. ಬರ ಭೂಮಿಯಲ್ಲಿ ಈ ಫಸಲು ಚನ್ನಾಗಿ ಬೆಳೆಯುವುದಾಗಿ ಅನುಭವದಿಂದ ಗೊತ್ತಾಗುತ್ತದೆ. ಇದಕ್ಕೆ ಸಾಮಾನ್ಯ ಜೋಳದ ಹಾಗೆಯೇ ತ್ಯಾವ ಬೇಕಾಗಿದೆ. ವೈಶಾಖ ಫಸಲಾಗಿ ಬೆಳೆದರೆ ನೀರು ಹಾಯಿಸಬೇಕು. ಚನ್ನಾಗಿ ಬರವುಳ ಉತ್ತು ಪಾಕವಾಗಿರುವ ಜಮೀನಿನಲ್ಲಿ ಮುಂಗಾರು ಮಳೆ ಬಿದ್ದ ಕೂಡಲೆ ಒಂದೂವರೆ ಅಥವಾ ಎರಡು ಅಂಗುಲ ಕಡ ಉಳಬೇಕು. ಒಂದು ಕಡಕಕ್ಕೂ ಮತ್ತೊಂದು ಕಡಕಕ್ಕೂ ಮಧ್ಯೆ ಒಂದೂವರೆ ಅಡಿ (ಅಂದರೆ, ಒಂದು ಮೊಳದಷ್ಟು) ಸ್ಥಳ ಬಿಡಬೇಕು. ಒಂದು ಕಡದಲ್ಲಿ ಮೊಳಕ್ಕೆ ಒಂದರಂತೆ ಬಿತ್ತಬೇಕು. ಚನ್ನಾಗಿ ಬೆಳೆದ ಮೇಲೆ ಇದನ್ನು ಆಗದು ಕಳೆ ಕೀಳಬೇಕು. ಇದನ್ನು ನಾವು ಜೋಳ ಬಿತ್ತುವ ಕಾಲದಲ್ಲಿಯೇ ಬಿತ್ತಿದರೆ ಒಳ್ಳೇದು. ಈ ಜೋಳದ ಪೈರಿಗೆ ಹೆಚ್ಚು ಮಳೆಯಾದರೆ ಕೆಟ್ಟುಹೋಗುತ್ತದೆ. ಒಂದು ಮೊಳದಷ್ಟು ಎತ್ತರವಾದ ಮೇಲೆ ಹೆಚ್ಚಾಗಿ ಮಳೆ ಬಂದರೂ ಬಾಧಕವಿಲ್ಲ. ಪಸಲು ಗೇಣುದ್ದ ಬೆಳೆದ ಮೇಲೆ ಹರತೆ ಹೊಡೆಯಬಹುದು. ಈ ಪಸಲನ್ನು ಮಾಡುವ ಜಮೀನು ಬಹಳ ಶಕ್ತಿಯುಳ್ಳದ್ದಲ್ಲದಿದ್ದರೆ ಬಿತ್ತುವುದಕ್ಕಿಂತ ಮುಂಚೆ ದನವಿನ ಗೊಬ್ಬರ ಹಾಕಿದ್ದಾಗಿರಬೇಕು. ಇದಕ್ಕೆ ಪೋರುಪ್ಪಿನ ಮಣ್ಣು ಬಹಳ ಒಳ್ಳೇದೆಂದು ಪ್ರಾಜ್ಞರು ಬರೆದು ಇದ್ದಾರೆ.

ಈ ಬೆಳೆಯನ್ನು ಮೈಸೂರು ಸೀಮೆಯಲ್ಲಿ ಬೆಳೆದು ಜೋಳ ಮಾಡಿ ಮಾರುವುದಕ್ಕಿಂತ ತೆನೆಯು ಹಸಿಯಾಗಿದ್ದಾಗಲೇ ಕೊಯಿದು ಮಾರಿದರೆ ಬಹಳ ಫಾಯಿದೆ ಬರುವುದು. ಒಂದು ಎಕರೆಗೆ ನಮ್ಮ ಸೀಮೆಯ ಐದು ಮಣದ ಲಾಗಾಯ್ತು ಎಂಟು ಮಣಗಳಷ್ಟು ಬಿತ್ತನವು ಸಿಕ್ಕುತ್ತದೆ. ಕೆಲವು ಜಮೀನುಗಳಲ್ಲಿ ೩೦ ಮಣದ ಲಾಗಾಯ್ತು ೪೦ ಮಣದವರಿಗೆ ಕಾಳಾಗುವುದುಂಟು. ಈ ಪಸಲಿನಿಂದ ಎಕರೆ ಒಂದಕ್ಕೆ ೩೫ ರೂಪಾಯಿ ಲಾಗಾಯ್ತು ೪೦ ರೂಪಾಯಿವರಿಗೆ ಫಾಯಿದೆ ಬರುತ್ತೆಂದು ಬೆಂಗಳೂರು ಪ್ರಾಂತ್ಯದ ರೈತರಿಂದ ತಿಳಿಯಬಂದಿದೆ. ಈ ಬೀಜ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ತಿಗಳರ ಹತ್ತಿರ ದೊರೆಯುತ್ತದೆ. ಬೇಕಾದವರು ಮೈಸೂರಲ್ಲಿರುವ ಶ್ರೀಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜಕ್ಕೆ ಬರೆದರೆ ತರಿಸಿಕೊಡುತ್ತಾರೆ.

೨. ತಯಾರಿಸಿದ ಗೊಬ್ಬರಗಳು

ಗಿಡಗಳು ಭೂಮಿಯಲ್ಲಿರುವ ಕೆಲವು ಧಾತು ಪದಾರ್ಥಗಳನ್ನು ಹೀರಿ ಆಹಾರವಾಗಿ ಉಪಯೋಗಿಸುತ್ತವೆ. ಈ ಪದಾರ್ಥಗಳು ಜಮೀನಿನಲ್ಲಿದ್ದರೆ ಇದರ ಹುಲುಸು ಚನ್ನಾಗಿರುತ್ತದೆ. ಇವು ಭೂಮಿಯಲ್ಲಿ ಮಿತವಾಗಿರುವ ಕಾರಣ ಸಸ್ಯಾಹಾರವಾಗಿ ಉಪಯೋಗಿಸಲ್ಪಟ್ಟಹಾಗೆಲ್ಲಾ ಇವನ್ನು ಪುನಃ ಭೂಮಿಯಲ್ಲಿ ಒದಗಿಸಲು ತಕ್ಕ ಅನುಕೂಲತೆಗಳನ್ನು ಕಲ್ಪಿಸದೇ ಇದ್ದರೆ, ಅಲ್ಪ ಸ್ವಲ್ಪ ಮಿಕ್ಕ ಈ ಪದಾರ್ಥಗಳು ಗಿಡಗಳಿಗೆ ಸಾಲದೆ ಹೋಗಿ ಪೈರು ಕ್ಷೀಣವಾಗಲು ಕಾರಣವಾಗುತ್ತದೆ. ಆದುದರಿಂದ ದನವಿನ ಗೊಬ್ಬರ, ತಯಾರಿಸಿದ ಗೊಬ್ಬರ, ಅಥವಾ ಹಸೀ ಸಸಿಯ ಗೊಬ್ಬರ ಮುಂತಾದವುಗಳನ್ನು ಜಮೀನಿಗೆ ಹಾಕಿ ಇದರಲ್ಲಿ ಸಸ್ಯಾಹಾರವನ್ನು ಒದಗಿಸುತ್ತಾರೆ.

ದನವಿನ ಗೊಬ್ಬರದಂತೆ ತಯಾರಿಸಿದ ಗೊಬ್ಬರಗಳು ಭೂಮಿಯಲ್ಲಿ ಗಿಡಗಳಿಗೆ ಬೇಕಾಗುವ ವಿಶಿಷ್ಟ ಸಸ್ಯಾಹಾರಗಳನ್ನೂ ಒದಗಿಸಕೊಡುವುದಿಲ್ಲ. ಇವು ಒಂದೆರಡು ಪದಾರ್ಥಗಳನ್ನು ಮಾತ್ರ ಒದಗಿಸುತ್ತವೆ. ಆದುದರಿಂದ ಜಮೀನಿನಲ್ಲಿ ಯಾವ ಪದಾರ್ಥ ಕಡಮೆಯಾಗಿರುವುದೋ ಅದಕ್ಕನುಗುಣವಾಗಿ ತಯಾರಿಸಿದ ಗೊಬ್ಬರವನ್ನು ಬಹಳ ವಿವೇಕದಿಂದ ಚುನಾಯಿಸಿ ಹಾಕಬೇಕು. ಇದಕ್ಕೆ ಉದಾಹರಣೆ ಏನಂದರೆ, ಮರದ ಬೂದಿಯಾದ ಪೊಟಾಷ್ ಎಂಬ ಉಪ್ಪು ಕಡಮೆಯಾಗಿರುವ ಜಮೀನಿಗೆ ರಂಜಕ ಪದಾರ್ಥವನ್ನು ಹಾಕಿದರೆ ರೈತನಿಗೆ ನಷ್ಟವಾಗಿಯೇ ಪರಿಣಮಿಸುತ್ತದೆ.

ತಯಾರಿಸಿದ ಅನೇಕ ಗೊಬ್ಬರಗಳು ಮಳೆಯಿಂದಲೂ ನೀರು ಹಾಯಿಸುವುದರಿಂದಲೂ ಕೊಚ್ಚಿಹೋಗುವ ಸಂಭವವುಂಟು, ಮತ್ತು ಕೆಲವು ಭೂಮಿಯಲ್ಲಿರುವ ಸಣ್ಣ ಅಂಗರಚನೆಗಳಿಂದ ನಾಶ ಹೊಂದಬಹುದು. ಆದ್ದರಿಂದ ಜಮೀನಿಗೆ ಬೇಕಾಗುವುದಕ್ಕಿಂತಲೂ ಹೆಚ್ಚಾಗಿ ಈ ಗೊಬ್ಬರಗಳನ್ನು ಹಾಕಿದರೆ ನಷ್ಟಕ್ಕೆ ಅವಕಾಶವಾಗುತ್ತೆ. ಅಲ್ಲದೆ ಜಮೀನಿಗೆ ಹಾಕಿದ ಗೊಬ್ಬರದ ಪೈಕಿ ಪೈರುಗಳು ಎಷ್ಟು ಉಪಯೋಗಿಸಿಕೊಳ್ಳುತ್ತವೆಯೋ ಅಷ್ಟೇ ಪ್ರಯೋಜನಕರವಾಗಿ ಪರಿಣಮಿಸುತ್ತದೆಯಲ್ಲದೆ ಮಿಕ್ಕವು ಮುಂದಿನ ಬೆಳೆ ಇಡುವವರಿವಿಗೂ ಬಡ್ಡಿಯಿಲ್ಲದ ಬಂಡವಾಳದಂತೆ ಜಮೀನಿನಲ್ಲೇ ನಿಷ್ಪ್ರಯೋಜನವಾಗಿ ಉಳಿಯುತ್ತವೆ. ಈ ಕಾರಣಗಳಿಂದ ತಯಾರಿಸಿದ ಗೊಬ್ಬರಗಳನ್ನು ಜಮೀನುಗಳಿಗೆ ಹಾಕುವ ಭಾಗದಲ್ಲಿ ಮುಖ್ಯವಾಗಿ ತಿಳಿಯಬೇಕಾದ ಅಂಶವೇನೆಂದರೆ, ಜಮೀನಿನಲ್ಲಿ ಇಡಬಹುದಾದ ಬೆಳೆಗೆ ಎಷ್ಟು ಸಸ್ಯಾಹಾರ ಒದಗಬೇಕೋ ಅದಕ್ಕನುಸಾರವಾಗಿಯೇ ಮಿತವರಿತು ತಯಾರಿಸಿದ ಗೊಬ್ಬರವನ್ನು ಹಾಕಬೇಕು. ಇಂಥಾ ಗೊಬ್ಬರಗಳನ್ನು ಹಾಕುವುದು ಪೈರಿಗೆ ಸಸ್ಯಾಹಾರ ಒದಗಿಸುವುದಕ್ಕೇ ಹೊರತು ಜಮೀನನ್ನು ಸಾರಗೊಳಿಸುವುದಕ್ಕಲ್ಲ. ಇಟ್ಟ ಬೆಳೆಗೆ ಕ್ಷಿಪ್ರವಾಗಿಯೇ ಅನುಕೂಲ ಕಂಡುಬರುವ ರೀತಿ ತಕ್ಕಂಥಾ ತಯಾರಿಸಿದ ಗೊಬ್ಬರವನ್ನು ಚುನಾಯಿಸಬೇಕು.

ತಯಾರಿಸಿದ ಗೊಬ್ಬರಗಳಲ್ಲಿ ಕೆಲವು ಜಾಗ್ರತೆಯಾಗಿಯೂ, ಮತ್ತೆ ಕೆಲವು ನಿಧಾನವಾಗಿಯೂ ವ್ಯಾಪಿಸಿ ಪೈರಿಗೆ ಅನುಕೂಲ ಮಾಡುವುದುಂಟು. ಹೇಗೆಂದರೆ ಸೂಪರ್‌ಫಾಸ್ಫೇಟ್ ಎಂಬ ಗೊಬ್ಬರವು ಜಾಗ್ರತೆಯಿಂದ ವ್ಯಾಪಿಸುವುದಾದಕಾರಣ ಇದರ ಗುಣವು, ಗೊಬ್ಬರ ಹಾಕಿದ ಕೂಡಲೆ ಇಡುವ ಪೈರಿನಲ್ಲಿ ಮುಖ್ಯವಾಗಿ ಗೋಚರವಾಗುವುದು. ಎಲುಬಿನ ಪುಡಿಯ ಪರೋ ಬಹಳ ಸಾವಕಾಶವಾಗಿ ವ್ಯಾಪಿಸತಕ್ಕ ಗೊಬ್ಬರ. ಇದು ಕೇವಲ ನಿಧಾನದಿಂದ ಸಸ್ಯಾಹಾರವಾಗಿ ಒದಗುವ ಕಾರಣ ಇದರ ಗುಣವು ಅನೇಕ ವರ್ಷಗಳ ವರೆಗೂ ತೋರ್ಪಡುವುದು.

೩ ದನಕರುಗಳ ಪೋಷಣೆಯು.

ದನಕರುಗಳ ಪೋಷಣೆಯ ವಿಷಯದಲ್ಲಿ ರೈತರು ಮುಖ್ಯವಾಗಿ ನೆನಪಿನಲ್ಲಿಡಬೇಕಾದ ಐದು ಸಂಗತಿಗಳು ಯಾವುವೆಂದರೆ —(೧) ನಮ್ಮ ಸೀಮೆಯ ಕಾಡುಗಳಲ್ಲಿಯೂ ಬೆಟ್ಟಗಳ ಪಕ್ಕಗಳಲ್ಲಿಯೂ ಸಮೃದ್ಧಿಯಾಗಿ ಬೆಳೆಯುವ ಹುಲ್ಲನ್ನು ವೃಥಾ ಕೊಳೆಯಗೊಡದೆ ಸಕಾಲದಲ್ಲಿ ಕೊಯಿದು ಮೆದೆ ಹಾಕಿದ್ದು ಎಲ್ಲಾ ಕಾಲಗಳಲ್ಲಿಯೂ ಸಮೃದ್ಧಿಯಾಗಿ ಮೇವು ದೊರಕುವಂತೆ ಮಾಡಿಕೊಳ್ಳಬೇಕು. (೨) ಎಲ್ಲಾ ಜಾತಿಯ ದನಗಳಲ್ಲಿಯೂ ಉತ್ತಮವಾದ ಬೀಜದ ಗೂಳಿಗಳನ್ನು ಎಲ್ಲಾ ಸ್ಥಳಗಳಿಗೂ ಒದಗಿಸಿಕೊಂಡು ತಳಿಯನ್ನು ಅಭಿವೃದ್ಧಿಪಡಿಸುವ ಯತ್ನವನ್ನು ಮಾಡಬೇಕು. (೩) ಇದಲ್ಲದೆ ಹಿಂದೂದೇಶದ ಇತರ ಭಾಗಗಳಲ್ಲಿ ಬೇರೆ ಬೇರೆ ಗುಣಗಳಿಗೆ ಪ್ರಸಿದ್ಧವಾದ ಹಸುಗಳನ್ನೂ ಗೂಳಿಗಳನ್ನೂ ತಂದು ಇಲ್ಲಿ ಅವುಗಳನ್ನು ಅಭಿವೃದ್ಧಿಪಡಿಸಲು ಯತ್ನಿಸಬೇಕು. ನೆಲ್ಲೂರಿನ ಎತ್ತುಗಳು ಹೊರೆ ಎಳೆಯುವುದರಲ್ಲಿಯೂ, ಕಥಿಯಾವಾಡಿನ ಹಸುಗಳು ಹಾಲು ಕರೆಯುವುದರಲ್ಲಿಯೂ, ಗುಜರಾತಿ ಎತ್ತುಗಳು ವ್ಯವಸಾಯದ ಕಾರ್ಯದಲ್ಲಿಯೂ ಪ್ರಸಿದ್ಧವಾಗಿರುವುದರಿಂದ ಅವುಗಳನ್ನೆಲ್ಲಾ ಇಲ್ಲಿಯೇ ಸ್ಥಾಪಿಸಲು ಯತ್ನಿಸಬೇಕು. ನಮ್ಮ ದೇಶದಲ್ಲಿ ಹಾಲು ಬೆಣ್ಣೆಗಳ ಸರಬರಾಯಿ ಸಾಲದಿರುವುದರಿಂದ ಹಾಲಿಗೆ ಪ್ರಸಿದ್ಧವಾದ ಸೂರತಿ ಎಮ್ಮೆ, ಜಾಫರಾಬಾದಿ ಎಮ್ಮೆ, ಡಿಲ್ಲಿ ಎಮ್ಮೆಗಳನ್ನು ಇಲ್ಲಿಗೆ ತರಿಸಿಕೊಳ್ಳಲು ಪ್ರಯತ್ನಮಾಡಬೇಕು. (೪) ಕೆಳತರದ ಹೋರಿಗಳು ಹಸುಗಳ ಮೇಲೆ ಹಾರದಂತೆ ಅವುಗಳನ್ನೆಲ್ಲಾ ಹಿಡಮಾಡಿಸಲು ಯತ್ನಿಸಬೇಕು. ನಮ್ಮ ದೇಶದಲ್ಲಿ ಹಿಡಮಾಡುವ ಪದ್ಧತಿಗಳಲ್ಲಿ ಕೆಲವು ಕ್ರೂರವಾಗಿಯೂ ಹೋರಿಗಳಿಗೆ ನೋವು ಮಾಡತಕ್ಕವಾಗಿಯೂ ಇವೆ. ಇಂಥ ದುಷ್ಟ ಪದ್ಧತಿಗಳನ್ನು ಬಿಟ್ಟು ಉತ್ತಮವಾದ ಮಾರ್ಗವನ್ನು ಅವಲಂಬಿಸಬೇಕು. (೫) ದನಕರುಗಳಿಗೆ ಪ್ರಬಲವಾದ ರೋಗಾದಿಗಳು ಬಂದಲ್ಲಿ ಪಶುವೈದ್ಯ ಇಲಾಖೆಯವರ ಸಹಾಯವನ್ನು ಪಡೆದುಕೊಂಡು ಅವುಗಳನ್ನು ರಕ್ಷಿಸಿಕೊಳ್ಳಲು ಯತ್ನಮಾಡಬೇಕು.

ಕಳೆದ ಫೆಬ್ರುವರಿಯಲ್ಲಿ ಬಂಗಾಳಾದಲ್ಲಿ ರಾಜದ್ರೋಹದ ಮೊಕದ್ದಮೆಯನ್ನು ಸರ್ಕಾರದ ಪರವಾಗಿ ನಡಿಸುತ್ತಿದ್ದ ಗವರ್ನ್‌ಮೆಂಟ್ ಪ್ರಾಸಿಕ್ಯೂಟರ್ (ಪ್ಲೀಡರು) ಬಾಬು ಅಶುತೋಷ್ ವಿಶ್ವಾಸ್ ಯವರನ್ನು ಕೋರ್ಟ್ ಬಾಗಿಲಿನಲ್ಲಿ ಪಾತಕರು ಗುಂಡಿನಿಂದ ಹೊಡೆದು ಕೊಂದು ಹಾಕಿದರಷ್ಟೆ. ಸರ್ಕಾರದ ಕೆಲಸ ಮಾಡುತ್ತಿದ್ದಾಗ್ಗೆ ಅವರಿಗೆ ಈ ದುರ್ಮರಣವು ಸಂಭವಿಸಿದ್ದಕ್ಕಾಗಿ ಇಂಡಿಯಾ ಗವರ್ನ್‌ಮೆಂಟಿನವರು ತುಂಬಾ ಕನಿಕರಪಟ್ಟು ಅವರ ಪತ್ನಿ ಪುತ್ರರುಗಳಿಗೆ ಜೀವನಕ್ಕೆ ಮಾರ್ಗಮಾಡಿಕೊಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಶಿಫಾರಸು ಮಾಡಿದ್ದರು. ಸ್ಟೇಟ್ ಸೆಕ್ರೆಟರಿಯವರು ಕೊಟ್ಟಿರುವ ಹುಕುಮಿನ ಅಭಿಪ್ರಾಯವೇನೆಂದರೆ —ಗತಿಸಿದ ಬಾಬು ಅಶುತೋಷ್ ವಿಶ್ವಾಸ್ ಯವರ ಪತ್ನಿ ಮತ್ತು ಸಂಸಾರಕ್ಕೆ ಒಂದು ಜಹಗೀರಿಯನ್ನು ಕೊಟ್ಟಿದೆ. ೨೪ ಪರಗಣೆಗಳೆಂಬ ಡಿಸ್ಟ್ರಿಕ್ಟಿನಲ್ಲಿ ಸಾಲೀಯಾನಾ ೩,೦೦೦ ರೂಪಾಯಿ ವರಮಾನವುಳ್ಳ ಮೂರು ಗ್ರಾಮಗಳನ್ನು ಅವರಿಗೆ ಕೊಡತಕ್ಕದ್ದು. ಇದಕ್ಕಾಗಿ ಅವರು ಸರ್ಕಾರಕ್ಕೆ ಕಂದಾಯವೇನೂ ಕೊಡಬೇಕಾದದ್ದಿಲ್ಲ. ಈ ಜಹಗೀರಿಯನ್ನು ಅವರ ಪತ್ನೀರವರೂ ಅವರ ಹಿರಿಯ ಮಗನೂ ಅನುಭವಿಸತಕ್ಕದ್ದು. ತರುವಾಯ ಅವರ ಮೊಮ್ಮಗನು ಈ ಜಹಗೀರಿಯಲ್ಲಿ ಅರೆವಾಸಿಯನ್ನು ಮಾತ್ರ ಪಡೆಯತಕ್ಕದ್ದು ಎಂಬುದೇ.

ವೃತ್ತಾಂತ ಪತ್ರಿಕೆ

ಶಕೆ ೧೯೦೯ ನೇ ಇಸವಿ ಆಗಸ್ಟ್ ತಾ|| ೨೬ ನೇ ಗುರುವಾರ

ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರವು.

ಪ್ರಜೆಗಳು ಗಾಬರಿಪಡುವಷ್ಟು ವಿಶೇಷವಾಗಿಲ್ಲದಿದ್ದರೂ ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಸದ್ಯದಲ್ಲಿ ದಿನೇ ದಿನೇ ಹೆಚ್ಚುತ್ತ ಲಿದೆ ಎಂಬುವುದಕ್ಕೆ ಸಂಶಯವಿಲ್ಲ. ಪಟ್ಟಣದ ಎಲ್ಲಾ ಮೊಹಲ್ಲೆಗಳಲ್ಲೂ ಪ್ಲೇಗ್ ಕಾಯಿಲೆಗಳು ಪ್ರಾಪ್ತವಾಗಿರುವವು. ಈಗಿನ ಶೀತವನ್ನು ನೋಡಿದರೆ ಈ ಉಪದ್ರವು ಇನ್ನೂ ಹೆಚ್ಚಾಗಬಹುದೆಂದು ಕಾಣುತ್ತದೆ. ಹೀಗೆ ಹೆಚ್ಚಿದ ಪಕ್ಷದಲ್ಲಿ ಅದನ್ನು ಅಡಗಿಸುವುದಕ್ಕೆ ತಕ್ಕ ಸಲಕರಣೆಗಳನ್ನು ಒದಗಿಸಿಕೊಂಡು ನಡಿಸುವುದಕ್ಕಾಗಿ ಸ್ಯಾನಿಟರಿ ಇಲಾಖೆಯ ಅಧಿಕಾರಿಗಳು ಮೊನ್ನೆ ಸೋಮವಾರ ಬೆಳಿಗ್ಗೆ ಮ್ಯುನಿಸಿಪಲ್ ಕೌನ್ಸಿಲರುಗಳನ್ನೂ ಮುಖಂಡರಾದ ಇತರ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡು ಟೌನ್ ಹಾಲ್ ಬಂಗಲೆಯಲ್ಲಿ ಅವರ ಕೂಡ ಚರ್ಚಿಸಿದ್ದು ತುಂಬಾ ಅನುಕೂಲವಾಯಿತೆಂದು ಧಾರಾಳವಾಗಿ ಹೇಳಬಹುದು. ಇದರ ವಿವರವನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

ಈ ಉಪದ್ರವನ್ನು ಹರಡುವುದಕ್ಕೆ ಇಲಿಹೆಗ್ಗಣಗಳೇ ಮುಖ್ಯ ಕಾರಣವೆಂಬುವುದು ಎಲ್ಲರಿಗೂ ಖಂಡಿತವಾಗಿ ತಿಳಿದಿರುತ್ತದೆ. ಆದ ಕಾರಣ ಅವುಗಳನ್ನು ನಿರ್ಮೂಲಮಾಡುವುದಕ್ಕೆ ಎಲ್ಲರೂ ಸಾಹಸ ಪಡಬೇಕಾಗಿದೆ. ಇಲಿಗಳ ಸಂಚಾರಕ್ಕೂ ವಾಸಕ್ಕೂ ಅವಕಾಶವಾಗುವಂತೆ ತಿಂಡಿಪದಾರ್ಥಗಳನ್ನು ಮನೆಮನೆಗಳಲ್ಲಿ ಚೆಲ್ಲಿರಬಾರದು. ಅವುಗಳನ್ನು ಭದ್ರವಾಗಿ ಮುಚ್ಚಿಟ್ಟಿರಬೇಕು. ಇಲಿಹೆಗ್ಗಣಗಳನ್ನು ಕೊಂದುಹಾಕಿ ಗೋಡೆ ನೆಲ ಮೂಲೆ ಸಂದುಗೊಂದುಗಳಲ್ಲಿರುವ ತೂತುಗಳನ್ನು ಚೆನ್ನಾಗಿ ಮುಚ್ಚಬೇಕು.

ಪ್ಲೇಗ್ ಉಪದ್ರವದ ಸೋಂಕನ್ನು ಚಿಗಟವು ಇಲಿಯಿಂದ ಮನುಷ್ಯನಿಗೆ ತಂದುಬಿಡುತ್ತದೆ. ಆದಕಾರಣ ಮನೆಗಳನ್ನು ಬಹಳ ಚೊಕ್ಕಟವಾಗಿಟ್ಟುಕೊಳ್ಳಬೇಕು. ಕಸದಲ್ಲೂ ಧೂಳಿನಲ್ಲೂ ಆ ಚಿಗಟಗಳು ಸೇರಿಕೊಂಡಿರುತ್ತವೆ. ಪದೇ ಪದೇ ಮನೆಯ ಪ್ರತಿ ಕೊಟಡಿಯನ್ನೂ ಇತರ ಭಾಗಗಳನ್ನೂ ಚೊಕ್ಕಟವಾಗಿ ಗುಡಿಸುತ್ತಲೂ, ಕ್ರಿಮಿಕೀಟಗಳನ್ನು ಕೊಲ್ಲತಕ್ಕಂಥಾ ಫಿನೈಲ್ ಮೊದಲಾದ ದ್ರಾವಕಗಳನ್ನು ಗೋಡೆಗಳಿಗೂ ಸಂದುಗೊಂದುಗಳಿಗೂ ಎರಚುತ್ತಲೂ ಇರಬೇಕು. ಇಲಿಗಳನ್ನು ನಾಶಪಡಿಸಿ ಚಿಗಟಗಳು ಮನೆಗಳಲ್ಲಿ ಸೇರದಂತೆ ಮಾಡಿಕೊಂಡ ಪಕ್ಷದಲ್ಲಿ ಜನರು ಪ್ಲೇಗ್ ಉಪದ್ರವಕ್ಕೆ ಹೆದರಿಕೊಳ್ಳಬೇಕಾದ ಅಗತ್ಯವಿರುವುದಿಲ್ಲ.

ಇದಲ್ಲದೆ ಆರೋಗ್ಯವಾಗಿರತಕ್ಕ ಮನುಷ್ಯನು ಪ್ಲೇಗ್ ಚುಚ್ಚು ಮದ್ದನ್ನು ಹಾಕಿಸಿಕೊಂಡಲ್ಲಿ ಬಹುತರವಾಗಿ ಅವನಿಗೆ ಪ್ಲೇಗ್ ತಗಲುವುದಿಲ್ಲವೆಂದು ಗೊತ್ತಾಗಿದೆ. ಅನೇಕ ಕಡೆ ಒಂದು ಸಂಸಾರದಲ್ಲಿ ಕೆಲವರು ಚುಚ್ಚುಮದ್ದು ಹಾಕಿಸಿಕೊಂಡವರೂ ಕೆಲವರು ಹಾಕಿಸಿಕೊಳ್ಳದವರೂ ಇದ್ದಾಗ್ಗ ಚುಚ್ಚುಮದ್ದು ಹಾಕಿಸಿಕೊಳ್ಳದವರು ಪ್ಲೇಗ್ ತಗಲಿ ಮೃತಪಟ್ಟಿರುವುದನ್ನೂ ಹಾಕಿಸಿಕೊಂಡಿದ್ದವರು ತಪ್ಪಿಸಿಕೊಂಡು ಬದುಕಿರುವುದನ್ನೂ ಅನೇಕರು ನೋಡಿಯೂ ಕೇಳಿಯೂ ಇರುತ್ತಾರೆ. ಚುಚ್ಚುಮದ್ದು ಹಾಕಿಸಿಕೊಂಡವನಿಗೆ ಖಂಡಿತವಾಗಿ ಪ್ಲೇಗ್ ತಗಲುವುದೇ ಇಲ್ಲವೆಂದು ಡಾಕ್ಟರುಗಳು ಖಾತರಿ ಕೊಡುವುದಿಲ್ಲ. ಪ್ಲೇಗ್ ಉಪದ್ರವದ ಕ್ರಿಮಿಗಳು ಮನುಷ್ಯನ ದೇಹವನ್ನು ಪ್ರವೇಶಿಸಿದ ಹತ್ತು ದಿನಗಳ ಮೇಲೆ ಅವನಿಗೆ ಪ್ಲೇಗ್ ಕಾಣಿಸಿಕೊಳ್ಳುವುದಾದ್ದರಿಂದ ಅವನು ಚುಚ್ಚುಮದ್ದು ಹಾಕಿಸಿಕೊಳ್ಳುವಾಗ ಅವನಲ್ಲಿ ಪ್ಲೇಗ್ ಕ್ರಿಮಿಗಳು ಇದ್ದಿರಬಹುದು. ಆದರೆ ಸಾಮಾನ್ಯವಾಗಿ ಚುಚ್ಚುಮದ್ದು ಹಾಕಿಸಿಕೊಂಡ ಬಳಿಕ ಪ್ಲೇಗ್ ತಗಲಿದರೂ ಅದರ ಉಲ್ಬಣವು ಅಷ್ಟು ಹೆಚ್ಚಾಗಿರುವುದಿಲ್ಲ, ಬಹುತರ ಅವನು ಬದುಕಿಕೊಳ್ಳುವನು. ಆದಕಾರಣ ಪ್ಲೇಗ್ ತಗಲದಂತೆ ದೇಹವನ್ನು ಕಾಪಾಡಿಕೊಳ್ಳುವುದಕ್ಕಾಗಿ ಪ್ರತಿ ಒಬ್ಬ ಆರೋಗ್ಯವಂತನೂ ಈ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕಾದದ್ದು ಪರಮಾವಶ್ಯವಾಗಿರುತ್ತದೆ. ಮ್ಯುನಿಸಿಪಲ್ ಕೌನ್ಸಿಲರುಗಳು ಆರೋಗ್ಯವಾಗಿರುವಂಥಾ ಗಂಡಸರು, ಹೆಂಗಸರು ಮತ್ತು ಮಕ್ಕಳಿಗೆ ಪ್ಲೇಗ್ ಚುಚ್ಚುಮದ್ದನ್ನು ಹಾಕಿಸುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಸ್ತ್ರೀ ಡಾಕ್ಟರುಗಳು ಮನೆಗಳಿಗೇ ಹೋಗಿ ಘೋಷಾ ಸ್ತ್ರೀಯರಿಗೆ ಚುಚ್ಚುಮದ್ದು ಹಾಕುವರು. ಪ್ರತಿ ಒಂದು ಸೀಸೆಯಲ್ಲೂ ಐದುಮಂದಿಗೆ ಹಾಕುವಷ್ಟು ಚುಚ್ಚುಮದ್ದಿನ ಔಷಧಿ ಇರೋಣದರಿಂದ ಒಂದುಸಲಕ್ಕೆ ಐದುಮಂದಿಗೆ ಕಡಮೆಯಿಲ್ಲದೆ ಸೇರಿ ಹಾಕಿಸಿಕೊಳ್ಳತಕ್ಕದ್ದಾಗಿದೆ.

ಚುಚ್ಚುಮದ್ದು ಹಾಕಿಸಿಕೊಳ್ಳುವುದರಿಂದ ಅಷ್ಟೇನೂ ಬಾಧೆಯುಂಟಾಗಲಾರದು, ಬಹಳ ಬೇಗ ನಿವಾರಣೆಯಾದೀತು. ಒಂದು ದಿನ ಸ್ವಲ್ಪ ಜ್ವರ ಕಾಣಿಸಿಕೊಳ್ಳಬಹುದು, ಚುಚ್ಚುಮದ್ದು ಹಾಕಿದ ಎಡದ ತೋಳು ಸ್ವಲ್ಪ ಊದಿಕೊಂಡು ಎರಡು ಮೂರು ದಿನ ನೋವಾಗಬಹುದು. ಆದರೆ ಅನೇಕಾನೇಕರಿಗೆ ಇದರ ಬಾಧೆಯು ವಿಶೇಷ ಉಂಟಾಗುವುದೇ ಇಲ್ಲ. ಬಡಬಗ್ಗರಾದ ಪ್ರಜೆಗಳು ಕೂಲಿಮಾಡಿ ಜೀವಿಸತಕ್ಕವರಾಗಿರೋಣದರಿಂದ ಚುಚ್ಚುಮದ್ದು ಹಾಕಿಸಿಕೊಂಡರೆ ಕೂಲೀಪಾಡಿಗೆ ಹೋಗದಂತೆ ಆಗಿ ಅವರ ಜೀವನಕ್ಕೆ ಕಷ್ಟವಾದೀತೆಂದು ತಿಳಿದುಬಂದದ್ದರಿಂದ ಅಂಥವರಿಗೆಲ್ಲಾ ಒಂದೆರಡು ದಿವಸಗಳ ವರೆಗೆ ಜೀವನಕ್ಕೆ ಸಹಾಯ ಮಾಡಬೇಕೆಂದು ಗೊತ್ತುಮಾಡಿದಾರೆ. ಮುಂದಿನ ತಿಂಗಳಲ್ಲಿ ಮೈಸೂರು ಪಟ್ಟಣದಲ್ಲಿರುವ ಸಕಲ ಪ್ರಜೆಗಳೂ ಈ ಚುಚ್ಚುಮದ್ದನ್ನು ಹಾಕಿಸಿಕೊಂಡುಬಿಟ್ಟ ಪಕ್ಷದಲ್ಲಿ ಪ್ಲೇಗ್ ಮರಣದ ಸಂಖ್ಯೆಯು ಹೆಚ್ಚದ ಇಳಿದುಹೋಗುವುದು.

ಮನೆಯಲ್ಲಿ ಇಲಿ ಸತ್ತಿತೆಂದು ತಿಳಿದ ಕೂಡಲೇ ಮನೆಯವರು ಅಲ್ಲಿಂದ ಹೊರಗೆ ಹೋಗಿಬಿಡಬೇಕು. ಯಾಕೆಂದರೆ ಆ ಇಲಿಗಳ ಮೈಮೇಲಿರುವ ಚಿಗಟಗಳು ಹಾರಿಹೋಗಿ ಆ ಮನೆಯ ಜನರನ್ನು ಕಡಿದು ಪ್ಲೇಗ್ ಸೋಂಕನ್ನು ಹರಡುತ್ತವೆ. ಮ್ಯುನಿಸಿಪಾಲಿಟಿಯವರು ಸ್ಥಳವನ್ನು ತೋರಿಸುವರು, ಸರ್ಕಾರದವರು ಬಡಬಗ್ಗರಿಗೆ ಸಾಮಾನುಗಳನ್ನು ಕೊಟ್ಟು ಜೋಪಡಿ ಹಾಕಿಕೊಳ್ಳುವುದಕ್ಕೆ ಸಹಾಯಮಾಡುತ್ತಾರೆ. ಇಲಿ ಸತ್ತ ಒಡನೆಯೇ ಬೇಗ ಬೇಗನೆ ಜನರು ಮನೆಗಳನ್ನು ಬಿಟ್ಟು ಹೊರಗೆ ಹೋಗುವುದಾದರೆ ಪ್ಲೇಗ್ ಉಪದ್ರವದ ಭೀತಿಯನ್ನು ತಪ್ಪಿಸಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ.

ಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಆಲೋಚನೆಯೂ ಇರುವುದು. ರಾಜಧಾನಿಯಲ್ಲಿ ಟ್ರಸ್ಟ್ ಬೋರ್ಡಿನವರು ಅನೇಕಾನೇಕ ಮನೆಗಳನ್ನು ಒಡೆದುಹಾಕಿರೋಣದರಿಂದ ಬಡಬಗ್ಗರಿಗೆ ವಾಸಕ್ಕೆ ಸರಿಯಾದ ಮನೆಗಳಿಲ್ಲದೆ ಬಹಳ ಕಷ್ಟವುಂಟಾಗಿದೆ. ಪಟ್ಟಣದ ಬಳಿಪಾರ್ಶ್ವದಲ್ಲೇ ಸರ್ಕಾರದವರು ಅನುಕೂಲವಾದ ನಿವೇಶನಗಳನ್ನು ತೋರಿಸಿಕೊಡುವರು. ಇಲ್ಲಿರುವ ಕೆಲವು ಪುಣ್ಯವಂತರು ಅಂಥಾ ನಿವೇಶನಗಳಲ್ಲಿ ಆರೋಗ್ಯಕರವಾದ ಹಲವು ಮನೆಗಳನ್ನು ಕಟ್ಟಿಸಿ ಅಲ್ಪ ಬಾಡಿಗೆಗೆ ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ಇದು ಬಹಳ ಆವಶ್ಯವಾದ ಕೆಲಸ. ಅನೇಕ ಪ್ರಜೆಗಳು ತಮ್ಮ ಮನೆಗಳನ್ನು ಕಳೆದುಕೊಂಡು, ಹೊಸ ಮನೆಗಳನ್ನು ಬಡಾವಣೆಗಳಲ್ಲಿ ಅಂದರೆ ದೂರಸ್ಥಳಗಳಲ್ಲಿ ಕಟ್ಟಿಕೊಳ್ಳುವುದಕ್ಕೆ ಚೈತನ್ಯಸಾಲದೆ, ಉಳಿದ ಮನೆಗಳಲ್ಲೇ ನಾಲ್ಕಾರು ಸಂಸಾರಗಳಾಗಿ ಸೇರಿಕೊಂಡಿರುವರು. ಆರೋಗ್ಯಕರವಾದ ರೀತಿಯಲ್ಲಿ ಮನೆಗಳನ್ನು ಬೇಗನೆ ಪಟ್ಟಣದೊಳಗೇ ಕಟ್ಟಿಸಿಬಿಟ್ಟು, ಸುಲಭವಾದ ಬಾಡಿಗೆಗೆ ಒದಗಿಸಿಕೊಡುವುದಾದರೆ ಬಡಬಗ್ಗರಿಗೆ ಈಗ ಉಂಟಾಗಿರುವ ಕಷ್ಟಗಳು ಬಹುಮಟ್ಟಿಗೆ ನಿವಾರಣೆಹೊಂದುವವು.

ರಾಜಧಾನಿಯಲ್ಲಿರುವ ಪ್ರಜೆಗಳು ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೆ ಸರ್ಕಾರದ ಅಧಿಕಾರಿಗಳು ಮಾಡುವಂಥಾ ಏರ್ಪಾಡುಗಳಲ್ಲಿ ಸಹಾಯಕರಾಗಿ ನಿಂತು, ಪ್ಲೇಗ್ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕು, ಇಲಿಗಳನ್ನು ನಾಶಪಡಿಸಬೇಕು, ಮನೆ ಮನೆಗಳಲ್ಲಿ ಚಿಗಟಗಳು ಸೇರದಂತೆ ಎಲ್ಲಾ ಭಾಗಗಳನ್ನೂ ಚೊಕ್ಕಟವಾಗಿ ಇಟ್ಟುಕೊಳ್ಳಬೇಕು. ತಮ್ಮ ನೆರೆಹೊರೆಯಲ್ಲಿ ಪ್ಲೇಗ್ ಕಾಯಿಲೆ ಸಂಭವಿಸಿರುವ ಸಂಗತಿಯನ್ನು ಕೂಡಲೇ ಹಲ್ತಿ ಆಫೀಸರವರಿಗೆ ತಿಳಿಸಬೇಕು. ಈ ರೀತಿ ಪ್ರಜೆಗಳೂ ಅಧಿಕಾರಿಗಳೂ ಕೆಲಸ ಮಾಡಿದ ಪಕ್ಷದಲ್ಲಿ ಪ್ಲೇಗ್ ಉಪದ್ರವದ ಹಾವಳಿಯು ರಾಜಧಾನಿಯಲ್ಲಿ ನಿಂತುಹೋಗುವುದೆಂದು ಹೇಳಬಹುದು.

ಬಳದೇಶದ ವೃತ್ತಾಂತಗಳು

ಕಳೆದ ಭಾನುವಾರ [illegible] ವರುಷದ [illegible] ಹೆಂಗಸು ಇಲ್ಲಿನ ಜೀವನ್ನಾರಾಯಣ ಚೆಟ್ಟಿಯವರ [illegible]

ಮುಂದಿನ ಬಾನುವಾರ ರಾಜಧಾನಿಯಲ್ಲಿ ನಡೆಯಬೇಕಾಗಿರುವ ಉಪಾಕರ್ಮದ ಹಬ್ಬಕ್ಕೋಸ್ಕರ ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ನಾಳೆ ಬೆಂಗಳೂರಿನಿಂದ ಹೊರಟು ರಾಜಧಾನಿಗೆ ದಯಮಾಡುವವರಾಗಿದ್ದಾರೆಂದು [illegible]

ಡೆಪ್ಟಿ ಕಮಿಷನರ್ [illegible] ಕಾಂತರಾಜ ಅರಸಿನವರು ಹಿಂದಿನ ಸೋಮವಾರ ಡಿಸ್ಟ್ರಿಕ್ಟ್ [illegible] ಮ|| ಕೆ. ಚಾಮಯ್ಯನವರಿಗೆ ವಹಿಸಿ ಎರಡು ದಿನ ರಾಜಧಾನಿಯಲ್ಲಿದ್ದು ನೀಲಗಿರಿಯಲ್ಲಿ ಶ್ರೀಮನ್ ಮಹಾರಾಜರವರ ಕ್ಯಾಂಪಿಗೆ ಪ್ರಯಾಣಮಾಡಿದರು.

ಗವರ್ನ್‌ಮೆಂಟಿನವರು ಚೀಫ್ ಸೆಕ್ರೆಟರಿ ಮ|| ಚಂದ್ರಶೇಖರಯ್ಯರವರನ್ನು ಸೆನ್ಸಸ್ ಕಮಿಷನರ ಕೆಲಸಕ್ಕೆ ನೇಮಕಮಾಡಿ ಹಿಂದೆ ಆ ಇಲಾಖೆಯಲ್ಲಿ ಕೆಲಸಮಾಡಿ ಅನುಭವವನ್ನು ಪಡೆದಿರುವ ಇಬ್ಬರು ಅ|| ಕಮಿಷನರುಗಳನ್ನು ಅವರ ಸಹಾಯಕ್ಕೆ ಕೊಡುವರೆಂದು ಪ್ರಕಟವಾಗಿದೆ.

ಕಳೆದ ಸೋಮವಾರ ಮಂಗಳವಾರಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸಭೆ ಸೇರಿ ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಬೇಕಾದ ವಿಚಾರಗಳನ್ನು ಕುರಿತು ಆಲೋಚನೆಮಾಡಿ ತಮ್ಮ ತೀರ್ಮಾನಗಳನ್ನು ಡೆಪ್ಟಿ ಕಮಿಷನರವರಿಗೆ ತಿಳಿಸಿದರು.

ಸೀನಿಯರ್ ಕೌನ್ಸಿಲರ್ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರು ತಮ್ಮ ಎರಡನೆಯ ಕುಮಾರ್ತೆಯನ್ನು ಮದರಾಸ್ ಹೈ ಕೋರ್ಟ್ ವಕೀಲರಾದ ಮೆ|| ಅಜ್ಜಿಸಂಗಪ್ಪ, ಬಿ. ಎ., ಬಿ. ಎಲ್. ಯವರಿಗೆ ಕೊಟ್ಟು ಬೆಂಗಳೂರು ಚಾಮರಾಜಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ಈ ದಿನ ಬೆಳಿಗ್ಗೆ ವಿವಾಹವನ್ನು ಬೆಳಸುವವರಾಗಿದ್ದಾರೆ.

ಡೆಪ್ಟಿ ಸ್ಯಾನಿಟರಿ ಕಮಿಷನರವರಾದ ಡಾ|| ಪಲ್ಪುರವರು ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಆರೋಗ್ಯವಿಚಾರಗಳನ್ನು ಮ್ಯಾಜಿಕ್ ಲ್ಯಾಂಟರ್ನ್ ಚಿತ್ರಪಟಗಳ ಪ್ರದರ್ಶನದ ಮೂಲಕ ತೋರಿಸಿ ವಿವರಿಸಿ ಹೇಳಿದರು. ಬಹು ಜನ ದೊಡ್ಡ ಮನುಷ್ಯರೂ ಪ್ರಜೆಗಳೂ ಹೋಗಿ ನೋಡಿ ಸಂತೋಷಪಟ್ಟುಕೊಂಡರು.

ರಾಜಧಾನಿಯಲ್ಲಿ ಇಟ್ಟಿರುವ ವಿದ್ಯುಚ್ಛಕ್ತಿಯ ದೀಪಗಳು ಸಾಲದೆಂದೂ, ಇನ್ನೂ ಕೆಲವು ಕಡೆ ಹೊಸವಾಗಿ ದೀಪಗಳನ್ನು ಇಡಿಸಬೇಕೆಂದೂ ಮ್ಯುನಿಸಿಪಾಲಿಟಿಯವರು ವಿದ್ಯುಚ್ಛಕ್ತಿಯ ಇಲಾಖೆಗೆ ಬರೆದಿರುತ್ತಾರೆ. ದೀಪವಿಲ್ಲದೆ ಇರುವ ಕಂಬಗಳು ಕತ್ತಲೆಕಾಲದಲ್ಲಿ ಜನಸಂಚಾರಕ್ಕೂ ಗಾಡಿಗಳ ಓಡಾಟಕ್ಕೂ ಆತಂಕವಾಗುತ್ತಿರುವುದರಿಂದ ಅವುಗಳಿಗೆ ನೆಲದಿಂದ ಸುಮಾರು ಆರೇಳು ಅಡಿಯ ವರೆಗೆ ಬಿಳಿಯ ಬಣ್ಣವನ್ನು ಹಾಕಿಸಿದರೆ ಅನುಕೂಲ.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ನಮ್ಮ ಮಹಾರಾಜರವರಿಗೆ ಅಲ್ಲಿನ ಎರಡು ಜೊತೆ ಭಾರೀ ಎತ್ತುಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಅವು ಮೊನ್ನೆ ಭಾನುವಾರ ಬೆಳಿಗ್ಗೆ ರಾಜಧಾನಿಗೆ ರೈಲಿನಲ್ಲಿ ಬಂದವು. ಅರಮನೆ ಇಲಾಖೆಯವರು ಅವುಗಳ ಕೂಡ ಬಂದಿರುವ ಮೂರು ಮಂದಿ ಪಾಲಕರನ್ನು ಇಲ್ಲೇ ಇಟ್ಟುಕೊಂಡಿದಾರೆ. ಆ ಎತ್ತುಗಳು ಬಹು ಸುಂದರವಾಗಿಯೂ ಒಳ್ಳೇ ಕಾಮಪುಷ್ಟಿಯಾಗಿಯೂ ಇರುತ್ತವೆ. ಜನರು ಎತ್ತಿನ ಕಡೋಹಟ್ಟಿಯಲ್ಲಿರುವ ಆ ಎತ್ತುಗಳನ್ನು ಹೋಗಿ ನೋಡಿಕೊಂಡು ಬರುತ್ತಿದ್ದಾರೆ.

ಕಳೆದ ಶುಕ್ರವಾರ ಬೆಳಿಗ್ಗೆ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಸೇರಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿದರು. ಈ ಸಲ ನಡೆಯುವ ಪ್ರಜಾಪ್ರತಿನಿಧಿ ಸಭೆಗೆ ಕೌನ್ಸಿಲರುಗಳಾದ ಅಡ್ವೊಕೇಟ್ ಮ|| ಎಂ. ಸಿ. ರಂಗೈಯಂಗಾರ್ಯರು, ಹೆಡ್ ಮಾಸ್ಟರ್ ಮ|| ಎಂ. ವೆಂಕಟಕೃಷ್ಣಯ್ಯನವರೂ, ಮ|| ಕ. ಶ್ರೀಕಂಠಯ್ಯನವರೂ, ಮ|| ಮಾದಪ್ಪನವರೂ ಮೆಂಬರುಗಳಾಗಿ ಚುನಾವಣೆ ಮಾಡಲ್ಪಟ್ಟರು. ಇವರು ಆ ದಿನ ಮಧ್ಯಾಹ್ನ ಸೇರಿ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರಬೇಕಾದ ವಿಚಾರಗಳನ್ನು ಗೊತ್ತುಮಾಡಿ ಡೆಪ್ಟಿ ಕಮಿಷನರವರಿಗೆ ತಿಳಿಸಿದರು.

ಈ ಸಲ ರಾಜಧಾನಿಯಲ್ಲಿ ನಡೆಯುವ ನವರಾತ್ರಿ ಪ್ರದರ್ಶನಶಾಲೆಯೊಳಗೆ ಉತ್ಕೃಷ್ಟವಾದ ಪ್ರದರ್ಶನವಸ್ತುಗಳಿಗೆ ಸರ್ಕಾರದವರು ೧,೨೬೩ ರೂಪಾಯನ್ನು ಬಹುಮಾನವಾಗಿ ಹಂಚಿಕೊಡುವರು. ಇದಲ್ಲದೆ ೯ ಚಿನ್ನದ, ೮೩ ಬೆಳ್ಳಿಯ ಮತ್ತು ೧೨೯ ಕಂಚಿನ ಪದಕಗಳನ್ನು ಕೊಡುವಂತೆ ಗೊತ್ತಾಗಿದೆ. ಗೋಶಾಲೆಗಳ ಪ್ರದರ್ಶನದಲ್ಲಿ ಒಳ್ಳೇ ರಾಸುಗಳಿಗೆ ಬಹುಮಾನಕೊಡುವುದಕ್ಕೆ ೫೦೦ ರೂಪಾಯಿ ತೆಗೆದಿಟ್ಟಿದಾರೆ. ಸ್ವಲ್ಪ ಪೋಟಾಪೋಟಿಗೆ ೨೫೦ ರೂಪಾಯನ್ನೂ, ಕುದುರೆಗಳ ಪೋಟಾಪೋಟಿಗೆ ೫೦ ರೂಪಾಯನ್ನೂ, [illegible] ಮಾಡುವ ಪೋಟಾಪೋಟಿಗೆ ೩೦ ರೂಪಾಯನ್ನೂ ವಿನಿಯೋಗಿಸುವರು. ಇದಲ್ಲದೆ ಒಂದು ಮೈಲು ಜಂಬಾನಾ ಆಟಗಳನ್ನು ಕುದುರೆಗಳಿಂದ ಆಡಿಸಿ ಗೆದ್ದವರಿಗೆ ಬಹುಮಾನ ಕೊಡುವುದಕ್ಕೆ ೧೫೦ ರೂಪಾಯಿ ಖರ್ಚುಮಾಡುವವರಾಗಿದಾರೆ.

ಒಬ್ಬ ಪತ್ರಿಕದಾರರು ಬರೆಯುವುದು — ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಗತ ಶನಿವಾರದಂದರೆ ೨೧ ನೇ ತಾರೀಖಿನಲ್ಲಿ ಈ ಸಮಾಜಕ್ಕೆ ಸೇರಿದ ಸ್ತ್ರೀ ಸಮಾಜ ಮೆಂಬರುಗಳು, ಸ್ತ್ರೀಯರು ಮತ್ತು ಪ್ರೇಕ್ಷಕರುಗಳು ಸುಮಾರು ೭೦ ಮಂದಿ ಮಹಿಳೆಯರು ಮಂದಿರದ ಸರಸ್ವತೀ ಭಂಡಾರದ ಸೌಧದಲ್ಲಿ ಸೇರಿದ್ದರು. ಈಶ್ವರನು ಹೇಗೆ ಪ್ರಕೃತಿಯೊಡನೆ ಸೇರಿದವನಾಗಿರುತ್ತಾನೆಯೋ ಹಾಗೆ ಪುರುಷನಾದವನಿಗೆ ಸ್ತ್ರೀಯು ಸೇರಿದವಳಾಗಿರುತ್ತಾಳೆ. ಆದದ್ದರಿಂದ ಪುರುಷನಾದವನು ವಿದ್ಯಾವಂತನಾದರೆ ಸ್ತ್ರೀಯೂ ಸಹ ವಿದ್ಯಾವಂತಳಾಗಬೇಕು. ಹಾಗಿಲ್ಲದ ಪಕ್ಷದಲ್ಲಿ ಮನುಷ್ಯ ಸ್ವಭಾವದ ಪ್ರಕೃತಿಯು ಅಪೂರ್ತಿಯುಳ್ಳದ್ದಾಗಿರುವುದೇ ಹೊರತು ಪೂರ್ತಿಯಾದದ್ದಾಗಿರಲಾರದು ಎಂಬ ಇತ್ಯಾದಿ ಮಾತುಗಳನ್ನು ಸೂಚಿಸಿ, ಮಂದಿರದ ಕಾರ್ಯದರ್ಶಿಯವರು ಆರ್ಯ ಮಹಿಳೆಯರ ಸಮಾಜಗಳನ್ನು ಕುರಿತು ಒಂದು ಉಪನ್ಯಾಸವನ್ನು ಹೇಳಿದರು. [ಈ ಉಪನ್ಯಾಸವು ನಮಗೆ ತಲುಪಿರುತ್ತದೆಯಾದರೂ ಸ್ಥಳಸಂಕೋಚದಿಂದ ಅದನ್ನು ಸದ್ಯ ಪ್ರಕಟಿಸಲು ಆಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ — ಎಡಿ.] ಉಪನ್ಯಾಸಾನಂತರ ಸಂವಾದನದೊಡನೆ ಸಭೆಯು ಮುಕ್ತಾಯವಾಯಿತು. ದೇವರಿಗೆ ಆರತಿ ಸಮರ್ಪಿಸಲ್ಪಟ್ಟಿತು. ಮುಖ್ಯ ಶೈಶವಾವಸ್ಥೆಯಲ್ಲಿರುವ ಈ ಸಮಾಜವನ್ನು ಆರ್ಯ ನಾರೀಮಣಿಗಳು ಕಾಪಾಡಬೇಕೆಂದು ಕಾರ್ಯದರ್ಶಿಯಾದವಳು ಬೇಡುತ್ತಾಳೆ. ಮುಂದಿನ ಮೀಟಿಂಗು ೨೮ ನೇ ತಾ|| ಶನಿವಾರ ನಡೆಯುವುದು. ಮೆಂಬರುಗಳು ಮತ್ತು ಪ್ರೇಕ್ಷಕರುಗಳು [illegible]

ಈ ತಸ್ವೀರಿನ ಬ್ಲಾಕನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ತಯಾರಿಸಿದೆ

ಕ್ಯಾಪ್ಟನ್ ಬರ್ನಾರ್ಡ್ ಡಾಸ್. ಆರ್. ಇ. ಯವರು.

ಮೈಸೂರು ಸಂಸ್ಥಾನದ ಲೇಟ್ ಅಫಿಷಿಯೇಟಿಂಗ್ ಚೀಫ್ ಇಂಜನಿಯರವರು

ಕ್ಯಾಪ್ಟನ್ ಡಾಸ್‌ಯವರು ಒಬ್ಬ ಹೆಂಗಸನ್ನು ಬದುಕಿಸಬೇಕೆಂದು ಬಹು ಪರಾಕ್ರಮವುಳ್ಳ ಸಾಹಸಪಟ್ಟು ತಮ್ಮ ಪ್ರಾಣವನ್ನು ಕಳೆದುಕೊಂಡ ವಿಚಾರವು ನಮ್ಮ ವಾಚಕರಿಗೆ ಜ್ಞಾಪಕವಿದೆ. ಅವರ ತಸ್ವೀರನ್ನು ಈ ಮೂಲಕ ವಾಚಕರ ದೃಷ್ಟಿಗೆ ತರಲು ತುಂಬಾ ಸಂತೋಷಪಡುತ್ತೇವೆ. ಕ್ಯಾಪ್ಟನ್ ಡಾಸ್‌ಯವರ ಸಾಹಸವನ್ನು ಈ ಸಂಸ್ಥಾನದಲ್ಲಿ ಅವರು ನಡಿಸಿರುವ ಕಾರ್ಯವನ್ನು ಜ್ಞಾಪಕಾರ್ಥವಾಗಿಡಬೇಕೆಂದು ಶೀಘ್ರವಾಗಿ ಅನೇಕ ಸ್ನೇಹಿತರು ಒಂದು ಫಂಡು ಏರ್ಪಾಡಾಗಿ ಚಂದಾ ವಸೂಲಾಗುತ್ತಿರುವುದು. ಯಾರೊಬ್ಬರೂ ಹತ್ತು ರೂಪಾಯಿಗಿಂತ ಹೆಚ್ಚು ಚಂದಾ ಕೊಡಬೇಕಾಗಿಲ್ಲ. ಈ ಫಂಡಿಗೆ ದ್ರವ್ಯ ಸಹಾಯಮಾಡಬೇಕೆಂದು ಅಪೇಕ್ಷಿಸತಕ್ಕವರು ಚಂದಾ ಹಣವನ್ನು ಮೈಸೂರು ವೃತ್ತಾಂತ ಪತ್ರಿಕೆಯ ಮ್ಯಾನೇಜರವರ ಹೆಸರಿಗೆ ಕಳುಹಿಸಬಹುದಾಗಿದೆ. ಚಂದಾ ಕಳುಹಿಸುವವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ನೀನೇಕೆ ಇಲ್ಲಿದ್ದೀ?

ಬಿನ್ನಾರ್ಡ್ ಎಂಬ ಒಬ್ಬ ಬಾಲಕನಿದ್ದನು. ಇವನು ಪ್ರತಿನಿತ್ಯ ವೇಳೆಗೆ ಎದ್ದ ಕೂಡಲೇ ತನಗೆ ಒಂದು ಪ್ರಶ್ನೆಯನ್ನು ಹಾಕಿಕೊಳ್ಳುವ ಪದ್ಧತಿಯನ್ನು ಮಾಡಿಕೊಂಡಿದ್ದನು. ಅವನು ಒಂದೊಂದು ದಿವಸ ಕೆಲಸಗಳನ್ನು ಆರಂಭಿಸುವುದಕ್ಕಿಂತ ಮುಂಚೆ ಬಿನ್ನಾರ್ಡನೇ ನೀನೇಕೆ ಇಲ್ಲಿದ್ದೀ? ಅಂದರೆ ನೀನು ಈ ಲೋಕದಲ್ಲಿ ಯಾವ ಉದ್ದೇಶವನ್ನು ನೆರವೇರಿಸಲಿಕ್ಕೆ ಬಂದು ಇದ್ದೀ? ಎಂದು ತನ್ನನ್ನೇ ಕೇಳಿಕೊಳ್ಳುತ್ತಿದ್ದನು. ಹೀಗೆ ಅವನು ಚಿಕ್ಕಂದಿನಿಂದಲೂ ಉದ್ದೇಶಪೂರ್ವಕವಾಗಿಯೇ ತನ್ನ ಕಾಲವನ್ನೂ ಸಾಮರ್ಥ್ಯವನ್ನೂ ವ್ಯಯಮಾಡುತ್ತ ಬರಲಾಗಿ ಕಡೆಗೆ ಸೇಂಟ್ ಬಿನಾರ್ಡ್ ಅಂದರೆ ಮಹಾದೇವನ ನಿಜಭಕ್ತನಾದ ಬಿನ್ನಾರ್ಡನು ಎಂಬ ಬಿರುದಿನಿಂದ ಪ್ರಸಿದ್ಧನಾದನು. ಈತನು ಪರಲೋಕ ಹೊಂದಿ ಸುಮಾರು ಏಳು ನೂರು ವರುಷಗಳು ಸಂದುಹೋಗಿವೆ. ಆದರೂ ಆತನು ಬದುಕಿದ್ದಾಗ ತನ್ನ ಸುತ್ತಮುತ್ತಲಿನ ಜನಗಳಿಗೆ ಸದ್ವರ್ತನೆಯಲ್ಲಿ ಹೇಗೆ ಪ್ರೇರಣೆಯನ್ನೂ ಪ್ರೋತ್ಸಾಹವನ್ನೂ ಕೊಡುತ್ತಿದ್ದನೋ ಹಾಗೆಯೇ ಈಗಲೂ ಆತನು ಸ್ಥಾಪಿಸಿದ ಸನ್ಯಾಸಾಶ್ರಮವೂ ಆತನು ರಚಿಸಿರುವ ದಿವ್ಯಗ್ರಂಥಗಳೂ ನಮಗೆ ಪ್ರೇರಣೆಯನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೇ ಇವೆ.

ನೀನೇಕೆ ಇಲ್ಲಿದ್ದೀ? ಎಂಬ ಪ್ರಶ್ನೆಯನ್ನು ನಾವು ಹಾಕಿಕೊಂಡು ತಕ್ಕ ಪ್ರತ್ಯುತ್ತರವನ್ನು ಹುಡುಕಿದರೆ ನಾವೂ ಆತನಂತೆ ಸದ್ಭಕ್ತರಾಗುವೆವಲ್ಲದೆ ನಮ್ಮ ನಡತೆಯೆಂಬ ಪುಷ್ಪದ ಸುವಾಸನೆಯು ಇತರರಿಗೂ ಪ್ರೇರಣೆಯೂ ಪ್ರೋತ್ಸಾಹವೂ ಆಗಿರುವದು. ಇದಕ್ಕೆ ಸಂದೇಹವಿಲ್ಲ. ದೇವರು ನಮ್ಮನ್ನು ಭೂಲೋಕಕ್ಕೆ ಕಳುಹಿಸುವದು ಬರೀ ಲೀಲಾವಿನೋದಕ್ಕಾಗಿಯೋ ಅಥವಾ ಇನ್ನೇನಾದರೂ ಉದ್ದೇಶಪೂರ್ವಕವಾಗಿಯೋ? ನಮ್ಮ ದೇಹರಚನೆಯು ಎಷ್ಟು ಸೌಂದರ್ಯವಾಗಿಯೂ ಚಮತ್ಕಾರವಾಗಿಯೂ ಇದೆ. ಈಚೀಚೆಗೆ ಲೋಕದಲ್ಲಿ ಅನೇಕಾನೇಕ ಯಂತ್ರಗಳು ರಚನೆಯಾಗಿ ಅಸಾಧ್ಯವಾಗಿದ್ದ ಕೆಲಸಗಳನ್ನು ಬಹು ಸುಲಭವಾಗಿ ನೆರವೇರಿಸುತ್ತಲಿವೆ. ಆದರೂ ಮನುಷ್ಯನ ದೇಹಕ್ಕೆ ಸಮಾನವಾದ ಸೌಂದರ್ಯವನ್ನೂ ಜ್ಞಾನವನ್ನೂ ಉಳ್ಳಂಥಾಗಿರುವ ಯಂತ್ರವು ಮತ್ತಾವುದೂ ಇಲ್ಲ. ಮನುಷ್ಯನ ಬುದ್ಧಿಯನ್ನು ಯೋಚಿಸಿದರಂತೂ ಅವನಿಗೆ ಸರಿಸಮಾನನಾದ ಪ್ರಾಣಿಯು ಮತ್ತಿನ್ನಾರೂ ಇಲ್ಲವೆಂದು ಸುಲಭವಾಗಿ ಗೋಚರವಾಗುವದು. ಅವನಲ್ಲಿ ತನ್ನನ್ನು ಸೃಷ್ಟಿಸಿದ ಭಗವಂತನನ್ನೇ ತಿಳಿಯುವದಕ್ಕೂ ಆರಾಧಿಸುವದಕ್ಕೂ ಆತನನ್ನು ಮೆಚ್ಚಿಸುವದಕ್ಕೂ ತಕ್ಕ ಬುದ್ಧಿಯೂ ಶಕ್ತಿಯೂ ಇರುವುವು.

ಇಂತಹ ಬುದ್ಧಿ ಶಕ್ತಿ ಭಕ್ತಿಗಳಿರುವ ಮನುಷ್ಯನು ಬರೀ ಲೀಲಾವಿನೋದಕ್ಕಾಗಿ ಕೆಲವು ವರುಷಗಳಿದ್ದು ಆ ಮೇಲೆ ಅವನು ಸುಳಿವೆ ಇಲ್ಲದೆ ಹೋಗುತ್ತಾನೆಂದು ನಂಬುವದು ಅಸಾಧ್ಯವಾಗಿದೆ. ಒಬ್ಬನು ತನ್ನ ಅಮೂಲ್ಯವಾದ ಕಾಲವಾದ ಮಂತ್ರವನ್ನು ಕಲ್ಪಿಸುತ್ತಾನೆ. ಆದರೆ ಯಂತ್ರವು ಪ್ರಯೋಜನಕಾರಿಯಾಗಿದ್ದು ಅನೇಕ ಕೆಲಸಗಳಲ್ಲಿ ತನಗೆ ಸಹಾಯವಾಗಿರಬೇಕೆಂತಲಲ್ಲವೇ ಅದನ್ನು ಅವನು ರಚಿಸಿದ್ದು. ಒಂದು ಉದ್ದೇಶವನ್ನೂ ಫಲವನ್ನೂ ಪ್ರಯೋಜನವನ್ನೂ ನಿರೀಕ್ಷಿಸದೆ ಬುದ್ಧಿವಂತರಾದವರು ಕಾಲ ಬುದ್ಧಿ ದ್ರವ್ಯಗಳನ್ನು ವ್ಯಯಮಾಡುವದಿಲ್ಲ. ದೇವರು ಬುದ್ಧಿ ಜ್ಞಾನ ಸಕಲಶಕ್ತಿ ಚಿತ್ತ ಮನಸ್ಸಾಕ್ಷಿಯೇ ಮುಂತಾದ ಈ ಸಗುಣಗಳನ್ನು ಕೊಟ್ಟು ಕೆಟ್ಟದ್ದನ್ನೂ ಒಳ್ಳೇದನ್ನೂ ತಿಳಿಯುವದಕ್ಕೆ ಶಕ್ತಿಯುಳ್ಳವನನ್ನಾಗಿ ಮನುಷ್ಯನನ್ನು ನಿರ್ಮಿಸಿರುವದು ಘನತರವಾದ ಉದ್ದೇಶದಿಂದಲೇ ಹೊರತು ಲೀಲಾಮಾತ್ರದಿಂದಲ್ಲವೇ ಅಲ್ಲ.

ಒಳ್ಳೇದು ಸಂಗತಿ ಹೀಗಿರುವಲ್ಲಿ ಆ ಮಹಾಸ್ವಾಮಿಯ ಸದುದ್ದೇಶವೇನೆಂದು ತಿಳಿಯುವದು ನಮ್ಮ ಕರ್ತವ್ಯವಾಗಿದೆ. ಆ ಉದ್ದೇಶವೇನಿರಬಹುದೆಂದು ಈಗ ಸಂಕ್ಷೇಪವಾಗಿ ವಿಚಾರಿಸೋಣ. ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರಷ್ಟೆ. ಯಾತಕ್ಕೆ ಕಳುಹಿಸುತ್ತಾರೆ? ಅವರು ತಮಗೆ ಮುಂದೆ ಅತ್ಯವಶ್ಯಕವಾದ ವಿದ್ಯಾಬುದ್ಧಿಗಳನ್ನು ಕಲಿತು ತಕ್ಕ ಉದ್ಯೋಗ ಸ್ಥಿತಿಗಳನ್ನು ಸಂಪಾದಿಸಿ ಸುಖವಾಗಿ ಬದುಕಬೇಕಾಗಿರುವದು ಹೌದು. ಆದರೆ ಇಷ್ಟೇ ಅಲ್ಲ. ಅವರು ತಮಗೂ ತಮ್ಮ ಬಂಧುಮಿತ್ರರಿಗೂ ಜೊತೆಗೆ ದೇವರಿಗೂ ಸಲ್ಲಿಸಬೇಕಾದ ಧರ್ಮವೇನೆಂದು ತಿಳಿದು ಮುಂದೆ ಅವರು ಬೆಳೆದು ದೊಡ್ಡವರಾದ ಮೇಲೆ ಅದನ್ನು ನೆರವೇರಿಸಲು ಶಕ್ತರಾಗಬೇಕೆಂತಲಲ್ಲವೇ? ಆ ಹುಡುಗನು ಕಷ್ಟಪಟ್ಟು ಎಷ್ಟು ವಿದ್ಯಾವಂತನಾದರೆ ಸರಿ. ಆದರೆ ಅವನು ವಿದ್ಯಾವಂತನಾಗಲಿ ಆಗದೆ ಇರಲಿ ಸದಾ ಪಾಠಶಾಲೆಯಲ್ಲಿರುವದಕ್ಕಾಗುವದಿಲ್ಲ. ಆತನ ತಂದೆಯು ಎಂದು ಅವನನ್ನು ಶಾಲೆಯಿಂದ ಬಿಡಿಸುವ ಕಾಲವು ಬಂದೇ ಬರುತ್ತದೆ. ಆಗ ಆ ಹುಡುಗನು ತನ್ನ ವಿದ್ಯಾಬುದ್ಧಿಗಳಿಗೆ ತಕ್ಕ ಉದ್ಯೋಗಸ್ಥಿತಿಗಳನ್ನು ಹೊಂದಿ ಬದುಕಬೇಕಾಗುವದು. ಅವನು ತನ್ನ ಬಾಲ್ಯವಯಸ್ಸನ್ನು ವ್ಯರ್ಥವಾಗಿ ಕಳೆದಿದ್ದರೆ ಜೀವಾವಧಿ ಹೀನಸ್ಥಿತಿಯನ್ನು ಅನುಭವಿಸುತ್ತಲೂ ತನ್ನ ಅಶ್ರದ್ಧೆಗಾಗಿ ಸದಾ ಕರಕರೆಪಡುತ್ತಲೂ ಬದುಕಬೇಕಾಗುವದು. ದೇವರು ನಮ್ಮನ್ನು ಈ ಭೂಲೋಕದಲ್ಲಿ ಕೆಲವು ಕಾಲ ಇರಿಸಿರುವದು ಒಂದು ವಿಶೇಷವಾದ ವಿದ್ಯವನ್ನು ಕಲಿಯುವದಕ್ಕಾಗಿಯೇ ಹೊರತು ಅನ್ಯಥಾ ಇಲ್ಲ. ನಮಗೆ ನಿತ್ಯವಾಗಿಯೂ ನೆಲೆಯಾಗಿಯೂ ಇರತಕ್ಕ ಸ್ಥಳವು ಇಹಲೋಕವಲ್ಲ. ಆತನ ಸನ್ನಿಧಾನವಾಗಿರುವ ಪರಲೋಕವೇ ನಮಗೆ ಸ್ಥಿರವಾದ ಸ್ಥಳ. ಈ ಸ್ಥಳವನ್ನು ನಾವು ಸೇರಿ ದೇವರ ದಿವ್ಯಸನ್ನಿಧಾನದಲ್ಲಿ ಸುಖಿಗಳಾಗಿ ನಮಗೆ ಅಲ್ಲಿ ನಿಯಮಿತವಾಗುವ ಕರ್ತವ್ಯವನ್ನು ನೆರವೇರಿಸಲು ಶಕ್ತರಾಗಬೇಕಾದರೆ ಒಂದು ಮಹಾ ವಿದ್ಯೆಯನ್ನು ಈ ಲೋಕದಲ್ಲೇ ಕಲಿಯಬೇಕಾಗಿದೆ. ಈ ಲೋಕದಲ್ಲಿ ನಮಗೆ ದೊರೆತಿರುವ ನಮ್ಮ ಜೀವಿತಕಾಲವೇ ಆ ವಿದ್ಯಾಭ್ಯಾಸಕ್ಕೆ ನಿಯಾಮಕವಾದ ಅವಧಿ. ಈ ಅವಧಿಕಾಲದಲ್ಲೇ ನಾವು ಅದನ್ನು ಕಲಿಯಬೇಕಾಗಿದೆ. ಆ ವಿದ್ಯೆ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸು ಮತ್ತು ನಿನ್ನನ್ನು ಪ್ರೀತಿಸಿಕೊಳ್ಳುವಂತೆಯೇ ನಿನ್ನ ನೆರೆಯವನನ್ನು ಪ್ರೀತಿಸು" ಎಂಬುವದೇ?

ಇದು ಬಹಳ ಸುಲಭವಾದ ವಿದ್ಯೆ. ಇದು ನಮಗೆ ತಿಳಿಯದೇ? ಎಂದು ಯಾರಾದರೂ ಕೇಳ್ಯಾರು. ಇದು ಸಂಪೂರ್ಣವಾಗಿ ನೆರವೇರಬೇಕಾದರೆ ಬಹಳ ಕಷ್ಟವಾದುದೂ ದೀರ್ಘಕಾಲ ಅಭ್ಯಾಸಿಸಬೇಕಾದುದೂ ಎಂದು ನಾವು ಹೇಳುತ್ತೇವೆ. ದೇವರನ್ನು ಪೂರ್ಣ ಬುದ್ಧಿ ಶಕ್ತಿ ಹೃದಯಗಳಿಂದ ಪ್ರೀತಿಸಬೇಕಾದರೆ ಒಂದುವೇಳೆ ನಮ್ಮ ದ್ರವ್ಯ, ಸುಖ, ಕೀರ್ತಿ, ಅಧಿಕಾರಗಳನ್ನು ತ್ಯಜಿಸಬೇಕಾಗಿರುವದು. ಇದಕ್ಕೆ ಸಿದ್ಧವಾಗಿರುವದು ಸುಲಭವೋ? ಅಥವಾ ತಂದೆತಾಯಿಗಳನ್ನೂ ಪ್ರಿಯರಾದ ಪತ್ನಿಮಕ್ಕಳನ್ನೂ ಸ್ವಂತ ಪ್ರಾಣವನ್ನೂ ಸಹ ಬಿಡಬೇಕಾಗಿರುವದು ಇದು ಸುಲಭವೋ? ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನೂ ಪ್ರೀತಿಸಬೇಕಾದರೆ ಗರ್ವವನ್ನೂ ಹೊಟ್ಟೆಕಿಚ್ಚನ್ನೂ ಜಾತಿಪದ್ಧತಿಗಳನ್ನೂ ತ್ಯಜಿಸಬೇಕಾಗುವದು. ಈ ವಿದ್ಯೆಯಲ್ಲಿ ಪಾರಂಗತರಾಗುವದಕ್ಕೆ ನಮ್ಮ ಜೀವಾವಧಿಯನ್ನೆಲ್ಲಾ ಪ್ರಯೋಗಿಸಿದರೂ ಸಾಲದೇ ಬರುವದೇನೋ ಭಯಪಡಬೇಕಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಡಿಸ್ಟ್ರಿಕ್ಟ್ ಚಾಮರಾಜನಗರದ ತಾಲ್ಲೂಕಿಗೆ ಸೇರಿದ ಚಿಕ್ಕ ಬೇಗೂರಿನಲ್ಲೂ, ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿಯಲ್ಲೂ ಪ್ಲೇಗ್ ಉಪದ್ರವಿರುವುದಿಲ್ಲವೆಂದು ತಿಳಿಯತಕ್ಕದ್ದು.

ಕೆಳಗೆ ಹೇಳುವ ದೊಡ್ಡ ಮನುಷ್ಯರು ಮೂರು ವರುಷಗಳ ತನಕ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸೆಲರುಗಳಾಗಿ ನೇಮಿಸಲ್ಪಟ್ಟಿದ್ದಾರೆ.—ಮೆ|| ಗಳಾದ ಹಸನ್ ಅಲ್ಲಿ ಬೇಗ್ ಸಾಹೇಬರು, ಅಂಬಳೆ ಅಣ್ಣಯ್ಯ ಪಂಡಿತರು, ರೆವ್ ಎಚ್. ಗಲಿಫೋರ್ಡ್‌ಯವರು, ವಿ. ತಿರುವೆಂಗಡಂ ಮೊದಲಿಯಾರ್ರು, ಹರ್ಬರ್ಟ್ ಮುನ್‌ಷಿಫ್ ಬಿ. ವೆಂಕಟಾಚಾರ್ರು.

ಕೋಣನಹಳ್ಳಿ ರಾಮರೆಡ್ಡಿಯವರು ಚಿಂತಾಮಣಿ ಸಿದ್ಧಘಟ್ಟದ ಹೈ ರೋಡಿನಲ್ಲಿ ಕಟ್ಟಿಸಿರುವ ಛತ್ರದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮೆ|| ಸುಬ್ಬಾರೆಡ್ಡಿಯವರನ್ನು ಐದು ವರುಷಗಳ ತನಕ ಒಬ್ಬ ಧರ್ಮದರ್ಶಿಯಾಗಿ ನೇಮಕ ಮಾಡಿದೆ.

ಮದ್ದಗಿರಿ ಮುನ್‌ಸಿಫ್ ಮೆ|| ಎ. ಕೆ. ಶ್ರೀನಿವಾಸರಾಘವಾಚಾರ್ರಿಗೆ ಅಗಸ್ಟ್ ತಾ|| ೬ ರಿಂದ ಪೂರಾ ಸಂಬಳದ ಮೇಲೆ ಒಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚೀಫ್ ಕೋರ್ಟ್ ಡೆಪ್ಯುಟಿ ಕ್ಲಾರ್ಕ್ ಮೆ|| ಡಿ. ಅಳಸಿಂಗ್ರಾಚಾರ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮದ್ದಗಿರಿಯ ಮುನ್‌ಸಫರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಪೋಲೀಸ್ ಪ್ರೊ|| ಅ. ಸೂಪರಿಂಟೆಂಡೆಂಟ್ ಮೆ|| ಟಿ. ಎನ್. ಅಲ್ಲಿಖಾನ್ ಯವರಿಗೆ ಜೂಲೈ ತಾ|| ೧೯ ರಿಂದ ಎರಡು ತಿಂಗಳೂ ಹನ್ನೆರಡು ದಿನಗಳ ಪ್ರಿವಿಲೆಜ್ ರಜವನ್ನೂ ಆ ತರುವಾಯ ಮೂರು ತಿಂಗಳೂ ಹದಿನೆಂಟು ದಿನಗಳ ರಜವನ್ನೂ ಕೊಟ್ಟಿದೆ.

ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ|| ಕೆ. ಶ್ರೀನಿವಾಸರಾಯರಿಗೆ ಕೊಟ್ಟಿರುವ ಆರು ವಾರಗಳ ಕಾಯಿಲೆ ರಜವನ್ನು ಇನ್ನೂ ಐದು ವಾರಗಳಿಗೆ ಜಾಸ್ತಿ ಮಾಡಿದೆ.

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ. ಕನ್ಸರ್ವೇಟರ್ ಮೆ|| ಎ. ಎ. ವರದಾಚಾರ್ರಿಗೆ ಅಗಸ್ಟ್ ತಾ|| ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳಲು ಅವಕಾಶ ಕೊಡಲ್ಪಡುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮದ್ದಗಿರಿ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಎಚ್. ಬಸವಾಚಾರಿ ಅರಸಿನವರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ದಿವಾನ್‌ರವರ ಆಫಿಸ್ ರಿಜಿಸ್ಟ್ರಾರ್ ಮೆ|| ವಿ. ವೆಂಕಟರಾಮಯ್ಯರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ನೇಮಿಸಿದೆ.

ಮುಂದೆ ಹೇಳುವವರನ್ನು ಸೀನಿಯರ್ ಅ|| ಕಮಿಷನರ್‌ರಾಗಿ ಬಡ್ತಿ ಮಾಡಿದೆ.—ಮೆ|| ಗಳಾದ ಕೆ. ಕೃಷ್ಣ ಐಯ್ಯರವರು, ಪಿ. ಎಫ್. ಬೌರಿಂಗ್ ಯವರು, ಸಿ. ಎಸ್. ಬಾಲಸುಂದರಂ ಐಯ್ಯರವರು, ಕೆ. ಮತ್ತನ್‌ರವರು, ಬಿ. ಅನಾಮುದ್ದೀಯಂಗಾರ್ರು.

ಅ|| ಕಮಿಷನರ್ ಮೆ|| ಟಿ. ಲಕ್ಷ್ಮೀನರಸಿಂಹರಾಯರನ್ನು ಜೂನ್ ೧ ರಿಂದ ೪ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮೆ|| ಕೆ. ಮೆ. ಲಾರಿರಾಯರನ್ನು ಜೂಲೈ ೧ ರಿಂದ ೪ ನೇ ಕ್ಲಾಸ್ ಅ. ಕಮಿಷನರ್‌ರಾಗಿ ಬಡ್ತಿ ಮಾಡಿದೆ.

ಶ್ರೀಮನ್‌ಮಹಾರಾಜರವರು ಮೈಸೂರು ಇನ್‌ಫಂಟ್ರಿ ೧ ನೇ ಬಟಾಲಿಯನ್‌ನಲ್ಲಿ ಮಾರ್ಚಿ ತಾ|| ೨೬ ರಿಂದ ಮುಂದೆ ಹೇಳುವವರನ್ನು ಬಡ್ತಿ ಮಾಡಿರುತ್ತಾರೆ.—ವಿಸಾರ್ ಬಾಕರಲ್ಲಿ ಯವರು—೧ ನೇ ಗ್ರೇಡ್ ಸುಬೇದಾರಿಗೆ. ಕೃಷ್ಣರಾಯರು—೨ ನೇ ಗ್ರೇಡ್ ಸುಬೇದಾರಿಗೆ. ಸೈಯದ್ ಹುಸೇನ್ ಯವರು—೧ ನೇ ಗ್ರೇಡ್ ಜಮೇದಾರಿಗೆ. ಜಂಗಮನಾಯಕರು—೨ ನೇ ಗ್ರೇಡ್ ಜಮೇದಾರಿಗೆ.

ಹಾಸನ್ ಡಿವಿಜನ್ ಸಬ್ ಅ|| ಇಂಜನಿಯರ್ ಮೆ|| ಆರ್. ಡಬ್ಲಿಯು ಸ್ಮಾಲ್‌ವೆಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ಮೆ|| ಸಿ. ಸುಬ್ಬಾರಾಯಲು ನಾಯುಡು ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಳವಳ್ಳಿಗೆ ವರ್ಗವಾಗಿರುವ ಕೃಷ್ಣರಾಜಪೇಟೆ ತಾಲ್ಲೂಕ್ ಶಿರಸ್ತೇದಾರ್ ಕೆ. ಎನ್. ರಾಮಚಂದ್ರಯ್ಯನವರು ಮಳವಳ್ಳಿ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ|| ಎಚ್. ಎಸ್. ವೆಂಕಟಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶ್ರೀರಂಗಪಟ್ಟಣಕ್ಕೆ ವರ್ಗವಾಗಿರುವ ಮೈಸೂರು ತಾಲ್ಲೂಕ್ ಶಿರಸ್ತೇದಾರ್ ಸಿ. ಎನ್. ...

ಗಂಧಕ ಮೊದಲಾದ ಮದ್ದಿನ ಪದಾರ್ಥಗಳು.

ಮೈಸೂರು ಸರ್ಕಾರದ ವಾರ್ಷಿಕ ರಿಪೋರ್ಟು

ಡಾ|| ಡಬ್ಲಿಯು ಎಫ್. ಸ್ಮೀತ್‌ರವರು ಮೈಸೂರು ಸಂಸ್ಥಾನದಲ್ಲಿ ಗಂಧಕವೇ ಮೊದಲಾದ ಮದ್ದಿನ ಪದಾರ್ಥಗಳನ್ನೂ ದ್ರಾವಕಗಳನ್ನೂ ಇಟ್ಟುಕೊಂಡಿರುವ ಪ್ರಜೆಗಳು ಕಳೆದ ವರುಷ ಸರ್ಕಾರದಿಂದ ೧೮೩ ಲೈಸೆನ್ಸುಗಳನ್ನು ಪಡೆದುಕೊಂಡರೆಂತಲೂ, ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಲೈಸೆನ್ಸ್‌ದಾರರು ಇದ್ದಾಗ್ಯೂ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಬಹಳ ಜಾಸ್ತಿಯಾಗಿ ಲೈಸೆನ್ಸು ಕೊಡಲ್ಪಟ್ಟವೆಂದೂ ರಿಪೋರ್ಟಿನಲ್ಲಿ ಪ್ರಕಟಿಸಿದ್ದಾರೆ. ಸರ್ಕಾರದ ಅಧಿಕಾರಿಗಳು ಅಂಥಾ ಲೈಸೆನ್ಸ್‌ದಾರರ ಅನೇಕ ಅಂಗಡಿ ಮುಂಗಟ್ಟುಗಳನ್ನು ಅಜಮಾಯಿಷಿ ಮಾಡಿ ಎಲ್ಲಾ ಕಡೆಯಲ್ಲಿಯೂ ತೃಪ್ತಿಕರವಾಗಿದ್ದವೆಂದು ತಿಳಿಸಿದ್ದಾರೆ. ಸಿಡಿಮದ್ದು ಕೋಲಾರ್ ಚಿನ್ನದ ಗಣಿಗಳಲ್ಲೇ ವಿಶೇಷವಾಗಿ ಉಪಯೋಗಿಸುತ್ತಾರೆ. ಅಲ್ಲಿ ಕೆಲವರು ಲೈಸೆನ್ಸ್ ಇಲ್ಲದೆ ಮದ್ದನ್ನೂ ಅದಕ್ಕೆ ಸಂಬಂಧಪಡುವ ಪದಾರ್ಥಗಳನ್ನೂ ಗುಟ್ಟಾಗಿ ಇಟ್ಟುಕೊಂಡಿದ್ದು ಸಿಕ್ಕಿಬಿದ್ದರು. ಸರ್ಕಾರದವರು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಮಾಡಿದ್ದಲ್ಲದೆ ಅವರ ಬಳಿ ಇದ್ದ ಅಂಥಾ ಪದಾರ್ಥಗಳನ್ನು ಕಿತ್ತುಕೊಂಡು ನಾಶಪಡಿಸಿದರು.

ತುಂಕೂರ್ ತಾಲ್ಲೂಕಿಗೆ ಸೇರಿದ ಕಸ್ತೂರಿನಲ್ಲಿ ಲೈಸೆನ್ಸ್ ಇಲ್ಲದೆ ಮದ್ದು ಮಾಡಿ ಬಾಣಬಿರುಸುಗಳನ್ನು ತಯಾರಿಸುತ್ತಿದ್ದ ಇಬ್ಬರ ಮೇಲೆ ಮೊಕದ್ದಮೆ ಆಯಿತು. ಅವರಿಗೆ ಮ್ಯಾಜಿಸ್ಟ್ರೇಟರು ಜುಲ್ಮಾನೆ ವಿಧಿಸಿದರು. ಯಳಂದೂರಿನಲ್ಲಿ ಒಬ್ಬ ಲೈಸೆನ್ಸ್‌ದಾರನು ಇನ್ನೊಬ್ಬನಿಗೆ ಸಹಾಯ ಮಾಡಿ ಅವನಿಗೆ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟನೆಂದು ಕಂಡುಬಂದದ್ದರಿಂದ ಅವನ ಲೈಸೆನ್ಸನ್ನು ಸರ್ಕಾರದವರು ಕಿತ್ತುಕೊಂಡರು.

ಕಳೆದ ವರುಷ ೧೫ ಅನಾಹುತಗಳು ನಡೆದವು. ಇವೆಲ್ಲಾ ಕೋಲಾರ್ ಚಿನ್ನದ ಗಣಿಗಳೊಳಗೇ ಸಂಭವಿಸಿದವು. ಹದಿನಾಲ್ಕು ಜನರು ಮೃತಪಟ್ಟರೆಂತಲೂ, ಹದಿನೇಳು ಮಂದಿಗೆ ಗಾಯಗಳಾದವೆಂತಲೂ ಗೊತ್ತಾಗುತ್ತದೆ. ಈ ಅನಾಹುತಗಳು ಸಂಭವಿಸಿದ ವಿಷಯವಾಗಿ ಸರ್ಕಾರದವರು ಎಂಟು ಜನರ ಮೇಲೆ ಮೊಕದ್ದಮೆ ತಂದರು. ಆ ಪೈಕಿ ಮೂರು ಮಂದಿಗೆ ಶಿಕ್ಷೆಯಾಯಿತು.

ಪ್ರತಿ ವರುಷವೂ ಈ ಸಿಡಿಮದ್ದಿನ ಪದಾರ್ಥಗಳನ್ನೂ ದ್ರಾವಕಗಳನ್ನೂ ಬಹಳವಾಗಿ ನಮ್ಮ ಸಂಸ್ಥಾನಕ್ಕೆ ತರಿಸುತ್ತಾರೆ. ಆದಕಾರಣ ಅವುಗಳ ದೆಸೆಯಿಂದ ಅನಾಹುತಗಳಾಗಲಿ ಪ್ರಾಣನಷ್ಟವಾಗಲಿ ಸಂಭವಿಸದಂತೆ ಬಂದೋಬಸ್ತು ಇಟ್ಟು ತನಿಖೆಮಾಡಬೇಕಾದದ್ದು ಪರಮಾವಶ್ಯಕವಾಗಿರುತ್ತದೆ.

ಎರಡು ಪರೋಪಕಾರಕ ಕಾರ್ಯಗಳು

೧ ಬೆಂಗಳೂರಿನಲ್ಲಿ

ಬೆಂಗಳೂರು ಪಟ್ಟಣದಲ್ಲಿ ಮಹಾರಾಜ ದೊಡ್ಡ ಮನುಷ್ಯರಲ್ಲಿ ಪುಣ್ಯವಂತರೂ ಪರೋಪಕಾರಿಗಳೂ ಎಂದು ಪ್ರಖ್ಯಾತಿ ಪಡೆದಿದ್ದ ಶೇಟ್ ಮ|| ವೆಂಕಟರಾಯರು ಬಡವರಾದ ಬಾಲಕರಿಗೆ ವಿದ್ಯೆ ಕಲಿಯಲು ಅನುಕೂಲ ಮಾಡಬೇಕೆಂದು ಇಷ್ಟಪಟ್ಟು ತಮ್ಮ ಕಡೆಯ ಕಾಲದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುವುದಕ್ಕೆ ತಮ್ಮ ಆಸ್ತಿಯಿಂದ ೪೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿ ಮರಣ ಶಾಸನವನ್ನು ಬರೆದಿರುತ್ತಾರೆ. ಅವರ ಶ್ರೇಷ್ಠವಾದ ಈ ಅಭಿಮತವು ಈಗ ನೆರವೇರಿರುತ್ತದೆಂತಲೂ, ನಾಳೆ ಭಾನುವಾರದ ದಿವಸ ಆ ವಿದ್ಯಾರ್ಥಿನಿಲಯವು ಅಲ್ಲಿನ ಚಾಮರಾಜಪೇಟೆಯಲ್ಲಿ ಪ್ರಾರಂಭಿಸಲ್ಪಡುವುದೆಂತಲೂ ಕೇಳಿ ಸಂತೋಷಪಡುತ್ತೇವೆ.

೨. ಮೈಸೂರು ಪಟ್ಟಣದಲ್ಲಿ

ಅನೇಕ ವರುಷಗಳಿಂದಲೂ ಮೈಸೂರು ಪಟ್ಟಣದಲ್ಲಿ ಸಾಹುಕಾರರಾಗಿದ್ದು ಗತಿಸಿದ ಮ|| ಬಿ. ಜಗನ್ನಾಥಶೆಟ್ಟರ ಪತ್ನಿ ಪಾಪಮ್ಮನವರು ಈ ತಿಂಗಳ ೮ನೇ ತಾರೀಖಿನಲ್ಲಿ ಕಾಲವಾದರು. ಈಕೆಯ ದತ್ತುಮಗನು ಇಲ್ಲಿನ ಸುಮಾರು ೫೦ ಮಂದಿ ಬಡಬಗ್ಗರಿಗೆ ಆಕೆಯ ಹೆಸರಿನಲ್ಲಿ ಬಟ್ಟೆಯ ಕಟ್ಟಿಯಲ್ಲಿ ಕಳೆದ ೧೯ನೇ ತಾ|| ಗುರುವಾರ ಅನ್ನದಾನವನ್ನು ಮಾಡಿಸಿದ್ದಲ್ಲದೆ, ತಾ|| ೨೨ನೇ ಭಾನುವಾರ ಇಲ್ಲಿನ ನಂಜರಾಜಬಹದ್ದೂರರ ಧರ್ಮಛತ್ರದಲ್ಲಿ ಸುಮಾರು ೧,೩೦೦ ಜನರಿಗೆ ಸಮಾರಾಧನೆಯನ್ನು ಮಾಡಿಸಿದನು. ಅವರಿಗೆ ನಂಜನಗೂಡಿನಲ್ಲಿರುವ ಸುಮಾರು ೫,೦೦೦ ರೂಪಾಯಿನ ಭೂಸ್ಥಿತಿಯನ್ನು ಧರ್ಮಕಾರ್ಯಕ್ಕಾಗಿ ಅಂದರೆ ಅದರ ಉತ್ಪತ್ತಿಯಲ್ಲಿ ಬಡವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವುದಕ್ಕಾಗಿ ಬಿಟ್ಟಿರುತ್ತಾರೆ. ಈ ಆಸ್ತಿಯನ್ನು ಅಡ್ವೊಕೇಟ್ ಮ|| ಎಂ. ಸಿ. ರಂಗೈಯಂಗಾರ್ರವರು ರೂಪಿಸಿ, ಅನೇಕ ಬಡವಿದ್ಯಾರ್ಥಿಗಳಿಗೆ ದ್ರವ್ಯಸಹಾಯ ಮಾಡತಕ್ಕದ್ದೆಂದು ಆಕೆಯು ಮರಣಶಾಸನವನ್ನು ಬರೆದಿರುವರು. ಈಗ ಆ ಆಸ್ತಿಯಿಂದ ತಿಂಗಳಿಗೆ ಬರುವ ಸುಮಾರು ೨೦-೨೨ ರೂಪಾಯಿ ಹುಟ್ಟುವಳಿಯಲ್ಲಿ ೬ ರೂಪಾಯಿ ಅಲ್ಲೇ ಧರ್ಮದಖರ್ಚಿಗೆ ವಿನಿಯೋಗವಾಗುತ್ತಿದೆಯೆಂದೂ, ಉಳಿದ ಹಣವನ್ನು ಬಡವಿದ್ಯಾರ್ಥಿಗಳಿಗೆ ಹಂಚಿ ಕೊಡಬಹುದಾಗಿದೆ ಎಂದೂ ತಿಳಿದು ಬಂದಿದೆ. ಹೆಣ್ಣುಹೆಂಗಸಾದರೂ ಆಕೆಯಲ್ಲಿ ಇಂಥಾ ವಿದ್ಯಾಪ್ರೋತ್ಸಾಹಕ ಕಾರ್ಯಕ್ಕೆ ಸಹಾಯ ಮಾಡಬೇಕೆಂಬ ಧರ್ಮಬುದ್ಧಿಯು ಉಂಟಾದದ್ದು ಸ್ತೋತ್ರಾರ್ಹವಾಗಿರುತ್ತದೆ.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ

ಉಪದ್ರವನ್ನು ನಿಲ್ಲಿಸುವುದಕ್ಕೆ ಏರ್ಪಾಡುಗಳು

ಕಳೆದ ಸೋಮವಾರ ಬೆಳಿಗ್ಗೆ ಅಫಿಸಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮ|| ಕೆ. ಚಾಂಡಿಯವರು ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಂದು ವಿಶೇಷ ಸಭೆಯನ್ನು ನಡಿಸಿದರು. ಮ್ಯುನಿಸಿಪಲ್ ಕೌನ್ಸಿಲರುಗಳೂ, ದರ್ಬಾರ್ ಭಕ್ಷಿ ಮ|| ಲಿಂಗರಾಜೇ ಅರಸಿನವರೂ, ಮೌಲ್ವಿ ದರ್ವೇಸ್ ಪೀರ್ ಯವರೂ, ರಜಿಮೆಂಟ್‌ದಾರರೂ, ಪೋಲೀಸ್ ಸೂಪರಿಂಟೆಂಡೆಂಟರೂ, ಶೇಷ್ ಪ್ರೊ|| ಸಾ|| ಮ|| ಮಹಮದ್ ಜಾಫರ್‌ಯವರೂ, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಡಾ|| ಪಲ್ಪುಯವರೂ ಮೀಟಿಂಗಿನಲ್ಲಿ ಹಾಜರಾಗಿದ್ದರು. ಡೆಪ್ಯುಟಿ ಕಮಿಷನರ್‌ರವರು ಸಭಿಕರನ್ನು ಕುರಿತು—ಈಗ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಹೆಚ್ಚುತ್ತಾ ಬಂದಿರುವುದರಿಂದ ಅದನ್ನು ಅಡಗಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಈ ದಿನ ನಿಮ್ಮನ್ನೆಲ್ಲಾ ಬರಮಾಡಿದ್ದಾಗಿದೆ ಎಂಬದಾಗಿ ತಿಳಿಸಿದರು.

ಪ್ಲೇಗ್ ಟಿಕಾ ಹಾಕಿಸುವುದು.

ಹೆಲ್ತ್ ಆಫೀಸರವರು - ಪ್ಲೇಗ್ ಉಪದ್ರವು ಕ್ರಮವಾಗಿ ಹೆಚ್ಚುತ್ತಿರುವುದನ್ನೂ ಅದರ ನಿವಾರಣೆಗೆ ಮಾಡಬೇಕಾಗಿರುವ ಕಾರ್ಯಗಳನ್ನೂ ತಿಳಿಸದನು ಕಳೆದ ಮೇ ತಿಂಗಳಿಂದ ಪ್ಲೇಗ್ ಕಾಯಿಲೆಯ ಸಂಖ್ಯೆ, ಆ ಪೈಕಿ ಮೃತಪಟ್ಟ ಜನರ ಸಂಖ್ಯೆ ಮೊದಲಾದ ಲೆಕ್ಕಗಳನ್ನು ತಿಳಿಸಿ ಹೇಳಿದರು:

ತಿಂಗಳು	ಪ್ಲೇಗ್ ತಗಲಿದ್ದು	ಮರಣ	ಶೇಕಡ
ಮೇ	೯	೮	೮೮
ಜೂನ್	೮೫	೩೩	೭೩
ಜುಲೈ	೬೮	೪೦	೬೯
ಆಗಸ್ಟ್ (೧೭ರ ವರೆಗೆ)	೧೧೯	೭೮	೬೭

ಹೆಲ್ತ್ ಆಫೀಸರವರು ಅದುವರೆಗೆ ಸುಮಾರು ೧,೫೦೦ ಜನರಿಗೆ ಪ್ಲೇಗ್ ಟಿಕಾವನ್ನು ಹಾಕಿದರು. ಆ ಪೈಕಿ ೧೧ ಮಂದಿಗೆ ಪ್ಲೇಗ್ ತಗಲಿ ೮ ಜನ ತೀರಿಹೋದರು. ೭ ಮಂದಿಗೆ ವಾಸಿಯಾಯಿತು. ಟಿಕಾ ಹಾಕಿಸಿಕೊಳ್ಳದಿದ್ದವರಲ್ಲಿ ೨೨೫ ಜನರಿಗೆ ಪ್ಲೇಗ್ ತಗಲಿತು. ೧೫೧ ಮಂದಿ ಕಾಲವಾದರು, ಅಂದರೆ ಶೇಕಡಾ ೬೮ ರಷ್ಟು ತೀರಿಹೋದರು. ಡಾಕ್ಟರ್ ಪಲ್ಪುಯವರು—ಬೆಂಗಳೂರು ದಂಡಿನಲ್ಲಿ ಪ್ರಜೆಗಳ ಮುಖಂಡರು ಪ್ರೋತ್ಸಾಹಪಡಿಸಿ ಅನೇಕ ಜನರಿಗೆ ಪ್ಲೇಗ್ ಟಿಕಾವನ್ನು ಹಾಕಿಸಿರುತ್ತಾರೆಂದೂ ಮೈಸೂರಿನಲ್ಲೂ ಮುಖಂಡರು ಆ ರೀತಿ ಮಾಡಬೇಕೆಂದೂ ಹೇಳಿದರು. ಮ|| ರಂಗೈಯಂಗಾರ್ರು—ಟಿಕಾ ಹಾಕಿಸುವುದು ಒಳ್ಳೇದು, ಅನುಭವಸ್ಥರಾದ ಡಾಕ್ಟರುಗಳ ಮಾತನ್ನು ಕೇಳಬೇಕು. ಬಲಾತ್ಕಾರ ಮಾಡುವುದು ಸಾಧ್ಯವಲ್ಲ. ಗಣ್ಯರಾದವರು ಮೊದಲು ಟಿಕಾ ಹಾಕಿಕೊಂಡು ಇತರರಿಗೆ ವಿವೇಕ ಕಲಿಸಬೇಕು. ಘೋಷಾ ಸ್ತ್ರೀಯರಿಗೂ ಸ್ತ್ರೀ ಡಾಕ್ಟರುಗಳು ಮನೆಗಳಲ್ಲಿ ಟಿಕಾ ಹಾಕಬೇಕು ಎಂದು ಹೇಳಿದರು. ಮ|| ಹಸನಲ್ಲಿ ಬೇಗ್‌ಯವರು—ಮಿಷನ್ ಆಸ್ಪತ್ರೆಯ ಲೇಡಿ ಡಾಕ್ಟರುಗಳು ಮುಸಲ್ಮಾನರ ಮನೆಗಳಿಗೆ ಹೋಗಿ ಔಷಧಗಳನ್ನು ಕೊಟ್ಟು ಅವರ ನಂಬಿಕೆ ಪ್ರೀತಿಗಳನ್ನು ಸಂಪಾದಿಸಿಕೊಂಡಿರುತ್ತಾರಾದ್ದರಿಂದ ಅವರನ್ನೇ ಟಿಕಾ ಹಾಕುವಂತೆ ನೇಮಿಸಿದರೆ ಅನುಕೂಲವೆಂದು ಸೂಚಿಸಿದರು. ಮ|| ಶ್ರೀಕಂಠಯ್ಯನವರು—ಟಿಕಾ ಹಾಕಿಸಿಕೊಂಡವರ ಯೋಗಕ್ಷೇಮವನ್ನು ಡಾಕ್ಟರುಗಳು ವಿಚಾರಿಸಬೇಕಲ್ಲದೆ ಬಡಬಗ್ಗರಿಗೆ ಜೀವನಕ್ಕೂ ಏನಾದರೂ ಸಹಾಯ ಮಾಡಿದರೆ ಒಳ್ಳೇದು ಎಂದು ಅಭಿಪ್ರಾಯಪಟ್ಟರು. ಮೌಲ್ವಿ ದರ್ವೇಸ್ ಪೀರ್‌ಯವರು ದೊಡ್ಡ ಕಟ್ಟಡದಲ್ಲಿ ಮೀಟಿಂಗ್ ಮಾಡಿ ಪ್ರಜೆಗಳ ಎದುರಿಗೆ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಟಿಕಾ ಹಾಕಿಸಿಕೊಂಡರೆ ಇತರರಿಗೆ ಪ್ರೋತ್ಸಾಹವಾಗುತ್ತದೆ ಎಂದು ಸೂಚಿಸಿದ್ದಕ್ಕೆ ಮ|| ಮಹಮದ್ ಜಾಫರ್‌ಯವರು - ಇದು ಸರಿಯಾದ ವಿಚಾರವಲ್ಲ. ಆಗಲೂ ಜನರಿಗೆ ಸಂಶಯ ತಪ್ಪುವುದಿಲ್ಲ. ಎರಡು ಕಡೆ ನೀರನ್ನು ಇಟ್ಟು ಹಾಕುತ್ತಾರೆ ಎನ್ನುವರು ಎಂದು ಹೇಳಿದರು. ದರ್ಬಾರ್ ಭಕ್ಷಿ ಮ|| ಲಿಂಗರಾಜೇ ಅರಸಿನವರೂ ಮ|| ಅಂಬಳೆ ಅಣ್ಣಯ್ಯ ಪಂಡಿತರೂ ಈ ಸಲ ಬೆಸ್ತಗೇರಿ ಮುಂತಾದ ಕಡೆ ಟಿಕಾ ಹಾಕಿಸಿಕೊಂಡವರಲ್ಲಿ ೩೩ ಮಂದಿ ಕಾಲವಾದದ್ದು ಜನರಲ್ಲಿ ಸಂಶಯಕ್ಕೆ ಕಾರಣವಾಗಿದೆ. ಪ್ಲೇಗ್ ಇಲ್ಲದೇ ಇರುವ ಮೊಹಲ್ಲೆಗಳಲ್ಲಿ ಜನರಿಗೆ ಟಿಕಾ ಹಾಕಿಸಿದರೆ ಉತ್ತಮವೆಂದು ತಿಳಿಸಿದರು. ಈ ಪ್ರಕಾರ ಚರ್ಚೆ ನಡೆದ ಮೇಲೆ ತೀರ್ಮಾನ ಮಾಡಲ್ಪಟ್ಟ ವಿಷಯಗಳೇನೆಂದರೆ:—

ಜನರಿಗೆ ಸಾಧ್ಯವಾದಷ್ಟು ನಂಬಿಕೆಯುಳ್ಳ ಡಾಕ್ಟರುಗಳನ್ನು ಟಿಕಾ ಹಾಕುವ ಕೆಲಸಕ್ಕೆ ನೇಮಿಸಬೇಕು. ಬಡಬಗ್ಗರ ಜೀವನಕ್ಕೆ ದ್ರವ್ಯ ಸಹಾಯವನ್ನು ಮಾಡಬೇಕು. ಇದಕ್ಕಾಗಿ ಪ್ಲೇಗ್ ಫಂಡಿನಿಂದ ೨,೦೦೦ ರೂಪಾಯಿ ಕೊಡಿಸುವಂತೆ ಗವರ್ನಮೆಂಟನ್ನು ಕೇಳಿಕೊಳ್ಳಬೇಕು. ಮೊಹಲ್ಲಾ ಕೌನ್ಸಿಲರುಗಳೂ ದೊಡ್ಡ ಮನುಷ್ಯರೂ ಶಿಫಾರಸು ಮಾಡುವಂಥ ಜನರಿಗೆ ಸರ್ಕಾರದವರು ಜೀವನಾರ್ಥವಾಗಿ ದ್ರವ್ಯಸಹಾಯ ಮಾಡಬೇಕು. ಜನಾನಾ ಸ್ತ್ರೀಯರಿಗೆ ಅವರವರ ಮನೆಗಳಲ್ಲಿ ಟಿಕಾ ಹಾಕುವುದಕ್ಕಾಗಿ ಸ್ತ್ರೀ ಡಾಕ್ಟರನ್ನೂ, ಮಿಷನ್ ಆಸ್ಪತ್ರೆಯ ಲೇಡಿ ಡಾಕ್ಟರನ್ನೂ ಗೊತ್ತುಮಾಡಿ, ಅವರಿಗೆ ಗಾಡಿ ಖರ್ಚಿಗಾಗಿ ಅಲೋಯನ್ಸು ಕೊಡಬೇಕು.

ಬೇರೆ ಸ್ಥಳವನ್ನು ಒದಗಿಸುವುದು

ಡಾ|| ಪಲ್ಪುಯವರು—ಈ ಸಂದರ್ಭದಲ್ಲಿ ಸಮೀಪದಲ್ಲಿ ಪ್ಲೇಗ್ ಕಾಯಿಲೆ ಸಂಭವಿಸಿದ್ದರಿಂದಲೋ ಮನೆಯನ್ನು ಬಿಟ್ಟುಹೋಗಬೇಕೆಂದು ಪ್ರಜೆಗಳು ಇಷ್ಟಪಟ್ಟರೆ ಅಂಥವರು ಜೋಪಡಿ ಹಾಕಿಕೊಳ್ಳುವುದಕ್ಕೆ ಗಳ ಬೊಂಬು ಮುಂತಾದವನ್ನು ಸರ್ಕಾರದಿಂದ ಕೊಡುತ್ತೇವೆ. ಪಟ್ಟಣದೊಳಪಾರ್ಶ್ವದಲ್ಲೇ ಆರೋಗ್ಯಕರವಾದ ಮನೆಗಳನ್ನು ಕಟ್ಟುವುದಕ್ಕೆ ಪ್ರಜೆಗಳ ಮುಖಂಡರಿಗೆ ಸ್ಥಳವನ್ನು ತೋರಿಸುವೆನು. ಅವರು ಅಲ್ಲಿ ಮನೆಗಳನ್ನು ಕಟ್ಟಿ ಸುಲಭ ಬಾಡಿಗೆಗೆ ಬಡಬಗ್ಗರಿಗೆ ಕೊಡಬೇಕು. ಪುಣ್ಯವಂತರು ಬಡವರ ವಿಷಯದಲ್ಲಿ ಈ ಕಷ್ಟಕಾಲದಲ್ಲಿ ಕರುಣೆ ತೋರಿಸಬೇಕಾಗಿದೆ ಎಂಬೀ ರೀತಿ ಸೂಚಿಸಿದರು. ಮ|| ಅಂಬಳೆ ಪಂಡಿತರು ಊರೊಳಗೇ ಸ್ಥಳವನ್ನು ಕೊಡಿಸಿಕೊಟ್ಟರೆ ನಾನು ಇಪ್ಪತ್ತು ಮನೆಗಳನ್ನು ಕಟ್ಟುವುದಕ್ಕೆ ೨,೫೦೦ ರೂಪಾಯಿ ಕೊಡುತ್ತೇನೆಂದು ಹೇಳಿದರು. ಸಾಹುಕಾರ್ ಮೊಹದೀನ್ ಸಾಬರು—ಹಾಗಾದರೆ ನಾನು ಕೂಡ ನನ್ನ ಜನರಿಗೆ ಪ್ರೋತ್ಸಾಹಪಡಿಸಿ ಸಹಾಯಕೊಟ್ಟು ನೂರು ಮನೆಗಳನ್ನು ಕಟ್ಟಿಸುತ್ತೇನೆ ಎಂದು ತಿಳಿಸಿದರು. ಸಾಹುಕಾರ್ ಮ|| ಅನಂತರಾಮಯ್ಯನವರೂ, ಮ|| ಸುಬ್ಬಣ್ಣನವರೂ, ಮ|| ನರಸಿಂಹಸ್ವಾಮಿಗಳೂ—ಹಾಗೆ ಸರ್ಕಾರದವರು ಪಟ್ಟಣದ ಒಳಪಾರ್ಶ್ವದಲ್ಲೇ ನಿವೇಶನಗಳನ್ನು ಕೊಡಿಸಿದ ಪಕ್ಷಕ್ಕೆ ತಾವೂ ಕೆಲವು ಸತ್ರಾರು ಆರೋಗ್ಯಕರವಾದ ಮನೆಗಳನ್ನು ಕಟ್ಟಿಸಲು ಸಿದ್ಧರಾಗಿರುತ್ತೇವೆಂದು ಹೇಳಿದರು. ಡಾಕ್ಟರ್ ಪಲ್ಪುಯವರೂ, ವೈಸ್ ಪ್ರೆಸಿಡೆಂಟರೂ, ಡೆಪ್ಯುಟಿ ಕಮಿಷನರವರೂ ಏಕೀಭವಿಸಿ ಪಟ್ಟಣದಲ್ಲೆಲ್ಲಾ ಸಂಚಾರಮಾಡಿ, ಆರೋಗ್ಯಕರವಾದ ನಿವೇಶನಗಳನ್ನು ಗೊತ್ತುಮಾಡಿ, ಒಂದು ವಾರದೊಳಗೆ ತಿಳಿಸುತ್ತೇವೆಂದು ಹೇಳಿದರು.

ಜೋಪಡಿ ಹಾಕಿಕೊಳ್ಳುವುದಕ್ಕೆ ಸಹಾಯ.

ಕೊಡಬೇಕಾದ ಮನೆ ಬಿಟ್ಟು ಜೋಪಡಿ ಹಾಕಿಕೊಂಡು ವಾಸಮಾಡಬೇಕೆನ್ನುವವರಿಗೆ ಅವರು ಬಡವರೆಂದು ಗೊತ್ತಾದ ಪಕ್ಷದಲ್ಲಿ ಸರ್ಕಾರದಿಂದ ಗಳ ಬೊಂಬುಗಳನ್ನು ಮುಫತ್ತಾಗಿ ಕೊಡಿಸುವುದಾಗಿ ಡಾ|| ಪಲ್ಪುಯವರು ಸೂಚಿಸಿದರು. ಆಯಾ ಮೊಹಲ್ಲೆಯ ಜನರು ಅಲ್ಲಲ್ಲೇ ಜೋಪಡಿ ಹಾಕಿಕೊಳ್ಳುವುದಕ್ಕೆ ಅನುಕೂಲವಾದ ಸ್ಥಳಗಳನ್ನು ಅಂದರೆ ಚಿಟ್ಟೆಹುಲ್ಲು ಬಡಾವಣೆ, ಜಲಪುರಿ ಬಡಾವಣೆ, ಕಿಲ್ಲಾ ಬಡಾವಣೆ, ಅಲಸಪ್ಪ ರಸ್ತೆಯ ಬಳಿ ಮೈದಾನ, ಕಾರಂಜಿಕೆರೆಯ ಕೋಡಿ ಪ್ರದೇಶ ಮುಂತಾದ ಕಡೆಗಳನ್ನು ನಿರ್ದೇಶ ಮಾಡಿದರು. ಇದಲ್ಲದೆ ಕ್ಯಾಂಪುಗಳನ್ನು ಹಾಕಿಕೊಂಡು ವಾಸಮಾಡತಕ್ಕ ಭಾಗಗಳಿಗೆ ದೀಪಗಳನ್ನು ಇಡಿಸಿ ಪೋಲೀಸ್ ಬಂದೋಬಸ್ತು ಕೊಡಿಸುವಂತೆ ಏರ್ಪಾಡಾಯಿತು. ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಕೌನ್ಸಿಲರುಗಳಿಂದ ಶಿಫಾರಸು ಕಾಗದಗಳನ್ನು ತರುವಂಥಾ ಸಂಸಾರಸ್ಥರಿಗೆ ಗಳ ಬೊಂಬುಗಳನ್ನು ಮುಫತ್ತಾಗಿ ಕೊಡಿಸಬೇಕೆಂದು ತೀರ್ಮಾನವಾದ ಬಳಿಕ ಮೀಟಿಂಗು ಮುಕ್ತಾಯವಾಯಿತು.

ಮೈಸೂರು ಡಿಸ್ಟ್ರಿಕ್ಟ್ ಫಂಡ್ ಮೀಟಿಂಗು.

ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೀಟಿಂಗು ನಡೆಯಿತು. ಡೆಪ್ಯುಟಿ ಕಮಿಷನರ್ ಮ|| ಕೆ. ಚಾಂಡಿಯವರು ಅಗ್ರಾಸನವನ್ನು ವಹಿಸಿದ್ದರು. ಅಲ್ಲಿ ಚರ್ಚೆಯಾಗಿ ನಿಷ್ಕರ್ಷಿಸಲ್ಪಟ್ಟ ವಿಷಯಗಳ್ಯಾವವೆಂದರೆ:—

ಸಂಸ್ಥಾನದ ಇತರಕ್ಕೆ ಮಿಡ್‌ವೈಫ್ (ಸೂಲಗಿತ್ತಿ) ಯರ ಸಂಬಳವನ್ನು ತಿಂಗಳಿಗೆ ೧೫ ರೂಪಾಯಿನಂತೆ ನಿಗದಿಮಾಡಿ, ಮಲೆನಾಡು ಮುಂತಾದ ಅನಾರೋಗ್ಯ ನಾಡು ಪ್ರಾಂತ್ಯಗಳಲ್ಲಿ ಕೆಲಸ ಮಾಡತಕ್ಕವರಿಗೆ ಅಲೋಯನ್ಸನ್ನು ಕೊಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡಿಸಿದ್ದನ್ನು ಮೆಂಬರುಗಳು ಓದಿಸಿ ರಿಕಾರ್ಡು ಮಾಡಿಕೊಂಡರು.—ಮೇಟಗಳ್ಳಿಯಲ್ಲಿ ಒಂದು ಸರ್ಕಾರಿ ಆಸ್ಪತ್ರೆಯನ್ನು ಇಡುವುದು ಆವಶ್ಯವೆಂದು ಕಳೆದ ಡಿಸ್ಟ್ರಿಕ್ಟ್ ಫಂಡ್ ಮೀಟಿಂಗಿನಲ್ಲಿ ತೀರ್ಮಾನವಾಗಿತ್ತು. ಗವರ್ನಮೆಂಟಿನವರು ಸದ್ಯ ಹಣ ಸಹಾಯ ಕಡಿಮೆಯಾಗಿರುವುದರಿಂದ ಅದನ್ನು ಸ್ಯಾಂಕ್ಷನ್ ಮಾಡಲಾಗದು ಎಂದು ಅಪ್ಪಣೆ ಕೊಡಿಸಿರುತ್ತಾರೆ.—ಹುಣಸೂರು ತಾಲ್ಲೂಕು ಗಾವಡಗೆರೆ ಗ್ರಾಮದಲ್ಲಿ ಪ್ರತಿವಾರವೂ ಸಂತೆ ಕಟ್ಟುವಂತೆ ಏರ್ಪಾಡಾಗಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಶಿಫಾರಸು ಮಾಡಿದ್ದನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.—ಮಂಡ್ಯ ತಾಲ್ಲೂಕು ಬಸರಾಳು ಗ್ರಾಮದಲ್ಲಿ ಕರ್ನಾಟಕ ವೈದ್ಯಶಾಲೆಯನ್ನು ಇಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿದ್ದರು. ಗವರ್ನಮೆಂಟಿನವರು ಹಣವಿಲ್ಲವೆಂದು ಹೇಳಿ ಅದನ್ನು ಸ್ಯಾಂಕ್ಷನ್ ಮಾಡಲಿಲ್ಲ.—ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ವರುಷಕ್ಕೊಂದಾವರ್ತಿ ನಡೆಯುವ ಗೋಜಾತ್ರೆಯ ಪ್ರದರ್ಶನಕ್ಕೆ ಸರ್ಕಾರದವರು ಗೋಜಾತ್ರೆಗಳಿಗೆ ಕೊಡುವ ಇನಾಮಿನ ದರಗಳನ್ನು ಬದಲಾವಣೆ ಮಾಡಿ ಹುಕುಂ ಕೊಟ್ಟಿರು. ಮೆಂಬರುಗಳು ಅದನ್ನು ಓದಿಸಿ ರಿಕಾರ್ಡು ಮಾಡಿಕೊಂಡರು.—ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬನ್ನೂರಿನಲ್ಲಿ ಸರ್ಕಾರಿ ಸೂಲಗಿತ್ತಿಯನ್ನು ನೇಮಿಸಿಕೊಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ತೀರ್ಮಾನಮಾಡಿ ಸ್ಯಾಂಕ್ಷನ್ ಬಗ್ಗೆ ಗವರ್ನಮೆಂಟಿಗೆ ಕಳುಹಿಸಿಕೊಟ್ಟಿದ್ದರು. ಸರ್ಕಾರದವರು ಹಣವಿಲ್ಲವೆಂದು ಹೇಳಿ ಅದನ್ನು ಸ್ಯಾಂಕ್ಷನ್ ಮಾಡಲಿಲ್ಲ.—ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಲೋಕಲ್ ಫಂಡ್ ಆಫೀಸಿನ ಕೆಲಸಕ್ಕೆ ೩೭೫ ರೂಪಾಯಿ ಕ್ರಯದ ಟೈಪ್‌ರೈಟರ್ ಎಂಬ ಅಚ್ಚಿನ ಯಂತ್ರವನ್ನು ಕೊಂಡು ತರಬೇಕಾಗಿದೆ ಎಂದು ಡೆಪ್ಯುಟಿ ಕಮಿಷನರವರು ಗವರ್ನಮೆಂಟಿಗೆ ಬರೆದಿದ್ದರು. ಗವರ್ನಮೆಂಟಿನವರು ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿದರು. ಮೆಂಬರುಗಳು ಆ ಯಂತ್ರವನ್ನು ಕೊಂಡು ತರಬಹುದೆಂದು ಒಪ್ಪಿಕೊಂಡರು.—ಹುಣಸೂರು ಯಡತೊರೆ ರಸ್ತೆಯ ಪೈಕಿ ಅಲ್ಲಲ್ಲಿ ಸುಮಾರು ೪೫ ಫರ್ಲಾಂಗ್ ದೂರ ಕೆಟ್ಟು ಹೋಗಿರುವುದರಿಂದ ಅದನ್ನು ದುರಸ್ತು ಮಾಡಿಸುವುದಕ್ಕೆ ೧,೮೩೩ ರೂಪಾಯಿ ಬೇಕಾಗಿದೆ ಎಂದು ಎಗ್ಸಿಕ್ಯುಟಿವ್ ಇಂಜನಿಯರವರು ಅಂದಾಜು ಪಟ್ಟಿಯನ್ನು ಕಳುಹಿಸಿದ್ದರು. ಈ ಹಣವನ್ನು ಖರ್ಚು ಮಾಡಿ ರಿಪೇರಿ ಮಾಡಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡಿರುತ್ತಾರೆ.—ಮೈಸೂರು ಟವನ್ ಕರಾಚಿನಲ್ಲಿರುವ ಕುಂಬಾರಕೊಪ್ಪಲು ಕೆರೆ ಏರಿಗೆ ಎರಡು ಕಡೆಗಳಲ್ಲೂ ಕಟಕಟೆಯನ್ನು ಹಾಕಿಸುವುದಕ್ಕೆ ೧,೯೩೮ ರೂಪಾಯಿ ಬೇಕಾಗುತ್ತದೆ ಎಂದು ಎಗ್ಸಿಕ್ಯುಟಿವ್ ಇಂಜನಿಯರವರು ಅಂದಾಜು ಪಟ್ಟಿಯನ್ನು ಕಳುಹಿ ಕೇಳಿದ್ದರು. ಈ ಕಟಕಟೆಯ ಕಟ್ಟಡದ ಖರ್ಚನ್ನು ನ್ಯಾಯವಾಗಿ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕು. ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟದ್ದಲ್ಲವೆಂದೂ ಮೆಂಬರುಗಳು ತೀರ್ಮಾನ ಮಾಡಿದರು.—ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಭೀಮನಹಳ್ಳಿ ಮುಂತಾದ ಕಡೆ ತಾಲ್ಲೂಕು ಹೆಗ್ಗಡದೇವನಕೋಟೆ ಕಟ್ಟಹಳ್ಳಿಗೆ ಒಂದು ಗಾಡಿ ರಸ್ತೆಯನ್ನು ಮಾಡಿಸಿದಲ್ಲಿ ದನ ಮೃಗಗಳ ಬಾಧೆಯು ಕಡಿಮೆಯಾಗಿ ರೈತರುಗಳ ಸಂಚಾರಕ್ಕೆ ಅನುಕೂಲವಾದೀತೆಂದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಸೂಚಿಸಿದ್ದರು. ಮೆಂಬರುಗಳು ಈ ವಿಷಯವನ್ನು ಚರ್ಚೆ ಮಾಡಿ ಈ ರಸ್ತೆ ಹಾಕುವುದು ಅವಶ್ಯವೆಂದೂ, ಅದಕ್ಕೆ ಎಷ್ಟು ಹಣ ಬೇಕಾಗುವುದೋ ಅಂದಾಜು ಪಟ್ಟಿ ತಯಾರುಮಾಡಿಸಬೇಕೆಂದೂ ಗೊತ್ತು ಮಾಡಿದರು.—ಗ್ರಾಮಾಂತರಗಳಲ್ಲಿ ಹುಚ್ಚುನಾಯಿ ಕಡಿದ ಬಡಬಗ್ಗರನ್ನು ಚಿಕಿತ್ಸೆಯ ಬಗ್ಗೆ ಕೂನೂರಿನ ಆಸ್ಪತ್ರೆಗೆ ಕಳುಹಿಸಿದರೆ ಅವರ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನ ಹಣದಿಂದ ಕೊಡಬಹುದೇ ಎಂದು ಸರ್ಕಾರದವರು ಕೇಳಿದ್ದರು. ಮೆಂಬರುಗಳು ಅದೇ ರೀತಿ ಆ ಖರ್ಚನ್ನು ವಹಿಸಿಕೊಳ್ಳುತ್ತೇವೆಂದು ಒಪ್ಪಿಕೊಂಡಿರುತ್ತಾರೆ.—ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಪರಸ್ಥಳದವರು ಇಳುಕೊಳ್ಳುವುದಕ್ಕೆ ಅನುಕೂಲವಾದ ಛತ್ರವನ್ನು ಕಟ್ಟಬೇಕೆಂದೂ, ಇದಕ್ಕೆ ೧,೮೫೦ ರೂಪಾಯಿ ಖರ್ಚಾಗುವುದರಿಂದ ಇದರಲ್ಲಿ ಅರ್ಧ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ಕೊಡಿಸಿದರೆ ಉಳಿದದ್ದನ್ನು ಮುಜರಾಯಿ ಫಂಡಿನಿಂದ ಭರ್ತಿ ಮಾಡಿಸುವುದಾಗಿಯೂ ಸಬ್ ಡಿವಿಜನ್ ಆಫೀಸರವರು ಸೂಚಿಸಿದರು. ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ ಅರ್ಧ ಹಣವನ್ನು ಮುಂದಿನ ವರುಷ ಕೊಡಬಹುದೆಂದು ತೀರ್ಮಾನ ಮಾಡಿದರು.—ಕೃಷ್ಣರಾಜಪೇಟೆ ತಾಲ್ಲೂಕು ಸಂದಿಘಟ್ಟದ ಹಕೀಮರಿಗೂ, ಗುಡ್ಲೂರು ಕರ್ನಾಟಕ ಪಂಡಿತರಿಗೂ ಸಂಬಳವನ್ನು ೮ ರಿಂದ ೧೦ ರೂಪಾಯಿಗೆ ಬಡ್ತಿ ಮಾಡುವ ವಿಷಯದಲ್ಲಿ ಚರ್ಚೆಯಾಯಿತು. ಇನ್ನೂ ಕೆಲವು ಕಾಲ ಕಳೆದ ಮೇಲೆ ಈ ಬಡ್ತಿಯ ವಿಚಾರವನ್ನು ಆಲೋಚಿಸತಕ್ಕದ್ದಾಗಿದೆ ಎಂದು ತೀರ್ಮಾನ ಮಾಡಿದರು.—ಹೆಗ್ಗಡದೇವನಕೋಟೆಯ ತಾಲ್ಲೂಕ್ ಬೋರ್ಡಿನವರು ಮಗ್ಗೆಯಲ್ಲಿ ಕರ್ನಾಟಕ ವೈದ್ಯನನ್ನು ನೇಮಿಸಿಕೊಡಬೇಕೆಂದು ಶಿಫಾರಸು ಮಾಡಿದ್ದರು. ಮೆಂಬರುಗಳು ಸದ್ಯ ಹಣವಿಲ್ಲದ್ದರಿಂದ ಮುಂದಕ್ಕೆ ಯೋಚಿಸೋಣವೆಂದು ತಗೆದಿಟ್ಟರು.—ಯಡತೊರೆ ತಾಲ್ಲೂಕಿಗೆ ಸೇರಿದ ಚುಂಚನಕಟ್ಟೆಯಲ್ಲಿ ಒಬ್ಬ ಹಕೀಮನನ್ನು ನೇಮಿಸಿಕೊಡಬೇಕೆಂದು ಸಬ್ ಡಿವಿಜನ್ ಆಫೀಸರವರು ಬರೆದಿದ್ದರು. ಇದು ಬಹಳ ಅವಶ್ಯವೆಂದು ಕಂಡುಬಂದದ್ದರಿಂದ ಮೆಂಬರುಗಳು ಒಬ್ಬ ಹಕೀಮನನ್ನು ನೇಮಿಸಬಹುದೆಂದೂ, ಮುಜರಾಯಿ ಫಂಡಿನಿಂದ ಆತನಿಗೆ ಮಾಹೆ ೧ಕ್ಕೆ ೫ ರೂಪಾಯಿ ಕೊಡುವುದಾದರೆ ಡಿಸ್ಟ್ರಿಕ್ಟ್ ಫಂಡಿನಿಂದ ೧೦ ರೂಪಾಯಿನಂತೆ ಕೊಡಬಹುದೆಂದೂ ತೀರ್ಮಾನ ಮಾಡಿರುತ್ತಾರೆ.—ಯಡತೊರೆ ತಾಲ್ಲೂಕು ಮಿರ್ಲೆಯ ಕೆರೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಳ್ಳಬೇಕೆಂದು ಸಬ್ ಡಿವಿಜನ್ ಆಫೀಸರವರು ಶಿಫಾರಸು ಮಾಡಿದ್ದಕ್ಕೆ ಮೆಂಬರುಗಳು ಒಪ್ಪಿಕೊಂಡರು.—ಶ್ರೀರಂಗಪಟ್ಟಣದ ಆಸ್ಪತ್ರೆಯಲ್ಲಿ ಸ್ತ್ರೀ ರೋಗಿಗಳು ನೋಡದೆ ನಿಲ್ಲುವುದಕ್ಕಾಗಲಿ ವೈದ್ಯರಿಂದ ಚಿಕಿತ್ಸೆ ಮಾಡಿಸಿಕೊಳ್ಳುವುದ

ಕ್ಕಾಗಲಿ ಪ್ರತ್ಯೇಕವಾದ ಕಟ್ಟಡವಿಲ್ಲವಾದದ್ದರಿಂದ ತುಂಬಾ ಅನನುಕೂಲವಾಗಿದೆ ಎಂದೂ, ಡಾಕ್ಟರು ಇರುವ ಮನೆಯನ್ನು ದುರಸ್ತು ಮಾಡಿಸಿಕೊಡಬೇಕೆಂದೂ ಮೆ|| ಬಿ. ನರಸಿಂಗರಾಯರು ಸೂಚಿಸಿದರು. ಡಾಕ್ಟರ ಮನೆಯನ್ನು ರಿಪೇರಿ ಮಾಡಿಸುವುದಕ್ಕೆ ಸರಕಾರದ ಸ್ಯಾಂಕ್ಷನ್ ಆಗಿರುವಂತೆ ಗೊತ್ತಾಯಿತು. ಆಸ್ಪತ್ರೆಯನ್ನು ಬದಲಾವಣೆ ಮಾಡಿ ಒಂದು ವರಾಂಡಾ, ಎರಡು ಕೊಠಡಿಗಳನ್ನು ಹೊಸದಾಗಿ ಕಟ್ಟಿಸುವುದು ಅವಶ್ಯವೆಂದೂ, ಅದಕ್ಕೆ ಅಂದಾಜುಪಟ್ಟಿ ತಯಾರು ಮಾಡಿಸಬೇಕೆಂದೂ ಮೆಂಬರುಗಳು ತೀರ್ಮಾನಮಾಡಿದರು.—ಮಂಡ್ಯದ ತಾಲ್ಲೂಕು ಲಿಂಗರಾಜ ಛತ್ರದಲ್ಲಿ ಒಂದು ಭಾವಿ ತೋಡಿದ್ದಕ್ಕೆ ಕಂಟ್ರ್ಯಾಕ್ಟರಿಗೆ ನಷ್ಟವಾದದ್ದರಿಂದ ೩೦ ರೂಪಾಯಿ ಜಾಸ್ತಿ ಕೊಡಬಹುದೆಂದು ಒಪ್ಪಿಕೊಂಡರು.—ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮುಸಾಫರಖಾನೆ ಮತ್ತು ಛತ್ರವನ್ನು ದುರಸ್ತು ಮಾಡುವುದಕ್ಕೆ ೬೫೦ ರೂಪಾಯಿ ಖರ್ಚು ಮಾಡಬಹುದೆಂದು ತೀರ್ಮಾನವಾಯಿತು.—ಮುಂದಿನ ವರುಷದ ಪ್ರತಿನಿಧಿ ಸಭೆಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮೆ|| ಅಂಬಳೆ ಅಣ್ಣಯ್ಯ ಪಂಡಿತರೂ ಮೆ|| ನಾಗನಾಲದ ಪಟೇಲ್ ಲಿಂಗೇಗೌಡರೂ ಮೆಂಬರುಗಳಾಗಿ ಹೋಗತಕ್ಕದ್ದೆಂದು ಮೆಂಬರುಗಳೆಲ್ಲಾ ಏಕವಾಕ್ಯತೆಯಿಂದ ಒಪ್ಪಿ ಸಮ್ಮತಿಹಾಕಿದರು.—ಪ್ರೆಸಿಡೆಂಟರು ಮುಂದಿನ ಡಿಸೆಂಬರ್ ತಾ. ೧೧ನೇ ಶನಿವಾರ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ನಡೆಯತಕ್ಕದ್ದೆಂದು ಗೊತ್ತುಮಾಡಿ ತಿಳಿಸಿರುತ್ತಾರೆ.

ವರ್ತಮಾನಸಾರವು.

ಪ್ಲೇಗ್ ಉಪದ್ರವು ಈಗೀಗ ಹಿಂದೂಸ್ಥಾನದಲ್ಲಿ ಹೆಚ್ಚುತ್ತಾ ಇದೆ. ಕಳೆದ ವಾರ ಒಟ್ಟು ೧,೨೫೧ ಜನರು ಈ ಉಪದ್ರದಲ್ಲಿ ಕಾಲವಾದರು.

ಗಡೀಪಾರು ಶಿಕ್ಷೆಯನ್ನು ಅನುಭವಿಸುತ್ತಿರುವ ಬಾಬು ಅಶ್ವಿನೀಕುಮಾರ ದತ್ತರನ್ನು ಸರ್ಕಾರದವರು ಲಕ್ನೋದಿಂದ ಬ್ಯಾರೇಲೀ ಜೈಲಿಗೆ ವರ್ಗಮಾಡಿ, ಅಲ್ಲಿ ಅವರ ರಕ್ತ ಸಂಬಂಧಿಗಳು ಅವರನ್ನು ಹೋಗಿ ನೋಡಿಕೊಂಡು ಬರುವಂತೆ ರಿಯಾಯಿತಿ ತೋರಿಸಿರುತ್ತಾರೆ.

ಬರ್ಮಾ ಅಧಿಪತ್ಯದಲ್ಲಿ ಲಿವರ್‌ಪೂಲ್ ಪಟ್ಟಣದ ಉಪ್ಪು ಇದುವರೆಗೆ ಬಹಳವಾಗಿ ಖರ್ಚು ಆಗುತ್ತಿತ್ತು. ಈಚೆಗೆ ಪಶ್ಚಿಮದಿಕ್ಕಿಗೆ ಸೇರಿದ ಏಡನ್ ಮತ್ತು ಸಾಲೀಫ್ ಎಂಬ ಸ್ಥಳಗಳಲ್ಲಿ ತಯಾರಾಗುವ ಉಪ್ಪು ವಿಶೇಷವಾಗಿ ಬರ್ಮಾಕ್ಕೆ ಬಂದು ಅಗ್ಗವಾಗಿ ಮಾರುತ್ತಿರುವುದರಿಂದ ಜನರು ಇದನ್ನೇ ಕೊಂಡುಕೊಳ್ಳಲಾರಂಭಿಸಿದಾರೆ.

[illegible] ತೀರದಲ್ಲಿರುವ ಪೀಟರ್‌ಮೆರಿಟ್ಸ್‌ಬರ್ಗ್ ಎಂಬ ಪಟ್ಟಣದೊಳಕ್ಕೆ ನದಿಯ ಪ್ರವಾಹವು ಬಂದು ಅನೇಕಾನೇಕ ಕಟ್ಟಡಗಳನ್ನು ಕೆಡಿಸಿಬಿಟ್ಟಿತು. ಬಹಳ ತಗ್ಗಾಗಿರುವ ಮನೆಗಳ ಮೇಲಕ್ಕೆ ನೀರು ನುಗ್ಗುತ್ತಿದೆ. ಪ್ರಜೆಗಳು ತಮ್ಮ ಚರ ವಸ್ತುಗಳನ್ನೆಲ್ಲಾ ಸಾಗಿಸಿಕೊಂಡು ಹೋಗುತ್ತಿದಾರೆ. ಬೇಗನೆ ಪ್ರವಾಹವು ಇಳಿಯದೆ ಹೋದಲ್ಲಿ ಆ ಪುರಾತನ ಪಟ್ಟಣವು ನಾಶವಾಗುವುದೆಂದು ಅಲ್ಲಿನ ಜನರು ಗಾಬರಿಪಡುವರು.

ಮ. ಬಿ. ಜಿ. ತಿಲಕರೂ ಮೆ|| ಎಸ್. ಎಂ. ಪರಂಜಪೆಯವರೂ ಮಾಡಿದಂಥ ರಾಜದ್ರೋಹಕರವಾದ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಅಚ್ಚುಹಾಕಿ ಪ್ರಕಟಿಸಿದ್ದಕ್ಕಾಗಿ [illegible] ಎಂಬೊಬ್ಬ ಲಿಂಗಾಯಿತನ ಮೇಲೆ ಮೊಕದ್ದಮೆ ಹುಟ್ಟಿತು. ಪೂನಾದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅತನನ್ನು ದಯಾದೃಷ್ಟಿ ಮಾಡಿ, ಅವನ ಯುವಾವಸ್ಥೆಯದರಿಂದ ಆತನಿಗೆ ಆರು ತಿಂಗಳ ಕಠಿನಸಜೆಯನ್ನು ವಿಧಿಸಿರುತ್ತಾರೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಚಿಟ್ಟಯಾ ಎಂಬ ಪ್ರದೇಶದಲ್ಲಿ ಕಳೆದ ವರುಷ ಗಲಭೆಯಲ್ಲಿ ಸಿಕ್ಕಿ ಸಜಾ ಶಿಕ್ಷೆಯನ್ನು ಅನುಭವಿಸುತ್ತಿರುವ ಖೈದಿಗಳನ್ನೆಲ್ಲಾ ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಬಂಗಾಳಾ ಗವರ್ನಮೆಂಟಿನವರು ಹುಕುಂಕೊಟ್ಟಿದಾರೆ. ಈ ರೀತಿ ಸುಮಾರು ೫೧ ಮಂದಿ ಖೈದಿಗಳಿಗೆ ಬಿಡುಗಡೆಯಾಗುವುದು. ಆದರೆ ಆ ಪ್ರತಿಯೊಬ್ಬರಿಂದಲೂ ಆರಾರು ತಿಂಗಳ ವರೆಗೆ ನೇಕಚಾಲಿನ ಜಾಮೀನನ್ನು ಪಡೆಸಿಕೊಂಡು ಬಿಡುವಂತೆ ಗೊತ್ತಾಗಿದೆ.

ಕಳೆದ ವಾರ ಸೀಮೆಯ ಟಪ್ಪಾಲು ಕಾಗದ ಪತ್ರಗಳು ತಿನ್ನವೆಲ್ಲಿಗೆ ಹೋದ ಕೂಡಲೆ ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರು ಅಂಚೆ ಬಟವಾಡೆ ಜವಾನರನ್ನೆಲ್ಲಾ ಹಿಡಿದು ಅವರ ಬಳಿ ಇದ್ದ ಕಾಗದಗಳನ್ನು ಅಜಮಾಯಿಷಿ ಮಾಡಿದರು. ಬಟವಾಡೆ ಮಾಡುವುದಕ್ಕೆ ಹೋಗಿದ್ದ ಒಬ್ಬ ಅಂಚೆ ಜವಾನನನ್ನು ಹಿಡಿದು ತರಿಸಿ ಅವನ ಬಳಿ ಇದ್ದ ಕಾಗದಗಳನ್ನೂ ಶೋಧಿಸಿದರು. ಪೊಲೀಸಿನವರು ಹೀಗೆ ಅಂಚೆ ಇಲಾಖೆಯವರ ಕೆಲಸಕ್ಕೆ ಆಟಂಕಪಡಿಸಿದ ವಿಷಯದಲ್ಲಿ ಆ ಎರಡು ಇಲಾಖಾ ಅಧಿಕಾರಿಗಳಿಗೂ ಕಾಗದ ಪತ್ರಗಳೂ ನಡೆಯುತ್ತಲಿವೆ.

ಮದರಾಸ್ ಪಟ್ಟಣದಲ್ಲಿ ಬರ್ಮಾ ಬ್ಯಾಂಕಿನ ಒಂದು ಶಾಖೆಯನ್ನು ಇಟ್ಟಿದಾರೆ. ಇದರ ಏಜಂಟಾದ ಚಾಯಿಸ್ ಎಂಬಾತನೂ, ಕ್ಯಾಷಿಯರಾದ ಪರಮಶಿವ ಮೊದಲಿಯಾರ್ ಎಂಬಾತನೂ ಬ್ಯಾಂಕಿನ ಹಣವನ್ನು ದುರುಪಯೋಗಪಡಿಸಿ ಸ್ವಂತ ಲೇವಾದೇವಿ ಮಾಡುತ್ತಿದಾರೆಂದು ಅಲ್ಲಿನ ಮೆ|| [illegible] ಎಂಬ ಸಾಹುಕಾರನು ಫಿರ್ಯಾದು ಮಾಡಿದನು. ಪೊಲೀಸಿನವರು ಹೋಗಿ ಆ ಬ್ಯಾಂಕನ್ನು ಸುತ್ತಿಕೊಂಡು ಲೆಕ್ಕದ ಪುಸ್ತಕಗಳನ್ನು ಸ್ವಾಧೀನಪಡಿಸಿಕೊಂಡರು. ನೆನ್ನೆ ಸೋಮವಾರ ಅವರಿಬ್ಬರನ್ನೂ ವಾರಂಟಿನಿಂದ ಹಿಡಿದು ಇಟ್ಟುಕೊಂಡಿದಾರೆ.

ಕಳೆದ ಜೂನ್ ತಿಂಗಳಲ್ಲಿ ಹಿಂದುಸ್ಥಾನದ ಹಲವು ದೊಡ್ಡ ಮನುಷ್ಯರಿಗೂ ಅಧಿಕಾರಿಗಳಿಗೂ ಚಕ್ರವರ್ತಿ ಸಾರ್ವಭೌಮರವರು ತಮ್ಮ ವರ್ಧಂತಿ ಉತ್ಸವದ ಜ್ಞಾಪಕಾರ್ಥವಾಗಿ ಬಿರುದುಗಳನ್ನು ದಯಪಾಲಿಸಿದರಷ್ಟೆ. ನಾಗಪುರ ಪಟ್ಟಣದಲ್ಲಿ ಪ್ರಕಟವಾಗುವ "ದೇಶಸೇವಕ" ಎಂಬ ಪತ್ರಿಕೆಯ ಎಡಿಟರಾದ ರಘುನಾಥ ಗಾಡ್ಗಿಲ್ ಎಂಬಾತನು ಆ ಬಿರುದುಗಳ ವಿಷಯದಲ್ಲಿ ರಾಜದ್ರೋಹಕರವಾದ ಬಿತ್ತಿಯನ್ನು ಬರೆದಿರುತ್ತಾನೆಂದು ಪೊಲೀಸಿನವರು ಆತನ ಮೇಲೆ ಮೊಕದ್ದಮೆ ತಂದಿದಾರೆ. ನಾಗಪುರದ ಅ|| ಕಮಿಷನರ್ ಮೆ|| ಬ್ರೌನ್‌ಯವರು ಈ ಮೊಕದ್ದಮೆಯನ್ನು ಧರ್ಮಾಸ್ತಿವಹಿಸುತ್ತಿರುವರು.

ಬಂಗಾಳದಿಂದ ವಾಯುವ್ಯ ಪ್ರಾಂತ್ಯಕ್ಕೆ ರೈಲ್ ಗಾಡಿಗಳು ಹೋಗಿಬರುವುದಕ್ಕೋಸ್ಕರ ಗವರ್ನಮೆಂಟಿನವರು ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಗಂಗಾ ನದಿಗೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಅಭಿಪ್ರಾಯ ಪಟ್ಟಿದಾರೆ. ಈ ಸೇತುವೆಯು ರಾಮಘಾಟಿಗೂ ತ್ರಿವೇಣಿ ಎಂಬ ಸಂಗಮ ಸ್ಥಳಕ್ಕೂ ಮಧ್ಯೆ ಕಟ್ಟಬೇಕಾಗಿದೆ. ಈ ವಿಚಾರವನ್ನು ಅಲಹಾಬಾದಿನ ಹಿಂದೂ ವೈದಿಕ ಪ್ರಜೆಗಳು ತಿಳಿದು, ಆ ಸ್ಥಳದಲ್ಲಿ ಸೇತುವೆಯನ್ನು ಕಟ್ಟಿದರೆ ಹಿಂದೂ ತೀರ್ಥಯಾತ್ರಿಕರಿಗೆ ಬಹಳ ತೊಂದರೆಯಾಗುವುದೆಂತಲೂ, ಮಾಘಮೇಲಾ ಎಂಬ ಜಾತ್ರೆ ನಡೆಯಲು ಅಡ್ಡಿಯಾಗುವುದೆಂತಲೂ, ಹಿಂದುಗಳ ಪುಣ್ಯಸ್ಥಳವನ್ನು ಈ ರೀತಿ ವಿಭಾಗ ಮಾಡುವುದು ಸರಿಯಲ್ಲವೆಂತಲೂ, ಆ ಸ್ಥಳವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಸೇತುವೆಯನ್ನು ಕಟ್ಟಿಸಬೇಕೆಂತಲೂ ಲೆಫ್ಟಿನೆಂಟ್ ಗವರ್ನರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದು ಒಪ್ಪಿಸಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಕೋಟ್ಯಧೀಶ್ವರರೆನ್ನಿಸಿಕೊಂಡಿದ್ದು ಕಾಲವಾದ ಮೆ|| ಎನ್. ಎಂ. ವಾಡಿಯಾ, ಸಿ. ಐ. ಇ. ಎಂಬ ಪಾರ್ಸಿ ದೊಡ್ಡ ಮನುಷ್ಯನು ತನ್ನ ಆಸ್ತಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ. ಆಸ್ತಿಯು ಸುಮಾರು ಒಂದೂವರೆ ಕೋಟಿ ರೂಪಾಯಿ ಆದೀತು. ಇದನ್ನೆಲ್ಲಾ ಗವರ್ನಮೆಂಟಿನವರೇ ವಹಿಸಿಕೊಳ್ಳಬೇಕೆಂದೂ ಅದಕ್ಕೆ ಶೇಕಡಾ ೬ ರಂತೆ ವಿಶೇಷ ಬಡ್ಡಿಯನ್ನು ಕೊಡಬೇಕೆಂದೂ ಮರಣ ಶಾಸನದಲ್ಲಿ ಬರೆಯಲಾಗಿದೆ. ಭೂಕಂಪ, ಗಾಳಿಮಳೆ, ಪ್ರವಾಹ, ಪ್ಲೇಗ್ ಮೊದಲಾದ ಉಪದ್ರಗಳು, ಬೆಂಕಿಯ ಅನಾಹುತ, ಈ ಮೊದಲಾದ ಅಪಘಾತಗಳಿಗೆ ಸಿಕ್ಕಿ ಕಷ್ಟನಷ್ಟಗಳನ್ನು ಅನುಭವಿಸುವಂಥಾ ಸಕಲ ಪ್ರಜೆಗಳಿಗೂ ಜಾತಿ ಕುಲ ಗೋತ್ರಗಳ ಪಕ್ಷಪಾತವಿಲ್ಲದೆ ಆ ಬಡ್ಡಿಯ ಹಣದಿಂದ ಸಹಾಯ ಮಾಡುತ್ತಾ ಬರಬೇಕೆಂಬುವುದೇ ಆ ಧರ್ಮಿಷ್ಠನ ಅಭಿಪ್ರಾಯವಾಗಿದೆ. ಈ ಹಣಕ್ಕೆ ಶೇಕಡಾ ೬ ರೂಪಾಯಿಯಂತೆ ಹೆಚ್ಚು ಬಡ್ಡಿಯನ್ನು ಕೊಡಬೇಕೆಂಬ ವಿಷಯವು ಅಪೂರ್ವವಾದದ್ದು. ಆದಕಾರಣ ಗವರ್ನಮೆಂಟಿನವರು ಇದನ್ನು ಹ್ಯಾಗೆ ಇತ್ಯರ್ಥಪಡಿಸಬೇಕೆಂದು ಆಲೋಚಿಸುತ್ತಿದಾರೆ.

ಖಾತ್ರಿದಾರರಿಗೆ ನೋಟೀಸು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್.

ಕರೆಸ್ಪಾಂಡೆನ್ಸ್

ಗ್ರಾಮಗಳಲ್ಲಿ ಕಕ್ಷಿಗಳು.

ಅಯ್ಯಾ,

ಚನ್ನಗಿರಿ ತಾಲ್ಲೂಕು ಲಿಂಗದಹಳ್ಳಿ [illegible] ಗ್ರಾಮವು ೧೫೦ ಮನೆಗಳಿಗೆ ಮೇಲ್ಪಟ್ಟದ್ದಾಗಿರುತ್ತೆ. ಇದುವರೆಗೆ ಪಟೇಲ ಮುಂತಾದ ಗ್ರಾಮನೌಕರರು ಮೊದಲಾದವರು ಮಾಡಿದ ಏರ್ಪಾಡಿನಂತೆ ಸದರಿ ೧೫೦ ಮನೆಯವರೂ ಕೂಡ ಏಕಮತದಿಂದ ನಡೆಯುತ್ತಾ ಇದ್ದರು. ಈಗ ಸದರಿ ಗ್ರಾಮದಲ್ಲಿ ಎರಡು ಪಾರ್ಟಿ ಆಗಿ, ಸರ್ಕಾರಿ ಕೆಲಸ ಮತ್ತು ಗ್ರಾಮದೇವರ ಉತ್ಸವ ಮೊದಲಾದ ಕಾರ್ಯಗಳು ನಡೆಯುವುದು ಅಸಾಧ್ಯವಾಗಿರುವುದು. ಇದೇ ಗ್ರಾಮದ ಕೆಲವು ಜನಗಳು ದೊಡ್ಡ ರೈತರಾಗಿದ್ದುಕೊಂಡು, ಇವರೇ ಮುಖ್ಯ ಸೇರಿ ಎರಡು ಪಾರ್ಟಿ ಆಗುವುದಕ್ಕೆ ಬೇಕಾದ ಮುಂತಾದ್ದನ್ನು ಕಲ್ಪಿಸಿ ಎರಡು ಪಾರ್ಟಿಯನ್ನುಂಟುಮಾಡಿದಾರೆ. ಆದರೆ ಈ ರೀತಿಯುಂಟಾಗಿರುವ ಎರಡು ಪಾರ್ಟಿಯಿಂದ ಉಭಯ ಪಾರ್ಟಿಯವರಿಗೂ ನಷ್ಟವಿದೆ ಎಂದು ಸ್ವಲ್ಪವೂ ಸಂದೇಹವಿಲ್ಲ. ಲೋಕದಲ್ಲಿ ಈ ರೀತಿಯಾದ ಅನೇಕ ಗ್ರಾಮಗಳು ಹಾಳಾಗುತ್ತಾ ಇವೆ. ಈ ವಿಷಯವನ್ನು ಸಮಸ್ತ ಜನರೂ ಬಲ್ಲವರಾಗಿರುತ್ತಾರೆ. ಆದುದರಿಂದ ಸರ್ವರೂ ಏಕಮತದಿಂದ ಒಡಹುಟ್ಟಿದ ಅಣ್ಣತಮ್ಮಂದಿರಂತೆ ಇದ್ದ ಪಕ್ಷದಲ್ಲಿ ನಮ್ಮನ್ನು ಕಾಪಾಡತಕ್ಕ ಶ್ರೀಮನ್ಮಹಾರಾಜರವರಿಗೂ ಕೂಡ ಕೀರ್ತಿಯುಂಟಾಗುವುದು.

೧೮ ೮ ೦೯ ಹಾಲಪ್ಪ, ಪಟೇಲ್

[ಈ ಖಾತ್ರಿದಾರರು ಹೇಳುವ ಪ್ರಕಾರ ಅನೇಕ ಗ್ರಾಮಗಳಲ್ಲಿ ಕಕ್ಷಿಗಳು ಹುಟ್ಟಿ ಗ್ರಾಮಗಳಾಗಲಿ ಅಲ್ಲಿನ ಪ್ರಜೆಗಳಾಗಲಿ ಅಭಿವೃದ್ಧಿಗೆ ಬಾರದಂತೆ ಅಡ್ಡಿಯಾಗಿರುತ್ತದೆಂದು ನಾವು ಬಲ್ಲೆವು. ಇದು ದೇಶೋನ್ನತಿಗೆ ಹಿತಕರವಾದದ್ದಲ್ಲ. ದೇಹದ ಅಂಗಗಳು ಒಂದಕ್ಕೊಂದು ವಿರೋಧವಾಗಿ ಕೆಲಸಮಾಡಿದಲ್ಲಿ ದೇಹವು ಹ್ಯಾಗೆ ಕೆಟ್ಟು ಹಾಳಾಗುವುದೋ ಹಾಗೆಯೇ ಗ್ರಾಮ ಊರುಗಳೂ ಈ ಕಕ್ಷಿಗಳ ದೆಸೆಯಿಂದ ಕೆಡುವವೆಂದು ತಿಳಿಯಬೇಕು. ಮುಖಂಡರಾದವರು ಮುಂದಾಳುಗಳಾಗಿ ನಿಂತು ಗ್ರಾಮಸ್ಥರಿಗೆಲ್ಲಾ ವಿವೇಕ ಹೇಳುತ್ತಾ ಎಲ್ಲರೂ ಏಕಮತ್ಯದಿಂದ ಅಭಿವೃದ್ಧಿಗೆ ಬರುವಂತೆ ಮಾಡಬೇಕಾಗಿದೆ. ಅವರು ಸ್ವಪ್ರಯೋಜನವನ್ನು ತ್ಯಜಿಸದೆ ಹೋದರೆ ಪಟ್ಟಣವಾಗಲಿ ಅಭಿವೃದ್ಧಿಯಾಗಲಾರದು. ಎಡಿಟರ್.]

ಪ್ರಜಾ ಪ್ರತಿನಿಧಿಗಳ ಅವಗಾಹನೆಗೆ ವಿಜ್ಞಾಪನೆಗಳು.

ವಿದ್ಯಾಭಿವೃದ್ಧಿಯ ಕ್ರಮಗಳು

ಅಯ್ಯಾ,

ತಮ್ಮ ೫-೮-೦೯ ನೆಯ ತಾ|| ವೃತ್ತಾಂತ ಪತ್ರಿಕೆಯಲ್ಲಿ "ಬಡೇಸಾಬಿ, ಜಗಲೂರು" ಎಂಬುವವರು ಪ್ರಜಾ ಪ್ರತಿನಿಧಿಗಳ ಮೂಲಕ ಗೌರ್ನಮೆಂಟಿಗೆ ಅರಿಕೆ ಮಾಡುವುದಕ್ಕಾಗಿ ನಾಲ್ಕು ವಿಷಯಗಳನ್ನು ಸೂಚಿಸಿರುತ್ತಾರೆ. ಅದರೊಳಗೆ ಮೊದಲನೆಯದಾದ "ವಿದ್ಯಾಭ್ಯಾಸದ ಕ್ರಮಗಳ" ವಿಷಯದಲ್ಲಿ ಇವರ ಸೂಚನೆಯು ಸ್ವಲ್ಪ ಅಸಮಂಜಸವಾಗಿ ಕಾಣುತ್ತದೆ. ಹಾಗೆಂದರೆ,

ಮೇಲೆ ಹೇಳಲ್ಪಟ್ಟ ದೊಡ್ಡ ಮನುಷ್ಯರಿಗೆ ನಮ್ಮ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಗೆ ಸಹಕಾರಿಯಾದ ಮಾರ್ಗಗಳು ಇವು ಸೂಚಿಸತಕ್ಕವೇ? ಆ ಕ್ರಮವು ಮಾಡುವುಗಳೆಂದು ತೋರುವಂತೆ ಕಾಣುತ್ತದೆ. ಆದರೆ ಇವರ ಸಲಹೆಯಂತೆ ಜಾರಿಗೆ ಬರುವುದಾದರೆ ಈ ಸೀಮೆಯಲ್ಲಿ ಏಳಿಗೆಗೆ ಬರುತ್ತಿರುವ ವಿದ್ಯೆಯು ಹೀನಸ್ಥಿತಿಗೆ ಇಳಿಯಲು ಸಂದೇಹವಿಲ್ಲ. ಈಗಿನ ಸ್ಥಿತಿಯಲ್ಲಿ ಸ್ಕೂಲ್ ಮಾಸ್ಟರುಗಳಿಗೆ, ತತ್ರ ಹಳ್ಳಿಗಳಲ್ಲಿ ಮಾಸ್ಟರುಗಳಾಗಿರುವವರಿಗಂತೂ ಉಂಟಾಗಿರುವ ನಿರ್ಬಂಧಗಳೂ, ಶ್ರಮವೂ, ಅನುಸರಣೆಯೂ ಮೊದಲಾದ ತೊಂದರೆಗಳೂ ಅಷ್ಟಿಷ್ಟೆಂದು ವರ್ಣಿಸಲು ಅಸಾಧ್ಯವಾಗಿರುತ್ತದೆ. ಅನೇಕ ಸ್ಕೂಲುಗಳಲ್ಲಿ ಬಾಲಕರು ಸರಿಯಾಗಿ ಹಾಜರಾಗುವುದೇ ಇಲ್ಲ. ಈ ವಿಷಯದಲ್ಲಿ ಸರ್ಕಾರದವರು ಇದುವರೆಗೂ ಯಾವುದೊಂದು ಕಾಯಿದೆಯನ್ನೂ ಆಚರಣೆಗೆ ತಂದಿರುವುದಿಲ್ಲ. ಸ್ಕೂಲಿನ ಅಭಿವೃದ್ಧಿಗೆ ಮಾತ್ರ ಮಾಸ್ಟರುಗಳೇ ಜವಾಬ್ದಾರರಾಗಿರಬೇಕಾಗಿದೆ. ಕೆಲವು ಕಾಲ ಸ್ಕೂಲ್ ಫೀಜಿನ ಪದ್ಧತಿಯು ಗ್ರಾಮಾಂತರ ಸ್ಕೂಲುಗಳಲ್ಲಿ ಜಾರಿಗೆ ಬಂದಿದ್ದಿತು. ಈಗ ಅದೂ ಸುತರಾಂ ತಪ್ಪಿಹೋಯಿತು. ಹೀಗಿದ್ದರೂ ಕೂಡ ಹುಡುಗರ ವಿಷಯದಲ್ಲಿ ಯಾವ ಏರ್ಪಾಡೂ ಬೇಕಿಲ್ಲದೆ, ಮಾಸ್ಟರುಗಳಿಗೆ ಈಗಿರುವುದಕ್ಕಿಂತಲೂ ಹೆಚ್ಚು ನಿರ್ಬಂಧವನ್ನು ಉಂಟುಮಾಡಬೇಕೆಂದು ಹೇಳುವುದು ಎಷ್ಟು ಸಮಂಜಸವಾದುದು? ಇನ್ಸ್‌ಪೆಕ್ಷನ್ ಕೆಲಸಕ್ಕೆ ಹಿತವಾದ ಶಿಬ್ಬಂದಿಯು ಇಲಾಖೆಯಲ್ಲಿ ಏರ್ಪಾಡಾಗಿರುತ್ತದೆ. ಇಂಥವರಲ್ಲಿ ಈಗಿನ ತನಿಖೆಯು ಸಾಲದೆಂತಲೂ, ತಾಲ್ಲೂಕ್ ಅಮಲ್ದಾರರು ತಿಂಗಳಿಗೊಂದಾವೃತ್ತಿ ಸ್ಕೂಲನ್ನು ಪರೀಕ್ಷಿಸಬೇಕೆಂತಲೂ ಇವರು ಸೂಚಿಸಿರುತ್ತಾರೆ. ಇಂತಹ ಹುಕುಂ ಜಾರಿಗೆ ಬಂದ ಮೇಲೆ ಶೇಕ್‌ದಾರರು ವಾರಕ್ಕೊಂದಾವೃತ್ತಿ ಪರೀಕ್ಷಿಸಬೇಕೆಂತಲೂ, ಗ್ರಾಮದ ಪಟೇಲ್ ಶಾನುಭೋಗರು ದಿನದಿನವೂ ಪರೀಕ್ಷಿಸಬೇಕೆಂತಲೂ ಕೇಳಬಹುದು. ಈ ರೀತಿಯಾದ ರೂಲ್ಸು ಉಂಟಾದ ಪಕ್ಷ ವಿದ್ಯಾಭ್ಯಾಸದ ಇಲಾಖೆಯಲ್ಲಿ ಆಫೀಸರುಗಳೇ ಅನಾವಶ್ಯಕ. ಮುಖ್ಯ ಯಾವ ಕೆಲಸವನ್ನಾದರೂ ಮಾಡಲು ಜವಾಬ್ದಾರನಾದ ಮನುಷ್ಯನಿಗೆ ಪ್ರೋತ್ಸಾಹವನ್ನು ಕೊಟ್ಟರೆ ಆ ಕೆಲಸವು ವಿಚಕ್ಷಣೆಯಿಂದ ನಡೆಯುವುದಲ್ಲದೆ, ನಿರ್ಬಂಧವನ್ನೇ ಹೆಚ್ಚಿಸುತ್ತಾ ಬಂದಲ್ಲಿ ಅಂಥವನಿಗೆ ಜಿಗುಪ್ಸೆ ಹುಟ್ಟುವುದಕ್ಕೆ ಸಂದೇಹವುಂಟೇ? ಹೀಗೆ ಜಿಗುಪ್ಸೆ ಹುಟ್ಟಿದುದಾದರೆ, ಆ ಕೆಲಸವು ಎಷ್ಟು ಮಟ್ಟಿನ ಫಲಕಾರಿಯಾಗುವುದು? ಸ್ಕೂಲ್ ತನಿಖೆಯ ಬಗ್ಗೆ ವಿದ್ಯಾ ಇಲಾಖೆಯಲ್ಲಿ ಬೇಕಾದಷ್ಟು ಏರ್ಪಾಡುಗಳನ್ನು ಮಾಡಿರುವುದೇನೋ ಸರಿಯಷ್ಟೆ! ಈಗಿನ ಸ್ಥಿತಿಯಲ್ಲಿ ಹಳ್ಳಿಯ ಒಬ್ಬ ಸಾಮಾನ್ಯ ಮನುಷ್ಯನೂ ಕೂಡ ದಿನಂಪ್ರತಿ ಮಾಸ್ಟರನ್ನು ತನಿಖೆಮಾಡದೆ ಇಲ್ಲ. ಮಾಸ್ಟರು ಸರ್ಕಾರಿ ಆಫೀಸರರಿಗೆ ಖಾತರಿ ಮಾಡುವುದಕ್ಕಿಂತ ಹೆಚ್ಚಾಗಿಯೇ ಈ ಹಳ್ಳಿಯವರಿಗೆ ತಾಬೇದಾರನಾಗಿರಬೇಕಾಗಿದೆ. ಅಲ್ಲದೆ ಸರ್ಕಾರದವರು ಗ್ರಾಮಸ್ಥರಲ್ಲಿ ಕೆಲವರನ್ನು ಸ್ಕೂಲ್ ಕಮಿಟಿಯ ಮೆಂಬರುಗಳೆಂದು ಏರ್ಪಡಿಸಿ ಸನ್ನದುಗಳನ್ನು ಕೊಟ್ಟಿರುತ್ತಾರೆ. ಇಂಥವರನೇಕರಿಗೆ ತಮ್ಮಗಳನ್ನು ಯಾವ ಉದ್ದೇಶಕ್ಕಾಗಿ ಏರ್ಪಾಡು ಮಾಡಿರುತ್ತಾರೆಂಬುದನ್ನು ತಿಳಿದುಕೊಳ್ಳತಕ್ಕ ಯೋಗ್ಯತೆ ಸಹ ಇಲ್ಲದೆ, ಮಾಸ್ಟರುಗಳ ಮೇಲೆ ತೋರಿಸತಕ್ಕ ಅಧಿಕಾರವಂತೂ, ಇಲಾಖಾಧಿಕಾರಿಗಳಾದ ಅ|| ಡೆ|| ಇನ್ಸ್‌ಪೆಕ್ಟರವರು ಮೊದಲ್ಗೊಂಡು ಇನ್|| ಜ|| ಸಾಹೇಬರ ವರೆಗೂ ಇರತಕ್ಕ ಅಧಿಕಾರಿಗಳಾದರೂ ತೋರಿಸುವುದಿಲ್ಲ. ಗ್ರಾಮಕ್ಕೆ ಬರುತ್ತಿರುವ ರೆವಿನ್ಯೂ, ಪೊಲೀಸ್ ವಗೈರೆ ಇತರ ಇಲಾಖೆಗಳ ನೌಕರರಿಗೆಲ್ಲಾ ಮಾಸ್ಟರುಗಳು ಸೇವಕನಾಗಿಯೇ ಇರಬೇಕು. ಈ ರೀತಿ ಸತ್ಯಕಟ್ಟಿ ಇವರ ಮೇಲೆ ಅನೇಕರ ಪರಾಂಬರಿಕೆ ಇರುವಾಗ ಇವರಿಗೆ ತನಿಖೆಯೇ ಸಾಲದೆಂದು ಈ ದೊಡ್ಡ ಮನುಷ್ಯರು ವಿವರಿಸಿರುವುದು ತುಂಬಾ ವಿಸ್ಮಯಕಾರಿಯಾಗಿದೆ. ಇದಲ್ಲದೆ ಈಗ ನಿಯಾಮಕವಾಗಿರುವ ೫ ಗಂಟೆಗಳ ಕಾಲಕ್ಕೆ ಬದಲಾಗಿ ೬ ಗಂಟೆಗಳನ್ನು ಏರ್ಪಡಿಸಬೇಕೆಂದು ಸೂಚಿಸುತ್ತಾರೆ. ಅನೇಕ ಸ್ಥಳಗಳಲ್ಲಿ ಪ್ರಾಯಶಃ ಹಳ್ಳಿಗಳಲ್ಲೆಲ್ಲಾ ಉಪಾಧ್ಯಾಯರು ಕಾಲವನ್ನು ಕ್ಲುಪ್ತಮಾಡಿಕೊಳ್ಳದೆ, ನಿಯಮಿತ ಕಾಲಕ್ಕೆ ಮೀರಿಯೇ ಕೆಲಸವನ್ನು ಮಾಡುತ್ತಾರೆಂಬುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇರುತ್ತದೆ. ಈ ಮೇರೆ ಸ್ವಾಭಾವಿಕವಾಗಿರುವ ಉತ್ಸಾಹವನ್ನು ತಪ್ಪಿಸಿ, ಬೇಕೆಂತ ನಿರ್ಬಂಧವನ್ನು ಕಲ್ಪಿಸಿದರೆ ಅದರಿಂದ ಹೆಚ್ಚು ಪ್ರಯೋಜನವೇನೂ ಉಂಟಾಗಲಾರದು. ಮುಖ್ಯವಾಗಿ ವಿದ್ಯಾಭಿವೃದ್ಧಿಯ ಏಳಿಗೆಗೋಸ್ಕರ ಪ್ರಜಾ ಪ್ರತಿನಿಧಿಗಳಾದ ತಾವುಗಳು ದಯವಿಟ್ಟು ಗೌರ್ನಮೆಂಟಿಗೆ ಕೊಡಬೇಕಾಗಿರುವ ಸಲಹೆಗಳೇನೆಂದರೆ:—

೧. ಸ್ಕೂಲಿರುವ ಗ್ರಾಮಕ್ಕೆ ಆಯಾ ತಾಲ್ಲೂಕ್ ಅಮಲ್ದಾರರು ಬಂದಾಗ ಆ ಸ್ಕೂಲಿನ ಏಳಿಗೆಗೆ ಗ್ರಾಮಸ್ಥರೂ, ಸ್ಕೂಲ್ ಕಮಿಟಿಯ ಮೆಂಬರುಗಳೂ ಎಷ್ಟು ಮಟ್ಟಿನ ಏರ್ಪಾಡುಗಳನ್ನು ಮಾಡಿ ಕೊಟ್ಟಿರುತ್ತಾರೆ? ಹುಡುಗರ ಸಂಖ್ಯೆಯು ಯಾವ ರೀತಿ ಇರುತ್ತದೆ? ಸ್ಕೂಲ್ ಒಳಗೂ ಹೊರಗೂ ಶುಚಿಯಾಗಿದೆಯೇ? ಮತ್ತು ಸ್ಕೂಲ್ ಕಟ್ಟಡವು ಭದ್ರವಾಗಿದೆಯೇ? ಈ ಮೊದಲಾದ ಸಂಗತಿಗಳನ್ನು ತಪ್ಪದೆ ತನಿಖೆ ಮಾಡಬೇಕು.

೨. ಅತ್ಯವಶ್ಯಕವಾದ ಸಂದರ್ಭಗಳಲ್ಲಿ ತಾಲ್ಲೂಕ್ ಅಮಲ್ದಾರರಾಗಲಿ, ಅವರ ದರ್ಜೆಗೆ ಸಮವಾದ ಅಥವಾ ಮೇಲ್ಪಟ್ಟ ಇತರ ಅಧಿಕಾರಿಗಳಾಗಲಿ ಸ್ಕೂಲನ್ನು ಪರೀಕ್ಷೆ ಮಾಡಬಹುದಲ್ಲದೆ, ಅಮಲ್ದಾರ್ರವರ ದರ್ಜೆಗೆ ಕಡಮೆಯಾಗಿರುವ ಇತರ ಇಲಾಖಾ ಆಫೀಸರುಗಳಿಗಾಗಲಿ ಸ್ಕೂಲಿನ ಪ್ರವೇಶಕ್ಕೂ ಪರೀಕ್ಷೆಗೂ ಅಧಿಕಾರ ಕೊಡಕೂಡದು. ಏಕೆಂದರೆ ಸ್ಕೂಲಿನ ವಿದ್ಯಮಾನಗಳನ್ನು ಸರ್ವದಾ ತಿಳಿಯುತ್ತ, ಹುಡುಗರನ್ನು ಆಗಿಂದಾಗ್ಗೆ ಪರೀಕ್ಷಿಸಲಿಕ್ಕೂ ಮಾಸ್ಟರ ಕೆಲಸದ ಯೋಗ್ಯತೆಯನ್ನು ತಿಳಿಯುವುದಕ್ಕೂ ಜವಾಬ್ದಾರರಾದ ಆಫೀಸರರು ಡಿಪೋ ಇಲಾಖೆಯೊಳಗೆ ಏರ್ಪಟ್ಟಿರುವಲ್ಲಿ ಇತರ ಇಲಾಖೆಯ ಮುಸಲ್ಲಾ, ಹೋಬಳಿಯ ಶೇಕದಾರ್, ತಾಲ್ಲೂಕಿನ ಪೋಲೀಸ್ ಇನ್ಸ್‌ಪೆಕ್ಟರ್, ಜಮೇದಾರ್, ಇಂತಹ ಸಾಮಾನ್ಯಾಧಿಕಾರಿಗಳು ಒಂದಾನೊಂದು ದಿನ ಗ್ರಾಮಸ್ಥರ ಹೇಳಿಕೆಯ ಮೇಲೆಯೋ, ಸ್ಕೂಲ ಮಾಸ್ಟರ ಇರುವಿಕೆಯಂತೆಯೋ, ಅಥವಾ ಸ್ವಪ್ರತಿಷ್ಠಾಪ್ರದರ್ಶನಾರ್ಥವಾಗಿಯೋ ಸ್ಕೂಲನ್ನು ಪರೀಕ್ಷಿಸಿ ತಮಗೆ ತೋರಿದಂತೆ ವಿಜಿಟರ್ಸ್ ಬುಕ್ಕಿನಲ್ಲಿ ಬರೆಯುವುದರಿಂದ ಆಗುವ ಫಲಿತಾಂಶವೇನು? ಸ್ಕೂಲಿನಲ್ಲಿ ದಿನಚರ್ಯದ ಪಾಠಗಳಿಗೆ ತೊಂದರೆ, ಪರೀಕ್ಷೆಮಾಡುವುದಕ್ಕೆ ಬಂದ ಆಫೀಸರ ಸ್ವಂತ ಇಲಾಖೆಯ ಕೆಲಸವು ನಿಂತುಹೋಗುತ್ತದೆ. ಈ ರೀತಿ ಉಭಯ ಕೆಲಸಗಳಲ್ಲಿಯೂ ಸರ್ಕಾರಕ್ಕೆ ನಷ್ಟ. ಆದಕಾರಣ ಇಂತಹ ಅನುಚಿತವಾದ ದೃಷ್ಟಿಯನ್ನು ಮಾಡಿದ ಸಂದರ್ಭದಲ್ಲಿ ಸರ್ಕಾರದವರು ಉಭಯತ್ರರನ್ನೂ ತಕ್ಕಂತೆ ದಂಡಿಸಬೇಕು.

೩. ಗೌರ್ನಮೆಂಟಿನಲ್ಲಿ ಆಗಿರುವ ೧೫-೮-೧೯೦೦ ನೆಯ ಮಹಜರಿನ ವಿ.ಸಿ. ೩ ೭೧ ಎಷ್ಟು ೮೮ ನೆಯ ನಂಬರು ಪ್ರೊಸೀಡಿಂಗ್ಸ್ ಮೇರೆ ಗ್ರಾಮದ ಪಟೇಲನು ತೋಟಿ ತಳವಾರರಿಂದ ಸ್ಕೂಲನ್ನು ಶುಚಿಯಾದ ಸ್ಥಿತಿಯಲ್ಲಿಡಲು ಉಪೇಕ್ಷಿಸಿದ ಸಮಯಗಳಲ್ಲಿ ಸರಿಯಾದ ಶಿಕ್ಷೆಯನ್ನು ವಿಧಿಸುತ್ತಾ ಬರಬೇಕು.

೪. ದೊಡ್ಡ ದೊಡ್ಡ ಗ್ರಾಮಗಳಲ್ಲಿರತಕ್ಕ ಸ್ಕೂಲುಗಳಿಗೆ ಒಬ್ಬೊಬ್ಬ ಜವಾನನನ್ನು ಏರ್ಪಾಡು ಮಾಡಬೇಕು.

೫. ಶೇಕದಾರರುಗಳು ಈಗ ಅನೇಕ ಕಡೆ ಮಾಸ್ಟರುಗಳ ತಲಬನ್ನು ಕಾಲಕ್ಕೆ ಸರಿಯಾಗಿ ಪಾವತಿಮಾಡುವುದಿಲ್ಲ. ಇದಕ್ಕೆ ಸರಿಯಾದ ಏರ್ಪಾಡನ್ನು ಮಾಡಿಕೊಡಬೇಕು.

೬. ಗ್ರಾಮಾಂತರ ಸ್ಕೂಲುಗಳಲ್ಲಿ ಈಗ ಪ್ರಾತಃಕಾಲ ೭ ರಿಂದ ೧೦ ಗಂಟೆ ವರೆಗೂ, ಮಧ್ಯಾಹ್ನ ೩ ರಿಂದ ೫ ಗಂಟೆಗಳ ವರೆಗೂ ಕಾಲನಿಯಾಮಕವಿರುತ್ತದೆ. ಅವಶ್ಯವಿದ್ದ ಕಡೆ ಪ್ರಾತಃಕಾಲದ ಸ್ಕೂಲನ್ನು ೧೧ ಗಂಟೆಯ ಲಾಗಾಯ್ತು ಮಧ್ಯಾಹ್ನ ೨ ಗಂಟೆ ವರೆಗಿನ ಕಾಲಕ್ಕೆ ಬದಲಾಯಿಸಿಕೊಳ್ಳುವಂತೆ ಹುಕುಂ ಆಗಬೇಕು. ಹೀಗೆ ಮಾಡಿದಲ್ಲಿ ಸುತ್ತುಮುತ್ತಣ ಸ್ವಲ್ಪದೂರ ಫಾಸಲೆ ಇರುವ ಹಳ್ಳಿಗಳಿಂದ ಕೂಡ ಬಾಲಕರು ಸ್ಕೂಲಿರುವ ಗ್ರಾಮಕ್ಕೆ ಬಂದು ಓದಿಕೊಳ್ಳಲು ಅನುಕೂಲವಾಗುತ್ತದೆ. ಎರಡು ವೇಳೆಗಳಲ್ಲಿಯೂ ಊರಿಂದೂರಿಗೆ ತಿರುಗಾಡಬೇಕೆಂಬ ತೊಂದರೆ ಇರುವುದಿಲ್ಲ. ಈ ಏರ್ಪಾಡಿನಿಂದ ಆಯಾ ಸ್ಕೂಲಿನಲ್ಲಿ ಹುಡುಗರ ಸಂಖ್ಯೆಯೂ ಹೆಚ್ಚಲು ಅವಕಾಶವಾಗುತ್ತದೆ.

೭. ಸ್ಕೂಲು ಇರುವ ಗ್ರಾಮದಲ್ಲಿ ೬ ವರ್ಷಗಳ ಲಾಗಾಯ್ತು ೧೪ ವರ್ಷಗಳೊಳಪಟ್ಟಿರುವ ಎಲ್ಲಾ ಬಾಲಕರೂ ಸ್ಕೂಲಿಗೆ ಬಂದು ಓದಿಕೊಳ್ಳುವಂತೆ ನಿರ್ಬಂಧಕರವಾದ ಕಾನೂನನ್ನು ಜಾರಿಯಲ್ಲಿ ತರಬೇಕು.

೮. ಸ್ಕೂಲಿಗೆ ಅಕ್ರಮವಾಗಿ ಬಂದ, ಗೈರುಹಾಜರಾದ ಅಥವಾ ತಪ್ಪುಮಾಡಿದ ವಿದ್ಯಾರ್ಥಿಗೆ ದಿನಾ ೧ ಕ್ಕೆ ೪ ಆಣೆಯ ವರೆಗೆ ಜುಲ್ಮಾನೆಯನ್ನು ವಿಧಿಸತಕ್ಕ ಅಧಿಕಾರವನ್ನು ಎಲ್ಲಾ ಸ್ಕೂಲ್ ಹೆಡ್ ಮಾಸ್ಟರುಗಳಿಗೂ ಕೊಡಬೇಕು.

೯ ಬೇಸಗೆಯ ರಜವು ತಾಲ್ಲೂಕು ಸ್ಕೂಲುಗಳಿಗೆ ಎಂದು ವೇಳೆಗಳಲ್ಲಿಯೂ ಪೂರಾ ಕೊಡಲ್ಪಡುತ್ತದೆ ಗ್ರಾಮಾಂತರಗಳ ಸ್ಕೂಲುಗಳಿಗೂ ಅದೇ ಸೂಕ್ಷ್ಮಮಸ್ಸೇ ಕಾಲದಲ್ಲಿ ಕರಬೇಕು ಈಗಿನ ಕರಿಕ್ಯುಲಂ ಪ್ರಕಾರ ಅನೇಕ ಪಾಠಗಳ ವ್ಯಾಸಂಗದಲ್ಲಿ ಹುಡುಗರ ಮನಸ್ಸಿಗೂ ಉಪಾಧ್ಯಾಯರ ಮನಸ್ಸಿಗೂ ಬೇಸರ ಉಂಟಾಗುವುದು ನಿಶ್ಚಯ ಹಾಗೆ ಬೇಸರವಾಗದಂತೆ ತಕ್ಕ ಕಾಲಗಳಲ್ಲಿ ವಿರಾಮ ಕೊಡತಕ್ಕದ್ದು ಅವಶ್ಯಕ

೧೦ ಗ್ರಾಮಾಂತರ ಸ್ಕೂಲ್ ಮಾಷ್ಟರುಗಳ ಮೇಲ್ಪಟ್ಟ ದರ್ಜೆಯ ಸಲುಬು ಈಗ ೧೨ ರೂ ಮಾತ್ರವಾಗಿರುತ್ತದೆ ಅನೇಕ ಸ್ಕೂಲುಗಳಲ್ಲಿ ಲೋವರ್ ಸೆಕಂಡರಿ ತರಗತಿಯ ವರೆಗೂ ಇರುತ್ತದೆ ತಾಲೂಕ್ ಸ್ಕೂಲುಗಳಿಗೆ ಸಮವಾಗಿಯೇ ಬಾಲಕರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ಯಾಸಾಗುತ್ತಾರೆ ಇಂತಹ ಸ್ಕೂಲುಗಳಿಗೆ ಅನೇಕ ಕಡೆ ಅಪ್ಪರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ಯಾಸಾದ ಮಾಷ್ಟರುಗಳು ನಿಯಮಿಸಲ್ಪಟ್ಟಿರುತ್ತಾರೆ ಒಂದೊಂದು ವೇಳೆ ಪಂಡಿತ ಪರೀಕ್ಷೆಯಲ್ಲಿ ಉತ್ತೀರ್ಣರಾದವರೂ ನಿಯಮಿಸಲ್ಪಡಬಹುದು ಇಂತಹ ಸ್ಕೂಲ್ ನಲ್ಲಿರುವವರಿಗೆ ತಾಲೂಕ್ ಅಥವಾ ಹೈಸ್ಕೂಲ್ ಮಾಷ್ಟರುಗಳಂತೆ ಬಡತಿ ಹೊಂದಲು ಅವಕಾಶವಿರುವುದಿಲ್ಲ ಮೇಲ್ಪಟ್ಟ ಸ್ಥಳಗಳಿಗೆ ಇವರನ್ನು ತೆಗೆದುಕೊಂಡು ಪ್ರಮೋಷನ್ ಕೊಡತಕ್ಕದು ತುಂಬಾ ದುಸ್ತರ ಹೀಗೆ ಇವರಿಗೆ ಸರಿಯಾದ ಪ್ರೋತ್ಸಾಹವಿಲ್ಲದಿರುವುದರಿಂದ ಗೌರ್ನಮೆಂಟಿನವರು ದಯವಿಟ್ಟು ಗ್ರಾಮಾಂತರ ಸ್ಕೂಲ್ ಹೆಡ್ ಮಾಷ್ಟರುಗಳ ಮೇಲ್ಪಟ್ಟ ದರ್ಜೆಯ ಸಲುಬನ್ನು ೨೦ ರೂ ವರೆಗಾದರೂ ಹೆಚ್ಚಿಸಿ ಗ್ರೇಡುಗಳನ್ನು ಸರಿಪಡಿಸಬೇಕು

೧೧ ಸ್ಕೂಲ್ ಮಾಷ್ಟರುಗಳಿಗೆ ಸರ್ಕಾರಿ ಗೆಜೆಟ್ಟನ್ನು (ಇಂಗ್ಲಿಷ ಅಥವಾ ಕನ್ನಡ ಯಾವುದೇ ಆಗಲಿ) ಅರ್ಧಕ್ರಯಕ್ಕೆ ಕೊಡಿಸಬೇಕು ಇದರಿಂದ ವ್ಯಾವಹಾರಿಕ ಜ್ಞಾನಕ್ಕೆ ತುಂಬಾ ಸಾಧಕವಾಗುವುದು

೧೨ ಗ್ರಾಮಾಂತರಗಳಲ್ಲಿ ಸ್ಥಾಪಿಸಲ್ಪಡುವ ದ್ರವ್ಯಸಹಾಯದ ಪಾಠಶಾಲೆಗಳಿಗೆ ಈಗ ನಿಯಾಮಕವಾಗಿರುವ ಪರಮಾವಧಿ ಗ್ರ್ಯಾಂಟಿನ ಮೊಬಲಗು ೬೦ ರೂ ಮಾತ್ರವಾಗಿರುತ್ತದೆ ಇದನ್ನು ೧೨೦ ರೂ ವರೆಗೆ ಹೆಚ್ಚಿಸಬೇಕು ಈ ಏರ್ಪಾಡಿನಿಂದ ಯೋಗ್ಯರಾದ ಉಪಾಧ್ಯಾಯರುಗಳು ಅಂತಹ ಸ್ಕೂಲುಗಳಲ್ಲಿ ಕೆಲಸಮಾಡಲು ಅವಕಾಶವಾಗುವುದು ಇದರಿಂದ ಎಲ್ಲಾ ಕಡೆಯೂ ವಿದ್ಯೆಯು ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ

ವಿದ್ಯಾಭಿವೃದ್ಧಿಯ ಏರ್ಪಾಡಿನ ವಿಷಯದಲ್ಲಿ ಮೇಲೆ ಹೇಳಲ್ಪಟ್ಟಿರುವ ಅಂಶಗಳನ್ನು ಸರ್ಕಾರದವರ ಗಮನಕ್ಕೆ ತಂದ ಪಕ್ಷದಲ್ಲಿ ಸರಿಯಾದ ಏರ್ಪಾಡುಗಳುಂಟಾಗಿ ದೇಶದ ಅಭಿವೃದ್ಧಿಗೆ ಬಂದೀತೆಂದು ಹಾರೈಸುವ

ವಿದ್ಯಾಭಿಮಾನಿ

ತಾಲ್ಲೋಕು ವರ್ತಮಾನಗಳು

ನಂಜನಗೂಡು.——ಈ ಮಾಹೆ ತಾ ೧೧ ನೇ ಗುರುವಾರ ಶ್ರೀ ಮತ್ ...ರಂಜನ ಜಗದ್ಗುರು ಮುಮ್ಮಡಿ ...ಸ್ವಾಮಿಗಳವರ ಸನ್ನಿಧಿಯಿಂದ ದಯಪಾಲಿಸಿದ ಆಶೀರ್ವಾದ ನಿರೂಪವನ್ನು ನಂಜನಗೂಡಿನ ಸಕಲ ವೀರಶೈವ ಮತ ಯಜಮಾನರುಗಳೂ ... ಬಳಿಯಿಂದ ಛತ್ರ ಚಾಮರಾದಿ ಬಿರುದುಗಳೊಡನೆ ವಾದ್ಯವಾದ್ಯಗಳ ... ವಿಜೃಂಭಣೆಯಿಂದ ಉತ್ಸವ ಮಾಡಿಕೊಂಡು ಇದೇ ನಂಜನಗೂಡಿನಲ್ಲಿರುವ ಶಾಲಾ ಗಡಿ ಕೆಂಬಸಪ್ಪನವರ ಗೃಹಕ್ಕೆ ಬಿಜಯಂಗೆಯ್ದು ಹೊಂದಲಗೆರೆ ... ಶಿವಮೂರ್ತಿಸ್ವಾಮಿಗಳ ಅಗ್ರಾಸನದ ಅಡಿಯಲ್ಲಿ ... ಅನೇಕ ... ಓದಿಕೊಂಡರು ಅ...ದಲ್ಲಿ ... ಸ್ವಾಮಿಗಳನ್ನು ಆಚರಣೆ ... ಪಟ್ಟಿ ... ರುದ್ರಸ್ವಾಮಿಗಳ ನೃತ್ಯ ... ಯಿಸಲಾಯಿತು ಅನಂತರ ಸಭೆ ... ಮಂಗಳಾದ್ಯ ... ಮುಕ್ತಾಯವಾಯಿತು

ಚಿಕ್ಕನಾಗರ ಊರು ——ಪ್ಲೇಗ್ ರೋಗವು ದಿನೇ ದಿನೇ ಹೊಸದಾಗಿ ತಲೆ ಹಾಕುತ್ತಿದೆ ಇದೆ ಪ್ರಜೆಗಳೆಲ್ಲರೂ ಗಾಬರಿಯಿಂದ ಕಳೆಗುಂದಿದವರಾಗಿ ... ಕಡೆ ತಿರುಗುತ್ತಲಿದ್ದಾರೆ ಪ್ಲೇಗ್ ಶಿಡಿಬನ್ನು ಹಾಕಿಸಿಕೊಳ್ಳುವುದರಲ್ಲಿ ತಡ ಮಾಡುವುದು ಚೆನ್ನಾಗಿಲ್ಲ ಸರ್ಕಾರದವರು ಹೆಚ್ಚಿನ ಪ್ರಯತ್ನದಲ್ಲಿದ್ದರೂ, ಗ್ರಾಮವಾಸಿಗಳು ತಟಸ್ಥರಾಗಿಯೇ ಇರುವುದು ಸರಿಯಲ್ಲ ಅಂಗಡಿ ...ದರೋ ಇದಕ್ಕೆ ಸ್ವಲ್ಪವೂ ಗಮನ ಕೊಡದವರಾಗಿದ್ದಾರೆ ... ಸ್ವತಂತ್ರ ... ಊಟ ... ಸತ್ತರೆ ಇನ್ನು ಮುಂದಾದರೂ ವೈಶ್ಯರೇ ಮೊದಲಾದ ಎಲ್ಲಾ ವ್ಯಾಪಾರಸ್ಥರೂ ... ಮಾಡಿ, ಮೊದಲು ತಾವು ಕೊಬ್ಬಿರುವ ಮೂಷಕಗಳನ್ನು ನಾಶನ ಮಾಡಿ ತಾವೂ ತಮ್ಮ ಮನೆಯವರೆಲ್ಲರೂ ಪ್ಲೇಗ್ ಶಿಡಿಬನ್ನು ಹಾಕಿಸಲು ಪ್ರಯತ್ನ ಪಡುವರೆಂದು ನಿರೀಕ್ಷಿಸುತ್ತೇವೆ ——ಸುಮಾರು ಎರಡು ವಾರಗಳಿಂದಲೂ ಮಳೆ ಕಾವು ಸಮಾಧಿಯವನು ... ಇಲ್ಲಿನ ಮಿಷನ್ ಪಾದ್ರಿಗಳಾದ ಮೆ|| ...ವರು ತಾವೂ ಪ್ಲೇಗ್ ಶಿಡಿಬನ್ನು ಹಾಕಿಸಿಕೊಂಡು, ತಮ್ಮ ಕ್ರೈಸ್ತಮಂಡಲಿಯವರಿಗೂ ಹಾಕಿಸಿದರು ——ಕಳೆದ ವಾರ ಹಾರನಹಳ್ಳಿಯಿಂದ ... ಇಲ್ಲಿಗೆ ದಯಮಾಡಿ ಅದರಿಂದ ಇಲ್ಲಿನ ಬಾಲಿಕಾಪಾಠಶಾಲೆಯನ್ನು ಅವಲೋಕಿಸಿ ನ್ಯೂನತೆಗಳನ್ನು ಪರಿಹರಿಸಿ, ಕಸೂತಿ ಸಂಗೀತ ಮೊದಲಾದ ಭಾಗಗಳಿಗೆ ಗಮನ ಕೊಟ್ಟು ಹೊಸ ಏರ್ಪಾಡುಗಳನ್ನು ಮಾಡಿ ಹೋದರು ——ಶಿವನೊಗ್ಗಿಯ ಸರ್ವೇಸ್ ಇದ್ದಿಯುವವರು ಕೆಲವು ದಿನಗಳಿದ್ದು ಎಲ್ಲಾ ಮನೆಗಳನ್ನೂ ... ವಾಪಸು ಹೋದರು ——ಧಾರಣೆ ವಾಸಿಯು ಯಥಾಸ್ಥಿತಿಯಲ್ಲಿದೆ ಬೆಳೆದ ಪೆರೋ ಕೂಡಲ ಮತ್ತೂ ಇಲ್ಲಿ ... ಮುಂದೆ ಅಧಿಕಾರಿಗಳು ದಯವಿಟ್ಟು ಸಂತೆ ವರ್ತಕರಿಗೆ ಅಲ್ಲಲ್ಲಿಗೆ ದವಸಗಳನ್ನು ಮಾರುವಂತೆ ಏರ್ಪಾಡು ಮಾಡಿದರೆ, ಬಡಬಗ್ಗರು ಬದುಕಿಕೊಳ್ಳಲು ಮಾರ್ಗವಾದೀತು

ಯಳಂದೂರು.——ಕಳೆದ ೨ ವಾರಗಳಿಂದ ಈ ತಾಲ್ಲೂಕಿನಲ್ಲಿ ಮಳೆ ... ರೈತರು ರಾಗಿ ... ರಾಗಿ ಪೈರು ಸಹಾ ... ಬೆಳೆಯು ಸಾಮಾನ್ಯವಾಗಿ ಚೆನ್ನಾಗಿ ಆಯಿತು ಸುವರ್ಣಾವತಿ ನದಿಯಲ್ಲಿ ಸ್ವಲ್ಪ ನೀರು ಬಂದಿರುತ್ತದೆ ದೇವರ ದಯದಿಂದ ಸಾಂಕ್ರಾಮಿಕ ರೋಗಗಳ ಬಾಧೆಯೇ ... ——ಕೆರೆ ... ವಿಚಾರಣೆಯು ಕ್ರಮವಾಗಿ ನಡೆಯುತ್ತಿದೆ ... ಕ್ರಮವಾಗಿ ... ——ಈ ಊರು ... ಎಂದು

ಹೆಸರಿನಿಂದ ಒಂದು ಪರಸ್ಪರ ಸಹಾಯಕ ಸಂಘವನ್ನು ಮಾಡಿಕೊಂಡಿದ್ದಾರೆ ಇದಕ್ಕೆ ಇಲ್ಲಿನ ಅಮಲ್ದಾರ್ ಮೆ|| ಮಹಮದ್ ಪಿರ್‌ಯವರು ಪ್ರೆಸಿಡೆಂಟರಾಗಿಯೂ, ಇಲ್ಲಿನ ಜಮಾದಾರರಾದ ಜವಳಿ ವರ್ತಕರು ಮೆ|| ಗುಲಾಮಹುಸೇನ್ ಸಾಹೇಬರು ಸೆಕ್ರೆಟರಿಯಾಗಿಯೂ, ಕೆಲವು ಮಹನೀಯರು ದೊಡ್ಡ ಮನುಷ್ಯರು ಮೆಂಬರುಗಳಾಗಿಯೂ ಇರುತ್ತಾರೆ ಬಡ ಜನಗಳಿಗೆ ಸ್ವಲ್ಪ ಸಹಾಯ ಮಾಡಿ, ಕಸಬು ನಡೆಸಲು ಅವಕಾಶ ಮಾಡಿ ಕೊಡುವುದೇ ಈ ಸೊಸೈಟಿಯ ಮುಖ್ಯ ಉದ್ದೇಶವಾಗಿದೆ ಇದು ಚಿರಕಾಲ ನಡೆಯಲಿ ಎಂದು ಹಾರೈಸುತ್ತೇವೆ — ಈ ಊರಲ್ಲಿ ಸ್ಥಾಪನೆಯಾಗಿರುವ ಯಳಂದೂರು ಜಹಗೀರ್ ರೀಡಿಂಗ್ ರೂಂ ಕ್ವಾರ್ಟರ್ಲಿ ಮೀಟಿಂಗು ಕಳೆದ ೧೫ ನೇ ತಾ ಭಾನುವಾರ ಮಧ್ಯಾಹ್ನ ೪ ಘಂಟೆಗಾಯಿತು ರಾತ್ರಿ ೮ ಘಂಟೆ ವರೆಗೂ ಜರುಗಿತು ಇಲ್ಲಿನ ಅಮಲ್ದಾರರಾದ ಮೆ|| ಮಹಮದ್ ಪೀರ್‌ಯವರು ಅಗ್ರಾಸನವನ್ನು ವಹಿಸಿದ್ದರು ಈ ರೀಡಿಂಗ್ ರೂಂ ಮೆಂಬರುಗಳೂ, ಸೆಕ್ರೆಟರಿ ಮೆ|| ಡಾಕ್ಟರ್ ಕೃಷ್ಣಮೂರ್ತಿಯವರೂ ಹಾಜರಾಗಿದ್ದರು ಜಾಯಿಂಟ್ ಸೆಕ್ರೆಟರಿ ಮೆ|| ಲಾಯರ್ ವೈ. ಶ್ರೀನಿವಾಸಯ್ಯಂಗಾರ್ಯ ಕಮಿಟಿ ರಿಪೋರ್ಟು ಓದಿದ್ದಲ್ಲದೆ ಈ ವಾಚನಾಲಯದ ಪುರೋಭಿವೃದ್ಧಿಯನ್ನು ಕುರಿತು ಉಪನ್ಯಾಸ ಮಾಡಿದರು ತರುವಾಯ ಮೆ|| ಡಿ ವರದಮೂರ್ತಿರಾಯರೂ, ಸ್ಕೂಲ್ ಹೆಡ್ಮಾಸ್ಟರ್ ಮೆ|| ಶ್ರೀಕಂಠಶಾಸ್ತ್ರಿಗಳೂ ರೀಡಿಂಗ್ ರೂಂ ಅಭಿವೃದ್ಧಿಯಾಗುವಂತೆ ಮೆಂಬರುಗಳಿಗೆ ಪ್ರೋತ್ಸಾಹವ ನೀಡಿದರು ಅನಂತರ ಮೆ|| ರಂಗಾಚಾರ್ಯರ ಸಂಗೀತವಾಯಿತು ಪ್ರೆಸಿಡೆಂಟರು ರೀಡಿಂಗ್ ರೂಂ ಶಾಶ್ವತವಾಗಿ ನಡೆಯತಕ್ಕ ಭಾಗದಲ್ಲಿ ಉಪನ್ಯಾಸ ನೀಡಿದರು ಬಳಿಕ ಸಭೆಯು ಬರಖಾಸ್ತ್ ಆಯಿತು

ಹೊಳೆನರಸೀಪುರ ತಾ|| ಜೋಡಿ ಗೂಂಜನಕೆರೆ ——ಈ ಗ್ರಾಮದಲ್ಲಿ ಪೈರು ಇಡುವ ಪೂರ್ವ ಮೊದಲು ಮೊದಲು ಸ್ವಲ್ಪ ಹದ ಮಳೆ ಬಂದು ಪೈರೆಲ್ಲಾ ಇಟ್ಟಿರುತ್ತಾರೆ ಈಚೆಗೆ ಮಳೆ ಬಾರದೆ ಆಗ ಹಾಕಿದ ಪೈರೆಲ್ಲಾ ಒಣಗುತ್ತಾ ಇರುತ್ತ ಬಿಸಲಿನ ತಾಪವಂತೂ ಸಹಿಸಲು ಅಸಾಧ್ಯವಾಗಿದೆ ದನಕರುಗಳಿಗೆ ಮೇವು ಇಲ್ಲದೆ ಮರದ ಸೊಪ್ಪು ತಿಂದು ಜೀವಿಸಬೇಕಾಗಿದೆ ಭಾವಿಗಳಲ್ಲಿ ನೀರು ಬತ್ತಿಹೋಗಿದೆ ಈಗ ಎರಡು ದಿವಸದಿಂದ ಮೋಡಗಳು ಮುಚ್ಚಿಕೊಂಡು ಇವೆ ಜನರು ಮಳೆಯನ್ನೇ ಎದುರು ನೋಡುತ್ತಿದ್ದಾರೆ — ಈ ಗ್ರಾಮದಲ್ಲಿ ಧಾರಣೆಯಾದರೂ ಅಂತೂ ಅಂಗಡಿಯವರ ಅಧೀನವಾಗಿರುತ್ತ ಅಳತೆ ಸೇರುಗಳೂ ತೂಕದ ಕಲ್ಲುಗಳೂ ಅಂಗಡಿಯವರಿಗೆ ಒಂದೊಂದು ರೀತಿ ಇರುತ್ತವೆ ಈ ಗ್ರಾಮದಲ್ಲಿ ೬ ೧೦ ಮನೆ ಸಾಹುಕಾರರು ಇರುತ್ತಾರೆ ಇವರು ಯಾವ ದಿನಸನ್ನು ಅಂಗಡಿಗಳಿಗೆ ತರುವದಿಲ್ಲ ಮುಖ್ಯವಾಗಿ ಬಡ ಜನಗಳಿಗೆ ತುಂಬಾ ತೊಂದರೆ ಆಗಿರುತ್ತ ——ಹೊಳೆನರಸೀಪುರ, ಬಳಕೆರೆ, ನಾರಾಯಣಪುರ ಈ ಸಂತೆಗಳಲ್ಲಿ ರಾಗಿ ಜೋಳ ೧೬ ೧೭ ಸೇರು ಮಾರಾಟವಾಗುತ್ತಿದೆ ಇಲ್ಲಿ ೧೧ ಸೇರಿಗಿಂತ ಜಾಸ್ತಿ ಇಲ್ಲ ಇತರ ತಲ್ಲುರೆ ... ಅಂಗಡಿಯವರು ಹೇಳಿದ್ದೇ ಧಾರಣೆ ——ಬಳ್ಳಾರಿಯಿಂದ ಪ್ರತಿ ... ಚಳ್ಳಕೆರೆ ಸಂತೆಗೆ ಪ್ರತಿವಾರವಲ್ಲಿಯೂ ಹೋಗುತ್ತದೆ ದಿನಸಿ ... ಗಾಡಿಗಳು ಇಲ್ಲಿ ಮೊಕ್ಕಾಂ ಮಾಡುತ್ತವೆ ಆ ದಿವಸ ಈ ಗ್ರಾಮದಲ್ಲಿ ಸಂತೆ ಮಾಡಿದ್ದಾದರೆ ಬಡ ಜನಗಳಿಗೆ ತುಂಬಾ ಅನುಕೂಲವಾಗುತ್ತ ಸಂತೆ ... ಈ ಗ್ರಾಮದಲ್ಲಿ ಧಾರಣೆಯು ಅಂಗಡಿಯವರ ಅಧೀನವಾಗಿರುವುದು ... ಸರ್ಕಾರದವರು ಈ ಗ್ರಾಮಕ್ಕೆ ಸಂತೆಯನ್ನು ತರಿಸಿಕೊಟ್ಟು ಈ ಗ್ರಾಮದ ... ಸಮಾಗಳನ್ನು ... ರೆಂದು ಪ್ರಾರ್ಥಿಸುತ್ತೇವೆ | ಸಂತೆ ಕಟ್ಟುವ ... ತಾಲೂಕು ... ಅನುಕೂಲವಾಗಬಹುದೆಂದು ... ಸುತ್ತೇವೆ ... |

ದೇವನಹಳ್ಳಿ ——ಈ ... ಇದೆ ತಿಂಗಳು ೧೧ ... ನೇ ತಾ ... ಮಳೆ ೨ ಹದ ಆಗಿರುತ್ತದೆ ... ನೀರು ಬಂದು ಪೈರು ... ಚೆನ್ನಾಗಿರುತ್ತವೆ ಧಾರಣೆ ... ದಿನೆ ದಿನೇ ಹೆಚ್ಚುತ್ತಿದೆ ... ರಾಗಿ ... ರೂಪಾಯಿಗೆ ... ಸೇರು ಮಾರುತ್ತದೆ —— ಇಲ್ಲಿದ್ದ ... ಸಬ್ ರಿಜಿಸ್ಟ್ರಾರ್ ಮೆ|| ... ನಾರಾಯಣರಾವ್ ಇದೇ ತಿಂಗಳಲ್ಲಿ ತಿಪಟೂರಿಗೆ ವರ್ಗಾಯಿಸಲ್ಪಟ್ಟರು ... ಪ್ರಜೆಗಳ ಕೆಲಸಗಳನ್ನು ... ಕಾಲದಲ್ಲಿ ಮಾಡಿಕೊಟ್ಟು ... ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು ಇವರಂತೆಯೇ ಈಗ ಬಂದಿರುವ ಮೆ|| ಎಂ ರಂಗೆ...ಯವರು ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಳ್ಳುವರೆಂದು ನಂಬಿರುತ್ತೇವೆ —— ... ಈ ಊರ ಸರೋವರದ ಬೀದಿಯಲ್ಲಿ ಇರತಕ್ಕ ಬೇಡರ ೧೯ ವರ್ಷದ ಲಗುಮನೆಂಬುವನು ಯಾವ ಕಾರಣದಿಂದಲೋ ಉರುಲು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಂತೆ ತಿಳಿದಿದೆ ಈಗ ಇವನ ಅಣ್ಣನಾದ ೧೯ ... ವರ್ಷದ ಮುನಿಸ್ವಾಮಿ ಎಂಬುವನು ಇದೇ ತಿಂಗಳು ... ನೇ ತಾ ಶನಿವಾರ ಮಧ್ಯಾಹ್ನ ೪ ಘಂಟೆ ಸಮಯದಲ್ಲಿ ಶಿವಭಕ್ತರ ಲಾಲಗೊಂಡರ ಅರಸಪ್ಪನ ಮನೆಯಲ್ಲಿ ಗಂಡಸರು ಇಲ್ಲದ ವೇಳೆ ... ತಾಯಿ ಒತ್ತಲಿನಲ್ಲಿರುವಾಗ ಒಳಗೆ ಪ್ರವೇಶಿಸಿ ಪೆಟ್ಟಿಗೆ ಒಡೆಯುತ್ತಿರುವಾಗ ಒತ್ತಲಿನಿಂದ ಬಂದು—ಯಾಕೆ ಪೆಟ್ಟಿಗೆ ಒಡೆಯುತ್ತೀ ಎಂದು ಸದರಿಯವನ ತಾಯಿ ಕೇಳಲು, ಕೂಗಿದರೆ ಒಂದೇಟಿಗೆ ಹಾಕಿಬಿಡುತ್ತೇನೆಂದು ಹೇಳಿ ಕುಡುಗೋಲಿನಿಂದ ಕತ್ತಿಗೆ ಮೇಲೆ ಹೊಡೆದನು ಕೊಡಲೇ ಸದರಿಯವನ ಮಗಳು ೩ ವರ್ಷದ ಹುಡುಗಿ ... ನಮ್ಮಪ್ಪನಿಗೆ ಹೇಳುತ್ತೇನೆನ್ನಲು ಆ ಹುಡುಗಿಯನ್ನು ಹಿಡಿದು ಕುಡುಗೋಲಿನಿಂದ ಒಂದು ಕಡೆ ಕಿವಿ, ಕೆನ್ನೆ ಹರಿಯ ಬಿಟ್ಟನು ಹುಡುಗಿಯನ್ನು ... ಹೊಡೆಯುತ್ತೀ ಎಂದು ಸದರಿ ಮುದುಕಿಯು ಆ ... ಕೇಳಲು, ನೀನು ತಿರುಗಿ ಮಾತನಾಡುತ್ತೀಯೋ ಎಂದು ಕೈಯಲ್ಲಿದ್ದ ಕುಡುಗೋಲಿನಿಂದ ಹೆಗಲನ್ನೂ, ಕತ್ತನ್ನೂ, ಗಡ್ಡವನ್ನೂ ಜೈವನ ಮಾಡುವ ರೀತಿಯಲ್ಲಿ ಕತ್ತರಿಸಿದನು ಆ ರೀತಿ ಕತ್ತರಿಸುವಾಗ ಒಂದು ಕಡೆಯ ಹೆಗಲಿನ ಮೂಳೆಯೇ ಮುರಿದುಹೋಯಿತೆಂದು ಹೇಳುತ್ತಾರೆ ಇಷ್ಟೆಲ್ಲಾ ಆಗುವಷ್ಟರಲ್ಲಿಯೇ ಮುದುಕಿಯು ಬಾಯಿ ಬಡಿದುಕೊಂಡು—ಏನಿದ್ದರೂ ತೆಗೆದುಕೊಂಡು ಹೋಗಪ್ಪಾ, ನನ್ನನ್ನು ಯಾಕೆ ಹಿಂಸಿಸುತ್ತೀ ಎಂದು ಹೇಳಿದಳು ಕೊಡಲೇ ಘಾತುಕನು ತನ್ನ ಕೈಗೆ ಸಿಕ್ಕಿದ ೫೦ ರೂಪಾಯಿನ ಸಗ ಸಾಮಾನುಗಳನ್ನು ಎತ್ತಿಕೊಂಡು ಹೋಗಿ ... ಒಂದು ಮರದ ಕೆಳಗೆ ಕೂತಿಟ್ಟು, ಸದರಿ ಮನೆ ಯಜಮಾನ ಅರಸಪ್ಪನ ಹೊಲಕ್ಕೆ ಓಡಿಹೋಗಿ—ನಿಮ್ಮ ಮನೆಯಲ್ಲಿ ಯಾರೋ ನಿಮ್ಮ ತಾಯಿಯನ್ನೂ, ನಿಮ್ಮ ಮಗಳನ್ನೂ ಹೊಡೆದುಹಾಕಿದ್ದಾರೆ ಎಂದು ಹೇಳಿ ಅವನನ್ನು ಕರೆದುಕೊಂಡು ಮನೆಗೆ ಬಂದನು ಆಗ ಈ ಸಂಗತಿಯನ್ನು ಪೋಲೀಸ್ ಸ್ಟೇಷನ್‌ಗೂ, ಅಮಲ್ದಾರರಿಗೂ ಇವರ ನಾರಸುದಾರರು ತಿಳಿಸಿದರು ಅನಂತರ ಅಮಲ್ದಾರರೂ ಇನ್ಸ್‌ಪೆಕ್ಟರೂ ಎಂದು ನೋಡಲು ಮನೆಯಲ್ಲಾ ರಕ್ತಮಯವಾಗಿತ್ತು ಅಧಿಕಾರಿಗಳು ... ಇವರನ್ನು ಈ ರೀತಿ ಹೊಡೆದವರು ಯಾರು ಎಂದು ಕೇಳಲು ಇವನೇ ಎಂಬುದಾಗಿ ಸದರಿ ಬೇಡರ ಮುನಿಸ್ವಾಮಿಯನ್ನು ತೋರಿಸಿದಳು ಇದರ ವಿಚಾರವಾಗಿ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರವರೂ ಇನ್ನೂ ಪರಿಶೋಧಿಸುತ್ತಿರುವುದರಿಂದ ಜನರ ಸಮೂಹವೇ ನೋಡುತ್ತಾ ಇರಲು, ಅಧಿಕಾರಿಗಳು ಮಹಜರ್ ಬರೆಯುತ್ತಿರುವುದರಿಂದ ಹೊಲೆಯರ ಹಾಕಿಸಿರುತ್ತಾರೆ ಸದರಿ ಗಾಯಪಟ್ಟ ೫೦ ೬೦ ವರ್ಷದ ಮುದುಕಿಯು ಬದುಕುವುದು ಕಷ್ಟ ಎಂದೂ ಈ ಮುದುಕಿಯ ಮೊಮ್ಮಗಳಿಗೆ ಪ್ರಾಣಭಯವಿಲ್ಲವೆಂದೂ ಹೇಳುತ್ತಾರೆ ಸದರಿ ಘಾತುಕನನ್ನು ಕೇಳಿದರೆ— ನನ್ನ ತಿಳುವಳಿಕೆಯಿಂದ ಮಾಡಿದ್ದಲ್ಲವೆಂದು ಹೇಳುತ್ತಾನಂತೆ ಅಂತು ಈ ಘೋರಕೃತ್ಯವನ್ನು ಮಾಡಿದ್ದು ತಾನೇ ಎಂದು ಒಪ್ಪಿಕೊಳ್ಳುತ್ತಾನೆ ಇವನನ್ನು ... ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ ಜನಭರಿತವಾದ ಈ ಬೀದಿಯಲ್ಲಿ ಈ ರೀತಿ ಹಗಲು ವೇಳೆ ನಡೆದಿರತಕ್ಕದ್ದು ನೋಡಿದರೆ ಆಶ್ಚರ್ಯಕರವಾಗಿರುತ್ತೆ

ಮದ್ದಗಿರಿ ——ಪುರವರದ ಸನ್ನುತು ... ಬಳ್ಳದಲ್ಲಿರುವ ನಂಜುಂಡರ ಗೊವಿಂದಪ್ಪನ ಅತ್ತೆ ಜೊತೆ ಹೆಂಗಸರ ಸಂಗಡ ನೀರಿಗೆ ಬೀಮಣ್ಣನವರ ಭಾವಿಗೆ ಹೋಗಿ ಅದರಲ್ಲಿ ಬಿದ್ದುಬಿಟ್ಟಳು ... ಹೆಂಗಸರು ಕೂಗಿಕೊಂಡರು ಜನಗಳು ಜಮಾಯಿಸಿ ಇಳಿದು ಮೇಲಕ್ಕೆ ತೆಗೆಯುವುದರಲ್ಲಿ ಪ್ರಾಣ ಹೋಗಿತ್ತು ... ತಕ್ಷಣ ... ಪೋಲೀಸಿನವರು ಬಂದು ದರ್ಖಾಸ್ತು ಮಾಡಿದರು ಸುಮಾರು ೧ ತಿಂಗಳಿಗೆ ಮುಂಚೆ ಇದೇ ರೀತಿಯಾಗಿ ಅದೇ ಗ್ರಾಮದಾಕೆಯೊಬ್ಬಳು ಭಾವಿಯಲ್ಲಿ ಸತ್ತುಹೋದಳು ... ಹೆಂಗಸರು ತುಂಬಾ ಎಚ್ಚರಿಕೆಯಿಂದ ಭಾವಿಗೆ ಇಳಿಯುವಂತೆ ಗಂಡಸರು ತಿಳಿಸುವುದು ಉತ್ತಮ ಅದೇ ಗ್ರಾಮದಲ್ಲಿ ತಳಗನ ... ನ ಹೆಂಡತಿ ಸುಮಾರು ೨೦ ವರ್ಷ ಪ್ರಾಯವುಳ್ಳ ಒಂದು ಮಗುವಿನ ತಾಯಿ ತನ್ನ ಮನೆಯಲ್ಲಿ ಮಲಗಿರುವಾಗ ಕೆಳಭಾಗದಲ್ಲಿ ಹಾವು ಕಚ್ಚಿತು ತಗಿ ... ಯಲ್ಲಿರುವ ವೈದ್ಯರ ಬಳಿಗೆ ಹೋಗಿ ಔಷಧ ಹಾಕಿಸಿಕೊಂಡು ಬಂದರೂ ಬೆಳಗ್ಗೆ ತೀರಿಹೋದಳು ತೀರಿಹೋದ ಮೂರು ದಿನಗಳ ತರುವಾಯ ಮದ್ದಗಿರಿಯಿಂದ ಪೋಲೀಸಿನವರು ಬಂದು ದರ್ಖಾಸ್ತು ಮಾಡಿದರು ಹೆಣವು ... ತಾ ೧೫ ನೇ ರಾತ್ರಿ ಹನುಮನ ನಾಗಪ್ಪನ ತೆಂಗಿನ ತೋಟಕ್ಕೆ ಹಾವು ಕಚ್ಚಿತು ಅಳಿಯನ್ನು ಸಹ ಕಗ್ಗಹಳ್ಳಿಗೆ ತೆಗೆದುಕೊಂಡು ಹೋಗಿರುವರು ಈ ಊರು ಸುತ್ತಲೂ ಮನೆಗಳಿಗೆ ಕೇವಲ ಸಮೀಪವಾಗಿ ಕತ್ತಾಳೆ ... ಇರುವುದರಿಂದ ಮನೆಗಳಲ್ಲಿ ವಿಷಜಂತುಗಳು ... ಕಾರಣವಾಗಿದೆ ಈ ಗ್ರಾಮದ ಮುನಿಸಿಪಾಲಿಟಿಗೆ ಸೇರಿದ ... ಸುತ್ತಲೂ ಇರುವ ... ಗಿಡಗಳನ್ನು ತೆಗೆದು ಹಾಕುವುದಕ್ಕೆ ತಕ್ಕ ಏರ್ಪಾಡು ಮಾಡಿ, ವಿಷಜಂತುಗಳಿಂದ ಉಂಟಾಗುವ ಮೃತ್ಯುವನ್ನು ... ಆಕಸ್ಮಾತ್ ಮರಣ ಹೊಂದಿದವರನ್ನು ... ದರ್ಖಾಸ್ತು ಮಾಡುವುದಕ್ಕೆ ಮದ್ದಗಿರಿ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಹೆಡ್‌ಕಾನ್ಸ್‌ಟೇಬಲ್ ಮಾತ್ರ ನಿಯಮಿಸಲ್ಪಟ್ಟಿದೆ ——ಸರ್ಕಾರಿ ಹರಾಜು ಮಾಡುವ ರೀತಿ ಹ್ಯಾಗೆ ಎಂದರೆ ... ಮರಗಳಾಗಲೀ ಇನ್ನು ಯಾವದೇ ಆಗಲೀ ತಾಲ್ಲೋಕಿನಿಂದ ಹರಾಜಾಗುವ ಪಕ್ಷದಲ್ಲಿ ಆ ಗ್ರಾಮಸ್ಥರಿಗೂ ... ಸಮೀಪ ಗ್ರಾಮಸ್ಥರಿಗೂ ಡಂಗೂರ ಮೂಲಕ ತಿಳಿಯಪಡಿಸಿ ... ಎಲ್ಲರನ್ನೂ ಬಹಿರಂಗವಾಗಿ ... ಮಾಡಿ ... ಕೂಗಿದವರ ಹೆಸರಿಗೆ ಮಾಡಿಸುವುದು ರೂಢಿಯಾಗಿದೆ ಆದರೆ ಈಚೆಗೆ ಆ ಕ್ರಮವು ಬದಲಾಗಿದೆಯೋ ... ಗೊತ್ತಾಗುವುದಿಲ್ಲ ಯಾಕೆಂದರೆ ... ಪಟೇಲ್ ... ಭೂಮಿಗಳಲ್ಲಿರುವ ಕೆಲವು ಮರಗಳನ್ನೂ ... ರುವ ಕೆಲವು ಮರಗಳನ್ನೂ ... ಹರಾಜು ... ಮುಂಚೆ ... ಮಾಡಿರುವುದರಿಂದಲೂ, ಈ ಹರಾಜು ನಡೆದು ... ತಿಂಗಳಾಗಿರುವುದರಿಂದಲೂ ತಿಳಿಯಬಂದದ್ದರಿಂದ ... ಅಮಲ್ದಾರರಿಗೆ ... ತಿಳಿಯದೆ ... ಮಾಡಿದಂತೆ ಗೊತ್ತಾಗುವುದು ... ಮತ್ತು ಹರಾಜು ಮೊಬಲಗು ... ಹರಾಜಾದರೆ ... ಆಗುವದೆಂದೂ ತಿಳಿಯುವುದಾಗಿರುವುದು ... ಆದು ಹಾಗಾದರೂ ಆಗಲಿ ಸರ್ಕಾರದವರು ಗ್ರಾಮಸ್ಥರಿಗೆ ತಿಳಿಸದೆ ... ಹರಾಜಾಗುವ ... ಬಗ್ಗೆ ... ಮೊಬಲಗಿಗೆ ಆ ಮರಗಳು ಹರಾಜಾದದ್ದಾಗಲಿ ... ಕ್ರಮ ತಪ್ಪಿ ... ಹರಾಜುಗಳು ... ಮೇಲಿನ ಅಧಿಕಾರಿಗಳು ಇಂತಾ ಕಾರ್ಯಗಳ ವಿಷಯದಲ್ಲಿ ... ಕ್ರಮವಾಗಿ ... ತೆಗೆದುಕೊಳ್ಳಬಹುದು ಹಾಗೆ ಮಾಡಿದರೆ ಮುಂದೆ ಇಂತಾ ಕಾರ್ಯಗಳು ಎಂದೆಂದಿಗೂ ನಡೆಯಲಾರವಲ್ಲವೇ ——ಈ ವರುಷ ... ಕಟ್ಟಡ ... ಆಗಿರಲಿಲ್ಲ ... ಸರ್ಕಾರದವರು ಪ್ರಜೆಗಳ ... ತೊಂದರೆ ... ಆಗತವೆಂದು ಕೆಂಪು ಬಂಡೆ ಕಡೆಗಳ ಭಾಗಗಳನ್ನು ತೆಗೆಯುವರು ಅದರಂತೆ ... ಮಾದಿಗರಿಗೆ ... ತೊಂದರೆ ... ತಾಲ್ಲೋಕು ಅಮಲ್ದಾರವರ ... ದರವರು ... ಹೇಳಿಕೆಯಂತೆ ಒಂದು ಬಂಡೆಯನ್ನು ತೋಡಿದರು ಅದಕ್ಕೆ ಕಲ್ಲು ಕಟ್ಟಿ ... ಆದು ಗಟ್ಟಿ ... ಅದನ್ನು ತೆಗೆಯುವಾಗ್ಗೆ ... ಕಾಲವಾದ್ದರಿಂದ ಅದೇ ರಿಲೀಫ್ ಕಾಮಗಾರಿ ಎಂದು ತಿಳಿದು ಬಡ್ಡಿಗೆ ಹಣ ತೆಗೆದು ಆ ಕೆಲಸವನ್ನು ಪೂರೈಸಿದರು ಸರ್ಕಾರದವರು ೬೦ ರೂಪಾಯಿ ಅಂದಾಜು ಮಾಡಿರುವರಂತೆ ಅದು ಆ ಕೆಲಸಕ್ಕೆ ಕಮ್ಮಿ ಎಂದು ಹೇಳಬೇಕಾಗುವುದು ಚಿಂತೆಯಿಲ್ಲ ಆ ಹಣವು ಈ ವರಿಗೂ ಅವರಿಗೆ ಬಂದಿಲ್ಲ ... ಬಡ್ಡಿ ಹೆಚ್ಚುತ್ತಾ ಇದೆ ಮಾದಿಗರು ಭಯಸ್ಥರು ... ಕೇಳಿದರೆ ಗಾರೆ ಗೋಡೆ ಕಟ್ಟಿ ಗಾಲಿಗೆ ಕಲ್ಲು ನಿಲ್ಲಿಸಿ ಪೂರೈಸಿದ ಹೊರತು ಹಣ ಬರುವದಿಲ್ಲವೆಂದು ಹೇಳುತ್ತಿರುವರಂತೆ ದಯಾಳುಗಳಾದ ಸಬ್ ಡಿವಿಜನ್ ಆಫೀಸರಾಗಲೀ ಅಮಲ್ದಾರರಾಗಲೀ ಇವರ ಮೇಲೆ ದಯವಿಟ್ಟು ಶೀಘ್ರದಲ್ಲಿಯೇ ಹಣವಿಯ ಹಣ ಕೊಡಿಸಿ ಕಾಪಾಡುವರೆಂದು ಹಾರೈಸುವೆವು

Printed and Published by the Rev H Gulliford,
Proprietor and Manager, Wesleyan Mission Press,
Mysore 26/8/1909

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ | ಮೈಸೂರು—ಸರ್ಕ ೧೯೦೯ ನೇ ಇಸವಿ ಸೆಪ್ಟಂಬರ್ ತಾರೀಖು ೨ ನೇ ಗುರುವಾರ. | ಸಂಚಿಕೆ ೧೮

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಹೊರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲಿಮೆಂಟರ ಮ್ಯಾಜಿಕ್ ಬಾಂ ತೈಲವು

47 15

ಕರಿನೋವು, ವಾಯುನೋವು, ಗಾಯ, ಗಂಟಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ ನೋಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದು ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಸ್ತೋತ್ರಗಳಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಬಯಸುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ನಾಶಪಡಿಸುತ್ತದೆ

ಕ್ರಯ ಚಿಕ್ಕ ಸೀಸೆ ೧೦ ಆಣೆ ಪ್ಯಾಕಿಂಗ್ ೪ ಆಣೆ ಅದರ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯಿಸುತ್ತಾರೆ ಮುಖ್ಯ ಏಜಂಟರ ವಿಳಾಸ—ಟಿ ಎಸ್ ಕನ್ನಯ್ಯಚೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಫಿಟ್ಟರ್,

೩೬, ನೈನಿಯಪ್ಪ ಬೀದಿ, ಪೇಟೆ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರೀಕ್ಷಿಸಿ.

10 35

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಪೋಸ್ಟೇಜ್, ಐದಾಣೆ

"ಸ್ವಪ್ನಯಾತ್ರಾಫಲದೀಪಿಕೆ" ಈ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಹಕ್ಕೆ ಬಹಳ ಪ್ರಯೋಜನವನ್ನು ಹೊಂದಿಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ನಯಾತ್ರಾಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೆ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರುಚಿಕರವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ದಿನ್ನಮಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟಿಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೆ ಮಾತ್ರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 28]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲುನೋವು, ಅರ್ಧಾಂಗವಾಯು, ಎದೆಶೀತ, ಗಾಯ, ಕಜ್ಜಿ, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮುಂದು ನೀರು ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪-೦ ೦

ಆಸಾ ಮಿಶ್ರಣ	೨ ೦ ೦
ದೇಶೀಯದಂತದ ಮದ್ದು	೦ ೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುಪ್ಪು ಜನರಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦-೪ ೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೨
ಬಜ್ಜ ಮುಲಾಮು—ಮಕ್ಕಳ ಬಜ್ಜಿಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦ ೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 34

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ? ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನ್ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆ ಕಡಿಮೆ ಬೆಲೆಯದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ಬೆಲ್ಲಾ ನೆಟ್ಟಗೆ ಇಂಗ್ಲೆಂಡಿನಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ಬಹಳ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೊಲಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೊಳ್ಳುವರು ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೆಲ್ಲಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 29

೧ ಲೋಕಾನುಗ್ರಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಅವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನರಗಳ ಶಕ್ತಿ, ಅರೆತಲೆ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಎಂಥ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಕಶೂಲೆ, ಮಕ್ಕಳ ಸೆಳವು, ಜ್ವರ, ಹಲ್ಲುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ ಎಂ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

18 31



ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ತಿಕ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿದರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೧—೪ ರೂ ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಅಮೃತಾಂಜನ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಸಂಗ್ರಹಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹಾಕಷ್ಟವಾಗಿ ಪರಿಣಮಿಸಿ, ಕೊಡಲೇ ಗುಣಕೊಡುವದು ಇದು ಕೆಲಗಳು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗಿ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ ಅಮೃತ ಕರ್ಪೂರವನ್ನು ನಾನೂ ನನ್ನ ಹಿಂದಿನವರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ನರುಷರಿಂದಲೂ ಕಾಲರಾ, ಅಜೀರ್ಣಭೇದಿ ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅವಲ್ಲದೆ ಕೆಳಗಿನ ವಿಳಾಸದಿಂದಲ್ಲಿ ಪಡೆಯ —

ಹನ್ನಿಯರವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಗೃಹಕೃತ್ಯದ ನೋಟೀಸು

೮೫-೧

೧೯೦೯ ನೇ ಜುಲೈ ೨೯ ನೇ ತಾರೀಖು ಬಾಬತು ಈ "ವೃತ್ತಾಂತ ಪತ್ರಿಕೆ" ಯಲ್ಲಿ ಪ್ಲೇಗ್ ಆಫೀಸು ಕ್ಲಾರ್ಕ್ ಯಂ ಕೃಷ್ಣಸಿಂಗ್ ಎಂಬುವನು ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ೪೩೬ ನೇ ಡೋರ್ ನಂಬರ್ ಮನೆಯು ತನ್ನ ಹಕ್ಕಿಗೆ ಒಳಪಟ್ಟದ್ದೆಂತಲೂ ವಗೈರೆ ಯಾರೂ ಖರೀದಿಗೆ ತೆಗೆದುಕೊಳ್ಳಕೂಡದೆಂತಲೂ ಪ್ರಕಟಿಸಿರುತ್ತಾನೆ ಈ ಕೃಷ್ಣಸಿಂಗಿಗೆ ಸದರಿ ಮನೆಯ ಮೇಲೆ ಲೇಶಮಾತ್ರವೂ ಹಕ್ಕು ಇರುವುದಿಲ್ಲ ಇವನ ಸ್ವಾಧೀನಾನುಭವದಲ್ಲಿ ಯಾವಾಗಲೂ ಇರಲಿಲ್ಲ ಈ ಮನೆಯನ್ನು ಮರದೂರ್ ರಂಗಾಚಾರ್ರೆಂಬುವರು ಮೈಸೂರು ಸಬ್ ಜಡ್ಜಿಯವರ ಕೋರ್ಟ್ ಬಹಿರಂಗವಾದ ಹರಾಜಿನಲ್ಲಿ ೧೮೮೭ ನೇ ಇಸವಿಯಲ್ಲಿ ಕ್ರಯಕ್ಕೆ ಪಡೆದು ಸೇಲ್ ಸರ್ಟಿಫಿಕೇಟ್ ಹೊಂದಿ ಸ್ವತ್ತು ಸ್ವಾಧೀನವಾದನಂತರ ಈ ಕೆಳಗೆ ರುಜು ಮಾಡುವ ಮಾದಮ್ಮನಿಗೆ ೧೨-೮ ೧೮೯೦ ರಲ್ಲಿ ಸದರೀ ರಂಗಾಚಾರ್ರು ಕ್ರಯಪತ್ರ ಬರೆದುಕೊಟ್ಟು ಇದನ್ನು ರಿಜಿಸ್ಟರ್ ಮಾಡಿಸಿ ಡಿಟೋ ಮನೆಯನ್ನು ಮಾದಮ್ಮನ ಸ್ವಾಧೀನ ಮಾಡಿದರು ಆ ಲಾಗಾಯತು ಕಹಲ್‌ವರೆಗೂ ಇದು ಈಕೆಯ ಅನುಭವದಲ್ಲಿದೆ ಈಚೆಗೆ ತನ್ನ ಇಷ್ಟಾನುಸಾರ ೩ ಜನಗಳಿಗೆ ಅಲಾಹಿದಾ ಆಧಾರಭೋಗ್ಯ ಸಹ ಮಾಡಿದಳು ಸದರೀ ಕೃಷ್ಣಸಿಂಗ್ ಎಂಬುವನ ಶುದ್ಧ ಸುಳ್ಳು ಬರವಣಿಗೆಗೆ ಯಾರೂ ಸಾಕಾರಣಬೇಕಾದ್ದಿಲ್ಲ ಇಷ್ಟವುಳ್ಳವರು ಸದರಿ ಮನೆಯನ್ನು ಮಾದಮ್ಮನಿಂದ ಖರೀದಿ ಬೆಲೆಗೆ ಕ್ರಯಕ್ಕೆ ಪಡೆಯಬಹುದು ಕ್ರಯದಾರರಿಗೆ ತೃಪ್ತಿಕರವಾದ ಮೂಲ ಪತ್ರಗಳನ್ನೂ ಮತ್ತು ಪೂರ್ವದ ಪತ್ರಗಳನ್ನೂ ದಾಖಲೆ ಬಗ್ಗೆ ಕೊಡಲ್ಪಡುತ್ತ

ಮೈಸೂರು, — ೦ ಈ ಬಳೆ ಗುರುತಿನ ರುಜು ಮಾದಮ್ಮ

೩೦-೮-೧೯೦೯ — ಹಾಕಿದ್ದಕ್ಕೆ ಅವಸರದ ತೋಟದ ಇಲಾಖೆಯಲ್ಲಿರುವ

ತಿಗಳರೈಯನ ಬರಹಾ

ಸಂಜೀವಿನೀ ಔಷಧಾಲಯ, ಮೈಸೂರು.

23 30

ಎಂ ಎಸ್ ಕುಮಾರಯ್ಯನವರ ದಿವ್ಯೌಷಧಗಳು

ಸಂಜೀವಿನೀ ತೈಲ —ವೆ ರಪೆ, ನರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ ರಕ್ತದೋಷ, ಚರ್ಮವ್ಯಾಧಿ, ಶೋಷಣ, ವಾಯುರೋಗಗಳೂ, ಹಳೇ ಜ್ವರ, ಕ್ಷತಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ನಂಪುಂಸತನ, ಉನ್ಮಾದ ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮಾಂಸಖಂಡ, ಬಲ ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಸಾಧನಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧ ... ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಗುಳಿಗೆ —ನಾನಾ ಬಗೇ ಜ್ವರಗಳು, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಪಾತರ್ಗ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨ ೩ ದಿವಸಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಬಾಲಕೋಟಿರಕ್ಷ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ದಬ್ಬಿ ೧ಕ್ಕೆ ೧೨ ಆಣೆ

ಸುಖಸೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ಕಣ್ಣಿನೋವು ನೀರುಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಸಾಮರ್ಥ್ಯವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೪ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳು, ತರಾವರಿ ಅತ್ತರುಗಳೂ, ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗಳನ್ನು ... ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION

6 35

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಮೀನುಮನುಷ್ಯ ಇರುವ

ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4 35

ಶೀತದ ಕೆಮ್ಮು, ಗಂಟಲು ಗೊರಗುಟ್ಟುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹು ಶ್ರೇಷ್ಠವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುತ್ತದೆ ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಜಾಗ್ರತೆಯಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಸ್ವಭಾವವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 31

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಮ ಬಟ್ಟೆಗಳು ನಾಜೂಕಾಗಿ ... ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ... ಗಳು ಕೋಲಾರದಲ್ಲಿ ತಯಾರಾದವುಗಳು ... ಸ್ವದೇಶಿ ಪ್ರಿಯರೇ, ಈ ಬಟ್ಟೆಗಳನ್ನು ... ಅಗ್ಗದ ... ಪ್ರತಿಯೊಬ್ಬನಿಗೆ ಗೋಚರವಾಗುವುದು ... ಒಂದಕ್ಕೆ ... ಆಣೆಯಿಂದ ... ಆಣೆ ವರಿವಿಗೂ ಚಿಲ್ಲರೆಯಾಗಿ ... ಆಗುತ್ತದೆ ... ಸಾಲುಗಳು ಹಸನದ ಟೋಪಿಗಳು ಮಾಸುಕಿನ ಟೋಪಿಗಳು ... ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ... ಕ್ಕೆ ಸಿಕ್ಕುತ್ತವೆ

ಸ್ವಾಸು—ಮ್ಯಾನೇಜರ್

ಬುಕ್ ಡಿಪೋ ಮೈಸೂರು

ಗೃಹಕೃತ್ಯದ ನೋಟೀಸು

೮೮ ೧

ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಆವನಿ ಸಮ್ಮತು ... ಕಾಚಂಗುತ್ತ ... ಇದಕ್ಕೆ ಮಜರೆ ರುವ ಪುರಚೋಡಿ ಕುರುಬರಹಳ್ಳಿ ... ಚೀರಿ ದೇವರ ... ವಗೈರೆ ಗ್ರಾಮಗಳ ... ಯುತ್ತಾದಾರ್ ... ಜಾಗೀರ್‌ದಾರ್ ಆದ ಸದರಿ ಹೊಸಗಾನಹಳ್ಳಿಯಲ್ಲಿರುವ ವೆಂಕಟಮ್ಮನವರ ಮಗ್ಗುಳವ ೧ ನೇ ವೆಂಕಟೇಶಯ್ಯ, ೨ ನೇ ರಾಮಸ್ವಾಮಿ ... ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ ಮೇಲ್ಕಂಡ ವೆಂಕಟಮ್ಮನವರ ೩ ನೇ ಮಗನಾದ ಕೃಷ್ಣಯ್ಯನೆಂಬುವನು ನಮ್ಮಗಳ ... ಅನಿಭಕ್ತ ಕುಟುಂಬದಲ್ಲಿ ಇದ್ದು ... ಅವನ ಸ್ವಸ್ಥದ ... ಗಳನ್ನೂ ವ ಕತ್ತು ... ತನ ... ಸ್ವತ್ತುಗಳನ್ನೂ ಕೂಡ ಅಂತರೆ ಮೇಲೆ ವಿವರಿಸುವ ಸ್ವತ್ತುಗಳನ್ನು ಕ್ರಯ ಭೋಗ್ಯ ... ವಗೈರೆ ಪರಬಾರೆ ಮಾಡತಕ್ಕವನಾಗಿ ಕಂಡುಬರುತ್ತದೆ ... ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ... ಮೇಲ್ಕಂಡ ಕೃಷ್ಣಯ್ಯನಿಂದ ಪಡೆದವರಿಗೆ ... ಸಲ್ಲಲಾರದೆಂದು ತಿಳಿಯಬೇಕು

ವೆಂಕಟೇಶಯ್ಯ ರಾಮಸ್ವಾಮಯ್ಯ

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾ —ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?' ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಮಲಬದ್ಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬದ್ಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ, ಪಿತ್ತಜ್ವರ ಅಜೀರ್ಣ, ಅಗ್ನಿಮಾಂದ್ಯ ಗಾಢರಿ ಅರುಚಿ ಎದೆಯು ಹಲ್ಲುಜಿನುಗುವುದು ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ತುಳಿಗೆಗಿನ ಹೊಟ್ಟೆ ... , ಚಂಗಿಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ಸೋಂಕನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [69 53]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎರಡರ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ೬ ಒ ಬಾಕ್ಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುದು

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಭಾದ್ರಪದ ಬಹುಳ ಬಿದಿಗೆ ಗುರುವಾರದಿಂದ ಭಾದ್ರಪದ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೆಂಗಿನ ಮಾಸ
2	ಗುರು	ಬಿದಿಗೆ	1 22	ಉಷರಿ	1 01	18
3	ಶುಕ್ರ	ತದಿಗೆ	45 11	ರೆ	21 19	19
4	ಶನಿ	ಪಂಚಮಿ	12 30	ಶ್ವಿ	1 29	20
5	ರವಿ ‡	ಷಷ್ಠಿ	16 45	ಭ	11 30	21
6	ಸೋಮ †	ಸಪ್ತಮಿ	32 13	ಕೃ	11 21	22
7	ಕುಜ *	ಅಷ್ಟಮಿ	29 15	ರೋ	11 2	23
8	ಬುಧ	ನವಮಿ	3 16	ಮೃ	9 10	24

ಮಹಾವ್ಯತೀಪಾತ, ಅನ್ವಷ್ಟಕಾಯೋಗ ಸಂಕಷ್ಟಹರ ಚತುರ್ಥಿ ಶ್ರಾವಣಪೂರ್ಣಿಮಾ

‡ ಪ್ರಸನ್ನ ಕೃಷ್ಣಾಷ್ಟಮಿ ರಥ

† ಶ್ರೀ ಕೃಷ್ಣಜಯಂತಿ

* ಶ್ರೀ ಕೃಷ್ಣಜಯಂತಿ, ಮಂಗಳಗೌರೀ ವ್ರತ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೦ ೦	೧೫ ೦ ೦
ಕೆಂಪು ಅಕ್ಕಿ ಅವಲ್		೧೪ ೬ ೦	೧೪ ೦ ೦
,, ದುಯ್ಯಂ		[illegible]	೧೩ ೬ ೦
ಜಾವಗೆ ಅಕ್ಕಿ		೧೨	೧೫ ೧೨ ೦
ಸಣ್ಣಕ್ಕಿ ಅವಲ್		೧೭	೧೬ ೮ ೦
,, ದುಯ್ಯಂ		೧೬ ೧ ೦	೧೬ ೦ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೫ ೦ ೦
,, ದುಯ್ಯಂ		೧೫ ೦ ೦	೧೪ ೮ ೦
ಹೈದರ್ ರಾಗಿ ಪಲ್ಲ ೧ಕ್ಕೆ		೯ ೦ ೦	೯ ೦ ೦
ಕಾರ್ರಾಗಿ		೮ ೮ ೦	೮ ೮ ೦
ಜೋಳ		೯ ೪ ೦	೯ ೦ ೦
ಹಲಸಂದೆ ಪಲ್ಲ ೧ಕ್ಕೆ		೧೨ ೦ ೦	೧೧ ೮ ೦
ಬಿಳೀ ಅವರೆ		೧೨ ೮ ೦	೧೪ ೮-೦
ಹೆಸರು		೧೩ ೦-೦	೧೩ ೦ ೦
ಉದ್ದು		೧೪ ೪ ೦	೧೩ ೮ ೦
ಕಡಲೆ		೧೪ ೪ ೦	೧೧ ೦ ೦
ಎಳ್ಳು ಸೇ ೧೭೭ ಕ್ಕೆ		೧೭ ೦ ೦	೧೫ ೦ ೦
ಹುರುಳಿ		೧೦ ೨ ೦	೧೦ ೧೨ ೦
ಹರಳು ೧೨೭ ಸೇರಿಗೆ		೧೪ ೦-೦	೧೦ ೮-೦
ಸೀಗೇಕಾಯಿ ಮಣ ೧ಕ್ಕೆ		೨ ೬ ೦	೨ ೪ ೦
ಮೆಣಸಿನಕಾಯಿ		೬ ೦ ೦	೪-೮-೦
,, ದುಯ್ಯಂ		೫ ೮ ೦	೪ ೦ ೦
ಬೆಲ್ಲ ದೊಡ್ಡ ಅಚ್ಚು		೯ ೮ ೦	ಮ ೨-೪-೦
ಒಳ್ಳೆಣ್ಣೆ ಮಣ ೧ಕ್ಕೆ		೫-೭ ೦	೫ ೪ ೦
ಹರಳೆಣ್ಣೆ ,,		೫ ೮	೪-೪ ೦
ಕೊತ್ತುಂಬರಿ ಪಲ್ಲ ೧ಕ್ಕೆ		೯ ೦ ೦	೯ ೦ ೦
ಉಪ್ಪು ,,		೬ ೧೨ ೦	೫ ೧೨ ೦
ಹುಣಸೇ ಹಣ್ಣು		೧ ೧೨ ೦	೧-೧೨-೦
,, ಹಳೇದು		೧ ೮ ೦	೧ ೮ ೦
ತುಪ್ಪ ಮಣ ೧ಕ್ಕೆ		೧೬ ೭ ೦	೧೩-೦ ೦
ಬೇವಿನೆಣ್ಣೆ ಪೆಟ್ಟಿ ೧ಕ್ಕೆ		೪ ೪ ೦	೪-೨ ೦
ತೆಂಗಿನಕಾಯಿ ೧೦೦ ಕ್ಕೆ		೩ ೦-೦	೪ ೧೨-೦
ಅಡಕೇಕಾಯಿ ಮಣ ೧ಕ್ಕೆ		೦ ೮ ೦	೦ ೧೨ ೦
ಅಂಟುವಾಳದ ಕಾಯಿ ಮಣ ೧ಕ್ಕೆ		೧ ೦-೦	೦-೧೧-೦
ಚಿನ್ನ (ಪೌನ್) ಕೆಂಪು		೧೫ ೬-೦	೧೫ ೮-೦
,, ,, ಪಸಿಮೆ		೧೬-೦ ೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ		೨೪-೮ ೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪-೦	೬೫-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—8—1909 ರಿಂದ 13—8—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	0	0	0
ಮೈಸೂರು ,,	18	17	0	0
ಬೆಂಗಳೂರು ಡಿಸ್ಟ್ರಿಕ್ಟ್	10	5	0	0
ಮೈಸೂರು ,,	50	40	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	1	4	0	0
ಚಿತ್ರದುರ್ಗ ,,	0	0	0	0
ಕಡೂರ್ ,,	23	17	0	0
ಶಿವಮೊಗ್ಗ ,,	6	4	12	9
ಜುಮ್ಲಾ	144	107	12	9

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಆಗಸ್ಟ್ ತಾ 21 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ.	ಧರ್ಮಸಹಾಯ ಪಡೆದ ಜನರು
ಬೆಂಗಳೂರು	56	[illegible]		76	
ಕೋಲಾರ	153	[illegible]	56	1,025	
ತುಂಕೂರು	167	[illegible]7	37	247	
ಮೈಸೂರು					
ಹಾಸನ	170	[illegible]	40	571	
ಶಿವಮೊಗ್ಗ				..	
ಕಡೂರು				.	
ಚಿತ್ರದುರ್ಗ	127	[illegible]	13	348	
ದಾವಣಗೆರೆ	472	[illegible]	[illegible]	919	
ಸಾಗರ				.	
ಒಟ್ಟು	1,315	1,[illegible]	1[illegible]	3,186	

ಕುರುಡಳೂ, ಕಿವುಡಳೂ ಮತ್ತು ಮೂಕಳೂ ಆದ ಹೆಲೆನ್ ಕೆಲರ್ ಎಂಬ ವಿದ್ಯಾರ್ಥಿನಿಯ ಚರಿತ್ರೆ.

[ಕಳೆದ ವಾರದ ಶೇಷ]

ಮೇಸೂಕಿ ಸ್ಸ ವರೆಗೆ ಆ ಪತ್ತು ಎ ನ ಊರಿನ ಮರಣವನ್ನು ಕೇಳಿದಾಗ ಅವಳು ಬಹಳವಾಗಿ ... ಮನ ... ಆ ... ತನ್ನ ಸತ್ತು ... ಕ್ಕೆಗೆ ... ಕೂ ಸಾ ಸಾಗಿ ... ಎಲ್ಲವನ್ನು ಉಂಟುಮಾಡಿದವನು ... ಎಂದು ಅವಳಿಗೆ ತಿಳಿಯಪಡಿಸಲು ... ದೇವರಿಲ್ಲದವರು ... ಪ್ರಪಂಚವನ್ನು ದೇವರು ಮೊದಲು ಏತರಲ್ಲಿ ಉಂಟುಮಾಡಿದನು ? ಆ ಮಣ್ಣು, ನೀರೂ, ಬೀಜಗಳೂ, ಮೊದಲಾದ ಪದಾರ್ಥಗಳೂ, ಆತನಿಗೆ ಎಲ್ಲಿ ದೊರಕಿದವು ... ಎಲ್ಲಿದ್ದಾನೆ ? ನೀವು ... ಗಾದರೂ ದೇವರನ್ನು ಕಂಡಿದ್ದೀರೋ ... ಎಂದು ಪ್ರಶ್ನೆ ಮಾಡಿದಳು ... ಮೊದಲಾದ ದೊಡ್ಡ ಪ್ರಶ್ನೆಗಳನ್ನು ಕೇಳಿದಾಗ ... ಗಳೂ ಕೂಡಾ ವಿವರಿಸಲಾರದಂಥ ವಿಷಯಗಳು ಅನೇಕವುಂಟು ... ಅವಳಿಗೆ ತಿಳಿಸಬೇಕಾಗಿ ಬಂತು.

ಮನಸ್ಸಿಗೆ ತಿಳುವಳಿಕೆಯು ಉಂಟಾದಾಗಿನಿಂದ ಅವಳು, ಇದು ಒಳ್ಳೆಯದು, ಇದು ಕೆಟ್ಟದ್ದು ಎಂದು ಧರ್ಮಾಧರ್ಮವನ್ನು ತಿಳಿದುಕೊಂಡು ಕೆಡಕುಗಳಲ್ಲಿ ಬಹಳ ಅಸಹ್ಯಪಟ್ಟು, ತಾನು ಒಳ್ಳೆಯವಳಾಗಬೇಕೆಂದು ದೃಢವಾದ ಮನಸ್ಸುಳ್ಳವಳಾದಳು. ಅವಳ ಸ್ವಭಾವವಾದರೋ ಬಹಳ ಹಟವುಳ್ಳದ್ದಾಗಿಯೂ ಕೋಪವುಳ್ಳದ್ದಾಗಿಯೂ ಇತ್ತೆಂದು ಮುಂಚೆ ಓದಿದ್ದೇವೆ. ಇದಲ್ಲದೆ ಬೈಬಲೆಂಬ ಸತ್ಯವೇದ ಪುಸ್ತಕವನ್ನು ಮೊದಲು ಓದಿದಾಗ ಅದನ್ನು ಗ್ರಹಿಸಿಕೊಳ್ಳದೆ ಅಲಕ್ಷ್ಯ ಮಾಡಿದಳು. ಆದರೆ ಅದರ ಶ್ರೇಷ್ಠವಾದ ಬೋಧನೆಯನ್ನು ಕ್ರಮೇಣ ತಿಳಿದುಕೊಂಡು ಕಡೆಗೆ ಅದರ ವಿಷಯದಲ್ಲಿ ಹೇಳಿದ್ದೇನಂದರೆ— "ಈಚೆಗೆ ಬೈಬಲಿನಲ್ಲಿ ನನಗೆ ಕಂಡುಬಂದಿರುವಂಥ ಲಕ್ಷಣಗಳನ್ನು ನಾನು ಏನೆಂದು ಹೇಳಲಿ ? ಬಹು ಕಾಲದಿಂದ ಅದನ್ನು ಓದುತ್ತಿರುವುದರಿಂದ ನನಗೆ ಆನಂದವೂ ದೇವರ ಪ್ರೀತಿಯೂ ಹೆಚ್ಚುತ್ತಾ ಬಂದವು. ನನಗೆ ಇದರಲ್ಲಿರುವ ಪ್ರೀತಿಯು ಇನ್ನಾವ ಪುಸ್ತಕದಲ್ಲಿಯೂ ಇಲ್ಲ. ದೃಶ್ಯವಾದದ್ದು ಕ್ಷಣಿಕವು, ಅದೃಶ್ಯವಾದದ್ದು ಶಾಶ್ವತವು ಎಂಬ ನಂಬಿಕೆಯನ್ನು ನನ್ನಲ್ಲಿ ಉಂಟುಮಾಡಿ ಅದು ನನಗೆ ಸ್ಥಿರವಾದ ಆನಂದಕ್ಕೆ ಕಾರಣವಾಗಿದೆ" ಎಂಬುವುದು. ದೇವರ ವಾಕ್ಯದ ಮೇಲೆ ಅವಳಿಗೆ ಇಷ್ಟು ಪ್ರೀತಿಯು ಹುಟ್ಟಿರುವುದೂ, ಮತ್ತು ಕೋಪ ಹಟಗಳುಳ್ಳ ಅವಳ ಸ್ವಭಾವವು ಇಷ್ಟರ ಮಟ್ಟಿಗೆ ಬದಲಾವಣೆಯಾಗಿ ಸಾಧುವಾಗುವುದೂ ದೇವರ ಕೃಪೆಯಿಂದಲೇ ಹೊರತು ಇನ್ನಾವರಿಂದಲೂ ಆಗಿರಲಾರದು.

ಘನತೋಂದಿದ ಬಿಷಪ್ ಬ್ರೂಕ್ಸ್ ಎಂಬಾತನು ಅವಳಿಗೆ ಪ್ರಿಯವಾದ ಬೋಧಕನಾಗಿದ್ದನು. ಎಳೇ ಪ್ರಾಯದಲ್ಲಿ ತಾನು ಆತನ ತೊಡೆಯ ಮೇಲೆ ಕೊತುಕೊಂಡು ಪ್ರೀತಿಯಿಂದ ಆತನ ಕೈಹಿಡಿಯುಲು ಮಿಸ್ ಸಲಿವನಳ ಮೂಲಕ ದೇವರೇ ಮೊದಲಾದ ಆತ್ಮೀಯ ವಿಷಯಗಳಲ್ಲಿ ಆತನು ಮಾತನಾಡಿದ್ದನ್ನು ಕೇಳುವುದಕ್ಕೆ ಅವಳಿಗೆ ಬಹಳ ಇಷ್ಟವಾಗಿತ್ತು. ಒಂದಾನೊಂದು ದಿವಸ ಅನೇಕ ಮತಗಳುಂಟೆಂದು ತಿಳಿದುಕೊಂಡು ಅವಳಿಗೆ ಬಹಳ ಸಂಶಯವುಂಟಾದಾಗ, ಆತನು— "ಹೆಲೆನಳೇ, ಒಂದೇ ಒಂದು ಮತವು ಸರ್ವರಿಗೂ ಸಾಮಾನ್ಯವಾಗಿದೆ, ಅದು ಯಾವುದೆಂದರೆ ಪ್ರೀತಿಯು. ಪರಲೋಕದಲ್ಲಿರುವ ನಿನ್ನ ತಂದೆಯನ್ನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಆತ್ಮದಿಂದಲೂ ಪ್ರೀತಿಸು ; ದೇವರ ಮಕ್ಕಳಲ್ಲಿ ಪ್ರತಿಯೊಬ್ಬನನ್ನು ನಿನ್ನ ಕೈಲಾಗುವ ಮಟ್ಟಿಗೆ ಪ್ರೀತಿಸು ; ನ್ಯಾಯವು ಯಾವಾಗ್ಯೂ ಅನ್ಯಾಯಕ್ಕಿಂತ ದೊಡ್ಡದು ಎಂದು ಜ್ಞಾಪಿಸಿಕೋ, ಇದರಲ್ಲಿ ನಿನಗೆ ಪರಲೋಕದ ಮಾರ್ಗವು ದೊರೆಯುವುದು" ಎಂದು ಹೇಳಿದನು.

ಆತನ ವಿಷಯದಲ್ಲಿ ಅವಳು— "ಬಿಷಪ್ ಬ್ರೂಕ್ಸ್‌ರವರು ನನಗೆ ವಿಶೇಷವಾದ ಸೂತ್ರಗಳನ್ನೂ ಸಿದ್ಧಾಂತಗಳನ್ನೂ ಹೇಳಿಕೊಡದೆ, ದೇವರು ಸರ್ವರಿಗೂ ತಂದೆಯು, ಮತ್ತು ಮನುಷ್ಯರೆಲ್ಲರು ಒಬ್ಬರಿಗೊಬ್ಬರು ಸಹೋದರರು ಎಂಬೀ ಎರಡು ಮುಖ್ಯಾಭಿಪ್ರಾಯಗಳನ್ನು ತಿಳಿಸಿ, ಎಲ್ಲಾ ತರದ ಮತಗಳಿಗೂ ಆರಾಧನೆಗಳಿಗೂ ಇವೆರಡೇ ಆಧಾರವೆಂದು ತಿಳಿಯುವಂತೆ ಮಾಡಿದರು. ದೇವರು ಪ್ರೀತಿಸ್ವರೂಪನು ; ದೇವರು ನಮ್ಮ ತಂದೆಯು, ನಾವು ಆತನ ಮಕ್ಕಳು, ಕೇಡೆಂಬ ಮೋಡಗಳು ಎಷ್ಟು ಕಪ್ಪಗೆ ಆವರಿಸಿಕೊಂಡರೂ ಅವು ಚದರಿ ಹೋಗುವವು, ಮತ್ತು ಪ್ರಕೃತದಲ್ಲಿ ನ್ಯಾಯಕ್ಕೆ ವಿಘ್ನಬಂದರೂ ಅನ್ಯಾಯವು ಎಂದಿಗೂ ಸಂಪೂರ್ಣವಾಗಿ ಜಯಿಸಲಾರದು" ಎಂದು ಹೇಳುತ್ತಾಳೆ.

ಹೀಗೆ ತನ್ನನ್ನು ಆವರಿಸಿಕೊಂಡಿದ್ದಂಥ ಅಂಧಕಾರವು ಕಳೆದುಹೋಗಿ, ತನ್ನ ಕಣ್ಣಿಗೆ ದೃಷ್ಟಿ ಇಲ್ಲದೆ ಇದ್ದರೂ ತನ್ನ ಮನೋಭಾವದಲ್ಲಿ ಪ್ರಕಾಶಿಸುವಂಥ ಜ್ಞಾನವೆಂಬ ಬೆಳಕಿನಲ್ಲಿ ಆನಂದ ಪಡುವವಳಾಗಿದ್ದಾಳೆ. ಈ ಆನಂದವು ಮತ್ತು ಅವಳ ಅತ್ಯುತ್ತಮವಾದ ಮನೋಭಿಪ್ರಾಯಗಳು ಅವಳು ಬರೆದಿರುವ ಕಾಗದಗಳಿಂದ ಗೊತ್ತಾಗಿವೆ. ಅವುಗಳಲ್ಲಿ ಒಂದೆರಡು ಮಾತ್ರ ಇಲ್ಲಿ ಬರೆಯುತ್ತೇವೆ.

ಮಿಸ್ ಸಲಿವನಳ ವಿಷಯವಾಗಿ ಅವಳು ಬರೆಯುವುದೇನೆಂದರೆ— "ನನ್ನ ಉಪಾಧ್ಯಾಯಳಿಗೂ ನನಗೂ ಇರುವ ಅನ್ಯೋನ್ಯತೆಯು ಎಷ್ಟರ ಮಟ್ಟಿಗಿದೆ ಅಂದರೆ ಅವಳಿಲ್ಲದೆ ನನ್ನನ್ನು ಕುರಿತು ಒಂದು ನಿಮಿಷವಾದರೂ ಯೋಚಿಸಲಾರೆನು. ಸೌಂದರ್ಯವಾದವುಗಳೆಲ್ಲವುಗಳಲ್ಲಿ ನನಗೆ ಉತ್ಸಾಹವುಂಟು. ಆದರೆ ಆ ಉತ್ಸಾಹವು ಎಷ್ಟರ ಮಟ್ಟಿಗೆ ನನ್ನಲ್ಲಿ ಸ್ವಭಾವವಾಗಿ ಉಂಟಾಯಿತೋ, ಎಷ್ಟರ ಮಟ್ಟಿಗೆ ನನ್ನ ಉಪಾಧ್ಯಾಯಳಿಂದ ಉಂಟಾಯಿತೋ, ಅದನ್ನು ನಾನು ಎಂದಿಗೂ ಹೇಳಲಾರೆನು. ಆಕೆಯು ಜೀವಮಾನದ ಹೆಜ್ಜೆಯ ಗುರುತಿನ ಮೇಲೆ ನನ್ನ ಪಾದವು ಸರಿಯಾಗಿ ಊರುವಂತೆ ಆಕೆಯ ಇರುವಿಕೆಯೂ ನನ್ನ ಇರುವಿಕೆಯೂ ಒಂದಾಗಿವೆ ಎಂದು ಭಾವಿಸುತ್ತೇನೆ. ನನ್ನಲ್ಲಿರತಕ್ಕ ಸಾಮರ್ಥ್ಯವಾಗಲಿ, ಆಶೆಯಾಗಲಿ, ಆನಂದವಾಗಲಿ, ಯಾವುದೇ ಆಗಲಿ, ಆಕೆಯ ಸ್ಪರ್ಶದಿಂದ ಉಂಟಾದದ್ದೇ ಹೊರತು ನನ್ನಲ್ಲಿ ಉಂಟಾಗಲಿಲ್ಲ" ಎಂಬುವುದೇ.

ಒಂಬತ್ತು ವರುಷಗಳವಳಾಗ ವ್ಹಿಟ್ಟಿಯರ್ ಎಂಬ ಪ್ರಸಿದ್ಧವಾದ ಕವಿಗೆ ಅವಳು ಬರೆದದ್ದೇನೆಂದರೆ— "ಪರಿಚಯವಿಲ್ಲದ ಒಬ್ಬ ಸಣ್ಣ ಹುಡುಗಿಯಿಂದ ನೀವು ಒಂದು ಕಾಗದವನ್ನು ಹೊಂದುವುದು ನಿಮಗೆ ಆಶ್ಚರ್ಯವನ್ನುಂಟುಮಾಡಬಹುದು. ಆದಾಗ್ಯೂ ನಿಮ್ಮ ಸೊಗಸಾದ ಕಾವ್ಯಗಳು ನನಗೆ ಬಹಳ ಆನಂದವನ್ನುಂಟುಮಾಡುತ್ತವೆಂದು ನಾನು ಹೇಳುವುದನ್ನು ನೀವು ಕೇಳಿ ಸಂತೋಷಪಡುವಿರೆಂದು ನಂಬುತ್ತೇನೆ . ಬಹಳ ಚೆಲುವಾದ ಈ ಲೋಕದಲ್ಲಿ ಬದುಕುತ್ತಿರುವ ಕೇವಲ ಚಿತ್ತಾಕರ್ಷವಾಗಿರುವ ಮನೋಹರವಾದ ವಸ್ತುಗಳನ್ನು ನಾನು ಕಣ್ಣಿನಿಂದ ನೋಡಲಾರೆನು. ಆದಾಗ್ಯೂ ಮನಸ್ಸಿನಲ್ಲಿ ಅವುಗಳೆಲ್ಲವನ್ನು ತಿಳಿದುಕೊಳ್ಳುವೆನು. ಆದದರಿಂದ ನಾನು ಯಾವಾಗಲೂ ಸಂತೋಷವುಳ್ಳವಳಾಗಿರುತ್ತೇನೆ. ಹೂಗಳನ್ನೂ ಪಕ್ಷಿಗಳನ್ನೂ ಜನಗಳನ್ನೂ ಕುರಿತು ನೀವು ನನಗೆ ಅನೇಕ ಉತ್ಕೃಷ್ಟವಾದ ವಿಷಯಗಳನ್ನು ತಿಳಿಸಿರುವುದರಿಂದ ನಿಮ್ಮಲ್ಲಿ ನನಗೆ ಬಹಳವಾದ ಪ್ರೀತಿಯುಂಟು" ಎಂಬುವುದು.

ಹನ್ನೊಂದು ವರುಷಗಳಾಗಿದ್ದಾಗ ಅವಳು ಬಿಷಪ್ ಬ್ರೂಕ್ಸ್‌ರಿಗೆ ಬರೆದದ್ದೇನೆಂದರೆ— "ನಾನು ಪರ್ವತಗಳನ್ನು ಹೇಗೆ ಕೈಯಿಂದ ಮುಟ್ಟಿ ನೋಡುವೆನೋ, ಆ ರೀತಿಯಲ್ಲಿ ಚಿತ್ರಪಟಗಳನ್ನು ನೋಡಬೇಕೆಂದು ಮೊದಲು ಬಹಳ ಇಷ್ಟಪಡುತ್ತಿದ್ದೆನು. ಆದರೆ ಈಗ ನಾನು ಹಾಗೆ ಯೋಚಿಸುವುದಿಲ್ಲ. ಏಕೆಂದರೆ ನಾನು ನೋಡಲಾರದಂಥ ಇತರ ವಸ್ತುಗಳುಳ್ಳ ಸೊಗಸಾದ ಚಿತ್ರಪಟಗಳಿಂದ ನನ್ನ ಪ್ರಿಯ ತಂದೆಯಾದ ದೇವರು ನನ್ನ ಮನಸ್ಸನ್ನು ತುಂಬಿಸಿದ್ದಾನೆ" ಎಂಬುವುದೇ.

ಹದಿನೊಂಬತ್ತನೆಯ ವಯಸ್ಸಿನಲ್ಲಿ ಅವಳು— "ನನ್ನ ಜೀವನದಲ್ಲಿ ಅನೇಕರಿಗೆ ಸುಖವೇ ಇಲ್ಲವೆಂದು ಯೋಚಿಸದೆ ನನಗೆ ಎಷ್ಟು ಮಟ್ಟಿಗೆ ಸುಖಪಡಬೇಕೆಂದು ಅಪೇಕ್ಷಿಸುತ್ತಿದ್ದ ನನ್ನ ಸ್ವಾರ್ಥ ಬುದ್ಧಿಯು ಎಷ್ಟೆಂದು ಈಗ ನನಗೆ ತಿಳಿದು ಬಂದಿದೆ. ನನ್ನಲ್ಲಿದ್ದ ಈ ಅಲಕ್ಷ್ಯಕ್ಕೆ ಬಹಳವಾಗಿ ನಾಚಿಕೆ ಪಡುತ್ತೇನೆ. ನಮ್ಮ ಕೋರಿಕೆಗಳನ್ನು ಇತರರಿಗೆ ತಿಳಿಯಪಡಿಸುವ ಮಾತ್ರದಿಂದಲೇ ಆ ಕೋರಿಕೆಗಳು ನೆರವೇರುವವೆಂದು ನನ್ನ ಬಾಲ್ಯದಲ್ಲಿ ದುರಭಿಪ್ರಾಯಪಟ್ಟಿದ್ದೆನು. ಈ ದುರಭಿಪ್ರಾಯವನ್ನು ತ್ಯಜಿಸಲು ಬಹಳ ಕಷ್ಟವಾಗಿತ್ತು" ಎಂದು ಬರೆಯುತ್ತಾಳೆ.

ಈ ಹೆಲೆನ್ ಕೆಲರ್ ಎಂಬವಳ ಚರಿತ್ರೆಯಿಂದ ಅಸಾಧ್ಯವಾದ ಕಾರ್ಯಗಳನ್ನಾದರೂ ಧೈರ್ಯ ಸ್ಥೈರ್ಯಗಳಿಂದ ಸಾಧಿಸಬಹುದೆಂದು ಕಾಣಬರುತ್ತದೆ. ಕಣ್ಣು ಕಿವಿ ಮಾತು ಈ ಮೂರು ಶಕ್ತಿಗಳು ಇಲ್ಲದೆ ಇರುವ ಪಕ್ಷದಲ್ಲಿ ಸ್ವಲ್ಪವಾದರೂ ವಿದ್ಯೆ ಕಲಿಯಕೊಳ್ಳುವುದು ಅಸಾಧ್ಯವೆಂದು ಕಾಣುತ್ತದೆ. ಆದರೆ ಈ ಕೊರತೆಗಳ ವಿಷಯದಲ್ಲಿ ವ್ಯಸನಪಡದೆ ತನ್ನಲ್ಲಿದ್ದ ಆಶ್ಚರ್ಯವಾದ ಜ್ಞಾಪಕವೂ, ಚುರುಕಾದ ತಿಳುವಳಿಕೆಯೂ, ಹೆಚ್ಚಿನ ಧೈರ್ಯವೂ, ದೃಢವಾದ ಮನಸ್ಸು, ಇವೇ ಮುಂತಾದ ಶಕ್ತಿಗಳನ್ನು ಸಾಧಿಸುವುದರಿಂದ ಇಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿ ಸುಖ ಸಂತೋಷವುಳ್ಳವಳಾಗಿದ್ದಾಳೆ. ಈ ವಿಷಯದಲ್ಲಿ ವಿದ್ಯಾರ್ಥಿನಿಯು ಪ್ರಿಯ ಸತ್ಯಂತ ಉಪಾಧ್ಯಾಯಳ ಶ್ರಮ ಸಫಲವಾಗದೆ ಹೋಗಲಿಲ್ಲ. ಅವರಿಬ್ಬರನ್ನು ಶ್ಲಾಘಿಸಿ, ಅವರಿಬ್ಬರ ವಿಷಯದಲ್ಲೂ ದೇವರನ್ನು ಸ್ತೋತ್ರಮಾಡಿ ನಾವೂ ಸಹ ಧೈರ್ಯಗೊಂಡು ಆತನ ದಿವ್ಯ ಸಹಾಯದಿಂದ ನಮ್ಮ ನಮ್ಮ ಕೆಲಸಗಳನ್ನು ಸಾಧಿಸಿಕೊಳ್ಳೋಣ.

ಸಮಾಪ್ತಿ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಮೆ॥ ಕೆ ಟಾಂಡಿಯವರು ಪ್ರೆಸಿಡೆಂಟರಾಗಿದ್ದರು. ಮ್ಯುನಿಸಿಪಾಲಿಟಿಯ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿದರು. ಕಳೆದ ಜೂಲೈ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೧೨,೭೨೫—೯—೫ ಪೈ ಜಮಾ ಆಯಿತೆಂದೂ, ರೂ ೮,೩೧೧—೧—೦ ಖರ್ಚಾಯಿತೆಂದೂ ತಿಳಿಯಿತು. ಆ ತಿಂಗಳಲ್ಲಿ ಜನನ ೧೦೬, ಮರಣ— ಪ್ಲೇಗ್ ೪೦, ಸಿಡುಬು ೩೦, ಜ್ವರ ೨೧, ಇತರ ಕಾರಣಗಳು ೧೮೫, ಅಂತು ೨೭೬ ಮರಣಗಳಾದವು.

ಮ್ಯುನಿಸಿಪಲ್ ಲೆಕ್ಕಗಳನ್ನು ಆಜಮಾಯಿಷಿ ಮಾಡಿದ ಆಡಿಟರವರು— ಮನೆಗಳ ಹಿತ್ತಲನ್ನು ಗುಡಿಸುವುದಕ್ಕೆ ಹಾಕಿರುವ ತೆರಿಗೆಯು ಬಹಳ ತೃಪ್ತಿಕರವಾಗಿ ವಸೂಲಾಗುತ್ತಲಿಲ್ಲವೆಂದೂ, ಮೊಹತರ್ಫಾ ಕಂದಾಯದ ವಸೂಲಾತಿಗೆ ಹೆಚ್ಚು ಸಿಬ್ಬಂದಿ ನೇಮಕವಾಗಿದ್ದರೂ ಕಂದಾಯವು ಬಹಳ ಬಾಕಿ ಉಳಿದಿದೆ ಎಂದೂ, ರಾಜಧಾನಿಯಲ್ಲಿ ನಡೆಯುವ ಉತ್ಸವಗಳ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಶೃಂಗಾರಾದಿ ಕೆಲಸಗಳನ್ನು ಕಂಟ್ರಾಕ್ಟು ಕೊಟ್ಟು ಮಾಡಿಸುವುದು ಉತ್ತಮವೆಂದೂ ಸೂಚಿಸಿದರು.

ಆಡಿಟರ್ ಕೆಲಸಕ್ಕೂ, ಹೆಲ್ತ್ ಕಮಿಟಿಗೂ, ಸ್ಕೂಲ್ ಕಮಿಟಿಗೂ, ಮ್ಯಾನೇಜಿಂಗ್ ಕಮಿಟಿಗೂ ಹೊಸದಾಗಿ ಕೌನ್ಸಲರುಗಳು ನೇಮಿಸಲ್ಪಟ್ಟರು.

ಲಕ್ಷ್ಮೀವಿಲಾಸ್ ಅಗ್ರಹಾರದ ಮನೆಗಳವರು ತಮ್ಮ ಮನೆಗಳ ಮುಂಭಾಗದಲ್ಲಿ ಇರುವ ತಮ್ಮ ಖಾಲಿ ನಿವೇಶನಗಳಿಗೆ ಮ್ಯುನಿಸಿಪಾಲಿಟಿಯವರು ಒಪ್ಪುವ ರೀತಿ ಗೋಡೆಗಳನ್ನು ಕಟ್ಟಿಸಿಕೊಳ್ಳುವುದಾಗಿಯೂ, ಇದಕ್ಕೆ ಮ್ಯುನಿಸಿಪಾಲಿಟಿಯವರು ತಮಗೆ ಅವಕಾಶ ಮಾಡಿಕೊಡಬೇಕೆಂತಲೂ ಅರ್ಜಿ ಬರೆದು ಕೇಳಿಕೊಂಡಿದ್ದರು. ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಬೇಕಾಗಿರುವುದರಿಂದ ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸೋಣವೆಂದು ಮೆಂಬರುಗಳು ಅಭಿಪ್ರಾಯಪಟ್ಟರು.

ಚಟ್ನಹಳ್ಳಿ ರೋಡ್ ಬಡಾವಣೆಯಲ್ಲಿ ಹಾಕಿರುವ ನೀರಿನ ದೊಡ್ಡ ನಲ್ಲಿಯನ್ನು ಅಲ್ಲಿಂದ ಮುಂದಕ್ಕೂ ಬಡಾಯಿಸಿ ಹಾಕುವದಕ್ಕೆ ೧,೧೦೦ ರೂಪಾಯಿ ಖರ್ಚುಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದರು. ಮೆಂಬರುಗಳು ಈ ಹುಕುಮನ್ನು ಓದಿಸಿ ರಿಕಾರ್ಡು ಮಾಡಿಕೊಂಡರು.

ಸಿಡುಬಿನ ಉಪದ್ರವು ರಾಜಧಾನಿಯಲ್ಲಿ ಹೆಚ್ಚಿದ್ದಾಗ ಮ್ಯುನಿಸಿಪಾಲಿಟಿಯವರು ಪ್ರಜೆಗಳ ಮಕ್ಕಳಿಗೆ ಟೀಕಾ ಸಿಡುಬು ಹಾಕುವುದಕ್ಕೆ ಹಂಗಾಮಿಯಾಗಿ ಇಬ್ಬರು ನೌಕರರನ್ನು ನೇಮಕಮಾಡಿದ್ದರು. ಇವರಿಬ್ಬರನ್ನೂ ಇನ್ನೂ ಕೆಲವು ದಿನ ಇಟ್ಟುಕೊಂಡಿರಬೇಕೆಂದು ಹೆಲ್ತ್ ಆಫೀಸರವರು ಕೇಳಿದರು. ಈಗ ಪಟ್ಟಣದಲ್ಲಿ ಸಿಡುಬಿನ ಉಪದ್ರವು ಕಡಮೆಯಾಗಿರುವುದರಿಂದಲೂ, ಪ್ರಜೆಗಳ ಮಕ್ಕಳಿಗೆ ಸಿಡುಬು ಹಾಕುವುದು ತುಂಬಾ ಕೊಂಚವಾದದ್ದರಿಂದಲೂ ಹೆಲ್ತ್ ಕಮಿಟಿಯವರ ಅಭಿಪ್ರಾಯವನ್ನು ಪಡೆದು ಆ ನೌಕರರನ್ನು ವಜಾಮಾಡಬಹುದೆಂದು ಮೆಂಬರುಗಳು ತೀರ್ಮಾನ ಮಾಡಿದರು.

ರಾಜಧಾನಿಯಲ್ಲಿ ೨೦ ರೂಪಾಯಿಗಿಂತ ಹೆಚ್ಚು ತೆರಿಗೆ ಕೊಡುವಂಥಾ ಮನೆಗಳಿಗೆ ಅಂದರೆ ಸುಮಾರು ೩೭ ಮನೆಗಳಿಗೆ ನೀರನ್ನು ಅಳೆಯುವ ಮೀಟರುಗಳನ್ನು ಇಡುವಂತೆ ಗೊತ್ತುಮಾಡಿದೆ ಎಂದು ಇಂಜನಿಯರವರು ಬರೆದಿದ್ದರು. ಕೌನ್ಸಲರುಗಳು ಈ ನೀರಿನ ಇಲಾಖೆಯ ವಿಚಾರವನ್ನೆಲ್ಲಾ ಸರಿಯಾಗಿ ಪರಿಶೀಲಿಸಿ ತೀರ್ಮಾನ ಮಾಡುವದಕ್ಕೆ ಒಂದು ಕಮಿಟಿ ಏರ್ಪಾಡಾಗಬೇಕೆಂದೂ, ಈ ಕಮಿಟಿಗೆ ಗವರ್ನ್‌ಮೆಂಟ್ ಸೆಕ್ರೆಟರಿ ಆಫೀಸಿನವರೊಬ್ಬರು, ಒಬ್ಬ ಇಂಜನಿಯರು, ಮ್ಯುನಿಸಿಪಲ್ ಪ್ರೆಸಿಡೆಂಟರು, ಮೆ॥ ವೆಂಕಟಕೃಷ್ಣಯ್ಯನವರು, ಮೆ॥ ಎಂ ಸಿ ರಂಗೈಯಂಗಾರ್ರು ಮೆಂಬರುಗಳಾಗಿರಬೇಕೆಂದೂ ತೀರ್ಮಾನ ಮಾಡಿದ್ದಾರೆ.

ದಿನಸಿ ಧಾರಣೆಯು ಇನ್ನೂ ತಗ್ಗಾಗಿರುವುದರಿಂದ ಮ್ಯುನಿಸಿಪಾಲಿಟಿಯ ಸಣ್ಣ ನೌಕರರಿಗೆ ಮಾತ್ರ ತಿಂಗಳು ಸಂಬಳದ ಜೊತೆಗೆ ಧಾನ್ಯದ ಅಲೋಯನ್ಸನ್ನು ಕೊಡಬೇಕೆಂದು ಕೌನ್ಸಲರುಗಳು ಒಪ್ಪಿಕೊಂಡರು.

ಮೈಸೂರು ಮುನಿಸಿಪಲ್ ಮೊಹತರ್ಫಾ ಮುಂತಾದ ಕಂದಾಯಗಳು ಬಹಳವಾಗಿ ಬಾಕಿಯಾಗಿ ವಸೂಲಾಗದೆ ಇರೋಣದರಿಂದ ಮುಕ್ತುವಜರ್ಯಾಗಿ ವಸೂಲ್ಮಾಡಬೇಕೆಂದು ಸರ್ಕಾರದವರು ರೆವಿನ್ಯೂ ಪ್ರೊಬೇಷನರಾಗಿರುವ ಮೆ॥ ಟಿ. ಹನುಮಂತರಾಯರನ್ನು ಡೆಪ್ಯುಟಿ ಅಮಲ್ದಾರ್ರ ಸಂಬಳದ ಮೇಲೆ ಆರು ತಿಂಗಳವರೆಗೆ ಕೆಲಸಮಾಡುವಂತೆ ನೇಮಿಸಿ ಕಳುಹಿಸಿ ಕೊಟ್ಟಿದ್ದಾರೆ. ಕೌನ್ಸಲರುಗಳು ಇವರಿಗೆ ಕಂದಾಯದ ವಸೂಲಾತಿಗೆ ಸಂಬಂಧಪಟ್ಟ ಅಧಿಕಾರಗಳನ್ನು ವಹಿಸತಕ್ಕದ್ದೆಂದು ತೀರ್ಮಾನಮಾಡಿದರು.

ಪೆನ್ಷನ್ ಆಗಿ ಕಮಿಷನರ್ ಮೆ॥ ಶ್ರೀಕಂಠಯ್ಯನವರು ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಜಂಪಣ್ಣರಾಯರ ಕಟ್ಟೆ, ಒಳಪಾರ್ಶ್ವದಲ್ಲಿ ಅತ್ಯ ಕುಟ್ಟುವ ಕಾರ್ಖಾನೆಯನ್ನು ಕಟ್ಟಿಕೊಳ್ಳುವುದಕ್ಕೆ ಸ್ಥಳವನ್ನು ಕೊಡಿಸಬೇಕೆಂದು ಕೇಳಿದ್ದಕ್ಕೆ ಮ್ಯುನಿಸಿಪಲ್ ಕೌನ್ಸಲರುಗಳು ಒಪ್ಪಿ ಗವರ್ನ್‌ಮೆಂಟಿಗೆ ಶಿಫಾರಸು ಮಾಡಿದ್ದರು. ಗವರ್ನ್‌ಮೆಂಟಿನವರು ಆ ಸ್ಥಳವು ಕಾರ್ಖಾನೆ ಕಟ್ಟುವುದಕ್ಕೆ ಕೊಡಲಾಗುವುದಿಲ್ಲವೆಂದೂ, ಅವರಿಗೆ ಬೇರೆ ಕಡೆ ನಿವೇಶನವನ್ನು ಕೊಡಬಹುದೆಂದೂ ಅಪ್ಪಣೆ ಕೊಡಿಸಿದರು. ಕೌನ್ಸಲರುಗಳು ಆ ಹುಕುಮನ್ನು ಓದಿ ರಿಕಾರ್ಡು ಮಾಡಿಕೊಂಡರು.

ವೈಸ್‌ರಾಯಿ ಪ್ರಭುಗಳವರು ರಾಜಧಾನಿಗೆ ದಯಮಾಡುವವರಾಗಿರೋಣದರಿಂದ ಪಟ್ಟಣದ ರಸ್ತೆಗಳನ್ನು ಮರಸ್ತುಮಾಡಿಸಿ ಒಳ್ಳೇ ಸ್ಥಿತಿಯಲ್ಲಿಟ್ಟಿರಬೇಕೆಂದು ಸರ್ಕಾರದವರು ಹುಕುಂ ಕೊಟ್ಟು, ಅದರ ಖರ್ಚಿಗಾಗಿ ಮ್ಯುನಿಸಿಪಾಲಿಟಿಗೆ ೫,೦೦೦ ರೂಪಾಯಿ ಗ್ರಾಂಟು ಕಳುಹಿಸಿರುತ್ತಾರೆ.

ವಿಲಾಯತಿಗೆ ಸೇರಿದ ಸಸೆಕ್ಸ್ ಡಿಸ್ಟ್ರಿಕ್ಟಿನಲ್ಲಿ ಕ್ರೌಲಿ ಎಂಬ ಊರಿನಲ್ಲಿದ್ದ ಫ್ರೆಡರಿಕ್ ಬ್ಲೇಕ್ ಎಂಬೊಬ್ಬ ಸೈನಿಕನು ೬ ಲಕ್ಷ ರೂಪಾಯಿ ಆಸ್ತಿಯನ್ನು ಬಿಟ್ಟು ಕಾಲವಾದನು. ಆತನಿಗೆ ಸಂಬಂಧಿಗಳಾರೂ ಇರಲಿಲ್ಲ, ಆತನು ಮರಣಶಾಸನವನ್ನೂ ಬರೆದಿಡಲಿಲ್ಲ. ಆದಕಾರಣ ಆತನ ಆಸ್ತಿಯೆಲ್ಲಾ ಇಂಗ್ಲೀಷ್ ಗವರ್ನ್‌ಮೆಂಟಿಗೆ ಸೇರಿಹೋಯಿತು. ಅಮೆರಿಕಾ ಬೋಸ್ಟನ್ ಪಟ್ಟಣದಲ್ಲಿ ಕಾಲವಾದ ಮಿಸೆಸ್ ಸಾರಾ ಜಾಕ್ಸನ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೪,೩೫,೦೦೦ ರೂಪಾಯಿಯನ್ನು ನಾನಾ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುವಳು. ಟೆಲ್ಟನ್‌ಹಾಂ ಪಟ್ಟಣದಲ್ಲಿ ಮೆ॥ ಎಲ್ ಯಂಗ್ ಎಂಬಾತನು ತನ್ನ ಆಸ್ತಿಯಲ್ಲಿ ೪॥ ಲಕ್ಷ ದ್ರವ್ಯವನ್ನು ಅದೇ ಪಟ್ಟಣದೊಳಗೆ ಕೆಲವು ಧರ್ಮ ಕೆಲಸಗಳಿಗೋಸ್ಕರ ಖರ್ಚುಮಾಡಬೇಕೆಂದು ಬರೆದಿಟ್ಟಿದ್ದಾನೆ. ಮತ್ತು ಈಚೀಚೆ ಇಷ್ಟರಲ್ಲಿ ಲಂಡನ್ ಪಟ್ಟಣದ ಲಾರ್ಡ್ ಮೇಯರ್ ಎಂಬ ಪುರಾಧ್ಯಕ್ಷತೆಯನ್ನು ಪಡೆದಿದ್ದ ಸರ್ ಆಂಡ್ರ್ಯು ಲಸ್ಕ್ ಎಂಬ ಪುಣ್ಯಾತ್ಮನು ಕಾಲವಾದನು. ಈತನು ಬರೆದಿಟ್ಟಿರುವ ಮರಣಶಾಸನದಿಂದ ಆತನ ಆಸ್ತಿಯು ೧೮॥ ಲಕ್ಷ ರೂಪಾಯಿಯೆಂತಲೂ, ಈ ಆಸ್ತಿಯಲ್ಲಿ ಸುಮಾರು ಮೂರು ಲಕ್ಷ ದ್ರವ್ಯವನ್ನು ಪರೋಪಕಾರಾರ್ಥವಾದ ಧರ್ಮ ಸಂಘಗಳಿಗೆ ವಿನಿಯೋಗಿಸಬೇಕೆಂದು ತಿಳಿಸಿರುತ್ತಾನೆಂತಲೂ ಪ್ರಕಟವಾಗಿದೆ.

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಸೆಪ್ಟೆಂಬರ್ ತಾ॥ ೨ ನೇ ಗುರುವಾರ

ಹಣವನ್ನು ಕೂಡಿಸಿಡುವುದು

ವಿವೇಕಿಯಾದ ಮನುಷ್ಯನು ಮುಂದೆ ಬರುವುದನ್ನು ಯೋಚಿಸಿ ಅದಕ್ಕೆ ತಕ್ಕದಾಗಿ ಸಿದ್ಧಪಡಿಸಿಕೊಳ್ಳುವನು. ಚನ್ನಾಗಿ ಸಂಪಾದನೆ ಮಾಡುವ ಕಾಲದಲ್ಲಿ ಅವನು ಅಲ್ಪಸ್ವಲ್ಪವನ್ನು ಉಳಿಸಿಡುತ್ತಾ ಒಂದು ಕಷ್ಟ ಒದಗಿದಾಗ ಬಳಸಿಕೊಳ್ಳುತ್ತಾನೆ ಕಷ್ಟಕಾಲ ಬರುವುದೇನೋ ಖಂಡಿತವಾದದ್ದರಿಂದ ಅವನಿಗೆ ಆ ಹಣವು ತುಂಬಾ ಸಹಾಯಕವಾಗುವುದು. ಅನೇಕಾನೇಕ ಜನರು ಸಂಪಾದನೆ ಮಾಡುವುದನ್ನೆಲ್ಲಾ ಖರ್ಚುಮಾಡಿಬಿಟ್ಟು, ಕಷ್ಟಬಂದಾಗ್ಗೆ ಗತಿಯಿಲ್ಲದೆ ತಲ್ಲಣಪಡುತ್ತಾರೆ. ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ಪ್ರಜೆಗಳು ತಮ್ಮ ಆದಾಯದಲ್ಲಿ ಅಲ್ಪಸ್ವಲ್ಪವನ್ನು ಕೂಡಿಸಿಡುವಂತೆಯೂ ಅವರು ಅದನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವಂತೆಯೂ ಮಾಡಬೇಕೆಂದು ಕುತೂಹಲಪಟ್ಟು, ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೆಲ್ಲಾ ಈ ವಿಚಾರವಾಗಿ ಹುಕುಂ ಕೊಟ್ಟಿರುವುದೇನೆಂದರೆ, ಆದಾಯದಲ್ಲಿ ಸ್ವಲ್ಪ ಭಾಗವನ್ನು ಕಷ್ಟಕಾಲಕ್ಕೆ ಅನುಕೂಲವಾಗುವಂತೆ ರೈತರೂ ಗ್ರಾಮಾಂತರ ಪ್ರಜೆಗಳೂ ಕೂಡಿಸಿ ಬ್ಯಾಂಕುಗಳಲ್ಲಿ ಇಡುತ್ತಾ ಬರಬೇಕೆಂದು ರೆವಿನ್ಯೂ ಅಧಿಕಾರಿಗಳು ಅವರಿಗೆಲ್ಲಾ ಆಗಾಗ್ಗೆ ವಿವೇಕ ಹೇಳಿ ಪ್ರೋತ್ಸಾಹಪಡಿಸುತ್ತಾ ಬರಬೇಕಾಗಿದೆ

ಪ್ರತಿ ಒಂದು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಸ್ಥಳದಲ್ಲೂ ಮೈಸೂರು ಗವರ್ನಮೆಂಟಿನವರು ಸೇವಿಂಗ್ಸ್ ಬ್ಯಾಂಕುಗಳನ್ನು ಇಟ್ಟಿದ್ದಾರೆ; ಮತ್ತು ದೊಡ್ಡ ದೊಡ್ಡ ಹೋಬಳಿಗಳಲ್ಲಿ ಪೋಸ್ಟ್ ಆಫೀಸುಗಳೊಳಗೆ ಸೇವಿಂಗ್ಸ್ ಬ್ಯಾಂಕು ಇರುತ್ತದೆ. ಇದಲ್ಲದೆ ಅನೇಕ ಕಡೆಗಳಲ್ಲಿ ಪರಸ್ಪರ ಸಹಾಯಕ ಸಂಘಗಳೂ ವ್ಯವಸಾಯದ ಬ್ಯಾಂಕುಗಳೂ ಇರುವವು ಈ ಬ್ಯಾಂಕುಗಳಲ್ಲೆಲ್ಲಾ ಯಾರೇ ಆಗಲಿ ಯಾವಾಗ ಬೇಕಾದರೂ ನಾಲ್ಕಾಣೆಗೆ ಕಡಮೆ ಇಲ್ಲದಂತೆ ಹಣವನ್ನು ತೆಗೆದುಕೊಂಡು ಹೋಗಿ ಇಡಬಹುದಾಗಿದೆ ಹೀಗೆ ಹಣ ಹಾಕಿದವನಿಗೆ ಒಂದು ಪ್ಯಾಸ್ ಬುಕ್ ಎಂಬ ಪುಸ್ತಕದಲ್ಲಿ ಆ ಹಣವನ್ನು ಬರೆದು ಕೊಡುವರು. ಅವನು ಯಾವ ತಾರೀಖಿನಲ್ಲಿ ಎಷ್ಟು ಹಣ ಹಾಕಿದರೂ ಅದನ್ನು ಆ ಪುಸ್ತಕದಲ್ಲಿ ಕ್ರಮವಾಗಿ ದಾಖಲ್ ಮಾಡಿಕೊಡುವರು ಒಂದೆರಡು ರೂಪಾಯಿಗಳಾಗಲಿ ನಾಲ್ಕಾರು ಆಣೆಯಾಗಲಿ ಸಂಪಾದಿಸಿರುವವನು ತನಗೆ ಇಷ್ಟಬಂದ ದಿನ ಪೋಸ್ಟ್ ಆಫೀಸಿಗೆ ತೆಗೆದುಕೊಂಡು ಹೋಗಿ ಅದನ್ನು ಕಟ್ಟಿ ತನ್ನ ಪ್ಯಾಸ್ ಬುಕ್ಕಿನಲ್ಲಿ ಬರೆಸಿಕೊಂಡು ಬರಬಹುದಾಗಿದೆ. ಹೀಗೆ ಮಾಡೋಣದರಿಂದ ಅವನ ಹಣಕ್ಕೆ ಅಪಾಯವಿಲ್ಲದೆ ಅದು ಭದ್ರವಾಗಿರುವುದು ಯಾಕಂದರೆ ಆ ಹಣಕ್ಕೆ ಗವರ್ನಮೆಂಟಿನವರೇ ಜವಾಬ್ದಾರರಾಗಿರುತ್ತಾರೆ ಬುದ್ಧಿವಂತನೂ ಜಾಗರೂಕನೂ ಆದ ಮನುಷ್ಯನು ಈ ಪ್ರಕಾರ ಮಾಡುತ್ತಾ ಬಂದರೆ ಪ್ರತಿ ವರುಷವೂ ಅವನು ಕೆಲವು ರೂಪಾಯಿಗಳನ್ನು ಕೂಡಿಸಿಕೊಳ್ಳಬಹುದು.

ಹೀಗೆ ಕೂಡಿಸಿಟ್ಟಿರುವ ಮನುಷ್ಯನಿಗೆ ಒಂದಾನೊಂದು ಕಾಲದಲ್ಲಿ ಕಷ್ಟ ಸಂಭವಿಸಿದ ಪಕ್ಷದಲ್ಲಿ ಅದರ ಪರಿಹಾರಕ್ಕಾಗಿ ಅವನು ಯಾವಾಗ ಬೇಕಾದರೂ ಹೋಗಿ ಆ ಹಣವನ್ನು ತೆಗೆದುಕೊಂಡು ಬರಬಹುದಾಗಿದೆ. ಇಷ್ಟು ಹಣ ಬೇಕಾಗಿದೆ ಎಂದು ಬ್ಯಾಂಕಿಗೆ ಬರೆದು ತಿಳಿಸಿಬಿಟ್ಟರೆ ಒಂದು ವಾರದೊಳಗಾಗಿ ಆ ಹಣವು ಅವನಿಗೆ ಬಂದು ಬಿಡುತ್ತದೆ ಅವನು ಅವಶ್ಯ ಬಿದ್ದಾಗ ತನಗೆ ಬೇಕಾದಷ್ಟು ತರಿಸಿಕೊಳ್ಳುವುದಕ್ಕೆ ಯಾವ ಕಷ್ಟವೂ ಅಡಚಣೆಯೂ ಇರುವುದಿಲ್ಲ.

ಗವರ್ನಮೆಂಟಿನವರು ತಮ್ಮ ಸೇವಿಂಗ್ಸ್ ಬ್ಯಾಂಕಿನಲ್ಲಿರುವ ಹಣಗಳಿಗೆ ಶೇಕಡಾ ವರುಷಕ್ಕೆ ಮೂರು ರೂಪಾಯಿ ಬಡ್ಡಿ ಕೊಡುತ್ತಾರೆ ಈ ಬಡ್ಡಿಯ ದರವು ಇತರ ಸಂಘಗಳಲ್ಲಿ ಸಿಕ್ಕುವ ಬಡ್ಡಿಗಿಂತ ಕಡಮೆಯಾಗಿದೆ. ಆದರೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿದಂಥಾ ಹಣಕ್ಕೆ ಲೇಶ ಮಾತ್ರವೂ ಅಪಾಯ ಬರುವುದಿಲ್ಲ, ಮತ್ತು ಯಾವಾಗ ಬೇಕೆಂದರೂ ಹಣ ವಾಪಸು ಪಡೆಯಬಹುದು. ಹ್ಯಾಗೂ ಈ ಬ್ಯಾಂಕುಗಳಲ್ಲಿ ಇಟ್ಟ ಹಣವು ಇತರ ಹಣವನ್ನು ಸಂಪಾದನೆ ಮಾಡಿಕೊಡುತ್ತದೆ ಒಬ್ಬ ಬಡವನಿಗೆ ಸ್ವಲ್ಪ ಬಡ್ಡಿ ಸಂಪಾದನೆಯಾದಾಗ್ಯೂ ಅದೂ ಅವನಿಗೆ ಎಷ್ಟೋ ಪ್ರಯೋಜನಕರವಾದದ್ದಾಗಿದೆ.

ಅನೇಕಾನೇಕ ಜನರು ತಮ್ಮ ಸಂಪಾದನೆಯಲ್ಲಿ ಒಡವೆಗಳನ್ನು ಕೊಂಡುಕೊಳ್ಳುತ್ತಾರೆ, ಆದರೆ ಇದು ಹಣವನ್ನು ಲಾಭಕರವಾದ ರೀತಿಯಲ್ಲಿ ವಿನಿಯೋಗಿಸಿದಹಾಗಾಗಲಿಲ್ಲ ಯಾಕಂದರೆ ಆಭರಣಗಳ ಮೇಲೆ ಹಾಕಿದಂಥಾ ಹಣಕ್ಕೆ ಒಂದು ಕಾಸಾದರೂ ಬಡ್ಡಿ ಉತ್ಪತ್ತಿಯಾಗುವುದಿಲ್ಲ, ಎರಡನೆಯದಾಗಿ ಆಭರಣಗಳ ಬೆಲೆಯು ದಿನೇ ದಿನೇ ಕಡಮೆಯಾಗುತ್ತಾ ಬರುವುದು. ಒಂದುವೇಳೆ ತಾನು ಕೊಟ್ಟಷ್ಟು ಹಣವೇ ಬರುವದೆಂದು ಬಂದರೂ ಏನು ಪ್ರಯೋಜನವಾಯಿತು? ಒಡವೆಗಳನ್ನು ಕಳ್ಳನು ಕದ್ದುಬಿಡಬಹುದು, ಆದರೆ ಮೇಲ್ಕಂಡ ಬ್ಯಾಂಕಿನಲ್ಲಿ ಹಾಕಿದಂಥಾ ಹಣಕ್ಕೆ ಚ್ಯುತಿಯುಂಟಾದೀತೇ? ಎಂದಿಗೂ ಇಲ್ಲ. ದುರ್ಭಿಕ್ಷಕಾಲವು ಪ್ರಾಪ್ತವಾದಾಗ್ಗೆ ಒಡವೆಗಳಿಗೆ ಗಿರಾಕಿಯನ್ನು ಹೊಂದಿಸುವುದು ಬಹಳ ಕಷ್ಟ, ಒಂದುವೇಳೆ ಸಿಕ್ಕಿದರೂ ಬಹಳ ನಷ್ಟಪಟ್ಟುಕೊಂಡು ಕಡಮೆ ಕ್ರಯಕ್ಕೆ ಕೊಡಬೇಕಾಗುವುದು ಮಸಲಾ, ಕೆಲವು ವರುಷಗಳ ಹಿಂದೆ ಚೊಕ್ಕಬೆಳ್ಳಿಯು ರೂಪಾಯಿ ತೂಕಕ್ಕೆ ರೂಪಾಯಿ ಎರಡಾಣೆ ಕೊಡಬೇಕಾಗಿತ್ತು ಈಗಲಾದರೋ ಬೆಳ್ಳಿಯ ಧಾರಣೆ ಇಳಿದುಹೋಯಿತು ಬೆಳ್ಳಿಯ ಒಡವೆಗಳು ರೂಪಾಯಿನ ತೂಕಕ್ಕೆ ಎಂಟಾಣೆಯಷ್ಟು ಮಾತ್ರ ಬೆಲೆಯಾಗುವವು. ಈ ಎಲ್ಲಾ ಕಾರಣಗಳಿಂದ ರೈತರೂ ಗ್ರಾಮವಾಸಿಗಳೂ ತಮ್ಮ ಸಂಪಾದನೆಯನ್ನು ಗವರ್ನಮೆಂಟಿನ ಇಲ್ಲವೇ ಪೋಸ್ಟ್ ಆಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಾಕಿ ಕೂಡಿಸಿಡುತ್ತಾ ಬರುವುದೇ ಸರ್ವೋತ್ತಮವಾದ ಕೆಲಸ ಈ ರೀತಿ ಕೂಡಿಸಿಟ್ಟ ಹಣವನ್ನು ಅವರು ಸ್ವಲ್ಪವೂ ಕಷ್ಟವಿಲ್ಲದೆ ಬೇಕಾದಾಗ ತೆಗೆದುಕೊಳ್ಳಬಹುದಾಗಿದೆ, ಮತ್ತು ಅದು ಆಪತ್ಕಾಲಕ್ಕೆ ಸಾಕ್ಷಾತ್ತಾಗಿಯೂ ಖಂಡಿತವಾಗಿಯೂ ಒದಗುವುದು.

ಮೈಸೂರು ಗವರ್ನಮೆಂಟಿನ ರೆವಿನ್ಯೂ ಅಧಿಕಾರಿಗಳು ಗ್ರಾಮಾಂತರಗಳ ಮೇಲೆ ಸಂಚಾರಹೋಗುವಾಗಲೆಲ್ಲಾ ರೈತರನ್ನೂ ಗ್ರಾಮಸ್ಥರನ್ನೂ ಕರೆಸಿಕೊಂಡು ಈ ರೀತಿಯಾಗಿ ಹಣ ಕೂಡಿಸಿಟ್ಟುಕೊಳ್ಳುವಂತೆ ಅವರಿಗೆ ವಿವೇಕವನ್ನು ಹೇಳಿಕೊಡುತ್ತಾ, ಬ್ಯಾಂಕುಗಳಲ್ಲಿ ಅವರನ್ನು ಹಣವನ್ನಿಡುವಂತೆ ಪ್ರೋತ್ಸಾಹಪಡಿಸುತ್ತಾ ಬರುವರೆಂದು ಹಾರೈಸುತ್ತೇವೆ

ಪ್ರಾಣನಷ್ಟ, ಪ್ರಾಣರಕ್ಷಣೆ

“ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದರ ನಷ್ಟಪಡುವನು ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣದ ನಷ್ಟಪಡುವವನು ಅದನ್ನು ಉಳಿಸಿಕೊಳ್ಳುವನು” ಇದು ಸ್ವಲ್ಪ ಆಶ್ಚರ್ಯವಾದ ನುಡಿಯಾಗಿದೆ ಲೋಕದಲ್ಲಿ ವಾಡಿಕೆಯಾಗಿ ದ್ರವ್ಯವನ್ನಾಗಲಿ ಪ್ರಾಣವನ್ನಾಗಲಿ ಉಳಿಸಿಕೊಳ್ಳಬೇಕೆಂದಿರುವವರು ಅದನ್ನು ಭದ್ರಪಡಿಸುವದೂ ಬಹು ಜೋಕೆಯಿಂದ ಕಾಪಾಡುವದೂ ಸಾಧಾರಣವಾಗಿದೆ ಆದರೆ “ಉಳಿಸಿಕೊಳ್ಳಬೇಕೆಂದಿರುವವನು ನಷ್ಟಪಡುವನು” ಎಂದು ಹೇಳುವದು ಲೋಕವಾಡಿಕೆಗೆ ವಿರೋಧವಷ್ಟೆ ಮತ್ತು ನಷ್ಟಪಡುವವನು ಅದನ್ನು ಉಳಿಸಿಕೊಳ್ಳುವನೆಂದು ಹೇಳುವದು ಮತ್ತೂ ಆಶ್ಚರ್ಯಕರವಾಗಿ ಕಾಣುತ್ತದಲ್ಲವೇ ಪ್ರಾಣವನ್ನು ಗಂಡಾಂತರಗಳಿಗೂ ಅಪಾಯಕ್ಕೂ ಗುರಿಪಡಿಸುವದು ಅದನ್ನು ಉಳಿಸಿಕೊಳ್ಳುವದಕ್ಕೂ ಸಂರಕ್ಷಿಸುವದಕ್ಕೂ ಕಾರಣವಾಗಿರುವದೆ.

ಮನುಷ್ಯನಿಗೆ ಎರಡುವಿಧವಾದ ಜೀವಗಳುಂಟು ಅಂದರೆ ಒಂದು ಇಹಲೋಕದ ಮತ್ತು ಕ್ಷಣಿಕವಾದ ಜೀವನ ಇನ್ನೊಂದು ಶಾಶ್ವತವಾದ ನಿತ್ಯ ಜೀವನ ಒಂದು ಇಹಸಂಬಂಧವಾದದ್ದು, ಮತ್ತೊಂದು ಪರಲೋಕಸಂಬಂಧವಾದದ್ದು ಇಹಸಂಬಂಧವಾದ ಜೀವನವು ದ್ರವ್ಯ, ಅಧಿಕಾರ, ಕೀರ್ತಿಗಳನ್ನು ಸಂಪಾದಿಸಿಕೊಳ್ಳುವದು ಸುಖಗಳನ್ನು ಭೋಗಿಸುವದು, ಇಷ್ಟಪಟ್ಟ ತೃಪ್ತಿಪಡುವದು ಪರಸಂಬಂಧವಾದ ಜೀವನವಾದರೋ ಪರಮಾತ್ಮನಾದ ದೇವರೊಬ್ಬನನ್ನೇ ಲಕ್ಷಿಸಿ ಆತನ ದಿವ್ಯ ಚಿತ್ತವನ್ನು ತಿಳಿಯುವದಕ್ಕೂ ಅದನ್ನು ನೆರವೇರಿಸುವದಕ್ಕೂ ಶ್ರದ್ಧೆಪಡುವದಾಗಿದೆ ಯೇಸು ಕ್ರಿಸ್ತನು ಈ ವಾಕ್ಯಗಳನ್ನು ನುಡಿದ ಸಂದರ್ಭವನ್ನು ಸ್ವಲ್ಪ ವಿಚಾರಿಸೋಣ ಆತನು ತನ್ನ ಶಿಷ್ಯರನ್ನು ಕಂಡು ಅವರಿಗೆ— ಮನುಷ್ಯರು ಪಾಪದಿಂದ ವಿಮುಕ್ತರಾಗಿ ರಕ್ಷಣೆಯನ್ನು ಹೊಂದಬೇಕಾಗಿದೆ ಈ ಮಹಾ ಕಾರ್ಯವು ನೆರವೇರಬೇಕಾದರೆ ನಾನೇ ಅವರಿಗಾಗಿ ಸಿಲುಬೆಯ ಮೇಲೆ ಮೃತಪಡಬೇಕಾಗಿದೆ ನಾನು ಬಹು ಕಷ್ಟಗಳನ್ನನುಭವಿಸಿ ಹಿರಿಯರಿಂದಲೂ ಮಹಾ ಯಾಜಕರಿಂದಲೂ ಶಾಸ್ತ್ರಿಗಳಿಂದಲೂ ನಿರಾಕ್ಷೇಪವಾಗಿ ಕೊಲ್ಲಲ್ಪಡುವೆನು ಎಂದು ಹೇಳಿದನು ಆತನ ಶಿಷ್ಯನಾದ ಪೇತ್ರನು ಇದನ್ನು ಕೇಳಿ ಸಹಿಸಲಾರದೆ—ಸ್ವಾಮಿ, ಈ ಅವಸ್ಥೆಯು ನಿನಗೆ ಬಂಬಾರದು, ದೇವರು ನಿನ್ನನ್ನು ಇದರೊಳಗಿಂದ ಬಿಡಿಸಲಿ ಎಂದು ಹೇಳಿದ್ದನ್ನು ಕೇಳಿ ಕ್ರಿಸ್ತನು ಪೇತ್ರನಿಗೆ “ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ ನೀನು ದೇವರ ಆಲೋಚನೆಗಳನ್ನು ಬಿಟ್ಟು ಮನುಷ್ಯರ ಆಲೋಚನೆಗಳನ್ನು ಹಿಡಿಯುತ್ತೀ” ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದರ ನಷ್ಟಪಡುವನು. ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣದ ನಷ್ಟಪಡುವವನು ಅದನ್ನು ಉಳಿಸಿಕೊಳ್ಳುವನು ಎಂದು ಹೇಳಿದನು ಕ್ರಿಸ್ತನ ತಾತ್ಪರ್ಯವೇನಂದರೆ, ನಾನು ನನ್ನ ಪ್ರಾಣವನ್ನು ಲೋಕದವರ ಹಿತಕ್ಕೋಸ್ಕರವಾಗಿ ಕೊಡಬೇಕೆಂಬುವದೇ ದೇವರ ಸಂಕಲ್ಪವಾಗಿದೆ ನಾನು ಆತನ ಚಿತ್ತವನ್ನು ನೆರವೇರಿಸುವದಕ್ಕೋಸ್ಕರ ತ್ವರೆಪಡುತ್ತಿದ್ದೇನೆ ಹೀಗೆ ನಾನು ಸಾಯದ ಹೊರತು ಮನುಷ್ಯರಿಗೆ ರಕ್ಷಣೆಯಾಗದು ಹೀಗಿರುವಲ್ಲಿ ಇಂಥ ಪಾರಮಾರ್ಥಿಕ ಜೀವವನ್ನು ನಡಿಸುತ್ತಿರುವ ನನ್ನನ್ನು ಲೌಕಿಕ ಆಶೆ ಅಪೇಕ್ಷೆಗಳಿಂದ ತಡೆಯುವದು ಪಾರಮಾರ್ಥಿಕ ಜೀವವನ್ನು ನಷ್ಟಪಡುವದಕ್ಕೆ ಒಪ್ಪಿಕೊ ಎಂದು ಪ್ರೇರಣೆ ಮಾಡುವದಾಗಿದೆ ನೀವಾದರೂ ನಿಮ್ಮ ಪಾರಮಾರ್ಥಿಕ ಜೀವವನ್ನು ಉಳಿಸಿಕೊಳ್ಳಬೇಕಾದರೆ ಇಹಲೋಕದ ಜೀವವನ್ನು ಲಕ್ಷಿಸದೆ ಪರೋಪಕಾರಾರ್ಥವಾಗಿ ನಿಮ್ಮ ದ್ರವ್ಯ ಕೀರ್ತಿ ಅಧಿಕಾರಗಳನ್ನೂ ನಿಮ್ಮ ಪ್ರಾಣವನ್ನೂ ಸಹ ತೊರೆಯಬೇಕಾಗುವದು ನಾನು ಈಗ ಅನುಭವಿಸುವ ಕ್ರೂರ ಮರಣವು ನಿಮಗೂ ಮುಂದೆ ಬರುವದು ಪರಹಿತಕ್ಕೋಸ್ಕರ ಅದನ್ನು ನೀವು ಹೊಂದುವದಕ್ಕೆ ಸಿದ್ಧರಾಗಿರಬೇಕು ಇದೇ ದೈವಸಂಬಂಧವಾದ ಪಾರಮಾರ್ಥಿಕ ಜೀವನಕ್ಕೆ ರಾಜಮಾರ್ಗವೆಂಬುವದು ಆತನ ತಾತ್ಪರ್ಯವಾಗಿದೆ ಆತನ ತಾತ್ಪರ್ಯವು ಸಿದ್ಧಿಗೆ ಬರಬೇಕೆಂದು ಆತನು ತನ್ನನ್ನು ಶಿಲುಬೆಯ ಮೇಲೆ ಯಜ್ಞವಾಗಿ ಅರ್ಪಿಸಿ ನಮ್ಮನ್ನು ಪಾಪದಿಂದಲೂ ಅದರ ಫಲವಾದ ನರಕದಿಂದಲೂ ರಕ್ಷಿಸಿದನು

ಇದಾಗಿ ಈಗ ಸುಮಾರು ಎರಡು ಸಾವಿರ ವರುಷಗಳಾದವು ಆದರೆ ಆಗಿನಿಂದ ಈವರಿಗೂ ಯೇಸು ಕ್ರಿಸ್ತನ ಭಕ್ತರನೇಕರು ಪರಹಿತಕ್ಕಾಗಿ ತಮ್ಮ ಆಸ್ತಿ, ಉದ್ಯೋಗ, ಜೀವನಗಳನ್ನು ಸಹ ತ್ಯಜಿಸಿಬಿಡುತ್ತ ಬಂದಿದ್ದಾರೆ ತಮ್ಮನ್ನು ರಕ್ಷಿಸಿದಂಥಾ ಸ್ವಾಮಿಯ ಮೇಲ್ಪಂಕ್ತಿಯಂತೆ ನಡೆದು ಆತನ ನಿಮಿತ್ತವಾಗಿಯೂ ತಮ್ಮ ಸಹೋದರರಾದ ಇತರೇ ಮನುಷ್ಯರ ದೇಹಾತ್ಮಗಳ ಮೇಲ್ಮೆಗಾಗಿಯೂ ಅವಾಚ್ಯವಾದ ಕಷ್ಟನಷ್ಟಗಳನ್ನೂ ಕ್ರೂರ ಮರಣಗಳನ್ನೂ ಹೊಂದುವದಕ್ಕೆ ಅವರು ಸಿದ್ಧರಾದರು ಈಗಲೂ ಅಂಥವರು ಇದ್ದಾರೆ ಇಂಥಾ ಪರೋಪಕಾರಕ್ಕಾಗಿ ಪ್ರೇರಣೆಯನ್ನೂ ಪ್ರೋತ್ಸಾಹವನ್ನೂ ಕೊಟ್ಟ ಯೇಸು ಸ್ವಾಮಿಯು ಇನ್ನೂ ಇಂಥವರ ಸಂಖ್ಯೆಯನ್ನು ಈ ದೇಶದಲ್ಲಿ ಹೆಚ್ಚಿಸಲಿ ಗತಿಸಿದ ಕ್ಯಾಪ್ಟನ್ ಬರ್ನಾರ್ಡ್ ಡಾಸ್, ರಾಯಲ್ ಇಂಜನೀಯರ್ ಯವರು ಮೈಸೂರು ಸಂಸ್ಥಾನದ ಹಂಗಾಮಿ ಚೀಫ್ ಇನ್‌ಜನಿಯರವರಾಗಿದ್ದು ಬಡ ರೈತರಿಗೆ ವ್ಯವಸಾಯಕ್ಕೆ ಬೇಕಾದ ನೀರನ್ನು ಈ ವರುಷವೇ ಒದಗಿಸಿ ಕೊಡಬೇಕೆಂಬ ಪರೋಪಕಾರಾರ್ಥವಾದ ಅಭಿಲಾಷೆಯನ್ನು ನೆರವೇರಿಸಬೇಕೆಂದು ತಾವೇ ಮುರಿದು ಹೋದ ಆಣೆ ಕಟ್ಟನ್ನು ಪಾಸಲಿಕ್ಕೆ ಹೋದರು ಇದರಲ್ಲಿಯೇ ಮೈಸೂರು ಪ್ರಜೆಗಳ ಮೇಲೆ ಅವರಿಗಿದ್ದ ಅಸಾಧಾರಣವಾದ ಪ್ರೀತಿಯು ಪ್ರಕಟವಾಗುತ್ತದೆ ಆದರೆ ಅವರು ಒಬ್ಬ ಬೆಸ್ತರವನಾದ ಕೂಲಿಯವನನ್ನು ರಕ್ಷಿಸಬೇಕೆಂದು ಪ್ರವಾಹದಲ್ಲಿ ಮುಳುಗಿದ್ದು ಅವರ ಆತ್ಮ ನಿವೇದನಕ್ಕೆ ಸಾಕ್ಷಿಭೂತವಾಗಿದೆ ಅನೇಕಾನೇಕರು ಇವರ ಮಹದುಪಕಾರವನ್ನು ವಿಚಾರಿಸಿ ವಿದ್ಯಾ ನಿಧಿಯೂ ಮೂವತ್ತೆರಡೇ ವರುಷದ ತರುಣರೂ, ಶ್ರೇಷ್ಠಪದವಿಯನ್ನನುಭವಿಸುತ್ತಿದ್ದ ಧನಕನಕ ವಸ್ತ್ರವಾಹನಗಳಿಗೇನೂ ಕೊರತೆಯಿಲ್ಲದವರಾಗಿ ತಮ್ಮ ಪ್ರಿಯರಾದ ಪತ್ನಿ ಪುತ್ರರನ್ನೂ ಸ್ವಂತ ಪ್ರಾಣವನ್ನೂ ಒಬ್ಬ ಬಹು ಸಾಮಾನ್ಯವಾದ ಮನುಷ್ಯನಿಗೋಸ್ಕರ ತ್ಯಜಿಸಿಬಿಟ್ಟದ್ದು ಅತ್ಯಂತ ಸೋಜಿಗವಾದ ಕೆಲಸವೆಂದು ಹೊಗಳುತ್ತಿರುವರು ಆದರೆ ಇಂಥಾ ಪರೋಪಕಾರದ ಗುಣವು ಅವರಿಗೆ ಅವರ ಗುರುವೂ ರಕ್ಷಕನೂ ಆದ ಯೇಸುಸ್ವಾಮಿಯಿಂದಲೇ ಅವರಲ್ಲಿ ಹುಟ್ಟಿತು ಈಗಲೂ ಯಾರ್ಯಾರು ನಿಷ್ಕಪಟವಾದ ಭಕ್ತಿಯಿಂದ ಯೇಸುಸ್ವಾಮಿಯ ಶಿಷ್ಯರಾಗುವರೋ ಅವರಿಗೂ ಇಂಥಾ ಪರೋಪಕಾರದ ಗುಣವೇ ಸಹಜವಾಗಿ ಬರುವದು ಇದು ನಿಜವೋ ಏನೋ ವಾಚಕರೇ ಪರೀಕ್ಷಿಸಿರಿ

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವನ್ನು ತಡೆಯುವ ಏರ್ಪಾಡುಗಳು

ಶನಿವಾರದ ದಿನ ನಡೆದ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಟೌನ್ ಹಾಲ ಬಂಗಲೆಯಲ್ಲಿ ಮ್ಯುನಿಸಿಪಲ್ ಕೌನ್ಸೆಲರುಗಳು ಸ್ಪೆಷಲ್ ಸೇರಿ ತಿಂಗಳ ಕಟ್ಟೆಯ ಮ್ಯುನಿಸಿಪಲ ಮೀಟಿಂಗನ್ನು ನಡಿಸುತ್ತಿದ್ದಾಗ್ಗೆ ಸಂಸ್ಥಾನದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರಾದ ಡಾಕ್ಟರ್ ಟಿ ಸ್ಮಿತ್ ಯವರು ಬಂದು ಈ ಪಟ್ಟಣದಲ್ಲಿ ಪ್ಲೇಗ್ ಉಪದ್ರವನ್ನು ಹರಡದಂತೆ ತಡೆಯುವದಕ್ಕಾಗಿ ಕೈಕೊಳ್ಳಬೇಕೆಂದಿರುವ ಏರ್ಪಾಡುಗಳನ್ನು ಕುರಿತು ಕೌನ್ಸೆಲರುಗಳಿಗೆ ತಿಳಿಯಹೇಳಿದರು ಅವರು ತಿಳಿಸಿದ ಮುಖ್ಯ ವಿಷಯಗಳೇನೆಂದರೆ —

ಮೈಸೂರು ಪಟ್ಟಣದಲ್ಲಿ ಈಗ ಪ್ಲೇಗ್ ಉಪದ್ರವು ದಿನೇ ದಿನೇ ಹೆಚ್ಚುತ್ತಿರುವುದು. ನಾನು ಪಟ್ಟಣದ ಎಲ್ಲಾ ಭಾಗಗಳನ್ನು ಸಂಚಾರಮಾಡಿ ನೋಡಿಕೊಂಡು ಬಂದಿರುತ್ತೇನೆ ಪ್ಲೇಗ್ ಆಸ್ಪತ್ರೆಗೂ ಹೋಗಿ ಅಲ್ಲಿನ ಏರ್ಪಾಡುಗಳನ್ನು ಅವಲೋಕಿಸಿ ಬಂದಿದ್ದೇನೆ ಅಲ್ಲಿ ಪ್ಲೇಗ್ ಬಡಿದ ರೋಗಿಗಳು ೧೨ ಮಂದಿಯೂ ಸೋಂಕುಳ್ಳ ಮನೆಗಳವರು ೫೦ ಮಂದಿಯೂ ಇರುತ್ತಾರೆ ಪ್ಲೇಗ್ ಉಪದ್ರವನ್ನು ತಡೆಯುವದಕ್ಕೆ ಜನರು ಪ್ಲೇಗ್ ಶಿಡುಬನ್ನು ಹಾಕಿಸಿಕೊಳ್ಳುವುದೇ ಉತ್ತಮವೆಂದು ನಾನು ಹೇಳಬೇಕಾದದ್ದಿಲ್ಲ ಇದರಿಂದ ಪ್ರಯೋಜನವುಂಟೆಂದು ನಾನಾ ಕಡೆಗಳಲ್ಲಿ ಸಿದ್ಧಾಂತಪಟ್ಟಿರುವದು ಬೆಂಗಳೂರು ದಂಡಿನಲ್ಲಿ ಪ್ರಜೆಗಳು ಇದರ ಪ್ರಯೋಜನವನ್ನು ತಿಳಿದು ಸಾವಿರಗಟ್ಟಲೆಯಾಗಿ ಶಿಡುಬು ಹಾಕಿಕೊಂಡಿರುವರು ಇದರಿಂದ ಅಲ್ಲಿ ಪ್ಲೇಗ್ ಉಪದ್ರವು ಹರಡುವ ಹಾಗೆ ಅವಕಾಶವಾಗಲಿಲ್ಲ ದಂಡಿನಲ್ಲಿ ಮಿ ಆರ್ಕಾಟ ನಾರಾಯಣಸ್ವಾಮಿ ಮೊದಲಿಯಾರರೇ ಮೊದಲಾದ ಮುಖಂಡ ದೊಡ್ಡ ಮನುಷ್ಯರು ಇದರ ಪ್ರಯೋಜನವನ್ನು ತಿಳಿದು ಭೂತದಯೆ ಪ್ರೀತಿ ವಿಶ್ವಾಸಗಳಿಂದ ಕೂಡಿದವರಾಗಿ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಒಂದೊಂದು ಸ್ಥಳದಲ್ಲಿ ಚಪ್ಪರ ಮೊದಲಾದ ಮಂಟಪಗಳನ್ನು ಹಾಕಿ ಅಲ್ಲಿಗೆ ಎಲ್ಲರನ್ನೂ ಕರೆದು ತಂದು ಪ್ಲೇಗ್ ಶಿಡುಬನ್ನು ಹಾಕಿಸಿದರು ಇಷ್ಟೇ ಅಲ್ಲ ಅವರು ಬಡಬಗ್ಗರಿಗೆಲ್ಲಾ ತಿಂಡಿತೀರ್ಥಾದಿಗಳನ್ನೂ ತಮ್ಮ ಸ್ವಂತ ಖರ್ಚಿನಿಂದಲೇ ಕೊಡಿಸಿದರು ಸರ್ಕಾರದಿಂದ ಬಹುಮಾನಗಳನ್ನು ಸಂಪಾದಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವರು ಈ ಪರೋಪಕಾರಕ ಕಾರ್ಯವನ್ನು ಮಾಡಿದರೆಂದು ತಿಳಿಯಬಾರದು ಬಡಬಗ್ಗರಿಗೆ ಸಹಾಯಮಾಡಿ ಅವರನ್ನು ಕಾಪಾಡಬೇಕೆಂಬ ಶ್ರೇಷ್ಠವಾದ ಉದ್ದೇಶವೇ ಅವರಲ್ಲಿ ಆಧಾರವಾಗಿತ್ತು ಇಂಥಾ ಪರೋಪಕಾರಿಗಳು ಮಾಡತಕ್ಕ ಕೆಲಸಗಳನ್ನು ಗವರ್ನಮೆಂಟಿನವರು ಉಚಿತವಾದ ರೀತಿಯಲ್ಲಿ ಪರಿಗಣಿಸದೆ ಇರಲಾರರು ಇದೇ ಪ್ರಕಾರ ನೀವುಗಳು ಈ ಪಟ್ಟಣದ ಮುಖಂಡರಾಗಿದ್ದುಕೊಂಡು ಇಲ್ಲಿನ ಬಡಬಗ್ಗರ ವಿಷಯದಲ್ಲಿ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿ ಅವರಿಗೆ ಪ್ರೋತ್ಸಾಹಮಾಡಿ ನಿಮ್ಮ ರಕ್ಷಣೆಗೋಸ್ಕರ ಸಹಾಯವನ್ನು ಮಾಡಿ, ಈ ಉಪದ್ರವನ್ನು ಅಡಗಿಸುವಂಥಾ ಪ್ಲೇಗ್ ಶಿಡುಬನ್ನು ಅವರೆಲ್ಲಾ ಹಾಕಿಸಬೇಕಾಗಿದೆ ನೀವುಗಳು ಮುಂದಾಳಾಗಿ ನಿಂತು ನಿಮ್ಮ ನಿಮ್ಮ ವಾರ್ಡುಗಳ ಜನರಿಗೆ ವಿವೇಕವನ್ನೂ ಧೈರ್ಯವನ್ನೂ ಹೇಳಿ ಅವರಿಗೆ ಈ ಕೆಟ್ಟ ರೋಗದ ಭೀತಿಯು ಬಾಧೆಯೂ ಉಂಟಾಗದಂತೆ ಮಾಡಬೇಕು ನೀವು ಈ ರೀತಿ ಪರೋಪಕಾರ ಮಾಡುವಿರಾದರೆ ನಿಮಗೆ ತುಂಬಾ ಪುಣ್ಯ ಕೀರ್ತಿಗಳುಂಟಾಗುವವು ನಿಮ್ಮ ಸಾಹಸವನ್ನೂ ಪರಹಿತಕಾರ್ಯವನ್ನೂ ಶ್ರೀಮನ್ಮಹಾರಾಜರವರು ಉಚಿತವಾದ ರೀತಿಯಲ್ಲಿ ಪರಿಗಣಿಸದೆ ಇರಲಾರರು, ಮಹಾಸ್ವಾಮಿಯವರು ತಮ್ಮ ಉದಾರವಾದ ಚಿತ್ತವೃತ್ತಿಯನ್ನು ಹಿಂದೆ ಅನೇಕ ಸಂದರ್ಭಗಳಲ್ಲಿ ಪ್ರಕಾಶಪಡಿಸಿರುತ್ತಾರೆಂಬುವದು ನಿಮಗೇ ವೇದ್ಯವಾಗಿದೆ ಆದಕಾರಣ ನೀವುಗಳೆಲ್ಲಾ ಏಕೀಭವಿಸಿ ಬಡ ಪ್ರಜೆಗಳಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡಿ ಅವರಿಗೆ ಪ್ಲೇಗ್ ಶಿಡುಬನ್ನು ಹಾಕಿಸುವುದರ ಮೂಲಕ ಈ ಉಪದ್ರವನ್ನು ಅಡಗಿಸುವದಕ್ಕೆ ಸಹಾಯ ಮಾಡುತ್ತೀರೆಂಬು ನಿರೀಕ್ಷಿಸುತ್ತೇನೆ

ಇನ್ನೂ ನೀವು ಮಾಡಬಹುದಾದ ಕಾರ್ಯವೇನೆಂದರೆ ನೀವು ಇಲ್ಲಿನ ಸರ್ಕಾರಿ ಪ್ಲೇಗ್ ಆಸ್ಪತ್ರೆಗೆ ಹೋಗಿ ಅಲ್ಲಿ ರೋಗಿಗಳಿಗೆ ನಡೆಯುವ ಚಿಕಿತ್ಸೋಪಚಾರಗಳನ್ನೂ ಅವರಿಗೆ ಕಲ್ಪಿಸಿರುವ ಸೌಕರ್ಯಗಳನ್ನೂ ಕಣ್ಣಾರ ನೋಡಿ ನ್ಯೂನತೆಗಳೇನಾದರೂ ಇದ್ದಲ್ಲಿ ಸರ್ಕಾರಕ್ಕೆ ತಿಳಿಯಪಡಿಸಬೇಕು ನಿಮ್ಮ ಅಭಿಪ್ರಾಯಕ್ಕೆ ಸರ್ಕಾರದವರು ವಿಶೇಷವಾದ ಗೌರವವನ್ನು ಕೊಟ್ಟು ನಿಮ್ಮ ಇಷ್ಟಪ್ರಕಾರ ಏರ್ಪಾಡುಗಳನ್ನು ಮಾಡಿಸುವರು ನೀವು ನಿಮ್ಮ ಬೀದಿಗಳಲ್ಲಿ ಸಂಚಾರಮಾಡುತ್ತಾ ಬಂದು, ಪ್ಲೇಗ್ ಕಾಯಿಲೆಯವರನ್ನು ಕಂಡಲ್ಲಿ ಅವರನ್ನು ಪ್ರೋತ್ಸಾಹಪಡಿಸಿ ಪ್ಲೇಗ್ ಆಸ್ಪತ್ರೆಗೆ ಹೋಗುವಂತೆ ಮಾಡಬೇಕು ಅಲ್ಲಿ ರೋಗಿಗಳಿಗೆ ನಡೆಯುವಷ್ಟು ಉತ್ತಮವಾದ ಚಿಕಿತ್ಸೆ ಶೈತ್ಯೋಪಚಾರಗಳು ಮನೆಗಳಲ್ಲಿ ನಡೆಯಲಾರವು, ಅಲ್ಲಿ ಅವರು ಬದುಕಿಕೊಳ್ಳಲು ತುಂಬಾ ಅವಕಾಶವಿದೆ ಈ ಪ್ಲೇಗ್ ಆಸ್ಪತ್ರೆಯ ವಿಷಯದಲ್ಲಾಗಲಿ, ಪ್ಲೇಗ ಶಿಡುಬಿನ ವಿಷಯದಲ್ಲಾಗಲಿ ಪ್ರಜೆಗಳಿಗೆ ನಾನಾ ಸಂಶಯಗಳೂ ಭೀತಿಯೂ ಇರಬಹುದು ಪ್ರಜೆಗಳ ಮುಖಂಡರಾದ ನೀವು ಅವರಲ್ಲಿ ಬೆರೆತು ಯಥಾರ್ಥವಾದ ಸಂಗತಿಗಳನ್ನು ಅವರಿಗೆ ತಿಳಿಸಿ ಆ ಭೀತಿಯನ್ನೂ ಸಂಶಯವನ್ನೂ ನಿವಾರಣೆ ಮಾಡಬೇಕಾಗಿದೆ ಎಂಬೀ ರೀತಿಯಾಗಿ ಹೇಳಿದರು

ಮ್ಯುನಿಸಿಪಲ್ ಕೌನ್ಸೆಲರುಗಳು ಮೇಲ್ಕಂಡ ವಿಚಾರಗಳನ್ನು ಕೇಳಿ, ಆ ರೀತಿ ಮಾಡಲು ಪ್ರಯತ್ನಪಡುವುದಾಗಿ ತಿಳಿಸಿದರು ಕಡೆಯಲ್ಲಿ ಪ್ಲೇಗ ಶಿಡುಬನ್ನು ಹಾಕಿಸುವುದಕ್ಕೆ ನಾಲ್ವರು ಡಾಕ್ಟರುಗಳನ್ನೂ ಇಬ್ಬರು ಸ್ತ್ರೀ ಡಾಕ್ಟರುಗಳನ್ನೂ ಕಳುಹಿಸಿಕೊಡುವುದಾಗಿ ಸೀನಿಯರ್ ಸರ್ಜನ್‌ರವರು ಅಪ್ಪಣೆಕೊಡಿಸಿದರು ಪ್ಲೇಗ್

ಶಿಡುಬು ಹಾಕಿಸಿಕೊಂಡ ಬಡಬಗ್ಗರಲ್ಲಿ ದೊಡ್ಡವರಿಗೆ ಸರ್ಕಾರದಿಂದ ನಾಲ್ಕಾಣೆ ಯಂತೆಯೂ, ಚಿಕ್ಕವರಿಗೆ ಎರಡಾಣೆಯಂತೆಯೂ ದ್ರವ್ಯಸಹಾಯ ಮಾಡುವುದಾಗಿಯೂ ಹೇಳಿದರು

ಪ್ಲೇಗ್ ಶಿಡುಬಿನ ಪ್ರಯೋಜನಗಳನ್ನು ವಿವರಿಸುವಂಥಾ ನೋಟೀಸುಗಳನ್ನು ಕನ್ನಡದಲ್ಲಿಯೂ ಹಿಂದುಸ್ತಾನಿಯಲ್ಲಿಯೂ ಅಚ್ಚುಹಾಕಿಸಿ ಪಟ್ಟಣದಲ್ಲೆಲ್ಲಾ ಪ್ರಜೆಗಳಿಗೆ ಹಂಚಬೇಕೆಂದೂ, ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಹೊತ್ತಿನ ತನಕ ಡಾಕ್ಟರುಗಳು ಪ್ಲೇಗ್ ಶಿಡುಬನ್ನು ಹಾಕುತ್ತಾರೆಂಬುವುದನ್ನೂ ಆ ನೋಟೀಸಿನಲ್ಲಿ ಪ್ರಕಟಿಸಬೇಕೆಂದೂ ಗೊತ್ತಾಯಿತು.

ಸೋಮವಾರ ನಡೆದ ಮೀಟಿಂಗು.

ಕಳೆದ ಸೋಮವಾರ ಬೆಂಗ್ಳೂರ ಪ್ಲೇಗ್ ಶಿಡುಬನ್ನು ಪ್ರಜೆಗಳಿಗೆ ಹಾಕಿಸುವ ವಿಚಾರವನ್ನು ಗೊತ್ತುಮಾಡುವುದಕ್ಕಾಗಿ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿದ್ದರು ಇಲ್ಲಿನ ಸಿವಿಲ್ ಸರ್ಜನ್‌ರಾದ ಮೆ|| ಟಿ ಎಸ್. ನಂಜಪ್ಪನವರು ಕೌನ್ಸಲರುಗಳಿಗೆ ಇನಾಕ್ಯುಲೇಷನ್ ವಿಚಾರವನ್ನು ಕುರಿತು ಹೇಳಿದರು ಇನಾಕ್ಯುಲೇಷನ್ ಮಾಡಿಸುವುದಕ್ಕೆ ಕೆಲವು ಮನೆಗಳನ್ನೂ ಕೆಲವು ಸ್ಕೂಲುಗಳನ್ನೂ ಗೊತ್ತುಮಾಡಿದರು. ಆಯಾ ಕಡೆಗಳಲ್ಲಿ ಬೆಳಗಿನ ಹೊತ್ತು ಪ್ಲೇಗ್ ಶಿಡುಬನ್ನು ಹಾಕುತ್ತಾರೆಂದು ಮೊದಲೇ ಟಾಂ ಟಾಂ ಮೂಲಕ ಇಸ್ತಿಹಾರು ಹಾಕಿಸಿ ಜನರಿಗೆ ತಿಳಿಯಪಡಿಸಬೇಕೆಂದೂ ಗೊತ್ತಾಯಿತು ಮತ್ತು ಮಧ್ಯಾಹ್ನದ ಹೊತ್ತು ಪ್ರತಿ ದಿನವೂ ೪ ರಿಂದ ೬ ಗಂಟೆಯ ತನಕ ಟೌನ್ ಹಾಲ್ ಬಂಗಲೆಯಲ್ಲಿ ಒಬ್ಬ ಡಾಕ್ಟರು ಹಾಜರಿದ್ದು, ಬಂದ ಜನರಿಗೆ ಪ್ಲೇಗ್ ಶಿಡುಬನ್ನು ಹಾಕಿಸಲು ಆರಂಭವಾಗಿದೆ ಸೋಮವಾರ ಮಧ್ಯಾಹ್ನವೇ ಹಲವು ಜನರು ಟೌನ್ ಹಾಲಿಗೆ ಬಂದು ಶಿಡುಬು ಹಾಕಿಸಿಕೊಂಡು ಹೋಗಿರುತ್ತಾರೆ ಹೀಗೆಯೇ ಪ್ರಜೆಗಳು ಗುಂಪುಗುಂಪಾಗಿ ಸೇರಿ ಹೋಗಿ ಶಿಡುಬನ್ನು ಹಾಕಿಸಿಕೊಳ್ಳುತ್ತಾ ಬಂದಾರೆಂದೂ ಈ ಮೂಲಕ ಈ ಉಪದ್ರವು ಪಟ್ಟದಂತೆ ಅಡಗಿಸಲ್ಪಟ್ಟೀತೆಂದೂ ನಿರೀಕ್ಷಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಕ್ಯಾಪ್ಟನ್ ಹಾಗ್ ಯವರ ಮೆಮೋರಿಯಲ್ ಫಂಡಿಗೆ ಕಳೆದ ತಾ ೨೭ ರ ವರೆಗೆ ೮೪೪ ರೂಪಾಯಿ ಚಂದಾ ಕೂಡಿತೆಂದು ಪ್ರಕಟವಾಗಿದೆ

* * *

ಕ್ಯಾಪ್ಟನ್ ಅಕ್ಕಡು ಎಂಬೊಬ್ಬ ಅಧಿಕಾರಿಯು ಸೆಪ್ಟೆಂಬರ್ ಮಧ್ಯಾಹ್ನದ ರೈಲಿನಲ್ಲಿ ರಾಜಧಾನಿಗೆ ಬಂದು, ಶ್ರೀಮನ್ಮಹಾರಾಜರವರ ಅತಿಥ್ಯದಲ್ಲಿರುತ್ತಾರೆ

* * *

ರಾಜಧಾನಿಯಲ್ಲಿದ್ದ ಮುಸಾಹೇಬ ರಾಮರಾಯರು ಕಳೆದ ವಾರ ಪ್ಲೇಗ್ ತಗಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ಹಿರಿಯರ ಮಕ್ಕಳು ಅ|| ಕಮಿಷನರ್‌ರಾಗಿರುವರು, ಕಿರಿಯ ಮಕ್ಕಳು ಸವಾರ್ ಸೈನ್ಯದಲ್ಲಿ ಹುದ್ದೇದಾರರಾಗಿರುತ್ತಾರೆ.

* * *

ಕಳೆದ ವಾರ ನೀಲಗಿರಿಯಿಂದ ಶ್ರೀಮನ್ ಯುವರಾಜರವರು ಬೆಂಗಳೂರಿಗೂ, ಸರ್ದಾರ್ ಕಾಂತರಾಜೇ ಅರಸಿನವರು ರಾಜಧಾನಿಗೂ ಬಂದರು ಇವರು ನಾಳಿದ್ದು ಬೆಂಗಳೂರಿಗೆ ಹೋಗಿ ಯುವರಾಜರವರ ಸಮೇತ ಅಲ್ಲಿಂದ ಪೂನಾ ಪಟ್ಟಣಕ್ಕೆ ಪ್ರಯಾಣ ಮಾಡುವರೆಂದು ಕೇಳುತ್ತೇವೆ

* * *

ರಾಜಧಾನಿಯಲ್ಲಿ ವೃದ್ಧಾಪ್ಯ ದೆಸೆಯಿಂದ ಕಾಲವಾದ ಮುಸಾಹೇಬ್ ಗಂಗಾಧರರಾಯರ ಮುಸಾಹಬಾಗಿಯನ್ನು ಶ್ರೀಮನ್ಮಹಾರಾಜರವರು ಅವರ ಜ್ಯೇಷ್ಠ ಪುತ್ರರೂ ನಾರ್ತ್ ಆಫೀಸರೂ ಆದ ಮೆ|| ಎಂ ಜಿ ರಾಮರಾಯರಿಗೆ ದಯಪಾಲಿಸಿ ಅದಕ್ಕಾಗಿ ಅರಮನೆಯಿಂದ ೫೦ ರೂಪಾಯಿ ಪೆನ್ಷನ್ ಸಲ್ಲುವಂತೆ ಹುಕುಂ ಕೊಟ್ಟಿದಾರೆ.

* * *

ರಾಜಧಾನಿಯಲ್ಲಿ ನಾಲ್ಕಾರು ದಿನಗಳಿಂದ ಮೋಡವಾಗುತ್ತಾ ಮಳೆ ಸ್ವಲ್ಪ ಸ್ವಲ್ಪ ಸುರಿಯುತ್ತಾ ಇದೆ. ಹವಾ ಅನುಕೂಲವಾಗಿದೆ ಎಂದು ಹೇಳಬಹುದಾದರೂ ಪ್ಲೇಗ್ ಉಪದ್ರವೂ ಒಟ್ಟು ಮರಣಸಂಖ್ಯೆಯೂ ದಿನದಿನ ಹೆಚ್ಚುತ್ತಾ ಇದೆ. ಕಳೆದ ಸೋಮವಾರ ೧೪ ಜನರಿಗೆ ಪ್ಲೇಗ್ ತಗುಲಿತು, ಆ ದಿನ ಒಟ್ಟು ೨೧ ಮರಣಗಳಾದವು

* * *

ಪೆನ್ಷನ್ ದಿವಾನ್ ಮೆ|| ಪಿ ಸಿ. ಮಾಧವರಾಯರು ಅನಂತಶಯನ ಸಂಸ್ಥಾನದಲ್ಲಿ ತೀರ್ಥಯಾತ್ರೆ ಮಾಡುತ್ತಿದಾರೆ ಕೋಟಾರಿನಿಂದ ಅವರು ರಾಮನಾಥ ಮತ್ತು ಬಾಣತೀರ್ಥ ಎಂಬ ಸ್ಥಳಗಳಿಗೆ ಹೋಗಿದ್ದು ಒಂದು ತಿರುಚಂದೂರಿಗೆ ಪ್ರಯಾಣಮಾಡಿದಾರೆ. ಅವರು ಮುಂದಿನ ತಿಂಗಳಲ್ಲಿ ಅಲ್ಲಿಂದ ವಾಪಸು ಬೆಂಗಳೂರಿಗೆ ಬರುತ್ತಾರೆಂದು ತಿಳಿದುಬಂದಿದೆ

* * *

ಪಾವಗಡದ ತಾಲ್ಲೂಕು ಹೊಸಕೋಟೆಯಲ್ಲೂ, ಕುಣಿಗಲ ತಾಲ್ಲೂಕು ನಿಟ್ಟೂರಿನಲ್ಲೂ ಕರ್ನಾಟಕ ವೈದ್ಯಶಾಲೆಗಳನ್ನು ಇಟ್ಟು ನಡಿಸುವುದಕ್ಕೆ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾದ್ದರಿಂದ ಅದು ಸದ್ಯ ಆಗಲಾರದೆಂದೂ, ತಿಪ್ಟೂರು ತಾಲ್ಲೂಕು ಕಿಬ್ಬನಹಳ್ಳಿಯಲ್ಲಿ ನಂತೆ ಇಟ್ಟುವಂತೆ ಮಾಡಬಹುದೆಂದೂ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಮಾಡಿರುತ್ತಾರೆ

* * *

ಬೇಲೂರಿನಲ್ಲಿ ಮೆ|| ರಂಗಣ್ಣನವರ ಮಗುವಿನ ಕೈಗೆ ಹಾಕಿದ್ದ ಭಂಗಾರದ ಬಳೆಯನ್ನು ಯಾಕೂಬ್‌ಸಾಬಿ ಎಂಬುವನು ಕದ್ದನೆಂದೂ, ಪೋಲೀಸಿನವರು ಪತ್ತೆಮಾಡಿ ಅಪರಾಧಿಯನ್ನು ತಾಲ್ಲೂಕ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಯಾಫ್ತು ಮಾಡಿಸಿದರೆಂದೂ, ಮ್ಯಾಜಿಸ್ಟ್ರೇಟರು ೧೦ ವರುಷದ ಗಂಡುಹುಡುಗನ ಮತ್ತು ೩|| ವರುಷದ ಹೆಣ್ಣುಮಗುವಿನ ಎರಡು ಸಾಕ್ಷಿಗಳ ವಿಚಾರಣೆಯಿಂದ ಅಪರಾಧಿಗೆ ೬ ತಿಂಗಳ ಕಠಿಣಸಜಾ ವಿಧಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಮೈಸ್‌ರಾಯಿಯವರು ನಮ್ಮ ಸಂಸ್ಥಾನಕ್ಕೆ ದಯಮಾಡಿದಾಗ್ಗೆ ಅವರಿಗೆ ಆನೆಗಳನ್ನು ಹಿಡಿದು ಕಟ್ಟಿಹಾಕುವ ವಿಧಾನವನ್ನು ತೋರಿಸುವುದಕ್ಕೆ ಮೈಸೂರು ಸರ್ಕಾರದವರು ಕಾಕನಕೋಟೆಯಲ್ಲಿ ಕೆಡ್ಡಾ ಕ್ಯಾಂಪನ್ನು ಏರ್ಪಾಡುಮಾಡುವರು. ಈ ಕಾರ್ಯಗಳು ಮೆ|| ಮುತ್ತಯ್ಯನವರಿಗೆ ಸದ್ಯ ವಹಿಸಲ್ಪಟ್ಟಿವೆ. ಮೆ|| ಉಸೂಮಿಯಾ ಎಂಬವರನ್ನು ಸರ್ಕಾರದವರು ಬಂಗಾಳಾ ಆಧಿಪತ್ಯಕ್ಕೆ ಸೇರಿದ ಢಕ್ಕಾ ಪ್ರಾಂತ್ಯದಿಂದ ಸುಮಾರು ೨೦೦ ಮಂದಿ ಆನೆ ಹಿಡಿಯತಕ್ಕ ಜನರನ್ನು ಕರೆದುತರಬೇಕೆಂದು ಕಳುಹಿಸಿಕೊಟ್ಟಿದಾರೆ.

* * *

ಚಿತ್ರದುರ್ಗದ ತಾಲ್ಲೂಕು ಅಣ್ಣೆಹಾಳು ಗ್ರಾಮದಲ್ಲಿ ಹಿಂದಿನ ವಾರ ಪ್ರಜೆಗಳು ಸೇರಿ ಒಂದು ವಾಚಕಶಾಲೆಯನ್ನು ಸ್ಥಾಪಿಸಿ ಅದಕ್ಕೆ ವಾಣೀವಿಲಾಸವೆಂಬ ಹೆಸರನ್ನಿಟ್ಟರು. ಪ್ರಾರಂಭದ ದಿನ ಮೆ|| ಭೀಮರಾಜಯ್ಯನವರು ಸಭಿಕರಿಗೆ ಉಪನ್ಯಾಸಮಾಡಿದಾಗ್ಗೆ “ಈ ವಾಚಕಶಾಲೆಯಲ್ಲಿ ವಾರಕ್ಕೊಂದುಸಾರಿ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಸಭೆ ಸೇರಿ ಈ ಶಾಲೆಗೋಸ್ಕರ ತರಿಸತಕ್ಕ ಪತ್ರಿಕೆಗಳಲ್ಲಿನ ದೇಶಕಾಲವರ್ತಮಾನ ಮತ್ತು ನೀತಿನ್ಯಾಯ ಮೊದಲಾದ ಮುಖ್ಯ ವಿಷಯಗಳನ್ನು ಓದಿಸಿ ತಿಳಿದುಕೊಂಡು ಸನ್ಮಾರ್ಗಾವಲಂಬಿಗಳಾಗಲು ಚಿಂತಿಸುವುದಲ್ಲದೆ ಪೂರ್ವಮಹಾಶಯರ ಚರಿತ್ರೆಗಳನ್ನು ಕೇಳಿ ಸಂತುಷ್ಟರಾಗಿ, ಕಾಲವನ್ನು ಕಾಡುಹರಟೆಗಳಿಂದ ಕಳೆಯುವುದನ್ನು ಬಿಟ್ಟು ಸದ್ವ್ಯಾಸಂಗದಲ್ಲಿ ಕಳೆಯುವಂತೆ ಮಾಡಿಕೊಳ್ಳುವುದೂ, ರಾಜಕೀಯ ಮೊದಲಾದ ನೀತಿಮಾರ್ಗಗಳನ್ನು ಸಂಭಾಷಣೆಮಾಡುತ್ತಾ ಸಂತೋಷಪಡುವುದೂ, ಗ್ರಾಮದ ಸಮಸ್ತರೂ ಏಕೀಭವಿಸಿ ಸುಸಲ್ಲಾಪಗಳಿಂದ ಐಕಮತ್ಯದಿಂದ ಅಭ್ಯುದಯ ಹೊಂದುವುದೂ, ಗ್ರಾಮವೇ ಕ್ರಮೇಣ ಕಾಲದಲ್ಲಿ ಉತ್ತಮಸ್ಥಿತಿಗೆ ಬರುವುದೂ ಈ ವಾಚಕಶಾಲೆಯ ಪ್ರಯೋಜನಗಳಾಗಿರುತ್ತವೆ” ಎಂದು ತಿಳಿಸಿದರು

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಪಟ್ಟಣದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಳುಹಿಸಿಕೊಡುವಂಥಾ ಕ್ರಿಮಿನಲ್ ಮೊಕದ್ದಮೆಗಳನ್ನು ತನಿಖೆ ಮಾಡಿ ಫೈಸಲ್ ಮಾಡುವುದಕ್ಕಾಗಿ ಮುಂದೆ ಕಾಣುವ ದೊಡ್ಡಮನುಷ್ಯರನ್ನು ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಿದೆ—ಪೆನ್ಷನ್ ಆ ಕಮಿಷನರುಗಳಾದ ಮೆ| ಸಿ ಕೃಷ್ಣರಾಯರು ಮೆ| ಕೃಷ್ಣಮೂರ್ತಿರಾಯರು, ಪೋಲೀಸ್ ಪೆನ್ಷನ್ ಸೂಪರಿಂಟೆಂಡೆಂಟ್ ಮೆ ಮಹಮದ್ ಜಾಫರ್ ಯವರು

ನಂಜನಗೂಡು ತಾಲ್ಲೂಕು ಅರಸನ ಪುರದಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ ಸ್ ಆಫೀಸರ್ ಮೆ ಎಂ ಹಸನಲ್ಲಿ ಯವರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಡೆಪ್ಟಿ ಅಮಲ್ದಾರ್ ಸಿ ಕಾಶೀನಾಥ ರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ ಎಚ್ ಎಸ್ ವೆಂಕಟಾಚಾರ್ರು ತಮ್ಮ ಕೆಲಸಗಳೊಂದಿಗೆ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು

ಜಗಲೂರ್ ತಾಲ್ಲೂಕ್ ಅಮಲ್ದಾರ್ ಮೆ ಇ. ಸಿ ಸದಾಶಿವಂ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹರಿಹರದ ಸಬ್ ತಾಲ್ಲೂಕ್ ಡೆಪ್ಟಿ ಅಮಲ್ದಾರ್ ಬಿ ಗರುಡಾಚಾರ್ರು ಜಗಲೂರ್ ತಾಲ್ಲೂಕಿನ ಅಮಲ್ದಾರ್ ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ಮಾಡತಕ್ಕದ್ದು

ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ಮೆ ಟಿ ವೆಂಕಟರಾಮಯ್ಯನವರು ತಮ್ಮ ಕೆಲಸಗಳೊಂದಿಗೆ ಹರಿಹರದ ಸಬ್ ತಾಲ್ಲೂಕ್ ಛಾರ್ಜನ್ನೂ ವಹಿಸಿತಕ್ಕದ್ದು

ಮೈಸೂರು ಸಬ್ ಜಡ್ ಮೆ ಪಿ ಎಸ್ ಕೃಷ್ಣಸ್ವಾಮೈಯಂಗಾರ್ರನ್ನು ಪೂರ್ವ ತಾ ೧ ರಿಂದ ೧ ನೇ ಕ್ಲಾಸ್ ಅ ಕಮಿಷನರ ದರ್ಜೆಗೆ ಬಡ್ತಿಮಾಡಿದೆ

ಶಿವಮೊಗ್ಗ ಪೋಲೀಸ್ ಅ ಸೂಪರಿಂಟೆಂಡೆಂಟ್ ಮೆ ಬಿ ಎಸ್ ರಾಮೋಜಿರಾಯರನ್ನು ೪ ನೇ ಕ್ಲಾಸ್ ಅ ಕಮಿಷನರ ದರ್ಜೆಗೆ ಬಡ್ತಿ ಮಾಡಿದೆ

ಕಡೂರ್ ಡಿವಿಜನ್ ಸಬ್ ಅ. ಇಂಜಿನಿಯರ್ ಮೆ| ಎಂ ಅನಂದಾಳ್ವಾರ್ ಯವರಿಗೆ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಭೂಗರ್ಭ ಇಲಾಖಾ ಮೈನಿಂಗ್ ಅಸಿಸ್ಟೆಂಟ್ ಮೆ ಸಿ ಇ. ಸೂರ್ಯನಾರಾಯಣರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಲೂರ್ ಸಬ್ ತಾಲ್ಲೂಕು ಡೆಪ್ಟಿ ಅಮಲ್ದಾರ್ ಮೆ ಎಸ್ ಅನಂತರಾಮೈಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನ್ ತಾಲ್ಲೂಕ್ ಅಮಲ್ದಾರ್ ಮೆ| ಎಸ್ ಎನ್ ಅಪ್ಪಣ್ಣಯ್ಯಂಗಾರ್ರು ತಮ್ಮ ಕೆಲಸಗಳೊಂದಿಗೆ ಆಲೂರ್ ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು

ಇಂಡಿಯಾದೇಶದ ವೃತ್ತಾಂತಗಳು.

ಕಾಶ್ಮೀರ ಸಂಸ್ಥಾನದ ಮಹಾರಾಣಿಯವರು ರಾಜಧಾನಿಯಾದ ಶ್ರೀನಗರದಲ್ಲಿ ಕಳೆದ ಬುಧವಾರ ಕಾಲವಾದರೆಂದು ತಿಳಿದು ಬಂದಿದೆ

* * *

ಈ ವರುಷ ಡಿಸೆಂಬರ್ ತಿಂಗಳಲ್ಲಿ ಲಾಹೋರ್ ಪಟ್ಟಣದಲ್ಲಿ ನಡೆಯುವ ರಾಷ್ಟ್ರಸಭೆಗೆ ಸರ್ ಫೆರೋಸ್ ಷಾ ಮೆಹತಾಯವರನ್ನೂ, ಇವರು ಒಪ್ಪದಿದ್ದರೆ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರನ್ನೂ ಪ್ರೆಸಿಡೆಂಟಾಗಿ ನೇಮಿಸಬೇಕೆಂದು ಕಳೆದ ವಾರ ಪಂಜಾಬ್ ಸಭಿಕರು ತೀರ್ಮಾನಮಾಡಿರುತ್ತಾರೆ

* * *

ಕಲ್ಕತ್ತಾ ಪಟ್ಟಣದ ಪೋಲೀಸಿನವರು ನಿಂತಲಾ ಎಂಬ ಮೊಹಲ್ಲಿಯೊಳಗೆ ಬಂದು ಮನೆಯನ್ನು ಪ್ರವೇಶಮಾಡಿ ಅಲ್ಲಿ ಸಿಕ್ಕಿದ್ದ ಕೆಲವು ಕಾಗದ ಪತ್ರಗಳನ್ನು ಎತ್ತಿಕೊಂಡು ಬಂದದ್ದಲ್ಲದೆ ಆ ಮನೆಯಲ್ಲಿ ವಾಸಮಾಡಿಕೊಂಡಿದ್ದ ಒಬ್ಬ ವೃದ್ಧ ಸನ್ಯಾಸಿಯನ್ನೂ ಇಬ್ಬರು ಬಂಗಾಳಿ ಹುಡುಗರನ್ನೂ ದಸ್ತಗಿರಿ ಮಾಡಿರುತ್ತಾರೆ

ಹಾರೋಡಿ ಎಂಬ ಸ್ಥಳದಲ್ಲಿ ಒಬ್ಬ ಬ್ರಾಹ್ಮಣ ವ್ಯವಸಾಯಗಾರನಿಗೂ ಅಲ್ಲಿನ ಪೋಲೀಸ್ ಇನ್‌ಸ್ಪೆಕ್ಟರಿಗೂ ಜಗಳವಾಗಿ ಕೆಲವು ಬ್ರಾಹ್ಮಣರು ಸೇರಿಕೊಂಡು ಇನ್‌ಸ್ಪೆಕ್ಟರನ್ನೂ ಇನ್ನಿಬ್ಬರನ್ನೂ ಕೊಂದು ಒಬ್ಬನಿಗೆ ಪೂರಾ ಗಾಯ ಮಾಡಿದರು. ಈ ಭಯಂಕರವಾದ ಸಂಗತಿಯನ್ನು ತನಿಖೆಮಾಡಲು ಅಲ್ಲಿಗೆ ಅಧಿಕಾರಿಗಳು ಕಳುಹಲ್ಪಟ್ಟಿದಾರೆ

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬಾರಿಸಾಲಿನಲ್ಲಿ ಬಾರಿಪ್ಪಿಕಾ ಎಂಬ ಸ್ಥಳದ ಶತೀಶಚಂದ್ರ ಛಕ್ರಬರ್ತಿ ಎಂಬೊಬ್ಬ ಬಂಗಾಳಿಯು “ಸ್ವದೇಶಸೇವಾ” ಎಂಬ ಒಂದು ಸಣ್ಣ ಪುಸ್ತಕವನ್ನು ಬರೆದು ಪ್ರಕಟಿಸಿದಂತೆಯೂ, ಅದರಲ್ಲಿ ರಾಜದ್ರೋಹಕರವಾದ ಸಂಗತಿಗಳು ಬರೆಯಲ್ಪಟ್ಟಿವೆ ಎಂತಲೂ ಪೋಲೀಸಿನವರು ಆತನನ್ನು ಹಿಡಿದು ಮೊಕದ್ದಮೆ ಮಾಡಿದಾರೆ

* * *

ಮೇ|| ಅಂಬತ್ ಕೇಶವ ಮೇನನ್ ಎಂಬ ಮಳೆಯಾಳ ಯೌವನಸ್ಥನು ಕಸಬನ್ನು ಕಲಿತುಕೊಂಡು ಬರುವುದಕ್ಕಾಗಿ ಕಳೆದ ವಾರ ಮದರಾಸಿನಿಂದ ಸೀಮೆಗೆ ಪ್ರಯಾಣವಾದನು ಮದರಾಸಿನಲ್ಲಿರುವ ಮಳೆಯಾಳ ದೊಡ್ಡ ಮನುಷ್ಯರೂ ಇತರರೂ ಆತನಿಗೆ ಔತಣವನ್ನು ಮಾಡಿ, ಕೆಲವು ಬುದ್ಧಿವಾದಗಳನ್ನು ಹೇಳಿದರು ಇಂಡಿಯಾ ಗವರನ್‌ಮೆಂಟಿನವರು ಈತನಿಗೆ ವರುಷಕ್ಕೆ ೨೦೦ ಪೌಂಡಿನಂತೆ ವೇತನ ಕೊಡುತ್ತಾರೆ

* * *

ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯ ಮೆಂಬರಾಗಿಯೂ ಪ್ರಜೆಗಳ ಮುಖಂಡರಾಗಿಯೂ ಇರುವ ಮೆ|| ಎಂ ಕೆ ಪೇರ್ರಾಜು ಎಂಬುವರು ಕಾಕಿನಾಡಾ ಪಟ್ಟಣದಲ್ಲಿ ಟೋಪಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಪ್ರಾರಂಭ ಮಾಡುವವರಾಗಿದಾರೆ. ಜಪಾನ್ ದೇಶದಲ್ಲಿ ಆ ಕಸಬನ್ನು ಕಲಿತುಕೊಂಡು ಬಂದಿರುವ ಮೆ|| ವೆಂಕಟಸುಬ್ಬರಾಯರು ಈ ಕಾರ್ಖಾನೆಗೆ ಮ್ಯಾನೇಜರಾಗಿ ನೇಮಿಸಲ್ಪಡುವರೆಂದು ತಿಳಿದುಬಂದಿದೆ

* * *

ಕೊಯಮುತ್ತೂರಿನಲ್ಲಿರುವ ನೆಯ್ಗೆ ಕಾರ್ಖಾನೆಯು ದಿನೇ ದಿನೇ ಅಭಿವೃದ್ಧಿಗೆ ಬರುತ್ತಿದೆ ಕಳೆದ ಜೂನ್ ತಿಂಗಳ ೩೦ ಕ್ಕೆ ಆಖೈರಾದ ೧೨ ತಿಂಗಳ ಜಮಾಖರ್ಚು ಈಗ ಪ್ರಕಟವಾಗಿರುವುದು ಈ ಕಂಪನಿಯ ಮೂಲಧನವು ಆರು ಲಕ್ಷ ರೂಪಾಯಿ ಕಳೆದ ವರುಷದ ಉತ್ಪತ್ತಿಯು ೧,೯೮,೦೦೦ ರೂಪಾಯಿ ಷೇರುದಾರರಿಗೆ ಶೇಕಡಾ ೨೦ ರೂಪಾಯಿಯಂತೆ ನಫೆಯನ್ನು ಹಂಚಿದರು ಡಿಪಾಜಿಟ್ಟಿನಲ್ಲಿ ಇನ್ನೂ ೬,೩೯,೦೦೦ ರೂಪಾಯಿ ಇಟ್ಟುಕೊಂಡಿದಾರೆ

* * *

ಗ್ರೇಟ್ ಇಂಡಿಯನ್ ಪೆನಿನ್‌ಸುಲರ್ ರೈಲ್ವೆ ಕಂಪನಿಯವರ ಅಜಾಗರೂಕತೆಯಿಂದ ಬೊಂಬಾಯಿ ಪಟ್ಟಣದ ದುಲಾಬ್ಜಿ ನವಿದಾಸ್ ಎಂಬಾತನೂ ಒಬ್ಬ ಗಾಡಿ ಹೊಡೆಯುವವನೂ ತಮಗೆ ಜಖಂ ಆಯಿತೆಂದೂ, ಇದಕ್ಕಾಗಿ ಆ ಕಂಪನಿಯಿಂದ ಡಾಮಿಜು ೨೦ ಸಾವಿರ, ೧೦ ಸಾವಿರ ರೂಪಾಯಿ ಕೊಡಿಸಬೇಕೆಂದೂ ಕಂಪನಿಯವರ ಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ದಾವಾ ಮಾಡಿದ್ದರು ಜಡ್ಜಿಗಳು ಕಳೆದ ವಾರ ಇವೆರಡು ಮೊಕದ್ದಮೆಗಳನ್ನೂ ವಜಾಮಾಡಿರುತ್ತಾರೆ.

* * *

ಕಲ್ಕತ್ತಾ ಪಟ್ಟಣದಲ್ಲಿ ಮುಲಿಕ್ ಸಿರಾಯತ್ ಎಂಬೊಬ್ಬನು ಅಲ್ಲಿನ ಎರಡುಮೂರು ಭಾರೀ ಷಾಪುಗಳಿಗೆ ಹೋಗಿ ರಾಂಪುರದ ನವಾಬರಿಗೆ ಮದುವೆಯಾಗುತ್ತದೆಂದು ಹೇಳಿ ಅವರ ಅಂಗಡಿಗಳಲ್ಲಿ ಮದುವೆಗಾಗಿ ಸುಮಾರು ೪೨,೦೦೦ ರೂಪಾಯಿನ ಸಾಮಾನುಗಳನ್ನು ಖರೀದಿಮಾಡಿ ತೆಗೆದಿಟ್ಟು, ನವಾಬರೇ ಬಂದು ಹಣ ಕೊಟ್ಟು ತೆಗೆದುಕೊಳ್ಳುವರೆಂದು ಹೇಳಿ ಹೋದನು ಇವನು ಮೋಸಗಾರನೆಂದು ವರ್ತಕರಿಗೆ ತಿಳಿಯಿತು ಪೋಲೀಸಿನವರು ಪತ್ತೆಮಾಡಿ ಅವನನ್ನು ದಸ್ತಗಿರಿ ಮಾಡಿದರು ಮ್ಯಾಜಿಸ್ಟ್ರೇಟರು ದಯಾಫ್ತುಮಾಡಿ ಅವನಿಗೆ ಒಂದು ವರುಷದ ಕಠಿಣಸಜಾ ವಿಧಿಸಿದರು

* * *

ಆರಣಿಯ ಜಹಗೀರ್ದಾರರಿಗೆ ಗವರ್ನ್‌ಮೆಂಟಿನವರು ಕಳೆದ ವಾರ ಸನ್ನದನ್ನು ಕೊಟ್ಟು, ಆ ಜಹಗೀರಿಯನ್ನು ಅವರು ಪುತ್ರ ಪೌತ್ರ ಪಾರಂಪರ್ಯವಾಗಿ ಅನುಭವಿಸತಕ್ಕದ್ದೆಂದು ತೀರ್ಮಾನ ಮಾಡಿದರು ಜಹಗೀರ್ದಾರರು ಕಳೆದವಾರ ಸತ್ಯವಿಜಯ ನಗರದಲ್ಲಿ ಒಂದು ದರ್ಬಾರ್ ನಡಿಸಿ, ತಮ್ಮ ಸಂತೋಷವನ್ನೂ ಬ್ರಿಟಿಷ್ ಗವರ್ನ್‌ಮೆಂಟಿನವರ ಔದಾರ್ಯವನ್ನೂ ತಮ್ಮ ಕೃತಜ್ಞತೆ ರಾಜಭಕ್ತಿ ಪ್ರೀತಿಗಳನ್ನೂ ಪ್ರಕಾಶಪಡಿಸಿದ್ದಲ್ಲದೆ ಇದುವರೆಗೆ ಆ ಜಹಗೀರಿಯಲ್ಲಿ ನಂಬಿಕೆಯಾಗಿ ನೌಕರಿ ಮಾಡುತ್ತಾ ಬಂದಿರುವ ಹಲವು ಅಧಿಕಾರಿಗಳಿಗೆ ಬಹುಮಾನಗಳನ್ನು ಕೊಡಿಸಿದರು ಸುಮಾರು ೧೬೦೦ ರೂಪಾಯಿನ ಕಂದಾಯಗಳನ್ನು ರಿಮಿಷನ್ ಮಾಡಿದರು ಬಡಬಗ್ಗರಿಗೆ ಭೋಜನ ಮಾಡಿಸಿ ಬಟ್ಟೆ ಬರೆಗಳನ್ನು ಕೊಡಿಸಿದರು ಆ ಜಹಗೀರಿಯ ಪ್ರಜೆಗಳು ಸಂತೋಷಭರಿತರಾಗಿದಾರೆ

* * *

ಹಿಂದು ಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಫಂಡು ಏರ್ಪಾಡಾಗಿದೆ ಈ ಫಂಡಿಗೆ ೧೫,೬೦೦ ರೂಪಾಯಿ ಚಂದಾ ವಸೂಲಾಯಿತು ವೈಸ್‌ರಾಯಿ ಪ್ರಭುಗಳು ೭೫೦ ರೂಪಾಯಿ, ಪಾಟಿಯಾಲಾ ಮಹಾರಾಜರವರು ೨,೦೦೦ ರೂಪಾಯಿ, ಹೈದರಾಬಾದಿನ ನೈಜಾಮರವರು ೧,೫೦೦ ರೂಪಾಯಿ, ಬೇರೆ ನಾಲ್ಕು ದೇಶೀಯ ರಾಜರಿಂದ ತಲಾ ೧,೦೦೦ ರೂಪಾಯಿ, ಈ ರೀತಿ ಚಂದಾ ಕೊಡಲ್ಪಟ್ಟಿದೆ ಕಳೆದ ಶುಕ್ರವಾರ ರಾತ್ರಿ ಲಾರ್ಡ್ ಕಿಚ್ನರ್ ಯವರಿಗೆ ಸಿಮ್ಲಾ ಪಟ್ಟಣದಲ್ಲಿ ಭಾರೀ ಔತಣವಾಯಿತು ವೈಸ್‌ರಾಯಿಯವರೇ ಮೊದಲಾದ ನೂರಾರು ಮಂದಿ ಮಹನೀಯರು ಸೇರಿ ಭೋಜನ ಮಾಡಿದರು ಕಡೆಯಲ್ಲಿ ಲಾರ್ಡ್ ಕಿಚ್ನರ್ ಯವರೂ, ಸರ್ ಎಡ್ವರ್ಡ್ ಬೇಕರ್ ಯವರೂ, ವೈಸ್‌ರಾಯಿಯವರೂ ಉಪನ್ಯಾಸಗಳನ್ನು ಮಾಡಿದರು.

* * *

ಬೊಂಬಾಯಿ ಪಟ್ಟಣದಲ್ಲಿ ಭಾರೀ ನೆಯ್ಗೆ ಕಾರ್ಖಾನೆಯನ್ನಿಟ್ಟುಕೊಂಡು ಪ್ರಜೆಗಳಲ್ಲಿ ತುಂಬಾ ಗಣ್ಯತೆಯನ್ನು ಸಂಪಾದಿಸಿಕೊಂಡಿದ್ದ ಮೆ|| ದ್ವಾರಕದಾಸ್ ಧರಂಸೀ ಎಂಬಾತನು ಕಳೆದ ಶನಿವಾರ ಮಧ್ಯಾಹ್ನ ತನ್ನ ಮನೆಯಲ್ಲಿ ಬಂದೂಕನ್ನು ಹಾರಿಸಿ ಆತ್ಮಹತ್ಯ ಮಾಡಿಕೊಂಡನು ಆತನ ಆಸ್ತಿಯೆಲ್ಲಾ ೧೬ ಲಕ್ಷ ರೂಪಾಯಿ ಬಾಳುವುದೆಂದೂ, ಆತನಿಗೆ ೫೦ ಲಕ್ಷ ರೂಪಾಯಿ ದೇಣೆ ಇದ್ದಿತೆಂದೂ, ಇದರ ಪರಿಹಾರಕ್ಕೆ ಮಾರ್ಗತೋರದೆ ಆತನು ಆತ್ಮಹತ್ಯ ಮಾಡಿಕೊಂಡನೆಂದೂ ಗೊತ್ತಾಯಿತು ಆತನು ಆತ್ಮಹತ್ಯ ಮಾಡಿಕೊಳ್ಳುವುದಕ್ಕೆ ಮುಂಚೆ ಒಂದು ಕಾಗದವನ್ನು ಬರೆದಿಟ್ಟನು ಅದರಲ್ಲಿ ಆತನು—ನನ್ನ ಸಾಲಗಳು ಅಪಾರವಾದವು ನನ್ನ ಈ ಅಂತ್ಯಕ್ಕೆ ಯಾರೂ ಕಾರಣರಲ್ಲ ನನ್ನ ಮಕ್ಕಳೂ ಮನೆಯವರೂ ಉಟ್ಟ ಹೊದ್ದ ಬಟ್ಟೆಗಳಲ್ಲಿ ಮನೆಯನ್ನು ಬಿಟ್ಟು ಹೋಗಬೇಕು ಯಾವ ಸಾಮಾನನ್ನೂ ತೆಗೆದುಕೊಂಡು ಹೋಗಕೂಡದು. ಹಾಗೆ ಮಾಡಿದಪಕ್ಷದಲ್ಲಿ ಅವರ ಮೇಲೆ ನನ್ನ ಶಾಪ ಬರುವುದು ಎಂಬೀ ರೀತಿ ಬರೆದಿರುತ್ತಾನೆ ಈತನು ೧೮೯೬ ನೇ ಇಸವಿಯಲ್ಲಿ ಬೊಂಬಾಯಿ ಪಟ್ಟಣದ ಷೆರಿಫ್ ಎಂಬ ಪುರಾಧ್ಯಕ್ಷನಾಗಿದ್ದನು ಹೈದರಾಬಾದ್ ರಿಲೀಫ್ ಫಂಡಿಗೆ ಚಂದಾ ಹಣವನ್ನು ಕೂಡಿಸಿ ಕಳುಹಿಸಿದನು ಅನೇಕ ಸಂಘಗಳಲ್ಲಿ ಗಣ್ಯತೆಯನ್ನು ಪಡೆದ ಮೆಂಬರಾಗಿದ್ದನು ಮತ್ತು ಹಲವು ಕಾರ್ಖಾನೆಗಳಲ್ಲೂ ಕಂಪನಿಗಳಲ್ಲೂ ಮುಂದಾಳಾಗಿ ಎಲ್ಲರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದನು.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಸಮಾಜ

ಸ್ತ್ರೀಯರ ಕೂಟವು.

ಕಳೆದ ಶುಕ್ರವಾರದ ದಿನ ವರಲಕ್ಷ್ಮೀವ್ರತವಾದಾಗ್ಯೂ, ವಠಕ್ಕೆ ಸೇರಿದ ಪೂಜೆಯು ಶನಿವಾರದ ದಿನವಿದ್ದಾಗ್ಯೂ ಮೇಲಿನ ಸಮಾಜದವರು ತಮ್ಮ ಕೂಟವನ್ನು ಶನಿವಾರದ ದಿವಸ ಕ್ರಮಪ್ರಕಾರ ನಡಿಸಿದರು ಸುಮಾರು ೫೦ ಮಂದಿ ಶಿಕ್ಷಕಿಗಳು ಮತ್ತು ಇತರ ಸ್ತ್ರೀಯರುಗಳು ಸಭೆಯನ್ನಲಂಕರಿಸಿದ್ದರು ಹಬ್ಬದ ಪ್ರಯುಕ್ತ ಮೆಂಬರುಗಳು ವಿಶೇಷವಾಗಿ ಬರಲಿಲ್ಲ ಶ್ರೀಮತಿ ರುಕ್ಮಿಣಿಯಮ್ಮನವರು ಓಂಕಾರ ಅಂದರೆ ಪ್ರಣವವನ್ನು ಕುರಿತು ಉಪನ್ಯಾಸವನ್ನು ಮಾಡಿದರು ಈ ಉಪನ್ಯಾಸಕ್ಕೆ ಆಧಾರಭೂತವಾಗಿ ಸೀತಾರಾಮಾಂಜನೇಯವೆಂಬ ಗ್ರಂಥದಿಂದ ನಾಲ್ಕೈದು ಪದ್ಯಗಳನ್ನು ಓದಿ, ಅದರರ್ಥವನ್ನು ಸಾಧ್ಯವಾದಷ್ಟುಗೂ ಸುಲಭವಾದ ಭಾಷೆಯಲ್ಲಿ ವಿವರಿಸಿ ಪ್ರಣವಾರ್ಥವೆಂಬುದು ವಿಶ್ವವನ್ನೇ ಅಡಗಿಸಿಕೊಂಡಿರುತ್ತದೆಂದು ಹೇಳಿ, ಈ ಪ್ರಣವವನ್ನು ತಿಳಿಯದ ಮನುಷ್ಯನು ಬ್ರಹ್ಮವೇತ್ತನಾಗಲಾರನೆಂದು ಹೇಳಿದರು ಈ ಅರ್ಥವನ್ನು ತಿಳಿದ ಮನುಷ್ಯನು ಯಾವನುಂಟೋ ಅವನು ಜಗತ್ತಿಗೆ ಉಪಕಾರಿಯಾಗಿರುತ್ತಾನೆಂತಲೂ, ಸರ್ವೇಶ್ವರನ ಸೇವೆಯಲ್ಲಿ ಶಾಶ್ವತದಾ ನಿರತನಾಗಿರುತ್ತಾನೆಂತಲೂ ಅನೇಕ ಉದಾಹರಣೆಗಳಿಂದ ಉಪನ್ಯಾಸವನ್ನು ಮಾಡಿ ಪೂರೈಸಿದರು ತದನಂತರದಲ್ಲಿ ಹಾರ್ಮೋನಿಯಂ ವಾದ್ಯ ನುಡಿಸಲ್ಪಟ್ಟು ೫ ಘಂಟೆಗೆ ವಿಸಿಟಿಂಗಿನ ಕಾರ್ಯಗಳೆಲ್ಲವನ್ನೂ ತೀರಿಸಿದರು ದೇವರಿಗೆ ಆರ್ತಿ ಸಮರ್ಪಿಸಲ್ಪಟ್ಟಿತು ಶಿಕ್ಷಕಿಗಳ ಸಂಗಡ ಬಂದಿದ್ದ ಕೇವಲ ಸಣ್ಣ ವಯಸ್ಸಿನ ಇಬ್ಬರು ಹೆಣ್ಣು ಮಕ್ಕಳು ಅತಿ ಶ್ರಾವ್ಯವಾಗಿಯೂ, ಮನೋಹರವಾಗಿಯೂ ಒಂದೆರಡು ಕೃತಿಗಳನ್ನು ಹಾಡಿದರು ಇದರಿಂದ ಅಲ್ಲಿ ಸೇರಿದ್ದ ಮಿತ್ರಿಯರೆಲ್ಲರೂ ಬಹಳ ಸಂತೋಷಪೂರ್ಣರಾದರು ಬರುವ ವಿಸಿಟಿಂಗ್ ಸೆಪ್ಟೆಂಬರು ೪ನೇ ತಾ ನಡೆಯುವುದು. ಮೆಂಬರುಗಳೂ ಶಿಕ್ಷಕಿಗಳು ಮುಂತಾದವರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತೆ

ಸ್ತ್ರೀ ಸಮಾಜಗಳಿಂದ ಪ್ರಯೋಜನವುಂಟೇ?

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಸಮಾಜದ ಸಭೆಯಲ್ಲಿ ಎ ಶಿಂಗಮ್ಮನವರು ಹೇಳಿದ ಉಪನ್ಯಾಸದಲ್ಲಿ ಮುಖ್ಯವಾದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತೇವೆ —

ಅನೇಕ ಆರ್ಯ ಬಾಲಕಿಯರು ವೀಣೆಯನ್ನು ಮಾತ್ರವಲ್ಲದೆ ಹಾರ್ಮೋನಿಯಂ ಮೊದಲಾದ ಇಂಗ್ಲೀಷ್ ವಾದ್ಯಗಳನ್ನು ಸಹ ನುಡಿಸುವರು ಹೀಗೆ ನುಡಿಸುವ ವಾದ್ಯಗಳನ್ನು ಕೇಳುವುದರಲ್ಲಿ ನಾಚ ಉಂಟೋ ಅಂಥವರನ್ನು ಪ್ರೋತ್ಸಾಹಪಡಿಸಿ ಅವರು ಬಡವರಾಗಿದ್ದ ಪಕ್ಷದಲ್ಲಿ ಅವರಿಗೆ ಸಹಾಯ ಮಾಡುವುದು ಅಯುಕ್ತವಾದ ಕಾರ್ಯವೋ ಈ ರೀತಿ ಪರಸ್ಪರ ಸಹಾಯದಿಂದ ಹೆಂಗಸರಲ್ಲಿ ಮಾತ್ರವಲ್ಲದೆ ಪುರುಷರಲ್ಲಿ ಸಹ ನಿಸ್ವಾರ್ಥ ಮೈತ್ರೀ ಭಾವಗಳು ಕ್ರಮ ಕ್ರಮವಾಗಿ ವೃದ್ಧಿ ಹೊಂದುವವು ಇಂಥಾ ಕಾರ್ಯಕ್ಕೆ ಅತ್ಯಂತವಾಗಿ ಅಡ್ಡಿಯಾಗಿರತಕ್ಕವು ಮೊದಲು ಮಾತ್ಸರ್ಯ, ಎರಡನೇದು ಸಂಕೋಚ, ಮೂರನೇದು ಅವಳು ಚಿಕ್ಕವಳು ನಾನು ದೊಡ್ಡವಳು ಎಂಬ ದುರಭಿಮಾನ, ಇವುಗಳಿಂದಲೇ ಮೇಲೆ ಹೇಳಿದ ಅಭ್ಯಂತರವು ಏರ್ಪಟ್ಟಿರುವುದು ಆದಾಗ್ಯೂ ತಮ್ಮಂಥವರುಗಳು ಪ್ರಯತ್ನಪಟ್ಟು ಕೈಗೂಡಿಸಿದರೆ ಬಹಳ ಪ್ರಯೋಜನ ಉಂಟಾಗುವುದರಲ್ಲಿ ಸಂದೇಹವಿಲ್ಲ ನಾವು ಹೀಗೆ ಮಾಡಿದ್ದಾದರೆ ಈ ವಿಷಯದಲ್ಲಿ ಪುರುಷರು ಸಹ ನಮಗೆ ಅನುಕೂಲವಾದ ಸಹಾಯ ಸಾಧನಗಳನ್ನು ಕಲ್ಪಿಸುವರು ಪ್ರಪಂಚದ ನೀತಿಯು ಅಂದರೆ ಚರಿತ್ರೆಯನ್ನು ತಿಳಿಯುವವು ಸ್ನೇಹವನ್ನು ಸಂಪಾದಿಸುವವು ನಮ್ಮ ಸಮಾಜಗಳು ಗೌರವಕ್ಕೆ ಅರ್ಹಗಳಾಗುವವು ಬುದ್ಧಿ ಚಮತ್ಕಾರಗಳು ವೃದ್ಧಿಯಾಗಿ ಮೌಢ್ಯವು ನಶಿಸಿ ಕ್ರಮೇಣ ಸಂಸಾರನಿಸ್ತರಣವೆಂಬುದು ಸಾಧ್ಯವಾಗುವುದು ಈ ಕಾರ್ಯಕ್ಕೆ ನಾವು ಪುರುಷರ ಸಹಾಯವನ್ನು ಎದುರುನೋಡಬಾರದು ಸಾವೇ ಮುಂದಾಗಿ ಅವರ ಬುದ್ಧಿವಾದಗಳಿಂದ ವಿಚಾರಿಸತಕ್ಕದ್ದಾಗಬೇಕು ಆದರೆ ಇಂಥಾ ಪ್ರಯತ್ನಗಳಲ್ಲಿ ಪ್ರಥಮ ಪ್ರವರ್ತಕರಿಗೆ ಆಕ್ಷೇಪಣೆ ಮತ್ತು ಕಷ್ಟಗಳಿಲ್ಲದೇ ಹೋಗಲಾರವು ಒಳ್ಳೇ ಕೆಲಸವಾದ್ದರಿಂದ ಅಂಥಾ ಮಾತುಗಳನ್ನು ನಾವು ಲಕ್ಷ್ಯಕ್ಕೆ ತರಬಾರದು ಈ ಬೆಂಗಳೂರು ಪಟ್ಟಣಕ್ಕೆಲ್ಲಾ ಎರಡು ಕುಟುಂಬದವರು ಮಾತ್ರ ಈ ರೀತಿ ಧೃಢಚಿತ್ತರಾಗಿದ್ದ ಪಕ್ಷದಲ್ಲಿ ಅಪ್ರಾರ್ಥಿತವಾಗಿ ಇತರರು ಅವರನ್ನು ಹಿಂಬಾಲಿಸುವದರಲ್ಲಿ ಸಂದೇಹವಿಲ್ಲ

ವರ್ತಮಾನ ಪತ್ರಿಕೆಗಳಲ್ಲಿ ಸ್ತ್ರೀ ವಿದ್ಯಾಭ್ಯಾಸದ ಪ್ರಯೋಜನವನ್ನು ಕುರಿತು ಉಪನ್ಯಾಸಗಳನ್ನು ಓದುತ್ತಲೇ ಇದ್ದೇವೆ ಆದರೆ ಅದರಂತೆ ನಾವು ನಡೆಯುವ ಕಾಲಕ್ಕೆ ಮಾತ್ರ ಶೋಚನೀಯವಾಗಿರುತ್ತೆ ತಪ್ಪುಗಳಿಲ್ಲದಿದ್ದರೆ ಆಕ್ಷೇಪಣೆಯನ್ನು ಮಾಡುತ್ತೇವೆ, ತಪ್ಪುಗಳಿದ್ದಲ್ಲಿ ತಿದ್ದುವುದಕ್ಕೆ ಪ್ರಯತ್ನಪಡುವುದಿಲ್ಲ ಹೀಗಿದ್ದರೆ ನಾವು ಎಂದಿಗೆ ಒಂದಾಗಕ್ಕದ್ದು ಈ ಸ್ನೇಹವು ಹ್ಯಾಗೆ ವೃದ್ಧಿಯಾಗುವುದು?

ನಾರೀಮಣಿಗಳಾದ ತಮಗಳ ಮತ್ತು ನನ್ನ ಪ್ರಯೋಜನಕ್ಕೆ ಮಾತ್ರ ನಾನು ಈ ಮಾತುಗಳನ್ನು ಹೇಳುವುದಿಲ್ಲ ನಮ್ಮ ಸಮೂಹದ ಅಭಿವೃದ್ಧಿಗಾಗಿ ಹೇಳುವವಳಾಗಿರುತ್ತೇನೆ ಇದರಿಂದ ನಾನಾ ವಿಧ ಪ್ರಯೋಜನಗಳುಂಟು ಇದರಲ್ಲಿ ನಾವೆಲ್ಲರೂ ಐಕಮತ್ಯದಿಂದ ಸೇರಿ ಅನೇಕ ಒಳ್ಳೇ ಕಾರ್ಯಗಳನ್ನು ಮಾಡಬಹುದು ನಮ್ಮ ಸಹಾಯವು ಅನೇಕ ವಿಧದಲ್ಲಿ ಲೋಕಕ್ಕೆ ಅವಶ್ಯಕವಾಗಿರುತ್ತದೆ ಧರ್ಮವನ್ನು ಕಾಪಾಡಬಹುದು, ದಾನಮಾಡಬಹುದು, ದಿಕ್ಕಿಲ್ಲದ ಮಕ್ಕಳನ್ನು ಸಂರಕ್ಷಿಸಬಹುದು, ದೇವರನ್ನು ಪೂಜಿಸಬಹುದು, ಆರೋಗ್ಯಭಾಗ್ಯಹೀನರಾದವರನ್ನು ಉಪಚರಿಸಬಹುದು, ಮನೆಮನೆಗಳಿಗೆ ಹೋಗಿ ಹಿತಬೋಧನೆಗಳನ್ನು ಮಾಡಿ ಅಂಥಾ ಹಿತೋಕ್ತಿಗಳಿರುವ ಅಚ್ಚಾದ ಪುಸ್ತಕಗಳನ್ನು ಅವರಿಗೆ ಕೊಡಬಹುದು. ಅವರೂ ಒಳ್ಳೇ ನಡತೆಯುಳ್ಳವರಾಗಬಹುದು, ನಾವೂ ಒಳ್ಳೆಯವರಾಗಬಹುದು ಜ್ಞಾನವನ್ನು ಸಂಪಾದಿಸಲಿಕ್ಕೆ ನಾನಾ ಮಾರ್ಗಗಳುಂಟು ಪ್ರಕೃತಕಾಲದಲ್ಲಿ ಸಂಘಶಕ್ತಿ ಇರುವುದರಿಂದ ನಾವು ಅಂಥಾ ಸಂಘಕ್ಕೆ ತಕ್ಕ ಅವಕಾಶಗಳನ್ನುಂಟುಮಾಡುವವರಾಗಿರಬೇಕು ನಮ್ಮ ಮನೆಗಳು ನಮಗೆ ಬೇಸರವನ್ನುಂಟುಮಾಡಕೂಡದು ಮನೆಯ ಕೆಲಸವು ತೀರಿದನಂತರ ಬುದ್ಧಿವಿಕಾಸತೆಗೆ ಪ್ರತಿನಿತ್ಯವೂ ಸ್ವಲ್ಪ ಅವಕಾಶವನ್ನುಂಟುಮಾಡಿಕೊಂಡಿರಬೇಕು ನಮಗಿಲ್ಲದೆ ಹೋದಾಗ್ಯೂ ನಮ್ಮ ಮಕ್ಕಳಿಗೋಸ್ಕರ ಈ ವಿಷಯಗಳನ್ನು ಬಹು ದೀರ್ಘವಾಗಿ ಯೋಚಿಸಬೇಕಾಗಿರುತ್ತದೆ

ಇದು ಸ್ವವಿಚಾರವಾಯಿತು ಇನ್ನು ನಮ್ಮ ಬಡಸ್ತ್ರೀಯರಿಗೂ ಭಾಗ್ಯಹೀನರಾದ ಇತರ ಸ್ತ್ರೀಯರಿಗೂ ಉತ್ತಮಸ್ಥಿತಿ ಉಂಟಾಗಬೇಕೆಂಬುದನ್ನು ಯೋಚಿಸಬೇಕಾಗಿರುತ್ತದೆ ಈ ಕಾರ್ಯ ನಮ್ಮಿಂದಲೇ ಆಗಬೇಕು ಬಹುಮಂದಿ ನಮ್ಮ ಸಹಾಯಕ್ಕೆ ಅರ್ಹರಾಗಿರುತ್ತಾರೆ ಬಹುಮಂದಿ ಸ್ತ್ರೀಯರು ವಿಕ್ಟೋರಿಯಾ ಹಾಸ್ಪತ್ರೆ ಮುಂತಿರುವ ವೈದ್ಯಶಾಲೆಗಳಲ್ಲಿ ರೋಗಪೀಡಿತರಾಗಿ ಸಂಕಟಪಡುತ್ತಲಿರುತ್ತಾರೆ ಅವರುಗಳನ್ನು ನಾವು ಯಾವದಾದರೂ ಒಂದು ದಿನ ನೋಡಿ, ಅವರಿಗೆ ಉಪಚಾರೋಕ್ತಿಗಳನ್ನು ಹೇಳಿ, ತಿಂಡಿತೀರ್ಥಗಳನ್ನು ಒದಗಿಸಿದರೆ ಅವರಿಗೆ ಎಷ್ಟು ಉತ್ಸಾಹ ಉಂಟಾಗುವುದು! ಅವರ ರೋಗ ಎಷ್ಟು ಬೇಗ ವಾಸಿಯಾಗುವುದು ನಾವು ೫—೬ ಮಂದಿ ಸೇರಿ ಸರದಿಯ ಪ್ರಕಾರ ಕೆಲಸ ಮಾಡಿದಲ್ಲಿ ಅವರಿಗೆ ಎಷ್ಟು ಪ್ರಯೋಜನವುಂಟು ನಮಗೆ ಎಷ್ಟು ತೃಪ್ತಿಯು ಉಂಟಾಗುವುದು!

ಅನೇಕ ಬಡಹೆಂಗಸರು ಜೀವನೋಪಾಯವಿಲ್ಲದವರಾಗಿರುತ್ತಾರೆ ಇವರುಗಳಿಗೆ ಸುಲಭವಾದ ಕೈಗಾರಿಕೆ ಕೆಲಸಗಳನ್ನು ಕಲಿಸಿಕೊಟ್ಟರೆ ಎಷ್ಟು ಪ್ರಯೋಜನ! ಧನಿಕರಾಗಿರತಕ್ಕ ಆರ್ಯ ಸ್ತ್ರೀಯರು ಈ ಕೆಲಸವನ್ನು ಮಾಡಬಹುದು ನಾವು ಯಾವ ವಿಧವಾದ ಕಸಬನ್ನೂ ತಿಳಿಯದೇ ಇರುವವರಾಗಿರುತ್ತೇವೆ ಇತರರಿಗಾದರೂ ಬೋಧಿಸಲು ಅವಕಾಶಗಳನ್ನುಂಟುಮಾಡಿದರೆ ಬಹಳ ಪ್ರಯೋಜನವಾದೀತು ಕೆಲವರು ವಿಧಿಯಿಂದ ಕೆಟ್ಟು ಹೋದವರಾಗಿರುತ್ತಾರೆ. ಇಂಥಾವರನ್ನು ಬುದ್ಧಿವಾದ ಮತ್ತು ಹಿತೋಪದೇಶದ ಮೂಲಕ ತಕ್ಕ ಸ್ಥಿತಿಗೆ ತರತಕ್ಕದ್ದು ಉತ್ತಮ ಈ ರೀತಿ ಇಂಗ್ಲೀಷಿನವರಲ್ಲಿ ಪದ್ಧತಿಯುಂಟು ಮತ್ತು ಇದಕ್ಕಾಗಿಯೇ ಆಲಯಗಳನ್ನು ಏರ್ಪಡಿಸಿರುತ್ತಾರೆ ಆದ್ದರಿಂದ ನಾವು ಮಾಡಬೇಕಾದ ಕಾರ್ಯಗಳು ಬಹಳವಾಗಿರುತ್ತವೆ ಅವಕ್ಕೆ ಅಡಚಣೆಯಾಗಿ ಆಕ್ಷೇಪಣೆಗಳು ಹುಟ್ಟಬಹುದು ಕೆಲವರಿಗೆ ಸ್ಥೈರ್ಯ ಇಲ್ಲದಿರಬಹುದು ಕೆಲವರಿಗೆ ಸಂಕಟ ಉಂಟಾಗಬಹುದು ಕೆಲವರು ಹಾಸ್ಯ ಮಾಡುವರು ಈ ಮಾತುಗಳು ಕೆಲ ಕಾಲಗಳಲ್ಲಿ ನಮಗೆ ಸರಿಯಾಗಿ ತೋರಬಹುದು ಅವುಗಳನ್ನು ಪರೀಕ್ಷಿಸಿ ನಮ್ಮ ಪುರೋಭಿವೃದ್ಧಿಯನ್ನೇ ಯೋಚನೆಮಾಡತಕ್ಕದ್ದು ನಮ್ಮ ಕರ್ತವ್ಯವಾಗಿರುತ್ತೆ ಈ ಕಾರ್ಯ ಈಗ ಚಿಕ್ಕದಾಗಿರಬಹುದು ಸಮುದ್ರದಲ್ಲಿ ಅಲೆಯು ಬರುವಾಗ ಚಿಕ್ಕದಾಗಿಯೇ ಇರುತ್ತದೆ ಆದರೆ ಬರಬರುತ್ತ ಅಲೆಗಳು ದೊಡ್ಡವಾಗುತ್ತವೆ ಆದ್ದರಿಂದ ಮಂದಿರದಿಂದ ಪ್ರಯತ್ನಪಟ್ಟಿರುವ ಈ ಸ್ತ್ರೀಸಮಾಜದ ಕಾರ್ಯವು ನೀವುಗಳೆಲ್ಲರೂ ಏಕಮನಸ್ಕರಾಗಿದ್ದ ಪಕ್ಷದಲ್ಲಿ ದೊಡ್ಡ ವೃಕ್ಷವಾಗಿ ಫಲಕಾರಿಯಾಗುವುದರಲ್ಲಿ ಯಾವ ಸಂದೇಹವೂ ಕಾಣುವುದಿಲ್ಲ ಆದ್ದರಿಂದ ಹಿರಿಯರಾಗಿಯೂ ಸಹೋದರಿಗಳಾಗಿಯೂ ಇರುವ ನೀವುಗಳು ಆಕ್ಷೇಪಣೆಕರವಾದ ತೊಂದರೆಗಳನ್ನು ಬಿಡಿಸಿ, ಈ ಕಾರ್ಯವನ್ನು ಸಾಂಗೋಪಾಂಗವಾಗಿ ನಡಿಸಿಕೊಂಡು ಬರಬೇಕೆಂದು ಪ್ರಾರ್ಥಿಸುತ್ತೇನೆ

ವರ್ತಮಾನಗಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಕಾಗದಗಳಿಗೆ ನಾವು ಗಮನಕೊಡಲಾರೆವು ಆದಕಾರಣ ವರ್ತಮಾನಗಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ವರ್ತಮಾನಗಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಈ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಮಂಡ್ಯದ ತಾಲ್ಲೂಕು ಕಚೇರಿಯ ಗುಮಾಸ್ತರು ಶೇಕದಾರರೂ, ತಾಲ್ಲೂಕು ನೌಕರವರ್ಗದವರೂ ತಮ್ಮ ನ್ಯಾಯವಾದ ಕೆಲಸಗಳನ್ನು ಕ್ರಮವಾಗಿ ನಡಿಸುತ್ತಾ ಇಲ್ಲವೆಂದು ಮುಂತಾಗಿ ಒಬ್ಬ ವರ್ತಮಾನಗಾರರು ಬರೆದಿದ್ದಾರೆ ಇದನ್ನು ಪ್ರಕಟಿಸಲು ನಮಗೆ ಇಷ್ಟವಿಲ್ಲವಾದರೂ ಅಮಲ್ದಾರರು ಈ ವಿಚಾರಕ್ಕೆ ಗಮನಕೊಟ್ಟು ಆ ನೌಕರವರ್ಗದವರು ತಮ್ಮ ಕರ್ತವ್ಯವನ್ನು ಸಕಾಲದಲ್ಲಿ ಮುತುವರ್ಜಿಯಿಂದ ನೆರವೇರಿಸುವಂತೆ ನೋಡಿಕೊಳ್ಳುವರೆಂದು ನಿರೀಕ್ಷಿಸುತ್ತೇವೆ

ಎಡಿ

ಕರೆಸ್ಪಾಂಡೆನ್ಸ್

ಗ್ರ್ಯಾಂಟು ಸ್ಕೂಲ್ ಉಪಾಧ್ಯಾಯರಿಗೆ ಟಪ್ಪಾಲ್ ರಿಯಾಯಿತಿಯು

ಅಯ್ಯಾ,

ಮೈಸೂರು ಸೀಮೆಯಲ್ಲಿರುವ ಸಣ್ಣ ಸಣ್ಣ ಗ್ರಾಮಗಳಲ್ಲಿ ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಪಾಧ್ಯಾಯರುಗಳನ್ನು ಗೊತ್ತುಮಾಡಿಕೊಂಡು ತಾವುತಾವೇ ಪಾಠಶಾಲೆಗಳನ್ನು ಏರ್ಪಾಡು ಮಾಡುವುದು ಸರಿಯಷ್ಟೆ ಇಂತಹ ಪಾಠಶಾಲೆಗಳಿಗೆ ಸರ್ಕಾರದ ಸಹಾಯವೂ ಮೇಲ್ವಿಚಾರಣೆಯೂ ಇದ್ದ ಪಕ್ಷದಲ್ಲಿ ಇವು ಶಾಶ್ವತವಾಗಿಯೂ ವಿಚಕ್ಷಣೆಯಿಂದಲೂ ನಡೆದು ಪ್ರಜೆಗಳ ಏಳಿಗೆಗೆ ತುಂಬಾ ಅನುಕೂಲವಾಗುವದೆಂದು ಉದಾರಿಗಳಾದ ನಮ್ಮ ಸರ್ಕಾರದವರು ಮನಃಪೂರ್ವಕವಾಗಿ ಪರ್ಯಾಲೋಚಿಸಿ, ಈ ಪಾಠಶಾಲೆಗಳನ್ನು ಸರ್ಕಾರಕ್ಕೆ ಸೇರಿಸಿಕೊಂಡು ವರ್ಷವರ್ಷ ಪರೀಕ್ಷೆ ಮಾಡಿ, ಸಹಾಯ ದ್ರವ್ಯವನ್ನು (ಗ್ರ್ಯಾಂಟು) ಕೊಡಲು ಏರ್ಪಾಡು ಮಾಡಿರುತ್ತಾರೆ ಸದರಿ ಪಾಠಶಾಲೆಗಳು ಸರ್ಕಾರಕ್ಕೆ ದಾಖಲಾದನಂತರ ಇವುಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳು ಸ್ಕೂಲ್ ಇಲಾಖೆಗೆ (ಇನ್ಸ್‌ಪೆಕ್ಟರುಗಳಿಗೆ) ತಮ್ಮ ಪಾಠಶಾಲೆ ಸಂಬಂಧಪಟ್ಟ ಕೆಲಸಗಳ ವಿಚಾರವಾಗಿ ಬರೆಯುವ ರಿಕಾರ್ಡುಗಳನ್ನು ಸರ್ಕಾರಿಯಾಗಿ ರವಾನಿಸಬಹುದೇ? ಅಥವಾ ಕೂಡದೇ? ಈ ಸಂಗತಿಯನ್ನು ದಯಮಾಡಿ ತಮ್ಮ ಅಮೋಘವಾದ ಪತ್ರಿಕೆಯ ಮೂಲಕ ತಿಳಿಸೋಣವಾಗಬೇಕೆಂದು ಕೋರುತ್ತೇನೆ ಹಾಗೆ ಒಂದ ವೇಳೆ ಈ ಉಪಾಧ್ಯಾಯರು ಸರ್ಕಾರಿಯಾಗಿ ರಿಪೋರ್ಟುಗಳನ್ನು ರವಾನಿಸತಕ್ಕ ರೂಢಿಯು ಇಲ್ಲದಿದ್ದ ಪಕ್ಷದಲ್ಲಿ ದಯಾಳುಗಳಾದ ಸರ್ಕಾರದವರು ಕರುಣವಿಟ್ಟು ಇನ್ನು ಮುಂದೆಯಾದರೂ ಈ ಬಡ ಉಪಾಧ್ಯಾಯರಿಗೆ ಈ ವಿಷಯದಲ್ಲಿ ರಿಯಾಯಿತಿಯನ್ನುಂಟುಮಾಡಿಕೊಟ್ಟಾರೆಂದು ಬೇಡಿಕೊಳ್ಳುವ

ಒಬ್ಬ ಗ್ರಾಮ ಪಾಠಶಾಲೋಪಾಧ್ಯಾಯ

ಕ್ಯಾಪ್ಟನ್ ದಾಸ್ ಮೆಮೋರಿಯಲ್ ಫಂಡು.

ಅಯ್ಯಾ,

ತಮ್ಮ ವಾಚಕರಲ್ಲಿ ನಾನು ಒಬ್ಬ ವಾಚಕನಾಗಿರುತ್ತೇನೆ ತಾ ೧೯ ನೇ ಆಗಸ್ಟು ೧೯೦೯ ರಲ್ಲಿ ತಮ್ಮ ಪತ್ರಿಕೆಯಲ್ಲಿ ನಮೂದಿಸಿರುವ ಪ್ರಕಾರ ಶ್ರೀ ಕ್ಯಾಪ್ಟನ್ ದಾಸ್ ಮೆಮೋರಿಯಲ್ ಫಂಡಿಗೆ ಹತ್ತು ರೂಪಾಯಿಗಳನ್ನು ತಮ್ಮ ಅಪ್ಪಣೆಯಂತೆ ಬೆಂಗಳೂರು ಯಕ್ಸೈಸ್ ಕಮಿಷನರ್ ಮೆ॥ ಎಚ್ ಎಚ್ ಸ್ಪಾರ್ಕ್ಸ್ ಸಾಹೇಬರವರ ಸನ್ನಿಧಾನಕ್ಕೆ ಮನಿ ಆರ್ಡರು ಮೂಲಕ ೨೬-೮ ೦೯ ರಲ್ಲಿ ರವಾನಿಸಿರುತ್ತೇನೆ ತಾವು ತಮ್ಮ ಪತ್ರಿಕೆ ಮೂಲಕ ಅಂಗೀಕರಿಸಿಕೊಳ್ಳುವಿರೆಂತ ನಂಬುತ್ತೇನೆ

ಕಳೆದ ಜೂಲೈ ೩೦ ರಲ್ಲಿ ಕ್ಯಾಪ್ಟನ್ ಬನರ್ಜಿ ದಾಸ್, ಆರ್ ಇ ಯವರು ತಮ್ಮ ಪ್ರಾಣವನ್ನು ದಾನಮಾಡಿದ ವಿಚಾರವು ತಮ್ಮ ಪತ್ರಿಕೆಯಿಂದ ತಿಳಿದು ಬಹಳ ವ್ಯಸನವೆಂಬ ಸಮುದ್ರದಲ್ಲಿ ಮುಳುಗಿದಂತೆ ಆಯಿತು

ಇವರು ರೈತರುಗಳಿಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಮಾಡಿದ ಉಪಕಾರಗಳು ನಾವು ಮರೆಯಲಾರೆವು ಇನ್ನು ನಮ್ಮ ಸಂಸ್ಥಾನದ ಅಭಿವೃದ್ಧಿಗೆ ಎಷ್ಟು ಮೆಹನತ್ತು ಮಾಡಿ ರೈತರುಗಳನ್ನು ಕಾಪಾಡುತ್ತಾ ನಮ್ಮಗಳ ಅಭಿವೃದ್ಧಿ ಅವರು ನೋಡಿ ಎಷ್ಟು ಸಂತೋಷಮಗ್ನರಾಗುತ್ತಿದ್ದರೆಂಬುವದಕ್ಕೆ ಏನೂ ಅಭ್ಯಂತರವಿರಲಿಲ್ಲವೆಂದು ನಂಬುತ್ತೇನೆ

ಇವರು ಚಿಕ್ಕಪ್ರಾಯದಲ್ಲಿ ಈ ಪದವಿಗೆ ಬಂದು ಒಬ್ಬ ಬೆಸ್ತನ ಪ್ರಾಣವನ್ನು ಉಳುಕಿಸುವದಕ್ಕೆ ಹೋಗಿ ತಮ್ಮ ಪ್ರಾಣವನ್ನು ಕೊಟ್ಟುಬಿಟ್ಟರು ಶ್ರೀ ದೇವರು ಇವರನ್ನು ಸ್ವರ್ಗದಲ್ಲಿಯೂ ಅನೇಕ ಪದವಿ ಕೊಟ್ಟು ಚನ್ನಾಗಿ ಕಾಪಾಡುತ್ತಾರೆಂಬುವದಕ್ಕೆ ಏನೂ ಅಭ್ಯಂತರವಿಲ್ಲವೆಂದು ನಂಬುತ್ತೇನೆ

ಈ ಲೋಕದಲ್ಲಿಯೂ ಶ್ರೀ ಚಿರಸ್ಮರಣೀಯರಾಗಿ ಅನೇಕ ಘನವನ್ನು ಹೊಂದಿದ ಅವರ ಸ್ನೇಹಿತರುಗಳು ಮಾಡಿದ ಆಲೋಚನೆಗೂ ಕ್ಯಾಪ್ಟನ್ ದಾಸ್ ಮೆಮೋರಿಯಲ್ ಇವರ ಉದ್ದೇಶಕ್ಕೂ, ಸಾಹಸಕ್ಕೂ ಬುದ್ಧಿಗೂ, ರೈತರುಗಳಿಗೆ ಮಾಡಿದ ಉಪಕಾರಕ್ಕೂ, ಸಾಯುವ ಕಾಲದಲ್ಲಿ ಒಬ್ಬನ ಪ್ರಾಣವನ್ನು ಬದುಕಿಸುವದಕ್ಕೆ ತಮ್ಮ ಪ್ರಾಣವನ್ನು ಕೊಟ್ಟದ್ದಕ್ಕೂ ಪರಲೋಕದಲ್ಲಿ ಶ್ರೀ ದೇವರು ಅವರಿಗೆ ಅತ್ಯಂತ ಸುಖ ಆರೋಗ್ಯಭಾಗ್ಯ ಸಂಪತ್ತುಗಳು ಕೊಡಲಿ ಎಂತ ಪ್ರಾರ್ಥಿಸುತ್ತೇನೆ

ನಾನು ವಂದಿಸುವಂತೆ ನನ್ನ ಮಿತ್ರಮಂಡಲಿಯವರೆಲ್ಲಾ ಮತ್ತು ತಮ್ಮ ವಾಚಕರೆಲ್ಲರೂ ಇದೇ ರೀತಿ ಇಷ್ಟಾನುಸಾರ ಅವರ ಮೆಮೋರಿಯಲ್ ಫಂಡಿಗೆ ಸಹಾಯಕರಾಗಿ ಅವರನ್ನು ಸ್ತೋತ್ರಮಾಡುವರೆಂತಲೂ ನಾನು ವಂದಿಸುತ್ತೇನೆ ಈ ರೀತಿ ನನ್ನ ವೇದನೆ ಯನ್ನು ಬರುವ ವಾರದ ಪತ್ರಿಕೆಯಲ್ಲಿ ನಮೂದಿಸಿ ಅನೇಕ ವಾಚಕರಿಗೆ ತಿಳಿಯಪಡಿಸುವರೆಂತಲೂ ನಂಬುತ್ತೇನೆ

ಮೋಸಮಕ್ಕಿ, ಬೇಗೋಡು ಎಂ ಸಂಜೀಗೌಡ ಕಾಫಿಪ್ಲಾಂಟರ್

ಪ್ರಜಾಪ್ರತಿನಿಧಿಗಳಿಗೆ ಸಲಹೆಗಳು

ಅಯ್ಯಾ,

ಮೈಸೂರಿನಲ್ಲಿ ನಡೆಯುವ ದಸರಾ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿರತಕ್ಕ ರಾವ್ ಮಹನೀಯರು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಈ ಕೆಳಗೆ ನಮೂದಿಸುವ ಸಂಗತಿಗಳನ್ನು ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ

೧ ದೇಶದ ನಾಗರಿಕತೆಗೆ ಅವಶ್ಯವಾದ ವಿದ್ಯಾಭ್ಯಾಸವು ಗಂಡಸರಿಗೂ, ಹೆಂಗಸರಿಗೂ ಕೂಡ ಅವಶ್ಯವೆಂಬುದಕ್ಕೆ ಅನೇಕ ಕಾರಣಗಳಿವೆ ಪರಂತು ಸ್ತ್ರೀಯರಿಗೆ ಗೃಹ ವಿದ್ಯಾಭ್ಯಾಸ ಇಲ್ಲದಿದ್ದರೆ ಆ ಗೃಹ ವಿವೇಕಿಯರಾಗಿ ಸನ್ಮಾರ್ಗಪ್ರವರ್ತಕರಾಗಲಿಕ್ಕೆ ಸಹಕಾರಿಯಾಗುವದು ವಿದ್ಯಾಭ್ಯಾಸವು ಅತ್ಯವಶ್ಯವಾಗಿರುತ್ತದೆ ಈಗ ಗ್ರಾಮಾಂತರಗಳಲ್ಲಿ ಗಂಡುಮಕ್ಕಳ ವಿದ್ಯಾಭಿವೃದ್ಧಿಗಾಗಿ ಒಂದೊಂದು ಸ್ಕೂಲನ್ನು ಸರ್ಕಾರದವರು ಏರ್ಪಡಿಸಿಕೊಂಡಿರುವುದರಿಂದ ಅದರಲ್ಲಿಯೇ ಹೆಣ್ಣುಮಕ್ಕಳೂ ಪಠಿಸಿ ಬರುವಂತಾಗಬಹುದೆಂದು ಆಲೋಚಿಸಬಹುದು ಆದರೆ ಹಳ್ಳಿಗಳಲ್ಲಿರುವ ಜನರು ತಮ್ಮ ಗಂಡುಹುಡುಗರ ಸ್ಕೂಲಿಗೆ ಬಾಲಕಿಯರನ್ನು ಕಳುಹಿಸತಕ್ಕ ರೂಢಿಯನ್ನಿಟ್ಟುಕೊಳ್ಳದೆ, ಮೌಢ್ಯದಿಂದ ... ಇದರಿಂದ ನಮ್ಮ ಸೀಮೆಯ ನಾನಾ ಭಾಗಗಳಲ್ಲಿಯೂ, ಅನೇಕ ಬಾಲಕಿಯರು ವಿದ್ಯೆಯಿಲ್ಲದೆ ವ್ಯರ್ಥಕಾಲಕ್ಷೇಪ ಮಾಡುತ್ತ ನಿರ್ಲಕ್ಷ್ಯರಾಗಿ ಬೆಳೆಯುತ್ತಲಿದ್ದಾರೆ ಆದಕಾರಣ ಪ್ರತಿಯೊಂದು ದೊಡ್ಡ ಗ್ರಾಮದಲ್ಲಿಯೂ ಒಂದೊಂದು ಗರ್ಲ್ಸ್ ಸ್ಕೂಲನ್ನು ಪ್ರತ್ಯೇಕವಾಗಿ ಸ್ಥಾಪಿಸಿಕೊಟ್ಟಲ್ಲಿ ತುಂಬಾ ಅನುಕೂಲವಾಗುವುದಲ್ಲದೆ, ಈ ಮೇಲ್ಪಂಕ್ತಿಯನ್ನನುಸರಿಸಿ ಗರ್ಲ್ಸ್ ಸ್ಕೂಲು ಇಲ್ಲದೆ ಇರುವ ಸ್ಥಳಗಳಲ್ಲಿರುವ ಬಾಲಕಿಯರಿಗೂ ಸಹ ವಿದ್ಯೆಯನ್ನು ಕಲಿಯಬೇಕೆಂಬ ಕುತೂಹಲವುಂಟಾಗಿ, ಆಯಾ ಗ್ರಾಮದಲ್ಲಿರತಕ್ಕ ಗಂಡು ಹುಡುಗರ ಸ್ಕೂಲಿಗೇ ಹೋಗಿ ವಿದ್ಯೆಯನ್ನು ಕಲಿಯಲು ಮಾರ್ಗವಾಗುವುದು ಈ ಸಂಗತಿಯನ್ನು ಸರ್ಕಾರದವರು ಪರ್ಯಾಲೋಚಿಸಿ, ಪ್ರತಿಯೊಂದು ದೊಡ್ಡ ಗ್ರಾಮದಲ್ಲಿಯಾದರೂ ಒಂದೊಂದು ಗರ್ಲ್ಸ್ ಸ್ಕೂಲನ್ನು ಏರ್ಪಾಡು ಮಾಡಬೇಕು

೨ ಈ ಸೀಮೆಯಲ್ಲಿ ಬಡವರಾಗಿರತಕ್ಕ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ತರಗತಿಯ ಪುಸ್ತಕಗಳನ್ನು ಉಚಿತವಾಗಿ ಒದಗಿಸಿಕೊಡಬೇಕು ಅಲ್ಲದೆ, ಪ್ರೈಮರಿ ವಿದ್ಯಾಭ್ಯಾಸವು ಪೂರೈಸುವವರೆಗೆ ಎಲ್ಲಾ ವಿದ್ಯಾರ್ಥಿನಿಯರಿಗೂ ಪಾಠಪುಸ್ತಕಗಳನ್ನು ಅಗತ್ಯವಾಗಿ ಮುಫತ್ತು ಕೊಡಿಸಬೇಕು

೩ ಕನ್ನಡ ಭಾಷಾಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ದಯವಿಟ್ಟು ಗಮನವನ್ನು ಕೊಡಬೇಕು ಇದಕ್ಕಾಗಿ ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲಿಯೂ ಅವಶ್ಯವಾದ ಇತರ ಸ್ಥಳಗಳಲ್ಲಿಯೂ ಅಪ್ಪರ್ ಸೆಕೆಂಡರಿ ಪರೀಕ್ಷೆಯ ವರೆಗೂ ವಿದ್ಯಾಭ್ಯಾಸ ನಡೆಯುವುದಕ್ಕೆ ಏರ್ಪಾಡು ಮಾಡಬೇಕು ಮೈಸೂರಿನಲ್ಲಿರುವಂತೆ ಬೆಂಗಳೂರಿನಲ್ಲಿಯೂ ಒಂದು ನಾರ್ಮಲ್ ಸ್ಕೂಲನ್ನು ಸ್ಥಾಪಿಸಿ, ಇದರಲ್ಲಿಯೂ ಪಂಡಿತ ಪರೀಕ್ಷೆಯ ವರಿಗೂ ತರಗತಿಗಳನ್ನು ಏರ್ಪಡಿಸಬೇಕು ಅಲ್ಲದೆ ಪ್ರತಿ ವರ್ಷವೂ ಸ್ಕೂಲ್ ಮಾಸ್ಟರುಗಳನ್ನು ವಿದ್ಯಾಭ್ಯಾಸಂಗಕ್ಕೋಸ್ಕರ ನಾರ್ಮಲ್ ಸ್ಕೂಲಿಗೆ ಚುನಾವಣೆ ಮಾಡುವುದರಲ್ಲಿ ಪೂರ್ವ ಸರ್ಕಲಿನ ನಾಲ್ಕು ಡಿಸ್ಟ್ರಿಕ್ಟುಗಳಿಂದ ಬೆಂಗಳೂರಿಗೂ, ಪಶ್ಚಿಮ ಸರ್ಕಲಿನ ನಾಲ್ಕು ಡಿಸ್ಟ್ರಿಕ್ಟುಗಳಿಂದ ಮೈಸೂರಿಗೂ ಕಳುಹಿಸುವಂತಾಗಬೇಕು

೪ ಸ್ಕೂಲುಗಳ ತನಿಖೆಯ ಬಗ್ಗೆ ಏರ್ಪಡಿಸಲ್ಪಟ್ಟಿರುವ ಅಸಿಸ್ಟಂಟ್ ಡೆಪ್ಯುಟಿ ಇನ್ಸ್‌ಪೆಕ್ಟರುಗಳಿಗೆ ಈಗ ಸಾಕಾದಷ್ಟು ಕೆಲಸವು ಕೊಡಲ್ಪಟ್ಟಿರುವದಿಲ್ಲ ಆದುದರಿಂದ ಇವರುಗಳಿಗೆ ಇನ್ನೂ ಸ್ವಲ್ಪ ಕೆಲಸವನ್ನು ಹೆಚ್ಚಿಸಿ, ಡಿಸ್ಟ್ರಿಕ್ಟು ವಾರು ಎಲ್ಲಾ ಸ್ಕೂಲುಗಳ ಮೇಲ್ವಿಚಾರಣೆಯನ್ನೂ ಹಿಂದಿನಂತೆ ಡೆಪ್ಯುಟಿ ಇನ್ಸ್‌ಪೆಕ್ಟರುಗಳವರ ಅಧೀನಕ್ಕೇ ಕೊಟ್ಟರೆ ಸಾಕಾಗಿರುತ್ತದೆ ಈಗ ಸರ್ಕಲ್ ಇನ್ಸ್‌ಪೆಕ್ಟರುಗಳ ಆಫೀಸುಗಳನ್ನಿಟ್ಟಿರತಕ್ಕದು ಸರ್ಕಾರಕ್ಕೆ ತುಂಬಾ

ದುಬಾರಿ ಖರ್ಚಿಗೆ ಕಾರಣವಾಗಿರುತ್ತದೆಯೇ ಹೊರತು, ಈ ಆಫೀಸುಗಳು ಸ್ಥಾಪಿಸಲ್ಪಡುವುದಕ್ಕಿಂತ ಮುಂಚೆ ನಡೆಯುತ್ತಿದ್ದುದಕ್ಕಿಂತಲೂ ಈಗ ಹೆಚ್ಚಿಗೆ ಕೆಲಸವೇನೂ ನಡೆಯುತ್ತಲಿಲ್ಲ. ಈ ಸಿಬ್ಬಂದಿಗಾಗಿ ಇಟ್ಟಿರುವ ಖರ್ಚನ್ನು ವಿದ್ಯಾಭ್ಯಾಸದ ಬೋಧನಾ ಕಾರ್ಯಗಳಿಗೆ ವಿನಿಯೋಗಿಸಿದರೆ ತುಂಬಾ ಸಾರ್ಥಕವಾಗುವುದು. ಆದುದರಿಂದ ಸರ್ಕಲ್ ಇನ್ಸ್‌ಪೆಕ್ಟರುಗಳ ಲವಾಜಮೆಯನ್ನು ತಪ್ಪಿಸಬೇಕು.

ವಿದ್ಯಾಭಿಲಾಷಿ

ಕುಲೀನುಪೇಟೆ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಸ್ಕೂಲು.

ಅಯ್ಯಾ,

ಈ ಊರು ವೆಸ್ಲಿಯನ್ ಮಿಷನ್ ಇಂಗ್ಲಿಷ್ ಸ್ಕೂಲು ೨೬-೨೭ ವರುಷಗಳಿಂದಲೂ ಯಾವ ನ್ಯೂನತೆಯೂ ಇಲ್ಲದೆ ಜನಗಳ ವಿಶ್ವಾಸಕ್ಕೆ ಪಾತ್ರವಾಗಿ ನಡೆದುಕೊಂಡು ಬರುತ್ತಿತ್ತು. ಹೋದ ವರುಷ ಈ ಸ್ಕೂಲಿನ ಇಬ್ಬರು ಮಾಸ್ಟರುಗಳು ಹೆಡ್ ಮಾಸ್ಟರಿಗೆ ದುಬೋಧನೆ ಮಾಡಿ ಬೇರೆ ಒಂದು ಇಂಗ್ಲಿಷ್ ಸ್ಕೂಲು ಇಡುವುದರ ಮೂಲಕ ಇದನ್ನು ತೆಗೆಸಿಹಾಕಬೇಕೆಂದು ಪ್ರಯತ್ನ ಮಾಡಿದರು. ಇದಕ್ಕೆ ಗ್ರಾಮಸ್ಥರೆಲ್ಲರೂ ಸಹಾಯ ಮಾಡಬೇಕೆಂದು ಬಲವಂತಪಡಿಸಿ, ಒಂದು ಕಮಿಟಿಯನ್ನು ಏರ್ಪಾಡುಮಾಡಿ ಅದಕ್ಕೆ ಮೆಂಬರುಗಳನ್ನು ಚುನಾಯಿಸಿದರು. ಅನಂತರ ಆ ಮೆಂಬರುಗಳು ಸಲಹೆ ಕೊಟ್ಟಂತೆ ಹೋದ ವರುಷ (ಅಂದರೆ, ೧೯೦೮ ನೇ ಇಸವಿ ಜುಲೈ ೧ ನೇ ತಾರೀಖಿನಲ್ಲಿ) ಬೇರೆ ಒಂದು ಸ್ಕೂಲನ್ನು ಇಟ್ಟು, ಮಿಷನ್ ಇಂಗ್ಲಿಷ್ ಸ್ಕೂಲಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳನ್ನು ಹೆದರಿಸಿ ಅವರ ತಾಯಿ ತಂದೆಗಳ ಕಿವಿ ಊದಿ ತಮ್ಮ ಸ್ವದೇಶೀ ಸ್ಕೂಲಿಗೆ ಸೇರಿಸಿಕೊಂಡರು.

ಹೀಗಿರುವಾಗ ಮಿಷನ್ ಇಂಗ್ಲಿಷ್ ಸ್ಕೂಲಿನ ಸೂಪರಿಂಟೆಂಡೆಂಟ್‌ರವರು ತಮ್ಮ ಸ್ಕೂಲಿಗೆ ಬೇರೆ ಇಬ್ಬರು ಹೊಸ ಮಾಸ್ಟರುಗಳನ್ನು ಕಳುಹಿಸಿದರು. ಅವರ ವ್ಯಕ್ತಿ ಹೆಡ್ ಮಾಸ್ಟರನ್ನು ಸ್ವದೇಶೀ ಸ್ಕೂಲಿನ ಮಾಸ್ಟರುಗಳು ಹೆದರಿಸಿ ಬೆದರಿಸಿ, ಒಂದು ತಿಂಗಳೊಳಗಾಗಿಯೇ ಊರು ಬಿಟ್ಟು ಹೋಗುವಂತೆ ಮಾಡಿದರು.

ಅನಂತರ ಸ್ಕೂಲಿನ ಸೂಪರಿಂಟೆಂಡೆಂಟರವರು ಪುನಃ ಮಿ॥ ಕೆ. ಸೂರ್ಯನಾರಾಯಣಪ್ಪನವರೆಂಬ ಹೆಡ್ ಮಾಸ್ಟರನ್ನು ಇಲ್ಲಿಗೆ ಕಳುಹಿಸಿದರು. ಇವರು ಈ ಊರಿಗೆ ಬಂದಾಗ ಹಳೇ ವಿದ್ಯಾರ್ಥಿಗಳ ಪೈಕಿ ಒಬ್ಬಿಬ್ಬರು ಮಿಷನ್ ಸ್ಕೂಲಿಗೆ ಬರುತ್ತಿದ್ದರೇ ವಿನಃ ಹೆಚ್ಚಾಗಿ ಇಲ್ಲ. ಇವರು ಮೂರು ತಿಂಗಳವರೆಗೂ ಗಂಭೀರ ಪಂಚವನ್ನು ಮಾಡಿಕೊಂಡು, ಹೀಗೆ ಮಾಡುವುದು ಸರಿಯಲ್ಲವೆಂದು ಕೆಲವರಿಗೆ ತಿಳಿಸಿದರು. ಆ ಸಮಯದಲ್ಲಿ, ಅಂದರೆ, ೧೯೦೮ ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಹೊಸ ಸ್ಕೂಲಿನ ಇಬ್ಬರು ಮಾಸ್ಟರುಗಳೂ ತುಂಬ ವಿವಾದವಾಗಿ ಹೋರಾಡಿ, ಅವರ ಪೈಕಿ ಹೆಡ್ ಮಾಸ್ಟರು ಹೊರಟುಹೋದರು. ಆ ಮೇಲೆ ಕಮಿಟಿಯ ಮೆಂಬರುಗಳು ಹೊಸ ಸ್ಕೂಲಿಗೆ ಸಹಾಯ ಕೊಡದೆ ಹೋದದ್ದರಿಂದಲೂ, ಗ್ರಾಮಸ್ಥರ ಸ್ವದೇಶೀ ವಾತ್ಸಲ್ಯವು ಕಮ್ಮಿಯಾಗಿ ಸಹಾಯವಿಲ್ಲದೆ ಹೋದದ್ದರಿಂದಲೂ, ಉಳಿದ ಇನ್ನೊಬ್ಬ ಮಾಸ್ಟರು ಎಲ್ಲರೊಡನೆ ಜಗಳ ಮಾಡಿಕೊಂಡು, ಊರು ಬಿಟ್ಟು ಹೋದರು. ಇಷ್ಟರಲ್ಲೇ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಮಿಷನ್ ಇಂಗ್ಲಿಷ್ ಸ್ಕೂಲಿಗೆ ಪುನಃ ಬಂದರು. ಇತ್ತಲಾಗಿ ಮಿಷನ್ ಇಂಗ್ಲಿಷು ಸ್ಕೂಲಿಗೆ ಹೋಗಿ ಸೇರಿದ ವಿದ್ಯಾರ್ಥಿಗಳು ತಮ್ಮ ಹೆಡ್ ಮಾಸ್ಟರಾದ ಮಿ॥ ಕೆ. ಸೂರ್ಯನಾರಾಯಣಪ್ಪನವರ ಪಾಠ ಹೇಳುವಿಕೆಯನ್ನು ನೋಡಿ ಸಂತೋಷಪಟ್ಟು, ಅವರಲ್ಲಿ ಸಂಪೂರ್ಣ ವಿಶ್ವಾಸವನ್ನು ಇಟ್ಟಿದ್ದಾರೆ. ಈ ಹೆಡ್ ಮಾಸ್ಟರನ್ನು ನಾನು ಬಲ್ಲೆನು. ಈ ಕುಲೀನುಪೇಟೆಯಲ್ಲಿ ಇವರನ್ನು ಎಲ್ಲರೂ ಬಹಳವಾಗಿ ಪ್ರೀತಿಸುತ್ತಾರೆಂಬುವುದನ್ನು ನಾನು ಬಲ್ಲೆ.

ಈ ಮಧ್ಯೆ ಸ್ವದೇಶೀ ಸ್ಕೂಲನ್ನು ಏರ್ಪಾಡು ಮಾಡುವುದರಲ್ಲಿ ಉದ್ಯುಕ್ತರಾದ ಕೆಲವು ವ್ಯಕ್ತಿಗಳು ಪುನಃ ಬೇರೆ ಒಂದು ಇಂಗ್ಲಿಷ್ ಸ್ಕೂಲನ್ನು ಏರ್ಪಾಡು ಮಾಡುತ್ತಾರೆಂದೂ, ಅದಕ್ಕೆ ಹಿಂದಿನ ಮಾಸ್ಟರುಗಳಲ್ಲಿ ಒಬ್ಬರನ್ನು ಕರೆಯಿಸುತ್ತಾರೆಂತಲೂ ವದಂತಿ ಇದೆ. ಪ್ರಯತ್ನಗಳು ಸಫಲವಾಗದಿದ್ದರೂ ಆರಂಭ ಶೂರತ್ವ ಮಾಡಬಹುದು. ಮಿಷನ್ ಸ್ಕೂಲು ಇಲ್ಲದಂತೆ ಮಾಡಿಸಿಹಾಕಿ, ಸರ್ಕಾರಿ ಇಂಗ್ಲೀಷು ಸ್ಕೂಲು ಇಡಿಸಬೇಕೆಂದು ವ್ಯರ್ಥ ಪ್ರಯತ್ನ ಮಾಡಿ ಹುಡುಗರ ವಿದ್ಯಾಭಿವೃದ್ಧಿಗೆ ಕುಂದಕ ತರುತ್ತಾರೆ. ಈ ಜನಗಳ ಸ್ವದೇಶಾಭಿಮಾನವು ವೃದ್ಧಿಗೆ ನಷ್ಟವಿಲ್ಲದೆಯೂ ವಿದ್ಯಾರ್ಥಿಗಳಿಗೆ ಕೊರತೆಯಾಗಿಯೂ ಇರುತ್ತದೆ. ಸರ್ಕಾರದವರೇನೋ ಮಿಷನ್ ಸ್ಕೂಲುಗಳನ್ನು ಅಲಕ್ಷ್ಯವಾಗಿ ನೋಡುವುದಿಲ್ಲ. ವಿದ್ಯಾಭಿವೃದ್ಧಿಗೆ ಯಾವ ಸ್ಕೂಲು ಆದರೇನು?

ಮಿಷನ್ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡಿ ಸರ್ಕಾರದಲ್ಲಿ ಭಾರೀ ನೌಕರಿಗಳಲ್ಲಿ ಇರುವವರೂ ಇಂತಾ ಮೋಸಕರವಾದ ಸಲಹೆಯನ್ನು ಕೊಡುವುದಿಲ್ಲ. ಇಂಥಾದ್ದರಲ್ಲಿ ಏನೂ ತಿಳಿಯದವರ ಪ್ರಯತ್ನಗಳಿಗೆ ಈ ಕುಲೀನುಪೇಟೆಯ ಪ್ರಜೆಗಳು ಮರುಳಾಗಿ ತಮ್ಮ ಮಕ್ಕಳು ಮರಿಗಳಿಗೆ ವಿದ್ಯಾ ಅಟಂಕ ಮಾಡಿದಲ್ಲಿ ಮುಂದಿನ ಫಲ ಅವರಿಗೇ ಗೊತ್ತಿದೆ. ವೈಶ್ಯರ ಮಕ್ಕಳಿಗೆ ಸ್ವಲ್ಪ ಓದುವುದಕ್ಕೂ ಬರೆಯುವುದಕ್ಕೂ ಬಂದರೆ ಅಂಗಡಿಯಲ್ಲಿ ಕುಳಿತು ವ್ಯಾಪಾರ ಲೇವಾದೇವಿ ಮಾಡಿ ಜೀವನ ಮಾಡಿಕೊಳ್ಳುತ್ತಾರೆಂಬ ಧೈರ್ಯವು ಕೆಲವರಿಗೆ ಇದೆ. ಬ್ರಾಹ್ಮಣರು ಈ ರೀತಿ ಮಾಡುವುದಕ್ಕೆ ಅವರ ಕೈಯಿಂದ ಹ್ಯಾಗಿಂದರೂ ಆಗದು. ವಿದ್ಯೆ ಕಲಿತು ಸರ್ಕಾರದಲ್ಲಾಗಲಿ ಅಥವಾ ವಿದ್ಯೆಯ ಫಲದಿಂದಲಾಗಲಿ ಜೀವನ ಮಾಡಬೇಕಾಗಿದೆ. ಆದಕಾರಣ ವಿದ್ಯಾಭಿವೃದ್ಧಿ ವಿಷಯವಾದ ಆ ಯೋಚನೆಗೆ ಬ್ರಾಹ್ಮಣರಾಗಲಿ ಇತರರಾಗಲಿ ಈ ರೀತಿ ದುಬೋಧನೆ ಮಾಡುವ ವ್ಯಕ್ತಿಗಳ ಸಲಹೆಗೆ ಕಿವಿಗೊಡಬಾರದು. ಮಿಷನ್ ಇಂಗ್ಲೀಷು ಸ್ಕೂಲು ಹೋದ ವರುಷದ ಗಲಾಟೆಗೆ ಸಿಕ್ಕಿ ಇನ್ನೂ ಚೇತರಿಸಿಕೊಳ್ಳುವುದರಲ್ಲೇ ಇದೆ. ಹೀಗಿರುವಾಗ ಪುನಃ ಗಲಾಟೆಗೆ ಆಸ್ಪದ ಮಾಡುವವರು ವಿದ್ಯಾಪ್ರೋತ್ಸಾಹಕರೇ? ದಾನ ಧರ್ಮ ಪರೋಪಕಾರಗಳು ಒಬ್ಬರ ಮೇಲಿನ ಅಸೂಯೆಯಿಂದಲಾಗಲಿ, ದ್ವೇಷದಿಂದಲಾಗಲಿ ಮಾಡತಕ್ಕವುಗಳಲ್ಲ. ಆದಕಾರಣ ಕುಲೀನುಪೇಟೆಯ ಜನಗಳು ಸ್ಕೂಲುಗಳಲ್ಲಿ ಭೇದಾಭೇದ ಬುದ್ಧಿ ಇಡದೆ, ಸ್ವದೇಶೀ ಪ್ರೋತ್ಸಾಹನೆಂದರೆ ಪರದೇಶದ ಮೇಲೆ ದ್ವೇಷವಿಡಬೇಕೆಂಬುವುದನ್ನು ಗ್ರಹಿಸದೆ, ನಾನಾ ತರಹದ ಜನಗಳ ಪ್ರಯತ್ನಗಳಿಗೆ ಭಾಗಿಗಳಾಗದೆ, ತಮ್ಮ ಮಕ್ಕಳು ಮರಿಗಳ ವಿದ್ಯಾಭಿವೃದ್ಧಿಯಲ್ಲಿ ಮನಸ್ಸನ್ನಿಡುತ್ತಾರೆಂದು ನಂಬಿದ್ದೇನೆ. ಮತ್ತು ಉಪಕಾರಿಗಳಂತೆ ತೋರ್ಪಡಿಸಿ, ಅಪಕಾರಗಳನ್ನೇ ತಮ್ಮ ಕುಲದೈವವಾಗಿಟ್ಟುಕೊಂಡಿರುವವರ ಪ್ರಯತ್ನಗಳಿಗೆ ಸರ್ಕಾರದವರೂ ಸಹ ಗಮನಗೊಟ್ಟು ಸಮಸ್ತ ವಿಧದಲ್ಲೂ ಜನಗಳಿಗೆ ಸಹಾಯ ಮಾಡಬೇಕಾಗಿ ಕೋರುವ

ವಿದ್ಯಾ ವಿಶಾರದ.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಇಲ್ಲಿ ಕಳೆದ ವಾರವೂ ಹಿಂದಿನ ವಾರವೂ ತಕ್ಕಮಟ್ಟಿಗೆ ಮಳೆಯಾಗಿದೆ. ದನಕರುಗಳಿಗೆ ಮೇವೂ ನೀರೂ ಅನುಕೂಲವಾಯಿತು. ಹೊಲಗಳು ಕಳಕಳಾಯಮಾನವಾಗಿ ವಿರಾಜಿಸುತ್ತವೆ. ಕೆಲವು ಕಡೆ ಜೋಳದ ಫಸಲು ಈ ಮಳೆಗೇ ಕೈಸೇರುವಂತಿದೆ. ಜನಗಳು ಕ್ಷಾಮದ ಸಂಕಟವನ್ನು ಮರೆತು ಸುಖವಾಗಿದ್ದಾರೆ. ಸಂತೆಯಲ್ಲಿ ತರಕಾರಿ ಕಾಯಿಪಲ್ಯ ಸೊಪ್ಪು ವಿಶೇಷವಾಗಿ ಸಿಕ್ಕುತ್ತವೆ. ಇಷ್ಟೊಂದು ಅನುಕೂಲವು ಈ ಎರಡು ವಾರಗಳ ಮಳೆಯಿಂದ ಆಗಿದೆ. ಆದರೂ ಕೆರೆಗಾದರೂ ಒಡ್ಡಿಗಾದರೂ ವಿಶೇಷ ನೀರು ಬಂದಿಲ್ಲ. ಇನ್ನು ದೊಡ್ಡ ಮಳೆಗಳು ಬರುವುದರಿಂದ ಕೆರೆ ತುಂಬುವದೆಂಬ ನಿರೀಕ್ಷೆ ತುಂಬಾ ಇದೆ. ಊರಿನಲ್ಲಿ ಕಣ್ಣುನೋವಿನ ಬಾಧೆಯು ಸ್ವಲ್ಪ ಹೆಚ್ಚಾಗಿದೆ. ಬಾಕಿ ರೋಗಾದಿಗಳ ತೊಂದರೆ ಏನೂ ಇಲ್ಲ.—ನಮ್ಮ ಅಸಿಸ್ಟೆಂಟ್ ಡೆಪ್ಯುಟಿ ಕಮಿಷನರ್ ಮಿ॥ ಎಂ. ಚಂಗಯ್ಯ ಚೆಟ್ಟಿಯವರು ಆರೋಗ್ಯಕ್ಕೆ ರಜಾ ಹೋಗಿರುವರಷ್ಟೆ. ಈಗ ಇವರು ಆರೋಗ್ಯವಾಗಿದ್ದಾರೆಂದೂ ಬೇಗನೆ ಬಂದು ತಮ್ಮ ಕೆಲಸದ ಛಾರ್ಜನ್ನು ವಹಿಸುವರೆಂದೂ ವರ್ತಮಾನವಿದೆ.—ಇಲ್ಲಿ ಕೆಲವು ಕಾಲದಿಂದ ಪೋಸ್ಟ್‌ಮಾಸ್ಟರಾಗಿದ್ದ ಮಿ॥ ಗ್ರೀನ್ ಸಾಹೇಬರವರು ವರ್ಗವಾಗಿ ಬೆಂಗಳೂರಿಗೆ ಹೋದರು. ಇವರು ಯಾರಿಗೂ ಏನೂ ತೊಂದರೆಯಾಗದಂತೆ ತಮ್ಮ ಕೆಲಸಗಳನ್ನು ಸರಿಯಾಗಿ ನಡಿಸುತ್ತಿದ್ದರು. ಇವರಿಗೆ ಬದಲೀ ಬಂದಿರುವವರೂ ಹಾಗೆಯೇ ಕೆಲಸಗಳನ್ನು ನಿರ್ವಹಿಸುವರೆಂದು ನಿರೀಕ್ಷಿಸುತ್ತೇವೆ.

ಅಜ್ಜಂಪುರ.—ಮಳೆ ಬರುತ್ತಾ ಇದೆ. ಫಸಲು ಚೆನ್ನಾಗಿದೆ. ಸಂತೆಯಲ್ಲಿ ದಿನಸಿ ಧಾರಣೆ ಏಗೀಗ ಇಳಿಯುತ್ತಾ ಇದೆ. ಮೂರು ಪಾವಿನ ಸೇರಿನ ಅಳತೆ ಹೆಚ್ಚಾಗಿದೆ. ಯಾಕೋ ಈ ಊರು ಜಮೀನ್ದಾರರ ದೃಷ್ಟಿ ಬೀಳಲಿಲ್ಲ. ಸ್ವಲ್ಪ ವಿಷಯವೆಂತ ಬಿಟ್ಟರಬಹುದು. ಇದು ದೊಡ್ಡ ವಿಷಯವಲ್ಲವೇ?—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ತರೀಕೆರೆ ಛಾರ್ಜಿಗೆ ಹೋಗಿದ್ದಾರೆ. ನಿನ್ನೆ ಇವತ್ತಿಗೆ ಕೈ ಮುರಿದುಕೊಂಡವರು ತಲೆ ಒಡೆದುಕೊಂಡವರು, ಪಾಪ ಆಸ್ಪತ್ರೆಯನ್ನು ಕಾಯುತ್ತಾರೆ. ಇಲಾಜು ಮಾಡುವವರೇ ಇಲ್ಲ. ಜಾಗ್ರತೆ ಇಲ್ಲಿಗೆ ಯಾರನ್ನಾದರೂ ಕಳುಹಿಸದಿದ್ದರೆ ಬಹಳ ಅನಾನುಕೂಲ.—ಕಡೂರು ತಾಲ್ಲೂಕಿನ ಒಡಿಹೋದ ಕೈದಿಯನ್ನು ಅಜ್ಜಂಪುರದ ಜಮೇದಾರ್ರು ಹಿಡಿದಿದ್ದರೆಂತ ಹೇಳಿದ್ದೆನಷ್ಟೆ. ಅವರಿಗೆಲ್ಲ ೪ ವರುಷ ಸಜಾ ಆಯ್ತು. ಇನ್ನೊಂದು ವಿಶೇಷ ತಿಳಿಸಲು ಸಂತೋಷಪಡುತ್ತೇನೆ. ತಪ್ಪಿತ ನಡೆಯುವಂತೆ ನಿಗಾ ನೋಡಲು ಬಂದರಾದ ಪೋಲೀಸ್ ಕಾ॥ ಹನುಮಂತರಾಯ ಮತ್ತು ರೈಲ್ವೆ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರ್, ಇನ್ನು ಕೆಲವರು ಸೇರಿ ಶಿವಪುರದ ಸ್ಟೇಷನ್ ಮಾಸ್ಟರ್ ಮನೆಯಲ್ಲಿ ದರೋಡೆ ಮಾಡಿದರು. ಇವರಿಗೆ ೧೦ ವರುಷ ಕಠಿಣ ಸಜಾ ಆಯ್ತು.—ಅಲ್ಲದೆ ಯಡಹಳ್ಳಿ ಪೋಲೀಸ್ ಕಾ॥ ರು ಎರಡು ಜನ ಒಬ್ಬ ಪ್ರಯಾಣಿಕನಿಂದ ಕಳ್ಳತನವಾಗಿ ೧೦ ರೂಪಾಯಿ ಬಾಬತು ೧೨ ನೋಟು ಕಿತ್ತುಕೊಂಡರೆಂತ ಅ॥ ಕ॥ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಾ ಇದೆ.—ಚೆಟ್ಟಿ ತಾವರೆಕೆರೆ ಸುಬ್ರಾಯರ ಮನೆಯಲ್ಲಿ ನಡೆದ ೫೦೦೦ ರೂಪಾಯಿನ ಕಳುವು ಪತ್ತೆಗೆ ಇಲ್ಲಿನ ಜವಾನ್ದಾರ್ ಅಪ್ಪಾರಾಯರು ಹೋಗಿರುತ್ತಾರೆ. ನನ್ನ ಕೊನೆಗೆ ಇಷ್ಟೇ ಸಾಲದು. ಇದಕ್ಕನುಸಾರವಾಗಿ ಅದನ್ನು ಪತ್ತೆ ಮಾಡಿದರೆ ಜಾಸ್ತೀ ತಮ್ಮ ಪೇಪರಿಗೆ ಬರೆಯುತ್ತೇನೆ. ಈ ಊರಿಗೆ ಯಗಟಿಯಿಂದ ಜಮೇದಾರರು ಬದಲಿದ್ದಾರೆ.

ಹಾಸನ.—ಈ ಹಾಸನದಲ್ಲಿ ಎಲ್ಲೆಲ್ಲಿ ನೋಡಿದರೂ ಸೈರುಪಟ್ಟಿಗಳಿಂದ ಕೂಡಿ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡುತ್ತದೆ. ಹೀಗಾದರೂ ಕೂಡ ಧಾರಣೆಗಳು ಇಳಿಯಲೇ ಇಲ್ಲ. ಇಲ್ಲಿನ ಸುತ್ತುಮುತ್ತಲೂ ಇರುವ ಕೆರೆಗಳೆಲ್ಲಾ ತುಂಬಿಕೊಳ್ಳುತ್ತಲಿವೆ.—ಇಲ್ಲಿನ ಗೌರ್ನಮೆಂಟ್ ಕನ್ನಡ ಸ್ಕೂಲು ಬಹು ಪುರಾತನ ಕಟ್ಟಡವೆಂಬುವುದು ಎಲ್ಲರಿಗೂ ತಿಳಿದೇ ಇದೆ. ಇದು ಹಳೆ ಕಟ್ಟಡವಾದ್ದರಿಂದ ಈ ಸ್ಕೂಲಿನ ಕೆಲವು ಕಡೆ ಗೋಡೆಗಳು ಈಗ ಬರುವ ಆದ್ರಾ ಮಳೆಗಳ ಅವಾಂತರದಿಂದ ಬಿದ್ದು ಹೋಗಿ ಬಿಟ್ಟಿವೆ. ಮತ್ತು ಈ ಸ್ಕೂಲಿನ ದೊಡ್ಡ ಗೋಡೆಗಳೂ ಕೂಡ ಈಗಲೋ ಆಗಲೋ ಬೀಳುವ ಸಂಭವ ಇರುವುದರಿಂದ ಸ್ಕೂಲಿಗೆ ಬಾಲಕರನ್ನು ಕಳುಹಿಸಲು ಅವರವರ ತಾಯಿ ತಂದೆಗಳು ಅಂಜುತ್ತಾರೆ. ಆದ್ದರಿಂದ ಈ ಪುರಾತನವಾದ ಕಟ್ಟಡವನ್ನು ತಪ್ಪಿಸಿ ಕೋಟೆಯ ಕಡೆ ಇನ್ನೆಲ್ಲಿಯಾದರೂ ಸ್ಕೂಲನ್ನು ಮಾಡುವುದು ಸರ್ವೋತ್ತಮ.—ಇಲ್ಲಿನ ವೆಸ್ಲಿಯನ್ ಮಿಷನ್ ಕೋಟೆ ಮತ್ತು ಪೇಟೆ ಗರ್ಲ್‌ಸ್ಕೂಲ್ ಮೇಲ್ವಿಚಾರಣಾಕರ್ತರಾದ ಮಿಸ್ ವಿಕರ್ಸ್ ಅಮ್ಮನವರು ಬಹಳ ಮುತುವರ್ಜಿಯಿಂದ ಸ್ಕೂಲಿನ ಕಾರ್ಯಗಳನ್ನು ನಡಿಸಿಕೊಂಡು ಹೋಗುತ್ತಿದ್ದಾರೆ. ಅವರು ಬಡವರಿಗೂ ಭಾಗ್ಯವಂತರಿಗೂ ಮತ್ತು ವಿಧವೆಯರಿಗೂ ತುಂಬಾ ಸಹಾಯವನ್ನು ಮಾಡುತ್ತಾರೆ. ಬಡವರೇ ಆಗಲಿ ಭಾಗ್ಯವಂತರೇ ಆಗಲಿ ಇಂಗ್ಲಿಷನ್ನೇ ಆಗಲಿ ಕನ್ನಡವನ್ನೇ ಆಗಲಿ ಕಲಿಯಬೇಕೆಂದು ಅಪೇಕ್ಷೆಪಟ್ಟಿದ್ದಾದರೆ ಅವರವರ ಸ್ವಂತ ಮನೆಗಳಿಗೆ ತಾವೇ ಖುದ್ದು ಹೋಗಿ ಅವರವರಿಗೆ ಬೇಕಾದಂಥ ಸಲಕರಣೆಗಳನ್ನೆಲ್ಲಾ ತಮ್ಮ ಸ್ವಂತ ಖರ್ಚಿನಿಂದಲೇ ಕೊಡಿಸಿ ಅವರಿಗೆ ವಿದ್ಯೆಯನ್ನು ಕಲಿಸುತ್ತಾರೆ.—ಈಗ ಹಾಸನಕ್ಕೆ ಪ್ಲೇಗ್ ಪ್ರವೇಶಿಸಲು ಕಾಲವಾದ್ದರಿಂದ ಸಮಸ್ತ ಜನಗಳೂ ತಮ್ಮ ತಮ್ಮ ಗೃಹಗಳನ್ನು ಬಹಳ ಶುಚಿಯಾಗಿಯೂ, ಇಲಿಗಳು ಸೇರಲು ಸ್ಥಳಕೊಡದಂತೆಯೂ ಮತ್ತು ಚಿಗಟಗಳಿಗೆ ಅವಕಾಶವಾಗದಂತೆಯೂ ಬಹಳಮಟ್ಟಿಗೆ ಶುಚಿಯಾಗಿದ್ದರೆ ಪ್ಲೇಗ್ ಮೊದಲಾದ ಜಾಡ್ಯಗಳು ತಲೆ ಹಾಕಲು ಸ್ಥಳ ಇರುವದಿಲ್ಲ. ಹಾಗೆ ಉದಾಸೀನ ಮಾಡಿದ್ದಾದರೆ ಮುಂದೆ ಜನಗಳಿಗೆ ತುಂಬಾ ತೊಂದರೆಯುಂಟಾಗುತ್ತೆ.—ಈ ಊರಿನ ಮಧ್ಯಭಾಗದಲ್ಲಿರುವ ದೇವಗೆರೆ ಎಂಬುದು ತುಂಬಿತುಳುಕುತ್ತಾ ಇರುವುದರಿಂದ ಅಲ್ಲಿಗೆ ನೀರು ತರಲು ಬರುವ ಹೆಂಗಸರು ಮಕ್ಕಳು ಹೋಗುವುದರಿಂದ ಬಹಳ ಜಾಗರೂಕರಾಗಿ ನೀರನ್ನು ತೆಗೆದುಕೊಳ್ಳಬೇಕಾಗಿದೆ.

ಹೆಗ್ಗಡದೇವನಕೋಟೆ ತಾ॥ ಸರಗೂರು.—ಇಲ್ಲಿನ ಪೈರುಗಳು ಬಂಧಾಗ್ಯೂ, ಹಿಡಿದ ಮಳೆ ಬಿಡದೇ ಇದ್ದದ್ದರಿಂದ ತೊಂದರೆಯಾಗಿದೆ. ಕೆಲವರು ಕೊಯ್ದೂ ಇದ್ದಾರೆ. ಬಂದ ಬೆಳಸನ್ನು ಮನೆಗೆ ತರುವುದೂ ಕಷ್ಟವಾಗಿದೆ.—ಹಿಂದೆ ಇಲ್ಲಿನ ಮ್ಯುನಿಸಿಪಲ್ ವಿಷಯವನ್ನೂ, ಕೊಟ್ಟಿಗೆಯಲ್ಲಿನ ದುರ್ಗಂಧವನ್ನೂ ತಪ್ಪಿಸಬೇಕೆಂದು ಬೇಡಿಕೊಂಡದ್ದೂ, ಸಂತೆಯ ವಿಷಯಕ್ಕೂ, ನುಗುವಿನ ವಿಷಯಕ್ಕೂ ಎಷ್ಟೋ ವಿಧವಾಗಿ ಅರಿಕೆ ಮಾಡಿಕೊಂಡಾಗ್ಯೂ ಸರ್ಕಾರದ ಯಾವ ನೌಕರರ ಮನಸ್ಸಿಗೂ ಗೋಚರವಾಗದಿರುವದು ಇಲ್ಲಿನ ಪ್ರಜೆಗಳ ದೌರ್ಭಾಗ್ಯವೇ ಸರಿ. ಇಲ್ಲಿ ಇಲಿಗಳು ಸಾಯುತ್ತವೆ ಎಂದು ಈಚೆಗೆ ವರ್ತಮಾನವಿರುತ್ತೆ. ಇಂಥಾ ಕಾಲದಲ್ಲಿ ನಮ್ಮ ಸರ್ಕಾರದವರು ಗಮನ ಕೊಡದಿದ್ದಲ್ಲಿ ಈ ಅಂಟುಜಾಡ್ಯಕ್ಕೆ ಸ್ವಲ್ಪ ಕಾಲದಲ್ಲೇ ತುತ್ತಾಗುವದು. ರೋಗ ಬಂದು ಔಷಧ ತೆಗೆದುಕೊಳ್ಳುವುದಕ್ಕಿಂತಲೂ ರೋಗ ಬಾರದಂತೆ ಎಚ್ಚರಿಕೆಯಾಗಿ ಆರೋಗ್ಯದಲ್ಲಿ ಸುಖಿಯಾಗಿದ್ದರೆ ಮುಂದೆ ಈ ರೋಗದ ಭಯವಿರುವದಿಲ್ಲ.—ಈಚೆಗೆ ಇಲ್ಲಿನ ಸಂತೆಯಲ್ಲಿ ಪೋಲೀಸಿನವರೂ ಇತರರೂ ಸೇರಿ ಕಮ್ಮಿ ಸೇರು ಪಾವುಗಳನ್ನು ಕಿತ್ತುಕೊಂಡು ಬೆದರಿಸಿ ಪ್ರತಿ ಫಲ ಪಡೆದು ಹಳ್ಳೀ ಜನಗಳನ್ನು ಬೆದರಿಸಿ ಅವರಿಂದ ತರಕಾರಿ ಕಿತ್ತುಕೊಳ್ಳುವುದು ಜಾಸ್ತಿಯಾಗಿರುವಂತೆ ಕಾಣುತ್ತದೆ. ವರ್ತಕರು ನಿರ್ಭಯದಿಂದ ಕಮ್ಮಿ ಸೇರು ಪಾವಿನಲ್ಲೇ ಮಾರುತ್ತಾರೆ. ಈ ಪದ್ಧತಿಯನ್ನು ಶೀಘ್ರದಲ್ಲೇ ಅಧಿಕಾರಿಗಳು ತಪ್ಪಿಸಿ ಕಮ್ಮಿ ಸೇರು ಪಾವುಗಳನ್ನು ಇಟ್ಟಿರುವವರಿಗೆ ಶಿಕ್ಷೆ ವಿಧಿಸಿ, ಬಡವರಿಗೆ ಉಪಕಾರ ಮಾಡಬೇಕಾಗಿ ಬೇಡುತ್ತೇನೆ.—ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಈ ವರುಷ ೧೩ ಹುಡುಗರು ಪರೀಕ್ಷೆಗೆ ಕಟ್ಟಿರುತ್ತಾರೆ.—ಇಲ್ಲಿಯ ಕಾನ್ಸ್‌ಟೇಬಲ್ಲುಗಳಿಗೆ ಅನ್ನ ಬೇಯಿಸಲಿಕ್ಕೆ ಜಾಗವಿಲ್ಲದೆ ಮಳೆ ಜಾಗದಲ್ಲೆಲ್ಲಾ ಬೇಯಿಸಿ ತಿನ್ನುತ್ತಾರೆ. ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ತಮ್ಮ ಮನಸ್ಸಿಗೆ ತಂದುಕೊಂಡು ಇವರಿಗೆ ಬೇರೆ ಮನೆಗಳನ್ನು ಕಟ್ಟಿಸಿಕೊಟ್ಟರೆ ತುಂಬಾ ಉಪಕಾರ ಮಾಡಿದಂತಾಗುತ್ತೆ.—ಸಂತೆಯಲ್ಲಿ ಅಕ್ಕಿ ೭ ಸೇರಿನಂತೆಯೂ, ರಾಗಿ ೧೭ ಸೇರಿನಂತೆಯೂ, ಮಿಕ್ಕ ದಿನಸಿಗಳು ಮೊದಲಿಗಿಂತ ಸ್ವಲ್ಪ ಅಗ್ಗವಾಗಿಯೂ ಮಾರಲ್ಪಡುತ್ತೆ.

ಆನೇಕಲ್ ತಾ॥ ದೊಮ್ಮಸಂದ್ರ.—ಈ ಗ್ರಾಮದಲ್ಲಿ ೨೫ ವರುಷಗಳಿಂದಲೂ ಲಂಡನ್ ಮಿಷನ್ ಪಾಠಶಾಲೆ ಸ್ಥಾಪಿತವಾಗಿ ನಡಿಸಲ್ಪಡುತ್ತಿದೆ. ಇದು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಬಂದದ್ದರಿಂದ ನಾಲ್ಕು ವರುಷಗಳ ಕೆಳಗೆ ಬಾಲಕಿಯರ ಪಾಠಶಾಲೆ ಪ್ರತ್ಯೇಕಿಸಲ್ಪಟ್ಟಿತು. ಮತ್ತು ವಿದ್ಯಾ ಇಲಾಖೆಯವರು ಏರ್ಪಡಿಸಿರುವ ಕರಿಕ್ಯುಲಂ ಪ್ರಕಾರ ಬಾಲಕ ಬಾಲಕಿಯರಿಗೂ ಪಾಠಗಳು ಕಲಿಸಲ್ಪಡುತ್ತಲಿವೆ. ವರುಷೇ ವರುಷವೂ ಮೈಸೂರು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳುಹಿಸುತ್ತಾರೆ. ಈ ಸಾರಿಯೂ ಈ ಪಾಠಶಾಲೆಯಿಂದ ಮೂವರು ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗುತ್ತಾರೆ.—ಕಳೆದ ಜೂನ್ ೨೬ರಲ್ಲಿ ನಡೆದ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ವರ್ಧಂತಿ ಮಹೋತ್ಸವವನ್ನು ಕಾರಣಾಂತರದಿಂದ ಆ ದಿನ ನಿಲ್ಲಿಸಲ್ಪಟ್ಟು, ಇದೇ ಆಗಸ್ಟು ತಾ॥ ೫ ನೇ ಗುರುವಾರ ನಡಿಸಲ್ಪಟ್ಟಿತು. ಸ್ಕೂಲ್ ಹುಡುಗರ ಆಟದ ಮೈದಾನವೆಲ್ಲಾ ವಿವಿಧ ಬಣ್ಣದ ಬಾವುಟಾಗಳಿಂದ ಅಲಂಕರಿಸಲ್ಪಟ್ಟು, ಅಧ್ಯಕ್ಷರಾದ ಘನ ವಿಲ್ಕಿನ್ಸ್ ಸಾಹೇಬರಿಗೂ ಧೊರಸಾನಿಯವರಿಗೂ ಒಳ್ಳೆದೊಂದು ಡೇರಾ ಹಾಕಲ್ಪಟ್ಟಿತ್ತು. ಮತ್ತು ಬೆಂಚು, ಕುರ್ಚಿ, ಮೇಜು ಮುಂತಾದವುಗಳನ್ನು ತಕ್ಕ ಸ್ಥಳದಲ್ಲಿ ಹಾಕಿದ್ದರು. ನೋಟಕರಿಗೆ ಆ ಮೈದಾನವೆಲ್ಲಾ ರಮಣೀಯವಾಗಿ ತೋರುತ್ತಿತ್ತು. ಧೊರಸಾನಿಯವರು ಮೈದಾನಕ್ಕೆ ಪ್ರವೇಶಿಸಿದ ಕೂಡಲೆ ಹುಡುಗಿಯರು ಇಂಪಾದ ಗಾನವನ್ನು ಹಾಡುತ್ತಿರಲು ಬಾಲಕ ಬಾಲಕಿಯರು ಅವರಿಗೆ ಪುಷ್ಪ ಮಾಲಿಕೆಗಳನ್ನು ಒಪ್ಪಿಸಿದರು. ಧೊರೆ ಧೊರಸಾನಿಗಳು ಪೀಠಗಳನ್ನು ಅಲಂಕರಿಸಿದ ಬಳಿಕ ಹುಡುಗರೂ ಹುಡುಗಿಯರೂ ತಮಗೆ ನೇಮಿಸಲ್ಪಟ್ಟ ಆಟಗಳನ್ನು ಆಡಿದರು. ಆಯಾ ಆಟಗಳೆಲ್ಲಾ ಬರೀ ವಿನೋದಕರಗಳಾಗಿರದೆ, ಅವರ ಅಂಗಸಾಧನೆಗೂ ಬುದ್ಧಿ ಸಾಧನೆಗೂ ತಕ್ಕವುಗಳಾಗಿದ್ದವು. ಎಲ್ಲಾ ತೀರಿದ ಮೇಲೆ ಸಾರ್ವಭೌಮರ ಮೇಲೆಯೂ ಮೈಸೂರು ಶ್ರೀಮನ್ಮಹಾರಾಜರವರ ಮೇಲೆಯೂ ಕಲ್ಪಿಸಿದ್ದ ಪ್ರಾರ್ಥನೆಯನ್ನು ಗಾನರೂಪವಾಗಿ ಹಾಡಿ ಮಂಗಳ ಗೀತವನ್ನು ಹಾಡಿದ ನಂತರ ಅವರ ಪರಿಪಾಲನೆಯು ಸ್ಥಿರಸ್ಥಾಯಿಯಾಗಿರಲೆಂದು ಮೂರು ಮೂರು ಸಾರಿ ಕೋರಿ ಮುಗಿಸಲ್ಪಟ್ಟಿತು. ಧೊರೆ ಧೊರಸಾನಿಗಳೂ ನೋಟಕರೂ ಸಂತೋಷಪಟ್ಟುಕೊಂಡು ಹೋದರು. ಹುಡುಗ ಹುಡುಗಿಯರು ಮಿಠಾಯಿ ತಿನ್ನುವುದರಿಂದ ಆಟದಲ್ಲಿ ತಮಗಾದ ದೇಹದ ಶ್ರಮವನ್ನು ಮರೆತು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಸೊರಬ.—ಈಚೆಗೆ ೧೫ ದಿವಸಗಳ ಲಾಗಾಯ್ತು ಸುತರಾಂ ಮಳೆ ಇಲ್ಲ. ಕಬ್ಬಿನ ಮತ್ತು ಭತ್ತದ ಫಸಲು ಚೆನ್ನಾಗಿರುತ್ತೆ. ಭತ್ತದ ಫಸಲು ಸದ್ಯ ಮಳೆ ಬಾರದಿದ್ದರೆ ಕೆಟ್ಟುಹೋಗುತ್ತೆ.—ಇಲ್ಲಿನ ಮ್ಯುನಿಸಿಪಾಲಿಟಿಯಂತೂ ಹೇಳತೀರದು. ಇತರೇ ಟವನ್‌ಗಳ ಮ್ಯುನಿಸಿಪಾಲಿಟಿಯಲ್ಲಿ ನಡೆಯತಕ್ಕ ಕೆಲಸಗಳೆಲ್ಲಾದರಲ್ಲೂ ಇದೇ ಕನಿಷ್ಠ ದೆಸೆಯಲ್ಲಿರುತ್ತೆಂದು ಹೇಳಬಹುದು. ಈಗ ಒಂದು ತಿಂಗಳಿಂದ ಹೊಸದಾಗಿ ಲಾಂದ್ರದ ಬೆಳಕು ಮುಖ್ಯವಾದ ರಸ್ತೆಯಲ್ಲಿ ಒಂದೆರಡು ಮಿಣಗುಟ್ಟುತ್ತವೆ. ಅದಕ್ಕೂ ಯಾವಾಗ ಪೂರ್ಣ ರಾಹು ಗ್ರಸ್ತವಾಗುತ್ತೋ ತಿಳಿಯದು. ಇದು ಈ ಸಂಸ್ಥಾನಕ್ಕೆ ಕೊನೆಯ ತಾಲ್ಲೂಕು. ಆದ್ದರಿಂದ ದೊಡ್ಡ ದೊಡ್ಡ ಆಫೀಸರ ದೃಷ್ಟಿ ಬೀಳುವುದು ಅಪರೂಪ. ಎಲ್ಲಾ ವಿಷಯವೂ ಬಹು ಶೋಚನೀಯಸ್ಥಿತಿಯಲ್ಲಿರುತ್ತದೆ.—ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ಮಿ॥ ಕೋಹಿಲೋಯವರಿಗೆ ಅವರ ಕೆಲಸ ಕಾರ್ಯದಿಂದ ಮೈಸೂರು ಟವನ್‌ಗೆ ವರ್ಗವಾಗಿ ಆನವಟ್ಟಿ ಜವಾದಾರ್ರಿಗೆ ಛಾರ್ಜು ಕೊಟ್ಟು ಹೊರಟು ಹೋದರು. ಇವರು ಇನ್ನೂ ಚಿಕ್ಕವಯಸ್ಸಿನವರು ಮತ್ತು ಈ ಇಲಾಖೆಯ ವಾಕಿತ್ತು ಕೊಂಚ ಕಡಮೆಯೇ. ಆ ಜನಗಳಲ್ಲಿ ಅಂದ್ರೆ ಮುಖ್ಯವಾಗಿ ಇಲ್ಲಿನ ಎಲ್ಲಾ ಸರ್ಕಾರಿ ನೌಕರರಲ್ಲಿ ತುಂಬಾ ಸ್ನೇಹಿತರಾಗಿದ್ದದ್ದರಿಂದ ಇವರನ್ನು ಎಲ್ಲರೂ ಅವರವರ ಮನೆಗೆ ಕರೆದುಕೊಂಡು ಹೋಗಿ ಸನ್ಮಾನಿಸಿ ಬ್ಯಾಂಡ್ ವಾದ್ಯದ ಸಮೇತ ಇಲ್ಲಿನ ಸರ್ಕಾರಿ ಕಟ್ಟಡದಲ್ಲಿ ಸಭೆ ಕೂಡಿಸಿದರು. ಅಲ್ಲಿ ಸ್ವಲ್ಪ ಉಪಚಾರವಾದ ನಂತರ ಸಾಹುಕಾರ್ ಅನಂತಪ್ಪನವರು ಇವರ ಗುಣ ಕಥನ ಮಾಡಿದರು. ಇದಕ್ಕೆ ಮಿ॥ ಕೋಹಿಲೋಯವರು ಸಮಯೋಚಿತವಾದ ಮಾತಿನಿಂದ ಇವರುಗಳ ಆ ಭಾವವನ್ನು ಮನ್ನಿಸಿದರು. ಇವರ ಸ್ಥಾನಕ್ಕೆ ಮಳವಳ್ಳಿಯಿಂದ ಫಜಲುಲ್ಲಾಖಾನರೆಂಬುವರು ವರ್ಗವಾಗಿರುತ್ತಾರೆ. ಇವರು ಇನ್ನೂ ಇಲ್ಲಿಗೆ ಬಂದಿಲ್ಲ. ಇವರು ಈ ಇಲಾಖೆಯಲ್ಲಿ ತುಂಬಾ ಅನುಭವಶಾಲಿಗಳಂತೆ ಕಾಣುತ್ತೆ. ಈ ನಮ್ಮ ಮಿ॥ ಕೋಹಿಲೋಯವರಿಗಿಂತಲೂ ಪ್ರಜೋಪಕಾರಿಗಳಾಗಿ ಇವರಿಗಿಂತಲೂ ಅತಿಶಯವಾಗಿ ಪ್ರಜಾಪ್ರಭುಗಳೆಲ್ಲರಿಂದಲೂ ವಂದನೀಯರಾಗುವರೆಂತ ಹಾರೈಸುತ್ತೇವೆ. ಇವರು ಜಾಗ್ರತೆ ಇಲ್ಲಿಗೆ ದಯಮಾಡಿಸಿದರೆ ಬಹಳ ಒಳ್ಳೇದು. ಇದು ದೊಡ್ಡ ತಾಲ್ಲೂಕು, ಮಲೆನಾಡು ಮತ್ತು ಧಾರವಾಡದ ಡಿಸ್ಟ್ರಿಕ್ಟಿನ ಸರಹದ್ದು. ಇಂಥಾ ತಾಲ್ಲೂಕಿಗೆ ತುಂಬಾ ಚಟುವಟಿಕೆಯೂ ಸಾಹಸ ಪರರೂ ಆದ ಅಧಿಕಾರಿಗಳು ಇರಬೇಕಾದದ್ದು. ಇಲ್ಲವಾದರೆ ಈಗಿನಂತೆ ಅನೇಕ ಖೂನಿ ದರೋಡೆ ಕಳ್ಳತನಗಳು ನಡೆಯಲಿಕ್ಕೆ ತುಂಬಾ ಅವಕಾಶವಾಗುವುದರಲ್ಲಿ ಸಂದೇಹವಿಲ್ಲ. ಪ್ರಜೆಗಳ ತನು ಮನ ಧನಗಳನ್ನು ಕಾಪಾಡತಕ್ಕ ಘನವಿಷ್ಟುಳ್ಳ ಸರ್ಕಾರವು ಇದಕ್ಕೆ ತುಂಬಾ ಗಮನ ಕೊಟ್ಟು ಈ ಭಾಗದ ಪ್ರಜೆಗಳನ್ನು ಕಾಪಾಡುವುದೆಂತ ಹಾರೈಸುತ್ತೇನೆ.

ಮದ್ದಗಿರಿ.—ಬಡಗೌಡನಹಳ್ಳಿಯಲ್ಲಿರುವ ಮಿಷನ್ ಉಪದೇಶಿಯವರ ಮನೆಗೆ ಇದೇ ಮಾಹೇ ೧೯ನೇ ತಾ ರಾತ್ರಿ ಕಳ್ಳರು ಕನ್ನಾ ಹಾಕಿ ನಗನಾಣ್ಯ ಬಟ್ಟೆಬರೆ ಕಂಚಿನ ಮತ್ತು ಹಿತ್ತಾಳೆ ಪಾತ್ರೆ ದವಸಧಾನ್ಯ ಮುಂತಾದವುಗಳನ್ನು ಕಳುವು ಮಾಡಿದರು ಸುಮಾರು ೧೩೪ ರೂಪಾಯಿಗಳು ನಷ್ಟವಾದವು ಮನೆಯವರು ತಿಗಣೆಯ ಕಾಟಕ್ಕಾಗಿ ಮನೆಯ ಮುಂಭಾಗದ ಕೊಠಡಿಯಲ್ಲಿ ಮಲಗಿಕೊಂಡಿದ್ದರು ಪಾಸದ ಮನೆಗೆ ಬೀಗ ಹಾಕಿಕೊಂಡಿದ್ದರು ಆ ರಾತ್ರಿಯೆಲ್ಲಾ ಕುಟುಕಲು ಹನಿ ಬೀಳುತ್ತಾ ಕತ್ತಲು ಜಾಸ್ತಿಯಾಗಿತ್ತು ಇಂಥಾ ಕಾಲದಲ್ಲಿ ಯಾವ ಶಬ್ದವೂ ಆಗದಂತೆ ಕಳುವು ಮಾಡಿರುವದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತೆ ಪೋಲೀಸಿಗೆ ೨೦ ನೇ ತಾ ಬೆಳಗ್ಗೆ ರಿಪೋರ್ಟು ಮಾಡಿದ್ದರ ಮೇಲೆ ಆ ಸಾಯಂಕಾಲವೂ ಮಾರನೇ ದಿನವೂ ಯಾವ ಅಧಿಕಾರಿಯಾದರೂ ಬರಲಿಲ್ಲ. ತೀರಾ ಸಾಯಂಕಾಲ ಮದ್ದಗಿರಿಯಿಂದ ದಫೇದಾರರು ಬಂದರು ಬೆಳಗ್ಗೆ ಭಾನುವಾರ ಆ ದಿನವೂ ಯಾವ ಕೆಲಸ ಮಾಡಲೂ ಅನುಕೂಲಿಸಲಿಲ್ಲ ಸೋಮವಾರ ಗುಮಾನಿ ಆಸಾಮಿಗಳ ಮನೆ ಜಪ್ತಿ ಮಾಡಿದರೂ ಯಾವ ಮಾಲೂ ಸಿಕ್ಕಲಿಲ್ಲ ಮಂಗಳವಾರ ಗುಮಾನಿಯವರನ್ನು ಕೊಡಿಗದಾಲದ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು ಬೃಹಸ್ಪತಿವಾರ ಬೆಳಗ್ಗೆ ಅವರನ್ನು ಬಿಟ್ಟುಬಿಟ್ಟರು ಪತ್ತೆ ಹರದೂ ಮಾಡುವದರಲ್ಲಿರುವನೆಂದು ಹೇಳಿದರು ಈ ಕೃತ್ಯ ಮಾಡಿದವರು ಬಡವರಾಗಿದ್ದರೆ ಅವರು ದವಸ ಧಾನ್ಯಗಳನ್ನು ಜಾಸ್ತಿ ಹೊರಬೇಕಾಗಿತ್ತು ಆದರೆ ಅವರು ಪೆಟ್ಟಿಗೆಯಲ್ಲಿದ್ದ ಬಟ್ಟೆಗಳನ್ನೂ, ಮೈಲಿಗೆಯಾಗಿ ಬಿಟ್ಟಿದ್ದ ಬಟ್ಟೆಗಳನ್ನೂ, ಔಷಧಗಳಿದ್ದ ಸಣ್ಣ ಡಬ್ಬಿಯನ್ನೂ, ಕೊಂಚ ಮಟ್ಟಿಗೆ ರಾಗಿ ಮೆಣಸಿನಕಾಯಿಗಳನ್ನೂ ಕಳುವುಮಾಡಿರುವರು ಪಾತ್ರೆಗಳ ಪೆಟ್ಟಿಗೆಯಲ್ಲಿ ನೋಡುವದಕ್ಕೆ ರಮ್ಯವಾಗಿ ಬೆಳ್ಳಿಯದೆಂದೇ ಹೇಳುವದರಲ್ಲಿ ಅನುಮಾನ ತೋರದಿರುವ ಪಾತ್ರೆಗಳನ್ನು ಬಿಡುವದುಂಟೇ ? ಅವು ಕ್ರೈಸ್ತರು ಒಂದು ಸಂಸ್ಕಾರದಲ್ಲಿ ಉಪಯೋಗಿಸುವ ಪಾತ್ರೆಗಳಾಗಿದ್ದ ಕಾರಣ ಅವುಗಳನ್ನು ಮುಟ್ಟದೆ ಬಿಟ್ಟಿರುವರು ಇದೇ ಗ್ರಾಮದ ರೈತರೂ ಬೇರೆ ಗ್ರಾಮಾಂತರಗಳ ರೈತರೂ ಅಥವಾ ಜನರು ಬಂದು ನಡೆದಿರುವ ಸಂಗತಿಯನ್ನು ನೋಡಿ ಮರುಗುವರು. ತುಮಕೂರಿಂದ ಬಂದಿದ್ದ ಘನ ಪಾದ್ರಿ ಎಡ್ವರ್ಡ್ಸ್ ದೊರೆಯವರು ಸಹ ಕೃತ್ಯವನ್ನು ನೋಡಿದ್ದಲ್ಲದೆ ಬಹು ಮರುಗಿದರು —ಈ ಕಡೆ ಮಳೆ ಭೂಮಿ ತ್ಯಾವವಾಗುವ ಪೂರ್ತಿಗೂ ಪೈರುಗಳು ಹಸುರಾಗಿರುವ ಪೂರ್ತಿಗೂ ಆಗಿರುವದಲ್ಲದೆ, ಕೆರೆ ಕಟ್ಟೆ ಕುಂಟೆಗಳಿಗೆ ಮಾತ್ರ ನೀರು ಬಂದಿಲ್ಲ ಮುಂದಿನ ಮಳೆಗಳಲ್ಲಿ ಕೆರೆಗಳಿಗೆ ನೀರು ಬಾರದಿದ್ದಲ್ಲಿ ಮುಂದೆ ಗದ್ದೆಗಳನ್ನು ಬೆಳೆ ಮಾಡಲಾಗುವದಿಲ್ಲ

ಅರಸಿಕೆರೆ.—ಕಳೆದ ಎರಡು ವಾರಗಳಿಂದಲೂ ಅರಸಿಕೆರೆ ಪ್ರಾಂತ್ಯದಲ್ಲಿ ದಿವ್ಯವಾದ ಮಳೆಯಾಗಿ ಪೈರುಗಳೆಲ್ಲಾ ಅತ್ಯಂತ ಉತ್ಕೃಷ್ಟವಾದ ಸ್ಥಿತಿಯಲ್ಲಿವೆ —ಈ ಊರಲ್ಲಿ ಬುದ್ಧಿ ಸ್ವಸ್ಥವಿಲ್ಲದೆ ತಿರುಗಾಡುತ್ತಿದ್ದ ಒಬ್ಬ ಹುಡುಗಿಯು ಮಂಗಳವಾರ ಸಾಯಂಕಾಲ ರೈಲ್ವೆ ಎಂಜನ್ನಿಗೆ ಸಿಕ್ಕಿ ಮೃತಪಟ್ಟಳು — ಸಂತೆ ಪೇಟೆಯಲ್ಲಿ ಬಹುಕಾಲದಿಂದಲೂ ಶಿಥಿಲವಾಗಿರುವ ಒಂದು ಪುರಾತನ ಬುದ್ಧ ಆಲಯವನ್ನು ಇಲ್ಲಿನ ಜೈನ ವರ್ತಕರಾದ ಮ ಧರಮಣ್ಣನವರು ತಮ್ಮ ಮೃತಪಟ್ಟ ಕುಮಾರನ ಜ್ಞಾಪಕಾರ್ಥವಾಗಿ ಜೀರ್ಣೋದ್ಧಾರ ಮಾಡುತ್ತಿದ್ದಾರೆ — ಮುನಿಸಿಪಾಲಿಟಿ ವಿಷಯ ಕೊಂಚ ಜಾಗ್ರತೆಯಾಗಿ ಗಮನ ಕೊಡಬೇಕಾಗಿದೆ ಈ ಊರಲ್ಲಿ ಕೆಲವು ಸ್ವಾರ್ಥ ಪರರಾಯಣರಾದ ವರ್ತಕರು ಯಾವಾಗಲೂ ಕಮ್ಮಿಯಾಗಿಯೇ ಕೊಳ್ಳುವವರಿಗೆ ನಷ್ಟ ಉಂಟಾಗುವಂತೆಯೂ ರಾಗಿ ಸಂಗಡ ಮರಳು ಮಣ್ಣು ಸೇರಿಸಿ ಮಾರುತ್ತಿದ್ದಾರೆ ಅಲ್ಲದೆ ಕಮ್ಮಿ ಸೇರುಗಳೂ ಕಮ್ಮಿ ಬೊಟ್ಟುಗಳೂ ಅಲ್ಲಲ್ಲಿ ಅಧಿಕವಾಗಿವೆ —ಅಜ್ಜಂಪುರದಲ್ಲಿ ಜಮಾದಾರರಾಗಿದ್ದು ಬಡ್ತಿಹೊಂದಿ ಅರಸೀಕೆರೆ ಪೋ॥ ಇನ್ಸ್ಪೆಕ್ಟರಾಗಿ ಬಂದಿರುವ ಮ ಗುಹಿಲಾಸ್ಟ್‌ನವರು ಕೆಲಸದಲ್ಲೂ ಗುಣದಲ್ಲೂ ಚಟುವಟಿಕೆಯಾಗಿರುವಂತೆ ತಿಳಿಯಬಂದಿದೆ ಆದರೆ ಇವರು ಇಲ್ಲಿ ನಡೆಯುವ ಅನೇಕ ಸಣ್ಣಪುಟ್ಟ ಕಳುವುಗಳ ಸುಳಿವು ಇಲ್ಲದಂತೆಯೂ ಕಾನ್‌ಸ್ಟೇಬಲ್‌ಗಳೂ ಆಫೀಸರುಗಳೂ ನಂಬಿಗಸ್ಥರೂ ಆಸಕ್ತಿಯುಳ್ಳವರು ಉದ್ಯಮವರಾಗಿರುವಂತೆಯೂ ನಾನಾ ರೀತಿ ನಿರೀಕ್ಷಿಸಲ್ಪಟ್ಟಿದೆ — ವೆಸ್ಲಿಯನ್ ಮಿಷನ್ ಘನ ದಾಂಸನ್ ಬೋಧಕರು ಈ ತಿಂಗಳ ಮಧ್ಯದಲ್ಲಿ ರೇಲ್ವೆ ಇನ್‌ಸ್ಟಿಟ್ಯೂಟಿನಲ್ಲಿ ದೇಶಾಂತರ ಪ್ರಯಾಣವನ್ನು ಭೂತಕನ್ನಡಿಯಲ್ಲಿ ಉಪನ್ಯಾಸ ಮಾಡಿ ತೋರಿಸಿದರು ಜನರಿಗೆ ಅದರಿಂದ ತುಂಬಾ ಪ್ರಯೋಜನವಾಯಿತೆಂಬುವುದರಲ್ಲಿ ಸಂಶಯವಿಲ್ಲ —ಅನೇಕ ವರ್ಷಗಳಿಂದ ಇಲ್ಲಿ ದೊಡ್ಡ ವ್ಯಾಪಾರಿಯಾಗಿದ್ದ ರತ್ನಾಜಿ ಎಂಬ ಮಾರ್ವಾಡಿ ವರ್ತಕನು ಸ್ವದೇಶದಲ್ಲೇ ಮೃತನಾದನು ಈತನ ಹೆಂಡತಿಯೂ ಕೂಡಾ ತೀರಿಹೋದಳಂತೆ ಈತನು ಕೂಡಿಸಿದ ದ್ರವ್ಯವು ತನಗೆ ಪ್ರಯೋಜನವಿಲ್ಲದಂತಾಯಿತು ಯಾಕೆಂದರೆ ಈತನೂ ಈತನ ಹೆಂಡತಿಯೂ ಪೂರ್ಣ ವಯಸ್ಸಿನಲ್ಲೇ ಮೃತರಾದರು — ಈ ಊರು ಸಂತೆಯಲ್ಲಿ ಕೆಲವರು ಸುಂಕ ಎತ್ತುತ್ತಲೂ ರೈತರನ್ನು ಪೀಡಿಸುತ್ತಲೂ ಬರುತ್ತಿದ್ದಾರೆ. ಇವರ ವಿಷಯ ಜನರಿಗೆ ಬಹಳ ದುಃಖ ಉಂಟು ಅಮಲ್ದಾರ್ರವರು ಈ ಕೆಟ್ಟ ಮಾಮೂಲನ್ನು ಯಾತಕ್ಕೆ ತಪ್ಪಿಸಬಾರದು ? ಕಷ್ಟಪಟ್ಟು ಬೆಳೆದವನ ಪದಾರ್ಥಗಳನ್ನು ಕೆಲ ನೌಕರರು ಸುಲಿಗೆ ಮಾಡುವದು ನ್ಯಾಯವೋ ? ಈ ನಾಗರೀಕ ಪ್ರಭುತ್ವದಲ್ಲೂ ಇದು ನಡೆಯಬೇಕೇ ?

ಹೊಸಕೋಟೆ —ಹೊಸಕೋಟೆಯಲ್ಲಿ ಸುಮಾರು ಹತ್ತು ವರುಷದಿಂದ ಕೆಲಸ ಮಾಡುತ್ತಿದ್ದ ಶಿರಸ್ತೇದಾರ್ ಮ ಬಿ ಕೆ ಚಿನ್ನಸ್ವಾಮಿನಾಯ್ಡುರವರಿಗೆ ಬೆಂಗಳೂರಿಗೆ ವರ್ಗವಾಯಿತೆಂಬ ಸುದ್ದಿ ಕೇಳದ ಕೂಡಲೆ ಅನೇಕ ಜನರಿಗೆ ತುಂಬಾ ವ್ಯಸನ ಉಂಟಾಯಿತು ಏಕೆಂದರೆ ಇವರು ಈ ತಾಲೂಕಿನಲ್ಲಿ ಪ್ರಜೆಗಳನ್ನು ಪರಿಪಾಲಿಸುವುದರಲ್ಲಿಯೂ ವಿಶ್ವಾಸ ಪಾತ್ರರಾಗಿಯೂ ಸ್ನೇಹಪರರಾಗಿಯೂ ಪ್ರೀತಿಯುಳ್ಳವರಾಗಿಯೂ ಸರ್ಕಾರಿ ನೌಕರರಿಗೆ ಅತಿ ಸಂತೋಷಕರವಾದ ವಾಕ್ಯದಿಂದ ಕಾರ್ಯ ನೆರವೇರಿಸುವವರಾಗಿಯೂ ಅನೇಕ ವಿಷಯಗಳಲ್ಲಿ ಪಾಪ ಭೀತಿಯಿಂದ ಕೆಲಸಗಳಲ್ಲಿ ಆಸಕ್ತಿಯುಳ್ಳವರಾಗಿಯೂ ಇದ್ದರು ಯಾರಿಗೂ ಇವರ ವಿಷಯದಲ್ಲಿ ಬೇಸರಿಕೆ ಇಲ್ಲ ಇವರು ಬೆಂಗಳೂರಿಗೆ ಹೋಗುವುದಕ್ಕಿಂತ ಮುಂಚೆ ತಾ ೨೨ ನೇ ಭಾನುವಾರ ಇವರ ಸ್ನೇಹಿತರು ಒಂದು ಟೀ ಪಾರ್ಟಿಯನ್ನು ಏರ್ಪಡಿಸಿದ್ದರು ಅಮಲ್ದಾರ್ ಮ॥ ಗುರುರಾಯರು, ಡಾಕ್ಟರ್ ಮ॥ ಕಣ್ಣಪ್ಪ ಮೊದಲಿಯಾರ್ರು ಮೊದಲಾದ ಇಷ್ಟೂ ಊರಿನ ದೊಡ್ಡ ಮನುಷ್ಯರೆಲ್ಲಾ ಶ್ರೀಕೃಷ್ಣರಾಜೇಂದ್ರ ಹಾಲಿನಲ್ಲಿ ಸಭೆ ಕೂಡಿ ಸಂಗೀತ ಗಾನವನ್ನು ಬಹಳ ವಿನೋದದಿಂದ ಮಾಡಿದರು ಅನಂತರ ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಅಬ್ದುಲ್ ರಜಾಕ್ ಸಾಹೇಬರವರು ಇವರ ವಿಷಯದಲ್ಲಿ ಸಂಸ್ಕೃತದಲ್ಲಿ ಒಂದು ಅಡ್ರೆಸ್ ಕೊಟ್ಟರು ಅನಂತರ ಸಭೆ ಮುಕ್ತಾಯವಾಯಿತು ಇವರ ಸ್ಥಾನಕ್ಕೆ ಬಂದಿರುವ ಶಿರಸ್ತೇದಾರರು ಅವರಂತೆ ಪ್ರಜೆಗಳನ್ನು ಕಾಪಾಡಿಕೊಂಡು ಬರುತ್ತಾರೆಂದು ನಂಬುತ್ತೇವೆ.—ಈ ಊರಿನಲ್ಲಿ ೧೫ ದಿವಸದಿಂದ ಒಳ್ಳೆ ಮಳೆಗಳು ಬಂದು ಕೆರೆ ಕುಂಟೆಗಳು ತುಂಬಿ ಕೋಡಿ ಹೋಗುವುದನ್ನು ಜನರು ನೋಡಿ ಕ್ಷಾಮಕಾಲವನ್ನು ಮರೆತು ಮಹದಾನಂದ ಭರಿತರಾಗಿರುತ್ತಾರೆ ನಮ್ಮ ದೊಡ್ಡ ಕೆರೆ ಅರ್ಧ ತುಂಬಿರುತ್ತದೆ ಚಿಕ್ಕ ಕೆರೆ ಭರ್ತಿಯಾಗಿ ಕೋಡಿ ಹೋಗುತ್ತಿದೆ ಭತ್ತದ ಮತ್ತು ರಾಗಿಯ ಪೈರುಗಳು ಬಹಳ ಚೆನ್ನಾಗಿರುತ್ತವೆ ಧಾರಣೆ ರಾಗಿಗಳು ರೂಪಾಯಿಗೆ ರಾಗಿ ೧೧ ಸೇರು, ಅಕ್ಕಿ ೭-೭॥ ಸೇರು ಮಾರುತ್ತಾರೆ ಸಂತೆಯಲ್ಲಿ ಜನರು ಕಮ್ಮಿ ಸೇರುಗಳನ್ನು ಇಟ್ಟುಕೊಂಡು ಅಳತೆ ಮಾಡುತ್ತಿದ್ದರು. ಹೊಸದಾಗಿ ಬಂದಿರುವ ಜಮಾದಾರ್ರು ೨ ವಾರಗಳಿಂದ ಸಂತೆಗೆ ಹೋಗಿ ಪರೀಕ್ಷೆಮಾಡಿ ಕಮ್ಮಿ ಸೇರುಗಳನ್ನು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿದಾರೆಂದು ವರ್ತಮಾನ ಇದೆ ಇವರು ಈ ರೀತಿ ಮಾಡಿದ್ದು ಅನೇಕ ಜನರಿಗೆ ತುಂಬಾ ಉಪಕಾರ ಮಾಡಿದಂತಾಯಿತು ಇವರು ಮಾಡುವ ಕೆಲಸಗಳಲ್ಲಿ ಇದು ಬಹಳ ಒಳ್ಳೇ ಕೆಲಸವೆಂದು ಹೇಳಬಹುದು.—ಗುಟ್ಟಿ ದಾದಾಸಿಮುಗಲಾಲ್ ಸಾಹೇಬರ ಕುದುರೆಗೂ ಮ॥ ಗುರುಸ್ವಾಮಿ ಕುದುರೆಗೂ ೨೫ ರೂಪಾಯಿ ಪಂದ್ಯ ಕಟ್ಟಿ ಮುಗ್‌ಬಾಲ್‌ನಿಂದ ಹೊಸಕೋಟೆಗೆ ಓಡಿ ಬಿಟ್ಟರು ಮ॥ ಗುರುಸ್ವಾಮಿ ಕುದುರೆ ಗೆದ್ದಿತು ಇದರಿಂದ ಇವರು ಕುದುರೆಗೆ ಆಭರಣಗಳಿಂದ ಅಲಂಕಾರ ಮಾಡಿ ಬಹು ಸಂತೋಷಪಟ್ಟರು ೨೫ ರೂಪಾಯಿ ಸಿಕ್ಕಿತೆಂಬ ಸಂತೋಷವು ಇವರಿಗೆ ಇಲ್ಲ ತಮ್ಮ ಕುದುರೆ ಗೆದ್ದಿತು ಎಂಬ ಸಂತೋಷವೆ ಇವರಿಗೆ ದೊಡ್ಡದು

ತಿಪ್ಪಮಗೊಂಡ್ಲು.—ಇಲ್ಲಿನ ಎ ವಿ ಸ್ಕೂಲ್‌ನಲ್ಲಿ ಇದುವರಿವಿಗೆ ಆಕ್ಟಿಂಗ್ ಇಂಗ್ಲಿಷ್ ಮಾಸ್ಟರಾಗಿದ್ದ ಮ॥ ರಾಮರಾಯರಿಗೆ ಮಧುಗಿರಿ ಎ ವಿ ಸ್ಕೂಲಿಗೆ ವರ್ಗವಾಯಿತು ಇವರು ಇಲ್ಲಿಯ ಹೆಡ್ ಮಾಸ್ಟರಿಗೆ ಛಾರ್ಜ್ ಕೊಟ್ಟು ಇದೇ ಆಗಸ್ಟು ೨೩ ನೇ ತಾ ಸೋಮವಾರ ಪ್ರಯಾಣ ಮಾಡಿದರು ಇವರು ಸ್ಕೂಲ್ ಕೆಲಸವನ್ನು ಬಹು ಶ್ರದ್ಧೆಯಿಂದ ಮಾಡಿ ವಿದ್ಯಾರ್ಥಿಗಳ ಮತ್ತು ಜನರ ಪ್ರೀತಿಗೆ ಪಾತ್ರರಾಗಿದ್ದರು ಇವರು ಇಲ್ಲಿಂದ ಹೊರಡುವ ದಿವಸ ವಿದ್ಯಾರ್ಥಿಗಳೂ, ಮತ್ತು ಹೆಡ್ ಮಾಸ್ಟರೇ ಆದಿಯಾಗಿ ಎಲ್ಲಾ ಉಪಾಧ್ಯಾಯರುಗಳೂ ಸೇರಿ ಫೋಟೋಗ್ರಾಫ್ ಹಾಕಿಸಿಕೊಂಡದ್ದಲ್ಲದೆ, ಬಹು ಸಂಭ್ರಮದಿಂದ ರೈಲ್ ಸ್ಟೇಷನ್ ವರೆಗೂ ಹೋಗಿ ಸಾಗ ಕಳುಹಿಸಿದರು ಇವರ ಬದಲಿ ಯಾರು ಬರುತ್ತಾರೋ ತಿಳಿಯದು ಇವರಿಗೆ ಇಲ್ಲಿಯೇ ಖಾಯಂ ನೌಕರಿ ಸಿಕ್ಕಿದ್ದರೆ ಬಹಳ ಚೆನ್ನಾಗಿತ್ತು —ಇದೆ ಸ್ಕೂಲಿನಲ್ಲಿ ಇಂಗ್ಲಿಷ್ ಮಾಸ್ಟರುಗಳ ಸಂಖ್ಯೆಯು ಕಮ್ಮಿ ಆಗಿರೋದರಿಂದ ಇಲ್ಲಿಯ ವರ್ತಕರೂ ಇತರರೂ ಸೇರಿ ಸ್ಕೂಲ್ ಇಲಾಖೆಗೆ ಅರ್ಜಿಗಳನ್ನು ಹಾಕಿರುವುದಾಗಿಯೂ, ಇದರ ಇತ್ಯರ್ಥಕ್ಕಾಗಿಯೇ ಸರ್ಕಲ್ ಇನ್ಸ್‌ಪೆಕ್ಟರವರು ಈ ಪ್ರಾಂತ್ಯ ದಯಮಾಡಿಸುತ್ತಾರೆಂತಲೂ ವರ್ತಮಾನವಿರುತ್ತೆ —ಈ ಊರಲ್ಲಿ ಮುಜರಾಯಿಗೆ ಸಂಬಂಧಪಟ್ಟ ಕೆಲವು ದೇವಸ್ಥಾನಗಳೂ ಪೂಜೆಗಾಗಿ ಕೆಲವು ಮಾನ್ಯಗಳೂ ಇವೆ ಅಲ್ಲದೆ ಸರ್ಕಾರದಿಂದ ನಾಮೇಯಾಪಾ ಅರ್ಚಕರಿಗೆ ಸ್ವಲ್ಪ ವೇತನವೂ ಸಲ್ಲುತ್ತಿದೆ ಇಷ್ಟೆಲ್ಲಾ ಇದ್ದಾಗ್ಯೂ ದೇವಸ್ಥಾನದ ಬಾಗಿಲುಗಳು ತೆರೆದ ದಿವಸವೇ ಅಪರೂಪ ಇದೇ ಊರಿನ ಕೋಟೆಯಲ್ಲಿ ತತಕ್ಕ ಕೇಶವ ದೇವರ ದೇವಸ್ಥಾನದಲ್ಲಿ ಕ್ಷೌರದ ಕಟ್ಟೆಯನ್ನು ಮಾಡಿಕೊಂಡಿರುತ್ತಾರೆ ಇದನ್ನೆಲ್ಲಾ ನಮ್ಮ ದಯಾಳುಗಳಾದ ಅಮಲ್ದಾರ್ರವರೂ, ಇತರ ರೆವಿನ್ಯೂ ಅಧಿಕಾರಿಗಳೂ ಪರಾಂಬರಿಸಿ ದೇವಸ್ಥಾನಗಳಲ್ಲಿ ಅವಶ್ಯಕರವಾದ ಕೆಲಸಗಳು ನಡೆಯುವಂತೆಯೂ ಏರ್ಪಾಡು ಮಾಡಿದ್ದಾರೆಂತ ಕೋರುತ್ತೇವೆ —ಇಲ್ಲಿ ಪೋಸ್ಟು ಮಾಸ್ಟರಾಗಿರುವ ನರಸಿಂಹ ನವರನ್ನು ಪೆನ್ಷನ್ ಮೇಲೆ ತೆಗೆಯುವದಾಗಿ ವರ್ತಮಾನವಿರುತ್ತೆ ಇವರು ಬಹು ದಿವಸಗಳಿಂದಲೂ ಸರ್ಕಾರಿ ಕೆಲಸವನ್ನು ಬಹು ಮುತುವರ್ಜಿ ಯಿಂದ ಮಾಡುತ್ತಿದ್ದರು ಇವರು ಈಚೆಗೆ ಕೆಲಸ ಮಾಡಲು ಅಶಕ್ತರಾಗುತ್ತಾ ಬಂದದ್ದರಿಂದ ಇವರ ಹಿರಿಯ ಮಕ್ಕಳೇ ಕೆಲಸವನ್ನು ನಡಿಸುತ್ತಿದ್ದಾರೆ ಇವರು ಇಂಗ್ಲಿಷ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಪೋಸ್ಟಾಫೀಸಿನ ಕೆಲಸವನ್ನು ಎಕ್ಸ್‌ಪರ್ಟ್‌ರಿ ಯಿಂದ ನಡೆಯಿಸುತ್ತಿದ್ದಾರೆ [illegible] ಈ ಪೋಸ್ಟ್ ಮಾಸ್ಟರ್ [illegible] ಇವರ ಮಕ್ಕಳಿಗೆ [illegible] ಕೊಟ್ಟು ಕಾಪಾಡಿ [illegible] ಮಳೆ ಆಗಿರುತ್ತೆ ದನ ಕರುಗಳಿಗೆ ಮೇವು ಚೆನ್ನಾಗಿ ಸಿಕ್ಕುತ್ತೆ ಹವಾ ಆರೋಗ್ಯಕರವಾಗಿರುತ್ತೆ ಧಾರಣ ಮಾತ್ರ ಇಳಿದಿಲ್ಲ —ಪೇಟೆಯಲ್ಲಿ ಕೆಲವು ವರ್ತಕರು ಕೆಟ್ಟ ಸಾಮಾನನ್ನು ಕೊಟ್ಟು ಜನರಿಗೆ ಬಹಳ ಮೋಸ ಮಾಡುತ್ತಿರುವರು ಇದನ್ನು ನಮ್ಮ ಬಾಳ್ವರವರು ಪರಾಂಬರಿಸಿ ಅಂಥಾವರಿಗೆ ತಕ್ಕ ಬಂದೋಬಸ್ತು ಮಾಡಿಸಾರೆಂತ ನಿರೀಕ್ಷಣೆ

ತಿಪ್ಪಟೂರು —ಇಲ್ಲಿ ಮುಂಗಾರಿಯಲ್ಲಿ ಮಾತ್ರ ಒಳ್ಳೇ ಮಳೆ ಬಂದು ಕೆರೆಗೆ ಸ್ವಲ್ಪ ನೀರುಬಂತು ಈಚೆಗೆ ಸರಿಯಾದ ಮಳೆ ಇಲ್ಲದೆ ಕೆರೆಯ ನೀರೆಲ್ಲಾ ಬತ್ತುತ್ತಿತ್ತು ನಿನ್ನೆ ದಿವಸ ಒಂದು ಹದ ಮಳೆಯಾಯಿತು ಸದ್ಯಕ್ಕೆ ದನಕರುಗಳ ಕಷ್ಟ ತಪ್ಪಿತು —ಇಲ್ಲಿನ ಅಮಲ್ದಾರ್ರವರಾದ ಮ. ನಾರಾಯಣನವರು ಇಲ್ಲಿನ ಸಂತೆಯಲ್ಲಿ ವರ್ತಕರು ಅಳೆಯುತ್ತಿದ್ದ ದಾವಣಗೆರೆ ಸೇರನ್ನು ತಪ್ಪಿಸಿ ಸರಿಯಾದ ಸೇರುಗಳಲ್ಲಿ ಅಳೆಯುವಂತೆ ತಕ್ಕ ಏರ್ಪಾಡು ಮಾಡಿದಾರೆ —ಇಲ್ಲಿ ೪-೫ ವರ್ಷಗಳಿಂದ ಸಬ್ ರೆಜಿಸ್ಟ್ರಾರಾಗಿದ್ದ ಮ॥ ಲಕ್ಷ್ಮೀಕಾಂತಯ್ಯಂಗಾರ್ರವರು ಇಲ್ಲಿಂದ ವರ್ಗವಾಗಿ ಮಳವಳ್ಳಿಗೆ ೨೨ ನೇ ತಾ। ಭಾನುವಾರ ಇಲ್ಲಿಂದ ಪ್ರಯಾಣಮಾಡಿದರು ಇವರು ಇಲ್ಲಿಂದ ತೆರಳುವುದಕ್ಕಿಂತ ಮುಂಚೆ ೨೦ ನೆ ತಾ ವರ್ತಕರು ಸಿ ವಿ ಚಂಗಲ್ರಾಯ ಶೆಟ್ಟರವರ ಮಹಡಿಯ ಮೇಲೆ ಮರ್ಯಾದೆ ಮಾಡಿದರು ಆ ಕಾಲದಲ್ಲಿ ಮ॥ ಸೂರಪ್ಪನವರು ಒಂದು ಅಡ್ರೆಸನ್ನು ಓದಿದರು ಅದಕ್ಕೆ ತಕ್ಕ ಪ್ರತ್ಯುತ್ತರ ಕೊಟ್ಟರು ಅನಂತರ ಸರಾಫ್ ನಂಜುಂಡಯ್ಯನವರ ಮ ನಂಜುಂಡ ಶೆಟ್ಟರವರು ತಕ್ಕ ಮರ್ಯಾದೆ ಮಾಡಿದರು ತಾ ೨೨ ನೇ ಭಾನುವಾರ ಇಲ್ಲಿನ ಛತ್ರದಲ್ಲಿ ಸಾಯಂಕಾಲ ತಕ್ಕ ಮರ್ಯಾದೆ ಮಾಡಿದರು ಅಲ್ಲಿ ಆ ಕಾಲದಲ್ಲಿ ಪ್ಲೀಡರ್ ಸೀತಾರಾಮರಾಯರು ಮಾತಾಡಿದ ನಂತರ ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ಕೊಟ್ಟರು ಇದಲ್ಲದೆ ಅದೇ ಮಧ್ಯಾಹ್ನ ಬ್ರಾಹ್ಮಣರಿಗೆ ಮಾತ್ರ ರಾಮ ಮಂದಿರದಲ್ಲಿ ಭೋಜನವಾಯಿತು ಡಾ ವಿ ಅರಿವಾನಂದಂ ಪಿಳ್ಳೆಯವರ ಮನೆಯಲ್ಲಿ ತಕ್ಕ ಮರ್ಯಾದೆ ಮಾಡಿದ್ದು ಮಾತ್ರವಲ್ಲದೆ, ಅವರ ಮಗನಾದ ಸುಮಾರು ೯ ವರ್ಷದ ಬಾಲಕನ ವಿನೋದವಾಗಿ ಸಂಗೀತವನ್ನು ಹಾಡಿದನು ಅಲ್ಲಿಂದ ಮ॥ ದಸ್ತಗಿರಿ ಸಾಹೇಬರವರಿಂದ ಮ ಮುಸ್ತಾಕ್ ಸಾಹೇಬರವರ ಮಹಡಿ ಮೇಲೆ ಡಿಟೋ ಸಬ್ ರೆಜಿಸ್ಟ್ರಾರವರಿಗೆ ತಕ್ಕ ಮಾನಮರ್ಯಾದೆಗಳು ನಡೆದವು ಆ ಕಾಲದಲ್ಲಿ ಅಬ್ದುಲ್ ರಹಿಮಾನ್ ಷರೀಫ್ ಸಾಹೇಬರು ರಚಿಸಿದ ಕೀರ್ತನೆಯನ್ನು ಅಬ್ದುಲ್ ನಬಿ ಎಂಬುವ ಹಬ್ಬ ಸಂಗೀತ ಪ್ರವೀಣರು ಅತಿ ರಂಜನೆಯಾಗಿ ಹಾಡಿದರು ತರುವಾಯ ಆ ಕೀರ್ತನೆಯನ್ನು ಡಿಟೋ ಸಬ್ ರೆಜಿಸ್ಟ್ರಾರವರಿಗೆ ಒಪ್ಪಿಸಿದರು ಉಪದೇಶಿಗಳು ಇವರ ಗುಣಾತಿಶಯದ ವಿಷಯದಲ್ಲಿಯೂ ಮುಂದೆ ಎಲ್ಲರೂ ಹ್ಯಾಗೆ ನಡೆಯಬೇಕೆಂಬುವ ವಿಷಯದಲ್ಲಿಯೂ ಸ್ವಲ್ಪ ಮಾತಾಡಿದ ತರುವಾಯ ಸಂಗೀತ ಭಜನೆ ನಡೆಯಿತು ಸುಮಾರು ೧೨ ಘಂಟೆ ರಾತ್ರಿವರಿವಿಗೂ ಎಲ್ಲರೂ ಇದ್ದು ತರುವಾಯ ತಮ್ಮ ತಮ್ಮ ಮನೆಗೆ ತೆರಳಿದರು ಆ ಕಾಲದಲ್ಲಿ ಇವರ ಆಪ್ತಸ್ನೇಹಿತರಾದ ದೊಡ್ಡ ಮನುಷ್ಯರುಗಳು ಸಹ ಅರಸಿಕೆರೆಯಿಂದ ಬಂದು ಕಾದಿದ್ದು ರಾತ್ರಿ ೧ ಘಂಟೆ ರೈಲಿನಲ್ಲಿ ಅರಸೀಕೆರೆಗೆ ಕರೆದುಕೊಂಡು ಹೋಗಿ ತಾ ೨೩ ರಲ್ಲಿ ಅಲ್ಲಿಯೇ ಇರಿಸಿಕೊಂಡು ಸಾಯಂಕಾಲದ ಗಾಡಿಯಲ್ಲಿ ತಕ್ಕ ಮರ್ಯಾದೆಗಳೊಡನೆ ಮಳವಳ್ಳಿಗೆ ಕಳುಹಿಸಿಕೊಟ್ಟರು ಆ ಕಾಲದಲ್ಲಿ ತಿಪಟೂರು ರೈಲ್ ಸ್ಟೇಷನಿಗೆ ೫ ಘಂಟೆಯಲ್ಲಿ ಇಲ್ಲಿನ ದೊಡ್ಡ ಮನುಷ್ಯರೂ ಸ್ನೇಹಿತರೂ ಕಾದಿದ್ದು ಅವರಿಗೆ ತಕ್ಕ ಮರ್ಯಾದೆಯನ್ನು ತೋರಿಸಿ ತಮ್ಮ ವ್ಯಸನವನ್ನೂ ಸೂಚಿಸಿದರು —ಮುಖ್ಯವಾಗಿ ನಮ್ಮ ಸ್ನೇಹಿತರಾದ ಮ॥ ಲಕ್ಷ್ಮೀಕಾಂತಯ್ಯಂಗಾರ್ರವರು ಇಷ್ಟು ಮರ್ಯಾದೆಗಳನ್ನು ಜನರಿಂದ ಹೊಂದಬೇಕಾದರೆ ಅವರ ಗುಣವೇ ಇದಕ್ಕೆ ಕಾರಣವೆಂದು ತಿಳಿಯುತ್ತೇವೆ ಇವರು ಸದ್ಗುಣಿಗಳಾಗಿ ಉದ್ಯೋಗದ ಕಾಲದಲ್ಲಿ ಜಾತಿಭೇದ ಐಶ್ವರ್ಯವಂತರು ಬಡವರು ಎಂಬ ಭೇದ ನೋಡದೆ ಕೈಲಾದ ಮಟ್ಟಿಗೂ ತಮ್ಮ ಕೆಲಸವನ್ನು ಜಾಗರೂಕತೆಯಿಂದ ಮಾಡಿದಾರ ಇದಲ್ಲದೆ ಕೈಲಾದಮಟ್ಟಿಗೂ ಬಡವರಿಗೂ ಕಾಯಿಲೆಯವರಿಗೂ ಕೆಲವು ಸಂದರ್ಭಗಳಲ್ಲಿ ದ್ರವ್ಯಸಹಾಯ ಸಹಾ ಮಾಡಿದಾರೆ ಈಗ ಇಲ್ಲಿಗೆ ಹೊಸದಾಗಿ [illegible] ಸಬ್ ರೆಜಿಸ್ಟ್ರಾರವರು ಸಹ ನಮ್ಮೆಲ್ಲರನ್ನೂ ಹಾಗೆಯೇ ಪ್ರೀತಿಯಿಂದ ನಡೆಸಿಕೊಳ್ಳುವರೆಂದು ನಂಬಿದೇವೆ

ವಿದೇಶ ವರ್ತಮಾನಗಳು.

ಫ್ರಾನ್ಸ್ ರಾಜ್ಯದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ನೂರು ಮಂದಿ ನೌಕರ ಮಾಲೆಯರು ಬಂದೀಖಾನೆಗಳಲ್ಲಿ ಸಜಾ ಅನುಭವಿಸುತ್ತಿದ್ದ ಖೈದಿಗಳಿಗೆ ಬಿಡುಗಡೆಯ ಹುಕುಂ ಕೊಡುತ್ತೇವೆಂದು ಆಸೆ ಹುಟ್ಟಿಸಿ ಅವರಿಂದ ಹಣವನ್ನು ವಸೂಲ್ಮಾಡುತ್ತಿದ್ದದ್ದು ಪತ್ತೆಯಾಗಿ ಆ ಮೂವರಿಗೂ ಸಜಾ ವಿಧಿಸಲ್ಪಟ್ಟಿತು

ಆಫ್ರಿಕಕ್ಕೆ ಸೇರಿದ ಮೊರೊಕ್ಕೊ ರಾಜ್ಯದಲ್ಲಿ ಸ್ಪೆಯಿನ್ ಸೈನಿಕರು ಮೂರ್ ಜನರ ಮುಖ್ಯ ಸ್ಥಳವನ್ನು ಕೈಸೆರೆ ಹಿಡಿದುಕೊಂಡರು ಯುದ್ಧಕಾರ್ಯಗಳು ನಿಂತು ಹೋದವು ಪ್ರಜಾ ನೆಮ್ಮದಿಯು ನೆಲೆಗೊಂಡಿರುತ್ತದೆ ಇನ್ನು ಮುಂದೆ ಆ ರಾಜ್ಯವು ಅಭಿವೃದ್ಧಿಗೆ ಬರುವುದರಲ್ಲಿ ಅನುಮಾನವಿಲ್ಲವೆಂದು ಕಾಣುತ್ತದೆ

ತುರ್ಕಿ ರಾಜ್ಯಕ್ಕೆ ಸೇರಿದ ಯೆಮೆನ್ ಎಂಬ ಆಧಿಪತ್ಯದಲ್ಲಿ ಅರಬ್ಬೀ ಜನರು ಗಲಭೆಯನ್ನೆಬ್ಬಿಸಿ ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡಿದರು ಅವರು ಹಾಡೀಜ ಎಂಬ ರಾಜ್ಯದ ಮೇಲೆ ನುಗ್ಗಿ ಹೋಗಿ ಆರು ಪಟಾಲಂಗಳ ತುರ್ಕಿ ಸೈನ್ಯಗಳನ್ನು ಸಂದಿಗೆ ಯುದ್ಧಮಾಡಿ ಅವರನ್ನೆಲ್ಲಾ ಸೋಲಿಸಿ ಬಿಟ್ಟರೆಂದೂ, ಅವರ ಬಳಿ ಇದ್ದ ಫಿರಂಗಿಗಳನ್ನು ಕಿತ್ತುಕೊಂಡರೆಂದೂ ತಂತೀ ವರ್ತಮಾನ ಬಂದಿದೆ

ಶ್ರೀ ಮಾಜಿ ಕೃಷ್ಣವರ್ಮ ಎಂಬಾತನು "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ವಾರ್ತಾಪತ್ರಿಕೆಯನ್ನು ಪ್ರಕಟಿಸುತ್ತಾ ಅದರಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಬರೆಯುತ್ತಿದ್ದನು ಈ ವಾರ್ತಾಪತ್ರಿಕೆಯನ್ನು ಲಂಡನ್ ಪಟ್ಟಣದಲ್ಲಿ ಅಚ್ಚು ಹಾಕಿಕೊಡುತ್ತಿದ್ದ ಮನುಷ್ಯನನ್ನು ಹಿಡಿದು ಸರ್ಕಾರದವರು ಶಿಕ್ಷೆ ವಿಧಿಸಿದರು ಅನಂತರ ಮಿ ಗೈ ಆಲ್ಡ್ರೆಡ್ ಎಂಬ ಇನ್ನೊಬ್ಬನು ಅದನ್ನು ಅಚ್ಚು ಹಾಕಿಕೊಟ್ಟನು ಈಗ ಅವನನ್ನು ಹಿಡಿದು ವಿಚಾರಣೆ ಮಾಡುತ್ತಿದ್ದಾರೆ

ಸೈಬೀರಿಯಾ ದೇಶದಲ್ಲಿ ಆಟಬಾರಿಸಿಂದ ಮೊಕ್ಡೆನ್ ವರೆಗೆ ಜಪಾನ್‌ನವರು ರೈಲ್ ಹಾದಿಯನ್ನು [illegible] ಪ್ರಯತ್ನಪಟ್ಟು [illegible] ಆ ಪ್ರಾಂತದಲ್ಲಿ ತಮ್ಮ ರಾಜ್ಯಕ್ಕೆ [illegible] ಜಪಾನ್‌ನವರು ರೈಲು ಹಾಕಕೂಡದೆಂದು [illegible] ಈ [illegible] ಆದೇಶ ರಾಜ್ಯಗಳಿಗೂ ಸ್ವಲ್ಪ ಹೊಟ್ಟೆಕಿಚ್ಚು ಮನಸ್ತಾಪಗಳು [illegible] ಈಚೆಗೆ ಚೀನೀಯರೂ ಜಪಾನ್‌ನವರೂ ಸೇರಿ ಒಂದು ಕರಾರನ್ನು ಮಾಡಿಕೊಂಡರೆಂತಲೂ, ಚೀನೀಯರು ಜಪಾನ್‌ನವರಿಗೆ ರೈಲ್ ಹಾಕುವುದರಲ್ಲಿ ಸಹಾಯ ಮಾಡುವುದಾಗಿ ಒಪ್ಪಿಕೊಂಡಿದಾರೆಂತಲೂ ತಂತೀ ವರ್ತಮಾನ ಬಂದಿದೆ

ಅಮೆರಿಕಕ್ಕೆ ಸೇರಿದ ಉತ್ತರ ಮೆಕ್ಸಿಕೋ ಎಂಬ ಪ್ರಾಂತ್ಯದಲ್ಲಿ ಪ್ರವಾಹಗಳ ದೆಸೆಯಿಂದ ಅಪಾರವಾದ ನಷ್ಟವುಂಟಾಗಿದೆ ಎಂದು ತಂತೀವರ್ತಮಾನ ಬಂದಿದೆ ಸಾಂಟಾ ಕಾಟರೀನಾ ಎಂಬ ನದಿಯಲ್ಲಿ ಅರ್ಧರಾತ್ರಿಯಲ್ಲಿ ಬಹಳ ಪ್ರವಾಹ ಬಂದು, ನದಿಯ ದಡದಲ್ಲಿರುವ ಮಾಂಟೇರಿ ಎಂಬ ಊರಿನ ಮೇಲೆ ಹೊರಳಿತು ನೂರಾರು ಪ್ರಜೆಗಳು ನಿದ್ರೆ ಹೋಗುತ್ತಿರುವಲ್ಲಿ ಪ್ರವಾಹದೊಳಗೆ ಕೊಚ್ಚಲ್ಪಟ್ಟು ಮೃತಿ ಹೊಂದಿದರು ಇದುವರೆಗೆ ೩,೦೦೦ ಶವಗಳು ಸಿಕ್ಕಿರುವೆ [illegible] ಮೈಲಿ ಉದ್ದಕ್ಕೂ ಇದ್ದ ಮನೆಮಠಗಳೆಲ್ಲಾ ಸಂಪೂರ್ಣವಾಗಿ ನಾಶಹೊಂದಿದವು ಸುಮಾರು ೮೦೦ ಜನಗಳು ಪ್ರಾಣ ಕಳೆದುಕೊಂಡರೆಂದೂ, ೧೫,೦೦೦ ನಿರ್ಗತಿ ಪ್ರಜೆಗಳು ಮನೆಗಳನ್ನು ಕಳೆದುಕೊಂಡು ಅಲೆಯುತ್ತಿದ್ದಾರೆಂದೂ ತಿಳಿದುಬಂದಿದೆ

ಯೂರೋಪಿಗೆ ಸೇರಿದ ರೀಮ್ಸ್ ಪಟ್ಟಣದಲ್ಲಿ ಕಳೆದ ವಾರ ಅಂತರಿಕ್ಷದಲ್ಲಿ ಸಂಚರಿಸುವ ವಿಮಾನಗಳ ಸ್ಪರ್ಧೆ ನಡೆಯಿತು ಅಮೇರಿಕ, ಇಂಗ್ಲೆಂಡ್, ಫ್ರಾನ್ಸ್ ಜರ್ಮನಿಯ ಸವಾರರು ತಮ್ಮ ವಿಮಾನಗಳನ್ನು ತೆಗೆದುಕೊಂಡು ಹೋಗಿ ಓಡಿಸಿದರು ಅಮೇರಿಕಾದ ಸವಾರ ಗ್ಲೆನ್ ಕರ್ಟಿಸ್ ಎಂಬಾತನು ಈ ಪಂದ್ಯದಲ್ಲಿ ಮೊದಲನೆಯವನಾಗಿ ಬಹುಮಾನವನ್ನು ಪಡೆದನು ಫ್ರಾನ್ಸಿನ ಸವಾರ ಬ್ಲೇರಿಯೋ ಎಂಬವನ ವಿಮಾನವು ಅತ್ಯಂತ ವೇಗವಾಗಿ ಪ್ರಯಾಣ ಮಾಡಿದ್ದರಿಂದ ಆತನಿಗೂ ಬಹುಮಾನ ಕೊಡಲಾಯಿತು ಎಂ ಫಾರ್ಮನ್ ಎಂಬಾತನು ಇಬ್ಬರನ್ನು ತನ್ನ ವಿಮಾನದಲ್ಲಿ ಕೂಡಿಸಿಕೊಂಡು ಸಂಚಾರ ಮಾಡಿಕೊಂಡು ಬಂದದ್ದರಿಂದ ಆತನಿಗೆ ೭,೦೦೦ ರೂಪಾಯಿ ಇನಾಮು ಸಿಕ್ಕಿತು ಎಂ ಲಾಥಮ್ ಎಂಬಾತನು ತನ್ನ ವಿಮಾನವನ್ನು ಇತರ ವಿಮಾನಗಳಿಗಿಂತ ಅಂತರಿಕ್ಷದಲ್ಲಿ ಬಹಳ ಮೇಲಕ್ಕೆ ತೆಗೆದುಕೊಂಡು ಹೋಗಿದ್ದ ಕಾರಣ ಆತನಿಗೆ ೬,೦೦೦ ರೂಪಾಯಿ ಬಹುಮಾನ ಕೊಡಲಾಯಿತು ಇತ್ತಲಾಗಿ ಕೌಂಟ್ ಜಪ್ಪಲಿನ್ ಎಂಬ ಜರ್ಮನಿಯ ಸವಾರನು ತನ್ನ ವಿಮಾನದಲ್ಲಿ ಕುಳಿತು ಸಂಚಾರ ಮಾಡಿಕೊಂಡು ಹೋಗಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಇಳಿದನು ಪ್ರಜೆಗಳು ಆತನನ್ನು ನೋಡಿ ಕೊಂಡಾಡಿದರು ಚಕ್ರವರ್ತಿಯವರು ಸಂತೋಷಪಟ್ಟು ಆತನನ್ನು ತಮ್ಮ ಕೂಡ ಮೋಟಾರ್ ಗಾಡಿಯಲ್ಲಿ ಕೂರಿಸಿ ಕರೆದುಕೊಂಡು ಅರಮನೆಗೆ ದಯಮಾಡಿದರು

Printed and Published by the Rev H Gulliford, Proprietor and Manager, Wesleyan Mission Press, Mysore 2 9 1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೫ ಮೈಸೂರು—೧೯೧೯ನೇ ಇಸವಿ ಸೆಪ್ಟೆಂಬರ್ ತಾರೀಖು ೯ನೇ ಗುರುವಾರ. ಸಂಚಿಕೆ ೧೫

ಶಾಸ್ತ್ರೀ ವೆಂಕಟಾಚಲ ಪಂಡಿತರ
ಜ್ವರದ ಗುಳಿಗೆ

28-30

ಈ ಗುಳಿಗೆಗಳು ೧ಜ್ವರ, ಹೊಸ ಜ್ವರ, ಚಳಿಜ್ವರ, ಪ್ಲೇಗು ಜ್ವರ, ವರಸೇ ಜ್ವರ ಮರುದಿವಸ ಮತ್ತು ಸಾಧ್ಯ, ಮಲೇರಿಯಾ ಜ್ವರ(ಇನ್ಫ್ಲುಯೆಂಜ ಜ್ವರ),



ಸೀತ ಜ್ವರ, ಪಿತ್ತ ಜ್ವರ, ಸನ್ನಿಪಾತ ಜ್ವರ, ಇವೆಲ್ಲವನ್ನೂ ಖಂಡಿತವಾಗಿ ತಪ್ಪದೆ ಗುಣಪಡಿಸುತ್ತದೆ.

ಇದರಲ್ಲಿ ಕ್ವಿನೈನ್ ಆಗಲೀ ಅಫೀಮ್ ಆಗಲೀ ಯಾವಾದ ಮತ್ತಿನ ವಸ್ತುವಾಗಲೀ ಇಲ್ಲವಾದ ಕಾರಣ ಪಥ್ಯವಿಲ್ಲದಂತೆ ಸೇವಿಸತಕ್ಕದ್ದಾಗಿದೆ. ಜ್ವರಕ್ಕೆ ಈ ಗುಳಿಗೆಗಳು ಅಮೃತದಂತೆ ಹೇಳಿದರೆ ಅತಿಶಯೋಕ್ತಿಯಾಗಲಾರದು.

೧೬ ಗುಳಿಗೆಯುಳ್ಳ ಕುಪ್ಪಿ ೮ ಆ.
೩೨ „ „ ೧ ರೂ.
೧ ಡಜನ್ ದೊಡ್ಡ ಕುಪ್ಪಿ ಒಂದೇಸಲ ತರಿಸಿದರೆ ೮ ರೂ.
೧ ಡಜನ್ ಸಣ್ಣ ಕುಪ್ಪಿ ೪ ರೂ.

ಪೋಸ್ಟೇಜು ಬೇರೆ

ಎ. ಎಸ್. ಎಸ್. ಆರ್. ವೈದ್ಯಶಾಲಾ, ಮೈಸೂರು

ಜ್ವರಹರಿ. 16 32

ಈ ಔಷಧವು ಜ್ವರ, ಚಳಿಜ್ವರ, ಮಲೇರಿಯಾ, ಪಿತ್ತಜ್ವರ, ಶೀತ ಜ್ವರ ಮುಂತಾದ ಎಲ್ಲಾ ಜ್ವರಗಳನ್ನೂ ಬೇಗ ಗುಣಪಡಿಸುವುದು.

ಈ ಔಷಧವು ಬಳ್ಳಾರಿಯಲ್ಲಿರುವ ಮಹಾಮಹೋಪಾಧ್ಯಾಯ ಸಬ್ ಅಸಿಸ್ಟೆಂಟ್ ಸರ್ಜನ್ ಎಸ್. ಬಿ. ವೆಂಕಟಸುಬ್ಬಯ್ಯನವರು ಕಂಡುಹಿಡಿದ ಔಷಧವು. ಈ ಔಷಧವನ್ನು ಉಪಯೋಗಿಸಿ ಅನೇಕ ಮಂದಿ ಜ್ವರದಿಂದ ಗುಣಹೊಂದಿರುವರು. ಇನ್ನೂ ಜನಗಳು ಉಪಯೋಗಿಸಿ ಸುಖಪಡಬಹುದು.

ಕ್ರಯ — ಸೀಸೆ ೧ಕ್ಕೆ ೮ ಆಣೆ, ೧ ಡಜನ್ ಸೀಸೆ ತರಿಸಿಕೊಂಡರೆ ಪೋಸ್ಟೇಜು ವಗೈರೆ ಉಚಿತವಾಗಿ ಕಳುಹಿಸಲಾಗುವದು.

ಅಮೃತ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಹೊಟ್ಟೆನೋವು, ವಾಂತಿ, ಕಾಲರಾ ಮುಂತಾದ ರೋಗಗಳಿಗೆ ಅತ್ಯುತ್ತಮವಾದ ಔಷಧವು. ಇದನ್ನು ಮನೆಯಲ್ಲಿ ಇಟ್ಟುಕೊಂಡಿರುವುದು ಒಳ್ಳೇದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಳವರು ಈ ಔಷಧವನ್ನು ಉಪಯೋಗಿಸಿ ಉತ್ತಮವಾದ ಔಷಧವೆಂದು ಹೇಳಿರುವರು.

ಈ ಎರಡು ಔಷಧಗಳು ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಹನುಮಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ವರುಷ ಕಡೆಯವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜು ಸೇರಿ	ರೂ ೧—೧೪—೦
„ „ ೬ „ „	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 16

ತಲೆನೋವು, ವಾಯುನೋವು, ಸೆಳತ, ಗಂಟುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಕೀಲುರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತನಿವಾರಣೆಯಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಒಂದುಸಾರಿ ನೋಡಿ ಎಲ್ಲಾ ಭಾಗಗಳ ಸಾಹೇಬರು ಜನರು ಪರೀಕ್ಷಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧವು ಅದ್ವಿತೀಯವಾದದ್ದು. ಇದನ್ನು ಅಪ್ಪಿ ಹಚ್ಚಾಗಿ ಹಚ್ಚಬೇಕು.

ಈ ಔಷಧವನ್ನು ಎಲ್ಲರೂ ಉಪಯೋಗಿಸಿ ಇದರ ಗುಣವನ್ನು ತಿಳಿದುಕೊಳ್ಳಬೇಕೆಂದು ಹೇಳುವೆನು. ಈ ಔಷಧದ ತೈಲವು ಸೋವಿ ಬೆಲೆಗೆ ಸಿಕ್ಕುತ್ತದೆ.

ಕ್ರಯ ಶೀಸೆ ೧ಕ್ಕೆ ೧೦ ಆಣೆ. ವಿ. ಪಿ. ಅಂಚೆ ಮೂಲಕ ಕಳುಹಿಸಲಾಗುವದು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ಜನರ ಉಪಯೋಗಕ್ಕೆ ಮಾರಬಹುದು.

ಜಿ. ಎಸ್. ಕ್ಲೆಮೆಂಟ್ ಕಂಪನಿ, ಕುಮಾರ ಮತ್ತು
ಎಸ್. ಓಟರ್ಸನ್,
೩೩, ವೇದಮಲೆಪಿಳ್ಳೆ ಬೀದಿ ವೇಪೇರಿ, ಮದರಾಸ್.

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(೧೯೧ ಪುಟಗಳು, ನೋಗಸಾದ ಒಟ್ಟೆ ಬೈಂಡು, ಕ್ರಯ ೮ಆಣೆ) ಒಂದುನೂರ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ ಲೋಕದ ನಾನಾ ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಪದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶದಲ್ಲಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	೦—೧—೦
ಎಕ್ಸರ್ಸೈಜ್ ಪುಸ್ತಕಗಳು	
(೪೦ ಪೇಜು) ಪ್ರತಿಯೊಂದಕ್ಕೆ	೦—೦—೬
(೮೦ ಪೇಜು)	೦—೧—೦
(೧೬೦ ಪೇಜು)	೦—೨—೦

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-36]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ. ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕವಾದ ಗುಣಕಾರಿಯು [30-29]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಊತ, ಗಂಟು, ಗಂಟ್ಲು ನೋವು, ಅರ್ಧಾಂಗವಾಯು, ನೆಗಡಿ, ಕೆಮ್ಮು, ಜಜ್ಜು, ಇತ್ಯಾದಿ.

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ. ಬಾಟ್ಲ ೧ ಇದರ ಕಿಮ್ಮತು ೦-೮-೦

ಗಜಕರ್ಣಾದಿ ಮುಲಾಮು.

ಮೂರು ನಾಲ್ಕು ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುದಿಲ್ಲ. ಡಬ್ಬಿ ಒಂದರ ಕಿಮ್ಮತು ೦-೩-೦. ೩ ಡಬ್ಬಿಗಳಿಗೆ ೦-೯-೦

ಅಮೃತಸಿಂಧು	೨-೦-೦
ಚೇಳುಕಡಿತದ ಮದ್ದು	೦-೮-೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುಡಿ ಬೆಳೆಗೆ	೦-೮-೦
ಜುಲಾಬು ವಟಿ—ಮಲಬದ್ಧತೆಗೆ	೦-೪-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಮಜ್ಜಿ ಮುಲಾಮು—ಗುಳ್ಳೆ ಬಿಸಿಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಅಸ್ತಮಾ ರೋಗಕ್ಕೆ	೦-೮-೦

ದಯಮಾಡಿ ಈ ಟಿಳಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ. 13

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ಬಾಬತ್ತು ಬೇಕಾದವು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ — ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾಬತ್ತು ಸೆಟ್ಟಿಗೆ ವಿಚಾರಿಸುವುದಾದರೆ ಬರುವವು. ಟೋಪಿಗಳನ್ನು ಮಾಡುವ ನಾವೇ ಎಂತು ಚೆನ್ನಾಗಿ ಹಾಕಿಸುತ್ತೇವೆ. ಆಲೋಚಿಸುವವರಿಗೆ ಬಹಳ ಚೆನ್ನಾಗಿ ಗೊತ್ತಾಗುತ್ತದೆ.

ಒಳ್ಳೇ ನೂಲು, ಚೆನ್ನಾಗಿ ಹೆಣೆದ, ಎಲ್ಲಾ ಮೂಲೆಗೆ ಒಪ್ಪುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅನ್ಯಥಾ ಬಹಳ ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ನಾನಾ ಬಣ್ಣ, ಕಪ್ಪು, ಬಿಳಿ, ಹಸಿರು ಟೋಪಿಗೆ ೧ ರೂ.
೧ ರೂ ೬ ಆ , ೧ ರೂ ೪ ಆ
ಚುಕ್ಕೆಯುಳ್ಳ ಟೋಪಿಗಳು ರೂ ೧-೮
ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨
ಸಾದಾ ಟೋಪಿಗಳು ೧ ರೂ ೧೨ ಆ , ೧ ರೂ ೦ ಆ , ೧ ರೂ ೬ ಆ
ಉಣ್ಣೆಯ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಹುಡುಗರ ಟೋಪಿ, ಫುಲ್ ಟೋಪಿ, ಅರ್ಧ ಟೋಪಿ ಕತ್ತರಿಸಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವ ಜನರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ ಹಾಸನ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕ ... ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ ... ಎದೆ ಕಲ್ಲಿಸುವುದು, ... ಗಾಬರಿ, ಕಣ್ಣು ನೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು ... ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಸ್ರಾವ ... ಉರುಮೂತ್ರ, ಮೂತ್ರಕೋಶದ ಕ್ಷಯಿಸಿಹೋಗುವುದು ... ಸಂದೇಹಿಸಲಾಗದ ರೋಗಗಳು ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ... ಮೂತ್ರಾಮ್ಲ ವಿಷವನ್ನು ಹೊರಕ್ಕೆ ಕಳುಹಿಸುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67 2]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೨—೦ ... ಆರು ... ಬುಡ್ಡಿಗಳಿಗೆ ರೂ ೧೦—೨—೦ ಔಷಧಿಗಳನ್ನು ... ರವಾನಿಸಲಾಗುವುದು ಅಥವಾ ಡೋನ್ಸ್, ೨೦, ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

... ೧೯೦೬ ರಿಂದ ೧೯೦೭ ವರೆಗೆ

...ಲದ ಪರೀಕ್ಷೆ !

... ವರ್ಷಗಳಿಗೂ ಹೆಚ್ಚಾಗಿ

SCOTT'S EMULSION 6 36

(ಸ್ಕಾಟ್ಸ್ ಇಮಲ್‌ಷನ್)

... ಅನೇಕ ವೇಳೆ ಪರೀಕ್ಷೆ ಮಾಡಿ, ... ಹೇಳುತ್ತಾರೆ

... ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ... ಸರಿ ... —

... ತರದ ಕೆಮ್ಮಲು

... ಕ್ಷೀಣತೆ

ಆಹಾರದಲ್ಲಿ ಅರುಚಿ

ಇವೆಲ್ಲವೂ ತಂದೆಗೂ ಮಗನಿಗೂ ಬಾಲಕಾರಿ ... ಮತ್ತು ... ಸೇವನಾ ...

ಕ್ಯಸೋಕದೆ ತಯಾರಾದದ್ದು

ಔಷಧಗಳ ... ನಡಿಗೆಯಲ್ಲಾ ... ಇನುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

... ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ

ಸಂಜೀವಿನಿ ಔಷಧಾಲಯ, ಮೈಸೂರು.

23 31

ಎಂ ಎಸ್ ಕುಮಾರ್‌ಯವರ ದಿವ್ಯಾವಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ ಜೋಮು, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾನಸಿಕ ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಶೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಸಿರಪ್ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ... ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಬೊಟ್ಲ್ ೧ ಕ್ಕೆ ೧ ರೂಪಾಯಿ

... ವಟಿಕ —ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ... ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ... ತಲೆನೋವು, ತಲೆಭಾರ ... ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ... ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನು ವೃದ್ಧಿಪಡಿಸುತ್ತದೆ ಕ್ರಯ ಶೀಶೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರತರವಾದ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು ಅರ್ಜಿಗಳ ... ಬರೆಯಿರಿ

ಡಿ ಕೆ. ಸ್ವಾಮಿ,
ಪ್ರೊಪ್ರೈಟರ್.

CHAMBERLAIN'S PAIN BALM.

ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವು

4 36



ಬೆನ್ನುಬುಡದ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು— ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಎದ್ದೇಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಇದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇ ಇನೂಜಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !

2 ...

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಒಪ್ಪವು ಹೊಗುವದಿಲ್ಲ ... ಬಹಳ ಕಡಮೆ ಈ ಬಟ್ಟೆಗಳು ಕೈಮಗ್ಗದಲ್ಲಿ ... ದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ... ಒಂದಕ್ಕೆ ... ಆಣೆಯಿಂದ ... ಚಿಲ್ಲರೆಯಾಗಿ ... ಸಗಟಾಗಿ ... ಕೊಡಲ್ಪಡುತ್ತವೆ ಶಾಲುಗಳು, ಜಾನವದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ. ಎಲ್ ಎಸ್ ಮಿಕ್ ಡಿಪೋ ಮೈಸೂರ.

ಸ್ವಹಕ್ಕುತ್ಯಾಗದ ನೋಟೀಸು

66 2

ಕೋಲಾರ್ ಡಿಸ್ಟ್ರಿಕ್ಟು ಮುಳುಬಾಗಿಲ್ ತಾಲ್ಲೂಕು ಆವನಿ ಸಮ್ಮತು ... ಹೊಂಗಾನಹಳ್ಳಿ ಇವಕ್ಕೆ ಮಜರೆ ರಾವ ಪುರ ಜೋಡಿ ಕುರುಬರಹಳ್ಳಿ ಮತ್ತು ಜೋಡಿ ದೇವರಾಯಸಮುದ್ರ ವಗೈರೆ ಗ್ರಾಮಗಳ ಬಾಬು ಗುತ್ತಾದಾರ್ ಮತ್ತು ಜೋಡಿದಾರ್ ಆದ ನವರಿ ಹೊಂಗಾನಹಳ್ಳಿಯಲ್ಲಿರುವ ವೆಂಕಟ್ರಾಮಯ್ಯನವರ ಮಕ್ಕಳಾದ ೧ ನೇ ವೆಂಕಟಸ್ವಾಮಿ ... ರಾಮಸ್ವಾಮಯ್ಯ ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ ಮೇಲ್ಕಂಡ ವೆಂಕಟ್ರಾಮಯ್ಯನವರ ೩ ನೇ ಮಗನಾದ ಕೃಷ್ಣಯ್ಯನೆಂಬುವನು ನಮ್ಮಗಳ ಅವಿಭಕ್ತ ಕುಟುಂಬಕ್ಕೆ ಸೇರಿದವನಾಗಿ ಅವಿಭಕ್ತ ಕುಟುಂಬದಲ್ಲಿ ಇದ್ದುಕೊಂಡೂ ಕಂಡ ಸ್ವೇಚ್ಛೆಯಾಗಿ ನಸ್ವಷ್ಟದ ಆಸ್ತಿಗಳನ್ನೂ ಮತ್ತು ನನ್ನ ... ತರ ಸ್ವಾರ್ಜಿತ ಸ್ವತ್ತುಗಳನ್ನೂ ಕೂಡ ಅಂದರೆ ... ವಿವರಿಸಿರುವ ಸ್ವತ್ತುಗಳನ್ನು ಕ್ರಯ ಭೋಗ್ಯ ಆಧಾರಾದಿಗಳು ವಗೈರೆ ಪರಭಾರೆ ಮಾಡುತ್ತಿರುವದಾಗಿ ಕಂಡುಬಂದು ಇರುತ್ತೆ ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ಬಾಧ್ಯತೆಯು ಮೇಲ್ಕಂಡ ಕೃಷ್ಣಯ್ಯನಿಂದ ಪಡೆದವರಿಗೆ ... ಸಲ್ಲಲಾರದ ತಿಳಿಯುವದು

ವೆಂಕಟೇಶಯ್ಯ ರಾಮಸ್ವಾಮಯ್ಯ

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ನಿಜ ಶ್ರಾವಣ ಬಹುಳ ದಶಮಿ ಗುರುವಾರದಿಂದ ಭಾದ್ರಪದ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ಸಿಂಹ ಮಾಸ
9	ಗುರು §	ದಶಮಿ	23 20	ಆ	9-2	25
10	ಶುಕ್ರ	ಏಕಾದಶಿ	22-10	ಪು	9 50	26
11	ಶನಿವಾ	ದ್ವಾದಶಿ	22 56	ಪು	11 50	27
12	ರವಿವಾ †	ತ್ರಯೋದಶಿ	24 58	ಶ್ಲೇ	15 2	28
13	ಚಂದ್ರ †	ಚತುರ್ದಶಿ	27-56	ಮ	19 18	29
14	ಕುಜ *	ಅಮಾವಾಸ್ಯೆ	31 58	ಪು	21-44	30
15	ಬುಧ ,,	ಪಾಡ್ಯಮಿ	36-16	ಪ್ರ	30 49	31

§ ಕರಿನಾಯೋಗ
ಸರ್ವತ್ರ ಏಕಾದಶಿ
,, ಶನಿಪ್ರದೋಷ
† ಮಾಸಶಿವರಾತ್ರಿ
† ಉತ್ತರಗೌರೀವ್ರತ
* ಸರ್ವತ್ರ ಅಮಾವಾಸ್ಯೆ, ಮಂಗಳಗೌರೀ ವ್ರತ
,, ಮಹಾಲೈಸ್ತ್ರ

ಕ್ಷಾಮನಿವಾರಣೆಯ ಕಾರ್ಯಗಳು

೧೯೦೯ ನೇ ಆಗಸ್ಟ್ ತಾ 28 ಕ್ಕೆ ಮುಗಿದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ: ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
ಬೆಂಗಳೂರು	[illegible]	11		10	
ಕೋಲಾರ	[illegible]	21	[illegible]	[illegible]	
ತುಮಕೂರು	[illegible]	[illegible]	[illegible]	[illegible] 1	
ಮೈಸೂರು					
ಹಾಸನ	[illegible]	141	[illegible]	[illegible]	
ಶಿವಮೊಗ					
ಕಡೂರು					
ಚಿತ್ರದುರ್ಗ	[illegible]	[illegible]	21	270	
ಮಾರಿಕಣಿವೆ	[illegible]	241	7	712	
ಸ್ಯಾನಿಟೇರಿ					
ಒಟ್ಟು	[illegible]	[illegible]	111	[illegible]	

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಒಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ	೧೫ ೦ ೦	೧೫ ೦ ೦
ಕೆಂಬೂತಿ ಅಕ್ಕಿ ಅವಲ್		೧೪ ೮ ೦	೧೪ ೦ ೦
,, ದುಯಂ		೧೩ ೦ ೦	೧೨ ೭ ೦
ಜಾವಾಣಿ ಅಕ್ಕಿ		೧೪ ೦ ೧	೧೫ ೧೨ ೦
ಸಣ್ಣಕ್ಕಿ ಅವಲ್		೧೭	೧೬ ೮ ೦
,, ದುಯಂ		೧೬ ೦ ೦	೧೬ ೧ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೫ ೦ ೦
,, ದುಯಂ		೧೫ ೨ ೦	೪ ೮ ೦
ಕ್ನೇಬ್ ರಾಗಿ ಪಲ್ಲ ೧ಕ್ಕೆ		೯ ೦ ೦	೯ ೦-೦
ಕಾರ್‍ರಾಗಿ		೮ ೮-೦	೨ ೮-೦
ಜೋಳ	.	೯ ೪ ೦	೯-೦ ೦
ಹುಲಗಂಡೆ ಪಲ್ಲ ೧ಕ್ಕೆ		೧೨ ೨-೦	೧೧ ೮-೦
ಬೀಕೀ ಅವರೆ	.	೧೨ ೮ ೦	೧೪ ೮ ೦
ಹೆಸರು		೧೨ ೮ ೦	೧೨ ೦ ೦
ಉದ್ದು		೧೪ ೬ ೦	೧೨ ೮-೦
ಅಡಲೆ		೧೪ ೬ ೦	೧೧-೦ ೦
ಎಳ್ಳು ಸೇ ೧೨೭ ಕ್ಕೆ		೧೭ ೦ ೦	೧೫ ೦ ೦
ಹುರುಳಿ	.	೧೨ ೪ ೦	೧೨ ೧೨ ೦
ಹರಳು ೧೨೭ ಸೇರಿಗೆ	...	೧೪ ೦ ೦	೧೦-೮ ೦
ನೆಲಗಡಲೆ(?) ಮಣ ೧ಕ್ಕೆ		೨ ೮ ೦	೨ ೪-೦
ಮೆಣಸಿನಕಾಯಿ	..	೬ ೦ ೦	೪ ೮ ೦
,, ದುಯಂ		೫ ೮ ೦	೬-೦ ೦
ಬೆಲ್ಲ ದೊಡ್ಡ ಅಚ್ಚು	..	೯ ೮ ೦	ಮ ೨-೪-೦
ಒಳ್ಳೆಣ್ಣೆ ಮಣ ೧ಕ್ಕೆ	.	೫ ೮	೫ ೪-೦
ಹರಳೆಣ್ಣೆ ,,		೫ ೮ ೦	೬-೪ ೦
ಕೊತ್ತುಂಬರಿ ಪಲ್ಲ ೧ಕ್ಕೆ		೯ ೦ ೦	೯-೦-೦
ಉಪ್ಪು ,,		೬-೧೨ ೦	೫ ೧೨-೦
ಹುಣಸೇ ಹಣ್ಣು	.	೧ ೧೨ ೦	೧ ೧೨-೦
,, ಹಳೇದು		೧ ೮ ೦	೧ ೮ ೦
ತುಪ್ಪ ಮಣ ೧ಕ್ಕೆ		೧೬ ೨-೦	೧೩ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೪ ೦	೬-೨-೦
ತೆಂಗಿನಕಾಯಿ ೧೦೦ ಕ್ಕೆ		೫-೦-೦	೪ ೧೨-೦
ಅಡಿಕೆಕಾಯಿ ಮಣ ೧ಕ್ಕೆ		೦ ೮-೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೦-೦	೦-೧೧ ೦
ಚಿನ್ನ (ಪೌನ್) ಕೆಂಪು	..	೧೫-೬-೦	೧೫-೮ ೦
,, ,, ಮಸಿಮೆ	.	೧೬-೦-೦	೧೫ ೧೨-೦
,, ,, ಗಟ್ಟಿ ತೊಲ ೧ಕ್ಕೆ	..	೨೪-೮-೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪ ೦	೬೫ ೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—8—1909 ರಿಂದ 11—8—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	0	0	0
ಮೈಸೂರು ,,	18	37	0	0
ಬೆಂಗಳೂರು ಡಿಸ್ಟ್ರಿಕ್ಟು	10	5	26	20
ಮೈಸೂರು ,,	50	10	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	4	4	0	0
ಚಿತ್ರದುರ್ಗ ,,	0	0	0	0
ಕಡೂರ್ ,,	25	17	0	0
ಶಿವಮೊಗ್ಗ ,,	6	4	6	6
ಜುಮ್ಲಾ	114	107	32	26

ಮೈಸೂರು ಸರ್ಕಾರಿ ಹುಕುಮುಗಳು

ಬೀಜದ ಕೋಠಿಗಳ ಏರ್ಪಾಡು

೧೯೦೮ ನೇ ಸಾಲಿನ ದಸರಾ ಪ್ರಜಾಪ್ರತಿನಿಧಿಸಭೆಯಲ್ಲಿ ಬಹಳ ರೈತರಿಗೆ ಉತ್ಕೃಷ್ಟವಾದ ಬಿತ್ತವನ್ನು (ಬತ್ತ, ರಾಗಿ ಮತ್ತು ಜೋಳ) ಸಾಲಕೊಟ್ಟು ಅವರ ಕಿಮ್ಮತ್ತನ್ನು ಸುಗ್ಗಿಯಾದನಂತರ ಅವರಿಂದ ವಸೂಲು ಮಾಡಿಕೊಳ್ಳುವ ಏರ್ಪಾಡು ಮಾಡಿಕೊಡುವ ವಿಚಾರದಲ್ಲಿ ಚರ್ಚೆ ನಡೆದು ಗವರ್ನ್ಮೆಂಟಿನವರು ಹುಕುಂ ಮಾಡಿರುವುದೇನೆಂದರೆ —ಬೀಜದ ಕೋಠಿಗಳನ್ನು ಸ್ಥಾಪಿಸುವುದರಲ್ಲಿ ಎರಡು ಮುಖ್ಯ ಉದ್ದೇಶಗಳಿರುತ್ತವೆ (೧) ಸಂಸ್ಥಾನದಲ್ಲಿ ಹಾಲಿ ಬೆಳೆಯುತ್ತಿರುವ ಧಾನ್ಯ ಮತ್ತು ಇತರ ಪೈರುಗಳ ಉತ್ತಮ ತರಹಾ ಬೀಜಗಳನ್ನು ರೈತರಲ್ಲಿ ಹಂಚುವುದು (೨) ಸಂಸ್ಥಾನದಲ್ಲಿ ಹಾಲಿ ಬೆಳೆಯದೆ ಇರುವ ಧಾನ್ಯದ ರಕಂಗಳನ್ನು ಇಲ್ಲಿ ಹೊಸದಾಗಿ ರೂಢಿಗೆ ತರುವುದು ಉಚಿತವಾಗಿದ್ದಲ್ಲಿ ಅಂಥಾ ಬೀಜಗಳನ್ನು ತರಿಸಿ ರೈತರಿಗೆ ಹಂಚುವುದು ಈ ಎರಡನೇ ತರಹಾ ಬೀಜಗಳನ್ನು ವಿಶೇಷವಾಗಿ ತರಿಸುವುದಕ್ಕೆ ಮೊದಲು ಇವು ಎಲ್ಲೆಲ್ಲಿ ಚನ್ನಾಗಿ ಬೆಳೆಯುತ್ತವೆಂದು ತಿಳಿಯುವುದಕ್ಕೆ ಅಜಮಾಯಿಷಿಗಳು ನಡೆಸಬೇಕಾಗಿತ್ತು ಮತ್ತು ಸಾಮಾನ್ಯ ರೈತರು ಈ ತರದ ಬೀಜಗಳಿಂದ ಹೆಚ್ಚು ಪ್ರಯೋಜನ ಹೊಂದಲಾರರು ಆದ ಕಾರಣ ಪ್ರಕೃತ ಸಂಸ್ಥಾನದಲ್ಲೇ ಬೆಳೆಯುವ ಬತ್ತ, ರಾಗಿ, ಜೋಳ, ನೆಲಗಡ್ಲೆ ಮತ್ತು ಆಲೂಗಡ್ಡೆ ಇವುಗಳನ್ನು ಮಾತ್ರ ಶೇಖರಿಸಿಡುವುದು ಯುಕ್ತವೆಂದು ತೋರುತ್ತದೆ

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ತೋಟದಲ್ಲಿ ಬಿತ್ತನೆ ಬೀಜವನ್ನು ಶೇಖರಿಸುವುದಕ್ಕೆ ಬೇಕಾದ ಒಂದು ಕೋಠಿಯನ್ನು ಏರ್ಪಡಿಸಿ, ಲಾಲ್‌ಬಾಗ್ ಸೂಪರಿಂಟೆಂಡೆಂಟರವರು ರೆವಿನ್ಯೂ ಕಮೀಷನರವರ ಸಲಹೆ ತೆಗೆದುಕೊಂಡು ಸಾಕಾದಷ್ಟು ಬೀಜಗಳನ್ನು ಜಮಾಯಿಸಿ, ಇವನ್ನು ಗ್ರಾಮ ಗೋಡೌನ್ ಕೊಠಡಿಗಳಲ್ಲಿ ಶೇಖರಿಸಿಡುವ ಏರ್ಪಾಡುಗಳನ್ನು ಮಾಡಬೇಕು ಹೀಗೆ ಕೋಠಿಯು ಕ್ರಮಪಟ್ಟು ಬೀಜದ ಧಾನ್ಯಗಳನ್ನು ಜಮಾಯಿಸಿ ಮಾರಾಟ ಮಾಡುವ ವಿಧಾನಗಳು ಸ್ಥಿರವಾಗುವ ತನಕ ಈ ಕೆಲಸವನ್ನು ಎಲ್ಲರಿಗೂ ತಿಳಿಯುವ ರೀತಿ ಸೂಪರಿಂಟೆಂಡೆಂಟರು ಜಾಗ್ರತೆ ವಹಿಸಬೇಕು ಧಾನ್ಯವನ್ನು ಬೇಗ ಹಾಳಾಗದ ಹಾಗೆ ಇಡುವ ಕ್ರಮ ಪ್ರತಿಯೊಂದು ಕಡೆಯಲ್ಲೂ ಕೊಠಡಿಯಲ್ಲಿ ಈ ಕೋಠಿಯ ಕೆಲಸ ನಡೆಯುವ ರೀತಿ ಇದರಿಂದ ರೈತರಿಗೆ ಎಷ್ಟರಮಟ್ಟಿಗೆ ಪ್ರಯೋಜನ ಉಂಟಾಗುತ್ತದೆ ಭಾಗದಲ್ಲಿ ಸೂಪರಿಂಟೆಂಡೆಂಟರವರು ರಿಪೋರ್ಟು ಮಾಡತಕ್ಕದ್ದು ಈ ಭಾಗದಲ್ಲಿ ಸ್ವಲ್ಪ ಅನುಭವ ಬಂದ ತರುವಾಯ ಇತರ ಸ್ಥಳಗಳಲ್ಲಿಯೂ ಇಂಥಾ ಕೋಠಿಗಳನ್ನು ಏರ್ಪಡಿಸುವ ಅಂಶವನ್ನು ಆಲೋಚಿಸಲಾಗುವುದು

ವ್ಯವಸಾಯದಲ್ಲಿ ಪರೀಕ್ಷೆ.

ಮೈಸೂರಿನ ನಾರ್ಮಲ್ ಸ್ಕೂಲಿನಲ್ಲಿ ಪ್ರತಿವರ್ಷವೂ ನವಂಬರು ಮಾಹೆ ಆಖೈರು ವಾರದಲ್ಲಿ ವ್ಯವಸಾಯದಲ್ಲಿ ಒಂದು ಪರೀಕ್ಷೆಯು ಕನ್ನಡದಲ್ಲಿ ನಡೆಸಲ್ಪಡುತ್ತದೆ ಈ ಪರೀಕ್ಷೆಗೆ ಮೇಲ್ಕಂಡ ಸ್ಕೂಲಿನ ಅಪ್ಪರ್ ಸೆಕೆಂಡರಿ ಟ್ರೈನಿಂಗ್ ಕ್ಲಾಸಿನಲ್ಲಿ ಒಂದು ವರುಷ ವ್ಯವಸಾಯದಲ್ಲಿ ತರಬೇತಾದ ವಿದ್ಯಾರ್ಥಿಗಳೂ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಒಪ್ಪಬಹುದಾದ ಇತರ ವಿದ್ಯಾರ್ಥಿಗಳೂ ಹೋಗಬಹುದು

ಪರೀಕ್ಷಾ ವಿಷಯಗಳಾವುವೆಂದರೆ — (೧) ವ್ಯವಸಾಯ ಕ್ರಮಗಳು— ರಾಗಿ, ಜೋಳ, ಭತ್ತ ಗೋಧಿ ಮೊದಲಾದ ಕಾಳುಗಳು ಅವರೆ, ತೊಗರಿ, ಹುರುಳಿ, ಕಡಲೆ, ಅಲಸಂದೆ ಮೊದಲಾದ ದ್ವಿದಳ ಧಾನ್ಯಗಳು ನೆಲಗಡ್ಲೆ, ಹರಳು, ಅಚ್ಚೆಳ್ಳು, ಹುಚ್ಚೆಳ್ಳು ಮೊದಲಾದ ಎಣ್ಣೆಬೀಜಗಳು, ಜೋಳ, ಮುಸುಕಿನಜೋಳ ಮೊದಲಾದ ದನಗಳ ಮೇವಿನ ಪೈರುಗಳು ಹತ್ತಿ, ಸಣಬು ಮೊದಲಾದ ನಾರಿನ ಪೈರು ಮತ್ತು ಕಬ್ಬು, ಹೊಗೆಸೊಪ್ಪು, ಆಲೂಗೆಡ್ಡೆ, ಗೆಣಸು, ಮೆಣಸಿನಕಾಯಿ, ಗೇರುಳ್ಳಿ, ತೆಂಗು, ಅಡಿಕೆ, ಶುಂಠಿ ಮತ್ತು ಅರಿಸಿನ ಮೊದಲಾದ ತೋಟಗಾರಿಕೆಗೆ ಸಂಬಂಧಪಟ್ಟ ಪೈರುಗಳು ಈ ಪೈರುಗಳನ್ನು ವ್ಯವಸಾಯ ಮಾಡುವ ಕ್ರಮಗಳು (೨) ಪೈರಿಗೆ ಬೀಳುವ ಹುಳುಗಳು ಮತ್ತು ಸಸ್ಯಜಾಡ್ಯಗಳು —ಸಾಮಾನ್ಯವಾದ ಹುಳುಗಳ ಜಾತಿ ಮತ್ತು ಸ್ವಭಾವ, ಹುಟ್ಟು ಮತ್ತು ಆಹಾರ, ಈ ವಿಷಯವಾದ ಸಾಮಾನ್ಯ ಸಂಗತಿಗಳು, ಮುಖ್ಯವಾದ ಪೈರುಗಳಿಗೆ ಹುಳುಗಳಿಂದಲೂ ಮತ್ತು ಬೂಜು ಕಟ್ಟುವುದರಿಂದಲೂ ಉಂಟಾಗುವ ರೋಗಗಳು ಮತ್ತು ಇವುಗಳಿಗೆ ಕಂಡು ಹಿಡಿದಿರುವ ಪರಿಹಾರಗಳು ಈ ಔಷಧಗಳ ಉಪಯೋಗ ಮತ್ತು ತಯಾರಿ

ಈ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರು ಸಂಸ್ಥಾನದ ಪಾಠಶಾಲೆಗಳಲ್ಲಿ ವ್ಯವಸಾಯ ನಿದರ್ಶಕರು ಅಥವಾ ರೂಢಿ ವ್ಯವಸಾಯ ಬೋಧಕರಾಗುವುದಕ್ಕೆ ಯೋಗ್ಯರೆನ್ನಿಸಿಕೊಳ್ಳುವರು

ಪರೀಕ್ಷೆಗೆ ಹೋಗಲು ಅಪೇಕ್ಷಿಸುವವರು ಆಗಸ್ಟ್ ತಾ ೧೫ ರೊಳಗಾಗಿ ತಮ್ಮ ಅಪ್ಲಿಕೇಷನ್‌ಗಳನ್ನು ಮೈಸೂರು ಲೋಕಲ್ ಎಗ್ಜಾಮಿನೇಷನ್ಸ್ ಮ್ಯಾನೇಜರವರಿಗೆ ಕಳುಹಿಸಬೇಕು ಚಾಲ್ತಿ ಇಸವಿಯ ಪರೀಕ್ಷೆಗೆ ಸೆಪ್ಟೆಂಬರು ತಾ ೪೦ ರೊಳಗಾಗಿ ಅಪ್ಲಿಕೇಷನ್‌ಗಳನ್ನು ಕಳುಹಿಸಬಹುದು ಈ ಪರೀಕ್ಷೆಗೆ ೩ ರೂಪಾಯಿ ಅಪ್ಲಿಕೇಷನ್ ಫೀಜು ಕೊಡಬೇಕಾಗುತ್ತದೆ

ಇನ್ನೂ ಹೆಚ್ಚಿಗೆ ತಪಶೀಲುಗಳನ್ನು ತಿಳಿಯಲಪೇಕ್ಷಿಸುವವರು ೧೯೦೯ ನೇ ಆಗಸ್ಟು ೨೬ ನೇ ತಾರೀಖಿನ ಮೈಸೂರು ಗೆಜೆಟ್ಟಿನ (ಇಂಗ್ಲೀಷು) ೧೧೩೫ ನೇ ಪುಟವನ್ನು ನೋಡಬಹುದಲ್ಲದೆ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ಬರೆದು ತಿಳಿದುಕೊಳ್ಳಬಹುದು

ಜಮೀನ್ದಾರರು ತಿಳಿಯಬೇಕಾದ ವಿಷಯಗಳು

ತೂರುವ ಯಂತ್ರಗಳು.

ಮಧ್ಯಪ್ರಾಂತ್ಯಗಳಲ್ಲಿ ತೂರುವ ಯಂತ್ರಗಳಿಗೆ ಗಿರಾಕಿಯು ದಿನೇ ದಿನೇ ಹೆಚ್ಚುತ್ತಿದೆಯೆಂದು ತಿಳಿದುಬರುವುದು ಹಿಂದಿನ ವರುಷ ನಾಲ್ಕೇ ಯಂತ್ರಗಳು ಮಾರಾಟವಾಗಿ, ಚಾಲ್ತಿ ಸಾಲಿನಲ್ಲಿ ೪೦-೫೦ ಯಂತ್ರಗಳು ಮಾರಾಟವಾಗಿರುತ್ತವೆ ಇದಕ್ಕೆ ಕಾರಣವೇನೆಂದರೆ, (೧) ಪ್ರತಿ ಗ್ರಾಮದಲ್ಲೂ ಈ ಯಂತ್ರದ ಉಪಯೋಗ ಮತ್ತು ಕೆಲಸವನ್ನು ರೈತರಿಗೆ ನಿದರ್ಶನಪೂರ್ವಕವಾಗಿ ತೋರಿಸಿದ್ದರಿಂದ ರೈತರೂ ಜಮೀನುದಾರರೂ ಈ ಯಂತ್ರವನ್ನು ತಾವೇ ಸ್ವತಃ ನಡಿಸಿ ಅದರ ಯೋಗ್ಯತೆಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು, (೨) ಆ ಪ್ರಾಂತ್ಯ ಸುಮಾರು ೧೫ ದಿನಗಳು ಏಕಪ್ರಕಾರವಾಗಿ ಭಾರೀ ಮಳೆ ಬೀಳುತ್ತಿದ್ದದ್ದರಿಂದ ಕೈಯಿಂದ ಕಾಳನ್ನು ತೂರುವುದಕ್ಕೆ ಅಸಾಧ್ಯವಾಗಿ ಕಣದಲ್ಲಿಯೇ ಕಾಳು ಬಲಿತು ದಪ್ಪವಾಯಿತು ಆ ಸಮಯದಲ್ಲಿ ಯಂತ್ರದಿಂದ ಕೆಲಸ ನಡೆದು ದಿನಕ್ಕೆ ೯ ಗಂಟೆಗಳಲ್ಲಿ ೧೧೦ ರಿಂದ ೧೩೦ ಬಂಗಾಳಾ ಮೌಂಡವರೆಗೂ ಶುದ್ಧವಾದ ಧಾನ್ಯವನ್ನು ತೂರಿ, ಮಳೆ ಗಾಳಿಗಳನ್ನು ಲಕ್ಷಿಸದೆ, ಈ ಯಂತ್ರದಿಂದ ತೂರುವ ಕೆಲಸ ನಡೆಸಬಹುದೆಂಬುದನ್ನು ರೈತರಿಗೆ ತೋರಿಸಿಕೊಟ್ಟದ್ದು ಉಪಯೋಗಕರವಾಯಿತು

ಇಂಡಿಯಾ ದೇಶದಲ್ಲಿ ಫಲಗಳ ವ್ಯವಸಾಯ

ಪೂರ್ವದಲ್ಲಿ ಮನುಷ್ಯರಿಗೆ ಫಲಗಳು ಒಂದು ಮುಖ್ಯಾಹಾರವಾಗಿದ್ದವು ಕಾಲ ಗತಿಸಿದಹಾಗೆಲ್ಲಾ ಇವುಗಳಿಗೆ ಬದಲಾಗಿ ಇತರ ಆಹಾರಪದಾರ್ಥಗಳು ಒದಗಿ ಜನಸಂಖ್ಯೆಯೂ ಹೆಚ್ಚಿದ್ದರಿಂದ ಇವುಗಳ ಪ್ರಾಮುಖ್ಯತೆಯು ಕಡಮೆಯಾಗುತ್ತಾ ಬಂದಿತು ಆದರೂ ಇವುಗಳ ಗಿರಾಕಿಯು ದಿನೇ ದಿನೇ ಹೆಚ್ಚುತ್ತಿದೆ ಫಲಗಳ ಬೆಲೆಯನ್ನು ತಗ್ಗಿಸುವುದರಮೂಲಕ ಹೀಗೆ ಏರಿರುವ ಧಾರಣೆಯನ್ನು ಇಳಿಸಬಹುದು ಆದರೆ ಈ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದಕ್ಕೆ ಒಂದು ಮುಖ್ಯವಾದ ತೊಂದರೆ ಇದೆ ಅದೇನೆಂದರೆ, ಕಡಿಮೆ ಬೆಲೆಗೆ ಎಲ್ಲಿಯೂ ಕೀಳು ರಕಮಿನ ಫಲಗಳನ್ನೇ ಬೆಳೆಯುತ್ತಾರೆ ಕೊಂಡುಕೊಳ್ಳುವವರೂ ಸಹ ಸ್ವಲ್ಪ ಅಗ್ಗದಬೆಲೆಗೆ ಈ ಹಣ್ಣುಗಳನ್ನು ಕೊಳ್ಳುತ್ತಾರೆ ಇದರ ಫಲಿತಾಂಶವೇನೆಂದರೆ, ಶ್ರೇಷ್ಠ ರಕಮಿನ ಫಲಗಳು ಅಪರೂಪವಾಗಿ, ಇವುಗಳ ಹುಟ್ಟಿಲ್ಲದಂತಾಗುತ್ತದೆ ಈ ನ್ಯೂನತೆಯನ್ನು ಹೋಗಲಾಡಿಸಲು ಜನಗಳು ಉತ್ತಮತರವಾದ ಹಣ್ಣುಗಳನ್ನು ಸೇವಿಸುವ ರೂಢಿಗೆ ತಂದವಿನಹ ಇವುಗಳ ವ್ಯವಸಾಯವು ವೃದ್ಧಿಯಾಗುವ ಹಾಗಿಲ್ಲ ಅನಸಾಸು, ಬಾಳೆ, ಕಲ್ಲಂಗಡಿ, ಖರಬೂಜಹಣ್ಣು, ದಾಳಿಂಬೆ, ನಿಂಬೆ, ಚಿಕ್ಕೋಸು ಲಕೋಟೆ, ಸೀತಾಫಲ, ಮಾವು, ಹಲಸು, ಸೀಬೆಹಣ್ಣುಗಳು, ಹಲಸು, ತೆಂಗು, ಪನ್ನೇರಳೆ, ಈ ಮೊದಲಾದ ಹಣ್ಣುಗಳನ್ನು ಈ ದೇಶದಲ್ಲಿ ಬೆಳೆದು ಲಾಭಸಂಪಾದಿಸಬಹುದು ಇಂಡಿಯಾ ದೇಶದಲ್ಲಿ ಎಷ್ಟುವಿಧ ಫಲಜಾತಿಗಳು ಇತರ ಕಡೆ ಇಲ್ಲವಾದುದರಿಂದ ಈ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಇಲ್ಲಿರುವಷ್ಟು ಸೌಕರ್ಯಗಳು ಬೇರೆಲ್ಲಿಯೂ ಇಲ್ಲ ಇಂಡಿಯಾದಲ್ಲಿ ೧೯೦೭-೮ ನೇ ಇಸವಿ ಎಲ್ಲಿ ೫೩ ಲಕ್ಷ ಎಕರೆ ಜಮೀನುಗಳು ಹಣ್ಣು ಹಂಪಲುಗಳ ವ್ಯವಸಾಯದಲ್ಲಿದ್ದವು ಈ ಪೈಕಿ ಮೈಸೂರು ಸಂಸ್ಥಾನದಲ್ಲಿ ೧,೭೭,೯೬೦ ಎಕರೆಗಳು ಇಲ್ಲಿ ಹಾಲಿ ಉತ್ಪತ್ತಿಯಾಗುವ ಫಲಗಳು ಇಲ್ಲಿನ ಉಪಯೋಗಕ್ಕೇನೇ ಸಾಲುವುದಿಲ್ಲವಾದ್ದರಿಂದ ಇವುಗಳ ರಫ್ತು ವ್ಯಾಪಾರ ಬಹಳ ಕಡಮೆ ೧೯೦೭-೮ ನೇ ಸಾಲಿನಲ್ಲಿ ೫೦,೬೬,೭೪೩ ರೂಪಾಯಿ ಹಣ್ಣುಗಳು ಅನ್ಯದೇಶಗಳಿಗೆ ರಫ್ತಾಗಿ ೯೯,೯೩,೭೪೪ ರೂಪಾಯಿ ಹಣ್ಣುಗಳು ಈ ದೇಶಕ್ಕೆ ಆಮದಾಗಿರುತ್ತವೆ ಫಲಗಳ ವ್ಯವಸಾಯವು ಮನಸ್ಸಿಗೆ ಸಂತೋಷಕೊಡತಕ್ಕ ಉದ್ಯೋಗವಾದದ್ದರಿಂದ ವಿದ್ಯಾವಂತರು ಈ ಕೃಷಿಯಲ್ಲಿ ಉದ್ಯುಕ್ತರಾಗಬಹುದು ಈ ವ್ಯವಸಾಯವನ್ನು ಅಭಿವೃದ್ಧಿಪಡಿಸಿ ಲಾಭಹೊಂದಲು ಅವಕಾಶವಿರುವ ಕಡೆಗಳಲ್ಲಿ, ಮುಖ್ಯ ಕಾಳುಕಡಿಗಳ ಸುಗ್ಗಿ ಆದಮೇಲೆ ಉದ್ಯೋಗವಿಲ್ಲದ ಅನೇಕ ಬಡಬಗ್ಗರಿಗೆ ಈ ಫಲಗಳ ವ್ಯವಸಾಯದಿಂದ ಜೀವನೋಪಾಯವು ದೊರೆಯುತ್ತದೆ ಈ ವ್ಯವಸಾಯದಲ್ಲಿ ಕಾಳುಕಡಿಗಳ ಬೆಳೆಗೆ ಬೇಕಾಗುವಷ್ಟು ಮುತುವರ್ಜಿಯು ಅವಶ್ಯಕವಿಲ್ಲವಾದದ್ದರಿಂದ ಈ ಉದ್ಯೋಗವನ್ನು ಅವಲಂಬಿಸುವುದರಲ್ಲಿ ಅನುಕೂಲವುಂಟು ಹೇಗೆಂದರೆ, ಧಾನ್ಯಾದಿಗಳು ಸಾಲ್‌ಬಸಲ್ ಆಗುವ ಫಸಲಾದದ್ದರಿಂದ ಅವುಗಳಿಗೆ ವರ್ಷ ವರ್ಷ ವಿಶೇಷ ದ್ರವ್ಯ, ಶ್ರಮ ಮತ್ತು ಮುತುವರ್ಜಿ ಬೇಕು ಒಂದು ಬೆಳೆ ಕೆಟ್ಟುಹೋದರೆ ಇಷ್ಟೂ ವ್ಯರ್ಥವಾಗಿ ಪುನಃ ಮೊದಲಿನಂತೆಯೇ ಅನುಷ್ಠಿಸಬೇಕಾಗುತ್ತದೆ ಹಣ್ಣಿನ ವ್ಯವಸಾಯದಲ್ಲಾದರೋ ಒಂದು ವರ್ಷ ಫಸಲು ಕೆಟ್ಟರೂ ಇಟ್ಟ ಗಿಡವೂ ಪಟ್ಟ ಶ್ರಮವೂ ಪೂರಾ ವ್ಯರ್ಥವಾಗುವುದಿಲ್ಲ ಒಂದು ವರುಷ ಗಿಡಗಳು ಫಲಿಸುವುದಿಲ್ಲವಾದರೂ ಅವಶ್ಯಕವಾದ ಆರೈಕೆಯಿಂದ ಮುಂದಿನ ವರ್ಷ ಅನುಕೂಲವುಂಟಾಗುವುದು ಆದಕಾರಣ ಜನರು ಈ ವ್ಯವಸಾಯದಲ್ಲಿ ಅನೇಕ ತಿಪ್ಪು ಪಾಟುಗಳನ್ನು ಮಾಡಬಹುದಾಗಿದೆ

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಭೆಯು.

ಈ ಸಮಾಜದ ಮೆಂಬರುಗಳು ವಾಡಿಕೆಯಂತೆ ಕಳೆದ ಶನಿವಾರದ ಸಾಯಂಕಾಲ ಮಂದಿರದ ಸೌಧದಲ್ಲಿ ಸುಮಾರು ೬೦ ಮಂದಿಗೆ ಮೇಲ್ಪಟ್ಟು ಒಂದು ಇದ್ದರು ಮಿಸೆಸ್ ಕಾಕ್ಸ್ ದೊರೆಸಾನಿಯವರು ಸಹ ಬಂದು ಇದ್ದರು ಒಕ್ಕಲಿಗರ ಸಂಘದ ಸೆಕ್ರೆಟರಿಯವರಾದ ಮ, ರಾಮಯ್ಯನವರ ಸೋದರಿ ಶ್ರೀಮತಿ ಲಕ್ಷ್ಮಮ್ಮನವರು ಪುಣ್ಯಕ್ಷೇತ್ರಗಳ ಯಾತ್ರಾ ಪ್ರಯೋಜನವನ್ನು ಕುರಿತು ಅತಿ ಮನೋಹರವಾದ ಉಪನ್ಯಾಸವನ್ನು ಮಾಡಿದರು ಆ ಉಪನ್ಯಾಸದಲ್ಲಿ ತಾವು ಅಲ್ಪ ಮತಿಯುಳ್ಳವರೆಂತಲೂ, ವಿದ್ಯಾವತಿಯಲ್ಲವೆಂತಲೂ, ವಿಷಯವು ದೊಡ್ಡದಾದ್ದೆಂತಲೂ ಸೂಚಿಸಿ, ತಮಗೆ ತೋರಿದ ಮಟ್ಟಿಗೆ ಹೇಳುತ್ತೇನೆಂದು ಸಂಭಾಷಣೆಗೆ ಆರಂಭಿಸಿದರು ಹಿಂದೆ ಅಟಿಗೆ ಯಾತ್ರಾರ್ಥವಾಗಿ ದೇಶಸಂಚಾರ ಮಾಡಿದ ಹಾಗೂ, ಅಂಥಾ ದೇಶಸಂಚಾರಕ್ಕೆ ಆ ಆ ದೇಶದಲ್ಲಿ ಪ್ರಚಾರದಲ್ಲಿರತಕ್ಕ ಭಾಷೆಗಳು ಬಾರದೆ ಇದ್ದ ಪಕ್ಷದಲ್ಲಿ ಆ ಸಂಚಾರದಿಂದ ವಿಶೇಷ ಫಲವು ಲಭಿಸಲಾರದೆಂದೂ ಹೇಳಿದರು ಮತ್ತು ದೇಶಸಂಚಾರದಿಂದ ಸ್ವಾಮಿ ದರ್ಶನ, ಪುಣ್ಯತೀರ್ಥಗಳ ಸ್ನಾನ, ಇವುಗಳೇ ಪ್ರಯೋಜನವೆಂದು ಭಾವಿಸಲಾಗದು ಇವು ಪ್ರಯೋಜನವಾದವುಗಳೇ ಸರಿ ಆದರೆ ಸರ್ವೇಶ್ವರನ ವಿಚಿತ್ರ ಸೃಷ್ಟಿಯನ್ನು ಕೊಂಚಮಟ್ಟಿಗಾದರೂ ತಿಳಿಯಬೇಕಾದರೆ ದೇಶಸಂಚಾರ ಬಹಳ ಅವಶ್ಯಕವಾಗಿ ಇರುತ್ತೆ ಈಗ ನಾವೇ ದೊಡ್ಡವರು, ನಮ್ಮ ಮನೆಯೇ ಮನೆ, ನಮ್ಮ ಜ್ಞಾನವೇ ಜ್ಞಾನ, ನಮ್ಮ ತಿಳುವಳಿಕೆಯೇ ತಿಳುವಳಿಕೆ, ನಮ್ಮ ಊರೇ ಊರು, ನಮ್ಮ ಅಗ್ರಹಾರವೇ ಅಗ್ರಹಾರ ಎಂಬ ತಿಳುವಳಿಕೆಯು ಪೂರ್ತಿಯಾದದ್ದಲ್ಲವೆಂದು ದೇಶಾಟನದಿಂದ ತಿಳಿಯಬರುತ್ತದೆ ನಮಗಿಂತಲೂ ಪ್ರಜ್ಞಾಶಾಲಿಗಳು ಇರುತ್ತಾರೆಂತಲೂ, ವಿದ್ಯಾವಂತರೂ ವಿದ್ಯಾವತಿಯರೂ ಇರುತ್ತಾರೆಂತಲೂ, ನಮ್ಮ ದೇಶಗಳಿಗಿಂತಲೂ ಅತಿ ವಿಸ್ತಾರವಾದ ದೇಶಗಳಿರುವವೆಂತಲೂ, ನಾವು ಅವಶ್ಯಕ ತಿಳಿದುಕೊಳ್ಳಬೇಕಾದ ವಿಷಯಗಳು ಬಹಳವಿರುತ್ತವೆಂತಲೂ, "ನಾನು" ಎಂಬದು ವರ್ಜನೀಯವಾದದ್ದೆಂತಲೂ ನಮ್ಮ ಮನಸ್ಸಿಗೆ ಸಾಧ್ಯತ್ಯವಾಗಿ ಬರುವದಾಗಿರುತ್ತೆ ಈ ರೀತಿ ಪ್ರಸಂಗವನ್ನು ವಿಸ್ತರಿಸಿ ಹೇಳಿ ಮುಂಬೈ ಪಟ್ಟಣದ ವರ್ಣನೆಯನ್ನೂ, ಅಲ್ಲಿನ ಜನಗಳ ನಡೆನುಡಿಗಳನ್ನೂ, ಅಲ್ಲಿನ ವಿದ್ಯಾಶಾಲೆಗಳ ವೈಭವವನ್ನೂ, ಅಲ್ಲಿನ ದೇಶಾಭಿಮಾನಿಗಳ ಚರಿತ್ರೆಯೇ ಮೊದಲಾದ ವಿಷಯಗಳನ್ನೂ ಅತಿ ರಮಣೀಯವಾಗಿ ಹೇಳಿದರು ಈ ಸಂದರ್ಭದಲ್ಲಿ ರೈಲ್ ಅನುಕೂಲಗಳನ್ನೂ ವರ್ಣಿಸಿ ಹೇಳಿದ್ದಲ್ಲದೆ, ಪೂನಾ ಪಟ್ಟಣದಿಂದ ಬೊಂಬೈಗೆ ರೈಲ್ ಗಾಡಿಯು, ಬೆಟ್ಟಗಳಲ್ಲಿ ಕೊರೆದ ರೈಲ್ ರಸ್ತೆಯನ್ನು ಬಹು ವಿಚಿತ್ರವಾಗಿ ವರ್ಣಿಸಿದರು ತದನಂತರದಲ್ಲಿ ಭೂಪಾಲ್ ಬೇಗಂ ಯವರ ಪ್ರಭುತ್ವ, ಆಗ್ರಾ, ತಾಜ್‌ಮಹಲ್ ಮತ್ತು ಆ ಮಹಲಿನ ಶಿಲ್ಪವೈಲಕ್ಷಣ್ಯ, ದೆಹಲಿ ವರ್ಣನೆ ಅಂದರೆ ಹಸ್ತಿನಾಪುರದ ಚರಿತ್ರೆ, ಬೃಂದಾವನ, ಇಲ್ಲಿ ಶ್ರೀ ಕೃಷ್ಣಧ್ಯಾನ ಮತ್ತು ಆತನ ಮಂದಿರಗಳೂ, ಇವುಗಳನ್ನು ಕುರಿತು ಬಹಳ ಮನೋಹರವಾದ ವ್ಯಾಖ್ಯಾನವನ್ನು ಹೇಳಿದರು

ಅನಂತರದಲ್ಲಿ ಹರಿದ್ವಾರದ ಚರಿತ್ರೆಯನ್ನು ಹೇಳಿ ಹರಿದ್ವಾರದಲ್ಲಿ ಈಚಿಗೆ ಸ್ಥಾಪಿಸಲ್ಪಟ್ಟಿರತಕ್ಕ ಒಂದು ವಿದ್ಯಾಲಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಿದರು ಈ ಪ್ರಾಂತ್ಯದಲ್ಲಿ ಇಂಗ್ಲಿಷ್ ವಿದ್ಯೆಯು ಅಷ್ಟು ಪ್ರಬಲವಾಗಿಲ್ಲವೆಂತಲೂ, ಮೇಲೆ ಹೇಳಿದ ವಿದ್ಯಾಶಾಲೆಯಲ್ಲಿ ಅನೇಕ ಬಾಲಕರನ್ನು ಬ್ರಹ್ಮಚಾರಿಗಳನ್ನಾಗಿಯೂ, ಸನ್ಯಾಸಿಗಳನ್ನಾಗಿಯೂ ಮಾಡಲು ಪ್ರಯತ್ನಿಸಿ ಈ ಬಾಲಕರಿಗೆ ಕೇವಲ ತತ್ವಜ್ಞಾನವನ್ನೇ ಬೋಧಿಸುತ್ತಲಿರುವರೆಂದು ಹೇಳಿದರು ಬಹುಶಃ ಈ ಶಾಲೆಯು ಶ್ರೀರಾಮಕೃಷ್ಣ ಪರಮಹಂಸರ ಮಾರ್ಗಕ್ಕೆ ಸೇರಿದ್ದಾಗಿ ತೋರುವದು ಲಕ್ನೋ ಅಂದರೆ ಲಕ್ಷ್ಮಣಪುರಿ ಕಾನಪೂರ್ ಅಲಹಾಬಾದು ಅಂದರೆ ಪ್ರಯಾಗ, ಈ ಗ್ರಾಮಗಳನ್ನು ಕುರಿತು ಪ್ರಸ್ತಾಪಿಸಿದರು ಪ್ರಯಾಗ ಕ್ಷೇತ್ರದ ಮಹಾತ್ಮೆಯನ್ನು ವಿವರಿಸಿ ಹೇಳಿದರು ಅನಂತರದಲ್ಲಿ ಕಾಶಿ ಪಟ್ಟಣದ ವರ್ಣನೆಯನ್ನು ಕೊಂಚ ವಿಸ್ತಾರವಾಗಿ ಮಾಡಿ ಆ ಪಟ್ಟಣದ ಸಂಪ್ರದಾಯ, ಮಹಿಮೆ, ಗಂಗಾವರ್ಣನ, ಅಲ್ಲಿನ ಜನಗಳ ಈಶ್ವರ ಭಕ್ತಿ, ಅವರ ನೇಮಾಭ್ಯಾಸ, ಶ್ರೀವಿಶ್ವೇಶ್ವರ ದೇವಸ್ಥಾನದ ಪ್ರಾಮುಖ್ಯತೆ, ಇವುಗಳನ್ನು ಕುರಿತು ಪ್ರಸ್ತಾಪಿಸಿದರು ಈ ಪಟ್ಟಣವು ಶಂಭುಗಳ ಅನುಗ್ರಹಕ್ಕೆ ಒಳಪಟ್ಟಿರುತ್ತೆಂಬುದಕ್ಕೆ ಯಾವ ಸಂದೇಹವೂ ಇರುವುದಿಲ್ಲ ಇಲ್ಲಿ ಪಕ್ಷಪಾತವು ನಮ್ಮ ದೇಶದಲ್ಲಿ ನಡೆಯುವಂತೆ ಅಲ್ಲಿ ಇರುವುದಿಲ್ಲ ವಿಶ್ವೇಶ್ವರನನ್ನು ಎಲ್ಲರೂ ತಮ್ಮ ಸ್ವಂತ ಕೈಗಳಿಂದಲೇ ಪೂಜಿಸುತ್ತಾರೆ ಗಂಗಾಜಲಕ್ಕೆ ಭೇದವಿರುವುದಿಲ್ಲ ಮುಸಲ್ಮಾನರು ಮತ್ತು ಚಂಡಾಲರೂ ಮಾತ್ರ ದೇವರ ಸ್ಪರ್ಶಕ್ಕೆ ಯೋಗ್ಯರಲ್ಲವೆಂದು ನುಡಿದು, ಕಾಶೀ ಮಹಿಮೆಯನ್ನು ಕುರಿತು ಸೊಗಸಾಗಿ ಬಣ್ಣಿಸಿ, ಅಲ್ಲಿಗೆ ಪ್ರಾಪ್ತವಾಗುವ ಮೋಕ್ಷವನ್ನು ಕುರಿತು ಒಂದು ಕಥೆಯನ್ನು ಹೇಳಿದರು ಅನಂತರ ಗಯೆಯು, ಅಲ್ಲಿನ ವಿಷ್ಣುಪಾದ, ಅಲ್ಲಿ ನಡೆಯುವ ಶ್ರಾದ್ಧಕರ್ಮ ವಿಶೇಷಗಳೂ, ಇವುಗಳನ್ನು ಕುರಿತು ಕೆಲ ವಿಷಯಗಳನ್ನು ಹೇಳಿದರು ಕಲ್ಕತ್ತಾ, ಕಂಚಿ, ಚಿದಂಬರ, ಮಧುರೆ, ರಾಮೇಶ್ವರ ಈ ಕ್ಷೇತ್ರಗಳನ್ನು ಕುರಿತು ಕೆಲಕೆಲವು ಮಾತುಗಳನ್ನು ಹೇಳಿ ಉಪನ್ಯಾಸವನ್ನು ಪೂರೈಸಿದರು

ಈಕೆ ಅಂದರೆ ಲಕ್ಷ್ಮಮ್ಮನವರು ತೆಗೆದುಕೊಂಡ ಪ್ರಯತ್ನಕ್ಕೆ ಸಭಾಧ್ಯಕ್ಷರ ಕಾರ್ಯದರ್ಶಿಯವರು ಸಭೆಯ ವಂದನೆಗಳನ್ನು ಕೆಲವು ಯುಕ್ತವಾದ ವಚನಗಳಿಂದ ತಿಳಿಸಿ ದೇವರಿಗೆ ಆರತಿಯಿಂದ ಸಭೆಯನ್ನು ಪೂರ್ತಿಮಾಡಿದರು ಕೆಲವಾರಗಳಿಂದೀಚೆಗೆ ಈ ಸಮಾಜದ ಮುಖ್ಯ ಅಭಿಮಾನಶಾಲಿಗಳಿಗೆ ಕೇವಲ ವಿಚಿತ್ರವಾದ ಕೆಲವು ಅನುಭವಗಳುಂಟಾಗುತ್ತಲಿವೆ ದೇವರೆ ಮಹಾಮಹಿಮ ಸರ್ವೇಶ್ವರನ ಕೃಪೆಯಿದ್ದ ಪಕ್ಷದಲ್ಲಿ ಆ ಅನುಭವಗಳು ಸಮಾಜದ ಪುರೋವೃದ್ಧಿಗೆ ಕಾರಣಗಳಾಗುವುವೆಂದು ನಿರೀಕ್ಷಿಸಲ್ಪಟ್ಟಿರುತ್ತೆ

ಶ್ರೀಮತಿ ಮಹಲಕ್ಷ್ಮಮ್ಮನವರು ಉಪನ್ಯಾಸಕ್ಕೆ ಪ್ರಥಮದಲಿ ನೀತಿಪ್ರದವಾದ ಕೆಲ ಪ್ರಶ್ನೋತ್ತರಗಳನ್ನು ಓದಿದರು ಈ ಪ್ರಶ್ನೋತ್ತರಗಳು ಬಹು ಶ್ಲಾಘ್ಯವಾಗಿದ್ದವು ಆದರೆ ಅವುಗಳನ್ನು ಪ್ರಚುರಪಡಿಸಲು ನಮ್ಮ ಪತ್ರಿಕೆಯಲ್ಲಿ ಅವಕಾಶವಿಲ್ಲವಾಗಿ ಒಂದೆರಡು ಪ್ರಶ್ನೋತ್ತರಗಳನ್ನು ಇಲ್ಲಿ ಉದಾಹರಿಸುತ್ತೇವೆ —

ಪ್ರಶ್ನೆ— ನಾವು ಮೈತುಂಬ ಆಭರಣವನ್ನು ಹಾಕಿಕೊಂಡು ಸಂತೋಷಪಡುವುದು ದುಃಖವೆಂದು ಯಾರು ಹೇಳುವರು?

ಉತ್ತರ —ಮೊದಲು ಆಭರಣ ಹಾಕಲು ತೆಗೆಯಲು ಬುದ್ಧಿ ಕೊಳ್ಳುವದು ದುಃಖವಲ್ಲವೇ ಚುಚ್ಚಿದ ಕಿವಿಯು ನಾಸಿಯೂ ವದೆ ಸರಿ, ಇಲ್ಲದ ವ್ರಣವಾದರೆ ಇನ್ನೂ ದುಃಖವಲ್ಲವೇ ಕಿವಿಗೆ ಕೆಂಪಿನ ಓಲೆ ಇಟ್ಟ ನಮ್ಮ ಗೃಹಕೃತ್ಯಗಳ ಅವಾನುಕೂಲದಿಂದ ವಜ್ರದ ಓಲೆಯ ತೆಗೆಯಲು ಶಕ್ತಿ ಇಲ್ಲದಿದ್ದರೆ ವ್ಯಸನವಲ್ಲವೆ? ಶ್ರೀಮಂತರು ಜವಾಹಿರಿ ಆಭರಣಗಳನ್ನು ಇಟ್ಟು ಇನು ಇಲ್ಲದಿದ್ದರೆ ವ್ಯಸನವಲ್ಲವೆ?

ಪ್ರಶ್ನೆ — ಇಹಲೋಕದಲ್ಲಿ ನಾವು ಆತಂಕವೆ ಇರಲು ಆಗುವದಿಲ್ಲವೊ?

ಉತ್ತರ — ದೇವರ ಕೃಪೆಯಿಲ್ಲದೆ ಅದನ್ನು ತಪ್ಪಿಸಲು ಆಗಲಾರದು

ಈ ರೀತಿಯೇ ಎಲ್ಲಾ ಪ್ರಶ್ನೋತ್ತರಗಳೂ ಮನುಷ್ಯರಾದವರಿಗೆ ಬುದ್ಧಿಯನ್ನು ಕಲಿಸತಕ್ಕವುಗಳಾಗಿರುತ್ತವೆ ಸಭಿಕರು ಶ್ರೀಮತಿ ಮಹಲಕ್ಷ್ಮಮ್ಮನವರ ಈ ಪ್ರಶ್ನೋತ್ತರಗಳಿಗೆ ಕೃತಜ್ಞರಾಗಿರುವರು

ಬರುವ ಮೀಟಿಂಗು ೧೧ನೇ ತಾ ಶನಿವಾರ ನಡೆಯುತ್ತದೆ ಹಿತೈಷಿಗಳೂ ಮೆಂಬರುಗಳೂ ಬರಬೇಕಾಗಿ ಪ್ರಾರ್ಥನೆ

ವೃತ್ತಾಂತ ಪತ್ರಿಕೆ.

:o

೧೯೦೯ನೇ ಇಸವಿ ಸೆಪ್ಟಂಬರ್ ತಾ|| ೯ ನೇ ಗುರುವಾರ

ಮೈಸೂರು ಸಂಸ್ಥಾನದ ಬಡ್ಜೆಟ್ಟು.

ಮೈಸೂರು ಗವರ್ನ್‌ಮೆಂಟಿನವರು ಸರ್ಕಾರಿ ಸಾಲನ್ನು ಜೂಲೈ ೧ರಿಂದ ಪ್ರಾರಂಭಿಸಿ ಜೂನ್ ಆಖೈರಿಗೆ ಮುಕ್ತಾಯಮಾಡುತ್ತಾರೆಂಬುವುದು ವಾಚಕರಿಗೆ ತಿಳಿದಿದೆ. ಸಂಸ್ಥಾನದ ಜಮಾ ಖರ್ಚುಗಳ ಅಂದಾಜಾ ಪಟ್ಟಿಗಳನ್ನು (ಅಂದರೆ, ಬಡ್ಜೆಟ್ಟನ್ನು) ಸರ್ಕಾರಿ ಸಾಲಿಗೆ ಮುಂಚೆಯೇ ಗೊತ್ತುಮಾಡಿ, ನವರಾತ್ರಿಯಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತಿಳಿಸುವರು, ಅಂದರೆ, ಬಡ್ಜೆಟ್ಟು ತಯಾರಾಗಿ ಮೂರು ನಾಲ್ಕು ತಿಂಗಳು ಕಳೆದುಹೋದ ತರುವಾಯ ಅದನ್ನು ಆ ಸಭೆಯಲ್ಲಿ ಪ್ರಕಟಮಾಡುವರು. ಇದು ಪ್ರಜಾಪ್ರತಿನಿಧಿಗಳಿಗೆ ತಿಳಿಯುವುದರಲ್ಲಿ ಬಹಳ ಕಾಲಾತೀತವಾಗುತ್ತಲಿದ್ದಿತಾದ್ದರಿಂದ ಅದರ ವಿಷಯದಲ್ಲಿ ಪ್ರತಿನಿಧಿಗಳು ಯಾವ ಸಲಹೆಗಳನ್ನಾಗಲೀ ಬದಲಾವಣೆಗಳನ್ನಾಗಲಿ ಗವರ್ನ್‌ಮೆಂಟಿಗೆ ಸೂಚಿಸಿ ಅಂಗೀಕಾರಮಾಡಿಕೊಳ್ಳಲು ಅವಕಾಶವೇ ದೊರಕುತ್ತಲಿರಲಿಲ್ಲ. ಇದೂ ಅಲ್ಲದೆ ಪ್ರತಿನಿಧಿಗಳು ಬಡ್ಜೆಟ್ಟನ್ನು ಓದಿ ಬಹು ವಿವರವಾಗಿ ಚನ್ನಾಗಿ ಮನದಟ್ಟುಮಾಡಿಕೊಳ್ಳುವುದಕ್ಕೂ ಅವರಿಗೆ ಸಮಯವಿರುತ್ತಿರಲಿಲ್ಲ. ಗವರ್ನ್‌ಮೆಂಟಿನವರು ಈ ಅನನುಕೂಲಗಳನ್ನು ನಿವಾರಣೆಮಾಡಬೇಕೆಂಬ ಸ್ತೋತ್ರಾರ್ಹವಾದ ಉದ್ದೇಶದಿಂದ ಬಡ್ಜೆಟ್ಟನ್ನು ಪ್ರಕಟಮಾಡುವ ವಿಷಯದಲ್ಲಿ ಹೊಸ ಬದಲಾವಣೆಯನ್ನು ಈ ವರುಷದಿಂದ ಜಾರಿಗೆ ತಂದಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಜಮಾ ಖರ್ಚುಗಳ ಅಂದಾಜಾ ಪಟ್ಟಿಗಳನ್ನು ಗವರ್ನ್‌ಮೆಂಟಿನವರು ತಯಾರುಮಾಡಿ ಶ್ರೀಮನ್ಮಹಾರಾಜರವರಿಗೆ ಒಪ್ಪಿಸುವರು ಅವರು ಆ ಪಟ್ಟಿಗಳನ್ನು ಪರಾಂಬರಿಸಿ ಸ್ಯಾಂಕ್ಷನ್ ಮಾಡುತ್ತಾರೆ. ಹೀಗೆ ಪ್ರತಿ ವರುಷವೂ ಸ್ಯಾಂಕ್ಷನ್ ಆದಕೂಡಲೇ ಸಾಧ್ಯವಾದಷ್ಟು ಜಾಗ್ರತೆಯಿಂದ ಆ ಪಟ್ಟಿಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಮಾಡಬೇಕೆಂದು ಗವರ್ನ್‌ಮೆಂಟಿನವರು ನಿಶ್ಚಯಿಸಿಕೊಂಡಿರುತ್ತಾರೆ. ಅದರಂತೆ ಹಾಲಿ (ಎಂದರೆ, ೧೯೦೯-೧೦ ನೇ) ಸಾಲಿನ ಸಂಸ್ಥಾನದ ಜಮಾ ಖರ್ಚುಗಳ ಪಟ್ಟಿಗಳನ್ನು ಅವರು ಇದೇ ತಿಂಗಳ ೬ ನೇ ತಾರೀಖಿನಲ್ಲಿ ಗೆಜೆಟ್ ವಿಶೇಷ ಪತ್ರಿಕೆಯಾಗಿ ಅಚ್ಚುಹಾಕಿಸಿ ಪ್ರಕಟಮಾಡಿರುವರು. ಆ ಗೆಜೆಟ್ಟಿನಲ್ಲಿ ಮೈಸೂರು ಸಂಸ್ಥಾನದ ೧೯೦೭-೦೮ನೇ ಸಾಲಿನ ನಿಜವಾದ ಆಯವ್ಯಯಗಳನ್ನೂ, ೧೯೦೮-೦೯ ನೇ ಸಾಲಿನ ತಿದ್ದುಪಾಟಾದ ಜಮಾಖರ್ಚು ಲೆಕ್ಕಗಳನ್ನೂ, ೧೯೦೯-೧೦ ನೇ ಸಾಲಿನ ಜಮಾಖರ್ಚಿನ ಅಂದಾಜಾ ಪಟ್ಟಿಗಳನ್ನೂ ಬಾಬುವಾರಾಗಿ ಜೊತೆ ಜೊತೆಯಾಗಿ ತೋರಿಸಿರುತ್ತಾರೆ. ಮರಾಮತ್ತು ಯಾನೆ ಇಂಜನಿಯರ್ ಇಲಾಖೆಯ ಕಾಮಗಾರಿ ಮುಂತಾದ ವಿವರಗಳನ್ನು ಪ್ರತ್ಯೇಕವಾಗಿ ಪ್ರಕಟಿಸಿರುವರು.

ಪ್ರಜೆಗಳು ತಿಳಿಯಲು ಕುತೂಹಲಪಡುವಂಥಾ ಅನೇಕ ವಿಷಯಗಳನ್ನು ಗವರ್ನ್‌ಮೆಂಟಿನವರು ಈ ಗೆಜೆಟ್ಟಿನ ಪ್ರಥಮ ಭಾಗದಲ್ಲಿ ಬಹಳ ಚನ್ನಾಗಿ ವಿವರವಾಗಿಯೂ ಪ್ರಕಟಿಸಿರುತ್ತಾರೆ. ಇದರಿಂದ ಸಂಸ್ಥಾನದ ಸ್ಥಿತಿಯು ಕೆಳಗೆ ಕಂಡಂತೆ ಗೊತ್ತಾಗುತ್ತದೆ.

1907-8 ರ ನಿಜ ಹುಟ್ಟುವಳಿ	ರೂ	2,11,10,000
1908-9 ರ ಅಂದಾಜಾ ಹುಟ್ಟುವಳಿ	,,	2,26,15,000
1908-9 ರ ತಿದ್ದುಪಾಟಾದ ಅಂದಾಜಾ	,,	2,22,10,000
1909-10 ರ ಬಡ್ಜೆಟ್ ಅಂದಾಜು	,,	2,32,13,000

ಮೇಲ್ಕಂಡ ಸಾಲುಗಳ ಖರ್ಚಿನ ವಿವರವೇನೆಂದರೆ —

1907-8 ರ ನಿಜ ಖರ್ಚು	ರೂ	2,11,58,650
ಆ ಸಾಲಿನ ಶಿಲ್ಕು	,,	2,52,011
1908-9 ರ ಅಂದಾಜಾ ಖರ್ಚು	,,	2,13,89,000
ಅಂದಾಜಾ ಶಿಲ್ಕು ..	,,	11,26,000
1908-9 ರ ತಿದ್ದುಪಾಟಾದ ಅಂದಾಜಾ ಖರ್ಚು	,,	2,12,91,000
,, ,, ಶಿಲ್ಕು	,,	9,52,000
1909-10 ರ ಅಂದಾಜಾ ಖರ್ಚು	,,	2,20,12,000
,, ಶಿಲ್ಕು ..	,,	12,51,000

ಮೇಲ್ಕಂಡ ಲೆಕ್ಕಗಳನ್ನು ನೋಡಿದರೆ ೧೯೦೭-೦೮ ನೇ ಸಾಲಿನಲ್ಲಿ ಗವರ್ನ್‌ಮೆಂಟಿನವರು ಅಂದಾಜು ಕಟ್ಟಿದ್ದದ್ದಕ್ಕಿಂತಲೂ ಹೆಚ್ಚಾಗಿಯೇ ಶಿಲ್ಕು ಉಳಿಯಿತೆಂದು ಗೊತ್ತಾಗುವುದು. ಈ ಶಿಲ್ಕಿನ ಪೈಕಿ ಕಾವೇರೀ ವಿದ್ಯುಚ್ಛಕ್ತಿಯ ಪವರ್ ಹೌಸಿನಲ್ಲಿ ಉತ್ಪತ್ತಿಯಾದ ಮೊಬಲಗನ್ನು ಸರ್ಕಾರದ ರೇವಿನ್ಯೂ ಖಾತೆಯನ್ನು ವೃದ್ಧಿಪಡಿಸಲು ವಿನಿಯೋಗಿಸಿದ್ದಲ್ಲದೆ ಕ್ಷಾಮನಿವಾರಣಾರ್ಥವಾದ ರಿಜರ್ವ್ ಫಂಡಿಗೆ ಎರಡು ಲಕ್ಷ ರೂಪಾಯನ್ನು ತೆಗೆದಿಟ್ಟಿದಾರೆ.

೧೯೦೮-೦೯ ನೇ ಸಾಲಿನ ಪ್ರಥಮ ಲೆಕ್ಕಗಳಿಗೂ ತಿದ್ದುಪಾಟಾದ ಲೆಕ್ಕಗಳಿಗೂ ಜಮಾ ಖರ್ಚುಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ ಇದಕ್ಕೆ ಕಾರಣವೇನೆಂಬುದನ್ನು ಪರಿಶೀಲನೆಯಿಂದ ತಿಳಿದುಕೊಳ್ಳಬೇಕು. ಹುಟ್ಟುವಳಿ ಲೆಕ್ಕದಲ್ಲಿ ಸುಮಾರು ಆರು ಲಕ್ಷ ರೂಪಾಯಿ ಕಡಿಮೆಯಾಗಿಯೂ ಖರ್ಚಿನಲ್ಲಿ ಸುಮಾರು ಒಂದು ಲಕ್ಷ ಕಡಿಮೆಯಾಗಿಯೂ ಅಂದಾಜಾ ಮಾಡಲ್ಪಟ್ಟಿದೆ. ಈ ವ್ಯತ್ಯಾಸಕ್ಕೆ ಸಂಸ್ಥಾನದಲ್ಲಿ ಸಾಮಾನ್ಯವಾಗಿಯೂ, ವಿಶೇಷವಾಗಿ ಕೋಲಾರ ಮತ್ತು ತುಂಕೂರು ಡಿಸ್ಟ್ರಿಕ್ಟುಗಳಲ್ಲಿಯೂ ದುಷ್ಕಾಲ ಪ್ರಾಪ್ತವಾಗಿದ್ದದ್ದು ಕಾರಣವೆಂದು ಕಾಣುತ್ತದೆ. ಜಮೀನ್ ಮತ್ತು ಮೊಹತರ್ಫಾ ಕಂದಾಯಗಳ ಬಾಬಿನ ಹುಟ್ಟುವಳಿಯಲ್ಲಿ ೧೬ ಲಕ್ಷ ರೂಪಾಯಿಗಿಂತ ಹೆಚ್ಚಾಗಿಯೂ, ಫಾರೆಸ್ಟ್ ಬಾಬಿನಲ್ಲಿ ಒಂದು ಲಕ್ಷ ರೂಪಾಯಿಯೂ ಕಡಿಮೆಯಾಗಿರುತ್ತದೆ. ಆದರೆ ಹುಟ್ಟುವಳಿಯು ಹೆಚ್ಚಾದ ಬಾಬುಗಳು ಯಾವುವೆಂದರೆ—ಎಕ್ಸೈಸ್ ೩.೭೬ ಲಕ್ಷ; ಸ್ಟಾಂಪು ಮತ್ತು ರೆಜಿಸ್ಟ್ರೇಷನ್ ೭೮,೦೦೦, ಗಣಿಗಳ ಉತ್ಪತ್ತಿಯ ಮೇಲಣ ರಾಜಾದಾಯ ೬೦,೦೦೦; ಬಡ್ಡಿ ೫೦,೦೦೦, ರೈಲ್ವೆ ೩.೬೧ ಲಕ್ಷ. ದುರ್ಭಿಕ್ಷದ ನಿಮಿತ್ತವಾಗಿ ವಿಶೇಷ ಹಣ ಖರ್ಚಾಗಿರುತ್ತದೆಯಾದರೂ ಸಮಸ್ತ ಇಲಾಖೆಗಳಲ್ಲೂ ಖರ್ಚುಬಾಬನ್ನು ಬಹಳಮಟ್ಟಿಗೆ ಕೋತಾ ಮಾಡುತ್ತಾ ಬಂದದ್ದರಿಂದ ಸಂಸ್ಥಾನಾದಾಯವು ಒಟ್ಟು ಖರ್ಚಿನಲ್ಲಿ ೯೫,೦೦೦ ರೂಪಾಯಿ ಕಡಿಮೆಯಾಗಲು ಸಾಧ್ಯವಾಯಿತು.

ಗವರ್ನ್‌ಮೆಂಟಿನವರು ದುರ್ಭಿಕ್ಷದ ನಿವಾರಣಾರ್ಥವಾಗಿ ೫,೪೫,೭೮೧ ರೂಪಾಯಿ ಖರ್ಚುಮಾಡಿರುತ್ತಾರೆಂದು ಗೊತ್ತಾಗುತ್ತದೆ. ಈ ಪೈಕಿ ಸರ್ಕಾರಿ ನೌಕರರಿಗೆ ಕೊಟ್ಟ ಧಾನ್ಯದ ಅಲೋವೆನ್ಸಿಗಾಗಿಯೇ ೧,೫೪,೧೦೭ ರೂಪಾಯಿ ಖರ್ಚಾಯಿತು; ಬಾವಿಗಳನ್ನು ತೋಡಿಸುವುದಕ್ಕೆ ೫೧,೭೮೧ ರೂಪಾಯಿಯೂ, ಇತರ ಕಾಮಗಾರಿಗಳಿಗೆ ೪೮,೬೨೫ ರೂಪಾಯಿಯೂ, ಧರ್ಮಾರ್ಥವಾದ ರಿಲೀಫಿಗೂ ನೇಯ್ಗೆಯವರಿಗೆ ಸಹಾಯ ಮಾಡಿದ್ದಕ್ಕೂ ೬೯,೭೫೧ ರೂಪಾಯಿಯೂ, ಸಾಲ ಮತ್ತು ಅಡ್ವಾನ್ಸುಗಳಿಗಾಗಿ ೩,೨೦,೯೪೫ ರೂಪಾಯಿಯೂ ವಿನಿಯೋಗವಾಗಿರುತ್ತದೆ.

ದುಷ್ಕಾಲದ ನಿಮಿತ್ತವಾಗಿ ಏರ್ಪಾಡಾಗಿದ್ದ ರಿಲೀಫ್ ಕೆಲಸಗಳೂ ಕಾಮಗಾರಿಗಳೂ ನಮಗೆ ತಿಳಿದು ಬಂದಿರುವ ಮಟ್ಟಿಗೂ ತೃಪ್ತಿಕರವಾಗಿಯೂ ನ್ಯಾಯವಾದ ರೀತಿಯಲ್ಲೂ ನಡಿಸಲ್ಪಟ್ಟಿರುತ್ತವೆಂದು ಹೇಳುತ್ತೇವೆ. ಇನ್ನೂ ಸಂಸ್ಥಾನದಲ್ಲಿ ಆಹಾರ ದಿನಸಿಗಳ ಧಾರಣೆಯು ಬಹಳ ತುಟ್ಟಿಯಾಗಿರೋಣದರಿಂದ ಪ್ರಜೆಗಳು ಜೀವನಕ್ಕೆ ಕಷ್ಟಪಡುತ್ತಿದ್ದಾರೆ ಆದಾಗ್ಯೂ ಈ ಕಷ್ಟವನ್ನು ಪರಿಹಾರ ಮಾಡುವುದರಲ್ಲೂ ಹೊಟ್ಟೆಗಿಲ್ಲದೆ ಸಾಯದಂತೆ ಪ್ರಜೆಗಳನ್ನು ಕಾಪಾಡುವುದರಲ್ಲೂ ಗವರ್ನ್‌ಮೆಂಟಿನವರು ಪಟ್ಟ ಶ್ರಮವೂ ಮಾಡಿದ ದ್ರವ್ಯ ಪ್ರಯವೂ ಬಹು ಮಟ್ಟಿಗೆ ಸಾರ್ಥಕವಾಗಿರುತ್ತವೆಂದು ತಿಳಿಯಲು ಸಂತೋಷಪಡುತ್ತೇವೆ.

ಈಗ ಶಿಲ್ಕು ಉಳಿದಿರುವಂಥಾ ೧೨|| ಲಕ್ಷ ರೂಪಾಯನ್ನು ಸರ್ಕಾರದವರು ಸಾಲ ತೀರಿಸುವುದರಲ್ಲೂ ಕಾವೇರಿ ವಿದ್ಯುಚ್ಛಕ್ತಿಯ ವಿಸ್ತಾರದಿಂದ ಇನ್ನೂ ಲಾಭ ಸಂಪಾದನೆಯಾಗುವಂತೆ ಮಾಡುವುದಕ್ಕೂ ಕ್ಷಾಮನಿವಾರಣಾರ್ಥವಾದ ಫಂಡಿಗೆ ೨ ಲಕ್ಷ ರೂಪಾಯನ್ನು ಸೇರಿಸುವುದಕ್ಕೂ ವಿನಿಯೋಗಿಸಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ ಇದೇ ಸರಿಯಾದ [illegible] ಎಂದು ನಮಗೆ ತೋರುತ್ತದೆ.

ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಒಂದು ಲಕ್ಷ ರೂಪಾಯನ್ನು ಹೆಚ್ಚಾಗಿ ಖರ್ಚುಮಾಡುವವರಾಗಿದಾರೆ ಸ್ಕೂಲು ಮತ್ತು ಪಾಠಶಾಲೆಗಳಿಗೆ ಸಹಾಯ ದ್ರವ್ಯವನ್ನು ಹೆಚ್ಚಾಗಿ ಕೊಡಬೇಕೆಂದೂ, ಗವರ್ನ್‌ಮೆಂಟು ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚುಮಾಡಬೇಕೆಂದೂ ತಿಳಿದುಬರುವುದು.

ಕ್ಷಾಮ ನಿವಾರಣೆಗಾಗಿ ಗವರ್ನ್‌ಮೆಂಟಿನವರು ಏರ್ಪಾಡು ಮಾಡಿರುವ ಫಂಡಿನಲ್ಲಿ ೧೯೦೯ ನೇ ಜೂನ್ ಆಖೈರಿನಲ್ಲಿ ೬ ಲಕ್ಷ ರೂಪಾಯಿ ಇದ್ದಿತು ೧೯೦೮ರ ದುಷ್ಕಾಲ ನಿವಾರಣೆಗೆ ಸರ್ಕಾರದವರು ಈ ಸಾಲಿನ ಹಾಲಿ ಹುಟ್ಟುವಳಿಯಿಂದಲೇ ಹಣವನ್ನು ಖರ್ಚುಮಾಡಿರುವುದೂ ಅಲ್ಲದೆ ಇನ್ನೂ ಎರಡು ಲಕ್ಷ ರೂಪಾಯನ್ನೂ ಆ ಫಂಡಿಗೆ ಸೇರಿಸಿರುತ್ತಾರೆ.

ರೈಲ್ವೆ ಇಲಾಖೆಯಲ್ಲಿ ಹೊಸ ಎಂಜಿನುಗಳನ್ನು ಕರಿ ರಸ್ತೆಗಳಿಗೆ ಹಾಕಿಸಿದ್ದಲ್ಲದೆ ವ್ಯಾಗನುಗಳನ್ನೂ ಗಾಡಿಗಳನ್ನೂ ಇತರ ಸಾಮಾನುಗಳನ್ನೂ ಹೆಚ್ಚಾಗಿ ತರಿಸಿದ್ದರಿಂದ ಖರ್ಚು ಸ್ವಲ್ಪ ಹೆಚ್ಚಾಗಿರುತ್ತದೆ ಗುಬ್ಬಿಯಿಂದ ಹಿಂದೂಪುರಕ್ಕೆ ಹಾಕಿರುವ ರೈಲ್ ರಸ್ತೆಯನ್ನು ಸರ್ಕಾರು ಮಾರಿ ಕಂಪೆನಿಯವರಿಗೆ ವಹಿಸಿಕೊಟ್ಟಿದ್ದರಿಂದ ಆ ಸಾಲಕ್ಕೆ ಬಡ್ಡಿ ಸರಕಾರವೇ ಕೊಡಬೇಕಾಗಿದೆ ಆ ಸಾಲವನ್ನು ತೀರಿಸುವುದಕ್ಕೆ ಹಣವನ್ನು ಕೂಡಿಸುತ್ತಾ ಬಂದಿದ್ದಾರೆ. ೧೯೧೬ ನೇ ಇಸವಿಯ ತನಕ ತೀರುವುದಿಲ್ಲವಾದ್ದರಿಂದ ಅದುವರೆಗೆ ಬಡ್ಡಿ ಸಲ್ಲಿಸಬೇಕಾಗಿರುವುದು.

ಇಂಜನಿಯರ್ ಯಾನೆ ಮರಾಮತ್ ಇಲಾಖೆಯ ಕಾಮಗಾರಿಗಳಿಗೆ ೫೫ ಲಕ್ಷ ರೂಪಾಯಿ ವಿನಿಯೋಗಿಸುವಂತೆ ಗೊತ್ತುಮಾಡಲ್ಪಟ್ಟಿತ್ತು ಅದರ ಹಿಂದಿನ ಸಾಲಿನ ಖರ್ಚಿಗೆ ಅದು ಸಾಲದೆಂದು ಕಂಡುಬಂದದ್ದರಿಂದ ಅದಕ್ಕಾಗಿ ೮೩,೦೦೦ ರೂಪಾಯನ್ನೂ, ಮೈಸೂರು ಪಟ್ಟಣದ ಅಭಿವೃದ್ಧಿಗಾಗಿ ೨೬೩,೨೫೮ ರೂಪಾಯನ್ನೂ ಖರ್ಚುಮಾಡುವವರಾಗಿದಾರೆ ಇಂಜನಿಯರ್ ಇಲಾಖೆಯವರು ಮಾಡಿಸುವ ಹೊಸ ಕಾಮಗಾರಿಗಳು ಯಾವವೆಂದರೆ—ಮೈಸೂರಿನ ಹೊಸ ಅರಮನೆ ಕಟ್ಟಡ ರೂ. ೨,೮೯,೦೦೦, ಮಾರಿಕಣಿವೆ ತಲಾವಿನ ಕಾಮಗಾರಿ ರೂ. ೧,೫೩,೦೦೦; ಬೆಂಗಳೂರು ಸೆಂಟ್ರಲ್ ಕಾಲೇಜಿನ ಒಡಾವಣೆ ರೂ ೧,೦೦,೦೦೦, ಬೆಂಗಳೂರು ಸಿಟಿ ಒಡಾವಣೆ ಮತ್ತು ನೀರಿನ ಏರ್ಪಾಡು ರೂ ೬೩,೦೦೦, ಶಿವಮೊಗ್ಗ ಟವನ್ ಒಡಾವಣೆ ಮತ್ತು ನೀರಿನ ಏರ್ಪಾಡು ರೂ. ೬೫,೦೦೦; ಮೈಸೂರು ಚಾಮರಾಜೇಂದ್ರ ಕೈಗಾರಿಕೆ ಪಾಠಶಾಲೆಯ ಕಟ್ಟಡ ರೂ. ೫೦,೦೦೦, ಬೆಂಗಳೂರು ಆಸ್ಪತ್ರೆ ರೂ. ೪೫,೦೦೦; ಬೆಂಗಳೂರು ಸಿಟಿ ಡ್ರೇನೇಜ್ ಯಾನೆ ಚರಂಡಿಗಳ ಕಾಮಗಾರಿ ರೂ. ೪೩,೦೦೦, ಮಂಡಿಗೆರೆ ನಾಲಾ ಒಡಾವಣೆ ರೂ. ೩೫,೦೦೦, ರಾಮಸಾಗರ ತಲಾವಿನ ಕಾಮಗಾರಿ ರೂ ೩೦,೦೦೦; ಹೊನ್ನಾಳಿ ಮತ್ತು ಚಿತ್ರದುರ್ಗಗಳಲ್ಲಿ ತಾಲ್ಲೂಕ್ ಕಚೇರಿ ಕಟ್ಟಡಗಳು ರೂ ೨೦,೦೦೦, ಬೆಂಗಳೂರು ಹೊಸ ಹೈ ಸ್ಕೂಲು ರೂ. ೨೦,೦೦೦; ಮೈಸೂರು ಸಿಟಿ ನೀರಿನ ಏರ್ಪಾಡು ರೂ ೩೦,೦೦೦, ಬೆಂಗಳೂರು ಹೊಸ ಸಿಲ್ಲೇದಾರ್ ಲೈನ್ ಕಟ್ಟಡ ರೂ ೨೦,೦೦೦.

ಈ ರೀತಿ ಪ್ರಕಟಮಾಡಿರುವ ಬಡ್ಜೆಟ್ಟನ್ನು ನೋಡಿದರೆ ಸರ್ಕಾರದವರು ಅದನ್ನು ಬಹು ಜಾಗರೂಕತೆಯಿಂದಲೂ ಮುಂದಾಲೋಚನೆಯಿಂದಲೂ ತಯಾರುಮಾಡಿರುತ್ತಾರೆಂದು ಗೊತ್ತಾಗುವುದು. ಸಂಸ್ಥಾನದಲ್ಲಿ ಕೆಲವು ಕಾರ್ಯಗಳು ಯಾವೂ ಹಿಂದೆ ಬೀಳದಂತೆಯೂ ದಿನಕ್ರಮೇಣ ಅವು ಅಭಿವೃದ್ಧಿಹೊಂದುತ್ತಾ ಬರುವಂತೆಯೂ ನೋಡಿಕೊಳ್ಳಬೇಕಾಗಿರುತ್ತದೆ. ವಿಶೇಷ ಭಾರಿಯಾದ ಏರ್ಪಾಡುಗಳಾಗಲಿ ಕಾಮಗಾರಿಗಳಾಗಲಿ ಯಾವೂ ಇರುವುದಿಲ್ಲ ಈ ಬಡ್ಜೆಟ್ಟಿನ ವಿಚಾರವನ್ನು ಇನ್ನೊಂದು ಸಲ ಪ್ರಸ್ತಾಪ ಮಾಡೋಣವೆಂದು ಸದ್ಯ ಇಲ್ಲಿಗೆ ನಿಲ್ಲಿಸಿರುವೆವು.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಮುಂದಿನ ವಾರ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿ ಬರುವ ಸಂಭವವಿದೆ.

ಪೆನ್ಷನ್ ರಿಸಾಲ್ದಾರ್ ಮೆ|| ಕೃಷ್ಣರಾಯರಿಗೆ ಕಳೆದ ವಾರ ಶ್ರೀಮನ್ಮಹಾರಾಜರವರು ಅರಮನೆ ಮುಸಾಹೆಬಗಿರಿಯನ್ನು ದಯಪಾಲಿಸಿ ಅದಕ್ಕಾಗಿ ಅರಮನೆಯಿಂದ ೫೦ ರೂಪಾಯಿ ಪೆನ್ಷನ್ ಸಲ್ಲುವಂತೆ ಹುಕುಂಮಾಡಿರುತ್ತಾರೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಚೀಫ್ ಜೈಲರಾಗಿದ್ದ ಮೆ|| ನಾಗಪ್ಪಾರಾಯರವರಿಗೆ ಬೆಂಗಳೂರು ದಂಡಿನಲ್ಲಿ ಪೋಲೀಸ್ ಇನ್ಸ್ಪೆಕ್ಟರ ಕೆಲಸವಾಯಿತು. ಮೆ|| ಮೆಕ್‌ಗ್ರೆರ್ ಎಂಬುವರನ್ನು ನಮ್ಮ ಸರ್ಕಾರದವರು ಚೀಫ್ ಜೈಲರಾಗಿ ಕೆಲಸ ಮಾಡುವಂತೆ ನೇಮಿಸಿರುತ್ತಾರೆ.

ಸಂಸ್ಥಾನದ ವಿದ್ಯುಚ್ಛಕ್ತಿಯ ಇಲಾಖೆಯ ಮುಖ್ಯಸ್ಥರಾದ ಮೆ|| ಗಿಬ್ಸ್‌ನರವರು ವಿಲಾಯಿತಿಯಲ್ಲೂ ಯೂರೋಪಿನ ಇತರ ರಾಜ್ಯಗಳಲ್ಲೂ ವಿದ್ಯುಚ್ಛಕ್ತಿಯ ಕಾರ್ಯಗಳನ್ನು ನೋಡಿಕೊಂಡು ಬರಲು ಕಳೆದ ವಾರ ಹೊರಟರು. ಇವರ ಕೂಡ ಅದೇ ಇಲಾಖೆಯ ಮೆ|| [illegible] ಪದ್ಮನಾಭರಾಯರೂ, ನರಸಿಂಹಯ್ಯಂಗಾರರೂ ಪ್ರಯಾಣಮಾಡಿರುತ್ತಾರೆ.

ಕಳೆದ ಶನಿವಾರ ಬೆಂಗಳೂರು ಪಟ್ಟಣದಲ್ಲಿ ರೈಲ್ವೆ ಅಂಡರ್ ಗಾರ್ಡುಗಳಾದ ಗೋವಿಂದರಾವ್ ಮತ್ತು ದಾಮೋದರರಾವ್ ಎಂಬುವರ ಪಂಕ್ತಿಯವರಾದ ೧೪ ಮತ್ತು ೧೦ ವರುಷದ ಹುಡುಗರು ಅಲ್ಲಿನ ಸಂಪಂಗೀ ಕೆರೆಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದ್ದಾರು. ಮ್ಯಾಜಿಸ್ಟ್ರೇಟರು ಶವಗಳನ್ನು ಇಬ್ಬರಾದಿಯಾಗಿ ಮಾಡಿ ದಹನ ಮಾಡುವುದಕ್ಕೆ ಅಪ್ಪಣೆಕೊಟ್ಟರು.

ಕಳೆದ ಬುಧವಾರ ಸಾಯಂಕಾಲ ಬೆಂಗಳೂರು ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಶ್ರೀ ಯುವರಾಜರವರನ್ನು ಕರೆಸಿಕೊಂಡು, ಅದ್ದೂರಿಯಾದ ಔತಣ್ಯ ಸ್ವೀಕರಿಸಿದರು. ಯುವರಾಜರವರು ಬಹಳ ಸಂತೋಷಪಟ್ಟು ಅವರನ್ನು ವಂದಿಸಿದರು. ಶನಿವಾರ ಯುವರಾಜರವರು ರೈಲು ಹತ್ತಿ ಪೂನಾ ಪಟ್ಟಣಕ್ಕೆ ಬಿಜಯಮಾಡಿದರು ಅವರ ಕೂಡ ಸರ್ದಾರ್ ಕಾಂತರಾಜ್ ಅರಸಿನವರೂ, ಸಿರ್ದಾರ್ ಗೋಪಾಲರಾಜೇ ಅರಸಿನವರೂ ಪ್ರಯಾಣ ಮಾಡಿರುತ್ತಾರೆ.

ಒಪ್ಪಿ ಚಾತ್ರಿ ನಾರದ ಒತ್ತಾಯವುದು —" ಮಂಜರಾಬಾದು ತಾಲ್ಲೂಕಿನ ಕಸಬಾ ಹೋಬಳಿ ಹೊಸೂರಿಗೆ ಬರಿ ಪಟೇಲರಾಗಿಯೂ ಶಾನುಭೋಗರು ಎಂದು ಪ್ರಸಿದ್ಧಿ ಪಡೆದೂ ಇದ್ದ ಮಂಡಪಟೇಲ್ ಮು|| ಶಿವೆಗೌಡರು ಕಳೆದ ಆಗಸ್ಟ್ ತಾ|| ೨೮ ನೇ ಬುಧವಾರ ಕಾಲವಾದರು ಇವರ ವಯಸ್ಸು ೫೯—೬೦ ಮಾತ್ರ ಆಗಿತ್ತು. ಇವರ ಬುದ್ಧಿ ವೈಲಕ್ಷಣಗಳನ್ನು ವಿವರಿಸಲು ಅಸಾಧ್ಯ. ಹಳ್ಳಿ ರೈತರುಗಳು ಬಹು ವ್ಯಸನಾಕ್ರಾಂತರಾಗಿ ಗೋಳಾಡುತ್ತಾರೆ ಇವರ ಸಾವಿನ ವಿಷಯ ಸಮಾಧಾನ ಹೇಳುವ ಜನಗಳ ಪಾಡಿಗೂ ಒಂದಿದ್ದರು ಇಂಥಾ ದೊಡ್ಡ ಮನುಷ್ಯರೂ ಪರೋಪಕಾರಿಗಳೂ ಕಾಲವಾದರಲ್ಲಾ ಎಂದು ಜನಗಳು ಗೋಳಾಡುತ್ತಾರೆ ಎಂಬುದೇ.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ ಹೆಚ್ಚುತ್ತಾ ಇರುವುದು ಪ್ರಜೆಗಳಲ್ಲಿ ಕಳವಳವನ್ನುಂಟುಮಾಡಿದೆ. ಮಳೆಯೂ ಸೋನೆಯೂ ಕಳೆದ ಭಾನುವಾರದಿಂದ ಶಿಲ್ಕಿ ಬಿಸಿಲು ಕಾಯುತ್ತಿದೆ. ಡಾಕ್ಟರುಗಳು ಕಳೆದ ೩೧ನೇ ತಾ. ಮೊದಲು ೬ನೇ ತಾ. ವರೆಗೆ ರಾಜಧಾನಿಯಲ್ಲಿ ೧,೯೪೩ ಮಂದಿಗೂ, ೬ನೇ ತಾ. ೪೮೦ ಮಂದಿಗೂ ಪ್ಲೇಗ್ ಇನಾಕ್ಯುಲೇಷನ್ ಹಾಕಿರುತ್ತಾರೆ ಕಳೆದ ವಾರದ ಪ್ಲೇಗಿನ ಉಲ್ಬಣ ಸ್ಥಿತಿಯನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು —

ತಾರೀಖು	ಪ್ಲೇಗ್ ತಗಲಿದ್ದು.	ಪ್ಲೇಗ್ ಮರಣ.	ಒಟ್ಟು ಮರಣ.
೧	೨೧	೧೭	೨೬
೨	೯	೭	೧೧
	೧೪	೧೦	೨೦
೪	೯	೯	೧೦
೫	೧೩	೧೧	೨೮
೬	೧೬	೧೭	೨೬
೭	೧೯	೧೫	೩೧

ಕಳೆದ ಶನಿವಾರ ಮಧ್ಯಾಹ್ನ ನೀಲಗಿರಿ ಬೆಟ್ಟದ ಮೇಲೆ ಮದರಾಸ್ ಗವರ್ನರವರ ಏಕಪುತ್ರರಾದ ಸುಮಾರು ೨೨ ವರುಷ ವಯಸ್ಸಿನ ಮೆ|| ಆರ್. ಇ. ಲಾಲಿಯವರು ಕುದುರೆಯ ಮೇಲೆ ಕುಳಿತು ಶಿಕಾರಿಮಾಡುತ್ತಿದ್ದಾಗ ಕುದುರೆಯು ಒಂದು ಹಳ್ಳದೊಳಕ್ಕೆ ಮಗುಚಿಕೊಂಡಿತೆಂತಲೂ, ಮೆ|| ಲಾಲಿಯವರು ಕೆಳಗೆ ಬಿದ್ದು ಅವರ ಮೇಲೆ ಕುದುರೆಯು ಬಿದ್ದಿತೆಂತಲೂ, ಅವರ ಕತ್ತು ಮುರಿದು ತಕ್ಷಣ ಪ್ರಾಣಹೋಯಿತೆಂತಲೂ ಬಹು ದುಃಖಕರವಾದ ತಂತಿ ವರ್ತಮಾನ ಬಂದಿದೆ ಗವರ್ನರವರು ಸಹ ಆಗ ಗೋಲ್ಫ್ ಆಟಕ್ಕೆ ಹೋಗಿದ್ದು ಈ ವಾರ್ತೆಯನ್ನು ಕೇಳಿದರು ಅವರ ಬಳಿ ಇದ್ದ ಅಧಿಕಾರಿಗಳು ಶವವನ್ನು ಸಾಗಿಸಿಕೊಂಡು ಬಂದು ಮರುದಿನ ಸಾಯಂಕಾಲ ಯಥಾವಿಧಿಯಾಗಿ ಸಂಸ್ಕಾರಮಾಡಿದರು ಪಂಕ್ತಿಕ್ಕೆಲ್ಲಾ ಏಕಪುತ್ರನಾಗಿದ್ದ ಈತನು ಕಾಲವಾದದ್ದರಿಂದ ಆ ಮಾತಾಪಿತೃಗಳಿಗೆ ಉಂಟಾಗಿರುವ ದುಃಖವನ್ನು ವಿವರಿಸಲಸಾಧ್ಯವಾಗಿದೆ. ಇಂಥಾ

ಅಪಾರವಾದ ಪುತ್ರಶೋಕವು ಈ ದಂಪತಿಗಳಿಗೆ ಸಂಘಟಿಸಿತಲ್ಲಾ ಎಂದು ಮದರಾಸ್ ಅಧಿಪಕ್ಷದ ಸಕಲ ಪ್ರಜೆಗಳ ಕೂಡ ನಾವೂ ಸಂತಾಪಪಡುತ್ತೇವೆ.

ಜಾನ್ ವೆಸ್ಲಿ ಎಂಬ ಮಹಾತ್ಮನು.

ಜಾನ್‌ವೆಸ್ಲಿ ಎಂಬ ಮಹಾತ್ಮನು ಇಂಗ್ಲೆಂಡಿನಲ್ಲಿರುವ ಲಿಂಕನ್‌ಷೈರ್ ಡಿಸ್ಟ್ರಿಕ್ಟಿನ ಒಂದು ಸಣ್ಣ ಗ್ರಾಮದಲ್ಲಿ ೧೭೦೩ನೇ ಸಂವತ್ಸರದಲ್ಲಿ ಜನಿಸಿದನು. ಅವನ ಬಾಲ್ಯ ಪ್ರಾಯದಲ್ಲಿ ಅವನ ತಾಯಿಯು ಅವನನ್ನು ಭಗವಂತನ ಭಯ ಭಕ್ತಿಯಲ್ಲಿ ಬೆಳೆಸಿ ಅವನು ಎಲ್ಲಾ ವೇಳೆಗಳಲ್ಲೂ ದೇವರ ಕಟ್ಟಳೆಗಳನ್ನು ಕೈಕೊಳ್ಳುವಂತೆ ಪ್ರೇರಿಸುತ್ತಿದ್ದಳು. ಜಾನ್‌ವೆಸ್ಲಿಯು ಪಂಡಿತನಾಗಿ ಸತ್ಪುರುಷನಾಗಿಯೂ ಬೆಳೆದನು. ಅವನು ಆಕ್ಸ್‌ಫರ್ಡ್ ಕಲಾಶಾಲೆಗೆ ಹೋಗಿ ಅಲ್ಲಿ ಕೆಲವು ಕಾಲ ಉಪಾಧ್ಯಾಯನಾಗಿದ್ದನು. ಅವನು ಆಕ್ಸ್‌ಫರ್ಡ್ ಪಟ್ಟಣದಲ್ಲಿರುವಾಗ್ಗೆ ಕೆಲವು ಸಹಪಾಠಿಗಳನ್ನು ಸೇರಿಸಿ ಒಂದು ಸಂಘವನ್ನು ಮಾಡಿಕೊಂಡು ವಾರಕ್ಕೊಂದಾವರ್ತಿ ಒಂದು ಸ್ಥಳದಲ್ಲಿ ಸೇರಿಸಿ ಭಕ್ತಿ ವೃದ್ಧಿಯುಂಟಾಗುವಂತೆ ಸತ್ವೇದ ಪಾರಾಯಣ, ಭಗವತ್ಪ್ರಾರ್ಥನೆ, ಪರಸ್ಪರ ಸಹಾಯ ಮಾಡುವುದು, ಈ ಮೊದಲಾದ ಕಾರ್ಯಗಳಲ್ಲಿ ನಿರತನಾಗಿದ್ದನು. ಮೇಲ್ಕಂಡ ಸಂಘದವರು ಅಸ್ವಸ್ಥರಾಗಿರುವವರನ್ನು ಕಂಡು ಉಪಚರಿಸುತ್ತಲೂ ಸೆರೆಮನೆಯಲ್ಲಿರುವವರನ್ನು ಸಂದಿಸಿ ಬುದ್ಧಿವಾದಗಳನ್ನು ಹೇಳುತ್ತಲೂ ಇರುವರು. ಕೆಲವು ಕಾಲವಾದನಂತರ ಜಾನ್‌ವೆಸ್ಲಿಯು ಅಮೆರಿಕ ದೇಶಕ್ಕೆ ಬೋಧಕನಾಗಿ ಹೊರಟು ಅಲ್ಲಿನ ಜನಗಳಿಗೆ ಕ್ರಿಸ್ತ ಮತವನ್ನು ಪ್ರಸಂಗಿಸುತ್ತಿದ್ದನು. ಜಾನ್‌ವೆಸ್ಲಿಯು ಒಳ್ಳೆಯವನಾಗಿದ್ದ ಕಾರಣ ಅನ್ಯರಿಗೆ ಒಳ್ಳೆಯದನ್ನು ಮಾಡುತ್ತಿದ್ದನು. ಅವನಲ್ಲಿ ಒಂದು ಕೊರತೆ ಇದ್ದಿತು. ಅವನು ದೇವರು ತನ್ನ ತಂದೆಯಾಗಿರುವನೆಂತಲೂ ತಾನು ಮಾಡಿರುವ ಪಾಪಗಳಿಲ್ಲವೂ ಪರಿಹಾರವಾಗಿವೆ ಎಂತಲೂ ತಿಳಿದುಕೊಂಡಿರಲಿಲ್ಲ.

ಒಂದಾನೊಂದು ದಿನ ಅವನು ಹಡಗಿನ ಮೇಲೆ ಪ್ರಯಾಣ ಮಾಡುತ್ತಿರುವಾಗ ಅವನು ಕೆಲವು ಜರ್ಮನ್ ಜನಗಳೊಡನೆ ಮಾತನಾಡುತ್ತಿದ್ದನು. ಆ ಜನಗಳೆಲ್ಲರೂ ತಮ್ಮ ರಕ್ಷಕನಾದ ಯೇಸು ಕ್ರಿಸ್ತನ ಮೂಲಕ ತಮ್ಮ ಪಾಪಗಳೆಲ್ಲವೂ ಪರಿಹರಿಸಲ್ಪಟ್ಟವೆಂದು ನಂಬಿಕೊಂಡು ಸಂತೋಷ ಚಿತ್ತರಾಗಿದ್ದರು. ಸ್ವಲ್ಪ ಕಾಲದಲ್ಲಿ ಬಿರುಗಾಳಿಯ ಭಯಂಕರವಾದ ಬಿರುಗಾಳಿ ಎದ್ದಿತು. ಹಡಗನ್ನು ಹಡಗಿನಲ್ಲಿದ್ದವರೆಲ್ಲರೂ ಮುಳುಗಿ ಹೋಗುವ ಸಮಯವು ಬಂದೊದಗಿತ್ತೆಂದು ಕಂಡು ಬಂತು. ಹಡಗಿನಲ್ಲಿದ್ದ ಜರ್ಮನರಾದ ಗಂಡರೂ ಹೆಂಗಸರೂ ಅವರಿಗೆ ಸಂಭವಿಸಬಹುದಾದ ಮರಣಕ್ಕೆ ಹೆದರದೆ ಕೀರ್ತನೆಗಳನ್ನು ಹಾಡಿ ದೇವರಿಗೆ ಸ್ತೋತ್ರ ಸಲ್ಲಿಸುತ್ತಿದ್ದರು. ಹೀಗೆ ಮರಣ ಸಂಭವಿಸಿದಲ್ಲಿ ಅವರು ತಮ್ಮನ್ನು ಸೃಷ್ಟಿಸಿದ ಭಗವಂತನ ಪರಮ ಸ್ಥಾನವನ್ನು ಸೇರಿ ಅತನ ಸಂಗಡ ಶಾಶ್ವತನಾಗಿ ಬದುಕುವರೆಂದು ಅವರು ತಿಳಿದಿದ್ದರು. ಜಾನ್‌ವೆಸ್ಲಿಯು ಇವನ್ನೆಲ್ಲಾ ನೋಡಿ ಅವರ ಸಂತೋಷಕ್ಕೆ ಕಾರಣವಾವುದೋ ಅದನ್ನು ಪರೀಕ್ಷಿಸಲು ತೊಡಗಿದನು. ಆಗ ಅಲ್ಲಿದ್ದ ಭಕ್ತರುಗಳ ಸಂಗಡ ಸಂಭಾಷಿಸಿದನು. ಮನುಷ್ಯರು ಅವನನ್ನು ಭಕ್ತನನ್ನಾಗಿಯೂ ಸಚ್ಚರಿತನನ್ನಾಗಿಯೂ ಮಾಡಿದಾಗ್ಯೂ ದೇವರು ಮನುಷ್ಯನನ್ನು ಪ್ರೀತಿಸಿ ಅವರೆಲ್ಲರೂ ಯೇಸು ಕ್ರಿಸ್ತನ ಮರಣದ ಮೂಲಕ ಪಾಪವಿಮೋಚನೆಯನ್ನು ಹೊಂದುವಂತೆ ಮಾಡಿರುತ್ತಾನೆಂತಲೂ ಅವನು ಆ ಜರ್ಮನರಿಂದ ತಿಳಿದುಕೊಂಡನು. ಕೆಲವು ಕಾಲದವರೆಗೆ ವೆಸ್ಲಿಯು ಮೇಲ್ಕಂಡ ವಿಷಯವನ್ನು ಗ್ರಹಿಸಲಿಲ್ಲ. ಆದರೆ ಕಡೆಯಲ್ಲಿ ಅವನು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಮನಸ್ಸಿನ ಸಮಾಧಾನವನ್ನೂ ಸಂತೋಷವನ್ನೂ ಪಡೆದು ಕೊಂಡನು. ದೇವರು ತನಗೆ ತಂದೆಯಾಗಿರುತ್ತಾನೆ ತಲೂ ತನ್ನ ಪಾಪವು ಪರಿಹಾರವಾಯಿತೆಂತಲೂ ಜಾನ್‌ವೆಸ್ಲಿಯು ಅನುಭವ ಪೂರ್ವಕವಾಗಿ ತಿಳಿದುಕೊಂಡನು.

ಈ ಸೂರ್ತನ ಜೀವನ ಧನವನ್ನು ವೆಸ್ಲಿಯು ಹೊಂದಿಕೊಂಡು ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್ ದೇಶಗಳಲ್ಲಿ ಜನರಿಗೆ ಪ್ರಸಂಗಿಸುತ್ತಲೂ ಬೋಧಿಸುತ್ತಲೂ ಬಂದನು. ಮೇಲ್ಕಂಡ ದೇಶಗಳ ಸಾಧಾರಣ ಜನರು ಅವಿದ್ಯಾವಂತರಾಗಿದ್ದರು. ಕೊಂಚ ಮಟ್ಟಿಗೆ ಕ್ರೂರ ಅಕ್ಷರಸ್ಥರಾಗಿದ್ದರು. ಅವರು ತಮ್ಮ ನಡವಳಿಕೆಯಲ್ಲಿ ಕೇವಲ ಒರಟರಾಗಿಯೂ ಮುಖ್ಯವಾಗಿ ಮದ್ಯಪಾನಾಸಕ್ತರಾಗಿಯೂ ಇದ್ದರು. ಅವರಲ್ಲಿ ಮತಾಸಕ್ತಿಯು ಬಹು ಕಡಮೆಯಾಗಿತ್ತು. ಅವರು ಮನುಷ್ಯರಂತಿರದೆ ಮೃಗಗಳೋಪಾದಿಯಲ್ಲಿ ಜೀವಿಸಿಕೊಂಡಿದ್ದರು. ಈ ಜನಗಳಿಗೆ ಜಾನ್‌ವೆಸ್ಲಿಯು ದೇವರ ಪ್ರೀತಿಯನ್ನು ಕುರಿತು ಬೋಧಿಸುತ್ತಿದ್ದನು. ಪ್ರಾರಂಭದಲ್ಲಿ ಜನರು ಅವನ ಬೋಧನೆಗೆ ಆಶ್ಚರ್ಯಪಟ್ಟರು. ಆದರೆ ಆ ಮೇಲೆ ಅವರು ಅವನ ಮೇಲೆ ಕೋಪಗೊಂಡು ಅವನನ್ನು ನಾನಾ ವಿಧವಾಗಿ ಹಿಂಸಿಸಿದರು. ವೆಸ್ಲಿಯು ಜನರು ಕೊಡುತ್ತಿದ್ದ ಹಿಂಸೆಗಳಿಗೆ ಹೆದರದೆ ತನ್ನ ಪ್ರಸಂಗದ ಕೆಲಸವನ್ನು ಆಸಕ್ತಿಯಿಂದ ಜರುಗಿಸುತ್ತಿದ್ದನು. ಇವನ ಪ್ರಸಂಗಗಳನ್ನು ಕೇಳಿದ ಜನರಲ್ಲಿ ಅನೇಕ ಸಹಸ್ರ ಮಂದಿ ಗಂಡಸರೂ ಹೆಂಗಸರೂ ತಮ್ಮ ಪಾಪಗಳೋಸ್ಕರ ಮನಸ್ತಾಪವನ್ನು ಹೊಂದಿ ರಕ್ಷಕನಾದ ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟರು. ಬಲವಾಲಿಗಳು ಅವನ ಪ್ರಸಂಗಗಳನ್ನು ಕೇಳಿ ಮಕ್ಕಳಂತೆ ಅತ್ತರು. ಅವರು ಮದ್ಯಪಾನವೇ ಮೊದಲಾದ ದುರಭ್ಯಾಸಗಳನ್ನು ಬಿಟ್ಟು ಬಿಟ್ಟು ಸಭ್ಯವಂತರಾಗಿಯೂ ಭಕ್ತರಾಗಿಯೂ ಮಾರ್ಪಟ್ಟರು. ಇಂಗ್ಲೆಂಡ್ ದೇಶದಲ್ಲಿ ಎಲ್ಲಾ ಜನಗಳ ನಡತೆಯಲ್ಲಿಯೂ ಜೀವಮಾನದಲ್ಲಿಯೂ ವಿಶೇಷವಾದ ಮಾರ್ಪಾಡುಗಳುಂಟಾಯಿತು. ಅನೇಕ ಸಹಸ್ರ ಮಂದಿ ಜಾನ್‌ವೆಸ್ಲಿಯ ಹಿಂಬಾಲಕರಾದರು. ಅವನು ಪ್ರಾರಂಭ ಮಾಡಿದ ಕೆಲಸವು ಲೋಕವನ್ನೇ ವ್ಯಾಪಿಸಿಕೊಂಡಿತು.

ಜಾನ್‌ವೆಸ್ಲಿಯ ಜೀವಮಾನ ಚರಿತ್ರೆಯು ಬಹು ರಸಿಕವಾಗಿರುವುದಲ್ಲದೆ ಪ್ರೇರಕವಾದುದಾಗಿಯೂ ಇರುವುದು. ಅವನ ಜೀವಮಾನ ಚರಿತ್ರೆಯು ರಾಜಧಾನಿಯಲ್ಲಿರುವ ವೆಸ್ಲಿಯನ್ ಮಿಷನ್ ಮುದ್ರಾಲಯದಲ್ಲಿ ಪ್ರಕಟವಾಗಿರುವುದು. ಪುಸ್ತಕದ ಕ್ರಯ ಎಂಟಾಣೆ. ಪುಸ್ತಕದಲ್ಲಿ ಸುಮಾರು ಇನ್ನೂರು ಪೇಜುಗಳಿರುವವು. ಅಚ್ಚು ಮತ್ತು ಬೈಂಡು ನೇತ್ರಾನಂದಕರವಾಗಿರುತ್ತವೆ. ಪುಸ್ತಕವನ್ನು ಓದಲಪೇಕ್ಷಿಸುವವರು ಮೈಸೂರಲ್ಲಿರುವ ಸಿ. ಎಲ್. ಎಸ್. ಬುಕ್ ಡಿಪೋ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು.

ಉತ್ತರ ಧ್ರುವವನ್ನು ಕಂಡುಹಿಡಿದದ್ದು.

ಈ ಭೂಗೋಳಕ್ಕೆ ಅತ್ಯಂತ ಉತ್ತರದಲ್ಲಿಯೂ ಮತ್ತು ದಕ್ಷಿಣದಲ್ಲಿಯೂ ಉತ್ತರ ದಕ್ಷಿಣ ಧ್ರುವಗಳೆಂಬ ಪ್ರದೇಶಗಳಿರುವವೆಂದು ಭೂಗೋಳ ಶಾಸ್ತ್ರಜ್ಞರು ನಿರ್ಣಯವಮಾಡಿದ್ದರು. ಆದರೆ ಆ ಪ್ರದೇಶಗಳನ್ನು ನೋಡಿದವರು ಮಾತ್ರ ಯಾರೂ ಇರಲಿಲ್ಲ. ಅಲ್ಲಿ ಆರು ತಿಂಗಳು ಕತ್ತಲೂ ಆರು ತಿಂಗಳು ಬೆಳಕೂ ಇರುವುದೆಂತಲೂ ನಿರಂತರವೂ ಮಂಜಿನ ಗಡ್ಡೆಗಳು ತುಂಬಿಕೊಂಡು ಅತ್ಯಂತ ಶೀತದಿಂದ ಜೀವರಾಶಿಗಳು ವಾಸಮಾಡಲಾರವೆಂತಲೂ ತಿಳಿದಿದ್ದಿತು.

ಆದುದರಿಂದ ಇಂತಹ ಪ್ರದೇಶವು ಹೇಗಿರುವುದೋ ನೋಡಬೇಕೆಂಬ ಕುತೂಹಲವು ಉತ್ಸಾಹವುಳ್ಳ ಕೆಲವರು ಪ್ರಯಾಣಿಕರಿಗೆ ಆಗಾಗ್ಗೆ ಉಂಟಾಗುತ್ತಿತ್ತು. ಅವರು ಅದನ್ನು ನೋಡಬರುವುದಕ್ಕೋಸ್ಕರ ಅನೇಕ ಸನ್ನಾಹಗಳನ್ನು ಮಾಡಿಕೊಂಡು ಹೊರಟರು. ಆದರೆ ಅವರು ಸ್ವಲ್ಪದೂರ ಪ್ರಯಾಣಮಾಡುವಷ್ಟರಲ್ಲೇ ಮುಂದಕ್ಕೆ ಪ್ರಯಾಣಮಾಡಲಾರದೆ ವಾಪಸು ಬರಬೇಕಾಯಿತು. ಈ ಪ್ರಕಾರವಾಗಿ ಅನೇಕಮಂದಿ ಒಬ್ಬರಿಗಿಂತಲೂ ಮತ್ತೊಬ್ಬರು ಸ್ವಲ್ಪ ಮುಂದಕ್ಕೆ ಸಾಗಿ ಹೋಗಿದ್ದರು. ಇಂಥವರಲ್ಲಿ ಡಾಕ್ಟರ್ ನಾನ್‌ಸೆನ್ ಎಂಬುವರು ಉತ್ತರ ಧ್ರುವಕ್ಕೆ ಕೇವಲ ಸಮೀಪಕ್ಕೆ ಹೋಗಿದ್ದವರೆಂದು ಪ್ರಖ್ಯಾತರಾಗಿದ್ದರು. ಇವರು ಸನ್ ೧೮೯೬ನೇ ಇಸವಿಯಲ್ಲಿ ಪ್ರಯಾಣವನ್ನು ಮಾಡಿ ತಾವು ಅನುಭವಿಸಿದ ಕಷ್ಟಗಳನ್ನೂ ನೋಡಿದುದನ್ನೂ ಕುರಿತು ಒಂದು ಪುಸ್ತಕವನ್ನು ಬರೆದರು.

ಈಗ ಇವರನ್ನೂ ಮೀರಿಸಿ ಡಾಕ್ಟರು ಕುಕ್ ಎಂಬಾತನು ಉತ್ತರ ಧ್ರುವವನ್ನು ಸೇರಿದೆನೆಂದು ತಂತಿ ವರ್ತಮಾನವನ್ನು ಅಮೆರಿಕಾ ದೇಶದ ಒಂದು ಪತ್ರಿಕೆಗೆ ಈಗತಾನೇ ಕಳುಹಿಸಿರುತ್ತಾನೆ. ಉಪವಾಸದಿಂದಲೂ ಛಳಿಯಿಂದಲೂ ಬಹಳ ದಿವಸಗಳು ಬಳಲಿ ಕಡೆಗೆ ಉತ್ತರ ಧ್ರುವವನ್ನು ಸೇರಿದೆನೆಂದು ಹೇಳುತ್ತಾನೆ. ದಾರಿಯಲ್ಲಿ ಎಸ್ಕಿಮೋ ಎಂಬ ಒಂದು ಬಗೆಯ ಜನರು ಮಂಜು ಕರಡಿಗಳನ್ನು ಬೇಟೆಯಾಡುತ್ತಿದ್ದರೆಂತಲೂ ಮಂಜು ನಾಯಿಗಳು ನೂರಾರು ದೊರೆತವೆಂತಲೂ ಅವರ ಸಹಾಯದಿಂದ ತಾನು ಉತ್ತರ ಧ್ರುವವನ್ನು ಸೇರಲು ಬಹಳ ಸುಲಭವಾಯಿತೆಂತಲೂ ಹೇಳುತ್ತಾನೆ. ಈತನು ತನ್ನ ಜೊತೆಯಲ್ಲಿ ಹನ್ನೊಂದು ಜನರನ್ನೂ, ೧೦೩ ನಾಯಿಗಳನ್ನೂ, ಮಂಜಿನ ಮೇಲೆ ಜಾರಿಹೋಗುವ ಹನ್ನೊಂದು ಗಾಡಿಗಳನ್ನೂ ತೆಗೆದುಕೊಂಡು ಸನ್ ೧೯೦೮ನೇ ಇಸವಿ ಫೆಬ್ರುವರಿ ತಿಂಗಳು ೧೯ನೇ ತಾರೀಖಿನ ದಿನ ಪ್ರಯಾಣ ಹೊರಟನು. ದಾರಿಯಲ್ಲಿ ಎಷ್ಟೋ ತೊಂದರೆಪಟ್ಟನು, ಮತ್ತು ಬೇಟೆ ಮೃಗಗಳು ಅನೇಕವಾಗಿ ದೊರೆತುದರಿಂದ, ಇವನ ಪ್ರಯಾಣವು ಸ್ವಲ್ಪ ಸುಲಭವಾಯಿತು. ಆದರೂ ಛಳಿಯು ಸಹಿಸಕೂಡದ್ದಾಗಿದ್ದಿತು. ಮಾರ್ಚಿ ೧೮ನೇ ತಾ ದಿವಸ ಉತ್ತರ ಧ್ರುವದ ಸಮುದ್ರದಲ್ಲಿರುವ ಒಂದು ದ್ವೀಪವನ್ನು ಬಿಟ್ಟು ಮುಂದಕ್ಕೆ ಹೊರಟನು. ತನ್ನ ಕಡೇ ಗಡ ವಿನಲ್ಲಿ ಇವನ ಜೊತೆಯಲ್ಲಿ ಇಬ್ಬರು ಎಸ್ಕಿಮೋ ಜನರೂ, ೨೬ ನಾಯಿಗಳೂ ಮಾತ್ರ ಇದ್ದರು. ಇವನು ದಿನವೊಂದಕ್ಕೆ ಪ್ರಾಯ ೧೫ ಮೈಲು ಪ್ರಯಾಣಮಾಡುತ್ತಾ, ಮಂಜಿನ ಗಡ್ಡೆಯ ಮೇಲೆಯೇ ವಿಶ್ರಾಂತಿಪಡೆಯುತ್ತಿದ್ದನು. ಒಣಗಿಸಿದ ಎತ್ತಿನ ಮಾಂಸವನ್ನೂ ಕೊಬ್ಬನ್ನೂ ಮತ್ತು ಬಿಸಿಯಾದ ಚಹಾ ಕಷಾಯವನ್ನು ಕುಡಿದು ಜೀವಿಸುತ್ತಿದ್ದನು. ಹೊಗೆಯು ಮುಚ್ಚಿಕೊಂಡಿದ್ದ ದಿವಸಗಳು ಭಯವಾಗಿ ಮುಚ್ಚಿಕೊಂಡಿತ್ತು. ಮತ್ತು ಮಾರ್ಚಿ ೩೦ನೇ ತಾ ದಿವಸ ಸ್ವಲ್ಪ ಮಂಜು ಕವಿಯದಾಗಲು ಪಶ್ಚಿಮಕ್ಕೆ ಭೂಮಿಯು ಕಾಣಿಸಿತು. ಅಲ್ಲಿಂದ ಸ್ವಲ್ಪವೂ ಹಿಮ್ಮೆಟ್ಟದೆ ಜೀವರಾಶಿಯ ಸುಳಿವೇ ಇಲ್ಲದ ಆ ಜನಗಡ್ಡೆಯ ಸಮುದ್ರದಲ್ಲಿ ಪ್ರಯಾಣಮಾಡಿದರು. ಬರಬರುತ್ತಾ ಮಂಜು ಹೆಚ್ಚಾಗುತ್ತಾ ಬಂದಿತು. ಏಪ್ರಿಲ್ ೨೧ನೇಯ ತಾರೀಖಿನ ವರೆಗೂ ಗ್ರಹಗತಿಗಳನ್ನು ನೋಡುತ್ತಲೇ ಇದ್ದು, ಆ ದಿವಸವೇ ಉತ್ತರ ಧ್ರುವ ಪ್ರದೇಶವನ್ನು ಸೇರಿದನು. ಆಗ ಅಲ್ಲಿ ಸೂರ್ಯನ ಬೆಳಕು ಇದ್ದಿತು. ಉತ್ತರ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳು ಕಾಣಿಸುತ್ತಿರಲಿಲ್ಲ. ಯಾವ ಕಡೆ ತಿರುಗಿ ನೋಡಿದರೂ ದಕ್ಷಿಣದಿಕ್ಕೇ ಕಾಣಿಸುತ್ತಿದ್ದಿತು. ತಾನು ನಿಂತಿದ್ದ ಸ್ಥಳವು ಮಾತ್ರ ಉತ್ತರವೆಂಬುದು ನಿಸ್ಸಂದೇಹವಾಯಿತು.

ಡಾಕ್ಟರ್ ಕುಕ್ ವಾಪಸು ಬರಲು ಏಪ್ರಿಲ್ ೨೩ನೇ ತಾರೀಖಿನ ದಿವಸ ಉತ್ತರ ಧ್ರುವವನ್ನು ಬಿಟ್ಟು ಹಿಂತಿರುಗಿದನು. ಬರುವಾಗಲೂ ಆಹಾರವು ಸಿಕ್ಕದೆ ಬಹಳ ಶ್ರಮಪಟ್ಟರು. ಸೆಪ್ಟಂಬರು ತಿಂಗಳಲ್ಲಿ ಛಳಿಯು ವಿಶೇಷವಾಗಿ ಹೆಚ್ಚಿಹೋದುದರಿಂದ ಮುಂದಕ್ಕೆ ಪ್ರಯಾಣಮಾಡಲು ಆಗದೆಹೋಯಿತು. ಆಗಿನಿಂದ ಈ ವರ್ಷದ ಆದಿಭಾಗದ ವರೆಗೂ ಭೂಮಿಯ ಕೆಳಗಡೆ ಒಂದು ಗುಹೆಯಲ್ಲಿ ವಾಸಮಾಡುತ್ತಿದ್ದರು. ಈ ಪ್ರಯಾಣದ ವೃತ್ತಾಂತವನ್ನು ಜನರು ಇನ್ನೂ ನಂಬಲಾರದವರಾಗಿದ್ದಾರೆ. ಆದರೆ, ಡಾಕ್ಟರ್ ಕುಕ್‌ಯವರು ತೋರಿಸುವ ಶಾಸ್ತ್ರಕೋಶ ಧನೆಯ ವಿವೃತ್ತಿಯನ್ನು ಪರಿಶೀಲಿಸಿದ ಮೇಲೆ ಇವರು ನಿಜವಾಗಿಯೂ ಉತ್ತರಧ್ರುವವನ್ನು ಸೇರಿದರೋ ಇಲ್ಲವೋ ಎಂಬುದು ನಿರ್ಧರಿಸಲ್ಪಡಬೇಕಾಗಿರುವುದು.

ಡಾಕ್ಟರ್ ಕುಕ್‌ಯವರು ಈ ಪ್ರಕಾರವಾಗಿ ಇದುವರೆವಿಗೂ ಯಾರೂ ನೆರವೇರಿಸದೇ ಇರುವ ಸಾಹಸಕೃತ್ಯವನ್ನು ನೆರವೇರಿಸಿ ಯಶೋವಂತರಾಗಿದ್ದಾರೆ. ನಾವು ವಾಸಮಾಡುವ ಪ್ರಪಂಚದ ಆಕಾರವೂ, ವಿಸ್ತೀರ್ಣವೂ, ಭೂಮಿ ಮತ್ತು ಜಲಪ್ರದೇಶಗಳೂ ಮುಂತಾದ ವಿಷಯಗಳೆಲ್ಲವೂ ಇಂತಹ ಸಾಹಸಿಗಳೂ ಉತ್ಸಾಹಪರರೂ ಆದ ಶಾಸ್ತ್ರಜ್ಞರಿಂದ ಕಂಡುಹಿಡಿಯಲ್ಪಟ್ಟು ನಮ್ಮ ತಿಳುವಳಿಕೆಯು ಹೆಚ್ಚಾಗುವುದಕ್ಕೆ ಮಾರ್ಗವಾಗಿರುವುದು. ಪ್ರತಿಯೊಬ್ಬರೂ ಒಂದೊಂದು ಮಾರ್ಗವನ್ನು ಅವಲಂಬಿಸಿ, ಅದನ್ನು ಎಡೆಬಿಡದೆ ಸಾಧಿಸಿ, ಲೋಕೋಪಕಾರವಾದ ಮತ್ತು ತಿಳುವಳಿಕೆಯನ್ನು ಹೆಚ್ಚುಮಾಡುವ ಸಂಗತಿಗಳನ್ನು ಕಂಡುಹಿಡಿದು, ಪ್ರಚುರಪಡಿಸುವುದರಿಂದಲೇ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಯುಂಟಾಗಲು ಮಾರ್ಗವಾಗಿರುವುದು.

ಮೈಸೂರು ಗೆಜೆಟ್ ಸಂಗ್ರಹ.

ಚಾಮರಾಜನಗರದ ತಾಲ್ಲೂಕು ನಂಜೇದೇವನಪುರದಲ್ಲೂ ಅರಳಕಟ್ಟೆಯಲ್ಲೂ ಪ್ಲೇಗ್ ಉಪದ್ರವಿದೆ ಎಂದು ತಿಳಿಯುತಕ್ಕದ್ದು.

ಚಾಮರಾಜನಗರದ ತಾಲ್ಲೂಕು ಮಲ್ಲಯ್ಯನಪುರದಲ್ಲೂ, ಗುಂಡ್ಲುಪೇಟೆ ತಾಲ್ಲೂಕ್ ಹೊಸೂರಿನಲ್ಲೂ ಪ್ಲೇಗ್ ಉಪದ್ರವು ನಿವಾರಣೆಯಾಗಿರುತ್ತದೆ.

ತೊಣ್ಣೂರು ಶಾನುಭೋಗ ಮ॥ ವೆಂಕಟಪತ್ಯಯ್ಯನವರನ್ನು ಫ್ರೆಂಚ್ ರಾಕ್ಸ್ ತಾಲ್ಲೂಕು ಬೋರ್ಡಿನ ಮೆಂಬರಾಗಿ ನೇಮಕ ಮಾಡಿದೆ.

ಮಧುಗಿರಿ ಮುನ್ಸಿಫ್ ಮ॥ ಎ. ಕೆ. ಶ್ರೀನಿವಾಸರಾಘವಾಚಾರ್ಯರಿಗೆ ಪೂರಾ ತಲಬಿನ ಮೇಲೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೊಂದು ದಿವಸಗಳಿಗೆ ಜಾಸ್ತಿ ಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಟಿ ಕನ್ಸರ್ವೇಟರ್ ಮ॥ ಟಿ. ಅಬ್ದುಲ್ ಕರೀಂ ಯವರು ರಜದಿಂದ ವಾಪಸು ಬಂದು ಆಗಸ್ಟ್ ತಾ ೧೩ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಸೀನಿಯರ್ ಅ॥ ಕಮೀಷನರ್ ಮ॥ ಎಂ. ಎ. ನಾರಾಯಣ ಐಯಂಗಾರ್ಯರಿಗೆ ಕೊಟ್ಟಿದ್ದ ಹದಿನಾಲ್ಕು ದಿವಸಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ.

ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಮ॥ ಪಿ. ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರೆವಿನ್ಯೂ ಸ್ಪೆಷಲ್ ಪ್ರೊಬೇಷನರ್ ಮ॥ ಲಿಂಗೋಪಂತ್ ಬಾದಾಮಿಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹೆಗ್ಗಡದೇವನಕೋಟೆ ತಾಲ್ಲೂಕಿನ ಅಮಲ್ದಾರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ಎಸ್. ವೆಂಕಟರಮಣಯ್ಯಂಗಾರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮ॥ ಎಂ. ಎನ್. ಶ್ರೀನಿವಾಸ ಐಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚಾಮರಾಜನಗರದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊಬೇಷನರಿ ಅ॥ ಕಮೀಷನರ್ ಮ॥ ಎಸ್. ವೆಂಕಟರಂಗೈಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಳವಳ್ಳಿ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಅ॥ ಕಮೀಷನರ್ ಮ॥ ಎಸ್. ಪಿ. ಗೋಪಾಲಾಚಾರ್ಯರು ತಮ್ಮ ಕೆಲಸಗಳೊಂದಿಗೆ ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯ ಅ॥ ಕಮೀಷನರ್ ಮ॥ ಎ. ವೇದಾಂತದೇಶಿಗಂ ಐಯಂಗಾರ್ಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಪ್ರೊ॥ ಅ॥ ಕಮೀಷನರ್ ಮ॥ ಎಸ್. ರಾಮಣ್ಣನವರು ಆ ಕಾಲದಲ್ಲಿ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿದ್ದರು.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ — (೧) ಎ. ಟಿ. ವೆಂಕಟಾಚಾರ್ಯರನ್ನು ಚಿತ್ರದುರ್ಗದಿಂದ ಶಿವಮೊಗ್ಗೆಗೆ, (೨) ಬಾವತ್ ವಿ. ಸುಬ್ಬರಾಯರನ್ನು ಶಿವಮೊಗ್ಗೆಯಿಂದ ಯಡತೊರೆಗೆ, (೩) ಕೆ. ದೊರೆಸ್ವಾಮಿ ಐಯಂಗಾರ್ಯರನ್ನು ಯಡತೊರೆಯಿಂದ ಚಿತ್ರದುರ್ಗಕ್ಕೆ.

ಅ॥ ಕಮೀಷನರ್ ಮ॥ ಮಹಮದ್ ರಜಾಯವರನ್ನು ಜೂಲೈ ತಾ ೧ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಅ॥ ಕಮೀಷನರ್ ಮ॥ ಮೃತ್ಯುಂಜಯ ಐಯರವರನ್ನು ಜೂಲೈ ತಾ ೧ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಅ॥ ಕಮೀಷನರ್ ಮ॥ ಆನಂದರಾವ್ ಎಸ್. ನಿಸ್ಸಾಯವರನ್ನು ಜೂಲೈ ತಾ ೧ರಿಂದ ೩ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಗವರ್ನಮೆಂಟ್ ಅ॥ ಸೆಕ್ರೆಟರಿಯಾಗಿರುವ ಅ॥ ಕಮೀಷನರ್ ಮ॥ ಎಂ. ಎಚ್. ಕೃಷ್ಣರಾಯರನ್ನು ಜೂನ್ ತಾ. ೧ರಿಂದ ೨ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಡೆಪ್ಯುಟಿ ಕಮೀಷನರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟ ಮ॥ ಕೆ. ಚಾಂಡಿಯವರು ಆಗಸ್ಟ್ ತಾ. ೧೬ರಲ್ಲಿ ಮ॥ ಎಂ. ಕಾಂತರಾಜ್ ಅರಸಿನವರಿಂದ ಮೈಸೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ಇಂಜಿನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟವೆ —

(೧) ಮ॥ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಆರ್. ಪಿ. ಸುಂದರಂ ಐಯರವರನ್ನು ಶಿವಮೊಗ್ಗೆಯಿಂದ ಮೈಸೂರು ಡಿವಿಜನಿಗೆ (ಮ॥ ಬಿ. ಸುಬ್ಬರಾಯರನ್ನು ಪೂರ್ವ ಸರ್ಕಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಿಸಿದ್ದರಿಂದ),

(೨) ಅ॥ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಎಫ್. ಎ. ಸ್ಟೀಲ್‌ಯವರನ್ನು ನಾಲಾ ಕನ್ಸರ್ವೇನ್ಸಿ ಡಿವಿಜನಿಂದ ಶಿವಮೊಗ್ಗಾ ಡಿವಿಜನಿಗೆ (ನಾಲಾ ಕನ್ಸರ್ವೇನ್ಸಿ ಡಿವಿಜನ್ ಲೆಕ್ಕಗಳನ್ನು ಪೂರೈಸಿಕೊಂಡು ಸೆಪ್ಟಂಬರ್ ೩ ರಲ್ಲಿ ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು).

(೩) ಮ॥ ಆರ್. ಪಿ. ಸುಂದರಂ ಐಯರವರು ಡಿವಿಜನ್ ಛಾರ್ಜನ್ನು ವಹಿಸಿಕೊಳ್ಳುವ ತನಕ ಅ॥ ಇಂಜನಿಯರ್ ಮ॥ ಟಿ. ಎಸ್. ಶೇಷ ಐಯಂಗಾರ್ಯರು ತಮ್ಮ ಇತರ ಕೆಲಸಗಳೊಂದಿಗೆ ಮೈಸೂರು ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು.

ಕೊಲಾರ್ ಡಿವಿಜನ್ ಅ॥ ಇಂಜನಿಯರ್ ಮ॥ ಎಚ್. ರಾಮರಾಯರಿಗೆ ಒಂಬತ್ತು ದಿನಗಳ ಕ್ಯಾಜುಯಲ್ ರಜಾ ಕೊಟ್ಟಿತ್ತು.

ತುಮಕೂರು ಡಿವಿಜನ್ ಅ॥ ಇಂಜನಿಯರ್ ಮ॥ ಕೆ. ವಿ. ದೇಶಿಕಾಚಾರ್ಯರನ್ನು ಸರಕಾರಿ ಕೆಲಸದ ನಿಮಿತ್ತ ಸ್ಪೆಷಲ್ ಡ್ಯೂಟಿಗಾಗಿ ಬೆಂಗಳೂರು ಡಿವಿಜನಿಗೆ ವರ್ಗಮಾಡಿದೆ.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಪೆ. ಸಾ. ಆಫೀಸರ್, ಚಿತ್ರದುರ್ಗ—ನೀವು ಹೇಳುವ ವಿಚಾರ ಯಾವ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತೋ ನಿಮ್ಮ ಬಾತ್ಮಿಯನ್ನು ಆ ಪತ್ರಿಕೆಗೇ ಕಳುಹಿಸುವದು ಚೆನ್ನಾಗಿದೆ.

ಮಿತವ್ಯಯವೇಬ ಉಪನ್ಯಾಸ—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

—ಎಡಿ.]

ಕರೆಸ್ಪಾಂಡೆನ್ಸ್.

ಬ್ರಹ್ಮ ಸಮಾಜ ಸ್ತ್ರೀಧರ್ಮೋಪನ್ಯಾಸವು.

ಅಯ್ಯಾ,

ಕಳೆದ ತಾ. ೨೭ನೇ ಶುಕ್ರವಾರ ವರಲಕ್ಷ್ಮೀವ್ರತದ ಹಬ್ಬವು ಹಿಂದೂ ಸ್ತ್ರೀಯರಿಗೆ ವಾಡಿಕೆಯಾಗಿರುವದರಿಂದ ಇಂಥಾ ಒಳ್ಳೆ ಸಮಯದಲ್ಲಿ ಶುದ್ಧ ನಿರ್ಗುಣಾರಾಧನೆ ಮಾಡಬೇಕೆಂಬದಾಗಿಯೂ, ಏಕಮೇವಾದ್ವಿತೀಯನಾದ ಪರಬ್ರಹ್ಮನನ್ನು ಧ್ಯಾನಿಸತಕ್ಕ ಬ್ರಹ್ಮಧರ್ಮವ್ರತವನ್ನು ಮಾತ್ರ ಆಚರಿಸಬೇಕೆಂಬದಾಗಿಯೂ, ಏಕದೇವರನ್ನು ಕುರಿತು ಪ್ರಾರ್ಥನೆಯನ್ನು ಮಾಡಿ ಆಯಾ ಸಂದರ್ಭಾನುಸಾರ ಕೆಲವು ಬ್ರಹ್ಮಸಂಕೀರ್ತನೆಗಳನ್ನು ಇಂಪಾದ ಧ್ವನಿಯಿಂದ ಹಾಡಿ ಆಭರಣಗಳು ಮತ್ತು ಸುಗುಣ ದುರ್ಗುಣಗಳು ಗೃಹಿಣೀಧರ್ಮಗಳು ಎಂಬ ಮೂರು ವಿಷಯಗಳನ್ನು ಕುರಿತು ಚೆನ್ನಾಗಿ ತಿಳಿಯುವ ಹಾಗೆ ಆಂಧ್ರದಲ್ಲಿ ಸುಲಭವಾದ ಭಾಷಾಶೈಲಿಯಿಂದ ಘನವುಳ್ಳ ಸ್ತ್ರೀಯರ ಮಹಾ ಸಭೆಯಲ್ಲಿ ಬೋಧಿಸಿ ಸರ್ವ ಶ್ರೋತೃಗಳಿಗೂ ಹೇಳಕೂಡದಷ್ಟು ಆನಂದವನ್ನು ಉಂಟುಮಾಡಿದರು. ಅಗ್ರಾಸನಾಧಿಪತಿಯಾಗಿ ಭಾಗ್ಯಲಕ್ಷ್ಮಮ್ಮನವರನ್ನು ನೇಮಕ ಮಾಡಲ್ಪಟ್ಟಿದ್ದರು.

ಆ ಸಮಯದಲ್ಲಿ ಆಗಮಿಸಿದ್ದ ಅನೇಕ ಜನಾನಾಸ್ತ್ರೀಯರುಗಳು ಬಹಳ ಸಂತುಷ್ಟಿಯನ್ನು ಹೊಂದಿ ಫಲಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ, ಅವರವರ ಮನೆಗಳಿಗೆ ತೆರಳಿದರು. ಇದು ಬೆಂಗಳೂರು ಕಂಟೋನ್ಮೆಂಟ್ ಕ್ಲೆವಲೆಂಡ್ ಟೌನ್ ಎ ಸ್ಟ್ರೀಟ್ ೧೮ನೇ ಮಂದಿರದೋಳ್ ಮೇಲ್ಕಂಡ ತಾರೀಖಿನಲ್ಲಿ ಸಾಯಂಕಾಲ ೪॥ ಗಂಟೆಗೆ ಪ್ರಾರಂಭಿಸಲ್ಪಟ್ಟು ೬ ಗಂಟೆಗೆ ಪೂರೈಸಲ್ಪಟ್ಟಿತು. ಹೀಗೆಯೇ ಸದರೀ ಅಮ್ಮನವರಿಂದ ಜನಾನಾ ಸ್ತ್ರೀಯರೆಲ್ಲರೂ ಉಪನ್ಯಾಸಗಳನ್ನು ಆಗಾಗ್ಗೆ ಮಾಡಿಸುತ್ತ ಆತ್ಮಪ್ರಯೋಜನವಂ ಹೊಂದಬೇಕೆಂಬದಾಗಿ, ಕೋರುತ್ತೇನೆ.

ಸುಬ್ಬಮ್ಮಗಾರು.

ತಾಲ್ಲೂಕು ವರ್ತಮಾನಗಳು.

ಕಡೂರು.—ಈ ಕಡೂರಿಗೆ ಈಗ ೪-೫ ದಿವಸದಿಂದ ಮಳೆಯು ಹಚಿ ಹಾಕಿದ್ದರಿಂದ ಪೈರುಗಳಿಗೆ ಬಹಳ ಒಳ್ಳೇ ಹದವಾಯಿತು. ಜೋಳದ ಪೈರು ತುಯಿಲಿಗೆ ಬಂದಿದೆ. ಧಾರಣೆಮಾನಗಳು ಇನ್ನೂ ಇಳಿದಿಲ್ಲ. ರೂಪಾಯಿಗೆ ೬-೬॥ ಸೇರು ಅಕ್ಕಿ, ೧೨ ಸೇರು ರಾಗಿ ಇದೆ. ಈ ಟವನ್ನಿನ ದುರವಸ್ಥೆಯನ್ನು ಹೇಳತೀರದು. ಮುನಿಸಿಪಾಲಿಟಿಯವರು ಸರಿಯಾಗಿ ದಿನವಹಿ ಟವನನ್ನು ಶುಚಿ ಮಾಡಿಸುವದಿಲ್ಲ. ಅಲ್ಲದೆ ರಾತ್ರಿಕಾಲದಲ್ಲಿ ಮುನಿಸಿಪಲ್ ಲಾಂದ್ರಗಳು ಸರಿಯಾಗಿ ಉರಿಯುವದಿಲ್ಲ. ಅಧಿಕಾರಸ್ಥರ ಮನೆ ಹತ್ತಿರ ಇರುವ ದೀಪಗಳು ಸರಿಯಾಗಿ ಉರಿಯುತ್ತವೆ. ಬಡಜನಗಳು ವಾಸಮಾಡುವ ಓಣಿಗಳಲ್ಲಿ ದೀಪದ ಹೆಸರೇ ಇಲ್ಲ. ಈ ತಪ್ಪು ಕಂಟ್ರಾಕ್ಟುದಾರರದೋ ಅಥವಾ ಸರ್ಕಾರದವರದೋ ಗೊತ್ತಿಲ್ಲ. ಮತ್ತು ಕೃಷ್ಣಪಕ್ಷದಲ್ಲಿ ಮಾತ್ರ ದೀಪವನ್ನು ಹಚ್ಚುತ್ತಾರೆ. ಶುಕ್ಲಪಕ್ಷದಲ್ಲಿ ಹಚ್ಚುವದಿಲ್ಲ. ಈ ನಡವಳಿಯು ಸರ್ಕಾರದವರೇ ಮಾಡಿದ್ದಾರೆಯೋ ಅಥವಾ ಕಂಟ್ರಾಕ್ಟುದಾರರ ರೂಲಸೋ ತಿಳಿಯದು.—ಊರಿನಲ್ಲಿ ಭಿಕ್ಷುಗಾರರ ಕಾಟವು ಬಹಳವಾಗಿದೆ. ಸಂತೆಯಲ್ಲಿ ಬಡಜನಗಳು ತರಕಾರಿ ಮೊದಲಾದ ಪದಾರ್ಥಗಳನ್ನು ತಂದು ಮಾರುವದು ದುರ್ಲಭವಾಗಿದೆ. ಸಂತೇ ದಿವಸ ಪೋಲೀಸಿನವರು ಸ್ವಲ್ಪ ನಿಗಾ ಕೊಟ್ಟಲ್ಲಿ ಈ ತೊಂದರೆಗಳೆಲ್ಲಾ ತಪ್ಪುತ್ತವೆ.—ಈ ಟವನ್ನಿನಲ್ಲಿ ರಾತ್ರಿ ಕಾಲದಲ್ಲಿ ಪೋಲೀಸಿನವರು ಗಸ್ತು ತಿರುಗುವ ಪದ್ಧತಿಯು ಇದೆಯೋ ಇಲ್ಲವೋ ಇದನ್ನು ವಿಚಾರಿಸಿ ಕ್ರಮಪಡಿಸಬೇಕು. ಈ ಊರಿನಲ್ಲಿ ಒಂದು ಚಿರತೆಯು ಸೇರಿಕೊಂಡು ರಾತ್ರಿವೇಳೆಯಲ್ಲಿ ದನ ಕರುಗಳನ್ನು ಹಿಡಿದು ತಿನ್ನುತ್ತದೆ. ಇದನ್ನು ಈ ಊರಿನಲ್ಲಿ ಹೊಡೆಯುವವರು ಇಲ್ಲ. ಪರಸ್ಥಳದಿಂದ ಯಾವ ಪುಣ್ಯಾತ್ಮನಾದರೂ ಬಂದು ಇದನ್ನು ಹೊಡೆದು ಪುಣ್ಯವನ್ನು ಕಟ್ಟಿಕೊಳ್ಳಬೇಕಾಗಿದೆ.

ಗುಂಡ್ಲುಪೇಟೆ ತಾ॥ ಬೊಮ್ಮಲಾಪುರ.—ಗುಂಡ್ಲುಪೇಟೆ ತಾ॥ಗೆ ಸೇರಿದ ಈ ಬೊಮ್ಮಲಾಪುರದ ಗ್ರಾಮಕ್ಕೆ ೫ನೇ ತಾ. ಮಳೆ ಬಂದದ್ದು ತಾ ೧೯ರ ವರೆಗೂ ಒಂದೇ ಸಮನಾಗಿ ಹಗಲೂ ರಾತ್ರಿಯೂ ಹುಯ್ಯುತ್ತಾ ಇತ್ತು. ಹಾಲೀ ತಾ. ೨೦ರ ಲಾಗಾಯತು ದಿವಸಕ್ಕೆ ೨ ಪದ ಮಳೆ ಗಟ್ಟಿಯಾಗಿ ಹುಯ್ಯುತ್ತಾ ಇರೋಣದರಿಂದ ಜನ ಜನಗಳು ಹೊರಗೆ ಹೊರಡಲು ಯತ್ನವಿಲ್ಲದೆ ಇದೆ. ಎಲ್ಲಿ ನೋಡಿದರೂ ಜಲಮಯವಾಗಿರುತ್ತೆ. ಆಗಿಯೂ ೧೫ ದಿವಸದಲ್ಲಿ ಬತ್ತದ ಪೈರುಗಳೂ ಚನ್ನಾಗಿರುತ್ತವೆ. ಈ ಗ್ರಾಮಕ್ಕೆ ಆಸರೆಯಾದ ವಡೆಯನಪುರದ ಕೆರೆಯಿಂದ ಇಲ್ಲಿನ ಕೆರೆಗೆ ಬರತಕ್ಕ ನೀರಿನ ಆಸರೆಯಿಂದ ಈ ಗ್ರಾಮದ ತರೀ ಜಮೀನು ರೈತರುಗಳೆಲ್ಲಾ ಭತ್ತದ ತರೀ ಫಸಲು ಮಾಡಿ ನಾಟಿ ಪಗ್ಗೆಗೆ ಹಾಕಿರುತ್ತಾರೆ. ಈ ಪೈರುಗಳೂ ಚನ್ನಾಗಿರುತ್ತವೆ.—ತಾ. ೨೬ನೇ ಗುರುವಾರದ ತೆರಕಣಾಂಬಿ ಸಂತೆಯಲ್ಲಿ ಜೋಳದ ಧಾರಣೆ ಪಲ್ಲಿಗೆ ೫-೫॥ ರೂಪಾಯಿ, ರಾಗಿ ೫ ೫॥ ರೂಪಾಯಿ ವ್ಯಾಪಾರವಾಯಿತೆಂತಲೂ, ಸಂತೆಯು ವಿಶೇಷವಾಗಿ ಕಟ್ಟಲು ಮಳೆಯ ದೆಸೆಯಿಂದ ಅವಕಾಶವಾಗಲಿಲ್ಲವೆಂದೂ ಜನಗಳೂ ಹೇಳಿದರು. ಇದರಿಂದ ಬಡ ಜನರಿಗೆ ಸ್ವಲ್ಪ ಅನುಕೂಲವಾಯಿತು. ಅಲ್ಲದೆ ರೈತರು ಜೋಳ ಎಳ್ಳು ಫಸಲನ್ನು ಕಿತ್ತು ಇರೋಣದರಿಂದ ಇದನ್ನು ಕಟಾವು ರೀತಿವಾದರೂ ಮಳೆಯಿಂದ ಆಗದೆ ಕೊಳೆತು ಗೊಬ್ಬರವಾಗುತ್ತಾ ಇವೆ.—ಈ ಗ್ರಾಮದಲ್ಲಿ ಜಾನುವಾರುಗಳಿಗೆ ವ್ಯಾಪ್ತವಾಗಿದ್ದ ದೊಡ್ಡ ರೋಗವು ಕಮ್ಮಿಯಾಯಿತು. ಆದರೆ ೮-೧೦ ದಿವಸದಿಂದ ಜಾನುವಾರುಗಳಿಗೆ ಕಾಲುಬಾಯಿ ಜ್ವರ, ಬೇದಿ ಮುಂತಾದ ರೋಗ ಹುಟ್ಟಿ ನರಳುತ್ತಾ ಇವೆ.

ಚಿಕ್ಕನಾಯಕನಹಳ್ಳಿ.—ಈ ಗ್ರಾಮದಲ್ಲಿಯೂ ಸಹ ಮಳೆಯಾಗಿ ಪೈರುಪಚ್ಚೆಗಳಿಂದ ಹೊಲಗಳೆಲ್ಲವೂ ಹಸುರಾಗಿ ಬೆಳೆದು ಅತಿ ಮನೋಲ್ಲಾಸವಾಗಿವೆ ಮತ್ತು ತಾ ೨ನೇ ಗುರುವಾರ ಇದೇ ತಾಲ್ಲೂಕಿಗೆ ಸೇರಿದ ಮಲ್ಲಿಗೆರೆಯ ಕೆರೆಯು ಒಡೆದು ಹೋಗಿ, ಆ ನೀರು ಮತ್ತಿಗಟ್ಟದ ಕೆರೆಗೆ ನುಗ್ಗಿ, ಸದರಿ ಕೆರೆಯ ಏರಿಯ ಮೇಲೆ ನೀರು ಹರಿದು ಓಟಿಕೆರೆಯ ಕೆರೆಗೆ ನುಗ್ಗಿ ಸದರಿ ಕೆರೆಯು ಒಡೆದು ಹೋಯಿತು. ಆದರೆ ಮೇಲ್ಕಂಡ ಅನಾಹುತದಿಂದ ಜನ ಜಾನುವಾರುಗಳ್ಯಾರಿಗೂ ಏನೂ ಪ್ರಾಣನಷ್ಟವಾಗಲಿಲ್ಲ. ಆದ್ದರಿಂದ ತುಂಬಾ ಸಂತೋಷಪಡಬೇಕಾಗಿರುತ್ತೆ.—ಸದರಿ ಚಿಕ್ಕನಾಯಕನಹಳ್ಳಿಯ ಎರಡು ಕೆರೆಗಳೂ ಕೋಡಿ ಬಿದ್ದುಹೋದವು. ಎಲ್ಲಿಲ್ಲಿಯೂ ಮಳೆಯ ದೆಸೆಯಿಂದ ಕೆಸರು ಕಾಲಿಡುವುದಕ್ಕೆ ಸ್ಥಳವಿಲ್ಲದಂತೆ ತುಂಬಿರುತ್ತದೆ. ಮತ್ತು ಟವನ್ನಿನಲ್ಲಿ ರಾತ್ರಿ ಹೊತ್ತು ವ್ಯಾಪಿಸಿರುವ ಮಳೆ ತುಂತುರುಗಳಿಂದ ನೋಡಕವಿದು ಕತ್ತಲೆ ಕವಿದಿರುತ್ತದೆ. ಮುನಿಸಿಪಲ್ ಲಾಂದ್ರಗಳಾದರೋ ಧೈರ್ಯವಾಗಿ ತಲೆ ಇಲ್ಲದ ಮುಂಡಗಳಂತೆ ನಿಂತಿವೆ. ಅಲ್ಲಲ್ಲಿ ಒಂದೊಂದು ಕಂಭದ ಮೇಲಿರುವ ಲಾಂದ್ರಗಳಾದರೋ ಮಿಂಚುಹುಳಗಳಂತೆ ಈಗಾಗ ಪ್ರಾಣಬಿಡುವ ರೋಗಿಗಳಂತೆ ಕೊರಗಾಡುತ್ತಿವೆ. ಇಂಥಾದ್ದರಲ್ಲಿ ಜನಗಳು ಒಬ್ಬರಿಗೊಬ್ಬರು ತಿರುಗಾಡುವಾಗ ಕುರುಡರಂತೆ ಢಿಕ್ಕಿ ಹೊಡೆದುಕೊಳ್ಳುತ್ತಾರೆ. ಇಂಥಾ ತೊಂದರೆಯನ್ನು ತಾಲ್ಲೂಕ್ ಅಧಿಕಾರಸ್ಥರು ಗಮನಕ್ಕೆ ತಂದುಕೊಂಡು ಜನಗಳ ತೊಂದರೆಯನ್ನು ತಪ್ಪಿಸಿ, ಪ್ರಜೆಗಳ ಕ್ಷೇಮವನ್ನು ಸ್ಥಿರಪಡಿಸಿ ಕೀರ್ತಿ ಸಂಪಾದಿಸ್ಯಾರೆಂದು ನಂಬಿದೇನೆ. ಅಲ್ಲದೆ ಮೇಲ್ಕಂಡ ರೀತಿ ಕತ್ತಲೆ ಕವಿದು ಜನಸಂಚಾರಕ್ಕೆ ತೊಂದರೆ ಉಂಟಾಗಿರುವುದರಿಂದಲೋ ಈಗಲೇ ಒಂದೆರಡು ಸ್ಥಳಗಳಲ್ಲಿ ಕಳುವು ಕೂಡ ನಡೆದಿರುವಂತೆ ವರ್ತಮಾನವಿರುತ್ತೆ. ಇಂಥಾ ಕಳ್ಳತನ ಮಾಡುವ ದುಷ್ಟರನ್ನು ಅಡಗಿಸಲು ಕಳ್ಳತನಕ್ಕೆ ಅವಕಾಶವಿಲ್ಲದಂತೆ ಟವನ್ನಿನಲ್ಲಿ ಸಾಕಾಗುವಷ್ಟು ಬೆಳಕುಗಳನ್ನು ಹೆಚ್ಚಿಸುವುದು ಅತ್ಯಾವಶ್ಯಕವಾಗಿರುತ್ತದೆ.

ತಪ್ಪಾವುಗೊಂಡ್ಲು.—ಈ ವಾರದಲ್ಲಿ ವಿಶೇಷವಾಗಿ ಮಳೆ ಆಗಿ ಎರಡು ಕೆರೆಗಳೂ ಕೋಡಿ ಬಿದ್ದಿವೆ. ಮಳೇ ಹೆಚ್ಚಾದ್ದರಿಂದ ಕಟಾವಿಗೆ ಸಿದ್ಧವಾಗಿದ್ದ ಎಳ್ಳು ಮತ್ತು ಜೋಳ ಬಹಳವಾಗಿ ಕೆಟ್ಟುಹೋಯಿತು. ಇದೇ ಕಾರಣದಿಂದಲೇ ನಮ್ಮ ಕಸಬಾ ಪಟೇಲ್ ಮ॥ ಅಪ್ಪಾಜಿಗೌಡರವರು ಹಾಕಿಸಿದ್ದ ಆಲೂಗೆಡ್ಡೆಗೆ ನೀರು ಹಿಡಿದು ಸುಮಾರು ೩೦೦ ಮೂಟೆಗಳಷ್ಟು ಲುಕ್ಸಾನ್ ಆಯಿತು. ೧೫ ದಿವಸಗಳ ವರೆಗೂ ಮಳೆ ಸ್ವಲ್ಪವೂ ವಿರಾಮಕೊಡದೆ ಹೋದಲ್ಲಿ ತುಂಬಿದ ಕೆರೆಗಳು ಉಳಿಯುವ ಹಾಗಿಲ್ಲ. ಫಸಲೂ ಕೈಸೇರುವುದಿಲ್ಲ.—ಈ ಗ್ರಾಮಕ್ಕೆ ೧॥ ಮೈಲಿ ಫಾಸಲೆಯಲ್ಲಿರುವ ತಿಪ್ಪನಹಳ್ಳಿ ಅಂಜನೇಯಸ್ವಾಮಿ ದೇವಸ್ಥಾನಕ್ಕೆ ಈ ಗ್ರಾಮದಲ್ಲಿರತಕ್ಕ ಕೆಲವು ಮಂದಿ ದೊಡ್ಡ ಮನುಷ್ಯರುಗಳೂ, ಕೆಲವು ವರ್ತಕರೂ ಸಹ ಪ್ರತಿ ಶನಿವಾರವೂ ಹೋಗಿ ಬರತಕ್ಕ ಪದ್ಧತಿ ಇದೆ. ಈಗ ಶ್ರಾವಣ ಮಾಸವಾದದ್ದರಿಂದ ಪ್ರತಿ ಶನಿವಾರದಲ್ಲಿಯೂ ಬಹು ವಿಜೃಂಭಣೆಯಿಂದ ಸೇವಾದಿಗಳು ನಡೆಯುತ್ತವೆ. ದೇವಸ್ಥಾನವು ಕೊಂಚ ಶಿಥಿಲವಾಗಿದ್ದುದರಿಂದ ಮ॥ ಕಂಟ್ರಾಕ್ಟರ್ ಹೊನ್ನಪ್ಪನವರು ರಿಪೇರಿ ಮಾಡಿಸಲು ಒಪ್ಪಿಕೊಂಡಿರುತ್ತಾರೆ. ಈ ಮೇಲ್ಕಂಡ ಅಂಜನೇಯ ದೇವರಿಗೆ ಕೆಲವು ಆಭರಣಗಳಿಗಾಗಿ ಆಗುವಷ್ಟು ಬೆಳ್ಳಿಯನ್ನು ಮ॥ ಸಾಹುಕಾರ್ ಪಾಲಣ್ಣನವರು ಕೊಡಲು ಒಪ್ಪಿರುತ್ತಾರೆ. ಇದರ ಮಗ್ಗುಲಲ್ಲಿಯೇ ಬಸವಣ್ಣನ ದೇವಸ್ಥಾನ ಒಂದಿದೆ. ಅಲ್ಲಿಯೂ ಈಗ ಪೂಜೆ ನಡೆಸಲು ಏರ್ಪಾಡಾಗಿರುತ್ತೆ.—ಈಗ ಹೊಸದಾಗಿ ಇಲ್ಲಿಗೆ ವರ್ಗವಾಗಿ ಬಂದಿರತಕ್ಕ ತಾಲ್ಲೂಕ್ ಮೇಷ್ಟ್ರು ವೆಂಕಟರಾಯರು ಕೂಡ ಮೊದಲಿದ್ದವರಂತೆಯೇ ಎಲ್ಲಾ ಕೆಲಸಗಳನ್ನು ಬಹು ಚಟುವಟಿಕೆಯಿಂದ ನಡೆಯಿಸುತ್ತಿದ್ದಾರೆ.—ಉಪಾಧ್ಯಾಯರ ಕೆಲಸವು ಬಹು ಜವಾಬ್ದಾರಿಯುಳ್ಳದ್ದು, ಮತ್ತು ಬಹು ಸಾರವ ಉಳ್ಳದ್ದೆಂತ ಭಾವಿಸಬೇಕಲ್ಲದೆ, ಮುಂದೆ ದೇಶದ ಏಳ್ಗೆಗೆ ಮುಖ್ಯ ಕಾರಣ ಭೂತರಾದ ವಿದ್ಯಾರ್ಥಿಗಳನ್ನು ಎಲ್ಲಾ ಭಾಗದಲ್ಲೂ ತಿದ್ದಲು ಸಾಮರ್ಥ್ಯವುಳ್ಳವರಾಗಿರಬೇಕೆಂಬುದು ಪ್ರಜೆಗಳ ಕೋರಿಕೆ. ಇದನ್ನು ನಮ್ಮ ಸರ್ಕಾರದವರು ಕೂಡಿದಮಟ್ಟಿಗೂ ನೆರವೇರಿಸುತ್ತಾ ಬರುತ್ತಿದ್ದಾರೆಂದು ತಿಳಿದು ಬಹು ಸಂತೋಷವಾಗಿರುತ್ತೆ.

ಹೆಗ್ಗಡದೇವನಕೋಟೆ.—ಇಲ್ಲಿ ೪—೫ ದಿವಸಗಳಿಂದ ಜಡಿಮಳೆ ಹುಯ್ಯುತ್ತಿದೆ. ಎಲ್ಲೆಲ್ಲಿ ನೋಡಿದರೂ ಹಸುರಾದ ಪೈರುಪಚ್ಚೆಗಳು ದೃಷ್ಟಿಗೆ ಬೀಳುತ್ತವೆ.—ಇಷ್ಟಾದರೂ ದಿನಸಿ ಧಾರಣೆ ತುಟ್ಟಿಯಾಗಿಯೇ ಇದೆ. ಬಡನೌಕರರ ಕಷ್ಟವು ವಿಶೇಷವಾಗಿದೆ. ಅಕ್ಕಿ ೬-೬॥ ಸೇರು, ರಾಗಿ ೧೨ ಸೇರು, ತೊಗರಿಬೇಳೆ ೫ ಸೇರು, ಈ ರೀತಿ ಮಾರುತ್ತಿದೆ. ನಮ್ಮ ದಯಾಳುವಾದ ಸರ್ಕಾರದವರು ಈ ಡಿಸ್ಟ್ರಿಕ್ಟಿನ ಕ್ಷಾಮದ ಅಲೋಯನ್ಸ್ ಸ್ಯಾಂಕ್ಷನ್ ಮಾಡಿದರೆ ಬಡ ನೌಕರರ ಕಷ್ಟ ಪರಿಹಾರವಾಗುತ್ತೆ.—ಕಳೆದ ಒಂದು ವರ್ಷದಿಂದ ಈ ಊರಿನಲ್ಲಿದ್ದು, ತಾ॥, ಕೆಲಸದಲ್ಲಿ ಬಹು ಚಟುವಟಿಕೆಯುಳ್ಳವರಾಗಿಯೂ, ಸಕಲರ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡವರಾಗಿಯೂ, ಎಂಥಾ ಅವೇಳೆಯಲ್ಲಾದರೂ ಬಂದ ರೋಗಿಗಳನ್ನು ಉಪಚರಿಸಿ ಚಿಕಿತ್ಸೆಮಾಡಿ ಕಳುಹಿಸುತ್ತಿದ್ದ ಡಾಕ್ಟರು ಮೆ॥ ಎಂ. ಮುನಿಸಾಮಿರೆಡ್ಡಿಯವರನ್ನು ಸರ್ಕಾರದವರು ಸೊರಬಕ್ಕೆ ವರ್ಗ ಮಾಡಿದುದಕ್ಕಾಗಿ ಈ ಊರಿನವರೆಲ್ಲರೂ ವ್ಯಸನಪಡುತ್ತಿದ್ದಾರೆ. ಕಳೆದ ತಿಂಗಳು ೨೨ನೇ ತಾ. ಭಾನುವಾರ ಇಲ್ಲಿನ ಮುಖ್ಯ ಉದ್ಯೋಗಸ್ಥರು ಸಭೆಸೇರಿ ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ವೆ ಕಟದಾಸಪ್ಪನವರನ್ನು ಅಗ್ರಾಸನಾಧಿಪತಿಯನ್ನಾಗಿ ಮಾಡಿದರು. ಆಗ ಎ ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ಎ ಎಲ್ ಕೃಷ್ಣಮಾಚಾರ್ಯರು ಸಭಿಕರ ಮುಂದೆ ಈಗ ವರ್ಗವಾಗಿರುವ ಮುನಿಸಾಮಿರೆಡ್ಡಿಯವರನ್ನು ಕುರಿತು ಬಹು ಸ್ವಾರಸ್ಯವಾದ ಒಂದು ಭಾಷಣವನ್ನು ಕನ್ನಡದಲ್ಲಿಯೂ, ಪೋಸ್ಟ್ ಮಾಸ್ಟರು ಮೆ॥ ಕೆ [illegible] ಇಂಗ್ಲೀಷಿನಲ್ಲಿಯೂ ಮಾಡಿದರು. ಅನಂತರ ಅವರನ್ನು ಟೀಪಾರ್ಟಿ ಏರ್ಪಡಿಸಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ಫಲಹಾರಾದಿಗಳೆಲ್ಲಾ ಮುಗಿದನಂತರ ಮೆ॥ ಮುನಿಸಾಮಿರೆಡ್ಡಿಯವರು ತಮಗೆ ಸನ್ಮಾನಮಾಡಿದ ಸಭಿಕರನ್ನೂ ಸ್ನೇಹಿತರನ್ನೂ ಕೃತಜ್ಞತಾಪೂರ್ವಕವಾಗಿ ವಂದಿಸಿದರು. ಸಭಿಕರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಿದ ಮೇಲೆ ಸಭೆಯು ಅತಿ ಸಂಭ್ರಮದೊಡನೆ ಮುಕ್ತಾಯವಾಯಿತು. ಮಾರನೇದಿನ ಬೆಳಿಗ್ಗೆ ಒಂದು ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು. ಅವರು ಪ್ರಯಾಣವಾಗಿದ್ದ ದಿನ ಅನೇಕರು ಅವರನ್ನು ತಮ್ಮ ತಮ್ಮ ಮನೆಗಳಿಗೆ ಬರಮಾಡಿಕೊಂಡು ಫಲ ತಾಂಬೂಲಾದಿಗಳನ್ನು ಕೊಟ್ಟು ಸಾಗಕಳುಹಿದರು. ಈಗ ಅವರ ಸ್ಥಾನಕ್ಕೆ ಬಂದಿರುವ ಮೆ॥ ಎಸ್ ಗುಂಡಪ್ಪನವರೂ ಅವರಂತೆ ಜನಗಳಲ್ಲಿ ಪ್ರೀತಿ, ವಿಶ್ವಾಸಗಳನ್ನು ಪಡೆಯುವರೆಂದು ನಂಬಿರುತ್ತೇವೆ.—ಇಲ್ಲಿನ ಲಾಂದ್ರಗಳಿಗೆ ಗ್ರಹಣಹಿಡಿದಿದೆ. ಇದನ್ನು ಬಿಡಿಸಬೇಕು.

ಫ್ರೆಂಚ್‌ರಾಕ್ಸ್.—ದಿನಾಲೂ ವಿಶೇಷವಾಗಿ ಮಳೆ ಬೀಳುತ್ತಿರುವದರಿಂದ ರಾಗಿ ಪೈರೆಲ್ಲಾ ಹೊಂಬಣ್ಣವಾಗಿ ಬೆಳೆ ಕೆಟ್ಟುಹೋಗುವದೆಂಬ ಭಯವುಂಟಾಗಿದೆ. ಹವ ಶೀತವಾಗಿರುವದರಿಂದ ಜನಗಳಿಗೆ ಅನಾರೋಗ್ಯವಾಗಿದೆ. ಪ್ಲೇಗ್ ಪ್ರಾರಂಭವಾಗಿ ಈಗ್ಗೆ ಸುಮಾರು [illegible] ಜನರು ಕಾಲವಾದರು. [illegible] ಪ್ಲೇಗ್ [illegible] ಶುದ್ಧ [illegible] ಏರ್ಪಾಡುಗಳನ್ನೂ ಮಾಡದ ಹಾಗೆ ಕಾರಣವಿಲ್ಲ. ಈಗ ಅಮಲ್ದಾರರೂ ಡಾಕ್ಟರವರೂ ಬೆಟ್ಟದ ಮೇಲಿನ [illegible] ಹೋದಲ್ಲಿ ಪ್ರಜೆಗಳಿಗೆ ತುಂಬಾ ಕ್ಷೇಮವಾಗುವದರಲ್ಲಿ [illegible] ಇರುವುದಿಲ್ಲ.—ಕಳೆದ ತಿಂಗಳಿನಲ್ಲಿ ಸಿವಿಲ್ ಸರ್ಜನ್‌ರಾದ ಡಾ॥ ನಂಜಪ್ಪನವರೂ ಸಬ್ ಅ॥ ಸರ್ಜನ್‌ರಾದ ಅನಂತರಾಮಯ್ಯಂಗಾರ್ರೂ ಇಲ್ಲಿಗೆ ದಯಮಾಡಿಸಿ ಆಸ್ಪತ್ರೆ, ಲಾಕಪ್ ಮುಂತಾದವನ್ನು ಅಜಮಾಯಿಸಿ ಮಾಡಿ ಕೆಲವರಿಗೆ ಮಾತ್ರ ಇನಾಕ್ಯುಲೇಷನ್ ಮಾಡಿಹೋದರು. ಅವರು ಪುನಹ ಈಗ ದಯಮಾಡಿಸುವರಾದರೆ ಅನೇಕ ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳುವರೆಂದು ನಂಬುತ್ತೇನೆ.—ಕೆಲವು ದಿವಸಗಳಿಗೆ ಮುಂಚೆ ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಪ್ರಿನ್ಸಿಪಲ್‌ರಾದ ರೆವ್ ಓಟ್ ಸಾಹೇಬರು ಇಲ್ಲಿಗೆ ದಯಮಾಡಿಸಿ ಇಲ್ಲಿನ ಮಿಷನ್ ಇಂಗ್ಲಿಷ್ ಸ್ಕೂಲನ್ನು ಪರೀಕ್ಷಿಸಿ, ಅದೇ ಸಾಯಂಕಾಲ ಇಲ್ಲಿನ ಗರಲ್ಸ್ ಸ್ಕೂಲಿನಲ್ಲಿ ಮ್ಯಾಜಿಕ್‌ಲ್ಯಾಂಟರ್ನ್ ಎಂಬ ಛಾಯಾಕನ್ನಡಿಯ ಪ್ರದರ್ಶನವನ್ನು ತೋರಿಸಿ, ಇಲ್ಲಿನ ಪ್ರಜೆಗಳಿಗೂ ಬಾಲಕ ಬಾಲಿಕೆಯರಿಗೂ ಮನಃಸಂತೋಷವನ್ನೂ ಪಾರಮಾರ್ಥಿಕ ಪ್ರಯೋಜನವನ್ನೂ ಉಂಟುಮಾಡಿದರು. ಮಾರನೇ ಭಾನುವಾರ ಬೆಳಿಗ್ಗೆ ಇಲ್ಲಿನ ಕ್ರೈಸ್ತ ಮಂಡಲಿಗಾಗಿ ಭಗವದಾರಾಧನೆಯನ್ನೂ ಸ್ವಾಮಿಯ ಪವಿತ್ರ ಭೋಜನ ಸಂಸ್ಕಾರವನ್ನೂ ನಡಿಸಿ, ಅದೇ ಮಧ್ಯಾಹ್ನ ಮೈಸೂರಿಗೆ ತೆರಳಿದರು.—ಈ ಊರಿನ ಕೆರೆಯಲ್ಲಿ ಒಬ್ಬ ಚಿಕ್ಕವನು ಸುಮಾರು ಅರವತ್ತು ವರ್ಷದ ಮುದುಕನು ನೀರು ಕುಡಿಯುವುದಕ್ಕೆ ಹೋಗಿ ಮುಳುಗಿ ಸತ್ತುಹೋದನು.—ಶ್ರೀರಂಗಪಟ್ಟಣದ ಸಬ್ ರೆಜಿಸ್ಟ್ರಾರವರ ಆಫೀಸಿನಲ್ಲಿರುವ ಸರ್ಕಾರಿ ನೌಕರರು ರುಸುಮತ್ತು ಕೇಳುತ್ತಾ ಆಫೀಸಿಗೆ ಬಂದ ಪ್ರಜೆಗಳಿಗೆ ಬಹಳ ತೊಂದರೆಯನ್ನು ಕೊಡುತ್ತಾರೆಂದು ವರ್ತಮಾನ ಕೇಳುತ್ತೇವೆ. ತಾಲ್ಲೂಕ್ ಅಮಲ್ದಾರರೂ ಸಬ್ ರೆಜಿಸ್ಟ್ರಾರರೂ ತಕ್ಕ ಬಂದೋಬಸ್ತು ಮಾಡದಿದ್ದರೆ ತುಂಬಾ ಪುಕಾರಿಗೆ ಕಾರಣವಾಗುವದು ಎಂಬುವದರಲ್ಲಿ ಯಾವ ಸಂಶಯವೂ ಇಲ್ಲ.

ಚನ್ನಪಟ್ಟಣ.—ಒಂದು ತಿಂಗಳೊಳಗೆ ಈ ಪ್ರಾಂತ್ಯ ಮಳೆ ಇಲ್ಲವೆಂಬ ಬೊಬ್ಬೆ ಬಹಳವಾಗಿತ್ತು. ಈಚೆಗೆ ಇಪ್ಪತ್ತು ದಿನಗಳಿಂದಲೂ ಹಿಡಿದ ಮಳೆಯು ಬಿಡದೆ, ಹಗಲೂ ರಾತ್ರಿ ಜನರು ಹೊರಗೆ ಹೋಗಲು ಅವಕಾಶವಿಲ್ಲದಂತೆ ಸುರಿಯುತ್ತಾ ಬಂದಿದೆ. ದನಕರಗಳು ಹೊರಗೆ ಹೋಗಿ ಮೇಯುವಹಾಗಿಲ್ಲ. ಈ ಪ್ರಾಂತ್ಯದ ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಬಿದ್ದಿದ್ದಾಯ್ತು. ಕೆಲವು ಕೆರೆಗಳು ಒಡೆದು ಹೋಗುತ್ತವೆಯೋ ಏನೋ ಎಂಬ ಯೋಚನೆ ಹುಟ್ಟಿರುವದು. ವಿಶೇಷವಾದ ಈ ಮಳೆಯಿಂದ ರಾಗಿ ಫಸಲು ಕೆಡುತ್ತೆಂಬ ಅಭಿಪ್ರಾಯವೂ ಉಂಟು. ಇಪ್ಪತ್ತು ದಿನಗಳಿಂದಲೂ ಸೂರ್ಯ ರಶ್ಮಿಯನ್ನು ನೋಡುವುದೇ ಕಷ್ಟವಾಗಿತ್ತು. ಈ ದಿನವೇ ಮಳೆ ಸ್ವಲ್ಪ ವಿಶ್ರಾಂತಿಯನ್ನು ಹೊಂದಿ ಬಿಸಿಲನ್ನು ತೋರಿಸುತ್ತಿರುವುದರಿಂದ ಜನರ ಸಂತೋಷಕ್ಕೆ ಪಾರವೇ ಇಲ್ಲ.—ಕಳೆದ ತಿಂಗಳ ತಾ. ೨೯ರಲ್ಲಿ ಕೋಟೆ ಬಾಗಲಿನ ಮಂಟಪದಲ್ಲಿ ಯಾರೋ ಒಬ್ಬ ಪರಸ್ಥಳದ ಭಿಕ್ಷುಕನು ಮೃತಪಟ್ಟನು. ಸದರಿ ಹೆಣವನ್ನು ಬೇವಾರಸ್ ಎಂದು ಉಪೇಕ್ಷೆ ಮಾಡಿ ಅಧಿಕಾರಿಗಳು ಧರ್ಮಶಾಲಿಗಳಿಗೆ ಒಪ್ಪಿಸಿಬಿಟ್ಟರೆಂತಲೂ ಅವರು ಆ ಹೆಣವನ್ನು ರಾಮಮ್ಮನ ಕೆರೆಯ ಒಂದು ಮೂಲೆಯಲ್ಲಿ ಒಣ ನೆಲದ ಮೇಲೆ ಮಲಗಿಸಿ ಮಣ್ಣು ಮುಚ್ಚಿ ಬಿಟ್ಟುಬಿಟ್ಟದ್ದರಿಂದ ಸದರಿ ಹೆಣವನ್ನು ನಾಯಿ ನರಿಗಳು ಎಳೆದಾಡುತ್ತಿದ್ದವೆಂದು ಕಂಡುಕೇಳಿದವರೆಲ್ಲರೂ ಹೇಳುತ್ತಾರೆ. ಇಲ್ಲಿನ ಮುನಿಸಿಪಲ್ಲಿನ ನಗರ ಮುಖಂಡರುಗಳು ಇಷ್ಟು ಸಡಿಲವಾಗಿ ಅವರ ನಿರ್ಲಕ್ಷ್ಯ ಭಾವದಲ್ಲಿರುತ್ತಿರುವದು ವಿಷಯವಾಗಿ ವಿಷಾದಿಸುವವರಾಗಿದಾರೆ.—ಕಳೆದ ವಾರ ಕಾಲರಾ ಸೋಂಕಿನ ಒಬ್ಬನು ಕೋಲಿನ್‌ಪೇಟೆಯಿಂದ ಇಲ್ಲಿಗೆ ಬಂದು ಕಾಲವಾದನೆಂದು ತಿಳಿದುಬರುತ್ತದೆ. ತಾತ್ಕಾಲಿಕ ಹವ ಬಹುಮಟ್ಟಿಗೆ ಜನರ ಆರೋಗ್ಯಕ್ಕೂ ಸಂತೋಷಕ್ಕೂ ಅನುಕೂಲವಾಗಿದೆ. ಆದರೆ ಈ ಮಳೆಗಾಲದಲ್ಲಿ ಈ ಊರಿನ ಮತ್ತು ಮಂಗಳವಾರಪೇಟೆ, ಮಳೂರು ಗ್ರಾಮಗಳ ಕೆಲವು ರಸ್ತೆಗಳು ಕೊಳಕು ಕೆಸರಿನಿಂದ ತುಂಬಿ ತಿರುಗಾಡುವದಕ್ಕೂ ಅವಕಾಶವಿಲ್ಲದೆ ಅಸಹ್ಯವನ್ನುಂಟುಮಾಡುತ್ತಿವೆ. ಇಂಥಾ ಸಂಭವಗಳಲ್ಲಿ ಅನಾರೋಗ್ಯವೂ ವ್ಯಾಧಿಗಳೂ ಕಾಣಿಸಿಕೊಂಡರೆ ಆಶ್ಚರ್ಯವೇನು? ಇಂಥಾ ದೊಡ್ಡ ತಾಲ್ಲೋಕಿನ ರಸ್ತೆಗಳ ಕೊಚ್ಚೆಗಳನ್ನೆಲ್ಲಾ ಇಲ್ಲಿ ಮುನಿಸಿಪಲ್ಲಿನವರು ನಿಗಾ ಕೊಟ್ಟು ದುರಸ್ತುಮಾಡಿಸಿ, ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವರೆಂದು ನಂಬಿದೇನೆ.—ಅಲ್ಲದೆ ಈ ಊರಿನ ಯಾವಭಾಗದಲ್ಲಿ ನೋಡಿದರೂ ಸತ್ತ ರೇಷ್ಮೆ ಹುಳಗಳ ದುರ್ಗಂಧವೇ ಬಡಿಯುತ್ತದೆ. ಇಂಥಾ ದುರ್ವಾಸನೆಯಿಂದ ಅನೇಕ ರೋಗಗಳು ಉತ್ಪತ್ತಿಯಾಗುವುದರಲ್ಲಿ ಸಂದೇಹ ಇರುವದೇ? ನಮ್ಮ ಅಮಲ್ದಾರರವರು ಈ ಹುಳಗಳನ್ನು ಅಲ್ಲಲ್ಲೇ ಬಿಸಾಡುವ ಪದ್ಧತಿಯನ್ನು ತಪ್ಪಿಸಿ ಊರಿಗೆ ದೂರವಾದ ಪ್ರದೇಶದಲ್ಲಿ ಹಳ್ಳತೋಡಿ ಮುಚ್ಚುವ ಏರ್ಪಾಡು ಮಾಡಿಸಿದರೆ ಕ್ಷೇಮವೆಂದು ನಂಬುತ್ತೇನೆ.

ಚಾಮರಾಜನಗರ.—ಈ ಪ್ರಾಂತ್ಯ ಸುಮಾರು ೧೨-೧೫ ದಿವಸಗಳಿಂದ ಹಿಡಿದ ಮಳೆ ಬಿಡದೆ ಸುರಿಯುತ್ತಲಿದೆ. ಇದರಿಂದ ರಸ್ತೆಗಳಲ್ಲಿ ನೀರೂ ಕೆಸರೂ ಕೂಡಿಕೊಂಡು ಸಂಚಾರಮಾಡುವವರಿಗೆ ತುಂಬಾ ಅಸಹ್ಯವನ್ನುಂಟುಮಾಡಿರುವದಲ್ಲದೆ ಅಲ್ಲಲ್ಲಿ ಮನೆಗಳ ಗೋಡೆಗಳು ನೆನೆದು ಬೀಳುತ್ತಿವೆ. ಅಲ್ಲದೆ ಸ್ವಲ್ಪವಾಗಿ ಬೆಳೆದಿದ್ದ ಜೋಳವು ಮೊದಲು ಮಾಡಿ [illegible] ಹುಟ್ಟಿರುವ ರಾಗಿ ಮತ್ತು [illegible] ಪೈರಿಗೆ ತಿಂದಿಯು ಜಾಸ್ತಿಯಾಗಿ ಕುಗ್ಗುತ್ತಿರುವವು. ಇಂಥಾ ಶೀತಕಾಲದಲ್ಲಿ ಪ್ಲೇಗ್ ಉತ್ಪತ್ತಿಯಾದ ಸೂಚನೆ ಉಂಟಾಗಲು [illegible] ಬಳಿ ೪-೬ ಮನೆಗಳನ್ನು ಬಿಟ್ಟಿದ್ದಾರೆ. ೩-೪ ಜನಗಳು ತೀರಿಹೋದರು. ಅಮಲ್ದಾರರವರು ಡಾಕ್ಟರನ್ನು ಕರೆದುಕೊಂಡುಹೋಗಿ ಸದರಿ ಮನೆಗಳವರನ್ನು ಪ್ರತ್ಯೇಕಿಸಿದ್ದಲ್ಲದೆ ಅವರುಗಳಿಗೆ ಜೋಪಡಿ ಹಾಕಿಸಿಕೊಳ್ಳಲು ಗಳು ಬೊಂಬುಗಳನ್ನು ಸಹ [illegible] ತುಂಬಾ ಸಂತೋಷಪಡತಕ್ಕ [illegible] ಈ ಊರಿನವರೆಲ್ಲಾ [illegible] ಜೋಪಡಿಗಳನ್ನು ಕಟ್ಟಲು [illegible] ದಯಾಳುಗಳಾದ ಸರ್ಕಾರದವರು [illegible] ಕೊಡಿಸಿ [illegible] ನಂಬುತ್ತೇನೆ. ಈ ಊರಿನ [illegible] ಮುನಿಸಿಪಾಲಿಟಿ [illegible] ಇಲ್ಲಿ ಎರಡು [illegible] ಈಗ [illegible] ಉಪಕಾರ [illegible] ಪ್ಲೇಗ್ [illegible] ಇಲ್ಲಿನ ಮಿಷನ್ ಸ್ಕೂಲುಗಳನ್ನು [illegible] ನಡಿಸುವ [illegible] ಈ ಊರಿನ [illegible] ಇಲ್ಲಿನ ಜನರೆಲ್ಲಾ [illegible] ಪ್ಲೇಗ್ ಕಾಯಿಲೆ ಎಂದು ಬಯಪಡುತ್ತಿದ್ದರು. ಈ ಕಾಯಿಲೆ [illegible] ಮೇಲ್ಕಂಡ ಘೋರಗಳು ನೋಡಿ [illegible] ಹೇಳಿ, ನಮ್ಮ ಅಮಲ್ದಾರರವರನ್ನು ಡಾಕ್ಟರವರನ್ನು ಕಂಡು ಕಾಯಿಲೆಯವನಿಗೆ ಯಾವೂ ಪೋಷಕರಿಲ್ಲದಿದ್ದರೆ ತಾವು ಪೋಷಿಸುತ್ತೇವೆಂದು ಹೇಳಿದರು. ನಮ್ಮ ಅಮಲ್ದಾರರವರೂ ಡಾಕ್ಟರವರೂ [illegible] ತಾನೇ [illegible] ತೆಗೆದುಕೊಳ್ಳಬೇಕು, ನಾವು [illegible] ಇಟ್ಟುಕೊಳ್ಳುತ್ತೇವೆ, ಅದು ಪಾಯಿರೋಗವೆಂದು ಹೇಳಿ ಹೋಗಿ ನೋಡಿದರು. ಈಚೆಗೆ ಅತನ ತೀರಿಹೋದನೆಂದು ಕೇಳಿ ವಿಷಾದಿಸುತ್ತೇನೆ.

ಚನ್ನಗಿರಿ ತಾ. ಜೋಳದಾಳ್ ಹಳ್ಳಿ.—ಇಲ್ಲಿ ಈಗ ಎರಡು ವರುಷಗಳಿಂದಲೂ ಮೆಸರ್ಸ್ [illegible] ಕಂಪೆನಿಯವರು ಮ್ಯಾಂಗನೀಸ್ ಗಣಿ ಕೆಲಸ ಪ್ರಾರಂಭಮಾಡಿ ನಡಿಸುತ್ತಾ ಇರುವದರಿಂದ ೫೦೦–೬೦೦ ಬಡ ಜನಗಳು ಕೆಲಸಮಾಡಿ ಜೀವನ ಮಾಡುತ್ತಲಿದ್ದಾರೆ. ಕಂಪೆನಿ ಏಜಂಟ್ ಮ॥ ಎಚ್ ಜೆ ಸಾರ್ಜಂಟ್ ಸಾಹೇಬರವರೂ ಸೂಪರಿಂಟೆಂಡೆಂಟ್ ಮೆ॥ ಎಸ್ ನರಸಿಂಹಯ್ಯಂಗಾರ್ರೂ ಬಹು ಮನುಷ್ಯತ್ವದಿಂದಲೂ ಸತ್ಯದಿಂದಲೂ ಕೆಲಸ ಮಾಡುತ್ತಲೂ, ಇಲ್ಲಿನ ಜನಗಳ ಅನುರಾಗಕ್ಕೆ ಬಹಳ ಪಾತ್ರರಾಗಿಯೂ ಇರುವದು ಶ್ಲಾಘ್ಯವಾಗಿದೆ.—ಮೇಲ್ಕಂಡ ಕಂಪೆನಿಯವರು ತಮ್ಮ ಸ್ವಂತ ಲಾಗವಡಿಯಿಂದ ಇಲ್ಲಿ ಒಂದು ಪೋಸ್ಟ್ ಆಫೀಸನ್ನು ಇಡಿಸಲು ಪೋಸ್ಟಲ್ ಇಲಾಖೆಗೆ ಅರ್ಜಿ ಬರೆದುಕೊಂಡಿರುವಂತೆಯೂ ಸದ್ಯದಲ್ಲೇ ಪೋಸ್ಟ್ ಆಫೀಸು ಬರುವದಾಗಿಯೂ ವದಂತಿ ಇದೆ. ಇದಕ್ಕೆ ಸರಿಯಾಗಿ ನಮ್ಮ ಸರ್ಕಾರದವರು ದಯವಿಟ್ಟು ಇಲ್ಲಿ ಪ್ರತಿ ಭಾನುವಾರವೂ ಒಂದು ಸಂತೆ ನಡೆಯುವ ಏರ್ಪಾಡು ಮಾಡಿದರೆ ಪ್ರಜೆಗಳಿಗೂ ಕೂಲಿ ಆಳುಗಳಿಗೂ ಬಹಳ ಉಪಕಾರವಾಗುತ್ತೆ. ಇದಕ್ಕೆ ಮೇಲ್ಕಂಡ ಕಂಪೆನಿಯವರು ಏರ್ಪಾಡು ಇಟ್ಟರೆ ನಡೆಯಬಹುದು.—ಇಲ್ಲಿಂದ ಚನ್ನಗಿರಿಗೆ ಹೋಗುವ ಪೈರೋಡು ಗೋಪನಾಳ್ ಬಳಿ ಸುಮಾರು ಒಂದು ಫರ್ಲಾಂಗ್ ದೂರ ರಸ್ತೆಯ ಮರಗಳು ಬಹಳವಾಗಿ ಬೆಳೆದು ಹಗಲುವೇಳೆಯೂ ಸೂರ್ಯನ ರಶ್ಮಿ ತಾಗದಹಾಗೆ ಇರುತ್ತೆ. ಇದು ದುಷ್ಟಮೃಗ ಇರತಕ್ಕ ಸ್ಥಳವಾದದ್ದರಿಂದ ರಾತ್ರಿವೇಳೆ ಪ್ರಯಾಣಿಕರಿಗೆ ಈ ಸ್ಥಳದಲ್ಲಿ ಕೊಂಚ ದಿಗಿಲು ಉಂಟಾಗುತ್ತೆ. ಇದನ್ನು ನಮ್ಮ ಅಮಲ್ದಾರರವರು ಪರಾಂಬರಿಸಿ ಒತ್ತಾಗಿರತಕ್ಕ ಕೊಂಬೆಗಳನ್ನು ಕತರಾಯಿಸಲು ಆರ್ಡರು ಕೊಟ್ಟರೆ ಪ್ರಯಾಣಿಕರಿಗೆ

ಬಹಳ ಉಪಕಾರವಾಗುತ್ತೆ.—ಇಲ್ಲಿ ಪ್ರತಿ ಶುಕ್ರವಾರ ಗಣಿ ಕೂಲಿಯವರಿಗೆ ಬಟವಡೆ ದಿವಸವಾದದ್ದರಿಂದ ಅನೇಕ ಕಡೆಗಳಿಂದ ಜನಗಳು ರಾಗಿ, ಜೋಳ ವಗೈರೆ ಧಾನ್ಯಗಳನ್ನು ಗಾಡಿಯಲ್ಲಿ ತಂದು ಕೂಲಿ ಜನಗಳ ಕಣ್ಣಿಗೆ ಮಣ್ಣು ಹಾಕಿ ಕಪ್ಪು ಸೇರಿನಲ್ಲಿ ಅಳೆದುಕೊಟ್ಟು ಹೋಗುತ್ತಾ ಇದ್ದಾರೆ. ಆದ್ದರಿಂದ ನಮ್ಮ ಪಯಾಳಗಳಿಂದ ಅಮಲ್ದಾರ್ರವರು ಮುದ್ದೆ ಗಿಯಾಗಲಿ ಅಥವಾ ಇನ್ಸ್ಪೆಕ್ಟರ್ ಮೂಲಕವೇ ಆಗಲಿ ಇದನ್ನು ಆಜಮಾಯಿಷಿ ಮಾಡಿಸಿ ಭದ್ರಪಡಿಸಿ ಕೂಲಿಯವರಿಗೆ ಉಪಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.—ಇಲ್ಲಿರುವ ಫಾರೆಸ್ಟರ್ ಮಿ॥ ಎಫ್ ಹರ್ಸ್ಟ್ ಯವರು ತಮ್ಮ ಕೆಲಸದಲ್ಲಿ ಬಹಳ ಚಾಗ ರೂಕರಾಗಿಯೂ ಜನಗಳ ಅನುರಾಗಕ್ಕೆ ಪಾತ್ರರಾಗಿಯೂ ಇರುವದು ಬಹಳ ಸಂತೋಷವಾದದ್ದೇ ಸರಿ.—ಈ ಜೊಡಾಳು ಗ್ರಾಮಕ್ಕೆ ಸರ್ಕಾರಿ ರಸ್ತೆಯಿಂದ ಬರುವಾಗ್ಗೆ ಕೆರೆಬಾಚಿ ದಾರಿಯು ಬಹಳ ಕೆಟ್ಟುಹೋಗಿ ಜನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಇದನ್ನು ಗ್ರಾಮದ ಪಟೇಲರು ಊರಿನ ಜನಗಳನ್ನು ಹಿಡಿದು ಸರಿಮಾಡಿಸಿದರೆ ಜನ ದನಗಳ ಸಂಚಾರಕ್ಕೆ ಬಹಳ ಅನುಕೂಲವಾಗುವದು.—ಇಲ್ಲಿ ೮ ದಿವಸಗಳಿಂದ ಒಂದೇ ಸಮನೆ ಬಿಡದೆ ಸುರಿಯುತ್ತಾ ಇದೆ. ಪೈರುಗಳು ಬಹಳ ಚನ್ನಾಗಿದೆ.

ಹೊರಟ.—ಈ ಊರಿನಲ್ಲಿ ೫ ೬ ವಾರಗಳಿಂದ ಮಳೆಯು ಬಂದಿರಲಿಲ್ಲ. ಈಗ ಸ್ವಲ್ಪ ಸ್ವಲ್ಪವಾಗಿ ಮಳೆ ಬರುತ್ತಿದೆ.—ಈಗೀಗ ಈ ಊರಲ್ಲಿ ೩ ೪ ವರ್ಷಗಳಿಂದಲೂ ತೆಗೆದುಹಾಕಲ್ಪಟ್ಟಿದ್ದ ಮ್ಯುನಿಸಿಪಲ್ ದೀಪಗಳು ಈಗ ಹಚ್ಚಲ್ಪಡಲು ಪ್ರಾರಂಭಿಸಿತೆಂದು ಬಹಳ ಸಂತೋಷವಾಗಿದೆ.—ಮಹಾ ಉದಾರಿಗಳೂ ದಯಾವಂತರೂ ಆದ ಡಾಕ್ಟರ್ ಮಿ॥ ... ದಪ್ಪನವರು ೪ ೫ ವಾರಗಳ ಹಿಂದೆ ವರ್ಗವಾಗಿ ಹೋದರು. ಅದಕ್ಕಾಗಿ ಎಲ್ಲಾ ಜನರೂ ಬಹಳ ವ್ಯಸನಭರಿತರಾಗಿದ್ದಾರೆ.—ಉಳವೆ ... ಒಂದಾನೊಂದು ಗ್ರಾಮದಲ್ಲಿ ನಡೆದ ನರಹತ್ಯವು ಇನ್ನೂ ವಿಚಾರಣೆಯಲ್ಲಿಯೇ ಇದೆ. ಇದರ ವರ್ತಮಾನವು ಮುಂದೆ ... ಕೆಲವು ತಿಂಗಳ ... ನಡೆದಿದ್ದ ... ಒಂದು ಮನೆ ... ಈಗ ಮಳೆಗಾಲವಾದ ... ರಾತ್ರಿ ಸುಮಾರು ೯ ಘಂಟೆಯಲ್ಲಿ ಆ ಬೆಂಕಿಯು ಹುಟ್ಟಿ ಪಕ್ಕದಲ್ಲಿರುವ ಮನೆಗಳಲ್ಲಿ ಕೆಲವನ್ನು ಸುಟ್ಟು ಹಾಕುವದರಲ್ಲಿತ್ತು. ಅದರ ... ಸಂಚಾರವು ಕಡಮೆಯಾದಾಗೂ ಕೆಲವು ಮಂದಿ ಬಹಳ ಸಹಾಯ ಮಾಡಿ ಅದನ್ನು ಆರಿಸಿದರು.—೧೦-೧೨ ದಿವಸಗಳ ಹಿಂದೆ ಈ ತಾಲ್ಲೂಕು ಪೊಲೀಸ್ ಇನ್ಸ್ಪೆಕ್ಟರು ಮೈಸೂರು ಟೌನಿಗೆ ವರ್ಗವಾಗಿ ಹೋದರು. ಅನೇಕ ಜನರು ... ಅವರನ್ನು ಸತ್ಕರಿಸಿ ಮಹಾ ವಿಜೃಂಭಣೆಯಿಂದ ಕಳುಹಿಸಿಕೊಟ್ಟರು. ಈ ಮಹನೀಯರು ... ಪರ್ಗವಾಗಿ ಹೋದುದಕ್ಕಾಗಿ ಎಲ್ಲರೂ ದುಃಖಿತರಾಗಿದ್ದಾರೆ.—ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬಾನೊಬ್ಬ ... ಗೆಹ್ ... ಯು ... ಮೊಹರಂ ... ಮುಸಲ್ಮಾನರವನು ತಾನು ಸಾಲವನ್ನು ವಸೂಲ್ಮಾಡುವ ಒಬ್ಬ ಸಾಹುಕಾರರ ಕಡೆಯವನೆಂದು ಹೇಳಿಕೊಂಡು ಒಬ್ಬ ಹೆಗ್ಗಡೆಯವರ ಮನೆಗೆ ಹೋಗಿ ... ಆ ಸಾಹುಕಾರರಿಂದ ಸಾಲವಾಗಿ ತೆಗೆದುಕೊಂಡ ಹಣವನ್ನು ... ಆ ಮನೆಯಲ್ಲಿ ಹೆಗ್ಗಡೆಯವರಿರಲಿಲ್ಲ. ಮನೆಯವರು ... ಒಬ್ಬ ಹುಡುಗಿಯು ಆಭರಣವನ್ನು ... ಹೊರಗೆ ... ಆ ಮುಸಲ್ಮಾನನು ಆ ಮಗುವಿನ ಶರೀರದಲ್ಲಿರುವ ಒಡವೆಗಳನ್ನು ತೆಗೆದುಕೊಂಡು ಪಲಾಯನ ಮಾಡಿದನು. ಆ ಮಗು ... ಒಳಗೆ ಹೋಗಿ ಈ ಸಮಾಚಾರವನ್ನು ತಿಳಿಸಲು ಅವರು ಹೊರಗೆ ಬರುವಷ್ಟರಲ್ಲಿ ಇವನಿಲ್ಲದಿಲ್ಲ. ಬಹಳ ದಿನಗಳವರೆಗೂ ಇವನೆಲ್ಲಿಯೂ ಸಿಕ್ಕಲಿಲ್ಲ. ಅವನ ... ಹುಡುಕುತ್ತಾ ಈ ಊರಿನಲ್ಲಿ ಅವನು ... ಪೊಲೀಸರವಶಕ್ಕೆ ಒಪ್ಪಿಸಿದರು. ಅವರು ... ಮಾಡುವಲ್ಲಿ ತಾನು ... ಆಭರಣ ತೆಗೆದುಕೊಂಡು ಬರುವ ಸಮಯದಿಂದ ಒಳಗೆ ಹೋಗಿ ... ಪ್ರಾಣವನ್ನು ... ದೇನು. ಅನಂತರ ಆತನು ಪೊಲೀಸಿನವರಿಗೆ ... ಎಂದು ಹೇಳಿದನು. ... ವಿಚಾರಿಸುತ್ತಿರುವಲ್ಲಿ ಆತನಿಗೆ ವಿಷವು ತಗಲಿ ... ತಿಯುಂಟಾಗಲು ... ಸಾರಿದರು ... ಅವನ ... ಹಾಗೆಯೇ ಆಭರಣವನ್ನು ತೆಗೆದುಕೊಂಡು ಬರುತ್ತೇನೆಂದು ಹೋಗಿದ್ದಾನಂತೆ. ಈ ವ್ಯಾಜ್ಯವನ್ನು ಸರಿಯಾಗಿಯೇ ಇಟ್ಟಿರುತ್ತಾರೆ.

ಹೊಸೂರು.—ಇಲ್ಲಿ ಕೆಲವು ದಿನಗಳಿಂದ ಬಿಡದೆ ಮಳೆ ಸುರಿಯುತ್ತಿದೆ. ಭೂಮಿಯನ್ನು ನೆನೆಯಿಸುವ ಮಳೆಯೇ ಹೊರತು ಕೆರೆಗಳನ್ನು ತುಂಬಿಸುವ ಮಳೆಯೇನೂ ಅಲ್ಲ. ಹೊಸೂರು ಕೆಲವು ವರ್ಷಗಳಿಂದ ನೀರಿಲ್ಲದೆ ಅತಿ ಪಡುತ್ತಿತ್ತು. ಸದ್ಯ ನೀರಿನ ಕೊರತೆ ಪರಿಹಾರವಾಗಿ, ಭೂಮಿಯು ಪೈರಿಂದ ಹಸುರಾಗಿ ಜನಗಳ ಮನಸ್ಸನ್ನು ರಮಿಸುವದಾಗಿದೆ. ಹಿಡಿದ ಮಳೆಯಿಂದ ಜನಗಳೆ ಮನೆಯೇ ಬಿಟ್ಟಗಿರುವಂತೆ ಮಾಡಿದ್ದರೂ, ಎಂಥಾ ಮಳೆಯನ್ನಾದರೂ ಸೋಸುವಂತೆ ಮಾಡಿದೆ.—ಇಲ್ಲಿ ಲಂಡನ್ ಮಿಷನ್ನವರು ಒಂದು ವಾಚಕಶಾಲೆಯನ್ನು (ರೀಡಿಂಗ್ ರೂಮನ್ನು) ತೆರೆದಿರುತ್ತಾರೆ. ಈ ವಾಚನಾ ಮಂದಿರಕ್ಕೆ ತಮಿಳು ಕನ್ನಡ, ತೆಲುಗು, ಇಂಗ್ಲೀಷು ಪತ್ರಿಕೆಗಳೂ ಆಯಾ ಸಂಬಂಧ ಪುಸ್ತಕಗಳೂ ಬರುತ್ತಾ ಇವೆ. ಈ ಆಲಯದಲ್ಲಿ ಪ್ರತಿ ಭಾನುವಾರ ಸಾಯಂಕಾಲ ಆರುವರೆ ಘಂಟೆಗೆ ಕ್ರೈಸ್ತರಲ್ಲದವರಿಗಾಗಿ ಉಪನ್ಯಾಸವನ್ನು ಘನ ವಿಲ್ಕಿನ್ಸ್ ಧೊರೆಗಳವರು ನಡಿಸುತ್ತಾರೆ. ಜೀರ್ಣದ ಜನಗಳು ಬಂದು ಕೇಳಿ ಹೋಗುತ್ತಾರೆ. ಕೆಲ ನೇಯಿಗೆಯವರು ತಪ್ಪದೆ ಆರಾಧನೆಗೆ ಬಂದು ಕೇಳುತ್ತಾರೆ. ಇದೇ ಆಲಯದಲ್ಲಿ ಇಂಗ್ಲೀಷ್ ಬಲ್ಲ ಜನಗಳಿಗೆ ಘನ ವಿಲ್ಕಿನ್ಸ್ ಧೊರೆಯವರು ಒಂದೆರಡು ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನಗಳನ್ನೂ ಮಾಡಿರುತ್ತಾರೆ. ಮ್ಯಾಜಿಕ್ ಲ್ಯಾಂಟರ್ನ್ ಇಲ್ಲದೆಯೂ ಆಯಾ ವಿಷಯಗಳ ಮೇಲೆ ಇಲ್ಲಿನ ಒಬ್ಬ ಅಧಿಕರನ್ನು ಅಗ್ರಾಸನರಾಗಿ ಕೇಳಿಕೊಂಡು ಇಂಗ್ಲೀಷ್ ಭಾಷೆಯಲ್ಲಿ ಉಪನ್ಯಾಸ ಕೊಡುತ್ತಿದ್ದಾರೆ. ಕಳೆದ ತಿಂಗಳು ತಾ ೪ರಲ್ಲಿ ಸ್ವದೇಶಾಭಿಮಾನದ ವಿಷಯವಾಗಿ ಒಳ್ಳೇ ಉಪನ್ಯಾಸ ಕೊಟ್ಟರು. ಇಲ್ಲಿನ ತಹಸೀಲ್ದಾರರಾದ ಮ॥ ನರ್ಸ್ ಯವರು ಅಗ್ರಾಸನರಾಗಿದ್ದರು. ಮಳೆ ಸುರಿಯುತ್ತಿದ್ದದರಿಂದ ಅಷ್ಟಾಗಿ ಜನರು ಬಾರದಿದ್ದರೂ ಈ ಪಟ್ಟಣಕ್ಕೆ ತಕ್ಕಷ್ಟುಮಂದಿ ಬಂದಿದ್ದರು.—ಈ ಊರಿಗೆ ರೈಲ್ವೆ ಬರುವದು ಇನ್ನೂ ಎರಡು ವರ್ಷವಾಗುವದಂತೆ. ಅಂತೂ ಕೆಲವು ದಿನಗಳಲ್ಲೇ ಕಾಮಗಾರಿಯನ್ನು ಪ್ರಾರಂಭಿಸುವರು

ಸರೇ ಕೆಲಸ ಪೂರ್ತಿಸುತ್ತಾ ಬಂದಿದೆ ಎಂದು ಕೇಳುತ್ತೇವೆ. ಧರ್ಮಪುರಿಯಿಂದ ಇಲ್ಲಿಗೂ ಇಲ್ಲಿಂದ ಧರ್ಮಪುರಿ ಇತ್ಯಾದಿ ಕಡೆಗೂ ಹೋಗುವವರಿಗೆ ರೈಲ್ವೆಯಿಂದ ಅನುಕೂಲವಾಯಿತೇ ಹೊರತು ಇಲ್ಲಿಂದ ಬೆಂಗಳೂರು ಮುಂತಾದ ಕಡೆ ಪ್ರಯಾಣ ಮಾಡುವವರಿಗೆ ಹೊಸೂರಿಗೆ ರೈಲ್ವೆ ಬೀಳುತ್ತದೆಂಬ ನಾತಿಂದ ಏನೂ ಉಪಯೋಗವಿಲ್ಲ. ಬೆಂಗಳೂರು ಕಡೆ ಪ್ರಯಾಣ ಮಾಡುವವರು ಇಲ್ಲಿಗೆ ಒಂದು ಬೆಂಗಳೂರಿಗೆ ಹೋಗಬೇಕಿಲ್ಲವೆಂದು ಕೇಳಿದರೆ ಬಾಯಾರಿ ಬಂದುದಕ್ಕೆ ಬಿಸಿಲುತರುವ ಕಂದಂತಾಗುತ್ತದೆ. ಆದ್ದರಿಂದ ಬೆಂಗಳೂರು ಕಡೆಗೆ ಹೋಗುವದಕ್ಕೆ ಸಹ ಯಾವ ಸರ್ಕಾರವೇ ಆಗಲಿ ದಯಾಳುಗಳಾಗಿ ಪ್ರಜೆಗಳ ಮೇಲೆ ಕರುಣೆಯಿಟ್ಟು ರೈಲ್ವೆಯನ್ನು ಹಾಕಿಸಿದರೆ ಪ್ರಜೆಗಳಿಗೆ ತುಂಬಾ ಮೇಲು ಮಾಡಿದಂತಾಗುತ್ತೆ.—ಪ್ಲೇಗ್ ಸಂಬಂಧದ ಉಪದ್ರ ಮುಕ್ಕಾಲು ಲು ಕಾರಿದಂತಿದ್ದಾಗ್ಯೂ ಬೆಂಗಳೂರು ಕಡೆಯಿಂದ ಬರುವವರು ಪ್ಯಾಸ್‌ಪೋರ್ಟ್ ತೆಗೆದುಕೊಂಡು, ಕೆಲಸ ಕಾರ್ಯ ಬಿಟ್ಟು ಏಳು ದಿವಸ ಆಸ್ಪತ್ರೆಗೆ ತಿರುಗುವದೇ ಸೋ ತಪ್ಪಲಿಲ್ಲ. ಆ ತಿರುಗಾಟ ಕೂಡಾ ಯಾವಾಗ ತಪ್ಪೀತೆಂದು ಹೊಸ್ತಾಗಿ ವರ್ತಕರು ಎದುರು ನೋಡುತ್ತಾರೆ. ಪ್ಯಾಸ್‌ಪೋರ್ಟುಗಳಿಗೆ ರುಜು ಹಾಕುವ ಅಧಿಕಾರ ಘನ ವಿಲ್ಕಿನ್ಸ್ ಧೊರೆಯವರಿಗೆ ಕೂಡಾ ಸರ್ಕಾರದವರು ಕೊಟ್ಟಿದ್ದಾರೆ. ಮಿಷನ್ ಕೆಲಸದ ಮೇಲೆ ಬರುವವರಿಗೆ ಮಾತ್ರ ಅವರ ಪ್ಯಾಸ್‌ಪೋರ್ಟುಗಳಿಗೆ ಘನ ವಿಲ್ಕಿನ್ಸ್ ಧೊರೆಯವರು ರುಜು ಹಾಕುತ್ತಾರೆ.

ಇಂಡಿಯಾಗೆ ಸೇರಿದ ವೃತ್ತಾಂತಗಳು.

ಕಾಶ್ಮೀರ ಸಂಸ್ಥಾನದ ರಾಜಧಾನಿಯಾದ ಶ್ರೀನಗರದಲ್ಲಿ ಅಕ್ಟೋಬರ್ ತಿಂಗಳಲ್ಲಿ ಸರ್ಕಾರದವರು ವ್ಯವಸಾಯ ಮತ್ತು ಗೋಕುಲಗಳ ಪ್ರದರ್ಶನವನ್ನು ನಡಿಸುವವರಾಗಿದ್ದಾರೆ.

ಕಳೆದ ಶನಿವಾರ ನಡುರಾತ್ರಿಯಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಭೂಮಿಯು ಸ್ವಲ್ಪ ಕಂಪಿಸಿತು. ಕರಾವಳಿ ಸಂಬಂಧ ... ಮಳೆಗಳು ಪ್ರಾಪ್ತವಾದವು. ಈಚೆಗೂ ನಾಲೆ ವಿಶೇಷವಾಗಿ ಸುರಿಯುತ್ತಾ ಇದೆ.

ತಂಜಾವೂರಿನ ಡಿಸ್ಟ್ರಿಕ್ಟ್ ಬೋರ್ಡಿನವರು ಚತ್ರದ ಪಂಡಿತರ ತಂಜಾವೂರಿನಲ್ಲಿ ಪರಸ್ಥಳದವರು ಇಳುಕೊಳ್ಳುವುದಕ್ಕಾಗಿ ೬೫,೦೦೦ ರೂಪಾಯಿ ಮುಟ್ಟಿನ ಒಂದು ಭಾರೀ ಚತ್ರವನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಟ್ರಾನ್ಸ್‌ವಾಲಿನಲ್ಲಿರುವ ಹಿಂದೂಸ್ಥಾನದ ಪ್ರಜೆಗಳಿಗೆ ಉಂಟಾಗಿರುವ ಕಷ್ಟ ನಷ್ಟಗಳನ್ನು ಕುರಿತು ವಿಚಾರ ಪರಿಹಾರವನ್ನು ಸೂಚಿಸುವುದಕ್ಕಾಗಿ ಬೊಂಬಾಯಿ ಪಟ್ಟಣದ ಪ್ರಜೆಗಳು ಅಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ನಾಳೆ ಶನಿವಾರದ ದಿನ ಒಂದು ಮಹಾಜನಸಭೆಯನ್ನು ನಡಿಸುವವರಾಗಿದ್ದಾರೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಉತ್ತರ ಷಾನ್ ಸ್ಟೇಟ್ಸ್ ಎಂಬ ಭಾಗದಲ್ಲಿ ಪ್ರಾಚೀನಕಾಲದ ... ಗಣಿಗಳಿರುತ್ತವೆ. ಒಂದು ಕಂಪನಿಯು ಏರ್ಪಾಡಾಗಿ ... ಕಳೆದ ವರುಷ ... ಟನ್ನು ... ತೆಗೆದಿರುತ್ತಾರೆಂದು ಪ್ರಕಟವಾಗಿದೆ.

ಬೊಂಬಾಯಿ ಗವರ್ನರವರ ಪತ್ನಿಯವರ ಹೆಸರನ್ನು ಇಡುವ ... ನಡಿಸುವುದಕ್ಕೆ ಒಂದು ಸಭೆ ... ಈ ಫಂಡಿನಲ್ಲಿ ... ೨೪,೦೦೦ ರೂಪಾಯಿಯನ್ನು ಆಸ್ಪತ್ರೆಗಳಲ್ಲಿ ... ರೋಗಿಗಳ ... ತೀರ್ಮಾನ ಮಾಡಿರುತ್ತಾರೆ.

ಕಳೆದ ವಾರ ಹಿಂದುಸ್ಥಾನದಲ್ಲಿ ೧೮,೧೮೧ ಜನರು ಪ್ಲೇಗ್ ಜಾಡ್ಯದಿಂದ ತೀರಿಹೋದರು. ಈ ಪೈಕಿ ಬೊಂಬಾಯಿ ಅಧಿಪತ್ಯ ೬೬೩, ಸಂಯುಕ್ತಾಧಿಪತ್ಯಗಳು ೫೫೩, ಮದರಾಸ್ ಅಧಿಪತ್ಯ ೧೪೦, ಮಧ್ಯಪ್ರಾಂತ್ಯಗಳು ೧೧೯, ಮೈಸೂರು ಸಂಸ್ಥಾನ ೧೧೯, ಬಂಗಾಳ ೭೬, ಪಂಜಾಬ್ ೧೬, ಈ ರೀತಿ ಮರಣಗಳಾಗಿರುತ್ತವೆ.

ಕಳೆದ ಜುಲೈ ತಿಂಗಳಲ್ಲಿ ಹಿಂದುಸ್ಥಾನದಿಂದ ಹಿಂದುಸ್ಥಾನಕ್ಕೆ ೯೦ ಲಕ್ಷ ರೂಪಾಯಿನ ಚಿನ್ನವು, ೨೭.೭ ಲಕ್ಷ ರೂಪಾಯಿನ ಬೆಳ್ಳಿಯೂ ರಫ್ತಾಗಿ ಬಂದಿರುತ್ತದೆ. ಸ್ಟ್ರೇಟ್ಸ್ ಸೆಟಲ್‌ಮೆಂಟ್ ಮತ್ತು ಹಾಂಕಾಂಗ್ ಸರ್ಕಾರಗಳ ಗೋಸ್ಕರ ಹಿಂದುಸ್ಥಾನದ ಟಂಕಸಾಲೆಗಳಲ್ಲಿ ಆ ತಿಂಗಳಲ್ಲಿ ೩೦ ಲಕ್ಷ ಡಾಲರ್ ಎಂಬ ಬೆಳ್ಳಿಯ ನಾಣ್ಯಗಳು ತಯಾರಾಗಿ ಕಳುಹಲ್ಪಟ್ಟವು. ರೂಪಾಯಿಗಳು ಛಾಪಾ ಆಗಲಿಲ್ಲ.

ಬೊಂಬಾಯಿನ ಅತಿ ಸಮೀಪದಲ್ಲಿ ಭೂಲೇಶ್ವರಕ್ಕೆ ನಡುವೆ ರೈಲ್ ಗಾಡಿಯು ಹೋಗುತ್ತಿದ್ದಾಗ ಮಿಕೆಲ್ ಥಾಮಸ್ ಎಂಬೊಬ್ಬನು ಫಸ್ಟ್ ಕ್ಲಾಸ್ ಗಾಡಿಯೊಳಕ್ಕೆ ನುಗ್ಗಿ ಫ್ರಾನ್ಸಿಸ್ ಎಂಬಾಕೆಯ ಮೇಲೆ ಬಿದ್ದು ಆಕೆಯ ಮಾನಭಂಗಮಾಡಬೇಕೆಂದು ಪ್ರಯತ್ನ ಪಟ್ಟನು. ಪೊಲೀಸಿನವರು ಅವನನ್ನು ಹಿಡಿದು ಕೋರ್ಟಿಗೆ ತಂದರು. ಈ ದುಷ್ಟನಿಗೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಏಳು ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದ ಪ್ರಜೆಗಳಲ್ಲಿ ಯಾರೂ ಕೆಲವು ದೇಶೀಯ ವರ್ತಮಾನ ಪತ್ರಿಕೆಗಳನ್ನು ತರಿಸಿ ಓದಕೂಡದೆಂತಲೂ, ಹಾಗೆ ತರಿಸಿದವರನ್ನು ಹಿಡಿದು ಕಠಿನವಾದ ಶಿಕ್ಷೆಗೆ ಗುರಿಪಡಿಸುವುದಾಗಿಯೂ ಇಸ್ತಿಹಾರು ಹಾಕಿಸಿರುತ್ತಾರೆ. ಇದೇ ರೀತಿ ಇನ್ನೂ ಕೆಲವು ದೇಶೀಯ ಸಂಸ್ಥಾನಗಳ ಮಹಾರಾಜರುಗಳು ತಮ್ಮ ಪ್ರಜೆಗಳಿಗೆ ರಾಜಾಜ್ಞೆಯನ್ನು ಕೊಟ್ಟು ಎಚ್ಚರಿಸಿರುತ್ತಾರೆ.

ಉತ್ತರ ದೇಶದಲ್ಲಿ ಮಳೆಗಳು ಸುರಿಯುತ್ತಾ ಇರೋಣದಿಂದ ರೈತ ಪ್ರಜೆಗಳು ಹೊಲ ಗದ್ದೆಗಳ ವ್ಯವಸಾಯದಲ್ಲಿ ಮಗ್ನರಾಗಿದ್ದಾರೆ. ಎಲ್ಲಾ ಕಡೆಗಳಲ್ಲೂ ಸುಭಿಕ್ಷವು ಸೂಚಿಸುತ್ತಿದೆ. ಸಂಯುಕ್ತ ಅಧಿಪತ್ಯ, ಪಂಜಾಬ್, ವಾಯವ್ಯ ಸರಹದ್ದಿನ ಪ್ರಾಂತ್ಯ, ಮಧ್ಯಪ್ರಾಂತ್ಯಗಳಲ್ಲಿ ಆಹಾರ ದಿನಸಿಗಳ ಧಾರಣೆಗಳು ಸ್ವಲ್ಪ ಕಡಮೆಯಾಗಿರುವುವು. ಈಗ ಸರ್ಕಾರದವರ ಪೋಷಣೆಯಲ್ಲಿ ೯,೦೦೦ ಪ್ರಜೆಗಳು ಮಾತ್ರ ಇರುತ್ತಾರೆಂದು ತಿಳಿದುಬಂದಿದೆ.

ಮೈಸೂರಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿರುವ ಮೆ॥ ಎಸ್ ಪಿ ಸಿಂಹರವರ ಸಹೋದರರಾದ ಮೇಜರ್ ಎನ್ ಪಿ ಸಿಂಹರವರು ಸ್ವಲ್ಪದ ಇಂಗ್ಲೆಂಡಿನಲ್ಲಿ ಡಾಕ್ಟರಾಗಿ ಈಗ ವಿಲಾಯಿತಿಯಲ್ಲಿರುತ್ತಾರೆ. ಹಿಂದುಸ್ಥಾನದಿಂದ ಯಾರಾದರೂ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಗಳಿಗಾಗಿ ಇಂಗ್ಲೆಂಡಿಗೆ ಕಳುಹಿಸಿ ಅವರ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ತಮಗೆ ವಹಿಸಿದ ಪಕ್ಷದಲ್ಲಿ ತಾವು ಆ ರೀತಿ ನೋಡಿಕೊಂಡು ಅವರನ್ನು ಸರಿಯಾಗಿ ನಡಿಸಲು ಸಿದ್ಧರಾಗಿದೇವೆಂದು ತಿಳಿಸಿರುತ್ತಾರೆ.

ಕಡಪಾ ಡಿಸ್ಟ್ರಿಕ್ಟಿನಲ್ಲಿ ಕಪ್ಪು ಭೂಮಿಯುಳ್ಳ ಜಮೀನುಗಳು ಕಡಪಾ, ಜಮ್ಮಲಮಡುಗು, ಪ್ರೊದ್ದಟೂರು ತಾಲ್ಲೂಕುಗಳಲ್ಲಿ ವಿಶೇಷವಾಗಿದ್ದು, ಕಳೆದ ವರುಷ ಬೆಳೆಯಾಗದೆ ರೈತರು ತುಂಬಾ ಕಷ್ಟಪಡುತ್ತಿರುವುದನ್ನು ನೋಡಿ, ಗವರ್ನ್‌ಮೆಂಟಿನವರು ಅಂಥಾ ರೈತರಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದಾರೆ. ಅಂದರೆ ಅವರಿಂದ ಬರಬೇಕಾದ ಕಂದಾಯದಲ್ಲಿ ೪ ಆಣೆಯನ್ನು ಮುಂದಿನ ಜನವರಿ ತಿಂಗಳಲ್ಲೂ, ೮ ಆಣೆಯನ್ನು ಫೆಬ್ರುವರಿಯಲ್ಲೂ, ೪ ಆಣೆಯನ್ನು ಮಾರ್ಚಿಯಲ್ಲೂ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ.

ಇಂದೋರ್ ಸಂಸ್ಥಾನದ ರೆಸಿಡೆನ್ಸಿ ಬಂಗಲೆಯ ವಿಕ್ಟೋರಿಯಾ ಸರಸ್ವತೀ ಭಂಡಾರದ ಮಂದಿರದಲ್ಲಿ ಒಂದು ಮಹಾ ಸಭೆಯು ನಡೆಯಿತು. ರಾಯ್ ಬಹದ್ದೂರ್ ಪಂಡಿತ ನಂದಲಾಲ್ ಯವರು ಅಗ್ರಾಸನವನ್ನು ವಹಿಸಿ, ಲಂಡನ್ ಪಟ್ಟಣದಲ್ಲಿ ಕ್ರೂರಾತ್ಮನಾದ ಧಿಂಗ್ರನಿಂದ ಕೊಲ್ಲಲ್ಪಟ್ಟ ಸರ್ ಕರ್ಜನ್ ವೈಲಿಯವರ ಜ್ಞಾಪಕಾರ್ಥವಾಗಿ ಇಂಡಿಯನ್ ಸಂಸ್ಥಾನದಲ್ಲಿ ಒಂದು ಮೆಮೋರಿಯಲ್ಲನ್ನು ಕಟ್ಟಬೇಕೆಂದು ಸೂಚಿಸಿದರು. ಸಭಿಕರೆಲ್ಲಾ ಅದನ್ನು ಒಪ್ಪಿಕೊಂಡು ಧಾರಾಳವಾಗಿ ಚಂದಾ ಕೊಡಲುಳ್ಳವರೆಂದು ಹೇಳಿದರು. ಈಗ ಚಂದಾ ಹಣ ವಸೂಲಾಗುತ್ತಿದೆ.

ಕಳೆದ ಗುರುವಾರ ಇಂದೋರ್ ಪಟ್ಟಣದಲ್ಲಿ ಸರ್ದಾರರು, ಜಹಗೀರ್ದಾರರು, ಅಧಿಕಾರಿಗಳು, ಪ್ರಜೆಗಳು ಮುಂತಾದವರು ಸಭೆ ಸೇರಿದ್ದರು. ಮಂತ್ರಿಗಳಾದ ರಾಯ ಬಹದೂರ್ ನಾನಕ್‌ಚಂದ್ ಯವರು ಸರ್ ಕರ್ಜನ್ ವೈಲಿಯವರ ಗುಣಕಥನವನ್ನು ಮಾಡಿ ಅವರ ಹೆಸರನ್ನು ತಮ್ಮ ಪಟ್ಟಣದಲ್ಲಿ ಶಾಶ್ವತ ಪಡಿಸಬೇಕೆಂದು ಸೂಚಿಸಿದ್ದನ್ನು ಸಭಿಕರು ಒಪ್ಪಿಕೊಂಡರು. ಮೆಮೋರಿಯಲ್ ಫಂಡು ಪ್ರಾರಂಭಿಸಲ್ಪಟ್ಟಿತು. ಹೋಳ್ಕಾರ್ ಮಹಾರಾಜರವರು ೬,೦೦೦ ರೂಪಾಯಿ ಚಂದಾ ಕೊಟ್ಟರೆಂದೂ, ಈ ಫಂಡಿಗೆ ೧೧,೯೦೦ ರೂಪಾಯಿ ವಸೂಲಾಗಿದೆ ಎಂದೂ ತಿಳಿದು ಬಂದಿದೆ.

ತಿರುವಾಂಕೂರು (ಟ್ರಾವಂಕೂರು) ಸಂಸ್ಥಾನದ ರಾಜಮನೆತನಕ್ಕೆ ಸೇರಿದ ಮೆ॥ ರವಿವರ್ಮ ರಾಜರವರು ಕಳೆದ ವಾರ ಮದರಾಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ರಾಜವಂಶಿಕರಾಗಿದ್ದರೂ ಬಹಳ ಕಷ್ಟಪಟ್ಟು ವಿದ್ಯಾಭ್ಯಾಸಂಗಮಾಡಿ ಎಂ ಎ ಮತ್ತು ಬಿ ಎಲ್ ಪರೀಕ್ಷೆಗಳಲ್ಲಿಯೂ ಮದರಾಸ್ ಸರ್ಕಾರಿ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿ ಡೆಪ್ಯುಟಿ ಕಲೆಕ್ಟರ್ ಪದವಿಯಲ್ಲಿದ್ದರು. ಇವರಿಗೆ ಕೆಲಸ್ಸ ಳಾಗಲಿಕ್ಕೆ ವರ್ಗವಾಗಿತ್ತು. ಅವರು ಎರಡು ತಿಂಗಳ ರಜಾ ಪಡೆದು ಮದರಾಸಿಗೆ ಹೋಗಿದ್ದಾಗ ಅಲ್ಲಿ ಕಾಲವಾದರು. ಇವರ ಪತ್ನಿ ಪುತ್ರರು ದಿಗಳೆಲ್ಲಾ ಅನಂತಶೋಕದಲ್ಲೇ ಇರುತ್ತಾರೆ.

ಕಳೆದ ವಾರ ಬಂಗಾಳಾ ಅಧಿಪತ್ಯಕ್ಕೆ ಸೇರಿದ ದಿನಾಜಪುರ ಪ್ರಾಂತಿಕ ಸಭೆಯು ಜರುಗಿತು. ಕುಮಾರ ಸಾರದಿಂದ ನಾರಾಯಣರಾಯಿ ಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಭಿಕರು ಉಪನ್ಯಾಸಗಳನ್ನು ಮಾಡಿ ಗವರ್ನ್‌ಮೆಂಟಿನವರು ರಾಜಕೀಯವಾದ ಹೊಸ ಏರ್ಪಾಡುಗಳನ್ನು ರೂಢಿಸುವುದರಲ್ಲಿ ಜಾತಿಮತಗಳ ತಾರತಮ್ಯವನ್ನು ಎಣಿಸುವುದು ದೇಶಾಭ್ಯುದಯಕ್ಕೆ ಸಹಕಾರಿಯಾದದ್ದಲ್ಲವೆಂದೂ, ಹಿಂದೂ ಜನಾಂಗವು ದಿನಕ್ರಮೇಣ ಕ್ಷೀಣದಶೆಗೆ ಬರುತ್ತಿರುವುದರಿಂದ ಮೇಲ್ ಜಾತಿಯವರು ತಮಗೆ ಬೆಂಬಲವಾಗಿರುವಂಥಾ ಕೆಳಗಣ ಜಾತಿಯ ಪ್ರಜೆಗಳನ್ನು ವಿದ್ಯೆ ಬುದ್ಧಿಗಳಲ್ಲಿ ಮುಂದಕ್ಕೆ ತರಲು ಸಾಹಸಪಡಬೇಕಾದದ್ದು ಪರಮಾವಶ್ಯಕವಾದದ್ದೆಂತಲೂ, ಸಕಲ ಪ್ರಜೆಗಳೂ ಸ್ವದೇಶೀ ವಸ್ತುಗಳನ್ನು ಪೋಷಿಸಿ ಅಭಿವೃದ್ಧಿ ಪಡಿಸಬೇಕೆಂತಲೂ ತೀರ್ಮಾನ ಮಾಡಿದರು.

ಧರ್ಮಲೋಕನೆಂಬೊಬ್ಬ ಸಿಲೋನಿನ ಬೌದ್ಧ ಸನ್ಯಾಸಿಯು ಕಳೆದ ತಿಂಗಳ ಕಡೇ ವಾರದಲ್ಲಿ ಸಿಲೋನ್ (ಲಂಕಾ) ದ್ವೀಪಕ್ಕೆ ಬಂದು ಅಲ್ಲಿರುವ ಅನಾಗರಿಕ ಧರ್ಮಪಾಲರೆಂಬ ಸನ್ಯಾಸಿಗಳ ಬಳಿ ಶಿಷ್ಯರಾಗಿರುತ್ತಾರೆ. ಇವರು ಅಲ್ಲಿ ಇನ್ನು ಒಂದು ತಿಂಗಳ ಪರ್ಯಂತರ ಅಲ್ಲಿರುವರು. ಇವರು ಪನ್ನೊಂದು ವರುಷಗಳ ಹಿಂದೆ ಕಾಷಾಯವನ್ನು ಧರಿಸಿದವರಾಗಿ ಬರ್ಮಾ, ಜಪಾನ್, ಸಿಂಗಪುರ ವೆಂಬೀ ಪ್ರಾಂತ್ಯಗಳಲ್ಲಿ ಬೌದ್ಧಮತ ತತ್ವಗಳನ್ನು ಪ್ರಚಾರ ಮಾಡುತ್ತಿದ್ದರು. ಎಲ್ಲಾ ಪ್ರದೇಶಗಳಲ್ಲೂ ಪಾಪ ಪದಾರ್ಥಗಳ ಸೇವನೆಯನ್ನು ತಪ್ಪಿಸಬೇಕೆಂದು ಇವರು ಬಹು ಸಾಹಸ ಪಡುತ್ತಿದ್ದಾರೆ. ಇಷ್ಟರಲ್ಲೇ ಅವರು ಸಿಲೋನ್ ದ್ವೀಪ ದೆಲ್ಲಾ ಸಂಚಾರ ಮಾಡಿ ಪ್ರಜೆಗಳಲ್ಲಿರುವ ಜೂಜುಗಾರಿಕೆ, ಅಫೀಮು ಸೇವನೆ, ಕುಡುಕುತನ ಮೊದಲಾದ ದುರಭ್ಯಾಸಗಳನ್ನು ಕಡಮೆ ಮಾಡಲು ಪ್ರಯತ್ನ ಪಡುವವರಾಗಿದ್ದಾರೆಂದು ತಿಳಿದು ಬಂದಿದೆ.

ಕರಾಚಿ ಪಟ್ಟಣದಲ್ಲಿ ಸಸೂನ್ ಕಂಪೆನಿಯವರು ತಮ್ಮ ನೌಕರನಾಗಿದ್ದ ಸೇಟ್ ಜೋಸಾ ಖಲಿಯಾನ್ ಎಂಬಾತನನ್ನು ಕೆಲಸದಿಂದ ವಜಾ ಮಾಡಿದರು. ಆತನು ಕಂಪೆನಿಯ ಮೇಲೆ ಅವರು ತನ್ನನ್ನು ಅನ್ಯಾಯವಾಗಿ ವಜಾ ಮಾಡಿರುತ್ತಾರೆಂದೂ, ಕಂಪೆನಿಯಿಂದ ತನಗೆ ಪರಿಹಾರ ದ್ರವ್ಯವನ್ನು ಕೊಡಿಸಬೇಕೆಂದೂ ದಾವಾ ಹಾಕಿದನು. ಜುಡಿಷಿಯಲ್ ಕಮಿಷನರವರು ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ, ಕಂಪೆನಿಯವರು ವಾದಿಗೆ ೬೦,೦೦೦ ರೂಪಾಯಿ ಪರಿಹಾರ ದ್ರವ್ಯವನ್ನು (ಹಾನಿಯನ್ನು) ಕೊಡಬೇಕೆಂದು ಡಿಕ್ರಿ ಕೊಟ್ಟರು. ಅವರ ಮೇಲೆ ಆ ಕಂಪೆನಿಯವರು ಈಗ ಅಪೀಲ್ ಮಾಡುವವರಾಗಿದ್ದಾರೆ.

ಬಂಗಾಳಾದಲ್ಲಿ ಬಹಳ ಮಳೆ ಸುರಿದದ್ದರಿಂದ ಉಬ್ಬರಾರಿಗೂ ಭಿತಾನಿಗೂ ನಡುವೆ ಇರುವ ರಸ್ತೆಯೆಲ್ಲಾ ಕಿತ್ತು ಕೊಚ್ಚಿಕೊಂಡುಹೋಗಿರುತ್ತದೆಂತಲೂ, ಜನರ ಮತ್ತು ಗಾಡಿಗಳ ಆಮದು ರಫ್ತಿಗೆ ಅಡಚಣೆಯುಂಟಾಗಿದೆ ಎಂತಲೂ ತಂತೀ ವರ್ತಮಾನ ಬಂದಿದೆ

ಕೊಚ್ಚಿ ಸಂಸ್ಥಾನದವರು ಅಲ್ಲಿನ ರೆಸಿಡೆಂಟರ ವಾಸಕ್ಕಾಗಿ ಬೋಲ್ಗಾಟಿ ಎಂಬ ಬಂಗಲೆಯನ್ನು ಬಿಟ್ಟುಕೊಟ್ಟದ್ದಕ್ಕೆ ಮದರಾಸ್ ಗವರ್ನ್‌ಮೆಂಟಿನವರು ಅದಕ್ಕಾಗಿ ಕೊಚ್ಚಿ ಸಂಸ್ಥಾನಕ್ಕೆ ವರುಷಕ್ಕೆ ೬,೭೨೨ ರೂಪಾಯಿ ಬಾಡಿಗೆಯನ್ನು ಸಲ್ಲಿಸುವಂತೆ ಕರಾರು ನಡದಿರುವುದು

ಪೂನಾ ಪಟ್ಟಣದಲ್ಲಿ ಹೊಸ ಇಂಗ್ಲಿಷ್ ಸ್ಕೂಲಿನ ವಿದ್ಯಾರ್ಥಿಯಾದ ೧೭ ವರುಷದ ವಾಸುದೇವ ಕೃಷ್ಣ ಹರ್ಷನೆಂಬುವನು ಸರ್ಚ್ ನಡೆಯುವ ಒಂದು ಜೋಡಿನಲ್ಲಿ ಪಿಸ್ತೂಲನ್ನು ಇರಿಸಿಕೊಂಡನು ಮ್ಯಾಜಿಸ್ಟ್ರೇಟರು ಅವನಿಗೆ ೨೦೦ ರೂಪಾಯಿ ಜುಲ್ಮಾನೆ ವಿಧಿಸಿ, ಮೂರು ವರುಷಗಳ ವರೆಗೆ ನೇಕ ಚಾಲಿಗೆ ಅವನಿಂದ ಜಾಮೀನ್ ತೆಗೆದುಕೊಂಡರು

ಸಿಂಧು ನದಿಯಲ್ಲಿ ಪ್ರವಾಹ ಬಂದು ನದಿಯ ದಡದಲ್ಲಿರುವ ಡೇರಾ ಘಾಜಿಖಾನ್ ಎಂಬ ಪಟ್ಟಣದ ಮೇಲೆ ಹೊರಳಿ ಜಮೀನುಗಳನ್ನೂ ಮನೆಮಠಾದಿಗಳನ್ನೂ ಹಾಳುಮಾಡುತ್ತಿದೆ ಎಂದು ಕಳೆದ ವಾರ ತಿಳಿಸಿದೆವಷ್ಟೆ ಪ್ರವಾಹವನ್ನು ತಡೆಯುವುದಕ್ಕಾಗಿ ಸರ್ಕಾರದವರು ೨೫ ಲಕ್ಷ ರೂಪಾಯಿ ವೆಚ್ಚಮಾಡಿ ಇದ್ದ ಕಾಮಗಾರಿಗಳೆಲ್ಲಾ ನಾಶವಾಗಿರುತ್ತವೆಂದು ತಿಳಿದು ಬಂದಿದೆ

ಕಾಶ್ಮೀರ ಸಂಸ್ಥಾನದಲ್ಲಿ ಅಪಾರವಾದ ಮಳೆ ಸುರಿಯಿತು ಜೀಲಂ ನದಿಯು ತುಂಬಿ ಪ್ರವಾಹ ಹೆಚ್ಚುತ್ತಿದೆ ರಾಜಧಾನಿಯಾದ ಶ್ರೀ ನಗರದಲ್ಲಿ ನದಿಗೆ ಅಡ್ಡಲಾಗಿ ಹಾಕಿರುವ ಗೋಡೆಗಳು ಕಳಚಿ ಬೀಳುವಹಾಗೂ ನೀರು ಪಟ್ಟಣದೊಳಕ್ಕೆ ನುಗ್ಗುವ ಹಾಗೂ ಗಾಬರಿಯುಂಟಾಗಿದೆ ನದಿಯಲ್ಲಿ ೨೯ ಅಡಿ ನೀರು ಹರಿಯುತ್ತಾ, ಅಪೂರ್ವವಾದ ಪ್ರವಾಹ ಬಂದಿರುವುದು ಅನೇಕ ಸ್ಥಳಗಳು ನೀರಿನಲ್ಲಿ ಮುಳುಗಿ ಹೋಗಿವೆ ಪೈರುಗಳಿಗೆ ತುಂಬಾ ನಷ್ಟವಾಗಿರುತ್ತದೆಂದು ತಂತೀ ವರ್ತಮಾನ ಬಂದಿದೆ

ಕಳೆದ ವರುಷ ಜೂನ್ ತಿಂಗಳಲ್ಲಿ ಅನಂತಶಯನದಲ್ಲಿ ಪೋಲೀಸಿನವರಿಗೂ ವರ್ತಕರಿಗೂ ಮನಸ್ತಾಪಗಳು ಹುಟ್ಟಿ ದಂಗೆ ಕೃತ್ಯಗಳು ನಡೆದವಷ್ಟೆ ಆಗ್ಗೆ ಪೋಲೀಸಿನವರು ನಿರಪರಾಧಿಗಳಾದ ಕೆಲವು ಜನರನ್ನು ಹಿಡಿದು ಅವರನ್ನು ಕ್ರೂರತರವಾಗಿ ಹಿಂಸೆ ಪಡಿಸಿದರೆಂಬುದು ಗೊತ್ತಾಯಿತು ಆ ವ್ಯಕ್ತಿ ಒಂದು ಮೊಕದ್ದಮೆಯಲ್ಲಿ ಐದು ಮಂದಿ ಪೋಲೀಸಿನವರಿಗೆ ಸಜಾ ಶಿಕ್ಷೆಯೂ ಜುಲ್ಮಾನೆಯೂ ಕಳೆದ ವಾರ ವಿಧಿಸಲ್ಪಟ್ಟವು ಕೆಲವರಿಗೆ ೨ ತಿಂಗಳ ಕಠಿಣ ಸಜ ೫೦ ರೂಪಾಯಿ ಜುಲ್ಮಾನೆಯೂ, ಕೆಲವರಿಗೆ ೬ ತಿಂಗಳ ಸಜ ೨೦೦ ರೂಪಾಯಿ ಜುಲ್ಮಾನೆಯೂ ಆಗಿರುತ್ತದೆ ಉಳಿದ ಮೊಕದ್ದಮೆಗಳು ವಿಚಾರಣೆಯಾಗುತ್ತಿರುವವು

ಮಿ|| ಬಿಪಿನ್ ಚಂದ್ರಪಾಲ್ ಯವರು ವಿಲಾಯತಿಯಲ್ಲಿ "ಸ್ವರಾಜ್ಯ"ವೆಂಬ ಪತ್ರಿಕೆಯನ್ನು ಪ್ರಕಟಿಸಿ, ಅದನ್ನೆಲ್ಲಾ ಹಿಂದುಸ್ಥಾನದಲ್ಲಿ ಚಂದಾದಾರರಿಗೆ ಒಟವಾಡೆ ಮಾಡಬೇಕೆಂದು ಹೇಳಿ ಬೊಂಬಾಯಿನಲ್ಲಿರುವ ವರ್ತಮಾನ ಏಜೆನ್ಸಿ ಕಂಪನಿಯ ಮ್ಯಾನೇಜರ್ ರಾವ್ ಗಣೇಶ ಬಲವಂತ ಮೋದಕ್ ಎಂಬಾತನ ಹೆಸರಿಗೆ ಕಳುಹಿಸಿದರು ಈತನು ಆ ಪತ್ರಿಕೆಗೆ ಹಿಂದುಸ್ಥಾನದ ಏಜಂಟನಾಗಿ ನಿಂತು ಕೆಲಸಮಾಡುತ್ತಿದ್ದನು ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಬಾತ್ಮಿಗಳು ಏರ್ಪಟ್ಟಿರೋಣದರಿಂದ ಅದನ್ನು ಪ್ರಕಟ ಮಾಡಕೂಡದೆಂದು ಪೋಲೀಸಿನವರು ಇದೇ ಆತನ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟ್ ಮಿ|| ಆಸ್ಟನ್‌ಯವರು ಈ ಮೊಕದ್ದಮೆಯನ್ನು ವಿಚಾರಣೆಮಾಡಿ ಆತನಿಗೆ ಕಳೆದ ವಾರ ಒಂದು ತಿಂಗಳ ಸಾದಾ ಸಜವನ್ನು ವಿಧಿಸಿರುತ್ತಾರೆ

ನೆಲಗಡಲೆಯು ಪೂರ್ವದಲ್ಲಿ ಬರ್ಮ ಆಧಿಪತ್ಯದಲ್ಲಿ ಬೆಳೆಯುತ್ತಲೇ ಇರಲಿಲ್ಲ ಇದು ಅಲ್ಲಿಗೆ ಹೊಸದು ಕಳೆದ ವರುಷ ಅಲ್ಲಿನ ರೈತರು ನೆಲಗಡಲೆ ವ್ಯವಸಾಯವನ್ನು ಬಹಳ ವಿಶೇಷವಾಗಿ ಮಾಡಿರುತ್ತಾರೆ ಅಲ್ಲದೆ ಅದರಿಂದ ಎಣ್ಣೆ ತೆಗೆದು ರಫ್ತುಮಾಡುವುದೂ ಹೆಚ್ಚುತ್ತದೆ ಬರ್ಮ ಆಧಿಪತ್ಯದಿಂದ ೧೯೦೭-೮ನೇ ಸಾಲಿನಲ್ಲಿ ಅನ್ಯ ದೇಶಗಳಿಗೆ ೭೦೦ ಗ್ಯಾಲನ್ ಎಣ್ಣೆಯೂ, ಹಿಂದುಸ್ಥಾನಕ್ಕೆ ೩,೫೦೦ ಗ್ಯಾಲನ್ ಎಣ್ಣೆಯೂ ೧೯೦೮-೯ನೇ ಸಾಲಿನಲ್ಲಿ ಅನ್ಯ ದೇಶಗಳಿಗೆ ೨,೨೧೨ ಗ್ಯಾಲನ್ ಎಣ್ಣೆಯೂ, ಹಿಂದುಸ್ಥಾನಕ್ಕೆ ೫೭,೨೦೦ ಗ್ಯಾಲನ್ ಎಣ್ಣೆಯೂ ರಫ್ತಾಗಿರುತ್ತದೆ ಇದರಿಂದ ಆ ಪ್ರಾಂತ್ಯದಲ್ಲಿ ನೆಲಗಡಲೆಯ ಬೆಳೆಯೂ, ಅದರಿಂದ ಎಣ್ಣೆ ತೆಗೆಯುವುದೂ ವರುಷೇ ವರುಷ ಹೆಚ್ಚುತ್ತಾ ಬರುವದೆಂದು ಗೊತ್ತಾಗುತ್ತದೆ

ತಿನ್ನವೆಲ್ಲಿಯಲ್ಲಿ ಸ್ಥಾಪಿಸಲ್ಪಟ್ಟು ನಡೆಯುತ್ತಾ ಬಂದಿರುವ ಸ್ವದೇಶೀ ಹಡಗಿನ ಕಂಪನಿಯು ವಾರ್ಷಿಕ ಜಮಾ ಖರ್ಚನ್ನು ಈಗ ತಾನೇ ಪ್ರಕಟಪಡಿಸಿದಾರೆ ಕಂಪನಿಗೆ ಕಳೆದ ವರುಷ ೨,೫೭,೧೦೯ ರೂಪಾಯಿನ ನಷ್ಟವಾಯಿತು ಷೇರುದಾರರು ಇದುವರೆಗೆ ೭,೬೬,೭೭೫ ರೂಪಾಯಿಗಳನ್ನು ಪಾವತಿ ಮಾಡಿದಾರೆ ಈ ಕಂಪನಿಗೆ ೪,೯೬,೮೦೦ ರೂಪಾಯಿ ಸಾಲವಿದೆ ಎಂದೂ, ಅದರ ಆಸ್ತಿಯೆಲ್ಲಾ ೬,೫೦,೧೫೩ ರೂಪಾಯಿ ಆದೀತೆಂದೂ, ೧೯೦೮ನೇ ಮಾರ್ಚಿ ವರೆಗೆ ೨,೦೮,೮೭೯ ರೂಪಾಯಿ ನಷ್ಟಸಂಭವಿಸಿದೆ ಎಂತಲೂ ತಿಳಿದುಬರುವುದು ಈಗ ಷೇರುದಾರರು ಒಂದೇ ಮನಸ್ಸಿನಿಂದ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಕಂಪನಿಯನ್ನು ನಡೆಸಬಹುದಾಗಿದೆ ಎಂದೂ, ಇಲ್ಲವಾದರೆ ಕಂಪನಿಯು ದಿವಾಳಿಯಾಗುವುದೆಂದೂ ಅದರ ಮ್ಯಾನೇಜರುಗಳು ತಿಳಿಸುತ್ತಾರೆ ಈ ಸ್ವದೇಶೀ ಏರ್ಪಾಡು ಈ ರೀತಿ ಅವನತ್ತಕ್ಕಾಗಿ ಬಹು ಜನರು ಮರುಗುತ್ತಿರುವರು

ಬೊಂಬಾಯಿ ಪಟ್ಟಣದ ಜನರಲ್ ಪೋಸ್ಟ್ ಆಫೀಸಿನಲ್ಲಿ ಜನರಿಗೆ ಸ್ಟಾಂಪುಗಳನ್ನು ಬಿಕರಿ ಮಾಡುವುದಕ್ಕಾಗಿ ಎರಡು ಯಂತ್ರಗಳನ್ನು ಇಡಿಸಿದಾರೆ ಒಂದು ಯಂತ್ರದ ಬಳಿಗೆ ಹೋಗಿ ಕಾಲಾಣೆ ಎಸೆಯುತ್ತಿದ್ದರೆ ಆ ಯಂತ್ರವು ಕಾಲಾಣೆಯ ಸ್ಟಾಂಪನ್ನೂ, ಇನ್ನೊಂದು ಯಂತ್ರವು ಹಾಗೆಯೇ ಅರ್ಧಾಣೆಯ ಸ್ಟಾಂಪನ್ನು ಕೊಡುತ್ತದೆ ಯೂರೋಪ್ ಖಂಡದ ಅನೇಕ ಪೋಸ್ಟ್ ಆಫೀಸುಗಳಲ್ಲಿ ಸ್ಟಾಂಪುಗಳ ಬಿಕರಿಗೆ ಇಂಥಾ ಯಂತ್ರಗಳನ್ನು ವಿಶೇಷವಾಗಿ ಇಟ್ಟಿರುತ್ತಾರೆ ಬೊಂಬಾಯಿನಲ್ಲೂ ಈ ಯಂತ್ರಗಳಿಂದ ತುಂಬಾ ಪ್ರಯೋಜನವಾಗುತ್ತೆಂದು ತಿಳಿದು ಬಂದದ್ದರಿಂದ ಆ ಪಟ್ಟಣದಲ್ಲಿ ಲೇಟರ್ ಬಾಕ್ಸ್ (ಕಾಗದ ಹಾಕುವ ಪೆಟ್ಟಿಗೆ)ಗಳು ಇಟ್ಟಿರುವ ಸ್ಥಳಗಳಲ್ಲೆಲ್ಲಾ ಇಂಥಾ ಒಂದು ಯಂತ್ರವನ್ನು ಇಡಿಸಬೇಕೆಂದು ಆಲೋಚಿಸಿದಾರೆ ಇದರಿಂದ ಪ್ರಜೆಗಳು ಸ್ಟಾಂಪಿಗಾಗಿ ಅಲೆಯುವುದು ತಪ್ಪುತ್ತದೆ ಜನರು ಕಾಗದವನ್ನು ಬರೆದು ತೆಗೆದುಕೊಂಡು ಹೋಗಿ ಲೆಟರ್ ಬಾಕ್ಸಿನ ಬಳಿ ಇರುವ ಮೇಲ್ಕಂಡಂಥಾ ಯಂತ್ರದಿಂದ ಸ್ಟಾಂಪನ್ನು ಕೊಂಡುಕೊಂಡು ಕಾಗದಕ್ಕೆ ಅಂಟಿಸಿ ಪೆಟ್ಟಿಗೆಯೊಳಗೆ ಹಾಕಿ ಬರಲು ಅನುಕೂಲವಾಗುವುದು

ವಿದೇಶ ವರ್ತಮಾನಗಳು

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು ೧,೪೭೬ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು

ಮೆಕ್ಸಿಕೋ ರಾಜ್ಯದ ಪ್ರವಾಹದ ಅನಾಹುತದಲ್ಲಿ ೨,೦೦೦ ಪ್ರಜೆಗಳು ಲಯವಾದರೆಂದು ಗೊತ್ತುಮಾಡಲ್ಪಟ್ಟವೆ

ಪರ್ಷಿಯಾ ರಾಜ್ಯದಲ್ಲಿ ಹೊಸ ಗವರ್ನ್‌ಮೆಂಟಿನವರು ತಮ್ಮ ಪ್ರಜೆಗಳಲ್ಲಿ ಅಫೀಮಿನ ಸೇವನೆಯನ್ನು ನಿಲ್ಲಿಸಿಬಿಡಬೇಕೆಂದು ಕಠಿಣತರವಾದ ನಿಬಂಧನೆಗಳನ್ನು ಮಾಡಿ ಪ್ರಕಟಿಸಿರುತ್ತಾರೆ

ಗ್ರೀಸ್ ರಾಜ್ಯದ ಯುವರಾಜರೂ ಇವರ ಸಹೋದರರೂ ಅಲ್ಲಿನ ಸೈನ್ಯಗಳಲ್ಲಿ ಹುದ್ದೇದಾರರಾಗಿದ್ದಾರೆ ಇವರೆಲ್ಲರೂ ಯಾವ ಕಾರಣಕ್ಕಾಗಿಯೋ ತಮ್ಮ ಉದ್ಯೋಗಗಳಿಗೆ ರಾಜೀನಾಮೆಯನ್ನು ಕೊಟ್ಟು ಇರುವರು

ಲಂಡನ್ ಪಟ್ಟಣದಲ್ಲಿದ್ದು ಕಾಲವಾದ ಮಿಸ್ ಮೇರಿ ಹೋವಾರ್ಡ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೫೨,೫೦೦ ರೂಪಾಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾಳೆ

ಟರ್ಕಿ ಗವರ್ನ್‌ಮೆಂಟಿನವರು ತಮ್ಮ ರಾಜ್ಯದ ಸೈನಿಕರ ದಿರಸುಗಳಿಗಾಗಿ ೧೫ ಲಕ್ಷ ಗಜದ ಖಾಕಿ ಬಟ್ಟೆಯನ್ನು ಸಮಾಮಾನಾಗಿ ಕಳುಹಿಸಬೇಕೆಂದು ವಿಲಾಯತಿಗೆ ಸೇರಿದ ಲೀಡ್ಸ್ ಪಟ್ಟಣದ ಒಂದು ನೆಯಿಗೆ ಕಾರ್ಖಾನೆಗೆ ಆರ್ಡರನ್ನು ಕಳುಹಿಸಿರುತ್ತಾರೆ

ರಷ್ಯಾ ರಾಜ ಮನೆತನದ ಪ್ರಿನ್ಸ್ ಗಾಗರಿನ್ ಎಂಬ ರಾಜಕುಮಾರರು ಸ್ವಿಟ್ಸರ್ಲಾಂಡಿಗೆ ಸೇರಿದ ಸೀವಾಯಿ ಹೋಟೇಲಿನಲ್ಲಿ ತಂಗಿರುವಾಗ್ಗೆ ಕಳ್ಳರು ಬಂದು, ಆತನ ಬಳಿ ಇದ್ದ ಸುಮಾರು ಎರಡು ಲಕ್ಷ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು

ಕ್ಯಾನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿದ ಟೊರಾಂಟೋ ಪಟ್ಟಣದಲ್ಲಿ ಪಾರ್ಲಿಮೆಂಟ್ ಸಭೆಗಳು ಕೂಡುವ ವಿಸ್ತಾರವಾದ ಭವನಕ್ಕೆ ಕಿಚ್ಚು ಬಿದ್ದು ಒಂದು ಭಾಗವೆಲ್ಲಾ ಉರಿದು ಹೋಯಿತು ಇದರಿಂದ ಸುಮಾರು ೩೦ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

ಬ್ರಿಟಾನಿಯಲ್ಲಿ ೫೯,೦೦೦ ಮೈಲಿಗಳ ರೈಲ್ ರಸ್ತೆಗಳು ಇರುವವು ಇವುಗಳನ್ನು ಹಾಕುವುದಕ್ಕೆ ೧೦೦ ಕೋಟಿ ಪೌಂಡುಗಳ ಮೂಲ ಧನವು ಖರ್ಚಾಗಿರುತ್ತದೆ ಕಳೆದ ವರುಷ ೧೧ ಕೋಟಿಯೂ ೧೦ ಲಕ್ಷ ಪೌಂಡುಗಳು ಪ್ರಯಾಣಿಕರಿಂದಲೂ, ಸಾಮಾನುಗಳ ರವಾನೆಯಿಂದಲೂ ಉತ್ಪತ್ತಿಯಾಗಿರುವುದು

ಚೀನ ರಾಜ್ಯದವರು ಜಪಾನ್ ರಾಜ್ಯದಿಂದ ಬರುವ ವ್ಯಾಪಾರ ಸರಕುಗಳನ್ನು ಕೊಂಡ ಕೂಡಲೆ ಅವುಗಳಿಗೆ ಬಹಿಷ್ಕಾರ ಹಾಕಿರುತ್ತಾರೆ ಇದರಿಂದ ಜಪಾನ್ ವರ್ತಕರಿಗೂ ಕಾರ್ಖಾನೆಗಳಿಗೂ ತುಂಬಾ ನಷ್ಟವಾಗುತ್ತಿದೆ ಈ ವಿಚಾರವನ್ನು ಜಪಾನ್ [illegible] ಜರ್ಮನಿಯ ಸರಕನ್ನು ವಿಶೇಷವಾಗಿ ಚೀನಕ್ಕೆ ರಫ್ತು ಮಾಡಲಾರಂಭಿಸಿದಾರೆ

ಇಟಲಿ ರಾಜ್ಯದ ಮುಖ್ಯಪಟ್ಟಣವಾದ ರೋಮ್ ನಗರದಲ್ಲಿ ಕಳೆದ ಮಂಗಳವಾರ ಮಧ್ಯಾಹ್ನ ಭೂಮಿಯು ಜೋರಾಗಿ ಕಂಪಿಸಿತು ಪ್ರಜೆಗಳು ಗಾಬರಿಬಿದ್ದು ರಸ್ತೆಗಳಿಗೆ ಓಡಿಬಂದು ನಿಂತುಕೊಂಡರು ಮನೆ ಬಂಗಲೆ ಮೊದಲಾದ ಕಟ್ಟಡಗಳಲ್ಲಿದ್ದ ಕಸ್ತೂರಿಗಳೂ ಅಲಂಕಾರ ವಸ್ತುಗಳೂ ಕಿತ್ತು ಕಳಚಿಬಿದ್ದವು ಒಂದು ದೇವಾಲಯದ ಗೋಡೆಗಳು ಬಿರುಕು ಬಿಟ್ಟವು ಆದರೆ ಪ್ರಾಣನಷ್ಟವೇನೂ ಆಗಲಿಲ್ಲ

ಪರ್ಷಿಯಾ ರಾಜ್ಯದ ಮಾಜಿ ಸುಲ್ತಾನರವರು ತಮ್ಮ ಆಸ್ತಿಯನ್ನು ಗವರ್ನ್‌ಮೆಂಟಿಗೆ ಒಪ್ಪಿಸಿಬಿಡುವುದಾಗಿ ತಿಳಿಸಿದರು ಇಂಗ್ಲಿಷ್ ಮತ್ತು ರಷ್ಯಾ ರಾಯಭಾರಿಗಳು ಮಧ್ಯಸ್ಥಗಾರರಾಗಿ ನಿಂತು ಪರ್ಷಿಯಾ ಗವರ್ನ್‌ಮೆಂಟಿಗೂ ಮಾಜಿ ಸುಲ್ತಾನರಿಗೂ ಒಂದು ಕರಾರನ್ನು ಮಾಡಿಸಿದರು ಈ ಸುಲ್ತಾನರು ಪರ್ಷಿಯಾವನ್ನು ಬಿಟ್ಟು ಹೊರಟು ಹೋಗುವುದಾಗಿ ಒಪ್ಪಿಕೊಂಡರು ಇವರಿಗೆ ಗವರ್ನ್‌ಮೆಂಟಿನಿಂದ ಒಂದು ಲಕ್ಷ ದ್ರವ್ಯವನ್ನು ಪೆನ್ಷನ್ ಕೊಡತಕ್ಕದೆಂದು ತೀರ್ಮಾನವಾಗಿರುತ್ತದೆ

ವಿಲಾಯತಿಯಲ್ಲಿ ಪ್ರಕಟಿಸಲ್ಪಡುವ "ಡೆಯಿಲಿ ಮೆಯಿಲ್" ಎಂಬ ವರ್ತಮಾನ ಪತ್ರಿಕೆಯ ಮಾಲಿಕರು ಲಂಡನ್ ಪಟ್ಟಣದಿಂದ ಮ್ಯಾಂಚೆಸ್ಟರ್ ನಗರಕ್ಕೆ ವಿಮಾನದಲ್ಲಿ ಕುಳಿತು ಪ್ರಯಾಣಮಾಡಿಕೊಂಡು ಹೋಗಿ ಇಳಿಯುವಂಥಾ ಸಾಹಸಿಗಾರನಿಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ಇಷ್ಟರಲ್ಲೇ ಪ್ರಕಟಿಸಿದಾರೆ ಇದನ್ನು ಕೇಳಿ ಕರ್ನಲ್ ಕೋಡಿ ಎಂಬೊಬ್ಬ ಇಂಗ್ಲಿಷ್ ಸಾಹಸಿಗಾರನು ತಾನು ಆ ರೀತಿ ಅಂತರಿಕ್ಷದಲ್ಲಿ ಸಂಚಾರಮಾಡಿ ತೋರಿಸ ಒಪ್ಪಿರೆಂದು ತಿಳಿಸಿರುವನು ಈ ಪಂದ್ಯವು ಇಷ್ಟರಲ್ಲೇ ನಡೆಯುವುದಾಗಿದೆ

ಪರ್ಷಿಯಾ ರಾಜ್ಯದಲ್ಲಿ ರಾಜಪಕ್ಷದವರಿಗೆ ವಿರೋಧವಾಗಿ ನಿಂತು ಕಾದಾಡಿದ ಪ್ರಜೆಗಳನ್ನು ಹೊಸ ಸುಲ್ತಾನರು ಕ್ಷಮಾಪಣೆಕೊಟ್ಟು ಬಂದೀಖಾನೆಗಳಿಂದ ಬಿಡಿಸಿ ಬಿಟ್ಟರು ಅವರ ಮುಂದಾಳುಗಳಿಗೆ ಮಾತ್ರ ಕ್ಷಮಾಪಣೆಯನ್ನು ಕೊಡಲಿಲ್ಲ ಇವರು ತಮ್ಮ ಪ್ರಾಣಕ್ಕೆ ಅಪಾಯ ಸಂಭವಿಸುವುದೆಂದು ತಿಳಿದು ಓಡಿಹೋಗಿ ಪರರಾಜ್ಯಗಳ ರಾಯಭಾರಿಗಳ ಆಶ್ರಯದಲ್ಲಿ ಸೇರಿಕೊಂಡರು ಈಚೆಗೆ ಇವರೆಲ್ಲಾ ಆ ರಾಜ್ಯವನ್ನು ಬಿಟ್ಟು ಹೊರಟು ಹೋಗುತ್ತೇವೆಂದೂ, ಮತ್ತೆ ವಾಪಸು ಬರುವುದಿಲ್ಲವೆಂದೂ ಭಾಷೆಕೊಡುವುದಾದರೆ ಅವರನ್ನು ಹಿಂಸಿಸದೆ ಬಿಟ್ಟು ಬಿಡುವುದಾಗಿ ಷಾ ಸುಲ್ತಾನರವರು ಪ್ರಕಟಿಸಿರುತ್ತಾರೆ

ಫ್ರಾನ್ಸ್ ಸಂಸ್ಥಾನದ ಮುಖ್ಯಪಟ್ಟಣವಾದ ಪ್ಯಾರಿಸ್ ನಗರದಲ್ಲಿ ನಾಯಿ ನರಿ ಕಡಿದವರಿಗೆ ಚಿಕಿತ್ಸೆ ಮಾಡುವಂಥಾ ಆಸ್ಪತ್ರೆಯು ಏರ್ಪಾಟಾಗಿದೆ ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚುಚ್ಚು ಹಾಕುವಂಥಾ ಹಾಲನ್ನು ತಯಾರುಮಾಡಿ ಬಿಕರಿ ಮಾಡುವರು ಈ ಹಣದಿಂದಲೇ ಆ ಆಸ್ಪತ್ರೆಯು ನಡೆಯಬೇಕಾಗಿದ್ದಿತು ಅದರ ವ್ಯಾಪಾರ ನಿಂತು ಹೋದ ಪಕ್ಷದಲ್ಲಿ ಆ ಆಸ್ಪತ್ರೆಯನ್ನು ನಡಸುವುದು ಸಾಧ್ಯವಲ್ಲವೆಂದು ಕಂಡು ಬಂದದ್ದರಿಂದ ಎಂ ಓಸಿರಿಸ್ ಎಂಬೊಬ್ಬ ಪುಣ್ಯಾತ್ಮನು ಈ ಆಸ್ಪತ್ರೆಯ ಫಂಡಿಗೆ ತನ್ನ ಆಸ್ತಿಯಿಂದ ೧೨೦ ಲಕ್ಷ ರೂಪಾಯನ್ನು ಕಳುಹಿಸಿರುತ್ತಾನೆ ಈತನ ಔದಾರ್ಯವನ್ನು ಅನೇಕಾನೇಕರು ಕೊಂಡಾಡುತ್ತಿರುವರು

ಹಿಂದುಸ್ಥಾನದ ಸರ್ವೆ ಇಲಾಖೆಗೆ ಸೇರಿದ ಹಜ್ರಾ ಅಲ್ಲಿ ಎಂಬೊಬ್ಬ ಉದ್ಯೋಗಸ್ಥನು ಚೀನಾ ರಾಜ್ಯದಲ್ಲಿ ಸಂಚಾರಮಾಡುತ್ತಿದ್ದಾಗ ಕಳೆದ ಜೂನ್ ತಾ ೨೧ರಲ್ಲಿ ಚೀನಾ ಜನರು ಆತನನ್ನು ಕಾನ್ಸು ಎಂಬ ರಾಜ್ಯದಲ್ಲಿ ಕೊಂದು ಇರುತ್ತಾರೆ ಇಂಗ್ಲಿಷ್ ರಾಯಭಾರಿಯು ಈ ಕೊಲೆಯ ಪೂರ್ವೋತ್ತರವನ್ನು ತನಿಖೆಮಾಡಬೇಕೆಂದು ಕೇಳಿದಾಗ ಚೀನಾ ಅಧಿಕಾರಿಗಳು ಅದಕ್ಕೆ ಒಪ್ಪದೆ ಹೋದರು ಆದಕಾರಣ ಆ ರಾಯಭಾರಿಯು ಈ ಕೊಲೆಯ ವಿಷಯದಲ್ಲಿ ಅನಾದರಣೆಮಾಡುವುದು ಸರಿಯಲ್ಲವೆಂದೂ ಅದಕ್ಕೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದೂ ನಿರ್ಣಯಿಸಿ, ಅದಕ್ಕೆ ಸರಿಯಾದ ಪರಿಹಾರವನ್ನು ಕೊಡಬೇಕೆಂದು ಚೀನಾ ಗವರ್ನ್‌ಮೆಂಟಿನವರನ್ನು ಕೇಳಿರುತ್ತಾರೆ

ಪ್ರಪಂಚದಲ್ಲಿ ಮುಖ್ಯವಾದ ರಾಜ್ಯಗಳಲ್ಲಿ ಗವರ್ನ್‌ಮೆಂಟಿನವರು ಯುದ್ಧಾದಿಗಳು ನಡೆಯದಂತೆಯೂ ಪರಸ್ಪರವಾದ ಸೌಖ್ಯಾದಿ ಸುಖ ಸಮಾಧಾನಗಳು ನೆಲೆಗೊಂಡಿರುವಂತೆಯೂ ಸೈನ್ಯಗಳನ್ನು ಇಟ್ಟುಕೊಂಡಿರುತ್ತಾರೆ ಆಯಾ ಗವರ್ನ್‌ಮೆಂಟಿನವರು ತಮ್ಮ ತಮ್ಮ ನೌಕಾ (ಸಮುದ್ರ) ಸೈನ್ಯಕ್ಕೂ, ಭೂಸೈನ್ಯಕ್ಕೂ ಪ್ರತಿ ವರುಷವೂ ಖರ್ಚು ಮಾಡುತ್ತಿರುವ ಹಣವೆಷ್ಟೆಂಬುದನ್ನು ಕೆಳಗಣ ಪಟ್ಟಿಯಿಂದ ತಿಳಿದುಕೊಳ್ಳಬಹುದು ಈ ದ್ರವ್ಯವನ್ನು ಪೌನುಗಳಾಗಿ ಕಾಣಿಸಿದೆ ಪೌನು ೧ಕ್ಕೆ ೧೫ ರೂಪಾಯಿಯಂತೆ ಇಟ್ಟುಕೊಂಡು ಗುಣಿಸಿಕೊಂಡಲ್ಲಿ ಅವರು ಸೈನ್ಯಕ್ಕಾಗಿ ಎಷ್ಟು ರೂಪಾಯಿ ಪ್ರತಿ ಸಾಲಿನಲ್ಲೂ ಖರ್ಚು ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ

ರಾಜ್ಯ	ಸಮುದ್ರ ಸೈನ್ಯಕ್ಕೆ	ಭೂಸೈನ್ಯಕ್ಕೆ
ಆಸ್ಟ್ರಿಯ	20,17,211	1,35,35,211
ಇಟಲಿ	36,70,561	1,10,28,131
ವಿಲಾಯತಿ	1,23,19,000	2,71,50,000
ಜರ್ಮನಿ	1,11,71,101	3,88,11,050
ರಷ್ಯಾ	91,97,016	1,10,91,173
ಫ್ರಾನ್ಸ್	1,13,16,100	3,19,33,101
ಜಪಾನ್	31,81,073	70,20,977
ಅಮೇರಿಕ	2,35,11,061	ತಿಳಿಯಲಿಲ್ಲ

ಎಂ. ಫರ್ಮಾನ್ ಮತ್ತು ಎಂ. ಬ್ಲೇರಿಯೋ ಎಂಬ ಸಾಹಸಿಗಾರರು ಮೊನ್ನೆ ಉಪಾಂತವಲ್ಲ ವಿಮಾನಗಳನ್ನು ಹಾರಿಸಿ ಬಿಡುವುದಾಗಿ ೫,೦೦೦ ಪೌನುಗಳ ಪಂದ್ಯ ಕಟ್ಟಿಕೊಂಡಿದಾರೆ ಇದರಲ್ಲಿ ಗೆದ್ದವನು ೪,೦೦೦ ಪೌನು ತೆಗೆದುಕೊಳ್ಳಬೇಕೆಂದೂ ಸೋತವನು ೧,೦೦೦ ಪೌನು ತೆಗೆದುಕೊಳ್ಳಬೇಕೆಂದೂ ಕರಾರು ನಡೆದಿದೆ — ರೀಂಸ್ ಪಟ್ಟಣದಲ್ಲಿ ನಡೆದ ವಿಮಾನಗಳ ವಿನೋದಗಳಿಂದ ೧೨,೦೦೦ ಪೌನುಗಳು ಉತ್ಪತ್ತಿಯಾಯಿತು ಈ ಹಣವನ್ನು ವಿಮಾನ ಪ್ರೋತ್ಸಾಹ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ತೀರ್ಮಾನವಾಗಿದೆ ಇಂಥಾ ವಿನೋದಗಳನ್ನು ೧೯೧೦ನೇ ಇಸವಿಯಲ್ಲೂ ನಡೆಸಬೇಕೆಂದು ಗೊತ್ತುಮಾಡಿದರು — ಎಂ ಫಾರ್ಮನ್ ಎಂ ಕೊಮ್ಟ್ ಎಂ ಪಾಲ್ಹಾನ್ ಎಂಬ ಸಾಹಸಿಗಾರರು ಎಲ್ಲಕ್ಕೂ ೧೨೦೦ ರಿಂದ ೨೦ ಪೌನುಗಳ ಪ್ರತಿ [illegible] ಸ್ಪಾ ಎಂಬ ಪಟ್ಟಣದಲ್ಲಿ ತಮ್ಮ ಚತುರತೆಯನ್ನು ಪ್ರಕಾಶಪಡಿಸುವುದಕ್ಕೆ ಒಪ್ಪಿಕೊಂಡಿದಾರೆ [illegible] ೫,೭೫೦ ಪೌನುಗಳನ್ನು ಪಡೆದು [illegible] ತನ್ನ ಸಾಮರ್ಥ್ಯವನ್ನು ತೋರಿಸುವುದಾಗಿ ಒಪ್ಪಿರುತ್ತಾನೆ ಎಂ ಬ್ಲೇರಿಯೋ ಎಂಬ ಸಾಹಸಿಗಾರನಿಗೋ ವಿಯನ್ನಾ ಪಟ್ಟಣದಲ್ಲಿ ೧೦,೦೦೦ ಪೌನು ಸಿಕ್ಕುವುದು — ಅಂತರಿಕ್ಷದಲ್ಲಿ ಸಂಚರಿಸುವಂಥ ಒಂದು ವಿಮಾನಕ್ಕೆ ಸಾಧಾರಣವಾಗಿ ೧೫,೦೦೦ ರೂಪಾಯಿ ವೆಚ್ಚವು ಮುಟ್ಟುತ್ತದೆ ರೀಂಸ್ ಪಟ್ಟಣದಲ್ಲಿ ನಡೆದ ಪಂದ್ಯದಲ್ಲಿ ಅನೇಕ ಸಾಹಸಿಗಾರರು ತಮ್ಮ ವಿಮಾನಗಳನ್ನು ವಿಕ್ರಯಮಾಡಿ, ೧೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ಸಂಪಾದಿಸಿಕೊಂಡರು

ಐರ್ಲೆಂಡಿಗೆ ಸೇರಿದ ವೆಸ್ಟ್ ಕ್ಲೇರ್ ಎಂಬ ಡಿಸ್ಟ್ರಿಕ್ಟಿನ ಪ್ರಜೆಗಳು ಕರ್ನಲ್ ಲಿಂಚ್ ಎಂಬಾತನಿಗೆ ತಮ್ಮ ಓಟುಗಳನ್ನು ಕೊಟ್ಟು, ವಿಲಾಯತಿಯ ಹೌಸ್ ಆಫ್ ಕಾಮನ್ಸ್ ಎಂಬ ಸಭೆಯಲ್ಲಿ ಆತನು ತಮ್ಮ ಪ್ರತಿನಿಧಿಯಾಗಬೇಕೆಂದು ಗೊತ್ತುಮಾಡಿದರು ಈತನು ಹಿಂದೆ ಬೋಯರ್ ಯುದ್ಧದಲ್ಲಿ ದಕ್ಷಿಣ ಆಫ್ರಿಕಕ್ಕೆ ಹೋಗಿ ಬೋಯರರ ಕಡೆ ನಿಂತು ಇಂಗ್ಲಿಷರ ಮೇಲೆ ಯುದ್ಧ ಮಾಡಿದವನು ತರುವಾಯ ಸುಮಾರು ೧೯೦೩ನೇ ಇಸವಿಯಲ್ಲಿ ವಾಪಸು ಐರ್ಲೆಂಡಿಗೆ ಬಂದು ವಿಲಾಯತಿಯ ಪಾರ್ಲಿಮೆಂಟಿನ ಮೆಂಬರಾಗಿ ಚುನಾಯಿಸಲ್ಪಡಬೇಕೆಂದು ಪ್ರಯತ್ನಪಟ್ಟನು ಇಂಗ್ಲಿಷರಿಗೆ ದ್ರೋಹಚಿಂತನೆಯನ್ನು ಮಾಡಿದ ಈ ಮನುಷ್ಯನು ಇಂಗ್ಲಿಷ್ ಪ್ರಜೆಗಳ ಪ್ರತಿನಿಧಿಯಾಗಿ ನಿಲ್ಲುವುದು ಸರಿಯಲ್ಲವೆಂದು ಗವರ್ನ್‌ಮೆಂಟಿನವರು ಆತನ ಮೇಲೆ ಮೊಕದ್ದಮೆಯನ್ನು ತಂದರು ಮ್ಯಾಜಿಸ್ಟ್ರೇಟರು ಆತನನ್ನು ರಾಜದ್ರೋಹಿಯೆಂದು ತೀರ್ಮಾನಮಾಡಿ, ಆತನಿಗೆ ಮರಣದಂಡನೆಯನ್ನು ವಿಧಿಸಿದರು ತರುವಾಯ ಈ ಮರಣ ದಂಡನೆಯು ತಪ್ಪಿ ಆತನು ಸಜಾ ಶಿಕ್ಷೆಯನ್ನು ಅನುಭವಿಸಬೇಕೆಂದು ಗವರ್ನ್‌ಮೆಂಟಿನವರು ಅಪ್ಪಣೆ ಕೊಟ್ಟರು ಆದರೆ ಒಂದು ವರುಷದೊಳಗಾಗಿ ಅಂದರೆ ೧೯೦೪ನೇ ಜನವರಿಯಲ್ಲಿ ಕರ್ನಲ್ ಲಿಂಚ್ ಎಂಬಾತನಿಗೆ ಬಂಧನದಿಂದ ಬಿಡುಗಡೆಯಾಯಿತು ಈಗ ಇಂಥಾ ಮನುಷ್ಯನನ್ನು ಆ ಡಿಸ್ಟ್ರಿಕ್ಟಿನ ಪ್ರಜೆಗಳು ಏಕವಾಕ್ಯತೆಯಿಂದ ತಮ್ಮ ಪ್ರತಿನಿಧಿಯಾಗಿ ಚುನಾಯಿಸಿರುತ್ತಾರೆ ಇಂಗ್ಲಿಷ್ ಗವರ್ನ್‌ಮೆಂಟಿನವರು ಈತನನ್ನು ಪಾರ್ಲಿಮೆಂಟ್ ಮೆಂಬರಾಗಿ ಅನುಮೋದಿಸಿಕೊಳ್ಳುವರೋ ಇಲ್ಲವೋ ಮುಂದೆ ತಿಳಿಯಬೇಕಾಗಿದೆ

Printed and Published by the Rev H GULLIFORD, Proprietor and Manager, Wesleyan Mission Press, Mysore 9/9/1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩. ಮೈಸೂರು—ಸರ್ ೧೯೧೯ ನೇ ಇಸವಿ ಸೆಪ್ಟೆಂಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೧೮.

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-30]

ತಲೆನೋವು, ಗಂಟು ಉಬ್ಬುವದು, ವಾತ, ಸನ್ನಿವಾತ, [illegible], ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, [illegible], ಘಾಯ, ಚಳುಮು, ಇತ್ಯಾದಿ

ಇದರ ವಿಷಯವಾಗಿ ಸರ್ವರಜನರೂ ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦-೬-೦

ನಮಕೀನಾದ ಮುಲಾಮು.

[illegible] ಗಜಕರ್ಣ, ತುರಿ, ಕಜ್ಜಿ ನೂಂಕಡಪವು [illegible] ಇದರಿಂದ [illegible] ಬಾರುತ್ತ [illegible] ಡಬ್ಬಿ ಒಂದರ ಕಿಮ್ಮತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಮೃತಮಿಶ್ರ	೨-೦-೦
[illegible]	೦-೮-೦
ವಜ್ರಗುಟಿಕೆ—[illegible] ರೇಚಕಮದ್ದು	೧-೦-೦
[illegible]	೦-೮-೦
[illegible]	೨-೮-೦
[illegible]	೬-೪-೦
[illegible] ಮಕ್ಕಳ [illegible]	೧-೨-೦
[illegible]	೩-೧-೦
[illegible] ರೋಗಕ್ಕೆ	೮-೮-೦

[illegible] ವಿಳಾಸ —

ವಿಲಿಯಂ ಅಂಡ್ ಕಂಪೆನಿ ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — 'ಅಮೃತಾಂಜನ,' ಮುಂಬಯಿ

THE [illegible] FOR HASSAN [illegible] IS HASSAN.

ನಿಮ್ಮ ತಲೆಯ ಮೇಲಿರುವದೇನು?

[illegible] ಟೋಪಿ ಅಲ್ಲವೋ?

[illegible] ಬೇಗ [illegible] ತರಿಸಿಕೊಳ್ಳಿ.

1 36

ಒಳ್ಳೇ ಟೋಪಿಗಳು ಯಾವವು? ಯಾವೆ? ಸಂದೇಹವೇಕೆ?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಇಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನಮ್ಮಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾಫಿ, ಕೆಂಪು, ಕಪ್ಪು, ಬಿಳಿಕೆ, ಕಾಸಿ ಬಣ್ಣಗಳ ಟೋಪಿಗಳು ೧ ರೂ [illegible], ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ೨ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಸೂತಿ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 31

೧ ಶೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೆನೋವು, ಸಂಧುಗಳ ನೋವು, ಮೈ ಕೈಕಾಲು ಕೊರತೆ (ಜಾಡ್ಯ), ಮೈ ನಡುಕ. [illegible] ಗಳ ಜಾಡ್ಯ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು ನೆಗಡಿ [illegible], ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, [illegible] ದಾರಿ ಕೊಡದೆ, [illegible] ಬಲಹೀನತೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸಿ [illegible] ಹುತುಹೂತಿ, ಮಕ್ಕಳ ಎಳವು, ಜ್ವರ, [illegible] ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. [illegible] ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ 18-33



ಇದು ಸಾಧಾರಣ ಜ್ವರ, [illegible], ಮೊರೆ ಜ್ವರ, ಸನ್ನಿಜ್ವರ ಶೀತಜ್ವರ, ವಾತಜ್ವರ, [illegible], ಎಂಬ ಸಕಲ [illegible] ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

— [illegible] ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಬಿ ವೆಂಕಟಪತಿ ಅಯ್ಯರವರು—[illegible] ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ [illegible] ಸೀಸೆಯು ತೀರಿಹೋಯಿತು ಇನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು [illegible] ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು [illegible] ಸೀಸೆಯನ್ನು [illegible] ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ [illegible] ಆಣೆ. ೧ ರೂ, [illegible] ರೂ [illegible] ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಯಾಗುವದು

ಓಮಂ ಕರ್ಪೂರ



ಈ ಔಷಧವು ಅಜೀರ್ಣ, ಸಿತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ಹಾನಾತರದ ಹೊಟ್ಟೆನೋವುಗಳು—ಮುಂತಾದ ಕೈಲ್ಲಾ ಮಹಾ ಹಿತವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು ಜ್ವರಹರಿಯ [illegible] ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ಓಮಂ ಕರ್ಪೂರವನ್ನು ನಾನೂ ನನ್ನ ಕಾಮ್ಪೌಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ನಿವಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾವತಿ ಆಗುವ ಪತ್ರಿಕೆಯ ಹೊದಿಕೆಯಲ್ಲಿ ಎತ್ತಿ ಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

47 17

ತಲೆನೋವು, ವಾಯುನೋವು, ಸೊಂಟ ಗಂಟಿನೋವು, [illegible], ನಾನಾ ವಿಧ ವಾಯುರೋಗಗಳು ಶೀತರೋಗಗಳು, ಚಳುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಹೇಳಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದಕಾರಣ ಇದನ್ನು [illegible] ವಿಶೇಷ ಪ್ರೀತಿಯಿಂದಲೂ ಎಲ್ಲರೂ ಉಪಯೋಗಿಸುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಕೈ ಬಳಿ ಇಟ್ಟರಬೇಕೆಂದು [illegible] ಈ [illegible] ತೈಲವು [illegible] ಮಾರಲ್ಪಡುತ್ತಿದ್ದ [illegible] ಅದರ ಹುಟ್ಟನ್ನೇ [illegible]

ಕ್ರಯ [illegible] ಆಣೆ [illegible] ಆಣೆ [illegible] ಅಥವಾ [illegible] ಬಾಟ್ಲಿ ಒಂದೇ [illegible] ವಾಸಿಯಾಗುವದು [illegible] ಎಲ್ಲಾ ವ್ಯಾಪಾರಿಗಳೂ, [illegible] ಎಸ್ [illegible] ಕನ್ನಯಚೆಟ್ಟಿ ಅಂಡ್ ಕಂಪೆನಿ [illegible]

ಎಸ್. ಕ್ಲೆಮೆಂಟ್,

[illegible] ಪೇವಮುಚೆಟ್ಟಿ ಬೀದಿ, [illegible], ಮದರಾಸ್.

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ—(1?5 ಪುಟಗಳು, ಸೊಗಸಾದ ಬಟ್ಟೆ ಬೈಂಡು ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಜೀವಿಸಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವದಕ್ಕಿದ್ದ ನಾಶವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ ಭೂಲೋಕದ ಸಕಲ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವನಚರಿತ್ರೆಯನ್ನು ಓದುವದರಿಂದ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(100 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10—37]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ಹೇಳಿದಾ —ಎಂದರೆ ನಿನಗೆ ಯಾವ ರೋಗ ಉಂಟಾಗಿರಲಿ— ನಿನಗೆ ದಿನಕ್ಕೆ ಒಂದು ಸಾರಿಯಾದರೂ ಕಾಲಶ್ರುವೃತ್ತಿಯಾಗುತ್ತಿದೆಯೋ ? ಎಂದು ನನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೊರನರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಇಡಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವು ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ ಪಿತ್ತದ್ವಾರ ಅಜೀರ್ಣ ಅಗ್ನಿಮಾಂದ್ಯ ಗಾಢ ಅಶಕ್ತಿ ಎದೆಯುರಿ ತಲ್ಲಣಿಸುವುದು, ತಲೆ ತಿರುಗುವುದು ತಲೆನೋವು, ಹಳದಿ ಜ್ವರ ಹೊಟ್ಟೆ ನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಓಡಿಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವು ನಾಶವಾಗಿ ಹೋಗುವುವು

ಡೋರ್ನರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಒಲಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [6-3]

ಬೆಲೆ ... ೧೨ ಆಣೆ ... ಬುಡ್ಡಿಗಳಲ್ಲಿ ... ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ... ಹೆಚ್ಚು ಮಾತ್ರೆಗಳುಳ್ಳ ಔಷಧಗಳನ್ನು ... ಅಥವಾ ಮೋರ್ ... ಬಾಕ್ಸ್ ... ಬಾಯಿ —...ಯಿಂದ ...ವುದು

(೧೨ ಆಣೆ ಬುಡ್ಡಿ ಪರಿಮಾಣ)

CHAMBERLAIN'S COLIC CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆ ರೋಗಗಳಿಗೆ ಕಾಲರಾ ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4 37



ಕಾಲರಾ, ಹೊಟ್ಟೆಯ ನೋವು, ಬರೀ ಭೇದಿಯಾಗುವುದು ಆಮಶಂಕೆ, ವಾಂತಿ ಭೇದಿ ಉಪದ್ರ, ಕಾಲುಗಳ ಸೆಳೆತ, ಹೊಟ್ಟೆಯ ನಾನಾ ತರದ ನೋವುಗಳು—ಈ ರೋಗಗಳನ್ನೆಲ್ಲಾ ವಾಸಿಮಾಡತಕ್ಕ ಗುಣಯುಕ್ತವಾದ ಔಷಧವು ಜನರನ್ನು ಬಹು ಕಾಲದ ವರೆಗೂ ಅವುಗಳ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಅನ್ಯಾವ ಔಷಧವೂ ಮಾಡಿರುವುದಿಲ್ಲ. ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿ ಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೆ ಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಶೀಸೆಗೆ ೧ ರೂಪಾಯಿ   ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 6 37
(ಸ್ಕಾಟ್ಸ್ ಇಮಲ್ಷನ್)

...ಎಂದು ಹೇಳಿ ... ಮಕ್ಕಳು ... ಮಕ್ಕಳ ... ಪುಷ್ಟಿಯಾಗಿ ... ಬರುತ್ತವೆ

ಇದು ಕುಡಿಯುವುದಕ್ಕೆ ರುಚಿಯಾಗಿರುವುದರಿಂದ ... ಸಂತೋಷವಾಗಿ ಸೇವಿಸುತ್ತಾರೆ

ಇದು ... ಅಶಕ್ತರಾದ ಮಕ್ಕಳನ್ನು ... ಬರುತ್ತವೆ

... ರೋಗಕ್ಕೆ ತಯಾರಾದದ್ದು

... ಎಲ್ಲಾ ಔಷಧ ಷಾಪುಗಳಲ್ಲೂ ... ಸಿಕ್ಕುತ್ತದೆ

... ಅಂಡ್ ಬೌನ್ ಲಿಮಿಟೆಡ್
ಕೆಮಿಸ್ಟ್ ಕಾರ್ಖಾನೆ
ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವದೇಶಿ ಬಟ್ಟೆಗಳು ! ಸ್ವದೇಶಿ ಬಟ್ಟೆಗಳು !

2 18

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ... ಬಹಳ ಬಾಳಿಕೆ ಬರತಕ್ಕವುಗಳಾಗಿವೆ ... ಈ ಬಟ್ಟೆಗಳು ಕೊಳ್ಳುವುದರಲ್ಲಿ ... ಸ್ವದೇಶೀ ಪ್ರಿಯರೆ ... ಒಂದೆಕ್ಕೆ ... ಕಾಲುಗಳು ... ಮುದ್ರಿಕೆ ...

ಪೀ ಸ ... ಮ್ಯಾನೇಜರ್

... ಬಿ ಎಸ್ ... ಮೈಸೂರು.

ಗೃಹಕೃತ್ಯದ ನೋಟೀಸು

66 1

... ಹೂಕೋಟೆ ... ವಾಸ್ತವ್ಯದ ... ತಿಳಿಸುವದೇನೆಂದರೆ— ... ಎಂಬ ಹುಡುಗ ... ಗಂಡಸಾಗುವವರೆಗೆ ... ದೊಡ್ಡವಳಾದ ... ನಂತರ ... ರೂಪಾಯಿಗಳವರೆಗೆ ... ಎಂಬುವನ ... ರಾಮೋಗೆ ... ಇದು ಕೊಂಡು ಗಂಡುಮಗುವನ್ನು ಹತ್ತಿರ ... ಎಂಬ ಹುಡುಗಿಯನ್ನು ... ಹುಡುಗನಿಗೆ ... ಪಾಲಿಸ ... ಕಲಸಮಾಡಲು ... ಮೈಸೂರ್ ... ದೊಡ್ಡವನಾಗಿದ್ದರೂ ... ಚಿಕ್ಕಿಲ್ಲವು ... ಮೈಸೂರ್ ಹುಡುಗನು ಬಾಧ್ಯನಲ್ಲವು

... ಈ ಗುರ್ತು ಮಾಸ್ತಿಗೌಡ ಹಾಡ್ಯ

ಶಾಲಿವಾಹನ ಶಕ ವರುಷಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಭಾದ್ರಪದ ಶುದ್ಧ ಏಡಿಗೆ ಗುರುವಾರದಿಂದ ಭಾದ್ರಪದ ಶುದ್ಧ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ಎಂಟ ಮಾಸ
16	ಗುರು §	ಬಿದಿಗೆ	11 ...	ಹ	3 16	1
17	ಶುಕ್ರ	ತದಿಗೆ	11 11	ಚಿ	13 30	2
18	ಶನಿವಾ	ಚೌತಿ	11 1	ಸ್ವಾ	11 ...	3
19	ರವಿವಾ ‡	ಪಂಚಮಿ	11 16	ವಿ	11 11	4
20	ಸೋಮ	ಷಷ್ಠಿ	7 ...	ಅ	...	...
21	ಕುಜ *	ಸಪ್ತಮಿ	... 25	ಜೆ	...	...
22	ಬುಧ	ಅಷ್ಟಮಿ	... 30	ಮೂ	... 20	...

§ ಚಂದ್ರೋದಯ ಉತ್ತರದ ... ಪಡಿಶೋತ್ತಮ ...
ಸ್ವರ್ಣಗೌರೀ ವ್ರತ
ಸಿದ್ಧಿವಿನಾಯಕ ವ್ರತ
‡ ಋಷಿಪಂಚಮೀ ... ವ್ರತ
* ಅಮುಕ್ತಾಭರಣ ಸಪ್ತಮಿ ... ವ್ರತ

ಸಂಜೀವಿನೀ ಔಷಧಾಲಯ, ಮೈಸೂರು.

23 32

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷಯ, ವಾಯುರೋಗಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ ಬಲ, ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಗುಳಿಗೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು, ಪ್ರಕೋಪ ಇವುಗಳಿಗೆ ಖಾತರಿ ಔಷಧ ... ಮುಂದಿ ಪ್ಲೇಗಿನಿಂದ ಗುಣ ಹೊಂದಿದವರ ... ದಿನಕ್ಕೊಂದಾವರ್ತಿ ... ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಮನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪರೆಗಣ್ಣು, ತಲೆನೋವು, ಶಲೀಬಾರ ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ಪಾಟವವನ್ನೂ ನೋಡುವ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಏಜಂಟರುಗಳೂ ಬೇಕು ಅರ್ಜಿ ... ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ತ್ಯಾಮಸಿವಾರಣೆಯ ಕಾರ್ಯಗಳು

೧೯೦೯ ನೇ ಸೆಪ್ಟಂಬರ್ ತಾ ... ಕ್ಕೆ ಕಳೆದ ವಾರದ ಬಂದು ... ರಿಪೋರ್ಟು

ಡಿಸ್ಟ್ರಿಕ್ಟು	... ಗಂಡಸರು	ಹೆಂಗಸರು	ಮಕ್ಕಳು	... ರೂ	... ಜನರು
ಬೆಂಗಳೂರು	...	1		1	15
ಕೋಲಾರ			11	...	
ತುಮಕೂರು					
ಮೈಸೂರು					
ಹಾಸನ	...	...		211	
ಚಿತ್ರದುರ್ಗ					
ಕಡೂರು				33	
ಶಿವಮೊಗ್ಗ	1...	11	15	...	
ಬೆಂಗಳೂರು ...	159	1...	15	113	
...					
ಒಟ್ಟು	...	111	...	1...	

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಸಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫ ೦ ೦	೧೫ ೪ ೦
ಕಂಬೂದಿ ಲಕ್ಕಿ ಲವಲ್		೧೪ ೮	೧೪ ೮ ೦
" ಮಧ್ಯಂ		೧೨ ೦	೧೩ ೮ ೦
ಜವ್ವಾಣಿ ಅಕ್ಕಿ		೧೬ ೦	೧೨ ೮ ೦
ಸಣ್ಣಕ್ಕಿ ಅವಲ್		೧೭	೧೬ ೮ ೦
" ಮಧ್ಯಂ		೧೬ ೦ ೦	೧೬ ೧ ೦
ರಾಗಿ ಬಿಳಿ ಪಲ್ಲಾ ೧ ಕ್ಕೆ		೧೬ ೦ ೦	೧೫ ೮ ೦
" ಮಧ್ಯಂ		೧೫ ೦ ೦	೧೫ ೦ ೦
ಹೈಬ್ರಿಡ್ ರಾಗಿ ಪಲ್ಲಾ ೧ ಕ್ಕೆ		೯ ೦ ೦	೯ ೦ ೦
ಕಂದ್ರಾಗಿ		೨ ೮ ೦	೭ ೮ ೦
ಜೋಳ		೯ ೦	೯ ೨ ೦
ದಲಸಂದೆ ಪಲ್ಲಾ ೧ ಕ್ಕೆ		೧೦ ೭ ೦	೧೧ ೮ ೦
ಬಿಳೀ ಅವರೆ		೧೩ ೮ ೦	೧೫ ೮ ೦
ಹೆಸರು		೧೭ ೨ ೦	೧೧ ೧೨ ೦
ಉದ್ದು		೧೪ ೪ ೦	೧೩ ೦ ೦
ಕಡಲೆ		೧೪ ೪ ೦	೧೧ ೦ ೦
ಎಳ್ಳು ಸೇ ೧೭೭ ಕ್ಕೆ		೧೫ ೦ ೦	೧೫ ೦ ೦
ಹುರುಳಿ		೧೨ ೨ ೦	೧೨ ೮ ೦
ಹರಳು ೧೨೭ ಸೇರಿಗೆ		೧೪ ೦ ೦	೧೦ ೦ ೦
ಸೀಗೆ ಕಾಯಿ ಮಣ ೧ ಕ್ಕೆ		೨ ೮ ೦	೨ ೭ ೦
ಮೆಣಸಿನಕಾಯಿ		೬ ೦ ೦	೬ ೧೨ ೦
" ಮಧ್ಯಂ		೫ ೮ ೦	೪ ೪ ೦
ವೆಲ್ಲ ದೊಡ್ಡ ಅಚ್ಚು		೯ ೮ ೦	ಮ ೨ ೪ ೦
ಒಳ್ಳೆಣ್ಣೆ ಮಣ ೧ ಕ್ಕೆ		೫ ೮ ೦	೫ ೦ ೦
ಹುಳ್ಳೆಣ್ಣೆ "		೫ ೮ ೦	೪ ೨ ೦
ಧೂತ್ತುಂಬರಿ ಪಲ್ಲಾ ೧ ಕ್ಕೆ		೯ ೦ ೦	೯ ೦ ೦
ಉಪ್ಪು		೬ ೧೧ ೦	೫ ೧೨ ೦
ಹುಣಸೇ ಹಣ್ಣು		೧ ೧೪ ೦	೧ ೧೨ ೦
" ಹಳೇದು		೧ ೮ ೦	೧ ೮ ೦
ತುಪ್ಪ ಮಣ ೧ ಕ್ಕೆ		೧೬ ೮ ೦	೧೩ ೪ ೦
ಸೀಮೆಣ್ಣೆ ಪೆಟ್ಟಿ ೧ ಕ್ಕೆ		೪ ೪ ೧	೪ ೨ ೦
ತೆಂಗಿನ ಕಾಯಿ ೧೦೦ ಕ್ಕೆ		೫ ೦ ೦	೪ ೧೨ ೦
ಅಡಿಕೆ ಕಾಯಿ ಮಣ ೧ ಕ್ಕೆ		೦ ೨ ೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ ಕ್ಕೆ		೧ ೦ ೦	೦ ೧೧ ೦
ಚಿನ್ನ (ಪೌನ್) ಕೆಂಪು		೧೫ ೬ ೦	೧೫ ೯ ೦
" ಪಾಮೆ		೧೬ ೦ ೦	೧೫ ೧೩ ೦
" ಗಟ್ಟಿ ತೊಲ ೧ ಕ್ಕೆ		೨೪ ೨ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೨ ೪ ೦	೬೫ ೦ ೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

13—8—1909 ರಿಂದ 20—8—1909 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	59	31	0	0
ಬೆಂಗಳೂರು ಡಿಸ್ಟ್ರಿಕ್ಟು	12	10	26	20
ಮೈಸೂರು ,,	27	21	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	13	[illegible]	0	0
ಚಿತ್ರದುರ್ಗ ,,	0	[illegible]	[illegible]	[illegible]
ಕಡೂರ್ ,,	22	11	0	0
ಶಿವಮೊಗ್ಗ ,,	4	[illegible]	[illegible]	6
ಜುಮ್ಲಾ	137	90	32	26

ವ್ಯವಸಾಯ — ಕೈ ತೋಟಗಳು.

ಬದನೆಸೊಪ್ಪು ಮಾಡುವ ಕ್ರಮ.

ಭೂಮಿ.—ಸಸಿಹಾಕುವ ಭೂಮಿಯನ್ನು ಚೆನ್ನಾಗಿ ಅಗೆದು ಹೆಂಟೆ ಒಡೆದು ಕಲ್ಲುಗಳು ಆರಿಸಿ ಹಾಕಿ ಭೂಮಿಯನ್ನು ಹಸನಾಗಿ ಹದಮಾಡಬೇಕು. ಇದಕ್ಕೆ ಒಳ್ಳೇ ಕೊಳೆತಗೊಬ್ಬರದ ಜೊತೆಯಲ್ಲಿ ಬೂದಿ ಮತ್ತು ಸುಣ್ಣದ ಬೂದಿಯನ್ನು ಬೆರಸಿ ಗೊಬ್ಬರ ಸಿದ್ಧಪಡಿಸಿ ಹಾಕಬೇಕು. ಹೀಗೆ ಹಾಕುವುದಕ್ಕೆ ಮುಂಚಿತವಾಗಿ ಒಂದೆರಡು ವಾರ ಅಗೆದು ಹಾಕಿದರೆ ಭೂಮಿಗೆ ಬಿಸಲು ಕಾಸಿ ಚೆನ್ನಾಗಿ ತಗಲಿ ಹಕ್ಕಿಪಕ್ಷಿಗಳ ಸಂಚಾರಕ್ಕೆ ಅವಕಾಶ ಕೊಟ್ಟರೆ ಕ್ರಿಮಿಗಳು ಸತ್ತು ಸಸಿಗಳು ಚೆನ್ನಾಗಿ ಬೆಳೆಯುವುದಕ್ಕೆ ಸಹಾಯವಾಗುತ್ತದೆ. ಭೂಮಿಯಲ್ಲಿ ಚೌಕಚೌಕವಾಗಿ ಮಡಿಗಳು ಮಾಡಿ, ನೀರು ಹಾಯಿಸಿ ಒತ್ತಾಗಿ ಬಿತ್ತನವನ್ನು ಬಿತ್ತಬೇಕು. ಕೈಯಿಂದ ಚೆನ್ನಾಗಿ ಸಮವಾಗುವಂತೆ ಮಾಡಿ ಬೀಜಗಳು ಮೇಲೆ ಕಾಣದಂತೆ ಮಣ್ಣಿನ ಜೊತೆಯಲ್ಲಿ ಬೆರಸುತ್ತಾರೆ. ಆಗ ಭೂಮಿಗೆ ನೆರಳು ಕೊಡಬೇಕು. ಬೀಜಹಾಕಿದ ೮-೫ ದಿವಸಗಳ ಮೇಲೆ ಸಸಿಗಳು ಕಾಣಿಸಿಕೊಳ್ಳುತ್ತವೆ. ಸಸಿಗಳಿಗೆ ಪ್ರತಿ ದಿವಸವೂ ಸಾಯಂಕಾಲದಲ್ಲಿ ತೆಳ್ಳಗೆ ನೀರು ಹಾಕಬೇಕು. ಮಳೆಬಂದು ಮಡಿಗಳಲ್ಲಿ ನೀರು ನಿಂತರೆ ನೀರನ್ನು ಹೊರಕ್ಕೆ ಬಿಟ್ಟುಬಿಡಬೇಕು. ಎಲೆಗಳನ್ನು ಹುಳು ತಿನ್ನುವಹಾಗೆ ಕಂಡುಬಂದರೆ ಬೂದಿ ಮತ್ತು ಸುಣ್ಣದಪುಡಿ ಬೆರಸಿ ಎಲೆಗಳ ಮೇಲೆ ಚೆಲ್ಲುವುದು ಒಳ್ಳೇದು.

ಕಾಲ.—ಆಯಾಯ ದೇಶ ಅಥವಾ ಸ್ಥಳಗಳಲ್ಲಿ ಅನಾದಿಯಿಂದ ನಡೆದುಬಂದ ಪದ್ಧತಿಯನ್ನು ಅನುಸರಿಸಿ ಸಸಿಹಾಕುವ ಕಾಲ ಮತ್ತು ನಡುವ ಕಾಲನಿರ್ಣಯದಂತೆ ನಡಿಸಬೇಕು.

ಬದನೆ ಹಾಕುವ ಭೂಮಿಯ ವ್ಯವಸಾಯ.—ಸಸಿ ನೆಡುವುದಕ್ಕೆ ಕೆಲವು ತಿಂಗಳಿಗೆ ಮುಂಚಿತವಾಗಿಯೇ ಭೂಮಿಯನ್ನು ಆಳವಾಗಿ ಉತ್ತು ಹಸನುಮಾಡಿಸಿರಬೇಕು. ಇಂತಹ ಭೂಮಿಯನ್ನು ತಿಂಗಳಿಗೆ ಒಂದಾವರ್ತಿ ಕುಂಟೆ ಹೊಡೆಯಬೇಕು. ಬದನೆ ಗಿಡಕ್ಕೆ ನೀರು ಹಾಯಿಸುತ್ತಿದ್ದಾದರೆ ಕಾಲುವೆಗಳನ್ನು ಮಾಡಬೇಕು. ಗಜಕ್ಕೆ ಒಂದರಂತೆ ಕತೆಗಳನ್ನು ತೋಡಿದು ಅರ್ಧ ಕತೆಗಳನ್ನು ಇದೇ ರೀತಿ ಮಾಡಿ ಒಂದೊಂದು ಕತೆಯಲ್ಲಿ ಮಳೆಯಿಲ್ಲದ ದಿವಸ ೩ ಸಸಿಗಳನ್ನು ನೆಟ್ಟು ಮೂರು ಬೂದಿ ಒಂದು ಸುಣ್ಣದ ಬೂದಿಯಂತೆ ಬೆರಸಿ ಇದನ್ನು ದನದ ಗೊಬ್ಬರದ ಜೊತೆಗೆ ಅಥವಾ ಹಿಂಡಿ ಗೊಬ್ಬರದ ಜೊತೆಗೆ ಬೆರಸಿ ತಕ್ಕಮಟ್ಟಿಗೆ ಗೊಬ್ಬರ ಹಾಕಿ ಮಣ್ಣುಮುಚ್ಚಿ ಬಿಡಬೇಕು. ಸಸಿಗಳು ನೆಟ್ಟ ೧೦-೧೫ ದಿನಗಳ ತರುವಾಯ ಭೂಮಿಯನ್ನು ಅಗೆಯಬಹುದು. ಸಸಿಗಳು ಕೆಂದರೆ ಇರುವ ಸ್ಥಳದಲ್ಲಿ ಹೊಸ ಸಸಿಗಳನ್ನು ನೆಡಬೇಕು. ಸಸಿಗಳು ನೆಟ್ಟ ಒಂದು ತಿಂಗಳ ತರುವಾಯ ಭೂಮಿಯನ್ನು ಚಿಕ್ಕನೇಗಿಲಿನಿಂದ ಉತ್ತು ಸಸಿಗಳ ಬುಡಕ್ಕೆ ಮಣ್ಣುಗಳನ್ನು ಏರಹಾಕಿ ಆಗಾಗ್ಗೆ ಕಳೆ ಕೀಳುತ್ತಾ ಇರಬೇಕು. ಹೂಬಿಡುವ ಸಮಯದಲ್ಲಿ ಬುಡಗಳಿಗೆ ತಿಪ್ಪೆಗೊಬ್ಬರ ಅಥವಾ ಕುರಿಗೊಬ್ಬರ ಹಾಕುವುದು ಒಳ್ಳೇದು.

ಬದನೆ ಗಿಡಗಳು ಫಲಬಿಟ್ಟು ಆದ್ಮೇಲೆ ಅವನ್ನೆಲ್ಲಾ ಅವುಗಳನ್ನು ಕಸಿಮಾಡಿ ಗೊಬ್ಬರ ಹಾಕಿದರೆ ಕೂಳೆಯಲ್ಲಿ ಚಿಗುರು ಒಡೆದು ೨ನೆಯ ಸಲ ಫಸಲು ಆಗುತ್ತದೆ. ಆದರೆ ಕೂಳೆ ಫಸಲಿನಲ್ಲಿ ಆಗುವ ಫಲ ಸ್ವಲ್ಪ ಮತ್ತು ಕಾಯಿಗಳ ರುಚಿಯು ಕಡಮೆ. ಪ್ರಾಯಶಃ ಹುಳುಬಿದ್ದು ಕೆಟ್ಟುಹೋಗುವುದೂ ಉಂಟು. ಈ ಫಸಲು ವಿಶೇಷ ಫಾಯಿದೆ ಆಗದಲ್ಲ.

ಬದನೆ ಫಸಲಿಗೆ ವಿಶೇಷವಾಗಿ ರೋಗಗಳು ಬರುತ್ತವೆ. ಈ ಫಸಲನ್ನು ದೊಡ್ಡ ಊರುಗಳ ಸಮೀಪದಲ್ಲಿ ಮಾಡಿದರೆ ಒಳ್ಳೇ ಲಾಭ ಸಿಕ್ಕುವುದು; ರೈತರು ಹಣ ಸಂಪಾದಿಸಬಹುದು. ದೊಡ್ಡ ಗ್ರಾಮಗಳಿಗೆ ದೂರ ಪ್ರದೇಶಗಳಲ್ಲಿ ಈ ಫಸಲು ಹೆಚ್ಚಾಗಿ ಬೆಳೆದರೆ ರೈತನಿಗೆ ವಿಶೇಷ ಪ್ರಯೋಜನ ಆಗಲಾರದು.

ಜಾತಿಗಳು.—ಬದನೆಯಲ್ಲಿ ಅನೇಕ ಜಾತಿಗಳು ಉಂಟು. ದೇಶದೇಶಕ್ಕೂ ಕಾಲಭೇದಕ್ಕೂ ತಕ್ಕ ಬದನೆಯೂ ಉಂಟು. ವರ್ಣಭೇದ ಆಕಾರ ಭೇದಗಳೂ ರುಚಿಭೇದಗಳೂ ಉಂಟು. ಈ ವಿಷಯ ಎಲ್ಲರಿಗೂ ಸಾಮಾನ್ಯವಾಗಿ ತಿಳಿದೇ ಇದೆ.

ಬಿತ್ತನೆ ಬೀಜವನ್ನು ಮಾಡುವ ಕ್ರಮ.—ಮೊದಲನೇ ಬಿಡಿನಲ್ಲಿ ಆರೋಗ್ಯವಾಗಿರುವ ಒಳ್ಳೇ ಕಾಯಿಗಳನ್ನು ಬೀಜಕ್ಕೆ ಬಿಡಬೇಕು. ಇವು ಚೆನ್ನಾಗಿ ಹಣ್ಣಾಗಿ ಅರಿಸಿನ ಬಣ್ಣಕ್ಕೆ ಬಂದಾಗ ಕಿತ್ತು ನಾಲ್ಕು ಭಾಗವಾಗಿ ಸೀಳಿ ೨-೩ ದಿವಸ ಹಾಗೇ ಒಣಗಿಸಿ ಇಡಬೇಕು.

ಭೂಮಿಯ ಗುಣ.—ಎತ್ತರವಾದ ಮರಳುಮಿಶ್ರವಾದ ಕೆಂಪು ಕಪ್ಪು ಭೂಮಿ, ಸುಣ್ಣದ ಬೂದಿ ಮತ್ತು ಸಾವಯವ ಗೊಬ್ಬರ ಒಳ್ಳೇದು. ಇವನ್ನು ಹೆಚ್ಚಾಗಿ ಇರುವಾಗ್ಗೆ ಹಾಕಬೇಕು. ಜೇಡಿಮಣ್ಣಿನ ಭೂಮಿಯಲ್ಲಿ ಕಾಯಿ ಚಿಕ್ಕದು, ರುಚಿ ಹೆಚ್ಚು. ಜಾಸ್ತಿಯಾಗಿ ಸೊಪ್ಪಿನ ಗೊಬ್ಬರ ಮತ್ತು ಅಮೋನಿಯ ಗೊಬ್ಬರ ಹಾಕಿದರೆ ಎಲೆ ಅಗಲವಾಗುತ್ತೆ. ಹುಳು ಕಾಯಿಗಳು ಆದನು. ಸಗಣಿ ಗೊಬ್ಬರ ಮತ್ತು ಸೊಪ್ಪಿನ ಗೊಬ್ಬರ ಹಾಕಿದ ಭೂಮಿಗಿಂತ ಇದು ಕಡಮೆಯಾದ ಜಮೀನಿನಲ್ಲಿ ಕಾಯಿಗಳು ಹೆಚ್ಚಾಗಿ ಬರುತ್ತವೆ. ಬದನೆ ಗಿಡಗಳಿಗೆ ರೋಗಗಳು ಹೆಚ್ಚು ಮತ್ತು ಹುಳು ಬೀಳುವುದೂ ಜಾಸ್ತಿ. ಆದದ್ದರಿಂದ ಒಂದೇ ಜಾಗದಲ್ಲಿ ಪ್ರತಿ ವರುಷವೂ ಹಾಕುವುದು ಒಳ್ಳೇದಲ್ಲ. ಹೀಗೆ ಉಕ್ಕೆ ಮತ್ತು ಚೆನ್ನಾಗಿ ಉಕ್ಕೆ ಬದಲ ಒಳ್ಳೇದು.

ಅವೆನ್ಯೂ ಕೆಟ್ಟೆ ವಿ. ರಾಮಾಚಾರ್ಯರು, ಮೈಸೂರು.

ಮೈಸೂರು ಸಂಸ್ಥಾನದ ಬಜೆಟ್ಟು.—೧೯೦೯-೧೯೧೦ ನೇ ಸಾಲಿನ ಆಯವ್ಯಯಗಳ ಅಂದಾಜು ಪಟ್ಟಿ.

ಜಮಾ ಬಾಬುಗಳು.

ಬಾಬು.	ಬಜೆಟ್ ಅಂದಾಜು, 1909-10.	ತಿದ್ದುಪಾಟಾದ ಅಂದಾಜು, 1908-09.	ನಿಶ್ಚಿತ, 1907-08.
ಜಮೀನ್ ಕಂದಾಯ	ರೂ. 1,03,39,000	ರೂ. 89,00,000	ರೂ. 1,03,80,180
ಫಾರೆಸ್ಟ್	19,38,000	19,11,000	22,76,716
ಎಕ್ಸೈಸ್	40,50,000	43,62,000	41,83,400
ತೆರಿಗೆಗಳು	3,00,000	2,00,000	3,16,444
ಸಾಯರ್ ಸುಂಕ	...	...	2,451
ಉಪ್ಪಿನ ಮೊಳೆಗಳು	10,000	6,000	10,276
ಸ್ಟಾಂಪುಗಳು	8,00,000	8,11,000	7,98,205
ರಿಜಿಸ್ಟ್ರೇಷನ್	1,40,000	1,62,000	1,49,139
ಗಣಿಗಳ ಕಾಣಿಕೆದಾಯ ಮತ್ತು ಗುತ್ತಿಗೆಗಳು	14,56,000	15,36,000	15,82,978
ಬಡ್ಡಿ	1,30,000	92,000	1,76,901
ಲಾಭ ಅಥವಾ ನಷ್ಟ	4,44,000	4,42,000	6,29,606
ಕೋರ್ಟುಗಳು	43,000	45,000	44,453
ಬಂದೀಖಾನೆಗಳು	25,000	25,000	24,950
ಪೋಲೀಸು	36,000	20,000	23,071
ವಿದ್ಯಾಭ್ಯಾಸ	1,28,000	1,33,000	1,34,690
ವೈದ್ಯ	1,04,000	1,00,000	1,37,860
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	63,000	81,000	76,137
ವಯೋಧಿಕರಿಗಾಗಿ ಕೊಡುವ ಪೆನ್ಶನ್‌ಗಾಗಿ ಜಮೆ	2,000	2,000	2,007
ಸ್ಟೇಷನರಿ ಮತ್ತು ಛಾಪಾಖಾನೆ	8,000	7,000	8,745
ನಾನಾ ಚಿಲ್ಲರೆ ಬಾಬುಗಳು	1,25,000	1,12,000	1,49,701
ಸೈನ್ಯ	62,000	65,000	34,390
ರೈಲ್ವೆ ಹುಟ್ಟುವಳಿ ಲೆಕ್ಕ	10,39,000	11,48,000	9,49,073
ಮರಮಮತ್ ಕಾಮಗಾರಿಗಳು	3,62,000	3,80,000	4,01,357
ಕಾವೇರೀ ವಿದ್ಯುಚ್ಛಕ್ತಿಯ ಉತ್ಪಾದನೆ	17,00,000	16,83,000	17 65,346
ಜುಮ್ಲಾ	ರೂ. 2,32,93,000	2,22,46,000	2,41,40,694

ಖರ್ಚು ಬಾಬುಗಳು.

ಬಾಬು.	ಬಜೆಟ್ ಅಂದಾಜು, 1909-10.	ತಿದ್ದುಪಾಟಾದ ಅಂದಾಜು, 1908-09.	ನಿಶ್ಚಿತ 1907-08.
ವಾಪಸ್ ಜಮಾ	2,22,000	2,12 000	2,04,812
ಜಮೀನ್ ಕಂದಾಯ	19,41,000	19,20,000	18,15,279
ಜಂಗಲು	7,75,000	7,33,000	6,61,457
ಅಬ್ಕಾರಿ	3,39,000	3,31,000	3,30,065
ಸಾಯರು	...	...	1,940
ಸ್ಟಾಂಪು	35,000	35,000	26,845
ರಿಜಿಸ್ಟ್ರೇಷನ್	86,000	84 000	82,174
ಗಣಿಗಳ ಹುಟ್ಟುವಳಿ ಖರ್ಚು	2,44,000	1,99,000	1,98,520
ಸಾಧಾರಣ ಸಾಲದ ಬಡ್ಡಿ	85,000	10,000	2,571
ಇತರ ಸಾಲದ ಬಡ್ಡಿ	3,08,000	3,02 000	2 81,403
ಲಾಭ ಅಥವಾ ನಷ್ಟ	12,000	11,000	12,053
ಅರಮನೆ	19,40 000	19,40,000	19 40 000
ಪ್ರೋವಿನ್ಷಿಯಲ್ ತಿಪ್ಪಣಿ	6,96,000	6,58,000	6,67,111
ಲಾ ಕೋರ್ಟುಗಳು	7,86,000	7,87,000	8 56,696
ಬಂದೀಖಾನೆಗಳು	1,27,000	1,26,000	1,22,431
ಪೋಲೀಸು	9,30,000	9,55,000	9,16,368
ವಿದ್ಯಾಭ್ಯಾಸ	10,87,000	9,87,000	13,52,179
ಮುಜರಾಯಿ ಸತ್ರ ದೇವಾಲಯಗಳು	3,57,000	3,43,000	3,35,296
ವೈದ್ಯ	7,60,000	6,72,000	6 81,167
ಶಾಸ್ತ್ರೀಯವಾದ ಮತ್ತು ಇತರ ಚಿಲ್ಲರೆ ಇಲಾಖೆಗಳು	2,75,000	2,60,000	2,28,293
ಖಿರಾರುಗಳ ಮೇಲೆ ಕೊಡುವ ವೇತನಗಳು	35,86,000	35,86,000	35,85,650
ವಯೋಧಿಕರಿಗಾಗಿ ಕೊಡುವ ಪೆನ್ಶನ್ ಮತ್ತು ವೇತನ	6 98 000	6,73,000	6,22,009
ಸ್ಟೇಷನರಿ ಮತ್ತು ಛಾಪಾಖಾನೆ	1,55,000	1,93,000	2,27,586
ಚಿಲ್ಲರೆ ಬಾಬುಗಳು	6,80,000	3,68,000	4,68,793
ಸೈನ್ಯ	14,23,000	13,88,000	12,83,765
ಕ್ಷಾಮದ ಸಹಾಯ	...	1,30,000	2,00,000
ಸಾಲಗಳನ್ನು ಕಡಮೆಮಾಡುವುದು	3,33,000	2,00,000	...
ರೈಲ್ವೆ ಹುಟ್ಟುವಳಿ ಖರ್ಚು	7,20,000	7,20,000	7,18,676
ಸಿವಿಲ್ ಭಾರಿ ಕಾಮಗಾರಿಗಳು	5,33,000	6,40,000	6,37,111
,, ಸಣ್ಣ ಕಾಮಗಾರಿಗಳು	2,08 000	3,41,000	1,75 505
ಸಿವಿಲ್ ಕಟ್ಟಡಗಳು	20,32,000	10,06,000	19,51,535
ಸೈನ್ಯದ ಕಟ್ಟಡಗಳು	18,000	10,000	25,604
ರೈಲ್ವೆ ಕಾಮಗಾರಿ	3,00,000	3,23,000	4,45,591
ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡು—			
ಹುಟ್ಟುವಳಿ ಲೆಕ್ಕ	4,23 000	3,68,000	2,56,690
ನಷ್ಟಕ್ಕೆ ಪರಿಹಾರ	8,63,000	6,19,000	...
ಸಾಲದ ಮೇಲಿನ ಬಡ್ಡಿ		70,000	62,577
ಸಾಲತೀರಿಸುವ ಫಂಡಿಗೆ		1,33 000	1,33,313
ಹೊಸ ಕಾಮಗಾರಿ—			
ಶಿವಸಮುದ್ರ ಕೋಲಾರ್ ಲೈನ್	38,000	...	...
ಬೆಂಗಳೂರು ಸಿಟಿ	1,31,000		75 523
,, ದಂಡು	15 000	..	...
ಮೈಸೂರು ಸಿಟಿ	22 000	...	...
ಉಳಿಯುವ ಬಾಕಿ	55,000	...	2 [illegible]
ಒಟ್ಟು ಖರ್ಚು ರೂ.	2,32,93,000	2,22,46,000	2,41,40,694

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ಸೆಪ್ಟಂಬರ್ ತಾ|| ೧೬ನೇ ಗುರುವಾರ.

ಮೈಸೂರು ಸಂಸ್ಥಾನದ ಬಡ್ಜೆಟ್ಟು.

ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಮೈಸೂರು ಸಂಸ್ಥಾನದ ೧೯೦೯-೧೦ ನೇ ಸಾಲಿನ ಆಯವ್ಯಯಗಳ ಬಡ್ಜೆಟ್ (ಅಂದಾಜಾ ಪಟ್ಟಿ) ಗಳನ್ನೂ, ೧೯೦೮-೦೯ ನೇ ಸಾಲಿನ ತಿದ್ದುಪಾಟಾದ ಅಂದಾಜಾ ಪಟ್ಟಿಗಳನ್ನೂ, ೧೯೦೭-೦೮ ನೇ ಸಾಲಿನ ನಿಶ್ಚಿತ ಹುಟ್ಟುವಳಿ ಖರ್ಚುಗಳನ್ನೂ ಪ್ರಕಟಿಸಿರುತ್ತೇವೆ.

ಈ ಪಟ್ಟಿಗಳನ್ನು ಪರಿಶೋಧನೆಮಾಡಿ ನೋಡಿದಲ್ಲಿ ಗವರ್ನಮೆಂಟಿನವರು ಜಮೀನ ಕಂದಾಯವು ೧೯೦೭-೦೮ ನೇ ಸಾಲಿನಲ್ಲಿ ಎಷ್ಟು ಉತ್ಪತ್ತಿ ಆಯಿತೋ ಅಷ್ಟೇ ಹಾಲಿ ಸಾಲಿನಲ್ಲೂ ಹುಟ್ಟುವಳಿ ಆಗುವುದೆಂದು—ಅಂದರೆ, ೧೯೦೮-೦೯ ನೇ ಸಾಲಿನ ಉತ್ಪತ್ತಿಗಿಂತಲೂ ೧೩,೭೦,೦೦೦ ರೂಪಾಯಿ ಹೆಚ್ಚಾಗುವುದೆಂದು ಅಂದಾಜಾ ಕಟ್ಟಿರುವಂತೆ ಗೊತ್ತಾಗುತ್ತದೆ. ಹಾಲಿ ಸಾಲು ಸುಭಿಕ್ಷಕಾಲವಾಗಿದ್ದೀತೆಂದೂ, ಹುಟ್ಟುವಳಿಯೂ ಬಿಂದುವೇಳೆ ಅಂದಾಜಾ ಕಟ್ಟಿರುವುದಕ್ಕಿಂತಲೂ ಹೆಚ್ಚಾದರೂ ಆಗಬಹುದೆಂದೂ ಕಾಣುತ್ತದೆ. ಆದರೆ ಹೀಗೆ ಹುಟ್ಟುವಳಿಯನ್ನು ಹೆಚ್ಚು ಮಾಡುವುದಕ್ಕಾಗಿ, ದುರ್ಭಿಕ್ಷದ ನಿಮಿತ್ತವಾಗಿ ನಿಲ್ಲಿಸಲ್ಪಟ್ಟಿರುವ ಕಂದಾಯ ಕಂತುಗಳ ಬಾಕಿಗಳನ್ನೆಲ್ಲಾ ಈ ಒಂದು ಸಾಲಿನಲ್ಲೇ ವಸೂಲ್ಮಾಡಿದಂತೆ ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ. ಕಳೆದ ಸಾಲಿನಲ್ಲಿ ಸಂಸ್ಥಾನದ ಕೆಲವು ಕಡೆಗಳ ರೈತರು ಬಹಳ ಕಷ್ಟನಷ್ಟಗಳನ್ನು ಅನುಭವಿಸಿರುತ್ತಾರೆ. ಅಂಥವರಿಂದ ವಸೂಲಾಗದ ನಿಂತಿರುವ ಬಾಕಿಗಳನ್ನೆಲ್ಲಾ ಒಂದೇ ಸಾಲಿನಲ್ಲಿ ವಸೂಲ್ಮಾಡುವುದಾದರೆ ಅವರು ನಿರ್ಗತಿಕರಾಗಲೂ, ಜಮೀನನ್ನು ಬಿಟ್ಟು ಕದಲುವುದಕ್ಕೂ ಕಾರಣವಾಗುತ್ತದೆ. ಆದಕಾರಣ ಗವರ್ನಮೆಂಟಿನವರು ರೈತರಮೇಲೆ ಬಾಕಿಯಾಗಿರುವ ಕಂದಾಯಗಳನ್ನೆಲ್ಲಾ ಒಂದೇ ಸಾಲಿನಲ್ಲಿ ವಸೂಲ್ಮಾಡುವ ವಿಷಯದಲ್ಲಿ ಚೆನ್ನಾಗಿ ಪರ್ಯಾಲೋಚನೆ ಮಾಡಿಯಾರೆಂದು ನಂಬಿ ನಿರೀಕ್ಷಿಸುತ್ತೇವೆ. ಪ್ರಜೆಗಳ ವಿಷಯದಲ್ಲೂ ಗವರ್ನಮೆಂಟಿನವರ ವಿಷಯದಲ್ಲೂ ಸುಭಿಕ್ಷಕಾಲವು ಬರಲೆಂದು ನಾವು ಸಂತೋಷಪಡುತ್ತಾ, ಅದಕ್ಕೆ ವ್ಯತಿರಿಕ್ತವಾಗದಿರಲೆಂದು ಪ್ರಾರ್ಥಿಸುತ್ತೇವೆ. ಇಷ್ಟುವರೆಗೂ ಸಂಸ್ಥಾನದ ಆಹಾರ ಪದಾರ್ಥಗಳ ಬೆಲೆಗಳು ಅಷ್ಟು ಕಡಿಮೆಯಾಗದಿರಲು ಕಾರಣವೇನೋ ನಮಗೆ ಗೊತ್ತಾಗಿಲ್ಲ. ಅಂತು ಮುಂದಿನ ಸುಗ್ಗಿಯಕಾಲದಲ್ಲಿ ಇದು ಸರಿಹೋಗಬಹುದೆಂದು ನಿರೀಕ್ಷಿಸುತ್ತೇವೆ.

ಕ್ಷಾಮನಿವಾರಣಾರ್ಥವಾಗಿ ಗವರ್ನಮೆಂಟಿನವರು ಒಂದು ಶಾಶ್ವತನಿಧಿಯನ್ನು ಏರ್ಪಡಿಸಿರುವುದೂ, ಅದಕ್ಕೆ ಪ್ರತಿ ಸಾಲಿನ ಹುಟ್ಟುವಳಿಯಿಂದಲೂ ಎರಡು ಲಕ್ಷ ರೂಪಾಯನ್ನು ಸೇರಿಸುತ್ತಾ ಬಂದಿರುವುದೂ ಸಂತೋಷಪ್ರದವಾಗಿರುತ್ತದೆ. ಯಾಕೆಂದರೆ ಈ ಸಂಸ್ಥಾನದ ಕೆಲವು ಭಾಗಗಳು ದುರ್ಭಿಕ್ಷಕ್ಕೆ ಗುರಿಯಾಗುವ ಸ್ಥಿತಿಯಲ್ಲಿರುವವು. ಅಂಥಾ ಕಷ್ಟಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ದ್ರವ್ಯವನ್ನು ಒದಗಿಸಿಟ್ಟುಕೊಂಡಿದ್ದ ಪಕ್ಷದಲ್ಲಿ ಸಂಸ್ಥಾನದ ಸಾಮಾನ್ಯ ಕಾರ್ಯಗಳನ್ನೆಲ್ಲಾ ನಿಶ್ಚಿಂತೆಯಿಂದಲೂ ನಿರುಪಾಧಿಕವಾಗಿಯೂ ನಡಿಸಿಕೊಂಡು ಹೋಗಬಹುದಾಗಿದೆ. ಈ ಕ್ಷಾಮದ ಫಂಡಿನಲ್ಲಿ ಒಂದು ಕೋಟಿ ರೂಪಾಯನ್ನು ಕೂಡಿಸಿ, ಅದು ಕಡಿಮೆಯಾಗದಂತೆ ನೋಡಿಕೊಳ್ಳುತ್ತಾ ಬಂದರೆ ಈ ಸಂಸ್ಥಾನಕ್ಕೆ ಕ್ಷಾಮಡಾಮರಗಳ ಭೀತಿಯೂ, ಕಷ್ಟನಷ್ಟಗಳೂ ಎಂದೆಂದಿಗೂ ನಿವಾರಣೆಯಾಗುವವು.

ಗವರ್ನಮೆಂಟಿನವರು ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಹಾಲಿ ಸಾಲಿನಲ್ಲಿ ಒಂದು ಲಕ್ಷ ರೂಪಾಯಿ ಹೆಚ್ಚಾಗಿ ಖರ್ಚು ಮಾಡುವಂತೆ ಗೊತ್ತುಮಾಡಿದಾರೆ. ಆದರೆ ಈ ಹಣವು ಸಾರ್ಥಕವಾಗಿ ವಿನಿಯೋಗವಾಗುವುದೆಂದು ನಮಗೆ ತೋರುವುದಿಲ್ಲ. ಯಾಕೆಂದರೆ ಈ ಒಂದು ಲಕ್ಷ ರೂಪಾಯನ್ನೂ ಸಂಸ್ಥಾನದ ಪ್ರೌಢ ವಿದ್ಯಾಭಿವೃದ್ಧಿಗೋಸ್ಕರ ಖರ್ಚುಮಾಡುತ್ತಾರೆ. ತಾಲ್ಲೂಕ್ ಮತ್ತು ಹೋಬಳಿ ಸ್ಕೂಲುಗಳಿಗೆ ತೆಗೆದಿಟ್ಟಿರುವ ದ್ರವ್ಯವು ನಿಜವಾಗಿಯೂ ಕಡಮೆಯಾಗಿರುತ್ತದೆ. ಪ್ರೌಢ ವಿದ್ಯಾಭ್ಯಾಸವೇನೋ ಬೇಕು. ಅದರ ಫಲ ಪ್ರಯೋಜನಗಳನ್ನು ಪಡೆಯುವವರು ಫೀಜಿನ ರೂಪದಲ್ಲಿ ಹೆಚ್ಚು ಹಣವನ್ನು ಕೊಡುವಂತೆ ಆಗಬೇಕಾದದ್ದೇ ನ್ಯಾಯ. ಪ್ರಜಾಕೋಟಿಗಳ ವಿದ್ಯಾಭ್ಯಾಸವು ಸರ್ಕಾರದ ಪ್ರಥಮ ಧರ್ಮವಾಗಿರುತ್ತದೆ. ಸ್ತ್ರೀ ವಿದ್ಯಾಭ್ಯಾಸವು ಇನ್ನೂ ಬಹಳ ಕಡಮೆಯಾಗಿರುವುದು. ಗವರ್ನಮೆಂಟಿನವರು ಸಾಮಾನ್ಯ ಪ್ರಜೆಗಳ ವಿದ್ಯೆಗೆ ಬಹಳ ಸ್ವಲ್ಪ ಹಣವನ್ನು ಖರ್ಚುಮಾಡಿ, ಮಹಾರಾಜರ ಕಾಲೇಜಿನಲ್ಲಿ ಈಗ ಖರ್ಚಾಗುತ್ತಿರುವ ೭,೭೦೦ ರೂಪಾಯಿ ವೇತನಗಳಲ್ಲದೆ ಇನ್ನೂ ೬೧,೪೭೦ ರೂಪಾಯನ್ನು ವಿನಿಯೋಗಿಸಬೇಕೆಂದು ಗೊತ್ತುಮಾಡಿರುವುದು ಸಮಂಜಸವೂ ನ್ಯಾಯವೂ ಆದದ್ದಲ್ಲವೆಂದು ನಮಗೆ ತೋರುತ್ತದೆ. ಗ್ರಾಮ ಪಾಠಶಾಲೆಗಳಿಗೂ ಗ್ರ್ಯಾಂಟು ಸ್ಕೂಲುಗಳಿಗೂ ವಿನಿಯೋಗಿಸಬೇಕೆಂದಿರುವ ಹಣವು ಸ್ವಲ್ಪ ಮಾತ್ರವೇ ಇಗಿದೆ. ಪ್ರಥಮ ವಿದ್ಯೆಯನ್ನು ಸಕಲ ಪ್ರಜೆಗಳಿಗೂ ಕಲಿಸಿ ಪ್ರೋತ್ಸಾಹ ಮಾಡುವುದಕ್ಕೆ ಗವರ್ನಮೆಂಟಿನವರು ಇನ್ನೂ ಹೆಚ್ಚು ದ್ರವ್ಯವನ್ನು ವಿನಿಯೋಗಿಸುವವರಾದರೆ ಸಂಸ್ಥಾನದಲ್ಲಿ ಇನ್ನೂ ಅನೇಕ ಮಕ್ಕಳು ಅಕ್ಷರಸ್ಥರಾಗಲು ಅವಕಾಶವಾಗುತ್ತಿತು. ಈಗ ವಿದ್ಯಾಭ್ಯಾಸದ ಇಲಾಖೆಯಲ್ಲಿ ಖರ್ಚಾಗುವ ಹಣವನ್ನೇ ಸರಿಯಾದ ರೀತಿಯಲ್ಲಿ ವಿನಿಯೋಗಮಾಡಿಸುವುದಾದರೆ ವಿದ್ಯೆಯು ಇನ್ನೂ ಹೆಚ್ಚಾಗಿ ಹರಡಲು ಸಂಶಯವಿಲ್ಲ.

ಖರ್ಚುಮಾಡುವ ಇಲಾಖೆಗಳೂ, ಈ ಇಲಾಖೆಗಳ ಖರ್ಚುಗಳೂ ವರುಷ ವರುಷ ಹೆಚ್ಚಾಗುತ್ತಲೇ ಬಂದಿರುವವು. ಪ್ರತಿ ಇಲಾಖೆಯಲ್ಲೂ ವಿತರಣೆಯೂ ದರ್ಜೆಯೂ ಇನ್ನೂ ತೃಪ್ತಿಕರವಾಗಿದ್ದ ಪಕ್ಷದಲ್ಲಿ ಆ ಖಾತೆಯ ಖರ್ಚುಗಳೂ ಸಾರ್ಥಕವೇ ಸರಿ ಎಂದು ಹೇಳಬಹುದು. ಶ್ರೀಮನ್ಮಹಾರಾಜರವರ ಗವರ್ನಮೆಂಟಿನ ಕಾರುಬಾರುಗಳು ಇನ್ನೂ ಹೆಚ್ಚು ದಕ್ಷತೆಯಿಂದಲೂ ಮಿತವ್ಯಯದಿಂದಲೂ ನಡಸಲ್ಪಟ್ಟಲ್ಲಿ ಪ್ರಜೆಗಳಲ್ಲಿ ತೃಪ್ತಿಯೂ ಸಮ್ಮತಿಯೂ ಹೆಚ್ಚಾಗಿ ಸರ್ಕಾರಕ್ಕೆ ಬಹು ತುಂಬಾ ಸಹಾಯವಾಗುವುದು. ಗವರ್ನಮೆಂಟಿನವರು ಅನೇಕ ಹೊಸ ನೌಕರಿಗಳನ್ನು ಇಟ್ಟುಕೊಂಡಿದಾರೆ. ಇಷ್ಟು ಅನಾವಶ್ಯಕ ವೆಚ್ಚದಿಂದ ಮೈಸೂರು ಸಂಸ್ಥಾನಕ್ಕೆ ಇನ್ನೂ ನಿರೀಕ್ಷಿತ ಹಿತವೂ ಉಪಕಾರವೂ ಆಗದೆಂದು ನಮಗೆ ತೋರುತ್ತಿದೆ.

ಸ್ತ್ರೀ ಸಾಹಸದ ಗೌಡ.

ಒಬ್ಬ ಐಶ್ವರ್ಯವಂತನ ಮನೆಯ ಹತ್ತಿರ ಒಬ್ಬ ವಿಧವೆಯ ಸಣ್ಣ ಗುಡಿಸಲು ಮನೆಗಳು ಇದ್ದವು. ಇವಳ್ಳದೆ ಇದಕ್ಕೆ ಒಂದು ಸಣ್ಣ ಹೊಲವೂ ತೋಟವೂ ಇತ್ತು. ಆದರೆ ಈ ತೋಟದ ಪಕ್ಕದಲ್ಲಿ ಒಂದು ಹೊಲವಿದ್ದು, ಈ ಭೂಮಿಯು ಅದೇ ಗ್ರಾಮದಲ್ಲಿದ್ದ ಒಬ್ಬ ಬಡ ವಿಧವೆಯ ಗಂಡನ ಪಿತ್ರಾರ್ಜಿತ ಸೊತ್ತಾಗಿತ್ತು. ಈ ಹೊಲದ ಹೊರತು ಆ ವಿಧವೆಗೆ ಜೀವನೋಪಾಯಕ್ಕೆ ಇನ್ನಾವ ಬೇರಾವ ಆಧಾರವೂ ಇರಲಿಲ್ಲ. ಈ ಬಡ ವಿಧವೆಯ ಸ್ಥಿತಿಯು ಆ ಐಶ್ವರ್ಯವಂತನಾದ ಗೌಡನಿಗೆ ಚೆನ್ನಾಗಿ ಗೊತ್ತಾಗಿದ್ದಿತು. ಆದರೂ ಅವನು ದುರಾಶೆಯಿಂದ ತನ್ನ ತೋಟವನ್ನು ಇನ್ನೂ ಹ್ಯಾಗೆ ಅಭಿವೃದ್ಧಿಮಾಡಿಕೊಳ್ಳಬೇಕೆಂದು ಯೋಚಿಸುತ್ತಿದ್ದವನಾಗಿ ಆ ವಿಧವೆಯ ಪಿತ್ರಾರ್ಜಿತ ಸೊತ್ತನ್ನು ತಾನು ಆಶಿಸಿದನು. ಆ ಹೊಲವನ್ನು ತನ್ನ ತೋಟಕ್ಕೆ ಸೇರಿಸಿದರೆ ತನ್ನ ತೋಟವು ಇನ್ನೂ ಹೆಚ್ಚು ಪ್ರಯೋಜನವುಳ್ಳದ್ದಾಗಿರುವದೆಂದು ಯೋಚಿಸಿ, ಆ ಹೊಲದ ಮೇಲೆ ಸುಳ್ಳು ದಸ್ತಾವೇಜನ್ನು ಹುಟ್ಟಿಸಿ ಸುಳ್ಳು ಸಾಕ್ಷಿಗಳನ್ನೇರ್ಪಡಿಸಿ ಅವಳಿಂದ ಆ ಹೊಲವನ್ನು ಕಸುಕೊಂಡು ತನ್ನ ತೋಟಕ್ಕೆ ಸೇರಿಸಿಕೊಂಡನು.

ಆ ಸ್ತ್ರೀಯು ಎಲ್ಲಿ ಹೋದರೂ ನ್ಯಾಯ ದೊರಕದೆ ಕಡೆಗೆ ತನಗಿದ್ದ ಒಂದೇ ಸೊತ್ತನ್ನು ಕಳೆದುಕೊಂಡು ನಿರಾಧಾರಳಾಗಿ ಶೋಕಪಾಶ ತೊಡಗಿದಳು. ಹೀಗೆ ಕೆಲವು ದಿನಗಳು ಹೋದನಂತರ ಅವಳು ಕಣ್ಣೆತ್ತಿ ತನ್ನ ಹೊಲದಲ್ಲಿ ಸಂತೋಷವಾಗಿ ತಿರುಗಾಡುತ್ತಿರುವ ಮದಾಂಧನಾದ ಆ ಗೌಡನ ಎದುರಿಗೆ ಗೋಣಿ ಚೀಲವನ್ನು ಹಿಡಿದುಕೊಂಡು ಬಂದು ಆತನನ್ನು ಕುರಿತು "ಗೌಡರೇ! ಹೇಳುವಂತೂ ನನಗೆ ಸೇರಿದ ಚಿಂತೆ ಇಲ್ಲ. ನಾಗೆ ತಾವು ಒಂದು ಸಣ್ಣ ಉಪಕಾರವನ್ನು ಮಾಡಬೇಕು ಅಪೇಕ್ಷಿಸುವೆ, ಈ ಹೊಲದ ಮಣ್ಣು ನನಗೆ ಸ್ವಲ್ಪ ಬೇಕಾಗಿದೆ. ಈ ಚೀಲದ ತುಂಬಾ ಮಣ್ಣು ತೆಗೆದುಕೊಳ್ಳಲಿಕ್ಕೆ ಅಪ್ಪಣೆಯಾಗಬೇಕು" ಎಂದು ವಿಜ್ಞಾಪಿಸಿಕೊಂಡಳು. ಅವನು ಅವಳ ಮಾತಿಗೆ ನಕ್ಕು, ಒಳ್ಳೇದು ನಿನಗೆ ಬೇಕಾದಷ್ಟು ತೆಗೆದುಕೊಂಡು ನಡೆ. ಇನ್ನು ಮುಂದೆ ಈ ಹೊಲದೊಳಕ್ಕೆ ಹೆಜ್ಜೆ ಇಡಬೇಡ ನೋಡಿಕೋ ಎಂದು ಹೇಳಿದನು. ಅವಳು ಆ ಮಾತುಗಳನ್ನು ಕೇಳಿ ಅಳುತ್ತಾ ಆ ಗೋಣಿ ಹಿಡಿಸುವಷ್ಟು ಮಣ್ಣನ್ನು ತುಂಬಿ, ಬುದ್ಧಿ! ಇನ್ನೊಂದೇ ಉಪಕಾರವನ್ನು ತಾವು ನನಗೆ ಮಾಡಬೇಕು, ಅದೇನೆಂದರೆ ದಯಮಾಡಿ ಈ ಚೀಲವನ್ನು ನನ್ನ ತಲೆಯಮೇಲೆ ಹೊರಿಸಬೇಕು ಎಂದು ಬೇಡಿದಳು. ಆ ಗೌಡನು ಆ ಸಹಾಯವನ್ನು ಅವಳಿಗೆ ಮಾಡಲಿಕ್ಕೆ ಮನಸಿಲ್ಲದೆ ಮೊದಲು ಅವಳನ್ನು ಕೋಪದಿಂದ ಗದರಿಸಿದರೂ ಅಲ್ಲಿ ಇತರರ್‍ಯಾರೂ ಇಲ್ಲದ್ದರಿಂದಲೂ ಅವಳು ಬೇಗ ಆ ಹೊಲವನ್ನು ಬಿಟ್ಟು ಹೋಗಬೇಕೆಂಬ ಆತುರವುಳ್ಳವನಾಗಿದ್ದುದರಿಂದಲೂ ಅವನು ಅಲ್ಲಿಗೆ ಹೋಗಿ ಆ ಚೀಲವನ್ನು ಎತ್ತುವದಕ್ಕೆ ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿದಾಗ್ಯೂ ಸಾಧ್ಯವಾಗಲಿಲ್ಲ. ಆಗಲಾತನು ಅವಳನ್ನು ನೋಡಿ ಇದು ಬಹು ಭಾರವಾಗಿದೆ. ಇದನ್ನೆತ್ತುವದು ನನ್ನಿಂದ ಅಸಾಧ್ಯವಾದ ಕೆಲಸವೆಂದು ಹೇಳಿದನು.

ತಕ್ಷಣವೇ ಆ ಬಡ ಸ್ತ್ರೀಯು ಧೈರ್ಯವನ್ನು ತಾಳಿ ಅವನನ್ನೇ ಪ್ರಶ್ನಿಸಿ ನೋಡುತ್ತಾ, ಎಲೈ ಗೌಡನೆ! ಚೀಲದಲ್ಲಿರುವ ಈ ಸ್ವಲ್ಪ ಮಣ್ಣನ್ನು ಹೊರುವದು ನಿನಗೆ ಅಸಾಧ್ಯವಾಗಿರುವುದಾದರೆ ಈ ಹೊಲದಲ್ಲಿರುವ ಮಣ್ಣು ಇಂಥಾ ಸಾವಿರಾರು ಚೀಲಗಳನ್ನು ತುಂಬಿಸುವಷ್ಟಿರುವುದು; ಇವನ್ನೆಲ್ಲಾ ಹೊತ್ತುಕೊಂಡು ಕಡೆಗೆ ದೇವರ ಮುಂದೆ ನಿಲ್ಲಬೇಕಾದಾಗ ಏನು ಮಾಡುವೆ ಎಂದು ಗರ್ಜಿಸಿದಳು. ಕೋರ್ಟು ಕಚೇರಿಗಳಿಗೂ ನ್ಯಾಯಾಧಿಪತಿಗಳಿಗೂ ಹೆದರದಿದ್ದ ಆ ಗೌಡನು ಈ ಮಾತುಗಳನ್ನು ಕೇಳಿದ ಒಡನೆಯೇ ಪಶ್ಚಾತ್ತಾಪವುಳ್ಳವನಾಗಿ ನಡುಗುತ್ತಾ ಆ ಹೊಲವನ್ನು ಆಕೆಗೆ ಕೊಟ್ಟುಬಿಟ್ಟನು.

ದೇವರು ಮನುಷ್ಯನಿಗೆ ದಾನವಾಗಿ ಕೊಟ್ಟಿರುವ ಸಕಲ ವರಗಳಲ್ಲಿ ಮನಸ್ಸಾಕ್ಷಿಯು ಅತ್ಯುತ್ತಮವಾದದ್ದು. ಮಳೆ, ಬಿಸಿಲು, ಗಾಳಿ, ಹಣ್ಣುಗಳು ಮೊದಲಾದವು ಮನುಷ್ಯನಿಗೆ ಹೇಗೆ ದಾನವಾಗಿ ಕೊಟ್ಟಿರುವ ವರಗಳಾಗಿವೆಯೋ ಅದರಂತೆ ಈ ವರಗಳು ಮಾನವರಿಗೆ ಮಾತ್ರವಲ್ಲ ಸಕಲ ಪ್ರಾಣಿಗಳಿಗೂ ಸಮಾನವಾಗಿವೆ. ಇವುಗಳನ್ನು ಆರೋಗ್ಯವಾದ ವಿಧದಲ್ಲಿ ಬಳಸುವದಕ್ಕೆ ಅವಶ್ಯವಾದ ವರಗಳಾಗಿರುವದರಿಂದ ನಮ್ಮ ಹಾಗೆ ದೇಹವನ್ನು ಪಡೆದಿರುವ ಸಕಲ ಮೃಗಾದಿಗಳಿಗೂ ಅವು ಪ್ರಯೋಜನಕಾರಿಗಳಾಗಿರಲೆಂದು ಪರಮಾತ್ಮನು ಅವುಗಳನ್ನು ಹುಡುವಾಗಿ ಕೊಟ್ಟಿದ್ದಾನೆ. ಆದರೆ ಮೃಗಗಳಿಗಿಲ್ಲದಂತಹ ಇನ್ನೊಂದು ದಿವ್ಯ ವರವು ಮನುಷ್ಯನಿಗೆ ಲಭ್ಯವಾಗಿದೆ, ಅದೇ ನಂದರೆ ಮನಸ್ಸಾಕ್ಷಿಯು. ಇದರಿಂದಲೇ ನಾವು ಯುಕ್ತಾಯುಕ್ತಗಳನ್ನೂ ಸತ್ಯಾಸತ್ಯಗಳನ್ನೂ ಧರ್ಮಾಧರ್ಮಗಳನ್ನೂ ತಿಳಿಯುತ್ತೇವೆ. ಇದೇ ದೇವರಿಗೂ ಮಾನವರಿಗೂ ಇರತಕ್ಕ ಪಾರಮಾರ್ಥಿಕ ಸಂಬಂಧ. ಇದಿರುವದರಿಂದಲೇ ನಾವು ನಮ್ಮ ಕೃತ್ಯಾಕೃತ್ಯಗಳಿಗೆ ಜವಾಬ್ದಾರರಾಗಿರುವದು. ಇದೇ ನಮ್ಮನ್ನು ದೇವರ ಹೋಲಿಕೆಯುಳ್ಳ ಆತನ ಮಕ್ಕಳಾಗಿರುವಂತೆ ನಡಿಸುತ್ತಿರುವದು. ಸತ್ಯವನ್ನೂ ಕರ್ತವ್ಯವನ್ನೂ ತನ್ನನ್ನೂ ದೇವರನ್ನೂ ತಿಳಿಯುವದಕ್ಕೆ ಇದು ಸಾಧನವಾಗಿದೆ. ಇದು ಎಲ್ಲೋ ಒಂದು ಪ್ರದೇಶದಲ್ಲಿ ಯಾರೋ ಮಹಾ ಜ್ಞಾನಿಗಳಲ್ಲಿ ಮಾತ್ರ ಇದ್ದುಕೊಂಡು ಇನ್ಯಾರಿಗೂ ಸಿಕ್ಕದ ಅಪರೂಪ ವಸ್ತುವಲ್ಲ. ಸಣ್ಣ ಮಕ್ಕಳಿಗೂ ಹೆಂಗಸರಿಗೂ ರೈತರಿಗೂ ಕೇವಲ ನೀಚ ಜಾತಿಯವರಿಗೂ ಸಹ ದೇವರು ಇದನ್ನು ಕರುಣಿಸಿದ್ದಾನೆ. ಈ ಮನಸ್ಸಾಕ್ಷಿಯು ನಮ್ಮ ಹೊರಗಿದ್ದುಕೊಂಡು ಆಗಾಗ್ಯೆ ನಮ್ಮನ್ನು ಕಂಡು ನಮಗೆ ಬುದ್ಧಿ ಹೇಳುವ ಉಪಾಧ್ಯಾಯರಂತೆ ಅಥವಾ ಗುರುಗಳಂತೆ ಅದು ಇಲ್ಲ. ಅದು ಸದಾ ನಮ್ಮ ನಮ್ಮೊಳಗೆ ನಮ್ಮ ಮನಸ್ಸಿನಲ್ಲಿ ಇದ್ದುಕೊಂಡು ಸಕಲಕ್ಕೂ ಸಾಕ್ಷಿಯಾಗಿರುವದು. ನಾವು ಸದ್ವರ್ತನೆಯನ್ನು ಅವಲಂಬಿಸಿದರೆ ಆಗ ಅದು ನಮ್ಮನ್ನು ಸಂತೋಷಪಡಿಸಿ ಧೈರ್ಯಗೊಳಿಸಿ ಬೆಳ್ಳಿ ಬಂಗಾರಗಳಿಂದ ದೊರೆಯಲಾರದ ಶಕ್ತಿಯ ಸುಖವನ್ನು ನಮಗೆ ಅನುಭವಗೊಳಿಸುವದು. ಅಧರ್ಮ ವರ್ತನೆಯಲ್ಲಿ ನಾವು ನಡೆದರೆ ಪಟ್ಟಣಗಳ ಪೋಲೀಸಿನವರೂ ನಮ್ಮನ್ನು ಹಿಡಿಯಲಾರದ ರೀತಿಯಲ್ಲಿ ಅದು ನಮ್ಮನ್ನು ಹೊರಹೊಕ್ಕು ನೋಡಿ, ಪೀಡಿಸಿ, ತರತರೆಯನ್ನುಂಟುಮಾಡಿ ಶಿಕ್ಷಿಸುವದು. ವಾಚಕರೇ! ಇಂತಹ ದೇವರ ಸಕ್ಷಮವಾದ ಶಕ್ತಿಯು ನಮ್ಮೊಳಗೆ ಸದಾ ಕೂತುಕೊಂಡು ನಮ್ಮನ್ನು ಪರೀಕ್ಷಿಸುತ್ತಿರುವದರಿಂದ ಆತನ ಬುದ್ಧಿವಾದಕ್ಕೆ ನಾವು ಸದಾ ವಿಧೇಯರಾಗಿರಬೇಕಲ್ಲವೆ?

ಮೈಸೂರು ಪಟ್ಟಣದಲ್ಲಿ ಪ್ಲೇಗಿನ ಸ್ಥಿತಿಯು

ಕಳೆದ ವಾರ ೮ ಜನರಿಗೆ ಪ್ಲೇಗ್ ಉಪದ್ರವು ತಗಲಿದ ವರ್ತಮಾನ ತಿಳಿದಿತ್ತು. ಹಿಂದಿನ ವಾರ ೯೬ ಮಂದಿಗೆ ಪ್ಲೇಗ್ ತಗಲಿ ೩೯ ಮಂದಿ ಪ್ಲೇಗಿನಿಂದ ಸತ್ತರು; ಒಟ್ಟು ೧೧೪ ಜನರು ಮರಣಹೊಂದಿರುವರು. ಈ ವಾರದಲ್ಲಿ ೧೪೩ ಮಂದಿಗೆ ಪ್ಲೇಗ್ ತಗಲಿ ೯೯ ಮಂದಿ ಪ್ಲೇಗಿನಿಂದ ಸತ್ತರು; ಎಲ್ಲಾ ಕಾರಣಗಳಿಂದಲೂ ೧೬೯ ಮಂದಿ ಕಾಲವಾದರು. ಇದರ ವಿವರ ಹೀಗೆಂದರೆ —

ತಾರೀಖು	ಪ್ಲೇಗ್ ತಗಲಿದ್ದು	ಪ್ಲೇಗ್ ಮರಣ	ಒಟ್ಟು ಮರಣ
೮	೧೭	೧೩	೨೦
೯	೧೬	೧೧	೨೫
೧೦	೧೮	೯	೧೪
೧೧	೨೧	೧೭	೨೬
೧೨	೨೯	೧೪	೨೭
೧೩	೧೫	೧೨	೧೯
೧೪	೨೭	೧೭	೨೮

ಈ ರೀತಿಯಾಗಿ ದಿನೇ ದಿನೇ ಅಭಿವೃದ್ಧಿಯಾಗುತ್ತಿರುವ ಪ್ಲೇಗ್ ಉಪದ್ರವನ್ನು ಅಡಗಿಸಬೇಕೆಂದು ಸರ್ಕಾರದವರು ಪ್ರಜೆಗಳಿಗೆ ಇನಾಕ್ಯುಲೇಷನ್ ಮಾಡುವುದರಲ್ಲಿ ತುಂಬಾ ಸಾಹಸಪಡುತ್ತಿದ್ದಾರೆ. ಇದು ಜನ ಡಾಕ್ಟರುಗಳೂ, ಒಬ್ಬ ಲೇಡಿ ಡಾಕ್ಟರೂ, ಮಿಷನ್ ಆಸ್ಪತ್ರೆಯ ಇಬ್ಬರು ಲೇಡಿ ಡಾಕ್ಟರುಗಳೂ ಈ ಕೆಲಸದಲ್ಲಿ ಉದ್ಯುಕ್ತರಾಗಿರುವರು. ಕಳೆದ ವಾರದ ಆಖೈರ್ ವರೆಗೆ ರಾಜಧಾನಿಯಲ್ಲಿ ೩,೯೨೪ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರು. ಈ ವಾರದಲ್ಲಿ ಇನ್ನೂ ೪,೨೯೮ ಜನರು ಚುಚ್ಚು ಹಾಕಿಸಿಕೊಂಡಿರುತ್ತಾರೆ. ಪ್ರತಿ ದಿವಸವೂ ಬೆಳಗಿನ ಹೊತ್ತು ಡಾಕ್ಟರುಗಳು ಬೀದಿ ಮನೆಗಳ ಮೇಲೆ ಹೋಗುತ್ತಾ ಜನರಿಗೆ ಅವರವರ ಮನೆಗಳಲ್ಲಿಯೇ ಚುಚ್ಚು ಹಾಕುತ್ತಿದ್ದಾರೆ. ಪ್ರತಿ ದಿನವೂ ಸಾಯಂಕಾಲ ೫ ರಿಂದ ೬ ಗಂಟೆಯ ತನಕ ಇಲ್ಲಿ ಟೌನ್ ಹಾಲಿನಲ್ಲಿ ಒಬ್ಬ ಡಾಕ್ಟರು ಇದ್ದು ಬಂದವರಿಗೆಲ್ಲಾ ಇನಾಕ್ಯುಲೇಷನ್ ಮಾಡುವರು. ಇಲ್ಲಿಗೆ ಬಹಳ ಜನರು ಬಂದು ಹಾಕಿಸಿಕೊಳ್ಳುತ್ತಿದ್ದಾರೆ. ಜನಾನಾ ಸ್ತ್ರೀಯರಿಗೆ ಮಿಷನ್ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರುಗಳು ಸೋಮವಾರ, ಬುಧವಾರ, ಶುಕ್ರವಾರಗಳಲ್ಲಿ ಸಾಯಂಕಾಲ ೪ ರಿಂದ ೬ ಗಂಟೆಯ ತನಕ ಚುಚ್ಚು ಹಾಕುತ್ತಾರೆ. ಮಹಮ್ಮದೀಯರೇ ಮೊದಲಾದವರಲ್ಲಿ ಜನಾನಾ ಸ್ತ್ರೀಯರೆಲ್ಲಾ ಮಿಷನ್ ಆಸ್ಪತ್ರೆಗೆ ಹೋಗಿ ಲೇಡಿ ಡಾಕ್ಟರುಗಳಿಂದ ಚುಚ್ಚು ಹಾಕಿಸಿಕೊಂಡು ಬರಬಹುದಾಗಿದೆ.

ಇನಾಕ್ಯುಲೇಷನ್‌ನಿಂದ ಪ್ಲೇಗ್ ಉಪದ್ರವು ಕಡಿಮೆಯಾಗುತ್ತಲಿರುವದರಿಂದ ಸಕಲ ಪ್ರಜೆಗಳೂ ಬೇಗನೆ ಚುಚ್ಚು ಹಾಕಿಸಿಕೊಳ್ಳುವುದೇ ಉತ್ತಮವೆಂದು ಸೂಚಿಸುತ್ತೇವೆ. ದೃಷ್ಟಾಂತವಾಗಿ, ಒಂದು ಮನೆಯಲ್ಲಿ ಒಬ್ಬ ಗರ್ಭಿಣಿ ಸ್ತ್ರೀಯು ವಿನಹಾ ಉಳಿದವರೆಲ್ಲಾ ಚುಚ್ಚು ಹಾಕಿಸಿಕೊಂಡಿದ್ದರು. ಆ ಸ್ತ್ರೀಗೆ ಮಾತ್ರ ಪ್ಲೇಗ್ ತಗಲಿ ಕಾಲವಾದಳು. ಆಕೆ ಚುಚ್ಚು ಹಾಕಿಸಿಕೊಂಡಿದ್ದ ಪಕ್ಷದಲ್ಲಿ ಆಕೆಯೂ ಆ ಮನೆಯವರಂತೆ ಈಗ ಬದುಕಿರಬಹುದಾಗಿತ್ತು.

ಅನೇಕ ಮನೆಗಳಲ್ಲಿ ಇಲಿಗಳು ಸತ್ತದ್ದರಿಂದ ಮನೆಯವರು ಬೋನುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಬಡ ಜನರು ಮುನಿಸಿಪಲ್ ವೈಸ್ ಪ್ರೆಸಿಡೆಂಟರನ್ನು ಕೇಳಿಕೊಂಡರೆ ಅವರು ಜೋಪಡಿ ಕಟ್ಟುವದಕ್ಕೆ ಗಳ ಬೊಂಬು ಮುಂತಾದದ್ದನ್ನು ಮುಫತ್ತಾಗಿ ಕೊಡಿಸುತ್ತಾರೆ.

ಪ್ಲೇಗ್ ತಗಲಿದ ಮೇಲೆ ರೋಗಿಗಳನ್ನು ಅಂಥಾ ಕಾಯಿಲೆಯವರನ್ನು ಮನೆಗಳಲ್ಲಿಟ್ಟುಕೊಂಡು ಉಪಚರಿಸುವದಕ್ಕೆ ಅನುಕೂಲವಿಲ್ಲ. ಅವರನ್ನು ಪ್ಲೇಗ್ ಕ್ಯಾಂಪಿಗೆ ಕರೆದುಕೊಂಡು ಹೋಗುವುದೇ ಉತ್ತಮ, ಯಾಕೆಂದರೆ ಕ್ಯಾಂಪಿನಲ್ಲಿ ರೋಗಿಗಳಿಗೆ ಬಹಳ ಒಳ್ಳೇ ಔಷಧಾದಿ ಉಪಚಾರಗಳು ನಡೆಯುತ್ತವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ತಾಲ್ಲೂಕ್ ಕಚೇರಿ ಶಿರಸ್ತೇದಾರರಾದ ಮ|| ಟಿ. ಸಿ. ರಂಗಯ್ಯನವರು ನಾಲ್ಕು ತಿಂಗಳ ರಜಾದಿಂದ ಕೈಗಾರಿಕೆಗಳನ್ನು ಕಲಿತು ಈ ಸಂಸ್ಥಾನದಲ್ಲಿ ಪ್ರಾರಂಭಿಸಿ ನಡೆಸುವವರಾಗಿದ್ದಾರೆಂದು ಕೇಳಿದ್ದೇವೆ.

ಮಾಜಿ ದಿವಾನ್ ಮ|| ವಿ. ಪಿ. ಮಾಧವರಾಯರು ದಕ್ಷಿಣ ದೇಶದಲ್ಲಿ ಸಂಚಾರಮಾಡಿಕೊಂಡು, ಹಿಂದಿನ ಭಾನುವಾರ ಬೆಂಗಳೂರಿಗೆ ವಾಪಸು ಬಂದರು.

ಗತಿಸಿದ ಕ್ಯಾಪ್ಟನ್ ಡಾಸ್‌ಯವರ ಮೆಮೋರಿಯಲ್ ಫಂಡಿಗೆ ಕಳೆದ ಆಗಸ್ಟ್ ತಾ. ೩೦ ರ ವರೆಗೆ ೯೪೪ ರೂಪಾಯಿ ಚಂದಾ ವಸೂಲಾಗಿರುವಂತೆ ಪ್ರಕಟವಾಗಿದೆ.

ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ನೆನ್ನೆ ಬೆಳಗ್ಗೆ ನೀಲಗಿರಿಯಿಂದ ಮೋಟಾರ್ ಗಾಡಿಯಲ್ಲಿ ಹೊರಟು, ನಂಜನಗೂಡು ಮಾರ್ಗವಾಗಿ ಮಧ್ಯಾಹ್ನ ೧ ಗಂಟೆಗೆ ರಾಜಧಾನಿಯನ್ನು ತಲಪಿದರು.

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಜೆ ಮ್ಯಾಂಟ್ಗೊಮೆರಿಯವರು ರಜಾಪಡೆದುಕೊಂಡದ್ದರಿಂದ ಅವರ ಕೆಲಸವನ್ನು ಅ|| ಕಮಿಷನರ್ ಮ|| ಟಿ ಚೊಕ್ಕಣ್ಣನವರು ನೋಡುತ್ತಿದಾರೆ. ಮ|| ಆರ್. ನಾರಾಯಣಸ್ವಾಮಿರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಯ ಆಫೀಸರಾಗಿ ನೇಮಿಸಲ್ಪಟ್ಟಿರುವರು

ನಮ್ಮ ಸಂಸ್ಥಾನದ ವೇತನವನ್ನು ಪಡೆದು ವಿಲಾಯಿತಿಗೆ ಹೋಗಿ ವಿದ್ಯಾಭ್ಯಾಸ ಮಾಡಿಕೊಂಡು ಬಂದಿರುವ ಮ|| ಎನ್ ಸುಬ್ಬರಾಯರು ಈ ವಾರ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ಭೇಟಿ ತೆಗೆದುಕೊಳ್ಳುವವರಾಗಿದಾರೆಂದೂ, ಇವರಿಗೆ ಇಲ್ಲಿನ ಕಾಲೇಜಿನಲ್ಲಿ ಬೋಧಕೋದ್ಯೋಗವು ದೊರಕಬಹುದೆಂದೂ ಕೇಳುತ್ತೇವೆ.

ಮೈಸೂರು ಮಹಾರಾಜಾ ಕಾಲೇಜಿನ ಚರಿತ್ರ ಬೋಧಕರಾದ ಮ|| ಟಿ ಡೆನ್‌ಹಾಂಯವರು ಒಂದು ವರ್ಷ ಫರ್ಲೋ ರಜಾ ಪಡೆದು ಈ ತಿಂಗಳ ಕಡೆಯಲ್ಲಿ ಸೀಮೆಗೆ ಹೋಗುವರು. ವಿದ್ಯಾಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮ|| ಸಿ. ಆರ್ ...ರವರು ಮೈಸೂರು ಕಾಲೇಜಿನಲ್ಲಿ ಚರಿತ್ರ ಬೋಧಕರಾಗಿ ಕೆಲಸ ಮಾಡುವರು.

ಸಪರ್ಟ್ರೈಯಲ್ಲಿ ರಾಜಧಾನಿಯಲ್ಲಿ ನಡೆಯುವ ಪ್ರದರ್ಶನಕ್ಕೆ ಇತರ ಕಡೆಗಳಿಂದ ಬರುವ ಪ್ರದರ್ಶನವಸ್ತುಗಳನ್ನು ಕಳುಹಿಸುವ ... ದಕ್ಷಿಣ ಮಹಾರಾಟ್ಟ ರೈಲ್ವೆ ಕಂಪೆನಿಯವರು ಸಾಗಾಣಿಕೆ ದರಗಳನ್ನು ಕಡಮೆಮಾಡಿರುತ್ತಾರೆ. ಪ್ರದರ್ಶಕರು ಪ್ರದರ್ಶನದ ಸೆಕ್ರೆಟರಿಯವರಿಂದ ಸರ್ಟಿಫಿಕೇಟನ್ನು ತೋರಿಸುವುದಾದರೆ ಅವರು ಪ್ರದರ್ಶನಕ್ಕೆ ಬಂದು ಹೋಗಲು ರೈಲ್ ಛಾರ್ಜಿ ದರಗಳನ್ನು ಕಡಮೆಮಾಡಿರುವರು. ೧ ನೇ, ೨ ನೇ ಕ್ಲಾಸಿನಲ್ಲಿ ಪ್ರಯಾಣಮಾಡುವವರು ಒಂದು ಕಡೆಯ ಛಾರ್ಜನ್ನೂ, ೩ನೇ ಕ್ಲಾಸಿಗಾದರೆ ೧|| ಛಾರ್ಜನ್ನೂ ಕೊಟ್ಟು ಬಂದುಹೋಗಬಹುದು. ಇಂಥಾ ರಿಯಾಯಿತಿಗಳಿಂದ ಪ್ರದರ್ಶಕರಿಗೆ ತುಂಬ ಸಹಾಯವೂ ಪ್ರೋತ್ಸಾಹವೂ ಉಂಟಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ.

ನಮ್ಮ ಮಹಾರಾಜರವರು ಜಿ ಸಿ ಎಸ್. ಐ. ಬಿರುದು ಪಡೆದ ಕಾಲ ... ... ದರ್ಬಾರಿನ ಪೂರ್ಣಾಕೃತಿಯ ಮತ್ತು ಅರ್ಧಾಕೃತಿಯ ಫೋಟೋಗಳನ್ನು ರಾಜಧಾನಿಯ ದೊಡ್ಡ ಪೇಟೆಯಲ್ಲಿರುವ ರವಿವರ್ಮನವರ ಚಿತ್ರಪಟಗಳ ಏಜೆಂಟರಾದ ಮ|| ಸಿದ್ಧಲಿಂಗಪ್ಪನವರು ರವಿವರ್ಮ ಚಿತ್ರಶಾಲೆಯಲ್ಲಿ ಬಹು ಸುಂದರವಾದ ಬಣ್ಣಗಳ ಸಹಿತ ಅಚ್ಚುಮಾಡಿಸಿ ತರಿಸಿರುತ್ತಾರೆ. ಮ|| ಸಿದ್ಧಲಿಂಗಪ್ಪನವರು ಹಿಂದೆ ನಮ್ಮ ಮಹಾರಾಜ ದಂಪತಿಗಳ ಚಿತ್ರಪಟವನ್ನು ಮಾಡಿಸಿದ್ದಲ್ಲದೆ ಕರ್ನಾಟಕ ವರ್ಣಮಾಲೆಯನ್ನು ಸಚಿತ್ರವಾಗಿ ಮಾಡಿಸಿ ಪ್ರಸಿದ್ಧಿಗೆ ತಂದಿರುವರು ಇವರು ಈಗ ತರಿಸಿರುವ ತಸ್ವೀರುಗಳು ಅನ್ಯಗಳಂತೆಯೇ ಬಹು ಮನೋಹರವಾಗಿರುತ್ತವೆ. ದೊಡ್ಡ ಆಕೃತಿಯ ತಸ್ವೀರಿಗೆ ೧೨ ಆಣೆಯೂ, ಸಣ್ಣ ಆಕೃತಿಯದಕ್ಕೆ ೪ ಆಣೆಯೂ ಬೆಲೆಯಾಗುವುದು

ಮೈಸೂರು ಸಂಸ್ಥಾನದಲ್ಲಿ ಮೊಖ್ತ್ಯಾರರುಗಳು ಮೊಕದ್ದಮೆ ಹಿಡಿದು ವಾದಿಸುವುದನ್ನು ತಪ್ಪಿಸಬೇಕೆಂದು ಚೀಫ್ ಕೋರ್ಟಿನವರು ಒಂದು ಸರ್ಕ್ಯುಲರ್ ಹುಕುಮನ್ನು ಎಲ್ಲಾ ಕೋರ್ಟುಗಳಿಗೂ ಕಳುಹಿಸಿದ್ದುದ್ದೂ, ಆ ಮೊಖ್ತ್ಯಾರರುಗಳು ಬೆಂಗಳೂರಿನಲ್ಲಿ ಸಭೆಸೇರಿ ಅರ್ಜಿಗಳನ್ನಿಟ್ಟು ಚೀಫ್ ಕೋರ್ಟಿಗೆ ತಮ್ಮ ಕಷ್ಟ ನಷ್ಟಗಳನ್ನು ಅರಿಕೆಮಾಡಿಕೊಂಡಿದ್ದದ್ದೂ ವಾಚಕರಿಗೆ ತಿಳಿದದೆಯಷ್ಟೆ. ಈಚೆಗೆ ಚೀಫ್ ಕೋರ್ಟಿನವರು ಪ್ರತಿ ಡಿಸ್ಟ್ರಿಕ್ಟಿನಲ್ಲೂ ಎಷ್ಟು ಮಂದಿ ಮೊಖ್ತ್ಯಾರರು ಇರುತ್ತಾರೆ, ಅವರ ಸ್ಥಿತಿಗತಿ ಯೋಗ್ಯತಾದಿಗಳೇನು ಎಂಬೀ ವಿಚಾರವನ್ನು ಈ ತಿಂಗಳ ಕಡೆಯೊಳಗಾಗಿ ತಿಳಿಸಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳಿಗೆ ಸರ್ಕ್ಯುಲರು ಕೊಟ್ಟಿದಾರೆ ಇದಲ್ಲದೆ ಚೀಫ್ ಕೋರ್ಟಿನವರು ಹಿಂದೂಸ್ಥಾನದ ಇತರ ಭಾಗಗಳಲ್ಲಿ ಈ ಮೊಖ್ತ್ಯಾರರು ... ಸಂಗತಿಗಳನ್ನು ತರಿಸಿಕೊಂಡಿರುವರು ಇದನ್ನೆಲ್ಲಾ ನೋಡಲಾಗಿ ನಮ್ಮ ಸಂಸ್ಥಾನದಲ್ಲೂ ಈ ಮೊಖ್ತ್ಯಾರರಿಗೆ ಏನಾದರೂ ಅನುಕೂಲವಾಗಬಹುದೆಂದು ತೋರುತ್ತದೆ.

ಇಂಡಿಯಾದೇಶದ ವೃತ್ತಾಂತಗಳು.

ಬಂಗಾಳ ಅಧಿಪತ್ಯದಲ್ಲಿ ಛತ್ರದ ಬೆಳೆಯು ಸಾಮಾನ್ಯವಾಗಿ ಒಳ್ಳೆ ಚೆನ್ನಾಗಿರುವುದು ಪೂರ್ವ, ಟಿಂಗ..., ವೊದಲಾದ ಕೆಲವು ಸ್ಥಳಗಳಲ್ಲಿ ವಾತ್ರ ಪ್ರವಾಹದ ದೆಸೆಯಿಂದ ಸ್ವಲ್ಪ ಪೈರು ನಷ್ಟವಾಯಿತು

ಸಿಮ್ಲಾ ಪಟ್ಟಣದಲ್ಲಿ ಇಟ್ಟಿರುವ ಭೂಕಂಪ ಸೂಚಕ ಸೂಕ್ಷ್ಮಯಂತ್ರಗಳ ಚಲನೆಯಿಂದ ಕಳೆದ ಬುಧವಾರ ರಾತ್ರಿ ಆ ಸ್ಥಳದಿಂದ ಸುಮಾರು ೪೦೦ ಮೈಲಿ ದೂರದಲ್ಲಿ ಭೂಕಂಪವಾದಂತೆ ಗೊತ್ತಾಯಿತು

ದಕ್ಷಿಣ ದೇಶದಲ್ಲಿರುವ ಪರಸ್ಪರ ಸಹಾಯಕ ಸಂಘಗಳ ಪ್ರತಿನಿಧಿಗಳೆಲ್ಲಾ ಮುಂದಿನ ನವಂಬರ್ ತಿಂಗಳಲ್ಲಿ ಮದರಾಸ್ ಪಟ್ಟಣದಲ್ಲಿ ಸಭೆ ಸೇರಿ ಪರಸ್ಪರ ಸಹಾಯಕ ಸಂಘಗಳ ಪುರೋಭಿವೃದ್ಧಿಗೆ ಸಹಕಾರಿಗಳಾದ ವಿಚಾರಗಳನ್ನು ಕುರಿತು ಚರ್ಚೆಮಾಡುವವರಾಗಿದಾರೆ

ಮುಂದಿನ ತಿಂಗಳು ಸಿಮ್ಲಾ ಪಟ್ಟಣದಲ್ಲಿ ಮಲೆನಾಡಿನ ಜ್ವರದ ಪೂರ್ವೋತ್ತರವನ್ನೂ ಅದರ ಪರಿಹಾರವನ್ನೂ ಕುರಿತು ಚರ್ಚೆಮಾಡುವುದಕ್ಕಾಗಿ ಡಾಕ್ಟರುಗಳ ಸಮಾಜವು ನಡೆಯುವುದು ಅಲ್ಲಿಗೆ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಮುಖ್ಯರಾದ ಡಾಕ್ಟರುಗಳು ಹೋಗುವವರಾಗಿದಾರೆ.

ಮ|| ತಿಲಕರ ಮೊಕದ್ದಮೆಯನ್ನು ನಡಿಸುವುದರ ಖರ್ಚಿಗೆಂದು ಒಂದು ಫಂಡನ್ನು ಲಾಹೋರ್ ಪಟ್ಟಣದ "ಪಂಜಾಬಿ" ಎಂಬ ಪತ್ರಿಕೆಯು ಕೂಡಿಸಿತ್ತು. ಈ ಹಣಕ್ಕೆ ಸರಿಯಾದ ವಿನಿಯೋಗವು ಲಭಿಸಲಿಲ್ಲವಾಗಿ ಅದನ್ನೆಲ್ಲಾ ಚಂದಾ ಕೊಟ್ಟಿದ್ದವರಿಗೆ ವಾಪಸು ವಾವತಿಮಾಡಿಬಿಟ್ಟರು.

ದನಗಳಿಗೆ ಪ್ರಾಪ್ತವಾಗುವ ಒಂದುತರದ ಅಂಟುರೋಗಕ್ಕೆ ಮಾತ್ರ ಈಗ ಏಡುಬಿನ ಹಾಲನ್ನು ಉಪಯೋಗಿಸುತ್ತಿದಾರಷ್ಟೆ. ಇತರ ಎಲ್ಲಾ ರೋಗಗಳಿಗೂ ಬೇರೆ ಬೇರೆ ಜಾತಿಯ ಹಾಲನ್ನು ಕಂಡುಹಿಡಿದು ತಯಾರುಮಾಡಿಸಬೇಕೆಂದು ಮಧ್ಯಪ್ರಾಂತ್ಯಗಳ ಸರ್ಕಾರದವರು ಅ...ನ ಸರ್ಕಾರೀ ಕಾರ್ಖಾನೆಯಲ್ಲಿ ಪಶುವೈದ್ಯರಿಂದ ಪರೀಕ್ಷೆಗಳನ್ನು ಮಾಡಿಸುವವರಾಗಿದಾರೆ.

ಲಕ್ನೋ ಪಟ್ಟಣದ ನಾರ್ಮಲ್ ಸ್ಕೂಲಿನಲ್ಲಿ ಉಪಾಧ್ಯಾಯ ಪರೀಕ್ಷೆ ನಡೆದಾಗ ಮಹದೇವಪ್ರಸಾದ್ ಎಂಬೊಬ್ಬ ಉಪಾಧ್ಯಾಯನು ಪ್ರಶ್ನಪತ್ರಿಕೆಗಳನ್ನು ಕೆಲವರಿಂದ ... ತೆಗೆದುಕೊಂಡು ಕೊಟ್ಟನೆಂದು ಗೊತ್ತಾಯಿತು. ಅವನನ್ನೂ ... ಉಪಾಧ್ಯಾಯ ನನ್ನೂ ಕೆಲಸದಿಂದ ವಜಾಮಾಡಿ, ಒಬ್ಬನಿಗೆ ವರ್ಗಮಾಡಿ ... ೩೭ ಮಂದಿ ವಿದ್ಯಾರ್ಥಿಗಳಿಗೆ ಎರಡು ವರುಷ ಪರೀಕ್ಷೆಗೆ ಹಾಜರಾಗಕೂಡದೆಂದು ಶಿಕ್ಷೆ ವಿಧಿಸಿದರು

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ... ಮಂದಿ ಪ್ಲೇಗ್ ಉಪದ್ರವದಿಂದ ಕಾಲವಾದರು ಈ ಪೈಕಿ ಮುಂಬಾಯಿ ಅಧಿಪತ್ಯ ... ಸಂಯುಕ್ತ ಅಧಿಪತ್ಯಗಳು ... ಮಧ್ಯಪ್ರಾಂತಗಳು ... ಮದರಾಸ್ ಅಧಿಪತ್ಯ ೧೮೨, ಮೈಸೂರು ಸಂಸ್ಥಾನ ೨೪೯, ಮಧ್ಯ ಇಂಡಿಯಾ ೮೫, ಬಂಗಾಳ ಅಧಿಪತ್ಯ ..., ಬಂಗಾಳಾ ೫೮, ರಾಜಪುಟಾನಾ ಮತ್ತು ಅಜ್ಮೀರ ಮೇರ್ವಾಡಾ ..., ಈ ರೀತಿ ಮರಣಗಳು ...

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಕರೌಲಿ ಎಂಬ ದೇಶೀಯ ಸಂಸ್ಥಾನದಲ್ಲಿ ಯಾವ ಪ್ರತಿಯೇ ಆಗಲಿ ರಾಜದ್ರೋಹ ವಿಷಯಗಳು ಪ್ರಕಟವಾಗಿರುವ ಪತ್ರಿಕೆಗಳನ್ನಾಗಲಿ ಚಿತ್ರಪಟಗಳನ್ನಾಗಲಿ ತರಿಸಕೂಡದೆಂದೂ, ಮಿಕ್ಕಿನ ಪದಾರ್ಥಗಳನ್ನು ಪರದೇಶಗಳಿಂದ ತರಿಸಿಕೊಳ್ಳಕೂಡದೆಂದೂ, ಈ ಆಜ್ಞೆಯನ್ನು ಮೀರಿದವರಿಗೆ ಇಪ್ಪತ್ತು ವರುಷಗಳ ಕಠಿಣಶಿಕ್ಷೆ ವಿಧಿಸಲ್ಪಟ್ಟು ಅವರ ಆಸ್ತಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವುದೆಂದೂ ಪ್ರಕಟಿಸಲಾಗಿದೆ

ಅಲಿಘಡದಲ್ಲಿ ಮಹಮ್ಮದೀಯ ವಿದ್ಯಾಭಿಮಾನಿಗಳು ಸ್ತ್ರೀಯರಿಗಾಗಿ ಒಂದು ಜನಾನಾ ನಾರ್ಮಲ್ ಸ್ಕೂಲನ್ನು ಸ್ಥಾಪಿಸುವವರಾಗಿದಾರೆ ಈ ಸ್ಕೂಲಿಗೆ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಸ್ತ್ರೀವಿದ್ಯಾರ್ಥಿಗಳು ಬಂದು ಸೇರಿ ಉಪಾಧ್ಯಾಯಿನಿಯರಾಗಿ ತರಬೇತಾಗಬಹುದು ಈ ನಾರ್ಮಲ್ ಸ್ಕೂಲನ್ನು ಕಟ್ಟುವುದಕ್ಕೆ ...೦೦೦ ರೂಪಾಯಿ ಚಂದಾ ಕೂಡಿರುತ್ತದೆ ಕೆಲವು ಪ್ರತಿನಿಧಿಗಳು ಊರಿಂದೂರಿಗೆ ಹೋಗಿ ಈ ಉದ್ದೇಶಕ್ಕೆ ಹಣವನ್ನು ಎತ್ತುತ್ತಿರುವರು.

ಲಾಹೋರ್ ಪಟ್ಟಣದಲ್ಲಿ ಈ ವರುಷದ ಅಂತ್ಯಭಾಗದಲ್ಲಿ ಹಿಂದೂಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರಸಭೆಯು ಕೂಡುವುದು ಈ ಸಭೆಯ ಪ್ರೆಸಿಡೆಂಟರನ್ನು ಚುನಾಯಿಸುವುದಕ್ಕಾಗಿ ಲಾಹೋರ್ ಪಟ್ಟಣದ ರಿಸೆಪ್ಷನ್ ಕಮಿಟಿಯವರು ಈ ವಾರ ಒಂದು ಸಭೆಯನ್ನು ನಡಿಸುವವರಾಗಿದಾರೆ ಸರ್ ಫಿರೋಜ್ ಷಾ ಮೆಹತಾ ಎಂಬ ಬೊಂಬಾಯಿನ ಪಾರ್ಸಿ ದೊಡ್ಡ ಮನುಷ್ಯರನ್ನೋ ಬಾಬು ಸುರೇಂದ್ರನಾಥ ಬ್ಯಾನರ್ಜಿ ಎಂಬ ಕಲ್ಕತ್ತೆಯ ಬಂಗಾಳಿ ದೊಡ್ಡ ಮನುಷ್ಯರನ್ನೋ ಪ್ರೆಸಿಡೆಂಟಾಗಿ ಚುನಾಯಿಸಬಹುದೆಂದು ಊಹಿಸಲ್ಪಟ್ಟಿದೆ

ಆನಂತರಯುತ ಸಂಸ್ಥಾನದ ಉತ್ತರ ಭಾಗದಲ್ಲಿ "ಮಲಬಾರಿನ ಚದರಂಗದ ಸಮಾಜ" ಎಂಬ ಒಂದು ಕೂಟವಿರುತ್ತೆ ಈ ಸಮಾಜದವರು ಕೊಚ್ಚಾಯಿಂ ಎಂಬ ನಗರದಲ್ಲಿ ಕಳೆದ ವಾರ ಸೇರಿ ಚದರಂಗದ ಪಂದ್ಯವನ್ನು ನಡಿಸಿದರು. ಮಂಗಳೂರು ಮುಂತಾದ ಪ್ರದೇಶಗಳಿಂದ ಚದರಂಗದ ಆಟದಲ್ಲಿ ನಿಪುಣರಾದವರನೇಕರು ಹೋಗಿದ್ದರು ಇಪ್ಪತ್ತುಮಂದಿ ಆಟಗಾರರು ಪಂದ್ಯದಲ್ಲಿ ಆಡಿದರು ಕಡೆಗೆ ಕ್ರಾಂಗನೂರಿನ ಮ|| ಎ ಮಹಮದ ಎಂಬಾತನು ಜಯಹೊಂದಿ ಬಹುಮಾನವನ್ನು ಪಡೆದನು. ಗೆದ್ದವನಂತೆ ಬೇರೆ ಸುಮಾರು ಮಂದಿಗೆ ಬಹುಮಾನವನ್ನೂ ಸರ್ಟಿಫಿಕೇಟುಗಳನ್ನೂ ಕೊಟ್ಟರು

ಹಿಂದಿನ ಸೋಮವಾರ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದ್ರಾಬಾದ್ ದಂಡಿನಲ್ಲಿ ನಾರ್ಮಲ್ ಸ್ಕೂಲಿನ ಇಬ್ಬರು ಮಹಮ್ಮದೀಯ ಉಪಾಧ್ಯಾಯರು ಜಗಳವಾಡಿ ಭರ್ಜಿಯಿಂದ ಒಬ್ಬರನ್ನೊಬ್ಬರು ತಿವಿದು ಸ್ಕೂಲ್ ಕಟ್ಟಡದೊಳಗೇ ಇಬ್ಬರೂ ಸತ್ತುಹೋದರು ಇವರಿಬ್ಬರಿಗೂ ಪರಸ್ಪರ ದ್ವೇಷಾಸೂಯೆಗಳು ಬಹುಕಾಲದಿಂದ ಇದ್ದವೆಂತಲೂ, ಅವರು ಗುಲ್ಬರ್ಗಾದಿಂದ ಆಗತಾನೇ ವರ್ಗಾಯಿಸಲ್ಪಟ್ಟು ಬಂದಿದ್ದರೆಂತಲೂ ತಿಳಿದುಬಂದಿದೆ ಆ ದಿನ ಆ ಊರಿನಲ್ಲೆಲ್ಲಾ ಈ ಘಟನಾಸ್ವರೂಪವು ಬಹಳ ಗಾಬರಿಯನ್ನುಂಟುಮಾಡಿತು ಅಧಿಕಾರಿಗಳು ಬಂದು ಶವಗಳನ್ನು ನೋಡಿ ಮಹಜರುಮಾಡಿ ದಫನಕ್ಕೆ ಹುಕುಂ ಕೊಟ್ಟರು

ಕಾಶ್ಮೀರ ಸಂಸ್ಥಾನದಲ್ಲಿ ... ಕಾಟ ... ಕಳೆದ ೭ ನೇ ತಾ ... ಸ್ವಲ್ಪ ... ಪ್ರತಿದಿನವೂ ... ಸುರಿಯುತ್ತಿರುವ ... ಗೊಂಡಿರುವ ... ಅತಿ ೨ ಅಂಗುಲ ಪ್ರಮಾಣವನ್ನು ಅನ್ವಯಮಾಡಿ ಪ್ರವಾಹ ಬಂದಿರುವುದು ... ನದಿಗೆ ಉದ್ಧಕ್ಕೂ ಹಾಕಿರುವ ಅಣೆದಿಮ್ಮಿಗಳು ಎಲ್ಲಿ ಕಿತ್ತು ನೀರು ಪಟ್ಟಣದ ಮೇಲೆ ಹೊರಳುವುದೋ ಎಂದು ಜನರು ಗಾಬರಿಪಡುತ್ತಿದಾರೆ ಅಲ್ಲದೆ ... ಎಂಬ ಪ್ರದೇಶದಲ್ಲಿ ಅಪಾರವಾದ ಹಿಮದ ಮಳೆ ಸುರಿದು, ಆ ಪ್ರಾಂತ್ಯದಿಂದ ಹಾದುಬರುತ್ತಿದ್ದ ನೂರಾರುಮಂದಿ ಯಾತ್ರಾರ್ಥಿಗಳನ್ನು ಮುಳುಗಿಸಿತೆಂತಲೂ, ಕೆಲವು ಜನರು ಶೈತ್ಯವನ್ನು ಸಹಿಸಲಾರದೆ ಪ್ರಾಣಕಳೆದುಕೊಂಡರೆಂತಲೂ ತಂತೀ ವರ್ತಮಾನ ಬಂದಿದೆ.

ಜನರಲ್ ಸರ್ ಓಮೂರ್ ಕ್ರೀಗ್‌ಯವರು ಕಳೆದ ಶುಕ್ರವಾರ ಬೆಳಗ್ಗೆ ಸೀಮೆಯಿಂದ ಬೊಂಬಾಯಿಗೆ ಬಂದು ಜಹಜು ಇಳಿದು, ಸುಮಾರು ೧೧ ಗಂಟೆಗೆ ಅಲ್ಲಿಂದ ಪೂನಾ ಪಟ್ಟಣವನ್ನು ತಲಪಿ, ಅಲ್ಲಿ ಲಾರ್ಡ್ ಕಿಚ್ನರ್‌ಯವರಿಂದ ಹಿಂದೂಸ್ಥಾನದ ಸರ್ವಸೇನಾಧಿಪತ್ಯವನ್ನು ವಹಿಸಿಕೊಂಡರು. ಮರುದಿನ ಅವರು ಪೂನಾದಿಂದ ಹೊರಟು ಕಳೆದ ಭಾನುವಾರ ಮಧ್ಯಾಹ್ನ ಸಿಮ್ಲಾ ಪಟ್ಟಣವನ್ನು ಸೇರಿ ವೈಸ್‌ರಾಯ್ ಲಾರ್ಡ್ ಮಿಂಟೋ ಪ್ರಭುಗಳ ಭೇಟಿಮಾಡಿದರು ಲಾರ್ಡ್ ಕಿಚ್ನರ್‌ಯವರು ತಾ ೧೦ ರಲ್ಲಿ ಪೂನಾದಿಂದ ಹೊರಟು ಭಾನುವಾರ ಟುಟಿಕಾರಿನ್ ನಗರಕ್ಕೆ ಹೋಗಿ ಅಲ್ಲಿಂದ ಜಹಜು ಹತ್ತಿ ಕೊಲಂಬೋ ಪಟ್ಟಣಕ್ಕೆ ತೆರಳಿದರು. ಇವರು ಅಲ್ಲಿಂದ ಚೀನಾ, ಜಪಾನ್, ಆಸ್ಟ್ರೇಲಿಯಾ, ಕ್ಯಾನಡಾ, ಈ ಪ್ರಾಂತ್ಯಗಳಲ್ಲಿ ಸಂಚಾರಮಾಡಿಕೊಂಡು ವಿಲಾಯಿತಿಗೆ ಹೋಗಿ ಸೇರಿಕೊಳ್ಳುವರು ಇವರಿಗೆ ಚಕ್ರವರ್ತಿ ಸಾರ್ವಭೌಮರವರು ಫೀಲ್ಡ್ ಮಾರ್ಷಲ್ ಎಂಬ ಬಹು ಪ್ರಶಸ್ತವಾದ ಬಿರುದನ್ನು ದಯಪಾಲಿಸಿರುತ್ತಾರೆ.

ಬೊಂಬಾಯಿ ಪಟ್ಟಣದ ವಿಕ್ಟೋರಿಯಾ ಜೂಬಿಲಿ ಸರ್ವಕಲಾಶಾಲೆಯ ವಿದ್ಯಾರ್ಥಿಯಾದ ಕೆ. ಡಿ ಬೊಸೆಕರನ ಬಳಿ ಕೆಲವು ಧ್ವತಿಗಳು ಇದ್ದವು ಅವನು ಅದನ್ನು ಸಿಡಿಮದ್ದಿನ ಗುಂಡು ತಯಾರುಮಾಡುವುದಕ್ಕಾಗಿ ಇಟ್ಟುಕೊಂಡಿದ್ದನೆಂದು ಪೋಲೀಸಿನವರು ಮೊಕದ್ದಮೆ ಮಾಡಿದರು ಸೆಷನ್ಸ್ ಜಡ್ಜರು ಜೂರಿ ಪಂಚಾಯತರನ್ನಿಟ್ಟುಕೊಂಡು ಈ ಮೊಕದ್ದಮೆಯನ್ನು ವಿಚಾರಿಸಿ ನಾಡಿ ಕಡೆಯಲ್ಲಿ ಪಂಚಾಯತರ ಅಭಿಮತಗಳನ್ನು ಕೇಳಿದರು ಐದುಮಂದಿ ಅವನು ಅಪರಾಧಿಯಲ್ಲವೆಂದೂ, ನಾಲ್ವರು ಅವನು ಅಪರಾಧಿಯೆಂದೂ ಹೇಳಿದರು, ಜಡ್ಜರು ಅದನ್ನು ಅಂಗೀಕರಿಸದೆ ಇನ್ನೊಂದಾವರ್ತಿ ಆಲೋಚನೆ ಮಾಡಿಕೊಂಡು ಬಂದು ಅಭಿಪ್ರಾಯವನ್ನು ಕೊಡುವಂತೆ ಆಜ್ಞೆಮಾಡಿದರು ಎರಡನೆಯ ಸಲ ... ಮಂದಿ ಪಂಚಾಯತರಲ್ಲಿ ಆರುಮಂದಿ ಅವನು ನಿರಪರಾಧಿ ಎಂದು ಹೇಳಿದ್ದರಿಂದ ಜಡ್ಜರು ಅವರ ಅಭಿಮತವನ್ನು ಅಂಗೀಕಾರ ಮಾಡಿ ಅಪರಾಧಿಯನ್ನು ಖುಲಾಸ್ ಮಾಡಿದರು. ಮೊಕದ್ದಮೆಯು ವಜಾ ಆಯಿತು.

ಬೊಂಬಾಯಿ ಪಟ್ಟಣದಲ್ಲಿ ಮಲೆನಾಡು ಜ್ವರವು ಬಹಳವಾಗಿ ಹೆಚ್ಚುತ್ತಾ ಬಂದದ್ದನ್ನು ನೋಡಿ ಅದಕ್ಕೆ ತಕ್ಕ ಪರಿಹಾರವನ್ನು ಸೂಚಿಸಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ಕೆಲವು ವೈದ್ಯರನ್ನು ಗೊತ್ತುಮಾಡಿದರು ಇವರು ಪಟ್ಟಣವನ್ನೆಲ್ಲಾ ಅಜಮಾಯಿಷಿಮಾಡಿ, ಮಲೆಜ್ವರವನ್ನು ನಿಲ್ಲಿಸುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದಾರೆ ಏನೆಂದರೆ, ಪಟ್ಟಣದ ಅನೇಕ ಕಡೆಗಳಲ್ಲಿ ನೀರು ಅಲ್ಲಲ್ಲಿ ಗುಂಡಿಗಳಲ್ಲಿ ನಿಂತು ಕೊಳೆಯುತ್ತಿದೆ ಇಂಥಾ ನೀರಿನಲ್ಲಿ ಮಲೆಜ್ವರವನ್ನು ಹುಟ್ಟಿಸುವ ಸೊಳ್ಳೆಗಳು ಲಕ್ಷೋಪಲಕ್ಷ ಹುಟ್ಟಿ ಬೆಳೆಯುವವು ಇವು ಜನರ ಮೇಲೆ ಕೂತು ಅವರನ್ನು ಕಡಿದು ಮಲೆಜ್ವರವನ್ನು ತರುತ್ತವೆ. ಜನರು ಉಪಯೋಗಿಸದೆ ಇರುವ ಅನೇಕ ಬಾವಿಗಳ ಸ್ಥಿತಿಯೂ ಈ ಸೊಳ್ಳೆಗಳ ಅಭಿವೃದ್ಧಿಗೆ ಜನ್ಮಸ್ಥಾನವಾಗಿದೆ. ಆದಕಾರಣ ಅಂಥಾ ಬಾವಿಗಳ ಮೇಲೆ ಸಣ್ಣ ರಂಧ್ರಗಳುಳ್ಳ, ಸೊಳ್ಳೆಗಳು ತಿರುಗಾಡುವುದಕ್ಕಾಗದ ಜಾಲರಿಗಳನ್ನು ಹಾಕಿಸಬೇಕು ... ಪ್ರದೇಶಗಳಲ್ಲಿರುವ ಕೊಚ್ಚೆಗುಂಡಿಗಳನ್ನು ಮುಚ್ಚಿಸಬೇಕು ಇದಕ್ಕಾಗಿ ಆರು ತಿಂಗಳ ವರೆಗೆ ಪ್ರತ್ಯೇಕವಾದ ಶಿಬ್ಬಂದಿಯನ್ನು ನೇಮಕಮಾಡಬೇಕು. ಇದಕ್ಕೋಸ್ಕರ ವರುಷಕ್ಕೆ ೧೬,೦೦೦ ರೂಪಾಯಿ ಶಿಬ್ಬಂದಿ ಖರ್ಚಾದೀತು ಇದಲ್ಲದೆ ಕೊಚ್ಚೆಗುಂಡಿಗಳನ್ನು ಮುಚ್ಚುವುದಕ್ಕೆ ೯೦,೦೦೦ ರೂಪಾಯಿ ಬೇಕಾಗುವುದು ಎಂಬುದೇ.

ವಿದೇಶ ವರ್ತಮಾನಗಳು.

ಇಟಲಿ ರಾಜ್ಯದ ಉತ್ತರ ಭಾಗದಲ್ಲಿರುವ ಬ್ರೇಸಿಯಾ ಎಂಬ ಸ್ಥಳದಲ್ಲಿ ಅಂತರಿಕ್ಷದಲ್ಲಿ ಸಂಚರಿಸುವ ವಿಮಾನಗಳ ಪಂದ್ಯವು ಮುಂದಿನ ವಾರ ನಡೆಯುವುದಾಗಿದೆ ಸುಮಾರು ೧೨ ಮಂದಿ ಕಾರ್‍ಯಗಾರರು ತಮ್ಮ ವಿಮಾನಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಜೂಜು ಹಿಡಿಯುವುದಾಗಿ ಮಾತು ಕೊಟ್ಟಿದಾರೆ.

ಸ್ಪೆಯಿನ್ ರಾಜ್ಯಕ್ಕೆ ಸೇರಿದ ಕೆಟಲೋನಿಯಾ ಎಂಬ ಸ್ಥಳದಲ್ಲಿ ಪ್ರಜೆಗಳು ದಂಗೆ ಕೃತ್ಯಗಳನ್ನು ನಡಿಸಿದ್ದರಿಂದ ಸರ್ಕಾರದವರು ೧೩ ಮಂದಿ ರಾಜದ್ರೋಹಾಪರಾಧಿಗಳನ್ನು ಗಡೀಪಾರು ಮಾಡಿದ್ದಲ್ಲದೆ, ಅನೇಕರನ್ನು ಹಿಡಿದು ಬಂದೀಖಾನೆಯಲ್ಲಿ ಹಾಕಿದರು. ಆ ಪೈಕಿ ಫೆರ್ರರ್ ಎಂಬೊಬ್ಬನು ಅಲ್ಪೋನ್ಸೋ ದೊರೆಯವರನ್ನು ಕೊಂದುಹಾಕಬೇಕೆಂದು ಪ್ರಯತ್ನಪಟ್ಟಿದ್ದನು ಸರ್ಕಾರದವರು ಅಲ್ಲಿನ ಹಲವು ಮ್ಯುನಿಸಿಪಲ್ ಅಧಿಕಾರಿಗಳನ್ನೂ ಪುರಾಧ್ಯಕ್ಷರನ್ನೂ ಕೆಲಸದಿಂದ ವಜಾ ಮಾಡಿರುತ್ತಾರೆ

ಜರ್ಮನಿಯ ಚಕ್ರವರ್ತಿಯವರು ಕಳೆದ ವಾರ ಆಸ್ಟ್ರಿಯಾದಲ್ಲಿ ನಡೆದ ಸೈನಿಕರ ಕವಾಯನ್ನು ಪರೀಕ್ಷಿಸುವುದಕ್ಕೆ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದರು. ಜರ್ಮನಿಗೆ ಸೇರಿದ ... ಎಂಬ ರಾಜ್ಯದ ಬಳಿ ರೈಲ್ ಕಂಬಿಯ ಮೇಲೆ ದುಷ್ಟರ್‍ಯಾರೋ ಮದ್ದಿನ ಗುಂಡನ್ನು ಇಟ್ಟಿದ್ದದ್ದು ಗೊತ್ತಾಯಿತು ಅಲ್ಲಿ ಅವರ ಗಾಡಿಯು ಸ್ವಲ್ಪಹೊತ್ತು ನಿಲ್ಲಬೇಕಾಯಿತು ... ಎಂಬ ಪಟ್ಟಣಕ್ಕೆ ಚಕ್ರವರ್ತಿಯವರು ಹೋಗಿ ಇಳಿದರು. ಅಲ್ಲಿ ...೦,೦೦೦ ಕಾಲ್ಬಲದ ಸೈನ್ಯವೂ, ...೦೦೦ ಕುದುರೆ ಸೈನ್ಯವೂ, ...೦ ತೋಫ್ ಸೈನ್ಯವೂ ಸೇರಿ ಕವಾಯಿತು ನಡೆಯಿತು ಅಲ್ಲಿ ಸೈನಿಕರು ವಿಮಾನಗಳನ್ನು ಉಪಯೋಗಿಸಿ, ತಂತಿಗಳಿಲ್ಲದೆ ವರ್ತಮಾನಗಳನ್ನು ಕೊಟ್ಟು ತರಿಸಿಕೊಂಡು, ಅನೇಕ ಸಾಹಸ ಕಾರ್ಯಗಳನ್ನು ಮಾಡಿತೋರಿಸಿದರು ಈ ಕವಾಯಿತಿನಲ್ಲಿ ಯುದ್ಧಕಾಲಗಳಲ್ಲಿ ಉಪಯೋಗಿಸುವಂಥಾ ದೊಡ್ಡ ದೀಪಗಳನ್ನು ವಿಶೇಷವಾಗಿ ಉಪಯೋಗಿಸಿದರು ಈ ದೀಪಗಳನ್ನು ... ಸುಮಾರು ... ಕುದುರೆಗಳು ... ಮಳೆ ... ಸೈನಿಕರನ್ನು ... ಬಿಟ್ಟವು ... ಗಾಯಪಟ್ಟರೆಂದೂ, ಈ ಪೈಕಿ ... ಜನರು ಮೃತಪಟ್ಟರೆಂದೂ, ... ಕುದುರೆಗಳ ಕಾಲು ... ಜನಗಳನ್ನು ... ತಂತೀ ವರ್ತಮಾನ ಬಂದಿದೆ

ಅಂತರಿಕ್ಷದಲ್ಲಿ ಸಂಚರಿಸುವ ವಿಮಾನಗಳು.

ಕೌಂಟ್ ಜೆಪ್ಪೆಲಿನ್ ಎಂಬ ಪ್ರಸಿದ್ಧ ಕಾರಿಗಾರನು ಜರ್ಮನಿ ಪಾರ್ಲಿಮೆಂಟ್ ಮೆಂಬರುಗಳ ಪೈಕಿ ೨೦೦ ಮಂದಿಯನ್ನು ಒಂದೊಂದು ಸಲಕ್ಕೆ ೧೨ ಮಂದಿಯಂತೆ ತನ್ನ ಕೂಡ ವಿಮಾನದಲ್ಲಿ ಕೂಡಿಸಿಕೊಂಡ ಲೇಕ್ ಕಾನ್‌ಸ್ಟೆನ್ಸ್ ಎಂಬ ಕೆರೆಯನ್ನು ದಾಟಿಸಿ ಕರೆದುಕೊಂಡು ಹೋಗಿ ಫ್ರೆಡ್ರಿಕ್‌ಶೇಫನ್ ಎಂಬ ಪಟ್ಟಣದಲ್ಲಿ ಸುರಕ್ಷಿತವಾಗಿ ಇಳಿಸಿದನು. ಅವರಿಗೆಲ್ಲಾ ಈ ಅಂತರಿಕ್ಷ ಪ್ರಯಾಣವು ಬಹು ಉತ್ಸಾಹಕರವಾಗಿದ್ದಿತು.

ವಿಮಾನಗಳ ಕಾರಿಗಾರನೆಂದು ಪ್ರಸಿದ್ಧಿಗೆ ಬಂದಿದ್ದ ಎಂ. ಲೆಫೇಬ್ರ್ ಎಂಬಾತನು ಜರ್ಮನಿ ಎಂಬ ಸ್ಥಳದಲ್ಲಿ ಅಮೇರಿಕದ ಒಂದು ಹೊಸ ತರಹಾ ವಿಮಾನ ಯಂತ್ರದಲ್ಲಿ ಕುಳಿತು ಅಭ್ಯಾಸಮಾಡುತ್ತಿದ್ದಾಗ ಆ ವಿಮಾನವು ಸುಮಾರು ಮೂವತ್ತು ಅಡಿಯ ಮೇಲಿನಿಂದ ಆಕಸ್ಮಾತ್ತಾಗಿ ಕಳಚಿಕೊಂಡು ಬಹು ರಭಸದಿಂದ ಬಂದು ನೆಲಕ್ಕೆ ಬಿದ್ದಿತು. ಅದರ ಏಟಿಗೆ ಒಳಗಿದ್ದ ಆ ಕಾರಿಗಾರನಿಗೆ ಪೆಟ್ಟುತಗಲಿ ಕಾಲವಾದನು. ರೀಂಸ್ ಪಟ್ಟಣದಲ್ಲಿ ವಿಮಾನಗಳ ಪಂದ್ಯ ನಡೆದಾಗ್ಗೆ ಈತನು ಅದರಲ್ಲಿ ಪ್ರಮುಖನಾಗಿದ್ದನು.

ವಿಲಾಯಿತಿಗೆ ಸೇರಿದ ಇಂಗ್ಲಿಷ್ ಸೈನಿಕರ ಠಾಣ್ಯವಾದ ಆಲ್ಡರ್‌ಷಾಟಿನಲ್ಲಿ ಕರ್ನಲ್ ಕೋಡಿ ಎಂಬಾತನು ತನ್ನ ವಿಮಾನದಲ್ಲಿ ಕುಳಿತು ಆರಿನ ಮೇಲೆ ಸುತ್ತಿಕೊಂಡು ಬಂದನು. ಆ ವಿಮಾನವು ೪೦ ಮೈಲಿಯ ದೂರವನ್ನು ೬೩ ನಿಮಿಷಗಳಲ್ಲಿ ಸಂಚಾರ ಮಾಡಿಕೊಂಡು ಬಂದಿತು. ಸೈನಿಕರು ಇಂತು ನೋಡಿ ಜಯಘೋಷಗಳನ್ನು ಮಾಡಿದರು.

ಬ್ರೆಕ್ಸಿಯಾ ಎಂಬ ಸ್ಥಳದಲ್ಲಿ ಅಂತರಿಕ್ಷದಲ್ಲಿ ಸಂಚರಿಸುವ ಹಡಗುಗಳ ಪಂದ್ಯವು ನಡೆಯುತ್ತಲಿದೆ. ಪ್ರಾರಂಭದ ದಿನ ವಿಮಾನಗಳು ಬಹಳ ಸರಿಯಾಗಿ ಬಂದಿರಲಿಲ್ಲ. ಗೆದ್ದವರಿಗೆ ಕೊಡುವುದಕ್ಕಾಗಿ ೫೨,೫೦೦ ರೂಪಾಯಿಗಳ ಬಹುಮಾನ ಪ್ರತ್ಯೇಕ ಕೂಡಿಸಲ್ಪಟ್ಟಿದೆ.

ಜೆಪ್ಪೆಲಿನ್ ಎಂಬ ಜರ್ಮನಿಯ ಕಾರಿಗಾರನಿಂದ ತಯಾರಿಸಲ್ಪಟ್ಟ ವಿಮಾನದಲ್ಲಿ ಸ್ಯಾಕ್ಸನಿ ರಾಜ್ಯದ ದೊರೆಯವರು ೨೨ ನೇ ಗುರುವಾರ ಕುಳಿತು ಎರಡುಮೂರು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದರೆಂದು ತಂತಿ ವರ್ತಮಾನ ಬಂದಿದೆ.

ಬೆಂಗಳೂರು ಶ್ರೀನಿವಾಸ ಮಂದಿರದ ಶ್ರೀ[illegible]

ಈ ವಾರದ ಮಧ್ಯಾಹ್ನ ದೈವಾಧೀನದಿಂದ ಮಳೆಯು ಸ್ವಲ್ಪ ಹಿಂತೆಗೆದು ಸೂರ್ಯಶಕ್ತಿ ಉಂಟಾದದ್ದರಿಂದ ಮೇಲೆ ಹೇಳಿದ ಸಮಾಜದ ಮೆಂಬರುಗಳು ಅನೇಕರು ಸೇರಿ ಮೂರು ಘಂಟೆ ಕಾಲವನ್ನು ಅತಿ ಪ್ರಯೋಜನದಿಂದ ಕಳೆದರು. ನಡೆದ ಉಪನ್ಯಾಸವೂ, ಮತ್ತು ಪ್ರಶ್ನೋತ್ತರಗಳೂ ಬಹಳ ಮನೋಹರವಾಗಿಯೂ, ಅನೇಕ ಹಿತೋಕ್ತಿಗಳಿಂದ ಕೂಡಿದ್ದಾಗಿಯೂ ಇದ್ದವು. ಇವನ್ನು ಕೇಳಲು ಬಾರದೆ ಇದ್ದವರಿಗೆ ಒಳ್ಳೆ ಅವಕಾಶ ತಪ್ಪಿ ಹೋದದ್ದಕ್ಕಾಗಿ ಚಿಂತಿಸುತ್ತೇವೆ. ಶ್ರೀಮತಿ ಮಹಲಕ್ಷ್ಮಮ್ಮನವರು ಸತ್ಕರ್ಮಗಳು ಯಾವುವು? ದುಷ್ಕಾರ್ಯಗಳು ಯಾವುವು? ಭಕ್ತಿಮಾರ್ಗ ಯಾವುದು? ಎಂಬ ವಿಷಯಗಳನ್ನು ಕುರಿತು ಪ್ರಶ್ನೋತ್ತರಗಳನ್ನು ಬರೆದು ಇದ್ದರು. ಪರರಿಗೆ ಅಹಿತವನ್ನುಂಟುಮಾಡದೆ ಕೇಡನ್ನು ಬಯಸದೆ ಇರತಕ್ಕದ್ದೇ ಸತ್ಕರ್ಮವೆಂದು ಹೇಳಿದರು. ಹೀಗೆಯೇ ಎಲ್ಲಾ ಪ್ರಶ್ನೆಗಳನ್ನೂ ಉತ್ತರಗಳನ್ನೂ ಊಹಿಸಬಹುದಾಗಿರುತ್ತದೆ. ತದನಂತರದಲ್ಲಿ ಸೌಭಾಗ್ಯವತಿ ಬಿ. ಸೀತಮ್ಮನವರು “ಈಶ್ವರನ ಕೃಪಾವೈಲಕ್ಷಣ್ಯ”ವನ್ನು ಕುರಿತು ಒಂದು ಸೂಕ್ಷ್ಮವಾದ ಸಂಭಾಷಣೆಯನ್ನು ಓದಿ ಅಲ್ಲಿ ಸೇರಿದ್ದ ನಾರೀಮಣಿಗಳಿಗೆ ಬಹಳ ಆನಂದವನ್ನು ಉಂಟುಮಾಡಿದರು. ಈಶ್ವರ ಕೃಪೆಯನ್ನು ವರ್ಣಿಸತಕ್ಕದ್ದು ಸಾಧ್ಯವಲ್ಲ. ಚೇತನರಾದವರು ಅಪರಾಧಿಗಳಾಗಿಯೇ ಇದ್ದಾರೆ. ಈ ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದಾದರೆ ಮನುಷ್ಯನಾದವನಿಗೆ ಗತ್ಯಂತರಗಳೇ ಇಲ್ಲವೆಂದು ಹೇಳಬೇಕಾಗುತ್ತೆ. ಆದರೆ ಜಡಪದಾರ್ಥಗಳಿಗೆ ಜೀವವನ್ನು ತುಂಬಿ ಅವಕ್ಕೆ ಜ್ಞಾನವನ್ನು ಉಂಟುಮಾಡಿದ ಈಶ್ವರ ಕೃಪೆಯನ್ನು ಏನೆಂದು ಹೇಳೋಣ? ಇದು ಆತನ ಅಂದರೆ ಸರ್ವೇಶ್ವರನ ಅಪಾರ ಕರುಣೆಗೆ ದೊಡ್ಡ ದೃಷ್ಟಾಂತರವಾಗಿರುತ್ತೆ ಎಂಬ ಅರ್ಥಗಳನ್ನು ಸಾಧಿಸಲು ಅನೇಕ ವಿಧವಾದ ಅಭಿಪ್ರಾಯಗಳನ್ನು ಸೂಚಿಸಿ ಆತನಿಂದ ಲಬ್ಧವಾದ ಪಂಚಭೂತಗಳ ಪ್ರಾಮುಖ್ಯತೆಯನ್ನು ಕುರಿತು ಕೆಲವು ವಚನಗಳನ್ನು ನುಡಿದು, ಅವುಗಳ ಮೂಲಕ ಈಶ್ವರ ವೈಚಿತ್ರ್ಯವನ್ನು ತಿಳಿಯಬಹುದಾಗಿ ಹೇಳಿ ಉಪನ್ಯಾಸವನ್ನು ಪೂರೈಸಿದರು. ಮೇಲೆ ಹೇಳಲ್ಪಟ್ಟ ನಾರೀಮಣಿಗಳಿಬ್ಬರಿಗೂ ಸಮಾಜದ ಕಾರ್ಯದರ್ಶಿಗಳಿಂದ ವಂದನೆಗಳು ಹೇಳಲ್ಪಟ್ಟು, ಶ್ರೀದೇವರಿಗೆ ಮಂಗಳಾರತಿಯೊಡನೆ ಸಭೆಯು ಪೂರೈಸಲ್ಪಟ್ಟಿತು.

ಮುಂದಿನ ಶನಿವಾರ ಅಂದರೆ ೧೮ ನೇ ತಾರೀಖು ಪದ್ಧತಿಯಂತೆ ವಿಶೇಷ[illegible] ಗಿನ ಕಾರ್ಯಗಳು ಜರುಗಿಸಲ್ಪಡುವವು. ಆ ದಿವಸ ಶ್ರೀ ಗಣೇಶನ ಹಬ್ಬವಾದದ್ದರಿಂದ ಗೌರಿ ಆರತಿ ಇತ್ಯಾದಿಗಳನ್ನು ವೈಭವದೊಡನೆ ಮಾಡಬೇಕೆಂಬ ಉದ್ದೇಶ ಉಂಟು. ಆದರೆ ನಾರೀಮಣಿಗಳು, ಮೆಂಬರುಗಳು ಮತ್ತು ಹಿತೈಷಿಗಳು ಆಗಮಿಸಿದರೆ, ಸರ್ವವೂ ಚೆನ್ನಾಗಿ ನಡೆಯಬಹುದು. ಇದಕ್ಕಾಗಿ ಎಲ್ಲರೂ ಬರಬೇಕೆಂಬ ವಿನಯ ಪೂರ್ವಕವಾದ ಸಮಾಜ ವಿಜ್ಞಾಪನೆಯನ್ನು ಈ ಮೂಲಕ ತಿಳಿಸಲಾಗಿದೆ.

ಬಂಗಾಳಾ ಪ್ರಾಂತಿಕ ಸಮಾಜವು.

ಹೂಗ್ಲಿ ಪಟ್ಟಣದಲ್ಲಿ ನಡೆಯಿತು.

ಮುಖ್ಯಂಡರಾದ ಬಂಗಾಳಿಗಳ ಉಪನ್ಯಾಸಗಳು

ಕಳೆದ ೫ನೇ ತಾ. ಭಾನುವಾರ ಕಲ್ಕತ್ತಾ ಪಟ್ಟಣದ ಬಳಿ ಇರುವ ಹೂಗ್ಲಿ ನಗರದಲ್ಲಿ ಬಂಗಾಳಾ ಪ್ರಾಂತಿಕ ಸಭೆಯು ನಡೆಯಿತು. ಅನೇಕ ಮಂದಿ ಪ್ರತಿನಿಧಿಗಳೂ ಬಂಗಾಳಿ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಬಾಬು ವೈಕುಂಠನಾಥ ಸೇನರವರು ಸಭಾನಾಯಕರಾಗಿದ್ದರು. ಸುರೇಂದ್ರನಾಥ ಬ್ಯಾನರ್ಜಿ ಯವರಿಗೂ ಆನರಿಂದ ಘೋಸರಿಗೂ ವಿದ್ಯಾರ್ಥಿಗಳು ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು. ಮೊದಲನೆಯವರು ಅವರಿಗೆ—ನೀವುಗಳು ಸರ್ಕಾರದ ದಾನೂನುಗಳನ್ನು ವಿನಾಕಾರಣ ಸಕ್ಕಾರಗಿ ನಡೆದುಕೊಳ್ಳುತ್ತಾ ಬರಬೇಕೆಂದೂ, ಎರಡನೆಯವರು ಅವರಿಗೆ—ನೀವು ಆತುರಪಡದೆ ಶಾಂತಚಿತ್ತ ಮನೋಭಾವವುಳ್ಳವರಾಗಿದ್ದರೆ ಹಿಂಸೆಕರವೆಂದು ತೋರುವಂಥಾ ಕಾರುಬಾರುಗಳೆಲ್ಲಾ ಬೇಗನೆ ನಿವಾರಣೆಯಾಗುವವೆಂದೂ ನಿವೇದನೆಯನ್ನು ಹೇಳಿದರು. ರಿಸೆಪ್ಷನ್ ಕಮಿಟಿಯ ಮುಖ್ಯಸ್ಥರಾದ ಬಾಬು ಬಿಹಾರಿ ಮಿತ್ರರವರು (ಇವರು ಹೂಗ್ಲಿ ಮ್ಯುನಿಸಿಪಾಲಿಟಿಯ ಚೇರ್‌ಮನ್ ರಾಗಿರುತ್ತಾರೆ) ಸಭಿಕರನ್ನು ಕುರಿತು ಉಪನ್ಯಾಸ ಮಾಡುತ್ತಾ, ವಿದ್ಯಾಭ್ಯಾಸಂಗ ಮಾಡುತ್ತಿರುವ ಬಾಲಕರು ರಾಜಕೀಯ ವಿಚಾರಗಳಲ್ಲಿ ಪ್ರವರ್ತಿಸಕೂಡದೆಂದು ಹೇಳಿದಾಗ ಸಭೆಯಲ್ಲಿದ್ದ ವಿದ್ಯಾರ್ಥಿಗಳು ಗಲಭೆಯನ್ನೆಬ್ಬಿಸಿ ತಮ್ಮ ಅಸಮಾಧಾನವನ್ನು ಪ್ರಕಾಶಪಡಿಸಿ, ಉಪನ್ಯಾಸಕರ ಬಾಯಿಯನ್ನು ಮುಚ್ಚಿಸಿದರು. ತರುವಾಯ ಆ ಉಪನ್ಯಾಸಕರು ಗಡೀಪಾರು ಹೊಂದಿರುವ ಕೃಷ್ಣಕುಮಾರ ಮಿತ್ರರ ಮತ್ತು ಅಶ್ವಿನೀ ಕುಮಾರ ದತ್ತರ ಹೆಸರನ್ನು ಮಾತ್ರ ನಮೂದು ಮಾಡಿದಾಗ ಸಭಿಕರೆಲ್ಲಾ—“ಗಡೀಪಾರಾಗಿರುವ ಒಂಭತ್ತು ಮಂದಿಯೂ ನಿರಪರಾಧಿಗಳು” ಎಂದು ಕೂಗಿಕೊಂಡರು. ರಾಯೇಂದ್ರನಾಥ ಮುಖರ್ಜಿಯವರು ಉಪನ್ಯಾಸ ಮಾಡಿದಾಗ ಸಭಿಕರು ಅವರನ್ನು ಉತ್ಸಾಹದೊಡನೆ ಕೊಂಡಾಡಿದರು. ಅವರು ಸಭಾಸದರಿಗೆ—ರಾಜಕೀಯ ವಿಷಯಗಳನ್ನು ಹಿಡಿದು ಹೊಡೆದಾಡಬೇಡಿ. ನೀವೆಲ್ಲಾ ಯಥಾರ್ಥವಾದ ಸ್ವದೇಶ ಪ್ರೋತ್ಸಾಹಕರಾಗಿ[illegible] ದೇವಂತರು ದೇಶಹಿತಕ್ಕಾಗಿ ತಮ್ಮ ದ್ರವ್ಯವನ್ನು ವಿನಿಯೋಗಿಸಲಿ ಎಂಬೀ ರೀತಿಯಾಗಿ ಹೇಳಿ, ಜನ್ಮಭೂಮಿಯ ಸೇವೆ ಮಾಡದಂತೆ ವಿದ್ಯಾರ್ಥಿಗಳನ್ನು ಅಡ್ಡಿಮಾಡಬಾರದು ಎಂದು ನುಡಿದಾಗ ಸಭಿಕರು ಅವರನ್ನು ಕೊಂಡಾಡಿದರು.

ಸಭೆಯ ಪ್ರೆಸಿಡೆಂಟರು—ಬಹಿಷ್ಕಾರ (ಬಾಯ್ಕಾಟ್) ವು ಯೂರೋಪಿಯನ್ನರಿಗೆ ಅಹಿತಕರವಾದ ಮಾತಾಗಿರೋಣದರಿಂದ ನಾವು ಅದನ್ನು ತ್ಯಜಿಸಬೇಕೆಂದು ಹೇಳಿದಾಗ ಸಭಿಕರು ಅದನ್ನು ನಾವು ಬಿಡುತ್ತಿಲ್ಲವೆಂದು ಹೇಳುತ್ತಾ ಪ್ರೆಸಿಡೆಂಟರು ಭಾಷಣ ಮಾಡದಂತೆ ಅಡಚಣೆ ಮಾಡುತ್ತಾ ಬಂದು, ಕೊನೆಗೆ ಸುರೇಂದ್ರನಾಥ ಬ್ಯಾನರ್ಜಿ ಯವರು ಮಧ್ಯಸ್ಥಿಕೆ ಮಾಡಿದ ಮೇಲೆ ಸುಮ್ಮನಾದರು. ಪ್ರೆಸಿಡೆಂಟರು ಬಂಗಾಳಾ ವಿಭಜನೆಯನ್ನೂ ರಾಜದ್ರೋಹ ಕೃತ್ಯಗಳನ್ನೂ ಖಂಡನೆ ಮಾಡಿದರು. ಮತ್ತು ಸ್ವದೇಶಿ ಗಲಭೆಯುಂಟಾದ ಪ್ರಾರಂಭದಲ್ಲಿ ಅಹಿಂಸಾಕವು ತಕ್ಕಮಟ್ಟಿಗೆ ಇದ್ದಿತೆಂದೂ, ವೈಸ್‌ರಾಯಿ ಬ್ರಭುಗಳು ಗಡೀಪಾರು ಮಾಡಲ್ಪಟ್ಟಿರುವವರನ್ನು ಬಿಡುಗಡೆ ಮಾಡಿಕೊಟ್ಟು ಸಮಸ್ತ ಬಂಗಾಳಾ ಪ್ರಜೆಗಳ ಕೃತಜ್ಞತೆಗೂ ಪಾತ್ರರಾಗಬೇಕೆಂದೂ, ಗವರ್ನ್‌ಮೆಂಟಿನವರು ರಾಜ್ಯಭಾರ ನಡೆಯುವದಲ್ಲಿ ಈಗ ಹೊಸ ಶಿಸ್ತುಗಳನ್ನು ರೂಢಿಸುವವರಾಗಿದ್ದಾಗ್ಯೂ ಬಂಗಾಳಾ ವಿಭಜನೆಯ ವಿಷಯವಾದ ವಾಗ್ವಾದವನ್ನು ಪ್ರಜೆಗಳು ಕಡೆತುಮಾಡಲಾರರೆಂದೂ, ಉಭಯ ಬಂಗಾಳಿಗಳಿಗೂ ಗವರ್ನ್‌ಮೆಂಟಿನವರು ಒಬ್ಬ ಗವರ್ನರವರನ್ನು ನೇಮಿಸಿಕೊಡಬೇಕೆಂದೂ ಹೇಳಿದರು.

ಎರಡನೆ ೨ ದಿನದ ನಿಂಟಿಂಗಿನಲ್ಲಿ ಸಭಿಕರು ಕೆಲವು ತೀರ್ಮಾನಗಳನ್ನು ಮಾಡಿದರು. ಮೌಲ್ವಿ ದೀನರ್ ಬಕ್ಷ್ ಯವರು—ಸ್ವದೇಶೀ ಬಹಿಷ್ಕಾರವನ್ನು ನಾವು ಇಟ್ಟುಕೊಳ್ಳುವುದು ಕಾನೂನಿಗೆ ವಿರುದ್ಧವಾದುದಲ್ಲವೆಂದೂ, ಆದರಿಂದ ನಮ್ಮ ದೇಶಾಭ್ಯುದಯಕ್ಕೆ ತುಂಬಾ ಪ್ರೋತ್ಸಾಹವಾಗುವುದೆಂದೂ ಹೇಳಿದರು. ಬಾಬು ಅರವಿಂದ ಘೋಷರವರು ಕೂಡ ಅದೇ ಅರ್ಥಕ್ಕೆ ಉಪನ್ಯಾಸ ಮಾಡಿದರು. ಲಾರ್ಡ್ ಮಾರ್ಲಿಯವರು ರಾಜ್ಯಭಾರತಂತ್ರದಲ್ಲಿ ಮಾಡಿರುವ ಶಿಸ್ತುಗಳು ಯೋಗ್ಯವಾಗಿರುತ್ತವೆಯಾದರೂ ಹಿಂದೂಸ್ಥಾನದ ಪ್ರಜೆಗಳಿಗೆ ರಾಜಭಾರದ ವಿನಿಯೋಗದಲ್ಲೂ ಆಳ್ವಿಕೆಯಲ್ಲೂ ಕಾನೂನು ಮಾಡುವುದರಲ್ಲೂ ವಿಶೇಷವಾದ ಸ್ವಾತಂತ್ರ್ಯಗಳನ್ನು ಸಹಿಸಿಕೊಟ್ಟ ಹೊರತು ಪ್ರಜೆಗಳು ತೃಪ್ತಿಪಡುವವರಾಗಿಲ್ಲವೆಂದೂ, ನ್ಯಾಯವಿಧಾಯಕ ಕೌನ್ಸಿಲ್ಲುಗಳಿಗೆ ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಜಾತಿ ಕುಲ ಗೋತ್ರಗಳ ತಾರತಮ್ಯವನ್ನು ನೋಡುವುದು ಸರಿಯಲ್ಲವೆಂತಲೂ, ಕೌನ್ಸಿಲ್ ಮೆಂಬರುಗಳ ಚುನಾವಣೆಗೆ ಏರ್ಪಡುವ ರೂಲುಗಳನ್ನು ಜಾರಿಗೆ ತರುವುದಕ್ಕಿಂತ ಮುಂಚೆ ಸರ್ಕಾರದವರು ಪ್ರಕಟಿಸಿ ಆ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯಗಳನ್ನು ತಿಳಿದು ತಿದ್ದಬೇಕಾಗಿದೆ ಎಂದೆಲ್ಲಾ ತೀರ್ಮಾನ ಮಾಡಿದರು.

ಮೈಸೂರು ಸರ್ಕಾರಿ ಹುಕುಮುಗಳು

ಮೈಸೂರು ಡಿಸ್ಟ್ರಿಕ್ಟಿನ ಭಾರೀ ಜಂಗಲು

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಆಯಸೂರು ಮಾಗುಡಿ, ಬೇಗೂರು, ಕಾಕನಕೋಟೆ ಮತ್ತು ನೇಟಕುಪ್ಪೆಗಳಲ್ಲಿರುವ ಸ್ಟೇಟ್ ಫಾರೆಸ್ಟು ಈ ಸಂಸ್ಥಾನದಲ್ಲೆಲ್ಲಾ ಬಹು ವಿಸ್ತಾರವಾದದ್ದು. ಅದು ಮಲಬಾರ್ ಮತ್ತು ಕೊಡಗಿನ ಪ್ರಾಂತ್ಯದ ಕಾಡಿನ ವರೆಗೂ ವಿಸ್ತರಿಸಿಕೊಂಡಿದೆ. ಮತ್ತು ಅದು ೪೭ ಮೈಲಿ ಉದ್ದವೂ ೨೫ ಮೈಲಿ ಅಗಲವೂ ಸುಮಾರು ೧೯೪ ಚದರಮೈಲಿ ವಿಸ್ತಾರವುಳ್ಳದ್ದಾಗಿಯೂ ಇದೆ. ಈ ಭಾರೀ ಜಂಗಲಿನಲ್ಲಿ ತೇಗವೇ ವಿಶೇಷವಾಗಿ ಬೆಳೆಯುವುದು. ಇದಲ್ಲದೆ ಹೊನ್ನೆ, ಬೀಟೆ, ಮತ್ತಿ, ನಂದಿ ಎಂಬ ಸಾಗುವಾನಿ ಮರಗಳೂ ಬಹಳವಾಗಿ ಬೆಳೆಯುತ್ತವೆ. ಕಳೆದ ೧೮೮೫ ನೇ ಇಸವಿಯಿಂದ ೧೮೯೧ ರ ವರೆಗೆ ಒಂದು ಕ್ರಮವನ್ನು ಅನುಸರಿಸದೆ ಬೈಬ್ಲೀಸರು ಗಳಿಗೋಸ್ಕರ ಅನೇಕ ಮರಗಳನ್ನು ಕಡಿಯುತ್ತಾ ಇದ್ದಂತೆ ಆಗಿದೆ. ಈಚೆಗೆ ಅಂದರೆ ೧೯೦೨ ನೇ ಇಸವಿ ಲಾಗಾಯಿತು ಮರಗಳನ್ನು ಕಡಿಯುವುದರಲ್ಲಿ ಒಂದು ಕ್ರಮವನ್ನು ಸಾಗಿಸಲಾಗಿದೆ. ೧೯೦೭—೦೮ ಕ್ಕೆ [illegible] ೧,೩೪, [illegible] ಮರವನ್ನೂ, ೧,೫೦,೦೦೦ ಬೊಂಬುಗಳನ್ನೂ [illegible] ದ ಜಂಗಲಿನಿಂದ ೧,೧೧,೦೦೦ ರೂಪಾಯಿ ಉತ್ಪತ್ತಿಯಾಗಿ ಅದರಲ್ಲಿ ೬೭,೦೦೦ ರೂಪಾಯಿನಂತೆ ಖರ್ಚು ಆಗುತ್ತಿದೆ.

ಇನ್ನು ಮುಂದೆ ಜಂಗಲಿನಲ್ಲಿ ಮರಗಳನ್ನು ಕಡಿಯಿಸುವ ವಿಷಯದಲ್ಲಿ ಹೊಸ ಕ್ರಮವನ್ನು ರೂಢಿಸಬೇಕೆಂದು ಸರ್ಕಾರದವರು ಯೋಚಿಸಿ ಇದನ್ನು [illegible] ಕೊಡತಕ್ಕ ಹುಕುಂ ಮಾಡಿದರು. ಫಾರೆಸ್ಟ್ ಕನ್ಸರ್ವೇಟರ್ [illegible] ಆಜ್ಞಾಯಿಸಿ ಮಾಡಿ [illegible] ವನ್ನು [illegible] ಈ ಸಲಹೆಗಳನ್ನು ಗವರ್ನ್‌ಮೆಂಟಿನವರು [illegible] ರೀತಿ ಮರಗಳನ್ನು ಕಡಿಯಿಸುತ್ತಾ [illegible] ಮರಗಳು [illegible] ದಾರೆ. ಈ ಕ್ರಮದಂತೆ [illegible] ಬಂದ ವರ್ಷದಲ್ಲಿ ಈ ಜಂಗಲಿನಿಂದ ಸರ್ಕಾರಕ್ಕೆ ಸಾಲೀಯಾನಾ ೧,೪೧,೦೦೦ ರೂಪಾಯಿನಂತ ಉತ್ಪತ್ತಿಯಾಗಿ ೬೩,೦೦೦ ರೂಪಾಯಿನಂತೆ ಖರ್ಚು ಜಾತಾ ೭೮,೦೦೦ ರೂಪಾಯಿನಂತೆ ನಿವ್ವಳ ತಿಲ್ಕು ಉಳಿಯುವುದು.

ಇನಾಂ ಜವಿಗಾನೂ ಮುಜರಾಯಿ ಸೂಪರಿಂಟೆಂಡೆಂಟರೂ

ಶ್ರೀ ಶಿವಗಂಗಾ ಮಠಕ್ಕೆ ಸೇರಿದ ನೆಲಮಂಗಲ ತಾಲ್ಲೂಕಿನಲ್ಲಿರುವ ಬರಗೇನಹಳ್ಳಿ ಎಂಬ ಇನಾಂ ಗ್ರಾಮದಲ್ಲಿ ಮುದ್ದುವೀರಪ್ಪನೆಂಬಾತನು ತನ್ನ ಮನೆ ಕಟ್ಟಿಕೊಳ್ಳುವುದಕ್ಕೆಂದು ೩೧ ನೇ ಸರ್ವೇ ನಂಬರುಳ್ಳ ಮನಾಗ ಭೂಮಿಯಲ್ಲಿ ಮಣ್ಣು ತೋಡಿ ಇಟ್ಟಿಗೆಗಳನ್ನು ತಯಾರಮಾಡಿಕೊಂಡನು. ಇದಕ್ಕೆ ಆತನು ಲೈಸೆನ್ಸ್ ಪಡೆಯಲಿಲ್ಲವೆಂದು ಹೇಳಿ ಮುಜರಾಯಿ ಸೂಪರಿಂಟೆಂಡೆಂಟರು ಆತನಿಗೆ ಹತ್ತು ರೂಪಾಯಿ ಜುಲ್ಮಾನೆ ಹಾಕಿದರು. ಅದರ ಮೇಲೆ ಆತನು ಅಪೀಲ್ ಮಾಡಿಕೊಂಡನು. ಗವರ್ನ್‌ಮೆಂಟಿನವರು ತನಿಖೆಮಾಡುವಲ್ಲಿ ಮುಜರಾಯಿ ಸೂಪರಿಂಟೆಂಡೆಂಟರು ಆ ಗ್ರಾಮಗಳ ಜಮಾಬಂದಿಯನ್ನು ಕರಾರುಮಾಡುವುದೂ, ದರಖಾಸ್ತುಗಳನ್ನೂ ತಕರಾರುಗಳನ್ನೂ ಪಹಣಿಪಟ್ಟಿಗಳನ್ನೂ ವ್ಯವಸ್ಥೆ ಮಾಡುವುದೂ, ಪಟೇಲ್ ಶ್ಯಾನುಭೋಗರುಗಳನ್ನು ಬಹಲಿ ಬರತರಫ್ ಮಾಡುವುದೂ, ಈ ರೀತಿ ಡೆಪ್ಯುಟಿ ಕಮಿಷನರ ಅಧಿಕಾರಗಳನ್ನು ಅದರು ಚಲಾಯಿಸುತ್ತಾರೆಂದು ತಿಳಿದುಬಂದಿತು. ಇತರ ಮಠಗಳಿಗೆ ಸೇರಿದ ಗ್ರಾಮಗಳ ವಿಷಯದಲ್ಲಿ ಅವರು ಇಂಥಾ ಅಧಿಕಾರಗಳನ್ನು ಚಲಾಯಿಸುತ್ತಿಲ್ಲವೆಂದೂ ಗೊತ್ತಾಯಿತು.

ಇದರ ಮೇಲೆ ಗವರ್ನ್‌ಮೆಂಟಿನವರು ಕೊಟ್ಟಿರುವ ಹುಕುಮಿನ ಸಾರಾಂಶವೇನೆಂದರೆ —ಶಿವಗಂಗಾ ಮಠದ ಇನಾಂ ಗ್ರಾಮಗಳಲ್ಲಿ ಮುಜರಾಯಿ ಸೂಪರಿಂಟೆಂಡೆಂಟರು ರೆವಿನ್ಯೂ ಅಧಿಕಾರಗಳನ್ನು ಚಲಾಯಿಸುವುದು ಸಹಜವಾಗಿ ಕಾಣುವುದಿಲ್ಲ. ರೆವಿನ್ಯೂ ಕಾರುಬಾರುಗಳನ್ನೆಲ್ಲಾ ಡೆಪ್ಯುಟಿ ಕಮಿಷನರಿಗೂ ಅವರ ಕೆಳಪಟ್ಟ ರೆವಿನ್ಯೂ ಅಧಿಕಾರಿಗಳಿಗೂ ವಹಿಸಿದೆ. ಆದರೆ ಈ ಗ್ರಾಮಗಳ ಕುಟ್ಟುವಳಿ ಜಮಾಖರ್ಚಿನ ಲೆಕ್ಕಗಳನ್ನು ರೆವಿನ್ಯೂ ಅಧಿಕಾರಿಗಳು ಮುಜರಾಯಿ ಸೂಪರಿಂಟೆಂಡೆಂಟರವರಿಗೆ ಸಾಲೀಸಾಲು ಕಳುಹಿಸುತ್ತಾ ಬರಬೇಕು. ಮೇಲ್ಕಂಡ ಮೊಕದ್ದಮೆಯ ವಿಷಯದಲ್ಲಿ ಅರ್ಜಿದಾರನಿಗೆ ಹಾಕಿರುವ ಜುಲ್ಮಾನೆಯನ್ನು ೧೦ ರಿಂದ ೨ ರೂಪಾಯಿಗೆ ಇಳಿಸಿದೆ.

ವ್ಯವಸಾಯದ ಬ್ಯಾಂಕುಗಳು ಸ್ಥಿರಾಸ್ತಿಯನ್ನು ಮಾಡಬಹುದೇ?

ನಂಜನಗೂಡಿನಲ್ಲಿರುವ ವ್ಯವಸಾಯದ ಬ್ಯಾಂಕು ಸರ್ಕಾರದಿಂದ ೧೮೯೮ ನೇ ಇಸವಿಯಲ್ಲಿ ತೆಗೆದುಕೊಂಡ ೨೬,೦೦೦ ರೂಪಾಯಿ ಸಾಲದ ಪೈಕಿ ೯,೮೭೦ ರೂಪಾಯಿಯನ್ನು ತೀರಿಸಿಬಿಟ್ಟಿದೆ. ಇನ್ನೂ ೧೬೦ ರೂಪಾಯಿ ಮಾತ್ರ ಉಳಿದಿರುವುದು. ಈ ಬ್ಯಾಂಕಿನ ಜಮಾಖರ್ಚನ್ನು ನೋಡಲಾಗಿ ೧೯೦೮ ನೇ ಡಿಸೆಂಬರ್ ಆಖೈರಿನಲ್ಲಿ ಬ್ಯಾಂಕಿನಲ್ಲಿ ೨,೩೫೪ ಚಿಲ್ಲರೆ ರೂಪಾಯಿ ಮೂಲಧನ ಉಳಿದಿತ್ತು. ವೆಂಕಟ್ರಮಣ ಉಪಾಧ್ಯಾಯರೆಂಬುವರು ಹತ್ತು ವರುಷಕಾಲ ಈ ಬ್ಯಾಂಕನ್ನು ನಡಿಸಿ ಅದನ್ನು ಅಭಿವೃದ್ಧಿಗೆ ತಂದದ್ದರಮೇಲೂ, ಅವರ ಸಾಲವನ್ನು ತೀರಿಸಿಕೊಳ್ಳಬೇಕೆಂದು ಅಪೇಕ್ಷೆಪಟ್ಟದ್ದರಮೇಲೂ ೧೯೦೮ ನೇ ಅಕ್ಟೋಬರಿನಲ್ಲಿ ಬ್ಯಾಂಕಿನ ಮೆಂಬರುಗಳು ೨೫ ಮಂದಿ ಸೇರಿ ಆ ಉಪಾಧ್ಯಾಯರ ಬಾಬತ್ತು ಚಿಕ್ಕಯ್ಯನ ಛತ್ರದ ಹೊಬಳಿ ಇವ[illegible] ಗ್ರಾಮದಲ್ಲಿರುವ ೧೧ ಎಕರೆ ೨೫ ಗುಂಟೆ ರೂ ೩೫-೩-೦ ಆಕಾರವುಳ್ಳ ಜಮೀನುಗಳನ್ನು ೨,೦೦೦ ರೂಪಾಯಿಗೆ ಬ್ಯಾಂಕಿನ ಹಣದಿಂದ ಕೊಂಡು ಕೊಳ್ಳತಕ್ಕದ್ದೆಂದು ತೀರ್ಮಾನಿಸಿದರು. ಆ ರೀತಿ ಅದೇ ತಿಂಗಳಲ್ಲಿ ೨,೦೦೦ ರೂಪಾಯಿ ಕೊಟ್ಟು ಅದನ್ನು ಬ್ಯಾಂಕಿನ ಆಸ್ತಿಯಾಗಿ ಕೊಂಡುಕೊಂಡದ್ದೂ ಆಯಿತು. ಈಚೆಗೆ ಬ್ಯಾಂಕಿನ ಏಜೆಂಟರು ಈ ಜಮೀನುಗಳನ್ನು ವ್ಯವಸಾಯಮಾಡಿಸುತ್ತಲೂ ಬಂದಿದ್ದಾರೆ. ಮೇಲ್ಕಂಡ ಮೂಲಧನವಾದ ೩,೩೫೪ ಚಿಲ್ಲರೆ ರೂಪಾಯಿ ಆಸ್ತಿಯಲ್ಲಿ ಈ ಜಮೀನೂ ಸೇರಿರುತ್ತದೆ. ವ್ಯವಸಾಯ ಬ್ಯಾಂಕುಗಳ ರಿಜಿಸ್ಟ್ರಾರವರು ಈ ವಿವರಗಳನ್ನು ತಿಳಿದು, ಈ ರೀತಿ ವ್ಯವಸಾಯದ ಬ್ಯಾಂಕಿನವರು ಸ್ಥಿರಾಸ್ತಿಯನ್ನು ಮಾಡಿಕೊಂಡು ನಡಿಸಬಹುದೇ ಎಂದು ಗವರ್ನ್‌ಮೆಂಟಿಗೆ ರಿಪೋರ್ಟುಮಾಡಿ ಕೇಳಿದರು.

ಅದರ ಮೇಲೆ ಗವರ್ನ್‌ಮೆಂಟಿನವರು ಕೊಟ್ಟಿರುವ ಹುಕುಮಿನ ಅಭಿಪ್ರಾಯವೇನೆಂದರೆ —ಹೀಗೆ ವ್ಯವಸಾಯದ ಬ್ಯಾಂಕಿನವರು ಮೆಂಬರುಗಳಿಂದ ಸಾಲವನ್ನು ವಸೂಲ್ಮಾಡಿಕೊಳ್ಳುವುದಕ್ಕಾಗಿ ಅವರ ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಳ್ಳುವುದೇನೂ ಅಕ್ರಮವಾದದ್ದಲ್ಲ. ಆದರೂ ಈ ಬ್ಯಾಂಕುಗಳಲ್ಲಿ ಲೇವಾದೇವಿ ನಡೆಯುವಾಗ್ಗೆ ಬ್ಯಾಂಕಿಗೇನಾದರೂ ನಷ್ಟ ಸಂಭವಿಸಿದ ಪಕ್ಷದಲ್ಲಿ ಅಂಥಾ ನಷ್ಟವನ್ನು ಎತ್ತಿಕೊಳ್ಳುವದಕ್ಕಾಗಿ ಬ್ಯಾಂಕಿನ ಮೂಲಧನವು ದ್ರವ್ಯರೂಪದಲ್ಲಿರಬೇಕಾದದ್ದು ಅಗತ್ಯವಾಗಿದೆ. ಆ ಕಾರಣ ಮೇಲ್ಕಂಡ ಬ್ಯಾಂಕಿನವರು ಈ ಹುಕುಂ ಹುಟ್ಟಿದ ತಾರೀಖು (೧೬-೨-೯) ಲಾಗಾಯಿತು ಆರು ತಿಂಗಳೊಳಗಾಗಿ ಒಳ್ಳೇ ಕ್ರಯವನ್ನು ಬರಿಸಿಕೊಂಡು ಮೇಲ್ಕಂಡ ಸ್ಥಿರಾಸ್ತಿಯನ್ನು ವಿಕ್ರಯ ಮಾಡತಕ್ಕದ್ದು.

ಉತ್ತರ ಧ್ರುವವನ್ನು ಕಂಡುಹಿಡಿದದ್ದು

ಡಾಕ್ಟರ್ ಕುಕ್ [illegible] ವೃತ್ತಾಂತವು

ಉತ್ತರ ಧ್ರುವವನ್ನು ಕಂಡು ಹಿಡಿದ ಡಾ. ಕುಕ್‌ರವರು [illegible] ಕೊಪನ್‌ಹೇಗನ್ [illegible] ಧೊರೆಯು ಆದೆಯಿಂದ [illegible] ಅಧಿಕಾರಿಯು ಅಲ್ಲಿಗೆ ಹೋಗಿ ಅವರನ್ನು ಎದುರುಗೊಂಡರು. ಅವರು ಅಲ್ಲಿಂದ [illegible] ಕೋ[illegible] ಪಟ್ಟಣವನ್ನು ಪ್ರವೇಶಮಾಡಿದರು. ಪಟ್ಟಣದ ಪ್ರಜೆಗಳು ಮಹಾಪೂರ್ವಕವಾಗಿ ಡಾಕ್ಟರ್ ಕುಕ್‌ಯವರನ್ನು ಎದುರುಗೊಂಡರು. ಮೊದಲು ಕ್ರೌನ್‌ಪ್ರಿನ್ಸ್ [illegible] ಅವರನ್ನು ಕಂಡು ಸನ್ಮಾನ ಮಾಡಿದರು. ಡಾಕ್ಟರ್ ಕುಕ್ [illegible] ಪಟ್ಟಣದಲ್ಲಿ [illegible] ಇವರು [illegible] ನಗಳ ಮತ್ತು ದೊರೆಯವರ [illegible] ಸತ್ಕಾರವನ್ನು [illegible] ಪ್ರಶ್ನೆ [illegible] ವರ್ತಮಾನ ಪತ್ರಿಕಾ ಪ್ರತಿನಿಧಿಗಳ ಉತ್ತರಗಳನ್ನು ಕೊಟ್ಟರು. ಮತ್ತು ಅವರು ಎಸ್ಕಿಮೋ ಜನರೂ ನಾಯಿಗಳೂ ದಾರಿಗೆ ತುಂಬಾ ಸಹಾಯವಾದರೆಂತಲೂ, ತಮ್ಮ ಪ್ರಯಾಣದ ವಿಷಯದಲ್ಲಿ ಇತರರು ಮಾಡುವ ಆಕ್ಷೇಪಣೆಗಳಿಂದ ತಮಗೆ ಯಾವ ಅಂಜಿಕೆಯೂ ಉಂಟಾಗಿಲ್ಲವೆಂತಲೂ ತಿಳಿಸಿದರು. ಡೆನ್‌ಮಾರ್ಕಿನ ದೊರೆಯವರೂ [illegible] ಯವರೂ ಡಾಕ್ಟರ್ ಕುಕ್‌ಯವರನ್ನು ಅರಮನೆಗೆ ಕರೆಸಿಕೊಂಡು ಅವರಿಗೆ

ಚೇತನ ಮಾಡದ್ದಲ್ಲದೆ ಅವರನ್ನು ಅರಮನೆಯೊಳಗೆ ಇಟ್ಟುಕೊಂಡಿದ್ದರು ಮತ್ತು ಅವರಿಗೆ ಮಹಾ ಘನತರವಾದ ಬಿರುದನ್ನು ದಯಪಾಲಿಸಿದರು

ಅಮೇರಿಕದ ಸಂಸ್ಥಾನಗಳ ಪ್ರೆಸಿಡೆಂಟ್ ಟಾಫ್ಟ್‌ಯವರು ತಮ್ಮ ಸಂತೋಷವನ್ನು ಡಾ|| ಕುಕ್‌ಯವರಿಗೆ ತಂತಿಯ ಮೂಲಕ ತಿಳಿಸುತ್ತಾರೆ ಅಮೇರಿಕದಲ್ಲಿ ಅನೇಕರಿಗೆ ಡಾ|| ಕುಕ್‌ಯವರ ಹೇಳಿಕೆಯಲ್ಲಿ ನಂಬಿಕೆ ಉಂಟಾಗದೆ ಸಂದೇಹಪಡುತ್ತಿದಾರೆ ಡಾ|| ಕುಕ್‌ಯವರು ತಮ್ಮ ಪ್ರಯಾಣದ ವಿಷಯದಲ್ಲಿ ವ್ಯಾಖ್ಯಾನಗಳನ್ನು ಕೊಟ್ಟು ಒಂದು ಪುಸ್ತಕವನ್ನು ಬರೆಯುತ್ತಿರುವುದಾಗಿಯೂ ಅದು ಪ್ರಕಟವಾದಲ್ಲಿ ಜನರಿಗಿರುವ ಅನುಮಾನವೆಲ್ಲಾ ನಿವಾರಣೆಯಾಗುವುದೆಂತಲೂ ಹೇಳಿದರು

ಇನ್ನೊಬ್ಬರು ಉತ್ತರ ಧ್ರುವವನ್ನು ಕಂಡುಹಿಡಿದರು

ಕಮ್ಯಾಂಡರ್ ಪೀರಿಯವರು ಹೇಳುವ ವೃತ್ತಾಂತವು

ನ್ಯೂಫೌಂಡ್‌ಲೆಂಡ್ ಪ್ರಾಂತ್ಯದಿಂದ ಕಮ್ಯಾಂಡರ್ ಪೀರಿ ಎಂಬುವರು ಕಳೆದ ಏಪ್ರೆಲ್ ತಾ ೬ರಲ್ಲಿ ಉತ್ತರ ಧ್ರುವವನ್ನು ಕಂಡು ಹಿಡಿದೆವೆಂದು ಅಲ್ಲಿನ ಗವರ್ನರವರಿಗೆ ತಂತೀ ವರ್ತಮಾನ ಕಳುಹಿಸಿದಾರೆ ಈ ಸುದ್ದಿಯನ್ನು ಕೇಳಿ ಅಮೇರಿಕದವರು ಸಂದೇಹಪಡದೆ ಬಹಳಾ ಸಂತೋಷಪಟ್ಟು ಪೀರಿಯವರ ಸಾಹಸವನ್ನು ಕೊಂಡಾಡುತ್ತಿದಾರೆ ಡಾ|| ಕುಕ್‌ಯವರು ಬಹಳ ಸಂತೋಷಪಟ್ಟು—ಪೀರಿಯವರ ವಿವರಣೆಯಿಂದ ನಾನು ಹೇಳಿದ್ದು ನಿಜವಾಗುವುದು ಎಂದು ತಿಳಿಸಿದರು

ಡಾಕ್ಟರ್ ಕುಕ್‌ಯವರಿಗೆ ಚಿನ್ನದ ಪದಕ ದೊರಕಿತು

ಡೆನ್ಮಾರ್ಕಿನ ರಾಜಧಾನಿಯ ಭೂಗೋಳ ಶಾಸ್ತ್ರಜ್ಞರ ಸಭೆಯು ನಡೆಯಿತು ಡಾ| ಕುಕ್‌ಯವರು ಆ ಸಭೆಯಲ್ಲಿ ಉಪನ್ಯಾಸ ಮಾಡಿದರು ದೊರೆಯವರು, ರಾಣಿಯವರು ರಾಜ ಮನೆತನದವರು, ಮಂತ್ರಿಗಳು ಮೊದಲಾದವರು ಸಭೆಯಲ್ಲಿ ಹಾಜರಾಗಿದ್ದು ಉತ್ತರ ಧ್ರುವ ಪ್ರಯಾಣದ ವೃತ್ತಾಂತವನ್ನು ಡಾ|| ಕುಕ್‌ಯವರಿಂದ ಕೇಳಿದರು ಡಾ| ಕುಕ್‌ಯವರು ನೋಡಲು ಹೇಳಿದ ನೀಗ್ರೋಗಳನ್ನೇ ಈ ಸಭೆಯಲ್ಲಿ ತೋರಿಸಿದರು ಮತ್ತು ಅವರು ಧ್ರುವ ಪ್ರದೇಶದಿಂದ ವಾಪಸು ಬರುವಾಗ್ಗೆ ಮೂರು ವಾರಗಳ ತನಕ ಮುಕ್ಕಾಲು ಹೊಟ್ಟೆ ಆಹಾರವನ್ನು ತಿನ್ನುತ್ತಿದ್ದರೆಂದೂ, ಧ್ರುವದ ಸ್ಥಳವನ್ನು ಖಚಿತವಾಗಿ ಕಂಡುಹಿಡಿಯುವ ಅನೇಕ ತಮ್ಮ ಬಳಿ ಇದ್ದ ಯಂತ್ರಗಳ ಬಳಕೆಯಿಂದಲೂ, ತಾವು ಮಾಡಿದ ಪರೀಕ್ಷೆಗಳಿಂದಲೂ ಉತ್ತರ ಧ್ರುವವನ್ನು ತಾವು ತಲುಪಿರುತ್ತೇವೆಂಬುವುದು ಗೊತ್ತಾಯಿತೆಂದೂ ಹೇಳಿದರು ಯುವರಾಜರವರು ಅವರಿಗೆ ಒಂದು ಚಿನ್ನದ ಪದಕವನ್ನು ಒಪ್ಪಿಸಿದರು

[illegible] ಭೂಗೋಳ ಸಂಸ್ಥೆಯ ವಿವರ ಸಭಾಜನರು ಕಮ್ಯಾಂಡರ್ ಪೀರಿಯವರನ್ನು ತಮ್ಮ ಸಭೆಗೆ ಒಂದು ಉಪನ್ಯಾಸ ಮಾಡಬೇಕೆಂದು ಕೇಳಿದಾರೆ ಆದರೆ ಆ ಸಭಾಜನರು ಡಾ|| ಕುಕ್‌ಯವರಿಗೆ ಇಂಥಾ ಆಹ್ವಾನ ಪತ್ರಿಕೆಯನ್ನು ಇದುವರೆಗೆ ಕಳುಹಿಸಿರುವುದಿಲ್ಲ

ಡಾ|| ಕುಕ್‌ಯವರು ಹೇಳುವ ವೃತ್ತಾಂತವನ್ನು ನಂಬಕೂಡದೆಂತಲೂ ಅವರ ಸಂಗಡ ಹೋಗಿದ್ದ ಇಬ್ಬರು ಎಸ್ಕಿಮೊ ಜನರು—ಡಾ|| ಕುಕ್‌ಯವರು ಬಹಳ ದೂರ ಭೂಮಿಯ ಮೇಲೆ ಬಿಟ್ಟು ಹೋಗಿಲ್ಲವೆಂದು ಹೇಳುತ್ತಾರೆಂತಲೂ ಇದೇ ರೀತಿ ಇತರ ಎಸ್ಕಿಮೋ ಜನರೂ ಹೇಳುತ್ತಾರೆ ತಮ್ಮ ಬಳಿ ದಾರಿ [illegible] ಡಾ| ಕುಕ್‌ಯವರು—ಕಮ್ಯಾಂಡರ್ ಪೀರಿಯವರು ಪ್ರಕಟ [illegible] ಸೇರುವ [illegible] ನೆಂದೂ, ಅವರಿಗೆ ಎದುರು ಉತ್ತರ [illegible] ಕೊಡಬೇಕಾದ ಅಗತ್ಯವಿಲ್ಲವೆಂದೂ, ತಮ್ಮ ಸಂಗಡ ಧ್ರುವ ಪ್ರಾಂತಕ್ಕೆ ಬಂದಿದ್ದ ಇಬ್ಬರು ಎಸ್ಕಿಮೊ ಜನರನ್ನು ಗ್ರೀನ್‌ಲ್ಯಾಂಡಿನಿಂದ ನ್ಯೂಯಾರ್ಕಿಗೆ ಕರೆದು ತರುವಂತೆ [illegible] ಅವರಿಗೆ ಹೇಳಿಕಳುಹಿ ಸುತ್ತೇನೆಂತಲೂ ತಿಳಿಸುತ್ತಾರೆ

ಕಮ್ಯಾಂಡರ್ ಪೀರಿಯವರ ವಿವರಣೆಯು

ಕಮ್ಯಾಂಡರ್ ಪೀರಿಯವರು ಉತ್ತರ ಧ್ರುವವನ್ನು ಕಂಡುಹಿಡಿದದ್ದರ ಪ್ರಥಮ ವೃತ್ತಾಂತವನ್ನು ತಿಳಿಸುತ್ತಾರೆ ಅವರು ಕಳೆದ ಫೆಬ್ರವರಿ ತಾ ೧೫ರಲ್ಲಿ ಗ್ರ್ಯಾಂಟ್ ಲ್ಯಾಂಡ್‌ನಲ್ಲಿರುವ ಕೇಪ್ ಕೊಲಂಬಿಯಾ ಭೂಶಿರದಿಂದ ಉತ್ತರ ದಿಕ್ಕಿಗೆ ಹೊರಟು, ಮಾರ್ಚಿ ತಾ ೧ರಲ್ಲಿ ಕೊಲಂಬಿಯಾ ಭೂಶಿರವನ್ನು ದಾಟಿದರು ಮಧ್ಯೆ ಮಧ್ಯೆ ನೀರಿನ ಅಡ್ಡಿಗಳು ದೊರಕಿದ್ದರಿಂದ ಅವರ ಪ್ರಯಾಣವು ಸಾವಕಾಶವಾಯಿತು ಕಡೆಗೆ ಅವರು ಏಪ್ರೆಲ್ ತಾ| ೬ರಲ್ಲಿ ಉತ್ತರ ಧ್ರುವವನ್ನು ತಲುಪಿದರು ಮರುದಿನವೇ ಅಂದರೆ ತಾ| ೭ರಲ್ಲಿ ಅವರು ಅಲ್ಲಿಂದ ಹಿಂತಿರುಗಿ ಪ್ರಯಾಣಮಾಡಿಕೊಂಡು ಏಪ್ರೆಲ್ ತಾ ೨೩ಕ್ಕೆ ಕೊಲಂಬಿಯಾ ಭೂಶಿರವನ್ನು ತಲುಪಿದರು ಅವರ ಸಂಗಡ ಹೋಗಿದ್ದವರೆಲ್ಲಾ ಕ್ಷೇಮದಿಂದ ವಾಪಸು ಬಂದರು ಪ್ರೊಫೆಸರ್ ಮಾರ್ವಿನ್ ಎಂಬುವರು ಮಾತ್ರ ಏಪ್ರೆಲ್ ತಾ|| ೧೦ರಲ್ಲಿ ನೀರಿನಲ್ಲಿ ಮುಳುಗಿ ಕಾಲವಾದರು ಕಮ್ಯಾಂಡರ್ ಪೀರಿಯವರು ಕಡೆಗೆ ಧ್ರುವ ಪ್ರಾಂತ್ಯಕ್ಕೆ ನುಗ್ಗಿ ಹೋದಾಗ್ಗೆ ಅವರ ಕೂಡ ಹೆನ್ಸನ್ ಎಂಬ ನೀಗ್ರೋ ಜನ ಮಾತ್ರ ಇದ್ದರು ಬಿಳೀಜನರು ಇನ್ಯಾರೂ ಇರಲಿಲ್ಲ ಅವರ ಸಂಗಡ ಹೋಗಿದ್ದವರೆಲ್ಲಾ ಕೆಲವು ವೇಳೆ ಬಹಳ ಕಷ್ಟಕ್ಕೆ ಗುರಿಯಾದರೆಂದು ತಿಳಿಯುವುದು ಒಂದಾವರ್ತಿ ಹಿಮಗಡ್ಡೆಗಳ ಕಠಿಣವಾದ ಬಿರುಗಾಳಿಯು ಬೀಸಿ ಅವರಲ್ಲಿ ಐದು ಮಂದಿ ಅದೃಶ್ಯರಾದರು ಅವರು ಸತ್ತುಹೋದರೆಂದೇ ಉಳಿದವರು ಭಾವಿಸಿದ್ದರು ಕಮ್ಯಾಂಡರ್ ಪೀರಿಯವರು ಕಡೆಕಡೆಗೆ ದಿನಕ್ಕೆ ೩೦ ಮೈಲಿಯಂತೆ ಮಹಾ ವೇಗವಾಗಿ ಧ್ರುವಪ್ರಾಂತ್ಯಕ್ಕೆ ನುಗ್ಗಿ ಹೋದರೆಂದು ಪ್ರಕಟವಾಗಿದೆ ಇದು ಸಾಧ್ಯವಲ್ಲವೆಂದೂ, ಡಾ|| ಕುಕ್‌ಯವರು ಹೇಳುವ ವೃತ್ತಾಂತವಲ್ಲಿ ನಿಜವಿರಬಹುದೆಂದೂ ಕೆಲವರು ಅಭಿಪ್ರಾಯ ಪಡುತ್ತಿದಾರೆ

ವಾಗ್ವಾದಗಳು

ಉತ್ತರ ಧ್ರುವವನ್ನು ಕಂಡು ಬಂದೆವೆಂದು ಹೇಳುತ್ತಿರುವ ಮೇಲ್ಕಂಡ ಡಾಕ್ಟರ್ ಕುಕ್‌ಯವರಿಗೂ ಕಮ್ಯಾಂಡರ್ ಪೀರಿಯವರಿಗೂ ಆದೇ ವಿಷಯವಾಗಿ ಚರ್ಚೆಗಳು ನಡೆಯುತ್ತಲಿವೆ. ಕಮ್ಯಾಂಡರ್ ಪೀರಿಯವರು ೧೯೦೮ನೇ ಮೇ ತಿಂಗಳಲ್ಲಿ ಬರೆದ ಒಂದು ಕಾಗದವು ಪ್ರಕಟವಾಗಿದೆ ಅದರಲ್ಲಿ ಡಾ|| ಕುಕ್‌ಯವರು ಈಟ ಎಂಬ ಸ್ಥಳದಲ್ಲಿದ್ದ ತಮ್ಮ ಕಡೆಯ ಇಬ್ಬರು ಎಸ್ಕಿಮೊ ಜನರನ್ನೂ ನಾಯಿಗಳನ್ನೂ ವಶಪಡಿಸಿಕೊಂಡರೆಂದೂ, ತಮ್ಮ ಸಹಾಯಕ್ಕಾಗಿ ಇಟ್ಟುಕೊಂಡಿದ್ದ ಎಸ್ಕಿಮೊ ಜನರಿಂದ ಅಲ್ಲಿನ ರಸ್ತೆ, ಭೂಮಿ, ಗಾಡಿ ನಡೆಸುವ ವಿಧಾನ ಈ ವಿಚಾರಗಳನ್ನೆಲ್ಲಾ ತಿಳಿದುಕೊಂಡರೆಂದೂ ಕಮ್ಯಾಂಡರ್ ಪೀರಿಯವರು ಆಕ್ಷೇಪಣೆ ಮಾಡಿದರು ಇದಕ್ಕೆ ಪ್ರತಿಯಾಗಿ ಡಾ| ಕುಕ್‌ಯವರು—ಎಸ್ಕಿಮೊ ಜನರು ಯಾವ ಒಂದು ಸ್ಥಳದಲ್ಲಿ ಇದ್ದು ಜೀವಿಸುವವರಲ್ಲವೆಂದೂ ಅವರು ತಮಗಾಗಲಿ ಕಮ್ಯಾಂಡರ್ ಪೀರಿಯವರಿಗಾಗಲಿ ಸೇರಿದವರಲ್ಲವೆಂದೂ ತಾವು ಅವರಿಗೆ ಹತ್ತರಷ್ಟು ಹೆಚ್ಚಾಗಿ ಪ್ರತಿಫಲ ಕೊಟ್ಟು ತಮ್ಮ ಕೂಡ ಕರೆದುಕೊಂಡು ಹೋದರೆಂದೂ, ತಾವು ಇಲ್ಲದಿದ್ದಾಗ ಕಮ್ಯಾಂಡರ್ ಪೀರಿಯವರು ಬಂದು ತಮ್ಮ ಆಹಾರಪದಾರ್ಥಗಳನ್ನು ತೆಗೆದುಕೊಂಡು ಹೋದರೆಂದೂ ಹೇಳುತ್ತಾರೆ

ಡಾ|| ಕುಕ್‌ಯವರಿಗೆ ಬಿರುದು ಒಂದದ್ದು

ಕಳೆದ ಗುರುವಾರ ಡೆನ್ಮಾರ್ಕ್ ರಾಜಧಾನಿಯಾದ ಕೋಪನ್‌ಹೇಗನ್ ಪಟ್ಟಣದ ಪಂಡಿತ ಮಂಡಲಿಯವರು ಸಭೆ ಸೇರಿ, ದೊರೆ ಮೊದಲಾದ ರಾಜಮನೆತನದವರ ಸಮ್ಮುಖದಲ್ಲಿ ಡಾ|| ಕುಕ್‌ಯವರ ಸಾಹಸವನ್ನು ಕುರಿತು ಪಂಡಿತರು ಶ್ಲಾಘನೆ ಮಾಡಿ, ಅವರಿಗೆ ಡಾಕ್ಟರ್ ಎಂಬ ಘನತರವಾದ ಬಿರುದನ್ನು ಕೊಟ್ಟರು. ಡಾಕ್ಟರ್ ಕುಕ್‌ಯವರು ಅದಕ್ಕಾಗಿ ಆ ಪಂಡಿತ ಮಂಡಲಿಯವರನ್ನು ವಂದಿಸಿ, ನಾನು ಬರೆಯುತ್ತಿರುವ ಈ ಪ್ರಯಾಣದ ವಿಷಯವಾದ ವೃತ್ತಾಂತವನ್ನೆಲ್ಲಾ ಸಂಪೂರ್ಣವಾಗಿ ತಿಳಿಯುವ ತನಕ ನಿಮ್ಮ ಅಭಿಪ್ರಾಯಗಳನ್ನು ಹೊರಪಡಿಸದೆ ಮನಸೀಕ ಮಾಡಿರಬೇಕು ಎಂಬದಾಗಿ ಕೇಳಿಕೊಂಡರು

ಡಾಕ್ಟರ್ ಕುಕ್‌ಯವರು ಕಳೆದ ಶುಕ್ರವಾರದ ದಿನ ಡೆನ್ಮಾರ್ಕ್ ರಾಜಧಾನಿಯಲ್ಲಿ ಹಡಗು ಹತ್ತಿ ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರವನ್ನು ಕುರಿತು ಪ್ರಯಾಣ ಮಾಡಿದರು

ವಿಮಾನದಲ್ಲಿ ಉತ್ತರ ಧ್ರುವಕ್ಕೆ ಹೋಗುವುದು.

ಮಿ| ವೆಲ್‌ಮನ್‌ರವರ ತೀರ್ಮಾನವು

ಮಿ| ವೆಲ್‌ಮನ್‌ರವರು ಆಕಾಶಬುಟ್ಟಿಯನ್ನು ತಯಾರುಮಾಡಿ ಅದರಲ್ಲಿ ಕುಳಿತುಕೊಂಡು ಅಂತರಿಕ್ಷದಲ್ಲಿಯೇ ಉತ್ತರದಿಕ್ಕಿಗೆ ಹೋಗಿ ಉತ್ತರ ಧ್ರುವವನ್ನು ನೋಡಿಕೊಂಡು ಬರಬೇಕೆಂದು ಸಾಹಸ ಪಡುತ್ತಿದ್ದರಷ್ಟೆ. ಅವರು ಈ ಉದ್ದೇಶವನ್ನು ತ್ಯಜಿಸಿಬಿಟ್ಟರೆಂದು ಕಳೆದ ಗುರುವಾರ ತಂತೀ ವರ್ತಮಾನ ಬಂದಿದೆ

ದಕ್ಷಿಣ ಧ್ರುವವನ್ನು ಕಂಡುಹಿಡಿಯುವ ಪ್ರಯತ್ನ

ಮಿ| ಷ್ಯಾಕಲ್‌ಟನ್‌ರವರಿಗೆ ದೊರೆತ ದ್ರವ್ಯಸಹಾಯವು.

ಕೆಲವುಕಾಲಕ್ಕೆ ಹಿಂದೆ ಮಿ ಷ್ಯಾಕಲ್‌ಟನ್ ಎಂಬ ಇಂಗ್ಲಿಷ್ ವಾಸ್ತವ್ಯರು ಪ್ರಯಾಣ ಮಾಡಿ ದಕ್ಷಿಣ ಧ್ರುವವನ್ನು ಬಹು ಸಾಹಸಪಟ್ಟು ಕಂಡುಹಿಡಿಯುವ ಪ್ರಯತ್ನ ಪಟ್ಟರು ಈ ಪ್ರಯಾಣಕ್ಕೆಲ್ಲಾ ಅವರಿಗೆ ಸುಮಾರು ೬ ಲಕ್ಷದ ೭೫ ಸಾವಿರ ರೂಪಾಯಿ ಖರ್ಚು ತಗಲಿತು ಅವರ ಈ ಸಾಹಸಕಾರ್ಯಕ್ಕೆ ಪ್ರೋತ್ಸಾಹಪಡಿಸುವುದಕ್ಕಾಗಿ ಅವರ ಸ್ನೇಹಿತರು ಕೆಲವರು ಅಸ್ಟ್ರೇಲಿಯ ಮತ್ತು ನ್ಯೂಜಿಲಂಡ್ ಎಂಬ ಇಂಗ್ಲಿಷ್ ವಸಾಹತುಗಳಿಂದ ೭೦,೦೦೦ ರೂಪಾಯಿ ಅವರಿಗೆ ಕಳುಹಿಸಿಕೊಟ್ಟರು ಈ ಹಣವು ಅವರ ಖರ್ಚಿಗೆ ಸಾಲದೆ ಬಂದದ್ದರಿಂದಲೂ, ದಕ್ಷಿಣ ಧ್ರುವ ಪ್ರಯಾಣದ ವೃತ್ತಾಂತವನ್ನು ಅವರು ಬರೆದು ಅಚ್ಚುಹಾಕಿಸುತ್ತಿರುವುದರ ಖರ್ಚಿಗಾಗಿಯೂ ಇಂಗ್ಲಿಷ್ ಗವರ್ನಮೆಂಟಿನವರು ಅವರಿಗೆ ಮೂರು ಲಕ್ಷ ರೂಪಾಯಿಯನ್ನು ಸರ್ಕಾರದಿಂದ ಕೊಡಬೇಕೆಂದು ಪ್ರಾಂ[illegible] ಮಿ|| ಷ್ಯಾಕಲ್‌ಟನ್‌ರವರು ಇಂಗ್ಲಿಷ್ ಗವರ್ನಮೆಂಟಿನವರ ಔದಾರ್ಯವನ್ನು ಕೊಂಡಾಡಿ ಅದರಿಂದ ತಮ್ಮ ಖರ್ಚೆಲ್ಲಾ ಉತ್ತೀರ್ಣವಾಯಿತೆಂದು ಸಂತೋಷಪಟ್ಟರು

ತಾಲ್ಲೋಕು ವರ್ತಮಾನಗಳು

ಬೀರೂರು —ಎರಡು ಮೂರು ವಾರಗಳಿಂದ ಮಳೆ ಬೀಳುತ್ತಿರುವುದು ನೋಡ ಪ್ರವಾಹ ತಪ್ಪಿಲ್ಲ ಹವಾ ಬದಲಾಯಿಸಿರುವುದರಿಂದ ಪ್ರಜೆಗಳಿಗೆ ಆರೋಗ್ಯಕ್ಕೆ ಅಪಾಯವಾಗಿದೆ ಪೈರುಗಳೆಲ್ಲಾ ಚೆನ್ನಾಗಿ ಬೆಳೆಯುತ್ತಲಿವೆ ಈ ಊರಿನ ಶಾನಿಟೇಷನ್ ಕಡೆಗೆ ಸ್ವಲ್ಪ ಗಮನಾಗಿರುವುದು ಈ ಊರಿನ ಶಾನಿಟರಿ ಇನ್ಸ್ಪೆಕ್ಟರವರಿಗೆ ಸ್ಯಾನಿಟರಿ ಇನ್ಸ್ಪೆಕ್ಟರ್ ಕೆಲಸವು ಚಕ್ಕರ ಮತ್ತು ಕೆಲಸವೂ ಎರಡೂ ಸೇರಿರುವವು ಈ ಊರು ಬಹು ದೊಡ್ಡ ಪ್ರಮಾಣದ ಸ್ಥಳವಾದದ್ದರಿಂದ ಸುಂಕದ ಕೆಲಸವೇ ಒಬ್ಬರಿಗೆ ಸಾಕಾದಷ್ಟಿರುವುದು ಹೀಗಿರುವಲ್ಲಿ ಎರಡು ಕೆಲಸವನ್ನೂ ಒಬ್ಬರೇ ನಿರ್ವಹಿಸುತ್ತಿದಾರೆ —ಕಳೆದ ೮ನೇ ತಾ. ಬುಧವಾರದ ದಿವಸ ಈ ಊರಿನ ಸಾಹುಕಾರರು ಮಿ ಏರಿಯ ಲಿಂಗಪ್ಪಶೆಟ್ಟರವರು ಇಲ್ಲಿನ ಎ ವಿ ಸ್ಕೂಲು ಬಾಲಕರಿಗೆ ಇನಾಂ ಪುಸ್ತಕಗಳನ್ನೂ, ಗರ್ಲ್ಸ್ ಸ್ಕೂಲ್ ಬಾಲಕಿಯರಿಗೆ ಆಟದ ಸಾಮಾನುಗಳನ್ನೂ ಕೊಡಿಸಿದರು ಆ ಕಾಲದಲ್ಲಿ ಡೆಪ್ಯೂಟಿ ಇನ್ಸ್ಪೆಕ್ಟರ್ ವಾಸ್ಸರ್ ಮಿ| ವೆಂಕೋಬರಾಯರವರು ಅಗ್ರಾಸನವನ್ನು ವಹಿಸಿದರು ಆ ದಿವಸದ ಸಭೆಯು ಬಾಲಕರ ಸ್ಪೋರ್ಟ್ಸ್, ಬಾಲಕಿಯರ ಗಾನಗಳಿಂದಲೂ, ಬಹುಮಂದಿ ಸಾಹುಕಾರರ ಆಗಮನದಿಂದಲೂ ಸಂತೋಷಮಯವಾಗಿತ್ತು. ಮಿ|| ಶೆಟ್ಟರವರು ಹಿಂದೆ ಯುವರಾಜ್ ಡೇ ಮಹೋತ್ಸವದ ದಿವಸ ಸರ್ಕಲ್ ಇನ್ಸ್ಪೆಕ್ಟರ್ ಮಿ|| ಶ್ರೀನಿವಾಸರಾಯರವರು ಈ ಪ್ರಾಂತ್ಯಕ್ಕೆ ಬಂದಿದ್ದಾಗ ಇಲ್ಲಿನ ಬಾಲಕರಿಗೆ ತಿಂಡಿ, ದ್ರವ್ಯ ಕೊಡುವುದರ ಮೂಲಕ ವಿದ್ಯಾಭಿವೃದ್ಧಿಯ ವಿಷಯದಲ್ಲಿ ತಮಗಿರುವ ಉದಾರ ಗುಣವನ್ನು ತೋರಿಸಿದರು ಈ ಮಹಾಶಯರು ಪದೇಪದೇ ಈ ರೀತಿ ನಡಿಸುತ್ತಾ ಇರುವರು —ಇಲ್ಲಿನ ಎ ವಿ ಸ್ಕೂಲು ಬಹುಮಟ್ಟಿಗೆ ಹೀನಸ್ಥಿತಿಯಲ್ಲಿರುವುದೆಂದೂ, ಅದಕ್ಕೆ ಕೆಲವು ಉಪಾಧ್ಯಾಯರು ಇಲ್ಲಿನ ಸ್ಥಳೀಕರಾಗಿರುವುದೇ ಕಾರಣವಿರಬಹುದೆಂದೂ ಕಾಣುತ್ತಿದೆ

ಚನ್ನಪಟ್ಟಣ —ಕಳೆದ ವಾರ ಕಕ್ಕಮಟ್ಟಿಗೂ ಮಳೆಯು ವಿಶ್ರಾಂತಿಯನ್ನು ಹೊಂದಿ ಬಿಸಿಲು ಕಾಯುತ್ತಾ ಇದ್ದಿತು ಪೈರು ಪಚ್ಚೆಗಳೆಲ್ಲಾ ಬಹಳಮಟ್ಟಿಗೂ ಚನ್ನಾಗಿವೆ ಕುಬೇರ್‌ಪೇಟೆಯಿಂದ ಕಾಲರಾ ರೋಗಿಗಳು ಇಲ್ಲಿಗೆ ಬಂದು ಮೃತಪಟ್ಟಿದ್ದಲ್ಲದೆ ಇಲ್ಲಿನವರೂ ಒಬ್ಬರು ಸದರಿ ರೋಗದಿಂದ ಸತ್ತರೆಂದು ಗೊತ್ತಾಗುವದು ನಮ್ಮ ಸಬ್ ಡಿವಿಜನ್ ಆಫೀಸರವರಾದ ಮಿ| ಬಿ ವೆಂಕೋಬರಾಯರು ಕುಲೀಸ್ ಪೇಟೆಯನ್ನು ಬಿಟ್ಟು ಇಲ್ಲಿಯೇ ಬಂದಿರುವರು —ಕಳೆದ ತಾ ೧೦ನೇ ಶುಕ್ರವಾರದ ಬೆಳಗ್ಗೆ ೧೧ ಘಂಟೆಗೆ ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಮಕ್ಕಳಿಗೆ ಬಹುಮಾನೋತ್ಸವವು ನಡೆಸಲ್ಪಟ್ಟಿತು ಸ್ಕೂಲ್ ಕಟ್ಟಡವು ಶೃಂಗರಿಸಲ್ಪಟ್ಟಿತ್ತು ರೆವ್ ಡಿ ಎ ರೀಸ್ ದೊರೆಗಳು ಅಗ್ರಾಸನವನ್ನು ವಹಿಸಿದ್ದರು, ರೆವ್ ಎ ಆರ್ ಫುಲ್ಲರ್ ದೊರೆಗಳು ಬಂದಿದ್ದರು ಲಾಯರ್ ಮಿ|| ಮಸ್ಕಾರಪ್ಪನವರೇ ಮೊದಲಾದ ಹಲವು ಮಹನೀಯರೂ ಹಲವು ಸ್ತ್ರೀಯರೂ ಬಹುಜನ ವರ್ತಕರೂ ಮಕ್ಕಳ ತಂದೆ ತಾಯಿಗಳೂ ಸಭೆಯನ್ನು ಅಲಂಕರಿಸಿದ್ದರು ದೇವತಾ ಪ್ರಾರ್ಥನೆಯು ನಡಿಸಲ್ಪಟ್ಟನಂತರ ಒಬ್ಬ ಬಾಲಕಿಯು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತ ಒಂದು ಲೇಖನವನ್ನೂ, ಮತ್ತೊಬ್ಬ ಬಾಲಕಿಯು ಸ್ಕೂಲ್ ರಿಪೋರ್ಟನ್ನೂ ಓದಿದರು, ಬಳಿಕ ಮಕ್ಕಳ ಇಂಪಾದ ಹಾಡುಗಳಾದವು ಫುಲ್ಲರ್ ದೊರೆಗಳು ಮಕ್ಕಳನ್ನು ಪ್ರೋತ್ಸಾಹಿಸಲು ಸೀರೆ, ಬಟ್ಟೆ, ಬೊಂಬೆಗಳನ್ನೂ ಬಹುಮಾನಗಳನ್ನೂ ಹಂಚಿದರು ಅಲ್ಲದೆ ಮಕ್ಕಳಿಗೂ ಸಭಿಕರಿಗೂ ಉಚಿತವಾದ ಕೆಲವು ಬುದ್ಧಿವಾದಗಳನ್ನು ತಿಳಿಸಿದರು ಆಗ್ಗೆ ಮಿ|| ಮಸ್ಕಾರಪ್ಪನವರು ಉಚಿತವಾದ ಮಾತುಗಳಿಂದ ಮಿಷನ್ ಸ್ಕೂಲುಗಳಿಂದ ದೇಶಕ್ಕೂ ಪ್ರಜೆಗಳಿಗೂ ಉಂಟಾಗಿರುವ ಪ್ರಯೋಜನಗಳನ್ನು ವ್ಯಾಖ್ಯಾನಿಸಿ ಸಭೆಯ ಮತ್ತು ಮಕ್ಕಳ ಪಕ್ಷವಾಗಿ ವಂದನೆಗಳನ್ನು ಸಲ್ಲಿಸಿದರು ಅನಂತರ ಮಕ್ಕಳಿಗೆ ಫಲಾಹಾರಗಳೂ ಸಭಿಕರಿಗೆ ಪಾನ ತಾಂಬೂಲಗಳೂ ಹಂಚಲ್ಪಟ್ಟವು ಫುಲ್ಲರ್ ದೊರೆಗಳು ಮಕ್ಕಳ ಫೋಟೋ ತೆಗೆದು ಉತ್ಸವವನ್ನು ಮುಕ್ತಾಯಮಾಡಿದರು —ಈಗ ಮಳೆಗಾಲವಾದುದರಿಂದ ಮಳೆ ಮೋಡಗಳಿಂದ ರಾತ್ರಿಕಾಲದಲ್ಲಿ ಅಧಿಕ ಕತ್ತಲೆಯಾಗಿರುತ್ತೆ, ಕೆಲವು ಸಂದರ್ಭಗಳಲ್ಲಿ ಜನರು ಒಬ್ಬರಿಗೊಬ್ಬರು ಕಾಣದೆ ಡಿಕ್ಕಿ ಕೊಡಬೇಕಾಗುತ್ತೆ ಎದುರು ಗಾಡಿಗಳು ಕೆಲವು ವೇಳೆ ಬಂದಿಕ್ಕಿಕೊಂಡು ತಗಲುವದೂ ಉಂಟು ಆದದರಿಂದ ರಾತ್ರಿಕಾಲದಲ್ಲಿ ಗಾಡಿಗಳಿಗೆ ಒಂದೊಂದು ಲಾಂದ್ರವನ್ನು ಕಟ್ಟುವ ವಾಡಿಕೆಯನ್ನು ಜಾರಿಗೆ ತಂದರೆ ಒಳ್ಳೇದು ನೆನ್ನೆ ಶನಿವಾರದ ರಾತ್ರಿ ಇಲ್ಲಿ ಒಳ್ಳೆ ಮಳೆಯಾಗಿದೆ

ದೇವನಹಳ್ಳಿ —ಈ ಊರಲ್ಲಿ ೧೦-೧೨ ದಿನಗಳಿಂದ ಮಬ್ಬು ಮಳೆಯ ಕಡೇ ವಾರ ಮೊದಲ್ಗೊಂಡು ಪುಷ್ಟಿ ಮಳೆ ಮಧ್ಯಾಹ್ನದ ವರೆವಿಗೂ ಚನ್ನಾಗಿ ಸುರಿದು, ಕೆರೆ ಕುಂಟೆಗಳು ತುಂಬಿ ತುಳುಕಾಡುತ್ತಾ, ಎಲ್ಲಿ ನೋಡಿದರೂ ಖುಷ್ಕಿ ಪೈರುಗಳೆಲ್ಲಾ ಈಗ್ಗೆ ಚನ್ನಾಗಿರುತ್ತವೆ ಆಲೂಗೆಡ್ಡೆ ಬೆಳೆಯು ಚನ್ನಾಗಿ ಆಗಿದ್ದದ್ದು ಮಳೆ ಹೆಚ್ಚಾದ ದೆಸೆಯಿಂದ ತೋಟಗಳಲ್ಲಿ ನೀರು ನಿಂತು ಇದ್ದ ಕಡೆಗಳಲ್ಲಿ ನಾಶ ಹೊಂದಿದವು ತೋಟಗಳವರು ಪಡುವ ಸಂಕಟವನ್ನು ಹೇಳತೀರದು, ಇಂಥಾದ್ದರಲ್ಲಿಯೂ ಗ್ರಾಮ ನೌಕರರು ಸಂತೆಯಲ್ಲಿ ಹಸಿಗೆ ಎತ್ತುವ ವಾಡಿಕೆಯು ತಪ್ಪಲಿಲ್ಲ ತಾಲ್ಲೂಕ್ ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡಿ ಮುಂದೆ ಈ ರೀತಿ ಹೋಗದಂತೆ ಏರ್ಪಾಟು ಮಾಡುವರೆಂದು ನಂಬುತ್ತೇವೆ —ಈ ಊರು ಸರೋವರಬೀದಿಯಲ್ಲಿ ಉಲಗೊಂಡ್ರ ಅರಸಪ್ಪನವರ ಮನೆಯಲ್ಲಿ ಮೇಷದ ಆಕ್ಕಯ್ಯನ ಮಗ ಮುನಿಹನುಮನೆಂಬುವನು ಗಂಡರು ಯಾರೂ ಇಲ್ಲದ ವೇಳೆಯಲ್ಲಿ ಸದರಿಯವರ ಮನೆಗೆ ಪ್ರವೇಶಿಸಿ ೫೦ ರೂಪಾಯಿನ ನಗನಾಣ್ಯಗಳನ್ನು ತೆಗೆದುಕೊಂಡು ಹೋಗಿದಾನಷ್ಟೆ ಈಗ ವಿಚಾರಮಾಡಲಾಗಿ ಸದರಿ ಸಾಹುಕಾರನು ೫೫೦ ರೂಪಾಯಿನ ನಗನಾಣ್ಯಗಳನ್ನು ಎತ್ತಿಕೊಂಡು ಅರಸಪ್ಪನ ತಾಯಿಯಾದ ಬಸಮ್ಮನನ್ನೂ ಅವನ ಮಗನನ್ನೂ ಖೂನ್ ಮಾಡಬೇಕೆಂದು ಉದ್ದೇಶಪಟ್ಟದ್ದನ್ನು ಉಕಳ್ಳಿವಲ್ಲಿಟ್ಟು ವಿಚಾರಣೆ ಮಾಡುತ್ತಿದಾರೆ, ಈ ರೀತಿ ಖೂನ್ ಮಾಡಲ್ಪಟ್ಟ ಇಬ್ಬರೂ ಆಸ್ಪತ್ರೆ ಅಸಿಸ್ಟೆಂಟ್ ಮಿ| ಅಬ್ದುಲ್ ಅಜೀಜ್‌ರವರ ಇಲಾಜಿನಿಂದ ಗುಣವಾಗುತ್ತಾ ಬಂದಿದಾರೆ ಬಸಮ್ಮನ ಒಂದು ಕೈ ಹೆಸಲಿನ ಮೂಳೆಯು ತುಂಡಾಗಿತ್ತಷ್ಟೆ ಆ ಭಾಗ ಮಾತ್ರ ಇನ್ನೂ ಸಂಪೂರ್ಣ ಗುಣವಾಗಲಿಲ್ಲ ಅದೂ ಗುಣವಾಗುವದೆಂಬ ನಂಬಿಕೆ ಇದೆ ಮತ್ತು ಮರಳುಬಾಗಲು ಗೊಲ್ಲರ ಆದೆಪ್ಪನ ಮನೆಯಲ್ಲಿ ೪೦೦ ರೂಪಾಯಿನ ನಗನಾಣ್ಯಗಳು ಕಳವು ಆಯಿತೆಂತಲೂ, ಪೊಲೀಸಿನವರು ಪತ್ತೆ ತರದೂದು ಮಾಡುತ್ತಾ ಇದಾರೆಂತಲೂ ತಿಳಿಸಿತ್ತಷ್ಟೆ ಈ ಮಾಲುಗಳು ಬಿಲಗ್ಗೆ ಬಂಗ್ಲೆ ಸಾಹುಕಾರ ಮಗ ಕುಂಟ ಉಸಫ್ ಮುನಿಸಾಮಿಯು ಬೆಂಗಳೂರು ಮಾರ್ವಾಡಿಗಳಲ್ಲಿ ಅಡವಿಟ್ಟು ಹಣ ತೆಗೆದುಕೊಂಡು ಬರುವಾಗ್ಗೆ ಪೋಲೀಸ್ ಇಲಾಖೆಯ ಕಮ್ಮಿ ನೌಕರರಲ್ಲಿ ಒಬ್ಬನು ಹಿಡಿದು ತಂದನೆಂದೂ, ಸದರಿಯವನನ್ನು ಕರೆಸಿ ವಿಚಾರಣೆ ಮಾಡುವಾಗ್ಗೆ ಅವನ ಬಳಿಯಲ್ಲಿ ಕೆಲವು ನಗಗಳು ಸಿಕ್ಕಿದವೆಂತಲೂ, ಇನ್ನೂ ವಿಚಾರಣೆ ಮಾಡುತ್ತಿದಾರೆಂತಲೂ ಗೊತ್ತಾಗುತ್ತದೆ—ಇದೇ ಟವನ್ ದಿಡ್ಡಿ ಬಾಗಲಿನಲ್ಲಿರುವ ದೋಟಗಾನಹಳ್ಳಿ ಲಕ್ಷ್ಮಣ್ಣನ ಮಗ ಸುನಾರ್ ಕೆಲಸ ಮಾಡುವ ವೆಂಕಟರಮಣಪ್ಪನೆಂಬುವನು ತನಗೆ ಸ್ನೇಹಿತರಾಗಿದ್ದ ಮೂವರನ್ನು ತನ್ನ ಮನೆಗೆ ಕರೆದ [illegible] ಕರಸಿಕೊಂಡಿರುವಾಗ್ಗೆ ಆರು ವರಹ ತೂಕದ ಚಿನ್ನದ ಗಟ್ಟಿ ಹೋಯಿತೆಂದು ಸದರಿಯವರ ಮೇಲೆ ಫಿರ್ಯಾದು ಆಗಿದೆ ಅವರನ್ನು ಅವಮಾನಿಸಿ ಮಾಡಲು ಮಾಲು ಯಾರಲ್ಲಿಯೂ ದೊರಕಲಿಲ್ಲ

ತ್ಯಾಮಗೊಂಡ್ಲು —ಈ ವಾರದಲ್ಲಿ ಮಳೆ ಸ್ವಲ್ಪ ಬಿಡುವು ಕೊಟ್ಟಿರುತ್ತೆ ರೈತರು ತಮ್ಮ ಹೊಲ ಗದ್ದೆಗಳಲ್ಲಿ ಬಹು ಸಂಭ್ರಮದಿಂದ ಕೆಲಸಗಳನ್ನು ಮಾಡಿಕೊಳುತ್ತಿದಾರೆ ಎಲ್ಲಾ ಕಡೆಗಳಲ್ಲಿಯೂ ಮಳೆ ಚನ್ನಾಗಿ ಆಗಿದ್ದರೂ ಕೂಡಾ ಕೆಲವು ಊರುಗಳಲ್ಲಿ ಮಾರಿಕಾ ಉಪದ್ರವು ಪ್ರಾರಂಭಿಸಿರುವುದಾಗಿ ವರ್ತಮಾನ ಬರುತ್ತೆ ಆದರೆ ಈ ಊರಲ್ಲಿ ಎಲ್ಲಿ ನೋಡಿದಾಗ್ಯೂ ಬಹು ಕಶ್ಮಲ ಅದರಲ್ಲೂ ಈಗ ಮುಸಲ್ಮಾನರ ಮತ್ತು ವೈಶ್ಯರ ಬೀದಿಗಳಲ್ಲಿ ಗಲೀಜು ಹೆಚ್ಚಾಗಿರುತ್ತೆ, ಇದನ್ನೆಲ್ಲಾ ಮ್ಯುನಿಸಿಪಲ್ ಛೇರ್‌ಮನ್‌ಗಳು ಚೊಕ್ಕಟ ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ಒಬ್ಬ ಮುತ್ಸದ್ದೀರು ಅತ್ಯಾವಶ್ಯಕವಾಗಿದೆ ಯಾಕೆಂದರೆ ಸ್ಥಳ ಮುತ್ಸದ್ದೀರು ಇಲ್ಲಿಗೆ ನೇಮಕವಾಗಿಲ್ಲವೋ ತಿಳಿಯದು ಮ್ಯುನಿಸಿಪಲ್ ಮೆಂಬರುಗಳಾದರೂ ಸರಿಯಾಗಿ ತನಿಖೆ ಮಾಡಿದಲ್ಲಿ ಊರು ಚೊಕ್ಕಟವಾಗಿರುವುದಲ್ಲದೆ, ಯಾವ ರೋಗದ ಭಯವೂ ಇರಲಾರದು ನೆಲಮಂಗಲದ ಸಬ್ ಡಿವಿಜನ್‌ಗೆ ಹೊಸದಾಗಿ ಬಂದಿರುವ ಅ|| ಇಂಜನಿಯರ್ ಮಿ|| ಶಾಂಡೋಣೆರಾಯರು ಇಲ್ಲಿಗೆ ಬಂದಿದ್ದ ಕಾಲದಲ್ಲಿ ಬಿದಲೂರುಕೆರೆ ಕಟ್ಟುವಂತೆ ಗವರ್ನಮೆಂಟಿನವರಿಂದ ಸುಮಾರು ೧೦ ಸಾವಿರ ರೂಪಾಯಿ ಮಂಜೂರಾಗಿರುವುದರಿಂದ ಆ ಕೆರೆ ತುಂಬಿದಾಗ ನೀರು ಮುಳುಗು ಆಗುವ ರೈತರ ಜಮೀನುಗಳಿಗೆ ಕಂಪೆನ್ಸೇಷನ್ ಕರಾರುಮಾಡಲು ಗ್ರಾಮಸ್ಥರೊಡನೆ ಅಲ್ಲಿಗೆ ಹೋಗಿ ಅಲ್ಲಿನ ಸಂಗತಿಗಳನ್ನೆಲ್ಲಾ ವಿಚಾರಮಾಡಿಕೊಂಡು ಇಲ್ಲಿಂದ ದಾಬಸ್ ಪೇಟೆಯ ಮಾರ್ಗವಾಗಿ ಶಿವಗಂಗೆಯನ್ನು ಕುರಿತು ಪ್ರಯಾಣ ಮಾಡಿದರು ಈ ಕೆರೆ ತಯಾರಾಗುವುದರಿಂದ ಈ ತ್ಯಾಮಗೊಂಡ್ಲು ಗ್ರಾಮಕ್ಕೆ ಬಹು ಅನುಕೂಲವಾಗುವುದು ಸರ್ಕಾರದವರು ಈ ಸ್ಯಾಂಕ್ಷನ್ ಮಾಡಿದ್ದು ಮಹದುಪಕಾರವನ್ನು ಮಾಡಿದಂತಾಯಿತು ಈಚೆಗೆ ನಮ್ಮ ಸರ್ಕಾರದವರು ಸ್ಕೂಲುಗಳಲ್ಲಿ ಧರ್ಮ ಮತ್ತು ಮತೋಪದೇಶಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಗೊತ್ತು ಮಾಡಿರುತ್ತಾರೆ ಇದು ಬಹು ಶ್ಲಾಘ್ಯವಾದ ಏರ್ಪಾಡೇ ಸರಿ ಆದರೆ ವಿದ್ಯಾರ್ಥಿಗಳು (ಗುರುವಿನಂತೆ ಶಿಷ್ಯ) ಎಂಬಂತೆ ಅನುಸರಿಸುತ್ತಾರಾದ್ದರಿಂದ ಮೊದಲು ಎಲ್ಲಾ ಭಾಗಗಳಲ್ಲೂ ಉಪಾಧ್ಯಾಯರು ತಿದ್ದಿಕೊಂಡು ತಮ್ಮ ಶಿಷ್ಯರನ್ನು ಅಭಿವೃದ್ಧಿಗೆ ತರುವಂತೆ ಕೋರುತ್ತೇವೆ ಈ ಸಲ ನಮ್ಮ ಡಾಕ್ಟರವರು ಸ್ಕೂಲಿಗೆ ದಯಮಾಡಿದ ಕಾಲದಲ್ಲಿ ವಿದ್ಯಾರ್ಥಿಗಳ ದೇಹ ಸ್ಥಿತಿಯು ದಿನೇ ದಿನೇ ಬಲಹೀನವಾಗುತ್ತಾ ಇರುವದನ್ನು ಆಯಾ ಹೆಡ್ ಮಾಸ್ಟರಿಗೆ ತಿಳಿಸಬೇಕೆಂತಲೂ, ಬಾಲಕರು ದೃಢಾಂಗಿಗಳಾಗುವಂತೆ ತಕ್ಕ ಏರ್ಪಾಡು ಮಾಡಿಸ್ಬೇಕೆಂತಲೂ ಕೋರು

ವೆಪ್ಪ.—ಈ ಊರಲ್ಲಿ ಸಂತೆ ಆಟ್ಟದೇ ಇರೋಣದರಿಂದ ಕೊಳ್ಳತಕ್ಕವರಿಗೆ ಬಹು ಕಷ್ಟವಾಗಿರುತ್ತೆ. ವರ್ತಕರು ಯಾವ ರೀತಿ ಹೇಳಿದರೆ ಅದರಂತೆ ಈಗ ತಕೊಳ್ಳಬೇಕಾಗಿರುತ್ತೆ. ಆದ್ದರಿಂದ ಘನವನ್ನು ಹೊಂದಿದ ಅಮಲ್ದಾರ್ರವರು ಈ ಟವರ್ನಲ್ಲಿ ಮ್ಯುನಿಸಿಪಲ್ ಸುಂಕಗಳನ್ನು ತೆಗಿಸಿ ದಾಕಿಸಿ, ಇಲ್ಲಿ ಸಂತೆ ನಡೆಯುವುದಕ್ಕೆ ಅನುಕೂಲಪಡಿಸಿಕೊಡಬೇಕೆಂದು ಪ್ರಾರ್ಥಿಸಲ್ಪಟ್ಟಿರುತ್ತಾರೆ.

ಬೇಲೂರು.—ಈ ಸಾರಿ ಮಳೆಯು ಸರಿಯಾಗಿ ನಡಿಸಿ ಅವ್ಯಾಪಿ ವಿರಾಮ ಕೊಡದ್ದರಿಂದ ಈ ಮಲ್ನಾಡು ತರಫಿನಲ್ಲಿ ರಾಗಿಯ ಫಸಲು ಆಗದೆ, ಆಕ ಕೊಂಚ ಭಾಗವೂ ಕೇಯ್ಲಿಗೆ ಅವಕಾಶವಿಲದಂತೆ ರಾಗಿಯೆಲ್ಲಾ ಉದುರಿ, ಗಿಡದಲ್ಲೇ ಮೊಳಕೆಯಾಗಿರುತ್ತೆ.—ಈ ಊರಿಗೆ ಕೇವಲ ಸಮೀಪವಾದ ಚಿಕ್ಕಮಗಳೂರಿನಲ್ಲಿ ಕಳೆದ ಒಂದು ತಿಂಗಳಿಂದಲೂ ಪ್ಲೇಗು ತಲೆಹಾಕಿ ಈಗ ಜೋರಾಗಿ ಹರಡುತ್ತಿರುವುದಾಗಿ ವರ್ತಮಾನ ಕೇಳುತ್ತೇವೆ.—ನಮ್ಮೂರಿನ ಮುನಿಸಿಪಾಲಿಟಿಯ ವಿಷಯವನ್ನು ಎಷ್ಟು ಹೇಳಿದರೂ ತೀರದು. ಊರ ಭಾಟಾಮಾರ್ಗ ಸಿಹ ಮುಖ್ಯ ಸ್ಥಳಗಳಲ್ಲಿ ಪ್ರಜಾ ಸೌಕರ್ಯದ ಅನಾಲಯಗಳು ತೃಪ್ತಿಕರವಾಗಿ ಇರುವುದಿಲ್ಲ. ಮುನಿಸಿಪಲ್ ಲಾಂದ್ರದ ಬೆಳಕೂ ಸಹ ಭಾಟಾ ಮಾರ್ಗಗಳಲ್ಲಿ ಬೆಳಗುತ್ತಿರುವವು. ಆದರೆ ಗಲ್ಲಿಗಳಲ್ಲಿ ಬರೀ ಲಾಂದ್ರ ಕಂಬಗಳು ಮಾತ್ರ ನಿಂತಿವೆ. ನಮ್ಮ ಆದಲ್ದಾರ್ರವರು ಒಂದು ಮೈದಾನದಲ್ಲಿ ವಾಸವಾಗಿದ್ದುಕೊಂಡು ಊರೊಳಕ್ಕೆ ಬಂದಾಗಲೆಲ್ಲಾ ಭಾಟಾಮಾರ್ಗದಲ್ಲಿ ಮಾತ್ರ ಹೋಗುವದಾಗಿರುವದರಿಂದ ಮುನಿಸಿಪಾಲಿಟಿಯ ಅನಾದರಣೆಗೆ ಅವಕಾಶವಾಗಿದೆ.—ಈಗ ಎರಡು ವಾರದಲ್ಲಿ ಕಳವುಮಾಡಿದವನೊಬ್ಬನಿಗೆ ಮಾತ್ರ ಶಿಕ್ಷೆಯಾಯಿತು. ಅವನ ಪ್ರೋತ್ಸಾಹಕರಿಗೆ ಶಿಕ್ಷೆಯಾಗದ್ದು ವ್ಯಸನವು. ನಮ್ಮ ಅಮಲ್ದಾರ್ರವರು ಸಹ ಪ್ಲೀಡರ್ ರಂಗಣ್ಣನವರ ಮಗುವಿನ ಚಿನ್ನದ ಬಳೆಯನ್ನು ಕದ್ದಿಸಿದ ಮತ್ತು ಅದನ್ನು ಖರೀದಿಗೆ ಪಡೆದುಕೊಂಡಿದ್ದವರನ್ನು ಬಿಟ್ಟಿರುವುದು ಯಾಕೋ ತಿಳಿಯಲಿಲ್ಲ.—ಈ ಊರಿನ ಪಾಠಶಾಲಾ ಪಂಡಿತರು ರಾಮನಾಥಯ್ಯನವರ ೫|| ವರುಷದ ಹೆಣ್ಣು ಮಗು ಕಳೆದ ಮಂಗಳವಾರ ಆಡಿಕೊಂಡಿದ್ದು, ತಾಯಿಯೂ ಅಕ್ಕನೂ ಅದು ಒಂದಷ್ಟೇ ಬಿಟ್ಟು ಹಿತ್ತಲಿಗೆ ಹೋಗಿರುವಾಗ್ಗೆ ಈ ಮಗುವು ನೀರು ಕುಡಿಯಲು ೫|| ಅಡಿ ಎತ್ತರವಿರುವ ಕೊಳದಪ್ಪತಿಯ ಹತ್ತಿರ ಹೋಗಿ ನೀರಿಗಾಗಿ ಬೊಗ್ಗಲು ಸೆಳೆಗಾಗಿ ಬಿದ್ದು ಅವರಲ್ಲೇ ಸತ್ತುಹೋಯಿತು. ಆತರ ಕುತ್ತಿಗೆ ನೀರಿನಲ್ಲಿ ಮುಳುಗಿತ್ತು.

ಬೌರಿಂಗ್‌ಪೇಟೆ ತಾ|| ಬೇತಮಂಗಲ.—ಈ ಪ್ರಾಂತ್ಯ ಮಳೆಯು ಸಮೃದ್ಧಿಯಾಗಿ ನಡೆಯುತ್ತಾ ಇರುವದು ಮಾತ್ರವಲ್ಲದೆ ಕೆರೆಗಳು ಸಹ ತುಂಬಿರುತ್ತವೆ. ಮತ್ತು ಈ ಊರ ದೊಡ್ಡಕೆರೆಯು ಪೂರ್ತಿ ೧೧ ಕೋಡಿ ಹರಿಯಿತು. ಧಾನ್ಯಗಳು ಸಾಧಾರಣವಾಗಿ ಇವೆ. ರೂಪಾಯಿಗೆ ೮ ಸೇರು ಅಕ್ಕಿ ೧೧ ಸೇರು ರಾಗಿ ಇರುವದಲ್ಲದೆ ಅನೇಕ ಬಡವರಿಗೆ ಕೂಲಿ ಕೆಲಸಗಳು ಸಿಕ್ಕುತ್ತಾ ಇರುವದರಿಂದ ಕ್ಷಾಮದ ಭೀತಿಯು ಕಡಿಮೆಯಾಯಿತು ಎಂಬುವದಕ್ಕೆ ಏನೂ ಸಂದೇಹವಿಲ್ಲ.—ಮತ್ತು ಈ ಊರಿನ ಪೊಲೀಸ್ ಸ್ಟೇಷನ್ಗೆ ಸೇರಿದ ಮಾರ್ಕ್ ಬೀಟ್ ಎಂಬ ಕಟ್ಟೋಡರ ಮೇಲೆ ಗೌರ್ನಮೆಂಟ್ ಸಾಮಾನುಗಳನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಅವನ್ನು ಹಿಡಿಸಿ ಜಾಮೀನಿನ ಮೇಲೆ ಬಿಡಲ್ಪಟ್ಟಿದೆ.—ಈ ತಿಂಗಳಿನಲ್ಲಿ ಈ ಊರಿಗೆ ಸೇರಿದ ಗುಟ್ಟಿನ ಜಾತ್ರೆಯು ಬಹು ಚೆನ್ನಾಗಿ ನಡೆಸಲ್ಪಟ್ಟಿತು. ಪೊಲೀಸ್ ಬಂದೋಬಸ್ತು ತೃಪ್ತಿಕರವಾಗಿದ್ದದ್ದರಿಂದ ಯಾವ ಗಲಾಟೆಯೂ ಆಗಲಿಲ್ಲ.—ಡಿವಿಷನ್ ಇನ್ಸ್‌ಪೆಕ್ಟರವರೂ ಬೌರಿಂಗ್‌ಪೇಟೆಯಿಂದ ಕಳುಹಿಸಲ್ಪಟ್ಟ ಆಫೀಸರುಗಳೂ ಸೇರಿಕೊಂಡು ಈ ಪರಿಷೆಯಲ್ಲಿ ನಡೆದಿರುವ ಅಂಗಡಿಗಳ ತೆರಿಗೆಯನ್ನು ವಸೂಲು ಮಾಡಿದರು. ಒಟ್ಟು ವಸೂಲಾದ ಹಣವು ೪೦೦ ಆಗಿರಬಹುದು. ಇದಲ್ಲದೆ ಇಲ್ಲಿಗೆ ಸಮೀಪದಲ್ಲಿರುವ ಗ್ರಾಮದ ಹೆಗ್ಗಡೆಯವರು ಎಂಬ ಪುಣ್ಯಾತ್ಮರು ೭೦೦ ರೂಪಾಯಿ ಖರ್ಚು ಮಾಡಿ ಪರಿಷೆಯ ಜನರಿಗೆ ತೃಪ್ತಿಕರವಾದ ಊಟವನ್ನು ಮಾಡಿಸಿದರು. ಅನೇಕರು ಸವಿ ಊಟವನ್ನು ಉಂಡು ಅವರನ್ನು ಕೊಂಡಾಡುತ್ತಾ ತಮ್ಮ ಊರುಗಳಿಗೆ ಹೋದರು. ಆದರೆ ಒಂದು ಕೊರತೆ ಮಾತ್ರ ಉಂಟಾಗಿತ್ತು. ಏನೆಂದರೆ, ಬೇರೆ ಕಡೆಗಳಲ್ಲಿ ನಾಟಕಗಳಾಗುತ್ತಿದ್ದ ಕಾರಣ ಈ ಪರಿಷೆಗೆ ಮುಂಚೆ ಹೋಗುವದು ನಿಂತುಹೋಗಿದೆ. ಆದರೆ ಇಲ್ಲಿ ಮಾತ್ರ ಉಪಾಧ್ಯಾಯರು ತಮ್ಮ ಕೆಲಸವನ್ನು ಮಾಡುತ್ತಾ ಇದ್ದಾರೆ. ಆದ್ದರಿಂದ ಎಲ್ಲಾ ಸ್ಥಳಗಳ ಕ್ರಮವನ್ನೇ ಇಲ್ಲಿಯೂ ನಮ್ಮ ಅಮಲ್ದಾರ್ರವರು ನೇಮಿಸುವರೆಂದು ನಂಬುವೆವು.

ದೊಡ್ಡಬಳ್ಳಾಪುರ.—ಇಲ್ಲಿ ೧೫ ದಿನಗಳಿಂದ ಚೆನ್ನಾಗಿ ಮಳೆ ಸುರಿಯಿತು. ಈ ಬಳ್ಳಾಪುರದ ಸಮೀಪದಲ್ಲಿರುವ ಎಲ್ಲಾ ಕೆರೆಗಳು ಕೋಡಿಬಿದ್ದವು. ಅಂತು ಮಳೆ ಹೆಚ್ಚಾದ್ದರಿಂದ ಕೆಲವು ಮಂದಿ ಹೊಲಗಳು ಕೆಟ್ಟವು ಎಂದು ಜನರು ಹೇಳುತ್ತಾರೆ. ಹ್ಯಾಗಾದರೂ ಇಷ್ಟುಮಟ್ಟಿಗೆ ಮಳೆ ಸುರಿದದ್ದಕ್ಕಾಗಿ ಪ್ರಜೆಗಳು ಸಂತೋಷಪಡುತ್ತಿದ್ದಾರೆ.—ಲಿಂಗದ ಹಳ್ಳಿಯ ಕೆರೆಯು ಒಡೆದುಹೋಗುವಂತೆ ಇತ್ತು. ೩ ದಿವಸದಿಂದ ನಮ್ಮ ಅಮಲ್ದಾರ್ರವರು ಅಲ್ಲೇ ಇದ್ದು ಸರಿಮಾಡಿಸುತ್ತಾ ಇದ್ದಾರೆ.—ರೈಲ್ ಸ್ಟೇಷನ್ ಹತ್ತಿರ ಇರುವ ಲಾಳ್ ಕೆರೆಯಲ್ಲಿ ೧೫ ವರ್ಷದ ಹೊಲೆಯರ ಮಲ್ಲನೆಂಬ ಹುಡುಗನು ಸ್ನಾನಮಾಡುವದಕ್ಕೆ ಹೋಗಿ, ಬಿದ್ದು ಸತ್ತನು. ಕೋಡಿಯಿಂದ ಮಧುರೆಗೆ ಓಡುವದಕ್ಕೆ ಹೋಗಿದ್ದ ಇಬ್ಬರು ಹುಡುಗರು ವಾಸಕ್ಕೆ ಮನೆಗೆ ಹೋಗುವ ಕಾಲದಲ್ಲಿ ಮಧುರೆ ಕೆರೆಯ ಕೋಡಿ ನೀರು ಬಹು ಜೋರಾಗಿ ಹರಿಯುತ್ತಾ ಇತ್ತು. ಈ ಹುಡುಗನು ಒಂದು ಸಣ್ಣ ಕಿರಿದಾದ ಗಲ್ಲಿನ ಮೇಲೆ ದಾಟಿಹೋಗುವಾಗ ನೀರಿನಲ್ಲಿ ಬಿದ್ದು ಸತ್ತುಹೋದರು. ಮತ್ತು ಇನ್ನೊಬ್ಬ ಕೆರೆಯ ಕೋಡಿಯಲ್ಲಿ ಒಬ್ಬ ಒಡ್ಡರವನು ಬಿದ್ದು ಸತ್ತನು. ಆದ್ದರಿಂದ ಇದೂ ನೀರಿನ ಅಪಾಯವಾದ ಮಾರ್ಗಗಳು ಇರುವ ಕಡೆಗಳಲ್ಲಿ ಸರ್ಕಾರದವರು ಅವರ ಗ್ರಾಮದವಲ್ಲಿ ಸ್ಕೂಲನ್ನು ಸ್ಥಾಪಿಸಿದರೆ ಒಳ್ಳೆಯದಾಗಿ ಕಾಣುತ್ತೆ.—ಮೈ|| ರುದ್ರಪ್ಪನವರು ೧೦-೧೫ ಸಾವಿರ ರೂಪಾಯಿ ಮುಟ್ಟಿಸಿ ಒಂದು ಧರ್ಮ ಛತ್ರವನ್ನು ಕಟ್ಟಿಸುತ್ತಾ ಇದ್ದಾರೆ.—ಮಧುರೆ ಹೋಬಳಿಯ ಶೇಖದಾರರ ಕೊಲೆಯನ್ನು ಅವರ ಬಳಿ ಇದ್ದ ಮುಸಲ್ಮಾನ ಜವಾನನು ಕರಕೊಂಡು ಹೋದನೆಂದು ಸದರಿ ಜವಾನನನ್ನು ಪೊಲೀಸರವರು ಹಿಡಿದು, ಇಲ್ಲಿನ ಕಚೇರಿಯಲ್ಲಿ ವಿಚಾರಣೆ ಮಾಡುತ್ತಿದ್ದಾರೆ.—ಗಾಣಿಗರ ಗುಟ್ಟಿ ವೆಂಕಟರಮಣಪ್ಪನ ದೊಡ್ಡಯ್ಯನ ಮನೆಯಲ್ಲಿ ಪ್ಲೇಗಿನ ಕಾಲದಲ್ಲಿ ಶಿರಸ್ತೇದಾರ್ ನರಸರಾಯರು, ಇನ್ನು ಕೆಲವರ ಸಾಮಾನುಗಳು ಕಳವಾಗಿ ಹೋಗಿದ್ದ ಸುಮಾರು ೫೦೦ ರೂಪಾಯಿ ಸಾಮಾನುಗಳು ಸಿಕ್ಕಿದರೆಂದೂ, ಸದರಿ ಮನೆಯವನನ್ನು ಹಿಡಿದು ವಿಚಾರಣೆ ಮಾಡುತ್ತಾ ಇದ್ದಾರೆಂದೂ ತಿಳಿಯುತ್ತದೆ.—ದೇವಾಂಗದ ಪೇಟೆಯಲ್ಲಿ ಒಬ್ಬ ಹೆಂಗಸು ತಾನು ಕಡಿದು ವಿಷವೇರಿ ಸತ್ತಳು.—ಈಗ ಬಹು ಜೋರು ಆಗಿರುವ ಚಿಕ್ಕ ಪೇಟೆಯ ಕೆಲವರ ಮನೆಯಲ್ಲಿ ಇಲಿ ಸತ್ತವೆ ಎಂದು ವರ್ತಮಾನ ಹುಟ್ಟಿ ಇದೆ. ಒಂದು ವೇಳೆ ಹಾಗಿದ್ದರೆ ಮ್ಯುನಿಸಿಪಾಲಿಟಿಯವರು ಚೆನ್ನಾಗಿ ಗಮನ ಕೊಡಬೇಕಾಗಿದೆ.

ಅರಸೀಕೆರೆ ತಾಲ್ಲೂಕು ಬಾಣಾವಾರ.—ಈ ಪ್ರಾಂತ್ಯ ಅತಿ ವೃಷ್ಟಿಯ ದೆಸೆಯಿಂದ ಪೈರುಗಳೆಲ್ಲಾ ಕೆಡುವ ಸ್ಥಿತಿಯಲ್ಲಿದ್ದವು. ಜನಗಳಿಗೂ ಶೀತದ ಬಾಧೆಯಿಂದ ಅನಾರೋಗ್ಯ ಉಂಟಾಯಿತೆಂದು ಹೇಳಬಹುದಾಗಿದೆ. ಈಚೆಗೆ ನಾಲ್ಕೈದು ದಿವಸಗಳಿಂದ ಬಿಸಿಲು ಕಾಯುತ್ತಾ ಇದೆ. ಪೈರು ಪಚ್ಚೆಗಳೆಲ್ಲಾ ಉತ್ತಮ ಸ್ಥಿತಿಯಲ್ಲಿವೆ. ಹೀಗಿದ್ದಾಗ್ಯೂ ಅಕ್ಕಿ ರೂಪಾಯಿಗೆ ೬-೬| ಸೇರು, ರಾಗಿ ೧೦-೧೧ ಸೇರಿನ ಮೇಲೆ ಕೊಡುವುದಿಲ್ಲ. ಧಾನ್ಯದ ಮಾರಾಟದ ಅರಿಕೆ ತೂಕಗಳನ್ನು ಕೇಳುವುದಕ್ಕೇ ಕೇಳದು. ಇಲ್ಲಿನ ವರ್ತಕರುಗಳನ್ನು ಒಟಾಂಬ್ಯವರೇ ದಿಕ್ಕಿಲ್ಲ. ಅವರು ತಮ್ಮ ಇಷ್ಟಾನುಸಾರ ಕಳ್ಳು ಅಳತೆ ತೂಕಗಳನ್ನು ಪ್ರಯೋಗಿಸಿ ತಮಗೆ ಲಾಭವಾಗುವದನ್ನೇ ನೋಡುತ್ತಾರೆ. ಮುಖ್ಯ ಬಡಬಗ್ಗರು ಬದುಕುವುದು ಕಷ್ಟ. ಬಡ ನೌಕರರಿಗೆ ಈ ಡಿಸ್ಟ್ರಿಕ್ಟಿನಲ್ಲಿ ಅಲೋಯನ್ಸ್ ಕೊಡದ ಕಾರಣ ಅವರನ್ನು ಹೆಚ್ಚು ಕಷ್ಟಕ್ಕೆ ಗುರಿಯಾಗಿದೆ.—ಇಲ್ಲಿನ ಕನ್ನಡ ಸ್ಕೂಲಿನ ಸ್ಥಿತಿಯು ತೃಪ್ತಿಕರವಾಗಿದೆ. ಈ ಸಾರಿ ೯ ಮಂದಿ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಳ್ಳಿದರು. ಸಾಧಾರಣವಾಗಿ ಈ ಸ್ಕೂಲು ಒಂದು ಎ. ವಿ. ಸ್ಕೂಲಿನ ಫಲಿತಾಂಶವನ್ನೇ ಮೂರು ಸಂವತ್ಸರಗಳಿಂದಲೂ ಸೂಚಿಸುತ್ತಿರುತ್ತದೆ. ಸ್ಕೂಲ್ ಕಟ್ಟಡವಂತೂ ಸಾಧುವಾದ ಸ್ಥಿತಿಯಲ್ಲಿದೆ. ಸೈಮರ್ಗ್ಯವೆಂಬುವುದು ಆಕೋಣೆ ತಾತ್ಕಾಲದಲ್ಲಿ ಮಾತ್ರ ಇರುವ ಹಾಗೆ ತೋರುತ್ತದೆಯೇ ಹೊರತು ಕಟ್ಟಡವಲ್ಲಂತೂ ಇಲ್ಲ. ಇದರ ವಿಷಯ ಬಗ್ಗೆ ಅಂದಾಜು ಪಟ್ಟಿಗಳನ್ನು ಮಾಡಿದ್ದಾಯಿತು. ಮೋಲ್ಪಟ್ಟವರ ಆಗ್ರಿಸ್ಟ್ ಸಹಾ ಆಯಿತು. ಆದರೆ ಕಾಮಗಾರಿಯೇನೂ ನಡೆಸಲಿಲ್ಲ. ಎಂದಿಗೆ ಇದಕ್ಕೆ ವೇಳೆ ಕೂಡುತ್ತದೋ ನೋಡಬೇಕು. ಮಳೆಗಾಲಕ್ಕೆ ಸ್ಕೂಲಿನೊಳಗೆಲ್ಲಾ ನೀರುನಿಂತು ಹುಡುಗರಿಗೆಲ್ಲಾ ಬಹು ತೊಂದರೆಯಾಗುತ್ತದೆ. ಊರಿನ ನಾಲ್ಕೂ ವಿಷಯವಂತೂ ಹೇಳತೀರದು. ಕುಳಿಸಿಯ ವನಗಳಂತೆ ಮನೋಹರವಾದ ಕಾಡು ಗಿಡದ ಬನಗಳಿಂದಲೂ, ಕಾರ್ಬೋನ್ನಿನ ರಾಸಿಗಳಂತೆ ಕಾಣಿಸಿಕೊಳ್ಳುವ ಗೊಬ್ಬರದ ಗುಡ್ಡೆಗಳಿಂದಲೂ, ನಿಮಗ ಉಪಕಾರಿಗಳಂತೆ ಚರಂಡಿ ಬಂದು ಸೇರುವ ಸಣ್ಣ ಸಣ್ಣ ಕಾಲುವೆಗಳಿಂದಲೂ, ದುರ್ಗಂಧದಿಂದ ಸೂಗಾಡುತ್ತಿರುವ ಇನ್ನೇನು ತೊಂದರೆ ಬರಬಹುದೋ ಎಂಬ ಕಂದಕಗಳಿಂದ ನಾನಾಯ ಮುಂಭಾಗದಲ್ಲಿರುವ ರಸ್ತೆಗಳ ಪಕ್ಕದಲ್ಲಿಯೂ ಜಲಮಲಗಳ ಬೆಟ್ಟ ಚಿಕ್ಕ ಗುಡ್ಡೆಗಳಿಂದಲೂ ಇತ್ಯಾ ಅನೇಕವಾದ ತೃಣ ಕಾಷ್ಠಗಳಿಂದಲೂ ಈ ಊರು ಶೋಭಿಸುತ್ತಿರುವುದು. ಊರಿನಲ್ಲಿ ಬೀಸಲು ಕಾಲದಲ್ಲಿ ಹವ ಮತ್ತು ನೀರು ಆರೋಗ್ಯಕರವಾದುದರಿಂದ ಯಾವ ಅನಾರೋಗ್ಯವೂ ಇಲ್ಲವೆ. ಗ್ರಾಮ ವ್ಯವಸ್ಥಾ ಬೇಕಿಲ್ಲದೆ ಆರೋಗ್ಯವಾಗಿದ್ದರು. ಆದರೆ ಈ ಸಾರಿ ಹಿಡಿದಿರುವ ಮಳೆಯಿಂದ ಪ್ಲೇಗಿನ ಶಂಕೆಯು ಎಲ್ಲರಿಗೂ ಇಲ್ಲ. ಇದನ್ನುಂಟುಮಾಡಿದ ಎಲ್ಲ ಜೋಳ ಕೆಟ್ಟತೆಂದು ಜನರು ಹಾಹಾಕಾರ ಪಡುತ್ತಾರೆ.—ಇಲ್ಲಿಗೆ ಎರಡು ಮೈಲಿ ಫಾಸಲೆಯಲ್ಲಿರುವ ಕಡೂರು ತಾಲ್ಲೂಕಿಗೆ ಸೇರಿದ ಬಿಸಜಿಗನಹಳ್ಳಿ ಎಂಬುವ ಗ್ರಾಮದ ಮುಂಭಾಗದಲ್ಲಿ ಒಂದು ದೇವಸ್ಥಾನದ ಆ ದೇವಸ್ಥಾನದ ಎಲ ಪ್ರಾಕಾರದಲ್ಲಿ ಉಪಯೋಗವಾದ ಕೇವಲ ಅತ್ಯುತ್ತಮವಾದ ಒಂದು ಅದ್ಭುತ ಅಶ್ವತ್ಥಯು ಗಾಳಿಯಲ್ಲಿ ರೂಪಿಸಲ್ಪಟ್ಟಿತು. ವಿಚಿತ್ರವಾದ ಗುಹೆಯಾಕಾರದ ಪಂಗಾರದಾರೂ ಅಲ್ಲಿ ಇದೆಯೆತ್ತಿ ಸಂಚಾರ ಮಾಡುತ್ತಿರುವನ್ನು ಸ್ವತಃ ನೋಡಿದವರನ್ನು ಇದರ ವಿಷಯವಾಗಿ ಒಂದು ಉಪನ್ಯಾಸವನ್ನೇ ಬರೆಯಬಹುದಾಗಿದೆ. ಇಂಥಾ ಸ್ಥಳವಾಗಿದ್ದ ಕಾಲದಲ್ಲಿಯೆ ಜನ ಅನೇಕ ಜನರು ಇಂಥಾ ಕಾರ್ಯಗಳನ್ನು ಮಾಡುತ್ತಿದ್ದರು. ಸರ್ಕಾರದವರು ಇದು ಸಣ್ಣದೆಂದು ಯಾವುದು ಬೇಡವೆಂದು ಈ ದೇವ ಸ್ಥಾನ ಕಟ್ಟಡವನ್ನು ಕಟ್ಟಿದ್ದರು ಸರ್ಕಾರಗಳಿಂದಲೂ. ಅದಿಸಿಂದಲೂ ಆ ಅದ್ಭುತವಾದ ಅಶ್ವತ್ಥ ಅಲ್ಲೇ ಇರುತ್ತದೆ. ದೊಡ್ಡದು ಸ್ವಲ್ಪಕ್ಕೆ ಇದೆ. ಗಮನಕ್ಕೆ ಬಾರದೆ ಇರುವುದು. ಇದು ಬಹಳ ಆಶ್ಚರ್ಯಕರವಾಗಿದೆ. ದೇವಸ್ಥಾನವು ಬಹು ಪುರಾತನವಾದ್ದು. ಸ್ವಾಮಿ ವಾರಗಳಿಗೆ ಪ್ರಸಾದಗಳನ್ನಿಟ್ಟು ದೇವಸ್ಥಾನದ ಸರ್ಕಾರದಿಂದ ಬಿಂಬವನ್ನು ಮತ್ತು ಪ್ರಾಕಾರವನ್ನು ಪುನರುತ್ಥಾನ ಮಾಡಿಸುವ ಹಾಗೆ. ಅಂಥ ಕರ್ತವ್ಯವಾದ ಪ್ರತಿಯೊಂದನ್ನು ವಿಚಾರಿಸಿ ಮಾಡುವವರನ್ನು ಬೇಡುತ್ತೇವೆ.

ಚಿತ್ರದುರ್ಗ.—ಕಳೆದ ೩-೪ ವಾರಗಳಲ್ಲಿ ಇಲ್ಲಿ ರಕ್ತಮೇಘಗಳು ಮುಸುಕಿಕೊಂಡಿದ್ದರೂ ಸಂಕೀರ್ಣವಾಗಿ ನೀರನ್ನುಂಟುಮಾಡಿವೆ. ಇನ್ನು ಸ್ವಲ್ಪ ಕಾಲ ಹೀಗೆಯೇ ಮಳೆ ನಡೆದಿದ್ದರೆ ಈ ಸಂವತ್ಸರ ಬೀಳುವ ಬೆಳೆಯಾಗುವುದರಲ್ಲಿ ಸಂದೇಹವಿಲ್ಲ. ಈ ವರೆಗೂ ಪೈರುಪಚ್ಚೆ ಎಲ್ಲಾ ಚೆನ್ನಾಗಿ ಬೆಳೆದು ಎಲ್ಲಿ ನೋಡಿದರೂ ಹಸುರು ಹೊಲಗಳು ಕಾಣಿಸುತ್ತವೆ. ಪಶುಗಳಿಗೆ ಹುಲ್ಲು ನೀರು ಸಮೃದ್ಧಿಯಾಗಿವೆ. ಇನ್ನು ದೊಡ್ಡ ಮಳೆಗಳು ಬರಬೇಕಾಗಿರುವುದರಿಂದ ಬೇರೆ ಕಡೆಗಳಲ್ಲಿ ಕೆರೆಗಳು ತುಂಬದಿದ್ದರೂ ಇನ್ನೂ ತುಂಬಬಹುದು ಎಂದು ಜನಗಳು ಸ್ವಲ್ಪ ಕ್ಷಾಮದ ಚಿಂತೆಯನ್ನು ಮರೆತು ಹರುಷಪಡುತ್ತಿದ್ದಾರೆ.—ಈಗ ಊರಿನಲ್ಲಿ ಹಾವು ನೀರುಗಳು ಅಲ್ಲಲ್ಲಿ ಬಹಳವಾಗಿ, ಇಂಥಾ ಕಡೆ ಹಾಳು ಗೋಡೆಗಳ ಸಂದುಗೊಂದುಗಳಲ್ಲಿ ಜನರು ಹೆದರಿಕೆ ಮಾಡುವರು. ಗಿಡ ಹುಲ್ಲು ಊರಿನ ನಡುವೆ ಪಾಳು ನೀರುಗಳಲ್ಲಿ ಬೆಳೆದು ಹಾವು ಚೇಳು ಮುಂತಾದ ಕೆಟ್ಟ ಜಂತುಗಳಿಗೆ ಆಶ್ರಯವಾಗಿದೆ. ಮ್ಯುನಿಸಿಪಾಲಿಟಿಯವರು ಈ ಗಿಡಗಂಟೆಗಳನ್ನು ತೆಗಿಸಿ ಪಾಕು ಮಾಡಿಸಿದರೆ ಉತ್ತಮವಾಗಿಯೂ ಭಯರಹಿತವಾಗಿಯೂ ಆರೋಗ್ಯಕರವಾಗಿಯೂ ಆಗುವದು. ಇದಕ್ಕೆ ನಮ್ಮ ಮೈಸೂರು ಪ್ರೆಸಿಡೆಂಟರು ಗಮನ ಕೊಡುವರೆಂದು ನಿರೀಕ್ಷಿಸುತ್ತೇವೆ.—ಇಲ್ಲಿಗೆ ಮಿ|| ಬ್ರೌನ್ ಎಂಬ ಒಬ್ಬ ಯೂರೋಪಿಯನರು ಬಂದು ಥಿಯೊಸಾಫಿಕಲ್ ಸಭೆಯ ಹಾಲಿನಲ್ಲಿ ಕಳೆದ ಶನಿವಾರದಿಂದ ಎಂದು ಮೂರು ದಿನಗಳ ವರೆಗೂ ಬೆಳಗ್ಗೆ ಸಾಯಂಕಾಲಗಳಲ್ಲಿ ಉಪನ್ಯಾಸಗಳನ್ನು ಕೊಟ್ಟರು. ಇವರು ಸಂಸ್ಕೃತದಲ್ಲಿ ಪಂಡಿತರಾಗಿ ಭಗವದ್ಗೀತೆಯನ್ನು ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡಿರುವರು. ಇವರು ಆದಾಗ ಊರುಗಳಲ್ಲಿ ಸನ್ನಾಸಿಗಳಂತೆಯೇ ಇರುತ್ತಾರೆ. ಇವರ ಉಪನ್ಯಾಸಗಳಿಂದ ಯಾವ ಪ್ರಯೋಜನಗಳಾಗುವವೋ ಮುಂದೆ ನೋಡಬೇಕಾಗಿದೆ.—ಈಗಿನ ಹವಾ ಸಪ್ತ ಸರ್ವ ವಿಷಯಗಳಲ್ಲೂ ಆರೋಗ್ಯವಾಗಿದೆ. ಈ ಚಿತ್ರದುರ್ಗ ಡಿಸ್ಟ್ರಿಕ್ಟಿನ ಪ್ರತಿ ಸ್ಥಳದಲ್ಲೂ ಚಿತ್ರದುರ್ಗದಲ್ಲೂ ಸಹ ಚೆನ್ನಾಗಿ ಮಳೆಗಳು ಆಗಿ ಭೂಮಿ ಬೆಳೆತಕ್ಕ ಫಸಲು ಗಳೆಲ್ಲಾ ಚೆನ್ನಾಗಿವೆ. ಆದರೆ, ಕೆಲವು ಕಡೆ ಗಿಡ್ಡವಿದ್ದುದರಿಂದ ಜೋಳ ಈಗಲೇ ಕಟಾವಿಗೆ ಬಂದಿದೆ. ಬಾಕೀ ಫಸಲುಗಳೆಲ್ಲಾ ಒಂದು ಎರಡು ತಿಂಗಳಿಗೆ ಕಟಾವಿಗೆ ಬರಬಹುದು.—ಸಂತೆಯಲ್ಲಿ ರಾಗಿ ರೂಪಾಯಿಗೆ ೧೫ ಸೇರು, ಜೋಳ ೧೫|'-೧೫ ಸೇರು, ಅಕ್ಕಿ ೬-೭, ಸೇರು ಮಾರುತ್ತದೆ.—ಚಿತ್ರದುರ್ಗದಲ್ಲಿರುವ ತಕ್ಕ ನೀರಿರುವ ಬಾವಿಗಳೆಲ್ಲಾ ನೀರು ಬಂದಿವೆ. ನಲ್ಲಿಗಳಿಗೆ ನೀರು ಸಪ್ಪೈ ಆಗತಕ್ಕ ತಿಮ್ಮಣ್ಣನಾಯಕನ ಕೆರೆಗೆ ಮಾತ್ರ ಸ್ವಲ್ಪವು ನೀರು ಬಂದಿಲ್ಲ. ಆದರೆ ಈ ಚಿತ್ರದುರ್ಗದ ಪ್ರಜೆ ಈಗ್ಗೆ ೭-೮ ವರುಷದಿಂದ ಅನುಭವಿಸಿದ ನೀರಿನ ಕಷ್ಟ ಹೇಳಲಿಕ್ಕೇ ಸಾಧ್ಯವಿಲ್ಲ. ಈ ಕಷ್ಟದಲ್ಲಿ ಅನೇಕ ದಿನ ಮುಂಚಿತವೇ ಜಾನುವಾರಗಳು ಕುಡಿಯಲಿಕ್ಕೆ ನೀರು ಇಲ್ಲದೆ ಸತ್ತುಹೋದವು. ಪ್ರಜೆಗಳಿಗೂ ಇದೇ ಸ್ಥಿತಿ ಬಂದೀತೆಂದು ನಿರೀಕ್ಷಿಸುತ್ತಿದ್ದ ಕಾಲಕ್ಕೆ ಸರಿಯಾಗಿ ನಮ್ಮ ಡೆ|| ಕಮಿಷನರ್ ಮೆ|| ಚಂಗುಬಟ್ಟಿಯವರು ಹಿಂದಲಕಾಲದ ಮಹಿಯಾತ್ ಮಾಡಿಕೊಳ್ಳುತ್ತಾ ನೂರಾರು ವರುಷದ ಕೆಳಗೆ ಮುಚ್ಚಿ ಹೋಗಿದ್ದ ಒಂದು ಭಾವಿಯನ್ನು ಕಂಡಕದಲ್ಲಿ ಕಂಡುಹಿಡಿದು ಅದನ್ನು ತೆಗಿಸಿ ನೋಡಿದ್ದರಲ್ಲಿ ಅದರ ತುಂಬ ಹಿಂದಲ ಕಾಲದಲ್ಲಿ ಪ್ರಜೆಗಳು ಬೀತಿ ಮಾಡುತ್ತಿದ್ದ ಚಿಕ್ಕಮನುಷ್ಯ ಕಲ್ಲುಗಳು ಮಣ್ಣು ಸಹ ತುಂಬಿತ್ತು. ಅದನ್ನೆಲ್ಲಾ ತೆಗಿಸಿ ಪಾಕು ಮಾಡಿದ ಕೂಡಲೆ ಒಳ್ಳೇ ಜಲ ಬರಲಿಕ್ಕೆ ಹತ್ತಿತು. ಮತ್ತೆ ಆ ಭಾವಿಯ ಕಲ್ಲು ಕಟ್ಟಣವು ನಾಟವಾಗಿತ್ತು. ಇದರ ಹೆಸರು “ಕಾಮನ ಭಾವಿ” ಎಂತ ವಾಡಿಕೆಯಲ್ಲಿದ್ದ ಹಿಂದಿನ ದಾಖಲೆಯು ಸಿಕ್ಕಿತು. ಮುಖ್ಯ ಇಲ್ಲಿ ಹೇಳತಕ್ಕದ್ದೇನೆಂದರೆ, ಈ ವರುಷದ ನೀರಿನ ಕಷ್ಟವನ್ನು ಈ ಭಾವಿ ನೀರಿನಿಂದಲೇ ಪ್ರಜೆಗಳು ಪರಿಹಾರ ಮಾಡಿಕೊಂಡರು. ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಇವರೆಲ್ಲಾ ಕಾದುನಿಂತು ನೀರು ಹೊರುವುದರಲ್ಲೇ ತಮ್ಮ ಕಾಲವನ್ನೆಲ್ಲಾ ಕಳೆಯುತ್ತಿದ್ದರು. ಅಂಥ ಕಷ್ಟಕಾಲದಲ್ಲೂ ಅನುಕೂಲಪಡಿಸಿದ ನೂರಾರು ಜನಕ್ಕೆ ನಲ್ಲೀ ನೀರು ಸಪ್ಲೈ ಆಗುತ್ತಿತ್ತು. ಅವರ ಪಿನಹ ಇತರರಿಗೆ ಈ ಅನುಕೂಲ ಇರಲಿಲ್ಲ. ಅಂತು ಇಲ್ಲಿನ ಪ್ರಜೆಗಳಿಗೆ ಹಿಂದೆ ಇದ್ದಷ್ಟು ಕ್ಷಾಮದ ಭೀತಿಯು ಇರುತ್ತಿದ್ದಿಲ್ಲ.—ಈಗ್ಗೆ ಕೆಲವು ದಿವಸಗಳ ಕೆಳಗೆ ಹಿರಿಯೂರು ತಾಲ್ಲೂಕು ಸುರಹಳ್ಳಿಯ ಬೇಗಾರರ ಸ್ಕೂಲಿನ ಹೀನಸ್ಥಿತಿ ತಿಳಿಸಿದೆಯಷ್ಟೆ. ಆ ವಿಷಯಕ್ಕೆ ಗೌರ್ನಮೆಂಟಿನವರು ಈ ವರೆಗೂ ಗಮನಕೊಟ್ಟಂತೆ ತೋರಲಿಲ್ಲ. ಆ ಸ್ಕೂಲು ಮೊದಲಿಗಿಂತಲೂ ಈಗ ಹೆಚ್ಚು ಅನಾನುಕೂಲಸ್ಥಿತಿಯಲ್ಲಿದೆ. ಈ ನಾಗರಿಕ ಕಾಲದಲ್ಲೂ ನಮ್ಮ ದೇಶದಲ್ಲಿ ಅನೇಕ ಪ್ರಜೆಗಳು ನಿದ್ರೆಯಿಲ್ಲದೆಯೂ, ಅದಕ್ಕೆ ಪ್ರಯತ್ನಪಟ್ಟರೆ ಪ್ರವೃತ್ತ ಸಹಾಯ ಪ್ರೋತ್ಸಾಹ ಸಹ ಇಲ್ಲದೆಯೂ ಕಷ್ಟಪಡುತ್ತಿದ್ದಾರೆ. ಅಂಥವರಿಗೆ ದೊಡ್ಡ ಮನುಷ್ಯರ ಸಹಾಯ ಸಿಕ್ಕದಿದ್ದರೆ ಅವರೆಂದಿಗೂ ಉತ್ತಮ ಸ್ಥಿತಿಗೆ ಬರಲಾಗುವುದಿಲ್ಲ. ಆದ್ದರಿಂದ ಇಂಥಾದ್ದಕ್ಕೆ ಹೆಚ್ಚು ಪ್ರಯತ್ನವು ಕೂಡಿ, ಬಡವರ ಉಪಯೋಗಕ್ಕಾಗಿ ಇರತಕ್ಕ ಸ್ಕೂಲುಗಳಿಗೆ ಸೇರಿಸುತ್ತಾ ಬಂದರೆ ನಮ್ಮ ಜತೆಯ ವಾಸಮಾಡುತ್ತಾ ಹೀನ ಸ್ಥಿತಿಯಲ್ಲಿರುವವರನ್ನು ಉದ್ಧಾರ ಮಾಡಲಿಕ್ಕೆ ಅನುಕೂಲವಾಗುತ್ತೆ. ಅದರಿಂದ ನಾವು ದೇವರಿಗೂ, ಗೌರ್ನಮೆಂಟಿಗೂ, ಪ್ರಜೆಗಳಿಗೂ ಪ್ರೀತಿ ಪಾತ್ರರಾಗಿ ಚೆನ್ನಾಗಿ ಬಾಳಲಿಕ್ಕೆ ಅನುಕೂಲವಾಗುವದು.

ಮೈಸೂರು ಗೆಜೆಟ್ ಸಂಗ್ರಹ

ಗುಂಡ್ಲುಪೇಟೆ ತಾಲ್ಲೂಕು ಬೇಗೂರು, ನಂಜನಗೂಡು ತಾಲ್ಲೂಕು ನಂಜನಗೂಡು ಮತ್ತು ರಾಂಪುರ, ಫ್ರೇಜರ್‌ಪೇಟೆ, ಪಿರಿಯಾಪಟ್ಟಣ ತಾಲ್ಲೂಕು ಸಂಗರೂರು, ಮಾವಳ್ಳಿ, ಕೃಷ್ಣರಾಜನಗರ, ಹುಣಸೂರು ತಾಲ್ಲೂಕು ಬೆಲೆಹಳ್ಳಿ ಮತ್ತು ಚಿಕ್ಕಹಳ್ಳಿ, ಚಾಮರಾಜನಗರ ತಾಲ್ಲೂಕು ಮರಿಯಾಲ—ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವ ಎಂದು ತಿಳಿಯಲ್ಪಟ್ಟಿದ್ದು.

ಕೆಳಗಿನ ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟ್ ನಲ್ಲಿ ಕಾಲರಾ ಉಪದ್ರವವೆಂದು ಸ್ಥಿರಪಡಿಸಿದ ಸ್ಥಳಗಳು: ಬಾಣಾವರ, ಬೆಳ್ಳೂರು, ಚಿಕ್ಕಮಗಳೂರು, ಮೊಟ್ಟೆ, ಬೆಣ್ಣೆ, ಹಾಳೂರು ಮುಂತಾದುವು [illegible]

ಮೈಸೂರು ಮುಜುರಾಯಿ ಅಸಿಸ್ಟೆಂಟ್ ಕಮಿಷನರ್ ರಾವ್ ಸಾಹೇಬ್ ಬಿ. ಟಿ. [illegible] ರವರಿಗೆ ೬ ತಿಂಗಳು ಫರ್ಲೋ ರಜಾ ಕೊಟ್ಟಿದೆ.

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ [illegible] ಯವರನ್ನು ಮೈಸೂರು [illegible] ಬದಲಿ ನೇಮಿಸಿದೆ.

ಪೊಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಎ. ಪಿ. [illegible] ರವರ ಅರ್ಜಿಯ ಮೇರೆಗೆ ಅವರ ಬಳಿ ಉಳಿದಿರುವ ರಜಾ [illegible] ತಿಂಗಳು ಹತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಮೂರು ತಿಂಗಳು ಹನ್ನೊಂದು ದಿನಗಳ ರಜವನ್ನೂ ಕೊಟ್ಟಿದೆ.

ಅಕೌಂಟ್ ಡಿಪಾರ್ಟ್ಮೆಂಟ್ ಅಸಿಸ್ಟೆಂಟ್ ಮೆ|| ಎನ್. ಕೃಷ್ಣಸ್ವಾಮಿ ಐಯ್ಯಂಗಾರ್ಯರಿಗೆ ಸೆಪ್ಟಂಬರ್ ತಾ|| ೧ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಿಜಿಲೆನ್ಸ್ ಆಫೀಸರು ಮೆ|| ಎಂ. ಮುನಿರಾಮಯ್ಯನವರು ಮನೆಗೆ ಹೋಗುವ ಹುಕುಂ ಕೊಡಲ್ಪಡುವ ತನಕ ಅಸಿಸ್ಟೆಂಟ್ ಕಮಿಷನರ್ ಆಗಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮಾಗಡಿ ತಾಲ್ಲೂಕ್ ಅಮಲ್ದಾರ್ ಮೆ|| ಪಿ. ಸುಬ್ಬರಾಯಲು ನಾಯ್ಡುಯವರಿಗೆ ಹಿಡಿದಿದ್ದ ದಿನಗಳ ಪ್ರಿವಿಲೆಜ್ ರಜಾ ಕೊಟ್ಟ ದೋಷದಿಂದ ತಾಲ್ಲೂಕ್ ಶಿರಸ್ತೆದಾರ್ ಕೆ. ಎಸ್. ರಾಮಚಂದ್ರಯ್ಯನವರು ಮಾಗಡಿಯ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಅ|| ಕಮಿಷನರ್ ಮೆ|| ಟಿ. ಧರ್ಮರಾಜ ಚೆಟ್ಟಿಯವರು ರಜದಿಂದ ವಾಪಸು ಬಂದು ಆಗಸ್ಟ್ ತಾ|| ೫ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಶ್ರೀರಂಗಪಟ್ಟಣದ ಕಾಲ್ಡ್ರನ್ ಅಮಲ್ದಾರ್ ಮೆ|| ಎಚ್. ಎಸ್. ವೆಂಕಟಾಚಾರ್ರಿಗೆ ರಜಾ ಕೊಟ್ಟಿದ್ದರಿಂದ ತಾಲ್ಲೂಕ್ ಶಿರಸ್ತೇದಾರ್ ಎಸ್. ವೆಂಕಟ್ಟಪ್ಪ [illegible] ಶ್ರೀರಂಗಪಟ್ಟಣದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ರೆವಿನ್ಯೂ ಕಮಿಷನರರವರ ಆಫೀಸಿನಲ್ಲಿ ಅಸಿಸ್ಟೆಂಟರಾಗಿರುವ ಮೆ|| ಕೆ. ಸುಬ್ಬರಾಯರವರನ್ನು ಅ|| ಕಮಿಷನರ್ ದರ್ಜೆಯಲ್ಲಿ ೪ನೇ ಕ್ಲಾಸಿಗೆ ಜೂಲೈ ತಾ. ೧೪ ರಿಂದ ಬಡ್ತಿ ಮಾಡಿದೆ.

ನಂಜನಗೂಡು ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಟಿ. ಕೆ. ಸುಂದರರಾಜೈಯಂಗಾರ್ರನ್ನು ಜೂಲೈ ತಾ. ೧೪ ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಶ್ರೀಮನ್ ಮಹಾರಾಜರವರು ಮೈಸೂರು ಇನ್ಫೆಂಟ್ರಿ ೧ನೇ ಬಟಾಲಿಯನ್ ಸಬೇದಾರ್ ಶೀನಪ್ಪನಾಯಕರನ್ನು ೧ನೇ ಗ್ರೇಡಿಗೆ ಜೂಲೈ ತಾ. ೧ ರಿಂದ ಬಡ್ತಿ ಮಾಡಿದ್ದಾರೆ.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 16/9/1909.

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೧೮ ನೇ ಇಸವಿ ಸೆಪ್ಟೆಂಬರ್ ತಾರೀಖು ೨೩ ನೇ ಗುರುವಾರ. ಸಂಚಿಕೆ ೧೭

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟ್ ಸೇರಿ ರೂ ೧—೧೪—೦

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಂಡಿರುವ ರಿಜಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 18

ತಲೆನೋವು ಮೈಯುಳುಕು ನರಗಳ ಗಂಟ್ಲುನೋವು, ವಾಯುವಿನ [illegible] ನಾನ ವಿಧವಾದ ಊತಗಳು ಕೀಲುಗಳು ಚುಚ್ಚುನೋವು [illegible] ಸಂದಿ ಕಟ್ಟುಗಳ ನೋವು ಚೇಳು ಕಡಿದ ನೋವು ಹಲ್ಲುನೋವು —ಇವುಗಳಿಗೆ ಈ ತೈಲವನ್ನು ಹಚ್ಚಿದರೆ [illegible] ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವು [illegible] ಎಲ್ಲಾ ಕಡೆ ಸಾವಿರಾರು ಜನರು ಪರೀಕ್ಷೆ ಮಾಡಿ ಖಂಡಿತವಾಗಿಯೂ ಗುಣಕೊಡುತ್ತದೆ [illegible] ಈ ಔಷಧವು [illegible] [illegible]

[illegible]

ವಿ. ಕೋ [illegible] ಮದರಾಸ್

ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಬೇಕಾದವರು ಪುಸ್ತಕಗಳ ಕ್ರಯಪಟ್ಟಿಯನ್ನು ಕಳಿಸಿದವರಿಗೆ ಮುಪತ್ತಾಗಿ ಕಳುಹಿಸಲಾಗುವುದು [illegible] ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(106 ಪುಟಗಳು ಸೊಗಸಾದ ಬೈಂಡು ಕ್ರಯ ಎಂಟು ಆಣೆ) ಒಂದು ನೂರ ವರುಷಗಳ ಹಿಂದೆ [illegible] ಮಹಾತ್ಮನು [illegible] ಈತನು ಇಂಗ್ಲೀಷು ಮಹಾತ್ಮರಲ್ಲಿ ಪ್ರಸಿದ್ಧನಾದವನು [illegible] ಇಂಗ್ಲೆಂಡ್ ದೇಶವು [illegible] ಈ ಮಹಾಪುರುಷನು [illegible] ಜೀವಮಾನ ಚರಿತ್ರೆಯನ್ನು ಓದುವುದು [illegible]

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ	0—1—0
ಎಕ್ಸರ್‌ಸೈಜ್ ಪುಸ್ತಕಗಳು	
(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(140 ಪೇಜು)	0—2—0

ಬೇರೆ ಬೇರೆ ಪುಸ್ತಕಗಳು ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-35]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 31]

ತಲೆನೋವು, ಗಂಟು ಉಬ್ಬುವದು, ವಾತಸಂಧಿವಾತ ಉಳುಕು, ಆಟಲು ಗಂಟು, ಗಂಟುನೋವು ಅಧಾಂಗವಾಯು [illegible], ಗಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮುಲಾಮು [illegible] ಹಾಗಿಸುವದರೊಳಗೆ ಗಜಕರ್ಣ, ಕುರಿ, ಕಜ್ಜಿ ಮುಂತಾದವುಗಳು ವಾಸಿಯಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುದಿವಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ಅಸ್ಮಾಮಿಶ್ರಣ	೨ ೦ ೦
ಬೇಲುಕಡತದ ಮದ್ದು	೦ ೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦ ೦
ಸುಂದರಿ ತೈಲ—ಮುಡಿ ಬಾಗಲಿ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮-೦
ಕೇಶ್ರಾಂಜನ— ಮಂದ ದೃಷ್ಟಿಗೆ	೦ ೪ ೦
ಬಜ್ಜಿ ಮುಲಾಮು—ಮಕ್ಕಳ ಜಾಡ್ಯ	೦ ೩ ೦
ಕೇಶವರ್ಧಿನಿ ತೈಲ—ತಲೆ ನೋವಿಗೆ	೧ ೦ ೦
ಕಫನಾಶಕ ಚೂರ್ಣ—ಕೆಮ್ಮು ರೋಗಕ್ಕೆ	೦ ೮ ೦

ಡಬಲ್ ಡಿ [illegible] ಟಪಾಲಿಗೆ ಪ್ರತ್ಯೇಕ ವಿಳಾಸ —

ವಿಲಿಯಮ್ ಮತ್ತು ಕಂಪೆನಿ ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ,' ಮುಂಬಯಿ

HE [illegible] OF HASSAN CAPS IN HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 07

ಒಳ್ಳೇ ಟೋಪಿಗಳು ಯಾವವು ? ಯಾರಿಗೆ ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಊರುಗಳಿಗೆ ಹೋಗುತ್ತವೆ ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಗೆ ಇಟ್ಟಿರುವ ಟೋಪಿಗಳ ದಾರಿಯಲ್ಲಿ ವಿಚಾರಿಸದೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುತ್ತಾರೆ

ಆದರೆ ಇಲ್ಲಿ ಸೊಗಸಾಗಿ [illegible] ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾರ [illegible] [illegible]

ಒಳ್ಳೇದಾದ ಜರತಾರಿ [illegible] [illegible]

[illegible]

ಟುಕ್ಕಿ [illegible] ಟೋಪಿಗಳು	[illegible]		
[illegible]			
ದಾರದ ಟೋಪಿಗಳು	೧ ರೂ ೧೨ ಆ	೧ ರೂ ೮ ಆ	೧ ರೂ ೬ ಆ
ಉಣ್ಣೆ ಟೋಪಿಗಳು	೧ ರೂ ೮ ಆ	೧ ರೂ ೬ ಆ	

ಆಕಾರದ ಟೋಪಿ, [illegible] ಟೋಪಿ [illegible] ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವ ಇವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28-82

೧ ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈ ಕಾಲು ಸೆಳೆತ (ಥಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ಸಿಗಡಿ ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಾ ಬಂದರೆ ಎಷ್ಟು ಹೊತ್ತು ಉಪವಾಸವಿದ್ದಾಗ್ಯೂ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, [illegible] ದಾರಿ ಕೊಡದೆ ನಾರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ ಮಕ್ಕಳ [illegible], ಜ್ವರ, ಎಟ್ಟಿಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ —ಬಾಳ್ಯದ ವೆಂಕಟಾಚಲ ಪಂಡಿತ ಎಸ್ ಎಸ್ ಅಂಡ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ

18 34



ಇದು ಸಾಧಾರಣ ಜ್ವರ, ಚಳಿ ಜ್ವರ ಮೊದಲಾದ ಜ್ವರ [illegible] ಜ್ವರ, ವಾತಜ್ವರ, [illegible] ಮುಂತಾದ ಸಕಲ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ಆಫೀಸರ್ ಎಸ್ ಆರ್ ವೆಂಕಟಪತಿ ಅಯ್ಯಂಗಾರರು [illegible] [illegible]

ಕ್ರಯ —[illegible] ಆಣೆ [illegible] ರೂ [illegible] ರೂ [illegible] [illegible]

ಪಿ ಮಂ ಕ ಪ್ರೂಫ ರ

ಈ ಔಷಧವು [illegible] ಸಾಧಾರಣ ಹೊಟ್ಟೆ ಕಟ್ಟಿ [illegible] [illegible]

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವುಗಳ ಕೆಳಗಿನ ವಿಳಾಸದಲ್ಲಿಯೂ ಬೇಕಾದ —

ಹೆಸ್ಸಿಯವರ ಗ್ರೇಟ್ ಇಂಡಿಯನ್ ಔಷಧ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು

ವ ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವಾಗ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯು ಬಂದೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ನ್ಯಾಯವಾಗಿ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ನೋವು, ಭಾರ ನಿದ್ರೆಯಿಲ್ಲದಿರುವುದು ಮೂತ್ರವು ಸ್ವಲ್ಪವಾಗಿಯೇ ವಿವರ್ಣವಾಗಿಯೋ ಬಿಸಿಯಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ ಎದೆ ಹಲ್ಲುಕುವುದು ಕಟಿರೋಗ ಗಾಬರಿ, ತಲೆ ನೋವು, ತಲೆ ತಿರುಗುವಿಕೆ ಮೈನೋವು ಕೀಲುನೋವು, ಊತ, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಕೋಶದ ವಾಯು, ಗ್ರೈವಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸಂಬಂಧಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67 4]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೧ ೮ ೦, ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ ಕಂ, ೭ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



1 38

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ ಗಂಟಲಿನಲ್ಲಿ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳಿಗೂ—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅಂಟು ರೋಗವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡು ಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಹಿಂದೆ ತಳ್ಳಿ ನಿವಾರಣೆಮಾಡುತ್ತದೆ ಉಸುರು ಎಳೆಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ರೋಗವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನ ಶಮನಮಾಡಿ, ನೀವು ಸುಖವಾಗಿ ನಿದ್ರೆ ಮಾಡುವಂತೆ ಮನಸ್ಸಿಗೆ ಉಲ್ಲಾಸ ಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವರ್ಷ ತಿಳಿ ತಯಾರು

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಔಷಧಿ ಚಿಕಿತ್ಸೆಯಿಂದ ಗುಣವಾಗುವುದಕ್ಕಿಂತಲೂ

ರೋಗ ಬರದಂತೆ ತಡೆವುದು ಉತ್ತಮ

SCOTT'S EMULSION 6-38

(ಸ್ಕಾಟ್ಸ್ ಇಮಲ್ಷನ್)

ಶೈತ್ಯ ಶರೀರಕ್ಷಯವೂ ಪ್ಲೇಗ್, ಮಲೇರಿಯಾ ಜ್ವರ ಅಥವಾ ನ್ಯಾಯೋನಿಯ ಕರ ರೋಗ ಬಂದ ಮೇಲೆ ಉಳಿಯುವ ಅಶಕ್ತಿ

ರೋಗವು ಬಲಹೀನರನ್ನು ಮೊದಲು ಹಿಡಿಯುತ್ತದೆ

ಅಸ್ವಸ್ಥತೆಯನ್ನು ದೂರ ಮಾಡುವುದಕ್ಕೂ, ಶರೀರದಲ್ಲಿರುವ ಬಲಹೀನ ಭಾಗಕ್ಕೆ ಪುಷ್ಟಿ ಸಂಪೂರ್ಣ ಪುಷ್ಟಿಯನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ

ಲಂಡನ್ ಇಂಗ್ಲೆಂಡ್

ಈ ವಿಗ್ರಹವುಳ್ಳ ಗುರುತಿರುವ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸ್

69 1

ಮೈಸೂರು ಡಿಸ್ಟ್ರಿಕ್ಟ್ ಯಳಂದೂರು ತಾಲ್ಲೂಕು ಮಾಂಬಳ್ಳಿ ಗ್ರಾಮದಲ್ಲಿರುವ ಒಕ್ಕಲು ಜಾತಿ ..ರವನ ಶಿವನ ಗೂಳಿಯ್ಯ ಸರ್ವ ಜನಗಳಿಗೂ ತಿಳಿಯಪಡಿಸುವುದೇನೆಂದರೆ —ನಾನು ಯಳಂದೂರು ಶೆಟ್ಟಿಯಾರ್ ಬಳಿ ೩೦ ೪ ೦ ರಲ್ಲಿ ೧ ೦ ೦ ರೂ ಬುಟ್ಟು ಒಂದು ಸಾಲ ಕಾಗದವನ್ನು ಕೊಟ್ಟು ಇಟ್ಟಿದ್ದೆನು ಇದು ಗೈರ್ ವಿಲೆಯಾಗಿರುವ ೧೦ ಲೆಕ್ಕ ನೇವ ದ್ಯೂಲ್ ಮಾತ್ರೇಯ ಒಸಾ ಕಾಗದವನ್ನು ಯಳಂದೂರಲ್ಲಿ ಕೇಂದುಕೊಂಡು ಮಾಂಬಳ್ಳಿಯಲ್ಲಿರುವ ಇನಾಂ ..ಉರುಸ್ ನಾಟು ಸಾಬಿಗೆ ಕ್ರಯಪತ್ರ ಬರೆದುಕೊಟ್ಟು ರಿಜಿಸ್ಟರು ಮಾಡಿರುವುದರಿಂದ ಅದ್ದರಿಂದ ಈಗ ಗೈರ್ ವಿಲೆ ಗಿರುವ ನನ್ನ ಹೆಸರಿನ ಬಾಬ್ತು ೩೦ ೪ ೦೯ ನೇ ಮಿತಿ ೦ ಸಾಲ ಕಾಗದವನ್ನು ಬರೆಯಲ್ಪಟ್ಟಿದ್ದಾಗಿ ನನಗೆ ಮೋಸವಾಗತಕ್ಕಂತೆ ಯಾರ ವಶದಲ್ಲಿ ಇದ್ದು ಪತ್ರವಾದ ಮಾಡತಕ್ಕಂತಿದ್ದರೆ ಅದು ಸ್ವೀಕರಿಸಿಯು ಹೋಗುವ ನ ನು ಬರೆದುಕೊಟ್ಟಿದ್ದೇನೆ ಎಲ್ಲರಿಗೂ ತಿಳಿಯುವಂತೆ ... ೦ ಗೂಳಿಯ್ಯ ಹಾಕಿದ ರುಜು ನಿಶಾನೆ

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ದೊರೆಯಲಾರದು

70 1

ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ೧—೨—೦ ಇಂಗ್ಲೀಷ್ ಬಾಷೆಯನ್ನು ಓದುವುದಕ್ಕೂ, ಬರೆಯ ವದಕ್ಕೂ, ಅರ್ಥ ಮಾಡುವುದಕ್ಕೂ, ತರ್ಜುಮೆ ಭಾಷಾಂತರ ಮಾಡುವುದಕ್ಕೂ, ಕ್ಷೇಮ ಪತ್ರ ಮೊದಲಾದ ಕಾಗದಗಳನ್ನು ಬರೆಯುವ ಪದ್ಧತಿ ಮೊದಲಾದ ಇನ್ನೂ ಅನೇಕ ಉಪಯೋಗವಾದ ವಿಷಯವನ್ನು ಈ ಪುಸ್ತಕ ಸಹಾಯದಿಂದ ೧—೨ ತಿಂಗಳಲ್ಲಿಯೇ ಸುಲಭವಾಗಿ ಕಲಿಯುವ ಉತ್ತಮವಾದ ಪುಸ್ತಕವಿದು ಕ್ರಯ ರೂ ೧ ೨ ೦

ವಿಳಾಸ —ವಿ ಕೆ ಮೂರ್ತಿ ಕಂಪನಿ, ಲಕ್ಷ್ಮೀ ಪೇಟೆ

೧೧ ನೆ ಪ್ರತಿ ಕನ್ನಡ ರಘೂಪರಿಶಿಷ್ಟಗಳ ಕ್ರಯ ೧—೨—೦ ನವರತ್ನ ಮಾಲಿಕೆಯಾಗಿ ಪೂರ್ವ ಕಾವ್ಯ ಗಳಿಂದ ರಚಿತವಾದ ಸಂಸ್ಕೃತ ಗ್ರಂಥವನ್ನು ಸಾಗರದ ಸ್ಕೂಲ್ ಹೆಡ್ಮಾಸ್ಟರಾಗಿದ್ದು ಗತಿಸಿದ ಮ ರ ಎನ್ ಶ್ರೀಕಂಠಯ್ಯನವರಿಂದ ಕನ್ನಡದಲ್ಲಿ ಬರೆಯಲ್ಪಟ್ಟು ಮ, ರಾ ಭಾರತೀ ಸಂಸ್ಕರಣವಾದಿಯ್ಯನವರಿಂದ ಹೊರತಂದು ಈಗ ಓದುವುದಕ್ಕೆ ಪ್ರಚಲಿತವಲ್ಲಿರುವ ಅರೆ ಬಿಯಿಸ್ಟ್ರಿ ಬ್ರಹ್ಮಕ್ಷಾಮ ಪರೀ ಮೊದಲಾದವುಗಳಿಗೆ ಉತ್ತ ಕ ಸ್ವಾರಸ್ಯವಾದ ಪುಸ್ತಕವಿದು ಕ್ರಯ ರೂ ೧—೨—೦

ಶಾಲೆಗೆ ಹೋಗದೆ ಇಂಗ್ಲೀಷು ಕಲಿಯುವಿಕೆ, ಕ್ರಯ ೧—೦ ೦ ಇಂಗ್ಲೀಷ್ ಭಾಷೆಯನ್ನು ಓದಲೂ, ಬರೆಯಲೂ, ಮಾತನಾಡಲೂ, ಉಪಾಧ್ಯಾಯರ ಸಹಾಯವಿಲ್ಲದೆ ತಿಳಿಸಿ ಕಲಿಸುವ ಪುಸ್ತಕವಿದು ಕ್ರಯ ರೂ ೧—೨—೦

ವಿಳಾಸ —ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟ್, ಮಾಲೂರ್, ಕೋಲಾರ

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಸೆಪ್ಟೆಂಬರ್ ತಾ 11 ಕ್ಕೆ ಮುಗಿದಿರುವ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮದ ಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	1	3			18
ಕೋಲಾರ	231	119	16	315	
ತುಂಕೂರು	55	21	10	107	
ಮೈಸೂರು					
ಹಾಸನ	20	10		80	
ಶಿವಮೊಗ್ಗ					
ಕಡೂರು					
ಚಿತ್ರದುರ್ಗ					
ದಾವಣಗೆರೆ ಸ್ಯಾನಿಟರಿ	203	185	14	556	.
ಒಟ್ಟು	517	390	40	1 088	18

ಶಾಲಿವಾಹನ ಶಕ ವರುಷ ೧೮೩೧ ನೆ ಸೌಮ್ಯನಾಮ ಸಂವತ್ಸರದ ಭಾದ್ರಪದ ಶುದ್ಧ ನವಮಿ ಗುರುವಾರದಿಂದ ಭಾದ್ರಪದ ಶುದ್ಧ ಪೌರ್ಣಮಿ ಬುಧವಾರದವರೆಗಿನ ಒಂದು ವಾರದ ಪಂಚಾಂಗ

ಸೆಪ್ಟೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಸಿಂಹ ಮಾಸ
	ಗುರು	ನವಮಿ	31	ಮೂಲ	1	9
2	ಶುಕ್ರ	ದಶಮಿ	10	ಪೂರ್ವಾ	1	9
-	-	ಏಕಾದಶಿ	2	ಉತ್ತರಾ	1	10
2	ರವಿವಾರ	ದ್ವಾದಶಿ	15 10	ಶ್ರ	1	11
27	ಸೋಮ	ತ್ರಯೋದಶಿ	1 12	ಧ	10	12
28	ಮಂಗಳ	ಚತುರ್ದಶಿ	15 10	ಪೂರ್ವಾ	11	13
21	ಬುಧ	ಪೌರ್ಣಮಿ	12 32	ಉತ್ತರಾ	15 25	11

ಈ ವಾರದಲ್ಲಿ ವಂಕಟೇಶಲರ ದರ್ಶ ತುಲಾ ಯೋಗಗಳೇರಿವಿ, ಸಾತ್ವಿಕವಾದವು ... ದ್ವಾದಶಿ ಸ್ಪಲ್ಪ ... ಜಯಂತಿ, ಪರಿಪಾಪರ ಗವಾಕ್ಷರವತ ವೃದ್ಧಿಯೋಗ ಸೋಮಪ್ರದೋಷ ... ಮಹಾಪ, ಉಪಾಮಾ ...

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫ ೦-೦	೧೫ ೪ ೦
ಕೆಂಪು ಅಕ್ಕಿ ಅವಲ್		೧೬ ೮ ೦	೧೪ ೮ ೦
,, ದಯಂ		೧೬ ೦ ೦	೧೩ ೮ ೦
ಜಾವ್ರಿ ಅಕ್ಕಿ		೧೬ ೦ ೦	೧೫ ೮ ೦
ಸಣ್ಣಕ್ಕಿ ಅವಲ್		೧೭	೧೭ ೦-೦
,, ದಯಂ		೧೬ ೦ ೦	೧೬ ೦-೦
ತೊಗರಿ ಬೇಳೆ ಪಲ್ಲಾ ೧ ಕ್ಕೆ		೧೬ ೦ ೦	೧೫ ೦ ೦
,, ದಯಂ		೧೫ ೦ ೦	೧೫ ೦ ೦
ಮೈಸೂರ್ ರಾಗಿ ಪಲ್ಲಾ ೧ ಕ್ಕೆ		೯ ೦ ೦	೯ ೦ ೦
ಕಾರಾಗಿ		೮ ೮ ೦	೨ ೮ ೦
ಜೋಳ		೯ ೪ ೦	೯-೦ ೦
ಹುರುಳಿ ಪಲ್ಲಾ ೧ ಕ್ಕೆ		೧೦ ೦ ೦	೧೧ ೮ ೦
ಬಳ್ಳಿ ಅವರೆ		೧೩ ೮ ೦	೧೫ ೮ ೦
ಹೆಸರು		೧೨ ೨-೦	೧೧ ೧೨ ೨
ಉದ್ದು		೧೪ ೬ ೦	೧೩ ೦ ೦
ಕಡಲೆ		೧೪ ೪ ೦	೧೧ ೦ ೦
ಎಳ್ಳು ಸೇ ೧೨೭ ಕ್ಕೆ		೧೫ ೦ ೦	೧೫ ೦ ೦
ಹುರುಳಿ		೧೨ ೨ ೦	೧೨ ೯-೦
ಹರಳು ೧೨೭ ಸೇರಿಗೆ		೧೪ ೦ ೦	೧೦ ೦ ೦
ಗೋಟಂಕಾಯಿ ಮಣ ೧ ಕ್ಕೆ		೨ ೮-೦	೨ ೬ ೦
ಮೆಣಸಿನಕಾಯಿ		೬ ೦-೦	೪ ೧೨ ೦
,, ದುಂಡು		೫ ೮ ೦	೪ ೪-೦
ಹಿಪ್ಪೆ ದೊಡ್ಡ ಅಚ್ಚು		೯-೮ ೦	೩ ೪-೦
ಒಣ್ಣೆಲ್ಲೆ ಮಣ ೧ ಕ್ಕೆ		೫ ೮ ೦	೫-೦ ೦
ಕೊರಳಿಕ್ಕೆ ,,		೫ ೮ ೦	೪-೨ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ		೯ ೦ ೦	೯ ೦ ೦
ಉಪ್ಪು ,,		೬ ೧೨ ೦	೫-೧೨-೦
ಹುಣಸೇ ಹಣ್ಣು		೧-೧೨ ೦	೧ ೧೨-೦
,, ಹಳೇದು		೧ ೮ ೦	೧ ೮-೦
ಸುಣ್ಣ ಮಣ ೧ ಕ್ಕೆ		೧೬ ೨ ೦	೧೩ ೪-೦
ಅರಳಿ ಬೆಲ್ಲ ಪಲ್ಲ ೧ ಕ್ಕೆ		೫ ೪ ೦	೪ ೨ ೦
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೬ ೧೨ ೦
ಅಲಸಂಕಾಯಿ ಮಣ ೧ ಕ್ಕೆ		೦ ೮ ೦	೦ ೧೨ ೦
ಆಲೂಗಡ್ಡೆ ಕಾಯಿ ಮಣ ೧ ಕ್ಕೆ		೧-೦ ೦	೦-೧೧ ೦
ಚಿನ್ನ (ಪವನ್) ಕೆಂಪು		೧೫ ೬-೦	೧೫ ೯ ೦
,, ,, ಪಸಿಮೆ		೧೬-೦ ೦	೧೫ ೧೩ ೦
,, ,, ಗಟ್ಟಿ ತೊಲ ೧ ಕ್ಕೆ		೨೪-೮ ೦	೨೪-೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪-೦	೬೫-೦ ೦

ಸಂಜೀವಿನೀ ಔಷಧಾಲಯ, ಮೈಸೂರು.

23 1

ಎಂ ಎಸ್ ನಾರಾಯಣರವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ಞಾನಂಶಂ, ವಾಯುರೋಗಗಳು, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಶೀತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾನಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಿಯಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಂತೆ ... ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟ ವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ಅರ್ಧಾವಭೇದ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಗ್ರಹಣ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ಪದಾರ್ಥ ಅತ್ತರುಗಳೂ, ಗಂಧದಬತ್ತಿ ಊದಿನಕಡ್ಡಿಗಳೂ ಇಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 37

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಂಬೂತಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಕೆಡುವದಿಲ್ಲ. ಮಿಂಟು ಒಗೆದ ಬಳಿಕ ಈ ಬಟ್ಟೆಗಳು ಕೋರಾದದ್ದಕ್ಕಿಂತ ಚಂದಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಶ್ರೇಷ್ಠತನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಆಣೆಯಿಂದ ೧॥ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ "ಬಟ್ಟೆಗೆ ಆಗಲೀ" ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

20—8—1909 ರಿಂದ 27—8—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	73	50	0	0
ಬೆಂಗಳೂರು ಡಿಸ್ಟ್ರಿಕ್ಟು	[illegible]	[illegible]	33	15
ಮೈಸೂರು ,,	31	23	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	[illegible]	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	1	0	0
ಚಿತ್ರದುರ್ಗ ,,	0	0	0	0
ಕಡೂರ್ ,,	17	10	0	0
ಶಿವಮೊಗ್ಗ ,,	1	1	0	1
ಜುಮ್ಲಾ	122	87	[illegible]	16

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಸಮಾಜ

ಗತ ವಾರದಲ್ಲಿ ಸೂಚಿಸಿದ ಈ ಸಮಾಜದ ಮೆಂಬರುಗಳು ಇತ್ಯಾದಿ ಬಂದಿರುವವರು ಎಲ್ಲರೂ ಮಾಡಿದ ಸರ್ವೋ ಭಂಡಾರದಲ್ಲಿ ಸುಮಾರು ಒಂದು ಮಂದಿ ಮಹಾ ಶಿವ ವದ [illegible] ಶ್ರೀ ಗಣೇಶ ಹಬ್ಬದಿಂದ ಇವರು ಕೇವಲ ಸ್ಥಳವನ್ನು ಬಹಳ ರಮಣೀಯವಾಗಿ [illegible] ಬಗೆ ಬಗೆಯ ಕಂಭಗಳಿಂದಲೂ ಹೂವಿನ ತೋರಣಗಳಿಂದಲೂ, ಚಿತ್ರ ಪಟಗಳಿಂದಲೂ, ಕಣ್ಣಿಗೆ ಸುಂದರವಾಗಿ ತೋರುವ ಹಸುರಾದ [illegible] ಮತ್ತು ಇತರ [illegible] ಹೂವುಗಳ [illegible] ಶೃಂಗರಿಸಲ್ಪಟ್ಟಿತ್ತು. ಶ್ರೀಮತಿ [illegible] ಶ್ರೀ ವಿನಾಯಕನನ್ನು ಪೂಜಿಸಿ ಒಂದು ಉತ್ಕೃಷ್ಟವಾದ ಉಪನ್ಯಾಸ ಪತ್ರಿಕೆಯನ್ನು ಓದಿದರು. ಉಪನ್ಯಾಸಾನಂತರ [illegible] ಮೊದಲಾದ ವಾದ್ಯಗಳು ಬಾರಿಸಲ್ಪಟ್ಟವು. ಮಂಗಳಸೂಚಕ [illegible] ಹಾಡುಗಳು [illegible].

ಬರುವ [illegible] ತಿಂಗಳು [illegible] ನೇ ತಾರೀಖಿಗೆ [illegible] ಜರುಗುವದಾಗಿದೆ. ಎಲ್ಲರೂ [illegible].

ನಮ್ಮ ಪುಸ್ತಕ ಭಂಡಾರವು.

ಓಷಧಿ ಶಾಸ್ತ್ರ

ಮದರಾಸ್ ಪಟ್ಟಣದ ಸರ್ಕಾರಿ ಉಪಾಧ್ಯಾಯ ವಿದ್ಯಾಶಾಲೆಯಲ್ಲಿ ಬೋಧನಾ ಪಂಡಿತರಾದ ಮ ಕೆ ರಂಗಾಚಾರಿ, ಎಂ. ಎ., ಎಲ್. ಟಿ. ಯವರು "ಓಷಧಿ ಶಾಸ್ತ್ರ" ಎಂಬ ಪುಸ್ತಕದ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿ ಕೊಟ್ಟಿದ್ದಾರೆ. ಮದರಾಸ್ ಪಟ್ಟಣದ ಕ್ರಿಶ್ಚಿಯನ್ ಕಾಲೇಜ್ ಎಂಬ ವಿದ್ಯಾಶಾಲೆಯ ಕನ್ನಡ ಪಂಡಿತರಾದ ಮ ಎಂ. ಡಿ ಆಳಸಿಂಗರಾಚಾರ್ಯರವರು ಇದನ್ನು ಕನ್ನಡಕ್ಕೆ ಭಾಷಾಂತರ ಮಾಡಿರುವರೆಂದು ತಿಳಿಯುತ್ತದೆ. ಈ ಪುಸ್ತಕವು ಹಲವು ರೀತಿಯಾಗಿ ಉಪಯುಕ್ತವಾದದ್ದೆಂದು ನಮಗೆ ತೋರುತ್ತದೆ. ಬೇರೆಯ ಗಿಡಗಳ ರಚನೆ, ಪುಷ್ಪ ಫಲಗಳು ಬರುವ ಕ್ರಮ ಮೊದಲಾದವುಗಳನ್ನು ಈ ಪುಸ್ತಕದಿಂದ ಚೆನ್ನಾಗಿ ತಿಳಿದುಕೊಳ್ಳಬಹುದು. ಭಗವಂತನ ಮಹಿಮಾ ವಿಶೇಷವನ್ನು ಸಸ್ಯಾದಿಗಳಲ್ಲಿ ತಿಳಿದುಕೊಳ್ಳುವುದಕ್ಕಿಂತಲೂ ಸಂತೋಷವೂ ಆನಂದವೂ ಇನ್ನಾವುದರಲ್ಲಿಯೂ ದೊರಕಲಾರದು. ಸಮಸ್ತವನ್ನೂ ಸೃಷ್ಟಿಸಿ ಮಾಡಿದ ಆ ಮಹಾತ್ಮನ ಅಪಾರವಾದ ಮಹಿಮೆಯನ್ನು ಸಸ್ಯ ವೃಕ್ಷ ಫಲ ಪುಷ್ಪಾದಿಗಳಲ್ಲಿ ಅಲ್ಪಸ್ವಲ್ಪ ಮಟ್ಟಿಗಾದರೂ ಗ್ರಹಣ ಮಾಡಿಕೊಳ್ಳಬಹುದಾಗಿದೆ. ಈ ಪುಸ್ತಕವನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಂಡ ಪಕ್ಷದಲ್ಲಿ ನಮ್ಮ ಸುತ್ತುಮುತ್ತಲೂ ಹುಟ್ಟಿ ಬೆಳೆದು ಬರುತ್ತಿರುವ ಗಿಡ ಮರಗಳ ಲಕ್ಷಣಗಳು ತಕ್ಕ ಮಟ್ಟಿಗೆ ತಿಳಿದು ಬರುತ್ತವೆ. ಇದು ಇಂಗ್ಲೀಷಿನಿಂದ ಭಾಷಾಂತರ ಮಾಡಲ್ಪಟ್ಟ ಪುಸ್ತಕವಲ್ಲ. ಈ ದೇಶದಲ್ಲಿ ಹುಟ್ಟಿ ಬೆಳೆದ ಎಂಥಾ ಸಸ್ಯವರ್ಗಗಳನ್ನು ಕುರಿತು ಬರೆಯಲ್ಪಟ್ಟದ್ದಾಗಿರುವುದು. ಗಿಡ ಸಸಿಗಳನ್ನು ಅಲ್ಲಲ್ಲಿ ಆರಿಸಿ ತೆಗೆದುಕೊಂಡು ಅವುಗಳ ವಿಚಾರವಾಗಿ ಈ ಪುಸ್ತಕದಲ್ಲಿ ವಿವರಿಸಿರುವ ಸಂಗತಿಗಳನ್ನು ಓದಿ ಹೋಲಿಸಿ ನೋಡುತ್ತಾ ಬಂದಲ್ಲಿ ಬಹು ಉಲ್ಲಾಸವನ್ನುಂಟುಮಾಡುವುದಾಗುತ್ತದೆ. ಇದರಲ್ಲಿ ಬೀಜ, ಬೇರು, ಕಾಂಡ, ಚಿಗುರು, ಎಲೆ, ಹೂವು, ಕಾಯಿ ಹಣ್ಣು ಮೊದಲಾದ ಭಾಗಗಳನ್ನೆಲ್ಲಾ ಪ್ರತಿ ಭಾಗಕ್ಕೂ ಬಿಂಗಡಿಸಿ ಚಿತ್ರಗಳನ್ನು ಸಹ ಹಾಕಿದ್ದಾರೆ. ಈ ಗಿಡಗಳ ವರ್ಗಗಳ ಹೆಸರುಗಳನ್ನು ಲ್ಯಾಟಿನ್ ಭಾಷೆಯಿಂದ ಕನ್ನಡಕ್ಕೆ ಪರಿವರ್ತನ ಮಾಡಿರುವುದು ಅಷ್ಟೇನೂ ಚೆನ್ನಾಗಿರುವಂತೆ ಕಾಣುವುದಿಲ್ಲ. ಒಂದಕ್ಕೊಂದು ಮಿಶ್ರವಾಗಿ ಗಲಿಬಿಲಿ ಆಗದಂತೆ, ಆಯಾ ಜಾತಿಗೆ ಆಯಾ ದೇಶ ಭಾಷೆಯ ಹೆಸರುಗಳನ್ನೆಲ್ಲಾ ಕೊಟ್ಟಿದ್ದ ಪಕ್ಷದಲ್ಲಿ ಇನ್ನೂ ಚೆನ್ನಾಗಿದ್ದಿರ ಬಹುದೆಂದು ನಮಗೆ ತೋರುತ್ತದೆ. ಈಗ ಕೊಟ್ಟಿರುವ ಅನ್ಯ ಭಾಷೆಯ ಹೆಸರುಗಳು ಅಷ್ಟು ಚೆನ್ನಾಗಿಲ್ಲ. ಬಹುಮಂದಿ ವಾಚಕರು ಈ ಪುಸ್ತಕವನ್ನು ಕೊಂಡು ತರಿಸಿ ಸಸ್ಯ ಶಾಸ್ತ್ರಾಭ್ಯಾಸವನ್ನು ಮಾಡುವರೆಂದು ಕೋರುತ್ತೇವೆ. ಇದರ ಕ್ರಯ ರೂ ೧ ೮-೦, ಮದರಾಸಿನಲ್ಲಿರುವ ಪಿ ಆರ್ ರಾ ಅಯ್ಯರ್ ಎಂಬ ಪುಸ್ತಕದ ಅಂಗಡಿಯಲ್ಲಿ ವಿಕ್ರಯವಾಗುವುದು.

ಆಲೂಗೆಡ್ಡೆಗೆ ತಗಲುವ ಬಂಗಡಿ ರೋಗವು.

ಈ ಸಂಸ್ಥಾನದಲ್ಲಿ ಪೈರುಗಳಿಗೆ ಹಿಡಿಯುವ ರೋಗಾದಿಗಳನ್ನು ಪರೀಕ್ಷೆ ಮಾಡುವುದಕ್ಕೂ ಅವುಗಳಿಗೆ ತಕ್ಕ ಪರಿಹಾರಗಳನ್ನು ಕಂಡುಹಿಡಿದು ಪ್ರಚಾರ ಮಾಡುವುದಕ್ಕೂ ಗವರ್ನಮೆಂಟಿನವರು ಮ|| ಕೋಲ್ಮನ್ ಎಂಬ ಅಧಿಕಾರಿಯನ್ನು ನೇಮಕ ಮಾಡಿರುತಾರೆ. ಇವರು ಆಲೂಗಡ್ಡೆಗೆ ಹಿಡಿಯುವ "ಬಂಗಡಿ" ಎಂಬ ರೋಗವನ್ನು ಪರಿಶೋಧನೆ ಮಾಡಿ, ಅದರ ನಿವಾರಣೆಗೆ ತಕ್ಕ ಪರಿಹಾರವನ್ನು ಕಂಡುಹಿಡಿದು, ಈ ವಿಚಾರವಾಗಿ ಒಂದು ಸಣ್ಣ ಪುಸ್ತಕವನ್ನು ಬರೆದರು. ಅದನ್ನು ಗವರ್ನಮೆಂಟಿನವರು ಸುಲಭವಾದ ಕನ್ನಡಕ್ಕೆ ಭಾಷಾಂತರ ಮಾಡಿಸಿ ಸರ್ಕಾರಿ ಛಾಪಾಖಾನೆಯಲ್ಲಿ ಅಚ್ಚು ಹಾಕಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈ "ಬಂಗಡಿ" ರೋಗವೆಂಬುವುದು ಒಂದು ಕ್ರಿಮಿಯಿಂದ ಹುಟ್ಟುವುದು. ಈ ಹುಳುವಿನ ಆಕೃತಿಯನ್ನು ಈ ಪುಸ್ತಕದಲ್ಲಿರುವ ಚಿತ್ರಗಳಿಂದ ನೋಡಬಹುದು. ಈ ಹುಳುವು ಹಿಡಿದಂಥಾ ಗಿಡಗಳು ದಿನೇ ದಿನೇ ಕೃಶವಾಗಿ ಒಣಗಿಹೋಗುತ್ತವೆ. ನಮ್ಮ ಸಂಸ್ಥಾನದಲ್ಲಿ ಆಲೂಗೆಡ್ಡೆಗಳನ್ನು ಬೆಳೆ ಮಾಡುವಂಥಾ ರೈತರೂ ಒಕ್ಕಲಿಗರೂ ಈ ಪುಸ್ತಕವನ್ನು ಅಗತ್ಯವಾಗಿ ತರಿಸಿಕೊಂಡು, ಅದರಲ್ಲಿ ವಿವರಿಸಿರುವ ಸಂಗತಿಗಳನ್ನು ಚೆನ್ನಾಗಿ ಓದಿ ತಿಳಿದುಕೊಂಡು, ಆ ರೀತಿ ವ್ಯವಸಾಯ ಮಾಡಬಹುದೆಂದು ನಿರೀಕ್ಷಿಸುತ್ತೇವೆ. ಈ ಪುಸ್ತಕಕ್ಕೆ ಕ್ರಯವೇನೂ ಕೊಡಬೇಕಾದದ್ದಿಲ್ಲ. ಅಪೇಕ್ಷೆಯುಳ್ಳವರು ಮೇಲ್ಕಂಡ ಅಧಿಕಾರಿಗೆ ಬರೆದುಕೊಂಡಲ್ಲಿ ಅವರು ಕಳುಹಿಸಿಕೊಡುತ್ತಾರೆ.

ಈ "ಬಂಗಡಿ" ರೋಗವನ್ನು ನಾಶಪಡಿಸುವುದಕ್ಕೆ ಅವರು ಆ ಪುಸ್ತಕದಲ್ಲಿ ಸೂಚಿಸಿರುವಂಥಾ ಕೆಲವು ಮುಖ್ಯ ವಿಚಾರಗಳನ್ನು ವಾಚಕರ ತಿಳುವಳಿಕೆಗಾಗಿ ಇಲ್ಲಿ ಎತ್ತಿ ಪ್ರಕಟಿಸಿರುತ್ತೇವೆ.

1 ರೋಗದ ಕ್ರಿಮಿಯೇ ಇಲ್ಲದ ಜಮೀನಿನಲ್ಲಿ ಬೆಳೆದ ಗೆಡ್ಡೆಗಳನ್ನೇ ಬೀಜವಾಗಿ ಉಪಯೋಗಿಸಬೇಕು. ರೋಗದ ಕ್ರಿಮಿಯು ಇರುವ ಗೆಡ್ಡೆಗಳನ್ನು ಮತ್ತು ರೋಗದಿಂದ ನರಳುವ ರೋಗವಿರುವ ಜಮೀನಿನಲ್ಲಿ ಬೆಳೆದ ಗೆಡ್ಡೆಯನ್ನೂ ರೋಗದ ಕ್ರಿಮಿಗಳಿರುವುದನ್ನು ಚೆನ್ನಾಗಿ ತಿಳಿದಿರಬೇಕು.

2 ಇದೂ ಅಲ್ಲದೆ ಗೆಡ್ಡೆಗಳನ್ನು ಕತ್ತರಿಸಿ ಕಣ್ಣುಗಳನ್ನು ಮಾತ್ರವೇ ಬಿತ್ತುವ [illegible] ರೋಗವನ್ನು ಹೆಚ್ಚಿಸುವ [illegible] ಸ್ವಲ್ಪವಾದರೂ [illegible] ಅಂಥಾ ಗೆಡ್ಡೆಗಳನ್ನೆಲ್ಲಾ ಬಿಸಾಟುಬಿಡಬೇಕು.

3 ಯಾವದಾದರೂ ಒಂದು ಜಮೀನಿನಲ್ಲಿ ಆ ರೋಗವು ಪೈರು ಬಹಳ ಮಟ್ಟಿಗೆ ಕೆಡಿಸಿದ್ದರೂ ಸರಿಯೇ ಇನ್ನೊಂದು ಸಾರಿ ಅಂಥಾ ಜಮೀನಿನಲ್ಲಿ [illegible] ಪೈರನ್ನು ಇಡಬೇಕು. ಎಷ್ಟು ಸ್ವಲ್ಪವಾಗಿ ಆದರೂ ರೋಗವು ಕಾಣಿಸಿಕೊಂಡ ತಾಕಿನಲ್ಲಿ ೩ ಅಥವಾ ವರ್ಷಕಾಲವಾದರೂ ಆಲೂಗೆಡ್ಡೆಯನ್ನು [illegible] ಬಿಡಬೇಕು. [illegible] ಹಾಗೆ ಮಾಡದ ಪಕ್ಷದಲ್ಲಿ ಆ ತಾಕಿನಲ್ಲೆಲ್ಲಾ ರೋಗವು ಹರಡುವದು ಬಹುಮಟ್ಟಿಗೆ ನಿಶ್ಚಯವಾಗಿರುವದಲ್ಲದೆ ಆ ಜಮೀನಿನಲ್ಲಿರುವ [illegible] ರೋಗವು ಹತ್ತುವದು. ಆನೇಕಲ್ಲಿನ ಸಮೀಪದಲ್ಲಿ ಹಿಂಗಿರುವದು [illegible] ಪಕ್ಕದಲ್ಲೇ ಇರುವ [illegible] ತಾಕಿನಲ್ಲಿ [illegible] ಆಲೂಗೆಡ್ಡೆಯನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಉತ್ತರ ದಿಕ್ಕಿನ ಕೊನೆಯಲ್ಲಿದ್ದ ತಾಕಿಗೆ ರೋಗವು ಹತ್ತಿ ಪ್ರಬಲವಾಗಿ [illegible] ಎಲ್ಲ [illegible] ವಿಚಾರಣೆ ಮಾಡುವಲ್ಲಿ ಈಗ ಮೂರು ವರ್ಷಗಳಿಂದಲೂ ಆ ತಾಕು ಸಾಲು ಸಾಲಿಗೂ ಜಾಸ್ತಿಯಾಗಿ ಕೆಡುತ್ತಿದೆ ಎಂಬುವದು ತಿಳಿಯಬಂತು. ಇದೂ ಅಲ್ಲದೆ ಅದರ ಪಕ್ಕದಲ್ಲಿರುವ ತಾಕಿಗೆ ಕೂಡ ರೋಗವು ಈಗ ಹತ್ತಿರುವದು.

4 ಹುಳಗಳನ್ನು ಕೊಲ್ಲುವ ದ್ರಾವಕಗಳನ್ನು ಗಿಡಗಳ ಮೇಲೆ ಚಿಮುಕಿಸುವದರಿಂದ ದ್ರವ್ಯ ವ್ಯಯವೂ ಕಾಲಹರಣವೂ ಆಗುವದೇ ಹೊರತು ಉಪಯೋಗವೇನೂ ಆಗುವದಿಲ್ಲ. ಯಾಕೆಂದರೆ ಹುಳುಗಳ ಮೂಲಕವಾಗಿಯಾಗಲಿ ಗಾಳಿಯ ಮೂಲಕವಾಗಿಯಾಗಲಿ ಈ ರೋಗವು ಗಿಡದಿಂದ ಗಿಡಕ್ಕೆ ಬಹುಮಟ್ಟಿಗೆ ಅಂಟುವದಿಲ್ಲ.

5 ಈ ರೋಗಕ್ಕೆ ಒಳಗಾಗದ ಜಾತಿಯ ಆಲೂಗೆಡ್ಡೆಯನ್ನು ತರಿಸಿ ಬೆಳೆಯುವದರಿಂದ ರೋಗದ ಪ್ರಾಬಲ್ಯವು ಬಹಳ ಮಟ್ಟಿಗೆ ಕಡಿಮೆಯಾಗುವದು. ಬೆಂಗಳೂರು ಲಾಲ್ಬಾಗಿನ ಅಧ್ಯಕ್ಷರೂ ನಾವೂ ಪರಸ್ಪರ ಸಹಾಯದಿಂದ ಅಂಥಾ ಗೆಡ್ಡೆಗಳನ್ನು ಬೆಳೆಯುವ ವಿಷಯದಲ್ಲಿ ತನಿಖೆ ಮಾಡುತ್ತಿರುವೆವು. ಯೂರೋಪಿನ ದೇಶದಿಂದ ಕೆಲವು ಜಾತಿ ಗೆಡ್ಡೆಗಳನ್ನು ನಾವು ತರಿಸುತ್ತೇವೆ. ಇಂಗ್ಲೆಂಡಿನಿಂದ ಕೆಲವನ್ನು ಲಾಲ್ಬಾಗಿನವರು ತರಿಸಿರುತ್ತಾರೆ. ಈ ಗೆಡ್ಡೆಗಳು ರೋಗ ಹತ್ತುವದನ್ನು ಎಷ್ಟರಮಟ್ಟಿಗೆ ತಡೆಯಬಲ್ಲವೆಂಬಂಶವನ್ನು ನಾನಾ ಭಾಗಗಳಲ್ಲಿ ತಾಕುಗಳಲ್ಲಿ ಪರೀಕ್ಷೆ ಮಾಡುವೆವು. ಅಂಥಾ ಪರೀಕ್ಷೆಗಳನ್ನು ಒಂದು ಸಾಲಿಗಿಂತ ಜಾಸ್ತಿಯಾಗಿ ಮಾಡಬೇಕು. ಯಾಕೆಂದರೆ ಅಂಥಾ ಗೆಡ್ಡೆಗಳು ಒಂದೆರಡು ಸಾಲು ಬೆಳೆಯಲ್ಲಿ ರೋಗವನ್ನು ತಡೆದರೂ ಕೆಲವು ಸಾಲುಗಳಾದ ಮೇಲೆ ಈ ಸೀಮೆಯಲ್ಲೇ ಬೆಳೆದ ಆ ಜಾತಿಯ ಗೆಡ್ಡೆಗಳಲ್ಲಿ ರೋಗವನ್ನು ತಡೆಯುವ ಶಕ್ತಿಯು ಕುಗ್ಗುತ್ತಾ ಬರುವದೆಂಬುವದು ಅನುಭವಕ್ಕೆ ಬಂದಿರುವದು. ಹಾಲಿ ಮೈಸೂರು ಸೀಮೆಯಲ್ಲಿ ಬೆಳೆಯುತ್ತಿರುವ ಗೆಡ್ಡೆಗಳಿಗಿಂತಲೂ ಈ ಗೆಡ್ಡೆಗಳು ಉತ್ಕೃಷ್ಟವಾದವುಗಳೆಂಬುವದರಲ್ಲಿ ಸಂದೇಹವಿಲ್ಲ. ಆ ಗೆಡ್ಡೆಗಳನ್ನು ಜನಗಳಿಗೆ ಬೆಳೆಯುವದಕ್ಕಾಗಿ ಕೊಡುವದಕ್ಕೆ ಮುಂಚೆ ಅವುಗಳಲ್ಲಿ ಬಂಗಡಿ ರೋಗವಿಲ್ಲವೆಂಬುವದನ್ನು ನಿರ್ಧರಿಸುತ್ತೇವೆ. ಅನಂತರ ಕೆಲವು ಸಂವತ್ಸರಗಳ ವರಿವಿಗೂ ರೋಗ ಹತ್ತದ ಸ್ಥಿತಿಯಲ್ಲಿ ಆ ಗೆಡ್ಡೆಗಳನ್ನು ಬೆಳೆಯಬಹುದು. ಹೀಗೆ ರೋಗ ಹತ್ತದಿರುವದಕ್ಕೆ ಆಲೂ ಗೆಡ್ಡೆಯನ್ನು ಬೆಳೆಯುವವರೆಲ್ಲರೂ ಬಹಳ ಹುಷಾರಿನಿಂದ ಮೇಲೆ ಹೇಳಿರುವಂತೆ ಮಾಡುವದು ಅತ್ಯವಶ್ಯಕವು.

ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವದು.

ಮೈಸೂರು ಗವರ್ನಮೆಂಟಿನವರ ಹೊಸ ಹುಕುಂ

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯವರು ನ್ಯಾಯವಿಧಾಯಕ ಕೌನ್ಸಿಲ್ಲಿಗೆ ತಮ್ಮ ಪೈಕಿ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಕಳುಹಿಸ ಬಹುದೆಂದು ಶ್ರೀಮನ್ ಮಹಾರಾಜರವರು ದಯಾಯತಿಯನ್ನು ತೋರಿಸಿರುತ್ತಾರಷ್ಟೆ. ಈ ಮೆಂಬರುಗಳ ಚುನಾವಣೆಯು ಹ್ಯಾಗೆ ನಡೆಯ ಬೇಕೆಂಬ ವಿಷಯದಲ್ಲಿ ಗವರ್ನಮೆಂಟಿನವರು ಕೆಲವು ಹೊಸ ಕ್ರಮಗಳನ್ನು ಮಾಡಿ ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಅದನ್ನು ವಾಚಕರ ತಿಳುವಳಿಕೆಗೋಸ್ಕರ ಸಂಗ್ರಹ ಮಾಡಿ ಕೆಳಗೆ ಪ್ರಕಟಿಸಿರುತ್ತೇವೆ. ಈ ಕ್ರಮಗಳನ್ನು ಅನುಸರಿಸಿ ಪ್ರತಿನಿಧಿಗಳು ಮೆಂಬರುಗಳನ್ನು ಚುನಾಯಿಸಿದ ಪಕ್ಷದಲ್ಲಿ ಹಾಗೆ ಚುನಾಯಿಸಲ್ಪಟ್ಟ ಮೆಂಬರುಗಳನ್ನು ಗವರ್ನಮೆಂಟಿನವರು ತಿರಸ್ಕರಿಸಲು ಅವಕಾಶವಾಗಲಾರದು. ಈ ನ್ಯಾಯವಿಧಾಯಕ ಕೌನ್ಸಿಲ್ಲಿಗೆ ಮೆಂಬರಾಗಿ ಚುನಾಯಿಸಲ್ಪಡ ಬೇಕೆಂದು ಅಪೇಕ್ಷಿಸುವಂಥಾ ಪ್ರಜಾಪ್ರತಿನಿಧಿಗಳ ಪೈಕಿ ಗವರ್ನಮೆಂಟಿನವರು ನೇಮಕ ಮಾಡಿಕೊಳ್ಳಲು ಒಪ್ಪುವಂಥಾ ಪ್ರತಿನಿಧಿಗಳ ಹೆಸರುಗಳನ್ನು ಮಾತ್ರ ಪ್ರಜಾಪ್ರತಿನಿಧಿಗಳಿಗೆ ತಿಳಿಯಪಡಿಸಿ, ಆ ಪೈಕಿ ಯಾರಿಗಾದರೂ ಇಬ್ಬರಿಗೆ ಪ್ರತಿನಿಧಿಗಳು ತಮ್ಮ ಸಮ್ಮತಿ (ಓಟು) ಗಳನ್ನು ಕೊಡತಕ್ಕದ್ದೆಂದು ಹೇಳುವರು. ಈ ರೀತಿಯಾಗಿ ಚುನಾವಣೆ ಮಾಡುವ ಏರ್ಪಾಡು ಕೆಲವು ಕಾಲದವರೆಗೆ ನಡೆಯ ಬಹುದಾಗಿದೆಯೇ ಹೊರತು ಎಂದೆಂದಿಗೂ ಇದೇ ಕ್ರಮವನ್ನು ಇಟ್ಟು ಅನುಸರಿಸಬೇಕೆಂಬುವದು ಸಹಜವಾದದ್ದಲ್ಲವೆಂದು ನಮಗೆ ತೋರುತ್ತದೆ. ಈಗ ಗವರ್ನಮೆಂಟಿನವರು ಮಾಡಿರುವ ಕ್ರಮಗಳೇನೆಂದರೆ —

೧ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಪೈಕಿ ಇಬ್ಬರನ್ನು ಗವರ್ನಮೆಂಟಿನವರು ನ್ಯಾಯವಿಧಾಯಕ ಕೌನ್ಸಿಲ್ಲಿಗೆ ನೇಮಕ ಮಾಡಿಕೊಳ್ಳಬಹುದು, ಹಾಗೆ ನೇಮಕ ಮಾಡಲ್ಪಡುವ ಮೆಂಬರುಗಳ ಚುನಾವಣೆಯು ಮುಂದೆ ಹೇಳುವ ರೂಲಸಿಗೆ ಅನುಸಾರವಾಗಿ ನಡೆಸಲ್ಪಡಬೇಕಾಗಿರುತ್ತದೆ.

೨ ಈ ಚುನಾವಣೆಯ ರೂಲಸಿಗೆ ಅನುಸಾರವಾಗಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳನ್ನು ಎರಡು ಗುಂಪುಗಳಾಗಿ ಭಾಗಿಸಲ್ಪಟ್ಟಿದೆ. ಮೊದಲನೇ ಗುಂಪಿನಲ್ಲಿ ಸಂಸ್ಥಾನದ ಪಶ್ಚಿಮ ಡಿವಿಜನ್ ಅಂದರೆ ಮೈಸೂರು, ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ಚುನಾವಣೆ ಹೊಂದಿ ಸಭೆಗೆ ಬಂದ ಪ್ರತಿನಿಧಿಗಳು ಇರತಕ್ಕದ್ದು. ಎರಡನೇ ಗುಂಪಿನಲ್ಲಿ ಪೂರ್ವ ಡಿವಿಜನ್ ಅಂದರೆ ಬೆಂಗಳೂರು, ಕೋಲಾರ, ತುಂಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಂದ ಚುನಾವಣೆ ಹೊಂದಿ ಸಭೆಗೆ ಬಂದ ಪ್ರತಿನಿಧಿಗಳು ಇರತಕ್ಕದ್ದು.

೩ (೧) ಪ್ರಜಾಪ್ರತಿನಿಧಿ ಸಭೆಯು ದಸರಾದಲ್ಲಿ [illegible] ಸೇರಿದ ಸಂದರ್ಭದಲ್ಲಿ ಗವರ್ನಮೆಂಟಿನವರು [illegible] ಸ್ಥಳ ಮತ್ತು ಕಾಲಗಳಲ್ಲಿ ಪ್ರತಿನಿಧಿಗಳ ಮೀಟಿಂಗು ನಡೆ[illegible] ಗವರ್ನಮೆಂಟಿನವರಿಂದ ನ್ಯಾಯವಿಧಾಯಕ ಕೌನ್ಸಿಲ್ಲಿಗೆ ನೇಮಕ [illegible] ಪ್ರತಿನಿಧಿಗಳು ಮೇಲ್ಕಂಡಂತೆ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟು, ಆಯಾ ಭಾಗಗಳ ಪ್ರತಿನಿಧಿಗಳು ತಮ್ಮ ಭಾಗಕ್ಕೆ ಒಬ್ಬ ಮೆಂಬರನ್ನು ಚುನಾಯಿಸುವದಕ್ಕೆ ಸಮ್ಮತಿ (ಓಟ್) ಗಳನ್ನು ಪ್ರತ್ಯೇಕವಾಗಿ ಹಾಕತಕ್ಕದ್ದು.

(೨) ಯಾವ ವಿಭಾಗಕ್ಕಾಗಲಿ ಚುನಾವಣೆಗೆ ನಿಲ್ಲುತ್ತೇವೆಂದು ಹೇಳುವ ಪ್ರಜಾಪ್ರತಿನಿಧಿಗಳು ವಿಜಯ ದಶಮಿಗೆ [illegible] ತಮ್ಮ ಹೆಸರುಗಳನ್ನು ಬರಹ ಮೂಲಕ ಗವರ್ನಮೆಂಟಿನ ಸೆಕ್ರಟರಿಯವರಿಗೆ ತಿಳಿಯಪಡಿಸಬೇಕಾಗಿದೆ.

(೩) ಹೀಗೆ ಚುನಾವಣೆಗೆ ನಿಲ್ಲುತ್ತೇವೆಂದು ಅಪೇಕ್ಷಿಸಿ ನಿಲ್ಲುವ ಪ್ರತಿನಿಧಿಗಳ ಪೈಕಿ ಗವರ್ನಮೆಂಟಿನವರು ಯಾರ ಚುನಾವಣೆಯನ್ನು ಒಪ್ಪಿಕೊಳ್ಳಬಹುದೋ ಅಂಥಾ ಪ್ರತಿನಿಧಿಗಳ ಹೆಸರುಗಳನ್ನು ಪಟ್ಟಿ ಮಾಡಿ, ಪ್ರಜಾ ಪ್ರತಿನಿಧಿ ಸಭೆಯು ಸೇರ್ಪಡುವಲ್ಲಿ ಸಮಸ್ತ ಪ್ರತಿನಿಧಿಗಳಿಗೂ ತಿಳಿಯುವಂತೆ ಚುನಾವಣೆಗೆ ಎರಡು ದಿನ ಮುಂಚಿತವಾಗಿ ಪ್ರಕಟ ಮಾಡುವರು. ಪ್ರತಿನಿಧಿಗಳು ಆ ಹೆಸರುಗಳ ಪೈಕಿ ಯಾರಿಗಾದರೂ ಒಬ್ಬರಿಗೆ ಮಾತ್ರ ತಮ್ಮ ಸಮ್ಮತಿಯನ್ನು ಕೊಡಬಹುದಾಗಿದೆ.

(೪) ಓಟ್ ಮಾಡುವ ಕ್ರಮವು ಬ್ಯಾಲಟ್ ಪ್ರಕಾರ (ಅಂದರೆ, ಪ್ರತಿನಿಧಿಗಳು ತಮ್ಮ ಇಷ್ಟಬಂದವರ ಹೆಸರನ್ನು ಚೀಟಿಯಲ್ಲಿ ಬರೆದು ಒಪ್ಪಿಸುವದು) ನಡಿಸಲ್ಪಡುವದು.

(೫) ಗವರ್ನಮೆಂಟಿನಿಂದ ನೇಮಿಸಲ್ಪಡುವ ಒಬ್ಬ ಅಧಿಕಾರಿಯು ಈ ಚುನಾವಣೆಯ ಮೀಟಿಂಗಿನಲ್ಲಿ ಹಾಜರಾಗಿದ್ದು, ಮೆಂಬರುಗಳು ಕೊಡುವ ಓಟ್ ಚೀಟಿಗಳನ್ನು ಎಣಿಕೆ ಮಾಡುವರು.

(೬) ಈ ಮೀಟಿಂಗು ಪೂರೈಸಿದ ಮೇಲೆ ಆ ಅಧಿಕಾರಿಯು ಓಟ್ ಚೀಟಿಗಳ ಕೂಡ ಪ್ರತಿ ಡಿವಿಜನ್ನಿಗೂ ಯಾವ ಯಾವ ಮೆಂಬರುಗಳಿಗೆ ಎಷ್ಟೆಷ್ಟು ಸಮ್ಮತಿಗಳು ದೊರಕಿರುತ್ತವೆ ಎಂಬದನ್ನು ಕುರಿತು ಒಂದು ರಿಪೋರ್ಟನ್ನು ಬರೆದು ಗವರ್ನಮೆಂಟಿಗೆ ಕಳುಹಿಸಬೇಕಾಗಿದೆ.

(೭) ಅಂಥಾ ಚುನಾವಣೆಯ ಮೀಟಿಂಗಿನಲ್ಲಿ ಅನುಸರಿಸಬೇಕಾದ ಕ್ರಮಗಳ ವಿಷಯದಲ್ಲಿ ಗವರ್ನಮೆಂಟಿನವರಿಗೆ ಸೂಕ್ತ ತೋರುವ ಇತರ ರೂಲಸುಗಳನ್ನು ಮಾಡಬಹುದಾಗಿದೆ.

೪ ಪ್ರತಿ ಒಂದು ಡಿವಿಜನ್ನಿನಲ್ಲೂ ಹೆಚ್ಚು ಮೆಂಬರುಗಳ ಸಮ್ಮತಿಗಳನ್ನು ಪಡೆದುಕೊಂಡಿರುವಂಥಾ ಪ್ರತಿನಿಧಿಗಳನ್ನು ಗವರ್ನಮೆಂಟಿನವರು ನ್ಯಾಯವಿಧಾಯಕ ಕೌನ್ಸಿಲ್ಲಿಗೆ ಮೆಂಬರಾಗಿ ನೇಮಿಸ ಬಹುದಾಗಿದೆ.

೫ ಈ ರೂಲ್ಸ ಪ್ರಕಾರ ನೇಮಿಸಲ್ಪಟ್ಟ ನ್ಯಾಯವಿಧಾಯಕ ಕೌನ್ಸಿಲ್ ಮೆಂಬರ ಸ್ಥಾನವು ಖಾಲಿಯಾದಲ್ಲಿ ಮುಂದಿನ ವರುಷದ ಪ್ರಜಾಪ್ರತಿನಿಧಿ ಸಭೆಯು ಸೇರಿದಾಗ್ಗೆ ಆಯಾ ಡಿವಿಜನ್ನಿಗೆ ಸೇರಿದ ಮೆಂಬರುಗಳ ಬಹುಮತಿಯನ್ನು ಈ ಕ್ರಮದಂತೆ ಪಡೆದು ಗವರ್ನಮೆಂಟಿನವರು ಹೊಸ ಮೆಂಬರನ್ನು ನೇಮಕ ಮಾಡತಕ್ಕದ್ದಾಗಿದೆ.

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಸೆಪ್ಟಂಬರ್ ೨೩| ೩ ನೇ ಗುರುವಾರ

ಮೈಸೂರು ಗವರ್ನಮೆಂಟೂ ವ್ಯವಸಾಯವೂ

ಮೈಸೂರು ಸಂಸ್ಥಾನದಲ್ಲಿ ವ್ಯವಸಾಯವೇ ಇತರ ಎಲ್ಲಾ ಕಸಬುಗಳಿಗಿಂತಲೂ ಪ್ರಧಾನವಾದದ್ದಾಗಿದೆ ಈ ಕಸಬನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಸರ್ಕಾರದವರೂ ಜಮೀನ್ದಾರರೂ ರೈತರೂ ಬಹಳ ಸಾಹಸ ಪಡಬೇಕಾಗಿರುವುದು ಮೈಸೂರು ಗವರ್ನಮೆಂಟಿನವರೇನೋ ಈ ಭಾಗದಲ್ಲಿ ರೈತರಿಗೆ ಸಹಾಯ ಮಾಡಲು ಉದ್ಯುಕ್ತರಾಗಿರುತ್ತಾರೆ, ಆದರೆ ಅವರು ಮಾಡುವ ಸಹಾಯ ಸಂಪತ್ತುಗಳೂ ಪ್ರೋತ್ಸಾಹಕ ಕಾರ್ಯಗಳೂ ಎಷ್ಟು ಮಟ್ಟಿನವುಗಳೆಂಬುದನ್ನು ರೈತರಿಗೆ ತಿಳಿಸುವ ಭಾಗದಲ್ಲಿ ಅವರು ಸರಿಯಾದ ಏರ್ಪಾಡನ್ನು ಮಾಡಿಲ್ಲವೆಂದು ನಮಗೆ ತೋರುತ್ತಿದೆ

ರೈತನಿಗೆ ಜಮೀನನ್ನು ಉತ್ತು ವ್ಯವಸಾಯ ಮಾಡುವುದಕ್ಕೆ ಒಳ್ಳೇ ಗಟ್ಟಿಯಾಗಿರುವ ಎತ್ತುಗಳು ಬೇಕಾಗಿವೆ ಅಮೃತಮಹಲ್ ಇಲಾಖೆಯವರು ಒಳ್ಳೇ ಜಾತಿಯ ದನಗಳನ್ನು ಸಾಕಿ ಬೆಳಸುತ್ತಿರುವರು ಇಂಥಾ ಒಳ್ಳೇ ರಾಸುಗಳು ರೈತನಿಗೆ ಸಿಕ್ಕುವಂತಾಗ ಬೇಕು ಮತ್ತು ರೈತರು ಒಳ್ಳೇ ಹಸುಗಳನ್ನು ಸಾಕುವಂತೆ ಅವರನ್ನು ಪ್ರೋತ್ಸಾಹ ಪಡಿಸುವುದೂ ಅವಶ್ಯವಾಗಿದೆ ಈ ಭಾಗದಲ್ಲಿ ಅಮೃತಮಹಲ್ ಇಲಾಖೆಯವರು ರೈತರಿಗೆ ಇನ್ನೂ ವಿಶೇಷ ಸಹಾಯವನ್ನು ಮಾಡಬಹುದಾಗಿದೆ

ಬೆಳೆಯು ಪುಷ್ಕಳವಾಗಿ ಕಟಾವಾಗ ಬೇಕಾದರೆ ಬಿತ್ತುವ ಬೀಜವು ಉತ್ತಮವಾಗಿರಬೇಕು ಒಂದೇ ಜಮೀನಿನಲ್ಲಿ ಬೆಳೆಯುವ ಧಾನ್ಯವನ್ನೇ ವರುಷ ವರುಷ ಅದೇ ಜಮೀನಿಗೆ ಬಿತ್ತುತ್ತಾ ಬಂದರೆ ಧಾನ್ಯವು ಕ್ಷೀಣಗತಿಗೆ ಬರುವುದು ಆದಕಾರಣ ಆ ಜಮೀನಿಗೆ ಬೇರೆ ಬೀಜವನ್ನು ಬಿತ್ತಿದರೆ ಉತ್ತಮ ಒಳ್ಳೇ ಬಿತ್ತನೇ ಬೀಜದಿಂದ ಬಹಳ ಪ್ರಯೋಜನವುಂಟೆಂಬ ಅಂಶವನ್ನು ಮೈಸೂರು ಗವರ್ನಮೆಂಟಿನವರು ಮುಂದಿಟ್ಟು ಮಾಡಿಕೊಂಡು ಬೆಂಗಳೂರು ಲಾಲ್‌ಬಾಗ್ ಎಂಬ ಉದ್ಯಾನವನದಲ್ಲಿ ಒಂದು ಡಿಪ್ಪೋವನ್ನು ಇಡಬೇಕೆಂದು ಹುಕುಂ ಕೊಟ್ಟಿರುತ್ತಾರೆ ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರವರು ಮೇಲ್ಕಂಡ ಡಿಪ್ಪೋದಲ್ಲಿ ಈ ಸೀಮೆಯಲ್ಲಿ ಬೆಳೆಯಾಗುವಂಥಾ ಭತ್ತ, ರಾಗಿ, ಜೋಳ, ಕಡಲೇಕಾಯಿ, ಆಲೂಗೆಡ್ಡೆ ಈ ಮೊದಲಾದ ಮುಖ್ಯ ಧಾನ್ಯಾದಿಗಳ ಒಳ್ಳೇ ಬೀಜಗಳನ್ನು ಶೇಖರಮಾಡಿ ಇಟ್ಟುಕೊಳ್ಳ ಬೇಕೆಂದು ಅಪ್ಪಣೆಯಾಗಿರುವುದು ಅವರು ಆ ಬೀಜಗಳನ್ನು ಕೊಂಡುಕೊಂಡು ಒಳ್ಳೆಯವುಗಳನ್ನೇ ಕೂಡಿಸಿ [illegible] ಇಟ್ಟು, ಈ ಸಂಸ್ಥಾನದ ರೈತರಿಗೆ ಅವುಗಳನ್ನು [illegible] ದರಗಳಂತೆ ಬಿಕರಿಮಾಡುವರು ಇದರಲ್ಲಿ ಗವರ್ನಮೆಂಟಿನವರು ಲಾಭ ಸಂಪಾದನೆ ಮಾಡುವಹಾಗಿಲ್ಲ ಅವರು ಈ ಡಿಪ್ಪೋಗಳನ್ನು ಇಟ್ಟು ನಡಿಸುವುದಕ್ಕೆ ಹಣವನ್ನು ಒದಗಿಸಿ ಕೊಡುತ್ತಾರೆ ಈ ಡಿಪ್ಪೋವು ಕೂಡಿದ ಮಟ್ಟಿಗೂ ಜಾಗ್ರತೆಯಲ್ಲೇ ಸ್ಥಾಪನೆ ಯಾಗುವುದೆಂದೂ, ರೈತಪ್ರಜೆಗಳೂ ಜಮೀನ್ದಾರರೂ ತಮಗೆ ಬೇಕಾಗುವ ಬಿತ್ತನೆ ಬೀಜಗಳನ್ನು ಈ ಡಿಪ್ಪೋವಿನಿಂದಲೇ ತರಿಸಿಕೊಂಡಾರೆಂದೂ ನಂಬಿ ಹಾರೈಸುತ್ತೇವೆ

ಅನೇಕ ವೇಳೆ ಜಮೀನುಗಳಲ್ಲಿ ರೈತರು ಕಷ್ಟಪಟ್ಟು ಮಾಡಿದ ಬೆಳೆಗೆ ಹಲವು ರೋಗಗಳು ತಗಲುವವು ಇದರಿಂದ ರೈತರಿಗೆ ಬಹಳ ನಷ್ಟ ಸಂಭವಿಸುತ್ತದೆ ಇದನ್ನು ತಪ್ಪಿಸುವ ಉದ್ದೇಶದಿಂದ ಗವರ್ನಮೆಂಟಿನವರು ಮೆ|| ಕೋಲ್ಮನ್ ಎಂಬೊಬ್ಬ ಅಧಿಕಾರಿಯನ್ನು ನೇಮಕ ಮಾಡಿರುತ್ತಾರೆ ಪೈರುಗಳಿಗೆ ಹಿಡಿಯುವಂಥಾ ಕ್ರಿಮಿಕೀಟಾದಿ ರೋಗಗಳನ್ನು ಪರೀಕ್ಷೆಮಾಡಿ, ಪರಿಹಾರಗಳನ್ನು ಕಂಡು ಹಿಡಿದು ತಿಳಿಯಪಡಿಸುವುದೇ ಈ ಅಧಿಕಾರಿಯ ಕೆಲಸವಾಗಿರುತ್ತದೆ ಇವರು ಆಲೂಗೆಡ್ಡೆಗಳಿಗೆ ಹಿಡಿಯುವ ರೋಗವನ್ನು ನಿವಾರಣೆ ಮಾಡುವುದಕ್ಕೆ ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದಿರುವರು ಈಗ ತಾನೇ ಪ್ರಕಟವಾಗಿರುವ ಈ ವಿಷಯವನ್ನು ಕುರಿತು ಇನ್ನೊಂದು ಕಡೆ ಪ್ರಸ್ತಾಪ ಮಾಡಿರುತ್ತೇವೆ ಆಲೂಗೆಡ್ಡೆಗೆ ಅನೇಕ ವೇಳೆ ಬೂಗದಿ ರೋಗ ಹಿಡಿದು, ಬೆಳೆಯು ಕೆಟ್ಟು ಹೋಗುವುದು ರೈತರು ಈ ಪುಸ್ತಕವನ್ನು ಓದಿಕೊಂಡು ಅದರಲ್ಲಿ ಹೇಳಿರುವಂತೆ ನಡೆದು ಕೊಂಡಲ್ಲಿ ಈ ರೋಗದ ಉತ್ಪತ್ತಿ ಬೆಳವಣಿಗೆಗಳನ್ನೂ ಅದರ ಪರಿಹಾರವನ್ನೂ ತಿಳಿದು ಮಾಡಿಕೊಳ್ಳ ಬಹುದಾಗಿದೆ

ಮೇಲ್ಕಂಡ ವಿಚಾರಗಳನ್ನೆಲ್ಲಾ ನೋಡಲಾಗಿ ಮೈಸೂರು ಗವರ್ನಮೆಂಟಿನವರು ರೈತರಿಗೆ ಸಹಾಯ ಮಾಡುವುದರಲ್ಲಿ ಕುತೂಹಲವುಳ್ಳವರಾಗಿದ್ದಾರೆಂದು ಗೊತ್ತಾಗುತ್ತದೆ ವಿಶೇಷ ರೈತರು ಓದು ಬರಹವನ್ನು ಕಲಿತುಕೊಳ್ಳಬೇಕೆಂದು ಆಶಿಸುತ್ತೇವೆ ವಿದ್ಯೆ ಕಲಿತ ರೈತರ ಸಂಖ್ಯೆಯು ಹೆಚ್ಚಿದ ಪಕ್ಷದಲ್ಲಿ ಅವರು ವ್ಯವಸಾಯಾಭಿವೃದ್ಧಿ ವಿಷಯಕವಾದ ಪುಸ್ತಕಗಳನ್ನೂ ಬರವಣಿಗೆಗಳನ್ನೂ ಓದಿ ತಿಳಿದುಕೊಂಡು ಪ್ರಯೋಜನ ಹೊಂದಲು ಅನುಕೂಲಿಸುತ್ತದೆ ಆಗ ಅವರ ಗೋಶಾಲೆಗಳೂ, ಅವರ ಜಮೀನುಗಳೂ, ಅವರ ಬೆಳೆಗಳೂ ಬಹುಮಟ್ಟಿಗೆ ಅಭಿವೃದ್ಧಿಹೊಂದುವವೆಂದು ನಿಸ್ಸಂದೇಹವಾಗಿ ಹೇಳಬಹುದು

ಸ್ವದೇಶದ ವೃತ್ತಾಂತಗಳು

ಕಳೆದ ಭಾನುವಾರ ಮಧ್ಯಾಹ್ನದ ರೈಲಿನಲ್ಲಿ ದಿವಾನರವರು ಪರಿವಾರಸಹಿತ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು ಅವರು ಇಲ್ಲಿ ಒಂದು ವಾರದ ತನಕ ಇದ್ದು ವಾಪಸು ಹೋಗುವರೆಂದು ಕೇಳುತ್ತೇವೆ

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿರುವ ಟೌನ್ ಹಾಲ್ ಬಂಗಲೆಯ ಮೇಲೆ ಆರೋಗ್ಯ ವಿಷಯವಾದ ವಸ್ತುಗಳನ್ನು ಈ ಸಲ ನವರಾತ್ರಿ ಹಬ್ಬದ ಹೊತ್ತಿಗೆ ಇಡಿಸಿ ಪ್ರದರ್ಶನ ಮಾಡಬೇಕೆಂದು ರಾ|| ಪಬ್ಬಯ್ಯವರು ಏರ್ಪಾಡು ಮಾಡುತ್ತಿದ್ದಾರೆ

ಕಳೆದ ಆಗಸ್ಟ್ ತಾ ೨೪ ರಲ್ಲಿ ಎನ್ನಕಟ್ಟನ ಸುಬ್ಬರಾಯಪ್ಪನವರ ಮನೆಗೆ ಕಳ್ಳರು ಬಿದ್ದು ಸುಮಾರು ೧೩೦೦ ರೂಪಾಯಿನ ನಗನಾಣ್ಯಗಳನ್ನೂ, ೧೧ ರೂಪಾಯಿನ [illegible] ೧೧ ರೂಪಾಯಿನ ಪಾತ್ರೆಪದಾರ್ಥಗಳನ್ನೂ ಅಪಹರಿಸಿರುತ್ತಾರೆ

ಇಲ್ಲಿನ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿದ್ದ ಮೆ|| ಆರ್ ನರಸಿಂಹಾಚಾರ್, [illegible] ಯವರು ಕಳೆದ ವಾರ ಪ್ಲೇಗ್ ಉಪದ್ರದಿಂದ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ [illegible] ವರುಷ ವಯಸ್ಸಾಗಿತ್ತು

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ಮೆ|| [illegible] ರಾವ್ ಅವರು ಬೆಂಗಳೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಟಿ ಇನ್ಸ್‌ಪೆಕ್ಟರ ಕೆಲಸವಾಯಿತು ಮೆ|| ಎಂ ರಾಮಸ್ವಾಮಯ್ಯನವರು ಮೈಸೂರು ಡಿಸ್ಟ್ರಿಕ್ಟಿನಲ್ಲೇ ಡೆಪ್ಟಿ ಇನ್ಸ್‌ಪೆಕ್ಟರಾಗಿ ಇರುವಂತೆ ಹುಕುಂ ಆಗಿದೆ

ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ವಾರ್ಷಿಕ ವಿದ್ವತ್ ಪರೀಕ್ಷೆಗಳು ಪ್ರಾರಂಭವಾಗಿ ನಡೆಯುತ್ತಲಿವೆ ಈ ಪರೀಕ್ಷೆಗಳಿಗೆ ಮದ್ರಾಸಿನಿಂದ ೧೨ ಮಂದಿ, ಗದ್ವಾಲಿನಿಂದ ಒಬ್ಬರು, [illegible] ಯಿಂದ ಒಬ್ಬರು, ಈ ರೀತಿ ಪಂಡಿತರುಗಳು ಉಮೇದುವಾರರಾಗಿ ಬಂದಿರುತ್ತಾರೆ

ಬೆಂಗಳೂರಿನ [illegible] ದ [illegible] ನೀರಿನ ಒಂದು ಜೋರಾದ ಕಳ್ಳತನ [illegible] ವಾರ ಕಳ್ಳರು [illegible] ೨೦೦ ರೂಪಾಯನ್ನು ಕದ್ದು ಹೊಡೆದುಕೊಂಡು ಹೋದರು ಪೋಲೀಸಿನವರು ಸಾಹಸಮಾಡಿದರೂ ಕಳ್ಳರು ಪತ್ತೆ ಆಗಲಿಲ್ಲ ಆಗ ಲೇವಾದೇವಿ ಇದ್ದ ಸಂತ್ರಿಗಳಿಬ್ಬರನ್ನು ಹಿಡಿದು ವಿಚಾರ ಮಾಡುತ್ತಿದ್ದಾರೆ

ಮೈಸೂರು ಪಟ್ಟಣದಿಂದ ಸ್ವಲ್ಪ ದೂರದಲ್ಲಿ ಮಿ|| ಅಂಡ್ರ್ಸನ್‌ರವರು ತಾ ೭ ರಲ್ಲಿ ಒಂದು ಹೆಣ್ಣು ಹುಲಿಯನ್ನೂ, ಮೆ|| ಜಾನ್‌ಸ್ಟನ್‌ರವರು ತಾ ೮ ರಲ್ಲಿ ಒಂದು ಚಿರತೆಯನ್ನೂ ಶಿಕಾರಿ ಮಾಡಿ ಕೊಂದಿರುತ್ತಾರೆ ಇದಲ್ಲದೆ ಯಣಹೊಳೆಯ ಒಬ್ಬ ಶಿಕಾರಿದಾರನು ಒಂದು ದೊಡ್ಡ ಚಿರತೆಯನ್ನು ಕೊಂದು ಹಾಕಿದನೆಂದು ತಿಳಿಯುತ್ತದೆ

ರಾಜಧಾನಿಯಲ್ಲಿರುವ ಅಡ್ವೋಕೇಟ್ ಮಿ|| [illegible] ಶೆಟ್ಟಿಯವರು ಬಹಳ ಖಾಯಿಲೆಯಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ ಇವರನ್ನು ಹೊಸ ಸೋಮವಾರ [illegible] ಆಸ್ಪತ್ರೆಗೆ ಕರೆದುಕೊಂಡು ಹೋಗಿ [illegible] ಡಾಕ್ಟರು ಗಳಿಂದ ಚಿಕಿತ್ಸೆ ನಡೆಯುವಂತೆ ಮಾಡಿದ್ದಾರೆ ಈ ಚಿಕಿತ್ಸೆಯು ಫಲಕಾರಿಯಾಗಿ ಇವರಿಗೆ ಬೇಗನೆ ವಾಸಿಯಾಗಲೆಂದು ಹಾರೈಸುತ್ತೇವೆ

ಕಳೆದ ೧೪ ನೇ ತಾ ಬುಧವಾರ [illegible] ಕೋಲಾರ ಜಿಲ್ಲೆಯ ಗಣಿಗಳಿಗೆ ಸೇರಿದ [illegible] ಗಣಿಯಲ್ಲಿ ಅನಾಹುತ ನಡೆದು ೧೨ ಜನರು ಮೃತಪಟ್ಟರು ಇದು [illegible] ಸಿಕ್ಕಿದವು ಉಳಿದವುಗಳನ್ನು ಹೊರಕ್ಕೆ ತೆಗೆಯುವುದು ಬಹಳ ಪ್ರಯಾಸವಾಯಿತು ಅವರ ಸಂಗಡ ಇದ್ದು ಅಪಾಯದಿಂದ ರಕ್ಷೆ ಸಿಕ್ಕಿದ್ದ ಒಬ್ಬ ಮಂದಿಯನ್ನು ಯೂರೋಪಿಯನ್ ಕೆಲಸಗಾರರು ಬದುಕಿಸಿ ತರದುಕೊಂಡರು

[illegible] ದಿವಾನ್ ಸರ್ ಶೇಷಾದ್ರಿ ಅಯ್ಯರವರ ಜ್ಞಾಪಕಾರ್ಥವಾಗಿ ಬೆಂಗಳೂರಿನಲ್ಲಿ ಒಂದು ಬಂಗಲೆಯನ್ನು ಕಟ್ಟಿಸಿದ್ದಾರೆ ಅವರ ಶಿಲಾಪ್ರತಿಮೆಯನ್ನು [illegible] ಯಿಂದ ಮಾಡಿಸಿ [illegible] ಎರಡು ವರುಷಗಳು ಕಳೆದುಹೋದವು ಈಗ ಅದನ್ನು ಆ ಬಂಗಲೆಯಲ್ಲಿ ನಿಲ್ಲಿಸುವಂತೆಯೂ, ವೈಸ್‌ರಾಯಿ ಪ್ರಭುಗಳು ಬೆಂಗಳೂರಿಗೆ ದಯಮಾಡಿದಾಗ್ಗೆ ಅವರ ಹಸ್ತದಿಂದ ಅದನ್ನು ಪ್ರತಿಷ್ಠೆ ಮಾಡಿಸಬೇಕೆಂದೂ ಏರ್ಪಾಡಾಗುತ್ತಿದೆ

ಪರಸ್ಪರಸಹಾಯಕಸಂಘಗಳ ಪ್ರವೃತ್ತಿಯನ್ನೂ ಕಾರ್ಯಗಳನ್ನೂ ನೋಡಿ ಕಲಿತುಬರುವುದಕ್ಕಾಗಿ ನಮ್ಮ ಸರ್ಕಾರದವರು ರಿಜಿಸ್ಟ್ರಾರರ ಆಫೀಸಿನಲ್ಲಿ ನೌಕರರಾಗಿದ್ದ ಮೆ|| ಆರ್ ರಂಗರಾಯರನ್ನು ದಾದಾಬಾಯಿ ನವರೋಜಿ ಫಂಡಿನಿಂದ ವಿದ್ಯಾರ್ಥಿವೇತನ ಕೊಟ್ಟು ವಿಲಾಯತಿಗೆ ಕಳುಹಿಸಿರುತ್ತಾರೆ ಅವರು ಕಳೆದ ವಾರ ಪ್ರಯಾಣಮಾಡಿದರೆಂದೂ, ವಾಪಸು ಬರಲು ಸುಮಾರು ಆರು ತಿಂಗಳಾಗುವದೆಂದೂ ಕೇಳುತ್ತೇವೆ

ಬೆಂಗಳೂರು ದಂಡಿನಿಂದ ಕ್ಯಾಪ್ಟನ್ ಜಾಯ್ ಎಂಬೊಬ್ಬ ಸೈನ್ಯದ ಮುನ್ಸೇದಾರರು ಕಳೆದ ಗುರುವಾರ ಮೋಟಾರ್ ಗಾಡಿಯಲ್ಲಿ ಹೆಬ್ಬಾಳಕ್ಕೆ ಹೋಗುತ್ತಿದ್ದಾಗ ಮೋಟಾರ್ ಗಾಡಿಯು ಒಂದು ಮೈಲುಗಲ್ಲಿಗೆ ಬಡಿದು, ಅವರು ಗಾಡಿಯಿಂದ ಹೊರಕ್ಕೆ ಎಸೆಯಲ್ಪಟ್ಟರು ಗಾಡಿಯು ಮುಂದಕ್ಕೆ ಹೋಗಲಿಲ್ಲ ಅವರಿಗೂ ಸ್ವಲ್ಪ ಹೆಚ್ಚಾಗಿಯೇ ಗಾಯವಾಗಿದೆ ಅವರ ಹಿಂದುಗಡೆ ಇನ್ನೊಂದು ಮೋಟಾರ್ ಗಾಡಿಯಲ್ಲಿ ಬರುತ್ತಿದ್ದ [illegible] ಜಾನ್‌ಸ್ಟನ್ ಎಂಬುವರು ಇವರನ್ನು [illegible] ತಮ್ಮ ಗಾಡಿಯಲ್ಲಿ ಕೂರಿಸಿ [illegible] ಆಸ್ಪತ್ರೆಗೆ ಕರೆದುಕೊಂಡು ಹೋಗಿಬಿಟ್ಟರು ಅಲ್ಲಿ ಅವರಿಗೆ ಚಿಕಿತ್ಸೆ ನಡೆಯುತ್ತಲಿದೆ

ರಾಜಧಾನಿಯಲ್ಲಿ ಚಿಕ್ಕ ಪೇಟೆಯ ಸಾಹುಕಾರರಾಗಿದ್ದ ಮೆ|| [illegible] ಸ್ವಾಮಿಗಳೂ, ಮೆ|| [illegible] ಯವರೂ ಪ್ಲೇಗ ಉಪದ್ರದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಪ್ರಥಮದಲ್ಲಿ [illegible] ಸಾಹುಕಾರರಾಗಿ [illegible] ವ್ಯಾಪಾರ [illegible] [illegible] ಈ ವ್ಯಾಪಾರದಲ್ಲಿ [illegible] ಹಣವನ್ನು ಸಂಪಾದನೆ ಮಾಡಿ ಪಟ್ಟಣದಲ್ಲಿ [illegible] ವನ್ನು [illegible] [illegible] ಸಂಪಾದಿಸಿಕೊಂಡಿದ್ದವರು [illegible] [illegible] ಯಲ್ಲಿ [illegible] [illegible] ಸಂಪದ [illegible] ಯಲ್ಲಿ [illegible] ರಾಗಿದ್ದರು [illegible] [illegible] [illegible] ಇನ್ನೂ [illegible] [illegible] ಈ [illegible] ಇನ್ನೂ [illegible] [illegible] ತ್ತಾರೆ

[illegible] ಯಲ್ಲಿ ಪ್ಲೇಗ ಉಪದ್ರವು [illegible] [illegible] ಬರುವುದು [illegible] ಪ್ಲೇಗಿನಿಂದ [illegible] [illegible] ಪ್ಲೇಗಿನಲ್ಲಿ [illegible] ೧೯ [illegible] [illegible] [illegible] [illegible] [illegible] [illegible] [illegible] ಪ್ಲೇಗ [illegible] ವಾರದಲ್ಲಿ [illegible] [illegible] [illegible] [illegible] ಒಂದು ವಾರದಲ್ಲಿ [illegible] [illegible] ಜನರು ಹಾಕಿಕೊಂಡಿದ್ದಾರೆ [illegible] ಮುಂದೆ ಒಂದು [illegible] ಹಾಕಿಕೊಂಡ [illegible] ದಲ್ಲಿ ಈ ಉಪದ್ರವ [illegible] ಕಳೆದ ವಾರದ ಸಂಖ್ಯೆಗಳಷ್ಟೆಂದರೆ —

ತಾರೀಖು	ಪ್ಲೇಗ್ ತಗಲಿದ್ದು	ಪ್ಲೇಗ್ ಮರಣ	ಒಟ್ಟು ಮರಣ
೧೪	೨೪	೨೯	೩೩
೧೫	೨೨	೧೦	೨೦
೧೬	೧೪	೯	೧೭
೧೭	೧೨	೧೩	೨೧
೧೮	೫೬	೧೬	೨೨
೨೦	೧೩	೧೩	೨೩
೨೧	೨೯	೧೬	೩೯

ಮೈಸೂರು ಪಟ್ಟಣವನ್ನು ಅಭಿವೃದ್ಧಿಗೆ ತರುವದಕ್ಕೆ ಸರ್ಕಾರದವರು ಟ್ರಸ್ಟ್ ಬೋರ್ಡ್ ಎಂಬ ಸಂಘವನ್ನು ಕಲ್ಪಿಸಿರುತ್ತಾರಷ್ಟೆ ಈ ಸಂಘದವರು ಅನೇಕ ಮನೆಗಳನ್ನು ಒಡೆದುಹಾಕಿದ್ದರಿಂದ ಬಡಜನರಿಗೆ ವಾಸಮಾಡಲು ಮನೆಗಳಿಲ್ಲದೆ ಕಷ್ಟವಾಗಿದೆ ಇದನ್ನು ಪರಿಹರಿಸುವುದಕ್ಕಾಗಿ ಟ್ರಸ್ಟ್ ಬೋರ್ಡಿನ ಕಮಿಟಿಯವರು ಹೊಸ ಸೋಮವಾರ [illegible] ಹಾಲ್ ಬಂಗಲೆಯಲ್ಲಿ ಸಭೆ ಸೇರಿ ಗೊತ್ತುಮಾಡಿರುವ ವಿಷಯಗಳೇನೆಂದರೆ- ಟ್ರಸ್ಟ್ ಬೋರ್ಡ್ ಕೆಲಸಗಳಿಗೆ ಸ್ಯಾಂಕ್ಷನ್ ಆಗುವ ಮೂರು ಲಕ್ಷ ರೂಪಾಯಿನ ಪೈಕಿ ೫೦,೦೦೦ ರೂಪಾಯನ್ನು ಪ್ರತಿ ವರುಷವೂ ಬೇರೆ ತೆಗೆದಿಟ್ಟು ಕೆಡವಿದ ಮನೆಗಳ ಸಾಮಾನುಗಳನ್ನು ಉಪಯೋಗಿಸಿ ಬಡಜನರಿಗಾಗಿ ಊರಿನ ಒಂದು ಭಾಗದಲ್ಲೇ ಆರೋಗ್ಯಕರವಾದ ಮನೆಗಳನ್ನು ಕಟ್ಟಿಸುತ್ತಾ ಬರಬೇಕು ಈ ಮನೆಗಳ ಕ್ರಯವು ೨೦೦ ರಿಂದ ೬೦೦ ರೂಪಾಯಿನೊಳಗೆ ಇರಬೇಕು ಇವುಗಳನ್ನು ಬಡವರಿಗೆ ವಹಿಸಿ ಅವರಿಂದ ೧೦ ವರುಷದ ವಾಯಿದೆಗೆ ಬಾರದಂತೆ ಪ್ರತಿ ತಿಂಗಳೂ ಸ್ವಲ್ಪ ಸ್ವಲ್ಪವನ್ನು ವಸೂಲ್ಮಾಡಿಕೊಂಡು, ಕಡೆಗೆ ಅವರೇ ಮನೆಗಳ ಮಾಲೀಕರಾಗುವಂತೆ ಮಾಡಬೇಕು ಮತ್ತು ಇಷ್ಟಪಟ್ಟವರಿಗೆ ಸುಲಭವಾದ ಬಾಡಿಗೆಗೂ ಮನೆಗಳನ್ನು ಕೊಡಬಹುದು ಮಧ್ಯಸ್ಥರಾದ ಸಾಮಾನ್ಯ ಜನರಿಗಾಗಿಯೂ ೬೦೦ ರಿಂದ ೧,೫೦೦ ರೂಪಾಯಿ ವರೆಗೆ ಕ್ರಯವಾಗು

ವಂಥಾ ಬೇರೆ ಬೇರೆ ತರಹಾ ಮನೆಗಳನ್ನು ಆರೋಗ್ಯ ಸೂತ್ರಗಳಿಗನುಸಾರವಾದ ರೀತಿಯಲ್ಲಿ ಕಟ್ಟಿಸಬೇಕು. ಈ ಮನೆಗಳನ್ನೂ ಮೇಲ್ಕಂಡ ರೀತಿಯಲ್ಲೇ ಕೊಂಡುಕೊಳ್ಳುವವರಿಗಾಗಲಿ, ಬಾಡಿಗೆಗಾಗಲಿ ಕೊಡಬಹುದು ಎಂಬೀ ರೀತಿಯಾಗಿ ತೀರ್ಮಾನಮಾಡಿರುವೆ.

ಲೈಟ್ ಹೌಸ್

ಮಹಾ ಸಾಗರಗಳಲ್ಲಿ ಯಾನಮಾಡುವ ಹಡಗುಗಳು ಯೂರೋಪ್ ಖಂಡದಿಂದ ಏಷಿಯ ಖಂಡಕ್ಕೂ ಅಮೇರಿಕ ಆಫ್ರಿಕಾ ಖಂಡಗಳಿಗೂ ಹೋಗಿ ಬರುತ್ತವೆಯಷ್ಟೆ. ಇಂಗ್ಲೆಂಡಿನಲ್ಲಿರುವ ಜನಗಳು ಸುಮಾರು ಇಪ್ಪತ್ತು ಅಥವಾ ಇಪ್ಪತ್ತೈದು ದಿನಗಳಿಗೆ ಹಿಂದೂ ದೇಶವನ್ನು ತಲಪಬಹುದು. ಇಲ್ಲಿಂದ ಇಂಗ್ಲೆಂಡಿಗೆ ಹೋಗಬೇಕೆಂದು ಅಪೇಕ್ಷಿಸುವವರು ಕೂಡ ಅಷ್ಟು ಕಾಲದಲ್ಲಿ ಅಲ್ಲಿ ಹೋಗಿ ಮುಟ್ಟಬಹುದು. ಇಂಗ್ಲೆಂಡ್ ದೇಶದಲ್ಲಿಯೂ ಜರ್ಮನಿ ಮುಂತಾದ ಇತರ ದೇಶಗಳಲ್ಲಿಯೂ ತಯಾರಾಗುವ ಯಂತ್ರಗಳೂ ವಿಧವಿಧವಾದ ದೀಪಗಳೂ ನಯವಾದ ವಸ್ತ್ರಗಳೂ ಈ ದೇಶಕ್ಕೆ ಹಡಗುಗಳಲ್ಲಿಯೇ ಬರುತ್ತವೆ. ಅದೇ ಹಡಗುಗಳು ಈ ದೇಶದಲ್ಲಿ ಬೆಳೆಯುವ ಹತ್ತಿ, ಕಬ್ಬಿಣ, ಎಣ್ಣೆಯಬೀಜ ಮುಂತಾದವುಗಳನ್ನು ಅನ್ಯದೇಶಗಳಿಗೆ ಒಯ್ಯುವವು. ಈ ವಿಧವಾಗಿ ಜನಗಳು ಸಂಚರಿಸುವುದಕ್ಕೂ ವ್ಯಾಪಾರಗಳನ್ನು ನಡಿಸುವುದಕ್ಕೂ ಹಡಗುಗಳೇ ಸದ್ಯಕ್ಕೆ ತಕ್ಕ ಸಾಧನಗಳಾಗಿವೆ. ಆದರೆ ಇಂಥಾ ಹಡಗುಗಳು ಒಂದೊಂದುವೇಳೆ ಬಹಳ ಅಪಾಯಕ್ಕೆ ಸಿಕ್ಕಿ ಒಡೆದುಹೋಗಿ ಅದರಲ್ಲಿದ್ದ ಜನಗಳೂ ಅಮೂಲ್ಯವಾದ ಸರಕುಗಳೂ ಸಮುದ್ರಪಾಲಾಗುತ್ತವೆ. ಈ ವಿಷಯವನ್ನು ಕುರಿತು ವಾಚಕರು ವರ್ತಮಾನ ಪತ್ರಿಕೆಗಳಲ್ಲಿ ಓದಿಯೂ ಕೇಳಿಯೂ ಇರಬಹುದು.

ಇಂತಹ ಅಪಾಯಗಳು ಹಡಗಿಗೆ ಸಂಭವಿಸುವುದಕ್ಕೇನು ಕಾರಣ? ದೊಡ್ಡ ದೊಡ್ಡ ಬಂಡೆಗಳು ಸಾಗರದ ನೀರುಗಳಲ್ಲಿ ಅಲ್ಲಲ್ಲಿ ಇರುತ್ತವೆ. ಇವು ನೀರಿನ ಮಟ್ಟದ ವರೆಗೂ ಎತ್ತರವಾಗಿದೆ ನೀರಿನ ಮಟ್ಟಕ್ಕೆ ಸ್ವಲ್ಪ ಕಡಿಮೆಯಾಗಿದ್ದು ಹಡಗನ್ನು ನಡಿಸುವ ನಾವಿಕರಿಗೆ ಮರೆಯಾಗಿರುವವು. ಹಡಗನ್ನು ನಡಿಸುವವರು ಈ ಮೋಸವನ್ನು ತಿಳಿಯದೆ ಹಡಗನ್ನು ಅಲ್ಲಿಗೆ ನಡಿಸಿಕೊಂಡು ಹೋಗುವದರಿಂದ ಅದು ಆ ಬಂಡೆಗೆ ತಾಕಿ ಒಡೆದುಹೋಗುತ್ತದೆ. ಇದೇ ಹಡಗುಗಳು ಒಡೆದು ಹೋಗುವುದಕ್ಕೊಂದು ಮುಖ್ಯಕಾರಣ. ಇಂಥಾ ಬಂಡೆಗಳು ಮುಖ್ಯವಾಗಿ ಎಲ್ಲಿರುವವೆಂದರೆ, ಹಡಗು ದೀರ್ಘವಾದ ಪ್ರಯಾಣವನ್ನು ಅಗಾಧವಾದ ಸಮುದ್ರದ ಮೇಲೆ ಅನೇಕ ದಿನಗಳ ವರೆಗೂ ಮಾಡಿ ಇನ್ನೇನು ನಮ್ಮ ಕಷ್ಟ ಮುಗಿಯಿತು, ರೇವು ಸಮೀಪವಾಗಿದೆ, ನಾವು ರೇವಿನೊಳಕ್ಕೆ ಹೋದ ಮೇಲೆ ದಡವನ್ನು ಸೇರಿ ಇಳಿದು ಅಲ್ಲಿ ನಮ್ಮನ್ನು ಎದುರುನೋಡುತ್ತಿರುವ ಸ್ನೇಹಿತರನ್ನು ಸುಖವಾಗಿ ನೋಡಬಹುದೆಂಬ ಸಂತೋಷದಿಂದ ಪ್ರಯಾಣಿಕರು ಸಂಭ್ರಮಪಡುತ್ತಿರುವಾಗಲೇ ಈ ಅಪಾಯಗಳು ಸಾಧಾರಣ ಸಂಭವಿಸುತ್ತವೆ. ಯಾಕೆಂದರೆ ಬಂಡೆಗಳು ರೇವಿಗೆ ಸಮೀಪವಾಗಿರುವ ಸ್ಥಳದಲ್ಲಿಯೇ ಇದ್ದು ಈ ಅಪಾಯವನ್ನುಂಟುಮಾಡುತ್ತವೆ.

ಇಂತಹ ಸಂತಾಪಕ್ಕೆ ಹಡಗನ್ನು ತಪ್ಪಿಸಿ ಸುರಕ್ಷಿತವಾಗಿ ಅದು ರೇವನ್ನು ಸೇರುವಹಾಗೆ ಏನಾದರೂ ಉಪಾಯವು ಕಲ್ಪಿಸಲ್ಪಟ್ಟಿಲ್ಲವೇ? ಕಲ್ಪಿಸಲ್ಪಟ್ಟಿದೆ. ಈ ಉಪಾಯಕ್ಕೆ ಲೈಟ್ ಹೌಸ್ ಎನ್ನುವರು. ಲೈಟ್ ಹೌಸ್ ಅಂದರೇನು? ಸಮುದ್ರದ ತೀರದಲ್ಲಿರುವ ಎತ್ತರವಾದ ಬಂಡೆಯ ಮೇಲಾಗಲಿ ಅಥವಾ ಉದ್ದೇಶಪೂರ್ವಕವಾಗಿ ಕಟ್ಟಿದ ಎತ್ತರವಾದ ಸ್ತಂಭದ ಮೇಲೆಯಾಗಲಿ ಒಂದು ದೊಡ್ಡ ದೀಪವನ್ನಿಟ್ಟು ಅದನ್ನು ರಾತ್ರಿಯೆಲ್ಲಾ ಉರಿಸುತ್ತಿರುವರು. ನಾವಿಕರು ರೇವಿನ ಹತ್ತಿರ ಬಹಳ ದೂರದಲ್ಲಿರುವಾಗಲೇ ಈ ದೀಪದ ಬೆಳಕಿನಿಂದ ಅಪಾಯಕ್ಕೆ ದೂರಾಗಿ ನೆಟ್ಟಗೆ ರೇವಿಗೆ ಹಡಗನ್ನು ನಡಿಸುವರು. ಇಂಥಾ ಲೈಟ್ ಹೌಸ್‌ಗಳು ಈ ದೇಶದಿಂದ ಇಂಗ್ಲೆಂಡ್ ದೇಶಕ್ಕೆ ಹೋಗುವ ಮಾರ್ಗದಲ್ಲಿ ಅನೇಕ ಇವೆ.

ಇಹಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿ ಪುರುಷನ ಅಥವಾ ಸ್ತ್ರೀಯ ಜೀವಯಾನವನ್ನು ಸಮುದ್ರಯಾನವೆಂದು ಹೇಳಬಹುದು. ಈ ಸಮುದ್ರಯಾನವು ನಮ್ಮ ಜನ್ಮದಲ್ಲೇ ಆರಂಭವಾಗಿ ನಮ್ಮ ಮರಣದ ದಿನದಲ್ಲಿ ಮುಕ್ತಾಯವಾಗುವದು. ಈ ಮಹಾ ಪ್ರಯಾಣಕ್ಕೆ ಯಾರೂ ಹೊರತಲ್ಲ; ನಾವೆಲ್ಲರೂ ಒಬ್ಬರೂ ತಪ್ಪದೆ ಮಾಡಬೇಕಾಗಿರುವುದರಿಂದ ಇದರ ವಿಷಯದಲ್ಲಿ ನಾವು ಕೆಲವು ಪ್ರಶ್ನೆಗಳನ್ನು ಕೇಳಿ ತಿಳುಕೊಳ್ಳುವದು ಬಹಳ ಅವಶ್ಯವಾಗಿರುವದು.

ಪ್ರಶ್ನೆ — ನಮ್ಮ ಜೀವಯಾನವು ಸಮುದ್ರಯಾನವಾಗಿದ್ದರೆ ನಾವು ಸಂಚರಿಸುವ ಹಡಗು ಯಾವುದು?

ಉ. ದೇಹವೇ ಹಡಗು.

ಪ್ರ. ಈ ಹಡಗಿನಲ್ಲಿ ಪ್ರಯಾಣಮಾಡುವವನ್ಯಾರು?

ಉ. ನಾನು ಅಥವಾ ನನ್ನ ಜೀವಾತ್ಮ.

ಪ್ರ. ಹಾಗಾದರೆ ನಾವೆಲ್ಲರೂ ಯಾನಮಾಡಿ ಯಾವ ಸಮುದ್ರವನ್ನು ದಾಟಬೇಕು?

ಉ.—ಈ ಲೋಕವೆಂಬ ಸಾಗರವನ್ನು.

ಪ್ರ. ಇದನ್ನು ದಾಟಿದ ಮೇಲೆ ಯಾವ ರೇವಿಗೆ ಸೇರುವೆವು?

ಉ. ಪರಲೋಕವೆಂಬ ರೇವಿಗೆ ನಾವೆಲ್ಲರೂ ಮುಟ್ಟಬೇಕು.

ಪ್ರ. ಈ ಹಡಗಿಗೆ ಸಹ ಏನಾದರೂ ಅಪಾಯಗಳು ಸಂಭವಿಸಬಹುದೋ?

ಉ.—ಹೌದು. ಅನೇಕ ಅಪಾಯಗಳಿವೆ. ಮೊದಲನೆಯದಾಗಿ ನಾವು ಯಾನಮಾಡುತ್ತಿರುವ ಈ ದೇಹವು ಬಹಳ ಅಶಕ್ತವಾದ ಹಡಗು. ಇದಕ್ಕೆ ಅನೇಕ ಚಂಡಮಾರುತಗಳು ಎದ್ದು ಅದನ್ನು ಮುಳುಗಿಸ ನೋಡುತ್ತವೆ. ಅಲ್ಲಲ್ಲಿ ದೊಡ್ಡ ದೊಡ್ಡ ಬಂಡೆಗಳು ಇದಕ್ಕೆ ತಾಕಿ ಮುಳುಗಬಹುದು. ಈ ದೇಹಕ್ಕೆ ಬರುವ ಅಪಾಯಗಳು ಎಷ್ಟೆಂತ ಯಾರು ಹೇಳಬಲ್ಲರು. ನಮಗೆ ಮುಂದೆ ಏನು ಸಂಭವಿಸುವದೋ ಯಾರಿಗೂ ಗೊತ್ತಿಲ್ಲ. ನಮ್ಮ ಹಡಗು ಅದರೊಳಗಿರುವ ನಮ್ಮ ಅತಿಮೌಲ್ಯವಾದ ಜೀವಾತ್ಮನನ್ನು ಪರಲೋಕಕ್ಕೂ ದೇವರ ಸನ್ನಿಧಾನದಲ್ಲಿ ಪರಮಪದಕ್ಕೂ ಸುರಕ್ಷಿತವಾಗಿ ಯಾನಮಾಡಿ ರೇವನ್ನು ಸೇರಿಸುವದೋ? ಈ ಹಡಗಿಗೆ ಬರುವ ಅಪಾಯವನ್ನು ಕಲ್ಪಿಸಿ ಅದನ್ನು ಮಧ್ಯಸಮುದ್ರದಲ್ಲಿ ಮುಳುಗಿಸಿ ಜೀವಾತ್ಮನನ್ನು ನಾಶನಕ್ಕೆ ಗುರಿಮಾಡುವ ಒಂದು ವಿಧವಾದ ಮುಖ್ಯ ಗಂಡಾಂತರಕ್ಕೆ ಬಹು ಎಚ್ಚರಿಕೆಯಾಗಿರಬೇಕೆಂದು ನಮಗೆ ತೋರುತ್ತದೆ. ಅದೇನೆಂದರೆ, ಪಾಪವೇ. ಈ ಬಂಡೆಗಳು ನಮ್ಮ ದೇಹವೆಂಬ ಹಡಗಿಗೆ ತಗುಲಿ ನಮಗೂ ತಿಳಿಯದ ಹಾಗೆ ಅದರಲ್ಲಿ ರಂಧ್ರಗಳನ್ನು ಕೊರೆಸಿ ಕಡೆಕಡೆಗೆ ಈ ದುರ್ಬಲವಾದ ಹಡಗು ರೇವನ್ನು ಮುಟ್ಟುವುದಕ್ಕೆ ಮುಂಚೆ ಮುಳುಗಿಹೋಗುವ ಹಾಗೆ ಮಾಡುವುದರಲ್ಲಿ ಸಂದೇಹವಿಲ್ಲ. ಪಾಪದಿಂದಲ್ಲವೇ ಈ ದೇಹಕ್ಕೂ ಆತ್ಮಕ್ಕೂ ರೋಗ, ದುಃಖ, ಅಸಮಾಧಾನ, ಅಪವಿತ್ರತೆಗಳು ಸಂಭವಿಸಿ ಮರಣಕ್ಕೆ ನಾವು ತುತ್ತಾಗಿದ್ದೇವೆ? ಹಾಗಾದರೆ ಇಂಥಾ ಅಪಾಯವಾದ ಬಂಡೆಗಳನ್ನು ನಮಗೆ ತೋರಿಸಿ ನಮ್ಮ ಹಡಗಿಗೆ ಅಪಾಯವಿಲ್ಲದಂತೆ ಭದ್ರವಾಗಿ ರೇವನ್ನು ತೋರಿಸುವ ಲೈಟ್ ಹೌಸ್ ಈ ದೇಹವೆಂಬ ಹಡಗಿಗೆ ಇಲ್ಲವೇ? ಇದೆ. ಅದೇ ನಿಜವಾದ ಶಾಸ್ತ್ರ ಮತ್ತು ಸದ್ಗುರು, ಸತ್ಯವೇದವು — "ನಿನ್ನ ವಾಕ್ಯವೇ ನನ್ನ ಪಾದಕ್ಕೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ" ಎಂದು ಹೇಳುತ್ತದೆ. ಭಕ್ತನು ಗಂಡಾಂತರದಲ್ಲಿ ಬೀಳದ ಹಾಗೆ ಈ ದೀಪದ ಬೆಳಕನ್ನು ನಿತ್ಯವೂ ಪಡೆಯಬೇಕು. ಸದ್ಗುರುವಾದ ಯೇಸುಸ್ವಾಮಿಯು ಕತ್ತಲಲ್ಲಿ ತಿರುಗಾಡುವವರಿಗೆ—"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿರುವನು" ಎಂದು ಹೇಳಿದ್ದಾನೆ. ವಾಚಕರೇ ನಿಮಗೀ ಬೆಳಕು ಬೇಡವೇ?

ಮರಾಠಿಯವರ ವಿದ್ಯಾರ್ಥಿನಿಲಯವು

ಬೆಂಗಳೂರು ಬಸವನಗುಡಿಯಲ್ಲಿ ಪ್ರಾರಂಭವಾದದ್ದು.

ಬೆಂಗಳೂರು ಸಿಟಿಯ ಬಸವನ ಗುಡಿ ಎಂಬ ಬಡಾವಣೆಯಲ್ಲಿ ಹಿಂದಿನ ಭಾನುವಾರ ಒಂದು ವಿದ್ಯಾರ್ಥಿನಿಲಯವು ಪ್ರಾರಂಭಿಸಲ್ಪಟ್ಟಿತು. ಇತರ ಕಡೆಗಳಿಂದ ವಿದ್ಯಾಭ್ಯಾಸಂಗ ಮಾಡುವುದಕ್ಕಾಗಿ ಬೆಂಗಳೂರಿಗೆ ಹೋಗತಕ್ಕ ಬಡ ಮರಾಠಿ ಬಾಲಕರಿಗೋಸ್ಕರ ಈ ವಿದ್ಯಾರ್ಥಿನಿಲಯವನ್ನು ಏರ್ಪಡಿಸಿರುತ್ತಾರೆ. ಇಂಥಾ ಒಂದು ನಿಲಯವನ್ನು ಕಲ್ಪಿಸಬೇಕೆಂದು ಆ ಪಟ್ಟಣದಲ್ಲಿ ಜವಾಹಿರಿ ವ್ಯಾಪಾರ ನಡಿಸುತ್ತಿದ್ದು ಕಾಲವಾದ ಮೆ॥ ವೆಂಕಟರಾಯರು ಉದ್ದೇಶಪಟ್ಟು ತಮ್ಮ ಆಸ್ತಿಯಲ್ಲಿ ೪೦,೦೦೦ ರೂಪಾಯನ್ನು ಸರ್ಕಾರದಲ್ಲಿ ಇಡಬೇಕೆಂದೂ, ಅದರ ಬಡ್ಡಿಯಿಂದ ನಿಲಯವನ್ನು ಶಾಶ್ವತವಾಗಿ ನಡಿಸಿಕೊಂಡು ಬರಬೇಕೆಂದೂ ತಿಳಿಸಿದ್ದರು. ಅವರ ಇಷ್ಟಾರ್ಥವನ್ನು ನೆರವೇರಿಸುವುದಕ್ಕೆ ಒಂದು ಕಮಿಟಿಯು ಏರ್ಪಡಾಯಿತು. ಈ ಕಮಿಟಿಯಲ್ಲಿ ಮೆ॥ ಮುಕೋಜೀರಾಯರು ಪ್ರೆಸಿಡೆಂಟರಾಗಿಯೂ, ಮೆ॥ ... ರಾಯರು ಸೆಕ್ರೆಟರಿಯಾಗಿಯೂ ಇದ್ದಾರೆ. ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನವರು ಆ ಕಮಿಟಿಯವರ ಪ್ರಾರ್ಥನೆಯನ್ನು ಲಾಲಿಸಿ, ವಿದ್ಯಾರ್ಥಿನಿಲಯಕ್ಕಾಗಿ ಬಸವನಗುಡಿಯಲ್ಲಿ ಜಮೀನನ್ನು ದಯಪಾಲಿಸಿದರು. ಸದ್ಯದಲ್ಲಿ ಈ ನಿಲಯವನ್ನು ಒಂದು ಬಾಡಿಗೆ ಮನೆಯಲ್ಲಿ ನಡಿಸುತ್ತಿದ್ದಾರೆ. ಇದನ್ನು ಪ್ರಾರಂಭಮಾಡಿದ ದಿನ ಬೆಂಗಳೂರು ಸಿಟಿಯಿಂದಲೂ ದಂಡಿನಿಂದಲೂ ಬಹುಜನ ಮರಾಟ ದೊಡ್ಡ ಮನುಷ್ಯರೂ ಇತರರೂ ಹೋಗಿದ್ದರು. ಮೆ॥ ಮುಕೋಜೀರಾವ್ ಸಿಂಧಿಯವರು ವಿದ್ಯಾರ್ಥಿನಿಲಯವನ್ನು ಯಥಾವಿಧಿಯಾಗಿ ಪ್ರಾರಂಭಿಸಿ, ಹತ್ತು ಮಂದಿ ಮರಾಟ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರು. ಡೆಪ್ಯುಟಿ ಪೊಲೀಸ್ ಇನ್‌ಸ್ಪೆಕ್ಟರಾದ ಮೆ॥ ಹನುಮಂತರಾಯರು ಸಭಿಕರನ್ನು ಕುರಿತು ಕೆಲವು ವಾಕ್ಯಗಳನ್ನು ಹೇಳಿದರು. ... ಮೆ॥ ವೆಂಕಟರಾಯರ ಅಭಿಲಾಷೆಯನ್ನು ಸಾರ್ಥಕಪಡಿಸುವುದಕ್ಕಾಗಿ ಈ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದೆ. ಮೈಸೂರು ಗವರ್ನ್‌ಮೆಂಟಿನವರು ಉದಾರಭಾವದಿಂದ ಇದಕ್ಕೆ ಜಮೀನನ್ನು ದಯಪಾಲಿಸಿದ್ದಕ್ಕಾಗಿ ಅವರನ್ನು ಬಹುವಾಗಿ ವಂದಿಸಿಕೊಂಡರು. ಈಗ ಈ ಜಮೀನಿನಲ್ಲಿ ಸಾಧ್ಯವಾದಷ್ಟು ಸಹಾಯವನ್ನೊದಗಿಸಿಕೊಂಡು ವಿದ್ಯಾರ್ಥಿನಿಲಯವನ್ನು ಕಟ್ಟಬೇಕಾಗಿರುತ್ತದೆ. ಈ ಕಾರ್ಯಭಾರವು ನಮ್ಮ ಮೇಲೆ ಬಿದ್ದಿರುತ್ತದೆ. ಅದು ತ್ವರಿತವಾಗಿ ನಡೆಯುವುದಕ್ಕಾಗಿ ಮೆ॥ ವೆಂಕಟರಾಯರು ೪,೦೦೦ ರೂಪಾಯಿ ಮೂಲಧನವನ್ನು ಕೊಟ್ಟಿರುತ್ತಾರೆ. ಸಭಿಕರೂ ನಮ್ಮ ಸಂಗಡದ ಮುಖಂಡರೂ ಕಟ್ಟಡಕ್ಕೆ ದ್ರವ್ಯ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ರೀತಿಯಾಗಿ ಅವರು ಹೇಳಿದ ಮೇಲೆ ಒಂದು ಚಂದಾ ಪಟ್ಟಿಯು ತಯಾರಾಯಿತು. ಆ ದಿವಸ ಅಲ್ಲಿ ಸೇರಿದ್ದ ಮಹನೀಯರು ೧,೦೦೦ ರೂಪಾಯನ್ನು ಚಂದಾ ಕೊಡುವುದಾಗಿ ವಾಗ್ದಾನ ಮಾಡಿದರು. ಶ್ರೀಮನ್ಮಹಾರಾಜರವರಿಗೆ ಜಯವಾಗಲೆಂದೂ ವಿದ್ಯಾರ್ಥಿನಿಲಯವು ವಿಸ್ತೃತವಾಗಿ ನಡೆಯಲೆಂದೂ ಸಭಿಕರು ಕೋರಿ, ಆ ದಿನದ ಸಭೆಯನ್ನು ಮುಕ್ತಾಯಮಾಡಿದರು.

ಜಮೀನ್ದಾರರು ತಿಳಿಯಬೇಕಾದ ವಿಷಯಗಳು

ಹೊಲಕ್ಕೆ ನೀರುಹಾಯಿಸಿ ಬೆಳೆಯುವುದು

ಮಧ್ಯಪ್ರಾಂತ್ಯಗಳ ವ್ಯವಸಾಯ ಇಲಾಖೆಯವರು ಗೋಧಿ ಬೆಳೆಗೆ ನೀರು ಹಾಯಿಸುವ ವಿಧಾನವನ್ನು ರೈತರಿಗೆ ತೋರಿಸಿಕೊಡುತ್ತಾರೆ. ಈ ಕ್ರಮವು ಇಲ್ಲಿ ರೈತರಿಗೆ ಗೊತ್ತೇ ಇಲ್ಲ. ಬತ್ತಕ್ಕೆ ನೀರುಕಟ್ಟುವಂತೆಯೇ ಗೋಧಿಗೂ ಜಾಸ್ತಿ ನೀರು ಕಟ್ಟಿ ಪೈರನ್ನು ಹಾಳುಮಾಡಿಕೊಂಡಿರುತ್ತಾರೆ. ಈಗ ಎರಡು ವರ್ಷಗಳಿಂದಲೂ ರೈತರಿಗೆ ಕ್ರಮವಾಗಿ ನೀರು ಹಾಯಿಸುವ ಮಾರ್ಗವನ್ನು ತೋರಿಸಿಕೊಡುತ್ತಿರುವ ಪ್ರಯುಕ್ತ ನೀರು ಹಾಯಿಸಿ ಬೆಳೆ ಮಾಡುವವರಿಂದ ಹುಲ್ಲು ಮತ್ತು ಧಾನ್ಯದ ಉತ್ಪತ್ತಿಯು ವಿಶೇಷವಾಗಿ ಹೆಚ್ಚುತ್ತಿದೆಯೆಂಬ ಅಂಶವು ರೈತರ ಮನಸ್ಸಿಗೆ ನಾಟುತ್ತದೆ. ಅನೇಕ ಸ್ಥಳಗಳಲ್ಲಿ ಈ ಇಲಾಖೆಯವರು ನೀರು ಹಾಯಿಸಿಯೂ ನೀರು ಹಾಯಿಸದೆಲೂ ಈ ಬೆಳೆಯನ್ನಿಟ್ಟು ನೋಡಿದ್ದರಲ್ಲಿ ನೀರು ಹಾಯಿಸಿದ ತಾಕಿನಲ್ಲಿ ಉತ್ಪತ್ತಿಯು ಮತ್ತೊಂದು ತಾಕಿನಲ್ಲಾದದ್ದಕ್ಕಿಂತಲೂ ಸ್ವಲ್ಪ ಹೆಚ್ಚು ಕಡಮೆ ಎರಡರಷ್ಟು ಜಾಸ್ತಿಯಾಗಿರುತ್ತದೆ.

ಫಲದ ವಸಾಯದಲ್ಲಿ ತಿದ್ದುಪಾಟುಗಳು

ಫಲವ್ಯವಸಾಯವು ಹೀನಸ್ಥಿತಿಯಲ್ಲಿರುವುದಕ್ಕೆ ಕಾರಣವೇನೆಂದರೆ ಈ ವ್ಯವಸಾಯದಲ್ಲಿ ಹಣ್ಣಿನ ಉತ್ಪತ್ತಿಯನ್ನು ಜಾಸ್ತಿಮಾಡಬೇಕೆಂಬುವದು ಪ್ರಾಧಾನ್ಯವಾಗಿದ್ದೇ ಹೊರತು ಅದರ ಗುಣವನ್ನು ಉತ್ತಮೋತ್ತಮ ಪಡಿಸುವದರಲ್ಲಿ ಗಮನ ಕಡಮೆ. ಹೆಚ್ಚಾಗಿ ಉತ್ತಮ ರಕಂ ಹಣ್ಣುಗಳನ್ನು ಬಿಡುವ ಗಿಡಗಳನ್ನು ಚುನಾಯಿಸಿ ಬೆಳೆಯುವದರಲ್ಲಿ ಪ್ರಯತ್ನ ನಡೆದರೆ ಒಳ್ಳೇದು. ಹೇಗೆಂದರೆ, ಈ ರೀತಿ ಚುನಾಯಿಸದೆ ಒಂದೇ ಜಾತಿ ಹಣ್ಣನ್ನು ಏಕಪ್ರಕಾರವಾಗಿ ಬೆಳೆಯುವದರಿಂದ ಅದರ ಗುಣವು ಕ್ರಮೇಣ ಕುಂದಿ ಹೋಗುವದು. ಇತರ ದೇಶಗಳಲ್ಲಿಯಾದರೋ ಚುನಾವಣೆಯ ಮೂಲಕವೂ ಮತ್ತು ಕಸಿ ಮಾಡುವದರ ಮೂಲಕವೂ ಉತ್ತಮ ರಕಂ ಹಣ್ಣುಗಳನ್ನು ಬೆಳೆಯಲು ಸದಾ ಪ್ರಯತ್ನಗಳು ನಡೆಯುತ್ತಿವೆ ಮತ್ತು ಹೊಸ ರಕಂ ದೊರೆಯುತ್ತಲೇ ಇದನ್ನು ವೃದ್ಧಿಪಡಿಸುತ್ತಾರೆ. ಆದಕಾರಣ ಆ ದೇಶಗಳಲ್ಲಿ ಹಣ್ಣಿನ ರಕಂ ದಿನೇ ದಿನೇ ಉತ್ತಮವಾಗುತ್ತಿದೆ. ಇಲ್ಲಿಯಾದರೋ ಈ ಭಾಗದಲ್ಲಿ ಗಮನ ಕೊಡದಿರುವದರಿಂದ ಕೀಳಾಗುತ್ತಿದೆ. ಇಲ್ಲಿನ ವ್ಯವಸಾಯ ಕ್ರಮಗಳಲ್ಲಿರುವ ಇತರ ನ್ಯೂನತೆಗಳನ್ನು ಸರಿಪಡಿಸುವದು ಅವಶ್ಯಕ. ಅನೇಕ ಕಡೆಗಳಲ್ಲಿ ಕೆಲವು ತೋಟಗಳು ಕಸ, ಗೊಬ್ಬರ, ಅಗತೆ ಮುಂತಾದವುಗಳನ್ನು ಕಂಡೇ ಇರುವದಿಲ್ಲ. ಯೂರೋಪಿಯನ್ ದೇಶಗಳಲ್ಲಿ ಹಣ್ಣು ಬೆಳೆಯುವವರು ವಿಶೇಷ ಗಮನ ಕೊಡುವ ಅಂಶಗಳ್ಯಾವುವೆಂದರೆ —(೧) ಗಿಡದಿಂದ ಗಿಡಕ್ಕೆ ಎಷ್ಟು ದೂರ ಬಿಟ್ಟಿರಬೇಕು, (೨) ಚೆನ್ನಾಗಿ ಉಳುಮೆ ಮಾಡುವದು, ಹಸುರು ಗೊಬ್ಬರವಾಗುವ ಪೈರುಗಳನ್ನಿಟ್ಟು ಉತ್ತು ಬಿಡುವದು, ಭೂಮಿಯ ಮೇಲೆ ಹುಲ್ಲು ಹೊದಿಕೆಯನ್ನು ಕಲ್ಪಿಸುವದೇ ಮೊದಲಾದ ಉಪಾಯಗಳಿಂದ ಭೂಮಿಯನ್ನು ಹಸಿಯಾಗಿ ಸ್ಥಿತಿಯಲ್ಲಿಡುವದು, (೩) ಕಸಿ ಕ್ರಮ, (೪) ಚೀಕೋಳವೆಯ ಉಪಯೋಗ—ಅಂದರೆ, ರೋಗತಗಲಿದ ಅಥವಾ ಹುಳು ಬಿದ್ದ ಗಿಡಗಳಿಗೆ ಔಷಧಿ ದ್ರಾವಕಗಳನ್ನು ಈ ಕೊಳವೆಗಳ ಮೂಲಕ ಎರಚುವದು, (೫) ಹೆಚ್ಚು ಕಾಯಿಗಳು ಬಿಟ್ಟಿದ್ದರೆ ಅವುಗಳನ್ನು ಉದುರಿ ಕೆಳಗೆ ಬೀಳುವದು. ಈ ಪೈಕಿ ಒಂದು ಮತ್ತು ಎರಡನೇ ಅಂಶಗಳನ್ನು ಈ ದೇಶದವರು ಸ್ವಲ್ಪ ತಿಳಿದಿರಬಹುದು. ಮಿಕ್ಕವುಗಳ ಪ್ರಾಮುಖ್ಯತೆಯನ್ನು ಇವರು ಸರಿಯಾಗಿ ಅರಿತಿರುವದಿಲ್ಲ. ಬೂಜು ಮತ್ತು ಹುಳುಗಳಿಂದುಂಟಾಗುವ ರೋಗಗಳನ್ನು ತಪ್ಪಿಸುವದಕ್ಕೆ ಇವರು ತಕ್ಕ ಪರಿಹಾರಗಳನ್ನು ತಿಳಿದಿರುವದಿಲ್ಲವಾದಕಾರಣ ಪ್ರತಿಸಾಲಿನಲ್ಲಿಯೂ ಸುರಿದ ಮೇಲೂ ಮರದಿಂದ ಇಳಿಸಿದನಂತರವೂ ಕೋಟ್ಯಂತರ ಹಣ್ಣುಗಳು ಕೊಳೆತು ನಾಶವಾಗುತ್ತಿವೆ. ಇಲ್ಲಿ ಹಣ್ಣು ಬೆಳೆಯುವ ಪ್ರದೇಶದ ಭೂಮಿಯು ಸ್ವಾಭಾವಿಕವಾಗಿ ಅಷ್ಟು ನಿಕೃಷ್ಟವಾದದ್ದಲ್ಲ. ಈ ಭೂಮಿಗಳನ್ನು ಒಳ್ಳೇ ಸ್ಥಿತಿಗೆ ತಂದು ಗಿಡಗಳನ್ನು ಉತ್ತಮರೀತಿಯಲ್ಲಿ ಬೆಳಸಿದ್ದಾದರೆ ವಿಶೇಷ ಅನುಕೂಲವಾದೀತು. ಮುಖ್ಯವಾಗಿ ಭೂಮಿಗಳನ್ನು ಹದವನ್ನು ಮಾಡಿ ಶ್ರೇಷ್ಠ ರಕಂ ಹಣ್ಣುಗಳನ್ನು ಚುನಾಯಿಸಿ ಬೆಳೆಯುವದು, ತಕ್ಕ ಗೊಬ್ಬರಗಳನ್ನು ಬುದ್ಧಿವಂತಿಕೆಯಿಂದ ಉಪಯೋಗಿಸುವದು, ಮತ್ತು ಉತ್ತಮ ತರಹಾ ವ್ಯವಸಾಯ ಕ್ರಮಗಳನ್ನು ರೂಢಿಸಿರುವದು, ಈ ಮೂರು ಮಾರ್ಗಗಳಲ್ಲಿ ತಿದ್ದುಪಾಟುಗಳು ಸಧ್ಯ ನಡೆಯಬೇಕಾಗಿರುತ್ತದೆ. ಬೆಳೆಯುವ ಕಡೆಗಳಿಂದ ವ್ಯಾಪಾರ ಸ್ಥಳಗಳಿಗೆ ಹಣ್ಣುಗಳನ್ನು ಅನೇಕವಾಗಿ ಸರಿಯಾದ ಸ್ಥಿತಿಯಲ್ಲಿ ಕಳುಹಿಸುವದಿಲ್ಲವಾದ್ದರಿಂದ ಅವುಗಳಿಗೆ ಒಳ್ಳೆ ಬೆಲೆ ದೊರೆಯುವದಿಲ್ಲ. ಹಣ್ಣುಗಳಾಗಲಿ ಅಥವಾ ಇತರ ಯಾವ ವ್ಯಾಪಾರದ ಸರಕುಗಳಾಗಲಿ, ಬೆಳೆಯುವವನು, ಸ್ಥಳದಿಂದ ಸ್ಥಳಕ್ಕೆ ಸಾಗಿಸುವವನು, ದಲ್ಲಾಳಿ, ಚಿಲ್ಲರೆ ವ್ಯಾಪಾರಿ ಮತ್ತು ಉಪಯೋಗಿಸುವವನು, ಈ ಐದು ಜನಗಳ ಕೈ ದಾಟಬೇಕು. ಮತ್ತು ಈ ಐದು ಜನರು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿದರೇನೇ ವ್ಯಾಪಾರವು ಚುರುಕಾಗುತ್ತದೆ. ಹೇಗೆಂದರೆ, ಬೆಳೆಯುವವನು ಹಣ್ಣುಗಳನ್ನು ಒಳ್ಳೇದು ಕೆಟ್ಟದ್ದು, ಚಿಕ್ಕದು ದೊಡ್ಡದು, ಈ ರೀತಿ ತರಗತಿವಾರು ವಿಂಗಡಿಸಿ ಚೆನ್ನಾಗಿ ಪ್ಯಾಕು ಮಾಡಿ ಕಳುಹಿಸಿದರೆ, ದಲ್ಲಾಳಿಯು ಒಳ್ಳೇ ಗಿರಾಕಿ ಒದಗಿಸುತ್ತಾನಲ್ಲದೆ, ಚಿಲ್ಲರೆ ವ್ಯಾಪಾರಿಯು ಮತ್ತು ತಿನ್ನುವವನೂ ಸಹ ತೃಪ್ತಿಪಡುತ್ತಾರೆ. ಮುಖ್ಯವಾಗಿ, ತಿನ್ನತಕ್ಕವರು ಉತ್ತಮ ರಕಂ ಹಣ್ಣುಗಳನ್ನೇ ಉಪಯೋಗಿಸುತ್ತಾ ಬಂದಲ್ಲಿ ಬೆಳೆಯುತಕ್ಕವರಿಗೂ ಒಳ್ಳೇ ಹಣ್ಣುಗಳನ್ನೇ ಬೆಳೆಯಲು ಪ್ರೋತ್ಸಾಹ ಉಂಟಾದೀತು.

ಮೈಸೂರು ಗೆಜೆಟ್ ಸಂಗ್ರಹ.

ತಿಮ್ಮಪ್ಪನ ಹಳ್ಳಿ ಪಟೇಲ್ ಮೆ॥ ವಿರೂಪಣ್ಣನವರನ್ನು ಚಳ್ಳಕೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕವಾಗಿದೆ.

ಹೊಳಲ್ಕೆರೆಯಲ್ಲಿರುವ ಮೆ॥ ಎಲ್ ಶ್ರೀನಿವಾಸರಾಯರನ್ನು ದಾವಣಗೆರೆ ತಾಲ್ಲೂಕು ಬೋರ್ಡಿನ ... ಮೆಂಬರಾಗಿ ನೇಮಕ ಮಾಡಿದೆ.

ಚಿತ್ರದುರ್ಗದ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಬಿ ರಾಮಸ್ವಾಮಯ್ಯನವರಿಗೆ ಕೊಟ್ಟಿದ್ದ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳದೆ ಹೋದದ್ದರಿಂದ ಅದನ್ನು ರದ್ದುಮಾಡಿದೆ.

ಬೆಂಗಳೂರು ಸರ್ಕಲ್ ಸ್ಕೂಲುಗಳ ಇನ್‌ಸ್ಪೆಕ್ಟರ್ ಮೆ॥ ಟಿ ಆರ್ ವೆಂಕಟಸ್ವಾಮಿಯಯ್ಯಂಗಾರ್ಯರಿಗೆ ಪೂರಾ ಸಂಬಳದ ಮೇಲೆ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಫಾರೆಸ್ಟ್ ಸರ್ವೆ ಸೂಪರಿಂಟೆಂಡೆಂಟ್ ಮೆ॥ ಟಿ ಇ ಎಂ ಕ್ಲಾಡಿಯಸ್‌ರವರು ರಜದಿಂದ ವಾಪಸು ಬಂದು ಆಗಸ್ಟ್ ತಾ ೨೬ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಎನ್ ರಾಮಚಂದ್ರರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಜೈಲ್ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಮೆ॥ ಟಿ ಎನ್ ಸಂಜೀವಪ್ಪನವರಿಗೆ ... ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ. ... ಜೈಲ್ ಆವರಣದೊಳಗೆ ಚಲಾಯಿಸತಕ್ಕದ್ದು. ಮತ್ತು ಅವರು ಛಡಿ ಶಿಕ್ಷೆಯನ್ನು ವಿಧಿಸುವ ಅಧಿಕಾರ ವಹಿಸಲ್ಪಟ್ಟಿದಾನೆ.

ಲೆಫ್ಟಿನೆಂಟ್ ಕರ್ನಲ್ ಆರ್ ಜಿ ಜೋನ್ಸ್‌ರವರನ್ನು ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಯಾಗಿ ನೇಮಕಮಾಡಿದೆ.

ಪೊಲೀಸ್ ಅ॥ ಸೂಪರಿಂಟೆಂಡೆಂಟರಾದ ಮೆ॥ ಎಂ ಪಿ ವಿಶ್ವನಾಥರಾಯರನ್ನು ಆ ಕೆಟಗರಿಯ ದರ್ಜೆಯಲ್ಲಿ ಜೂಲೈ ೧ರ ಲಾಗಾಯತು ೫ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಪೊಲೀಸ್ ಅ॥ ಸೂಪರಿಂಟೆಂಡೆಂಟರಾದ ಮೆ॥ ಎಸ್ ನಾರಾಯಣರಾಯರನ್ನು ಆ ಕೆಟಗರಿಯ ದರ್ಜೆಯಲ್ಲಿ ಜೂಲೈ ೧ರ ಲಾಗಾಯತು ೫ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಅ॥ ಚೀಫ್ ಇಲೆಕ್ಟ್ರಿಕಲ್ ಇಂಜನಿಯರ್ ಮೆ॥ ಆರ್ ಸಿ ಎಂ ಕ್ಯಾಲ್ವರ್ಟ್‌ರವರನ್ನು ಮೆ॥ ಎಚ್ ಪಿ ಗಿಬ್ಸ್‌ರವರ ಗೈರಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಚೀಫ್ ಇಲೆಕ್ಟ್ರಿಕಲ್ ಇಂಜನಿಯರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೆ॥ ಆರ್ ಸಿ ಎಂ ಕ್ಯಾಲ್ವರ್ಟ್‌ರವರು ತಾ ೪ರಲ್ಲಿ ಚೀಫ್ ಇಲೆಕ್ಟ್ರಿಕಲ್ ಇಂಜನಿಯರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ಡಿಪ್ಯುಟಿ ಚೀಫ್ ಇಂಜನಿಯರ್ ಮತ್ತು ಅಂಡರ್ ಸೆಕ್ರೆಟರಿ ಕೆಲಸಕ್ಕೆ ಒಬ್ಬರನ್ನು ನೇಮಕ ಮಾಡುವ ತನಕ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರ ಚೀಫ್ ಅಸಿಸ್ಟೆಂಟರಾದ ಮೆ॥ ಎಂ ಶಿಂಗಾರವೇಲು ಮೊದಲಿಯಾರ್ರಿಗೆ ಡಿಪ್ಯುಟಿ ಚೀಫ್ ಇಂಜನಿಯರ್ ಮತ್ತು ಅಂಡರ್ ಸೆಕ್ರೆಟರಿ ಆಫೀಸಿನ ಕರೆಂಟ್ ಕೆಲಸದ ಛಾರ್ಜನ್ನು ವಹಿಸಲಾಗಿದೆ.

ಕೆಪಿನ್ಸೂ ಕಚೇರಿ ... ರವರ ಪರ್ಸನಲ್ ಅಸಿಸ್ಟೆಂಟರಾದ ಅ॥ ಇಂಜನಿಯರ್ ಮೆ॥ ಟಿ ಪಿ ಲಕ್ಷ್ಮಣರಾಯರನ್ನು ತುಮಕೂರು ಡಿವಿಜನ್‌ಗೆ ಹೆಡ್ ಕ್ವಾರ್ಟರ್ ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಲ್ಪಟ್ಟಿದೆ.

ಅರಮನೆ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಆರ್ ಶ್ರೀನಿವಾಸಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಸರ್ಕಾರದ ಹುಕುಮುಗಳು

ಪರಸ್ಪರ ಸಹಾಯಕ ಸಂಘಗಳಿಗೆ ಪ್ರೋತ್ಸಾಹವು

ಮೈಸೂರು ಸೀಮೆಯಲ್ಲಿ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ರೈತಾಪಿ ಜನಗಳಿಗೆ ವ್ಯವಸಾಯಸಂಬಂಧವಾಗಿ ಏರ್ಪಾಡಾಗಿನ ಪರಸ್ಪರ ಸಹಾಯ ಸಂಘಗಳ ಮೇಲ್ವಿಚಾರಣೆಗೋಸ್ಕರ ಸರಿಯಾದ ತಿಳುವಳಿಕೆಯುಳ್ಳ ಜನರು ದೊರೆಯುವುದು ಅಶಕ್ಯವಾಗಿರುವುದರಿಂದಲೂ, ಇಂಥಾವರು ಇಲ್ಲದ್ದರಿಂದ ಸಂಘಗಳ ಕೆಲಸಗಳು ಕ್ರಮಪ್ರಕಾರ ನಡಿಸಲು ಆಗದೆ ಅನೇಕ ತಪ್ಪುಗಳು ಉಂಟಾಗುವುದಾಗಿಯೂ, ಹಾಲಿ ಇಟ್ಟಿರುವ ಕೋ ಆಪರೇಟಿವ್ ಸೊಸೈಟಿಗಳ ಆಡಿಟರು ಪ್ರೋತ್ಸಾಹಕರು ಇದ್ದರೂ ಇವರಿಗಿಂತಲೂ ಸ್ವಲ್ಪ ಕಮ್ಮಿ ದರ್ಜೆಯವರಾಗಿ ರೈತಾಪಿ ಜನರಲ್ಲಿ ಸಂಕೋಚವಿಲ್ಲದೆ ಸೇರಿ ಅವರ ಅಹವಾಲ್ ವಿಚಾರಿಸಿ ಸಂಘಗಳನ್ನು ನಡಿಸುವ ಆವಶ್ಯಕವಾದ ಬುದ್ಧಿಮಾರ್ಗವನ್ನು ಹೇಳುತ್ತಾ ಆಗಿಂದಾಗ್ಗೆ ರೆಜಿಸ್ಟ್ರಾರರಿಂದ ಸೊಸೈಟಿಗಳಿಗೆ ಬರುವ ಹುಕುಂಗಳನ್ನು ವಿಶದವಾಗಿ ತಿಳಿಸಲು ಅನುಕೂಲವಾಗಿರುವಂಥಾ ತಾಲ್ಲೂಕು ಶಿರಸ್ತೆಗೆ ಕಮ್ಮಿ ಇಲ್ಲದ ಗೌರವವಾದ ಸರ್ಕಾರದ ನೌಕರಿಯಲ್ಲಿದ್ದು ಹಾಲಿ ಪೆನ್‌ಷನ್‌ದಾರರಾಗಿ ಜನಗಳಿಗೆ ಸಹಾಯ ಮಾಡಲು ಉತ್ಸಾಹ ಹಾಗು ಶಕ್ತಿಯುಳ್ಳವರಾಗಿ ಮುಂದಾಳಾಗಿ ಸೊಸೈಟಿಯ ಅಭಿವೃದ್ಧಿಗೆ ಸಹಾಯಮಾಡಲು ಬರುವಂಥಾವರನ್ನು ರೆಜಿಸ್ಟ್ರಾರವರು ನೇಮಿಸಬಹುದೆಂದೂ ಮತ್ತು ಅಂಥಾವರು ಮಾಡುವ ಕೆಲಸಕ್ಕೆ ತಮ್ಮ ಸ್ವಂತ ಖರ್ಚು ಬೀಳದಂತೆ ಅವರಿಗೆ ಒಂದು ರೂಪಾಯಿಗೆ ಮೀರದ ಭತ್ಯವನ್ನು ರಿಜಿಸ್ಟ್ರಾರರು ಕೊಡಬಹುದೆಂದೂ ಗವರ್ನ್‌ಮೆಂಟಿನವರು ಹುಕುಂ ಮಾಡಿರುತ್ತಾರೆ. ಈ ಪ್ರಕಾರ ಸಹಾಯಮಾಡಲು ಅನೇಕರು ಮುಂದಾಗಿ ಬರುವರೆಂದು ಕೋರಲ್ಪಟ್ಟಿರುತ್ತದೆ.

ಸರ್ಕಾರದ ಹುಕುಮುಗಳು

ಸರ್ಕಾರದವರು ಮಾಡಿದ ನಿಬಂಧನೆಗಳನ್ನೂ ಮುಖ್ಯವಾದ ಸರ್ಕಾರೀ ಹುಕುಮುಗಳನ್ನೂ ಜನಗಳು ತಿಳಿದುಕೊಳ್ಳುವುದಕ್ಕೆ ಅನುಕೂಲಿಸುವಂತೆ ಸರ್ಕಾರದವರು ಮಾಡಿದ ಏರ್ಪಾಡುಗಳನ್ನು ಜನಗಳು ಸಾಕಾದಷ್ಟು ಮಟ್ಟಿಗೆ ಉಪಯೋಗಿಸಿಕೊಳ್ಳದೆ ಇರುವುದರಿಂದ ಸದರಿ ಏರ್ಪಾಡನ್ನು ಮುಂದೂ ನಡೆಯುವಂತೆ ಹುಕುಂ ಮಾಡುವುದು ಆವಶ್ಯಕವಿಲ್ಲವೆಂತ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ರಿಪೋರ್ಟಿನಿಂದ ತಿಳಿಯಬರುತ್ತದೆ. ಆದಕಾರಣ ಸರ್ಕಾರೀ ಹುಕುಮುಗಳ ಕನ್ನಡ ಪ್ರತಿಗಳ ಮಾರಾಟವನ್ನು ಇನ್ನು ಮುಂದೆ ಮೌಕೂಫ್ ಮಾಡತಕ್ಕದ್ದು.

ಮುಖ್ಯವಾದ ಹುಕುಮುಗಳನ್ನು ಕನ್ನಡಕ್ಕೆ ತರ್ಜುಮೆಮಾಡಿ ಸರ್ಕಾರೀ ಕನ್ನಡ ಗೆಜೆಟ್ಟಿನಲ್ಲಿ ಪ್ರಕಟಿಸತಕ್ಕದ್ದಲ್ಲದೆ ಸರ್ಕಾರೀ ಹುಕುಮುಗಳಲ್ಲಿ ಆಯಾ ಸೂಚಿಸಿದ ಮೇರೆಗೆ ರೆವಿನ್ಯೂ ಕಮಿಷನರವರ ಯುಕ್ತಾನುಸಾರವಾಗಿ ರೆವಿನ್ಯೂ ವ್ಯವಸಾಯ ಗೆಜೆಟ್ಟಿನಲ್ಲಿಯೂ ಪ್ರಕಟಿಸತಕ್ಕದ್ದು.

ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸುವಂಥಾ ಸರ್ಕಾರೀ ಹುಕುಮುಗಳ ಇಂಗ್ಲೀಷ್ ಪ್ರತಿಗಳ ಪೈಕಿ ಆರ ಪ್ರತಿಗಳನ್ನು ಮಾತ್ರ ಮಾರಾಟದ ಬಗ್ಗೆ ಸರ್ಕಾರೀ ಬುಕ ಡಿಪೋವಿಗೆ ಕಳುಹಿಸಬೇಕು. ಆ ಪೈಕಿ ಮಾರಾಟವಾಗದ ಪ್ರತಿಗಳನ್ನು ಆರು ತಿಂಗಳಿಗೆ ಒಂದಾವರ್ತಿ ಚೀಫ್ ಸೆಕ್ರೆಟೇರಿಯಟ್ ಆಫೀಸಿಗೆ ಅಲ್ಲಿಂದ ವಾಪಸು ಕಳುಹಿಸಬೇಕು.

ಮಾರಾಟವಾಗದೆ ಬುಕ್ ಡಿಪೋವಿನಲ್ಲಿ ಹಾಲಿ ಇರುವ ಸಿಲ್ಕು ಪ್ರತಿಗಳ ಪೈಕಿ ಮುಂದೆ ಗಿರಾಕಿ ಬಂದರೆ ಮಾರುವುದಕ್ಕಾಗಿ ಪ್ರತಿಯೊಂದು ಹುಕುಮಿನ ಪ್ರತಿಗಳಲ್ಲಿಯೂ ಆರು ಪ್ರತಿಗಳನ್ನು ಬುಕ ಡಿಪೋವಿನಲ್ಲಿ ದಾಸ್ತಾನು ಇಟ್ಟುಕೊಂಡು ಬಾಕಿ ಪ್ರತಿಗಳನ್ನು ಮೇಲೆ ಹೇಳಿದ ಪ್ರಕಾರ ಸೆಕ್ರೆಟೇರಿಯಟ್ ಆಫೀಸಿಗೆ ವಾಪಸು ಕಳುಹಿಸಬೇಕು.

ಪ್ರಜೆಗಳು ಮತ್ತು ಜಿಲ್ಲಾ ಬೋರ್ಡಿನ ಮೆಂಬರ್ [illegible]

ಸಂಸ್ಥಾನದಲ್ಲಿ ಆ ವರ್ಷಕ್ಕೆ ಒಂದು ವರ್ತಿ ವ್ಯವಸಾಯಕ್ಕೆ ಸಂಬಂಧಪಟ್ಟ ಜಾನುವಾರುಗಳ ಸೆನ್ಸಸ್ಸನ್ನು ತೆಗೆಯುವ ಬಗ್ಗೆ ಸರ್ಕಾರದ ಹುಕುಮಿನಲ್ಲಿ ವಿಧಿಸಿದ ಏರ್ಪಾಡಿನ ಮೇರೆಗೆ ೩ನೆ ಪಂಚವಾರ್ಷಿಕ ಸೆನಸಸ್ಸು ಚಾಲ್ತಿ ಕ್ಯಾಲೆಂಡರ್ ಸಾಲಿನಲ್ಲಿ ಬರುತ್ತದೆ. ಸಂಸ್ಥಾನದ ಜನಸಂಖ್ಯೆಯನ್ನು ಕುರಿತು ಹತ್ತು ವರ್ಷಕ್ಕೆ ಒಂದಾವರ್ತಿ ತೆಗೆಯತಕ್ಕ ಸೆನಸಸ್ಸನ್ನು ೧೯೨೧ನೇ ಇಸವಿಯ ಮಾರ್ಚಿನಲ್ಲಿ ತೆಗೆಯಬೇಕಾಗಿದೆ. ಮನೆ ಗಳನ್ನು ಎಣಿಸುವ ಎಣಿಕೆಗಾರರನ್ನೂ ಸೂಪರ್‌ವೈಜರುಗಳನ್ನೂ ನೇಮಕಮಾಡುವ ಬಗ್ಗೆ ಸುರುವಿನಲ್ಲಿ ಮಾಡಬೇಕಾದ ಏರ್ಪಾಡುಗಳೂ, ಕಟ್ಟಡಗಳ ಮತ್ತು ಅವುಗಳಲ್ಲಿ ವಾಸಮಾಡುವ ಜನಗಳ ವಿಷಯದಲ್ಲಿ ಲೆಕ್ಕವಾಗಿ ಸುರುವಿನಲ್ಲಿ ಲೆಕ್ಕವನ್ನು ತಯಾರುಮಾಡುವುದೂ ಸಹ ಈ ಎರಡು ಸೆನ್‌ಸಸ್ಸುಗಳಿಗೂ ಒಂದೇ ಆಗಿರುವುದರಿಂದ ಮುಂದೆ ಬರುವ ಜನರಲ್ ಸೆನಸಸ್ಸನ್ನೂ ವ್ಯವಸಾಯದ ಜಾನುವಾರುಗಳ ಸೆನಸಸ್ಸನ್ನೂ ಸೇರಿಸಿ ಒಂದೇ ದಫ ತೆಗೆಯಬಹುದೇ ಎಂಬ ವಿಷಯದಲ್ಲಿ ಅವರವರ ಅಭಿಪ್ರಾಯವನ್ನು ಕಳುಹಿಸಬೇಕೆಂತ ರೆವಿನ್ಯೂ ಕಮಿಷನರನ್ನೂ ಇತರ ಆಫೀಸರುಗಳನ್ನೂ ಕೇಳಲಾಗಿ, ಈ ವಿಷಯದಲ್ಲಿ ರೆವಿನ್ಯೂ ಕಮಿಷನರು ಅಭಿಪ್ರಾಯಪಡುವುದೇನೆಂದರೆ:— ದನಗಳ ಸೆನ್‌ಸಸ್ಸನ್ನು ೧೯೨೧ ನೇ ಜನವರಿ ಮಾಹೆಯಲ್ಲಿ ತೆಗೆಯಬೇಕಾಗುತ್ತೆ, ಆಗ್ಗೆ ಹಬ್ಬಗಳ ಕಾಲವಾದುದರಿಂದ ದನಗಳನ್ನು ಮನೆಗಳಿಂದ ಹೊರಗೆ ತೆಗೆದುಕೊಂಡು ಹೋಗಬಹುದು. ಆದ್ದರಿಂದ ಚಾಲ್ತಿ ಸಾಲಿನ ನವಂಬರ್ ತಿಂಗಳಲ್ಲಿ ದನಗಳ ಸೆನ್‌ಸಸ್ಸನ್ನು ತೆಗೆಯುವುದು ಉತ್ತಮ, ಇದೂ ಅಲ್ಲದೆ ಈಚೆಗೆ ಕಾಲವ್ಯತ್ಯಾಸವು ಕೆಟ್ಟುಹೋದುದರಿಂದಲೂ ಸಾಂಕ್ರಾಮಿಕ ಜಾಡ್ಯಗಳು ಪ್ರಬಲವಾದುದರಿಂದಲೂ ಅನೇಕ ದನಗಳು ಸತ್ತುಹೋಗಿರುವಕಾರಣ ಈ ಸಾಲಿನಲ್ಲಿ ದನಗಳ ಸೆನಸಸ್ಸನ್ನು ತೆಗೆಯುವುದು ಅತ್ಯವಶ್ಯಕವಾಗಿರುತ್ತದೆ ಎಂಬದಾಗಿ ಅಭಿಪ್ರಾಯಪಡುತ್ತಾರೆ.

ಆದರೆ ವ್ಯವಸಾಯದ ಜಾನುವಾರುಗಳ ಸೆನಸಸ್ಸನ್ನು ನವಂಬರಿನಲ್ಲಿ ತೆಗೆಯುವುದನ್ನೂ ಮುಂದೆ ತೆಗೆಯುವ ಭಾಗದಲ್ಲಿ ಈ ಸಾಲಿನ ಖಾನೇಷುಮಾರಿ ಕಾಲದಲ್ಲಿ ಜಾನುವಾರುಗಳನ್ನು ಎಣಿಕೆಮಾಡಿ ಅದರ ಫಲಿತಾಂಶವನ್ನು ಪ್ರತಿ ಡಿಸ್ಟ್ರಿಕ್ಟಿಗೂ ಬೇರೆಬೇರೆಯಾಗಿ ಬರೆದು ಪ್ರಕಟಿಸುವ ಬಗ್ಗೆ ವಿಶೇಷ ಗಮನಕೊಡುವಂತೆ ಡೆಪ್ಯುಟಿ ಕಮಿಷನರುಗಳಿಗೆ ಬರೆಸಬೇಕೆಂತ ರೆವಿನ್ಯೂ ಕಮಿಷನರು ಸೂಚಿಸುತ್ತಾರೆ.

ಈ ವಿಷಯವಾಗಿ ಎಲ್ಲಾ ಆಫೀಸರುಗಳೂ ಕೊಟ್ಟ ಅಭಿಪ್ರಾಯಗಳನ್ನು ಪರ್ಯಾಲೋಚಿಸಿ ನೋಡಿದ್ದರಲ್ಲಿ ವ್ಯವಸಾಯದ ಜಾನುವಾರುಗಳ ಸೆನ್‌ಸಸ್ಸನ್ನೂ ೧೯೨೦ ನೇ ನವಂಬರ್ ಅಥವಾ ಡಿಸೆಂಬರ್ ಮಾಹೆಯಲ್ಲಿ ನಡೆಯುವ ಜನರಲ್ ಸೆನ್‌ಸಸ್ಸನ್ನೂ ಸೇರಿಸಿ ಈ ಎರಡನ್ನೂ ಒಂದೇ ಆವರ್ತಿ ತೆಗೆದುಕೊಂಡರೆ ವ್ಯವಸಾಯ ಕೆಲಸಕ್ಕೆ ಸಂಬಂಧಪಟ್ಟ ಲೆಕ್ಕಗಳು ಸಾಮಾನ್ಯ ಗ್ರಾಮಚಾವಡಿಯಿಂದಾಗಲಿ ಚಾಲ್ತಿ ಸಾಲಿನಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾಗಿ ಏರ್ಪಡಿಸತಕ್ಕ ಸೆನಸಸ್ಸಿನಿಂದಾಗಲಿ ದೊರೆಯಲ್ಪಡತಕ್ಕ ಲೆಕ್ಕಗಳಿಗಿಂತ ಕರಾರುವಾಕ್ಕಾಗಿಯೂ ಸ್ವಲ್ಪ ಖರ್ಚಿನಿಂದಲೂ ಒದಗುವುವೆಂದು ತೋರುತ್ತದೆ. ಈ ಸಂಸ್ಥಾನದ ಪ್ರಜೆಗಳು ವ್ಯವಸಾಯ ಮತ್ತು ಇತರ ವಿಷಯಗಳಲ್ಲಿ ಎಷ್ಟು ಮಟ್ಟಿಗೆ ಅಭಿವೃದ್ಧಿಯ ಸ್ಥಿತಿಗೆ ಬಂದಿರುತ್ತಾರೆಂಬದಾಗಿ ಸದರಿ ಖಾನೇಷುಮಾರಿಯಿಂದ ತಿಳಿದುಕೊಳ್ಳುವುದರಲ್ಲಿ ಈ ಲೆಕ್ಕಗಳು ಬಹಳ ಪ್ರಯೋಜನಕಾರಿಯಾಗಿರುತ್ತವೆ.

ಆದಕಾರಣ ವ್ಯವಸಾಯಕ್ಕೆ ಸಂಬಂಧಪಟ್ಟ ಜಾನುವಾರುಗಳ ವಿಷಯವಾಗಿ ಮುಂದೆ ತೆಗೆಯತಕ್ಕ ಸೆನ್‌ಸಸ ಲೆಕ್ಕವನ್ನು ಪ್ರಾಥಮಿಕ ಯಾ ಮುಖ್ಯ ಜನರಲ್ ಸೆನಸಸ್ಸಿನ ಸಂಗಡಲೇ ತೆಗೆಯಬೇಕೆಂತ ಸರ್ಕಾರದವರು ಹುಕುಂ ಮಾಡುತ್ತಾರೆ. ಈ ಎರಡು ಸೆನಸಸ್ಸು ಲೆಕ್ಕಗಳನ್ನೂ ಹ್ಯಾಗೆ ಸೇರಿಸಬೇಕೆಂಬ ಬಗ್ಗೆ ಅವುಗಳ ಫಲಿತಾಂಶಗಳನ್ನು ಪ್ರಕಟಿಸತಕ್ಕ ಬಗ್ಗೆ ಸದರಿ ಸೆನ್‌ಸಸ್ಸನ್ನು ತೆಗೆಯುವ ಕಾಲದಲ್ಲಿ ಹುಕುಂ ಕೊಡಲಾಗುವುದು.

ಈ ಲೆಕ್ಕಗಳು ಒದಗಬೇಕಾದರೆ ಇನ್ನೂ ಕೆಲವುಕಾಲ ಹಿಡಿಯುವಕಾರಣ ರೆವಿನ್ಯೂ ಕಮಿಷನರವರು ಸೂಚಿಸುವ ಪ್ರಕಾರ ಚಾಲ್ತಿ ಸಾಲಿನ ಖಾನೇಷುಮಾರಿ ಕಾಲದಲ್ಲಿ ವ್ಯವಸಾಯದ ಜಾನುವಾರು ವಗೈರೆಗಳನ್ನೂ ಸರಿಯಾಗಿ ಲೆಕ್ಕಮಾಡಿ ಅದರ ಫಲಿತಾಂಶಗಳನ್ನು ಪುನರ್ವಿಮರ್ಶೆ ಸಮೇತ ಡಿಸ್ಟ್ರಿಕ್ಟುವಾರಾಗಿ ಪ್ರಕಟಿಸಬೇಕೆಂತ ಸರ್ಕಾರದವರು ಹುಕುಂ ಮಾಡುತ್ತಾರೆ.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

[ಶ್ರೇಯೋಭಿಲಾಷಿ, [illegible] —ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ —ಎಡಿ]

ಕರೆಸ್‌ಪಾಂಡೆನ್ಸ್

ತಗಣೆಯನ್ನು ನಾಶಪಡಿಸಲು ಅನುಭವಸಿದ್ಧವಾದ ಔಷಧವು

ಅಯ್ಯಾ,

ಸೀಬೇಕಾಯಿಯ ಸೊಪ್ಪನ್ನು ತಂದು ಮನೆಯಲ್ಲಿ ರಾತ್ರಿ ಹೊತ್ತು ಹಾಸಿಗೆ ಸುತ್ತಲೂ ಹಾಕಿಕೊಂಡು ಮಲಗಿಕೊಳ್ಳಬೇಕು. ಇದೇ ರೀತಿಯಲ್ಲಿ ನೆ ವಲು ದಿವಸದ ಸೊಪ್ಪನ್ನೇ ೩-೪ ದಿವಸಗಳ ವರೆಗೂ ಚೆನ್ನಾಗಿ ಬಾಡುವ ವರೆಗೆ ಗೋಡೆಗಳ ಮಗ್ಗುಲಲ್ಲಿಯೂ, ಹಾಸಿಗೆ ಸುತ್ತಲೂ ಹಾಕಿ ಮಲಗುತ್ತಾ ಬರಬೇಕು. ಈ ಸೊಪ್ಪಿನಿಂದ ಒಂದು ತರಹಾ ವಾಸನೆ ಬರುತ್ತೆ. ಈ ವಾಸನೆಗೆ ತಗಣೆಗಳು ಸತ್ತುಹೋಗುತ್ತೆ. ಅನಂತರ ಇದೇ ಬಾಡಿದ ಸೊಪ್ಪನ್ನು ಮನೆಯಲ್ಲೆಲ್ಲಾ ಚೆನ್ನಾಗಿ ಹೊಗೆ ಹಾಕಬೇಕು. ಹೊಗೆ ಹಾಕಿದ ಕಾಲದಲ್ಲಿ ಮನೆಯಲ್ಲಿ ಯಾರೂ ಇರಕೂಡದು. ಕಣ್ಣಿಗೆ ಬಹು ಕೆಡಕು ಆಗುತ್ತದೆ. ಮನೆಗೆ ಚೆನ್ನಾಗಿ ಹೊಗೆ ಹಾಕಿದ ನಂತರ ಮನೆಯ ಬಾಗಿಲು ಕಿಟಕಿಗಳನ್ನೂ ಸಂದು ಗೊಂದುಗಳನ್ನೂ ಚೆನ್ನಾಗಿ ಮುಚ್ಚಿ ಮನೆಯಿಂದ ಹೊರಗೆ ಸ್ವಲ್ಪ ಹೊತ್ತಿದ್ದು ಮನೆಯ ಬಾಗಿಲು ತೆಗೆದರೆ ತಗಣೆಗಳು ಸತ್ತುಹೋಗುತ್ತವೆ. ಈ ಔಷಧ ಬಹಳ ಅಗ್ಗವಾದದ್ದೂ ಅನುಭವಸಿದ್ಧವಾದದ್ದೂ ಆಗಿದೆ. ಇದನ್ನು ಇತರರಿಗೂ ಪ್ರಯೋಜನವಾಗಲೆಂದು ತಿಳಿಸಿರುತ್ತೇನೆ. ತಾವು ದಯಮಾಡಿ ತಮ್ಮ ಪತ್ರಿಕಾ ಮುಖಾಂತರ ವಾಚಕ ಮಹಾಶಯರುಗಳಿಗೆ ತಿಳಿಯಬೇಕಾಗಿ ಪ್ರಾರ್ಥನೆ.

ಆರ್. ಶ್ರೀನಿವಾಸರಾವ್

[illegible] ಸಮಾಚಾರಗಳು

ಅಯ್ಯಾ,

ಈ ಚನ್ನಪಟ್ಟಣದ ಪೇಟೆಯಲ್ಲಿ ಟ್ರಿಬ್ ರೈಲ್ವೇ ಸ್ಟೇಷನಿಗೆ ಸಮೀಪದಲ್ಲಿರುವ ಮಿ ಪಟ್ಟದ ರೈಸ್ ಫ್ಯಾಕ್ಟರಿ [illegible] ಈ ತಾರೀಖು ೧೧ನೇ ಗುರುವಾರ ರಾತ್ರಿ ಕಳ್ಳರು ಹೊಕ್ಕು [illegible] ಕನ್ನ ಹಾಕಿ ಒಳಗೆ ನುಗ್ಗಿ ಪೆಟ್ಟಿಗೆ ಬೀಗ ಮುರಿದು ಒಳಗೆ ಇದ್ದ ೩೦-೪೦ ರೂಪಾಯಿನ್ನೂ, ಒಂದು ಗಡಿಯಾರವನ್ನೂ, ಚಿನ್ನದ ಸರ ಕಳ್ಳ ಕಾಗದ ಪತ್ರ ಮುಂತಾದವನ್ನೂ ಕಳವು ಮಾಡಿರುತ್ತಾರೆ. ಇಂಥಾ ನಡುಬೀದಿಯಲ್ಲಿ ಪೋಲೀಸ್ ಸ್ಟೇಷನ್ ಎದುರಿಗಿರುವ ಅಂಗಡಿಯಲ್ಲೇ ಈ ರೀತಿ ಕಳ್ಳತನದಲ್ಲಿ ಸಂದುಗೊಂದುಗಳ ಅಂಗಡಿಮನೆಗಳ ಗತಿ ಏನು? ಇದರಿಂದ ಪೋಲೀಸಿನವರ ಬೀಟು ರಾತ್ರಿವೇಳೆ ಬಹಳ ಚೆನ್ನಾಗಿ ನಡೆಯುವುದಿಲ್ಲವೆಂದು ವ್ಯಕ್ತವಾಗುತ್ತದೆ. ಸ್ವಲ್ಪ ದಿನಗಳ ಕೆಳಗೆ ಇಲ್ಲಿಂದ ವರ್ಗವಾದ ಇನ್ಸ್‌ಪೆಕ್ಟರ್ ನಟರಾಜೈಯರವರೂ, ದಫೇದಾರ್ ಮನ್ನಾಜರಾಯರೂ ಇರುವಾಗ್ಗೆ ಇಂಥಾ ಕನ್ನಕಳವು ಸ್ವಪ್ನಪ್ರಾಯವಾಗಿ ಪ್ರಜೆಗಳ ಸ್ವತ್ತು ಸಂರಕ್ಷಣೆಗೆ ತುಂಬಾ ಸಹಾಯವಾಗಿತ್ತು. ಇಲ್ಲಿನವರ ದುರ್ಭಾಗ್ಯ ವರಾತ್ ಈಗ ತಲೆ ಹಾಕಿದೆ. ಈಗ ಇಲ್ಲಿಗೆ ಬಂದಿರುವ ಇನ್ಸ್‌ಪೆಕ್ಟರೂ ತುಂಬಾ ಸಾಹಸವಂತರೆಂದು ಕೇಳುತ್ತೇವೆ. ಆದಾಗ್ಯೂ ತಮ್ಮ ಪ್ರಭಾವವನ್ನು ತೋರಿಸದೆ ಇರುವುದಕ್ಕಾಗಿ ವಿಷಾದಿಸುತ್ತೇವೆ. ಇನ್ನುಮೇಲಾದರೂ ಇನ್ಸ್‌ಪೆಕ್ಟರವರು ಮತ್ತು ಜಮಾದಾರ್, ದಫೇದಾರ್ ಮೊದಲಾದ ಪೋಲೀಸಿನವರು ತುಂಬಾ ಮುತುವರ್ಜಿ ವಹಿಸಿ ರಾತ್ರಿವೇಳೆ ಸರಿಯಾದ ಬೀಟು ಏರ್ಪಾಡು ಮಾಡಿದರೆ ಇತರ ಕಡೆಗಳಲ್ಲಾದರೂ ಈ ರೀತಿ ಕಳವು ನಡೆಯುವುದು ತಪ್ಪಿ ಅನುಕೂಲವಾಗುತ್ತೆ.

ಇಲ್ಲಿನ ಮುನಿಸಿಪಲ್ ದೀಪಗಳ ಕಂಟ್ರಾಕ್ಟರು ದವರ್ಗೀಯವಾಗಿ ದೀಪಗಳನ್ನು ಹಚ್ಚುತ್ತಲಿರುವಂತೆ ಕಾಣುತ್ತದೆ. ಇದರಿಂದ ತಿರುಗಾಡುವವರಿಗೆ ಬಹಳ ತೊಂದರೆಯಾದಾಗ್ಯೂ ಕಳ್ಳರಿಗೆ ತುಂಬಾ ಸಹಾಯವಾಗಿದೆ. ನಮ್ಮ ವೈಸ್‌ಪ್ರೆಸಿಡೆಂಟರು ದಯಮಾಡಿ ಈ ಮಳೆಗಾಲದಲ್ಲಿ ಸರಿಯಾಗಿ ದೀಪಗಳ ಏರ್ಪಾಡು ಮಾಡಿಸಿಯಾರೆಂದು ಪ್ರಾರ್ಥಿಸುತ್ತೇವೆ.

ಪಟ್ಟಣವಾಸಿ

ಒಕ್ಕಲಿಗರ ಮಕ್ಕಳ ವಿದ್ಯಾಭ್ಯಾಸ ವಿಚಾರವು

ಅಯ್ಯಾ,

ಈ ಭರತಖಂಡದಲ್ಲಿರುವ ಅನೇಕ ಮತದವರು ತಮ್ಮ ಮತಗಳನ್ನು ಪ್ರಕಾಶಪಡಿಸುವದಕ್ಕೋಸ್ಕರ ಅನೇಕ ಪಾಠಶಾಲೆ ಮುಂತಾದ ಸಭೆಗಳು ನಡಿಸಿ ಚಂದಾ ವಸೂಲಿಯಿಂದ ತಮ್ಮ ಮತದ ಬಡವರ ಮಕ್ಕಳಿಗೆ ವಿದ್ಯೆಯನ್ನು ಕಲಿಸುವದಕ್ಕೋಸ್ಕರ ಅನೇಕ ಏರ್ಪಾಟು ಮಾಡಿ ವಿದ್ಯಾವಂತರನ್ನು ಮಾಡಿ ಕೀರ್ತಿಪಡೆಯುತ್ತಾ ಇದ್ದಾಗ್ಯೂ ನಮ್ಮ ಮೈಸೂರು ದೇಶದ ಒಕ್ಕಲಿಗರು ಮಾತ್ರ ಏನೊಂದು ಕಾರ್ಯವನ್ನೂ ನಡಿಸದೆ ತಮ್ಮ ಮಕ್ಕಳನ್ನು ಕುರಿಗಳೋಪಾದಿಯಲ್ಲಿ ಬೆಳಸಿಕೊಂಡು ವಿದ್ಯೆಯನ್ನು ಕಲಿಸದೆ ಇರುವದು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಈಗ ಹಾಲಿ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿಯವರ ಶ್ರದ್ಧೆಯಿಂದ ಅನೇಕ ಪ್ರಯತ್ನಗಳನ್ನು ಮಾಡಿ ಒಕ್ಕಲಿಗರ ಮಹಸ್ಥರನ್ನು ಸೇರಿಸಿ ಮಹಾಸಭೆಯನ್ನು ಏರ್ಪಡಿಸಿ ತಮ್ಮ ಮತದಲ್ಲಿ ಕೇವಲ ಬುದ್ಧಿಹೀನರಾದ ಬಡವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಸಾವಿರಾರು ರೂಪಾಯಿ ಚಂದಾ ಕೂಡಿಸಿ ನಡೆಸುತ್ತಿರುವ ಘನವಾದ ಏರ್ಪಾಡುಗಳನ್ನು ನೋಡಿ ಮಹೋನ್ನತವಾದ ಮೈಸೂರು ಸೀಮೆಯ ಇತರ ಭಾಗದ ಒಕ್ಕಲಿಗರುಗಳು ತಾವು ಸಹ ಸ್ವಾಭಿಮಾನದಿಂದ ಹಾಕಿ ಈ ಪ್ರಾಂತ್ಯದ ಕೇವಲ ವಿದ್ಯಾವಿಹೀನ ಸ್ಥಿತಿಯಲ್ಲಿರುವ ಬಡ ಒಕ್ಕಲಿಗರ ಮಕ್ಕಳಿಗಾಗಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಏರ್ಪಡಿಸಿರುವ ಹಾಗೆಯೇ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಒಕ್ಕಲಿಗರ ಸಂಘವನ್ನೇರ್ಪಡಿಸಿ ಈ ನಮ್ಮ ನಾಡು ಪ್ರಾಂತ್ಯದಲ್ಲಿರುವ ಸಾಧಾರಣವಾಗಿ ಜನಸಮೂಹವಿರುವ ಪ್ರತಿ ಗ್ರಾಮಗಳಲ್ಲಿಯೂ ಮುಖ್ಯ ಮುಖ್ಯ ಸ್ಥಳಗಳಲ್ಲಿಯೂ ಒಂದೊಂದು ಕನ್ನಡ ವಿದ್ಯಾಶಾಲೆಯನ್ನು ಏರ್ಪಡಿಸಿ ತದನಂತರ ತಮ್ಮ ಕುಲಕಸುಬಿಗೆ ಸಂಬಂಧಪಟ್ಟ ಕೈಗಾರಿಕೆ ವಿದ್ಯಾಶಾಲೆಯನ್ನು ಸ್ಥಾಪಿಸಿ ನಮ್ಮ ಬಾಲಕ ಬಾಲಿಕೆಯರನ್ನು ವಿದ್ಯಾವಂತರನ್ನು ಮಾಡಿ ಅವರಲ್ಲಿರುವ ದುರಾಚಾರಗಳನ್ನು ಹೋಗಲಾಡಿಸಿ ತಮ್ಮ ಆರೋಗ್ಯವಿಚಾರದಲ್ಲಿಯೂ ತಾವು ಹೇಗೆ ನಡೆದುಕೊಳ್ಳಬೇಕೆಂಬ ವಿಚಾರದಲ್ಲಿಯೂ ಕುಡಿತ ವ್ಯಭಿಚಾರ ಮುಂತಾದ ದುರಾಚಾರಗಳನ್ನು ತ್ಯಜಿಸಿ ಬೆಂಗಳೂರು ಒಕ್ಕಲಿಗರ ಸಂಘದವರು ನಡಿಸಿರುವ ಶ್ರೇಷ್ಠವಾದ ಮೇಲ್ಪಂಕ್ತಿಯನ್ನು ಅನುಸರಿಸುವಂತೆ ಮಾಡಿ ತಮ್ಮ ಕೀರ್ತಿಯನ್ನು ಇಹದಲ್ಲಿಯೂ ಪರದಲ್ಲಿಯೂ ಆಚಂದ್ರಾರ್ಕವಾಗಿ ನಿಲ್ಲುವಂತೆ ಮಾಡಿಯಾರೆಂದು ನಂಬುತ್ತೇನೆ.

ಒಬ್ಬ ಬಡ ಒಕ್ಕಲಿಗ

ಮೆ|| ಸಿ. ರಾಮಲಿಂಗ ರೆಡ್ಡಿಗಾರು

ಅಯ್ಯಾ,

ಇವರಿಗೆ ಮೈಸೂರು ಮಹಾರಾಜಾಸ್ ಕಾಲೇಜ್ ಹಿಸ್ಟರಿ ಪ್ರೊಫೆಸರ್ ಕೆಲಸವಾದದ್ದನ್ನು ಗೆಜೆಟ್ಟಿನಲ್ಲಿ ಓದಿದೆ. ಈ ವಿಷಾದರಿಂದ ಮೆ|| ರೆಡ್ಡಿಯವರಿಗೆ ಅನುಕೂಲವಾಗಿರಬಹುದಾದಾಗ್ಯೂ ಇವರನ್ನು ನೋಡಲಿನ ಅಧಿಕಾರದಿಂದ ತಪ್ಪಿಸಿದ್ದು ಈ ದೇಶದ ಪ್ರಜೆಗಳಿಗೆಲ್ಲಾ ಸಂಕಟವಾಗಿದೆ. ಕಾರಣವೇನೆಂದರೆ, ನಮ್ಮ ಮೈಸೂರು ದೇಶದಲ್ಲಿ ಅನೇಕ ಲಕ್ಷ ಪ್ರಜಾ ವಿದ್ಯೆಯಿಲ್ಲದೆ ಹಿಂದೆಬಿದ್ದು ಅವರ ಪೂರ್ವಿಕರು ಗಳಿಸಿಟ್ಟತಕ್ಕ ದ್ರವ್ಯವನ್ನು ಮನ್ಯವ್ಯಕ್ತಿಗಳಿಗೆ ಉಪಯೋಗಿಸುತ್ತಾ ದಿನೇ ದಿನೇ ಹೀನಸ್ಥಿತಿಗೆ ಬರುತ್ತಿದ್ದಾರೆ. ಎಲ್ಲಾ ವಿಷಯಗಳಲ್ಲೂ ಹಿಂದೆಬಿದ್ದು ವಿವೇಕವಿಲ್ಲದೆ ಕೆಡುತ್ತಿರುವ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡತಕ್ಕದ್ದು ಗವರ್ನಮೆಂಟಿನ ಪ್ರಥಮ ಕರ್ತವ್ಯವಾಗಿದೆ. ಈ ಜವಾಬ್ದಾರಿ ಅಲ್ಪಭಾಗ ವಿದ್ಯಾಹೀನರಾದ ಮಕ್ಕಳ ತಂದೆತಾಯಿಗಳಿಗೆ ಇರುತ್ತೆಂತ ಹೇಳಬಹುದು. ಆದರೆ ಆ ತಂದೆತಾಯಿಗಳಿಗಾಗಲೀ, ಅವರ ತಂದೆತಾಯಿಗಳಿಗಾಗಲೀ ವಿದ್ಯೆಯಿದ್ದರೆ [illegible] ಅವರಿಗೆ ಕೋಪ ಬರುವುದು. [illegible] ಇಲ್ಲ. ಮಂಕನಾಗಿ [illegible] ಹಿಂದೆ ನಡೆದು ಎಂಬುದೆ ಈಗಲೂ ನಡೆಯಲಿ ಎಂದು ಯೋಚಿಸುವವರಾದರೆ ಇದು ಹಿಂದಲ ಕಾಲದಂತೆ ಮೌಢ್ಯಕಾಲವಾಗಿ ಇಲ್ಲ.

ಗವರ್ನಮೆಂಟಿನವರು [illegible] ಎಲ್ಲಾ ಪ್ರಜೆಗಳೂ ಒಂದೇ ಸಮಾಚಾರ ಸಲ ಹೊಂದಲಿಕ್ಕೆ ಆಧಾರ [illegible] ರಾಜ್ಯಭಾರದ ಸೀರಿಯಲನ್ನು ಇಂಗ್ಲೀಷಿನವರು ನಮ್ಮ ದೇಶದಲ್ಲಿ ಸ್ಥಾಪಿಸಿದರೆ ಅದರ ಗಜಕ್ಕೆ ಎಲ್ಲಾ ಪ್ರಜೆಗಳಿಗೂ [illegible] ಒಂದೇ ಬಗೆಯ ಅಲ್ಪ ಪ್ರಜೆಯ [illegible] ಗವರ್ನಮೆಂಟಿನ ಒಳ್ಳೇ ಸಲಹೆಗಳಲ್ಲಾ ಹಿಂದೆಬಿದ್ದ ಪ್ರಜೆಗಳಲ್ಲಿ [illegible] ಇದರಿಂದ ಈ ಆಶಯವನ್ನು ಸಂಪಾದಿಸಬೇಕಾದರೆ ಒಂದೆ ಬಿಟ್ಟಿರತಕ್ಕವರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದದ್ದು ಮುಖ್ಯ ಕರ್ತವ್ಯವಾಗಿದೆ. ಈ ಕಾರಣಗಳಿಂದ ಈಗಿನ ಸ್ಥಿತಿ ನಮ್ಮ ದೇಶಕ್ಕೆ ಜಾತಿ ಪಕ್ಷಪಾತವಿಲ್ಲದ, ಪಕ್ಷಪಾತ ಬುದ್ಧಿಗೆ ಬಾರದ, ಹಿಂದೆಬಿದ್ದ ವಿದ್ಯಾಭಿವೃದ್ಧಿ ಇಲಾಖೆಗೆ ಒಬ್ಬ ಅಧಿಕಾರಿಯಾಗಬೇಕಾದದ್ದು ಬಹಳ ಆವಶ್ಯಕ. ಅದನ್ನೇ ಪ್ರಜೆಗಳು ಕೋರುತ್ತಿದ್ದದ್ದು. ಹಿಂದೆಬಿದ್ದ ಪ್ರಜೆಗಳ ಪುಣ್ಯೋದಯದಿಂದ ಸರ್ವಗುಣ ಸಂಪನ್ನರಾದ ಮೆ|| ರೆಡ್ಡಿಯವರು ಅಕಸ್ಮಾತ್ ಸಿಕ್ಕಿ, ಅವರನ್ನು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಿಸಿದ್ದು ದೇಶಕ್ಕೆಲ್ಲಾ ಪರಮ ಸಂತೋಷವಾಗಿ ಇತ್ತು. ಈಗ ಅವರಿಗೆ ಆ ಕೆಲಸವನ್ನು ತಪ್ಪಿಸಿ ಒಂದು ಕಾಲೇಜಿನಲ್ಲಿ ವಿದ್ಯಾಬೋಧಕರಾಗಿ ನೇಮಿಸಿದ್ದು ಆ ಕಾಲೇಜು ಇರತಕ್ಕ ಪ್ರದೇಶದ ಪ್ರೌಢ ವಿದ್ಯಾವಂತರಿಗೆ ಅನುಕೂಲವು. ಲೋಕಕ್ಕೆಲ್ಲಾ ಅನಾನುಕೂಲಪ್ರದವಾಗಿದೆ. ಆದ್ದರಿಂದ ಈ ಅನಾನುಕೂಲವನ್ನು ಯೋಚಿಸಿ ನಮ್ಮ ಗವರ್ನಮೆಂಟಿನವರು ಮೆ|| ರೆಡ್ಡಿಯವರನ್ನು ವಿದ್ಯಾಭಿವೃದ್ಧಿ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಎಡಿಕೇಷನಲ್ ಸೆಕ್ರೆಟರಿಯಾಗಿ ಮಾಡಿದರೆ ಹೆಚ್ಚು ಹೆಚ್ಚು ಕಾರಣವಾಗುತ್ತೆ. ಇದೇ ಪ್ರಜೆಗಳ ಕೋರಿಕೆ ಆಗಿದೆ.

ಪೆನ್‌ಷನ್ ಆಫೀಸರ್

ಸೋಮರಾಜಪೇಟೆ ವಿಕ್ಟೋರಿಯಾ ಕ್ಲಬ್

ಅಯ್ಯಾ,

ಈ ಕ್ಲಬ್ಬಿಗೆ ಮುಂಚೆ ವಿಕ್ಟೋರಿಯಾ ರೀಡಿಂಗ್ ರೂಂ ಎಂಬ ಹೆಸರಿತ್ತು. ಇಲ್ಲಿಗೆ ಹೊಸದಾಗಿ ನೇಮಕವಾದ ಮುನ್‌ಸೀಫ್ ಸಿ. ಮುತ್ತಣ್ಣನವರು ಬಂದ ನಂತರ ರೀಡಿಂಗ್ ರೂಂ ಎಂಬದನ್ನು ಬದಲಾಯಿಸಿ ವಿಕ್ಟೋರಿಯಾ ಕ್ಲಬ್ ಎಂಬ ಹೆಸರಿಟ್ಟು ಕೆಲವು ರೂಲ್ಸುಗಳನ್ನು ಏರ್ಪಾಡು ಮಾಡಿದರು. ಅದರ ಈಚೆಗೆ ಮೆಂಬರುಗಳು ಹೆಚ್ಚಾಗಿ ಸೇರುತ್ತಾ ಬಂದ ಕಾರಣ ಅಭಿವೃದ್ಧಿ ಹೊಂದುತ್ತಾ ಇದೆ. ಈ ಕ್ಲಬ್ಬಿಗೆ ಬ್ರಾಹ್ಮಣರು, ಕೊಡಗರು, ಮಹಮ್ಮದೀಯರು, ಕ್ರಿಶ್ಚಿಯನ್ನರು ಸಹ ಮೆಂಬರುಗಳಾಗಿ ಸೇರಿದರೆ. ಕಳೆದ ಕೊಡಗಿನ ಕೈಲ್‌ಮುಹೂರ್ತ ಹಬ್ಬದ ದಿವಸ ಕೊಡಗರಿಗೆ ಒಂದೇ ವೇಳೆಯಲ್ಲಿ ಟೀ ಪಾರ್ಟಿಯಾಯಿತು. ಈ ಸೆಪ್ಟಂಬರು ತಾ ೧೧ರಲ್ಲಿ ಕೊಡಗಿನ ತಂದು ಕೊಡಗರಿಗೆ ಒಂದು ಟೀ ಪಾರ್ಟಿ ಕೊಟ್ಟರು. ಅದರಲ್ಲಿ ಕೂಡ ಬ್ರಾಹ್ಮಣರು, ಕೊಡಗರು ಎಂಬ ಭೇದವಿಲ್ಲದೆ ಮಹಮ್ಮದೀಯರು, ಕ್ರಿಶ್ಚಿಯನ್ನರು ಸಮೇತ ಒಂದೇ ಮೇಜಿನಲ್ಲಿ ಅತಿ ವಿಜೃಂಭಣೆಯಿಂದ ಟೀ ಪಾರ್ಟಿ ನಡೆಯಿತು. ನಮ್ಮ ಹೊಸ ಮುನ್‌ಸೀಫ್ ಮೆ|| ಮುತ್ತಣ್ಣನವರು ಸುಮ್ಮನೆ ಮನ್ನಣೆಯ ಕ್ಲಬ್ಬನ್ನು ಕಟ್ಟಿಸಿ ಮಾಡಬೇಕೆಂದಲ್ಲದೆ ಎಲ್ಲರಲ್ಲಿ ಸಹೋದರ ಭಾವವನ್ನು ಉಂಟುಮಾಡಿದ್ದಕ್ಕಾಗಿ ತುಂಬಾ

ಸಂತೋಷಪಡಬೇಕಾಗಿದೆ. ಈ ಕ್ಲಬ್ಬಿನಲ್ಲಿ ಬಿಲಿಯರ್ಡ್ಸ್, ಇಸ್ಪೀಟು, ಪಗಡೆ, ಚದುರಂಗ, ಡೋಮಿನೊ, ಈ ಮೊದಲಾದ ಆಟಗಳು ರಾತ್ರಿ ೮ ಗಂಟೆ ವರೆಗೆ ನಡೆಯುತ್ತವೆ. ಈ ಕ್ಲಬ್ಬಿನ ಸೆಕ್ರೆಟರಿಗಳಾದ ಡಾಕ್ಟರ್ ಅಟ್ಟೆಯ್ಯನವರು, ಲಾಯರ್ ತಮ್ಮಯ್ಯನವರು ಸಹ ಬಹಳ ಉತ್ಸಾಹದಿಂದ ಕೆಲಸ ನಡೆಸುತ್ತಾ ಬರುತ್ತಾರೆ. ಈ ಕ್ಲಬ್ಬಿಗೆ ಸೇರುವ ಎಲ್ಲಾ ಮೆಂಬರುಗಳಿಗೆ ಸರಿಯಾಗಿ ಆಟ ಸಿಕ್ಕುವದಿಲ್ಲ. ಈ ವಿಷಯದಲ್ಲಿ ಇವರಿಗೆ ಸೂಚನೆ ಕೊಡಬೇಕಾಗಿದೆ. ಅದೇನೆಂದರೆ, ಇಲ್ಲಿ ಮುನ್ಸೀಫ್ ಕೋರ್ಟು ತೆರೆದ ಗ ಮೆ॥ ರಾಮಯ್ಯಪುಂಜರವರು ಮುನ್ಸೀಫರಾಗಿ ಬಂದರು. ಅವರು ಇಲ್ಲಿಂದ ವರ್ಗವಾಗಿ ಹೋದಾಗ ಅವರ ಹೆಸರಿನಲ್ಲಿ ಇದೇ ರೀಡಿಂಗ್ ರೂಮಿನಲ್ಲಿ ರಾಮಯ್ಯಪುಂಜರ ಲೈಬ್ರರಿ ಎಂಬದಾಗಿ ಒಂದು ಪುಸ್ತಕ ಭಂಡಾರವನ್ನು ಇಟ್ಟರು. ಅದು ಈಗಲೂ ಹಾಗೆಯೇ ನಡೆಯುತ್ತಿದೆ. ಅದರ ಮೇಲೆ ಮೆ॥ ಗೋಪಾಲರಾಯರು ಮುನ್ಸೀಫರಾಗಿ ಬಂದು ಕಳೆದ ಮಾರ್ಚ ತಿಂಗಳಲ್ಲಿ ರಿಟೈರಾಗಿ ಹೋದರು. ಆ ಕಾಲದಲ್ಲಿ ಅವರ ಹೆಸರಿನಲ್ಲಿ ಏನಾದರೂ ಒಂದು ಶಾಶ್ವತ ಕೆಲಸವನ್ನು ಮಾಡಬೇಕೆಂದು ಈ ತಾಲ್ಲೂಕಿನ ಜನರು ಉತ್ಸುಕ್ತರಾಗಿದ್ದು ಹಣ ಒದಗಿಸುವಂತೆ ಮೇಲ್ಕಂಡ ಲಾಯರ್ ತಮ್ಮಯ್ಯನವರನ್ನೂ, ಅಡಿಕೆ ನಂಜಪ್ಪಶೆಟ್ಟರನ್ನೂ, ವಿನ್ಲಹಸನ್ ಸಾಬರನ್ನೂ ಮೆಂಬರಾಗಿ ನೇಮಕ ಮಾಡಿದರು. ಅದೇ ಪ್ರಕಾರ ಅವರು ಹಣವನ್ನು ಜಮಾಯಿಸುತ್ತಿದ್ದರು. ಈ ಮಧ್ಯೆ ಏನು ಕಾರಣವೆಂಬುದೋ ಅದು ನಿಂತೇ ಹೋಯಿತು. ಈಗ ಅದರ ಸುದ್ದಿಯೇ ಇಲ್ಲ. ಇದಕ್ಕೆ ಕೆಲವರು ಹಣ ಕೊಟ್ಟಿರುತ್ತಾರೆ, ಕೆಲವರು ಕೊಟ್ಟಿಲ್ಲ. ವಸೂಲಾದ ಹಣ ಏನಾಯಿತೋ ಈಗ ಅದರ ಪ್ರಸಂಸೆಯೇ ಇಲ್ಲ. ಹೀಗಲ್ಲದರೂ ಮೆ॥ ಗೋಪಾಲರಾಯರ ಹೆಸರು ಮರೆತುಹೋಗದಂತೆ ಈಗ ವಸೂಲಾಗಿರುವ ಹಣವನ್ನೂ, ಇನ್ನೂ ಹಣ ಕೊಡುವುದಾಗಿ ವಾಗ್ದಾನ ಮಾಡಿದ ಮೆಂಬರುಗಳಿಂದ ಹಣ ವಸೂಲು ಮಾಡಿ ಅದನ್ನು ಕೂಡಿ ಇದೇ ಕ್ಲಬ್ಬಿನಲ್ಲಿ ಗೋಪಾಲರಾಯರ ಬಿಲಿಯರ್ಡ್ ಟೇಬಲ್ ಎಂಬ ಹೆಸರಿನಿಂದ ಒಂದು ಬಿಲಿಯರ್ಡ್ ಟೇಬಲ್ ಇಟ್ಟರಾಗಿ ಸಲ್ಲುತ್ತೇವೆ. ಹಾಗಾದರೆ ಈ ಇಕ್ಕೆಲಿಯೂ ಕ್ಲಬು ಇನ್ನೂ ಉಚಿತ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ. ಮೆ॥ ಗೋಪಾಲರಾಯರು ಈ ತಾಲ್ಲೂಕಿನ ಎಲ್ಲಾ ಜನರಿಗೂ ಪ್ರೀತಿಪಾತ್ರರಾಗಿದ್ದು ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಮೇಲೆ ಹೋದ ಈ ಪ್ರಸ್ತಾಪವನ್ನು ಮರೆತು ಬಿಡುವುದು ನಮ್ಮ ಪ್ರಕಾರ ಯುಕ್ತವಾದದ್ದಲ್ಲ.

ಕ್ಲಬ್ಬಿನ ಹಿತಚಿಂತಕ

ಪ್ರಜಾಪ್ರತಿನಿಧಿಗಳೂ ವಿದ್ಯಾಭ್ಯಾಸದ ಕ್ರಮಗಳೂ

ಅವ್ಯ...

ನಾನು ೩೦ ೫ ೮-೦೯ ನೇ ಪತ್ರಿಕೆಯಲ್ಲಿ ವಿದ್ಯಾಭ್ಯಾಸದ ಕ್ರಮಗಳ ವಿಷಯದಲ್ಲಿ ಕೆಲವು ಸೂಚನೆಗಳನ್ನು ಪ್ರಜಾಪ್ರತಿನಿಧಿಗಳ ಅವಗಾಹನೆಗೆ ತಂದದ್ದನ್ನು "ವಿದ್ಯಾಭಿಮಾನಿಗಳು" ತಾ. ೨-೯-೦೯ ನೇ ಪತ್ರಿಕೆಯಲ್ಲಿ ಬರೆದು ಕೆಲವು ಸೂಚನೆಗಳನ್ನು ಕೊಟ್ಟಿರುತ್ತಾರೆ. ಯಾವ ಸೂಚನೆಗಳೇ ಆಗಲಿ ಪ್ರಜೆಗಳಿಗೆ ಹಿತವಾಗಿಯೂ, ರೈತರನ್ನು ಅಭಿವೃದ್ಧಿಗೆ ತರುವವುಗಳಾಗಿಯೂ ಇದ್ದಲ್ಲಿ ಅಂಥವುಗಳನ್ನು ರೈತಪಕ್ಷಪಾತಿಗಳು ಅಂಗೀಕರಿಸಿ ಸರ್ಕಾರದಲ್ಲಿ ಅರಿಕೆಮಾಡಿ ಕೊಳ್ಳಬೇಕೆಂಬದೇ ನನ್ನ ಕೋರಿಕೆಯಾಗಿರುತ್ತದೆ.

ಸುಖಿವಸತಿಯಲ್ಲಿರುವ ವಿದ್ಯಾವಂತರಾದ ಮಹನೀಯರು ತಮಗೆ ಇರುವ ಅಲ್ಪ ಕಷ್ಟವನ್ನು ಅಧಿಕ ಪ್ರತಿಕೂಲತರವಾಗಿ ಭಾವಿಸುವ ಅಭಿಪ್ರಾಯವಲ್ಲ. ಮಾಸ್ತರುಗಳು ತಮಗಿರುವ ಕೊರತೆಯನ್ನು ಕುರಿತು ಪತ್ರಿಕೆಗಳಲ್ಲಿ ಪ್ರಕಟವಾಗಿ ಪ್ರಲಾಪಿಸುತ್ತಾ ಇದ್ದುದಲ್ಲದೆ ಅದಕ್ಕಾಗಿ ಒಂದು ಪುರಾಣವನ್ನು ರಚಿಸಿದ್ದು ಮತ್ತು ಇದೇ ಪತ್ರಿಕೆಯಲ್ಲಿ "ಎಲ್ಲಾ ಇಲಾಖೆಯಲ್ಲಿ ತಮ್ಮ ಸಂಬಳವಲ್ಲದೆ ಮೇಲೆ ಸಂಪಾದನೆಯುಂಟು. ಈ ಇಲಾಖೆಯಲ್ಲಿ ತಮ್ಮ ಸಂಬಳದಲ್ಲಿಯೇ ಜೀವಿಸಬೇಕಾಗಿದೆ" ಎಂದು ಬರೆದದ್ದು. ಆ ಬಗೆ ಮಹನೀಯರಿಗೆ ಗೊತ್ತೇ ಇದೆ. ಅದಕ್ಕೋಸ್ಕರ ಸರ್ಕಾರದವರು ೭ ರೂಪಾಯಿ ಸಂಬಳವನ್ನು ವಜಾಮಾಡಿ ೧೦ ರೂಪಾಯಿಗಳಿಗೆ ಬಡ್ತಿ ಮಾಡಿದರು.

ಆದರೆ ವಿದ್ಯಾವಿಹೀನರಾಗಿ ಕೂಲಿಯೇ ಬಾಳಿಲ್ಲದ ಪಶುಗಳಂತೆ ಮಳೆ ಗಾಳಿ ಮುಳಬಿಸಿಲಿನಲ್ಲಿ ಮಾನ ಮುಚ್ಚುವಷ್ಟು ಮೈಗೆ ಬಟ್ಟೆಬರೆ ಇಲ್ಲದೆ ಹೊಟ್ಟೆಗೆ ಸರಿಯಾದ ಆಹಾರವಿಲ್ಲದೆ ಒಂದು ದಿನವಾದರೂ ವಿರಾಮವಿಲ್ಲದ ದಿನ ೧೧ ಕ್ಕೆ ೧೭ ಘಂಟೆಗಳ ಹೊತ್ತು ಶ್ರಮಸಾಧ್ಯವಾದ ಕೆಲಸಗಳನ್ನು ಮಾಡಿಕೊಂಡ ತಮ್ಮ ಸಂಕಟಗಳನ್ನೆಲ್ಲಾ ತಮ್ಮ ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡು ಇರುವ ಬಡಪ್ರಜೆಗಳ ಗೋಳನ್ನು ವರ್ಣಿಸುವದಕ್ಕೆ ಜಗದೀಶನಿಗೂ ಅಸದಳವಾಗಿರುತ್ತದೆ. ಪರಿತಪ್ತರೂ ಸಹಿಷ್ಣುಗಳಾದ ರೈತರ ಕುಂದು ಕೊರತೆಗಳನ್ನು ಸರ್ಕಾರದವರು ಸಮಗ್ರವಾಗಿ ಕೇಳಿ ತಿಳಿದು ಕೊಳ್ಳಬೇಕೆಂದು ಪ್ರಜಾ ಪ್ರತಿನಿಧಿಸಭೆಯನ್ನು ಏರ್ಪಡಿಸಿರಾದರೆ ಈ ಸಭೆಯಲ್ಲಿ ರೈತರ ಕುಂದು ಕೊರತೆಗಳನ್ನು ಹೇಳಿಕೊಳ್ಳತಕ್ಕದ್ದು ಮುಖ್ಯ ಕರ್ತವ್ಯವಾಗಿರುತ್ತದೆ.

"ವಿದ್ಯಾಭಿಮಾನಿಗಳು" ತಮ್ಮ ೭—೮ ಸೂಚನೆಗಳಲ್ಲಿ "ಸ್ಕೂಲಿರುವ ಗ್ರಾಮದಲ್ಲಿ ೬ ವರ್ಷದಿಂದ ೧೦ ವರ್ಷಕ್ಕೆ ಒಳಪಟ್ಟಿರುವ ಬಾಲಕರೆಲ್ಲಾ ಸ್ಕೂಲಿಗೆ ಬಂದು ಓದಿಕೊಳ್ಳುವಂತೆ ನಿರ್ಬಂಧಕರವಾದ ಕಾನೂನು ಜಾರಿಗೆ ತರಬೇಕು. ಸ್ಕೂಲಿಗೆ ಅಕ್ರಮವಾಗಿ ಬಂದ, ಗೈರಹಾಜರಾದ, ತಪ್ಪು ಮಾಡಿದ ವಿದ್ಯಾರ್ಥಿಗೆ ದಿನ ೧ ಕ್ಕೆ ನಾಲ್ಕಾಣೆ ವರೆಗೆ ಜುಲ್ಮಾನೆ ವಿಧಿಸುವ ಅಧಿಕಾರವನ್ನು ಹೆಡ್ ಮಾಸ್ಟರಿಗೆ ಕೊಡಬೇಕು" ಎಂದು ಬರೆದಿದ್ದಾರೆ. ಈ ರೂಲು ಜಾರಿಗೆ ಬಂದರೆ ರೈತರು ತಮಗೆ ಬಾಧಿಸುತ್ತಿರುವ ಗುಪ್ತಕ್ಷಯ ರೋಗದ ಜೊತೆಗೆ ನಂಜು ಜ್ವರ ಸಂಘಟಿಸಿದಂತೆ ಆಗಿ ಕ್ಷಯಿಸಿ ಹೋಗುವದರಲ್ಲಿ ಸಂದೇಹವಿಲ್ಲ. "ವಿದ್ಯಾಭಿಮಾನಿಗಳು" ಸ್ಕೂಲ್ ಇಲಾಖೆಯಲ್ಲಿ ಇರಬಹುದಾದ್ದರಿಂದ ಅವರ ಸೂಚನೆಗಳನ್ನು ರೈತಹಿತಚಿಂತಕರು ಒಪ್ಪುವದಾದರೆ ಚರ್ಚೆಗೆ ಸಭೆಯಲ್ಲಿ ಸೂಚಿಸಬಹುದಾಗಿರುತ್ತದೆ.

ಸ್ಕೂಲುಗಳನ್ನು ರೆವಿನ್ಯೂ ಆಫೀಸರು ತನಿಖೆ ಮಾಡಬಹುದೆಂಬುವದಕ್ಕೆ ಪ್ರತಿಗಾಗಿ ವಿದ್ಯಾ ಇಲಾಖೆಯು ಉಪಾಧ್ಯಾಯನಂತೆಯೂ, ರೆವಿನ್ಯೂ ಇಲಾಖೆಯು ತಂದೆಯಂತೆಯೂ ಇರುತ್ತದೆ. ವಿದ್ಯಾ ಇಲಾಖಾ ಆಫೀಸರರ ಮನಸ್ಸು ತಮ್ಮ ಅಂಗವಾದ ಮಾಸ್ತರುಗಳ ಯೋಗಕ್ಷೇಮದ ಕಡೆಗೆ ಆಕರ್ಷಿಸುತ್ತದಲ್ಲದೆ ರೈತರ ಕಡೆಗೆ ತಿರುಗಲಾರದು. ರೆವಿನ್ಯೂ ಇಲಾಖೆಯಂತೂ ಯಾವಾಗಲೂ ತಮ್ಮ ಅಂಗವಾದ ರೈತರ ಮಧ್ಯೆ ಇದ್ದು ರೈತರ ಯೋಗಕ್ಷೇಮವನ್ನು ಅಭಿವೃದ್ಧಿಪಡಿಸತಕ್ಕದ್ದಾಗಿರುತ್ತದೆ. ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರವರ ಸರ್ಕಾರದವರು ಕೃಷಿಶಿಲ್ಪಾಭಿವರ್ಧಕ ಕಾರ್ಯಗಳನ್ನು ಅಭಿವೃದ್ಧಿಪಡಿಸಿ ರೈತರನ್ನು ಚತುರರನ್ನಾಗಿ ಮಾಡಬೇಕೆಂಬ ಮಹತ್ ಪ್ರಯತ್ನಕ್ಕೆ ವಿದ್ಯೆಯೇ ಮೂಲಾಧಾರವಾಗಿರುತ್ತದೆ. ಆದ್ದರಿಂದ ಪಿತೃಸ್ವರೂಪಿಗಳಾದ ರೆವಿನ್ಯೂ ಆಫೀಸರರು ರೈತರನ್ನು ವಿದ್ಯಾವಂತರನ್ನಾಗಿ ಮಾಡತಕ್ಕದ್ದು ಮುಖ್ಯ ಕರ್ತವ್ಯವೆಂದು ಭಾವಿಸಿ, ಸ್ಕೂಲುಗಳ ಮೇಲ್ತನಿಖೆಯನ್ನು ಸಾಧ್ಯವಾದಷ್ಟು ಮುತುವರ್ಜಿಯಿಂದ ನೋಡಿಕೊಳ್ಳಬೇಕಾದದ್ದು ಸಹಜವಾಗಿರುತ್ತದೆ. ರೆವಿನ್ಯೂ ಆಫೀಸರರ ಮೇಲ್ತನಿಖೆಯಿಂದ ವಿದ್ಯಾ ಇಲಾಖೆಗೆ ಪ್ರೋತ್ಸಾಹ ಉಂಟಾದೀತಲ್ಲದೆ ತೊಡಕೆಯುಂಟಾಗಲಾರದು. ಸ್ಕೂಲ್ ಮಾಸ್ತರುಗಳು ತಮ್ಮ ಕೆಲಸವನ್ನು ಮುತುವರ್ಜಿಯಿಂದ ಮಾಡಿಕೊಂಡು ಹೋದರೆ ಯಾರ ಭಯವೂ ಇರಲಾರದು. ಅವರು ಯಾರಿಗೂ ಸೇವಕರಾಗತಕ್ಕ ಅವಶ್ಯಕವಿರುವದಿಲ್ಲ. ತಿಕ್ಕಪ್ರತಿ ಸ್ಕೂಲಿನಲ್ಲಿ ರಜಾ ದಿನಗಳು ಬಹು ವಿಶೇಷವಾಗಿರುವದರಿಂದ ಸಾಧ್ಯವಾದಷ್ಟು ಕಡಮೆ ಮಾಡಬೇಕಾದದ್ದೂ, ಬೇಸಿಗೆ ರಜಾದಲ್ಲಿ ಮಧ್ಯಾಹ್ನ ಸ್ಕೂಲಿಡಬೇಕಾದದ್ದೂ, ಸ್ಕೂಲಿನಲ್ಲಿ ಕಾಪಿ ಬರೆಸುವದಕ್ಕೂ ನೀತಿ ಬೋಧನೆಗೂ ಮತಸಂಬಂಧವಾದ ಪುಸ್ತಕಗಳನ್ನು ಓದಿಸುವದಕ್ಕೂ ೧ ಘಂಟೆ ಕಾಲ ಗೊತ್ತುಪಡಿಸಬೇಕಾದದ್ದೂ ಅತ್ಯವಶ್ಯಕವಾಗಿದೆ. ಈ ವಿಚಾರಗಳನ್ನು ಸರ್ಕಾರದಲ್ಲಿ ಪ್ರಾರ್ಥಿಸಿ ಕೊಳ್ಳುವದಕ್ಕೆ ರೈತಾಭಿಮಾನಿಗಳಾದ ಪ್ರತಿನಿಧಿಗಳ ಹೃದಯದಲ್ಲಿ ಕರುಣಾಸಾಗರನಾದ ಜಗದೀಶನು ಪ್ರೇರೇಪಿಸಲಿ.

ಬಡೇಸಾಬಿ, ಜಗಳೂರು

ತಾಲ್ಲೂಕು ವರ್ತಮಾನಗಳು.

ಯಳಂದೂರು.—ಈ ಪ್ರಾಂತ್ಯವೂ ಬಿಳಿಗಿರಿರಂಗನ ಬೆಟ್ಟದ ಮೇಲೂ ಒಂದು ತಿಂಗಳಿಂದ ಹಿಡಿದ ಮಳೆ ಬಿಡದೆ ಜನ ಸಂಚಾರಕ್ಕೆ ಮಾರ್ಗವಿಲ್ಲದೆ ಬಹಳ ತೊಂದರೆಯಾಗಿದೆ. ಬಿಳಿಗಿರಿರಂಗಸ್ವಾಮಿಯವರ ದೇವಸ್ಥಾನಕ್ಕೆ ವರ್ಷ ವರ್ಷ ಶ್ರಾವಣ ಮಾಸದ ಶನಿವಾರಗಳಲ್ಲಿ ಭಕ್ತಾದಿ ಜನಗಳಿಂದ ಕಾಣಿಕೆ ಕಪ್ಪ ಮುಂತಾದದ್ದು ೧,೨೦೦—೧,೫೦೦ ರೂಪಾಯಿವರೆಗೆ ಹುಟ್ಟುವಳಿ ಆಗುತ್ತಾ ಇತ್ತು. ಈ ವರ್ಷ ಹಿಡಿದ ಮಳೆ ಬಿಡದೆ ಹರಿಸೆ ಜನಗಳು ಬಂದು ಸೇವಾರ್ಥ ಮುಂದಾದದ್ದು ಮಾಡಿಸಲು ಯತ್ನವಿಲ್ಲದೆ ಹೋದದ್ದರಿಂದ ಹುಟ್ಟುವಳಿ ಬಹಳ ಕಡಿಮೆಯಾಗಿದೆ.—ಇಲ್ಲಿ ಕಳೆದ ಶುಕ್ರವಾರ ಸಾಯಂಕಾಲ ೮ ಘಂಟೆಯಿಂದ ರಾತ್ರಿ ೭ ಘಂಟೆವರೆಗೆ ಲಗನೇ ಕೆಳಗಿನ ಕರೂರು ಪ್ರಾಂತ್ಯದ ಗೀರಾಸ್ವಾಮಿಯವರ ಸಂಗೀತವು ಬಹಳ ಸಂಭ್ರಮದಿಂದ ನಡೆಯಿತು. ಇಲ್ಲಿನ ದೊಡ್ಡ ಮನುಷ್ಯರೆಲ್ಲಾ ಬಿಡಿಸೇರಿ ವಾದ್ಯಗಾರರನ್ನು ಮರ್ಯಾದೆಯಿಂದ ಪುರಸ್ಕರಿಸಿದರು.

ತಿಪ್ಟೂರು.—ತಿಪ್ಟೂರಿನಲ್ಲಿ ಊರು ಒಳಗೆ ಇದೇ ತಿಂಗಳು ತಾ ೭ ರಲ್ಲಿ ಶುಕ್ರೋಜಿರಾವ್‌ರವರ ಕುಮಾರ್ತೆ ಸುಮಾರು ೮ ವರ್ಷ ವಯಸ್ಸುಳ್ಳ ನರಸಮ್ಮ ಎಂಬುವ ಬಾಲಕಿಯು ತಿಪ್ಟೂರು ಜವಳಿಸೇಟರು ಹಿಂದೆ ದಾಸಪ್ಪನವರ ಭಾವಿಯಲ್ಲಿ ಅಕಸ್ಮಾತ್ತಾಗಿ ಬಿದ್ದು, ಆಗ ಸುಮಾರು ೧೫೦ ಗಜ ದೂರದಲ್ಲಿದ್ದ ದರ್ಜಿ ಹನುಮಂತಪ್ಪನು ಅತಿ ವೇಗವಾಗಿ ಬಂದು ಭಾವಿಗೆ ಇಳಿದು ಬಾಲಕಿಯನ್ನು ಮೇಲಕ್ಕೆ ಎತ್ತಿಹಾಕಿದನು. ಮಗುವಿಗೆ ಹಣೆಮೇಲೆ ಗಾಯವಾಗಿತ್ತು. ಈಚೆಗೆ ಮಗು ಸುಖವಾಗಿದೆ. ಭಾವಿಯಲ್ಲಿ ಸುಮಾರು ೪ ಅಡಿ ನೀರಿತ್ತು. ಭಾವಿಯು ಉದ್ದ ೯ ಆಳವಿದ್ದರೂ ಮಗುವು ಏನೂ ಅಪಾಯವಿಲ್ಲದೆ ಬದುಕಿದೆ. ಈ ಮಗುವನ್ನು ಉಳಿಸುವದಕ್ಕಾಗಿ ಸಾಹಸಪಟ್ಟ ಇವನಿಗೂ ಕೈಯಲ್ಲಿ ಗಾಯವಾಯಿತು. ಅಷ್ಟು ಜಾಗ್ರತೆ ಈತನು ಸಾಹಸಪಟ್ಟದ್ದಕ್ಕಾಗಿ ಎಲ್ಲರೂ ಕೊಂಡಾಡಬೇಕಾಗಿದೆ. ಇದಕ್ಕಾಗಿ ಡಾಕ್ಟರವರು ಸಂತೋಷಪಟ್ಟು ಇವನಿಗೆ ಆದ ಗಾಯಕ್ಕಾಗಿಯೂ ಮಗುವಿಗೆ ಆದ ಗಾಯಕ್ಕಾಗಿಯೂ ತಕ್ಕ ಚಿಕಿತ್ಸೆಯನ್ನು ಮಾಡಿದರು. ಮೈಸೂರು ಸರ್ಕಾರದವರು ಇವನಿಗೆ ಪ್ರೋತ್ಸಾಹಕೊಡುವರೆಂದು ನಂಬುತ್ತೇನೆ.

ಚಿತ್ರದುರ್ಗ.—ಇದೇ ವರ್ಷ ಜೂನ್ ತಿಂಗಳು ತಾ ೮ ಮತ್ತು ೨೨ ರಲ್ಲಿ ಪ್ರಕಟಿಸಲ್ಪಟ್ಟ ಈ ಪತ್ರಿಕೆಯಲ್ಲಿ ಇಲ್ಲಿನ ಪೇಟೆ ಬ್ರಾಂಚ್ ಸ್ಕೂಲಿನ ಅಕ್ರಮಗಳನ್ನು ವಾಚಕರಿಗೆ ಗೋಚರಪಡಿಸಿತ್ತಷ್ಟೆ. ಈಚೆಗೆ ಇದೇ ಸ್ಕೂಲಿನ ಒಬ್ಬ ಟೀಚರು ೫-೬ ವರ್ಷದ ಒಬ್ಬ ವಿದ್ಯಾರ್ಥಿನಿಯನ್ನು ವಿಶೇಷವಾಗಿ ಹೊಡೆದು ನೆತ್ತಿಯ ಮೇಲೆ ಗುದ್ದಿ ಮೂಗಿನಲ್ಲಿ ರಕ್ತ ಬರುವಂತೆ ಪರಚಿರುತ್ತಾರಂತೆ. ಈ ಹುಡುಗಿಯ ತಾಯಿಯು ಸದರಿ ಉಪಾಧ್ಯಾಯರನ್ನು ವಿಚಾರಿಸಲು ಅವರು ಅಕೆಯನ್ನು ಮನಸ್ಸು ಮಾತುಗಳಾಡಿ ಕಳುಹಿಸಿದರಂತೆ. ಆಕೆಯು ವೃಷಭ ದೆಪ್ಟಿ ಇನ್ಸ್ಪೆಕ್ಟರಿಗೆ ತಿಳಿಸಿದ್ದರ ಮೇಲೆ ಆ ಉಪಾಧ್ಯಾಯರಿಗೆ ಬಂದೋಬಸ್ತು ಮಾಡುವುದಾಗಿ ಹೇಳಿ ಆಕೆಯನ್ನು ಕಳುಹಿಸಿಬಿಟ್ಟರಂತೆ. ಈ ಸ್ಕೂಲಿನಲ್ಲಿ ನಡೆಯುವ ಅಕ್ರಮಗಳನ್ನು ಆಗಾಗ್ಗೆ ಹೊರಪಡಿಸುವಾಗ್ಯೂ ಅವುಗಳನ್ನು ಕ್ರಮಕ್ಕೆ ತರುವವರು ಇಲ್ಲದಂತೆ ಆಗಿದೆ.—ಇಲ್ಲಿ ಜೂಜಾಡುವುದು ಈಚೆಗೆ ಬಹಳ ಹೆಚ್ಚಿದೆ. ಪೋಲೀಸಿನವರಾದರೋ ಕಂಡರೂ ಕಾಣದಂತೆ ಸುಮ್ಮನಿರುತ್ತಾರೆ. ಶ್ರೀಮನ್ ಮಹಾರಾಜಾ ಸರ್ಕಾರದವರು ಈ ವರ್ಷ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ "ಗ್ಯಾಂಬ್ಲಿಂಗ್ ಆಕ್ಟನ್ನು" ಚರ್ಚಿಸಿ ಜಾರಿಗೆ ತರುವರೆಂದು ನಂಬುತ್ತೇವೆ.—ಇಲ್ಲಿ ತಕ್ಕಮಟ್ಟಿಗೆ ಮಳೆ ಆಗಿದೆ. ಪೈರುಗಳೆಲ್ಲಾ ಚನ್ನಾಗಿವೆ. ಕೆರೆಗೆ ಮಾತ್ರ ನೀರು ಬರಲಿಲ್ಲ. ಹೊಸ ಜೋಳ ೨೬—೨೮ ಸೇರು, ಹಳೇ ಜೋಳ ೧೭—೧೮ ಸೇರು ಸಿಕ್ಕುತ್ತೆ. ರಾಗಿ ಮತ್ತು ಅಕ್ಕಿಯ ಧಾರಣೆಯೂ ಸ್ವಲ್ಪ ಮಟ್ಟಿಗೆ ಇಳಿದಿದೆ.

ಕೊಳ್ಳೇಗಾಲ.—ಈ ಸಾರಿ ಮಳೆಯು ಸರಿಯಾಗಿ ಸುರಿದು ರಾಗಿ ಭತ್ತದ ಬೆಳೆಗೆ ಬಹಳ ಅನುಕೂಲವಾಗಿ ಇರುತ್ತದೆ.—ಟೌನಿನಲ್ಲಿ ಪ್ಲೇಗಿನ ಗಲಾಟೆಯು ಜಾಸ್ತಿಯಾಗಿ ದಿನಕ್ಕೆ ೧೦-೧೫ ಜನಗಳು ಸಾಯುತ್ತಾ ಇದ್ದು, ಈಗ ಸ್ವಲ್ಪ ಕಮ್ಮಿಯಾಗಿ ಪಂಚಮರ ಬೀದಿಯಲ್ಲಿ ಜಾಸ್ತಿಯಾಗಿ ಇರುತ್ತವೆ. ನಮ್ಮ ಜಿಲ್ಲಾ ಕಲೆಕ್ಟರವರು ದಯಮಾಡಿ ಬಡವರು ಗುಡಿಸಲು ಹಾಕಿಕೊಳ್ಳುವದಕ್ಕೆ ೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ ಹೋದರು. ತಾಲ್ಲೂಕಿನ ಅಧಿಕಾರಿಗಳು ಮೇಲ್ಕಂಡ ರೂಪಾಯಿನಲ್ಲಿ ಕೆಲವನ್ನು ಖರ್ಚು ಮಾಡಿ ಕವೆ, ಗಳ, ಹುಲ್ಲು, ಬಾಪೆ ವಗೈರೆ ಸಾಮಾನುಗಳನ್ನು ತರಿಸಿ ಇಟ್ಟಿರುತ್ತಾರೆ. ಆದರೂ ಊರಿನ ಜನರು ಗುಡಿಸಲಿಗೆ ಹೋಗದೆ ಹಟಾ ಹಿಡಿದುಕೊಂಡು ಇರುತ್ತಾರೆ.—ಈ ಮಧ್ಯೆ ದೇವಾಂಗದ ಜನರು ಸುಮಾರು ೩೦ ವರ್ಷದಿಂದ ನಿಂತುಹೋಗಿದ್ದಂಥ ಮಾರಮ್ಮನ ಹಬ್ಬವನ್ನು ಮಾಡಿ, ದೇವತೆಗೆ ಮರಿಗಳನ್ನು ಕೊಯಿದು ಬಲಿ ಕೊಟ್ಟು, ಊರೆಲ್ಲಾ ಮಾರಮ್ಮನನ್ನು ಮೆರವಣಿಗೆ ಮಾಡಿ ಊರ ಹೊರಗೆ ಬಿಡಗಿ ಬಂದರು.—ಇಲ್ಲಿ ಪಂಚಮರ ಬೀದಿ ಪಕ್ಕದಲ್ಲಿ ತಾ ೧೪ ನೇ ಶುಕ್ರವಾರ ಹೊತ್ತಾರೆ ಸುಮಾರು ೯ ಘಂಟೆಯ ಸಮಯದಲ್ಲಿ ಒಂದು ಕತ್ತೆಕಿರುಬನು ಹೋಗುವುದನ್ನು ಜನಗಳು ನೋಡಿ, ಅದನ್ನು ಓಡಿಸಿಕೊಂಡು ಹೋಗಿ ಕೊಡಲಿಯಿಂದಲೂ ಭರ್ಜಿಯಿಂದಲೂ ಹೊಡೆದು, ಸರ್ಕಾರದ ಅಧಿಕಾರಿಗಳಿಗೆ ತೋರಿಸಿದರು.—ಇಲ್ಲಿನ ಮೈನ್ ಸ್ಕೂಲೂ ಮತ್ತು ಇಲ್ಲಿನ ಪಂಚಮರ ಪಾಠಶಾಲೆಯೂ ಪ್ಲೇಗಿನ ಗಲಾಟೆಗಾಗಿ ಮುಚ್ಚಿ ಇರುತ್ತವೆ.

ಹೊಳೆನರಸೀಪುರ.—ಈ ಪ್ರಾಂತ್ಯ ಸುರಿದ ಮಳೆಯಿಂದ ಗಿಡ್ಡರಾಗಿ ಪೈರೂ ಜೋಳದ ಪೈರೂ ಎಲ್ಲಾ ಕಟಾವಿಗೆ ಬಂದಿದೆ. ೩—೪ ದಿನಗಳಿಂದ ಮಾತ್ರ ಮಳೆ ಇಲ್ಲದೆ ಬಿಸಿಲು ಕಾಯುತ್ತಾ ಇದೆ. ಇದರಿಂದ ರೈತರು ಬಹು ಆಸಕ್ತಿಯಿಂದ ಬೆಳೆಯನ್ನು ಕೊಯ್ಯುತ್ತಾ ಇರುತ್ತಾರೆ. ೨—೩ ವರುಷದ ಬೆಳೆ ಈ ಒಂದೇ ವರುಷದಲ್ಲಿ ಆಗಿದೆ ಎಂದು ಜನರು ಹೇಳುತ್ತಾರೆ. ಬೆಳೆ ಹೀಗಿದ್ದರೂ ಧಾರಣೆ ಮಾತ್ರ ಇಳಿಯಲಿಲ್ಲ. ರಾಗಿ ರೂಪಾಯಿಗೆ ೧೭ ಸೇರು, ಅಕ್ಕಿ ೭—೭॥ ಸೇರು ಮಾರುತ್ತಾರೆ. ಬಾಕಿ ದಿನಸಿಗಳೂ ಬಹಳ ತಗ್ಗಾಗಿಯೇ ಇರುವವು.—ಮೈಸೂರಿನಿಂದ ಹಾಸನಕ್ಕೆ ರೈಲ್ವೆ ಕಂಪನಿಯವರು ಬಹು ಆಸಕ್ತಿಯಿಂದ ಮಾರ್ಗವನ್ನು ಮಾಡಲು ಸರ್ವೆ ಮಾಡುತ್ತಾರೆ. ೧೦—೧೫ ದಿನಗಳಿಂದ ಇಂಜನಿಯರೂ ಮತ್ತು ಅವರ ಕೆಲಸದವರೂ ಮುಸಾಫರಿ ಬಂಗ್ಲೆಯಲ್ಲಿ ಇಳಿದುಕೊಂಡು ತಮ್ಮ ಕೆಲಸವನ್ನು ತೀರಿಸಿಕೊಂಡು ಮುಂದಕ್ಕೆ ಪ್ರಯಾಣ ಮಾಡಿದರು. ಇದರಿಂದ ಪುರಾತನವಾದ ಕೆಲವು ಹೊಲ ಗದ್ದೆಗಳು ಹೋದರೂ ಜನರಿಗೆ ಬಹಳ ಪ್ರಯೋಜನವಾಗುತ್ತೆ.—ಎಕ್ಸೈಜ್ ಅ॥ ಕಮಿಷನರ್ ಮೆ॥ ರಂಗರಾಯರು ಇಲ್ಲಿಗೆ ದಯಮಾಡಿ ತಮ್ಮ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು ಅಜಮಾಯಿಷಿ ಮಾಡಿಕೊಂಡು ಹೋದರು. ಸರಾಬ್ ಸೇಂದಿ ದುಕಾನ್‌ದಾರರು ಸರಕಿಗೆ ನೀರನ್ನು ಬೆರಸಿ ಮಾರುತ್ತಾರೆಂದೂ, ಯಾರೂ ವಿಚಾರಿಸುವವರಿಲ್ಲವೆಂದೂ ಜನರು ಹೇಳಿಕೊಳ್ಳುತ್ತಾರೆ. ಆದ್ದರಿಂದ ಆಗಾಗ್ಗೆ ಇನ್ಸ್ಪೆಕ್ಟರುಗಳು ಪರೀಕ್ಷಿಸುತ್ತಾ ಇದ್ದರೆ ಆ ಫಿರ್ಯಾದು ನಿಂತು ಹೋಗುವದು.—ಇಲ್ಲಿ ರೋಗೋಪದ್ರಗಳ ಭಯವೇನೂ ಇಲ್ಲ. ಆದರೆ ಮ್ಯುನಿಸಿಪಲ್ ಏರ್ಪಾಡುಗಳನ್ನು ನೋಡಿದರೆ ದೂರದಲ್ಲಿರುವ ರೋಗಗಳನ್ನು ಬೇಗನೆ ಬರಬೇಕೆಂದು ಕರೆಯುವ ಹಾಗಿದೆ. ಚರಂಡಿಗಳಲ್ಲಿ ಬಚ್ಚಲಿನ ಕೊಳೆ, ಪಾಳು ನಿವೇಶನ ಸೊಂದು ಗೊಂದುಗಳಲ್ಲಿ ಮಲ ಮೂತ್ರಗಳ ದುರ್ವಾಸನೆ ಹಾಳ ತಿರುಗು ಬಾಣಸಾಲೆಗಳು ಏನುಮಾಡುತ್ತಾರೋ ತಿಳಿಯದು. ಅಮಲ್ದಾರರು ಊರನ್ನು ಗಸ್ತುಮಾಡುವದರಿಂದ ಈ ಬೇಗ್ಯ ಕಡಿಮೆಗಳನ್ನು ತಿಳಿಕೊಳ್ಳಬಹುದು. ಮ್ಯುನಿಸಿಪಲ್ ಲಾಂದ್ರಗಳು ಸರಿಯಾದ ಬೆಳಕು ಕೊಡುವದಿಲ್ಲ. ಇದರ ಕಾರಣವೇನೆಂಬುವದನ್ನು ಅಧಿಕಾರಿಗಳು ತಮ್ಮ ಗಮನಕ್ಕೆ ತಂದುಕೊಳ್ಳಲಿಲ್ಲ. ಬೈನಗರ ವೀದಿಗೆ ಲಾಂದ್ರವು ಇಲ್ಲದೆ ರಾತ್ರಿಯಲ್ಲಿ ತಿರುಗಾಡುವದೇ ಕಷ್ಟವಾಗಿದೆ. ಕತ್ತಲೆಯಾಗಿರುವ ಕಾರಣ ಕಳ್ಳಕಾಕರಿಗೆ ತುಂಬಾ ಅನುಕೂಲ ಉಂಟು. ಅಮಲ್ದಾರರು ಅತಿ ಜಾಗ್ರತೆಯಿಂದ ತಿಳಿಕೊಂಡು ಏರ್ಪಾಡು ಮಾಡಿದರೆ ಜನರಿಗೆ ಉಂಟಾಗಿರುವ ಕಷ್ಟವನ್ನು ಪರಿಹರಿಸಿದ ಹಾಗಾಗುತ್ತೆ.—ಇಲ್ಲಿ ಸರಕಾರದವರಿಂದ ಜನರ ಪ್ರಯೋಜನಕ್ಕಾಗಿ ನೇಯಿಗೆ ಕೆಲಸವೂ, ಮರಗೆಲಸವೂ, ಕಬ್ಬಿಣ ಕೆಲಸವೂ ನೇಮಕವಾಗಿವೆ. ೬ಟ ಕೆಲಸಗಳಿಗೆ ತಕ್ಕ ಮೇಸ್ತ್ರಿಗಳನ್ನು ನೇಮಿಸಿರುತ್ತಾರೆ. ಈ ಕೆಲಸಗಳಿಗೋಸ್ಕರ ಎ. ವಿ. ಸ್ಕೂಲ್ ಹೆಡ್ ಮಾಸ್ಟರಾದ ಮೆ॥ ಗಂಗಪ್ಪಯ್ಯಂಗಾರ್ಯರು ತೆಗೆದು ಕೊಳ್ಳುವ ಪ್ರಯಾಸವು ವಿಶೇಷವಾದದ್ದಾಗಿದೆ.—ಮೈಸೂರಿನಲ್ಲಿ ಪ್ಲೇಗ್ ಉಪದ್ರವು ಹೆಚ್ಚಿರುವುದರಿಂದ ಆ ಸೀಮೆಯ ಜನರು ಇಲ್ಲಿಗೆ ತಮ್ಮ ಬಂದು ಜನರ ಮನೆಗಳಿಗೆ ಬರುವಾಗ ಅವರಿಗೆ ಬಿಡಾರಗಳನ್ನು ಕೊಡುವ ವಿಷಯದಲ್ಲಿ ಜಾಗರೂಕರಾಗಿರಬೇಕು.—ಇಲ್ಲಿನ ಪೋಸ್ಟ್ ಮಾಸ್ಟರಾದ ಮೆ॥ ನರಸಿಂಹ ಅಯ್ಯಂಗಾರ್ಯರು ತಮ್ಮ ಕೆಲಸದಲ್ಲಿ ಬಹಳ ಜಾಗರೂಕರಾಗಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿ ಯಾವ ಜನರಿಗಾದರೂ ತೊಂದರೆಯಾಗದಂತೆ ತಮ್ಮ ಸ್ವಂತ ಕೆಲಸಗಳನ್ನು ನಡೆಸುತ್ತಲಿದ್ದಾರೆ.—ಪೋಲೀಸ್ ಸಿಬ್ಬಂದಿಯು ಕಡಮೆಯಾಗಿರುವದರಿಂದ ಪೋಲೀಸ್ ಬಂದೋಬಸ್ತು ಸಾಲದು. ಇದಕ್ಕೆ ಮೇಲಿನ ಅಧಿಕಾರಿಗಳು ಗಮನ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ದೊಡ್ಡಬಳ್ಳಾಪುರ.—ಈ ತಿಂಗಳು ತಾ ೯ ರಲ್ಲಿ ದೊಡ್ಡಬಳ್ಳಾಪುರದಲ್ಲಿರುವ ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ ಅಮಲ್ದಾರ್ ಮೆ॥ ಸದಾಶಿವರಾಯರ ಅಪ್ಪಣೆ ಪ್ರಕಾರ ಮೆ॥ ತಿ. ಕೊಂಗಾಡಿಯಪ್ಪನವರು ಕಾರ್ಯಾಧ್ಯಕ್ಷರಾಗಿ ಟೌನಿನಲ್ಲಿ ಇರುವ ಸರಕಾರಿ ಆಫೀಸರನ್ನೂ, ಮುನಿಸಿಪಲ್ ಮೆಂಬರುಗಳನ್ನೂ, ವರ್ತಕರನ್ನೂ, ವಿದ್ಯಾರ್ಥಿಗಳನ್ನೂ ಸಭೆ ಸೇರಿಸಿ ಅಮಲ್ದಾರರನ್ನು ಚೇರ್ಮನ್‌ರಾಗಿ ಇರಲಿಕ್ಕೆ ಸರ್ವತ್ರ ಗೊತ್ತುಮಾಡಿಕೊಂಡು, ಪ್ಲಾಟ್‌ಫಾರಂ ಪೀಠವನ್ನೂ, ಮಹಾದ್ವಾರವನ್ನೂ ತೋರಣಗಳಿಂದ ಶೃಂಗಾರ ಮಾಡಿ ಬೆಂಗಳೂರಿಂದ ಬಂದಿದ್ದ ಬ್ರಹ್ಮ ಸಮಾಜದ ಪ್ರಜ್ಞಾನಾಚಾರ್ಯರಾದ ಶ್ರೀ ಸ್ವಯಂಪ್ರಕಾಶಾನಂದ ಮಹರ್ಷಿ ಸ್ವಾಮಿಯವರಿಂದ ಮಾತಾ ಪಿತೃಗಳ ಭಕ್ತಿ ವಿಷಯವನ್ನು ಕುರಿತು ಉಪನ್ಯಾಸ ಜರಗಿಸುವ ಕಾಲಕ್ಕೆ ಅಕಸ್ಮಾತ್ ದೈವೀಕದಿಂದ ೬ ಮೈಲಿ ದೂರದಲ್ಲಿರುವ ಲಿಂಗದಹಳ್ಳಿ ಕೆರೆಯು ಕಟ್ಟೆಯು ಕಿತ್ತು ಹೋಗುವಂತೆ ಪೋಳಬಿದ್ದು ಇದೆ ಎಂಬದಾಗಿ ಅಲ್ಲಿನ ಪಟೇಲ್ ಶ್ಯಾನುಭೋಗರು ರಿಪೋರ್ಟು ತರಲಾಗಿ ಆ ಕ್ಷಣವೇ ಅಗ್ರಾಸನಾಧಿಪತಿಗಳಾಗಿದ್ದ ಅಮಲ್ದಾರರವರು ಸದರಿ ಕೆರೆಯ ಕಾಮಗಾರಿ ಮಾಡಿಸಲಿಕ್ಕೆ ಹೋಗಿ ಬರುತ್ತೇವೆಂದು ಹೇಳಿ ಮಹಾ ಸಭೆಯವರಿಗೆ ಆ ಉಪನ್ಯಾಸವನ್ನು ನಿಲ್ಲಿಸಿ ಹೊರಟು ಹೋದರು. ಅನಂತರ ಸಭಿಕರು ಅನೇಕ ಜನಗಳು ಬಂದಿರುವವರಿಂದ ಶೂನ್ಯವಾಗಬಾರದೆಂದು ವಿದ್ಯಾರ್ಥಿಗಳಿಂದ ಸಂಗೀತವನ್ನು ಪಾಡಿಸಿ, ಪ್ರಣವ ಎಂಬ ಓಂಕಾರ ವೃಕ್ಷದ ವಿಷಯವಾಗಿ ಸ್ವಲ್ಪ ಹೊತ್ತು ಉಪನ್ಯಾಸ ಮಾಡಬೇಕೆಂದು ಕೇಳಿಕೊಂಡ ಪ್ರಕಾರ ಮಹರ್ಷಿ ಸ್ವಾಮಿಗಳು ಉಪನ್ಯಾಸ ಮಾಡಿದರು. ಅದರ ಮುಖ್ಯಸಾರಾಂಶವೇನೆಂದರೆ, ಈ ಪಂಚಭೂತ ಸಂಬಂಧವಾದ ಸೃಷ್ಟಿಯೂ ಸಚರಾಚರ ಪ್ರಾಣಿಗಳೂ ಉಂಟಾಗುವದಕ್ಕಿಂತ ಮೊದಲೇ ಆದಿಮಧ್ಯಾಂತ ರಹಿತನಾದ, ನಿರಾಕಾರನಾದ, ಪರಾತ್ಪರ ವಸ್ತುವಾದ ಸ್ವಯಂಭು ಬ್ರಹ್ಮವು ಒಂದೇ ಇದ್ದಿತು. ಅಂಥಾ ಏಕಮೇವಾದ್ವಿತೀಯನಾದ ಪರಬ್ರಹ್ಮನಲ್ಲಿ ಕಾಲಾಂತರದಲ್ಲಿ ಮೂಲಪ್ರಕೃತಿಯಾದ ಪ್ರಜ್ಞಾನ ಶಕ್ತಿಯು ಉಂಟಾಯಿತು. ಅದರಿಂದ ಸಾಕಾರವಾದ ರಜೋಗುಣದ ಭೂಚರಾಚರಾದಿಗಳೂ ಮಾನುಷವರ್ಗಾದಿಗಳೂ ಉಂಟಾದವು. ಉಕಾರವೆನಿಸುವ ಸತ್ವಗುಣದ ಖೇಚರಾದಿ ದೇವತೆಗಳ ವರ್ಗ ಮುಂತಾದದ್ದು ಉಂಟಾಯಿತು. ಮಕಾರವೆನಿಸುವ ತಮೋಗುಣದ ಜಲಚರಾದಿಗಳೂ ಕ್ರಿಮಿಕೀಟಗಳು ಉಂಟಾದವು. ಹೀಗೆ ಏಕೋ ದೇವನು ಸರ್ವಶಕ್ತಿಯಿಂದ ಸಕಲವನ್ನೂ ಸೃಷ್ಟಿಸಿದ್ದಕ್ಕಾಗಿ ಆತನಿಗೆ ಬ್ರಹ್ಮವೆಂಬ ನಾಮ ಉಂಟಾಯಿತು. ಆ ದೇವರು ಸಚರಾಚರ ಪ್ರಾಣಿಗಳನ್ನು ಸಂರಕ್ಷಣೆ ಮಾಡುತ್ತಾ ಬರುವದರಿಂದ ಆತನಿಗೆ ವಿಷ್ಣುವೆಂಬ ನಾಮ ಉಂಟಾಯಿತು. ಅದೇ ದೇವರು ಸಮಸ್ತವನ್ನೂ ಲಯಪಡಿಸುವನಾದ್ದರಿಂದ ಆತನಿಗೆ ರುದ್ರನೆಂಬ ಹೆಸರು ಬಂದಿತು. ಬ್ರಹ್ಮನೆಂದರೆ ಮಹೋನ್ನತವಾದ ವಸ್ತುವು. ವಿಷ್ಣುವೆಂದರೆ ಸರ್ವವ್ಯಾಪಿಯಾದ ಪೂರ್ಣನು. ಶಿವನೆಂಬ

ಸದಾ ಮಂಗಳಕರನಾಗಿರುವ ಪ್ರಭುವು ಇಂಥಾ ಮಹಾ ಸ್ವಾಮಿಯಾದ ಪರಮೇಶ್ವರನನ್ನು ವಿನಾ ತ್ರಿಕರಣ ಶುದ್ಧಿಯಿಂದ ಧ್ಯಾನಿಸಬೇಕು ಇಹಲೋಕ ಸಂಬಂಧವಾದ ಅನಿತ್ಯ ವಸ್ತುಗಳನ್ನು ತ್ಯಜಿಸಬೇಕು ನಾನಾ ಪಾಪ ಸಂಬಂಧವಾದ ಭೋಗಗಳನ್ನು ಮಲಮೂತ್ರಾದಿಗಳಿಗಿಂತ ಅಸಹ್ಯವಾಗಿ ತುಚ್ಛೀಕರಿಸಬೇಕು ಅಂತರಬಾಹ್ಯೇಂದ್ರಿಯಗಳ ಸಾಧನಾಪರರಾಗಿ ನಿಗ್ರಹಿಸಬೇಕು ಶ್ರೀ ಜ್ಞಾನ ಗುರುವಿನ ಬ್ರಹ್ಮೋಪದೇಶದಿಂದ ಮೋಕ್ಷವನ್ನು ಹೊಂದಬೇಕು ಶುಷ್ಕ ವೇದಾಂತಿಗಳು ಹೇಳತಕ್ಕ "ಅಹಂ ಬ್ರಹ್ಮಾಸ್ಮಿ" ಎನಿಸುವ ವಾಕ್ಯವನ್ನು ದೃಷ್ಟಾಂತ ಸಿದ್ಧಾಂತಗಳಿಂದ ಖಂಡನೆಮಾಡಿ, ಕಡೆಗೆ "ಏಕಮೇವಾದ್ವಿತೀಯಂ" "ಬ್ರಹ್ಮಾನದ್ವೈತಮಸ್ತಿ" ಎಂಬದಾಗಿ ಲಲಿತವಾದ ಭಾಷೆಯಿಂದ ಸರ್ವ ಜನರಿಗೂ ಹೃದಯಂಗಮವಾಗುವಂತೆ ವಿವರಿಸಿ ಸ್ವಾಮಿಗಳು ಬೇಡಾಧಿ ದೇವ ಮಂಗಳ ಪ್ರಾರ್ಥನೆಯನ್ನು ಮಾಡಿ ಸಂಪೂರ್ಣಿಸಿದರು ಅನಂತರ ಮಹಾ ಸಭೆಯಲ್ಲಿದ್ದ ಘನವಂತರೆಲ್ಲಾ ಅಪರಿಮಿತವಾದ ಸಂತೋಷವನ್ನು ಹೊಂದಿ, ರಾತ್ರಿ ಸುಮಾರು ೧೧ ಗಂಟೆಗೆ ಅವರವರ ಮನೆಗಳಿಗೆ ತೆರಳಿದರು

ಚಿಕ್ಕಮಗಳೂರು.—ಸ್ಥಳದ ಆರೋಗ್ಯದ ವಿಷಯ ಪರಿತಾಪವಾಗಿಯೇ ಇದೆ ಪ್ಲೇಗಾದರೋ ಕಡಮೆಯಾಗಲಿಲ್ಲ. ವೈದ್ಯರಾದರೋ ಶತಪ್ರಯತ್ನದಿಂದ ರೋಗದ ತಲೆಯನ್ನೇ ಕಣ್ಣಿಗೆ ಕಾಣಿಸದಂತೆ ಮಾಡಬೇಕೆಂದು ಹಲವು ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ ಪ್ರಜೆಗಳಾದರೋ ತಮ್ಮ ಮೌಢ್ಯವನ್ನು ಸಂಪೂರ್ಣವಾಗಿ ಬಿಡಲಿಲ್ಲ ಶಿಡುಬನ್ನು ಹಾಕಿಸಿಕೊಳ್ಳುವದರಲ್ಲಿಯೂ, ಇಲಿಗಳನ್ನು ಹಗೆತನದಿಂದ ಕಾಣದೆಯೂ, ಈ ವಿಷಯದಲ್ಲಿ ಕೇವಲ ನಿರಾಸಕ್ತರಾಗಿ ಇದ್ದಾರೆ ವೈದ್ಯರ ಪ್ರಯತ್ನ ಮಾತ್ರದಿಂದ ರೋಗ ಅಡಗೀತೆಂದು ಭಾವಿಸುವದು ಸಾಧ್ಯವೋ, ಅಸಾಧ್ಯವೋ ವಾಚಕರೇ ಊಹಿಸಬೇಕು — ಮೊನ್ನೆ ವಾರದಲ್ಲಿ ಘನ ಮಿಸ್ ವಿಕರ್ಸ್ ಅಮ್ಮನವರನ್ನು ಹಾಸನದಿಂದ ಚಿಕ್ಕಮಗಳೂರಿನ ಘನ ರೆಡ್‌ಮಂಡ್ ಬೋಧಕರು ಬರಮಾಡಿಕೊಂಡು ಬಾಲಿಕಾ ಪಾಠಶಾಲೆಯಲ್ಲಿ ನೂತನ ಏರ್ಪಾಡುಗಳನ್ನು ಮಾಡುವಂತೆ ಘನ ಮಿಸ್ ಅಮ್ಮನವರು ೩ ದಿನಗಳವರೆಗೂ ಎಡೆಬಿಡದೆ ಸಾಹಸದಿಂದ ಕೆಲವು ಹೊಸ ಕ್ರಮಗಳನ್ನು ಜಾರಿಗೆ ತಂದು ಬಾಲೆಯರಿಗೆ ಪ್ರೋತ್ಸಾಹವನ್ನು ಕಲ್ಪಿಸಿ ಹೋದರು ಮುಂದೆಯೂ ಇನ್ನು ಹೊಸ ಕ್ರಮಗಳನ್ನು ತಂದು ಶಾಲೆಯ ಅಭಿವೃದ್ಧಿಯಲ್ಲಿ ಕೀರ್ತಿ ಪಡೆಯುವರೆಂದು ಕೋರುತ್ತೇವೆ ಅಲ್ಲದೆ ಮಾಸ್ತರುಗಳನ್ನು ನಿತ್ಯೋದ್ಯೋಗದಲ್ಲಿ ಬೇಗನೇ ವೃದ್ಧಿಗೆ ತರುವರೆಂಬುವದರಲ್ಲಿ ಸಂತೋಷವೇ — ಘನ ರೆಡ್‌ಮಂಡ್ ಬೋಧಕರು ೩ ವಾರಗಳ ಪ್ರಸಂಗಪ್ರಯಾಣ ಹೊರಟಿದ್ದಾರೆ ೩ ವಾರಗಳವರೆಗೂ ಕೊಡಗು ಜಿಲ್ಲೆ ಪೊಲ್ಲಿಬೆಟ್ಟದಲ್ಲಿದ್ದು ಎಲ್ಲಾ ಯೂರೋಪಿಯನ್ ಧೊರೆಧೊರೆಸಾನಿಗಳನ್ನು ಸಂಧಿಸುತ್ತಿದ್ದಾರೆ ಕೂಲಿ ಕೆಲಸ ಮಾಡಲಿಕ್ಕೆ ಬಂದ ಜನಗಳಿಗೂ ಸುವಾರ್ತಾ ಪ್ರಸಂಗವಾಗುತ್ತಿದೆ ಉಪದೇಶಕರು ಆನಂದಪುರದಲ್ಲಿರುವ ಜಾಸೆಲ್ ಮಿಷನ್ ಉಪದೇಶಕರೊಂದಿಗೆ ಸೇರಿ ಮೈಸೂರಿನ ನಾನಾ ಭಾಗದಿಂದ ಹೋಗಿ ಕೂಲಿ ಕೆಲಸ ಮಾಡುವವರಿಗೆ ಆತ್ಮರಕ್ಷಣೆ ಸಮಾಚಾರ ತಿಳಿಸುತ್ತಿದ್ದಾರೆ ಜನರು ಪ್ರೀತಿಯಿಂದ ಕೇಳುತ್ತಿರುವರು

ತಾ ಮಗಡಿಂದ್ಲು.—ಈ ಊರಿನಲ್ಲಿ ಸುಮಾರು ಸಾವಿರ ಮನೆಗಳವೆ ಇದಕ್ಕಾಗಿಯೇ ಸರ್ಕಾರದವರು ಒಂದು ಆಸ್ಪತ್ರೆಯನ್ನು ಇಟ್ಟಿದ್ದಾರೆ ಒಬ್ಬೊಬ್ಬ ಗಟ್ಟಿಗರಾದ ಡಾಕ್ಟರೂ ಇರುತ್ತಾರೆ ಆದರೆ ಈ ಆಸ್ಪತ್ರೆಯಲ್ಲಿ (ಮಿಡ್‌ವೈಫ್) ಸೂಲಗಿತ್ತಿಯನ್ನು ಸರ್ಕಾರದವರು ನೇಮಿಸಲಿಲ್ಲ. ಇದರಿಂದ ಈ ಊರಲ್ಲಿ ಹೆಂಗಸರು ಕಷ್ಟ ಪಡುತ್ತಾ ಇದ್ದಾರೆ ಆದ್ದರಿಂದ ನಮ್ಮ ಘನವನ್ನು ಹೊಂದಿದ ಮಹಾರಾಜಾ ಸರ್ಕಾರದವರು ಈ ತ್ವರೆಗೊಂಡು ಆಸ್ಪತ್ರೆಗೆ ಒಬ್ಬ ಸೂಲಗಿತ್ತಿಯನ್ನು ನೇಮಿಸುವ ಹಾಗೆ ನಮ್ಮ ಪ್ರಾರ್ಥನೆಯನ್ನು ಪರಿಶೀಲಿಸಬೇಕೆಂದು ಬೇಡುತ್ತೇವೆ —ಈ ಊರಿನಲ್ಲಿ ಗೌರಿ ಹಬ್ಬವು ಈ ಸಲ ಬಹು ವೈಭವದಿಂದ ನಡೆಯಿತು ಈ ಊರಿನ ಜನರೆಲ್ಲರೂ ಪುರೋಹಿತರೊಡನೆ ವಾದ್ಯಗಳೊಡನೆ ಕೂಡಿ ಕೆರೆಗೆ ಹೋಗಿ ಮೊದಲು ಗಂಗೆಯನ್ನು ಪೂಜಿಸಿ ಅನಂತರ ಗೌರಿಯನ್ನು ಅಲ್ಲಿಂದ ಪುರೋಹಿತರು ತರುವ ಪದ್ಧತಿ ಇದೆ ಆದರೆ ದೇವತೆಯನ್ನು ಕರೆತರುವ ಕಾಲದಲ್ಲಿ ಆಬಾಲವೃದ್ಧರೂ ಸೇರಿ ಪುರೋಹಿತರಿಗೆ ಸೆಟ್ಟಂಗಾಯಿಯನ್ನು ಹೊಡೆಯುವ ಪದ್ಧತಿ ಇದೆ ಹೀಗಿರಲು ಈ ಸಲ ಪುರೋಹಿತರು ಈ ಬಾಧೆಯನ್ನು ತಡೆಯಲಾರದೆ ಪೊಲೀಸ್ ಜಮಾದಾರನಲ್ಲಿ ಫಿರ್ಯಾದು ಹೋಗಿದ್ದರು ಆಗ ಉತ್ಸವಾಂಗವಾಗಿ ಪೊಲೀಸ್ ಪಟ್ಟಣವನ್ನು ಬಂದ ಮೇಲೆ ಗೌರೀದೇವಿಯ ಉತ್ಸವವು ಸಾಂಗವಾಗಿ ನೆರವೇರಿತು ಇಂಥಾ ನವನಾಗರೀಕಕಾಲದಲ್ಲಿಯೂ ನಮ್ಮ ಜನರು ಹೇಯವಾದ ಪದ್ಧತಿಗಳನ್ನು ಆಚರಿಸುತ್ತಾ ಇರುವುದು ಮಹಾ ಆಶ್ಚರ್ಯವಾಗಿರುತ್ತೆ ಇನ್ನು ಮುಂದೆ ಯಾವರೂ ಇಂಥಾ ಹಾಸ್ಯಾಸ್ಪದವಾದ ಕೆಲಸವನ್ನು ಬಿಟ್ಟುಬಿಡಲೆಂದು ಆಶಿಸುತ್ತೇವೆ — ಇಲ್ಲಿಗೆ ಸಮೀಪದ ಘಾಸಬೆಯಲ್ಲಿ ಎತ್ತುಗಳ ಬಾಲಶ್ವೇತವಲ್ಲಿ ಇಲಿಗಳು ಸಾಯುತ್ತಿರುವವೆಂತಲೂ, ಜನರು ಊರು ಬಿಡಲು ಸನ್ನಾಹ ಮಾಡುತ್ತಿದ್ದಾರೆಂತಲೂ ವರ್ತಮಾನವಿರುತ್ತೆ. ಈ ಕಾಲದಲ್ಲಿ ತಾಲ್ಲೂಕಿನೊಳಗೆ ಗ್ರಾಮದವರು ಬಹು ಎಚ್ಚರಿಕೆಯಿಂದ ಇರುವಂತೆ ತಕ್ಕ ಸನ್ನಾಹಗಳು ನಡೆಯುತ್ತಲಿವೆ

ಸೀಯರ್.—ಈ ಹಿರಿಯ ದೊಡ್ಡಕೆರೆ ಚಿಕ್ಕಕೆರೆ ನೀರು ತುಂಬಿ ಕೋಡಿಗಳಲ್ಲಿ ನೀರು ಹರಿದು ಸಂತೋಷವಾಯಿತು ಮುಸುಕಿನ ಪೈರುಗಳು ಸಸಿಗಳಿಂದ ಕೂಡಿ ಮಹದಾನಂದವನ್ನು ಉಂಟುಮಾಡುತ್ತವೆ ಆದಾಗ್ಯೂ, ತುರ್ತಾ ಒಂದು ಹದ ಮಳೆ ಬೇಕಾಗಿದೆ ಇನ್ನು ೮ ದಿನ ಮಳೆ ಇಲ್ಲವಾದರೆ ಪೈರುಗಳು ಒಣಗಲು ಕಾರಣವಾಗುತ್ತೆ ಧಾರಣಾದಿಗಳು ಇನ್ನೂ ತಗ್ಗಲಿಲ್ಲ — ಈ ದುರ್ಭಿಕ್ಷದ ಬೇಸಗೆಯಿಂದ ಪ್ರಜೆಗಳನ್ನು ರಕ್ಷಿಸಲು ಘನವನ್ನು ಹೊಂದಿದ ಗೌರ್ನಮೆಂಟಿನವರು ದಯಪಾಲಿಸಿದ ತಗಾವಿಯನ್ನು ನಮ್ಮ ಅಮಲ್ದಾರರು ತಾಲ್ಲೂಕಿನ ರೈತರುಗಳ ಕಷ್ಟ ನಷ್ಟಗಳನ್ನು ಖುದ್ದು ಪರಾಂಬರಿಸಿಕೊಂಡು ಹೋಗುತ್ತಾ ಹಂಚಿ ಇರುತ್ತಾರಲ್ಲದೆ ಪ್ರಜೆಗಳಲ್ಲಿಯೂ ತಾವೆ ದಾತರುಗಳಲ್ಲಿಯೂ ಕೀರ್ತಿಯನ್ನು ಹೊಂದಿ ಇರುತ್ತಾರೆ —ಕೆಲವು ದಿನಗಳ ಹಿಂದೆ ನಮ್ಮ ಅಮಲ್ದಾರರು ಗಾಡಿಯಲ್ಲಿ ಕುಳಿತು ತುಂಕೂರಿನಿಂದ ಬರುತ್ತಿರುವಾಗ್ಗೆ ರಸ್ತೆಯಲ್ಲಿ ಮಾರಿಯೋಕನು ಮೂರು ವರುಷದ ತನ್ನ ಮಗುವನ್ನು ಸಂಚಿಯಂತೆ ಬೆನ್ನಿಗೆ ಕಟ್ಟಿಕೊಂಡು ಕೈಲಿ ತಂಬೂರಿಯನ್ನು ಹಿಡಿದುಕೊಂಡು ಬರುವಾಗ್ಗೆ ಬೆನ್ನಿಗೆ ಕಟ್ಟಿದ್ದ ಮಗುವು ಕೆಳಕ್ಕೆ ಜಗ್ಗುವದರಿಂದ ತಂಬೂರಿಯನ್ನು ಕೆಳಗೆ ಇಡುತ್ತಾ ಮಗುವನ್ನು ಮೇಲಕ್ಕೆ ಕಟ್ಟಿಕೊಳ್ಳುವುದು ಈ ರೀತಿ ಈತ ಪಡುವ ಕಷ್ಟವನ್ನು ದಯಾಳುವಾದ ನಮ್ಮ ಅಮಲ್ದಾರರು ನೋಡಿ ಗಾಡಿಯನ್ನು ನಿಲ್ಲಿಸಿ, ಜವಾನನಿಂದ ಆತನನ್ನು ಕರೆಸಿಕೊಂಡು ವಿಚಾರಿಸಿದ್ದಕ್ಕೆ ತಾನು ಸಾತಾನಿ ಮುದ್ದಗಿರಿಯವನು, ಜೀವನಕ್ಕೆ ಮಾರ್ಗವಿಲ್ಲದೆ ಬಿಕ್ಷಾಟನೆಗಾಗಿ ಬಂದೆ, ತಾನು ಒಬ್ಬಂಟಿಗ, ಯಾರೂ ಇಲ್ಲ, ಚಿಕ್ಕತೊಟ್ಲು ಗ್ರಾಮದಲ್ಲಿ ತನ್ನವರು ಇರುತ್ತಾರೆ, ಅಲ್ಲಿಗೆ ಹೋಗಬೇಕೆಂದು ಹೇಳಿದ್ದರ ಮೇಲೆ ದಯೆಯಿಂದ ಗಾಡಿಯಲ್ಲಿ ಮಗುವನ್ನು ಒಂಬತ್ತು ಮೈಲಿ ಫಾಸಲೆ ವರೆಗೆ ಕೂಡಿಸಿಕೊಂಡು ಬಂದು ಆ ಗ್ರಾಮದ ಬಳಿ ಬಿಟ್ಟರೆಂಬ ಮಾತನ್ನು ಕೇಳಿ ನಾವೆಲ್ಲಾ ಅವರನ್ನು ಕೊಂಡಾಡುತ್ತೇವೆ ಇಂಗ್ಲೀಷಿನವರು ಪರದೇಶದಿಂದ ಬಂದು ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಾರೆಂತಲೂ, ಸಕ್ಷಪಾತಗಳಿಂದಲೂ ಕೆಲವರು ಹೇಳಿಕೊಳ್ಳುವದನ್ನು ಕೇಳಿ ಬಹಳಾ ವ್ಯಸನಪಡಬೇಕಾಗಿದೆ ಯಾಕೆಂದರೆ ನಮ್ಮ ಹಿಂದೂ ದೇಶದ ಚರಿತ್ರೆಯನ್ನು ಓದಿ ನೋಡಿದರೆ, ಹಿಂದೆ ನಮ್ಮವರುಗಳಿಗೆ ಅನೇಕ ಕಷ್ಟ ಹಾನಿಗಳು ಸಂಭವಿಸುತ್ತಾ, ಅಗಾಧವಾದ ಅಂಧಕಾರದಲ್ಲಿದ್ದರೆಂಬುವುದು ಗೊತ್ತಾಗುತ್ತೆ ಈ ಇಂಗ್ಲೀಷರ ಆಳ್ವಿಕೆಯು ದೇವರ ಕೃಪೆಯಿಂದ ನಮಗೆಲ್ಲಾ ಲಭಿಸಿದನಂತರ ನಮ್ಮ ಎಲ್ಲಾ ಕಷ್ಟದುಃಖಗಳೂ ತಪ್ಪಿ ಅಂದರೆ ಅಂಧಕಾರವು ತೊಲಗಿ ಸೂರ್ಯಬೆಳಕಿನಂತೆ ಪ್ರಜ್ವಲಿಸುತ್ತಿದ್ದೇವೆಂಬುವದನ್ನು ಯೋಚಿಸದೆ ಅನ್ಯಾಯವಾಗಿ ದೂಷಿಸುತ್ತಾರಲ್ಲಾ ಎಂದು ಬಹಳ ವ್ಯಸನಪಡಬೇಕಾಗಿದೆ.—ಮತ್ತು ಈಗ್ಗೆ ಕೆಲವು ತಿಂಗಳ ಕೆಳಗೆ ಇಲ್ಲಿನ ಒಬ್ಬ ಸರಕಾರಿ ಅಧಿಕಾರಿಯು ಇಂಗ್ಲೀಷಿನವರನ್ನು ದೂಷಿಸುತ್ತಿರುವಾಗ್ಗೆ ಅಲ್ಲಿ ಇದ್ದ ಒಬ್ಬರು—ಅಯ್ಯಾ, ಇವರಿಂದ ಎಲ್ಲಾ ವಿದ್ಯೆಗಳನ್ನು ಕಲಿತು ಇವರಿಂದಲೇ ಜೀವಿಸುತ್ತಿದ್ದಾಗ್ಯೂ ಕೂಡ ಇವರನ್ನು ದೂಷಿಸುವದು ಸರಿಯಲ್ಲವೆಂದು ಹೇಳಿದ ಮಾತ್ರಕ್ಕೇ ಕೋಪಗೊಂಡು, ಇತರ ಅನ್ಯಾಯವಾದ ಕಾರಣಗಳೊಂದಿಗೆ ಕೆಟ್ಟದನ್ನು ಮಾಡಲು ಪ್ರಯತ್ನಪಟ್ಟಿದ್ದಾರೆ ಇದರ ಪರ್ಯವಸಾನವನ್ನು ಮುಂದೆ ವಿವರವಾಗಿ ಬರೆಯುತ್ತೇವೆ

ಇಂಡಿಯಾದೇಶದ ವೃತ್ತಾಂತಗಳು.

ಕಳೆದ ೧೯೦೮ ನೇ ಡಿಸೆಂಬರ್ ತಾ ೩೧ ಕ್ಕೆ ಆಖೈರಾದ ೧೨ ತಿಂಗಳಲ್ಲಿ ಮದರಾಸ್ ಪಟ್ಟಣದೊಳಗೆ ೧೯,೯೮೦ ಜನನವೂ ೨೨,೨೮೫ ಮರಣಗಳೂ ಆಗಿರುತ್ತವೆ.

ಕಾಶ್ಮೀರ ಸಂಸ್ಥಾನದಲ್ಲಿ ಈ ಸಲ ಪ್ರವಾಹಗಳ ದೆಸೆಯಿಂದ ಎಷ್ಟು ಮಟ್ಟಿಗೆ ಮನೆ ಮಠಗಳೂ ಆಸ್ತಿಪಾಸ್ತಿಗಳೂ ಪೈರುಪಚ್ಚೆಗಳೂ ನಷ್ಟವಾಗಿವೆ ಎಂಬುದನ್ನು ಕಡಾಖಂಡಿ ತಿಳಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

ಹಿಂದುಸ್ಥಾನದಲ್ಲಿ ಸಂಚಾರ ಮಾಡಿ ಇಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಹೋಗುವುದಕ್ಕಾಗಿ ವಿಲಾಯತಿ ಪಾರ್ಲಿಮೆಂಟಿನ ಮೆಂಬರಾದ ಮೆ॥ ರಾಂಸೇ ಮೆಕ್ಡಾನಲ್ಡ್ ಯವರು ಪತ್ನಿ ಸಹಿತ ಆರೇಬಿಯಾ ಎಂಬ ಹಡಗು ಹತ್ತಿ ಬರುತ್ತಿದ್ದಾರೆ

ಸಿಂಧು ನದಿಯಲ್ಲಿ ಪ್ರವಾಹಬಂದು ಅದರ ದಡವೊಡೆದು ಹೋಯಿತು, ಕರಾಚಿ ಡಿಸ್ಟ್ರಿಕ್ಟಿಗೆ ಸೇರಿದ ಘೋರಬಾರಿ ತಾಲ್ಲೂಕಿನ ಅನೇಕ ಗ್ರಾಮ ಊರುಗಳ ಮೇಲೆ ಹರಿಯುತ್ತಿದೆ ಪ್ರಜೆಗಳ ಕಷ್ಟವೂ ಅವರ ಗಾಬರಿಯೂ ಅಪಾರವಾಗಿರುವುದು

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಗವರ್ನಮೆಂಟಿನವರು ಢಕ್ಕಾ ನವಾಬನವರಿಗೆ ಶೇಕಡಾ ೪ ರೂಪಾಯಿ ಬಡ್ಡಿಯ ಮೇಲೆ ೧೪ ಲಕ್ಷ ರೂಪಾಯನ್ನೂ, ೪ ರೂಪಾಯಿ ಬಡ್ಡಿಯ ಮೇಲೆ ೩ ಲಕ್ಷ ರೂಪಾಯನ್ನೂ ಸಾಲ ಕೊಟ್ಟಿದ್ದಾರೆಂದು ತಿಳಿಯುವುದು

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಬಳಿ ಖೋಸ್ಟ್ ಎಂಬ ಪ್ರಾಂತ್ಯದ ದುಷ್ಟ ಜನರು ಕಳೆದ ೧೧ನೇ ತಾ ಶನಿವಾರ ರಾತ್ರಿ ಲಾಚಿ ಮಿಟರ್ ಎಂಬ ರೈಲ್ವೇಸ್ಟೇಷನ್ನಿಗೆ ನುಗ್ಗಿ ಒಂದು ಪಟ್ಟಿಯನ್ನು ಕೊಂದು, ಹಾಕಿ ೧೬ ಬಂದೂಕುಗಳನ್ನು ಅಪಹರಿಸಿಕೊಂಡು ಓಡಿಹೋಗಿದ್ದಾರೆ

ಬೊಂಬಾಯಿನ ಕೆಲವು ಪಾರ್ಸಿ ವೃದ್ಧ ಮನುಷ್ಯರೂ ಗಾಯಕವಾಡ ಮಹಾರಾಜರವರೂ ಸೇರಿ ಹಿಂದುಸ್ಥಾನದಲ್ಲಿ ಕ್ರಿಕೆಟ್ ಎಂಬ ಚೆಂಡಾಟದಲ್ಲಿ ನಿಪುಣರಾದವರನ್ನು ಚುನಾಯಿಸಿ ವಿಲಾಯಿತಿಗೆ ಕಳುಹಿ ಅಲ್ಲಿನ ಆಟಗಾರರ ಕೂಡ ಪಂದ್ಯಗಳನ್ನು ನಡಿಸಬೇಕೆಂದು ತರದೂದು ಮಾಡುತ್ತಿದ್ದಾರೆ

ಆಗ್ರಾ ಪಟ್ಟಣದಲ್ಲಿರುವ ಬಂಗಾಳಾ ಬ್ಯಾಂಕಿನಲ್ಲಿ ಕಳವಾದ ಮಾಲುಗಳನ್ನು ಕದ್ದುಕೊಂಡನೆಂದು ಅಲ್ಲಿನ ಬಾರಿ ವರ್ತಕನಾದ ಲಾಲಾ ರಾಧಾರಾಮ್ ಎಂಬುವನನ್ನು ಹಿಡಿದು ದರ್ಯಾಪ್ತಿ ಮಾಡಿದರು ಅಪರಾಧವು ರುಜುವಾತಾಗದ್ದರಿಂದ ಮ್ಯಾಜಿಸ್ಟ್ರೇಟರು ಆ ವರ್ತಕನಿಗೆ ಎರಡು ವರುಷ ಕಠಿಣ ಸಜಾವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

ಇಟಲಿ ರಾಜ್ಯಕ್ಕೆ ಸೇರಿದ ಜಿನೀವಾ ಪಟ್ಟಣದಲ್ಲಿ "ವಂದೇ ಮಾತರಂ" ಎಂಬ ಹಿಂದುಸ್ಥಾನದ ರಾಜದ್ರೋಹಿ ಪತ್ರಿಕೆ ಯು ಆಗಾಗ್ಗೆ ಪ್ರಕಟಿಸಲ್ಪಡುತ್ತಿದೆ ಹಿಂದುಸ್ಥಾನದ ಕಾಂಗ್ರೆಸ್ ಮಹಾಸಭೆಯ ಮುಖಂಡರಾದ ಮೆ॥ ಬ್ಯಾನರ್ಜಿ, ಮಿ ಗೋಖಲೆ ಈ ಮೊದಲಾದವರನ್ನು ಬರಿದು ಬರೆಯಲ್ಪಟ್ಟ ವಾರ್ತೆಗಳು ಈ ಪತ್ರಿಕೆಯಲ್ಲಿ ಹೊರಡುತ್ತಿರುವವೆಂದು ತಂತೀ ವರ್ತಮಾನ ಬಂದಿದೆ

ಕಳೆದ ವಾರ ಹಿಂದುಸ್ಥಾನದಲ್ಲಿ ೨,೧೯೩ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು ಈ ಪೈಕಿ ಬೊಂಬಾಯಿ ಅಧಿಪತ್ಯ ೬೧೭, ಮಧ್ಯಪ್ರಾಂತ್ಯಗಳು ೪೩೫, ಸಂಯುಕ್ತ ಅಧಿಪತ್ಯಗಳು ೩೨೯, ಮೈಸೂರು ಸಂಸ್ಥಾನ ೧೭೬, ಮದರಾಸ್ ಅಧಿಪತ್ಯ ೧೧೦, ಮಧ್ಯ ಇಂಡಿಯ ೧೧೩, ರಾಜಸ್ಥಾನಾ ಮತ್ತು ಅಜ್ಮೀರ್‌ಮೇರ್ವಾರಾ ೫೨, ಬಿಹಾರ್ ೪೯, ಪಂಜಾಬ್ ೬೭, ಬಂಗಾಳಾ ೨೭, ಈ ರೀತಿ ಮರಣಗಳಾಗಿರುತ್ತವೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸುಪೋರ್ ಡಿವಿಜನ್ನಿನ ಪ್ರಾಂತಿಕ ಸಭೆಯು ಕಳೆದ ವಾರ ಎರಡು ದಿನ ನಡೆಯಿತು. ಸರ್ಥಚಂದ್ರ ಚೌಧುರಿಯವರು ಸಭಾನಾಯಕರಾಗಿದ್ದರು ಅರವಿಂದ ಘೋಷ್, ಪಂಡಿತ ಗಜಪತಿ ಕಾವ್ಯತೀರ್ಥ, ಸಿ ಕುಮಾರ ಕೃಷ್ಣ ಬ್ಯಾನರ್ಜಿ, ಈ ಮೊದಲಾದ ವಿದ್ವಾಂಸರು ರಾಜಕೀಯ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು ಸ್ವದೇಶೀ ಪ್ರೋತ್ಸಾಹ, ಪೆಟ್ಟಿಯ ವಿದ್ಯಾಭ್ಯಾಸ, ಬಂಗಾಳಾ ವಿಭಜನೆ, ಈ ಮುಂತಾದ ವಿಷಯಗಳನ್ನು ಕುರಿತು ತೀರ್ಮಾನಗಳು ಮಾಡಲ್ಪಟ್ಟವು

ಬೊಂಬಾಯಿನಲ್ಲಿ ಸುಂದರದಾಸ್ ಭಗವಾನ್ ಎಂಬುವನು ಹಿಂದುಸ್ಥಾನದ ಟೋಪಿ ಕಾರ್ಖಾನೆಯ ಮಾಲೀಕನಾಗಿದ್ದುಕೊಂಡು, ಹಿಂದುಸ್ಥಾನದಲ್ಲಿ ದೊರಕುವ ಪದಾರ್ಥಗಳಿಂದಲೇ ಸ್ವದೇಶಿ ಟೋಪಿಗಳನ್ನು ತಯಾರು ಮಾಡುತ್ತೇನೆಂದು ಹೇಳಿ ವರ್ತಕರಿಗೆ ಮೋಸಮಾಡಿ ಅವರಿಂದ ಹಣವನ್ನು ಅಡ್ವಾನ್ಸಾಗಿ ತೆಗೆದುಕೊಂಡು, ವಿದೇಶೀ ಟೋಪಿಗಳನ್ನು ಕೊಟ್ಟನು ಇದಕ್ಕಾಗಿ ಮ್ಯಾಜಿಸ್ಟ್ರೇಟರು ಆ ಕಾರ್ಖಾನೆಯ ಮಾಲೀಕನಿಗೆ ೩೫೦ ರೂಪಾಯಿ ಜುಲ್ಮಾನೆ, ಇಲ್ಲವೆ ಮೂರು ತಿಂಗಳ ಕಠಿಣ ಸಜಾ ಎಂಬ ಶಿಕ್ಷೆಯನ್ನು ವಿಧಿಸಿದರು

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಭಾಗಲ್ಪುರ ಎಂಬ ಸಬ್ ಡಿವಿಜನ್ ಸಂಘದ ಮೆ॥ ನಾಗೇಶ್ವರ ಪ್ರಸಾದ ಸಿಂಹರವರು ಆ ಪ್ರಾಂತ್ಯದಲ್ಲಿ ಪ್ರವಾಹಗಳ ದೆಸೆಯಿಂದ ೫೦೦-೬೦೦ ಗ್ರಾಮಗಳು ಹಾಳುಬಿದ್ದವೆ ಅಲ್ಲೂ, ೨೫,೦೦೦ ದಿಂದ ೫೦,೦೦೦ ಪ್ರಜೆಗಳ ವರೆಗೆ ಮನೆ ಮಠಗಳನ್ನು ಕಳೆದು ಕೊಂಡು ಜೀವನಕ್ಕೆ ಮಾರ್ಗವಿಲ್ಲದೆ ಸಂಕಟ ಪಡುತ್ತಿದ್ದಾರೆಂದೂ, ಅವರು ಮರಗಳ ಕೆಳಗೆ ವಾಸಮಾಡುತ್ತಾ ಇರೋಣದರಿಂದ ಅವರನ್ನು ಕಾಪಾಡುವುದಕ್ಕೆ ಬೇಗನೆ ಏರ್ಪಾಡುಗಳನ್ನು ಮಾಡದಿದ್ದರೆ ಅನೇಕರು ಸತ್ತು ಹೋಗುವರೆಂದೂ, ಧರ್ಮದಯಾಪರರಾದ ಪ್ರಜೆಗಳು ಸಹಾಯಮಾಡಬೇಕಾಗಿದೆ ಎಂದೂ ಬರೆದಿರುತ್ತಾರೆ

ಕಲ್ಕತ್ತೆಯಲ್ಲಿ ಪ್ರಸಿದ್ಧರಾದ ಮೆ॥ ಲಾಲ್ ಮೋಹನ್ ಘೋಸ್ ಎಂಬ ಬಂಗಾಳೀ ದೊಡ್ಡ ಮನುಷ್ಯರು ಕಳೆದ ಶನಿವಾರ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ ಇವರು ಬ್ಯಾರಿಸ್ಟರಾಗಿದ್ದರು. ೧೯೦೩ ನೇ ಇಸವಿಯಲ್ಲಿ ಹಿಂದುಸ್ಥಾನದ ಕಾಂಗ್ರೆಸ್ ಸಭೆಯ ಪ್ರೆಸಿಡೆಂಟರಾಗಿದ್ದರು. ಮತ್ತು ೧೮೮೫ ನೇ ಇಸವಿಯಲ್ಲಿ ವಿಲಾಯತಿ ಪಾರ್ಲಿಮೆಂಟಿನ ಮೆಂಬರಾಗಲು ಸಾಹಸಪಟ್ಟರು ವಿದ್ಯಾವಂತರಾಗಿಯೂ, ವಾಗ್ಮಿಗಳಾಗಿಯೂ, ದೇಶವತ್ಸಲರಾಗಿಯೂ ಇದ್ದ ಇವರು ಕಾಲವಾದದ್ದು ಅನೇಕರಲ್ಲಿ ವ್ಯಸನವನ್ನುಂಟುಮಾಡಿದೆ ಕಲ್ಕತ್ತಾ ಹೈಕೋರ್ಟಿನಲ್ಲಿ ಜಡ್ಜಿಗಳವರು ಇವರ ಗುಣಕಥನವನ್ನು ಮಾಡಿ ಕೊಂಡಾಡಿ ತಮ್ಮ ವ್ಯಸನವನ್ನು ಪ್ರಕಾಶಪಡಿಸಿದರು

ಪೂನಾ ಪಟ್ಟಣದಲ್ಲಿ ಮುಂದಿನ ಬುಧವಾರ ಗುರುವಾರಗಳಲ್ಲಿ ಒಂದು ವ್ಯವಸಾಯ ಪ್ರೋತ್ಸಾಹಕ ಸಮಾಜವು ಜರುಗುವುದು ಬೊಂಬಾಯಿನ ಗವರ್ನರವರು ಸಭೆಯ ಅಗ್ರಾಸನವನ್ನು ವಹಿಸುವದಾಗಿ ಒಪ್ಪಿ ಅಪ್ಪಣೆಕೊಡಿಸಿದ್ದಾರೆ ಮದರಾಸ ಮಂಡಲಿಯ, ಕಾರ್ಖಾನೆಗಳ ಮಾಲೀಕರು, ವ್ಯವಸಾಯ ಸಂಘಗಳ ಪ್ರತಿನಿಧಿಗಳು ಈ ಸಭೆಗೆ ವಿಶೇಷವಾಗಿ ಹೋಗುವರು ಸಭೆಯಲ್ಲಿ ವಾರ್ಷಿಕ ರಿಪೋರ್ಟನ್ನು ಓದಿದ ಬಳಿಕ ವ್ಯವಸಾಯ ವಿಷಯವಾದ ಅನೇಕ ಕಾರ್ಯಗಳನ್ನು ಅಲ್ಲಿನ ಫಾರಮಿನಲ್ಲಿ ಮಾಡಿತೋರಿಸುವರು ಹೊಸ ಹೊಸ ಸಾಧನಗಳ ಉಪಯೋಗವನ್ನು ಪ್ರದರ್ಶನಮಾಡುವರು ಇವುಗಳನ್ನು ನೋಡುವುದಕ್ಕಾಗಿ ಸುತ್ತುಮುತ್ತಿನ ಅನೇಕ ವ್ಯವಸಾಯಗಾರರೂ ಜಮೀನ್ದಾರರೂ ಅಲ್ಲಿ ಹೋಗಿ ಸೇರುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

ವಿದೇಶ ವರ್ತಮಾನಗಳು.

ಆಫ್ರಿಕದ ಉತ್ತರ ಭಾಗದಲ್ಲಿರುವ ಸೋಮಾಲಿಲ್ಯಾಂಡಿನಲ್ಲಿ ಮುಲ್ಲಾ ಎಂಬ ಕಡವೆಯವನು ಸೈನ್ಯಸಮೇತ ಇಂಗ್ಲೀಷಿನ ಜನರ ಮೇಲೆ ಬಿದ್ದು ಅನೇಕರನ್ನು ಕೊಂದ ದ್ದಲ್ಲದೆ, ಅವರ ದನ ಕುರಿಗಳನ್ನು ಅಪಹರಿಸಿರುತ್ತಾರೆ

ಜರ್ಮನಿ ದೇಶದ ಹ್ಯಾಂಬರ್ಗ್ ಪಟ್ಟಣದ ಕ್ಯಾಪ್ಟನ್ ಕ್ಲೇನ್ ... ವಾದ ರೈಟ್ ಎಂಬ ತನ್ನ ... ಮುಖೇನ ... ಪಡಿಸಿ ... ಮಾಡಿರುತ್ತಾರೆ

ಪರ್ಷಿಯಾ ರಾಜ್ಯದ ರಾಜ ಷಾ ಸುಲ್ತಾನರು ... ರಾಜ್ಯವನ್ನು ಬಿಟ್ಟು ... ರವರ ... ರನ್ನು ಕಳುಹಿಸುತ್ತಾರೆ

ಅಮೇರಿಕದಲ್ಲಿ ... ಮೊದಲನೆಯದೆಂದು ಪ್ರಖ್ಯಾತಿ ಪಡೆದ ... ಈ ... ಭಾಗಗಳು ... ಲಕ್ಷ ರೂಪಾಯಿ ... ಲಕ್ಷ ರೂಪಾಯಿ ... ವಿಕರಿಯಾಗುತ್ತಿದ್ದವೆ ... ವರ್ತಮಾನ ಬಂದಿದೆ

ಅಮೇರಿಕದಲ್ಲಿ ಕಾಲವಾದ ಮಿಸ್ಟರ್ ಹ್ಯಾರಿಮನ್ ಎಂಬುವರು ೩॥ ಲಕ್ಷ ರೂಪಾಯನ್ನು, ... ಗೋಲ್ಡ್ ... ಎಂಬುವರು ... ಲಕ್ಷ ರೂಪಾಯನ್ನು, ಎಡ್ವರ್ಡ್ ... ಎಂಬಾತನು ... ಲಕ್ಷ ... ಸಾವಿರ ರೂಪಾಯನ್ನು ... ಎಂಬ ತನು ೧೨,೬೦,೦೦೦ ರೂಪಾಯನ್ನು ತಮ್ಮ ತಮ್ಮ ಆಸ್ತಿಗಳಿಂದ ತೆಗೆದು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ

ಮಿ ಶ್ಯಾಮಜಿ ಕೃಷ್ಣವರ್ಮರವರು ಫ್ರಾನ್ಸಿನಿಂದ ಬರೆದು ಕಳುಹಿಸುವ ರಾಜದ್ರೋಹಕರವಾದ ವಾರ್ತೆಗಳನ್ನು ಅವರೇ ಪ್ರಕಟಿಸುವ "ಇಂಡಿಯನ್ ಸೋಷಿಯಾಲಜಿಸ್ಟ್" ಎಂಬ ಪತ್ರಿಕೆಯಲ್ಲಿ ಅಚ್ಚುಹಾಕಿಕೊಟ್ಟ ಮಿ ಆಲ್‌ಫ್ರೆಡ್ ಎಂಬ ಇಂಗ್ಲೀಷ್ ಮುದ್ರಾಯಂತ್ರದವನನ್ನು ಲಂಡನ್ ಪಟ್ಟಣದಲ್ಲಿ ಹಿಡಿದು ವಿಚಾರಣೆಮಾಡಿ ಮ್ಯಾಜಿಸ್ಟ್ರೇಟರು ಆತನಿಗೆ ೪ ವರುಷ ಸಾಧಾರಣ ಸಜಾವನ್ನು ವಿಧಿಸಿದರು

ಮಿ ಅರ್ನೆಸ್ಟ್ ಲೈಟ್ ಎಂಬಾತನು ವಿಮಾನದಲ್ಲಿ ತನ್ನ ಜೊತೆಯಲ್ಲಿ ಒಬ್ಬನನ್ನು ಕೂರಿಸಿಕೊಂಡು ಆಕಾಶಕ್ಕೆ ಹೋಗಿ ಒಂದೂವರೆ ಗಂಟೆಯ ಹೊತ್ತು ಸಂಚಾರ ಮಾಡಿ ಬಂದನು. ಎಂ ಪಾಲ್ಹನ್ ಎಂಬ ಕಾರೀಗಾರನು ಓಸ್ಟೆಂಡ್ ನಗರದಲ್ಲಿ ಏರ್ಪಡಿಸಲ್ಪಟ್ಟ ತನ್ನ ವಿಮಾನದೊಳಗೆ ಸಂಚರಿಸಿ ಒಂದು ಸಮುದ್ರದ ಮೇಲೆ ಇಳಿದನು ಇವನಿಗೆ ಅಪಾಯವೇನೂ ಸಂಭವಿಸಲಿಲ್ಲ ಇವನ ಸಾಹಸವನ್ನು ಮೆಚ್ಚಿ ೭,೫೦೦ ರೂಪಾಯನ್ನು ಬಹುಮಾನ ಕೊಟ್ಟರು

ಕಾಪ್ಟನ್ ಸ್ಕಾಟ್ ಎಂಬೊಬ್ಬ ಇಂಗ್ಲಿಷರನು ಮುಂದಿನ ವರುಷ ಆಗಸ್ಟ್ ತಿಂಗಳಲ್ಲಿ ದಕ್ಷಿಣ ಧ್ರುವ ಪ್ರಾಂತ್ಯವನ್ನು ನೋಡಿಕೊಂಡು ಬರಬೇಕೆಂದು ಈಗಿನಿಂದ ಸನ್ನಾಹವ ಮಾಡಿಕೊಳ್ಳುತ್ತಿರುವನು ದಕ್ಷಿಣ ಧ್ರುವವನ್ನು ತಲುಪಿ, ಕಿಂಗ್ ಎಡ್ವರ್ಡ್ ಲ್ಯಾಂಡ್ ಎಂಬ ಪ್ರದೇಶದ ಸ್ಥಿತಿಗತಿಯನ್ನು ನೋಡಿಕೊಂಡು ಬರಬೇಕೆಂಬುವದೇ ಇವನ ಉದ್ದೇಶ ಈ ಪ್ರಯಾಣದಲ್ಲಿ ... ನಾಯಿಗಳನ್ನೂ, ಕುದುರೆಗಳನ್ನೂ, ಹಿಮಗಾಡಿಗಳನ್ನೂ ಮತ್ತು ... ಮೋಟಾರ್ ಗಾಡಿಗಳನ್ನೂ ತೆಗೆದುಕೊಂಡು ಹೋಗಬೇಕೆಂದಿರುವನು ಇದಕ್ಕೆಲ್ಲಾ ಸುಮಾರು ... ಲಕ್ಷ ರೂಪಾಯಿ ಬೇಕಾಗಿರುವುದು ಅಂದಾಜಾಗಿದೆ, ಈ ಹಣವನ್ನು ಚಂದಾ ಮೂಲಕ ಕೂಡಿಸಬೇಕೆಂದು ಪ್ರಯತ್ನಪಟ್ಟಿರುತ್ತಾನೆ.

Printed and Published by the Rev H GULLIFORD, Proprietor and Manager, Wesleyan Mission Press, Mysore. 23/9/1909

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೧೯೦೯ ನೇ ಇಸವಿ ಸೆಪ್ಟಂಬರ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೧೮

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 33

೧ ಲೋಕಾನಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ ಜ್ವರ, ಹೊಟ್ಟೆಶೂಲಿ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ಸಶ್ಯತ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯನ್ನಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀಲಿ ಹನಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧವಾದಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಿಕಾಶೂಲಿ, ಮಕ್ಕಳ ಎಳವು, ಜ್ವರ, ವಿಷಮಜ್ವರ, ಕ್ಷಯರೋಗಗಳನ್ನು ಬಹು ಬೇಗ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಸಿಗುವವರಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್

ವೈದ್ಯಶಾಲಾ, ಲಕ್ಷ್ಮೀಪುರಂ ರೋಡ್, ಮೈಸೂರು

ಜ್ವರಹರಿ.

18 J5

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಬಿಡಿ ಜ್ವರ ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ಗುಣಪಡಿಸುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಔಷಧಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಅಪೇಕ್ಷೆ ಪಡುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ ೧—೮ ರೂ ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಚಿಮಂಕರ್ಪೂರ.

ಈ ಔಷಧವು ಅಜೀರ್ಣ, ರಕ್ತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗುಪ್ತಾ ಅವರು—ಜ್ವರ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹನುಮಯ್ಯನವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೨—೦

ಪರಸ ಊರವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಕಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಗಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

47 19

ತಲೆನೋವು, ವಾಯುನೋವು, ಸೆಳತ, ಗಂಟ್ಟನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿನೆಮುದಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗ ಗುಣಕೊಡುತ್ತದೆಂದು ಒಪ್ಪಿಕೊಂಡು ಸ್ಥಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ತೆಗೆದುಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಕೇಳುವರು ಈ ಅದೋಘವಾದ ತೈಲವು ನೋಡಿದ ಮಾತ್ರಕ್ಕೆ ಸನ್ನು ಹಿಡಿದು ಅದರ ಹುಟ್ಟನ್ನು ಹೇಳುವುದಾಗುತ್ತದೆ

ಕ್ರಯ ಸೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೬ ಬಾಟ್ಲು ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟ್ ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜಿ ಎಸ್ ಕನ್ನಂಗರೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಕ್ಲೆಮೆಂಟ್,

೩೩, ವೇಪಮುಟ್ಟೆಟ್ಟೆ ಬೀದಿ, ವೇಪೇರಿ, ಮದರಾಸ್.

ಸಿ ಎಲ್ ಎಸ್ ಬುಕ್ ಡಿಪ್ಪೊ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(1೯೦ ಪುಟಗಳು ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಪೈಸೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಇಂಗ್ಲೀಷ ಮಹಾತ್ಮರಲ್ಲಿ ಪ್ರಸಿದ್ಧನಾದವನು ಇದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವ ದುಸ್ಥಿತಿಯ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(100 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ದೊರಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-88]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪ್ಪೊ, ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಷಣಾತ ಗುಣಕಾರಿಯು [30-32]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಚಾಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು ೦ ೮-೦

ಗಜಕರ್ಣದ ಮುಲಾಮು.

ಮೂರು ನಾಲ್ಕು ತಿಂಗಳುವರೆಯೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗು ದಿನಲ್ಲ ಡಬ್ಬಿ ಒಂದರ ಕಿಮ್ಮತು ೦-೬ ೦ ೧೨ ಡಬ್ಬಿಗಳಿಗೆ ೪-೦ ೦

ಅಶ್ವಾಮಿಶ್ರಿತ	೨-೦-೦
ಚೇಳುಕಡಿತದ ಮದ್ದು	೦-೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦-೦
ಸುಂದರಿ ತೈಲ—ಮುದ್ದಿಗಳಿಗೆ	೦ ೮-೦
ಬಾಲಬು ವಸ್ತ್ರ—ಬಾಲಾಜಿಗೆ	೦ ೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಬಿಜ್ಜ ಮುಲಾಮು—ಮಕ್ಕಳ ಬಿಜ್ಜಿಗೆ	೦-೪ ೦
ಕೇಶವರ್ಧಿನೀ ತೈಲ—ತಲೆಯ ಮೊದಲಿಗೆ	೧-೦-೦
ಕಫನಾಶಕ ಚೂರ್ಣ—ಉಸ್ಸು ರೋಗಕ್ಕೆ	೦ ೫-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 39

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ , ೧ ರೂ ೪ ಆ.

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ , ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಹೆಂಗಸರ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೈಚೀಲ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆ ? ಹೀಗಿದ್ದಾ —ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನಿನಗೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಆರುವಾ ಮೂರೋ ರಾತ್ರಿ ಮಲಗುವಾಗಲೇ ಮುಂಚೆ ತೆಗೆದುಕೋ ಗಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು.

(೧೫ ಆಗೆ ಬುದ್ಧಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕೆಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳಿಗೆಲ್ಲ ಅರ್ಧದಷ್ಟಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ, ಅಜೀರ್ಣ ; ಅಗ್ನಿಮಾಂದ್ಯ, ಗಾಬರಿ, ಅರುಚಿ ; ಎದೆಯು ಕಟ್ಟುತ್ತಿರುವುದು, ತಲೆತಿರುಗುವುದು ; ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಜವಾಗಿಯೂ ಕೆಲಸ ಮಾಡುತ್ತವೆ. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತವು ಸರಿಯಾಗಿ ಇಳಿಯುವಂತೆ ಮಾಡಿ, ಅಂಗಗಳೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು ಕಷ್ಟದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [67-5]

ಬೆಲೆ ೪ ಪಟ್ಟಿ, ೪೮ ಗುಳಿಗೆಗಳುಳ್ಳ ೧ ಆಣೆ, ೧೨ ಆಣೆ ಬುದ್ಧಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುದ್ಧಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ ಡೋನ್ ಕಂ. ಬಾಕ್ಸ್ ೩೦, ಬೊಂಬಾಯಿ —ಇವರಿಂದ ದೊರೆಯುವುದು.

ಮಕ್ಕಳ ಆರೋಗ್ಯವನ್ನು

ಯಜಮಾನರು ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆ ಯುಳ್ಳವರಾಗಿರುವರೆಂದು ಕಂಡ ಕೂಡಲೆ

SCOTT'S EMULSION. 6 19

(ಸ್ಕಾಟ್ಸ್ ಇಮಲ್ ಷನ್)

ಇವರಿಗೆ ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕಾಟ ಸಹಿತ ದೊಡ್ಡ ಪ್ರಯತ್ನ ಸತೋರಾ ರದು

ಎದೆ ಸಂತೋಷವೂ ಆನಂದವೂ ಸಡುವ ವಾಗಿ ಬಾರದೆ ಬಲ ಹೊಂದಿ ಸುಖಿಜೀವಿ ಕೊಂಡಿರುವನು

ಕ್ರ್ಯಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧವಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಚಿತ್ರವುಳ್ಳ ಗುರುತು ಔಷಧವನ್ನು ಕೊಂಡುಕೊಳ್ಳಿ.

ಸಂಜೀವಿನೀ ಔಷಧಾಲಯ, ಮೈಸೂರು.

23 31

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೀವನ, ವಾಯುಸಂಬಂಧಗಳು, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಮಾಂದ್ಯ, ಮಂಕುತನ, ಉರಿಮೂತ್ರ, ಸೊಂಟನೋವು ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವನಶಕ್ತಿಯನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಸ್ಥೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವವರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ:—ನಾನಾ ಬಗೆ ಜ್ವರಗಳು, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ. ೩-೪ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲರಾಹರ ವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಧಾನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಶಕ್ತಿಯನ್ನು ನೆನಪಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳು, ತರಿಸಾದ ಅತ್ತರುಗಳು, ಗಂಧದಬತ್ತಿ ಊದುಬತ್ತಿಗಳು ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು. ಅರ್ಥಾತ್ ಲೆಟರ್ ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

4 39



ಚಳ್ಳುಳುಕಿದ ನೋವು, ಪೆಟ್ಟುಗಳಿಂದ ಆಗುವ ಗಾಯ, ಕಿಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಲ್ಲಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕೆಲೆಯುವ ಬಾಧೆ, ಕಿಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದು ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವಿನ ಮಾಲೆಯೊಳಕ್ಕೆ [illegible] ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಸಲಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

ಜಾಗ್ರತೆ ತರಿಸಿಕೊಳ್ಳಿರಿ

71-1

ಯಿದ್ಯ‌ರ್ಡ್ ಸ್ಕಾಲ್ ಮತ್ತು, ಕೈಪ್ಯ ಓಫ್ ಫೇಸ್, ಕ್ಯಾಲರ್ ಮಾತು ಮಾಮು ೧ಕ್ಕೆ ಕ್ರಯ ೦-೪-೦ ಸ್ಕಾಲ್ ಸ್ಟೈಲ್, ಓವರ್ ಹೈ ಸ್, ಕೀಪಿಂಗ್ ಓವರ್ ೧ಕ್ಕೆ ಕ್ರಯ ೦-೮-೦ ವಿಳಾಸ—ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟ್ ಕೋಲಾರ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

3 4

ನಮ್ಮಲ್ಲಿ ಈಗ ವಾರಾಟಕ್ಕೆ ಸಿದ್ಧವಾಗಿರುವ ಬಟ್ಟೆ ಬಟ್ಟೆಗಳು ಸುಖ ಕಿಂಗಿ ತು ರಿಕ್ಕಟ್ಟು ಬಹಳ ಬಾಳಿಕೆ ಬರುವಂತವುಗಳಾಗಿದೆ ಇವನ್ನು ಯಾರು ಕೊಂಡರೂ ಸಹ ಈ ಬಟ್ಟೆಗಳು ಕೊಳ್ಳಲಾದಲ್ಲಿ ಸಹ ದಾ ನವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಂಗಿ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಟ್ಟಿ ಒಂದಕ್ಕೆ ಆ ಆಣೆಯಿಂದ ೧ ಆಣೆ ವರೆಗಿನ ಬೆಲೆಗಳಿಂದ ಆಗಲಿ ಬಟ್ಟೆಗೆ ಆಗಲಿ ವ ರೆಲ್ಲ ಮಿತ್ತವೆ ಕಂಬಳಿಗಳು, ಜಮಖಾನಗಳು, ಜಮಖಾನ ಬಟ್ಟೆಗಳು, ಮುಸುಕು, ಟೋಪಿಗಳು, ಕಾಲುಚೀಲಗಳು ಇವೇ ಮುಂತಾದವುಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ ಮ್ಯಾನೇಜರ್,

ಸಿ. ಎಚ್. ಎಸ್. ಬುಕ್ ಡಿಪೋ, ಮೈಸೂರು.

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ದೊರಕಿತು ದೊರೆಯಲಾರದು

70-2

ಇಂಗ್ಲೀಷ್ ಕಲಿಯುವ ಪುಸ್ತಕ, ಕ್ರಯ ೧—೫—೦ ಇಂಗ್ಲೀಷ್ ಭಾಷೆಯನ್ನು ಓದುವವರಿಕ್ಕೂ ಬರೆಯುವವರಿಗೂ ವ ಕ್ತಾಮರ್ಪಣವೆ, ತರ್ಜುಮೆ, ಭಾಷಾಂತರ ಮಾಡುವುದಕ್ಕೂ, ಕನ್ನಡದ ಮಾದರಿ ಮೊದಲಾದ ಕಾಗದಗಳನ್ನು ಬರೆಯುವ ಪದ್ಧತಿ ಮೊದಲಾದ ಇನ್ನೂ ಅನೇಕ ಉಪಯೋಗವಾದ ವಿಷಯವನ್ನು ಈ ಪುಸ್ತಕ ಸಹಾಯದಿಂದ ೧—೩ ತಿಂಗಳಲ್ಲಿ ಚೆನ್ನಾಗಿ ಕಲಿಸುವ ಉತ್ತಮವಾದ ಪುಸ್ತಕವಿದು ಕ್ರಯ ರೂ ೧—೮—೦

ವಿಳಾಸ —ಎಂ. ಕೆ ಮಾತರ ಕಂಪನಿ, ಲಕ್ಕೂರ್ ಪೋಸ್ಟು

೧ನೇ ಸಂಪುಟ ಕನ್ನಡ ತಥೋಪನಿಷತ್ತು ಗದ್ಯ, ಕ್ರಯ ೧—೮—೦ ಮತ್ತು ೨ನೇ ಸಂಪುಟ ಕೇರಿಯ ಭೈಂದಾಗಿರತಕ್ಕ ಪುಸ್ತಕ ೨—೦—೦ ನವರಸಯು ಕನ್ನಡಿಗೆ ಪೂರ್ವಿಕರು ಸೋವದೇವನಿಂದ ರಚಿಸಿದ ಸಂಸ್ಕೃತ ಗ್ರಂಥವನ್ನು ಸಿಂಗರದ ಸ್ಕೂಲ್ ಹೆಡ್ಮಾಸ್ತರಾಗಿದ್ದ ಗತಿಸಿದ ಮಿ ರಾ ಎಕ್ ಕೃಷ್ಣರಾಯರವರಿಂದ ಕನ್ನಡದಲ್ಲಿ ಬರೆಯಲ್ಪಟ್ಟು ಮ್ಯಾ ರಾ ಬಿ ಮರಿ ಸಂಗರಾವ ಯ್ಯನವರಿಂದ ಪರಿಶೋಧಿಸಿ ಈಗ ಓದುವುದಕ್ಕೆ ಪ್ರಚಾರದಲ್ಲಿರುವ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಅತ್ಯಂತ ಸ್ವಾರಸ್ಯವಾದ ಪುಸ್ತಕವಿದು ಕ್ರಯ ರೂ ೧—೮—೦

ಕನ್ನಡದ ಇಂಗ್ಲೀಷು ಕಲಿಯುವಿಕೆ, ಕ್ರಯ ೧—೮—೦ ಇಂಗ್ಲೀಷ್ ಭಾಷೆಯನ್ನು ಓದಲೂ, ಬರೆಯಲೂ, ಮಾತನಾಡಲೂ, ಬೋಧಕರ ಸಹಾಯವಿಲ್ಲದೆ ಕಲಿಸತಕ್ಕ ಪುಸ್ತಕವಿದು ಕ್ರಯ ರೂ ೧—೮—೦

ವಿಳಾಸ —ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟ್, ಮಾಲೂರ್, ಕೋಲಾರ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3—9—1909 ರಿಂದ 10—9—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	18	9	6	6
ಮೈಸೂರು ,,	110	83	0	0
ಬೆಂಗಳೂರು ಡಿಸ್ಟ್ರಿಕ್ಟ್	15	12	154	121
ಮೈಸೂರು ,,	28	21	0	0
ಕೋಲಾರ್ ,,	5	5	0	0
ಕೋಲಾರ್ ಚಿನ್ನದ ಗಣಿಗಳು	0	0	9	0
ತುಂಕೂರು ಡಿಸ್ಟ್ರಿಕ್ಟ್	0	0	1	1
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	22	12	0	0
ಶಿವಮೊಗ್ಗಾ ,,	0	0	11	9
ಜುಮ್ಲಾ	198	141	174	128

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಭಾದ್ರಪದ ಬಹುಳ ಪಾಡ್ಯಮಿ ಗುರುವಾರ ದಿಂದ ಭಾದ್ರಪದ ಬಹುಳ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಸೆಪ್ಟಂಬರ್ ಮತ್ತು ಅಕ್ಟೋಬರ್

ದಿ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷ್ ತಾರೀಖು
30	ಗುರು	ಪಾಡ್ಯಮಿ	27 12	ರೆ	11 11	15
1	ಶುಕ್ರ	ಬಿದಿಗೆ	21-20	[illegible]	12 2	16
2	ಶನಿ	ತದಿಗೆ	11 4	ಭ	10 25	17
3	ರವಿವಾರ	[illegible]	10	ಕೃ	11-13	18
4	ಸೋಮ	ಪಂಚಮಿ	1 1	ರೋ	10-10	19
5	ಮಂಗಳ	ಷಷ್ಠಿ	0-18	ಮೃಗಶಿರ	57 40	20
6	ಬುಧ	ಅಷ್ಟಮಿ	55 18	ಆ	28 10	21

೭ ಸೋಮವಾರ ವ್ಯತೀಪಾತ ತಿಥಿದ್ವಯಂ, ಪ್ರತಿಪತ್ತಿಲು ಮಹಾ ಭರಣಿ ಬುಧ ತ್ರಿತಿಯು ನಾಗಪತಸಮಾಪ್ತಿಯು ಪತಿ ಸಾತವಾಹಾ ೧೦ ೧೧ ಸಭಾಕರ್ಮ ನವಮಿನು ಮಧ್ಯಾಷ್ಟಮಿ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಶಿವಸಿ ಅಕ್ಕಿ ಪಲ್ಲ ೧ಕ್ಕೆ ರೂ	೧೫-೦-೦	೧೫-೪-೦
ಕಂಬಿಕ ಅಕ್ಕಿ ಅವಲ್	೧೬-೮-೦	೧೪-೮-೦
,, ಮಧ್ಯಮ	೧೬-೦-೦	೧೩-೮-೦
ಜಾಪಾನೀ ಅಕ್ಕಿ	೧೪-೦-೦	೧೫-೮-೦
ಸಣ್ಣಕ್ಕಿ ಅವಲ್	[illegible]	೧೬-೮-೦
,, ಮಧ್ಯಮ	೧೬-೦-೦	೧೬-೦-೦
ಕೊಗರೀ ಜೋಳ ಪಲ್ಲ ೧ಕ್ಕೆ	೧೬-೦-೦	೧೫-೮-೦
,, ಮಧ್ಯಮ	೧೫-೦-೦	೧೫-೦-೦
ಹೈರಾಗಿ ಪಲ್ಲ ೧ಕ್ಕೆ	೯-೦-೦	೯-೦-೦
ಕಾರಾಗಿ	೮-೮-೦	೮-೮-೦
ಜೋಳ	೯-೪-೦	೯-೦-೦
ಹಲಸಂದೆ ಪಲ್ಲ ೧ಕ್ಕೆ	೧೦-೦-೦	೧೧-೮-೦
ಬಿಳೀ ಅವರೆ	೧೩-೮-೦	೧೫-೮-೦
ಹೆಸರು	೧೩-೮-೦	೧೧-೧೨-೦
ಉದ್ದು	೧೪-೪-೦	೧೩-೦-೦
ಕಡಲೆ	೧೪-೪-೦	೧೧-೦-೦
ಎಳ್ಳು ಸೇರು ೧೨೭ ಕ್ಕೆ	೧೫-೦-೦	೧೫-೦-೦
ಹುರುಳಿ	೧೨-೮-೦	೧೨-೮-೦
ಹರಳು ೧೨೭ ಸೇರಿಗೆ	೧೪-೦-೦	೧೦-೦-೦
ನೀಗೇಕಾಯಿ ಮಣ ೧ಕ್ಕೆ	೨-೮-೦	೨-೬-೦
ಮೆಣಸಿನಕಾಯಿ	೬-೦-೦	೪-೧೨-೦
,, ಮಧ್ಯಮ	೫-೮-೦	೪-೪-೦
ಬೆಲ್ಲ ದೊಡ್ಡ ಅಚ್ಚು	೯-೮-೦	ಮ ೨-೪-೦
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦	೫-೦-೦
ಹರಳೆಣ್ಣೆ ,,	೫-೮-೦	೪-೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	೯-೦-೦
ಉಪ್ಪು ,,	೬-೧೨-೦	೫-೧೨-೦
ಹುಣಸೇ ಹಣ್ಣು	೧-೧೨-೦	೧-೧೨-೦
,, ಹಳೇದು	೧-೮-೦	೧-೮-೦
ತುಪ್ಪ ಮಣ ೧ಕ್ಕೆ	೧೬-೮-೦	೧೪-೪-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೪-೧೨-೦
ಅಳಲೇಕಾಯಿ ಮಣ ೧ಕ್ಕೆ	೦-೮-೦	೦-೧೨-೦
ಅಂಟುವಾಳದ ಕಾಯಿ ಮಣ ೧ಕ್ಕೆ	೧-೦-೦	೦-೧೧-೦
ಚಿನ್ನ (ಸವರಿನ್) ಕೆಂಪು	೧೫-೬-೦	೧೫-೯-೦
,, ,, ಪಸಿಮೆ	೧೬-೦-೦	೧೫-೧೪-೦
,, ,, ಗಟ್ಟಿ ತೊಲ ೧ಕ್ಕೆ	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೫-೦-೦

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909ನೇ ಸೆಪ್ಟಂಬರ್ ತಾ 18 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ. ಗಂಡಾಳು	ಹೆಣ್ಣಾಳು.	ಮಕ್ಕಳು	ಕೂಲಿ ಕೊಟ್ಟದ್ದು. ರೂ	ಧರ್ಮಾರ್ಥ ಸಹಾಯ ಪಡೆದ ಜನರು
ಬೆಂಗಳೂರು	15	10	..	7	18
ಕೋಲಾರ	161	76	20	277	..
ತುಂಕೂರು	15	...	..	.	...
ಮೈಸೂರು	..	...	..	...	...
ಹಾಸನ	25	45	.	100	...
ಶಿವಮೊಗ್ಗ	...	..	...	..	...
ಕಡೂರು	...	.	...	.	...
ಚಿತ್ರದುರ್ಗ	.	..	...	.	...
ಮಾರಿಕಣಿವೆ	192	191	8	425	...
ಸ್ಯಾನಿಟೇರಿ	...	..	...	..	...
ಒಟ್ಟು	408	312	28	809	18

ವ್ಯವಸಾಯ ವಿಚಾರವು.

ಜೋಳ, ಕಬ್ಬು ಮತ್ತು ಮುಸುಕಿನಜೋಳಕ್ಕೆ ಒಂದು ಬಗೆಯ ದುಂಬಿ ಕೊರೆದು ದಂಟಿನೊಳಗಿನ ಗರ್ಭವನ್ನು ತಿಂದು ಧ್ವಂಸವನ್ನು ಮಾಡುತ್ತದೆ. ಗಿಡವು ಎಳೆದಾಗಿದ್ದಾಗ ಹುಳ ಬಿದ್ದರೆ ಹುಳು ತಾಕಿದ ದಂಟು ಒಣಗಿ, ಹೊಸ ಚಿಗುರುಗಳು ಬುಡದಲ್ಲಿ ಗಿಡ ಬೇರೂರಿಕೊಳ್ಳುತ್ತದೆ. ಗಿಡವು ಬಲಿತ ನಂತರ ಹುಳು ಬಿದ್ದರೆ ಅನೇಕಸಾರಿ ಒಣಗಿ ಹೋಗುವುದು. ಇದಕ್ಕೆ ಪರಿಹಾರವೇನೆಂದರೆ, ಹುಳು ಸೋಂಕಿದ ಕಡ್ಡಿಗಳನ್ನೆಲ್ಲಾ ಬುಡದಿಂದ ಕತ್ತರಿಸಿ ಸುಟ್ಟರೆ ಒಳಗಿರುವ ಹುಳು ಸತ್ತುಹೋಗುತ್ತದೆ. ಇಲ್ಲವಾದರೆ ಇದು ರೂಪಾಂತರಗಳನ್ನು ಹೊಂದಿ ಇತರ ದಂಟುಗಳಿಗೂ ವ್ಯಾಪಿಸಿ ಮೊಟ್ಟೆಗಳಿಟ್ಟು ಈ ಮೂಲಕ ಹುಳಗಳು ಹೆಚ್ಚಿ ಪೈರು ನಾಶವಾಗುವುದು. ಈ ಹುಳುವು ಕಬ್ಬಿಗಿಂತ ಮುಸುಕಿನಜೋಳಕ್ಕೆ ಬೀಳುವುದು ಹೆಚ್ಚು. ಆದಕಾರಣ ಕಬ್ಬಿನ ಗದ್ದೆಯಲ್ಲಿ ಹುಳದ ಕಾಟ ತಪ್ಪಿಸಬೇಕಾದರೆ ಕಬ್ಬು ನೆಡುವ ಕಾಲದಲ್ಲಿ ಅಲ್ಲಲ್ಲಿ ಒಂದೊಂದು ಮುಸುಕಿನಜೋಳವನ್ನು ಬಿತ್ತಿದರೆ ಹುಳುವು ಕಬ್ಬನ್ನು ಬಿಟ್ಟು ಜೋಳಕ್ಕೆ ಬೀಳುವುದು. ಈ ಜೋಳದ ಕಡ್ಡಿಗಳನ್ನು ಅನಂತರ ಕಿತ್ತು ಬೆಂಕಿಗೆ ಹಾಕಬಹುದು. ಜೋಳದ ಹೊಲಕ್ಕೆ ಹುಳು ಬಿದ್ದರೆ ಫಸಲು ಕಟಾವಾದ ಬಳಿಕ ಕೂಳೆಗಳನ್ನು ಬುಡಸಹಿತ ಕಿತ್ತು ಸುಡಬೇಕು. ಹೀಗೆ ಬಿಟ್ಟರೆ ಹುಳು ಕೂಳೆಯಲ್ಲಿ ಜೀವಿತವಾಗಿದ್ದು ಮುಂದಿನ ಪೈರನ್ನೂ ಹಿಡಿಯುವುದು.

ಮೈಸೂರು ಸಿಟಿ ಟ್ರಸ್ಟ್ ಬೋರ್ಡಿನ ಮೀಟಿಂಗು

ರಾಜಧಾನಿಯ ಅಭಿವೃದ್ಧಿ [illegible] ಟ್ರಸ್ಟ್ ಬೋರ್ಡಿನ ಮೆಂಬರುಗಳು [illegible] ವಾಡಿರುವ ಮುಖ್ಯ ವಿಷಯಗಳಾವವೆಂದರೆ —

ಅಡ್ವೊಕೇಟ್ ಮಿ ಎ ರಾಮಣ್ಣನವರು [illegible] ರಸ್ತೆಯಲ್ಲಿ [illegible] ಸುಮಾರು [illegible] ನಿವೇಶನವನ್ನು ತಮಗೆ ಮುಫತ್ತಾಗಿ ಕೊಡಿಸಬೇಕೆಂದೂ, ಆ ನಿವೇಶನದಲ್ಲಿ [illegible] ರೂಪಾಯಿ [illegible] ಧರ್ಮದ [illegible] ಕಟ್ಟಿಸುವೆನೆಂದೂ ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಮಿ ರಾಮಣ್ಣನವರಿಗೆ ಆ ನಿವೇಶನವನ್ನು [illegible] ಕೊಟ್ಟು, ಅವರು ಟ್ರಸ್ಟ್ ಬೋರ್ಡಿನವರು ಒಪ್ಪುವ ಪ್ಲಾನ್ ಪ್ರಕಾರ ಕಟ್ಟಡ ಕಟ್ಟುವುದಾಗಿಯೂ ಅವರೂ ಅವರ ನಂತರ [illegible] ಆ ಕಟ್ಟಡವನ್ನು ಧರ್ಮ ಕೆಲಸಕ್ಕೇನೆ ನಿಯೋಗಿಸುವುದಾಗಿಯೂ ಒಪ್ಪಂದವನ್ನು ಬರೆಸಿಕೊಳ್ಳಬೇಕೆಂದೂ ಹಾಗೆ ತಪ್ಪಿದ ಪಕ್ಷದಲ್ಲಿ ಅವರಿಂದ ಆ ನಿವೇಶನಕ್ಕೆ ಜಮಾ ಗಡತ್ತು [illegible] ಕ್ರಯ ವಸೂಲ್ಮಾಡಬೇಕೆಂದೂ ತೀರ್ಮಾನ ಮಾಡಿದರು.

[illegible] ಫಾದರ್ ಎಂ [illegible] ಯವರು ಹೊಸ ಮೊಹಲ್ಲಾ [illegible] ಒಂದು ದೇವಾಲಯವನ್ನೂ ಒಂದು ಸ್ಕೂಲ್ ಮನೆಯನ್ನೂ ಒಂದು ವಾಸದ ಮನೆಯನ್ನೂ ಕಟ್ಟಿಸುವುದಕ್ಕೆ ದೊಡ್ಡ ಮೊಹಲ್ಲಾದ ದಕ್ಷಿಣಭಾಗದಲ್ಲಿರುವ ಸುಮಾರು ಒಂದೂವರೆ ಎಕರೆ ಜಮೀನನ್ನು ಕೊಡಿಸಿಕೊಡಬೇಕೆಂದು ಕೇಳಿದ್ದರು. ಟ್ರಸ್ಟ್ ಬೋರ್ಡಿನವರು ಆ ಜಮೀನನ್ನು [illegible] ಅವರಿಗೆ [illegible] ಕ್ರಯಕ್ಕೆ ಕೊಡಬೇಕೆಂತಲೂ ಒಂದು ವೇಳೆ ಈ ಕ್ರಯದ ಮೇಲೆ ಎಕರೆಗೆ ೧೦೦ ರೂಪಾಯಿಗಿಂತ [illegible] ಆ ಜಮೀನನ್ನು [illegible] ವಸೂಲ್ಮಾಡಬೇಕೆಂತಲೂ ತೀರ್ಮಾನ ಮಾಡಿದರು.

[illegible] ಸಯ್ಯಾಜಿರಾವ್ ರಸ್ತೆಯಲ್ಲಿ [illegible] ಕೆಲವರು ಅಂಗಡಿಗಳನ್ನು [illegible] ಟ್ರಸ್ಟ್ ಬೋರ್ಡಿನವರು [illegible] ನಿವೇಶನಗಳನ್ನು [illegible]

[illegible]

ಮಿ [illegible] ಮುನಿಸಿಪಾಲಿಟಿ [illegible] ಅಂಗಡಿ [illegible] ಟ್ರಸ್ಟ್ ಬೋರ್ಡಿನಲ್ಲಿ ಇತ್ಯರ್ಥವಾಗಿದೆ.

ಬಡಬಗ್ಗರ ಮನೆಗಳನ್ನು ಒಡೆಯುವಾಗ್ಗೆ ಅವರಿಗೆ ಪ್ರತಿಫಲ (ಕಾಂಪನ್ ಸೇಷನ್) ಕೊಡದೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ವಿಷಯದಲ್ಲಿ ಒಂದು ಸಬ್ ಕಮಿಟಿಯು ಏರ್ಪಾಡಾಗಿದೆ. ಇವರು ಈ ವಿಚಾರವನ್ನು ಚರ್ಚಿಸಿ ಬೋರ್ಡಿಗೆ ಸಲಹೆಗಳನ್ನು ಕೊಡುವವರಾಗಿದ್ದಾರೆ.

ನಜರಬಾದಿನಲ್ಲಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಭಕ್ಷಿ ನರಸಪ್ಪನವರ ತೋಟದಲ್ಲಿ ಒಂದು ಭಾಗವನ್ನು ಕೊಡಬೇಕೆಂದು ತೀರ್ಮಾನವಾಗಿದೆ

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ.

ಈ ಸಮಾಜದ ಮೆಂಬರುಗಳು ಮತ್ತು ಹಿತೈಷಿಗಳು ಬಹುಮಂದಿ ಮಂದಿರದ ಸೌಧದಲ್ಲಿ ಗತ ಶನಿವಾರದ ದಿನ ಸೇರಿ ಇದ್ದರು. ಶ್ರೀಮತಿ ಮಹಲಕ್ಷ್ಮಮ್ಮನವರು ನೀತಿಪ್ರದವಾದ ಕೆಲವು ಪ್ರಶ್ನೋತ್ತರಗಳನ್ನು ಓದಿದರು. ಆ ಬಳಿಕ ಅನಂತಶಯನ ಐಯ್ಯಂಗಾರ್ಯರಿಂದ ಈಚೆಗೆ ಇಲ್ಲಿಗೆ ಬಂದಿರುವ ಸೌ॥ ಮೀನಾಕ್ಷಮ್ಮನವರು "ಗೃಹಸೌಂದರ್ಯತೆ" ಎಂಬ ವಿಷಯವನ್ನು ಕುರಿತು ಒಂದು ಸಣ್ಣ ಉಪನ್ಯಾಸವನ್ನು ಇಂಗ್ಲಿಷ್ ಭಾಷೆಯಲ್ಲಿ ಓದಿದರು. ಇವರಿಗೆ ಈ ದೇಶದ ಭಾಷೆಯು ತಿಳಿಯದೆ ಇರುವದರಿಂದ ಆ ಉಪನ್ಯಾಸದ ಭಾಷಾಂತರವು ಕನ್ನಡ ಭಾಷೆಯಲ್ಲಿ ಮಿ॥ ಕಾಳ್ ಧೊರೆಸಾನಿಯವರಿಂದ ಬರೆಯಲ್ಪಟ್ಟು ಸಭಿಕರಿಗೆ ಓದಲ್ಪಟ್ಟಿತು. ಸೌ॥ ಮೀನಾಕ್ಷಮ್ಮನವರು ಮೇಲೆ ಹೇಳಿದ ಉಪನ್ಯಾಸವನ್ನು ಈ ಸಮಾಜದಲ್ಲಿ ಹೇಳಲು ತಮಗೆ ಕೊಟ್ಟ ಅವಕಾಶಕ್ಕಾಗಿ ಸಮಾಜದ ಮೆಂಬರುಗಳಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿ ಗೃಹಸೌಂದರ್ಯತೆಯನ್ನು ಕುರಿತು ಮಾತನಾಡಿದರು. ಈ ಸಮಾಜದ ಅಭಿವೃದ್ಧಿಯ ವಿಷಯದಲ್ಲಿ ತಾವು ಬಹಳ ಕುತೂಹಲವುಳ್ಳವರಾಗಿರುವದರಿಂದ ಇಲ್ಲಿ ಹೇಳತಕ್ಕ ವಿಷಯಗಳು ಕೇವಲ ಮತವಿಷಯಗಳಾಗಿಯೇ ಇರದೆ ಪ್ರಯೋಜನಕರವಾದ ವ್ಯವಹಾರ ವಿಷಯಗಳಾಗಿರಬೇಕೆಂದು ಅಭಿಪ್ರಾಯಪಟ್ಟರು. ಆದ್ದರಿಂದಲೇ ತಾವು ಮತ ವಿಷಯವನ್ನು ಬಿಟ್ಟು ಬೇರೆ ನೂತನ ವಿಷಯವನ್ನು ಕುರಿತು ಮಾತನಾಡಲು ಯೋಚಿಸಿದರೆಂದು ಹೇಳಿ, ಇಂಗ್ಲಿಷ್ ಜನಗಳ ಮನೆಗಳಿಗೂ ಹಿಂದೂ ಜನಗಳ ಮನೆಗಳಿಗೂ ಇರತಕ್ಕ ವ್ಯತ್ಯಾಸಗಳನ್ನು ವಿವರಿಸಿ ಹೇಳಿದರು. ಹಾಗೆ ಹೇಳುವದರಲ್ಲಿ ತಮ್ಮ ಮನೆಗಳು ಚನ್ನಾಗಿಲ್ಲವೆಂತಲೂ, ಇಂಗ್ಲಿಷ್ ಜನಗಳ ಮನೆಗಳು ಚನ್ನಾಗಿರುವವೆಂತಲೂ ಹೇಳತಕ್ಕದ್ದು ತಮ್ಮ ತಾತ್ಪರ್ಯವಲ್ಲವೆಂದು ತಿಳಿಸಿದರು. ಇಂಗ್ಲಿಷ್ ಜನಗಳ ಮನೆಗಳಲ್ಲಿ ಇರತಕ್ಕ ಏರ್ಪಾಡುಗಳು ನಮ್ಮ ಮನೆಗಳಲ್ಲಿ ಇರುವದಿಲ್ಲವೆಂತಲೂ, ಅವರ ಮನೆಗಳ ಸೌಂದರ್ಯವು ತಮ್ಮ ಮನೆಗಳಲ್ಲಿ ಕಾಣಿಸುವದಿಲ್ಲವೆಂತಲೂ ಸೂಚಿಸಿ, ಇಂಗ್ಲಿಷ್ ಜನಗಳ ಮನೆಗಳ ಸಮಸ್ತ ಭಾಗಗಳನ್ನೂ ಹೇಗೆ ಅವರು ಬೇರೆ ಬೇರೆಯಾಗಿ ಮಾಡಿ ಉಪಯೋಗಿಸುವರೆಂಬುದನ್ನು [illegible] ಕೆಲಸಗತಿಗಳನ್ನು ತಿಳಿಸಿದರು ಮತ್ತು ಇಂಗ್ಲಿಷ್ ಜನಗಳ ಬಂಗಲೆಗಳಲ್ಲಿ ಇರತಕ್ಕ ಅವರ ಆರಾಮಗಳನ್ನು ಕುರಿತು ಬಹಳ ಶ್ಲಾಘ್ಯವಾಗಿ ವರ್ಣನೆ ಮಾಡಿ, ನಮ್ಮ ಮನೆಗಳು ಎಷ್ಟು ಶುಚಿಯಾಗಿಯೂ, ನಿರ್ಮಲವಾಗಿಯೂ ಇದ್ದಾಗ್ಯೂ ಅವರ ಮನೆಗಳಂತೆ ಕಣ್ಣುಗಳಿಗೆ ಇಂಪಾಗಿ ಒಂದು ಏರ್ಪಾಡಿಗೆ ಒಳಪಡದೆ ಇರುವದು ಬಹಳ ಕೊರತೆಯಾಗಿರುವದೆಂದು ಹೇಳಿದರು. ಇಂಗ್ಲಿಷ್ ಜನರ [illegible] ಇರುವ ರೀತಿಯು ಆರೋಗ್ಯಕ್ಕೆ [illegible] ಅವಕಾಶವನ್ನು ಕೊಡುವುದಾಗಿರುತ್ತದೆ ಮತ್ತು ಯಾವ ಭಾಗವನ್ನು ನೋಡಿದಾಗ್ಗೆ [illegible] ಚಕರವಾಗಿ ಕಾಣಿಸುವದು. ಹೀಗೆಯೇ ನಮ್ಮ ಮನೆಗಳನ್ನೂ ಕ್ರಮವಾಗಿ ಇಟ್ಟರೆ ಬಹು ಪ್ರಯೋಜನ ಉಂಟಾಗುವದೆಂಬದಾಗಿ ಹೇಳಿ ಉಪನ್ಯಾಸವನ್ನು ಪೂರೈಸಿದರು.

ಅನಂತರದಲ್ಲಿ ಸಮಾಜದ ಕಾರ್ಯದರ್ಶಿಯವರು ಸಭಿಕರ ವಂದನೆಗಳನ್ನು ಸೌ ಮೀನಾಕ್ಷಮ್ಮನವರಿಗೂ ಮತ್ತು ಮಿ ಕಾಳ್ ಧೊರೆಸಾನಿಯವರಿಗೂ ತಿಳಿಸಿದರು. ಆ ಸಂದರ್ಭದಲ್ಲಿ ಮೂಲಾರೆಂಬ ಶಬ್ದವು ಕೇವಲ ಗೂಢವಾದ ಶಬ್ದವಾಗಿರುತ್ತೆಂತಲೂ, ಈ ಶಬ್ದದಲ್ಲಿ ಅಡಗಿದೆ ಇರತಕ್ಕ ಅರ್ಥವು ಮತ್ತೊಂದು ಶಬ್ದದಲ್ಲಿ ಇರುವದೇ ಇಲ್ಲವೆಂತಲೂ, ಇದರಲ್ಲಿ ದೈವಭಕ್ತಿ, ನೀತಿ, ಸತ್ಯ, ಈಶ್ವರ ಮತ್ತು ಇನ್ನೂ ಅನೇಕ ವಿಷಯಗಳು ಸೇರಿರುತ್ತವೆಂತಲೂ ಹೇಳಿದರು. ಗೃಹಸೌಂದರ್ಯತೆ ಎಂಬುದು ಇದರಲ್ಲಿ ಏಕದೇಶವಾದ ವಿಷಯವಾಗಿರುತ್ತದೆ. ಮನುಷ್ಯ ವೈಲಕ್ಷಣ್ಯ ಚನ್ನಾಗಿ ತಿಳಿದರೆ ಇತರ ಲೌಕಿಕ ವೈಲಕ್ಷಣ್ಯಗಳು ತಿಳಿಯತಕ್ಕದ್ದು ಅಸಾಧ್ಯವಾದ ವಿಷಯವಲ್ಲ. ದೇವರು ಸಕಲ ಲಕ್ಷಣಯುಕ್ತನಾಗಿರುತ್ತಾನೆ. ಆತನ ಮತವನ್ನು ತಿಳಿದುಕೊಂಡರೆ ಸಕಲ ವೈಲಕ್ಷಣ್ಯವನ್ನೂ ನಾವು ತಿಳಿದುಕೊಂಡಂತೆ ಆಗುವದೆಂದು ಹೇಳಿದರು. ಮತ್ತು ಒಳ್ಳೆಯ ವಿಷಯಗಳು ಇಂಗ್ಲಿಷ್‌ನವರಲ್ಲಿ ಮಾತ್ರವೇ ಅಲ್ಲ; ಯಾವಲ್ಲಿ ಯಾವ ಜನಗಳಲ್ಲಿ, ಯಾವ ಜಾತಿಯವರಲ್ಲಿ ಮತ್ತು ಯಾವ ದೇಶದವರಲ್ಲಿ ಇದ್ದಾಗ್ಯೂ ನಮಗೆ ಪರಿಗ್ರಾಹ್ಯವೆಂದು ಹೇಳದ್ದಲ್ಲದೆ. ಸಾಧ್ಯವಾದಮಟ್ಟಿಗೂ ಇಂಗ್ಲಿಷ್‌ನವರ ಗೃಹಾಲಂಕಾರವಿಷಯವು ನಮಗೂ ಆದರಣೀಯವಾದದ್ದೆಂದು ಹೇಳಿ ತಮ್ಮ ಪ್ರಸಂಗವನ್ನು ಪೂರೈಸಿದರು.

ಈ ಪ್ರಸಂಗಾನಂತರ ಕೆಲ ಸುಂದರವಾದ ಹಾಡುಗಳು ಹಾರ್ಮೋನಿಯಂನಲ್ಲಿ ನುಡಿಸಲ್ಪಟ್ಟು, ಸ್ತ್ರೀ ವರಿಗೆ [illegible] ಸಭೆಯನ್ನು ಮುಕ್ತಾಯಕ್ಕೆ ತಂದರು.

ಎರಡು ಮೀಟಿಂಗು ಅಕ್ಟೋಬರು ತಿಂಗಳು [illegible] ಶನಿವಾರದ ದಿನ ನಡೆಯುವದಾಗಿ ಗೊತ್ತಾಗಿರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

[illegible] ಮೈಸೂರು ಸಿಟಿ [illegible] ಮುನಿಸಿಪಲ್ [illegible] ಟೌನ್‌ಹಾಲ್ [illegible] ಆಗ್ರಾಸನವನ್ನು [illegible]

[illegible]

ಮುನಿಸಿಪಲ್ [illegible] ಗಳು [illegible]

ಯರುಗಳು ಈಚೆಗೆ ಹೆಚ್ಚುಮಾಡಲ್ಪಟ್ಟಿದ್ದಾಗ್ಯೂ, ವಸೂಲಿಯು ತೃಪ್ತಿಕರವಾಗಿಲ್ಲವೆಂದೂ, ಹೊಸದಾಗಿ ನೇಮಿಸಲ್ಪಟ್ಟಿರುವ ಕಲೆಕ್ಟರ್‌ರು ಮೊಹಲ್ಲಾಗಳ ಮೇಲೆ ಸಂಚಾರಮಾಡಿ ಬಾಕಿಗಳನ್ನು ವಸೂಲ್ಮಾಡುವಂತೆ ಆಗಬೇಕೆಂದೂ, ಮೊಹತರ್ಫಾ ಮುತ್ಸದ್ದಿಗಳನ್ನು ಒಂದು ಮೊಹಲ್ಲೆಯಿಂದ ಇನ್ನೊಂದು ಮೊಹಲ್ಲೆಗೆ ವರ್ಗಾಯಿಸುತ್ತಾ ಬಂದರೆ ಕಂದಾಯದ ವಸೂಲಾತಿಯು ಹೆಚ್ಚುವುದಕ್ಕೂ ರಿಮಿಷನ್ ಬಾಬು ಕಡಮೆಯಾಗುವುದಕ್ಕೂ ಸಹಾಯವಾಗುವುದೆಂದೂ, ಕನ್ಸರ್ವೆನ್ಸಿ ಸೆಸ್ಸನ್ನು ಹೆಲ್ತ್ ಆಫೀಸಿನವರೇ ಮುಖವರ್ಜಾ ವಹಿಸಿ ವಸೂಲ್ಮಾಡುವಂತೆ ಏರ್ಪಾಡಾಗಬೇಕೆಂದೂ ನಮೂದು ಮಾಡಿದರು. ಪ್ರೆಸಿಡೆಂಟರವರು ಈ ವಿಚಾರಗಳು ಕಾರ್ಯನಿರ್ವಾಹಕ ಮಾಡತಕ್ಕ ಅಧಿಕಾರಿಗಳಿಗೆ ಸಂಬಂಧಪಟ್ಟವುಗಳಾಗಿರೋಣದರಿಂದ ಅವರು ಅದನ್ನು ಸರಿಪಡಿಸಿಕೊಳ್ಳುತ್ತಾರೆಂದು ತಿಳಿಸಿದರು.

ಜಗನ್ಮೋಹನ ಬಂಗಲೆಯ ಉಪಪಾರ್ಶ್ವದಲ್ಲಿರುವ ಲಕ್ಷ್ಮೀವಿಲಾಸ ಅಗ್ರಹಾರದ ನಿವಾಸಿಗಳು ತಮ್ಮ ಮನೆಗಳ ಹಿಂಭಾಗಗಳಲ್ಲಿ ರಸ್ತೆಯ ತನಕ ಇರುವ ಖಾಲೀ ನಿವೇಶನಗಳನ್ನು [illegible] ಗೋಡೆ ಹಾಕಿಕೊಂಡು ಸೇರಿಸಿಕೊಳ್ಳುವುದಕ್ಕೆ ಅಪ್ಪಣೆಯಾಗಬೇಕೆಂದು ಕೇಳಿಕೊಂಡಿದ್ದರು. ಕೌನ್ಸಿಲರುಗಳು ಈ ವಿಚಾರವನ್ನು ಸ್ವಲ್ಪ ಹೊತ್ತು ಚರ್ಚೆಮಾಡಿ, ಸದ್ಯದಲ್ಲಿ ಅವರಿಗೆ ಆ ರೀತಿ ಅಪ್ಪಣೆ ಕೊಡತಾಗುವುದಿಲ್ಲವೆಂದು ಜವಾಬು ಕೊಡತಕ್ಕದ್ದೆಂಬದಾಗಿ ತೀರ್ಮಾನಮಾಡಿದರು.

ಪಟ್ಟಣದಲ್ಲಿ ಟ್ರಸ್ಟ್ ಬೋರ್ಡಿನವರು ಕಟ್ಟಿರುವ ಬಚ್ಚಲು ಮತ್ತು ಚರಂಡಿಗಳನ್ನು ನೀರುಹಾಯಿಸಿ ಆಗಿಂದಾಗ್ಗೆ ಚೊಕ್ಕಟಮಾಡಬೇಕೆಂದೂ, ಇಲ್ಲವಾದರೆ ಪಟ್ಟಣದ ಆರೋಗ್ಯಕ್ಕೆ ಕುಂದಕವುಂಟಾಗುವುದೆಂತಲೂ ಡಿಪ್ಟಿ ಸ್ಯಾನಿಟರಿ ಕಮಿಷನರ್ ಮೆ॥ ಪಲ್ಲಿಯವರು ಬರೆದಿದ್ದರು. ಮತ್ತು ಮನೆಗಳಿಗೆ ನೀರಿನ ಕೊಳಾಯಿಗಳನ್ನು ತರಿಸಿಕೊಂಡಿರುವವರಿಂದ ನೀರಿನ ತೆರಿಗೆಯನ್ನು ವಸೂಲ್ಮಾಡುವುದಕ್ಕೂ ಮೀಟರು (ಅಳತೆಯ ಯಂತ್ರ) ಗಳನ್ನು ಇಡಿಸುವುದಕ್ಕೂ ಮ್ಯುನಿಸಿಪಾಲಿಟಿಯವರು ನೀರಿನ ಇಲಾಖೆಯವರಿಗೆ ಸಹಾಯಮಾಡಬೇಕೆಂದು ಗವರ್ನಮೆಂಟ್ ಸೆಕ್ರೆಟರಿಯವರು ಬರೆದಿದ್ದರು. ಇವೆರಡು ವಿಷಯಗಳನ್ನೂ ನೀರಿನ ಇಲಾಖೆಯ ಅಧಿಕಾರದ ಇತ್ಯರ್ಥದ ಬಗ್ಗೆ ಹಿಂದೆ ನೇಮಕವಾಗಿರುವ ಕಮಿಟಿಯವರಿಗೆ ವಹಿಸಿ, ಅವರು ಮಾಡುವ ತೀರ್ಮಾನದಂತೆ ನಡೆದುಕೊಳ್ಳತಕ್ಕದ್ದೆಂದು ಗೊತ್ತುಮಾಡಲಾಯಿತು

ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯ ಉತ್ಪತ್ತಿಯು ಖರ್ಚಿಗೆ ಸಾಕಾಗುವಂತೆ ಇಲ್ಲದಿರೋಣದರಿಂದ ಪ್ರಜೆಗಳಿಗೆ ದೀಪದ ಕಂದಾಯವನ್ನು ಹಾಕಿ, ಉತ್ಪತ್ತಿಯನ್ನು ಹೆಚ್ಚಿಸುವುದು ಅಪೇಕ್ಷಣೀಯವಾಗಿದೆ ಎಂದು ಗವರ್ನಮೆಂಟಿನವರು ಬರೆದಿದ್ದರು. ಕೌನ್ಸಿಲರುಗಳು ಈ ದೀಪದ ತೆರಿಗೆಯನ್ನು ಹಾಕಬೇಕಾದದ್ದು ಅವಶ್ಯವೆಂದು ಒಪ್ಪಿಕೊಂಡು, ಪಟ್ಟಣದಲ್ಲಿ ಸಾಧ್ಯವಾದ ಕಡೆಗಳಲ್ಲೆಲ್ಲಾ ವಿದ್ಯುಚ್ಛಕ್ತಿ ದೀಪಗಳನ್ನೂ [illegible] ಇಲ್ಲದ ಕಡೆಗಳಲ್ಲಿ ಎಣ್ಣೆಯ ದೀಪಗಳನ್ನೂ ಇಡಿಸಿಕೊಡುವುದೇ ಮೊದಲಾದ ಭಾಗಗಳನ್ನೆಲ್ಲಾ ಮ್ಯುನಿಸಿಪಾಲಿಟಿಯ ಮ್ಯಾನೇಜಿಂಗ್ ಕಮಿಟಿಯವರು ಆಲೋಚಿಸಿ ಗೊತ್ತುಮಾಡಿ ತಮ್ಮ ತೀರ್ಮಾನವನ್ನು ಬೋರ್ಡಿಗೆ [illegible] ಕೊಡಬೇಕೆಂತಲೂ ಇತ್ಯರ್ಥಮಾಡಿದರು.

ಮೆ॥ ಚಾರ್ಲಸ್ ಪಿ ಎಂ ವಾಲ್ಟರ್ ಎಂಬುವರು ಮೈಸೂರು ಪಟ್ಟಣದಲ್ಲಿ ಚುಟ್ಟಾ ತಯಾರುಮಾಡುವ ಕಾರ್ಖಾನೆಯನ್ನು ಪ್ರಾರಂಭಿಸುವುದಾಗಿಯೂ, ಈ ಕಸಬನ್ನು ಅಭಿವೃದ್ಧಿಪಡಿಸುವದಕ್ಕಾಗಿ ಈ ಕಾರ್ಖಾನೆಗೆ ತರಿಸುವ ಹೊಗೇಸೊಪ್ಪಿನಮೇಲೆ ಆಕ್ಟ್ರಾಯಿ ಸುಂಕವನ್ನು ರಿಯಾಯಿತಿ ದರದಿಂದ ವಸೂಲ್ಮಾಡಬೇಕೆಂದೂ ಅರ್ಜಿ ಬರೆದುಕೊಂಡಿದ್ದರು. ಕೌನ್ಸಿಲರುಗಳು ಈ ಕಸಬಿಗೆ ಯಾವ ರಿಯಾಯಿತಿಯೂ ತೋರಿಸಲಾಗದೆಂದು ಅಭಿಪ್ರಾಯಪಟ್ಟರು

ಪಟ್ಟಣದಲ್ಲಿ ಪ್ಲೇಗ್ ಮೊದಲಾದ ಸಾಂಕ್ರಾಮಿಕ ರೋಗಗಳು ಸಂಭವಿಸಿದ ಮನೆಗಳನ್ನು ಶುದ್ಧಿ (ಡಿಸಿನ್‌ಫೆಕ್ಟ್) ಮಾಡುವುದಕ್ಕೆ ಮೂರು ತಿಂಗಳ ವರೆಗೆ ಒಂದು ರೂಪಾಯಿನ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಖರ್ಚಿನ ಪೈಕಿ ಅರೆವಾಸಿಯನ್ನು ಪ್ಲೇಗ್ ಫಂಡಿನಿಂದಲೂ, ಉಳಿದದ್ದನ್ನು ಮ್ಯುನಿಸಿಪಲ್ ಫಂಡಿನಿಂದಲೂ ಪಾವತಿ ಮಾಡುವಂತೆ ಗೊತ್ತಾಯಿತು

ಪಟ್ಟಣದಲ್ಲಿ ಹಳೇ ಮನೆಗಳನ್ನು ರಿಪೇರಿ ಮಾಡಿಕೊಳ್ಳುವದಕ್ಕಾಗಲಿ, ಹೊಸ ಮನೆಗಳನ್ನು ಕಟ್ಟುವದಕ್ಕಾಗಲಿ ಪ್ರಜೆಗಳು ಮ್ಯುನಿಸಿಪಾಲಿಟಿಯವರಿಂದ ಲೈಸೆನ್ಸು ಪಡೆದುಕೊಳ್ಳಬೇಕಾಗಿದೆ. ಕೌನ್ಸಿಲ್ಲಿನವರು ಈ ಅಧಿಕಾರವನ್ನು ಹೆಲ್ತ್ ಆಫೀಸರವರಿಗೆ ವಹಿಸಿರುತ್ತಾರೆ. ಅನೇಕ ಜನರಿಗೆ ಲೈಸೆನ್ಸು ಕಾಲಕ್ಕೆ ಸಿಕ್ಕದೆ ತೊಂದರೆಯಾಗಿದೆ ಎಂದು ಗೊತ್ತಾಯಿತು. ಹೆಲ್ತ್ ಆಫೀಸರವರು ತಮಗೆ ಇತರ ಕೆಲಸಗಳು ವಿಶೇಷವಾಗಿರೋಣದರಿಂದ ಈ ಲೈಸೆನ್ಸ್ ಕೊಡುವ ಜವಾಬ್ದಾರಿಯನ್ನು ಮ್ಯುನಿಸಿಪಲ್ ಇಂಜನಿಯರವರಿಗೆ ವಹಿಸಿದಲ್ಲಿ ಅನುಕೂಲವೆಂದು ಸೂಚಿಸಿದರು. ಮೆಂಬರುಗಳು ಈ ವಿಷಯವನ್ನು ಸ್ವಲ್ಪದೂರ ಚರ್ಚೆಮಾಡಿ, ಹೆಲ್ತ್ ಕಮಿಟಿಯ ಮತ್ತು ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳು ಆಲೋಚನೆಮಾಡಿ ತಮ್ಮ ತೀರ್ಮಾನವನ್ನು ಬೋರ್ಡಿಗೆ ತಿಳಿಸಬೇಕೆಂದು ಇತ್ಯರ್ಥಮಾಡಿರುತ್ತಾರೆ.

ರಾಜಧಾನಿಯಲ್ಲಿ ಪ್ಲೇಗಿಗೆ ಕಾರಣಭೂತವಾದ ಇಲಿಗಳನ್ನು ಹಿಡಿದು ನಾಶಮಾಡುವುದಕ್ಕಾಗಿ ರಾವಲ್ ಪಿಂಡಿ ಪಟ್ಟಣದ ಒಂದು ಕಾರ್ಖಾನೆಯಲ್ಲಿ ತಯಾರಾಗುವ ಒಂದು ತರಹಾ ಬೋನು ಬಹಳ ಚನ್ನಾಗಿದೆ ಎಂದೂ, ಅಂಥಾ [illegible] ಬೋನುಗಳನ್ನು ತರಿಸಲು [illegible] ರೂಪಾಯಿ ಬೇಕಾಗಿದೆ ಎಂದು ಹೆಲ್ತ್ ಆಫೀಸರವರು ಸೂಚಿಸಿದ್ದರು. ಕೌನ್ಸಿಲರುಗಳು [illegible] ಬೇಕಾಗಿಲ್ಲವೆಂದೂ, ನಮ್ಮ ಪಟ್ಟಣದ ಕಾರಿಗಾರರೇ ಆ ಬೋನುಗಳನ್ನು [illegible] ಮಾಡಿಕೊಡಬಲ್ಲರೆಂದೂ ಅಭಿಪ್ರಾಯ [illegible] ಆಗಿ ಅಷ್ಟೇ ಕೆಲವನ್ನು ಮಾತ್ರ ತರಿಸಬಹುದೆಂದು [illegible]

ಸಿಟಿ ಹೆಲ್ತ್ ಆಫೀಸಿನಲ್ಲಿ ಬಸಪ್ಪನವರು [illegible] ಕಷ್ಟದಲ್ಲಿರುವ ಮತ್ತು [illegible] ಹೆಲ್ತ್ ಆಫೀಸರವರು [illegible]

[illegible]

ಮೊಹತರ್ಫಾ [illegible] ಆಕ್ಟ್ರಾಯಿ [illegible] ವಿಷಯದಲ್ಲಿ ತಯಾರಾಗಿದ್ದ ಕೆಲವು ಬೈಲಾಗಳನ್ನು ಕೌನ್ಸಿಲರುಗಳು [illegible] ಮಾಡಿದರು.

ವೃತ್ತಾಂತ ಪತ್ರಿಕೆ.

:o:—

೧೯೦೯ ನೇ ಇಸವಿ ಸೆಪ್ಟಂಬರ್ ತಾ|| ೩೦ ನೇ ಗುರುವಾರ

ಮೈಸೂರು ಸಂಸ್ಥಾನದ ಲೋಕಲ್ ಫಂಡುಗಳು.

ಮೈಸೂರು ಗವರ್ನಮೆಂಟಿನವರು ನಾನಾ ತೆರಿಗೆಗಳನ್ನು ವಸೂಲ್ಮಾಡಿ ವಿನಿಯೋಗಪಡಿಸುವುದಲ್ಲದೆ ಲೋಕಲ್ ಬೋರ್ಡುಗಳಿಗೂ, ಮ್ಯುನಿಸಿಪಾಲಿಟಿಗಳಿಗೂ, ಗ್ರಾಮ ಪಾಠಶಾಲೆಗಳಿಗೂ ಬೇರೆ ಬೇರೆ ಫಂಡುಗಳನ್ನು ಏರ್ಪಡಿಸಿರುತ್ತಾರೆ. ಈ ಫಂಡುಗಳ ಹಣವೆಲ್ಲಾ ಒಟ್ಟುಕೂಡಿಸಿದರೆ ೨೩,೫೦,೦೦೦ ರೂಪಾಯಿ ಆಗುವುದು. ಈ ಪೈಕಿ ಮ್ಯುನಿಸಿಪಾಲಿಟಿಗಳಲ್ಲಿ ೮,೭೮,೦೦೦ ರೂಪಾಯಿಯೂ, ಡಿಸ್ಟ್ರಿಕ್ಟ್ ಫಂಡುಗಳಲ್ಲಿ ೮,೦೦,೦೦೦ ರೂಪಾಯೂ ಹುಟ್ಟುವಳಿ ಆಗುತ್ತದೆ. ಮೈಸೂರು ಗವರ್ನಮೆಂಟಿನವರು ಲೋಕಲ್ ಫಂಡುಗಳ ಹುಟ್ಟುವಳಿಯನ್ನು ೧,೯೦,೦೦೦ ರೂಪಾಯಿ ಎಂತಲೂ, ಗ್ರಾಮ ಪಾಠಶಾಲಾ ಫಂಡನ್ನು ೩,೧೭,೦೦೦ ರೂಪಾಯಿ ಎಂತಲೂ ಮೊನ್ನೆ ತಾನೇ ಸ್ಯಾಂಕ್ಷನ್ ಮಾಡಿರುತ್ತಾರೆ.

ಲೋಕಲ್ ಫಂಡುಗಳ ಹಣದಲ್ಲಿ ಮರಾಮತ್ತ್ (ಇಂಜನಿಯರ್) ಕಾಮಗಾರಿಗಳಿಗೆ ೭೦,೮೦೦ ರೂಪಾಯಿ; ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಕಾಮಗಾರಿಗಳಿಗೆ ಸಹಾಯದ್ರವ್ಯ (ಕಂಟ್ರಿಬ್ಯೂಷನ್) ೧೮,೩೦೦ ರೂಪಾಯಿ, ಇಂಡಸ್ಟ್ರಿಯಲ್ (ಕೈಗಾರಿಕೆ) ಪಾಠಶಾಲೆಗಳಿಗೆ ೮೨,೫೩೬ ರೂಪಾಯಿ; ಕರ್ನಾಟಕ ಮತ್ತು ಯುನಾನಿಯ ಆಸ್ಪತ್ರೆಗಳಿಗೆ ೩,೧೭೦ ರೂಪಾಯಿ, ನವರಾತ್ರಿ ಪ್ರವರ್ತನಗಳಿಗೆ ೯,೫೭೫ ರೂಪಾಯಿ; ಕೂನೂರಿನ ಪಾಸ್ತುರು ಆಸ್ಪತ್ರೆಗೆ ೫೦೦ ರೂ., ಡಿಸ್ಟ್ರಿಕ್ಟ್ ವ್ಯವಸಾಯ ಸಂಘಗಳಿಗೆ ೭೫೦ ರೂ; ಬೀಜದ ಧಾನ್ಯಗಳಿಗೆ ೫೦೦ ರೂ.; ವ್ಯವಸಾಯವನ್ನು ಕಲಿಯುವವರಿಗೆ ವಿದ್ಯಾರ್ಥಿ ವೇತನಗಳು ೧,೦೦೦ ರೂ., ಪಶುವೈದ್ಯದ ಆಸ್ಪತ್ರೆಗಳಿಗೆ ೩,೭೫೦ ರೂ., ಈ ಪ್ರಕಾರ ಹಣವನ್ನು ವಿನಿಯೋಗಿಸುವರು. ಆದರೆ ಕಸಬಿನ ಪಾಠಶಾಲೆಗಳಿಂದ ೨೦,೦೦೦ ರೂಪಾಯೂ, ನವರಾತ್ರಿ ಪ್ರದರ್ಶನದಿಂದ ೩,೦೦೦ ರೂಪಾಯೂ ಉತ್ಪತ್ತಿಯಾಗುವುದೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ.

ಜವಾ ಮತ್ತು ಖರ್ಚುಬಾಬುಗಳನ್ನು ನೋಡಲಾಗಿ ಇವುಗಳಿಗೋಸ್ಕರ ಪ್ರತ್ಯೇಕವಾಗಿಯೇ ಒಂದು ಫಂಡನ್ನು ಯಾಕೆ ಮಾಡಬೇಕಾಯಿತೋ ನಮಗೆ ತೋರುವುದಿಲ್ಲ. ಬಹುಭಾಗವು ಮರಾಮತ್ತು ಕಾಮಗಾರಿಗಳಾಗಿರುವವು. ಅದಕಾರಣ ಈ ಖರ್ಚನ್ನು ಇಂಜನಿಯರ್ ಇಲಾಖೆಗೋ ಡಿಸ್ಟ್ರಿಕ್ಟ್ ಫಂಡುಗಳಿಗೋ ಸೇರಿಸಿಬಿಡಬಹುದು. ಅದಲ್ಲದೆ ವಿದ್ಯಾರ್ಥಿವೃತ್ತಿಗಾಗಿ ಇಟ್ಟಿರುವ ಕೆಲವು ಹಣವನ್ನು ಈ ಫಂಡಿನಲ್ಲಿ ಸೇರಿಸಿದರೆ ಆ ಮೊಬಲಗನ್ನು ವಿದ್ಯಾಭ್ಯಾಸದ ಇಲಾಖೆಗೇ ವಹಿಸಿ ಬಿಡಬಹುದು. ಈ ರೀತಿ ಫಂಡುಗಳನ್ನು ಹೆಚ್ಚಿಸುವುದರಿಂದ ಅನಾವಶ್ಯವಾದ ಖರ್ಚುಗಳಿಗೆ ಅವಕಾಶವುಂಟಾಗುತ್ತದೆ.

ಗ್ರಾಮ ಪಾಠಶಾಲಾ ಫಂಡಿನ ಬಡ್ಜೆಟ್ ಹಣದಿಂದ ಸ್ಕೂಲುಗಳನ್ನೂ ಮಾಸ್ಟರುಗಳನ್ನೂ ಹೆಚ್ಚು ಮಾಡುವಂತೆ ಸ್ವಲ್ಪ ಹೆಚ್ಚು ಹಣ ಸ್ಯಾಂಕ್ಷನ್ ಮಾಡಿರುತ್ತಾರೆ. ಆದರೆ ಇದು ಸಂಸ್ಥಾನಮುಳ ಎಷ್ಟುಮಾತ್ರಕ್ಕೂ ಸಾಕಾಗುವುದಿಲ್ಲ. ಈ ಸಾಲಿನಲ್ಲಿ ಹೊಸದಾಗಿ ೪೬ ಉಪಾಧ್ಯಾಯರನ್ನು ಮಾತ್ರ ನೇಮಕಮಾಡಿಕೊಳ್ಳುವುದಾಗಿ ಸಮೂದಾಗಿರುತ್ತದೆ. ಆದರೆ ಸಂಸ್ಥಾನದಲ್ಲಿ ಸುಮಾರಾಗಿ ಎಲ್ಲಾ ಗ್ರಾಮಗಳಲ್ಲೂ ಪ್ರಥಮ ವಿದ್ಯೆಯನ್ನು ಕಲಿಸುವುದು ಸಾಧ್ಯವಾಗುವಂತೆ ಪ್ರತಿ ವರುಷವೂ ಕಡೇ ಪಕ್ಷ ೧೦೦ ಹೊಸ ಪಾಠಶಾಲೆಗಳನ್ನಾದರೂ ಸ್ಥಾಪಿಸುತ್ತಾ ಬರಬೇಕಾಗಿರುತ್ತದೆ. ಸಕಲ ಪ್ರಜೆಗಳೂ ಅಕ್ಷರಸ್ಥರಾಗುವುದೇ ಈಗ ಅವಶ್ಯವಾದದ್ದು. ಈ ಕೊರತೆಯನ್ನು ಪರಿಹರಿಸಬೇಕಾದಲ್ಲಿ ಗವರ್ನಮೆಂಟಿನವರು ನೂರಾರು ಗ್ರಾಮ ಪಾಠಶಾಲೆಗಳನ್ನು ನೇಮಕಮಾಡುತ್ತಾ ಬರಬೇಕಾಗಿದೆ. ಸರ್ಕಾರದವರು ಪ್ರಥಮ ವಿದ್ಯಾಶಿಕ್ಷಣವನ್ನು ಸಂಸ್ಥಾನಮುಳ ಮುಫತ್ತಾಗಿ ಮಾಡಿಸುತ್ತಾರೆ. ಇದರಿಂದ ಉತ್ಪತ್ತಿಯಾಗುತ್ತಿದ್ದ ಫೀಜಿನ ಮೊಬಲಗು ಅವರ ಕೈ ಸೇರದಂತಾಯಿತು. ಆದಕಾರಣ ಗ್ರಾಮಾಂತರಗಳಲ್ಲಿರುವ ಪ್ರಜೆಗಳೆಲ್ಲಾ ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಿ ಅಕ್ಷರಸ್ಥರನಾಗಿ ಮಾಡುವುದಕ್ಕಾಗಿ ಸರ್ಕಾರದವರು ಹಣವನ್ನು ಹೆಚ್ಚಾಗಿ ಒದಗಿಸಿ ಗ್ರಾಮ ಪಾಠಶಾಲೆಗಳನ್ನು ಪ್ರಾರಂಭಿಸುವವರಾಗಬೇಕು.

ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಕಟ್ಟಿಸುವುದಕ್ಕೆ ಗವರ್ನಮೆಂಟಿನವರು ೫೦,೦೦೦ ರೂಪಾಯನ್ನು ತೆಗೆದಿಟ್ಟಿದಾರೆಂದು ತಿಳಿದು ಸಂತೋಷಪಡುತ್ತೇವೆ. ಈ ಹಣವನ್ನು ಈ ಸಾಲಿನಲ್ಲಿ ಪೂರಾ ವಿನಿಯೋಗಿಸಿ ಅನುಕೂಲವಾದ ಪಾಠಶಾಲೆಗಳನ್ನು ಕಟ್ಟಿಸಿ ಸಿದ್ಧಪಡಿಸುವರೆಂದು ನಿರೀಕ್ಷಿಸುತ್ತೇವೆ. ಈ ಕಟ್ಟಡಗಳಿಗೆ ಬಹಳ ಹಣವನ್ನು ಖರ್ಚುಮಾಡಿ ಅಲಂಕರಿಸಬೇಕಾದ ಅಗತ್ಯವಿಲ್ಲ; ಸುಲಭವಾಗಿಯೂ ಸಾಮಾನ್ಯವಾಗಿಯೂ ಇದ್ದರೆ ಸಾಕಾಗಿರುವವು. ಅವುಗಳಲ್ಲಿ ಬೆಳಕು ಗಾಳಿ ಧಾರಾಳವಾಗಿ ಇರುವಂತೆಯೂ, ಅವು ಬೇಗನೆ ಬಿದ್ದು ಹೋಗದಂತೆಯೂ ಇರಬೇಕು.

ಗವರ್ನಮೆಂಟಿನವರು ಸಂಸ್ಥಾನಮುಳ ಸಕಲ ಪ್ರಜೆಗಳಿಗೂ ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹ ಮಾಡಬೇಕಾದ್ದು ಅವರ ಪ್ರಥಮ ಧರ್ಮವಾಗಿರುತ್ತದೆ. ರೈತರೂ ಗ್ರಾಮಾಂತರ ಪ್ರಜೆಗಳೂ ತಮ್ಮ ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸುವುದರಲ್ಲಿ ನಮ್ಮದಲ್ಲಿ ಅಷ್ಟೇನೂ ಕುತೂಹಲಪಡತಕ್ಕವರಾಗಿಲ್ಲವೆಂಬುವುದನ್ನು ನಾವು ಬಲ್ಲೆವು. ಅವರ ಹುಡುಗರನ್ನು ಬರಮಾಡಿಕೊಳ್ಳುವುದೂ, ಅವರನ್ನು ಸರಿಯಾಗಿ ಕಳುಹಿಸುವಂತೆ ಅವರ ತಂದೆತಾಯಿಗಳಿಗೆ ಪ್ರೋತ್ಸಾಹಪಡಿಸುವುದೂ ಸದ್ಗುಣಶೀಲರಾದ ಉಪಾಧ್ಯಾಯರಿಗೆ ಕಷ್ಟವಲ್ಲ. ಸರ್ಕಾರದವರು ಅಂಥಾ ಯೋಗ್ಯರಾದ ಮಾಸ್ಟರುಗಳನ್ನು ನೇಮಕ ಮಾಡುತ್ತಾ ಬಂದಪಕ್ಷದಲ್ಲಿ ಕೆಲವು ವರುಷಗಳೊಳಗಾಗಿ ಈ ಸಂಸ್ಥಾನದ ಸಮಸ್ತ ಬಾಲಕರೂ ವಿದ್ಯಾವಂತರಾಗಿ ದೇಶಾಭ್ಯುದಯದ ಮೊದಲನೇ ಅಂತಸ್ತನ್ನು ಹತ್ತುವರೆಂದು ಧಾರಾಳವಾಗಿ ಹೇಳಬಲ್ಲೆವು.

ಮೈಸೂರು ಸಂಸ್ಥಾನದಲ್ಲಿರುವ ಕಾರ್ಖಾನೆಗಳ ವಾರ್ಷಿಕ ರಿಪೋರ್ಟು

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ಕಾರ್ಖಾನೆಗಳ ಕೆಲಸ ಕಾರ್ಯಗಳ ವಿಷಯವಾದ ಕಾನೂನನ್ನು ಜಾರಿಗೆ ತಂದಿರುತ್ತಾರಷ್ಟೆ. ಆ ಕಾನೂನಿಗನುಸಾರವಾಗಿ ೧೯೦೮ ನೇ ಇಸವಿಯಲ್ಲಿ ಸಂಸ್ಥಾನದಲ್ಲಿ ಇರುವ ಕಾರ್ಖಾನೆಗಳ ವಿಚಾರವಾದ ವಾರ್ಷಿಕ ರಿಪೋರ್ಟನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರುಗಳಿಂದ ತರಿಸಿಕೊಂಡು, ಅದರ ಮೇಲೆ ತಮ್ಮ ಹುಕುಮನ್ನು ಈಗತಾನೇ ಪ್ರಕಟಿಸಿರುತ್ತಾರೆ.

ಕಡೂರು, ಹಾಸನ, ಶಿವಮೊಗ್ಗಾ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಕಾರ್ಖಾನೆಗಳೊಂದೂ ಇಲ್ಲ. ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಸೇರಿದ ದಾವಣಗೆರೆಯಲ್ಲಿರುವ ಮೂರು ಕಾರ್ಖಾನೆಗಳು ೧೯೦೯ ನೇ ಜೂನ್ ಲಾಗಾಯಿತು ಈ ಕಾನೂನಿಗನುಸಾರವಾಗಿ ನಡಿಸಲ್ಪಡಬೇಕೆಂದು ಹುಕುಂ ಮಾಡಲಾಯಿತು.

ಮೈಸೂರಿನಲ್ಲಿರುವ ಸ್ಯಾಂಡರ್ಸನ್ ವರ್ಕ್ಸ್ ಒಂದು ಕಾರ್ಖಾನೆಯೊಂದೇ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ್ದಾಗಿದೆ. ಇಲ್ಲಿ ಮೂರು ವಿಧವಾದ ಕೆಲಸಗಳು ನಡೆಯುವವು. ಕಾಫಿಬಿತ್ತವನ್ನು ಒಡಿಸುವುದು, ಗೊಬ್ಬರವನ್ನು ತಯಾರುಮಾಡುವುದು, ಮರ ಕೊಯ್ಯುವುದು, ಈ ಮೂರು ಕೆಲಸಗಳನ್ನು ಮಾಡಿಸುತ್ತಾರೆ. ಈ ಕಾರ್ಖಾನೆಯಲ್ಲಿ ೮೯ ಮಂದಿ ಕೂಲಿಯವರು ಕೆಲಸ ಮಾಡುವರು. ಈ ಪೈಕಿ ೫೧ ಮಂದಿ ಗಂಡಸರು, ೩೮ ಜನ ಹೆಂಗಸರು. ಗತಸಾಲಿನಲ್ಲಿ ಅಲ್ಲಿ ಒಂದು ಅನಾಹುತ ಸಂಭವಿಸಿತು, ಅಂದರೆ, ಒಬ್ಬ ಕೂಲಿಯವನು ಅಜಾಗರೂಕತೆಯಿಂದ ಒಂದು ಕೊಯ್ಯುವ ಗರಗಸವನ್ನು ಹಿಡಿದದ್ದರಲ್ಲಿ ಅವನ ಕೈಯಿ ಕತ್ತರಿಸಿಹೋಯಿತು. ಅವನನ್ನು ಇಲಾಜಿಗಾಗಿ ಆಸ್ಪತ್ರೆಗೆ ಕಳುಹಿಸಿದರು, ಆದರೆ ಅವನು ಸತ್ತುಹೋದನು. ಈ ಕಾರ್ಖಾನೆಯಲ್ಲಿ ನಡೆಯುವ ಕೆಲಸದ ವಿಷಯದಲ್ಲಿ ಆಕ್ಷೇಪಣೆಯೇನೂ ಹುಟ್ಟಲಿಲ್ಲ, ಆದರೆ ಕಾರ್ಖಾನೆಯವರು ಕೆಲವು ಪುಸ್ತಕಗಳಲ್ಲಿ ಕೆಲಸ ಕಾರ್ಯಗಳ ವಿಷಯವನ್ನು ಬರೆಯಿಡದೆ ತಪ್ಪಿರುತ್ತಾರೆಂದು ತೋರುತ್ತದೆ.

ಬೆಂಗಳೂರು ನೂಲಿನ ಕಾರ್ಖಾನೆ ಎಂಬುವುದೂ, ಮೈಸೂರು ನೂಲುವ ಮತ್ತು ನೆಯ್ಯುವ ಕಾರ್ಖಾನೆ ಎಂಬುವುದೂ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಇರತಕ್ಕವುಗಳು. ಮೊದಲನೆಯದನ್ನು ಮದರಾಸಿನಲ್ಲಿರುವ ಬಿನ್ನಿ ಕಂಪನಿಯವರೂ, ಎರಡನೆಯದನ್ನು ಬೊಂಬಾಯಿನಲ್ಲಿರುವ ಎಫ್. ಸೀರೂರ್ ಕಂಪನಿಯವರೂ ನಡಿಸುತ್ತಾರೆ. ಬಿನ್ನಿ ಕಾರ್ಖಾನೆಯಲ್ಲಿ ಸರಾಸರಿ ೯೩೮ ಜನರೂ, ಸೀರೂರ್ ಕಂಪನಿಯಲ್ಲಿ ೭೩೭ ಜನರೂ ಕೆಲಸ ಮಾಡುವರು. ಕೆಲಸ ಮಾಡತಕ್ಕವರ ಅಜಾಗರೂಕತೆಯಿಂದ ಕಳೆದ ವರುಷ ಮೊದಲನೇ ಕಾರ್ಖಾನೆಯಲ್ಲಿ ಎರಡು ಅನಾಹುತಗಳೂ, ಎರಡನೆಯದರಲ್ಲಿ ಐದು ಅನಾಹುತಗಳೂ ಸಂಭವಿಸಿದವು. ಆ ವರುಷ ಯಾರ ಮೇಲೂ ಮೊಕದ್ದಮೆ ಮಾಡಲಿಲ್ಲ. ಬಿನ್ನಿ ಕಂಪನಿಯಲ್ಲಿ ಆರೋಗ್ಯವಿಚಾರವಾದ ಏರ್ಪಾಡುಗಳು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಣೆ ಮಾಡಲಾಯಿತು. ಈ ಲೋಪವನ್ನು ಸರಿಪಡಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

ಗೌರೀಬಿದನೂರಿನಲ್ಲಿರುವ ಸಕ್ಕರೆ ಕಾರ್ಖಾನೆಯೊಂದೇ ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ್ದು ಅದರಲ್ಲಿ ಕಳೆದ ಜೂನ್ ತಾ ೨೧ಕ್ಕೆ ಕೆಲಸ ಪ್ರಾರಂಭವಾಗಿ ಡಿಸೆಂಬರ್ ತಾ. ೨೨ ರ ವರೆಗೆ ನಡೆಯಿತು. ಸಕ್ಕರೆ ತಯಾರಿಗೆ ಸರಕು ಒದಗಲಿಲ್ಲವಾದ್ದರಿಂದ ಆ ಲಾಗಾಯಿತು ಕೆಲಸ ನಿಲ್ಲಿಸಲ್ಪಟ್ಟಿದೆ.

ಮೈಸೂರು ಸೀಮೆಯಲ್ಲಿ ಕಾರ್ಖಾನೆಗಳ ಕೆಲಸಗಳು ಹೆಚ್ಚಲು ತುಂಬಾ ಅವಕಾಶವುಂಟೆಂದು ಧಾರಾಳವಾಗಿ ಹೇಳಬಹುದು. ಪ್ರಜೆಗಳ ಶೀಲ ಸ್ವಭಾವಗಳೂ ಅವರ ಐಶ್ವರ್ಯವೂ ಅಭಿವೃದ್ಧಿಯಾಗುವಂತೆ ಹೆಚ್ಚು ಹೆಚ್ಚಾಗಿ ಜನರು ಇಂಥಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಾಗಲಿ ಎಂದು ಪ್ರಾರ್ಥಿಸುತ್ತೇವೆ. ಈಗಿರುವ ಕಾರ್ಖಾನೆಗಳ ಆರೋಗ್ಯ ವಿಚಾರವು, ಕೆಲಸ ಮಾಡತಕ್ಕ ಜನಗಳಿಗೆ ಅನುಕೂಲವಾಗಿರುವಂತೆ ಕಂಡುಬಂದಿದೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಕೋಟೆ ದಕ್ಷಿಣ ಬಾಗಿಲ ಪೂರ್ವಭಾಗದ ಕೋಟೆ ಗೋಡೆಯನ್ನು ಒಡೆದು ಕಂದಕವನ್ನು ಮುಚ್ಚುವುದಕ್ಕೆ ಸರ್ಕಾರದವರು ೧೭,೯೯೮ ರೂಪಾಯಿ ಮ್ಯುನಿಸಿಪಾಲಿಟಿಯಿಂದ ಖರ್ಚು ಮಾಡಬಹುದೆಂದು ಸ್ಯಾಂಕ್ಷನ್ ಮಾಡಿದಾರೆ

ಕಳೆದ ವಾರ ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಊರಿಗಳಲ್ಲಿ ಎರಡು ಕಡೆ ಭಾರೀ ಕಳ್ಳತನಗಳು ನಡೆದು, ಸುಮಾರು ಎರಡು ಸಾವಿರ ರೂಪಾಯಿನ ನಗನಾಣ್ಯಗಳು ಅಪಹಾರವಾಗಿರುತ್ತವೆ. ಪೋಲೀಸಿನವರು [illegible] ನಡೆಸುತ್ತಿರುವರು.

ಶಿವಮೊಗ್ಗಾ ಡಿಸ್ಟ್ರಿಕ್ಟ್ [illegible] ಮಿ. ಆರ್. ಎ. [illegible] ರಜಾ ಪಡೆದು ಸೀಮೆಗೆ ಹೋಗುವರೆಂದೂ, ಅವರ ಸ್ಥಳಕ್ಕೆ ಸರ್ಕಾರದವರು [illegible] ನೇಮಿಸುವವರಾಗಿದ್ದಾರೆಂದೂ ಕೇಳುತ್ತೇವೆ

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ|| ವಿ. ದೇವರಾಜೇ ಅರಸಿನವರು ತಮ್ಮ ಇಲಾಖೆಯ ಕಾರ್ಯಗಳ ನಿಮಿತ್ತ ಕಳೆದ ವಾರ ರಾಜಧಾನಿಗೆ ಬಂದರು [illegible] ಒಂದು ವಾರ ರಾಜಧಾನಿಯಲ್ಲಿದ್ದು, ಕಳೆದ ಭಾನುವಾರ ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿದರು

ಕಳೆದ ಭಾನುವಾರ [illegible] ಗಂಟೆಯಲ್ಲಿ ಕೋಲಾರದ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ [illegible] ಅನಾಹುತ ಸಂಭವಿಸಿ [illegible] ಆಳುಗಳಿಗೆ [illegible] ಆಗಿರುತ್ತದೆ. ಆ ಗಣಿಯ ಒಂದು [illegible] ಬಿದ್ದಿತೆಂದು ತಿಳಿದು ಬಂದಿದೆ.

ಪ್ರವಾಸಕ್ಕೆ ಹೋಗಿದ್ದ ಶ್ರೀಮನ್ ಯುವರಾಜರವರು ಕಳೆದ ಶುಕ್ರವಾರ ಬೆಳಿಗ್ಗೆ ಸುಮಾರು ೧೦ ಗಂಟೆ ಹೊತ್ತಿಗೆ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿದರು. ಅವರ ಕೂಡ ಸರ್ದಾರ್ ಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ ಬಂದರು.

ಕಳೆದ ವಾರ ಮಿ|| ಸಿ. ರಾಮಲಿಂಗರೆಡ್ಡಿಯವರು ರಾಜಧಾನಿಗೆ ಬಂದು ಇಲ್ಲಿನ ಮಹಾರಾಜಾ ಕಾಲೇಜಿನ ಚರಿತ್ರಬೋಧಕ ಪಂಡಿತರಾಗಿ ದಾಖಲಾದರು. ಮಿ|| ಶ್ರೀಕಂಠಯ್ಯನವರನ್ನು ಸರ್ಕಾರದವರು ಈ ಕಾಲೇಜಿನಲ್ಲಿ ಸಹಾಯೋಪಾಧ್ಯಾಯ ಕೆಲಸಕ್ಕೆ ಹೊಸದಾಗಿ ನೇಮಕಮಾಡಿರುತ್ತಾರೆ.

ಬೆಂಗಳೂರು ಒಕ್ಕಲಿಗರ ಸಂಘದ ಮುಖಂಡರಾಗಿ ನಿಂತು ಕೆಲಸಗಳನ್ನು ಮಾಡುತ್ತಿರುವ ಮಿ|| ಬೈಯಣ್ಣನವರಿಗೆ ಕಾಲಿನ ಮೇಲೆ ಒಂದು ಕುರು ಎದ್ದು ವಾಸಿಯಾಗದೆ ಈಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದಾರೆಂದು ತಿಳಿದು ಬಂದಿದೆ. ಇವರಿಗೆ ಅದು ಬೇಗನೆ ವಾಸಿಯಾಗಲೆಂದು ಬಹಳವಾಗಿ ಪ್ರಾರ್ಥಿಸುತ್ತೇವೆ.

ಹಾಸನದಲ್ಲಿರುವ ಸರ್ಕಾರಿ ಕೈಗಾರಿಕೆ ಪಾಠಶಾಲೆಯನ್ನು ಸರ್ಕಾರದವರು ಅಲ್ಲಿನ ಕೋ ಆಪರೇಟಿವ್ ಸೊಸೈಟಿಯವರಿಗೆ ವಹಿಸಿರುತ್ತಾರೆ. ಈ ಕೈಗಾರಿಕೆ ಪಾಠಶಾಲೆಯಲ್ಲಿ ತಿಂಗಳಿಗೆ ವೇತನಗಳಿಗಾಗಿ ೫೦ ರೂಪಾಯನ್ನೂ ಸಿಬ್ಬಂದಿಗಾಗಿ ೬ ರೂಪಾಯನ್ನೂ ಕೊಡಬೇಕೆಂದೂ, ಅದನ್ನು ನಡಿಸುವುದಕ್ಕೆ ಸರ್ಕಾರದಿಂದ ಮಾಹೆಯಾನಾ ೧೦೦ ರೂಪಾಯಿ ಗ್ರಾಂಟ್

ಕೊಡಲ್ಪಡುವುವೆಂದೂ, ಸದ್ಯಕ್ಕೆ ಆ ಪಾಠಶಾಲೆಗೋಸ್ಕರ ಅಲ್ಲಿನ ಹಳೇ ಜೈಲು ಕಟ್ಟಡವನ್ನು ಮುಫತ್ತಾಗಿ ಕೊಟ್ಟಿದೆ ಎಂದೂ ಹುಕುಂ ಆಗಿರುತ್ತದೆ.

∴

ಮೈಸೂರು ಗವರ್ನಮೆಂಟಿನವರು "ಗಾರ್ಡಿಯನ್ಸ್ ಮತ್ತು ವಾರ್ಡ್ಸ್" ಎಂಬ ಒಂದು ಮಸೂದೆ ಕಾನೂನನ್ನು ತಯಾರು ಮಾಡಿಸಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಇದನ್ನು ಪ್ರಜೆಗಳು ನೋಡಿ ಅದರಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಗವರ್ನಮೆಂಟಿಗೆ ತಿಳಿಯಪಡಿಸಬೇಕಾಗಿದೆ. ನ್ಯಾಯವಿಧಾಯಕ ಕೌನ್ಸಿಲ್ಲಿನಲ್ಲಿ ಈ ಮಸೂದೆಯು ಚರ್ಚಿಸಲ್ಪಡುವದು.

∴

ರಾಜಧಾನಿಯಲ್ಲಿ ಬೆಂಚ್ ಆಫ್ ಮ್ಯಾಜಿಸ್ಟ್ರೇಟರ ಕೋರ್ಟು ಮೊನ್ನೆ ಸೋಮವಾರದಿಂದ ಪ್ರಾರಂಭವಾಗಿದೆ. ಬೇರೆ ಕಟ್ಟಡವನ್ನು ಏರ್ಪಾಡು ಮಾಡಿಕೊಡುವ ತನಕ ಈ ಕೋರ್ಟನ್ನು ಟೌನ್ ಹಾಲ್ ಬಂಗಲೆಯಲ್ಲಿ ನಡಿಸುವರು. ಈ ಕೋರ್ಟು ವಾರಕ್ಕೆ ಎರಡು ದಿನ ಅಂದರೆ ಸೋಮವಾರ ಶುಕ್ರವಾರ ಸೇರಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಕಳುಹಿಸಲ್ಪಡುವ ಮೊಕದ್ದಮೆಗಳನ್ನು ಇತ್ಯರ್ಥ ಮಾಡುತ್ತದೆ.

∴

ಈ ಸಲ ನವರಾತ್ರಿಯ ಉತ್ಸವಗಳಿಗೂ, ಪ್ರಜಾಪ್ರತಿನಿಧಿ ಸಭೆಗೂ, ಪ್ರದರ್ಶನೋತ್ಸವಕ್ಕೂ ಮೈಸೂರಿಗೆ ಬರುವಂಥಾ ಬೇರೆಯ ದೊಡ್ಡ ಮನುಷ್ಯರಿಗೂ ಪ್ರತಿನಿಧಿಗಳಿಗೂ ಇಳಿದುಕೊಳ್ಳುವ ಸ್ಥಳ ಮುಂತಾದ್ದನ್ನು ಒದಗಿಸಿಕೊಟ್ಟು, ಅವರ ಸೌಕರ್ಯಗಳನ್ನು ನೋಡಿಕೊಳ್ಳುವಂತೆ ಮೆ|| ಸಿ ವೆಂಕಟರಾಯರನ್ನು ಮುಖ್ಯ ಅಧಿಕಾರಿಯನ್ನಾಗಿ ಸರ್ಕಾರದವರು ನೇಮಕ ಮಾಡಿರುತ್ತಾರೆ. ಇವರಿಗೆ ತಿಳಿಸಿದ್ದರೆ ಅವರು ಏರ್ಪಾಡು ಮಾಡಿಕೊಡುವರು.

∴

ದೈಸರಾ ದರ್ಬಾರನ್ನು ಸತ್ಕಾರ ಮಾಡುವದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲಾ ನಡಿಸಲು ಸರ್ಕಾರದವರು ಒಂದು ಸ್ವಾಗತ ಕಮಿಟಿಯನ್ನು ನೇಮಿಸಿರುತ್ತಾರೆ. ಈ ಕಮಿಟಿಯ ಪ್ರೆಸಿಡೆಂಟರಾದ ಕೌನ್ಸಿಲರ್ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಕಳೆದ ವಾರ ರಾಜಧಾನಿಗೆ ಬಂದು, ಮೊನ್ನೆ ಸೋಮವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಇಲ್ಲಿನ ಮುಖ್ಯ ಅಧಿಕಾರಿಗಳ ಕೂಡ ಸೇರಿ ಆಲೋಚನೆ ಮಾಡಿದರು. ದೈಸರಾ ಪ್ರಭುಗಳು ಬರುವಾಗ್ಗೆ ಡಿಸ್ಟ್ರಿಕ್ಟಿನಲ್ಲಿರುವ ಗಣ್ಯರುಗಳಿಂದ ಸ್ವಾಗತವನ್ನು ಸಮರ್ಪಿಸಿ ಆ ಪ್ರಾಂತದ ಪ್ರದರ್ಶನ ಮುಂತಾದ್ದು ಮಾಡಿಕೊಂಡು, ಕೋಲಾರದ ಚಿನ್ನದಗಣಿಗಳಲ್ಲಿ ಚಿನ್ನ ತೆಗೆಯುವ ಕಾರ್ಖಾನೆ ಕೆಲಸ ಕಾರ್ಯಗಳನ್ನು ಪರಾಂಬರಿಸುವರೆಂದು ತಿಳಿದು ಬರುತ್ತದೆ. ಕಾಲಕಾಲಕ್ಕೆ ವಿಷಯಗಳು ಕ್ರಮಕ್ರಮವಾಗಿ ಪರ್ಯಾಲೋಚಿಸಲ್ಪಡುತ್ತಲಿವೆ. ಆ ಪ್ರಾಂತ ಜನಗಳು ಬಹಳ ಸಂಭ್ರಮಪಡುತ್ತಾ ಇವೆ ಎಂದು ಕೇಳುತ್ತೇವೆ.

∴

ಕಳೆದ ವಾರ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಬಹಳ ತೀವ್ರಸ್ಥಿತಿಯಲ್ಲೇ ಇತ್ತು. ಹೊಸ ಕಾಯಿಲೆಗಳು ಹೆಚ್ಚಾಗುತ್ತಲಿದ್ದರೂ ಉಪದ್ರವು ಕೋಟೆಯ ವರಣ ಒಂದು ವಿನಾ ಉಳಿದ ಎಲ್ಲಾ ಕಡೆಗಳಲ್ಲೂ ಹರಡಿಕೊಂಡಿರುವುದು. ಕಳೆದ ೨೮ನೇ ತಾ ಮಂಗಳವಾರದ ವರೆಗೆ ೧೦,೦೦೦ ಕ್ಕಿಂತಲೂ ಹೆಚ್ಚು ಪ್ರಜೆಗಳು ಡಾಕ್ಟರುಗಳಿಂದ ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ. ಕಳೆದ ೨೨ನೇ ತಾ. ನಿಂದ ಮೊನ್ನೆ ತಾ. ೨೮ರ ವರೆಗೆ ಉಪದ್ರವದ ಸ್ಥಿತಿಯು ಹ್ಯಾಗಿತ್ತೆಂಬುವುದನ್ನು ಕೆಳಗಿನ ಸಂಖ್ಯೆಗಳಿಂದ ತಿಳಿದುಕೊಳ್ಳಬಹುದು :—

ತಾರೀಖು	ಪ್ಲೇಗ್ ಕಾಯಿಲೆ.	ಪ್ಲೇಗ್ ಮರಣ.	ಒಟ್ಟು ಮರಣ
22	18	12	18
23	17	16	35
24	28	19	28
25	16	12	21
26	11	10	14
27	28	19	27
28	31	12	19

∴

ಬೆಂಗಳೂರು ಸಿಟಿಯಲ್ಲಿ ಪ್ರಜೆಗಳಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಲ ದೊರಕುವುದಕ್ಕಾಗಿ ಒಂದು ಪರಸ್ಪರ ಸಹಾಯಕ ಸಂಘವು ಪ್ರಾರಂಭವಾಗಿದೆ. ರೆಜಿಸ್ಟ್ರಾರ್ ಮೆ|| ರಾಮರಾಯರು ಸಭೆಯಲ್ಲಿ ಹಾಜರಾಗಿದ್ದರು. ಸಾಮಾನ್ಯ ಪ್ರಜೆಗಳು ಸಾಹುಕಾರರಲ್ಲಿ ಹೆಚ್ಚು ಬಡ್ಡಿಗೆ ಸಾಲಾ ತಂದು ಮನೇ ಕಟ್ಟಿ ಬಹಳ ನಷ್ಟಪಡುತ್ತಿದ್ದರು. ಈ ಸಂಘವು ಏರ್ಪಾಡಾದದ್ದರಿಂದ ಅಂಥವರಿಗೆ ತುಂಬಾ ಸಹಾಯವಾಯಿತು. ಮನೆ ಕಟ್ಟಬೇಕೆಂಬುವವರು ಈ ಸಂಘದಲ್ಲಿ ಮೆಂಬರಾಗಿ ಸೇರಿ, ಕಟ್ಟತಕ್ಕ ಮನೆಯನ್ನೇ ಸಂಘಕ್ಕೆ ಆಧಾರಮಾಡಿ ಸುಲಭ ದರದ ಬಡ್ಡಿಗೆ ಸಾಲಾ ಪಡೆಯಬಹುದು. ಈ ಸಂಘದ ಕಾರ್ಯನಿರ್ವಾಹಕರು ಯಾರೆಂದರೆ — ಪರ್ಷನಲ್ ಸೆಕ್ರಿಟರಿ ಮೆ|| ಎಚ್. ರಾಮೈಯನವರು (ಪ್ರೆಸಿಡೆಂಟರು) ; ಅ|| ಕಂಟ್ರೋಲರ್ ಮ|| ಟಿ ಲಕ್ಷ್ಮೀ ನರಸಿಂಹರಾಯರು (ವೈಸ್ ಪ್ರೆಸಿಡೆಂಟರು), ಜವಳಿ ವರ್ತಕರಾದ ಮ|| ವೆಂಕಟರಾಮ ಶಾಸ್ತ್ರಿಗಳು (ಟ್ರೆಜರರು), ಚೀಫ್ ಕೋರ್ಟ್ ಟ್ರಾನ್ಸ್ಲೇಟರ್ ಮೆ|| ಸಿ. ಸುಬ್ಬರಾಯರು (ಸೆಕ್ರಿಟರಿ) ; ಪರ್ಷನಲ್ ಸಬ್ ಜಡ್ಜ್ ಮ|| ಸಿ. ಬಿ. ಶೇಷಗಿರಿರಾಯರೂ, ಪರ್ಷನಲ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ|| ಎ ಅರುಣಾಚಲ ಮೊದಲಿಯಾರೂ, ಚೀಫ್ ಕೋರ್ಟ್ ಟ್ರಾನ್ಸ್ಲೇಟರ್ ಮೆ|| ಎಂ. ಎಚ್. ರಾಮೇಗೌಡರೂ ಮೆಂಬರುಗಳಾಗಿದಾರೆ. ಪಟ್ಟಣವನ್ನು ಬದಲಾವಣೆ ಮಾಡಿ ಕಟ್ಟುವಂಥಾ ಮೈಸೂರು, ಶಿವಮೊಗ್ಗೆ, ಮೊದಲಾದ ಸ್ಥಳಗಳಲ್ಲೂ ಇಂಥಾ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿಕೊಂಡಲ್ಲಿ ಬಹಳ ಅನುಕೂಲವೂ ಸಹಾಯವೂ ಆದೀತೆನ್ನುವುದಕ್ಕೆ ಸಂಶಯವಿಲ್ಲ.

ನಮೂನೆ ಅಥವಾ ಮೇಲ್ಪಂಕ್ತಿ.

ನಮ್ಮ ಪಾಠಶಾಲೆಗಳಲ್ಲಿ ಬಾಲಕ ಬಾಲಕಿಯರ ಕೈಬರಹ ಬರವಣಿಗೆಯು ಚನ್ನಾಗಿರಬೇಕೆಂದು ಅವರಿಂದ ಕಾಪಿ ಅಥವಾ ಕರಡುಗಳನ್ನು ಬರಸುತ್ತೇವಷ್ಟೆ. ವಿದ್ಯಾರ್ಥಿಗಳು ಕಾಪಿ ಬಹಳವಾಗಿ ಬರೆಯಬೇಕು ಸರಿ, ಆದರೆ ಅವರು ತಮ್ಮ ಇಷ್ಟಾನುಸಾರವಾಗಿ ಎಷ್ಟೇ ಬರೆದಾಗ್ಯೂ ಅಕ್ಷರಗಳು ಚನ್ನಾಗುವದಿಲ್ಲ. ಕೈ ತಿದ್ದುವುದೂ ಇಲ್ಲ. ಏಕೆಂದರೆ ಅವರು ಯಾವ ವಿಧವನ್ನನುಸರಿಸಿ ಅಕ್ಷರಗಳನ್ನು ರೂಪಿಸಬೇಕೋ ಅವರಿಗೆ ಗೊತ್ತಿಲ್ಲ. ಇದಕ್ಕಾಗಿ ಬೋಧಕರು ಆ ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿ ಎಂದರೆ ನಮೂನೆಯನ್ನು ಕಾಪಿಯ ಮೇಲ್ಭಾಗದಲ್ಲಿ ಬರೆದುಕೊಡುತ್ತಾರೆ. ವಿದ್ಯಾರ್ಥಿಗಳು ಆ ನಮೂನೆಯನ್ನೇ ನೋಡಿ ನೋಡಿ ಕೆಳಗೆ ಅನೇಕ ಬಾರಿ ಬರೆದರೆ ಅವರ ಅಕ್ಷರಗಳು ತಕ್ಕ ರೂಪವನ್ನು ಹೊಂದಿ ಕೈ ತಿದ್ದಿ ಅವರು ಕ್ರಮೇಣ ಒಳ್ಳೆ ಬರವಣಿಗೆಯವರಾಗುವರು.

ಆದರೆ ಸ್ವಲ್ಪ ಯೋಚಿಸಿದರೆ ವಿದ್ಯಾರ್ಥಿಗಳು ಮಾತ್ರವಲ್ಲ, ದೊಡ್ಡವರನ್ನಿಸಿಕೊಂಡಿರುವ ನಾವೂ ಕೂಡ ನಮೂನೆಯನ್ನನುಸರಿಸಿಯೇ ನಮ್ಮ ನಮ್ಮ ಕೆಲಸಗಳನ್ನು ನಡೆಸುತ್ತೇವೆ. ಚಿತ್ರಕಾರನು ಕೆಲವು ಚಿತ್ರಗಳನ್ನು ಮಾಡಬೇಕೆಂದು ಮನಸ್ಸಿನಲ್ಲಿ ಉದ್ದೇಶಪಟ್ಟು, ಈಗ ತನ್ನೆದುರಿಗೆ ಇರುವ ಕೆಲವರನ್ನೋ ಅಥವಾ ಹಿಂದೆ ತಾನು ನೋಡಿದ್ದ ಚಿತ್ರಗಳನ್ನೋ ಮನಸ್ಸಿನಲ್ಲಿ ಧ್ಯಾನಿಸಿಕೊಂಡು ತನ್ನ ಮನೋಭಾವನೆಯು ರೂಪಕ್ಕನುಗುಣವಾಗಿ ಇನ್ನೊಂದು ಚಿತ್ರವನ್ನು ರೂಪಿಸುತ್ತಾನೆ. ಕುಂಬಾರನು ತನ್ನ ಮುಂದೆ ಹಾಕಿಕೊಂಡಿರುವ ಜೇಡಿಮಣ್ಣನ್ನು ನೋಡಿ ಇದರಿಂದ ನಮ್ಮ ಮನೆಗಳಲ್ಲಿ ಪ್ರಯೋಗಿಸುವ ಸುಂದರವಾದ ಭಾಂಡಗಳು ಹ್ಯಾಗೆ ತಯಾರಾಗುತ್ತವೆಂದು ನಾನು ಯೋಚಿಸುತ್ತಿದ್ದೆ. ಆಗಲಿ ಕುಂಬಾರನ ಅಲ್ಲಿಗೆ ಬಂದು ಆ ಮಣ್ಣಿನ ಮುದ್ದೆಯನ್ನು ಚಕ್ರದ ಮೇಲಿಟ್ಟು ಕೋಲಿನಿಂದ ಚಕ್ರವನ್ನು ತಿರುಗಿಸಿ ತನ್ನ ಮನಸ್ಸಿನಲ್ಲಿದ್ದ ಭಾಂಡದ ರೂಪವನ್ನು ಆ ಮಣ್ಣಿಗೆ ಕೊಟ್ಟು ಸುಂದರವಾದ ಭಾಂಡವನ್ನು ಮಾಡಿ ಕೆಳಗಿಳಿಸಿದನು. ಇದು ಆಶ್ಚರ್ಯವಾಗಿದೆ. ಆದರೆ ನಾವು ಸ್ವಲ್ಪ ಯೋಚಿಸಿದರೆ ಈ ಲೋಕದಲ್ಲಿ ನಡೆಯುವ ಸಮಸ್ತ ಕೆಲಸಗಳು ಪ್ರಾಯಶಃ ನಮೂನೆಯನ್ನು ಅನುಸರಿಸಿ ನಡೆಸಲ್ಪಡುತ್ತವೆ. ಕಂಬ್ಳಿ ನೇಯುವವನು, ದರ್ಜಿ, ಅಕ್ಕಸಾಲೆ, ಚಮ್ಮಾರ, ಚಮ್ಮಾಗಾರ, ಇವರೂ ಇನ್ನೂ ಅನೇಕ ಕಸಬುದಾರರೂ ನಮೂನೆಯ ಮಾದರಿಯನ್ನು ಕಣ್ಣಿನಿಂದ ನೋಡಿ ಮನಸ್ಸಿನಲ್ಲಿ ಅದರ ರೂಪವನ್ನು ಗ್ರಹಿಸಿ ಅದರಂತೆ ತಾನು ಇನ್ನೊಂದನ್ನು ಮಾಡಬಲ್ಲವನಾಗುತ್ತಾನೆ.

ಇಷ್ಟೇ ಅಲ್ಲ, ನಮ್ಮ ಯೋಚನೆ, ಮಾತುಗಾರಿಕೆ, ನಡತೆಗಳಲ್ಲಿಯೂ ನಾವು ನಮಗಿಂತ ಉತ್ತಮರಾದವರನ್ನು ಅಥವಾ ಮೇಲ್ಪಟ್ಟವರನ್ನು ನೋಡಿ ಅನುಸರಿಸುವವರಾಗಿದ್ದೇವೆ. ಉಪಾಧ್ಯಾಯನು ಬೋಧಿಸುವ ಬರೀ ಪಾಠವನ್ನು ಹುಡುಗರು ಕೇಳುವದು ಮಾತ್ರವಲ್ಲ, ಅವನು ಹೇಳುವ ಪಾಠಕ್ಕಿಂತ ಹೆಚ್ಚಾಗಿ ಬಾಲಕರು ಅವನ ನಡವಳಿ ಕ್ರಿಯೆಗಳನ್ನು ಲಕ್ಷ್ಯಕೊಟ್ಟು ನೋಡುತ್ತಿರುತ್ತಾರೆ. ಉಪಾಧ್ಯಾಯನು—ನನಗೆ ಬೋಧಿಸಬೇಕೆಂದು ಗೊತ್ತುಮಾಡಿರುವ ಪಾಠಗಳನ್ನು ಚನ್ನಾಗಿ ಹೇಳಿದರೆ ನನ್ನ ಕರ್ತವ್ಯ ಮುಗಿಯಿತೆಂದು ಯೋಚಿಸಬಹುದು. ಆದರೆ ಇದು ತಪ್ಪು. ಹುಡುಗರ ಎಳೆ ಮನಸ್ಸುಗಳು ಕುಂಬಾರನ ಚಕ್ರದ ಮೇಲಿರುವ ಹದವಾದ ಜೇಡಿಮಣ್ಣಿಗೆ ಸಮಾನವಾಗಿವೆ. ಅವನು ಯಾವ ಆಕೃತಿಯನ್ನು ಆ ಮಣ್ಣಿಗೆ ಕೊಡಬೇಕೆಂದಿರುತ್ತಾನೋ ಅದೇ ಆಕೃತಿಯನ್ನು ಆ ಮಣ್ಣು ಹೊಂದುವದಲ್ಲವೆ? ಪಾಠಶಾಲೆಯ ಬಾಲಕರು ಅವರ ಮನಸ್ಸು, ಬುದ್ಧಿ, ಇಚ್ಛೆ, ಆಶೆಗಳು ಸಹ ಉಪಾಧ್ಯಾಯನ ಮನಸ್ಸು, ಬುದ್ಧಿ, ಇಚ್ಛೆ ಆಶೆಗಳ ಮಾದರಿಯಂತೆಯೆ ಮುದ್ರಿಸಲ್ಪಡುತ್ತವೆ. ಉಪಾಧ್ಯಾಯನು ದುರ್ಮಾರ್ಗಿಯೂ ಕೋಪಿಯೂ ಅಬದ್ಧಗಾರನೂ ಸುಳ್ಳು ನುಡಿಯುವವನೂ ಆಗಿದ್ದಲ್ಲಿ ಅವನು ತನ್ನ ದುಶ್ಚೇಷ್ಟೆಗಳನ್ನು ಹೊರಗೆ ಬಾರದಂತೆ ಎಷ್ಟೇ ಅಂತರಂಗವಾಗಿ ಸಾಧಿಸುತ್ತಿದ್ದರೂ ಆ ಹುಡುಗರು ಅವನಿಗೂ ತಿಳಿಯದ ಹಾಗೆ ಅವನ ದುರ್ಗುಣಗಳನ್ನು ಭೇದಿಸಿ ತಿಳುಕೊಳ್ಳುತ್ತಾರೆ. ಇದರಿಂದ ಅವರ ಎಳೆಯ ಮನಸಿನಲ್ಲಿ ದುರ್ಬೀಜವನ್ನು ಬಿತ್ತಿ ಅವರನ್ನು ಕೆಡಿಸಿದಂತಾಗುವದು, ಇದಕ್ಕೆ ಸಂದೇಹವಿಲ್ಲ. ಅಥವಾ ಉಪಾಧ್ಯಾಯನು ಸತ್ಯವಂತನೂ ನಿರ್ದೋಷಿಯೂ ಪರೋಪಕಾರಿಯೂ ಪಾಪಭೀತನೂ ಆಗಿದ್ದಲ್ಲಿ ಹುಡುಗರ ಮನಸ್ಸಿನಲ್ಲಿ ಸದ್ಭೀತಿ ಬುದ್ಧಿಯು ಮುದ್ರಿತವಾಗುವದು. ಆದ್ದರಿಂದ ಉಪಾಧ್ಯಾಯನು ಪಾಠ ಹೇಳಿದರೆ ಸಾಕು, ನನ್ನ ನಡತೆ ಹೇಗಾದರೂ ಇರಲೆಂದು ಯೋಚಿಸಕೂಡದು. ನಿನ್ನೊಬ್ಬನ ನಡತೆಯಿಂದ ನಿನ್ನಲ್ಲಿ ಓದುವ ಇಪ್ಪತ್ತು ಮೂವತ್ತು ಹುಡುಗರು ಕೆಟ್ಟು ಹೋದಾರು. ಅನಂತರ ಆ ಇಪ್ಪತ್ತು ಮಂದಿಯಲ್ಲಿ ಒಬ್ಬೊಬ್ಬನಿಂದ ಇನ್ನೂ ಇಪ್ಪತ್ತಿಪ್ಪತ್ತು ಮಂದಿ ಪರಂಪರೆಯಾಗಿ ಕೆಡುತ್ತಾ ಹೋದರೆ ಗತಿಯೇನು? ಇವೆಲ್ಲದೆ ಇದು ಯಾರಿಗೂ ಗೊತ್ತಾಗುವದಿಲ್ಲವೆಂದು ತಿಳಿಯಬೇಡ. ದೇವರಿಗೆ ತಿಳಿದೇ ತಿಳಿಯುತ್ತೆ. ಆತನ ನ್ಯಾಯಾಸನದ ಮುಂದೆ ನಿಲ್ಲಬೇಕಾದಾಗ ನಮ್ಮ ಮೂಲಕವಾಗಿ ಕೆಟ್ಟವರೆಲ್ಲರೂ ಆ ಸ್ವಾಮಿಯ ಮುಂದೆ ನಿಂತು ಈತನ ಮೂಲಕವಾಗಿ ನಾವು ದುರ್ಮಾರ್ಗರಾದವೆಂದು ನಮ್ಮನ್ನು ತೋರಿಸಿ ದೂರು ಹೇಳಿದರೆ ನಮ್ಮ ಗತಿ ಏನು? ಈ ಮಾತು ಉಪಾಧ್ಯಾಯನಿಗೆ ಮಾತ್ರವಲ್ಲ. ತಂದೆತಾಯಿಗಳಿಗೂ ಗುರುಹಿರಿಯರಿಗೂ ಮಠಾಧಿಪತಿಗಳಿಗೂ ಯಜಮಾನರಿಗೂ ಧೊರೆಗೂ ಅಧಿಕಾರಿಗಳಿಗೂ ಇಡಿಗೆ ಒಂದು ಮನೆಯಲ್ಲಿರುವ ಹಿರಿಯಣ್ಣನಿಗೂ ಹಿಂದಿಯಣ್ಣನಿಗೂ ಸಹ ಹೇಳಿದ್ದು. ತಂದೆಯಂತೆ ಮಗ, ತಾಯಿಯಂತೆ ಮಗಳು, ಗುರುವಿನಂತೆ ಶಿಷ್ಯ, ದೊರೆಯಂತೆ ಪ್ರಜೆಯೆಂದು ನಮ್ಮ ಹಿರಿಯರು ಹೇಳಿದ್ದು ಎಂದಿಗೂ ಸುಳ್ಳಲ್ಲ. ನಾವೆಲ್ಲರೂ ನಮ್ಮ ನಮ್ಮ ಹಿರಿಯರಿಂದ ಮಾದರಿ ತಕ್ಕೊಳ್ಳುತ್ತ ನಮಗಿಂತ ಕಿರಿಯರಿಗೆ ಮಾದರಿ ಕೊಡುತ್ತಾ ಇದ್ದೇವೆ. ಹಾಗಾದರೆ ನೀವು ಯಾರಿಂದ ಮಾದರಿ ತಕ್ಕೊಳ್ಳುತ್ತಿದ್ದೀರಿ? ಎಂಥಾ ಮಾದರಿಯನ್ನು ಇತರೇಯವರಿಗೆ ಕೊಡುತ್ತಿದ್ದೀರಿ?

ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಪರ್ವತಪ್ರಸಂಗವೆಂಬ ದಿವ್ಯೋಪದೇಶವನ್ನು ಹೇಳಿ ಆ ಮೇಲೆ ಅವರಿಗೆ ಉತ್ತಮೋತ್ತಮವಾದ ಮೇಲ್ಪಂಕ್ತಿಯನ್ನು ಕೊಟ್ಟನು. ಈ ಮಾದರಿಯು ಸಮಸ್ತರು ಒಪ್ಪತಕ್ಕದ್ದು. ಅದನ್ನು ಕೇಳಿರಿ. "ಹೀಗೆ ನೀವು ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ದುರ್ನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ಆದ್ದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರಿ." ತಂದೆಯಾದ ದೇವರ ಮೇಲ್ಪಂಕ್ತಿಯಂತೆ ನಡೆಯುವವರೇ ಆತನ ಮಕ್ಕಳು.

ಮೈಸೂರು ಗೆಜೆಟ್ ಸಂಗ್ರಹ.

ಹಾಸನದ ತಾಲ್ಲೂಕು ದಂಗ್ರವಳ್ಳಿ, ತಮ್ಮಗಾನಹಳ್ಳಿ, ಹರಿಬೇಲಿ ಕೊಪ್ಪಲು, ತವರವ ಕೊಪ್ಪಲು, ಕಾಟಹಳ್ಳಿ, ಸಿದಲಹೊಸಳ್ಳಿ, ಈ ಗ್ರಾಮಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು.

ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿಗೆ ಸೇರಿದ ಚಂದ್ರಗಿರಿ ತಾಲ್ಲೂಕಿನಲ್ಲಿ ತಿರುಮಲೆ, ತಿರುಪತಿ, ತಿರುಚನೂರು ಈ ಸ್ಥಳಗಳಲ್ಲಿ ಅಕ್ಟೋಬರ್ ತಾ. ೨೪ರ ವರೆಗೂ ನಡೆಯುವ ಜಾತ್ರೆ ಉತ್ಸವಾದಿಗಳಿಗೆ ಪ್ಲೇಗ್ ಸೋಂಕು ಇರುವ ಪ್ರದೇಶಗಳಿಂದ ಹೋಗುವ ಯಾತ್ರಿಕರ್ಯಾರನ್ನೂ ಬಿಡದೆ ವಾಪಸು ಕಳುಹಿಸಲಾಗುವುದೆಂದು ಗವರ್ನ್‌ಮೆಂಟಿನವರು ಇಷ್ತಿಹಾರು ಕೊಟ್ಟಿದ್ದಾರೆ.

ಚನ್ನಗಿರಿ ತಾಲ್ಲೂಕು ದಾನೀಗೆರೆ ಎಂಬ ಗ್ರಾಮದಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು.

ಮೈಸೂರು ಅರಮನೆ ಮುಜರಾಯಿ ಸತ್ರ ದೇವಸ್ಥಾನಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಮುಂದೆ ಹೇಳುವವರನ್ನು ಐದು ವರ್ಷಕಾಲ ಧರ್ಮದರ್ಶಿಗಳಾಗಿ ನೇಮಿಸಿದುತ್ತೆ — ಮೆ|| ಗಣಾದ ಅಂಬಳೆ ಅಣ್ಣಯ್ಯಪಂಡಿತರು, ಅಡ್ವೋಕೇಟ್ ಎಸ್ ನಂಜಪ್ಪನವರು, ಅರಮನೆ ದರ್ಮಾಧಿಕಾರಿಗಳು ಕಟ್ಟಿ ನರಸಿಂಹಶಾಸ್ತ್ರಿಗಳು, ಅರಮನೆ ಮಹಾವಿದ್ವಾನ್ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ವಿದ್ವಾನ್ ಪಂಡಿತ ರಾಮಚಂದ್ರಾಚಾರ್ಯರು.

ಮೈಸೂರು ಸಿಟಿಯಲ್ಲಿ ಬೆಂಚ್ ಆಫ್ ಮ್ಯಾಜಿಸ್ಟ್ರೇಟರುಗಳಿಗೆ ಸಮ್ಮರಿ ವಿಚಾರಣೆಯ ಅಧಿಕಾರವನ್ನು ವಹಿಸಿದೆ.

ಆನೇಕಲ್ ಸಬ್ ಅ| ಸರ್ಜನ್ ಮೆ|| ಡಿ ಬಸಪ್ಪನವರಿಗೆ ಕೊಟ್ಟಿದ್ದ ಅರವತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟಿನ ಎಕ್ಸೈಸ್ ಆಫೀಸರ್ ಮ|| ಬಿ ಭೀಮರಾಯರಿಗೆ ಆಗಸ್ಟ್ ತಾ ೨೫ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

೧ ನೇ ಕ್ಲಾಸ್ ಅಮಲ್ದಾರ್ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಪೋಲೀಸ್ ಆಕ್ಟಿಂಗ್ ಅ|| ಸೂಪರಿನ್‌ಟೆಂಡೆಂಟರಾದ ಮೆ|| ಬಿ ರಾಮಸ್ವಾಮೈಯನವರನ್ನು ಆಗಸ್ಟ್ ಮಾಹೆ ತಾ. ೨೫ ರ ಲಾಗಾಯಿತು ೫ ನೇ ಕ್ಲಾಸ್ ಅ|| ಕಮಿಷನರ್‌ರಾಗಿ ನೇಮಕ ಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ.— (೧) ರಜದ ಮೇಲಿರುವ ಅಮಲ್ದಾರ್ ಮೆ|| ಕೆ ಶ್ರೀನಿವಾಸರಾಯರನ್ನು ಚಿಕ್ಕಬಳ್ಳಾಪುರದಿಂದ ಮೊಳಕಾಲ್ಮೂರು ತಾಲ್ಲೂಕಿಗೆ, (೨) ಮೆ|| ಅಬ್ದುಲ್ ಹಕೀಂಯವರನ್ನು ಮೊಳಕಾಲ್ಮೂರಿನಿಂದ ಚಿತ್ರದುರ್ಗ ತಾಲ್ಲೂಕಿಗೆ.

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ —ಮೆ|| ಎ. ಶೇಷಗಿರಿರಾಯರನ್ನೂ, ಮೆ|| ಎಸ್ ಕೆ ಹನುಮಂತರಾಯರನ್ನೂ, ಮೆ|| ಟಿ ಎಸ್ ಸಿದ್ಧಪ್ಪನವರನ್ನೂ ೪ನೇ ಕ್ಲಾಸ್ ಅ|| ಸರ್ಜನ್‌ರಾಗಿ, ಮೆ|| ಎಫ್ ಫರ್ನಾಂಡಿಸ್, ಮೆ|| ಎಸ್ ನಾರಾಯಣರಾವ್, ಮೆ|| ಬಿ. ನಂಜಪ್ಪ, ಇವರನ್ನು ೩ನೇ ಕ್ಲಾಸ್ ಸಬ್ ಅ| ಸರ್ಜನ್‌ರಾಗಿ, ಮೆ|| ಎಸ್. ಎಸ್ ನಂಜುಂಡೈಯನವರನ್ನೂ, ಮೆ|| ಟ ಬಾಲಕೃಷ್ಣಮೊದಲಿಯಾರ್ರನ್ನೂ ೩ನೇ ಕ್ಲಾಸ್ ಸಬ್ ಅ|| ಸರ್ಜನ್‌ರಾಗಿ.

ಅ| ಕಮಿಷನರ್ ಮೆ|| ಬಿ. ತಿಮ್ಮಣ್ಣನವರನ್ನು ಆಗಸ್ಟ್ ತಾ. ೨ ರಿಂದ ೪ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಆಲೂರ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮೆ|| ಎಸ್ ಅನಂತರಾಮೈಯಂಗಾರ್ರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ಅದನ್ನು ರದ್ದು ಮಾಡಿದೆ.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಬೇರೂರಿನ ಸ್ಕೂಲು.

ಅಯ್ಯಾ,

ತಮ್ಮ ತಿಂಗಳು ೧೬ ನೇ ತಾ. ಪತ್ರಿಕೆಯಲ್ಲಿ ಬೇರೂರಿನ ವಿಷಯವನ್ನು ಬರೆಯುವಾಗ ಎ ವಿ. ಸ್ಕೂಲು ಹೀನಸ್ಥಿತಿಯಲ್ಲಿರುವದೆಂತಲೂ, ಅದಕ್ಕೆ ಕೆಲವು ಉಪಾಧ್ಯಾಯರು ಇಲ್ಲಿನ ಸ್ಥಳೀಕರಾಗಿರುವುದೇ ಕಾರಣವೆಂತಲೂ ಬರೆದಿತ್ತು. ಈ ಊರಿನ ಎ. ವಿ ಸ್ಕೂಲಿನಲ್ಲಿ ಸ್ಥಳೀಕರಾದ ಉಪಾಧ್ಯಾಯರೊಬ್ಬರೂ ಇಲ್ಲ. ಎಲ್ಲರೂ ಪರಸ್ಥಳದವರೇ ಆಗಿರುವರು ಮತ್ತು ಎಲ್ಲರೂ ಉತ್ಸಾಹದಿಂದ ಕೆಲಸವನ್ನು ಮಾಡುತ್ತಿರುವರು. ಸ್ಕೂಲು ಉತ್ತಮಸ್ಥಿತಿಯಲ್ಲಿರುವುದೆಂದು ಮೇಲಿನ ಅಧಿಕಾರಿಗಳೂ ಅಭಿಪ್ರಾಯಪಟ್ಟಿರುವರು. ಇದನ್ನೆಲ್ಲಾ ನೋಡಿದರೆ ಆ ಲೇಖನವನ್ನು ಬರೆದವರು ಸ್ಕೂಲಿನ ವಿಷಯದಲ್ಲಿ ಎಷ್ಟು ಮಟ್ಟಿನ ಅನುಭವಶಾಲಿಗಳೆಂಬುದು ಚೆನ್ನಾಗಿ ಸ್ಪಷ್ಟಪಡುವುದು.

ಒಬ್ಬ ಟೀಚರ್.

ದನಗಳ ಸಾಕಾಣಿಕೆ ಮತ್ತು ಮೇವು

ಕೆಲವು ಜಾತಿ ರಾಸುಗಳು ಕೆಲವು ಪ್ರಾಂತ್ಯಗಳಲ್ಲಿ ಒಗ್ಗಿಕೊಂಡಿರುವುದಿಲ್ಲ. ಆದಕಾರಣ ಸಾಮಾನ್ಯವಾಗಿ ದೂರದಿಂದ ಹೊಸ ಜಾತಿ ದನಗಳನ್ನು ತರುವುದಕ್ಕಿಂತಲೂ ಸ್ಥಳೀಯ ರಾಸುಗಳನ್ನೇ ಉತ್ತಮಪಡಿಸಿಕೊಳ್ಳುವುದು ಒಳ್ಳೆಯದು. ಒಂದು ಕಡೆಯ ದನಗಳನ್ನು ಕೇವಲ ಅಲ್ಲಿನ ಗೂಳಿಗಳಿಂದಲೇ ವೃದ್ಧಿಪಡಿಸಿಕೊಳ್ಳುವುದರಲ್ಲಿ ಹುಟ್ಟುವ ಕರುಗಳು ರೂಪಿನಲ್ಲಿ ಮಾತ್ರ ಯೋಗ್ಯವಾಗಿದ್ದಾಗ್ಯೂ ಇದೇ ಕ್ರಮವನ್ನು ಒಂದೆರಡು ತಲೆಗಳು ಅನುಸರಿಸಿದ್ದಾದರೆ ವಿರೋಧವಾಗುತ್ತದೆ. ಈ ರಾಸುಗಳ ಗುಣಸ್ವಭಾವಗಳನ್ನು ಹೊಂದುವ ಹೋರಿಗಳು ಆಸ್‌ಪಾಸ್ ಗ್ರಾಮಗಳಲ್ಲಿ ಸುಲಭವಾಗಿ ದೊರೆಯುತ್ತವೆ. ಇವುಗಳನ್ನು ಉಪಯೋಗಿಸಬಹುದು. ಈ ದೇಶದ ದನಗಳನ್ನು ಮಂದೆಯಲ್ಲಿ ಮೇಯಿಸುವ ಪದ್ಧತಿಯು ದನಗಳು ಕೆಡುವುದಕ್ಕೆ ಒಂದು ಮುಖ್ಯಕಾರಣ.

ಗೂಳಿಗಳ ಮೂಲಕ ತಳಿಗಳನ್ನು ಉತ್ತಮಪಡಿಸುವುದೇ ಒಳ್ಳೇ ಕ್ರಮ. ಗೂಳಿಗಳು ನೋಟಕ್ಕೆ ಪುಷ್ಟಿಯಾಗಿಯೂ ಅಂದವಾಗಿಯೂ ಇದ್ದ ಮಾತ್ರಕ್ಕೇ ತಳಿಯನ್ನು ವೃದ್ಧಿಪಡಿಸುವುದಕ್ಕೆ ಸಹಾಯವಾಗುವುದಿಲ್ಲ. ಹೇಗೆಂದರೆ ಅವುಗಳ ಕಾಲುಗಳು ಸೊಟ್ಟನಾಗಿರಬಹುದು, ಅಥವಾ ಪಾದಗಳು ಅಸಹ್ಯವಾಗಿ ತಿರುಗಿಕೊಂಡಿರಬಹುದು. ಇವೇ ಮೊದಲಾದ ಇತರ ದುರ್ಗುಣಗಳಿರುವವುಗಳನ್ನು ಈ ಕೆಲಸಕ್ಕೆ ಉಪಯೋಗಿಸಬಾರದು. ಕಾಲು ಬಲವಾಗಿಯೂ ನೇರವಾಗಿಯೂ ಗೊರಸುಗಳು ಬಹಳ ಸಂದುಬಿಡದೇಲೂ ಇರುವ ಗೂಳಿಗಳನ್ನೇ ಹಸುಗಳ ಮೇಲೆ ಹಾರಿಸಬೇಕು. ಹಸುವಿನಲ್ಲಿ ದೋಷ ಇದ್ದರೆ ಇದರಿಂದ ಒಂದು ದುರ್ಬಲ ಕರು ಹುಟ್ಟಬಹುದು. ಆದರೆ ದುರ್ಬಲವಾದ ಗೂಳಿಯಿಂದ ೮೦ ಕರುಗಳ ಆರೋಗ್ಯ ಮತ್ತು ಬಲ ಕೆಡುತ್ತವೆ. ಆದಕಾರಣ ಬಲವಾದ ಕಾಲು ಪಾದಗಳನ್ನುಳ್ಳ ಆರೋಗ್ಯವಾದ ಮತ್ತು ಪುಷ್ಟಿಯಾದ ಗೂಳಿಯನ್ನೇ ಆಳಲು ಮಂದೆಯಲ್ಲಿಡುವುದು ಅತ್ಯವಶ್ಯಕ. ಶ್ರೇಷ್ಠವಾದ ಗೂಳಿಗಳನ್ನು ಹೊರಗಿನಿಂದ ಸುಮ್ಮನೆ ತರಿಸಿದ ಮಾತ್ರಕ್ಕೆ ಪ್ರಯೋಜನವಿಲ್ಲ. ರಾಸುಗಳಿಗೆ ಒಳ್ಳೆ ಮೇವು ತಿನ್ನಿಸಬೇಕು. ಕರುಗಳಿಗೆ ತಾಯಿಯ ಹಾಲಿನಲ್ಲಿ ಅರ್ಧ ಮತ್ತು ಅಲ್ಪಸ್ವಲ್ಪ ಹುಲ್ಲಿನಿಂದ ಬೆಳವಣಿಗೆ ಉಂಟಾಗಲಾರದು. ಹಸುಗಳಿಗೆ ಚೆನ್ನಾಗಿ ತಿಂಡಿ ಹಾಕಿ, ಕರುಗಳನ್ನು ಮಕ್ಕಳಂತೆ ಸಾಕಿಕೊಂಡು ಬರುವವರಲ್ಲಿ ಮಾತ್ರವೇ ಉತ್ತಮವಾದ ರಾಸುಗಳು ಆಗುವವು.

ಆರಂಭ ಚನ್ನಾಗಿರುವ ಕಡೆಗಳಲ್ಲೂ ಮೇವಿಗಾಗಿಯೇ ಬೆಳೆ ತೆಗೆಯುವ ಕಡೆಗಳಲ್ಲೂ ಒಳ್ಳೇ ದನಗಳು ವಿಶೇಷ ಕಾವಲುಗಳಲ್ಲಿ ಹುಲ್ಲು ಯಾವಾಗಲೂ ದೊರೆಯುವುದಿಲ್ಲ. ಆದದ್ದರಿಂದ ಪ್ರಾಯದ ರಾಸುಗಳು ಆರೋಗ್ಯವಾಗಿಯೂ ಬಲವಾಗಿಯೂ ಇರುವಂತೆ ಕಾಪಾಡಬೇಕಾದರೆ ಮೇವು ಬೆಳೆದು ಕೊಡುತ್ತಿರಬೇಕು.

ಫಾರೆಸ್ಟು ರಿಜರ್ವುಗಳಲ್ಲಿ ದನಗಳನ್ನು ಮೇಯಿಸುವುದಾದರೆ ಒಂದು ಕ್ರಮವನ್ನು ಅನುಸರಿಸಿದರೆ ಬಹಳ ಪ್ರಯೋಜನವುಂಟು. ಹೇಗೆಂದರೆ ದನಗಳನ್ನು ಸ್ವೇಚ್ಛೆಯಾಗಿ ಬಿಡದೆ ರಿಜರ್ವುಗಳನ್ನು ಭಾಗಗಳಾಗಿ ವಿಂಗಡಿಸಿ ಒಂದು ತಾಕು ಆದನಂತರ ಮತ್ತೊಂದರಂತೆ ಕ್ರಮವಾಗಿ ಮೇಯಿಸಿದ್ದಾದರೆ ಹುಲ್ಲು ದನವಿನ ತುಳಿತಕ್ಕೆ ಗುರಿಯಾಗದೆ ಚೆನ್ನಾಗಿ ಬೆಳೆದು ಕೊನೇ ತಾಕಿಗೆ ಬಂದಾಗ ಮೊದಲು ತಾಕಿನಲ್ಲಿ ಹುಲ್ಲು ಎಷ್ಟು ಬಹಳ ದಿನ ಬೆಳೆಯುತ್ತದೆ. ಸಾಮಾನ್ಯವಾಗಿ ಹಳ್ಳಿ ಹೋರಿಗಳನ್ನೂ ದನಗಳನ್ನೂ ಹಿಡವಳಿಸಿದ ಎನಹ ಇದನ್ನು ತಪ್ಪಿಸಲಾಗಲಾರದು. ೫ ತಿ. ಮಂದೆಯಲ್ಲಿ ಇಂಥಾ ಹೋರಿಗಳು ಹಸುಗಳೊಂದಿಗೆ ಸೇರದಂತೆ ಮಾಡುವುದು ಅಸಾಧ್ಯವಾದ್ದರಿಂದ ಇವುಗಳನ್ನು ಹಿಡವಳಿಡುವುದೊಂದೇ ಉಪಾಯ. ಸಾಮಾನ್ಯವಾಗಿ ಹೋರಿಗಳನ್ನು ೪ನೇ ವರುಷದಲ್ಲಿ ಹಿಡವಳಿಸುವುದುಂಟು. ಆದರೆ ಇವು ಇದ್ದರಲ್ಲಿಯೇ ಕೇಡು ಉಂಟುಮಾಡುತ್ತವೆಯಾಗಿ ಇವುಗಳನ್ನು ಹನ್ನೆರಡು ತಿಂಗಳು ತುಂಬಿದ ಕೂಡಲೆ ಹಿಡವಳಿಸಿದಲ್ಲಿ ಆರೋಗ್ಯವಾಗಿಯೂ ಅಂದವಾಗಿಯೂ ಸಾಧುವಾಗಿಯೂ ಬೆಳೆದು ನೇಗಿಲಿಗೆ ಹೂಡುವುದಕ್ಕೆ ಸಹಾಯವಾಗುತ್ತವೆ.

ಒಂದೆರಡು ಬಲಿಯದ ಗೂಳಿಗಳನ್ನು ಮಾತ್ರ ಬಾಲ್ಯದಿಂದ ಹಸುಗಳ ಮಂದೆಯಲ್ಲಿ ಬಿಡಬೇಕು. ಇವಕ್ಕೆ ಹೆಚ್ಚು ತಿಂಡಿ ಕೊಟ್ಟು ಆರೋಗ್ಯವಾಗಿಯೂ ಬಲವಾದ ಸ್ಥಿತಿಯಲ್ಲಿಯೂ ಇಡಬೇಕು. ಗೂಳಿಗಳನ್ನು ಒಂದೇ ಕಡೆ ಕಟ್ಟಬಾರದು. ಏಕೆಂದರೆ ಇವು ಒಲಗುಂದಿ ಕೀಲುಗಳು ಹಿಡಿದು ಬಹಳ ತುಂಟಾಗುವವು. ಸ್ವೇಚ್ಛೆಯಾಗಿ ತಿರುಗಾಡುವುದಕ್ಕೆ ಬಟ್ಟಲಲ್ಲಿ ಬಿಟ್ಟಿರಬೇಕಾಗುತ್ತದೆ.

ನಮ್ಮ ಪುಸ್ತಕ ಭಂಡಾರವು

“ಸ್ತೋತ್ರ ಸಾರ”

ಎಂಬ ಪುಸ್ತಕವು ಬೆಂಗಳೂರು ಸಿಗರೆ ಬೀದಿಯಲ್ಲಿರುವ ಮೆ॥ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳಿಂದ ರಚಿಸಲ್ಪಟ್ಟು ನಮ್ಮಲ್ಲಿಗೊಂದು ಪ್ರತಿಯು ಬಂದಿರುವುದು. ಇದು ಸುಮಾರು ೬೫ ಪೇಜುಗಳ ವರೆಗೂ ವಚನ ಭಾಗವೂ ಅಲ್ಲಿಂದ ೭೯ ಪೇಜುಗಳ ವರೆಗೂ ಪದ್ಯ ಭಾಗವೂ ಉಳ್ಳುದಾಗಿರುವುದು. ವಚನ ಭಾಗವು ಮನುಷ್ಯನ ಪಾಪಿಷ್ಠ, ಪರ ಪರಿಶುದ್ಧತ್ವ ಮತ್ತು ಕೆಲವು ನೀತಿಗಳು ಈ ಮೊದಲಾದುವುಗಳನ್ನು ವಿವರಿಸುವುದಾಗಿ, ಸಂಪೂರ್ಣ ಅದ್ವೈತ ಮತವನ್ನು ಬೋಧಿಸುತ್ತ, ಸರಳವಾದ ಕ್ರೈಸ್ತ ಬೋಧಕರ ರೀತಿಯ ಲಿಲೆಗೆ ಓಲುವುದಾಗಿವೆ. ಮತ್ತು ಈ ಬರವಣಿಗೆಯ ಆಯುವು ಕಲ್ಲು, ಮರ, ಹಾವು, ಹಕ್ಕಿ ಮೊದಲಾದುವೆಲ್ಲಾ ದೇವರಾದ ಹಾಗೇ ಎಂದು ನಂಬುವ ಮನಸ್ಸಿನ ಆಚಾರವನ್ನು ಸಡೆದುದಾಗಿಯೂ, ಹೂವು, ಹಣ್ಣು, ಕಾಯಿ, ನೀರು, ಸೊಪ್ಪು, ಧೂಪ ದೀಪ ಮೊದಲಾದವುಗಳಿಂತ ಆಗಮ್ಯವಾದ ನಿಷ್ಠೆಯ ಪೂಜೆಯಲ್ಲವು ಸರಿಯಲ್ಲವೆಂದೂ ಸಾಧಾರಣವಾಗಿ ಒಪ್ಪುವಹಾಗಿಲ್ಲ ಆ ನಿಗ್ರಹಾರಾಧನೆಯು ಸಾಧನವೆಂದು ಧೀರನಾದರೆಂದೇ ಹಿಂಡಿಸಿಲ್ಲ. ಆದರೂ ಮನಃಪೂರ್ವಕವಾದ ಸಿದ್ಧಾಂತಗಳನ್ನು ಯಾವ ತಂಥವೂ ಸಂಕುಚಿತತೆಯೂ ಇಲ್ಲದೆ ಒಪ್ಪಿಕೊಳ್ಳ ತಕ್ಕದಾಗಿವೆ. ಸುಮಾರಾಗಿ ಕ್ರೈಸ್ತ ಮತದ ಪ್ರಕಾರವು ಸರ್ವ ಮತಗಳ ಮೇಲೂ ಬಿದ್ದು, ಈಗೀಗ ಪ್ರಕಾಶವಾಗುತ್ತಿರುವ ಇಂಥ ತಿಳಿಯಲ್ಪಟ್ಟ ಬರಹಗಳು ಮುಂದಪುಸ್ತಕಕ್ಕೆ ಅಭಿವೃದ್ಧಿಯನ್ನು ಸಾಧಿಸುವುದಾದರೆ ಈ ಪುಸ್ತಕವೂ ನಿಜ ದೇವರ ಕೃಪೆಯಿಂದುಂಟಾದ ಸಂಸ್ಕೃತ ಪ್ರೀತಿ, ದಾನ, ಸದ್ಭಾವನೆಗಾಗಿ ಶಾಸ್ತ್ರಗಳ ದೇವತ್ವಗಳ ಅಭಿವೃದ್ಧಿಯನ್ನೂ ಬಯಸಲು ಸಂದೇಹವಿದ್ದರಲ್ಲಿ ಸಂಶಯವಿಲ್ಲ. ಪದ್ಯಭಾಗವು ನಾಲ್ಕು ಸಂಸ್ಕೃತ ಸ್ತೋತ್ರಗಳಿಂದಲೂ ಹದಿನೆಂಟು ಕನ್ನಡ ಪದ್ಯಗಳಿಂದಲೂ ಕೂಡಿದೆ. ಈ ಪದ್ಯಗಳಲ್ಲಿ ಕೆಲವು ಎಲ್ಲಾ ಸ್ತ್ರೀಪುರುಷರಿಗೂ ಹಿತವಾಗುವ ಸ್ತುತಿರೂಪವಾಗಿಯೂ ಕೀರ್ತನೆಗಳಲ್ಲಿ ಕೆಲವು ಬಾಲಕರ ನಡತೆಯ ಸೂತ್ರಗಳನ್ನೂ ಮತ್ತೆ ಕೆಲವು ಸರ್ವಸಾಮಾನ್ಯವಾದ ನೀತಿಗಳನ್ನೂ ಬೋಧಿಸತಕ್ಕವುಗಳಾಗಿಯೂ ಇವೆ. ಇಂಥ ಉಪಯುಕ್ತ ಪುಸ್ತಕವು ಸರ್ವರಿಂದಲೂ ಅಂಗೀಕರಿಸಲ್ಪತಕ್ಕುದಾಗಿವೆಯೆಂದು ನಾವು ಅಭಿಪ್ರಾಯಪಡುತ್ತೇವೆ. ಇದು ಒಂದನೆಯ ಭಾಗ, ಇದರ ಬೆಲೆ ೪ ಆಣೆಗಳು.

“ಸೋಮಸುಂದರ”

ಮೆ॥ ಟಿ. ರಾಮಭಟ್ಟರಿಂದ ರಚಿಸಲ್ಪಟ್ಟ ಈ ಸಣ್ಣ ಕನ್ನಡ ಕಥೆಯ ಒಂದು ಪ್ರತಿಯನ್ನು ಜಿ. ಟಿ. ಎ. ಪ್ರೆಸ್ಸಿನ ಮೆ॥ ಎ. ಸೇತೂರಾಯರು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇದು ಬಂಗಾಳಾದಲ್ಲಿ ಕಲ್ಕತ್ತಾ ಪಟ್ಟಣದ ಬಳಿ ಇರುವ ವಿದ್ಯಾರ್ಥಿಗಳ ವಿಷಯವಾದ ಕಥೆಯಾಗಿದೆ. ತಂದೆ ತಾಯಿಗಳು ತಮ್ಮ ಮಕ್ಕಳ ಶೀಲಸ್ವಭಾವ ಬುದ್ಧಿಕುಶಲತೆ ಮುಂತಾದ ಸ್ವಾಭಾವಿಕ ಗುಣಗಳನ್ನು ತಿಳಿದುಕೊಂಡು, ಅವರು ಸಚ್ಚರಿತ್ರರಾಗಿ ನಡೆದುಕೊಳ್ಳುವುದಕ್ಕೆ ಪ್ರೋತ್ಸಾಹಕರಾಗಬೇಕೆಂಬುವುದೂ, ಮಕ್ಕಳ ಚಟುವಟಿಕೆಯನ್ನೂ ಅವರ ಬುದ್ಧಿಕುಶಲತೆಯನ್ನೂ ಕೆಡಿಸುವಂತೆ ದರ್ಪವನ್ನಿಟ್ಟು ಶಿಕ್ಷೆ ಮಾಡುವುದು ಯೋಗ್ಯವಲ್ಲವೆಂಬುವುದೂ, ತಂದೆತಾಯಿಗಳು ಮಕ್ಕಳ ವಿಷಯದಲ್ಲಿ ನಿರ್ಲಕ್ಷ್ಯಭಾವದಲ್ಲಿದ್ದು ಅವರನ್ನು ಕೆಟ್ಟುಹೋಗುವಂತೆ ಮಾಡುತ್ತಿರಬಾರದೆಂಬುವುದೂ ಈ ಕಥೆಯಿಂದ ಸೂಚಿತವಾಗುತ್ತದೆ.

ಈ ಕಥೆಯು ಓದುವುದಕ್ಕೆ ಸ್ವಾರಸ್ಯವಾಗಿರುವುದು. ಸೋಮಸುಂದರನೆಂಬ ಹುಡುಗನು ತನ ತಂದೆಯ ಕಾಠಿಣ್ಯಯುಕ್ತವಾದ ನಡವಳಿಕೆಯನ್ನು ಸಹಿಸಲಾರದೆ ಮನೆಯನ್ನು ಬಿಟ್ಟು ನಾನಾ ಕಷ್ಟಗಳಿಗೆ ಗುರಿಯಾದರೂ ಕಡೆಗೆ ಸಕಲ ಒಳ್ಳೆಯವನೂ ನಂಬಿಗಸ್ತನೂ ಆಗಿದ್ದನೆಂಬುವುದೇ ಕಥಾ ಸಂದರ್ಭವಾಗಿದೆ. ಬಹು ಲಲಿತವಾದ ರೀತಿಯಲ್ಲಿ ಬರೆಯಲ್ಪಟ್ಟಿರುವ ಈ ಪುಸ್ತಕವನ್ನು ಓದುವವರಿಗೆ ವಿದ್ಯಾರ್ಥಿಗಳೂ ಮಾತಾಪಿತೃಗಳೂ ಪರಸ್ಪರ ನಡೆದುಕೊಳ್ಳಬೇಕಾದ ಕ್ರಮವೂ ಸಹವಾಸದ ಗುಣದೋಷಗಳೂ ತಕ್ಕಮಟ್ಟಿಗೆ ಚೆನ್ನಾಗಿ ಗೊತ್ತಾಗುವವು. ಈ ಪುಸ್ತಕವು ಮೈಸೂರು ಜಿ. ಟಿ. ಎ. ಪ್ರೆಸ್ಸಿನಲ್ಲಿ ೧೦ ಆಣೆಗೆ ದೊರೆಯುವುದು.

“ಭೀಮಸೇನಮಹಾರಾಜ ಭಾರತ ಚರಿತ್ರ”

ಈ ಉಪಾಖ್ಯಾನವು ಮಹಾಭಾರತದಲ್ಲಿ ಸೇರಿರುವ ಭೀಮಸೇನನ ವಿಚಾರವಾದದ್ದಾಗಿರುತ್ತದೆ. ಇದರಲ್ಲಿ ಯಥಾರ್ಥವಾದ ವಿಷಯಗಳ್ಯಾವವು ಎಂಬುದನ್ನು ಶೋಧಿಸಿ ಹಿಡಿದು ಬರೆದಿದ್ದರೆ ಚನ್ನಾಗಿತ್ತು. ಭಾರತವೇ ಮೊದಲಾದ ಗ್ರಂಥಗಳಿಂದ ಸಂಗ್ರಹ ಮಾಡಿ ಈ ಭೀಮಸೇನನ ಜೀವಚರಿತ್ರೆಯನ್ನು ಬರೆದದ್ದಾಗಿದೆ. ಕನ್ನಡದಲ್ಲಿ ಗ್ರಂಥಗಳನ್ನು ಬರೆಯತಕ್ಕ ನಮ್ಮ ವಿದ್ಯಾವಂತರು ಮುಂದೆ ಬೆಳೆದು ಪ್ರವರ್ಧಮಾನಕ್ಕೆ ಬರುವಂಥಾ ಬಾಲಕರಿಗೆ ಹಿತಕರವಾಗಿಯೂ, ಪ್ರೀತಿ ನಂಬಿಕೆ ಉತ್ಸಾಹಗಳನ್ನು ಹುಟ್ಟಿಸತಕ್ಕವುಗಳಾಗಿಯೂ ಇರುವ ಪುಸ್ತಕಗಳನ್ನು ಬರೆಯಾರೆಂದು ಹಾರೈಸುತ್ತೇವೆ. ಮೊದಲಿಂಥಾ ಪುಸ್ತಕಗಳು ಓದುವುದಕ್ಕೆ ಸ್ವಾರಸ್ಯವಾಗಿರಬಹುದು. ಆದರೆ ಅವುಗಳಿಂದ ಆಗುವ ಪ್ರಯೋಜನವು ಅಷ್ಟರಲ್ಲೇ ಇದೆ. ಈ ಪುಸ್ತಕವನ್ನು ಮೈಸೂರು ಅರಸುಗಳ ಬೋರ್ಡಿಂಗ್ ಸ್ಕೂಲ್ ಮೆ॥ ವಿ. ಚಂದ್ರಶೇಖರಶಾಸ್ತ್ರಿಗಳು ಸುಲಭವಾದ ಕನ್ನಡ ಸರಳಿಯಲ್ಲಿ ಬರೆದು ಮೈಸೂರು ಡೆಪ್ಯುಟಿ ಕಮಿಷನರಾದ ಮೆ॥ ಕಾಂಡಾಜೀ ಅರಸಿನವರಿಗೆ ಅರ್ಪಿಸಿರುವರು. ಮತ್ತು ಇದು ಮೈಸೂರು ಮೆ॥ ಕೆ. ಸಹಕಾರಿ ಸನದ ಮುದ್ರಾಯಂತ್ರದಲ್ಲಿ ಅಚ್ಚಾಗಿರುತ್ತದೆ.

ಮೈಸೂರು ಪಟ್ಟಣದಲ್ಲಿ ಪ್ಲೇಗು ಉಪದ್ರವು

ಪ್ರಜಾಸಭೆಯ ಮಹಾಸಭೆಯು

ಈ ತಿಂಗಳು ೨೬ನೇ ತಾರೀಖು ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಪೌರಜನ ಮಹಾಸಭೆಯು ನಡೆಯಿತು. ಮುನಿಸಿಪಾಲ್ ಪ್ರೆಸಿಡೆಂಟ್ ಕೌನ್ಸಿಲರಾದ ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಪ್ರಾಮಾಣಿಕರಾದ ಮುಖ್ಯರಿಂದ ಸರ್ಕಾರಿ ಅಧಿಕಾರಿಗಳೂ, ಹೆಸರಾದ ಆಫೀಸರುಗಳಲ್ಲಿ ನಾನಾ ಕಾರಿಯ ದೊಡ್ಡ ಮನುಷ್ಯರೂ, ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಸಭೆಯಲ್ಲಿ ಹಾಜರಾಗಿದ್ದರು.

ಮೆ॥ ಪುಟ್ಟಣ್ಣಶೆಟ್ಟರವರು ಸಭಿಕರನ್ನು ಕುರಿತು ಹೇಳಿದ ವಿಷಯಗಳೇನೆಂದರೆ,—ಮೈಸೂರು ಟವನ್ನಿನಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾಗಿ ಮೂರು ತಿಂಗಳು ಆಯಿತು. ಇದುವರೆಗೆ ಪ್ಲೇಗಿನಿಂದಲೂ ಇತರ ಕಾರಣಗಳಿಂದಲೂ ೧೨೦೦ ಜನರಿಗಿಂತಲೂ ಹೆಚ್ಚಾಗಿ ಸತ್ತುಹೋಗಿರುತ್ತಾರೆ. ಮತ್ತು ಸೆಪ್ಟಂಬರ್ ತಿಂಗಳಲ್ಲಿ ೨೨ನೇ ತಾರೀಖು ವರೆಗೆ ೫೩೬ ಜನರು ಕಾಲವಾಗಿರುವರು. ಮರಣಸಂಖ್ಯೆಯು ಈ ರೀತಿ ದಿನೇ ದಿನೇ ಹೆಚ್ಚುತ್ತಾ ಬಂದಿದೆ. ಈ ಉಪದ್ರವನ್ನು ಶಮನಮಾಡುವುದಕ್ಕೆ ತಕ್ಕ ಉಪಾಯಗಳನ್ನು ಸರ್ಕಾರವೂ ಆಲೋಚಿಸಿದೆ. ಕೆಂಡು ಜನಗಳನ್ನೆಲ್ಲಾ ಡೆಪ್ಯುಟಿ ಕಮಿಷನರ್ ಮೆ॥ ಕೆ. ಚಂಡಿಯವರು ಈ ದಿನ ಕರೆಸಿರುತ್ತಾರೆ. ಮೂರು ನಾಲ್ಕು ತಿಂಗಳ ಕೆಳಗೆ ಜನರು ಹೀಗೆ ಬರುವುದು ಕಷ್ಟವಾಗಿತ್ತು. ಈಗಲಾದರೋ ಪ್ರಜೆಗಳಿಗೆ ಈ ಉಪದ್ರದ ಕಷ್ಟಗಳೂ ಸಂಕಟಗಳೂ ಚನ್ನಾಗಿ ಅನುಭವಕ್ಕೆ ಬಂದಿರುತ್ತವೆ. ಅದಕ್ಕೆ ಈ ದಿನ ಸೇರಿರತಕ್ಕ ಮಹಾಸಭೆಯೇ ನಿದರ್ಶನವಾಗಿರುವುದು. ಈ ರೀತಿ ಜನರಲ್ಲಿ ವಿವೇಕವೂ ಸಂಘಟನವೂ ಅತಿಶಯವಾಗಿ ಉಂಟಾಗಿ ಈ ಉಪದ್ರವನ್ನು ಅಡಗಿಸುವುದರಲ್ಲಿ ಉತ್ಸಾಹ ಶೀಲತೆಯನ್ನು ತೋರಿ, ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಸಭೆಗೆ ಬಂದದ್ದಕ್ಕಾಗಿ ತುಂಬಾ ಕೃತಜ್ಞನಾಗಿರುತ್ತೇನೆ. ಇಷ್ಟು ಕೆಲವು ದಿನಗಳೊಳಗಾಗಿ ರಾಜಧಾನಿಯಲ್ಲಿ ನವರಾತ್ರಿ ಮಹೋತ್ಸವದ ಉತ್ಸವಗಳು ನಡೆಯಬೇಕಾಗಿರುವವು. ಸುತ್ತುಮುತ್ತಲಿಂದ ನಾನಾ ದೇಶದ ಪ್ರಜೆಗಳು ಇಲ್ಲಿಗೆ ಬರುವವರಾಗಿದ್ದರೆ ಅದರ ಕಾರಣ ಈ ಉಪದ್ರವು ಅತ್ಯಂತ ಭಯಂಕರವಾಗಿ ಆಗಿ, ಪಟ್ಟಣವನ್ನು ಆಶ್ರಯಿಸಿ ಕರಣವಾಗಿ ಹಾನಿಯುಂಟಾಗುವುದನ್ನು ಸಮ್ಮತಿಸಲಾಗದಿರುವ ಅವಶ್ಯವಾಗಿರುತ್ತದೆ. ಈ ಭಾಗದಲ್ಲಿ ಸರ್ಕಾರದವರು ಮಾಡಿರುವ ಏರ್ಪಾಡುಗಳು, ಅವರು ನಡೆಸುತ್ತಿರುವ ಕ್ರಮವೂ ನಿಮಗೆ ತಿಳಿದೇ ಇದೆ. ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೆ ಎರಡು ಉಪಾಯಗಳು ಮಾತ್ರ ತಿಳಿದಿವೆ. ಇಲಿ ಸತ್ತ ಕೂಡಲೇ ಮನೆಯನ್ನು ಬಿಟ್ಟು ಹೊರಟುಹೋಗುವುದೊಂದು ಉಪಾಯ. ಆದರೆ ಇದನ್ನು ಬಡವರು ಮಾಡಲಾರದ್ದಲ್ಲದೆ ನಗರದಲ್ಲಿ ವ್ಯವಹಾರ ನಡೆಸುವವರಿಗೆ ಅಸಾಧ್ಯ. ಆದಕಾರಣ ಎರಡನೇ ಉಪಾಯವಾದ ಪ್ಲೇಗ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕು. ಇದು ಪ್ಲೇಗನ್ನು ಖಂಡಿತವಾಗಿ ತಡೆಯಬಲ್ಲದೆಂದು ಬೊಂಬಾಯಿನ ಪ್ರಸಿದ್ಧ ಡಾಕ್ಟರುಗಳು ಅನುಭವದಿಂದ ತೋರಿಸಿರುತ್ತಾರೆ. ಮತ್ತು ನಮಗೆ ಇದು ಅನುಭವಕ್ಕೆ ಬಂದಿರುವುದು. ಬೆಂಗಳೂರು ದಂಡಿನಲ್ಲಿ ದೊಡ್ಡ ಮನುಷ್ಯರ ಸಹಾಯ ಪ್ರೋತ್ಸಾಹಗಳಿಂದ ಸುಮಾರು ೬೦,೦೦೦ ಪ್ರಜೆಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಅಲ್ಲಿ ಈಗ ಪ್ಲೇಗ್ ಉಪದ್ರವು ಶಮನವಾಗಿರುತ್ತದೆ. ಬೆಂಗಳೂರು ಸಿಟಿಯಲ್ಲಾದರೋ ಈ ಉಪದ್ರ ಇನ್ನೂ ಇದೆ. ರಾಜಧಾನಿಯಾದ ಮೈಸೂರು ಪಟ್ಟಣದಲ್ಲೂ ಪ್ರಜೆಗಳಾದ ನಿಮಗೆಲ್ಲಾ ಇನಾಕ್ಯುಲೇಷನ್ನಿನ ಪ್ರಯೋಜನವು ಮಂದಟ್ಟಾಗಿದೆ ಎಂದು ಭಾವಿಸುತ್ತೇನೆ. ಇಲ್ಲವಾದರೆ ಡಾಕ್ಟರುಗಳಿಂದ ಇದುವರೆಗೆ ಈ ಪಟ್ಟಣದ ಜನರು ಅಂದರೆ ೧೦,೪೦೦ ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳುತ್ತಿರಲಿಲ್ಲ. ಇದೇ ಬಹಳ ಫಲಕಾರಿಯಾದ ಚಿಕಿತ್ಸೆಯು. ಚುಚ್ಚುಮದ್ದನ್ನು ಹಾಕಿಸಿಕೊಂಡವರಿಗೂ ಪ್ಲೇಗ್ ತಗಲುತ್ತೆಂತಲೂ, ಅವರು ಸಾಯುತ್ತಾರೆಂತಲೂ ಅನೇಕರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಇಲಿ ಸತ್ತಾಗ್ಯೂ ಅದೇ ಮನೆಯಲ್ಲೇ ಜನರೆಲ್ಲಾ ಚುಚ್ಚುಮದ್ದು ಹಾಕಿಸಿಕೊಂಡಿದ್ದರೆ ಅವರಿಗೆ ಪ್ಲೇಗ್ ತಗಲುವುದಿಲ್ಲ. ಒಂದು ವೇಳೆ ತಗಲಿದರೂ ವಾಸಿಯಾಗುತ್ತೆಂಬ ಭರವಸೆ ಹೆಚ್ಚಾಗಿರುವುದು. ಇದಕ್ಕೆ ಈಗ ಚುಚ್ಚುಮದ್ದು ಹಾಕಿಸಿಕೊಂಡಿರುವ ೧೦,೦೦೦ ಜನರ ಪೈಕಿ ೨೮ ಮಂದಿಗೆ ಮಾತ್ರ ಪ್ಲೇಗ್ ಆಗಿರುವುದೂ ಆ ಪೈಕಿ ೧೭ ಜನರು ಬದುಕಿಕೊಂಡಿರುವುದೂ ದೃಷ್ಟಾಂತವಾಗಿರುತ್ತದೆ. ಚುಚ್ಚುಮದ್ದು ಹಾಕಿಸಿಕೊಂಡ ೮ ದಿನಗಳೊಳಗೇ ಅವರಿಗೆಲ್ಲಾ ಪ್ಲೇಗ್ ಕಾಣಿಸಿಕೊಂಡದ್ದರಿಂದ ಅವರು ಚುಚ್ಚುಮದ್ದು ಹಾಕಿಸಿಕೊಂಡಾಗ್ಗೆ ಅವರ ದೇಹದಲ್ಲಿ ಪ್ಲೇಗಿನ ಸೋಂಕು ಸೇರಿತ್ತೆಂದು ಹೇಳಬಹುದು. ಆದಕಾರಣ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದೇ ಗುಣಕಾರಿಯಾದ ಉಪಾಯವಾಗಿದೆ. ಸರ್ಕಾರದವರು ಇದಕ್ಕಾಗಿ ಡಾಕ್ಟರುಗಳನ್ನೂ ಲೇಡಿ ಡಾಕ್ಟರುಗಳನ್ನೂ ನೇಮಕಮಾಡಿರುವರು. ಸಕಲ ಪ್ರಜೆಗಳೂ ಏಕಮನಸ್ಸಿನಿಂದ ಈ ಚುಚ್ಚುಮದ್ದನ್ನು ಹಾಕಿಸಿಕೊಂಡಲ್ಲಿ ಈ ರೋಗವನ್ನು ಅಡಗಿಸಬಹುದು. ಸಭಿಕರು ಪ್ರಜೆಗಳಿಗಿರುವ ತೊಂದರೆಗಳನ್ನೂ ಅವರ ಅಭಿಪ್ರಾಯಗಳನ್ನೂ ತಿಳಿಸಿದ ಪಕ್ಷದಲ್ಲಿ ಸರ್ಕಾರದವರು ಅಂಥವುಗಳನ್ನು ನಿವಾರಣೆಮಾಡಲು ಸಾಹಸಪಟ್ಟಾರೆಂದು ಹೇಳುತ್ತೇನೆ ಎಂಬ ರೀತಿಯಾಗಿ ತಿಳಿಸಿದರು.

ತರುವಾಯ ಮೆ॥ ಅಂಬಳೆ ಅಣ್ಣಯ್ಯಪಂಡಿತರು ಕನ್ನಡದಲ್ಲೂ ಮೌಲ್ವಿ ದರ್ವೇಶ್ ಮೀರ್‌ಯವರು ಹಿಂದುಸ್ತಾನಿಯಲ್ಲಿಯೂ ಉಪನ್ಯಾಸಗಳನ್ನು ಮಾಡಿ, ಮೈಸೂರು ಪಟ್ಟಣವನ್ನು ಅಭಿವೃದ್ಧಿಮಾಡುವುದಕ್ಕೂ, ಪ್ರಜೆಗಳ ಆರೋಗ್ಯವನ್ನು ಹೆಚ್ಚಿಸುವುದಕ್ಕೂ, ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೂ ಶ್ರೀಮನ್ಮಹಾರಾಜರವರೂ ಅವರ ಗವರ್ನಮೆಂಟಿನವರೂ ಮಾಡಿರುವ ಮತ್ತು ಈಗ ಮಾಡುತ್ತಿರುವ ಕಾರ್ಯಗಳನ್ನು ವಿವರಿಸಿ, ಈ ಉಪದ್ರವನ್ನು ತಡೆಯುವುದಕ್ಕೆ ಎಲ್ಲರೂ ಅನುಭವಸಿದ್ಧವಾದ ಈ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕೆಂದು ತಿಳಿಸಿದರು.

ಪೇಷ್ಕರ್ ಆ ಕಮಿಷನರ್ ಮೆ॥ ವಿ. ಪಿ. ಮಾಧವರಾವ್ ಅಲ್ಲಿ ಬ್ರಾಹ್ಮಣರವರು ಬಡಬಗ್ಗರಿಗೆ ಆರೋಗ್ಯಕರವಾದ ಮನೆಗಳನ್ನು ಕಟ್ಟಿ ಕೊಡಬೇಕೆಂದೂ ಬೊಂಬಾಯಿನ ಪ್ಲೇಗ್ ಕಮಿಟಿ ಕೆಲಸದಂತೆ ಪ್ರಮಾಣ ಮನೆಗಳನ್ನು ಒಡೆದುಹಾಕಿ ಒಂದೆರಡು ವರುಷವಾದ ಮೇಲೆ ಕಟ್ಟಬೇಕೆಂದೂ ಸೂಚಿಸಿದರು.

ಮೆ॥ ಬಿ. ರಾಘವಾಚಾರ್ಯರೂ ಒಬ್ಬ ಮಹಮ್ಮದೀಯ ಪಂಡಿತರೂ ಪ್ಲೇಗ್ ಉಪದ್ರಕ್ಕೆ ಕರ್ಣಾಟಕ ಮತ್ತು ಯುನಾನಿ ಚಿಕಿತ್ಸೆಗಳುಂಟೆಂದೂ, ತಮ್ಮ ಅಂಥಾ ಅನೇಕ ರೋಗಿಗಳನ್ನು ವಾಸಿಮಾಡಿರುತ್ತೇವೆಂದೂ ಹೇಳಿದರು.

ಇನ್ಸ್‌ಪೆಕ್ಟರ್ ಜನರಲ್ ಅವರು ಸಭಿಕರನ್ನು ಕುರಿತು—ಇನಾಕ್ಯುಲೇಷನ್ ಮಾಡತಕ್ಕ ಡಾಕ್ಟರುಗಳು ಜನರ ದೇಹಸ್ಥಿತಿ, ಅವರ ವಯಸ್ಸು, ಅವರ ಆರೋಗ್ಯಸ್ಥಿತಿ ಮುಂತಾದದ್ದನ್ನು ಪರೀಕ್ಷಿಸಿ, ಅನಂತರ ಎಷ್ಟು ಪ್ರಮಾಣವನ್ನು ಅವರಿಗೆ ಚುಚ್ಚುಮದ್ದು ಹಾಕಬೇಕೋ ಅಷ್ಟನ್ನೇ ಹಾಕಬೇಕೆಂತಲೂ, ಅವರು ಈಗ ಆ ರೀತಿ ಮಾಡದೆ ಎಲ್ಲರಿಗೂ ಒಂದೇ ರೀತಿ ಇನಾಕ್ಯುಲೇಷನ್ ಮಾಡುತ್ತಿದ್ದಾರೆಂತಲೂ ಸೂಚಿಸಿದರು.

ರೆವರೆಂಡ್ ಬಿ. ಲೂಕ್ ಯವರು ಪ್ಲೇಗ್ ಚುಚ್ಚುಮದ್ದಿನಿಂದಾಗುವ ಪ್ರಯೋಜನವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸ ಮಾಡಿ, ಪ್ರಜೆಗಳ ಮುಖಂಡರೂ ಗುರುಗಳೂ ಶ್ರೀ ಸ್ವಾಮಿಗಳವರೂ ಆದ ಪೇಟೆ ಬೀದಿ ಮಠಗಳಲ್ಲಿ ಪ್ರಜೆಗಳೆದುರಲ್ಲಿ ತಮ್ಮ ಪ್ಲೇಗ್ ಚುಚ್ಚುಮದ್ದನ್ನು ಬಹಿರಂಗವಾಗಿ ಹಾಕಿಸಿಕೊಂಡು ಮಾದರಿಯನ್ನು ತೋರಿಸಬೇಕೆಂದೂ, ಸಾಮಾನ್ಯ ಜನರು ಸ್ವಲ್ಪ ಅನುಮಾನದಿಂದ ಇನಾಕ್ಯುಲೇಷನ್ ಮಾಡಿಸಿಕೊಂಡಾರೆಂತಲೂ, ಇದರಿಂದ ಒಂದೆರಡು ವಾರದೊಳಗಾಗಿ ಅನೇಕ ಸಾವಿರ ಜನರು ಚುಚ್ಚುಮದ್ದು ಹಾಕಿಸಿಕೊಂಡು ಬದುಕಿಕೊಳ್ಳುವರೆಂತಲೂ, ಅನೇಕ ಕೂಲಿಜನರಿಗೆ ಈ ಚುಚ್ಚುಮದ್ದು ಹಾಕಿಸಿಕೊಂಡದ್ದಕ್ಕಾಗಿ ೪ ಆಣೆ, ೩ ಆಣೆಗಳನ್ನು ಕೊಡುವುದಕ್ಕೆ ಪ್ರತಿಯಾಗಿ ಡಾಕ್ಟರು ಅಕ್ಕಿಯನ್ನು ಅಳೆದು ಕೊಡಿಸುವುದೇ ಉತ್ತಮವೆಂತಲೂ ತಿಳಿಸಿದರು.

ಕಡೆಯಲ್ಲಿ ಸಭಾನಾಯಕರಾಗಿದ್ದ ಮೆ॥ ಪುಟ್ಟಣ್ಣಶೆಟ್ಟರವರು ಸಭಿಕರನ್ನು ಕುರಿತು—ತಾವೆಲ್ಲಾ ಈ ರೀತಿ ಸಭೆಗೆ ಬಂದು ಈ ಉಪದ್ರವನ್ನು ಅಡಗಿಸುವ ಭಾಗದಲ್ಲಿ ಆತುರಪಡುತ್ತಿರುವುದನ್ನು ಪ್ರಕಾಶಪಡಿಸಿದ್ದಲ್ಲದೆ, ಪ್ರಜೆಗಳ ಇಂಗಿತಗಳನ್ನು ಅಭಿಪ್ರಾಯಗಳನ್ನೂ ತೊಂದರೆಗಳನ್ನೂ ತಿಳಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ವಂದಿಸಿ, ತಮ್ಮ ಅಭಿಪ್ರಾಯಾನುಸಾರವಾಗಿ ಸರ್ಕಾರದವರು ಪರಿಹಾರವನ್ನು ಕಲ್ಪಿಸಿಕೊಡುವ ಸಾಹಸಪಡುತ್ತಾರೆಂದು ಹೇಳಬಲ್ಲೆನು ಎಂಬ ರೀತಿ ಸೂಚಿಸಿ ಸಭೆಯನ್ನು ಮುಕ್ತಾಯಮಾಡಿದರು.

ತಾಲ್ಲೋಕು ವರ್ತಮಾನಗಳು

ನಂಜನಗೂಡು—ಈ ಕಡೆಗೆ ಇತ್ತ ಮಳೆಯು ಮೂರು ವಾರದಿಂದ ನಿಂತುಹೋಗಿ ಚನ್ನಾಗಿ ಬಿಸಿಲು ಕಾಯುತ್ತಿದೆ. ರಾಗಿ ಪೈರು ಚನ್ನಾಗಿ ಬೆಳೆಯುತ್ತಿದೆ. ಮಳೆಯಿಂದ ತಗ್ಗಿನ ಪ್ರದೇಶದ ಗದ್ದೆ ಪೈರು ಚನ್ನಾಗಿ ಬೆಳೆಯಿತು. ಗಿರುತ್ತದೆ. ಈ ಊರು ಆರೋಗ್ಯಕರವಾಗಿ ... ಕಾಲರಾ ಇಲ್ಲದಾಗಿರುವುದು—ಇತ್ತೀಚೆಗೆ ... ರಾತ್ರಿ ಇಲ್ಲಿನ ಮಾದ್ಯ ... ನಡೆದ ... ಕಾಗದ ... ಬೀಗ ... ಕೊಂಡು ... ಹೋಗಿರುತ್ತಾರೆ. ... ಇದನ್ನು ಮಾಡಿದವರು ... ಬಾಲಕನ ... ವರ್ಷದ ... ಬಾಲಕಿಯು ತನ್ನ ತಾಯಿಯೊಡನೆ ಸ್ನಾನಕ್ಕೆ ಹೋದ ಗುಂಡ್ಲಿನ ಹೊಳೆಯಲ್ಲಿ ಕಾಲು ಜಾರಿ ಆಕಸ್ಮಾತ್ತಾಗಿ ಬಿದ್ದು ತೀರಿ ಹೋದಳೆಂದು ತಿಳಿದುಬಂದಿದೆ.

ತ್ಯಾಮಗೊಂಡ್ಲು.—ಕಳೆದ ೨೦ನೇ ತಾ ಸೋಮವಾರ ಮೈಸೂರಿನಿಂದ ವೀಣಾ ವಾದ್ಯಗಾರರಾದ ಬಸವಣ್ಣನವರು ಬಂದಿದ್ದರು ಇವರಿಗೆ ಇಲ್ಲಿನ ಸರ್ಕಾರಿ ಉದ್ಯೋಗಸ್ಥರೂ ಕೆಲವು ಮಂದಿ ವರ್ತಕರೂ ಸೇರಿ ಸಂಗೀತ ಕಛೇರಿಯನ್ನು ಮಾಡಿಸಿ ಬಹುಮಾನವನ್ನು ಕೊಟ್ಟು ಕಳುಹಿಸಿದರು ಇವರು ಮೆ॥ ಪಂಡಿತ ಶೇಷಣ್ಣನವರ ಶಿಷ್ಯರೆಂದು ಹೇಳಿದರು ಇವರ ಸಂಗೀತವು ಎಲ್ಲರ ಮನಸ್ಸನ್ನೂ ಆಕರ್ಷಿಸುವ ಹಾಗೆ ಇತ್ತು —ಒಡೆಯಂದದ ಸ್ಟೇಷನ್ ಮಾಸ್ಟರು ಮೇಲೆ ಯಾರೋ ಹೆಸರಿಲ್ಲದ ಅರ್ಜಿಯನ್ನು ಬರೆದಿದ್ದರೆಂತಲೂ, ಅದರ ವಿಚಾರಣೆಗಾಗಿ ರೈಲ್ವೆ ಇಲಾಖಾ ಸಾಹೇಬರು ೨೨ ನೇ ತಾ ಸ್ಟೇಷನ್ ಮಾಸ್ಟರೊಡನೆ ಇಲ್ಲಿಗೆ ದಯಮಾಡಿಸಿದ್ದು ಇಲ್ಲಿನ ವರ್ತಕರನ್ನೆಲ್ಲಾ ವಿಚಾರಿಸಿ ಮಾಸ್ಟರ ಮೇಲೆ ಬರೆದಿದ್ದ ಅರ್ಜಿ ನಿಜವು ಸುಳ್ಳೆಂದು ತಿಳಿದು ಆ ದಿನ ಸಾಯಂಕಾಲವೇ ಹೊರಟು ಹೋದರು —ದಾಬಸ್‌ಪೇಟೆಯಲ್ಲಿ ಪ್ಲೇಗಿನ ಹಾವಳಿಯಿಂದ ಇದುವರೆಗೆ ೫೬ ಜನರು ಸತ್ತರು ಉಳಿದವರು ದಿಕ್ಕಾಪಾಲಾಗಿ ಚದರಿ ಗ್ರಾಮಸಂತರಗಳನ್ನು ಸೇರುತ್ತಿದ್ದಾರೆ ಈ ಕಾಲದಲ್ಲಿ ಗ್ರಾಮಸ್ಥರೂ ಸರ್ಕಾರದವರೂ ಪ್ಲೇಗಿನ ಊರಿನಿಂದ ಬರತಕ್ಕ ಜನರನ್ನು ತಡೆಯದೆ ಇದ್ದರೆ ಇಲ್ಲಿಗೂ ಪ್ಲೇಗ್‌ಮಾರಿಯು ಬಂದೀತೆಂದು ತೋರುತ್ತೆ —ಈ ಕಾಲದಲ್ಲಿ ನಮ್ಮ ಡಾಕ್ಟರವರು ಊರಿನ ಆರೋಗ್ಯಸ್ಥಿತಿಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಕೋರಲ್ಪಟ್ಟಿರುತ್ತಾರೆ ಈಚೆಗೆ ಮಳೆ ನಿಂತಿದೆ ಬಿಸಿಲು ಬಹು ಜೋರಾಗಿರುವದು ಇದುವರೆಗೆ ಇಲ್ಲಿನ ಹವಾ ಆರೋಗ್ಯಸ್ಥಿತಿಯಲ್ಲಿದೆ

ಪ್ರಂಶುರಾಪ್ಪ —ಪ್ರಜಾ ಆರೋಗ್ಯವು ತಪ್ಪಿ, ಜನರು ಷೆಡ್ಡುಗಳಲ್ಲಿ ವಾಸಮಾಡುತ್ತಾರೆ ಆದರೆ ಸಂಪೂರ್ಣವಾಗಿ ಖಾಲಿಯಾಗಲಿಲ್ಲ ಪ್ಲೇಗ್ ಸುರುವಾಗಿ ಸುಮಾರು ಎರಡು ತಿಂಗಳಾಯಿತು ಸುಮಾರು ೩೫ ಜನಗಳ ವರೆಗೂ ಸತ್ತುಹೋದರು ಈ ಸಲ ಪ್ಲೇಗ್ ತಗಲಿ ಬದುಕಿಕೊಂಡವರು ಅಪರೂಪ ಪ್ಲೇಗ್ ತಗಲುವದೂ ಜನ ಸಾಯುವದೂ ಸುಮಾರಾಗಿ ಪ್ರತಿದಿನವೂ ಉಂಟು ನಮ್ಮ ಡಿಪ್ಯುಟಿ ಅಮಲ್ದಾರರು ಊರು ಸಂಚಾರ ಮಾಡಿ ಜನಗಳಿಗೆ ಎಚ್ಚರಿಕೆಯನ್ನು ಹೇಳುತ್ತಾ ಬಂದಿದ್ದಾರೆ ನಮ್ಮ ಡಿಪ್ಯುಟಿ ಕಮಿಷನರಾದ ಮಾ॥ ಕೆ ಚಾಂಡಿ ಸಾಹೇಬರು ಇಲ್ಲಿಗೆ ದಯಮಾಡಿಸಿ ಟವರ್ ಸಂಚಾರ ಮಾಡಿ ಕಾಯಿಲೆಯವರನ್ನು ನೋಡಿ ಸಂತೋಷಪಟ್ಟು ಜನರು ಶೀಘ್ರವಾಗಿ ಷೆಡ್ಡುಗಳನ್ನು ಹಾಕಿಕೊಳ್ಳುವಂತೆ ಗಳ ಬೊಂಬುಗಳನ್ನು ಸರ್ಕಾರದಿಂದ ಗರೀಬರಾದ ಜನಗಳಿಗೆ ಮುಫತ್ತಾಗಿ ಕೊಡಬೇಕೆಂದು ಅಮಲ್ದಾರರಿಗೆ ಹುಕುಂ ಮಾಡಿದರು ಅದಕ್ಕನುಸಾರವಾಗಿ ನಮ್ಮ ಡಿಪ್ಯುಟಿ ಅಮಲ್ದಾರರು ಗಳ ಬೊಂಬುಗಳನ್ನು ಹಂಚುತ್ತಿರುವದು ಬಹಳ ಸಂತೋಷಕರವಾಗಿದೆ —ಈ ಊರಿಗೆ ಸುಮಾರು ೩ ಮೈಲು ದೂರದಲ್ಲಿರುವ ಕಾಶಿನಗರ ಮುಖ್ಯ ಬ್ರಾಹ್ಮಣರೊಬ್ಬರು ಅವರ ಮಗನನ್ನು ಯಾರೋ ಕೊಲೆ ಮಾಡಿ ಗದ್ದೆಯಲ್ಲಿ ಹಾಕಿದ್ದು ಮಗನ ಶವವನ್ನು ಮೂರನೇ ದಿವಸ ಡಾಕ್ಟರ ಆಜ್ಞಾನುಸಾರ ಪೋಲೀಸಿನವರು ತೆಗೆದು ಸುಟ್ಟರು —ಈ ವಿಷಯವಾಗಿ ಪೋಲೀಸಿನವರು ಕೆಲವರನ್ನು ಹಿಡಿದಿದ್ದಾರೆ ಆ ಗಡ್ಡೆಯಲ್ಲಿ ಕೊಡವನ್ನು ನಮ್ಮ ಡಾಕ್ಟರು ಜತೆಯಲ್ಲಿ ವೈದ್ಯರ ಮನೆಯ ಪಕ್ಕದಲ್ಲಿ ಕೊಡುತ್ತಿದ್ದದೂ ಗೊತ್ತಾಯಿತು ಹೀಗೆ ಅಪರಾಧಿಗಳನ್ನು ಇನ್ನೂ ಪತ್ತೆ ಮಾಡದ ಹಾಗೆ ಕಾಣಲಿಲ್ಲ —ಕಳೆದ ವಾರದಲ್ಲಿ ಮಿಸ್ಟರ್ ಗೂಸರಿಂಟೆಂಡೆಂಟರಾದ ಪೂಸನೀ ಧೊರೆ ಅವರು ಇಲ್ಲಿಗೆ ದಯಮಾಡಿಸಿ ಇಲ್ಲಿರುವ ಪಠ್ಯ ಸ್ಕೂಲುಗಳ ಉಪಾಧ್ಯಾಯರನ್ನು ನೋಡಿ ಅವರಿಗೆ ಬುದ್ಧಿವಾದಗಳನ್ನು ಹೇಳಿದ್ದು ಮಾತ್ರವಲ್ಲದೆ ಸ್ಕೂಲುಗಳ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಿ ಹೋದರು

ಹಾಸನ —ಈ ಊರಿನ ಸುತ್ತುಮುತ್ತಲೂ ಇರುವ ಪೈರು ಪಚ್ಚೆಗಳೆಲ್ಲಾ ಕಡೆಯಾಗಿ ಒಣಗುತ್ತೆ ಆದರೂ ಮಳೆಯು ಇನ್ನೂ ಬಿಡಲಿಲ್ಲ ಪೈರು ಕಟಾವಿಗೆ ಬಹಳ ತೊಂದರೆಯಾಗಿದೆ —ವಾರಕ್ಕೆ ಒಂದು ಮಾತ್ರ ಎಷ್ಟು ಪೈರಾದರೂ ಇನ್ನೂ ಕಟಾವಿಲ್ಲ ಇದುವರೆಗೂ ಊರಿಗೆ ಪ್ಲೇಗ್ ಬಂದಿಲ್ಲವಾದ್ದರಿಂದ ಈ ಊರನ್ನು ಸೇರುವುದಕ್ಕೆ ಪ್ರಾಂತಗಳಿಗೆ ಚೆನ್ನಾಗಿದೆ ಈ ಕಾಯಿಲೆ ಬಾರದೆ ಇದ್ದರೆ ಒಟ್ಟು ಮನೆಗೆ ವಾಪಸಾಗಬಲ್ಲ ಅಭಿವೃದ್ಧಿ ಹೊಂದಬಹುದು —ಈ ಊರಿನ ಪಶ್ಚಿಮ ಭಾಗದಲ್ಲಿರುವ ಮುನಿಸಿಪಲ್ ಗಟಾರವನ್ನು ಬಿಚ್ಚಿ ದೊಡ್ಡದಾಗಿ ಮಾಡಬೇಕೆಂದು ಎಷ್ಟು ಹೇಳಿಕೊಂಡರೂ ತೆಗೆಯಲಿಲ್ಲ ಈ ವಿಷಯವನ್ನು ಮುನಿಸಿಪಲ್ ಮೆಂಬರುಗಳು ಮನಸ್ಸಿಗೆ ತಂದುಕೊಂಡು ಅಲ್ಲಿ ಚರಂಡಿ ಮಾಡಿ ಅದನ್ನು ಬೀದಿ ವಿಸ್ತಾರಗಳಿಗೆ ಹಾಕಿಸಿದರೆ ಬಹಳ ಪ್ರಯೋಜನವು ಇಲ್ಲಿನ ಜನರಲ್ ಲೈಕ ಮತ್ತು ದೇವರಾಜೇ ಅರಸಿನವರ ಮನೆಯಲ್ಲಿ ಗಣೇಶನ ಹಬ್ಬವು ಬಹು ವಿಜೃಂಭಣೆಯಿಂದ ನಡೆಯಿತು —ರೈಲ್ ಸರ್ವೆ ಮಾಡುವವರು ಹಾಸನಕ್ಕೆ ೧೦ ೧೨ ಮೈಲಿ ದೂರದಲ್ಲಿರುತ್ತಾರೆಂದು ಕೇಳುತ್ತೇವೆ ಹಾಸನದಲ್ಲಿ ರೈಲ್ವೆ ಸ್ಟೇಷನನ್ನು ಊರಿನ ಉತ್ತರ ಭಾಗದಲ್ಲಿ ಮಹರ್ನವಮಿ ಮಂಟಪದ ಹತ್ತಿರ ಹಾಕುತ್ತಾರೆಂದು ವರ್ತಮಾನವಿದೆ ಹಾಗೆ ಹಾಕುವುದರಿಂದ ಜನಗಳಿಗೆ ನೀರು ಮುಂತಾದವುಗಳು ಸಿಕ್ಕಬೇಕಾದರೆ ಕಷ್ಟ ಮತ್ತು ಅದು ಊರಿಗೆ ದೂರವಾಗುತ್ತೆ ಸ್ಟೇಷನ್ನನ್ನು ಈಗ ಹಾಲಿ ಸಂತೆ ನಡೆಯುವ ಸ್ಥಳದಲ್ಲಿ ಅಂದರೆ ಊರಿನ ದಕ್ಷಿಣ ಭಾಗದಲ್ಲಿ ಗಂಡಸರ ಆಸ್ಪತ್ರೆ ಹತ್ತಿರ ಮಾಡಿದರೆ ಜನಗಳಿಗೆ ನೀರು ಮುಂತಾದವುಗಳಿಗೆ ಯಾವ ತೊಂದರೆಯೂ ಇರುವುದಿಲ್ಲ ಮತ್ತು ಊರಿಗೂ ಹತ್ತಿರವಾಗುತ್ತೆ ಇಲ್ಲಿನ ಆಮ್ಲಬಾಲಿಕಾ ಪಾಠಶಾಲೆಯನ್ನು ಮುನಿಸಿಪಾಲಿಟಿಗೆ ಸೇರಿಸಿಕೊಂಡರೆಂಬ ವರ್ತಮಾನವಿದೆ

ಚಿತ್ರದುರ್ಗ —ನಮ್ಮ ಖಾಯಂ ಡೆಪ್ಯುಟಿ ಕಮಿಷನರ್ ಮೆ॥ ಎಂ ವೆಂಕಟಯ್ಯಶೆಟ್ಟಿಯವರು ಖಾಯಿಲೆ ರಜಾ ಹೋಗಿದ್ದವರು ಚೆನ್ನಾಗಿ ಆರೋಗ್ಯಹೊಂದಿ ನೆನ್ನೆದಿನ ಇಲ್ಲಿಗೆ ದಯಮಾಡಿಸಿ ಡಿಸ್ಟ್ರಿಕ್ಟಿನ ಭಾರವನ್ನು ವಹಿಸಿಕೊಂಡರು ಇವರ ಪುನರಾಗಮನವು ಇಲ್ಲಿನ ಪ್ರಜೆಗಳಿಗೆ ಸಂತೋಷವನ್ನುಂಟುಮಾಡಿತು ಎದಲಿಗೆ ಬಂದಿದ್ದ ಮೆ॥ ಕೆ ಶ್ರೀನಿವಾಸರಾಯರು ಅವರ ಪೂರ್ವದ ಕೆಲಸಕ್ಕೆ ವಾಪಸು ದಯಮಾಡಿಸಿದರು —ಸರ್ಕಲ್ ಇನ್‌ಸ್ಪೆಕ್ಟರ್ ಮೆ॥ ವೆಂಕಟಸ್ವಾಮಿನಾಯ್ಡುಯವರು ಇಲ್ಲಿಗೆ ದಯಮಾಡಿಸಿ ೪-೫ ದಿವಸಗಳಿಂದ ಈ ಸ್ಥಳಗಳಲ್ಲಿರತಕ್ಕ ಸ್ಕೂಲುಗಳನ್ನು ಇನ್‌ಸ್ಪೆಕ್ಷನ್ ಮಾಡುತ್ತಿದ್ದಾರೆ ಈ ಸ್ಥಳದ ಎಲ್ಲಾ ಪ್ರಜೆಗಳೂ ಅವರ ನಿರ್ದುಷ್ಟವಾದ ನಡವಳಿಕೆಯನ್ನು ಶ್ಲಾಘಿಸುತ್ತಿದ್ದಾರೆ —ಇಲ್ಲಿ ಚಿಟ್ಟೆದವೇಲಿರತಕ್ಕ ಮುರಿಗಿಸ್ವಾಮಿ ಮಠದ ಕಟ್ಟಡದ ವಿಷಯದಲ್ಲಿ ಬ್ರಾಹ್ಮಣರು ನಡಿಸುತ್ತಿದ್ದ ಆಟಂಕ ಹೋರಾಟಗಳೆಲ್ಲಾ ಇತ್ಯರ್ಥವಾಗಿ, ಆ ಸ್ಥಳದಲ್ಲಿ ಸ್ವಾಮಿಗಳವರು ಮುರಿಗೀದೇವರು ಎಂಬ ಒಬ್ಬ ಸನ್ಯಾಸಿಯನ್ನು ನೇಮಿಸಿ, ಅವರು ಸಂಸ್ಕೃತ ಪಾಠಶಾಲೆಯನ್ನಿಟ್ಟುಕೊಂಡು ಅಲ್ಲೇ ಖಾಯಮಾಗಿ ಇರಲು ಏರ್ಪಾಡುಮಾಡಿ, ತುರ್ತು ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದ್ದಾರೆ ಅಂದರೆ, ವೀರಶೈವರೂ ಮತ್ತು ಮುರಗರಾಜೇಂದ್ರ ಸ್ವಾಮಿಯವರ ಗದ್ದಿಗೆಯಲ್ಲಿ ಭಕ್ತಿಯುಳ್ಳ ಇತರರೂ ಅವರ ಪ್ರತಿಯೊಬ್ಬರ ಮನೆಯಲ್ಲೂ ಮಠದ ಪರವಾಗಿ ಒಂದೊಂದು ಗಡಿಗೆ ಇಡಬೇಕೆಂತಲೂ, ಅದರಲ್ಲಿ ಪ್ರತಿನಿತ್ಯವೂ ಆ ಮನೆಯವರು ಒಂದು ಹಿಡಿ ಅವರಿಗೆ ಅನುಕೂಲವಿದ್ದ ದವಸವನ್ನು ಹಾಕುತ್ತಿರಬೇಕೆಂತಲೂ, ಮಠದವರು ೮ ದಿವಸಕ್ಕೊಂದಾವರ್ತಿ ಹೋಗಿ ಆ ದವಸವನ್ನು ಕೂಡಿಸಿ ತೆಗೆದುಕೊಂಡು ಹೋಗಿ ಅದರಿಂದ ಪಾಠಶಾಲೆಯನ್ನು ನಡಿಸಬೇಕೆಂತಲೂ ಏರ್ಪಾಡು ಮಾಡಿದ್ದಾರೆ ಕ್ರಮೇಣ ಈ ಪಾಠಶಾಲೆಯು ಚೆನ್ನಾಗಿ ಅಭಿವೃದ್ಧಿಗೆ ಬಂದೀತೆಂದು ತೋರುತ್ತದೆ

ಶಿವಮೊಗ್ಗ —ಟವನ್ನಲ್ಲಿ ಪ್ಲೇಗ್ ಮರಣಗಳಾಗುತ್ತಲೇ ಇರುತ್ತವೆ ಮತ್ತು ಬ್ರಾಹ್ಮಣ ಕೇರಿಯಲ್ಲಿ ಕೆಲವರು ಮನೆಗಳನ್ನು ಬಿಡುತ್ತಿದ್ದಾರೆ ರೆವ್ ಬ್ರಾಕ್‌ಬ್ಯಾಂಕ್ ದೊರೆಯವರ ಮೂಲಕ ಕ್ರೈಸ್ತ ಜನರಲ್ಲಿ ಮಕ್ಕಳೂ ದೊಡ್ಡವರೂ ಮುದುಕರೂ ಸಹಾ ಇನಾಕ್ಯುಲೇಷನ್ ಮಾಡಿಸಿಕೊಂಡು, ಎಲ್ಲರೂ ಸುಖವಾಗಿರುತ್ತಾರೆ ಮತ್ತು ಬೇರೆ ಇತರರೂ ಸಹಾ ಪ್ಲೇಗ್ ಸಿಡುಬನ್ನು ಹಾಕಿಸಿಕೊಂಡರು —ಊರೊಳಗೆ ಅನೇಕ ಕಡೆ ಗಿಡಗಂಡೆಗಳು ಬೆಳದು ಭಯಂಕರವಾಗಿವೆ ಮ್ಯುನಿಸಿಪಾಲಿಟಿಯವರು ಕೆಲವು ಕಡೆ ಗಿಡಗಳನ್ನು ಕತ್ತರಿಸಿ ಪ್ಲೇಗನ್ನು ಹೊಳೆಗೆ ತಳ್ಳುವವರಲ್ಲಿದ್ದರೆ ಮಾಡಬೇಕಾದ ಕೆಲಸ ಇನ್ನೂ ಎಷ್ಟೋ ಉಂಟು ವೈಸ್ ಪ್ರೆಸಿಡೆಂಟರು ಬಹಳ ಪ್ರಯಾಸಪಡುತ್ತಾರೆಂದು ಕೇಳಿ ಸಂತೋಷವಾಯಿತು ಬಡಾವಣೆ ಸ್ಥಳಗಳಲ್ಲಿ ರಸ್ತೆಗಳನ್ನು ಕತ್ತರಿಸಿ ತಯಾರುಮಾಡಿದ್ದಾಯಿತು ಈ ವಿಷಯದಲ್ಲಿ ಓವರ್‌ಸಿಯರ್ ಮೆ॥ ಕೃಷ್ಣಸ್ವಾಮಿ ಮೊದಲಿಯಾರ್‌ರು ಮುತುವರ್ಜಿಯಿಂದ ಕೆಲಸ ನಡಿಸುತ್ತಿದ್ದಾರೆ ಮನೆಗಳನ್ನು ಕಟ್ಟತಕ್ಕವರಿಗೆ ಸ್ಥಳಗಳನ್ನು ಯಾವಾಗ ಹಂಚಿಕೊಡುತ್ತಾರೋ ತಿಳಿಯದು —ಊರೊಳಗಿನ ಕೊಳಾಯಿಗಳನ್ನು ಆಗಲೇ ಚರಂಡಿಗಳಲ್ಲಿ ಹರಡಿಕೊಂಡು ಹೋಗಿರುತ್ತಾರೆ ಮಳೆಯ ನೀರು ಅವುಗಳಲ್ಲಿ ಧಾರಾಳವಾಗಿ ಜೊರಟುಹೋಗುತ್ತದೆ ಆದರೆ ಹೊಳೆಯ ನೀರು ಬರುವದು ಯಾವಾಗಲೋ ಗೊತ್ತಿಲ್ಲ ಮಂಡಲಿ ಬಳಿ ನಮೆಯುವ ವಾಟರ್ ವರ್ಕ್ಸ್ ಕೆಲಸವು ನಡೆಯುತ್ತದೆ ಮಹನೀಯರ್ಯಾರಾದರೂ ಒಬ್ಬರ ಕೆಲಸದಲ್ಲಿ ಇದ್ದ ರಂತೂ ಇನ್ನಿಲ್ಲದ ಖಿಲ್ಲೆಗಳಲ್ಲಿ ಅತಿ ಮುಕ್ತಿದರೆ ಮಟ್ಟಿ ದಾಮುಗಾರಿಯಲ್ಲಿ ಈ ಒಬ್ಬರು ಪ್ರಸಿದ್ಧರು ಕೆಲಸವೇ ಆಗುವದಿಲ್ಲವೆಂದು ಚಿಂತೆಪಡುತ್ತಾರೆ —ಮಳೆ ಬಂದಾಗ ಮಾರ್ಕೆಟ್ಟಿನೊಳಗೆ ಕಾಲಿಟ್ಟರೆ ಕುಂಬಾರರಿಗೂ ಹೆಚ್ಚಿನ ಕೆಲಸವೇ ನಡೆದಂತಾಗುತ್ತೆ ಮತ್ತು ಮಾರ್ಕೆಟ್ಟಿನ ಹಿಂಭಾಗದ ಪಾಯಿಖಾನೆ ಮನೆಯಿಂದ ವಿಶೇಷ ದುರ್ಗಂಧವು ಹೊರಡುತ್ತದೆ ಮ್ಯುನಿಸಿಪಾಲಿಟಿಯವರು ತಕ್ಕ ಏರ್ಪಾಡು ಮಾಡಿದರೆ ಒಳ್ಳೆಯದು —ಗಾಡಿಕೊಪ್ಪವೆಂಬ ಗ್ರಾಮದಲ್ಲಿ ಗೌಳಿಗರ ಯುವಕನೊಬ್ಬನು ತನ್ನ ಮನೆಯೊಳಗೆ ಇಂದು ಮೂರು ದಿನಕ್ಕೆ ಕೆದಗಳಿಗೆ ಹಗ್ಗವನ್ನು ಹಾಕಿಕೊಂಡು ತನ್ನ ಪ್ರಾಣವನ್ನು ಮೂರನೇ ದಿವಸಕ್ಕೆ ಇವನಿಗೆ ಹುಚ್ಚು ಹಿಡಿದಿತ್ತೆಂದು ಹೇಳುತ್ತಾರೆ ಇವನು ಈಗ ಪೋಲೀಸಿನವರ ವಶದಲ್ಲಿರುತ್ತಾನೆ —ಮಳೆ ಬೆಳೆ ಎಲ್ಲಾ ಚೆನ್ನಾಗಿವೆ ಆದರೆ ಕೆರೆ ಕೋಡಿ ಬೀಳುವ ಮಳೆ ಬರಲಿಲ್ಲ ಇಷ್ಟರಲ್ಲಿಯೆ ಬಂದೀತೆಂದು ನಿರೀಕ್ಷಿಸುತ್ತೇವೆ

ತೀರ್ಥಹಳ್ಳಿ —ಇಲ್ಲಿ ಮಳೆಯು ಈ ತಿಂಗಳಲ್ಲಿ ಸಾಧಾರಣವಾಗಿ ಬೀಳುವದಾದ್ದು ವಿಶೇಷವಾಗಿ ಬಿಸಿಲು ಇರುತ್ತದೆ ಬತ್ತದ ಪೈರು ಎಲ್ಲಿ ನೋಡಿದರೂ ಬಹಳ ಚೆನ್ನಾಗಿವೆ ಈ ಮಳೆಗಾಲದಲ್ಲಿ ಮಲೆನಾಡಿನಲ್ಲಿ ಜನರಿಗೆ ಆರೋಗ್ಯವೆಂದು ಸಾಧಾರಣವಾಗಿ ಜನರು ಹೇಳುತ್ತಲಿದ್ದರೂ ಆಸ್ಪತ್ರೆಗೆ ಬರುವ ಜನರ ಸಂಖ್ಯೆಯನ್ನು ನೋಡಿದರೆ ಖಾಯಿಲೆಯು ಜಾಸ್ತಿಯೆಂದೇ ಹೇಳಬೇಕಾಗಿದೆ ಮೆ॥ ಜಿ ಸಾಮುವೆಲ್ ರವರು ಈ ಆಸ್ಪತ್ರೆಯ ಚಾರ್ಜನ್ನು ತೆಗೆದುಕೊಂಡಂದಿನಿಂದ ಪ್ರತಿನಿತ್ಯದಲ್ಲೂ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವವರ ಸಂಖ್ಯೆಯು ಹೆಚ್ಚುತ್ತಲೇ ಬಂದಿರುವದು —ಇಲ್ಲಿನ ಮುನಿಸಿಪಾಲಿಟಿ ರಸ್ತೆ ಸೋದೆಗಳಿಗೆ ದೀಪಗಳು ಇಲ್ಲದೆ ಜೀವನಕಲಿ ಆ ಸ್ಥಳದಲ್ಲಿ ಸೋದೆಗಳು ಮೊದಲಾದವು ಮನುಷ್ಯರನ್ನೂ ಹುಲಿ ಮೊದಲಾದ ಮೃಗಗಳನ್ನೂ ಕತ್ತಿ ಕಲ್ಲುಗಳನ್ನೂ ದೊಣ್ಣೆಯನ್ನು ಹಿಡಿದರೂ ಹಟ್ಟಿಸಬಹುದಾಗಿದ ದೀಪವನ್ನು ಮಲೆನಾಡಿನಲ್ಲಿ ಈ ಎರಡು ರೋಗಗಳೂ ಹೆಚ್ಚಾಗಿರುವದು ಆದ್ದರಿಂದ ಇಲ್ಲಿನ ಮ್ಯುನಿಸಿಪಾಲಿಟಿಯವರು ಊರಿನೊಳಗಿರುವ ಕಾಡು ಗಿಡದ ಪೊದೆಗಳನ್ನು ತೆಗಿಸುವದು ಒಳ್ಳೆಯದೆಂದು ತೋರುವದು ಈ ತಾಲ್ಲೋಕಿನ ಅಮಲ್ದಾರರಾದ ಮೆ॥ ನರಸಿಂಹ ರಾವ್‌ರವರು ಈ ಊರಿನಲ್ಲಿ ಸಂತೆ ನಡೆಯುವಂತೆ ಏರ್ಪಾಡು ಮಾಡಿ ಆ ರೀತಿ ಗವರ್ನ್‌ಮೆಂಟ್ ಆರ್ಡರು ಪಡೆದಿರುವದಾಗಿ ಕೇಳುತ್ತೇವೆ ಇದು ಪಟ್ಟಣಿಗರಿಗೂ ಸ್ಥಳೀಕರಿಗೂ ಗ್ರಾಮಾಂತರಗಳ ಜನರಿಗೂ ತುಂಬಾ ಪ್ರಯೋಜನವಾದದ್ದೇ ಸರಿ ಆದರೆ ಅದು ನೆರವೇರುವ ವಿಷಯ ಸ್ವಲ್ಪ ಸಂಶಯವಾಗಿದೆ ಯಾಕೆಂದರೆ, ಇವರಿಗೆ ಹಿಂದೆ ಇದ್ದ ಕೆಲವು ಅಮಲ್ದಾರರು ಪ್ರಯತ್ನಮಾಡಿ ಬಿಟ್ಟುಬಿಟ್ಟರೆಂದು ಕೇಳುತ್ತೇವೆ ಈ ಊರಿನ ವರ್ತಕರು ಸಂತೆ ನಡೆಯುವದಕ್ಕೆ ಆಸ್ಪದ ಕೊಟ್ಟರೆ ತಮ್ಮ ವ್ಯಾಪಾರ ಲೇವಾದೇವಿಗಳು ಕೆಟ್ಟು ಹೋಗುವವೆಂದು ತಿಳಿದು ಅದಕ್ಕೆ ಆಸ್ಪದ ಕೊಡುವದಿಲ್ಲವೆಂದು ಜನರು ಹೇಳಿಕೊಳ್ಳುತ್ತಾರೆ ಆದರೆ ಸಂತೆಯಿಂದ ಎಲ್ಲರಿಗೂ ಅಂದರೆ ಮಾರುವವರಿಗೂ ಕೊಳ್ಳುವವರಿಗೂ ಪ್ರಯೋಜನವೂ, ಊರಿನ ಅಭಿವೃದ್ಧಿಗೆ ಕಾರಣವೂ, ಬಡ ಜನರು ತಮಗೆ ಬೇಕಾದ ಪದಾರ್ಥಗಳನ್ನು ಕ್ರಯವಿಲ್ಲದೆ ಸಂತೆಯಲ್ಲಿಯೆ ತೆಗೆದುಕೊಂಡು ಸಾಲ ಕೊಡುವವರ ತೊಂದರೆಯನ್ನು ತಪ್ಪಿಸಿಕೊಳ್ಳುವದಕ್ಕೂ ಸಹಾಯವಾಗುವದಾದ್ದರಿಂದ ನಮ್ಮ ಅಮಲ್ದಾರರ ಪ್ರಯತ್ನಕ್ಕೆ ಇಲ್ಲಿನ ವರ್ತಕರು ಸಹಾಯಮಾಡಿ ಸಂತೆ ನಡಿಯುವದಕ್ಕೆ ಅನುಕೂಲಪಡಿಸುವದು ಪ್ರಯೋಜನವಾಗಿರುವದು ಈ ಸಂತೆಯು ಪ್ರತಿ ಸೋಮವಾರವೂ ನಡಿಯುವಂತೆ ಏರ್ಪಾಡಾಗಿದೆ

ಚಿಕ್ಕಬಳ್ಳಾಪುರ —ಇಲ್ಲಿ ಮಳೆ ಇಲ್ಲದೆ ಪೈರುಗಳು ಒಣಗುತ್ತಾ ಇವೆ ಜನರೆಲ್ಲರೂ ಮಳೆಯನ್ನೇ ಎದುರು ನೋಡುತ್ತಾರೆ —ಈ ಊರಿನ ಕಂದವಾರದ ಕೆರೆ ಕಟ್ಟೆ ಕೆಳಗೆ ಇರುವ ನೀರಿನ ಗುರಪ್ಪನ ಭಾವಿಯಲ್ಲಿ ನೀರಿಲ್ಲವೆ ಎಲ್ಲರೂ ಬಹಳ ಶ್ರಮಪಡುತ್ತಿರುವದನ್ನು ಇಲ್ಲಿನ ಸಬ್ ಡಿವಿಜನ್ ಸಾಹೇಬರವರು ನೋಡಿ ಭಾವಿಯನು ಕೀಳಿಸಿ ಹೊಸದಾಗಿ ಇನ್ನೂ ಇಳಿಸಿ ಕಟ್ಟಿಸಬೇಕೆಂಬ ಇರಾದೆಯಿಂದ ಅನಾಸಿವೋಲೆ ಕೆಲಸ ನಡಿಸುತ್ತಿರುವ ವೇಳೆ ಕಲ್ಲು ಬಿಡುವ ಸಮಯದಲ್ಲಿ ಒಳಗೆ ಹಾಕಿದ್ದ ಗರಸೆಯನ್ನು ತೆಗೆಯುವ ಉದ್ದೇಶದಿಂದ ಅಲ್ಲಿ ಕೆಲಸ ನಡಿಸುತ್ತಿದ್ದ ಮೇಸ್ತ್ರಿಯು ಭಾವಿಯ ಒಳಗಿರುವ ಗರಸೆಗೆ ಹಗ್ಗ ಕಟ್ಟುವ ವೇಳೆ ಪಕ್ಕದಲ್ಲಿರುವ ದಡಗಳು ಬಿದ್ದು ಆ ಮೇಸ್ತ್ರಿಗೆ ಕಾಲು ಮುರಿದು ಹೋಯಿತು ಕೂಡಲೇ ಆತನನ್ನು ಆಸ್ಪತ್ರೆಗೆ ಸಾಗಿಸಿದರು ಭಾವಿಯು ಅರ್ಧ ಮುಚ್ಚಿಹೋಯಿತು ಎಲ್ಲರೂ ಇನ್ನು ಈ ಭಾವಿ ಆಗುವದಿಲ್ಲವೆಂದು ನಂಬಿಕೆ ಇಟ್ಟುಕೊಂಡಿರುವ ವೇಳೆ ನಮ್ಮ ಕೋಲಾರದ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಸಾಹೇಬರವರೂ ಸಬ್ ಡಿವಿಜನ್ ಸಾಹೇಬರವರೂ ಮನಸ್ಸಿಗೆ ತಂದುಕೊಂಡು ಹ್ಯಾಗಾದರೂ ಈ ಭಾವಿಯನ್ನು ಕಟ್ಟಿಸಬೇಕೆಂದು ಸರ್ಕಾರದಿಂದ ಕೊಂಚವಾಗಿ ಸ್ಯಾಂಕ್ಷನ್ ಆಗಿದ್ದರೂ, ಹೆಚ್ಚಾಗಿ ಕೆಲಸ ನಡಿಸಬೇಕೆಂಬ ಇರಾದೆಯಿಂದ ಮಟ್ಟೀನಹಳ್ಳಿಯ ಬಳಿ ಇದ್ದ ದಾದೂಸಾಬಿಯನ್ನು ಸಾಹೇಬರವರು ಖುದ್ದಾಗಿ ಕರೆದು ತಂದು ಈತನಿಗೆ ಕಂಟ್ರ್ಯಾಕ್ಟ್ ಕೊಟ್ಟರು ಈತನು ಬಹಳ ಮೆಹನತ್ತಿನ ದಬೂ, ಮುತುವರ್ಜಿಯಾಗಿಯೂ ಕೆಲಸ ನಡಿಸಿ ಪೂರ್ತಿಯಾಗಿ ಮುಗಿಸಿದನು ಈತನು ಸಮಸ್ತರಿಗೂ ಉಪಯೋಗವಾಗಿರುವ ಈ ಭಾವಿಯ ಕೆಲಸ ನೆರವೇರಿಸಿದ್ದನ್ನು ನೋಡಿ ಈ ಊರಿನ ಕಂದವಾರದ ಬಾಗಿಲಿನವರು ಚಂದಾ ಎತ್ತಿ ತಾ ೨೬ನೇ ಭಾನುವಾರ ಭಾವಿ ಬಳಿ ಚಪ್ಪರ ಹಾಕಿಸಿ ಇಲ್ಲಿನ ಮುನ್‌ಸಿಫರು, ಹೆಡ್ ಮಾಸ್ಟರವರು, ಲಾಯರುಗಳು ಮತ್ತು ದೊಡ್ಡ ಮನುಷ್ಯರು ಸುಮಾರು ೧,೦೦೦ ಪ್ರಜೆಗಳ ವರೆವಿಗೂ ಸೇರಿದ್ದರು ಸಬ್ ಡಿವಿಜನ್ ಸಾಹೇಬರವರೂ, ಅಮಲ್ದಾರರವರೂ ಸರ್ಕೀಟು ಹೋಗಬೇಕಾಗಿದ್ದ ಕಾರಣ ಇಲ್ಲಿಗೆ ದಯಮಾಡಲು ಅವಕಾಶವಾಗಲಿಲ್ಲ ಸಮಸ್ತರಿಗೂ ಪಾನಕ ಪನ್ಯಾರ ಕೊಟ್ಟನಂತರ ಲಾಯರ್ ಮೆ॥ ತಿಮ್ಮವೆಂಗಡಯ್ಯನವರು ಸಭಿಕರಿಗೆ ವಂದಿಸಿ ಮುನ್‌ಸೀಫರವರನ್ನು ಛೇರ್ಮನ್ ಆಗಿ ಮಾಡಿದರು ಕಂಟ್ರ್ಯಾಕ್ಟರ್ ದಾದೂಸಾಬಿಗೆ ಬಹಳ ಮೆಹನತ್ತು ಮಾಡಿದ್ದಕ್ಕಾಗಿ ಒಂದು ಚಿನ್ನದ ಮೆಡಲನ್ನು ಬಹುಮಾನವಾಗಿ ಕೊಟ್ಟರು ಈ ಕೆಲಸವನ್ನು ನೆರವೇರಿಸಿದ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ, ಸಬ್ ಡಿವಿಜನ್ ಸಾಹೇಬರವರಿಗೂ, ಮೈಸೂರು ಸರ್ಕಾರದವರಿಗೂ ಕೃತಜ್ಞತೆಯನ್ನು ಸೂಚಿಸಿ ಸಭಿಕರೆಲ್ಲರಿಗೂ ಗಂಧಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಅತ್ಯಂತ ಸಂತೋಷದೊಡನೆ ಎಲ್ಲರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು

ಚಿಕ್ಕನಾಯಕನಹಳ್ಳಿ —ಇಲ್ಲಿ ಹವೆ ಚೆನ್ನಾಗಿದೆ ಬಿಸಿಲು ಕಾಯುತ್ತಾ ಇದೆ ಮಧ್ಯ ಮಧ್ಯದಲ್ಲಿ ಸಣ್ಣದಾಗಿ ತುಂತುರು ಮಳೆ ಬರುತ್ತದೆ ರಾಗಿ ಪೈರು ಚೆನ್ನಾಗಿವೆ ಹೆಚ್ಚಾಗಿ ಮಳೆ ಬಂದದ್ದರಿಂದ ಜೋಳ ಕೆಟ್ಟುಹೋಗಿದೆ —ಸಂತೆಯಲ್ಲಿ ವರ್ತಕರು ಜೋಳ, ರಾಗಿ, ಅಕ್ಕಿ ಮುಂತಾದ ಧಾನ್ಯಗಳನ್ನು ಕಮ್ಮಿ ಸೇರಿನಲ್ಲಿ ಅಳೆಯುತ್ತಾರೆ ಈ ವಿಚಾರದಲ್ಲಿ ಸರ್ಕಾರದ ರೆವಿನ್ಯೂ ಉದ್ಯೋಗಸ್ಥರು ಸಂತೆಗೆ ಹೋಗಿ ಕಮ್ಮಿ ಸೇರಿನಲ್ಲಿ ಅಳೆಯುವವರನ್ನು ಕಂಡು ಹಿಡಿದು ತಕ್ಕ ಶಿಕ್ಷೆ ಮಾಡಿ ಜನಗಳಿಗಿರುವ ತೊಂದರೆಯನ್ನು ತಪ್ಪಿಸುವರೆಂದು ನಂಬಿದ್ದೇವೆ —ಈ ಊರಿನಲ್ಲಿ ಪೇಟೆಯಲ್ಲಿ ಛಾಪಾಕಾಗದ ಮಾರುವ ಅಂಗಡಿಯಲ್ಲಿ ಜನರಿಗೆ ಛಾಪಾಕಾಗದಗಳು ಸುಲಭವಾಗಿಯೂ ಸರಾಗವಾಗಿಯೂ ಸಿಕ್ಕುವದಿಲ್ಲ ನಮ್ಮ ಅಮಲ್ದಾರರು ದಯವಿಟ್ಟು ಈ ಸಮಾಚಾರಗಳನ್ನು ತಕ್ಕ ಗಮನಕ್ಕೆ ತಂದು ಇನ್ನು ಮುಂದೆ ಜನಗಳಿಗೆ ಇರತಕ್ಕ ತೊಂದರೆಗಳನ್ನು ತಪ್ಪಿಸಬೇಕಾಗಿ ಬೇಡುತ್ತೇವೆ —ತಾ ೨೧ನೇ ಮಂಗಳವಾರ ಬೆಳಗ್ಗೆ ೧ ಘಂಟೆ ಸಮಯದಲ್ಲಿ ಹೆಡ್ ಮಾಸ್ಟರು ಮೆ॥ ಕೃಷ್ಣಪ್ಪನವರ ಹೆಂಡತಿ ಊಟ ಮಾಡಿಕೊಂಡು ಪಾತ್ರೆ ಬೆಳಗುವದಕ್ಕೋಸ್ಕರ ಕೆರೆಗೆ ೫ ವರುಷದ ಮಗನ ಸಹಿತ ಹೋಗಿದ್ದರು ಅವರು ಪಾತ್ರೆ ಬೆಳಗುತ್ತಾ ಇರುವಾಗ ಆ ಹುಡುಗನು ಸ್ವಲ್ಪ ದೂರದಲ್ಲಿ ನೀರು ಕುಡಿಯುವದಕ್ಕೆ ಹೋಗಿ ಕಾಲು ಜಾರಿ ಬಿದ್ದನು ಮಗನನ್ನು ಹಿಡಿಯಬೇಕೆಂದು ತಾಯಿ ಸಹಾ ನೀರೊಳಕ್ಕೆ ಬಿದ್ದರು ಅಷ್ಟರೊಳಗೆ ಮೇಲೆ ಇದ್ದ ಕೆಲವರು ಮೊದ್ಲಿಯರ ಹೆಂಗಸರು ನೀರೊಳಗೆ ಬಿದ್ದರೆಂದು ಘಟ್ಟಿಯಾಗಿ ಕೂಗಿಕೊಂಡರು ಊಟ ಮಾಡಿಕೊಂಡು ತಮ್ಮ ಮನೆ ಜಗಲಿಯಮೇಲೆ ಕೂತಿದ್ದ ಮೆ॥ ದಾಸರ ರಾಮಣ್ಣನವರು ಈ ಕೂಗನ್ನು ಕೇಳಿ ತಕ್ಷಣವೇ ಕೆರೆಯ ಹತ್ತಿರಕ್ಕೆ ಓಡಿಹೋಗಿ ನೋಡುವದರಲ್ಲಿ ತಾಯಿ ಮಗನೂ ಸಹ ಬಿದ್ದಿದ್ದರು ಅವನ್ನು ಕಂಡು ಮಗನನ್ನು ಹಿಡಿಯಬೇಕೆಂದು ಸೊಂಟದ ಉದ್ದ ನೀರಲ್ಲಿ ಇಳಿದರು ಆಗ ಅವನನ್ನು ಮೇಲಕ್ಕೆ ಎತ್ತಿ ತರುವದರಲ್ಲಿ ಆ ಹುಡುಗನ ತಾಯಿಯು ೧೦ ಗಜಗಳ ದೂರ ಹೋದರು ಕೂಡಲೇ ಜನಗಳು ಸೇರಿದರು ಮೆ॥ ರಾಮಣ್ಣನವರು ಮುಳುಗಿದ ಆಕೆಯನ್ನು ಎತ್ತಿ ಹಾಕಿದರು ನಮ್ಮ ಅಮಲ್ದಾರ್ ಮೆ॥ ಸುಂದರರಾಯರು ಪ್ರಾಣ ಉಳಿಸುವದಕ್ಕೆ ಬಹಳ ಶ್ರಮಪಟ್ಟರು ಮೆ॥ ರಾಮರಾಯರೇ ಮುಂತಾದ ಸರ್ಕಾರಿ ಉದ್ಯೋಗಸ್ಥರು ಸೇರಿ ಎಷ್ಟು ಪ್ರಯತ್ನಪಟ್ಟರೂ ಕೊನೆಗೂ ಪ್ರಾಣ ಹೋಯಿತು ಕೋರ್ಟಿಗೆ ಶವವನ್ನು ಮಹಜರ್ ಮಾಡಿ, ದಹನಕ್ಕೆ ಕೊಟ್ಟರು ಇವರು ಈ ಊರಿಗೆ ೨ ತಿಂಗಳ ಹಿಂದೆ ತಿಪಟೂರಿನಿಂದ ವರ್ಗವಾಗಿ ಬಂದವರು ಬಹಳ ಒಳ್ಳೆಯವರಾಗಿಯೂ ಗುಣಾಢ್ಯರಾಗಿಯೂ ಇರುತ್ತಾರೆ ಇವರಿಗೆ ಪ್ರಾಪ್ತವಾದ ದುಃಖಕ್ಕೆ ನಾವು ಬಹಳವಾಗಿ ಮರುಗುವೆವು

ಬೌರಿಂಗ್‌ಪೇಟೆ —ಈ ಊರಿನ ವಾಸಸ್ಥನಾದ ಪಳ್ಳಿಗರ ಜಾತಿ ವೆಂಗಟ್ರಾಮ ಎಂಬವನು ತನ್ನ ಹೆಂಡತಿ ಸುಮಾರು ೨೫ ವಯಸ್ಸುಳ್ಳ ಮುನಿ ಎಂಬಾಕೆಯನ್ನು ಅವನ ಎಲೆ ತೋಟದಲ್ಲಿ ಈಗ ೧೧ ದಿನಗಳ ಹಿಂದೆ ತಲೆ ಕೈಕಾಲುಗಳನ್ನು ಮುಂಡಕ್ಕೆ ಹತ್ತಿಂಡವಾಗಿ ಕತ್ತರಿಸಿ, ಸದರಿ ತೋಟಕ್ಕೆ ಸಮೀಪವಾದ ಶ್ಯಾನುಭೋಗ ರಾಮಣ್ಣನ ಭಾವಿಯಲ್ಲಿ ೨ ಅಡಿ ಉದ್ದ ೧½ ಅಡಿ ಅಗಲ ದಪ್ಪದ ಕಲ್ಲನ್ನು ಸಣ್ಣಬಿನ ತಂತಿಯಿಂದ ಮುಂಡಕ್ಕೆ ಕಟ್ಟಿಹಾಕಿದ್ದನು ಸದರಿ ಮುಂಡವು ೧೪ನೇ ತಾ ಕಲ್ಲಿನೊಂದಿಗೆ ತೇಲಿ ಎಲ್ಲಾ ಜನರಿಗೂ ಮುಖ್ಯವಾಗಿ ಪೋಲೀಸಿನವರಿಗೂ ದಿಗ್ಭ್ರಮೆಯನ್ನು ಹುಟ್ಟಿಸಿತು ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ರಿಚರ್ಡ್ಸ್ ಸಾಹೇಬರೂ ಇಲ್ಲಿನ ಇನ್‌ಸ್ಪೆಕ್ಟರ್ ಮೆ॥ ಟೇಟ್‌ಸಾಹೇಬರೂ ತಮ್ಮ ಸಿಬ್ಬಂದಿಯೊಂದಿಗೆ ಹಾಜರಾಗಿ ಮಹಜರು ಮಾಡಿಸಿ ಮುಂಡವು ಹೆಂಗಸದಾಗಿದೆ ಎಂತಲೂ, ಯಾರೋ ಖೂನಿಮಾಡಿರುತ್ತಾರೆಂತಲೂ ಗೊತ್ತುಮಾಡಿ ಮುಂಡವನ್ನು ಫೋಟೋ ಹಿಡಿಸಿ ಡಾಕ್ಟರವರ ಅಪಮಾಯಿಸಿ ಆದನಂತರ ಅದನ್ನು ದಫನ್ ಮಾಡಿಸಿದರು ಸದರಿ ಮೆ॥ ಟೇಟ್‌ಸಾಹೇಬರು, ಹೆಡ್ ಕಾನ್‌ಸ್ಟೇಬಲ್ ರಾಜರಾವು ಮುಂತಾದವರು ಮುತುವರ್ಜಿಯಿಂದ ಮೊಕದ್ದಮೆಯ ಪತ್ತೆಯಲ್ಲಿದ್ದುಕೊಂಡು ಸದರಿ ವೆಂಕಟ್ರಾಮನನ್ನು ಹಿಡಿಯುವಷ್ಟರಲ್ಲಿ ಸದರಿ ಮುಂಡದ ಕೈಯನ್ನು ನಾಯಿಗಳು ತಿನ್ನುತ್ತಿವೆ ಎಂಬ ಸುದ್ದಿಯುಂಟಾಯಿತು ಮತ್ತು ಸದರಿ ವೆಂಕಟ್ರಾಮನ ಹೇಳಿಕೆಯಮೇಲೆ ಮುಂಡವಿದ್ದ ಭಾವಿಗೂ ತನ್ನ ಎಲೆ ತೋಟದ ಭಾವಿಗೂ ಅಜೂಬಾಜು ಇದ್ದ ಮತ್ತೊಂದು ಭಾವಿಯಲ್ಲಿ ತಲೆ ಕೈಕಾಲುಗಳನ್ನು ಹಾಕಿದೇನೆಂದು ೧೯ನೇ ತಾ ನಲ್ಲಿ ಹೇಳಿದ್ದರ ಮೇಲೆ ಸದರಿ ಭಾವಿಗೆ ಆ ರಾತ್ರಿ ಕಾವಲಿಟ್ಟು ಮಾರನೇ ದಿನ ಯಾತದಿಂದಲೂ ಗೂಡೆಗಳಿಂದಲೂ ವಾಟೆ ಹೊಡಿಸಿ ಏಳು ಹಳ್ಳಕ್ಕೆ ನೀರನ್ನು ತೆಗೆದು, ಇನ್ನೂ ಸುಮಾರು ನೀರಿರುವಾಗಲೇ ಜನರನ್ನು ಇಳಿಸಿ ಶೋಧಿಸಿದಾಗ ಎರಡುಕಾಲುಗಳಿಗೂ ಕಲ್ಲುಗಳನ್ನು ಕಟ್ಟಿಹಾಕಿದ್ದವುಗಳು ಸಿಕ್ಕಿದವು ಇನ್ನೂ ಶೋಧಿಸಲಾಗಿ ಸದರಿ ಹೆಂಗಸಿನ ಸೀರೆಯಲ್ಲಿ ತಲೆಯನ್ನು ಕಲ್ಲಿನೊಂದಿಗೆ ಸುತ್ತಿ ಹಳೇ ಗೋಣಿಚೀಲದಲ್ಲಿ ಹಾಕಿದ್ದದ್ದೂ ಸಿಕ್ಕಿತು ಆ ಕಾಲುಗಳನ್ನೂ ತಲೆಯನ್ನೂ ಫೋಟೋ ತೆಗಿಸಿ ಮಹಜರು ಮಾಡಿಸಿ ಡಾಕ್ಟರವರ ಅಪಮಾಯಿಷಿ ಬಗ್ಗೆ ಕಳುಹಿಸಿದರು ತಲೆಯನ್ನು ತೆಗೆದಾಗ ಕಾಟಿ ಎಲೆಯ ಓಲೆಗಳೂ (ಬುಗಡಿಗಳು) ಮೂಗಿನಲ್ಲಿ ಮೂಗುತಿ

ಯೂ ಇದ್ದವು ಈ ಮೊಕದ್ದಮೆ ಇನ್ನೂ ಅಖೈರಾಯಿಸಿಯಲ್ಲಿದೆ ಇವಕ್ಕೆ ಕೋಲಾರು ತಾಲ್ಲೂಕ್ ವಕ್ಕಲೇರಿಯವನು ಒಬ್ಬನು ಸೇರಿರುತ್ತಾನೆಂದು ಅವನನ್ನು ಹಿಡಿದು ತರಲು ಪೋಲೀಸಿನವರು ಹೋಗಿರುತ್ತಾರೆಂಬ ವರ್ತಮಾನವಿದೆ ಕೆಲವರು ಈಕೆ ಕಟ್ಟಿಹಾಲಿನಲ್ಲಿದ್ದದ್ದರಿಂದ ಈಕೆಯ ದುರ್ನಡತೆಯ ದೆಸೆಯಿಂದ ಈಕೆಯ ಗಂಡನೂ ನೆಂಟರಲ್ಲಿ ಒಬ್ಬನೂ ಹೀಗೆ ಮಾಡಿರುತ್ತಾರೆಂದು ಹೇಳಿಕೊಳ್ಳುತ್ತಾರೆ ಈಗ ಮೂರು ತಿಂಗಳಿಗೆ ಮುಂಚೆ ಒಬ್ಬ ಲಿಂಗಾಯತನು ಖೂನ್ ಮಾಡಲ್ಪಟ್ಟನು ಆಸಾಮಿಗಳು ಯಾರೆಂಬುದು ಇನ್ನೂ ಪತ್ತೆಯಾಗಲಿಲ್ಲ

ಬೇಲೂರು —ಇಲ್ಲಿನ ವಾಚಕಮಂದಿರವು ಉತ್ತಮಸ್ಥಿತಿಯಲ್ಲಿರುವುದು ಆದರೆ ಕೆಲವು ಮಹಾಶಯರು ಪೋಷಕದ್ರವ್ಯಗಳನ್ನು ಸಹಾಯ ಮಾಡದೆ ನಿಲ್ಲಿಸಿರುವಂತೆ ತೋರುತ್ತದೆ. ಆ ರೀತಿ ಮಾಡಲಾಗದೆಂದು ನಿರೀಕ್ಷಿಸಬೇಕಾಗಿದೆ — ಪುಸ್ತಕಭಂಡಾರವು ಏರ್ಪಟ್ಟು ಸುಮಾರು ೧೨೦ ರೂಪಾಯಿನ ಪುಸ್ತಕಗಳು ತರಿಸಲ್ಪಟ್ಟವೆ. ಕೆಲವು ಉದಾರಚಿತ್ತರು ಪುಸ್ತಕಗಳನ್ನು ದಯಪಾಲಿಸುತ್ತಿರುವರು ಅವರಿಗೆ ವಂದನೆಗಳನ್ನು ಈ ಮೂಲಕ ಅರ್ಪಿಸುವೆವು —ಉಪಾಸನಾಸಮಾಜವೂ, ಅನಾಥಾಲಯವೂ ಉತ್ತಮಸ್ಥಿತಿಯಲ್ಲಿರುವವು ಸಮಾಜದವರಿಗೆ ಕುಶಲವಿದ್ಯೆಗಳನ್ನು ಬಾಲಕರಿಗೆ ಕಲಿಸಬೇಕೆಂದು ಅಭಿಲಾಷೆ ಹುಟ್ಟಿತು ಇವುಗಳನ್ನು ಕಲಿತುಕೊಂಡು ಬರಲು ಸಮಾಜದ ಮೆಂಬರಾದ ಮ|| ದೇವರಶ್ಯನವರನ್ನು ಬೆಳಗಾವಿಗೆ ಕಳುಹಿಸಿಕೊಟ್ಟರು ಅವರು ಅಲ್ಲಿಗೆ ಹೋಗಿ, ಇಪಾಕ್ ಮಿಷನ್ನನ್ನು ಪ್ರೆಸಿಡೆಂಟರವರ ಮುಖಾಂತರ ತೆಗೆದುಕೊಂಡು ಕಲಿಯಲಿಕ್ಕೆ ಪ್ರಾರಂಭಿಸಿದರು ಸುಮಾರು ೩೦ ದಿನಗಳಾಗುತ್ತಾ ಬಂತು ಅವರು ಇಷ್ಟರೊಳಗಾಗಿ ತಯಾರುಮಾಡಿ ಕಳುಹಿಸಿದ ಬಟ್ಟೆಗಳು ಶ್ಲಾಘ್ಯತರವಾಗಿವೆ ಮುಂದೆ ಅವರು ಈ ವಿದ್ಯೆಯಲ್ಲಿ ಹೆಚ್ಚಾಗಿ ಪ್ರವೇಶಿಸಬಹುದೆಂದು ನಿರೀಕ್ಷಿಸಲ್ಪಟ್ಟಿದೆ —ಈಚೆಗೆ ೩ ತಿಂಗಳ ಕೆಳಗೆ ಒಂದು ವಿದ್ಯಾರ್ಥಿಗಳ ಸಂಘವು ಗರಲ್ಸ್‌ಸ್ಕೂಲ್ ಹೆಡ್‌ಮಾಸ್ಟರ್ ಮ|| ವಲ್ಲಭವಯ್ಯಂಗಾರ್ಯರಿಂದ ಸ್ಥಾಪಿಸಲ್ಪಟ್ಟಿತು, ಇದು ಪ್ರತಿ ಭಾನುವಾರವೂ ಒಂದು ಗೊತ್ತಾದ ಸ್ಥಳದಲ್ಲಿ ಸಭೆ ಸೇರಿ, ವಿದ್ಯಾವಂತರ ಸಮಕ್ಷಮ ವಿದ್ಯಾರ್ಥಿಗಳ ಉಪನ್ಯಾಸಗಳು ನಡೆಸಲ್ಪಡುತ್ತಲಿವೆ ಇದಕ್ಕೆಲ್ಲಾ ಈ ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎಚ್ ಎನ್ ವೆಂಕಟೇಶಯ್ಯನವರೇ ಪ್ರೋತ್ಸಾಹಕಾರಿಗಳು ಇವರ ವಿಷಯದಲ್ಲಿ ಸಂಘದವರು ಚಿರಕಾಲ ಕೃತಜ್ಞರಾಗಿರಬೇಕಾದುದು ಕರ್ತವ್ಯವಾಗಿದೆ —ಇಲ್ಲಿನ ಗರಲ್ಸ್‌ಸ್ಕೂಲು ಈಚೆಗೆ ಅಭಿವೃದ್ಧಿಗೆ ಬರುತ್ತಲಿರುವುದು ಈಗಿನ ಹೆಡ್ ಮಾಸ್ಟರವರು ಮುತುವರ್ಜಿಯನ್ನು ವಹಿಸಿ ಕೆಲಸ ಮಾಡುತ್ತಲಿರುವರು ಆದರೆ ಸಂಗೀತವನ್ನು ಚೆನ್ನಾಗಿ ಬಲ್ಲ ಒಬ್ಬ ಮಾಸ್ಟರು ಇಲ್ಲದೆ ಇರುವುದೊಂದು ಕೊರತೆಯಾಗಿರುವುದೆಂದು ಹೇಳುತ್ತಿರುವರು ಇಲಾಖೆಯವರೂ, ಕಮಿಟಿಯ ಮೆಂಬರುಗಳೂ ಗಮನ ಕೊಟ್ಟಾರೆಂದು ನಿರೀಕ್ಷಿಸಬೇಕಾಗಿದೆ —ವಿದ್ಯಾರ್ಥಿನಿಯರಿಗೆ ಹೆಚ್ಚಾಗಿ ಪ್ರೋತ್ಸಾಹ ಕೊಡುವುದರ ಮೂಲಕ ವಿದ್ಯಾಭಿಮಾನಿಗಳಾದ ಉಪಾಸನಾಸಮಾಜದ ಅಧ್ಯಕ್ಷರೂ ಉಪಾಧ್ಯಕ್ಷರೂ ವಿದ್ಯಾಭಿವೃದ್ಧಿಗೆ ಕಾರಣವೆಂದು ಊಹಿಸಿದರು ಅದಕ್ಕನುಗುಣವಾಗಿ ಇಲ್ಲಿನ ಎ ವಿ ಸ್ಕೂಲ್ ಮುಖ್ಯೋಪಾಧ್ಯಾಯರ ಮೂಲಕ ಆದ ತಾ ೧೫—೧೬ ರಲ್ಲಿ ಸ್ಕೂಲನ್ನು ಪರೀಕ್ಷಿಸಿ, ತೇರ್ಗಡೆಯಾದವರಿಗೆಲ್ಲಾ ಅವರಿಗುಪಯುಕ್ತವಾದ ಪುಸ್ತಕಗಳನ್ನು ಹಂಚಿದರು ಈ ಬಹುಮಾನ ಸಭೆಯು ತಾ ೧೯ ರಲ್ಲಿ ಎ ವಿ ಸ್ಕೂಲು ಕಟ್ಟಡದಲ್ಲಿ ಮಧ್ಯಾಹ್ನ ಸೇರಿತು ಮ|| ಕಡೂರು ಸ್ಟ್ರೆ| ವೆಂಕಟಾಚಲಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿದ್ದರು ಸರ್ಕಾರಿಯ ಉಪಾಧ್ಯಾಯರು, ಪುರಪ್ರಮುಖರು, ರೇಲ್ವೇ ಆಫೀಸರು ಮೊದಲಾದ ಅನೇಕ ಮಹಾಶಯರುಗಳಿಂದ ಸಭೆಯು ಅಲಂಕೃತವಾಗಿತ್ತು ಬಾಲಕಿಯರ ಇಂಪಾದ ಗಾನವು ಸಭೆಯವರಿಗೆ ಸಂತೋಷವನ್ನುಂಟುಮಾಡಿದ್ದಲ್ಲದೆ, ವಿದ್ಯಾರ್ಥಿಗಳ ಸಂಘದ ಉಪನ್ಯಾಸಗಳು ಆನಂದಗೊಳಿಸುತ್ತಿದ್ದವು ಸರ್ಕಾರದಿಂದ ಕಳುಹಿಸಲ್ಪಟ್ಟಿದ್ದ ಬಹುಮಾನ ಪುಸ್ತಕಗಳು ಹಂಚಲ್ಪಟ್ಟ ತರುವಾಯ ಸಮಾಜದ ಅಧ್ಯಕ್ಷರು ಅಗ್ರಾಸನರ ಹಸ್ತದಿಂದ ಕೇಗರ್ಗಡೆ ಹೊಂದಿದ ಬಾಲಕಿಯರಿಗೆ ಬಹುಮಾನ ಪುಸ್ತಕಗಳನ್ನು ಕೊಡಿಸಿದರು ಅನಂತರ ಅಗ್ರಾಸನರು ಪ್ರೋತ್ಸಾಹಕವಾಕ್ಯಗಳಿಂದ ಸಭೆಯವರನ್ನು ಆನಂದಗೊಳಿಸಿದ್ದಲ್ಲದೆ, ಬಾಲಕಿಯರಿಗೆ ಬುದ್ಧಿವಾದಗಳನ್ನೂ, ವಿದ್ಯಾರ್ಥಿಗಳ ಸಂಘದವರಿಗೆ ಹಿತೋಪದೇಶವನ್ನೂ ಮಾಡಿ ತಮ್ಮ ಭಾಷಣವನ್ನು ಮುಗಿಸಿದರು ಬಳಿಕ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳೂ ಬಾಲಕಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು ವಿದ್ಯಾರ್ಥಿಯರಲ್ಲಿ ಬಡವರಾದವರಿಗೆ ಪುಸ್ತಕಗಳನ್ನೂ ಸ್ಲೇಟುಗಳನ್ನೂ ಕೊಡಿಸಿ ೩ ನೇ ಭಾನುವಾರ ವಿಚಾರಿಸುವ ಮಾಡಿರುವುದಾಗಿ ಅಂತಸ್ತು ಇವರು ಈ ರೀತಿ ಏರ್ಪಾಡು ಮಾಡಿ, ವಿದ್ಯಾಭಿವೃದ್ಧಿ ಮಾಡಲು ಪ್ರೋತ್ಸಾಹಿಸುತ್ತಿರುವರು

ಇಂಡಿಯಾದೇಶದ ವೃತ್ತಾಂತಗಳು

ಕಳೆದ ಭಾನುವಾರ ಮಧ್ಯಾಹ್ನ ೨|| ಗಂಟೆ ಹೊತ್ತಿನಲ್ಲಿ ಓಂಗೋಲ್ ಪಟ್ಟಣದಲ್ಲಿ ಭೂಮಿಯು ಸ್ವಲ್ಪ ಜೋರಾಗಿ ಕಂಪಿಸಿತೆಂದು ತಿಳಿಯುತ್ತದೆ

* * *

ಸಂಯುಕ್ತ ಆಧಿಪತ್ಯಗಳ ಮುಖ್ಯ ಪಟ್ಟಣವಾದ ಲಕ್ನೋ ನಗರದಲ್ಲಿ ಗವರನ್‌ಮೆಂಟಿನವರು ಒಂದು ವೈದ್ಯ ವಿದ್ಯಾಶಾಲೆಯನ್ನು ಸ್ಥಾಪಿಸುವವರಾಗಿದ್ದಾರೆ

* * *

ಕಾನಪುರದಲ್ಲಿ ಮಕ್ಕಳ ಸಾವು ವಿಶೇಷವಾಗಿರುವುದರಿಂದ ಅದಕ್ಕೆ ಕಾರಣಗಳೇನೆಂಬುದನ್ನು ಕುರಿತು ಶೋಧನೆಮಾಡಿ ತಿಳಿಸುವಂತೆ ಗವರನ್‌ಮೆಂಟಿನವರು ಒಬ್ಬ ಲೇಡಿ ಡಾಕ್ಟರನ್ನು ನೇಮಿಸಿರುತ್ತಾರೆ

* * *

ಕಲ್ಕತ್ತೆಯಲ್ಲಿರುವ ಮ|| ಬಿ ಎಲ್ ಗುಪ್ತ ಎಂಬ ಬಂಗಾಳಿ ವಕೀಲರನ್ನು ಬರೋಡಾ ಸಂಸ್ಥಾನದ ಮಹಾರಾಜರವರು ತಮ್ಮ ಗವರ್ನ್‌ಮೆಂಟಿನಲ್ಲಿ ನೌಕರಿ ಕೊಟ್ಟು ನೇಮಿಸಿಕೊಂಡಿರುತ್ತಾರೆ

* * *

ಸ್ವದೇಶವತ್ಸಲರಾಗಿದ್ದು ಕಳೆದ ವಾರ ಕಲ್ಕತ್ತೆಯಲ್ಲಿ ಕಾಲವಾದ ಮ|| ಲಾಲ್ ಮೋಹನ್ ಘೋಸ್‌ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಆ ಪ್ರಾಂತ್ಯದಲ್ಲಿ ಒಂದು ಸಲಹೆ ಹುಟ್ಟಿ ಏರ್ಪಾಡಾಗುತ್ತಿದೆ

* * *

ನಾಗಪುರ ಡಿಸ್ಟ್ರಿಕ್ಟಿನಲ್ಲಿ ಕಳೆದ ೧೯೦೭-೦೮ನೇ ಸಾಲಿನಲ್ಲಿ ಸರ್ಕಾರದವರು ೨೫,೦೦೦ ರೂಪಾಯಿ ಖರ್ಚುಮಾಡಿ ೧೮೩,೭೭೮ ಇಲಿ ಹೆಗ್ಗಣಗಳನ್ನು ಕೊಲ್ಲಿಸಿರುತ್ತಾರೆಂದೂ, ೧೯೦೮ ನೇ ಇಸವಿಯಲ್ಲಿ ಮಧ್ಯ ಪ್ರಾಂತಗಳಲ್ಲಿಲ್ಲಾ ಒಟ್ಟು ಐದು ಲಕ್ಷ ಇಲಿ ಹೆಗ್ಗಣಗಳು ಕೊಲ್ಲಲ್ಪಟ್ಟವೆಂದೂ ತಿಳಿದು ಬಂದಿದೆ

ಪಂಜಾಬ್ ಆಧಿಪತ್ಯದಲ್ಲಿ (ದೇಶೀಯ ಸಂಸ್ಥಾನಗಳಲ್ಲದೆ) ೧೯೦೭ನೇ ವರುಷದಲ್ಲಿ ೬,೦೮,೬೮೦ ಜನರೂ ೧೯೦೮ರಲ್ಲಿ ೩೦,೬೦೮ ಜನರೂ ಪ್ಲೇಗ್ ಉಪದ್ರದಲ್ಲಿ ಕಾಲವಾದರೆಂದು ತಿಳಿಯುವುದು

* * *

ಸಂಯುಕ್ತ ಆಧಿಪತ್ಯಗಳ ಗವರನ್‌ಮೆಂಟಿನವರು ಅಲ್ಲಿನ ಕೆಲವು ಸರ್ಕಾರಿ ನೌಕರವಾನೇತುಗಳ ಪ ಹಿತಕಾರ್ಯಗಳನ್ನು ನೋಡಿ ಮೆಚ್ಚಿಕೊಂಡು, ಅವರಿಗೆ ಜಹಗೀರಿಗಳನ್ನೂ ಜವಿನಿನ ಇನಾಮತಿಗಳನ್ನೂ ದಯಪಾಲಿಸಿರುತ್ತಾರೆ

* * *

ಪಂಜಾಬ್ ಗವರನ್‌ಮೆಂಟಿನವರು ಆ ಆಧಿಪತ್ಯದಲ್ಲಿ ಅಫೀಂ ತಯಾರಾಗುವ ಗಸಗಸೆಯ ವ್ಯವಸಾಯವನ್ನು ನಿಲ್ಲಿಸಿಬಿಡಬೇಕೆಂದು ಏರ್ಪಾಡು ಮಾಡಿದಾರೆ ಮತ್ತು ಆ ಪ್ರಾಂತ್ಯದಲ್ಲಿರುವ ದೇಶೀಯ ರಾಜರಿಗೂ ಈ ವಿಚಾರವನ್ನು ತಿಳಿಸಿ, ದೇಶೀಯ ಸಂಸ್ಥಾನಗಳಲ್ಲೂ ಆ ಬೆಳೆಯನ್ನು ಮಾಡದಂತೆ ನೋಡಿಕೊಳ್ಳಬೇಕೆಂದು ಸೂಚಿಸಿರುವರು

* * *

ಕಳೆದ ಶನಿವಾರ ರಾತ್ರಿ ಬೊಂಬಾಯಿನಲ್ಲಿ ಜೋರಾದ ಮಳೆ ಸುರಿಯಿತು ಪದ್ಮಾವಿ ಬೀದಿಯಲ್ಲಿದ್ದ ನಾಲ್ಕು ಅಂತಸ್ತಿನ ಮಹಡಿ ಮನೆಯು ನೆನೆದು ಪಕ್ಕದಲ್ಲಿದ್ದ ಎರಡು ಅಂತಸ್ತಿನ ಮನೆಯ ಮೇಲೆ ಉರುಳಿಕೊಂಡಿತು ದೊಡ್ಡ ಮನೆಯಲ್ಲಿ ಆಗ ಯಾರೂ ಇರಲಿಲ್ಲ ಸಣ್ಣ ಮನೆಯಲ್ಲಿದ್ದ ಇಬ್ಬರು ಮೃತಪಟ್ಟರು ಮೂರು ಮಂದಿಗೆ ಗಾಯಗಳಾದವು

* * *

ಕಳೆದ ವಾರ ಉತ್ತರ ದೇಶಕ್ಕೆ ಸೇರಿದ ಇನ್ನು ಕೆಲವು ದೇಶೀಯ ಸಂಸ್ಥಾನಗಳ ರಾಜರುಗಳು ತಮ್ಮ ಪ್ರಜೆಗಳಲ್ಲಿ ಯಾರಾದರೂ ರಾಜದ್ರೋಹಕರವಾದ ಮಸಲತ್ತುಗಳನ್ನಾಗಲಿ, ಕೃತ್ಯಗಳನ್ನಾಗಲಿ, ಸನ್ನಾಹಗಳನ್ನಾಗಲಿ, ಉಪನ್ಯಾಸಗಳನ್ನಾಗಲಿ ಮಾಡಕೂಡದೆಂದೂ, ಹಾಗೆ ಮಾಡಿದವರಿಗೆ ಕಠಿಣತರವಾದ ಶಿಕ್ಷೆಯಾಗುವುದೆಂದೂ ಇಸ್ತಿಹಾರ ಗಳನ್ನು ಹಾಕಿಸಿರುತ್ತಾರೆ

* * *

ಮ|| ಪಂಕಜರಾಯ ಎಂಬೊಬ್ಬ ಕಲ್ಕತ್ತಾ ವರ್ತಕನು ತನ್ನಲ್ಲಿ ೨೫ ಲಕ್ಷ ರೂಪಾಯಿನ ಸ್ವದೇಶೀ ಬಟ್ಟೆಗಳು ಬಿಕರಿ ಆಗದೆ ಉಳಿದಿರುತ್ತವೆ ಎಂದೂ ಅವೆಲ್ಲಾ ಬಂಗಲಕ್ಷ್ಮೀ ಎಂಬ ದೇಶೀಯ ಕಾರ್ಖಾನೆಯೊಳಗೆ ತಯಾರಾದದ್ದೆಂದೂ, ಜನರು ಅದನ್ನು ವಿದೇಶದ ಸರಕೆಂದು ಕೊಂಡುಕೊಳ್ಳದೆ ಇದ್ದಾರೆಂದೂ ಮೊನ್ನೆ ಕಲ್ಕತ್ತೆಯಲ್ಲಿ ನಡೆದ ಒಂದು ಸ್ವದೇಶೀ ಮೀಟಿಂಗಿನಲ್ಲಿ ತಿಳಿಸಿದನು

* * *

ತಿರುವಾಂಕೂರು (ಅನಂತಶಯನ) ಸಂಸ್ಥಾನದ ಮಹಾರಾಜರವರ ೫೩ ನೇ ವರುಷದ ವರ್ಧಂತಿ ಉತ್ಸವಗಳು ಕಳೆದ ವಾರ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟವು ಅವರು ಆಳುವಿಕೆ ಪ್ರಾರಂಭಿಸಿ ಇಲ್ಲಿಗೆ ೨೫ ಸಂವತ್ಸರಗಳಾದವು ಮೂರು ದಿನಗಳ ವರೆಗೆ ರಾಜಧಾನಿಯಲ್ಲೂ ಸಂಸ್ಥಾನದ ಇತರ ಊರುಗಳಲ್ಲೂ ಪ್ರಜೆಗಳು ಅನೇಕ ಸಂತೋಷಕಾರ್ಯಗಳನ್ನು ನಡಿಸಿದರೆಂದು ಪ್ರಕಟವಾಗಿದೆ

* * *

ಕೊಚ್ಚಿ ಸಂಸ್ಥಾನದಲ್ಲಿ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರನು ಒಬ್ಬ ಕಾನಿಸ್ಟೇಬಲೂ ಜೂಜಿನ ಕಟ್ಟೆಗೆ ಹೋಗಿ ಜೂಜಾಡುತ್ತಿದ್ದವರ ಬಳಿ ಸಿಕ್ಕಿದ ನಗನಾಣ್ಯಗಳನ್ನು ಕಿತ್ತುಕೊಂಡು ಬಂದು ರಿಪೋರ್ಟಿನಲ್ಲಿ ಆ ಹಣಗಳನ್ನು ನಮೂದು ಮಾಡದೆ ಅಪಹರಿಸಬೇಕೆಂದು ಪ್ರಯತ್ನಪಟ್ಟರು ದಿವಾನ್ ಮ|| ವೆಂಕಟ ಬ್ಯಾನರ್ಜಿಯವರು ರಿಪೋರ್ಟನ್ನು ತರಿಸಿಕೊಂಡು ಆ ಇನ್‌ಸ್ಪೆಕ್ಟರನ್ನು ಕೆಲಸದಿಂದ ವಜಾ ಮಾಡಿಸಿರುತ್ತಾರೆ

* * *

ಎಸ್ ಜನರಲ್ಲಿ ಅವರ ಮುಚ್ಚಿನೆ ವಿಷಯವಾದ ಒಂದು ಕಾನೂನು ಗವರನ್‌ಮೆಂಟಿನಲ್ಲಿ ಚರ್ಚೆಯಾಗುತ್ತಿದೆ ಅವರ ವಿವಾಹ ಕಾಲದಲ್ಲಿ ನಡೆಯಬೇಕಾದ ಶಾಸ್ತ್ರಗಳನ್ನೆಲ್ಲಾ ಕ್ರಮವಾಗಿ ವಿವರಿಸಿ ಆ ಕಾನೂನಿನಲ್ಲಿ ಕಾಣಿಸಬೇಕೆಂದು ಇಲ್ಲವಾದರೆ ಅದನ್ನು ಜಾರಿಗೆ ತರಕೂಡದೆಂತಲೂ ಎಸ್ ಜನರ ಗುರು ಹಿರಿಯರು ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ವಿಲಾಯತಿಗೆ ಮಹಾರಾಜಾ ಚಕ್ರವರ್ತಿಯವರಿಗೆ ಕಳುಹಿಸಿಕೊಟ್ಟಿದಾರೆ

* * *

ಮದ್ರಾಸ್ ಪಟ್ಟಣದ ಚೂಳೆಯಲ್ಲಿರುವ ಹತ್ತಿ ಬಟ್ಟೆಗಳ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಕೂಲಿಜನರು ಕಳೆದ ವಾರ ಇದ್ದಕ್ಕಿದ್ದಹಾಗೇ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು ಆ ಕಾರ್ಖಾನೆಯಲ್ಲಿ ೧,೩೦೦ ಜನರು ಕೆಲಸಮಾಡುತ್ತಿದ್ದರು ಅಧಿಕಾರಿಗಳು ಅವರಿಗೆ ಸಮಾಧಾನ ಹೇಳಿದ್ದರ ಮೇರೆಗೆ ಮಾರನೇ ದಿನದಿಂದ ಅವರೆಲ್ಲಾ ಕೆಲಸದ ಮೇಲೆ ಬಂದರು ಮುಖ್ಯದರಾಗಿ ಜನರ ಮನಸ್ಸನ್ನು ಕೆಡಿಸಿದ ಕೆಲವರನ್ನು ಕೆಲಸದಿಂದ ವಜಾಮಾಡಿರುತ್ತಾರೆ

* * *

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು ೩,೩೫೩ ಪ್ಲೇಗ್ ಮರಣಗಳಾದವು ಇವರ ಹಂಚಿಕೆ ಹ್ಯಾಗೆಂದರೆ, ಬೊಂಬಾಯಿ ಆಧಿಪತ್ಯ ೬೯೩, ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ ೨೯೬, ಸಂಯುಕ್ತ ಆಧಿಪತ್ಯಗಳು ೩೫೩, ಮದರಾಸ್ ಆಧಿಪತ್ಯ ೧೮೫, ಮೈಸೂರು ಸಂಸ್ಥಾನ ೧೬೯, ಮಧ್ಯ ಇಂಡಿಯಾ ೧೦೯, ಪಂಜಾಬ್ ೬೮, ಬಂಗಾಳಾ ೫೮ ಒಟ್ಟು ೪೨, ಹೈದರಾಬಾದ್ ಸಂಸ್ಥಾನ ೨೦, ರಾಜಪುಟ ನಾ ಮತ್ತು ಅಜ್ಮೀರ್ ಮೇರ್ವಾರಾ ೬೦

* * *

ಕಾಶೀ ಡಿಸ್ಟ್ರಿಕ್ಟಿನ ಕಲೆಕ್ಟರಾಗಿ ಅಲ್ಲಿನ ಪ್ರಜೆಗಳ ಪ್ರೀತಿವಿಶ್ವಾಸಗಳನ್ನು ವಿಶೇಷವಾಗಿ ಸಂಪಾದಿಸಿಕೊಂಡಿದ್ದು ಕಾಲವಾದ ಮ|| ರ್ಯಾಡಿಸ್‌ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಕಳೆದ ವಾರ ಅಲ್ಲಿನ ವೈದಿಕ ಮತ್ತು ಲೌಕಿಕ ಪ್ರಜೆಗಳ ಒಂದು ಸಭೆಯನ್ನು ನಡಿಸಿ ಗೊತ್ತುಮಾಡಿದರು ಮಹಾ ಮಹೋಪಾಧ್ಯಾಯ ಪಂಡಿತ ಶಿವಕುಮಾರಶಾಸ್ತ್ರಿಯವರು ಸಭಾನಾಯಕರಾಗಿದ್ದರು ಮ|| ರ್ಯಾಡಿಸ್‌ಯವರ ಅರ್ಧಾಕೃತಿಯ ಪ್ರತಿಮೆಯನ್ನು ಶ್ವೇತಶಿಲೆಯಲ್ಲಿ ಮಾಡಿಸಿ, ಅಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಇಡಿಸಬೇಕೆಂದು ಸಭಿಕರು ತೀರ್ಮಾನಮಾಡಿರುತ್ತಾರೆ

* * *

ಕರಾಚಿ ಪಟ್ಟಣದಲ್ಲಿ ರಾಜದ್ರೋಹದ ಪತ್ರಗಳೂ ಕಾರುಬಾರುಗಳೂ ನಡೆಯುತ್ತಲಿವೆ ಎಂದು ತಿಳಿದುಬಂದಕಾರಣ ಮ್ಯಾಜಿಸ್ಟ್ರೇಟರ ಮುಖಾಂತರವಾದ ಕೇವಲನ್ನು ದಸ್ತಗಿರಿ ಮಾಡುವಂತೆ ವಾರಂಟು ಕೊಟ್ಟರು “ಸಿಂಧಿ” ಎಂಬ ಪತ್ರಿಕೆಯ ಎಡಿಟರಾದ ಮ|| ವೀರುಮಾಲ್ ಯನರನ್ನೂ ಸ್ವದೇಶೀ ಅಂಗಡಿಯ ಮಾಲೀಕರಾದ ಮ|| ಚಿತುಮಾಲ್, ಗೋವರ್ಧನ ಲಾಲ್ ಕಾಲಾಚಂದ್ ಎಂಬೀ ಜನರನ್ನು ಪೋಲೀಸಿನವರು ಹಿಡಿದು, ಅವರ ಮನೆಮಠಗಳನ್ನು ಶೋಧನೆಮಾಡಿ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು ಅವರನ್ನೆಲ್ಲಾ ಜಾಮೀನಿನ ಮೇಲೆ ಬಿಡದೆ ಲಾಕಪ್ಪಿನಲ್ಲಿ ಇಟ್ಟುಕೊಂಡಿದಾರೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಮಟ್ರಾ ಡಿಸ್ಟ್ರಿಕ್ಟಿನಲ್ಲಿ ಮ... ಜ್ವರವು ಯಾವಾಗಲೂ ಬಹಳ ಜೋರಾಗಿರುವುದೆಂದು ತಿಳಿದು ಬಂದದ್ದ... ಸರ್ಕಾರದವರು ಅದನ್ನು ಅಡಗಿಸುವುದಕ್ಕೆ ಸಾಠಶಾಲೆಗಳಲ್ಲಿ ಓದುವ ...ರ್ಥಿಗಳಿಗೆಲ್ಲಾ ಕ್ರಮವಾಗಿ ಸ್ವಲ್ಪ ಸ್ವಲ್ಪ ಕ್ವಿನೈನ್ ಎಂಬ ದ್ರವದ ಪುಡಿಯ... ಉಪಯೋಗಿಸುವಂತೆ ಏರ್ಪಡಿಸಿದರು, ಕೆರೆ ಕುಂಟೆಗಳಲ್ಲಿ ಹುಟ್ಟಿ ಬೆಳೆಯು... ಸೊಳ್ಳೆಗಳನ್ನು ನಾಶಪಡಿಸುವುದಕ್ಕೆ ಪಶ್ಚಿಮ ಇಂಡೀಸ್ ಎಂಬ ದ್ವೀಪ... ಒಂದು ತರಹಾ ಸಣ್ಣ ಜಾತಿಯ ಮೀನುಗಳನ್ನು ತರಿಸಿ ಆ ಕೊಚ್ಚೆ ಗುಂ... ಗಳಲ್ಲಾ ಬಿಡಬೇಕೆಂದೂ ಪ್ರಯತ್ನಪಟ್ಟಿರುತ್ತಾರೆ

* * *

ಪಂಡಿತ ಭೋಜದತ್ತ ಎಂಬಾತನು ಆಗ್ರಾಪಟ್ಟಣದಿಂದ ಕಲ್ಕತ್ತೆಗೆ ಬಂ... ಅಲ್ಲಿನ ಅಲ್ಬರ್ಟ್ ಹಾಲ್ ಎಂಬ ಬಂಗಲೆಯಲ್ಲಿ ಮಹಮದೀಯರಿಗೆ ... ವಾದ ವಿಷಯವನ್ನು ಕುರಿತು ಉಪನ್ಯಾಸ ಮಾಡಬೇಕೆಂದು ಪ್ರಯತ್ನ... ಮ್ಯಾಜಿಸ್ಟ್ರೇಟರು ಹುಕುಂಕೊಟ್ಟು ಆ ಮೀಟಿಂಗನ್ನು ನಿಲ್ಲಿಸಿಬಿಟ್ಟ... ಇನ್ನೆರಡು ತಿಂಗಳ ತನಕ ಕಲ್ಕತ್ತಾಪಟ್ಟಣದ ಯಾವ ಸ್ಥಳದಲ್ಲೂ ಉಪನ್ಯಾ... ಗಳ ಸಭೆಯಾಗಲಿ ನಡೆಯಕೂಡದೆಂದು ಇಸ್ತಿಹಾರು ಹಾಕಿಸಿರುತ್ತಾರೆ. ಮ... ಭೋಜದತ್ತನೆಂಬಾತನು ಆಗ್ರಾಪಟ್ಟಣದಲ್ಲಿ “ಮುಸಾಫರ್ ಆರ್ಯ” ... ದೇಶಭಾಷಾ ಪತ್ರಿಕೆಯನ್ನು ನಡಿಸತಕ್ಕವನು ಮತ್ತು ರಾಜಕೀಯ ವಿಚಾರ... ಜೋರಾಗಿ ಉಪನ್ಯಾಸ ಮಾಡತಕ್ಕವನು ಎಂದು ತಿಳಿದು ಬಿದೆ

ವಿದೇಶ ವರ್ತಮಾನಗಳು

ಕಳೆದ ೧೮೯೮ ರಿಂದ ೧೯೦೫ ರ ವರೆಗೆ ಹಿಂದುಸ್ಥಾನದ ವೈಸರಾಯ... ದ್ದು ಶೀಮೆಗೆ ದಯಮಾಡಿದ ಲಾರ್ಡ್ ಎಲ್ಗಿನ್‌ರವರ ಪತ್ನೀಯವರು ಕಳೆದ ... ವಿಲಾಯತಿಯಲ್ಲಿ ಕಾಲವಾದರೆಂದು ತಂತಿವರ್ತಮಾನ ಬಂದಿದೆ

* * *

ಫ್ರಾನ್ಸ್ ಸಂಸ್ಥಾನದ ದಕ್ಷಿಣ ಪ್ರಾಂತ್ಯದ ಆಧಿಪತ್ಯಗಳಲ್ಲಿ ಭ... ವೂ, ಅದರ ಮೇಲೆ ಅಪಾರವಾದ ಮಳೆ ಸುಂಟರ ಗಾಳಿಗಳೂ ವ್ಯಾಪ್ತವಾಗಿ ... ಗಳು ನಾಶವಾದವು ವಿಸ್ತಾರವಾಗಿ ಬೆಳೆದಿದ್ದ ದ್ರಾಕ್ಷಿವನಗಳು ಹಾಳಾ... ಗ್ರಾಮಾಂತರಗಳಲ್ಲಿ ಅನೇಕ ಜನರೂ ಪ್ರವಾಹಕ್ಕೆ ಸಿಕ್ಕಿ ಮೃತಪಟ್ಟರು

* * *

ವಿಲಾಯಿತಿಗೆ ಸೇರಿದ ಗ್ಯಾರ್‌ಬರೋ ಡಿಸ್ಟ್ರಿಕ್ಟಿನಲ್ಲಿ ಕಾಲವಾದ ... ಎಡ್ವರ್ಡ್ ಆಂಡ್ರೂಸ್ ಯವರು ತಮ್ಮ ಆಸ್ತಿಯಲ್ಲಿ ೫,೦೨,೦೦೦ ರೂಪಾ... ನ್ನೂ, ವೆಲಿಂಗ್‌ಟನ್ ಪಟ್ಟಣದ ಮಿಸೆಸ್ ಬರ್ನೀಸ್ ಎಂಬಾ... ೬೦ ೦೦೯ ರೂಪಾಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ... ಮರಣಶಾಸನದಲ್ಲಿ ಬರೆದಿದ್ದಾರೆ

* * *

ಅಸ್ಟ್ರೇಲಿಯನ್ನು ಇರುವ ಪಶ್ಚಿಮ ದೇಶಕ್ಕೆ ಸೇರಿದ ಹಾಂಸ್ ಎಂಬ ... ಣದಲ್ಲಿ ಅಪಾರವಾದ ಮಳೆ ಸುರಿದು ಓರಿಂಟಸ್ ನದಿಯಲ್ಲಿ ಪ್ರವಾಹ ... ಊರಿನ ಮೇಲೆ ಹೋಯಿತು ಈ ಪಟ್ಟಣದಲ್ಲಿ ಹತ್ತಿಬಟ್ಟೆ, ಕಂಬಳಿ ಬಟ್ಟೆ... ತಯಾರಾಗುವ ಕಾರ್ಖಾನೆಗಳು ವಿಶೇಷವಾಗಿರುತ್ತವೆ ಅಲ್ಲಿನ ಕುರು... ಹೆಸರುವಾಸಿ ವವು ಇಂತಾ ದೊಡ್ಡ ಪಟ್ಟಣಕ್ಕೆ ಅನಾಹುತ ಪ್ರಾಪ್ತ... ೫೦೦ ಮನೆಗಳು ಕೊಚ್ಚಿ ಹೋದವೆಂದೂ, ೧೦೦ ಪ್ರಜೆಗಳ ವರೆಗೆ ಮೃ... ರೆ ಹೊಂದಿದ ವರ್ತಮಾನ ಬಂದಿದೆ

* * *

ಜಪಾನ ರಾಜ್ಯಕ್ಕೆ ಸೇರಿದ ಒಸಾಕಾ ಎಂಬ ಪಟ್ಟಣದಲ್ಲಿ ಕಳೆದ ... ಎರಡನೆಯ ವಾರ ಅಪಾರವಾದ ಬೆಂಕಿಯ ಅನಾಹುತ ನಡೆಯಿತು ಅಲ್ಲಿ ಮ... ಳನ್ನು ಬಹು ಸುಲಭವಾಗಿ ಕಟ್ಟುತ್ತಾರೆ ಒಂದು ಸಣ್ಣ ಮನೆಯಲ್ಲಿ ಸೀಮೆ... ಎಣ್ಣೆಯ ದೀಪ ಹತ್ತಿಕೊಂಡು ಆ ಮನೆ ಉರಿಯಲಾರಂಭವಾಗಿ, ಜ್ವಾಲೆ... ಸ್ವಲ್ಪ ಸ್ವಲ್ಪವಾಗಿ ಹೆಚ್ಚಿ ಪಕ್ಕದ ಮನೆಗಳಿಗೆ ವ್ಯಾಪಿಸಿ ಕಡೆಗೆ ಅಡಗಿಸು... ಅಸಾಧ್ಯವಾಯಿತು ೧೬ ಮನೆಗಳು ಉರಿದುಹೋದವು ಒಂದು ಲಕ್ಷ... ಟು ಅಲೆಯುವಂತಾಗಿ ಸಕರಿ ಕಟ್ಟಡಗಳೂ ಈ ಬೆಂಕಿಗೆ ಸಿಕ್ಕಿ ಉರಿ... ದವು ಸುಮಾರು ೭೦ ಲಕ್ಷ ದ್ರವ್ಯ ಈ ಅನಾಹುತದಿಂದ ನಷ್ಟವಾಯಿ... ವುದಕ್ಕೆ ಸಂಶಯವಿಲ್ಲ

* * *

ಜಪಾನ್ ರಾಜ್ಯಕ್ಕೆ ಸೇರಿದ ಓಮಿ ಎಂಬ ಆಧಿಪತ್ಯದಲ್ಲಿ ಬೀವಾ ಎ... ಭಾರೀ ಕೆರೆಯ ಪ್ರಾಂತ್ಯದಲ್ಲಿ ಭೂಕಂಪವಾಯಿತು ಹಿಂದೆ ೧೮೯೧ನೇ ... ಯಲ್ಲಿ ಆದ ಭೂಕಂಪದಷ್ಟು ಕಠಿಣವಾದದ್ದಾಗಿರಲಿಲ್ಲ ಆದರೂ ಒ... ನೂರು ಮೈಲಿಗಳ ಉದ್ದಕ್ಕೂ ಒಂದು ದಿನವೆಲ್ಲಾ ಆಗಾಗ್ಗೆ ಭೂಮಿಯು ಕ... ಸುತ್ತಲೇ ಇದ್ದಿತು ಪ್ರಜೆಗಳು ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಕ... ಕೊಂಡು ಸಂಕಟಪಡುತ್ತಿದಾರೆ ಈ ಅನಾಹುತದಲ್ಲಿ ೩೧ ಜನರು ಮೃತ... ರೆಂದು ಊಹಿಸಲ್ಪಟ್ಟಿದೆ ನೂರಾರು ಮನೆಗಳು ಕಳಚಿ ಬಿದ್ದವು, ೧,೩... ಮನೆಗಳೂ ಕಟ್ಟಡಗಳೂ ಅಲ್ಲಾಡಿ ಛಿದ್ರವಾದವು ಅನೇಕ ಪ್ರಜೆ... ಗಾಯಗಳಾಗಿರುತ್ತವೆ ಈ ಪ್ರಾಂತ್ಯದಲ್ಲಿ ಸುಮಾರು ಒಂದು ಸಾವಿರ ವ... ಗಳಿಂದಲೂ ಆಗಾಗ್ಗೆ ಭೂಕಂಪಗಳು ಸಂಭವಿಸುತ್ತಲೇ ಇರುವವೆಂದು ... ಬಂದಿದೆ

* * *

ಆಫ್ರಿಕದ ಉತ್ತರಭಾಗದಲ್ಲಿರುವ ಮೊರೊಕ್ಕೋ ಸಂಸ್ಥಾನದ ಸುಲ್ತಾನ... ತಮ್ಮ ಮೂರ್ ಸೈನ್ಯಗಳನ್ನು ನಡಿಸುವುದಕ್ಕೆ ಕೇಯಿಡ್ ಬೆಲ್ಸನ್ ಎಂಬ... ಇಂಗ್ಲಿಷ್ ಮುಖ್ಯಾಧಿಕಾರಿಯನು ನೇಮಿಸಿಕೊಂಡರು ಈ ಮುಖ್ಯೋದ್ಯೋಗಿಯು ಸುಲ್ತಾ... ತಾಪೆಯನ್ನು ಬಿಟ್ಟು ವಾಪಸು ವಿಲಾಯತಿಗೆ ಹೋಗಿ ಸುಲ್ತಾನರ ಕ್ರೂರ ಸ್ವಭಾವವನ್ನು ಪ್ರಕಟಮಾಡಿರುತ್ತಾನೆ ಸುಲ್ತಾನರು ದಂಗೆಯನ್ನು ಅಡಗಿಸುವುದರ... ೯೩ ದಂಗೆಕೋರರ ತಲೆಗಳನ್ನು ಕಡಿಸಿ ಸ್ಥಳದಲ್ಲಿ ಪ್ರದರ್ಶನಮಾಡಿದರು ... ಕರು ಇನ್ನು ೨೦ ಮಂದಿಯನ್ನು ಎದುರಿಗೆ ನಿಲ್ಲಿಸಿಕೊಂಡು ಅವರ ಮುಂಗೈ... ಳನ್ನು ಕತ್ತರಿಸಿ ಹಾಕಿ ಹಸ್ತಗಳನ್ನೆಲ್ಲಾ ತಟ್ಟೆಗಳಲ್ಲಿಟ್ಟು ಸುಲ್ತಾನರಿಗೆ ಒಪ್ಪಿಸಿದರ... ತರುವಾಯ ಆ ಜನರ ಕೈಗಳನ್ನು ಕುದಿಯುವ ಉಕ್ಕಿನ ಕೊಪ್ಪರಿಗೆಗಳಲ್ಲಿ ಅದ್ದಿ... ದರು ಇಷ್ಟೇ ಅಲ್ಲ ಈಚೆಗ ಇನ್ನೂ ೩೦೦ ಜನರ ತಲೆಗಳನ್ನು ಕಡಿಸಿಹಾಕಿಸಿ... ತ್ತಾರೆ ಎಂಬುದೇ

Printed and Published by the Rev H Gulliford
Proprietor and Manager, Wesleyan Mission Press
Mysore 30/9/1909

REGISTERED M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಅಕ್ಟೋಬರ್ ತಾರೀಖು ೭ ನೇ ಗುರುವಾರ. ಸಂಚಿಕೆ ೧೯

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೆ ಯೋಗ್ಯವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಅಕ್ಸೀರಾದ ಗುಣಕಾರಿಯು [30 33]

ತಲೆನೋವು, ಗಂಟು ಊದುವದು, ವಾತ, ಸಂಧಿವಾತ, ಉಳುಕು, ಊದಲು ಗಂಟು, ಗಂಟಲು ನೋವು ಅರ್ಧಾಂಗವಾಯು, ಎದೆನೋವು, ವಾಯು, ಜಡಗು, ಇತ್ಯಾದಿ

ಇದರ ವಿಷಯವಾಗಿ ಸರ್ಟಿಫಿಕೇಟು ಕೇಳಿದಾದಲ್ಲಿ ಕೊಡುವೆವು. ಬಾಟ್ಲಿ ಒಂದರ ಕಿಮ್ಮತ್ತು ೦ ೮-೦

ಸಚಿತ್ರವಾದ ಮುಲಾಮು.

[illegible] ಗುಳ್ಳೆ, ಕಜ್ಜಿ, ತುರಿ, ಕಜ್ಜಿ ಮುಂತಾದವು ಗಳು [illegible] ಬರುವದಿಲ್ಲ. ಚರ್ಮವು ಕಪ್ಪಾಗು ವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦ ೬-೦ ೧೨ ಡಬ್ಬಿಗಳಿಗೆ ೪-೦-೦

ಅಮೃತಬಿಂದು	೩ ೦-೦
ಶೀತಜ್ವರದ ಮದ್ದು	೦ ೮-೦
ವಜ್ರಗುಟಿಕೆ—[illegible] ರಕ್ತಶುದ್ಧಿ	೧-೦ ೦
ಸುಂದರೀ ತೈಲ—[illegible]	೦ ೮ ೦
ಬಾಲಾಮೃತ—[illegible]	೦-೮ ೦
ನೇತ್ರಾಂಜನ—[illegible]	೦-೨-೦
[illegible]	೦ ೪ ೦
[illegible] ತೈಲ—[illegible]	೧ ೦ ೦
[illegible] ಚೂರ್ಣ—[illegible]	೦ ೮ ೦

[illegible] ವಿಳಾಸ —

ವಿಲಿಯಂ ಮತ್ತು ಕಂಪೆನಿ ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು — 'ಅಮೃತಾಂಜನ,' ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು, ತರಿಸಿಕೊಳ್ಳಿ.

1 39

ಒಳ್ಳೇ ಟೋಪಿಗಳು ಯಾವವು ? ಯಾವೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಎಕ್ಸಿಬಿಷನ್ನಿಗೆ ಬರುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಆದರೆ ಹಾಸನದ ಟೋಪಿಗಳಿಂದು ಎಲ್ಲರೂ ಕೊಂಡುಕೊಂಡು ಹೋಗುತ್ತಿದ್ದಾರೆ.

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುದ್ದಾಗಿ ನಾವೇ ಚಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಎಷ್ಟು ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೪ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಫುಲ್ ಮೋಜೋಡು, ಅರ್ಧ ಮೋಜೋಡು, ಕೈಗವಸು ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೨—೦

ಅಂಚೆ ಕಡವನು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೪—೦

" " " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾಸಾಗುವ ಪತ್ರಿಕೆಯ ವಿಳಾಸದಲ್ಲಿ ಎಡ ಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು. ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47-20

ತಲೆನೋವು ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ [illegible] ಖಂಡಿತವಾಗಿ ವಾಸಿಯಾಗು ತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಕೊಂಡಿರು ತ್ತಾರೆ. ಮೇಲ್ಕಂಡ ಎಲ್ಲಾ ರೋಗಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷ ಧದ ಶಕ್ತಿಯು ಅದ್ಭುತವಾದದ್ದು. [illegible] [illegible] ಈ ಔಷಧವನ್ನು [illegible] [illegible] [illegible] [illegible]

[illegible] ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಅಂಚೆ ಖರ್ಚು ಮಾಫಿ ಯಾಗುವದು [illegible] ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ [illegible] ಈ ತೈಲವನ್ನು ಎಲ್ಲಾ [illegible] ವಿಳಾಸ— [illegible] ತರಿಸಿಕೊಂಡು ಮತ್ತು

ಎಸ್ ಕ್ಲೆಮೆಂಟ್ಸ್

೩೩. ದೇವರಾಜು ಮೊದಲಿಯಾರ್ ಬೀದಿ, ವೇಪೇರಿ, ಮದರಾಸ್.

ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ.—(195 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು. ಈತನು ಇಂಗ್ಲೀಷು ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತ ವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾ ಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣ ಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾ ಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವದು.

ಮೈಸೂರು ಪ್ರಾಯಿಮರ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷ ದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿ ಕೊಳ್ಳಿ. [10—10]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 81

೧. ಲೋಕಾನುಗ್ರಹದ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಅನೇಕ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತ ಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ಕಾಂಬಾಲದೊಡನೆ ಅಥವಾ ಜೇನು ಉಪಯೋಗಿಸುತ್ತ [illegible] ಬಹಳ ಹೊತ್ತು [illegible], ಎಂಥ ಆಹಾ [illegible] [illegible] [illegible] ಬದಲಾವಣೆಯನ್ನು ನಿವಾರಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿಶಕ್ತಿ ವೃದ್ಧಿಪಡಿಸು ತ್ತದೆ. ಸ್ತ್ರೀಯರ ಮುಟ್ಟುನೋವು, ಮಕ್ಕಳ ಎಳೆ, ಜ್ವರ, ನಚ್ಚುಜ್ವರ, ಕೆಮ್ಮುಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ [illegible] ಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವನ್ನು ಔಷಧದ ಸಂಗಡಲೇ ಕಳುಹುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ [illegible] ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ ಎಸ್. ಎಸ್ ಆರ

ವೈದ್ಯಶಾಲಾ, ಚಿಕ್ಕ [illegible] ರೋಡ್ ಮೈಸೂರು.

ಜ್ವರಹರಿ. 18 38



ಇದು ಸಾಧಾರಣ ಜ್ವರ, ಚಳಿಜ್ವರ, ನೆಗಡಿಜ್ವರ, ಪಿತ್ತಜ್ವರ ಶೀತ ಜ್ವರ, ವಾತಜ್ವರ, [illegible] ಎಲ್ಲ ತರಹ [illegible] ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ [illegible] ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ [illegible] ನೀವು ತಿಳಿಸಿದೇ ಯಷ್ಟು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಅದಕ್ಕೇ ಬೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು [illegible] ಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , [illegible] ರೂ ೨—೧೨ ಆ , ೧೧ ರೂ ; ಇನ್ನಿತರದು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಯಾಗುವದು

ಬಿ ಮ ಂ ಕ ಪ್ಲೂ ರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಗ್ರಾಂಟಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಪ್ರಶಸ್ತವಾಗಿ ಪ್ರಸಿದ್ಧಿ, ಕೂಡಲೇ ಗುಣಕೊಡುವದು. ಇದು ಹಂಗಸರು ಕಿಂಗ ರಿಗೆ ಒಂದುವರ್ತೀ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿ ಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪಟ್ಟಿಯು ಜ್ವರಹರಿ ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಯ್ಯನವರು—ಜ್ವರಹರಿ ಬಿಮಂ ಕರ್ಪೂರವನ್ನು ನಾನೂ ನನ್ನ ಕಾರ್ಬಾರಿದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಪ್ರತಿದಿನವೂ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಸ್ತಾರವಾಗಿಯೋ ಬಲುಬಾರಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ ಎದೆ ಕಲ್ಲುಕಟ್ಟುವುದು ತಲೆನೋವು, ಗಾಬರಿ ಕಣ್ಣು ಮೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋತ್ಪದ್ರವ ವಾಯು, ಮೈಬಾವು, ಉರಿಮೂತ್ರ ಮೂತ್ರಕೋಶ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಲಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ಕಳುಹುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67 6]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೮—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೯—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ೨೦ ಪಿ ಒ ಬಾಕ್ ಮೆಡ್ರಾಸು —ಇವರಲ್ಲಿ ದೊರೆಯುವುದು

ಅಪಾಯದ ಕುರುಹುಗಳು

ಸಾಧಾರಣವಾಗಿ ಅಪಾಯ ಬರತಕ್ಕುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು :

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅದನ್ನು ಬೇಗನೆ ನಿಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6 40

(ಸ್ಕಾಟ್ಸ್ ಇಮಲ್ಷನ್)

ಎಂಬೀ ಈ ಔಷಧವು ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ದೊರೆಯುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್ ಇಂಗ್ಲೆಂಡ್

ಈ ವಿಗ್ರಹದಮನುಷ್ಯನಿರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು

23 3೦

ಎಂ ಎಸ್ ಕುಮಾರ್‌ರವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕೋಮು ನಾಯುನೋವುಗಳೂ, ಚಳಿಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮಾಂಸಖಂಡ, ಬಲ ಧೈರ್ಯ, ಕಾಂತಿ, ಉತ್ಸಾಹ ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ನಯನಸ್ತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾತಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ವೆಳಕಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗಳಿಗೆ ಸ್ಟಾಂಪ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

CHAMBERLAIN'S COLIC CHOLERA AND DIARRHOEA REMEDY

ಚೇಂಬರ್ಲೈನ್ ರವರ ಹೊಟ್ಟೆಶೂಲೆ ಕಾಲರಾ ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 40



ಕೆಳಹೊಟ್ಟೆಯ ನೋವು, ಬರೀ ಭೇದಿಯಾಗುವುದು ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಡೋಸು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಜಾಗ್ರತೆ ತರಿಸಿಕೊಳ್ಳಿರಿ

71 2

ಯಶ್ವರ್ನ ನಿಕ್ಕಲ್ ವಾಚು ರೈಲ್ವೆ ಓಪನ್ ಫೇಸ್, ಲೀವರ್ ವಾಚು ವಾಚು ೧ಕ್ಕೆ ಕ್ರಯ ೩ ೪ ೦ ನಿಕ್ಕಲ್ ಸಿಲ್ವರ್ ಓಪನ್‌ಫೇಸ್ ಕೀಲೆಸ್ ಲಿವರ್ ೧ಕ್ಕೆ ಕ್ರಯ ೨ ೮ ೦ ವಿಳಾಸ—ಮಾನೇಜರ್ ಕರ್ನಾಟಕ ಪುಸ್ತಕಶಾಲಾ, ಲಕ್ಷ್ಮೀರ್ ಪೋಸ್ಟ್ ಕೋಲಾರ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 39

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕೆ ಬಟ್ಟೆಗಳು ನಾಜೂಕಾಗಿ ಕಟ್ಟಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವುದಿಲ್ಲ ಬಹಳ ಕಡಿಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದ್ದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಇದಲ್ಲದೆ ಕಂಬಳಿ ಆಸೆ ಪರದಾ ಚಿಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರೆಯುತ್ತದೆ ಶಾಲುಗಳು ಹಾಸನದ ಪೊ ಪಿಗಳು, ಮುಸುಕು ಮೋಸಿಗಳು ಸಣ್ಣಗಳ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಜಾಗ್ರತೆ ತರಿಸಿಕೊಳ್ಳಿರಿ, ಮುಗಿದುಹೋದನಂತರ ಖಂಡಿತ ದೊರೆಯಲಾರದು

70 ೨

ಇಂಗ್ಲೀಷ್ ಕಲಿಯುವ ಪುಸ್ತಕ, ಕ್ರಯ ೧—೮—೦ ಇಂಗ್ಲೀಷ್ ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ (ತರ್ಜುಮೆ) ಭಾಷಾಂತರ ಮಾಡುವದಕ್ಕೂ ಕ್ಷೇಮಸಮಾಚಾರ ಮೊದಲಾದ ಕಾಗದಗಳನ್ನು ಬರೆಯುವ ವಗೈರೆ ಮೊದಲಾದ ಇನ್ನೂ ಅನೇಕ ಉಪಯೋಗವಾದ ವಿಷಯವನ್ನು ಈ ಪುಸ್ತಕ ಸಹಾಯದಿಂದಲೇ ೧—೨ ತಿಂಗಳಲ್ಲಿಯೇ ತಾನಾಗಿ ಕಲಿಸುವ ಉತ್ತಮವಾದ ಪುಸ್ತಕವಿದು ಕ್ರಯ ರೂ ೧—೪—೦

ವಿಳಾಸ —ಬಿ ಕೆ ಮೂರ್ತಿ ಕಂಪನಿ, ಲಕ್ಷ್ಮೀರ್ ಪೋಸ್ಟ್

೧ನೆ ಸಂಪುಟ ಕನ್ನಡ ಕಥಾಸರಿತ್ಸಾಗರ ಕ್ರಯ ೧—೮—೦ ೧ ಮತ್ತು ೨ನೇ ಸಂಪುಟ ಸೇರಿರುವ ಬೈಂಡಾಗಿರತಕ್ಕ ಪುಸ್ತಕ ೩—೦—೦ ನವರಸಯುಕ್ತವಾಗಿ ಪೂರ್ವಕವಿ ಸೋಮದೇವನಿಂದ ರಚಿಸಿದ ಸಂಸ್ಕೃತಗ್ರಂಥವನ್ನು ಸಾಗರದ ಸ್ಕೂಲ್ ಹೆಡ್ಮಾಸ್ಟರಾಗಿದ್ದ ಗತಿಸಿದ ಮ|| ರಾ|| ಎನ್ ಶ್ರೀಕಂಠಯ್ಯನವರಿಂದ ಕನ್ನಡದಲ್ಲಿ ಬರೆಯಲ್ಪಟ್ಟು ಮ|| ರಾ|| ಭಾರತಿ ಸಂಪಗಿರಾಮಯ್ಯನವರಿಂದ ಹೊರತಂದು ಈಗ ಓದುವುದಕ್ಕೆ ಪ್ರಚಾರದಲ್ಲಿರುವ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಅತ್ಯಂತ ಸ್ವಾರಸ್ಯವಾದ ಪುಸ್ತಕವಿದು ೧ ೨ನೇ ಸಂಪುಟ ಸೇರಿದ ಪುಸ್ತಕ ರೂ ೩—೦—೦

ತಾನಾಗಿ ಇಂಗ್ಲೀಷು ಕಲಿಯುವಿಕೆ ಕ್ರಯ ೧—೮ ೦ ಇಂಗ್ಲೀಷ್ ಭಾಷೆಯನ್ನು ಓದಲೂ, ಬರೆಯಲೂ ಮಾತನಾಡಲೂ, ಬೋಧಕರ ಸಹಾಯವಿಲ್ಲದೆ ತಿಳಿಸಿ ಕಲಿಸುವ ಪುಸ್ತಕವಿದು ಕ್ರಯ ರೂ ೧—೮—೦

ವಿಳಾಸ —ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಷ್ಮೀರ್ ಪೋಸ್ಟ್ ಮಾಲೂರ್, ಕೋಲಾರ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

10—9—1909 ರಿಂದ 17—9—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	7	8	1	1
ಮೈಸೂರು ,,	137	9	0	0
ಬೆಂಗಳೂರು ಡಿಸ್ಟ್ರಿಕ್ಟು	7	6	61	53
ಮೈಸೂರು ,,	60	30	0	0
ಕೋಲಾರ್	2	1	0	0
ಕೋಲಾರ್ ಚಿನ್ನದ ಗಣಿಗಳು		0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	16	9	0	0
ಶಿವಮೊಗ್ಗ ,,	7	2	0	0
ಜುಮ್ಲಾ	231	147	62	54

ಶಾಲಿವಾಹನ ಶಕ ೧೮೩೧ನೇ ಸೌಮ್ಯನಾಮ ಸಂವತ್ಸರದ ಭಾದ್ರಪದ ಬಹುಳ ನವಮಿ ಗುರುವಾರದಿಂದ ಭಾದ್ರಪದ ಬಹುಳ ಅಮಾವಾಸ್ಯ ಗುರುವಾರದ ವರೆಗಿನ ಎಂಟು ದಿವಸಗಳ ಪಂಚಾಂಗ

೧೯೦೯ನೆ ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ಕನ್ಯಾಮಾಸ
7	ಗುರು §	ನವಮಿ	2 21	ಪು	28 10	22
8	ಶುಕ್ರ *	ದಶಮಿ	[illegible]	ಪು	30 29	23
9	ಶನಿ	ಏಕಾದಶಿ	57 7	ಶ್ಲೇ	33 2	24
10	ರವಿ ‡	ದ್ವಾದಶಿ	[illegible]	ಮ	3 3	[illegible]
11	ಚಂದ್ರ	ದ್ವಾದಶಿ	0 15	ಪು	12 30	26
12	ಮಂಗಳ †	ತ್ರಯೋದಶಿ	[illegible]	ಉ	16 25	27
13	ಬುಧ	ಚತುರ್ದಶಿ	56	ಹ	51 18	28
14	ಗುರು	ಅಮಾವಾಸ್ಯ 1	50	ಚಿ	60 0	29

§ ಅಮೃತಯೋಗ ಅನ್ವಾಷ್ಟಕಾ ಸರಿತ್ತ್ರಾಸ ರತ್ರ * ಉತ್ಪಾತಯೋಗ, ಚಚ್ಚಾಷ್ಟಕಾಮ ಹಾಲಯ ಸರ್ವತ್ರ ಏಕಾದಶಿ ಜೀರ್ಣಾದ್ರಿಮಾರ ಕಣ ಪಾಸಪ್ಯಯಂ ದರ್ಮಾಮಹಾಲಯ ‡ ಮೃತ್ಯು ರಾಮಾನುಜ ಭಾಗವತಾನಾಂ ಏಕಾದಶಿ ಬುಧಕೀನಾಂ ಮಹಾಲಯ ಸೋಮಪ್ರದೋಷ † ಮಹಾವೈಕ್ರಮ ಧಾರಾಚತುರ್ದಶಿ , ಸರ್ವಪಿತೃ ಮಹಾಲಯ ಅಮಾವಾಸ್ಯ ಕನ್ಯಾಯಾಂ ಚಾತುರ್ಗ್ರಹಯೋಗ ರ ಚಂ ಬು ಗು

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ	೧೫ ೮ ೦	೧೭ ೮ ೦
ಕೆಂಬೂತಿ ಅಕ್ಕಿ ಅವಲ್		೧೪ ೮ ೦	೧೪ ೦ ೦
,, ಮಧ್ಯಂ		೧೬ ೮ ೦	೧೩ ೮ ೦
ಜಾಪಾನ್ ಅಕ್ಕಿ		೧೪ ೦ ೦	೧೫ ೦ ೦
ಸಣ್ಣಕ್ಕಿ ಅವಲ್		೧೭	೧೭ ೦ ೦
,, ಮಧ್ಯಂ		೧೬ ೦ ೦	೧೫ ೦ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೫ ೨ ೦
,, ಮಧ್ಯಂ		೧೫ ೦ ೦	೧೨ ೦ ೦
ಹೈಬ್ರಿಡ್ ರಾಗಿ ಪಲ್ಲ ೧ಕ್ಕೆ		೯ ೦ ೦	೮ ೮ ೦
ಸಾಧಾ ರಾಗಿ		೬ ೮	೨ ೪ ೦
ಜೋಳ		೯ ೬ ೦	೮ ೮ ೦
ಹುರಳಿ ಕಾಳು ಪಲ್ಲ ೧ಕ್ಕೆ		೧೦ ೦ ೦	೧೧ ೮ ೦
ಬೇಳೆ ಅವರೆ		೧೩ ೮ ೦	೧೭ ೦ ೦
ಹೆಸರು		೧೭ ೨ ೦	೧೧ ೬ ೦
ಉದ್ದು		೧೪ ೪ ೦	೧೩ ೦ ೦
ಕಡಲೆ		೧೬ ೪ ೦	೧೧ ೦ ೦
ಎಳ್ಳು ಸೇ ೧೨೭ ಕ್ಕೆ		೧೫ ೦ ೦	[illegible]
ಹುರುಳಿ		೧೨ ೨ ೦	೧೨ ೮ ೦
ಹರಳು ೧೨೭ ಸೇರಿಗೆ		೧೪ ೦ ೦	೯ ೮ ೦
ಸೀಗೇಕಾಯಿ ಮಣ ೧ಕ್ಕೆ		೨ ೮ ೦	೨ ೬ ೦
ಮೆಣಸಿನಕಾಯಿ		೬ ೦ ೦	೫ ೪ ೦
,, ಮಧ್ಯಂ		೫ ೮ ೦	೫ ೦ ೦
ಬೆಲ್ಲ ದೊಡ್ಡ ಅಚ್ಚು		೯ ೮ ೦	ಮ ೨ ೮ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೨ ೦	೬ ೧೦ ೦
ಹರಳೆಣ್ಣೆ ,,		೫ ೬	೪ ೧೨ ೦
ಕೊತ್ತುಂಬರಿ ಪಲ್ಲ ೧ಕ್ಕೆ		೯ ೦ ೦	೯ ೦ ೦
ಉಪ್ಪು ,,		೬ ೧೭ ೦	೫ ೧೨ ೦
ಹುಣಸೇ ಹಣ್ಣು		೧ ೧೨ ೦	೧ ೧೨ ೦
,, ಹಳೇದು		೧ ೮ ೦	೧ ೨ ೦
ಕುಸ್ಸ ಮಣ ೧ಕ್ಕೆ		೧೭ ೨ ೦	೧೪ ೮ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪ ೪ ೦	೪ ೨ ೦
ತೆಂಗಿನಕಾಯಿ ೧೦೦ ಕ್ಕೆ		೫ ೧ ೦	೪ ೮ ೦
ಅಳಲೇಕಾಯಿ ಮಣ ೧ಕ್ಕೆ		೦ ೮ ೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೦ ೦	೦-೧೧ ೦
ಚಿನ್ನ (ಪವನ್) ತೊಲ		೧೫ ೬ ೦	೧೫-೯ ೦
,, ಪವನು		೧೬ ೦ ೦	೧೫-೧೩-೦
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೭ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೪ ೦ ೦

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಸೆಪ್ಟೆಂಬರ್ ತಾ 25 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು					
ಕೋಲಾರ	57	24	2	31	
ತುಮಕೂರು	13				
ಮೈಸೂರು					
ಹಾಸನ					
ಶಿವಮೊಗ್ಗ					
ಕಡೂರು				225	
ಚಿತ್ರದುರ್ಗ					
ಮಾರಿಕಣಿವೆ					
ಸ್ಯಾನಿಟೇರಿ					
ಒಟ್ಟು	70	24	2	256	

ನಮ್ಮ ಪುಸ್ತಕಭಂಡಾರವು.

"ವ್ಯವಸಾಯಕ್ರಮ ಬೋಧಿನಿ"

ಮ ಬಿ ಹನುಮಂತಪ್ಪ ಗೌಡರಿಂದ ರಚಿಸಲ್ಪಟ್ಟ "ವ್ಯವಸಾಯಕ್ರಮ ಬೋಧಿನಿ" ಎಂಬ ಪುಸ್ತಕವನ್ನು ಬಹು ಸಂತೋಷದಿಂದ ಸ್ವೀಕರಿಸಿರುತ್ತೇವೆ ಈ ಕರ್ನಾಟಕ ದೇಶದಲ್ಲಿ ರೈತನಿಗೆ ತನ್ನ ಜಮೀನನ್ನು ವ್ಯವಸಾಯ ಮಾಡುವುದಕ್ಕೆ ಸಹಾಯಕವಾದ ಪುಸ್ತಕಗಳು ದೊರೆಯುವುದು ಬಹಳ ವಿರಳವಾಗಿದೆ ಈ ಲೋಪವನ್ನು ಪರಿಹರಿಸುವ ಭಾಗದಲ್ಲಿ ಒಕ್ಕಲಿಗರ ಸಂಘವು ಸಾಹಸ ಪಡುತ್ತಿರುವುದನ್ನು ನೋಡಿ ನಾವು ಬಹಳ ಸಂತೋಷ ಪಡುತ್ತೇವೆ ಈ ವಿಧವಾದ ಸಾಹಸ ಕಾರ್ಯಗಳು ಸಫಲಾರ್ಥಿಯಾಗಲು ಒಂದು ವಿಶೇಷವಾದ ಅಡಚಣೆ ಇರುವುದು ಅದೇನೆಂದರೆ ರೈತಪ್ರಜೆಗಳಲ್ಲಿ ವಿದ್ಯೆ ಕಲಿತವರು ಸಿಕ್ಕುವುದು ಬಹಳ ಕಷ್ಟ ಆದಕಾರಣ ಗ್ರಾಮಾಂತರಗಳಲ್ಲಿರುವ ವ್ಯವಸಾಯಗಾರರು ತಮ್ಮ ಮಕ್ಕಳನ್ನು ಹೆಚ್ಚು ಹೆಚ್ಚಾಗಿ ಅಕ್ಷರಸ್ಥರನ್ನಾಗಿ ಮಾಡುವಂತೆ ಒಕ್ಕಲಿಗರ ಸಂಘವು ಪ್ರೋತ್ಸಾಹಪಡಿಸುತ್ತಾ ಬರುವುದನ್ನು ನೋಡಬೇಕೆಂದು ಆಶಿಸುತ್ತೇವೆ ಆದರಾಗಿಯೂ ಈ ಕರ್ತವ್ಯಗಳನ್ನೆಲ್ಲಾ ಸಂಘವೇ ನಡೆಸಬೇಕೆಂಬುದು ನಮ್ಮ ಅಭಿಮತವಲ್ಲ ಅದು ಪ್ರಜಾಪರಿಪಾಲನೆಯನ್ನು ವಹಿಸಿಕೊಂಡಿರುವಂಥ ಗವರ್ನ್‌ಮೆಂಟಿನವರ ಕಾರ್ಯಭಾರವಾಗಿರುತ್ತದೆ ಒಕ್ಕಲಿಗರ ಸಂಘವು ಉಪನ್ಯಾಸಕರನ್ನೂ ಬೋಧಕರನ್ನೂ ಗ್ರಾಮಾಂತರಗಳ ಮೇಲೆ ಕಳುಹಿಸಿ ರೈತಪ್ರಜೆಗಳು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿಕೊಳ್ಳುವಂತೆ ಪ್ರೋತ್ಸಾಹಪಡಿಸಬೇಕಾಗಿದೆ ಅವರು ಅಕ್ಷರಸ್ಥರಾದರೆ ಈಗ ನಮ್ಮ ಮುಂದಿರುವಂಥಾ ಪುಸ್ತಕಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಅನುಕೂಲವಾಗುವುದು

ಈ ಪುಸ್ತಕದಲ್ಲಿ ಕಬ್ಬು, ಭತ್ತ, ಗೋಧಿ ಸಾಲು ಹೊಗೆಸೊಪ್ಪು, ಅರಿಸಿನ, ಉರುಳಗೆಡ್ಡೆ ರಾಗಿ ಜೋಳ ಅರಳೆ, ತೆಂಗು ಅಡಿಕೆ, ಬಾಳೆ, ಕಾಫಿ ಈ ಮೊದಲಾದವುಗಳ ಅನೇಕ ವಿಷಯಗಳನ್ನು ಕುರಿತು ಬರೆಯಲ್ಪಟ್ಟಿರುವುದು

ಈ ಪುಸ್ತಕದ ಪ್ರಿಂಟಿಂಗ್, ಬೈಂಡಿಂಗ್ ಅಂದವಾಗಿಯೂ ಗಟ್ಟಿಯಾಗಿಯೂ ಇರುವವು ಭಾಷಾಸರಣಿಯು ಬಹು ಲಲಿತವಾದುದಾಗಿದೆ ವ್ಯವಸಾಯಕ್ರಮಗಳು ಬಹು ಸುಲಭವಾಗಿ ತಿಳಿಯುವಂತೆ ಬರೆಯಲ್ಪಟ್ಟಿರುವವು ರೈತನು ಈ ಪುಸ್ತಕವನ್ನು ಓದಿ ಚನ್ನಾಗಿ ಅರ್ಥಮಾಡಿಕೊಳ್ಳುವಷ್ಟು ಸಮರ್ಥನಾದ ಪಕ್ಷದಲ್ಲಿ ಈ ಪುಸ್ತಕದ ಸಹಾಯದಿಂದ ಆತನ ಕೃಷಿಯು ಅಭಿವೃದ್ಧಿಹೊಂದಿ ವಿಶೇಷ ಸಫಲಕಾರಿಯಾದೀತೆಂದು ಹೇಳಬಹುದು

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಪ್ರಜಾಹಿತಚಿಂತಕ, ಕಡೂರು ವಾಸಿ —ನಿಮ್ಮ ಹೆಸರು ವಿಳಾಸ ತಿಳಿಸಿಲ್ಲ

ಒಬ್ಬ ಪ್ರೇಕ್ಷಕ, ಬೆಂಗಳೂರು ಸಿಟಿ —ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಎಡಿ]

ಕರೆಸ್ಪಾಂಡೆನ್ಸ್

ಗ್ರಾಮಾಂತರ ವಿಚಾರಗಳು

ಅಯ್ಯಾ,

ಎರಾ ತಾ|| ಮದಲೂರೆಂಬ ಗ್ರಾಮದಲ್ಲಿ ಸ್ಕೂಲಿನ ಕೆಲ ವಿದ್ಯಾರ್ಥಿಗಳೂ ಗ್ರಾಮದ ಮುಖಂಡರೂ ಸೇರಿ ಗಣಪತಿ ಪೂಜೆ ಉತ್ಸವಾದಿಗಳನ್ನು ಬ್ಯಾಂಡ್ ಸಮೇತ ವಿಜೃಂಭಣೆಯಿಂದ ನಡಿಸಿದರು ಈ ಉತ್ಸವವನ್ನು ನೋಡುವದಕ್ಕೆ ಅಕ್ಕಪಕ್ಕದ ಗ್ರಾಮದ ಅನೇಕ ಜನರು ಸೇರಿದ್ದರು —ಈ ಗ್ರಾಮದ ಕೆರೆ ದೊಡ್ಡದಾಗಿಯೂ ಇದಕ್ಕೆ ಬರತಕ್ಕ ಹಳ್ಳ ಭಾರಿಯಾಗಿಯೂ ಮದ್ದಗಿರಿ ತುಮಕೂರು ಈ ಪ್ರಾಂತ್ಯದ ಕೆಲವು ಕಡೆಯಿಂದ ನೀರು ಬರುತ್ತೆ ಅನಂತಪುರ ಜಿಲ್ಲಾ ಮಡಕಶಿರಾ ತಾಲೂಕಿನ ಕೆಲವು ಕಡೆ ನೀರು ಸಹಾ ಬರುತ್ತೆ ಇಷ್ಟು ನೀರಿನ ಆವರಣವಿದ್ದಾಗ್ಯೂ ಕೆರೆ ತುಂಬಿ ಎಂಟು ವರುಷವಾಯಿತು ಇಲ್ಲಿ ಜನಗಳು ಪ್ರತಿ ವಾರವು ಶಿರಾಕ್ಕೆ ಹೋಗಿ ಅಲ್ಲಿಂದ ಆಹಾರ ಪದಾರ್ಥಗಳನ್ನು ತಂದು ಜೀವನ ಮಾಡುತ್ತಾರೆ ಮೊನ್ನೆ ಬಿದ್ದ ಮಳೆಯಲ್ಲಿ ವಗ್ಗೆ ಈ ಕೆರೆಗೆ ಎರಡು ತಿಂಗಳ ನೀರು ಬಂದು ಇರುತ್ತೆ ಪುನಃ ಈಗ ಮೋಡವಾಡುವಂತಾಗಿವೆ ಪೈರುಗಳೆಲ್ಲಾ ಒಣಗಿಹೋಗಿರುತ್ತವೆ ಈ ಪ್ರಾಂತ್ಯ ಕಳ್ಳಂಬೆಳ್ಳದ ಕೆರೆ ಮತ್ತು ಶಿರಾದ ಕೆರೆಗಳು ಮಾತ್ರ ತುಂಬಿರುತ್ತವೆ

ಗ್ರಾಮಸ್ಥ

ಬೀರೂರು ವಿಷಯಗಳು

ಅಯ್ಯಾ,

ಈಚೆಗೆ ಕೆಲವು ದಿನಗಳಿಂದ ಮಳೆ ಇಲ್ಲದೆ ಇದದ್ದು ನೆನ್ನೆಯಿಂದ ತಿರಿಗಿ ಪ್ರಾರಂಭವಾಗಿದೆ ಕಡೂರಿನಲ್ಲಿ ಪ್ಲೇಗ್ ಇರುವುದಾಗಿ ವರ್ತಮಾನವಿದೆ ಕಳೆದ ವಾರ ಈ ಪತ್ರಿಕೆಯಲ್ಲಿ ಇಲ್ಲಿನ ಎ ವಿ ಸ್ಕೂಲಿನಲ್ಲಿ ಸ್ತ್ರೀಕಲರ ದ ಉಪಾಧ್ಯಾಯರೊಬ್ಬರೂ ಇಲ್ಲವೆಂತಲೂ, ಸ್ಕೂಲು ಒಹು ಚನ್ನಾಗಿದೆ ಎಂತಲೂ ಒಬ್ಬ ಉಪಾಧ್ಯಾಯರೇ ಬರೆದಿದ್ದರು ಈ ಊರು ಛತ್ರದ ಪಾರುಪತ್ಯಗಾರರೊಬ್ಬರೂ ಈಶ್ವರನ ಅರ್ಚಕರೊಬ್ಬರೂ ಇಲ್ಲಿ ಉಪಾಧ್ಯಾಯರಾಗಿ ಸ್ಕೂಲನ್ನು ಹೀನಸ್ಥಿತಿಗೆ ತಂದಿರುವುದು ಅವರಿಗೆ ಗೊತ್ತಿಲ್ಲವೆಂದು ತೋರುತ್ತೆ ಈ ಊರಿನ ಬ್ರಾಹ್ಮಣರ ರೀಡಿಂಗ್ ರೂಂ ಒಳ್ಳೇಸ್ಥಿತಿಯಲ್ಲಿರುವದೆಂತ ಕಳೆದ ವಾರ ಬರೆದಿತ್ತು ಅದೇನೋ ಒಳ್ಳೇಸ್ಥಿತಿಯಲ್ಲೇ ಇರುವುದು ಆದರೆ ಕೆಲವರಿಗೆ ಮಾತ್ರ ಅನುಕೂಲವಾಗಿರುವುದು ಲೈಬ್ರರಿ ಇರುವುದೆಂತ ಬರೆದಿದ್ದರು ರೀಡಿಂಗ್ ರೂಂ ಯಾರಿಗೆ ಅನುಕೂಲವಾಗಿದೆಯೋ ಲೈಬ್ರರಿಯೂ ಅವರಿಗೇ ಅನುಕೂಲವಾಗಿ ಇರುವದೆಂದು ತೋರುವುದು ಇಲ್ಲಿನ ಗರ್ಲ್ ಸ್ಕೂಲು ಚನ್ನಾಗಿತ್ತು ಅಲ್ಲಿ ಹನ್ನೊಂದಿರೇ ಇಲ್ಲಿನ ಹೆಡ್ ಮತ್ತು ಅಸಿಸ್ಟೆಂಟ್ ಮಾಸ್ಟರುಗಳಾದಮೇಲೆ ಪೂರ್ವಸ್ಥಿತಿಯನ್ನು ಬಿಡುತ್ತಿರುವುದು ಉಪಾಸನಾ ಸಮಾಜಕ್ಕೆ ಬರತಕ್ಕ ಪತ್ರಿಕೆಗಳನ್ನು ಅಲ್ಲಿನ ಮೆಂಬರುಗಳು ಹಂಚಿಕೊಳ್ಳುವುದನ್ನು ಬಿಡತಕ್ಕದ್ದು ಯುಕ್ತವೆಂದು ತೋರುವುದು ಉಪಾಸನಾ ಸಮಾಜದ ಪ್ರೆಸಿಡೆಂಟರು ಮತಾಭಿಮಾನವನ್ನು ಬಿಡುವುದು ಮುಖ್ಯವಾದದ್ದು ಇಲ್ಲಿನ ವೀರಶೈವ ರೀಡಿಂಗ್ ರೂಂ ಸಾಧಾರಣವಾಗಿರುವುದು ಅಂತೂ ಈ ಊರಿನ ಎ ವಿ ಸ್ಕೂಲು, ಗರ್ಲ್ಸ್ ಸ್ಕೂಲು, ಅನಾಥಾಲಯ ರೀಡಿಂಗ್ ರೂಂ, ಉಪಾಸನಾ ಸಮಾಜ ಇವುಗಳೆಲ್ಲಾ ಪತ್ರಿಕೆಗಳಲ್ಲಿ ಪ್ರಸಿದ್ಧಿಗೆ ಬರಲು ಪ್ರಯತ್ನ ಪಡುವವೇ ಹೊರತು ಕಾರ್ಯತಃ ಪ್ರಯತ್ನ ಪಡುತ್ತಿಲ್ಲ ಹಾಗೆ ಮಾಡದೆ ಒಳ್ಳೇ ಸ್ಥಿತಿಗೆ ಬರಬೇಕೆಂಬುದೇ ನಮ್ಮ ಕೋರಿಕೆ ಇಲ್ಲಿನ ನೇಟಿವ್ ಡಾಕ್ಟರವರು ಬಡವರಿಗೂ ಸುಲಭರಾದರೆ ಬಹಳ ಅನುಕೂಲವೆಂದು ತೋರುವುದು

ಖಂಡಿತವಾದಿ

ಶ್ರೀರಂಗಪಟ್ಟಣದ ರೀಡಿಂಗ್ ರೂಂ

ಅಯ್ಯಾ,

ಈ ಶ್ರೀರಂಗಪಟ್ಟಣದಲ್ಲಿ ಈಗ್ಗೆ ಸುಮಾರು ೭-೭ ವರುಷಗಳಿಂದೀಚೆಗೆ ಕನ್ನಡ ರೀಡಿಂಗ್ ರೂಂ ಎಂದು ಒಂದು ವಾಚಕಶಾಲೆಯು ಇಲ್ಲಿನ ಕೆಲವು ಸನ್ನಾಗರಿಕರಾದವರುಗಳಿಂದ ಏರ್ಪಡಿಸಲ್ಪಟ್ಟಿತು ಪ್ರಾರಂಭವಾದ ಬಾಗಾಯಿತು ಅಲ್ಲಿಗೆ ಎಷ್ಟು ಕನ್ನಡ ಪತ್ರಿಕೆಗಳು ಬರುತ್ತಿದ್ದವು. ಅಷ್ಟು ಈಗ ಬರುವಂತೆ ತೋರಿಬರುವುದಿಲ್ಲ ಆರಂಭ ಪೂರ್ವವನ್ನು ತೋರಿಸಿ ವಾಚಕಶಾಲೆಯನ್ನು ಏರ್ಪಡಿಸಿದ ಮೆಂಬರುಗಳೇ ಬರುಬರುತ್ತ ಅದರ ಕ್ಷೀಣದೆಸೆಗೂ ಕಾರಣರೆಂದು ತೋರಿಬರುತ್ತೆ ವಾಚಕಶಾಲೆಗೆ ಪ್ರತಿತಿಂಗಳೂ ಪ್ರತಿ ಒಬ್ಬ ಮೆಂಬರೂ ಕೊಡಬೇಕೆಂದು ನಿಯಮಿತವಾಗಿರುವ ಚಂದಾದ್ರವ್ಯವು ಸರಿಯಾಗಿ ವಸೂಲಾಗದೆ ಪ್ರಪಂಚಕ್ಕೆ ಮಹಮಹಪತ್ರಗಳು ಒಂದಂತೆ ಪ್ರಚಲಿತವಾಗಿ ಬರತಕ್ಕ ಪತ್ರಿಕೆಗಳಿಗೂ ರೋಗ ಪ್ರಾಪ್ತಿಯಾಗಿದೆ ವಾಚಕಶಾಲೆಯು ಉಪಯೋಗವೆಂಬಾಷ್ಟೆಂಬುವುದನ್ನು ತಿಳಿದು ಅದನ್ನು ಏರ್ಪಡಿಸಿ ಆದಕ್ಕೆ ಈಗ ದಯೆಯಿಟ್ಟು ಬರುವಂತೆ ಮಾಡಿರುವುದನ್ನು ನೋಡಿದರೆ ತುಂಬಾ ವ್ಯಾಕುಲವಾಗಿದೆ ಆದರಿಂದ ಅನೇಕ ಪ್ರಯೋಜನಗಳುಂಟು ಎಲ್ಲೆಲ್ಲಿ ಈಗ ನವನಾಗರೀಕರಾದವರು ಇಂಥ ವಾಚಕಶಾಲೆಗಳನ್ನು ಏರ್ಪಡಿಸುತ್ತಿರುವರು ಈ ಶ್ರೀರಂಗಪಟ್ಟಣದ ವಾಚಕಶಾಲೆಯಲ್ಲಿ ಆಗಾಗ್ಗೆ ಧರ್ಮಕೆಲಸಗಳು, ರಾಮೋತ್ಸವ, ಗಣಪತಿ ಉತ್ಸವ, ಹರಿಕಥೆ, ಸಂಗೀತ ಮುಂತಾದವು ನಡೆಯುತ್ತಿವೆ ಇದರಿಂದ ವಾಚಕರಿಗೂ, ಇತರರಿಗೂ ಅನೇಕ ವಿಷಯಗಳಲ್ಲಿ ಸಹಾಯವಾಗುವುದರಲ್ಲಿ ಸಂದೇಹವಿಲ್ಲ ಕೇವಲ ಪತ್ರಿಕೆಯನ್ನೋದುವುದರಿಂದಲ್ಲದೆ ಈ ರೀತಿಯಾಗಿಯೂ ವರ್ತಮಾನಪ್ರವರ್ತನ ಪ್ರಪಂಚಾನುಭವಗಳನ್ನುಂಟು ಮಾಡಿಕೊಳ್ಳುತ್ತಿದ್ದಾರೆ ಈ ವಾಚಕಶಾಲಾ ಮೆಂಬರುಗಳು ಇಲ್ಲಿ ಮತ್ತೊಂದು ಸಂಘವನ್ನು ಏರ್ಪಡಿಸಿಕೊಂಡು ಪ್ರತಿ ಭಾನುವಾರವೂ ಒಬ್ಬೊಬ್ಬರು ಒಂದೊಂದು ವಿಷಯವಾಗಿ ಕನ್ನಡದಲ್ಲಿ ಉಪನ್ಯಾಸವನ್ನು ಬರೆದು ತಂದಾಗಲಿ, ಬಾಯಿಯಿಂದಾಗಲೀ ಹೇಳುವಂತೆ ವಿಧಾಯಕ ಮಾಡಿದಾರೆ ಅದರಂತೆ ಈಗ ಮೂರು ವಾರದಿಂದಲೂ ನಡತೆ, ವಿದ್ಯೆ, ಪ್ರೀತಿ, ಇವುಗಳ ವಿಷಯವಾಗಿ ಉಪನ್ಯಾಸ ನಡೆಯಿತು ಇದರಲ್ಲಿ ವಿದ್ಯಾವಿಷಯದ ಉಪನ್ಯಾಸವು ಸರ್ವೋತ್ಕೃಷ್ಟವಾಗಿಯೂ, ಶ್ರಾವ್ಯವಾಗಿಯೂ ಇತ್ತು ಪ್ರೀತಿ ಎಂಬ ಉಪನ್ಯಾಸವು ಪಂಡಿತರಂಜಕವಾಗಿಯೂ ಪ್ರೀತಿಗೆ ಪ್ರೀತಿಯನ್ನುಂಟು ಮಾಡುವುದಾಗಿಯೂ ಇತ್ತು ನಡತೆಗೆ ಪ್ರಪಂಚಾನುಭವವೂ, ಭಾಷಾ ಪರಿಚಯವೂ ಇಲ್ಲದೆ ಇದ್ದಾಗ್ಯೂ, ಶ್ರಾವ್ಯವಾಗಿತ್ತು ನಡತೆ ವಿಷಯ ಮ, ಬಿ ರಾಮಯ್ಯನವರೂ, ವಿದ್ಯಾವಿಷಯ ಮೆ|| ಜ ಕೃಷ್ಣರಾಯರೂ, ಪ್ರೀತಿ ವಿಷಯ ಮೆ|| ಎನ್ ಸುಬ್ರಹ್ಮಣ್ಯನವರೂ ಉಪನ್ಯಾಸಗಳನ್ನು ಓದಿದರು ಈ ರೀತಿ ಎಲ್ಲೆಲ್ಲಿ ವಾಚಕಶಾಲೆಗಳಿರುವವೋ ಅಲ್ಲೆಲ್ಲಾ ಸಭೆ ಏರ್ಪಡಿಸಿ ಉಪನ್ಯಾಸ ಮಾಡುವುದಕ್ಕೆ ಏರ್ಪಡಿಸಿದರೆ, ಅದರಿಂದ ಸಭೆಗಳಲ್ಲಿ ಧೈರ್ಯವಾಗಿ, ಯುಕ್ತವಾಗಿ ಮಾತನಾಡುವುದಕ್ಕೂ, ಸನ್ಮಾರ್ಗಪ್ರವರ್ತನಕ್ಕೂ, ದೇಶೀಯರಲ್ಲಿ ಸಹೋದರ ವಾತ್ಸಲ್ಯತೆ ಬರುವುದಕ್ಕೂ, ಅವಿದ್ಯಾವಂತರೂ ವಿದ್ಯಾವಂತರಾಗುವುದಕ್ಕೂ ಸಾಧನವಾಗುವುದೆಂದು ದೃಢವಾಗಿ ಹೇಳುತ್ತೇನೆ ಇಲ್ಲಿನ ವಾಚಕಶಾಲೆಯು ಇನ್ನೂ ಅಭಿವೃದ್ಧಿಗೆ ಬಂದು, ಮೆಂಬರುಗಳು ಸಂಪೂರ್ಣ ವಿದ್ಯಾವಂತರಾಗಲೆಂದು ಹಾರೈಸುವೆನು

ವಾಚಕಶಾಲಾಭಿಮಾನಿ

ಬುಕ್ಕಾಪಟ್ಟಣದ ವಾಚಕಶಾಲೆ ಮುಂತಾದ ವಿಚಾರಗಳು

ಅಯ್ಯಾ,

ಸಿರಾ ತಾಲ್ಲೂಕು ಬುಕ್ಕಾಪಟ್ಟಣದ ಶ್ರೀ ಕೃಷ್ಣರಾಜೇಂದ್ರ ವಾಚಕಶಾಲೆಯ ಪುರೋಭಿವೃದ್ಧಿ ವಿಚಾರದಲ್ಲಿ ಪ್ರತಿ ಮಾಹೆಯಲ್ಲಿಯೂ ಮೀಟಿಂಗ್ ನಡಿಸಲ್ಪಡಬೇಕೆಂದೂ, ಮೀಟಿಂಗಿನಲ್ಲಿ ಯಾವದಾದರೊಂದು ವಿಚಾರ ಉಪನ್ಯಾಸ ನಡಿಸಬೇಕೆಂದೂ ವಾಚಕಶಾಲಾರಂಭದಲ್ಲಿ ಕ್ಲಿಪ್ತಮಾಡಿದ್ದಂತೆ ಹಿಂದಿನ ವಾರ ನಡೆದ ಮೀಟಿಂಗಿನಲ್ಲಿ ಮೆ|| ಫಾರೆಸ್ಟರ್ ಸಿದ್ಧಲಿಂಗಯ್ಯನವರು ರೀಡಿಂಗ್ ರೂಮಿನಿಂದ ಆಗತಕ್ಕ ಪ್ರಯೋಜನದ ವಿಚಾರವನ್ನೂ, ಫಾರೆಸ್ಟರ್ ಮೆ|| ಶ್ರೀ ವೆಂಕಟರಾಯರವರು ಕಾಲಕ್ಲಿಪ್ತದ ವಿಚಾರದಲ್ಲಿಯೂ ಈಚೆಗೆ ನಡೆದ ಮೀಟಿಂಗಿನಲ್ಲಿ ಸ್ಕೂಲ್ ಹೆಡ್ ಮಾಸ್ಟರ್ ವೆಂಕಟರಮಣಯ್ಯನವರು ವ್ಯವಸಾಯದ ವಿಚಾರದಲ್ಲೂ ಉಪನ್ಯಾಸಮಾಡಿದಾಗ್ಯೆ ಅನೇಕ ಗ್ರಾಮದ ಮುಖಂಡರು, ರೈತಾಬಿ ಜನಗಳೂ ಕಲಿತು ತುಂಬಾ ಹರ್ಷಿತರಾಗಿ ವಾಚಕಶಾಲೆಗೆ ಮತ್ತಷ್ಟು ಹೆಚ್ಚು ಜನ ಮೆಂಬರುಗಳಾದರು

೨೧ ನೇ ತಾ ಇಲ್ಲಿಗೆ ದಯಮಾಡಿದ್ದ ತಾಲ್ಲೂಕ್ ಅಮಲ್ದಾರ್ ಮೆ|| ಎಂ ಎ ಶ್ರೀನಿವಾಸಯ್ಯಂಗಾರ್ರವರನ್ನು ಕದಳೀ ಸ್ತಂಭಗಳಿಂದಲೂ ತಳಿರು ತೋರಣಗಳಿಂದಲೂ ಶ್ರೀಮತ್ ಚಕ್ರವರ್ತಿ ಶ್ರೀಮತ್ ಮಹಾರಾಜರವರೇ ಮೊದಲಾದವರ ಚಿತ್ರಪಟಗಳಿಂದಲೂ ಅಲಂಕೃತವಾಗಿದ್ದ ಸ್ಕೂಲ್ ಕಟ್ಟಡಕ್ಕೆ ಬರಮಾಡಿಕೊಂಡು ಅಲ್ಲಿ ಸೇರಿದ್ದ ಸಭಿಕರೆಲ್ಲರೂ ಅಗ್ರಾಸನಾಧಿಪತ್ಯವನ್ನು ವಹಿಸಲು ಪ್ರಾರ್ಥಿಸಿಕೊಂಡದ್ದರ ಮೇರೆ ಅಮಲ್ದಾರರವರು ಅಗ್ರಾಸನಾಧಿಪತ್ಯವನ್ನು ವಹಿಸಿದರು ಸಭೆಯಲ್ಲಿ ಸೇರಿದ್ದ ಮಹಾ ಜನಗಳನ್ನು ಸಂಗೀತಮಂಡಲಿಯವರು ಆನಂದಗೊಳಿಸಿದರು ಬಳಿಕ ಸ್ಕೂಲ್ ಹೆಡ್ ಮಾಸ್ಟರಿಂದ ಸ್ಕೂಲ್ ಸ್ಥಾಪಿತವಾದ ಬಾಗಾಯಿತು ತಾತ್ಕಾಲದ ವರೆಗಿನ ಸ್ಕೂಲ್ ಸ್ಥಿತಿ ರಿಪೋರ್ಟ್ ಓದಲ್ಪಟ್ಟಿತು ಹುಡುಗರಿಂದ ತಯಾರಿಸಲ್ಪಟ್ಟಿದ್ದ ಕಾರ್ಯ ನಡಿಸಲ್ಪಟ್ಟಿತು ಅನಂತರ ಅಗ್ರಾಸನಾಧಿಪತಿಗಳು ಅತ್ಯಾನಂದದಿಂದ ಸ್ಕೂಲ್ ಹುಡುಗರಿಗೆ ಇನಾಮು ಪುಸ್ತಕಗಳನ್ನು ಹಂಚಿ ಸ್ಕೂಲ್ ವಿದ್ಯಾಭಿವೃದ್ಧಿ ವಿಚಾರದಲ್ಲೂ, ರೀಡಿಂಗ್ ರೂಂ ಸ್ಥಾಪಿತವಾಗಿರುವದರಿಂದ ಜನಗಳಿಗುಂಟಾಗುವ ಹಿತಮತ್ಯವೂ, ಪತ್ರಿಕೆಗಳನ್ನು ಓದುವದರಿಂದ ಉಂಟಾಗುವ ಪ್ರತಿಫಲ ಮತ್ತು ಭಾರತೀಯರು ತಾವು ಮೊದಲಿದ್ದ ಉಚ್ಛ್ರಾಯಸ್ಥಿತಿಯಿಂದ ಹೀನಸ್ಥಿತಿಗೆ ಬರಲು ಕಾರಣಗಳು, ಈಗಿನ ನಾಗರಿಕ ಕಾಲಕ್ಕೆ ತಕ್ಕಹಾಗೆ ನಡವಳಿಕೆಗಳನ್ನು ಕಲಿತುಕೊಳ್ಳಲು ಸಭಿಕರಿಗೆಲ್ಲಾ ಪ್ರತಿಬಿಂಬಿಸುವಂತೆ ರಸವತ್ತಾದ ಸಂಭಾಷಣವನ್ನು ಅಪ್ಪಣೆ ಕೊಡಿಸಿ, ಈ ಗ್ರಾಮದಲ್ಲಿ ಒಂದು ಕೋಆಪರೇಟಿವ್ ಸೊಸೈಟಿ ಎಂಬ ಸಂಘವು ಸ್ಥಾಪಿತವಾದರೆ ಇದರಿಂದ ಈ ಪ್ರಾಂತ್ಯದ ಜನಗಳಿಗೆ ಬಹಳ ಅನುಕೂಲವೂ ಬಡಬಗ್ಗರ ಅಭಿವೃದ್ಧಿಗೆ ಸೌಕರ್ಯವೂ ಉಂಟಾಗುವದೆಂದು ಬೋಧಿಸಿದ್ದರಿಂದ ಬಹುಜನ ಒಪ್ಪಿ ೧,೦೦೦ ರೂಪಾಯಿಗೆ ಮೇಲ್ಪಟ್ಟು ಷೇರ್ ಮೊಬಲಗು ವಾಗ್ದಾನವಾಯ್ತು ಸ್ವಲ್ಪ ದಿವಸಗಳೊಳಗಾಗಿಯೇ ಈ ಸಂಘದ ನಡವಳಿಕೆ ರೂಲ್ಸುಗಳನ್ನು ತರಿಸಿ ಸಂಘವನ್ನು ಸ್ಥಾಪಿಸಿ ಮುಂದಿನ ನಡವಳಿಕೆಯನ್ನು ಕ್ರಮಗೊಳಿಸಬೇಕೆಂಬದಾಗಿ ಅಧ್ಯಕ್ಷರಿಂದ ಅಪ್ಪಣೆ ಕೊಡಿಸೋಣವಾಯಿತು ನಂತರ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ಶ್ರೀಮತ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳಿಂದ ಸಭಿಕರಿಗೆ ಅಲ್ಪಾಹಾರವೂ ಗಂಧ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟು ಸಭೆ ಬರಖಾಸ್ತು ಮಾಡಲ್ಪಟ್ಟಿತು

ಪುರವಾಸಿ

ಮೊಖ್ತ್ಯಾರ್ರುಗಳು

ಅಯ್ಯಾ,

ಈಚೆಗೆ ಬರತಕ್ಕ ನ್ಯೂಸ್ ಪೇಪರುಗಳಲ್ಲಿ ಮೈಸೂರು ಚೀಫ್ ಕೋರ್ಟಿನವರು ಇನ್ನು ಮುಂದೆ ಮೊಖ್ತ್ಯಾರ್ರು ಕ್ರಿಮಿನಲ್ ಕೋರ್ಟುಗಳಲ್ಲಿ ಅಪರಾಧಿಪರವಾಗಿ ಸಂದರ್ಭಾನುಸಾರ ಫಿರ್ಯಾದಿ ಪರವಾಗಿ ವಾದಿಸಬಹುದೆಂತ ಅಪ್ಪಣೆ ಮಾಡಿರುವುದಾಗಿ ಕಂಡುಬರುವೆ ಈ ಆರ್ಡರಿನಿಂದ ಕೆಲವರಿಗೆ ಮಾತ್ರ ಜೀವನಕ್ಕೆ ಅವಕಾಶವಾಯಿತೆಂತೆ ಹೇಳಬಹುದಾದಾಗ್ಯೂ ಇದರಿಂದ ಉಂಟಾಗತಕ್ಕ ಸಾಧಕಬಾಧಕಗಳನ್ನು ಯೋಚಿಸಿದರೆ ಇದರಿಂದ ಸ್ವಲ್ಪ ಸಂಖ್ಯೆ ಪ್ರಜೆಗಳಿಗೆ ಅನುಕೂಲವಿದ್ದರೂ ದೇಶದ ಪ್ರಜೆಗಳಲ್ಲಿ ಸಮೃದ್ಧಿ, ಸಮಾಧಾನ, ಐಕಮತ್ಯ, ಇವುಗಳನ್ನು ಕೆಡಿಸಲಿಕ್ಕೆ ಇದು ಹೆಚ್ಚು ಅವಕಾಶ ಉಂಟುಮಾಡಿತೆಂತ ಹೇಳಬೇಕಾಗಿದೆ ಕಾರಣವೇನೆಂದರೆ, ನಮ್ಮ ಮೈಸೂರು ದೇಶದಲ್ಲಿ ವಿದ್ಯಾವಂತರು ಜೀವನ ಮಾಡಲಿಕ್ಕೆ ಪ್ಲೀಡರುಗಳಾಗತಕ್ಕದ್ದು, ನೌಕರಿ ಮಾಡತಕ್ಕದ್ದು, ಪ್ಲೀಡರುಗಳಲ್ಲಿ ವ್ಯಾಜ್ಯಗಳನ್ನು ತಂದುಹಾಕಿ ಅದರಲ್ಲಿ ಎರಡು ಕಡೆ ರುಸುಂ ಪಡೆಯತಕ್ಕದ್ದು, ಅವಿಲ್ಲವಾದರೆ ಧನವಂತರಾದ ಮೂಢರಿಗೆ ಜೂಜಾಡತಕ್ಕದ್ದನ್ನು ಕಲಿಸಿ ಅದರಿಂದ ರುಸುಂ ಪಡೆಯತಕ್ಕದ್ದು, ಈತರ ದುರ್ಗಾತಿ ಇವುಗಳಿಂದ ಜೀವನ ನಡೆಯಬೇಕೇ ಹೊರತು ವಿದ್ಯಾವಂತರಾದವರು ತಾವು ಚನ್ನಾಗಿ ಬಾಳಿ, ಇತರರನ್ನು ಜೀವನ ಮಾಡಿಸತಕ್ಕ ಯಾವದಾದರೂ ಕೈಗಾರಿಕೆಗಳನ್ನು ಆರಂಭಿಸುವಂತೆ ಬೋಧಿಸುವುದಿಲ್ಲ ದೇಶದಲ್ಲಿ ವಿದ್ಯಾಭಿವೃದ್ಧಿಯ ಸ್ಥಿತಿ ಯೋಚಿಸಿದರೆ ನಮ್ಮವರು ವರ್ಷ ವರ್ಷ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು, ಅನಂತರ ಪ್ಲೀಡರುಗಳಾಗತಕ್ಕದ್ದು, ಇವು ವಿಶೇಷ ಜಾಸ್ತಿಯಾಗುತ್ತಾ ಬಂದಿದೆ, ಇದು ವೃದ್ಧಿ ಆದಹಾಗೆಲ್ಲಾ ದೇಶದಲ್ಲಿ ಜರಾಯತಿ ಮಾಡತಕ್ಕ, ವ್ಯಾಪಾರ ಮಾಡತಕ್ಕ ಜನಗಳಲ್ಲಿ ಪರಸ್ಪರ ದ್ವೇಷಾಸೂಯೆಗಳು ಜಾಸ್ತಿಯಾಗಿ, ಅವರು ಸದಾ ಕೋರ್ಟುಗಳಲ್ಲಿರತಕ್ಕದ್ದು, ಪರಸ್ಪರ ಜವಾಬು ಖೂನಿಗಳನ್ನು ನಡಿಸತಕ್ಕದ್ದು ಇವು ಜಾಸ್ತಿಯಾಗುತ್ತಾ ಬಂದಿವೆ ಹೀಗಿರತಕ್ಕದ್ದರಲ್ಲಿ ಚೀಫ್ ಕೋರ್ಟಿನಿಂದ ಅಧಿಕಾರ ಹೊಂದಿರತಕ್ಕ ವಿದ್ಯಾವಂತರಾದ ಪ್ಲೀಡರುಗಳ ಜತೆಗೆ ಮೊಖ್ತ್ಯಾರ್ರು ಎಂಬವರು ಕೋರ್ಟುಗಳಿಗೆ ಹೋಗುತ್ತಾ ಬಂದರೆ ಜುಡಿಷಿಯಲ್ ಕೋರ್ಟುಗಳು ಜಾಸ್ತಿಯಾಗಬೇಕಾಗುತ್ತೆ ದೇಶದಲ್ಲಿ ಜುಡಿಷಿಯಲ್ ಕೆಲಸಗಳು ಹೆಚ್ಚೋದು, ಎಕ್ಸಿಕ್ಯೂಟಿವ್ ಇಲಾಖೆಯ ಹುಟ್ಟುವಳಿ ಜಾಸ್ತಿಯಾಗೋದು, ಇವು ಕ್ಷೇಮಕರವಲ್ಲ ನನ್ನ ದೀರ್ಘಕಾಲದ ಅನುಭವ ಹೇಳುತ್ತೇನೆ ಗೌರ್ನಮೆಂಟಿನವರು ಬಡವ ದೂಲ್ಲು ಜಾರೀಯ ತಂದಾಗ್ಯೂ ಅದು ಸ್ವಭಾವವಾಗಿ ಪ್ರಜೆಗಳಲ್ಲಿ ಪರಸ್ಪರ ಹುಟ್ಟತಕ್ಕ ದ್ವೇಷಾಸೂಯೆಗಳನ್ನು ಅಡಗಿಸಿ ಅವರನ್ನು ಸನ್ಮಾರ್ಗಕ್ಕೆ ತಂದು ಸಮೃದ್ಧಿ ಕಾಪಾಡತಕ್ಕದ್ದಾಗಿರಬೇಕು ಗೌರ್ನಮೆಂಟಿಗೆ ಸಂಬಂಧಪಟ್ಟ ಪ್ರತಿ ಆಫೀಸರೂ ಆತನ ಅಧಿಕಾರಕ್ಕೆ ಸಂಬಂಧಪಟ್ಟ ಕೆಲಸ ಮಾಡತಕ್ಕದ್ದರಲ್ಲೂ, ಪ್ರಜೆಗಳ ನೆಮ್ಮದಿಗೆ ಭಂಗಬಾರದಂತೆ ಎಚ್ಚರಿಕೆ ಇಟ್ಟುಕೊಂಡು ಕೆಲಸ ಮಾಡತಕ್ಕದ್ದು ಗೌರ್ನಮೆಂಟಿನ ಅಸ್ತಿಭಾರವಾಗಿದೆ ಮತ್ತು ಒಂದು ತಪ್ಪಿತ ನಡೆದ ನಂತರ ಅದನ್ನು ನಡಿಸಿದ ಮನುಷ್ಯರನ್ನು ಹಿಡಿದು ಶಿಕ್ಷಿಸುವುದಕ್ಕಿಂತಲೂ ಗೌರ್ನಮೆಂಟಿನವರು ಮುಂಜಾಗ್ರತೆ ತೆಗೆದುಕೊಂಡು ಅಂಥಾ ಅಕೃತ್ಯಗಳು ನಡೆಯದಂತೆ ತಡೆಯತಕ್ಕದ್ದು ಉತ್ತಮವಾದದ್ದೆಂಬ ವಿಧಿ ಎಲ್ಲಾ ಶಾಸ್ತ್ರಗಳಲ್ಲೂ ಸೂಚಿಸುತ್ತಾ ಇದೆ ಆದದ್ದರಿಂದ ಈಗಿನ ಮೊಖ್ತ್ಯಾರ್ರುಗಳ ಏರ್ಪಾಡು ದೇಶದ ಕ್ಷೇಮಕ್ಕೆ ಅನುಕೂಲವಾದದ್ದೋ ಪ್ರತಿಕೂಲವಾದದ್ದೋ ಎಂಬೀ ವಿಷಯವನ್ನು ವಿದ್ಯಾವಂತರೂ, ಗೌರ್ನಮೆಂಟಿನವರೂ ಸಹಾ ಯೋಚಿಸಿ, ತಕ್ಕ ಏರ್ಪಾಡು ಮಾಡುತ್ತಾರೆಂದು ನಂಬಿ ಇದ್ದೇನೆ

ಪೆನ್‌ಷನ್ ಆಫೀಸರ್

ವೃತ್ತಾಂತ ಪತ್ರಿಕೆ.

—:o,—

೧೯೦೯ನೇ ಇಸವಿ ಅಕ್ಟೋಬರ್ ತಾ ೭ನೇ ಗುರುವಾರ

ಮೈಸೂರು ಪಟ್ಟಣವೂ ಪ್ಲೇಗ್ ಉಪದ್ರವೂ

ಸದ್ಯ ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರದ ಹಾವಳಿಯು ಬಹಳ ಜೋರಾಗಿರುತ್ತದೆ. ಯಾಕೆಂದರೆ ಎಷ್ಟೆಲ್ಲಾ ಸಾಹಸಪಡುತ್ತಿದ್ದಾಗ್ಯೂ ದಿನದಿನದ ಮರಣಸಂಖ್ಯೆಯು ಕಡಮೆಯಾಗುತ್ತಾ ಇಲ್ಲ. ಅದನ್ನು ತಡೆಯುವುದಕ್ಕೆ ಸಾಹಸ ಪಡದೆಹೋಗಿದ್ದರೆ ಮರಣಸಂಖ್ಯೆಯು ಇನ್ನೂ ಬಹಳವಾಗಿ ಹೆಚ್ಚಿ ಹೋಗುತ್ತಿತ್ತೆಂದು ಧಾರಾಳವಾಗಿ ಹೇಳಬಹುದು. ಹ್ಯಾಗೂ ಕೆಲವು ವರುಷಗಳ ಹಿಂದೆ ಉಪದ್ರವು ಹೆಚ್ಚಿ ಇದ್ದಷ್ಟು ಈಗ ಇಲ್ಲವೆಂದು ಸಂತೋಷಪಡಬೇಕಾಗಿದೆ. ಎಷ್ಟೋ ಮುತುವರ್ಜಿಯಿಂದ ನೋಡಿಕೊಳ್ಳುತ್ತಾ ಬಂದಿದ್ದಾಗ್ಯೂ ಮೇ ತಿಂಗಳಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾದಾರಭ್ಯ ಎಲ್ಲಾ ಕಾರಣಗಳಿಂದಲೂ ಮೈಸೂರು ಪಟ್ಟಣದಲ್ಲಿ ೨,೦೯೮ ಪ್ರಜೆಗಳು ಮೃತಪಟ್ಟಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಮ್ಯುನಿಸಿಪಲ್ ಅಧಿಕಾರಿಗಳು ಕುತೂಹಲಪಟ್ಟ ಪ್ರಕಾರ ಪ್ರಜೆಗಳು ಧಾರಾಳವಾಗಿ ನಡೆದುಕೊಂಡಿದ್ದ ಪಕ್ಷದಲ್ಲಿ ಕೆಲವುಕಾಲಕ್ಕೆ ಮುಂಚೆಯೇ ಪ್ಲೇಗ್ ಉಪದ್ರವು ಸಂಪೂರ್ಣವಾಗಿ ನಿಂತುಹೋಗುತ್ತಿತ್ತು.

ಪ್ಲೇಗ್ ಉಪದ್ರವನ್ನು ಬಾರದಂತೆ ತಡೆಯುವುದಕ್ಕೆ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದೊಂದೇ ಫಲಕಾರಿಯಾದ ಉಪಾಯವು ಅದರಿಂದ ಪ್ಲೇಗ್ ಉಪದ್ರವು ವಾಸಿಯಾಗುವುದಿಲ್ಲ. ಆದಕಾರಣ ಇನಾಕ್ಯುಲೇಷನ್ ಮಾಡಿಸಿಕೊಳ್ಳುವಾಗ್ಗೆ ಶರೀರದಲ್ಲಿ ಪ್ಲೇಗಿನ ಸೋಂಕು ಇದ್ದ ಪಕ್ಷದಲ್ಲಿ ಪ್ಲೇಗ್ ಕ್ರಿಮಿಗಳು ಹೆಚ್ಚಿ ಉಪದ್ರವನ್ನುಂಟುಮಾಡದಂತೆ ಈ ಸಿಡುಬಿನ ಹಾಲು ತಡೆಯಲಾರದು; ಹಾಗಿಲ್ಲದೆ ಪ್ಲೇಗ್ ಕ್ರಿಮಿಯು ಶರೀರದೊಳಕ್ಕೆ ಪ್ರವೇಶಮಾಡುವುದಕ್ಕೆ ಮೊದಲೇ ಇನಾಕ್ಯುಲೇಷನ್ ಮಾಡಿಸಿಕೊಂಡುಬಿಟ್ಟರೆ ಮುಕ್ಕಾಲು ಮೂರುವೀಸಪಾಲು ಪ್ಲೇಗ್ ತಗಲುವುದೇ ಇಲ್ಲವೆಂದು ಖಂಡಿತವಾಗಿ ತಿಳಿದುಕೊಳ್ಳಬಹುದು.

ಈ ಅರ್ಥಕ್ಕೆ ಅನೇಕ ದೃಷ್ಟಾಂತಗಳನ್ನು ಹೇಳಬಹುದಾಗಿದೆ. ಪ್ಲೇಗ್ ಪ್ರಾರಂಭವಾದ ತರುಣದಲ್ಲಿ ವೆಸ್ಲಿಯನ್ ಮಿಷನ್ ಸಂಘದ ಕ್ರೈಸ್ತ ಪ್ರಜೆಗಳೂ, ವೆಸ್ಲಿಯನ್ ಮಿಷನ್ ಪ್ರೆಸ್ಸಿನ [illegible] ನೌಕರಮಾಣೇಯರೂ ಇನಾಕ್ಯುಲೇಷನ್ ಮಾಡಿಸಿಕೊಂಡುಬಿಟ್ಟರು. ಇಲ್ಲಿಂದೀಚೆಗೆ ಈ ಜನಗಳ ಪೈಕಿ ಅನೇಕರ ಮನೆಗಳಲ್ಲಿ ಇಲಿಗಳು ಸತ್ತುಬಿದ್ದವು ಮತ್ತು ಅವರ ಮನೆಗಳಲ್ಲಿ ಇದ್ದು ಇನಾಕ್ಯುಲೇಷನ್ ಮಾಡಿಸಿಕೊಳ್ಳದ ಕೆಲವು ಬಂಧುಗಳಿಗೆ ಪ್ಲೇಗ್ ತಗಲಿ ಕಾಲವಾದದ್ದೂ ಉಂಟು. ಆದರೆ ಇದುವರೆಗೂ ಒಬ್ಬ ಕ್ರೈಸ್ತ ಪ್ರಜೆಗಾಗಲೀ, ಪ್ರಿಂಟಿಂಗ್ ಆಫೀಸಿನ ಯಾವನೊಬ್ಬ ನೌಕರನಿಗಾಗಲೀ ಪ್ಲೇಗ್ ಉಪದ್ರವು ತಗಲಿರುವುದಿಲ್ಲ. ಅವರ ಮನೆಮಠಗಳಲ್ಲಿ ಪ್ಲೇಗಿನ ಸೋಂಕು ಇದ್ದಿತೆಂಬುವುದು ಖಂಡಿತವಾಗಿದೆ; ಇಲ್ಲದಿದ್ದಲ್ಲಿ ಆ ಮನೆಗಳಲ್ಲಿ ಇಲಿಗಳು ಸಾಯುತ್ತಿರಲಿಲ್ಲ. ಆದರೆ ಆ ಜನರೆಲ್ಲರೂ ಪ್ಲೇಗ್ ಸಿಡುಬನ್ನು ಹಾಕಿಸಿಕೊಂಡಿದ್ದರಾದಕಾರಣ ಅವರು ಈ ಉಪದ್ರದ ಬಾಧೆಯನ್ನು ತಪ್ಪಿಸಿಕೊಂಡಿರುತ್ತಾರೆ.

ಮೈಸೂರು ಷಹರಿನಲ್ಲಿ ಇದುವರೆಗೆ ೧೪,೨೩೦ ಪ್ರಜೆಗಳು ಪ್ಲೇಗ್ ಸಿಡುಬನ್ನು ಹಾಕಿಸಿಕೊಂಡಿರುತ್ತಾರೆಂದು ಕೇಳಿ ಬಹಳವಾಗಿ ಸಂತೋಷಪಡುತ್ತೇವೆ. ಇಷ್ಟು ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಹೋಗಿದ್ದರೆ ದಿನವಹಿ ಮರಣಸಂಖ್ಯೆಯು ಇನ್ನೂ ಬಹಳಮಟ್ಟಿಗೆ ಹೆಚ್ಚಾಗುತ್ತಿತ್ತು. ಈಗಲೂ ಮುಂದಿನ ವಾರದೊಳಗಾಗಿ ಉಳಿದ ಪ್ರಜೆಗಳೆಲ್ಲಾ ಮುಂದೆ ಬಂದು ಸಿಡುಬನ್ನು ಹಾಕಿಸಿಕೊಂಡುಬಿಡುವುದಾದರೆ ಬಹುಶಃ ಇನ್ನು ಇಪ್ಪತ್ತು ದಿನಗಳೊಳಗಾಗಿಯೇ ಈ ಉಪದ್ರವು ನಿಂತುಹೋಗುವುದೆಂದು ನಾವು ನಂಬುತ್ತೇವೆ. ಆದಕಾರಣ ಈ ಉಪದ್ರವನ್ನು ಅಡಗಿಸುವ ಪರಿಹಾರವು ಪ್ರಜೆಗಳ ಹಸ್ತಗತವಾಗಿರುವುದು. ಅವರು ಇನಾಕ್ಯುಲೇಷನ್ ಮಾಡಿಸಿಕೊಳ್ಳಲಿ, ಈ ಉಪದ್ರದ ಸೆಳೆಯೇ ಅಡಗಿಹೋಗುತ್ತದೆ.

ಸರ್ಕಾರಿ ಡಾಕ್ಟರುಗಳು ಟೌನ್ ಹಾಲ್ ಬಂಗಲೆಯಲ್ಲಿ ದಿನವಹಿ ಸಾಯಂಕಾಲ ೪ ರಿಂದ ೬ ಗಂಟೆಯ ತನಕ ಇನಾಕ್ಯುಲೇಷನ್ ಮಾಡುತ್ತಾರೆ. ಬೆಳಗಿನ ಹೊತ್ತಿನಲ್ಲಿ ಪಟ್ಟಣದ ಬೇರೆ ಬೇರೆ ಮೊಹಲ್ಲೆಗಳಲ್ಲಿ ಅವರು ಸುತ್ತಿಕೊಂಡು ಅಲ್ಲಲ್ಲಿ ಅಪೇಕ್ಷಿಸುವ ಜನರಿಗೆ ಸಿಡುಬು ಹಾಕುವರು. ಗೋಷಾ ಸ್ತ್ರೀಯರು ವಾರದಲ್ಲಿ ಕೆಲವು ದಿನ ಮಧ್ಯಾಹ್ನದ ಹೊತ್ತು ಮಿಷನ್ ಆಸ್ಪತ್ರೆಗೆ ಹೋಗಿ ಸಿಡುಬನ್ನು ಹಾಕಿಸಿಕೊಂಡು ಬರಬಹುದು. ಮತ್ತು ಐದುಮಂದಿ ಇಥವಾ ಹೆಚ್ಚು ಮಂದಿ ಸ್ತ್ರೀಯರು ಅಪೇಕ್ಷಿಸಿ ಹೇಳಿಕಳುಹಿಸಿದರೆ ಲೇಡಿ ಡಾಕ್ಟರುಗಳು ಅವರ ಮನೆಗಳಿಗೇ ಬಂದು ಇನಾಕ್ಯುಲೇಷನ್ ಮಾಡಿ ಹೋಗುವರು. ಈ ರೀತಿ ಪ್ರಜೆಗಳು ಸಿಡುಬು ಹಾಕಿಸಿಕೊಳ್ಳುವುದಕ್ಕೆ ಬೇಕಾದ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಟ್ಟಿರುತ್ತಾರೆ. ಹಾಕಿಸಿಕೊಳ್ಳುವವರು ಬಡವರಾಗಿದ್ದ ಪಕ್ಷದಲ್ಲಿ ಸರ್ಕಾರದವರು ಅಂಥವರಿಗೆ ಸ್ವಲ್ಪ ದ್ರವ್ಯ ಸಹಾಯವನ್ನೂ ಮಾಡುವರು. ಆದದರಿಂದ ಇನ್ನು ಮುಂದೆ ೮-೧೦ ದಿನಗಳೊಳಗಾಗಿ ಈ ಷಹರಿನ ಸಮಸ್ತ ಪ್ರಜೆಗಳೂ ಇನಾಕ್ಯುಲೇಷನ್ ಮಾಡಿಸಿಕೊಂಡು, ಈ ಮರಣಕರವಾದ ರೋಗದ ಹುಟ್ಟನ್ನೇ ಅಡಗಿಸಿಬಿಟ್ಟಾರೆಂದು ನಂಬಿ ನಿರೀಕ್ಷಿಸುತ್ತೇವೆ

ಇದಲ್ಲದೆ ಸಂಸ್ಥಾನದೊಳ ಈ ಉಪದ್ರವು ಅನೇಕ ಗ್ರಾಮಗಳಲ್ಲಿ ಈಗೀಗ ಹರಡಿಕೊಳ್ಳುತ್ತಿರುವುದು. ಪ್ರಜೆಗಳಿಗೆ ಇನಾಕ್ಯುಲೇಷನ್ನಿನ ಪ್ರಯೋಜನಗಳನ್ನು ಕುರಿತು ವಿವೇಕ ಹೇಳಿಕೊಡುವಂತೆ ಏರ್ಪಾಡಾದರೆ ಉತ್ತಮ. ಮತ್ತು ಯೋಗ್ಯರಾದ ವೈದ್ಯರನ್ನು ಇನಾಕ್ಯುಲೇಷನ್ ಮಾಡುವಂತೆ ಗ್ರಾಮಾಂತರಗಳ ಮೇಲೆ ಕಳುಹಿಸಿಕೊಡಬೇಕಾಗಿರುವುದು. ಬೆಂಗಳೂರು ದಂಡಿನಲ್ಲಿ ಬಹುಮಂದಿ ಪ್ರಜೆಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಅಲ್ಲಿ ಈಗ ಪ್ಲೇಗಿನ ಸೆಳೆಯೇ ಇರುವುದಿಲ್ಲ. ಆದಕಾರಣ ಇನಾಕ್ಯುಲೇಷನ್ ಕೆಲಸವು ತೃಪ್ತಿಕರವಾಗಿಯೂ ಸಂಪೂರ್ಣವಾಗಿಯೂ ನಡೆದ ಪಕ್ಷದಲ್ಲಿ ಸಂಸ್ಥಾನದೊಳ ಪ್ಲೇಗ್ ಉಪದ್ರವು ನಿಂತುಹೋದೀತು.

ಒಳದೇಶದ ವೃತ್ತಾಂತಗಳು

ಕಳೆದ [illegible]ವಾರ ಮಹಾರಾಜಾ ಗಾಯಕವಾಡ್ [illegible]ರವರು ಪರಿವಾರ ಸಹಿತ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ಗವರ್ನ್ಮೆಂಟಿನ ಸಕ್ರೆಟರಿಗಳು ಅವರ [illegible] ಈ ವಾರ ಬರುವವರಾಗಿದ್ದಾರೆಂದು ಕೇಳುತ್ತೇವೆ.

⁂

ರಾಜಧಾನಿಯ ಸಂದೇಶಹರಿಯಲ್ಲಿ ಮುಖ್ಯರಾದ ಕೆಲವು ವರ್ತಕರು ಸೇರಿ, ಪ್ಲೇಗ್ ಸಿಡುಬನ್ನು ಹಾಕಿಸುವುದಕ್ಕೆ ಏರ್ಪಾಡು ಮಾಡಿ, ಹಾಕಿಸಿಕೊಂಡವರಿಗೆ ಒಕ್ಕೊಂದು [illegible] ಹಂಚಿಕೊಡುತ್ತಿದ್ದಾರೆಂದು ಕೇಳಿ ಬಹಳ ಸಂತೋಷಪಡುತ್ತೇವೆ.

⁂

ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಲೆಕ್ಕಪತ್ರಗಳು ಸರಿಯಾಗಿಲ್ಲವೆಂದೂ, ಹಣಕಾಸು [illegible]ಯಾಗಿದೆ ಎಂದೂ ಸರ್ಕಾರಕ್ಕೆ ತಿಳಿದು ಬಂದದ್ದರಿಂದ ಆ [illegible] ಮ್ಯಾನೇಜರನ್ನು ಸಸ್ಪೆಂಡ್ ಮಾಡಿ, ಆಡಿಟರುಗಳನ್ನು ಕಳುಹಿ ಲೆಕ್ಕಗಳನ್ನು ತನಿಖೆ ಮಾಡಿಸುತ್ತಿದ್ದಾರೆಂದು ಪ್ರಕಟವಾಗಿದೆ

⁂

ಕಳೆದ ಸೋಮವಾರ ಅರಮನೆಯಲ್ಲಿ ಮಹಾರಾಜ ಕುಮಾರಿಯವರ ದ್ವಿತೀಯ ಪುತ್ರಿಯ ವಾರ್ಷಿಕ ವರ್ಧಂತಿ ಉತ್ಸವವು ನಡೆಯಿತು. ಬೆಳಿಗ್ಗೆ ಲಂಬಾವಿಲಾಸ ತೊಟ್ಟಿಯಲ್ಲಿ ಆರತಕ್ಷತೆ ಶಾಸ್ತ್ರಾದಿಗಳೂ ಮಧ್ಯಾಹ್ನ ರಾಜಸಂತೆಯವರಿಗೆ ಭೋಜನವೂ, ರಾತ್ರಿ ಆರತಕ್ಷತೆಯೂ ಜರಿಗಿದವು

⁂

ಬೆಂಗಳೂರಿನಿಂದ ಚಿಕ್ಕಬಳ್ಳಾಪುರದ ವರೆಗೆ ೩೮ ಮೈಲಿ ದೂರ ನ್ಯಾರೋ ಲೈನನ್ನು ಹಾಕಬಹುದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿರುತ್ತಾರೆ. ಇದಕ್ಕಾಗಿ ವಿಶೇಷ ಕಂಪೆನಿಯು ಹಣಗಳನ್ನು ಒದಗಿಸಿಕೊಂಡು ಈ ಸ್ವದೇಶೀ ಕಾರ್ಯವು ಸಾರ್ಥಕವಾಗುವಂತೆ ಮಾಡಬೇಕೆಂದು ನಿರೀಕ್ಷಿಸಲ್ಪಟ್ಟಿದೆ

⁂

ಮೈಸೂರು ಮಹಾರಾಜಾ ಕಾಲೇಜಿನ ಮ|| ರಾ|| [illegible] ಕಳೆದ [illegible] ಮ|| ರಾ|| [illegible] ಮುಖ್ಯೋಪಾಧ್ಯಾಯರಾಗಿ [illegible]

⁂

ಸದ್ಯ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ [illegible] ಸಿವಿಲ್ ಸರ್ಜನ್‌ರಾದ ಮ|| ರಾ|| [illegible] ಡಿ ರಾಘವೇಂದ್ರರಾಯರು ಪ್ಲೇಗ್ ಮೊದಲಾದ ಅಂಟು ರೋಗಗಳ ನಿವಾರಣೆಯನ್ನು ಕುರಿತು ಉಪನ್ಯಾಸ ಮಾಡಿದರು. ಸಿವಿಲ್ ಸರ್ಜನ್ ಮ|| ಟಿ ಎಸ್ ನಂಜಪ್ಪನವರು ಸಭೆಯ ಅಗ್ರಾಸನವನ್ನು ವಹಿಸಿದ್ದರು

⁂

ರಾಜಧಾನಿಯ ಪೋಲೀಸ್ [illegible] ಶಿಬ್ಬಂದಿಯವರಿಗೆ ಈಗ ೮ ೧೦ ರೂಪಾಯಿಗಳಾಗುವ ತನಕ ಸಂಬಳ ಬಟವಾಡೆ ಆಗುತ್ತಾ ಇಲ್ಲವೆಂದೂ, ಇದರಿಂದ ಬಡಬಗ್ಗರಾದ ಪೋಲೀಸಿನವರಿಗೆ ಜೀವನಕ್ಕೆ ಕಷ್ಟವಾಗಿದೆ ಎಂದೂ ಕೇಳುತ್ತೇವೆ. ಪೋಲೀಸ್ ಸೂಪರಿಂಟೆಂಡೆಂಟರವರು ಇದರ ನಿಜಸ್ಥಿತಿಯನ್ನು ವಿಚಾರಿಸಿ ಕ್ರಮಪಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ

⁂

ಹರಿಹರ ಮಾರ್ಗದಲ್ಲಿ ಸುಮಾರು ೧೦೦ ಮೈಲಿ ದೂರ ರೈಲ್ ರಸ್ತೆಗೆ ಹಾಕಿರುವ ೪೧ ಪೌಂಡಿನ ಕಂಬಿಗಳನ್ನು ತೆಗೆದು ೬೦ ಪೌಂಡಿನ ರೈಲ್ ಕಂಬಿಗಳನ್ನು ಹಾಕಿ ಸಮಮಾಡಬೇಕೆಂತಲೂ, ಹುಬ್ಬಳ್ಳಿಯಿಂದ ಗದಗಿನ ವರೆಗೆ ರೈಲ್ ರಸ್ತೆಯ ಕೊಂಚ ಭಾಗವನ್ನು ಹೊಸದು ತಯಾರುಮಾಡಿಸಬೇಕೆಂತಲೂ ಇಂಡಿಯಾ ರೈಲ್ವೆ ಬೋರ್ಡಿನವರು ಸ್ಯಾಂಕ್ಷನ್ ಮಾಡಿರುತ್ತಾರೆ

⁂

ಕಳೆದ ವಾರ ರಾಜಧಾನಿಯಲ್ಲಿ ಶ್ರೀಮನ್ ಯುವರಾಜರವರಿಗೆ ಸ್ವಲ್ಪ ದೇಹಾಲಸ್ಯವಾಗಿದ್ದಿತು. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಡಾ|| ಟಿ [illegible]ರವರು ಒಂದು ದಿವಸದ ಮಟ್ಟಿಗೆ ಬಂದು ಅವರ ದೇಹಸ್ಥಿತಿಯನ್ನು ನೋಡಿಕೊಂಡು ಹೋದರು. ಈಗ ಯುವರಾಜರವರು ಸೌಖ್ಯವಾಗಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ

⁂

ಕೋಲಾರ್ ಜಿಲ್ಲಾ [illegible] ಪೈಕಿ ಮೈಸೂರ್ ಮೈನ್ [illegible] ಗಣಿಯಲ್ಲಿ [illegible] ಗಣಿಯಲ್ಲಿ ಕಳೆದ ತಾ ೨೭ನೇ ಸೋಮವಾರ [illegible] ಕುಳಿತು [illegible] ಮೃತಪಟ್ಟನು. [illegible] ಸಿಕ್ಕಿ [illegible] ತನಿಖೆ ಮಾಡಿದರು

⁂

ಬೆಂಗಳೂರು [illegible] ನೌಕರರಾಗಿದ್ದ ಮ|| [illegible] ಗವರ್ನ್ಮೆಂಟಿನವರು [illegible] ಕಳುಹಿಸಿದ್ದಾರೆ. [illegible] ಪ್ರಜೆಗಳು, ಕ್ಷತ್ರಿಯ ಬ್ರಾಹ್ಮಣ [illegible] ಸಮುದ್ರಯಾನ ಮಾಡಿ [illegible]

⁂

ಅರಮನೆಯ [illegible] ಪಕ್ಷಿಯವರಾದ ಮ|| [illegible] ರಂಗಮ್ಮಣ್ಣಿಯವರು ಕಳೆದ ಸೋಮವಾರ [illegible] ಸ್ವರ್ಗಸ್ಥರಾದರೆಂದು ತಿಳಿದು ವಿಷಾದಿಸುತ್ತೇವೆ. ಅವರಿಗೆ [illegible] ಕಡೆಯ ತನಕ ಇಂದ್ರಿಯಸಾಧನಗಳು ಚೆನ್ನಾಗಿದ್ದವು. ಅವರು ಅನೇಕ ಬಡಬಗ್ಗರಿಗೆ ಅವರ ಜೀವನಕ್ಕೆ ಸಹಾಯಮಾಡುತ್ತಾ ಪರೋಪಕಾರಿಗಳಾಗಿದ್ದರು. [illegible] ಅರಮನೆಯಿಂದ [illegible] ಮುಂತಾದ ಮಹಾದಾನಗಳು ನಡೆದವು. ಅವರ ಮೊಮ್ಮಕ್ಕಳು ಮೈಸೂರು [illegible] ಉದ್ಯೋಗಸ್ಥರಾಗಿರುತ್ತಾರೆ

⁂

ಪದ್ಧತಿಯ ಪ್ರಕಾರ ಈ [illegible] ಉತ್ಸವಗಳು ಜಗನ್ಮೋಹನ ಬಂಗಲೆಯಲ್ಲಿ [illegible] ಇದಕ್ಕಾಗಿ [illegible] ಟೌನ್ ಹಾಲ್ ಬಂಗಲೆಯಲ್ಲಿ [illegible] ಪ್ರದರ್ಶನವು [illegible] ಕ್ರಿಕೆಟ್, [illegible] ನಡೆಯುವ [illegible] ಶ್ರೀಮನ್ ಯುವರಾಜರವರು [illegible]

⁂

ಈ ತಿಂಗಳು [illegible] ಸಾಯಂಕಾಲ [illegible] ಮ|| ಟಿ [illegible]ರಾಯರವರು ಬೆಂಗಳೂರು ಸಿಟಿ ಮೈಸೂರು ರಸ್ತೆಯಲ್ಲಿರುವ ಗವರ್ನ್ಮೆಂಟ್ [illegible] ಕಾರ್ಖಾನೆಯ (ಡಿಸ್ಟ್ರಿ

[illegible] "ಮೈಸೂರು ಚಕ್ಕಳದ ಕಾರ್ಖಾನೆ" ಎಂಬ ಕೈಗಾರಿಕಾ ಕಟ್ಟಡವನ್ನು ಪ್ರತಿಷ್ಠೆ ಮಾಡಿ, ಕಾರ್ಖಾನೆಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿದರು. ಈ ಹೊಸ ಚಕ್ಕಳದ ಕಾರ್ಖಾನೆಯು [illegible] ಕೂಡಿಸಿ ನಡಿಸಲ್ಪಡುವುದು. ಈ ಕಂಪನಿಗೆ ಪ್ರತಿಷ್ಠಿತರಾದ ಮೆ॥ [illegible] ಮೈಗಂಡ ಗೀರ್ವಾಣರವರು [illegible] ರಾಗಿಯೂ, ಮ॥ [illegible] ಗೋರಸಾಫ಼ು ಐಯುರವರು [illegible] ಟರಿಯಾಗಿಯೂ ಇರುತ್ತಾರೆ. ನಮ್ಮ ಸಂಸ್ಥಾನದಲ್ಲಿ ಹೀಗೆ ದಿನಕ್ರಮೇಣ ಹೊಸ ಹೊಸ ಕೈಗಾರಿಕೆ ಕೆಲಸಗಳೂ [illegible] ರ್ಖಾನೆಗಳೂ ಹುಟ್ಟಿ ಅಭಿವೃದ್ಧಿಗೆ ಬರಲೆಂದು ಪ್ರಾರ್ಥಿಸುತ್ತೇವೆ.

* * *

ಹಿಂದಿನ ವಾರ ರಾಜಧಾನಿಯಲ್ಲಿ ಪ್ಲೇಗಿನ ಸ್ಥಿತಿಯು ಪ್ರಾಯಶಃ ಈ ವಾರ ಅದಕ್ಕಿಂತ ಹೆಚ್ಚಾಗಿದೆ. ಹಿಂದಿನ ವಾರ ೧೮೯ ಸರಿಗ ಪ್ಲೇಗು ತಗಲಿ ೧೦೦ ಜನರು ಕಾಲವಾದರೆಂದೂ, ಒಟ್ಟು ಮರಣ ೧೭೦ ಎಂದೂ ತಿಳಿಸಿರುತ್ತೇವಷ್ಟೆ. ಈ ವಾರ ಅಂದರೆ ಕಳೆದ ಸೆಪ್ಟಂಬರ್ ತಾ ೨೯ ನೇ ಬುಧವಾರದಿಂದ ಅಕ್ಟೋಬರ್ ತಾ ೫ ನೇ ಮಂಗಳವಾರದ ವರೆಗೆ ೧೮೩ ಜನಗೆ ಪ್ಲೇಗ್ ತಗಲಿ ೬೨ ಪ್ಲೇಗ್ ಮರಣಗಳೂ, ಒಟ್ಟು ೧೮೯ ಮರಣಗಳೂ ಆಗಿರುತ್ತವೆ. ಕಳೆದ ವಾರ ಜಾಡ್ಯವು ಅತಿ ತೀಕ್ಷ್ಣವಾಗಿಯೂ, ಬಹಳ ಮಳೆಗಳಾಗಿಯೂ ಇರುತ್ತ[illegible]. ಪ್ರತಿ ದಿವಸದ ಪ್ಲೇಗಿನ ಸ್ಥಿತಿ ಹೀಗಿರುತ್ತದೆ,—

ತಾರೀಖು	ಪ್ಲೇಗ್ ಕಾಯಿಲೆ	ಪ್ಲೇಗ್ ಮರಣ	ಒಟ್ಟು ಮರಣ
29	25	23	28
30	23	16	25
1	–	20	33
2	28	21	43
	31	21	27
4	15	1	13
5	21	17	21

* * *

ನವರಾತ್ರಿ ಉತ್ಸವ ಮತ್ತು ದಸರಾ ದರ್ಬಾರುಗಳನ್ನು ನೋಡಿಕೊಂಡು ಹೋಗುವುದಕ್ಕೆ ರಾಜಧಾನಿಗೆ ಬೆಂಗಳೂರು [illegible] ರಿಂದ [illegible] ರೈಲ್ವೆ ಪ್ರಯಾಣಿಕರಿಗೆ ೧ ಮತ್ತು ೨ ನೇ ತರಗತಿಗಳ ರೈಲ್ವೆ [illegible] ಕಡಿಮೆ ಮಾಡಿರುತ್ತಾರೆ. ಈ ಟಿಕೇಟುಗಳು ಅಕ್ಟೋಬರ್ ತಾ ೧೪ ರಿಂದ ನವಂಬರ್ ತಾ [illegible] ರ ವರೆಗೆ ಚಾಲ್ತಿಯಲ್ಲಿರುವವು. ೧ ನೇ ಕ್ಲಾಸ್ ಟಿಕೇಟಿಗೆ ರೂ ೯–೩–೦, ೨ ನೇ ಕ್ಲಾಸಿನದಕ್ಕೆ ರೂ. ೪–೧೦–೦. ಇವರಲ್ಲಿ ಒಂದು ಹೋಗುವ ಪ್ರಯಾಣಕ್ಕೂ, ಪ್ರದರ್ಶನಶಾಲೆಯೊಳಗೆ [illegible] ಹೋಗುವ [illegible] ಪ್ರಯಾಣಕ್ಕೂ [illegible] ಇರುತ್ತವೆ. [illegible] ಈ ಟಿಕೇಟುಗಳನ್ನು [illegible] ಪ್ರದರ್ಶನಶಾಲೆಯನ್ನು [illegible] ಆಗಿಲ್ಲ. [illegible] ಬೆಂಗಳೂರಿಗೆ ಹೋಗಿ [illegible] ಬೆಂಗಳೂರಿನಲ್ಲಿ ಅಕ್ಟೋಬರ್ ತಾ [illegible] ಈ ಟಿಕೇಟುಗಳನ್ನು [illegible] ಪ್ರದರ್ಶನಶಾಲೆಯ ಟಿಕೇಟುಗಳು [illegible] ಮೈಸೂರಿಗೆ ಒಂದು ವಸ್ತು ಪ್ರದರ್ಶನವನ್ನು ನವರಾತ್ರಿ ಉತ್ಸವಗಳನ್ನೂ ನೋಡಿಕೊಂಡು ಹೋಗಲು [illegible] ಅನುಕೂಲವಾಯಿತು.

ರೋಗಿಗಳ ನಿಮಿತ್ತ ಪ್ರಾಣತ್ಯಾಗಮಾಡಿದ ವೈದ್ಯನು

ಬ್ರಿಟಾನಿಂಗ್ ಎಂಬ ಹಡಗು ಇಂಡಿಯಾ ದೇಶದಿಂದ ಇಂಗ್ಲೆಂಡ್ ದೇಶವನ್ನು ಸೇರಬೇಕೆಂದು ಸಮುದ್ರದ ಮೇಲೆ ಪ್ರಯಾಣಮಾಡುತ್ತಿತ್ತು. ಅದು ಕೆಲವು ದಿನಗಳು ಮಹಾ ಸಾಗರದಲ್ಲಿ ಸಂಚರಿಸಿದನಂತರ ಒಂದಾನೊಂದು ದಿನ ಹಡಗದಲ್ಲಿದ್ದವರು ತಮಗೆ ಸ್ವಲ್ಪ ದೂರವಾಗಿ ಇನ್ನೊಂದು ಹಡಗು ಹೋಗುತ್ತಿರುವುದನ್ನು ನೋಡಿದರು. ಅದನ್ನು ಸಮೀಪಿಸುತ್ತ ಸಮೀಪಿಸುತ್ತ ಅದರ ಧ್ವಜಸ್ತಂಭದ ಮೇಲೆ ದುಃಖಸೂಚಕವಾದ ಸಂಜ್ಞೆಯನ್ನು ತೋರಿಸುವ ಬಾವುಟವನ್ನು ನೋಡಿ [illegible] ವೆಂದು ಯೋಚಿಸುತ್ತಿರುವಲ್ಲಿ ಆ ದುಃಖಸೂಚಕವಾದ ಹಡಗಿನ [illegible] ಒಂದು ದೋಣಿಯು ಬ್ರಿಟಾನಿಂಗ್ ಹಡಗಿನವರ ಬಳಿಗೆ ಬಂದಿತು. ಆ ದೋಣಿಯಲ್ಲಿದ್ದವರು ದೂರದಲ್ಲೇ ತಮ್ಮ ದೋಣಿಯನ್ನು ನಿಲ್ಲಿಸಿ ಬ್ರಿಟಾನಿಂಗ್ ಹಡಗದ ಯಜಮಾನನನ್ನು ಕುರಿತು—ಯಜಮಾನರೇ! ನಾವೂ ನಮ್ಮ ಹಡಗದಲ್ಲಿರುವವರೂ [illegible] ರೋಗದಿಂದ ನರಳುತ್ತಲಿದ್ದೇವೆ. ದಿನಾಲೂ ಈ ರೋಗಕ್ಕೆ [illegible] ಕೆಲವರು ಸಾಯುತ್ತಿದ್ದಾರೆ. ಈ ವಿಷಜಾಡ್ಯವು [illegible] ನಿಮಗೂ ವ್ಯಾಪಿಸದೆ [illegible] ಈ ವಾರ್ತೆಯನ್ನು ನಮ್ಮ ಹಡಗಿನ ಯಜಮಾನನು [illegible] ಅರಿಕೆಮಾಡಿ ಬರಬೇಕೆಂದು ನಮ್ಮನ್ನು ಕಳುಹಿಸಿರುವನು ಎಂದು ಹೇಳಿದನು.

ಬ್ರಿಟಾನಿಂಗ್ ಹಡಗಿನಲ್ಲಿ ಒಬ್ಬನೆ ಒಬ್ಬ ಪ್ರವೀಣನಾದ ವೈದ್ಯನು ಇಂಗ್ಲೆಂಡಿಗೆ ಹೋಗಬೇಕೆಂದು ಪ್ರಯಾಣಮಾಡುತ್ತಿದ್ದನು. ಆತನು ಇಂಗ್ಲೆಂಡಿನಿಂದ ಕೆಲವು ವರುಷಗಳಿಗೆ [illegible] ಹಿಂದೂದೇಶಕ್ಕೆ ಬಂದಿದ್ದು ತನ್ನ [illegible] ಈಗ ಇಂಗ್ಲೆಂಡ್ ದೇಶಕ್ಕೆ ಹೋಗಿ ಅಲ್ಲಿ ತನಗೆ ಪ್ರೀತಿಪಾತ್ರಳಾದ [illegible] ವರಿಸಿ ವಿವಾಹವಾಗಬೇಕೆಂದು ನಿಶ್ಚಯಿಸಿಕೊಂಡಿದ್ದನು. ಇಂಗ್ಲೆಂಡಿನಲ್ಲಿ ಈತನ ವಧುವೂ ಪ್ರಿಯರಾದ ಮಾತಾಪಿತೃಗಳೂ ಅಣ್ಣತಮ್ಮಂದಿರೂ [illegible] ಈತನ ಬರೋಣವನ್ನು [illegible] ಲಿದ್ದರು. ಆದರೆ ಆ ತರುಣವೈದ್ಯನು ಇಂಥಾ ಸಂಭ್ರಮವಾದ ಸ್ಥಿತಿಯುಳ್ಳವನಾಗಿದ್ದರೂ ಆ ರೋಗಪೀಡಿತರ ಮೇಲೆ ಕನಿಕರಪಟ್ಟು ತಾನು ಆ ದುಃಖಭರಿತವಾದ ಹಡಗಿಗೆ ಹೋಗಿ ಅವರಿಗೆ ಸಹಾಯಮಾಡುತ್ತೇನೆಂದು ಒಪ್ಪಿಕೊಂಡನು. ಬ್ರಿಟಾನಿಂಗ್ ಹಡಗದ ಯಜಮಾನನೂ ಆತನ ಸ್ನೇಹಿತರೂ ಆ ರೋಗಪೀಡಿತವಾದ ಹಡಗಿಗೆ ಹೋಗುವುದು ಅಪಾಯಕರವಾಗಿದೆ, ನೀವು ಅಲ್ಲಿಗೆ ಹೋಗಕೂಡದೆಂದು ಎಷ್ಟಾಗಿ ವೈದ್ಯನನ್ನು ಒಡಂಬಡಿಸಿದರೂ ಆತನು ಒಪ್ಪದೆ—ಯೇಸು ಕ್ರಿಸ್ತಸ್ವಾಮಿಯು ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನೇ ತ್ಯಾಗಮಾಡಿದನು. ನಾನು ಆತನ ಪ್ರೀತಿಯನ್ನು ಅನುಭವಿಸಿ ತಿಳಿದಿದ್ದೇನೆ. ಹೀಗಿರುವಲ್ಲಿ ನಾನು ಆತನ ಪ್ರೀತಿಯಿಂದ ಪ್ರೇರಿತನಾಗಿ ಈ ಜನಗಳಿಗೋಸ್ಕರ ನನ್ನ ಪ್ರಾಣವನ್ನು ತ್ಯಾಗಮಾಡಬೇಕಾದರೂ ಸಿದ್ಧನಾಗಿದ್ದೇನೆ ಎಂದು ಹೇಳಿ ರೋಗಪೀಡಿತವಾದ ಹಡಗನ್ನು ಹೊಕ್ಕನು. ಆತನು ವೈದ್ಯದಲ್ಲಿ ಬಹಳ ನಿಪುಣನಾಗಿದ್ದದ್ದರಿಂದ ರೋಗದ ಸ್ವಭಾವವನ್ನು ಭೇದಿಸಿ ಅದರ ಹುಟ್ಟನ್ನಡಗಿಸುವ ಪ್ರಯತ್ನವನ್ನು ಮಾಡಲು ಅದು ಕ್ರಮೇಣ ಶಾಂತವಾಯಿತು. ರೋಗಿಗಳಲ್ಲಿ ಅನೇಕರು ಬದುಕಿದರು. ಆದರೆ ಕಾಲಕ್ರಮದಲ್ಲಿ ಆ ರೋಗವು ಈ ವೈದ್ಯನ ದೇಹವನ್ನು ವ್ಯಾಪಿಸಿ ಆತನು ಅದರಲ್ಲಿ ಮೃತನಾಗಬೇಕಾಯಿತು. ಆತನ ಕಳೇಬರವು ಮಾತ್ರ ಇಂಗ್ಲೆಂಡ್ ದೇಶವನ್ನು ಮುಟ್ಟಿತು. ಅಂಥಾ ಸುಕುಮಾರನು ಸತ್ತದ್ದರಿಂದ ಸಹಿಸಲಾರದ ದುಃಖವೂ ಇಂಥಾ ಶುಭಕಾರ್ಯಕ್ಕಾಗಿ ಆತನು ಪ್ರಾಣತ್ಯಾಗಮಾಡಿದ್ದರಿಂದ ದುಃಖಕ್ಕೆ ದ್ವಿಗುಣವಾದ ಸಂತೋಷವೂ ಉಂಟುಮಾಡಿತು.

ಸಕಲ ನರಮನುಷ್ಯರೂ ಪಾಪವೆಂಬ ಭಯಂಕರವಾದ ರೋಗದಿಂದ ನರಳುತ್ತಿದ್ದಾರೆ. ಈ ರೋಗವು ಎರಡು ವಿಧಗಳಾಗಿ ನರಜಾತಿಯನ್ನು ಬಾಧಿಸುತ್ತಲಿರುವದು. ಮೊದಲನೇದು—ಅದು ಅಪನಂಬಿಕೆ, ಅಜ್ಞಾನ, ಅನಭಕ್ತಿಗಳೆಂಬ ರೂಪವನ್ನು ಹೊಂದಿ ಸಾಕ್ಷಾತ್ ನಮ್ಮ ತಂದೆಯಾದ ದೇವರಿಗೂ ನಮಗೂ ಇರುವ ವಾತ್ಸಲ್ಯ, ಪ್ರೀತಿ, ಅನ್ಯೋನ್ಯಗಳನ್ನು ಕೆಡಿಸಿ ದೇವರು ಯಾರೋ ನಾವು ಯಾರೋ ಆತನಿಗೆ ನಾವು ಮಾಡಬೇಕಾದ ಶಿಶ್ಯಭಕ್ತಿಯಂಥಾದ್ದು ಎಂಬ ವಿಷಯದಲ್ಲಿ ಜತ್ತಿರಿ ಕವಿದು ಅಜ್ಞಾನವುತ್ತಿಕೊಳ್ಳುವ ಹಾಗೆ ಮಾಡಿದೆ. "ಇದರಂಥಾ ದೊಡ್ಡ ನಷ್ಟವು ಇನ್ನಾವುದಿದೆ? ತಂದೆಗೂ ಮಕ್ಕಳಿಗೂ ಆಗದಂತೆ ಮಾಡುವ [illegible] ಗಿಂತ ಭಯಂಕರವಾದ ದುಷ್ಟಜೀವಿ ಇನ್ನಾರು?" ಇದನ್ನು ಕುರಿತು ವಾಚಕರು ದೀರ್ಘವಾಗಿ ಯೋಚಿಸಬೇಕೆಂದು ಆಲೋಚಿಸುತ್ತೇವೆ. ಎರಡನೇದು—ಪಾಪವೆಂಬ ಈ ರೋಗವು ಕಳ್ಳತನ, ಸುಳ್ಳು, ಮೋಸ, ಹಾದರ, ವಂಚನೆ, ಪಿಶ್ನಾಚಾಟಿಗಳ ರೂಪವನ್ನು ಧರಿಸಿ ಒಬ್ಬನೇ ತಂದೆಯ ಮಕ್ಕಳಾದ ನಮ್ಮಲ್ಲಿ ಸಹೋದರಪ್ರೀತಿ, ಅನ್ಯೋನ್ಯಬಂಧಗಳನ್ನು ಕೆಡಿಸಿ, ಹಗೆ, ಹೊಟ್ಟೆಕಿಚ್ಚು, ಕೋಪ, ಕ್ರೋಧಗಳ ಬೀಜವನ್ನು ಬಿತ್ತಿ, ನರಹತ್ಯ, ಜಗಳ, ದರೋಡೆ ಮುಂತಾದ ವಿಷಫಲಗಳನ್ನು ಬೆಳಸಿದೆ. ಇಂತಹ ಭಯಂಕರವಾದ ರೋಗದಿಂದ ಬಿಡಿಸಿ ನಮ್ಮನ್ನು ಪಾವನಮಾಡ[illegible] ದೇವರು ಯೇಸುಸ್ವಾಮಿಯ ರೂಪವನ್ನು ಧರಿಸಿ ಈ ಲೋಕಕ್ಕೆ ಬಂದನು. ಈಗ ಜನರು ಆತನನ್ನು ಆಶ್ರಯಿಸಿ ಪಾಪಪರಿಹಾರವನ್ನು ಆತನಿಂದ ಬೇಡುತ್ತಾರೋ ಅವರೆಲ್ಲರಿಗೆ ಉಚಿತವಾಗಿ ಪಾಪಪರಿಹಾರವೂ ರಕ್ಷಣೆಯೂ ದೊರಕುವವು.

ಆದರೆ ದೇವರು ಈ ಲೋಕದಲ್ಲಿ ಏಕೆ ಅವತಾರವನ್ನು ಧರಿಸಿ ಬರಬೇಕು? ಆತನಿಗೆ ಅಸಾಧ್ಯವಾದದ್ದೇನಿದೆ? ಇದೂ ಅಲ್ಲದೆ ಆತನು ಈ ಲೋಕದಲ್ಲಿ ಏಕೆ ಸಾಯಬೇಕಾಗಿತ್ತು? ಎಂದು ಕೆಲವರು ಪ್ರಶ್ನೆಮಾಡುವರು. ಬ್ರಿಟಾನಿಂಗ್ ಹಡಗಿನಲ್ಲಿದ್ದ ವೈದ್ಯನು ಆರೋಗ್ಯವಾಗಿದ್ದ ಹಡಗನ್ನು ಬಿಟ್ಟು ರೋಗಪೀಡಿತವಾದ ಜನಗಳ ಬಳಿಗೆ ಏಕೆ ಹೋದನು? ತಾನಿದ್ದಲ್ಲಿಯೇ ನಿಂತು ಕೆಲವು ಔಷಧಿಗಳನ್ನು ಬಂದಿದ್ದವರ ಮುಖಾಂತ್ರ ರೋಗಿಗಳಿಗೆ ಕಳುಹಿಸಬಾರದಾಗಿತ್ತೆ? ಆದರೆ ಹಾಗೆ ಕಳುಹಿಸಿದ್ದರೆ ಆ ವೈದ್ಯನ ಪ್ರೀತಿಯು ರೋಗಿಗಳಿಗೆ ಗೊತ್ತಾಗುತ್ತಿದ್ದಿತೇ? ಆತನು ಅವರ ಬಳಿಗೆ ಹೋದದ್ದರಿಂದ ಅವರು ಆತನಲ್ಲಿ ಭರವಸವಿಟ್ಟು ಆತನ ಅಪ್ಪಣೆಯನ್ನು ಕೈಕೊಂಡು ಔಷಧಿಯನ್ನು ಸೇವಿಸಿದರು. ನಾವು ಕೆಟ್ಟುಹೋಗಿದ್ದರೂ ದೇವರು ನಮ್ಮನ್ನು ತಿರಸ್ಕರಿಸದೆ ನಮ್ಮನ್ನು ಈಗಲೂ ಮಕ್ಕಳಂತೆ ಭಾವಿಸಿ ಪ್ರೀತಿಮಾಡುತ್ತೇನೆಂದು ತನ್ನ ಪ್ರೀತಿಯನ್ನು ಪ್ರಕಟಿಸಲಿಕ್ಕೆ ಈ ಲೋಕಕ್ಕೆ ಬಂದನು. ಇದಲ್ಲದೆ ಆತನು ಈ ಲೋಕಕ್ಕೆ ಬಂದು ಕ್ರೂರವಾದ ಮರಣವನ್ನು ಸಹಿಸಬೇಕಾದ್ದರಿಂದ ಪಾಪವು ಎಷ್ಟು ಭಯಂಕರವಾದದ್ದೆಂದು ನಮಗೆ ಗೊತ್ತಾಗಿ ನಾವು ಅದನ್ನು ಬಿಡಲಿಕ್ಕೆ ಹೇತುವಾಯಿತಲ್ಲವೆ.

ಮೈಸೂರು ಗೆಜೆಟ್ ಸಂಗ್ರಹ

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯುತ್ತದೆ.—[illegible] ನರಸೀಪುರ ತಾಲೂಕು ಕುಕ್ಕೂರು, ನಂಜನಗೂಡು ತಾಲೂಕು [illegible] ತಾಲೂಕು [illegible] ಮಂಡ್ಯಪುರ [illegible] ಬೇಗೂರು ನಾಗಮಂಗಲ.

ಕೊಳ್ಳೇಗಾಲ ತಾಲೂಕು ಸತ್ತೇಗಾಲದ ಶಿವಸಮುದ್ರದಲ್ಲಿ ಮಾದೇಶ್ವರ ಬೆಟ್ಟದಲ್ಲೂ ನಡೆಯುವ ದುಗಾ೯ ಮತ್ತು ದೀಪಾವಳಿ ಜಾತ್ರೆಗಳಿಗೆ ಈ ತಿಂಗಳ ೧೩ನೇ ತಾ ವರೆಗೆ ಹೋಗತಕ್ಕ ಭಕ್ತಾದಿಗಳನ್ನು ಸರ್ಕಾರದವರು ಬಿಡದೆ ವಾಪಸು ಕಳುಹಿಸುತ್ತಾರೆಂದು ತಿಳಿಯತಕ್ಕದ್ದು.

ಮದ್ದೂರು ಟೌನಿಗೆ ಶಿವಪುರ ಗ್ರಾಮವನ್ನು ಸೇರಿಸಿ ಇದೇ ಅಕ್ಟೋಬರ್ ಒಂದನೇ ತಾರೀಖಿನಿಂದ ಮುನಿಸಿಪಾಲಿಟಿ ಮಾಡಲಾಗಿದೆ.

ಮೆ [illegible] ರಾಯರನ್ನು ಗುಬ್ಬಿಯ ತಾಲ್ಲೂಕ್ ಬೋರ್ಡಿನ ಕೆಂಟ್ರಾಕ್ಟರ್ ಮೆ ಎ ನೇಹದೀನ್ [illegible] ಬರನ್ನು [illegible] ಮುನಿಸಿ ಪಲ್ ಬೋರ್ಡಿನ [illegible] ಬರಾಗಿ [illegible].

[illegible] ತಾಲ್ಲೂಕಿಗೆ ಸೇರಿದ [illegible] ಗ್ರಾಮಗಳಲ್ಲೂ ಗುಬ್ಬಿ ತಾಲ್ಲೂಕಿಗೆ ಸೇರಿದ ೧೫ ಗ್ರಾಮಗಳಲ್ಲೂ ರೀಸರ್ವೆ ಸೆಟಲ್‌ಮೆಂಟು ಪೂರೈಸಿ ಹೊಸ ಕಂದಾಯದ ದರಗಳು ಗೊತ್ತು ಮಾಡಲ್ಪಟ್ಟವೆ. ೧೯೧೦-೧೧ನೇ ಸಾಲ್ ಆರಂಭಿಸಿ ಮೂವತ್ತು ವರುಷಗಳ ವರೆಗೆ ಈ ಕಂದಾಯದ ದರಗಳು [illegible] ಆಗಿರುವವು.

[illegible] ಕೆಲಸ ವನ್ನು [illegible] ಅಫ್ [illegible] ಕ್ಲಾಸ್ [illegible] ಕೆಲಸದಲ್ಲಿರುವ [illegible] ಮೆ [illegible] ಸಬ್ ಮೆ ಎಸ್ [illegible] ಸೆಕ್ರೆಟರಿ [illegible] ರಾವ್ [illegible] ಅಸಿಸ್ಟೆಂಟ್ [illegible] ಮೆ [illegible] ಜನರಲ್ [illegible] ಮೆ [illegible] ಅಫ಼ೀಸರ್ [illegible] ಮೆ॥

ಸಾರ್ ಮಹಮದ್ ಗೌಸ್ ಸಾಹೇಬ್ ಯವರು, ವರ್ತಕ ಮೆ॥ ಬ [illegible] ಕೆ [illegible] ಬಹದ್ದೂರ್, ಇವರಿಗೆ ಸಮ್ಮರಿ ವಿಚಾರಣೆಯ ಅಧಿಕಾರವನ್ನು ವಹಿಸಿದೆ.

ಮಧುಗಿರಿಯ ಮುನ್ಸಿಫ್ ಮೆ॥ ಎ ಕೆ ಶ್ರೀನಿವಾಸರಾಘವಾಚಾರ್ಯರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೆರಡು ದಿನಗಳಿಗೆ ಜಾಸ್ತಿ ಮಾಡಿದೆ.

ಶಿವಮೊಗ್ಗಾ ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮೆ॥ ಆರ್ ಬಿ ಪ್ರಭುಸ್ ಯವರಿಗೆ ಅಕ್ಟೋಬರ್ ತಾ [illegible] ರಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಅದರ ಕೂಡ ಹನ್ನೆರಡು ತಿಂಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

ಅವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೋಲಾರ್ ಡಿಸ್ಟ್ರಿಕ್ಟ್ ಸೀನಿಯರ್ ಅ॥ ಕಮಿಷನರ್ ಮೆ॥ ವಿಠಲ್ ಪಂಡಿತ ಹುಸೇನ್ ಯವರು ಶಿವಮೊಗ್ಗಾ ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಬದಲಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ.

ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮೆ॥ ಜಿ ಅರವಾಮುದು ಐಯಂಗಾರ್ಯರಿಗೆ ಅಕ್ಟೋಬರ್ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಬಳಿಗಾಗಿ ಕೊಟ್ಟಿರುವ ಅ॥ ಕಮಿಷನರ್ ಮೆ ಆನಂದರಾವ್ [illegible] ಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಛಾರ್ಜಿನಲ್ಲಿರತಕ್ಕದ್ದು.

ತುಮಕೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ॥ ಅ॥ ಕಮಿಷನರ್ ಮೆ॥ ಎನ್ ಮಾಧವರಾಯರಿಗೆ ಸೆಪ್ಟಂಬರ್ ತಾ ೧೭ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಒಂದು ದಿನದ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಕಮಿಷನರ್ ಮೆ ಸಿ ವೆಂಕಟರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಮ್ಮ ಕೆಲಸಗಳೊಂದಿಗೆ ಖಜಾನೆಯ ಛಾರ್ಜನ್ನು ವಹಿಸಿರತಕ್ಕದ್ದು.

ಚಿತ್ರದುರ್ಗ ತಾಲ್ಲೂಕಿಗೆ ವರ್ಗ ಮಾಡಿರುವ ಅಮಲ್ದಾರ್ ಮೆ॥ ಅಬ್ದುಲ್ ಕರೀಂ ಯವರನ್ನು ಹೊಳಲ್ಕೆರೆ ತಾಲ್ಲೂಕಿಗೂ, ಹೊಳಲ್ಕೆರೆ ತಾಲ್ಲೂಕಿನ ಅಮಲ್ದಾರ್ ಮೆ [illegible] ಸಿ ಕೃಷ್ಣಸ್ವಾಮಿರಾಯರನ್ನು ಚಿತ್ರದುರ್ಗ ತಾಲ್ಲೂಕಿಗೂ ವರ್ಗ ಮಾಡಿದೆ.

ಮೆ ವೈ ಶ್ರೀನಿವಾಸರಾಯರನ್ನು ೧೯೦೭ ನೇ ಇಸವಿ ಡಿಸೆಂಬರ್ ತಾ. ೧ ರ [illegible] ಸೂಪರಿಂಟೆಂಡಿಂಗ್ ಇಂಜಿನಿಯರಾಗಿ ಖಾಯಂ ಮಾಡಿದೆ.

ಸೂಪರಿಂಟೆಂಡಿಂಗ್ ಇಂಜನಿಯರ್ ಮೆ ವೈ ಶ್ರೀನಿವಾಸರಾಯರನ್ನು ೧೯೦೯ ನೇ ಆಗಸ್ಟ್ ತಾ ೨೦ ರ ಸಂಸ್ಥಾನದ ಚೀಫ್ ಇಂಜನಿಯರ್ ಮತ್ತು ಪಬ್ಲಿಕ್ ವರ್ಕ್ಸ್ ರೈಲ್ವೆ ಇಲಾಖೆಗಳಲ್ಲಿ ಗವರ್ನಮೆಂಟ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದಾರೆ.

ವಿವಿಧ ವರ್ತಮಾನಗಳು

ಈ ತಿಂಗಳ ೧೬ ನೇ ತಾರೀಖಿನ ದಿನ ಬಂಗಾಳಾ ವಿಭಜನೆಯ ವಾರ್ಷಿಕ ದಿನವನ್ನು ಆಚರಣೆಮಾಡಬೇಕೆಂದು ಕಲ್ಕತ್ತೆಯಲ್ಲಿ ಒಂದು ನೋಟೀಸನ್ನು ಹಂಚಿರುತ್ತಾರೆ. ಈ ನೋಟೀಸಿಗೆ ಮೆ॥ ಗಳಾದ ಆನಂದಚಂದ್ರರಾಯ, ಅನಾಥಬಂಧುಗುಹಾ, ಬ್ಯಾರಿಸ್ಟರ್ ಎ ರಸೂಲ್, ಜಮೀನ್‌ದಾರ್ ಎ ಜೋತೀಂದ್ರ ಚೌಧ್ರಿ, ಬ್ಯಾರಿಸ್ಟರ್ ಜೆ ಚೌಧ್ರಿ, ವೈಕುಂಠನಾಥಸೇನ್, ಫರೀದ್‌ಪುರದ ಅಂಬಿಕಾಚರಣಮಜುಂದಾರ್, "ಅಮೃತಬಜಾರ್ ಪತ್ರಿಕೆ"ಯ ಎಡಿಟರ್ ಮೋತಿಲಾಲ್‌ಘೋಷ್, ಬಾರಿಸಾಲಿನ ಅಶ್ವಿನೀಕುಮಾರ್‌ಸೇನ್, ಕಲ್ಕತ್ತೆಯ ಭೂಪೇಂದ್ರನಾಥಬೋಸ್, "ಬೆಂಗಾಲಿ" ಪತ್ರಿಕೆಯ ಎಡಿಟರ್ ಸುರೇಂದ್ರನಾಥ ಬ್ಯಾನರ್ಜಿ, ಇವರು ರುಜುಮಾಡಿರುತ್ತಾರೆ. ಆ ದಿನ ನಡೆಯುವ ಸಭೆಗೆ ಫರೀದ್‌ಪುರದ ಮೆ॥ ಅಂಬಿಕಾಚರಣ ಮಜುಂದಾರ್‌ಯವರು ಪ್ರೆಸಿಡೆಂಟರಾಗಿ ನಿಲ್ಲಬಹುದು. ನಾರಾಯಣಗಂಜ್ ಮೊದಲಾದ ಕಡೆಗಳಲ್ಲಿ ಈಗ ವಿದೇಶೀ ಬಹಿಷ್ಕಾರ ಕಾರ್ಯವಾದ ಮಿಟಿಂಗುಗಳು ನಡೆಯಲಾರಂಭವಾಗಿವೆ.

ಕಾನ್‌ಪುರದ ಮುನಿಸಿಪಲ್ ಸ್ಯಾನಿಟರಿ ಇನ್ಸ್‌ಪೆಕ್ಟರ್ ಮೆ॥ ಎಸ್ ಪಬ್ಲಿಯು [illegible] ತನ್ನ ಆಫೀಸಿನಲ್ಲಿದ್ದಾಗ ಸ್ಯಾನಿಟರಿ ವರ್ಗದವನಾದ [illegible] ಎಂಬುವನು ಹೋಗಿ ಆತನ ಕೂಡ ಜಗಳವಾಡಿ ಒಂದು ಕಬ್ಬಿಣದ ಸುತ್ತಿಗೆಯಿಂದ ಇನ್ಸ್‌ಪೆಕ್ಟರ ತಲೆಗೆ ಹೊಡೆದನು. ತಲೆ ಬುರುಡೆ ಒಡೆದು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾನೆ. ಪಾಪಿಯಾಗ ಬಹುದು. ಇವರಿಬ್ಬರಿಗೂ ಕೆಲವು ಕಾಲದಿಂದ ದ್ವೇಷವಿದ್ದಂತೆ ಕಾಣುತ್ತದೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಉಲುಬೇರಿಯಾ ಎಂಬ ಸ್ಥಳದಲ್ಲಿ ಕಳೆದ ಶುಕ್ರವಾರದ ದಿನ ಒಂದು ಭಾರೀ ಸ್ವದೇಶೀ ಮೀಟಿಂಗು ನಡೆಯಿತು. ರಾಮಜೀವನ ಛತ್ರಜಿ ಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸುಮಾರು ೫,೦೦೦ ಜನರು ಸೇರಿದ್ದರು. ಸ್ತ್ರೀಪುರುಷರೂ, ಜಮೀನ್‌ದಾರರೂ, ವರ್ತಕರೂ, ವ್ಯವಸಾಯಗಾರರೂ ಸಭೆಯಲ್ಲಿ ಹಾಜರಾಗಿದ್ದರು. ಮೆ ಸುರೇಂದ್ರನಾಥ ಬ್ಯಾನರ್ಜಿ ಯವರು ಉಪನ್ಯಾಸ ಮಾಡಿ, ಸ್ವದೇಶೀ ಪ್ರೋತ್ಸಾಹವನ್ನು ಎಲ್ಲರೂ ಆಚರಿಸತಕ್ಕದ್ದೆಂದು ಹೇಳಿದಾಗ ಸಭೆಯವರೆಲ್ಲಾ ಎದ್ದು ನಿಂತು ಒಪ್ಪಿಕೊಂಡರು.

ಕಾನ್‌ಪುರದ ಮಾರ್ವಾಡಿ ವರ್ತಕರು ಸೇರಿ ಒಂದು ವರ್ತಕರ ಸಂಘವನ್ನು ಏರ್ಪಡಿಸಿಕೊಂಡಿದಾರೆ. ಈ ಮಂಡಲಿಯಲ್ಲಿ ೩೦೦ ಮಂದಿ ಮೆಂಬರಾಗಿ ಸೇರಿರುತ್ತಾರೆ. ಲಾಲಾ ಗುಲಾಬ್‌ರಾವ್ ಯವರು ಸಂಘದ ಪ್ರೆಸಿಡೆಂಟರಾಗಿಯೂ, ಲಾಲಾ ವಿ [illegible] ರವರು ಸೆಕ್ರೆಟರಿಯಾಗಿಯೂ ಚುನಾಯಿಸಲ್ಪಟ್ಟಿರುವರು.

ಕಾಶೀ ಪಟ್ಟಣದ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಮಿಸಸ್ ಬೆಸೆಂಟರವರ ಅರವತ್ತನೆಯ ಜನ್ಮೋತ್ಸವವನ್ನು ಆಚರಿಸಿದರು. [illegible] ಮೆ॥ [illegible] ಯವರು ಸಭಾಧ್ಯಕ್ಷಸ್ಥಾನವನ್ನು ವಹಿಸಿ ಆಕೆಯ ಗುಣಕಥನವನ್ನು ಮಾಡಿ, ಆಕೆಯ ಒಂದು [illegible] ವನ್ನು ಆ ವಿದ್ಯಾಶಾಲೆಯಲ್ಲಿ ಕಟ್ಟಿಸಿ ಪ್ರತಿಷ್ಠೆ ಮಾಡಿದರು.

ಕಲ್ಕತ್ತಾ ಪಟ್ಟಣದ ಮೆಟ್ರೊಪಾಲಿಟನ್ ಮಿಷನ್ ಎಂಬ ಗುರುಗಳು ನವೆಂಬರ್ ತಿಂಗಳ [illegible] ದೊಡ್ಡ ಸಭೆಯನ್ನು [illegible] ಲಾಹೋರ್, ನಾಗಪುರ [illegible] ಗಳ ಬಿಷಪ್ ಎಂಬ [illegible] ಈ ಸಭೆಯಲ್ಲಿ [illegible] ಕೊಡುವರು.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಮಾಜ

ಈ ತಿಂಗಳು ೨ ನೇ ತಾ ಶನಿವಾರದ ದಿನ ಬಹುಮಂದಿ ಮಂದಿರದ ಸೌಧದಲ್ಲಿ ಸೇರಿ ಇದ್ದರು ಸುಮಾರು ೩೦ ಮಂದಿ ಇರಬಹುದು ಶುಭಕರವಾದ ಕೆಲ ಹಾಡುಗಳನ್ನು ಶ್ರೀಮತಿ ಶಾರದಾಬಾಯಿಯವರು ಹಾರ್ಮೋನಿಯಂ ವಾದ್ಯದಲ್ಲಿ ನುಡಿಸಿದನಂತರ, ಶ್ರೀಮತಿ ಮಹಾಲಕ್ಷ್ಮಮ್ಮನವರು ಕೆಲ ಪ್ರಶ್ನೋತ್ತರಗಳನ್ನು ಓದಿದರು ಅನಂತರದಲ್ಲಿ ಶ್ರೀಮತಿ ಲಕ್ಷ್ಮಮ್ಮನವರು ಭಗವದ್ಗೀತಾ ವಿಚಾರವಾಗಿ ಅತಿ ಸುಂದರವಾದ ಒಂದು ಸಣ್ಣ ಉಪನ್ಯಾಸವನ್ನು ಓದಿದರು ಅನಂತರ ಪುನಃ ಕೆಲ ಹಾಡುಗಳು ಹಾರ್ಮೋನಿಯಂನಲ್ಲಿ ನುಡಿಸಲ್ಪಟ್ಟು, ಸಭೆಯು ತೀರ್ಮಾನ ಮಾಡಲ್ಪಟ್ಟಿತು ಕೆಲ ನಾರೀಮಣಿಗಳು ಕೇವಲ ಶ್ರಾವ್ಯವಾಗಿ ಸುಕಂಠದಿಂದ ಕೆಲ ರಮಣೀಯವಾದ ಕೀರ್ತನೆಗಳನ್ನು ಹಾಡಿದರು ದೇವರಿಗೆ ಆರತಿ ಸಮರ್ಪಿಸಲ್ಪಟ್ಟಿತು

ಬರುವ ಮೀಟಿಂಗು ೯ ನೇ ತಾ ಶನಿವಾರ ಕ್ರಮಪ್ರಕಾರ ಜರಗುವದಾದ್ದರಿಂದ ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ಬರಬೇಕಾಗಿ ಕಾರ್ಯದರ್ಶಿಯವರು ಸೂಚಿಸಿದರು

ಮೈಸೂರು ಸಿಟಿ ಟ್ರಸ್ಟ್ ಬೋರ್ಡಿನ ಮೀಟಿಂಗು

ಹಿಂದಿನ ಬುಧವಾರ ಬೆಳಗ್ಗೆ ರಾಜಧಾನಿಯ ಪುರಾಭಿವೃದ್ಧಿಕ ಬೋರ್ಡಿನ ಮೆಂಬರುಗಳು ಇಲ್ಲಿನ ಟೌನ್‌ಹಾಲಿನಲ್ಲಿ ಸಭೆ ಸೇರಿ ತಿಂಗಳ ಕಟ್ಲೆಯ ಮೀಟಿಂಗನ್ನು ನಡಿಸಿದರು ಆಗ್ಗೆ ಅವರು ಚರ್ಚೆಯಿಂದ ತೀರ್ಮಾನಮಾಡಿದ ಮುಖ್ಯ ವಿಷಯಗಳೇನೆಂದರೆ —

ದೊಡ್ಡಕೆರೆಯಲ್ಲಿ ವಾಯುವ್ಯ ಭಾಗವನ್ನು ಮುಚ್ಚುವದಕ್ಕೆ ೧೫,೪೦೦ ರೂಪಾಯಿ ಬೇಕಾಗುವದೆಂದು ಇಂಜನಿಯರವರು ಅಂದಾಜು ಪಟ್ಟಿಯನ್ನು ತಯಾರ್ಮಾಡಿ ಕಳುಹಿಸಿದರು ಮೆಂಬರುಗಳು ಇದು ಅವಶ್ಯವೆಂದು ತೀರ್ಮಾನಿಸಿ, ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್‌ಮಾಡಿ, ಆ ಖರ್ಚನ್ನು ಮುಂದಿನ ಸಾಲಿನ ಬಡ್ಜೆಟ್ಟಿಗೆ ಸೇರಿ ಕಾಮಗಾರಿ ಮಾಡಿಸಬೇಕೆಂದು ಗೊತ್ತುಮಾಡಿದರು

ಜಲಪುರಿ ಮತ್ತು ಕರುಣಾಪುರವೆಂಬ ಬಡಾವಣೆಗಳಲ್ಲಿ ಬಚ್ಚಲು ಚರಂಡಿಗಳನ್ನು ಕಟ್ಟುವದಕ್ಕೆ ಇಂಜನಿಯರಿಂದ ತಯಾರಾಗಿ ಬಂದಿದ್ದ ೨,೯೩೫ ರೂಪಾಯಿನ ಎಸ್ಟಿಮೇಟನ್ನು ಮೆಂಬರುಗಳು ಸ್ಯಾಂಕ್ಷನ್‌ಮಾಡಿ, ಈ ಸಾಲಿನಲ್ಲೇ ಈ ಕಾಮಗಾರಿಯನ್ನು ಮಾಡಿಸುವಂತೆ ತೀರ್ಮಾನಿಸಿರುತ್ತಾರೆ

ರೋಮನ್ ಕ್ಯಾಥಲಿಕ್ ಕಾನ್ವೆಂಟಿನ ಬಳಿ ಅದಕ್ಕೆ ಸೇರಿ ಇರುವ ಜಮೀನನ್ನೂ ಪಕ್ಕದ ರಸ್ತೆಯನ್ನೂ ಆ ಕಾನ್ವೆಂಟಿಗೇ ಸೇರಿಸಿಕೊಡತಕ್ಕದ್ದೆಂದು ತೀರ್ಮಾನವಾಯಿತು

ಪಟ್ಟಣದಲ್ಲಿ ಬಚ್ಚಲು ಮತ್ತು ಚರಂಡಿಗಳನ್ನು ಸಿಮೆಂಟ್ ಗಾರೆಯಿಂದ ಕಟ್ಟುವದಕ್ಕೆ ಕಂಟ್ರಾಕ್ಟರಿಗೆ ಗೊತ್ತಾಗಿರುವ ದರವನ್ನು ೧೧ ಆಣೆಯಿಂದ ೧೧½ ಆಣೆಗೆ ಜಾಸ್ತಿಮಾಡಿಕೊಡಬೇಕೆಂದು ಇಂಜನಿಯರವರು ಶಿಫಾರಸು ಮಾಡಿದ್ದರ ಮೇರೆ ಮೆಂಬರುಗಳು ಅದರಂತೆ ಕೊಡಬಹುದೆಂದು ಗೊತ್ತುಮಾಡಿದರು

ಟ್ರಸ್ಟ್ ಬೋರ್ಡಿನವರು ತರಿಸಿಟ್ಟುಕೊಂಡಿರುವ ಆಯಿಲ್ ಇಂಜನ್ನನ್ನು ಬೆಂಗಳೂರು ಕೈಗಾರಿಕೆಯ ಸರ್ಕಾರಿ ಪರೀಕ್ಷಾರ್ಥವಾದ ಫಾರಂಗೆ ಕೆಲವು ಕಾಲದ ಮಟ್ಟಿಗೆ ಮುಫತ್ತಾಗಿ ಕೊಡಬಹುದೇ ಎಂದು ಗವರ್ನಮೆಂಟ್ ಸೆಕ್ರೆಟರಿಯವರು ಬರೆದು ಕೇಳಿದ್ದರು ಮೆಂಬರುಗಳು ಒಪ್ಪಿಕೊಡಬಹುದೆಂದು ತೀರ್ಮಾನ ಮಾಡಿರುತ್ತಾರೆ

ಟ್ರಸ್ಟ್ ಬೋರ್ಡಿನ ಜಮಾಖರ್ಚು ಲೆಕ್ಕಗಳನ್ನು ಗವರ್ನಮೆಂಟ್ ಆಡಿಟರವರು ಬಂದು ತನಿಖೆಮಾಡುತ್ತಿದ್ದರೆ ಇದು ಇನ್ನೂ ಪೂರೈಸಲಿಲ್ಲವಾದದ್ದರಿಂದ ಅವರನ್ನು ಈ ಮಾಸದ ಆಖ್ಖರುವರೆಗೆ ಇಟ್ಟುಕೊಳ್ಳುವುದಕ್ಕೆ ಅವಕಾಶಕೊಡಬೇಕೆಂದು ಮೆಂಬರುಗಳು ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ಗೊತ್ತುಮಾಡಿದರು

ಡೆಪ್ಯುಟಿ ಸ್ಯಾನಿಟರಿ ಕಮೀಷನರಾದ ಮಿ ಪಲ್ಪುಯವರು ರಾಜಧಾನಿಯಲ್ಲಿರುವ ಕೊಳಕಾದ ಮತ್ತು ಅನಾರೋಗ್ಯಕರವಾದ ಮನೆಗಳನ್ನು ಕೆಡವಿಬಿಟ್ಟು ಆರೋಗ್ಯಕರವಾದ ಏರ್ಪಾಡುಗಳನ್ನು ಕಲ್ಪಿಸಬೇಕೆಂತಲೂ, ಪ್ರಜೆಗಳ ವಾಸಕ್ಕೆ ಯೋಗ್ಯವಾದ ಮನೆಗಳ ಲಕ್ಷಣವನ್ನು ವಿವರಿಸಿ ಅಂಥಾ ಒಳ್ಳೇ ಮನೆಗಳನ್ನು ಕಟ್ಟಿಸಿಕೊಡಬೇಕೆಂತಲೂ ಟ್ರಸ್ಟ್ ಬೋರ್ಡಿಗೆ ಬರೆದಿದ್ದರು ಈ ವಿಚಾರಗಳನ್ನೆಲ್ಲಾ ಪರ್ಯಾಲೋಚಿಸಿ ರಿಪೋರ್ಟು ಕಳುಹಿಸುವಂತೆ ಮೆಂಬರುಗಳು ಒಂದು ಸಬ್ ಕಮಿಟಿಯನ್ನು ನೇಮಕ ಮಾಡಿರುತ್ತಾರೆ ಈ ಕಮಿಟಿಯ ಮೆಂಬರುಗಳ್ಯಾರೆಂದರೆ,—ಡೆಪ್ಯುಟಿ ಸ್ಯಾನಿಟರಿ ಕಮೀಷನರ್ ಮಿ|| ಪಲ್ಪುಯವರು, ಟ್ರಸ್ಟ್ ಬೋರ್ಡ್ ಇಂಜಿನಿಯರ್ ಮಿ| ಡಿಕ್ರೂಸ್ ರವರು, ವೈಸ್ ಪ್ರೆಸಿಡೆಂಟ್ ಮಿ|| ಕೃಷ್ಣಸ್ವಾಮಿರಾಯರು, ಮಿ|| ಎಂ ಸಿ ರಂಗೈಯಂಗಾರ್ರ್ಯ, ಮಿ|| ಮಹಮದ್ ಜಾಫರ್‌ಯವರು

ಲಕ್ಷ್ಮೀಪುರದ ಬಡಾವಣೆಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಆಗಬೇಕಾದ ಕಾಮಗಾರಿಗಳಿಗೆಲ್ಲಾ ೮,೪೦೦ ರೂಪಾಯಿ ಖರ್ಚಾಗುವುದೆಂದು ಚೀಫ್ ಇಂಜನಿಯರವರು ಬರೆದಿದ್ದರು ಮೆಂಬರುಗಳು ಈ ಹಣವನ್ನು ಸ್ಯಾಂಕ್ಷನ್‌ಮಾಡಿ, ಈ ನಲ್ಲಿಗಳನ್ನು ಹಾಕುವಾಗ್ಗೆ ಡೆಪ್ಯುಟಿ ಸ್ಯಾನಿಟರಿ ಕಮೀಷನರವರು ಸೂಚಿಸಿರುವ ಪ್ರಕಾರ ನಲ್ಲಿಗಳನ್ನು ಫ್ಲಷ್ ಕೊಳಾಯಿಗಳಿಗೆ ಜಂಟಿಸಿ ಮಾಡಿಸಬೇಕೆಂದು ಚೀಫ್ ಇಂಜನಿಯರವರಿಗೆ ತಿಳಿಸಬೇಕೆಂದು ಗೊತ್ತುಮಾಡಿದರು

ದೊಡ್ಡ ಕೆರೆಯಲ್ಲಿ ಮಟ್ಟಿಕಾಮಗಾರಿ ಮಾಡಿಸಿದ ಕಂಟ್ರಾಕ್ಟರ್ ಪುಟ್ಟೇಗೌಡರಿಗೆ ಸ್ಯಾಂಕ್ಷನ್ ಆದ ದರಕ್ಕಿಂತಲೂ ಸ್ವಲ್ಪ ಜಾಸ್ತಿ ಕೊಡಬೇಕೆಂದು ಇಂಜನಿಯರವರು ಶಿಫಾರಸು ಮಾಡಿದ ಪ್ರಕಾರ ಮೆಂಬರುಗಳು ಜಾಸ್ತಿದರವನ್ನು ಸ್ಯಾಂಕ್ಷನ್‌ಮಾಡಿರುತ್ತಾರೆ

ಪಟ್ಟಣದಲ್ಲಿ ಬಡಬಗ್ಗರಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಸುಲಭ ಕ್ರಯದಲ್ಲಿ ಕಟ್ಟಿಸಿಕೊಡುವುದು ಉತ್ತಮವೆಂದು ಅದಕ್ಕಾಗಿ ಏರ್ಪಾಟಾಗಿದ್ದ ಕಮಿಟಿಯವರು ಸೂಚಿಸಿದ್ದರು ಮೆಂಬರುಗಳು ಅವರ ಸಲಹೆಗಳನ್ನು ಒಪ್ಪಿಕೊಂಡು, ಆ ಕಮಿಟಿಗೆ ಮಿ| ಎಂ ಸಿ ರಂಗೈಯಂಗಾರ್ರನ್ನೂ ಮೆಂಬರಾಗಿ ಸೇರಿಸಬೇಕೆಂತಲೂ, ಗವರ್ನಮೆಂಟಿನವರು ಮನೆಗಳನ್ನು ಕೊಂಡು ಒತ್ತೆಯಿಡುವುದಕ್ಕೆ ಸ್ಯಾಂಕ್ಷನ್ ಮಾಡಿರುವ ಮೊಬಲಗಿನಲ್ಲಿ ಬಡಬಗ್ಗರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿ ೨೦,೦೦೦ ರೂಪಾಯಿಗಳನ್ನು ವಿನಿಯೋಗಿಸುವುದಕ್ಕೆ ಟ್ರಸ್ಟ್ ಬೋರ್ಡಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಳ್ಳತಕ್ಕದ್ದೆಂದು ತೀರ್ಮಾನವಾಗಿರುತ್ತದೆ

ಕೀಳುಜಾತಿಯವರ ಅಭಿವೃದ್ಧಿಯು

ಪೂನೆಯಲ್ಲಿ ನಡೆದ ಅಪೂರ್ವವಾದ ಸಭೆಯು

ಪೂನಾ ಪಟ್ಟಣದಲ್ಲಿ ಪರೋಪಕಾರಿಗಳೂ ಮಹನೀಯರೂ ಆದ ಕೆಲವು ದೊಡ್ಡ ಮನುಷ್ಯರು ಕೀಳುಜಾತಿಯವರೆಂದು ನಿಕೃಷ್ಟ ಮಾಡಲ್ಪಟ್ಟಿರುವ ಪ್ರಜೆಗಳನ್ನು ವಿದ್ಯೆ ಬುದ್ಧಿ ವಿನೀತಾದಿಗಳನ್ನು ಕಲಿಸಿ ಅಭಿವೃದ್ಧಿಗೆ ತರಬೇಕೆಂಬ ಘನತರವಾದ ಉದ್ದೇಶದಿಂದ ಕಳೆದ ೧೯೦೬ ನೇ ಇಸವಿ ಅಕ್ಟೋಬರ್ ತಾ ೨೨ ರಲ್ಲಿ ಒಂದು ಸಭೆಯನ್ನು ಪ್ರಾರಂಭಿಸಿರುತ್ತಾರೆ ಈ ಸಭೆಯ ಮೆಂಬರುಗಳು ಆ ಪಟ್ಟಣದ ಒಳಗೂ ಹೊರಗೂ ಕೀಳು ಜಾತಿಯವರಿಗಾಗಿ ನಾಲ್ಕು ಪಾಠಶಾಲೆಗಳನ್ನು ಸ್ಥಾಪನೆ ಮಾಡಿ, ಅವರ ಮಕ್ಕಳಿಗೆ ವಿದ್ಯೆ ಕಲಿಸುತ್ತಾ ಬಂದಿರುವರು ಈ ಪಾಠಶಾಲೆಗಳಲ್ಲಿ ಓದುವ ಹುಡುಗರಿಗೆ ಬಹುಮಾನಗಳನ್ನು ಕೊಡುವುದಕ್ಕೆ ಕಳೆದ ತಾ ೧೭ ನೇ ಭಾನುವಾರ ಒಂದು ಸಭೆಯನ್ನು ನಡಿಸಲಾಯಿತು ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಬಹು ಸಂತೋಷದಿಂದ ಆ ಸಭೆಗೆ ದಯಮಾಡಿ, ಅಗ್ರಸ್ಥಾನವನ್ನು ಅಲಂಕರಿಸಿದರು ಮೇಲ್ಕಂಡ ಸಂಘದ ಪ್ರೆಸಿಡೆಂಟರಾದ ಡಾ|| ಹಾರಲ್ಡ್ ಮ್ಯಾನ್ನರವರು ಸಭೆಯ ಕಾರ್ಯವನ್ನು ಆರಂಭಿಸಿ, ಆ ಸಂಘದವರು ನಡಿಸುತ್ತಾ ಬಂದಿರುವ ಪರಹಿತ ಕಾರ್ಯವನ್ನು ಸಂಕ್ಷೇಪವಾಗಿ ವಿವರಿಸಿದ್ದಲ್ಲದೆ, ಆ ದಿನ ಸಭೆಯ ಅಗ್ರಾಸನವನ್ನು ಅಲಂಕರಿಸಿದ್ದ ಮಹಾರಾಜರವರನ್ನು ಸಭೆಯ ಪರವಾಗಿ ವಂದಿಸಿದರು ಅವರು ಮಾಡಿದ ಭಾಷಣದ ಮುಖ್ಯಾಭಿಪ್ರಾಯಗಳೇನೆಂದರೆ,—

ಸಂಘದ ಕಾರ್ಯಗಳೂ ಉದ್ದೇಶವೂ

ಈ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಬಾಲಕರು ಹಿಂದೂಗಳ ಜಾತಿ ಪಂಗಡದಲ್ಲಿ ನಿಕೃಷ್ಟರಾದವರು, ಇವರನ್ನು ಇತರ ಪಂಗಡದವರು ತಮ್ಮ ಸಮೀಪಕ್ಕೂ ಸೇರಿಸುವುದಿಲ್ಲ ಆದಕಾರಣ ಸಕಲ ಪ್ರಜೆಗಳೂ ಭಿನ್ನಭೇದವಿಲ್ಲದೆ ಒಂದೇ ತರಗತಿಯವರಾಗಿ ಎಣಿಸಲ್ಪಡಬೇಕೆಂಬುವುದು ನಮ್ಮ ಸಂಘದ ಉದ್ದೇಶವಾಗಿರುತ್ತದೆ ಈ ಉದ್ದೇಶದಿಂದ ಕೀಳು ಜಾತಿಯವರಾಗಿ ಎಲ್ಲಾ ವಿಷಯಗಳಲ್ಲೂ ಹಿಂದೆ ಬಿದ್ದಿರುವ ಈ ಜನವನ್ನು ವಿದ್ಯಾವಿನಯ ಸಂಪನ್ನರನ್ನಾಗಿ ಮಾಡಿ ಅಭಿವೃದ್ಧಿಗೆ ತರಲು ಪ್ರಯತ್ನ ಪಡುತ್ತೇವೆ ಈ ನಮ್ಮ ಕಾರ್ಯವನ್ನು ಎಲ್ಲಾ ಪಂಗಡದ ನವನಾಗರಿಕರೂ ಮೆಚ್ಚಿಕೊಂಡು ಪ್ರೋತ್ಸಾಹ ಕೊಡುತ್ತಿರುವರು ಗವರ್ನರವರು ಕೆಲವು ದೇಶೀಯ ರಾಜರುಗಳು, ಎಲ್ಲಾ ತರಗತಿಗಳಲ್ಲಿರುವ ಮಹನೀಯರು, ಇವರೆಲ್ಲಾ ಈ ನಮ್ಮ ಕಾರ್ಯಕ್ಕೆ ತಮ್ಮ ಕೈಲಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಿದ್ದಾರೆ ಆದರೂ ಈ ಕೀಳು ಜಾತಿಯವರು ನಮ್ಮಿಂದ ಬಹಳ ಜಾಗ್ರತೆಯಾಗಿ ಈ ಸಹಾಯವನ್ನು ಪಡೆದುಕೊಂಡು ಅಭಿವೃದ್ಧಿಗೆ ಬರಬೇಕೆಂಬ ಕುತೂಹಲವನ್ನು ತೋರಿಸದಿದ್ದರೆ ನಾವು ಅವರಿಗಾಗಿ ಮಾಡುತ್ತಿರುವ ಸಹಸವು ಫಲಕಾರಿಯಾಗಲಾರದು ಈ ಸಂದರ್ಭದಲ್ಲಿ ಈ ಜನರು ಹಿಂದಾಳುಗಳಾಗಿರದೆ ನಮ್ಮ ಸಹಾಯವನ್ನು ಸರಿಯಾಗಿ ಅನುಭವಿಸಿ ಪ್ರಯೋಜನ ಹೊಂದುತ್ತಿದ್ದಾರೆಂದು ತಿಳಿಸಲು ಸಂತೋಷವಾಗುವುದು ಈ ದಿನ ಆ ಜನರ ಮುಖಂಡರು ಈ ಸಭೆಯಲ್ಲಿ ಹಾಜರಾಗಿದ್ದು ನಮ್ಮ ಸಹಾಯವನ್ನು ಕೋರಿದ್ದಾರೆ ಅವರೆಲ್ಲಾ ನನಗೆ ಪರಮಮಿತ್ರರಾಗಿರುತ್ತಾರೆಂದೂ, ಪೂನಾ ಪಟ್ಟಣದಲ್ಲಿ ಮೊದಲಿನಿಂದ ಅವರು ನೆರವೇರಿಸುವ ಈ ಸಭೆಯ ಕಾರ್ಯಗಳಲ್ಲಿ ಭಾಗಿಯಾಗಲು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ ಎಂದೂ ಹೇಳುವೆನು ಪೂನಾ ಪಟ್ಟಣದಲ್ಲಿ ನಡೆದಿರುವ ಈ ಪರಹಿತ ಕಾರ್ಯವು ಇತರ ಕಡೆಗಳಿಗೂ ಹರಡಿಕೊಂಡು ಕೀಳು ಜಾತಿಯ ಜನರು ಅಭಿವೃದ್ಧಿಗೆ ಬರಲು ಅವಕಾಶವೂ ಪ್ರೋತ್ಸಾಹವೂ ಆಗುತ್ತದೆಂದು ನಿರೀಕ್ಷಿಸುತ್ತೇನೆ ಇತರ ಜಾತಿಯವರ ತನ್ನನ್ನು ಮುಟ್ಟಕೂಡದೆಂದೂ ತಮ್ಮ ಸಮೀಪಕ್ಕೂ ಬರಕೂಡದೆಂದೂ ಈ ಕೀಳು ಜಾತಿಯವರನ್ನು ದೂರಮಾಡಿರುತ್ತಾರೆ ಇವರು ವಿದ್ಯಾವಿನಯ ಸಂಪನ್ನರಾದ ಪಕ್ಷದಲ್ಲಿ ಈಗ ಅವರಿಗಿರುವ ಕಳಂಕವು ನಿವಾರಣೆಯಾಗಿ ಇವರೂ ಇತರ ಜಾತಿಯವರ ಸಂಗಡ ಸರಿಸಮಾನರಾಗಿ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಾ ಅಭಿವೃದ್ಧಿ ಹೊಂದುವರೆಂದು ಧಾರಾಳವಾಗಿ ನಿರೀಕ್ಷಿಸಬಹುದಾಗಿದೆ ಹಿಂದೂಸ್ಥಾನದ ದೇಶೀಯ ಪ್ರಭುಪಾಲಕರ ಪೈಕಿ ತಾರತಮ್ಯವಿಡದೆ ಸಕಲ ಪ್ರಜೆಗಳನ್ನೂ ಏಕರೀತಿಯಾಗಿ ಕಾಣುತ್ತಾ ಸಂರಕ್ಷಣೆ ಮಾಡುತ್ತಾ ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಟ್ಟು ಸಾಹಸ ಕಾರ್ಯಗಳನ್ನು ನಡಿಸುತ್ತಿರುವ ಗಾಯಕವಾಡ ಮಹಾರಾಜರವರು ಈ ದಿನ ಈ ಸಭೆಯ ಅಗ್ರಸ್ಥಾನವನ್ನು ಅಲಂಕರಿಸಿರುವುದು ನಮ್ಮ ಈ ಕಾರ್ಯಕ್ಕೆ ಅಪಾರವಾದ ಪ್ರೋತ್ಸಾಹವಾಗಿರುತ್ತದೆ ಪ್ರಜೆಗಳ ಪೈಕಿ ಯಾವ ಒಂದು ಭಾಗದವರಾಗಲಿ ನಿಕೃಷ್ಟಸ್ಥಿತಿಯಲ್ಲಿರುವುದೂ ಇತರ ಭಾಗಗಳವರು ಅಭಿವೃದ್ಧಿ ಹೊಂದುತ್ತಿರುವುದೂ ದೇಶಾಭ್ಯುದಯಕ್ಕೆ ಹಿತಕರವಾದದ್ದಲ್ಲವೆಂದು ಹೇಳಬಹುದು. ಎಲ್ಲಾ ಪಂಗಡಗಳವರೂ ಒಂದೇ ರೀತಿ ಅಭಿವೃದ್ಧಿ ಹೊಂದುತ್ತಾ ಬಂದಲ್ಲಿ ದೇಶೋನ್ನತಿಗೆ ಅಡ್ಡಿ ಆತಂಕಗಳೇ ಇರುವುದಿಲ್ಲ ಎಂಬೀ ರೀತಿಯಾಗಿ ಡಾ|| ಹಾ ಮ್ಯಾನ್ನರವರು ಹೇಳಿದರು

ತರುವಾಯ ಸಂಘದ ಸೆಕ್ರೆಟರಿಯವರಾದ ಮಿ ಎ ಕೆ ಮೊಹಲಿಯಾರ್ರವರು ಕಳೆದ ವರುಷ ಆ ಸಂಘದವರು ನಡಿಸಿದಂಥಾ ಕಾರ್ಯಗಳ ರಿಪೋರ್ಟನ್ನು ಸಭಿಕರಿಗೆ ಓದಿ ತಿಳಿಸಿದರು

ಸಭಾನಾಯಕರಾಗಿದ್ದ ಗಾಯಕವಾಡ ಮಹಾರಾಜರವರು ತಮ್ಮ ಸ್ಥಾನದಿಂದೆದ್ದು ಸಭಿಕರನ್ನು ಕುರಿತು ಮರಾಟಿ ಭಾಷೆಯಲ್ಲಿ ಅಪ್ಪಣೆಕೊಡಿಸಿದ ಭಾಷಣದ ಮುಖ್ಯಾಂಶಗಳೇನೆಂದರೆ,—

ಮಹಾರಾಜರವರ ಭಾಷಣವು

ಕೀಳು ಜಾತಿಯವರನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಏರ್ಪಟ್ಟ ಈ ಸಂಘದವರು ನನ್ನನ್ನು ಈ ದಿನ ಈ ಸಭೆಯ ಅಗ್ರಾಸನವನ್ನು ವಹಿಸಬೇಕೆಂದು ಕೇಳಿಕೊಂಡದ್ದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ! ಕೀಳು ಜಾತಿಯವರ ವಿಷಯದಲ್ಲಿ ನನಗೆ ವಿಶೇಷವಾದ ಸಹಾನುಭೂತಿಯೂ ಪ್ರೀತಿಯೂ ಉಂಟು ಈ ಸಂಘದವರು ಪ್ರಾರಂಭಿಸಿರುವ ಶ್ರೇಷ್ಠವಾದ ಕಾರ್ಯವು ಫಲಕಾರಿಯಾಗಲೆಂದು ನಾನು ಪುನಃ ಪೂರ್ವಕವಾಗಿ ನಿರೀಕ್ಷಿಸುತ್ತೇನೆ ನಿಕೃಷ್ಟಜಾತಿಯವರೆಂದು ದೂರ ಮಾಡಲ್ಪಟ್ಟಿರುವ ನೀವು ಅಭಿವೃದ್ಧಿಗೆ ಬರುವ ಭಾಗದಲ್ಲಿ ನಿಮಗೆ ನಾನಾ ಅಡಚಣೆಗಳುಂಟು ಆದರೂ ನೀವು ವಿದ್ಯಾವಿನಯ ಸಂಪನ್ನರಾಗಬೇಕೆಂದು ಕುತೂಹಲಪಡುತ್ತಿರುವುದನ್ನೂ, ಅದಕ್ಕಾಗಿ ಮುಂದಾಳುಗಳಾಗಿ ಬರಲು ಸಾಹಸಪಡುತ್ತಿರುವುದನ್ನೂ ನೋಡಿ ನಾನು ಮನಃಪೂರ್ವಕವಾಗಿ ಕೊಂಡಾಡುತ್ತೇನೆ ಅನೇಕ ಪ್ರಜೆಗಳು ನೀವು ವಿದ್ಯಾವಂತರಾದರೆ ನಿಮ್ಮಿಂದ ಅವರಿಗೆ ಈಗ ಆಗುತ್ತಿರುವ ಸಹಾಯ ಸಂಪತ್ತುಗಳು ತಪ್ಪಿಹೋಗುವವೆಂದು ತಪ್ಪಾಗಿ ತಿಳಿದುಕೊಂಡವಾರೆ ಹೀಗೆ ಎಷ್ಟು ಮಾತ್ರಕ್ಕೂ ಆಗಲಾರದೆಂದು ನಾನು ಖಂಡಿತವಾಗಿ ಹೇಳಬಲ್ಲೆನು ನೀವು ಸಾಹಸಪಟ್ಟು ನಿಮ್ಮ ಕೈಲಾಗುವಷ್ಟೂ ವಿದ್ಯೆ ಕಲಿತು ಪ್ರಸಂಚಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಈ ಉದ್ದೇಶದಿಂದಲೇ ನಾನು ನಮ್ಮ ಸಂಸ್ಥಾನದಲ್ಲಿ ನಿಮ್ಮಂಥಾ ಕೀಳು ಜಾತಿಯ ಪ್ರಜೆಗಳಿಗಾಗಿ ೩೩೫ ಪಾಠಶಾಲೆಗಳನ್ನು ಇಡಿಸಿರುತ್ತೇನೆ ಅವುಗಳಲ್ಲಿ ೮೩,೦೦೦ ಹುಡುಗರೂ ಹುಡುಗಿಯರೂ ಓದುಬರಹವನ್ನು ಕಲಿಯುತ್ತಿದ್ದಾರೆ ಮತ್ತು ಅವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲೇ ಇರುವುದು ಇಷ್ಟೇ ಅಲ್ಲ ವಿದ್ಯಾರ್ಥಿಗಳ ವಾಸಕ್ಕೂ ಅವರ ಭೋಜನಾದಿಗಳಿಗೂ ಅನುಕೂಲವಾದಂಥಾ ನಿಲಯಗಳನ್ನೂ ಕಲ್ಪಿಸಿಕೊಟ್ಟಿದೇನೆ ಅನೇಕನೇಕ ಹಿಂದುಗಳು ಈ ಕೀಳು ಜಾತಿಯವರ ಮಧ್ಯೆ ಹೋಗಿ ಅವರ ಸಹವಾಸದಲ್ಲಿದ್ದು ಅವರಿಗೆ ವಿದ್ಯಾದಿಗಳನ್ನು ಕಲಿಸಿ ಅವರನ್ನು ಮುಂದಕ್ಕೆ ತರುವ ಭಾಗದಲ್ಲಿ ಆತ್ಮಾಭಿಮಾನವನ್ನು ಇಟ್ಟುಕೊಂಡು ಇಷ್ಟಪಡದೆ ಇರುತ್ತಾರೆಂದು ತಿಳಿಸಲು ನನಗೆ ತುಂಬಾ ವ್ಯಸನವಾಗಿದೆ ಈ ಕಾರಣದಿಂದ ನಾನು ಮುಸಲ್ಮಾನರನ್ನೂ ಕ್ರೈಸ್ತರನ್ನೂ ಆ ಮಠಗಳಿಗೆ ಉಪಾಧ್ಯಾಯರನ್ನಾಗಿ ಕರೆದು ನೇಮಕಮಾಡಬೇಕಾಯಿತು ನಮಗೆ "ಕೀಳು ಜಾತಿಯವರು" ಎಂಬ ಹೆಸರಿಟ್ಟಿರುವುದು ಸರಿಯಾದದ್ದಲ್ಲವೆಂದು ನಾನು ಹೇಳುತ್ತೇನೆ ಇದರ ಕೀಳು ದರ್ಜೆಯಲ್ಲಿರಬೇಕೇ, ಅಥವಾ ಇತರರಿಗೆ ಸರಿಸಮಾನಸ್ಥರಾಗುವಂತೆ ಅಭಿವೃದ್ಧಿಗೆ ಬರಬೇಕೇ ಎಂಬ ವಿಚಾರವು ನಿಮಗೇ ಸೇರಿದ್ದಾಗಿದೆ ನೀವು ಉತ್ತಮರಾಗಬೇಕೆಂದು ಸಾಹಸಪಟ್ಟು ಕಾರ್ಯನಡಿಸುತ್ತಾ ಬಂದಲ್ಲಿ ಎಷ್ಟುಮಾತ್ರಕ್ಕೂ ನೀವು ಕೀಳು ದರ್ಜೆಯವರೆನ್ನಿಸಿಕೊಳ್ಳಲಾರಿರಿ. ಆಗಿನ ಸ್ಥಿತಿಗತಿಯನ್ನು ನೋಡಲಾಗಿ ವಿದ್ಯೆ ಕಲಿಯತಕ್ಕವರು ತಕ್ಕ ಕೆಲಸವನ್ನು ಸಂಪಾದಿಸಿಕೊಳ್ಳಬೇಕೆಂಬ ಅಭಿಲಾಷೆಯುಳ್ಳವರಾಗಿದ್ದಾರೆ ನೀವುಗಳಾದರೋ ಅಂಥಾ ನೌಕರಿ ಪಡೆಯಬೇಕೆಂಬ ಉದ್ದೇಶವನ್ನು ಬಿಟ್ಟು, ಇತರ ಮಾರ್ಗಗಳಲ್ಲಿ ಪ್ರಮಾಣಿಕ ಕಸಬುಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಈ ಸಂದರ್ಭದಲ್ಲಿ ನಿಮಗೆ ಹೇಳುತ್ತೇನೆ ಪ್ರಜೆಗಳಲ್ಲಿ ತಾರತಮ್ಯವಿಲ್ಲದೆ ಸಮಸ್ತ ಪಂಗಡಗಳಿಗೆ ಸೇರತಕ್ಕವರೂ ವಿದ್ಯೆ ಬುದ್ಧಿ ವಿವೇಕಗಳನ್ನು ಪಡೆಯಬೇಕೆಂಬುವುದೇ ನನ್ನ ಮುಖ್ಯ ಅಭಿಮತವಾಗಿದೆ ಈ ಉದ್ದೇಶದಿಂದಲೇ ನಾನು ಸಕಲ ಪ್ರಜೆಗಳನ್ನೂ ಏಕ ರೀತಿಯಾಗಿ ನೋಡುತ್ತೇನೆ ನೀವು ನಿಮ್ಮ ಸ್ಥಾನವನ್ನೂ ಗೌರವವನ್ನೂ ಕಾಪಾಡಿಕೊಂಡು ಬರಬೇಕೆಂದು ಅಭಿಲಾಷೆ ಪಡುವಿರಾದಪಕ್ಷದಲ್ಲಿ ನಿಮಗೆ ಮೇಲ್ಪಟ್ಟವರು ನಿಮ್ಮನ್ನು ಯಾವ ರೀತಿಯಲ್ಲಿ ನಡಿಸಿ ಸಹಾಯ ಮಾಡಿ ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡುವರೋ ಅದೇ ರೀತಿಯಲ್ಲಿ ನೀವು ಕೂಡ ನಿಮಗಿಂತ ಕೀಳು ದರ್ಜೆಯಲ್ಲಿರುವವರಿಗೆ ಸಹಾಯ ಮಾಡುತ್ತಾ ಅವರನ್ನು ಅಭಿವೃದ್ಧಿಗೆ ತರುತ್ತ ಬರಬೇಕೆಂದು ನಾನು ಹೇಳುತ್ತೇನೆ ಎಂಬೀ ರೀತಿಯಾಗಿ ಭಾಷಣ ಮಾಡಿದರು

ಕಡೆಯಲ್ಲಿ ಮೇಲ್ಕಂಡ ಸಂಘದವರು ಸಭಾನಾಯಕರಿಗೂ ಸಭಿಕರಿಗೂ ಗಂಧಪುಷ್ಪಗಳನ್ನು ಹಂಚಿ, ಆ ದಿನದ ಸಭೆಯನ್ನು ಮುಕ್ತಾಯಮಾಡಿದರು

ತಾಲ್ಲೋಕು ವರ್ತಮಾನಗಳು

ಸಿರಾ —ಇಲ್ಲಿ ೨೬ ನೇ ತಾ ಸೋಮವಾರ ರಾತ್ರಿ ಆದ ಮಳೆಯಿಂದ ಬಾಡುತ್ತಾ ಇದ್ದ ಮುಸುಕಿನ ಪೈರುಗಳಿಗೆ ತುಂಬಾ ಉಪಕಾರವಾಯಿತು ದೊಡ್ಡ ಕೆರೆ ಚಿಕ್ಕ ಕೆರೆಗಳಲ್ಲಿ ಒಂದು ಅಡಿ ನೀರು ಕಡಮೆಯಾಗಿದೆ ಕೆರೆ ಹಿಂದಣ ತೋಟ ಜಮೀನುಗಳು ಸಾಗುವಳಿಯಾದರೆ ಆದೀತು ಅಲ್ಲವೆಂತಲೂ ಕಾರ್ತೀಕ ಮಾಸದಲ್ಲಿ ಬೀಜ ಸೇರುವ ವಾಡಿಕೆ ಇದೆ ಅಷ್ಟರೊಳಗೆ ಪುನಃ ಮಳೆ ಬಂದು ಕೆರೆಗಳು ಪೂರ್ತಿಯಾಗಿ ತುಂಬಿದರೆ ಒಳ್ಳೆ ಫಸಲ್ ಕೈಸೇರುವುದು ಎಂದು ಹೇಳುತ್ತಾರೆ ಮಳೆ ಬರುವ ಚಿಹ್ನೆಗಳು ಕಂಡು ಬಂದಾಗ್ಯೂ ಇನ್ನೂ ಬರಲಿಲ್ಲ —ಈ ತಾಲ್ಲೂಕಿನಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರಾಗಿದ್ದ ವರದಾಚಾರ್ಯ ವರ್ಗವಾಗಿ ತುಮಕೂರಿಗೆ ತೆರಳಿದರು ಇವರು ಇಲ್ಲಿ ಇರುವಾಗ್ಗೆ ತಮ್ಮ ಕೆಲಸದೊಂದಿಗೆ ಇಲ್ಲಿನ ಸೊಸೈಟಿಗೆ ಅನರರಿ ಸೆಕ್ರೆಟರಿಗಳಾಗಿದ್ದು ಪರರಾಗಿರುವ ಕನ್ನಡ ಸ್ಕೂಲ್ ಹೆಡ್‌ಮಾಸ್ಟರ್ ದಾಸಪ್ಪನವರೊಂದಿಗೆ ಸೊಸೈಟಿಯನ್ನು ಅಭಿವೃದ್ಧಿಗೆ ತಂದದಲ್ಲದೆ ಸಂಘದ ಎಲ್ಲಾ ಮೆಂಬರುಗಳಲ್ಲಿ ಪರಸ್ಪರ ಯಾದ ವಿಶ್ವಾಸವನ್ನಿಟ್ಟು ಸದ್ಗುಣ ಸದ್ವರ್ತನೆಯುಳ್ಳವರು ಇವರು ವರ್ಗವಾದ ವಿಷಯದಲ್ಲಿ ಮೆಂಬರುಗಳು ಆದಿಯಾಗಿ ತುಂಬಾ ವ್ಯಸನಪಟ್ಟು ಇವರು ಒಳ್ಳೆ ನಡತೆಗಾಗಿ ಮರ್ಯಾದೆಮಾಡಿ ಕಳುಹಿಸಿದರು

ದಾಬಸ್‌ಪೇಟೆ (ನೆಲಮಂಗಲ) —ಈ ವಾರದಲ್ಲಿ ನಮ್ಮ ಅಮಲ್ದಾರರವರು ತಾಲ್ಲೂಕ್ ಜಮಾಬಂದಿಗಾಗಿ ದಯಮಾಡಿಸಿದ್ದರು ಹಾಗೆಯೇ ಮ್ಯುನಿಸಿಪಲ್ ಮೀಟಿಂಗನ್ನೂ ನಡಿಯಿಸಿಕೊಂಡು ನೆಲಮಂಗಲಕ್ಕೆ ತೆರಳಿದರು ಮೈಸೂರಿಗೆ ದಸರಾದಲ್ಲಿ ನಡೆಯುವ ಯಾಗ್ರಿಕಲ್ಚರಲ್ ಎಕ್ಸಿಬಿಷನ್‌ಗೋಸ್ಕರ ಇಲ್ಲಿನ ಆಸ್ಪತ್ರೆಯಿಂದ ಡಾಕ್ಟರವರು ಕಳುಹಿಸುವ ಪದಾರ್ಥಗಳು ಯಾವವೆಂದರೆ —ಹೇಗಾಗಿ ದಂತಚೂರ್ಣ ಚಿಗರೆ ಸೊಪ್ಪಿನ ಪುಡಿ, ನಾಲ್ಕುಕಾಲಿನ ಕೋಳಿಮರಿ, ಮತ್ತು ಇವರ 8 ವಯಸ್ಸಿನ ಮಗನಿಂದ ತಯಾರಾದ ಬೆಂಡಿನಲ್ಲಿ ಮಾಡಿದ ಕೆಲವು ಆಟದ ಸಾಮಾನುಗಳು, ಅಂಗಸಾಧನೆ ವಿಷಯಕವಾದ ಲೆಕ್ಚರ್ ಸಹಾ ಬರೆದು ಕಳುಹಿಸುತ್ತಾರೆ ಈಸಲ ವಿದ್ಯಾಭ್ಯಾಸದ ಎಕ್ಸಿಬಿಷನ್ ಇಲ್ಲದ್ದರಿಂದ ಸ್ಕೂಲಿನಿಂದ ಯಾವ ಸಾಮಾನೂ ಹೋಗಲಿಲ್ಲ —ಇಲ್ಲಿನ ಕೆಲವು ಮಂದಿ ಇಂಜಿನಿಯರ್ ಇಲಾಖಾ ಕಂಟ್ರಾಕ್ಟುದಾರರು ಪೂರ್ವದಂತೆ ತಮಗೆ ದರಗಳು ದೊರೆಯದೆ, ಈಗ ಕಮ್ಮಿ ಮಾಡಿರುವರೆಂತಲೂ ಅದರಿಂದ ಸರಿಯಾಗಿ ಕೆಲಸ ನಡಿಸಲು ಆಗಲಾರದೆಂತಲೂ, ತಮಗೆ ಲುಕ್ಸಾನ್ ಎಂತಲೂ, ಹೇಳಿಕೊಳ್ಳುತ್ತಿದ್ದಾರೆ ಇದನ್ನು ಆ ಇಲಾಖೆಯವರು ವಿಚಾರಿಸಿ ಕಂಟ್ರಾಕ್ಟುದಾರರ ಕಷ್ಟವನ್ನು ಪರಿಹರಿಸಿಕೊಟ್ಟಾರೆಂತ ನಂಬಿಕೆ —ಪೈರುಗಳೆಲ್ಲಾ ಬಾಡಲು ಪ್ರಾರಂಭಿಸಿತ್ತು ಆದರೆ ಕಳೆದ ಶನಿವಾರ ರಾತ್ರಿ ಒಳ್ಳೆ ಮಳೆ ಸುರಿದು ಬಹಳ ಅನುಕೂಲವಾಯಿತು ದಿನಸಿ ಧಾರಣೆಯೇನೋ ಇಳಿಯಲೇ ಇಲ್ಲ ಇದುವರೆಗೆ ನಮ್ಮ ಸರ್ಕಾರದವರು ಎಲ್ಲರಿಗೆ ಧಾನ್ಯದ ಅಡ್ವಾನ್ಸನ್ನು ಕೊಡುತ್ತಿದ್ದರು ಇದನ್ನು ಈಗ ನಿಲ್ಲಿಸಿರುವುದಾಗಿ ತಿಳಿಯಬರುತ್ತೆ ದಯಮಾಡಿ ನಮ್ಮ ಸರ್ಕಾರದವರು ಇನ್ನೂ ಎರಡು ತಿಂಗಳು ಕಾಲ ಮೊದಲಿನಂತೆಯೇ ಅಡ್ವಾನ್ಸನ್ನು ಕೊಟ್ಟು ಕಾಪಾಡಿದರೆ ಬಹು ಅನುಕೂಲವಾದೀತೆಂತ ತೋರುತ್ತೆ —ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಯ ಸೂಪರಿನ್‌ಟೆಂಡೆಂಟರೂ ಹೆಡ್ ಮಾಸ್ಟರು ಸಹಾ ಬಹಳ ಮುತವರ್ಜಿಯಿಂದ ಸ್ಕೂಲಿನ ಕೆಲಸವನ್ನು ಮಾಡುತ್ತಾರೆ

ಸಂತೆಬೆನ್ನೂರು —ಇಲ್ಲಿ ಹವ ಚೆನ್ನಾಗಿದೆ ಈ ವರ್ಷ ಈ ಪ್ರಾಂತಕ್ಕೆ ಸಕಾಲಕ್ಕೆ ಮಳೆಯು ಸುರಿದುಕೊಟ್ಟದ್ದರಿಂದ ಪೈರುಗಳೆಲ್ಲಾ ಬಹಳ ಚೆನ್ನಾಗಿರುತ್ತವೆ ಆದರೆ ಸದ್ಯಕ್ಕೆ ಧಾರಣೆಯು ಸಾಧಾರಣವಾಗಿರುತ್ತೆ ಅಕ್ಕಿ ರೂಪಾಯಿಗೆ

೭ ೨ ಸೇರು, ರಾಗಿ ೧೪ ಸೇರು, ಜೋಳ ೧೭ ಸೇರು ತೊಗರಿಬೇಳೆ ೬½ ಸೇರು, ಈ ರೀತಿ ಇರುತ್ತೆ ಇದಲ್ಲದೆ ಸಂತೆಯಲ್ಲಿ ವರ್ತಕರು ಕಮ್ಮಿ ಅಳತೆ ಸೇರುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಇದರಿಂದ ಬಡ ಜನಗಳಿಗೆ ತುಂಬಾ ತೊಂದರೆಯಾಗಿರುತ್ತೆ ಇಷ್ಟರಿಂದ ಈಗ ಹೊಸದಾಗಿ ಬಂದಿರುವ ಪೊಲೀಸ್ ದಫೇದಾರ್ರು ಸರಿಯಾದ ಏರ್ಪಾಟು ಇಟ್ಟಹಾಗೆ ಕಾಣುವದಿಲ್ಲ, ಆದ್ದರಿಂದ ಇನ್ಸ್‌ಪೆಕ್ಟರವರೂ ಒಳ್ಳೇ ನಿಗಾದಿಂದ ನೋಡಿ ಆ ದಫೆಗಳಿಗೆ ತಕ್ಕ ಬಂದೋಬಸ್ತು ಮಾಡಿಸಿದರೆ ಬಡ ಜನಗಳಿಗೆ ಉಪಕಾರ ಮಾಡಿದಂತೆ ಆಗುತ್ತದೆ — ಇಲ್ಲಿನ ಕನ್ನಡ ಸ್ಕೂಲಿನ ಸ್ಥಿತಿಯು ತೃಪ್ತಿಕರವಾಗಿದೆ ಎಂದು ಹೇಳಲು ಕೋರುತ್ತಾರೆ ಸಾಧಾರಣವಾಗಿ ಈ ಸ್ಕೂಲು ಎ ವಿ ಸ್ಕೂಲಿನ ಫಲಿತಾಂಶವನ್ನು ತೋರಿಸುತ್ತಿರುವದು ಆದರೆ ಸ್ಕೂಲ್ ಕಟ್ಟಡವಂತು ನಾದುರಸ್ತಾದ ಸ್ಥಿತಿಯಲ್ಲಿದೆ ನೈರ್ಮಲ್ಯವೆನ್ನುವದು ಆರೋಗ್ಯ ಶಾಸ್ತ್ರದಲ್ಲಿ ಮಾತ್ರ ಇರುವ ಹಾಗೆ ತೋರುತ್ತೆಯೇ ಹೊರ್ತು ಕಟ್ಟಡದಲ್ಲಿ ಇಲ್ಲ ಇದರ ರಿಪೇರಿ ಬಗ್ಗೆ ಡಿಪ್ಟಿ ಇನ್ಸ್‌ಪೆಕ್ಟರವರೂ ಇಂಜನಿಯರುಗಳೂ ಅನೇಕಾವರ್ತಿ ನೋಡಿ ಅಂದಾಜು ಪಟ್ಟಿಗಳನ್ನು ಮಾಡಿದ್ದಾಯಿತು ಮತ್ತು ಮೇಲ್ಪಟ್ಟವರ ಇನ್ಸ್‌ಪೆಕ್ಷನ್ ಸಹ ಆಯಿತು ಆದರೆ ಈವರೆಗೆ ಕಾಮಗಾರಿ ಯಾಕೆ ನಡಸಲಿಲ್ಲವೋ ಗೊತ್ತಾಗಲಿಲ್ಲ ಮಳೆಗಾಲದಲ್ಲಿ ಸ್ಕೂಲಿನಲ್ಲಿ ನೀರು ನಿಂತು ಹುಡುಗರಿಗೆಲ್ಲಾ ಬಹಳ ತೊಂದರೆಯನ್ನುಂಟು ಮಾಡುತ್ತಿದೆ ಮುಂದಾದರೂ ಜಾಗ್ರತೆ ರಿಪೇರಿ ಮಾಡಿಸ್ತಾರಾಗಿ ನಂಬಿದೇವೆ — ಮ್ಯುನಿಸಿಪಾಲಿಟಿ ವಿಷಯವಂತು ಎಷ್ಟು ಹೇಳಿದರೂ ತೀರದು ಕಾಡು ಗಿಡಗಳ ಬನಗಳಿಂದಲೂ, ಗೊಬ್ಬರದ ಗುದ್ದೆಗಳಿಂದಲೂ, ಚರಂಡಿಗೆ ಬಂದು ಸೇರುವ ಸಣ್ಣ ಸಣ್ಣ ಕಾಲ್ವೆಗಳಿಂದಲೂ ದುರ್ಗಂಧವನ್ನು ದೂರಮಾಡಿದರೆ ಇನ್ನೇನು ತೊಂದರೆ ಸಂಭವಿಸುವದೋ ಎಂಬ ಸಂದೇಹ ಬಂದು ಮನೆಯ ಮುಂಭಾಗದಲ್ಲೂ ಬೀದಿ ಬೀದಿ ರಸ್ತೆಯ ಪಕ್ಕದಲ್ಲೂ ಜಲಮಲಗಳ ಬಚ್ಚಲಿಂದಲೂ, ಇನ್ನೂ ಅನೇಕವಾದ ತೃಣ ಕಾಷ್ಠ ವಿಗೆಳಿಂದಲೂ, ಮತ್ತು ನಕ್ಷತ್ರಗಳಂತೆ ಮಿನುಗುತ್ತಿರುವ ದೀಪಗಳಿಂದಲೂ ಈ ಊರು ಅನಾರೋಗ್ಯಕ್ಕೆ ಕಾರಣವಾಗಿದೆ ನೀರು ಒಳ್ಳೇದಾದ್ದರಿಂದ ಯಾವ ರೋಗಕ್ಕೂ ಆಸ್ಪದ ಕೊಡದೆ ಇರುವದು ಇದಕ್ಕೆ ನಮ್ಮ ವೈಸ್ ಪ್ರೆಸಿಡೆಂಟರವರು ನಿಗಾ ಕೊಟ್ಟು ಸರಿಪಡಿಸಬೇಕಾಗಿದೆ ಈ ಊರಿನ ಲಿಂಗಾಯಿತ ಜನಗಳು ಕಾನೂನನ್ನು ಇಟ್ಟುಕೊಳ್ಳುವದಕ್ಕೆ ಅಮಲ್ದಾರರಿಂದ ಲೈಸೆನ್ಸು ತರದೆ ತ್ರಿಸರ್ಕಾರಿಗೆ ವಿರುದ್ಧವಾಗಿ ನಡೆದರೆಂದು ಬ್ರಾಹ್ಮಣರು ಎಲ್ಲರ್ಕು ಆಫೀಸರ ಮುಂದೆ ಹೇಳಿಕೊಂಡರು ಅವರು ಮತ್ತು ಪೊಲೀಸ್ ಇನ್ಸ್‌ಪೆಕ್ಟರು ... ಲಿಂಗಾಯಿತರ ಕಾಮನನ್ನು ಉತ್ಸವ ಮಾಡಿಸಿ ಕೊಟ್ಟುಬಿಟ್ಟರು ... ಕಾಮನು ಬೆಪ್ಪರವಷ್ಟೇ ಇರುತ್ತೆ ಈ ವಿಷಯವನ್ನು ಡೆಪ್ಯುಟಿ ಕಮೀಷನರ್ ಹುಜೂರಿನವರಲ್ಲಿ ಅಪೀಲ್ ಮಾಡಿಕೊಂಡರು ಅವರು ವಿಚಾರ ಮಾಡಿ ... ತಿಂಗಳಾಯಿತು ಇದುವರೆಗೂ ಇತ್ಯರ್ಥ ಪಡಿಸಲಿಲ್ಲ ಈಗ ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರನ್ನು ಬೇರೆ ಕಡೆಗೆ ವರ್ಗ ಮಾಡಿರುತ್ತಾರೆ

ತಿಪ್ಪೂರು —ಇಲ್ಲಿ ... ದಿನಗಳಿಂದ ಮಳೆ ಇಲ್ಲ ಪೈರು ಬಾಡುತ್ತಾ ಇದೆ ಸಂತೆಯಲ್ಲಿ ರಾಗಿ ಪೇಟೆ ಆಳೆಯುವ ಸೇರಿನ ವಿಷಯದಲ್ಲಿ ಪ್ರತಿ ಸಂತೆಯಲ್ಲಿಯೂ ಪೋಲೀಸಿನವರ ನಿಗರಾಣೆ ಇತ್ತು ಈಚೆಗೆ ಯಾಕೋ ನಿಗಾವಣೆ ಕಡಮೆಯಾಗಿದೆ — ಇದೆ ಟೌನ್‍ನಲ್ಲಿ ಮುನಿಸಿಪಾಲಿಟಿ ಬೀದಿ ಕಂಬಳಿ ಬೀದಿಗಳಲ್ಲಿ ಒಂದು ಲಾಂದ್ರವಾದರೂ ಇಲ್ಲ ೪—೫ ವರ್ಷಗಳಿಂದ ಇಲ್ಲಿ ಲಾಂದ್ರ ಕಂಬವಿದ್ದಾಗ್ಯೂ ಅದರಲ್ಲಿ ಲಾಂದ್ರವಿಲ್ಲದಿರುವದು ಅತಿ ಆಶ್ಚರ್ಯವಾಗಿದೆ ಕಂಬಳಿ ಬೀದಿಯ ಲಾಂದ್ರದ ಕಂಭವನ್ನು ಕಿತ್ತುಕೊಂಡು ಹೋಗಿ ಬೇರೆ ಕಡೆ ಹಾಕಿದಾರೆ ಈ ಎರಡು ಬೀದಿ ಸೇರಿ ಒಂದು ಫರ್ಲಾಂಗು ಆಗುತ್ತದೆ ವೆ ಬಡಗಿನ ಕಾಯಿ ಬೀದಿಯ ಲಾಂದ್ರ ಕಂಬದ ಎದುರಿಗೆ ಒಂದು ಅಡ್ಡ ರಸ್ತೆ ಇದೆ ಇದರಲ್ಲಿ ಮಾಮೂಲಾಗಿ ರಾತ್ರಿಯೆಲ್ಲಾ ಜನರು ರೈಲಿಗೆ ತಿರುಗಾಡುವ ಬೀದಿಯಾಗಿದೆ ಇಲ್ಲಿ ದಿ ಫಲ್ಲದ್ದು ತುಂಬಾ ತೊಂದರೆ ಅಮಲ್ದಾರ್ರವರು ಆಗಾಗ್ಗೆ ಟೌನಿಗೆ ಬರುತ್ತಿದ್ದರು ಆದರೆ ಈಚೆಗೆ ಸ್ಯಾನಿಟರಿ ಇನ್ಸ್‌ಪೆಕ್ಟರವರು ನೇಮಕವಾದ ಮೇಲೆ ಅವರ ಸವಾರಿ ಟೌನಿನಲ್ಲಿ ಬರುವದು ಕಡಮೆಯಾಯಿತು ಸ್ಯಾನಿಟರಿ ಇನ್ಸ್‌ಪೆಕ್ಟರು ಮ್ಯುನಿಸಿಪಲ್ ವಿಚಾರಕರಾಗಿರುವದೂ ಮತ್ತು ಗೌವರ್ನಮೆಂಟಿನವರು ದಯವಿಟ್ಟು ಇವರನ್ನು ನೇಮಿಸಿರುವದೂ ಯಾತಕ್ಕೋ ತಿಳಿಯುವದಿಲ್ಲ ಲಾಂದ್ರ ಕಂಬಗಳ ವಿಚಾರ, ರಾತ್ರಿ ವೇಳೆಯಲ್ಲಿ ಲಾಂದ್ರಗಳು ಉರಿಯುವ ವಿಚಾರ ಮತ್ತು ಗಲೀಜ್ ಪಾಯಿಖಾನೆ ಗುಂಡಿಗಳ ವಿಚಾರ ನೋಡಿಕೊಳ್ಳುವಂತೆ ಮೇಲ್ಪಟ್ಟವರು ತಕ್ಕ ಪ್ರಯತ್ನ ಮಾಡಿದರೆ ಉತ್ತಮ ಎದುರಿಗೆ ದೊಡ್ಡ ದೊಡ್ಡ ರಸ್ತೆಗಳಲ್ಲಿ ಇರುವದನ್ನು ನೋಡುವದು ಸುಲಭ. ಆದರೆ ಸಂದಿಗಳೂ ಸಂದಿಗಳ ಚರಂಡಿ ಕಸವೂ ಪ್ರತಿ ದಿವಸ ಸಾಗಿಸಲ್ಪಡುತ್ತದೋ ಇಲ್ಲವೋ ಈ ವಿಚಾರ ಮುಖ್ಯವಾದದ್ದು ಕೆಲವು ಸಂದಿಗಳ ಚರಂಡಿಗಳ ಕಸವು ೧೫ ದಿನಕ್ಕೊಂದಾವರ್ತಿ ಸಾಗಿಸುವದೂ ಕಷ್ಟ ಸ್ಯಾನಿಟರಿ ಇನ್ಸ್‌ಪೆಕ್ಟರು ತಿಂಗಳಿಗೆ ಒಂದಾವರ್ತಿ ಇಂಥ ಸಂದಿಗಳನ್ನು ನೋಡದೆ ಹೋದರೂ ಹೊಸ ಕಟ್ಟಡಗಳ ಲೈಸೆನ್ಸ್ ವಿಷಯದಲ್ಲಿ ಬಹು ಮುತುವರ್ಜಿ ಉಳ್ಳವರಾಗಿದಾರೆ —ಕಳೆದ ತಿಂಗಳು ೨೧ನೇ ತಾ ಮಂಗಳವಾರ ಇಲ್ಲಿನ ವೀರಶೈವ ಮಹಸ್ತರು ಈ ಊರಿನಲ್ಲಿ ಸ್ಥಾಪಿಸಿರುವ ಜಗದ್ಗುರು ಜಯದೇವ ಮಂದಿರದ ವಾರ್ಷಿಕ ಉತ್ಸವವನ್ನು ಬಹಳ ವಿಜೃಂಭಣೆಯಿಂದ ನಡಿಸಿದರು ಆ ದಿವಸ ಒಂದು ವಿಚಿತ್ರವಾದ ಪುಷ್ಪರಥವನ್ನು ಕಟ್ಟಿಸಿ, ಅದರಲ್ಲಿ ಶ್ರೀ ಸ್ವಾಮಿಗಳವರ ಭಾವ ಚಿತ್ರವನ್ನು ಇಟ್ಟು ಪಟ್ಟಣದ ನಾಲ್ಕು ಬೀದಿಗಳಲ್ಲಿಯೂ ಬ್ಯಾಂಡ್ ವಾದ್ಯ ಭಜನೆಯೊಂದಿಗೆ ಉತ್ಸವ ಮಾಡುವ ಕಾಲದಲ್ಲಿ ಅಲ್ಲಲ್ಲಿ ಬಾಲಕಿಯರು ಮಂಗಳವೊಡನೆ ಆರತಿಗಳನ್ನು ಬೆಳಗಿದರು ಉತ್ಸವವು ಮುಗಿಯುವದಕ್ಕೆ ಮಧ್ಯಾಹ್ನ ೧ ಘಂಟೆಯಾಯಿತು ಅನಂತರ ೫೦ ಜನಗಳ ವರೆಗೂ ಸಂತರ್ಪಣೆಯಾಯಿತು ಈ ಉತ್ಸವಕ್ಕಾಗಿ ಪರಸ್ಥಳಗಳಿಂದ ಅನೇಕರು ಧರ್ಮಾತ್ಮರುಗಳು ಬಂದಿದ್ದರು ಈ ಉತ್ಸವವು ಸಾಂಗವಾಗಿ ನೆರವೇರುವಂತೆ ಇವರ ಧರ್ಮ ಕರ್ತರಾದ ಮೆ| ಕೊಟ್ಟೂರಯ್ಯನವರೂ, ಮೆ| ಉಸಾಪ್ಪ ಕುಂತೆ ಮತ್ತಿ ನಿಷ್ಪಪ್ಪನವರೂ, ಮೆ| ಪಲ್ಲಾಗಟ್ಟಿ ಚನ್ನವೀರಪ್ಪನವರೂ, ಮೆ| ಬಸಪ್ಪನವರೂ, ಮೆ| ಹೊಳೆಹೊನ್ನೂರು ಗುರುಪಾದಪ್ಪನವರೂ ಬಹಳ ಮುತುವರ್ಜಿಯನ್ನು ವಹಿಸಿ ಕಾರ್ಯ ಸಾಫಲ್ಯ ಮಾಡಿದರು ಇವರು ಮುಂದೆಯೂ ವರ್ಷಂಪ್ರತಿಯಲ್ಲಿಯೂ ಇದೇ ರೀತಿ ನಡೆಯುವದಕ್ಕೆ ಪ್ರತಿ ವರ್ಷದಲ್ಲಿಯೂ ದ್ರವ್ಯ ಸಹಾಯ ಮಾಡಿದಾರೆ

ನೊಣವಿನಕೆರೆ ಬುಕ್ಕಾಪುರ —ಇಲ್ಲಿ ೧೦-೧೨ ದಿನಗಳಿಂದ ಮಳೆ ಇಲ್ಲದೇ ಇದ್ದು ನೆನ್ನೆ ಮೊನ್ನೆಯಿಂದ ಆದ ಎರಡು ಹದ ಮಳೆಯಿಂದ ಪೈರುಗಳು ನಗೆಮುಖದಿಂದ ಕಾಡಿವೆ ರಾಗಿ ಪೈರು ತೆನೆ ಹೊರಡುತ್ತಲಿದೆ ಇದರಂತೆ ಇನ್ನು ೨-೩ ಹದ ಮಳೆಯಾದರೆ ಈ ತಾಲ್ಲೂಕಿನ ಎಲ್ಲಾ ಭಾಗವೂ ಸಂಪೂರ್ಣವಾದ ಬೆಳೆಯಾಗುತ್ತೆ ಎಲ್ಲಾ ಕೆರೆಗಳೂ ತುಂಬಿ ಗದ್ದೆ ಸಾಗುವಳಿಯು ನಡೆಯುತ್ತಲಿದೆ ನಾಗರ ಕೆರೆ ತುಂಬಿದ್ದರಿಂದ ತಿಗಳರ ತೋಟಗಳಲ್ಲಿ ತರಕಾರಿ ವಿಶೇಷವಾಗಿ ಬೆಳೆದು ಅಗ್ಗವಾಗಿ ಮಾರುತ್ತಾರೆ ಟವನ್ನಲ್ಲಿ ಕಾಯಿಲೆ ವಗ್ಯೆರೆ ಏನೂ ಇಲ್ಲದೆ ಆರೋಗ್ಯವಾಗಿದೆ —ಇಲ್ಲಿನ ದೇವಾಂಗದವರು ಗೌರಿ ಹಬ್ಬದ ವ್ರತವನ್ನು ಬಹು ವಿಶೇಷವಾಗಿ ನಡಿಸುವ ಪದ್ಧತಿ ಇದೆ ಅದರಂತೆ ಈ ವರ್ಷವೂ ಭಾದ್ರಪದ ಶುದ್ಧ ೪ ರ ಆಗಾಯ್ತು ೧೫ ವರಿವಿಗೂ ದೇವತಾಪೂಜೆಯೂ ನಾನಾ ವಿಧವಾದ ವೇಷಗಳೂ ಸಹ ಹಾಕಿ ೧೫ ರ ಗಣೇಶನನ್ನು ಬಿಟ್ಟರು —ಹಿಂದೂಸ್ಥಾನದ ಕಡೆಯ ತೆಲಗು ಮತದವರು ಇಲ್ಲಿ ೧೦-೧೫ ದಿನಗಳಿಂದ ದೊಡ್ಡ ಗೊಂಬೆಗಳ ಆಟದಲ್ಲಿ ರಾಮಾಯಣವನ್ನು ಆಡುತ್ತಾರೆ ಬೈಲಿನಲ್ಲಿಯೇ ಚಪ್ಪರವನ್ನು ಕಟ್ಟಿ ಆಡುವದರಿಂದ ಅನೇಕರು ಬಂದು ಈ ಆಟವನ್ನು ನೋಡುತ್ತಾ ಇದಾರೆ ಮೊದಲು ದಿನ ಆಡಿದಾಗ ಹಳ್ಳಿ ಜನಗಳೂ ಸೇರಿ ಸುಮಾರು ೪ ಸಾವಿರದ ವರೆಗೂ ಸೇರಿತ್ತು ಇಷ್ಟು ಜನ ಸೇರಿದಾಗ್ಯೂ ಏನೂ ಗಲಾಟೆ ವಗ್ಯೆರೆ ನಡೆಯದಂತೆ ನಮ್ಮ ಪೊಲೀಸ್ ಜಮಾದಾರ್ ಮುನಿಶಾಮಪ್ಪನವರು ತಕ್ಕ ಸಿಬ್ಬಂದಿಯನ್ನು ಇಟ್ಟಿದ್ದದ್ದಕ್ಕಾಗಿ ಅನೇಕರು ಸಂತೋಷಪಟ್ಟರು —ನಮ್ಮ ಅಮಲ್ದಾರ್ ಮೆ|| ಸದಾಶಿವರಾಯರು ೧೫ ದಿನಗಳ ರಜಾ ತೆಗೆದುಕೊಂಡು ಪರಸ್ಥಳಕ್ಕೆ ಹೋಗಿರುವುದರಿಂದ ನಮ್ಮ ಶಿರಸ್ತೇದಾರರೇ ತಾಲೂಕಿನ ಛಾರ್ಜಿನಲ್ಲಿರುತ್ತಾರೆ ಈ ಮಧ್ಯೆ ಯಕ್ಸೈಸ್ ಕಮಿಷನರ್ ರವರು ಗಯವಾಗಿ ತಾಲ್ಲೂಕು ಕಚೇರಿ, ಸಬ್ ರಿಜಿಸ್ಟ್ರಾರ್ ಆಫೀಸು, ಬಾಂಡೆಡ್ ಡಿಪೋ ವಗ್ಯೆರೆ ಅಡವಾಯಿಸಿ ಮಾಡಿಕೊಂಡು ಹೊರಟು ಹೋದರು —ಇಲ್ಲಿನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ೪೦ ದಿನಗಳು ರಾಮಾಯಣ ಪಾರಾಯಣವನ್ನು ರಾತ್ರಿ ೮ ರಿಂದ ೧೧ ಗಂಟೆ ವರಿಗೂ ನಡಿಸುವರು ಕೋಟೆ ಶ್ರೀ ಆಂಜನೇಯಸ್ವಾಮಿ ವಿಗ್ರಹವನ್ನು ಕಿತ್ತು ಕುಚ್ಚಪ್ಪನ ಪೇಟ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ಡುತ್ತಾರೆಂದು ತಿಳಿದು ಸುಮಾರು ೬೦೦ ಜನಗಳು ದೇವರನ್ನು ಕೀಳಕೂಡದೆಂದು ಗೌರ್ನಮೆಂಟಿಗೆ ಅರ್ಜಿ ಬರೆದುಕೊಂಡದ್ದಕ್ಕೆ ಮುಜರಾಯಿ ಸೂಪರೆಂಟ್ ಸಾಹೇಬರವರು ದೇವರನ್ನು ಯಥಾಸ್ಥಾನದಲ್ಲಿಯೇ ಇರಿಸುವಂತೆಯೂ ಮಾಮೂಲಿನಂತೆ ಅಲ್ಲಿಯೇ ಪೂಜೆ ನಡಿಸತಕ್ಕದೆಂತಲೂ ಹುಕುಂ ಕೊಟ್ಟದ್ದಕ್ಕೆ ಅನೇಕ ಜನ ಭಕ್ತರು ಶ್ರೀ ಆಂಜನೇಯ ದೇವಸ್ಥಾನದ ಆಜೂ ಬಾಜೂದಲ್ಲಿದ್ದ ಪೊದೆಗಳನ್ನು ಕತ್ತರಿಸಿ ದೇವಸ್ಥಾನಕ್ಕೆ ಹೊಗಲು ಸರಿಯಾದ ದಾರಿಯನ್ನು ಬಿಂಗಡಿಸಿ ದೇವಸ್ಥಾನದೊಳಗೆ ಗಾರೆ ಸುಣ್ಣ ವಗ್ಯೆರೆ ಕೆಲಸಗಳನ್ನು ಮಾಡಿ ಕ್ರಮವಾಗಿ ಪೂಜೆ ನಡಿಯುವಂತೆ ಏರ್ಪಾಡು ಮಾಡಿರುತ್ತಾರೆ ಈ ದೇವಸ್ಥಾನದ ಮುಂದೆ ಇದ್ದ ದಿಣ್ಣೆಯನ್ನು ಅಗೆದು ರಸ್ತೆಯನ್ನು ಸರಿಮಾಡಿಸುತ್ತಿರುವಾಗ ೪ ೫ ಅಡಿ ಆಳದಲ್ಲಿ ೧೫೩೩ನೇ ಶಾಲೀವಾಹನ ಶಕ ಸಾಧಾರಣಸಂವತ್ಸರದ ಕಾರ್ತೀಕ ಶುದ್ಧ ೫ ಮಿ ದಿನ ಬರೆದ ಹಾವ ೧ ಭೈರೇಗೌಡರ ಕಾಲದ (ಸುಮಾರು ೩೦೦ ವರ್ಷದ) ಶಿಲಾ ಶಾಸನವು ಸಿಕ್ಕಿತು ಅದನ್ನು ದೇವಸ್ಥಾನದ ಒಳಯಿಟ್ಟಿರುತ್ತಾರೆ ಅನೇಕರು ಬಂದು ನೋಡಿಕೊಂಡು ಹೋಗುತ್ತಾ ಇರುವರು ಇನ್ನು ಹೊಸದಾಗಿ ದೇವಸ್ಥಾನದ ರಿಪೇರಿ ವಗ್ಯೆರೆ ಮಾಡಿಸತಕ್ಕವರು ಸಂತೋಷವಾಗಿ ಮಾಡುತ್ತಾರೆ ಗೌರ್ನಮೆಂಟಿನವರು ಬಹು ಪುರಾತನ ವಿಗ್ರಹವನ್ನು ಯಥಾಸ್ಥಾನದಲ್ಲಿಯೇ ಇರಿಸಿ ಜೀರ್ಣೋದ್ಧಾರ ಮಾಡಿದ್ದಕ್ಕಾಗಿ ಬಹು ಜನಗಳು ಕೊಂಡಾಡುತ್ತಾರೆ

ಇಂಡಿಯಾದೇಶದ ವೃತ್ತಾಂತಗಳು

ಕಳೆದ ಬುಧವಾರ ಬೆಳಗಿನ ಝಾವದ ೫ ಗಂಟೆ ಹೊತ್ತಿನಲ್ಲಿ ಸಿಂಲಾ ಪಟ್ಟಣದಲ್ಲಿ ಭೂಮಿಯು ಸ್ವಲ್ಪವಾಗಿ ಕಂಪಿಸಿತು

* * *

ಭೂಪಾಲ್ ಸಂಸ್ಥಾನದ ಬೇಗಂ ರವರು ಲಕ್ನೋ ಪಟ್ಟಣದಲ್ಲಿರುವ ಅರಬ್ಬೀ ಕಾಲೇಜಿಗೆ ತಿಂಗಳಿಗೆ ೭೬೫ ರೂಪಾಯಿ ಸಹಾಯ ದ್ರವ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದಾರೆ

* * *

ಭೂಪಾಲ್ ಸಂಸ್ಥಾನದ ಬೇಗಂ ರಾಣಿಯವರು ಹಿಂದುಸ್ಥಾನದ ಮಹಮದೀಯ ವಿದ್ಯಾಭಿವೃದ್ಧಿಯ ಫಂಡಿಗೆ ಪ್ರತಿವರುಷವೂ ೨,೩೦೦ ರೂಪಾಯಿ ಚಂದಾ ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ

* * *

ಹಾಫಿಸ್ ಅಹಮದ್ ಬೇಗ್ ರವರನ್ನು ಆಫ್ಘಾನಿಸ್ಥಾನದ ಅಮೀರರವರು ತಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ್ ಕೆಲಸಕ್ಕೆ ನೇಮಕ ಮಾಡಿಕೊಂಡಿದಾರೆಂದು ವರ್ತಮಾನವಿದೆ

* * *

ಪಂಜಾಬ್ ಅಧಿಪತ್ಯಗಳಲ್ಲಿ (ಲಾಹೋರ್ ಪಟ್ಟಣದಲ್ಲಿ) ನಡೆಯುವ ಸರ್ವ ವಸ್ತು ಪ್ರದರ್ಶನ ಶಾಲೆಯ ಫಂಡಿಗೆ ಪಟಿಯಾಲ್ ಶೀಮೆಗೆ ಸೇರಿದ ಕಪೂರ್‌ತಲಾ ಮಹಾರಾಜರು ೭,೦೦೦ ರೂಪಾಯಿ ಚಂದಾ ಕಳುಹಿಸಿದರು ಈ ಫಂಡಿಗೆ ಇದುವರೆಗೆ ೧,೬೬,೦೦೦ ರೂಪಾಯಿ ವಸೂಲಾಗಿರುತ್ತದೆ

* * *

ಕೂಚ್ ಬಿಹಾರ್ ಮಹಾರಾಜರವರ ಕುಮಾರರಾದ ರಾಜಕುಮಾರ ಹಿತೇಂದ್ರರವರು ಪರಿವಾರ ಸಹಿತ ಅಮೇರಿಕ ಮತ್ತು ಜಪಾನ್ ರಾಜ್ಯಗಳನ್ನು ನೋಡಿಕೊಂಡು ಬರುವದಕ್ಕಾಗಿ ಹೋಗಿದ್ದರು ಇವರೆಲ್ಲಾ ಮುಂದಿನ ತಿಂಗಳ ಮೊದಲನೇ ವಾರದಲ್ಲಿ ವಾಪಸು ಕಲ್ಕತ್ತೆಗೆ ಬರುವವರಾಗಿದಾರೆ

* * *

ಬಂಗಾಳಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾಗಿದ್ದು ಶೀಮೆಗೆ ಹೋಗಿರುವ ಸರ್ ಬಿ ಫುಲರ್ ರವರನ್ನು ತುರ್ಕಿರಾಜ್ಯದ ಸುಲ್ತಾನರವರ ಗವರನ್‌ಮೆಂಟಿನವರು ಅಲ್ಲಿಗೆ ಕರೆಸಿಕೊಂಡು, ಆ ರಾಜ್ಯದ ಜಮಾನ್ ಕಂದಾಯದ ಶಿಸ್ತನ್ನು ಜಮಾಬಂದಿ ಮಾಡಿಸುವವರಾಗಿದಾರೆಂದು ವರ್ತಮಾನವಿದೆ

* * *

ಆಫ್ಘಾನಿಸ್ಥಾನವೇ ಮೊದಲಾದ ಪ್ರಾಂತ್ಯಗಳಿಂದ ೧೯೦೭-೦೮ನೇ ಸಾಲಿನಲ್ಲಿ ೬,೭೭೦ ಉಣ್ಣೆ, ತಾಂಬಾಕು, ಹೇಸರಕತ್ತೆ, ಗೋಣಾಯಿಗಳು ವಾಯುವ್ಯ ಸರಹದ್ದಿನ ಪ್ರಾಂತ್ಯಕ್ಕೆ ಬಂದು ೧,೬೩,೮೪೦ ರೂಪಾಯಿಗೆ ವಿಕರಿ ಆದವೆಂದೂ, ೧೯೦೮-೦೯ನೇ ಸಾಲಿನಲ್ಲಿ ೧,೧೧,೭೭೦ ರೂಪಾಯಿನ ೨,೩೦೪ ರಾಸುಗಳು, ವಿಕರಿ ಆದವೆಂದೂ ತಿಳಿದು ಬಂದಿದೆ ಈಚೆಗೆ ಆಫ್ಘಾನಿಸ್ಥಾನದ ಅಮೀರರವರು ತಮ್ಮ ರಾಜ್ಯದಿಂದ ರಾಸುಗಳನ್ನು ಯಾರೂ ರಫ್ತು ಮಾಡದಂತೆ ಹುಕುಂ ಕೊಟ್ಟು ಕಳೆದಿರುತ್ತಾರೆ

ಈ ತಿಂಗಳ ಪ್ರಾರಂಭದಿಂದ ಟೆಲಿಗ್ರಾಫ್ ಮೂಲಕ ಹಣ ಕಳುಹಿಸುವುದನ್ನು ಗವರ್ನಮೆಂಟಿನವರು ಸುಲಭ ಮಾಡಿದ್ದಾರೆ ಹ್ಯಾಗೆಂದರೆ, ಟೆಲಿಗ್ರಾಫ್ ಮೂಲಕ ಹಣ ಕಳುಹಿಸುವವರು ಸಾಮಾನ್ಯ ಮನಿಆರ್ಡರ್ ಕಮಿಷನ್‌ನನ್ನೂ, ಅದರ ಜೊತೆಗೆ ಟೆಲಿಗ್ರಾಫ್ ಫಾರಮ್ಮಿನಲ್ಲಿ ಅವರು ಎಷ್ಟು ಮಾತುಗಳನ್ನು ಬರೆಯುವರೋ ಅದಕ್ಕೆ ಸರಿಯಾದ ಟೆಲಿಗ್ರಾಂ ಚಾರ್ಜನ್ನೂ ಕೊಡತಕ್ಕದ್ದೆಂದು ವಿಧಾಯಕವಾಗಿರುತ್ತದೆ

* * *

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಫರೀದ್‌ಪುರ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರೂ ಇಬ್ಬರು ಕಾನ್ಸ್‌ಟೇಬಲರೂ ಒಬ್ಬ ನಾಮಶೂದ್ರ ಕಳ್ಳನನ್ನು ದಸ್ತಗಿರಿಮಾಡುವುದಕ್ಕೆಂದು ಓರ್ಕಾಂಡಿ ಎಂಬ ಸ್ಥಳಕ್ಕೆ ಹೋದರು ಅಲ್ಲಿನ ನಾಮ ಶೂದ್ರರು ಒಟ್ಟು ಕೂಡಿ ಪೋಲೀಸಿನವರ ಮೇಲೆ ಬಿದ್ದು ಅವರನ್ನು ಬಹಳವಾಗಿ ಗಾಯಪಡಿಸಿದರೆಂದೂ, ಒಬ್ಬ ಪೇದೆಯನ್ನು ಕೊಂದುಹಾಕಿದರೆಂದೂ ತಿಳಿಯುವುದು

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬರ್ದವಾನ್ ಜಿಲ್ಲೆಯಲ್ಲಿ ಪ್ರವಾಹಗಳ ದೆಸೆಯಿಂದ ಬಹಳ ಮನೆ ಮಠಗಳು ಕೊಚ್ಚಿ ಹೋಗಿ ಸಾವಿರಾರು ಪ್ರಜೆಗಳು ಸಂಕಟಪಡುತ್ತಿದಾರೆಂದು ತಿಳಿಸಿದೆವಷ್ಟೆ ರಾಜಾಮನವಿಹಾರಿಕಾಪೂರ್ ಎಂಬ ಪುಣ್ಯಾತ್ಮನು ಅವರ ಕಷ್ಟ ಪರಿಹಾರಕ್ಕಾಗಿ ವಿಶೇಷ ದ್ರವ್ಯವನ್ನು ಸಹಾಯಮಾಡಿದನು ಇದಲ್ಲದೆ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಂದು ರಿಲೀಫ್ ಫಂಡನ್ನು ಪ್ರಾರಂಭಿಸಿ, ಚಂದಾ ಕೂಡಿಸುತ್ತಿದಾರೆ

* * *

ಪಂಜಾಬ್ ಅಧಿಪತ್ಯದಲ್ಲಿ ಹಲಿಸೆಂಟು ಡಿಸ್ಟ್ರಿಕ್ಟ್ ಹಿಂದೂ ಸಭೆಗಳು ಏರ್ಪಾಡಾಗಿರುತ್ತವೆ ಪಂಜಾಬಿನ ಹಿಂದೂ ಸಮಾಜವು ಇಪ್ಪರಲ್ಲೇ ನಡೆಯುವುದು ಈ ಸಭೆಗಳ ಮೆಂಬರುಗಳೆಲ್ಲಾ ಮೀಟಿಂಗುಗಳನ್ನು ನಡಿಸಿ ದೊಡ್ಡ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುತ್ತಿದಾರೆ ರಿಸೆಪ್ಷನ್ (ಸ್ವಾಗತ) ಕಮಿಟಿಗೆ ಸುಮಾರು ೧೦೦ ಮಂದಿ ಮೆಂಬರುಗಳಾಗಿಯೂ ರಾಯ ಬಹದ್ದೂರ್ ಲಾಲ್ ಚಂದ್ ಯವರು ಚೇರ್ಮನ್ನರಾಗಿಯೂ ನೇಮಕವಾದರು

* * *

ಪಂಜಾಬ್ ಅಧಿಪತ್ಯದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಗ್ರಾಮಸ್ಥರು ಉಳುವುದಕ್ಕೆ ಯೋಗ್ಯವಾದ ಒಳ್ಳೊಳ್ಳೇ ರಾಸುಗಳನ್ನು ಸಾಕಿ ವಿಕರಿಮಾಡುತ್ತಿದಾರೆ ಅವುಗಳಿಗೆ ಬಹು ಹೆಚ್ಚು ಕ್ರಯ ಸಿಕ್ಕುತ್ತದೆಂತಲೂ, ನೂರಾರು ಮಂದಿ ಜಮೀನ್ದಾರರು ಹೋಗಿ ಎತ್ತುಗಳನ್ನು ಕೊಂಡು ತಂದುಕೊಳ್ಳುತ್ತಿದಾರೆಂತಲೂ ತಿಳಿಯುವುದು ನಮ್ಮ ದೇಶದಲ್ಲಿ ಗೋವುಗಳನ್ನು ಸಾಕತಕ್ಕವರು ಕೂಡ ಈ ರೀತಿ ದನಗಳನ್ನು ಸಾಕಿದರೆ ಇದೇ ಒಂದು ಲಾಭಕರವಾದ ಕಸಬಾದೀತೆನ್ನುವುದಕ್ಕೆ ಸಂದೇಹವಿಲ್ಲ

* * *

ಲಾಹೋರಿನಲ್ಲಿ ಈ ವರುಷದ ಅಖೈರಿನಲ್ಲಿ ಹಿಂದುಸ್ಥಾನದ ಕಸಬುಗಳನ್ನು ಪ್ರೋತ್ಸಾಹಿಸುವ ಸಮಾಜವೂ ವಸ್ತು ಪ್ರದರ್ಶನವೂ ಜರಗುವವು ಕಳೆದ ಮಂಗಳವಾರ ಅಲ್ಲಿನ ದೊಡ್ಡ ಮನುಷ್ಯರು ಒಂದು ಸಭೆಯನ್ನು ನಡಿಸಿ ಈ ಸಮಾಜದ ರಿಸೆಪ್ಷನ್ (ಸ್ವಾಗತ) ಕಮಿಟಿಗೆ ಮೆ| ಹರಿಕಿಶನ್ ಲಾಲ್ ಯವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿದರು ಮತ್ತು ಆ ಸಮಾಜದ ಅಧ್ಯಕ್ಷಸ್ಥಾನಕ್ಕೆ ನಾಗಪುರದ ಮೆ| ದಾದಾಬಾಯಿ ಯವರನ್ನೂ ಕಲ್ಕತ್ತೆಯ ಮೆ| ಆರ್ ಎನ್ ಮುಖರ್ಜಿ ಯವರನ್ನೂ ಚುನಾವಣೆ ಮಾಡಿರುತ್ತಾರೆ

* * *

ಈ ವರುಷ ಡಿಸೆಂಬರ್ ತಿಂಗಳ ಕಡೆಯ ವಾರದಲ್ಲಿ ಹಿಂದುಸ್ಥಾನದ ರಾಷ್ಟ್ರ ಕೂಟವು (ನ್ಯಾಷನಲ್ ಕಾನ್‌ಗ್ರೆಸ್ಸು) ಲಾಹೋರ್ ಪಟ್ಟಣದಲ್ಲಿ ನಡೆಯುವುದು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಇರುವ ಆ ಸಭೆಯ ಶಾಖೆಗಳ ಪೈಕಿ ಅನೇಕ ಸಭೆಗಳು ಅಭಿಪ್ರಾಯ ಪಟ್ಟಂತೆ ರಾಷ್ಟ್ರ ಕೂಟದ ಪ್ರೆಸಿಡೆಂಟ್ (ಅಧ್ಯಕ್ಷ) ಸ್ಥಾನಕ್ಕೆ ಬೊಂಬಾಯಿನ ಸರ್ ಫಿರೋಜ್‌ಷಾ ಮೆಹತಾ ಎಂಬ ಪಾರ್ಸಿ ದೊಡ್ಡಮನುಷ್ಯರನ್ನು ಚುನಾಯಿಸಿದರು ಇವರು ಆ ಗೌರವ ಸ್ಥಾನವನ್ನು ಅಂಗೀಕರಿಸುವುದಾಗಿ ಒಪ್ಪಿಕೊಂಡಿರುತ್ತಾರೆ

* * *

ಆಫ್ಘಾನಿಸ್ಥಾನದ ಅಮೀರರವರ ಬಳಿ ಡಾಕ್ಟರಾಗಿದ್ದ ಗುಲಾಂನಬಿಖಾನ್ ಯವರು ಆರುತಿಂಗಳ ರಜಾ ಪಡೆದು ಹಿಂತಿರಿಗಿ ಹಿಂದುಸ್ಥಾನಕ್ಕೆ ಬರುವವರಾಗಿದಾರೆ ಇವರು ಕಾಬೂಲ್ ಪಟ್ಟಣದಲ್ಲಿ ಆರು ವರುಷಗಳಿಂದ ಇದ್ದರು ಅಮೀರರವರಿಗೆ ಇವರ ಮೇಲೆ ತುಂಬಾ ಪ್ರೀತಿಯುಂಟೆಂದು ಕಾಣುವುದು ಅಮೀರರು ಈ ಡಾಕ್ಟರಿಗೆ ಸಾವಿರಾರು ರೂಪಾಯಿ ಇನಾಂ ಕೊಟ್ಟದ್ದಲ್ಲದೆ ಆರು ತಿಂಗಳ ಪೂರಾ ಸಂಬಳವನ್ನೂ ಕೊಡುವವರಾಗಿದಾರೆ. ಇವರ ತಮ್ಮನಾದ ಡಾಕ್ಟರ್ ಗುಲಾಂ ಮಹಮದ್‌ಖಾನ್‌ರವರು ಈಗ ಕಾಬೂಲಿನಲ್ಲೇ ವೈದ್ಯಮಾಡುತ್ತಿರುವರು

* * *

ರಾಮೇಶ್ವರದಿಂದ ಸಿಲೋನ್ ದ್ವೀಪಕ್ಕೆ ರೈಲ್ ರಸ್ತೆಯನ್ನು ಹಾಕುವ ಕೆಲಸವು ಪ್ರಾರಂಭವಾಗಿದೆ ಮದರಾಸ್ ಮತ್ತು ದಕ್ಷಿಣ ಮರಾಠಾ ರೈಲ್ವೆ ಕಂಪನಿಯ ಇಂಜನಿಯರಾಗಿದ್ದ ಮೆ|| ಎಚ್ ವಾಲ್ಟರ್ ರವರು ಈ ಕೆಲಸದ ಮೇಲ್ವಿಚಾರಣೆಗೆ ನೇಮಕವಾಗಿರುವರು ಈ ಹೊಸ ರೈಲ್ ರಸ್ತೆಯು ಬಹು ದೂರ ತುಂಬಾ ದಟ್ಟವಾದ ಕಾಡಿನಲ್ಲಿ ಹೋಗುತ್ತಾದ್ದರಿಂದ ಅಲ್ಲಿ ಕೆಲಸ ಮಾಡತಕ್ಕವರು ಬಂದೂಕುಗಳನ್ನು ಸರ್ವದಾ ತಮ್ಮ ಬಳಿಯಲ್ಲಿ ಇಟ್ಟುಕೊಂಡಿರಬೇಕಾಗಿದೆ ಯಾಕೆಂದರೆ ಆ ಕಾಡುಪ್ರದೇಶಗಳಲ್ಲಿ ಆನೆ, ಕರಡಿ, ಹುಲಿ, ಚಿರತೆ ಮೊದಲಾದ ದುಷ್ಟ ಮೃಗಗಳ ಕಾಟ ಜಾಸ್ತಿಯಾಗಿರುವುದು

* * *

ಸಿಲಾಯಿತಿಯಲ್ಲಿ ಡಿಂಗ್ರನಿಂದ ಕೊಲೆಯಾದ ಸರ್ ಕರ್ಜನ್ ವೈಲಿ ಯವರ ಹೆಸರನ್ನು ಶಾಶ್ವತ ಪಡಿಸುವ ಉದ್ದೇಶದಿಂದ ಕಳೆದ ಮಂಗಳವಾರ ಲಾಹೋರ್ ಪಟ್ಟಣದಲ್ಲಿ ಒಂದು ಮಹಾ ಸಭೆ ನಡೆಯಿತು ಸರ್ ಪಿ. ಸಿ ಛತ್ರಜೀ ಯವರ ಸಭಾನಾಯಕರಾಗಿದ್ದರು ದೇಶೀಯ ಮತ್ತು ಯೂರೋಪಿಯನ್ ದೊಡ್ಡಮನುಷ್ಯರು ಗತಿಸಿದ ಸರ್ ಕರ್ಜನ್ ವೈಲಿಯವರ ಗುಣಕಥನವನ್ನು ಮಾಡಿ, ಅವರ ಹೆಸರನ್ನು ಪಂಜಾಬ್ ಅಧಿಪತ್ಯದಲ್ಲಿ ಶಾಶ್ವತ ಪಡಿಸಬೇಕೆಂದು ತೀರ್ಮಾನಿಸಿದರು ಅನೇಕರು ಈ ಉದ್ದೇಶಕ್ಕೆ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದಾರೆ. ಲೆಫ್ಟಿನೆಂಟ್ ಗವರ್ನರವರೂ ಚಂದಾ ಹಾಕಿದರು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮಿಡ್ನಾಪುರಕ್ಕೆ ಸರ್ಕಾರದವರು ಮಿಲಿಟರಿ ಪೋಲೀಸ್ ಶಿಬ್ಬಂದಿಯನ್ನು ಕಳುಹಿಸಿ, ಪಟ್ಟಣವನ್ನು ಉಸ್ತುವಾರಿ ಮಾಡಿಸುತ್ತಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಮುಂದಿನ ತಿಂಗಳು ತಾ ೨೧ ರಿಂದ ೨೪ ರ ವರೆಗೆ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರುಗಳ ಸಾಲ್ಯನೇ ಸಭೆಯು ನಡೆಯುವುದು. ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ರೆಜಿಸ್ಟ್ರಾರುಗಳು ಹೋಗುವರು

ಬೊಂಬಾಯಿ ಪಟ್ಟಣದಲ್ಲಿ ಜನರ ಸಂಚಾರಕ್ಕೆ ಅನುಕೂಲಿಸುವಂಥಾ ಟ್ಯಾಕ್ಸಿಕಾಬ್ ಎಂಬ ಹೊಸ ತರಹಾ ಜಟ್ಕಾಗಾಡಿಗಳನ್ನು ಕಳೆದ ವಾರ ನಡೆಸಿಗೆ ತಂದರು ಬಹು ಜನರು ಈ ಹೊಸ ಗಾಡಿಯಲ್ಲಿ ತಿರುಗಬೇಕೆಂದು ಕುತೂಹಲಪಟ್ಟು ಮೇಲಾಡುತ್ತಿದ್ದಾರೆ

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್ ಪಟ್ಟಣದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ॥ ಬ್ಲ್ಯಾಕ್‌ವುಡ್ ಯವರು ದೇಶೀಯ ದೊಡ್ಡ ಮನುಷ್ಯರ ಪ್ರಾರ್ಥನೆಯಂತೆ ಅಲ್ಲಿ ಆನಂದ ಮೋಹನ ಎಂಬ ವಿದ್ಯಾಶಾಲೆಯನ್ನು ಕಟ್ಟುವದಕ್ಕೆ ಶಿಲಾಸ್ಥಾಪನೆಯನ್ನು ಮಾಡಿದರು

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿಗೆ ಸೇರಿದ ದೇವಗೊಂಡನ ಹಳ್ಳಿಯಲ್ಲಿ ವಜ್ರಗಳು ಸಿಕ್ಕುವವೆಂದು ಕಂಡು ಹಿಡಿದು, ಅವನ್ನು ತೆಗೆಯುವುದಕ್ಕೆ ಶೀಘ್ರದಲ್ಲಿ ಒಂದು ಕಂಪನಿ ಏರ್ಪಾಡುಮಾಡುತ್ತಾರೆ ಕಂಪನಿಗೆ ಹಣ ಸೇರಿದ ಕೂಡಲೇ ಕೆಲಸವು ಪ್ರಾರಂಭವಾಗುತ್ತದೆಂದು ತಿಳಿದು ಬಂದಿದೆ.

ಹಿಂದುಸ್ಥಾನದಲ್ಲಿ ಕ್ಷಯರೋಗ ಪೀಡಿತರಿಗೆ ಚಿಕಿತ್ಸೆ ನಡೆಯುವಂಥಾ ಒಂದು ಆಸ್ಪತ್ರೆಯನ್ನು ಸ್ಥಾಪಿಸುವವರಾಗಿರಾರೆ. ಹಿಮಾಚಲ ಪರ್ವತದ ತಪ್ಪಲಲ್ಲಿರುವ ಅಲ್ಮೊರಾ ಪಟ್ಟಣದಲ್ಲಿ ಈ ಆಸ್ಪತ್ರೆ ಇಡಬೇಕೆಂದು ಯೋಚಿಸಿದ್ದರು ಈಚೆಗೆ ಆ ಪಟ್ಟಣವು ಅನುಕೂಲವಾದದ್ದಲ್ಲವೆಂದು ತೀರ್ಮಾನವಾಗಿದೆ

ಲಾಹೋರಿಮಾಸಿರಾಯಿ ಎಂಬ ರೈಲ್ವೆ ಸ್ಟೇಷನ್‌ನಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಮಿ॥ ಬಾಬು ನಿಶಾನ್ದ ಘೋಷಯವರು ಗಾಡಿಯಿಂದ ಇಳಿಯುವಾಗ್ಯೆ ತಮಗೆ ಆದ ಗಾಯಕ್ಕಾಗಿ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ದಾವಾ ಮಾಡಿದ್ದರು ಕಂಪನಿಯವರಿಂದ ಅವರಿಗೆ ೫೦೦ ರೂಪಾಯಿ ಪರಿಹಾರ ಕೊಡಿಸಿರುತ್ತಾರೆ

ವಿಷ್ಣುಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ॥ ಡೊನಾಲ್ಡ್‌ಸನ್‌ರವರ ಮೇಲೂ, ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಮೌಲವಿ ಮಹಮ್ಮದ್ ಅಲಿಯವರ ಮೇಲೂ, ಪೋಲೀಸ್ ಇನ್‌ಸ್ಪೆಕ್ಟರ್ ಲಾಲ್‌ಮೋಹನ ಗುಹಾಯವರ ಮೇಲೂ ಅಲ್ಲಿನ ಕೆಲವು ದೇಶೀಯ ಜಮೀನುದಾರರೂ ಪ್ಲೀಡರುಗಳೂ ಮಾನನಷ್ಟಕ್ಕೆ ದಾವಾ ತರುತ್ತೇವೆಂದು ಅವರುಗಳಿಗೆ ನೋಟೀಸ್ ಕೊಟ್ಟಿದ್ದಾರೆ

ಕಳೆದ ವಾರ ಹಿಂದುಸ್ಥಾನದಲ್ಲಿ ೩,೫೯೫ ಜನರು ಪ್ಲೇಗಿನಿಂದ ಕಾಲವಾದರು ಈ ಪೈಕಿ ಮಧ್ಯಪ್ರಾಂತ್ಯ ಮತ್ತು ಬೀರಾರದಲ್ಲಿ ೯೬೩, ಬೊಂಬಾಯಿ ಆಧಿಪತ್ಯ ೯೧೪, ರಾಜಪುಟಾನ ಮತ್ತು ಅಜ್ಮೀರ್ ಮೇರ್ವಾರದಲ್ಲಿ ೪೦೩, ಮೈಸೂರು ಸಂಸ್ಥಾನ ೨೪೩, ಮಧ್ಯ ಇಂಡಿಯಾ ೭೧೯, ಸಂಯುಕ್ತ ಆಧಿಪತ್ಯಗಳು ೪೧೫, ಪಂಜಾಬ್ ೧೮೧, ಮದ್ರಾಸ್ ಆಧಿಪತ್ಯ ೧೫೫, ಬಂಗಾಳಾ ೪೨, ಬರ್ಮಾ ೧೬, ಹೈದರಾಬಾದ್ ೧೪ ಕಾಶ್ಮೀರ ೧, ಈ ರೀತಿ ಮರಣಗಳಾಗಿರುತ್ತವೆ

ಬೊಬ್ಬಿಲಿ ಸಂಸ್ಥಾನದ ಯುವರಾಜರವರು ಯೂರೋಪಿಯನ್ ರಾಜ್ಯಗಳಲ್ಲಿ ದೇಶಾಟನಮಾಡಿಕೊಂಡು ಕಳೆದ ಗುರುವಾರ ಸ್ವದೇಶಕ್ಕೆ ವಾಪಸು ಬಂದರು. ಮಹಾರಾಜರವರೂ, ಅವರ ಎರಡನೇ ಕುಮಾರರೂ, ಯುವರಾಜರ ಕುಮಾರರೂ ನೂರಾರು ಮಂದಿ ಪ್ರಜೆಗಳೂ ವಿಜಯನಗರದ ರೈಲ್ವೆ ಸ್ಟೇಷನ್‌ನಲ್ಲಿ ಕಾದಿದ್ದು ಅವರನ್ನು ಎದುರುಗೊಂಡು, ಮೆರವಣಿಗೆಯಲ್ಲಿ ಅರಮನೆಗೆ ಕರೆದುಕೊಂಡು ಹೋದರು ಸಂಸ್ಥಾನದ ಪ್ರಜೆಗಳು ಆ ದಿವಸವನ್ನು ಬಹಳ ಸಂಭ್ರಮದಿಂದ ಕಳೆದರು,

ವಿಲಾಯತಿ ಪಾರ್ಲಿಮೆಂಟಿನ ಮೆಂಬರಾದ ಮಿ॥ ರಾಂಸೇ ಮೆಕ್ಡಾನಲ್ಡ್ ಯವರು ಪತ್ನಿ ಸಹಿತ ಈ ವಾರ ಹಿಂದುಸ್ಥಾನಕ್ಕೆ ಬಂದಿಳಿಯುವರು ಇವರು ಬೊಂಬಾಯಿ ಬರೋಡಾ, ಸಿಂಲಾ, ಪೇಷಾವರ್, ಕಲ್ಕತ್ತೆ, ಢಾಕ್ಕಾ, ಮದರಾಸ್ ಮೊದಲಾದ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿ, ಇಲ್ಲಿನ ರಾಜ್ಯಭಾರ ಕ್ರಮಗಳ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳ ಮತ್ತು ದೇಶೀಯ ದೊಡ್ಡ ಮನುಷ್ಯರ ಅಭಿಪ್ರಾಯಗಳನ್ನು ಸಂಗ್ರಹ ಮಾಡಿಕೊಂಡು ಹೋಗುವರೆಂದೂ, ತಮ್ಮ ಅಭಿಪ್ರಾಯವನ್ನು ಈ ದೇಶದಲ್ಲಿ ಯಾರಿಗೂ ತಿಳಿಸುವದಿಲ್ಲವೆಂದೂ ಹೇಳಿರುತ್ತಾರೆ

ಡ್ಯೂಕ್ ಆಫ್ ಅಬ್ರುಜಿಯವರು ಹಿಂದುಸ್ಥಾನದ ಉತ್ತರ ಮೇರೆಯಾದ ಹಿಮಾಚಲಪರ್ವತವನ್ನು ಹತ್ತಿ ನೋಡಿಕೊಂಡು ಬಂದರು ಅವರು ಹೇಳುವುದೇನೆಂದರೆ,—ನಾನು ಪರ್ವತವನ್ನು ಹತ್ತಿ ಸುತ್ತಿಕೊಂಡು ಬಂದದ್ದರಲ್ಲಿ ನನಗೆ ಯಾವ ಅಡ್ಡಿ ಅಡಚಣೆಗಳೂ ಉಂಟಾಗಲಿಲ್ಲ ನಾನು ಹತ್ತಿ ಹೋದಷ್ಟು ಮೇಲಕ್ಕೆ ಯಾರೂ ಹತ್ತಲಿಲ್ಲವೆಂದು ಸಂತೋಷಪಡುತ್ತೇನೆ ಹಿಂದೆ ನಾರ್ವೇ ದೇಶೀಯರಿಬ್ಬರು ಮಾತ್ರ ಕಾಬ್ರು ಎಂಬ ಶಿಖರವನ್ನು ಹತ್ತಿ ನೋಡಿಕೊಂಡು ಬಂದಿದ್ದರು ಅದು ಸಮುದ್ರಮಟ್ಟದಿಂದ ೨೪,೦೦೦ ಅಡಿ ಎತ್ತರದಲ್ಲಿರುತ್ತದೆ ನಾನಾದರೂ ಅದಕ್ಕಿಂತಲೂ ಮೇಲಕ್ಕೆ ಅಂದರೆ ೨೬,೦೦೦ ಅಡಿಯ ವರೆಗೆ ಹತ್ತಿ ಹೋಗಿ ಬಂದೆನು ಎಂಬುದೇ

ಬರ್ಮಾ ಆಧಿಪತ್ಯದಲ್ಲಿ ಹುಚ್ಚುನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ನಡೆಯುವುದಕ್ಕೆ ಒಂದು ಪಾಸ್ಚರ್ ಆಸ್ಪತ್ರೆಯನ್ನು ಇಟ್ಟು ನಡೆಸಬೇಕೆಂದು ಅಲ್ಲಿನ ಕೆಲವು ಮುಖಂಡರು ತೀರ್ಮಾನಿಸಿ, ಅದಕ್ಕಾಗಿ ಬೇಕಾಗುವ ಹಣವನ್ನು ಚಂದಾ ಮೂಲಕ ಕೂಡಿಸುತ್ತಿದ್ದರಷ್ಟೆ. ಇದುವರೆಗೆ ಈ ಫಂಡಿಗೆ ೧,೧೬,೦೦೦ ರೂಪಾಯಿ ಚಂದಾ ವಸೂಲಾಗಿರುವುದು ಈ ಫಂಡಿನ ಕಮಿಟಿಯವರು ಕಳೆದ ವಾರ ಸಭೆ ಸೇರಿ, ಈಗ ಕೂಡಿರುವ ಹಣದಲ್ಲಿ ಸುಮಾರು ೬೦,೦೦೦ ರೂಪಾಯನ್ನು ವಿನಿಯೋಗಿಸಿ ಆಸ್ಪತ್ರೆಗೂ, ವೈದ್ಯರೇ ಮುಂತಾದವರು ವಾಸ ಮಾಡುವುದಕ್ಕೂ ತಕ್ಕ ಕಟ್ಟಡಗಳನ್ನು ಕಟ್ಟಿಸಬೇಕೆಂದು ಗೊತ್ತುಮಾಡಿದರು ಉಳಿಯುವ ಹಣವನ್ನು ಫಂಡು ಹಾಕುವರು ಈ ಆಸ್ಪತ್ರೆಯ ಖರ್ಚಿಗೆ ವರುಷಕ್ಕೆ ೨೦,೦೦೦ ರೂಪಾಯಿಗಳಿಗೆ ಚಂದಾ ಮುಂತಾದ ರೂಪದಲ್ಲಿ ವರಮಾನ ಬರುವುದೆಂದು ಯೋಚಿಸುತ್ತಾರೆ ಆಸ್ಪತ್ರೆಯಲ್ಲಿ ಶಿಬ್ಬಂದಿ ಮುಂತಾದ ಖರ್ಚಿಗೆ ವರುಷಕ್ಕೆ ೨೪,೬೫೦ ರೂಪಾಯಿ ಬೇಕಾದೀತೆಂದು ಅಂದಾಜು ಕಟ್ಟಿದ್ದಾರೆ

ಕರಾಚಿ ಪಟ್ಟಣದಲ್ಲಿ ಎಡ್ವರ್ಡ್ ಛಾಪಖಾನೆಯ ಪ್ರೊಪ್ರೈಟರ್ ಮತ್ತು "ಸಿಂಧಿ" ಪತ್ರಿಕೆಯ ಎಡಿಟರ್ ಆದ ವೀರುಮಲ್ ಬೇಗರಾಜ್ ಎಂಬಾತನೂ, ಸ್ವದೇಶೀ ಅಂಗಡಿಯ ಪ್ರೊಪ್ರೈಟರ್ ಚೋಟುಮಲ್ ಎಂಬಾತನೂ ಮಿ॥ ತಿಲಕರವರು ಬರೆದ ಸ್ವದೇಶಿ ವಿಷಯಕವಾದ ಪುಸ್ತಕಗಳನ್ನು ಭಾಷಾಂತರ ಮಾಡಿ ಅಚ್ಚು ಹಾಕಿ ಬಿಕರಿ ಮಾಡಿದರೆಂದೂ, ಅದರಲ್ಲಿ ರಾಜದ್ರೋಹ ವಿಚಾರಗಳು ಬರೆಯಲ್ಪಟ್ಟಿವೆ ಎಂದೂ ಹೇಳಿ ಈಗ ಅವರಿಬ್ಬರನ್ನೂ ಸರ್ಕಾರದವರು ದಸ್ತಗಿರಿ ಮಾಡಿ ೧೦,೦೦೦ ರೂಪಾಯಿನ ಮೂರು ಮೂರು ಜಾಮೀನುಗಳ ಮೇಲೆ ಬಿಟ್ಟಿರುತ್ತಾರೆ ಗೋವರ್ಧನದಾಸನೆಂಬಾತನೇ ಆ ಪುಸ್ತಕಗಳನ್ನು ಭಾಷಾಂತರ ಮಾಡಿದವನೆಂದು ಆತನನ್ನು ದಸ್ತಗಿರಿ ಮಾಡಿರುವರು

ಕಲ್ಕತ್ತಾ ಪಟ್ಟಣದಲ್ಲಿ ಶ್ರೀಶಚಂದ್ರ ಸರ್ಕಾರ್ ಎಂಬಾತನೂ ಸಿ ಸ್ಟೀವನ್ ಡಿಕಾಸ್ಟ ಎಂಬಾತನೂ ಸೇರಿ ಮರಣದ ಫಂಡು ಎಂಬ ಫಂಡನ್ನು ಪ್ರಾರಂಭಿಸಿ, ಈ ಫಂಡಿಗೆ ಸೇರಿದ ಮೆಂಬರುಗಳಿಂದ ಚಂದಾ ವಸೂಲ್ಮಾಡುತ್ತಾ, ಬಂದ ಹಣವನ್ನು ತಿಂದುಹಾಕಿ, ಸತ್ತುಹೋದ ಮೆಂಬರುಗಳ ವಾರಸ್ದಾರರಿಗೆ ಸಲ್ಲಬೇಕಾದ ಹಣವನ್ನು ಪಾವತಿಮಾಡದೆ ಮೋಸಮಾಡುತ್ತಿದ್ದರು ವಿಶಾಖ ಪಟ್ಟಣದಲ್ಲಿ ಈ ಫಂಡಿಗೆ ಸೇರಿದ್ದ ಕೆಲವು ಮೆಂಬರುಗಳು ಅವರ ಮೇಲೆ ಮೊಕದ್ದಮೆ ಮಾಡಿದ್ದಾರೆ ಪೋಲೀಸಿನವರು ಕಳೆದ ವಾರ ಅವರಿಬ್ಬರನ್ನೂ ಕಲ್ಕತೆಯಲ್ಲಿ ದಸ್ತಗಿರಿ ಮಾಡಿದರು ಈ ಮೊಕದ್ದಮೆಯು ವಿಶಾಖ ಪಟ್ಟಣದಲ್ಲಿ ನಡೆಯುವುದು ಅವರಿಬ್ಬರೂ ಈ ಫಂಡಿನ ಹಣದಲ್ಲಿ ಹತ್ತಾರು ಸಾವಿರ ರೂಪಾಯನ್ನು ತಿಂದು ಹಾಕಿರುತ್ತಾರೆಂದು ತಿಳಿಯುತ್ತದೆ

ಆಗ್ರಾಪಟ್ಟಣದ "ಮುಸಾಫರ್ ಆಗ್ರಾ" ಎಂಬ ಪತ್ರಿಕೆಯ ಎಡಿಟರಾದ ಪಂಡಿತ ಬೋಜದತ್ತನೆಂಬಾತನು ಕಲ್ಕತ್ತೆಗೆ ಹೋಗಿ ಅಲ್ಲಿನ ಆಲ್ಬರ್ಟ್ ಹಾಲ್ ಎಂಬ ಕಟ್ಟಡದಲ್ಲಿ ಮುಸಲ್ಮಾನರಿಗೆ ವಿರುದ್ಧವಾದ ವಿಷಯವನ್ನು ಕುರಿತು ಉಪನ್ಯಾಸಮಾಡಬೇಕೆಂದು ಪ್ರಯತ್ನಪಟ್ಟನೆಂದೂ, ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟು ಆತನು ಉಪನ್ಯಾಸ ಮಾಡದಂತೆ ತಡೆದುಬಿಟ್ಟರೆಂದೂ ಕಳೆದ ವಾರ ತಿಳಿಸಿದೆವಷ್ಟೆ ಈಚೆಗೆ ಆತನು ತಾನು ರಾಜಕೀಯ ವಿಚಾರಗಳನ್ನು ಕುರಿತು ಮಾತಾಡತಕ್ಕವನಲ್ಲವೆಂದೂ ಭಕ್ತಿ ವಿಚಾರವಾಗಿ ಉಪನ್ಯಾಸ ಮಾಡತಕ್ಕವನೆಂದೂ, ಮುಸಲ್ಮಾನರಿಗೆ ವಿರೋಧವಾಗಿ ತಾನು ಏನೂ ಮಾಡುವವನಲ್ಲವೆಂದೂ ಆದಕಾರಣ ಆ ತಡೆಯ ನೋಟೀಸನ್ನು ರದ್ದುಮಾಡಬೇಕೆಂದೂ ಆ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡನು

ಹಿಂದಿನ ಸೋಮವಾರ ಪೂನಾ ಪಟ್ಟಣದಲ್ಲಿ ಒಂದು ಮಹಾ ಜನ ಸಭೆ ನಡೆಯಿತು ಡಾ॥ ಆರ್ ಜಿ ಭಂಡಾರ್ಕರವರು ಸಭಾನಾಯಕರಾಗಿದ್ದರು ದಕ್ಷಿಣ ಆಫ್ರಿಕಕ್ಕೆ ಹೋಗಿರುವ ಹಿಂದುಸ್ಥಾನದ ಪ್ರಜೆಗಳನ್ನು ಅಲ್ಲಿನ ಸರ್ಕಾರದವರು ಸರಿಯಾಗಿಯೂ ನ್ಯಾಯವಾಗಿಯೂ ಪರಿಪಾಲಿಸುತ್ತಾ ಇಲ್ಲವೆಂದೂ, ಅವರನ್ನು ತಿರಸ್ಕಾರ ಪಡಿಸುತ್ತಾರೆಂದೂ, ಇನ್ನು ಸರಿಯಾದ ನಡವಳಿಕೆಯನ್ನು ಜಾರಿಗೆ ತರುವ ತನಕ ಹಿಂದುಸ್ಥಾನದಿಂದ ಜನರನ್ನು ಅಲ್ಲಿಗೆ ಯಾರೂ ಕರೆದುಕೊಂಡು ಹೋಗದಂತೆ ಇಂಡಿಯಾ ಗವರ್ನ್‌ಮೆಂಟಿನವರು ತಡೆಯಬೇಕೆಂದೂ ಈ ವಾಗ್ಗೆ ದಕ್ಷಿಣ ಆಫ್ರಿಕಾ ಸರ್ಕಾರದವರು ಜನರನ್ನು ಬಯಲುಮಾಡುವ ಪಕ್ಷ [illegible] ಆಫ್ರಿಕದಿಂದ ಬರುವ ಪದಾರ್ಥಗಳಿಗೆ ಬಹಿಷ್ಕಾರ ಹಾಕಬೇಕೆಂದೂ ತೀರ್ಮಾನ ಮಾಡಿದರು ಈ ತೀರ್ಮಾನಗಳನ್ನು ಚಕ್ರವರ್ತಿ [illegible] ಮಂತ್ರಿಗಳಿಗೂ ಬ್ರಿಟಿಷ್ ಪಾರ್ಲಿಮೆಂಟಿಗೂ ಅರಿಕೆ ಮಾಡಬೇಕೆಂದು ಸಭಿಕರು ಗೊತ್ತುಮಾಡಿದರು.

ಪೂನಾ ಪಟ್ಟಣದ ಒಳ ಇರುವ ಪೇಟೆ ಎಂಬ ಗ್ರಾಮದ ಮೂರು ಮಂದಿ ಸ್ತ್ರೀಯರ ಮೂರೋಪಿಯನ್ ಹುದ್ದೆದಾರರುಗಳು ಶಿಕಾರಿಗೆ ಹೋಗಿದ್ದಾಗ ಅಬ್ದುಲ್ಲಾ ಎಂಬ ಹುಡುಗನು ಸಹ [illegible] ಗಾಯಪಟ್ಟನು [illegible] ಆ ಮೂರು ಮಂದಿಯನ್ನೂ ಸುತ್ತಿಕೊಂಡು ಅವರಿಂದ ಬಂದೂಕುಗಳನ್ನು ಕಿತ್ತುಕೊಳ್ಳಬೇಕೆಂದು ಪ್ರಯತ್ನಪಟ್ಟರು ಆ ಮೂರು ಮಂದಿಯೂ ತಮ್ಮ ಹೆಸರನ್ನು ಬರೆದು ಕೊಟ್ಟು ಹೋಗುತ್ತೇವೆಂದು ಹೇಳಿದರು ಕಡೆಗೆ ಕ್ಯಾಪ್ಟನ್ ಜಿಕೋಲಕರ್ ಎಂಬುವರ ಹುಡುಗನು ಹೋಗಿ ಆ ಮೂವರು ಹುದ್ದೆದಾರರುಗಳ ಹೆಸರನ್ನು ಬರೆದುಕೊಂಡು ಬಿಡಿಸಿ ಬಿಟ್ಟನು ಅವರು ಪೂನಾಕ್ಕೆ ಹೋಗಿ ನಡೆದ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸಿದರು ಈಗ ಆ ಗ್ರಾಮದ ಐದು ಮಂದಿಯ ಮೇಲೆ ಇವರು ಸ್ತ್ರೀಯರ ಹುದ್ದೆದಾರರನ್ನು ಅಕ್ರಮವಾಗಿ ತಡೆದು ನಿಲ್ಲಿಸಿದರೆಂದು ಮೊಕದ್ದಮೆ ಆಗಿದೆ

ಬೊಂಬಾಯಿ ಪಟ್ಟಣದಲ್ಲಿ ಮಲೆ ಜ್ವರವನ್ನು ಅಡಗಿಸುವುದಕ್ಕೆ ಉಪಾಯಗಳನ್ನು ಸೂಚಿಸಬೇಕೆಂದು ಗವರ್ನ್‌ಮೆಂಟಿನವರು ಬೆಂಟ್ಲಿ ಎಂಬ ಡಾಕ್ಟರನ್ನು ನೇಮಕ ಮಾಡಿದರು ಇವರು ಕಳುಹಿಸಿರುವ ರಿಪೋರ್ಟಿನ ಸಾರಾಂಶವೇನೆಂದರೆ, ಸೊಳ್ಳೆಗಳ ದೆಸೆಯಿಂದಲೇ ಈ ಮಲೆ ಜ್ವರವು ಪ್ರಬಲವಾಗುತ್ತದೆ ಅವು ಕೊಚ್ಚೆ ಗುಂಡಿಗಳಲ್ಲಿ ಮಾತ್ರವೇ ಅಲ್ಲ, ಒಳ್ಳೆಯ ನೀರಿನಲ್ಲೂ ಹುಟ್ಟಿ ಹಬ್ಬುವವು ಬಾವಿ, ಕೊಳ, ಕೆರೆ ಮೊದಲಾದ ತಿಳಿನೀರಿರುವ ಕಡೆಗಳಲ್ಲೂ ಇವು ಬೆಳೆಯುವವು ಮನೆಗಳೊಳಗೆ ಇರುವಂಥಾ ಬಾವಿಗಳಲ್ಲಿಯೇ ಈ ಸೊಳ್ಳೆಗಳು ವಿಶೇಷವಾಗಿರುತ್ತವೆ ಎಂಬುದೇ ಈ ರಿಪೋರ್ಟನ್ನು ನೋಡಿ ಆ ಪಟ್ಟಣದ ಹೆಲ್ತ್ ಆಫೀಸರ್ ಯವರು ಬೀದಿ ಮನೆಗಳ ಮೇಲೆ ಸಂಚಾರ ಮಾಡುತ್ತಾ, ಬಾವಿಗಳನ್ನೆಲ್ಲಾ ಗಾರೆಯಿಂದ ಮುಚ್ಚಿ ಪಂಪುಗಳನ್ನು ಬಾವಿಗಳಿಗೆ ಇಟ್ಟುಕೊಳ್ಳುವಂತೆ ಜನರಿಗೆ ಹೇಳುತ್ತಿದ್ದಾರೆ ಪ್ರತಿ ಒಂದು ಬಾವಿಗೂ ಪಂಪು ಇಟ್ಟು ಗಾರೆಯಿಂದ ಮುಚ್ಚುವುದಕ್ಕೆ ೫೦ ರೂಪಾಯಿ ಖರ್ಚಾಗುತ್ತದೆ ಈ ರೀತಿ ಮಾಡದೆ ಇರುವ ಮನೆಗಳ ಮಾಲೀಕರಿಗೆ ಮುನಿಸಿಪಾಲಿಟಿಯವರು ನೋಟೀಸ್ ಕೊಟ್ಟು ಅವರ ಮೇಲೆ ಮೊಕದ್ದಮೆ ಮಾಡುವವರಾಗಿದ್ದಾರೆ

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಪ್ರಸಿದ್ಧವಾದ "ಹಿತವಾದಿ" ಎಂಬ ಬಂಗಾಳೀ ದೇಶಭಾಷಾ ಪತ್ರಿಕೆಯ ಆಫೀಸನ್ನು ಶೋಧನೆ ಮಾಡಿದ್ದಲ್ಲದೆ ಆ ಪತ್ರಿಕೆಯನ್ನು ಪ್ರಿಂಟು ಮಾಡಿ ಕೊಡುತ್ತಿದ್ದ ನರೋತ್ತಮ ಬಸಾಕ್ ಎಂಬಾತನನ್ನು ವಾರಂಟಿನ ಮೇಲೆ ದಸ್ತಗಿರಿ ಮಾಡಿದರು ಬಂಗಾಳದಲ್ಲಿ ಪತ್ರಿಕೆಗಳಿಗೆ ವರ್ತಮಾನಗಳನ್ನು ಕೊಡುತ್ತಾ "ಟೆಲಿಗ್ರಾಫ್" ಸಂಪ್ರಾ" ಎಂಬ ಪತ್ರಿಕೆಗಳ ಎಡಿಟರಾಗಿದ್ದ ಪಂಚಕೊರಿ ಬ್ಯಾನರ್ಜಿ ಎಂಬಾತನ ಮನೆಯನ್ನು ಶೋಧನೆ ಮಾಡಿ, ಕೆಲವು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು ಈತನು "ಹಿತವಾದಿ" ಪತ್ರಿಕೆಯನ್ನು ನಡಿಸುತ್ತಿದ್ದನೆಂದು ವರ್ತಮಾನವಿದೆ ಈಚೆಗೆ ೫,೦೦೦ ರೂಪಾಯಿ ಜಾಮೀನು ಕೊಟ್ಟದ್ದರಿಂದ ಮ್ಯಾಜಿಸ್ಟ್ರೇಟರು ಆತನನ್ನು ಜೈಲಿನಿಂದ ಬಿಡಿಸಿರುತ್ತಾರೆ "ಹಿತವಾದಿ" ಎಂಬ ದಿನ ಪತ್ರಿಕೆಯಲ್ಲಿ ಹಿಂದೆ ಪ್ರಕಟವಾಗಿದ್ದ "ಹೊಸ ಪೋಲೀಸ್ ಕಾನೂನು, ಸೇನೆ ನಾಳೆ ಬಂದದ್ದು" ಎಂಬೀ ವಿಷಯಗಳನ್ನು ಕುರಿತು ಬಾತ್ಮಿಗಳು ಪ್ರಕಟವಾದದ್ದರಿಂದ ಪೋಲೀಸಿನವರು ಈ ಮೊಕದ್ದಮೆಯನ್ನು ಮಾಡಿರುತ್ತಾರೆಂದೂ ಇದು ಈ ದಿನ ವಿಚಾರಣೆ ಪ್ರಾರಂಭವಾಗುವುದೆಂದೂ ತಿಳಿದು ಬಂದಿದೆ

ವಿದೇಶ ವರ್ತಮಾನಗಳು

ಪರ್ಷಿಯಾ ರಾಜ್ಯದ ಮಾಜಿ ಷಾ ಸುಲ್ತಾನರವರು ಪರಿವಾರ ಸಹಿತ ಆ ರಾಜ್ಯವನ್ನು ಬಿಟ್ಟು ಹೊರಟುಹೋದರಷ್ಟೆ ಇವರು ಕಳೆದ ವಾರ ಕ್ಯಾಸ್ಪಿಯನ್ ಸಮುದ್ರದ ತೀರದಲ್ಲಿರುವ ಪೆಟ್ರೋಸ್ಕ್ ಪಟ್ಟಣವನ್ನು ತಲಪಿ, ಅಲ್ಲಿಂದ ತಮ್ಮ ಮುಂದಿನ ನಿವಾಸಸ್ಥಳವಾದ ಒಡೆಸ್ಸಾ ಪಟ್ಟಣಕ್ಕೆ ಪ್ರಯಾಣ ಮಾಡಿದರು

ಮಿ॥ ಆರ್ವಿಲ್ಲೆ ರೈಟ್ ಎಂಬ ಕಾರೀಗಾರರು ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕಳೆದ ವಾರ ಯುವರಾಜರನ್ನು ತನ್ನ ವಿಮಾನದಲ್ಲಿ ಕೂರಿಸಿಕೊಂಡು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದನು. ಅತ್ತಲಾಗಿ ರಷ್ಯಾ ರಾಜ್ಯದವರು ಮಿಲಿಟರಿ ಇಲಾಖೆಯಲ್ಲಿ ವಿಮಾನಗಳನ್ನು ತಯಾರುಮಾಡಿಸುವುದಕ್ಕೂ ಶೋಧನೆಗಳನ್ನು ನಡಿಸುವುದಕ್ಕೂ ಈ ವರುಷ ೪೦॥ ಲಕ್ಷ ರೂಪಾಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

ಚೀನಾ ಸರ್ಕಾರದವರೇ ಸ್ವತಂತ್ರಿಸಿ ರಾಜಧಾನಿಯಾದ ಪೀಕಿಂಗ್ ನಗರದಿಂದ ಕಾಲ್ಗನ್ ಎಂಬ ಪಟ್ಟಣದ ತನಕ ರೈಲ್ ರಸ್ತೆಯನ್ನು ಹಾಕಿಸಿದರು ಈ ರಸ್ತೆಯು ಕಳೆದ ವಾರ ಸಿದ್ಧವಾಗಿ ಪ್ರತಿಷ್ಠೆ ಮಾಡಲ್ಪಟ್ಟಿತು ಚೀನೀ ಬಹು ಮಂದಿ ಮುಖ್ಯಾಧಿಕಾರಿಗಳೂ ಪರರಾಜ್ಯಗಳ ರಾಯಭಾರಿಗಳೂ ಹಾಜರಾಗಿದ್ದು, ಚೀನೀಯವರು ಅಭಿವೃದ್ಧಿ ಕಾರ್ಯವನ್ನು ನಡಿಸುತ್ತಾ ಬಂದಿರುವುದು ಸ್ತೋತ್ರಾರ್ಹವಾಗಿದೆ ಎಂದು ಅವರನ್ನು ಹೊಗಳಿದರು

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಧಾನ ಪಿಲ್ಗ್ರಿಮ್ಗಳಲ್ಲಿ ಹತ್ತು ಕಾರ್ಖಾನೆಗಳನ್ನು ಇಟ್ಟು ನಡಿಸುತ್ತಿರುವವರು ಸೇರಿ ಒಂದು ಸಭೆಯನ್ನು ನಡಿಸಿದರು ಆ ಸಭೆಯಲ್ಲಿ ಈಗ ಬರುತ್ತಿರುವ ಹತ್ತಿಬಟ್ಟೆಗಳು ಅಗ್ಗವಾಗಿಯೂ [illegible] ಆಗುವುದಿಲ್ಲವೆಂದು ತೀರ್ಮಾನ ಮಾಡಿದರು [illegible] ಲಾಭಕ್ಕಾಗಿ ಅಲ್ಲಿನ ಹತ್ತಿ ಕಾರ್ಖಾನೆಗಳೆಲ್ಲಾ ಮುಚ್ಚಲ್ಪಡುತ್ತವೆ [illegible] ಇವೆ

ವಿಲಾಯತಿ ರಾಜ್ಯದ ಚಾರ್ಲ್ಸ್ ನೇಪಿಯರ್ [illegible] ಪಟ್ಟಣಗಳ ವಿಷಯದಲ್ಲಿ ಪಾರ್ಲಿಮೆಂಟಿನ ಮೆಂಬರುಗಳು ಕಳೆದ [illegible] ಚರ್ಚೆಮಾಡುತ್ತಾ ಒಂದಿದ್ದಾರೆ ಗವರ್ನ್‌ಮೆಂಟ್ ಪಕ್ಷದವರಿಗೂ [illegible] ಪಕ್ಷದವರಿಗೂ ನಾನಾ ದೇಶಗಳು ನಡೆಯುತ್ತಿವೆ [illegible] ಆಗಿ ಈಗಿನ ಪಾರ್ಲಿಮೆಂಟು ಬರ್ಖಾಸ್ತಾಗುವದೆಂದೂ ಪಾರ್ಲಿಮೆಂಟಿಗೆ ಹೊಸದಾಗಿ ಪ್ರಜೆಗಳು ಮೆಂಬರುಗಳನ್ನು ಚುನಾಯಿಸಿ [illegible] ದೀತೆಂದೂ ವರ್ತಮಾನ ಹುಟ್ಟಿದೆ

ತುರ್ಕಿ ರಾಜ್ಯದ ಸೈನ್ಯಾಧಿಪತಿಯಾದ [illegible] ಫ್ರೆಂಚ್ ಸಂಸ್ಥಾನದಲ್ಲಿ ಸಂಚಾರಮಾಡುತ್ತಿದ್ದಾರೆ [illegible] ಗಳು ಪಾಷಾಯವರಿಗೆ ಔತಣಮಾಡಿದರು [illegible] ಫ್ರೆಂಚ್ ಸೈನಿಕ ತರಬೇತು [illegible] ಎಂದು ಪ್ರಶಂಸೆ ಮಾಡಿ [illegible] ತುರ್ಕಿಯ [illegible] ಕೊಡುತ್ತೇವೆಂದು ತಿಳಿಸಿದರು [illegible] ಇಂಗ್ಲಿಷ್ ಜನರನ್ನು ಹುಟ್ಟಿದ [illegible] ಬಂದಿದೆ

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾದ ಮಿ॥ ಟಾಫ್ಟ್ ಯವರು ಓರಿಗಾನ್ ಜಿಲ್ಲೆಗೆ ಸೇರಿದ ಪೋರ್ಟ್ಲೆಂಡಿನಲ್ಲಿ ಕಳೆದ ವಾರ ಮೋಟಾರ್ ಗಾಡಿಯನ್ನು ಹತ್ತುವುದಕ್ಕೆ ಹೋಗುತ್ತಿರುವಲ್ಲಿ ಒಬ್ಬ ಮನುಷ್ಯನು ಬಹು ರಭಸವಾಗಿ ಅವರೆಡೆಗೆ ನುಗ್ಗಿಬರುತ್ತಿದ್ದನು ಅವನನ್ನು ಅವರ ಬಳಿ ಇದ್ದವರು ದೂರದಲ್ಲೇ ತಡೆದು ದಸ್ತಗಿರಿಮಾಡಿ, ಅವನ ಜೇಬುಗಳನ್ನು ಶೋಧನೆಮಾಡಿ ನೋಡಿದಾಗ ಅವನ ಬಳಿ ಒಂದು ಫೋಟೋ ತೆಗೆಯುವ ಪೆಟ್ಟಿಗೆಯೂ ಅದರೊಳಗೆ ಒಂದು ಪಿಸ್ತೂಲೂ ಸಿಕ್ಕಿದವು ಇವನು ಪ್ರೆಸಿಡೆಂಟರನ್ನು ಕೊಂದು ಹಾಕಬೇಕೆಂತಲೇ ಅಷ್ಟು ವೇಗದಿಂದ ಹೋಗುತ್ತಿದ್ದನೆಂದು ಊಹಿಸಲ್ಪಟ್ಟಿದೆ

ಆಫ್ರಿಕಕ್ಕೆ ಸೇರಿದ ಮೊರೊಕ್ಕೋ ಸೀಮೆಯಲ್ಲಿ ಸ್ಪೇನ್ ರಾಜ್ಯದವರ ಸೈನಿಕರಿಗೂ ಮೂರ್‌ರೆಂಬ ಸ್ವದೇಶೀ ಜನರಿಗೂ ಕೆಲವು ಕಾಲದಿಂದ ಕಲಹ ಕಾದಾಟಗಳು ನಡೆಯುತ್ತಲಿರುವವಷ್ಟೆ ಕಳೆದ ವಾರದಿಂದ ಮತ್ತೆ ಯುದ್ಧ ಕಾರ್ಯಗಳು ಪ್ರಾರಂಭವಾಗಿವೆ ಜುಲುವನ್ ಎಂಬ ಸ್ಥಳದ ಪ್ರಾಂತ್ಯದಲ್ಲಿ ಸ್ಪೇನ್ ಸೈನಿಕರು ೫,೦೦೦ ಮೂರ್ ಜನರನ್ನು ಸಂಧಿಸಿ ಅವರ ಮೇಲೆ ಬಹು ಕೋಪವಾಗಿ ಯುದ್ಧಮಾಡಿದರು ಸ್ಪೇನ್ ಸೈನಿಕರಲ್ಲಿ ೬೦ ಮಂದಿ ಕೊಲೆಯಾದರು, ೨೦೦ ಜನರು ಗಾಯಪಟ್ಟಿದ್ದಾರೆ ಮೂರ್ ಜನರು ಬಹು ಪರಾಕ್ರಮದಿಂದ ಕಾದುತ್ತಾರೆಂದು ತಿಳಿಯುವುದು ಸ್ಪೇನ್ ಸೈನಿಕರ ಜಯಪ್ರದವಾದದ್ದನ್ನು ನೋಡಿ ಮುಲ್ಲೈ ಹಾಫಿಡ್ ಎಂಬ ದೊರೆಯು ಮಾ ಒಂದು [illegible] ಚದರಿಹೋಗಿರುವ ತನ್ನ ಹಿಂಬಾಲಕರೆಲ್ಲ ಉದ್ರೇಕವಾಗುತ್ತಾ, ಕ್ರೈಸ್ತರನ್ನು ಅಲ್ಲಿಂದ ಓಡಿಸಬೇಕೆಂದು ನಾಯಕತ್ವ ಬಂದಿದ್ದಾನೆ ಸ್ಪೇನ್‌ನಿಂದ ಹೊಸದಾಗಿ ಸೈನ್ಯಗಳನ್ನು ಮೊರೊಕ್ಕೋಗೆ ಕಳುಹಿಸಿದರು ಇನ್‌ಫಂಟಾ ಕಾರ್ಲೋಸ್ ಎಂಬ ರಾಜಕುಮಾರನೇ ಕುದುರೆ ಸೈನ್ಯದ ಅಧಿಪತಿಯಾಗಿ ಪ್ರಯಾಣ ಮಾಡಿರುವನು ಯುದ್ಧಭೂಮಿಯಲ್ಲಿ ಸ್ಪೇನ್ ಸೈನಿಕರು ೮೦,೦೦೦ ಮಂದಿ ಆಗುತ್ತಾರೆಂದು ತಂತಿ ವರ್ತಮಾನ ಬಂದಿದೆ

Printed and Published by the Rev H GULLIFORD, Proprietor and Manager, Wesleyan Mission Press, Mysore 7/10/1909

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ಪೈಸ್ಸ್ಯ. | ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೦೯ ನೇ ಇಸವಿ ಅಕ್ಟೋಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೨೦

'ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ

ಮೈಸೂರಿನಲ್ಲಿ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೮—೦

ಹೊರ ಊರವರು ಅಂಚೆ ಮೂಲಕ ಅಂಚೆಯ ವೆಚ್ಚ ಸಹ — ರೂ ೧—೧೪—೦

, , , ೦—೧೫—೦

ಚಂದಾದಾರರ [illegible] ನಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು [illegible] ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ [illegible] ಆಗುವ ಪತ್ರಿಕೆಯ ನಿಶಾನದಲ್ಲಿ [illegible] ನಮೂದಿಸಬೇಕು ನಮ್ಮ [illegible] ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ನ್ಯೂ ಜೆರ್ ಬಾಂ ತೈಲವು

47 21

[illegible] ಪಾರ್ಶ್ವವಾಯು, [illegible] ಹುಲ್ಲುನೋವು—ಇವುಗಳಿಗೆ ಈ ತೈಲವನ್ನು [illegible] ಈ ಔಷಧವನ್ನು [illegible] ಭಾಗಗಳ ಸಾವಿರಾರು ಜನರು [illegible] ಈ ಔಷಧ [illegible] ಇವನ್ನು [illegible] ಈ ತೈಲವು [illegible] ಹೆಚ್ಚಾಗಿ [illegible] ಇವರೆಲ್ಲ ಇವನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕು [illegible] ತೈಲವು [illegible]

[illegible] ಈ ತೈಲವನ್ನು ಎಲ್ಲಾ [illegible] ನಮ್ಮ ಏಜಂಟರ ವಿಳಾಸ— [illegible]

ಎಸ್ ಪೀಟರ್ಸ್,

೩೩, ಪೋನ್ನಪ್ಪಚೆಟ್ಟಿ ಬೀದಿ ಪೇರೂರಿ, ಮದರಾಸ್

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧ ಪುರುಷನ ಜೀವಮಾನ ಚರಿತ್ರೆ—(19೦ ಪುಟಗಳು, ಸೊಗಸಾದ ಒಟ್ಟೆ ಬೈಂಡು ಕ್ರಯ ಎಂಟು ಆಣೆ) ಒಂದು ನೂರು ವರುಷಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಅಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(1 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿ ಕೊಳ್ಳಿ [10—11]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಪ್ಲೇಗಿನ ಔಷದ

28-35

ಕೊಳ್ಳೇಗಾಲದ ಪ್ರಾಂತದಲ್ಲಿ ಮೊದಲು ಪ್ಲೇಗ್ ರೋಗವು ವ್ಯಾಪಿಸಿದ್ದಾಗ ಈ ಲಕ್ಷ್ಮೀವಿಲಾಸ ರಸವು ಕಂಡುಹಿಡಿಯಲ್ಪಟ್ಟು ಉಪಯೋಗಿಸಲಾಗಿ ಪ್ರತಿಯೊಬ್ಬ ಪ್ಲೇಗು ರೋಗಿಗಳೂ ಗುಣವಾಗಿರುತ್ತದೆ ಈವರೆಗೆ ಸಾವಿರಾರು ಜನಗಳು ಗುಣ ಹೊಂದಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುತ್ತಾರೆ—ಅವುಗಳನ್ನು ವಿವರಿಸಲು ಸ್ಥಳ ಸಂಕೋಚವಿರುವ ಸಂಭವವಿಲ್ಲವಿದೆ

ಪ್ಲೇಗು ಊರೊಳಗಿರುವಾಗ ಜ್ವರವು ಕಾಣಿಸಿಕೊಂಡ (ಯಂತಹ ಜ್ವರವೇ ಆಗಲಿ) ಕೂಡಲೇ ಈ ಲಕ್ಷ್ಮೀವಿಲಾಸ ರಸವನ್ನು ಮತ್ತು ಶ್ರೀನಿವಾಸ ತೈಲವನ್ನು ಉಪಯೋಗಿಸಿದಲ್ಲಿ ಪ್ರತಿಯೊಬ್ಬರಿಗೂ ಖಂಡಿತ ಗುಣವಾಗುತ್ತದೆ ಅಷ್ಟು [illegible] ಪ್ಲೇಗು [illegible] ತವಾಗಿಯೇ ತರಿಸಿಟ್ಟು ಕೊಂಡಿರುವ [illegible] ಔಷಧವ ಜೊತೆಯೂ ಅನುಪಾನ ಪತ್ರವಿರುವುದು

ಪ್ಲೇಗು [illegible] (ಹೊಟ್ಟೆಗೆ ತೆಗೆದುಕೊಳ್ಳತಕ್ಕದ್ದು) ರೂ ೧— —೦

ಶ್ರೀನಿವಾಸ ತೈಲ (ಮೈಗೆ ಹಚ್ಚುವುದಕ್ಕೆ) ರೂ ೦—೨—೦

[illegible] ಪೋಸ್ಟೇಜು ಬೇರೆ

[illegible]

ವಿಳಾಸ —[illegible] ಪಂಡಿತರು ಮೈಸೂರು

ಭೀಮಸೇನಮಹಾವೀರ.

72 1

THE LIFE OF BHEEMASENA

With a short History of Mahabharata

ಈ ಹೊಸಪುಸ್ತಕದಲ್ಲಿ ಮಹಾಭಾರತ ಕಥೆಯು [illegible] ಸಂಕ್ಷೇಪವಾಗಿಯೂ, [illegible] ಸಮಗ್ರವಾಗಿಯೂ, [illegible] ಗಳಿಂದ [illegible] ಪ್ರಾಯಶ್ಚಿತ್ತ [illegible] ಯಿಂದ [illegible] ಸಂಗ್ರಹವಾಗಿಯೂ [illegible] ದವಾಗಿಯೂ, ಮನೋಹರವಾಗಿಯೂ [illegible] ಸದ್ವಿದ್ಯಾಭ್ಯಾಸಿಗಳಾದ [illegible] (Prose) [illegible] ಸುಂದರಾಕ್ಷರ ಒಳ್ಳೆಯ ಕಾಗದ [illegible] 1 [illegible] ಪ್ರತಿ 1 ಕ್ಕೆ [illegible] 12 [illegible] ಆಂಗ್ಲೇಯ [illegible] ದಸರಾ 1 [illegible] ಚಾಮರಾಜೇಂದ್ರ [illegible] 12 [illegible]

ವಿಳಾಸ —ಮೈಸೂರಿನಲ್ಲಿ—[illegible] ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಅರಸುಗಳ ಬೋರ್ಡಿಂಗ್ ಸ್ಕೂಲ್ ಮಾಸ್ಟರ್ ಎಂ ವಿ [illegible]

ಖಂಡಿತ ದೊರೆಯಲಾರದು

70 4

ಇಂಗ್ಲೀಷ್ ಕಲಿಯುವ ಪುಸ್ತಕ, ಕ್ರಯ ೧—೮—೦ ಇಂಗ್ಲೀಷ್ ಭಾಷೆಯನ್ನು ಓದುವದಕ್ಕೂ, ಬರೆಯುವದಕ್ಕೂ, ಮಾತನಾಡುವದಕ್ಕೂ, (ತರ್ಜುಮೆ) ಭಾಷಾಂತರ ಮಾಡುವದಕ್ಕೂ, [illegible] ಮೊದಲಾದ ಕಾಗದಗಳನ್ನು ಬರೆಯುವ ವಗೈರೆ ಮೊದಲಾದ ಇನ್ನೂ ಅನೇಕ ಉಪಯೋಗವಾದ ವಿಷಯವನ್ನು ಈ ಪುಸ್ತಕ ಸಹಾಯದಿಂದಲೇ ೧—೨ ತಿಂಗಳಲ್ಲಿಯೇ ತಾನಾಗಿ ಕಲಿಸುವ ಉತ್ತಮವಾದ ಪುಸ್ತಕವಿದು ಕ್ರಯ ರೂ ೧—೮—೦

ವಿಳಾಸ —[illegible] ಕಂಪನಿ, ಲಕ್ಷ್ಮೀಪುರ್ ಪೋಸ್ಟ್

೧ ನೆ ಸಂಪುಟ ಕನ್ನಡ ಕಥಾಸರಿತ್ಸಾಗರ, ಕ್ರಯ ೧—೨—೦ ೧ ಮತ್ತು ೨ ನೇ ಸಂಪುಟ ಸೇರಿರುವ ಬೈಂಡಾಗಿರತಕ್ಕ ಪುಸ್ತಕ ೩—೦—೦ ನವರಸಯುಕ್ತವಾಗಿ ಪೂರ್ವಕವಿ ಸೋಮದೇವನಿಂದ ರಚಿಸಿದ ಸಂಸ್ಕೃತಗ್ರಂಥವನ್ನು ಸಾಗರದ ಸ್ಕೂಲ್ ಹೆಡ್ಮಾಸ್ಟರಾಗಿದ್ದ ಗತಿಸಿದ ಮ|| ರಾ ಎನ್ ಶ್ರೀಕಂಠಯ್ಯನವರಿಂದ ಕನ್ನಡದಲ್ಲಿ ಬರೆಯಲ್ಪಟ್ಟು ಮ|| ಭಾಗೀರಥಿ ಸಂಪಗಿರಾಮಯ್ಯನವರಿಂದ ಹೊರತಂದು ಈಗ ಓದುವದಕ್ಕೆ ಪ್ರಚಾರದಲ್ಲಿರುವ ಅರೇಬಿಯನ್ ನೈಟ್ಸ್ ಬೃಹತ್ಕಥಾಮಂಜರಿ ಮೊದಲ ಇವುಗಳಿಗಿಂತಲೂ ಅತ್ಯಂತ ಸ್ವಾರಸ್ಯವಾದ ಪುಸ್ತಕವಿದು ೧ ೨ ನೇ ಸಂಪುಟ ಸೇರಿದ ಪುಸ್ತಕ ರೂ ೩—೦—೦

ತಾವಾಗಿ ಇಂಗ್ಲೀಷು ಕಲಿಯುವಿಕೆ ಕ್ರಯ ೧—೮—೦ ಇಂಗ್ಲೀಷ್ ಭಾಷೆಯನ್ನು ಓದಲೂ ಬರೆಯಲೂ, ಮಾತನಾಡಲೂ, ಬೋಧಕರ ಸಹಾಯವಿಲ್ಲದೆ ತಿಳಿಸಿ ಕಲಿಸುವ ಪುಸ್ತಕವಿದು ಕ್ರಯ ರೂ ೧—೨—೦

ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕಶಾಲಾ ಲಕ್ಷ್ಮೀಪುರ್ ಪೋಸ್ಟ್, ಮಾಲೂರ್, ಕೋಲಾರ

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು (30 34)

ತಲೆನೋವು, ಗಂಟು ಊತ, ವಾತ, ಸಂಧಿವಾತ, ಉಳುಕು [illegible] ಗಂಟು, ಗಂಟಲು ನೋವು ಅಸ್ಥಿರಾಂಗವಾಯು, ಎದೆಶೀತ ಘಾಯ, ಜಖಮು, ಇತಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರ ನಾಲ್ಕು ತಿಂಗಳು [illegible] ಗಜಕರ್ಣ, ತುರಿ ಕಜ್ಜಿ [illegible] ಗಳು ಸಾರವಾಗುವವು ಇದರಿಂದ ಉರಿಯೂ ಬರುವದಿಲ್ಲ ಚರ್ಮಕ್ಕೆ ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು [illegible] ಡಬ್ಬಿಗಳಿಗೆ [illegible]

ಆಸ್ತಮಿಶ್ರಣ	೩ ೦ ೦
ಜೀಳುಕಡಿತದ ಮದ್ದು	೬ ೮ ೦
ಪುಷ್ಟಿಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದು ಜನಗಳಿಗೆ	೦ ೮ ೦
ಜುಲಾಬು ವಟ್ಟಿ—ಜುಲಾಬಿಗೆ	೦ ೨ ೦
ನೇತ್ರಾಂಜನ—ಮಂದದೃಷ್ಟಿಗೆ	೦ ೪ ೦
ಬಿಜ್ಜ [illegible]—ಮಕ್ಕಳ [illegible]	[illegible]
ಕೇಶವರ್ಧಿನೀ ತೈಲ—ತಲೆಯ ಬೊಡ್ಡೆಗೆ	೧ ೦ ೦
ಕಫನಾಶಕ ಚೂರ್ಣ—ಆಸ್ತಮ ರೋಗಕ್ಕೆ	೨ ೮ ೦

ದಯವಿಟ್ಟು ಕ್ಯಾಟಲಾಗಿಗೆ ಬರಯಿ ವಿಳಾ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —' ಅಮೃತಾಂಜನ,' ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 40

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಳಸಲಾಗುತ್ತಿರುವ ಟೋಪಿಗಳ ಮಾರಟವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೦ ಆ, ೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ನಿನಗೆ ವ್ಯಸನವೆಲ್ಲವೋ ?

ನಿನಗೆ ವ್ಯಸನವೆಲ್ಲವೆ ಏನೇನಿದಾ —ಎಂದರೆ, ನಿನಗೆ ಯಾವ ನೋವೇ ಉಂಟಾಗಿಲ್ಲ... ನಿನಗೆ ... ಸಲವಾಗಿಯೂ ಶಾಂತ್ರವೃತ್ತಿಯಾಗುತ್ತಿದೆಯೋ ? ' ಎಂದು ನನ್ನನ್ನು ... ಕೇಳಿಕೊ, ಹಾಗೆ ಇಲ್ಲದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಆ ... ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ



(೧೨ ಆನೆ ಬುತ್ತಿ ಪರಿಮಾಣ)

ಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಳೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುತ್ತವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ, ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಆಶಕ್ತಿ ಎದೆಯು ಕಲ್ಲಣಿಸುವುದು ತಲೆನೋವು ... ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆ ... ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾಗಿವೆ ಗಂಡಸರಾಗಲಿ ಹೆಂಗಸರಾಗಲಿ ಮಕ್ಕಳಾಗಲಿ ...ದಲ್ಲಿರುವ ಮಲವನ್ನೂ ಕಶ್ಮಲವಾದ ... ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಎತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ... ಹಿತವಾಗಿಯೂ ಇಟ್ಟು ಶಿಘ್ರದಲ್ಲಿ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [67 7]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ... ಮಾತ್ರೆಗಳು ... ೪ ಆಣೆ ಬುಡ್ಡಿ ... ಇರುವುದಕ್ಕಿಂತ ಹೆಚ್ಚು ಮಾತ್ರೆಗಳಿರುವ ... ಔಷಧಗಳನು ನಾವು ... ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ ... ಕಂಪೆನಿ ... —ಇವರಲ್ಲಿ ದೊರೆಯುವುದು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣಾಂಶವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಜೀವಿಸಬೇಕಾಗಿದೆ

ಅವರ ಸ್ನಾಯುಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ... ಅವರಿಗೆ ... ಬಲಕಾರಿಯಾದ ಸೇವನೆ ... ಅವಶ್ಯಕ

SCOTT'S EMULSION 6 41

(ಸ್ಕಾಟ್ಸ್ ಇಮಲ್ಷನ್)

... ದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ... ಉತ್ಕೃಷ್ಟ ... ಗುಣ ಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ವಿಷಯವನ್ನು ಸೇವನೆ ಮಾಡುತ್ತಾ ... ಲದವರು ... ಕಂಡು ...

ಕೈಯಿಂದ ಮುಟ್ಟದೇನೇ ತಯಾರಾದದ್ದು

... ದ್ರವ್ಯ ವ್ಯಾಪಾರಸ್ಥರೆಲ್ಲರಲ್ಲಿ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

... ಗುರುತು ಇದು ... ಈ ಔಷಧ ...

ಸಂಜೀವಿನೀ ಔಷಧಾಲಯ, ಮೈಸೂರು. 28 J8

ಎ. ಎಸ್. ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನರದೌರ್ಬಲ್ಯ, ನಿದ್ರಾಭಂಗ, ಎದೆ ಕಟ್ಟು, ರಕ್ತದೋಷ ಚರ್ಮವ್ಯಾಧಿ ಜೋಮು, ವಾಯುದೋಷಗಳೂ, ಛಳಿಜ್ವರ, ಕ್ಷಯ, ... ನೆತ್ತಿಯುರಿ, ತಲೆಭಾರ, ಮಾಂಸಖಂಡ ... ಭ್ರಮಣೆ, ಮಂದಾಗ್ನಿ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸದಿಂದ ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಿಯಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದ್ದಾರೆ ... ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತರಿನೋವು, ಕಲೆಭಾರ, ... ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರತರವಾದ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ

ಬಿ. ಕೆ. ಸ್ವಾಮಿ,
ಪ್ರೊಪ್ರೈಟರ್

CHAMRERLAIN S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4 41

... ತರದ ಕೆಮ್ಮು, ಗಂಟಲು ಗೊರೆನ್ನುವುದು, ಮುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ... ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹು ಶ್ರೇಷ್ಠವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಶರೀರದ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಲಕ್ಷಣವನ್ನು ನಿಲ್ಲಿಸಿಬಿಡುತ್ತವೆ ಎದೆ ಒಡೆಯುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪ್ರಾಣಹರಿ 18 37



ಇದ ಸಾಧಾರಣ ಜ್ವರ, ಛಳೀಜ್ವರ, ದೊರೆಜ್ವರ, ಪಿತ ಜ್ವರ ... ಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ... ಕಳುಹಿಸಿ ಕೊಟ್ಟ ... ಜ್ವರದಿಂದ ... ಬಹು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದ ... ಉಗ್ರಜ್ವರ ... ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ... ದಯವಿಟ್ಟು ಇನ್ನೊಂದು ... ಮನ್ನು ... ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —... ೧ಕ್ಕೆ ... ಆಣೆ ... ರೂ ... ರೂ ... ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾಬಿಡಲಾಗುವದು

ಅಮೃತಾಂಜನ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ... ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ... ಪರಿಹರಿಸಿ ಕೂಡಲೆ ಗುಣಕೊಡುವದು ಇದು ಹೆಂಗಸರು ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ... ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಇವರ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆನ್ರಿಯ ... ಸ್ವರೂಪವನ್ನು ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ... ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಲ್ಲಿಯೂ ಕೇಳಿ —

ಅಸ್ಸಿಸ್ಟೆಂಟ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಅಕ್ಟೋಬರ್ ತಾ 2 ಕ್ಕೆ ಮುಗಿದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಾರ್ಥ ಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	30	20		11	17
ಕೋಲಾರ	302	1 3	20	1 270	
ತುಮಕೂರು	90	12	19	123	
ಮೈಸೂರು					
ಹಾಸನ	41	11	2	170	
ಶಿವಮೊಗ್ಗ					
ಕಡೂರು				1 13	
ಚಿತ್ರದುರ್ಗ	23	20		5	
ಮಾಂಡ್ರನೆ ಸ್ವಾನಿಟರಿ	101	205	7	4 1	
ಒಟ್ಟು	670	311	53	2,161	17

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಶ್ವೀಜ ಶುದ್ಧ ಪಾಡ್ಯಮಿ ಶುಕ್ರವಾರ ದಿಂದ ಆಶ್ವೀಜ ಶುದ್ಧ ಸಪ್ತಮಿ ಗುರುವಾರದವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳು ಮಾಸ
15	ಶುಕ್ರ *	ಪಾಡ್ಯಮಿ	16	ಚಿತ್ತ	1 20	30
16	ಶನಿ	ಬಿದಿಗೆ	20 10	ಸ್ವಾತಿ	6 30	31
17	ರವಿ †	ತದಿಗೆ	28 19	ವಿಶಾಖ	12 08	1
18	ಚಂದ್ರ	ಚೌತಿ	31 31	ಅನೂರಾಧ	17 12	2
19	ಮಂಗಳ	ಪಂಚಮಿ	32 18	ಜ್ಯೇಷ್ಠ	20 28	3
20	ಬುಧ ‖	ಷಷ್ಠಿ	33 0	ಮೂಲ	23 42	4
21	ಗುರು §	ಸಪ್ತಮಿ	31 08	ಪೂರ್ವಾಷಾಢ	23 16	5

* ಶೂನ್ಯತಿಥಿ, ಶರನ್ನವರಾತ್ರಾರಂಭ, ಚಂದ್ರೋದಯ, ಮಯಲಕ್ಷ್ಮೀವ್ರತ, ದ್ವಿತೀಯಾತಿಥಿ ಪಶ್ಚಾತ್ ಚಂದ್ರ † ವಿಷುವತ್ಪುಣ್ಯಕಾಲ ... ಯೋಗ ‡ ಉಪಾಂಗಲಲಿತಾ ವ್ರತ ... ಪುಸ್ತಕಮಂಡಲ ... ದಾಸಾರ್ಪಣ, ಕಾತ್ಯಾಯಿನೀ ಪೂಜಾ § ಕಾಳರಾತ್ರಿ ಪೂಜಾ ... ವಲ್ಲಿ ಮಹಿಷಾಸುರ ಸಂಹಾರ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೭ ೦	೧೪ ೮ ೦
ಕೆಂಬತ್ತ ಅಕ್ಕಿ ಅವಲ್		೧೪ ೮ ೦	೧೪ ೦ ೦
,, ದುಯಂ		೧೩ ೦ ೦	೧೩ ೮ ೦
ಜಾಪಾನ್ ಅಕ್ಕಿ		೧೬ ೦ ೦	೧೫ ೦ ೦
ಸಣ್ಣಕ್ಕಿ ಅವಲ್		೧೭	೧೭ ೦ ೦
,, ದುಯಂ		೧೬ ೦ ೦	೧೫ ೦ ೦
ಕೊಗನೀ ಬೀಳ ಪಲ್ಲಾ ೧ಕ್ಕೆ		೧ ೮ ೦	೧೫ ೮ ೦
,, ದುಯಂ		೧೫ ೦ ೦	೧೫ ೦ ೦
ಕೈರ ರಾಗಿ ಪಲ್ಲಾ ೧ಕ್ಕೆ		೭ ೧೨ ೦	೮ ೮ ೦
ಕಾರ್ರಾಗಿ		೭ ೬ ೦	೨ ೪ ೦
ಜೋಳ		೭ ೧೨ ೦	೬ ೮ ೦
ಹುಲಸಂದೆ ಪಲ್ಲಾ ೧ಕ್ಕೆ		೧೨ ೦ ೦	೧೧ ೮ ೦
ಬಿಳೀ ಅವರೆ		೧೩ ೮ ೦	೧೬ ೦ ೦
ತೊಗರಿ		೧೨ ೬ ೦	೧೧ ೮ ೦
ಉದ್ದು		೧೯ ೦ ೦	೧೪ ೦ ೦
ಕಡಲೆ		೧೪ ೯ ೦	೧೧ ೦ ೦
ಎಳ್ಳು ಸೇ ೧೨೭ ಕ್ಕೆ		೧೫ ೦ ೦	೧೪ ೮ ೦
ಹುರುಳಿ		೧೨ ೧೨ ೦	೧೨ ...
ಹರಳು ೧೨೭ ಸೇರಿಗೆ		೧೪ ೦ ೦	[illegible]
ತೆಂಗಿನಕಾಯಿ ಮಣ ೧ಕ್ಕೆ		೨ ೮ ೦	[illegible]
ಮೆಣಸಿನಕಾಯಿ		೬ ೦ ೦	[illegible]
,, ದುಯಂ		೫ ೮ ೦	[illegible]
ಬೆಲ್ಲ ದೊಡ್ಡ ಅಚ್ಚು		೯ ೮ ೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೫ ೮ ೦	೪ ೧೦
ಹರಳೆಣ್ಣೆ ,,		೫ ೮ ೦	೪ ೧೨
ಕೊತ್ತುಂಬರಿ ಪಲ್ಲಾ ೧ಕ್ಕೆ		೮ ೮ ೦	೯ ೦
ಉಪ್ಪು		೬ ೦ ೦	೫ ೧೨
ಹುಣಸೇ ಹಣ್ಣು		೧ ೦ ೦	೧ ೧೨
,, ತಿಳಿದು		೧ ೦ ೦	೧ ೬
ತುಪ್ಪ ಮಣ ೧ಕ್ಕೆ		೧೬ ೮ ೦	೧೪ ೦
ನಯಿಣ್ಣೆ ಪೆಟ್ಟಿ ೧ಕ್ಕೆ		೪ ೦	೪ ೨
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೪ ೮
ಅಡಕೆಕಾಯಿ ಮಣ ೧ಕ್ಕೆ		೦ ೮ ೦	೦ ೧೨
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೦ ೦	೦ ೧೧
ವಿಸ್ಕಿ (ಶಕ್ಕರ) ಕೆಂಪು		೧೫ ೬ ೦	೧೫ ೯
,, ಹಸಿರು		೧೬ ೦ ೦	೧೫ ೧೪
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೭
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೪ ೦

ಮೈಸೂರು ಸಂಸ್ಥಾನದಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17—9—1909 ರಿಂದ 21—9—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	0	0
ಮೈಸೂರು ,,	140	106	0	0
ಬೆಂಗಳೂರು ಡಿಸ್ಟ್ರಿಕ್ಟು	51	30	69	62
ಮೈಸೂರು ,,	91	68	0	0
ಕೋಲಾರ್ ,,	0	0	10	6
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	1	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	12	8	0	0
ಶಿವಮೊಗ್ಗ ,,	1	0	0	0
ಜುಮ್ಲಾ	297	225	79	68

ಬೆಂಗಳೂರು ಸಿಟಿ ರಿಲೀಫ್ ಫಂಡು.

ಈ ಫಂಡಿನ ಜಮಾ ಖರ್ಚು

ಈ ಫಂಡಿನ ಪ್ರೆಸಿಡೆಂಟರಾದ ಮೆ॥ ಎಂ. ಹರಿಯಣ್ಣನವರು ಕಳುಹಿಸಿರುವ ಜಮಾ ಖರ್ಚಿನ ಲೆಕ್ಕಗಳನ್ನು ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಲು ಸಂತೋಷಪಡುತ್ತೇವೆ. ತಾ. ೩-೧೨—೧೯೦೮ ರ ಲಾಗಾಯಿತು ತಾ. ೩೧—೭—೧೯೦೯ ರ ವರೆಗೆ ನಡೆದ ಜಮಾ ಖರ್ಚು ವಿವರವೇ —

ಜಮಾ ಬಾಬು	ರೂ ಆ ಪೈ
ಪಾಗ್ಸ್ ನವರಿಂದ ವಸೂಲಿ ಬಾಬುಗಳು	೧೭,೫೩೭—೦—೦
ಈ ಪ್ರೈಕಿ ನಸೂಲಾದ ಮೊಬಲಗು	೧೫,೯೩೩—೦—೦
ಖಾಲಿ ವಸೂಲಾಗಬೇಕಾದ ಮೊಬಲಗು	೧,೫೯೫—೦—೦

ಖರ್ಚು ಬಾಬು

ತಾ ೩—೧೨—೧೯೦೮ ರ ಲಾಗಾಯಿತು ತಾ ೩೧—೭— ೧೯೦೯ ರವರೆಗೆ ಖರೀದಿ ಆಗಿರುವ ರಾಗಿ ಮೂಟೆ ೧೨,೧೭೩ ಕ್ಕೆ ರೂಪಾಯಿ	೬೭,೯೫೩—೧೦—೫
ಪಲ್ಲ ೧೨೧೭೩ ಮೂಟೆಗಳನ್ನು ನಾಲ್ಕಾಣೆಗೆ ೩-೩ ಸೇರಿನ ಪ್ರಕಾರ ವಿಕರಿ ಮಾಡಿದ್ದರಲ್ಲಿ ಬಂದ ನಷ್ಟ	೧೩,೯೭೭—೧೪—೩
ತಾ ೩—೧೨—೧೯೦೮ ರ ಲಾಗಾಯಿತು ತಾ ೩೧—೭—೧೯೦೯ ರವರೆಗೆ ಖರೀದಿ ಮಾಡಿದ ಅಕ್ಕಿ ಮೂಟೆ ೩,೭೫೬ ಕ್ಕೆ ರೂಪಾಯಿ	೩೩,೩೧೮—೧೪—೧೧
ಪಲ್ಲ ೩,೭೫೬ ನ ಪಡಿಗಳನ್ನು ನಾಲ್ಕಾಣೆಗೆ ೨ ಸೇರು ಪ್ರಕಾರ ವಿಕರಿ ಮಾಡಿದ್ದರಲ್ಲಿ ಬಂದ ನಷ್ಟ	೧,೨೨೫—೩—೭
ಜಮಾ ಖರ್ಚು ಬಾಕಿ ಖಾತೆಯಲ್ಲಿ ರೂಪಾಯಿ	೬೮೧—೧೦—೨

ಚಂದಾದಾರರಿಂದ ಬರಬೇಕಾದ ಮೊಬಲಗು ವಸೂಲಿ ಆಗಿ ಖಾಲಿ ಉಳಿದಿರುವ ಮೊಬಲಗಿಗೆ ಕೂಡಿಸಿ ಅದನ್ನು ಶಾಶ್ವತವಾದ ಧರ್ಮ ಕಾರ್ಯಕ್ಕಾಗಿ ಸರ್ಕಾರದ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡಬೇಕೆಂದು ಕಮಿಟಿ ಮೆಂಬರುಗಳು ತೀರ್ಮಾನ ಮಾಡಿರುವ ಪ್ರಕಾರ ಚಂದಾ ವಸೂಲ್ ಮಾಡಬೇಕೆಂತಲೂ ಅಭಿಪ್ರಾಯಪಟ್ಟಿರುತ್ತಾರೆ.

ವ್ಯವಸಾಯ ವಿಷಯಗಳು.

ತಾಳೇನಾರಿನ ಉಪಯೋಗ

ತೆಂಗಿನನಾರು ಕೈಗಾರಿಕೆ ಕಸಬಿನಲ್ಲಿ ಅನೇಕ ಕೆಲಸಗಳಿಗೆ ಉಪಯೋಗಪಡುವುದು ಸರಿಯಷ್ಟೆ. ಇದರಂತೆ ತಾಳೇ ನಾರು ಬಹಳ ಉಪಯೋಗಕರವಾದದ್ದು. ತಾಳೇ ಮೋಸುಗಳು ಏಕ ಪನಾಗಿಯೂ ಕರನೆ(?)ಯಾರಿ ಉದ್ದವಾಗಿಯೂ ಇರುತ್ತವೆ. ಇದರ ನಾರು ಬಹಳ ಬಲವಾದದು. ಈ ಮೋಸು ೬-೩ ಅಂಗುಲ ದಪ್ಪವಾಗಿರುತ್ತದೆ. ಮತ್ತು ಚೆನ್ನಾಗಿ ಬಲಿತು ನೀಳಕ್ಕೆ ತಗಲಿರುವಾಗ ಇದನ್ನು ಕತ್ತರಿಸಿಕೊಂಡು ಸಣ್ಣ ಚಾಕುವಿನಿಂದ ಇವರಲ್ಲಿ ನಾರು ತೆಗೆದು, ಒಣಗಿಸಿ ಪಾಕಮಾಡಿ ಮಾರಾಟ ಮಾಡುತ್ತಾರೆ. ಈ ನಾರಿನಿಂದ ಆರಂಬಕ್ಕೆ ಬೇಕಾಗುವ ಹಗ್ಗಗಳನ್ನೂ ದನದ ಕೊಟ್ಟಿಗೆ ಮತ್ತು ಮನೆಗಳಿಗೆ ಪೊರಕೆಗಳನ್ನೂ ಮಾಡಬಹುದು.

ದನಸಾಕಾಣಿಕೆಯು

ದನಗಳ ತಳಿಯನ್ನು ಉತ್ತಮಪಡಿಸುವುದರಲ್ಲಿ ಗಮನಕೊಡಬೇಕಾದ ಅಂಶಗಳ್ಯಾವವೆಂದರೆ,—ಮಂದೆಯಲ್ಲಿ ೪೦ ಹಸುಗಳಿಗೆ ಒಂದು ಒಳ್ಳೇ ಗೂಳಿಯಂತೆ ಬಿಡಬೇಕು. ಗೂಳಿಯಾಗಿ ಉಪಯೋಗಿಸಲ್ಪಡುವ ಹೋರಿಗರುಗಳ ವಿನಹ ನಾಲಕ್ಕಾರು ವಾರದ ಮಿಕ್ಕವುಗಳನ್ನು ಒಂದು ವರುಷ ತುಂಬುತ್ತಲೇ ಬೀಜವಾಡಬೇಕು. ಕರುಗಳನ್ನು ಬಹಳ ಚೆನ್ನಾಗಿ ಮೇಯಿಸಬೇಕು. ಮೇವು ಪೈರುಗಳನ್ನು ಬೆಳದು ದನಗಳಿಗೆ ಹಾಕಿ, ಹೆಚ್ಚಿಗೆ ಮೇವನ್ನು ಕ್ಷಾಮಕಾಲಗಳಲ್ಲಿ ಒದಗುವಂತೆ ಕೂಡಿಸಿಡಬೇಕು. ಕರುಗಳಿಗೆ ಮನೆಗಳಲ್ಲೇ ಕೈಯಿಂದ ಮೇವು ತಿನ್ನಿಸಬೇಕು. ಗೋಮಾಳದ ಜಮಾನುಗಳನ್ನು ಉತ್ತಮಪಡಿಸಿ, ದನದ ಮಂದೆಗಳನ್ನು ಜಮೀನಿನಲ್ಲೆಲ್ಲಾ ಸ್ವೇಚ್ಛೆಯಾಗಿ ತಿರುಗಲಿಕ್ಕೆ ಬಿಡದೆ ಸಣ್ಣ ಸಣ್ಣ ಶಾಕೆಗಳಾಗಿ ವಿಂಗಡಿಸಿಕೊಂಡು ಒಂದೊಂದು ತಾಕಿನಲ್ಲಿ ಒಂದೊಂದು ಸಲವಂತೆ ಕ್ರಮವಾಗಿ ಮೇಯಿಸಬೇಕು.

ಒತ್ತರದ ಸೂಡಿಯನ್ನು ಒಂದೊಂದಾಗಿ ನಾಟುವ ಕ್ರಮ

ಮದರಾಸು ಸರ್ಕಾರಿ ವ್ಯವಸಾಯ ಇಲಾಖೆಯವರು ಬತ್ತದ ನಾಟಿ ಪೈರು ಮಾಡುವುದರಲ್ಲಿ ಸೊಸಿಗಳನ್ನು ಗುತ್ತಿಯಾಗಿ ನಾಟುವುದಕ್ಕೆ ಬದಲಾಗಿ ಒಂದೊಂದಾಗಿ ನಾಟಿ ಅಜಮಾಯಿಷಿ ಮಾಡಿದ್ದರಲ್ಲಿ ಉತ್ಪತ್ತಿಯು ಗುತ್ತಿಯಾಗಿ ನಾಟುವ ಕ್ರಮದಿಂದ ಬರುವುದಕ್ಕಿಂತಲೂ ಸುಮಾರು ಒಂದೂವರೆಯಷ್ಟು ಹೆಚ್ಚಿರುತ್ತಿಯಲ್ಲದೆ ಈ ತರಹಾ ಪೈರಿನಿಂದ ಆಗುವ ಬತ್ತವೂ ಕೂಡ ಶ್ರೇಷ್ಠವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ, ಗುತ್ತಿಯಾಗಿ ನಾಟುವ ಕ್ರಮದಲ್ಲಿ ೧೫-೨೦ ಸೊಸಿಗಳು ತೆಗೆದುಕೊಳ್ಳುವ ಸ್ಥಳವೂ ಗೊಬ್ಬರವೂ ಮೊಳ್ಳಂದ ಕ್ರಮದಲ್ಲಿ ಒಂದೇ ಸೊಸಿಗೆ ಒದಗುವುದರಿಂದ ನಾಟಿದ ಸೊಸಿಯು ಬಹಳ ಬಲವಾಗಿ ಬೆಳೆಯುವುದಕ್ಕೆ ಅವಕಾಶವುಂಟಾಗಿ, ತನೆಗಳಲ್ಲಿ ಕಾಳುಗಳು ಹೆಚ್ಚಾಗಿಯೂ ಮತ್ತು ದಪ್ಪನಾಗಿಯೂ ಕಟ್ಟುತ್ತವೆ. ಪುನಃ ದಪ್ಪನಾದ ಬತ್ತದಿಂದ ಹುಟ್ಟುವ ಸೊಸಿಗಳು ತಾಯಿರುವ ಎಲ್ಲಾ ಲಕ್ಷಣಗಳನ್ನೇ ಹೊಂದಿ ಹೆಚ್ಚಾಗಿ ಕೌಲುಗಳೊಡೆದು ಧಾನ್ಯದ ಉತ್ಪತ್ತಿಯೂ ಜಾಸ್ತಿಯಾಗುವುದು. ಈ ಕ್ರಮವನ್ನು ಬಿಡದೆ ಅನುಸರಿಸುತ್ತಾ ಬಂದರೆ ಕಾಳಿನ ದಪ್ಪನಾಗುವಿಕೆಯೂ, ಸೊಸಿಗಳಲ್ಲಿ ಕೌಲುಗಳು ಒಡೆಯುವ ಶಕ್ತಿಯೂ ಮತ್ತು ಧಾನ್ಯದ ಉತ್ಪತ್ತಿಯೂ ಕ್ರಮೇಣ ಹೆಚ್ಚುತ್ತಲೇ ಬರುವುವು. ಈ ಅಂಶವು ಪಾಲೂರು ಅಗ್ರಿಕಲ್ಚರಲ್ ಸ್ಟೇಷನ್‌ನಲ್ಲಿ ಜರುಗಿದ ಅಜಮಾಯಿಷಿಗಳಿಂದ ಸಿದ್ಧರಪಟ್ಟಿದೆ. ಇದಕ್ಕಾಗಿಯೇ ೧೯೦೭-೦೮ ನೇ ಸಾಲಿನಲ್ಲಿ ಬೇರೆ ಬೇರೆ ೧೬ ತಾಕುಗಳಲ್ಲಿ ಒಂದೊಂದೇ ಸೊಸಿ ನಾಟಿ ಪ್ರಯೋಗ ನೋಡಿದರು. ಎಕರೆಗೆ ೧,೯೫೬ ಪೌಂಡಿನಂತೆ ಬತ್ತ ಹುಟ್ಟುವಳಿಯಾಯಿತು. ಅದೇ ಜಮೀನಿನಲ್ಲಿ ೧೯೦೮-೦೯ ರಲ್ಲಿ ೩,೨೬೪ ಪೌಂಡು ಹುಟ್ಟುವಳಿಯಾಯಿತು. ಈ ಅಜಮಾಯಿಷಿ ತಾಕುಗಳಿಗೆ ಎರಡು ಸಾಲುಗಳಲ್ಲೂ ಒಂದೇ ತರದ ಗೊಬ್ಬರವನ್ನು ಒಂದೇ ಪ್ರಮಾಣದಲ್ಲಿ ಹಾಕಿತ್ತು. ಮಿಕ್ಕ ಹವಾ, ನೀರು, ಮುಂತಾದ ಸ್ಥಿತಿಗಳಲ್ಲಿ ವ್ಯತ್ಯಾಸವೇನೂ ಇರಲಿಲ್ಲ. ಆದ್ದರಿಂದ ಈ ಎರಡನೇ ಸಾಲಿನಲ್ಲಿ ಅದ ಹೆಚ್ಚು ಹುಟ್ಟುವಳಿಗೆ ಸೊಸಿಗಳನ್ನು ಒಂದೊಂದಾಗಿ ನಾಟಿದ್ದ ತಾಕುಗಳಿಂದ ಬತ್ತವನ್ನು ತೆಗೆದು ಪೈರುಮಾಡಿದ್ದದ್ದೇ ಕಾರಣವೆಂದು ಹೇಳಬೇಕಾಗುತ್ತದೆ.

ಈ ಕ್ರಮದಲ್ಲಿ ಒಂದು ವರುಷ ಕೆಲವು ಸೊಸಿಗಳಲ್ಲಿ ಒಂದು ಕೌಲು, ಮತ್ತೆ ಕೆಲವಲ್ಲಿ ಎರಡು ಕೌಲುಗಳು ಇದ್ದವು. ಎರಡನೇ ವರುಷ ಮೂರು ಕೌಲುಗಳು ಒಡೆದವು. ಮೂರನೇ ವರುಷ ಎಲ್ಲಾ ಸೊಸಿಗಳಲ್ಲೂ ಮೂರು ಕೌಲುಗಳು ಧಾರಾಳವಾಗಿ ಬಂದು, ಕೆಲವಲ್ಲಿ ಐದು ಒಡೆದಿದ್ದವು.

ಒಂದೊಂದೇ ಪೈರು ನಾಟುವ ಕ್ರಮದಲ್ಲಿ ಅಗೆಯಲ್ಲಿ ಜಾಸ್ತಿ ಬತ್ತ ಒಟ್ಟು ಹಾಕಕೂಡದು. ಒಂದು ಎಕರೆಯ ನಾಟುವಳಿಗೆ ಬೇಕಾಗುವ ಸೊಸಿಗಳನ್ನು ತಯಾರು ಮಾಡಿಕೊಳ್ಳುವುದಕ್ಕೆ ಸುಮಾರು ೩ ಗುಂಟೆಯಾಗುವಷ್ಟು ಅಗೆ ಸಿದ್ಧಪಡಿಸಿಕೊಂಡು ೭ ಮದರಾಸು ಸೇರು ಬತ್ತ ಒಟ್ಟುಹಾಕಿದರೆ ಸಾಕಾಗುತ್ತದೆ. ಅಗೆಗೆ ಚೆನ್ನಾಗಿ ಮಾಡಿದ ದನದ ಗೊಬ್ಬರವನ್ನು ಸಮೃದ್ಧಿಯಾಗಿ ಹಾಕಿದರೆ ಚೆನ್ನಾಗಿ ಮೊಳಕೆ ಏಳುತ್ತದೆ. ಸೊಸಿಗಳನ್ನು ಅಗೆಯಲ್ಲಿ ೨೦ನೇ ದಿನಗಳು ಬಿಡದೆ ಎಳೆಯಾಗಿರುವಾಗಲೇ ಕಿತ್ತು ನಾಟಬೇಕು. ಅಂದರೆ, ೫ ತಿಂಗಳ ಫಸಲಿಗೆ ೩೫ ದಿನಗಳಿಗೆ ಮೀರದ ಸೊಸಿಗಳು ಅನುಕೂಲ. ಮೇಲೆ ಹೇಳಿದ ಮೇರೆ ಅಗೆಯನ್ನು ತಯಾರು ಮಾಡಿಕೊಂಡಲ್ಲಿ ಸೊಸಿಗಳು ಬಲವಾಗುವುದಲ್ಲದೆ ಅವನ್ನು ಒಂದೊಂದಾಗಿ ಪ್ರತ್ಯೇಕಿಸುವುದೂ ಸುಲಭವಾಗುತ್ತದೆ.

ನಾಟುವಾಗ ಸೊಸಿಗೆ ಸೊಸಿ ಎಷ್ಟು ದೂರ ಇರಬೇಕೆಂಬ ವಿಷಯದಲ್ಲಿ ಎಕರೆಗೆ ೧೦೦ ಮದರಾಸು ಸೇರು ಹುಟ್ಟುವಳಿಯಾಗುವ ಜಮೀನಿನಲ್ಲಿ ಸೊಸಿಯಿಂದ ಸೊಸಿಗೆ ಒಂದು ಗೇಣು ಇದ್ದರೆ ಸಾಕು. ೧,೫೦೦ ಸೇರು ಆಗುವ ಜಮೀನಿನಲ್ಲಿ ಮುಕ್ಕಾಲು ಗೇಣು ಇರಬಹುದು. ೫೦೦ ಸೇರು ಮತ್ತು ಕಮ್ಮಿ ಉತ್ಪತ್ತಿಯಾಗುವ ಭಾಗದಲ್ಲಿ ಅರ್ಧ ಗೇಣು ಇರಬೇಕಾಗುತ್ತದೆ. ಅಪೂರ್ವವಾಗಿ ೧,೫೦೦ ಸೇರು ಆಗುವ ಉತ್ಕೃಷ್ಟ ಜಮೀನಾದರೆ ೨ ಗೇಣು ಬಿಟ್ಟರೂ ಬಾಧಕವಿಲ್ಲ. ಆದರೆ ಈ ವಿಧಾನವು ಎಲ್ಲಾ ಜಮೀನಿಗೆ ಅಷ್ಟು ಅನುಕೂಲಿಸುವಂತೆ ಇಲ್ಲ. ಯಾಕೆಂದರೆ, ಒಂದೊಂದೇ ಸೊಸಿ ನಾಟುವುದಕ್ಕೆ ತಗಲುವ ಆಳಗಳ ಮಜೂರಿ ಜಾಸ್ತಿಯಾಗುವುದು.

ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರವ.

ಪುರವಾಸಿಗಳ ಒಂದು ಸಭೆಯು

ಕಳೆದ ೬ ನೇ ತಾ ಬುಧವಾರ ಸಾಯಂಕಾಲ ರಾಜಧಾನಿಯ ಪ್ರಜೆಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿದ್ದರು. ದಿವಾನ್ ರವರಾದ ಮೆ॥ ಟಿ. ಆನಂದರಾಯರವರೆ ಮೊದಲಾದ ಅಧಿಕಾರಿಗಳೂ, ಎಲ್ಲಾ ಕೋಮು ಮತ್ತು ಕಸಬುಗಳ ಪ್ರತಿನಿಧಿಗಳೂ ಸಭೆಯನ್ನಲಂಕರಿಸಿದ್ದರು. ಸಿವಿಲ್ ಸರ್ಜನ್‌ರಾದ ಮೆ॥ ಬಿ. ಎಸ್. ನಂಜಪ್ಪನವರು ಸಭೆಯ ಅಗ್ರಾಸನವನ್ನು ವಹಿಸಿ, ಪುರವಾಸಿಗಳು ಆಹ್ವಾನದ ಸಭೆಗೆ ದಯಮಾಡಿದ್ದಕ್ಕಾಗಿ ಅವರನ್ನು ವಂದಿಸಿ, ಈಗ ಪಟ್ಟಣದಲ್ಲಿ ಹರಡಿಕೊಂಡು ಸಕಲ ಕಷ್ಟನಷ್ಟ ಸಂಕಟಗಳನ್ನುಂಟುಮಾಡುತ್ತಿರುವ ಪ್ಲೇಗ್ ಉಪದ್ರವದ ಪೂರ್ವೋತ್ತರವನ್ನೂ ಅದರ ಪರಿಹಾರವನ್ನೂ ಕುರಿತು ಸಿವಿಲ್ ಸರ್ಜನ್ ಮೆ॥ ಬಿ. ಡಿ. ರಾಘವೇಂದ್ರರಾಯರು ಉಪನ್ಯಾಸಮಾಡುತ್ತಾರೆಂದೂ, ಅದನ್ನು ಸಕಲರೂ ಸಾವಧಾನದಿಂದ ಆಲಿಸಬೇಕೆಂದೂ ತಿಳಿಸಿ ಕುಳಿತುಕೊಂಡರು.

ಪ್ಲೇಗ್ ವಿಚಾರವಾದ ಉಪನ್ಯಾಸವು

ಮೆ॥ ಬಿ. ಡಿ. ರಾಘವೇಂದ್ರರಾಯರು ಸಭಾನಾಯಕರ ಅನುಜ್ಞೆಯನ್ನು ಪಡೆದು, ಸಭಾಸದರನ್ನು ವಂದಿಸಿ, ಪ್ಲೇಗ್ ಉಪದ್ರವದ ವಿಷಯವಾದ ಉಪನ್ಯಾಸವನ್ನು ಮೊದಲು ಇಂಗ್ಲಿಷಿನಲ್ಲೂ ತರುವಾಯ ಕನ್ನಡದಲ್ಲೂ ಓದಿದರು. ಅದರಲ್ಲಿ ಕಂಡ ಮುಖ್ಯಾಭಿಪ್ರಾಯಗಳನ್ನು ವಾಚಕರ ತಿಳುವಳಿಕೆ ಬಗ್ಗೆ ಇಲ್ಲಿ ವಿವರಿಸುವೆವು.

ಮೊದಲು ತುಂಕೂರು ಟವನ್‌ನಲ್ಲಿ ಪ್ಲೇಗ್ ಉಪದ್ರವವು ಉಲ್ಬಣಸ್ಥಿತಿಯಲ್ಲಿದ್ದಾಗ ನಾನು ಅದರ ವಿಷಯವಾಗಿ ಆ ಪುರಜನರಲ್ಲಿದ್ದ ಅನುಮಾನಗಳನ್ನು ತಿಳಿದುಕೊಂಡು ಅವರ ಕೂಡ ಸಂಭಾಷಣೆ ಮಾಡುತ್ತಾ ಬಂದು, ಅವರ ಅನುಮಾನಗಳನ್ನು ನಿವಾರಣೆ ಮಾಡಿದೆನು. ಪ್ರಾರಂಭದಲ್ಲಿ ಪ್ಲೇಗ್ ಉಪದ್ರವವು ಬೊಂಬಾಯಿನಲ್ಲಿ ಪ್ರಾರಂಭವಾದಾಗ್ಗೆ ಅದರ ಪೂರ್ವೋತ್ತರವೇನೆಂಬುವುದು ವೈದ್ಯರಿಗೂ ತಿಳಿಯದೆ ಇದ್ದಿತು. ವೈದ್ಯಶಾಸ್ತ್ರ ಪಂಡಿತರೂ ಪ್ರಸಿದ್ಧರೂ ಆದ ಕೆಲವು ಡಾಕ್ಟರುಗಳೂ ಅದರ ಲಕ್ಷಣಾದಿಗಳನ್ನು ಪರಿಷ್ಕಾರವಾಗಿ ಶೋಧನೆ ಮಾಡಿ, ಈ ಉಪದ್ರವವು ಇಲಿಗಳಿಂದಲೇ ಬರುವುದೆಂದೂ, ಇಲಿಗಳಿಂದ ಮನುಷ್ಯನಿಗೂ ಮನುಷ್ಯನಿಂದ ಮನುಷ್ಯನಿಗೂ ಊರಿಂದೂರಿಗೂ ವ್ಯಾಪಿಸಿಯಾಗುವುದೆಂದೂ, ಇಲಿಗಳ ಶರೀರಕ್ಕೆ ಅಂಟಿಕೊಂಡಿರುವ ಚಿಗಟಗಳೆಂಬ ಕ್ರಿಮಿಗಳು ಮನುಷ್ಯನ ಬಟ್ಟೆಗಳ ಮೇಲೆ ಕುಳಿತು ಮೈಯನ್ನು ಕಡಿದು ಪ್ಲೇಗ್ ಉಪದ್ರವನ್ನು ಉಂಟುಮಾಡುವುದೆಂದೂ, ಪ್ಲೇಗ್ ಕ್ರಿಮಿಗಳು ಮನುಷ್ಯನ ದೇಹದೊಳಗೆ ಸೇರಿಕೊಂಡರೆ ಹದಿನೈದು ದಿನಗಳ ತನಕ ಆಯಾ ಮನುಷ್ಯನ ಪ್ರಕೃತಿ ಸ್ವಭಾವವಿದ್ದಂತೆ ಕಾಲವಿಳಂಬದಲ್ಲಿ ಪ್ಲೇಗ್ ಉಪದ್ರವು ಕಾಣಿಸಿಕೊಳ್ಳುವುದೆಂದೂ ಕಂಡುಹಿಡಿದಿರುತ್ತಾರೆ. ಆದಕಾರಣ ಈ ಉಪದ್ರವಕ್ಕೆ ಮೂಲಕಾರಣವಾದ ಇಲಿಗಳನ್ನು ಕೊಂದು ಬಿಡಬೇಕು. ಇದಕ್ಕೆ ಬೋನುಗಳನ್ನು ಜನರು ಮನೆಗಳಲ್ಲಿ ಇಟ್ಟು ಇಲಿಗಳನ್ನು ಹಿಡಿಯುತ್ತಾ ಬಂದಿದ್ದಾರೆ. ವಿಷವುಳ್ಳ ಆಹಾರ ಪದಾರ್ಥಗಳನ್ನು ಬಿಲಗಳಲ್ಲಿಟ್ಟು ಅವು ಸಾಯುವಂತೆ ಮಾಡುತ್ತಿದ್ದಾರೆ. ಮತ್ತು ಅಂಟುರೋಗವನ್ನು ಲಿಗಳಲ್ಲೇ ಹುಟ್ಟಿಸಿ ಅವನ್ನು ನಿರ್ಮೂಲಮಾಡುವ ಪ್ರಯತ್ನವೂ ಮಾಡಿದ್ದಾರೆ. ಈ ಮೂರು ಉಪಾಯಗಳೂ ಅಷ್ಟೇನೂ ಸಾರ್ಥಕವಾಗಿ ಕಾಣುವುದಿಲ್ಲ. ಇವುಗಳಿಗೆ ಬದಲಾಗಿ ಮನೆಗಳಲ್ಲಿ ಇಲಿ ಹೆಗ್ಗಣಗಳ ವೈರಿಗಳಾದ ಬೆಕ್ಕುಗಳನ್ನು ಇಟ್ಟುಕೊಂಡು ಸಾಕುತ್ತಾ ಬರುವುದೇ ಇಲಿಗಳ ನಿರ್ನಾಮಕ್ಕೆ ಬಹು ಫಲಕಾರಿಯಾದ ಉಪಾಯವೆಂದು ತೋರುತ್ತಿರುವುದು.

ಸಕಾಲದಲ್ಲೇ ಮನೆ ಮಠಗಳನ್ನು ಬಿಟ್ಟು ಹೋಗುವುದು ಈ ಉಪದ್ರವದ ಹರಡುವಿಕೆಗೆ ದೊಡ್ಡ ಪ್ರತಿಬಂಧಕವಾಗಿದೆ. ಆದರೆ ಸಕಾಲವೆನ್ನುವುದು ಯಾವಾಗಲೋ ತಿಳಿಯದೆ ಕಡೆಯ ತನಕ ಮನೆಗಳಲ್ಲಿದ್ದು ಅವೇಳೆ ಬಿಟ್ಟು ಬೇರೆ ಮನೆಗೋ ಗುಡಿಸಲಿಗೋ ಊರಿಗೋ ಹೋಗುತ್ತಾರೆ. ಇದರಿಂದ ಅವರು ತಮ್ಮ ಮನೆಯ ಪದಾರ್ಥಗಳ ಮೂಲಕ ಆಯಾ ಕಡೆಗಳಿಗೆ ಉಪದ್ರವ ಕ್ರಿಮಿಗಳನ್ನೂ ತೆಗೆದುಕೊಂಡು ಹೋಗುವರು. ಮತ್ತು ಅನೇಕಾನೇಕರಿಗೆ ಬೇರೆ ಕಡೆ ಹೋಗಿ ವಾಸಮಾಡಲು ಅವಕಾಶವಾಗಲಿ ಚೈತನ್ಯವಾಗಲಿ ಇರುವುದಿಲ್ಲ. ಇದನ್ನೆಲ್ಲಾ ಪರ್ಯಾಲೋಚನೆ ಮಾಡಿ ಬೊಂಬಾಯಿನ ಪ್ರಸಿದ್ಧ ವೈದ್ಯರಾದ ಡಾ॥ ಹಾಫ್ಕಿನ್ ರವರು ಈ ಉಪದ್ರವು ಮನುಷ್ಯನಿಗೆ ಬಾರದಂತೆ ಒಂದು ತಡೆಯನ್ನು ಕಲ್ಪಿಸಬೇಕೆಂದು ಪರೀಕ್ಷೆಗಳನ್ನು ಮಾಡಿ ಒಂದು ತರಹಾ ಹಾಲನ್ನು ಕಂಡು ಹಿಡಿದರು. ಮಕ್ಕಳಿಗೂ ದೊಡ್ಡವರಿಗೂ ದೇಹದ ಶಿರಬು ಹಾಕಿ ಬಿಟ್ಟರೆ ಶಿರುಬು ಅವರಿಗೆ ಹ್ಯಾಗೆ ಬಾರದೆ ಅವರು ಸುರಕ್ಷಿತರಾಗಿರುವರೋ ಹಾಗೆಯೇ ಪ್ಲೇಗ್ ಉಪದ್ರವನ್ನು ಬಾರದಂತೆ ತಡೆಯುವುದಕ್ಕೂ ಆ ಡಾಕ್ಟರವರು ಒಂದು ರಸವನ್ನು ಕಲ್ಪಿಸಿರುತ್ತಾರೆ. ಅವರು ಬೊಂಬಾಯಿನಲ್ಲಿ ೧೮೯೬ ನೇ ಇಸವಿಯಲ್ಲಿ ಪ್ಲೇಗ್ ಉಪದ್ರವು ಕಾಣಿಸಿಕೊಂಡ ಹದಿನಾಲ್ಕು ದಿನಗಳಲ್ಲೇ ಈ ರಸವನ್ನು ಕಂಡು ಹಿಡಿದರು. ಸಾಮಾನ್ಯವಾಗಿ ದೇವಿ ಶಿರುಬಿನ ವಿಷಯದಲ್ಲಿ ಪ್ರಜೆಗಳಿಗೆಲ್ಲಾ ವಿಶೇಷವಾದ ನಂಬಿಕೆಯುಂಟು. ಬೇರೆ ಬೇರೆ ರೋಗಗಳಿಗೆ ಪೂರ್ವಕಾಲದಲ್ಲಿ ಹಿಂದುಸ್ಥಾನದೊಳಗೂ ತುರ್ಕಿ, ಈಜಿಪ್ಟ್ ಮೊದಲಾದ ಕಡೆಗಳಲ್ಲೂ ಇಂಥಾ ಹಾಲುಗಳನ್ನು ಕಂಡು ಹಿಡಿದು ಆ ರೋಗಗಳು ಪ್ರಜೆಗಳಿಗೆ ತಗಲದಂತೆ ಶಿರುಬು ಹಾಕುತ್ತಿದ್ದರೆಂಬುವುದನ್ನು ಚರಿತ್ರೆಗಳಲ್ಲಿ ಓದುತ್ತೇವೆ.

ಕೆಲವು ವರುಷಗಳ ಕೆಳಗೆ ಈ ರಸದಿಂದ ಶಿರುಬು ಹಾಕಿಸಿಕೊಂಡವರಿಗೆ ನಾಲ್ಕಾರು ದಿನಗಳ ತನಕ ಜ್ವರಬಂದು ಬಾಧೆಯುಂಟಾಗುತ್ತಿತ್ತು. ಈಗ ತಯಾರಾಗುವಂಥಾ ಹಾಲು ಅಷ್ಟು ಕಠಿಣವಾದದ್ದಲ್ಲ. ಇದನ್ನು ಹಾಕಿಸಿಕೊಂಡರೆ ಕೆಲವರಿಗೆ ಜ್ವರವೇ ಬರುವುದಿಲ್ಲ. ಕೆಲವರಿಗೆ ಬಂದರೂ ಒಂದು ದಿನ ಮಾತ್ರ ಸ್ವಲ್ಪವಾಗಿ ಕಾಣಿಸಿಕೊಳ್ಳುವುದು. ಇನಾಕ್ಯುಲೇಷನ್ ಮಾಡಿಸಿಕೊಂಡಲ್ಲಿ ಆ ರಸದ ತ್ರಾಣದಿಂದ ೬ ತಿಂಗಳು, ವರುಷ, ೫ ವರುಷ ಈ ರೀತಿ ಅವರವರ ದೇಹ ಸ್ವಭಾವವಿದ್ದಂತೆ ಅವರನ್ನು ಪ್ಲೇಗ್ ಗಿಡದ ಇಲ್ಲ ದಯೆಪ್ಲ ದು(?) ಒಂದು ವೇಳೆ ಇನಾಕ್ಯುಲೇಷನ್ ಮಾಡಿಸಿಕೊಂಡವರಿಗೆ ಪ್ಲೇಗ್ ತಗಲಿದರೂ ಮರಣ ಸಂಭವಿಸುವುದೆಂಬ ಭೀತಿ ಕಡಮೆಯೇ ಸರಿ. ಇದಲ್ಲದೆ ಈ ಶಿರುಬನ್ನು ಹಾಕಿಸಿಕೊಂಡರೆ ಅಂಗಾಂಗಗಳು ಊನವಾದೀತೆಂದೂ ಇಂದ್ರಿಯ ಶಕ್ತಿಗಳು ಕುಂದುವುವೆಂದೂ, ಹೊಸ ರೋಗಗಳು ದೇಹದಲ್ಲಿ ಉಂಟಾಗುವುವೆಂದೂ ಕೆಲವರಲ್ಲಿ ಅನುಮಾನವಿದೆ. ಇಂಥಾ ಅನುಮಾನಕ್ಕೆ ಸ್ವಲ್ಪವಾದರೂ ಕಾರಣವಿಲ್ಲವೆಂಬುವುದು ಅನೇಕ ಕಡೆಗಳ ಅನುಭವದಿಂದ ತಿಳಿದುಬಂದಿದೆ. ಕಳೆದ ಹನ್ನೊಂದು ವರುಷಗಳಿಂದಲೂ ಈ ಇನಾಕ್ಯುಲೇಷನ್ ಹಾಕುತ್ತಾ ಬಂದಿದೆ. ಬೊಂಬಾಯಿ, ಪೂನಾ, ಪಂಜಾಬ್, ಈ ಮೊದಲಾದ ಅನೇಕ ಕಡೆಗಳಲ್ಲಿ ಈ ಶಿರುಬು ಹಾಕಿರುವುದರಲ್ಲಿ ತುಂಬಾ ಪ್ರಯೋಜನವಾಗಿದೆ. ಅನೇಕ ಸಹಸ್ರ ಪ್ರಜೆಗಳು ಬದುಕಿಕೊಂಡಿರುವರು. ಇಲಿಗಳ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಸಕಲ ಪ್ರಜೆಗಳೂ ಮನೆ ಮಠಗಳನ್ನು ಕಟ್ಟಿಕೊಳ್ಳುವುದು ಕಷ್ಟದಲ್ಲಿ ಸಾಧ್ಯವಿಲ್ಲವಾದ್ದರಿಂದ ಈ ಉಪದ್ರವದಿಂದ ತಪ್ಪಿಸಿಕೊಳ್ಳುವುದಕ್ಕೆ ಶಿರುಬು ಹಾಕಿಸಿಕೊಳ್ಳುವುದೊಂದೇ ಉತ್ತಮೋತ್ತಮವಾದ ಉಪಾಯವಾಗಿದೆ ಎಂಬುದೇ.

ಸಭಾನಾಯಕರ ಭಾಷಣವು

ಬಳಿಕ ಸಭಾಧ್ಯಕ್ಷರಾದ ಸಿವಿಲ್ ಸರ್ಜನ್ ಮೆ॥ ಬಿ. ಎಸ್. ನಂಜಪ್ಪನವರು ಉಪನ್ಯಾಸಕರ ಭಾಷಣವನ್ನು ಕೊಂಡಾಡಿ ಕೆಳಗೆ ವಿವರಿಸಿರುವ ಹೊಸ ಸಂಗತಿಗಳೇನೆಂದರೆ —

ಉಪನ್ಯಾಸಕರು ಮಾಡಿದ ಭಾಷಣದಿಂದ ಈ ಕೆಟ್ಟ ರೋಗದ ಪೂರ್ವೋತ್ತರವೂ ಅದರ ಪರಿಹಾರವೂ ನಮಗೆಲ್ಲಾ ತಿಳಿಯಿತು. ಅದಕ್ಕಿಂತಲೂ ಹೆಚ್ಚಾಗಿ ನಾನೇನೂ ಹೇಳಬೇಕಾಗಿಲ್ಲ. ಆದರೂ ನನ್ನ ಅನುಭವಕ್ಕೆ ಬಂದಿರುವ ಕೆಲವು ಸಂಗತಿಗಳನ್ನು ನಿಮಗೆ ತಿಳಿಸಲು ಕುತೂಹಲಪಡುತ್ತೇನೆ. ಇದುವರೆಗೆ ಡಾಕ್ಟರುಗಳಿಂದ ಈ ಪಟ್ಟಣದಲ್ಲಿ ೧೪ ಸಾವಿರಕ್ಕಿಂತಲೂ ಹೆಚ್ಚು ಪ್ರಜೆಗಳು ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದಾರೆ. ಇಷ್ಟು ಜನರಲ್ಲಿ ೪೦ ಮಂದಿಗೆ ಪ್ಲೇಗ್ ತಗಲಿ ೧೪ ಮರಣಗಳು ಮಾತ್ರ ಆಗಿರುವವು. ಇದಲ್ಲದೆ ಇಲ್ಲಿನ ಜೈಲ್‌ಖಾನೆಯೊಳಗೆ ಇಲಿ ಬಿದ್ದಿತು. ಅಲ್ಲಿರುವ ಸುಮಾರು ೧೫೦ ಬಂದೀವಾನರಿಗೂ ಇನಾಕ್ಯುಲೇಷನ್ ಮಾಡಿಸಿದೆವು. ಒಬ್ಬರಿಗಾದರೂ ಪ್ಲೇಗ್ ತಗಲಲಿಲ್ಲ. ೧೭ ಮಂದಿ ಇದ್ದ ಒಂದು ಸಂಸಾರದಲ್ಲಿ ೧೬ ಮಂದಿ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರು. ಗರ್ಭಿಣಿಯಾಗಿದ್ದ ಒಬ್ಬ ಹೆಂಗಸು ಮಾತ್ರ ಮಾಡಿಸಿಕೊಂಡಿರಲಿಲ್ಲ. ಆ ಮನೆಗೆ ಪ್ಲೇಗ್ ಪ್ರವೇಶಿಸಿ ಆ ಒಬ್ಬ ಸ್ತ್ರೀಯನ್ನು ಮಾತ್ರ ಮೃತಪಡಿಸಿತು. ಉಳಿದ ೧೬ ಮಂದಿಯೂ ಸುಖವಾಗಿದ್ದಾರೆ. ಇಂಥಾ ವಿಷಯಗಳನ್ನು ಅನೇಕವಾಗಿ ಹೇಳಬಹುದು. ಇದನ್ನೆಲ್ಲಾ ನೋಡಲಾಗಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದರಲ್ಲಿ ಬಹಳ ಅನುಕೂಲವುಂಟೆಂದು ನಾನು ಹೇಳಬೇಕಾಗಿಲ್ಲ. ಈ ಪ್ರಯೋಜನವು ನಮ್ಮ ಪಟ್ಟಣದ ಕೆಲವು ಮಹನೀಯರಿಗೆ ತಿಳಿದು ಅವರೀಗ ಮುಂದಾಳುಗಳಾಗಿ ನಿಂತು ಪ್ರಜೆಗಳಿಗೆ ಪ್ರೋತ್ಸಾಹ ಕೊಡುತ್ತಲೂ ಇನಾಕ್ಯುಲೇಷನ್ ಮಾಡಿಸುತ್ತಲೂ ಬಂದಿದ್ದಾರೆ. ಕೆಲವು ದಿನಗಳಲ್ಲಿ ಪ್ರಜೆಗಳಾದ ನಾವು ನವರಾತ್ರಿ ಹಬ್ಬವನ್ನು ಆಚರಿಸಬೇಕಾಗಿದೆ. ಈ ಸಂತೋಷ ಕಾಲವು ನಮಗೆ ಮಾತ್ರ ಅಲ್ಲ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೆ ಅದು ವಿಶೇಷವಾದ ಉತ್ಸವಕಾಲವಾಗಿರುವುದು. ಸಾವಿರಾರು ಪ್ರಜೆಗಳು ಹೊರಗಿನಿಂದ ಈ ಉತ್ಸವಗಳಿಗಾಗಿ ರಾಜಧಾನಿಗೆ ಬರುವವರಾಗಿದ್ದಾರೆ. ಆದಕಾರಣ ನಾವೆಲ್ಲಾ ನಮ್ಮ ಕೈಲಾಗುವಷ್ಟು ಪ್ರಯತ್ನಪಟ್ಟು ನಮ್ಮ ನೆರೆ ಹೊರೆಯವರಿಗೆ ಪ್ರೋತ್ಸಾಹ ಕೊಟ್ಟು ಶಿರುಬು ಹಾಕಿಸಿದಲ್ಲಿ ಈ ಉಪದ್ರವು ಕಡಿಮೆಯಾಗುವುದು, ಉತ್ಸವಗಳು ಎಂದಿನಂತೆ ಸಂಭ್ರಮದಿಂದ ನಡೆಯುವುವು. ನೀವೆಲ್ಲಾ ಈ ರೀತಿ ನಡೆಸಬೇಕೆಂದು ನಾನು ಪ್ರಾರ್ಥಿಸುತ್ತೇನೆ ಎಂಬುದೇ.

ತರುವಾಯ ಮೆ॥ ಅಂಬಳೆ ಅಣ್ಣಯ್ಯ ಪಂಡಿತರು, ಬಿ. ಎಂ. ವೆಂಕಟಕೃಷ್ಣಯ್ಯನವರೂ ಸಭಿಕರಿಗೆ ಪ್ಲೇಗ್ ಶಿರುಬಿನ ಪ್ರಯೋಜನವನ್ನು ಕುರಿತು ಭಾಷಣಮಾಡಿದರು. ದಿವಾನ್‌ರವರಿಗೂ ಸಭಾನಾಯಕರಿಗೂ ಉಪನ್ಯಾಸಕರಿಗೂ ಸಭೆಯ ವಂದನೆಗಳನ್ನು ಸಲ್ಲಿಸಿದ ಬಳಿಕ ಆ ದಿವಸ ಕೂಟವು ಮುಕ್ತಾಯವಾಯಿತು.

ಕೇಶನಿರ್ಮೂಲಚೂರ್ಣ.

71-1

೩ ಆಣೆ ಪೋಸ್ಟೇಜ್ ಸ್ಟಾಂಪನ್ನು ಕಳುಹಿಸಿದರೆ ಅನುಭವ ನೋಡುವದಕ್ಕೆ ಸದರಿ ಚೂರ್ಣವನ್ನು ಕಳುಹಿಸುತ್ತೇವೆ. ಇದನ್ನು ತಲೆಗೆ ಹಚ್ಚಿಕೊಳ್ಳುವದರಿಂದ ಬೆವರು ದೋಷವನ್ನು ಹೋಗಲಾಡಿಸಿ, ತಲೆಯ ಮಿದುಳನ್ನು ವೃದ್ಧಿಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುವದು. ತಲೆಯಲ್ಲಿ ಹೇನು ಬಿದ್ದಿದ್ದರೆ ಕೂಡಲೆ ಹಲಾಯನಗೈಯುವವು. ತಲೆಯಲ್ಲಿ ಹುಣ್ಣು ಕಟಗು ಆಗಿದ್ದರೆ ವಾಸಿಯಾಗುವದು. ಕೇಶಗಳು ಮೃದುವಾಗಿ ನಿರ್ಮಲವಾಗುವವು. ದೇಹಕ್ಕೆ ಹಚ್ಚಿಕೊಂಡರೆ ತುರಿಕೆ, ಬಚ್ಚೆ, ಬಾಕುರಿ ನಾಶವಾಗುವವು. ಕೂಡಲೇ ತರಿಸಿ ಅನುಭವ ನೋಡಿರಿ. ಉಪಯೋಗಿಸುವ ಕ್ರಮವನ್ನು ಚೂರ್ಣದ ಸಂಗಡ ಕಳುಹಿಸುತ್ತೇವೆ. ಡಬ್ಬಿ ೧ ಕ್ಕೆ ಭಾಡಿಗೆ ರೂ ೧-೦-೦

ವಿಳಾಸ.—ಪಿ. ಯಸ್ ಹಾಲಪ್ಪದೇವರ ಮಠದ ಸಿದ್ಧಾಂತಿಗಳು,

ವರದನಹಳ್ಳಿ, ಬಳ್ಳಾರಿ ಜಿಲ್ಲಾ.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

240

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಸಿಲ್ಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಹೀಗಿದ್ದು ಬಹಳ ಅಗ್ಗ. ಈ ಬಟ್ಟೆಗಳು ಕೊಳ್ಳಲುರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿರಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೭। ಆಣೆ ವರೆವಿಗೂ ಚಿಲ್ಲರೆಯಾಗಿ ಅಗಲೀ ಒಟ್ಟಾಗಿ ಅಗಲೀ ಮಾರಲ್ಪಡುತ್ತವೆ. ಶಾಲುಗಳು, ಜರಿಸರದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು

'ಜಾಹೀರಾತು'

73-1

ಸ್ವದೇಶೀ ವನೌಷಧಿಗಳೂ ಗುಣಕಾಣದ ಪಕ್ಷಕ್ಕೆ ಹಣವಾಪಸು ಕೊಡಲ್ಪಡುವುದು. ಪಕ್ವವ ಸ್ವತಃ ನಮ್ಮಿಂದಲೇ ತಯಾರಿಸಿರುವ ಅನುಭವಸಿದ್ಧ ಔಷಧಗಳು ಶಿರೋವೇದನೆ ಮುಂತಾದ ಅಂಗಸೂಟಿಗಳಿಗೆ ಪರಿಮಳಾಂಜನ ಬಾ ೧ ಕ್ಕೆ ೦-೮-೦ ಈ ಪರಿಮಳಾಂಜನದಿಂದ ಎಲ್ಲಾ ತರದ ಅಂಗಸೂಟಿಗಳು ಅರ್ಧ ಗಂಟೆಗಳಲ್ಲಿ ಗುಣವಾಗುತ್ತವೆ—ಸುಗಂಧ ಕೇಶವರ್ಧಿನಿ ತೈಲಾ ಬಾ ೧ ಕ್ಕೆ ರೂ ೧-೦-೦ ಇದರಿಂದ ಕಣ್ಣಿಗೂ ಮೆದಳಿಗೂ ಬಹಳ ತಂಪುಕರವು. ಕೂದಲುಗಳು ರಮಣೀಯವಾಗಿ ಬೆಳೆಯುತ್ತವೆ. ಕಜ ನಿವಾರಣ ಡ ೧ ಕ್ಕೆ ೬ ಆಣೆ ದಂತಧಾವನ ಚೂರ್ಣ ಡ ೧ ಕ್ಕೆ ೨ ಆಣೆ ಎಲ್ಲಾ ತರದ ರೋಗಗಳಿಗು ಶಾಸ್ತ್ರೀಯ ಔಷಧಿಗಳೇ ಮುಂತಾದ ಸಮಸ್ತ ಸಾಮಾನುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ. ಅಪೇಕ್ಷಿಸಿದವರಿಗೆ ಕ್ಯಾಟ್ಲಾಗು ಫ್ರೀ ರವಾನಿಸುವೆವು.

ವಿಳಾಸ, ಕೆ ಯಸ್ ಪರಮೇಶ್ವರ ಅಯ್ಯರ್, ಬಳ್ಳಿಗಾವೆ, ತಾಳಗುಪ್ಪ, ಕಾಸ್ಬ ತಾಲ್ಲೂಕ್ (ಡಿ॥ ಶಿವಮೊಗ್ಗಾ)

ವೃತ್ತಾಂತ ಪತ್ರಿಕೆ

೦

೧೯೦೯ ನೇ ಇಸವಿ ಅಕ್ಟೋಬರ್ ತಾ ೧೪ ನೇ ಗುರುವಾರ

ಹೊಸ ಕಾನೂನುಗಳ ರಚನೆಯು.

ಕಳೆದ ವಾರದ ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯವರು ಮೂರು ಹೊಸ ಕಾನೂನುಗಳ ಮಸೂದೆಗಳನ್ನು ಪ್ರಜೆಗಳ ತಿಳುವಳಿಕೆಗಾಗಿ ಪ್ರಕಟಮಾಡಿರುತ್ತಾರೆ. ಆ ಕಾನೂನುಗಳು ಯಾವವೆಂದರೆ,—(೧) ಸಿವಿಲ್ ಪ್ರೊಸೀಜರ್ ಕೋಡಿನ ಬಿಲ್ಲು, (೨) ಮೈಸೂರು ಇನ್ಸಾಲ್ವೆನ್ಸಿ ಬಿಲ್ಲು, (೩) ಮೈಸೂರು ಲಿಮಿಟೇಷನ್ ಬಿಲ್ಲು. ಈ ಮೂರು ಮಸೂದೆಗಳೂ ಗೆಜೆಟ್ಟಿನಲ್ಲಿ ೩೩೪ ಪುಟಗಳಾಗಿವೆ. ಹೀಗಿರುವಲ್ಲಿ ಇಷ್ಟು ದೀರ್ಘವಾದ ಮಸೂದೆಗಳನ್ನು ಪ್ರಜೆಗಳಲ್ಲಿ ಅನೇಕರು ತಾಳ್ಮೆಯಿಂದ ಓದಿ ಅವರಲ್ಲಿ ಕಂಡುಬರುವ ಸಾಧಕಬಾಧಕಗಳನ್ನಾಗಲಿ, ಗುಣದೋಷಗಳನ್ನಾಗಲಿ ಕಂಡುಹಿಡಿದು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಪ್ರಯತ್ನಪಡುತ್ತಾರೆಂದು ನಮಗೆ ತೋರುವುದಿಲ್ಲ.

ಈ ಬಿಲ್ಲುಗಳು ಯಥಾರ್ಥವಾಗಿಯೂ ಹೊಸ ಕಾನೂನುಗಳಲ್ಲ; ಅಂದರೆ, ಅವುಗಳಲ್ಲಿ ಮೊದಲಿಂದ ಕಡೆಯ ತನಕ ಹೊಸದಾಗಿ ರಚಿಸಲ್ಪಟ್ಟ ಭಾಗಗಳು ಸ್ವಲ್ಪಮಾತ್ರ ಇರುತ್ತವೆ. ಇಂಡಿಯಾ ಗವರ್ನ್‌ಮೆಂಟಿನವರು ಕಳೆದ ವರುಷ ಪ್ಯಾಸ್ ಮಾಡಿ ಜಾರಿಗೆ ತಂದಿರುವಂಥಾ ಕೆಲವು ಬದಲಾವಣೆಗಳು ಈ ಮಸೂದೆಗಳಲ್ಲಿ ಅಡಗಿರುತ್ತವೆ. ಬ್ರಿಟಿಷ್ ಇಂಡಿಯಾದಲ್ಲೂ ಮೈಸೂರು ಸೀಮೆಯಲ್ಲೂ ಕಾನೂನುಗಳು ಬೇರೆ ಬೇರೆಯಾಗಿರದೆ ಒಂದೇ ರೂಪ ಮತ್ತು ಕ್ರಮವಾಗಿರುವುದು ಬಹಳ ಅನುಕೂಲ. ಈ ಮಸೂದೆಯನ್ನು ಅಲ್ಲಲ್ಲಿ ಸ್ವಲ್ಪ ಸ್ವಲ್ಪವಾಗಿ ಓದಿನೋಡುವಲ್ಲಿ ಕಾನೂನು ಎಷ್ಟು ತೊಡಕಾದದ್ದೆಂಬುವುದು ನಮಗೆ ಗೊತ್ತಾಗುತ್ತದೆ ಮತ್ತು ಕಾನೂನು ಇಷ್ಟು ದುರವಗಾಹವಾಗಿರುವಲ್ಲಿ ಸಿವಿಲ್ ವ್ಯಾಜ್ಯವನ್ನು ಪ್ರಾರಂಭಿಸಿದ ಮನುಷ್ಯನು ಹೇಗಾದರೂ ಜೋಗನೆ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಂಡು ಬಂದಾನು ಎಂದು ನಮಗೆ ಆಶ್ಚರ್ಯವಾಗುವುದು. ಕಾನೂನು ಇಷ್ಟು ತೊಡಕಾದದ್ದಾಗಿಯೇ ಇರಬೇಕೆಂದು ನಮಗೆ ತೋರುತ್ತದೆ. ಆದರೂ ನಮ್ಮ ಮೈಸೂರು ಸೀಮೆಗೆ ಕಾನೂನು ಇವಕ್ಕಿಂತಲೂ ಸುಲಭತರವಾಗಿದ್ದಲ್ಲಿ ಎಷ್ಟೋ ಅನುಕೂಲವೆಂದು ನಾವು ಯೋಚಿಸುತ್ತೇವೆ. ಈ ಕಾನೂನಿನ ಮಸೂದೆಯಲ್ಲಿ ಕೆಲವು ಉದಾಹರಣೆಗಳನ್ನು ಬ್ರಿಟಿಷ್ ಇಂಡಿಯಾ ಕಾನೂನಿನಲ್ಲಿ ಇದ್ದಂತೆಯೇ ಎತ್ತಿ ಕಾಣಿಸಿರುವರು. ಇವಕ್ಕಿಂತ ನಮ್ಮ ಸೀಮೆಗೆ ಯೋಗ್ಯವಾದ ಉದಾಹರಣೆಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತೆಂದು ನಮಗೆ ತೋರುವುದು. ಮೈಸೂರು ಕೋರ್ಟುಗಳಲ್ಲಿ ವ್ಯಾಜ್ಯಗಳನ್ನು ನಡಿಸತಕ್ಕ ಮನುಷ್ಯನಿಗೆ ದೆಹಲಿಯಲ್ಲಿರುವ ಎ ಎಂಬ ಮನುಷ್ಯನು ಕಲ್ಕತ್ತೆಯಲ್ಲಿರುವ ಬಿ ಎಂಬುವನನ್ನು ಹೊಡೆಯುತ್ತಾನೆಂದೂ, ಬಿ ಎಂಬ ಮನುಷ್ಯನು ಎ ಎಂಬುವನ ಮೇಲೆ ಕಲ್ಕತ್ತೆಯಲ್ಲಾಗಲಿ ದೆಹಲಿಯಲ್ಲಾಗಲಿ ಮೊಕದ್ದಮೆ ಮಾಡಬಹುದೆಂದೂ ಉದಾಹರಣೆಯನ್ನು ಹೇಳಿದರೆ ಅದು ಅವನ ಮನಸ್ಸಿಗೆ ಹಿಡಿಯುವುದೇ? ಇದಕ್ಕೆ ಪ್ರತಿಯಾಗಿ ಮೈಸೂರು ಸೀಮೆಯ ಸ್ಥಳಗಳನ್ನೇ ಉದಾಹರಿಸಿ ಹೇಳುವುದು ಸುಲಭಸಾಧ್ಯವೂ ಹಿತಕರವೂ ಆಗಿದ್ದೀತು.

ಇನ್ಸಾಲ್ವೆನ್ಸಿ ಕಾನೂನು ಈ ಸೀಮೆಯಲ್ಲಿ ಜಾರಿಯಲ್ಲಿರಬೇಕಾದದ್ದು ಅವಶ್ಯವೇ ಸರಿ. ಇದು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ಸೇರಿಸಲ್ಪಟ್ಟಿರುವುದಿಲ್ಲ. ಈಗ ಪ್ರಕಟಿಸಿರುವ ಮಸೂದೆಯು ಬ್ರಿಟಿಷ್ ಇಂಡಿಯಾ ಗವರ್ನ್‌ಮೆಂಟಿನ ಪ್ರೊವಿನ್ಷಿಯಲ್ ಇನ್ಸಾಲ್ವೆನ್ಸಿ ಆಕ್ಟಿನ ಕ್ರಮವನ್ನು ಅನುಸರಿಸಿ ರಚಿಸಲ್ಪಟ್ಟದ್ದಾಗಿರುತ್ತದೆ.

ಇದೇ ರೀತಿ ನಮ್ಮ ಸರ್ಕಾರದವರು ಲಿಮಿಟೇಷನ್ ಮಸೂದೆ ಕಾನೂನನ್ನು ರಚಿಸಿ ಪ್ರಕಟಮಾಡಿರುತ್ತಾರೆ.

ಈ ಕಾನೂನುಗಳನ್ನೆಲ್ಲಾ ವಕಾಲತ್ತು ನಡಿಸುವಂಥಾ ನಮ್ಮ ಸ್ನೇಹಿತರಾದ ಲಾಯರುಗಳು ಸಂಪೂರ್ಣವಾಗಿಯೂ ಸಾವಧಾನದಿಂದಲೂ ಓದಿ ಸಂತೋಷಪಟ್ಟುಕೊಳ್ಳುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಸಾಮಾನ್ಯಪ್ರಜೆಗಳಿಗೆ ಅವುಗಳಲ್ಲಿ ವಿಶೇಷ ಅನಾವಶ್ಯವಾದ ವಿಚಾರಗಳು ಇರುತ್ತವೆಂದು ತೋರದಿರಲಾರದು. ಕಾನೂನುಗಳು ಸುಲಭಸಾಧ್ಯವಾಗಿ ಗ್ರಹಿಸಿಕೊಳ್ಳುವಂತೆ ಇರುವ ಪಕ್ಷದಲ್ಲಿ ಅವುಗಳ ಅರ್ಥವನ್ನು ಬಿಡಿಸಿ ವ್ಯಾಖ್ಯಾನಮಾಡುವುದಕ್ಕೆ ಲಾಯರುಗಳು ಬೇಕಾಗುತ್ತಲೇ ಇರಲಿಲ್ಲ ಮತ್ತು ಕಾನೂನ್ ಪ್ರಕಾರ ಕೋರ್ಟಿನ ವಿದ್ಯಮಾನಗಳು ಜರುಗಬೇಕೆಂದು ಜಡ್ಜಿಗಳು ಕಷ್ಟಪಡಬೇಕಾದ ಆವಶ್ಯಕತೆಯೂ ಇರಲಿಲ್ಲ.

ಒಳದೇಶದ ವೃತ್ತಾಂತಗಳು

ಸರ್ಕಾರದವರು ಚನ್ನಪಟ್ಟಣವನ್ನು ಹೊಸ ಕಾನೂನ್ ಪ್ರಕಾರ ಮುನಿಸಿಪಾಲಿಟಿಯಾಗಿ ಮಾಡಬೇಕೆಂದು ಪ್ರಕಟಮಾಡಿರುತ್ತಾರೆ.

* * *

ನಾಳೆಯ ದಿನ ಬೆಳಿಗ್ಗೆ ರಾಜಧಾನಿಯಲ್ಲಿ ಪ್ರಾರಂಭವಾಗುವ ನವರಾತ್ರಿ ಉತ್ಸವಗಳಿಗಾಗಿ ಬರುವಂಥ ಅಧಿಕಾರಿಗಳು ಆಗಲೇ ಬಂದಿರುವರು. ಹಲವರು ನಾಳೆ ಬೆಳಿಗ್ಗೆಯೂ ಬರುವವರಾಗಿದ್ದಾರೆ.

* * *

ನ್ಯಾಯಾಲಯವರಿಗೆ ರಾಜಧಾನಿಯಲ್ಲಿ ನಡೆಯಬೇಕಾದ ಆತಿಥ್ಯ ಕಾರ್ಯಗಳನ್ನು ಕುರಿತು ಯೋಚಿಸಿ ಗೊತ್ತುಮಾಡುವುದಕ್ಕಾಗಿ ಇಲ್ಲಿನ ಅಧಿಕಾರಿಗಳ ಒಂದು ಕಮಿಟಿಯು ಏರ್ಪಾಡಾಗಿದೆಯಷ್ಟೆ. ಈ ಕಮಿಟಿಯವರು ಕಳೆದ ವಾರ ಎರಡು ದಿನ ಸಭೆ ಸೇರಿ ಆಲೋಚನೆ ನಡಿಸಿದರು.

* * *

ಮೈಸೂರಿನಲ್ಲಿರುವ ಮೆ॥ ಜನವಟ್ಟಿ ರಾಮರಾಯರು "ಭಾರತೀ ವಿಲಾಸ" ವೆಂಬ ಕನ್ನಡ ಮಾಸ ಪತ್ರಿಕೆಯನ್ನು ಹೊರಡಿಸಲು ಅಪ್ಪಣೆಯಾಗಬೇಕೆಂದು ಮೈಸೂರು ಗವರ್ನ್‌ಮೆಂಟಿನವರನ್ನು ಕೇಳಿಕೊಂಡದ್ದಕ್ಕನುಸಾರವಾಗಿ ಆ ಮಾಸ ಪತ್ರಿಕೆಯನ್ನು ಪ್ರಕಟಿಸಬಹುದೆಂದು ಅವರಿಗೆ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

* * *

ಡಾನ್ ಮೆಮೋರಿಯಲ್ ಪಂಡಿಗೋಸ್ಕರ ತೀರ್ಥಹಳ್ಳಿ ತಾ॥ ಮಂಡಗದ್ದೆಯ ಮ॥ ಬಿ ಕೃಷ್ಣಗೌಡರು ನಮ್ಮಲ್ಲಿಗೆ ಕಳುಹಿಸಿರುವ ಎರಡು ರೂಪಾಯಿ ಚಂದಾವನ್ನು ಬಹು ಸಂತೋಷದಿಂದ ಸ್ವೀಕರಿಸಿರುತ್ತೇವೆ. ಇದನ್ನೂ ಇತರ ಮಹನೀಯರಿಂದ ಈ ಫಂಡಿಗೆ ಬರುವ ಚಂದಾವನ್ನೂ ಟ್ರೆಜರರವರಿಗೆ ರವಾನೆ ಮಾಡಲು ಸಂತೋಷಪಡುವೆವು.

* * *

ಕಳೆದ ಶನಿವಾರ ಸಾಯಂಕಾಲ ಬೆಂಗಳೂರಿನಲ್ಲಿ ಒಂದು ಚಕ್ಕಳದ ಕಾರ್ಖಾನೆಯು ಪ್ರಾರಂಭವಾಯಿತು. ಕಾರ್ಖಾನೆಯ ಪ್ರತಿಯಾಗಿ ಸೀನಿಯರ್ ಕೌನ್ಸಿಲರ್ ಮ॥ ಕೆ ಪಿ ಪುಟ್ಟಣ್ಣ ಚೆಟ್ಟಿಯರವರು ಹೋಗಿ ಕಾರ್ಖಾನೆಯನ್ನು ಪ್ರತಿಷ್ಠೆಮಾಡಿದರು. ಅಗ್ಗ ಅಲ್ಲಿನ ಬಹುಮಂದಿ ಸರ್ಕಾರಿ ಮತ್ತು ದೊಡ್ಡ ಅಧಿಕಾರಿಗಳೂ ಹಾಜರಾಗಿದ್ದು, ಕಾರ್ಖಾನೆಯ ಪ್ರತಿಷ್ಠೆಯನ್ನು ನೋಡಿದರು.

* * *

ಕಳೆದ ವಾರ ಜಿಲ್ಲಾ ಅಸಿಸ್ಟೆಂಟ್ ಕಮಿಷನರ್ ಮ॥ ಎಸ್ ರಂಗಸ್ವಾಮಯ್ಯಂಗಾರ್‌ರವರು ತಮ್ಮ ಪತ್ನಿ ಮತ್ತು ಕುಟುಂಬದವರನ್ನು ರಾಜಧಾನಿಯಿಂದ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಚೆಳ್ಳೂರಿಗೆ ರಾತ್ರಿ ಗಾಡಿಯಲ್ಲಿ ಕಳುಹಿಸಿದರು. ಅವರು ಕಾಡಿನ ಮೈಲಿ ದೂರ ಹೋಗುವಷ್ಟರಲ್ಲೇ ಆ ಗಾಡಿಗೆ ಕಳ್ಳರು ಬಿದ್ದು ಅವರನ್ನೆಲ್ಲಾ ಹೊಡೆದು ಗಾಯಮಾಡಿ, ಅವರ ಬಳಿ ಇದ್ದ ಸುಮಾರು ಸಾವಿರ ರೂಪಾಯಿನ ನಗನಾಣ್ಯಗಳನ್ನು ಕಸುಕೊಂಡು ಹೋದರು.

* * *

ಬೆಂಗಳೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಿಗೆ ಸೇರಿದ ಕೆಲವು ತಾಲ್ಲೂಕುಗಳಲ್ಲೂ ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ರಾಗಿಯ ಧಾರಣೆಯು ಅಸಾಧ್ಯ ಪ್ರಿಯವಾಗಿದೆ ಎಂದು ತಿಳಿದು ಸರ್ಕಾರದವರು ಆಯಾ ಸ್ಥಳಗಳ ಸರ್ಕಾರಿ ನೌಕರರಿಗೆ ಬರುವ ತಿಂಗಳಲ್ಲಿ ಧಾನ್ಯದ ಅಲೋಯನ್ಸನ್ನು ಕಾಯಿತವಾಗಬೇಕೆಂದೂ, ನವೆಂಬರ್ ಗುರ್ರ ರಾಗಾಯಿತು ಈ ಅಲೋಯನ್ಸನ್ನು ಎಲ್ಲಾ ಕಡೆಗಳಲ್ಲೂ ನಿಲ್ಲಿಸಬೇಕೆಂದೂ ಹುಕುಂ ಮಾಡಿರುತ್ತಾರೆ.

* * *

ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯ ಸಂತೇಪೇಟೆಯಲ್ಲಿ ಮ॥ ಸಾಹುಕಾರ್ ನಾಗಣ್ಣನವರು ತಮ್ಮ ಮನೆಯ ಮುಂಭಾಗದಲ್ಲಿ ಪ್ರಜೆಗಳಿಗೆ ಧರ್ಮಾರ್ಥ ದೀಪ ಮಾಡಿಸುತ್ತಿದ್ದಾಗ ಎರಡು ಎತ್ತುಗಳ ಗಾಡಿಯನ್ನು ಎಳೆದುಕೊಂಡು ಬರುವ ಗುಂಪಿನಲ್ಲಿ ನುಗ್ಗಿ ಬಹಳ ಗಲಾಟೆಯನ್ನುಂಟುಮಾಡಿದವು. ಡಾಕ್ಟರು ಕಂಪೌಂಡರ್ ಮುಂತಾದ ಉಪಕರಣಗಳು ಕುರ್ಚಿ ಬೆಂಚು ಮುಂತಾದ ಸಾಮಾನುಗಳೂ ಮುರಿದು ಹೋದವು. ಕಡೆಗೆ ಕೆಲವರು ಜನರು ಸಾಹಸಪಟ್ಟು ಎತ್ತುಗಳನ್ನು ಹಿಡಿದು ಹಟ್ಟಿಗೆ ತಂದರು.

* * *

ಬೆಂಗಳೂರು ಮುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಿರುವ ಮುಖ್ಯ ವಿಚಾರಗಳನ್ನರಿತ ಸಿಟಿ ರೈಲ್ವೆ ಸ್ಟೇಷನಿಂದ ಚಾಮರಾಜಪೇಟೆಯ ಮೂಲಕ ಬಸವನಗುಡಿ ತನಕ ಟ್ರಾಂವೇ ಗಾಡಿಗಳನ್ನು ಬಿಡಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದ್ದರು. ಹೋಲಿ ಗೇಟ್ ಕಂಟ್ರಾಕ್ಟರುಗಳಿಗೆ ನಷ್ಟ ಸಂಭವಿಸಿದ ಕಾರಣ ೧,೦೦೦ ರೂಪಾಯಿಗಳಷ್ಟು ರಿಮಿಷನ್ ಮಾಡಬಹುದು. ಮುನಿಸಿಪಲ್ ಕೌನ್ಸಿಲನ್ನು ಸ್ಥಾಪಿಸಿದಂದಿನಿಂದ ಪ್ರಾರಂಭಿಸಿ ನಾಲ್ಕು ಡಿಸ್ಟ್ರಿಕ್ಟುಗಳ ಸಹಾಯದಿಂದ ಈಗ ಬೇಕು ಪಟ್ಟಣದ ಬೀದಿಗಳಿಗೂ, ಬಸವನಗುಡಿ ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಬಿಡಿಸುವುದಕ್ಕೆ ಸರ್ಕಾರದವರು ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಆಶ್ವಿನ ಮಾಸದಲ್ಲಿ ಈ ಕೆಲಸವು ಪ್ರಾರಂಭವಾಗುವುದು.

* * *

ಮೈಸೂರು ಪಟ್ಟಣದ ಹೆಲ್ತ್ ಆಫೀಸರ್ ಮ॥ ಪಿ ಎಲ್ ಮಾರ್ಕರ್‌ರವರು ತಿಳಿಸುವುದೇನೆಂದರೆ—"ಬೆಂಗಳೂರಿನಲ್ಲಿ ಕಾಲರಾ ಜಾಡ್ಯದಿಂದ ಈ ಊರಿಗೆ ಆ ಕಡೆ ಜನಗಳ ಮುಖಾಂತರ ಬರುವ ಸಂಭವವಿರುವದಾಗಿ ಈ ರೋಗ ಸಮೀಪಿಸುವ ಮೊದಲೇ ನಡೆಸಿಕೊಳ್ಳಬೇಕಾದ ಉಪಾಯವನ್ನು ತಪ್ಪಿಸಿಕೊಳ್ಳುವುದಾಗಿ ಪುರವಾಸಿಗಳೆಲ್ಲರಿಗೂ ತಿಳಿಸುತ್ತೇನೆ.—(1) ಕುಡಿಯುವ ನೀರನ್ನು 10-20 ನಿಮಿಷಗಳ ವರೆಗೂ ಕುದಿಸಿ ಚನ್ನಾಗಿ ತೊಳೆಯಲ್ಪಟ್ಟ ಪಾತ್ರೆಯಲ್ಲಿ ಮುಚ್ಚಿಟ್ಟು ಉಪಯೋಗಿಸಬೇಕು (2) ಹಾಲನ್ನು ಉಪಯೋಗಿಸುವದಕ್ಕೆ ಮುಂಚೆ ಚನ್ನಾಗಿ ಕುದಿಸಿ ಉಪಯೋಗಿಸಬೇಕು (3) ಬೇಯಿಸಲ್ಪಡದ ತರಕಾರಿ ಹಣ್ಣುಗಳನ್ನು ತಿನ್ನಬಾರದು. ಒತ್ತಾದ ಅಥವಾ ಚನ್ನಾಗಿ ಪಕ್ವವಾದ ಹಣ್ಣುಗಳನ್ನಾಗಲಿ, ತಂಗಳು ಅನ್ನ ಮೊದಲಾದ ಪದಾರ್ಥಗಳನ್ನಾಗಲಿ ತಿನ್ನಬಾರದು."

* * *

ರಾಜಧಾನಿಯ ಕುಕ್ಕರಹಳ್ಳಿ ಕೆರೆಯ ದಕ್ಷಿಣಪಾರ್ಶ್ವದಲ್ಲಿರುವ ಪೋಲೀಸ್ ಲೈನ್ ಎಂಬ ಕಟ್ಟಡದಲ್ಲಿ ಪದ್ಧತಿಯ ಪ್ರಕಾರ ದೇಶೀಯ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ತಾ ೧೮ ನೇ ಸೋಮವಾರ ಸಾಯಂಕಾಲ ಪ್ರಾರಂಭವಾಗಿ ಈ ತಿಂಗಳ ಅಂತ್ಯದ ವರೆಗೂ ನಡೆಯುವುದು. ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ, ಹಿಂದೂಸ್ಥಾನದ ಅನೇಕ ಸ್ಥಳಗಳಿಂದಲೂ ನಾನಾ ವಸ್ತುಗಳು ಬಂದಿರುತ್ತವೆ. ಇವುಗಳನ್ನೆಲ್ಲಾ ಪ್ರದರ್ಶನಾಧಿಕಾರಿಗಳು ಆಯಾ ಕೊಠಡಿಗಳಲ್ಲಿ ವಿಂಗಡಿಸಿ ಇಡಿಸುತ್ತಿದ್ದಾರೆ. ಈ ಸೀಮೆಯ ಧಾನ್ಯೋತ್ಪನ್ನಗಳೂ, ಅರಮನೆಯ ಚಿತ್ರಕಲೆಗಳೂ ಪ್ರದರ್ಶನಮಾಡಲ್ಪಡುವವು. ಈ ಪ್ರದರ್ಶನಶಾಲೆಯ ಕೊಠಡಿಗಳಲ್ಲೂ ಇತರ ಬಾಗಿಲುಗಳಲ್ಲೂ ಪ್ರಕಾಶಮಾನವಾದ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿರುತ್ತಾರೆ. ಹೋದ ವರುಷ ಸಂಸ್ಥಾನದ ಮಳೆ ಮಹಾ ಅನಾವೃಷ್ಟಿಯಾಗಿದ್ದದರಿಂದ ಧಾನ್ಯಾದಿಗಳು ಅಷ್ಟು ವಿಶೇಷವಾಗಿ ಪ್ರದರ್ಶನಕ್ಕೆ ಬಂದಿರುವಂತೆ ಕಾಣುವುದಿಲ್ಲ. ಉಪನ್ಯಾಸಗಳಿಗೂ, ನಾಟಕಗಳಿಗೂ, ಫಲಾಹಾರಗಳಿಗೂ ಪ್ರತ್ಯೇಕವಾದ ಸ್ಥಳಗಳನ್ನು ಕಲ್ಪಿಸಿರುತ್ತಾರೆ.

ಒಕ್ಕಲಿಗರ ಸಂಘದ ಪ್ರತಿನಿಧಿಗಳಾಗಿದ್ದ ಮ|| ಟಿ ಜಯ್ಯಣ್ಣನವರು ಹಿಂದಿನ ವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇವೆ ಒಕ್ಕಲಿಗರ ಸಂಘಕ್ಕೆ ಇವರೇ ಮೂಲ ಪುರುಷರಾಗಿದ್ದರು, ಅದನ್ನು ಸ್ಥಾಪಿಸುವುದಕ್ಕೂ ಅಭಿವೃದ್ಧಿಗೆ ತರುವುದಕ್ಕೂ ತಮ್ಮ ತನುಮನ ಧನಗಳನ್ನು ಧಾರಾಳವಾಗಿ ವಿನಿಯೋಗಿಸಿ ಮರಣಾನಂತರರಾಗಿರುತ್ತಾರೆ ಇವರಿಗೆ ಇನ್ನೂ ೪೯ ವರುಷ ವಯಸ್ಸಾಗಿದ್ದಿತು ಇವರ ಮರಣದಿಂದ ಇವರ ರಕ್ತಸಂಬಂಧಿಗಳಿಗೂ ಒಕ್ಕಲಿಗರ ಮಂಡಲಿಗೂ ಉಂಟಾಗಿರುವ ನಷ್ಟವನ್ನೂ ದುಃಖವನ್ನೂ ಅಷ್ಟಿಷ್ಟೆಂದು ವಿವರಿಸಲಾರೆವು

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿರುವ ಟೌನ್ ಹಾಲ್ ಬಂಗಲೆಯಲ್ಲಿ ತಾ ೧೭ನೇ ಶನಿವಾರ ಬೆಳಿಗ್ಗೆ ಆರೋಗ್ಯ ವಿಚಾರವಾದ ವಸ್ತು ಪ್ರದರ್ಶನವು ಪ್ರಾರಂಭವಾಗುವುದು ಶ್ರೀಮದ್ ಯುವರಾಜರವರು ದಯಮಾಡಿ ಪ್ರದರ್ಶನ ಶಾಲೆಯನ್ನು ತೆರೆಯುವರೆಂದು ಕೇಳುತ್ತೇವೆ ಈ ಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಕೆಲವು ಪಂದ್ಯಗಳನ್ನೂ ಕಸರತ್ತುಗಳನ್ನೂ ಒಂಬಾನಾ ಆಟಗಳನ್ನೂ ನಡಿಸುವರು ಚಿಕ್ಕ ಮಕ್ಕಳ ಪಂದ್ಯದಲ್ಲಿ ಗೆದ್ದವರಿಗೆ ಬಂಗಾರದ ಪದಕಗಳನ್ನೂ, ಕ್ರಿಕೆಟ್ಟಿನಲ್ಲಿ ಗೆದ್ದವರಿಗೆ ಬೆಳ್ಳಿಯ ಬಟ್ಟಲನ್ನೂ, ಜಂಬಾನಾ ಆಟಗಳಲ್ಲಿ ಗೆದ್ದವರಿಗೆ ಬೆಳ್ಳಿಯ ಪದಕ ಮತ್ತು ಹಣದ ಬಹುಮಾನವನ್ನೂ ನಾನಾ ಕಸರತ್ತುಗಳಲ್ಲಿ ಗೆದ್ದವರಿಗೆ ಬೆಳ್ಳಿಯ ಪದಕಗಳನ್ನೂ ಅವುಗಳಲ್ಲಿ ಗೆಲ್ಲುವ ಹುಡುಗಿಯರಿಗೆ ಪಾತ್ರೆಗಳ ಬಹುಮಾನವನ್ನೂ, ನೀರು ಸೇದುವುದರಲ್ಲೂ ಬತ್ತ ಕುಟ್ಟುವುದರಲ್ಲೂ ಗೆಲ್ಲುವ ಹೆಂಗಸರಿಗೆ ಸೀರೆಗಳನ್ನೂ ಕೊಡುವಂತೆ ಏರ್ಪಾಡಾಗಿದೆ

ರಾಜಧಾನಿಯಲ್ಲಿ ಸುಮಾರಾಗಿ ಪ್ರತಿದಿನವೂ ಸಾಯಂಕಾಲದ ಮಳೆಯು ಹೆಚ್ಚು ಮಳೆಗಳಾಗುತ್ತಿರುವವು ಪ್ಲೇಗ್ ಉಪದ್ರವು ಇನ್ನೂ ಅಷ್ಟೇನೂ ಕಡಿಮೆಯಾಗಲಿಲ್ಲ ಹಿಂದಿನ ವಾರ ೧೩೮ ಜನರಿಗೆ ಪ್ಲೇಗ್ ತಗಲಿ, ೧೧೨ ಪ್ಲೇಗ್ ಮರಣಗಳು, ಒಟ್ಟು ೧೪೯ ಮರಣಗಳೂ ಆಗಿದ್ದವು ಈ ವಾರ ೩೭೫ ಜನರಿಗೆ ಪ್ಲೇಗ್ ತಗಲಿತು, ೧೦೨ ಪ್ಲೇಗ್ ಮರಣಗಳಾದವು ಈ ಏಳು ದಿನಗಳಲ್ಲಿ ೧೬೦ ಮಂದಿ ಕಾಲವಾದರು ಸಂತೇಪೇಟೆಯ ವರ್ತಕ ಮ|| ಮೊಗಣ್ಣನವರು ಜ್ವರವನ್ನು ಹಾಕಿಸಿ ಜನರಿಗೆ ಪ್ರೋತ್ಸಾಹಪಡಿಸಿ ಇನಾಕ್ಯುಲೇಷನ್ ಮಾಡಿಸುತ್ತಿದ್ದಾರೆ ಮತ್ತು ಒಬ್ಬ ಇತರ ಹೊಸ್ತಿಗರುಲ್ಲೂ ವರ್ತಕರೂ ಮ್ಯುನಿಸಿಪಲ್ ಕೌನ್ಸಿಲರುಗಳೂ ಜನರಿಗೆ ಇನಾಕ್ಯುಲೇಷನ್ ಮಾಡಿಸುವುದಕ್ಕೆ ಸಹಾಯಪಡುತ್ತಿರುವರು ಅಂತು ಪಟ್ಟಣದಲ್ಲಿ ಹೋದ ಮಂಗಳವಾರ ಸಾಯಂಕಾಲದವರೆಗೆ ೧೭೬೦೪ ಮಂದಿ ಪ್ಲೇಗ್ ಲಸಿಕೆಯನ್ನು ಹಾಕಿಸಿಕೊಂಡಂತೆಯೂ ಈ ಲಸಿಕೆ ೪೦ ಮಂದಿಗೆ ಪ್ಲೇಗ್ ಬಂದು ೧೭ ಮಂದಿ ಮಾತ್ರ ಕಾಲವಾಗಿರುವಂತೆಯೂ ತಿಳಿಯುಬಂದಿದೆ ಪ್ಲೇಗ್ ಕ್ಯಾಂಪಿನಲ್ಲಿ ೨೧ ಮಂದಿ ಪ್ಲೇಗ್ ರೋಗಿಗಳೂ, ೧೫೫ ಮಂದಿ ಸಾಂಕ್ರಾಮಿಕರೂ ಇರುತ್ತಾರೆ. ಕಳೆದ ೭ ದಿನಗಳಲ್ಲಿ ಪ್ಲೇಗಿನ ಸ್ಥಿತಿ ಹೀಗಿತ್ತೆಂದರೆ,—

ತಾರೀಖು	ಪ್ಲೇಗ್ ತಗಲಿದ್ದು	ಪ್ಲೇಗ್ ಮರಣ	ಒಟ್ಟು ಮರಣ
6	13	11	18
7	14	12	20
8	25	15	22
9	20	9	11
10	18	17	27
11	20	19	27
12	18	17	27

ರಾಜಸನ್ನಿ.

ಈಗ ನವರಾತ್ರಿ ಹಬ್ಬವು ಸಮೀಪಿಸಿತು ಮೈಸೂರು ಸೀಮೆಯ ಪ್ರಜೆಗಳಿಗೆ ನವರಾತ್ರಿಯ ಹಬ್ಬವು ಬಹು ಸಂಭ್ರಮದ ಕಾಲವಾಗಿದೆ ಈ ಮಹೋತ್ಸವವು ನಮ್ಮ ಸೀಮೆಯ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿಯೇ ಅತ್ಯಂತ ವೈಭವದಿಂದ ಆಚರಿಸಲ್ಪಡುತ್ತದೆ ಏಕೆ ನಮ್ಮ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರೂ ಸರ್ಕಾರದವರೂ ಖುದ್ದು ನಿಂತು ಈ ಹಬ್ಬವನ್ನು ಪ್ರಜಾರಂಜನೀಯವಾಗಿ ಆಚರಿಸುತ್ತಾರೆ ಪಟ್ಟಣವು ಶೃಂಗಾರವಾದನಂತರ ಮಹಾರಾಜರವರು ಅರಮನೆಯ ಎದುರಿಗೆ ತಮ್ಮ ಸೈನ್ಯಗಳನ್ನೆಲ್ಲಾ ನಿಲ್ಲಿಸಿ ತಾಲ್ಲೋಕು ಗ್ರಾಮಗಳಿಂದ ಬಂದಿರುವ ಜನಗಳೆಲ್ಲರ ಎದುರಿಗೆ ಸಮಸ್ತ ಮುಖ್ಯಾಧಿಕಾರಿಗಳ ನಡುವೆ ರತ್ನಖಚಿತವಾದ ಸಿಂಹಾಸನವೆಂಬ ದಿವ್ಯ ಪೀಠದ ಮೇಲೆ ಮುಹೂರ್ತಮಾಡಿ ಒಡ್ಡೋಲಗವನ್ನು ಕೊಟ್ಟು ವಿಧ ವಿಧವಾದ ಆಟಪಾಟಗಳಿಂದಲೂ ಬಹು ನೂತನತರವಾದ ಬಾಣಬಿರುಸುಗಳನ್ನು ಹಚ್ಚುವದರಿಂದಲೂ ತಮ್ಮ ಪ್ರಜೆಗಳನ್ನು ಸಂತೋಷ ಪಡಿಸುವರು

ಆದರೆ ಬೇರೆ ಬೇರೆ ಊರು ಗ್ರಾಮಗಳಿಂದ ಈ ಮಹೋತ್ಸವಕ್ಕಾಗಿ ರಾಜಧಾನಿಗೆ ಹೋಗುವವರೆಲ್ಲರೂ ಮಹಾರಾಜರ ಒಡ್ಡೋಲಗವನ್ನು ಕೊಡುವ ಭವನಕ್ಕೆ ಹೋಗಿ ಅವರ ದರ್ಶನವನ್ನು ಮಾಡಲಿಕ್ಕಾಗುವದಿಲ್ಲ ರಾಜದರ್ಶನಕ್ಕೆ ಯೋಗ್ಯವಾದ ಅಧಿಕಾರ ಪದವಿಗಳುಳ್ಳವರು ಮಾತ್ರ ರಾಜಸನ್ನಿಧಾನಕ್ಕೆ ತಕ್ಕ ಉಡುಪುಗಳನ್ನು ಧರಿಸಿಕೊಂಡು ಅಲ್ಲಿಗೆ ಹೋಗುವರು ಬಾಕಿಯವರನ್ನು ಅಲ್ಲಿಗೆ ಬಿಡುವದಿಲ್ಲ ಅಲ್ಲಿಗೆ ತಕ್ಕ ಯೋಗ್ಯತೆ ಇಲ್ಲದೆ ಇರುವ ಯಾರಾದರೂ ಮೋಸದಿಂದ ಆ ಸ್ಥಳವನ್ನು ಸೇರಿದ್ದೇಯಾದರೆ ಇದರ ವಿಚಾರಣೆಗೆ ನೇಮಕವಾದ ಅಧಿಕಾರಿಗಳು ಅವರನ್ನು ಆಚೆಗೆ ಹೊರಡಿಸುವರು ಅಂಥಾ ಸಂದರ್ಭದಲ್ಲಿ ಸಮಸ್ತ ಪ್ರಜೆಗಳ ಮುಂದೆಯೂ ಅಧಿಕಾರಿಗಳ ಮುಂದೆಯೂ ನಾಚಿಕೆಯಿಂದ ಆ ಸ್ಥಳವನ್ನು ಬಿಡುವ ಅಪಮಾನಕ್ಕೆ ಗುರಿಯಾಗಬೇಕಾದೀತು ಒಂದು ದಿನ ಒಬ್ಬ ಅರಸನು ಒಡ್ಡೋಲಗವನ್ನು ತನ್ನ ಪ್ರಜೆಗಳ ಎದುರಿಗೆ ಕೊಡುತ್ತಿರುವಲ್ಲಿ ಒಡ್ಡೋಲಗಕ್ಕೆ ಬಂದಿದ್ದ ತನ್ನ ಕಡೆಯ ಅಧಿಕಾರಿಗಳನ್ನೂ ಪ್ರಮುಖರಾದ ಪ್ರಜೆಗಳನ್ನೂ ಕಾಣೆ ನೋಡಿ ಮಾತನಾಡಿಸಬೇಕೆಂದು ಪ್ರತಿಯೊಬ್ಬರನ್ನು ಕಂಡು ಮಾತನಾಡಿಸಿದನಂತರ ರಾಜಸನ್ನಿಧಾನಕ್ಕೆ ಯೋಗ್ಯವಾದ ವಸ್ತ್ರಗಳಿಂದಲಂಕೃತನಾಗದೆ ಬಂದಿದ್ದ ಒಬ್ಬನನ್ನು ನೋಡಿ ಅವನನ್ನು ಕುರಿತು ಏನಪ್ಪಾ ರಾಜವಸ್ತ್ರಗಳಿಲ್ಲದೆ ನೀನಿಲ್ಲಿ ಹ್ಯಾಗೆ ಒಳಕ್ಕೆ ಬಂದಿಯೆಂದು ಕೇಳಲು ಅವನು ಸುಮ್ಮನಿದ್ದನು ಆಮೇಲೆ ಅರಸನು ಸೇವಕರಿಗೆ ಅವನ ಕೈಕಾಲುಗಳನ್ನು ಕಟ್ಟಿ ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಅವನು ನನ್ನನ್ನು ಅವಮಾನಪಡಿಸಿದ್ದಾನೆ ಅಂದು ಆಜ್ಞಾಪಿಸಿದಂತೆ ಒಳಗೆ ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ

ನಾನು ಇದನ್ನು ಕುರಿತು ಯೋಚಿಸಿ—ಇದು ಹೀಗಾಗುವದು ಯಾತಕ್ಕೆ? ಮಹಾರಾಜರಿಗೆ ಎಲ್ಲರು ಪ್ರಜೆಗಳಲ್ಲವೆ ಎಲ್ಲರನ್ನು ಅವರು ಏಕರೀತಿಯಾಗಿ ಭಾವಿಸಬೇಡವೆ? ಅಂದುಕೊಳ್ಳುತ್ತಿರುವಲ್ಲಿ ಲೋಕಜ್ಞಾನವುಳ್ಳ ನನ್ನ ಮಿತ್ರನು ನನ್ನ ಹಿಂದಿನಿಂದ ಬಂದು ನನ್ನ ಮಾತುಗಳನ್ನು ಕೇಳಿ—ಅಯ್ಯಾ, ಲೋಕದಲ್ಲಿ ನಿಮ್ಮ ಅಭಿಪ್ರಾಯದಂತೆ ಸಕಲರನ್ನು ಏಕರೀತಿಯಾಗಿ ಭಾವಿಸಿ ಕಾರ್ಯಗಳನ್ನು ತೂಗಿಸುವದು ಅಸಾಧ್ಯ ಒಬ್ಬ ಮನುಷ್ಯನು ಮಹಾರಾಜನಾದರೂ ಅತನಿಗೆ ಎಲ್ಲಾ ಪ್ರಜೆಗಳನ್ನು ಒಂದೇ ಸಮನಾಗಿ ಭಾವಿಸಬೇಕೆಂತ ಮನಸಿದ್ದರೂ ಅತನ ಒಡ್ಡೋಲಗವು ಚಿಕ್ಕದು; ಸಮಯವು ಕೊಂಚ, ಅತನ ಶಕ್ತಿಯು ಮಿತವಾದದ್ದು, ಕೊರತೆಯುಳ್ಳದೆಂದು ತಿಳಿಯಬೇ ಎಲ್ಲರನ್ನು ಸಮಾನವಾದ ಮರ್ಯಾದೆಯಿಂದ ಕರಿಸಿ ಸಮಾನವಾದ ಬಹುಮಾನದಿಂದ ತೃಪ್ತಿಗೊಳಿಸುವ ಸ್ಥಳವೂ ಕಾಲವೂ ಅಂಥಾ ಸಾಮರ್ಥ್ಯವೂ ಈ ಲೋಕದಲ್ಲಿ ಯಾರಿಗೂ ಇಲ್ಲವೆಂದನು

ಈ ವಿವೇಕವುಳ್ಳ ಮಾತುಗಳು ನನ್ನನ್ನು ಸ್ವಲ್ಪ ಸಮಾಧಾನ ಪಡಿಸಿದವು ನಾನು ಕೃತಜ್ಞನಾಗಿದೆ—ದೇವರು ಇದ್ದಾನಷ್ಟೆ ಅತನು ಸಮಸ್ತ ರಾಜರುಗಳಿಗೆ ರಾಜನು ಅತನ ಒಡ್ಡೋಲಗವು ಸಮಸ್ತರನ್ನು ಹಿಡಿಯತಕ್ಕಷ್ಟು ವಿಸ್ತಾರವಾಗಿರಬೇಕು ಅತನ ಶಕ್ತಿಯು ಅಪರಿಮಿತವಾದದ್ದು ಅಲ್ಲಿ ಇಂತಹ ವ್ಯತ್ಯಾಸಗಳೇನೂ ಇರಲಾರವು ಅಂದುಕೊಂಡೆನು ಆದರೆ ಮನಸ್ಸು ಇದೆಯಲ್ಲಾ ಅದು ಎಂದಿಗೂ ತಟಸ್ಥವಾಗದೆ ಯಾವಾಗಲೂ ಕೌತುಕವಾದ ವಿಷಯಗಳನ್ನು ಕುರಿತು ಯೋಚಿಸುವಂಥಾದಷ್ಟೆ ಆದ್ದರಿಂದ ನನ್ನ ಮನಸ್ಸಿನಲ್ಲಿ ಇನ್ನೂ ಯೋಚನೆ ಹತ್ತಿ—ದೇವರ ಒಡ್ಡೋಲಗವು ಎಲ್ಲರನ್ನು ಹಿಡಿಸುವಷ್ಟು ವಿಸ್ತಾರವಾಗಿಯೂ ಆತನ ಶಕ್ತಿಯು ಎಲ್ಲರನ್ನೂ ಏಕರೀತಿಯಾಗಿ ಭಾವಿಸತಕ್ಕಷ್ಟು ಅಪರಿಮಿತವಾಗಿದ್ದರೂ ಪ್ರಜೆಗಳ ಯೋಗ್ಯತಾಯೋಗ್ಯತೆಗಳನ್ನು ಪರಿಗಣಿಸದೆ ಎಲ್ಲರನ್ನೂ ಏಕರೀತಿಯಾಗಿ ಭಾವಿಸುವದು ಸಹ ಪಕ್ಷಪಾತವಾಗಿಯೂ ನ್ಯಾಯಕ್ಕೆ ವಿರುದ್ಧವಾಗಿಯೂ ಇದೆಯೆಂದು ನಿಶ್ಚಯಿಸಿದನು ವಾಚಕರು ಈ ಮಾತಿಗೆ ಒಡಂಬಡುವರೆಂದು ಸಂದೇಹವಿಲ್ಲದೆ ನಂಬುತ್ತೇನೆ

ಹಾಗಾದರೆ ದೇವರ ದಿವ್ಯ ಸನ್ನಿಧಾನಕ್ಕೆ ನಮ್ಮನ್ನು ಯೋಗ್ಯರನ್ನಾಗಿ ಮಾಡತಕ್ಕ ಉಡುಪು ದಿವ್ಯಗುಣವು ಅಧಿಕಾರವಾವುದು - ಅ ದಿವ್ಯವೇನಂದರೆ ಮನೋವಾಕ್ಕಾಯ ಕರ್ಮಗಳಲ್ಲಿ ನಿಷ್ಕಳಂಕನೂ ಪರಿಶುದ್ಧನೂ ಆಗಿರುವದೇ ಮಯೋಚಿತ, ದುರ್ವಾಸನೆ, ದುಷ್ಕೃತ್ಯಗಳಿಗೆ ತನುಮನಗಳಲ್ಲಿ ಆಸ್ಪದ ಕೊಡದೆ ಇರುವದೇ ಇದೀಗ ದೇವರ ಒಡ್ಡೋಲಗಕ್ಕೆ ನಾವು ಧರಿಸಿಕೊಂಡು ಹೋಗಬೇಕಾದ ನಿಲುವಂಗಿ ಮತ್ತು ಆ ದೇವನಲ್ಲಿ ಭಕ್ತಿಯನ್ನಿಟ್ಟು ತನ್ನ ಶಕ್ತ್ಯನುಸಾರವಾಗಿ ಪರೋಪಕಾರವನ್ನು ಮಾಡುತ್ತಲಿರುವುದೇ ಸತ್ಯವೇದವು ಹೇಳುವದೇನಂದರೆ—ಸಂಕಟದಲ್ಲಿ ಎದ್ದವರನ್ನೂ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ ವಾಚಕರೇ ಈ ರಾಜ ವಸ್ತ್ರಗಳು ನಿಮಗಿವೆಯೋ?

ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದು —ಹಾಸನ ತಾಲ್ಲೋಕು ಚನ್ನಪಳ್ಳಿ, ತಮಗಾನಹಳ್ಳಿ, ಹರಿಹೇಲಿ ಕೊಪ್ಪಲು, ತವರದ ಕೊಪ್ಪಲು, ಕತಿಹಳ್ಳಿ, ಸಿದ್ದಿಕಹೊಸಹಳ್ಳಿ, ಚನ್ನಗಿರಿ ತಾಲ್ಲೋಕು ದೊನಗೆರೆ, ತಿರುಮಕೂಡ್ಲು ನರಸೀಪುರ ತಾಲ್ಲೋಕು ಕುಕ್ಕೂರು, ಶ್ರೀರಂಗಪಟ್ಟಣದ ತಾಲ್ಲೋಕು ಕಿರಂಗೂರು

ಕಡೂರು ಡಿಸ್ಟ್ರಿಕ್ಟು ಶೃಂಗಗಿರಿಯಲ್ಲಿ ತಾ ೧೪ ರಿಂದ ೨೮ ರ ವರೆಗೆ ನಡೆಯುವ ನವರಾತ್ರಿ ಉತ್ಸವಗಳಿಗೆ ಪ್ಲೇಗ್ ಇರುವ ಪ್ರದೇಶಗಳಿಂದ ಯಾರನ್ನೂ ಹೋಗ ಗೊಡಿಸುವದಿಲ್ಲ

ತಿರುಪತ್ತೂರು ತಾಲ್ಲೋಕು ವಾಣಿಯಂಬಾಡಿಯಲ್ಲಿ ನಡೆಯುವ ರಂಜಾನ್ ಮತ್ತು ಪನ್ಯಾನ್ ಎಂಬ ಉತ್ಸವಗಳಿಗೆ ತಾ ೬ ರಿಂದ ೩೦ ರ ವರೆಗೆ ಪ್ಲೇಗ್ ಉಪದ್ರವಿರುವ ಪ್ರದೇಶಗಳಿಂದ ಪ್ರಯಾಣಿಕರನ್ನು ಬಿಡುವದಿಲ್ಲ

ಮೆ|| ದೇವೋಜಿರಾಯರನ್ನು ಯಡತೊರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಲಾಗಿದೆ

ಸಿವಿಲ್ ಸರ್ಜನ್ ಮಿಸ್ ಅಯ್ಯಾಚಮ್ಮಾಳ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬೆಂಗಳೂರು ಸರ್ಕಲ್ ಸ್ಕೂಲುಗಳ ಇನ್ಸ್‌ಪೆಕ್ಟರ್ ಮೆ| ಟಿ ಆರ್ ವೆಂಕಟಸ್ವಾಮಿನಾಯ್ಡು ಯವರಿಗೆ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅ|| ಕಮಿಷನರ್ ಮೆ| ನರಸಿಂಗರಾವ್ ಘೋರ್ಪಡೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವತನಕ ಚನ್ನರಾಯಪಟ್ಟಣದ ಸಬ್ ಡಿವಿಜನ್ ಆಫಿಸರ್ ಮತ್ತು ಅ| ಕಮಿಷನರ್ ಮೆ|| ಸಿ ದೇವರಾಜೇ ಅರಸಿನವರು ತಮ್ಮ ಇತರ ಕೆಲಸಗಳೊಂದಿಗೆ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸಿರತಕ್ಕದ್ದು

ಕೃಷ್ಣರಾಜನಹಳ್ಳಿ ತಾಲ್ಲೋಕು ಅಮಲ್ದಾರ್ ಮೆ| ಎಂ ರಂಗನಾಥರಾಯರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ವಹಿಸಲ್ಪಟ್ಟವೆ

ಮುಂದೆ ಹೇಳುವವರನ್ನು ೫ನೇ ಕ್ಲಾಸ್ ಅ| ಕಮಿಷನರಾಗಿ ನೇಮಿಸಿದೆ —(೧) ತರೀಕೆರೆ ತಾಲ್ಲೂಕ್ ಅಮಲ್ದಾರ್ ಮೆ|| ಎಂ ಕೃಷ್ಣಸ್ವಾಮಯ್ಯಂಗಾರ್ರು (೨) ಬೌರಿಂಗ್‌ಪೇಟೆ ತಾಲ್ಲೂಕ್ ಅಮಲ್ದಾರ್ ಮ ಮಹಮದ್ ಓಬಿದುಲ್ಲಾಯವರು

ಮುಂದೆ ಹೇಳುವ ಅ| ಕಮಿಷನರುಗಳ ವರ್ಗಾವರ್ಗೀ ಹುಕುಂ ಮಾಡಿದೆ —ಮೆ ಎಂ ಕೃಷ್ಣಸ್ವಾಮಯ್ಯಂಗಾರ್ರನ್ನು ಕಡೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಮಹಮದ್ ಓಬೇದುಲ್ಲಾಯವರನ್ನು ಮಾಲೂರ್ ಸಬ್ ಡಿವಿಜನ್ ಛಾರ್ಜಿಗೆ

ಮುಂದೆ ಹೇಳುವ ಅಮಲ್ದಾರ್ರುಗಳ ಮತ್ತು ಡಿಪ್ಟಿ ಅಮಲ್ದಾರ್ರುಗಳ ವರ್ಗಾವರ್ಗೀ ಹುಕುಂಮಾಡಿದೆ —ಮೆ ಗಳಾದ ಸಿ ಎಸ್ ಕಪ್ಪುಸ್ವಾಮಯ್ಯಂಗಾರ್ರು ಆನೆಕಲ್ಲಿನಿಂದ ಚನ್ನಪಟ್ಟಣಕ್ಕೆ, ಎಚ್ ವೆಂಕಟರಮಣಯ್ಯನವರು ಚನ್ನಪಟ್ಟಣದಿಂದ ಆನೆಕಲ್ಲಿಗೆ, ಎ ಕೃಷ್ಣ ಅರಸರವರು ಗುಬ್ಬಿಯಿಂದ ದೊಡ್ಡಬಳ್ಳಾಪುರಕ್ಕೆ, ಎಂ ಸದಾಶಿವರಾಯರು ದೊಡ್ಡಬಳ್ಳಾಪುರದಿಂದ ಗುಬ್ಬಿಗೆ, ಎಚ್ ಶ್ರೀನಿವಾಸಯ್ಯಂಗಾರ್ರು ಶ್ರೀರಂಗಪಟ್ಟಣಕ್ಕೆ, ಎಚ್ ಎಸ್ ವೆಂಕಟಾಚಾರ್ರು ಶ್ರೀರಂಗಪಟ್ಟಣದಿಂದ ಕೃಷ್ಣರಾಜಪೇಟೆಗೆ, ವಿ ಎಸ್ ಗೋಪಾಲಚಾರ್ರು ಕೃಷ್ಣರಾಜಪೇಟೆಯಿಂದ ಅರಕಲಗೂಡಿಗೆ, ಬಿ ನಾರಾಯಣಸ್ವಾಮಿ ಅಯ್ಯಂಗಾರ್ರು ಶಿಕಾರಿಪುರಕ್ಕೆ, ಗುಲಾಂ ಮಹಮದ್ ಮೆಹ್ತಾಯವರು ಶಿಕಾರಿಪುರದಿಂದ ಮುಳಬಾಗಿಲಿಗೆ, ಟಿ ಸ್ವಾಮಿನಾಥ ಶಾಸ್ತ್ರಿಗಳು ಕುಲಸ್‌ಪೇಟೆಯಿಂದ ತುರುವೇಕೆರೆಗೆ, ಲಿಂಗ್ಯಯ್ಯನವರು ತುರುವೇಕೆರೆಯಿಂದ ಕುಲಸಪೇಟೆಗೆ

ಮುಂದೆ ಹೇಳುವವರನ್ನು ನೊವೆಂಬರ್ ತಾ ೧ ರಿಂದ ಪೋಲೀಸ್ ಇಲಾಖೆಗೆ ಸ್ಪೆಷಲ್ ಡ್ಯೂಟಿಗಾಗಿ ವರ್ಗಮಾಡಿದೆ—(೧) ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅ| ಕಮಿಷನರ್ ಮೆ| ಎ ವೇದಾಂತದೇಶಿಕ ಅಯ್ಯಂಗಾರ್ರು, (೨) ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಆಕ್ಟಿಂಗ್ ಅ| ಕಮಿಷನರ್ ಮೆ|| ಎ ಕೃಷ್ಣಸ್ವಾಮಿ ಅಯ್ಯಂಗಾರ್ರು

ಅ|| ಕಮಿಷನರ್ ಮೆ| ಎ ವೇದಾಂತದೇಶಿಕ ಅಯ್ಯಂಗಾರ್ರು ಹಂಗಾಮಿಯಾಗಿ ಕೋಲಾರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದು

ಪ್ರೊ|| ಅ| ಕಮಿಷನರ್ ಮೆ|| ಎಸ್ ರಾಮಣ್ಣನವರು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರತಕ್ಕದ್ದು.

ಹಾಸನ್ ಡಿವಿಜನ್ ಸಬ್ ಅ| ಇನ್‌ಜನಿಯರ್ ಮೆ| ಆರ್ ಡಬ್ಲಿಯು ಸ್ಕ್ಯಾಲ್ಡ್‌ವೆಲ್ ಯವರು ತಾ ೧ ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಸಬ್ ಅ| ಇನ್‌ಜನಿಯರ್ ಮೆ| ಎ ತಾಂಡೋಣಿರಾಯರನ್ನು ಬೆಂಗಳೂರು ಡಿವಿಜನ್‌ನಿಂದ ಮೈಸೂರು ಅರಮನೆ ಡಿವಿಜನ್‌ಗೆ ವರ್ಗಮಾಡಿದೆ.

ದೊಡ್ಡ ಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ| ಸದಾಶಿವರಾಯರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿಮಾಡಿದೆ

ತಾಲ್ಲೂಕ್ ಶಿರಸ್ತೆದಾರ್ ಸಿ ಜಿ ಸುಬ್ಬರಾಯರೇ ತಾಲ್ಲೋಕಿನ ಖಾಲಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಇಂಡಿಯಾದೇಶದ ವೃತ್ತಾಂತಗಳು

ಆಫ್ಘಾನಿಸ್ಥಾನದ ಅಮೀರರು ತಮ್ಮ ರಾಜ್ಯದ ಆರು ರೆಜಿಮೆಂಟಿನ ಶಿಪಾಯಿಗಳಿಗೆ ಹೊಸ ತರಹಾ ಬಂದೂಕುಗಳನ್ನು ಕೊಡಿಸಿರುತ್ತಾರೆಂದೂ, ಖೋಸ್ಟ್ ಪ್ರಾಂತ್ಯದಲ್ಲಿರುವ ಕೆಲವು ಮಂದಿ ಕರ ದಂಗೆ ಕೃತ್ಯಗಳನ್ನು ನಡಿಸುತ್ತಾ ಬಂದಿದ್ದಾರೆಂದೂ ತಿಳಿದುಬಂದಿದೆ

ಹಿಂದುಸ್ಥಾನದ ಫಾರೆಸ್ಟ್ ಇಲಾಖೆಯಲ್ಲಿ ಮೂವತ್ತೈದು ವರುಷಗಳಿಂದ ಇನ್ಸ್‌ಪೆಕ್ಟರ್ ಜನರಲ್ ಎಂಬ ಅಧಿಕಾರದಲ್ಲಿದ್ದು ಈಗತಾನೇ ನಿವೃತ್ತಿಸುಖವನ್ನನುಭವಿಸಿರುವ ಮೆ| ಸೆಯಿಂಟ್‌ಜಿಲ್ ಎಡ್ಲಿ ವಿಲಿಯಮ್ ಎಂಬಾತನು ಇಲ್ಲಿನ ಜಂಗಲುಗಳಲ್ಲಿ ೧೩೦ ಹುಲಿಗಳನ್ನು ಕೊಂದುಹಾಕಿರುವಂತೆ ಪ್ರಕಟವಾಗಿದೆ

ಖಾಟಿಯಾಲಾ ಸಂಸ್ಥಾನದಲ್ಲಿ ಮಹಾರಾಜರವರು ಪ್ರಾಪ್ತವಯಸ್ಕರಾಗಿರೋಣದರಿಂದ ಇಷ್ಟರಲ್ಲೇ ಅವರಿಗೆ ಯಥಾವಿಧಿಯಾಗಿ ಆಳ್ವಿಕೆಯ ಅಧಿಕಾರಗಳು ವಹಿಸಲ್ಪಡುವವು ಈಗ ಅವರು ಸ್ವತಂತ್ರಿಸಿ ಸಂಸ್ಥಾನದ ಕಾರುಬಾರುಗಳನ್ನು ನಡಿಸುತ್ತಿದ್ದಾರೆಂದು ತಿಳಿದು ಬಂದಿದೆ ರೀಜನ್ಸಿ ಕೌನ್ಸಿಲ್ಲು ವಜಾ ಆಯಿತು ರೀಜನ್ಸಿ ಕೌನ್ಸಿಲ್‌ನವರು ದುವರಿಗೆ ಸಂಸ್ಥಾನವನ್ನು ರಕ್ಷಿಸಿ, ಖಜಾನೆಯಲ್ಲಿ ಹಣವನ್ನು ಕೂಡಿಸಿಟ್ಟಿರುವರಲ್ಲದೆ ರಾಜಾದಾಯದಲ್ಲಿ ಸಾಲ್ ಒಂದಕ್ಕೆ ಖರ್ಚು ಕಳೆದು ೫ ಲಕ್ಷ ರೂಪಾಯಿನಂತೆ ಉಳಿಯುವ ರೀತಿಯಲ್ಲಿ ಹುಟ್ಟುವಳಿಯನ್ನು ಹೆಚ್ಚು ಮಾಡಿರುವರು

ಕೊಯಮುತ್ತೂರು ಮತ್ತು ಕರಿಂಬೂವಿ ಪ್ರಾಂತ್ಯದಲ್ಲಿ ಐಶ್ವರ್ಯವಂತನಾಗಿಯೂ ಭಾರೀ ಮಿರಾಸೀದಾರನಾಗಿಯೂ ಇರುವ ಮೆ ರಾಮಸ್ವಾಮಿನಾಯ್ಡು ಎಂಬಾತನು ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿದ್ದುಕೊಂಡು ಬೋರ್ಡಿನ ಮೀಟಿಂಗಿಗೆ ಪ್ರಯಾಣ ಮಾಡಿಕೊಂಡು ಹೋಗಿದ್ದರೂ ಗಾಡಿ ಖರ್ಚನ್ನು ಸರ್ಕಾರದಿಂದಲೇ ವಸೂಲಾಡಿಕೊಂಡನೆಂದು ಮೊಕದ್ದಮೆ ಆಗಿ, ಡೆಪ್ಯುಟಿ ಮ್ಯಾಜಿಸ್ಟ್ರೇಟರು ಆತನಿಗೆ ಆರು ತಿಂಗಳ ಸಜೆಯನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದ್ದರು ಆತನು ಅದರ ಮೇಲೆ ಸೆಷನ್ಸ್ ಜಡ್ಜರಲ್ಲಿ ಅಪೀಲ್ ಮಾಡಿಕೊಂಡಿದ್ದನು ಜಡ್ಜಿಯವರು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ ಅಂಥಾ ಅಪರಾಧವು ಆತನ ಮೇಲೆ ರುಜುವಾತು ಆಗುವದಿಲ್ಲವೆಂದು ಹೇಳಿ ಕೆಳಕೋರ್ಟಿನ ತೀರ್ಪನ್ನು ರದ್ದು ಮಾಡಿರುತ್ತಾರೆ

ಬರ್ಮಾ ಆಧಿಪತ್ಯಕ್ಕೆ ಉತ್ತರ ದಿಕ್ಕಿನಲ್ಲಿರುವ ಚಿತ್ರಗೊಂಡವೆಂಬ ಪಟ್ಟಣದಿಂದ ಸ್ವಲ್ಪದಲ್ಲಿ ಒಂದುಕಡೆ ಭೂಮಿಯು ಬಿರುಕು ಬಿಟ್ಟಿದೆ ಈ ಬಿರುಕಿನಿಂದ ಒಂದು ತರಹಾ ಸ್ವಭಾವಸಿದ್ಧವಾದ ಹೊಗೆಯು ಹೊರಡುತ್ತಿರುವುದು ಅದಕ್ಕೆ ಯಾರು ಯಾವಾಗ ಬೆಂಕಿ ತೋರಿಸಿದರೋ ತಿಳಿಯದಿಲ್ಲ ಈಗ ಅಲ್ಲಿ ಆ ಹೊಗೆಯು ನಿರಾತಂಕವಾಗಿ ಉರಿಯುತ್ತಿದೆ ಅಂತು ಬಹು ಕಾಲದಿಂದಲೂ ಈ ಉರಿಯನ್ನು ನೋಡಿದವನು ಅದು ಹ್ಯಾಗೆ ಹತ್ತಿಕೊಂಡಿತೋ ತಮಗೆ ತಿಳಿಯದೆಂದು ಹೇಳುತ್ತಾರೆ ಹ್ಯಾಗೂ ನೂರಾರು ವರುಷಗಳಿಂದ ಅದು ಅಲ್ಲಿ ಉರಿಯುತ್ತಿರಬಹುದೆಂದು ತೋರುವುದು ಈಗ ಈ ಉರಿಯನ್ನು ಆರಿಸಿ ಆ ಹೊಗೆಯನ್ನು ಸ್ವಾಧೀನಕ್ಕೆ ತಂದುಕೊಂಡು ಅಂದರೆ ನೀರಿನಂತೆ ನಲ್ಲಿಗಳ ಮೂಲಕ ಸಾಗಿಸಿಕೊಂಡು ಹೋಗಿ ಪಟ್ಟಣಕ್ಕೆಲ್ಲಾ ದೀಪಗಳನ್ನು ಇಡುವುದಕ್ಕೂ ಕಾರ್ಖಾನೆಗಳಲ್ಲಿ ಕಲ್ಲಿದ್ದಲಿಗೆ ಬದಲಾಗಿ ಉಪಯೋಗಪಡಿಸಿಕೊಳ್ಳುವುದಕ್ಕೂ, ಬೆಂಕಿ ಹೊತ್ತಿಸುವುದಕ್ಕೂ, ಇನ್ನೂ ಇತರ ಕೆಲಸಗಳಿಗೂ ಸಹಾಯವಾಗುವಂತೆ ಮಾಡಿಕೊಳ್ಳಬೇಕೆಂದು ಕೆಲವರು ಯೋಚಿಸಿ ಸಾಹಸಪಡುತ್ತಿದ್ದಾರೆ

ಕಳೆದ ೧೯೦೮ ನೇ ವರುಷ ಹಿಂದುಸ್ಥಾನದಲ್ಲಿ ದುಷ್ಟ ಮೃಗಗಳಿಂದಲೂ, ವಿಷ ಸರ್ಪಗಳಿಂದಲೂ ಮರಣ ಹೊಂದಿದ ಪ್ರಜಾ ಸಂಖ್ಯೆಯೇ ಮೊದಲಾದ ಲೆಕ್ಕಗಳನ್ನು ಇಂಡಿಯಾ ಗವರ್ನಮೆಂಟಿನವರು ಈಗತಾನೇ ಪ್ರಕಟಿಸುತ್ತಾರೆ ಇದರಲ್ಲಿ ಕಂಡುಬರುವ ಮುಖ್ಯ ವಿಷಯಗಳೇನೆಂದರೆ,—ಕಳೆದ ೧೯೦೭ ನೇ ವರುಷದಲ್ಲಿ ಕಾಡು ಮೃಗಾದಿಗಳಿಂದ ೧,೯೭೬ ಜನರೂ, ೧೯೦೮ ನೇ ವರುಷದಲ್ಲಿ ೧,೧೭೬ ಜನರೂ ಕಾಲವಾಗಿರುತ್ತಾರೆ ಕಳೆದ ನಾಲ್ಕು ವರುಷಗಳಲ್ಲಿ ಯಾವ ವರುಷವೂ ಇಷ್ಟು ಹೆಚ್ಚು ಜನರು ಮೃತಪಟ್ಟಿರುವುದಿಲ್ಲ ಬಂಗಾಳದಲ್ಲಿ ೪೫೫ ಜನರು ಹುಲಿಗಳ ಬಾಯಿಗೆ ತುತ್ತಾದರು ಜಲ್ಪಾಯಿಗುರಿ ಡಿವಿಜನ್ನಲ್ಲಿ ಪ್ರಜೆಗಳನ್ನು ಕೊಲ್ಲುತ್ತಿದ್ದ ಒಂದು ಸಲಗ ಆನೆಯನ್ನು ಸಿಕಾರಿ ಮಾಡಿದವನಿಗೆ ೨೦೦ ರೂಪಾಯಿ ಸಿಕ್ಕಿತು ಪಲಾಮೂ ಮತ್ತು ಹಜಾರಿಬಾಗ್ ಡಿಸ್ಟ್ರಿಕ್ಟುಗಳಲ್ಲಿ ಮನುಷ್ಯರನ್ನು ತಿನ್ನುವಂಥಾ ಎರಡು ಹುಲಿಗಳನ್ನು ಇಬ್ಬರು ಸಂಹಾರಮಾಡಿ ೬೦೦ ರೂಪಾಯಿ ಬಹುಮಾನ ಪಡೆದರು ಹಜಾರಿಬಾಗಿನಲ್ಲಿ ತಲೆ ೧ಕ್ಕೆ ೩೦ ರೂಪಾಯಿನಂತೆ ಬಹುಮಾನವಿಟ್ಟಿದ್ದಾಗ್ಯೂ ಅವು ೭೫ ಜನರನ್ನು ಕೊಂದಿರುತ್ತವೆ ಸುಂದರಬನ್ ಅಡವಿಯಲ್ಲಾ ದರೋ ೧೭೦ ಜನರನ್ನು ಹುಲಿಗಳು ಕೊಂದುಹಾಕಿವೆ ಈ ಸ್ಥಳಕ್ಕೆ ಸಮೀಪಿಸಿದ ಜಿಲ್ಲೆಯೊಂದರಲ್ಲೇ ೧೫೬ ಜನರು ಮೃತಪಟ್ಟಿದ್ದಾರೆ ಮನುಷ್ಯರನ್ನು ತಿನ್ನುವ ಒಂದು ಹುಲಿಯನ್ನು ಕೊಂದವರಿಗೆ ಹೋದ ವರುಷ ೫೦ ರೂಪಾಯಿ ಇನಾಮು ಕೊಡುವುದಾಗಿ ಪ್ರಕಟಿಸಿದ್ದರೂ ಅದು ಸಿಕ್ಕಲಿಲ್ಲ ಈಗ ಅದನ್ನು ಕೊಂದವರಿಗೆ ೫೦೦ ರೂಪಾಯಿ ಕೊಡುತ್ತೇವೆಂದು ಪ್ರಕಟಿಸುತ್ತಾರೆ ಅತ್ತಲಾಗಿ ವಿಷಸರ್ಪಗಳು ಕಡಿದು ೧೯೦೭ ನೇ ವರುಷದಲ್ಲಿ ೨೧,೯೮೯ ಜನರು ಮೃತಪಟ್ಟರು, ಕಳೆದ ೧೯೦೮ ನೇ ವರುಷದಲ್ಲಿ ೧೯,೭೩೮ ಜನರು ಸತ್ತುಹೋಗಿರುತ್ತಾರೆ.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಸಮಾಜ

ನವರಾತ್ರಿ ಉತ್ಸವ ಪ್ರಯುಕ್ತ ಪ್ರಮುಖರಾದ ಕೆಲ ಮೆಂಬರುಗಳು ಮೈಸೂರಿಗೆ ಪ್ರಯಾಣ ಮಾಡಿದ್ದಾಗ್ಯೂ ಶನಿವಾರದ ಸಭೆಯು ಬಹಳ ವಿಜೃಂಭಣೆಯಾಗಿ ನಡೆಯಿತು ಕೂಡಲು ಸೌಧದಲ್ಲಿ ಸ್ಥಳ ಸಾಲದೆ ಹೋಯಿತು ಮಿ ಕಾರ್ಕ್ ದೊರೆಸಾನಿಯವರೂ ಮತ್ತು ಅವರ ಸ್ನೇಹಿತರಾದ ಮಕೆನ್ಸ್ಟಿ ದೊರೆಸಾನಿಯವರೂ ಬಂದು ಇದ್ದರು ನೀತಿ ಸ್ವಾರಸ್ಯವಾದ ಪ್ರಶ್ನೋತ್ತರ ಪತ್ರ ಓದಿದ ನಂತರ ಸೌ|| ರಾಘಾಬಾಯಮ್ಮನವರು ಭಕ್ತಿಯನ್ನು ಕುರಿತು ಒಂದು ಸಣ್ಣ ಉಪನ್ಯಾಸವನ್ನು ಓದಿದರು ಕೆಲ ನಾರೀ ಮಣಿಗಳು ಸುಂದರವಾದ ಹಾಡುಗಳನ್ನು ಹಾಡಿದರು ಪಾನಸೋಪಾನಿಯಂ ನಡೆಸಲ್ಪಟ್ಟಿತು ಮಿ|| ಕಾರ್ಕ್ ದೊರೆಸಾನಿಯವರ ಮಿತ್ರರು ಕೆಲವು ಇಂಗ್ಲಿಷ್ ಹಾಡುಗಳನ್ನು ಅತಿ ರಮಣೀಯವಾಗಿ ಹಾಡಿದರು ಜಯಘೋಷಣೆಯಿಂದ ಮೀಟಿಂಗ್ ಮುಕ್ತಾಯ ಮಾಡಲ್ಪಟ್ಟಿತು

ಬರುವ ಮೀಟಿಂಗು ೧೬ ನೇ ತಾ|| ಶನಿವಾರದ ದಿನ ಪದ್ಧತಿಯಂತೆ ನಡೆಸಲ್ಪಡುತ್ತೆ ಎಲ್ಲರೂ ದಯಮಾಡಿ ಬರಬೇಕಾಗಿ ಸೆಕ್ರೆಟರಿಯವರು ಪ್ರಾರ್ಥಿಸುತ್ತಾರೆ

ದಸರಾ ಮಹೋತ್ಸವ

ಸನ್ ೧೯೦೯ ನೇ ಅಕ್ಟೋಬರ್ (ಸೌಮ್ಯನಾಮ ಸಂವತ್ಸರದ ಆಶ್ವಯುಜ ಶುದ್ಧ)

೧೫ ಶುಕ್ರವಾರ (೧)—ಪ್ರಾತಃಕಾಲ ೯ ಘಂಟೆಗೆ ವೃಶ್ಚಿಕಲಗ್ನದಲ್ಲಿ ಸಿಂಹಾಸನಾರೋಹಣ, ನಜರ್ ಸಾಯಂಕಾಲ ೬ ಘಂಟೆಗೆ ದರ್ಬಾರ್, ನಜರ್

ತಾ|| ೧೬ ನೇ ಶನಿವಾರದಿಂದ ತಾ|| ೨೨ ನೇ ಶುಕ್ರವಾರದ ವರೆಗೂ ಪ್ರತಿ ನಿತ್ಯವೂ ಪ್ರಾತಃಕಾಲ ೮ ಘಂಟೆಗೆ ಆನೆ ಕುದುರೆ ಕೆರೆ ಬಳಿಗೆ ಬಿಜಮಾಡುವವು ಪ್ರತಿ ಸಾಯಂಕಾಲ ೬ ಘಂಟೆಗೆ ದರ್ಬಾರಾಗುವುದು

೨೩ ಶನಿವಾರ (೯)—ಪ್ರಾತಃಕಾಲ ೭ ಘಂಟೆಗೆ ತುಲಾ ಲಗ್ನದಲ್ಲಿ ಆನೆ ಕುದುರೆ ಮತ್ತು ಆಯುಧಗಳು ಕೆರೆ ಒಳಗೆ ಬಿಜಮಾಡುವವು ಅನಂತರ ಆಯುಧ ಗಜಾಶ್ವಾದಿಗಳ ಪೂಜೆ ಸಾಯಂಕಾಲ ೫ ಘಂಟೆಗೆ ಇಂಗ್ಲೀಷ್ ದರ್ಬಾರ್

೨೪ ಭಾನುವಾರ (೧೦)—ಪ್ರಾತಃಕಾಲ ೭ ಘಂಟೆಗೆ ತುಲಾ ಲಗ್ನದಲ್ಲಿ ಆಯುಧ ಗಜಾಶ್ವಗಳು ಬನ್ನೀ ಮಂಟಪಕ್ಕೆ ಬಿಜಮಾಡುವವು ಅನಂತರ ಪಟ್ಟದ ಕಾಳಗ, ಸಾಯಂಕಾಲ ೯ ಘಂಟೆಗೆ ಜಂಬೂಸವಾರಿ ಅನಂತರ ದರ್ಬಾರ್

೨೫ ಸೋಮವಾರ (೧೧)—ಸಾಯಂಕಾಲ ೭ ಘಂಟೆಗೆ ಜಗನ್ಮೋಹನ ಮಹಲಿನಲ್ಲಿ ದರ್ಬಾರ್, ನಜರ್

೨೬ ಮಂಗಳವಾರ (೧೨)—ಸಾಯಂಕಾಲ ೭ ಘಂಟೆಗೆ ಜಗನ್ಮೋಹನ ಮಹಲಿನಲ್ಲಿ ದರ್ಬಾರ್, ಮಿಲಿಟರಿಯವರಿಗೂ ಪ್ರಜಾಪ್ರತಿನಿಧಿಗಳಿಗೂ ನಜರ್

ಬೆಂಗಳೂರಿನಲ್ಲಿರುವ ತಾತಾ ಯವರ ರೇಷ್ಮೆ ಕಾರ್ಖಾನೆಯು

ಒಪ್ಪಿ ನಡೆಯುವ ಕೆಲಸಗಳು

ತಿರುಮಕೂಡ್ಲು ನರಸೀಪುರದ ಶ್ರೀ ಕೃಷ್ಣರಾಜ ಒಡೆಯರ್ ರೇಷ್ಮೆ ಕೈಗಾರಿಗೆ ಕೋ ಆಪರೇಟಿವ್ ಸೊಸೈಟಿಯ ಸೆಕ್ರೆಟರಿ ಎಂ ಟಿ ಕೃಷ್ಣರಾಯರು ಬೆಂಗಳೂರಿಗೆ ಈ ವಾರದಲ್ಲಿ ಬಂದಿದ್ದಾಗ ತಾತಾ ಸಾಹೇಬರ ರೇಷ್ಮೆ ಕಾರ್ಖಾನೆಯನ್ನು ನೋಡಬೇಕೆಂದು ಅಪೇಕ್ಷೆಪಟ್ಟು, ಕೋ ಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರವರ ಮುಖಾಂತರ ಅಲ್ಲಿನ ಮ್ಯಾನೇಜರ್ ಪಿ ಎ ಓಡ ಯವರಿಗೆ ಕಾಗದ ಬರೆದು ೧೦ನೇ ತಾರೀಖಿನ ದಿವಸ ಕಾರ್ಖಾನೆಗೆ ಹೋಗಿದ್ದರು ಅಲ್ಲಿ ಈಗ ಹುಳುಗಳನ್ನು ಮೇಯಿಸುತ್ತಿರುವುದರಿಂದ ರೇಷ್ಮೆ ತೆಗೆಯುವ ಕೆಲಸ ನಡೆಯುತ್ತಿಲ್ಲದಿದ್ದರೂ ಇತರ ಎಲ್ಲಾ ವಿಷಯಗಳನ್ನೂ ಚೆನ್ನಾಗಿ ತಿಳಿಯುವಂತೆ ಮ್ಯಾನೇಜರವರು ತಿಳಿಸಿದರು ೧೧ ದಿವಸದ ಹುಳುಗಳು ಮತ್ತು ೩೧ ದಿವಸದ ಹುಳುಗಳು ಇದ್ದವು ಕೈಯಲ್ಲಿ ಮುಟ್ಟದಂತೆ ಇರುವುದಕ್ಕೆ ತಟ್ಟೆಗಳ ಮೇಲೆ ಬಲೆಗಳನ್ನು ಹಾಕಿದ್ದರು ಇನ್ನು ಸ್ವಲ್ಪ ದಿವಸದಲ್ಲಿಯೇ ಗೂಡು ಕಟ್ಟುವುವಾಗಿಯೂ, ರೇಷ್ಮೆ ತೆಗೆಯುವುದಾಗಿಯೂ ಹೇಳಿದರು ರೇಷ್ಮೆಗಳಲ್ಲಿ ಜಪಾನ್ ಫ್ರೆಂಚ್ ಮತ್ತು ಬಂಗಾಳಿ ಶೀಮೆಗಳ ಮಾದರಿಗಳನ್ನು ತೋರಿಸಿದರು ಮತ್ತು ಕಾಡು ರೇಷ್ಮೆಯ ಗೂಡನ್ನು ತೋರಿಸಿದರು ತೋಟದಲ್ಲಿ ಜಪಾನ್, ಬಗ್ದಾದಿ ಮತ್ತು ಮೈಸೂರು ಸೀಮೆಗಳ ಹಿಪ್ಪನೇರಳೆ ಗಿಡಗಳನ್ನೂ, ಅವುಗಳ ಎಲೆಗಳಲ್ಲಿರುವ ವ್ಯತ್ಯಾಸಗಳನ್ನೂ ತೋರಿಸಿದರು ಅಲ್ಲಿ ಕೆಲವು ಗಿಡಗಳನ್ನು ದೊಡ್ಡ ಮರಗಳನ್ನಾಗಿ ಬೆಳೆಯುವುದಕ್ಕೆ ಬಿಟ್ಟಿರುತ್ತಾರೆ ಇದರಿಂದ ಆಗಿಂದಾಗ್ಗೆ ಗಿಡಗಳಿಗೆ ನೀರು ಹಾಕುವುದೂ ತಪ್ಪುತ್ತದೆ ಅಲ್ಲಿ ಅನೇಕ ರಬ್ಬರು ಗಿಡಗಳು ಬೆಳೆಯುತ್ತಿರುತ್ತವೆ ಇವನ್ನೆಲ್ಲಾ ತೋರಿಸಿದನಂತರ ಸೆಕ್ರೆಟರಿಯವರಿಗೆ ಅಲ್ಲಿನ ಯಂತ್ರದಲ್ಲಿ ಕೆಲಸ ಮಾಡುವುದನ್ನು ತೋರಿಸುವುದಕ್ಕೆ ಸ್ವಲ್ಪ ಗೂಡನ್ನು ತರಿಸಿ ಒಂದು ರಾಟೆಯಲ್ಲಿ ಹಸನಾದ ನೂಲು ಅಂದರೆ ೧೨ ಎಳೆ ರೇಷ್ಮೆಯುಳ್ಳದ್ದನ್ನು ತೆಗೆಯಲು ಒಬ್ಬ ಹುಡುಗನನ್ನು ಏರ್ಪಾಡು ಮಾಡಿದರು ಗಂಟು ಆಗದಂತೆ ಒಂದು ಗಾಜಿನ ಗುಂಡಿಯ ರಂಧ್ರದಲ್ಲಿ ದಾರ ಬರುತ್ತಿತ್ತು ಇದಲ್ಲದೆ ರೇಷ್ಮೆಯನ್ನು ತರಹಾವರಿ ವಿಂಗಡಿಸಲು ಅನುಕೂಲವಾದ ಒಂದು ತೂಕದ ಮನೆ ಯಂತ್ರವನ್ನು ತೋರಿಸಿದರು

ಜಪಾನ್ ದೇಶದಲ್ಲಿ ರೇಷ್ಮೆ ಕೋ ಆಪರೇಟಿವ್ ಸೊಸೈಟಿಗಳು ಮಾಡುವ ಮುಖ್ಯ ಕೆಲಸವೇನೆಂದರೆ—ಸೊಸೈಟಿಯ ಮೆಂಬರುಗಳು ತಮ್ಮ ಮನೆಗಳಲ್ಲಿ ಸ್ವಂತವಾಗಿ ತಯಾರಾಗುವ ರೇಷ್ಮೆಯನ್ನು ಸೊಸೈಟಿಯ ಕಾರ್ಖಾನೆಯಲ್ಲಿ ಪುನಃ ತೋಡುವುದಕ್ಕೆ ಕಳುಹಿಸುತ್ತಾರೆ ಹೀಗೆ ಎರಡು ದಫಾ ತೋಡುವುದರಿಂದ ರೇಷ್ಮೆಯು ಹಸನಾಗುತ್ತದೆ ಹೀಗೆ ಹಸನು ಮಾಡಿದ ರೇಷ್ಮೆಯ ಕ್ರಯ ಜಾಸ್ತಿಯಾಗುತ್ತದೆ

ಮಿ|| ಓಡ್ಡು ಯವರು ಬಹಳ ವಿಶ್ವಾಸದಿಂದ ಕಾರ್ಖಾನೆಯ ವಿಷಯವನ್ನು ಎಲ್ಲರಿಗೂ ತಿಳಿಸುತ್ತಾರೆ

ಮೈಸೂರು ಸರ್ಕಾರಿ ಹುಕುಂಗಳು

ರಸ್ತೆ ಮಾಡಿಸಲು ಅಪ್ಪಣೆಯು

ಕೊಂಡಾಪುರ ಇನಾಂ ಗ್ರಾಮದ ಅನುಮಂತೆ ಗೌಡನೆಂಬಾತನು ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಕೋಡಂಬಳ್ಳಿಯಿಂದ ಸಿಂಗರಾಜಪುರಕ್ಕೆ ಒಂದು ರಸ್ತೆಯನ್ನು ಧರ್ಮಾರ್ಥವಾಗಿ ಸ್ವಂತ ಖರ್ಚಿನಿಂದ ಹಾಕಿಸುವುದಾಗಿಯೂ ಮತ್ತು ಇದನ್ನು ತನ್ನ ಖರ್ಚಿನಿಂದಲೇ ಸುಮಾರು ಮ ೩೭ ವರುಷ ಸ್ಥಿತಿಯಲ್ಲಿಟ್ಟುಕೊಂಡಿರಲೂ ಕಬೂಲು ಪಟ್ಟಿರುತ್ತಾನೆ ಇದರಿಂದ ಜನಗಳಿಗೆ ತುಂಬಾ ಅನುಕೂಲ ಉಂಟು ಮತ್ತು ಸರ್ಕಾರಕ್ಕೂ ನಷ್ಟವಿಲ್ಲವಾದ್ದರಿಂದ ಸದರಿ ಕೆಲಸ ನಡೆಸುವುದಕ್ಕೆ ಗೌರ್ನಮೆಂಟವರು ಒಪ್ಪಿಗೆ ಕೊಡಬಹುದೆಂದೂ, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು ಮಾಡಿದ ಶಿಫಾರಸನ್ನು ಗೌರ್ನಮೆಂಟಿನವರು ಅಂಗೀಕರಿಸಿ, ರಸ್ತೆ ಕೆಲಸ ಪೂರೈಸಿದ್ದಕ್ಕೆ ರಿಪೋರ್ಟು ಮಾಡಬೇಕೆಂದೂ ಹುಕುಂ ಮಾಡಿರುತ್ತಾರೆ

ಕ್ಯಾಜುಯಲ್ ರಜಾ ವಿಚಾರ

ನಿರ್ವಾಹವಿಲ್ಲದೆ ಜರೂರಿಯಾತ್ ಸಂದರ್ಭಗಳಲ್ಲಿ ಸರ್ಕಾರಿ ನೌಕರರ ಅನುಕೂಲಕ್ಕೋಸ್ಕರವೇ ಕ್ಯಾಜುಯಲ್ ರಜಾವನ್ನು ಕೊಡತಕ್ಕದ್ದಾಗಿದೆ ಮತ್ತು, ಅದಕ್ಕೆ ಸಂಬಂಧಪಟ್ಟ ನಿಯಮಗಳು ಹಂಗಾಮಿ ನೌಕರರಿಗೂ ಸಹ ಅನ್ವಯಿಸುತ್ತಂಬದಾಗಿ ಮೊದಲಿನಿಂದಲೂ ಭಾವಿಸಲ್ಪಟ್ಟಿರುತ್ತದೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ ೧೬೩ ನೇ ಪ್ರಕರಣದಲ್ಲಿ ಸದರಿ ರಜಾವನ್ನು ಸರ್ಕಾರದ ಕೆಲಸಕ್ಕೆ ಕುಂದಕವಿಲ್ಲದೆ ಇರುವಾಗ ಮಾತ್ರ ಕೊಡತಕ್ಕದ್ದೆಂದು ವಿಧಿಸಿರುತ್ತೆ ಆದುದರಿಂದ, ಕಛೇರಿಗಳ ಮತ್ತು ಇಲಾಖೆಗಳ ಮೊಖ್ತೇಸರರು ಇಂಥಾ ರಜಾವನ್ನು ಮಿತಿಮೀರಿ ಕೊಟ್ಟಾರೆಂಬ ಶಂಕೆಗೆ ಆಸ್ಪದವಿಲ್ಲ ಈ ಕಾರಣಗಳಿಂದ ಹಂಗಾಮಿ ನೌಕರಿಯಲ್ಲಿರುವ ಜನಗಳಿಗೆ ಕ್ಯಾಜುಯಲ್ ರಜಾವನ್ನು ಕೊಡತಕ್ಕ ವಿಷಯದಲ್ಲಿ ಇನ್ನೂ ಹೆಚ್ಚು ನಿರ್ಬಂಧಗಳನ್ನು ಕಲ್ಪಿಸುವುದು ಯುಕ್ತವಲ್ಲವೆಂದು ಸರ್ಕಾರದವರು ತಿಳಿದಿರುತ್ತಾರಲ್ಲದೆ, ವಾಡಿಕೆಯಾಗಿರುವ ಕ್ಯಾಜುಯಲ್ ರಜಾ ವಿಷಯದ ನಿಬಂಧನೆಗಳನ್ನು ಹಂಗಾಮಿ ನೌಕರರಿಗೂ ಸಹಾ ಅನ್ವಯಿಸಿಕೊಳ್ಳಬೇಕೆಂದು ಹುಕುಂ ದಯಪಾಲಿಸುತ್ತಾರೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ ೧೬೯ ಎ ಪ್ರಕರಣದಲ್ಲಿ ಬರುವ "ಪ್ರಿವಿಲೇಜ್ ರಜಾ" ಎಂಬ ಪದಗಳಿಗೆ ಮುಂಚೆ "ಕ್ಯಾಜುಯಲ್ ರಜಾ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು

ಗ್ರಾಮಪಾಠಶಾಲೆಗಳಲ್ಲಿ ರೇಷ್ಮೆಯ ವ್ಯವಸಾಯಕ್ರಮವನ್ನು ಕಲಿಸುವುದು

ಬೊಂಬಾಯಿನ ಪ್ರಸಿದ್ಧ ವರ್ತಕರಾದ ಮಿ ತಾತಾ ಯವರು ಬೆಂಗಳೂರಿನಲ್ಲಿ ಏರ್ಪಡಿಸಿರುವ ರೇಷ್ಮೆ ಕಾರ್ಖಾನೆಯಲ್ಲಿ ೮ ಮಂದಿ ಮಾಸ್ಟರುಗಳಿಗೆ ರೇಷ್ಮೆ ತಯಾರಿ ಕ್ರಮವು ಹೇಳಿಕೊಡಲ್ಪಟ್ಟಿತು ಅವರ ವ್ಯಾಸಂಗವು ಮುಗಿದ ನಂತರ ಅವರು ರೇಷ್ಮೆ ತಯಾರಾಗುವ ಸ್ಥಳಗಳ ಸ್ಕೂಲುಗಳಲ್ಲಿ ಆ ಕಸಬನ್ನು ಹೇಳಿಕೊಡುವುದಕ್ಕೋಸ್ಕರ ನೇಮಿಸಲ್ಪಟ್ಟರು ಈ ಏರ್ಪಾಡಿನಂತೆ ಮಾಸ್ಟರುಗಳಿಗೆ ಕೊಡುತ್ತಿದ್ದ ೧೦ ರೂಪಾಯಿ ಅಲೋಯನ್ಸನ್ನು ೧೯೦೯ ನೇ ಜುಲೈ ೮ ಗಾಯಿತು ನಿಲ್ಲಿಸಬೇಕೆಂದು ಡಿಪಿಐ ಕಮಿಷನರವರು ಗವರ್ನಮೆಂಟಿಗೆ ಶಿಫಾರಸ್ಸು ಮಾಡಿದರು ಇದರ ಮೇಲೆ ಗವರ್ನಮೆಂಟಿನವರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥರಾದ ಮಿ ಭಾಬಾಯವರ ಅಭಿಪ್ರಾಯವನ್ನು ಕೇಳಲು ಅವರು ಈ ಮಾಸ್ಟರುಗಳನ್ನು ಗ್ರಾಮ ಪಾಠಶಾಲೆಗಳಲ್ಲಿ ಕನ್ನಡ ನಾಲ್ಕು ಮತ್ತು ಐದನೇ ತರಗತಿಗಳ ಹುಡುಗರಿಗೆ ರೇಷ್ಮೆ ವ್ಯವಸಾಯವನ್ನು ಕಲಿಸುವುದಕ್ಕೆ ಉಪಯೋಗಿಸಿಕೊಳ್ಳಬೇಕೆಂದೂ, ಈ ವ್ಯವಸಾಯವನ್ನು ಪುಸ್ತಕಗಳಿಂದ ಓದಿ ತಿಳಿದುಕೊಳ್ಳುವುದು ಅಲ್ಲದೆ ಕೈಯಿಂದ ಮಾಡಿಯೂ ಕಲಿಯಬೇಕೆಂದೂ ಸೂಚಿಸಿದರು ಈ ಅಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿ ಮುಂದೆ ಹೇಳುವಂತೆ ಅಪ್ಪಣೆ ಮಾಡಿದಾರೆ —

ಈ ರೇಷ್ಮೆ ವ್ಯವಸಾಯವನ್ನು ಕಲಿತುಕೊಂಡಿರುವ ಆ ಎಂಟು ಮಾಸ್ಟರುಗಳನ್ನು ಆ ಪ್ರದೇಶಗಳಲ್ಲಿರುವ ಪಾಠಶಾಲೆಗಳಲ್ಲಿ ರೇಷ್ಮೆ ವ್ಯವಸಾಯವನ್ನು ಬೋಧಿಸುವುದಕ್ಕೆ ನೇಮಿಸಿಕೊಂಡು ಅವರಿಗೆ ಒಟ್ಟು ಬಾಬಿಗೆ ತಿಂಗಳಿಗೆ ೧೦ ರೂಪಾಯಿ ಕಳಬನ್ನೂ ಎರಡು ರೂಪಾಯಿ ಕಂಟಿಂಜೆನ್ಸಿ ಮೊದಲಾದ ಖರ್ಚನ್ನೂ ಕೊಡತಕ್ಕದ್ದು ಶಾಲೆಯ ತೋಟಗಳ ಒಂದು ಭಾಗದಲ್ಲಿ ಹಿಪ್ಪನೇರಳೆ ಗಿಡಗಳನ್ನು ಬೆಳೆಯಿಸಿಕೊಳ್ಳಬಹುದು ಮತ್ತು ರೇಷ್ಮೆಯ ಎಳೆಗಳನ್ನು ಸುತ್ತುವುದಕ್ಕೆ ಬಂಗಾಳದಲ್ಲಿ ಉಪಯೋಗಿಸುವ ಸುಲಭ ಕ್ರಯದ ರಾಟೆಗಳನ್ನು ಕೊಂಡು ತರಿಸಿ ಆ ಪಾಠಶಾಲೆಗಳಲ್ಲಿ ಉಪಯೋಗಿಸಬಹುದು ಈ ಸ್ಕೂಲು ಮಾಸ್ಟರುಗಳನ್ನು ರೇಷ್ಮೆ ವ್ಯವಸಾಯವು ನಡೆಯುತ್ತಿರುವ ಪ್ರದೇಶಗಳಿಗೆ ವರ್ಗಾಯಿಸಬೇಕು ಈ ರೇಷ್ಮೆಯ ವ್ಯವಸಾಯವನ್ನು "ನೇಚರ್ ಸ್ಟಡಿ" ಅಂದರೆ ಸೃಷ್ಟಿಯ ವಿಚಿತ್ರವನ್ನು ಪರೀಕ್ಷೆಯಿಂದಲೂ ವ್ಯಾಸಂಗದಿಂದಲೂ ನೋಡಿ ತಿಳಿದುಕೊಂಡು ತಿಳುವಳಿಕೆಯನ್ನು ವೃದ್ಧಿಮಾಡಿಕೊಳ್ಳುವ ಪ್ರಕಾರವಾಗಿ ಅಭ್ಯಾಸ ಮಾಡಿಸಬೇಕು ಈ ಏರ್ಪಾಡು ಒಂದು ವರ್ಷದ ವರೆಗೆ ಆಚರಣೆಯಲ್ಲಿದ್ದು ನಂತರ ಇದರಿಂದ ಎಷ್ಟು ಪ್ರಯೋಜನ ಉಂಟಾಗಿದೆ ಎಂಬುವನ್ನು ಕುರಿತು ಒಂದು ರಿಪೋರ್ಟು ಬರೆಯಲ್ಪಡಬೇಕು

ವಾರ್ತಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್

ಬೆಂಗಳೂರು ಸುಲ್ತಾನ್ ಪೇಟೆ ಹಿಂದೂ ಎ ವಿ ಸ್ಕೂಲು

ಅಯ್ಯಾ,

ಈ ಟವುನ್ನಿನಲ್ಲಿ ಈ ಸ್ಕೂಲು ಸುಮಾರು ೨೭ ವರುಷಗಳ ಕೆಳಗೆ ಸ್ಥಾಪಿತವಾಗಿ, ಹಾಲಿ ೬೦೦-೭೦೦ ಬಾಲಕರುಳ್ಳ ಹೆಸರುವಾಸಿಯಾದ ಸ್ಕೂಲಾಗಿ ನಡೆಸಿಕೊಂಡಿದೆ ಇದಕ್ಕೆ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರು ಅಭಿಮಾನವಿಟ್ಟು ೫೦ ರೂಪಾಯಿ ಗ್ರಾಂಟನ್ನು ದಯಪಾಲಿಸುತ್ತಾರೆ ಸ್ಕೂಲಿನಲ್ಲಿ ೨೦-೨೫ ಮಂದಿ ಮಾಸ್ಟರುಗಳಿರುತ್ತಾರೆ ಈ ಸ್ಕೂಲು ಮಿ ಎಸ್ ಆರ್ ವಂದುಂದಯ್ಯನವರ ಮ್ಯಾನೇಜ್‌ಮೆಂಟಿನಿಂದಲೂ, ಹೆಡ್‌ಮಾಸ್ಟರ್ ಮಿ ಟಿ ಯಂ ರಾಜಾರಾವ್ ಬಿ ಎ ಯವರಿಂದಲೂ, ಮಿ ಗೋಪಾಲರಾಯರೇ ಮೊದಲಾದ ಅನೇಕ ಮಾಸ್ಟರುಗಳಿಂದಲೂ ಸಾಕಾದ ಅಭಿವೃದ್ಧಿಯನ್ನು ಹೊಂದಿರತಕ್ಕ ದೊಡ್ಡ ಸ್ಕೂಲಾಗಿರುತ್ತೆ ಆದರೆ ಸ್ಕೂಲು ಇಷ್ಟು ಉತ್ತಮಸ್ಥಿತಿಯಲ್ಲಿದ್ದಾಗ್ಯೂ ಕೇವಲ ಸರ್ಕಾರಿ ಸ್ಕೂಲಿನಂತೆ ಇಲ್ಲದಿರುವುದರಿಂದಲೂ, ಒಬ್ಬರ ಮ್ಯಾನೇಜ್‌ಮೆಂಟಿಗೆ ಸಿಕ್ಕಿರುವುದರಿಂದಲೂ ಕೆಲವು ಅನನುಕೂಲಗಳಿಗೆ ಒಳಪಟ್ಟಿರುತ್ತೆ ಸದರಿ ಮ್ಯಾನೇಜರವರು, ಇತರ ಸ್ಕೂಲುಗಳಂತಲ್ಲದೆ ತನಗೆ ತೋರಿದಂತೆ ಟೀಚರುಗಳನ್ನು ತೆಗೆದು ಹಾಕುವುದು, ಇತರರನ್ನು ಸೇರಿಸಿಕೊಳ್ಳುವುದು, ಈ ರೀತಿ ಮಾಡುತ್ತಿದ್ದಾರೆ ಅಲ್ಲದೆ ಕ್ರಿಕೆಟ್ ಫೀಸ್ ಮೊದಲಾದ ಲೆಕ್ಕ ಪತ್ರ ಇಲ್ಲ ಮ್ಯಾನೇಜರವರು ಮೇಲ್ಕಂಡ ವಿಷಯಗಳನ್ನು ಸರಿಪಡಿಸುವರೆಂದು ನಂಬಿರುತ್ತೇವೆ

ಪ್ರತ್ಯಕ್ಷದರ್ಶಿ

ಆನೇಕಲ್ ತಾಲ್ಲೂಕು ದೊಮ್ಮಸಂದ್ರದ ಕೆರೆಯು

ಅಯ್ಯಾ,

ಈ ಊರು ಕೆರೆಯು ಸುಮಾರು ೫೦ ೬೦ ವರ್ಷಗಳ ಹಿಂದೆ ಕೊಡಗಿಯವರದಾಗಿತ್ತು ಆ ಕಾಲದಲ್ಲಿ ಕೊಡಗಿಯವರು ಕೆರೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡಿದ್ದರು ಆ ತರುವಾಯ ಅದು ಸವರಿಯವರ ಕೈ ತಪ್ಪಿ ಸರ್ಕಾರಕ್ಕೆ ಸೇರಿತು ಈಚೆಗೆ ಸುಮಾರು ೧೫ ವರ್ಷಗಳಿಂದಲೂ ಕೆರೆ, ಕಟ್ಟೆ, ತೂಬು, ಕೋಡಿ ಸಹಾ ಕೆಟ್ಟಿತ್ತಾಗಿರುತ್ತೆ ಆಗಿನಿಂದಲೂ ತಾಲ್ಲೂಕು ಆಫೀಸರುಗಳಿಗೆ ರೂಬರೂಬು ಹೇಳಿಕೊಂಡು ತೋರಿಸಿದ್ದಾಯಿತು ಹಿಂದೆ ಈ ತಾಲ್ಲೂಕಿನಲ್ಲಿ ಅಮಲ್ದಾರರಾಗಿದ್ದ ಮಿ|| ಶ್ರೀಕಂಠಯ್ಯನವರು ಈಗ್ಗೆ ಸುಮಾರು ೭ ೮ ವರ್ಷಗಳ ಕೆಳಗೆ ಪ್ಲೇಗ್ ಕಾಲದಲ್ಲಿ ಸುಮಾರು ೩೦೦ ರೂಪಾಯಿನಷ್ಟು ಮಟ್ಟಿ ಕಾಮಗಾರಿ ಗೌರ್ನಮೆಂಟಿನಿಂದ ಮಾಡಿಸಿರುತ್ತಾರೆ ಆ ತರುವಾಯ ಅಮಲ್ದಾರರಾಗಿ ಬಂದ ಮಿ| ಮಹಮದ್ ರಜಾ ಸಾಹೇಬರನ್ನು ಕರೆದುಕೊಂಡು ಹೋಗಿ ಕೆರೆಯ ಸ್ಥಿತಿಯನ್ನು ತೋರಿಸಿದ್ದಾಯಿತು ಅಮಲ್ದಾರ್ ಸಾಹೇಬರವರು ಗ್ರಾಮದ ಪಟೇಲ್ ಶಾನುಭೋಗರಿಗೆ ಕೆರೆಯ ಮಟ್ಟಿ ಕಾಮಗಾರಿಗೋಸ್ಕರ ರೈತರಿಗೆ ಹಂಚಿಕೊಟ್ಟು ಕಾಮಗಾರಿ ಮಾಡಿಸಿ ರಿಪೋರ್ಟು ಮಾಡಬೇಕೆಂದು ಹುಕುಂ ಆಜ್ಞೆಯಾಯಿತು ಸದರಿ ಪಟೇಲ್ ಶಾನುಭೋಗರು ರೈತರಿಗೆ ಹಂಚಿಕೊಟ್ಟು ಕೆಲಸಮಾಡಬೇಕೆಂದು ಎಷ್ಟು ವಿಧವಾಗಿ ಕೇಳಿದಾಗ್ಯೂ ಕೆಲವರಿಂದ ಕೆಲಸ ನಡೆದಿರುತ್ತದೆ ಬಾಕಿ ಇರುವ ಕೆಲಸವು ಕೆಲವು ರೈತರಿಂದಲೂ ಒಹು ಮಟ್ಟಿಗೆ ಕೊಡಗಿಯವರಿಂದಲೂ ನಡೆಯಬೇಕಾಗಿದೆ ಈಚೆಗೆ ವರ್ಕ್ ಇನ್ಸ್‌ಪೆಕ್ಟರು ಸಹಾ ಬಂದು ನೋಡಿಕೊಂಡು ಹೋದರು ಆದರೆ ಈ ಕೆರೆಗೆ ಏರಿಯ ಕಡೆಯಿಂದ ಮರಳು ಒಂದು ಕೆರೆಯಲ್ಲಿ ಭರ್ತಿಯಾಗಿ ಕೋಡಿಯಿಲ್ಲದ್ದರಿಂದ ಬಂದ ನೀರು ಹೊರಟು ಹೋಗುತ್ತಾ ಇದೆ ಈ ಕೆರೆಯು ನಾಶವಾಗುತ್ತಿರುವದರಿಂದ ಮುಂದಿನ ಗ್ರಾಮವಾದ ಮುಮರಿ ಎಂಬ ಗ್ರಾಮದ ಕೆರೆಗೆ ತುಂಬಾ ಅಪಾಯಕರವಾಗಿರುತ್ತೆ ಈ ಕೆರೆ ಕೆಳಗಿನ ಜಮೀನುಳ್ಳ ರೈತರುಗಳು ಪರಸ್ಥಳಗಳಲ್ಲಿರುವುದರಿಂದ ಇದರ ಕೆಲಸ ನಡೆಯಲು ತುಂಬಾ ಅಡಚಣೆಯಾಗಿರುತ್ತೆ ಗೌರ್ನಮೆಂಟವರೇ ಈ ಮಟ್ಟಿ ಕಾಮಗಾರಿ ಮಾಡಿ ರೈತರಿಂದ ಹಣ ವಸೂಲ್ ಮಾಡಿಕೊಂಡು ಕಲ್ಲು ಕಾಮಗಾರಿ ಮತ್ತು ಕೋಡಿ ಕಾಮಗಾರಿ ಸಹ ಮಾಡಿಸಿಕೊಟ್ಟು ಬಡ ರೈತರನ್ನು ಕಾಪಾಡಬೇಕು ಇದು ದೊಡ್ಡ ಗ್ರಾಮ ಒಳ್ಳೇ ಮಾನಾವರಿ ಸ್ಥಳ ಕೆರೆಯಲ್ಲಿ ನೀರು ಇಲ್ಲದೆ ಇರುವುದರಿಂದ ಊರಿನಲ್ಲಿರತಕ್ಕ ಬಾವಿಗಳಲ್ಲಿ ಸಹಾ ನೀರಿಗೆ ತುಂಬಾ ತೊಂದರೆಯೂ ಸಕಲಿನ ನಷ್ಟವೂ ಆಗುತ್ತಾ ಇದೆ ಆದ್ದರಿಂದ ದಯಾಳುಗಳಾದ ನಮ್ಮ ಅಮಲ್ದಾರರು ಗಮನಾದ ಚಿತ್ತವಿಟ್ಟು ಈ ಕೆರೆಯ ಕಾಮಗಾರಿ ಆಗುವ ಹಾಗೆ ತಕ್ಕ ಏರ್ಪಾಡು ಮಾಡಿದರೆ ಬಡ ರೈತರಿಗೆ ತುಂಬಾ ಉಪಕಾರವಾಗುತ್ತೆ

ಬ ಆ ಕ

[ವಾರ್ತಾದಾರರು ಅಪೇಕ್ಷಿಸುವಂತೆ ಕೈತಪ್ಪಿಹೋದ ಈ ಕೆರೆ ಕಾಮಗಾರಿಯನ್ನು ಸರ್ಕಾರದವರು ಮಾಡಿ ಖರ್ಚನ್ನು ಹಂಚಿ ಹಾಕಿ ಕಟ್ಟಿಂದ ವಸೂಲು ಮಾಡಿಕೊಳ್ಳಬಹುದೆಂದರೆ ಆದರೆ ಈ ವಿಷಯವಾಗಿ ದಾರರು ಗಳೇನೆಂದೂ ಅರ್ಜಿ ಬರೆದುಕೊಂಡರೆ ಸರ್ಕಾರದವರೇ ಮಾಡಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ —ಎಡಿ]

ಮೊಖ್ತಾರುಗಳು

ಅಯ್ಯಾ,

ತಾ ೭ ೧೦ ೧೯೦೯ ನೇ ವೃತ್ತಾಂತ ಪತ್ರಿಕೆಯ ಮೂಲಕ ಪ್ರಚುರ ಪಡಿಸಿರುವ ಪ್ಲೀಡರ್ ಆಫೀಸರವರು ಬರೆದ ಅಂಶಕ್ಕೆ ಪ್ರತಿಯಾಗಿ ಇದನ್ನು ಪ್ರಚುರಪಡಿಸಲು ಕೃತವಡಿಸಿದೆ

ಘನವುಳ್ಳ ಮೈಸೂರು ಚೀಫ್ ಕೋರ್ಟಿನವರು ಮೊಖ್ತಾರುಗಳನ್ನು ಕ್ರಿಮಿನಲ್ ಕೋರ್ಟುಗಳಲ್ಲಿ ಫಿರ್ಯಾದಿ ಯಾ ಅಪರಾಧಿಗಳ ಪರ ವಾದಿಸಬಹುದೆಂದು ಅಪ್ಪಣೆ ಮಾಡಿರುವುದಾಗಿ ನಮೂದು ಇರುವುದಾಗಿಯೂ ಈ ಮೊಖ್ತಾರುಗಳ ಪ್ರಾಕ್ಟೀಸಿನಿಂದ ಕೆಲ ಪ್ರಜೆಗಳಿಗೆ ಅನುಕೂಲವಿರುತ್ತೆಂತಲೂ ನಮೂದಿಸುತ್ತಾರೆ ಆದರೆ ಈ ಎರಡು ವಿಷಯಗಳೂ ಪರಮ ಆಶ್ಚರ್ಯವಾದದ್ದಾಗಿ ಕಾಣುತ್ತೆ ಯಾಕೆಂದರೆ ಚೀಫ್ ಕೋರ್ಟಿನವರು ಕೊಟ್ಟ ತಾ ೨೫ ೧ ೧೯೦೯ ನೇ ಮರಕಂ ೧೭೭ ನೇ ನಂಬರು ಸರ್ಕ್ಯುಲರಿನಿಂದ ಕೆಲವು ಜನ ಮೇಜಿಸ್ಟ್ರೇಟರುಗಳು ಮೊಖ್ತಾರುಗಳು ತಮ್ಮ ಕೋರ್ಟುಗಳಲ್ಲಿ ಪ್ರಾಕ್ಟೀಸು ಮಾಡಬಾರದೆಂಬ ಉದ್ದೇಶಪಟ್ಟು ಬಹು ದಿವಸಗಳಿಂದ ಪ್ರಜೆಗಳ ಇಷ್ಟಾನುಸಾರವಾಗಿ ಮೊಕದ್ದಮೆಗಳನ್ನು ನಡಿಸುವವರನ್ನು ಅಡ್ಡಿ ಪಡಿಸುತ್ತಿರ ಮೇಲೆ ಘನವುಳ್ಳ ಚೀಫ್ ಕೋರ್ಟಿಗೆ ತಾ ೩೦ ೭ ೧೯೦೯ ರಲ್ಲೂ ಮೊಖ್ತಾರುಗಳು ತಮ್ಮ ಅಹವಾಲನ್ನು ಕೆಲವು ಜನ ಅಡ್ವೊಕೇಟರ ಮೂಲಕ ಅರಿಕೆ ಮಾಡಿಕೊಂಡಿರುವದೂ ಈ ವಿಚಾರವು ಇನ್ನೂ ಇತ್ಯರ್ಥವಿಲ್ಲದೆ ಇರುವದೂ ಸರ್ವರಿಗೂ ಗೊತ್ತೇ ಇರಬಹುದು ಇಂದಿರ್ದ್ದರಲ್ಲಿ ಮೊಖ್ತಾರುಗಳ ಪ್ರಾಕ್ಟೀಸು ವಿಷಯದಲ್ಲಿ ನಿಜಾಂಶ ವಿಚಾರಿಸದೆ ಲಘು ಬರೆದ ಬರವಣಿಗೆಯಾಗಿ ಭಾವಿಸಬೇಕಾಗಿದೆ

ಆದರೆ ಮೊಖ್ತಾರರಿಂದ ಪ್ರಜೆಗಳಿಗೆ ಇರತಕ್ಕ ಅನುಕೂಲತೆ ಅನಾನುಕೂಲತೆಗಳ ವಿಷಯದಲ್ಲಿ ಬಹಳ ದೂರ ಯೋಚಿಸಿದರೆ ಯಾವ ಪ್ರಜೆಗಾದರೂ ಎಂದಿಗೂ ಅನನುಕೂಲವಾಗಲಾರದೆಂದೂ ಈಗ ಮೊಖ್ತಾರು ಹಾಜರಾಗದೆ ತಮ್ಮ ಮೊಕದ್ದಮೆಗಳಲ್ಲಿ ನಿಜಾಂಶವನ್ನು ಕೋರ್ಟಿನವರ ತಿಳುವಳಿಕೆಗೆ ತರುವವರಿಲ್ಲದೆ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಪ್ರಜೆಗಳು ಸಂಕಟ ಪಡುತ್ತಿರುವದನ್ನೂ ಸರ್ವರೂ ತಿಳಿದೇ ಇರಬಹುದು

ಈ ನಮ್ಮ ಮೈಸೂರು ದೇಶದಲ್ಲಿ ಪ್ರಜೆಗಳು ವಿದ್ಯಾವಂತರಾಗಿ ಅಭಿವೃದ್ಧಿಗೆ ಬರುತ್ತಾ ಇರುವುದನ್ನು ಕೇಳುವುದು ನಿಶ್ಚಯ. ಆದರೆ ಅವರ ಗೌರವಕ್ಕೆ ಮೋಬ್ಯಾರಾಗಳಿಂದ ಏನೂ ಕೊರತೆಯೂ ಇರುವದಿಲ್ಲ. ಯಾಕೆಂದರೆ ಅಸ ದಂಡಿಗಳ ಇಕ್ಕೇರಿ ಭಂಗಾರಕ್ಕೂ ಹ್ಯಾಗೆ ಸುಮ್ಮನೋ ಹಾಗೆ ಎಣಿಸಬಹುದು. ಹಾಲಿ ರೆವಿನ್ಯೂ ಮತ್ತು ಇತರ ಖಾತೆಗಳ ಮೇಲಿನ ಕೆಲಸದ ಪ್ಲೀಡರುಗಳು ಮತ್ತು ಅಡ್ವೊಕೇಟುಗಳು ಕೋರ್ಟಿನಲ್ಲಿ ವಕಾಲತ್ತು ನಾಮೆಗಳು ಹಾಕಿ, ಅನೇಕ ಮೊಕದ್ದಮೆಗಳನ್ನು ನಡೆಸುತ್ತಿರುವದು ಸರ್ವರಿಗೂ ಗೊತ್ತೇ ಇರುತ್ತೆ. ಆದರೆ ಈ ಮೊಖ್ತ್ಯಾರುಗಳು ಊರು ಬಿಡುವದ ಎಲ್ಲವರಿಗಿಂತ ಕಕ್ಷಿಗಾರರಲ್ಲಿ ನಂಬಿಕೆಯಿಂದ ಕೆಲಸಗಳು ನಡೆಸುವದರ ಮೂಲಕ ಪ್ರಜೆಗಳ ಪ್ರೀತಿವಿಶ್ವಾಸಗಳನ್ನೂ ಸಂಪಾದನೆ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಕಕ್ಷಿಗಾರರು ತಮ್ಮ ಮೊಕದ್ದಮೆಗಳನ್ನು ನಡೆಸುವ ಏರ್ಪಾಟನ್ನು ಏರ್ಪಾಟು ಮಾಡಿಕೊಳ್ಳುವಷ್ಟರ ಯೋಗ್ಯತೆಯನ್ನು ಮೈಸೂರು ದೇಶದ ಪ್ರಜೆಗಳು ದಿನೇ ದಿನೇ ಸಂಪಾದಿಸಿಕೊಳ್ಳುವವರಾಗಿರುತ್ತಾರೆ.

ಹಾಲಿ ಮೊಖ್ತ್ಯಾರುಗಳ ವಿಷಯದಲ್ಲಿ ನಮ್ಮ ಘನವುಳ್ಳ ಚೀಫ್ ಕೋರ್ಟಿನವರು ಪ್ರಾಕ್ಟೀಸು ಮಾಡತಕ್ಕವರೆಂದು ನಿರ್ಬಂಧ ಪಡಿಸದೆ ಇದ್ದರೂ ಕೆಲ ಮೇಜಿಸ್ಟ್ರೇಟರು ತಮ್ಮ ದಿವಾನ್ಗಿರಿಯನ್ನು ಉಪಯೋಗಿಸಿ ಅಪ್ಪಣೆ ಕೊಟ್ಟರೆ ತಮಗೆ ಏನು ತೊಂದರೆ ಉಂಟಾಗುತ್ತೋ ಎಂಬುದಾಗಿ ಭಾವಿಸಿಕೊಂಡಿರುತ್ತಾರೆ. ಕೆಟ್ಟ ಸ್ವಭಾವ ಮರ್ಯಾದೆ ಉಳ್ಳ ಜನರು ಮೊಖ್ತ್ಯಾರರಾಗಿ ಪ್ರಾಕ್ಟೀಸು ಮಾಡುವ ಅವರ ವಿಷಯದಲ್ಲಿ ಮೇಲ್ಕಂಡ ಸರ್ಕಾರಿನ ಆದೇಶದ ಪ್ರಕಾರ ನಡಿಸುವುದು ನ್ಯಾಯವಾಗಿರುತ್ತೆ.

ಹಾಲಿ ಕೆಲವು ಮೊಖ್ತ್ಯಾರುಗಳು ೮-೯ ತಿಂಗಳಿಂದ ಜೀವನಕ್ಕೆ ಇಲ್ಲದೆ ಬಹಳ ಶ್ರಮಪಡುತ್ತಿರುವದಲ್ಲದೆ ಪ್ರಜೆಗಳ ಕಷ್ಟವೆಂತೂ ನಮ್ಮ ಗೌರ್ನಮೆಂಟಿಗೂ ಘನವುಳ್ಳ ಚೀಫ್ ಕೋರ್ಟಿನವರ ಗೋಚರಕ್ಕೂ ಬಂದಿರಬಹುದಾಗಿರುತ್ತೆ. ಈ ಭಾಗದಲ್ಲಿ ಮೊಖ್ತ್ಯಾರುಗಳಿಂದ ಅನುಕೂಲ ಅನಾನುಕೂಲ ಎಂಬ ವಿಷಯದಲ್ಲಿ ಎಷ್ಟು ದೂರ ಯೋಚನೆ ನ್ಯಾಯ ವಿಮರ್ಶೆಯನ್ನು ಮಾಡಿ ಘನವುಳ್ಳ ಚೀಫ್ ಕೋರ್ಟಿನವರು ಜಾಗ್ರತೆ ತೀರ್ಮಾನಿಸಿ ಪ್ರಜೆಗಳಿಗೆ ಇರತಕ್ಕ ಕಷ್ಟವನ್ನು ನಿವಾರಣೆ ಮಾಡುತ್ತಾರೆಂದು ನಂಬಿರುವ

ಪ್ರಜೆಗಳ ಹಿತಚಿಂತಕ

ಒಕ್ಕಲಿಗರ ಸಂಘದ ಪ್ರೆಸಿಡೆಂಟ್ ಲೇಟ್ ಮೆ|| ಟಿ ಬಯ್ಯಣ್ಣನವರು

ಅಯ್ಯಾ,

ಈ ಸತ್ಪುರುಷನ ಮರಣವು ದೇಶಕ್ಕೇನೇ ಅತ್ಯಾಶ್ಚರ್ಯ ಮತ್ತು ವ್ಯಸನ ಸಹಾ ಉಂಟುಮಾಡಿ ಇದೆ. ಇವರ ಚರಿತ್ರೆಯನ್ನು ಈ ಕೆಳಗೆ ಅರಿಕೆ ಮಾಡುತ್ತೇನೆ. ಈ ಮೊತ್ತ ಮನುಷ್ಯನ ಸಣ್ಣ ಚರಿತ್ರೆ ೬-೧೦-೦೯ ನೇ ತಾ ಒಕ್ಕಲಿಗರ ಪೇಪರಿನಲ್ಲಿ ಪಬ್ಲಿಷ್ ಆಗಿದೆ. ಆ ವಿಷಯ ಬಿಟ್ಟು ಈ ದೊಡ್ಡ ಮನುಷ್ಯನು ಪಬ್ಲಿಕ್ ವಿಷಯದಲ್ಲಿ ಮಾಡಿರುವ ಉಪಕಾರ, ಆದರಿಂದ ಮೈಸೂರು ದೇಶಕ್ಕೇನೇ ಮಾತ್ರವಲ್ಲದೆ ಇಂಡಿಯಾ ದೇಶಸ್ಥರಿಗೆಲ್ಲಾ ಉಂಟಾಗಿರತಕ್ಕ ಫಲ, ಇವರ ಸಜ್ಜನವಾದ ಪಾರಮಾರ್ಥಿಕತೆ, ಇವುಗಳನ್ನು ಮಾತ್ರ ಈ ಕೆಳಗೆ ಅರಿಕೆ ಮಾಡುತ್ತೇನೆ. ಪ್ರಜಾಭ್ಯುದಯಕ್ಕೂ ಪ್ರಜೆಗಳ ಸೌಖ್ಯಕ್ಕೂ ಕಾರಣ ಭೂಕರಂದವರು ಒಕ್ಕಲಿಗರು. ಇವರ ಕೃಷಿಯಿಂದಲೇ ಗೌರ್ನಮೆಂಟ್ ನಡೆಯುವಿಕೆಗೆ ಸಹಕಾರಿಯಾದ ಹಣ ಒದಗುತ್ತದೆ. ಇತ್ತ ಪ್ರಜಾದ ಆಹಾರಕ್ಕೆ ಬೇಕಾದ ಪದಾರ್ಥಗಳು ಎಲ್ಲ ಇವರಿಂದ. ಈ ವಿಷಯ ಜಗತ್ತಿಗೇನೇ ಗೊತ್ತಾಗಿರತಕ್ಕದ್ದಾಗಿದೆ.

ಸಜಾತಿಯವನಾದ ಲೇಟ್ ಮೆ|| ಟಿ ಬಯ್ಯಣ್ಣ ಒಕ್ಕಲಿಗರ ಸ್ಥಿತಿಗತಿಯನ್ನು ನೋಡಿ ಅದನ್ನು ಪಿ ಗಳಾದಲ್ಲಿ ವಾಸವಾಗತಕ್ಕ ಶ್ರೀಮಂತ ಬಿ ಎಸ್ ಮರಿಯಪ್ಪ ವಗೈರೆ ದೊಡ್ಡ ಮನುಷ್ಯರಿಗೆ ಬೋಧಿಸಿ ಅವರನ್ನು ತನ್ನಂತೆ ಮಾಡಿಕೊಂಡು ಪ್ರಥಮ ಬೆಂಗಳೂರು ಪಟ್ಟಣದಲ್ಲಿ ಒಂದು ಒಕ್ಕಲಿಗರ ಸಂಘ ಏರ್ಪಡಿಸಿ, ಅದಕ್ಕೆ ಶ್ರೀಮಂತ ಬಿ ಎಸ್ ಮರಿಯಪ್ಪನವರನ್ನು ಅಗ್ರಾಸನಾಧಿಪತಿಗಳನ್ನಾಗಿ ಮಾಡಿಕೊಂಡು ತಮ್ಮ ಪುರೋಭಿವೃದ್ಧಿಗಾಗಿ ಒಂದು ಸಭಾ ನಡಿಸಿದರು. ಆ ಸ್ಥಾಪನೆ ಮೊದಲೇ ಈ ಲೋಕೋಪಕಾರವಾದ ಕೆಲಸಗಳನ್ನು ನಡೆಸಲಿಕ್ಕೆ ಎಗ್ಸಿಕ್ಯೂಟಿವ್ ಕಮಿಟಿ ಪ್ರೆಸಿಡೆಂಟಾಗಿರುವಿಕೆಯು ಇತ್ತು. ಈತನ ತನ್ನ ಪ್ರಯತ್ನ ಕಾರ್ಯ ನೆರವೇರಿಸಲಿಕ್ಕೆ ಆಗತಕ್ಕ ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗೌರ್ನಮೆಂಟ್ ಸರ್ವೀಸಿನಲ್ಲಿ ಸೇರಿಕೊಂಡಿದ್ದ ಸ್ವಜಾತಿಯವರಾದ ಮೆ ಕೆ ಎಚ್ ರಾಮಯ್ಯ, ಮೆ ಪುಟ್ಟಯ್ಯ ಮತ್ತು ಮೆ ಸುಬ್ಬಯ್ಯ, ಇವರಿಗೆ ತನ್ನ ಪ್ರಯತ್ನಕಾರ್ಯದ ಉದ್ದೇಶ, ಅದರಿಂದ ಸ್ವಜಾತಿಯವರಿಗೆ ಉಂಟಾಗತಕ್ಕ ಫಲ, ಇವುಗಳನ್ನು ಬೋಧಿಸುವುದರ ಮೂಲಕ ಅವರಿಗೂ ಪಾರಮಾರ್ಥಿಕತೆಯನ್ನುಂಟುಮಾಡಿ ಅವರು ಮನಃಪೂರ್ವಕವಾಗಿ ಸ್ವಕುಲಾಭಿವೃದ್ಧಿಗೆ ಅವಶ್ಯಕವಾದ ಕೆಲಸಗಳನ್ನು ಮಾಡಬಹುದಾಗಿ ತಿಳಿಸಿದ ನಂತರ ಅವರನ್ನು ತನ್ನ ಜೊತೆಗೆ ಸೇರಿಸಿಕೊಂಡು, ಒಕ್ಕಲಿಗರ ಸಂಘದ ನಿಜವಾದ ಉದ್ದೇಶ್ಯ ನ್ಯೂಸ್‌ಪೇಪರುಗಳಿಂದಲೂ ತನ್ನ ಕಡೆಯುವವರನ್ನು ಪರಗ್ರಾಮಗಳಿಗೆ ಕಳುಹಿಸಿ ಅವರ ಮೂಲಕ ಸಂಬಂಧಪಟ್ಟವರಿಗೆ ತಿಳಿಸುತ್ತಾ ಬಂದದ್ದರಿಂದಲೂ ಇಡೀ ಇಂಡಿಯಾ ದೇಶವೆಲ್ಲಾ ಪ್ರಚುರವಾಯಿತು. ಸಂಘದ ಹೆಸರಿನಿಂದ ಪ್ರಿಂಟಿಂಗ್ ಆಫೀಸನ್ನು ಪ್ರಾರಂಭಮಾಡಿದರು. ೨೦೦೦ ಆಗಿನದು ಮುಟ್ಟಿಸಿದ್ದ ತಮ್ಮ ಸ್ವಂತ ಭವನವನ್ನು ಮೇಲಿನ ಕಾರ್ಯಕ್ಕೂ, ಒಕ್ಕಲಿಗರ ಹುಡುಗರ ಸ್ಟೂಡೆಂಟ್ಸ್ ಹೋಮಿಗೂ ಉಚಿತವಾಗಿ ಬಿಟ್ಟುಕೊಟ್ಟರು. ಸ್ಟೂಡೆಂಟ್ಸ್ ಹೋಮನ್ನು ಸ್ಥಾಪಿಸಿದರು. ಈ ಕೆಲಸಗಳಿಗಾಗಿ ತಮ್ಮ ಕೈಯಿಂದ ಹತ್ತು ಹನ್ನೆರಡು ಸಾವಿರ ರೂಪಾಯಿ ಖರ್ಚುಮಾಡಿದರು.

ಮೇಲಿನ ಸದವಳಿಕೆಗಳ ಯಶಸ್ಸು ಜಗತ್ತೆಲ್ಲಾ ತುಂಬಿ ಹೋಗಿ ಈ ಕಾರ್ಯ ಸಂಪೂರ್ಣವಾಗಿ ನೆರವೇರಿದರೆ ದೇಶಕ್ಕೇನೇ ಸೌಖ್ಯವುಂಟಾಗುವುದೆಂಬ ನಂಬಿಕೆ ನಮ್ಮ ಪ್ರಭುಗಳಾದ ಶ್ರೀಮನ್ಮಹಾರಾಜಾಸಾಹೇಬ್ಬಹದ್ದೂರವರಿಗೂ, ಅವರ ಮುಖ್ಯ ಮಂತ್ರಿಯವರಾಗಿದ್ದ ಮೆ|| ವಿ ಪಿ ಮಾಧವರಾವ್‌ಜೀ ಯವರಿಗೂ ಹುಟ್ಟಿ ೨ನೇ ವರ್ಷದ ಒಕ್ಕಲಿಗರ ಮಹಾ ಸಭಾ ಮೈಸೂರಲ್ಲೇ ನಡೆಯುವಂತೆ ಮಾಡಿ, ಅದಕ್ಕೆ ನಮ್ಮ ಪ್ರಭುಗಳು ಅಧ್ಯಕ್ಷರಾಗಿಯೂ, ಮಂತ್ರಿಗಳು ಸಹಾಯಕರಾಗಿಯೂ ಆ ಮಹಾ ಸಭಾಕಾರ್ಯವನ್ನು ನೆರವೇರಿಸಿ, ಈ ಸಂಘದ ಪ್ರೆಸಿಡೆಂಟರಾದ ಶ್ರೀಮಂತ ಬಿ ಎಸ್ ಮರಿಯಪ್ಪನವರಿಗೂ, ಎಗ್ಸಿಕ್ಯೂಟಿವ್ ಕಮಿಟಿ ಪ್ರೆಸಿಡೆಂಟರಾಗಿದ್ದ ಲೇಟ್ ಮೆ|| ಟಿ ಬಯ್ಯಣ್ಣನವರಿಗೂ ಪ್ರೋತ್ಸಾಹಪಡಿಸಿ ಈ ಸಂಘದ ಸ್ಟೂಡೆಂಟ್ಸ್ ಹೋಂ ವಗೈರೆ ಕಾರ್ಯಗಳಿಗೆ ಬೇಕಾದ ವಸತಿಗಳನ್ನು ಕಲ್ಪಿಸಿಕೊಳ್ಳಲು ೪ ಸಾವಿರ ಚಿಲ್ಲರೆ ಖರ್ಚಿನ ಬಾಬತ್ತು ಜಮೀನನ್ನು ಇನಾಮಾಗಿ ಕೊಟ್ಟರು. ಆ ಸ್ಥಳದಲ್ಲಿ ೩೦ ಸಾವಿರ ರೂಪಾಯಿ ಮುಟ್ಟಿಸಿ ಸ್ವಂತ ಖರ್ಚಿನಿಂದ ಕಟ್ಟಡಗಳನ್ನು ಕಟ್ಟಿಸಿಕೊಡುವುದಾಗಿ ಮಹಾಸನ್ನಿಧಾನದಲ್ಲೇ ಶ್ರೀಮಂತ ಬಿ ಎಸ್ ಮರಿಯಪ್ಪನವರು ಒಪ್ಪಿಕೊಂಡರು. ಈ ಖ್ಯಾತಿ ಜಗತ್ತೆಲ್ಲಾ ತುಂಬಿ, ಬೇರೆ ಬೇರೆ ಸ್ಥಳದ ಒಕ್ಕಲಿಗರು ಕೂಡ ಸ್ವಕುಲೋದ್ಧಾರಕ್ಕಾಗಿ ಹೊರಟು ತಮ್ಮ ಜನಗಳನ್ನು ವಿದ್ಯಾವಂತರನ್ನಾಗಿ ಮಾಡಲಿಕ್ಕೆ ಆರಂಭಿಸಿದಾರೆ.

ಈ ಸಂಘದ ೧ ೨ ನೇ ಮಹಾಸಭೆಗಳು ನಡೆದದ್ದು, ಅದರಿಂದೀಚೆಗೆ ನಡೆದಿರತಕ್ಕ ಸತ್ಕಾರ್ಯಗಳೂ, ಇವುಗಳನ್ನು ಸಜಾತೀಯರಾದ ಶ್ರೀಮಂತ ರಂಗೇಗೌಡರವರು ಕೇಳಿ, ಸಂತೋಷದಿಂದ ೩ ನೇ ಮಹಾಸಭೆಗೆ ತಾವು ಅಧ್ಯಕ್ಷರಾಗಲು ಒಪ್ಪಿಕೊಂಡು ನೀಲಗಿರಿಯಿಂದ ಬೆಂಗಳೂರಿಗೆ ಬಂದು ೩ ನೇ ಮಹಾಸಭಾ ಕಾರ್ಯಗಳನ್ನು ನೆರವೇರಿಸಿ ತಮ್ಮ ಜೀವಾವಧಿ ಈ ಸಂಘಕ್ಕೆ ಪೋಷಕರಾಗಿರಲು ಒಪ್ಪಿಕೊಂಡು ಈ ಕಾರ್ಯಕ್ಕಾಗಿ ಹತ್ತು ಸಾವಿರ ರೂಪಾಯಿ ಉಚಿತವಾಗಿ ಕೊಟ್ಟರು. ಆ ಮಹಾಸಭಾದಲ್ಲೇ ತಮ್ಮ ಸಂಘಕ್ಕೆ ಕೇವಲ ಅಭಿಮಾನಿಗಳಾಗಿದ್ದು ಧರ್ಮವಾಗಿ ತಮ್ಮ ಸರ್ವೀಸ್ ಕಾಲದಲ್ಲಿ ಪ್ರಜೆಗಳನ್ನು ರಕ್ಷಿಸಿದ ರಿಟೈರ್ಡು ದಿವಾನ್ ಮೆ|| ವಿ ಪಿ ಮಾಧವರಾವ್‌ಜೀ ಯವರಿಗೆ ಈ ಸಂಘದವರು ಒಪ್ಪಿಸಿದ ಅಡ್ರೆಸ್ಸಿಗೆ ಅವರು ಜವಾಬು ಕೊಟ್ಟದ್ದು, ಅದೇ ಕಾಲದಲ್ಲಿ ಈ ಸಂಘದ ಪುರೋಭಿವೃದ್ಧಿ ವಿಷಯದಲ್ಲಿ ಬ್ರಿಟಿಷ್ ರೆಸಿಡೆಂಟರವರಾದ ಘನವನ್ನು ಹೊಂದಿದ ಮೆ|| ಎಸ್ ಎಂ ಫ್ರೇಜರ್ ಸಾಹೇಬರವರು ಲಿಖಿತ ಮೂಲಕ ತೀರ್ಮಾನಕ್ಕೆ ಬುದ್ಧಿ ಹೇಳಿದ್ದು, ಇವುಗಳಿಂದ ಮೇಲಿನ ಉಭಯ ದೊಡ್ಡ ಮನುಷ್ಯರೂ ಈ ಸಂಘಕ್ಕೆ ಸಹಾಯಕರೆಂದು ಸ್ಪಷ್ಟವಾಗುತ್ತದೆ. ಈ ಯಶಸ್ಸು ಜಗತ್ತೆಲ್ಲಾ ವ್ಯಾಪಿಸಿ, ಇದೇ ಸಂಘಕ್ಕೆ ಸೇರಿದವರು ಧಾರವಾಡ ಮುಂತಾದ ಅನ್ಯದೇಶಗಳಲ್ಲಿ ತಮ್ಮ ಸ್ವಂತ ಬಾಲಕರ ಸ್ಟೂಡೆಂಟ್ಸ್ ಹೋಮ್‌ಗಳನ್ನೇ ಸ್ಥಾಪಿಸಿಕೊಂಡು ವಿದ್ಯಾವಂತರಾಗುತ್ತಾ ಇದ್ದಾರೆ.

ಈಗ್ಗೆ ೨೦೦ ವರ್ಷಗಳಿಂದಲೂ ಹಿಂದೆಬಿದ್ದಿದ್ದ ಒಕ್ಕಲಿಗರನ್ನು ಅಭಿವೃದ್ಧಿಗೆ ತರಬೇಕೆಂಬ ಯಾಗದಲ್ಲಿ ಕೀರ್ತಿವಂತನಾಗಿದ್ದ ನಮ್ಮ ಲೇಟ್ ಮೆ|| ಟಿ ಬಯ್ಯಣ್ಣನ ಪ್ರಯತ್ನ, ಕಷ್ಟ, ಸಾಹಸ, ಇವುಗಳಿಂದ ಈಗ ಆ ಉದ್ದೇಶ್ಯ ನೆರವೇರಿ ಇದೇ ಮುಂದಕ್ಕೆ ಚ್ಯುತಿಯಿಲ್ಲದ ಕಲ್ಪವೃಕ್ಷವಾಗಿ ನೆಲೆಗೆ ನಿಂತಿತು. ಮೇಲಿನ ಕಾರ್ಯಗಳನ್ನು ನೆರವೇರಿಸಲಿಕ್ಕೆ ಲೇಟ್ ಮೆ|| ಟಿ ಬಯ್ಯಣ್ಣನು ತನ್ನ ಜೀವಿತಕಾಲ, ಆಸ್ತಿ, ತನ್ನ ಪ್ರಾಣ ಸಹಾ ಇವಕ್ಕೇನೇ ಉಪಯೋಗಿಸುತ್ತಿದ್ದನು. ಈತನ ಕಷ್ಟದಿಂದ ಅನೇಕ ಹುಡುಗರನ್ನಿಟ್ಟುಕೊಂಡು, ಒಬ್ಬರ ಸ್ವಾರ್ಥವು ಇಲ್ಲದೇ ಇದೆ. ಮೌಢ್ಯವು ಸಾರ್ವತ್ರಿಕವಾಗಿ ಒಕ್ಕಲಿಗರೆಲ್ಲಾ ಒಂದಾಗಿ ಸೇರಿದ್ದಲ್ಲದೆ ಅವರಿಗೆಲ್ಲಾ ವಿದ್ಯಾಸಕ್ತಿ ಹುಟ್ಟಿ ಮುವರ್ಗಗಳೆಲ್ಲಾ ಏರುತ್ತಾ ಬಂದರು. ಇದಲ್ಲದೆ ಇಂಡಿಯಾ ದೇಶದಲ್ಲಿರತಕ್ಕ ಒಕ್ಕಲಿಗರೆಲ್ಲಾ ಲೇಟ್ ಮೆ|| ಟಿ ಬಯ್ಯಣ್ಣ ಹಾಕಿದ ಸ್ವಕುಲಾಭಿವೃದ್ಧಿಯ ಪಾಯ, ಅದಕ್ಕಾಗಿ ಅವರು ಪಡತಕ್ಕ ಕಷ್ಟ, ಇವು ಎಲ್ಲರಿಗೆ ಹಿತವಾಗಿ ಅವರುಕೂಡ ಇದನ್ನೇ ಅನುಸರಿಸುವಂತೆ ಮಾಡಿತು. ಇಂಥಾ ವಿಚಾರಗಳು ಇನ್ನೂ ಅನೇಕವಿವೆ. ಅದನ್ನೆಲ್ಲಾ ಬರವಣಿಗೆ ಜಾಸ್ತಿಯಾಗುತ್ತೆಂಬ ಕಾರಣದಿಂದ ನಿಲ್ಲಿಸಿ ಬಿಟ್ಟಿದೇನೆ.

ಮೇಲಿನ ಕಾರಣಗಳಿಂದ ಸತ್ಪುರುಷನಾದ ಲೇಟ್ ಮೆ|| ಟಿ ಬಯ್ಯಣ್ಣನ ಮರಣ ಇಂಡಿಯಾ ದೇಶಕ್ಕೇನೇ ಸಂಕಟವನ್ನುಂಟುಮಾಡಿ ಇದೆ. ನಮ್ಮ ದೇಶೋದ್ಧಾರಕ್ಕಾಗಿ ನಿಂತಿದ್ದ ಸತ್ಸಂಕಲ್ಪನಾದ ಮೆ|| ಟಿ ಬಯ್ಯಣ್ಣನೆಂಬ ಮುಖ್ಯ ನಕ್ಷತ್ರವು ಭೂಪತನವಾಯಿತು. ಜಗತ್ಕರ್ತನಾದ ಭಗವಂತನು ಚಿರಕೀರ್ತಿಶಾಲಿಯಾದ ಲೇಟ್ ಮೆ|| ಟಿ ಬಯ್ಯಣ್ಣನ ಆತ್ಮಕ್ಕೆ ಸೌಖ್ಯಕೊಟ್ಟು ರಕ್ಷಿಸುವುದಲ್ಲದೆ ಉಳಿದಿರತಕ್ಕ ಆತನ ಕುಟುಂಬಕ್ಕೆ ಸಮಸ್ತ ಸೌಖ್ಯವೂ ಕೊಟ್ಟು ರಕ್ಷಿಸಲಿ. ಇದೇ ನನ್ನ ಪ್ರಾರ್ಥನೆಯಾಗಿದೆ.

ಚಿತ್ರದುರ್ಗ ಎ. ಕೃಷ್ಣರಾವ್

ಬಡೇಸಾಬರ ಆಕ್ಷೇಪಣೆಗೆ ಪ್ರತ್ಯುತ್ತರ

ಅಯ್ಯಾ,

ನಮ್ಮ ೫-೧೦-೦೯ ನೇಯ ತಾ|| ಪತ್ರಿಕೆಯಲ್ಲಿ ಬಡೇಸಾಬ, ಜಗಳೂರು ಎಂಬುವರು ಒಂದು ಲೇಖನವನ್ನು ಬರೆದಿದ್ದರು. ಅದನ್ನು ನಾನು ತಿದ್ದುಪಾಟು ಮಾಡಿ ಕಳುಹಿಸಿದ್ದೆನು. ಅದನ್ನು ತಾ ೨೫-೯-೦೯ ನೇಯ ಪತ್ರಿಕೆಯಲ್ಲಿ ಪ್ರಚುರಗೊಳಿಸಲಾಯಿತು. ಪುನಃ ೫-೧೦-೦೯ ನೇಯ ತಾ|| ಪತ್ರಿಕೆಯಲ್ಲಿ ಜಗಳೂರು ಬಡೇಸಾಬರು ನನ್ನ ಲೇಖನವನ್ನು ಆಕ್ಷೇಪಿಸುತ್ತಾರೆ. ಈ ಭಾಗದಲ್ಲಿ ನನ್ನ ಅಭಿಮತವೇನೆಂದರೆ —

ಬಡೇಸಾಬರು—ಮಾಸ್ಟರುಗಳು ತಮ್ಮ ಕೊರತೆಯನ್ನು ಕುರಿತು ಪತ್ರಿಕೆಗಳಲ್ಲಿ ಘೋರವಾಗಿ ಪ್ರಕಟಿಸುವುದರಿಂದ ಸರ್ಕಾರದವರು ೬-೭ ರೂ ಗಳ ಸಂಬಳವನ್ನು ೧೦ ರೂ ಗಳಿಗೆ ಏರಿಸಿರುವರೆಂದು ಹೇಳುತ್ತಾರೆ. ಹಾಗಾದರೆ ಮಾಸ್ಟರುಗಳಿಗೆ ಬಡತಿ ಕೊಟ್ಟದ್ದು ಪ್ರಜೆಗಳಿಗೆ ನಷ್ಟವಾಯಿತೆ? ಉಪಕಾರವಾಗಲಿಲ್ಲವೋ? ಈ ಬಡತಿಯನ್ನು ಸರ್ಕಾರದವರು ದಯಪಾಲಿಸಿದುದರಿಂದ ಈಗ ಉಪಾಧ್ಯಾಯರು ಮೊದಲಿಗಿಂತ ಎಷ್ಟೋ ಪಟ್ಟಿಗೆ ಶಾಂತಚಿತ್ತರಾಗಿ ಉತ್ಸಾಹದಿಂದ ಕೆಲಸವನ್ನು ಮಾಡಲು ಕಾರಣವಾಯಿತು. ಸರ್ಕಾರದವರು ಮಾಸ್ಟರುಗಳ ಉದ್ಯೋಗದ ಪರಿಮಾಣವೆಂಥದೆಂಬುದನ್ನು ಸ್ವತಃ ಪರ್ಯಾಲೋಚಿಸಿಯೂ ಮತ್ತು ವಿಶೇಷಗಳಿಂದ ಪ್ರಜಾಪ್ರತಿನಿಧಿಗಳು ಮಹಾಸಭೆಗಳಿಂದ ಕೇಳಿಕೊಳ್ಳುತ್ತ ಬಂದುದರಿಂದಲೂ ಈ ಬಡತಿಯು ಕೊಡಲ್ಪಟ್ಟಿತೇ ವಿನಾ ಪತ್ರಿಕೆಗಳಲ್ಲಿ ಮಾಸ್ಟರುಗಳು ಪ್ರಕಟಿಸಿಕೊಂಡ ವಾಕ್ಯಕ್ಕಲ್ಲ. ಎಷ್ಟುಮಾತ್ರವೂ ಕೊಡಲ್ಪಡಲಿಲ್ಲ.

ಇದಲ್ಲದೆ ಬಡೇಸಾಬರು ತಮ್ಮ ಲೇಖನದ ಕಡೆಯ ಅಧ್ಯಾಯದಲ್ಲಿ ಪ್ರಜೆಗಳಿಗೆ ವಿದ್ಯಾ ಇಲಾಖೆಯೂ ಉಪಾಧ್ಯಾಯರೂ ಬೇಡ, ರೆವಿನ್ಯೂ ಇಲಾಖೆಯು ತಂದೆತಾಯಿಗಳೋಪಾದಿಯಲ್ಲಿಯೂ ಇರುತ್ತದೆಂದು ಉತ್ಪ್ರೇಕ್ಷಿಸುತ್ತಾರೆ. ಪ್ರಜೆಗಳು ಕೃಷಿ, ಶಿಲ್ಪ, ವಾಣಿಜ್ಯಾದಿ ವೃತ್ತಿಗಳಲ್ಲಿ ಸ್ವಾತಂತ್ರ್ಯತೆಯುಳ್ಳವರಾಗಬೇಕಾದರೂ, ಅಥವಾ ಯಾವ ಇಲಾಖೆಯ ಸರ್ಕಾರಿ ಉದ್ಯೋಗಗಳಲ್ಲಿ ಪ್ರವೇಶಿಸಬೇಕಾದರೂ ವಿದ್ಯಾಭ್ಯಾಸದ ಇಲಾಖೆಯ ಅನುಗ್ರಹವನ್ನು ಪಡೆಯಲು ಪ್ರೋತ್ಸಾಹಿಸಿಕೊಳ್ಳಬೇಕಲ್ಲವೆ. ಅವರಲ್ಲಿಯೂ ಸ್ವಾಭಾವಿಕವಾಗಿ ತಾಯಿಯಿಂದ ಮಕ್ಕಳು ಎಷ್ಟು ಪೋಷಿಸಲ್ಪಡುತ್ತಾರೆಯೋ ಅಷ್ಟು ಮಟ್ಟಿನ ದೃಷ್ಟಾಂತರವಾಗಿಯೂ, ಅದಕ್ಕನುಸಾರವಾದ ಕೆಲಸವನ್ನು ಮಾಡಲು ಶಕ್ತರಾಗಿಯೂ ತೋಗಬಹುದು. ನ್ಯಾಯವೂ ಅದರಂತೆ ವಿದ್ಯಾ ಇಲಾಖೆಯು ಪ್ರಜೆಗಳಿಗೆ ಆಗಲಿ, ಇತರ ಯಾವ ಇಲಾಖೆಯವರಿಗೇ ಆಗಲಿ ಮಾತೃಸ್ವರೂಪವಾಗಿರತಕ್ಕದು ಸಹಜವೆಂಬುವದನ್ನು ಒಪ್ಪಿಕೊಳ್ಳಲು ಬಡೇಸಾಬ ಮಹಾಶಯರಿಗೆ ಏನಾದರೂ ಅನುಮಾನವುಂಟೋ? ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಈ ವಿದ್ಯಾ ಇಲಾಖೆಯನ್ನು ಪ್ರಿಯಪುತ್ರಿಯೋಪಾದಿಯಲ್ಲಿಯೂ, ಕಡಮೆ ಇಲಾಖೆಗಳ ಮತ್ತು ಪ್ರಜೆಗಳ ಗುಂಪನ್ನು ಮಕ್ಕಳೋಪಾದಿಯಲ್ಲಿಯೂ ಪೋಷಿಸುತ್ತಿರುವರೆಂಬುದಕ್ಕೆ ಸಂದೇಹವೇನೂ ತೋರುವುದಿಲ್ಲ.

ಇಷ್ಟೇ ಅಲ್ಲದೆ ಬಡೇಸಾಬರು ಒಟ್ಟಿಗೆ ವಿದ್ಯಾ ಇಲಾಖೆಯನ್ನೇ ತುಚ್ಛೀಕರಿಸುವಂತೆ—ವಿದ್ಯಾ ಇಲಾಖಾ ಆಫೀಸರರ ಮನಸ್ಸು ತಮ್ಮ ಅಂಗವಾದ ಮಾಸ್ಟರುಗಳ ಯೋಗಕ್ಷೇಮದ ಕಡೆಗೆ ಆಕರ್ಷಿಸುತ್ತದಲ್ಲದೆ ರೈತರ ಕಡೆಗೆ ತಿರುಗಲಾರದು ಎನ್ನುವರು. ಆದರೆ ಯಾವ ಇಲಾಖೆಯ ಆಫೀಸರರೇ ಆಗಲಿ, ತಮ್ಮ ತಮ್ಮ ಇಲಾಖೆಯಲ್ಲಿರುವ ನೌಕರರು ಕ್ರಮವಾಗಿಯೇ ನಡೆಯಲಿ, ಅಕ್ರಮವಾಗಿಯೇ ನಡೆಯಲಿ ಅವರಿಗೆ ಸಹಾಯಕರಾಗುವರೆಂದೂ ಇದರಿಂದ ಒಟ್ಟು ನಮ್ಮ ಶ್ರೀಮನ್ಮಹಾರಾಜರವರ ಗೌರ್ನಮೆಂಟಿನಲ್ಲಿ ಪಕ್ಷಪಾತವೇ ತುಂಬಿರುವುದೆಂದೂ ಸೂಚಿಸಿದಂತಾಯಿತು. ಈ ಅಭಿಪ್ರಾಯವು ಕೇವಲ ಅಸಂಗತವಾದುದೆಂದು ಯಾರಾದರೂ ಹೇಳಬಲ್ಲರೇ?

ಈಗ ಸರ್ಕಾರದಲ್ಲಿ ಏರ್ಪಡಿಸಿರುವ ವಿಧಿಯಂತೆ ಗ್ರಾಮ ನೌಕರರು ಸ್ಕೂಲ್ ಕೆಲಸಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಮಾಡದೆ ತಪ್ಪಿದ ಸಂದರ್ಭಗಳಲ್ಲಿ ಆಯಾ ತಾಲ್ಲೂಕ್ ಅಮಲ್ದಾರರು ಆಸಕ್ತಿಯನ್ನು ವಹಿಸಿ, ಬಂದೋಬಸ್ತಿನಿಂದ ಸದರೀ ಕೆಲಸಗಳು ಕ್ರಮವಾಗಿ ನಡೆಯುವಂತೆ ತಾವೇ ಯನ್ನು ತೆಗೆದುಕೊಳ್ಳುತ್ತಾ ಬರುವರೇ ಹೊರತು ರೆವಿನ್ಯೂ ಇಲಾಖೆಯಿಂದ ಸ್ಕೂಲ್ ಇಲಾಖೆಗೆ ಆಗತಕ್ಕ ಪ್ರೋತ್ಸಾಹವು. ಉಳಿದ ವಿಚಾರಗಳನ್ನೆಲ್ಲಾ ನೋಡಿಕೊಳ್ಳುವುದಕ್ಕೆ ವಿದ್ಯಾ ಇಲಾಖೆಯಲ್ಲಿ ಅವಶ್ಯವಾದ ಏರ್ಪಾಡುಗಳೆಲ್ಲವನ್ನೂ ಘನ ಸರ್ಕಾರದವರು ಕಲ್ಪಿಸಿಯೇ ಇರುತ್ತಾರೆ. ಮತ್ತು ಇಲಾಖೆಯವರೂ ಯೋಗ್ಯರಾದ ಉಪಾಧ್ಯಾಯರುಗಳನ್ನು ಸ್ಕೂಲುಗಳಿಗೆ ಒದಗಿಸಿ ಕೊಡುತ್ತಾರೆ. ಆದಕಾರಣ ಪ್ರಜೆಗಳಾದ ನಾವು ನಮ್ಮ ಅಭಿವೃದ್ಧಿಗೆ ಮಾರ್ಗದರ್ಶಕರಾಗಿ ನಿಯಮಿಸಲ್ಪಡುವ ಈ ಉಪಾಧ್ಯಾಯರ ವಿಷಯದಲ್ಲಿ ಅಸೂಯೆಯನ್ನಿಡದೆ, ಇವರಲ್ಲಿ ಪೂರ್ಣ ನಂಬಿಗೆಯನ್ನಿಟ್ಟು ಕೆಲಸಗಳನ್ನು ನಡೆಯಿಸುವುದಕ್ಕೆ ಸಹಕಾರಿಗಳಾಗುತ್ತ ಬಂದಷ್ಟೂ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹವುಂಟಾಗುತ್ತದೆ. ಹಾಗೆ ಮಾಡದೆ ಹೋದರೆ ನಮ್ಮ ಅಭಿವೃದ್ಧಿಗೆ ನಾವೇ ಭಂಗವ ತಂದಿಕೊಂಡಂತಾಗುವುದು.

ಎಲ್ಲಾ ಬಾಲಕರನ್ನೂ ೬ ವರ್ಷಗಳ ಲಾಗಾಯತು ಕಡೆಯ ಪಕ್ಷ ೧೨ ವರ್ಷಗಳ ವಯಸ್ಸಿನ ವರೆಗಾದರೂ ಬಲಾತ್ಕಾರವಾಗಿಯಾಗಲಿ, ಅನ್ಯಾವರೀತಿಯಲ್ಲಾಗಲಿ ವಿದ್ಯಾಭ್ಯಾಸ ಮಾಡಿಸಬೇಕೆಂಬುದನ್ನೂ, ಮತ್ತು ಅವರನ್ನು ಅಂಕೆಯಲ್ಲಿಟ್ಟುಕೊಂಡು ಸನ್ಮಾರ್ಗಗಳನ್ನಾಗಿ ಮಾಡಲಿಕ್ಕೆ ಮಾಸ್ಟರುಗಳಿಗೆ ಸ್ವಲ್ಪ ದಂಡಾಧಿಕಾರ ಇರಬೇಕೆಂಬುವನ್ನೂ ಪ್ರಜೆಗಳು ಕೋರಿಕೊಳ್ಳುವುದರ ದೆಸೆಯಿಂದ ಮೇಲುಂಟಾಗುವುದೇ ಹೊರತು ಎಂದಿಗೂ ಕೆಟ್ಟು ಹೋಗಲಾರರು. ತಲ್ಕಾಲ ಈಗ ವಿದ್ಯಾ ವಿಷಯದಲ್ಲಿ ಹಿಂದೆ ಬಿದ್ದಿರತಕ್ಕ ಕೆಲವು ಜನಾಂಗಗಳವರ ಅಭಿವೃದ್ಧಿಗಂತೂ, ಈ ಏರ್ಪಾಡಿನಿಂದ ಅಷ್ಟಿಷ್ಟು ಪ್ರಯೋಜನವುಂಟೆಂಬುದನ್ನು ವಿವರಿಸಲವಶ್ಯವಿಲ್ಲ. ಆ ವಯಸ್ಸಿನ ತರುವಾಯ ಅನೇಕರು ನಾನಾ ಕಸಬುಗಳಲ್ಲಿ ಪ್ರವೇಶಿಸಬಹುದು. ಯಾವುದರಿಂದ ಜೀವನಧರ್ಮದಿಂದಲಾದರೂ ಅಲ್ಲಿಯ ತನಕ ಕಲಿತ ವಿದ್ಯೆಯು ಅಂಥವರ ಭವಿಷ್ಯದಭಿವೃದ್ಧಿಗೆ ಎಷ್ಟೋ ಸಹಾಯಕರವಾಗಿ ಪರಿಣಮಿಸುವುದು. ಮಾಸ್ಟರುಗಳು ತಮ್ಮ ಕೆಲಸವನ್ನು ಮುತುವರ್ಜಿಯಿಂದ ಮಾಡಿಕೊಂಡು ಹೋದರೆ ಅವರಿಗೆ ಯಾರ ಭಯವೂ ಇರಲಾರದೆಂದು ಬಡೇಸಾಬರು ತಮ್ಮ ಲೇಖನದ ಅಂತ್ಯಭಾಗದಲ್ಲಿ ಸೂಚಿಸುತ್ತಾರೆ. ಅದರಂತೆ ನಮ್ಮ ಬಾಲಕರು ಸನ್ಮಾರ್ಗದಲ್ಲಿ ನಡೆಯಲೆಂಬುದಕ್ಕೆ ನಾವು ಸಹಕಾರಿಗಳಾಗಿರುವ ಪಕ್ಷದಲ್ಲಿ ಮಾಸ್ಟರುಗಳಿಗೆ ಸ್ವಲ್ಪ ಅಧಿಕಾರವಿದ್ದ ಮಾತ್ರಕ್ಕೇನೇ ಅವರಿಗೆ ಹೆದರಿಕೊಳ್ಳಬೇಕಾಗಿರುವುದೇ? ಆ ಅಧಿಕಾರವೆಂಬುದು ಅಂಕೆ ತಪ್ಪಿದ, ದುರ್ಮಾರ್ಗರಾಗುವ ಬಾಲಕರಲ್ಲಿ ಮಾತ್ರ ಉಪಯೋಗವಾಗುವುದೇ ಹೊರತು ಅನ್ಯತ್ರ ಆಗಲಾರದು.

ಮತ್ತೇನೆಂದರೆ, ಬಾಲಕರ ಅಭಿವೃದ್ಧಿಗೆ ತಂದೆ ತಾಯಿಗಳಿಗಿಂತಲೂ ಗುರುವು ಹೆಚ್ಚು ಭಾಗದಲ್ಲಿ ಕಾರಣನಾದವನು. ಪೂರ್ವದಲ್ಲಿ ವಿದ್ಯೆಯನ್ನು ಹೇಳತಕ್ಕವನನ್ನು ಗುರುವೆಂದೂ, ಈ ಗುರುವು ದೇವರಿಗೆ ಸಮಾನನೆಂದೂ ಭಾವಿಸುತ್ತಿದ್ದರು. ಈಗಿನ ಕಾಲದಲ್ಲಿ ಅಂತಹ ಭಾವನೆಯು ಹೋಗಿ ತಮ್ಮ ಸ್ವಂತ ಜೀತಗಾರನಿಗೆ ಸಮಾನನೆಂಬಂತೆ ಭಾವನೆಯು ಅನೇಕರಲ್ಲಿ ಕಂಡು ಬರುತ್ತಲಿದೆ. ಈ ದುರಭಿಮಾನವು ಜನಗಳಲ್ಲಿ ಕಡಮೆಯಾದಷ್ಟೂ ದೇಶಾಭಿವೃದ್ಧಿಗೆ ಸಹಾಯಕರವಾಗಿರುವುದು. ಒಂದು ವಿಷಯದಲ್ಲಿ ಉಪಾಧ್ಯಾಯನೂ, ವೈದ್ಯನೂ ಕಾರ್ಯಮುಖೇನ ಸಮಾನ ಪುರುಷರೆಂದು ಹೇಳಬಹುದು. ವೈದ್ಯನು ರೋಗಿಗಳಿಗೆ ಔಷಧವನ್ನೇನೋ ಕೊಡುತ್ತಾನೆ. ಆದರೆ ಅವನಲ್ಲಿ ಅನುರಾಗವನ್ನಿಟ್ಟು ಪಟ್ಟ ಪಥ್ಯ ಮುತುವರ್ಜಿಯನ್ನು ಮಾಡಿ ರೋಗವನ್ನು ಜಾಗ್ರತೆಯಾಗಿ ವಾಸಿಮಾಡುತ್ತಾನೆ ಯಲ್ಲವೇ? ಅದರಂತೆಯೇ ಉಪಾಧ್ಯಾಯನಲ್ಲಿಯೂ ಜನಗಳು ವಿಶ್ವಾಸವನ್ನು ಇಟ್ಟು, ತಮ್ಮ ಮಕ್ಕಳನ್ನು ವಿವೇಕಿಗಳನ್ನಾಗಿ ಮಾಡಿಕೊಳ್ಳುವುದಕ್ಕೆ ಸಹಕಾರಿಯಾದ ಮಾರ್ಗವನ್ನು ಅವಲಂಬಿಸುವವರಾಗಲಿ.

ಪ್ರಜಾಪ್ರತಿನಿಧಿಗಳಾದ ದೊಡ್ಡ ಮನುಷ್ಯರು ಈ ವಿಚಾರಗಳ ಸಾಧಕ ಬಾಧಕಗಳನ್ನು ಚೆನ್ನಾಗಿ ಪರಿಶೀಲಿಸಿ ಮಾಡಿ ಉತ್ತಮವಾದ ಸಲಹೆಗಳನ್ನು ಗೌರ್ನಮೆಂಟಿಗೆ ಅರಿಕೆ ಮಾಡದೆ ಇರಲಾರರೆಂದು ನಂಬಿರುವ

ವಿದ್ಯಾಭಿಮಾನಿ

ತಾಲ್ಲೋಕು ವರ್ತಮಾನಗಳು

ಮಾಗಡಿ ತಾ|| ಕುದೂರು ಗ್ರಾಮ.—ಬೆಂಗಳೂರು ಸ್ಕೂಲುಗಳ ಡಿಪ್ಯುಟಿ ಇನ್ಸ್‌ಪೆಕ್ಟರವರು ಈ ಊರಿಗೆ ಬಂದು ಇಲ್ಲಿನ ಸ್ಕೂಲನ್ನೂ ಬಾಲಿಕಾಪಾಠಶಾಲೆಯನ್ನೂ ಚೆನ್ನಾಗಿ ಪರೀಕ್ಷಿಸಿ ಕಳೆದ ವರ್ಷ ಒಬ್ಬ ವಿದ್ಯಾರ್ಥಿ ಲೋ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದುದನ್ನೂ, ಈಗ ಸ್ಕೂಲಿನ ಫಲಿತಾಂಶವು ಅತಿ ತೃಪ್ತಿಕರವಾಗಿರುವುದನ್ನೂ ನೋಡಿ ಸಂತೋಷಿಸಿ ಇಲ್ಲಿನ ಗ್ರಾಮಸ್ಥರು ಕೇಳಿಕೊಂಡಂತೆ ಹುಡುಗರ ಸ್ಕೂಲಿಗೆ ಒಬ್ಬ ಮಾಸ್ಟರನ್ನೂ, ಬಾಲಿಕಾ ಪಾಠಶಾಲೆಗೆ ಸಂಗೀತದ ಮಾಸ್ಟರನ್ನೂ ಕೊಡಿಸುವುದಾಗಿ ಹೇಳಿದರು. ಗರ್ಲ್ಸ್‌ಸ್ಕೂಲ್ ಬಾಲಕಿಯರಿಗೆ ಬಹುಮಾನ ಮುಂತಾದ ತಿಂಡಿಯ ಸಾಮಾನು ಕೊಡಿಸಿ ತೆರಳಿದರು.— ಇಲ್ಲಿನ ಬಾಯ್ಸ್ ಸ್ಕೂಲ್ ಮಾಸ್ಟರ್ ಎನ್ ಶ್ರೀಕಂಠಶಾಸ್ತ್ರಿಗಳಿಗೆ ಕನ್ನಿಂಗ್‌ಹ್ಯಾಂ ಪೇಟೆ ತಾಲ್ಲೂಕು ವೈರಮುಂಗಲಕ್ಕೆ ವರ್ಗವಾಯಿತು. ಇವರು ಇಲ್ಲಿನ ಜನಾನುರಾಗವನ್ನು ಸಂಪಾದಿಸಿಕೊಂಡು ಚೆನ್ನಾಗಿ ಕೆಲಸಮಾಡುತ್ತಿದ್ದುದರಿಂದ ಮಾಸ್ಟರ್‌ಗಳೂ, ಕೆಲವು ದೊಡ್ಡಮನುಷ್ಯರುಗಳೂ ಸ್ಕೂಲಿನಲ್ಲಿ ಸಭೆ ಸೇರಿ ತಮ್ಮ ವ್ಯಸನವನ್ನು ಪ್ರಕಟಿಸಿ ಮರ್ಯಾದೆ ಮಾಡಿ ಅವರನ್ನು ಸಾಗಕಳುಹಿಸಿದರು.

ಚಿತ್ರದುರ್ಗ.—ಈಗ್ಗೆ ನಾಲ್ಕಾರು ದಿನದಿಂದ ಪ್ರತಿದಿನ ಬಿಟ್ಟು ದಿನ ಒಳ್ಳೇ ಮಳೆ ಬರುತ್ತಾ ಇದೆ. ಹೆಚ್ಚು ಭಾಗ ಈ ಡಿಸ್ಟ್ರಿಕ್ಟಿನಲ್ಲಿ ಕೆರೆಗಳೆಲ್ಲಾ ತುಂಬಿವೆ. ಚಿತ್ರದುರ್ಗಕ್ಕೆ ಆಧಾರವಾದ ತಿಮ್ಮಣ್ಣನಾಯಕನ ಕೆರೆಗೆ ಮೂರು ತಿಂಗಳ ನೀರು ಬಂತು. ಫಸಲುಗಳೆಲ್ಲಾ ಚನ್ನಾಗಿವೆ. ಈ ಟೌನಿನಲ್ಲಿ ಶೀತ ಸಂಬಂಧವಾದ ನೆಗಡಿ, ಕೆಮ್ಮು, ಚಳಿ, ಜ್ವರ ಇವು ಈಚೆಗೆ ಜಾಸ್ತಿಯಾಗುತ್ತಾ ಇವೆ. ಮೆ॥ ವಿನಾಲ್ ಹಂಚಾರುಸನ್ ಸಾಹೇಬರವರು ಈ ತಿಂಗಳು ೬ನೇ ತಾ ಇಲ್ಲಿಗೆ ಬಂದು ಕೋರ್ಟು ಮಾಡುತ್ತಾ ಇದಾರೆ. ಇವರು ಸೆಷನ್ಸ್ ಜಡ್ಜಿಯಾಗಿ ಬಂದದ್ದಕ್ಕೆ ಈ ಪ್ರಾಂತ್ಯದವರು ಬಹಳ ಸಂತೋಷಪಡುವರು.—ಚಿತ್ರದುರ್ಗದ ಅಂಜುಮನ್ ಸಂಘದ ಮುಸಲ್ಮಾನರು ಮೆ॥ ವಿನಾಲ್ ಹಂಚಾರುಸನ್ ಸಾಹೇಬರವರಿಗೆ ಸೆಷನ್ಸ್ ಜಡ್ಜಿ ಕೆಲಸವಾದದ್ದಕ್ಕೂ, ಕಾಯಿಲೆ ಸಬಬು ರಜಾ ಪಡೆದುಕೊಂಡಿದ್ದ ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಎಂ. ಬಂಗಯ್ಯಶೆಟ್ಟರವರು ಆರೋಗ್ಯಹೊಂದಿ ದಯಮಾಡಿದ್ದಕ್ಕೂ ಸಂತೋಷಪಟ್ಟು, ಆ ಊರಿನ ದೊಡ್ಡ ಮನುಷ್ಯರನ್ನೂ ಅಂಜುಮನ್‌ಗೆ ಬರಮಾಡಿಕೊಂಡು ಸಂತೋಷಪಡಿಸಿದರು. ಮತ್ತು ತಮ್ಮ ಸಂತೋಷವನ್ನು ಸಭಾದಲ್ಲಿ ವಿವರಿಸಿದ್ದಲ್ಲದೆ ೧ನೆಯವರಿಗೆ ಸೆಷನ್ಸ್ ಜಡ್ಜ್ ಹುದ್ದೆ ದಯಪಾಲಿಸಿದ್ದಕ್ಕಾಗಿ ಗೌರ್ನಮೆಂಟಿನವರನ್ನು ವಂದಿಸಿದರು. ೨ನೆಯವರಿಗೆ ಆರೋಗ್ಯ ಕೊಟ್ಟದ್ದಕ್ಕಾಗಿ ಸಭಾಸದರ ಸಹಿತ ದೇವರಿಗೆ ವಂದಿಸಿದರು. ಈ ಸಭಾಕ್ಕೆ ಈ ಸ್ಥಳದಲ್ಲಿರತಕ್ಕ ಅಧಿಕಾರಿಗಳು, ಪ್ಲೀಡರುಗಳು, ಇತರ ದೊಡ್ಡ ಮನುಷ್ಯರು ಸಹ ಬಂದಿದ್ದರು. ಸಭಾದ ನಡವಳಿಯೂ ವಿತರಣೆಯೂ ಚನ್ನಾಗಿತ್ತು.

ತರೀಕೆರೆ.—ಕಳೆದ ತಿಂಗಳು ೨೨ನೇ ತಾ ಶಿವಮೊಗ್ಗೆಯಿಂದ ರೆವ್. ಬ್ರಾಕ್‌ಬ್ಯಾಂಕ್ ಸಾಹೇಬರು ಪತ್ನಿ, ಇಬ್ಬರು ಜನನಾ ಮಿಸ್ಸಿಗಳ ಮತ್ತು ಸ್ವದೇಶ ಬೋಧಕರಾದ ಫಿನ ಜಾರ್ಜ್ ಮಾರ್ಕ್ಸ್‌ಯನವರ ಸಮೇತ ಬಂದರು. ಆ ದಿನ ಇಲ್ಲಿನ ಮಿಷನ್ ಸ್ಕೂಲ್ ಬಾಲಕಿಯರಿಗೆ ಇನಾಮುಗಳನ್ನು ಕೊಡಲು ಏರ್ಪಾಡಾಗಿದ್ದದ್ದರಿಂದ ಸ್ಕೂಲನ್ನು ತೋರಣಗಳಿಂದಲೂ, ಅಲಂಕಾರವಾದ ಅನೇಕ ಚಿತ್ರಗಳಿಂದಲೂ ಶೃಂಗರಿಸಿದ್ದರು. ಸುಮಾರು ೨ ಘಂಟೆಗೆ ಬ್ರಾಕ್‌ಬ್ಯಾಂಕ್ ಸಾಹೇಬರೂ, ಅವರ ಪತ್ನಿಯವರೂ, ಅಮಲ್ದಾರ್ರವರೂ, ಡಾಕ್ಟರವರೂ, ಪೊ॥ ಇನ್ಸ್‌ಪೆಕ್ಟರವರೇ ಮುಂತಾದ ಮಹನೀಯರೆಲ್ಲಾ ದಯಮಾಡಿಸಿದರು. ಫಿನ ಬ್ರಾಕ್‌ಬ್ಯಾಂಕ್ ಸಾಹೇಬರು ಭಗವತ್ ಪ್ರಾರ್ಥನೆ ಮಾಡಿದ ನಂತರ ಬಾಲಕಿಯರು ಒಂದು ಗಾನ ಮಾಡಿದರು. ಡಾಕ್ಟರ್ ಮೆ॥ ಗುರುರಾಯರು ಸ್ತ್ರೀ ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವನ್ನು ಕುರಿತು ಒಂದು ಸಣ್ಣ ಉಪನ್ಯಾಸ ಮಾಡಿದ ಮೇಲೆ ನಮ್ಮ ಅಮಲ್ದಾರರಾದ ಮೆ॥ ಎಂ. ಕೃಷ್ಣಸ್ವಾಮಿ ಅಯ್ಯಂಗಾರ್ರವರು ಬಾಲಕಿಯರಿಗೆ ಗೊಂಬೆ ಪೆಟ್ಟಿಗೆ ಮುಂತಾದ ಇನಾಮುಗಳನ್ನು ಕೊಟ್ಟರು. ಫಿನ ಜಾರ್ಜ್ ಮಾರ್ಕ್ಸ್‌ಯನವರು ಕೆಲವು ಮಾತುಗಳನ್ನಾಡಿದರು. ಸಭೆಯಲ್ಲಿದ್ದ ಮಹನೀಯರುಗಳಿಗೆ ಗಂಧ, ಪುಷ್ಪ, ತಾಂಬೂಲ ಒಪ್ಪಿಸಲಾಯಿತು. ಮಕ್ಕಳಿಗೆ ಫಲಾಹಾರ ಹಂಚಲ್ಪಟ್ಟಿತು. ಕೊನೆಯಲ್ಲಿ ಅಮಲ್ದಾರ್ರವರು ಕೆಲವು ಬುದ್ಧಿವಾದಗಳನ್ನು ಹೇಳಿದರು. ಸಭಿಕರ ಪರವಾಗಿ ಮೆ॥ ಗುರುರಾಯರು ಸಾಹೇಬರಿಗೂ ಅವರ ಪತ್ನಿ ಮುಂತಾದವರಿಗೆಲ್ಲಾ ವಂದನೆಗಳನ್ನು ಸಲ್ಲಿಸಿದರು. ಸಭೆಯು ಬರಖಾಸ್ತಾಯಿತು.—ಈ ತಿಂಗಳು ಮೊದಲನೇ ತಾ ಬೆಂಕಿಪುರದ ಕಡೆ ವಾಸಿಯಾದ ಒಬ್ಬನು ಶುಕ್ರವಾರ ನಡೆಯುವ ಇಲ್ಲಿನ ಸಂತೆಗೆ ಬಂದು ರೈಲ್ವೆ ಇಸ್ಟೇಷನ್ನಿಗೆ ನೀರು ತೆಗೆಯುತ್ತಿದ್ದ ಹಳೇ ಬಾವಿಯಲ್ಲಿ ಬಿದ್ದು ಸತ್ತುಹೋದನು. ಮಾರನೇ ದಿನ ಸರ್ಕಾರಕ್ಕೆ ತಿಳಿದು ಬಂದು, ಶವವನ್ನು ಎತ್ತಿಸಿ ವಾರಸುದಾರರಿಗೆ ಒಪ್ಪಿಸಿದರು.—ಇದೇ ತಿಂಗಳು ೯ನೇ ತಾ ಇಲ್ಲಿಗೆ ಸುಮಾರು ೫ ಮೈಲಿ ದೂರದಲ್ಲಿರುವ ಹಾದಿಕೆರೆ ಜಂಗಲಿಗೆ ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದ ಸುಮಾರು ೧೨—೧೫ ವಯಸ್ಸಿನ ಒಬ್ಬ ಶಿವಭಕ್ತರ ಹುಡುಗನಿಗೆ ಹುಲಿಯು ಹಿಡಿದು ಗಾಯಮಾಡಿ, ಕೊಲ್ಲುವದರೊಳಗಾಗಿ ಬಾಕಿ ದನಕಾಯುವಂಥವರು ಶಬ್ದ ಮಾಡಿ, ಹುಲಿಯನ್ನು ಓಡಿಸಿ, ಆ ಹುಡುಗನನ್ನು ಇಲ್ಲಿನ ಆಸ್ಪತ್ರೆಗೆ ತಂದಿರುತ್ತಾರೆ. ಈಗ ಡಾಕ್ಟರವರ ಇಲಾಜಿನಲ್ಲಿರುತ್ತಾನೆ. ಇಂಥಾ ಹುಲಿಯನ್ನು ನಾಶಮಾಡಿದರೆ ಎಷ್ಟೋ ಉತ್ತಮವಾಗಿರುವದು.—೧೦ನೇ ತಾ ಸಾಯಂಕಾಲ ನಮ್ಮ ಡಾಕ್ಟರ್ ಮೆ॥ ಗುರುರಾಯರು 'ಪ್ಲೇಗ್ ಅಂದರೇನು? ಪ್ಲೇಗ್ ಬರುವದು ಹ್ಯಾಗೆ? ಪ್ಲೇಗ್ ಬಂದ ನಂತರ ಅದು ನಿವಾರಣೆಯಾಗುವದು ಹ್ಯಾಗೆ?' ಎಂಬೀ ವಿಷಯಗಳನ್ನು ಸಭಿಕರಿಗೆ ಬಹು ಚನ್ನಾಗಿ ವಿವರಿಸಿದರು. ನಮ್ಮ ಅಮಲ್ದಾರ್ರವರು ಈ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಇಂಜನಿಯರ್ ಇಲಾಖಾ ಆಫೀಸರೂ, ಸಬ್ ರೆಜಿಸ್ಟ್ರಾರವರೂ ಪ್ಲೇಗ್ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದು ಅವಶ್ಯವೆಂದು ತಮ್ಮ ಅನುಭವವನ್ನು ಹೇಳಿದರು.—ಈ ವರ್ಷ ಈ ಪ್ರಾಂತ್ಯ ಎಲ್ಲಾ ಕಡೆ ಮಳೆ ಬೆಳೆ ಬಹಳ ಚನ್ನಾಗಿರುವದನ್ನು ನೋಡಿ ಪ್ರಜೆಗಳೆಲ್ಲಾ ಹಸನ್ಮುಖಿಗಳಾಗಿರುತ್ತಾರೆ.

ಹೊಳೆನರಸೀಪುರ.—ಈ ಪ್ರಾಂತ್ಯ ೧೫ ದಿವಸಗಳಿಂದ ಮಳೆ ಇಲ್ಲದೆ ಬಿಸಲು ಕಾದದ್ದರಿಂದ ರೈತರು ಬಹು ಸಂತೋಷವಾಗಿ ಕಟಾವಿಗೆ ಬಂದ ಪೈರುಗಳನ್ನೆಲ್ಲಾ ಕೊಯ್ದು ಗುಪ್ಪೆಗಳನ್ನು ಹಾಕಿ ಕೊಂಡರು. ಇನ್ನು ೧-೨ ಹದ ಮಳೆಯಾದಲ್ಲಿ ಎಲ್ಲಾ ಬೆಳೆ ಕೈ ಸೇರಿದಷ್ಟಂದವಾಗುತ್ತದೆ; ಬಡಜನರ ಕಷ್ಟವು ಪರಿಹಾರವಾದ ಹಾಗಾಯಿತು.—ಈ ವರುಷ ಎಲ್ಲಾ ಕಡೆಗಳಲ್ಲಿಯೂ ಮಳೆ ಬೆಳೆ ಚನ್ನಾಗಿದೆ. ಆದರೂ ದಿನಸಿಗಳ ಧಾರಣೆ ಮಾತ್ರ ಇಳಿಯಲಿಲ್ಲ. ರಾಗಿ ರೂಪಾಯಿಗೆ ೧೨ ಸೇರು, ಅಕ್ಕಿ ೭-೮ ಸೇರು, ಬೇಳೆ ೬ ಸೇರು, ಜೋಳ ೧೬ ಸೇರು, ಈ ಪ್ರಕಾರ ಮಾರಾಟವಾಗುತ್ತದೆ. ೩-೪ ದಿನಗಳಿಂದ ಹಗಲಿನಲ್ಲಿ ಬಹು ತೀಕ್ಷ್ಣವಾದ ಬಿಸಲು, ರಾತ್ರಿಯಲ್ಲಿ ಘಟ್ಟಿಯಾದ ಮಳೆ. ಇದರಿಂದ ಊರಿನ ಕೊಳೆಯೆಲ್ಲಾ ಹೇಮಾವತಿಗೆ ಸೇರುವದರಿಂದ ತಾತ್ಕಾಲಕ್ಕೆ ಬೀದಿಗಳೆಲ್ಲಾ ಶುಚಿಯಾಗಿವೆ. ಮುನಿಸಿಪಲ್ ದಫೇದಾರರು ಜಾಡಮಾಲಿಗಳ ಮೇಲೆ ಮುತುವರ್ಜಿ ವಹಿಸಿದಾರೆ. ಈ ಟೌನಿನಲ್ಲಿ ಊರು ನಾಯಿಗಳು ಹೆಚ್ಚಿ ಬಹಳ ತೊಂದರೆ ಕೊಡುತ್ತವೆ. ಅವುಗಳಿಗೆ ಹುಚ್ಚು ಹಿಡಿದರೆ ಮತ್ತಷ್ಟು ಹಿಂಸೆಗೆ ಕಾರಣವಾದೀತು. ಆದಕಾರಣ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಮುನಿಸಿಪಾಲಿಟಿಯವರು ಅವುಗಳನ್ನು ಕೊಲ್ಲಿಸುವ ಪ್ರಕಾರ ಇಲ್ಲಿ ಸಹ ಕೊಲ್ಲಿಸಿದರೆ ಬಹಳ ಅನುಕೂಲವಾಗಬಹುದು.—ಈ ಸಾರಿ ಗೌರಿ ಹಬ್ಬವನ್ನು ಈ ಸ್ಥಳದಲ್ಲಿ ಜನರು ಬಹು ವಿಜೃಂಭಣೆಯಿಂದ ಆಚರಿಸಿದರು. ಆ ದಿನಗಳು ಬೇರೆ ಮಗ್ಗದವರು ತಮ್ಮ ಉದ್ಯೋಗವನ್ನು ಬಿಟ್ಟು ತಮ್ಮ ಮನೆಗಳಲ್ಲಿ ಅನೇಕ ಗೊಂಬೆಗಳನ್ನು ಶೃಂಗರಿಸಿ ನೋಟಕರಿಗೆ ಅನುಕೂಲ ಮಾಡಿದ್ದರು. ಈ ಎಂಟು ದಿನಗಳೂ ಅನೇಕ ಜನರು ಇಸ್ಪೀಟು ಮೊದಲಾದ ಜೂಜಾಟಗಳಲ್ಲಿ ಬಹಳ ಹಣವನ್ನು ಕಳಕೊಂಡರು.—ಇದೇ ತಾಲ್ಲೂಕು ಹಾನಿಕ ಮಾರನಹಳ್ಳಿ ನಿಂಗಿ ಎಂಬವಳೂ, ಅವಳ ಗಂಡನೂ ಎರಡು ಮಕ್ಕಳನ್ನು ಇಟ್ಟುಕೊಂಡು ಜೀವನ ಮಾಡುವದಕ್ಕೆ ಶಕ್ತಿಯಿಲ್ಲದೆ ಇದ್ದ ಕಾರಣ ವಾರನಾಯಕನಹಳ್ಳಿ ಕೋಟೆಗೌಡನ ಬಳಿ [illegible] ಕೂಲಿಗಾಗಿ ನಿಂತರು. ಮನುಷ್ಯರಿಗೆ [illegible] ಊಟ ಎಂಬುದಾಗಿ ಗೊತ್ತು ಮಾಡಿಕೊಂಡು ಇದ್ದರು. [illegible] ಕೋಪಗೊಂಡು [illegible] ಎಂಬುವಳಿಗೆ ಕತ್ತಿನ ಸುತ್ತಲೂ, ಬೆನ್ನಿನ ಮೇಲೆ ಬರೆ ಹಾಕಿದ್ದನು. ಇಷ್ಟು ಅಲ್ಪವಾದ ತಪ್ಪಿಗಾಗಿ ಇಂಥಾ ಕ್ರೂರವಾದ ಶಿಕ್ಷೆಯನ್ನು ಕೊಡತಕ್ಕ ಯಜಮಾನನು ಇರುವನು.—೧೫ ದಿವಸಗಳ ಕಾಲ ಇವಳು ಇಲ್ಲಿನ ಆಸ್ಪತ್ರೆಗೆ ಬಂದು ತಕ್ಕ ಚಿಕಿತ್ಸೆಯನ್ನು ಹೊಂದಿಕೊಂಡು ಕ್ಷೇಮವಾಗಿ ಹೊರಟು ಹೋದಳು. ಆಸ್ಪತ್ರೆ ವೈದ್ಯರಾದ ಮೆ॥ ರಾಮಚಂದ್ರರಾಯರು ತಮ್ಮ ಕೆಲಸದಲ್ಲಿ ಬಹಳ ಮುತುವರ್ಜಿಯನ್ನು ವಹಿಸಿರುತ್ತಾರೆ. ಇವರು ಈ ಸ್ಥಳಕ್ಕೆ ಬಂದ ೪ ವರುಷದಿಂದಲೂ ರೋಗಿಗಳಿಗೆ ಪ್ರೀತಿಯಿಂದ ತಕ್ಕ ಚಿಕಿತ್ಸೆ ಮಾಡುತ್ತಿದಾರೆ. ಇವರು ಜಾತಿ ವ್ಯತ್ಯಾಸವನ್ನು ಇಟ್ಟುಕೊಳ್ಳದೆ ತಮ್ಮ ಆಸ್ಪತ್ರೆಗೆ ಯಾವ ಜಾತಿಯವನೇ ಬರಲಿ ಬಹಳ ಸಂತೋಷದಿಂದ ತಕ್ಕ ಚಿಕಿತ್ಸೆ ಮಾಡಿ ಉಪಚರಿಸಿ ಕಳುಹಿಸುತ್ತಾರೆ. ಯಾವ ಬಡ ಮನುಷ್ಯನು ತಮ್ಮ ಮನೆಗೆ ಬಂದು ನೋಡಬೇಕೆಂದು ಕೇಳಿಕೊಂಡರೂ ಇವರು ಉಚಿತಾರ್ಥವಾಗಿ ಅವರ ಮನೆಗಳಿಗೆ ಹೋಗಿ ರೋಗಿಗಳನ್ನು ಪರಾಂಬರಿಸುತ್ತಾರೆ. ಇಂಥವರಿಗೆ ಇಷ್ಟರಲ್ಲೇ ವರ್ಗವೆಂಬ ಸಮಾಚಾರವನ್ನು ಕೇಳುವದರಿಂದ ಜನರು ವ್ಯಸನಪಡುತ್ತಾರೆ.—ಖಾಲಿ ನಿವೇಶನಗಳಿಗೆ ಗೋಡೆಗಳಿಲ್ಲದ್ದರಿಂದ ಮುಳ್ಳುಗಿಡಗಳು ಬೆಳೆದು ಜನರು ಹೇಸಿಗೆ ಮಾಡುವದಕ್ಕೂ, ವಿಷಜಂತುಗಳು ಸೇರಲಿಕ್ಕೂ ಆಸ್ಪದವಾಗಿದೆ. ಆದಕಾರಣ ನಮ್ಮ ಅಮಲ್ದಾರರು ಆಯಾ ಖಾಲಿ ನಿವೇಶನ ಹಕ್ಕುದಾರರಿಗೆ ನೋಟೀಸಿನ ಮೂಲಕ ಖಾಲಿ ನಿವೇಶನಗಳಿಗೆ ಹಕ್ಕುದಾರರು ಗೋಡೆಗಳನ್ನು ಹಾಕಿಸಿಕೊಂಡರೆ ಸರಿ, ಇಲ್ಲವಾದರೆ ಸರ್ಕಾರದಿಂದ ಹರಾಜು ಮಾಡಿಸುತ್ತೇವೆಂದು ಪ್ರಕಟ ಮಾಡಿಸಿದರೆ ಎಲ್ಲಾ ಶುಚಿಯಾಗಲಿಕ್ಕೆ ಅನುಕೂಲವಾಗುತ್ತೆ. ಈ ವಿಷಯಕ್ಕೆ ಅಮಲ್ದಾರರು ಗಮನಿಸ ತಕ್ಕದ್ದೆಂದು ಹಾರೈಸುತ್ತೇವೆ.

ತ್ಯಾಮಗೊಂಡ್ಲು.—ಕಳೆದ ತಿಂಗಳಿನಲ್ಲಿ ನಡೆದ ಮುನಿಸಿಪಲ್ ವಿಷಯಗಳಲ್ಲಿ ಪ್ರೆಸಿಡೆಂಟರೂ ಮತ್ತು ಮೆಂಬರುಗಳಲ್ಲಿ ಕೆಲವರೂ ಇಲ್ಲಿನ ಆಸ್ಪತ್ರೆಗೆ ಸೂಲಗಿತ್ತಿಯನ್ನು ಕೊಡತಕ್ಕ ವಿಚಾರದಲ್ಲಿ ಇಷ್ಟ ಪಡಲಿಲ್ಲವೆಂದು ತಿಳಿಯಬರುತ್ತೆ. [illegible] ಇಷ್ಟಪಡಲಿಲ್ಲವೋ ತಿಳಿಯದು. ಇದು ದೊಡ್ಡ ಊರಾದ್ದರಿಂದಲೂ, ಸುಮಾರು ಎರಡುಸಾವಿರ ಪ್ರಜಾ ಇರುವುದರಿಂದಲೂ, ಈ ಪ್ರಕೃತಿ ಬಡವರೇ ಹೆಚ್ಚು. ದಾಸರಿಗೆ ಸೂಲಗಿತ್ತಿ ಸಹಾಯ ಅವಶ್ಯಕವಲ್ಲವೇ? ಇದ್ದೀತು. ಕೆಲವು ಸಂದರ್ಭಗಳಲ್ಲಿ ನೆಲಮಂಗಲದಿಂದ ಸೂಲಗಿತ್ತಿಯನ್ನು ಕರಸಿಕೊಳ್ಳಬೇಕಾಗುತ್ತದೆ. ಸರ್ಕಾರದವರು ದಯಮಾಡಿ ಇಲ್ಲಿಗೆ ಒಬ್ಬ ಸೂಲಗಿತ್ತಿಯನ್ನು ಖಂಡಿತ ದಯಪಾಲಿಸ ಬೇಕೆಂದು ತ್ಯಾಮಗೊಂಡ್ಲುದ ಬಡಪ್ರಜೆಗಳು ಕೋರುತ್ತಾರೆ.—ಸ್ಯಾನಿಟೇಷನ್ ನೋಡಿಕೊಳ್ಳುವದಕ್ಕಾಗಿ ಒಬ್ಬ ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್‌ಪೆಕ್ಟರನ್ನು ಕಳುಹಿಸುವದಾಗಿಯೂ, ಅವರು ಬರುವ ವರೆವಿಗೂ ಒಬ್ಬ ಮುನಿಸಿಪಲ್ [illegible]ನನ್ನು ನಮ್ಮ ಅಮಲ್ದಾರರವರು ಇಲ್ಲಿಗೆ ಕಳುಹಿಸುತ್ತಾರೆ. ಸದರೀ [illegible] ಇಲ್ಲಿಗೆ ಇದೇ ವಾರ ೬ನೇ ತಾ ಬಂದರು. ಇನ್ನು ಮೆ॥ [illegible] ಜಾರಿಗೆ ಬಂದು ಈ ಗ್ರಾಮಕ್ಕೆ ತುಂಬಾ ಅನುಕೂಲವಾದೀತೆಂದು ನಂಬುತ್ತೇವೆ.—ಪ್ಲೇಗ್ ಮಾರಿಗೆ ಈ ಊರು [illegible] ಎರಡು ಮೂರು ವರ್ಷದಿಂದಲೂ ಜನರ ರೋಗಗಳೂ ಇಲ್ಲದೆ ಆರೋಗ್ಯವಾಗಿದೆ. ಆದರೆ ಗ್ರಾಮದ ಪಾಕೀಜು ಸಂಗ್ರಹದಲ್ಲಿ ಅಷ್ಟೇನೂ ತೃಪ್ತಿಕರವಾಗಿಲ್ಲ. ಲಾಂದ್ರಗಳು ಕೆಲವು ಕಡೆ ಪ್ರಕಾಶವಾಗಿವೆ, ಕೆಲವು ಕಡೆ [illegible] ಕೆಲವು ಕಡೆ ಕೃಷ್ಣಪಕ್ಷದಂತಿವೆ. ಇವಕ್ಕೆ [illegible]. ಕೆರೆಗಳು ಕೂಡ [illegible] ಮಳೆಯಿಂದ ಕೆಟ್ಟು ಹೋಗಿ ನಿರುಪಯೋಗವಾಗಿವೆ. ಬೆಳೆ—೧೦ ದಿವಸವಾಗಬಹುದೆಂದು ಜನರು ಅಂದುಕೊಳ್ಳುತ್ತಾರೆ. ರಾಗಿ ಬೆಳೆ [illegible] ಚನ್ನಾಗಿದೆ. ಮುಂದೆ ಹೇಗಾಗುತ್ತದೆಯೋ ತಿಳಿಯದು. ಧಾರಣೆ [illegible] ವಿಷಯ ಏರಿದಂತೆ ಇರುತ್ತವೆ. ಯಾವಾಗ ಇದು ಕಡಮೆಯಾದೀತೊ ತಿಳಿಯದು. ಇಲ್ಲಿಗೆ ಸುಮಾರು ಮೂರು ಮೈಲಿಯಿರುವ ದಾಬಸ್‌ಪೇಟೆಯಲ್ಲಿ ಪ್ಲೇಗು ಶಮನವಾಗಲಿಲ್ಲ. [illegible]ಗಳಲ್ಲಿಯೂ ಪ್ಲೇಗ್ ಕೇಸುಗಳು ನಡೆಯುತ್ತಲೇ ಇವೆ. ಈ ಊರಿಗೆ ದಾಬಸ್‌ಪೇಟೆಯಿಂದ ಬಹಳ ಜನಗಳು ಬಂದು ಇದಾರೆ. ಇದು ಯಾವಾಗ ಏನಾಗುತ್ತದೊ ಎಂದು ಜನಗಳು ಭಯ ಪಟ್ಟಿರುತ್ತಾರೆ. ಹಾಗೇನಾದರೂ ಪ್ಲೇಗು ಪುನಃ ಬಂದರೆ ಈ ದುರ್ಭಿಕ್ಷಕಾಲದಲ್ಲಿ ಜನರು ಎಲ್ಲಿ ಸೇರುತ್ತಾರೋ, ಹ್ಯಾಗೆ ಜೀವನ ಮಾಡುತ್ತಾರೊ ತಿಳಿಯದು.—ಮಿಷನ್ ಬಾಲಿಕಾ ಪಾಠಶಾಲೆಯು ತುಂಬಾ ಅಭಿವೃದ್ಧಿಯಲ್ಲಿದೆ. ಆದರೆ ಮಾಸ್ಟರ ಸಂಬಳ ಮಾತ್ರ ಬಹಳ ವ್ಯಸನಕರವಾಗಿದೆ. ಒಬ್ಬ ಸಂಗೀತೋಪಾಧ್ಯಾಯನನ್ನು ಕೊಡಬೇಕೆಂದು ಕೆಲವು ಜನ ಗ್ರಾಮಸ್ಥರು ಆ ಇನ್ಸ್‌ಪೆಕ್ಟರ್ ಸಾಹೇಬರಿಗೆ [illegible] ಅರ್ಜಿ ಬರೆದು ಕೊಟ್ಟಿದ್ದರು. ಅದು ಏನಾಯಿತೋ? ಇದುವರೆಗೂ ಉಪಾಧ್ಯಾಯನನ್ನು ಕೊಡಲಿಲ್ಲ. ಮಾಸ್ಟರುಗಳಿಗೆ ಈ ಕಾಲಕ್ಕೆ ತಕ್ಕಂತೆ ಸಂಬಳ ಸಾಲದು. ೫—೬ ರೂಪಾಯಿಗಳಲ್ಲಿ ಹ್ಯಾಗೆ ಜೀವನ ನಡೆದೀತು? ಇದಕ್ಕೆ ಗೌರ್ನಮೆಂಟಿನವರೂ ಮಿಷನ್ ಅಧಿಕಾರಿಗಳೂ ಇವರಿಗೆ ಸರಿಯಾದ ವೇತನವನ್ನು ಕೊಟ್ಟು ಕಾಪಾಡಬೇಕು. ಮಿಷನ್ ಸೂಪ್ರೆಂಟು ಸಾಹೇಬರವರ ಸವಾರಿಯು ಎರಡು ವರುಷದಿಂದಲೂ ದಯಮಾಡಿಸಲಿಲ್ಲ. ಆಗಾಗ್ಯೆ ಬಂದು ಹೋಗುತ್ತಾ ಇದ್ದರೆ ಇವರ ಕಷ್ಟ ಸುಖಗಳು ಮನಸ್ಸಿಗೆ ಗೊತ್ತಾಗುತ್ತಿತ್ತು.—ಎ. ವಿ. ಸ್ಕೂಲ್ ಹೆಡ್ಮಾಸ್ಟರು ಕೆಲಸದಲ್ಲಿ ಬಹಳ [illegible] ದುಷ್ಟರು ಅವರ ಮೇಲೆ [illegible] ಅರ್ಜಿಗಳನ್ನು ಬರೆಯುತ್ತಾರೆಂದು ವರ್ತಮಾನವಿದೆ. ಡಾಕ್ಟರ್ ಸಾಹೇಬರು ಪ್ರತಿ ಸೋಮವಾರವೂ ಮುತುವರ್ಜಿಯಿಂದ ಸ್ಕೂಲುಗಳಿಗೆ ಬಂದು ಕಾಯಿಲೆಯವರನ್ನು ವಿಚಾರಿಸಿಕೊಂಡು ಹೋಗುತ್ತಾರೆ. ಮಕ್ಕಳಲ್ಲಿ ಮುತುವರ್ಜಿ ಇಟ್ಟಿದ್ದಾರೆ. ಬಾಲಿಕಾ ಪಾಠಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಕಕ್ಕಸು ಕಟ್ಟಿಸಿಕೊಡುವಂತೆ ಹೇಳಿಕೊಂಡಾಗ್ಯೂ ಇನ್ನೂ ಏರ್ಪಡಿಸಿ ಕೊಡಲಿಲ್ಲ. ಮಕ್ಕಳಿಗೆ ಮಲಮೂತ್ರವಿಸರ್ಜನೆ ಬಹಳ ತೊಂದರೆಯಾಗಿದೆ. ಜಾಗ್ರತೆ ಕಟ್ಟಿಸಿಕೊಡಬೇಕು.—ಈ ಊರಿನಲ್ಲಿ ಸುಮಾರು 1 ತಿಂಗಳಿಂದ ಒಬ್ಬ ಅವಧೂತರು ಇದ್ದರು. ಇವರು ದಿವಸಕ್ಕೆ ಊಟಮಾಡುತ್ತಿರಲಿಲ್ಲ. ಭಂಗಿಸೊಪ್ಪನ್ನು ಮಾತ್ರ ಸೇವನೆ ಮಾಡುತ್ತಿದ್ದರು. ಯಾವಾಗ ನೋಡಿದರೂ ಭಗವದ್ಗೀತೆ, ಹನುಮದ್ವಿಲಾಸ, ಇತ್ಯಾದಿ ಗ್ರಂಥಗಳನ್ನು ಪಾರಾಯಣ ಮಾಡುತ್ತಿದ್ದರು. 2-3 ದಿವಸಕ್ಕೊಂದುಸಲ ಜಾತಿಭೇದವಿಲ್ಲದೆ ಯಾರ ಮನೆಯ ಹತ್ತಿರಕ್ಕಾದರೂ ಹೋಗಿ ಸ್ವಲ್ಪ ಆಹಾರವನ್ನು ಕೇಳುತ್ತಿದ್ದರು. ಇವರಿಂದ ಯಾರಿಗೂ ತೊಂದರೆ ಇರಲಿಲ್ಲ. ಇವರಿಗೆ ಕಳೆದ ೪ನೇ ತಾ ಸಾಯಂಕಾಲ ಅಕಾಲಮರಣ ಪ್ರಾಪ್ತವಾಯಿತು. ಸಾಯುವದಕ್ಕೆ 1 ದಿನ ಹಿಂದೆ [illegible] ಅವರ [illegible] ಆತನನ್ನು [illegible] ಮಾಡಿದವರೂ [illegible] ಕಾಲ ತೀರಿಹೋದರು. ಅನಂತರ ಪೋಲೀಸಿನವರು, ಗ್ರಾಮದ ಪಟೇಲರೂ ಮಹಜರು ಮಾಡಿ ದಫನಿಗೆ ಅಪ್ಪಣೆ ಮಾಡಿದರು. ಇವರ ಸಮಾಧಿಗಾಗಿ ಆಗತಕ್ಕ ಖರ್ಚನ್ನು ಇಲ್ಲಿನ ಕೆಲವು ವರ್ತಕರೇ ಮುಂತಾದ ದೊಡ್ಡ ಮನುಷ್ಯರು ಸೇರಿ ಚಂದಾ ಹಾಕಿ, ಕ್ರಿಯೆಯನ್ನು ನಡೆಸಿದರು.

ವಿದೇಶ ವರ್ತಮಾನಗಳು

ಯೂರೋಪಿಗೆ ಸೇರಿದ ಆಸ್ಟ್ರಿಯಾ ಮತ್ತು ಹಂಗೇರೀ ರಾಜ್ಯಗಳಲ್ಲಿ ಕೆಲವು ಸಲ ಭೂಮಿಯು ಕಂಪಿಸಿತು. ವಿಶೇಷ ಕಷ್ಟನಷ್ಟಗಳೇನೂ ಆಗಲಿಲ್ಲ.

ಲಂಡನ್ ಪಟ್ಟಣದ ಸೌತ್‌ವಾರ್ಕ್ ಎಂಬ ವಿಭಾಗದಲ್ಲಿರುವ ಒಂದು ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ೯ ಲಕ್ಷ ರೂಪಾಯಿನ ಸರಕು ಹಾಳಾಯಿತು.

ಈಜಿಪ್ಟ್ ದೇಶದ ಖೇದೈವರ್ ರಾಜನೂ ಅವರ ತಾಯಿಯವರೂ ಈ ವರುಷ ಮಕ್ಕಾ ಎಂಬ ತಮ್ಮ ಪುಣ್ಯಸ್ಥಳಕ್ಕೆ ಯಾತ್ರೆ ಹೊರಡುತ್ತಾರೆಂದು ತಿಳಿಯುವುದು.

ಫ್ರಾನ್ಸ್ ಸಂಸ್ಥಾನಕ್ಕೆ ಸೇರಿದ ರೆಹಿಂಸ್ ಪಟ್ಟಣದಲ್ಲಿ ಸರ್ಕಾರದವರು ಏಳು ಜನ ಗಂಡಸರನ್ನೂ ಮೂವರು ಹೆಂಗಸರನ್ನೂ ಕಳೆದ ವಾರ ದಸ್ತಗಿರಿ ಮಾಡಿದರು. ಇವರು ಜರ್ಮನಿ ರಾಜ್ಯದಿಂದ ಬಂದಿದ್ದ ಗೂಢಚಾರರೆಂದು ಊಹಿಸಲ್ಪಟ್ಟಿದೆ.

ಪರ್ಶಿಯಾ ರಾಜ್ಯದ ಮಾಜಿ ಸುಲ್ತಾನರವರು ಪರಿವಾರ ಸಹಿತ ಕಳೆದ ವಾರ ರಷ್ಯಾ ರಾಜ್ಯದಲ್ಲಿರುವ ಒಡೆಸ್ಸಾ ಪಟ್ಟಣವನ್ನು ಸೇರಿದರು. ಅವರನ್ನು ಅಲ್ಲಿ ರಾಜಮರ್ಯಾದೆಗಳೊಡನೆ ಎದುರುಗೊಂಡರು. ಸುಲ್ತಾನರವರು ಇನ್ನು ಮುಂದೆ ಅಲ್ಲೇ ಇರುವಂತೆ ಗೊತ್ತಾಗಿದೆ.

ಸ್ವಿಟ್ಸರ್ಲಂಡಿಗೆ ಸೇರಿದ ಜೂರಿಚ್ ಪಟ್ಟಣದಲ್ಲಿ ಆಕಾಶಬುಟ್ಟಿಗಳ ಪಂದ್ಯ ನಡೆಯಿತು. ಅಮೇರಿಕದ ಒಬ್ಬ [illegible] ತನ್ನ ಆಕಾಶಬುಟ್ಟಿಯಲ್ಲಿ ಕುಳಿತುಕೊಂಡು ಅಂತರಿಕ್ಷದಲ್ಲಿ ೨೬ ಗಂಟೆ ಹೊತ್ತಿನಲ್ಲಿ ಸುಮಾರು ೧,೦೦೦ ಮೈಲಿ ದೂರದಲ್ಲಿರುವ ವಾರ್ಸಾ ಪಟ್ಟಣದ ಬಳಿ ಇಳಿದನು. ಈ ಆಕಾಶಬುಟ್ಟಿಯು ಅತ್ಯಂತ ವೇಗವಾಗಿ ಸಂಚಾರಮಾಡಿತೆಂದು ಗೊತ್ತಾದದ್ದರಿಂದ ಗಾರ್ಡನ್ ಬೆನೆಟ್ ಎಂಬ ಇಂಗ್ಲಿಷ್ ದೊರೆ ಮುಂಚೆ ಪ್ರಕಟಮಾಡಿದ್ದ ಬಹುಮಾನವನ್ನು ಆತನಿಗೆ ಕೊಟ್ಟರು.

ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪಾರಿಸ್ಸಿನ ಹತ್ತಿರ ಜುವಿಸಿ ಎಂಬ ಮೈದಾನದಲ್ಲಿ ಕಳೆದ ವಾರ ವಿಮಾನಗಳ ಪರೀಕ್ಷೆ ನಡೆಯಿತು. ಅದನ್ನು ನೋಡುವದಕ್ಕೆ ಎರಡು ಲಕ್ಷ ಜನ ಸೇರಿದ್ದರು. ರೈಲ್ ಗಾಡಿಗಳು ಬರುವುದಕ್ಕೆ [illegible] ಸಾವಿರಾರು ಜನ [illegible] ಕೆಲವು ಗಾಡಿಗಳನ್ನೂ ಒಡೆದುಬಿಟ್ಟರು.

ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಲಾರ್ಡ್ ಹಿಲ್ ಎಂಬ ಮಂತ್ರಿಯು ಒಂದು ಕಾನೂನಿನ ಮಸೂದೆಯನ್ನು ಸೂಚಿಸಿ ಚರ್ಚೆಗೆ ತಂದಿರುತ್ತಾರೆ. ಈ ಕಾನೂನಿನ ಉದ್ದೇಶವೇನಂದರೆ—ಚಿಕ್ಕವಯಸ್ಸಿನ ಹುಡುಗರೂ ಹುಡುಗಿಯರೂ ದೇಹವ್ಯಾಯಾಮವಿಲ್ಲದವರಾಗಿ ಬೆಳೆಯುತ್ತಾರಾದ್ದರಿಂದ ಹದಿನಾರು ವರ್ಷ ತುಂಬುವ ತನಕ ಅವರಿಗೆಲ್ಲಾ ಕ್ರಮವಾಗಿ ಅಂಗಸಾಧನೆಗಳನ್ನು ಹೇಳಿಕೊಟ್ಟು ಮಾಡಿಸಿ ಅವರನ್ನೆಲ್ಲಾ ಕಾಯಪುಷ್ಟರನ್ನಾಗಿ ಮಾಡಿಸಬೇಕು. ಈ ಕಸರತ್ತುಗಳು ಮಕ್ಕಳ ಅಂಗಾಂಗಗಳನ್ನೆಲ್ಲಾ ಗಟ್ಟಿಮಾಡಿ, ಬೆಳೆಯಿಸುವಂಥವುಗಳಾಗಬೇಕು ಎಂಬುದೇ.

ಫ್ರೆಂಚರಿಗೆ ಸೇರಿದ ಕೊಚ್ಚಿನ್ ಚೀನಾದಲ್ಲಿ ಫ್ರೆಂಚ್ ಸೈನ್ಯವು [illegible] ಕೆಲವು ಕಾಲದಿಂದ ಒಳ್ಳೆ ಅಡಗಿಕೊಂಡು ಸಮುದ್ರ ಮಾರ್ಗವಾಗಿ ಸಂಚಾರ ಮಾಡುತ್ತಿದ್ದ ಹಡಗು ದೋಣಿಗಳನ್ನು ತಡೆದು ಲೂಟಿಮಾಡುತ್ತಿದ್ದ ೩೫೦ ಮಂದಿ ಕಳ್ಳರನ್ನು ಓಡಿಸಿ, ಅವರ ಮೇಲೆ ಯುದ್ಧ ಮಾಡಿದರು. ಆ ಕಳ್ಳರು ಸ್ವಲ್ಪಕ್ಕೆ ಸಗ್ಗದೆ ಸೈನಿಕರ ಮೇಲೆ ಯುದ್ಧ ಮಾಡಿದರು. ಸೈನಿಕರಲ್ಲಿ ೧೯ ಮಂದಿ ಕೊಲೆಯಾಗಿ, ೩೫ ಮಂದಿ ಗಾಯಪಟ್ಟರೆಂದೂ, ಇವರಲ್ಲಿ ೨೦ ಮಂದಿ ಬೇರೆ ಜನರೆಂದೂ ತಿಳಿಯುವುದು.

ಚೀನಾ ರಾಜ್ಯಕ್ಕೆ ಸೇರಿದ ಮ್ಯಾಂಚೂರಿಯಾ ಸೀಮೆಯನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಈಚೆಗೆ ಚೀನಾ ಜಪಾನರವರು ಸೇರಿ ಒಂದು ಕರಾರು ಮಾಡಿಕೊಂಡರು. ಈ ಕರಾರು ಅಮೇರಿಕದ ಸಂಯುಕ್ತ ಸಂಸ್ಥಾನಗಳ ಗವರ್ನ್‌ಮೆಂಟಿಗೆ ಸಮ್ಮತವಾಗಿರುವಂತೆ ತೋರುವುದಿಲ್ಲ. ಅವರು ಮ್ಯಾಂಚೂರಿಯಾಗೆ ಕಳುಹಿಸಿದ ತಮ್ಮ ಕಡೆಯ ರಾಯಭಾರಿಯಾದ ಮೆ॥ ಕ್ರೇನ್ ಎಂಬಾತನನ್ನು ಅಲ್ಲಿಂದ ವಾಪಸು ಕರೆಸಿಕೊಂಡು, ಆ ಕರಾರಿನಲ್ಲಿರುವ ೩ನೇ, ೩ನೇ ಕಲಮುಗಳನ್ನು ತಾವು ಒಪ್ಪುವದಿಲ್ಲವೆಂದು ತಿಳಿಸಿರುತ್ತಾರೆ.

ಜರ್ಮನಿಯ ಕಡೆ [illegible]ನಾದ ಎ. ಆಸೋಕ ಬೋಯನ್ನರ್ ಎಂಬಾತನು ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಲ್ಲಿ ಈಗ ವಾಸಮಾಡಿಕೊಂಡಿರುತ್ತಾನೆ. ಈತನು ತನ್ನ ಸ್ವಂತ ಖರ್ಚಿನಿಂದ ಅಂದಾಜು ೧ ಲಕ್ಷದ ೮೦ ಸಾವಿರ ರೂಪಾಯಿ ಮುಟ್ಟಿಸಿ ಅಂತರಿಕ್ಷದಲ್ಲಿ ಸಂಚಾರ ಮಾಡುವಂಥಾ ಒಂದು ಭಾರೀ ವಿಮಾನವನ್ನು ತಯಾರು ಮಾಡುವನಂತೆ. ಅದರಲ್ಲಿ ೨೦೦ ಜನರು ಏಕಕಾಲದಲ್ಲಿ ಕುಳಿತು ಎಲ್ಲಿಯೂ ತಂಗದೆ ೩,೦೦೦ ಮೈಲಿಯ ದೂರ ಗಂಟೆಗೆ ೫೦ ಮೈಲಿಯ ಪ್ರಕಾರ ಸಂಚಾರ ಮಾಡಿಕೊಂಡು ಬರಬಹುದೆಂದೂ ತಿಳಿಸುತ್ತಾನೆ. ಈತನ ಅಭಿಪ್ರಾಯ ಎಷ್ಟರ ಮಟ್ಟಿಗೆ ಸಾರ್ಥಕವಾಗುವುದೋ ಕಾಲಕ್ರಮದಲ್ಲಿ ವ್ಯಕ್ತಪಡುವುದು.

Printed and Published by the Rev H GULLIFORD, Proprietor and Manager, Wesleyan Mission Press, Mysore. 14/10/1909

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸೆ ೧೯೦೯ ನೇ ಇಸವಿ ಅಕ್ಟೋಬರ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೨೧

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಅಕ್ಸೀರವಾದ ಗುಣಕಾರಿಯು [30 34]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಟಲು ಗಂಟು, ಗಂಟ್ಲು ನೋವು ಅಧಾಶೀಂಗವಾಯು, ಎದೆನೋವು, ಘಾಯ, ಜಡಿಮು, ಇತ್ಯಾದಿ

ಇದರ ವಿಷಯ [illegible] ಸರ್ಟಿಫಿಕೆಟುಗಳು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ವಾಸಿಯಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು [illegible] ೨ ಡಬ್ಬಿಗಳಿಗೆ ೪ ೦ ೦

ಆಸ್ತಾಮಿಶ್ರಣ	೨ ೦ ೧
ಚೀಳು ಕಡತದ ಮದ್ದು	೦ ೮ ೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦ ೦
ಸುಂದರೀ ತೈಲ—ಮುದ್ದಿ ಜಗಳಿಗೆ	೦ ೮ ೦
ಜುಲಾಬು ವಾತ್ರೆ—ಜುಲಾಬಿಗೆ	೦ ೬-೦
ನೇತ್ರಾಂಜನ—ಮಂದದೃಷ್ಟಿಗೆ	೦ ೪-೦
ಬಜ್ಜೆ ಮುಲಾಮು—ಮಕ್ಕಳ ಬಜ್ಜ ಗ	೦ ೩ ೦
ಕೇಶವರ್ಧನೀ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦ ೮-೦

ದಯವಿಟ್ಟು ಈ ವಿಳಾಸಕ್ಕೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ — "ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯು ನೋಯುತ್ತಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 41

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಯಾಗುತ್ತಿರುವ ಟೋಪಿಗಳ ದಾರಿಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —೧ ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು ೨ ಈ ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾಧಾ ಕೆಂಪು, ಕಪ್ಪು ಬಿಳಿ ಕಾಪಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ಹೆಚ್ಚು ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಕುಸುರಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ,

ಕೊಳ್ಳುವವರು ಟೋಪಿ ಪೂರ್ತಿ ಬೇಕೋ, ಅರ್ಧ ಬೇಕೋ, ಸುತ್ತಿನ ಅಳತೆ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ	ರೂ ೧—೧೪—೦
" " " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್ ವೃತ್ತಾಂತ ಪತ್ರಿಕೆ, ಮೈಸೂರು

ಪುಸ್ತಕಗಳು

70-5

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧ ೮-೦ ಇಂಗ್ಲಿಷ್ ಭಾಷೆಯನ್ನು ಓದಲೂ, ಬರೆಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಬೇಕಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೇ ೧ ೨ ತಿಂಗಳೊಳಗಾಗಿ ತಿಳಿಯಬಹುದು ಕಲಿಸುವ ಉತ್ತಮಪುಸ್ತಕವಿದು ಕ್ರಯ ೧ ೮ ೦

ಸಿ ರಾಮಾಚಾರ್ಯ ವಿಳಾಸ —ಬಿ ಕೆ ಮೂರ್ತಿ ಕಂಪೆನಿ

ನಂ ೧೮ ಬಾಡಿಗೆ ಬಿಲ್ಡಿಂಗ್ ಸಿದ್ದಿಕಟ್ಟೆ ಲಕ್ಷ್ಮೀ ಪ್ರೆಸ್ಸು

ಬೆಂಗಳೂರು ಸಿಟಿ

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳು ಉಳಿದಿವೆ [illegible] ಬೇಗ ಬರೆದು ತರಿಸಿಕೊಳ್ಳಿರಿ ಆರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—[illegible]—೦ ೧ನೇ ಭಾಗ [illegible] ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ನೇ ಭಾಗದ ಪುಸ್ತಕವಿದು ಕ್ರಯ ೧—[illegible]—೦ ಗೀತಾಮೃತ ಮಹೋದಧಿ ಕ್ರಯ [illegible]

ವಿಳಾಸ —ಮ್ಯಾನೇಜರ್

ಕರ್ನಾಟಕ ಪುಸ್ತಕ ಶಾಲೆ

ಲಕ್ಷ್ಮೀ ಪ್ರೆಸ್ಸ್

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ !!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ — (19೦ ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—[illegible]
(80 ಪೇಜು)	0—1—0
(110 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10—12]

ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪ್ಪೋ, ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಪ್ಲೇಗಿನ ಔಷಧ

28-36

ಕೊಳ್ಳೇಗಾಲದ ಪ್ರಾಂತ್ಯದಲ್ಲಿ ಮೊದಲು ಪ್ಲೇಗ್ ರೋಗವು ವ್ಯಾಪಿಸಿದ್ದಾಗ ಈ ಲಕ್ಷ್ಮೀವಿಲಾಸ ರಸವು ಕಂಡುಹಿಡಿಯಲ್ಪಟ್ಟು ಉಪಯೋಗಿಸಲಾಗಿ ಪ್ರತಿಯೊಬ್ಬ ಪ್ಲೇಗು ರೋಗಿಗೂ ಗುಣವಾಗಿರುತ್ತದೆ ಈವರೆಗೆ ಸಾವಿರಾರು ಜನಗಳು ಗುಣ ಹೊಂದಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುತ್ತಾರೆ—ಅವುಗಳನ್ನು ವಿವರಿಸಲು ಸ್ಥಳ ಸಂಕೋಚದಿಂದ ಸಾಧ್ಯವಿಲ್ಲದಿದೆ

ಪ್ಲೇಗು ಊರೊಳಗಿರುವಾಗ ಜ್ವರವು ಕಾಣಿಸಿಕೊಂಡ (ಯಂತಹ ಜ್ವರವೇ ಆಗಲಿ) ಕೂಡಲೇ ಈ ಲಕ್ಷ್ಮೀವಿಲಾಸ ರಸವನ್ನು ಮತ್ತು ಶ್ರೀನಿವಾಸ ತೈಲವನ್ನು ಉಪಯೋಗಿಸಿದಲ್ಲಿ ಪ್ರತಿಯೊಬ್ಬರಿಗೂ ಖಂಡಿತ ಗುಣವಾಗುತ್ತದೆ ಆದ್ದರಿಂದ ಪ್ಲೇಗು ಹರಡಿರುವ ಸ್ಥಳದಲ್ಲಿ ವಾಸವಾಗತಕ್ಕ ಪ್ರತಿಯೊಬ್ಬರೂ ಮುಂಚಿತವಾಗಿಯೇ ತರಿಸಿಟ್ಟುಕೊಂಡಿರುವುದು ಒಳ್ಳೇದು ಔಷಧದ ಜೊತೆಯಲ್ಲಿ ಅನುಪಾನ ಪತ್ರವಿರುವುದು

ಪ್ಲೇಗುಹರ ಲಕ್ಷ್ಮೀವಿಲಾಸ ರಸ (ಹೊಟ್ಟೆಗೆ ತೆಗೆದುಕೊಳ್ಳತಕ್ಕದ್ದು)	ರೂ ೧—೨—೦
ಶ್ರೀನಿವಾಸ ತೈಲ (ಗೆಡ್ಡೆ ಮುಂತಾದ್ದಕ್ಕೆ)	ರೂ ೦—೮—೦

ಲೋಕೋಪಯೋಗಿ ಕಸ್ತೂರಿ ಮಾತ್ರೆ ಐದು ತೊಲೆಗೆ ಒಂದು ಹೆಚ್ಚು } ಪೋಸ್ಟೇಜು ಬೇರೆ

ವಿಳಾಸ —ಎಸ್ ಎಸ್ ಆರ್ ವೈದ್ಯಶಾಲೆ, ಮೈಸೂರು

ಭೀಮಮಹಿಮಾದರ್ಶ.

72-2

THE LIFE OF BHEEMASENA

With a short History of Mahabharata

ಈ ಹೊಸಪುಸ್ತಕದಲ್ಲಿ ಮಹಾಭಾರತ ಕಥೆಯೆಲ್ಲಾ ಸಂಕ್ಷೇಪವಾಗಿಯೂ, ಭೀಮಸೇನನ ಚರಿತ್ರೆಯು ಸಮಗ್ರವಾಗಿಯೂ, ಹೇಳಲ್ಪಟ್ಟಿದೆ ಭೀಮನ ಸ್ವಭಾವಪ್ರದರ್ಶಕಗಳಾದ ಅನೇಕ ಉಪಾಖ್ಯಾನಗಳನ್ನೊಳಗೊಂಡು, ಸುಲಭ ಶೈಲಿಯಿಂದ ಕೂಡಿ, ಸಂಗತಿಗಳಿಂದ ಕೂಡಿದವಾಗಿಯೂ, ಪುಣ್ಯಪ್ರದವಾಗಿಯೂ, ಮನೋಹರವಾಗಿಯೂ, ಇರುವ ಈ ಇತಿಹಾಸವು ಸರ್ವದಾ ಜನಾಂಗಗಳಾದ ಎಲ್ಲರಿಗೂ ಅತ್ಯಂತೋಪಯುಕ್ತವಾದುದು ಹಳಗನ್ನಡ (Prose) ವಚನಗ್ರಂಥ ಸ್ಫುಟಾಕ್ಷರ, ಒಳ್ಳೆಯ ಕಾಗದ, ಡೆಮ್ಮಿ 170 ಪುಟಗಳು, ಸ್ಟಿಫ್ ಬೈಂಡು, ಬೆಲೆ ಪ್ರತಿ 1 ಕ್ಕೆ 10 ಆಣೆ ವಿ. ಪಿ. 12 ಆಣೆ ಆಂಗ್ಲೇಯ ಚರಿತ್ರಸಂಗ್ರಹ ೪ ಆಣೆ ತತ್ವದರ್ಪಣ 1 ಆಣೆ ಚಾಮರಾಜೇಂದ್ರ ರಾಜ್ಯಾಭಿಷೇಕ 12 ಆಣೆ

ವಿಳಾಸ —ಮೈಸೂರಿನಲ್ಲಿ—ದಿ ಜನರಲ್ ಏಜನ್ಸಿ, ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಅರಸುಗಳ ಬೋರ್ಡಿಂಗ್ ಸ್ಕೂಲ್ ಮಾಸ್ಟರ್ ಎಂ ಪಿ ಚಂದ್ರಶೇಖರಶಾಸ್ತ್ರಿಗಳು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 22

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಬುಕ್ಕಿ[illegible]ದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಜನಗಳು [illegible] ವಿಶೇಷ ಪ್ರೀತಿಯಿಂದಲೂ ಎಲ್ಲರೂ [illegible] ಈ ಔಷಧವನ್ನು ಒಂದು ಡಾಕ್ಟರ್ ತರಿಸಿ ಪರೀಕ್ಷಿಸಿ ನೋಡಿದವರೆಲ್ಲಾ ಅದನ್ನು [illegible] ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ರೋಗದ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ನಾಶಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಾಪಸ್ಸಾಗುವುದು ವ್ಯಾಪಾರಸ್ಥರಿಗೆ ಮತ್ತು ಏಜಂಟರಿಗೆ [illegible] ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟ್ ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮೈಸೂರು ಏಜಂಟರ ವಿಳಾಸ—ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ಮೈಸೂರು ಮತ್ತು

ಎಸ್. ಕ್ಲೆಮೆಂಟ್,

೩೨೨, ವೇಪೇರಿ ಹೈರೋಡ್, ವೇಪೇರಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನುನೋವು, ಛಳುಕು, ನಡೆಯಲ್ಲದ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ, ಬಳಲಿಕೆ; ಎದೆ ಕಲ್ಲೆನಿಸುವುದು; ತಲೆನೋವು; ಗಾಬರಿ; ಕಣ್ಣು ಮಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿದ್ರಾಭಂಗ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ, ಮೂತ್ರೇಂದ್ರಿಯಗಳನ್ನೂ ಶರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [67-8]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೨-೨-೦, ಅಥವಾ ೬ ಬುಡ್ಡಿಗಳಿಗೆ ರೂ. ೧೦-೮-೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೨೧, ಪಿ. ೬ ಬಾಕ್ಸ್ ಬೊಂಬಾಯಿ.—ಇವರಲ್ಲಿ ದೊರೆಯುವುದು

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು

4-42



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಪಟ್ಟಾದ ಕಟ್ಟಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದು ಹನಿಕಲ್ಲ

ಇದು ಎಲ್ಲಿಲ್ಲೂ ಬಿಕರಿಯಾಗುತ್ತದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಸೆಪ್ಟ್ ೧೯೦೬ ರಿಂದ ೧೯೦೭ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-42

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಶಕ್ತತೆಗಳು, ನಾನಾ ತರದ ಕೆಮ್ಮಲು,
ಸಕಲವಿಧ ಕ್ಷಯಗಳು, ಮಾಂಸಖಂಡಗಳ ಕ್ಷೀಣತೆ,
ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸಂಜೀವಿನೀ ಔಷಧಾಲಯ, ಮೈಸೂರು.

28 37

ಎಂ. ಎಸ್ ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷಯ, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆಗಡಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಸ್ಥೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ.

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು:—ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಬಾಧೆ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಅರ್ಥಾತ್ ಲೇಬಲ್ ಇಟ್ಟು ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ಕೇಶನಿಮ್ಮನ ಲಿಕ್ವಿಡ್.

74-2

೩ ಆಣೆ ಪೋಸ್ಟೇಜು ಸ್ಟಾಂಪನ್ನು ಕಳುಹಿಸಿದರೆ ಅನುಭವ ನೋಡುವವಕ್ಕೆ ಸಣ್ಣ ಚೂರ್ಣವನ್ನು ಕಳುಹಿಸುತ್ತೇವೆ ಇದನ್ನು ತಲೆಗೆ ಹಚ್ಚಿಕೊಳ್ಳುವದರಿಂದ ಬೆವರು ದೋಷವನ್ನು ಹೋಗಲಾಡಿಸಿ, ತಲೆಯ ಮೆದುಳನ್ನು ವೃದ್ಧಿಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುವದು ತಲೆಯಲ್ಲಿ ಹೇನು ಬದ್ದಿದ್ದರೆ ಕೂಡಲೆ ಪಲಾಯನಗೈಯುವವು ತಲೆಯಲ್ಲಿ ಹುಣ್ಣು ಕಟಿಗು ಆಗಿದ್ದರೆ ವಾಸಿಯಾಗುವದು ಕೇಶಗಳು ಮೃದುವಾಗಿ ನಿರ್ಮಲವಾಗುವವು ದೇಹಕ್ಕೆ ಹಚ್ಚಿಕೊಂಡರೆ ಹುರುಕು, ತುರಿ, ಒಣತುರಿ ನಾಶವಾಗುವವು ಕೂಡಲೇ ತರಿಸಿ ಅನುಭವ ನೋಡಿರಿ ಉಪಯೋಗಿಸುವ ಕ್ರಮವನ್ನು ಚೂರ್ಣದ ಸಂಗಡ ಕಳುಹಿಸುತ್ತೇವೆ ಡಬ್ಬಿ ೧ಕ್ಕೆ ಚಾರ್ಜು ರೂ ೧-೦-೨.

ವಿಳಾಸ.—ವಿ ಮನಾ ಪಾಲಪ್ಪದೇವರ ಮರಿದ ಸಿದ್ಧಾಂತಿಗಳು,
ಸರಪನಹಳ್ಳಿ, ಬಳ್ಳಾರಿ ಜಿಲ್ಲಾ.

ಜ್ವರಹರಿ. 18 38

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಸಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದ ಬರೆದಿದಾರೆ.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೯ ರೂ; ರೂ ೩—೧೨ ೮, ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಬಿಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅದಿಲ್ಲದಿದ್ದರೆ ಕೆಳಗಿನ ವಿಳಾಸದಲ್ಲಿ ವಿಶೇಷ —

ತೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಶ್ವೀಜ ಶುದ್ಧ ಅಷ್ಟಮಿ ಶುಕ್ರವಾರದಿಂದ ಆಶ್ವೀಜ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಅಕ್ಟೋಬರ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ತುಲಾ ಮಾಸ
22	ಶುಕ್ರ *	ಅಷ್ಟಮಿ	29-50	ಶ್ರವಣ	22-48	6
23	ಶನಿವಾರ ‖	ನವಮಿ	26-30	ಧ	2-12	7
24	ರವಿವಾರ ‡	ದಶಮಿ	22-30	ಶ	18-58	8
25	ಚಂದ್ರ	ಏಕಾದಶಿ	17-37	ಪೂ	17-57	9
26	ಕುಜ †	ದ್ವಾದಶಿ	12-10	ಪೂಭಾ	12-18	10
27	ಬುಧ	ತ್ರಯೋದಶಿ	6-16	ಉಭಾ	6-18	11
28	ಗುರು	ಚತುರ್ದಶಿ	2-31	ರೇವತಿ	51-58	12

* ದುರ್ಗಾಷ್ಟಮಿ, ಮಹಾಷ್ಟಮಿ, ದಗ್ಧಯೋಗ, ‖ ಹಯಗ್ರೀವ ಪೂಜಾ, ಮಹಾನವಮಿ, ಆಯುಧಗಜಾಶ್ವ ಪೂಜಾ, ಅಮಲ ದೇವತಾ ಪೂಜಾ ‡ ತಿಥಿದ್ವಯಂ, ವಿಜಯದಶಮಿ, ಶಮೀಪೂಜಾ, ರಾಜ್ಞಾಂಸೀಮೋಲ್ಲಂಘನಂ ದ್ವಾದಶೀ ತಿಥಿ, ಮಹಾದ್ವಾದಶಿ, ದಗ್ಧಯೋಗ, ಸರ್ವತ್ರೈಕಾದಶಿ † ಪ್ರದೋಷ, ಪಟ್ಟದಲ್ಲಿ ಚಾಮರಾಜಮುಡಿ ಉತ್ಸವ.

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ ಕ್ಕೆ	ರೂ	೧೫-೦-೦	೧೭-೦-೦
ಕೆಂಬೂತಿ ಅಕ್ಕಿ ಅವಲ್		೧೪-೮-೦	೧೪-೦-೦
,, ದುಯ್ಯಂ		೧೪-೦-೦	೧೩-೮-೦
ಜಾಪಾನಿ ಅಕ್ಕಿ		೧೪-೦-೦	೧೫-೦-೦
ಸಣ್ಣಕ್ಕಿ ಅವಲ್		೧೭-೦-೦	೧೭-೦-೦
,, ದುಯ್ಯಂ		೧೬-೦-೦	೧೫-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೭-೮-೦	೧೬-೦-೦
,, ದುಯ್ಯಂ		೧೫-೦-೦	೧೫-೦-೦
ಹೈಕ್ ರಾಗಿ ಪಲ್ಲ ೧ಕ್ಕೆ		೯-೦-೦	೮-೪-೦
ಕಾಡ್ರಾಗಿ		೮-೧೨-೦	೮-೦-೦
ಜೋಳ		೭-೧೨-೦	೮-೦-೦
ಹಲಸಂದೆ ಪಲ್ಲ ೧ಕ್ಕೆ		೧೨-೦-೦	೧೧-೮-೦
ಬೀಳೀ ಅವರೆ		೧೩-೮-೦	೧೫-೦-೦
ಹೆಸರು		೧೩-೦-೦	೧೧-೮-೦
ಉದ್ದು		೧೪-೪-೦	೧೩-೪-೦
ಕಡಲೆ		೧೪-೬-೦	೧೧-೦-೦
ಎಳ್ಳು ಸೇ. ೧೨೭ ಕ್ಕೆ		೧೫-೦-೦	೧೩-೦-೦
ಹುರುಳಿ		೧೩-೦-೦	೧೨-೮-೦
ಹರಳು ೧೨೭ ಸೇರಿಗೆ		೧೪-೦-೦	೧೦-೦-೬
ಸೀಗೇಕಾಯಿ ಮಣ ೧ಕ್ಕೆ		೨-೮-೦	೨-೨-೦
ಮೆಣಸಿನಕಾಯಿ		೬-೦-೦	೪-೮-೦
,, ದುಯ್ಯಂ		೫-೮-೦	೪-೦-೦
ಬೆಲ್ಲ ದೊಡ್ಡ ಅಚ್ಚು		೮-೪-೦	ಮ ೨-೪-೦
ಒಳ್ಳೆಣ್ಣೆ ಮಣ ೧ಕ್ಕೆ		೫-೮-೦	೪-೨-೦
ಹರಳೆಣ್ಣೆ ,,		೫-೮-೦	೪-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ		೮-೭-೦	೯-೦-೦
ಉಪ್ಪು ,,		೬-೮-೦	೫-೧೦-೦
ಹುಣಸೇ ಹಣ್ಣು		೧-೧೦-೦	೧-೧೦-೦
,, ಹಳೇದು		೧-೮-೦	೧-೮-೦
ಕುಸ್ಬೆ ಮಣ ೧ಕ್ಕೆ		೧೬-೮-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೨-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ		೫-೦-೦	೫-೦-೦
ಅಳಲೇಕಾಯಿ ಮಣ ೧ಕ್ಕೆ		೦-೮-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧-೦-೦	೦-೧೨-೦
ಚಿನ್ನ (ಸಾವರಿನ್) ಕೆಂಪು		೧೫-೯-೦	೧೫-೭-೦
,, ,, ಪವನು		೧೬-೦-೦	೧೭-೧೧-೦
,, ,, ಗಟ್ಟಿ ತೊಲ ೧ಕ್ಕೆ		೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪-೦	೬೩-೮-೦

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

241

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಳ್ಳಿ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿದ ಕೂಡಲೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

17—1—1909 ರಿಂದ 24—9—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	0	0
ಮೈಸೂರು	140	108	0	0
ಬೆಂಗಳೂರು ಡಿಸ್ಟ್ರಿಕ್ಟು	51	39	69	62
ಮೈಸೂರು ,,	91	68	0	0
ಕೋಲಾರ್ ,,	0	0	10	6
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	1	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	13	8	0	0
ಶಿವಮೊಗ್ಗ	1	0	0	0
ಜುಮ್ಲಾ	297	225	79	68

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಅಕ್ಟೋಬರ್ ತಾ 2 ಕ್ಕೆ ಮುಗಿದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ: ಗಂಡಾಳು	ಹೆಣ್ಣಾಳು	ಮಕ್ಕಳು	ಕೊಟ್ಟ ಕೂಲಿ ರೂ	ಧರ್ಮಕ್ಕೆ ಹಾಯ ಪಡೆದ ಜನರು
ಬೆಂಗಳೂರು	30	21		14	17
ಕೋಲಾರ	352	163	25	1,275	...
ತುಮಕೂರು	5	32	19	123	..
ಮೈಸೂರು					
ಹಾಸನ	41	91	2	175	
ಶಿವಮೊಗ್ಗ					
ಕಡೂರು				103	
ಚಿತ್ರದುರ್ಗ	23	25		51	
ಮಾರಿಕಣಿವೆ ಸ್ಯಾಂಕ್ಷನ್	144	205	7	424	.
ಒಟ್ಟು	675	531	53	2,164	47

ಆರೋಗ್ಯ ವಿಚಾರವಾದ ಪ್ರದರ್ಶನವು

ಶ್ರೀಮತ್ ಯುವರಾಜರವರು ಪ್ರತಿಷ್ಠೆ ಮಾಡಿದ್ದು

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿರುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಯ ಎರಡನೇ ಅಂತಸ್ತಿನಲ್ಲಿ ಸಂಸ್ಥಾನದ ಆರೋಗ್ಯ ವಿಚಾರವನ್ನು ಕ್ರಮಪಡಿಸುವ ಇಲಾಖೆಯವರು ಆರೋಗ್ಯ ವಿಚಾರವಾದ ವಸ್ತುಗಳನ್ನು ಇಟ್ಟು ಪ್ರದರ್ಶನ ಮಾಡಿದ್ದಾರೆ. ಈ ಪ್ರದರ್ಶನ ಶಾಲೆಯನ್ನು ಕಳೆದ ಶನಿವಾರ ಬೆಳಿಗ್ಗೆ ೧೧ ಗಂಟೆಗೆ ಶ್ರೀಮತ್ ಯುವರಾಜರಾದ ಶ್ರೀ ಕಂಠೀರವ ನರಸರಾಜ ಒಡೆಯರ್ ಬಹದೂರ್ ರವರು ದಯಮಾಡಿ ಉಪನ್ಯಾಸ ಪೂರ್ವಕವಾಗಿ ಪ್ರತಿಷ್ಠೆ ಮಾಡಿದರು. ಈ ಸಭೆಗೆ ದಿವಾನ್‌ರು, ಕೌನ್ಸಿಲ್ ಮೆಂಬರುಗಳು, ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರು, ರಾಜಬಂಧುಗಳು, ಅಧಿಕಾರಿಗಳು, ಪ್ರಮುಖರಾದ ದೊಡ್ಡ ಮನುಷ್ಯರೂ ಮೊದಲಾದವರೆಲ್ಲ ದಯಮಾಡಿ ಹಾಜರಾಗಿದ್ದರು. ಶ್ರೀಮತ್ ಯುವರಾಜರವರು ಸರ್ದಾರ್ ಗೋಪಾಲರಾಜೆ ಅರಸಿನವರ ಸಹಿತ ೧೧ ಗಂಟೆಗೆ ಸಾರೋಟಿನಲ್ಲಿ ದಯಮಾಡಿದರು. ಪೊಲೀಸ್ ಸಿಪಾಯಿಗಳು ಬ್ಯಾಂಡಿನವರು ವಾದ್ಯ ಮಾಡಿ ಅವರ ಆಗಮನವನ್ನು ಸೂಚಿಸಿದರು. ದಿವಾನ್‌ರೇ ಮೊದಲಾದ ಅಧಿಕಾರಿಗಳೂ, ಸೀನಿಯರ್ ಸರ್ಜನ್‌ರವರೂ, ಸರ್ದಾರ್ ಕಾಂತರಾಜೆ ಅರಸಿನವರೂ ಹೆಬ್ಬಾಗಿಲಲ್ಲಿ ಯುವರಾಜರವರನ್ನು ಎದುರುಗೊಂಡು ಕರೆದು ತಂದು ಸಿಂಹಾಸನದಲ್ಲಿ ಕೂಡಿಸಿದರು. ಸಭಿಕರೆಲ್ಲ ಕುಳಿತುಕೊಂಡ ಬಳಿಕ ಸಂಸ್ಥಾನದ ಸೀನಿಯರ್ ಸರ್ಜನ್‌ರೂ ಸ್ಯಾನಿಟರಿ ಕಮಿಷನರ್‌ರೂ ಆದ ಲೆಫ್ಟಿನೆಂಟ್ ಕರ್ನಲ್ ಟಿ. ಸ್ಮಿತ್‌ರವರು ಎದ್ದು ಶ್ರೀಮತ್ ಯುವರಾಜರವರನ್ನೂ ಸಭಾಸದರನ್ನೂ ಕುರಿತು ಕೆಲವು ಮಾತುಗಳನ್ನು ಹೇಳಿದರು. ಅವರ ಸಾರ ಏನೆಂದರೆ,—

ತಾವು ದಯವಿಟ್ಟು ರಾಜಧಾನಿಯಲ್ಲಿ ನಡೆಯುವ ಈ ಮೊದಲನೆಯ ಆರೋಗ್ಯ ವಿಚಾರವಾದ ವಸ್ತುಪ್ರದರ್ಶನವನ್ನು ಪ್ರಾರಂಭ ಮಾಡುವುದಕ್ಕೆ ಒಪ್ಪಿಕೊಂಡು ದಯಮಾಡಿರುವುದಕ್ಕಾಗಿ ನಾವೆಲ್ಲಾ ಕೃತಜ್ಞರಾಗಿರುತ್ತೇವೆ. ತಮ್ಮ ಆಗಮನದಿಂದ ಈ ಪ್ರದರ್ಶನಕ್ಕೆ ವಿಶೇಷವಾದ ಪ್ರಾಶಸ್ತ್ಯವುಂಟಾಗಿರುವುದು. ತಮ್ಮ ಸಹೋದರರಾಗಿ ನಮ್ಮ ಪ್ರೀತಿಪಾತ್ರರಾದ ಮಹಾರಾಜರವರ ಪ್ರಜೆಗಳ ಆರೋಗ್ಯಾಭಿವೃದ್ಧಿಯನ್ನು ಬಯಸಿ, ಅವರು ಸುಕ್ಷೇಮದಿಂದ ಅಭಿವೃದ್ಧಿ ಹೊಂದಲಿ ಎಂಬ ತಮ್ಮ ಅಭಿಲಾಷೆಯನ್ನು ತಾವು ಕಾರ್ಯತಃ ಈ ದಿನ ಪ್ರಕಾಶಪಡಿಸಿರುತ್ತೀರಿ. ಆರೋಗ್ಯಭಾಗ್ಯವೇ ಯಥಾರ್ಥವಾದ ಭಾಗ್ಯವು. ಇದು ಇಲ್ಲದಿದ್ದರೆ ಯಾರಿಗೇನು ಇನ್ನೇನಿದ್ದರೂ ಪ್ರಯೋಜನವೇನು? ಈ ಪ್ರದರ್ಶನವನ್ನು ಏರ್ಪಾಡು ಮಾಡಿರುವ ಡಾಕ್ಟರ್ ಪಲ್ಪುರವರು ಪ್ರದರ್ಶನವನ್ನೆಲ್ಲಾ ಶ್ರೇಷ್ಠವಾದ ಮೂಲವಾಕ್ಯಗಳಿಂದ ತುಂಬಿಸಿರುತ್ತಾರೆ. ಅವುಗಳನ್ನೆಲ್ಲಾ ತಾವು ದಯಮಾಡಿ ಪರಾಂಬರಿಸಿದರೆ ಸಕಲ ವಿಷಯಗಳಿಗೂ ಆರೋಗ್ಯವೇ ಪ್ರಧಾನವಾದದ್ದೆಂಬುವುದು ವೇದ್ಯವಾಗುತ್ತದೆ. ಅಲ್ಲದೆ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನಕ್ಕಿಂತ ಈ ಪ್ರದರ್ಶನವನ್ನು ಮೊದಲು ಪ್ರಾರಂಭಿಸಿರುತ್ತೇವೆ. ಇದೇ ಸರಿಯಾದ ಕ್ರಮವು. ಆರೋಗ್ಯವನ್ನು ಮೊದಲು ಕಾಪಾಡಿಕೊಂಡು ಅಭಿವೃದ್ಧಿಪಡಿಸಿಕೊಂಡರೆ ಕಸಬುಗಳನ್ನೂ ವ್ಯವಸಾಯಾದಿ ಕಾರ್ಯಗಳನ್ನೂ ಏಳಿಗೆಗೆ ತರುವುದು ಸುಲಭ.

ಇಂಥಾ ಆರೋಗ್ಯ ವಿಷಯಗಳ ಪ್ರದರ್ಶನವನ್ನು ೨-೩ ವರುಷಗಳಿಗೊಂದಾವರ್ತಿ ನಡಿಸಿದರೆ ಸಾಕು ಎಂದು ನಾವೆಲ್ಲಾ ತಿಳಿದುಕೊಂಡಿದ್ದೆವು. ಆದರೆ ಇದರ ಪ್ರಯೋಜನಾಂಶವು ಈ ಸಂಸ್ಥಾನದಲ್ಲಿರುವ ಶ್ರೀಮನ್ಮಹಾರಾಜರವರಿಗೆ ಗೊತ್ತಾಗಿರೋಣದರಿಂದ ಅದನ್ನು ಪ್ರತಿ ವರುಷವೂ ನಡಿಸಬೇಕೆಂದು ಅವರೇ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ. ಈ ರೀತಿ ಅವರೇ ನಮಗೆ ಬೆಂಬಲವಾಗಿ ನಿಂತು ನಮ್ಮನ್ನು ಪ್ರೇರಿಸುತ್ತಿರೋಣದರಿಂದ ಈ ಪ್ರದರ್ಶನಕ್ಕೆ ತುಂಬಾ ಪ್ರೋತ್ಸಾಹವಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಈ ರೀತಿ ನಡೆಯುವುದಿಲ್ಲ. ಉಚ್ಚಸ್ಥಾನಗಳಲ್ಲಿರತಕ್ಕವರು ಆರೋಗ್ಯಾಭಿವೃದ್ಧಿಯ ವಿಚಾರಗಳಲ್ಲಿ ಮುಂದಾಳುಗಳಾಗಿ ಬಂದು ಪ್ರೋತ್ಸಾಹ ಪಡಿಸುವುದು ಅಪರೂಪ. ವೈದ್ಯ ಮತ್ತು ಸ್ಯಾನಿಟರಿ ಇಲಾಖೆಗಳು ಬರೀ ಖರ್ಚುಬಾಬಿನ ಇಲಾಖೆಗಳೆಂದು ಹೆಸರಾಗಿವೆ. ಈ ಇಲಾಖೆಗಳಿಗೆ ಹಣ ಬೇಕೆಂದರೆ ಖಜಾನಾ ಛಕ್ತಿಗಳು ಸ್ಯಾಂಕ್ಷನ್ ಮಾಡಲು ಮುಖವನ್ನು ಗಂಟು ಹಾಕಿಕೊಳ್ಳುವರು. ಈಗಲಾದರೋ ಗವರ್ನ್‌ಮೆಂಟಿನವರು ಕಣ್ಣು ತೆರೆದು ರೋಗಗಳನ್ನು ಅಡಗಿಸುವುದಕ್ಕೂ ಆರೋಗ್ಯಜನಕವಾದ ಕಾರ್ಯಗಳನ್ನು ಮಾಡಿಸುವುದಕ್ಕೂ ಹೆಚ್ಚು ಹೆಚ್ಚಾಗಿ ದ್ರವ್ಯವನ್ನು ವಿನಿಯೋಗಿಸಲಾರಂಭಿಸಿದಾರೆ. ರೋಗಗಳ ಮೂಲೋತ್ಪಾಟನೆಗೆ ಮಹಾ ಮಹಾ ಡಾಕ್ಟರುಗಳ ಸಮಾಜಗಳನ್ನು ನಡಿಸುವಂತೆ ಮಾಡಿದಾರೆ. ಮಲೇರಿಯವನ್ನು ಅಡಗಿಸುವುದಕ್ಕೆ ಸಿಮ್ಲಾ ಪಟ್ಟಣದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಈಗ ನಡಿಸುತ್ತಿರುವ ಡಾಕ್ಟರುಗಳ ಕೂಟವು ಒಂದು ದೃಷ್ಟಾಂತವಾಗಿರುತ್ತದೆ. ಹೀಗೆಯೇ ವ್ಯವಸಾಯದ ಇಲಾಖೆಯನ್ನೂ ಖರ್ಚುಬಾಬಿನ ಇಲಾಖೆಯೆಂದೇ ಹೇಳಬಹುದು. ಹಣವು ಹೆಚ್ಚಾಗಿ ವಿನಿಯೋಗವಾಗುವುದಲ್ಲ ಎಂದು ಚಿಂತಿಸದೆ ಫಲಪರಿಣಾಮಗಳಿಂದ ಈ ಇಲಾಖೆಗಳ ಪ್ರಯೋಜನವನ್ನು ತಿಳಿಯಬೇಕಾಗಿದೆ. ಧನವ ಕೇವಲ ಸಂಪಾದನೆ ಮಾಡಬೇಕೆಂದು ಹೊರಟರೆ ಮೊದಲು ಆರೋಗ್ಯ ಬೇಕು. ಪ್ರತಿ ಒಂದಕ್ಕೂ ಇದು ಅಸ್ತಿಭಾರವಾಗಿರುತ್ತದೆ. ಸಕಲ ವಿಧವಾದ ಧರ್ಮಾರ್ಥಕಾಮಗಳಿಗೂ ಆರೋಗ್ಯವೇ ಮೂಲ ಭೂತವಾದದ್ದು. ಪ್ರದರ್ಶನಕ್ಕೆ ಹೋಗಿ ಅಲ್ಲಿರುವ ವಿಷಯಗಳನ್ನು ಚನ್ನಾಗಿ ಗ್ರಹಿಸಿಕೊಂಡು ಆ ರೀತಿ ಆಚರಿಸುತ್ತಾ ಬಂದರೆ ಅದರಿಂದ ನಿಜವಾದ ಪ್ರಯೋಜನವುಂಟು. ಇಂಥಾ ಪ್ರಯೋಜನವನ್ನು ಮೈಸೂರು ಸೀಮೆಯ ಪ್ರಜೆಗಳು ಪಡೆದು ಸುಖಜೀವಿಗಳಾಗಲಿ ಎಂಬ ಘನತರವಾದ ಉದ್ದೇಶದಿಂದ ಶ್ರೀಮನ್ಮಹಾರಾಜರವರು ಈ ಪ್ರದರ್ಶನವನ್ನು ಶಾಶ್ವತವಾದ ಈ ಕಟ್ಟಡದಲ್ಲಿ ಪ್ರಾರಂಭ ಮಾಡಿಸಿ ಯಾವಾಗಲೂ ಅದನ್ನು ತೆರೆದಿಡುವ ಏರ್ಪಾಡು ಮಾಡಿಸಿರುತ್ತಾರೆ. ಇದನ್ನು ನಾಲ್ಕಾರು ವಾರ ನಡಿಸಿ ಮುಚ್ಚಿ ಬಿಡುವುದಿಲ್ಲ. ಎಂದೆ ಬಿಗೂ ಇಷ್ಟೇ ಇರುವರು. ಪ್ರಜೆಗಳು ಸರ್ವದಾ ಇಂಥಾ ಪ್ರದರ್ಶನವನ್ನು ನೋಡುತ್ತಾ ಇದ್ದರೆ ಅವರು ತಮ್ಮಲ್ಲಿರುವ ಅನಾರೋಗ್ಯಕಾರಕವಾದ ಅಭ್ಯಾಸಗಳನ್ನೂ ಆಚರಣೆಗಳನ್ನೂ ಆಧಿವ್ಯಾಧಿಗಳನ್ನೂ ಕ್ರಮೇಣ ದಿನೇ ದಿನೇ ಕ್ಷೀಣವಾದ ವೃತ್ತಿಗಳನ್ನು ಪಡೆದು ಯಶೋವಂತರಾಗುತ್ತಿರುವುದಕ್ಕೆ ಸಂಶಯವಿಲ್ಲ ಎಂಬುದೇ.

ಶ್ರೀಮತ್ ಯುವರಾಜರವರ ಭಾಷಣವು

ತರುವಾಯ ಶ್ರೀಮತ್ ಯುವರಾಜರವರು ತಮ್ಮ ಸ್ಥಾನದಿಂದೆದ್ದು ಪ್ರದರ್ಶನ ಶಾಲೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಮೊದಲು, ಡಾಕ್ಟರ್ ಸ್ಮಿತ್‌ರವರನ್ನೂ ಸಭಾಸದರನ್ನೂ ಕುರಿತು ಕೆಲವು ಮಾತುಗಳನ್ನು ಅಪ್ಪಣೆ ಕೊಡಿಸಿದರು. ಸಭಾಸದರೆಲ್ಲಾ ಎದ್ದು ನಿಂತು ಅವರ ಭಾಷಣವನ್ನು ಕೇಳಿ ಸಂತೋಷಪಟ್ಟರು. ಈ ಭಾಷಣದ ಮುಖ್ಯಾಂಶಗಳೇನೆಂದರೆ—

ಈ ದಿನ ನಾನು ನಿಮ್ಮ ಮುಂದೆ ನಿಂತು ಈ ಆರೋಗ್ಯಾಭಿವರ್ಧಕ ಪ್ರದರ್ಶನವನ್ನು ಪ್ರಾರಂಭ ಮಾಡಲು ತುಂಬಾ ಸಂತೋಷಪಡುತ್ತೇನೆ. ಮತ್ತು ಇಲ್ಲಿ ಈ ಪ್ರದರ್ಶನವು ಶಾಶ್ವತವಾಗಿ ಇಡಲ್ಪಟ್ಟು ನಡಿಸಲ್ಪಡುವುದೆಂದು ತಿಳಿದಾಗ ನನ್ನ ಸಂತೋಷವು ಇನ್ನೂ ಹೆಚ್ಚುವುದು. ಆರೋಗ್ಯ ವಿಷಯಗಳನ್ನು ತಿಳಿಯಪಡಿಸುವುದರಲ್ಲಿ ಇದು ಮಹತ್ವಪೂರ್ಣವಾಗಿದ್ದೀತೆಂದೂ, ಇದರಿಂದಾಗುವ ಪ್ರಯೋಜನಗಳನ್ನು ಸಕಲರೂ ಗ್ರಹಿಸಿ ಅನುಭೋಗಿಸುವರೆಂದೂ ನಂಬುತ್ತೇನೆ. ಇಂಥಾ ಶಾಶ್ವತವಾದ ಏರ್ಪಾಡು ಹಿಂದುಸ್ಥಾನದ ಯಾವ ಪ್ರಾಂತ್ಯದಲ್ಲೂ ಮಾಡಿಲ್ಲ. ನೇಮಿಸಿ ಇದೇ ಮೊದಲನೆಯದೆಂದೂ ತೋರುವುದು. ಪ್ರಜಾ ಆರೋಗ್ಯದ ವಿಚಾರವು ಈಗೀಗ ಎಲ್ಲಾ ಪ್ರದೇಶಗಳಲ್ಲೂ ಜಿಜ್ಞಾಸವಾಗಲು ಆರಂಭವಾಗಿದೆ. ನಮ್ಮ ಸಂಸ್ಥಾನವು ಈ ಭಾಗದಲ್ಲಿ ಹಿಂದೆ ಬೀಳಲಿಲ್ಲವೆಂದು ಸಂತೋಷಪಡುತ್ತೇನೆ.

ಆರೋಗ್ಯ ವಿಚಾರವಾದ ಬುದ್ಧಿಬೋಧನೆಗಳೂ ಆಚಾರಗಳೂ ಈ ದೇಶೀಯರ ಮತಕರ್ಮಗಳಲ್ಲಿ ಸೇರಿಕೊಂಡಿದ್ದರೂ ಪ್ರಜೆಗಳು ಅವುಗಳನ್ನು ಆಚರಣೆಯಲ್ಲಿಟ್ಟುಕೊಳ್ಳದೆ ಬಿಟ್ಟುಬಿಟ್ಟಿರುವರೋ, ಅವರಿಗೆ ದಿನ ದಿನದ ನಡವಳಿಕೆಗಳಲ್ಲಿ ಆಚರಿಸಬೇಕಾದ ಕ್ರಮಗಳನ್ನೂ ಮತ್ತು ಜ್ಞಾಪಕಪಡಿಸಿಕೊಡತಕ್ಕಾಗಿ ಬಂದಿರ ಪ್ರಮುಖ ವಿಶ್ವಾಸಿಕರ ಸರಿ. ಆರೋಗ್ಯ ಸೂತ್ರಗಳನ್ನು ಕ್ರಮವಾಗಿ ಕಲಿಸಿಕೊಡಬೇಕಾಗಿರುವುದು. ಈ ಭಾಗದಲ್ಲಿ ಮೈಸೂರು ಸರ್ಕಾರದ ಆರೋಗ್ಯ ಇಲಾಖೆಯೊಂದು ಏರ್ಪಾಡಾಗಿರುವುದೂ, ಈ ಇಲಾಖೆಯವರು ಆದಷ್ಟಾಗಿ ಸಾಹಸ ಪಡುತ್ತಿರುವುದನ್ನೂ ನೋಡಿ ನಾನು ಸಂತೋಷಪಡುತ್ತೇನೆ. ಆರೋಗ್ಯ ಸೂತ್ರಗಳ ಓದಾದಗಳನ್ನು ಪ್ರಜೆಗಳಿಗೆ ಹೆಚ್ಚಾಗಿ ಕಲಿಸುವುದಕ್ಕೆ ಆವಶ್ಯಕವಾಗಿದೆ. ಆದರೆ ಈಗ ಪ್ರಜೆಗಳ ಆಲೋಚನೆಯಲ್ಲಿರುವ ಕ್ರಮಗಳನ್ನೂ ಅವರ ಪದ್ಧತಿ ಆಚಾರಾದಿಗಳನ್ನೂ ನೋಡಿ ತಿಳಿದುಕೊಂಡು ಉಪದೇಶಗಳನ್ನು ಅವರಿಗೆ ತಿಳಿಸುತ್ತಾ ಬಂದರೆ ತುಂಬಾ ಸಹಾಯವಾಗುವುದು.

ಪ್ರಜೆಗಳು ಆರೋಗ್ಯವಂತರಾಗಿಯೂ ಧೃಢಕಾಯರಾಗಿಯೂ ಆಗುವಂತೆ ಮಾಡಬೇಕೆನ್ನುವುದರಲ್ಲಿ ನನಗೆ ತುಂಬಾ ಕುತೂಹಲವಿರುತ್ತದೆ. ಇಂಥಾ ಕಾರ್ಯಕ್ಕೆ ನನ್ನಿಂದ ಆಗಬೇಕಾಗಿರುವ ಸಹಾಯವನ್ನು ಮಾಡಿಕೊಡಲು ಸಿದ್ಧನಾಗಿರುತ್ತೇನೆ.

ಈಗ ಈ ಪ್ರದರ್ಶನ ಶಾಲೆಯನ್ನು ಪ್ರತಿಷ್ಠೆ ಮಾಡಿ ಪ್ರಾರಂಭಿಸಿ, ಅನೇಕಾನೇಕ ಪ್ರಜೆಗಳೂ ಇದನ್ನು ಬಂದು ನೋಡುವರೆಂದೂ, ಇದರಿಂದ ಪ್ರಯೋಜನ ಪಡೆಯುವರೆಂದೂ ನಂಬಿ ನಿರೀಕ್ಷಿಸುತ್ತೇನೆ ಎಂಬುದೇ.

ದಿವಾನ್ ಮೆ|| ಟಿ. ಆನಂದರಾಯರು

ಬಳಿಕ ದಿವಾನ್ ಮೆ|| ಟಿ. ಆನಂದರಾಯರು ಎದ್ದು, ಶ್ರೀಮತ್ ಯುವರಾಜರವರು ಆ ಸಭೆಗೆ ದಯಮಾಡಿ ಪ್ರದರ್ಶನವನ್ನು ಪ್ರಾರಂಭಿಸಿದ್ದಕ್ಕಾಗಿ ಸಭಿಕರ ವಂದನೆ ಕೃತಜ್ಞತಾ ಭಕ್ತಿಗಳನ್ನು ಪ್ರಕಾಶಪಡಿಸಿದ್ದಲ್ಲದೆ ಶ್ರೀಮತ್ ಯುವರಾಜರವರು ಇದುವರೆಗೆ ಮುಂದೆ ಬಂದು ಇಂಥಾ ಕಾರ್ಯಗಳನ್ನು ನಡಿಸಿರಲಿಲ್ಲವೆಂದೂ, ಇದೇ ಮೊದಲನೆಯದಾದದ್ದರಿಂದ ಈ ಪ್ರದರ್ಶನಕ್ಕೆ ತುಂಬಾ ಪ್ರೋತ್ಸಾಹವಾಯಿತೆಂದೂ, ಅವರು ಹೀಗೆಯೇ ಪ್ರಜಾಭಿವೃದ್ಧಿಯ ಕಾರ್ಯಗಳಲ್ಲಿ ಮುಂದಾಳುಗಳಾಗಿ ಬಂದು ತಮ್ಮ ಅಂತರ್ಯವಾದ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸುತ್ತಾ ಬರುವವರಾಗಬೇಕೆಂದೂ ಹೇಳಿದರು.

ಪ್ರದರ್ಶನ ಶಾಲೆಯನ್ನು ನೋಡಿದ್ದು

ತರುವಾಯ ಸೀನಿಯರ್ ಸರ್ಜನ್‌ರವರು ಶ್ರೀಮತ್ ಯುವರಾಜರನ್ನು ಟೌನ್ ಹಾಲಿನ ಅಂತಃಪುರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅಣಿಮಾಡಿದ್ದ ಆರೋಗ್ಯವಿಚಾರವಾದ ವಸ್ತುಗಳನ್ನೆಲ್ಲಾ ಅವರಿಗೆ ಕ್ರಮವಾಗಿ ತೋರಿಸಿ, ಡಾಕ್ಟರ್ ಪಲ್ಪುರವರೂ ಅವರಿಗೆ ವಿವರಿಸಿ ಹೇಳಿದರು. ಯುವರಾಜರು ಪ್ರತಿಯೊಂದನ್ನೂ ನಿಧಾನವಾಗಿಯೂ ಚೆನ್ನಾಗಿಯೂ ಪರೀಕ್ಷೆ ಮಾಡಿ ನೋಡಿ, ಪ್ರದರ್ಶನವು ಬಹಳ ಚೆನ್ನಾಗಿಯೂ ಸರ್ವೋತ್ತಮವಾಗಿಯೂ ಇರುತ್ತದೆಂದು ಹೇಳಿ ಅವರುಗಳನ್ನು ವಂದಿಸಿದರು. ಸೀನಿಯರ್ ಸರ್ಜನ್ ಡಾ. ಸ್ಮಿತ್‌ರವರು ಯುವರಾಜರವರಿಗೆ ಪುಷ್ಪಮಾಲಿಕೆಯನ್ನರ್ಪಿಸಿ, ಸಾರೋಟಿನಲ್ಲಿ ಕೂಡಿಸಿ ವಾಪಸು ಕಳುಹಿಸಿ, ದಿವಾನ್‌ರವರಿಗೂ ಕೌನ್ಸಿಲ್ ಮೆಂಬರುಗಳಿಗೂ ಹಾರ ಹಾಕಿಸಿ ತಾಂಬೂಲಗಳನ್ನು ಕೊಡಿಸಿ ಪ್ರದರ್ಶನದ ಪ್ರಾರಂಭಕಾರ್ಯಗಳನ್ನು ಸಂಪೂರ್ಣ ಮಾಡಿದರು.

ಪ್ರದರ್ಶನದ ಸಂಕ್ಷಿಪ್ತ ವಿವರಣೆಯು

ಈ ಪ್ರದರ್ಶನ ಶಾಲೆಯಲ್ಲಿ ಪ್ರಜೆಗಳು ನೋಡಿ ಆಚರಣೆಯಲ್ಲಿ ತರತಕ್ಕ ಅನೇಕ ಸಂಗತಿಗಳು ಇರುತ್ತವೆ. ಕೊಳಕು ನೀರು, ಒಳ್ಳೇ ಆರೋಗ್ಯಕರವಾದ ನೀರು, ನೀರನ್ನು ಶುದ್ಧಿಮಾಡುವ ವಸ್ತುಗಳು ಒಂದು ಕಡೆಯೂ, ಎಳೇ ಮಕ್ಕಳು ಮೊದಲುಗೊಂಡು ಮುದಿ ಪ್ರಾಯದ ತನಕ ಮನುಷ್ಯರಿಗೆ ಪುಷ್ಟಿಯನ್ನುಂಟುಮಾಡುವ ಆಹಾರ ವಸ್ತುಗಳು ಒಂದು ಕಡೆಯೂ, ಮನುಷ್ಯನ ದೇಹದ ಅಂಗಾಂಗಗಳ ಚಿತ್ರಗಳೂ ಬೊಂಬೆಗಳೂ ವಿವರಣೆಯೂ ಒಂದು ಕಡೆಯೂ, ಆಯಾ ವಯಸ್ಸಿನಲ್ಲಿ ಅಂಗಾಂಗಗಳನ್ನು ಕಸರತ್ತುಮಾಡಿ ಬೆಳವಣಿಗೆ ಮಾಡಿಕೊಳ್ಳುವುದಕ್ಕೆ ಸಹಕಾರಿಗಳಾದ ಸಾಧನೆಯ ಉಪಕರಣಗಳು ಒಂದು ಕಡೆಯೂ, ಮನುಷ್ಯನ ದೇಹ ಸ್ವಸ್ಥತೆಗೆ ಅವಶ್ಯವಾದ ಉಪಕರಣಗಳು ಒಂದು ಕಡೆಯೂ, ಪ್ಲೇಗ್, ಕಾಲರಾ, ಸಿಡುಬು ಮೊದಲಾದ ಅಂಟು ಜಾಡ್ಯಗಳ ಪ್ರಭೋತ್ಕರ, ಆರೋಗಗಳಿಂದ ಇದುವರೆಗೆ ಆಗಿರುವ ಮರಣಸಂಖ್ಯೆ, ಆ ರೋಗಗಳನ್ನುಂಟುಮಾಡುವ ಕ್ರಿಮಿಗಳ ನಕ್ಷೆಗಳು, ಮುಂತಾದವು ಒಂದು ಕಡೆಯೂ, ಈ ರೋಗಗಳನ್ನು ಬಾರದಂತೆ ತಡೆಯಲು ಸಹಕಾರಿಗಳಾದ ಉಪಕರಣಗಳು ಒಂದು ಕಡೆಯೂ, ರೋಗದ ಕ್ರಿಮಿಗಳನ್ನು ಕೊಂದು ಓಡಿಸುವುದರಲ್ಲಿ ಉಪಯೋಗಿಸುವಂಥಾ ವಸ್ತು ವಿಶೇಷಗಳು ಒಂದು ಕಡೆಯೂ, ಆಗಿಂದಾಗ್ಗೆ ಹೊಸ ಬದಲಾವಣೆಯಾಗುತ್ತಿರುವುದನ್ನೂ, ಮಳೆ ಗಾಳಿ ಬಿಸಿಲು ಪ್ರಾಪ್ತವಾದದ್ದನ್ನು ಗುರುತು ಮಾಡಿ ತೋರಿಸುವ ಯಂತ್ರ ವಿಶೇಷಗಳನ್ನು ಒಂದು ಕಡೆಯೂ, ಸುಖನಿದ್ರೆಯನ್ನು ಕೊಟ್ಟು ಆರೋಗ್ಯಾಭಿವೃದ್ಧಿಗೆ ಸಹಕಾರಿಯಾದ ಶಾಂತಿಯ ಮಂಚಗಳು ಒಂದು ಕಡೆಯೂ, ಮನುಷ್ಯನು ದಿನ ದಿನ ಅಭ್ಯಾಸಮಾಡತಕ್ಕ ಒಂದೆಲ್ಲಿ ಆರೋಗ್ಯವನ್ನೂ ದೀರ್ಘಾಯುಸ್ಸನ್ನೂ ಕೊಡಬಲ್ಲಂಥಾ ಹಿತೋಪದೇಶ ಪೂರ್ವಕಗಳಾದ ಶ್ರೇಷ್ಠವಾದ ನೀತಿ ವಾಕ್ಯಗಳು ಎಲ್ಲಾ ಕಡೆಗಳಲ್ಲಿಯೂ, ಹೊರಗಡೆ ಬಿಸಿಲು ಮಹಡಿಯಲ್ಲಿ ಒಂದು ಕಡೆ ಗ್ರಾಮಸಾರವನ್ನು ಕೂಡಿಸಿ ಅದನ್ನು ಶುದ್ಧಿಮಾಡುವ ವಿಧಾನಗಳೂ, ಮಲೆನಾಡಿನಲ್ಲಿ ಗುಡ್ಡಗಳ ನಡುವೆ ಬೆಳಕು ಗಾಳಿಯ ಸಂಚಾರಕ್ಕಾಗಲಿ ಪ್ರವೇಶಕ್ಕಾಗಲಿ ಅವಕಾಶವಿಲ್ಲದಂತೆಯೂ ಮನೆಯ ಬಚ್ಚಲ ರೊಚ್ಚು ಹೊರಕ್ಕೆ ಸಾಗಿ ಹೋಗಲು ಮಾರ್ಗವಿಲ್ಲದಂತೆಯೂ ಕಟ್ಟಿಕೊಂಡು ವಾಸಮಾಡುವಂಥಾ ಮನೆಗಳ ನಕ್ಷೆಗಳೂ, ಆರೋಗ್ಯ ಜನಕಗಳಾದ ಮನೆಗಳ ಮತ್ತು ಅನಾರೋಗ್ಯಕರಗಳಾದ ಮನೆಗಳ ನಮೂನೆಗಳೂ, ಬತ್ತ ಬೆಳೆಯುವ ಕಾಡುಗಳಲ್ಲಿ ಹೇರಳವಾಗಿ ಸಿಕ್ಕುವ ಮನುಷ್ಯನ ಆಹಾರಕ್ಕೆ ಯೋಗ್ಯಗಳಾದ ಗೆಡ್ಡೆ ಗೆಣಸುಗಳೂ ಫಲಗಳೂ, ವಿಷಜನಕಗಳಾದ ಗಿಡಮೂಲಿಕೆ ಕಾಯಿ ಹಣ್ಣು ಹಂಪಲುಗಳೂ, ವಾಂತಿ ಭೇದಿಯೇ ಮೊದಲಾದ ಅಂಟುರೋಗಗಳನ್ನು ಮನೆಯಲ್ಲಿ ಪಡೆದಿರುವವರು ಬಾವಿಗಳ ಬಳಿಗೆ ಹೋಗಿ ನೀರು ಸೇದಿ ತರುವ ಸಂದರ್ಭದಲ್ಲಿ ಆ ರೋಗಗಳನ್ನು ಇತರ ಜನರಿಗೆ ಹಾಗೆ ಹರಡುತ್ತಾರೆಂಬುದನ್ನು ನಿದರ್ಶನಪಡಿಸುವ ಮಾದರಿಗಳೂ, ಮನೆಗಳಲ್ಲಿ ಕ್ಷಯ ರೋಗಾದಿಗಳಿಂದ ಬಡವರೂ ಭಾಗ್ಯವಂತರೂ ಸಿಕ್ಕಿ ಗೋಡೆಗಳಿಗೂ ಅಪ್ಪಳಿಸಿಕೊಳ್ಳುವಂಥಾ ವಿಷಪಾದರಿ ಚಿತ್ರ ಚಿತ್ರಗಳೂ, ರಾಜಧಾನಿಯ ಕೋಟೆಯ ಆವರಣದೊಳಗೆ ಮನೆಗಳನ್ನು ಒಡೆದು ಪಾಳುಮಾಡಿದ ಮೇಲೆ ಅಲ್ಲಿ ಉಳಿಯುವ ನಿವಾಸ ರಾದಿಗಳನ್ನು ತೋರಿಸುವ ನಕ್ಷೆಯೂ, ಇನ್ನೂ ಅನೇಕ ಸಂಗತಿಗಳೂ ಇಡಲ್ಪಟ್ಟಿವೆ.

ನೋಟಕರ ಸ್ವಾಗತ

ಈ ಪ್ರದರ್ಶನ ಶಾಲೆಯೊಳಕ್ಕೆ ಹೋಗಿ ಅಲ್ಲಿರುವ ವಸ್ತುಗಳನ್ನು ನೋಡಿಕೊಂಡು ಬರುವುದಕ್ಕೆ ಯಾರೂ ಏನೂ ಕಾಸು ಕೊಡಬೇಕಾದ್ದಿಲ್ಲವೆಂದು ತಿಳಿಸಿರೋಣದರಿಂದ ಸಾವಿರಾರು ಪ್ರಜೆಗಳು ಪ್ರತಿದಿನವೂ ಬೆಳಿಗ್ಗೆ ಸಾಯಂಕಾಲ ಹೋಗಿ ತುಂಬಿಕೊಂಡು ನೋಡಿ ಬರುತ್ತಿದ್ದಾರೆ.

ಉಪನ್ಯಾಸಗಳು

ಈ ಪ್ರದರ್ಶನಕ್ಕೆ ಸಂಬಂಧಪಟ್ಟ ಕಾರ್ಯಕ್ರಮದ ಪಟ್ಟಿಯಲ್ಲಿ ಆರೋಗ್ಯಸೂತ್ರಗಳನ್ನು ತಿಳಿಯಹೇಳಲು ಸಮರ್ಥರಾದ ಪ್ರಖ್ಯಾತ ವಿದ್ವಾಂಸರೂ ಪ್ರಜೆಗಳಿಗೆ ಉಪನ್ಯಾಸ ಮಾಡುವಂತೆ ಏರ್ಪಾಡು ಮಾಡಿದೆ.

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ಅಕ್ಟೋಬರ್ ತಾ. ೨೧ ನೇ ಗುರುವಾರ

ನವರಾತ್ರಿ ಉತ್ಸವಗಳು.

ಮೈಸೂರು ಸಂಸ್ಥಾನದಲ್ಲಿ ಈ ನವರಾತ್ರಿ ಉತ್ಸವಗಳನ್ನು ಪ್ರಜೆಗಳು ಸಾರ್ವತ್ರಿಕವಾಗಿ ಆಚರಿಸುತ್ತಾರೆ. ಈ ಹಬ್ಬವು ಬಹಳ ವಿಶೇಷವಾದದ್ದು. ಸುಮಾರಾಗಿ ಸಕಲ ಪ್ರಜೆಗಳೂ ಇದನ್ನು ಸಂತೋಷದಿಂದ ವಿಹರಿಸುವ ಕಾಲವೆಂದು ಎಣಿಸುತ್ತಾರೆ. ಐಶ್ವರ್ಯದ ಪ್ರಭಾವವನ್ನು ವಹಿಸಿರುವ ಶ್ರೀಮತ್ ಮಹಾರಾಜರವರು ಪ್ರಾಚೀನ ಕಾಲದಿಂದ ನಡೆದು ಬಂದಿರುವ ಪದ್ಧತಿಯನ್ನು ಆಚರಿಸುವರು. ಪ್ರಭುಗಳು ಹತ್ತು ದಿನಗಳ ವರೆಗೆ ದರ್ಬಾರ್ ಮಾಡಿ, ಪ್ರಮುಖರಾದ ಅಧಿಕಾರಿಗಳಿಗೂ ಗಣ್ಯರಾದ ಪ್ರಜೆಗಳಿಗೂ ಭೇಟಿಯನ್ನು ದಯಪಾಲಿಸುತ್ತಾರೆ. ಈ ದರ್ಬಾರುಗಳನ್ನೂ ಇವುಗಳ ಅಂಗಗಳಾಗಿ ನಡೆಯುವ ಉತ್ಸವಗಳನ್ನೂ ನೋಡಿ ಸಂಭ್ರಮಪಡುವುದಕ್ಕೆ ಎಲ್ಲಾ ಕಡೆಗಳಿಂದಲೂ ಪ್ರಜೆಗಳು ರಾಜಧಾನಿಗೆ ಬರುವರು. ಆದರೆ ಈ ವರುಷ ಮೈಸೂರು ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಪ್ರಾಪ್ತವಾಗಿರೋಣದರಿಂದ ನೋಟಕರ ಜನಸಂದಣಿಯು ಬಹಳಮಟ್ಟಿಗೆ ಕಡಮೆಯಾಗಿರುವುದು.

ಈ ರೀತಿ ಸಂಭ್ರಮದಿಂದಲೂ ವಿರಾಮವಾಗಿಯೂ ಕಾಲಯಾಪನೆ ಮಾಡುವ ಸಂದರ್ಭದಲ್ಲಿ ಪ್ರಜೆಗಳು ಪ್ರಜಾಧರ್ಮಗಳಲ್ಲಿ ಅಭಿವೃದ್ಧಿ ಹೊಂದಲೆಂದೂ, ಈ ಕಾಲದಲ್ಲಿ ವ್ಯಾಪಾರಕ್ಕೂ ಕಸಬುಗಳಿಗೂ ಪ್ರೋತ್ಸಾಹವಾಗಲೆಂದೂ ಮೈಸೂರು ಸರ್ಕಾರದವರು ಬಹು ಸಮಯೋಚಿತವಾದ ಮತ್ತು ಯೋಗ್ಯವಾದ ಏರ್ಪಾಡುಗಳನ್ನು ಮಾಡಿರುತ್ತಾರೆ. ಲೇಟ್ ದಿವಾನ್ ರಂಗಾಚಾರ್ಯರಿಗೆ ಅಂಥಾ ಸಮಯವನ್ನು ವ್ಯರ್ಥ ಮಾಡಬಾರದೆಂಬ ಅಭಿಪ್ರಾಯವು ಹೊಳೆಯಿತು. ಅವರು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಪ್ರಜಾ ಪ್ರತಿನಿಧಿಗಳನ್ನು ಈ ಉತ್ಸವಕಾಲಕ್ಕೆ ರಾಜಧಾನಿಗೆ ಕರೆಯಿಸಿಕೊಂಡು, ಅವರಿಗೆ ಗವರ್ನಮೆಂಟಿನವರ ಕಾರುಬಾರುಗಳನ್ನೂ ಉದ್ದೇಶ ಅಭಿಪ್ರಾಯಗಳನ್ನೂ ಪ್ರಜೆಗಳಿಂದ ವಸೂಲಾಗುವ ಕಂದಾಯ ಹಣಗಳ ವಿನಿಯೋಗವನ್ನೂ ತಿಳಿಯಪಡಿಸಿ, ಅವರ ಅಭಿಪ್ರಾಯಗಳನ್ನು ಸಾಕ್ಷಾತ್ತಾಗಿ ಕೇಳಿ ತಿಳಿಯಬೇಕೆಂದು ಏರ್ಪಾಡು ಮಾಡಿದರು. ಈ ಮಹನೀಯರ ಅಭಿಪ್ರಾಯವೇ ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಿರ್ಮಾಣಕ್ಕೆ ಕಾರಣವಾಯಿತು. ಈ ಪ್ರಜಾಪ್ರತಿನಿಧಿ ಸಭೆಯು ತಾ. ೨೭ ನೇ ಬುಧವಾರ ಮಧ್ಯಾಹ್ನ ಇಲ್ಲಿನ ಪಬ್ಲಿಕ್ ಆಫಿಸ್ ಕಟ್ಟಡದಲ್ಲಿ ಪ್ರಾರಂಭವಾಗುತ್ತದೆ. ಸರ್ಕಾರದವರು ಪ್ರಜೆಗಳನ್ನು ತಮ್ಮ ನಂಬಿಕೆ ವಿಶ್ವಾಸಗಳಿಗೆ ತೆಗೆದುಕೊಂಡು, ಸಂಸ್ಥಾನದ ಕಾರುಬಾರುಗಳ ವಿಷಯದಲ್ಲಿ ಅವರು ಪಡುವ ಅಭಿಪ್ರಾಯಗಳನ್ನೂ ಪ್ರಜಾಸಾಮಾನ್ಯಕ್ಕಿರುವ ಕುಂದು ಕೊರತೆಗಳನ್ನೂ ಅವರ ಮುಖೇನ ತಿಳಿದುಕೊಳ್ಳುವುದು ಸರ್ವೋತ್ತಮವಾಗಿರುತ್ತದೆ.

ಈಚೆಗೆ ಮೈಸೂರು ಪಟ್ಟಣಕ್ಕೆ ಈ ಉತ್ಸವಕಾಲದಲ್ಲಿ ಬರತಕ್ಕ ಪ್ರಜೆಗಳೊಳಗೆ ಕಸಬುಗಳ ವಿಷಯದಲ್ಲೂ ವ್ಯಾಪಾರಾಭಿವೃದ್ಧಿಯ ವಿಷಯದಲ್ಲೂ ಕುತೂಹಲವನ್ನು ಹುಟ್ಟಿಸಬೇಕೆಂಬ ಉದ್ದೇಶದಿಂದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ವರುಷೇವರುಷ ಪ್ರದರ್ಶನಗಳನ್ನೂ ಮೇಲಾಟಗಳನ್ನೂ ಕಲ್ಪಿಸುತ್ತಾ ಬಂದಿದಾರೆ. ಇವುಗಳಲ್ಲಿ ಜನರಿಗೆ ಆಸಕ್ತಿಯನ್ನೂ ಉತ್ಸಾಹವನ್ನೂ ಉಂಟುಮಾಡುತ್ತಿರುವರು. ಈ ಸಂಸ್ಥಾನದಲ್ಲೂ ಹೊರಗಡೆಯಲ್ಲೂ ಯಾವ ಯಾವ ದಿನಸುಗಳು ಬೆಳೆಯುವವು, ಯಾವ ಯಾವ ಪದಾರ್ಥಗಳು ತಯಾರಾಗುವವು ಎಂಬೀ ವಿದ್ಯಮಾನಗಳನ್ನು ನೋಟಕರು ಸುಲಭವಾಗಿ ಗ್ರಹಿಸಿಕೊಳ್ಳಬಹುದಾಗಿದೆ. ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನಶಾಲೆಯು ಮೊನ್ನೆ ಸೋಮವಾರ ತೆರೆಯಲ್ಪಟ್ಟಿತು. ಸಾವಿರಾರು ಪ್ರಜೆಗಳೂ ಆಗಂತುಕರೂ ಇನ್ನು ಎರಡು ವಾರಗಳ ತನಕ ಈ ಪ್ರದರ್ಶನಾಲಯವನ್ನು ಹೋಗಿ ನೋಡಿ ಈ ಸೀಮೆಯೊಳಗೆ ಆಗತಕ್ಕ ವಸ್ತುಗಳೂ ದೊರೆಯತಕ್ಕ ಧಾನ್ಯಾದಿಗಳೂ, ಹಿಂದುಸ್ಥಾನದ ಇತರ ಭಾಗಗಳಲ್ಲಿ ತಯಾರಾಗುವ ಮತ್ತು ಬೆಳೆಯುವ ವಸ್ತುವಿಶೇಷಗಳೂ ಯಾವ ಯಾವವೆಂದು ತಿಳಿದುಕೊಳ್ಳುತ್ತಾರೆಂದು ಆಶಿಸುತ್ತೇವೆ. ಈ ಪ್ರದರ್ಶನ ಮಂದಿರದಲ್ಲಿಯೇ ಗೋಕಾಯಿಗಳ ಪ್ರದರ್ಶನವೂ, ಫಲಪುಷ್ಪಾದಿಗಳ ಪ್ರದರ್ಶನವೂ, ಕಸಬುಗಳ ಮೇಲಾಟಗಳೂ ನಡೆಯುತ್ತವೆ. ಇವರ ವಿವರಣೆಯನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು.

ಪ್ರಜೆಗಳು ಹೇರಳವಾಗಿ ಆಯಾ ಕಾಲಕ್ಕೆ ಹೋಗಿ ನೋಡಿ ಪ್ರಯೋಜನ ಪಡೆಯುವರೆಂದು ನಂಬುತ್ತೇವೆ.

ಈ ವರುಷ ಆರೋಗ್ಯ ಪ್ರದರ್ಶನಶಾಲೆಯನ್ನು ಟೌನ್ ಹಾಲ್ ಬಂಗಲಿಯಲ್ಲಿ ಪ್ರಾರಂಭಮಾಡಿರುತ್ತಾರೆ. ಅಧಿಕಾರಿಗಳೂ ಪ್ರಜೆಗಳಲ್ಲಿ ಗಣ್ಯರಾದವರೂ ಶ್ರೀಮದ್ಯುವರಾಜರವರನ್ನು ಕಳೆದ ಶನಿವಾರ ಅಟ್ಟಹಾಸದಿಂದಲೂ ಸಗೌರವವಾಗಿಯೂ ಎದುರುಗೊಂಡು, ಅವರಿಂದ ಆ ಪ್ರದರ್ಶನವನ್ನು ಪ್ರಾರಂಭಮಾಡಿಸಿದರು. ಶ್ರೀಮದ್ಯುವರಾಜರವರು ಪಬ್ಲಿಕ್ಕಾಗಿ ದಯಮಾಡಿದ್ದು ಇದೇ ಮೊದಲನೆಯ ಸಲವಾಗಿರುತ್ತದೆ. ಅವರು ಸಾದರದಿಂದಲೂ ಗಾಂಭೀರ್ಯಯುಕ್ತವಾದ ವಚನ ಪೂರ್ವಕವಾಗಿಯೂ ಈ ಪ್ರದರ್ಶನವನ್ನು ಪ್ರಾರಂಭ ಮಾಡಿದರು. ಹೀಗೆಯೇ ಶ್ರೀಮನ್ಮಹಾರಾಜರವರು ಈ ಸೀಮೆಯ ಪ್ರಜೆಗಳ ಕ್ಷೇಮಾಭಿವೃದ್ಧಿಯಲ್ಲಿ ದಿನೇ ದಿನೇ ಹೆಚ್ಚು ಹೆಚ್ಚಾದ ಉತ್ಸಾಹವನ್ನೂ ಕುತೂಹಲವನ್ನೂ ಪ್ರಕಾಶಪಡಿಸುತ್ತಾ ಬಂದಾರೆಂದು ನಿರೀಕ್ಷಿಸುತ್ತೇವೆ. ಈ ಆರೋಗ್ಯ ಪ್ರದರ್ಶನಶಾಲೆಯು ನವರಾತ್ರಿಯ ಉತ್ಸವಗಳ ನಿಮಿತ್ತ ಮೈಸೂರಿಗೆ ಬರುವ ಪ್ರಜೆಗಳಿಗೆ ಬಹು ಹಿತಕರವಾದ ಮತ್ತು ಶ್ರೇಯಸ್ಕರವಾದ ವಿವೇಕವನ್ನು ಕಲಿಸಿಕೊಟ್ಟೀತೆನ್ನುವುದಕ್ಕೆ ಅನುಮಾನವಿಲ್ಲ.

ಪ್ರಜಾ ಬಾಹುಳ್ಯದ ಪ್ರಯೋಜನಾರ್ಥವಾದ ಈ ಪ್ರದರ್ಶನಗಳನ್ನು ಸಿದ್ಧಪಡಿಸುವುದರಲ್ಲಿ ಅನೇಕಾನೇಕರು ಬಹಳ ಕಷ್ಟಪಟ್ಟಿದಾರೆನ್ನುವುದನ್ನು ನಾವು ಮರೆಯತಕ್ಕದ್ದಲ್ಲ. ಆದರೆ ಸಾವಿರಾರು ಪ್ರಜೆಗಳು ಈ ಪ್ರದರ್ಶನಗಳಿಗೆ ಹೋಗಿ ನೋಡಿ ಬಂದಲ್ಲಿ ಅವರ ಕಷ್ಟವು ಬಹು ಮಟ್ಟಿಗೆ ಸಾರ್ಥಕವಾಗುವುದೆಂದು ಹೇಳುತ್ತೇವೆ. ಈ ಪ್ರದರ್ಶನಗಳು ಅವುಗಳ ಉದ್ದೇಶಕ್ಕೆ ತಕ್ಕ ಫಲಪರಿಣಾಮಗಳನ್ನು ಉಂಟುಮಾಡದಿರಲಾರವೆಂದು ನಂಬಿ ನಿರೀಕ್ಷಿಸುವೆವು.

ಒಳದೇಶದ ವೃತ್ತಾಂತಗಳು.

ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಈ ವಾರ ರಾಜಧಾನಿಗೆ ದಯಮಾಡಿ, ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ತೆರಳುವವರಾಗಿದಾರೆಂದು ತಿಳಿದು ಬಂದಿದೆ.

ಸೈನ್ಯಾಧಿಪತಿ ಪ್ರಭುಗಳು ಮೈಸೂರು ಪಟ್ಟಣಕ್ಕೆ ದಯಮಾಡಿದಾಗ್ಗೆ ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳು ಅವರಿಗೆ ಸುಸ್ವಾಗತವನ್ನು ಬಯಸಿ ಒಂದು ಸ್ವಾಗತಪತ್ರಿಕೆಯನ್ನು ಓದಿ ಒಪ್ಪಿಸುವರು.

ರಾಜಧಾನಿಯಲ್ಲಿ ಕಳೆದ ವಾರ ಶ್ರೀಮದ್ಯುವರಾಜರವರೂ ಸರ್ದಾರ್ ಎಂ. ಕಾಂತರಾಜೇ ಅರಸಿನವರೂ ತಮ್ಮ ತಮ್ಮ ಭವನಗಳಲ್ಲಿ ಅರಸು ಮಕ್ಕಳಿಗೂ ಇತರ ದೊಡ್ಡ ಮನುಷ್ಯರಿಗೂ ಒಂದೊಂದು ದಿನ ಔತಣಗಳನ್ನು ಮಾಡಿಸಿ ವಿನೋದಗಳನ್ನು ಕಲ್ಪಿಸಿದ್ದರು.

ನವರಾತ್ರಿ ಉತ್ಸವದ ನಿಮಿತ್ತ ಡೆಪ್ಯುಟಿ ಕಮಿಷನರುಗಳೂ, ಚೀಫ್ ಕೋರ್ಟ್ ಜಡ್ಜಿಗಳೂ, ಇಲಾಖೆಗಳ ಮುಖ್ಯ ಮುಖ್ಯ ಅಧಿಕಾರಿಗಳೂ ರಾಜಧಾನಿಗೆ ಬಂದಿರುತ್ತಾರೆ. ಹಾಗೆಯೇ ಕೆಲವು ಪ್ರಜಾ ಪ್ರತಿನಿಧಿಗಳು ಬಂದಿದಾರೆ, ಉಳಿದವರು ಈ ವಾರ ಬರುವವರಾಗಿದಾರೆ.

ಬೆಂಗಳೂರಿನಲ್ಲಿ ಒಬ್ಬ ಮಹಮದೀಯನು ನಾಲ್ವರು ಹುಡುಗರಿಗೆ ಸಕ್ಕರೆ ಎಂದು ಹೇಳಿ ನಾಲ್ಕು ಪಟ್ಟಗಳನ್ನು ಕೊಟ್ಟನೆಂದೂ, ಅವರು ಅದನ್ನು ತಿಂದು ವಾಂತಿ ಮಾಡಿಕೊಂಡು ಒಬ್ಬ ಹುಡುಗನು ಮೃತಪಟ್ಟನೆಂದೂ, ಈಗ ಪೋಲೀಸಿನವರು ಆ ಮಹಮದೀಯನನ್ನು ದಸ್ತಗಿರಿ ಮಾಡಿದಾರೆಂದೂ ಪ್ರಕಟವಾಗಿದೆ.

ಶ್ರೀಮತ್ ಮಹಾರಾಜರವರ ಏಡೀಕಾಂಗರಾಗಿದ್ದ ಮಿ॥ ಆಗಾ ಜಾನ್‌ರವರು ಕಳೆದ ೧೮ ನೇ ತಾ. ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕೆಲವು ಕಾಲದಿಂದ ಇವರಿಗೆ ಕಾರ್ಬಂಕಲ್ ರೋಗ ಪ್ರಾಪ್ತವಾಗಿತ್ತು. ಇವರ ಕುಮಾರರು ಶ್ರೀಮತ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಆಫೀಸಿನಲ್ಲಿ ಅ॥ ಕಮಿಷನರಾಗಿ ಕೆಲಸಮಾಡುತ್ತಿದಾರೆ.

ಮೈಸೂರು ಸಂಸ್ಥಾನದ ಚಿನ್ನದ ಗಣಿಗಳಿಂದ ಕಳೆದ ಮಾಸದಲ್ಲಿ ೫,೦೯೦ ಚಿಲ್ಲರೆ ರೂಪಾಯಿ ಉತ್ಪತ್ತಿಯಾಯಿತು. ಈ ಗಣಿಗಳು ಪ್ರಾರಂಭವಾದ ೧೮೭೭ನೇ ಇಸವಿಯಿಂದ ಇಲ್ಲಿಯವರೆಗೆ ೧೧,೭೭,೪೩೪ ಚಿಲ್ಲರೆ ರೂಪಾಯಿ ಉತ್ಪತ್ತಿಯಾಗಿರುತ್ತದೆ. ಈ ಗಣಿಗಳಿಂದ ರಾಯಲ್ಟಿ ಮೊದಲಾದವುಗಳಿಂದ ರಾಜಾದಾಯವು ಸಾಲೀಯಾನಾ ೨,೭೪,೫೨೮ ಚಿಲ್ಲರೆ ರೂಪಾಯಿ ಹೆಚ್ಚಿರುವುದು.

ಸ್ಯಾನಿಟರಿ ಕಮಿಷನರಾದ ಡಾ॥ ಸ್ಮಿತ್ ರವರು ಪ್ರಕಟ ಮಾಡಿರುವುದೇನೆಂದರೆ,— ಮೈಸೂರು ಪಟ್ಟಣದಲ್ಲಿ ಈಗ ಪ್ಲೇಗ್ ಉಪದ್ರವೇಣದರಿಂದ ನವರಾತ್ರಿ ಉತ್ಸವಕ್ಕೆ ಬರತಕ್ಕವರು ಪ್ಲೇಗ್ ಡಿಸ್ಟ್ರಿಕ್ಟ್ ಗಳಲ್ಲಿರುವ ಇತರ ಕ್ಷೇತ್ರ, ಅಥವಾ ಮೈಸೂರಿನಲ್ಲಿ ಆರೋಗ್ಯಕರವಾದ ಮನೆ ದೊರೆಯುವುದಕ್ಕೆ ನಿಶ್ಚಯರೂ ಆಗದವರು ಇವರೆಲ್ಲರೂ ಇಲ್ಲಿಗೆ ಬಾರದೆ ತಮ್ಮ ತಮ್ಮ ಮನೆಗಳಲ್ಲೇ ಇರುವುದು ಉತ್ತಮವೆಂದು ತಿಳಿಸಿದೆ.

ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಹಣವನ್ನು ಕೂಡಿಸುವ ವಿಷಯದಲ್ಲಿ ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟರವರು ತಿಳಿಯಪಡಿಸುವುದೇನೆಂದರೆ,— ವಿವಾಹದಲ್ಲಿ ಮಾತ್ರ ಫಂಡಿಗೆ ಹಣವನ್ನು ಎತ್ತುವ ಪದ್ಧತಿ ವಿಶೇಷ ರೂಢಿಯಲ್ಲಿದೆ. ಇತರ ಶುಭಕಾರ್ಯಗಳು ನಡೆಯುವಾಗ್ಗೆ ಈ ಪದ್ಧತಿಯಿಲ್ಲ. ಎಲ್ಲಾ ಕಡೆಗಳಲ್ಲೂ ಸಮಸ್ತ ಶುಭಕಾರ್ಯಗಳಲ್ಲೂ ಈ ಆಚಾರವನ್ನು ರೂಢಿಗೆ ತಂದಲ್ಲಿ ಈ ವಿದ್ಯಾಭಿವೃದ್ಧಿಯ ಫಂಡು ಹೆಚ್ಚುವುದಕ್ಕೆ ಕಾರಣವಾಗುತ್ತದೆ ಎಂಬುದೇ.

ಸನ್ನಿವೇಶದ ಬಳಿಯ ಕೈಗಾರಿಕಾ ಪ್ರದರ್ಶನ ಶಾಲೆಯ ಆವರಣದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ವಿಷಯವಾದ ಸಂಗತಿಗಳನ್ನು ಕುರಿತು ಉಪನ್ಯಾಸಗಳು ನಡೆಯುತ್ತಿರುವವು. ಆಯಾ ವಿಚಾರಗಳನ್ನು ಶಾಸ್ತ್ರಪ್ರಕಾರವಾಗಿಯೂ ಅನುಭವದಿಂದಲೂ ತಿಳಿದಿರುವ ಅಧಿಕಾರಿಗಳೂ ಇತರರೂ ಉಪನ್ಯಾಸ ಮಾಡುತ್ತಾರೆ. ಇತ್ತಲಾಗಿ ಆರೋಗ್ಯ ವಸ್ತುಪ್ರದರ್ಶನ ಶಾಲೆಯೊಳಗೆ ವೈದ್ಯರೂ ಪಂಡಿತರೂ ಆರೋಗ್ಯ ವಿಚಾರಗಳನ್ನು ಕುರಿತು ದಿನದಿನ ಬೇಗನೆ ಹೊತ್ತು ಉಪನ್ಯಾಸಗಳನ್ನು ಮಾಡುತ್ತಿರುವರು.

ಈಗ ನಡೆಯುವ ದಸರಾ ಹಬ್ಬದ ಕಾಲದಲ್ಲಿ ಬಿಡಿ ಆರ್ಡರ್‌ಗಳು ಮತ್ತು ಬಹುಮಾನಗಳನ್ನು ಕೊಟ್ಟು ದಾನ ಮಾಡಿಕೊಳ್ಳಬೇಕೆಂದು ಬೊಂಬಾಯಿನ ಜೈನ ಮಹಾಸಭೆಯವರು ಈ ರಾಷ್ಟ್ರದ ಸಮಸ್ತ ದೇಶೀಯ ರಾಜರುಗಳಿಗೂ ಅರಿಕೆಮಾಡಿಕೊಂಡಿರುತ್ತಾರೆ. ಈ ಸಭೆಯವರ ಪ್ರಾರ್ಥನೆಯಂತೆ ಮೋರ್ವಿ, ಗೊಂಡಾಲ್, ಲಿಂಬಡಿ, ಅಮ್ರೇಲಿ, ಜೂನಾಗಡ, ಬರೋಡ, ಪೋರಬಂದರು, ಪಾಲಿಟಾನಾ, ಉದಯಪುರ, ಕಿಶನಘಡ, ಅಥಿ ಎಂಬೀ ಸಂಸ್ಥಾನಗಳ ಪ್ರಜಾಪಾಲಕರು ಮೂಗ ಪ್ರಾಣಿಗಳನ್ನು ಕೊಲ್ಲದಂತೆ ಒಪ್ಪಿಕೊಂಡಿರುತ್ತಾರೆ.

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿದ್ದ ರಿಟೈರ್ಡ್ ಡೆ॥ ಕಮಿಷನರ್ ಮೆ॥ ಎನ್. ಕೃಷ್ಣಮೂರ್ತಿರಾಯರು ಸ್ವಗೃಹದಲ್ಲಿ ಪಕ್ಷಾಘಾತದ ದೆಸೆಯಿಂದ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಅಂತ್ಯಕಾಲದಲ್ಲಿ ೬೭ ವರುಷ ವಯಸ್ಸಾಗಿತ್ತು. ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಯಾಗಿರುವ ಮಿ॥ ವಿ. ರಾಘವೇಂದ್ರರಾಯರು ಅವರ ಹಿರಿಯ ಕುಮಾರರು. ಇವರನ್ನು ಲೇಟ್ ಕೌನ್ಸಿಲರ್ ಮೆ॥ ಪೂರ್ಣಕೃಷ್ಣರಾಯರ ಮನೆಗೆ ದತ್ತುಮಾಡಿದರು. ಅಲ್ಲದೆ ಅವರಿಗೆ ಮದುವೆಯಾದ ಒಬ್ಬ ಕುಮಾರ್ತೆಯೂ, ಎರಡನೇ ಪತ್ನಿಯೂ, ವಿದ್ಯಾಭ್ಯಾಸ ಕ್ರಮದಲ್ಲಿ ಕಲಿಯುತ್ತಿರುವ ಸಣ್ಣ ವಯಸ್ಸಿನ ಒಬ್ಬ ಕುಮಾರನೂ ಇರುತ್ತಾರೆ. ರಾಜಧಾನಿಯಲ್ಲಿ ನಡೆಯುತ್ತಿರುವ ಉತ್ಸವಕಾಲದಲ್ಲಿ ಅವರಿಗೆ ಈ ವಿಯೋಗ ದುಃಖವು ಪ್ರಾಪ್ತವಾಯಿತಲ್ಲಾ ಎಂದು ಸಂತಾಪಪಡುತ್ತೇವೆ.

ಕಳೆದ ವಾರ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಸ್ವಲ್ಪ ಕಡಮೆಯಾಗಿದ್ದರೂ ೧೧೭ ಜನರಿಗೆ ಹೊಸದಾಗಿ ತಗಲಿತು. ಈ ಉಪದ್ರವದಿಂದ ೮೭ ಜನರೂ, ಎಲ್ಲಾ ಕಾರಣಗಳಿಂದ ೧೪೭ ಜನರೂ ತೀರಿಹೋಗಿರುತ್ತಾರೆ. ಕಳೆದ ವಾರ ೧,೮೩೦ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡರು. ಒಟ್ಟು ಇದುವರೆಗೆ ೧೨,೭೪೪ ಜನರಿಗೆ ಔಷಧ ಪ್ರಯೋಗಿಸಲ್ಪಟ್ಟಿದೆ. ದಿವಾನ್ ಮೆ॥ ಟಿ. ಆನಂದರಾಯರವರು ಕಳೆದ ವಾರ ಇಲ್ಲಿನ ಪ್ಲೇಗ್ ಆಸ್ಪತ್ರೆಗೆ ದಯಮಾಡಿ, ರೋಗಿಗಳಿಗೆ ಅಲ್ಲಿ ನಡೆಯುವ ಉಪಚಾರಾದಿಗಳನ್ನು ನೋಡಿಕೊಂಡು ಬಂದರು. ಕಳೆದ ವಾರದ ಸಂಖ್ಯೆಗಳನ್ನು ಇಲ್ಲಿ ಪ್ರಕಟಮಾಡಿದೆ:—

ತಾರೀಖು	ಪ್ಲೇಗ್ ಆಯಿತು	ಪ್ಲೇಗ್ ಮರಣ	ಒಟ್ಟು ಮರಣ
13	14	14	21
14	12	8	13
15	16	11	20
16	11	13	23
17	22	16	21
18	22	12	18
19	[illegible]	12	21

ಹಬ್ಬ

ನಮ್ಮ ದೇಶದಲ್ಲಿ ಹಬ್ಬಗಳನ್ನು ಆಚರಿಸುವುದಕ್ಕೆ ಎಲ್ಲರೂ ಇಷ್ಟಪಡುತ್ತಾರಲ್ಲವೇ? ಮೈಸೂರು ಸಂಸ್ಥಾನದ ಪ್ರಜೆಗಳು ದಸರಾ ಮಹೋತ್ಸವವನ್ನು ಬಹು ಕುತೂಹಲದಿಂದ ಇದಿರುನೋಡುವುದುಂಟು. ಪ್ರಜೆಗಳು ಹೀಗೆ ಮಾಡುವುದು ಸರಿಯೆಂದು ನಾವು ಭಾವಿಸುವೆವು. ಮತ್ತು ಅಂಥಾ ಮಹೋತ್ಸವ ಕಾಲ

ಗಳಲ್ಲಿ ಜನರು ಭಗವಂತನನ್ನು ಯಥೋಚಿತವಾಗಿ ಆರಾಧಿಸುತ್ತಿರುವ ಅವರ ಕರ್ತವ್ಯವಾಗಿರಬೇಕು

ಅದರೆ ಹಬ್ಬದ ಕಾಲಗಳಲ್ಲಿ ಅನೇಕರು ದೇವರನ್ನು ಮರೆತುಬಿಟ್ಟು ಆತನು ಇಷ್ಟಪಡದೆ ಇರತಕ್ಕ ದುರ್ವ್ಯಾಪಾರಗಳಲ್ಲಿ ಪ್ರವರ್ತಿಸುವುದುಂಟು ನಮ್ಮ ಸಂಭ್ರಮ ಕಾಲಗಳಲ್ಲಿ ದೇವರು ನಮಗೆ ತೋರಿಸಿರುವ ಮಹೋಪಕಾರಗಳನ್ನು ಜ್ಞಾಪಕಕ್ಕೆ ತರುವುದು ಬಹು ಯೋಗ್ಯ ನಮ್ಮ ಮನಸ್ಸಿನಲ್ಲಿ ಭಗವಂತನ ಉಪಕಾರಗಳಿಗಾಗಿ ಕೃತಜ್ಞತಾ ಸ್ಮೃತಿ ಇದ್ದರೆ ನಾವು ಆತನ ಮೆಚ್ಚಿಕೆಗೆ ಪಾತ್ರರಾಗಿರುವೆವು

ದೇವರು ನಮ್ಮನ್ನು ಸೃಷ್ಟಿಸಿದಾಗ್ಗೆ ಆತನು ನಮ್ಮೆಲ್ಲರಿಗೆ ಸಂತೋಷಪಡುವ ವರವನ್ನು ಕೊಟ್ಟನು ಆತನ ಮಕ್ಕಳು ಸಂತೋಷಪಡುವುದನ್ನೇ ಆತನು ಕೋರುತ್ತಾನೆ ಆದರೆ ನಿಜವಾದ ಸಂತೋಷವು ದೇವರು ಕೊಟ್ಟಿರತಕ್ಕ ಕಟ್ಟಳೆಗಳನ್ನು ಕೈಕೊಳ್ಳುವುದರಲ್ಲಿ ದೊರಕುವುದೇ ವಿನಾ ಮತ್ತಾವುದರಲ್ಲಿಯೂ ದೊರಕುವುದಿಲ್ಲ ಆತನ ಕಟ್ಟಳೆಗಳನ್ನು ತಿರಸ್ಕರಿಸಿ ಪಾಪದ ಕಾರ್ಯಗಳಲ್ಲಿ ನಾವು ಪ್ರವರ್ತಿಸಿದರೆ ಆತನು ನಮ್ಮನ್ನೆಂದಿಗೂ ಆಶೀರ್ವದಿಸಲಾರನು ಉತ್ಸವ ಕಾಲಗಳಲ್ಲಿ ಅರಿಷಡ್ವರ್ಗಗಳಲ್ಲಿ ಯಾವುದನ್ನಾದರೂ ನಾವು ಮಾಡುವುದಾದರೆ ನಾವು ಹಬ್ಬದ ನಿಜಾರ್ಥವನ್ನು ಹಾಳುಮಾಡುವವರಾಗಿರುತ್ತೇವೆ ನಾವು ನಮ್ಮ ಮನಸ್ಸುಗಳನ್ನು ವ್ಯರ್ಥಕ್ಕೆ ಒಪ್ಪಿಸಿಕೊಟ್ಟು ಪಾಪದ ಇಚ್ಛೆಗಳಿಗೆ ಒಳಪಟ್ಟರೆ ನಮ್ಮನ್ನು ದೇವರಿಂದ ಪ್ರತ್ಯೇಕಿಸಿಕೊಳ್ಳುತ್ತೇವೆಂಬತಕ್ಕ ಸಂಗತಿಯನ್ನು ನಾವು ಮರೆಯಲಾಗದು ದೇವರು ನಮ್ಮನ್ನು ಆಶೀರ್ವದಿಸಲಾರನು ಈ ವಾರವೆಲ್ಲಾ ದಸರಾ ಮಹೋತ್ಸವವಾಗಿರುವುದರಿಂದ ಜನರು ಎಲ್ಲಿಲ್ಲಿಯೂ ಆನಂದಭರಿತರಾಗಿರುತ್ತಾರೆ ದೇವರ ಅತಿಶಯವಾದ ವರಗಳನ್ನು ಸ್ಮರಿಸಿ ಆತನನ್ನು ಸೇವಿಸತಕ್ಕ ಸಮಯವು ಈ ಉತ್ಸವ ಕಾಲದಲ್ಲಿ ಬಂದೊದಗಿರುವುದು ನಾವು ನಮ್ಮ ಮಹಾರಾಜರವರಿಗೆ ನಮ್ಮ ರಾಜಭಕ್ತಿಯನ್ನು ತೋರಿಸುವುದು ನಿಜವಾಗಿರುತ್ತದೆ ಯಾಗ ವೆನ್ನಿಸಿಕೊಳ್ಳುವ ಎಲ್ಲಾ ರಾಜಾಧಿಕಾರಗಳಿಗೆ ದೇವರೇ ಕಾರಣಭೂತನಾಗಿರುತ್ತಾನೆ ಸರ್ಕಾರಕ್ಕೂ ರಾಜನಿಗೂ ನಾವು ವಿಧೇಯರಾಗಿರಬೇಕೆಂಬುದು ದೇವರ ಕಟ್ಟಳೆಗಳಲ್ಲಿ ಒಂದಾಗಿರುತ್ತದೆ

ಉತ್ಸವ ಕಾಲಗಳಲ್ಲಿ ನಮ್ಮನ್ನು ಪಾಪಕ್ಕೆ ಎಳೆಯತಕ್ಕ ಎಲ್ಲಾ ದುರಿಚ್ಛೆಗಳಲ್ಲಿ ಬಹು ಎಚ್ಚರಿಕೆ ಇಂದಿರೋಣ ದೇವರಲ್ಲಿ ಆನಂದಪಡೋಣ ನಿಜವಾದ ಸಂತೋಷವು ನಮ್ಮಲ್ಲಿರಬೇಕಾದರೆ ನಾವು ಎಲ್ಲಾ ತರವಾದ ಪಾಪಗಳನ್ನು ಹಗೆ ಮಾಡತಕ್ಕದ್ದು ನಾವು ನಮ್ಮ ವಾಕ್ಕು ಮತ್ತು ಕ್ರಿಯೆಗಳನ್ನು ದೇವರು ಮೆಚ್ಚುವಂತೆ ನಡಿಸಬೇಕು ಪಾಪವನ್ನು ತ್ಯಜಿಸುವುದು ಸುಲಭಸಾಧ್ಯವಲ್ಲ ನರೆ ದೇವರನ್ನು ನಾವು ಚೆನ್ನಾಗಿ ಅರಿತು ಆತನನ್ನು ಭಕ್ತಿಪುರಸ್ಸರವಾಗಿ ಆರಾಧಿಸಿದರೆ ನಮೊಳಗೆ ನಿಜವಾದ ಸಂತೋಷವು ಬರಲಾರದು ದೇವರ ಮೇಲಣ ಭಕ್ತಿಯು ನಮ್ಮೊಳಗಿದ್ದರೆ ನಮ್ಮಲ್ಲಿ ಮನಸ್ಸಿನ ಸಮಾಧಾನವಿರುವುದು ಯೇಸು ಕ್ರಿಸ್ತನು ಈ ವಿಶೇಷವಾದ ಸಮಾಧಾನವನ್ನು ಕುರಿತು— "ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವುದಿಲ್ಲ" ಎಂಬದಾಗಿ ತಿಳಿಸುತ್ತಾನೆ ಲೋಕದ ಸುಖಸಂತೋಷಗಳು ಗತಿಸಿಹೋಗುವುದರಲ್ಲಿ ಸಂದೇಹವಿಲ್ಲ ಅವೆಲ್ಲಾ ಮಾಯವಾಗಿವೆ ಆದರೆ ದೇವರಿಂದ ಬರತಕ್ಕ ಆನಂದವು ಸದಾಕಾಲವೂ ನಿಲ್ಲುವುದು ದೇವರು ಮೆಚ್ಚತಕ್ಕ ಭಕ್ತನೇ ಅದನ್ನು ಸದಾ ಅನುಭವಿಸುತ್ತಿರುವನು

ಮೈಸೂರು ಗೆಜೆಟ್ ಸಂಗ್ರಹ

ಮೆ ಎಂ ಜಿ ಕೃಷ್ಣಸ್ವಾಮಿರಾಯರನ್ನು ಮೈಸೂರು ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟಾಗಿ ನೇಮಿಸಿದ ೧೯೦೮ ನೇ ಆಗಸ್ಟ್ ತಾ ೨೦ ರಿಂದ ಅವರನ್ನು ಮ್ಯುನಿಸಿಪಲ್ ಕೌನ್ಸಲರಾಗಿ ಮೊಕರರುಮಾಡಿದೆ

ಕುಣಿಗಲ್ ಮ್ಯುನಿಸಿಪಲ್ ಪ್ರೆಸಿಡೆಂಟ್ ಮೆ ಚಂದ್ರಪ್ಪನವರನ್ನೂ, ಮ ಹುಸ್ಸೇನ್ ಬೇಗ್ ಸಾಹೇಬರನ್ನೂ ಮೆಂಬರಾಗಿ ನೇಮಿಸಿದೆ

ಸಿ ರಾಪುರ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಮುಂದೆ ಹೇಳುವವರು ಕೌನ್ಸಲರಾಗಿ ಚುನಾಯಿಸಲ್ಪಟ್ಟಿರುತ್ತಾರೆ,—ಮೆ। ಗಳಾದ ಬಿ ಗಂಗಯ್ಯನವರು, ಡಿ ಬಿ ರಾಮಚಂದ್ರ ಮೊದಲಿಯಾರ್ರು, ಬಿ ಕೆ ಗರುಡಾಚಾರ್ರು ಟಿ ರಾಮಚಂದ್ರಪ್ಪನವರು, ಬಿ ಬಸಪ್ಪನವರು, ಡಿ ಆದೆಪ್ಪನವರು, ಬಿ ವಿ ರಾಮಸ್ವಾಮಿಶೆಟ್ಟರು, ಎಂ ಸುಬ್ಬಯ್ಯನವರು, ಬಿ ಹನುಮಂತಪ್ಪನವರು, ಬಿ ಶ್ರೀನಿವಾಸರಾಯರು, ಡಿ ವೆಂಕಟರಾಮಯ್ಯನವರು

(೨) ಮುಂದೆ ಹೇಳುವವರು ಕೌನ್ಸಲರುಗಳಾಗಿ ಸರ್ಕಾರದಿಂದ ನೇಮಕವಾಗಿರುತ್ತಾರೆ,—ಮೆ ಗಳಾದ ನಾಡಿಗ ಸುಬ್ಬರಾಯರು, ಬಿ ಬ್ರೌನ್‌ಸನ್‌ರವರು, ಗುಲಾಮ್ ಮಹಮದ್ ಗೌಸ್‌ಸಾಹೇಬರವರು, ಜೆ ಎಚ್ ಕ್ರಂಬೀಗಲ್‌ರವರು, ಎಚ್ ರಾಮಯ್ಯನವರು, ಕೃಷ್ಣಮೂರ್ತಿಯವರು, ಎಸ್ ವೆಂಕಟರಂಗಯ್ಯಂಗಾರ್ರು, ಎಸ್ ಗೋಪಾಲ ನಾಯುಡುವರು

(೩) ಮುಂದೆ ಹೇಳುವವರು ಸರ್ಕಾರಿ ತರಫಿನಿಂದ ನೇಮಕವಾದ ಕೌನ್ಸಲರುಗಳಾಗಿರುತ್ತಾರೆ—ಡೆಪ್ಯುಟಿ ಕಮಿಷನರು, ಎಗ್ಸಿಕ್ಯೂಟಿವ್ ಇನ್‌ಜನಿಯರು, ಹೆಲ್ತ್ ಆಫೀಸರು ಅಮಲ್ದಾರ್ರು

ನನರಾ ಸಪ್ ಅ ಸರ್ಜನ್ ಮೆ। ಡಿ ಎಸಪ್ಪನವರಿಗೆ ಕೊಟ್ಟಿರುವ ಒಂ ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ಮೂರು ದಿನಗಳಿಗೆ ಜಾಸ್ತಿ ಮಾಡಿದೆ

ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ಮೆ ವಿ ರಂಗರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿ ಮಾಡಿದೆ ಅವರು ವಾಪಸು ಬರುವತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಈಗಿನ ಬದಲೀ ಏರ್ಪಾಡೇ ಇರತಕ್ಕದ್ದು

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ ಎಂ ಕಾಂತರಾಜೇ ಅರಸರವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಐದು ದಿನಗಳಿಗೆ ಜಾಸ್ತಿಮಾಡಿ, ಅದರ ಕೂಡ ಅವರು ದಸರಾ ರಜಾವನ್ನೂ ಉಪಯೋಗಿಸಿಕೊಳ್ಳುವಂತೆ ಅಪ್ಪಣೆ ಕೊಡಲಾಗಿದೆ

ರೆವಿನ್ಯು ಕಮಿಷನರವರ ಆಫೀಸ್ ಮ್ಯಾನೇಜರ್ ಮೆ ಬಿ ನಾರಾಯಣಸ್ವಾಮಿ ಅಯ್ಯಂಗಾರ್ರನ್ನು ಆನೇಕಲ್ ತಾಲ್ಲೂಕಿನ ಅಮಲ್ದಾರರಿಗೂ, ಮೆ। ಎಚ್ ವೆಂಕಟನರಸೈಯನವರನ್ನು ಶಿಕಾರಿಪುರದ ತಾಲ್ಲೂಕಿನ ಅಮಲ್ದಾರಿಗೂ ವರ್ಗಾಯಿಸಿ ವರ್ಗಮಾಡಿದೆ

ಮೈಸೂರು ಇನ್‌ಫೆಂಟ್ರಿ ೧ನೇ ಬಟಾಲಿಯನ್ ಕಮಿಷನ್ ರ್‍ಯಾಂಕಿನಲ್ಲಿ ಅಬ್ದುಲ್ ಜಲೀಲ್ ಯವರನ್ನು ೨ ನೇ ಗ್ರೇಡ್ ಸುಬೇದಾರಿಗೂ, ಓಬಳನಾಯಕರನ್ನು ೧ನೇ ಗ್ರೇಡಾ ಜಮಾದಾರಿಗೂ ಸೆಪ್ಟಂಬರ್ ತಾ ೧೩ ರಿಂದ ಬಡ್ತಿಮಾಡಲಾಗಿದೆ

ಅ। ಕಮಿಷನರ್ ಮೆ ಟಿ ಬೋಕ್ಕಣ್ಣನವರನ್ನು ಜುಲೈ ತಾ ೨೪ ರಿಂದ ೧ನೇ ಕ್ಲಾಸಿಗೆ ಬಡ್ತಿಮಾಡಿದೆ

ಮೈಸೂರು ಮರಮತ್ತ್ ಇಲಾಖಾ ಅ। ಅ। ಇಂಜನಿಯರ್ ಮೆ॥ ಕೆ ವಿ ವೇಂಕಟಾಚಾರ್ಯರನ್ನು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಮ್ಯುನಿಸಿಪಲ್ ಇನ್‌ಜನಿಯರಾಗಿ ನೇಮಕ ಮಾಡಿದೆ ಇವರಿಗೆ ಆ ಗ್ರೇಡಿನ ಸಂಬಳವಲ್ಲದೆ ಮಾಹವಾರಾ ೫೦ ರೂಪಾಯಿ ಸ್ಪೆಷಲ್ ಅಲೋಯನ್ಸೂ, ೨೦ ರೂಪಾಯಿ ಗಾಡಿ ಅಲೋಯನ್ಸೂ ಸಲ್ಲತಕ್ಕದ್ದು

ರೆವಿನ್ಯು ಕಮಿಷನರ ಆಫೀಸ್ ಮ್ಯಾನೇಜರಾಗಿದ್ದು ಅಮಲ್ದಾರರಾಗಿ ನೇಮಿಸಲ್ಪಟ್ಟಿರುವ ಮೆ। ಬಿ ನಾರಾಯಣಸ್ವಾಮಿ ಐಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ

ಹೊಸ ಕಾನೂನ್ ಪ್ರಕಾರ ಮುಳಬಾಗಲ ಟೌನನ್ನು ಮ್ಯುನಿಸಿಪಾಲಿಟಿಯಾಗಿ ಮಾಡಬೇಕೆಂದು ಸರ್ಕಾರದವರು ಉದ್ದೇಶಪಟ್ಟಿರುತ್ತಾರೆ

ಮೈಸೂರು ಸರ್ಕಾರಿ ಹುಕುಂಗಳು

ಖಜಾನೆಗಳೂ ಕರೆನ್ಸಿ ನೋಟುಗಳೂ

ಮೈಸೂರು ಗವರ್ನಮೆಂಟಿನ ಕಂಟ್ರೋಲರವರಾದ ಮೆ। ಜಿ ಎಸ್ ಚಕ್ರವರ್ತಿಯವರು ಸಂಸ್ಥಾನದೊಳಗಿನ ಸರ್ಕಾರಿ ಖಜಾನೆಗಳಲ್ಲಿ ಕರೆನ್ಸಿನೋಟುಗಳನ್ನು ಕೊಡುವ ವಿಷಯವಾಗಿ ಈ ತಿಂಗಳ ೭ ನೇ ತಾರೀಖಿನಲ್ಲಿ ಹೊಸ ಸರ್ಕ್ಯುಲರ್ ಹುಕುಮನ್ನು ಪ್ರಕಟಿಸಿರುತ್ತಾರೆ ಈ ಹುಕುಮಿನ ಸಾರಾಂಶವೇನೆಂದರೆ,—

ಸಾಮಾನ್ಯವಾಗಿ ಸರ್ಕಾರಿ ಕೆಲಸಗಳಿಗೆ ಅನಾನುಕೂಲವಾಗಲಾರದೆಂದು ನಿಂಧಿತವಾಗಿ ತಿಳಿದ ಹೊರತು ಯಾವ ಖಜಾನೆಯಿಂದಲೂ ಕರೆನ್ಸಿ ನೋಟುಗಳನ್ನು ಹೊರಕ್ಕೆ ಕೊಡಕೂಡದು ಗವರ್ನಮೆಂಟಿನಿಂದ ಇತರರಿಗೆ ಹಣ ಸಲ್ಲಬೇಕಾಗಿದ್ದು ಅವರು ಕರೆನ್ಸಿನೋಟುಗಳನ್ನು ಅಪೇಕ್ಷಿಸಿದ ಪಕ್ಷದಲ್ಲಿ ಕೊಡುವುದಕ್ಕೆ ಅಡ್ಡಿಯಿಲ್ಲ ಯಥಾರ್ಥವಾದ ಪ್ರಯೋಜಕರು ಹಣವನ್ನು ಖಜಾನೆಗೆ ಕೊಟ್ಟು ಕರೆನ್ಸಿ ನೋಟು ಬೇಕೆಂದು ಕೇಳಿದರೆ ಅಂಥವರಿಗೆ ೫೦೦ ರೂಪಾಯಿ ನಷ್ಟು ನೋಟುಗಳನ್ನು ಕೊಡಬಹುದು ನಗದು ಹಣ ಸಾಕಾಗಿಯೂ ಕರೆನ್ಸಿ ನೋಟು ಕಡಿಮೆಯಾಗಿಯೂ ಇರುವ ಖಜಾನೆಗಳಲ್ಲಿ ವರ್ತಕರೇ ಮುಂತಾದವರಿಗೆ ಕರೆನ್ಸಿ ನೋಟುಗಳನ್ನು ಕೊಡಲಾಗದು ಇದರಿಂದ ಖಜಾನೆಗಳಲ್ಲಿ ಹಣವು ಹೆಚ್ಚಿ, ಇತರ ಕಡೆಗಳಿಗೆ ಸಾಗಿಸುವುದಕ್ಕೆ ಸರ್ಕಾರದವರಿಗೆ ಖರ್ಚು ಹೆಚ್ಚಾಗುತ್ತದೆ ಆದರೆ ದುರ್ಭಿಕ್ಷವೇ ಮೊದಲಾದ ವಿಶೇಷ ಸಮಯಗಳಲ್ಲಿ ಧಾನ್ಯಾದಿಗಳನ್ನು ಇತರ ಕಡೆಗಳಿಂದ ತರಿಸುವುದಕ್ಕಾಗಿ ಕರೆನ್ಸಿ ನೋಟುಗಳನ್ನು ವರ್ತಕರಿಗೆ ಕೊಡಿಸುವಂತೆ ಸರ್ಕಾರದವರು ಏರ್ಪಾಡು ಮಾಡುವರು ನಗದು ಹಣ ಹೆಚ್ಚಾಗಿ ಶೇಖರವಾಗುವಂಥ ಖಜಾನೆಗಳಲ್ಲಿ ಕರೆನ್ಸಿ ನೋಟುಗಳನ್ನು ಜನರಿಗೆ ಕೊಟ್ಟು ಹಣವನ್ನು ತೆಗೆದುಕೊಳ್ಳಬಹುದು ಜಮಾ ಆಗತಕ್ಕ ಹಣವೆಲ್ಲಾ ಕರೆನ್ಸಿ ನೋಟುಗಳೇ ಆಗಿರುವ ಖಜಾನೆಗಳಲ್ಲಿ ಕೇಳಿದವರಿಗೆ ಹಣವನ್ನೂ ಕರೆನ್ಸಿ ನೋಟುಗಳನ್ನೂ ಧಾರಾಳವಾಗಿ ಕೊಡಬಹುದು

ಕೂಲೀಸ್‌ಪೇಟೆಯ ಹಿಂದೂ ಮುಸಲ್ಮಾನರ ಏರ್ಪಾಡು

ಕೂಲೀಸ್‌ಪೇಟೆಯಲ್ಲಿ ರೇಷ್ಮೆ ಕಸಬನ್ನು ಮಾಡಿಕೊಂಡಿರುವ ವರ್ತಕರ್ರು ಒಂದು ಮಣ ರೇಷ್ಮೆಗೆ ಎರಡಾಣೆಯಂತೆಯೂ, ಒಂದು ಮಣ ರಣಬಿಗೆ ಒಂದ್ರೆಜೆಯಂತೆಯೂ ಚಂದಾ ಎತ್ತಿ ವಸೂಲಾದ ಹಣವನ್ನು ಧರ್ಮಕೆಲಸಗಳಿಗೆ ವಿನಿಯೋಗಿಸುತ್ತಿದ್ದಾರೆ ಈ ಹಣದಲ್ಲಿ ಪರಿವಾರಿಯನ್ನು ಕೂಲೀಸ್‌ಪೇಟೆಯಲ್ಲಿರುವ ಮುಸಲ್ಮಾನರ ಮಸೀದಿಯ ಖರ್ಚಿಗೆ ಕೊಡುತ್ತಿದ್ದರು ಉಳಿದ ಅರ್ಧಭಾಗವನ್ನು ತೆಗೆದಿಡುತ್ತಿದ್ದರಲ್ಲದೆ ವಿನಿಯೋಗವಾಗುತ್ತಿರಲಿಲ್ಲ ಈಗ ಉಭಯ ಪಂಗಡಗಳ ವರ್ತಕರೂ ಸೇರಿ, ಈ ಅರ್ಧ ಹಣವನ್ನು ಕೂಲೀಸ್‌ಪೇಟೆಯಲ್ಲಿರುವ ಶ್ರೀರಾಮದೇವರ ದೇವಸ್ಥಾನದ ನೈವೇದ್ಯಾನುಭೋಗಗಳಿಗೆ ಸಂಬಳರೂಪವಾಗಿ ಕೊಡಬಹುದೆಂದು ಒಪ್ಪಿ ತೀರ್ಮಾನ ಮಾಡಿಕೊಂಡಿದ್ದಾರೆ ಈ ಪ್ರಕಾರ ಕೊಡುವ ಚಂದಾ ಹಣವು ವರುಷಕ್ಕೆ ೫೦ ರಿಂದ ೧೦೦ ರೂಪಾಯಿ ಆದೀತೆಂದು ತಿಳಿಯುವುದು ಕೂಲೀಸ್ ಪೇಟೆಯ ಹಿಂದೂ ಮುಸಲ್ಮಾನರು ಆ ಊರಿನಲ್ಲಿರುವ ಮುಜರಾಯಿ ದೇವಸ್ಥಾನದ ಕೆಲಸಗಳಿಗೆ ಸಹಾಯ ಮಾಡಬೇಕೆಂದು ಕುತೂಹಲಪಟ್ಟು ಈರೀತಿ ಒಪ್ಪಿಕೊಂಡಿರುವುದು ಸಂತೋಷಕರವಾಗಿದೆ

ವೈಸ್‌ರಾಯಿಯವರ ಆತಿಥ್ಯಕ್ಕೆ ಏರ್ಪಾಡುಗಳು

ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರಾದ ಘನವಸ್ತಿಯಿದ ಲಾರ್ಡ್ ಮಿಂಟೋಯವರು ನವಂಬರ್ ತಿಂಗಳಲ್ಲಿ ಮೈಸೂರ್ರು ಪಟ್ಟಣಕ್ಕೆ ದಯಮಾಡುವವರಾದದ್ದರಿಂದ ಅವರಿಗೆ ಆತಿಥ್ಯವನ್ನು ಮಾಡುವುದಕ್ಕಾಗಿ ಒಂದು ರಿಸೆಪ್ಷನ್ ಕಮಿಟಿಯನ್ನು ನೇಮಿಸಿದೆ ಈ ಕಮಿಟಿಯ ಮೆಂಬರುಗಳ್ಯಾರೆಂದರೆ,—ಮೆ। ಗಳಾದ ಕೌನ್ಸಲರ್ ಕೆ ಪಿ ಪುಟ್ಟಣ್ಣಚೆಟ್ಟರು, ಮೈಸೂರ್ರು ಡೆಪ್ಯುಟಿ ಕಮಿಷನರು, ಸೂಪರಿನ್‌ಟೆಂಡಿಂಗ್ ಇನ್‌ಜನಿಯರ್ ಡಿ ಶೇಷಗಿರಿರಾಯರು, ಸಿವಿಲ್ ಸರ್ಜನ್ ಟಿ ಎಸ್ ನಂಜಪ್ಪನವರು, ದರ್ಬಾರ್ ಬಕ್ಷಿ ಎಚ್ ಲಿಂಗರಾಜೇ ಅರಸಿನವರು, ಉದ್ಯಾನವನಗಳ ಸೂಪರಿನ್‌ಟೆಂಡೆಂಟ್ ಜೆ ಎಚ್ ಕ್ರಂಬೀಗಲ್‌ಯವರು, ಅರಮನೆ ಆಫೀಸರ್ ಬಿ ರಾಮಕೃಷ್ಣರಾಯರು, ಅರಮನೆ ಇನ್‌ಜನಿಯರ್ ಮೆ ಸಿ ಮಾಧವರಾಯರು, ಮುನಿಸಿಪಲ್ ವೈಸ್ ಪ್ರೆಸಿಡೆಂಟ್ ಎಂ ಜಿ ಕೃಷ್ಣಸ್ವಾಮಿರಾಯರು ಈ ಕಮಿಟಿಯವರಿಗೆ ಇತರರನ್ನು ಮೆಂಬರಾಗಿ ಸೇರಿಸಿಕೊಳ್ಳುವುದಕ್ಕೂ ಸಬ್ ಕಮಿಟಿಗಳನ್ನು ಮಾಡಿಕೊಳ್ಳುವುದಕ್ಕೂ ಅಧಿಕಾರ ವಹಿಸಿದೆ ಕಮಿಟಿಯವರು ಬೇಗನೆ ಸಭೆಸೇರಿ, ಆತಿಥ್ಯದ ಏರ್ಪಾಡುಗಳನ್ನು ಆಲೋಚನೆಯಿಂದ ಗೊತ್ತುಮಾಡಿ ಗವರನ್‌ಮೆಂಟ್ ಸ್ಯಾಂಕ್ಷನ್ ಪಡೆದು ಆ ಏರ್ಪಾಡಿನಂತೆ ಕಾರ್ಯಗಳನ್ನು ನಡಿಸತಕ್ಕದ್ದು

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಸ್ವರವಂದಿಗ, ತ್ಯಾಮಗೊಂಡ್ಲು —ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆದು ತಿಳಿಸಿರಿ

ತುಂಕೂರು ಸಬ್ ಡಿವಿಜನ್ ಪೋಸ್ಟ್ ಆಫೀಸುಗಳ ವಿಚಾರ —ಬಾತ್ಮಿದಾರರು ಮೊದಲು ಪೋಸ್ಟ್ ಇಲಾಖಾ ಸೂಪರಿಂಟೆಂಡೆಂಟರಿಗೆ ಬರೆದುಕೊಂಡಲ್ಲಿ ಅವರು ಕ್ರಮಪಡಿಸುತ್ತಾರೆನ್ನುವುದಕ್ಕೆ ಸಂದೇಹವಿಲ್ಲ

ಶ್ರೀರಂಗಪಟ್ಟಣ ಆಸ್ಪತ್ರೆ ವಿಚಾರ —ಪ್ರಜೆಗಳ ಮುಖಂಡರು ತಮ್ಮ ಅನಾನುಕೂಲಗಳನ್ನು ಸೀನಿಯರ್ ಸರ್ಜನರವರಿಗೆ ಮೊದಲು ತಿಳಿಸಬೇಕು ಅವರು ಪ್ರಜೆಗಳ ಕೊರತೆಗಳನ್ನು ನೀಗಲಾಡಿಸದೆ ಇರರು

ಉಡಕೋಟೆ ಸ್ಕೂಲಿನ ಉಪಾಧ್ಯಾಯರ ವಿಷಯ —ಈ ವಿಚಾರವನ್ನು ಉಪಾಧ್ಯಾಯರುಗಳೂ ಮಕ್ಕಳ ಪೋಷಕರೂ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದಲ್ಲಿ ಅವರು ಅನುಕೂಲಮಾಡಿ ಕೊಟ್ಟಾರೆಂದು ನಂಬುತ್ತೇವೆ —ಎಡಿ]

ಕರೆಸ್‌ಪಾಂಡೆನ್ಸ್

ಕಳ್ಳರ ಕಾಟವು

ಅಯ್ಯಾ,

ಬೌರಿಂಗ್‌ಪೇಟೆ ತಾಲ್ಲೂಕು ಬೊಂಪಲ್ಲಿ ಗ್ರಾಮದಲ್ಲಿರುವ ಪೂಜಾರಿ ವೆಂಕಟರಾಮನಾಯಕ ಎಂಬುವನು ಕಳೆದ ಬುಧವಾರ ರಾತ್ರಿ ತನ್ನ ಮರಾಠದ ತಲೆಬಾಗಿಲನ್ನು ಬಂದೋಬಸ್ತು ಮಾಡಿ ತಾನು ಮನೆಯಲ್ಲಿ ಮಲಗಿದ್ದನು ಬೆಳಗ್ಗೆ ಎದ್ದು ನೋಡುವಾಗ್ಗೆ ಗಡಿಗೋಲು ವಗೈರೆ ಕಿತ್ತುಹಾಕಿ ಬಾಗಿಲು ಹಾರಾ ತೆಗೆದುಹಾಕಿತ್ತು ಆತನು ಗಾಬರಿಯಿಂದ ತನ್ನ ದೊಡ್ಡಿಯಲ್ಲಿದ್ದ ಮೇಕೆಗಳನ್ನು ನೋಡಲಾಗಿ ಒಂದು ಮೇಕೆ ಮಾತ್ರ ಕಳುವಾಯಿತೆಂದು ತಿಳಿಯಿತು ಈಗ್ಗೆ ೧೫ ದಿನಗಳಿಗೆ ಮುಂಚೆ ಇದೇ ಗ್ರಾಮದ ಪಲಮೊಡುಗು ಪೂಜಾರಿ ವೆಂಕಟರಾಮಣ್ಣನ ಹೆಂಡತಿಯು ವಾಸವಾಗಿದ್ದ ಮನೆಯನ್ನು ತನ್ನ ಗಂಡನು ಮೃತಪಟ್ಟ ಕಟ್ಟನಕ್ಷತ್ರಬೆಸೆಯಿಂದ ಬಿಟ್ಟು ಬೇರೆ ಸ್ಥಳದಲ್ಲಿ ವಾಸಮಾಡುತ್ತಿದ್ದಳು ಸದರಿ ಮನೆಗೆ ಕಳ್ಳರು ಪ್ರವೇಶಮಾಡಿ ಬೀಗವನ್ನು ಕಿತ್ತು ಮನೆಯೊಳಕ್ಕೆ ನುಗ್ಗಿದಾಗ ಗ್ರಾಮಸ್ಥರು ಕಂಡು ಗಲಾಟೆಮಾಡಲು ಓಡಿಹೋದರು ಸೊತ್ತುಗಳು ಯಾವದೂ ಕಳುವಾಗಲಿಲ್ಲ ಈ ಎರಡು ವಿಚಾರಗಳಲ್ಲಿ ಪೋಲೀಸ್ ಸ್ಟೇಷನ್ ಆಫೀಸರಿಗೆ ರಿಪೋರ್ಟ ಸಹ ಕಳುಹಿಸಿರುತ್ತೇನೆ ಈ ಗ್ರಾಮದಲ್ಲಿ ೩೬ ಮನೆಗಳು ಇರುತ್ತವೆ ಇಲ್ಲದೆ ಈ ಗ್ರಾಮ ಕಾಡುಪ್ರದೇಶವಾಗಿದೆ ಈ ವಿಚಾರದಲ್ಲಿ ಸರ್ಕಾರದವರು ಆಗಾಗ್ಗೆ ಗ್ರಾಮ ಉಸ್ತುವಾರಿಯಾಗಿ ನೋಡಿಕೊಳ್ಳುವರೆಂದು ನಂಬಿ ಇರುತ್ತೇನೆ

ವೆಂಕಟರಾಮಯ್ಯ, ಪಟೇಲ್

ವಿವಿಧ ವರ್ತಮಾನಗಳು

ರಾವಲ್‌ಪಿಂಡಿಯಲ್ಲಿರುವ ಬ್ಯಾರಿಸ್ಟರ್ ಮೆ। ಬೋದರಾಜ ಸಾಹನಿಯವರನ್ನು ಕಾಶ್ಮೀರ ಸಂಸ್ಥಾನದ ಚೀಫ್ ಜಡ್ಜರ ಸ್ಥಾನಕ್ಕೆ ನೇಮಿಸಿಕೊಂಡಿರುತ್ತಾರೆ

ಬ್ಯಾಂಕಾಕ್ ಪಟ್ಟಣದಲ್ಲಿ ಬರ್ಮಾ ಸ್ಟ್ಯಾಂಡರ್ಡ್ ಕಿರೋಸಿನ್ ಕಂಪನಿಯ ವ್ಯಾನೇಜರಾಗಿದ್ದ ಸಿ ರಾಬರ್ಟ್ಸ್ ಎಂಬುವನು ಕಂಪನಿಯ ಹಣವನ್ನು ತಿಂದು ಹಾಕಿದ್ದರಿಂದ ಅವನಿಗೆ ಮೂರು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿತು

ತಿರುವಾಂಕೂರು ಸಂಸ್ಥಾನದ ಶ್ರೀ ಮೂಲಂ ಎಂಬ ಪ್ರಜಾಪ್ರತಿನಿಧಿ ಸಭೆಯು ಜನವರಿ ೫ನೇ ತಾ ಬುಧವಾರ ನಡೆಯುವುದೆಂದು ಪ್ರಕಟವಾಗಿದೆ ಆ ಸಂಸ್ಥಾನದಲ್ಲಿ ಮುಂದಿನ ವರುಷ ನಡೆಯುವ ಸೆನ್‌ಸಸ್ ಗಣತಿಯ ಏರ್ಪಾಡಿಗೆ ಮೆ। ಎಸ್ ಸುಬ್ರಹ್ಮಣ್ಯ ಐಯರವರನ್ನು ಕಮಿಷನರಾಗಿ ನೇಮಕ ಮಾಡಿರುತ್ತಾರೆ

ಅಲ್ಲಹಾಬಾದ್ ಪಟ್ಟಣದಲ್ಲಿ ಫಾಜಲುಲ್ಲಾ ರ್ ಎಂಬೊಬ್ಬ ಮಹಮದೀಯನು ಸಿವಿಲ್ ಕೋರ್ಟಿನಲ್ಲಿ ತಂದಿದ್ದ ಎರಡು ಮೊಕದ್ದಮೆಗಳನ್ನೂ ಜಡ್ಜಿಯವರು ವಜಾಮಾಡಿದರು ಅವನು ಅದಕ್ಕಾಗಿ ಅವರ ಮೇಲೆ ಜೋಡನ್ನು ಎಸೆದನು ಈ ಮನುಷ್ಯನಿಗೆ ಸೆಷನ್ಸ್ ಜಡ್ಜರು ೧೮ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ

ಬೊಂಬಾಯಿನಲ್ಲಿ ಪ್ರಕಟವಾಗುವ ಹಿಂದೂ ಪಂಚ್ ಎಂಬ ಪತ್ರಿಕೆಯಲ್ಲಿ ಮೆ ಜಿ ಕೆ ಗೋಖಲೆಯವರ ಮೇಲೆ ಪ್ರಜೆಗಳಿಗೆ ಅಸಮಾಧಾನ ಉಂಟಾಗಿ ಅವರನ್ನು ಹಿಂಸಿಸುವ ಅರ್ಥವುಳ್ಳ ಬಾತ್ಮಿಯನ್ನು ಬರೆದು ಪ್ರಕಟಿಸಲ್ಪಟ್ಟಿತ್ತು ಅದಕ್ಕಾಗಿ ಆ ಆಚ್ಚಿನ ಆಫೀಸನ್ನೇ ಮುಚ್ಚಿ ಸಾಮಾನುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟು, ನೋಟಿಸ್ ಜಾರಿಮಾಡಿಸಿರುತ್ತಾರೆ ಇದು ಈ ವಾರ ವಿಚಾರಣೆಯಾಗುವುದಾಗಿದೆ

ಕಳೆದ ತಾ ೧೬ ನೇ ಶನಿವಾರ ಬಂಗಾಳಾ ಆಧಿಪತ್ಯದ ಕೆಲವು ಸ್ಥಳಗಳಲ್ಲಿ ಬಂಗಾಳಿಗಳು ವಿಭಜನೆಯ ವಾರ್ಷಿಕ ಕೂಟಗಳನ್ನು ನಡಿಸಿದರು ಕಲ್ಕತ್ತೆಯಲ್ಲಿ ಮೆ ಆನಂದಮೋಹನ ಬೋಸ್ ಮೆ ಅಮೃತಲಾಲ್ ಚಕ್ರವರ್ತಿಯವರು ಸಭಾನಾಯಕರಾಗಿದ್ದರು ಅರವಿಂದ ಘೋಷ್, ಸುರೇಂದ್ರನಾಥ ಬ್ಯಾನರ್ಜೀ ಮೊದಲಾದ ಪ್ರಮುಖರಾದ ಬಂಗಾಳಿಗಳು ಉಪನ್ಯಾಸಗಳನ್ನು ನಡಿಸಿದರು ಫೆಡರೇಷನ್ ಹಾಲ್ ಎಂಬ ಒಂದು ಉಪನ್ಯಾಸ ಮಂದಿರವನ್ನು ಕಟ್ಟಬೇಕೆಂಬ ಫಂಡಿಗೆ ಚಂದಾ ಕೊಡಿಸಿದರು ಆ ದಿನ ಸಭೆಯಲ್ಲಿ ೨೬,೦೦೦ ರೂಪಾಯಿ ವಸೂಲಾಯಿತು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ನಾರಾಯಣಗಂಜ್ ಎಂಬ ಊರಿನ ಒಬ್ಬ ವರ್ತಕನು ಚೀಲಗಳಲ್ಲಿ ೨೩೦೦೦ ರೂಪಾಯಿ ಹಾಕಿ ಮೂರು ಮಂದಿ ಸೇವಕರ ವಶಕ್ಕೆ ಕೊಟ್ಟು ರೈಲ್ ಗಾಡಿಯ ಮೇಲೆ ಕಳುಹಿಸಿದನು ರೈಲ್ ಗಾಡಿಗಳು ಹೋಗುತ್ತಿದ್ದಾಗ ರಾಜೇಂದ್ರಪುರವೆಂಬ ಸ್ಟೇಷನ್ ಬಳಿ ಕಳ್ಳರು ಆ ಗಾಡಿಗೆ ನುಗ್ಗಿ ಸೇವಕರನ್ನು ಹೊಡೆದು ಕೆಡವಿ ಅವರ ಬಳಿ ಇದ್ದ ಹಣದ ಚೀಲಗಳನ್ನು ಹೊತ್ತುಕೊಂಡು ಹೋದರು ಒಂದು ಚೀಲ ಮಾತ್ರ ಉಳಿದುಕೊಂಡಿತು ಸೇವಕರಲ್ಲಿ ಒಬ್ಬನು ಸತ್ತು ಹೋದನು ಇನ್ನಿಬ್ಬರು ಗಾಡಿಯಿಂದ ಹೊರಕ್ಕೆ ಧುಮುಕಿದರು ಈ ಪೈಕಿ ಒಬ್ಬನು ಮೃತಪಟ್ಟನು ಪೋಲೀಸಿನವರು ಈ ಕಳ್ಳರನ್ನು ತಲಾಷ್ ಮಾಡುವುದರಲ್ಲಿದಾರೆ

ಹೈದರಾಬಾದ್ ಸಂಸ್ಥಾನದ ನೈಜಾಮರವರು ಆ ಸಂಸ್ಥಾನದಲ್ಲಿ ಜುಡಿಷಲ್ ಸೆಕ್ರೆಟರಿ ಆಗಿದ್ದ ಮೌಲ್ವಿ ಮಹಮದ್ ಅಜೀಸ್ ಮಿರ್ಜಾ ಯವರನ್ನೂ, ಅವರ ಅಸಿಸ್ಟೆಂಟರಾಗಿದ್ದ ಮೌಲ್ವಿ ಸೈಫುದ್ದೀನ್ ಯವರನ್ನೂ, ಲೆಜಿಸ್ಲೆಟಿವ್ ಇಲಾಖೆಯ ರೆಜಿಸ್ಟ್ರಾರ್ ಜಾಫರ್ ಅಲ್ಲಿ ಖಾನ್‌ರವರನ್ನೂ ಹುಕುಂ ಕೊಟ್ಟು ಗಡೀಪಾರು ಮಾಡಿದರು ಅವರಿಗೆ ಮೂರು ತಿಂಗಳ ಸಂಬಳ ವಾಪತಿ ಮಾಡಿಸಿದರು ಪೆನ್‌ಷನ್ ಕೊಡುವಂತೆ ಹುಕುಂ ಕೊಟ್ಟಿದ್ದಾರೆ ಮತ್ತು ವಿದ್ಯಾಭ್ಯಾಸದ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿದ್ದ ಮೆ ಹಾಂಲಿನ್ ಹುಸೇನ್ ಯವರನ್ನು ಕೆಲಸದಿಂದ ವಜಾ ಮಾಡಿಸಿರುತ್ತಾರೆ ನಿಜಾಮಶಿ ನೈಜಾಮರವರು ಈ ಅಧಿಕಾರಿಗಳ ವಿಷಯದಲ್ಲಿ ಇಂಥಾ ಹುಕುಂ ಕೊಡಲು ಕಾರಣವೇನೋ ಇನ್ನೂ ಪ್ರಕಟವಾಗಲಿಲ್ಲ.

ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು.

ಮೊದಲನೇ ದಿನದ ದರ್ಬಾರು.

ಕಳೆದ ಶುಕ್ರವಾರ ಬೆಳಗ್ಗೆ ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವಗಳು ಪ್ರಾರಂಭವಾದವು. ಆದಿನ ಮಳೆ ಸುರಿಯುತ್ತಾ ಬೆಳಕು ಹರಿದದ್ದರಿಂದ ಉತ್ಸವಗಳು ಎಲ್ಲಿ ಅಸಂತೋಷಕರಗಳಾಗುವವೋ ಎಂಬ ಶಂಕೆಯುಂಟಾಗಿತ್ತು. ಆದರೆ ಒಂದೆರಡು ಗಂಟೆ ಹೊತ್ತಿನೊಳಗಾಗಿ ಮಳೆಯು ನಿಂತು ಆಹ್ಲಾದಕರವಾದ ಸೂರ್ಯಕಿರಣಗಳು ಪ್ರಕಾಶಿಸಿದವು

ಬೆಳಗಿನ ದರ್ಬಾರು.

ಶ್ರೀಮನ್ಮಹಾರಾಜರವರು ಪ್ರಾತಃಕಾಲ ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು ಪಟ್ಟೆ ವಸ್ತ್ರಗಳನ್ನು ಧರಿಸಿ ಕುಲದೇವರ ಪೂಜೆ ಮಾತೃಸೇವೆ ಮೊದಲಾದ ಶಾಸ್ತ್ರ ವಿಧಿಗಳನ್ನು ನೆರವೇರಿಸಿ, ಸುಮಾರು ೯ ಘಂಟೆಯ ಹೊತ್ತಿಗೆ ಅರಮನೇ ಕರೀಕಲ್ಲು ತೊಟ್ಟಿಯಿಂದ ಪಾಲಕಿಯಲ್ಲಿ ಕುಳಿತು ಬಿರುದು ಸಲ್ಯನಗಳ ಸಮೇತ ಜಗನ್ಮೋಹನ ಮಹಲಿಗೆ ಚಿತ್ತೈಸಿದರು. ದರ್ಬಾರ್ ಮಂದಿರದಲ್ಲಿ ವೈದಿಕ ಮಂಡಲಿಯವರೂ, ಸರ್ದಾರರೂ, ಅರಸುಗಳೂ, ದಿವಾನ್‌ರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ, ಕಸಬು ಮತ್ತು ಕೋಮುಗಳ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಹೊರಗಡೆ ಮೈದಾನದಲ್ಲಿ ಕುದುರೆ ಸವಾರರು, ಸಿಪಾಯಿಗಳು, ರಾಚಾವಾರದವರು, ಕಟ್ಟಿಗೆಯವರು, ನಗಾರಿಗಳನ್ನು ಹೊತ್ತಿದ್ದ ಆನೆಗಳು, ಒಂಟೆಗಳು, ಬೇರೆ ಬೇರೆ ದಿನಸಿನ ವಾದ್ಯಗಾರರು ಮೊದಲಾದವರು ಸಾಲು ಸಾಲಾಗಿ ನಿಂತಿದ್ದರು. ಸುಮಾರು ೧೦॥ ಘಂಟೆಗೆ ಶ್ರೀಮನ್ಮಹಾರಾಜರವರು ದರ್ಬಾರ್ ಮಂದಿರಕ್ಕೆ ದಯಮಾಡಿ ಸಿಂಹಾಸನದ ಬಲಪಾರ್ಶ್ವದಲ್ಲಿ ಬಂಗಾರದ ಪೀಠದ ಮೇಲೆ ಕುಳಿತು ಪುರೋಹಿತರ ಮುಖೇನ ದಶದಾನಗಳು ಪೂಜೆ ದಾನಾದಿಗಳನ್ನು ನಡಿಸಿ, ಸಿಂಹಾಸನದ ಮುಂಭಾಗದಲ್ಲಿ ನಿಂತು ವಿಧಿವತ್ತಾಗಿ ಪೂಜೆ ಸಹಸ್ರನಾಮಾರ್ಚನೆ ಧೂಪ ದೀಪ ನೈವೇದ್ಯಾದಿಗಳನ್ನು ಮಾಡಿ, ಸಿಂಹಾಸನದ ಸುತ್ತಲೂ, ಮೂರಾವರ್ತಿ ಪ್ರದಕ್ಷಿಣೆ ಮಾಡಿ, ಸರ್ದಾರ್ ಗೋಪಾಲರಾಜೇ ಅರಸಿನವರ ಹಸ್ತಾಲಂಬನವನ್ನು ಪಡೆದು ಸಿಂಹಾಸನಾರೋಹಣವನ್ನು ಮಾಡಿ ನಿಂತುಕೊಂಡು ವಾದ್ಯಗಳು ಮೊಳಗುತ್ತಾ ಸೈನಿಕರು ಮುಜರೆ ಮಾಡುತ್ತಾ ಫಿರಂಗಿಗಳು ಹಾರುತ್ತಾ ಇರುವಲ್ಲಿ ಕುಳಿತುಕೊಂಡರು ಬಲಪಾರ್ಶ್ವದಲ್ಲಿ ಉಚ್ಚಸ್ಥಾನದಲ್ಲಿ ಶ್ರೀಮನ್ ಯುವರಾಜರವರು ಕುಳಿತುಕೊಂಡರು

ದರ್ಬಾರು ಪ್ರಾರಂಭವಾದ ಬಳಿಕ ಸಂಸ್ಥಾನದೊಳಗೆ ಇರುವ ಮುಖ್ಯ ಮುಖ್ಯ ಮಠದೇವಸ್ಥಾನಗಳ ಪ್ರತಿನಿಧಿಗಳು ಶ್ರೀಮನ್ಮಹಾರಾಜರವರಿಗೆ ಆಶೀರ್ವಾದ ಪೂರ್ವಕವಾಗಿ ಬಿಲ್ವಪತ್ರೆಗಳನ್ನು ಒಪ್ಪಿಸಿದರು ಅರಮನೆಯ ವಿದ್ವಾಂಸರೂ ರುತ್ವಿಕ್ಕರೂ ಸಾಮಾನ್ಯ ವೈದಿಕ ಮಂಡಲಿಯವರೂ ಒಬ್ಬೊಬ್ಬರಾಗಿ ಸಿಂಹಾಸನದ ಬಳಿಗೆ ಹೋಗಿ ಶ್ರೀಮನ್ಮಹಾರಾಜರವರಿಗೆ ಫಲಮಂತ್ರಾಕ್ಷತೆಗಳನ್ನು ಒಪ್ಪಿಸಿದರು, ಮಹಾರಾಜರವರು ಅವುಗಳನ್ನೆಲ್ಲಾ ಹಸ್ತ ಸ್ಪರ್ಶದಿಂದ ಸ್ವೀಕರಿಸಿದರು ತರುವಾಯ, ದಿವಾನ್‌ರವರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ಸರ್ದಾರರೂ ರಾಜಸಿಂಹಾಸನದವರೂ ಹಿಂದೂ ಮುಸಲ್ಮಾನ್ ಪಾರ್ಸಿ ಜನರ ಎಲ್ಲಾ ಕಸಬುಗಳ ದೊಡ್ಡ ಮನುಷ್ಯರೂ ಸಾಲು ಸಾಲಾಗಿ ಎದುರು ನಿಂತು ಮುಜರೆ ಮಾಡಿ ಒಬ್ಬೊಬ್ಬರಾಗಿ ಸಿಂಹಾಸನದ ಬಳಿಗೆ ಹೋಗಿ ಶ್ರೀಮನ್ಮಹಾರಾಜರವರಿಗೆ ನಜರನ್ನು ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಸಾವಧಾನದಿಂದ ನಜರುಗಳನ್ನು ಮುಟ್ಟಿ ವಾಪಸು ಮಾಡಿದರು ದರ್ಬಾರಿಗಳೆಲ್ಲರೂ ತಮ್ಮ ತಮ್ಮ ಅಧಿಕಾರ ಸ್ಥಿತಿಗತಿಗಳಿಗೆ ಅನುಸಾರವಾಗಿ ಸಾಲು ಕಟ್ಟಿ ಸಿಂಹಾಸನದ ಎದುರಿಗೆ ಉಭಯ ಪಾರ್ಶ್ವಗಳಲ್ಲೂ ನಿಂತಿರುವಲ್ಲಿ ಪಟ್ಟದಾನೆ ಪಟ್ಟದ ಕುದುರೆಗಳು ಸರ್ಕಾರ್ ವಾದ್ಯ ತಾಳಮೇಳಗಳ ಸಮೇತ ಕೆರೆಯ ಬಳಿಯಿಂದ ದರ್ಬಾರ್ ಮಂದಿರದ ಮುಂಭಾಗದ ಮೈದಾನಕ್ಕೆ ಬಂದು ಶ್ರೀಮನ್ಮಹಾರಾಜರವರಿಗೆ ಮುಜರೇ ಮಾಡಿ ತೆರಳಿದವು. ನಗಾರಿಗಳನ್ನು ಹೊತ್ತಿದ್ದ ಆನೆಗಳೂ ರಾಹುತರು ಕುಳಿತಿದ್ದ ಒಂಟೆಗಳೂ ತುರುಪ್ ಕುದುರೆ ಸವಾರರೂ ಸಿಲ್ಲೇದಾರ್ ಸವಾರರೂ ಸಿಪಾಯಿಗಳೂ ರಾಚಾವಾರದವರೂ ಓಲೇಕಾರರೂ ಕ್ರಮವಾಗಿಯೂ ಸಾಲು ಸಾಲಾಗಿಯೂ ಮೈದಾನದಲ್ಲಿ ಸಿಂಹಾಸನದ ಎದುರಿಗೆ ಬಂದು ಶ್ರೀಮನ್ಮಹಾರಾಜರವರಿಗೆ ಮುಜರೇ ಮಾಡಿ ಹೋಗಿ ಯಥಾಸ್ಥಾನಗಳಲ್ಲಿ ನಿಂತುಕೊಂಡರು ಸಿಪಾಯಿಗಳು ಬಂದೂಕುಗಳಿಗೆ ಹುಸಿ ಮದ್ದನ್ನು ಹಾಕಿ ಮೂರು ಸಲ ಸಂತೋಷ ಸೂಚಕವಾದ ಸುರುಟುಗಳನ್ನು ಹಾರಿಸಿದರು. ಬಳಿಕ ಸೈನಿಕರೆಲ್ಲಾ ಒಟ್ಟು ಸೇರಿ ಏಕಧ್ವನಿಯಿಂದ "ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದೂರ್‌ಕಿ ಜೈ" ಎಂದು ಉಚ್ಚರಿಸಿ ಜಯಘೋಷವನ್ನು ಮಾಡಿದರು ಈ ಮಧ್ಯೆ ಶ್ರೀಮನ್ಮಹಾರಾಜರವರ ಇಂಗ್ಲಿಷ್ ಬ್ಯಾಂಡ್, ಬಾರ್ ಸಿಪಾಯಿಗಳ ಇಂಗ್ಲಿಷ್ ಬ್ಯಾಂಡ್, ಜಿಲ್ಲೆ ಕಛೇರಿಯ ದೇಶೀಯ ಬ್ಯಾಂಡ್, ತಂಜಾವೂರಿನ ಓಲಗ, ಈ ವಾದ್ಯಗಾರರು ಒಬ್ಬರಾದಮೇಲೊಬ್ಬರಂತೆ ದಿವ್ಯವಾದ ನುಡಿಗಳನ್ನು ಎತ್ತಿ ಮನೋಹರವಾಗಿ ವಾದ್ಯವಾದುತ್ತಿದ್ದರು ಅರಮನೆ ಇಲಾಖೆಯವರು ದರ್ಬಾರಿಗಳಿಗೆಲ್ಲಾ ಹೂವಿನ ಹಾರ ಹಾಕಿ ಅಡಿಕೆಲೆಯನ್ನು ಕೊಟ್ಟರು ತರುವಾಯ ದರ್ಬಾರಿಗಳು ಸಾಲು ಸಾಲಾಗಿ ಸಿಂಹಾಸನದ ಎದುರಿಗೆ ಬಂದು ನಿಂತು ಮುಜರೇ ಮಾಡಿ ತೆರಳಿದರು. ಕಡೆಯಲ್ಲಿ ಶ್ರೀಮನ್ಮಹಾರಾಜರವರು ದಿವಾನ್‌ರೇ ಮೊದಲಾದ ಕೆಲವು ಮುಖ್ಯ ಅಧಿಕಾರಿಗಳಿಗೂ ಸರ್ದಾರರಿಗೂ ಪ್ರಸಾದವನ್ನು ಕೊಟ್ಟರು ಬಳಿಕ ಶ್ರೀಮನ್ಮಹಾರಾಜರವರು ಸಿಂಹಾಸನದಮೇಲೆ ಕುಳಿತಿರುವಾಗಲೇ ಸುತ್ತಲೂ ಪರದೆಗಳನ್ನು ಹಾಕಿದಾಗ ಜನಾನಾ ಸ್ತ್ರೀಯರು ಸಿಂಹಾಸನದ ಬಳಿಗೆ ಬಂದು ಶ್ರೀಮನ್ಮಹಾರಾಜರವರಿಂದ ಪ್ರಸಾದವನ್ನು ಸ್ವೀಕರಿಸಿ ಹೋದರು. ತರುವಾಯ ಸಲಾಂಬಾಜ ಆಗುತ್ತಿರುವಲ್ಲಿ ಮಹಾರಾಜರವರು ಸಿಂಹಾಸನದಿಂದಿಳಿದು ಮಂದಿರದೊಳಕ್ಕೆ ಚಿತ್ತೈಸಿದರು ಅಲ್ಲಿಗೆ ಬೆಳಗಿನ ದರ್ಬಾರು ಪೂರೈಸಿತು

ಸಾಯಂಕಾಲದ ದರ್ಬಾರು

ದರ್ಬಾರಿಗಳೂ ಸಕಲ ಸಲ್ತನುಗಳೂ ಸಾಯಂಕಾಲ ೬ ಗಂಟೆಗೆ ದರ್ಬಾರ್ ಮಂದಿರದಲ್ಲಿ ಹಾಜರಾಗಿರುವಂತೆ ದರ್ಬಾರ್ ಭಕ್ಷಿಯವರ ಸರ್ಕ್ಯುಲರ್‌ಪ್ರಕಾರ ಎಲ್ಲಾ ದರ್ಬಾರಿಗಳೂ ೬ ಗಂಟೆಯೊಳಗಾಗಿ ಹಾಜರಾಗಿದ್ದರು. ಶ್ರೀಮನ್ಮಹಾರಾಜರವರು ೬॥ ಗಂಟೆಗೆ ಮಹಲಿನೊಳಗಿಂದ ದರ್ಬಾರ್ ಮಂದಿರಕ್ಕೆ ದಯಮಾಡಿ, ಪುರೋಹಿತರ ಮುಖೇನ ಸಿಂಹಾಸನವನ್ನು ಅರ್ಚನೆಮಾಡಿ ಪ್ರದಕ್ಷಿಣೆ ಬಂದು ಮೆಟ್ಟಲು ಹತ್ತಿ ಸಿಂಹಾಸನದಲ್ಲಿ ಕುಳಿತುಕೊಂಡರು. ಮಂದಿರವು ವಿದ್ಯುಚ್ಛಕ್ತಿಯ ದೀಪಗಳಿಂದ ಹಗಲಿನೋಪಾದಿಯಲ್ಲಿ ಪ್ರಕಾಶಮಾನವಾಗಿ ಆಹ್ಲಾದವನ್ನುಂಟು ಮಾಡುತ್ತಿತ್ತು. ಬ್ಯಾಂಡು ವಾದ್ಯಗಳು ಮಧುಗೀತಗಳನ್ನು ನುಡಿಸುತ್ತಾ ಪರಮಾನಂದವನ್ನುಂಟುಮಾಡುತ್ತಿದ್ದವು. ಈ ಮಧ್ಯೆ ದರ್ಬಾರಿಗಳು ಪದ್ಧತಿಯ ಪ್ರಕಾರ ಸಾಲು ಸಾಲಾಗಿ ನಿಂತು ಶ್ರೀಮನ್ಮಹಾರಾಜರವರಿಗೆ ಮುಜರೇ ಮಾಡಿ ಕ್ರಮವಾಗಿ ಕುಳಿತರು ಹೊರಗಡೆ ಮೈದಾನದಲ್ಲಿ ಜಟ್ಟಿ ಕಾಳಗಗಳು ನಡೆದವು ಸೈನ್ಯದ ಹುದ್ದೇದಾರರು ಮುಜರೇ ಮಾಡಿ, ಕತ್ತಿಗಳ ನೆತ್ತಿಯನ್ನು ಶ್ರೀಮನ್ಮಹಾರಾಜರವರಿಗೆ ನಜರೊಪ್ಪಿಸಿದರು ಮಹಾರಾಜರವರು ಮುಟ್ಟಿಬಿಡುತ್ತಿದ್ದರು ದೀವಟಿಗೆ ಸಲಾಂ ಆದ ತರುವಾಯ ಪಟ್ಟದಾನೆ ಕುದುರೆಗಳು ಮೆರವಣಿಗೆ ಬಂದು ಮುಜರೇ ಮಾಡಿ ಹೋದವು ಬಳಿಕ ನಾನಾ ತರದ ಬಾಣಬಿರುಸುಗಳು ಹಾರಿಸಲ್ಪಟ್ಟವು. ದರ್ಬಾರಿಗಳಿಗೆ ಹಾರ ಎಲೆ ಅಡಿಕೆ ಹಂಚಿ ಆದಮೇಲೆ ಅವರು ಮುಜರೇ ಮಾಡಿ ತೆರಳಿದರು. ಶ್ರೀಮನ್ಮಹಾರಾಜರವರು ಬೆಳಗಿನಂತೆಯೇ ದಿವಾನ್‌ರವರಿಗೆ ಹಾರ ಹಾಕಿಸಿ, ಪ್ರಸಾದಗಳನ್ನು ಕೊಟ್ಟು, ದರ್ಬಾರನ್ನು ಮುಕ್ತಾಯ ಮಾಡಿ ಸಲಾಂ ಬಾಜಾ ಆಗುತ್ತಿರುವಲ್ಲಿ ಸಿಂಹಾಸನದಿಂದಿಳಿದು ಮಹಲಿನೊಳಕ್ಕೆ ಚಿತ್ತೈಸಿದರು ಇಲ್ಲಿಗೆ ಮೊದಲನೆಯ ದಿವಸ ದರ್ಬಾರುಗಳು ಮುಕ್ತಾಯವಾದವು.

ಇತರ ದಿನಗಳ ದರ್ಬಾರುಗಳು.

ಮೇಲ್ಕಂಡ ಪ್ರಕಾರ ಎರಡನೆಯ ದಿನದ ಆರಾಭ್ಯ ಪ್ರತಿ ದಿನವೂ ಸಾಯಂಕಾಲದ ಹೊತ್ತು ಶ್ರೀಮನ್ಮಹಾರಾಜರವರು ದರ್ಬಾರುಗಳನ್ನು ನಡಿಸಿದರು ಇದೇ ರೀತಿ ಇಂದಿನವರೂ ನಾಳೆಯೂ ದರ್ಬಾರುಗಳು ನಡೆಯುವವು

ಇಂಗ್ಲಿಷ್ ದರ್ಬಾರು

ತಾ. ೨೩ ನೇ ಶನಿವಾರ ಸಾಯಂಕಾಲ ೫ ಗಂಟೆಗೆ ಇಂಗ್ಲಿಷ್ ದರ್ಬಾರು ನಡೆಯತಕ್ಕದ್ದೆಂದು ಗೊತ್ತಾಗಿದೆ ಇದಕ್ಕಾಗಿ ನಾಳೆಯೂ ನಾಡಿದ್ದೂ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ಇತರ ಕಡೆಗಳಿಂದ ರಾಜಧಾನಿಗೆ ಬರುವರು ಇವರಿಗೆಲ್ಲಾ ಇಲ್ಲಿನ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಸುಮಾರು ಒಂದು ವಾರದ ತನಕ ಆತಿಥ್ಯಗಳು ಜರುಗುವವು.

ವಿಜಯ ದಶಮಿ ಉತ್ಸವವು.

ತಾ. ೨೪ ನೇ ಭಾನುವಾರ ಬೆಳಗ್ಗೆ ವಿಜಯದಶಮಿಯ ನಿಮಿತ್ತ ಜಗನ್ಮೋಹನ ಮಹಲಿನಿಂದ ಪಟ್ಟದಾನೆ ಕುದುರೆಗಳ ಮೆರವಣಿಗೆ ಹೊರಟು ಕರ್ಜನ್ ಪಾರ್ಕ್ ದೊಡ್ಡ ಪೇಟೆಗಳ ಮಾರ್ಗವಾಗಿ ದೊಡ್ಡಕೆರೆ ಕೆರೆಯ ಬಳಿ ಇರುವ ಬನ್ನಿ ಮಂಟಪಕ್ಕೆ ಹೋಗಿ ಸೇರುವವು

ಸಾಯಂಕಾಲ ಸುಮಾರು ೪ ಗಂಟೆಗೆ ಶ್ರೀಮನ್ಮಹಾರಾಜರವರು ಉತ್ಸವದಲ್ಲಿ ತೆರಳಿ ಬನ್ನಿ ಮಂಟಪಕ್ಕೆ ಚಿತ್ತೈಸಿ ಶಮೀವೃಕ್ಷ ಪೂಜಾದಿಗಳನ್ನು ತೀರಿಸಿಕೊಂಡು, ಸಂಸ್ಥಾನದ ಸೈನ್ಯಗಳ ಕವಾತುಗಳನ್ನು ನಡಿಸುವರು ತರುವಾಯ ಅಲ್ಲಿಂದ ಮೆರವಣಿಗೆಯಲ್ಲಿ ದಯಮಾಡಿ ಅರಮನೆಯನ್ನು ಸೇರಿ, ಆನಂತರ ಉತ್ತರೀಯಾದ ಬಳಿಕ ನವರಾತ್ರಿ ಉತ್ಸವಗಳನ್ನು ಮುಕ್ತಾಯ ಮಾಡುವರು

ಪ್ರಜಾಪ್ರತಿನಿಧಿ ಸಭೆಯು.

ಈ ತಿಂಗಳ ೨೭ ನೇ ತಾ ಬುಧವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಮಂದಿರದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು ದಿವಾನ್‌ರವರಾದ ಮ ಟಿ ಆನಂದರಾಯರವರು ಸಭಿಕರಿಗೂ ಪ್ರತಿನಿಧಿಗಳಿಗೂ ಸಂಸ್ಥಾನದ ಸ್ಥಿತಿಗತಿಗಳ ವಿವರವನ್ನು ಕುರಿತು ಅಡ್ರೆಸ್ಸನ್ನು ಓದಿ ಹೇಳುವರು

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ

ಪ್ರಕೃತ ಸಮಯವು ಮೈಸೂರಲ್ಲಿ ಬಹು ವಿಶೇಷವಾಗಿರುತ್ತಾದದ್ದರಿಂದ ಮೇಲಿನ ಸಮಾಜವನ್ನು ಕುರಿತು ಅತಿ ಸಂಕ್ಷೇಪವಾಗಿ ತಿಳಿಸುತ್ತೇವೆ ನಮ್ಮ ಪತ್ರಿಕೆಯಲ್ಲಿ ವಿಶೇಷ ಅವಕಾಶವಿಲ್ಲದಾಗಿ ಹೆಚ್ಚು ವಿಸ್ತರಿಸನ್ನು ನಾವು ಆಕಾಂಕ್ಷಿಸ ತಕ್ಕದ್ದು ಯುಕ್ತವಲ್ಲ ರವಿವಾರದ ಸಭೆಯು ಬಹಳ ವಿಜೃಂಭಣೆಯಾಗಿ ನಡೆಯಿತು ಮೊದಲನೆಯದಾಗಿ ಬಹುಮಂದಿ ನಾರೀಮಣಿಗಳು ಮಂದಿರದ ಸೌಧವನ್ನಲಂಕರಿಸಿದ್ದರು ಶ್ರೀಮತಿ ಮಹಾಲಕ್ಷ್ಮಮ್ಮನವರು "ಎಂಥಾ ಅನುವರ್ತನದಿಂದ ಸರ್ವೇಶ್ವರನನ್ನು ಮೆಚ್ಚಿಸಬಹುದು" ಎಂಬ ವಿಷಯವನ್ನು ಕುರಿತು ಒಂದು ಸುಂದರವಾದ ಮತ್ತು ಅತ್ಯಂತ ಭಕ್ತಿಯುಕ್ತವಾದ ಉಪನ್ಯಾಸವನ್ನು ಓದಿದರು ಕೆಲವು ಮೆಂಬರುಗಳು ಹಾರ್ಮೋನಿಯಂ ವಾದ್ಯವನ್ನು ಕರ್ಣ ಪ್ರಾವ್ಯವಾಗಿ ನುಡಿಸಿದರು ಕೆಲವರು ಮಂಗಳಕರವಾದ ಹಾಡುಗಳನ್ನು ಬಹು ಲಕ್ಷಣವಾಗಿ ಹಾಡಿದರು ಕೋಲಾಹಲ ಧ್ವನಿಗಳಿಂದ ಸಭೆಯು ಕಾರ್ಯಗಳನ್ನು ತೀರ್ಮಾನಿಸಿದರು

ಬರುವ ಮೀಟಿಂಗು ೨೩ ನೇ ತಾರೀಖು ನಡೆಸಲ್ಪಡುವದು. ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ದಯಮಾಡಿ ಬರುವಂತೆ ಮಾಡಿಸಬೇಕಾಗಿ ಸೆಕ್ರೆಟರಿಯವರು ಪ್ರಾರ್ಥಿಸುತ್ತಾರೆ

ಸಾಹಸದಿಂದ ಚಿರತೆಯನ್ನು ಕೊಂದುಹಾಕಿದ್ದು.

[ಒಬ್ಬ ಬಾತ್ಮಿದಾರರಿಂದ]

ಇದೇ ಮಾಹೆ ತಾರೀಖು ೧೪ ರಲ್ಲು ಆನೆಕಲ್ ತಾಲ್ಲೂಕು ಬನ್ನೇರುಘಟ್ಟದ ದಾಖಲೆ ಕೆಂಪನಾಯಕನ ಹಳ್ಳಿಯಲ್ಲಿ ಇರುವ ಗೊಲ್ಲರ ಸಂಜೀವಪ್ಪನೆಂಬುವನು ಆ ದಿನ ಮಧ್ಯಾಹ್ನ ಸುಮಾರು ೩-೪ ಗಂಟೆ ಸಮಯದಲ್ಲಿ ಬನ್ನೇರುಘಟ್ಟದ ಕಾಡಿನಲ್ಲಿ ದನಗಳನ್ನು ಮೇಯಿಸುತ್ತಾ ಇದ್ದನು ಅಲ್ಲಿ ಒಂದು ಚಿರತೆಯು ಒಂದು ಕರುವನ್ನು ಹಿಡಿಯುವಷ್ಟರಲ್ಲಿ ಅವನು ತನ್ನ ಕೈಯಲ್ಲಿ ಇದ್ದ ಬಂದೂಕಿನಿಂದ ಚಿರತೆಯನ್ನು ಹೊಡೆದನು ಮುಂದಿನ ಬಲಪಾರ್ಶ್ವದ ಚಪ್ಪೆಯ ಮೇಲೆ ಅದಕ್ಕೆ ಏಟು ಬಿದ್ದು ಚಿರತೆಯು ಓಡಿಹೋಯಿತು ಅಷ್ಟರಲ್ಲೇ ಸೂರ್ಯಾಸ್ತಮಯವಾಯಿತು ಮಾರನೇ ದಿನ ಬೆಳಗ್ಗೆ ಸುಮಾರು ೧೦-೨೦ ಜನಗಳು ಅದನ್ನು ಹುಡುಕಿಕೊಂಡು ಹೋದರು ಕಾಡಿನಲ್ಲಿ ಅದು ಒಂದು ಪೊದೆಯಲ್ಲಿ ಹೊಕ್ಕಿಕೊಂಡಿದ್ದು, ಅಲ್ಲಿ ಹುಡುಕುತ್ತಾ ದಾಸಪ್ಪನ ಸೈಕೆ ಪದ್ರ ಚಿಕ್ಕಹನುಮ ಎಂಬುವನ ಎದುರಾಗಿ ಹಾಯ್ದು ಬಿದ್ದು ಹೋಗ ಬಂದು ಅವನ ತಲೆಯಮೇಲೆ ಚಿರತೆಯು ಬಿದ್ದಿತು ಆದರೆ ಅವನು ಧೈರ್ಯದಿಂದ ಬಲಗೈಯನ್ನು ಹಾಕಿ ಅವನ ತಲೆಗೆ ಬಾಯಿಹಾಕುವದರೊಳಗಾಗಿ ಅವನ ತಲೆಯ ಮೇಲೆ ಇದ್ದ ರುಮಾಲು ಅದರ ಬಾಯಿಗೆ ಸಿಕ್ಕಿತು ಅಷ್ಟರಲ್ಲೇ ಚಿಕ್ಕಹನುಮನು ಧೈರ್ಯದಿಂದ ತನ್ನ ಕೈಲಿ ಇದ್ದ ಮೊಚ್ಚಿನಿಂದ ಚಿರತೆಯ ತಲೆಯ ಮೇಲೆ ಎರಡು ಭಾಗವಾಗುವಂತೆ ಮೂರು ಏಟು ಹೊಡೆದು ಕೊಂದುಹಾಕಿದನು ಈ ಪ್ರದೇಶದ ಕಾಡುಮೃಗಗಳು ಬಹಳ ಪ್ರಬಲವಾಗಿ ಇರುತ್ತವೆ

ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು.

ಫ್ರೆಂಚ್‌ರಾಕ್ಸಿನ ಆವಶ್ಯಕತೆಗಳು

ಫ್ರೆಂಚ್‌ರಾಕ್ಸಿನಲ್ಲಿ ಕುಡಿಯುವುದಕ್ಕೆ ಒಳ್ಳೇ ನೀರು ಇಲ್ಲದೆ ಕೆರೆಯಲ್ಲಿರುವ ಕೊಳಕು ನೀರನ್ನೇ ಜನಗಳು ಉಪಯೋಗಿಸುವುದರಿಂದ ಕೆರೆ ಕೆಳಗೆ ಒಂದು ರಿಜರ್ವಾಯಿರ್ ಕಟ್ಟಿಸಿ ಜನಗಳಿಗೆ ಒಳ್ಳೇ ನೀರು ಸರ್ಕಾರದವರು ಒದಗಿಸಿಕೊಟ್ಟರೆ ಬಹಳ ಉಪಯೋಗ

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿಗೆ ಪೂರ್ವದಲ್ಲಿದ್ದಂತೆ ಕೇತನಹಳ್ಳಿ ಹೋಬಳಿಯನ್ನು ಸೇರಿಸಿ ಕೊಡಬೇಕು ಮತ್ತು ಕೇತನಹಳ್ಳಿ ದೊಡ್ಡ ಗ್ರಾಮವಾದ್ದರಿಂದಲೂ ಕೃತ್ಯಗಳು ಜಾಸ್ತಿ ನಡೆಯುವದರಿಂದಲೂ ಈಗಿನ ವಿಚಾರದಿಂದ ಅಲ್ಲಿ ಒಂದು ಪೋಲೀಸು ಸ್ಟೇಷನ್ ಏರ್ಪಾಡು ಮಾಡಿ ಇನ್ಸ್‌ಪೆಕ್ಟರ್ ಸೆಂಟರ್ ಇಡಿಸಬೇಕು. ಮತ್ತು ಕೇತನಹಳ್ಳಿ ಪೋಲೀಸ್ ಅಧಿಕಾರ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿಗೂ ಇತರ ಅಧಿಕಾರ ಶ್ರೀರಂಗಪಟ್ಟಣದ ತಾಲ್ಲೂಕಿಗೂ ಇರುವದು ಬಹಳ ತೊಂದರೆಯಾಗಿದೆ. ಮತ್ತು ಕೃಷ್ಣರಾಜಪೇಟೆಗೆ ಸೇರಿದ ಕನ್ನಂಬಾಡಿ ಹೋಬಳಿಯನ್ನಾದರೂ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿಗೆ ಸೇರಿಸಿಕೊಡಬೇಕು

ಫ್ರೆಂಚ್‌ರಾಕ್ಸ್ ಅ॥ ಕಮಿಷನರ್ ಸಾಹೇಬರವರಿಗೆ ಈಗ ಅಪ್ಪೀಲ್ ಹಿಡಿಯುವ ಅಧಿಕಾರ ಸಹ ಇಲ್ಲದೇ ಇರುವದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಅವರಿಗೆ ಅಪ್ಪೀಲ್ ಹಿಡಿಯುವ ಅಧಿಕಾರ ಸರ್ಕಾರದವರು ಕೊಡಬೇಕು.

ಶ್ರೀರಂಗಪಟ್ಟಣದ ಹವಾ ಚನ್ನಾಗಿಲ್ಲವೆಂಬ ಸಂಗತಿ ಸರ್ಕಾರದವರಿಗೆ ಸಹ ತಿಳಿದು ಇದೆ.—ಆದ್ದರಿಂದ ಅಲ್ಲಿರುವ ಮುನ್ಸೀಫ್ ಕೋರ್ಟನ್ನು ಫ್ರೆಂಚ್‌ರಾಕ್ಸ್ ಸ್ಟೇಷನ್ ಬಳಿ ಇಡಿಸಿದ್ದಾದರೆ ಜನಗಳಿಗೂ ಮತ್ತು ಸರ್ಕಾರದ ನೌಕರರಿಗೂ ಬಹಳ ಉಪಕಾರ ಉಂಟು

ಅಮಲ್ದಾರರಿಗೂ, ಡಿಪ್ಟಿ ಅಮಲ್ದಾರರಿಗೂ ಇರುವ ಪೋಲೀಸ್ ಅಧಿಕಾರವನ್ನು ತಪ್ಪಿಸಬೇಕು

ಸಿವಿಲ್ ಕೋರ್ಟುಗಳಲ್ಲಿ ಸರ್ಕಾರದವರ ನೋಟಿ ಯಿನದ ವೇಳಿದ್ದ ಮೇಯನ್ನೂ ಹಿಡಿಯುವಂತೆ ಮೈಸೂರು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ಕೆಲವು ಸೆಕ್ಷನ್‌ಗಳು ವಜಾಮಾಡಲ್ಪಟ್ಟಿದೆ ಸರ್ಕಾರದವರು ಏನು ನಿಷ್ಪಕ್ಷಪಾತಿಗಳಾಗಿದ್ದರೂ ಕಂಪನೀ ಸೀಮೆಯಲ್ಲಿದ್ದಂತೆ ಸದರಿ ಸೆಕ್ಷನ್‌ಗಳನ್ನು ಇಲ್ಲಿಯೂ ಇಡಿಸಬೇಕು

ಫ್ರೆಂಚ್‌ರಾಕ್ಸಿನಲ್ಲಿ ಪೂರ್ವದಲ್ಲಿದ್ದಂತೆ ಒಂದು ಇಂಜನಿಯರ್ ಆಫೀಸ್ ಇಡಿಸಿಕೊಡಬೇಕು ಇದು ಸಾಧ್ಯವಿಲ್ಲದಿದ್ದರೆ ಒಂದು ರೇಂಜು ಆಫೀಸನ್ನಾದರೂ ಇಡಿಸಿಕೊಡಬೇಕು ಇಲ್ಲವಾದರೆ ಪುಕಾರು ತಪ್ಪುವದಿಲ್ಲ

ಮೈಸೂರು ಸೀಮೆಯಲ್ಲಿ ಪ್ಲೀಡರುಗಳ ಪರೀಕ್ಷೆಯನ್ನು ಕನ್ನಡದಲ್ಲಿಯೂ ಮಾಡಬಹುದೆಂಬದಾಗಿ ಮಾಡಿ, ಅದಕ್ಕೆ ಯಾರು ಬೇಕಾದರೂ ಹೋಗಿ ಪ್ಯಾಸು ಮಾಡಬಹುದೆಂದಾಗಿ ಮಾಡಿ ಅದರಲ್ಲಿ ಪ್ಯಾಸುಮಾಡಿದವರನ್ನು ಮೊಖ್ತೇದಾರಗಳನ್ನಾಗಿ ಮಾಡಬೇಕು ಇವರುಗಳು ಕ್ರಿಮಿನಲ್ ಕೋರ್ಟುಗಳಲ್ಲಿಯೂ ಸಿವಿಲ್ ಕೋರ್ಟುಗಳಲ್ಲಿಯೂ ಸ್ಮಾಲ್ ಕಾಸು ಕೇಸುಗಳಲ್ಲಿಯೂ ಹಾಜರಾಗಬಹುದೆಂಬದಾಗಿ ಮಾಡಿದ್ದಾದರೆ ಇದರಿಂದ ಸರ್ಕಾರಕ್ಕೆ ಯಾವ ಬಾಧಕವೂ ಇರುವದಿಲ್ಲ ಮತ್ತು ಅನೇಕ ಜನಗಳಿಗೆ ಉಪಕಾರಮಾಡಿದ ಹಾಗೆ ಆಗುತ್ತೆ ಮತ್ತು ರೈತರಿಗೂ ಬಹಳ ಉಪಯೋಗ ಉಂಟು, ಈ ಸಂಗತಿಗಳನ್ನೆಲ್ಲಾ ಬರುವ ರೆಪ್ರೆಸೆಂಟೆಟಿವ್ ಮೀಟಿಂಗಿನಲ್ಲಿ ಮೆಂಬರುಗಳು ತಂದು ಚರ್ಚಿಸಬೇಕಾಗಿ ಪ್ರಾರ್ಥಿಸುತ್ತೇನೆ

ಒಬ್ಬ ವಾಚಕ

ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ವಸ್ತುಪ್ರದರ್ಶನ ಶಾಲೆಯು

ಪ್ರಾರಂಭಮಹೋತ್ಸವವು.

ಕಳೆದ ೧೮ ನೇ ತಾ. ಸೋಮವಾರ ಸಾಯಂಕಾಲ ನವರಾತ್ರಿ ಉತ್ಸವಗಳ ಅಂಗವಾದ ಕೈಗಾರಿಕೆ ಮತ್ತು ವ್ಯವಸಾಯದ ವಸ್ತುಪ್ರದರ್ಶನ ಶಾಲೆಯು ರಾಜಧಾನಿಯ ಪಶ್ಚಿಮಾಭಿವೃದ್ಧಿಯಲ್ಲಿರುವ ಪ್ರದರ್ಶನಶಾಲಾ ಕಟ್ಟಡದಲ್ಲಿ ಪ್ರಾರಂಭವಾಯಿತು ಸರ್ದಾರ್ ಎಂ ಕಾಂತರಾಜೇ ಅರಸಿನವರು, ಕೌನ್ಸಿಲರ್ ಮಿ ಎಚ್ ವಿ ನಂಜುಂಡಯ್ಯನವರೇ ಮೊದಲಾದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಪ್ರಾರಂಭದ ಪ್ರತಿಷ್ಠಾ ಕಾರ್ಯಗಳಾಗಲಿ, ಭಾಷಣಗಳಾಗಲಿ ನಡೆಯದೆ, ಪ್ರದರ್ಶನವು ಗಂಭೀರವಾಗಿ ತೆರೆಯಲ್ಪಟ್ಟಿತು ಒಳಗೆ ಒಂದು ಸಲಕ್ಕೆ ಎರಡಾಣೆಯಂತೆ ರುಸುಂ ಕೊಡತಕ್ಕದ್ದೆಂದೂ, ಪ್ರತಿ ದಿವಸ ಮಧ್ಯಾಹ್ನ ೩ ರಿಂದ ಸಾಯಂಕಾಲ ೮ ಗಂಟೆಯ ತನಕ ಜನರು ಹೋಗಿ ನೋಡಬಹುದೆಂದೂ ಪ್ರದರ್ಶನ ಶಾಲಾಧಿಕಾರಿಗಳು ಗೊತ್ತು ಮಾಡಿದ್ದಾರೆ ವಿಜಯದಶಮಿ ದಿವಸವೂ (ತಾ ೨೪ ನೇ ಭಾನುವಾರ) ಮತ್ತು ಪ್ರಜಾಪ್ರತಿನಿಧಿಸಭೆಯೂ ಪ್ರಾರಂಭವಾಗುವ ದಿವಸವೂ (ತಾ ೨೭ ನೇ ಬುಧವಾರ) ಬೆಳಗಿನ ೭ ರಿಂದ ೧೧ ಗಂಟೆಯ ತನಕ ಪ್ರದರ್ಶನ ಶಾಲೆಯನ್ನು ತೆರೆಯುವರು

ಇತರ ಕಡೆಗಳ ವಸ್ತುಗಳು.

ಈ ಸಂಸ್ಥಾನದ ಬೇರೆ ಬೇರೆ ಕಡೆಗಳಿಂದ ನಾನಾ ಪ್ರದರ್ಶನ ವಸ್ತುಗಳು ಬಂದಿರುತ್ತವೆ. ಆದರೆ ಇವುಗಳಿಗಿಂತಲೂ ಪರಸ್ಥಳಗಳಿಂದ ಬಂದಿರುವ ವಸ್ತುಗಳೇ ಬಹಳ ನೆಟ್ಟಗಿಯೂ, ವಿಶೇಷವಾದವುಗಳಾಗಿಯೂ ಇರುವವು ಯಾವ ಯಾವ ಪರಸ್ಥಳಗಳಿಂದ ವಸ್ತುಗಳು ಬಂದಿರುವವೆಂದರೆ —ಲಾಹೋರ್, ಅಮೃತಸಾರ, ಬಿಕನೀರ್, ಜಯಪುರ, ಅಜ್ಮೀರ್, ಕಾಶಿ, ನಾಗ್ಪುರ, ಇಂದೂರ್, ಬೊಂಬಾಯಿ, ಬರೋಡಾ, ಶ್ರೀನಗರ (ಕಾಶ್ಮೀರ), ಮಲ್ಕಾಪುರ (ಬಿಹಾರ) ರಂಗೂನ್, ಬಿಜಾಪುರ ಮುರಾದಾಬಾದ್ ಲಕ್ನೋ, ಢಾಕಾ (ಬಂಗಾಳ), ಆಗ್ರಾ, ಭಾಗಲ್ಪುರ, ಶಹರಾನ್ಪುರ (ಬಿಹಾರ), ಅಲಿಘಡ, ಕಾನ್ಪುರ, ಜಾಮನಗರ, ಮಧುರೆ, ತಿನ್ನವೇಲಿ ತಿರುವಾಂಕೂರು, ಬೆಂಗಳೂರ್, ಮದರಾಸ್, ಕೊಯಮತ್ತೂರು, ಕಡಲೂರು ಕುಂಭಕೋಣ, ತಂಜಾವೂರು, ಪಾಲ್ಘಾಟು, ಧಾರವಾಡ, ಸಕಲೇಶಪುರ, ಮಂಗಳೂರು, ಪುದುಕೋಟೆ, ಮಚಿಲೀಬಂದರು, ರತ್ನಗಿರಿ, ಕುಂಭಕೋಣ, ಕೈಲಾಸ್, ಬೆಳಗಾವ, ತಿರುಚನಾಪಳ್ಳಿ, ಉದಕಮಂಡಲ, ಮಾಯಾವರ ಬಗ್ ಆದಿವೇನಿ, ಎಲ್ಲೋರು, ಈ ಮೊದಲಾದ ಕಡೆಗಳಿಂದ ದೀಪಾವಳಿ ಒಬ್ಬೊಬ್ಬರಿಂದ ಲೋಹಪಾತ್ರಗಳೂ, ಇತರ ವಸ್ತುಗಳೂ ಬಂದಿರುತ್ತವೆ ಇವಲ್ಲದೆ ಪ್ಯಾರಿ ಕಂಪನಿ, ಓಕ್ಸ್ ಕಂಪನಿ,

ಟೀಲಿಯರ್ಸ್ ಕಂಪನಿ, ಬಟ್ಲರ್ ಕಂಪನಿಗಳೆಂಬ ಇಂಗ್ಲಿಷ್ ಕಂಪನಿಗಳಿಂದಲೂ ನಾನಾ ಸರಕುಗಳು ಬಂದಿರುವವು ಪುದುಕೋಟೆ, ಪಂಜಾಬ್, ತಿರುವಾಂಕೂರು ಕೊಚ್ಚಿ ಎಂಬೀ ಸಂಸ್ಥಾನಗಳ ಸರ್ಕಾರದವರು ಕೂಡ ಕೆಲವು ಸರಕನ್ನು ಕಳುಹಿಸಿ ಕೊಟ್ಟಿದ್ದಾರೆ

ಪ್ರಾಮುಖ್ಯ ವಿವರಣೆಯು

ಪ್ರದರ್ಶನ ಶಾಲೆಯೊಳಕ್ಕೆ ಪ್ರವೇಶ ಮಾಡಿದ ಕೂಡಲೆ ಎಡಗಡೆಯ ಬಗಲಿ ನಲ್ಲಿರುವ ಒಂದು ಕೋಟಡಿಯಲ್ಲಿ ಬೇರೆ ಬೇರೆ ತರದ ಹುಳುಹುಪ್ಪಟೆಗಳೂ, ಕ್ರಿಮಿಕೀಟಗಳೂ, ವ್ಯವಸಾಯ ಇಲಾಖೆಯವರಿಂದ ಪರಿಶೋಧಿಸಲ್ಪಟ್ಟಿರುವ ಕೊಳೆ ರೋಗ ಮೊದಲಾದವುಗಳ ನಿವಾರಣಾರ್ಥವಾದ ಉಪಕರಣಗಳೂ ಪ್ರದರ್ಶನ ಮಾಡಲ್ಪಟ್ಟಿರುವವು ಬೆಳೆಗಳಿಗೆ ಹುಳು ಹುಪ್ಪಟೆಗಳು ಹಿಡಿದು ಮೊದಲು ಎಲೆಗಳನ್ನು ಕ್ರಮೇಣ ಧಾನ್ಯಾದಿ ಫಸಲುಗಳನ್ನೂ ಕೆಡಿಸಿ ನಷ್ಟಪಡಿಸುವಂಥಾ ಸಂದರ್ಭದಲ್ಲಿ ಜಮೀನುದಾರರೂ ರೈತರೂ ಅವುಗಳನ್ನು ಕೊಂದು ಫಸಲನ್ನು ಕೆಡದಂತೆ ಮಾಡಿಕೊಳ್ಳಬಹುದಾದ ಸುಲಭತರದ ಉಪಾಯಗಳನ್ನು ಮಾಡಿಟ್ಟು ದೃಷ್ಟಾಂತ ಪೂರ್ವಕವಾಗಿ ಈ ಕೋಟಡಿಯಲ್ಲಿಟ್ಟು ತೋರಿಸಿರುತ್ತಾರೆ

ಬಗಲಿಯ ಬಲಪಾರ್ಶ್ವದ ಮೊದಲನೇ ಕೋಟಡಿಯಲ್ಲಿ ಮೈಸೂರು ಸಂಸ್ಥಾನದ ಜಂಗಲುಗಳಲ್ಲಿ ಉತ್ಪತ್ತಿಯಾಗುವ ನಾನಾ ಜಾತಿಯ ಮರಗಳೂ, ಮನುಷ್ಯನ ಉಪಯೋಗಕ್ಕೆ ಬರುವ ತರದಾವರಿ ಫಲಗಳೂ, ಗಿಡ ಮೂಲಿಕೆಗಳೂ, ನಾರುಗಳೂ ಪ್ರದರ್ಶನ ಮಾಡಲ್ಪಟ್ಟಿರುತ್ತವೆ

ಎರಡನೇ ಕೋಟಡಿಯಲ್ಲಿ ಮೈಸೂರು ಸರ್ಕಾರಿ ಭೂಶೋಧನಾ ಇಲಾಖೆಯವರು ಈ ಸೀಮೆಯ ... ದ ಯಾವ ಸ್ಥಳಗಳಲ್ಲಿ ಎಂಥೆಂಥಾ ಕಲ್ಲುಗಳೂ, ಲೋಹಾದಿಗಳೂ ದೊರಕುವವೋ ಅವುಗಳ ಮಾದರಿಗಳನ್ನೆಲ್ಲಾ ಇಟ್ಟು ತೋರಿಸಿರುವರು

ಅಲ್ಲಿಂದ ಒಳಗೆ ಹೋಗಿ ನೋಡಿದರೆ ಬಲಗಡೆಯಲ್ಲೂ ಎಡಗಡೆಯಲ್ಲೂ ಎದುರು ಭಾಗದಲ್ಲೂ ಸಾಲಿನ ಕೋಟಡಿಗಳಿರುವವು ಇವುಗಳಲ್ಲಿ ಪ್ರದರ್ಶನ ವಸ್ತುಗಳನ್ನು ಬಹು ಓರಣವಾಗಿಯೂ, ವಿವರಣೆಯಿಂದಲೂ, ಬಹು ಸಂತೋಷ ಮತ್ತು ಉತ್ತೇಜನಪ್ರದವಾಗಿಯೂ ಇಟ್ಟಿರುವರು ಬಲಗಡೆ ಲೈನಿನ ಮೊದಲನೇ ಕೋಟಡಿಯಲ್ಲಿ ಆಲಮಾರ ಮೊದಲಾದ ಕಡೆಗಳಿಂದ ಓರಣವಾಗಿ ತಂದಿಟ್ಟಿರುವ ಚಿನ್ನ, ಬೆಳ್ಳಿ, ದಂತ ಕೆತ್ತನೆಗಳ ಚಿತ್ರವಸ್ತುಗಳೂ, ಎರಡನೆಯ ಕೋಟಡಿಯಲ್ಲಿ ನಾನಾ ಚಿತ್ರಕೃತಿಯ ಉಪಕರಣಗಳೂ, ಮೂರನೇ ಕೋಟಡಿಯಲ್ಲಿ ಬಹು ನಮೂನೆಯಾಗಿ ಕೆಲಸ ಮಾಡಿರುವ ಕುರ್ಚಿ, ಬೆಂಚು, ಮೇಜು, ಬೀರು ಮೊದಲಾದ ಸಾಮಾನುಗಳೂ ನಾಲ್ಕನೇ ಕೋಟಡಿಯಲ್ಲಿ ಜೋಡು, ಬೂಟ್ಸು, ಜೀನು, ಲಗಾಮು ಮೊದಲಾದ ಚರ್ಮದ ಸಾಮಾನುಗಳೂ, ಐದನೇ ಕೋಟಡಿಯಲ್ಲಿ ಚಿತ್ರವಾಗಿಯೂ ಗಟ್ಟಿಯಾಗಿಯೂ ಮಣ್ಣಿನಲ್ಲಿ ರಚಿಸಲ್ಪಟ್ಟಿರುವ ಪಾತ್ರೆ ಪದಾರ್ಥಗಳೂ ಆರನೇ ಕೋಟಡಿಯಲ್ಲಿ ಬಾಗಾಯತು ಮತ್ತು ತೋಟದ ಉತ್ಪತ್ತಿ ಪದಾರ್ಥಗಳೂ ಮುಂದಿನ ಕೋಟಡಿಯಲ್ಲಿ ನಾನಾ ಜಾತಿಯ ಎಣ್ಣೆ ಬೀಜಗಳೂ ದ್ವಿದಳ ಧಾನ್ಯಗಳೂ, ಕಡೆಯ ಕೋಟಡಿಯಲ್ಲಿ ಬತ್ತ, ರಾಗಿ, ಜೋಳ ಮೊದಲಾದ ಜಿನಸಿಗಳ ನಮೂನೆಗಳೂ ಬಹು ಅಂದವಾಗಿ ಪೇರಿಸಿ, ಇಟ್ಟು ಪ್ರದರ್ಶನ ಮಾಡಿರುತ್ತಾರೆ

ಎದುರು ಪಾರ್ಶ್ವದ ಒಂದು ಕೋಟಡಿಯಲ್ಲಿ ಸ್ಪಾರ್ಲಿಂಗ್ ಕಂಪನಿಯವರು ಬೆಲೆ ಮುಂತಾದ ವಸ್ತುಗಳನ್ನೂ ಇನ್ನೊಂದರಲ್ಲಿ ವೈಪ್ರ್ಯ್ ಕಂಪನಿ, ಎ. ಎಸ್. ಕುಮಾರ್ ಕಂಪನಿ, ಚೂಡಾಮಣಿ ಕಂಪನಿ, ಡಿ ಕೃಷ್ಣಯ್ಯಂಗಾರ್ ಕಂಪನಿಗಳವರು ಔಷಧಾದಿಗಳನ್ನೂ ಮೂರನೆಯ ಕೋಟಡಿಯಲ್ಲಿ ಬೊಂಬಾಯಿ ಸ್ವದೇಶೀ ಕಾರ್ಖಾನೆಯವರು ಅಲ್ಲಿ ತಯಾರಾಗತಕ್ಕ ಚಿತ್ರ ಮೊದಲಾದ ಪದಾರ್ಥಗಳನ್ನೂ ಇಟ್ಟಿರುವರು

ಎಡಪಾರ್ಶ್ವದ ಮೊದಲನೇ ಎರಡು ಕೋಟಡಿಗಳಲ್ಲಿ ಬೇರೆ ಬೇರೆ ಕಡೆಗಳಿಂದ ಬಂದಿರುವ ನೂಲು, ಲೇಸ್, ಕಲಾಪತ್ತಿನ ಬಟ್ಟೆಬರೆಗಳೂ, ಒಂದು ಕೋಟಡಿಯಲ್ಲಿ ನೇಲೂರು ಜಿಲ್ಲೆಯಿಂದ ಕಳುಹಿಸಲ್ಪಟ್ಟಿರುವ ಜಮಖಾನ ರತ್ನಕಂಬಳಿ, ಚೀಟಿ, ಪಟ್ಟೆ ಮೊದಲಾದವುಗಳೂ, ಮುಂದಿನ ಕೋಟಡಿಯಲ್ಲಿ ಹತ್ತಿ ಉಣ್ಣೆ ವಗೈರೆಗಳು ಮಿಶ್ರವಾಗಿ ತಯಾರಿಸಲ್ಪಟ್ಟಿರುವ ಬಟ್ಟೆಬರೆಗಳೂ, ಇನ್ನೊಂದು ಕೋಟಡಿಯಲ್ಲಿ ಜರತಾರಿ ತೊಡಿಗೆಗಳೂ, ಕಂಚಿನ ಪಾತ್ರೆಪದಾರ್ಥಗಳೂ, ಕೊನೆಯ ಕೋಟಡಿಯಲ್ಲಿ ಚಿತ್ತದಿಂದ ತಯಾರಿಸಲ್ಪಟ್ಟಿರುವ ದಿನಸುವಾರಿ ಸಾಮಾನುಗಳೂ ಪ್ರದರ್ಶನ ಮಾಡಲಾಗಿವೆ

ವ್ಯವಸಾಯೋಪಕರಣ ಮುಂತಾದವು

ಪ್ರದರ್ಶನ ಶಾಲೆಯ ಒಲ ಭಾಗದಲ್ಲಿ ಒಂದು ನಡುಚಪ್ಪರವನ್ನು ಹಾಕಿ ಅದರಲ್ಲಿ ವ್ಯವಸಾಯ ಸಾಧನಗಳನ್ನು ಇಟ್ಟು ತೋರಿಸಿರುತ್ತಾರೆ ಮೊದಲು ಭಾಗದಲ್ಲಿ ಬೆಂಗಳೂರಿನ ಸಿಟಿ ಇಟ್ಟಿಗೆ ಮತ್ತು ಹೆಂಚಿನ ಕಾರ್ಖಾನೆಯವರು ತಮ್ಮಲ್ಲಿ ತಯಾರಾಗುವ ಮಣ್ಣಿನ ಹೆಂಚು, ಚಪ್ಪಡಿಚಿಲ್ಲಿ, ಇಟ್ಟಿಗೆ, ಪಾತ್ರೆಗಳು, ಹೂವಿನ ಕುಂಡ, ಇ ಮೊದಲಾದವುಗಳನ್ನು ತಂದಿಟ್ಟಿರುವರು ಚಪ್ಪರದೊಳಗಡೆ ಬಲ ಪಾರ್ಶ್ವದಲ್ಲಿ ಬೆಂಗಳೂರು ಸೀಟರ್ ಕಂಪನಿಯವರಲ್ಲಿ ತಯಾರಾದ ದಿವ್ಯವಾದ ಬಗ್ಗಿ ಮತ್ತು ಒತ್ತು ಜಟಕಾಗಳೂ, ಮದರಾಸಿನ ಎಕ್ಸ್‌ಪೋರ್ಟ್ ಕಂಪನಿಯ ಎತ್ತಿಗಳೂ ಪ್ಯಾರಿ ಕಂಪನಿಯಲ್ಲಿ ತಯಾರಾಗುವ ದಿನಸುವಾರಿ ಗೊಬ್ಬರಗಳೂ, ಎಡಗಡೆ ಮೈಸೂರು ಸರ್ಕಾರಿ ಸೀಂದಿ ಇಲಾಖೆಯ ಮತ್ತು ಮದರಾಸ್ ಪ್ಯಾರಿ ಕಂಪನಿಯ ನಾನಾತರದ ನೀರು ಎತ್ತುವ ಯಂತ್ರಗಳೂ, ಕೆಮಿಕಲ್ ವರ್ಕ್ಸ್ ಕಂಪನಿಯಲ್ಲಿ ತಯಾರಾಗುವ ಬೇರೆ ಬೇರೆ ತರದ ಎಣ್ಣೆಗಳೂ, ಇನ್ನೂ ಮುಂದಕ್ಕೆ ಹೋದಲ್ಲಿ ಈ ಸೀಮೆಯಲ್ಲಿ ಈಗ ಉಪಯೋಗಿಸುತ್ತಿರುವ ನೇಗಿಲು ಮುಂತಾದ ವ್ಯವಸಾಯ ಸಾಧನಗಳೂ, ಹೊಸ ನಮೂನೆಯ ಸಾಧನಗಳೂ ಇಡಲ್ಪಟ್ಟಿರುತ್ತವೆ

ಮುಂದೆ ನಡೆಯುತಕ್ಕ ಸ್ಪರ್ಧೆ ಪೋಟಿಗಳು ಮುಂತಾದದ್ದು.

ಈ ಪ್ರದರ್ಶನ ಶಾಲಾ ಮಂಟಪದಲ್ಲಿ ತಾ| ೨೫ನೇ ಸೋಮವಾರ ಗೋಶಾಲೆಯ ಪ್ರದರ್ಶನವು ಪ್ರಾರಂಭವಾಗಿ ನಾಲ್ಕು ದಿನಗಳು ನಡೆಯುತ್ತದೆ. ತಾ| ೨೬ನೇ ಮಂಗಳವಾರದ ದಿನ ಸಂಜೆಗೆ ಮೃಗಗಳ ಪೋಟಾಪೋಟಿಯೂ ಮಣ್ಣಿನ ಪಾತ್ರೆ ಪದಾರ್ಥಗಳನ್ನು ತಯಾರುಮಾಡುವವರಲ್ಲಿ ಪಂದ್ಯವೂ, ತಾ| ೨೭ನೇ ಬುಧವಾರ ಉಳುವುದರಲ್ಲಿ ಮೇಲಾಟವೂ ನಡೆಯಬೇಕೆಂದು ಗೊತ್ತುಮಾಡಿದ್ದಾರೆ

ಉಪನ್ಯಾಸಗಳು.

ಪ್ರದರ್ಶನ ಶಾಲೆಯಲ್ಲಿ ಕೈಗಾರಿಕೆಗಳ ಮತ್ತು ವ್ಯವಸಾಯದ ವಿಷಯವಾದ ಉಪನ್ಯಾಸಗಳು ಜರುಗುವವು ಆದರೆ ವಿಷಯಗಳೂ, ಕಾಲವೂ ಇನ್ನೂ ಪ್ರಕಟವಾಗಿರುವುದಿಲ್ಲ

ತಾಲ್ಲೋಕು ವರ್ತಮಾನಗಳು

ಹರಿಹರದ ತಾಲ್ಲೂಕು ದೇವರಬೆಳಕೆರೆ.—ಕಳೆದ ತಾ ೧೪ ನೇ ಸಾಯಂಕಾಲ ೫ ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಸ್ಕೂಲ್ ವಿದ್ಯಾರ್ಥಿಗಳೆಲ್ಲಾ ಕೂಡಿಕೊಂಡು ಚಂದಾ ವಸೂಲ್ಮಾಡಿ ಸ್ಕೂಲ್ ಮನೆಯಲ್ಲಿ ಮಂಟಪವನ್ನು ಶಿವಮೊಗ್ಗ ವೈಶ್ಯರ ನಾರಾಯಣಪ್ಪನವರಿಂದ ಬಹಳ ಅಂದವಾಗಿ ತಯಾರುಮಾಡಿಸಿ ಅದರಲ್ಲಿ ಶಾರದೆಯನ್ನು ಕುಳ್ಳಿರಿಸಿ ಅತಿ ವಿಜೃಂಭಣೆಯಿಂದ ವಾದ್ಯಘೋಷ ದೊಡನೆ ಬಾಣಬಿರುಸುಗಳಿಂದ ಉತ್ಸವ ನಡಿಸಿದ ಮೇಲೆ ಕೆಲವು ಮುಖಂಡರೂ ಸ್ಕೂಲ್ ಮಾಸ್ಟರವರೂ ಸಭೆ ಸೇರಿದರು ಕೆ ಎಸ್ ಲಕ್ಷ್ಮಣಯ್ಯನವರು ವಿದ್ಯಾಭ್ಯಾಸದಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು ಅನಂತರ ಮೆ|| ಚನ್ನಬಸಪ್ಪನವರು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಷಯವಾಗಿಯೂ, ಮೆ|| ಮಹಲಿಂಗಯ್ಯನವರು ವಿದ್ಯಾಭ್ಯಾಸದ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿದರು ಇದೇ ಪ್ರಕಾರ ತಿಂಗಳಿಗೊಂದಾವರ್ತಿ ಈ ಗ್ರಾಮದವರೂ ಅಕ್ಕಪಕ್ಕ ಗ್ರಾಮದವರೂ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿ ವಿದ್ಯಾಭ್ಯಾಸದ ವಿಷಯವಾಗಿ ಸಂಭಾಷಣೆ ಮಾಡಬೇಕಾಗಿ ನಿಷ್ಕರ್ಷೆ ನಡೆಯಿತು ಇದರಲ್ಲಿ ಲಕ್ಷ್ಮಣಯ್ಯನವರು ಪ್ರಯತ್ನಪಟ್ಟು ಈ ಸಭೆಯನ್ನು ಸೇರಿಸಿ ಈ ರೀತಿ ಏರ್ಪಾಡು ಮಾಡಿದ್ದು ಸರ್ವರಿಗೂ ಸಮ್ಮತವಾಗಿದೆ

ದೊಡ್ಡಬಳ್ಳಾಪುರ.—ಇಲ್ಲಿ ಸುಮಾರು ೨|| ವರ್ಷದಿಂದ ಜನರಲ್ಲಿ ತುಂಬಾ ವಿಶ್ವಾಸ ಪ್ರೀತಿಯನ್ನು ಹೊಂದಿ ಖಂಡಿತವಾದಿಗಳಾಗಿಯೂ ಬಹು ಯಥಾರ್ಥವಂತರಾಗಿಯೂ ಇದ್ದ ಮೆ|| ಎಂ ಸದಾಶಿವರಾಯರು ಗುಬ್ಬಿಗೆ ವರ್ಗವಾದರೆಂಬ ಸುದ್ದಿಯನ್ನು ಕೇಳಿ ಬಹು ಜನರು ವ್ಯಸನಪಟ್ಟರು ತಮ್ಮ ಪ್ರೀತಿಯನ್ನು ತೋರಿಸುವುದಕ್ಕಾಗಿ ಕಚೇರಿಯವರೆಲ್ಲಾ ಸೇರಿ ಅಮಲ್ದಾರರಿಗೆ ಒಳ್ಳೇ ಔತಣವನ್ನು ಮಾಡಿ ಸಂತೋಷ ಪಡಿಸಿದರು ಸ್ಕೂಲ್ ಮಾಸ್ಟರುಗಳೆಲ್ಲಾ ಸೇರಿ ಅಮಲ್ದಾರರನ್ನು ಬರಮಾಡಿಕೊಂಡು ಹುಡುಗರಿಂದ ತಮಾಷೆಗಳನ್ನು ಮಾಡಿಸಿ ಸಂತೋಷಪಡಿಸಿದರು ತರುವಾಯ ಮೆಂಬರುಗಳು ಶೆಟ್ಟಿ ವರ್ತಕರೇ ಮೊದಲಾದವರೆಲ್ಲಾ ಸೇರಿ ಊರು ಮಧ್ಯೆ ಇರುವ ಸ್ಕೂಲಿಗೆ ಅಮಲ್ದಾರರನ್ನು ಬರಮಾಡಿಕೊಂಡು ಅವರ ಗುಣಕಥನವನ್ನು ಮಾಡಿ ಇಂಥವರು ತಮ್ಮನ್ನು ಬಿಟ್ಟು ಹೋಗುವುದು ತಮಗೆಲ್ಲಾ ತುಂಬಾ ವ್ಯಸನವೆಂದು ಹೇಳಿದರು ತಮ್ಮಗಳ ಅನುರಾಗವನ್ನು ತೋರಿಸಲು ಕೆಲವು ಬಹುಮಾನಗಳನ್ನು ಮಾಡಿ ಸಂತೋಷಪಡಿಸಿದರು ತರುವಾಯ ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಾಗಿ ಹೊರಟು ದೇವಸ್ಥಾನಗಳಿಗೆ ಹೋಗಿ ಮಂಗಳಾರತಿ ಮಾಡಿಸಿ ಅಮಲ್ದಾರರನ್ನು ಮನೆಗೆ ಕಳುಹಿಸಿದರು —ಕಾಕೋಳಿ ನಗರದ ಸಿದ್ದಪ್ಪನು ರಾಗಿ ತುಂಬಿದ್ದ ಹಗೇವನ್ನು ತೆಗೆಸಿ ಇರುವಾಗ ಅವಿವೇಕಿಯಾದ ಒಬ್ಬನು ಒಳಗೆ ಇಳಿದನಂತೆ ವಿಷಗಾಳಿಯಿಂದ ಪ್ರಜ್ಞೆ ತಪ್ಪಿ ಕೈ ಅಡಿಸುವಾಗ ಇನ್ನೊಬ್ಬನು ಎತ್ತುವುದಕ್ಕೆ ಇಳಿದನು ಇಬ್ಬರೂ ಸತ್ತರು

ಚಿತ್ರದುರ್ಗ —ಮಳೆ ಧಾರಾಂಗವಾಗಿ ನಿಂತಿದೆ ಬಿಸಿಲು ಬಹಳ ಜಾಸ್ತಿ ರೈತರೆಲ್ಲಾ ಸದ್ಯಕ್ಕೆ ಮಳೆ ಬಾರದಿದ್ದರೆ ಈಗ ಕೈಗೆ ಬಂದಿರತಕ್ಕ ಫಸಲು ತೆಗೆದುಕೊಳ್ಳಬಹುದೆಂತ ಆಶೆ ಪಡುತ್ತಾ ಇದ್ದಾರೆ —ಚಿತ್ರದುರ್ಗದ ಪ್ರಜೆಗಳು ಪರೋಪಕಾರ ಕೆರೆ ತುಂಬಿ ನಲ್ಲಿಗಳಿಗೆ ನೀರು ಸಲೀಸಾಗಿ ಸಪ್ಲೈ ಆದರೆ ಸಾಕೆಂತ ಆಶೆ ಪಡುತ್ತಾರೆ ಮಳೆ ಬರತಕ್ಕ ಚಿಹ್ನೆಯೂ ಕಾಣುತ್ತಾ ಇದೆ —ಚಿತ್ರದುರ್ಗದ ತಾಲ್ಲೂಕು ಭೀಮ ಸಮುದ್ರದ ವಾಸಸ್ಥನಾದ ತೋಟದ ಸಿದ್ದಪ್ಪನೆಂಬ ಭಾರೀ ರೈತನು ಈಗ್ಗೆ ೩—೪ ದಿನಗಳ ಕೆಳಗೆ ಒಂದು ದಿನ ರಾತ್ರಿ ಆತನ ಮನೆಯಲ್ಲಿ ಪತ್ನಿ ಸಹಿತ ಮಲಗಿರುವಾಗ ಯಾರೋ ಬಂದು ಆತನನ್ನು ಕಡಿದು ಹಾಕಿದರು. ಮಗ್ಗುಲಲ್ಲಿ ಮಲಗಿದ್ದ ಆತನ ಹೆಂಡತಿ ಜೀವಂತಳಾಗಿದ್ದಾಳೆ ಕೃತ್ಯದ ಪೂರ್ವೋತ್ತರಗಳನ್ನು ತಾಲ್ಲೂಕು ಅಮಲ್ದಾರರವರೇ ಖುದ್ದು ವಿಚಾರಣೆ ಮಾಡುತ್ತಿದ್ದಾರೆ ಈ ಕೊಲೆಯಾದ ಸಿದ್ದಪ್ಪನು ಐಶ್ವರ್ಯವಂತನಾಗಿಯೂ ಮಾತುಬರ ರೈತನಾಗಿಯೂ, ಪ್ರತಿನಿಧಿ ಸಭೆಯ ಮೆಂಬರನಾಗಿಯೂ ಇದ್ದನು — ಈ ಚಿತ್ರದುರ್ಗದಲ್ಲಿ ವಾಸವಾದ ತಕ್ಕ ಗೌರವವುಳ್ಳ ಒಂದು ಕುಟುಂಬದವರು ಈಗ್ಗೆ ಒಂದು ತಿಂಗಳ ಕೆಳಗೆ ತಮ್ಮ ಮನೆ ಅದಲಿಕ ನೋಡಿತಕ್ಕ ಯಾವ ನಸ್ಥನಾದ ಬಂದುವನ್ನು ಮನೆಯಲ್ಲಿ ಬಿಟ್ಟು ಬಾಕೀ ಜನರೆಲ್ಲಾ ಅವರ ನೆಂಟರ ಮನೆಯಲ್ಲಿ ನಡೆಯತಕ್ಕ ಶುಭಕಾರ್ಯಕ್ಕಾಗಿ ಈ ಗ್ರಾಮ ಬಿಟ್ಟು ಪರಸ್ಥಳಕ್ಕೆ ಹೋಗಿದ್ದರು ಆ ವ್ಯಕ್ತಿ ಮುಖ್ಯಸ್ಥರಾದ ಹೆಣ್ಣು ಮಕ್ಕಳು ಏಕಾಯೇಕಿ ನೆನ್ನೆ ದಿನ ಈ ಗ್ರಾಮಕ್ಕೆ ವಾಪಸು ಬಂದರು ಕಾರಣ ವಿಚಾರಿಸಿದ್ದಕ್ಕೆ ಯಾರೋ ದುಷ್ಟರು ಅವರಿಗೆ ನಿಮ್ಮ ಮನೆ ಲೂಟಿಯಾಯಿತು ಎಂತಲೂ, ಮನೆಯಲ್ಲಿದ್ದ ನಿಮ್ಮ ಸಂಬಂಧಿಯನ್ನು ಚೆನ್ನಾಗಿ ಹೊಡೆದಿದ್ದಾರೆಂತಲೂ, ಆತನು ಆಸ್ಪತ್ರೆಯಲ್ಲಿದ್ದಾನೆಂತಲೂ ಟೆಲಿಗ್ರಾಫ್ ಕೊಟ್ಟಿದ್ದಾಗಿಯೂ ಅದರ ಮೇಲೆ ಅವರು ಏಕಾಯೇಕಿ ಬಂದು ನೋಡುವಾಗ್ಯೆ ಅಂಥಾ ಅನಾಹುತವೇನೂ ನಡೆಯದೆ ಸೌಖ್ಯವಾಗಿದ್ದದ್ದರಿಂದ ಮನಸ್ಸಿಗೆ ಸಮಾಧಾನ ಮಾಡಿಕೊಂಡು ಪರಸ್ಥಳದಲ್ಲಿ ಉಳಿದಿರತಕ್ಕ ತಮ್ಮ ಸ್ವಜನಗಳಿಗೆ ಈ ಸಂಗತಿಯನ್ನು ಟೆಲಿಗ್ರಾಫ್ ಮೂಲಕ ತಿಳಿಸಿದರೆಂತ ತಿಳಿಯಬರುತ್ತದೆ ಅಂತೂ ಈ ದುಷ್ಟರ ನಡತೆಯಿಂದ ಮಾನಿತರಾದ ಈ ಕುಟುಂಬದವರು ಬಹಳ ಸಂಕಟಪಟ್ಟರು

ಮುಳಬಾಗಿಲು —ಈಗ್ಗೆ ಎರಡು ತಿಂಗಳಿಂದಲೂ ಹಿಡಿದ ಮಳೆ ಬಿಡದೆ ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಹರಿಯುತ್ತಾ ಇವೆ ರಾಗಿಯ ಬೆಳೆಯು ಕೆಲವು ಕಡೆಯಲ್ಲಿ ಮಾತ್ರ ಚೆನ್ನಾಗಿರುತ್ತೆ ಭತ್ತವೆಲ್ಲವೂ ಚೆನ್ನಾದ ಸ್ಥಿತಿಯಲ್ಲಿರುತ್ತದೆ —ಇಲ್ಲಿಯ ಪೇಟೆಯಲ್ಲಿ ದನಕರುಗಳಿಗೆ ಚಪ್ಪೆಯ ರೋಗ ಪ್ರಾಪ್ತವಾಗಿ ಬಹು ನಷ್ಟಗೆ ಕಾಲು ನಡೆಗಳು ವ್ಯಥಪಟ್ಟವು. ಸರ್ಕಾರದವರು ಮೈಸೂರಿನಲ್ಲಿರುವ ಪಶುವೈದ್ಯ ಶಾಲಾ ಡಾಕ್ಟರಿಗೆ ಬರೆದು ಕರೆಸಿ ಇತರ ದನಗಳಿಗೆ ಚಿಕಿತ್ಸೆ ಮಾಡಿಸಿದಲ್ಲಿ ಬಹಳ ದನಗಳು ಬದುಕಿಕೊಳ್ಳಬಹುದು —ನಮ್ಮ ಊರನ್ನೇ ಹಾಳುಮಾಡುತ್ತಿದ್ದ ಪಾಪನಾಸಕಳ್ಳಿಯನ್ನು ಕಡಿಸಿ ಕಂದಕದ ಒಂದು ಪಾರ್ಶ್ವದಲ್ಲಿ ಕೊಳೆಯತಕ್ಕ ಭಗ್ಗ ತುಂಬಿಸಿದ್ದರು ಈಚೆಗೆ ಆದ ವಿಪರೀತ ಮಳೆಯಿಂದ ಮೇಲ್ಗಡೆಯಿಂದ ಬಂದ ನೀರು ಅದನ್ನೆಲ್ಲಾ ತಳ್ಳಿಕೊಂಡು ಬಂದು ಜನರು ಬಟ್ಟೆ ಒಗೆಯತಕ್ಕ ಪ್ರದೇಶಕ್ಕೆ ತಂದು ಹಾಕಿರುತ್ತದೆ —ಈಚೆಗೆ ನಡೆದ ಮುನಿಸಿಪಲ್ ಮೀಟಿಂಗಿನಲ್ಲಿ ನದರಿ ಕಂದಕಕ್ಕೆ ಅಡ್ಡಕಟ್ಟೆ ಹಾಕಿಸಿ ಜನಗಳು ಬಟ್ಟೆ ಒಗೆಯುವ ಕಡೆಗೆ ಕಲ್ಲು ಕಟ್ಟಿಸಬೇಕೆಂದು ತೀರ್ಮಾನವಾಗಿರುವ ವಿಷಯವು ಜನಗಳಿಗೆಲ್ಲಾ ತುಂಬಾ ಸಂತೋಷವನ್ನುಂಟು ಮಾಡಿರುತ್ತದೆ —ಊರೊಳಗಿನ ರಸ್ತೆಗಳಿಗೆ ಸರಿಯಾಗಿ ಗ್ರಾವೆಲ್ ಹಾಕಿಸದಿರುವುದು ಈ ಮಳೆಗಾಲದಲ್ಲಿ ಜನರಿಗೆ ತಿರುಗಾಡುವುದಕ್ಕೂ ಸಹ ಅನಾನುಕೂಲವಾಗಿರುತ್ತದೆ.—ತಿಪಟೂರಿಂದ ವರ್ಗವಾಗಿ ಬಂದಿರುವ ಸಬ್ ರೆಜಿಸ್ಟ್ರಾರ್ ಮ|| ಎ. ಲಕ್ಷ್ಮೀಕಾಂತಯ್ಯಂಗಾರ್ಯರು ಆಗಲೇ ಜನಗಳ ವಿಶ್ವಾಸಕ್ಕೆ ಪಾತ್ರರಾಗಿ ತಾವು ಇಷ್ಟು ಕಡೆಯಲ್ಲೆಲ್ಲಾ ಜನಗಳಿಗೆ ಉಪಯೋಗವಾಗುವಂತೆ ವಾಚಕಶಾಲೆಯನ್ನು ಏರ್ಪಡಿಸಿರುವ ಮೇರೆಗೆ ಈ ಸ್ಥಳದಲ್ಲೂ ಒಂದು ವಾಚಕಶಾಲೆ ಏರ್ಪಾಡು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ —ನಮ್ಮ ಡಾಕ್ಟರು ಮುಸಾಫರಖಾನೆಯನ್ನು ಬಿಟ್ಟು ಊರೊಳಗೆ ಮನೆ ಮಾಡಿಕೊಂಡು ಇಂದದ್ದು ನಮ್ಮ ಊರಿನವರಿಗೆಲ್ಲಾ ಸದಾಕಾಲದಲ್ಲಿಯೂ ಅವರ ಸಹಾಯವು ಸುಲಭವಾಗಿ ದೊರಕುವಂತಾಯಿತು —ಇಲ್ಲಿಗೆ ಅಕ್ಟೋಬರು ಗುರ್ರೇ ತಾರೀಖಿನಿಂದ ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರು ನಿಯಮಿಸಲ್ಪಟ್ಟಿರುತ್ತಾರೆ ಇವರು ಛಾರ್ಜು ವಹಿಸಿದ ದಿವಸವೇ ಇಲಿ ಸತ್ತುಬಿದ್ದಿದ್ದ ಎರಡು ಮನೆಗಳನ್ನು ಕ್ರಮವಾಗಿ ಶುದ್ಧಮಾಡಿಸೋಂಕು ಹರಡದಂತೆ ಮಾಡಿದುದಕ್ಕೆ ನಾವು ತುಂಬಾ ಕೊಂಡಾಡುತ್ತೇವೆ —ಈ ವರುಷದ ನವರಾತ್ರಿ ಉತ್ಸವದ ಸಭೆಗೆ ನಮ್ಮ ಊರಿನ ವರ್ತಕ ಮಂಡಲಿಯಲ್ಲಿ ಇಬ್ಬರೂ, ಸ್ಥಳೀಯ ಕ್ಲಬ್ಬಿನ ಭೋಗರೂ, ಈ ರೀತಿ ಮೂರು ಜನಗಳು ಚುನಾಯಿಸಲ್ಪಟ್ಟಿರುತ್ತಾರೆ —ಪ್ರದರ್ಶನ ಶಾಲೆಗೆ ಇಲ್ಲಿಂದ ಅತ್ಯುತ್ತಮತರದ ರೇಷ್ಮೆ ಮತ್ತು ಇತರ ತರಹ ನಾಜೂಕಾದ ಕೆಲಸದ ಸಾಮಾನುಗಳೂ ಸಹ ಕಳುಹಿಸಲ್ಪಟ್ಟಿವೆ —ನಮ್ಮ ಹೆಡ್ ಮಾಸ್ಟರಿಗೆ ದೇಹಾಲಸ್ಯವಾಗಿರುವುದು ಪರೀಕ್ಷೆಗೆ ದರಖಾಸ್ತು ಮಾಡಿರುವ ವಿದ್ಯಾರ್ಥಿಗಳಿಗೆ ಕೊಂಚ ಅನಾನುಕೂಲವಾಗಿರುತ್ತೆ.

ಅರಸೀಕೆರೆ ತಾಲ್ಲೂಕು ದೊಡ್ಡಬಾಣಾವರ —ಮಳೆ ಕಕ್ಕವುಟ್ಟಿಗೆ ಆಗಿ ಬೆಳೆ ಹುಲುಸಾಗಿ ಆಗಿರುತ್ತದೆ ಇನ್ನು ೧—೨ ಹದ ಮಳೆಗಳಲ್ಲಿ ಬೆಳೆಗಳೆಲ್ಲಾ ಕೈಸೇರುವಂತಿದೆ, ಈ ಸುತ್ತಮುತ್ತಿಗೆ ಸೇರಿದ ಕಣಕಟ್ಟೇ ಪ್ರಾಂತ್ಯದಲ್ಲಿ ೨—೩ ಆಕಸ್ಮಾತ್ ಮರಣಗಳಾದವೆಂತಲೂ, ಎಲ್ಲವೂ ಭಾವಿ, ಕೆರೆಗಳಲ್ಲಿ ಪ್ರಾಣ ಕಳಕೊಂಡವುಗಳೆಂತಲೂ ಪರಸ್ಪರ ವರ್ತಮಾನ ತಿಳಿಯಿತು ಇಂಥಾ ದುರ್ಮರಣಗಳಿಗೆ ಕಾರಣವೇನೋ ತಿಳಿಯದು —ಊರಿನ ಶಾನಿಟರಿ ವಿಷಯವಂತು ನಿಗಾ ತೆಗೆದುಕೊಳ್ಳುವವರೇ ದಿಕ್ಕಿಲ್ಲ. ಉತ್ಸಾಹಶಾಲಿಗಳಿಗೆ ಯಜಮಾನಿಕೆಯನ್ನು ವಹಿಸಿದರೆ ಪೂರ್ಣ ನಿಗಾ ತೆಗೆದುಕೊಂಡು ನೋಡಿಕೊಳ್ಳುವರು ಇದರ ನಿಗಾ ವಿಚಾರದಲ್ಲಿ ಶಾಂತಗುಣ ಸಂಪನ್ನರಾದ ಪ್ರಜಾವಾತ್ಸಲ್ಯವುಳ್ಳ ಉತ್ತರೋತ್ತರ ಅಭಿವೃದ್ಧಿ ಸ್ಥಿತಿಗೆ ಬರತಕ್ಕ ಇಲ್ಲಿನ ಸಭಾ ಶೇಕದಾರರಿಗೆ ವಹಿಸಿದರೆ ಅವರು ಈ ಕೆಲಸವನ್ನೂ ತಮ್ಮ ಇತರ ಕೆಲಸಗಳಂತೆ ವಿಶ್ವಾಸದಿಂದ ನೋಡಿಕೊಳ್ಳುವರು. ಇಲ್ಲದ ಭಾಗದಲ್ಲಿ ಬೀದಿಯಲ್ಲಿ ಬಿದ್ದಿರುವ ಮಲ ಮೂತ್ರಾದಿಗಳ ತೊಳೆತಕ್ಕೆ ಎಷ್ಟುಸಾರಿ ಪಾದ ಪ್ರಕ್ಷಾಳನ ಮಾಡಿಕೊಂಡರೂ ತೀರದ್ದಾಗಿದೆ ಅನೇಕ ಜನ ಅಧಿಕಾರಿಗಳು ಪದೇ ಪದೇ ಬರುತ್ತಿದ್ದಾಗ್ಯೂ ಈ ಗಲೀಜು ಅವರ ಕಣ್ಣಿಗೆ ಯಾಕೆ ಬೀಳದೋ, ಅಥವಾ ಬಿದ್ದರೂ ಯಾಕೆ ಹೇಳಬೇಕು ಎಂಬ ಭಾವನೆಯಿಂದ ಸುಮ್ಮನಿರುವರೋ ಹೇಳತೀರದ್ದಾಗಿದೆ — ಎರಡುವಾರಗಳ ಹಿಂದೆ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗಪಟ್ಟು ಪ್ರಕೃತ ಹಾಸನ ಡಿಸ್ಟ್ರಿಕ್ಟಿನಲ್ಲಿದ್ದ ಸ್ಕೂಲ್ ಇನ್ಸ್‌ಪೆಕ್ಟರ್ ಮೆ|| ಎಂ ಕೆ. ತಿರುಮಲಾಚಾರ್ರವರು ಇಲ್ಲಿನ ಕನ್ನಡ ಸ್ಕೂಲನ್ನು ಪರೀಕ್ಷಿಸಿ, ಪರೀಕ್ಷಾ ಫಲಿತಾಂಶಕ್ಕೂ ಮಾಸ್ಟರುಗಳ ಒಗ್ಗಟ್ಟಿಗೂ ಸಂತೋಷಿಸಿ ಪ್ರಥಮೋಪಾಧ್ಯಾಯರ ಮಾದರಿಯು ಇವರ ಅಭಿವೃದ್ಧಿಗೆ ಸಹಾಯಕವಾಗಿದೆ ಎಂದು ಪೌರಜನಗಳಿಗೆ ತಿಳಿಸಿ, ಇದುವರೆಗೂ ಇಲ್ಲಿನ ಹೆಡ್ಮಾಸ್ಟರ್ ಮೆ|| ಸೂರನಾರಣಪ್ಪನವರಿಗೆ ಪ್ರಮೋಷನ್ ಕೊಡುವ ಹಾಗೆ ಬರೆಯುತ್ತೇನೆಂತಲೂ ಹೇಳಿ, ತಮ್ಮ ವರ್ಗ ವಿಚಾರವಾಗಿ ಚಿಂತನೆಮಾಡಿದವರಿಗೆ ತಮ್ಮ ನೈಜವಾದ ಪ್ರೀತಿಸೂಚಕವಾದ ಸಮಾಧಾನೋಕ್ತಿಗಳನ್ನು ಹೇಳುತ್ತಾ ವಾಪಸು ಹಾಸನಕ್ಕೆ ತೆರಳಿದರು ಇವರ ಬದಲಿಗೆ ಬಂದಿರುವ ಮೆ|| ವೀರಭದ್ರಯ್ಯನವರು ಇವರ ಕೀರ್ತಿಯನ್ನೇ ಪಡೆಯುತ್ತಾರೆಂದು ಹಾರೈಸುತ್ತೇವೆ —ಇಲ್ಲಿ ೫ ಸಂವತ್ಸರಗಳಿಂದಲೂ ಡಾಕ್ಟರಾಗಿದ್ದ ಹಜರತ್ ಅಬ್ದುಲ್ ಖಾದರ್ ಸಾಹೇಬರವರಿಗೆ ಹರಿಹರಕ್ಕೆ ವರ್ಗವಾಗಿ ಅವರ ಸ್ಥಾನಕ್ಕೆ ಚಾಮರಾಜನಗರದಿಂದ ಮೆ|| ಬಿ ಶ್ರೀಕಂಠಯ್ಯನವರು ಬಂದಿರುತ್ತಾರೆ. ಉಭಯತ್ರ ಸಹನಗುಣ, ಶೀಲಸ್ವಭಾವ, ಪರೋಪಕಾರಾಸಕ್ತಿಗಳನ್ನು ಹೇಳಲ ಸಾಧ್ಯವು ಇಲ್ಲಿನ ದೊಡ್ಡಮನುಷ್ಯರುಗಳು ಸೇರಿ ತಾ| ೪ನೇ ಸಾಯಂಕಾಲ ಮರ್ಯಾದಾಪುರಸ್ಸರವಾದ ಔತನ ಸಂಘವನ್ನು ನಡಿಸಿ, ಉಭಯ ಡಾಕ್ಟರುಗಳನ್ನೂ ಬರಮಾಡಿಕೊಂಡು ತಮ್ಮ ಪ್ರೀತಿಯನ್ನು ತೋರ್ಪಡಿಸಿ, ಅವರುಗಳ ಪ್ರೀತಿವಿಷಯವಾದ ಒಂದು ಉಪನ್ಯಾಸವನ್ನು ಇಲ್ಲಿನ ಕನ್ನಡ ಸ್ಕೂಲ್ ಹೆಡ್ ಮಾಸ್ಟರಿಂದಲೂ, ಹಿಂದುಸ್ಥಾನಿಯಲ್ಲಿ ಸೈಯದ್ ಟಪ್ಪಾಸಾಹೇಬರವರಿಂದಲೂ ಹೇಳಿಸಿ ತಾಂಬೂಲಾದಿಗಳನ್ನು ಕೊಟ್ಟು ಮಂಗಳವಾದ್ಯಗಳೊಡನೆ ಕಳುಹಿಸಿದರು —ಹಳೆಬೀಡು ತಾ|| ೫ರಲ್ಲಿ ಇಲ್ಲಿಂದ ಪ್ರಯಾಣ ಬೆಳೆಸಿದರು —ಅಳಲೆಸೇರು, ಪಾಪುಗಳ ವಿಚಾರಕ್ಕೆ ಪೋಲೀಸ್ ಇನ್ಸ್‌ಪೆಕ್ಟರ್ ಮೆ| ಗುಡಿಯಪ್ಪನವರ ನಿಗಾ ಸ್ವಲ್ಪ ಬಿದ್ದಂತಿದೆ

ಚನ್ನರಾಯಪಟ್ಟಣ — ಈ ಪ್ರಾಂತ್ಯ ಸಕಾಲಕ್ಕೆ ಮಳೆಯಾಗಿ ಬೆಳೆಯಾಗಿ ತುಂಬಾ ಅನುಕೂಲವಾಗಿದೆ ತಿಂಗಳ ಕೆಳಗೆ ಗಿಡ್ಡರಾಗಿ ಕಟಾವು ಮಾಡಿಕೊಂಡದ್ದಾಯಿತು ದೊಡ್ಡ ರಾಗಿ ಪೈರು ಬಹಳ ಚೆನ್ನಾಗಿದೆ ಮಳೆ ಹೆಚ್ಚಾದರೂ ಆಗದಿದ್ದರೂ ಬೆಳೆಯು ಕೈಗೆ ಬಂದ ಹಾಗೆಯೇ ಸರಿ ಎಂದು ರೈತರು ತುಂಬಾ ಹರ್ಷಪೂರ್ಣವರಾಗಿದ್ದಾರೆ ಇಷ್ಟೆಲ್ಲಾ ಆದಾಗ್ಯೂ ಧಾರಣೆಯಾ ಎಂತು ಭರಾವಾಗಿಯೇ ಇದೆ ಕೆಲವು ವಾರಗಳ ಕೆಳಗೆ ಸಂತೆಯಲ್ಲಿ ರೂಪಾಯಿ ೧ಕ್ಕೆ ರಾಗಿ ೧೨ ೧೩ ಸೇರು ಇದ್ದದ್ದು ಈಚೆಗೆ ಒಂದೆರಡು ವಾರಗಳಿಂದ ೧೦, ೧೧ ಸೇರಿಗೆ ಇಳಿದಿದೆ ತಮ್ಮ ಅಳತೆ ಕೂಡದಂತು ತಪ್ಪಿಯೇ ಇಲ್ಲ ಈ ವಿಷಯ ಸ್ಥಳಾಧಿಕಾರರು ನಿಗಾ ತೆಗೆದುಕೊಂಡಾರೆಂದು ನಿರೀಕ್ಷಿಸಲ್ಪಟ್ಟಿದೆ —ಈ ಊರು ಕೆರೆಯು ತುಂಬಿದೆ ಇನ್ನು ಒಂದೆರಡು ದಿವಸಗಳಲ್ಲಿ ಕೋಡಿ ಬೀಳುತ್ತೆ ಕೆರೆ ತುಂಬಿದ್ದರಿಂದ ಮುಂದೆ ಭತ್ತದ ಬೆಳೆಗೆ ತುಂಬಾ ಅನುಕೂಲವಾಗಿ ಜನಗಳು ಕ್ಷಾಮದ ಬಾಧೆ ಪೂರ್ಣವಾಗಿ ತಪ್ಪಿಹೋಗುವುದೆಂದು ಹಸನ್ಮುಖಿಗಳಾಗಿದ್ದಾರೆ — ಈ ಊರಿನಲ್ಲಿ ೫ ವರ್ಷಗಳ ಕಾಲ ಪೋಸ್ಟು ಮಾಸ್ಟರಾಗಿದ್ದ ಮ| ಕೃಷ್ಣಮೂರ್ತಿರಾಯರಿಗೆ ಸಕಲೇಶಪುರಕ್ಕೆ ವರ್ಗವಾಯಿತು ಇವರು ತುಂಬಾ ನಿದಾನಸ್ಥರು ತಮ್ಮ ಕೆಲಸದಲ್ಲಿ ತುಂಬಾ ಜಾಗ್ರತೆಯುಳ್ಳವರು ಎಲ್ಲಾ ಜನರಲ್ಲಿ ತುಂಬಾ ವಿಶ್ವಾಸವುಳ್ಳವರಾಗಿದ್ದು ಯಾರಿಗೂ ಯಾವ ತೊಂದರೆ ಇಲ್ಲದೆ ಕೆಲಸ ಕಾರ್ಯಗಳನ್ನು ನಡಿಸುತ್ತಾ ಇದ್ದರು ಇಂಥಾ ಅನುಕೂಲವಾದ ಪೋಸ್ಟುಮಾಸ್ಟರನ್ನು ಕಳೆದುಕೊಳ್ಳುವದು ವ್ಯಸನವಾಗಿದ್ದರೂ ಇವರ ಮಹಸತ್ತಿಗೆ ಮೇಲಿನವರು ಒಡ್ಡಿಯ ಮೇಲೆ ಕಳುಹಿಸಿರುವದರಿಂದ ಸಂತೋಷಪಡುತ್ತಾರೆ, ತಾ. ೧೧ರಲ್ಲಿ ಇಲ್ಲಿನ ತಾಲ್ಲೋಕು ಅಮಲ್ದಾರ್ ಮೆ| ಶ್ರೀನಿವಾಸರಾಯರೂ ಇತರ ಉದ್ಯೋಗಸ್ಥರೂ ಸೇರಿ ಇವರನ್ನು ಟ್ರಾವಲರ್ಸ್ ಬಂಗ್ಲೆಗೆ ಬರಮಾಡಿಕೊಂಡು ಬ್ಯಾಂಡು ವಗೈರೆ ವಾದ್ಯ ಘೋಷಗಳಿಂದ ಟಿಫನ್ ಪಾರ್ಟಿ ಮಾಡಿ ಸತ್ಕರಿಸಿದ್ದ

ಲ್ಲದೆ ಅದೇ ಸಾಯಂಕಾಲ ಬ್ಯಾಂಡಿನೊಂದಿಗೆ ಅಮಲ್ದಾರರವರೇ ಮುಂತಾದವರ ಜೊತೆಯಲ್ಲಿ ಪೇಟೆ ಕೋಟೆಗೆ ದಯಮಾಡಿ ಪ್ರತಿ ಮನೆಯಲ್ಲೂ ಅವರನ್ನು ಮರ್ಯಾದೆಮಾಡಿಕೊಂಡು ತಾಂಬೂಲ ಫಲಪುಷ್ಪಾದಿಗಳಿಂದ ತಮ್ಮ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿದರು ಮಾರನೆ ದಿನ ಅವರು ತಮಗೆ ನೇಮಕವಾದ ಸ್ಥಳಕ್ಕೆ ಪ್ರಯಾಣ ಬೆಳಸಿದರು ಈಗ ಅರಸೀಕೆರೆಯಿಂದ ಇವರ ಬಳಿಗೆ ಬಂದಿರುವ ಮೆ॥ ಆನಂದರಾಯರವರು ಅವರಂತೆ ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ತಮ್ಮ ಕೆಲಸವನ್ನು ಮುತುವರ್ಜಿಯಿಂದ ನಡಿಸಿಕೊಂಡು ಬರುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ —ಇಲ್ಲಿನ ಎ ವಿ ಸ್ಕೂಲಿಗೆ ಮೆ॥ ತಿರುಮಲಯ್ಯಂಗಾರ್, ಬಿ ಎ ಯವರು ಹೆಡ್‌ಮಾಸ್ಟರಾಗಿ ನೇಮಕವಾಗಿ ಸುಮಾರು ವರುಷವಾಗುತ್ತಾ ಬಂತು ಇವರು ಬಾಲಕರ ವಿದ್ಯಾಭ್ಯಾಸದ ವಿಚಾರದಲ್ಲಿ ತುಂಬಾ ಮುತುವರ್ಜಿಯಿಂದ ಕೆಲಸ ನಡಿಸಿಕೊಂಡು ಬರುತ್ತಾರೆ ತಮ್ಮ ಸಹಾಯೋಪಾಧ್ಯಾಯರುಗಳಲ್ಲಿ ಏಕರೀತಿಯಾದ ವಿಶ್ವಾಸಾಭಿಮಾನಗಳಿಂದ ಕಾಣುತ್ತಾ ಬರುವದರಿಂದ ಮಾಸ್ಟರುಗಳೆಲ್ಲರೂ ಐಕಮತ್ಯದಿಂದ ಕೆಲಸವನ್ನು ಮಾಡುತ್ತಾ ಇರುತ್ತಾರೆ ಸಾಧಾರಣವಾಗಿ ದೊಡ್ಡ ಪಟ್ಟಣಗಳಲ್ಲಿ ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷಾ ಪರಿಚಯವು ಅನುಕೂಲವಾಗಿದೆ ತಾಲ್ಲೂಕು ಎ ವಿ ಸ್ಕೂಲುಗಳಲ್ಲಿ ಅಂಥಾ ಅವಕಾಶವು ದೊರೆಯದಿರುವದರಿಂದ ಇಂಗ್ಲಿಷ್ ಅಭ್ಯಾಸವು ಕಡಮೆ ಎಂದು ತಿಳಿದಿದೆ ಇಂಥಾ ಕೊರತೆಯನ್ನು ಹೋಗಲಾಡಿಸಬೇಕೆಂದು ಸದರಿ ಹೆಡ್ ಮಾಸ್ಟರವರು ಹಲವು ಪ್ರಯತ್ನವನ್ನು ಮಾಡುತ್ತಾರೆ ಈಚೆಗೆ ಇದೇ ಉದ್ದೇಶಕ್ಕಾಗಿ ಅವರು ವಿದ್ಯಾರ್ಥಿಗಳಿಗೆ ವಾರಕ್ಕೊಂದು ದಿನ ಸಾಯಂಕಾಲದಲ್ಲಿ ಒಂದು ಕೂಟವನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೇ ಸಣ್ಣ ಉಪನ್ಯಾಸಗಳನ್ನು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಸಹ ಬರೆದು ಓದುವಂತೆ ಮಾಡಿರುತ್ತಾರೆ ಇಂಥ ಇವರ ಉದ್ದೇಶವು ಫಲಕಾರಿಯಾಗಲೆಂದು ಹಾರೈಸುತ್ತೇವೆ —ಕಟ್ಟಡವಾದರೋ ಒಳಗಿನ ನೆಲವೆಲ್ಲಾ ಕಿತ್ತು ಹಳ್ಳ ಬಿದ್ದಿರುತ್ತ ಗಾರೆ ಧೂಳು ಸ್ಕೂಲಿನ ವರಿಗೆ ಬಹಳ ಜುಗುಪ್ಸೆಯನ್ನುಂಟುಮಾಡುತ್ತದೆ ಇದಕ್ಕೆ ಇಲಾಖೆಯ ಅಧಿಕಾರಿಗಳು ಇನ್ನೂ ನಿಗಾ ಕೊಡದೆ ಇರುತ್ತಾರೆ —ಈ ಊರ ಹೊಲಗೇರಿಯಲ್ಲಿ ಕಲ್ಲನೆಂಬವನ ಮನೆಯಲ್ಲಿ ಕಟ್ಟಿಹಾಕಿದ್ದ ಬಿಳಿ ಬೂದು ವರ್ಣದ ಗಬ್ಬದ ಹಸುವನ್ನು ಈಗ್ಗೆ ಸುಮಾರು ೧। ತಿಂಗಳ ಕೆಳಗೆ ಇದೇ ಊರಿಗೆ ಸೇರಿದ ಮೇಲಿನ ಹೊಲಗೇರಿಯಲ್ಲಿರುವ ಹುಲ್ಲುಮನೆ ಕಾಳನ ಮಗ ತಿರುಮಲ ಉರುಫ್ ಮೂಗ, ಅದೇ ಹೊಲಗೇರಿ ಕೊಸಲ ಕಾಳನ ಮಗ ಸಂಕ ಕಸಬಾ ಪೇಟೆ ೭ ಬಟ್ಟನ ದಾದು ಮಗ ಮುಸ್ತಾಫ್ ಸಾಬಿ, ಈ ೩ ಜನರೂ ಹಸುವನ್ನ ಕದ್ದು ಎತ್ತಿಕೊಂಡು ಹೋಗಿ ಕಾಳನ ಮನೆಯಲ್ಲಿ ಕೊಯ್ದಿರುವರೆಂದು ಪೋಲೀಸಿನವರು ಪತ್ತೆಮಾಡಿ ಅವರನ್ನು ಹಾಸನದ ಲಾಕಪ್ಪಿನಲ್ಲಿಟ್ಟಿರುತ್ತಾರೆ ಸಂಕನೆಂಬುವನು ಪರಾರಿಯಾಗಿರುತ್ತಾನೆ

ಚಿಕ್ಕಬಿರಂಗನಬೆಟ್ಟ —ಇಲ್ಲಿ ಈಗ್ಗೆ ೨೦ ದಿವಸಗಳಿಂದ ಮಳೆ ನಿಂತು ಚೆನ್ನಾಗಿ ಬಿಸಲು ಕಾಯುತ್ತಾ ಜನಗಳಿಗೆ ಆರೋಗ್ಯವನ್ನುಂಟುಮಾಡಿದೆ ಈ ಕಾಡಿಗೆ ಒಂದು ಮನುಷ್ಯರನ್ನು ತಿನ್ನತಕ್ಕ ಹುಲಿ ಬಂದು ಸೇರಿಕೊಂಡು ತೊಂದರೆ ಪಡಿಸುತ್ತಾ ಇದೆ ಕಳೆದ ೭ನೇ ತಾ ಗುರುವಾರ ಬೆಳಿಗ್ಗೆ ಸಾಮದಕಟ್ಟೆ ಬಳಿ ದನಾ ಕಾಯುತ್ತಿದ್ದ ಗೌಡಳ್ಳಿ ಶಿವಾಚಾರದ ಕಪನ್ನಯನೆಂಬುವನನ್ನು ಹಿಡಿದು ತಿಂದು ಬಿಟ್ಟಿದ್ದಾಗಿಯೂ ಆ ಮನುಷ್ಯನ ಶವ ಕಾಡಿನಲ್ಲಿ ಹುಡುಕುವಾಗ್ಗೆ ಸಿಕ್ಕಿದ ಅರ್ಧ ಭಾಗ ಶವವನ್ನು ವರ್ಸ ಬಗ್ಗೆ ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾಗಿಯೂ ಕೇಳುತ್ತೇನೆ ಜನಗಳು ದಾರಿ ಮುಂತಾದ ಕಡೆ ತಿರುಗಾಡಲು ಬಹಳ ಭಯಪಡುತ್ತಾರೆ ಇಲ್ಲಿಗೆ ಹುಲಿ ಶಿಕಾರಿಗೋಸ್ಕರ ನಾಳೆನಾಡಿದ್ದರಲ್ಲಿ ಇಬ್ಬರು ಯುರೋಪಿಯನ್ ಸರದಾರ್ರು ಬರುವದಾಗಿ ವರ್ತಮಾನವಿದೆ ಈ ಕಾಲದಲ್ಲಿ ಸರ್ಕಾರದವರು ಮುತುವರ್ಜಿ ವಹಿಸಿ ಈ ದುಷ್ಟ ವ್ಯಾಘ್ರವನ್ನು ಶಿಕಾರಿಮಾಡಿಸಿ ಜನಗಳಿಗೂ ಜಾನವಾರುಗಳಿಗೂ ಕ್ಷೇಮ ಉಂಟುಮಾಡುತ್ತಾರೆಂದು ಹಾರೈಸುತ್ತೇವೆ

ಒಬ್ಬಂಪುರ ತಾ॥ ಒಗ್ಗಪಲ್ಲಿ —ತಾ ೧೫ನೇ ಶುಕ್ರವಾರ ಮಧ್ಯಾಹ್ನ ಈ ಗ್ರಾಮದ ಸ್ಕೂಲಿನಲ್ಲಿ ಒಂದು ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ ಸಭೆ ಸೇರಿಸಲ್ಪಟ್ಟು, ಕಟ್ಟಡವು ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಭಾವ ಚಿತ್ರಗಳಿಂದಲೂ, ಪುಷ್ಪ ತೋರಣಗಳಿಂದಲೂ ಅಲಂಕರಿಸಲ್ಪಟ್ಟಿತು ಸಭಿಕರ ಅನುಮತಿಯನ್ನರಿತು ಸ್ಕೂಲ್ ಮಾಸ್ಟರ್ ಮೆ॥ ಡಿ ರಾಮಯ್ಯನವರ ಪ್ರಾರ್ಥನೆಯಂತೆ ರೆಪ್ರಸೆಂಟೆಟಿವ್ ಮೆಂಬರ್ ಮೆ॥ ಎ ಗುರುರಾಯರು ತಮಗಾಗಿ ಸಿದ್ಧಮಾಡಿದ್ದ ಅಗ್ರಾಸನವನ್ನು ಅತ್ಯಾದರದಿಂದ ಅಲಂಕರಿಸಿದರು ಮಾಸ್ಟರು ಸಂಘದ ವಿಷಯವಾಗಿ ಸುಲಭ ಶೈಲಿಯಲ್ಲಿ ಉಪನ್ಯಾಸಮಾಡಿದರು ಅಗ್ರಾಸನಾಧಿಪತಿಗಳು ಈ ಉಪನ್ಯಾಸವನ್ನು ಶ್ಲಾಘಿಸಿ ವಿದ್ಯಾಭಿವೃದ್ಧಿ ವಿಷಯದಲ್ಲಿ ವಾಗ್ವೈಖರಿಯಿಂದ ಸಭಾಸದರನ್ನು ತೃಪ್ತಿಗೊಳಿಸಿದರು ನೀಲಕಂಠಪ್ಪ, ಚೌಡಪ್ಪ ಎಂಬ ವಿದ್ಯಾರ್ಥಿಗಳು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಮಾಡಿದ ಸಂಭಾಷಣೆಯೂ, ಮಕ್ಕಳ ತರಗತಿ ಪಂಕ್ತಿಯ, ಹೊಳೆಯ ಎಂಬ ಬಾಲಕರು ಅಭಿನಯದಿಂದ ಹೇಳಿದ ಕಥೆಯೂ ಶ್ಲಾಘನೀಯವಾಗಿತ್ತು ಇಂಡಿಯಾ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಕೀರ್ತನೆಗಳನ್ನು ಕಪನ್ನಯ್ಯ ನಂಜಪ್ಪ ಎಂಬ ವಿದ್ಯಾರ್ಥಿಗಳು ಇಂಪಾಗಿ ಹಾಡಿದರು ಇಂತಹ ಸಭೆಯು ಪ್ರತಿ ತಿಂಗಳಲ್ಲಿಯೂ ಒಂದಾವರ್ತಿ ಇದೇ ಸ್ಥಳದಲ್ಲಿ ನಡೆಯಬೇಕೆಂತಲೂ, ಆ ಕಾಲದಲ್ಲಿ ವಿದ್ಯಾರ್ಥಿಗಳು ಅವರ ಅಭಿವೃದ್ಧಿಗೆ ಅತ್ಯವಶ್ಯಕವಾದ ವಿಷಯಗಳಲ್ಲಿ ಯೋಗ್ಯವಾದ ಉಪನ್ಯಾಸಗಳನ್ನು ಸಿದ್ಧಪಡಿಸಬೇಕೆಂತಲೂ ತೀರ್ಮಾನವಾಗಿ ಸಭೆಯು ಸಮಾಪ್ತವಾಯಿತು

ಮಗ್ಗೆರಾಮದೇವನಕೋಟೆ —ಇಲ್ಲಿ ೪ ೫ ದಿನ [illegible] ಪ್ರತಿನಿತ್ಯ ದಿನ ಬಿಟ್ಟು ದಿನ ಒಳ್ಳೇ ಮಳೆಯಾಗುತ್ತದೆ ರೈತರೆಲ್ಲಾ ಹಸನ್ಮುಖಿಗಳಾಗಿ ಕಟಾವಿಗೆ ಬಂದ ರಾಗಿ, ಎಳ್ಳು ಹುಚ್ಚೆಳ್ಳು ಪೈರುಗಳನ್ನು ಕೊಯ್ದು ಮೆದೆ ಹಾಕುತ್ತಿದ್ದಾರೆ ಹುರುಳಿ ಪಸಲೂ ಚೆನ್ನಾಗಿದೆ ಹಿಂಗಿದ್ದರೂ ದಿನಸಿ ಧಾರಣೆ ತುಟ್ಟಿಯಾಗಿಯೇ ಇದೆ ಹೆಚ್ಚಾಗಿ ಮಳೆಯಾದದ್ದರಿಂದ ವಿಪರೀತವಾಗಿ ತರಕಾರಿಗಳು ಸಂತೆಗೆ ಮಾರಾಟಕ್ಕೆ ಬರುತ್ತಿವೆ ಸದ್ಯಕ್ಕೆ ಸಾಂಕ್ರಾಮಿಕಾದಿ ರೋಗಗಳ ಬಾಧೆಯೇನೂ ಇಲ್ಲ —ಇಲ್ಲಿಗೆ ಸರ್ಕಾರದವರು ಹೊಸದಾಗಿ ಕಳುಹಿಸಿಕೊಟ್ಟಿರುವ ಸ್ಯಾನಿಟರಿ ಇನ್‌ಸ್ಪೆಕ್ಟರು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ ಈ ಊರಲ್ಲಿ ಹಾಳು ನಿವೇಶನಗಳು ಹೆಚ್ಚಾಗಿರುವದರಿಂದಲೂ ಅವುಗಳಿಗೆ ಗೋಡೆಗಳು ಇಲ್ಲದೆ ಗಿಡಗಳು ಬೆಳೆದು ಹೊಲಸು ಮಾಡುವದಕ್ಕೂ ವಿಷಜಂತುಗಳು ಸೇರುವುದಕ್ಕೂ ಅವಕಾಶವಿದ್ದಿತು ಆದರೆ ನಮ್ಮ ಹೊಸ ಅಮಲ್ದಾರ್ರವರು ಆ ನಿವೇಶನಗಳ ಮಾಲೀಕರು ಗೋಡೆ ಹಾಕಿಸಿಕೊಳ್ಳದಿದ್ದರೆ ಅವು ಸರ್ಕಾರದಿಂದ ಹರಾಜಾಗುವುವೆಂದು ನೋಟೀಸು ಮೂಲಕವೂ ಟಾಂಟಾಂ ಮೂಲಕವೂ ಪ್ರಕಟಿಸಿದ್ದರಿಂದ ಎಲ್ಲಾ ಶುಚಿಯಾಗಲಿಕ್ಕೆ ಬಂದಿವೆ ಇದನ್ನು ನೋಡಿದರೆ ಇವರು ಸ್ವಲ್ಪ ದಿವಸಗಳಲ್ಲಿಯೇ ಮುನಿಸಿಪಾಲಿಟಿಯನ್ನು ಒಳ್ಳೇ ಸ್ಥಿತಿಗೆ ತರುವದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಇವರು ಬಂದು ಸ್ವಲ್ಪ ದಿವಸಗಳಾಗಿದ್ದರೂ ಜನರಲ್ಲಿ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದಾರೆ ಕೆಲಸ ಜಯಪ್ರದವಾಗಲೆಂದು ಹಾರೈಸುತ್ತೇವೆ —ಇಲ್ಲಿನ ಜೋಗಿಗರ, ಬ್ರಾಹ್ಮಣರ, ಕುರುಬರ ಮತ್ತು ಹೊಲೆಯರ ಬೀದಿಗಳಲ್ಲಿ ಲಾಂದ್ರಗಳೇ ಇಲ್ಲ ಇದ್ದರೂ ಶಿರವಿಲ್ಲದ ಮುಂಡದಂತೆ ಅಲ್ಲಲ್ಲಿ ಒಂದೊಂದು ನಿಂತಿವೆ ರಾತ್ರಿ ವೇಳೆ ಕತ್ತಲೆಯಲ್ಲಿ ತಿರುಗತಕ್ಕ ಜನಗಳಿಗೆ ಕಷ್ಟ ಅಮಲ್ದಾರ್ರವರು ಮೇಲಿನ ಬೀದಿಗಳಿಗೆ ಲಾಂದ್ರಗಳನ್ನು ಇಡಿಸಿ ಕೊಟ್ಟು ಕಾಪಾಡುವರೆಂದು ನಂಬಿದೇನೆ —ಇಲ್ಲಿನ ಸ್ಕೂಲು ಉತ್ತಮಸ್ಥಿತಿಯಲ್ಲಿದೆ ಆದರೆ ಕಟ್ಟಡ ಮಾತ್ರ ಶಿಥಿಲವಾಗಿದೆ ಮಳೆಗಾಲದಲ್ಲಿ ಸ್ಕೂಲಿನಲ್ಲಿ ನೀರು ನಿಂತು ಹುಡುಗರಿಗೆ ತೊಂದರೆಯಾಗುವದರಿಂದ ಸ್ಕೂಲು ಜಾಗ್ರತೆಯಲ್ಲಿ ರಿಪೇರಿಯಾಗುವದೆಂದು ನಂಬಿದೇನೆ —ನಮ್ಮ ಡಾಕ್ಟರು ಪ್ರತಿ ಸೋಮವಾರ ತಪ್ಪದೆ ಬಾಲಕ ಬಾಲಕಿಯರ ಸ್ಕೂಲುಗಳಿಗೆ ಹೋಗಿ ಕಾಯಿಲೆಯವರನ್ನು ವಿಚಾರಿಸಿಕೊಂಡು ಬರುತ್ತಾರೆ —ನಿನ್ನೆ ದಿನ ಇಲ್ಲಿನ ಒಬ್ಬ ಬ್ರಾಹ್ಮಣ ಹುಡುಗಿಯು ನೀರುಸೇದಲಿಕ್ಕೆ ಬಾವಿಗೆ ಹೋಗಿ ಮುಗ್ಗರಿಸಿಬಿದ್ದಳು, ಹತ್ತಿರದ್ದವರು ಕೂಗಿಕೊಳ್ಳಲು ನಮ್ಮ ಕಸಬಾ ಪಠೇದಾರರು ಸಾಹಸಮಾಡಿ ವೆಂಕಟಸುಬ್ಬಯ್ಯ ಎಂಬುವರನ್ನು ಭಾವಿಗೆ ಇಳಿಸಿ ತೊಟ್ಟಿಬಿಟ್ಟು ಆ ಹುಡುಗಿಯನ್ನು ಮೇಲಕ್ಕೆ ತೆಗಿಸಿದರು ಅಲ್ಲಲ್ಲಿ ಅಲ್ಪಸ್ವಲ್ಪ ಘಾಯಗಳಿವೆ ಡಾಕ್ಟರೂ ಜಮಾದಾರ್ರೂ ಬಂದು ಉಪಚಾರ ಮಾಡಿಕೊಂಡು ಹೋದರು —ಇವರು ಸರಗೂರಿನ ರಂಗಶೆಟ್ಟಿ ಎಂಬುವನು ಕಮ್ಮಿ ಸೇರನ್ನು ಇಟ್ಟು ಅಳೆಯುತ್ತಿದ್ದುದನ್ನು ಪತ್ತೆಮಾಡಿ ಅವನ ಮೇಲೆ ಮೊಕದ್ದಮೆ ಮಾಡಿದ್ದಾರೆ ಇದನ್ನು ಕಂಡು ಇತರರು ತಮ್ಮಲ್ಲಿರುವ ತೂಕಗಳನ್ನು ಮರೆಮಾಚಿಸುತ್ತಿದ್ದಾರೆ —ಕೆರೆಯ ಕೆಲಸ ತ್ವರಿತದಿಂದ ನಡೆಯುತ್ತಿದೆ

ಅರಸೀಕೆರೆ —ಎಲ್ಲಾ ಕಡೆಗಳಲ್ಲೂ ರಾಗಿ ಮುಂತಾದ ಪೈರುಗಳು ಬೆಳೆದು ಸಮೃದ್ಧಿಯಾಗಿದೆ ಪ್ರಾಯಶಃ ಎರಡು ಮೂರು ವರ್ಷಗಳ ಧಾನ್ಯ ರೈತರಿಗೆ ಸಿಕ್ಕುವದು ಅನೇಕ ಕಡೆಗಳಲ್ಲಿ ರಾಗಿ ಬೆಳೆ ಮನುಷ್ಯ ಪ್ರಮಾಣ ಬೆಳೆದು ಮಲಗಿವೆ ಅಂತೂ ಕಳೆದ ಅನೇಕ ವರ್ಷಗಳಿಂದಲೂ ಇಂಥ ಮಳೆಗಾಲವೂ ಸುಭಿಕ್ಷವೂ ಇರಲಿಲ್ಲವೆಂದು ಜನರು ಹೇಳುತ್ತಾರೆ ಕೆರೆಗಳೆಲ್ಲಾ ತುಂಬಿ ಕೋಡಿಬಿದ್ದಿವೆ ರೈತರಿಗೆ ಯಳ್ಳು ಮೆಣಸಿನಕಾಯಿಗಳ ಫಲದಿಂದ ಬಹಳ ಲಾಭ ಬಂದಿದೆ ಕಷ್ಟವು ರೈತರಿಗೆ ತೀರಾ ಕಡಮೆಯಾಗಿದೆ ಆದರೆ ಕೂಲಿಕಾರರಿಗೆ ಮಾತ್ರ ಕಷ್ಟ ತಪ್ಪಲಿಲ್ಲ ಇನ್ನೂ ರಾಗಿ ೧೨ ಸೇರೂ, ಅಕ್ಕಿ ೬–೭ ಸೇರೂ, ಬೇಳೆ ೫ ಸೇರೂ ಮಾರುತ್ತಿದೆ ಆದ್ದರಿಂದ ಧಾರಣೆ ಇಳಿಯಲು ಇನ್ನು ಮೂರು ನಾಲ್ಕು ತಿಂಗಳ ಮಟ್ಟಿಗೂ ಕಾಯಬೇಕಾಗಿದೆ —ಕೆಲವು ಕಡೆ ಆಕಸ್ಮಾತ್ ಕಾಯಿಲೆಗಳೂ ಒಂದೆರಡು ಆಕಸ್ಮಾತ್ ಮರಣಗಳೂ ಈ ತಾಲ್ಲೂಕಿನಲ್ಲಿ ಸಹ ಬಂದ ವರ್ತಮಾನವಿದೆ —ಪೋಲೀಸ್ ಇನ್‌ಸ್ಪೆಕ್ಟರ್ ಗುಡಿಯಪ್ಪನವರು ಅರಸೀಕೆರೆ ಸಂತೆಗೆ ಪ್ರತಿವಾರವೂ ಹೋಗಿ ಕಮ್ಮಿ ಸೇರುಗಳನ್ನು ಕಂಡು ಹಿಡಿಯುತ್ತಿರುವದರಿಂದ ಅನೇಕರಿಗೆ ತುಂಬಾ ಉಪಕಾರವಾಗಿದೆ ಮತ್ತು ಇವರು ತುಂಬಾ ಮುಹನತ್ತು ಮಾಡಿ ವರ್ತಕರಲ್ಲಿ ಕೆಲವರನ್ನು ಚನ್ನಾಗಿ ತಿದ್ದುವಂಟು ಮಾಡಲಿಕ್ಕೆ ಕಾದಿರುತ್ತಾರೆ ಆದರೆ ಮೋಸಗಾರರು ಇನ್ನೂ ಇವರ ವಶಕ್ಕೆ ಸಿಕ್ಕಿಬಿದ್ದಿಲ್ಲ ಪೋಲೀಸ್ ನೌಕರರನ್ನೆಲ್ಲಾ ಮೆ ಗುಡಿಯಪ್ಪನವರ ಹಾಗೆ ನಂಬಿಕೆಯೂ ಆಸಕ್ತಿಯೂ ಚಟುವಟಿಕೆಯೂ ಉಳ್ಳವರಾದರೆ ಬಹಳ ಒಳ್ಳೇದು ಎಕ್ಸ್‌ಪ್ರೆಸ್ ಬಾಬಿನಲ್ಲಿ ಕೆಲಸ ಮಾಡುತ್ತಿದ್ದ ಫೌಂಡೇಷನ್‌ಯವರಿಗೆ ಟ್ರೇನಿಂಗ್ ಆಗಲಿಕ್ಕೆ ಅಪ್ಪಣೆ ಇದೆ —ಇಲ್ಲಿಗೆ ಕೆಲವು ತಿರುಕರು ಸಾಧುಗಳ ವೇಷದಿಂದ ಬರುತ್ತಿದ್ದಾರೆ ಆದರೆ ಅವರಲ್ಲಿ ಕೆಲವರು ಅಂತರಂಗ ಕಳ್ಳರಾಗಿದ್ದಾರೆ —ತಾಲ್ಲೂಕ್ ಜಮಾಬಂದಿ ಕೆಲಸ ಪೂರೈಸುತ್ತಿದೆ ಅಮಲ್ದಾರ್ರವರು ತುಂಬಾ ಮುತುವರ್ಜಿಯಿಂದಲೂ ಆಸಕ್ತಿಯಿಂದಲೂ ಯಥಾರ್ಥವಾದ ನ್ಯಾಯ [illegible] ಯಿಂದಲೂ ಕೆಲಸ ನಡಿಸುವದರಿಂದ ಈ ತಾಲ್ಲೂಕಿನ ಕೆಲಸಗಳೂ ತುಂಬಾ ಅನುಕೂಲವಾಗಿ ನಡೆಯುತ್ತಿವೆ ಆದರೆ ಕೆಲವು ನೌಕರರೂ ಜುಜುಬಿ ಸಂಬಳದಲ್ಲಿ ಜೀವಿಸಲಾಗದೆ, ಅವರ [illegible] ದರಿಂದ ಜಾಸ್ತಿ ಪಗಾರ ವಕ್ಕೆ ಆಶಿಸುವವರು ಅಪರೂಪವಲ್ಲ ಇದು ರೈತರಿಗೆ ಕಿರುಕುಳವೇ ಸರಿ ಪೋಟಿಗೆ ಹೊಂದುವವರಾಗಲೀ ಮುಖ್ಯರಾಗಲೀ ರುಸುಂ ಕೊಟ್ಟರೆ ಶಿವಾಯಿ ಕೆಲಸ ನಡೆಯುವದೇ ಕಷ್ಟವೆಂತಲೂ, ಇದು ನಿರಂಕುಶವಾದ ಮಾಮೂಲಾಗಿದೆ ಎಂತಲೂ ಅನೇಕರು ಹೇಳಿಕೊಳ್ಳುತ್ತಿದ್ದಾರೆ —ಮುನಿಸಿಪಾಲಿಟಿ ಸ್ಥಿತಿ ತೃಪ್ತಿಕರವಾಗಿಲ್ಲ ಎಲ್ಲಾ ಕಡೆಗಳಲ್ಲೂ ಗಿಡಗಂಟಿ ಬೆಳೆದು ಜನ ರೋಗಕ್ಕೆ ಅವಕಾಶವಾಗಿದೆ ಅಲ್ಲಲ್ಲಿ ಕೊಳೆ ತುಂಬಿದ ಬಚ್ಚಲುಗಳೂ ಮನುಷ್ಯರ ಹೇಸಿಕೆಯೂ ತುಂಬಿವೆ ಬರಬರ ಅರಸೀಕೆರೆಯಲ್ಲಿ ಅನಾರೋಗ್ಯಕ್ಕೆ ಅವಕಾಶವಾಗುತ್ತಿದೆ ಇದಕ್ಕಾಗಿ ಇಲ್ಲಿಗೆ ಒಬ್ಬ ಸ್ಯಾನಿಟರಿ ಇನ್‌ಸ್ಪೆಕ್ಟರನ್ನು ಮೊಕರರ್‌ಮಾಡಿರುತ್ತಾರೆ ನಮ್ಮ ಸಬ್ ಡಿವಿಜನ್ ಆಫೀಸರ್ ಮೆ॥ ಎಲಿಸ್ ಸಾಹೇಬರವರಿಗೆ ಸೂಪರ್‌ವೈಸರ್ ಗ್ರೇಡಿಗೆ ಬಡ್ತಿ ಆಗಿದೆ ಅದರಂತೆ ಇನ್ನು ಕೆಲವು ಇಂಜನಿಯರ್ ಆಫೀಸರುಗಳಿಗೆ ಬಡ್ತಿ ಆಯಿತಂತೆ —ಇಲ್ಲಿನ ವೆಸ್ಲಿಯನ್ ಮಿಷನ್ ಕ್ರೈಸ್ತ ಬೋಧಕರಾದ ಜನ ಥಾಮ್ಸನ್‌ಯವರು ಆಗಾಗ್ಗೆ ಅರಸೀಕೆರೆಗೆ ಬಂದು ಉಪನ್ಯಾಸಗಳನ್ನು ನಡಿಸಿ ಸಭಿಕರನ್ನು ಅನೇಕ ವಿಧವಾಗಿ ಪ್ರೋತ್ಸಾಹಗೊಳಿಸುವದರಿಂದ ಇಲ್ಲಿನ ಕ್ರೈಸ್ತ ಮಂಡಲಿಯವರೂ ಇತರರೂ ಇವರ ಮೇಲೆ ತುಂಬಾ ಅನುರಾಗವುಳ್ಳವರಾಗಿದ್ದಾರೆ —ಇಲ್ಲಿನ ಕೆಲವು ಕೊರಮರೂ ಒಡ್ಡರೂ ಡಕಾಯಿತಿ ಮೊಕದ್ದಮೆಗಳಿಗೆ ಸೇರಿದವರೆಂಬದಾಗಿ ಹಿಡಿಯಲ್ಪಟ್ಟಿರು ಅವರಲ್ಲೇ ಅನೇಕರು ಗ್ರಾಮಗಳನ್ನು ಕಟ್ಟಿ ಜರಾಯಿತಿ ಮುಂತಾದ ಕಸುಬುಗಳಿಂದ ಜೀವನ ಮಾಡುತ್ತಿರುವದರಿಂದ ಈ ಅಪವಾದಕ್ಕೆ ತಕ್ಕ ಆಧಾರವಿಲ್ಲವೆಂದು ಹೇಳಬಹುದು

ಇಂಡಿಯಾದೇಶದ ವೃತ್ತಾಂತಗಳು

ಅಫ್ಘಾನಿಸ್ಥಾನದಲ್ಲಿ ಭೂಮಿಯನ್ನು ಶೋಧನೆಮಾಡಿ ಕಲ್ಲಿದ್ದಲು, ಲೋಹಾದಿಗಳು ಸಿಕ್ಕುವ ಪ್ರದೇಶಗಳನ್ನು ಕಂಡು ಹಿಡಿಯುವುದಕ್ಕಾಗಿ ಅಮೀರರವರು ಡಾ ಡಬ್ಲಿಯು ನಿಯಿಸ್ಸಂ ಎಂಬುವನನ್ನು ನೇಮಕಮಾಡಿಕೊಂಡಿರುವರು ಇವರು ಈ ತಿಂಗಳ ಅಖೈರಿನೊಳಗಾಗಿ ಕಾಬೂಲಿಗೆ ಪ್ರಯಾಣವಾಗುವವರಾಗಿದ್ದಾರೆ

* * *

ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಬಳಿ ಇರುವ ವಜೀರಿಸ್ಥಾನದ ಮುಲ್ಲಾ ಎಂಬ ಮುಖಂಡನು ತನ್ನ ಪ್ರತಿನಿಧಿಗಳನ್ನು ಕಾಬೂಲಿಗೆ ಅಮೀರರ ಬಳಿಗೆ ಕಳುಹಿಸಿಕೊಟ್ಟನು ಇವರು ಅಪಾರವಾಗಿ ಮದ್ದು ಗುಂಡುಗಳನ್ನು ಅಲ್ಲಿಂದ ತಂದಿರುತ್ತಾರೆ ವಜೀರಿಸ್ಥಾನದ ಜನರಿಗೆ ಇದನ್ನು ಹಂಚಿಕೊಡುವರು ಆ ಮುಲ್ಲಾ ಎಂಬ ಮುಖಂಡನು ತನ್ನ ಬಳಿಯಲ್ಲಿ ೨೦೦೦ ಯುದ್ಧಭಟರನ್ನು ಸಿದ್ಧಮಾಡಿ ಇಟ್ಟುಕೊಂಡಿರುತ್ತಾನೆ ಆದರೆ ಈಚೆಗೆ ಆತನು ಕಂಪನೀ ಸೀಮೆಗೆ ಆ ಜನರನ್ನು ಕಳುಹಿಸುವುದನ್ನು ನಿಲ್ಲಿಸಿರುವನು

* * *

ಕಳೆದ ವಾರ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವ ಕಾರಣಗಳು ಹಿಂದಿನ ವಾರಕ್ಕಿಂತ ಹೆಚ್ಚಾಗಿರುತ್ತವೆ ಒಟ್ಟು ೪,೧೨೩ ಜನಗಳು ಈ ಉಪದ್ರವದಲ್ಲಿ ತೀರಿಹೋದರು ಮರಣಗಳ ಹಂಚಿಕೆ ಹ್ಯಾಗೆಂದರೆ,—ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ ೧,೪೯೪, ಬೊಂಬಾಯಿ ಅಧಿಪತ್ಯ ೯೬೭ ಮಧ್ಯ ಇಂಡಿಯಾ ೩೯೩, ರಾಜಪುಟಾನಾ ಮತ್ತು ಅಜ್ಮೀರ್ ಮೇವಾರಾ ೩೭೦, ಸಂಯುಕ್ತ ಅಧಿಪತ್ಯಗಳು ೨೯೨, ಪಂಜಾಬ್ ೨೩೪, ಮೈಸೂರು ಸಂಸ್ಥಾನ ೧೪೯, ಮದರಾಸ್ ಅಧಿಪತ್ಯ ೧೩೩, ಬಂಗಾಳಾ ೬೯, ಬರ್ಮಾ ೧೬, ಹೈದರಾಬಾದ್ ೪, ಕಾಶ್ಮೀರ ೪

* * *

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಸಿರಮೂರು ಸಂಸ್ಥಾನದ ರಾಜರು ಕುಂಪಣೀ ಸರ್ಕಾರದ ಇಂಜನಿಯರನ್ನು ಕರೆಸಿಕೊಂಡು, ತಮ್ಮ ರಾಜಧಾನಿಯಾದ ನಾಹನ್ ಪಟ್ಟಣಕ್ಕೆ ಒಳ್ಳೇ ಕುಡಿಯುವ ನೀರನ್ನು ತಂದೊದಗಿಸುವ ವಿಷಯದಲ್ಲಿ ಅವರಿಂದ ಪರೀಕ್ಷೆಗಳನ್ನು ಮಾಡಿಸಿ ತಿಳಿದುಕೊಂಡರು ಇದಕ್ಕಾಗಿ ಆ ರಾಜರು ಆ ಇಂಜನಿಯರವರಿಗೆ ೧,೨೬೦ ರೂಪಾಯಿ ಫೀಜನ್ನು ಕೊಟ್ಟರು ಇಂಡಿಯಾ ಗವರ್ನಮೆಂಟಿನವರು ಆ ಹಣದಲ್ಲಿ ಎರಡು ಭಾಗವನ್ನು ಆ ಇಂಜನಿಯರಿಗೆ ಪಾವತಿಮಾಡಬೇಕೆಂದೂ, ಭಾಗವನ್ನು ಒಂದು ಸರ್ಕಾರದ ಖಜಾನೆಗೆ ಸೇರಿಸಬೇಕೆಂದೂ ಹುಕುಂ ಕೊಟ್ಟಿದ್ದಾರೆ

* * *

ಪೂನಾ ಪಟ್ಟಣದಲ್ಲಿ ಮೂರು ಜನ ಇಂಗ್ಲಿಷ್ ಸೈನ್ಯದ ಉದ್ಯೋಗದಾರರು ಗ್ರಾಮಾಂತರದ ಮೇಲೆ ಶಿಕಾರಿಗೆ ಹೋಗಿದ್ದಾಗ ಒಂದು ಗ್ರಾಮದ ಜನರು ಅವರನ್ನು ಅಕ್ರಮವಾಗಿ ತಡೆದು ಅಡ್ಡಿಪಡಿಸಿದರೆಂತಲೂ, ಪೋಲೀಸಿನವರು ಮುಖಂಡರಾದ ಐದು ಮಂದಿ ಗ್ರಾಮಸ್ಥರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದಾರೆಂದೂ ತಿಳಿಸಿದ್ದೆವಷ್ಟೆ ಈ ಮೊಕದ್ದಮೆಯು ಕಳೆದ ವಾರ ಇತ್ಯರ್ಥವಾಯಿತು ಮೆಜಿಸ್ಟ್ರೇಟರು ಆ ಐದು ಮಂದಿಗೂ ತಲಾ ಎರಡು ವರುಷದ [illegible] ಆರು ತಿಂಗಳ ತನಕ ಕಠಿಣ ಸಜಾ ಶಿಕ್ಷೆಯನ್ನೂ ೧೦ ರೂಪಾಯಿನಿಂದ ೫೦ ರೂಪಾಯಿ ವರೆಗೆ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

* * *

ಬೊಂಬಾಯಿ ಅಧಿಪತ್ಯದ ಮಹಮ್ಮದೀಯರು ಬೊಂಬಾಯಿಗೆ ವೈಸ್‌ರಾಯಿ ಪ್ರಭುಗಳು ದಯಮಾಡುವಾಗ್ಗೆ ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಬೇಕೆಂದು ನಿಷ್ಕರ್ಷೆಮಾಡಿಕೊಂಡು, ಗವರ್ನಮೆಂಟಿಗೆ ಈ ತಮ್ಮ ತೀರ್ಮಾನವನ್ನು ಅರಿಕೆಮಾಡಿಕೊಂಡರು ಬೊಂಬಾಯಿ ಗವರ್ನಮೆಂಟಿನವರು ಹೀಗೆ ಮಹಮ್ಮದೀಯರಿಗೆ ಅವಕಾಶಕೊಡುವದರಿಂದ ಇತರ ಪಂಗಡಗಳಿಗೆ ಹೊಟ್ಟೆಕಿಚ್ಚನ್ನುಂಟುಮಾಡಿದ ಹಾಗಾಗುವುದೆಂದು ಯೋಚಿಸಿ ಮಹಮ್ಮದೀಯರು ಅಪ್ಪಣೆಯನ್ನು ಕೊಡಕೂಡದೆಂದು ಹುಕುಂಕೊಟ್ಟರು ಗವರ್ನಮೆಂಟಿನವರು ಹೀಗೆ ತಿರಸ್ಕಾರಮಾಡಕೂಡದಾಗಿತ್ತೆಂದು ಮಹಮ್ಮದೀಯ ಸಂಘದವರು ಪೂನೆಯಲ್ಲಿ ಸಭೆ ಸೇರಿ ತೀರ್ಮಾನಿಸಿರುತ್ತಾರೆ

* * *

ಪಾಟಿಯಾಲಾ ಸಂಸ್ಥಾನದಲ್ಲಿ ರಾಜದ್ರೋಹಕರವಾದ ಕೃತ್ಯಗಳನ್ನು ನಡಿಸಬೇಕೆಂದು ಪಲವು ಸಲತ್ತುಗಳೂ ಪಿತೂರಿಗಳೂ ನಡೆಯುತ್ತಿದ್ದವು ಸರ್ಕಾರದವರು ಉಸ್ತುವಾರಿ ಇಟ್ಟು ಕಳೆದ ವಾರ ೧೫೦ ಮಂದಿಯನ್ನು ದಸ್ತಗಿರಿ ಮಾಡಿಸಿರುತ್ತಾರೆ ರೀಜೆನ್ಸಿ ಕೌನ್ಸಿಲ್‌ನವರು ಅವರನ್ನು ದಸ್ತಗಿರಿ ಮಾಡಬೇಕೆಂದು ಹುಕುಂ ಕೊಟ್ಟು ಅವರ ವಿಚಾರಣೆಗೆ ಒಂದು ಸ್ಪೆಷಲ್ ಕೋರ್ಟನ್ನು ಏರ್ಪಾಡು ಮಾಡಿರುವರು ಈ ಕೋರ್ಟಿನ ಜಡ್ಜಿಗಳು ಯಾರೆಂದರೆ —ಚೀಫ್ ಜಡ್ಜ್ ಸರ್ದಾರ್ ಭಗವಾನ್ ಸಿಂಗರವರು, ಬ್ಯಾರಿಸ್ಟರ್ ಮತ್ತು ಜುಡಿಷಲ್ ಸೆಕ್ರೆಟರಿ ದಿವಾನ್ ರಾಮಪ್ರಸಾದ್ ಯವರು, ಮತ್ತು ಸಂಸ್ಥಾನದ ಮ್ಯಾಜಿಸ್ಟ್ರೇಟ್ ಮೌಲಿ ಫಸ್ಲಿಮುರ್ತಜರವರು ದಸ್ತಗಿರಿ ಮಾಡಲ್ಪಟ್ಟಿರುವವರಲ್ಲಿ ಮುಖ್ಯರಾದವರು ಯಾರೆಂದರೆ,—ಎಗ್ಜಿಕ್ಯುಟಿವ್ ಇಂಜನಿಯರ್ ಜೋವಾಲಪ್ರಸಾದ್, ಮುರಾಹಮತ್ ಇಲಾಖಾ ಅಕೌಂಟೆಂಟ್ ನಂದಿಲಾಲ್ ಪಾಟಿಯಾಲಾ ಸ್ಕೂಲ್ ಹೆಡ್ ಮಾಸ್ಟರ್ ಲಕ್ಷ್ಮಣದಾಸ್, ಟ್ರೆಜರಿ ಆಫೀಸರ್ ರಾಮವಿಲಾಸದಾಸ್, ಪೋಲೀಸ್ ಟ್ರೇನಿಂಗ್ ಸ್ಕೂಲ್ ಮುಖ್ಯಸ್ಥ ವಾಸೀರಾಮ ಈ ಪೈಕಿ ಎಗ್ಜಿಕ್ಯುಟಿವ್ ಇಂಜನಿಯರ್ ಜೋವಾಲಪ್ರಸಾದ್ ಯವರನ್ನು ಜಾಮೀನ್ ಮೇಲೆ ಬಿಟ್ಟಿದಾರೆ

* * *

ಸಿಂಲಾ ಪಟ್ಟಣದಲ್ಲಿ ಹಿಂದುಸ್ಥಾನದ ಮುಖ್ಯರಾದ ಡಾಕ್ಟರುಗಳ ಸಮಾಜವು ಕಳೆದ ವಾರದಿಂದ ನಡೆಯುತ್ತಲಿದೆ ವೈಸ್‌ರಾಯಿ ಪ್ರಭುಗಳು ಮೊದಲನೆಯ ದಿನ ಸಭೆಗೆ ದಯಮಾಡಿ, ಮಲೇರಿಯಕ್ಕೆ ಪರಿಹಾರವನ್ನು ಕಂಡುಹಿಡಿದು ತಿಳಿಸಬೇಕೆಂದು ಉಪನ್ಯಾಸ ಪೂರ್ವಕವಾಗಿ ತಿಳಿಸಿದರು ಈ ಮಲೇರಿಯವು ಕೊಚ್ಚೆ ಗುಂಡಿಗಳಲ್ಲೂ ನಿಂತ ನೀರಿನಲ್ಲೂ ಹುಟ್ಟಿ ಬೆಳೆಯುವ ಒಂದು ವಿಧವಾದ ಸೊಳ್ಳೆಗಳಿಂದ ಉಂಟಾಗುತ್ತೆಂದೂ, ಅವು ಮನುಷ್ಯನ ಮೈಮೇಲೆ ಕೂತು ಕಡಿದು ಆ ಜ್ವರದ ಕ್ರಿಮಿಯನ್ನು ಮನುಷ್ಯನ ರಕ್ತದೊಳಕ್ಕೆ ತಂದು ಬಿಡುವುವೆಂದೂ ಸಿದ್ಧಾಂತವಾಗಿದೆ ಇದರ ಪರಿಹಾರಕ್ಕೆ ಮಲೆನಾಡುಗಳಲ್ಲಿರತಕ್ಕವರು ದಿನವೂ ಸಾಯಂಕಾಲದ ಹೊತ್ತು ಸ್ವಲ್ಪ ಕ್ವಿನೈನ್ ಎಂಬ ಜ್ವರದ ಪುಡಿಯನ್ನು ಸೇವನೆ ಮಾಡುತ್ತಾ ಬರಬೇಕೆಂದು ಒಬ್ಬ ಡಾಕ್ಟರು ಹೇಳಿದರು ಪ್ರತಿ ಊರು ಗ್ರಾಮಗಳಲ್ಲೂ ಜನರು ತಮ್ಮ ಕೆರೆಕೊರೆಗಳಲ್ಲಿ ನೀರು ನಿಂತು ಕೊಳೆಯದಂತೆ ನೋಡಿಕೊಂಡರೆ ಆ ಸೊಳ್ಳೆಗಳು ಹುಟ್ಟುವ [illegible] ಅಂಥಾ ಗುಂಡಿಗಳನ್ನೂ ನೀರು ನಿಲ್ಲುವ ತಗ್ಗುಗಳನ್ನೂ [illegible] ಮುಚ್ಚಿಸ [illegible] ರಾತ್ರಿ ಹೊತ್ತು ಸೊಳ್ಳೆ ತೆರೆಗಳನ್ನು ಕಟ್ಟಿ ಮಲಗಿಕೊಳ್ಳಬೇಕು ಅಂತಾ ಮೇಲ್ಕಂಡ ಜ್ವರದ ಪುಡಿಯನ್ನು ಮನುಷ್ಯರು ಜ್ವರವಿರತಕ್ಕ ಕಾಲದಲ್ಲಿ ಸ್ವಲ್ಪ ಸ್ವಲ್ಪ ದಿನಾ ಸೇವಿಸುತ್ತಿದ್ದರೆ ಅಂಥವರಿಗೆ ಈ ಸೊಳ್ಳೆಗಳ ಕಡಿತದಿಂದ ಮಲೇರಿಯವು ಉಂಟಾಗುವುದಿಲ್ಲವೆಂದು ಇದುವರೆಗೆ ಮೇಲ್ಕಂಡ ಸಮಾಜದಲ್ಲಿ ನಡೆದಿರುವ ಚರ್ಚೆಗಳಿಂದ ಕಂಡುಬರುತ್ತದೆ ಈ ಡಾಕ್ಟರುಗಳ ತೀರ್ಮಾನಗಳು ಇನ್ನು ಮುಂದೆ ಪ್ರಕಟವಾಗುವವು

Printed and Published by the Rev H GULLIFORD, Proprietor and Manager Wesleyan Mission Press, Mysore 21/10/1909

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ಅಕ್ಟೋಬರ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೨೨

ಭೀಮಮಹಿಮಾದರ್ಶ.

72-3

ಮೈಸೂರಿನಲ್ಲಿರುವ ಶ್ರೀಮನ್ ಮಹಾರಾಜರವರ ಅರಸು ಬೋರ್ಡಿಂಗ್ ಸ್ಕೂಲ್ ಮಾಸ್ಟರಾದ ಎಂ. ವಿ. ಚಂದ್ರಶೇಖರ ಶಾಸ್ತ್ರಿಗಳಿಂದ ರಚಿತವಾಗಿರುವ ಈ ನೂತನ ಗ್ರಂಥದಲ್ಲಿ ಮಹಾಭಾರತೇತಿಹಾಸವು ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುದಾದರೂ ಮುಖ್ಯವಾಗಿ ಭೀಮಸೇನನ ಜೀವಿತ ಚರಿತ್ರೆಯಲ್ಲವು ಚೆನ್ನಾಗಿ ವರ್ಣಿತವಾಗಿರುವುದು. ಹಿಡಿಂಬ, ಬಕ, ಜರಾಸಂಧ, ಕಿಮ್ಮೀರ, ಕೀಚಕ ಮುಂತಾದ ಮಹಾ ವೀರರೊಡನೆ ಭೀಮನು ಕಾಳಗ ಮಾಡಿ ಅವರನ್ನು ಸಂಹರಿಸಿದ ರೀತಿಯೂ, ಹನುಮಂತನೊಡನೆ ಹೋರಾಡುವುದಕ್ಕೆ ಯತ್ನಿಸಿದಾಗ ಅವರವರಿಗೆ ನಡೆದ ಸಂವಾದಗಳೂ ವಿವರಿಸಲ್ಪಟ್ಟಿವೆ. ಭೀಮನ ಸಾಹಸ ಪ್ರದರ್ಶಕಗಳಾದ ಅನೇಕ ಉಪಾಖ್ಯಾನಗಳನ್ನೊಳಗೊಂಡಿರುವ ಈ ಸದ್ಗ್ರಂಥವು ಭಾಷೆಯಲ್ಲಿಯೂ ಉದ್ದೇಶದಲ್ಲಿಯೂ ಉತ್ತಮತರವಾಗಿರುವುದು. "ಧೈರ್ಯಂ ಸರ್ವತ್ರ ಸಾಧಕಂ" ಎಂಬ ನೀತಿಯನ್ನು ಬೋಧಿಸುವ ಈ ಪುಸ್ತಕವು ಆಸ್ತಿಕರಾದ ಕನ್ನಡಿಗರಿಗೆಲ್ಲ ಅತ್ಯಂತೋಪಯುಕ್ತವಾದುದು. ಇದರ ಬೆಲೆ ೧೦ ಆಣೆ. ವಿ. ಪಿ. ಮೂಲಕ ೧೨ ಆಣೆ. ಪುಸ್ತಕವು ಗ್ರಂಥಕರ್ತರಲ್ಲಿಯೂ, ಮೈಸೂರು ದಿ ಜನರಲ್ ಏಜೆನ್ಸಿಯಲ್ಲಿಯೂ ದೊರೆಯುವುದು.

ಪೊಳ್ಯದ ವೆಂಕಟಾಚಲ ಪಂಡಿತರ ಪ್ಲೇಗಿನ ಔಷಧ.

28-37

ಕೊಳ್ಳೇಗಾಲದ ಪ್ರಾಂತ್ಯದಲ್ಲಿ ಮೊದಲು ಪ್ಲೇಗ್ ರೋಗವು ವ್ಯಾಪಿಸಿದ್ದಾಗ ಈ ಲಕ್ಷ್ಮೀವಿಲಾಸ ರಸವು ಕಂಡುಹಿಡಿಯಲ್ಪಟ್ಟು ಉಪಯೋಗಿಸಲಾಗಿ ಪ್ರತಿಯೊಬ್ಬ ಪ್ಲೇಗು ರೋಗಿಗೂ ಗುಣವಾಗಿರುತ್ತದೆ. ಈವರೆಗೆ ಸಾವಿರಾರು ಜನಗಳು ಗುಣ ಹೊಂದಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುತ್ತಾರೆ—ಅವುಗಳನ್ನು ವಿವರಿಸಲು ಸ್ಥಳ ಸಂಕೋಚದಿಂದ ಸಾಧ್ಯವಿಲ್ಲವಿದೆ

ಪ್ಲೇಗು ಊರೊಳಗಿರುವಾಗ ಪ್ರಥಮ ಕಾಣಿಸಿಕೊಂಡ (ಅಂತಹ ಜ್ವರವೇ ಆಗಲಿ) ಕೂಡಲೇ ಈ ಲಕ್ಷ್ಮೀವಿಲಾಸ ರಸವನ್ನು ಮತ್ತು ಶ್ರೀನಿವಾಸ ತೈಲವನ್ನು ಉಪಯೋಗಿಸಿದಲ್ಲಿ ಪ್ರತಿಯೊಬ್ಬರಿಗೂ ಖಂಡಿತ ಗುಣವಾಗುತ್ತದೆ. ಆದ್ದರಿಂದ ಪ್ಲೇಗು ಹರಡಿರುವ ಸ್ಥಳದಲ್ಲಿ ವಾಸವಾದವರು ಪ್ರತಿಯೊಬ್ಬರೂ ಮುಂಚಿತವಾಗಿಯೇ ತರಿಸಿಟ್ಟುಕೊಂಡಿರುವುದು ಒಳ್ಳೇದು. ಔಷಧದ ಜೊತೆಯಲ್ಲಿ ಅನುಪಾನ ಪತ್ರವಿರುವುದು

ಪ್ಲೇಗುಹರ ಲಕ್ಷ್ಮೀವಿಲಾಸ ರಸ (ಹೊಟ್ಟೆಗೆ ತೆಗೆದುಕೊಳ್ಳತಕ್ಕದ್ದು) ರೂ. ೧—೦—೦

ಶ್ರೀನಿವಾಸ ತೈಲ (ಗೆಡ್ಡೆ ಮುಂತಾದ್ದಕ್ಕೆ) ರೂ. ೦—೮—೦

ಲೋಕಾನುಗ್ರಹರ ಕಸ್ತೂರಿ ಮಾತ್ರೆ ಐದು ಸೀಸೆಗೆ ಒಂದು ಬೆಲೆ } ಪೋಸ್ಟೇಜು ಬೇರೆ

ವಿಳಾಸ —ಎಸ್ ಎಸ್ ಆರ್ ವೈದ್ಯಶಾಲಾ, ಮೈಸೂರು.

ಕ್ಲಿಮೆಂಟರ ಮ್ಯಾಜಿಕ್ ಬಾಂ ತೈಲವು.

47-23

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣಿಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಅದಕ್ಕಾರಣದಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—ಟಿ. ಎಸ್. ಕನ್ನಯಸೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್. ಕ್ಲಿಮೆಂಟ್ಸ್,

೩೩, ವೀರಮಲೆಯಿಳ ಬೀದಿ, ವೇಪೇರಿ, ಮದರಾಸ್.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ. ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು. [30 35]

ತಲೆನೋವು, ಗಂಟು ಊದಿಕೊಳ್ಳುವದು, ವಾತ, ಸಂಧಿವಾತ, ಉಳುಕು, ಊತ ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಗಾಯ, ಜಖಮು, ಇತ್ಯಾದಿ.

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ. ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗುವದರೊಳಗೆ ಗಜಕರ್ಣ, ಹುರಿ, ಕಜ್ಜಿ ಮುಂತಾದವುಗಳು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦.

ಆಸ್ತಾಮಿಶ್ರಣ	೨-೦-೦
ಬೇಳುಕಡತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿನಗೆಗೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಬಿಚ್ಚು ಮುಲಾಮು—ಮಕ್ಕಳ ಬಚ್ಚಿಗೆ	೦-೨-೦
ಕೇಶವರ್ಧಿನೀ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1-42

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ ; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧-೮ ; ರೂ. ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ಹಾರದ ಟೋಪಿಗಳು ೧ ರೂ. ೧೨ ಆ. ; ೧ ರೂ. ೮ ಆ. ; ೧ ರೂ. ೬ ಆ.

ಉಣುಕಿನ ಟೋಪಿಗಳು ೧ ರೂ ೮ ಆ., ೧ ರೂ. ೬ ಆ ;

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈ ಚೀಲ, ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ... ... ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ. ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳ್ಳುವಾಗಲೂ ತಮಗೆ ಸಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎತ್ತಿಗೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು. ನಮ್ಮ ವಿಳಾಸ—ಮ್ಯಾನೇಜರು, ವೃತ್ತಾಂತ ಪತ್ರಿಕೆ, ಮೈಸೂರು.

ಪುಸ್ತಕಗಳು.

70-6

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು.

೨ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦, ಇಂಗ್ಲಿಷ್ ಭಾಷೆಯನ್ನು ಓದಲೂ, ಬರೆಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧-೨ ತಿಂಗಳೊಳಗಾಗಿ ತಿಳಿಸಿ ತಾನಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೪-೦

ಪಿ. ರಾಮಾಚಾರ್ಯ ವಿಳಾಸ—ಬಿ. ಕೆ. ಮೂರ್ತಿ ಕಂಪೆನಿ
ನಂ ೧೮ ಒಂದನೆ ಬೀದಿ ಸಿದ್ದಿಕಟ್ಟೆ ಲಕ್ಕೂರ್ ಪೋಸ್ಟು.
ಬೆಂಗಳೂರು ಸಿಟಿ.

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳೇ ಉಳಿದಿರುವದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾವಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾವ್ಯಾಖ್ಯಾನ ಮಹೋದಧಿ ಕ್ರಯ ೦—೮—೦.

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಕೂರ್ ಪೋಸ್ಟ್.

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ.—(195 ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ). ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ 0—0—6
(80 ಪೇಜು) 0—1—0
(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10—43]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನಿಮ್ಮ ಸ್ವಪ್ನವೆಲ್ಲವೂ?

ನಿನಗೆ ದುಃಸ್ವಪ್ನಗಳಲ್ಲವೆಂದು ಕೋರಿದಾ — ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ — "ನನಗೆ ನಿನಗೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿವ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸಮೃತೃಪ್ತಿಯಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ — ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ ಅತೀಸಾರ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ ಎದೆಯು ಕಲ್ಲುಣಿಸುವುದು ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ ಮುಟ್ಟಿನ ಹೊಟ್ಟೆ ನೋವು ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಎಬ್ಬಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [67 9]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ಆರರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ, ಡೋನ್ಸ್ ೩ ಒ ಬಾಕ್ಸ್ ೨೦ ಟೊಂಬಾಯಿ — ಇವರಲ್ಲಿ ದೊರೆಯುವುದು

CHAMBERLAIN'S COLIC CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಬೇದಿಗಳಿಗೆ ಕಂಡುಹಿಡಿದಿರುವ ಔಷಧವು

4 43



ಈ ಹೊಟ್ಟೆಯ ನೋವು, ಬಿಡುವಿಮಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕಾಲುಗಳ ಸೆಳೆತ, ಹೊಟ್ಟೆಯು ನಾನಾ ತರದ ರೋಗಗಳು — ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ — ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಒಂದೇ ಸಾರಿಗೆ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 6 43

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಶೈತ್ಯಕ್ಕೆ ಕೊಟ್ಟಾಗ ಅವರ ತಂದೆತಾಯಿಗಳು ಹೇಳುತ್ತಾರೆ ಏಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸುತ್ತದೆ

ಇದು ಕುಡಿಯಲು ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧದ ಅಂಗಡಿಗಳಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್

ಔಷಧಗಳ ಕಾರ್ಖಾನೆ

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

28 88

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು — ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ — ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೩ ೪ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ — ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ನಯನ ತ್ರಿಬಿಂದು — ಉರಿಗಣ್ಣು, ಕೆಂಗಣ್ಣು, ಮಂಜುಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಸಾಮರ್ಥ್ಯವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜೆಂಟ್ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಕೇಸರಿನಿಮಲ ಲಿಪೋಜನ್.

74 3

ಆನೆ ಪೊಸ್ಸಿ ವು ಸ್ವಾಂಪನ್ನು ಹೊಂದುವವರೆ ಅನುಭವ ನೋಡುವವರಿಗೆ ಸದಾ ಚೂರ್ಣವನ್ನು ಕಳುಹಿಸುತ್ತೇವೆ ಇದನ್ನು ತಲೆಗೆ ಹಚ್ಚಿಕೊಳ್ಳುವದರಿಂದ ಬಿದಿರು ಮೊಳೆಯನ್ನು ಹೋಗಲಾಡಿಸಿ, ತಲೆಯ ಮಿದುಳನ್ನು ವೃದ್ಧಿಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುವದು ತಲೆಯಲ್ಲಿ ಹೇನು ಬಿದ್ದಿದ್ದರೆ ಕೂಡಲೆ ಪಲಾಯನಗೈಯುವವು ತಲೆಯಲ್ಲಿ ಹುಣ್ಣು ಕಲೆಗಳು ಆಗಿದ್ದರೆ ವಾಸಿಯಾಗುವವು ಕೂದಲು ಸ್ವಚ್ಛವಾಗಿ ಸಮವಾಗುವವು ಮೈಕಕ್ಕೆ ಹಚ್ಚಿಕೊಂಡರೆ ತುರಿಕೆ ಗಜ್ಜಿ, ಹುಳುಕಡ್ಡಿ ನಾಶವಾಗುವವು ಕೂಡಲೇ ತರಿಸಿ ಅನುಭವ ನೋಡಿರಿ ಉಪಯೋಗಿಸುವ ಕ್ರಮವನ್ನು ಚೂರ್ಣದ ಸಂಗಡ ಕಳುಹಿಸುತ್ತೇವೆ ಡಬ್ಬಿ ೧ ಕ್ಕೆ ಅಂಚೆ ವೆಚ್ಚ ರೂ ೧-೦-೦

ವಿಳಾಸ — ಎಂ ಮಹಾ ಪಾಲಿಸ್ವಾಮಿಯವರ ಮರಡಿ ಸಿದ್ಧಾಂತಿಗಳು,

ಮರಡಿಹಳ್ಳಿ, ಬಳ್ಳಾರಿ ಜಿಲ್ಲಾ

ಜ್ವರಹರಿ 18 39



ಇದು ಸಾಧಾರಣ ಜ್ವರ ಚಳಿಜ್ವರ ಮೊರೇಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು — ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ — ಎಂದೆ ಬರೆದಿದಾರೆ

ಕ್ರಯ — ಸೀಸೆ ೧ ಕ್ಕೆ ೮ ಆಣೆ, ೧ ರೂ ೧ — ೮ ರೂ ರೂ ೨ — ೧೨ ಆ ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಾಪಸ್ ಬಿಡಲಾಗುವದು

ಓಮುಂಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು — ಮುಂತಾದ್ದಕ್ಕೆಲ್ಲಾ ಮಹಾ ಫಲವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಇವುಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು — ತಮ್ಮಿಯ ಓಮುಂಕರ್ಪೂರವನ್ನು ನಾನೂ ನನ್ನ ಹಾಬೀದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರ್ಷಗಳಿಂದಲೂ ಕಾಲರಾ, ಆಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ಷ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಲ್ಲಿ ಕೇಳಿ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಶ್ವೀಜ ಬಹುಳ ಪಾಡ್ಯಮಿ ಶುಕ್ರವಾರದಿಂದ ಆಶ್ವೀಜ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಅಕ್ಟೋಬರ್ ಮತ್ತು ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ತುಲಾ ಮಾಸ
29	ಶುಕ್ರ *	ಪಾಡ್ಯಮಿ	18 51	ಕೃ	1 2	13
30	ಶನಿ	ಬಿದಿಗೆ	13 38	ಕೃ	1 50	14
31	ರವಿ	ತದಿಗೆ	31 1	ರೋ	50 17	15
1	ಚಂದ್ರ	ಚೌತಿ	31 59	ಮೃ	18 6	16
2	ಕುಜ †	ಪಂಚಮಿ	32-20	ಆ	17 12	17
3	ಬುಧ	ಷಷ್ಠಿ	30 39	ಪು	17 20	18
4	ಗುರು ‡	ಸಪ್ತಮಿ	30 3	ಪು	16 53	19

* ಶ್ರೀ ಚಾಮುಂಡೇಶ್ವರಿ ರಥೋತ್ಸವ ಸಂಕಷ್ಟಚತುರ್ಥಿ

† ದಗ್ಧಯೋಗ

‡ ಅಮೃತಸಿದ್ಧಿಯೋಗ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಗಿಡ್ಡ ಅಕ್ಕಿ ಪಲ್ಲ ೧ ಕ್ಕೆ	ರೂ	೧೫ ೦ ೦	೧೫ ೦ ೦
ಕೆಂಪುತಿ ಅಕ್ಕಿ ಅವಲ್		೧೪ ೨ ೦	೧೪ ೮ ೦
,, ದುಯಂ		೧೬ ೮ ೦	೧೩ ೮ ೦
ಜಾವಾಣಿ ಅಕ್ಕಿ		೧೪-೦ ೦	೧೫ ೦ ೦
ಸಣ್ಣಕ್ಕಿ ಅವಲ್		೧೭	೧೭ ೮ ೦
,, ದುಯಂ		೧೬ ೨ ೦	೧೫ ೦ ೦
ತೊಗರಿ ಬೇಳೆ ಪಲ್ಲ ೧ ಕ್ಕೆ		೧೫ ೮ ೦	೧೬ ೦ ೦
,, ದುಯಂ		೧೫ ೦ ೦	೧೫ ೦ ೦
ಹೈಜ್ ರಾಗಿ ಪಲ್ಲ ೧ ಕ್ಕೆ		೯ ೦ ೦	೮ ೪ ೦
ಕಾರ್ರಾಗಿ		೮ ೧೦ ೦	೨ ೦ ೦
ಜೋಳ		೭ ೧೨ ೦	೮ ೦ ೦
ಹುಲಸಂದಿ ಪಲ್ಲ ೧ ಕ್ಕೆ		೧೨ ೦ ೦	೧೧ ೮ ೦
ಬಳೇ ಅವರೆ		೧೩ ೨ ೦	೧೫ ೦ ೦
ಹೆಸರು		೧೩ ೦ ೦	೧೧ ೮ ೦
ಉದ್ದು		೧೪ ೪ ೦	೧೩ ೪ ೦
ಕಡಲೆ		೧೪ ೪ ೦	೧೧ ೦ ೦
ಎಳ್ಳು ಸೇ ೧೨೭ ಕ್ಕೆ		೧೫ ೦ ೦	೧೩-೦ ೦
ಹುರುಳಿ		೧೩ ೦ ೦	೧೨ ೮ ೦
ಹರಳು ೧೨೭ ಸೇರಿಗೆ		೧೪ ೦ ೦	೧೦ ೮ ೦
ಸೀಗೇಕಾಯಿ ಮಣ ೧ ಕ್ಕೆ		೨ ೮ ೦	೨ ೩ ೦
ಮೆಣಸಿನಕಾಯಿ		೬ ೦ ೦	೪ ೮ ೦
,, ದುಯಂ		೫ ೮ ೦	೪ ೦ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	ಮು ೩ ೪ ೦
ಒಳ್ಳೆಣ್ಣೆ ಮಣ ೧ ಕ್ಕೆ		೫ ೨ ೦	೪-೩ ೦
ಹರಳೆಣ್ಣೆ ,,		೫ ೮	೪ ೧೨ ೦
ಕೊತ್ತುಂಬರಿ ಪಲ್ಲ ೧ ಕ್ಕೆ		೮ ೮ ೦	೯ ೦ ೦
ಉಪ್ಪು ,,		೬ ೨ ೦	೫ ೧೨ ೦
ಹುಣಸೇ ಹಣ್ಣು		೧ ೧೨ ೦	೧ ೧೨ ೦
,, ಹಳೇದು		೧	೧ ೮ ೦
ತುಪ್ಪ ಮಣ ೧ ಕ್ಕೆ		೧೬ ೭ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ		೩	೪ ೩-೦
ತೆಂಗಿನಕಾಯಿ ೧೦೦ ಕ್ಕೆ		೫ ೦ ೦	೫ ೦ ೦
ಅಳಲೇಕಾಯಿ ಮಣ ೧ ಕ್ಕೆ		೦ ೮ ೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ		೭ ೦ ೦	೦ ೧೨ ೦
ಚಿನ್ನ (ಪವನ್) ಕೆಂಪು		೧೫ ೯ ೦	೧೫ ೭ ೦
,, ,, ಪಸಿಮೆ		೧೬ ೦ ೦	೧೫ ೧೧ ೦
,, ,, ಗಟ್ಟಿ ತೊಲ ೧ ಕ್ಕೆ		೨೪ ೮ ೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪-೦	೬೩ ೮ ೦

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 42

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ ಬಣ್ಣವು ಹೋಗುವದಿಲ್ಲ ಬಿರ್ಗ ಬಹಳ ಕಡಿಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ಖರೀದಿಸಿರಿ. ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಕಾಗದದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ನಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1—10—1909 ರಿಂದ 8—10—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	5	1
ಮೈಸೂರು ,,	157	111	0	0
ಬೆಂಗಳೂರು ಡಿಸ್ಟ್ರಿಕ್ಟು	26	14	29	33
ಮೈಸೂರು ,,	50	29	4	3
ಕೋಲಾರ್ ,,	1	1	2	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	2	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	25	20	0	0
ಶಿವಮೊಗ್ಗ ,,	9	12	10	1
ಜುಮ್ಲಾ	272	192	50	31

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಅಕ್ಟೋಬರ್ ತಾ 16 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ: ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದವರು
ಬೆಂಗಳೂರು					
ಕೋಲಾರ	12	11			
ತುಮಕೂರು					
ಮೈಸೂರು					
ಹಾಸನ	37	19		61	
ಶಿವಮೊಗ್ಗ					
ಕಡೂರು					
ಚಿತ್ರದುರ್ಗ	7	5			
ಮಾರಿಕಣಿವೆ ಸ್ಯಾಂಕ್ಷನ್					
ಒಟ್ಟು	[illegible]	[illegible]		61	

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಸಭಾ

ಈ ಸಮಾಜದ ಮೆಂಬರುಗಳು ಕ್ರಮಪ್ರಕಾರ ಶನಿವಾರದ ದಿನ ಸಭೆ ಕೂಡಿ ಇದ್ದರು ಮಹರ್ನವಮಿ ಹಬ್ಬದ ದೆಸೆಯಿಂದ ಕೆಲವು ಮಂದಿ ಬರಲು ಅವಕಾಶವಾಗಲಿಲ್ಲ ಆದರೂ ಹಾಜರಿದ್ದ ಮೆಂಬರುಗಳ ಸಂಖ್ಯೆಯು ಕಡಮೆಯಾಗಿರಲಿಲ್ಲ ಪ್ರಾರಂಭದಲ್ಲಿ ಕೀರ್ತನೆಯು ನಡಿಸಲ್ಪಟ್ಟಿತು ಅನಂತರ ನೀತಿ ಪೂರ್ವಕವಾದ ಪ್ರಶ್ನೋತ್ತರ ಪತ್ರಿಕೆ ಓದಲ್ಪಟ್ಟು, ಸಭಿಕರಿಗೆ ತಿಳಿಸಿ ಇದ್ದಂತೆ ಶ್ರೀಮತಿ ರಾಮಲಕ್ಷ್ಮಮ್ಮನವರು ಆರೋಗ್ಯವೆಂಬ ವಿಚಾರವನ್ನು ಕುರಿತ ಒಂದು ಉಪಕ್ರಮದ ವ್ಯಾಸವನ್ನು ಓದಿದರು ತರುವಾಯ ಕೂಡಿ ಇದ್ದ ಸುಮಂಗಲಿಯರೆಲ್ಲರೂ ಸಡಗರದಿಂದ ಪುಷ್ಪಾದಿಗಳಿಂದ ಶ್ರೀ ಸರಸ್ವತಿಯನ್ನು ಪೂಜಿಸಿ ಮಂಗಳವನ್ನು ಹಾಡಿದರು ಕೆಲ ಹೆಣ್ಣುಮಕ್ಕಳು ಕೀರ್ತನೆಗಳನ್ನು ಹಾಡಿ ಕೋಲಾಟವನ್ನು ಹಾಕಿದರು ಇದು ಎಲ್ಲರ ಮನಸ್ಸಿಗೂ ವಿಶೇಷ ಸಂತೋಷವನ್ನು ಉಂಟುಮಾಡಿತು

ಬರುವ ನವೆಂಬರು ೩ನೇ ತಾ ಶನಿವಾರದ ದಿನ ನಡೆಯುತ್ತಿದ್ದ ಕಾರ್ಯದರ್ಶಿಯವರ ಸಡಗರದ ಗಂಧ ಪುಷ್ಪ ಸಕ್ಕರೆ ತಾಂಬೂಲಾದಿಗಳ ವಿನಿಯೋಗದಿಂದ ಆ ದಿವಸ ಕಾರ್ಯವು ಸಂಪೂರ್ಣವಾಗಲ್ಪಟ್ಟಿತು

ನಮ್ಮ ಪುಸ್ತಕ ಭಂಡಾರವು

‘ ಸುದರ್ಶನ ’

ಸುವಾಸಿನೀಶತಕವೆಂಬ ಪುಸ್ತಕವು ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನ ಅ। ಮಾಸ್ಟರ್ ಮೆ। ಎಚ್ ನಾಗಪ್ಪನವರಿಂದ ಬರೆಯಲ್ಪಟ್ಟು ನಮ್ಮಲ್ಲಿಗೊಂದು ಪ್ರತಿಯು ಬಂದಿರುವುದು ಇದು ಮುಖ್ಯವಾಗಿ ಸ್ತ್ರೀ ಧರ್ಮವನ್ನು ಬೋಧಿಸತಕ್ಕ ನೂರೆಂಟು ಕಂದಪದ್ಯಗಳಿಂದ ಕೂಡಿ ಸರಳವಾದ ಭಾಷೆಯೂ ಸರಸವಾದ ಬೋಧಾಕ್ರಮವೂ ಉಳ್ಳದಾಗಿರುವುದು ಮತ್ತು ಇದರ ಕಡೇ ಭಾಗದಲ್ಲಿ ಕಠಿಣಪದಗಳಿಗೆ ಅರ್ಥವೂ ಬರೆಯಲ್ಪಟ್ಟಿದೆ ಇಂಥ ಪುಸ್ತಕಗಳು ಬೋಧಿಸುವ ಪದ್ಧತಿಯಲ್ಲಿ ಉಪಯುಕ್ತವಾಗಿ, ಅಂಥ ಬೋಧೆಗಳು ನಡತೆಯಲ್ಲೂ ಅನುಸರಿಸಲ್ಪಟ್ಟರೆ, ದೇಶಕ್ಕೆ ವಿಶೇಷ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ ಇದರ ಕ್ರಯ ೨ ಆಣೆ

“ ರಾಮಾನುಜಾಚಾರ್ಯರೂ ವೈಷ್ಣವ ಮತವೂ ”

ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನ ಪಂಡಿತರಾದ ಮೆ ಎಂ ರಂಗಾಚಾರ್ಯ ಎಂ ಎ ಯವರು ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ರಾಮಾನುಜಾಚಾರ್ಯರೂ ವೈಷ್ಣವ ಮತವೂ ಎಂಬೀ ವಿಚಾರವನ್ನು ಕುರಿತು ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು ಇದನ್ನು ಈಗ ಪುಸ್ತಕ ರೂಪದಲ್ಲಿ ಪ್ರಕಟಿಸಿ ಅದಕ್ಕೆ ೪ ಆಣೆ ಕ್ರಯವಿಟ್ಟಿದ್ದಾರೆ ಈ ಪುಸ್ತಕದಲ್ಲಿ ಹಿಂದೂಸ್ಥಾನದೊಳಗೆ ಮತಭಕ್ತಿಯು ಹ್ಯಾಗೆ ಹುಟ್ಟಿ ಬೆಳೆದು ಹರಡಿಕೊಂಡಿತೆಂಬುವುದನ್ನೂ, ಭಕ್ತಿಮಾರ್ಗವನ್ನು ರಾಮಾನುಜಾಚಾರ್ಯರು ಹ್ಯಾಗೆ ಬೋಧನೆ ಮಾಡಿದರೆಂಬುವುದನ್ನೂ, ಈ ಭಕ್ತಿಮಾರ್ಗಾವಲಂಬನೆಯಿಂದ ಸಕಲ ಮನುಷ್ಯರೂ ಹ್ಯಾಗೆ ದೇವರನ್ನು ಪ್ರೀತಿಸುವವರಾಗಬಹುದೆಂಬುವುದನ್ನೂ ಮೆ, ರಂಗಾಚಾರ್ಯರವರು ಬಹು ಸ್ಪಷ್ಟವಾಗಿ ವಿವರಿಸಿರುತ್ತಾರೆ

“ ಕಿಂಡರ್‌ಗಾರ್ಟನ್ ಕಥೆಗಳು ”

ಮೈಸೂರು ಗವರ್ನಮೆಂಟ್ ನಾರ್ಮಲ್ ಸ್ಕೂಲಿನ ಸಹಾಯೋಪಾಧ್ಯಾಯರಾದ ಮೆ॥ ಜೆ ಕೃಷ್ಣಶಾಸ್ತ್ರಿಗಳು ಸಣ್ಣ ಮಕ್ಕಳು ಓದುವುದಕ್ಕೆ ಯೋಗ್ಯವಾದ ಸಣ್ಣ ಕಥೆಗಳನ್ನು ಕೂಡಿಸಿ ಪುಸ್ತಕ ರೂಪವಾಗಿ ಪ್ರಕಟಿಸಿರುತ್ತಾರೆ ಇದಕ್ಕೆ “ ಕಿಂಡರ್‌ಗಾರ್ಟನ್ ” ಕಥೆಗಳೆಂಬ ಹೆಸರನ್ನಿಟ್ಟಿದ್ದಾರೆ ನಮಗೆ ತಿಳಿದ ಮಟ್ಟಿಗೆ “ ಕಿಂಡರ್‌ಗಾರ್ಟನ್ ” ಎಂಬುವುದು ಒಂದು ಬೋಧನಾ ಕ್ರಮವೇ ಹೊರತು ಅದೂ ಒಂದು ಪಾಠವೆಂದು ಹೇಳಲಾಗದು ವಿಷಯವನ್ನು ಕಥೆಯರೂಪವಾಗಿಯೂ ಸ್ವಾರಸ್ಯವಾಗಿಯೂ ಹೇಳುವುದು ಮಕ್ಕಳಿಗೆ ಬಹಳ ಒಳ್ಳೆಯದೇ ಸರಿ ಆದರೆ ಮಕ್ಕಳು ಕೆಲವು ವಿಷಯಗಳನ್ನು ಸರಿಯಾದ ರೀತಿಯಲ್ಲಿ ತಿಳಿಯಲಾಗದಂತೆ ಕೆಲವು ಕಥೆಗಳು ಗಲಿಬಿಲಿ ಉಂಟುಮಾಡುವವಾಗಿವೆ ಮೂಲಾ “ ಚಂದ್ರನೂ ದೇವತೆಗಳೂ ” ಎಂಬ ಕಥೆಯಿಂದ ಚಂದ್ರನ ಪ್ರಭಾವವು ಅಮಾವಾಸ್ಯೆಗೆ ಕಾರಣವೂ ಮಕ್ಕಳಿಗೆ ಸರಿಯಾಗಿ ತಿಳಿಯುವಂತೆ ವಿವರಿಸಲ್ಪಟ್ಟಿಲ್ಲವೆಂದು ನಮಗೆ ತೋರುವುದು ಕಥೆಗಳು ವಿದ್ಯಾಭ್ಯಾಸಕ್ಕೆ ಸಹಕಾರಿಗಳಾಗಿರಬೇಕಾದಲ್ಲಿ ನಾವು ಬೋಧಿಸಬೇಕೆಂದಿರುವ ಮುಖ್ಯ ವಿಷಯವನ್ನು ನಾವು ಹೇಳುವ ಕಥೆ ಕಥಾಂತರಗಳು ವ್ಯಕ್ತಾಂತರಪಡಿಸತಕ್ಕವುಗಳಾಗಿರುತ್ತವೆ ಮತ್ತು ಈ ಕಥೆಗಳು ನಾನಾ ವಿಷಗಳಾಗಿರುವವು ಸೂರ್ಯ, ಚಂದ್ರ, ಕಾಲ, ಗಾಳಿ ಮಳೆ ಮೊದಲಾದ ಪ್ರಕೃತಿ ವಸ್ತುಗಳೂ, ಕುದುರೆ, ಹಸು, ಕುರಿ ಮೊದಲಾದ ಪ್ರಾಣಿಗಳೂ ಹತ್ತಿ, ರಾಗಿ, ಬತ್ತ ಮುಂತಾದ ಸಸ್ಯಗಳೂ ಆಶ್ಚರ್ಯಕರವಾದ ಕಥೆಗಳೂ ಅನೇಕವಾಗಿರುತ್ತವೆ ಪುಸ್ತಕವು ಅಂದವಾಗಿದೆ ಮಕ್ಕಳೂ ಕೂಡ ತಿಳಿಯುವಷ್ಟು ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಇದರಿಂದ ಉಪಾಧ್ಯಾಯರಿಗೆ ತುಂಬಾ ಸಹಾಯವಾಗುವುದೆಂದು ನಂಬುತ್ತೇವೆ ಇದರ ಕ್ರಯ ೧೦ ಆಣೆ

ಮೈಸೂರು ಸರ್ಕಾರಿ ಹುಕುಂಗಳು

ಗವರ್ನಮೆಂಟ್ ಪ್ರೆಸ್ ಮತ್ತು ಸ್ಟೇಷನರಿ ಡಿಪೋ

ಈ ಇಲಾಖೆಗಳನ್ನು ನಡಿಸುವ ಸಮರ್ಥರೂ ಅನುಭವಶಾಲಿಗಳೂ ಆದ ಮೆ। ಯೇಟ್ಸ್‌ರವರು ಕಳೆದ ಸಾಲಿನ ವಾರ್ಷಿಕ ರಿಪೋರ್ಟುಗಳನ್ನು ಬರೆದು ಗವರ್ನಮೆಂಟಿಗೆ ಕಳುಹಿಸಿದರು ಗವರ್ನಮೆಂಟಿನವರು ಅದರ ಮೇಲೆ ತಮ್ಮ ಹುಕುಮನ್ನು ಬರೆದು ಈಗ ಪ್ರಕಟಿಸಿರುತ್ತಾರೆ ಇದರಲ್ಲಿ ಕಂಡುಬರುವ ವಿಷಯಗಳು ಕಸುಬುದಾರಿಗೆ ಸಂಬಂಧಪಟ್ಟವುಗಳಾಗಿವೆ ಮೆ ಯೇಟ್ಸ್‌ರವರು ಮುತುವರ್ಜಿಯಿಂದಲೂ ಚಟುವಟಿಕೆಯಾಗಿಯೂ ಈ ಇಲಾಖೆಗಳನ್ನು ನಡಿಸಿದ್ದರಿಂದ ಖರ್ಚು ಬಾಬು ಕೂಡಿದ ಮಟ್ಟಿಗೂ ಕಡಮೆಯಾಗಿರುತ್ತದೆ, ಮತ್ತು ಕೆಲಸ ಕಾರ್ಯಗಳು ಸ್ತೋತ್ರಾರ್ಹವಾಗಿ ನಡೆದಿರುವವು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಬಹಳ ಚೆನ್ನಾಗಿ ಕೆಲಸ ನಡೆದಿದೆ ಗವರ್ನಮೆಂಟಿನವರು ತಮ್ಮ ಈ ಒಂದು ಇಲಾಖೆಯಲ್ಲಿ ಕೆಲಸಗಳೂ ಮೇಲ್ವಿಚಾರಣೆಯೂ ಹೆಚ್ಚು ಖರ್ಚಿಲ್ಲದೆಯೂ ತೃಪ್ತಿಕರವಾಗಿಯೂ ನಡೆಯುತ್ತಲಿವೆ ಎಂದು ಸಂತೋಷಪಡಬೇಕಾಗಿದೆ

ಜೈಲುಖಾನೆಗಳೂ ಲಾಕಪ್ಪುಗಳೂ

ಮೈಸೂರು ಸಂಸ್ಥಾನದಲ್ಲಿ ಬಂದೀಖಾನೆಗಳಲ್ಲಿರತಕ್ಕ ಜನಸಂಖ್ಯೆಯು ಬಹಳ ಹೆಚ್ಚಾದದ್ದಲ್ಲ ಸರಾಸರಿ ನೋಡಿದರೆ ಸಂಸ್ಥಾನವೊಳಗೆ ಒಟ್ಟು ೧,೩೦೩ ಜನ ಬಂದೀವಾನರಿರುತ್ತಾರೆಂದು ಗೊತ್ತಾಗುವುದು ಈ ಪೈಕಿ ೯೬೦ ಮಂದಿ ಸಜಾ ಶಿಕ್ಷೆಯನ್ನನುಭವಿಸುವ ಬಂದೀವಾನರು, ೨೪೯ ಮಂದಿ ವಿಚಾರಣೆಯಲ್ಲಿದ್ದ ಖೈದಿಗಳು, ೩ ಮಂದಿ ಸಿವಿಲ್ ಖೈದಿಗಳು ಅಪರಾಧಗಳನ್ನು ಮಾಡಿದವರು ಇಷ್ಟೇ ಮಂದಿ ಎಂದಾಗಲಿ ಅಪರಾಧಗಳನ್ನು ನಡಿಸಿದವರೆಲ್ಲಾ ಬಂದೀಖಾನೆಗಳಲ್ಲಿರುತ್ತಾರೆಂದಾಗಲಿ ನಾವು ಊಹಿಸಲಾರೆವು ಆದರೆ ಇಷ್ಟು ಜನ ಬಂದೀವಾನರ ಸಂರಕ್ಷಣೆಯು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರಾದ ಕರ್ನಲ್ ಸ್ಮಿತ್‌ರವರಿಗೆ ವಹಿಸಲ್ಪಟ್ಟಿರುತ್ತದೆ ವರುಷದಲ್ಲಿ ಬಂದೀಖಾನೆಗಳಿಗೂ ಲಾಕಪ್ಪುಗಳಿಗೂ ದಾಖಲಾಗಿ ಬಿಡುಗಡೆಯಾಗತಕ್ಕವರ ಸಂಖ್ಯೆಯೇನೋ ಬಹಳ ಹೆಚ್ಚಾಗಿಯೇ ಇರುತ್ತದೆ, ಅಂದರೆ, ಕಳೆದ ಸಾಲಿನಲ್ಲಿ ಈ ಜನರ ಸಂಖ್ಯೆಯು ೧೧,೯೧೩ ಆಗಿದ್ದಿತು ಈ ಪೈಕಿ ೧೦,೬೮೯ ಮಂದಿ ಬಂದೀಖಾನೆ ಮತ್ತು ಲಾಕಪ್ಪುಗಳಿಂದ ಬಿಡುಗಡೆ ಹೊಂದಿರುತ್ತಾರೆ

ಕಳೆದ ಸಾಲಿನಲ್ಲಿ ಎಂಟು ಜನ ಖೈದಿಗಳು ತಪ್ಪಿಸಿಕೊಂಡು ಓಡಿಹೋದರು ಇವರಲ್ಲಿ ಆರು ಜನ ದಸ್ತಗಿರಿಯಲ್ಲಿದ್ದವರು ಈ ಪೈಕಿ ಇಬ್ಬರನ್ನೂ ಇಬ್ಬರು ಬಂದೀವಾನರನ್ನೂ ಪತ್ತೆ ಮಾಡಿ ಹಿಡಿದಿರುತ್ತಾರೆ

ಈ ಜೈಲ್‌ಖಾನೆಗಳಿಗೂ ಲಾಕಪ್ಪುಗಳಿಗೂ ಕಳೆದ ಸಾಲಿನಲ್ಲಿ ಒಟ್ಟು ೧,೦೯,೯೧೧ ರೂಪಾಯಿ ಗವರ್ನಮೆಂಟಿನಿಂದ ಖರ್ಚಾಯಿತು ಬಂದೀವಾನರೂ ಜೈಲುಗಳೊಳಗೂ ಹೊರಗೂ ಕೆಲಸಗಳನ್ನು ಮಾಡಿ ೧೩,೦೬೪ ರೂಪಾಯಿ ಹುಟ್ಟುವಳಿ ಮಾಡಿಕೊಟ್ಟರು, ಅಂದರೆ, ಪ್ರತಿಯೊಬ್ಬ ಖೈದಿಯಿಂದಲೂ ವರುಷದಲ್ಲಿ ೨೦ ರೂಪಾಯಿನಂತೆ ಉತ್ಪತ್ತಿಯಾದ ಹಾಗಾಯಿತು ಬಂದೀಖಾನೆಯಲ್ಲಿರತಕ್ಕ ಖೈದಿಗಳಿಂದ ವಿಶೇಷ ಹಣ ಹುಟ್ಟುವಳಿ ಆಗುವಂಥಾ ಕೆಲಸಗಳನ್ನು ಮಾಡಿಸುವದು ಸಾಧ್ಯವಲ್ಲ ಆದಕಾರಣ ಅವರ ಪೋಷಣಾದಿ ಕೆಲಸಗಳಿಗೆ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ ಆದರೂ ಈ ವರುಷದ ಜೈಲ್ ಹುಟ್ಟುವಳಿಯು ಹಿಂದಿನ ವರುಷಕ್ಕಿಂತಲೂ ೫,೦೦೦ ರೂಪಾಯಿ ಹೆಚ್ಚಾಗಿರುವುದು

ಜೈಲುಗಳಲ್ಲಿ ಸರ್ಕಾರದವರು ಬಂದೀವಾನರ ಆರೋಗ್ಯಭಾಗ್ಯವನ್ನು ಬಹಳ ಚೆನ್ನಾಗಿ ನೋಡಿಕೊಳ್ಳುವಂತೆ ಕಾಣುವುದು ಕಳೆದ ವರುಷ ೧೮ ಮಂದಿ ಮಾತ್ರ ಕಾಲವಾಗಿರುತ್ತಾರೆ ಪಟ್ಟಣ ಊರು ಗ್ರಾಮಾದಿಗಳ ಆರೋಗ್ಯ ಸ್ಥಿತಿಗಿಂತಲೂ ಜೈಲ್‌ಖಾನೆಗಳೇ ವಿಶೇಷ ಆರೋಗ್ಯವಾಗಿವೆ ಎಂದು ಹೇಳಬಹುದಾಗಿದೆ ೧,೩೦೩ ಮಂದಿ ಬಂದೀವಾನರಿರುವ ಕಡೆ ಒಂದು ವರುಷದಲ್ಲಿ ಹದಿನೆಂಟೇ ಮರಣಗಳಾಗಿರುವುದನ್ನು ನೋಡಿದರೆ ಬಂದೀಖಾನೆಗಳ ಆರೋಗ್ಯಸ್ಥಿತಿಯು ಯೂರೋಪ್ ಖಂಡದ ಅತ್ಯಂತ ಸುಖಕರವಾದ ಪ್ರದೇಶಗಳ ಆರೋಗ್ಯ ಸ್ಥಿತಿಗಿಂತಲೂ ಉತ್ತಮವಾಗಿರುವಂತೆ ಕಾಣುವುದು ಇಂಥಾ ಸ್ಥಿತಿಯನ್ನು ನೋಡಲಾಗಿ ಖೈದಿಗಳು ತಮ್ಮ ಊರು ಗ್ರಾಮಗಳಲ್ಲಿರುವುದಕ್ಕಿಂತಲೂ ಜೈಲ್‌ಖಾನೆಗಳಲ್ಲಿ ಇರುವಾಗ್ಯೆ ಸುಖಕರವಾದ ಭೋಜನಾದಿ ಸೌಕರ್ಯಗಳು ಅವರಿಗೆ ಲಭಿಸುವವೆಂದು ಹೇಳಬಹುದಾಗಿದೆ ಕಳೆದ ಸಾಲಿನಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿ ನೋಡಿದ್ದರಲ್ಲಿ ೪೫೩ ಜನರು ೧ ರಿಂದ ೧೦ ಪೌಂಡುಗಳ ವರೆಗೆ ತೂಕದಲ್ಲಿ ಹೆಚ್ಚಿದ್ದರೆಂದೂ, ೨೨೭ ಮಂದಿ ತೂಕದಲ್ಲಿ ಕಡಮೆಯಾಗಿದ್ದರೆಂದೂ ತಿಳಿಯುವುದು

ಕಳೆದ ಸಾಲಿನಲ್ಲಿ ಅಪರಾಧಗಳು ಕ್ರಮೇಣ ಹೆಚ್ಚಾಗುವಂತೆ ತೋರಿತು ಯಾಕೆಂದರೆ ಸಂಸ್ಥಾನವೊಳಗೆ ದುಷ್ಕಾಲ ಪ್ರಾಪ್ತವಾಗಿ ಜನರ ಜೀವನಕ್ಕೆ ತಕ್ಕ ಮಟ್ಟಿಗೆ ಕಷ್ಟವಾಗಿತ್ತೆಂಬುವುದು ಎಲ್ಲರಿಗೂ ಗೊತ್ತೇ ಇದೆ ಜೈಲಿನೊಳಗೆ ೨೨೨ ಮಂದಿ ಬಂದೀವಾನರು ಛಡೀ ಶಿಕ್ಷೆಗೆ ಗುರಿಪಡಿಸಲ್ಪಟ್ಟರಾದಾಗ್ಯೂ ಸರ್ಕಾರದವರ ದರ್ಪವೂ ಅಧಿಕಾರಿಗಳ ಮೇಲ್ವಿಚಾರಣೆಯೂ ತೃಪ್ತಿಕರವಾಗಿದ್ದವು ಬಂದೀವಾನರಿಗೆ ಅವರ ಒಳ್ಳೆಯ ನಡತೆಗೋಸ್ಕರ ಸಂಬಳಗಳನ್ನು ಕೊಡುವ ಪದ್ಧತಿ ಇದ್ದರೂ ಈ ಭಾಗವನ್ನು ಈ ರಿಪೋರ್ಟಿನಲ್ಲಿ ಕಾಣಿಸಿರುವುದಿಲ್ಲ ಈ ಪದ್ಧತಿಯಿಂದ ಖೈದಿಯ ಶಿಕ್ಷಾ ಅವಧಿಯು ಕೆಲವು ದಿವಸಗಳು ಕಡಮೆಯಾಗುತ್ತವೆ

ಜನರು ಪ್ರಜಾ ಕಂಟಕವಾದ ಕಾರ್ಯಗಳನ್ನು ಮಾಡಿ ಜೈಲ್‌ಖಾನೆಯಲ್ಲಿ ಬಿದ್ದುಕೊಂಡಿರುವಾಗ ಸರ್ಕಾರದವರು ಅವರ ಗುಣನಡತೆಗಳನ್ನು ಕ್ರಮಪಡಿಸುವುದಕ್ಕೆ ಬಂದೀಖಾನೆಗಳಲ್ಲಿ ಯಾವ ಏರ್ಪಾಡುಗಳನ್ನು ಮಾಡಿರುತ್ತಾರೆಯೋ ನಮಗೆ ತಿಳಿಯದು ಅವರು ಬಂದೀಖಾನೆಯಲ್ಲಿ ವಿಧಿಸಲ್ಪಟ್ಟ ಶಿಕ್ಷೆಯನ್ನು ಅನುಭವಿಸುವುದಕ್ಕೋಸ್ಕರವೇ ಆದೇನೋ ಅವರು ಅನುಭವಿಸಬೇಕು ಆದರೆ ಸಾಧ್ಯವಾದಲ್ಲಿ ಅವರನ್ನು ಒಳ್ಳೆಯವರನ್ನಾಗಿ ಮಾಡಲು ಪ್ರಯತ್ನಪಡಬೇಕಾದದ್ದು ಅವಶ್ಯವಾಗಿರುತ್ತದೆ ಜೈಲುಗಳಲ್ಲಿ ಬಂದೀವಾನರಿಗೆ ಸದ್ಭಕ್ತಿ ಸದ್ಗುಣ ಸನ್ನಡತೆಗಳನ್ನು ಬೋಧನೆ ಮಾಡುವುದಕ್ಕೆ ಏನಾದರೂ ಏರ್ಪಾಡುಗಳನ್ನು ಮಾಡಿದಾರೆಯೋ ಇಲ್ಲವೋ ನಮಗೆ ತಿಳಿಯಲಿಲ್ಲ ಪ್ರಜೆಗಳ ನೆಮ್ಮದಿಗೂ ಪ್ರಜಾಪಾಲಕರ ನೀತಿಗೂ ವಿರೋಧವಾಗಿ ದುಷ್ಕಾರ್ಯಗಳನ್ನು ನಡಿಸುವುದು ತಪ್ಪೆಂದೂ ಅಯೋಗ್ಯವೂ ಅದ ಕಾರ್ಯವೆಂತಲೂ, ಇಂಥಾ ಕಾರ್ಯಗಳಲ್ಲಿ ಆಸಕ್ತರಾಗದೆ ಸಚ್ಚರಿತ್ರರಾಗಬೇಕೆಂತಲೂ ಖೈದಿಗಳಿಗೆ ಆಗಾಗ್ಗೆ ಹೇಳಿ ವಿವೇಕವನ್ನು ಕಲಿಸುತ್ತಾ ಬರುವುದು ಆವಶ್ಯವೆಂದು ನಮಗೆ ತೋರುತ್ತದೆ ಈ ಸಂಸ್ಥಾನದಲ್ಲಿ ಕಾರಾಗೃಹವಾಸವು ಶಿಕ್ಷಾಕಾಲವಾಗಿಯೂ, ಸತ್‌ಶಿಕ್ಷಣ ಕಾಲವಾಗಿಯೂ ಪರಿಣಮಿಸಬೇಕೆಂಬುವುದೇ ನಮ್ಮ ಮುಖ್ಯಾಶಯವಾಗಿರುತ್ತದೆ

ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗುವ ಸಂಗತಿಗಳು

ಮೈಸೂರು ಗವರ್ನಮೆಂಟಿನವರು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗುತ್ತಿರುವ ಸಂಗತಿಗಳನ್ನೂ ತಃಖ್ತೆಗಳನ್ನೂ ನೋಡಿ ಅವುಗಳ ಪೈಕಿ ಕೆಲವು ಅನಾವಶ್ಯವೆಂದೂ, ಅವನ್ನು ಇನ್ನು ಮುಂದೆ ಪ್ರಕಟಿಸಬೇಕಾದದ್ದಿಲ್ಲವೆಂದೂ ಹುಕುಂ ಕೊಟ್ಟಿರುತ್ತಾರೆ ಈ ಹುಕುಮಿನ ಅಭಿಪ್ರಾಯವೇನೆಂದರೆ —

ಈಚೆಗೆ ಸರ್ಕಾರಿ ಗೆಜೆಟ್ಟಿನಲ್ಲಿ ಅನೇಕ ವಿಚಾರಗಳು ಪ್ರಕಟವಾಗುತ್ತಾ, ಅವುಗಳ ಪ್ರಕಟನೆಗೆ ಹೆಚ್ಚು ಕಾಗದವೂ ವಿಶೇಷ ದ್ರವ್ಯವೂ ವಿನಿಯೋಗವಾಗುತ್ತಾ ಬಂದಿದೆ ಈಗ ಗೆಜೆಟ್ಟಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳ ಬಜೆಟ್ ಲೆಕ್ಕಗಳೂ, ತೀರ್ಮಾನಗಳೂ, ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನ ತೀರ್ಮಾನಗಳೂ ಲೆಕ್ಕಗಳೂ, ಮೈಸೂರು ಬೆಂಗಳೂರು ಮುನಿಸಿಪಲ್ ಕೌನ್ಸಿಲ್ಲುಗಳ ಲೆಕ್ಕಗಳೂ ತೀರ್ಮಾನಗಳೂ, ಮತ್ತು ಈ ಕೌನ್ಸಿಲ್ ಮೀಟಿಂಗುಗಳಲ್ಲಿ ಚರ್ಚೆಗೆ ತರಲ್ಪಡುವ ವಿಷಯಗಳೂ ಪ್ರಕಟವಾಗುತ್ತಲಿವೆ ಇನ್ನು ಮುಂದೆ ಇಷ್ಟು ವಿಸ್ತಾರವಾಗಿ ಇವುಗಳನ್ನು ಪ್ರಕಟಿಸಬೇಕಾದ ಅಗತ್ಯವಿಲ್ಲ ಸ್ಯಾನಿಟರಿ ಬೋರ್ಡುಗಳ ಬರಿಯ ತೀರ್ಮಾನಗಳನ್ನೂ, ಮುಖ್ಯ ಮುಖ್ಯವಾದ ಜಮಾ ಖರ್ಚುಗಳನ್ನು ತೋರಿಸುವ ಮಾಸಿಕ ಲೆಕ್ಕಗಳನ್ನೂ ಭಾರೀ ಕಾಮಗಾರಿಗಳ ಅಗಿರುವ ವಿವರಗಳನ್ನೂ ಮಾತ್ರ ಪ್ರಕಟಿಸುತ್ತಾ ಬರಬೇಕಾಗಿದೆ ಇನ್ನು ಮುಂದೆ ಮೈಸೂರು ಬೆಂಗಳೂರು ಮುನಿಸಿಪಲ್ ಕೌನ್ಸಿಲ್ಲುಗಳಲ್ಲಿ ಚರ್ಚಿಸಲಾಗುವ ವಿಷಯಗಳನ್ನು ಗೆಜೆಟ್ಟಿನಲ್ಲಿ ಪ್ರಕಟಮಾಡಬೇಕಾದದ್ದಿಲ್ಲ

ಲಾಹೋರ್ ಪಟ್ಟಣದಲ್ಲಿ ಈ ವರುಷದ ಅಂತ್ಯದಲ್ಲಿ ನಡೆಯುವ ಸಕಲ ವಸ್ತುಪ್ರದರ್ಶನಶಾಲೆಗೆ ಪ್ರದರ್ಶನ ವಸ್ತುಗಳನ್ನು ಕಳುಹಿಸ ನವಂಬರ್ ೨೦ ರೊಳಗಾಗಿ ಕಳುಹಿಸಬೇಕೆಂದು ವಿಧಿಸಿದಾರೆ ಈ ಪ್ರದರ್ಶನಶಾಲೆಯ ಪ್ರಾರಂಭದಲ್ಲಿ ಸಂಚರಿಸುವಂಥ ಒಂದು ವಿಮಾನವು ಬರುವದಾಗಿಯೂ ಅದು ಅಗ್ನಿಶಿಖೆಯಿಂದ ಒಬ್ಬ ಕಾರೀಗಾರನು ಒಂದು ವಿಮಾನವನ್ನು ತರುವರೆಂದೂ, ಪ್ರದರ್ಶನಕ್ಕೆ ಹೋಗುವ ನೋಟಕರಿಗೆಲ್ಲಾ ಅದರ ಸಂಚಾರವನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುತ್ತಾನೆಂದೂ ತಿಳಿಯುವುದು

ಕಲ್ಕತ್ತಾ ಪಟ್ಟಣದ ಬಳಿ ಇರುವ ಬೆಲಿಯಘಾಟಾದಲ್ಲಿ ಒಂದು ಮನೆಯೊಳಗೆ ೪೫ ಜನ ಜೂಜುಕೋರರು ೬೧೦ ರೂಪಾಯಿ ಇಟ್ಟುಕೊಂಡು ನವರಾತ್ರಿಯಲ್ಲಿ ಜೂಜಾಡುತ್ತಿದ್ದರು ಈ ಜೂಜುಕೋರರು ಆ ಮನೆಯ ಹೆಬ್ಬಾಗಿಲಬಳಿ ಕುದುರೆ ಸವಾರರ ಪಹರೆಯನ್ನಿಟ್ಟುಕೊಂಡಿದ್ದರು ಪೋಲೀಸಿನವರು ಸಪ್ತರಾತ್ರಿಯಲ್ಲಿ ಆಯುಧ ಸಮೇತ ಆ ಮನೆಯನ್ನು ಸುತ್ತುವರಿದುಕೊಂಡು ೨-೩ ಸಲ ಗುಂಡು ಹಾರಿಸಿ ಮನೆಯ ಬಾಗಿಲು ಮುರಿದು ಒಳಕ್ಕೆ ಇಳಿದುಹೋಗಿ ಅವರನ್ನೆಲ್ಲಾ ಜೂಜಾಡುತ್ತಿದ್ದ ಹಾಗೆಯೇ ರೂಪಾಯಿ ಸಹಿತವಾಗಿ ದಸ್ತಗಿರಿ ಮಾಡಿದರು

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ಅಕ್ಟೋಬರ್ ತಾ ೨೮ ನೇ ಗುರುವಾರ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯು.

ನೆನ್ನೆಯ ದಿನ ಮೈಸೂರು ಪಟ್ಟಣದಲ್ಲಿ ಇಪ್ಪತ್ತಾರನೆಯ ಪ್ರಜಾ ಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ನಾವು ಈ ಮೂಲಕ ಪ್ರತಿನಿಧಿಗಳಿಗೆಲ್ಲಾ ಸುಖಾಗಮನವನ್ನು ಬಯಸುತ್ತೇವೆ. ಸದ್ಯ ಮೈಸೂರಿನಲ್ಲಿ ಪ್ಲೇಗ್ ಉಪದ್ರವಿರೋಣದರಿಂದ ಪ್ರಜೆಗಳು ಚಿಂತಾಕ್ರಾಂತರಾಗಿರುತ್ತಾರೆ. ಅವರು ಪ್ರತಿನಿಧಿಗಳಿಗೆ ಸುಖಾಗಮನವನ್ನು ಬಯಸುವ ವಿಷಯದಲ್ಲೂ ಅವರಿಗೆ ಸುಖವಸತಿಗಳನ್ನು ಕಲ್ಪಿಸಿ ಕೊಡುವ ಭಾಗದಲ್ಲೂ ಎಂದಿನಂತೆ ಸಂತೋಷಯುಕ್ತರಾಗಿಲ್ಲ. ಹಲವು ಪ್ರಜೆಗಳು ಪ್ಲೇಗಿನ ದೆಸೆಯಿಂದ ಕಷ್ಟ ನಷ್ಟ ದುಃಖಾದಿಗಳಿಗೆ ಸಿಕ್ಕಿ ಕೊರಗುತ್ತಿದ್ದಾರೆ ಈ ಸಂಕಟವು ಇನ್ನೂ ಪರಿಹರವಾಗದೆ ಇರುವ ನಿಮಿತ್ತ ನವರಾತ್ರಿ ಉತ್ಸವಗಳಿಗೆ ಸಾಮಾನ್ಯವಾಗಿ ಬರುತ್ತಿದ್ದಷ್ಟು ವಿಶೇಷ ಜನರು ಬಂದಿರುವುದಿಲ್ಲ. ಈ ಕಾರಣದಿಂದಲೇ ಸಂಸ್ಥಾನಾಮಳಯಿಂದ ಬರಬೇಕಾಗಿದ್ದ ೨೩೦ ಮಂದಿ ಪ್ರತಿನಿಧಿಗಳ ಪೈಕಿ ಸುಮಾರು ೧೨೦ ಮಂದಿ ಮಾತ್ರ ಬಂದು, ಉಳಿದವರು ಬಾರದೆ ಹೋಗಿದ್ದಾರೆ. ಪ್ರಜಾ ಪ್ರತಿನಿಧಿಗಳು ತಮ್ಮ ತಮ್ಮ ವಿಭಾಗದ ಪ್ರಜೆಗಳ ಪರವಾಗಿ ನಿಂತು ಕೆಲಸಗಳನ್ನು ಮಾಡಬೇಕಾಗಿರುತ್ತದೆ ಅವರು ರಾಜಧಾನಿಗೆ ಬರುವುದು ಸ್ವಕಾರ್ಯಕ್ಕಾಗಿ ಅಲ್ಲ ಅದಕಾರಣ ಪರೋಪಕಾರಾರ್ಥವಾದ ಕೆಲಸಗಳನ್ನು ಮಾಡುವುದಕ್ಕಾಗಿ ಮೈಸೂರಿಗೆ ಬಂದಿರುವಂಥಾ ಪ್ರಜಾ ಪ್ರತಿನಿಧಿಗಳಿಗೆ ಯಾವುದೊಂದು ಅಪಾಯವೂ ಸಂಭವಿಸದೆ ಅವರು ಸುಕ್ಷೇಮವಾಗಿದ್ದು ಸ್ವಸ್ಥಳವನ್ನು ಸೇರಲೆಂದು ಹಾರೈಸುತ್ತೇವೆ.

ಕಳೆದ ವರುಷದ ಪ್ರತಿನಿಧಿ ಸಭೆಯಲ್ಲಿ ಪ್ರತಿನಿಧಿಗಳು ಸೂಚಿಸಿ ಚರ್ಚೆಮಾಡಿದ ವಿಷಯಗಳ ಸಂಖ್ಯೆಯನ್ನೂ ಈ ಪೈಕಿ ಅಲ್ಲಿಂದೀಚೆಗೆ ಇತ್ಯರ್ಥಮಾಡಲ್ಪಟ್ಟಿರುವ ವಿಷಯಗಳ ಸಂಖ್ಯೆಯನ್ನೂ ತಿಳಿಸುವಂಥಾ ಪಟ್ಟಿಗಳನ್ನುಳ್ಳ ಒಂದು ಗವರ್ನಮೆಂಟಿನ ಹುಕುಮು ಈಗ ತಾನೇ ನಮ್ಮಲ್ಲಿಗೆ ಬಂದಿರುತ್ತದೆ ಸಂಸ್ಥಾನಾಮಳ ವ್ಯವಹರಿಸುವ ೭೩ ಜನರಲ್ ಸಬ್ಜಕ್ಟುಗಳೂ, ೧೪೯ ಸ್ಥಳೀಯ ಅಥವಾ ಲೋಕಲ್ ಸಬ್ಜಕ್ಟುಗಳೂ ಹಿಂದಿನ ಸಭೆಯಲ್ಲಿ ಚರ್ಚೆಗೆ ತರಲ್ಪಟ್ಟವು ಅವುಗಳಲ್ಲಿ ೨೧೧ ವಿಷಯಗಳು ಸಭೆ ಸೇರಿದ್ದಾಗಲೇ ಇತ್ಯರ್ಥವಾದವು; ೩೮ ವಿಷಯಗಳನ್ನು ವ್ಯವಸ್ಥೆಯಬಗ್ಗಾಗಿ ಡೆಪ್ಯುಟಿ ಕಮಿಷನರುಗಳಿಗೂ ಇಲಾಖಾ ಮುಖ್ಯಾಧಿಕಾರಿಗಳಿಗೂ ಕಳುಹಲಾದವು; ಗವರ್ನಮೆಂಟಿನವರು ಸಭೆಯಾದಂದಿನಿಂದ ಈಚೆಗೆ ೧೮ ವಿಷಯಗಳನ್ನು ಫೈನಲ್ ಮಾಡಿರುತ್ತಾರೆ; ೩೮ ವಿಷಯಗಳು ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಸರ್ಕಾರದವರು ಈ ಹುಕುಮನ್ನು ನಾಲ್ಕಾರು ವಾರಗಳ ಹಿಂದೆ ಅಂದರೆ, ಪ್ರಜಾಪ್ರತಿನಿಧಿಗಳು ಈ ವರುಷದ ಸಭೆಯಲ್ಲಿ ಚರ್ಚೆಗೆ ತರಬೇಕೆಂಬ ವಿಷಯಗಳನ್ನು ಕಳುಹಿಸಿಕೊಡುವುದಕ್ಕಿಂತ ಮೊದಲೇ ಪ್ರಕಟಿಸಿದ್ದರೆ ಬಹಳ ಚೆನ್ನಾಗಿತ್ತೆಂದು ನಮಗೆ ತೋರುತ್ತದೆ ಈ ಹುಕುಮು ಮೊದಲೇ ಪ್ರತಿನಿಧಿಗಳಿಗೆ ದೊರಕ್ಕಿದ್ದ ಪಕ್ಷದಲ್ಲಿ ಅವರು ಇತ್ಯರ್ಥವಾಗಿರುವ ವಿಷಯಗಳನ್ನು ಬಿಟ್ಟುಬಿಡುವುದಕ್ಕೆ ಸಹಾಯವಾಗುತ್ತಿತ್ತು. ಪ್ರಜಾ ಪ್ರತಿನಿಧಿ ಸಭೆಯ ಕಾರ್ಯಗಳು ಸಾರ್ಥಕವಾಗಿಯೂ ಚಟುವಟಿಕೆಯಿಂದಲೂ ನಡೆಯಬೇಕಾಗಿದ್ದಲ್ಲಿ ಮೈಸೂರು ಗವರ್ನಮೆಂಟಿನವರು ಆ ಸಭೆಯ ಮೆಂಬರುಗಳಿಗೆ ಅವಶ್ಯವಾದ ವಿಷಯಗಳನ್ನೆಲ್ಲಾ ಕಾಲಾತೀತವಿಲ್ಲದೆ ಮೊದಲೇ ತಿಳಿಯುವಂತೆ ಒದಗಿಸಿ ಕೊಡಬೇಕು. ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿದ ತರುವಾಯ ಅಂದರೆ ಪ್ರತಿನಿಧಿಗಳು ಚರ್ಚೆಗೆ ತರಬೇಕೆಂಬ ವಿಷಯಗಳ ಪಟ್ಟಿಯನ್ನು ಸರ್ಕಾರಕ್ಕೆ ಕೊಡುವುದಕ್ಕಿಂತ ಮುಂಚೆ ಆ ಪ್ರತಿನಿಧಿಗಳಿಗೆ ಮೇಲ್ಕಂಡಂಥಾ ಹುಕುಮಿನ ಒಂದೊಂದು ಪ್ರತಿಯನ್ನು ಕೊಡುವಂತಾಗಬೇಕು.

ವಿಷಯಗಳನ್ನು ಹೆಚ್ಚು ಹೆಚ್ಚಾಗಿ ಸಭೆಯಲ್ಲಿ ಚರ್ಚೆಗೆ ತರಬೇಕೆಂಬ ಅಭಿಲಾಷೆಯು ನಮ್ಮ ಪ್ರಜಾ ಪ್ರತಿನಿಧಿಗಳಲ್ಲಿ ವಿಶೇಷವಾಗಿರುತ್ತದೆಂದು ಕಾಣುತ್ತದೆ. ಅನೇಕ ಸಣ್ಣ ಸಣ್ಣ ವಿಚಾರಗಳನ್ನು ಮೊದಲು ಮ್ಯುನಿಸಿಪಾಲಿಟಿಗಳಿಗೂ, ಲೋಕಲ್ ಬೋರ್ಡು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಇತ್ಯರ್ಥದ ಬಗ್ಗೆ ಕಳುಹಿಸಿಕೊಡಬೇಕು. ಪ್ರಜಾ ಪ್ರತಿನಿಧಿ ಸಭೆಯ ಕಾಲವು ಬಹಳ ಕೊಂಚವಾಗಿರುತ್ತದೆ. ಆದ ಕಾರಣ ಪ್ರತಿ ವರುಷವೂ ವಿಷಯಗಳು ಕೆಲವೇ ಆಗಿದ್ದರೆ ಸಭೆಯಲ್ಲಿ ಚೆನ್ನಾಗಿ ಚರ್ಚೆಮಾಡಬಹುದು. ಸಭೆಯಲ್ಲಿ ಇಂಥವುಗಳಿಗೇ ವಿಶೇಷ ಪ್ರಾಮುಖ್ಯತೆಯನ್ನು ಕೊಟ್ಟು, ಸ್ಥಳೀಯ ಅಥವಾ ಸಣ್ಣ ವಿಚಾರಗಳನ್ನು ನ್ಯಾಯವಾದ ಮಾರ್ಗಗಳಲ್ಲಿ ಸರ್ಕಾರಕ್ಕೆ ಬರುವಂತೆ ಮಾಡಿಕೊಳ್ಳಬೇಕು. ಆದರೆ ಅಷ್ಟೆಂದು ವಿಷಯಗಳೂ ಆಮಲ್ದಾರ್, ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡ್, ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ಗವರ್ನಮೆಂಟಿಗೆ ಹೋಗುವುದರಲ್ಲಿ ನೌಕರಮಾನೇರುಗಳ ಸಾಮಾನ್ಯ ಕೆಲಸಗಳಿಗೆ ಅಡಚಣೆಯುಂಟಾದರೂ ಆಗಬಹುದು. ಸರ್ಕಾರಿ ಅಧಿಕಾರಿಗಳಿಗೆ ಸಾಮಾನ್ಯವಾಗಿ ಸೂಚಿಸಲ್ಪಟ್ಟ ವಿಷಯಗಳು ಕಾಲವಿಳಂಬದಲ್ಲಿ ಕೈಬಿಟ್ಟು ಹೋಗಬಹುದು ಹೀಗಾಗುವ ಪಕ್ಷದಲ್ಲಿ ಅದು ದೊಡ್ಡ ತಪ್ಪೇ ಸರಿ. ಪ್ರಜಾ ಪ್ರತಿನಿಧಿ ಸಭೆಯ ಉದ್ದೇಶಗಳು ಸಾರ್ಥಕವಾಗಬೇಕಾದರೆ ಪ್ರತಿನಿಧಿಗಳು ಅಮಲ್ದಾರರಿಂದಲೋ ಡೆಪ್ಯುಟಿ ಕಮಿಷನರಿಂದಲೋ ಇಲಾಖಾ ಅಧಿಕಾರಿಗಳಿಂದಲೋ ಇತ್ಯರ್ಥ ಮಾಡಲ್ಪಡಬಹುದಾದ ಸ್ಥಳೀಯ ವಿಷಯಗಳನ್ನು ಮಾತ್ರ ಸಭೆಯಲ್ಲಿ ಸೂಚಿಸಿ ಚರ್ಚಿಸುವುದೇ ಸಾಲದು. ಪ್ರಜಾರಂಜಕವೂ ದೇಶೋನ್ನತಿಯೂ ಉಂಟಾಗುವಂಥಾ ರಾಜ್ಯಭಾರದ ನವೀನ ಕ್ರಮಗಳನ್ನು ಸಭೆಯಲ್ಲಿ ಸೂಚಿಸಿ ಚೆನ್ನಾಗಿ ಚರ್ಚೆಮಾಡಬೇಕಾಗಿದೆ ಈಗಿನ ಸ್ಥಿತಿಗತಿಯನ್ನು ನೋಡಲಾಗಿ ಸಂಸ್ಥಾನಾಮಳ ವ್ಯವಹರಿಸುವಂಥಾ ವಿಚಾರಗಳನ್ನು ಕುರಿತು ಚರ್ಚಿಸುವುದರಲ್ಲಿ ಮೆಂಬರುಗಳು ಧಾರಾಳ ಮನಸ್ಸನ್ನು ಪಡೆಯುವುದಕ್ಕೂ ಪರಿಜ್ಞಾನವುಳ್ಳವರಾಗುವುದಕ್ಕೂ ಇನ್ನೂ ಬಹುಕಾಲ ಬೇಕಾದೀತೆಂದು ಹೇಳಬಹುದು ಆದರೆ ಸ್ವಾಭಾವಿಕ ದೇಶವಾತ್ಸಲ್ಯ ಶೀಲರಾಗಿರುವಂಥಾ ಮತ್ತು ಸಂಸ್ಥಾನದ ಸಮಸ್ತ ಭಾಗಗಳಲ್ಲೂ ಆಳ್ವಿಕೆಯ ಕಾರುಬಾರುಗಳು ತೃಪ್ತಿಕರವಾಗಿ ನಡೆಯಬೇಕೆಂದೂ ಸೀಮೆಯು ಶ್ರೇಯೋಭಿವೃದ್ಧಿಹೊಂದುತ್ತಾ ಬರಬೇಕೆಂದೂ ಕುತೂಹಲ ಪಡುವಂಥಾ ಪ್ರಜೆಗಳು ದಿನಕ್ರಮದಲ್ಲಿ ಹೇರಳವಾಗುವಂತೆ ಈ ಪ್ರಜಾಪ್ರತಿನಿಧಿ ಸಮಾಜವು ಮಾಡಬೇಕೆಂದು ಆಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಗೆ ಬಂದಿರುವ ಪ್ರಜಾಪ್ರತಿನಿಧಿಗಳಿಗೆ ಪದ್ಧತಿಯ ಪ್ರಕಾರ ಸರ್ಕಾರದ ಔತಣವು ಈ ದಿನ ನಡೆಯುವುದು

ಮೊನ್ನೆ ಮಂಗಳವಾರ ಬೆಂಗಳೂರಿನಲ್ಲಿ ಬ್ರಹ್ಮೋಪಾಸನಾ ಸಮಾಜದ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತೆಂದು ತಿಳಿದು ಬಂದಿದೆ

ಈ ವಾರ ನಮ್ಮಲ್ಲಿಗೆ ಬಂದಿರುವ ವಾರ್ತೆಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲು ಅನುಕೂಲವಿಲ್ಲವೆಂದು ವಿಷಾದಿಸುತ್ತೇವೆ

ಈ ಸಲ ನವರಾತ್ರಿ ಉತ್ಸವಗಳಿಗಾಗಿ ರಾಜಧಾನಿಗೆ ಬಂದಿರುವ ಮತ್ತು ರಾಜಧಾನಿಯಲ್ಲಿರುವ ಯೂರೊಪ್ಪಿಯನ್ ಸರ್ದಾರರಿಗೂ ದೊರೆಸಾನಿಗಳಿಗೂ ನೆನ್ನೆರಾತ್ರಿ ಗವರ್ನಮೆಂಟ್ ಹೌಸ್ನಲ್ಲಿ ದಿವ್ಯವಾದ ಔತಣವಾಯಿತು

ಎರಡನೆಯ ಕೌನ್ಸಿಲರ್ ಮೆ|| ಸಂಜುಂಡಯ್ಯನವರು ರಾಜಧಾನಿಗೆ ನವರಾತ್ರಿ ಉತ್ಸವದ ನಿಮಿತ್ತ ದಯಮಾಡಿದ್ದರು. ಬೆಂಗಳೂರಿನಲ್ಲಿ ಅವರ ಸಹೋದರರ ಪತ್ನಿಯು ಕಾಲವಾದದ್ದನ್ನು ಕೇಳಿ ಅವರು ವಾಪಸು ಹೊರಟುಹೋದರು.

ಇಲ್ಲಿನ ಪ್ಲೇಗ್ ಆಸ್ಪತ್ರೆಯಲ್ಲಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಒಂದು ಕೆಲಸ ಮಾಡುತ್ತಿದ್ದ ಆಸ್ಪತ್ರೆ ಅಸಿಸ್ಟೆಂಟ್ ಮೆ|| ವೈ ನರಸಿಂಹಯ್ಯನವರನ್ನು ಕಳೆದ ವಾರ ಒಂದು ನಾಯಿ ಕಡಿದದ್ದರಿಂದ ಅವರು ಚಿಕಿತ್ಸೆಮಾಡಿಸಿಕೊಂಡು ಬರುವುದಕ್ಕಾಗಿ ಕೂನೂರಿನ ಆಸ್ಪತ್ರೆಗೆ ಪ್ರಯಾಣಮಾಡಿದರು.

ಕಳೆದ ಶುಕ್ರವಾರ ಸಾಯಂಕಾಲ ಕನ್ನೇಗೌಡನಕೊಪ್ಪಲಿನ ಒಬ್ಬ ಗಾಡಿಯವನು ಕಾನ್ಸ್ಟಾಬಲ್ ಕ್ಲಬ್ಬಿನ ಬಳಿ ಗಾಡಿ ಓಡಿಸಿಕೊಂಡು ಹೋಗುತ್ತಿದ್ದಾಗ ಗಾಡಿಯಿಂದ ಕೆಳಕ್ಕೆ ಬಿದ್ದನು ಗಾಡಿಯ ಚಕ್ರವು ಅವನ ಹೊಟ್ಟೆಯಮೇಲೆ ಹರಿದು ಬಹಳ ಏಟಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವುದಕ್ಕೆ ಕಳುಹಿಸಲ್ಪಟ್ಟನು.

ಕಳೆದ ಸೋಮವಾರ ಬೆಳಿಗ್ಗೆ ಇಲ್ಲಿನ ಆರ್ಯ ಧರ್ಮೋಜ್ಜೀವಿನೀ ಸಮಾಜದ ನಾಲ್ಕನೇ ವಾರ್ಷಿಕ ಸಭೆಯು ಕೌನ್ ಹಾಲ್ ಬಂಗಲೆಯಲ್ಲಿ ನಡೆಯಿತು. ಸಂಸ್ಥಾನದ ಕಂಟ್ರೋಲರವರಾದ ಮ|| ವಿ. ಎಸ್. ಚಕ್ರವರ್ತಿಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಮಾಜದ ರಿಪೋರ್ಟನ್ನು ಸಕ್ರೆಟರಿ ಮ|| ಎ. ಮಹದೇವ ಶಾಸ್ತ್ರಿಗಳು ಓದಿ ಹೇಳಿದರು.

ಕಳೆದ ೧೮೮೦ನೇ ಇಸವಿ ಜೂನ್ ತಾ ೧೩ರ ಲಾಗಾಯ್ತು ರಾಜಧಾನಿಯಲ್ಲಿ ಮಹಾರಾಜರವರ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಮ|| ಬಿ ವೀರ್ ಯವರು ನಾಳೆ ಶನಿವಾರ ಬೆಂಗಳೂರಿಗೆ ಹೋಗಿ ಮ|| ಭಾಭಾ ಯವರಿಂದ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಅಧಿಕಾರದ ಛಾರ್ಜನ್ನು ವಹಿಸಿಕೊಳ್ಳುವರು.

ತುಂಕೂರಿನ ಹತ್ತಿರ ಇಬ್ಬರು ಕುರುಬರು ರೈಲ್ ಕಂಬಿಗಳ ಮೇಲೆ ಒಂದು ಮರದ ತುಂಡನ್ನು ತಂದುಹಾಕಿದ್ದರು. ರೈಲ್ ಗಾಡಿಯನ್ನು ಕೆಡವಬೇಕೆಂದು ಅವರು ಈ ಕೆಲಸವನ್ನು ಮಾಡಿದರೆಂಬದಾಗಿ ಅವರಿಬ್ಬರ ಮೇಲೂ ಮೊಕದ್ದಮೆ ಆಗಿದೆ. ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮ|| ರಿಜಿಸ್ಟರ್ಯವರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದಾರೆ.

ಕೂಡ್ಲಿ ಶೃಂಗಗಿರಿ ಮಠದ ಶೀರಕ್ಕಯೂರು ಹಕ್ಕುದಾರರು ಎಂಬೀ ವ್ಯವಹಾರದ ವಿಷಯದಲ್ಲಿ "ಅಭಿಮಾನಿ" ಎಂಬುವರು ಇಂಗ್ಲೀಷಿನಲ್ಲಿ ದೀರ್ಘವಾದ ಒಂದು ವಾರ್ತೆಯನ್ನು ಬರೆದು ಕಳುಹಿಸಿಕೊಟ್ಟಿದ್ದಾರೆ. ಪ್ರಕಟಿಸಬೇಕೆಂಬ ವಾರ್ತೆಗಳು ಸಮಗ ಸಾಮಾನ್ಯವಾಗಿ ಕನ್ನಡದಲ್ಲೇ ಬರೆದು ಬರಬೇಕು ಇಲ್ಲವಾದರೆ ನಾವು ದೀರ್ಘವಾದ ಬರವಣಿಗೆಗಳನ್ನು ಕ್ರಮವಾಗಿ ಭಾಷಾಂತರ ಮಾಡಿ ಪ್ರಕಟಿಸಲಾಗುವುದಿಲ್ಲ.

ಮುಸಾಹಬ್ ಮೀರ್ ಕಮಾಲುದ್ದೀನ್ ಅಲ್ಲಿ ಖಾನರವರ ಕುಮಾರರಾದ ಮೆ|| ಮೀರ್ ನಿಸಾರುದ್ದೀನ್ ಎಂಬ ಯೌವನಸ್ಥನಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ವರುಷಕ್ಕೆ ೨೦೦ ಪೌನಿನಂತೆ ವೇತನ ಕೊಟ್ಟು ಸೀಮೆಗೆ ಕಳುಹಿಸಿದ್ದಾರಷ್ಟೆ ಅಲ್ಲಿನ ಇಂಡಿಯನ್ ಬೋರ್ಡ್ ಎಂಬ ಸಮಿತಿಯ ಅಧ್ಯಕ್ಷರವರು ಆ ವಿದ್ಯಾರ್ಥಿಯು ವಿಷಯದಲ್ಲಿ ನಿನ್ನಾರಿಗೆ ಬರೆದುದರಿಂದ ಶ್ರೀಮನ್ ಮಹಾರಾಜರವರು ಅವನ ವೇತನವನ್ನು ಇನ್ನೂ ೫೦ ಪೌಂಡು ಹೆಚ್ಚುಮಾಡಿರುತ್ತಾರೆ ಅವನು ಈಗ ಕೇಂಬ್ರಿಡ್ಜ್ ವಿದ್ಯಾಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದಾನೆ.

ಮೊನ್ನೆ ರಾತ್ರಿ ಬಂಗಲೆ ದಿವಾನ್ ದರ್ಬಾರಿನಲ್ಲಿ ನಡೆದ ದರ್ಬಾರಿನಲ್ಲಿ ಪ್ರಜಾಪ್ರತಿನಿಧಿಗಳು ಶ್ರೀಮನ್ ಮಹಾರಾಜರವರಿಗೆ ನಜರನ್ನು ಒಪ್ಪಿಸಿದರು. ಜನರಲ್ ಸಕ್ರೆಟರಿ ಮೆ|| ಚಂದ್ರಶೇಖರ ಅಯ್ಯರವರು ಪ್ರತಿನಿಧಿಗಳ ಹೆಸರನ್ನು ಮಹಾರಾಜರವರಿಗೆ ಅರಿಕೆಮಾಡಿ ಪರಿಚಯಮಾಡಿಸಿದರು ಸಿದ್ಧಾಂತ ಶಿರೋಮಣಿ ಆಫೀಸರ್ ಮೆ|| ಬಿ. ರಾಮಕೃಷ್ಣರಾಯರು ಶ್ರೀಮನ್ ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಈ ಸಲ ನಡೆದ ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದವರ ಹೆಸರುಗಳನ್ನು ಮಹಾರಾಜರವರಿಗೆ ಅರಿಕೆ ಮಾಡಿದರು ಪಂಡಿತರಿಗೆಲ್ಲಾ ಮಹಾರಾಜರವರ ಸನ್ನಿಧಿಯಲ್ಲಿ ಶಾಲುಗಳೂ, ಬಹುಮಾನದ ಹಣವೂ, ಸರ್ಟಿಫಿಕೇಟುಗಳೂ ಕೊಡಲ್ಪಟ್ಟವು.

ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಮೊನ್ನೆ ಸೋಮವಾರ ಸಾಯಂಕಾಲ ೮ ಗಂಟೆಗೆ ನೀಲಗಿರಿಯಿಂದ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿದರು ಗೌರವಾರ್ಥವಾದ ೧೭ ತೋಪುಗಳು ಹಾರಿಸಲ್ಪಟ್ಟವು. ಅವರ ಸಂಗಡ ಅವರ ಪತ್ನೀಯವರೂ, ಇಬ್ಬರು ಕುಮಾರ್ತೆಯರೂ, ಪಬ್ಲಿಕ್ ಎಂಬೊಬ್ಬ ಸಕ್ರೆಟರಿಯೂ ಬಂದಿರುತ್ತಾರೆ ಮರುದಿನ ಅವರೆಲ್ಲಾ ಇಲ್ಲಿಂದ ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿರುವ ಚರಿತ್ರಾರ್ಹವಾದ ಸ್ಥಳಗಳನ್ನೆಲ್ಲಾ ನೋಡಿಕೊಂಡು ವಾಪಸು ಬಂದರು ಅವರು ನಾಳೆ ಬೆಳಿಗ್ಗೆ ರಾಜಧಾನಿಯನ್ನು ಬಿಟ್ಟು ಶಿವಸಮುದ್ರಕ್ಕೆ ಹೋಗಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಪರಾಂಬರಿಸಿ ಬೆಂಗಳೂರು ಮಾರ್ಗವಾಗಿ ಮದರಾಸಿಗೆ ದಯಮಾಡುವವರಾಗಿದ್ದಾರೆ

ವಿಲಾಯತಿ ಪಾರ್ಲಿಮೆಂಟಿನಲ್ಲಿ ಕೆಲವು ವಾರಗಳ ಹಿಂದೆ ಒಬ್ಬ ಮೆಂಬರು ಇಂಡಿಯಾ ಸ್ಟೇಟ್ ಸಕ್ರೆಟರಿಯವರನ್ನು ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವ ಇಲಿಗಳಿಂದ ಮನುಷ್ಯರಿಗೆ ಬರುತ್ತದೆ ಎಂಬುವುದನ್ನು ಕೆಲವು ಡಾಕ್ಟರುಗಳು ಅಲ್ಲಗಳೆದಿರುತ್ತಾರೆಯೇ ಎಂದು ಕೇಳಿದರು ಈ ವಿಷಯವನ್ನು ಓದಿ ನಮ್ಮ ಆಫೀಸಿನ ಒಬ್ಬ ನೌಕರರು ಬೊಂಬಾಯಿನಲ್ಲಿರುವ ಕ್ಯಾಪ್ಟನ್ ಲಿಸ್ಟರ್ ಎಂಬ ಡಾಕ್ಟರಿಗೆ ಕಾಗದ ಬರೆದು ಇದ್ದದ್ದಕ್ಕೆ ಇನಾಕ್ಯುಲೇಷನ್ ಹಾಲನ್ನು ತಯಾರುಮಾಡಿ ಕಳುಹಿಸುವ ಅಲ್ಲಿನ ಡಾಕ್ಟರ್ ಬ್ಯಾನರ್ಮನ್ ರವರು ಜವಾಬು ಕೊಟ್ಟಿರುವುದೇನೆಂದರೆ,— ಪ್ಲೇಗ್ ಉಪದ್ರವ ಪೂರ್ವೋತ್ತರವನ್ನು ವಿಚಾರಣೆ ಮಾಡಿದ ಕಮಿಷನ್ ಡಾಕ್ಟರುಗಳು ಇಲಿಗಳ ಕಡಿಯೋಣದರಿಂದ ಮನುಷ್ಯರಿಗೆ ಪ್ಲೇಗ್ ಉಪದ್ರ ಉಂಟಾಗುತ್ತದೆಯೇ ಹೊರತು ಅನ್ಯಥಾ ಅಲ್ಲವೆಂದು ಖಚಿತವಾಗಿ ತಿಳಿಯಬೇಕು ನೀವು ಈ ವಿಚಾರವನ್ನು ಎಲ್ಲರಿಗೂ ತಿಳಿಸಬಹುದು ಎಂಬುದೇ

ಘಾಸುಪಾರಿಗಳಲ್ಲಿ ನಡೆಯುವ ನ್ಯುತ್ರಿನ ಸಸ್ತ ಪಾಠಶಾಲಾ ವಿದ್ಯಾರ್ಥಿಗಳು ಪ್ರತಿ ವರುಷವೂ ಸತ್ಯವೇದದ ಕೆಲವು ಭಾಗಗಳಲ್ಲಿ ಪರೀಕ್ಷೆ ಕೊಡುವರು ಈ ವರುಷದ ಪರೀಕ್ಷೆಯು ಕಳೆದ ಜೂಲೈ ತಿಂಗಳಲ್ಲಿ ಜರುಗಿತು ಒಟ್ಟು ೬೭೯ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಹಾಜರಾಗಿದ್ದರು ಇವರಲ್ಲಿ ೩೮೧ ಮಂದಿ ಆಯಾ ಭಾಗಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಉಪಾಧ್ಯಾಯರ ತರಗತಿಯಲ್ಲಿ ೪೧ ಮಂದಿ ಪರೀಕ್ಷಿಸಲ್ಪಟ್ಟು ೨೮ ಮಂದಿ ತೇರ್ಗಡೆ ಹೊಂದಿದರು. ಈ ತರಗತಿಯಲ್ಲಿ ಇಬ್ಬರು

ಮೊದಲನೇ ತರಗತಿಯಲ್ಲೂ ೧೪ ಮಂದಿ ಎರಡನೇ ತರಗತಿಯಲ್ಲೂ ೧೭ ಮಂದಿ ಮೂರನೇ ತರಗತಿಯಲ್ಲೂ ತೇರ್ಗಡೆಯಾಗಿರುತ್ತಾರೆ. ಉತ್ತಮ ತರಗತಿಯಲ್ಲಿ (ಸೀನಿಯರ್ ಡಿವಿಜನ್) ೭೮ ಮಂದಿ ಉಮೇದುವಾರರು ಪರೀಕ್ಷೆಗೆ ಹಾಜರಾಗಿ ನಾಲ್ವರು ಮೊದಲನೇ ಕ್ಲಾಸ್, ೨೨ ಮಂದಿ ಎರಡನೇ ಕ್ಲಾಸ್, ೨೯ ಮಂದಿ ಮೂರನೇ ಕ್ಲಾಸ್ ಈ ರೀತಿ ಒಟ್ಟು ೫೫ ಮಂದಿ ತೇರ್ಗಡೆ ಹೊಂದಿರುತ್ತಾರೆ. ಮಧ್ಯಮ ತರಗತಿಯಲ್ಲಿ (ಇಂಟರ್ಮೀಡಿಯೇಟ್ ಗ್ರೇಡ್) ೧೫೬ ಮಂದಿ ಉಮೇದುವಾರರು ಪರೀಕ್ಷೆಗೆ ನಿಂತರು. ಇವರಲ್ಲಿ ೮೪ ಮಂದಿ ತೇರ್ಗಡೆ ಹೊಂದಿರುತ್ತಾರೆ. ೨೧ ಮಂದಿ ಎರಡನೆಯ ಕ್ಲಾಸಿನಲ್ಲಿಯೂ ೬೩ ಮಂದಿ ಮೂರನೆಯ ಕ್ಲಾಸಿನಲ್ಲಿಯೂ ಪ್ಯಾಸಾಗಿರುತ್ತಾರೆ. ಮಕ್ಕಳ ತರಗತಿಯಲ್ಲಿ (ಜೂನಿಯರ್ ಡಿವಿಜನ್) ೧೨೫ ಮಂದಿ ಉಮೇದುವಾರರು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ ೯ ಮಂದಿ ೧ನೇ ಕ್ಲಾಸ್, ೧೫ ಮಂದಿ ೨ನೇ ಕ್ಲಾಸ್, ೩೩ ಮಂದಿ ೩ನೇ ಕ್ಲಾಸ್ ಈ ರೀತಿ ಒಟ್ಟು ೬೭ ಮಂದಿ ತೇರ್ಗಡೆ ಹೊಂದಿರುತ್ತಾರೆ. ಬಾಯಿಪಾಠದ ಯುವಕರ ತರಗತಿಯಲ್ಲಿ ೫೧ ಮಂದಿ ಉಮೇದುವಾರರು ಪರೀಕ್ಷೆಗೆ ಕೂತಿದ್ದರು. ಇವರಲ್ಲಿ ೯ ಮಂದಿ ೧ನೇ ಕ್ಲಾಸಿನಲ್ಲೂ, ೧೪ ಮಂದಿ ೨ನೇ ಕ್ಲಾಸಿನಲ್ಲೂ, ೧೧ ಮಂದಿ ೩ನೇ ಕ್ಲಾಸಿನಲ್ಲೂ (ಒಟ್ಟು ೩೪) ತೇರ್ಗಡೆ ಹೊಂದಿರುತ್ತಾರೆ. ಬಾಯಿಪಾಠದ ಬಾಲಕರ ತರಗತಿಯಲ್ಲಿ ೧೬೪ ಮಂದಿ ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ ೨೨ ಮಂದಿ ೧ನೇ ಕ್ಲಾಸ್, ೩೭ ಮಂದಿ ೨ನೇ ಕ್ಲಾಸ್, ೫೦ ಮಂದಿ ೩ನೇ ಕ್ಲಾಸಿನಲ್ಲಿಯೂ (ಒಟ್ಟು ೧೦೯) ತೇರ್ಗಡೆಯಾದರು. ಇಷ್ಟು ಮಂದಿ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವುದಕ್ಕಾಗಿ ಸಂತೋಷಿಸುತ್ತಾ ನಾವು ಈ ಮೂಲಕ ನಮ್ಮ ಸಂತೋಷವನ್ನು ಪ್ರಕಟಿಸುತ್ತೇವೆ.

∴

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರಾಗಿರುವ ಮ|| ಹಾಮ್ಯಾರಾಜ ಬರ್ಜಂಗಿರಾ(?) ಬಾಬ್ ೩೦ ವರುಷ ಈ ತಿಂಗಳ ಒಪ್ಪೈರಿಗೆ ಕೆಲಸ ಬಿಟ್ಟು ವಿಶ್ರಾಮಪಡೆಯುವರಾಗಿದ್ದಾರೆ. ಇವರು ೧೮೭೩ನೇ ಇಸವಿ ಜೂನ್ ತಾ ೭ ರಲ್ಲಿ ಬಿ. ಏ. ಪದವಿ ಸಂಪಾದಿಸಿ, ೧೮೭೩ನೇ ಇಸವಿ ನವೆಂಬರ್ ತಿಂಗಳಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಸೈನ್ಸ್ ಪ್ರೊಫೆಸರ್ ಕೆಲಸಕ್ಕೆ ನೇಮಕವಾದರು. ತರುವಾಯ ಮ|| ಕಾಳಿಂದಿ ಸಾಹೇಬರೂ ಮ|| ಬೆನರ್ಜೀ ಸಾಹೇಬರೂ ಕೆಲಸದಿಂದ ಹೊರಟುಹೋದ ಮೇಲೆ ೧೮೮೪ನೇ ಜೂನ್ ತಾ. ೩ ರಲ್ಲಿ ಇವರು ಪ್ರಿನ್ಸಿಪಾಲರಾಗಿ ಮೈಸೂರು ಮಹಾರಾಜರವರ ಕಾಲೇಜಿನ ಪದವಿಗೆ ನೇಮಕರಾಗಿ ೧೪ ವರುಷ ಆ ಕೆಲಸವನ್ನು ಬಹು ಪ್ರಶಸ್ತಿಯಿಂದ ನಡೆಸುತ್ತಾ ಬಂದರು. ಲೇಟ್ ಸರ್ ಶೇಷಾದ್ರಿ ಅಯ್ಯರವರು ಇವರ ಸಾಮರ್ಥ್ಯವನ್ನು ನೋಡಿ ಮೆಚ್ಚಿಕೊಂಡು ೧೮೯೮ನೇ ಇಸವಿ ಏಪ್ರಿಲ್ ತಾ ೨೭ ರಲ್ಲಿ ಇವರನ್ನು ಈ ಸಂಸ್ಥಾನದ ವಿದ್ಯಾ ಇಲಾಖೆಯ ಸೆಕ್ರೆಟರಿಯಾಗಿ ನೇಮಕ ಮಾಡಿದರು. ಬೇಜಿಂವರರ ಗೌಟಿನ್ನಲ್ಲಿ ಆ ಕೆಲಸವು ರದ್ದಾದ ಮೇಲೆ ಮ|| ಹಾಮ್ಯಾ ಯವರನ್ನು ೧೯೦೧ನೇ ಇಸವಿ ಜೂನ್ ತಾ ೨೭ ರಿಂದ ಇನ್ಸ್‌ಪೆಕ್ಟರ್ ಜನರಲ್ಲರನ್ನಾಗಿ ಮಾಡಿದರು. ಇವರು ಕಳೆದ ಸುಮಾರು ಇಪ್ಪತ್ತು ವರುಷಗಳಿಂದಲೂ ಈ ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ ಮುಖ್ಯ ಅಧಿಕಾರಿಯಾಗಿದ್ದು ಕೊಂಡು, ವಿದ್ಯಾಭಿವೃದ್ಧಿಗೆ ಅನೇಕಾನೇಕ ಹೊಸ ಏರ್ಪಾಡುಗಳನ್ನು ಮಾಡಿರುತ್ತಾರೆ. ಸಾವಿರಾರು ಸ್ಕೂಲುಗಳು ಇವರ ಕಾಲದಲ್ಲಿ ಪ್ರಾರಂಭವಾದವು. ದೊಡ್ಡ ಗ್ರಾಮಗಳಲ್ಲಿಯೂ ಜನರು ತಮ್ಮ ಮಕ್ಕಳಿಗೆ ಈಗಿನ ಕಾಲದ ಇಂಗ್ಲಿಷ್ ವಿದ್ಯೆಯನ್ನು ಕಲಿಸುವುದಕ್ಕೆ ಅನುಕೂಲಿಸುವಂತೆ ಎ. ವಿ. ಸ್ಕೂಲುಗಳನ್ನು ಅನೇಕವಾಗಿ ಸ್ಥಾಪಿಸಿಕೊಟ್ಟು ಇರುತ್ತಾರೆ. ಹೊಸ ತರಹ ನಾನಾ ವಿಧ ಶಿಕ್ಷಣಾ ಕ್ರಮಗಳೂ ನಾರ್ಮಲ್ ಸ್ಕೂಲುಗಳೂ ಇವರ ಕಾಲದಲ್ಲಿ ಏರ್ಪಾಟಾದವು. ಉಪಾಧ್ಯಾಯರುಗಳ ಸಂಬಳಗಳನ್ನು ಏರಿಸು ನೀಳ ಕ್ರಮಪಡಿಸಿ ಒಡ್ಡಿ ಮಾಡಿರುತ್ತಾರೆ. ಜಾಲ ಪಾಠಗಳನ್ನು ಕಲಿಯುವ ಮಕ್ಕಳಿಗೆ ಸಂಸ್ಥಾನಾಮೆ ಸ್ಕೂಲ್ ಫೀಜು ಪಡಾ ಇದಿದ್ದೂ ಇವರ ಕಾಲದಿಂದಲೇ. ಅನೇಕಾನೇಕ ಬಾಲಕರು ಸಾಹುಕಾರಿ ವಿದ್ಯೆಗಳನ್ನು ಕಲಿಯುವರು ಹೊಸ ಹೊಸ ಪಾಠಶಾಲೆಗಳನ್ನು ಇವರೇ ಏರ್ಪಾಡು ಮಾಡಿದರು. ಅಂತು ಇವರ ಅಧಿಕಾರ ಕಾಲದಲ್ಲಿ ಈ ಸಂಸ್ಥಾನದ ವಿದ್ಯಾಭಿವೃದ್ಧಿಯು ಸ್ಥಿರಪಟ್ಟ ದಿನಕ್ರಮದಲ್ಲಿ ಹರಡಿಕೊಂಡು ಬಹಳ ಪ್ರಚುರಕ್ಕೆ ಬಂದಿರುತ್ತದೆ. ಮೈಸೂರು ಸಂಸ್ಥಾನದ ಇತಿಹಾಸದಲ್ಲಿಯೇ ಮ|| ಹಾಮ್ಯಾ ಸಾಹೇಬರ ಹೆಸರು ಪ್ರಾಮುಖ್ಯವಾಗಿ ನಿಲೆಗೊಂಡೀತೆಂದು ನಂಬುತ್ತೇವೆ. ಮೊನ್ನೆ ಮಂಗಳವಾರ ರಾತ್ರಿ ಜಗನ್ಮೋಹನ ಮಹಲಿನಲ್ಲಿ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಮ|| ಹಾಮ್ಯಾ ರವರಿಗೆ "ಮುಶೀರ್-ಉಲ್ ತಾಲೀಂ" (ಅಂದರೆ, ವಿದ್ಯಾ ಸಲಹೆಗಾರರು) ಎಂಬ ಪ್ರಶಸ್ತವಾದ ಬಿರುದನ್ನೂ, ಅದಕ್ಕೆ ತಕ್ಕ ಕಂಠಮಾಲೆಯನ್ನೂ ಕೊಟ್ಟು ಸನ್ಮಾನಿಸಿ ವಿದ್ಯಾ ಇಲಾಖೆಯ ಅವರ ಸರ್ವೀಸಿನ ವಿಷಯದಲ್ಲಿ ತಮಗುಂಟಾದ ತೃಪ್ತಿ ಮೆಚ್ಚಿಕೆ ಸಂತೋಷಾತಿಶಯಗಳನ್ನು ಪ್ರಕಾಶಪಡಿಸಿದರು.

ಪ್ರತಿನಿಧಿ

ನಮ್ಮ ಮೈಸೂರು ಸೀಮೆಯ ಪ್ರಜಾಪ್ರತಿನಿಧಿ ಸಭೆಯು ಈ ವಾರದಲ್ಲಿ ಆರಂಭವಾಗಿದೆಯಷ್ಟೆ. ಈ ಸಭೆಗೆ ಮೈಸೂರು ಸೀಮೆಯ ಹಲವು ಡಿಸ್ಟ್ರಿಕ್ಟು ಗಳಿಂದಲೂ ತಾಲ್ಲೂಕುಗಳಿಂದಲೂ ಪ್ರತಿನಿಧಿಗಳು ಮೆಂಬರುಗಳಾಗಿ ರಾಜಧಾನಿಗೆ ಬಂದಿರುವರು. ಮೆಂಬರುಗಳು ಇಂತವರೇ. ಇವರು ಈ ಸಭೆಯಲ್ಲಿ ಬಂದು ಮಾಡಬೇಕಾದ ಕರ್ತವ್ಯವೇನು ?

ಸರ್ಕಾರದವರು ಮುಖ್ಯವಾಗಿ ಎರಡು ಉದ್ದೇಶಗಳಿಂದ ಈ ಸಭೆಯನ್ನು ಸ್ಥಾಪಿಸಿ ಅದಕ್ಕೆ ಮೆಂಬರುಗಳನ್ನು ಬರಮಾಡಿಕೊಳ್ಳುವರು. ಮೊದಲನೆ ಉದ್ದೇಶವೇನೆಂದರೆ ನಮ್ಮ ಸೀಮೆಯ ರಾಜ್ಯಾಡಳಿತವು ಯಾವ ಯಾವ ಕಟ್ಟಳೆ, ಕ್ರಮ, ನಿಬಂಧನೆಗಳನುಸಾರವಾಗಿ ನಡೆಸಲ್ಪಡುತ್ತಲಿದೆಯೋ ಅದನ್ನು ಪ್ರಜೆಗಳೆಲ್ಲರೂ ತಿಳಿದುಕೊಳ್ಳಬೇಕು ಎಂಬುದೇ. ಪೂರ್ವಕಾಲದ ಈ ನವನಾಗರಿಕ ಕಾಲದಲ್ಲಿ ಅರಸುಗಳೂ ಅಧಿಕಾರಿಗಳೂ ನಿರಂಕುಶ ಪ್ರಭುತ್ವವನ್ನು ಮಾಡುತ್ತಲಿಲ್ಲ. ಧೊರೆ ಯಾದರೂ ಅಧಿಕಾರಿಗಳಾದರೂ ತಮ್ಮ ಇಷ್ಟದಂತೆ ಶಿಕ್ಷೆ ರಕ್ಷಣೆಗಳನ್ನು ಮಾಡಿ ನ್ಯಾಯ ನೀತಿಗಳನ್ನು ಏರ್ಪಡಿಸಿ ಮನಸ್ಸಿಗೆ ಬಂದಂತೆ ಕಾಣಿಕೆಗಳನ್ನು ಎತ್ತುತ್ತಾ ಇಲ್ಲ. ಇದು ಪೂರ್ವದಲ್ಲಿ ಹಿಂದೂ ದೇಶದ ಬೇರೆಬೇರೆ ಭಾಗಗಳನ್ನಾಳುತ್ತಿದ್ದ ಪಾಳೆಯಗಾರರ ಕಾಲದಲ್ಲಿಯೂ ಕ್ರಮ ಹೀನವಾದ ತುರುಕರ ಮತ್ತು ಮರಾಟೆಯವರ ಕಾಲದಲ್ಲಿಯೂ ನಡೆಯುತ್ತಿತ್ತು. ಆ ಕಾಲದಲ್ಲಿ ಧೊರೆಯ ಅಥವಾ ಅಧಿಕಾರಿಯ ಇಚ್ಛೆಯೇ ಕಟ್ಟಳೆಯೂ ಕ್ರಮವೂ ಆಗಿತ್ತು. ಈಗ ಆದರೋ ಅದೆಲ್ಲಾ ಬದಲಾಗಿ ನಿಬಂಧನೆಯಾದ ಕಟ್ಟಳೆ ಕ್ರಮಗಳು ಏರ್ಪಾಡಾಗಿರುವವು. ಅರಸನೂ ಅಧಿಕಾರಿಗಳೂ ಆ ಕ್ರಮ ಕಟ್ಟಳೆಗಳಂತೆ ರಾಜ್ಯಾಡಳಿತವನ್ನು ನಡೆಸಬೇಕೇ ಹೊರತು ತಮ್ಮಿಷ್ಟದಂತೆ ಅವುಗಳನ್ನು ಬದಲಾಯಿಸುವುದಕ್ಕಾಗದು. ಅರಸನೂ ಅಧಿಕಾರಿಗಳೂ ಮಾತ್ರವಲ್ಲ, ಪ್ರಜೆಗಳು ಸಹ ತಾವು ಯಾವ ಕಾಯಿದೆ ಕಟ್ಟಳೆಗಳ ಪ್ರಕಾರ ಆಳಲ್ಪಡುತ್ತಲಿದ್ದೇವೆ, ಯಾವ ಯಾವ ಕಟ್ಟಳೆಗಳಿಗೆ ತಾವು ವಿಧೇಯರಾಗಿರಬೇಕೆಂದು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಯಾವ ವಿಷಯದಲ್ಲೂ ಮುಚ್ಚುಮರೆಯಿಲ್ಲ. ಎಲ್ಲಾ ಪ್ರಜೆಗಳೂ ತಮ್ಮ ದೇಶದ ಕಟ್ಟಳೆ ಕಾನೂನುಗಳನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇದಲ್ಲದೆ ತಾವು ಕೊಡುವ ಕಂದಾಯ ತೆರಿಗೆಗಳು ಹ್ಯಾಗೆ ಖರ್ಚಾಗುತ್ತವೆ. ಯಾವ ಯಾವ ಹೊಸ ಏರ್ಪಾಡುಗಳನ್ನು ನಮ್ಮ ಸರ್ಕಾರದವರು ಮಾಡುತ್ತಾರೆ ! ಈ ಏರ್ಪಾಡುಗಳು ಪ್ರಜೆಗಳ ಸೌಖ್ಯಕ್ಕೆ ಎಷ್ಟು ವಿಧದ ಕಾರಣಗಳಾಗಿವೆಯೋ ಎಂದು ಎಲ್ಲರೂ ತಿಳಿದು ಚರ್ಚಿಸಿ ನಿಶ್ಚಯಿಸಬೇಕಾಗಿದೆ.

ಅವರ ಮಹಾರಾಜರು ಎಲ್ಲಾ ಪ್ರಜೆಗಳನ್ನೂ ಕರೆಸಿ ಅವರಿಗೆ ತಮ್ಮ ಹುಕುಮುಗಳನ್ನು ಮುದ್ದಾಗಿ ಹೇಳಿ ಕಳಿಸುವುದು ಅಸಾಧ್ಯವಾಗಿದೆ. ಆದ್ದರಿಂದ ಅವರು ಪ್ರಜೆಗಳ ಮುಖಂಡರಲ್ಲಿ ಕೆಲವರನ್ನು ಪ್ರತಿ ಡಿಸ್ಟ್ರಿಕ್ಟಿನಿಂದಲೂ ತಾಲ್ಲೂಕುಗಳಿಂದಲೂ ಕರಸಿ ಅವರ ಮುಂದೆ ತಮ್ಮ ಕಾಯಿದೆ ಕಾನೂನುಗಳನ್ನು ಓದಿ ತಿಳಿಯ ಪಡಿಸುವರು. ಈ ಮುಖಂಡರಿಗೆ ರಾಜ್ಯಾಡಳಿತದ ವಿಷಯವು ಗೊತ್ತಾಗಿ ಅವರ ಮುಖಾಂತರ ಅವರವರ ತಾಲ್ಲೂಕು ಗ್ರಾಮಗಳಲ್ಲಿರುವ ಪ್ರಜೆಗಳಿಗೂ ಕ್ರಮೇಣ ನಮ್ಮ ರಾಜ್ಯಾಡಳಿತದ ವಿಧಾನವು ಗೊತ್ತಾಗಬೇಕೆಂಬುವದೇ ಅವರ ಒಂದು ಮುಖ್ಯೋದ್ದೇಶ.

ಇಹ ಲೋಕದ ಆಡಳಿತವು ಹೀಗೆ ಪ್ರತಿನಿಧಿಗಳಿಂದ ನಡೆಸಲ್ಪಡುತ್ತಿರುವಂತೆ ಪಾರಮಾರ್ಥಿಕವಾದ ದೇವರ ಆಡಳಿತವೂ ಸಹ ಪ್ರತಿನಿಧಿಗಳ ಮುಖಾಂತರವೇ ನಡೆಸಲ್ಪಡುತ್ತಲಿದೆ. ದೇವರು ಅಗೋಚರನಾಗಿದ್ದಾಗ್ಗ್ಯೂ ಈ ಲೋಕದಲ್ಲಿ ಆದಿಯಿಂದಲೂ ಆತನ ಸನಿಹವರ್ತಿಗಳಾಗಿ ಜ್ಞಾನ ವೃದ್ಧಿಯಿಂದ ಆತನನ್ನು ನೋಡುತ್ತ ಆತನ ಚಿತ್ತ, ಆಜ್ಞೆಗಳೇನೆಂದು ತಿಳಿಯುತ್ತಿದ್ದವರು ಸದಾಕಾಲದಲ್ಲಿಯೂ ಇದ್ದೇ ಇದ್ದರು. ದೇವರು ಎಂಥವನು ? ಆತನ ಗುಣಲಕ್ಷಣಗಳು ಯಾವವು ? ಆತನಿಗೂ ಮನುಷ್ಯರಿಗೂ ಸಂಬಂಧವೇನು ? ನಾವು ಹ್ಯಾಗೆ ನಡೆಯಬೇಕೆಂತ ಆತನು ಬಯಸುವನು ಎಂಬ ಇವೇ ಮೊದಲಾದ ಪ್ರಶ್ನೆಗಳನ್ನು ಕುರಿತು ಈ ಮಹನೀಯರು ದೀರ್ಘವಾಗಿ ಯೋಚಿಸಿ ದೇವರನ್ನು ಪ್ರಾರ್ಥಿಸಿ ತಿಳಿದುಕೊಂಡರು. ಅವರು ತಿಳಿದು ಅಷ್ಟಕ್ಕೆ ಸಂತೋಷ ಪಡದೆ ಅದನ್ನು ತಮ್ಮ ಜೊತೆಸ್ನೇಹಿತರಿಗೂ ತಿಳಿಸಿದರು. ಉಪ್ಪನಿಷತ್ತುಗಳೇ ಮೊದಲಾದ ಗ್ರಂಥಗಳಲ್ಲಿ ಜನಗಳು ದೇವರನ್ನು ಅರಿಯಬೇಕಾದ ವಿಧಾನವನ್ನು ಸೂಚಿಸುತ್ತಾ ಸಾಮಾನ್ಯ ಜನರು ವ್ಯರ್ಥ ವಾದಗಳನ್ನು ನಂಬಿಕೊಂಡು ದೇವರನ್ನು ಮೆಚ್ಚಿಸುವ ಹಾದಿಗಳಾಗಿರುವವೆಂದು ಬುದ್ಧನು ಸಾರಿದನು. ನಾಸ್ತಿಕವಾದವು ಪ್ರಬಲವಾಗಿ ಜನಗಳು ದೇವರನ್ನು ಮರೆಯುವ ಅಪಾಯದಲ್ಲಿದ್ದಾಗ ಶ್ರೀಶಂಕರಾಚಾರ್ಯರು ದೇವಭಕ್ತಿಯನ್ನು ಸ್ಥಾಪಿಸಿದರು. ನೋಡಿ ಮಹನೀಯರು ದೇವರ ಸಂಗಡ ಹಗಲಿರುಳು ಇದ್ದು ನ್ಯಾಯವುಳ್ಳ ಮಾರ್ಗವನ್ನು ಪಡೆದರು. ಈಚೆಗೆ ನಾನಕ್, ಕಬೀರದಾಸ, ಕಬೀರದಾಸ, ಇತ್ಯಾದಿ ಭಕ್ತರು ದೇವರ ಮಾರ್ಗವನ್ನು ಜನಗಳಿಗೆ ತೋರಿಸುವವರಾಗಿದ್ದರು.

ಆದರೆ ಇವರೆಲ್ಲರಿಗಿಂತ ಅತ್ಯಂತ ಶ್ರೇಷ್ಠನಾದ ದೇವರ ಪ್ರತಿನಿಧಿಯು ಇದ್ದಾನಷ್ಟೆ. ಇದಾನ ಆತನ್ಯಾರೆಂದರೆ ಯೇಸು ಕ್ರಿಸ್ತನೇ. ನಾನೇ ದೇವರ ಪ್ರತಿನಿಧಿ ನನ್ನಷ್ಟಕ್ಕೆ ನಾನೇ ಏನುಮಾಡುವುದಿಲ್ಲ. ನನ್ನನ್ನು ಕಳುಹಿಸಿ ಕೊಟ್ಟಿರುವ ತಂದೆಯು ತಾನೇ ನನ್ನ ಮುಖಾಂತರ ನುಡಿಯುತ್ತಾನೆ. ಆತನು ಕಳುಹಿಸಿಕೊಟ್ಟವನಾದ ನನ್ನನ್ನು ನಂಬುವದೇ ದೇವರು ಮೆಚ್ಚಿಕೊಂಡ ಕೆಲಸವಾಗಿದೆ. ನನ್ನನ್ನು ನಂಬುವ ಪ್ರತಿಯೊಬ್ಬನಿಗೆ ನಿತ್ಯಜೀವವು ಸಿಕ್ಕುತ್ತದೆ. ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮುಖಾಂತರವಲ್ಲದೆ ಯಾರೂ ತಂದೆಯಾದ ದೇವರನ್ನು ಸೇರುವದಕ್ಕಾಗುವದಿಲ್ಲ. ನಾನೇ ಲೋಕದ ಬೆಳಕು. ನನ್ನನ್ನು ಹಿಂಬಾಲಿಸುವವನು ಕತ್ತಲಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದುವನು ಎಂದು ಆತನು ಹೇಳಿದನು. ಪುನಃ ಆತನು ಸತ್ಯಸ್ವರೂಪನಾದ ದೇವರು ನನ್ನನ್ನು ಕಳುಹಿಸಿಕೊಟ್ಟಿದ್ದಾನೆ. ಆತನಿಂದ ನಾನು ಕೇಳಿದವುಗಳನ್ನೇ ಲೋಕಕ್ಕೆ ಸಾರಿ ಹೇಳುತ್ತೇನೆ ಎಂದು ಬೋಧಿಸಿದನು. ಈತನಲ್ಲವೆ ದೇವರ ಪ್ರತಿನಿಧಿಗಳಲ್ಲಿ ಮುಖಂಡನು.

ಮೈಸೂರು ಗೆಜೆಟ್ ಸಂಗ್ರಹ.

ಹರಿಹರ ಗ್ರಾಮದ ಮ|| ವೆಂಕಟಗಿರಿಯಪ್ಪನವರನ್ನು ದಾವಣಗೆರೆ ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿದೆ.

೭ ಕೆಮಿಸ್ಟ್ ಮ|| ಬಿ. ವೆಂಕಟರಾಯರಿಗೆ ಅಕ್ಟೋಬರ್ ತಾ ೬ ರಿಂದ ಇಪ್ಪತ್ತೆಂಟು ದಿನಗಳ ಪ್ರಿವಿಲೇಜ್ ರಜವನ್ನು ಒಂದು ವರುಷದ ಫರ್ಲೋ ರಜವನ್ನು ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಮಿಡಾಯಿ ಆಫೀಸರ್ ಮ|| ಎಸ್. ವೆಂಕಟರಂಗಯ್ಯನವರು ಸೆಪ್ಟಂಬರ್ ತಾ ೨೭ ರಲ್ಲಿ ಕೆಲಸದ ಭಾರವನ್ನು ವಹಿಸಿಕೊಂಡ ದಿನದಿಂದ ಅವರು ಉಪಯೋಗಿಸಿಕೊಳ್ಳದಿದ್ದ ರಜವನ್ನು ರದ್ದು ಮಾಡಿದೆ.

ವಾಕ್ಸಿನೇಷನ್ ೭ ಇನ್ಸ್‌ಪೆಕ್ಟರ್ ಮ|| ಜಿ. ಕೃಷ್ಣಮೂರ್ತಿಯನ್ನು ಯವರನ್ನು ಹುಣಸೂರಿನಿಂದ ಶಿವಮೊಗ್ಗ ಜಿಲ್ಲೆಯಿಂದ ಮೈಸೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿದೆ.

ಮ|| ವಿ. ಆರ್. ಹಂಜಾ ಹುಸೇನ್‌ರವರು ಮ|| ಆರ್. ಬಿ. ಪ್ರಮರ್‌ಯವರಿಂದ ಶಿವಮೊಗ್ಗ ಡಿವಿಜನ್ ಸೆರ್ವೆಸ್ ಜಡ್ಜರ ಕೋರ್ಟಿನ ಭಾರವನ್ನು ಅಕ್ಟೋಬರ್ ತಾ ೪ ರಲ್ಲಿ ವಹಿಸಿಕೊಂಡರು.

ಫಾರೆಸ್ಟ್ ಮತ್ತು ಪಬ್ಲಿಕ್ ವರ್ಕ್ಸ್ ಸರ್ಕಲ್ಲುಗಳ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳಿಂದ ನೌಕರಿಗಳನ್ನು ವಜಾ ಮಾಡುತ್ತ ಇಲಾಖೆಗಳ ಅಧಿಕಾರಿಗಳೇ ಮುಂತಾದವರು ಇನ್ನು ಮುಂದೆ ಚೀಫ್ ಇಂಜನಿಯರವರಿಗೆ ಸೀದಾ ಕಾಗದ ಪತ್ರಗಳನ್ನು ಬರೆಯತಕ್ಕದ್ದು.

ಟ್ರಾವೆಲ್ ಕನ್ಸರ್ವೇಟರಿ ಡಿವಿಜನ್ ೭|| ಇಂಜನಿಯರ್ ಮ|| ಎಂ. ಎ. ಅನಂದಾಳ್ವಾರ್‌ಯವರಿಗೆ ಆಗಸ್ಟ್ ತಾ ೨೪ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಮ|| ವಿ. ಗೋಪಾಲರಾಯರಿಗೆ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಮದ್ದಗಿರಿ ತಾಲ್ಲೂಕ್ ಅಕ್ಟಿಂಗ್ ಅಮಲ್ದಾರ್ ಮ|| ಎಚ್. ಬಸವರಾಜೇ ಅರಸಿನವರಿಗೆ ಅಕ್ಟೋಬರ್ ತಾ ೮ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮದ್ದಗಿರಿಯ ಸಬ್ ರೆಜಿಸ್ಟ್ರಾರ್ ಇ. ಎಸ್. ವೆಂಕಟರಮಣಯ್ಯನವರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ವನಗಿರಿ ತಾಲ್ಲೂಕ್ ಅಕ್ಟಿಂಗ್ ಅಮಲ್ದಾರ್ ಮ|| ಎಸ್. ಗೋಪಾಲಕೃಷ್ಣಯ್ಯಂಗಾರ್ಯರಿಗೆ ಅಕ್ಟೋಬರ್ ತಾ ೨೩ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಬಿ. ನಾರಾಯಣರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸತಕ್ಕದ್ದು.

ಸೊರಬ್ ತಾಲ್ಲೂಕಿನ ಅಕ್ಟಿಂಗ್ ಅಮಲ್ದಾರ್ ಮ|| ಹ. ಮುರುಡಪ್ಪನವರು ಉಪಯೋಗಿಸಿಕೊಳ್ಳದೆ ಇರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ನೆನ್ನೆ ಮಧ್ಯಾಹ್ನ ೧೨ ಗಂಟೆಗೆ ಮೈಸೂರು ಪಟ್ಟಣದ ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಮಂದಿರದಲ್ಲಿ ೨೬ನೆಯ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಬ್ರಿಟಿಷ್ ರೆಸಿಡೆಂಟರೂ, ಯೂರೋಪಿಯನ್ ಸದಸ್ಯರೂ, ಸರ್ಕಾರಿ ಅಧಿಕಾರಿಗಳೂ, ಸುಮಾರು ೧೩೦ ಪ್ರಜಾಪ್ರತಿನಿಧಿಗಳೂ, ಇತರ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು. ೧೨ ಗಂಟೆಗೆ ಸರಿಯಾಗಿ ದಿವಾನ್ ಮ|| ಟಿ. ಆನಂದರಾಯರವರು ಎದ್ದು ತಮ್ಮ ಅಡ್ರೆಸ್ಸನ್ನು ಓದಿ ಹೇಳಿದರು. ಈ ಅಡ್ರೆಸ್ಸಿನಲ್ಲಿ ಕಂಡುಬರುವ ಮುಖ್ಯ ಭಾಗಗಳನ್ನು ಎತ್ತಿ ಕೆಳಗೆ ಪ್ರಕಟಿಸುತ್ತೇವೆ.

ಸಭಿಕರೇ,

ಹಿಂದಿನ ವರ್ಷ ನಡೆಸಿದ ರಾಜ್ಯಾಡಳಿತವನ್ನೂ ಈ ವರ್ಷ ನಡೆಸಬೇಕೆಂದಿರುವ ಆಲೋಚನವನ್ನೂ ಈಗ ಸಂಕ್ಷೇಪವಾಗಿ ತಮ್ಮಗಳಿಗೆ ವಿವರಿಸುವ ಗೌರವವನ್ನು ಶ್ರೀಮನ್ಮಹಾರಾಜಾ ಸಾಹೆಬ್ ಬಹದ್ದೂರವರು ನಮಗೆ ದಯಪಾಲಿಸಿರುತ್ತಾರೆ. ಈ ದಿವಸದ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚಿತವಾಗಿ, ಈ ವರ್ಷ ಮಳೆಗಳು ಚೆನ್ನಾಗಿ ನಡೆಸಿ ಸುಭಿಕ್ಷ ಉಂಟಾಗಿರುವುದಕ್ಕಾಗಿ ನಮಗೆಲ್ಲಾ ನಾವು ಅಭಿನಂದಿಸಬೇಕಾಗಿದೆ. ಹೋದ ಸಂವತ್ಸರದ ದುರ್ಭಿಕ್ಷವು ಪ್ರಬಲಿಸಿ ತೀವ್ರವಾದ ಕ್ಷಾಮವು ಪ್ರಾಪ್ತವಾದೀತೋ ಏನೋ ಎಂಬದಾಗಿ ಕೆಲವು ಕಾಲ ತುಂಬಾ ಭಯವಾಗಿತ್ತು. ಈಚೆಗೆ ದೈವಾನುಗ್ರಹದಿಂದ ಈ ಭಯವು ತಪ್ಪಿಹೋಗಿ ಶುಭ ಸೂಚನೆಗಳು ತೋರಿಬಂದಿರುವುದರಿಂದ ಇಂಥಾ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರು ನಮ್ಮೆಲ್ಲರನ್ನೂ ರಾಜಧಾನಿಗೆ ಸುಖಾಗಮನ ಬಯಸುತ್ತಾರೆ. ಈ ಪಟ್ಟಣದಲ್ಲಿ ಪ್ಲೇಗು ವ್ಯಾಪಿಸಿದ್ದರೂ ತಾವುಗಳೆಲ್ಲರೂ ಪ್ರಜೆಗಳ ಕ್ಷೇಮ ಚಿಂತನೆಯಲ್ಲಿಯೇ ದೃಷ್ಟಿ ಇಟ್ಟು ಈ ಸಭೆಯಲ್ಲಿ ನಡೆಯಬೇಕಾದ ಕೆಲಸಗಳನ್ನು ನಿರ್ವಹಿಸುವುದಕ್ಕೆ ದಯಮಾಡಿರುವುದು ಶ್ರೀಮನ್ಮಹಾರಾಜರವರಿಗೆ ತುಂಬಾ ಸಂತೋಷಕರವಾಗಿದೆ.

ಬಳಿಕ ದಿವಾನ್‌ರವರು ಕಳೆದ ವರುಷದ ದುರ್ಭಿಕ್ಷ ವಿಚಾರ ಸ್ಥಾನ ಕ್ಷಾಮ ನಿವಾರಣೆಗಾಗಿ ಮಾಡಿದ ಸನ್ನಾಹಗಳನ್ನೂ ವಿವರಿಸಿ, ಕಂದಾಯವನ್ನು ಸೋಡಿ ಬಿಟ್ಟದ್ದು ಮತ್ತು ಹಂಗಾಮಿಯಾಗಿ ಗಲ್ಲಿಸಿರುವ ವಿಷಯವಾಗಿ ಸ್ವಲ್ಪ ದೂರ ಪ್ರಸ್ತಾಪಮಾಡಿ, ಮುಂದೆ ಹೇಳಿದ್ದೇನೆಂದರೆ —

ಒರೀಸಗೆ ಧರ್ಮಸಹಾಯ

ಬಡಜನರಿಗೆ ಸಹಾಯಮಾಡುವ ಉದ್ದೇಶದಿಂದ ಈ ಸಂಸ್ಥಾನದ ಕೆಲವು ಭಾಗಗಳಲ್ಲಿ ಖಾಸಗಿ ದೊಡ್ಡ ಮನುಷ್ಯರು ಧರ್ಮಾರ್ಥವಾಗಿ ಏರ್ಪಾಡುಗಳನ್ನು ಮಾಡಿದ್ದದಕ್ಕಾಗಿ ಅವರುಗಳನ್ನು ತುಂಬಾ ವಂದಿಸಬೇಕಾಗಿದೆ. ಬೆಂಗಳೂರಲ್ಲಿ ಪ್ರಮುಖರಾದ ವರ್ತಕರುಗಳು ಒಂದು ರಿಲೀಫ್ ಕಮಿಟಿಯನ್ನು ಏರ್ಪಡಿಸಿಕೊಂಡು ಚಂದಾ ವಸೂಲ್‌ಮಾಡಿ ರಾಗಿಯನ್ನು ಬಡಜನರಿಗೆ ಪೇಟೆಧಾರಣೆಗಿಂತ ಕಮ್ಮಿಯಾಗಿ ಮಾರಿದರು. ಇದರಿಂದ ಸುಮಾರು 30,000 ಜನರಿಗೆ ಸಹಾಯ ದೊರೆಯಿತೆಂದು ತಿಳಿಯಬಂದಿದೆ. ಇದೇ ರೀತಿಯಲ್ಲಿ ಇತರ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಕಸಬೆಗಳಲ್ಲಿಯೂ ಸಹಾ ತಕ್ಕಮಟ್ಟಿಗೆ ಏರ್ಪಾಡು ನಡೆಯಿತು. ಈ ವಿಷ್ಯಮಾನಗಳನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡುವುದರಲ್ಲಿ, ದುರ್ಭಿಕ್ಷ ನಿವಾರಣೆಗಾಗಿ ಸಾಕಾದಷ್ಟು ಏರ್ಪಾಡುಗಳು ಸಕಾಲದಲ್ಲಿ ಮಾಡಲ್ಪಟ್ಟವೆಂದು ಶ್ರೀಮನ್ ಮಹಾರಾಜ ಸಾಹೇಬ್ ಬಹದ್ದೂರವರ ಅವಗಾಹನೆಗೆ ಬಂದು ಅವರು ಸಂತುಷ್ಟರಾಗಿರುತ್ತಾರೆ.

ದಿವಾನ್‌ರವರು ಸರ್ಕಾರದ ಆದಾಯವನ್ನೂ, ಅಂದಾಜುಪಟ್ಟಿ, ಆಸ್ತಿ ಮತ್ತು ಸಾಲಗಳ ಸಾಮಾನ್ಯ ಸ್ಥಿತಿ, ಖರ್ಚು ಕಡಿಮೆಮಾಡುವ ಕಮಿಟಿಯ ಏರ್ಪಾಡು, ಸರ್ಕಾರಿ ಇನ್ಸೂರೆನ್ಸ್, ಈ ವಿಚಾರಗಳನ್ನು ಪ್ರಸ್ತಾಪಮಾಡಿದ ಮೇಲೆ ಕಾನೂನ್ ಮತ್ತು ನ್ಯಾಯವಿಧಾಯಕ ಸಭೆಯ ವಿಷಯದಲ್ಲಿ ವಿವರವಾಗಿ ಹೀಗೆ ಹೇಳಿದ್ದೇನೆಂದರೆ,—

ಕಾನೂನ್ ವಿಷಯ, ನ್ಯಾಯವಿಧಾಯಕ ಸಭೆ

ಈ ವರ್ಷದಲ್ಲಿ ನ್ಯಾಯವಿಧಾಯಕ ಸಭೆಯು ನಾಲ್ಕು ಸಭಾ ಸೇರಿತ್ತು. 11 ಮಸೂದಾ ಕಾನೂನುಗಳನ್ನು ಸಭೆಯವರು ಪರ್ಯಾಲೋಚಿಸಿದರು. ಕಾನೂನಾಗಿ ಮಂಜೂರಾದ ಮಸೂದೆಗಳೂ ಇಲ್ಲ. ವಿವಾಹನಿರ್ಭಂಧಗಳ ವಸೂಲಿಯೂ, ಗ್ರಾಮನೌಕರಿಗಳ ಸಂಬಳಿಗಳ ಮುಖಾಂತರವೂ, ನಿಕ್ಷೇಪವನ್ನು ಕುರಿತ ಮಸೂದೆಯೂ, ಚೀಫ್ ಕೋರ್ಟ್ ರೆಗ್ಯುಲೇಷನ್ನಿನ ತಿದ್ದುಪಾಟಿನ ಮಸೂದೆ ಈ ಆ

[೮ನೇ ಪುಟವನ್ನು ನೋಡಿ]

ನವರಾತ್ರಿ ಉತ್ಸವಗಳು.

ಇಂಗ್ಲಿಷ್ ದರ್ಬಾರು.

ರೆಸಿಡೆಂಟರು ದಯಮಾಡಿದ್ದು.

ಕಳೆದ ಶನಿವಾರ ಬೆಳಿಗ್ಗೆ ೭ ಗಂಟೆಗೆ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ|| ಎಸ್. ಎಂ. ಫ್ರೇಸರ್‌ಯವರು ಬೆಂಗಳೂರಿಂದ ನವರಾತ್ರಿ ಉತ್ಸವಗಳ ನಿಮಿತ್ತ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ರಾಜಧಾನಿಗೆ ದಯಮಾಡಿದರು. ದಿವಾನ್‌ರೇ ಮೊದಲಾದ ಮುಖ್ಯಾಧಿಕಾರಿಗಳೂ ಮ್ಯುನಿಸಿಪಲ್ ಕೌನ್ಸಿಲರುಗಳೂ ಮೊದಲಾದ ಪ್ರಜಾಮುಖ್ಯರೂ ರೈಲ್ವೆಸ್ಟೇಷನ್‌ನಲ್ಲಿ ಕಾದಿದ್ದು ರೆಸಿಡೆಂಟರಿಗೆ ಸುಸ್ವಾಗತವನ್ನು ಬಯಸಿ ಪುಷ್ಪಮಾಲಿಕೆಯನ್ನು ಒಪ್ಪಿಸಿದರು. ಅವರು ಆದರದಿಂದ ಸ್ವೀಕರಿಸಿ ಅವರನ್ನು ವಂದನೆ ಮಾಡಿ, ಅರಮನೆಯಿಂದ ಹೋಗಿ ಕಾದಿದ್ದ ಖಾಸಾಗಾಡಿಯನ್ನು ಹತ್ತಿ, ರಾಜವೀಧಿಗಳ ಮೂಲಕ ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು. ಅವರ ಸಾರೋಟಿನ ಹಿಂದೆಯೂ ಮುಂದೆಯೂ ಮೈಸೂರ್ ದಳದ ಕುದುರೆ ಸವಾರರು ನೇಮಕವಾಗಿದ್ದರು.

ಆಯುಧಗಜಾಶ್ವಾದಿಗಳ ಪೂಜೆ ಮುಂತಾದ್ದು.

ಅತ್ತಲಾಗಿ ಜಗನ್ಮೋಹನ ಮಹಲ್‌ನಲ್ಲಿ ಶ್ರೀಮನ್ ಮಹಾರಾಜರವರು ಪಟ್ಟದಾನೆ ಕುದುರೆ ಪಟ್ಟದ ಕತ್ತಿ ಮೊದಲಾದವುಗಳನ್ನು ಶಾಸ್ತ್ರವಿಧಿಗನುಸಾರವಾಗಿ ಪುರೋಹಿತರ ಮುಖೇನ ಅರ್ಚನೆ ಮಾಡಿದರು.

ಸಾಯಂಕಾಲ ೬|| ಗಂಟೆಯ ಹೊತ್ತಿಗೆ ಬ್ರಿಟಿಷ್ ರೆಸಿಡೆಂಟರವರು ಶ್ರೇಷ್ಠವಾದ ಉಡುಪನ್ನು ಧರಿಸಿ ಸಂಸ್ಥಾನದ ಮತ್ತು ಅರಮನೆಯ ಬಿರುದುಗಳ ಸಹಿತ ಜಗನ್ಮೋಹನ ಮಹಲನ್ನು ಕುರಿತು ದಯಮಾಡಿದರು. ಕರ್ಜನ್ ಪಾರ್ಕಿನಲ್ಲಿ ಛಲ್ಲು, ಜಲೋ, ಚೋಪದಾರ್, ಓಲೇಕಾರ್, ಛತ್ರಿ, ಚಾಮರ, ದೀವಟಿಗೆಗಳೂ ಕಾದಿದ್ದು ರೆಸಿಡೆಂಟರವರನ್ನು ಮರ್ಯಾದೆಯೊಡನೆ ಗೌರವಾರ್ಥವಾದ ೧೩ ತೋಪುಗಳು ಹಾರುತ್ತಿರುವಲ್ಲಿ ದರ್ಬಾರ್ ಮಂದಿರಕ್ಕೆ ಕರೆದುಕೊಂಡರು. ಹೊರಗಡೆ ಮೆಟ್ಟಿನ ಹತ್ತಿರ ಸರ್ದಾರ್ ಗೋಪಾಲಕೃಷ್ಣೇ ಅರಸಿನವರೂ ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಮೆ|| ಕೆ. ಎಸ್. ಚಂದ್ರಶೇಖರ ಅಯ್ಯರವರೂ ಕಾದಿದ್ದು ಬ್ರಿಟಿಷ್ ರೆಸಿಡೆಂಟರನ್ನೂ ಅಸಿಸ್ಟೆಂಟ್ ರೆಸಿಡೆಂಟರನ್ನೂ ಕಾಣಿಸಿಕೊಂಡು ಸಾರೋಟಿನಿಂದ ಇಳಿಸಿ ಮೆಟ್ಟಿಲು ಹತ್ತಿಸಿ ಕರೆದುಕೊಂಡು ಹೋಗುತ್ತಿರುವಲ್ಲಿ ದಿವಾನ್‌ರಾದ ಮೆ|| ಟಿ. ಆನಂದರಾಯರವರು ಬಂದು ರೆಸಿಡೆಂಟರನ್ನು ಸಂಧಿಸಿ ಕುಶಲಪ್ರಶ್ನೆಗಳನ್ನು ಬೆಳಸಿ ದರ್ಬಾರ್ ಮಂದಿರದೊಳಕ್ಕೆ ಅಂದರೆ ಸಿಂಹಾಸನದ ಹಿಂಭಾಗದಲ್ಲಿರುವ ಡ್ರಾಯಿಂಗ್‌ರೂಮಿಗೆ ಕರೆದುಕೊಂಡು ಹೋದರು. ಆ ಸಮಯಕ್ಕೆ ಸರಿಯಾಗಿ ಒಳಗಿನಿಂದ ದಿವ್ಯಾಭರಣಭೂಷಿತರಾಗಿ ಶ್ರೀಮನ್ ಮಹಾರಾಜರವರು ಪರಿವಾರ ಸಹಿತರಾಗಿ ಬಾಗಿಲಿಗೆ ದಯಮಾಡಿ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಾದ ಬ್ರಿಟಿಷ್ ರೆಸಿಡೆಂಟರನ್ನು ಕಂಡು ಹಸನ್ಮುಖದಿಂದ ಅವರ ಕೈ ಹಿಡಿದು ಕುಶಲಪ್ರಶ್ನೆಯ ಬೆಳಸಿ ಮುಂದರಿದು ಸಿಂಹಾಸನದ ಬಳಿಗೆ ಹೋಗಿ ಪೂಜಾದಿ ವಿಧಿಗಳನ್ನು ನೆರವೇರಿಸಿ ವಾದ್ಯಗಳು ಮೊಳಗುತ್ತಿರುವಲ್ಲಿ ಮೆಟ್ಟಿಲು ಹತ್ತಿ ಸಿಂಹಾಸನದಲ್ಲಿ ಬಿಜಯಂಗೈದರು. ಬ್ರಿಟಿಷ್ ರೆಸಿಡೆಂಟರವರು ತರುವಾಯ ಮುಂದೆ ಬಂದು ಮಹಾರಾಜರವರಿಗೆ ವಂದಿಸಿ ಗದ್ದಿಗೆ ನೋಲ್ಗ [illegible] ಸಿಂಹಾಸನದ [illegible] ಹಾಕಿದ್ದ ದಿವ್ಯವಾದ ಬಂಗಾರದ ಕುರ್ಚಿಯನ್ನು ಅಲಂಕರಿಸಿದರು. ದರ್ಬಾರು ಪ್ರಾರಂಭವಾಯಿತು.

ಈ ವರುಷ ಯೂರೋಪ್ಯನ್ ಅತಿಥಿಗಳು ಅಷ್ಟು ವಿಶೇಷ ಮಂದಿ ದಯಮಾಡಿಲ್ಲ. ಆ ದಿವಸ ಬೆಳಗಿನ ರೈಲಿನಲ್ಲೂ ಮಧ್ಯಾಹ್ನದ ಮೆಯಿಲ್ ಗಾಡಿಯಲ್ಲೂ ಸುಮಾರು ೮೦ ಮಂದಿ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ಬಂದು, ಇಲ್ಲಿನ ಗವರ್ನ್‌ಮೆಂಟ್ ಹೌಸಿನಲ್ಲಿ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ. ಸಾಯಂಕಾಲ ೭ ಗಂಟೆಯೊಳಗಾಗಿ ಈ ಅತಿಥಿಗಳು ಅರಮನೆಯ ಸಾರೋಟುಗಳಲ್ಲಿ ಕುಳಿತು ದರ್ಬಾರ್ ಮಂದಿರಕ್ಕೆ ಉತ್ತರ ಬಾಗಿಲಿನ ಮೂಲಕ ಬಂದು ರೆಸಿಡೆಂಟರ ಆಗಮನವನ್ನು ನಿರೀಕ್ಷಿಸುತ್ತಿದ್ದರು.

ರೆಸಿಡೆಂಟರವರ ಪಕ್ಕದವರೂ ಕೈಸಾಲೆಯಲ್ಲಿ ಕಾದಿದ್ದ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ಒಬ್ಬೊಬ್ಬರಾಗಿ ಸಿಂಹಾಸನದ ಎದುರಿಗೆ ಬಂದು ಮಹಾರಾಜರವರನ್ನು ವಂದಿಸಿ ಸಿಂಹಾಸನದ ಬಲಗಡೆ ಎದುರಾಗಿ ಸಾಲುಕಟ್ಟಿ ಹಾಕಿದ್ದ ಕುರ್ಚಿಗಳ ಮೇಲೆ ಕುಳಿತುಕೊಂಡರು. ಎಡಪಾರ್ಶ್ವದಲ್ಲಿ ಗದ್ದಿಗೆಯ ಮೇಲೆ ಸರ್ದಾರರುಗಳಾದ ಗೋಪಾಲರಾಜೇ ಅರಸಿನವರೂ, ಎ. ರಾಮಸ್ವಾಮಿ ಅರಸಿನವರೂ, ವೀರಸುಬ್ರಹ್ಮಣ್ಯರಾಜೇ ಅರಸಿನವರೂ ನಿಂತು ಇದ್ದರು. ಅವರ ಪಕ್ಕದಲ್ಲಿ ಒಂದು ಸಾಲಿನಲ್ಲಿ ದಿವಾನ್‌ರವರು, ಸರ್ದಾರರುಗಳಾದ ಎಂ. ಕಾಂತರಾಜೇ ಅರಸಿನವರು, ಕರ್ನಲ್ ಜೆ. ದೇಸರಾಜೇ ಅರಸಿನವರು, ಎಂ. ಲಕ್ಷ್ಮೀಕಾಂತರಾಜೇ ಅರಸಿನವರು, ಕೌನ್ಸಿಲರ್ ಮೆ|| ಕೆ. ಪಿ. ಪುಟ್ಟಣ್ಣಸೆಟ್ಟಿಯವರೇ ಮೊದಲಾದವರೂ, ಇತರ ಮುಖ್ಯ ಮುಖಿರಾದ ಅರಸು ಮಕ್ಕಳೂ ಅಧಿಕಾರಿಗಳೂ ಸಾಹುಕಾರರೂ ದೊಡ್ಡ ಮನುಷ್ಯರೂ ಶ್ರೀಮನ್ ಮಹಾರಾಜರವರಿಗೆ ಮುಜರೆ ಮಾಡಿ ಕುಳಿತುಕೊಂಡರು.

ಹೊರಗಡೆ ಕಮ್ಮಣ್ಣಿ ಮುಟ್ಟಿ ಮೈದಾನಿನಲ್ಲಿ ನಾನಾ ಚಮತ್ಕಾರಪೂರ್ವಕವಾದ ಕುಸ್ತಿಗಳೂ, ಆನಂದಯುಕ್ತವಾದ ವಾದ್ಯ ಘೋಷಗಳೂ, ಪರಿಹಾಸಾದಿ ಕಸರತ್ತುಗಳೂ ನಡೆಯುತ್ತಿದ್ದವು. ಸ್ವಲ್ಪ ಹೊತ್ತಾದ ಮೇಲೆ ದಿವಾನ್‌ರವರು ಎದ್ದು ಹೋಗಿ ಶ್ರೀಮನ್ ಮಹಾರಾಜರವರ ಅನುಜ್ಞೆಯನ್ನು ಪಡೆದು ದರ್ಬಾರ್ ಭಕ್ಷಿ ಎಂ. ಎನ್. ಲಿಂಗರಾಜೇ ಅರಸಿನವರ ಸಹಾಯದಿಂದ ಬ್ರಿಟಿಷ್ ರೆಸಿಡೆಂಟರವರಿಗೆ ದಿವ್ಯವಾದ ನಂದೀ ಹಾರವನ್ನು ಹಾಕಿ ಸುವಾಸನಾಯುಕ್ತವಾದ ತುರಾಯಿಯನ್ನು ಒಪ್ಪಿಸಿದ್ದಲ್ಲದೆ ಅತ್ತರ್ ಪಾನ್‌ಗಳನ್ನು ಕೊಟ್ಟರು. ಅತ್ತಲಾಗಿ ಸರ್ದಾರ್ ಗೋಪಾಲಕೃಷ್ಣೇ ಅರಸಿನವರೂ ಸರ್ದಾರ್ ವೀರಸುಬ್ರಹ್ಮಣ್ಯರಾಜೇ ಅರಸಿನವರೂ ಯೂರೋಪ್ಯನ್ ಸರ್ದಾರರಿಗೆಲ್ಲಾ ದಂಡೆಯ ಹಾರಗಳನ್ನು ಹಾಕಿದರು. ಹೊರಗಡೆ ಮೈದಾನಿನಲ್ಲಿ ದಿವ್ಯವೂ ವಿಚಿತ್ರವೂ ಆದ ಬಾಣಬಿರುಸುಗಳಾಗುತ್ತಿದ್ದವು. ವಾದ್ಯಗಾರರು ಇಂಪಾದ ಪದಗಳನ್ನೆತ್ತಿ ನುಡಿಸುತ್ತಿದ್ದರು. ಬ್ರಿಟಿಷ್ ರೆಸಿಡೆಂಟರವರು ತಮ್ಮ ಸ್ಥಾನದಿಂದೆದ್ದು ಶ್ರೀಮನ್ ಮಹಾರಾಜರವರನ್ನು ವಂದಿಸಿ ಅವರಿಂದ ಬೀಳ್ಕೊಂಡು ಹೊರಡಲು ಸನ್ನದ್ಧರಾದಾಗ ಹ್ಯಾಗೋ ಹಾಗೆಯೇ ಮರ್ಯಾದೆಗಳೊಡನೆ ಅಸಿಸ್ಟೆಂಟ್ ರೆಸಿಡೆಂಟರ ಸಮೇತ ಸಾರೋಟನ್ನು ಹತ್ತಿ ಗೌರವಾರ್ಥವಾದ ತೋಪುಗಳಾಗುತ್ತಿರುವಲ್ಲಿ ದರ್ಬಾರ್ ಮಂದಿರದಿಂದ ಸಲ್ತನ್ ಸಮೇತ ಹಿಂತಿರುಗಿ ರೆಸಿಡೆನ್ಸಿ ಬಂಗಲೆಯನ್ನು ಕುರಿತು ತೆರಳಿದರು. ಆ ಬಳಿಕ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ಸಿಂಹಾಸನದ ಎದುರಿಗೆ ಬಂದು ಮಹಾರಾಜರವರನ್ನು ವಂದಿಸಿ ತೆರಳಿದರು. ದೊರೆಸಾನಿಗಳು ವಾಪಸು ಹೋಗುವಲ್ಲಿ ಶ್ರೀಮನ್ ಮಹಾರಾಜರವರು ಸ್ವಹಸ್ತದಿಂದ ಪ್ರತಿ ಒಬ್ಬರಿಗೂ ಒಂದೊಂದು ತುರಾಯಿಯನ್ನು ದಯಪಾಲಿಸಿದರು. ಅಲ್ಲಿಗೆ ಯೂರೋಪ್ಯನ್ ದರ್ಬಾರು ಮುಕ್ತಾಯವಾಯಿತು.

ಅನಂತರ ದೇಶೀಯ ದರ್ಬಾರಿಗಳು ಮುಜರೆ ಮಾಡಿ, ಪಟ್ಟದಾನೆ ಕುದುರೆಗಳು ಮೆರವಣಿಗೆಯಲ್ಲಿ ಬಂದ ಮೇಲೆ ಕುಳಿತುಕೊಂಡರು. ಹೂವಿನ ಹಾರಗಳನ್ನು ಎಲ್ಲರಿಗೂ ಹಾಕಿ ಅಡಿಕೆ ಎಲೆ ಕೊಟ್ಟಮೇಲೆ ದರ್ಬಾರಿಗಳು ಸಾಲುಕಟ್ಟಿ ನಿಂತು ಮುಜರೆ ಮಾಡಿ ತೆರಳಿದರು.

ವಿಜಯದಶಮಿ ಉತ್ಸವವು.

ಮರುದಿನ ಅಂದರೆ ಭಾನುವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಜಗನ್ಮೋಹನ ಮಹಲ್‌ನಲ್ಲಿ ವಿಜಯ ದಶಮಿ ಪ್ರಯುಕ್ತವಾದ ಅರ್ಚನೆ ನಾನಾವಿಧ ವಿಶೇಷ ಕರ್ಮಗಳನ್ನು ಆಚಾರ್ಯರ ಮುಖೇನ ನೆರವೇರಿಸಿ, ದಿವ್ಯವಾದ ಉಡುಪುಗಳನ್ನು ಧರಿಸಿ ಪಟ್ಟದ ಕುದುರೆಯ ಮೇಲೆ ಕುಳಿತು ವಿಜಯ ಯಾತ್ರೆ ಹೊರಟು ಕೆಮ್ಮಣ್ಣು ಮಟ್ಟಿಯ ತನಕ ದಯಮಾಡಿ ಅಲ್ಲಿ ಕುದುರೆಯಿಂದಿಳಿದು ಪಟ್ಟದಾನೆ ಕುದುರೆಗಳನ್ನು ಸಕಲ ಸಲ್ತನ್ ಮೃದಂಗ ವಾದ್ಯ ತಾಳ ಮೇಳಗಳ ಸಮೇತ ಮೆರವಣಿಗೆಯಾಗಿ ಪಟ್ಟಣದ ಹೊರಗಡೆ ಉತ್ತರಾಂತ್ಯಭಾಗದಲ್ಲಿರುವ ಬನ್ನಿಮಂಟಪಕ್ಕೆ ಕಳುಹಿಸಿಕೊಟ್ಟರು. ಈ ಮೆರವಣಿಗೆಯು ನೇತ್ರಾನಂದಕರವಾಗಿತ್ತು. ಸಾವಿರಾರು ಪ್ರಜೆಗಳು ಅದರ ವೈಖರಿಯನ್ನು ನೋಡಿ ಸಂತೋಷಪಟ್ಟರು.

ಅತ್ತಲಾಗಿ ಶ್ರೀಮನ್ ಮಹಾರಾಜರವರು ಮುಖ್ಯರಾದ ಸರ್ದಾರರುಗಳ ಮತ್ತು ದರ್ಬಾರಿಗಳ ಸಮೇತ ಮಹಲಿನಲ್ಲಿ ಕುಳಿತು ಮೈದಾನಿನಲ್ಲಿ ನಡೆದ ಜಟ್ಟಿಕಾಳಗ, ಕರ್ನಾಟಿಕ ಕುಸ್ತಿಗಳನ್ನು ವೀಕ್ಷಿಸಿದರು.

ಸಾಯಂಕಾಲ ೫ ಗಂಟೆಗೆ ಶ್ರೀಮನ್ ಮಹಾರಾಜರವರು ಗೌರವಾರ್ಥವಾದ ತೋಪುಗಳಾಗುತ್ತಿರುವಲ್ಲಿ ವಿಜಯ ಯಾತ್ರೆಯ ನಿಮಿತ್ತವಾಗಿ ಮೆರವಣಿಗೆಯಲ್ಲಿ ದಯಮಾಡಿದರು. ಈ ಮೆರವಣಿಗೆಯು ಅರಮನೆ ಮತ್ತು ಸಂಸ್ಥಾನದ ಬಿರುದು ಸಲ್ತನ್‌ಗಳ ಸಹಿತವಾದದ್ದಾಗಿ ನೋಟಕರಿಗೆ ಮಹದಾನಂದವನ್ನುಂಟುಮಾಡಿತು. ಸುಂದರವಾಗಿ ಅಲಂಕರಿಸಲ್ಪಟ್ಟ ಭಾರೀ ಆನೆಯ ಮೇಲೆ ಬಂಗಾರದ ಅಂಬಾರಿಯೊಳಗೆ ಕಿನ್‌ಖಾಪಿನ ದಿರಸು, ಶಿರಪೇಚು ಸಹಿತವಾದ ಪೇಟಾ [illegible] ಧರಿಸಿ ನವರತ್ನ ಖಚಿತವಾದ ಅಮೂಲ್ಯಾಭರಣಗಳನ್ನು ತೊಟ್ಟು ಶ್ರೀಮನ್ ಮಹಾರಾಜರವರು ಕುಳಿತು ಮೆರವಣಿಗೆ ಹೊರಟರು. ಹಿಂಗಡೆ ಅವರ ಮುಂಭಾಗದಲ್ಲೂ ಅಕ್ಕಪಕ್ಕಗಳಲ್ಲೂ ಸರ್ದಾರರುಗಳೂ ಹುದ್ದೇದಾರರೂ ಕುದುರೆಯ ಮೇಲೆ ಬರುತ್ತಿದ್ದರು. ಸ್ವಲ್ಪ ದೂರದಲ್ಲಿ ಶ್ರೀಮನ್ ಯುವರಾಜರವರು ಶ್ವೇತಚ್ಛತ್ರಿಯನ್ನು ಹಿಡಿಸಿಕೊಂಡು ದಿವ್ಯವಾದ ಕುದುರೆಯ ಮೇಲೆ ಕುಳಿತಿದ್ದರು. ಗಂಡಭೇರುಂಡಗಳೇ ಮುಂತಾದ ಬಿರುದುಗಳೂ, ಜಾಸಾಜಿಲ್ಲೋ ಛಲ್ಲುಗಳೂ, ಛತ್ರ ಚಾಮರಾದಿಗಳೂ ತುರುಫ್ ಸವಾರರೂ, ಅರಮನೆಯ ಮತ್ತು ಕವಿಸಾರ್ ಬಾರ್ ಸಿಪಾಯಿ ಸೈನ್ಯಗಳೂ, ಇಂಪೀರಿಯಲ್ ಮತ್ತು ಲೋಕಲ್ ಸರ್ವಿಸ್ ಸವಾರರ ಸೈನ್ಯಗಳೂ, ದಿವ್ಯವಾದ ಹೌದಾಗಳನ್ನು ಕಟ್ಟಿದ್ದ ಆನೆಗಳೂ ಒಂದೇ ಸಾಲಾಗಿಯೂ ಕ್ರಮದಿಂದಲೂ ಹೋಗುತ್ತಿದ್ದವು. ಮಹಾರಾಜರವರ ಇಂಗ್ಲಿಷ್ ಬ್ಯಾಂಡು, ಅರಮನೆ ಕರ್ನಾಟಕ ಬ್ಯಾಂಡು, ಓಲಗಗಳು ಬೇರೆ ಬೇರೆ ಭಾಗಗಳಲ್ಲಿ ಇಂಪಾದ ವಾದ್ಯಗಳನ್ನು ನುಡಿಸುತ್ತಿದ್ದವು. ಮೆರವಣಿಗೆಯ ಹಿಂಭಾಗದಲ್ಲಿ ದಿವಾನ್‌ರವರು, ಕೌನ್ಸಿಲರುಗಳು, ಚೀಫ್ ಕೋರ್ಟ್ ಜಡ್ಜಿಗಳು, ರೆವಿನ್ಯೂ ಕಮಿಷನರವರು, ಇಲಾಖೆಗಳ ಮುಖ್ಯಾಧಿಕಾರಿಗಳು, ಡೆಪ್ಯುಟಿ ಕಮಿಷನರುಗಳು, ಗವರ್ನ್‌ಮೆಂಟ್ ಸೆಕ್ರೆಟರಿಗಳು, ಮುಖ್ಯರಾದ ಪೆನ್ಷನ್ ಅಧಿಕಾರಿಗಳು, ರಾಜಬಂಧುಗಳು, ಮೊದಲಾದವರೆಲ್ಲಾ ಅರಮನೆಯ ಸಾರೋಟುಗಳಲ್ಲಿ ಕುಳಿತು ಹೋಗುತ್ತಿದ್ದರು.

ಮೆರವಣಿಗೆಯು ಜಗನ್ಮೋಹನ ಬಂಗಲೆಯಿಂದ ಹೊರಟು ಲಕ್ಷ್ಮೀವಿಲಾಸ್ ರೋಡಿನಲ್ಲಿ ಬಂದು ಕರ್ಜನ್ ಉದ್ಯಾನವನದ ದ್ವಾರವನ್ನು ಪ್ರವೇಶಿಸಿ ವಿಕ್ಟರ್ ರಸ್ತೆಯ ಮೇಲೆ ಹಾದು ದೊಡ್ಡ ಪೇಟೆಯಲ್ಲಿ ಉದ್ದಕ್ಕೂ ಹೋಗಿ ಪಾಂಡವಪುರದ ಬಾಗಿಲನ್ನು ದಾಟಿ ಬೆಂಗಳೂರು ರಸ್ತೆಯ ಮೇಲೆ ಹೊರಟು, ಒಳಗೆರೆರೆ ಒಂದು ಪಾರ್ಶ್ವದಲ್ಲಿರುವ ಬನ್ನಿಮಂಟಪದ ಬಂಗಲೆಯನ್ನು ಕಲಿಪುವಾಗ್ಗೆ ಸರಿಸುಮಾರು ೭ ಘಂಟೆಯಾಯಿತು. ರಸ್ತೆಯ ಉದ್ದಕ್ಕೂ ಉಭಯ ಪಾರ್ಶ್ವಗಳಲ್ಲೂ ಬಾವುಟ ತೋರಣಾದಿಗಳನ್ನು ಕಟ್ಟಿ, ಅಲ್ಲಲ್ಲಿ ಅಂಕಿತ ಸಹಿತವಾದ ಕಮಾನುಗಳನ್ನೂ ಚಪ್ಪರಗಳನ್ನೂ ಹಾಕಿ ಕಳಕಳಿಸುವಂತೆ ಶೃಂಗಾರ ಮಾಡಿದ್ದರು. ಸಾವಿರಾರು ಪ್ರಜೆಗಳು ರಸ್ತೆಗಳಲ್ಲಿ ಕಿಕ್ಕಿರಿಯುವಂತೆ ನಿಂತು ಮೆರವಣಿಗೆಯ ವೈಭವವನ್ನೂ ಶ್ರೀಮನ್ ಮಹಾರಾಜರವರನ್ನೂ ಕಣ್ಣು ತುಂಬಾ ನೋಡಿ ಪರಮಾನಂದಪಡುತ್ತಿದ್ದರು. ಪೇಟೆಯಲ್ಲಿ ಮನೆಗಳ ಮತ್ತು ಅಂಗಡಿಗಳ ಮುಂಭಾಗಗಳನ್ನು ನಾನಾಪ್ರಕಾರದಿಂದ ಬಹು ಅಂದವಾಗಿ ಅಲಂಕಾರಮಾಡಿದ್ದರು. ಕರ್ಜನ್ ಪಾರ್ಕಿನಲ್ಲಿರುವ ಯೂರೋಪ್ಯನ್ ಕ್ಲಬ್ಬಿನ ಬಿಸಿಲು ಮಹಡಿಯ ಮೇಲೆ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ನಿಂತು ಶ್ರೀಮನ್ ಮಹಾರಾಜರವರ ಸವಾರಿ ಠೀವಿಯನ್ನು ನೋಡಿದರು. ದೊಡ್ಡಪೇಟೆಯಲ್ಲಿ ಉದ್ದಕ್ಕೂ ವರ್ತಕರೂ ಮನೆಗಳ ಯಜಮಾನರೂ ಶ್ರೀಮನ್ ಮಹಾರಾಜರವರಿಗೆ ಹಾರ ತುರಾಯಿಗಳನ್ನೂ ಫಲಾದಿಗಳ ತಟ್ಟೆಗಳನ್ನೂ ಒಪ್ಪಿಸಿದರು. ಸುವಾಸಿನಿಯರು ಜೋಡಿಜೋಡಿಯಾಗಿ ಬಂದು ಶ್ರೀಮನ್ ಮಹಾರಾಜರವರಿಗೆ ಮಂಗಳವನ್ನು ಕೋರಿ ಆರತಿಗಳನ್ನೆತ್ತಿದರು.

ಬನ್ನಿಮಂಟಪದಲ್ಲಿ ಶ್ರೀಮನ್ ಮಹಾರಾಜರವರು ಅಂಬಾರಿಯಿಂದಿಳಿದು ಶಮೀವೃಕ್ಷಕ್ಕೂ ಆಯುಧಗಳಿಗೂ ಶಾಸ್ತ್ರಪದ್ಧತಿಗಳನ್ನನುಸರಿಸಿ ಪೂಜಾದಿಗಳನ್ನು ಮಾಡಿ, ಶ್ವೇತವಾದ ಕುದುರೆಯ ಮೇಲೆ ಕುಳಿತು ಹುದ್ದೇದಾರರ ಸಹಿತ ಮೈದಾನಕ್ಕೆ ದಯಮಾಡಿ, ಅಲ್ಲಿ ಸಂಸ್ಥಾನದ ಸೈನ್ಯಗಳು ಮಾಡಿದ ಕವಾಯಿತನ್ನು ವೀಕ್ಷಿಸಿದರು. ಸಂತೋಷಸೂಚಕವಾದ ಸುರುಟುಗಳೂ ಗೌರವಾರ್ಥವಾದ ತೋಪುಗಳೂ ಹಾರಿಸಲ್ಪಟ್ಟವು. ಸೈನ್ಯಗಳೆಲ್ಲಾ ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರವರ ಹೆಸರನ್ನು ಸಾರಾವತಿ ಉಚ್ಚರಿಸಿ ಜಯಘೋಷಗಳನ್ನು ಮಾಡಿದರು.

ತರುವಾಯ ಶ್ರೀಮನ್ ಮಹಾರಾಜರವರು ಯಥಾಪ್ರಕಾರ ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಅಲ್ಲಿಂದ ಮೆರವಣಿಗೆಯಲ್ಲಿ ಹಿಂತಿರುಗಿದರು. ಈ ಮೆರವಣಿಗೆಯು ದೀಪವು ಅಪೂರ್ವವಾದದ್ದಾಗಿಯೂ ನೋಟಕರ ಜನಸಂದಣಿಯು ಅಪಾರವಾಗಿಯೂ ಇತ್ತು. ದೀಪೋತ್ಸವವು ಎಲ್ಲಾ ಕಡೆಗಳಲ್ಲೂ ಕಳಕಳಿಸುತ್ತಿತ್ತು. ಮೆರವಣಿಗೆಯು ಹಿಂತಿರುಗಿ ಜಗನ್ಮೋಹನ ಮಹಲನ್ನು ಸೇರುವಾಗ್ಗೆ ಸುಮಾರಾಗಿ ಸಮರಾತ್ರಿಯಾಯಿತು. ಶ್ರೀಮನ್ ಮಹಾರಾಜರವರು ಆಗ ದರ್ಬಾರ್ ನಡಿಸಿದ ಮೇಲೆ ದಿವಾನ್‌ರವರೇ ಮೊದಲಾದ ಅಧಿಕಾರಿಗಳೂ ಸರ್ದಾರರುಗಳೂ ಅಲ್ಲಿಂದ ತೆರಳಿದರು. ಅಲ್ಲಿಗೆ ನವರಾತ್ರಿ ಉತ್ಸವಗಳು ಮುಕ್ತಾಯವಾದವು.

ಕೃತಜ್ಞತಾ ಪ್ರದರ್ಶನವು

ಚಿತ್ರದುರ್ಗ ಡಿಸ್ಟ್ರಿಕ್ಟಿನ ತೋಟಗಿ ಸ್ಕೂಲ್‌ಮಾಸ್ಟರುಗಳು.

ಕಳೆದ ತಾ. ೨೨ನೇ ಶುಕ್ರವಾರ ಚಿತ್ರದುರ್ಗದ ಗರ್ಲ್ಸ್ ಸ್ಕೂಲು ಹಾಲನ್ನು ನಾನಾ ವಿಧವಾದ ತೋರಣ ಚಿತ್ರಪಟಗಳಿಂದ ಅಲಂಕರಿಸಿ, ನಾನಾ ವಿಧವಾದ ಕ್ರೀಡಾಸನಗಳನ್ನು ಹಾಕಿದ್ದರು. ಈ ಸಭೆಯ ಪ್ರೆಸಿಡೆಂಟರು ಮತ್ತು ಮೆಂಬರುಗಳು ಮಧ್ಯಾಹ್ನ ೧|| ಘಂಟೆಗೆ ಸರಿಯಾಗಿ ವಿಜೃಂಭಣೆಯಿಂದ ಸಭಾಗೃಹವನ್ನಲಂಕರಿಸಿದರು. ಆಗ ಆ ಪಟ್ಟಣದ ದೊಡ್ಡಮನುಷ್ಯರುಗಳೆಲ್ಲಾ ಸೇರಿದ್ದರು. ಆ ಸಭೆಯ ಪ್ರೆಸಿಡೆಂಟರವರು ಮೆಂಬರುಗಳ ಅಭಿಪ್ರಾಯಗಳೊಂದಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಈ ಕೆಳಗೆ ಕಂಡಂತೆ ತಯಾರಿಸಿ ಕಳುಹಿಸಿದ ತರುವಾಯ ಎಲ್ಲರೂ ಕೊಂಚ ಟೀ ಫಲಹಾರಗಳನ್ನು ಸೇವನೆಮಾಡಿದರು. ಅನಂತರ ಸಂಗೀತ ವಿದ್ವಾನ್ ಮೆ|| ವೆಂಕಟೇಶ ಶಾಸ್ತ್ರಿಗಳವರ ವೀಣೆ ಮತ್ತು ಹಾಡುಗಾರಿಕೆಯಿಂದ ಸಭಿಕರೆಲ್ಲರೂ ಆನಂದ ಹೊಂದಿ ಗಂಧ ಪುಷ್ಪ ತಾಂಬೂಲಗಳನ್ನು ತೆಗೆದುಕೊಂಡು ಸಭೆಯನ್ನು ಪೂರೈಸಿ ತಮ್ಮ ಗೃಹಗಳಿಗೆ ತೆರಳಿದರು.

“ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮೆ|| ಎಚ್. ಜೆ. ಭಾಭಾ, ಎಂ. ಎ. ಯವರ ಸನ್ನಿಧಿಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟು ತೋಟಗಿ ಸ್ಕೂಲ್ ಮಾಸ್ಟರುಗಳು ಅತ್ಯಂತ ವಿನಯವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ,—

“ಮಹಾಸ್ವಾಮಿ,

“ದೇಶೋನ್ನತಿಗೆ ವಿದ್ಯೆಯೇ ಮುಖ್ಯವಾದದ್ದು. ಜನಾಂಗವನ್ನು ವಿದ್ಯಾವಂತರನ್ನಾಗಿ ಮಾಡುವ ಕೆಲಸವು ಬಹು ಶ್ರೇಷ್ಠವಾದದ್ದು. ‘ಗುರುರ್ಬ್ರಹ್ಮ ಗುರುರ್ವಿಷ್ಣು’ ಎಂದು ಪದೇ ಪದೇ ಎಲ್ಲರೂ ಹೇಳುತ್ತಾರೆ. ಇಂಥಾ ಶ್ರೇಷ್ಠವಾದ ಜವಾಬ್ದಾರಿಯುಳ್ಳ ಕೆಲಸಗಳನ್ನು ವಹಿಸಿಕೊಂಡು, ಪರೋಪಕಾರ ಧರ್ಮವೇ ಮುಖ್ಯವಾಗಿ ಉಳ್ಳ ಉಪಾಧ್ಯಾಯ ಕೆಲಸಗಳನ್ನು ಮಾಡಿಕೊಂಡು, ನಾವುಗಳು ಬಹು ದಿವಸದಿಂದ ಕಷ್ಟಪಟ್ಟು ಸಂಬಳವಿಲ್ಲದೆ (ಅಂದರೆ, ಒಬ್ಬನ ಜೀವನಕ್ಕೂ ಸಾಲದಷ್ಟು ಸಂಬಳದಿಂದ) ಕೆಲಸ ಮಾಡುತ್ತಾ, ಬಹು ಕ್ಲೇಶಗಳಿಗೆ ಒಳಗಾಗಿದ್ದೆವು. ಆದರೆ ದಯಾಳುಗಳಾದ ಮೈಸೂರು ಸರ್ಕಾರದವರು ಈ ವಿಷಯದಲ್ಲಿ ಬಹುಕಾಲದಿಂದ ಯೋಚಿಸುತ್ತಲೇ ಇದ್ದಾಗ್ಯೂ, ನಮ್ಮ ದುರದೃಷ್ಟದಿಂದ ಯಾವುದೂ ಆಗದೆ ನಿಂತುಹೋಗಿತ್ತು. ಅಂಥಾದ್ದು ತಮ್ಮ ಮಹತ್ತಾದ ಸಾಹಸದಿಂದ ನಮ್ಮ ಕಷ್ಟವು ತಕ್ಕ ಮಟ್ಟಿಗೆ ನಿವಾರಣೆಯಾಯಿತು.

“ನಮ್ಮಗಳ ಸಂಬಳವನ್ನು ೧೦ ರೂಪಾಯಿಗೆ ಕಡಮೆಯಿಲ್ಲದ ಹಾಗೆ ಹೆಚ್ಚು ಮಾಡಿರುವುದಲ್ಲದೆ ನಮ್ಮಗಳ ಮೌಢ್ಯವನ್ನು ಹೋಗಲಾಡಿಸಿ ಉಪಾಧ್ಯಾಯ ಕೆಲಸಗಳನ್ನು ಚೆನ್ನಾಗಿ ಬೋಧಿಸುವುದಕ್ಕೆ ಟ್ರೈನಿಂಗ್ ಸ್ಕೂಲುಗಳನ್ನು ಏರ್ಪಡಿಸಿ ಅನೇಕ ವಿಧದಲ್ಲಿ ನಮ್ಮನ್ನು ವೃದ್ಧಿಗೆ ತರುತ್ತಲಿರುವ ದೇವರು ತಮಗೆ ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತೇವಲ್ಲದೆ ಬಡಸೌಕರರಾದ ಈ ಡಿಸ್ಟ್ರಿಕ್ಟಿನಲ್ಲಿರುವ ಉಪಾಧ್ಯಾಯರುಗಳನ್ನು ಈ ರೀತಿ ಉತ್ತೇಜನಕೊಟ್ಟು ಕಾಪಾಡಿದ್ದಕ್ಕಾಗಿ, ಸಕಲರನ್ನೂ ವಾತ್ಸಲ್ಯದಿಂದ ಕಾಪಾಡುತ್ತಲಿರುವ ಶ್ರೀಮನ್ ಮಹಾರಾಜರವರಿಗೂ ಅವರ ಸರ್ಕಾರಕ್ಕೂ ನಮ್ಮ ಅಚ್ಚಿನ್ನವಾದ ಭಕ್ತಿಯನ್ನು ಸೂಚಿಸಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

“ಇಂತಿ ನಮ್ಮಗಳ [illegible] ಚಿತ್ರದುರ್ಗದ ಡಿಸ್ಟ್ರಿಕ್ಟು ತೋಟಗಿ ಸ್ಕೂಲ್ ಮಾಸ್ಟರುಗಳು.”

ಖಾತ್ರಿದಾರರಿಗೆ ನೋಟೀಸು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. — ಎಡಿಟರ್

ಕರೆಸ್‌ಪಾಂಡೆನ್ಸ್.

ಜೋಡಿ ನ್ಯಾಯರುಗಳೂ ಪ್ಲೀಡರುಗಳೂ.— ಎಡಿಟರ್ ಅಯ್ಯಾ,

ಇದೇ ಅಕ್ಟೋಬರು ತಾ. ೭ನೇ ತಮ್ಮ ಪತ್ರಿಕೆಯಲ್ಲಿ ಯಾರೋ ಒಬ್ಬ ಪೆನ್ಷನ್ ಆಫೀಸರು ಜೋಡಿ ನ್ಯಾಯರುಗಳ ವಿಷಯದಲ್ಲಿ ಮತ್ತು ಎಸ್‌ರೋಲ್ ಪ್ಲೀಡರುಗಳು ಬೇಕಾಗುವ ವಿಷಯದಲ್ಲೂ ಜನರಿಗೆ ಸೂಚಕವಾದ ಅಭಿಪ್ರಾಯ ಪಡುವುದನ್ನು ನೋಡಿ ತುಂಬಾ ಸಂತೋಷಿಸುತ್ತೇನೆ. ಜುಡಿಷಿಯಲ್ ಕೋರ್ಟುಗಳು ಪ್ರಜೆಗಳ ನಮ್ಮದಿ ಕಾಪಾಡುವುದಕ್ಕೂ, ಸಮಾಧಾನ ಹೊಂದುವುದಕ್ಕೂ ಏರ್ಪಾಡಾಗಿರುವವು. ಇವು ಈಗಲೇ ಅಲ್ಲ ಪೂರ್ವಕಾಲಗಳಲ್ಲಿಯೂ ನ್ಯಾಯಸ್ಥಾನವೆಂತಲೂ, ನ್ಯಾಯಶಾಸ್ತ್ರವೆಂತಲೂ. ನ್ಯಾಯ ವಿಷಯಗಳಿಗೆ ಪ್ರಜಾಸಮ್ಮತಿ ಪಾಲನೆಗೋಸ್ಕರ ಸಹಾಯಕರಾದ ಕೋರ್ಟು ಪಂಡಿತರೆಂಬ ದಂಡ, ಲಿಖಿತಾ ಮುಂತಾದ ಅನೇಕ ಜನಗಳು ವಿಶಾಲವಾದ ಶಾಸ್ತ್ರಗಳನ್ನು ಕೇಳಿಸಿಕೊಡುತ್ತಿದ್ದರೆಂತಲೂ ಅನೇಕ ಧರ್ಮಶಾಸ್ತ್ರಗಳಿಂದ ವ್ಯಕ್ತವಾಗುತ್ತದೆ. ನಮ್ಮ ಪೆನ್ಷನ್ ಆಫೀಸರು ಅಭಿಪ್ರಾಯಪಡುವಂತೆ ಪ್ಲೀಡರುಗಳ ಶಿಕ್ಷೆಯಿಂದ ಅಸಮಾಧಾನವೂ, ಅನೈಕ್ಯವೂ, ನೆಮ್ಮದಿ ಭಂಗವೂ ಉಂಟಾಗುತ್ತಿರುವುದು ಶುದ್ಧ ತಪ್ಪು. ಅವಕ್ಕೆ ಅವರು ತಿಳಿಸಿರುವ ಕಾರಣದಲ್ಲಿ ಪ್ಲೀಡರುಗಳು ವ್ಯಾಜ್ಯಗಳನ್ನು ತಂದುಹಾಕುತ್ತಾರೆಂತಲೂ, ಎರಡು ಕಡೆಯಿಂದಲೂ ದುಡ್ಡು ಪಡೆಯುತ್ತಾರೆಂತಲೂ, ಅದಿಲ್ಲವಾದರೆ ಜೂಜಾಡುವುದನ್ನು ಕಲಿಸಿ ತಪ್ಪುಸಿಕೆ ಫೀಜು ಪಡೆಯುತ್ತಾರೆಂತಲೂ ಅಭಿಪ್ರಾಯ ಪಟ್ಟಿರುವರೆ. ಇದು ಎಂದಿಗೂ ಹಾಗೆ ನಡೆಯತಕ್ಕದ್ದಲ್ಲ. ಪ್ಲೀಡರು ಎಂದರೆ ಏನು ಎಂದರಾಗಿ, ಅನೇಕ ಧರ್ಮಶಾಸ್ತ್ರಗಳಲ್ಲಿ ಪರಿಚಿತ ವಿದ್ಯೆಯವರಾಗಿ, ನೀತಿ ಮಾರ್ಗ ಪ್ರವರ್ತಕರಾಗಿ ಇರುವುದೇ ಅವರ ಕರ್ತವ್ಯವಾಗಿದೆ. ಇಂಥವರು ಎಷ್ಟು ಹೇಳಿದರೂ ಅನ್ಯಾಯ ದೇಶೋನ್ನತಿ ಆಗುವ ವಿಷಯದಲ್ಲಿ ಸಂದೇಹವೇ ಇರುವುದಿಲ್ಲ. ಅವರಂತೆ ಜೋಡಿನ್ಯಾಯರು ಎಸ್‌ರೋಲ್ ಆಗದೇ ಇದ್ದಾಗ್ಯೂ ವ್ಯವಹಾರಕ್ಕೆ ನಡೆಸುವುದಕ್ಕೆ ಉಪಯುಕ್ತವಾದ ಎಲ್ಲಾ “ಲಾ” ಗಳನ್ನೂ ಬಲ್ಲವರೇ ಆಗಿರುತ್ತಾರೆ. ಜೋಡಿನ್ಯಾಯರಾಗಲಿ, ಪ್ಲೀಡರುಗಳಾಗಲಿ ಇಲ್ಲದೇ ಇದ್ದ ಅನೇಕ ಮೊಕದ್ದಮೆಗಳಲ್ಲಿ ನ್ಯಾಯ ದೊರೆಯದೆ ಹೋದದ್ದು ಎಷ್ಟೋ ಇವೆ. ಪಡ್ಗಿ [illegible] “ಕೌನ್ಸಿಲ್” ಇಲ್ಲದೆ ಇರುವುದೇ ನ್ಯಾಯಕ್ಕೆ ವಿರೋಧವಾಗುವುದಕ್ಕೆ ಮುಖ್ಯ ಕಾರಣವಾಗಿದೆ. ಪ್ಲೀಡರು ಉನ್ನತ ಸ್ಥಾನಗಳಲ್ಲಿ ಮುಡಿಗೆ ಆಳ ಪಟ್ಟರೆ, ಪಾರ್ಟಿಗಳು ಅಂತಹ ಪ್ಲೀಡರನ್ನು ಹ್ಯಾಗೆ ನಂಬ್ಯಾರು? ಆ ಪ್ಲೀಡರು ಜೀವನ ಹ್ಯಾಗೆ ಮಾಡ್ಯಾನು? ಅವನಿಗೆ ವರಮಾನವೇನು ಸಿಕ್ಕೀತು? ಹಾಗಿದ್ದರೂ ಒಂದು ಕೇಸಾದರೂ ನಮ್ಮ ಪೆನ್ಷನ್ ಆಫೀಸರ ಅವಗಾಹನೆಗೆ ಬಂದಿರಬೇಕು ಹೀಗಿದ್ದರೂ ಪ್ಲೀಡರುಗಳ ವಿಷಯದಲ್ಲಿ ಅವರು ದುರಭಿಪ್ರಾಯ ಪಟ್ಟದ್ದಕ್ಕೆ ತುಂಬಾ ವಿಷಾದಿಸುವ

ನ್ಯಾಯಾಭಿಮಾನಿ

ತಾಲ್ಲೋಕು ವರ್ತಮಾನಗಳು

ಚಿಕ್ಕಬಳ್ಳಾಪುರ.—ಇದೇ ಮಾಹೆ ೧೬ನೇ ತಾ ಇಲ್ಲಿನ ಎ ವಿ. ಸ್ಕೂಲ್ ಕಟ್ಟಡದೊಳಗೆ ಸ್ಕೂಲ್ ಎಗ್ಸಿಬಿಷನ್ ಎಂಬುದೊಂದು ಪ್ರದರ್ಶನವು ಇಲ್ಲಿನ ಅಸಿಸ್ಟೆಂಟ್ ಕಮಿಷನರ್ ಮೆ, ಕೃಷ್ಣಸ್ವಾಮಿ ಅಯ್ಯಂಗಾರ್ಯರವರಿಂದ ಪ್ರಾರಂಭವಾಗಲ್ಪಟ್ಟಿತು ಅನೇಕ ದೊಡ್ಡ ಮನುಷ್ಯರುಗಳೂ ಲೌಕಿಕ ವೈದಿಕರೂ ಸಹ ನೆರೆದಿದ್ದರು ಇಲ್ಲಿನ ಎ ವಿ ಸ್ಕೂಲ್ ಗರ್ಲ್ಸ್ ಸ್ಕೂಲ್ ಹಿಂದುಸ್ಥಾನಿ ಸ್ಕೂಲುಗಳ ಬಾಲಕ ಬಾಲಕಿಯರ ನಾನಾ ವಿಧ ಚಮತ್ಕಾರ ಕಾರ್ಯಗಳಿಂದ ಪ್ರದರ್ಶನ ಸ್ಥಾನವೆಲ್ಲಾ ತುಂಬಿತುಳುಕಿ ಶೋಭಿಸುತ್ತಲಿದ್ದಿತು ಪ್ರದರ್ಶನದ ಬಾಗಿಲಿನಲ್ಲಿ ಇಲ್ಲಿನ ಉಭಯ ಭಾಷಾ ಪಂಡಿತರು ಶ್ರೀನಿವಾಸ ಜಿ ಅಪ್ರಮೇಯ ಐಯ್ಯಂಗಾರ್ಯರಿಂದ ರಚಿಸಲ್ಪಟ್ಟ ಶ್ರೀಮುಮ್ಮಡಿಯ ಚಕ್ರವರ್ತಿಗಳ ಮತ್ತು ಶ್ರೀ ಕೃಷ್ಣರಾಜ ಸಾರ್ವಭೌಮರ ಶ್ರೇಯಃಪ್ರಾರ್ಥನಾರೂಪಗಳಾದ ಸಂಸ್ಕೃತ ಸಂಬಂಧ ಪದ್ಯಗಳು ಬಹು ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದವು ಇಲ್ಲಿ ಈ ಪ್ರದರ್ಶನಕ್ಕೆ ಇದೇ ಮೊದಲು—ವಾಗ್ಯೂ ಅನೇಕ ಸಂದರ್ಭಗಳಲ್ಲಿ ಮೈಸೂರು ಪ್ರದರ್ಶನವನ್ನೇ ತೋರುತ್ತಲಿದ್ದಿತು ತಾ ೨೦ರಲ್ಲಿ ಇದಕ್ಕೆ ಸಂಬಂಧಪಟ್ಟ ಬಾಲಕ ಬಾಲಿಕೆಯರಿಗೆಲ್ಲಾ ಡಾಕ್ಟರ್ ಫರ್ನಾಂಡಿಸ್ ರವರಿಂದ ಬಹುಮಾನವು ಸಭೆಯೊಳಗೆ ಕೊಡಲ್ಪಟ್ಟಿತು ಹೆಡ್‌ಮಾಸ್ಟರು ಉಭಯಭಾಷಾ ಪಂಡಿತರು ಜಿ ಅಪ್ರಮೇಯ ಐಯ್ಯಂಗಾರ್ಯರು ಮತ್ತು ಅಸಿಸ್ಟೆಂಟ್ ಮಾಸ್ಟರುಗಳ ಮಹತ್ವವನ್ನು ಹೇಳತೀರದು ಇವರುಗಳು ಸ್ಕೂಲ್ ಕೆಲಸಗಳನ್ನು ಮಾಡಿಕೊಳ್ಳುತ್ತಾ ರಾತ್ರಿ ಹಗಲು ಶ್ರಮಪಟ್ಟು ಏರ್ಪಡಿಸಿದ ಈ ಪ್ರದರ್ಶನವು ಬಹು ಸ್ತೋತ್ರಾರ್ಹವಾಗಿರುತ್ತದೆ ಮೆ| ಗ್ರಿಹಂ ಅಂಡರ್ಸನ್, ಸಿ ಐ ಇ ಯವರು ಸಹ ಈ ಪ್ರದರ್ಶನಕ್ಕೆ ದಯಮಾಡಿ ಆನಂದವನ್ನು ಹೊಂದಿದರು ಹೀಗೆಯೇ ಈ ಮಾಸ್ಟರುಗಳೆಲ್ಲರೂ ಇಂತಹ ಪ್ರದರ್ಶನವನ್ನು ವರುಷೇ ವರುಷ ನಡೆಸಿ ಅಭಿವೃದ್ಧಿಗೊಳಿಸುವರೆಂದು ಇಲ್ಲಿನವರೆಲ್ಲರೂ ಹಾರೈಸುತ್ತಲಿದ್ದಾರೆ

ಶಿಡ್ಲಘಟ್ಟ.—ಈ ಊರಿನಲ್ಲಿ ೮ ೧೦ ದಿನಗಳ ಲಾಗಾಯ್ತು ಬಿಸಿಲಿನ ಝಳವು ಹೆಚ್ಚಾಗಿ, ಬೇಸಿಗೆಯಲ್ಲಿ ಆದಂತೆ ಕಾಯುತ್ತಾ ಇರುವುದಲ್ಲದೆ ವಿಶೇಷ ಸೆಕೆಯು ಉತ್ತಾ ಇದೆ ಬೆಳೆ ಪೈರುಗಳೆಲ್ಲಾ ಚೆನ್ನಾಗಿದ್ದರೂ ಇನ್ನೂ ಒಂದೆರಡು ಮಳೆ ಬಿದ್ದರೆ ಬೆಳೆಗಳೆಲ್ಲಾ ಪೂರೈಸಹೋಗುತ್ತವೆಂದು ರೈತರು ಎದುರು ನೋಡುತ್ತಾ ಇದ್ದಾರೆ [illegible] ಯಥಾಪ್ರಕಾರವಾಗಿದೆ — ಸರ್ಕಾರದ [illegible] ಬೆಂಗಳೂರಿನ [illegible] ಮೂಲಕ ಮಾಡಿದ ಮಾಸಿಕ [illegible] ವೈದ್ಯಕೀಯ ಶಾಲೆಯ [illegible] ವರ್ತಮಾನ ಕೇಳುತ್ತೇವೆ ಅಲ್ಲದೆ ಮರಳು ಬಾಗಿಲಿನ ಬೀಳಿಸವು ಪತ್ತೆ ತರದೂದು ಇಷ್ಟು ನಡೆಯುತ್ತಾ ಇದೆ —ಟೌನ್ ಪೇಟೆಯಲ್ಲಿ ೧೦ ೧೧ ದಿನಗಳ ಕೆಳಗೆ ರಾತ್ರಿ ಸುಮಾರು ೧ ಘಂಟೆಯಲ್ಲಿ ೪ ಅಂಗಡಿಗಳಿಗೆ ಕಳ್ಳರು ಪ್ರವೇಶಿಸಿ ಕೆಲವು ಹಣವನ್ನು ಅಪಹರಿಸಿಕೊಂಡು ಹೋದರು ಆ ಲಾಗಾಯ್ತು ಪೋಲೀಸ್ ಗಸ್ತು ಚನ್ನಾಗಿ ನಡೆಯುತ್ತಾ ಇದೆ ಆ ಕಳ್ಳರು ಪತ್ತೆ ಆಗಲಿಲ್ಲ —ಈ ಊರಿನ ಸಂತೆಯಲ್ಲಿ ಹೊಗೆಸೊಪ್ಪು ತರಕಾರಿ ವಗೈರೆ ಪದಾರ್ಥಗಳನ್ನು ಹಾಗೆ ಎತ್ತುವವನ್ನೂ, ಸಂತೆಯಲ್ಲಿ ಅಳೆಯುವ ಸೇರು ತೂಗುವ ಬಟ್ಟುಗಳು ಕಮ್ಮಿಯಾಗಿರುವ ಕಾರಣ ಈ ವಿಚಾರವನ್ನು ಮೇಲಿನ ಅಧಿಕಾರಿಗಳು ಆಜಮಾಯಿಷಿಯಿಂದ ಕ್ರಮಪಡಿಸ್ಯಾರೆಂತ ನಂಬುತ್ತೇವೆ ಅಲ್ಲದೆ ಅನೇಕ ಜನರು ಕಸಬುಗಳಾದ ಕಂದಾಯವನ್ನು ದಾಖಲ್ಯಾಡಿರುತ್ತಾರೆ ಈ ಪದ್ಧತಿಯು ಯಾವ ಊರಿನಲ್ಲಿಯೂ ಇರುವಂತೆ ಕೇಳಿಲ್ಲ ಈ ವಿಚಾರಕ್ಕೆ ತಾಲ್ಲೂಕ್ ಅಧಿಕಾರಿಗಳು ಗಮನ ಕೊಟ್ಟು ತಕ್ಕ ಏರ್ಪಾಟು ಮಾಡುವರೆಂದು ನಂಬುತ್ತೇವೆ —ಗ್ರಾಮದ ಸಾಕಿ ಜಾ ತಕ್ಕಮಟ್ಟಿಗೆ ಚನ್ನಾಗಿರುತ್ತವೆ ಮ್ಯುನಿಸಿಪಲ್ ಲಾಂದ ಗಳನ್ನು ಹಚ್ಚುವ ವಿಷಯದಲ್ಲಿ ಸರ್ಕಾರದವರು ಕಂಟ್ರಾಕ್ಟನ್ನು ಕೊಟ್ಟಿದ್ದಾರೆ ಇವರು ಕೆಲವು ಒಕ್ಕೆ ತಂದುಹಾಕಿ ಹಚ್ಚಿ [illegible] ಮಗಳಲ್ಲಿ ಎತ್ತ ಬಿಟ್ಟುಬಿಡುತ್ತಾರೆ ಕತ್ತಲೆ ಕಾಲದಲ್ಲಿ ತುಂಬಾ ಕಷ್ಟವಾಗಿರುತ್ತವೆ ಇದನ್ನು ಹಚ್ಚುವಂತೆ ಏರ್ಪಾಟು ಮಾಡಿದಲ್ಲಿ ಜನಗಳಿಗೆ ತೊಂದರೆ ತಪ್ಪಿವದು —ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ವರಗೇನಹಳ್ಳಿಯಲ್ಲಿ ನಡೆದ ಕಳವನ್ನು ತುಂಬಾ ಮುತುವರ್ಜಿ ವಹಿಸಿ ಪತ್ತೆ ತರಮೂದು ಮಾಡುತ್ತಾ ಇದ್ದಾರೆ

ಶಿವಮೊಗ್ಗ.—ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮೆ ಆರ್ ಟಿ ಮಹದೇವರಾಯರಿಗೆ ಇಲ್ಲಿನ ಪ್ರಜೆಗಳು ಸಭೆ ಸೇರಿಸಿ ವಂದನಾಪತ್ರಿಕೆಗಳನ್ನು ಸಮರ್ಪಿಸಿದರು ತಾ ೧೯ನೇ ಮಂಗಳವಾರ ಇಲ್ಲಿನ ಮಿಷನ್ ಗಂಡುಹುಡುಗರ ಪಾಠಶಾಲೆಯನ್ನು ನಾನಾವಿಧವಾಗಿ ಅಲಂಕರಿಸಿದ್ದರು ಅಧಿಕಾರಿಗಳಲ್ಲಿ ಅನೇಕರೂ ಮತ್ತು ಬಹಳಮಂದಿ ಲಾಯರುಗಳೂ, ಊರಿನ ವರ್ತಕರಲ್ಲಿ ಮೆ| ಸಾಹುಕಾರ್ ಕಾಡಪ್ಪನವರೇ ಮುಂತಾದವರೂ, ಇಂಗ್ಲಿಷ್ ದೊರೆಗಳೂ ಮತ್ತು ಲೇಡಿಗಳೂ, ಸಭೆಯನ್ನಲಂಕರಿಸಿದ್ದರು. ಪ್ರಾಖ್ಯಾತ ಘನ ಬ್ರಾಕ್‌ಬ್ಯಾಂಕ್ ದೊರೆಯವರು ಅಗ್ರಾಸನವನ್ನು ವಹಿಸಿದರು ಬಹುಮಂದಿ ದೊಡ್ಡಮನುಷ್ಯರು, ಮೆ ಮಹದೇವರಾಯರ ಕೆಲಸಗಳನ್ನೂ ಇವರ ನಿಷ್ಪಕ್ಷಪಾತತೆಯನ್ನೂ ವಿವರಿಸಿದರಲ್ಲಿ ಸಕಲ ಸುಗುಣಗಳೂ ತೋರುತ್ತಿದ್ದವು ಮತ್ತು ಅಗ್ರಾಸನವು ಸಹ ಬಹಳ ಚನ್ನಾಗಿ, ಮೆ| ಮಹದೇವರಾಯರ ಗುಣಕಥನವನ್ನು ಮಾಡಿ, ತಾವೆಯಾದ ದೇವರು ನಮ್ಮ ವಿಶ್ರಾಂತಿ ಕಾಲವನ್ನು ಆಶೀರ್ವದಿಸಲೆಂದು ಹರಸಿದರು ಮಹಮ್ಮದೀಯರಲ್ಲಿಯೂ ಅನೇಕರು ಸಭೆಯಲ್ಲಿ ಕೂಡಿದ್ದರು ಇವರಲ್ಲಿ ಪೆನ್ಷನ್ ಇನ್ಸ್‌ಪೆಕ್ಟರೊಬ್ಬರು ಇಂಗ್ಲಿಸಿನಲ್ಲಿಯೂ ಹಿಂದುಸ್ಥಾನಿಯಲ್ಲಿಯೂ ಕೊಂಚ ಮಾತಾಡಿದರು ಸಭಿಕರೆಲ್ಲರೂ ಮೆ ಮಹದೇವರಾಯರ ಗುಣಕಥನವನ್ನು ಮಾಡುವುದರಲ್ಲಿ ಹರ್ಷಿತರಾಗಿದ್ದರು ಆದರೆ ಸಮಯ ಸಾಲದೆಹೋಯಿತು ಸಾಮದೇವ್ ಮತಸ್ಥರಾದ ಇವರು ಇಷ್ಟು ಅಭಿವೃದ್ಧಿ ಹೊಂದಿದ್ದು ಸಂತೋಷಕರವಾಗಿದೆ ಮೆ| ಮಹದೇವರಾಯರು ಉದ್ಯೋಗದಲ್ಲಿರುವಾಗ್ಯೆ ಅನೇಕ ಸಂದರ್ಭಗಳಲ್ಲಿ ವಿಜ್ಞಾಪನಾ ಪತ್ರಿಕೆಗಳನ್ನು ಸಂಪಾದಿಸಿರಬಹುದು ಆದರೆ ಇವರ ವಿಶ್ರಾಂತಿಸಮಯದ ಈ ಮೊದಲನೇ ಸಭೆಯು ಇವರನ್ನು ಒಂದು ವಾಗಿ ಆದರಿಸಿರುತ್ತದೆ ಕೂಡಿದ್ದ ಸಭಿಕರಿಂಗೆಲ್ಲಾ ಪನ್ನೀರು ಎರಚಿ ಪುಷ್ಪ, ಗಂಧ, ತಾಂಬೂಲಗಳು ಹಂಚೋಣಾಯಿತು ಕೊನೆಗೆ ಇಂಗ್ಲಿಷ್ ಬಾಂಡ್‌ವಾದ್ಯವು ಮೊಳಗುತ್ತಿರಲು ಸಭೆಯು ಮುಕ್ತಾಯವಾಯಿತು

ಸೋಮನಹಳ್ಳಿ.—ಈಗ್ಗೆ ೧೫—೨೦ ದಿವಸಗಳಿಂದಲೂ ಮಳೆ ಇಲ್ಲ ಪೈರು ಪಚ್ಚೆಗಳೆಲ್ಲಾ ಬಿಸಿಲಿನ ತಾಪಕ್ಕೆ ಒಣಗುತ್ತಲಿವೆ ರೈತರೆಲ್ಲಾ ಸ್ವಾತಿ ಮಳೆಯನ್ನು ಎದುರು ನೋಡುತ್ತಿದ್ದಾರೆ —ಇಲ್ಲಿನ ಡಿ ಪಿ ಡಬ್ಲ್ಯು ಇಲಾಖೆ ಸೂಪರ್‌ವೈಜರಾಗಿದ್ದ ಮೆ| ತಾಂಡೋಜೆರಾಯರಿಗೆ ಮೈಸೂರಿಗೆ ವರ್ಗವಾದದ್ದರಿಂದ ಜ್ಞಾಪಕಾರ್ಥವಾಗಿ ಅವರ ಇಲಾಖೆಯವರೆಲ್ಲಾ ಸೇರಿ, ಈ ಊರಿನ ರೀಡಿಂಗ್ ರೂಮಿನಲ್ಲಿ ಒಂದು ಸಭೆಯನ್ನು ಏರ್ಪಡಿಸಿ, ಸಭಿಕರಿಗೆಲ್ಲಾ ಮೊದಲು ಫಲಾಹಾರಗಳನ್ನು ಕೊಟ್ಟು, ವೃಷಭಪುರೀಶವಾಸಸ್ಥರಾದ ಮೆ| ರಾಮಣ್ಣನವರು ನವರಸಭರಿತವಾದ ಹರಿಕಥೆಯಿಂದ ನಡೆಸಿ ಮುಗಿಸಿದ ನಂತರ ಸಭಿಕರೆಲ್ಲಾ ಪುಷ್ಪ ತಾಂಬೂಲದೊಡನೆ ಅವರವರ ಮನೆಗಳಿಗೆ ತೆರಳಿದರು —ಈ ಊರಿನ ಮ್ಯುನಿಸಿಪಲ್ ವಿಚಾರವು ಇದ್ದ ಮಟ್ಟಿಗೂ ಒಳ್ಳೇ ಸ್ಥಿತಿಯಲ್ಲಿರುವದು ಮ್ಯುನಿಸಿಪಲ್ ಅಧಿಕಾರಿಗಳು ಕಶ್ಮಲವಾದ ಸ್ಥಳಗಳನ್ನು ಪ್ರತಿ ನಿತ್ಯವೂ ಪಾಕೀಜು ಮಾಡಿಸುತ್ತಾ ಇರುವದರಿಂದ ರೋಗಾದಿಗಳಿಗೆ ಆಸ್ಪದವಿಲ್ಲದಂತೆ ಜನರು ಆರೋಗ್ಯಸ್ಥಿತಿಯಲ್ಲಿರುತ್ತಾರೆ. ಇದಲ್ಲದೆ ನಮ್ಮ ಅಮಲ್ದಾರ್ರವರು ಎ ವಿ ಸ್ಕೂಲಿನ ಹಿಂದೆ ಅನೇಕ ವರ್ಷಗಳಿಂದ ಇದ್ದ ಶಿಪ್ಪೆಗುಂಡಿಗಳ ಕಶ್ಮಲವೆಲ್ಲವನ್ನೂ ಪಾಕುಮಾಡಿಸಿ ಮಕ್ಕಳ ಆರೋಗ್ಯಭಾಗ್ಯವನ್ನು ಕಾಪಾಡಿರುತ್ತಾರೆ —ಈ ಊರಲ್ಲಿ ಟಾಡಿ ಇನ್ಸ್‌ಪೆಕ್ಟರಾಗಿದ್ದ ಮಹಮ್ಮದ್ ಮುಸ್ತಫಬೇಗ್ ಎಂಬುವರು ಇಲಾಖೆಯ ಹಣ ಕಾಸಿನ ಬಿಳ್ಳ ಪತ್ರಗಳನ್ನು ತಿದ್ದಿದರೆಂದೂ, ತಮಗೆ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿದೆ ಎಂದು ಸುಳ್ಳು ಬರವಣಿಗೆ ಮೇಲಿನ ಆಫೀಸರಿಗೆ ಬರೆದರೆಂದೂ, ಅವರನ್ನು ಕೆಲಸದಿಂದ ವಜಾ ಮಾಡಿದ್ದಾರೆ.—ಈಗ್ಗೆ ಸುಮಾರು ಮೂರು ವಾರದ ಕೆಳಗೆ ಒಬ್ಬ ದೊಡ್ಡ ಸಂಸಾರಿಯ ಮನೆ ಹೆಬ್ಬಾಗಿಲಿನಲ್ಲಿ ರಾತ್ರಿ ೮ ಘಂಟೆ ಸಮಯದಲ್ಲಿ ಪಂಸ್ಥಳದ ಕಳ್ಳನು ಸಂಜೆ ಕವಳವೆಂತ ಕೂಗಿ, ಅನ್ನ ಹಾಕುವ ದಿಕ್ಕೆ ತಕ್ಕಲಲ್ಲಿ ಹೊರಗೆ ಬಂದ ಸಂಸಾರಿ ಹೆಂಗಸಿನ ಕುತ್ತಿಗೆಗೆ ಕೈಹಾಕಿ, ಒಂದು ಕೈಯಿಂದ ಆಕೆಯ ಬಾಯಿಯನ್ನು ಮುಚ್ಚಿಕೊಂಡು ೫-೬ ಹೆಜ್ಜೆಯ ದೂರ ಆಕೆಯನ್ನು ಎಳೆದುಕೊಂಡು ಹೋಗಿ ಆಕೆಯ ಕೊರಳೆಲ್ಲಾ ತಡಕುತ್ತಾ ಇರುವಾಗ ಆ ಹೆಂಗಸು ಧೈರ್ಯದಿಂದ ದಿಕ್ಕು ತೋಚದೆ, ಬಾಯಿ ಮುಚ್ಚಿಕೊಂಡಿದ್ದ ಆ ಕಳ್ಳನ ಬೆರಳನ್ನು ಸಂಪೂರ್ಣವಾಗಿ ಕಚ್ಚಲು, ಆ ಕಳ್ಳನು ಅಹಹಾ ಎಂದು ರಕ್ತವನ್ನು ಸುರಿಸಿಕೊಂಡು ಫರಾರಿಯಾದನು ಅನಂತರ ಈ ಹೆಂಗಸಿನ ಕೂಗುಕೇಳಿ ಜನಗಳೆಲ್ಲಾ ಬಂದು ಆಕೆಯನ್ನು ನೋಡುವಾಗ್ಗೆ ಈಕೆಯ ಬಾಯಿಯಲ್ಲಾ ರಕ್ತವಾಗಿದ್ದುದಲ್ಲದೆ ಕಳ್ಳನ ಬೆರಳು ಮಾಂಸವು ಸ್ವಲ್ಪ ಈಕೆಯ ಹಲ್ಲಿನ ಸಂದಿನಲ್ಲಿತ್ತು ನಡೆದ ಸಂಗತಿಗಳ್ಯಾವತ್ತೂ ಆಕೆಯಿಂದ ತಿಳಿಯಲಾಯ್ತು

ಚಿಕ್ಕನಾಯಕನಹಳ್ಳಿ.—ಈ ತಾಲ್ಲೂಕಿನಲ್ಲಿ ರೋಗೋಪದ್ರವಗಳೇನೂ ಇಲ್ಲ ಮಳೆ ಬೆಳೆ ಬಹಳ ಅನುಕೂಲವಾಗಿರುವದರಿಂದ ಜನರಿಗೆ ತುಂಬಾ ಸಂತೋಷವಾಗಿದೆ —ಈ ಊರಿನ ವರ್ತಕರಾದ ಸರಾಫ್ ಗಂಜಾಮದ ಮುದ್ದುರಂಗ ಶೆಟ್ಟರು ಒಬ್ಬ ಧರ್ಮಿಷ್ಠರಾಗಿರುತ್ತಾರೆ ಇವರು ಜನರ ಪ್ರಯೋಜನಕ್ಕೋಸ್ಕರ ನೂರಾರು ರೂಪಾಯಿ ವೆಚ್ಚಮಾಡಿ ಊರಿನ ಜೋಡಿಗಡೆ ಹುಳಿಯಾರಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಒಂದು ಕೊಳವನ್ನು ತೋಡಿಸಿದ್ದಾರೆ ಅದರ ಜಲವು ಬಹಳ ನಿರ್ಮಲವಾಗಿದೆ ಜನರು ಆ ನೀರನ್ನು ಕುಡಿಯಲಿಕ್ಕೂ ಸ್ನಾನಕ್ಕೂ ಅನುಕೂಲಪಡಿಸಿಕೊಂಡಿರುತ್ತಾರೆ ಅದರ ಪಕ್ಕದಲ್ಲಿ ಒಂದು ಆಂಜನೇಯನ ಗುಡಿಯನ್ನು ಕಟ್ಟಿಸಿ ತುಳಸೀಕೋಟೆ ಹೂವಿನ ತೋಟವನ್ನು ಸಹ ಮಾಡಿಸುತ್ತಾರೆ ಇನ್ನು ಮುಂದೆ ಆ ಕೊಳಕ್ಕೆ ಸುತ್ತಲೂ ಸೋಪಾನಗಳನ್ನು ಕಟ್ಟಿಸಲು ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ ಇಂಥಾ ಪ್ರಯೋಜನಕರವಾದ ಕೆಲಸವನ್ನು ಕೆಡಿಸಲಿಕ್ಕೆ ಊರಿನ ಕೊಳಕು ನೀರು ಕಾದುಕೊಂಡಿದೆ ಊರಿನ ಕೊಳಕು ನೀರೆಲ್ಲಾ ಈ ಕೊಳದ ಮೇಲ್ಗಡೆ ಇರುವ ಒಂದು ಗುಂಡಿಗೆ ಬಂದು ಬೀಳುತ್ತದೆ. ಈ ಗುಂಡಿಯಿಂದ ಕೊಳಕ್ಕೆ ನೀರು ಹೋಗಲಿಕ್ಕೆ ಒಂದು ದ್ವಾರವಿರುವದು ಮಳೆ ಬಂದಾಗ ಈ ಹಳ್ಳದ ನೀರೆಲ್ಲಾ ಪವಿತ್ರವಾದ ಕೊಳದ ನೀರಿಗೆ ಸೇರುತ್ತದೆ ಊರಿನ ನೀರು ಈ ಕೊಳದ ನೀರನ್ನು ಕೆಡಿಸದಹಾಗೆ ಪೂರ್ವದಲ್ಲಿದ್ದ ದಾರಿಯನ್ನು ತಪ್ಪಿಸಿ ಇನ್ನೊಂದು ಕಡೆ ದಾರಿ ಮಾಡಿದರೆ ಜನರಿಗೆ ಪ್ರಯೋಜನವೂ, ಅದನ್ನು ಮಾಡಿಸಿದವರಿಗೆ ತೃಪ್ತಿಯೂ ವಿಚಾರದ ಹಣಕ್ಕೆ ಸಾರ್ಥಕವೂ ಉಂಟಾಗಿರುವದರಲ್ಲಿ ಸಂಶಯವಿಲ್ಲ ಈ ವಿಷಯಕ್ಕೆ ಅಮಲ್ದಾರರು ಗಮನಕೊಟ್ಟು ಈ ಅನಾನುಕೂಲವನ್ನು ಹೋಗಲಾಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ —ಈ ತಾಲ್ಲೂಕಿನಲ್ಲಿ ಕಳ್ಳತನಗಳೂ, ಕೊಲೆ, ವಿಷಹಾಕಿ ಜನರನ್ನು ಕೊಲ್ಲುವದೇ ಮುಂತಾದ ಕೃತ್ಯಗಳೂ ಬಹಳ ಹೆಚ್ಚುತ್ತಾ ಬರುತ್ತಲಿವೆ ಎಂದೂ, ಪೋಲೀಸಿನವರ ನಿಗಾ ಕ್ಷಿಪ್ರ ಗೆ ಮೊದಲಿಗೆ ಎಲ್ಲಾ ಚಟ್ಟಗೆ ಮಾಡುತ್ತಾರೆಂದೂ ಮತ್ತು ನಿಷ್ಪಕ್ಷಪಾತಗಳು ಸಾಲದೆಂದೂ ದೂರುವ ಉಂಟು ಈ ವಿಷಯಕ್ಕೆ ಇನ್ಸ್‌ಪೆಕ್ಟರ್‌ರವರು ಹೆಚ್ಚು ಗಮನ ಕೊಟ್ಟರೆ ಜನರಲ್ಲಿ ಉಂಟಾಗಿರುವ ಭೀತಿಯು ನಿವಾರಣೆ ಹೊಂದಿ ಇಂಥಾ ಕಾರ್ಯಗಳಿಗೆ ಅವಕಾಶ ತಪ್ಪುತ್ತದೆ —ಆಸ್ಪತ್ರೆ ವೈದ್ಯರಾದ ಮೆ ಮಹಮ್ಮದ್ ಹುಸೇನ್ ಸಾಹೇಬರು ಕಳೆದ ೫ ವರುಷಗಳ ಲಾಗಾಯಿತು ತಮ್ಮ ಕೆಲಸದಲ್ಲಿ ಮುತುವರ್ಜಿಯನ್ನು ವಹಿಸಿಕೊಂಡು ಈ ತಾಲ್ಲೂಕಿನ ಜನರಿಗೆಲ್ಲಾ ಪ್ರಯೋಜಕರಾಗಿರುತ್ತಾರೆಂದೂ ಜನರ ಗೌರವ ಕೀರ್ತಿಗಳಿಗೆ ಪಾತ್ರರಾಗಿರುತ್ತಾರೆಂದೂ ಜನರು ಹೇಳುತ್ತಾರೆ —ಮುಂಚೆ ಇದ್ದ ಅಮಲ್ದಾರರು ಕಾರಣಾಂತರಗಳಿಂದ ಕೆಲಸದಿಂದ ವಜಾ ಮಾಡಲ್ಪಟ್ಟರು. ಈಗ ಸದ್ಯಕ್ಕೆ ಒಬ್ಬರು ಬದಲಿಯಾಗಿ ಕೆಲಸ ನೋಡುತ್ತಿರುವರು ಮುಂದೆ ಬೇಗನೆ ಈ ತಾಲ್ಲೂಕಿಗೆ ತಕ್ಕ ಅಮಲ್ದಾರರು ಬಂದು ಕೆಲಸದ ಛಾರ್ಜನ್ನು ವಹಿಸಿದರೆ ಇಲ್ಲಿನ ಅನಾನುಕೂಲಗಳು ನಿವಾರಣೆಯಾಗುವವು —ಇಲ್ಲಿನ ಪೋಲೀಸ್ ಪರಸ್ತರಾದ ಮೆ| ರಾಮರಾಯರು ತಮ್ಮ ಕೆಲಸಗಳನ್ನು ಬಹಳ ಚಟುವಟಿಕೆಯಾಗಿ, ಜನರಿಗೆ ತೊಂದರೆ ಇಲ್ಲದಂತೆ ನಡಿಸಿಕೊಂಡು ಹೋಗುತ್ತಿದ್ದಾರೆ

ತರೀಕೆರೆ.—ಇಲ್ಲಿ ಈ ವರ್ಷ ಸರಿಯಾದ ಮಳೆ ಆಗಿ, ರಾಗಿ ಭತ್ತ ವಗೈರೆಗಳು ಸಮೃದ್ಧಿಯಾಗಿ ಫಸಲು ಆಗಿ ರೈತರೆಲ್ಲಾ ಬಹಳ ಹರ್ಷವಾಗಿರುತ್ತಾರೆ ದಿನಸಿಗಳ ಧಾರಣೆ ಮಾತ್ರ ಕಡಮೆಯಾಗಲಿಲ್ಲ —ಈ ಊರು ಸುತ್ತ ಮುತ್ತ ಗ್ರಾಮಗಳಲ್ಲಿ ಪ್ಲೇಗಿನ ಉಪದ್ರವು ಇರುತ್ತದೆ ಆದರೆ ದೇವರ ದಯೆಯಿಂದ ಈ ವರೆಗೂ ಇಲ್ಲಿ ಏನೂ ಇಲ್ಲ ಗ್ರಾಮಸ್ತರು ಬಹಳ ಭಯಸ್ಥರಾಗಿ ಇರುತ್ತಾರೆ ಆದರೆ ಮ್ಯುನಿಸಿಪಲ್ ಏರ್ಪಾಡುಗಳನ್ನು ನೋಡಿದರೆ ದೂರ ಇರುವ ರೋಗಗಳನ್ನು ಬೇಗನೆ ಬರಮಾಡಿಕೊಂಡು ಕರೆಯುವಹಾಗಿದೆ ಚರಂಡಿಗಳಲ್ಲಿ ಬಚ್ಚಲಿನ ರೊಚ್ಚೆ, ಪಾಚಿ ಸಿವೇಜ್, ಸಂದುಗೊಂದುಗಳಲ್ಲಿ ಮಲಮೂತ್ರದ ದುರ್ವಾಸನೆ ಹೇಳತೀರದು ರುಂಡವಾಳಿಗಳು ಏನು ಮಾಡುತ್ತಾರೋ ತಿಳಿಯದು ಲಾಂದ್ರಗಳ ದೀಪಗಳು ಚನ್ನಾಗಿ ಪ್ರಕಾಶಿಸುವುದಿಲ್ಲ ಮತ್ತು ಅವು ಲ್ಯಾಂಪ್ ಇಲ್ಲಿಗೆ ದಯಮಾಡಿಸಿದ ಕಾಲದಲ್ಲಿ ಮಾತ್ರ ದೀಪಗಳು ಚೆನ್ನಾಗಿ ಪ್ರಕಾಶಮಾನವಾದ ಹಾಗೆ ಉರಿಯುವವು ಇದಕ್ಕೆ ಮೇಲಿನ ಅಧಿಕಾರಿಗಳು ಗಮನ ಕೊಡುತ್ತಾರೆಂದು ನಿರೀಕ್ಷಿಸುತ್ತೇವೆ —(ಇನ್ನೊಬ್ಬ ವರದಿಗಾರರಿಂದ) ಈ ನಮ್ಮ ಗ್ರಾಮವು ಪೂರ್ವದಲ್ಲಿ ರಾಜಧಾನಿ ಈಚೆಗೆ ತಾಲ್ಲೂಕಾಗಿದ್ದು ಪಾಲಿಟಿಕಲ್ ದೊಡ್ಡ ಗ್ರಾಮವಾಗಿದೆ ಹಾಲಿ ಈ ತಾಲ್ಲೂಕಿನಲ್ಲಿ ಒಂದು ವೈದ್ಯಶಾಲೆ ಏರ್ಪಡಿಸಿದೆ ಈ ವೈದ್ಯಶಾಲೆಗೆ ಉತ್ತಮ ಜನ ರೋಗಿಗಳು ಹೋದಾಗ್ಗೂ ಚಟ್ಟ ಇಟ್ಟುಕೊಂಡು ನಾಡಿ ಪರೀಕ್ಷೆ ನೋಡುತ್ತಾರೆ ಈ ವೈದ್ಯಶಾಲೆಗೆ ಬುದ್ಧಿವಂತರಾಗಿಯೂ ಎಲ್ಲಾ ಮಾತಿನಲ್ಲಿಯೂ ಪ್ರೀತಿವಂತರಾಗಿಯೂ ಮತ ಭೇದವಿಲ್ಲದೆ ಔಷಧೋಪಚಾರ ಮಾಡುವಂಥಾ ಪಂಡಿತರನ್ನು ನೇಮಿಸಲು ಇಲ್ಲಿನ ಪ್ರಜೆಗಳಿಗೆ ತುಂಬಾ ಅನುಕೂಲವಾಗುತ್ತೆ —ಈ ಗ್ರಾಮಕ್ಕೆ ಸುತ್ತಲೂ ಒಂದು ಗಾವುದದಲ್ಲಿ ಸಂತೆ ಇರುತ್ತೆ ಅಲ್ಲಿಗೆ ಹೋಗಿ ವ್ಯಾಪಾರಾದಿಗಳನ್ನು ತೀರಿಸಿಕೊಂಡು ಬರಲು ತುಂಬಾ ಪ್ರಯಾಸವಾಗಿದೆ ಹಾಲಿ ಇಲ್ಲಿ ಸಂತೆ ನಡೆಯುವಂತೆ ಆರ್ಡರ್ ಬಂದಿತ್ತು ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳು ಇಲ್ಲಿಗೆ ೨ ಮೈಲಿ ದೂರವಾಗಿರುವ ಮುದುಕುತೊರೆಯಲ್ಲಿ ಸಂತೆ ಕಟ್ಟುವುದು ಅನುಕೂಲವೆಂದು ೪ ಜನ ಮೆಂಬರುಗಳೂ ಈ ತಲಕಾಡಿನಲ್ಲೇ ಸಂತೇ ಕಟ್ಟಿಸಿಕೊಡಬೇಕೆಂದು ಮತ್ತೊಬ್ಬ ಮೆಂಬರೂ ಅಭಿಪ್ರಾಯಪಟ್ಟಂತೆ ಕೇಳುತ್ತೇನೆ ಮೇಲ್ಕಂಡ ೪ ಜನ ಮೆಂಬರುಗಳ ಅಭಿಪ್ರಾಯವು ನಮ್ಮ ಗ್ರಾಮ ರೈತಾಪಿ ಜನರ ಅಭಿಪ್ರಾಯವಲ್ಲ. ಆದ ಕಾರಣ ಇಲ್ಲಿಯೇ ಸಂತೆ ಏರ್ಪಾಡಾದಲ್ಲಿ ಇಲ್ಲಿನ ಜನಗಳಿಗೆ ತುಂಬಾ ಉಪಕಾರವಾಗಿದೆ —ಇಲ್ಲಿನ ಕನ್ನಡ ಸ್ಕೂಲ್ ಹೆಡ್‌ಮಾಸ್ಟರು ಮೆ|| ವಿ ನಾಗೇಶರಾಯರು ಈ ಊರಿಗೆ ಬಂದು ೫-೬ ವರ್ಷವಾಯ್ತು ಇವರು ಬಂದ ಲಾಗಾಯ್ತು ಸ್ಕೂಲು ಬಹಳ ಅಭಿವೃದ್ಧಿ ಸ್ಥಿತಿಗೆ ಬಂತು ಇವರು ಬುದ್ಧಿವಂತರಾಗಿಯೂ, ಹುಡುಗರಿಗೆ ಪಾಠಹೇಳುವುದರಲ್ಲಿ ಆಸಕ್ತರಾಗಿಯೂ ಇದ್ದಾರೆ —ಇಲ್ಲಿಗೆ ೪ ಮೈಲಿ ಫಾಸಲೆಯಲ್ಲಿ ವಿಜಾಪುರವೆಂಬ ಗ್ರಾಮವಿದೆ. ಈ ತಿಂಗಳು ೧೬ ನೇ ತಾ ಶನಿವಾರ ಸಾಯಂಕಾಲ ೫ ಘಂಟೆ ವೇಳೆಯಲ್ಲಿ ಬಂದ ಮಳೆಯೊಳಗೆ ಈ ಊರಿನ ಮುಸಲ್ಮಾನರ ಪೀರಸಾಬಿ ಎಂಬುವನು ಮಳೆ ಜೋರಾಗಿ ಬರುವುದೋ ಇಲ್ಲವೋ ಎಂದು ನೋಡುವುದಕ್ಕೆ ಮನೆ ಪಡಸಾಲೆ ಸೂರಿನಡಿ ನಿಂತಿರಲು ಅಷ್ಟರಲ್ಲೇ ಸಿಡಿಲು ಅವನ ನೆತ್ತಿಗೆ ಹೊಡೆದು ತಲೆ ಎರಡು ಭಾಗವಾಗಿ ಸೀಳಿಕೊಂಡು ಮೈಯಲ್ಲಾ ಸುಟ್ಟು ಹೋಗಿ ತಕ್ಷಣ ಮೃತಪಟ್ಟನು ಪ್ರತಿನಿತ್ಯವೂ ಮಳೆ ಸುರಿಯುತ್ತಾ ಇದೆ ಇದರಿಂದ ಆದ ಬೆಳೆಯು ನಷ್ಟಪಡುತ್ತಾ ಇದೆ —ಇಲ್ಲಿನ ಮೈರೋಡು ರಸ್ತೆಗೆ ಯಾತಕ್ಕೂ ಬಾರದ ಜಲ್ಲಿಕಲ್ಲು ಮಣ್ಣನ್ನು ತಂದು ಹಾಕಿ ರಸ್ತೆ ಕೆಡಿಸಿರುತ್ತಾರೆ ಈ ಮಳೆಗಾಲದಲ್ಲಿ ತಿರುಗಲು ಜನಗಳಿಗೆ ಅನಾರೋಗ್ಯವೂ ಅಶಕ್ಯವೂ ಉಂಟಾಗಿದೆ ಮುಂದೆ ರಿಪೇರಿ ಮಾಡದೆ ಒಳ್ಳೇ ಗ್ರಾವಲ್ ಜಲ್ಲಿ ಹಾಕುವಂತೆ ಸರ್ಕಾರದವರು ಮಾಡಿಸಿದರೆ ಪ್ರಜೆಗಳಿಗೆ ತುಂಬಾ ಪ್ರಯೋಜನವೂ, ಆರೋಗ್ಯವೂ ಉಂಟಾಗುತ್ತೆ.

ಬೌರಿಂಗ್‌ಪೇಟೆ.—ಹಿಂದೆ ನಡೆದ ಹೆಂಗಸಿನ ಖೂನಿ ವಿಚಾರದಲ್ಲಿ ಮುಂದವನ್ನು ಪರೀಕ್ಷಿಸಿದ ೫ ದಿವಸಕ್ಕೆ ಕೈ, ತಲೆ, ಕಾಲುಗಳು ಸಿಕ್ಕಿದ್ದರಿಂದ ಈ ತುಂಡುಗಳನ್ನು ಮುಂಡಕ್ಕೆ ಇಟ್ಟು ನೋಡಬೇಕೆಂದು ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಅಪೇಕ್ಷಿಸಿದರು. ಮ್ಯಾಜಿಸ್ಟ್ರೇಟರ ಅನುಮತಿಯನ್ನು ಪಡೆದು ಹೋಗಿ ನೋಡುವಲ್ಲಿ ಮುಂಡವು ಪರೀಕ್ಷೆಮಾಡಿದ್ದ ಕಾಳೆಯು ಮುಚ್ಚಿದ್ದು ಮುಚ್ಚಿದ ಹಾಗೆಯೇ ಇದ್ದು, ಮುಂಡವು ಒಳಗೆ ಇಲ್ಲದೆ ಇದ್ದದ್ದು ಎಲ್ಲರಿಗೂ ದಿಗ್ಭ್ರಮೆಯನ್ನು ಹುಟ್ಟಿಸಿತು ಮುಂಡವು ಮಾಯವಾದ ವಿಷಯದಲ್ಲಿ ಎಷ್ಟು ಪ್ರಯತ್ನ ಮಾಡಿದರೂ ಪತ್ತೆಯಾಗದೇನೇ ಹೋಯಿತು ಈ ವಿಷಯವಾದ ವಿಚಾರಣೆಯು ಕೋಲಾರ್ ಮುನ್ಸಿಫ್ ಮ್ಯಾಜಿಸ್ಟ್ರೇಟರಲ್ಲಿ ನಡೆಯುತ್ತಾ ಇದೆ —ಈ ತಾಲ್ಲೂಕಿನಲ್ಲಿ ಮೂರು ವರುಷಗಳಿಂದ ಅಮಲ್ದಾರಿ ಕೆಲಸವನ್ನು ಸಾರ್ಥಕವಾಗಿ ನಡಿಸಿದ ಮೆ|| ಒಬೇದುಲ್ಲಾ ಸಾಹೇಬರು ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟು ಕೋಲಾರಕ್ಕೆ ವರ್ಗಪಟ್ಟುದರಮೇಲೆ ಅವರನ್ನು ಸಾಗಕಳುಹಿಸುವದಕ್ಕಾಗಿಯೂ ಚಿಂತಾಮಣಿಯಲ್ಲಿ ಇದುವರೆಗೆ ಪ್ರಜೆಗಳಿಗೆ ಬಹು ಉಪಕಾರಗಳನ್ನು ಮಾಡಿ ಇಲ್ಲಿಗೆ ವರ್ಗಪಟ್ಟಿರುವ ಅಮಲ್ದಾರ್ ಮೆ|| ರಾಘವಾಚಾರ್ಯರನ್ನು ಸ್ವೀಕರಿಸಲೂ ಈ ಊರಿನ ದೊಡ್ಡಮನುಷ್ಯರುಗಳೆಲ್ಲಾ ೨೦ ನೇ ತಾ. ಈ ಊರಿನ ಎಡ್ವರ್ಡ್ ಹಾಲಿನಲ್ಲಿ ಒಂದು ಎಂಟರ್‌ಟೈನ್‌ಮೆಂಟ್ ಕೂಟವನ್ನು ಬಹು ವಿಜೃಂಭಣೆಯಿಂದ ನಡಿಸಿದರು. ಸದರಿ ಎಡ್ವರ್ಡ್ ಹಾಲಿನ ರೀಡಿಂಗ್ ರೂಮಿನ ಸೆಕ್ರೆಟರಿಯವರಾದ ಪ್ಲೀಡರ್ ಮೆ| ರಾಮರಾಯರು ಸದರಿ ಕೂಟದ ಮುಂದಾಳಾಗಿ ನಿಂತು ಕಾರ್ಯಗಳನ್ನು ಬಹಳ ರಂಜನೀಯವಾಗಿ ಸಮಯಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದ್ದರು ಎಡ್ವರ್ಡ್ ಹಾಲ್ ಕಂಪೌಂಡು ಬಾವುಟ ತೋರಣ ಲತಾದಿಗಳಿಂದ ಅಲಂಕರಿಸಿತ್ತು ಸಾಯಂಕಾಲ ೯ ಗಂಟೆಗೆ ಬ್ಯಾಂಡ್ ವಗೈರೆ ವಾದ್ಯಗಳು ಭೋರ್ಗರೆಯುತ್ತಿರಲು ಎಲ್ಲರೂ ಸೇರಿದರು ಹೋಗುವ ಮತ್ತು ಬರುವ ಅಮಲ್ದಾರುಗಳ ಹೆಸರುಗಳು ಪ್ರತ್ಯೇಕ ಪ್ರತ್ಯೇಕವಾಗಿ ಕೆಗೆಯಲ್ಪಟ್ಟವು ಅನಂತರ ಫಲಾಹಾರಾದಿಗಳು ಹಂಚಲ್ಪಟ್ಟವು ಫೋನೋಗ್ರಾಫ್ ವಾದ್ಯಗಳು ರಮಣೀಯವಾಗಿ ಹಾಡುತ್ತಿದ್ದವು ತರುವಾಯ ಮೂರು ನಾಲ್ಕು ಜೊತೆ ಕುಸ್ತಿಗಳು ಜರಗಿದವು ಎಲ್ಲರೂ ಹಾಲಿನಲ್ಲಿ ಕೂಡಲು ಉಭಯ ಅಮಲ್ದಾರ್ರುಗಳೂ ಆಸನಗಳಮೇಲೆ ಕುಳಿತ ತರುವಾಯ, ಮೆ| ರಾಮಲಿಂಗಶೆಟ್ಟಿಯವರು ಇಂಗ್ಲಿಷಿನಲ್ಲಿಯೂ, ಮೆ, ಎಸ್ ನೋಹಯವರು ಕನ್ನಡದಲ್ಲಿಯೂ, ಹಿಂದೂಸ್ಥಾನಿ ಸ್ಕೂಲಿನ ಹೆಡ್‌ಮಾಸ್ಟರು ಹಿಂದೂಸ್ಥಾನಿಯಲ್ಲಿಯೂ ಮೇಲ್ಪಟ್ಟವರ ಗುಣಕಥನವನ್ನು ಮಾಡಿದರು ತರುವಾಯ ಉಭಯ ಅಮಲ್ದಾರ್ರುಗಳೂ ಭಾಷಣಗಳಿಗೆ ಪ್ರತಿ ಭಾಷಣಗಳನ್ನು ಇತ್ತರು ಹಾರಾ ತುರಾಯಿಗಳು ಒಪ್ಪಿಸಲ್ಪಟ್ಟು ಸಭಿಯವರಿಗೆಲ್ಲಾ ಹೂ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟು ಕೂಟವು ಬರಖಾಸ್ತಾಗಿ ಎಡ್ವರ್ಡ್ ಹಾಲಿನಿಂದ ಮೆ| ಒಬೇದುಲ್ಲಾ ಸಾಹೇಬರ ಬಿಡಾರದ ವರೆಗೆ ರಸ್ತೆಯು ಉದ್ದಕ್ಕೂ ದೀಪೋತ್ಸವದಿಂದ ಮೆರವಣಿಗೆಯಾಗುತ್ತಾ ಮನೆಗೆ ತೆರಳಿದರು ಮಾರಣೆ ಬೆಳಗ್ಗೆ ೧೦ ಗಂಟೆಗೆ ಮೆ, ಒಬೇದುಲ್ಲಾ ಸಾಹೇಬರನ್ನು ವಾದ್ಯ ಮುಂತಾದವುಗಳಿಂದ ಪುರದ ದೊಡ್ಡಮನುಷ್ಯರೂ ಇತರರೂ ಸಲಾಂ ಸಲ್ಲಾಪಗಳಿಂದಲೂ ಆಶೀರ್ವಾದದ ನುಡಿಗಳಿಂದಲೂ ಸಾಗಕಳುಹಿ ಹಿಂದಿರುಗಿದರು ಈಗ ಬಂದಿರುವ ಅಮಲ್ದಾರ್ರವರು ರೈತಾಪಿಗಳ ಮೇಲೆ ಬಹಳ ಕರುಣೆಯುಳ್ಳವರೆಂತಲೂ, ಚಿಂತಾಮಣಿಯಲ್ಲಿ ರೈತಾಪಿಗಳ ಏಳಿಗೆಯ ವಿಷಯವಾಗಿಯೂ ಅಲ್ಲಿನ ಕೈಗಾರಿಕೆಗಳ ಅಭಿವೃದ್ಧಿಯ ವಿಷಯವಾಗಿಯೂ ಬಹಳ ಶ್ರಮೆಯನ್ನು ವಹಿಸಿ "ಚಿಂತಾಮಣಿ ವಸ್ತುಪ್ರದರ್ಶನ"ವೆಂದು ತಮ್ಮ ತಾಲ್ಲೂಕಿನಲ್ಲಿಯೇ ಜನಗಳಿಗೆ ಅನುಕೂಲವಾಗಿರುವಂತೆ ಬಹಳ ಸಾರ್ಥಕವಾಗಿ ನಡಿಸಿದರೆಂತಲೂ, ಹಿಂದಿನ ಕ್ಷಾಮದ ದಿನಗಳಲ್ಲಿ ಬಡಜನಗಳನ್ನು ಬಹಳವಾಗಿ ಪೋಷಿಸಿದರೆಂತಲೂ ಜನಗಳೂ ಪತ್ರಿಕೆಗಳೂ ನುಡಿಯುತ್ತವೆ ಇವರೂ ಬೌರಿಂಗ್‌ಪೇಟೆಯಿಂದಲೇ ಅಸಿಸ್ಟೆಂಟ್ ಪದವಿಗೆ ಬಡ್ತಿಯಾಗಲೆಂದು ಜನಗಳು ಹಾರೈಸುತ್ತಿದ್ದಾರೆ ೨೧ನೇ ತಾ ಮಧ್ಯಾಹ್ನ ಸುಮಾರು ೨ ಗಂಟೆಗೆ ಈ ಊರಿನ ಒಬ್ಬ ಮಹಮ್ಮದೀಯನ ಮನೆಯಿಂದ ಎಂಟು ವರುಷದ ಇಬ್ಬರು ಹೆಣ್ಣುಮಕ್ಕಳು ಮನೆ ಬಿಟ್ಟು ಹೊರಗೆ ಹೋದವರು ಹ್ಯಾಗೋ ಸಂಜೆಗೆ ದಕ್ಷಿಣ ಪಾರ್ಶ್ವದಲ್ಲಿರುವ ಚಿಕ್ಕ ಕೆರೆಯಲ್ಲಿ ಬಿದ್ದು ಪ್ರಾಣ ಬಿಟ್ಟಿರುತ್ತಾರೆ ಅದೇ ಸಾಯಂಕಾಲ ೬ ಗಂಟೆಗೆ ಶವಗಳು ಸ್ವಲ್ಪ ಸ್ವಲ್ಪವಾಗಿ ಕಾಣುತ್ತಿದ್ದವು ಮಾರನೇ ಬೆಳಗ್ಗೆ ಪೋಲೀಸ್ ವಿಚಾರಣೆಯಿಂದ ಎರಡು ಶವಗಳನ್ನು ದಫನ್ ಒಪ್ಪಿಸಿಕೊಟ್ಟರು ಈ ಮಕ್ಕಳ ಸಾವು ಸಮಸ್ತರಿಗೂ ಬಹಳ ಪರಿತಾಪವನ್ನುಂಟುಮಾಡಿದೆ ಮ್ಯುನಿಸಿಪಾಲಿಟಿಯವರು ಈ ಕೆರೆಯು ಅನೇಕ ಜನಗಳೂ ಗಾಡಿಗಳೂ ತಿರುಗುವ ರಸ್ತೆಯ ಬಾಜೂದಲ್ಲಿರುವದರಿಂದ ಕಟಕಟೆಗಳನ್ನು ಹಾಕಿಸಿ ಭದ್ರಪಡಿಸುವದು ಉತ್ತಮವಾಗಿ ಕಾಣುತ್ತದೆ

[೭ನೇ ಪುಟದಿಂದ ಮುಂದಕ್ಕೆ]

ಸಾಲಿನಲ್ಲಿ ಸಭೆಯವರ ಪರ್ಯಾಲೋಚನೆಯಲ್ಲಿ ಇದ್ದವು ಸಿವಿಲ್ ಪ್ರೊಸೀಜರ್ ಕೋಡಿನ ತಿದ್ದುಪಾಟನ್ನೂ, ಲಿಮಿಟೇಷನ್ ಕಾನೂನನ್ನೂ ಒಟ್ಟುಗೂಡಿಸಿ ತಿದ್ದುಪಡಿಮಾಡುವುದನ್ನೂ, ಇನ್ಸಾಲ್ವೆನ್ಸಿ ಮಸೂದೆಯನ್ನೂ, ಗಾರ್ಡಿಯನ್ ಮತ್ತು ವಾರ್ಡುಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಡಿ ಮಾಡುವುದನ್ನೂ ಈ ವರ್ಷ ಕಳೆದ 15 ತಿಂಗಳಿಂದ ಆಲೋಚನೆಯು ಬಗ್ಗೆ ತೆಗೆದುಕೊಂಡಿರುತ್ತದೆ

ಮಂಜೂರಾದ ರೆಗ್ಯುಲೇಷನ್‌ಗಳು.

ಈ ಸಾಲಿನಲ್ಲಿ ಏಳು ರೆಗ್ಯುಲೇಷನ್‌ಗಳನ್ನು ಮಂಜೂರ್ಮಾಡಿ ಇದೆ ಅವುಗಳು ಯಾವುವೆಂದರೆ —(1) 1900ನೇ ಇಸವಿಯ ಮೈಸೂರು ಸ್ಟಾಂಪು ರೆಗ್ಯುಲೇಷನನ್ನು ತಿದ್ದುಪಡಿ ಮಾಡುವುದಕ್ಕಾಗಿ ಹುಟ್ಟಿದ ರೆಗ್ಯುಲೇಷನ್ (2) ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನ್ (3) ಮೈಸೂರು ಗ್ರಾಮನೌಕರಿಗಳ ರೆಗ್ಯುಲೇಷನ್ (4) ಮೈಸೂರು ಪೋಲೀಸು ರೆಗ್ಯುಲೇಷನ್ (5) ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವುದಕ್ಕಾಗಿ ಹುಟ್ಟಿದ ರೆಗ್ಯುಲೇಷನ್ (6) ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟು ಮಾಡುವುದಕ್ಕಾಗಿ ಹುಟ್ಟಿದ ರೆಗ್ಯುಲೇಷನ್ (7) ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡುವುದಕ್ಕಾಗಿ ಹುಟ್ಟಿದ ರೆಗ್ಯುಲೇಷನ್

ಮೈಸೂರು ಸೀಮೆಯ ಸ್ಟಾಂಪು ಕಾನೂನು ಬ್ರಿಟಿಷ್ ಇಂಡ್ಯಾದ ಸ್ಟಾಂಪು ಕಾನೂನಿಗೆ ಸರಿಯಾಗಿ ಇರುವಂತೆ ಮಾಡುವುದಕ್ಕಾಗಿ ಮೇಲ್ಕಂಡವುಗಳ ಪೈಕಿ ಮೊದಲನೆ ರೆಗ್ಯುಲೇಷನನ್ನು ಏರ್ಪಡಿಸಿತು ಈ ಕಾನೂನಿನಲ್ಲಿ ಏರ್ಪಡಿಸಿರುವ ಒಂದು ಮುಖ್ಯಾಂಶವೇನೆಂದರೆ —ಕಮ್ಮಿ ಸ್ಟಾಂಪು ಕಾಗದದ ಮೇಲೆ ಬರೆದಿರುವ ದಸ್ತಾವೇಜುಗಳಿಗೆ ಡೆಪ್ಯುಟಿ ಕಮೀಷನರು ಜುಲ್ಮಾನೆ ವಿಧಿಸುವುದರಲ್ಲಿ ಹಿಂದೆ ಇದ್ದದ್ದಕ್ಕೆ ಬದಲಾಗಿ ವಿದ್ಯಮಾನಕ್ಕನುಸರಿಸಿ ಮುನಾಸಿಬ್ ಜುಲ್ಮಾನೆ ವಿಧಿಸಬಹುದೆಂತ ಅವರಿಗೆ ಸ್ವಾತಂತ್ರ್ಯ ಕೊಟ್ಟಿದೆ

ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನ್

ಈ ದೇಶದಲ್ಲಿ ಕೆಲವು ವರ್ತಮಾನಪತ್ರಿಕಾ ಕರ್ತರು ಕೆಲವು ಕಾಲದಿಂದ ಈಚೆಗೆ ನಮ್ಮ ಸರ್ಕಾರದವರ ಮತ್ತು ಇಂಡಿಯಾ ಸರ್ಕಾರದವರ ಅಭಿಪ್ರಾಯ ಕಾರ್ಯ, ಉದ್ದೇಶ ವಗೈರೆ ವಿಷಯವಾಗಿ ಜನರಿಗೆ ಬೇಕೆಂತಲೇ ತಪ್ಪು ತಿಳುವಳಿಕೆ ಕೊಟ್ಟು ಬಹಳ ಕೆಡಕನ್ನುಂಟುಮಾಡುತ್ತಿದ್ದರು; ಇಷ್ಟೇ ಅಲ್ಲದೆ, ಒಂದು ಜನಾಂಗದವರಿಗೂ ಮತ್ತೊಂದು ಜನಾಂಗದವರಿಗೂ ಪರಸ್ಪರ ವೈರ ಹುಟ್ಟಿಸಬಹುದಾದಂಥಾ ಬರವಣಿಗೆಗಳನ್ನೂ ಸಾರ್ವಭೌಮರವರ ಸರ್ಕಾರದ ವಿಷಯದಲ್ಲಿ ಮೈಸೂರು ಸೀಮೆಯ ಜನಗಳ ಮನಸ್ಸನ್ನು ಕೆಡಿಸಿ ತಪ್ಪು ತಿಳುವಳಿಕೆಯನ್ನು ಕೊಟ್ಟು ಅವರಲ್ಲಿ ವಿಶ್ವಾಸವನ್ನು ಕೆಡಿಸುವ ಬರವಣಿಗೆಗಳನ್ನೂ ಬರೆಯುತ್ತಿದ್ದರು ಆದುದರಿಂದ ಇಂಥಾ ಪತ್ರಿಕೆಗಳನ್ನು ಸರಿಯಾದ ತಹಬಂದಿಯಲ್ಲಿ ಇಡುವುದಕ್ಕಾಗಿಯೇ ಈ ಮೈಸೂರು ಸೀಮೆಯ ವರ್ತಮಾನ ಪತ್ರಿಕೆಗಳ ರೆಗ್ಯುಲೇಷನನ್ನು ಜಾರಿಗೆ ತರಲಾಯಿತು

ಪ್ರತಿಯೊಂದು ವರ್ತಮಾನ ಪತ್ರಿಕೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಆ ಪತ್ರಿಕೆಯನ್ನು ಅಚ್ಚು ಹಾಕುವವರು ಪ್ರಕಟಿಸುವವರು ಮತ್ತು ಪತ್ರಿಕಾಕರ್ತರು ಸರ್ಕಾರದವರ ಅಪ್ಪಣೆಯನ್ನು ಪಡೆಯಬೇಕೆಂಬುದಾಗಿ ಸದರಿ ರೆಗ್ಯುಲೇಷನಿನಲ್ಲಿ ವಿಧಿಸಿರುವುದಲ್ಲದೆ, ಅಂಥಾ ಅಪ್ಪಣೆಯನ್ನು ಯಾವ ಕಾಲದಲ್ಲಾದರೂ ಸರ್ಕಾರದವರು ರದ್ದುಪಡಿಸುವುದಕ್ಕೂ ಸಹ ಇದರಲ್ಲಿ ನಿಯಮವನ್ನು ಏರ್ಪಡಿಸಿರುತ್ತದೆ ಸರ್ಕಾರದವರ ಅಪ್ಪಣೆ ಪಡೆಯದೆ ಆಗಲಿ ಅಥವಾ ಹಿಂದೆ ಪಡೆದಿದ್ದ ಅಪ್ಪಣೆಯು ರದ್ದಾದಮೇಲೆ ಆಗಲಿ ಪ್ರಕಟಿಸಲಾಗುವ ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ಕೆಲವು ದಂಡನೆಗಳನ್ನು ಸಹಾ ಇದರಲ್ಲಿ ವಿಧಿಸಲಾಗಿದೆ

ಈ ರೆಗ್ಯುಲೇಷನು ಜಾರಿಗೆ ಬಂದಿರುವುದರಲ್ಲಿ ತೃಪ್ತಿಕರವಾಗಿರುತ್ತದೆ ಮುಖ್ಯವಾಗಿ, ಪಕ್ಷಪಾತಕರವಾದ ಕೃತ್ಯಗಳು ನಡೆಯದಹಾಗೆ ಅಡ್ಡಿಮಾಡಬೇಕೆಂಬುವುದೇ ಇದರ ಉದ್ದೇಶ ಇದರಲ್ಲಿ ಏರ್ಪಡಿಸಿರುವ ಶಿಕ್ಷಾನಿಯಮಗಳನ್ನು ಜಾರಿಗೆ ತರಲವಶ್ಯಕವಾದ ಸಂದರ್ಭ ಯಾವುದೂ ಬರಲಿಲ್ಲ ಮೈಸೂರು ಸೀಮೆಯಲ್ಲಿ ಖಾಯಮಾಗಿ ಇತರ ಕಡೆಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಚಾರದಲ್ಲಿ ಇರುವ ಒಂದು ವರ್ತಮಾನ ಪತ್ರಿಕೆಯ ವಿಷಯದಲ್ಲಿ ಮಾತ್ರ ಸ್ವಲ್ಪ ಅಮಲ್ ನಡೆಸಬೇಕಾಗಿ ಬಂತು ಆ ಸಂದರ್ಭದಲ್ಲಿಯೂ ಕೂಡ ಇನ್ನು ಮುಂದೆ ಹುಷಾರಾಗಿರಬೇಕೆಂತ ಆ ಪತ್ರಿಕಾಕರ್ತರಿಗೆ ಎಚ್ಚರಿಕೆಯನ್ನು ಮಾತ್ರ ಕೊಟ್ಟಿತು

ಈ ಸಂಸ್ಥಾನದ ಗ್ರಾಮನೌಕರಿಗಳಿಗೆ ಸಂಬಂಧಪಟ್ಟ ಶಾಸನವನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವುದಕ್ಕಾಗಿ ಮೈಸೂರು ಗ್ರಾಮ ನೌಕರಿಗಳ ರೆಗ್ಯುಲೇಷನನ್ನು ಏರ್ಪಡಿಸಿದೆ ಇಂಥಾ ಕಾನೂನನ್ನು ಏರ್ಪಡಿಸಬೇಕಾದ್ದು ಅವಶ್ಯಕವೆಂದು ಬಹು ಕಾಲದಿಂದಲೂ ಅಭಿಪ್ರಾಯಪಟ್ಟು 1905ನೇ ಇಸವಿಯ 3ನೇ ನಂಬರ್ ಮದರಾಸಿನ ಆಕ್ಟನ್ನನುಸರಿಸಿ ಈ ರೆಗ್ಯುಲೇಷನನ್ನು ಏರ್ಪಡಿಸಿ ಇದೆ ಇದರಲ್ಲಿ ಹಾಲಿ ಚಾಲ್ತಿ ಇರುವ ಪದ್ಧತಿಗೆ ವಿರೋಧವಾಗಿ ಯಾವ ವಿಶೇಷವಾದ ಬದಲಾವಣೆಯನ್ನೂ ಮಾಡಿ ಇಲ್ಲ ಇದು ಮೈಸೂರು ಗ್ರಾಮ ನೌಕರಿಗಳ ವಿಚಾರದಲ್ಲಿ ಬಾಗಾಯತಿನಿಂದಲೂ ರೂಢಿಯಲ್ಲಿದ್ದ ಪದ್ಧತಿಗಳಿಗೆ ಅನುಸಾರವಾಗಿಯೇ ಇರುತ್ತದೆ ಆದರೆ ಸದರಿ ನೌಕರಿಯನ್ನು ಇನ್ನೂ ಉತ್ತಮಸ್ಥಿತಿಗೆ ತರುವುದಕ್ಕೆ ತಕ್ಕ ಕೆಲವು ಬದಲಾವಣೆಗಳನ್ನು ಮಾತ್ರ ಮಾಡಿ ಇದೆ

ಹಾಲಿ ಪರ್ಯಾಲೋಚನೆಯಲ್ಲಿರುವ ಮಸೂದಾ ಕಾನೂನುಗಳು

ನ್ಯಾಯವಿಧಾಯಕಸಭೆಯವರ ಪರ್ಯಾಲೋಚನೆಯಲ್ಲಿರುವ ಮಸೂದಾ ಕಾನೂನುಗಳ ಪೈಕಿ ಹಾಲಿ ಇಲ್ಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸೀಜರ್ ಕೋಡನ್ನು 1908ನೇ ಇಸವಿಯ 5ನೆ ನಂಬರ್ ಇಂಡಿಯಾ ಆಕ್ಟಿನಂತೆ ತಿದ್ದುಪಾಟು ಮಾಡುವುದಕ್ಕಾಗಿ ಹುಟ್ಟಿರುವ ಮಸೂದೆಯು ಮುಖ್ಯವಾದದ್ದು ಈ ಹೊಸ ಮಸೂದೆಯಲ್ಲಿ ಹಳೇ ಕೋಡಿನಲ್ಲಿದ್ದ ಇನ್ಸಾಲ್ವೆನ್ಸಿಗೆ ಸಂಬಂಧಪಟ್ಟ ನಿಯಮಗಳನ್ನು ಬಿಟ್ಟುಬಿಟ್ಟಿರುತ್ತದೆ ಇದಕ್ಕಾಗಿ ಒಂದು ಹೊಸ ಇನ್ಸಾಲ್ವೆನ್ಸಿ ಕಾನೂನಿನ ಮಸೂದೆಯನ್ನು ತಯಾರು ಮಾಡಿರುತ್ತದೆ ಇದಲ್ಲದೆ ಗಾರ್ಡಿಯನ್ ಮತ್ತು ವಾರ್ಡು ಬಿಲ್ಲು ಎಂದರೆ ಮೈನರುಗಳ ಸ್ವತ್ತನ್ನು ನೋಡಿಕೊಳ್ಳುವ ಬಗ್ಗೆ ಮಾಡಿರುವ ಒಂದು ಮಸೂದೆ ಕಾನೂನು ತುಂಬಾ ಮುಖ್ಯವಾದದ್ದು ಆದರಿಂದ ಹಾಲಿ ಜಾರಿಯಲ್ಲಿರುವ ಕಾನೂನಿನ ನ್ಯೂನತೆಗಳನ್ನು ಸರಿಪಡಿಸಲು ಉದ್ದೇಶಿಸಿದೆ

ಗ್ರಾಮ ಕೆರೆ ಪಂಚಾಯಿತಿಯ ಮಸೂದೆಯು ಸೆಲೆಕ್ಟ್ ಕಮಿಟಿಯಾ ತಿಯುಕ್ತ ಸಮಾಜದವರ ಪರ್ಯಾಲೋಚನೆಯಲ್ಲಿದೆ ನಿಕ್ಷೇಪವನ್ನು ಕುರಿತ ಮಸೂದೆಯನ್ನು ನ್ಯಾಯವಿಧಾಯಕ ಸಭೆಯಲ್ಲಿ ಪರ್ಯಾಲೋಚಿಸಿದ್ದಾಯಿತು ಇನ್ನೂ ಮಂಜೂರಾಗಿಲ್ಲ

ನ್ಯಾಯವಿಧಾಯಕ ವಿಷಯವನ್ನು ಕುರಿತು ಪ್ರಸ್ತಾಪಿಸುವಲ್ಲಿ, ಒಂದು ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸಿದವರಿಗೆ ದಾಯಭಾಗದ ಹಕ್ಕು ಮುಂತಾದ್ದು ತಪ್ಪಿಹೋಗದಂತೆ ಮಾಡುವುದಕ್ಕಾಗಿ 1905ನೆ ಇಸವಿಯಲ್ಲಿ ತಯಾರಾದ ಮಸೂದಾ ಕಾನೂನನ್ನು ಕುರಿತು ಸಂಕ್ಷೇಪವಾಗಿ ಸೂಚಿಸಬೇಕಾಗಿದೆ ಈ ಮಸೂದೆಯನ್ನು ಸಮುಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಿದ್ದೂ, ಕೆಲವರು ಸದರಿ ರೆಗ್ಯುಲೇಷನನ್ನು ಜಾರಿಗೆ ತರಬೇಕೆಂತಲೂ, ಅನೇಕರು ಅದನ್ನು ಜಾರಿಗೆ ತರಕೂಡದೆಂತಲೂ ಸರಕಾರಕ್ಕೆ ಅಹವಾಲ್ ಬರೆದುಕೊಂಡದ್ದೂ ತಮ್ಮಗಳಿಗೆ ತಿಳಿದೇ ಇದೆ ಈ ವಿಷಯವಾಗಿ 1906ನೆ ಇಸವಿಯ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆ ನಡೆದು ಸದರಿ ರೆಗ್ಯುಲೇಷನನ್ನು ಜಾರಿಗೆ ತರಕೂಡದೆಂದು ಬಹುಮಂದಿ ಅಭಿಪ್ರಾಯಪಟ್ಟದ್ದರಿಂದಲೂ, ಅದನ್ನು ವ್ಯವಸ್ಥೆಮಾಡುವುದಕ್ಕೆ ನ್ಯಾಯವಿಧಾಯಕ ಸಭೆಯು ಆಗ ಇಲ್ಲದೇ ಇದ್ದದ್ದರಿಂದಲೂ ಆ ಪ್ರಸ್ತಾಪವನ್ನು ಅಷ್ಟಕ್ಕೆ ನಿಲ್ಲಿಸಿದ್ದಾಯಿತು ಈ ವಿಷಯಕ್ಕೆ ಈಚೆಗೆ ವಿಶೇಷ ಪ್ರಾಮುಖ್ಯತೆ ಹುಟ್ಟಿ ಕ್ರೈಸ್ತಮತದ ಮಿಷನ್ ಸಂಘದವರು ಕಳೆದ ಮಾರ್ಚಿ ತಿಂಗಳಲ್ಲಿ ತಮ್ಮ ಪ್ರತಿನಿಧಿಗಳ ಮೂಲಕ ಶ್ರೀಮನ್‌ಮಹಾರಾಜರವರ ಸನ್ನಿಧಿಯಲ್ಲಿ ತಮ್ಮ ಅಹವಾಲುಗಳನ್ನು ಅರಿಕೆಮಾಡಿಕೊಂಡರು. ಹಿಂದಿನ ಅಧಿಕಾರಿಗಳು ಈ ವಿಷಯದಲ್ಲಿ ಉಪಕ್ರಮಿಸಿದ ಕಾರ್ಯವನ್ನು ಕ್ರಮವಾಗಿ ತೀರ್ಮಾನಕ್ಕೆ ತರಬೇಕೆಂದು ಈಗಿನ ಸರ್ಕಾರದವರು ಅಭಿಪ್ರಾಯವುಳ್ಳವರಾಗಿದಾರೆ, ಎಂದರೆ, ಇಂಥಾ ಕಾನೂನು ನಿಜವಾಗಿ ಅವಶ್ಯಕವೇ ಎಂಬ ಅಂಶವನ್ನು ನಿರ್ಧರಿಸಲು ಇದಕ್ಕೆ ಸಂಬಂಧಪಟ್ಟ ಮಸೂದಾ ಕಾನೂನನ್ನು ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗೆ ತರುತ್ತದೆ ಹೀಗೆ ಮಾಡೋಣದರಿಂದ ಈ ಪ್ರಬಲವಾದ ವಿಷಯವನ್ನು ಸರ್ವರೂ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅನುಕೂಲವಾಗುವುದು"

ಅಲ್ಲಿಂದ ಮುಂದಕ್ಕೆ ಮೆ॥ ಆನಂದರಾಯರವರು ರೆವಿನ್ಯೂ ಕಮಿಷನರ್‌ರವರ ಅಧಿಕಾರವನ್ನು ಹೆಚ್ಚಿಸಿ, ಅವರಿಗೆ ಗ್ರಾಮನಿವಾರಣೆಯ ಕಾರ್ಯಗಳು ನಡೆಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ವಿಚಾರವನ್ನೂ, ಶೀಘ್ರಲಿಪಿ ಪಾಠಶಾಲೆಯ ಕೆಲಸವನ್ನೂ, ವಿಶಾಲ ದುರ್ಗಗಳ ವಿಲೇವಾರಿಗೆ ಮಾಡಿಟ್ಟ ಏರ್ಪಾಡನ್ನೂ, ರೆವಿನ್ಯೂ ವ್ಯವಸಾಯ ಗೆಜೆಟ್ಟಿನ ಸ್ಥಿತಿಗತಿಯನ್ನೂ ಪ್ರಸ್ತಾಪಮಾಡಿ, ವ್ಯವಸಾಯದ ಇಲಾಖೆ ವಿಷಯವಾಗಿ ಹೇಳಿದ್ದೇನೆಂದರೆ,—

ವ್ಯವಸಾಯದ ಇಲಾಖೆ

ರಾಗಿಯ ಬೆಳೆಗೆ ಸೊಪ್ಪಿನ ಗೊಬ್ಬರವನ್ನು ಉಪಯೋಗಿಸುವುದರ ಪ್ರಯೋಜನ, ಬತ್ತದ ಸಾಗುವಳಿ ಮಾಡುವ ವಿಧಾನಗಳು, ಅದಕ್ಕೆ ಬೇಕಾದ ಗೊಬ್ಬರ, ಭತ್ತವನ್ನೂ ಕಡಲೆಯನ್ನೂ ಬದಲಾಯಿಸಿ ಸಾಗುವಳಿ ಮಾಡುವುದರಿಂದ ಉಂಟಾಗುವ ಪ್ರಯೋಜನ ವರ್ಷದಲ್ಲಿ ಸದಾ ಕಬ್ಬಿನಬೆಳೆ ಒಂದನ್ನೇ ಇಡುವುದರ ಕ್ರಮ ಅದನ್ನು ಭತ್ತ, ನೆಲಗಡಲೆಕಾಯಿ ಕಡಲೆ ಇವುಗಳ ಜೊತೆಗೆ ಬದಲಾಯಿಸಿ ಪೈರು ಮಾಡುವುದರ ಪ್ರಯೋಜನ—ಇವೇ ಮೊದಲಾದ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಹೆಬ್ಬಾಳದ ವ್ಯವಸಾಯ ಪರೀಕ್ಷಾಕ್ಷೇತ್ರದಲ್ಲಿ ಅಜಮಾಯಿಷಿಗಳನ್ನು ನಡೆಸಲಾಯಿತು ಈ ಅಜಮಾಯಿಷಿಯಿಂದ ಕಂಡ ಒಂದೆ ಅಂಶಗಳ ರಿಪೋರ್ಟು ಬಂದ ತರುವಾಯ ಇವುಗಳನ್ನು ಛಾಯಿಸ್ತಾರದಲಾಗುವುದು ಬೇರೆ ಬೇರೆ ತಳಿ ಭತ್ತ, ಕಬ್ಬು ಇವುಗಳ ಸಾಗುವಳಿಯಲ್ಲಿಯೂ ಅಜಮಾಯಿಷಿ ನಡೆಯಿತು

ರೆವಿನ್ಯೂ ಕಮಿಷನರವರು ಕೆಲವು ತಳಿ ಭತ್ತ ನೆಲಗಡಲೆಕಾಯಿ, ಹುಲ್ಲು ಇವುಗಳ ಬಿತ್ತನೆ ಕಾಳುಗಳನ್ನು ಇತರ ಕಡೆಗಳಿಂದ ತರಿಸಿಕೊಂಡು ಅಜಮಾಯಿಷಿ ಬಗ್ಗೆ ಜಮೀನ್ದಾರರಿಗೆ ಹಂಚಿದರು, ಮತ್ತು ಕೆಲವು ವ್ಯವಸಾಯದ ಮುಟ್ಟುಗಳನ್ನು ಪ್ರದರ್ಶಿಸುವುದಕ್ಕೂ, ಉಪಯೋಗಿಸಿ ತೋರಿಸುವುದಕ್ಕೂ, ಬೇಕಾದವರಿಗೆ ತರಿಸಿಕೊಡುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿದರು ಮಾರೀಕಣಿವೆಯ ಕೆರೆ ಕೆಳಗಣ ಕೆಲವು ಜಮೀನುಗಳಲ್ಲಿ ಅಜಮಾಯಿಷಿ ತರೀಕ ಹಿಪ್ಪುನೇರಳೆ ಪೈರು ಇಡಿಸಿದೆ

ಇಷ್ಟೇ ಅಲ್ಲದೆ ಮೇಲ್ಕಂಡ ಪರೀಕ್ಷಾ ಕ್ಷೇತ್ರದಲ್ಲಿ ಸಕ್ಕರೆ ಮಾಡುವ ವಿಧಾನವನ್ನು ಜನಗಳಿಗೆ ತೋರಿಸಿ ಕೊಡುವ ಉದ್ದೇಶ ಒಂದು ಪ್ರದರ್ಶನವನ್ನು ಏರ್ಪಡಿಸಿ ಸೆಂಟ್ರಿಫ್ಯೂಗಲ್ ಎಂಬ ಯಂತ್ರದಿಂದ ಸಕ್ಕರೆ ತಯಾರುಮಾಡಿದ್ದಲ್ಲದೆ, ಚೌಕವಾದ ಕೆಲವು ಕೊಪ್ಪರಿಗೆಗಳನ್ನು ಸಾಲಾಗಿಟ್ಟು ಕಬ್ಬಿನ ಹಾಲನ್ನು ಒಂದರಿಂದ ಇನ್ನೊಂದಕ್ಕೆ ಬಿಟ್ಟುಕೊಂಡು ಇವುಗಳಿಗೆ ತಕ್ಕಂತೆ ಉರಿ ಹೆಚ್ಚು ಕಮ್ಮಿ ಮಾಡಿ ಹಾಲನ್ನು ಕುದಿಸುವುದರಿಂದ ಪೇಟೆಯಲ್ಲಿ ಮಾರಾಟಕ್ಕೆ ಬರುತ್ತಿರುವ ನಾಟು ಸಕ್ಕರೆಗಿಂತ ಬಹು ಶುಭ್ರವಾದ ಸಕ್ಕರೆಯನ್ನು ತಯಾರುಮಾಡಬಹುದೆಂದು ತೋರಿಸಲಾಯಿತು ಕಾಕಂಬಿಯಿಂದ ಒಳ್ಳೇ ಬೆಲ್ಲವನ್ನೂ ತಯಾರುಮಾಡಲಾಯಿತು ಮೇಲ್ಕಂಡ ಪ್ರದರ್ಶನವನ್ನು ಅನೇಕ ರೈತಾಬಿ ಜನರು ನೋಡಿಕೊಂಡು ಹೋದರು ಈ ಇಲಾಖೆಯವರು ಕಬ್ಬಿನ ಬೆಳೆ, ಸಕ್ಕರೆ ತಯಾರಿ ಈ ವಿಷಯಗಳಲ್ಲಿ ಕಂಡು ಹಿಡಿದಿರುವ ಅಂಶಗಳನ್ನು ಜನಗಳಿಗೆ ಸುಲಭವಾಗಿ ತಿಳಿಸುವ ಹಾಗೆ ಒಂದು ಪುಸ್ತಕವನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ತಯಾರುಮಾಡಿಸಿ ಕ್ಷಿಪ್ರದಲ್ಲಿಯೇ ಛಾಪಿಸಲಾಗುತ್ತದೆ

ವ್ಯವಸಾಯ ಪರೀಕ್ಷಾ ಕ್ಷೇತ್ರದಲ್ಲಿ ಉಪಯೋಗಿಸುತ್ತಿರುವ ಹೊಸತರದ ವ್ಯವಸಾಯದ ಮುಟ್ಟುಗಳು ಬೇಕೆಂದು ಅನೇಕರು ಅಪೇಕ್ಷಿಸಿದರು, ಆದಕಾರಣ ಅಂಥಾ ಮುಟ್ಟುಗಳನ್ನು ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಪ್ರದರ್ಶಿಸಬೇಕೆಂದು ಉದ್ದೇಶಿಸಿದೆ ಲ್ಯಾಬೊರೇಟರಿ ಎಂಬ ಶೋಧನಾಲಯದಲ್ಲಿ ಸೊಪ್ಪಿನ ಗೊಬ್ಬರ, ಕಬ್ಬು, ಕಾಫಿ, ವಿವಿಧ ಭೂಗುಣಗಳು, ಮತ್ತು ಯಾವ ಯಾವ ತರಹೆ ಜಮೀನಿನಲ್ಲಿ ನೀರು ಎಷ್ಟೆಷ್ಟು ಇರುತ್ತದೆ ಎಂಬ ವಿಷಯಗಳಲ್ಲಿ ಅಜಮಾಯಿಷಿ ನಡೆಸಿತು"

ಆ ಮೇಲೆ ಪೈರು ಪಚ್ಚೆ ಪಲಾದಿಗಳ ಬೆಳೆಗೆ ಹಿಡಿಯುವ ಕ್ರಿಮಿರೋಗಗಳ ಪರಿಶೋಧನೆಗಳ ವಿಷಯದಲ್ಲಿ ನಡೆಸಲ್ಪಟ್ಟಿರುವ ಕಾರ್ಯಗಳೂ, ದಾಸುಗಳ, ಶೈಗಾರಿಕೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳೂ ಪ್ರಸ್ತಾಪ ಮಾಡಲ್ಪಟ್ಟವು

ಪಶುವೈದ್ಯದ ಇಲಾಖೆ

ಈ ಸಾಲಾಖೈರಿನಲ್ಲಿ ಪ್ರತಿ ಡಿಸ್ಟ್ರಿಕ್ಟ್ ಕಸಬೆಗೂ ಒಂದೊಂದರ ಮೇರೆಗೆ ಎಂಟು ಪಶುರೋಗದ ಆಸ್ಪತ್ರೆಗಳಲ್ಲದೆ ಬರುವ ವರ್ಷದಲ್ಲಿ ಇನ್ನೆರಡು ಆಸ್ಪತ್ರೆಗಳನ್ನು ಹೊಸದಾಗಿ ಏರ್ಪಡಿಸಲಾಗುವುದು ಈ ಆಸ್ಪತ್ರೆಗಳಲ್ಲಿ ಒಟ್ಟು 5,905 ರೋಗಗಳಿಗೆ ಚಿಕಿತ್ಸೆ ನಡೆಯಿತು ಈ ಸಾಲಿನಲ್ಲಿ ದಾಸುಗಳಿಗೆ ಅಂಟುಜಾಡ್ಯಗಳು ಬಹಳವಾಗಿ ತಗುಲಿದುವು, ಪಶುರೋಗದ ಇನ್ಸ್‌ಪೆಕ್ಟರವರೂ ಇವರ ಅಸಿಸ್ಟೆಂಟರುಗಳೂ ಸಹಾ ಈ ಅಂಟುಜಾಡ್ಯಗಳಿಗೆ ಚಿಕಿತ್ಸೆ ಮಾಡಿ ಇವುಗಳನ್ನು ಕಮ್ಮಿ ಮಾಡುವುದಕ್ಕೋಸ್ಕರ ಸಂಸ್ಥಾನದಲ್ಲಿ ಬಹಳವಾಗಿ ಸಂಚಾರ ಮಾಡಿದ್ದಲ್ಲದೆ ತುಂಬಾ ಮೆಹನತ್ತಿನಿಂದ 11,000 ಕ್ಕಿಂತ ಜಾಸ್ತಿ ದಾಸುಗಳಿಗೆ ಔಷಧಿ ಹಾಕಿದರು ಈ ಬಗ್ಗೆ ಸಿದುವಿನ ಶಾಲನ್ನು ಇಂಡಿಯಾ ಸರ್ಕಾರದ ಕ್ರಿಮಿಶಾಸ್ತ್ರ ಪಂಡಿತರು ಮುಕ್ತೇಸರ ನಿಂದ ಕಾರ್ಖಾನೆಯಿಂದ ದಯವಿಟ್ಟು ನಮಗೆ ಸರಬರಾಯಿ ಮಾಡಿದರು ಈ ಪ್ರಕಾರ ಸಿದುವು ಹಾಕುವುದನ್ನು ಜನಗಳು ಬೇಗನೆ ಅವಲಂಬಿಸುದ್ದು ಒಂದು ಸಂತೋಷಕರವಾಗಿದೆ

ವ್ಯವಸಾಯ ಬ್ಯಾಂಕುಗಳು

ವ್ಯವಸಾಯ ಬ್ಯಾಂಕುಗಳು ಜಾಗ್ರತೆಯಾಗಿ ಒಂದೊಂದಾಗಿ ನಿಂತುಹೋಗುತ್ತಾ ಬರುತ್ತಿರುವುದು ತುಂಬಾ ವಿಷಾದಕರವಾಗಿದೆ ಅವುಗಳನ್ನು ನಡೆಸಿಕೊಂಡು ಬರುವ ಜನಗಳಿಗೆ ಕಾರ್ಯನಿರ್ವಾಹಕ ಶಕ್ತಿಯೂ, ಉತ್ಸಾಹವೂ, ಜನಗಳ ಕ್ಷೇಮಚಿಂತನೆಯೂ ಇಲ್ಲದೆ ಇರುವುದೇ ಇದಕ್ಕೆ ಕಾರಣವಾಗಿದೆ ಈ ವರ್ಷದಲ್ಲಿ ಆರು ಬ್ಯಾಂಕುಗಳು ಮೋಕೂಫ್ ಆಗಿ ಸಾಲಾಖೈರಿನಲ್ಲಿ ೫ ಬ್ಯಾಂಕುಗಳು ಮಾತ್ರ ಉಳಿದಿದ್ದುವು ಇವುಗಳ ಪೈಕಿ 1 ಬ್ಯಾಂಕುಗಳಲ್ಲಿ ಮಾತ್ರ ಪ್ರಯೋಜನಕರವಾದ ಕೆಲಸವು ಸ್ವಲ್ಪಮಟ್ಟಿಗೆ ನಡೆದಿರುವುದೆಂದು ಹೇಳಬಹುದು, ಸರ್ಕಾರದ ಸಾಲವನ್ನು ತೀರಿಸಿ ಸ್ವಂತ ಹಣದಿಂದ ಕಾರ್ಯನಿರ್ವಾಹ ಮಾಡುತ್ತಿರುವುದು ನಂಜನಗೂಡು ಬ್ಯಾಂಕು ಒಂದರಲ್ಲಿಯೇ ಹೊರತು ಬೇರೆ ಯಾವುದರಲ್ಲಿಯೂ ಇಲ್ಲ

ಈ ವರ್ಷದಲ್ಲಿ ಕಾರ್ಯ ಜರುಗಿಸುತ್ತಿದ್ದ ಬ್ಯಾಂಕುಗಳಿಂದಲೂ, ಮೋಕೂಫ್ ತರದೂದಿನಲ್ಲಿದ್ದ ಬ್ಯಾಂಕುಗಳಿಂದಲೂ ಸರ್ಕಾರಕ್ಕೆ ಸಲ್ಲಬೇಕಾದ ಸಾಲದ ಅಸಲು ಮತ್ತು ಬಡ್ಡಿ ಬಗ್ಗೆ 80,000 ರೂಪಾಯಿ ವಸೂಲಾಯಿತು ಸಂಸ್ಥಾನವಲ್ಲೆಲ್ಲಾ ದುರ್ಭಿಕ್ಷ ಪ್ರಾಪ್ತವಾಗಿದ್ದ ಸಬಬು ಕೆಲವು ಬ್ಯಾಂಕುಗಳಿಂದ ಬರಬೇಕಾದ ಸಾಲವನ್ನು ಕೊಂಚಕಾಲ ತಡೆದು ತೀರಿಸಬಹುದೆಂತ ಹುಕುಂ ಮಾಡಲಾಯಿತು

ಅನ್ಯೋನ್ಯಸಹಾಯಕ ಸಂಘಗಳು,

ವ್ಯವಸಾಯ ಬ್ಯಾಂಕುಗಳು ಒಂದೊಂದಾಗಿ ಕಡಮೆ ಬೀಳುತ್ತಾ ಬಂದುದಕ್ಕೆ ಪ್ರತಿಯಾಗಿ ಅನ್ಯೋನ್ಯಸಹಾಯಕ ಸಂಘಗಳ ಸಂಖ್ಯೆಯು ಬಹುಮಟ್ಟಿಗೆ ಹೆಚ್ಚುತ್ತಾ ಬಂದಿರುವುದು ತುಂಬಾ ಸಂತೋಷಕರವಾಗಿರುತ್ತದೆ ಇವುಗಳು 27 ರಿಂದ 43 ಕ್ಕೂ, ಇವುಗಳ ಮೆಂಬರುಗಳ ಸಂಖ್ಯೆಯು 2,151 ರಿಂದ 3,181 ಕ್ಕೂ, ಮತ್ತು ಸದರಿ ಮೆಂಬರುಗಳಿಂದ ಅವರವರ ಹಿಸ್ಸೆಗಾಗಿ ಪಾವತಿಯಾಗಿರುವ ಬಂಡವಾಳದ ಮೊಬಲಗು 57,000 ರೂಪಾಯಿಯಿಂದ 1,05,000 ರೂಪಾಯಿಗೂ, ಹೆಚ್ಚಿನ ಮೆಂಬರುಗಳು ಬಡ್ಡಿ ಪಡೆಯುವುದಕ್ಕಾಗಿ ಡಿಪಾಜಿಟ್ ಇಟ್ಟಿರುವ ಮೊಬಲು 6,300 ರೂಪಾಯಿಯಿಂದ 12,700 ರೂಪಾಯಿಗೆ ಹೆಚ್ಚಿರುವುದು ಇದರಿಂದ ಇಂಥಾ ಸಂಘಗಳಲ್ಲಿ ಜನಗಳಿಗೆ ನಂಬಿಕೆಯು ಹೆಚ್ಚುತ್ತಾ ಇದೆಯೆಂದು ತೋರುತ್ತದೆ ಈ ಸಂಘಗಳಿಂದ ಮೆಂಬರುಗಳು 2½ ಲಕ್ಷ ರೂಪಾಯಿನ ಸಾಲವನ್ನು ನಗದಾಗಿ ತೆಗೆದುಕೊಂಡಿರುತ್ತಾರೆ ಈ ಪೈಕಿ 3 ಲಕ್ಷ ರೂಪಾಯಿಯು ಸದರಿ ಸಂಘಗಳಿಗೆ ಈ ವರ್ಷದಲ್ಲಿಯೇ ವಾಪಸ್ಸು ಪಾವತಿಯಾಗಿದೆ ಹಾಲಿ ಇರುವ 43 ಸಂಘಗಳ ಪೈಕಿ 19 ಸಂಘಗಳು ಗ್ರಾಮಾಂತರಗಳಲ್ಲಿ ಏರ್ಪಟ್ಟ ವ್ಯವಸಾಯಕ ಸಂಘಗಳಾಗಿಯೂ, 12 ಸಂಘಗಳು ಸಾಲಕೊಡುವ ಮತ್ತು ಆಹಾರ ಸಾಮಗ್ರಿಗಳನ್ನು ಒದಗಿಸುವ ಸಂಘಗಳಾಗಿಯೂ, ಮತ್ತು 8 ಸಂಘಗಳು ಕೈಗಾರಿಕೆಗೆ ಸಂಬಂಧಪಟ್ಟ ಸಂಘಗಳಾಗಿಯೂ ಇವೆ ಈ ಕಡೆಯಲ್ಲಿ ಸೂಚಿಸಿರುವ 8 ಸಂಘಗಳ ಪೈಕಿ 6 ಸಂಘಗಳು ನೇಯಿಗೆ ಕೆಲಸಕ್ಕೂ ಒಂದು ಸಂಘವು ರೇಷ್ಮೆ ನೂಲುವ ಕೆಲಸಕ್ಕೂ ಮತ್ತೊಂದು ಸಂಘವು ಚರ್ಮದ ಸಾಮಾನು ತಯಾರಿಸುವ ಕೆಲಸಕ್ಕೂ ಪ್ರೋತ್ಸಾಹ ಕೊಡುವಂಥವುಗಳಾಗಿವೆ ಈ ಅನ್ಯೋನ್ಯಸಹಾಯಕ ಸಂಘಗಳ ವಿಷಯವು ಸಂಸ್ಥಾನದಲ್ಲೆಲ್ಲಾ ಚೆನ್ನಾಗಿ ತಿಳಿದಿದೆ ಜನಗಳು ಈ ಸಂಘಗಳ ವಿಚಾರದಲ್ಲಿ ತುಂಬಾ ಆಸಕ್ತಿಯನ್ನು ತೋರ್ಪಡಿಸುತ್ತಲಿದ್ದಾರೆ ಆದರೂ ಅಲ್ಲಲ್ಲಿ ಇಂಥಾ ಸಂಘ ಹುಟ್ಟಿ ಅಭಿವೃದ್ಧಿಯಾಗಬೇಕಾದರೆ ಪ್ರಮುಖರಾದ ಒಬ್ಬೊಬ್ಬರು ಮುಂದಾಳುಗಳಾಗಿ ನಿಂತು ಆಸಕ್ತಿಯಿಂದ ಕೆಲಸ ಮಾಡಬೇಕಾಗಿದೆ ಮತ್ತು ಇನ್ನೂ ಬಹಳ ಕಾಲದ ವರೆಗೆ ಈ ಸಂಘಗಳ ವಿಷಯದಲ್ಲಿ ಬುದ್ಧಿಶಾಲಿಗಳಾಗಿಯೂ ಪ್ರಜಾಹಿತೈಷಿಗಳಾಗಿಯೂ ಇರುವ ಜನಗಳು ಜಂಬಾಯಿ ಮುತವರ್ಜಿ ವಹಿಸಬೇಕಾದದ್ದು ಅತ್ಯವಶ್ಯಕವಾಗಿದೆ ಈ ಮಾತಿಗೆ ದೃಷ್ಟಾಂತವಾಗಿ ಇದೇ ಸಾಲಿನಲ್ಲಿ ಆನೆಕಲ್ ತಾಲ್ಲೂಕು ಮಾಯಸಂದ್ರದ ಧಾನ್ಯದ ಬ್ಯಾಂಕು ಮೋಕೂಫ್ ಆದದ್ದನ್ನು ಇಲ್ಲಿ ಸೂಚಿಸಬಹುದು ಈ ಬ್ಯಾಂಕಿನಲ್ಲಿ ಮೊದಲು ಚೆನ್ನಾಗಿ ಕೆಲಸ ನಡೆಯುತ್ತಿದ್ದರೂ ಅದರ ಕಾರ್ಯದರ್ಶಿಯು ಪ್ಲೇಗ್ ರೋಗದಿಂದ ಮೃತಪಟ್ಟನಂತರ ಬೇರೆ ಇನ್ನೊಬ್ಬ ದಕ್ಷರಾದ ಕಾರ್ಯದರ್ಶಿಯು ಸಿಕ್ಕದೆ ಹೋದ ಪ್ರಯುಕ್ತ ಆ ಬ್ಯಾಂಕನ್ನೇ ಮೋಕೂಫ್ ಮಾಡಬೇಕಾಗಿ ಬಂತು

ಘನವನ್ನು ಹೊಂದಿದ ವೈಸರಾಯಿಯವರ ಆಗಮನ

ಈ ಉಪನ್ಯಾಸದ ಉಪಕ್ರಮದಲ್ಲಿ ಈ ವರ್ಷದ ಸುಭಿಕ್ಷವನ್ನು ಕುರಿತು ತಮ್ಮಗಳನ್ನು ಅಭಿನಂದಿಸಿದಂತೆ ಉಪಸಂಹಾರದಲ್ಲಿಯೂ ಶೀಘ್ರದಲ್ಲಿ ಸಂಭವಿಸುವುದಾಗಿರುವ ಒಂದು ಹರ್ಷಕರವಾದ ಮುಖ್ಯ ರಾಜಕೀಯ ವಿಷಯವನ್ನು ಕುರಿತು ತಮ್ಮಗಳನ್ನು ಅಭಿನಂದಿಸಲು ಸಂತೋಷಿಸುತ್ತೇವೆ ಇದು ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್‌ರವರ ಆಗಮನವೇ, ಘನವನ್ನು ಹೊಂದಿದ ಲಾರ್ಡ್ ಮಿಂಟೋ ಪ್ರಭುಗಳು ಈ ಸಂಸ್ಥಾನಕ್ಕೆ ದಯಮಾಡಿಸಿ ಆತಿಥ್ಯವನ್ನು ಸ್ವೀಕರಿಸಬೇಕೆಂದು ನಮ್ಮ ಪ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರರವರಿಂದ ಮಾಡಲ್ಪಟ್ಟ ಆಹ್ವಾನವನ್ನು ಅಭಿಮಾನವಿಟ್ಟು ಅಂಗೀಕರಿಸಿರುತ್ತಾರೆ ಮಹತ್ತಾದ ಯಾವ ಸಾರ್ವಭೌಮ ಪ್ರಭುತ್ವವು ಇಂಡಿಯಾ ದೇಶದ ಪ್ರಜೆಗಳ ಕ್ಷೇಮಕ್ಕೂ ನೆಮ್ಮದಿಗೂ ಕಾರಣಭೂತನಾಗಿರುವುದೋ, ಯಾವ ಪ್ರಭುತ್ವಕ್ಕೆ ನಮ್ಮ ಮೈಸೂರು ಸಂಸ್ಥಾನದ ಪ್ರಜೆಗಳು ಅನುಲ್ಲಂಘನೀಯವಾದ ಕೃತಜ್ಞತಾ ರಾಜಭಕ್ತಿಗಳಿಂದ ಬದ್ಧರಾಗಿರುತ್ತಾರೆಯೋ ಅಂಥಾ ಪ್ರಭುತ್ವದ ಮಹನೀಯರಾದ ಪ್ರತಿನಿಧಿಗಳನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸುವುದರಲ್ಲಿ ಈ ಸಂಸ್ಥಾನದ ಪ್ರಜೆಗಳೆಲ್ಲರೂ ತಮ್ಮೊಡನೆ ಏಕೀಭವಿಸುವರೆಂದು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರರವರು ದೃಢವಾಗಿ ನಂಬಿರುತ್ತಾರೆ

Printed and Published by the Rev H Gulliford, Proprietor and Manager, Wesleyan Mission Press, Mysore 28/10/1909

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭. ಮೈಸೂರು—ಸೆ ೧೯೧೯ ನೇ ಇಸವಿ ನವಂಬರ್ ತಾರೀಖು ೮ ನೇ ಗುರುವಾರ. ಸಂಚಿಕೆ ೨೩.

ದೀಪಾವಳಿಗಾಗಿ ಬಹುಮಾನ.

75-1

ಈ ಕೆಳಗೆ ವಿವರಿಸಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ನವೆಂಬರ್ ಅಕ್ಟೋಬರ್ ವರೆಗೆ ಮಾತ್ರ ವಿ ಪಿ ಛಾರ್ಜು ಅಲಾಹಿದಾ

ನಿರುಪಮಾ—ಹೊಸನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಹೆಂಡಕುಡುಕರ ಅವ್ಯವಸ್ಥೆ, ಕಳ್ಳರ ಕಾರ್ಯ ಇವುಗಳನ್ನು ತೋರಿಸಿ ತಿದ್ದುವುದು ಅಂದವಾದ ಮುದ್ರಣ ಸೊಗಸಾದ ಪದ್ಯಗಳಿವೆ ಕ್ರಯ ರೂ ೦-೧೨-೦

ಉತ್ಪಲಕುಮಾರಿ— ಇದೊಂದು ಹೊಸ ನಾಟಕ ಥಿಯೇಟರ್ ನಾಟಕಗಳನ್ನು ಹೋಲುವದು ಶೃಂಗಾರರಸವೂ ಹಾಸ್ಯರಸವೂ ಇದರಲ್ಲಿ ಪ್ರಾಮುಖ್ಯವನ್ನು ಹೊಂದಿರುವವು ಸತ್ಸಂಗದುಸ್ಸಂಗಗಳ ತಾರತಮ್ಯವನ್ನು ಬೋಧಿಸುವ ಈ ಪುಸ್ತಕದ ಬೆಲೆ ರೂ ೦ ೮ ೦

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುಗಾರವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ! ಋತುಕಾಲದಲ್ಲಿರಬೇಕಾಗುವ ನಡವಳಿಕೆ ಗರ್ಭಿಣಿಯರ ಸ್ಥಿತಿ, ಪ್ರಸವಾವಸ್ಥೆ, ಬಾಲರಕ್ಷಣ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅವುಗಳ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳು ಉಳಿದಿವೆ ಕ್ರಯ ರೂ ೦ ೧೨-೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು, ಆರತಿಯೆತ್ತುವ ಹಾಡು, ಬಳೆಯ ಹಾಡು, ಬಾಗಿಲು ತಡೆಯುವದು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ "ಬಾಲಿಕಾಗೀತಮಾಲಿಕಾ" ದ ಮಟ್ಟುಗಳನ್ನೇ ಅನುಸರಿಸಿದೆ ಕ್ರಯ ರೂ ೦-೪-೦

ಇವಲ್ಲದೆ "ಪ್ರಹಸನಚತುಷ್ಟಯ" ಎಂಬ ನಾಲ್ಕು ನಕಲಿಯುಳ್ಳ ಪುಸ್ತಕ (೦-೪-೦), "ಆಯುರ್ವೇದಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ (೦-೩-೬), "ಸತ್ಯಸಂಜೀವಿನಿ" ಎಂಬ ಸೊಗಸಾದ ಕಾದಂಬರಿ (೦-೮-೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ಣಾಟಕಚಂದ್ರಿಕೆ, ಮೈಸೂರು

'ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ	೧—೦—೦
ಪರಸ್ಥಳದವರು ಅಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ	ರೂ	೧—೧೪—೦
" " ೬ " "	"	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂತಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪುಸ್ತಕಗಳು

70-7

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧ ೮-೦ ಇಂಗ್ಲಿಷ್ ಭಾಷೆಯನ್ನು ಓದಲೂ ಬರೆಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧-೨ ತಿಂಗಳೊಳಗಾಗಿ ತಿಳಿಸಿ ತಾನಾಗಿ ಕಲಿಸುವ ಉತ್ತಮ ಪುಸ್ತಕವಿದು ಕ್ರಯ ೧-೮-೦

ಪಿ ರಾಮಾಚಾರ್ಯ ವಿಳಾಸ —ಬಿ ಕೆ ಮೂರ್ತಿ ಕಂಪೆನಿ
ನಂ ೧೮ ಓಂದನ ಬೀದಿ ಸಿದ್ದಿಕಟ್ಟೆ ಲಕ್ಕೂರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳೇ ಉಳಿದಿವೆ ಆದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾನಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೮—೦.

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಕೂರ್ ಪೋಸ್ಟ್

ಭೀಮಮಹಿಮಾದರ್ಶ.

72-4

ಮೈಸೂರಿನಲ್ಲಿರುವ ಶ್ರೀಮನ್ಮಹಾರಾಜರವರ ಅರಸು ಬೋರ್ಡಿಂಗ್ ಸ್ಕೂಲ್ ಮಾಸ್ಟರ ವೇ॥ ಎಂ ವಿ ಚಂದ್ರಶೇಖರ ಶಾಸ್ತ್ರಿಗಳಿಂದ ರಚಿತವಾಗಿರುವ ಈ ನೂತನ ಗ್ರಂಥದಲ್ಲಿ ಮಹಾಭಾರತೇತಿಹಾಸವು ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುದಾದರೂ ಮುಖ್ಯವಾಗಿ ಭೀಮಸೇನನ ಜೀವಿತ ಚರಿತ್ರೆಯಲ್ಲವು ಚೆನ್ನಾಗಿ ವರ್ಣಿತವಾಗಿರುವುದು. ಹಿಡಿಂಬ, ಬಕ, ಜರಾಸಂಧ, ಕಿರ್ಮೀರ, ಕೀಚಕ ಮುಂತಾದ ಮಹಾ ವೀರರೊಡನೆ ಭೀಮನು ಕಾಳಗ ಮಾಡಿ ಅವರನ್ನು ಸಂಹರಿಸಿದ ರೀತಿಯೂ, ಹನುಮಂತನೊಡನೆ ಹೋರಾಡುವುದಕ್ಕೆ ಯತ್ನಿಸಿದಾಗ ಅವರಿವರಿಗೆ ನಡೆದ ಸಂವಾದಗಳೂ ವಿವರಿಸಲ್ಪಟ್ಟಿವೆ ಭೀಮನ ಶೌರ್ಯ ಪ್ರದರ್ಶಕಗಳಾದ ಅನೇಕ ಉಪಾಖ್ಯಾನಗಳನ್ನೂ ಒಳಗೊಂಡಿರುವ ಈ ಸದ್ಗ್ರಂಥವು ಭಾಷೆಯಲ್ಲಿಯೂ ಉದ್ದೇಶದಲ್ಲಿಯೂ ಉತ್ತಮತರವಾಗಿರುವುದು "ಧೈರ್ಯಂ ಸರ್ವತ್ರ ಸಾಧಕಂ" ಎಂಬ ನೀತಿಯನ್ನು ಬೋಧಿಸುವ ಈ ಪುಸ್ತಕವು ಅಕ್ಷರಕಾದ ಕನ್ನಡಿಗರಿಗೆಲ್ಲ ಅತ್ಯಂತೋಪಯುಕ್ತವಾಗಿರುವುದು ಇದರ ಬೆಲೆ ೧೦ ಆಣೆ, ವಿ ಪಿ ಮೂಲಕ ೧೨ ಆಣೆ ಪುಸ್ತಕವು ಗ್ರಂಥಕರ್ತರಲ್ಲಿಯೂ, ಮೈಸೂರು ದಿ ಜನರಲ್ ಏಜನ್ಸಿಯಲ್ಲಿಯೂ ದೊರೆಯುವುದು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

47 24

ತಲೆನೋವು, ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕಾಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರು ೬ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಾಫ್ ಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—
ಜಿ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು
ಎಸ್. ಕ್ಲೆಮೆಂಟ್ಸ್,
೬೭, ದೇವರಾಜಮುದಲಿ ಬೀದಿ, ವೇಪೇರಿ, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

23 38

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಛಾಯ) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಹೆಚ್ಚು ಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು.
೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ಯವಾದ ಗುಣಕಾರಿಯು [30-36]

ತಲೆನೋವು ಗಂಟು ಊದುವದು, ವಾತ, ಸಂಧಿವಾತ, ಉಳುಕು, ಅಬಲೆ ಗಂಟು, ಗಂಟು ನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಜಪಿಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦ ೮-೦

ಗಜಕರ್ಣದ ಮುಲಾಮು.

ಮೂರು ನಾಲ್ಕು ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕೆಟ್ಟಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೩-೦ ೧೨ ಡಬ್ಬಿಗಳಿಗೆ ೪-೦-೦

ಅಸ್ತಾಮಿಶ್ರಣ	೨-೦-೦
ಚೇಳುಕಡಿತದ ಮದ್ದು	೦-೮-೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಹಗಳಿಗೆ	೦-೬-೦
ಜುಲಾಬು ಮಾತ್ರೆ—ಜುಲಾಬಿಗೆ	೦-೫-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಖಜ್ಜ ಮುಲಾಮು—ಮಕ್ಕಳ ಖಜ್ಜಿಗೆ	೦-೩-೦
ಕೇಶವರ್ಧನ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಅಸ್ತಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —
ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ
ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 44

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ;
೧ ರೂ ೬ ಆ , ೧ ರೂ ೪ ಆ
ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨
ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩
ಜಾರದ ಟೋಪಿಗಳು ೧ ರೂ. ೧೨ ಆ , ೧ ರೂ ೮ ಆ ೧ ರೂ ೬ ಆ
ಉಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ಥಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ಬಿಡೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ ಎದೆ ಕಲ್ಲರಿಸುವುದು ತಲೆನೋವು, ಗಾಬರಿ ಕೈಯು ನಡುಕ, ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು, ನಿದ್ರಾಭಂಗ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಾಶ್ಮರಿ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [67 10]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೨—೦—೦ ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ೬ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 6 44

(ಸ್ಕಾಟ್ಸ್ ಇಮಲ್ಷನ್)

ಪುಷ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಆಗತ್ಯವಿಲ್ಲ

ರೋಗವು ಬಂದಿದ್ದಾಗ್ಯೂ ಮರ್ಬಲರನ್ನೂ ಬೇಗನೆ ಪಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟು ಮಾಡುತ್ತದೆ

—

ಕ್ರಯಸೋಕದೆ ತಯಾರಾದದ್ದು

—

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್

ಈ ಮಿನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

23 39

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕೋಪ ೩, ವಾಯುನೋವುಗಳೂ, ಹಳೇ ಜ್ವರ, ಕ್ಕಶಕ್ತ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ದುಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಪಿಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದ್ದಾರೆ ೨ ೩ ದಿವಸಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟ ವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಬ್ಬುಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರತರಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4 44

ಗಂಟಲ ಕೆಮ್ಮು, ಗಂಟಲು ಕೆರೆಸುವುದು, ಕುಡಿಗೆಮ್ಮು, ನಾಯಿಕೆಮ್ಮು, ಎಲ್ಲಾ ತರದ ಶೀತ ಗಂಟಲಿನಲ್ಲಿ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣಮಾಡುತ್ತದೆ ಉಸುರು ಎಳೆಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಕೇಶವರ್ಧಿನಿ ಲಹರಿ.

74 4

೩ ಆಣೆ ಪೋಸ್ಟೇಜು ಸ್ಟಾಂಪನ್ನು ಕಳುಹಿ ಪರೆ ಅನುಭವ ನೋಡುವವರಿಗೆ ಸಣ್ಣ ಚೂರ್ಣವನ್ನು ಕಳುಹಿಸುತ್ತೇವೆ ಇದನ್ನು ತಲೆಗೆ ಹಚ್ಚಿಕೊಳ್ಳುವದರಿಂದ ಬಿಸಿಯ ದೋಷವನ್ನು ಹೋಗಲಾಡಿಸಿ, ಕಣ್ಣು ಮಿದುಳನ್ನು ವೃದ್ಧಿಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುವದು ತಲೆಯಲ್ಲಿ ಹೇನು ಬಿದ್ದರೆ ಕೂಡಲೆ ಪಲಾಯನಗೈಯುವವು ತಲೆಯಲ್ಲಿ ಹುಣ್ಣು ಕಜ್ಜಿ ಆದ್ದರೆ ನಾಶವಾಗುವವು ಕೇಶಗಳು ಮೃದುವಾಗಿ ನಿರ್ಮಲವಾಗುವವು ದೇಹಕ್ಕೆ ಹಚ್ಚಿಕೊಂಡರೆ ಹುಳುಕು, ಕಜ್ಜಿ, ಒಣತುರಿ ನಾಶವಾಗುವವು ಕೂಡಲೇ ತರಿಸಿ ಅನುಭವ ನೋಡಿರಿ ಉಪಯೋಗಿಸುವ ಕ್ರಮವನ್ನು ಚೂರ್ಣದ ಸಂಗಡ ಕಳುಹಿಸುತ್ತೇವೆ ಡಬ್ಬಿ ೧ ಕ್ಕೆ ಛಾರ್ಜು ರೂ ೧—೦ ೦

ವಿಳಾಸ —ಪಿ ಮುರಿ ಶಾಲಪ್ಪದೇವರ ಮಠದ ಸಿದ್ಧಾಂತಿಗಳು,

ಹರಪನಹಳ್ಳಿ ಬಳ್ಳಾರಿ ಜಿಲ್ಲಾ.

ಜ್ವರಹರಿ

18 40

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೆಜ್ವರ, ಪಿತ್ತಜ್ವರ, ಶೀತ ಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ ೧—೪ ರೂ ರೂ ೨—೧೨ ೮ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು " ಜ್ವರಹರಿ " ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಎವರು—ತೆಸ್ರಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಂತ್ರಲ್ಲಿ ವಿಶೇಷ —

ತೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಶ್ವೀಜ ಬಹುಳ ಅಷ್ಟಮಿ ಶುಕ್ರವಾರದಿಂದ ಆಶ್ವೀಜ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
5	ಶುಕ್ರ *	ಅಷ್ಟಮಿ	31 ೨೧	ಶ್ಲೇ	೨1 28	20
6	ಶನಿವಾ ೩	ನವಮಿ	32 ೨೫	ಮ	೨೨ 16	21
7	ರವಿವಾ †	ದಶಮಿ	36 1೯	ಪು	೯೦-೦	22
8	ಚಂದ್ರ	ಏಕಾದಶಿ	40 1೫	ಪು	0-10	23
9	ಕುಜ	ದ್ವಾದಶಿ	೪೨-1೨	ಉ	೨-5೯	24
10	ಬುಧ ‡	ತ್ರಯೋದಶಿ	50 ೨೪	ಹ	12 1೬	2೫
11	ಗುರು	ಚತುರ್ದಶಿ	5೨ ೨೮	ಚಿ	18 5೨	26

* ದಗ್ಧಯೋಗ, ಮೃತ್ಯುಯೋಗ

೩ ಮಹಾವ್ಯತಿಪಾತ, ದಗ್ಧಯೋಗ

† ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ ದಗ್ಧಯೋಗ, ಸರ್ವತ್ರ ಏಕಾದಶಿ

‡ ಪ್ರದೋಷ, ನರಕಚತುರ್ದಶೀ ಪ್ರಯುಕ್ತ ನೀರು ತುಂಬುವ ಹಬ್ಬ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ ಕ್ಕೆ	ರೂ	೧೫ ೦ ೦	೧೬ ೮ ೦
ಕೆಂಬೂತಿ ಅಕ್ಕಿ ಅವಲ್		೧೬ ೮ ೦	೧೪ ೮-೦
,, ದುಯಂ		೧೬ ೦ ೦	೧೪ ೦ ೦
ಚಾಪ್ರಾಣಿ ಅಕ್ಕಿ		೧೯ ೦ ೦	೧೫ ೦-೦
ಸಣ್ಣಕ್ಕಿ ಅವಲ್		೧೭ ೦ ೦	೧೬ ೮ ೦
,, ದುಯಂ		೧೬ ೦ ೦	೧೫ ೦-೦
ಕೊಗರೀ ಬೆಳ ಪಲ್ಲ ೧ಕ್ಕೆ		೧೨ ೩ ೦	೧೬ ೦-೦
,, ದುಯಂ		೧೫ ೦ ೦	೧೫-೧ ೦
ಹೈನ್ ರಾಗಿ ಪಲ್ಲ ೧ಕ್ಕೆ		೯ ೦ ೦	೮ ೦ ೦
ಕಾರ್‍ರಾಗಿ		೮ ೧೨ ೦	೭-೮ ೦
ಜೋಳ		೭-೧೨ ೦	೮-೦ ೦
ಹಲಸಂದೆ ಪಲ್ಲ ೧ಕ್ಕೆ		೧೨ ೦ ೦	೧೨ ೦-೦
ಬಿಳೀ ಅವರೆ		೧೪ ೮ ೦	೧೫ ೦ ೦
ಹೆಸರು		೧೪ ೦ ೦	೧೦ ೮-೦
ಉದ್ದು		೧೬-೪ ೦	೧೨ ೮ ೦
ಕಡಲೆ		೧೪ ೪ ೦	೧೦ ೦ ೦
ಎಳ್ಳು ಸೇರ್ ೧೨೭ ಕ್ಕೆ		೧೫ ೦ ೦	೧೪-೦ ೦
ಹುರುಳಿ		೧೪ ೦-೦	೧೨-೮ ೦
ಹರಳು ೧೨೭ ಸೇರಿಗೆ		೧೪ ೦ ೦	೧೨ ೮ ೦
ಸೀಗೇಕಾಯಿ ಮಣ ೧ಕ್ಕೆ		೨ ೮ ೦	೨ ೨ ೦
ಮೆಣಸಿನಕಾಯಿ		೬ ೦ ೦	೩ ೮ ೦
,, ದುಯಂ		೫ ೦ ೦	೩-೦ ೦
ಬೆಲ್ಲ ದೊಡ್ಡ ಅಚ್ಚು		೮ ೮ ೦	ಮ ೨ ೧೦ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೪ ೪ ೦
ಹರಳೆಣ್ಣೆ ,,		೫ ೮ ೦	೪ ೧೨ ೦
ಕೊತ್ತುಂಬರಿ ಪಲ್ಲ ೧ಕ್ಕೆ		೨ ೮ ೦	೯ ೪-೦
ಉಪ್ಪು ,,		೬ ೮ ೦	೫ ೧೨ ೦
ಹುಣಸೇ ಹಣ್ಣು		೧ ೧೨ ೦	೧ ೧೦ ೦
,, ಹಳೇದು		೧ ೮-೦	೧ ೮ ೦
ತುಪ್ಪ ಮಣ ೧ಕ್ಕೆ		೧೬ ೮ ೦	೧೪ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೨ ೪ ೦	೪ ೨-೦
ತೆಂಗಿನಕಾಯಿ ೧೦೦ ಕ್ಕೆ		೫ ೦-೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ		೦ ೮-೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೦-೦	೦-೧೨ ೦
ಚಿನ್ನ (ಪೌನ್) ಕೆಂಪು		೧೫ ೯-೦	೧೫ ೮-೦
,, ,, ಪಸಿಮೆ		೧೬ ೦ ೦	೧೫ ೧೨-೦
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪ ೦	೬೪-೦-೦

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !

3 43

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ್ ಬಟ್ಟೆಗಳು ನಾಡಿನ ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವುದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ವೃತ್ತಾಂತ ಪತ್ರಿಕೆ.

— o —

೧೯೦೯ ನೇ ಇಸವಿ ನವೆಂಬರ್ ತಾ ೪ ನೇ ಗುರುವಾರ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯು

ದಿವಾನರವರು ಸಂಸ್ಥಾನದ ಸ್ಥಿತಿಗತಿಯನ್ನು ಕುರಿತು ಪ್ರಜಾ ಪ್ರತಿನಿಧಿ ಸಭೆಯಲ್ಲಿ ತಿಳಿಸಿದ ವಿಚಾರಗಳ ಪೈಕಿ ಕೆಲವಂಶಗಳನ್ನು ಕಳೆದ ವಾರ ಪ್ರಕಟಿಸಿದೆವು. ಉಳಿದ ಕೆಲವಂಶಗಳನ್ನು ಈ ವಾರ ಪ್ರಕಟಮಾಡಿರುವೆವಲ್ಲದೆ ಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಕೆಲವು ವಿಚಾರಗಳನ್ನೂ ತಿಳಿಸಿರುತ್ತೇವೆ.

ಕಳೆದ ಸಾಲಿನಲ್ಲಿ ಬಹುಭಾಗವು ಮೆ|| ಮಾಧವರಾಯರ ದಿವಾನಗಿರಿಯ ಅವಧಿಯಾಗಿದ್ದದರಿಂದ ದಿವಾನ್ ಮೆ। ಟಿ ಆನಂದರಾಯರವರು ತಿಳಿಸಿದ ಅನೇಕ ಸಂಗತಿಗಳ ವಿಷಯಕ್ಕೂ ಸಂಸ್ಥಾನದ ಕಾರುಬಾರುಗಳಿಗೂ ಅವರು ಜವಾಬ್ದಾರರಲ್ಲ. ಅವರು ವಿವರಿಸಿರುವ ಸಾಲಿನಲ್ಲಿ ಕಾಲಸ್ಥಿತಿಯು ಅಷ್ಟು ಚೆನ್ನಾಗಿರಲಿಲ್ಲ. ಆದರೆ ಈಗ ಮಳೆಗಳು ಧಾರಾಳವಾಗಿ ನಡೆದು ಬೆಳೆಗಳೆಲ್ಲಾ ಬಹಳ ಹುಲುಸಾಗಿರೋಣದರಿಂದ ಪ್ರಜೆಗಳಲ್ಲೂ ಸರ್ಕಾರದವರಲ್ಲೂ ಉಂಟಾಗಿದ್ದ ಕ್ಷಾಮದ ಕಳವಳವು ನಿವಾರಣೆಯಾಗಿರುತ್ತದೆ.

ನಾವು ಅನೇಕವೇಳೆ ದುರ್ಭಿಕ್ಷದ ವಿಚಾರವನ್ನೂ ಸಂಸ್ಥಾನದ ಜಮಾ ಖರ್ಚುಗಳನ್ನೂ ಕುರಿತು ಪ್ರಸ್ತಾಪಮಾಡಿರುತ್ತೇವೆಯಾಗಿ ಈ ವಿಷಯಗಳನ್ನು ಮತ್ತೆ ಚರ್ಚಿಸಬೇಕಾದ ಅಗತ್ಯವಿಲ್ಲ. ಸಂಸ್ಥಾನದ ಸ್ಥಿತಿಗತಿಯು ಯಾವ ರೀತಿಯಲ್ಲಿದೆ ಎಂಬುವುದನ್ನು ಪ್ರತಿನಿಧಿಗಳೂ ಪ್ರಜೆಗಳೂ ಮೊದಲೇ ಮಂದಟ್ಟು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಗವರ್ನಮೆಂಟಿನವರು ಜಮಾಖರ್ಚಿನ ಲೆಕ್ಕಗಳನ್ನು ಕೆಲವು ಕಾಲ ಮುಂಚಿತವಾಗಿಯೇ ಪ್ರಕಟಮಾಡಿದರು. ಈ ವಿಚಾರವು ಸಕಲರಲ್ಲೂ ಸಂತೋಷವನ್ನುಂಟುಮಾಡಿದೆ. ಸುಭಿಕ್ಷವೆಂಬ ಸೌಭಾಗ್ಯವು ಸಂಸ್ಥಾನಕ್ಕೆ ಲಭ್ಯವಾಗುವುದೆಂದು ಗವರ್ನಮೆಂಟಿನವರ ಕೂಡ ನಾವೂ ಸಂತೋಷಪಡುತ್ತೇವೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪಾರಸಂಖ್ಯೆಯ ವಿಷಯಗಳು ಚರ್ಚೆಗೆ ತರಲ್ಪಟ್ಟಿದ್ದವು. ಇಷ್ಟೊಂದು ವಿಷಯಗಳನ್ನು ಅಷ್ಟು ಸ್ವಲ್ಪಕಾಲದಲ್ಲಿ ಚರ್ಚೆಮಾಡುವುದು ಯಾವ ಸಭೆಗೂ ಸಾಧ್ಯವಲ್ಲ. ಆ ಪೈಕಿ ಅನೇಕ ವಿಷಯಗಳು ಸೂಚಿಸಲ್ಪಡಬಾರದಾಗಿತ್ತು, ಯಾಕಂದರೆ ಅವುಗಳನ್ನು ಚರ್ಚಿಸಬೇಕೆಂದು ಸೂಚಿಸಿದವರು ಅವುಗಳ ಪೂರ್ವೋತ್ತರವನ್ನಾಗಲಿ, ಫಲಾಫಲಗಳನ್ನಾಗಲಿ ಆಲೋಚನೆಮಾಡಿ ಅರಿತವರಲ್ಲ. ಇನ್ನು ಕೆಲವು ಸೂಚನೆಗಳನ್ನು ಚರ್ಚಿಸುವುದಕ್ಕೆ ಇದು ತಕ್ಕ ಸಮಯವಲ್ಲ, ಕೆಲವುಕಾಲ ಗತಿಸಿದಮೇಲೆ ಅವುಗಳನ್ನು ಸೂಚಿಸಿ ಚರ್ಚಿಸುವುದರಲ್ಲಿ ಪ್ರಯೋಜನವಾಗಬಹುದು. ಕೆಲವು ಸೂಚನೆಗಳನ್ನೂ ಚರ್ಚೆಗಳನ್ನೂ ನೋಡಿದರೆ ಪ್ರತಿನಿಧಿಗಳು ಸರ್ಕಾರಿ ನೌಕರಮಾನೆಯರ ವಿಷಯದಲ್ಲೂ ಅವರ ನಡವಳಿಕೆಯ ವಿಷಯದಲ್ಲೂ ಅಸಂತೋಷಿಕ ಪಡುತ್ತಾರೆಂದು ಕಾಣುವುದು, ಆದರೆ ಅಂಥಾ ವಿಷಯಗಳನ್ನು ಕುರಿತು ಚರ್ಚೆಮಾಡುವ ರೀತಿಯು ಅಷ್ಟೇನೂ ಬುದ್ಧಿವಂತಿಕೆಯಾದದ್ದೆಂದು ತೋರುವುದಿಲ್ಲ. ಪ್ರಜೆಗಳು ಸತ್ಯವಂತರಾಗಿದ್ದು, ಯಾವ ಅಧಿಕಾರಿ ಅಥವಾ ನೌಕರನಾಗಲಿ ಸರ್ಕಾರದ ರೂಲಿನನ್ನು ಮೀರಿ ಕೆಲಸ ನಡೆಸಿರುವುದನ್ನು ಕಂಡ ಒಡನೆಯೆ ಅದನ್ನು ಗವರ್ನಮೆಂಟಿಗೆ ರಿಪೋರ್ಟುಮಾಡುತ್ತಾ ಬಂದ ಹೊರತು ಸರ್ಕಾರವು ಯೋಗ್ಯವಾದದ್ದಾಗುವುದಿಲ್ಲ, ಮತ್ತು ಅವರ ಕಾರುಬಾರುಗಳು ವಿವೇಕವಾಗಿರುವುದಿಲ್ಲ. ಪ್ರಜೆಗಳು ಇಂಥಿಂಥಾ ವಿಚಾರದಲ್ಲಿ ಈ ಈ ರೀತಿ ಅನ್ಯಾಯ ನಡೆದಿದೆ ಎಂದೂ, ಇಂಥಿಂಥವರು ಲಂಚ ತೆಗೆದುಕೊಂಡಿದ್ದಾರೆಂದೂ ಸ್ಪಷ್ಟವಾಗಿ ವಿವರಿಸದೆ ಸುಮ್ಮನೆ ಒಟ್ಟುಗೂಡಿಸಿ ದಿವಾನರಮುಂದೆ ಹೇಳಿಕೊಳ್ಳುವುದು ನಿಷ್ಪ್ರಯೋಜನ.

ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿ ಸಭೆಯ ಮೆಂಬರುಗಳಾದ ಮೆ|| ಎ ರಾಮಣ್ಣನವರೂ, ಮೆ ಡಿ ವೆಂಕಟರಾಮಯ್ಯನವರೂ ಮೆಂಬರಾಗಿ ಚುನಾಯಿಸಲ್ಪಟ್ಟರೆಂದೂ, ಶ್ರೀಮನ್ಮಹಾರಾಜರವರು ಈ ಚುನಾವಣೆಯನ್ನು ಸ್ಯಾಂಕ್ಷನ್ ಮಾಡಿದರೆಂದೂ ನಾವು ಸಂತೋಷಪಡುತ್ತೇವೆ. ಇವರು ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರಾಗಿರುವಾಗ್ಗೆ ಅಲ್ಲಿ ಚರ್ಚೆಗಳನ್ನು ನಡೆಸುವ ಸಂದರ್ಭದಲ್ಲಿ ಪ್ರಜೆಗಳ ಹಿತಚಿಂತನೆಯೇ ಅವರ ಮುಖ್ಯಾಶಯವಾಗಿರಲೆಂದು ನಂಬಿ ಹಾರೈಸುತ್ತೇವೆ.

ಮುಂದಿನ ವಾರಗಳಲ್ಲಿ ಸಭೆಯೊಳಗೆ ಚರ್ಚಿಸಲ್ಪಟ್ಟ ಕೆಲವು ವಿಷಯಗಳನ್ನು ಕುರಿತು ಪ್ರಸ್ತಾಪ ಮಾಡುವೆವು.

ಒಳದೇಶದ ವೃತ್ತಾಂತಗಳು

ಬೆಂಗಳೂರು ಬಳೇಪೇಟೆಯಲ್ಲಿ ಮೆ|| ಅಹಮದ್ ಸೇಟರವರು ಹೊಸದಾಗಿ ಕಟ್ಟಿಸಿರುವ ಭಾರೀ ಕಟ್ಟಡದಲ್ಲಿ ಪೋಸ್ಟ್ ಮಾಸ್ಟರು ಸೋಮವಾರದಿಂದ ಪೋಸ್ಟ್ ಆಫೀಸನ್ನು ಮಾಡುತ್ತಿದ್ದಾರೆ.

ಬಾರಿಸ್ಟರ್ ಮು|| ಸಿ ನಾಗಪ್ಪನವರ ಸರ್ಕಾರದವರು ಸಬ್ ಜಡ್ಜಿ ಕೆಲಸವನ್ನೂ, ಅಮಲ್ದಾರ್ ಮು| ನ್ ರಾಮರಾಯರಿಗೆ ಸಕ್ರೆಟರಿ ಅಫೀಸ ರಿಜಿಸ್ಟ್ರಾರ್ ಕೆಲಸವನ್ನೂ ನೇಮಕ ಮಾಡಿದರೆಂದು ತಿಳಿಯುತ್ತೇವೆ.

ಮೊನ್ನೆ ಸೋಮವಾರ ಮೆ। ಎಂ ಕಾಂತರಾಜ್ ಅರಸ್‌ನವರು ರಜದಿಂದ ಬಂದು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಕೆಲಸದ ಚಾರ್ಜನ್ನು ಮು|| ಕೆ ಚಾಂಡಿಯವರಿಂದ ವಹಿಸಿಕೊಂಡರು. ಮು| ಚಾಂಡಿಯವರು ರಜಾ ತೆಗೆದುಕೊಂಡಿರುತ್ತಾರೆ.

ಮದರಾಸ್ ಗವರ್ನರವರು ಕಳೆದ ವಾರ ಬೆಂಗಳೂರಿಗೆ ಹೋಗಿ ಕುಣಿಗಲ್ ಕುದುರೆ ಫಾರಮನ್ನು ನೋಡಿಬಂದು ರೆಸಿಡೆಂಟರವರ ಆತಿಥ್ಯವನ್ನು ಸ್ವೀಕರಿಸಿ, ಸತ್ಪಿವಾರ ಸಮೇತ ಸೋಮವಾರದ ದಿನ ಮೋಟಾರ್ ಗಾಡಿಗಳಲ್ಲಿ ಮೈಸೂರಿಗೆ ಪ್ರಯಾಣ ಮಾಡಿದರು.

ಬೆಂಗಳೂರಿನಲ್ಲಿ ಏರ್ಪಡಿಸಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಶೋಧನಾ ವಿದ್ಯಾಶಾಲೆಯ ಮೆಂಬರುಗಳು ಈ ೧೯ ಡಿಸೆಂಬರ ಬೆಂಗಳೂರಿನಲ್ಲಿ ಸಭೆ ಸೇರಿ, ಕಟ್ಟಡಗಳೇ ಮೊದಲಾದ ಕೆಲವು ವಿಚಾರಗಳನ್ನು ಕುರಿತು ಚರ್ಚಿಸುವರೆಂದು ತಿಳಿದುಬಂದಿದೆ.

ಕಳೆದ ಗುರುವಾರ ರಾಜಧಾನಿಗೆ ಈ ಸಲ ಬಂದಿದ್ದ ಪ್ರಜಾ ಪ್ರತಿನಿಧಿಗಳಿಗೆ ಕ್ಷೇಮುವಾರು ಔತಣವಾಯಿತು. ಈ ಔತಣಕ್ಕೆ ಪ್ರಜಾಪ್ರತಿನಿಧಿಗಳಲ್ಲದೆ ಅಧಿಕಾರಿಗಳೂ ಇಲ್ಲಿನ ದೊಡ್ಡ ಮನುಷ್ಯರೂ ಕರೆಯಲ್ಪಟ್ಟಿದ್ದರು. ಔತಣವು ಎಲ್ಲಾ ವಿಷಯಗಳಲ್ಲೂ ತೃಪ್ತಿಕರವಾಗಿ ಜರುಗಿತೆಂದು ತಿಳಿದು ಬಂದಿದೆ.

ಕಳೆದ ಗುರುವಾರ ಬೇಗೀಸ ಬ್ಲಾಕುದಲ್ಲಿ ಕೋಲಾರ್ ಜನ್ನದ ಗಣಿಗಳ ಪ್ರದೇಶದಲ್ಲಿ ಬೂಸಿಯು ಕಂಪಿಸಿತು. ಪ್ರಜೆಗಳು ಗಾಬರಿಯಿಂದ ಹಾಸಿಗೆಬಿಟ್ಟು ಓಡಿಹೋಗಿ ಮೈದಾನುಗಳಲ್ಲಿ ಬಂದುಕೊಂಡರು. ದೇವರ ದಯದಿಂದ ಅಪಾಯವೇನೂ ಆಗಲಿಲ್ಲ. ಒಂದು ದೇವಾಲಯವು ಬಿರುಕುಬಿಟ್ಟಿದೆ ಎಂದು ಪ್ರಕಟವಾಗಿದೆ.

ಕಳೆದ ಶನಿವಾರದ ಲಾಗಾಯಿತು ರಾಜಧಾನಿಯಲ್ಲಿ ಪ್ರತಿದಿನವೂ ಹಗಲು ಬಿಸಿಲು ಕಾಯುತ್ತಾ ರಾತ್ರಿ ಜೋರಾಗಿ ಮಳೆ ಸುರಿಯುತ್ತಾ ಇದೆ. ನೆನ್ನೆ ಹಗಲಿನಲ್ಲೂ ಮೋಡಹಾಕಿಕೊಂಡು ಸ್ವಲ್ಪ ಮಳೆ ಬಂದಿದೆ. ಕೆಲವು ಕಡೆ ಈ ಮಳೆಯಿಂದ ಪೈರಿಗೆ ಅನುಕೂಲವಾಯಿತೆಂದೂ, ಇನ್ನು ಕೆಲವು ಕಡೆ ಪೈರು ಉದುರುವುದಕ್ಕೂ ಮೆದೆಗಳು ಮುಗ್ಗುವುದಕ್ಕೂ ಆಕರವಾಯಿತೆಂದೂ ಹೇಳುತ್ತಾರೆ.

ದಿವಾನ್ ಮು|| ಟಿ ಆನಂದರಾಯರೂ ಕೌನ್ಸಲರುಗಳೂ ರಾಜಧಾನಿಯಲ್ಲಿ ನವರಾತ್ರಿ ಉತ್ಸವ ಪ್ರತಿನಿಧಿ ಸಭೆ ಮುಂತಾದವುಗಳನ್ನು ಆಗಮಾಡಿ ಪರಿವಾರ ಸಮೇತ ನೆನ್ನೆ ಮೆಯಿಲ್ ಗಾಡಿಯಲ್ಲಿ ಬೆಂಗಳೂರಿಗೆ ದಯಮಾಡಿದರು. ದಿವಾನರವರು ಮತ್ತೆ ನಾಳೆ ಶನಿವಾರ ಮಧ್ಯಾಹ್ನ ರಾಜಧಾನಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ. ಗವರ್ನಮೆಂಟ್ ಸಕ್ರೆಟರಿಗಳು ಸಿಬ್ಬಂದಿ ಸಮೇತ ನಾಳೆ ನಾಡಿದ್ದರಲ್ಲಿ ಬೆಂಗಳೂರಿಗೆ ತೆರಳುವರು.

ಹಿಂದಿನ ಬುಧವಾರ ರಾತ್ರಿ ಬೌರಿಂಗ್‌ಪೇಟೆಯಿಂದ ಒಂದು ಮೈಲಿ ದೂರದಲ್ಲಿ ಅಂಚೆ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಟಪ್ಪಾ ಗಾಡಿಗೆ ಕಳ್ಳರು ಬಿದ್ದರು. ಅದರಲ್ಲಿ ಕುಳಿತಿದ್ದ ಇಬ್ಬರು ಪ್ರಯಾಣಿಕರನ್ನು ಹಿಡಿದು ಅವರ ಬಳಿ ಸಿಕ್ಕಿದ್ದನ್ನು ಕಿತ್ತುಕೊಂಡರು. ಒಬ್ಬ ಪ್ರಯಾಣಿಕನ ಹತ್ತಿರ ೧೩೦ ರೂಪಾಯಿ ಇತ್ತು. ಅವನು ಇಳಿದು ಕಳ್ಳರು ಶೋಧನೆ ಮಾಡುವಾಗ್ಗೆ ಅವರ ಕೈಯಲ್ಲಿದ್ದ ದೊಣ್ಣೆಯನ್ನು ಕಿತ್ತುಕೊಂಡು ಒಬ್ಬ ಕಳ್ಳನನ್ನು ಚನ್ನಾಗಿ ಹೊಡೆದು ತಪ್ಪಿಸಿಕೊಂಡು ಓಡಿ ಹೋದನು. ಕಳ್ಳರು ಅಂಚೆ ವಸ್ತುಗಳನ್ನು ಹೊತ್ತುಕೊಂಡು ಹೋಗಿ ಒಂದು ರಾಗಿ ಹೊಲದಲ್ಲಿ ಒಡೆದು ಎರಡು ರಿಜಿಸ್ಟರಾದ ೧೯ ಇನ್ಷೂರ್ ಪಾರ್ಸಲ್ಲುಗಳನ್ನು ಎತ್ತಿಕೊಂಡು ಹೋದರು. ಆ ಪೈಕಿ ಒಂದರಲ್ಲಿ ೧೨೦೦ ರೂಪಾಯಿನ ಬಣ್ಣವಿತ್ತೆಂದು ತಿಳಿದು ಬಂದಿದೆ. ಮತ್ತು ೧೬ ರಿಜಿಸ್ಟರ್ ಕಾಗದಗಳು ಹೊಲದಲ್ಲಿ ಸಿಕ್ಕಿರುವವು.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಬಹು ಕಾಲದಿಂದ ಪರಹಿತ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದ ಮಿಸ್ ಎಲ್ ಎಚ್ ಆನ್‌ಸ್ಲಿ ಎಂಬಾಕೆಯು ಕಳೆದ ತಾ ೨೭ ನೇ ಬುಧವಾರ ಚಿಗರಾಪುರದಲ್ಲಿ ಕಾಲವಾದರೆಂದು ಕೇಳಿ ವಿಷಾದಪಡುತ್ತೇವೆ. ಒಬ್ಬ ವಾರ್ತಾಹಾರರು ಇವರು ಮಾಡಿರುವ ನಾನಾ ಉಪಕಾರ ಕಾರ್ಯಗಳನ್ನು ವಿವರಿಸಿ ಬರೆದಿರುತ್ತಾರೆ. ಸ್ಥಳಸಂಕೋಚದಿಂದ ಅದನ್ನು ಪ್ರಕಟಿಸಲು ಅವಕಾಶವಾಗಲಿಲ್ಲವೆಂದು ವ್ಯಸನವಾಗಿದೆ.

ಕಳೆದ ಶುಕ್ರವಾರದ ದಿನ ಇಲ್ಲಿನ ಕುರುಬರಹಳ್ಳಿಯ ಒಬ್ಬ ಹುಡುಗನು ತೆಂಗಿನ ಮರ ಹತ್ತುವಾಗ ವಿದ್ಯುಚ್ಛಕ್ತಿಯ ತಂತಿಯ ಮೇಲೆ ಹತ್ತಿ ಹೋಗಿ ತಂತಿಯನ್ನು ಹಿಡಿದುಕೊಂಡದ್ದರಿಂದ ತಕ್ಷಣವೇ ಸತ್ತು ಬಿದ್ದನು. ಯಾರೂ ಈ ತಂತಿಗಳ ಗೋಜಿಗೆ ಹೋಗಬಾರದೆಂದು ಎಷ್ಟಾವರ್ತಿ ಸರ್ಕಾರದವರು ಎಚ್ಚರಿಕೆ ಕೊಟ್ಟಿದ್ದರೂ ಈ ರೀತಿ ಹೋಗಿ ತಂತಿಗಳನ್ನು ಮುಟ್ಟಿ ಅಪಾಯಕ್ಕೂ ಪ್ರಾಣನಷ್ಟಕ್ಕೂ ಗುರಿಯಾಗುತ್ತಿರುವುದು ವಿಷಾದಕರವಾಗಿದೆ.

ಒಬ್ಬ ವಾರ್ತಾಹಾರರಿಂದ—ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಸಬ್ ಡಾಕ್ಟರ್ ಟಿ ರಂಗಸ್ವಾಮಯ್ಯನವರ ಮನೆಯಲ್ಲಿ ತಾ ೨೯ನೆ ರಾತ್ರಿ ಬಿದ್ದ ಗಾಳಿ ಮಳೆಯಿಂದ ಒಂದು ಹಾವು ಮನೆಯೊಳಕ್ಕೆ ಪ್ರವೇಶಮಾಡುತ್ತಿರುವುದನ್ನು ಮನೆಯಲ್ಲಿ ಮಲಗಿದ್ದ ನಾಯಿಯು ಕಚ್ಚಿ ಕೊಂದುಹಾಕಿ ಜೋರಾಗಿ ಬೊಗಳಿತು. ಅದು ಏನಾಗಿರಬಹುದೆಂದು ಮನೆಯ ಯಜಮಾನರು ಬಂದು ದೀಪವಿಟ್ಟು ನೋಡುವಲ್ಲಿ ಹಾವು ಸತ್ತು ಬಿದ್ದಿತ್ತು. ನಾಯಿಯು ಅದರ ಪಕ್ಕದಲ್ಲಿಯೇ ಕೂತಿತ್ತು. ಮಲಗಿದವರೆಲ್ಲಾ ಎದ್ದು ನೋಡಿ ಬಹಳ ಆಶ್ಚರ್ಯಪಟ್ಟರು. ಇದರಿಂದ ನಾಯಿಯು ಎಷ್ಟು ಉಪಕಾರಿ ಎಂಬುವದು ಗೊತ್ತಾಗುತ್ತದೆ.

ಮೈಸೂರು ಮಹಾರಾಜರವರು ರಾಜಧಾನಿಗೆ ಈ ತಿಂಗಳ ೧೧ನೇ ತಾ ಗುರುವಾರ ದಯಮಾಡಿಸುವುದರಿಂದ ಪಟ್ಟಣ ಶೃಂಗಾರವೇ ಮೊದಲಾದ ಏರ್ಪಾಡುಗಳು ನಡೆಯುತ್ತಾ ಇವೆ. ಇದು ಸ್ವಾಗತಗಳಲ್ಲಿ ಭಾರಿಯೂ ಅಂದವೂ ಆದ ಗದ್ದುಗೆ ಮಹೋತ್ಸವಗಳೂ ಚಿತ್ತಾನಂದಕರವಾದ ಸಾಲಕ್ಕಾರು ಕಮಾನುಗಳೂ ಕಟ್ಟಲ್ಪಡುವವು. ಮುನಿಸಿಪಲ್ ಕೌನ್ಸಿಲರುಗಳು ಮೈಸೂರಾಯ ಪ್ರಭುಗಳಿಗೆ ಸುಸ್ವಾಗತವನ್ನು ಬಯಸಿ ಟೌನ್ ಹಾಲ್ ಬಳಿ ಬೆಳ್ಳಿಯ ಪಾತ್ರೆಯಲ್ಲಿ ಹಾಕಿಸುವ ಬಿನ್ನವತ್ತಳೆ ಅತ್ತರನ್ನು ಓದಿ ವಿಪುಲವಾದ ಕೈಪಟ್ಟಿಗಳುಳ್ಳ ಪಂಡಿತರು ಈ ಕಾರ್ಯಗಳಿಗಲ್ಲಾ ಮುನಿಸಿಪಾಲಿಟಿಯಿಂದ ೨೦೦೦ ರೂಪಾಯಿಯೂ, ಸರ್ಕಾರದಿಂದ ೩೦ ಸಾವಿರ ರೂಪಾಯಿಯೂ ಸ್ಯಾಂಕ್ಷನ್ ಆಗಿದೆ ಎಂದು ಕೇಳುತ್ತೇವೆ.

ಪ್ಲೇಗ್ ಉಪದ್ರವು ರಾಜಧಾನಿಯಲ್ಲಿ ಇನ್ನೂ ಇದೇ ಇದೆ ಎಂದೂ, ಇದಕ್ಕಾಗಿ ಪ್ರಜೆಗಳು ಪಡುವ ಚಿಂತೆಯೂ ವ್ಯಸನವೂ ತಪ್ಪಿ ಇಲ್ಲವೆಂದೂ ವಿಷಾದಪಡುತ್ತೇವೆ. ಆದರೂ ಕಳೆದ ವಾರದ ಸ್ಥಿತಿಯನ್ನು ನೋಡಿದರೆ ಉಪದ್ರವು ಕಡಮೆಯಾಗುತ್ತಿರುವಂತೆ ಕಾಣುವುದು. ಇದುವರೆಗೆ ಪ್ಲೇಗ್ ಲಸಿಕೆಯನ್ನು ಹಾಕಿಸಿಕೊಂಡಿರುವವರು ೨೧,೩೪೧ ಮಂದಿ ಎಂದು ತಿಳಿಯುತ್ತೇವೆ. ಕಳೆದ ಅಕ್ಟೋಬರ್ ತಾ ೨೭ ನೇ ಬುಧವಾರದಿಂದ ನವೆಂಬರ್ ತಾ ೨ ನೇ ಮಂಗಳವಾರದ ಅಖೈರುವರೆಗೆ ಪ್ಲೇಗಿನ ಸ್ಥಿತಿಯನ್ನು ಇಲ್ಲಿ ತಿಳಿಸಿದೆ —

ತಾರೀಖು	ಪ್ಲೇಗ್ ಕೇಸು	ಪ್ಲೇಗ್ ಮರಣ	ಒಟ್ಟು ಮರಣ
27	23	16	21
28	15	21	32
29	20	10	20
30	20	11	27
31	10	9	15
1	10	8	16
2	11	8	15

ಸಂಬಳ

ಒಬ್ಬ ದೊರೆಯು ತನ್ನ ರಾಜಧಾನಿಯಲ್ಲಿದ್ದ ಕಮ್ಮಾರನ ಕುಲುಮೆ ಮನೆಗೆ ಹೋಗಿ ಆ ಕಮ್ಮಾರನನ್ನು ಕುರಿತು—ನನಗೆ ಒಂದು ಬಲವಾದ ಮತ್ತು ಉದ್ದವಾಗಿರುವ ಸರಪಣಿಯು ಬೇಕಾಗಿದೆ. ಇದನ್ನು ಒಂದು ತಿಂಗಳಲ್ಲಿ ಮಾಡಿ ಪೂರೈಸಿದರೆ ನಾವು ನಿನ್ನ ಕಷ್ಟಕ್ಕೆ ತಕ್ಕ ಸಂಬಳವನ್ನು ಕೊಡುತ್ತೇವೆ ಯೆಂದು ಆಜ್ಞಾಪಿಸಿ ತನಗೆ ಬೇಕಾದ ಸರಕು ಸಾಮಾನುಗಳನ್ನು ಕೊಟ್ಟನು. ಕಮ್ಮಾರನು ತನಗಿದ್ದ ಇತರ ಗಿರಾಕಿಗಳನ್ನು ಬಿಟ್ಟು ದೊರೆಯ ಕೆಲಸವಾದ್ದರಿಂದ ನನ್ನ ಉದ್ಯೋಗಕ್ಕೆ ತಕ್ಕ ಸಂಬಳ ದೊರೆಯುವದೆಂಬ ಧೈರ್ಯದಿಂದ ಮೂವತ್ತು ದಿನಗಳವರೆಗೂ ಬೆವರು ಸುರಿಸುತ್ತಾ ಬಹು ಕಷ್ಟಪಟ್ಟು ಆ ಕೆಲಸವನ್ನು ಅವಧಿಯ ಮೇರೆಗೆ ಮುಗಿಸಿದನು. ಆಗ ಆ ದೊರೆಯು ಬಂದು— ನಾವು ಆಜ್ಞಾಪಿಸಿದ ಸರಪಳಿಯನ್ನು ಮಾಡಿದ್ದೀಯೋ ಯೆಂದು ಕೇಳಲು, ಕಮ್ಮಾರನು ಹೌದು ಸ್ವಾಮಿ ಇಗೋ ನೋಡಿ ಯೆಂದು ತೋರಿಸಿದನು. ದೊರೆಯು ಅದನ್ನು ಪರೀಕ್ಷಿಸಿ—ನಿನ್ನ ಕೆಲಸ ಚೆನ್ನಾಗಿದೆ, ಸರಪಣಿ ಬಲವಾಗಿರುವದೇನೋ ನಿಜ, ಆದರೆ ಉದ್ದ ಸಾಲದು. ನಾವು ಮೊದಲು ತೋರಿಸಿದ ಅಳತೆಗಿಂತಲೂ ಇಮ್ಮಡಿಯಾದ ಉದ್ದವುಳ್ಳ ಸರಪಣಿಯು ಅಗತ್ಯವಾಗಿದೆ. ಅದ್ದರಿಂದ ನೀನು ನಿನ್ನಲ್ಲಿರುವ ಕಬ್ಬಿಣವನ್ನು ಪ್ರಯೋಗಿಸಿ ಇಷ್ಟು ಸರಪಣಿಯನ್ನು ಇದಕ್ಕೆ ಜೋಡಿಸು. ಬರುವ ತಿಂಗಳ ಕೊನೆಯಲ್ಲಿ ನಾವು ಬಂದು ನಿನ್ನ ಕಷ್ಟಕ್ಕೆ ತಕ್ಕ ಸಂಬಳವನ್ನು ಕೊಡಿಸುವೆವೆಂದು ಆಜ್ಞಾಪಿಸಿದನು.

ಎರಡನೆ ತಿಂಗಳ ಕಡೆಯಲ್ಲಿ ದೊರೆಯು ಒರುವತನಕ ಕವಾತ್ಗಾರನು ತನಗೆ ಸಾಮಾನ್ಯವಾದ ಕೆಲಸವನ್ನು ಪ್ರತ್ಯಕ್ಷದಿಂದ ವಸತಿ ಅರಸನಿಗೆ ಅದನ್ನು ತೋರಿಸಲು ಅರಸನು ಆ ಕೆಲಸವನ್ನು ನೋಡಿ ಮೆಚ್ಚಿಕೊಂಡವನಂತೆ ನಟಿಸಿ ಕವಾತ್ಗಾರನನ್ನು ಕುರಿತು—ಈ ಸರಪಣಿಯು ಇನ್ನೂ ಉದ್ದ ಸಾಲದು, ಇನ್ನೊಂದು ತಿಂಗಳು ಕೆಲಸಮಾಡಿ ನಿನ್ನಲ್ಲಿರುವ ಕಬ್ಬಿಣವನ್ನೆಲ್ಲಾ ನನ್ನ ಕೆಲಸಕ್ಕೆ ಪ್ರಯೋಗಿಸೆಂದು ಹೇಳಿದನು. ಕವಾತ್ಗಾರನು ತನ್ನ ಬಂಡವಾಳವನ್ನೆಲ್ಲಾ ಖರ್ಚುಮಾಡಿ ಸಂಬಳ ಸಾರಿಗೆ ಇಲ್ಲದಿದ್ದರೂ ನನ್ನ ಕಷ್ಟಕ್ಕೆ ತಕ್ಕ ಪ್ರತಿಫಲವು ಒಂದೇಗಂಟಿನಲ್ಲಿ ಬರುವದೆಂದು ದೊರೆಯ ಮಾತನ್ನು ನಂಬಿ ಇನ್ನೊಂದು ತಿಂಗಳವರೆಗೂ ಕೆಲಸಮಾಡಿ ಆ ಸರಪಣಿಯ ಉದ್ದವನ್ನು ಹೆಚ್ಚಿಸಿದನು. ಅಷ್ಟರಲ್ಲಿ ದೊರೆಯು ಕೃತ್ರಿಮವಾಗಿ ಆಂತರಂಗದವರೇನೂ ಆ ಸರಪಣಿ ಕೆಲಸವನ್ನು ಮಾಡಿಸಿ ಕಡೇಸಾರಿ ಆಸಕ್ತನಾಗಿ ಬೀಸುತ್ತಿರುವ ಕವಾತ್ಗಾರನನ್ನು ಬಂದು ನೋಡಿ,—ಭಲಾ! ನೀನು ಒಳ್ಳೇ ಸೇವಕ, ಸರಪಣಿಯನ್ನು ಪೂರೈಸಿದ್ದೆ. ಈಗ ನಿನ್ನ ಕೆಲಸಕ್ಕೆ ತಕ್ಕ ಬಹುಮಾನ ಕೊಡುವೆನೆಂದು ಹೇಳಿ ಹತ್ತಿರ ನಿಂತಿದ್ದ ತನ್ನ ಸೇವಕನನ್ನು ಕರೆದು—ನೀವು ಈ ಸರಪಣಿ ತೆಗೆದುಕೊಂಡು ಅದರಿಂದ ಈ ಕವಾತ್ಗಾರನನ್ನು ಚೆನ್ನಾಗಿ ಕಟ್ಟಿ ಬಂದೀಖಾನೆಯಲ್ಲಿ ಅವನನ್ನು ಹಾಕಿಬಿಡಿರಿ ಯೆಂದು ಆಜ್ಞಾಪಿಸಿ ಮಾಡಿದನು. ಆ ಕವಾತ್ಗಾರನು ಬಂದೀಖಾನೆಯಲ್ಲಿ ತನ್ನ ಜೀವಾವಧಿ ಇದ್ದುಕೊಂಡು ಮಣ್ಣು ಸೇರಬೇಕಾಗಿಬಂದಿತು.

ಇದು ಕೇವಲ ಅನ್ಯಾಯ, ಮಹಾ ಕ್ರೂರಕೃತ್ಯ. ಇದಲ್ಲದೆ ಇಂತಹ ಕ್ರೂರಾತ್ಮರಾದ ದೊರೆಗಳೂ ಅಧಿಕಾರಿಗಳೂ ಹಿಂದೂ ದೇಶದಲ್ಲಿ ಈಗ ಇಲ್ಲವೆಂದು ವಾಚಕರು ಹೇಳುವರು. ಹೌದು, ಇದು ನಿಜ. ನಾವು ಈಗ ಪ್ರಜೆಗಳನ್ನು ಪ್ರೀತಿಮಾಡಿ ಸರ್ಕಾರದ ಆಳು ಉದ್ಯೋಗಕ್ಕೆ ತಕ್ಕ ಸಂಬಳಗಳನ್ನು ನೀಡಿ ಪಾಲಿಸುವ ಪ್ರಭುಗಳಿಂದ ಆಳಲ್ಪಡುತ್ತೇವೆ. ಆದರೆ ಇನ್ನೊಂದು ವಿಧವಾಗಿ ಸ್ವಲ್ಪ ಯೋಚಿಸಿರಿ. ನಮ್ಮ ದೇಶದಲ್ಲಿ ಕುಡಿತವೆಂಬ ದುರಭ್ಯಾಸವು ದಿನೇ ದಿನೇ ಹೆಚ್ಚುತ್ತ ಬರುತ್ತಿದೆಯೆಂತ ಎಲ್ಲರೂ ಹೇಳುತ್ತಾರೆ. ಇದು ಬಹಳ ಕೆಟ್ಟ ಪಾಪಕ್ಕೆ ನಮ್ಮನ್ನು ನಾವೇ ಒಪ್ಪಿಸಿ ಅದರ ಸೇವೆಯನ್ನು ಮಾಡುತ್ತೇವೆಂದು ಸ್ಪಷ್ಟವಾಗಿದೆ. ಕುಡಿತವು ಈ ದುರಭ್ಯಾಸಕ್ಕೆ ಸಿಕ್ಕಿದವನಿಗೆ ಬಹಳ ಸಂತೋಷವನ್ನು ಮೊದಲು ಕೊಡುವಂತೆ ತೋರುತ್ತದೆ. ಆದರೆ ಈ ದುರಭ್ಯಾಸವು ದಿನ ದಿನ ಹೆಚ್ಚುತ್ತ ಬಂದು ಅವನ ದ್ರವ್ಯವನ್ನೂ ಮಾನವನ್ನೂ ಆಯುಸ್ಸನ್ನೂ ಹಾಳುಮಾಡುವುದು, ಬುದ್ಧಿಯನ್ನು ವಿಕಾರಪಡಿಸುವುದು. ಇಷ್ಟಾದರೂ ಅದರ ಸೇವೆಯನ್ನು ಬಿಡಬೇಕೆಂದರೆ ಆ ದುರಭ್ಯಾಸಿಯ ಶಕ್ತಿಗೆ ಅಸಾಧ್ಯವಾಗಿರುವುದು. ಕುಡಿತವೆಂಬ ಯಜಮಾನನು ತನ್ನ ಸೇವೆಯನ್ನು ಮಾಡುವವನಿಗೆ ಕೊಡುವ ಶಿಕ್ಷೆಯು ಮೇಲೆ ಹೇಳಿದ ದೊರೆಯು ಕವಾತ್ಗಾರನಿಗೆ ಕೊಟ್ಟ ಶಿಕ್ಷೆಗಿಂತ ಕಡಮೆಯಾದದ್ದಲ್ಲ. ವ್ಯಭಿಚಾರಿಯು ತನ್ನ ದುಷ್ಕೃತ್ಯದಿಂದ ಸಂತೋಷವನ್ನು ಅನುಭೋಗಿಸಬೇಕೆಂದು ಆರಂಭಿಸುತ್ತಾನೆ. ಆದರೆ ವ್ಯಭಿಚಾರವೆಂಬ ಕಿರಾತಕನು ಕಡೆ ಕಡೆಗೆ ಅವನ ದೇಹದ ಜೀವರಸವನ್ನು ಬಸಿದು ಸಂಸಾರವನ್ನು ಹಾಳುಮಾಡಿ ಮಾನಹಾನಿ ದ್ರವ್ಯಹಾನಿಗಳನ್ನು ಅವನ ಪಾಲಿಗೆ ಬರಮಾಡಿ ಅವನನ್ನು ನರಕಿಯಾಗ ಮಾಡುವದಿಲ್ಲವೇ? ಹೀಗೆಯೇ ಸಕಲ ವಿಧ ಪಾಪಗಳೂ ಒಬ್ಬೊಬ್ಬ ಕ್ರೂರಾತ್ಮನಾದ ಧಣಿಯಂತಿದ್ದು ತನ್ನ ಹಸ್ತಗತನಾದವರ ದೇಹಾತ್ಮಗಳನ್ನು ಹಾಳುಮಾಡುತ್ತವೆ. ಲೋಭಿಯೂ ಲಂಚಕೋರನೂ ಪರರ ದ್ರವ್ಯಗಳನ್ನು ಅಪಹರಿಸಿ ಗಂಟುಕಟ್ಟುತ್ತಾನೆ. ಆ ಗಂಟು ಎಷ್ಟು ದೊಡ್ಡದಾಗುತ್ತದೋ ಅಷ್ಟು ಅವನ ದುರಾಶೆ ಹೆಚ್ಚುತ್ತದೆಯೇ ಹೊರತು ಕಡಮೆಯಾಗುವುದಿಲ್ಲವಷ್ಟೆ. ಈ ಕಾಲದಲ್ಲಿ ಪ್ರತಿ ಊರು ಗ್ರಾಮಗಳಲ್ಲಿಯೂ ಹೂಜಾಡುವುದು ಹೆಚ್ಚುತ್ತ ಬರುತ್ತದೆ. ಆದರೆ ಇದರಿಂದ ಎದುಕಿರುವವರು ಯಾರು? ನಮಗೆ ಗೊತ್ತಿಲ್ಲ. ಸೊತ್ತು, ಮನೆ, ಭೂಮಿ, ಒಡವೆ, ಎಲ್ಲವುಗಳನ್ನು ಕಳೆದುಕೊಂಡಿರುವವರು ಪುಷ್ಕಳವಿದ್ದಾರೆ. ಹಾಗಾದರೆ ಈಸಲು ಬುದ್ಧಿಹೀನರಿಗೆ ಮುಕ್ತಿಮಾರ್ಗವನ್ನು ತಿಳಿದು ತಮ್ಮ ವಶಪಡಿಸಿಕೊಂಡು ಆಳುವ ದುಷ್ಟ ಅಧಿಕಾರಿಗಳು ಇವರೇ ಇವೆ. ಅವು ಯಾವುವೆಂದರೆ ಕುಡಿತ, ಹಾದರ, ಲಂಚ, ಜೂಜು ಮೊದಲಾದ ಪಾಪಗಳೇ. ಯೇಸು ಸ್ವಾಮಿಯು ಇವನ್ನು ಕುರಿತು ಯೋಚಿಸಿ ಜನಗಳಿಗೆ ಬೋಧಿಸಿದ್ದೇನೆಂದರೆ—ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪಾಪಮಾಡುವವರೆಲ್ಲರೂ ಪಾಪಕ್ಕೆ ದಾಸರಾಗಿರುತ್ತಾರೆ ಎಂಬುವದೇ. ಕ್ರಿಸ್ತನ ಶಿಷ್ಯರಲ್ಲಿ ಅಗ್ರಗಣ್ಯನಾದವನೊಬ್ಬನು—ಪಾಪವು ವಂಚಿಸಿ ಮನುಷ್ಯನನ್ನು ಕೊಲ್ಲುತ್ತದೆ. ಪಾಪದ ಸ್ವಾಧೀನಕ್ಕೆ ಸಿಕ್ಕಬೇಡಿರಿ ಯಾಕಂದರೆ ಅದು ಕೊಡುವ ಸಂಬಳ ಮರಣವೇ ಹೊರತು ಇನ್ನೇನೂ ಇಲ್ಲವೆಂದು ಬರೆದಿದ್ದಾನೆ.

ನವರಾತ್ರಿ ಪ್ರದರ್ಶನಗಳು.

ಆರೋಗ್ಯ ವಸ್ತು ಪ್ರದರ್ಶನವು.

ಪ್ರಜೆಗಳು ಆರೋಗ್ಯ ಭಾಗವನ್ನು ಕಾಪಾಡಿಕೊಳ್ಳಬೇಕಾದದ್ದು ಅವರ ಮೊದಲನೆಯ ಕರ್ತವ್ಯವಾದದ್ದರಿಂದ ಅದಕ್ಕೆ ಸಹಕಾರಿಯಾದ ವಸ್ತು ವಿಶೇಷಗಳನ್ನು ಶ್ರೀಮನ್ ಮಹಾರಾಜರವರ ಗವರನ್‌ಮೆಂಟಿನವರು ರಾಜಧಾನಿಯ ಟೌನ್ ಹಾಲ್ ಬಂಗಲೆಯ ಮೇಲಂತಸ್ತಿನಲ್ಲಿ ಇಡಿಸಿ ಪ್ರಾರಂಭ ಮಾಡಿರುತ್ತಾರೆ. ಇದುವರೆಗೆ ಸಾವಿರಾರು ಜನರು ಹೋಗಿ ನೋಡಿ ವಿಷಯಗಳನ್ನು ತಿಳಿದುಕೊಂಡು ಬಂದರು. ಈ ಪ್ರದರ್ಶನವು ಇನ್ನೂ ನಡೆಯುತ್ತಲೂ, ಪ್ರಜೆಗಳು ಹೋಗಿ ನೋಡುತ್ತಲೂ ಇರುವುದಾಗಿದೆ. ಡೆಪ್ಯುಟಿ ಸ್ಯಾನಿಟರಿ ಕಮಿಷನರಾದ ಡಾಕ್ಟರ್ ಪಲ್ಪು ಅವರು ಈ ಪ್ರದರ್ಶನದಿಂದ ಉಂಟಾಗತಕ್ಕ ಪ್ರಯೋಜನಾಂಗಗಳನ್ನು ಸಕಲ ಪ್ರಜೆಗಳಿಗೂ ತಿಳಿಯಪಡಿಸುವುದರಲ್ಲಿ ಬಹಳ ಉತ್ಸಾಹಶೀಲತೆಯಿಂದ ಶ್ರಮಪಡುತ್ತಾರೆ. ಸಂಸ್ಥಾನದಲ್ಲಿರುವ ವೈದ್ಯ ಇಲಾಖಾ ಆಸ್ಪತ್ರೆ ಅಸಿಸ್ಟೆಂಟರನ್ನು ಸರ್ಕಾರದವರು ರಾಜಧಾನಿಗೆ ಕರೆಸಿದ್ದರು. ಇವರು ಬಂದು ಈ ಪ್ರದರ್ಶನವನ್ನು ನೋಡಿ ಹೋಗಿ ಅದರ ವಿಷಯವಾಗಿ ತಮ್ಮ ತಮ್ಮ ಊರುಗಳಲ್ಲಿರುವ ಪ್ರಜೆಗಳಿಗೆಲ್ಲಾ ಸಮಯ ಒದಗಿದಾಗ ಈ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡಿ, ಆರೋಗ್ಯ ಸೂತ್ರಗಳಿಗೆ ಅನುಸಾರವಾಗಿ ಊಟ, ಉಡಿಗೆ, ಆಚಾರ, ವ್ಯಾಯಾಮ, ನಿದ್ರೆ ಈ ಮೊದಲಾದ ವಿಷಯಗಳನ್ನು ಕ್ರಮಪಡಿಸಿಕೊಂಡು, ಆರೋಗ್ಯ ದೃಢಕಾಯರಾಗಿಯೂ ದೀರ್ಘಾಯುಷ್ಯರಾಗಿಯೂ ಬದುಕುವಂತೆ ಮಾಡಬೇಕೆಂಬುವುದೇ ಸರ್ಕಾರದವರ ಉದ್ದೇಶವೆಂದು ಕೇಳಿ, ಇಂಥಾ ಪ್ರಜಾಹಿತ ಕಾರ್ಯವನ್ನು ಮಾಡಿದ್ದಕ್ಕಾಗಿ ಸಂತೋಷಪಟ್ಟು ಸರ್ಕಾರದವರನ್ನು ಪ್ರಜೆಗಳ ಪರವಾಗಿ ವಂದಿಸುತ್ತೇವೆ. ಈಗ ಈ ಪ್ರದರ್ಶನವನ್ನು ನೋಡಿಕೊಂಡು ಹೋಗಿರುವ ಈ ಆಸ್ಪತ್ರೆ ಅಸಿಸ್ಟೆಂಟರುಗಳು ಸರ್ಕಾರದವರ ಶ್ರೇಷ್ಠವಾದ ಉದ್ದೇಶವನ್ನು ಸಾರ್ಥಕಪಡಿಸುವರೆಂದು ನಂಬಿ ನಿರೀಕ್ಷಿಸುವೆವು.

ಈ ಆರೋಗ್ಯ ವಿಚಾರವಾದ ಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಗಂಡಸು ಹೆಂಗಸರಿಗೂ ಹುಡುಗರಿಗೂ ನಾನಾವಿನೋದವಾದ ಕಸರತ್ತುಗಳನ್ನೂ ಆಟಗಳನ್ನೂ ಪಂದ್ಯಗಳನ್ನೂ ಮಾಡಿಸಿದರು. ಕ್ರಿಕೆಟ್ ಎಂಬ ಚೆಂಡಾಟದ ಪಂದ್ಯದಲ್ಲಿ ಸಿಟಿ ಕ್ಲಬ್ ಎಂಬ ಸಂಘದವರು ಗೆದ್ದರು. ಟೆನ್ನಿಸ್ ಎಂಬ ಚೆಂಡಾಟದ ಪಂದ್ಯವು ನೆನ್ನೆ ಪೂರೈಸುವುದಾಗಿತ್ತು. ಗರಡಿ ಸಾಮುಮಾಡಿದವರಿಗೆ ಕುಸ್ತಿಗಳನ್ನು ಮಾಡಿಸಿದರು. ಹೆಂಗಸರಿಂದ ಬಟ್ಟೆ ಕಟ್ಟುವುದು ಮತ್ತು ನೀರುಸೇದುವುದರಲ್ಲಿ ಪಂದ್ಯಗಳನ್ನು ನಡಿಸಿದರು. ವಿದ್ಯಾರ್ಥಿಗಳಾದ ಹುಡುಗರಿಗೆ ಜಂಬಾನಾ ಆಟಗಳನ್ನು ಕಲ್ಪಿಸಿ ನಡಿಸಿದರು. ಹೆಣ್ಣುಮಕ್ಕಳನ್ನು ಮೊನ್ನೆ ಸೋಮವಾರ ಸಾಯಂಕಾಲ ಟೌನ್‌ಹಾಲ್ ಬಂಗಲೆಯ ಮೈದಾನದಲ್ಲಿ ಸೇರಿಸಿ ಅವರಿಂದ ನಾನಾ ಆಟಗಳನ್ನು ಆಡಿಸಿದರು.

ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನವು.

ಇತ್ತಲಾಗಿ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನ ಶಾಲೆಯು ನೆನ್ನೆಯ ತನಕ ತೆರೆಯಲ್ಪಟ್ಟಿತ್ತು. ಅನೇಕಾನೇಕ ಪ್ರಜೆಗಳು ಹೋಗಿ ಪ್ರದರ್ಶನ ವಸ್ತುಗಳನ್ನು ನೋಡಿಬಂದರು. ಆದರೂ ಹೋದ ವರುಷದಷ್ಟು ಜನರು ಪ್ಲೇಗಿನ ದೆಸೆಯಿಂದ ಹೋಗಿರಲಿಲ್ಲವೆಂದು ತಿಳಿಯುತ್ತೇವೆ. ಈ ಪ್ರದರ್ಶನಕ್ಕೆ ಸಂಬಂಧಪಟ್ಟಹಾಗೆ ನಾನಾ ಆಟಗಳನ್ನೂ ಪಂದ್ಯಗಳನ್ನೂ ಕಮಿಟಿಯವರು ನಡಿಸಿದರು. ಕಳೆದ ಸೋಮವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಪ್ರದರ್ಶನಶಾಲೆಗೆ ದಯಮಾಡಿ ದೊಡ್ಡ ಸಭೆಯಲ್ಲಿ ಮೆಡಲುಗಳನ್ನೂ ಬಹುಮಾನಗಳನ್ನೂ ಹಂಚಿಕೊಟ್ಟರು. ಈ ಪ್ರದರ್ಶನ ಶಾಲೆಯಲ್ಲಿ ಒಂದು ಕಬ್ಬಿಣದ ಪೆಟ್ಟಿಗೆಯನ್ನು ತೋರಿಸಿದರು. ಈ ಪೆಟ್ಟಿಗೆಯ ಸುತ್ತಲೂ ಮೂರು ಗಂಟೆಗಳ ತನಕ ಬೆಂಕಿಯನ್ನು ಹಾಕಿ ಜ್ವಾಲೆಗಳು ವಿಶೇಷವಾಗಿ ಹೊರಡುವಂತೆ ಉರಿಸಿದರು. ಕಡೆಯಲ್ಲಿ ಆ ಪೆಟ್ಟಿಗೆಯ ಬಾಗಿಲು ತೆರೆದು ನೋಡಿದಾಗ ಒಳಗಿದ್ದ ಕಾಗದಪತ್ರಗಳೇ ಮೊದಲಾದವುಗಳ ಪೈಕಿ ಒಂದು ಪದಾರ್ಥವಾಗಲಿ ಸೆಕೆಯಿಂದ ಕೆಟ್ಟುಹೋಗಿರಲಿಲ್ಲ. ಈ ಕಬ್ಬಿಣದ ಪೆಟ್ಟಿಗೆಗೆ ಚಿನ್ನದ ಮೆಡಲನ್ನು ಬಹುಮಾನ ಕೊಟ್ಟಿರುವಂತೆ ಕೇಳುತ್ತೇವೆ. ಇದು ಬೊಂಬಾಯಿನ ಗಾಡ್ರೆಜ್ ಬಾಯಿಸಿ ಕಂಪನಿಯಲ್ಲಿ ತಯಾರಾಗುವಂಥಾ ಪೆಟ್ಟಿಗೆ.

ಮಹಾರಾಜರವರು ನಡಿಸಿದ ವಿನೋದಗಳು.

ನವರಾತ್ರಿ ಹಬ್ಬದ ಸಂತೋಷಾರ್ಥವಾಗಿ ಇಲ್ಲಿನ ಕಾರಂಜಿಕೆರೆಯ ಬಳಿ ಇರುವ ಜೂಜಿನ ಮೈದಾನದಲ್ಲಿ ಶ್ರೀಮನ್ ಮಹಾರಾಜರವರು ಕಳೆದ ವಾರ ನಾನಾ ಆಟಗಳನ್ನೂ ವಿನೋದಗಳನ್ನೂ ಪಂದ್ಯಗಳನ್ನೂ ನಡಿಸಿದರು. ಸಾಕಿದ ಪ್ರಾಣಿಗಳನ್ನೂ ಪ್ರದರ್ಶನಮಾಡಿಸಿ, ಉತ್ತಮವಾಗಿ ಸಾಕಿದ್ದವರಿಗೆ ಬಹುಮಾನಗಳನ್ನು ಕೊಡಿಸಿದರು. ಅಧಿಕಾರಿಗಳ ಮತ್ತು ಸವಾರರ ಕುದುರೆಗಳ ಜೂಜು ಬಿಡಿಸಿ ಗೆದ್ದವುಗಳಿಗೆ ಇನಾಮು ದಯಪಾಲಿಸಿದರು. ಅಧಿಕಾರಿಗಳ ಕುದುರೆಜೂಜು, ಸಿಪಾಯರುಗಳ ಕುದುರೆಜೂಜು ನಡೆಗೆಯ ಪಂದ್ಯವು, ಮಕ್ಕಳು ಸಣ್ಣ ಕುದುರೆಗಳ ಮೇಲೆ ಕುಳಿತು ಓಡಿಸಿದ್ದು, ಭಾರವನ್ನು ಎಳೆಯುವುದು, ಹಟ್ಟಿಗಳನ್ನು ಹಾರುವುದು, ಈ ಮೊದಲಾದ ವಿನೋದಗಳೂ ಪಂದ್ಯಗಳೂ ನಡೆದವು. ಎಲ್ಲಾ ಆಟಗಳಲ್ಲೂ ಗೆದ್ದವರನ್ನೆಲ್ಲಾ ಕೂಡಿಸಿ ಶ್ರೀಮನ್ ಮಹಾರಾಜರವರು ಬಹುಮಾನಗಳನ್ನು ಹಂಚಿಕೊಟ್ಟರು. ಇವುಗಳನ್ನು ನೋಡುವುದಕ್ಕೆ ದಿನವೂ ಸಾವಿರಾರು ಜನರೂ, ಯೂರೋಪ್ಯನ್ ಸರದಾರರೂ ದೊರೆಸಾನಿಗಳೂ, ಅರಸುಗಳೂ, ಅಧಿಕಾರಿಗಳೂ ಅಲ್ಲಿಗೆ ಹೋಗಿ ಬರುತ್ತಿದ್ದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಕಡೇ ದಿನ ನಡೆದ ವಿಚಾರಗಳು.

ಕಳೆದ ಮಂಗಳವಾರದ ಬೆಳಗ್ಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾಮಾನ್ಯ ವಿಷಯಗಳೂ ಸ್ಥಳೀಯ ವಿಷಯಗಳೂ ಚರ್ಚೆಯಾಗಿ ಮುಗಿಯಿತು. ಬಳಿಕ ಮೆ॥ ಜಂಬಳೆ ಅಣ್ಣಯ್ಯ ಪಂಡಿತರು ಶ್ರೀಮನ್ ಮಹಾರಾಜರವರಿಗೆ ಒಂದು ಅಡ್ರೆಸ್ಸನ್ನು ಓದಿ, ದಿವಾನರವರಿಗೆ ಕೊಟ್ಟು ಅದನ್ನು ಮಹಾರಾಜರವರಿಗೆ ಒಪ್ಪಿಸಬೇಕೆಂದು ಕೇಳಿಕೊಂಡರು. ಈ ಅಡ್ರೆಸ್ಸಿಗೆ ಸುಮಾರು ನಾಲ್ವತ್ತು ಮಂದಿ ಪ್ರತಿನಿಧಿಗಳು ರುಜು ಮಾಡಿದ್ದರೆಂದು ತಿಳಿಯುತ್ತೇವೆ. ಅದರ ಮುಖ್ಯಾಭಿಪ್ರಾಯವೇನೆಂದರೆ,—

ಕಳೆದ ವರುಷ ಸಂಸ್ಥಾನದಲ್ಲಿ ದುಷ್ಕಾಲವು ಪ್ರಾಪ್ತವಾಗಿದ್ದುದನ್ನು ಪರಾಂಬರಿಸಿ ಮಹಾಸ್ವಾಮಿಯವರು ಪ್ರಜಾಹಿತವನ್ನು ಬಯಸಿ ಸ್ವಸಂತೋಷವನ್ನು ತ್ಯಜಿಸಿ ಜರ್ಮನಿರಾಜ್ಯಕ್ಕೆ ಹೋಗಿ ಬರಬೇಕೆಂಬ ಉದ್ದೇಶವನ್ನು ಬಿಟ್ಟು ಸಂಸ್ಥಾನದಲ್ಲೇ ಉಳಿದುಕೊಂಡದ್ದಕ್ಕಾಗಿ ಪ್ರಜೆಗಳೆಲ್ಲಾ ಕೃತಜ್ಞತೆ ರಾಜಭಕ್ತಿಯಿಂದ ವಂದನೆಗಳನ್ನು ಸಮರ್ಪಿಸುತ್ತಾರೆ. ಸರ್ವಿಸ್‌ದಾರರೂ ಪೂರ್ಣ ಅನುಭವಶಾಲಿಗಳೂ ಸತ್ಯವಂತರೂ ಪ್ರಸಿದ್ಧ ಸರ್ ಟಿ. ಮಾಧವರಾಯರ ಪುತ್ರರೂ ಆದ ಮೆ। ಟಿ. ಆನಂದರಾಯರನ್ನು ನಮ್ಮ ಒಡೆಯರವರು ಸಂಸ್ಥಾನದ ದಿವಾನರಾಗಿಯೂ, ಮೆ। ಎಚ್. ವಿ. ನಂಜುಂಡಯ್ಯನವರನ್ನು ಎರಡನೆಯ ಕೌನ್ಸಲರಾಗಿಯೂ ನೇಮಕಮಾಡಿರುವುದು ಪ್ರಜೆಗಳಿಗೆಲ್ಲಾ ಆನಂದವೂ ತೃಪ್ತಿಯೂ ಉಂಟಾಗಿದೆ. ಪ್ರಜಾಪ್ರತಿನಿಧಿ ಸಭೆಯವರು ತಮ್ಮಲ್ಲಿ ಇಬ್ಬರನ್ನು ಚುನಾಯಿಸಿ ನ್ಯಾಯವಿಧಾಯಕ ಕೌನ್ಸಿಲ್ಲಿಗೆ ಮೆಂಬರಾಗಿ ಕಳುಹಿಸಬಹುದೆಂಬ ಹಕ್ಕನ್ನು ಮಹಾಸ್ವಾಮಿಯವರು ದಯಪಾಲಿಸಿದ್ದಕ್ಕಾಗಿಯೂ, ಈ ಸಲ ಸಭಿಕರಾದ ನಾವು ಚುನಾಯಿಸಿದ ಪ್ರತಿನಿಧಿಗಳ ಪೈಕಿ ಹೆಚ್ಚು ಸಂಮತಿಗಳನ್ನು ಪಡೆದ ಇಬ್ಬರನ್ನು ಆ ಕೌನ್ಸಿಲ್ಲಿಗೆ ಮೆಂಬರಾಗಿ ನೇಮಿಸಿದೆ ಎಂದು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಕ್ಕಾಗಿಯೂ ಪ್ರಜೆಗಳ ಸಂತೋಷವನ್ನು ಕೃತಜ್ಞತಾಪೂರ್ವಕವಾಗಿ ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುತ್ತೇವೆ. ಶ್ರೀಮನ್ ಮಹಾರಾಜರವರಿಗೂ, ದಿವಾನ್‌ರವರಿಗೂ ಶಾಶ್ವತವಾದ ಶ್ರೇಯೋಭಿವೃದ್ಧಿಯುಂಟಾಗಲೆಂಬುವುದೇ ನಮ್ಮ ಪ್ರಾರ್ಥನೆ.

ಈ ವಿಜ್ಞಾಪನೆಯನ್ನು ದಿವಾನರವರು ಮಹಾರಾಜರವರಿಗೆ ಒಪ್ಪಿಸುವುದಾಗಿ ಹೇಳಿ ತೆಗೆದುಕೊಂಡ ಬಳಿಕ ಮೆ॥ ಎ. ರಾಮಣ್ಣನವರು ದಿವಾನರವರನ್ನು ಕುರಿತು ಹೇಳಿದ್ದೇನೆಂದರೆ,—

ತಾವು ಈ ಸಲ ಈ ಪ್ರತಿನಿಧಿ ಸಭೆಯ ಕಾರ್ಯಗಳನ್ನು ಅತ್ಯಂತ ತೃಪ್ತಿಕರವಾಗಿ ನೆರವೇರಿಸಿದಿರಿ. ಇದಕ್ಕಾಗಿಯೂ, ನಮ್ಮಗಳ ವಿಜ್ಞಾಪನೆಗಳನ್ನೂ ಚರ್ಚೆಗಳನ್ನೂ ಸಾವಧಾನದಿಂದಲೂ ಪ್ರಜಾಹಿತಚಿಂತನೆಯಿಂದಲೂ ಆಲಿಸಿ ಸಂದರ್ಭಾನುಸಾರ ಸದುತ್ತರಗಳನ್ನು ದಯಪಾಲಿಸುವುದಕ್ಕಾಗಿಯೂ ಪ್ರಜಾಪ್ರತಿನಿಧಿಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಮಗೆ ಅರ್ಪಿಸುತ್ತೇನೆ. ಸತ್ಯವಂತರೂ ಕಾರ್ಯದಕ್ಷರೂ ಅನುಭವಶಾಲಿಗಳೂ ಸದ್ವಂಶೀಯರೂ ಆಗಿರುವ ತಾವು ನಮ್ಮ ಸಂಸ್ಥಾನದಲ್ಲಿ ದಿವಾನ್‌ರಾಗಿರುವಾಗ್ಗೆ ಈಗ ನಮ್ಮ ಮನಸ್ಸನ್ನು ಒಡಳವಾಗಿ ಬಾಧಿಸುತ್ತಿರುವ ಮುಖ್ಯವಾದ ಎರಡು ವಿಷಯಗಳನ್ನು ಕ್ರಮಪಡಿಸಿ ಕೊಡದೆ ಇರಲಾರಿರಿ ಎಂದು ನಂಬಿ ಪ್ರಾರ್ಥಿಸುತ್ತೇನೆ. ಮೊದಲನೆಯದು ಮೈಸೂರು ಸಂಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಗಳು. ವಿಶೇಷ ವಿದ್ಯಾವಂತರು ಮೊದಲು ನಮ್ಮ ಸಂಸ್ಥಾನದಲ್ಲಿ ದೊರೆಯುವುದು ಕಷ್ಟವಾಗಿಯೂ ಸರ್ಕಾರಿ ಅಧಿಕಾರಗಳಿಗೆ ಹೊರಗಿನಿಂದ ವಿದ್ಯಾವಂತರನ್ನು ಕರೆದುತರಬೇಕಾಗಿಯೂ ಇತ್ತು. ಈಗ ಈ ಸಂಸ್ಥಾನದಲ್ಲಿ ವಿದ್ಯಾವಂತರು ಹೇರಳವಾಗಿರುತ್ತಾರೆ. ಹೊಸದಾಗಿ ವರುಷೇ ವರುಷ ಶ್ರೇಷ್ಠವಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುತ್ತಲೂ ಇದ್ದಾರೆ. ಇಂಥಾ ಕಾಲದಲ್ಲೂ ಗವರನ್‌ಮೆಂಟಿನವರು ದೇಶೀಯ ಪ್ರಜೆಗಳ ಇಂಗಿತ ಕಷ್ಟನಷ್ಟಗಳನ್ನೂ ಅವರ ಭಾಷೆಯನ್ನೂ ತಿಳಿಯಲಾರದ ಯೌವನಸ್ಥರನ್ನು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುತ್ತಾರೆಂಬ ಒಂದೇ ಯೋಚನೆಯ ಮೇಲೆ ಕರೆದು ತಂದು ಅಧಿಕಾರಗಳಿಗೆ ನೇಮಿಸುವುದು ಪ್ರಜೆಗಳಲ್ಲಿ ಸಂಕಟವನ್ನುಂಟುಮಾಡಿರುತ್ತದೆ. ಆದಕಾರಣ ಈ ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ತಾವು ಕೃಪೆಯಿಟ್ಟು ನಮ್ಮ ಮಹಾರಾಜರವರಿಗೆ ಅರಿಕೆ ಮಾಡಿ ನಿಲ್ಲಿಸಿಕೊಡಬೇಕು. ಇದು ಸಾಧ್ಯವಲ್ಲದಿದ್ದ ಪಕ್ಷದಲ್ಲಿ ಈ ಸಂಸ್ಥಾನದ ಪ್ರಜೆಗಳಲ್ಲೇ ಯೌವನಸ್ಥರಿಗೆ ಪರೀಕ್ಷೆಯನ್ನಿಟ್ಟು ತೇರ್ಗಡೆಯಾಗತಕ್ಕವರನ್ನು ಅಧಿಕಾರಗಳಿಗೆ ನೇಮಿಸಿಕೊಳ್ಳುವಂತಾದರೂ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಎರಡನೆಯದಾಗಿ, ಈ ಸಂಸ್ಥಾನದಲ್ಲಿ ವರ್ತಮಾನ ಪತ್ರಿಕೆಗಳ ಕಾನೂನು ಹುಟ್ಟಿ ಒಂದು ವರುಷದಿಂದ ಪ್ರಜೆಗಳಿಗೆ ವೈಮನಸ್ಯವುಂಟಾಗಿದೆ. ಮತ್ತು ಇದರ ದೆಸೆಯಿಂದ ಇಲ್ಲಿ ನಡೆಯುವ ವರ್ತಮಾನಗಳು ಪ್ರಕಟವಾಗಲು ಅವಕಾಶವಿಲ್ಲದಂತಾಗಿದೆ. ಕೆಲವು ಪತ್ರಿಕೆಗಳು ನಿಂತುಹೋದದ್ದೂ, ಸರ್ಕಾರದವರ ನಡವಳಿಕೆಗಳ ಮೇಲೆ ಬರುತ್ತಿದ್ದ ಆಕ್ಷೇಪಣೆಗಳು ನಿಂತುಹೋಗಿರುವುದೂ ಸ್ವಾಮಿಗೆ ವೇದ್ಯವೇ ಇದೆ. ನಮ್ಮ ದೇಶದಲ್ಲಿ ಪ್ರಜೆಗಳಾಗಲಿ ಪತ್ರಿಕಾ ಎಡಿಟರುಗಳಾಗಲಿ ರಾಜದ್ರೋಹವೆಂಬುವುದನ್ನು ಅರಿತವರಲ್ಲ. ಈ ಕಾನೂನು ಬಂದದ್ದರಿಂದ ಪ್ರಜೆಗಳು ತಮ್ಮ ರಾಜಭಕ್ತಿಗೆ ಕುಂದಕವುಂಟಾಯಿತೆಂದು ಭಾವಿಸುವಹಾಗಾಗಿದೆ, ಹೊರಗಿನವರು ಈ ಸಂಸ್ಥಾನದಲ್ಲೂ ರಾಜದ್ರೋಹವಿರುವುದೆಂದು ಊಹಿಸುವ ಸ್ಥಿತಿಯುಂಟಾಯಿತು. ಆದಕಾರಣ ಈ ಕಾನೂನನ್ನು ರದ್ದುಮಾಡಿಸಿಕೊಟ್ಟು, ನಮ್ಮ ರಾಜಭಕ್ತಿಗೆ ಒಳಗೂ ಹೊರಗೂ ಕುಂದಕ ಬಾರದಂತೆ ಕಾಪಾಡಬೇಕು.

ಬಳಿಕ ಮೌಲ್ವಿ ಪರ್ವೇಜ್ ಪೀರ್ ಯವರು ಎದ್ದು ದಿವಾನರವರನ್ನು ಕುರಿತು ಹೇಳಿದ್ದೇನೆಂದರೆ,—ಈ ಸಂಸ್ಥಾನದ ಮಹಮದೀಯ ಪ್ರಜೆಗಳ ಪರವಾಗಿ ಬಂದಿರುವ ನಾವುಗಳು ತಮಗೆ ಮನಃಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇವೆ. ನಾವು ಅರಿಕೆಮಾಡಿಕೊಂಡ ವಿಷಯಗಳನ್ನೂ ನಡಿಸಿದ ಚರ್ಚೆಗಳನ್ನೂ ತಾವು ಸಾವಧಾನದಿಂದ ಆಲಿಸಿ ನಮಗೆ ಉತ್ತರಗಳನ್ನು ದಯಪಾಲಿಸಿ ನಮಗೆಲ್ಲಾ ಸಂತೋಷವನ್ನೂ ತೃಪ್ತಿಯನ್ನೂ ಉಂಟುಮಾಡಿದಿರಿ. ರಾಜಭಕ್ತಿಯಲ್ಲಿ ಮಹಮದೀಯ ಪ್ರಜೆಗಳು ಅದ್ವಿತೀಯರಾಗಿರುತ್ತಾರೆಂಬ ನಮ್ಮ ಪ್ರಾರ್ಥನೆಯನ್ನು ತಾವು ಶ್ರೀಮನ್ ಮಹಾರಾಜರವರಿಗೆ ನಮ್ಮ ಪರವಾಗಿ ಅರಿಕೆಮಾಡಬೇಕೆಂದು ಬೇಡುತ್ತೇವೆ.

ಮಾಗಡಿಯ ಮೆ॥ ಕೃಷ್ಣಮೂರ್ತಿರಾಯರು ದಿವಾನ್‌ರವರನ್ನು ಕುರಿತು ಹೇಳಿದ್ದೇನೆಂದರೆ,—ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಸೂಚಿಸಿದ ಮೆಂಬರುಗಳು ಸಭೆಗೆ ಬಾರದೆ ನಿಂತುಬಿಡುತ್ತಾರೆ. ಇದರಿಂದ ಇಂಥಾ ವಿಷಯಗಳು ಚರ್ಚೆಯಾಗಲು ಮಾರ್ಗವಿಲ್ಲದೆ ವರುಷೇ ವರುಷ ಬರುತ್ತಲೇ ಇರುವವು. ಇಂದವುಗಳನ್ನು ಕಳುಹಿಸಿದ ಮೆಂಬರುಗಳು ಬಾರದೆಹೋದಾಗ್ಯೂ ಆ ವಿಷಯಗಳು ಸಭೆಯಲ್ಲಿ ಚರ್ಚೆಯಾಗಿ ಇತ್ಯರ್ಥಪಡುವಂತೆ ಮಾಡಿಕೊಡಬೇಕು. ಇದಲ್ಲದೆ ಮೈಸೂರಿಗೆ ಈ ಸಭೆಗಾಗಿ ಬಂದ ಮೆಂಬರುಗಳಲ್ಲಿ ಕೆಲವರು ಕ್ರಮವಾಗಿ ಸಭೆಯಲ್ಲಿ ಹಾಜರಾಗಿರುವದಿಲ್ಲ. ಅವರು ಕಳುಹಿಸಿದ ವಿಷಯಗಳನ್ನು ಎತ್ತಿ ಅವರ ಹೆಸರು ಕೂಗಿದ್ದಾಗ ಇದ್ದೇ ತೀರಬೇಕೆಂದೂ, ವಿಷಯವನ್ನು ಚರ್ಚಿಸಬೇಕೆಂದೂ ವಿಧಾಯಕವಾಗಬೇಕು. ಈ ಭಾಗಗಳನ್ನು ತಮ್ಮ ಕಾಲದಲ್ಲಿ ಕ್ರಮಪಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ತರುವಾಯ ಕೃಷ್ಣರಾಜಪೇಟೆ ಪ್ರತಿನಿಧಿಯಾದ ಮೆ॥ ಕೃಷ್ಣಶಾಸ್ತ್ರಿಯವರು ದಿವಾನ್‌ರವರಿಗೆ ಅರಿಕೆಮಾಡಿದ್ದೇನೆಂದರೆ,—ಈ ಸಲ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವಿದ್ದರೂ ಪ್ರತಿನಿಧಿಗಳಾದ ನಮಗೆ ಯಾವವಿಧವಾದ ಚಿಂತೆಯೂ ಅನಾನುಕೂಲಗಳೂ ಉಂಟಾಗದಂತೆ ನಮಗೆಲ್ಲಾ ಆರೋಗ್ಯವಾದ ಸ್ಥಳವಸತಿಗಳನ್ನು ಕಲ್ಪಿಸಿಕೊಟ್ಟು ನಮ್ಮನ್ನು ಸುರಕ್ಷಿತವಾಗಿ ಕಾಪಾಡಿರುವಿರಿ ಎಂಬದಾಗಿ ಅರಿಕೆ ಮಾಡಿ, ಈ ಎಲ್ಲಾ ಸೌಕರ್ಯಗಳಿಗಾಗಿಯೂ ತಮ್ಮನ್ನು ಬಹಳವಾಗಿ ವಂದಿಸುತ್ತೇವೆ.

ಕಡೆಯಲ್ಲಿ ದಿವಾನ್ ಮೆ॥ ಟಿ. ಆನಂದರಾಯರವರು ಮೆಂಬರುಗಳನ್ನು ಕುರಿತು—ನೀವು ಹೇಳಿದ ವಿಚಾರಗಳನ್ನೆಲ್ಲಾ ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡುತ್ತೇನೆ ಎಂಬದಾಗಿ ತಿಳಿಸಿ, ಪ್ರತಿನಿಧಿ ಸಭೆಯನ್ನು ಮುಕ್ತಾಯಮಾಡಿದರು.

ತಾಲ್ಲೋಕು ವರ್ತಮಾನ

ಹುಣಸೂರು.—ಹುಣಸೂರಿನ ಹಾಕಿ ಕ್ಲಬ್ಬಿನವರು ಕಳೆದ ತಾರೀಖಿನಲ್ಲಿ ದಕ್ಷಿಣ ಕೊಡಗಿಗೆ ಸೇರಿದ ಪಾಲಿಬೆಟ್ಟ ಎಂಬ ಸ್ಥಳಕ್ಕೆ ಹೋಗಿ ಅಲ್ಲಿ ನಾಲ್ಕು ಕಡೆಯಿಂದಲೂ ಈ ಆಟಕ್ಕಾಗಿ ಬಂದಿದ್ದವರ ಸಂಗಡ ಆಡಿ, ಜಯಪ್ರದರಾಗಿ ಬಂದರು.—ಇಲ್ಲಿ ಪ್ಲೇಗ್ ಹೆಚ್ಚು ಕಡಮೆ ಒಂದು ವರ್ಷದಿಂದಲೂ ಇದ್ದೇ ಇದೆ. ಬ್ರಾಹ್ಮಣರೆಲ್ಲಾ ಊರು ಬಿಟ್ಟರು. ಇನ್ನು ಕೆಲವು ಪಂಗಡದವರು ಊರು ಬಿಟ್ಟು ತಿರುಗಿ ಬಂದು ಪುನಃ ಊರು ಬಿಡುವುದರಲ್ಲಿದ್ದಾರೆ. ಇಲ್ಲಿನ ಪಾಕೀಜಾ ವಿಷಯದಲ್ಲಿ ಸರ್ಕಾರದವರು ತುಂಬಾ ನಿಗಾ ಕೊಡಬೇಕಾಗಿದೆ.—ಕಳೆದ ವಾರ ಎಕ್ಸೈಸ್ ಕಮಿಷನರವರು ಇಲ್ಲಿಗೆ ದಯಮಾಡಿ ಅವರ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ಕಾರುಬಾರುಗಳನ್ನು ಪರಾಂಬರಿಸಿ ಸಂತೋಷಪಟ್ಟು ಇಲ್ಲಿಯ ಲಕ್ಷ್ಮಣ ತೀರ್ಥವೆಂಬ ಹೊಳೆಯಲ್ಲಿ ಒಂದು ಭಾರೀ ಮೊಸಳೆಯನ್ನು ಬಂದೂಕಿನಿಂದ ಹೊಡೆದು ಮುಂದಕ್ಕೆ ಪ್ರಯಾಣ ಬೆಳಸಿದರು.—ಇಲ್ಲಿನ ಬಾಳದ ಬೀದಿ, ಹೊಳೆಯರ ಬೀದಿ ಮತ್ತು ಇನ್ನು ಕೆಲವು ಭಾಗಗಳಲ್ಲಿ ಜ್ವರಗಳು ಹೆಚ್ಚುತ್ತಲಿವೆ. ಇಲ್ಲಿ ಪ್ಲೇಗಿನ ಹಾವಳಿ ದಿನೇ ದಿನೇ ಹೆಚ್ಚುತ್ತಲಿರುವದರಿಂದ ಈ ವಿಷಯಕ್ಕೂ ಗ್ರಾಮಾಧಿಕಾರಿಗಳು ಹೆಚ್ಚು ನಿಗಾ ಕೊಡಬೇಕಾಗಿದೆ.—ಇಲ್ಲಿ ಹಲವು ವರ್ಷಗಳಿಂದಲೂ ತಾಲ್ಕೂರಾಗಿದ್ದ ಮೆ॥ ಶ್ರೀನಿವಾಸಯ್ಯಂಗಾರ್ರವರು ವರ್ಗವಾಗಿ ಹೋದದ್ದರಿಂದ ಇಲ್ಲಿನ ಪ್ರಜೆಗಳಿಗೆ ವ್ಯಸನವಾದಾಗ್ಯೂ ಅವರಿಗೆ ಬದಲಾಗಿ ಬಂದಿರುವ ಮೆ॥ ರಾಮಸ್ವಾಮಯ್ಯನವರು ಆ ವ್ಯಸನವನ್ನು ಹೋಗಲಾಡಿಸಿ ಇಲ್ಲಿಯ ಪ್ರಜೆಗಳ ವಿಷಯದಲ್ಲಿ ತುಂಬಾ ಹಿತಚಿಂತಕರಾಗಿರುವದು ಬಹಳ ಸಂತೋಷವಾಗಿದೆ.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಸಮಾಜ.

ಈ ಸಮಾಜದ ಮೆಂಬರುಗಳು ಮತ್ತು ಅವರ ಸ್ನೇಹಿತರು ಶನಿವಾರದ ದಿನ ಎಲ್ಲರೂ ಸೇರಿ ಸಭೆಯನ್ನು ನಡಿಸಿದರು. ಬಹು ಮಂದಿ ಸ್ತ್ರೀಯರು ಸೇರಿದ್ದರು. ಬೆಂಗಳೂರಿನಲ್ಲಿ ಪ್ರಸಿದ್ಧರಾಗಿರತಕ್ಕ ಕೆಲ ಕುಟುಂಬದವರ ಸ್ತ್ರೀಯರು ಸಹ ಬಂದು ಸಭೆಯನ್ನಲಂಕರಿಸಿದ್ದರು. ಸಭಾ ಮಂದಿರವು ನೋಡಲು ಬಹಳ ರಮಣೀಯವಾಗಿತ್ತು. ಈ ಸಮಾಜದ ಕಾರ್ಯಗಳಲ್ಲಿ ಕೇವಲ ಆಸಕ್ತಿಯುಳ್ಳ ಸರಸ್ವತಿ ಸ್ಥಳದವರಾದ ಮೆಂಬರೊಬ್ಬರು ಐಕಮತ್ಯ ಎಂಬ ವಿಷಯವನ್ನು ಕುರಿತು ಅತಿಯುಕ್ತವಾದ ಒಂದು ಉಪನ್ಯಾಸವನ್ನು ಓದಿದರು. ಐಕಮತ್ಯವೆಂಬುದೇನು? ಅದರಿಂದ ಪ್ರಯೋಜನವೇನು? ಅದು ಯಾವಲ್ಲಿ ಇರಬೇಕಾದದ್ದು? ಅದು ಇಲ್ಲದೆ ಹೋಗುವುದರಿಂದ ಉಂಟಾಗುವ ಹಾನಿಗಳು ಯಾವವು? ಐಕಮತ್ಯದಿಂದ ಯಾರು ಎಂಥಾ ಉತ್ಕೃಷ್ಟ ಪದವಿಯನ್ನು ಸಂಪಾದಿಸಿರುವರು? ಮತ್ತು ಐಕಮತ್ಯದ ಲೋಪದಿಂದ ಪ್ರಾಪ್ತವಾಗತಕ್ಕ ಕೇಡುಗಳಿಂದ ಯಾವ ಜನಗಳು ಶ್ರಮಪಡುತ್ತಲಿರುವರು? ಎಂಬೀ ವಿಷಯಗಳನ್ನೆಲ್ಲಾ ಗರ್ಭೀಕರಿಸಿ ಉಪನ್ಯಾಸವು ಅತ್ಯಂತ ಬೋಧಯುಕ್ತವಾಗಿ ಬರೆಯಲ್ಪಟ್ಟಿತ್ತು. ಇದನ್ನು ಕೇಳಿದವರಿಗೆಲ್ಲರಿಗೂ ಬಹಳ ಸಂತೋಷ ಉಂಟಾಯಿತು. ತದನಂತರದಲ್ಲಿ ನೀತಿಪ್ರಮುಖವಾದ ಪ್ರಸಂಗವನ್ನು ಕೊಂಚಕಾಲ ನಡಿಸಿ ವಾದ್ಯಘೋಷದಿಂದಲೂ, ಸಂಗೀತದಿಂದಲೂ ಸಭೆಯನ್ನು ಮುಕ್ತಾಯಪಡಿಸಿದರು.

ಬರುವ ವಿಹಾರಂಗು ನವಂಬರು ೬ ನೇ ತಾ, ಶನಿವಾರ ನಡೆಯುವುದಾಗಿ ಸೂಚಿಸಲ್ಪಟ್ಟಿತು. ಎಲ್ಲರೂ ದಯಮಾಡಿ ಬರಬೇಕಾಗಿ ಸೆಕ್ರೆಟರಿಯವರು ಪ್ರಾರ್ಥಿಸಿದರು.

ನವರಾತ್ರಿ ಉತ್ಸವಗಳು.

ಸರ್ದಾರರಿಗೆ ನಡೆದ ಔತಣವೂ ಭಾಷಣಗಳೂ

ಕಳೆದ ಬುಧವಾರ ರಾತ್ರಿ ರಾಜಧಾನಿಯ ಗವರ್ನ್ಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ಈ ಸಲ ನವರಾತ್ರಿ ಉತ್ಸವಗಳಿಗೆ ಕರೆಸಲ್ಪಟ್ಟಿದ್ದ ಯೂರೋಪಿಯನ್ ಸರ್ದಾರರಿಗೂ ದೊರೆಸಾನಿಗಳಿಗೂ ಆ ಉತ್ಸವಗಳ ನಿಮಿತ್ತವಾದ ಔತಣವು ಜರುಗಿತು. ಈ ಸಲ ಅತಿಥಿಗಳ ಸಂಖ್ಯೆಯು ಎಂದಿಗಿಂತಲೂ ಕಡಮೆಯಾಗಿತ್ತು. ರಾಜಧಾನಿಯಲ್ಲಿರುವ ಯೂರೋಪಿಯನ್ನರೂ ಸೇರಿ ಸುಮಾರು ೭೦ ಮಂದಿ ಕುಳಿತು ಭೋಜನಮಾಡಿದರು. ಮದರಾಸ್ ಗವರ್ನರವರೂ ಅವರ ಸಂಸಾರಕ್ಕೆ ಸೇರಿದವರೂ ಔತಣಕ್ಕೆ ದಯಮಾಡಿಸಲಿಲ್ಲ. ಬ್ರಿಟಿಷ್ ರೆಸಿಡೆಂಟರು, ಅವರ ಪತ್ನೀರವರು, ಚೀಫ್ ಜಡ್ಜರು, ಸಂಸ್ಥಾನದ ನೌಕರಿಯಲ್ಲಿರುವ ಯೂರೋಪಿಯನ್ ಅಧಿಕಾರಿಗಳು ಮೊದಲಾದವರು ಹಾಜರಾಗಿದ್ದರು. ಭೋಜನಕಾಲದಲ್ಲಿ ಶ್ರೀಮನ್ಮಹಾರಾಜರವರ ಇಂಗ್ಲಿಷ್ ಬ್ಯಾಂಡ್ ವಾದಗಾರರು ಮನೋಹರವಾದ ರಾಗಗಳನ್ನು ನುಡಿಸುತ್ತಾ ಉಲ್ಲಾಸಪಡಿಸುತ್ತಿದ್ದರು.

ಭೋಜನಾನಂತರ ಅಂದರೆ ಸುಮಾರು ೯ ಗಂಟೆಗೆ ಶ್ರೀಮನ್ಮಹಾರಾಜರವರೂ ಯುವರಾಜರವರೂ ಆ ಮಂದಿರಕ್ಕೆ ದಯಮಾಡಿಸಿದರು. ಅವರ ಕೂಡ ದಿವಾನ್‌ರವರೂ ಸರ್ದಾರರುಗಳಾದ ಎಂ. ಕಾಂತರಾಜೇ ಅರಸಿನವರು, ಎಂ. ಲಕ್ಷ್ಮೀಕಾಂತರಾಜೇ ಅರಸಿನವರು, ಎಂ. ಗೋಪಾಲರಾಜೇ ಅರಸಿನವರೂ, ಸೀನಿಯರ್ ಕೌನ್ಸಿಲರ್ ಮಿ. ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ ಬಂದಿದ್ದರು. ಅತಿಥಿಗಳೆಲ್ಲಾ ಅವರನ್ನು ಬರಮಾಡಿಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಮಹಾರಾಜರವರು ಎಂಪ್ರರ್ ಚಕ್ರವರ್ತಿ ಸಾರ್ವಭೌಮರವರ ಆಯುರಾರೋಗ್ಯಗಳನ್ನು ಬಯಸಿದರು. ಅತಿಥಿಗಳೆಲ್ಲಾ ಅದೇ ರೀತಿ ಬಯಸಿದರು.

ರೆಸಿಡೆಂಟರವರ ಭಾಷಣವು.

ಬಳಿಕ ಬ್ರಿಟಿಷ್ ರೆಸಿಡೆಂಟ್ ಮಿ. ಎಸ್. ಎಂ. ಫ್ರೇಸರ್‌ರವರು ಎದ್ದು ಮಹಾರಾಜರವರನ್ನೂ ಅತಿಥಿಗಳನ್ನೂ ಕುರಿತು ಹೇಳಿದ್ದೇನೆಂದರೆ —

ನವರಾತ್ರಿ ಎಂಬುವುದು ಸಂಸ್ಥಾನದ ಪ್ರಜೆಗಳೂ ರಾಜರುಗಳೂ ಆಚರಿಸುವಂಥಾ ಬರಿಯ ಹಬ್ಬ ಮಾತ್ರವೇ ಅಲ್ಲ. ಹಿಂದೆ ಮಹಾರಾಜರವರು ಒಂದಾವರ್ತಿ ಹೇಳಿರುವ ಪ್ರಕಾರ ಅವರೂ ಅವರ ಮಂತ್ರಿಯವರೂ ಹಿಂದಿನ ವರುಷದಲ್ಲಿ ನಡೆದಿರುವ ಮತ್ತು ಮುಂದೆ ನಡೆಯಬೇಕಾಗಿರುವ ಕಾರ್ಯಗಳನ್ನೂ ಆಯವ್ಯಯಗಳನ್ನೂ ಗೊತ್ತುಮಾಡುವಂಥಾ ಸಮಯವಾಗಿಯೂ ಇರುತ್ತದೆ. ಮಹಾರಾಜರವರು ಇದುವರೆಗೆ ನಡೆದಿರತಕ್ಕ ಕಾರ್ಯಗಳ ವಿಷಯದಲ್ಲಿ ತೃಪ್ತಿಯನ್ನೂ ಸಂತೋಷವನ್ನೂ ಪಡಬಹುದಾಗಿದೆ. ಕೆಲವು ವರುಷಗಳಿಂದ ಮಳೆಬೆಳೆಗಳು ಸ್ವಲ್ಪಸ್ವಲ್ಪವೇ ಆಗುತ್ತಾ ಬಂದು, ಹೋದ ವರುಷ ಅದೂ ಆಗದೆ ಹೋದದ್ದರಿಂದ ದಿನಸಿಗಳ ಧಾರಣೆಗಳು ಹೆಚ್ಚಿದವು. ಇದರಿಂದ ಈ ಸೀಮೆಯ ನಾಲ್ಕರಲ್ಲೊಂದುಭಾಗವು ಕ್ಷಾಮಕ್ಕೆ ಗುರಿಯಾಯಿತು. ಈ ವರುಷವೂ ಮಳೆಯು ಸರಿಯಾಗಿ ನಡೆಯದೆ ಹೋಗಿದ್ದರೆ, ಈ ದಿನ ಮಧ್ಯಾಹ್ನ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಹೇಳಿದಂತೆ ವಿಸ್ತಾರವಾದ ಪ್ರದೇಶದಲ್ಲಿ ಕ್ಷಾಮ ಪ್ರಾಪ್ತವಾಗುತ್ತಿದ್ದಿತು. ಆದರೆ ದುಷ್ಕಾಲದ ನಿಮಿತ್ತವಾಗಿ ವಿಶೇಷ ಪ್ರಜೆಗಳು ಸರ್ಕಾರಿ ಕಾಮಗಾರಿಗಳಿಗೆ ಬರಲಿಲ್ಲ. ಸರ್ಕಾರದವರು ಕಾಮಗಾರಿಗಳನ್ನು ಸಾಮಾನ್ಯವಾಗಿ ಪ್ರಾರಂಭಮಾಡಿದರು. ತಕಾವಿ ಸಾಲಗಳನ್ನು ಕೊಡಿಸಿದರು. ಕೆಲವು ಮಟ್ಟಿಗೆ ದಿನಸಾರ್ಥವಾಗಿ ಜೀವನ ನಡಿಸಬೇಕಾಗಿಯೂ ಬಂತು. ಆದರೂ ಕ್ರಮವಾದ ರಿಲೀಫ್ ಕಾಮಗಾರಿಗಳು ಪ್ರಾರಂಭಿಸಲಿಲ್ಲ. ಕ್ಷಾಮ ಬಂದಾಗ್ಯೂ ಡಿಸ್ಟ್ರಿಕ್ಟ್ ಅಧಿಕಾರಿಗಳು ತುಂಬಾ ಚಟುವಟಿಕೆಯಿಂದ ಕೆಲಸಮಾಡಬೇಕಾಗಿರುತ್ತದೆ. ಅದೇ ರೀತಿ ಅವರು ಕ್ಷಾಮವನ್ನು ನಿರೀಕ್ಷಿಸಿ ಅದರ ಪರಿಹಾರಕ್ಕೆ ಎಲ್ಲಾ ಸಲಕರಣೆಗಳನ್ನೂ ಕಳೆದ ಜನವರಿಯಿಂದ ಮೇ ತಿಂಗಳ ವರೆಗೆ ಒದಗಿಸಿಕೊಳ್ಳುತ್ತಾ ಬಂದರು. ಎಲ್ಲರಿಗಿಂತಲೂ ಈ ಭಾಗದಲ್ಲಿ ಶ್ರೀಮನ್ಮಹಾರಾಜರವರು ವಿಶೇಷ ಮುತುವರ್ಜಿಯನ್ನು ವಹಿಸಿದವರಾಗಿದ್ದರು. ಅವರು ಜರ್ಮನಿ ದೇಶಕ್ಕೆ ಸಂಚಾರಾರ್ಥವಾಗಿ ಹೋಗಬೇಕೆಂದು ಎಲ್ಲಾ ಏರ್ಪಾಡುಗಳೂ ನಡೆದಿದ್ದರೂ, ಇಲ್ಲಿ ಕ್ಷಾಮಪ್ರಾಪ್ತವಾದೀತೆಂಬ ಕಳವಳ ಅವರಲ್ಲಿ ಉಂಟಾಗಿ ಅದರ ನಿವಾರಣೆಗಾಗಿ ತಾವು ಇಲ್ಲೇ ಇರುವುದು ಉಚಿತವೆಂದು ತೀರ್ಮಾನಿಸಿ ಆ ಪ್ರಯಾಣವನ್ನು ನಿಲ್ಲಿಸಿಬಿಟ್ಟದ್ದೂ ನಮ್ಮೆಲ್ಲರಿಗೂ ತಿಳಿದೇ ಇದೆ. ಅವರು ಈ ರೀತಿ ಮಾಡಿ ನಿಂತುಬಿಟ್ಟದ್ದರಿಂದ ಸರ್ಕಾರದ ಅಧಿಕಾರಿಗಳಲ್ಲೂ ಜನರಲ್ಲೂ ಎಷ್ಟು ಮಟ್ಟಿಗೆ ಉತ್ತೇಜನವೂ ಮುತುವರ್ಜಿಯೂ ಉಂಟಾದವೋ ವಿವರಿಸಬೇಕಾಗಿಲ್ಲ. ಶ್ರೀಮನ್ಮಹಾರಾಜರವರು ಸ್ವಸುಖಸಂತೋಷಗಳನ್ನು ನಿರಾಕರಿಸಿದ್ದನ್ನು ನೋಡಿ ಪ್ರಜೆಗಳೂ ಕೃತಜ್ಞತಾಪೂರ್ವಕವಾಗಿ ಸ್ವಾರ್ಥವನ್ನು ತ್ಯಜಿಸಿ ಸಹೋದರವರ್ಗದವರ ಕಷ್ಟಪರಿಹಾರಕ್ಕೆ ಸಹಾಯಮಾಡಿದರು. ಈಗಲೂ ದರಿಸೀ ಮಳೆಬೆಳೆಗಳು ತೃಪ್ತಿಕರವಾಗಿ ನಡೆದು ಆಳುವವರ ಮತ್ತು ಪ್ರಜೆಗಳ ಕಳವಳವನ್ನೂ ಭೀತಿಯನ್ನೂ ನಿವಾರಣೆಮಾಡಿರುವವು. ಮುಂದೆ ಧಾರಣೆಗಳು ಇಳಿದು ಬಡಬಗ್ಗರ ಜೀವನವು ಸುಲಭವಾಗಿ ನಡೆಯುವುದೆಂದು ನಂಬುತ್ತೇನೆ.

ನಮಗೆಲ್ಲಾ ಆತಿಥ್ಯವನ್ನು ನಡಿಸಿದ್ದಕ್ಕಾಗಿ ಶ್ರೀಮನ್ ಮಹಾರಾಜರವರಿಗೆ ನಮ್ಮಗಳ ವಂದನೆಯನ್ನು ಸಮರ್ಪಿಸುತ್ತೇನೆ. ಮುಂದಿನ ವರುಷ ನಮ್ಮ ಮಹಾರಾಜರವರಿಗೂ, ಈ ಸಂಸ್ಥಾನಕ್ಕೂ, ಕಷ್ಟಕರವಾದ ಮತ್ತು ಜವಾಬ್ದಾರಿಯುಳ್ಳ ಮಂತ್ರಿ ಪದವಿಯನ್ನು ಈಗತಾನೇ ವಹಿಸಿರುವ ದಿವಾನ್ ಮಿ. ವಿ. ಆನಂದರಾಯರವರಿಗೂ ಶ್ರೇಯಸ್ಸೂ ಸುಖಸಂತೋಷಾದಿಗಳೂ ಲಭಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀಮನ್ಮಹಾರಾಜರವರ ಭಾಷಣವು

ಅತಿಥಿಗಳೆಲ್ಲರೂ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನೂ ಆಯುರಾರೋಗ್ಯಗಳನ್ನೂ ಕೋರಿದ ಬಳಿಕ ಮಹಾರಾಜರವರು ಅವರನ್ನು ಕುರಿತು ಅಪ್ಪಣೆ ಕೊಡಿಸಿದ ಭಾಷಣದ ಅಭಿಪ್ರಾಯವೇನೆಂದರೆ,—

ಘನವನ್ನೈದಿದ ಮಿ. ಫ್ರೇಸರ್ ಯವರೇ ಮೊದಲಾಗಿ ತಾವುಗಳೆಲ್ಲಾ ಉದಾರವಾಗಿ ನಮ್ಮ ಶ್ರೇಯಸ್ಸನ್ನು ಬಯಸಿದ್ದಕ್ಕಾಗಿ ತಮ್ಮೆಲ್ಲರನ್ನೂ ವಂದಿಸುತ್ತೇವೆ. ನವರಾತ್ರಿ ಹಬ್ಬಕಾಲದಲ್ಲಿ ತಮ್ಮಂಥ ಯೂರೋಪಿಯನ್ ಸ್ನೇಹಿತರನ್ನು ಕರೆಸಿಕೊಂಡು ಸತ್ಕರಿಸುವ ಭಾಗದಲ್ಲಿ ನಮಗೆ ತುಂಬಾ ಸಂತೋಷವಾಗಿರುತ್ತದೆ.

ಈ ದಿನ ಅತಿಥಿಗಳ ಮಧ್ಯೆ ನಮಗೆಲ್ಲಾ ಚೆನ್ನಾಗಿ ತಿಳಿದಿರುವಂಥಾ ಮೂರು ಮಂದಿ ಸರ್ದಾರರುಗಳು ಇಲ್ಲದಿರುವುದನ್ನು ಸೂಚಿಸದೆ ಇರಲಾರೆವು. ಬಹು ದೀರ್ಘಕಾಲದಿಂದ ನಮ್ಮ ಮಧ್ಯೆ ಕೆಲಸಮಾಡುತ್ತಿದ್ದು ಕೆಲಸ ಬಿಟ್ಟಿರುವ ಮಿ. ಮೆಕ್‌ಚೀನ್‌ಯವರು ಒಬ್ಬರು. ನಮ್ಮ ಬಳಿ ಏಳು ವರುಷ ಪ್ರೈವೆಟ್ ಸೆಕ್ರೆಟರಿಯಾಗಿ ನೌಕರಿ ಮಾಡಿದ ಮಿ. ಮೆಕಾನಕಿಯವರು ಎರಡನೆಯವರು. ನಮ್ಮಿಂದಾಗಲಿ ನಮ್ಮ ಪ್ರಜೆಗಳಿಂದಾಗಲಿ ಎಂದೆಂದಿಗೂ ಮರೆಯಲಾಗದ ಪರಾಕ್ರಮವನ್ನು ಪ್ರಕಾಶಪಡಿಸಿ ಒಬ್ಬನ ಪ್ರಾಣವನ್ನು ಬದುಕಿಸುವ ಪ್ರಯತ್ನದಲ್ಲಿ ತಮ್ಮ ಪ್ರಾಣವನ್ನೇ ತ್ಯಾಗಮಾಡಿದ ಕ್ಯಾಪ್ಟನ್ ಡಾಸ್ ಯವರು ಮೂರನೆಯವರಾಗಿರುತ್ತಾರೆ.

ನಮ್ಮ ಸಂಸ್ಥಾನದಲ್ಲಿ ಮಳೆಬೆಳೆ ಆಗದೆ ದುಷ್ಕಾಲಪ್ರಾಪ್ತವಾಗಿದ್ದು ಈಗ ನಿವಾರಣೆಯಾಗಿರುವ ವಿಚಾರವನ್ನು ಘನವನ್ನೈದಿದ ಮಿ. ಫ್ರೇಸರ್‌ಯವರು ಅವರ ಭಾಷಣದಲ್ಲಿ ಸೂಚಿಸುತ್ತಾರೆ. ಅದರ ನಿವಾರಣೆಗೆ ನಮ್ಮ ಗವರ್ನ್ಮೆಂಟಿನವರು ಮಾಡಿದ ಏರ್ಪಾಡುಗಳೂ ಸಾಹಸಕಾರ್ಯಗಳೂ ತೃಪ್ತಿಕರವಾಗಿ ನಡೆದವೆಂದು ಅವರು ಒಪ್ಪಿಕೊಂಡಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಆ ಸಮಯದಲ್ಲಿ ನಾವು ಜರ್ಮನ್ ದೇಶಾಟನೆಯನ್ನು ನಿಲ್ಲಿಸಿಬಿಟ್ಟದ್ದು ನಮ್ಮಲ್ಲಿ ತಾತ್ಕಾಲಿಕವಾದ ನಷ್ಟವನ್ನುಂಟುಮಾಡಿದಾಗ್ಯೂ ನಾವು ಇಲ್ಲಿ ಇರದೆ ಹೋಗಿದ್ದರಿಂದ ಪ್ರಜೆಗಳ ವಿಷಯದಲ್ಲಿ ನಾವು ನಡಿಸಬೇಕಾದ ಕರ್ತವ್ಯಕ್ಕೆ ಲೋಪವುಂಟಾದೀತೆಂಬ ಚಿಂತೆಯು ನಮ್ಮನ್ನು ಬಾಧಿಸಿತು. ದೇವರ ದಯೆಯಿಂದ ಒಳ್ಳೆ ಮಳೆ ಸುರಿದು ಬೆಳೆಗಳು ಚೆನ್ನಾಗಿರುತ್ತವೆ. ಕ್ಷಾಮದ ಭೀತಿಯು ನಮ್ಮ ಪ್ರಜೆಗಳಿಗೆ ನಿವಾರಣೆಯಾಗಿರುವುದು.

ದೌರ್ಭಾಗ್ಯದ ಮೇರೆಯಿಂದ ನಮ್ಮ ಮಧ್ಯೆ ಪ್ಲೇಗ್ ಉಪದ್ರವು ಇದ್ದೇ ಇರುವುದು. ಇದಕ್ಕೆ ಬೇಕಾದ [illegible], ಮೈಸೂರಿನ ಆರೋಗ್ಯಚಾರವನ್ನು [illegible] ಪರಿಶೋಧನೆಯಿಂದಲೂ ಈ ಉಪದ್ರವ ಹಾವಳಿಯನ್ನು ಅಡಗಿಸಬೇಕೆಂದು ಸಾಹಸಪಡುತ್ತಾ ಬಂದಿದೆ. ಕಾಲಕ್ರಮದಲ್ಲಿ ಈ ಉಪದ್ರವು ನಿವಾರಣೆಯಾದೀತೆಂದು ನಿರೀಕ್ಷಿಸುವೆವು.

ಬಳಿಕ ಅತಿಥಿಗಳೆಲ್ಲಾ ಮಹಾರಾಜರವರನ್ನು ವಂದಿಸಿ ಅರಮನೆಗೆ ಕಳುಹಿ ಕೊಟ್ಟರು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನರವರಿಗೆ ಓದಿ ಒಪ್ಪಿಸಿದ ಅಡ್ರೆಸ್ಸುಗಳು

ಬೆಂಗಳೂರು.

ಪ್ರಜಾಪ್ರತಿನಿಧಿಗಳಾದ ಮಿ. ಎ. ಗುಂಡೂರಾಯರು, ಡಿ. ದಾಸಪ್ಪನವರು, ಧೂಳಪ್ಪನವರು, ಬಿ. ರಾಮಸ್ವಾಮಿಯ್ಯಂಗಾರ್ರು ಇವರಿಂದ ಒಪ್ಪಿಸಲ್ಪಟ್ಟದ್ದು.

ಶ್ರೀಮನ್ಮಹಾರಾಜರವರು ದೇಶೀಯ ಪ್ರಜೆಗಳ ಯೋಗಕ್ಷೇಮ ಸಂರಕ್ಷಣಾರ್ಥವಾಗಿ ತಮಗೆ ಮಹೋನ್ನತ ಪದವಿಯನ್ನು ದಯಪಾಲಿಸಿದ್ದಕ್ಕಾಗಿ ಪ್ರಜೆಗಳಿಗೆ ಉಂಟಾಗಿರುವ ಸಂತೋಷಾತಿಶಯವನ್ನು ರಾಜಭಕ್ತಿಯುಕ್ತರಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಈಚೆಗೆ ಎರಡು ವರುಷಗಳಿಂದಲೂ ಈ ದೇಶದಲ್ಲಿ ಮಳೆಯಿಲ್ಲದೆ ಪ್ರಜೆಗಳು ಜೀವನೋಪಾಯಕ್ಕಾಗಿ ವಿಶೇಷ ತೊಂದರೆಗಳನ್ನು ಅನುಭವಿಸುತ್ತಿದ್ದ ಸಂಭವದಲ್ಲಿ ತಾವು ಈ ಮುಖ್ಯವಾದ ಪದವಿಯನ್ನು ಅಲಂಕರಿಸಿದ ಒಡನೆಯೆ ಒಳ್ಳೆ ಮಳೆಯಾದದ್ದು ಅಲ್ಲದೆ ಅಲ್ಲಿಂದ ಈಚೆಗೆ ಸಕಾಲಗಳಲ್ಲಿ ಮಳೆಗಳು ನಡಿಸಿ ಕೆರೆಗಳೆಲ್ಲಾ ತುಂಬಿ ಎಲ್ಲಾ ಫಸಲುಗಳು ಚೆನ್ನಾಗಿ ಬೆಳೆದಿರುವುದೇ ಮೊದಲನೇ ಸಂತೋಷವಾಗಿದೆ.

ಜನಗಳು ಜೀವನಕ್ಕೆ ಇಲ್ಲದೆ ಪಡುತ್ತಿದ್ದ ತೊಂದರೆ ವಿಷಯದಲ್ಲಿ ದಯಾಳುಗಳಾದ ಸರ್ಕಾರದವರು ಮಾಡಿದ ಸಹಾಯಗಳಿಗಾಗಿ ತುಂಬಾ ಕೃತಜ್ಞರಾಗಿದ್ದೇವೆ. ಆ ಸಹಾಯಗಳು ಯಾವುವೆಂದರೆ —ಇಪ್ಪತ್ತು ರೂಪಾಯಿನ ಒಳಪಟ್ಟ ನೌಕರರಿಗೆ ಧಾನ್ಯದ ಅಲೋಯನ್ಸು ಕೊಡಿಸಿದ್ದು. ಕೇವಲ ಬಡಜನಗಳಿಗೆ ಧಾನ್ಯವನ್ನು ಮುಫತ್ತು ಕೊಟ್ಟದ್ದು. ಜನಗಳಿಗೆ ಪ್ರೋತ್ಸಾಹಪಡಿಸಿ ಪೇಟೇ ಧಾರಣೆಗಿಂತಲೂ ಕಡಮೆ ಧಾರಣೆಗೆ ಬಡಜನಕ್ಕೆ ಜೀವನಕ್ಕೆ ದವಸ ಕೊಡಿಸಿದ್ದು, ರಿಯಾಯಿತಿ ಬಡ್ಡಿಗೆ ತಕಾವಿ ಮೊಬಲಗು ಕೊಟ್ಟದ್ದು. ತರಿ, ಬಾಗಾಯಿತು ಜಮೀನುಗಳಲ್ಲಿ ಫಸಲಾಗದ್ದಕ್ಕೆ ಅವರ ಕಂದಾಯ ರಿಮಿಷನ್ ಕೊಟ್ಟದ್ದು ಮತ್ತು ರಿಲೀಫ್ ಕಾಮಗಾರಿ ಮೂಲಕ ಬಡಜನಗಳಿಗೆ ಜೀವನ ಕಲ್ಪಿಸಿದ್ದು. ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರೇ ಮೊದಲಾದ ಎಲ್ಲಾ ಆಫೀಸರುಗಳು ಕೇವಲ ಶ್ರಮವಹಿಸಿ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಿ [illegible] ನ್ಯಾಯವಾಗಿ ಅವರವರ [illegible] ಮಾಡಿದ ಮೂಲಕ ತೋರಿಸಿದ ಮಹೋಪಕಾರ.

ಶ್ರೀ ಟಿ. [illegible] ಶ್ರೀನಿವಾಸ ರಂಗಯ್ಯಂಗಾರವರು ಈ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ [illegible] ಬರುತ್ತಿವೆ. ತಮ್ಮ ಕಾಲದಲ್ಲಿ ಈ ಸಭೆಗೆ [illegible] ಹಕ್ಕುಗಳೂ ಲಭಿಸುವುವೆಂದು ನಂಬಿ ಇದ್ದೇವೆ.

ಸಕುಟುಂಬ ಸಪರಿವಾರಯುಕ್ತರಾದ ಶ್ರೀಮದ್ರಾಜಾಧಿರಾಜ ಶ್ರೀಮತ್ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರಿಗೂ ಅವರ ಮುಖ್ಯಾಮಾತ್ಯ ಸಕುಟುಂಬಯುಕ್ತರಾದ ಮಹಾಸ್ವಾಮಿಯವರಿಗೂ ಇತೋಪ್ಯಧಿಕಪದವಿಯೊಡನೆ ಆಯುರಾರೋಗ್ಯ ಐಶ್ವರ್ಯ ಸರ್ವದಾ ಕಾಪಾಡಿಕೊಂಡು ಬರಬೇಕೆಂತ ಭಕ್ತಿಪೂರ್ವಕವಾಗಿ ಶ್ರೀಲಕ್ಷ್ಮೀಸಮೇತ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುತ್ತೇವೆ.

ಕೋಲಾರ ಚಿನ್ನದ ಗಣಿಯವರು ಒಪ್ಪಿಸಿದ್ದು

ಸ್ವಾಮಿ,

ತಮಗೆ ಈ ಸಂಸ್ಥಾನದ ದಿವಾನ್‌ಗಿರಿ ಆದ ವಿಷಯದಲ್ಲಿ ಕೋಲಾರ ಚಿನ್ನದ ಗಣಿಗಳ ಬೋರ್ಡಿನವರು ಮನಃಪೂರ್ವಕವಾಗಿ ಸಂತೋಷಪಟ್ಟು, ಈ ಘನವಾದ ಮತ್ತು ಜವಾಬ್ದಾರಿಯುಳ್ಳ ಕಾರ್ಯವನ್ನು ಸಾರ್ಥಕವಾಗಿ ನೆರವೇರಿಸುವುದರಲ್ಲಿ ತಮಗೆ ಅವಿಚ್ಛಿನ್ನವಾದ ಆರೋಗ್ಯವೂ, ಸಾಮರ್ಥ್ಯವೂ ದೊರಕಲಿ ಎಂದು ಕೋರುತ್ತೇವೆ. ತಮ್ಮಂಥಾ ಅನುಭವಸ್ಥರೂ ಕುಶಲಮತಿಗಳೂ ದಿವಾನ್‌ಗಿರಿಗೆ ದೊರಕಿರುವುದು ಶ್ರೀಮನ್ಮಹಾರಾಜರವರಿಗೂ ಈ ಸಂಸ್ಥಾನದ ಪ್ರಜೆಗಳಿಗೂ ಸಂಭ್ರಮಯುಕ್ತವಾದದ್ದೆಂದು ಈ ಸಂದರ್ಭದಲ್ಲಿ ಸೂಚಿಸುವೆವು.

ಮೈಸೂರು ಗಣಿಗಳ ಕಾನೂನು ಈ ಪ್ರದೇಶದಲ್ಲಿ ಎಷ್ಟು ಮಟ್ಟಿಗೆ ಉಪಯುಕ್ತವಾದದ್ದಾಗಿದೆ ಎಂಬುದನ್ನು ತಿಳಿಯುವುದಕ್ಕಾಗಿ ಗವರ್ನ್ಮೆಂಟಿನವರು ಈ ಎರಡು ವರುಷಗಳ ರಿಪೋರ್ಟನ್ನು ತರಿಸಿಕೊಂಡಿರುತ್ತಾರೆ. ಈ ರಿಪೋರ್ಟುಗಳಲ್ಲಿ ತೃಪ್ತಿಕರವಾದ ಕೆಲಸ ನಡೆದಿದೆ ಎಂದು ಬರೆಯಲ್ಪಟ್ಟಿರುವುದನ್ನು ಓದಿ ಸಂತೋಷಪಡುವೆವು. ಈ ಕಾನೂನು [illegible] ಪ್ರಜೆಗಳನ್ನು ಯಾವ ಭಾಗದಲ್ಲೂ ಹಿಂಸೆ ಕಷ್ಟ ನಷ್ಟಗಳಿಗೆ ಗುರಿಪಡಿಸಿಲ್ಲವೆಂಬುವುದು ಈ ರಿಪೋರ್ಟಿನಿಂದ ಗೊತ್ತಾಗುವುದು. ಸರ್ಕಾರದವರು ಈ ಎರಡು ವರುಷಗಳ ಬೇರೊಂದು ಸ್ಪೆಷಲ್ ರಿಪೋರ್ಟನ್ನು ತರಿಸಿಕೊಳ್ಳುವವರಾಗಿದ್ದಾರೆ. ಈ ಕಾನೂನನ್ನು ಇಷ್ಟರಲ್ಲೇ ಬೌರಿಂಗ್ ಪೇಟೆಗೂ ಮಾರಿಕುಪ್ಪಕ್ಕೂ ಮಧ್ಯೆ ಇರುವ ರೈಲ್ವೆ ಹದ್ದು ಬಸ್ತಿಗೆಲ್ಲಾ ಜಾರಿಗೆ ತರುವಂತೆ ಆಗಬೇಕೆಂದು ಕೇಳಿಕೊಳ್ಳುವೆವು.

ಪೋಲೀಸ್ ಕಾನೂನನ್ನು ಪ್ರಮಾಣಿಸಿ ಜಾರಿಗೆ ತಂದದ್ದಕ್ಕಾಗಿ ನಾವು ವಂದನೆ ಮಾಡುತ್ತೇವೆ. ಇದರಿಂದ [illegible] ಅಕೃತ್ಯಗಳನ್ನು ಅಡಗಿಸುವುದಕ್ಕೆ ಪೋಲೀಸಿನವರಿಗೆ ತುಂಬಾ ಅವಕಾಶವಾಯಿತು. ಅಲ್ಲಿನ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈ ಪೋಲೀಸು ಮೊಕದ್ದಮೆಗಳು ಬಹಳ ಹೆಚ್ಚಾಗಿರೋಣದರಿಂದ ಅವು ಬೇಗನೆ ಇತ್ಯರ್ಥವಾಗಲು ಅಡ್ಡಿಯಾಗಿದೆ. ಇಲ್ಲಿಗೆ ಒಂದು ಸಬ್ ಟ್ರೆಜರಿಯನ್ನು ಸ್ಥಾಪಿಸಿಕೊಟ್ಟು ಅಲ್ಲಿಗೆ ಒಬ್ಬ ಅಮಲ್ದಾರ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದಲ್ಲಿ ಅವರು ಈ ಮೊಕದ್ದಮೆಗಳನ್ನು ಫೈಸಲ್ ಮಾಡಲು ಸಹಾಯವಾಗುತ್ತದೆ.

ಶಿವಸಮುದ್ರದ ಕಾರ್ಖಾನೆಯಲ್ಲಿ ಉತ್ಪತ್ತಿಮಾಡಿ ನಮ್ಮ ಚಿನ್ನದಗಣಿ ಕೆಲಸಗಳಿಗೆ ಒದಗಿಸುತ್ತಿರುವ ವಿದ್ಯುಚ್ಛಕ್ತಿಯು ಕಡಮೆಯಾಗದಂತೆ ಸರ್ಕಾರದವರು ಏರ್ಪಾಡುಗಳನ್ನು ಮಾಡುತ್ತಿರುವುದು ಸಂತೋಷಪ್ರದವಾಗಿದೆ. ಶಿವಸಮುದ್ರ ಬಳಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕೆ ಸರ್ಕಾರದವರು ಒಂದು [illegible] ಕೆರೆಯನ್ನು ಕಟ್ಟಿ ನೀರನ್ನು ಶೇಖರ ಮಾಡಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಗವರ್ನ್ಮೆಂಟಿನವರು ಪ್ರಜಾ ಆರೋಗ್ಯ ಮತ್ತು ಸ್ಯಾನಿಟರಿ ವಿಚಾರಗಳನ್ನು ಕ್ರಮಪಡಿಸುವುದಕ್ಕೆ ಪ್ರತ್ಯೇಕವಾದ ಇಲಾಖೆಯನ್ನು ಏರ್ಪಾಡು ಮಾಡಿರುವುದು ಸ್ತೋತ್ರಾರ್ಹವಾಗಿದೆ. ಇಷ್ಟರಲ್ಲೇ ಒಂದು ಪರಿಶೋಧನಾ ಗೃಹವನ್ನೂ ಸಲಕರಣೆಗಳನ್ನೂ ಒದಗಿಸಬೇಕೆಂದು ನಂಬುವೆವು. ಈಗ ಈ ಪರಿಶೋಧನಾ ಕೆಲಸಗಳನ್ನೂ [illegible] ಮಾಡುತ್ತಿರುವರು.

ನಮ್ಮ ಕಂಪನಿಯ ಡಾಕ್ಟರುಗಳ ಅಪೇಕ್ಷೆಯನ್ನು ಅನುಸರಿಸಿ [illegible] ಮಂಗಲದ ಕೆರೆ [illegible] ಒಂದು [illegible] ಜನರು ಕೆಡಿಸುವುದಕ್ಕೆ ಅವಕಾಶವಾಗದಂತೆ ಅದರ ಮೇಲೆ ಮುಚ್ಚಳವನ್ನು ಮಾಡಿಸಿ ಕೊಡುವುದಾಗಿ ಸರ್ಕಾರದವರು ಒಪ್ಪಿ [illegible] ಅದಕ್ಕೆ ಹಣವನ್ನು ಒದಗಿಸುವವರಾಗಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ.

ಸರ್ಕಾರದವರು ರಾಬರ್ಟ್‌ಸನ್ ಪೇಟೆಯಲ್ಲಿ ಜನರಲ್ ಆಸ್ಪತ್ರೆಯನ್ನು ಇಟ್ಟು ನಡಿಸುತ್ತಿರುವುದರಿಂದ ಸಾಮಾನ್ಯ ಪ್ರಜೆಗಳ ರೋಗ ಚಿಕಿತ್ಸೆಗೆ ತುಂಬಾ ಉಪಕಾರವಾಯಿತು. ಅದರಲ್ಲಿ ಎಂಗ್ಲೋ ಇಂಡಿಯನ್ ಮತ್ತು ಯೂರೋಪಿಯನ್ ರೋಗಿಗಳನ್ನು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಸಾಧನಗಳಿಲ್ಲದೆ ಕೊರತೆಯಾಗಿದೆ. ಇದನ್ನು ಸರ್ಕಾರದವರು ಬೇಗನೆ ನಿವಾರಣೆಮಾಡಿ ಕೊಡಬೇಕು.—ಹೇಗೆಯೂ ಆಸ್ಪತ್ರೆಯಲ್ಲಿ ಸ್ಥಳ ಸಾಲದು. ಅದನ್ನು ವಿಸ್ತಾರ ಮಾಡುವುದು ಸರ್ಕಾರದವರ ಯೋಚನೆಯಲ್ಲಿದೆ ಎಂದು ಒಪ್ಪಿದ್ದು ಅದನ್ನು ಅವರು ಜಾಗ್ರತೆ ನೆರವೇರಿಸಿಕೊಡುವರೆಂದು ನಿರೀಕ್ಷಿಸುತ್ತೇವೆ.

ಸರ್ಕಾರದವರು ರಸ್ತೆಗಳನ್ನು ಕಳೆದ ವರ್ಷ ಒಳ್ಳೆ ಸ್ಥಿತಿಯಲ್ಲಿಟ್ಟಿದ್ದರಿಂದಲೂ, ವಿದ್ಯುಚ್ಛಕ್ತಿ ದೀಪಗಳನ್ನು ಇಡಿಸಿಕೊಟ್ಟರೆಂದೂ ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಅರಿಕೆ ಮಾಡುತ್ತೇವೆ.

ದಕ್ಷಿಣ ಮೈಸೂರ್ ಪ್ಲಾಂಟರುಗಳ ಸಭಾಪತಿಯು [illegible]

ಸ್ವಾಮಿ,

ಹೋದ ವರುಷ ಈ ದಿನಗಳಲ್ಲಿ ಮಳೆ ಇಲ್ಲದೆ ಬೆಳೆಗಳು ಕೆಟ್ಟು ಹೋಗಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ದುಷ್ಕಾಲಪ್ರಾಪ್ತವಾಗಿತ್ತು. ಈ ವರುಷ ಮಳೆ ನಡಿಸದೆ ಹೋಗಿದ್ದರೆ ಕಠಿಣವಾದ ಕ್ಷಾಮವುಂಟಾಗುತ್ತಿತ್ತೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಈ ಸಲ ಸಕಾಲಗಳಲ್ಲಿ ಒಳ್ಳೆ ಮಳೆಗಳು ಸುರಿದು ಎಲ್ಲಾ ಕೆರೆಗಳೂ ಕೆರೆಕಟ್ಟೆಗಳು ತುಂಬಿ ಪೈರುಪಚ್ಚೆಗಳು ಹುಲುಸಾಗಿ ಆಗಿರೋಣದರಿಂದ ಸರ್ಕಾರದವರಿಗೂ ಪ್ರಜೆಗಳಿಗೂ ಉಂಟಾಗಿದ್ದ ಕಳವಳವೂ ಭೀತಿಯೂ ನಿವಾರಣೆಯಾಗಿವೆಯೆಂದು ಸರ್ಕಾರದವರ ಕೂಡ ನಾವೂ ಸಂತೋಷಪಡುತ್ತೇವೆ ಮತ್ತು ಕೆಲವು ಕಾಲದಲ್ಲೇ ದಿನಸಿಗಳ ಧಾರಣೆಯು ಇಳಿಯುವುವೆಂದು ನಿರೀಕ್ಷಿಸುವೆವು.

[illegible] ಅವಕಾಶ ಕೊಡಿಸಿದ [illegible] ತಮ್ಮ [illegible] ಸಂತೋಷಪಡುತ್ತೇವೆ. ಮಿ. [illegible] ಎಂಬ [illegible] ವಿಚಾರಣೆ ಮಾಡಿದರು. ಇದರಿಂದ ನಮ್ಮ ಕೆಲಸಗಳಿಗೆ ಒಳ್ಳೇ [illegible] ಸಂಭವವೆಂದು ನಿರೀಕ್ಷಿಸುತ್ತೇವೆ.

ಅರಸೀಕೆರೆ ಮಂಗಳೂರು ರೈಲ್ವೆಯನ್ನು ಇನ್ನು ಕೆಲವು ವರುಷಗಳ ತನಕ ಹಾಕುವ ಯೋಚನೆ ಮಾಡುವುದಿಲ್ಲವೆಂಬ ಇಂಡಿಯಾ ಗವರ್ನ್‌ಮೆಂಟಿನವರ ತೀರ್ಮಾನವನ್ನು ಕೇಳಿ ನಾವು ವಿಷಾದಿಸುತ್ತೇವೆ ಸಾಹುಕಾರಿಯಾಗಿ ಈ ರೈಲು ಹಾಕಲ್ಪಡುವ ಭಾಗದಲ್ಲಿ ಅವರು ಅಡ್ಡಿ ಮಾಡುತ್ತಿಲ್ಲವೆಂದು ಅಪ್ಪಣೆ ಕೊಡಿಸಿದ್ದಾರಾದ್ದರಿಂದ ಇಂಥಾ ಕೆಲಸವೇನಾದರೂ ನಡೆಯುವುದಾದರೆ ಮೈಸೂರು ಸರ್ಕಾರದವರು ಅದಕ್ಕೆ ತಕ್ಕ ಸಹಾಯ ಪ್ರೋತ್ಸಾಹಾದಿಗಳನ್ನು ಒದಗಿಸಿ ಕೊಟ್ಟಾರೆಂದು ನಿರೀಕ್ಷಿಸುವೆವು ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಲೈಟ್ ರೈಲ್ವೆ (ಸಣ್ಣ ರೈಲು) ಹಾಕುವ ಯೋಚನೆ ಬಹುಕಾಲದಿಂದ ಇತ್ತು ಈಗ ಅದಕ್ಕಾಗಿ ಸರ್ವೆ ಮುಂತಾದ ಕೆಲಸಗಳು ನಡೆಯುತ್ತಿವೆ ಎಂದು ಕೇಳಿ ಸಂತೋಷಪಡುತ್ತೇವಲ್ಲದೆ ಗವರ್ನ್‌ಮೆಂಟಿನವರು ಈ ಕಾರ್ಯವನ್ನು ಜಾಗ್ರತೆ ಪಡಿಸಿಯಾರೆಂದು ಪ್ರಾರ್ಥಿಸುತ್ತೇವೆ ಈಗ ಅಜ್ಜಂಪುರ ಸೇರುವ ಒಳ್ಳೇ ಸ್ಥಿತಿಯಲ್ಲಿರುವುದು ಅವರ ಮೂಡಿಗೆರೆಯ ಕಡೆಯಿಂದ ಬರತಕ್ಕ ರಸ್ತೆಯು ಚೆನ್ನಾಗಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ

ಬೇಲೂರಿನಲ್ಲಿ ಟೆಲಿಗ್ರಾಫ್ ಆಫೀಸು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ ಪೂರ್ವ ಪಶ್ಚಿಮ ೫೦ ಮೈಲಿಗಳು, ದಕ್ಷಿಣೋತ್ತರ ೩೩ ಮೈಲಿಗೂ ನಡುವೆ ಒಂದಾದರೂ ಟೆಲಿಗ್ರಾಫ್ ಆಫೀಸು ಇಲ್ಲದೆ ಪ್ರಜೆಗಳಿಗೆ ತುಂಬಾ ಕಷ್ಟವಾಗಿದೆ ಸರ್ಕಾರದವರು ಪ್ರಯತ್ನಪಟ್ಟು ಬೇಲೂರಿನಲ್ಲಿ ಒಂದನ್ನು ಇಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ

ಇಂದಿನ ಜಲಾಶಯಗಳ ಎರಡು ಕಡೆಗಳಲ್ಲೂ ೫೦ ಗಜ ದೂರದ ವರೆಗೆ ಇರುವ ಜಮೀನನ್ನು ಕಾಫಿ ಬೆಳೆಯುವ ಪಕ್ಕದ ವ್ಯವಸಾಯಕ್ಕೆ ಕೊಡಕೂಡದೆಂದು ಸರ್ಕಾರದವರು ನಿಷೇಧಿಸಿದ್ದಾರೆ ಹೀಗೆ ಕೊಟ್ಟರೆ ಆ ಜಲಾಶಯಗಳು ಒಣಗುವುದಿಲ್ಲವೆಂದು ನಮ್ಮ ಅನುಭವದಲ್ಲಿ ತಿಳಿದುಬಂದಿದೆ ಆದಕಾರಣ ಆ ನಿಷೇಧವನ್ನು ಸರ್ಕಾರದವರು ಪುನರಾಲೋಚನೆಗೆ ತರಬೇಕೆಂದು ಸೂಚಿಸುತ್ತೇವೆ

ಪ್ಲಾಂಟರುಗಳು ಇರುವ ಪ್ರದೇಶದಲ್ಲಿ ಬಹುಮಂದಿ ಯೂರೋಪಿಯನ್ನರು ಇರುತ್ತಾರೆ ಕೊಪ್ಪದಲ್ಲಿ ಯೂರೋಪಿಯನ್ ಡಾಕ್ಟರನ್ನು ನೇಮಿಸಿಕೊಡಬೇಕು ದೇಶೀಯ ಡಾಕ್ಟರುಗಳು ಬಹಳ ಸಾಹಸಪಟ್ಟು ಕೆಲಸಮಾಡುತ್ತಿದ್ದಾಗ್ಯೂ ಇಂಗ್ಲಿಷರು ತಮ್ಮ ಜನಾಂಗಕ್ಕೆ ಸೇರಿದಂಥವರೇ ಅಲ್ಲಿ ಡಾಕ್ಟರಾಗಿ ನೇಮಕವಾಗಿರಬೇಕೆಂದು ಅಪೇಕ್ಷಿಸುತ್ತಾರೆ ಸರ್ಕಾರದವರು ಈ ನಮ್ಮ ಅರಿಕೆಯನ್ನು ನೆರವೇರಿಸಿಕೊಡಬೇಕಾಗಿದೆ

ಪ್ಲಾಂಟರುಗಳಿರುವ ಡಿಸ್ಟ್ರಿಕ್ಟುಗಳಲ್ಲಿ ಆಸ್ಪತ್ರೆಗಳು ವಿಸ್ತಾರವಾಗಿಲ್ಲದಿರೋಣದರಿಂದ ದೂರ ಸ್ಥಳದಿಂದ ಚಿಕಿತ್ಸೆಗೆ ಹೋಗತಕ್ಕ ರೋಗಿಗಳಿಗೆ ನಿಲ್ಲುವುದಕ್ಕೆ ಸ್ಥಳವಿಲ್ಲದೆ ಬಹಳ ಕಷ್ಟಪಡುತ್ತಾರೆ ಸರ್ಕಾರದವರು ಅಂಥಾ ಸ್ಥಳಗಳಲ್ಲಿ ವಸತಿಗಳನ್ನು ಕಲ್ಪಿಸಿಕೊಡಬೇಕು ಮಲೆ ಜ್ವರದಿಂದ ಹಿಂದುಸ್ಥಾನದಲ್ಲಿ ಕಳೆದ ವರುಷ ಹತ್ತು ಕೋಟಿ ಜನಗಳು ಶ್ರಮಪಟ್ಟರೆಂದು ವೈಸ್‌ರಾಯಿಯವರೇ ಸಭೆಯಲ್ಲಿ ಅಪ್ಪಣೆ ಕೊಡಿಸಿದರು ನಮ್ಮ ಮಲೆನಾಡಿನಲ್ಲಿ ಈ ಜ್ವರದ ಹಾವಳಿಯೂ, ಅದರಲ್ಲಿ ನರಳಿ ಸಾಯತಕ್ಕವರ ಸಂಖ್ಯೆಯೂ ಎಷ್ಟೆಂಬುವುದನ್ನು ಸರ್ಕಾರದವರು ತನಿಖೆ ಮಾಡಿಸಿದ್ದಾರೆಯೋ ಇಲ್ಲವೋ ತಿಳಿಯದು ಮಲೆನಾಡು ಗ್ರಾಮಗಳಲ್ಲಿ ಪ್ಲೇಗು ಎಂದಿಲ್ಲವಾದರೂ ಪ್ರಜಾ ಸಂಖ್ಯೆಯೇನೋ ದಿನಕ್ರಮೇಣ ಕ್ಷೀಣವಾಗುತ್ತಿದೆ ಸರ್ಕಾರದವರು ಮಲೆ ಜ್ವರವನ್ನು ಹುಟ್ಟಿಸುವ ಸೊಳ್ಳೆಗಳ ವಿವರವನ್ನೂ, ಅವುಗಳ ನಾಶಕ್ಕೆ ತಕ್ಕ ಏರ್ಪಾಡುಗಳನ್ನೂ, ಕ್ವಿನೈನ್ (ಜ್ವರದ ಮದ್ದು) ಸೇವನೆಯಿಂದಾಗುವ ಪ್ರಯೋಜನಗಳನ್ನೂ ಆ ಪ್ರಾಂತ್ಯದ ಪ್ರಜೆಗಳಿಗೆ ತಿಳಿಯಪಡಿಸುವಂತೆ ಮಾಡಿಸಬಹುದೆಂದು ನಂಬುತ್ತೇವೆ

ಚನ್ನಪಟ್ಟಣ ತಾಲೂಕಿನ ವಿಜ್ಞಾಪನೆಯು.

ಪ್ರಜಾ ಪ್ರತಿನಿಧಿಯಾದ ಮ॥ ಡಿ ಎಸ್ ಹನುಮಂತರಾಯರು ಓದಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯ ಸಾರಾಂಶವೇನೆಂದರೆ,—

ಸ್ವಾಮಿ,

ಸಂಸ್ಥಾನದಲ್ಲಿ ನೆಮ್ಮದಿ ಸುಖಸಂತೋಷಗಳು ನೆಲೆಗೊಂಡು ದಿನಕ್ರಮದಲ್ಲಿ ಅಭಿವೃದ್ಧಿ ಹೊಂದುತ್ತಲೂ ಬಂದಿರುವುದರಿಂದ ಶ್ರೀಮನ್ಮಹಾರಾಜರವರ ಮತ್ತು ಅವರ ಗವರ್ನ್‌ಮೆಂಟಿನವರ ಆಳ್ವಿಕೆಯ ಏತರಣೆಯನ್ನು ಕೊಂಡಾಡಿ ರಾಜಭಕ್ತಿಯಿಂದಲೂ ಕೃತಜ್ಞತಾಪೂರ್ವಕವಾಗಿಯೂ ವಂದನೆಗಳನ್ನು ಸಮರ್ಪಿಸುತ್ತೇವೆ

ದುಷ್ಕಾಲದ ನಿಮಿತ್ತವಾಗಿ ಕಳೆದ ಸಾಲಿನಲ್ಲಿ ವಿಳಂಬವಾಗದ ಅಥವಾ ಬಂಜರು ಬಿದ್ದಿದ್ದ ತರೀ ಜಮೀನುಗಳ ಕಂದಾಯವನ್ನು ಸರ್ಕಾರದವರು ರಿಮಿಷನ್ ಮಾಡಿಕೊಟ್ಟರು ಲೆಜಿಸ್ಲೇಟಿವ್ ಕೌನ್ಸಿಲ್ (ನ್ಯಾಯವಿಧಾಯಕ ಸಭೆಗೆ) ಪ್ರಜಾ ಪ್ರತಿನಿಧಿ ಸಭೆಯಿಂದ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಕಳುಹಿಸುವ ಹಕ್ಕನ್ನು ದಯಪಾಲಿಸಿದ್ದರ ವಿಷಯದಲ್ಲಿ ಕಳೆದ ವರುಷ ನಮಗೆ ಉಂಟಾದ ಕಳವಳವನ್ನು ಗವರ್ನ್‌ಮೆಂಟಿನವರು ನಿವೃತ್ತಿ ಮಾಡಿದರು ಮತ್ತು ಸಕಲ ಪ್ರಜೆಗಳನ್ನೂ ಜಾತಿ ಮತ ಕುಲಗೋತ್ರಗಳ ತಾರತಮ್ಯವಿಲ್ಲದೆ ಏಕ ರೀತಿಯಲ್ಲಿ ಧರ್ಮದಿಂದ ಪರಿಪಾಲನೆ ಮಾಡುತ್ತಾ ಬಂದಿದ್ದಾರೆ ಇದಕ್ಕಾಗಿ ನಮ್ಮ ಕೃತಜ್ಞತಾಪೂರ್ವಕವಾದ ಪ್ರಜಾ ವಂದನೆಗಳನ್ನು ಶ್ರೀಮನ್ ಮಹಾರಾಜರವರಿಗೆ ಸಮರ್ಪಿಸಬೇಕೆಂದು ಅರಿಕೆ ಮಾಡುತ್ತೇವೆ ಕಳೆದ ೧೯೦೬-೭ ಮತ್ತು ೧೯೦೭-೮ನೇ ಸಾಲುಗಳಲ್ಲಿ ಬೆಳೆಗಳು ಆಗಲಿಲ್ಲ ತರೀ ಜಮೀನುಗಳ ಆ ಸಾಲ್‌ಗಳ ಬಾಬ್ತು ಅರ್ಧ ಕಂದಾಯವನ್ನು ರಿಮಿಷನ್ ಮಾಡಿಕೊಡುವ ವಿಷಯದಲ್ಲಿ ಗವರ್ನ್‌ಮೆಂಟಿಗೆ ಶಿಫಾರಸ ಮಾಡಲ್ಪಟ್ಟಿತ್ತು ಇದನ್ನು ಸ್ಯಾಂಕ್ಷನ್ ಮಾಡಿ ಕೊಡಬೇಕೆಂದು ಬೇಡುತ್ತೇವೆ ಇದಲ್ಲದೆ ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕೆಲಸಗಳನ್ನು ತ್ವರಿತವಾಗಿ ನಡಿಸಿ, ಗಾಡಿಗಳು ತಿರುಗುವಂತೆ ಮಾಡಿಕೊಡಬೇಕೆಂದೂ, ಎಲ್ಲ ಜೋಡಣೆ ಮೊದಲು ಬೇಗನೆ ಸಿದ್ಧವಾಗುವಂತೆ ದೇವನಹಳ್ಳಿ ತಾಲೂಕಿನ ಅಥವಾ ಅದರ ಒಂದು ಭಾಗದ ಜೋಡಣೆ ಮೊದಲನ್ನು ಚಿಕ್ಕಬಳ್ಳಾಪುರದ ಮುನ್ಸಿಫರ ಯಜಮಾನಿಕೆಯಿಂದ ತಪ್ಪಿಸಿ ಬೆಂಗಳೂರು ಮುನ್ಸಿಫರ ಯಜಮಾನಿಕೆಗೆ ಸೇರಿಸಿಕೊಡಬೇಕೆಂದೂ ಪ್ರಾರ್ಥಿಸುತ್ತೇವೆ

ಮುಸಲ್ಮಾನರ ಅಡ್ರೆಸ್ಸು

ಸೆಂಟ್ರಲ್ ಮಹಮ್ಮದೀಯ ಸಂಘದ ಪ್ರೆಸಿಡೆಂಟರಾದ ಮ॥ ಗುಲಾಂ ಅಹಮದ್‌ರವರು ಈ ವಿಜ್ಞಾಪನೆಯನ್ನು ಓದಿ ದಿವಾನ್‌ರವರಿಗೆ ಒಪ್ಪಿಸಿದರು —

ಸ್ವಾಮಿ,

ಮೈಸೂರು ಸಂಸ್ಥಾನದ ಮಹಮ್ಮದೀಯ ಪ್ರಜೆಗಳ ಹಿತಾರ್ಥವಾಗಿ ಮಧ್ಯರಾಷ್ಟ್ರವಾದ ಬೆಂಗಳೂರಿನಲ್ಲಿ ಒಂದು ಸಭೆಯು ಏರ್ಪಾಡಾಗಿದೆ ಈ ಸಂಘದಿಂದ ಒಬ್ಬ ಪ್ರತಿನಿಧಿಯನ್ನು ಈ ಸಭೆಗೆ ಚುನಾಯಿಸಿ ಕಳುಹಿಸಬಹುದೆಂದು ದಯಾಯುತ ತೋರಿಸಿದ್ದಕ್ಕಾಗಿ ಗವರ್ನ್‌ಮೆಂಟಿನವರನ್ನು ವಂದಿಸುತ್ತೇವೆ ತಮಗೆ ಈ ಸಂಸ್ಥಾನದ ಮಂತ್ರಿ ಪದವಿಯು ದೊರೆತದ್ದಕ್ಕಾಗಿ ನಮ್ಮ ಮನಃಪೂರ್ವಕವಾದ ಸಂತೋಷವನ್ನು ಸೂಚಿಸುವೆವು ತಾವು ಈ ಪದವಿಯನ್ನಲಂಕರಿಸಿದ ಲಾಗಾಯಿತು ಸಂಸ್ಥಾನದ ಸರ್ವೀಸಿನಲ್ಲಿ ಸುಶಿಕ್ಷಿತರನ್ನೂ ದಕ್ಷರನ್ನೂ ಸೇರಿಸಿಕೊಳ್ಳುತ್ತಿರುವಿರಿ ಆಯವ್ಯಯಗಳ ಅಂದಾಜಾ ಪಟ್ಟಿಗಳನ್ನು ಮುಂದಾಗಿಯೇ ಪ್ರಕಟಪಡಿಸಿ ಸಂಸ್ಥಾನದ ಸ್ಥಿತಿಗತಿಯನ್ನು ಪ್ರಜೆಗಳಿಗೆ ತಿಳಿಸಿ, ಅವರು ಆ ವಿಚಾರವಾಗಿ ಆಲೋಚನೆ ಮಾಡುವುದಕ್ಕೂ ಸಲಹೆಗಳನ್ನು ಕೊಡುವುದಕ್ಕೂ ಅವಕಾಶವನ್ನು ಕಲ್ಪಿಸಿಕೊಟ್ಟಿರಿ

ಈ ಸಂಸ್ಥಾನದಲ್ಲಿ ಮಹಮ್ಮದೀಯರು ವಿದ್ಯಾವಿನಯ ಸಂಪನ್ನರಾಗದೆ ಇತರ ಕೋಮಿನವರಿಗಿಂತ ಹಿಂದೆ ಬಿದ್ದಿರುತ್ತಾರೆಂದು ಹೇಳಬೇಕಾದದ್ದೇ ಇಲ್ಲ ನಮ್ಮ ಮಹಾರಾಜರವರ ಮತ್ತು ಅವರ ಗವರ್ನ್‌ಮೆಂಟಿನವರ ಉದ್ದೇಶ ಮತ್ತು ಪ್ರೋತ್ಸಾಹಗಳು ವಿಶೇಷವಾಗಿರೋಣದರಿಂದ ಈ ನಮ್ಮ ಜನರು ಈಗೀಗ ಕಣ್ಣುತೆರೆದು ಅಭಿವೃದ್ಧಿಗೆ ಬರಬೇಕೆಂದು ಪ್ರಯತ್ನಪಡುತ್ತಿದ್ದಾರೆ ಅವರು ಅಂಜುಮನ್ನು ಮತ್ತು ಸಭೆಗಳನ್ನು ಕಲ್ಪಿಸಿಕೊಂಡು ತಮ್ಮ ಜನರನ್ನು ವಿದ್ಯೆ ಬುದ್ಧಿ ವಿವೇಕಾದಿಗಳಲ್ಲಿ ಏಳಿಗೆಗೆ ತಂದುಕೊಳ್ಳಲಾರಂಭಿಸಿದಾರೆ ಇವರಿಗಾಗಿ ಸರ್ಕಾರದವರು ವೇತನಗಳನ್ನು ಕೊಟ್ಟು, ವಿದ್ಯಾವಂತರನ್ನು ಅಧಿಕಾರಗಳಿಗೆ ನೇಮಿಸಿಕೊಳ್ಳುತ್ತಾ ಬಂದಿರುವುದು ತುಂಬಾ ಪ್ರೋತ್ಸಾಹಕರವಾಗಿದೆ ನಾವು ನಮ್ಮ ಜನರಿಗೆ ವಿದ್ಯೆ ಕಲಿಸುವುದಕ್ಕೆ ಮಾಡತಕ್ಕ ಕಾರ್ಯಗಳಲ್ಲಿ ಸರ್ಕಾರದವರ ಸಹಾಯವು ಇನ್ನೂ ತುಸು ವಿಶೇಷವಾಗಿ ಬೇಕಾಗುತ್ತದೆ

ಉತ್ತರ ಮೈಸೂರ್ ಪ್ಲಾಂಟರುಗಳ ವಿಜ್ಞಾಪನೆಯು

ಮೈಸೂರು ಉತ್ತರ ಪ್ಲಾಂಟರುಗಳ ಸಂಘದ ಪರವಾಗಿ ಕೊಪ್ಪದ ಮ॥ ಎಚ್ ಪಿಲ್ಕಿಂಗ್‌ಟನ್ ರವರು ಓದಿ ಒಪ್ಪಿಸಿದ ವಿಜ್ಞಾಪನೆಯ ಮುಖ್ಯಾಭಿಪ್ರಾಯವೇನೆಂದರೆ,—

ತಮಗೆ ದಿವಾನ್‌ಗಿರಿಯು ದೊರೆತದ್ದಕ್ಕಾಗಿ ನಮಗುಂಟಾದ ಸಂತೋಷವನ್ನು ಈ ಸಂದರ್ಭದಲ್ಲಿ ಅರಿಕೆಮಾಡುತ್ತೇವೆ ನೀವು ಹಲವು ವರುಷಗಳ ತನಕ ಈ ಸಂಸ್ಥಾನದ ಮುಖ್ಯಮಂತ್ರಿಯಾಗಿ ಕಾರ್ಯನಡಿಸುವವರಾಗಬೇಕೆಂತಲೂ, ತಮ್ಮ ತಂದೆಯವರ ಹೆಸರು ಹೇಗೆ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಪ್ರಾಶಸ್ತ್ಯವನ್ನು ಪಡೆದು ಇರುತ್ತದೆಯೋ ತಮ್ಮ ಹೆಸರೂ ಈ ಸಂಸ್ಥಾನದ ಚರಿತ್ರೆಯಲ್ಲಿ ಶ್ರೇಷ್ಠತೆಯನ್ನು ಪಡೆಯುವುದಾಗಬೇಕೆಂದೂ ಮನಃಪೂರ್ವಕವಾಗಿ ಆಶಿಸುತ್ತೇವೆ

ಈ ವರುಷ ಮಳೆಬೆಳೆಗಳು ಆಗಿ ಸುಭಿಕ್ಷವು ಲಭಿಸಿತೆಂದು ಸಮ್ಮಿಡನೆ ನಾವೂ ಸಂತೋಷಪಡುವೆವು ನಾವು ಕೂಲೀ ಜನರನ್ನು ಇಟ್ಟು ಕೆಲಸಮಾಡಿಸತಕ್ಕವರು, ಹೋದ ವರುಷ ಗವರ್ನ್‌ಮೆಂಟಿನವರು ಹ್ಯಾಗೆ ದುಷ್ಕಾಲದ ದೆಸೆಯಿಂದ ಕಳವಳಪಟ್ಟರೋ ನಾವೂ ಹಾಗೆಯೇ ಕಳವಳಕ್ಕೆ ಗುರಿಯಾಗಿದ್ದೆವು ಆಹಾರದ ದಿನಸುಗಳ ಧಾರಣೆಯು ಮಲೆನಾಡಿನಲ್ಲಿ ಇನ್ನೂ ಬಹಳ ತುಟ್ಟಿಯಾಗಿ ಕ್ಷಾಮಕಾಲಗಳಲ್ಲಿರುವಂತೆ ಇದ್ದಾಗ್ಯೂ ಪಶ್ಚಿಮಘಟ್ಟದ ಕಡೆಯಿಂದ ಸಕಾಲದಲ್ಲಿ ಬರೋಣ ದೇಶದ ಅಕ್ಕಿಯು ಬಂದು ಕ್ಷಾಮವನ್ನು ನಿವಾರಣಮಾಡಿತು ಈಗ ಕಾಲಸ್ಥಿತಿಯು ತೃಪ್ತಿಕರವಾಗಿದೆ ಎಂದು ಸಂತೋಷಪಡುತ್ತೇವೆ. ಪೈರುಗಳು ಬಹಳ ಚೆನ್ನಾಗಿರುವವು ಇದರಿಂದ ಮುಂದಕ್ಕೆ ದೇಶವೆಲ್ಲಾ ಸುಭಿಕ್ಷವಾಗಿ ಏಳಿಗೆ ಹೊಂದೀತೆಂದು ನಿರೀಕ್ಷಿಸುವೆವು

ನಮ್ಮ ಕಾಲದಲ್ಲಿ ಕಡೂರಿನಿಂದ ಮಂಗಳೂರು ಮುಂತಾದ ಕಡೆಗಳಿಗೆ ರಿನ್ನಾಪ್ಸ್ ಫೋರ್ಡ್ ಟ್ರೈಯಿನ್ ಎಂಬ ಗಾಡಿಯು ಸಂಚಾರವು ಪ್ರಾರಂಭವಾಗುವಂತೆ ಗವರ್ನ್‌ಮೆಂಟಿನವರು ಮಾಡಿಯಾರೆಂದು ನಿರೀಕ್ಷಿಸುತ್ತೇವೆ ಇದರಿಂದ ಬೇಗನೆ ಸ್ಥಳದಿಂದ ಸ್ಥಳಕ್ಕೆ ಹೋಗಿಬರುವುದಕ್ಕೂ ರಾಜಾದಾಯವು ಹೆಚ್ಚುವುದಕ್ಕೂ ಅಡ್ಡಿಯಿಲ್ಲವೆಂದು ತೋರುತ್ತದೆ

ಲಾಂಟಾನಾ ಗಿಡಗಳ ಮೆಳೆಯು ಅದಮ್ಯವಾಗಿ ಹಬ್ಬಿ ಬಹಳ ಹಾವಳಿಯನ್ನುಂಟುಮಾಡುತ್ತಿದೆ ನೂರಾರು ಎಕರೆ ಜಮೀನೆಲ್ಲಾ ಈ ಮೆಳೆಯಿಂದ ತುಂಬಿಹೋಗಿದೆ ಇದರಿಂದ ಪ್ರಜಾ ಆರೋಗ್ಯವು ಕೆಡಲು ಕಾರಣವುಂಟು ಅವುಗಳ ಆಸರೆಯಲ್ಲಿ ಹಂದಿಗಳು ಸೇರಿಕೊಂಡು ರೈತರ ಬೆಳೆಯನ್ನು ನಾಶಪಡಿಸುತ್ತಲಿವೆ ಕೊಡಗಿನಲ್ಲಿ ಸರ್ಕಾರದವರು ರಿಯಾಯಿತಿ ತೋರಿಸಿದ್ದರಿಂದ ಈ ಮೆಳೆಯು ಕಡಮೆಯಾಗುತ್ತದೆ ಮೈಸೂರು ಸರ್ಕಾರದವರು ಈ ಭಾಗದಲ್ಲಿ ನಡಿಸಿರುವ ಕಾರ್ಯಭಾಗಗಳೇನೋ ತಿಳಿಯಲಪೇಕ್ಷಿಸುವೆವು

ಶಿಕಾರಿ ಕಾನೂನಿನ ಕಾಯಿದೆಗಳು ವ್ಯವಹಾರದಲ್ಲಿ ತೃಪ್ತಿಕರವಾಗಿಲ್ಲ ಅದು ಫಾರೆಸ್ಟ್ ಜವಾನರಿಗೂ, ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೂ ಅರ್ಥವಾಗುವುದಿಲ್ಲ ಆದಕಾರಣ ಶಿಕಾರಿಮಾಡುವುದಕ್ಕೆ ಕಟ್ಟು ಇದ್ದರೂ ಇಲ್ಲದಂತಾಗಿದೆ. ಶಿಕಾರಿ ಎನ್ನಿಸಿಕೊಂಡವನು ೩ ರೂಪಾಯಿ ಕೊಟ್ಟು ಲೈಸೆನ್ಸ್ ಪಡೆದುಕೊಂಡು ಹೋದರೆ ನೌಕರರು ಅವನ ಬೆನ್ನುಹತ್ತಿ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ ರೈತರು ಗುಂಪುಕಟ್ಟಿಕೊಂಡು ಹೋಗಿ ಬೇಟೆಯಾಡಿಕೊಂಡು ಬರುತ್ತಿರುವರು ಅವರಿಗೆ ಯಾವ ತಡೆಯೂ ಇಲ್ಲ ಅವರು ತಮ್ಮ ಬೆಳೆಯನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಾಣಿಗಳನ್ನು ಕೊಲ್ಲುವ ವಿಷಯದಲ್ಲಿ ನಮ್ಮ ಆಕ್ಷೇಪಣೆಯೇನೂ ಇರುವುದಿಲ್ಲ ಅವರು ಅದೂ ಅಲ್ಲದೆ ಮಾಂಸಕ್ಕಾಗಿಯೂ ಚರ್ಮಕ್ಕಾಗಿಯೂ ಶಿಕಾರಿಮಾಡುತ್ತಾರೆ ಆದಕಾರಣ ಸರ್ಕಾರದವರು ಈ ಕಾನೂನನ್ನು ಕ್ರಮವಾಗಿ ಜಾರಿಗೆ ತರಬೇಕು ಇಲ್ಲವೇ ಇದನ್ನು ಸಂಪೂರ್ಣವಾಗಿ ವಜಾಮಾಡಬೇಕು

ಜಲಾಶಯಗಳ ಎರಡು ಕಡೆಗಳಲ್ಲೂ ೫೦ ಗಜದ ದೂರ ಮಾತ್ರ ಕಾಡು ಇಟ್ಟುಕೊಂಡು ಉಳಿದ ಭಾಗವನ್ನೆಲ್ಲಾ ಕಾಫಿ ಬೆಳೆಗೆ ಕೊಡಬಹುದೆಂದು ಫಾರೆಸ್ಟ್ ಕನ್ಸರ್ವೇಟರವರು ಶಿಫಾರಸು ಮಾಡಿದ್ದರೂ ಮೈಸೂರು ಸರ್ಕಾರದವರು ೫೦ ಗಜದ ವರೆಗೆ ಬಿಟ್ಟುಕೊಳ್ಳಬೇಕೆಂದು ಹುಕುಂ ಮಾಡಿರುವುದನ್ನು ನೋಡಿ ನಾವು ವಿಷಾದಪಡುತ್ತೇವೆ ಈ ಹುಕುಮು ಕಾಫಿ ವ್ಯವಸಾಯಕ್ಕೆ ಬಹಳ ಕುಂದಕವಾಗಿದೆ ಆದಕಾರಣ ಅದನ್ನು ಪುನರಾಲೋಚಿಸಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ ಮೈಸೂರಿನ ಹೆಸರು ಪ್ರಖ್ಯಾತಿಗೆ ಬಂದದ್ದು ಮೊದಲು ಇಲ್ಲಿ ಬೆಳೆದ ಕಾಫಿಯಿಂದ ಈಗ ಚಿನ್ನವು ಅದನ್ನು ಹೆಸರುವಾಸಿಗೆ ತಂದಿರುತ್ತದೆ ಕಾಫಿ ಬೆಳೆ ಕೆಟ್ಟುಹೋಗಿ ಅದರ ಧಾರಣೆ ಇಳಿದು ನಾವು ಬಹಳ ಕಷ್ಟನಷ್ಟಗಳನ್ನು ಅನುಭವಿಸುತ್ತೇವೆ ಈ ಹುಕುಮು ಈ ಬೆಳೆಯನ್ನು ಬಿಡಿಸುತ್ತದೆಂತೆ ಮಾಡುವುದಾಗಿದೆ ಆದದ್ದರಿಂದ ಫಾರೆಸ್ಟ್ ವಿಚಾರದಲ್ಲಿ ಅನುಭವದಿಂದ ಹೇಳುವ ನಮ್ಮ ಅಧಿಕಾರಿಯ ಮಾತಿನಲ್ಲಿ ಹೆಚ್ಚಾಗಿ ನಂಬಿಕೆ ಇಟ್ಟು ನಮಗೆ ಸಹಾಯಮಾಡಬೇಕೆಂದೂ, ವಿದ್ಯಮಾನ ಸ್ಥಿತಿಗತಿಗಳನ್ನು ತಿಳಿಯದೆ ಸುಮ್ಮನೆ ಸಟ್ಟಾಗಿಯೂ ದುರಭಿಮಾನದಿಂದಲೂ ಹೇಳುವವರ ಮಾತನ್ನು ಲಕ್ಷ್ಯಮಾಡಬೇಕಾದದ್ದಿಲ್ಲವೆಂದೂ ಬೇಡಿಕೊಳ್ಳುತ್ತೇವೆ

ನಮ್ಮಲ್ಲಿ ಅನೇಕರು ಈ ಸಂಸ್ಥಾನದಲ್ಲಿ ಬಂದು ೨೦ ವರುಷಗಳಿಗಿಂತಲೂ ಹೆಚ್ಚಾಗಿದೆ ಡಿಸ್ಟ್ರಿಕ್ಟ್ ಮತ್ತು ತಾಲೂಕ್ ಬೋರ್ಡುಗಳಲ್ಲಿ ಮೆಂಬರುಗಳಾಗಿ ನಿಂತು ಅಧಿಕಾರಿಗಳಿಗೆ ಸಹಾಯ ಮಾಡಲು ಸಿದ್ಧರಾಗಿದ್ದೇವೆ ಈ ಸಂಸ್ಥಾನಕ್ಕೆ ಶ್ರೇಯಸ್ಸುಂಟಾಗಬೇಕೆಂದು ನಾವು ಮನಃಪೂರ್ವಕವಾಗಿ ಅಭಿಲಾಷೆಪಡತಕ್ಕವರು ಸರ್ಕಾರದವರಿಗೆ ಬೆಂಬಲವಾಗಿ ನಿಲ್ಲುವ ವಿಷಯದಲ್ಲಿ ೨೦ ವರುಷಗಳ ಹಿಂದೆ ನಾವು ಎಷ್ಟು ಉತ್ಸಾಹವೂ ರಾಜಭಕ್ತಿಯೂ ಉಳ್ಳವರಾಗಿದ್ದೆವೋ ಈಗಲೂ ಅದೇ ರೀತಿಯಾಗಿರುವೆವು

ದಿವಾನ್‌ರವರ ಪ್ರತ್ಯುತ್ತರವು.

ಮೇಲ್ಕಂಡ ವಿಜ್ಞಾಪನಾ ಪತ್ರಿಕೆಗಳನ್ನೆಲ್ಲಾ ಅಂಗೀಕರಿಸಿ ದಿವಾನ್‌ರವರು ಅವುಗಳಿಗೆಲ್ಲಾ ಪ್ರತಿಯಾಗಿ ಒಂದೇ ಉತ್ತರವನ್ನು ದಯಪಾಲಿಸಿದರು ಅದರ ಮುಖ್ಯಾಂಶವೇನೆಂದರೆ,—

ನೀವುಗಳೆಲ್ಲಾ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿ, ನಮ್ಮ ಪ್ರೀತಿಪೂರ್ವಕವಾದ ಸಂತೋಷವನ್ನು ಪ್ರಕಾಶಪಡಿಸಿದ್ದಕ್ಕಾಗಿ ನಿಮ್ಮುಗಳನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ ನೀವುಗಳು ರಾಜಭಕ್ತಿಪೂರಿತರಾಗಿ ಕೃತಜ್ಞತಾಪೂರ್ವಕವಾಗಿ ಹೇಳಿರುವ ವಾಕ್ಯಗಳನ್ನೂ ಅಭಿಪ್ರಾಯಗಳನ್ನೂ ಶ್ರೀಮನ್ಮಹಾರಾಜರವರಿಗೆ ಬಹು ಸಂತೋಷದಿಂದ ಅರಿಕೆ ಮಾಡುವೆನು

ಕಾವೇರಿಗೆ ಅಡ್ಡಗಟ್ಟೆಹಾಕಿ ಒಂದು ಭಾರೀ ಜಲಾವನ್ನು ಕಟ್ಟಿ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಸಹಾಯಮಾಡುವುದಕ್ಕೆ ಎರಡು ಕೋಟಿ ರೂಪಾಯಿ ಬೇಕಾಗುವುದೆಂದು ತಿಳಿದಕಾರಣ ಅದು ಅಪಾರವಾದದ್ದೆಂದೂ ಬಜೆಟ್ ಹೆಚ್ಚಿಂದೂ ಗವರ್ನ್‌ಮೆಂಟಿನವರು ಸದ್ಯಕ್ಕೆ ಮುಲ್ತವಿಮಾಡಿರುತ್ತಾರೆ ಅದಕ್ಕಿಂತ ಚಿಕ್ಕದೂ ಅಲ್ಪಧನವ್ಯಯವೂ ಆಗತಕ್ಕ ಕೆರೆಯ ಏರ್ಪಾಡು ಸಾಧ್ಯವೇ ಎಂಬ ವಿಷಯದಲ್ಲಿ ವಿಚಾರನಡಿಸಲಾಗುವುದು ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರ ಮತ್ತು ಮುನ್ಸಿಫರ ಕೆಲಸವನ್ನು ಕಡಮೆಮಾಡುವುದಕ್ಕೆ ಒಬ್ಬ ಅಮಲ್ದಾರ್ ಮ್ಯಾಜಿಸ್ಟ್ರೇಟರನ್ನು ನೇಮಿಸಿ ಅಲ್ಲಿಗೆ ಸಬ್ ಟ್ರೆಜರಿಯನ್ನು ಏರ್ಪಾಡುಮಾಡಿಕೊಡುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಪರ್ಯಾಲೋಚನೆಮಾಡುವರು ಮತ್ತು ಅದಿಲ್ಲವಾದರೆ ಬೆಂಚ್ ಆಫ್ ಮ್ಯಾಜಿಸ್ಟ್ರೇಟರನ್ನು ನೇಮಕಮಾಡಿಕೊಟ್ಟು, ಸಣ್ಣ ಮೊಕದ್ದಮೆಗಳನ್ನು ಅವರು ಇತ್ಯರ್ಥಪಡಿಸುವಂತೆ ಆಗಬಹುದೆಂದು ತೋರುತ್ತದೆ ಹೆಲ್ತ್ ಆಫೀಸರ ಕೆಲಸಕ್ಕೆ ಅನುಕೂಲವಾದ ಒಂದು ಶೋಧನಾಶಾಲೆಯನ್ನು ಸ್ಥಾಪಿಸಿಕೊಡುವುದು, ಛಾಂಪಿಯನ್ ರೀಫ್ ಕೋಲದ ಮೇಲೆ ಮೋಲ್ಡ್ ಮನೆಯನ್ನು ಹಾಕಿಸುವುದು, ಜರಿಗೆ ಆಸ್ಪತ್ರೆಯ ಒಡಾವಣೆ, ಜನರಲ್ ಆಸ್ಪತ್ರೆಯಲ್ಲಿ ಯೂರೋಪಿಯನ್ನರಿಗೂ ಯೂರೇಷಿಯನ್ನರಿಗೂ ವಾರ್ಡುಗಳನ್ನು ಕಟ್ಟಿಸಿಕೊಡುವುದು—ಇವುಗಳನ್ನು ಮಾಡಿಸಿಕೊಡಬೇಕೆಂದು ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ ಇವೆಲ್ಲಾ ಬೇಗನೆ ಪೂರೈಸಬೇಕೆಂಬುವುದೇ ನಮ್ಮ ನಿರೀಕ್ಷೆಯು ಈ ನಮ್ಮ ನಿರೀಕ್ಷೆಯು ನೆರವೇರಿದ ಪಕ್ಷದಲ್ಲಿ ನಾನು ತುಂಬಾ ಸಂತೋಷಪಡುವೆನು ಗಣಿಗಳ ಕಾನೂನನ್ನು ಬೌರಿಂಗ್‌ಪೇಟೆಯಿಂದ ಮಾರಿಕುಪ್ಪದ ಸ್ಟೇಷನ್ ವರೆಗೆ ರೈಲ್ವೆ ಸರಹದ್ದಿನಲ್ಲೆಲ್ಲಾ ಜಾರಿಗೆ ತರುವ ಭಾಗದಲ್ಲಿ ಗವರ್ನ್‌ಮೆಂಟಿನವರು ಸಂತೋಷವಾಗಿ ಸಹಾಯ ಮಾಡುವರು ಇದು ಘನವಸ್ಥೆಯದ ಬ್ರಿಟಿಷ್ ರೆಸಿಡೆಂಟರವರು ಜಾರಿಗೆ ತರತಕ್ಕದ್ದಾಗಿದೆ ಎಂಬುವುದನ್ನು ನೀವು ತಿಳಿಯಬೇಕು ಇದು ಅವಶ್ಯವೆಂಬುವದನ್ನು ಅವರಿಗೆ ತಿಳಿಯಪಡಿಸುವುದಾದರೆ ಅವರು ಅದರಂತೆ ಸ್ಯಾಂಕ್ಷನ್ ಮಾಡಿಕೊಡುತ್ತಾರೆಂದು ನಾನು ಹೇಳಬಲ್ಲೆನು

ದಕ್ಷಿಣ ಮೈಸೂರು ಮತ್ತು ಉತ್ತರ ಮೈಸೂರು ಪ್ಲಾಂಟರುಗಳ ಸಂಘಗಳವರು ೫೦ ಗಜಗಳ ವಿಚಾರವಾದ ವಿಧಿಯನ್ನು ಕುರಿತು ಪ್ರಸ್ತಾಪ ಮಾಡಿದಾರೆ ಇದು ಕಷ್ಟವಿಷಯ ಈ ವಿಷಯದಲ್ಲಿ ಶಾಸ್ತ್ರಕೋವಿದರಾದ ಪಂಡಿತರುಗಳಲ್ಲೇ ವಿಶೇಷ ಭಿನ್ನಾಭಿಪ್ರಾಯಗಳಿರುವವು ಆ ವಿಧಿಯನ್ನು ಬದಲಾಯಿಸಿ ಕಡಮೆ ಮಾಡಿದ್ದರಿಂದ ಕೆಡುಕು ವಿಶೇಷವೆಂದೂ, ದಿನೇ ದಿನೇ ಹೆಚ್ಚುವುದೆಂದೂ ತಿಳಿದು ಬಂದಕಾರಣ ಆ ವಿಧಿಯನ್ನು ಎಂದಿನಂತೆ ರೂಢಿಸಬೇಕಾಗಿ ಬಂತು ಫಾರೆಸ್ಟುಗಳು, ಹವಾ, ಭೂಮಿಯ ತೇವ—ಇವುಗಳಲ್ಲಿ ಪರಸ್ಪರವಾದ ಸಂಬಂಧವೇನಾದರೂ ಇರುವುದೇ ಎಂಬೀ ವಿಚಾರದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಪರ್ಯಾಲೋಚನೆ ಮಾಡುತ್ತಿದಾರೆ ಅವರು ಈ ವಿಷಯದಲ್ಲಿ ಯಾವ ರೀತಿ ನಡೆಯುವರೋ ಅದು ನಮಗೂ ಮೇಲ್ಪಂಕ್ತಿಯಾದೀತು ಪ್ಲಾಂಟರುಗಳೂ ಸರ್ಕಾರಿ ನೌಕರರೂ ಪರಸ್ಪರ ಪ್ರೀತಿವಿಶ್ವಾಸಗಳನ್ನುಳ್ಳವರಾಗಿದಾರೆಂದು ಕೇಳಿ ಸಂತೋಷಪಡುತ್ತೇನೆ

ಈ ಅಡ್ರೆಸ್ಸುಗಳಲ್ಲಿ ಕಂಡ ಸ್ಥಳೀಯವಾದ ಇತರ ಕುಂದುಕೊರತೆಗಳನ್ನು ಗವರ್ನ್‌ಮೆಂಟಿನವರು ಕಾಲಕ್ರಮದಲ್ಲಿ ಗಮನಕ್ಕೆ ತಂದುಕೊಂಡಾರೆಂದು ಹೇಳಬಲ್ಲೆನು

ಸಭೆಯಲ್ಲಿ ನಡೆದ ಚರ್ಚೆಗಳು.

ಸಂಸ್ಥಾನದೊಳಗೆ ವ್ಯವಹರಿಸುವಂಥಾ ಸಾಮಾನ್ಯ ವಿಷಯಗಳ ಚರ್ಚೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ಕಳೆದ ಗುರುವಾರದಿಂದ ಪ್ರಾರಂಭವಾಗಿ ನೊನ್ನೆ ಮಂಗಳವಾರದ ತನಕ ನಡೆಯಿತು ಪ್ರತಿ ದಿನವೂ ದಿವಾನ್‌ರವರೂ, ಕೌನ್ಸಿಲ್ ಮೆಂಬರುಗಳೂ, ಸೆಕ್ರೆಟರಿಗಳೂ, ಇಲಾಖೆಗಳ ಮತ್ತು ಡಿಸ್ಟ್ರಿಕ್ಟುಗಳ ಮುಖ್ಯಾಧಿಕಾರಿಗಳೂ ಹಾಜರಾಗಿದ್ದರು ಪ್ರತಿನಿಧಿಗಳ ಸಂಖ್ಯೆಯು ಎಂದಿಗಿಂತ ಬಹಳ ಕಡಮೆಯಾಗಿತ್ತು ಈ ಸಭೆಯಲ್ಲಿ ಚರ್ಚಿತವಾದ ವಿಷಯಗಳ ಪೈಕಿ ಮುಖ್ಯವಾದವುಗಳನ್ನು ಕ್ರೋಢೀಕರಿಸಿ ತಿಳಿಸುವೆವು

ಪ್ರಜಾಪ್ರತಿನಿಧಿಗಳ ಪ್ರಾರ್ಥನೆ—ಪ್ರತಿನಿಧಿ ಸಭೆಯವರು ತಮ್ಮ ಪೈಕಿ ಇಬ್ಬರನ್ನು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಬೇಕೆಂದು ವಿಧಿಯುಕ್ತವಾಗಿದೆ ನಂದಿದುರ್ಗ, ಅಷ್ಟಗ್ರಾಮ, ನಗರ—ಈ ಡಿವಿಜನ್‌ಗಳಿಗೆ ಒಬ್ಬೊಬ್ಬ ಮೆಂಬರನ್ನು ಚುನಾಯಿಸುವಂತೆ ಆಗಬೇಕು ಈಗ ಸಂಸ್ಥಾನವು ಎರಡು ಡಿವಿಜನ್ ಆಗಿ, ಮಲೆನಾಡು ಮತ್ತು ಮೈದಾನು ಡಿಸ್ಟ್ರಿಕ್ಟುಗಳು ಕೂಡಿಸಲ್ಪಟ್ಟಿರುವುದರಿಂದ ಪ್ರಜೆಗಳ ಕುಂದುಕೊರತೆಗಳು ಸರ್ಕಾರಕ್ಕೆ ಸರಿಯಾಗಿ ತಿಳಿಯಲು ಅವಕಾಶವಿಲ್ಲ

ದಿವಾನ್‌ರವರ ಉತ್ತರ—ಚೆನ್ನಾಗಿ ಯೋಚನೆ ಮಾಡಿ ಇಬ್ಬರನ್ನೇ ನೇಮಿಸಬೇಕೆಂದು ನಿಷ್ಕರ್ಷೆಯಾಗಿ ಎರಡು ಡಿವಿಜನ್ ಮಾಡಲಾಗಿದೆ ಇದರಲ್ಲಿ ದೋಷವೇನಾದರೂ ಕಂಡರೆ ಮುಂದೆ ಸರಿಮಾಡೋಣ ಗವರ್ನ್‌ಮೆಂಟಿನವರು ತಾವೇ ಕೆಲವು ಮೆಂಬರುಗಳನ್ನು ನೇಮಿಸಿ ಕೂಡಿಸಬಹುದು

ಪ್ರಾರ್ಥನೆ—ಈ ಚುನಾವಣೆಗಿಂತ ಒಬ್ಬ ಮಹಮ್ಮದೀಯ ಮೆಂಬರನ್ನೂ ಒಬ್ಬ ಹಿಂದೂ ಮೆಂಬರನ್ನೂ ಸರ್ಕಾರದವರೇ ನೇಮಿಸಿಟ್ಟರೆ ಅನುಕೂಲ.

ಉತ್ತರ—ಆಲೋಚನೆ ಮಾಡಲಾಗುವುದು

ಪ್ರಾರ್ಥನೆ —ಈ ಸಭೆಯಲ್ಲಿ ಚುನಾಯಿಸಲ್ಪಟ್ಟವರನ್ನು ಹೋದ ವರುಷ ದಂತೆ ನಿರಾಕರಿಸದೆ ಸರ್ಕಾರದವರು ಒಪ್ಪಿ ನೇಮಿಸಿಕೊಳ್ಳಬೇಕು

ಉತ್ತರ —ಬಹುಶಃ ಹಾಗೇ ಆದೀತು

ಪ್ರಾರ್ಥನೆ —ನ್ಯಾಯವಿಧಾಯಕ ಸಭೆಯಲ್ಲಿ ಕಾನೂನುಗಳು ಚರ್ಚೆಯಾಗಿ ತೀರ್ಮಾನವಾಗುವುದಕ್ಕೆ ಮೊದಲೇ ಅವುಗಳನ್ನು ಪ್ರತಿನಿಧಿ ಸಭೆಯಲ್ಲಿಟ್ಟು ಈ ಸಭಿಕರ ಅಭಿಪ್ರಾಯಗಳನ್ನು ಪಡೆಯುವಂತಾಗಬೇಕು

ಉತ್ತರ —ಸರ್ಕಾರಿ ಗೆಜೆಟ್ಟಿನಲ್ಲಿ ಕಾನೂನುಗಳ ಮಸೂದೆಯನ್ನು ಮೊದಲೇ ಪ್ರಕಟಿಸುತ್ತೇವೆ ಮೆಂಬರುಗಳೂ ಇತರರೂ ಅವುಗಳನ್ನು ಓದಿಕೊಂಡು ಸಾಧಕಬಾಧಕಗಳನ್ನು ಗವರ್ನ್‌ಮೆಂಟಿಗೆ ತಿಳಿಸಬಹುದಾಗಿದೆ ನ್ಯಾಯವಿಧಾಯಕ ಸಭೆಯಲ್ಲಿ ಇಂಥಾ ಅಭಿಪ್ರಾಯಗಳಿಗೆ ಗಮನಕೊಡುವರು

ಪ್ರಾರ್ಥನೆ —ಗ್ರಾಮಪಂಚಾಯತಿ ಕೋರ್ಟನ್ನು ಸ್ಥಾಪಿಸಿಕೊಡಬೇಕು, ಗ್ರಾಮ ಮುಖ್ಯಸ್ಥರನ್ನು ಏರ್ಪಾಡು ಮಾಡಬೇಕು ಆಯಾ ಸ್ಥಳಗಳಲ್ಲಿ ಹುಟ್ಟುವ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಅಲ್ಲಲ್ಲೇ ವ್ಯವಸ್ಥೆ ಮಾಡಿದಲ್ಲಿ ಕಕ್ಷಿಗಾರರಿಗೆ ದೇಹಶ್ರಮವೂ ದ್ರವ್ಯನಷ್ಟವೂ ತಪ್ಪುತ್ತದೆ

ಉತ್ತರ —ಇದು ಸರ್ಕಾರದವರ ಯೋಚನೆಯಲ್ಲಿದೆ ಇದಕ್ಕಾಗಿ ಕಾನೂನನ್ನು ಮಾಡಬಹುದು

ಪ್ರಾರ್ಥನೆ —ಕೆರೆಗಳ ಸಂರಕ್ಷಣಾರ್ಥವಾದ ಪಂಚಾಯತಿ ಬಿಲ್ಲಿನೊಳಗೆ ಕಂಡುಬರುವ ಕೆಲವು ನ್ಯೂನತೆಗಳನ್ನು ಕ್ರಮಪಡಿಸಿಕೊಡಬೇಕು

ಉತ್ತರ —ಪ್ರತಿನಿಧಿಗಳೆಲ್ಲಾ ಒಂದು ಕಡೆ ಪ್ರತ್ಯೇಕವಾಗಿ ಕಲೆತು ಈ ಬಿಲ್ಲಿನ ವಿಷಯದಲ್ಲಿ ಚರ್ಚೆಮಾಡಿ ತಮ್ಮ ಅಭಿಪ್ರಾಯಗಳನ್ನೆಲ್ಲಾ ಬರೆದುಕೊಡಬೇಕೆಂದು ಅಪೇಕ್ಷಿಸುತ್ತೇವೆ

ಪ್ರಾರ್ಥನೆ —ಸಂಸ್ಥಾನದೊಳಗೆ ಅಳತೆಯ ಸೇರು ತೂಕದಬಟ್ಟು ಒಂದೇ ರೀತಿ ಇಲ್ಲದಿರೋಣದರಿಂದ ಬಹಳ ಕಷ್ಟವಾಗಿದೆ ಬೆಳೆಯುವವರಿಗೂ ಕೊಂಡುತಿನ್ನುವವರಿಗೂ ನಷ್ಟ ಹೆಚ್ಚು ವ್ಯಾಪಾರಸ್ಥರು ಮೋಸ ಮಾಡಲು ಅವಕಾಶವಿದೆ ಅಳತೆಯ ಸೇರನ್ನೂ ತೂಕದ ಸೇರನ್ನೂ ವಿಧಿಸಿ, ಕಾನೂನ್ ಮಾಡಿದರೆ ಉಪಕಾರವಾದೀತು

ಉತ್ತರ —ಇದಕ್ಕಾಗಿ ಒಂದು ಮಸೂದೆ ಕಾನೂನ್ ಮಾಡಿದೆ ಅದನ್ನು ಮೆಂಬರುಗಳು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು ಈ ಸಂಸ್ಥಾನದ ಎಲ್ಲ ಕಡೆಗಳಲ್ಲಿ ಒಂದು ಕಡೆ ಬೊಂಬಾಯಿ ಸೀಮೆಯೂ, ಇನ್ನೊಂದು ಕಡೆ ಮದರಾಸ್ ಸೀಮೆಯೂ ಇರೋಣದರಿಂದ ನಾವು ನಿಗದಿ ಮಾಡುವ ಅಳತೆ ತೂಕಗಳು ಆಯಾ ಸೀಮೆಗಳಲ್ಲಿರುವ ಅಳತೆ ತೂಕಗಳಿಗೆ ಸರಿಹೋಗುವಂತಿರಬೇಕು ಇವನ್ನು ನಿಗದಿಪಡಿಸುವ ವಿಷಯದಲ್ಲಿ ಸರ್ಕಾರದವರು ಯೋಚಿಸುತ್ತಾರೆ

ಪ್ರಾರ್ಥನೆ —ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನನ್ನು ವಜಾ ಮಾಡಬೇಕು ಅಂಥಾ ಕಾನೂನು ಇದ್ದರೆ ಅದು ಈ ಸೀಮೆಯ ಪ್ರಜೆಗಳು ರಾಜಭಕ್ತಿಪರಾಯಣರಲ್ಲವೆಂಬ ಅಭಿಪ್ರಾಯವನ್ನುಂಟುಮಾಡಬಹುದು ಅದನ್ನು ರದ್ದುಮಾಡುವುದು ಸಾಧ್ಯವಲ್ಲದ ಪಕ್ಷಕ್ಕೆ ಅದರಲ್ಲಿ ಕೆಲವು ಬದಲಾವಣೆಗಳನ್ನಾದರೂ ಮಾಡಿಕೊಡಬೇಕು ಅದರಲ್ಲಿರುವ, ಎಡಿಟರು ಮೊದಲೇ ಗವರ್ನ್‌ಮೆಂಟಿನವರಿಂದ ಅಪ್ಪಣೆ ಪಡೆಯಬೇಕೆಂಬ ನಿರ್ಬಂಧವನ್ನು ವಜಾ ಮಾಡಬೇಕು ಎಡಿಟರು ತಪ್ಪಿತಸ್ಥನಾದರೆ ಅವನನ್ನು ಚೀಫ್ ಕೋರ್ಟಿನಲ್ಲಿ ವಿಚಾರಣೆ ಮಾಡುವಂತಾಗಬೇಕು ದಿವಾನರವರೇ ಸ್ವಂತ ಅವನನ್ನು ಗಡೀಪಾರು ಮಾಡುವಂತೆಯೂ ಅಚ್ಚಿನ ಯಂತ್ರ ಮೊದಲಾದ ಸಾಮಾನುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವಂತೆಯೂ ಬದಲಾಯಿಸಿಕೊಡಬೇಕು ಮತ್ತು ಈ ಕಾನೂನಿಗೆ ಸಂಬಂಧಿಸಿದ [illegible] ಅಪರಾಧಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು ಹೋದ ವರುಷ ಸಭೆಯಲ್ಲಿ [illegible] ಪತ್ರಿಕಾ ಚಳುವಳಿಯಿಂದ ವ್ಯವಸ್ಥೆ [illegible]

ಉತ್ತರ —ಈ ಕಾನೂನನ್ನು ಬದಲಾಯಿಸಬಹುದೇ ಎಂದು ಗವರ್ನ್‌ಮೆಂಟಿನವರು ಈವರೆಗೆ ಚರ್ಚೆ ಮಾಡಿದರು ಕಡೆಗೆ ಅದನ್ನು ರದ್ದು ಮಾಡುವುದಾಗಲಿ ಅದರಲ್ಲಿ ಬದಲಾವಣೆಗಳನ್ನು ಕಲ್ಪಿಸುವುದಾಗಲಿ ಸಾಧ್ಯವಲ್ಲವೆಂದು ಗೊತ್ತುಮಾಡಲ್ಪಟ್ಟಿತು ಈ ಕಾನೂನು ನಮ್ಮ ಸೀಮೆಯಲ್ಲಿ ಜಾರಿಯಲ್ಲಿರೋಣದರಿಂದ ಪ್ರಜೆಗಳ ಮೇಲೆ ಯಾವ ಕಳಂಕವೂ ಉಂಟಾಗಲಾರದೆಂದು ತೋರುತ್ತದೆ

ಪ್ರಾರ್ಥನೆ —(ಹಿಂದುಗಳು) ಮತಾಂತರವನ್ನು ಹೊಂದಿದ ಹಿಂದುವಿಗೆ ಕುಟುಂಬದ ಆಸ್ತಿಯಲ್ಲಿ ಪಾಲುಭಾಗ ಕೊಡಬೇಕೆಂಬ ವಿಷಯದಲ್ಲಿ ಸರ್ಕಾರದವರು ಒಂದು ಕಾನೂನ್ ಮಾಡಬೇಕೆಂದಿರುವಂತೆ ತಿಳಿದು ಬಂದಿದೆ ಅಂಥಾ ಕಾನೂನನ್ನು ಮಾಡದೆ ಈಗಿನಂತೆಯೇ ಪ್ರಜೆಗಳನ್ನು ಕಾಪಾಡಿಕೊಂಡು ಬರಬೇಕು ಹಿಂದೂ ಪ್ರತಿನಿಧಿಗಳಲ್ಲಿ ಯಾವ ಮೆಂಬರಾದರೂ ಇದಕ್ಕೆ ಸಮ್ಮತಿಪಡುವವರಾಗಿಲ್ಲ ಅದು ಕಾನೂನಾದರೆ ಹಿಂದುಗಳ ಸಂಸಾರದ ಕಟ್ಟುಪಾಡಿಗೇನೇ ಕೊಡಲಿ ಹಾಕಿದಂತಾಗುವುದು —(ಮಹಮದೀಯ ಮೆಂಬರುಗಳು) ಇದು ಕಾನೂನಾಗಕೂಡದು ನಮ್ಮ ಖುರಾನಿಗೆ ವಿರುದ್ಧವಾದದ್ದು ಮಹಮದೀಯರು ಇದಕ್ಕೆ ಸಮ್ಮತಿಪಡುವುದಿಲ್ಲ —(ಮ ಎಚ್ ಹಿಲ್ಟಿಂಗ್ಟನ್ ಯವರು) ಕ್ರೈಸ್ತರಲ್ಲಿ ಎರಡು ಪಂಗಡದವರೂ, ಮಹಮದೀಯರಲ್ಲಿ ಎರಡು ಪಂಗಡದವರೂ ಪರಸ್ಪರ ಮತವಿಷಯದಲ್ಲಿ ಕಾದಾಡಿದಾರೆ ಹಿಂದೂ ಮತಸ್ಥರು ಯಾವಾಗಲೂ ಸಹನವಂತರು ಈಗ ಅವರು ಪರಮತ ದ್ವೇಷಿಗಳಾಗಿಯೂ ಮನಸ್ಸಾಕ್ಷಿಯ ಪ್ರೇರಣೆಯನ್ನು ಅಡಗಿಸುವವರಾಗಿಯೂ ಆಗಿದಾರೆ ಇದು ಹಿಂದೂ ಮತಕ್ಕೆ ಅಪಮರ್ಯಾದೆಯನ್ನು ತರುವುದು ಈಗಲಾದರೋ ಹಿಂದುಗಳಲ್ಲಿ ಹಲವರು ಥಿಯಾಸಫಿ ಸಂಘಕ್ಕೆ ಸೇರಿದವರು ಇವರನ್ನು ನೀವು ನಿಮ್ಮ ಮನೆಗಳಲ್ಲಿ ಧಾರಾಳವಾಗಿ ಸೇರಿಸಿಕೊಳ್ಳುತ್ತೀರಿ ನಾಲ್ಕು ತಲೆಗಳ ಹಿಂದೆ ಇದು ಸಾಧ್ಯವಾಗುತ್ತಿತ್ತೇ? ಒಬ್ಬನು ಮತವನ್ನು ಬದಲಾಯಿಸಿದ ಮಾತ್ರಕ್ಕೇ ಅವನಿಗೆ ಹುಟ್ಟಿನಿಂದಲೇ ಬಂದಿರುವ ಬಾಧ್ಯತೆಯ ಹಕ್ಕನ್ನು ತಪ್ಪಿಸಿ ಮಾಡುವುದು ತರವಲ್ಲ ಅವನ ತಂದೆಯು ಇಷ್ಟಪಟ್ಟರೆ ತನ್ನ ಸ್ವಾರ್ಜಿತವನ್ನು ಯಾವ ರೀತಿಯಲ್ಲಿ ಬೇಕಾದರೂ ವಿನಿಯೋಗಿಸಲಿ

ಉತ್ತರ —ಇದು ಸರ್ಕಾರದವರು ಮಾಡಬೇಕೆಂದಿರುವ ಕಾನೂನಲ್ಲ ಒಂದು ಮಸೂದೆಯು ತಪ್ಪಾಗಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದಿದೆ

ಪ್ರಾರ್ಥನೆ —ರೇನ್ಜ್ ಹವಾಲು ಸಡಿಲ ಮೇಲೆ ಒಂದು ತಿಂಗಳೊಳಗಾಗಿ ಹಣವನ್ನು [illegible] ರೈತರು ಕಟ್ಟದಿದ್ದರೆ ಜರಿಮಾನೆಯನ್ನು ರದ್ದುಮಾಡಿಕೊಡಬೇಕು

ಉತ್ತರ —ಇದನ್ನು ಎಲ್ಲರೂ ಅನುಮೋದಿಸಿದಾರೆ, ಒಂದೇ ರೀತಿ ಜಾರಿಗೆ ತರುತ್ತೇವೆ, ಎರಡು ತಿಂಗಳ ವರೆಗೂ ಅವಧಿ ಕೊಟ್ಟಿದೆ

ಪ್ರಾರ್ಥನೆ —ಗ್ರಾಮ ಉದ್ಯೋಗ ಪಟೇಲರು ಗತಿಸಿ ಹೋಗಿ ಹೆಂಗಸು ಹಕ್ಕುದಾರಳಾಗಿದ್ದರೆ ಅವಳಿಗೆ ಜೀವನ ನಡೆಯುವಂತೆ ಪಟೇಲಿಯಲ್ಲಿ ಸ್ವಲ್ಪ ಕೊಡಿಸಬೇಕು

ಉತ್ತರ —ಹೊಸ ಕಾನೂನ್ ಈಗತಾನೆ ಜಾರಿಗೆ ಬಂದಿದೆ ಬದಲಾವಣೆ ಇನ್ನೂ ಮಾಡಿಲ್ಲ ಅದರಲ್ಲಿ ಈ ಅನಾನುಕೂಲಗಳನ್ನು ಸರಿಪಡಿಸುತ್ತೇವೆ

ಪ್ರಾರ್ಥನೆ —ಆಹಾರ ಪದಾರ್ಥಗಳಿಗೂ ಧಾನ್ಯಗಳಿಗೂ ವರ್ತಕರು ಬೆರಕೆ ಹಾಕಿ ಕೆಡಿಸುತ್ತಾರೆ ಇದನ್ನು ತಪ್ಪಿಸುವುದಕ್ಕೆ ಒಂದು ಕಾನೂನ್ ಆಗಬೇಕು

ಉತ್ತರ —ಹೆಲ್ತ್ ಆಫೀಸರವರು ಅಂಥವುಗಳನ್ನು ಪರಿಶೋಧನೆ ಮಾಡತಕ್ಕವರು ನೋಡಲು ಅವರಿಗೆ ತಕ್ಕ ಪರೀಕ್ಷಾ ಉಪಕರಣಗಳನ್ನು ಒದಗಿಸಿ ಕೊಟ್ಟು, ತರುವಾಯ ಕಾನೂನು ಮಾಡುತ್ತೇವೆ

ಪ್ರಾರ್ಥನೆ —ಸರ್ವೆ ಆಗಿರುವ ಇನಾಂ ಗ್ರಾಮಗಳಲ್ಲಿ ರೈತರು ಜಮೀನ್ ಮೇಲೆ ದ ನಾತ ದರೆ ಅವರ ಬೆಳೆಯ ಮೇಲೂ ಅವರ ಬೆಳೆಯ ಹದಿನೈದರಷ್ಟು ಕಿಮ್ಮತ್ತಿನ ಮೇಲೂ ದಾವಾ ಸ್ಟಾಂಪು ಕಟ್ಟಬೇಕು ಸರ್ಕಾರಿ ಜಮೀನಾಗಿದ್ದರೆ ಹ್ಯಾಗೋ ಹಾಗೆ ಕಂದಾಯದ ಐದರಷ್ಟು ಮೊಬಲಗಿನ ಮೇಲೆ ಸ್ಟಾಂಪು ಕಟ್ಟುವಂತೆ ಬದಲಾಯಿಸಿಕೊಡಬೇಕು

ಉತ್ತರ —ಬದಲಾವಣೆಯಾಗಬೇಕಾದ ರೀತಿ ಹೀಗೆಂದು ನೀವು ಸ್ಪಷ್ಟವಾಗಿ ಬರೆದುಕೊಡಿ ಆಲೋಚನೆಮಾಡುತ್ತೇವೆ

ಪ್ರಾರ್ಥನೆ —ಹೆಣ್ಣುಮಕ್ಕಳಿಗೆ ೧೬ ತುಂಬುವತನಕ ಗಂಡುಮಕ್ಕಳಿಗೆ ೨೦ ತುಂಬುವತನಕ ಮದುವೆಮಾಡಕೂಡದೆಂದು ಹಿಂದೂ ವೈದ್ಯಶಾಸ್ತ್ರಗಳು ಹೇಳುತ್ತವೆ ಆ ವಯಸ್ಸಿಗೆ ಮುಂಚೆ ಅವರಿಗೆ ವಿವಾಹವಾಗಕೂಡದೆಂದೂ, ಮದುವೆಯಾಗದೇ ಇರುವ ಹೆಂಗಸನ್ನು ಅಪಮಾನ ನಿಂದೆಗಳಿಗೆ ಗುರಿಪಡಿಸಿದವರನ್ನು ಶಿಕ್ಷಿಸುವುದಾಗಿಯೂ ಕಾನೂನ್ ಮಾಡಬೇಕು ಎಂದು ಮೆ ಎಂ ವೆಂಕಟಕೃಷ್ಣಯ್ಯನವರು ಸರ್ಕಾರದವರನ್ನು ಬರಹಮೂಲಕ ಕೇಳಿಕೊಂಡರು ಸಭೆಯಲ್ಲಿ ಈ ವಿಷಯವನ್ನು ಚರ್ಚಿಸುತ್ತೀರೋ ಎಂದು ದಿವಾನ್‌ರವರು ಅವರನ್ನು ಕರೆದು ಕೇಳಿದಾಗ ಅವರು ಹೇಳಿದ್ದೇನೆಂದರೆ,—ಈಚೆಗೆ ನಾನು ವಿಚಾರಮಾಡಿದ್ದರಲ್ಲಿ ಇಂಥಾ ಆಚಾರವ್ಯವಹಾರಗಳನ್ನು ಕ್ರಮಪಡಿಸಿಕೊಳ್ಳುವ ವಿಷಯದಲ್ಲಿ ಪ್ರಜೆಗಳು ಸರ್ಕಾರದವರನ್ನು ಕೇಳಿಕೊಳ್ಳುವುದೂ ಕಾನೂನ್ ಮಾಡಿ ಜಾರಿಗೆ ತರುವುದೂ ದೇಶಕ್ಕೆ ಹಿತಕರವಾದದ್ದಲ್ಲವೆಂದೂ, ಪ್ರಜೆಗಳ ಮುಖಂಡರೇ ಸೇರಿ ಸಾಮಾನ್ಯ ಪ್ರಜೆಗಳಿಗೆ ಬುದ್ಧಿ ವಿವೇಕಗಳನ್ನು ಕಲಿಸಿ ಕೊಟ್ಟು ಪದ್ಧತಿ ಆಚಾರವ್ಯವಹಾರಗಳನ್ನು ಕ್ರಮಪಡಿಸಿಕೊಳ್ಳಬೇಕಾಗಿದೆ ಎಂದೂ ಗೊತ್ತಾಯಿತು ಈ ವಿಚಾರವನ್ನು ನಾನು ವಾಪಸು ತೆಗೆದುಕೊಳ್ಳುತ್ತೇನೆ ಸಂಘಸುಧಾರಣಾ ಕಾರ್ಯದಲ್ಲಿ ಹಿಂದುಸ್ಥಾನದ ಬೇರೆ ಬೇರೆ ಭಾಗದವರು ಯಾವ ರೀತಿ [illegible] ಬರೋಡಾ ಸರ್ಕಾರದವರು [illegible] ಪ್ರಜೆಗಳ [illegible]

ಉತ್ತರ —ಒಳ್ಳೇದು, ನೋಡೋಣ

ಪ್ರಾರ್ಥನೆ —ಬೊಂಬಾಯಿ ಅಧಿಪತ್ಯದಲ್ಲಿ [illegible] ಕಾನೂನನ್ನು ನಮ್ಮ ಸೀಮೆಯಲ್ಲಿ ಜಾರಿಗೆ ತರಬೇಕು

ಉತ್ತರ —ಇದು ಹಿಂದೆಯೇ ಒಂದು ಸಲ ಚರ್ಚೆಯಾಗಿದೆ ಪ್ರತಿನಿಧಿಗಳು ವಿರೋಧಾಭಿಪ್ರಾಯವನ್ನು ತಿಳಿಸಿದರು ಅದನ್ನು ಜಾರಿಗೆ ತರಬೇಕಾದ ಅಗತ್ಯವಿಲ್ಲ

ಪ್ರಾರ್ಥನೆ —ಜೂಜಾಟವನ್ನು ನಿಲ್ಲಿಸುವ ಕಾನೂನನ್ನು ಜಾರಿಗೆ ತರಬೇಕು [illegible] ಅಂಗಡಿಗಳ [illegible]

ಉತ್ತರ —ಹೊಸದಾಗಿ ಜಾರಿಗೆ ತರಲ್ಪಟ್ಟಿರುವ ಪೋಲೀಸ್ ರೆಗ್ಯುಲೇಷನ್ನಲ್ಲಿ ಜೂಜಾಟವನ್ನು ಬಿಂದಿಕ್ಕಾಗಿ ನಿಲ್ಲಿಸುವುದಕ್ಕೆ ಪೋಲೀಸಿನವರಿಗೆ ಸಂಪೂರ್ಣವಾದ ಮತ್ತು ಸ್ಪಷ್ಟವಾದ ಅಧಿಕಾರ ಕೊಟ್ಟಿದೆ ಪೋಲೀಸಿನವರು ಅದರಂತೆ ಜೂಜಾಟವನ್ನು ನಿಲ್ಲಿಸುವರು ಇದಕ್ಕಾಗಿ ಪ್ರತ್ಯೇಕವಾದ ಕಾನೂನ್ ಆಗಬೇಕಾದ ಅವಶ್ಯವಿಲ್ಲ

ಪ್ರಾರ್ಥನೆ —ಮೋಟಾರ್ ಗಾಡಿಗಳು ಬಹು ರಭಸದಿಂದ ಸಂಚಾರಮಾಡೋಣದರಿಂದ ಅನೇಕರು ಅವುಗಳ ಕೆಳಗೆ ಸಿಕ್ಕಿ ಗಾಯಪಡುತ್ತಿದ್ದಾರೆ ಹಲವರು ಪ್ರಾಣವನ್ನೂ ಕಳೆದುಕೊಂಡರು [illegible] ವೇಗವಾಗಿ ಓಡಿಸದ ಹಾಗೆ ಒಂದು ಕಾನೂನ್ ಆಗಬೇಕು

ಉತ್ತರ —ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಈಗ ನಾಲ್ಕಾರು ಮೋಟಾರ್ ಗಾಡಿಗಳಿಗಿಂತ ಹೆಚ್ಚಿಲ್ಲ ಅವುಗಳ ಸಂಖ್ಯೆ ಇನ್ನೂ ಹೆಚ್ಚಿದ ಮೇಲೆ ಆ ವಿಚಾರ ಮಾಡೋಣ

ಪ್ರಾರ್ಥನೆ —ಪ್ರತಿನಿಧಿಗಳ ಪೈಕಿ ಕೆಲವು ಅಪೇಕ್ಷೆ ಪಟ್ಟರೂ ಲಾಯರುಗಳೂ ಅಮಲ್ದಾರರಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ತಪ್ಪಿಸಬೇಕೆಂದು ಕೇಳಿದರು ಇತರ ಮೆಂಬರುಗಳು ಹಾಗೆ ಮಾಡಕೂಡದೆಂತಲೂ, ಅಮಲ್ದಾರರಿಗೆಲ್ಲಾ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಹೆಚ್ಚಿಸಿಕೊಡಬೇಕೆಂತಲೂ ಕೇಳಿಕೊಂಡರು

ಉತ್ತರ —ಅಮಲ್ದಾರರಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ತಪ್ಪಿಸೋಣದರಲ್ಲಿ ಇದುವರೆಗೆ ಎರಡು ವಿಷಯಗಳು ಗವರ್ನ್‌ಮೆಂಟಿನವರ ಅನುಭವಕ್ಕೆ ಬಂದಿದೆ ಮೊದಲನೆಯದಾಗಿ ಶಿಕ್ಷೆಯ ಖರ್ಚು ಹೆಚ್ಚಿಸಬೇಕಾಯಿತು ಹೆಚ್ಚು ಖರ್ಚಿಗೆ ತಕ್ಕ ಪ್ರತಿಫಲ ದೊರಕಿದಂತೆ ಕಾಣುವುದಿಲ್ಲ ಎರಡನೆಯದಾಗಿ ಗ್ರಾಮಾಂತರಗಳಲ್ಲಿ ಆರೋಗ್ಯ ಮತ್ತು ಪೋಲೀಸು ವಿಚಾರಗಳು ಬಹಳ ಹೀನಸ್ಥಿತಿಗೆ ಬಂದಿರುತ್ತವೆ ಅಮಲ್ದಾರರಿಗೆ ತೀರಾ ಪೋಲಿಸ ಸಂಬಂಧದ ವ್ಯಾಜ್ಯಗಳನ್ನು ಹಿಡಿದು ಫೈಸಲ್ ಮಾಡುವ ಅಧಿಕಾರ ಕೊಡುವುದು ಸಾಧ್ಯವಲ್ಲ, ಮತ್ತು ಹಾಗೆ ಕೊಡಲೂ ಬಾರದು ಕಕ್ಷಿಗಾರರೇ ದೂರಲು ಒಪ್ಪುವುದಿಲ್ಲ

ಪ್ರಾರ್ಥನೆ —ಎಲ್ಲಾ ಡಿಸ್ಟ್ರಿಕ್ಟ್ ಸ್ಥಳಗಳಲ್ಲಿ ಬೆಂಚ್ ಆಫ್ ಮ್ಯಾಜಿಸ್ಟ್ರೇಟನ್ನು ನೇಮಿಸಿದರೆ ಉತ್ತಮ

ಉತ್ತರ —ಪರೀಕ್ಷಾರ್ಥವಾಗಿ ಈಗಾಗಲೇ ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಏರ್ಪಾಡು ಮಾಡಿದೆ ಅನುಭವದಿಂದ ತೃಪ್ತಿಕರವಾಗಿ ಕೆಲಸ ನಡೆಯುತ್ತದೆಂದು ಗೊತ್ತಾದರೆ ಇತರ ಕಡೆಗಳಲ್ಲೂ ಅಂಥಾ ಕೋರ್ಟುಗಳನ್ನು ಇಡಬೇಕೆಂದಿದೇವೆ

ಇಂಡಿಯಾದೇಶದ ವೃತ್ತಾಂತಗಳು

ಕಳೆದ ಸೋಮವಾರ ಬೆಳಗಿನ ಝಾಮದಲ್ಲಿ ಎಂಬಾ ಪಟ್ಟಣದಿಂದ ಸುಮಾರು ಮುನ್ನೂರು ಮೈಲಿ ದೂರದಲ್ಲಿ ಯಾವ ಪ್ರದೇಶದಲ್ಲೋ ಭೂಕಂಪವಾಗಿರುವುದೆಂದು ಅಲ್ಲಿಟ್ಟಿರುವ ಯಂತ್ರಗಳ ಚಲನೆಯಿಂದ ಗೊತ್ತಾಯಿತು

* * *

ಪೂರ್ವ ಬಂಗಾಳಾ ಮತ್ತು ಅಸಾಂ ಎಂಬ ವಿಭಾಗದಲ್ಲಿ ಈಗ ೧,೯೭,೬೯,೯೦೦ ಎಕರೆ ಜಮೀನಿನಲ್ಲಿ ಬತ್ತದ ಬೆಳೆ ಆಗುವುದು ಅಂದರೆ, ಹಿಂದಿನ ವರ್ಷಕ್ಕಿಂತ ೭,೨೧,೩೦೦ ಎಕರೆ ಹೆಚ್ಚು ಈಗ ಆಗಿರುವ ಬೆಳೆಯನ್ನು ನೋಡಿದರೆ ಕೇವಲ [illegible] ರಷ್ಟು ಫಸಲು ಕೈಗೆ ಬರುವಂತೆ ಕಾಣುತ್ತದೆ

ಮದರಾಸ್ ಪಟ್ಟಣದಲ್ಲಿರುವ ಪೈಕ್ರಾಫ್ಟ್ ಗಾರ್ಡನ್ಸ್ ಎಂಬ ಹೆಸರುಳ್ಳ ಗಿಸ್ತಾರದ ಜಮೀನನ್ನು ದಕ್ಷಿಣ ಮರಾಠಾ ರೈಲ್ವೆ ಕಂಪೆನಿಯವರು ೫೦ ಸಾವಿರ ರೂಪಾಯಿಗೆ ಕೊಂಡುಕೊಂಡರು ಈ ಜಮೀನಿನಲ್ಲಿ ಆ ಕಂಪೆನಿಯ ಏಜೆಂಟರ ಮತ್ತು ಆಡಿಟರ್ ರ ಸಲುವಾಗಿ ಎರಡು ಬಂಗಲೆಗಳನ್ನು ಕಟ್ಟುವರು

* * *

ಮದರಾಸ್ ಪಟ್ಟಣಕ್ಕೆ ಪ್ಲೇಗಿರುವ ಪ್ರದೇಶಗಳಿಂದ ಹೋಗುವವರು ಪ್ಲೇಗ್ ಪ್ಯಾಸ್‌ಪೋರ್ಟ್ ಚೀಟಿಗಳನ್ನು ಪಡೆದು, ಹತ್ತು ದಿನಗಳ ವರೆಗೆ ಅಲ್ಲಿನ ಡಾಕ್ಟರುಗಳಿಗೆ ಹೋಗಿ ತೋರಿಸಿಕೊಂಡು, ಅವರಿಂದ ರುಜು ಮಾಡಿಸಿಕೊಂಡು ಬರಬೇಕಾಗಿತ್ತಷ್ಟೆ ಗವರ್ನರವರು ಹುಕುಂಕೊಟ್ಟು ಆ ಅವಧಿಯನ್ನು ೧೦ ರಿಂದ ೭ ದಿನಕ್ಕೆ ಬದಲಾಯಿಸಿರುತ್ತಾರೆ ಒಂದು ವಾರ ಪ್ಯಾಸುಪೋರ್ಟಿಗೆ ರುಜುಮಾಡಿಸಿದರೆ ಸಾಕಾಗಿದೆ

* * *

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ನೈನಿಟಾಲ್ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದವರು ನೀರಿನ ಯಂತ್ರಗಳ ಸಹಾಯದಿಂದ ಧಾನ್ಯವನ್ನು ಬೀಸಿ ಹಿಟ್ಟುಮಾಡುವಂಥಾ ಉಪಕರಣಗಳನ್ನು ತರಿಸಿಟ್ಟುಕೊಂಡು, ಪ್ರಜೆಗಳಿಗೆ ಬಾಡಿಗೆಗೆ ಕೊಡುತ್ತಾ ಬಂದಿದಾರೆ ಈ ಬಾಬಿನಲ್ಲಿ ಕಳೆದ ಇಸವಿಯಲ್ಲಿ ಸರ್ಕಾರಕ್ಕೆ ೫೧,೦೦೦ ರೂಪಾಯಿ ಅಂದರೆ ಹಿಂದಿನ ವರುಷಕ್ಕಿಂತ ೬,೦೦೦ ರೂಪಾಯಿ ಹೆಚ್ಚಾಗಿ ಉತ್ಪತ್ತಿಯಾಗಿರುತ್ತದೆ

* * *

ಆಲಿಪುರದಲ್ಲಿ ಜ್ಯೋತೀಂದ್ರನಾಥನೆಂಬುವನ ಅಫೀಂ ಸೇವನೆ ಮಾಡುತ್ತಿದ್ದನು ಅವನು ಅಫೀಮಿನ ಸಣ್ಣ ಪೊಟ್ಟಣವನ್ನು ತನ್ನ ತಲೆದಿಂಬಿನ ಕೆಳಗೆ ಇಟ್ಟಿದ್ದನು ಇದನ್ನು ಅವನ ಮೂರು ವರುಷದ ಮಗುವು ಬಿಚ್ಚಿ ತಿಂದು ಜ್ಞಾನ ತಪ್ಪಿ ಬಿದ್ದುಕೊಂಡಿತು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿದರೂ ಮಗು ಬದುಕದೆ ಸತ್ತು ಹೋಯಿತು ಮನೆಯಲ್ಲಿ ಹಿರಿಯರ ದುರಭ್ಯಾಸದ ದೆಸೆಯಿಂದ ಎಂಥಾ ವಿಪತ್ತು ಸಂಭವಿಸುತ್ತದೆಂಬುವುದು ಇದರಿಂದ ದೃಷ್ಟಾಂತವಾಗುತ್ತದೆ

* * *

ಪಾಟಿಯಾಲಾ ಸಂಸ್ಥಾನದಲ್ಲಿ ಸುಮಾರು ಎರಡು ವರುಷಗಳ ಹಿಂದಿನಿಂದ ಬಹು ರಾಜದ್ರೋಹಕರವಾದ ಮಸಲತ್ತುಗಳು ನಡೆಯುತ್ತಿದ್ದುವೆಂದೂ, ಪೋಲೀಸಿನವರು ಇದುವರೆಗೆ ಆ ದ್ರೋಹಿಗಳನ್ನು ದಸ್ತಗಿರಿ ಮಾಡದೆ ಗುಮಾನಿ ಇಟ್ಟಿದ್ದರೆಂದೂ, ಈಗ ದಸ್ತಗಿರಿ ಮಾಡಲ್ಪಟ್ಟಿರುವ ೫೩ ಜನರನ್ನೂ ಊರ ಹೊರಗಡೆ ಪ್ರತ್ಯೇಕವಾದ ಒಂದು ಕ್ಯಾಂಪಿನಲ್ಲಿ ಇಟ್ಟಿದಾರೆಂದೂ, ಆ ಪೈಕಿ ಹಲವು ಜನರು ಪರದೇಶಗಳಿಂದ ಹೋಗಿ ನೌಕರಿ ಮಾಡುತ್ತಿದ್ದವರೆಂದೂ ತಿಳಿದು ಬಂದಿದೆ

* * *

ಮ ಎಚ್ ಎಸ್ ಎಲ್ ಪೋಲಕ್ ಎಂಬಾತನು ದಕ್ಷಿಣ ಆಫ್ರಿಕದಿಂದ ಹಿಂದುಸ್ಥಾನಕ್ಕೆ ಬಂದು ಎರಡು ವಾರಗಳಿಂದ ಸ್ವದೇಶದಲ್ಲಿ ಸಂಚಾರಮಾಡುತ್ತಾ, ಮುಖ್ಯ ಮುಖ್ಯ ನಗರಗಳಲ್ಲಿ ದೇಶೀಯ ಪ್ರಜೆಗಳ ಸಭೆನಡಿಸಿ, ದಕ್ಷಿಣ ಆಫ್ರಿಕದಲ್ಲಿ ಹಿಂದುಸ್ಥಾನದ ಪ್ರಜೆಗಳಿಗೆ ಇರುವ ಸರ್ಕಾರದ ನಿರ್ಬಂಧಗಳನ್ನೂ ಅವರ ಕಷ್ಟನಷ್ಟಗಳನ್ನೂ ನಿವೇದಿಸುತ್ತಾ ಬಂದಿದಾನೆ ಎಲ್ಲಾ ಕಡೆಗಳಲ್ಲೂ ದೇಶೀಯ ಪ್ರಜೆಗಳು ಇಂಡಿಯಾ ಗವರ್ನ್‌ಮೆಂಟಿನವರು ಇಲ್ಲಿನ ಪ್ರಜೆಗಳನ್ನು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸದಂತೆ ಅಡ್ಡಿ ಮಾಡಬೇಕೆಂದೂ ಇಲ್ಲವಾದರೆ ಅಲ್ಲಿನ ಸರ್ಕಾರದವರು ವಿಧಿಸುತ್ತಿರುವ ಕಾನೂನನ್ನು ರದ್ದು [illegible] ಬೇಕೆಂದೂ ಬೇಡಿಕೊಳ್ಳಬೇಕೆಂಬದಾಗಿ ತೀರ್ಮಾನಗಳನ್ನು ಮಾಡುತ್ತಿದಾರೆ

* * *

ಇಲ್ಲೀಚೆಗೆ [illegible] ರಾಜರು ಸ್ವದ್ದೇಶದ ಸಂಸ್ಥಾನದ [illegible] ಕಳೆದ ವಾರ ಜೋಧಪುರಕ್ಕೆ [illegible] ಸುಮಾರು ೧,೨೦೦ ಪ್ರಜೆಗಳಿಗೆ ಸುಭೋಜನ ಮಾಡಿಸಿದರು [illegible] ಗವರ್ನ್‌ಮೆಂಟಿನವರ [illegible] ಕೊಡಿಸಿದ್ದರು ಈ ಹಣಕ್ಕೆ ನಾಲ್ಕು ಜನ ಹಕ್ಕುದಾರರು ಬಂದು [illegible] ಗವರ್ನ್‌ಮೆಂಟಿನವರು ಅದನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದಾರೆ ಈ ಹಣವನ್ನು ಜನರಲ್ ಕಾಲೇಜಿನ ಮೂಲಧನಕ್ಕೆ ಸೇರಿಸಿಕೊಡಬೇಕೆಂದು ಕೆಲವರು ಅಭಿಪ್ರಾಯಪಡುವರು

* * *

ಪಾಟಿಯಾಲಾ ಸಂಸ್ಥಾನದಲ್ಲಿ ಈಚೆಗೆ ಆಳ್ವಿಕೆಯ ಸ್ವಾತಂತ್ರ್ಯವನ್ನು ವಹಿಸಿಕೊಂಡ ಪ್ರಾಪ್ತವಯಸ್ಕರಾದ ಮಹಾರಾಜರವರು ಸರ್ದಾರ್ ಗುರುದತ್ತಸಿಂಗ್‌ಯವರನ್ನು ಮಂತ್ರಿಯಾಗಿಯೂ, ಲಾಲಾರಾಂಪ್ರಸಾದ್ ಯವರನ್ನೂ ಸರ್ದಾರ್ ಭಗವಾನ್‌ಸಿಂಗ್ ಯವರನ್ನೂ ಸೆಕ್ರಿಟರಿಗಳಾಗಿಯೂ ಖಾಲಿಫಾ ಸೈಯದ್ ಹಾಮಿದ್ ಹುಸೇನ್‌ಯವರನ್ನು ಖಜಾನಾ ಛಕ್ಷಿಯಾಗಿಯೂ, ಮೌಲ್ವಿ ಫಸ್ಲ್ ಮುಹಿಕನ್ ಯವರನ್ನು ಸೆಷನ್ಸ್ ಜಡ್ಜಿಯಾಗಿಯೂ ನೇಮಕ ಮಾಡಿಕೊಂಡಿದಾರೆ ಮಹಾರಾಜರವರು ಬೇರೆ ಬೇರೆ ಸೆಕ್ರೆಟರಿಗಳಿಂದ ಕಳುಹಲ್ಪಡುವ ಕಾಗದಪತ್ರಗಳನ್ನೂ ಮೊಕದ್ದಮೆಗಳನ್ನೂ ಇತ್ಯರ್ಥ ಮಾಡುವರಲ್ಲದೆ ಸಂಸ್ಥಾನದ ನ್ಯಾಯಸ್ಥಾನಗಳಲ್ಲಿ ತೀರ್ಪಾದ ಮೊಕದ್ದಮೆಗಳ ಅಪೀಲನ್ನು ತಾವೇ ಹಿಡಿದು ವ್ಯವಸ್ಥೆ ಮಾಡುತ್ತಾರೆ

* * *

ಬೊಂಬಾಯಿ ಸರ್ಕಾರದವರು ತಿಳಿಸುವುದೇನೆಂದರೆ,—ಬರುವ ವರ್ಷದಲ್ಲಿ ಆಕಾಶದಲ್ಲಿ ಒಂದು ಧೂಮಕೇತು ಕಾಣಬರುವುದು ಮತ್ತು ಅದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಹಳ ದೊಡ್ಡದಾಗಿ [illegible] ಈ ಧೂಮಕೇತುವನ್ನು ಚೀನಿಯ ಜನರು ನೂರಾರು ವರ್ಷಗಳ ಹಿಂದೆ ಕಂಡುಹಿಡಿದಿದ್ದರು ಆ ತರುವಾಯ ಅದು ಆಕಾಶದಲ್ಲಿ ಆನೇಕ ಸಾರಿ ಕಾಣಬಂದಿದೆ ಕೊನೆಯ ಸಾರಿ ಅದು ೭೪ ವರ್ಷಗಳ ಹಿಂದೆ ಕಾಣಬಂದಿತ್ತು ಆಕಾಶದ ನಕ್ಷತ್ರ ಗ್ರಹಗಳು ಮುಂತಾದವುಗಳ ಚಲನೆಯನ್ನು ಬಲ್ಲವರಾದ ಜ್ಯೋತಿಷ ಪಂಡಿತರು ಅದು ಯಾವ ದಿನ ವರ್ಷ ತಿರುಗಿ ಕಾಣಬರುವುದೆಂದು ಕಳೆದ [illegible] ಇದನ್ನು ಹಿಂದೆಯೇ ಹೇಳಿದವರು ಈ ಧೂಮಕೇತುವಿನಿಂದ [illegible] ಕೆಟ್ಟ ಪರಿಣಾಮವೂ [illegible] ಮತ್ತು [illegible] ಕೆಲವು ಕಾಲದ ಮೇಲೆ [illegible] ಹಾಗೆಯೇ ಈಗಲೂ ಸ್ವಲ್ಪ ಕಾಲ ಕಾಣಿಸಿ ಒಳಕ್ಕೆ ಪುನಃ [illegible] ವರ್ಷಗಳ [illegible] ಕಾಣಿಸಿಕೊಳ್ಳುವುದು

Printed and Published by the Rev H Gulliford, Proprietor and Manager, Wesleyan Mission Press, Mysore 4/11 1909

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ನವಂಬರ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೨೮

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ಯವಾದ ಗುಣಕಾರಿಯು [30 37]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆನೋವು, ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮುಖರು ಸಾರಿ ಹಾಕಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸಾ ಮಿಶ್ರಣ	೨-೦-೦
ಬೇಳುಕಡತದ ಮದ್ದು	೦-೮-೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುಡಿ ಬೆಳೆಗೆ	೦-೮-೦
ಗುಲಾಬಿ ಪತ್ರೆ—ಗುಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಕಜ್ಜಿ ಮುಲಾಮು—ಮಕ್ಕಳ ಕಜ್ಜಿಗೆ	೦-೩-೦
ಕೇಶವರ್ಧಿನೀ ತೈಲ—ಕೂದಲು ಬೆಳೆಗೆ	೧-೦-೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 45

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆ ಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಕುಚ್ಚುಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ರೇಷ್ಮೆ ಕುಚ್ಚುಯುಳ್ಳ ಟೋಪಿಗಳು ರೂ ೨

ಜಾಲರ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ದೀಪಾವಳಿಗೆಂದು ಬಹುಮಾನ

75-2

ಈ ಕೆಳಗೆ ವಿವರಿಸಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ನವೆಂಬರ್ ಆಖೈರ್‌ವರೆಗೆ ಮಾತ್ರ ವಿ ಪಿ ಛಾರ್ಜು ಅಲಾಹಿದಾ

ನಿರುಪಮಾ—ಹೊಸನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಹೆಂಡಕುಡುಕರ ಅವ್ಯವಸ್ಥೆ, ಕಳ್ಳರ ಪರಿಣಾಮ ಇವುಗಳನ್ನು ತೋರ್ಪಡಿಸಿ ತಿದ್ದುವುದು ಅಂದವಾದ ಮುದ್ರಣ ಸೊಗಸಾದ ದಪ್ಪಕಾಗದ ಕ್ರಯ ರೂ ೦ ೧೨-೦

ಉತ್ಪಲಕುಮಾರಿ— ಇದೊಂದು ಹೊಸ ನಾಟಕ ಘೋರಸ್ ನಾಟಕಗಳನ್ನು ನೋಡುವುದು ಶೃಂಗಾರದರ್ಪೂ ಮಧುರರಸವೂ ಇದರಲ್ಲಿ ಪ್ರಾಮುಖ್ಯವನ್ನು ಹೊಂದಿರುವವು ಸತ್ಸಂಗದುಸ್ಸಂಗಗಳ ತಾರತಮ್ಯವನ್ನು ಬೋಧಿಸುವ ಈ ಪುಸ್ತಕದ ಬೆಲೆ ರೂ ೦ ೮-೦

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುಯವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ಋತುಮತಿಯರಾಗುವ ಮೊದಲ್ಗೊಂಡು ಗರ್ಭಿಣಿಯರ ಸ್ಥಿತಿ, ಪ್ರಸವಾವಸ್ಥೆ, ಬಾಣಂತಿತನ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅದರ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟಿರುವದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ ರೂ ೦-೧೨-೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು, ಆರತಿಯೆತ್ತುವ ಹಾಡು, ಬೀಗರಹಾಡು, ಬಾಗಿಲುತೆರೆಯುವಹಾಡು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ "ಬಾಲಿಕಾಗೀತಮುಕ್ತಾಕಲಾಪ" ದ ಮಟ್ಟುಗಳನ್ನೇ ಅನುಸರಿಸಿರುವುದು ಕ್ರಯ ರೂ ೦-೪-೦

ಇದಲ್ಲದೆ "ಪ್ರಹಸನಚತುಷ್ಟಯ" ಎಂಬ ನಾಲ್ಕು ನಕಲಿಯನ್ನುಳ್ಳ ಪುಸ್ತಕ (೦-೪-೦), "ಅಸಹಾಯಶೂರಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ (೦-೨-೬), "ಸತ್ಯಸಂಜೀವನಿ" ಎಂಬ ಸೊಗಸಾದ ಕಲ್ಪಿತಕಥೆ (೦-೬-೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ಣಾಟಕಚಂದ್ರಿಕೆ, ಮೈಸೂರು

'ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
" " ೬ " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪುಸ್ತಕಗಳು

70-8

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦ ಇಂಗ್ಲಿಷ್ ಭಾಷೆಯನ್ನು ಓದಲೂ, ಬರೆಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧-೨ ತಿಂಗಳೊಳಗಾಗಿ ತಿಳಿಸಿ ತಾನಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೮-೦

ಪಿ ರಾಮಾಚಾರ್ಯ ವಿಳಾಸ —ಬಿ ಕೆ ಮೂರ್ತಿ ಕಂಪೆನಿ
ನಂ ೧೫ ಒಂದನೆ ಬೀದಿ ಸಿದ್ದೀಕಟ್ಟೆ ಒಕ್ಕಲೆರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕಥಾ ಸಂಗ್ರಹ ಕ್ರಯ ೧—೮—೦ ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್‌ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾನಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೬—೮—೦

ವಿಳಾಸ — ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲೆ
ಒಕ್ಕಲೆರ್ ಪೋಸ್ಟ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 44

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಳ್ಳ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೧೪ ಆಣೆ ವರಿವಿಗೂ ಚೆಲ್ಲರೆಯಾಗಿ ಜಗಟೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 25

ತಲೆನೋವು, ವಾಯುನೋವು, ಸೆಳತ, ಗಂಟಿನೋವು ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು —ಇವುಗಳೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರಿಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರಿಕ್ಷೆಮಾಡಿದವರೆಲ್ಲಾ ಅದನ್ನು ೦ ಗಂಟೆಗೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ಗೋಪಿಸ ಮೂಲಸ್ಥಾನವನ್ನು ಹಿಡಿದು ಆದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ಒಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜ್ ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜೆ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್ ಪೀಟರ್ಸನ್

೩೨, ವೇದಮುಲಪಿಳ್ಳೆ ಬೀದಿ, ಪಾಂಪೇರಿ, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 39

೧ ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ವಾತ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಬಾಯಿ ರುಚಿಯನ್ನು ಕೊಡುವ, ನೀರು ಹಸಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಪಚ್ಚಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವೂ, ಔಷಧದ ಸಂಗಡಲೇ ಇರುತ್ತದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಎಫ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್ ಮೈಸೂರು

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ—(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೀಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರಹಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಿಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-45]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಜ್ವರಹರಿ. 18 41



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚೆಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ ರೂ ೨—೧೨ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂಕಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತವೆ ಕ್ರಯದ ದರವು ,, ಜ್ವರಹರಿ " ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂಕಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಿಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

4 45



ಬೆನ್ನು ಬಿಗಿದ ನೋವು, ಪಕ್ಕಗಳಲ್ಲಿ ಆಗುವ ನೋವು, ಮಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು— ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಮಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದಲ್ಲ

ಇದು ಎಲ್ಲಿಯೂ ವಿಕ್ರಯವಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ನಿಮಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ಕೇಳಿದಾ —ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ? ' ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ನಾಳಿನ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದು ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಟ್ಟಿಕೊಂಡು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ, ಗಾಬರಿ ಅಶಕ್ತಿ, ಎದೆಯು ತಲ್ಲಣಿಸುವುದು, ಶಲಿತ ಗುಲ್ಮವು, ತಲೆನೋವು, ಹೊಟ್ಟೆಯುಬ್ಬರ, ಮುಳೆಗಿನ ಹೊಟ್ಟೆ ಶೀಘ್ರ ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [67-11]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್. ಪಿ ಓ ಬಾಕ್ಸ್ ೩೦ ಬೊಂಬಾಯಿ —ಇವರಲ್ಲಿ ದೊರೆಯುವುದು

ಸಂಜೀವಿನಿ ಔಷಧಾಲಯ, ಮೈಸೂರು.

23 40

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೩ ರೂಪಾಯಿ

ಸಂಜೀವಿನಿ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ತ್ರಿದೋಷ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳನ್ನೂ ಕೂಡಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿಸಾಮರ್ಥ್ಯವನ್ನೂ ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬಿಲ್ಲೆ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜೆಂಟರುಗಳೂ ಬೇಕು ಅರ್ಜಿಗಳ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ತಂದೆತಾಯಿಗಳ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಬೈಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION. 6 45

(ಸ್ಕಾಟ್ಸ್ ಇಮಲ್ಷನ್)

ಎಂಬ ಜೀವನಾ ಔಷಧವನ್ನು ಕೊಡಬೇಕು

ಇದನ್ನು ಕೊಡುವುದರಿಂದ ಕೆಲವು ದಿನಗಳಲ್ಲಿ ಬಹಳ ದೊಡ್ಡ ವಿಶ್ವಾಸವನ್ನು ಕೊಡುವದು

ಅವನು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಬಡ್ಡಿಕೆ ಬೆಳೆಯುವನು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧವ್ಯಾಪಾರಿಗಳಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಹಿಡಿಯುವ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ತುಮಕೂರು ಮುನ್ಸಿಫ್ ಕೋರ್ಟಿನಿಂದ.

ನೋಟೀಸು.

ಈ ಕೋರ್ಟಿನ ೧೯೦೯—೧೦ ನೇ ಅಸಲ್ ೭೧೬ ನೇ ನಂಬರು ಮೊಕದ್ದಮೆಯಲ್ಲಿ ಫಿರ್ಯಾದಿರು ತಾ ನೊಣವಿನಕೆರೆ ಸ್ಥಳದ ವೀರಶೈವ ಮಠದ ಗುರುಚನ್ನಬಸಪ್ಪ ವಗೈರೆ ೬ ಇಸಮುಗಳು ಡಿಟೋ ನೊಣವಿನಕೆರೆ ಸ್ಥಳದ ದರೋಗ ಕೃಷ್ಣಯ್ಯಂಗಾರ್ ವಗೈರೆ ೭೩ ಇಸಮುಗಳ ಮೇಲೆ ಒಂದು ದಾವೆ ದಾಖಲ್‌ಮಾಡಿರುತ್ತಾರೆ ಸದರಿ ದಾವೆಯಲ್ಲಿ ವಾದಿಗಳು ತಮ್ಮ ಮಠಸ್ಥರ ಮನೆಗಳಲ್ಲಿ ಲಗ್ನ ಮತ್ತು ಇತರ ಶುಭಾಶುಭ ಕಾಲಗಳಲ್ಲಿ ಹಗಲು ದೀವಟಿಗಳು ನಡೆಸತಕ್ಕಂಥ ಛತ್ರವನ್ನು ಹಿಡಿಸಿಕೊಂಡು ಉತ್ಸವಾದಿಗಳು ಮತ್ತು ದೇವತಾ ಕಾರ್ಯಗಳು ಸಹಾ ಸರ್ಕಾರಿ ರಸ್ತೆಗಳಲ್ಲಿ ನಡಿಸತಕ್ಕ ಹಕ್ಕು ಇದೆ ಎಂತಲೂ, ಪ್ರತಿವಾದಿಗಳೇ ಆಗಲಿ ಇತರರೇ ಆಗಲಿ ಇವರುಗಳಿಗೆ ಅಡ್ಡಿ ಮಾಡತಕ್ಕ ಹಕ್ಕು ಇಲ್ಲವೆಂತಲೂ ತೀರ್ಮಾನಿಸಬೇಕೆಂದು ಪ್ರಾರ್ಥಿಸುತ್ತಾರೆ ಇದ್ದರಿಂದ ಸಿವಿಲ್ ಪ್ರೊಸಿಡ್ಯೂರ್ ಕೋಡ್ ೩೦ ನೇ ಸೆಕ್ಷನ್ ಮೇರೆಗೆ ತಿಳಿಯಪಡಿಸುವದೇನಂದರೆ - ಮೇಲ್ಕಂಡ ಮೊಕದ್ದಮೆಯಲ್ಲಿ ಕಕ್ಷಿಗಾರರಾಗಿ ಸೇರುವದಕ್ಕೆ ಇಷ್ಟವುಳ್ಳವರು ಕೋರ್ಟಿನ ರೂಬರೂಬು ೧೯೦೯ ನೇ ಡಿಸೆಂಬರು ೧೦ ನೇ ತಾರೀಖಿಗೆ ದಿವಿ ೧೧ ಘಂಟೆಗೆ ಹಾಜರಾಗತಕ್ಕದ್ದು [76-1]

Tumkur, G SATTEYAJI RAO,
Dated 6th Nov., 1909 Munsiff

ಹಿಂದುಸ್ಥಾನದಲ್ಲಿ ಕ್ರಿಕೆಟ್ ಎಂಬ ಚೆಂಡಿನ ಆಟದಲ್ಲಿ ಗಟ್ಟಿಗರೆನಿಸಿಕೊಂಡಿರುವ ದೇಶೀಯ ಯೌವನಸ್ಥರನ್ನು ಕರೆದು ೧೯೧೧ನೇ ಇಸವಿಯಲ್ಲಿ ವಿಲಾಯತಿ ಮೊದಲಾದ ಪರದೇಶಗಳಿಗೆ ಕಳುಹಿ ಅಲ್ಲಿನ ಆಟಗಾರರ ಮೇಲೆ ಪಂದ್ಯಗಳನ್ನು ನಡಿಸುವುದಕ್ಕಾಗಿ ಮೆ, ಫ್ರಾಂಜಿ ಪಟೇಲ್ ಎಂಬ ಪಾರ್ಸಿ ದೊಡ್ಡ ಮನುಷ್ಯನು ಬೊಂಬಾಯಿನಲ್ಲಿ ಪ್ರಯತ್ನ ಪಡುತ್ತಿದಾನೆ ಈ ಅಭಿಪ್ರಾಯವನ್ನು ಪುಷ್ಟೀಕರಿಸಿ ನವಾನಗರದ ಮಹಾರಾಜರವರು ಅವರ ಪ್ರಯಾಣದ ಖರ್ಚಿಗಾಗಿ ೧,೦೦೦ ರೂಪಾಯಿ ಕಳುಹಿಸಿದಾರೆ ಈ ಫಂಡಿಗೆ ಇತರರೂ ಹಣವನ್ನು ಚಂದಾ ಕೊಡುತ್ತಿದಾರೆ

ಕ್ಷಾಮನಿವಾರಣೆಯ ಕಾರ್ಯಗಳು.

[illegible] ಅಕ್ಟೋಬರ ತಾ [illegible] ಕ್ಕೆ [illegible] ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುತಕ್ಕವರ ಸಂಖ್ಯೆ: ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಾರ್ಥ ಸಹಾಯ ಪಡೆವ ಜನರು
ಬೆಂಗಳೂರು				.	
ಕೋಲಾರ	12	14	.	.	
ತುಮಕೂರು				.	..
ಮೈಸೂರು		.		..	
ಹಾಸನ	2			11	
ಶಿವಮೊಗ್ಗ		.	.	.	.
ಕಡೂರು	.	..	.	..	.
ಚಿತ್ರದುರ್ಗ				..	
ಮಾರಿಕಣಿವೆ		.	..	.	.
ಸ್ಯಾಸಿಟಿಂ	.	.	...	..	.
ಒಟ್ಟು	14	14	..	11	.

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಶ್ವೀಜ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಕಾರ್ತೀಕ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ॥

೧೯೦೯ ನೇ ನವೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ತುಲಾ ಮಾಸ
12	ಶುಕ್ರ *	ಅಮಾವಾಸ್ಯ	60 0	ಸ್ವಾ	26-5	27
13	ಶನಿವಾ §	ಅಮಾವಾಸ್ಯ	1-50	ವಿ	30-31	28
14	ರವಿವಾ †	ಪಾಡ್ಯಮಿ	3 45	ಅ	35-10	29
15	ಚಂದ್ರ	ಬಿದಿಗೆ	7-20	ಜ್ಯೆ	38-22	30
16	ಕುಜ	ತದಿಗೆ	8-56	ಮೂ	40-54	1
17	ಬುಧ	ಚೌತಿ	9 2	ಪೂಷಾ	42 12	2
18	ಗುರು	ಪಂಚಮಿ	7-58	ಉಷಾ	41-2	3

* ಕೇದಾರೇಶ್ವರವ್ರತ, ಧನಲಕ್ಷ್ಮೀಪೂಜಾ, ಸರ್ವತ್ರ ಅಮಾವಾಸ್ಯ

§ ದೀಪಾವಳಿ ಬಲೀಂದ್ರಪೂಜಾ, ಚಂದ್ರದೀಪದಾನಂ, ಕಾಮಧೇನು ಪೂಜಾ

† ಚಂದ್ರೋದಯ, ಯಮದ್ವಿತೀಯ, ಬಲ್ಯುತ್ಸವ

ಜಲಕಾಚ್ ಚಂ ೧ ಕಾರ್ತೀಕ ಸೋಮವಾರ

ಪೇಟೆ ಧಾರಣೆ

ವಿವರ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫-೦-೦	೧೪-೮-೦
ಕೆಂಬೂತಿ ಅಕ್ಕಿ ಅವಲ್	...	೧೪-೮-೦	೧೩-೮-೦
,, ದುಯಂ	..	೧೪-೦-೦	೧೩-೦-೦
ಜಾಪಾನೀ ಅಕ್ಕಿ	..	೧೪-೦-೦	೧೫-೦-೦
ಸಣ್ಣಕ್ಕಿ ಅವಲ್	...	೧೭-೦-೦	೧೬-೮-೦
,, ದುಯಂ	...	೧೬-೦-೦	೧೫-೦-೦
ತೊಗರೀ ಬೇಳೆ ಪಲ್ಲಾ ೧ ಕ್ಕೆ	...	೧೫-೮-೦	೧೬-೦-೦
,, ದುಯಂ	..	೧೫-೦-೦	೧೫-೦-೦
ಹೈಕ್ ರಾಗಿ ಪಲ್ಲಾ ೧ ಕ್ಕೆ	...	೯-೦-೦	೮-೦-೦
ರಾಗಿ	...	೮-೧೨-೦	೭-೮-೦
ಜೋಳ	..	೭-೧೨-೦	೮-೦-೦
ಹಲಸಂದೆ ಪಲ್ಲಾ ೧ ಕ್ಕೆ	..	೧೨-೦-೦	೧೨-೦-೦
ಬಿಳೀ ಅವರೆ	...	೧೩-೮-೦	೧೫-೦-೦
ಹೆಸರು	...	೧೩-೦-೦	೧೦-೮-೦
ಉದ್ದು		೧೪-೪-೦	೧೨-೮-೦
ಕಡಲೆ	..	೧೪-೪-೦	೧೦-೦-೦
ಎಳ್ಳು ಸೇ ೧೨೭ ಕ್ಕೆ	.	೧೫-೦-೦	೧೪-೦-೦
ಹುರುಳಿ	...	೧೩-೦-೦	೧೨-೮-೦
ಹರಳು ೧೨೭ ಸೇರಿಗೆ	.	೧೪-೦-೦	೧೨-೮-೦
ಸೀಗೇಕಾಯಿ ಮಣ ೧ ಕ್ಕೆ	...	೨-೮-೦	೨-೨-೦
ಮೆಣಸಿನಕಾಯಿ	...	೬-೦-೦	೩-೮-೦
,, ದುಯಂ	..	೫-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು		೮-೮-೦	ಮ ೨-೧೦-೦
ಒಣ್ಣೆಕ್ಕೆ ಮಣ ೧ ಕ್ಕೆ	.	೫-೮-೦	೪-೪-೦
ಹರಳೆಣ್ಣೆ ,,	...	೫-೮-೦	೪-೧೨-೦
ಕೊತ್ತುಂಬರಿ ಪಲ್ಲಾ ೧ ಕ್ಕೆ	..	೮-೮-೦	೯-೪-೦
ಉಪ್ಪು ,,	.	೬-೮-೦	೫-೧೨-೦
ಹುಣಸೇ ಹಣ್ಣು	..	೧-೧೨-೦	೧-೧೨-೦
,, ಹುಳೀದು	..	೧-೮-೦	೧-೮-೦
ತುಪ್ಪ ಮಣ ೧ ಕ್ಕೆ	...	೧೬-೮-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	..	೪-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	.	೫-೦-೦	೬-೦-೦
ಅಡಕೇಕಾಯಿ ಮಣ ೧ ಕ್ಕೆ	..	೦-೮-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ	...	೧-೦-೦	೦-೧೨-೦
ಚಿನ್ನ (ಪೌನ್) ಕೆಂಪು	...	೧೫-೯-೦	೧೫-೮-೦
,, ,, ಪಸಿವು	.	೧೬-೦-೦	೧೫-೧೨-೦
,, ,, ಗಟ್ಟಿ ತೊಲ ೧ ಕ್ಕೆ	...	೨೪-೮-೦	೨೪-೭-೦
ಕೈ ಗಟ್ಟಿ ತೊಲ ೧೦೦ ಕ್ಕೆ ...	..	೬೭-೪-೦	೬೪-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

15—10—1909 ರಿಂದ 22—10—1909 ರ ವರೆಗೆ

ಸ್ಥಳ	ಪ್ಲೇಗ್: ಬಂದದ್ದು	ಸತ್ತದ್ದು	ಕಾಲರಾ: ಬಂದದ್ದು	ಸತ್ತದ್ದು
ಬೆಂಗಳೂರು ಪಟ್ಟಣ	6	5	1	0
ಮೈಸೂರು ,,	115	[illegible]	0	0
ಬೆಂಗಳೂರು ಡಿಸ್ಟ್ರಿಕ್ಟು	[illegible]	[illegible]	0	0
ಮೈಸೂರು ,,	39	31	13	9
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	1	0	0
ಚಿತ್ರದುರ್ಗ ,,	0	[illegible]	0	0
ಕಡೂರ್	9	5	0	0
ಶಿವಮೊಗ್ಗ ,,	0	0	0	0
ಜುಮ್ಲಾ	189	133	13	9

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ

ಬೆಂಗಳೂರು, ತಾ ೬ ನೇ ಶನಿವಾರ —ಈ ದಿನದ ಕೂಟವು ಬಹಳ ವಿಮರ್ಶೆಯಾಗಿ ನಡೆಯಿತು. ಅನೇಕ ಸ್ತ್ರೀಯರು, ದೊಡ್ಡವರು ಬಿಡುವಾಗಿ ಬಂದು ಇದ್ದರು. ನೀತಿಯುಕ್ತವಾದ ಪ್ರಶ್ನೋತ್ತರಗಳು ಬೆಳೆದ ನಂತರ ಶ್ರೀಮತಿ ಬಿ ಲಕ್ಷ್ಮಮ್ಮನವರು ತಾವು ಸ್ವಂತವಾಗಿ ಹೇಳತಕ್ಕ ಉಪನ್ಯಾಸಕ್ಕಿಂತಲೂ ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕ ಪ್ರಾಜ್ಞರಿಂದ ಬರೆಯಲ್ಪಟ್ಟ ಉಪನ್ಯಾಸವನ್ನು ಓದಿ ತಿಳಿಸತಕ್ಕದ್ದು ಉಚಿತವೆಂದು ಸೂಚಿಸಿ, ಮೊಳಕಾಲ್ಮೂರು ವಿಷ್ಣು [illegible] ನವಾಜನ ಮ॥ ವೆಂಕಟರಾಯರಿಂದ ಮಾಡಲ್ಪಟ್ಟ ಒಂದು ಉಪನ್ಯಾಸವನ್ನು ಓದಿದರು. ಅದರ ಸಾರಾಂಶವೇನೆಂದರೆ —

ರೋಗವೆಂಬುದೇನು ? ವಿಪತ್ತುಗಳು ಯಾವವು ? ಇವುಗಳ ರಹಸ್ಯವೇನು ? ಎಂದು ವಿಚಾರಿಸುವ ಪಕ್ಷಕ್ಕೆ ಇವುಗಳಲ್ಲಿ ಅನೇಕವು ನಮ್ಮ ಸ್ವಯಂ ಕೃತಗಳಾದವುಗಳೇ ಹೊರತು ಅನ್ಯಥಾ ಅಲ್ಲ. ವಿಧಿ ಎಂಬುದು ಸುಳ್ಳು. ಅದಕ್ಕೆ ಸರ್ವೇಶ್ವರನನ್ನು ಗುರಿಮಾಡತಕ್ಕದ್ದು ಯುಕ್ತವಲ್ಲ. ನಾವು ಸನ್ಮಾರ್ಗ ಪ್ರವರ್ತಕರಾಗಿ, ಮಾಡತಕ್ಕ ಕರ್ಮವನ್ನು ಮಾಡದೆ, ಮಾಡಬಾರದ ದುಷ್ಕರ್ಮವನ್ನು ಮಾಡಿ ಸುಕರ್ಮವೆಂದು ಎಣಿಸಿದರೆ ಅದು ಯಾರ ತಪ್ಪು ? ಪರೋಪಕಾರ ಮಾಡತಕ್ಕದ್ದೇ ಮುಖ್ಯವಾದ ಧರ್ಮ. ಮಾಡದೆ ಹೋಗತಕ್ಕದ್ದೇ ರೋಗ, ವಿಪತ್ತು ಮೊದಲಾದವುಗಳು. ಸತ್ಪುರುಷನ ಸಹವಾಸವೇ ಸುಕರ್ಮ, ದುಷ್ಟರ ಸಹವಾಸವೇ ದುಷ್ಕರ್ಮಗಳು. ಹರಸಿಂದ, ದೂಷಣೆ, ಇವೇ ಸಾಂಕ್ರಾಮಿಕ ರೋಗಗಳಂತೆ ವೃದ್ಧಿಯಾಗತಕ್ಕವು. ಇವುಗಳ ತ್ಯಜನೇ ಸತ್ಪ್ರವರ್ತನೆಗೆ ಸಹಕಾರವಾದದ್ದು ಎಂಬದು. ಈ ಅಭಿಪ್ರಾಯಗಳೇ ಈ ಉಪನ್ಯಾಸದ ಮುಖ್ಯ ತಾತ್ಪರ್ಯಗಳಾಗಿದ್ದವು. ಉಪನ್ಯಾಸದ ಹಿತೋಕ್ತಿಗಳಿಂದ ಎಲ್ಲರೂ ಸಂತೋಷಪಟ್ಟರು.

ಕಾರ್ಯದರ್ಶಿಯವರಿಂದ ಅಕ್ಟೋಬರು ತಿಂಗಳ ಜಮಾ ಖರ್ಚು ಓದಲ್ಪಟ್ಟಿತು. ಗತಿಸಿದ ಶ್ರೀಮಂತ ಡಾಸ್ ರವರ ಜ್ಞಾಪಕಾರ್ಥವಾದ ಫಂಡಿಗೆ ಸಮಾಜದವರಿಂದ ಕಳುಹಿಸಲ್ಪಟ್ಟ ಚಂದಾ ವಿವರವನ್ನು ತಿಳಿಸಿದರು. ಮತ್ತು ಸಮಾಜಕ್ಕೆ ಉಚಿತಾರ್ಥ ಪುಸ್ತಕಗಳನ್ನು ಕೊಟ್ಟು ಕಳುಹಿಸಿದ್ದ ಕೆಲವು ದೊಡ್ಡಮನುಷ್ಯರುಗಳಿಗೆ ಮೆಂಬರುಗಳ ಕೃತಜ್ಞತೆಯನ್ನೂ ಸಹ ತಿಳಿಯಪಡಿಸಿದರು. ಸಮಾಜದ ಮೆಂಬರಾದ ಶ್ರೀಮತಿ ವೈ ಕೆ ನರಸಮ್ಮನವರಿಗೆ ಪ್ರಾಪ್ತವಾದ ಪತಿವಿಯೋಗವನ್ನು ಕೇಳಲು ಮೆಂಬರುಗಳೆಲ್ಲರೂ ಬಹಳ ಪಶ್ಚಾತ್ತಾಪವುಳ್ಳವರಾಗಿರುತ್ತಾರೆಂದು ಕಾರ್ಯದರ್ಶಿಯವರು ಸಭೆಯಲ್ಲಿ ತಿಳಿಸಿದರು.

ಬರುವ ಕೂಟವು ೧೩ ನೇ ತಾ ಶನಿವಾರದ ದಿನ ಪದ್ಧತಿಯಂತೆ ನಡೆಸಲ್ಪಡುವುದು. ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ಬರಬೇಕಾಗಿ ಸೂಚಿಸಲ್ಪಟ್ಟಿರುತ್ತೆ.

ಆರೋಗ್ಯವಸ್ತುಪ್ರದರ್ಶನವು

ಬಹುಮಾನಗಳ ವಿನಿಯೋಗ ಸಭೆಯು

ಶ್ರೀಮನ್ ಯುವರಾಜರವರು ದಯಮಾಡಿದ್ದುದು

ರಾಜಧಾನಿಯಲ್ಲಿ ಈ ಸಲ ನವರಾತ್ರಿ ಉತ್ಸವಗಳಿಗೆ ಸಂಬಂಧಪಟ್ಟಂತೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಆರೋಗ್ಯ ವಸ್ತುಪ್ರದರ್ಶನವನ್ನು ನಡಿಸಿದ್ದಲ್ಲದೆ, ಆರೋಗ್ಯಾಭಿವೃದ್ಧಿಗೆ ಸಹಕಾರಿಗಳಾದ ಅಂಗಸಾಧನೆ ಕಸರತ್ತು ಮೊದಲಾದ ಸಾಹಸ ಕಾರ್ಯಗಳನ್ನು ಪ್ರಜೆಗಳಲ್ಲಿ ಪ್ರೋತ್ಸಾಹಪಡಿಸುವುದಕ್ಕಾಗಿ ಆ ಪ್ರದರ್ಶನದ ಸೆಕ್ರೆಟರಿಯವರಾದ ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮ ಸಿ ಪಲ್ಪು ಯವರು ಹಲವು ಇಂಗ್ಲಿಷ್ ಮತ್ತು ದೇಶೀಯ ಪಂದ್ಯಗಳನ್ನೂ ಆಟಗಳನ್ನೂ ಕಲ್ಪಿಸಿ ನಡಿಸಿದರು. ಈ ಪದ್ಯಗಳಲ್ಲಿ ಗೆದ್ದ ಗಂಡಸರು ಹೆಂಗಸರಿಗೂ ಗಂಡು ಹೆಣ್ಣು ಮಕ್ಕಳಿಗೂ ಕಳೆದ ಶನಿವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ಬಹುಮಾನಗಳು ಕೊಡಲ್ಪಟ್ಟವು. ಇದಕ್ಕಾಗಿ ಬಂಗಲೆಯನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಅರಸುಮಕ್ಕಳೂ, ಅಧಿಕಾರಿಗಳೂ, ಯೂರೋಪಿಯನ್ ಮತ್ತು ದೇಶೀಯ ದೊಡ್ಡಮನುಷ್ಯರೂ, ದೊರೆಸಾನಿಗಳೂ ಹಿಂದೂ ಸ್ತ್ರೀಯರೂ ಸಭೆಯನ್ನಲಂಕರಿಸಿದ್ದರು. ಅಲ್ಲದೆ ನೂರಾರುಮಂದಿ ಬಾಲಕರೂ, ಬಾಲಕಿಯರೂ ಒಳಗೂ ಉಪ್ಪರಿಗೆಯ ಮೇಲೂ ಸೇರಿದ್ದರು. ಬೆಳಿಗ್ಗೆ ೮ ಘಂಟೆಗೆ ಸರಿಯಾಗಿ ಶ್ರೀಮನ್ ಯುವರಾಜರವರು, ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ ಆರ್ ಎಚ್ ಕ್ಯಾಂಬಲ್‌ಯವರೊಡನೆ ಜೋಡಿಕುದುರೆ ಸಾರೋಟಿನಲ್ಲಿ ಕಮಿಷನರ್ ಬಾರ್ ಬ್ಯಾಂಡಿನವರು ವಾದ್ಯ ನುಡಿಸುತ್ತಿರುವಲ್ಲಿ ಟೌನ್ ಹಾಲಿಗೆ ದಯಮಾಡಿದರು. ಬಾಗಿಲ ಬಳಿ ಡೆಪ್ಯುಟಿ ಕಮಿಷನರಾದ ಸರ್ದಾರ್ ಎಂ ಕಾಂತರಾಜೇ ಅರಸಿನವರೂ, ಸೆಕ್ರೆಟರಿ ಡಾ॥ ಪಿ ಪಲ್ಪು ಯವರೂ, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ ಎಂ ಜಿ ಕೃಷ್ಣಸ್ವಾಮಿ ರಾಯರೂ, ಕಾದಿದ್ದು ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ, ಸಭಾಮಂದಿರದೊಳಕ್ಕೆ ಕರೆದುಕೊಂಡು ಹೋಗಿ ಪ್ಲಾಟ್‌ಫಾರದ ಮೇಲೆ ಹಾಕಿದ್ದ ಬೆಳ್ಳಿಯ ಪೀಠದಲ್ಲಿ ಕುಳ್ಳಿರಿಸಿದರು. ಕುಮಾರಿ ಮ ಬಿ ಕೃಷ್ಣಪ್ಪನವರು ಎರಡು ಮೂರು ಗೀತಗಳನ್ನು ಬಹು ಮನೋಹರವಾಗಿ ಹಾಡಿದರು. ಬಳಿಕ ತೆರೆಯ ಹಿಂಭಾಗದಲ್ಲಿ ಹಾರ್ಮೋನಿಯಂ ವಾದ್ಯದಲ್ಲಿ ಒಂದೆರಡು ಹಾಡುಗಳು ತುಂಬಾ ಅಹ್ಲಾದಕರವಾಗಿ ನುಡಿಸಲ್ಪಟ್ಟವು.

ಡಾಕ್ಟರ್ ಪಿ. ಪಲ್ಪುರವರು ಓದಿದ ರಿಪೋರ್ಟು.

ತರುವಾಯ ಆರೋಗ್ಯ ವಸ್ತು ಪ್ರದರ್ಶನ ಶಾಲಾ ಸೆಕ್ರೆಟರಿಯವರಾದ ಡಾ॥ ಪಲ್ಪುಯವರು ಶ್ರೀಮನ್ ಯುವರಾಜರವರನ್ನೂ ಸಭಾಸದರನ್ನೂ ಕುರಿತು ಓದಿ ಹೇಳಿದ ರಿಪೋರ್ಟಿನ ಮುಖ್ಯಾಭಿಪ್ರಾಯವೇನೆಂದರೆ —

ಹೋದ ವರುಷದಂತೆ ಈ ವರುಷದಲ್ಲೂ ಆರೋಗ್ಯ ವಸ್ತು ಪ್ರದರ್ಶನದ ಅಂಗವಾಗಿ ಹಲವು ಸಾಮರ್ಥ್ಯ ಕಾರ್ಯಗಳ ಪಂದ್ಯಗಳನ್ನೂ ಆಟಗಳನ್ನೂ ನಡಿಸಿದೆವು. ಅಲ್ಲದೆ ಅದೇ ಉದ್ದೇಶದಿಂದ ಅನೇಕ ಉಪನ್ಯಾಸಗಳು ಮಾಡಲ್ಪಟ್ಟವು. ಇವುಗಳಲ್ಲಿ ಅನೇಕರು ಅಭಿರುಚಿಪಟ್ಟು ಸೇರಿ ಇರುತ್ತಾರೆ. ಒಂದು ಕಮಿಟಿಯು ಏರ್ಪಾಡಾಯಿತು. ಈ ಕಮಿಟಿಯವರು ಅನುಕೂಲವಾದ ಸ್ಥಳಗಳಲ್ಲಿ ನಾನಾ ಇಂಗ್ಲಿಷ್ ಮತ್ತು ದೇಶೀಯ ಕಸರತ್ತುಗಳನ್ನೂ ಪಂದ್ಯಗಳನ್ನೂ ನಡಿಸಿರುತ್ತಾರೆ. ಇವುಗಳನ್ನು ನಡಿಸುವುದು ಶ್ರಮಸಾಧ್ಯವಾಗಿದ್ದರೂ ಮೆಂಬರುಗಳು ಆಯಾ ಪಂದ್ಯಗಳನ್ನು ತೃಪ್ತಿಕರವಾಗಿ ನಡಿಸುವರು. ಸರ್ದಾರ್ ಎಂ ಗೋಪಾಲರಾಜೇ ಅರಸಿನವರು, ರೆವ್ ಮ ಆರ್ ಡಬ್ಲ್ಯು ಬೂಷ್‌ಯವರು, ಮೆ॥ ಗಳಾದ ಬಿ ಕೃಷ್ಣರಾಯರು, ಎಲ್ ಶ್ರೀಕಂಠಯ್ಯನವರು, ಸೌ॥ ರುಕ್ಮಿಣಮ್ಮನವರು, ಸೌ॥ ಶ್ರೀರಂಗಮ್ಮನವರು, ಸೌ॥ ಸುಬ್ಬಮ್ಮನವರು, ಮಿಸ್ ಇ ಎಫ್ ಸ್ಮಿತ್ ಯವರು, ಇವರೆಲ್ಲಾ ಮುಂದಾಗಿ ನಿಂತು ನಮ್ಮ ಉದ್ದೇಶವನ್ನು ಸಾರ್ಥಕಪಡಿಸಿರುತ್ತಾರಾದದ್ದರಿಂದ ಅವರನ್ನು ಈ ಸಂದರ್ಭದಲ್ಲಿ ವಂದಿಸುವೆವು. ಏರ್ಪಾಡಾಗಿದ್ದ ಇಪ್ಪತ್ತು ಪಂದ್ಯದ ಆಟಗಳಲ್ಲೂ ಕಸರತ್ತಿನ ಕಾರ್ಯಗಳಲ್ಲೂ ಒಂದು ಮಾತ್ರ ಪೂರೈಸಲಿಲ್ಲ. ಅನಿವಾರ್ಯದ ಪ್ರಯುಕ್ತ ಅದೊಂದನ್ನು ಮಾತ್ರ (ಅಂದರೆ ಕುಸ್ತಿಯನ್ನು) ಮುಂದಕ್ಕೆ ಇಡಬೇಕಾಯಿತು. [ಇದನ್ನು ಮೊನ್ನೆ ಭಾನುವಾರ ಸಾಯಂಕಾಲ ಸರ್ದಾರ್ ಎಂ ಗೋಪಾಲರಾಜೇ ಅರಸಿನವರು ನಿಂತು ಇಲ್ಲಿನ ಮರಿಮಲ್ಲಪ್ಪನವರ ಸ್ಕೂಲ್ ಒಳ ಅಂಗಳದಲ್ಲಿ ಮಾಡಿಸಿ ಪೂರೈಸಿರುತ್ತಾರೆ. ಕುಸ್ತಿಯಲ್ಲಿ ಚಿಕ್ಕಣ್ಣ ಬೋರೈಯ ಎಂಬವರಿಬ್ಬರೂ ಸಮಾನವಾಗಿ ಕುಸ್ತಿ ಮಾಡಿ ಚಿನ್ನದ ಮೆಡಲನ್ನು ಪಡೆಯುವವರಾಗಿರುತ್ತಾರೆ] ಇವು ಈಗ ಪಂದ್ಯಗಳೇ ಮೊದಲಾದವುಗಳಲ್ಲಿ ಗೆದ್ದಿರುವವರಿಗೆ ದಯವಿಟ್ಟು ಬಹುಮಾನಗಳನ್ನು ಹಂಚಿ ಕೊಡಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀಮನ್ ಯುವರಾಜರವರ ಭಾಷಣವು

ಬಳಿಕ ಶ್ರೀಮನ್ ಯುವರಾಜರವರು ಸಭಿಕರನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ,—

ನಾನಾ ತರದ ಅಂಗಸಾಧನೆಗಳನ್ನು ಪ್ರೋತ್ಸಾಹ ಪಡಿಸುವುದಕ್ಕಾಗಿ ದಸರಾ ಆರೋಗ್ಯ ವಸ್ತು ಪ್ರದರ್ಶನ ಶಾಲಾ ಸೆಕ್ರೆಟರಿಯವರೂ ಕಮಿಟಿಯವರೂ ಜನಬಾನದ ಆಟಗಳನ್ನೂ ಪಂದ್ಯಗಳೇ ಮೊದಲಾದವುಗಳನ್ನೂ ನಡಿಸಿರುತ್ತಾರೆನ್ನುವುದನ್ನು ಕೇಳಿ ತುಂಬಾ ಸಂತೋಷಪಡುತ್ತೇನೆ. ಕಾಯಪುಷ್ಟಿಯು ಚೆನ್ನಾದರೆ ಬುದ್ಧಿಯು ಕುಶಲವಾಗುವುದು ಎಂಬ ಶ್ರೇಷ್ಠವಾದ ವಾಕ್ಯವನ್ನು ನಮ್ಮ ಜನರು ಮರೆಯಲ್ಲವೆನ್ನುವುದಕ್ಕೆ ಈ ದಿನದ ಸಭೆಯೇ ದೃಷ್ಟಾಂತವಾಗಿದೆ. ಇದನ್ನು ಚಟುವಟಿಕೆಯುಳ್ಳ ಡಾ॥ ಪಲ್ಪುಯವರು ನಡಿಸಿ ಸಾರ್ಥಕಪಡಿಸಿರುತ್ತಾರೆ. ಅವರೂ ಅವರಿಗೆ ಸಹಾಯಕರಾಗಿ ನಿಂತು ಕಾರ್ಯಗಳನ್ನು ನಡಿಸಿದ ಕಮಿಟಿಯವರೂ ವಂದ್ಯರಾಗಿರುವರು. ಈ ಕಸರತ್ತುಗಳಲ್ಲೂ ಪಂದ್ಯಗಳಲ್ಲೂ ಜಯವನ್ನು ಹೊಂದಿ ಬಹುಮಾನಗಳನ್ನು ಪಡೆಯುವವರ ಕೂಡ ಸಂತೋಷಪಡುತ್ತೇನೆ. ಅವರಿಗೆಲ್ಲಾ ಈ ಸಂದರ್ಭದಲ್ಲಿ ಬಹುಮಾನಗಳನ್ನು ವಿಶೇಷ ಹರುಷದಿಂದ ಹಂಚಿಕೊಡುವೆನು.

ಮೇಲ್ಕಂಡ ಪ್ರಕಾರ ಕೆಲವು ವಾಕ್ಯಗಳನ್ನು ನುಡಿದು ಶ್ರೀಮನ್ ಯುವರಾಜರವರು ತೆಗೆದುಕೊಂಡ ಮೇಲೆ ಡಾ॥ ಪಲ್ಪುಯವರು ಗೆದ್ದ ಹುಡುಗರ, ಹುಡುಗಿಯರ ಗಂಡಸರ, ಹೆಂಗಸರ ಹೆಸರುಗಳನ್ನು ಕ್ರಮವಾಗಿ ಕರೆದರು. ಅವರು ಪೀಠದ ಸಮೀಪಕ್ಕೆ ಬಂದು ಯುವರಾಜರವರ ಹಸ್ತದಿಂದ ಬಹುಮಾನಗಳನ್ನು ಪಡೆದುಕೊಂಡು ವಂದನೆಗಳನ್ನು ಸಲ್ಲಿಸಿ ಹೋದರು.

ಬಹುಮಾನ ಪಡೆದವರು.

ಈ ಪಂದ್ಯ ಮತ್ತು ಆಟಗಳಲ್ಲಿ ಬಹುಮಾನಗಳನ್ನು ಪಡೆದವರ ಪೈಕಿ ಮುಖ್ಯರಾದವರ್ಯಾರೆಂದರೆ,—ಟೆನ್ನಿಸ್ ಚೆಂಡಾಟದಲ್ಲಿ ಮ॥ ಸಿ ದೇವರಾಜೇ ಅರಸಿನವರಿಗೆ ಚಿನ್ನದ ಮೆಡಲು, ಕ್ರಿಕೆಟ್ ಚೆಂಡಾಟದಲ್ಲಿ ಮೈಸೂರು ಕ್ರಿಕೆಟ್ ಕ್ಲಬ್ ಸಂಘಕ್ಕೆ ಬೆಳ್ಳಿಯ ಬಟ್ಟಲು, ಬಾರ್ ಕಂಬದ ಮೇಲೆ ಕಸರತ್ತು ಮಾಡಿದ್ದಕ್ಕೆ ಎಸ್. ನರಹರಿರಾವ್‌ಗೆ ಚಿನ್ನದ ಮೆಡಲು, ಭಾರವನ್ನು ಎತ್ತಿದ್ದಕ್ಕೆ ಬೋರೈಯನಿಗೆ ಚಿನ್ನದ ಮೆಡಲು, ಚಿಕ್ಕಣ್ಣನಿಗೆ ಬೆಳ್ಳಿಯ ಮೆಡಲು, ದೇಶೀಯ ಕಸರತ್ತುಗಳನ್ನು ಮಾಡಿದ್ದರಲ್ಲಿ ಎಂ ಪಿ ಪಾರ್ಥಸಾರಥಿ ಐಯಂಗಾರ್ರಿಗೆ ಚಿನ್ನದ ಮೆಡಲು, ಹೆಂಗುಸರಲ್ಲಿ ನೀರು ಸೇದಿದ್ದಕ್ಕೆ ಸಿಂಗಮ್ಮನಿಗೂ ತಿಮ್ಮಮ್ಮನಿಗೂ ಒಂದೊಂದು ಸೀರೆ ಒಂದೊಂದು ಕುಪ್ಪಸದ ಕಣ, ಬತ್ತ ಕುಟ್ಟುವುದರಲ್ಲಿ ಗೆದ್ದ ಲಕ್ಷ್ಮಮ್ಮನಿಗೂ ಕಲ್ಯಾಣಮ್ಮನಿಗೂ ಒಂದೊಂದು ಸೀರೆ ಒಂದೊಂದು ಕುಪ್ಪಸದ ಕಣ, ಈ ರೀತಿ ಹಂಚಿಕೊಟ್ಟರು. ಇದಲ್ಲದೆ ಗಂಡು ಮತ್ತು ಹೆಣ್ಣು ಮಕ್ಕಳಿಗೆ ರೂಪಾಯಿ ಬಹುಮಾನಗಳೂ, ಛಾಲಿ ಪೆಟ್ಟಿಗೆ ಕನ್ನಡಿ ಮೊದಲಾದ ಉಪಯುಕ್ತ ಪದಾರ್ಥಗಳೂ ದೊರಕಿದವು.

ಕಡೆಯಲ್ಲಿ ಡಾ॥ ಪಲ್ಪುಯವರು ಶ್ರೀಮನ್ ಯುವರಾಜರವರಿಗೆ ಶ್ರೇಷ್ಠವಾದ ದಿಂಡಿನ ಹಾರಾ ಹಾಕಿ, ಸುಂದರವಾದ ತುರಾಯಿಯನ್ನು ಒಪ್ಪಿಸಿ, ಸಂಭ್ರಮವೂ ಸಾರ್ಥಕವೂ ಆದ ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು.

ಹಿಂದುಸ್ಥಾನದ ರಾಜಕೀಯ ವಿಚಾರಗಳಲ್ಲಿ ಗವರ್ನರ್ ಜನರಲ್‌ರವರು ಸ್ಟೇಟ್ ಸೆಕ್ರೆಟರಿಯವರ ಅನುಮತಿಯನ್ನು ಪಡೆದ ಕೆಲವು ಹೊಸ ತಿದ್ದುಗಳನ್ನು ಮಾಡಿರುತ್ತಾರಷ್ಟೆ. ವೈಸ್‌ರಾಯಿಯವರ ಮತ್ತು ಗವರ್ನರುಗಳ ಮಂತ್ರಾಲೋಚನಾ ಸಭೆಗಳಿಗೆ ಹೆಚ್ಚು ಸಂಖ್ಯೆಯ ಹೊಸ ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ ಕೆಲವು ಕ್ರಮಗಳನ್ನು ಗೊತ್ತುಮಾಡಿ ಸ್ಯಾಂಕ್ಷನ್ ಬಗ್ಗೆ ಕಳೆದ ವಾರ ವಿಲಾಯಿತಿಗೆ ಸ್ಟೇಟ್ ಸೆಕ್ರೆಟರಿಯವರ ಬಳಿಗೆ ಕಳುಹಿಸಿದ್ದಾಯಿತು. ಅದು ಇನ್ನೆರಡು ವಾರಗಳೊಳಗಾಗಿ ಅವರ ಸ್ಯಾಂಕ್ಷನ್ ಪಡೆದು ಬರುವುದು. ಕೂಡಲೇ ಆಯಾ ಅಧಿಪತ್ಯದಲ್ಲಿ ಮೆಂಬರುಗಳ ಚುನಾವಣೆಯು ನಡೆದು, ಮುಂದಿನ ವರುಷ ಜನವರಿ ಹೊತ್ತಿಗೆ ಹೊಸ ಕೌನ್‌ಸಿಲ್ಲುಗಳು ಏರ್ಪಡಾಗುವವು. ಈಗ ಐವತ್ತು ಸಂವತ್ಸರಗಳಿಂದ ನಡೆದು ಬಂದ ಕೌನ್‌ಸಿಲ್ಲುಗಳು ಇನ್ನು ಮುಂದೆ ಬದಲಾವಣೆ ಹೊಂದಿ, ಜನವರಿಯಲ್ಲಿ ಕಲ್ಕತ್ತೆಯೊಳಗೆ ಹೊಸ ಕೌನ್‌ಸಿಲ್ಲು ಕೂಡುವುದು.

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ನವಂಬರ್ ತಾ ೧೧ ನೇ ಗುರುವಾರ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಈ ಸಲ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಮಾಡಲ್ಪಟ್ಟ ವಿಷಯಗಳ ಪೈಕಿ ಎರಡು ವಿಚಾರಗಳು ಈ ಸೀಮೆಯೊಳಗಿರತಕ್ಕವರು ಮಾತ್ರವೇ ಅಲ್ಲ, ಇತರ ಕಡೆಗಳಲ್ಲಿರತಕ್ಕವರು ಕೂಡ ಗಮನವಿಟ್ಟು ಪರ್ಯಾಲೋಚಿಸತಕ್ಕವುಗಳಾಗಿರುತ್ತವೆ ವರ್ತಮಾನ ಪತ್ರಿಕೆಗಳ ವಿಚಾರವಾದ ಕಾನೂನಿನ ಚರ್ಚೆಯು ಮೊದಲನೆಯದು, ಮತಾಂತರವನ್ನು ಹೊಂದಿದವರ ಹಕ್ಕುಬಾಧ್ಯತೆಯ ವಿಷಯವಾಗಿ ನಡೆದ ಚರ್ಚೆಯು ಎರಡನೆಯದು

ವರ್ತಮಾನಪತ್ರಿಕೆಯ ಕಾನೂನನ್ನು ರದ್ದುಮಾಡಿಬಿಟ್ಟರೆ ಅನುಕೂಲವೆಂದು ಕೆಲವರು ಅಪೇಕ್ಷೆಪಡುತ್ತಿರುವಂತೆ ಕಾಣುತ್ತದೆ ದಿವಾನರವರು ತಿಳಿಸಿರುವ ಪ್ರಕಾರ ಈ ಕಾನೂನು ಯಾವ ಉದ್ದೇಶಕ್ಕಾಗಿ ಜಾರಿಗೆ ತರಲ್ಪಟ್ಟಿತೋ ಆ ಉದ್ದೇಶವು ನೆರವೇರಿದೆ ಎನ್ನುವುದಕ್ಕೆ ಸಂಶಯವಿಲ್ಲ ಈ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚೆ ಕೆಲವು ಪತ್ರಿಕೆಗಳು ಮೈಸೂರು ಸಂಸ್ಥಾನಕ್ಕೆ ಅಪಯಶಸ್ಸನ್ನು ತರುವ ಹಾಗೆ ನಡೆಸಲ್ಪಡುತ್ತಿದ್ದವು ಈ ಕಾನೂನು ಜಾರಿಗೆ ಬಂದ ಮೇಲೆ ಅವರಿಂದ ಸಂಭವಿಸಬಹುದಾದ ನಷ್ಟವನ್ನೂ ಶ್ರಮವನ್ನೂ ಸಹಿಸುವುದಕ್ಕೆ ಪ್ರತಿಯಾಗಿ ಅವು ಪ್ರಕಟವೇ ಆಗದೆ ನಿಂತುಹೋದವು ಇದರಿಂದ ಆ ಕಾನೂನು ಅವಶ್ಯವಾಗಿದ್ದಿತೆಂಬುವುದು ಸಿದ್ಧಾಂತವಾಗಿರುತ್ತದೆ ವರ್ತಮಾನಪತ್ರಿಕೆಗಳನ್ನು ನಡೆಸತಕ್ಕವರು ಸಂಸ್ಥಾನದ ರಾಜ್ಯಭಾರವಿಚಾರಗಳನ್ನು ನ್ಯಾಯವಾಗಿಯೂ ಗೌರವಯುಕ್ತವಾಗಿಯೂ ಆಕ್ಷೇಪಣೆ ಮಾಡುವ ಬಾಗದಲ್ಲಿ ಈಗ ಜಾರಿಗೆ ಬಂದಿರುವ ಕಾನೂನು ಸ್ವಲ್ಪವೂ ಅಡ್ಡಂತರಪಡಿಸತಕ್ಕದ್ದಾಗಿಲ್ಲ ಕೆಲವು ಕಾಲಾನಂತರ ಈ ಕಾನೂನಿನಲ್ಲಿ ವಿಧಿಸಲ್ಪಟ್ಟಿರುವ ನಿರ್ಬಂಧಗಳನ್ನು ತೆಗೆದುಹಾಕಿದರೂ ಹಾಕಬಹುದು ಅಂಥಾ ಕಾಲವು ಲಭ್ಯವಾಗಬೇಕಾದಲ್ಲಿ ವರ್ತಮಾನಪತ್ರಿಕೆಗಳನ್ನು ನಡೆಸತಕ್ಕವರು ಸತ್ಯವೂ ಗೌರವಯುಕ್ತವೂ ಗಂಭೀರವೂ ಆದ ಮಾರ್ಗವನ್ನೇ ಅವಲಂಬಿಸಿ, ಕೆಡುಕು ದುರ್ನಡತೆಗಳನ್ನು ನಿರ್ಭೀತಿಯಿಂದ ಎತ್ತಿ ಹಾಕುತ್ತಾ, ಸತ್ಯಪ್ರವರ್ತನೆಯನ್ನೂ ಧರ್ಮ ಪರಿಪಾಲನೆಯನ್ನೂ ಕಾಪಾಡಿ ಪ್ರೋತ್ಸಾಹಿಸುತ್ತಾ, ಸಕಲ ಸಜ್ಜನರ ಮೆಚ್ಚಿಕೆಯನ್ನೂ ಸಂಪೂರ್ಣಸಹಾನುಭೂತಿಯನ್ನೂ ಸಂಪಾದಿಸಿಕೊಳ್ಳುವವರಾಗಬೇಕೆಂದು ಹಾರೈಸುತ್ತೇವೆ

ಮತಾಂತರದಲ್ಲಿ ಪ್ರಾಪ್ತವಾಗಬಹುದಾದ ಕಷ್ಟನಷ್ಟಗಳನ್ನು ಕುರಿತು ಚರ್ಚೆಮಾಡುವಾಗ್ಗೆ ಪ್ರಜಾಪ್ರತಿನಿಧಿಗಳು ಧರ್ಮಮಾರ್ಗದ ನಿಬಂಧನೆಗಳನ್ನು ಊರ್ಜಿತಪಡಿಸದೆ ಹೋದರಲ್ಲಾ ಎಂದು ವಿಷಾದಿಸುತ್ತೇವೆ ಈಗಿನ ಸಾವಿರಾರುಮಂದಿ ಹಿಂದುಗಳೂ, ಮುಸಲ್ಮಾನರೂ ತಮ್ಮ ಹಿರಿಯರಕಾಲದಲ್ಲಿದ್ದ ಭಕ್ತಿ ಆಚಾರವ್ಯವಹಾರಗಳನ್ನು ವಿಧಿವತ್ತಾಗಿ ನೆರವೇರಿಸುವವರಾಗಿಲ್ಲವೆಂದೂ ಅನೇಕ ವಿಚಾರಗಳಲ್ಲಿ ಅವರಿಂದ ಭಿನ್ನಿಸಿಹೋಗಿರುತ್ತಾರೆಂದೂ ಎಲ್ಲರಿಗೂ ತಿಳಿದೇ ಇದೆ ಅವರು ತಮ್ಮ ವಿಶ್ವಾಸವಿಂಥಾದ್ದೆಂದೂ ತಮ್ಮ ಕಾರ್ಯಗಳು ಇಂಥವುಗಳೆಂದೂ ಬಹಿರಂಗವಾಗಿ ಒಪ್ಪಿ ಹೇಳುವವರಾದ ಪಕ್ಷದಲ್ಲಿ ಜಾತಿಬಾಹಿರರಾಗುವರು, ಅವರಿಗೆ ಲಭ್ಯವಾಗಿರತಕ್ಕ ಹಕ್ಕು ಬಾಧ್ಯತೆಗಳು ತೊಲಗಿಹೋಗುವುವು ಅನೇಕರು ಬಹಿರಂಗವಾಗಿ ಮಾಡಲಾರದೆ ಅಂತರಂಗದಲ್ಲೇ ಕೆಲವು ಆಚರಣೆಗಳನ್ನು ಇಟ್ಟುಕೊಂಡಿರುತ್ತಾರಾದಕಾರಣ ಅವರಿಗೆ ಯಾವ ವಿಧವಾದ ಕುಂದುಕೊರತೆಗಳೂ ಪ್ರಾಪ್ತವಾಗುವಹಾಗಿಲ್ಲ ನಿಜಸ್ಥಿತಿಯನ್ನು ತಿಳಿದವರೆಲ್ಲಾ ಆ ಜನರು ಎರಡು ವಿಧವಾದ ನಡವಳಿಕೆಯುಳ್ಳವರು ಎಂದು ಹೇಳುತ್ತಾರೆ ಅವರು ತಮ್ಮ ಅಂತಃಕರಣಕ್ಕೆ ಸರಿಬಿದ್ದು ಅನುವರ್ತಿಸುತ್ತಿರುವ ಮಾರ್ಗವನ್ನು ಬಹಿರಂಗವಾಗಿ ಒಪ್ಪಿ ಎಲ್ಲರೂ ನೋಡುವಂತೆ ಮಾಡುವುದಕ್ಕೆ ಅವರಿಗೆ ಧೈರ್ಯಸಾಲದು ಇಂಥಾ ನಡವಳಿಕೆಯಿಂದ ಮನುಷ್ಯನ ಸದ್ಗುಣವೇ ನಾಶವಾಗುವುದು ಇಂಥಾ ಜನಗಳಲ್ಲಿ ಸತ್ಯತೆ ಮನೋಧರ್ಮ, ಧೈರ್ಯ, ಪೌರುಷಾದಿಗಳು ಕ್ಷಯಿಸುವವು ಯಾವ ಮನುಷ್ಯನು ತನ್ನ ಮನಸ್ಸಾಕ್ಷಿಗೆ ಅನುಸಾರವಾದ ನಡವಳಿಕೆಯನ್ನು ಅಂತರಂಗ ಬಹಿರಂಗಗಳಲ್ಲಿ ನಿಷ್ಕಪಟ್ಯವಾಗಿ ಇಟ್ಟುಕೊಂಡಿರುವನೋ ಅವನೇ ಸರ್ವಶ್ರೇಷ್ಠನಾದ ಪುರುಷನೆನ್ನಿಸಿಕೊಳ್ಳುತ್ತಾನೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆಯನ್ನು ನೋಡಲಾಗಿ ಈ ಸಭೆಯು ಪ್ರಜೆಗಳಲ್ಲಿ ಕಪಟಯುಕ್ತವಾದ ಸ್ವಭಾವವನ್ನು ಪ್ರೋತ್ಸಾಹಪಡಿಸುವಂತೆ ಕಾಣುವುದು ಈ ಸ್ವಭಾವದ, ಅಂದರೆ ತಮ್ಮ ಮನಸ್ಸಾಕ್ಷಿಯನ್ನು ಮಾರುವುದರಲ್ಲಿ ಪೌರುಷಹೀನರಾದಂಥಾ ಪ್ರಜೆಗಳು ಹೆಚ್ಚಿದ ಪಕ್ಷದಲ್ಲಿ ಮೈಸೂರು ಸೀಮೆಗೆ ಅಪಾರವಾದ ಕೇಡುಂಟಾದೀತೆನ್ನುವುದಕ್ಕೆ ಸಂಶಯವಿಲ್ಲ ಇದಕ್ಕೆ ಪರಿಹಾರವಾದ ಕೇಡು ಮತ್ತೊಂದಿರಲಾರದು ಮನುಷ್ಯನು ಕಪಟಿಯಾಗಿದ್ದರೆ ಅವನಿಗೆ ಹುಟ್ಟಿನಿಂದ ಬರುವ ಹಕ್ಕುಬಾಧ್ಯತೆಗಳಿಗೆ ಚ್ಯುತಿಯಿಲ್ಲ ಸತ್ಯವಂತನಾಗಿ ನಡೆದುಕೊಂಡರೆ ಅವನು ಪತಿತನಾಗುವನು, ಅವನ ಆಗರ್ಭದ ಹಕ್ಕುಗಳು ಹೋಗುವುವು, ಮತ್ತೂ ಅವನು ತನ್ನ ಮಕ್ಕಳ ಪೋಷಣೆ ಪರಿಪಾಲನೆಗಳಿಗೆ ಬಾಹಿರನಾಗುವನು

ದೇಶದಲ್ಲಿ ರೂಢಿಸಲ್ಪಡುವಂಥಾ ಕಟ್ಟಳೆ ಕಾನೂನುಗಳು ಪ್ರಜೆಗಳಲ್ಲಿ ಸತ್ಯಸಂಧತೆಯನ್ನೂ ಸದ್ಗುಣವನ್ನೂ ನ್ಯಾಯವಾದ ಪೌರುಷವನ್ನೂ ಹೆಚ್ಚುವಂತೆ ಪ್ರೋತ್ಸಾಹಪಡಿಸುವವುಗಳಾಗಿರಬೇಕು, ಈ ಸದ್ಗುಣಗಳಿಗೆ ಕುಂದಕವಾಗುವುದಾಗಿದ್ದ ಪಕ್ಷದಲ್ಲಿ ಪ್ರಜೆಗಳಿಗೆ ಯಥಾರ್ಥವಾದ ಶ್ರೇಯಸ್ಸುಂಟಾಗುವುದಿಲ್ಲ ಮೈಸೂರು ಪ್ರಜಾಪ್ರತಿನಿಧಿ ಸಭಿಕರು ತಾವು ಸತ್ಯತೆ ಧರ್ಮನಿರತೆಗಳ ಪಕ್ಷಪಾತಿಗಳೆಂದು ಸ್ಥಾಪಿಸುವುದಕ್ಕೂ ಅದಕ್ಕೆ ಅನುಸಾರವಾಗಿ ನಡೆಯಲು ಸಿದ್ಧರಾಗಿರುತ್ತೇವೆಂದು ಒಪ್ಪಿಕೊಳ್ಳುವುದಕ್ಕೂ ಒಳ್ಳೆಯ ಸಮಯ ಒದಗಿತ್ತು [illegible] ಸ್ವಾರ್ಥಾಪೇಕ್ಷೆಯಿಂದಲೋ ದುರ್ಮಾರ್ಗವನ್ನು ಅವಲಂಬಿಸಿ ಆ ಅವಕಾಶವನ್ನು ಕಳೆದುಕೊಂಡಿದ್ದಾರೆ ಸ್ವಪ್ರಯೋಜನದೃಷ್ಟಿಯನ್ನು ಪರಿಹರಿಸಿ [illegible] ಈಗ ಮೈಸೂರಿನಲ್ಲಿರುವ ಕಾನೂನು ಸೋಗರಿಗೂ ಸತ್ಯಸಂಧರಿಗೂ ಅನ್ಯಾಯವನ್ನುಂಟು ಮಾಡುವುದಾಗಿ ಎಂದು ಎನಿಸುವಹಾಗಾಯಿತು ಇಂಥಾ ಕಾನೂನನ್ನು ರದ್ದುಮಾಡುವುದಕ್ಕೆ ಪ್ರತಿನಿಧಿ ಸಭೆಯಲ್ಲಿ ಮನೋನಿಶ್ಚಯ ಸ್ಥೈರ್ಯ ಕಾರ್ಯಾದಿಗಳು ಕಾಣದೆಹೋದವಲ್ಲಾ ಎಂದು ಸತ್ಯವಂತರು ಕೊರಗದೆ ಇರಲಾರರು

ಉತ್ತರವು

ಒಬ್ಬ ಫಕೀರನು ಟಾರ್ಟರಿ ದೇಶದಲ್ಲಿ ಸಂಚಾರಮಾಡುತ್ತಾ ಕಡೆಗೆ ಅಫ್ಘಾನಿಸ್ಥಾನ್ ದೇಶದ ಮುಖ್ಯ ಪಟ್ಟಣವಾದ ಬಾಲ್ಕ್ ನಗರಿಗೆ ಹೋದಾಗ ಅಲ್ಲಿ ರಾತ್ರಿ ಇಳುಕೊಳ್ಳುವುದಕ್ಕೆ ತಕ್ಕ ವಸತಿಯನ್ನು ಹುಡುಕುತ್ತಾ ಎಲ್ಲೂ ಕಾಣದೆ ಕಡೆಗೆ ಅರಸನು ವಾಸಮಾಡುತ್ತಿದ್ದ ಅರಮನೆಯನ್ನು ಕಂಡು ಇದು ಯಾವುದೋ ಒಂದು ಛತ್ರವಾಗಿರಬಹುದೆಂದು ಊಹಿಸಿ ಅದರೊಳಗೆ ಪ್ರವೇಶಿಸಿದನು ಆ ಸಮಯದಲ್ಲಿ ಅಲ್ಲಿ ಯಾವ ಜನಗಳೂ ಕಾವಲಿರದ್ದರಿಂದ ಪಡಸಾಲೆಯ ಮೂಲೆಯಲ್ಲಿ ತನ್ನ ಸಾಮಾನುಗಳನ್ನಿಟ್ಟು ಅಲ್ಲಿಯೇ ತನ್ನ ಹೆಗಲ ಮೇಲಿದ್ದ ಜಂಬಾಖಾನೆಯನ್ನು ಹಾಸಿ ಹಾಗೆ ಅಡ್ಡವಾಗಿಕೊಂಡನು ಹೀಗೆ ಅವನು ಸ್ವಲ್ಪಹೊತ್ತು ವಿಶ್ರಾಂತಿಪಡೆದುಕೊಳ್ಳುತ್ತಿರುವಲ್ಲಿ ಕಾವಲುಗಾರನು ಬಂದು ಆ ಫಕೀರನನ್ನು ನೋಡಿ ನೀನು ಯಾರು? ಇಲ್ಲಿ ಏಕೆ ಬಂದೆ ಎಂದು ಪ್ರಶ್ನೆ ಕೇಳಲು ಆತನು—ನಾನೊಬ್ಬ ಫಕೀರನು ಈ ರಾತ್ರಿ ಇಲ್ಲಿ ತಂಗಬೇಕೆಂತ ಬಂದೆನು ಎನಲು ಆಗ ಪಹರೆಯವನು—ಇದು ಫಕೀರರು ತಂಗತಕ್ಕ ಛತ್ರವಲ್ಲ ಅರಮನೆಯೆಂದು ತಿಳಿಯದೇ? ನೀನಿದ್ದ ಕಡೆಯಿಂದ ಏಳು ಬೇಗ ಹೋಗು ಎಂದು ಕೋಪದಿಂದ ಅಜ್ಞಾಪಿಸುತ್ತಿದ್ದನು ಈ ಗದ್ದಲವನ್ನು ಕೇಳಿ ಅರಸನು ತಾನೆ ಅಲ್ಲಿಗೆ ಬಂದು ಆ ಫಕೀರನನ್ನು ಕುರಿತು—ನೀನೆಂತಹ ದಡ್ಡನು? ಅರಮನೆಗೂ ಛತ್ರಕ್ಕೂ ಭೇದ ನಿನಗೆ ತಿಳಿಯದೇಹೋಯಿತೇ? ಎಂದನು ಫಕೀರನು ವಿಹಾಸ್ಯಭಾವದಿಂದ ನಾನು ತಮ್ಮನ್ನು ಒಂದೆರಡು ಪ್ರಶ್ನೆ ಕೇಳುವುದಕ್ಕೆ ಅಪ್ಪಣೆಯಾಗಬೇಕು ಎಂದರೆ, ಈ ಅರಮನೆಯನ್ನು ಕಟ್ಟಿ ಅದರಲ್ಲಿ ವಾಸಮಾಡಿದವರಾರು?

ಅರಸು—ನಮ್ಮ ಹಿರಿಯರು

ಫಕೀರ—ತಮಗೆ ಪೂರ್ವ ಈ ಮನೆಯಲ್ಲಿ ಯಾರು ವಾಸಿಸುತ್ತಿದ್ದರು?

ಅರಸು—ನಮ್ಮ ಪಿತಾಮಹರು ಅನಂತರ ನಮ್ಮ ತಂದೆಯು

ಫಕೀರ—ಈಗ ಇದರಲ್ಲಿ ವಾಸಮಾಡುವವರಾರು?

ಅರಸು—ನಾನೇ

ಫಕೀರ—ತಮ್ಮ ಅನಂತರ ಇದರಲ್ಲಿ ಯಾರು ವಾಸಿಸಬಹುದು?

ಅರಸು—ನನ್ನ ಮಗನಾದ ಯುವರಾಜನು

ಫಕೀರನು ಇದನ್ನು ಕೇಳಿ ಅರಸನನ್ನು ಕುರಿತು ಹಜರತ್ ಸಾಹೇಬರೇ ಇಷ್ಟೊಂದು ಮಂದಿ ಬಂದಿಳಿದಿದ್ದು ಬಿಟ್ಟುಹೋಗಿರುವಂತಹ ಸ್ಥಳವು ಛತ್ರವೋ? ಅರಮನೆಯೋ? ತಮಗೇ ವೇದ್ಯವಾಗಬೇಕು ಎಂದು ಹೇಳಿ ಹೊರಟುಹೋಗಲು [illegible] ಅರಸು ಆತನ ಸತ್ಯವಾದ ವಾಕ್ಯಗಳಿಗೂ ಧೈರ್ಯಕ್ಕೂ ಮೆಚ್ಚಿ ಆತನನ್ನು [illegible] ಅರಮನೆಯಲ್ಲಿ ತನ್ನೊಂದಿಗಿಟ್ಟುಕೊಂಡು ಉಪಚರಿಸಿದನಂತೆ

ಈ ಲೋಕವು ಆತ್ಮವಾಸವು ಎಂಬ ಮಾತೇನೂ ಹೊಸದಲ್ಲ ಅದು ಎಲ್ಲರಿಗೂ ಗೊತ್ತಾಗಿಯೇ ಇದೆ ಆದರೂ ಅದರ ವಿಷಯದಲ್ಲಿ ಒಂದು ಕೌತುಕವುಂಟು ಏನೆಂದರೆ, ಈ ಸತ್ಯವಾದ ಮಾತನ್ನು ಸದಾ ಮನದಲ್ಲಿಟ್ಟುಕೊಂಡು ವರ್ತಿಸುತ್ತಿರುವವರು ಅಪರೂಪ ಒಂದು ವಿಧದಲ್ಲಿಯಲ್ಲದಿದ್ದರೆ ಇನ್ನೊಂದು ವಿಧದಲ್ಲಿ ಅಥವಾ ಮತ್ತೊಂದು ವಿಧದಲ್ಲಿ ಪಂಚೇಂದ್ರಿಯಗಳಿಗೆ ಸಂಬಂಧಪಟ್ಟ ಈ ಲೋಕವು ಅದರ ಭೋಗಭಾಗ್ಯಗಳಿಂದ ನಮ್ಮ ದೃಷ್ಟಿಯನ್ನಾಕರ್ಷಿಸುತ್ತಿರುವುದರಿಂದ [illegible] ನಮ್ಮ ಮೆಚ್ಚುವ ಇಹಲೋಕದ ಸ್ಥಾನವನ್ನು [illegible] ಹೊಂದುತ್ತೇವೆ [illegible] ಗಳ ಸಹ ಈ ರೀತಿ ಜೀವಿಸುತ್ತಿರುತ್ತವೆ ನಾವು ದಿನಪ್ರತಿದಿನದಲ್ಲಿರುವ ದೇಹದಲ್ಲಿರುವ ಜೀವಾತ್ಮನು ಸಾಕ್ಷಾತ್ ಪರಮಾತ್ಮನ ಸಂಬಂಧವುಳ್ಳದ್ದಾಗಿದೆ ಒಬ್ಬ ಭಕ್ತನು ದೇವರೇ ನಿನಗೋಸ್ಕರವಾಗಿಯೇ ನಮ್ಮನ್ನು ನೀನು ಸೃಷ್ಟಿಸಿದ್ದೀ ಆದ್ದರಿಂದ ನಮ್ಮ ಆತ್ಮಗಳು ನಿನ್ನನ್ನು ಹೊಂದುವ ತನಕ ತೃಪ್ತಿಪಡದೆ ತಪಿಸುತ್ತಿರುತ್ತವೆಯೆಂದು ಹೇಳಿದ್ದಾನೆ ಇದು ಸತ್ಯವಲ್ಲವೆ?

ಈ ಲೋಕದಲ್ಲಿ ನಾವೆಲ್ಲರೂ ಪ್ರಯಾಣಿಕರಾಗಿದ್ದೇವೆ ಈಗ ನಾವು ನಮ್ಮದೆಂತ ಹೇಳಿಕೊಳ್ಳುವ ಹೊಲ, ಮನೆ, ಪದಾರ್ಥಗಳು ಇದಕ್ಕೆ ಪೂರ್ವ ಅನೇಕರ ವಶದಲ್ಲಿದ್ದು ಈಗ ನಮ್ಮನ್ನು ಸೇರಿವೆ ನಾವೂ ಇವುಗಳನ್ನು ಕೆಲವು ಕಾಲದ ನಂತರ ಎರಡನೆಯವನಿಗೆ ಬಿಟ್ಟುಹೋಗತಕ್ಕವರಾಗಿಯೇ ಇದ್ದೇವೆ ನಮಗಿಲ್ಲಿ ಕೊಟ್ಟಿರುವ ಆಯುಸ್ಸೂ ಹಲವು ಬಗೆ ದ್ರವ್ಯಗಳೂ ನಮ್ಮ ಪರೀಕ್ಷೆಗಾಗಿ ನಿಯಮಿತವಾದ ಕಾಲವೂ ಶಕ್ತಿಗಳೂ ಆಗಿವೆ ಇವುಗಳನ್ನು ನಾವು ಸದ್ವಿನಿಯೋಗಕ್ಕಾಗಿ ಬಳಸಿ ದೇವರು ಮೆಚ್ಚತಕ್ಕ ದಯೆ ಪರೋಪಕಾರ ನೀತಿ, ಪ್ರೀತಿಯೇ ಮುಂತಾದ ಸದ್ಗುಣಗಳನ್ನು ವೃದ್ಧಿಗೊಳಿಸುವುದಕ್ಕಾಗಿ ಪ್ರಯೋಗಿಸಿಕೊಂಡರೆ ಅವುಗಳನ್ನು ನಮಗೆ ಕರುಣಿಸಿದ ದೇವರ ದಿವ್ಯೋದ್ದೇಶವನ್ನು ನಾವು ನೆರವೇರಿಸಿದವರಾಗುತ್ತೇವೆ ಹಾಗಿಲ್ಲದೆ ಈ ವಸ್ತುಗಳು ಪರಸ್ಪರ ಹೊಟ್ಟೆಕಿಚ್ಚಿಗೂ ಕಲಹಕ್ಕೂ ವಂಚನೆ ಚೋರತ್ವ ನರಹತ್ಯ ಮುಂತಾದ ಕ್ರೂರಕೃತ್ಯಗಳಿಗೆ ಕಾರಣವಾದರೆ ದೇವರು ನಮ್ಮ ಪ್ರಯೋಜನಕ್ಕೂ ಸಹಾಯಕ್ಕೂ ಯಾವ ವಸ್ತುಗಳನ್ನು ಕೊಟ್ಟನೋ ಅವೇ ನಮ್ಮನ್ನು ಕೆಡಿಸಿ ದಂಡನೆಗೆ ಗುರಿಮಾಡುವುದಕ್ಕೆ ಸಹಕಾರಿಗಳಾಗಿ ಪರಿಣಮಿಸುತ್ತವೆ ಇದೇ ಆತ್ಮನ ನಷ್ಟ ಇದೇ ನರಕ ಆದ್ದರಿಂದ ನಾವು ಎಷ್ಟು ಸಂಪಾದಿಸಿದ್ದೇವೆಂದು ಯೋಚಿಸುವುದಕ್ಕಿಂತ ನಮಗೆ ದೊರೆತದ್ದನ್ನು ನಾವು ಹೇಗೆ ಬಳಸಿದ್ದೇವೆ ಎಂದು ಚಿಂತಿಸುವುದು ಪ್ರಯೋಜನಕರವಾಗಿರುವುದು ಒಬ್ಬನು ಈ ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನಾತ್ಮವನ್ನು ನಷ್ಟಮಾಡಿಕೊಂಡರೆ ಅದು ಅವನಿಗೇನು ಪ್ರಯೋಜನ? ಆದ್ದರಿಂದ ಮೊದಲು ನಾವು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿ ಸಂಪಾದಿಸಿಕೊಳ್ಳಬೇಕು

ಕೃತಜ್ಞತಾ ಪ್ರದರ್ಶನವು

[illegible] ಇನ್ಸ್ಪೆಕ್ಟರ್ ಜನರಲ್

ಮ॥ ಎಚ್ ಜೆ ಭಾಭಾ ಎಂ ಎ ಯವರು

ಮ ಎಚ್ ಜೆ ಭಾಭಾ ಯವರು ಪೆನ್ಷನ್ ಪಡೆದು ಈ ತಿಂಗಳ ಪ್ರಾರಂಭದಿಂದ ಕೆಲಸ ಬಿಟ್ಟಿರುತ್ತಾರೆ ಅವರ [illegible] ನ್ನು ಶ್ರೀಮನ್ಮಹಾರಾಜರವರು ಪರಿಗಣಿಸಿ ಅವರಿಗೆ ಈ ಸಲ ನವರಾತ್ರಿ ದರ್ಬಾರಿನಲ್ಲಿ ಮುಶೀರ್ ಉಲ್ ತಾಲೀಂ ಎಂಬ ಮೊದಲ ಬಿರುದನ್ನು ದಯಪಾಲಿಸಿದರು ಅವರ ಕೈಕೆಳಗೆ ವಿದ್ಯಾಭ್ಯಾಸ ವಿಭಾಗದವರೂ ಅವರ ಸ್ನೇಹಿತರೂ, ಅವರ ಹಿತಚಿಂತಕರೂ ಅಕ್ಟೋಬರ್ ತಾ ೨೩ರಲ್ಲಿ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಒಂದು ಪ್ರಥಮ ಕೂಟವನ್ನು ನಡೆಸಿ ಮ ಭಾಭಾ ಯವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಯೋಚಿಸಿದರು ಮ ಎಂ ವಾಸುದೇವ್ [illegible] ಎ ಯವರು ಅಗ್ರಾಸನವನ್ನು ವಹಿಸಿದ್ದರು ಮ ಭಾಭಾ ಯವರಿಗೆ ಒಂದು [illegible] ತೋಷೋತ್ಸವವನ್ನು (ಎಂಟರ್ಟೇನ್‌ಮೆಂಟ್) ಮಾಡಬೇಕೆಂದೂ ಅವರ ಹೆಸರನ್ನು ಈ ಸೀಮೆಯಲ್ಲಿ ತಕ್ಕ ರೀತಿಯಲ್ಲಿ ಶಾಶ್ವತಪಡಿಸಬೇಕೆಂದೂ ತೀರ್ಮಾನವಾಯಿತು ಇದಕ್ಕೆ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಹೊರ ಸೀಮೆಯಲ್ಲೂ ಅವರ ಹಿತೈಷಿಗಳಿಂದ ಚಂದಾ ಹಣವನ್ನು ಕೂಡಿಸುವ ವಿಷಯದಲ್ಲಿ ಒಂದು ಕಮಿಟಿಯು ಏರ್ಪಾಡಾಯಿತು ಮ॥ [illegible] ಕೃಷ್ಣರಾವ ಎರಡೂ ಮ॥ ಪಿ ಎಸ್ ಅಚ್ಯುತರಾಯರೂ ಸೆಕ್ರೆಟರಿ ಮತ್ತು ಟ್ರೆಜರರುಗಳಾಗಿರತಕ್ಕದ್ದೆಂದೂ ಮ ಭಾಭಾಯವರ ಅನುಕೂಲವನ್ನು ಕೇಳಿ ತಿಳಿದು ಮುಂದಿನ ಕ್ರಿಸ್ಮಸ್ ರಜಾ ಕಾಲದಲ್ಲಿ ಅವರಿಗೆ ಎಂಟರ್ಟೇನ್‌ಮೆಂಟು ಕೊಡತಕ್ಕದ್ದೆಂದೂ ತೀರ್ಮಾನವಾಗಿದೆ

ಮ ಜಿ ವೀರ್, ಎ [illegible] ಯವರು

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕಳೆದ ಸುಮಾರು ಇಪ್ಪತ್ತು ವರುಷಗಳಿಂದಲೂ ಪ್ರಿನ್ಸಿಪಲ್‌ರಾಗಿದ್ದು ಈ ತಿಂಗಳ ಪ್ರಾರಂಭದಿಂದ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಪದವಿಗೆ ನೇಮಕವಾಗಿರುವ ಮ ಜಿ ವೀರ್ ಯವರಿಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಮತ್ತು ಈಗ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಕೃತಜ್ಞತೆ ಪ್ರೇಮ ವಿಶ್ವಾಸಗಳನ್ನು ಪ್ರಕಾಶಪಡಿಸಬೇಕೆಂದು ಗೊತ್ತುಮಾಡಿ ಒಂದು ಕಮಿಟಿಯನ್ನು ನಡೆಸಿ ಚಂದಾ ಹಣವನ್ನು ಕೂಡಿಸುತ್ತಿದ್ದಾರೆ ಮ ವೀರ್ ಯವರಿಗೆ [illegible] ಸಮಯದಲ್ಲಿ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಬೇಕೆಂತಲೂ, ಅವರ ಭಾವಚಿತ್ರವನ್ನು ಬರೆದು [illegible] ಕಾಲೇಜಿನಲ್ಲಿ ಅವರ ಜ್ಞಾಪಕಾರ್ಥವಾಗಿ ಇಟ್ಟುಕೊಳ್ಳಬೇಕೆಂತಲೂ ತೀರ್ಮಾನವಾಗಿರುತ್ತದೆ

ಪ್ರಿನ್ಸ್ ಇಟೋಯವರ ಕೊಲೆಯು

ಕೊರಿಯಾ ರಾಜ್ಯದಲ್ಲಿ ಮೂರು ವರುಷಗಳಿಂದ ರೆಸಿಡೆಂಟ್ ಜನರಲ್ ಎಂಬ ಮುಖ್ಯಾಧಿಕಾರವನ್ನು ವಹಿಸಿ ಅಲ್ಲಿನ ರಾಜ್ಯಭಾರಕ್ರಮಗಳನ್ನು ಈಗಿನಕಾಲಕ್ಕೆ ತಕ್ಕಂತೆ ಮಾರ್ಪಡಿಸುತ್ತಾ ಹೊಸ ಶಿಸ್ತುಗಳನ್ನು ರೂಢಿಗೆ ತರುತ್ತಾ ಬಂದಿರುವ ಜಪಾನ್ ರಾಜ್ಯದ ಪ್ರಿನ್ಸ್ ಇಟೋಯವರು ಘಾತುಕನಿಂದ ಕೊಲ್ಲಲ್ಪಟ್ಟರೆಂದು ತಿಳಿಸಲು ದುಃಖಪಡುತ್ತೇವೆ ಪ್ರಿನ್ಸ್ ಇಟೋಯವರೂ, ಮಾಂಚೂರಿಯಾ ರೈಲ್ವೆಯ ಡೈರೆಕ್ಟರಾದ ಡಾ॥ ತನಾಕಾಯವರೂ, ರಷ್ಯಾ ರಾಜ್ಯದ ಖಜಾನೆ ಛಿತ್ಯಿಯವರಾದ ಎಂ ಕೋಕೋಫ್‌ಸೆಫ್‌ಯವರೂ ಹಾರ್ಬಿನ್ ಪಟ್ಟಣದ ರೈಲ್ವೆ ಸ್ಟೇಷನ್‌ನಲ್ಲಿ ಸಂಭಾಷಣೆಮಾಡುತ್ತಿರುವಲ್ಲಿ ಜಪಾನೀನವನಂತೆ ದುಸ್ತನ್ನು ಹಾಕಿಕೊಂಡಿದ್ದ ಒಬ್ಬ ಕೊರಿಯಾ ಪ್ರಜೆಯು ಮೂರಾವರ್ತಿ ಪ್ರಿನ್ಸ್ ಇಟೋಯವರಿಗೆ ಗುರಿಯಿಟ್ಟು ಗುಂಡುಹೊಡೆದನು ಈ ಗುಂಡಿನೇಟು ಪ್ರಿನ್ಸ್ ಇಟೋಯವರನ್ನು ಕೊಂದುಹಾಕಿತು ಅವರ ಸಂಗಡಿದ್ದ ಡಾ ತನಾಕಾಯವರಿಗೂ ಸ್ವಲ್ಪ ಗಾಯವಾಯಿತು ರಷ್ಯಾ ಖಜಾನಾ ಛಿತ್ಯಿಯವರಿಗೆ ಗುಂಡು ತಗಲದೆ ಅವರು ತಪ್ಪಿಸಿಕೊಂಡದ್ದು ಪರಮಾಶ್ಚರ್ಯವಾಗಿದೆ [illegible] ರೈಲ್ವೆ ಸ್ಟೇಷನ್ ಒಳಕ್ಕೆ ಬಿಡಬಹುದೆಂದು ಪ್ರಿನ್ಸ್ ಇಟೋಯವರು ಅಪ್ಪಣೆಕೊಟ್ಟಿದ್ದರು ಕೊಲೆಗೇಡಿಯು ಕೊರಿಯಾ ಪ್ರಜೆಯಾಗಿದ್ದರೂ ವೇಷಮರೆಸಿಕೊಂಡಿದ್ದ ಕಾರಣ ಯಾರಿಗೂ ಅನುಮಾನಕ್ಕೆ ಅವಕಾಶವಾಗಲಿಲ್ಲ ಅವರನ್ನು ಕೊಲ್ಲಬೇಕೆಂದು ಮೊದಲೇ [illegible] ಕೊಲೆಗೇಡಿಯನ್ನು ಇನ್ನು ಮೂವರನ್ನೂ ದಸ್ತಗಿರಿಮಾಡಿರುತ್ತಾರೆ ಕೊಲೆಗೇಡಿಯು ಅವರು ಕೊರಿಯಾವನ್ನು ಬಹು ಕ್ರೂರವಾಗಿ ಆಳುತ್ತಿದ್ದರೆಂದೂ ತನ್ನ ಸಂಬಂಧಿಗಳನ್ನು ಕೊಲ್ಲಿಸಿದ್ದರೆಂದೂ ಅದಕ್ಕೆ ಪ್ರತೀಕಾರವಾಗಿ ತಾನು ಅವರನ್ನು ಕೊಂದುಹಾಕಿದೆನೆಂದೂ ಹೇಳುತ್ತಾನೆ

ಗತಿಸಿದ ಪ್ರಿನ್ಸ್ ಇಟೋಯವರು ಕಳೆದ ೧೮೪೧ನೇ ಇಸವಿಯಲ್ಲಿ ಜನಿಸಿ, ನಾಲ್ಕಾರುಸಲ ಯೂರೋಪಿಯನ್ ರಾಜ್ಯಗಳಲ್ಲಿ ಸಂಚಾರಮಾಡಿ ರಾಜ್ಯಭಾರ ಕ್ರಮಗಳನ್ನು ಸಾಕ್ಷಾತ್ತಾಗಿ ನೋಡಿ ಕಲಿತುಕೊಂಡು ಬಂದು, ಜಪಾನ್ ರಾಜ್ಯದಲ್ಲಿ ಅನೇಕ ರಾಜಕೀಯ ಮತ್ತು ಸಾಮಾಜಿಕ ಶಿಸ್ತುಗಳನ್ನು ಮಾಡಿದವರು ಜಪಾನ್ ರಾಜ್ಯದ ಈಗಿನ ಶ್ರೇಯೋಭಿವೃದ್ಧಿಗೂ ಉಚ್ಛ್ರಾಯಸ್ಥಿತಿಗೂ ಆಳ್ವಿಕೆಯ [illegible] ಮಾರ್ಕ್ವಿಸ್ ಇಟೋಯವರು ಬಹುಮಟ್ಟಿಗೆ ಕಾರಣಭೂತರಾಗಿದ್ದರೆಂದು ಹೇಳಬಹುದು ಜಪಾನ್ ರಾಜ್ಯದ ಎಲ್ಲಾ ಇಲಾಖೆಗಳ

ಕಾರುಬಾರುಗಳೂ ಅವರಿಗೆ ಬಹಳ ಚೆನ್ನಾಗಿ ಪರಿಚಿತವಾಗಿತ್ತು ಮತ್ತು ಅವರು ಅನ್ಯರಾಜ್ಯಗಳಿಗೂ ಜಪಾನಿಗೂ ಹಲವುವೇಳೆ ಕೌಲುಕರಾರುಗಳನ್ನು ಮಾಡುವುದರಲ್ಲಿ ಮುಂದಾಳಾಗಿ ಪ್ರಖ್ಯಾತಿಗೊಂಡಿದ್ದರು. ಇವರು ಐದು ಸಲ ಜಪಾನಿನ ಪ್ರಧಾನಮಂತ್ರಿ ಪದವಿಯನ್ನು ಅನುಭೋಗಿಸಿ, ಜಪಾನ್ ರಾಜ್ಯದೊಳಗೂ ಪರರಾಷ್ಟ್ರಗಳಲ್ಲೂ ರಾಜ್ಯಧುರಂಧರರೆಂಬ ಯಶಸ್ಸನ್ನು ಸಂಪಾದಿಸಿಕೊಂಡಿದ್ದರು. ಇಂಥ ಮಹನೀಯರಿಗೆ ಈ ರೀತಿ ಅಕಾಲಮರಣ ಪ್ರಾಪ್ತವಾಯಿತಲ್ಲಾ ಎಂದು ಶೋಕಿಸಬೇಕಾಗಿದೆ.

ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು.

ಬಹುಮಾನಗಳ ವಿನಿಯೋಗವು.

ಹಿಂದಿನ ಸೋಮವಾರ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ರಾಜಧಾನಿಯಲ್ಲಿ ಮುಕ್ತಾಯವಾಯಿತು. ಶ್ರೀಮನ್ ಮಹಾರಾಜರವರು ದಯಮಾಡಿ ಪ್ರದರ್ಶಕರಿಗೆ ಬಹುಮಾನಗಳನ್ನು ಹಂಚಿಕೊಟ್ಟರು. ಬಹುಮಾನ ಪಡೆದ ವಸ್ತುಗಳ ಪೈಕಿ ಮುಖ್ಯವಾದವುಗಳನ್ನೂ ಮಾಲೀಕರ ಹೆಸರನ್ನೂ ಕೆಳಗೆ ಸೂಚಿಸುತ್ತೇವೆ.

ಭಂಗಾರದ ಮೆಡಲುಗಳು (ಬಿಲ್ಲೆಗಳು) -ತಿರುವಾಂಕೂರು ರಬ್ಬರು ಮೆ॥ ಎ. ಬಿ ಕರ್ಣೀಯವರಿಗೆ, ಜೇನುಗೂಡು-ಆರ್ಕ ಐತಗೀದಾರರಿಗೆ, 'ಸಂಟ್ರಿಫ್ಯೂಗಲ್' ಪಂಪು-ಮೆ॥ ಇ ಆರ್ ಲೋಗಾನ್‌ಯವರಿಗೆ, ಕಂಬಳಿ ಜಮಖಾನಗಳು-ಜಯಪುರದ ಸೆಂಟ್ರಲ್ ಜೈಲ್ ಸೂಪರಿನ್‌ಟೆಂಡೆಂಟರಿಗೆ, ದಂತದ ಸಾಮಾನುಗಳು-ಬರ್ಮಾ ದೇಶದ ಮೆ॥ ಮಾಂಗ್‌ನಿಲಾಯವರಿಗೆ, ಗಂಧದ ಮರದ ಮೇಲೆ ಚಿತ್ರ ಕೆಲಸ-ಸೊರಬದ ಮೆ॥ ಗಣಪತಿಯವರಿಗೆ, ಕ್ರೋಂ ಚರ್ಮದ ಸಾಮಾನುಗಳು-ಮದರಾಸಿನ ಟೇಂಬರ್ಸ್ ಕಂಪನಿಯವರಿಗೆ, ಪಟ್ಟೆ ರೇಷ್ಮೆ ನೇಯ್ಗೆಗಳು-ಬೆಂಗಳೂರಿನ ಮೆ॥ ವೆಂಕಟಪ್ಪ ಬಸಪ್ಪಾಯವರಿಗೆ, ಕಬ್ಬಿಣದ ಪೆಟ್ಟಿಗೆಗಳು ಮತ್ತು ಬೀಗಗಳು-ಬೊಂಬಾಯಿಯ ಮೆ॥ ಗಳಾದ ಗಾಡ್ರೆಜ್ ಮತ್ತು ಬಾಯ್ಸ್‌ಯವರಿಗೆ, ಆಸೂತಿ ಕೆಲಸ-ಭಾವನಗರದ ರಾಜಕುಮಾರಿಯವರಿಗೆ, ವಿದ್ಯುಚ್ಛಕ್ತಿಯ ಸಾಮಾನುಗಳು-ಬೆಂಗಳೂರಿನ ಮೆ॥ ಅಂಡ್ರೂಸ್‌ಯವರಿಗೆ, ಕಲ್ಲಿನೊಳಗೆ ಜಾಲ್ ಕೆಲಸ-ಪಂಜಾಬಿನ ಮೆ॥ ಸಬಲ್ ಅಹಮ್ಮದ್‌ಯವರಿಗೆ, ಸ್ತ್ರೀಯರು ಮನೆಯಲ್ಲಿ ಮಾಡುವ ಕೆಲಸಗಳು ಮದರಾಸಿನ ಶ್ರೀ ಸೂರಿ ಮುತ್ತಮ್ಮನವರಿಗೆ.

ಬೆಳ್ಳಿ ಮೆಡಲುಗಳು—ತಿರುವಾಂಕೂರು ರಬ್ಬರು-ಮೆ॥ ಮುಕೀರಿಯವರಿಗೆ, ಅಂಟೆ-ಪಂಜಾಬಿನ ವ್ಯವಸಾಯ ಇಲಾಖೆಯ ಅಧ್ಯಕ್ಷರಿಗೆ, ಹೊಗೆಸೊಪ್ಪು-ಒವರಿ ನಾಸೇಟಿಯ ಮೆ॥ ರಾಮಲಿಂಗಶೆಟ್ಟರಿಗೆ, ದಂತದ ಸಾಮಾನುಗಳು-ತಿರುವಾಂಕೂರಿನ ಕಲಾಶಾಲೆಗೆ, ಹುರುಳಿಕಾಯಿ-ಮೈಸೂರಿನ ಮಾಲ ಲಕ್ಷ್ಮಯ್ಯನವರಿಗೆ, ಮಾಲಕಿ ಕೊಪ್ಪದ ಮೆ॥ ಸುಬ್ಬರಾಯರಿಗೆ, ಚಿಪ್ಪಿನ ಕೆಲಸ ಮತ್ತು ಹಾಯಿ-ಬೆಂಗಳೂರಿನ ಮೆ॥ ಈಸಾಖಾಸಿಂ ಸೇಟರಿಗೆ, ಚರ್ಮದ ಸಾಮಾನುಗಳು-ಮದರಾಸಿನ ಓಕ್ಸ್ ಕಂಪನಿಯವರಿಗೆ, ಪರಿಮಳ ದ್ರವ್ಯಗಳು, ಬೊಂಬಾಯಿನ ಅಲೆಂಬಿಕ್ ಕೆಮಿಕಲ್ ಕಂಪೆನಿಯಲ್ಲಿ ತಯಾರಾದವು-ಮದರಾಸಿನ ವೈದ್ಯ ಕಂಪೆನಿಯವರಿಗೆ, ಎಣ್ಣೆಗಳು-ಬೊಂಬಾಯಿನ ಆನಂದರಾವ್ ಬಾಪೂಜಿಯವರ ಕಂಪೆನಿಗೆ, ಕೊಡೆಗಳು, ಬೊಂಬಾಯಿನ ಅಲೆಂಬಿಕ್ ಕಂಪೆನಿಯವು-ಮದರಾಸಿನ ವೈದ್ಯ ಕಂಪೆನಿಯವರಿಗೆ, ಚೆಂಡಾಟದ ಸಾಮಗ್ರಿಗಳು-ಪಂಜಾಬಿನ ಸಿಯಾಲ್‌ಕೋಟ್ ಪಟ್ಟಣದಲ್ಲಿರುವ ಗಂಧಸಿಂಗ್ ಉಬೆರಾಯ್ ಕಂಪೆನಿಯವರಿಗೆ, ಇಂಜಿನ ನಿಂದ ಕೆಲಸ ಮಾಡುವ ಪಂಪು, ಮದರಾಸು ಸ್ಪಾರಿ ಕಂಪೆನಿಯವರದು ಮೆ॥ ಇ ಆರ್. ಲೋಗನ್‌ಯವರಿಗೆ, ಮೋಟಾರ್ ಬಂಡಿಗೆ ಇಡುವ ದೀಪ ಬೆಂಗಳೂರು ಮೋಟಾರ್ ಕಂಪೆನಿಯದು-ಮೆ॥ ಇ ಆರ್ ಲೋಗನ್‌ಯವರಿಗೆ, ನೇಗಿಲುಗಳು ಮತ್ತು ಕಟೆಗಳು-ಕೋಲಾರದ ರೆವರೆಂಡ ಹಾಲಿಸ್ಟರ್‌ಯವರಿಗೆ, ನಾಟಾಗಳು-ಮಲಬಾರ್ ಟಿಂಬರ್ ಕಂಪನಿಗೆ, ಝರತಾರಿ-ಬೆಂಗಳೂರಿನ ಮೆ॥ ವಿಟ್ಟಲಯ್ಯನವರಿಗೆ, ಮಸಲೀನು-ಮದರಾಸಿನ ವೆಂಕಟಾಚಲಪತಿ ಅಯ್ಯರವರಿಗೆ, ಕಂಬಳಿ ಮೆ॥ ವೆಂಕಟರಮಣಪ್ಪನವರಿಗೆ, ಶಾಲು ಮತ್ತು ಕಂಬಳಿ ಜಮಖಾನಗಳು-ವೆಲ್ಲೂರು ಸೆಂಟ್ರಲ್ ಜೈಲು ಸೂಪರಿನ್‌ಟೆಂಡೆಂಟರವರಿಗೆ, ಚಿಕ್ಕುಬಟ್ಟೆಗಳು-ಮಲಬಾರ ನೇಯುವ ಕಾರ್ಖಾನೆಗೆ, ಕಾರ್ಖಾನೆಯಲ್ಲಿ ಯಂತ್ರದಿಂದ ತಯಾರಾದ ಬಟ್ಟೆಗಳು, ಬೊಂಬಾಯಿನ ಸ್ವದೇಶಿ ಮಿಲ ಕಂಪೆನಿ, ಹಾಡುವ ಲಾಳಿಯುಳ್ಳ ಮಗ್ಗದಲ್ಲಿ ನೇದ ಝರತಾರಿ ರೇಷ್ಮೆ ಸೀರೆಗಳು-ಶಾಲ್ಯದ ನೇಯಿಗೆ ಕಾರ್ಖಾನೆ, ಬೆಳ್ಳಿ ಪಾತ್ರೆ ಸಾಮಾನುಗಳು ಬೆಂಗಳೂರಿನ ಮೆ॥ ಶಂಕರಶೆಟ್ಟರಿಗೆ, ಚೀಲಕೆಲಸ ಮಾಡಿದ ಬೆಳ್ಳಿ ಪಾತ್ರೆಗಳು ರಂಗೂನ ಪಟ್ಟಣದ ಮೋಂಗ್‌ಷಾಯವರಿಗೆ, ಬೆಳ್ಳಿ ಪೆಟ್ಟಿಗೆಗಳು-ಬೆಂಗಳೂರಿನ ಬಾರ್ಟನ ಕಂಪೆನಿಯವರಿಗೆ, ಹಸನು ಕೆಲಸ ಮಾಡಿದ ಬೊಂಬೆಗಳು-ರಂಗೂನ್ ಪಟ್ಟಣದ ಮಾಂಗ ಇನ ಸಾಂಗ್‌ಯವರಿಗೆ, ಭಂಗಾರದ ಆಭರಣಗಳು-ಕೋಲಾರದ ಮೆ॥ ವಾಸುದೇವಾಚಾರಿಯವರಿಗೆ ಹಸನು ಕೆಲಸ ಮಾಡಿದ ಬೊಂಬೆಗಳು-ತಿರುಪತಿಯ ಮೆ॥ ರಾಮಾಚಾರಿಯವರಿಗೆ, ಚಿತ್ರದ ಕೆಲಸ-ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನ ವಿದ್ಯಾರ್ಥಿಗಳಿಗೆ, ಪಂಚೆಗಳು ಮತ್ತು ವಸ್ತ್ರಗಳು-ಕುಂಭಕೋಣದ ಮೆ॥ ಸುಂದರಂ ಅಯ್ಯರವರಿಗೆ, ಸ್ತ್ರೀಯರು ಮನೆಯಲ್ಲಿ ಮಾಡುವ ಕಸಬುಗಳು—ಮದರಾಸಿನ ಡಾಕ್ಟರ್ ಎಂ. ಸಿ ನಂಜುಂಡರಾಯರಿಗೆ, ಗಾಡಿಗಳು—ಬೆಂಗಳೂರಿನ ಮೆ॥ ಎಫ್ ಟಿ ಪೀಟರ್ಸ್‌ಯವರಿಗೆ, ಪೈರುಗಳನ್ನು ಒಕ್ಕುವುದು ಮೈಸೂರಿನ ಪಟೇಲ್ ರಂಗೇಗೌಡರಿಗೆ.

ಇದಲ್ಲದೆ ತಾಮ್ರದ ಮೆಡಲುಗಳೂ ಯೋಗ್ಯತಾಪತ್ರಗಳೂ ಸಹ ಬೇರೆ ಬೇರೆ ಪ್ರದರ್ಶಕರಿಗೆ ಕೊಡಲ್ಪಟ್ಟವು.

ಬಳಗೋತದ ವೃತ್ತಾಂತಗಳು

ಕಳೆದ ವಾರ ನಮಗೆ ತಲುಪಿರುವ ಕೆಲವು ಬಾತ್ಮಿಗಳನ್ನು ಪ್ರಕಟಿಸಲು ಸ್ಥಳ ದೊರೆಯಲಿಲ್ಲವೆಂದು ವಿಷಾದಿಸುತ್ತೇವೆ.

* * *

ಮೈಸೂರು ಪಟ್ಟಣದಲ್ಲಿ ರಸ್ತೆಗಳನ್ನು ಸರಿಮಾಡುವುದಕ್ಕೆ ೬೦೦೦ ರೂಪಾಯಿ ಕ್ರಯವುಳ್ಳ ಸ್ಟೀಮ್ ರೋಲರ ಯಂತ್ರವನ್ನು ಕೊಂಡುಕೊಳ್ಳಬೇಕೆಂದು ಮ್ಯುನಿಸಿಪಾಲಿಟಿಯವರು ಆಲೋಚಿಸುತ್ತಿದ್ದಾರೆ.

* * *

ದಿವಾನ್ ಮೆ॥ ಟಿ ಆನಂದರಾಯರು ಕಳೆದ ವಾರ ವೈಸ್‌ರಾಯಿಯವರ ಆತಿಥ್ಯದ ಸಮಾರಂಭಗಳನ್ನು ನೋಡಿಕೊಂಡು [illegible] ಶಿವಮೊಗ್ಗೆಯ ಕಡೆ ದಯಮಾಡಿದ್ದರೆಂದೂ, ಈ ವಾರ ಅವರು ರಾಜಧಾನಿಗೆ ಬರುತ್ತಾರೆಂದೂ ಕೇಳುತ್ತೇವೆ.

* * *

ತುಮಕೂರು ಮಂಡಿ ಮೆ॥ ಡಿ ಎಸ್ ಶಾಮರಾಜಪ್ಪನವರು ಜೈನ ದಿಗಂಬರ ಜ್ಞಾನೋತ್ಕರ್ಷಸಭಾ ಕಾರ್ಯಗಳಿಗೆ ಹಿತೈಷಿಗಳಿಂದ ೧,೦೩೮ ರೂಪಾಯಿ ಚಂದಾ ವಸೂಲಾಗಿ, ಖರ್ಚು ಜಾತಾ ರೂ ೯೩೧-೧೩-೧೧ ಪೈ ತಮ್ಮಲ್ಲಿ ಉಳಿದಿದೆ ಎಂದು ತಿಳಿಸುತ್ತಾರೆ.

ಸ್ಕೂಲುಗಳಿಗೆ ಹೊಸದಾಗಿ ಗ್ರಾಂಟು ಆಗಬೇಕೆನ್ನುವವರೂ, ಈಗಿರುವ ಗ್ರಾಂಟನ್ನು ಹೆಚ್ಚುಮಾಡಿ ಕೊಡಬೇಕೆನ್ನುವವರೂ ಈ ತಿಂಗಳ ಆಖೈರಿನೊಳಗಾಗಿ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ತಲುಪುವಂತೆ ಅರ್ಜಿಗಳನ್ನು ಬರೆದುಕೊಳ್ಳಬೇಕಾಗಿದೆ.

* * *

ಬೆಂಗಳೂರು ಸಿಟಿಯಲ್ಲಿ ನೇಮಕವಾಗಿರುವ ಬೆಂಚ್ ಆಫ್ ಮ್ಯಾಜಿಸ್ಟ್ರೇಟರು ಅಲ್ಲಿನ ಡಿಸ್ಟ್ರಿಕ್ಟ್ ಆಫಿಸ್ ಕಟ್ಟಡದೊಳಗೆ ಪ್ರತಿ ಸೋಮವಾರ ಬುಧವಾರ ಶುಕ್ರವಾರಗಳಲ್ಲಿ ಸೇರಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಳುಹುವ ೨-೩ನೇ ಕ್ಲಾಸ್ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡಿ ಇತ್ಯರ್ಥಪಡಿಸುವರು.

* * *

ಬೀರೂರಿನಲ್ಲಿರುವ ಸಾಹುಕಾರ್ ಐರೀಡಿ ಲಿಂಗಪ್ಪಶೆಟ್ಟರು ಕಳೆದ ವರುಷ ನಡಿಸಿದಂತೆ ಈ ಸಲವೂ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಕಡೂರಿಗೆ ಹೋಗುವ ವಿದ್ಯಾರ್ಥಿಗಳಿಗೆಲ್ಲಾ ತಮ್ಮ ಖರ್ಚಿನಿಂದ ಭೋಜನ ಫಲಹಾರಾದಿಗಳನ್ನು ನಡಿಸುವುದಕ್ಕೆ ಸಂಕಲ್ಪಿಸಿ ಏರ್ಪಾಡುಮಾಡಿರುತ್ತಾರೆಂದು ಒಬ್ಬ ಬಾತ್ಮಿದಾರರು ತಿಳಿಸುವರು.

* * *

ರಾಜಧಾನಿಯಲ್ಲಿ ನಡೆದ ಕೈಗಾರಿಕೆ ಪ್ರದರ್ಶನ ಶಾಲೆಯೊಳಗೆ ಅತ್ಯಂತ ಉತ್ಕೃಷ್ಟವಾಗಿದ್ದ ವಸ್ತುಗಳನ್ನು ಕೂಡಿಸಿ ಸರ್ಕಾರದವರು ಮುಂದಿನ ತಿಂಗಳ ಕಡೇ ವಾರದಲ್ಲಿ ಲಾಹೋರ್ ಪಟ್ಟಣದಲ್ಲಿ ನಡೆಯುವ ಪ್ರದರ್ಶನ ಶಾಲೆಗೆ ಕಳುಹಿಸುವವರಾಗಿದ್ದಾರೆ. ಈ ವಸ್ತುಗಳನ್ನು ಮೆ॥ ಟಿ ಕೆ ಸುಬ್ಬರಾಯರು ಅಲ್ಲಿಗೆ ಸಾಗಿಸಿಕೊಂಡು ಹೋಗುವರು.

* * *

ಒಬ್ಬ ಬಾತ್ಮಿದಾರರು ಬರೆಯುವುದು —ಕಳೆದ ೧೯೦೮ನೇ ಇಸವಿ ಸೆಪ್ಟಂಬರಿನಲ್ಲಿ ನಡೆದ ವ್ಯವಸಾಯದ ಸ್ಪೆಷಲ್ ಸೆನ್ಸಸ್ ಲೆಕ್ಕಗಳನ್ನು ಬೆಂಗಳೂರು ತಾಲೂಕಿನಲ್ಲಿ ತಪ್ಪು ಚುಕ್ಕು ಇಲ್ಲದೆ ಬರೆದಿದ್ದುದಕ್ಕಾಗಿ ಸರ್ಕಾರದವರು ಮೂರು ಶ್ಯಾನುಭೋಗರಿಗೆ ಇನಾಮನ್ನು ಈಗತಾನೇ ಪಾವತಿ ಮಾಡಿಸಿರುತ್ತಾರೆ. ಕೊಡತಿ ಸುಬ್ಬಯ್ಯನವರಿಗೆ ರೂ ೧೫, ಕೆಂಗೇರಿ ಸುಬ್ಬರಾಯರಿಗೆ ರೂ ೧೦, ವಲ್ಲೂರು ಸುಬ್ಬಯ್ಯನವರಿಗೆ ರೂ. ೧೦, ಈ ರೀತಿ ಬಹುಮಾನ ದೊರಕಿದೆ.

* * *

ಬೆಂಗಳೂರು ಪಟ್ಟಣದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಶೋಧನಾ ವಿದ್ಯಾಲಯವನ್ನು ಕೂಡಲೇ ಕಟ್ಟುವುದಕ್ಕೆ ಪ್ರಾರಂಭಿಸಬೇಕೆಂದು ಕಳೆದ ವಾರ ಬೆಂಗಳೂರಿನಲ್ಲಿ ಕಮಿಟಿ ಮೆಂಬರುಗಳು ಸೇರಿ ತೀರ್ಮಾನ ಮಾಡಿದಾರೆ. ಕಟ್ಟಡದ ಕಂಟ್ರಾಕ್ಟನ್ನು ಮೆ॥ ಟಿ ಸ್ಮಿತ್‌ಯವರಿಗೂ, ಪಾಲೊಂಜಿ ಎದುಲ್ಜಿ ಕಂಪನಿಯವರಿಗೂ ವಹಿಸಿದ್ದಾರೆ. ಅದಕ್ಕೆಲ್ಲಾ ೧೯ ಲಕ್ಷ ರೂಪಾಯಿ ಖರ್ಚಾಗುವುದು. ಈ ಪೈಕಿ ೧೬॥ ಲಕ್ಷ ರೂಪಾಯಿ ಕಮಿಟಿಯವರ ವಶದಲ್ಲಿದೆ. ಕಟ್ಟಡವು ೧೫ ತಿಂಗಳೊಳಗಾಗಿ ಪೂರೈಸುವುದೆಂದೂ, ಅಷ್ಟರೊಳಗೇ ಕೆಲವು ಭಾಗ ಶಾಸ್ತ್ರಶೋಧನಾ ವಿಚಾರದ ಬೋಧನೆಗಳು ಪ್ರಾರಂಭವಾಗುವವೆಂದೂ ಪ್ರಕಟವಾಗಿದೆ.

* * *

ಕಳೆದ ವಾರ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಹಿಂದಿನ ವಾರಕ್ಕಿಂತ ಸ್ವಲ್ಪ ಕಡಮೆಯಾಗಿದೆಯಾದರೂ ಹೊಸದಾಗಿ ಪ್ಲೇಗ್ ಕಾಯಿಲೆಗಳು ಇನ್ನೂ ಸಂಭವಿಸುತ್ತಲೇ ಇವೆ. ಇದು ಇಳಿತರಕ್ಕೆ ಬಂದಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಇದರ ಹಸೆಯಿಂದ ಪ್ರಜೆಗಳಲ್ಲಿ ಭೀತಿಯೂ ಕಳವಳವೂ ಇನ್ನೂ ಶಮನವಾಗಿಲ್ಲ. ಈಚೆಗೆ ಬೆಳಗಿನ ಹೊತ್ತು ರಾತ್ರಿಯೂ ಹೆಚ್ಚಾಗಿ ಮಂಜು ಸುರಿಯುವುದು. ಬಹಳ ಶೀತವಾಗಿ ಕಾಯುತ್ತದೆ. ಇದುವರೆಗೆ ರಾಜಧಾನಿಯಲ್ಲಿ ೨೩,೪೯೦ ಜನರು ಇನಾಕ್ಯುಲೇಷನ್ ಮಾಡಿಕೊಂಡಿದ್ದಾರೆ. ಅಂದರೆ, ಕಳೆದ ವಾರ ೩ ರಿಂದ ತಾ ೯ ರ ವರೆಗೆ ೨,೧೪೯ ಮಂದಿ ಹಾಕಿಸಿಕೊಂಡರು. ಈ ವಾರದ ಕಾಯಿಲೆ ಸ್ಥಿತಿಯನ್ನು ಕೆಳಗೆ ತಿಳಿಸಿದೇವೆ —

ತಾರೀಖು	ಪ್ಲೇಗ್ ಕಾಯಿಲೆ	ಪ್ಲೇಗ್ ಮರಣ	ಒಟ್ಟು ಮರಣ
3	10	5	8
4	19	10	21
5	22	12	20
6	11	10	19
7	11	7	13
8	12	9	16
9	13	12	16

ಮೈಸೂರು ಗೆಜೆಟ್ ಸಂಗ್ರಹ

ಮಾಲೂರು ತಾಲೂಕು ಕುಡಿಯನೂರಿನಲ್ಲಿ ಪ್ಲೇಗು ಉಪದ್ರವಿದೆ ಎಂದು ತಿಳಿಯತಕ್ಕದ್ದು.

ಕೆಡ್ಡಾ ಕೆಲಸಗಳು ನಡೆಯೋಣದರಿಂದ ಕಾಕನಕೋಟೆಯಿಂದ ಮಾಸ್ತೀಗುಡಿಗೆ ನವಂಬರ್ ತಾ ೧ ರಿಂದ ಡಿಸೆಂಬರ ತಾ ೩ ರ ತನಕ ಹೋಗಿ ಬರುವ ಗಾಡಿಗಳನ್ನೂ ಜನರನ್ನೂ ಬಿಡುವುದಿಲ್ಲ. ಯಥಾರ್ಥವಾದ ಪ್ರಯಾಣಿಕರನ್ನು ಮಾತ್ರ ಬಿಡಲಾಗುವುದು. ಇತರರು ಫಾರೆಸ್ಟ್ ಆಫೀಸರಿಂದ ಅಪ್ಪಣೆ ಪಡೆಯತಕ್ಕದ್ದು.

ದುಷ್ಕಾಲದ ನಿಮಿತ್ತ ಧಾನ್ಯಗಳನ್ನು ರೈಲ್ ಮೇಲೆ ಸಾಗಿಸಿ ತರುವುದಕ್ಕಾಗಿ ಕಡಮೆ ಮಾಡಿದ್ದ ರೈಲ್ವೆ ಛಾರ್ಜಿನ ದರಗಳನ್ನು ದುಷ್ಕಾಲ ನಿವಾರಣೆಯಾದ ಸಬಬು ನವಂಬರ ತಾ ೧ ರಿಂದ ವಜಾ ಮಾಡಲಾಗಿದೆ.

ಗುಬ್ಬಿ ತಾಲೂಕು ಅಮಲ್ದಾರ್ ಮೆ॥ ಎ ಕೃಷ್ಣೇ ಅರಸಿನವರಿಗೆ ಕೊಟ್ಟಿರುವ ಎರಡು ತಿಂಗಳು ಎರಡು ದಿನಗಳ ಪ್ರಿವಿಲೆಜ ರಜಕ್ಕೆ ಮೂರು ತಿಂಗಳು ಇಪ್ಪತ್ತೆಂಟು ದಿನಗಳ ಸಂಬಳವಿಲ್ಲದ ಸೇರಿಸಿಕೊಟ್ಟಿದೆ.

ಮತ್ತೊಂದು ಹುಕುಂ ಕೊಡುವತನಕ ಆನೆಕಲ್ ತಾಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎನ ಮುನೀರರಾಯರು ದೊಡ್ಡಬಳ್ಳಾಪುರದ ತಾಲೂಕ್ ಅಮಲ್ದಾರರಾಗಿ ನೇಮಿಸಲ್ಪಟ್ಟಿದ್ದಾರೆ.

ಕಡೂರ್ ತಾಲೂಕ ಅಮಲ್ದಾರ್ ಮೆ॥ ಎಂ ಎಸ ರಾಮಚಂದ್ರರಾಯರಿಗೆ ನೊವಂಬರ್ ತಾ ೧ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಇವರು ನವರಾತ್ರಿ ಹಬ್ಬದ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಹೆಡ ಕ್ಲಾರ್ಕ್ ಬಿ. ಎಸ ರಾಮಸ್ವಾಮಿ ಐಯಂಗಾರ್ಯರು ಕಡೂರ್ ತಾಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಬಾಗೇಪಲ್ಲಿ ತಾಲೂಕ್ ಅಮಲ್ದಾರ್ ಮೆ॥ ವಿ ಗೋಪಾಲರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೌರಿಂಗ್‌ಪೇಟೆ ತಾಲೂಕ್ ಶಿರಸ್ತೆದಾರ್ ಕೆ ಕನ್ನಯ್ಯ ಶಾಸ್ತ್ರಿಗಳು ಬಾಗೇಪಲ್ಲಿ ತಾಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮೆ॥ ಜೆ ವೀರ್‌ಯವರನ್ನು ನವಂಬರ್ ತಾ ೧ ರಿಂದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಕ ಮಾಡಿದೆ.

ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮೆ॥ ವಿ. ಎಸ್. ವಾಸುದೇವರಾಯರನ್ನು ತರೀಕೆರೆ ತಾಲೂಕ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಕೋಲಾರ್ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಎ ವೇದಾಂತ ದೇಶಿಕಂ ಐಯ್ಯಂಗಾರ್ರನ್ನು ಪೊಲೀಸ್ ಇಲಾಖೆಯಲ್ಲಿ ಸ್ಪೆಷಲ್ ಡ್ಯೂಟಿಗಾಗಿ ವರ್ಗಮಾಡಿರತಕ್ಕ ಹುಕುಮನ್ನು ರದ್ದುಮಾಡಿದೆ.

ಅ॥ ಕಮಿಷನರ್ ಮೆ॥ ಎಸ್ ಪಿ ರಾಜಗೋಪಾಲಾಚಾರ್ಯರನ್ನು ಮೈಸೂರಿಂದ ಹಾಸನಕ್ಕೆ ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸುವಂತೆ ವರ್ಗಮಾಡಿದೆ.

ಆಕ್ಟಿಂಗ್ ಅ॥ ಕಮಿಷನರ್ ಮೆ॥ ಎ ಕೃಷ್ಣಸ್ವಾಮಿ ಐಯಂಗಾರ್ಯರನ್ನು ಕಡೂರ್ ಡಿಸ್ಟ್ರಿಕ್ಟಿನಲ್ಲಿ ಪೊಲೀಸ್ ಸೂಪರಿನ್‌ಟೆಂಡೆಂಟರ ಕೆಲಸಕ್ಕೆ ವರ್ಗಮಾಡಿದೆ.

ಪ್ರೊ॥ ಅ॥ ಕಮಿಷನರುಗಳಾದ ಮೆ॥ ಕೆ. ವಿ ಅನಂತರಾಮನ್‌ಯವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೂ, ಮೆ॥ ಎ ವಿ ರಾಮನಾಥನ್‌ಯವರನ್ನು ಮೈಸೂರು ಡಿಸ್ಟ್ರಿಕ್ಟಿಗೂ ವರ್ಗಮಾಡಿದೆ.

ಅಮಲ್ದಾರರುಗಳಾದ ಮೆ॥ ಎಸ್. ಶ್ರೀನಿವಾಸಯ್ಯಂಗಾರ್ಯರನ್ನೂ, ಮೆ॥ ಎಸ್ ಧರ್ಮರಾಯರನ್ನೂ, ಮೆ॥ ವೆಂಕಟರಮಣ ಶಾಸ್ತ್ರಿಗಳನ್ನೂ ಸ್ಪೆಷಲ್ ಡ್ಯೂಟಿಗೆ ನೇಮಿಸಿರೋಣದರಿಂದ ಶಿರಸ್ತೆದಾರರುಗಳಾದ ಪಿ ರಾಮಣ್ಣನವರೂ, ಎನ್ ನಾಗೇಶಶಾಸ್ತ್ರಿಗಳೂ, ಎನ್ ವೆಂಕಟಕೃಷ್ಣಯ್ಯನವರೂ ಹುಣಸೂರು, ನಂಜನಗೂಡು ಮತ್ತು ಚಾಮರಾಜನಗರ ತಾಲೂಕುಗಳ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಕೋಲಾರ್ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮೆ॥ ಪಿ ಎಫ್ ಬೌರಿಂಗ್ ಯವರನ್ನು ಶ್ರೀಮನ್ ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರ ಬಳಿ ಸ್ಪೆಷಲ್ ಡ್ಯೂಟಿಗಾಗಿ ನೇಮಿಸಿದೆ.

ಮೈಸೂರು ಇನ್‌ಫೆಂಟ್ರಿ ೩ ನೇ ಬಟಾಲಿಯನ್‌ನಲ್ಲಿ ಕಾಮಂಡಾಂಟ್ ಹರಿರಾಯರು ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವದರಿಂದ ರಾಂಸಿಂಗ್ ಯವರನ್ನು ಕಾಮಂಡಾಂಟರಾಗಿಯೂ ಪೀರ್‌ಖಾನ್‌ಯವರನ್ನು ಸುಬೇದಾರ್ ಮೇಜರಾಗಿಯೂ ಬಡತಿ ಮಾಡಲಾಗಿದೆ.

ಎಗ್ಸಿಕ್ಯುಟಿವ್ ಇನ್‌ಜನಿಯರುಗಳಾದ ಮೆ॥ ಡಿ. ಸೀತಾರಾಮರಾಯರಿಗೂ ಮೆ॥ ಜಿ ಸುಬ್ಬರಾಯರಿಗೂ ನವಂಬರ್ ತಾ ೧ ರಿಂದ ಎರಡು ತಿಂಗಳು ಇಪ್ಪತ್ತೊಂಬತ್ತು ಮತ್ತು ಮೂರು ತಿಂಗಳುಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್.

ಪ್ರತ್ಯಕ್ಷದರ್ಶಿ—ಸರ್ಜಾಪುರ, ಭಗವದ್ಭಕ್ತ—ಬಿಂಡಿಗನವಿಲೆ, ಸಿ ವೆಂಕೋಬರಾವ್—ಬೆಂಗಳೂರು ಸಿಟಿ, ವಿ ಜಿ ಕೆ—ರಾಬರ್ಟ್‌ಸನ್ ಪೇಟೆ, ಸಜ್ಜನವಿಧೇಯ—ಅನುವನಹಳ್ಳಿ, ಚಿತನ—ಚಿತ್ರದುರ್ಗ, ಪ್ರತ್ಯಕ್ಷದರ್ಶಿ—ಹೆಗ್ಗಂದ, ಬೊಂಬ್ಲಾಪುರ, ಮಾರಿಕುಪ್ಪ, ಮುಳಬಾಗಲ ಹನುಮಂತರಾವ್—ಮೈಸೂರು ಚಾಮರಾಜಪೇಟೆ, ಚಂದಾದಾರ—ಶ್ಯಾಮಗೊಂಡ್ಲು —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ —ಎಡಿಟರ್]

ಕರೆಸ್‌ಪಾಂಡೆನ್ಸ್

ಹಾಸನದ ವಾಣೀವಿಲಾಸ ಗರ್ಲ್ಸ್ ಸ್ಕೂಲು

ಅಯ್ಯಾ,

ಹಾಸನದ ಪುರವಾಸಿಗಳ ಮತ್ತು ಮೊಲ್ಬಂದ ಪಾಠಶಾಲಾ ಎಗ್ಸಿಕ್ಯುಟಿವ್ ಕಮಿಟಿ ಮೆಂಬರುಗಳ ಕೋರಿಕೆಯ ಮೇರೆ ಈ ಪಾಠಶಾಲೆಯ ಆಡಳಿತವನ್ನು ಮ್ಯುನಿಸಿಪಲ್ ಕೌನ್ಸಿಲ್ಗೆ ವರ್ಗಾಯಿಸಲು ಸರ್ಕಾರದವರು ದಯಮಾಡಿ ಅಪ್ಪಣೆಮಾಡಿ ಇರುವದಲ್ಲದೆ ಮ್ಯುನಿಸಿಪಾಲಿಟಿ ಬಾಬತು ಶಾಲೆಯಾನಾ ೩೬೦ ರೂಪಾಯಿ ಗ್ರಾಂಟಿನೊಂದಿಗೆ ಸರ್ಕಾರದಿಂದ ಮೊದಲು ಮಂಜೂರಾಗಿದ್ದ ೬೦ ರೂಪಾಯಿ ಗ್ರಾಂಟ್ ಮೊಬಲಗನ್ನೂ ಮಾಹೆಯಾನಾ ರೂ ೬೭—೧೪—೪ ಪೈಗೆ ಹೆಚ್ಚಿಸಿ ಇರುತ್ತಾರೆಂತ ಸರ್ವರಿಗೂ ಈ ಮೂಲಕ ತಿಳಿಸಿ ಇರುತ್ತೇನೆ.

ಈ ಪಾಠಶಾಲಾ ಚಂದಾದಾರರಿಗೂ ಮತ್ತು ಅಭಿಮಾನ ಕರ್ತರಿಗೂ ಅವರು ದಯಮಾಡಿ ಅನುಗ್ರಹಿಸಿದ ಸಹಾಯಕ್ಕಾಗಿ ಎಗ್ಸಿಕ್ಯುಟಿವ್ ಕಮಿಟಿಯವರ ಪರವಾಗಿ ನಾನು ಕೃತಜ್ಞತಾಪೂರ್ವಕವಾಗಿ ವಂದನೆಯನ್ನು ಒಪ್ಪಿಸುತ್ತೇನೆ.

ಹಾಸನ, ಹೆಚ್ ಶ್ರೀನಿವಾಸರಾವ್,
೪-೧೧-೧೯೦೯ ಗೌರವಕಾರ್ಯದರ್ಶಿ

[ಕಮಿಟಿಯವರೇ ಈ ಪಾಠಶಾಲೆಯನ್ನು ಎಂದಿನಂತೆ ನಡಿಸಿಕೊಂಡು ಬರಲಾರದೆ ಹೋದರಲ್ಲಾ ಎಂದು ವಿಷಾದಿಸುತ್ತೇವೆ. ಇದೇ ರೀತಿ ಅನೇಕ ಸ್ಕೂಲುಗಳು ಕೆಲವು ದಿನ ಸಾಹುಕಾರಿಯಾಗಿ ನಡೆದು, ಕಡೆಗೆ ಮ್ಯುನಿಸಿಪಾಲಿಟಿಗೋ ಗವರ್ನ್‌ಮೆಂಟಿಗೋ ವಹಿಸಲ್ಪಟ್ಟಿರುವವು. ಸ್ತ್ರೀ ವಿದ್ಯಾಭ್ಯಾಸವು ಪ್ರಚಾರಕ್ಕೆ ಬಂದು ಅಭಿವೃದ್ಧಿ ಹೊಂದಬೇಕಾದಲ್ಲಿ ಪ್ರಜೆಗಳೇ ಮುಖಂಡರಾಗಿ ನಿಂತು ಪಾಠಶಾಲೆಗಳನ್ನು ಇಟ್ಟು ತಾವೇ ನಡಿಸಿಕೊಂಡು ಬರಬೇಕಾಗಿರುತ್ತದೆ —
ಎಡಿಟರ್]

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆಗಳೂ ತೀರ್ಮಾನಗಳೂ

ನ್ಯಾಯ ನಿಬಂಧನೆಯ ವಿಷಯಗಳು

ಪ್ರತಿನಿಧಿಗಳ ಪ್ರಾರ್ಥನೆ —ಮೈಸೂರು ಚೀಫ್ ಕೋರ್ಟಿನಲ್ಲಿ ಒಬ್ಬ ಮಹಮದೀಯ ಜಡ್ಜಿಯನ್ನೂ, ಯಾವುದಾದರೊಂದು ಡಿಸ್ಟ್ರಿಕ್ಟಿಗೆ ಮಹಮದೀಯ ಡೆಪ್ಯುಟಿ ಕಮಿಷನರನ್ನೂ ನೇಮಕ ಮಾಡಿಕೊಡಬೇಕು

ದಿವಾನರವರ ಉತ್ತರ —ಒಳ್ಳೇದು, ಆಲೋಚನೆ ಮಾಡುತ್ತೇವೆ

ಪ್ರಾರ್ಥನೆ —ಎಲ್ಲಾ ಸ್ಥಳಗಳಲ್ಲೂ ಕಕ್ಷಿಗಾರರಿಗೆ ಲಾಯರುಗಳು ದೊರಕುವುದಿಲ್ಲ. ದೂರ ಸ್ಥಳಗಳಿಂದ ಹೆಚ್ಚು ರುಸುಂ ಕೊಟ್ಟು ಕರೆದು ತರಬೇಕಾಗುತ್ತದೆ ಇದರಿಂದ ಕಕ್ಷಿಗಾರರಿಗೆ ವಿಶೇಷ ಶ್ರಮವೂ ಹೆಚ್ಚು ದ್ರವ್ಯನಷ್ಟವೂ ಆಗುವುದು ಆದಕಾರಣ ಸರ್ಕಾರದವರು ಮೊಖ್ತ್ಯಾರರುಗಳಿಗೆ ಮೊಕದ್ದಮೆ ನಡಿಸುವಂತೆ ಅಪ್ಪಣೆ ಕೊಡಿಸಬೇಕು

ಉತ್ತರ —ಆಯಾ ಮ್ಯಾಜಿಸ್ಟ್ರೇಟರು ಇಷ್ಟಪಟ್ಟರೆ ಮೊಖ್ತ್ಯಾರರುಗಳನ್ನು ನೇಮಕ ಮಾಡಿಕೊಳ್ಳಬಹುದು ಎಂಬ ರೂಲಸು ಜಾರಿಯಲ್ಲಿದೆ ಇದನ್ನು ಚೀಫ್ ಕೋರ್ಟಿನವರು ರದ್ದು ಮಾಡಿಲ್ಲ

ಪ್ರಾರ್ಥನೆ —ಮ್ಯುನಿಸಿಪಾಲಿಟಿಗಳಲ್ಲಿ ಕೋರ್ಟು ಡಿಕ್ರಿಯ ಪ್ರಕಾರ ಭಿತ್ತಿಮಾನರು ಮನೆಗಳನ್ನು ಕಕ್ಷಿಗಾರರಿಗೆ ವಿಭಾಗಮಾಡಿಕೊಡುತ್ತಾರೆ ಇದರಿಂದ ಒಂದು ಮನೆಯು ಸಣ್ಣದಾದ, ಬೆಳಕು ಗಾಳಿ ಇಲ್ಲದ ಅನಾರೋಗ್ಯವಾದ ಸ್ಥಿತಿಗೆ ಬರುವುದಕ್ಕೆ ಕಾರಣವಾಗುವುದು ಇದನ್ನು ತಪ್ಪಿಸುವುದಕ್ಕೆ ಅಂಥಾ ವಿಭಾಗದ ಡಿಕ್ರಿಗಳನ್ನು ಸಿವಿಲ್ ಕೋರ್ಟಿನವರು ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಕಳುಹಿಸಿಕೊಡುವಂತಾಗಬೇಕು ಇವರು ಅಂಥಾ ಮನೆಗಳಿಗೆ ಹೋಗಿ ಸಾಧ್ಯವಾದರೆ ಆರೋಗ್ಯಕರವಾದ ರೀತಿಯಲ್ಲಿ ವಿಭಾಗಮಾಡಿ ಕೊಡುವರು, ಇಲ್ಲವೇ ಇತರರ ಭಾಗವನ್ನು ಒಬ್ಬನಿಗೆ ವಹಿಸಿ ಅವನಿಂದ ಅವರಿಗೆ ಪ್ರತಿ ಫಲವನ್ನು ದಸ್ತಾವೇಜು ಪ್ರಕಾರ ಕೊಡಿಸುತ್ತಾರೆ ಮನೆಯು ಅನಾರೋಗ್ಯಸ್ಥಿತಿಗೆ ಕಾರಣವಾಗುವುದಿಲ್ಲ

ಉತ್ತರ —ವಿಭಾಗಗಳನ್ನು ಮಾಡುವುದಕ್ಕೆ ಡೆಪ್ಯುಟಿ ಕಮಿಷನರನ್ನೇ ಕಮಿಷನರಾಗಿ ನೇಮಿಸಬೇಕು ಇದಕ್ಕೆ ಬರೀ ಹುಕುಂ ಕೊಟ್ಟರೆ ಸಾಲದು, ಕಾನೂನೇ ಮಾಡಬೇಕಾಗುವುದು

ಪ್ರಾರ್ಥನೆ —ಸಣ್ಣ ಪುಟ್ಟ ಕಳುವುಗಳನ್ನು ಗ್ರಾಮದಲ್ಲೇ ಪಟೇಲರು ವಿಚಾರಣೆ ಮಾಡಿ ಇತ್ಯರ್ಥ ಪಡಿಸುವುದಕ್ಕೆ ಏರ್ಪಾಡು ಮಾಡಿಕೊಡಬೇಕು

ಉತ್ತರ —ಒಳ್ಳೇದು ಯೋಚಿಸುತ್ತೇವೆ

ಪ್ರಾರ್ಥನೆ —ಸಿವಿಲ್ ಕೋರ್ಟುಗಳಲ್ಲಿ ವರುಷಾಂತರಗಳು ಕಳೆದುಹೋದರೂ ಮೊಕದ್ದಮೆಗಳು ಫೈಸಲಾಗದೆ ಕಕ್ಷಿಗಾರರಿಗೆ ತುಂಬಾ ಕಷ್ಟನಷ್ಟಗಳಾಗುತ್ತವೆ ಹೀಗೆ ಸಾವಕಾಶವಾಗುವುದಕ್ಕೆ ಕಾರಣವೇನೆಂಬುದನ್ನು ವಿಚಾರಣೆಯಿಂದ ತಿಳಿದು ಪರಿಹಾರಗಳನ್ನು ಕಲ್ಪಿಸಿಕೊಡಬೇಕು

ಉತ್ತರ —ಈ ರೀತಿ ಸಿವಿಲ್ ವ್ಯಾಜ್ಯಗಳು ನಿಧಾನವಾಗಿ ಫೈಸಲಾಗುವುದಕ್ಕೆ ಕಾರಣವೇನೆಂದು ಗವರ್ನ್‌ಮೆಂಟಿನವರು ವಿಚಾರಮಾಡಿ ನೋಡಿದ್ದರಲ್ಲಿ ಬಹುತರ ಲಾಯರುಗಳಿಂದಲೇ ಸಾವಕಾಶವಾಗುತ್ತೆಂದೂ, ಕೆಲವು ಸಂದರ್ಭಗಳಲ್ಲಿ ಸಮನ್ ಜಾರಿ ಆಗದೆ ನಿಧಾನವಾಗುತ್ತೆಂದೂ ತಿಳಿದು ಬಂತು ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಲಾಯರುಗಳ ಸಂಘಗಳು ಇರುತ್ತವೆ ಲಾಯರುಗಳು ಅಲ್ಲಿ ಸೇರಿ ಈ ವಿಷಯವನ್ನು ಚರ್ಚೆ ಮಾಡಿ, ಅದಕ್ಕೆ ಪರಿಹಾರಗಳನ್ನು ಬರೆದು ಗವರ್ನ್‌ಮೆಂಟಿಗೆ ಕಳುಹಿಸಿದರೆ ತುಂಬಾ ಉಪಕಾರವಾದೀತು

ಪ್ರಾರ್ಥನೆ —ಸರ್ಕಾರಿ ಅಧಿಕಾರಿಗಳ ಮತ್ತು ನೌಕರವರ್ಗದವರುಗಳ ನಡವಳಿಕೆಗಳನ್ನು ಗೋಪ್ಯವಾಗಿ ತನಿಖೆ ಮಾಡಿ ಗವರ್ನ್‌ಮೆಂಟಿಗೆ ರಿಪೋರ್ಟು ಮಾಡುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡಬೇಕು ಇದರಿಂದ ಸರ್ಕಾರಿ ನೌಕರರ ಅನ್ಯಾಯ ಪ್ರವರ್ತನೆಗಳಿಗೂ ಪ್ರಜೆಗಳ ಕಷ್ಟನಷ್ಟಗಳಿಗೂ ತಪ್ಪಿಹೋಗುವುವು

ಉತ್ತರ —(ಇದನ್ನು ಸೂಚಿಸಿದ ಮೆಂಬರು ಈ ವಿಷಯವನ್ನು ವಾಪಸು ತೆಗೆದುಕೊಳ್ಳುತ್ತೇನೆಂದು ಹೇಳಿದರು) ಕಷ್ಟಪಟ್ಟು ಕೆಲಸ ಮಾಡುವಂಥಾ ಅಧಿಕಾರಿಗಳ ಮೇಲೂ ನೌಕರರ ಮೇಲೂ ಕೆಟ್ಟ ದುರಭಿಪ್ರಾಯವನ್ನು ಹುಟ್ಟಿಸುವಂಥಾ ವಿಷಯವಾಗಿದೆ ಇಂಥಾ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂತಲ್ಲಾ ಎಂದು ವಿಷಾದಿಸಬೇಕು ಆದರೆ ನೀವು ಈ ಸಂಗತಿಯನ್ನು ವಾಪಸು ತೆಗೆದುಕೊಳ್ಳುತ್ತೇನೆಂದು ಹೇಳಿದ್ದು ಸಂತೋಷವಾಗಿದೆ

ನ್ಯಾಯಸ್ಥಾನ ವಿಚಾರಗಳು

ಪ್ರಾರ್ಥನೆ —ಸೆಂಟ್ರಲ್ ನಾಜರ್ ಏರ್ಪಾಡನ್ನು ಮಾಡಿರೋದರಿಂದ ಕೋರ್ಟುಗಳಲ್ಲಿ ಸಮರ್ ಮುಂತಾದವುಗಳು ತೃಪ್ತಿಕರವಾಗಿ ಜಾರಿ ಆಗದೆ, ಮೊಕದ್ದಮೆಗಳು ಜಾಗ್ರತೆಯಿಂದ ಇತ್ಯರ್ಥವಾಗಲು ತುಂಬಾ ಅಡಚಣೆ ಆಗಿದೆ ಇದನ್ನು ವಜಾ ಮಾಡಿಬಿಟ್ಟು, ಪೂರ್ವದಲ್ಲಿದ್ದಂತೆ ಆಯಾ ಕೋರ್ಟಿಗೆ ಪ್ರತ್ಯೇಕವಾದ ಸಮರ್ ಜವಾನರನ್ನು ನೇಮಕಮಾಡಿಕೊಡಬೇಕು

ಉತ್ತರ —ಸೆಂಟ್ರಲ್ ನಾಜರ್ ಏರ್ಪಾಡಿನಿಂದ ತೃಪ್ತಿಕರವಾಗಿ ಕೆಲಸಗಳು ನಡೆಯುತ್ತಲಿವೆ ಎಂದು ಚೀಫ್ ಕೋರ್ಟಿನವರು ಅಭಿಪ್ರಾಯ ಪಡುತ್ತಾರೆ ಗವರ್ನ್‌ಮೆಂಟಿನವರು ಈ ಬಾಬಿನಲ್ಲಿ ಬೇರೆ ಏರ್ಪಾಡು ಮಾಡಬೇಕೆಂದು ಆಲೋಚಿಸುತ್ತಿದ್ದಾರೆ ಇದು ಜಾಗ್ರತೆಯಿಂದ ಆದೀತೆಂದು ನಿರೀಕ್ಷಿಸಲ್ಪಟ್ಟಿದೆ

ಪ್ರಾರ್ಥನೆ —ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರು ಕಾಪಿಗಳನ್ನು ಪಡೆಯಬೇಕಾದರೆ ಕಾಪಿ ಫೀಜನ್ನು ಬಹಳ ಹೆಚ್ಚಾಗಿ ಕೊಡಬೇಕಾಗಿದೆ ಸರ್ಕಾರದವರು ಪ್ರತಿ ಒಂದು ಕೋರ್ಟಿನಲ್ಲೂ ಕಾಪಿ ಬರೆಯುವವರಿಗೆ ಸಂಬಳ ಗೊತ್ತುಮಾಡಿ, ಕಾಪಿ ಫೀಜನ್ನು ಅರ್ಧ ಕಡಮೆಮಾಡಿಕೊಡಬೇಕು

ಉತ್ತರ —ಈ ಫೀಜು ಈಗಲೇ ಕಡಮೆ ಆಗಿದೆ ಇನ್ನೂ ಕಡಮೆಯಾದ ಲಾಗದೆಂದು ಚೀಫ್ ಕೋರ್ಟಿನವರು ಅಭಿಪ್ರಾಯಪಟ್ಟಿದ್ದಾರೆ ಇದನ್ನು ಕಡಮೆ ಮಾಡುವುದಿಲ್ಲ

ಪ್ರಾರ್ಥನೆ —ತಾಲ್ಲೂಕುಗಳಲ್ಲಿ ಅಮಲ್ದಾರರು ೧೧ ಗಂಟೆಗೆ ಕಚೇರಿಗೆ ಬರುವುದಿಲ್ಲ ಅವರು ಸಾವಕಾಶವಾಗಿ ಬರುತ್ತಾರೆಂದು ಊಹಿಸಿ ಕ್ರಿಮಿನಲ್ ಮೊಕದ್ದಮೆಗಳ ಕಕ್ಷಿಗಾರರು ಸ್ವಲ್ಪ ಹೊತ್ತು ಮೀರಿ ಹೋಗುವಷ್ಟರಲ್ಲೇ ಮೊಕದ್ದಮೆಗಳನ್ನು ಕೂಗಿಸಿ ಡಿಸ್ಮಿಸ್‌ಮಾಡಿಬಿಡುತ್ತಾರೆ ಇದರಿಂದ ಕಕ್ಷಿಗಾರರಿಗೆ ಕಷ್ಟನಷ್ಟಗಳುಂಟಾಗುತ್ತವೆ ಆದಕಾರಣ ಅಮಲ್ದಾರರು ಸಾಯಂಕಾಲ ೫ ಗಂಟೆಯ ತನಕ ಮೊಕದ್ದಮೆಗಳನ್ನು ವಜಾಮಾಡದಂತೆ ಅಪ್ಪಣೆ ಆಗಬೇಕು

ಉತ್ತರ —ಒಳ್ಳೆ ಮ್ಯಾಜಿಸ್ಟ್ರೇಟರಿಗೆ ರೂಲಸು ಅವಶ್ಯಕವಿಲ್ಲ ಕೆಟ್ಟವರಿಗೆ ಎಷ್ಟು ರೂಲಸು ಮಾಡಿಟ್ಟರೂ ತಪ್ಪಿಸಿಕೊಳ್ಳುವುದಕ್ಕೆ ದಾರಿ ಇವೆ ಅವರು ಹಾಗೆ ವಜಾಮಾಡಿರುವ ಒಂದೆರಡು ಮೊಕದ್ದಮೆಗಳನ್ನು ಗವರ್ನ್‌ಮೆಂಟಿಗೆ ತೆಗೆದುಕೊಂಡು ಬನ್ನಿ ಅಂಥಾ ಆಫೀಸರಿಗೆ ಕಠಿಣವಾದ ಶಿಕ್ಷೆ ಮಾಡುತ್ತೇವೆ

ಪ್ರಾರ್ಥನೆ —ದಾವಾ ದಾಖಲ್ ಮಾಡುವಾಗ್ಗೆ ಕಕ್ಷಿಗಾರರು ಪೂರಾ ಸ್ಟ್ಯಾಂಪನ್ನೇ ಕೊಡಬೇಕೆಂದೂ, ಪ್ರತಿವಾದಿಯ ತಕರಾರು ಬಾರದಿದ್ದರೆ ಅರ್ಧ ಸ್ಟ್ಯಾಂಪನ್ನು ವಾಪಸು ವಾದಿಗೆ ವಾಪತಿ ಆಗಬೇಕೆಂದೂ ರೂಲಸು ಮಾಡಿದೆ ಈ ಅರ್ಧ ಸ್ಟ್ಯಾಂಪು ವಾದಿಗೆ ವಾಪತಿ ಆಗುವದು ಬಹಳ ಪ್ರಯಾಸ ವಾದಿಗೆ ನಷ್ಟವಾಗುತ್ತದೆ ಆದದ್ದರಿಂದ ಎಲ್ಲಾ ಸಿವಿಲ್ ದಾವಾಗಳಲ್ಲೂ ಮೊದಲು ಅರ್ಧ ಸ್ಟ್ಯಾಂಪನ್ನು ಮಾತ್ರ ಕಕ್ಷಿಗಾರರಿಂದ ತೆಗೆದುಕೊಳ್ಳುವಂತೆಯೂ, ತಕರಾರು ಬಂದರೆ ಉಳಿದ ಅರ್ಧವನ್ನು ತೆಗೆದುಕೊಳ್ಳುವಂತೆಯೂ ರೂಲಸು ಬದಲಾಯಿಸಿಕೊಡಬೇಕು ಮದರಾಸ್ ಸ್ಮಾಲ್‌ಕಾಸ್ ಕೋರ್ಟುಗಳಲ್ಲಿ ಈ ರೀತಿ ಜಾರಿಯಲ್ಲಿದೆ

ಉತ್ತರ —ಈ ವಿಚಾರವನ್ನು ಚೀಫ್ ಕೋರ್ಟಿನವರ ಅಭಿಪ್ರಾಯದ ಬಗ್ಗೆ ಕಳುಹಿಸಿಕೊಡುತ್ತೇವೆ

ಪ್ರಾರ್ಥನೆ —ವಿಭಾಗಪತ್ರಗಳಿಗೆ ಈಗ ಸಾವಿರಕ್ಕೆ ೫ ರೂಪಾಯಿನಂತೆ ಕೊಡಬೇಕು ಇದು ಹೆಚ್ಚಾಗಿರೋದರಿಂದ ಅನೇಕರು ವಿಭಾಗ ಪತ್ರಗಳನ್ನು ಖಾಲಿ ಕಾಗದದಲ್ಲೇ ಬರೆದುಕೊಳ್ಳುತ್ತಾರೆ ಇದನ್ನು ತಪ್ಪಿಸಿ ಮೊದಲನೇ ಸಾವಿರಕ್ಕೆ ೨| ರೂಪಾಯಿಯೂ, ೫,೦೦೦ದ ವರೆಗೆ ಪ್ರತಿ ೫೦೦ಕ್ಕೂ ೧ ರೂಪಾಯಿನಂತೆಯೂ ಸ್ಟ್ಯಾಂಪು ಕಾಗದ ಕೊಂಡುಕೊಳ್ಳತಕ್ಕದ್ದೆಂದು ದರವನ್ನು ಕಡಮೆ ಮಾಡಿಕೊಟ್ಟರೆ ಸರ್ಕಾರಕ್ಕೆ ಉತ್ಪತ್ತಿ ಹೆಚ್ಚಾಗುವುದು, ವಿಭಾಗದ ಪತ್ರಗಳು ಕ್ರಮವಾಗಿ ಬರೆದು ರೆಜಿಸ್ಟರು ಮಾಡಿಸಿಕೊಳ್ಳುವುದಕ್ಕೆ ಪ್ರಜೆಗಳಿಗೆ ತುಂಬಾ ಸಹಾಯವಾಗುವುದು

ಉತ್ತರ —ಒಳ್ಳೇದು ಈ ವಿಚಾರವನ್ನು ಆಲೋಚನೆ ಮಾಡುತ್ತೇವೆ

ಪ್ರಾರ್ಥನೆ —ಕ್ರಿಮಿನಲ್ ಕೋರ್ಟು ಜಡ್ಜ್‌ಮೆಂಟುಗಳ ಕಾಪಿ ಬೇಕಾದರೆ ಕಕ್ಷಿಗಾರರು ಬಹಳ ಹಣವನ್ನು ಕೊಡಬೇಕಾಗಿದೆ ಪ್ರತಿ ೩೦ ಮಾತುಗಳಿಗೂ ೮ ಆಣೆ ರುಸುಂ ತೆಗೆದುಕೊಳ್ಳುತ್ತಾರೆ ಸಿವಿಲ್ ಕೋರ್ಟುಗಳಲ್ಲಾದರೋ ಜಡ್ಜ್‌ಮೆಂಟು ಎಷ್ಟು ದೊಡ್ಡದಾಗಿದ್ದರೂ ೮ ಆಣೆ ಮಾತ್ರ ವಸೂಲಾಗುವದು ಇದೇ ರೀತಿ ಕ್ರಿಮಿನಲ್ ಕೋರ್ಟು ಜಡ್ಜ್‌ಮೆಂಟುಗಳಿಗೂ ಭಾಜನ ದರವನ್ನು ಗೊತ್ತುಮಾಡಿ ಕೊಡಬೇಕು

ಉತ್ತರ —ಈ ಸಂಗತಿಯನ್ನು ತನಿಖೆ ಮಾಡಿಸುತ್ತೇವೆ

ಪ್ರಾರ್ಥನೆ —ಆಸ್ತಿಯ ಹಕ್ಕುದಾರಿ ಸರ್ಟಿಫಿಕೇಟು ಬೇಕೆಂದು ಅರ್ಜಿ ಹಾಕಿದರೆ ಆಸ್ತಿಯು ೧,೦೦೦ ರೂಪಾಯಿನೊಳಗಿದ್ದರೆ ಫೀಜನ್ನೂ ತೆಗೆದುಕೊಳ್ಳುತ್ತಿರಲಿಲ್ಲ ೧೯೦೧ನೇ ಇಸವಿಯಿಂದ ಈಚೆಗೆ ಶೇಕಡ ೨ ರೂಪಾಯಿನಂತೆ ಫೀಜು ಕೊಡಬೇಕೆಂದು ವಿಧಿಸಿದ್ದಾರೆ ೧೦೦-೨೦೦ ರೂಪಾಯಿ ಆಸ್ತಿ ಉಳ್ಳ ಬಡವರು ಈ ಫೀಜು ಕೊಡುವದು ಕಷ್ಟವಾಗಿರೋದರಿಂದ ಅದನ್ನು ತಪ್ಪಿಸಿ ಪೂರ್ವದಲ್ಲಿದ್ದಂತೆ ಮಾಡಿಕೊಡಬೇಕು ಇಲ್ಲವೇ ೫೦೦ ರೂಪಾಯಿನೊಳಗಿರುವ ಆಸ್ತಿಗಾದರೂ ಸ್ಟ್ಯಾಂಪನ್ನು ಮಾಫಿ ಬಿಡಬೇಕು

ಉತ್ತರ —ಬಹಳ ಆಲೋಚನೆಮಾಡಿ ಈಗಿನ ರೂಲಸು ಮಾಡಿದೆ ಇದನ್ನು ಈಗಲೇ ಬದಲಾಯಿಸಲಾಗುವುದಿಲ್ಲ

ಪ್ರಾರ್ಥನೆ —ಸಿವಿಲ್ ಮೊಕದ್ದಮೆಗಳಲ್ಲಿ ಖಾತೆ ಎಕ್ಸ್‌ಟ್ರ್ಯಾಕ್ಟನ್ನು ಹಾಜರ್ಮಾಡಬೇಕೆಂಬ ನಿರ್ಬಂಧವಿದೆ ಆಧಾರದ ಪತ್ರದಲ್ಲೇ ಜಮೀನಿನ ವಿವರಣೆ ಸ್ಪಷ್ಟವಾಗಿ ಕಾಣಿಸಿ ಬರೆಯಲ್ಪಟ್ಟಿರೋದರಿಂದ ಮತ್ತೆ ಎಕ್ಸ್‌ಟ್ರ್ಯಾಕ್ಟು ಹಾಜರ್ಮಾಡುವುದನ್ನು ತಪ್ಪಿಸಿಕೊಡಬೇಕು

ಉತ್ತರ —ಈ ವಿಷಯವನ್ನು ಇತ್ಯರ್ಥದ ಬಗ್ಗೆ ಚೀಫ್ ಕೋರ್ಟಿಗೆ ಕಳುಹಿಸುತ್ತೇವೆ

ಪ್ರಾರ್ಥನೆ —ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಾಕ್ಷಿಗಳಿಗೆ ಸರ್ಕಾರದಿಂದಾಗಲಿ ಕಕ್ಷಿಗಾರರಿಂದಾಗಲಿ ಭತ್ಯ ಪಾವತಿಯಾಗುವಂತೆ ಮಾಡಿಕೊಡಬೇಕು ಕುಂಫಣೀ ಸೀಮೆಯಲ್ಲಿ ಇದು ಜಾರಿಯಲ್ಲಿದೆ

ಉತ್ತರ —ಇದು ಸಾಧ್ಯವಲ್ಲ

ಪ್ರಾರ್ಥನೆ —ಸಿವಿಲ್ ಕೋರ್ಟುಗಳಲ್ಲಿ ಮುಖ್ಯವಾದ ರಿಕಾರ್ಡುಗಳನ್ನು ದೀರ್ಘಕಾಲ ಇಟ್ಟರದೆ ಸುಟ್ಟುಬಿಡುತ್ತಾರೆ ಇದರಿಂದ ಕಕ್ಷಿಗಾರರಿಗೆ ಬಹಳ ನಷ್ಟವಾಗುವುದು ಜಾರಿ ಅರ್ಜಿ, ಸಾಕ್ಷಿಗಳ ಕೈಫಿಯತ್ತು, ಎಗ್ಜಿಬಿಟ್ಟುಗಳು, ಜಪ್ತಿಪಟ್ಟಿ, ಹರಾಜು ಸರ್ಟಿಫಿಕೇಟು, ಈ ಐದು ರಿಕಾರ್ಡುಗಳನ್ನು ೩೦ ವರುಷಗಳ ವರೆಗೆ ನಾಶಪಡಿಸದಂತೆ ಹುಕುಂ ಆಗಬೇಕು

ಉತ್ತರ —ಯೋಚನೆಮಾಡುತ್ತೇವೆ

ಪ್ರಾರ್ಥನೆ —ಡಿಕ್ರಿ ಹಣ ಕೋರ್ಟಿಗೆ ಕಟ್ಟಿದ ಸಂಗತಿ ಡಿಕ್ರಿದಾರನಿಗೆ ತಿಳಿಯದೆ ಬಹಳ ಕಾಲದವರೆಗೆ ಕೋರ್ಟಿನಲ್ಲೇ ಉಳಿದಿರುತ್ತದೆ ಡಿಕ್ರಿದಾರನಿಗೆ ಕೋರ್ಟಿನಿಂದ ನೋಟೀಸ್ ಕೊಡುವಂತೆ ಮಾಡಿಕೊಟ್ಟರೆ ಅವನು ಕೋರ್ಟಿಗೆ ಹಾಜರಾಗಿ ಹಣವನ್ನು ವಾಪತಿ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ

ಉತ್ತರ —ಸಿವಿಲ್ ಪ್ರೊಸೀಜರ್ ಕಾನೂನನ್ನು ಬದಲಾವಣೆ ಮಾಡುವುದರಲ್ಲಿದೇವೆ ಈ ಭಾಗವನ್ನು ಅದರಲ್ಲಿ ಸೇರಿಸಿ, ನೋಟೀಸ್ ಕೊಡುವಂತೆ ಮಾಡುತ್ತೇವೆ

ಪ್ರಾರ್ಥನೆ —ಕೋರ್ಟಿಗೆ ಹಾಜರ್ಮಾಡಿದ ಪತ್ರಗಳನ್ನು ಒಂದು ತಿಂಗಳೊಳಗಾಗಿ ತೆಗೆದುಕೊಳ್ಳಬೇಕೆಂಬ ವಿಧಿಯನ್ನು ತಪ್ಪಿಸಿ, ಎರಡು ತಿಂಗಳ ಅವಧಿಯನ್ನು ಕಲ್ಪಿಸಿ ಕೊಡಬೇಕು

ಉತ್ತರ —ಈ ವಿಷಯವನ್ನು ಚೀಫ್ ಕೋರ್ಟಿಗೆ ತಿಳಿಸುತ್ತೇವೆ

ಪ್ರಾರ್ಥನೆ —ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಸಾಕ್ಷಿಗಳೂ ಕಕ್ಷಿಗಾರರೂ ಕಾಯಿಲೆ ನಿಮಿತ್ತ ಹೋಗುವುದಕ್ಕಾಗದೆ ಇದ್ದರೆ ಸ್ಥಳೀಯ ಡಾಕ್ಟರುಗಳು ಅಂಥವರನ್ನು ನೋಡಿ ಸರ್ಟಿಫಿಕೇಟು ಕೊಡುವಂತೆ ಆಗಬೇಕೆಂದು ಕೇಳಿದ್ದೆವು ಇದು ಸಮ್ಮತವಲ್ಲವೆಂದು ಹೋದ ವರುಷ ಹುಕುಂ ಆಯಿತು ಕಾಯಿಲೆಯವರೇ ಸ್ವತಃ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡರೆ ಡಾಕ್ಟರು ಸರ್ಟಿಫಿಕೇಟು ಕೊಡಬೇಕೆಂದೂ, ಅವರನ್ನು ಮನೆಗೆ ಕರೆಸಿಕೊಂಡಾಗ್ಗೆ ಅವರಿಗೆ ಅದಕ್ಕಾಗಿ ಫೀಜು ಕೊಡತಕ್ಕದ್ದೆಂದೂ ಹುಕುಂ ಆಗಬೇಕು

ಉತ್ತರ —ಇದು ಸ್ವಂತ ಕೆಲಸವಾದದ್ದರಿಂದ ಡಾಕ್ಟರು ಪುಕ್ಕಟ್ಟಾಗಿ ಸರ್ಟಿಫಿಕೇಟು ಕೊಡಲಾಗದು ಎಂದು ಸೀನಿಯರ್ ಸರ್ಜನ್ ರವರು ಹೇಳುತ್ತಾರೆ ರೋಗಿಯು ಯಾವ ವೈದ್ಯನಲ್ಲಿ ಔಷಧ ತೆಗೆದುಕೊಳ್ಳುತ್ತಾನೋ ಅಂಥಾ ಇಂಗ್ಲಿಷ್ ಅಥವಾ ದೇಶೀಯ ಪಂಡಿತನಿಂದ ಸರ್ಟಿಫಿಕೇಟು ಪಡೆದು ಕೋರ್ಟಿಗೆ ಕಳುಹಿಸಬಹುದಾಗಿದೆ ಅದನ್ನು ಕೋರ್ಟಿನವರು ಅಂಗೀಕರಿಸುತ್ತಾರೆ

ಪ್ರಾರ್ಥನೆ —ಹೆಂಗಸರು ಖೈದಿಗಳಾಗಿ ಲಾಕಪ್ಪಿನಲ್ಲಿದ್ದರೆ ಅವರುಗಳಿಗೆ ಹೆಂಗಸರನ್ನೇ ಕಾವಲು ನೇಮಿಸಬೇಕು ಇದಲ್ಲದೆ ಡಾಕ್ಟರುಗಳೂ ಸಬ್ ರೆಜಿಸ್ಟ್ರಾರುಗಳೂ ಲಾಕಪ್ ಅಧಿಕಾರಿಗಳಾಗಿರುವುದು ಬೆಸರು ಮಾತ್ರಕ್ಕೆ ಹೊರತು ವಿಚಾರಣೆಯಲ್ಲಿರುವ ಖೈದಿಗಳು ಪೋಲೀಸಿನವರ ಸ್ವಾಧೀನದಲ್ಲೇ ಇರುತ್ತಾರೆ ಲಾಕಪ್ಪುಗಳು ಪೋಲೀಸ್ ಠಾಣಾಗಳಲ್ಲೇ ಇರುತ್ತವೆ ಲಾಕಪ್ಪುಗಳನ್ನು ಬೇರೆ ಕಡೆ ಕಟ್ಟಿಸಿ ಕೊಡಬೇಕು ಮತ್ತು ಪೋಲೀಸಿಗೆ ಸಂಬಂಧಪಡದಂಥಾ ಕಾವಲುಗಾರರನ್ನು ಅಲ್ಲಿ ನೇಮಿಸಬೇಕು ಅವಶ್ಯಬಿದ್ದಾಗ ಪೋಲೀಸಿನವರು ಖೈದಿಗಳನ್ನು ಕೋರ್ಟಿಗೆ ಕರೆದುಕೊಂಡು ಹೋಗುವಂತೆಯೂ, ವಿಚಾರಣೆ ಆದ ಮೇಲೆ ವಾಪಸು ತಂದುಬಿಡುವಂತೆಯೂ ಆದರೆ ಎಷ್ಟೋ ಉಪಕಾರವಾಗುತ್ತದೆ

ಉತ್ತರ —ಇದು ಒಳ್ಳೇ ಅಭಿಪ್ರಾಯ ಅವಶ್ಯ ಮಾಡಬೇಕಾದದ್ದು ಹಣ ಒದಗಿದ ಹಾಗೆ ಮಾಡುವೆವು ಹೆಂಗಸರ ಕಾವಲಿಗೆ ಹೆಂಗಸರನ್ನೇ ನೇಮಿಸಬೇಕೆಂಬ ವಿಧಿ ಇದೆ ಈ ರೀತಿ ಜಾರಿಯಲ್ಲೂ ಇದೆ

ಪ್ರಾರ್ಥನೆ —ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಾಲ್ಯ ವಯಸ್ಸಿನ ಖೈದಿಗಳಿಗೆ ವಿದ್ಯೆ ಮತ್ತು ಕಸಬುಗಳನ್ನು ಕಲಿಸುವಂತೆ ಏರ್ಪಾಡಾಗಬೇಕು

ಉತ್ತರ —ಈಗ ಅವರಿಗೆ ಓದು ಬರಹವನ್ನೂ ಕಬ್ಬಿಣ ಕೆಲಸ ಮರಕೆಲಸ ಮುಂತಾದ ಕಸಬುಗಳನ್ನೂ ಕಲಿಸುತ್ತಿದ್ದಾರೆ ಸರ್ಕಾರದವರು ಇಷ್ಟರಲ್ಲೇ ಬಾಲ್ಯವಯಸ್ಸಿನ ಖೈದಿಗಳನ್ನು ಪ್ರತ್ಯೇಕವಾದ ಕಟ್ಟಡದಲ್ಲಿ ಇಟ್ಟು, ಅವರಿಗೆ ಬೇರೆ ಕಸಬುಗಳನ್ನೂ ಕಲಿಸಿಕೊಡಬೇಕೆಂದು ಯೋಚಿಸುತ್ತಿರುವರು

ಪ್ರಾರ್ಥನೆ —ಸಾಯುವ ಸ್ಥಿತಿಯಲ್ಲಿರುವಂಥಾ ಬಂದೀಖಾನೆಯವರನ್ನು ಜೈಲುಗಳಿಂದ ಬಿಟ್ಟುಕೊಡಬೇಕು

ಉತ್ತರ —ಅಂಥವರನ್ನೂ ವಾಸಿಯಾಗದ ರೋಗದಲ್ಲಿ ನರಳುವಂಥವರನ್ನೂ ಡಾಕ್ಟರ ಅಭಿಪ್ರಾಯದಂತೆ ಬಂದೀಖಾನೆಯಿಂದ ಬಿಡಿಸಬಹುದು ಎಂಬ ಹುಕುಂ ಇದ್ದೇ ಇದೆ ಕೆಲವು ಕಾಲಕ್ಕೆ ಮುಂಚೆ ಇದೇ ರೀತಿ ಶಿವಮೊಗ್ಗೆಯಲ್ಲಿ ಒಬ್ಬ ಖೈದಿಯನ್ನು ಖುಲಾಸ್ ಮಾಡಿರುತ್ತಾರೆ

ಪ್ರಾರ್ಥನೆ —ರೆಜಿಸ್ಟ್ರೇಷನ್ ಆಫೀಸುಗಳಲ್ಲಿ ಅರ್ಜಿಗಳು ನಮೂನೆಗಳು ಇಂಗ್ಲೀಷಿನಲ್ಲಿರುತ್ತವೆ ಕನ್ನಡದಲ್ಲಿದ್ದರೆ ತುಂಬಾ ಅನುಕೂಲ

ಉತ್ತರ —ಆಗ ಬಹುದು, ಆ ರೀತಿ ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಕೋರ್ಟುಗಳಲ್ಲಿ ಕಾಪಿ ಕೇಳಿದರೆ ೧೦೦ ಮಾತಿಗೆ ೧ ಆಣೆಯಂತೆ ಬರವಣಿಗೆ ರುಸುಂ ತೆಗೆದುಕೊಳ್ಳುತ್ತಾರೆ ರೆಜಿಸ್ಟರ್ ಆಫೀಸಿನಲ್ಲಿ ಮಾತ್ರ ೧೦೦ ಮಾತಿಗೆ ೪ ಆಣೆಯಂತೆ ರುಸುಂ ಕೊಡಬೇಕು

ಉತ್ತರ —ಈ ದರವನ್ನು ಯಾಕೆ ಇಷ್ಟು ಹೆಚ್ಚಾಗಿ ಇಟ್ಟಿದ್ದಾರೆಯೋ ತಿಳಿಯಲಿಲ್ಲ ವಿಚಾರಿಸುತ್ತೇವೆ

ಪ್ರಾರ್ಥನೆ —ರೆಜಿಸ್ಟ್ರಾರ್ ಆಫೀಸುಗಳಲ್ಲಿ ಸ್ವಂತ ಉಪಯೋಗಕ್ಕೆ ಪತ್ರಗಳ ನಕಲುಗಳನ್ನು ಖಾಲೀಕಾಗದದ ಮೇಲೆ ಬರೆದುಕೊಡಿ ಎಂದರೆ ಒಂದು ರೂಪಾಯಿ ಸ್ಟ್ಯಾಂಪು ಹಾಜರ್ಮಾಡಬೇಕು ಎನ್ನುತ್ತಾರೆ ಇದನ್ನು ತಪ್ಪಿಸಿ ಕಾಪಿ ರುಸುಂ ಮಾತ್ರ ಇಟ್ಟು ಕೊಡಬೇಕು

ಉತ್ತರ —ಈ ವಿಚಾರದಲ್ಲಿ ಚೀಫ್ ಕೋರ್ಟಿನವರ ಅಭಿಪ್ರಾಯವನ್ನು ಅನುಮೋದಿಸಿರುತ್ತೇವೆ ನೀವು ಕೇಳುವುದು ಸಾಧ್ಯವಲ್ಲ

ಪ್ರಾರ್ಥನೆ —೫೦ ರೂಪಾಯಿನೊಳಗಿರುವ ಗುತ್ತಿಗೆ ಕರಾರು (ಗೇಣಿಚೀಟಿ) ರೆಜಿಸ್ಟರಾಗಬೇಕಾದದ್ದಿಲ್ಲವೆಂದು ವಿಧಾಯಕವಾಗಿದೆ ಅದನ್ನು ೧೦೦ ರೂಪಾಯಿ ವರೆಗೆ ಹೆಚ್ಚಿಸಿಕೊಡಬೇಕು

ಉತ್ತರ —ಇದು ಆಗಲಾರದು

ಪ್ರಾರ್ಥನೆ —ಯೂನಿಯನ್ ಪಂಚಾಯಿತಿ ಗ್ರಾಮಗಳಲ್ಲಿ ಪ್ರಜೆಗಳೇ ರಾತ್ರಿ ಕಾವಲು ನಡಿಸುವಂತೆ ಅಪ್ಪಣೆ ಆಗಬೇಕು

ಉತ್ತರ —ಈ ವಿಷಯವನ್ನು ಡೆಪ್ಯುಟಿ ಕಮಿಷನರಿಗೂ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ರವರಿಗೂ ತಿಳಿಸಿ ಹೇಳಿಕೊಂಡರೆ ಅವರು ಕ್ರಮಪಡಿಸಿಕೊಡುತ್ತಾರೆ

ಪ್ರಾರ್ಥನೆ —ಪೋಲೀಸ್ ಇಲಾಖೆಯಲ್ಲಿ ಸಣ್ಣ ನೌಕರರ ಸಂಬಳವನ್ನು ಹೆಚ್ಚು ಮಾಡದಿದ್ದರೆ ವಿದ್ಯಾವಂತರೂ ಪಾಪಭೀರುಗಳೂ ಸಿಕ್ಕುವುದು ಕಷ್ಟ ತೋಟಿ ತಳವಾರರುಗಳಿಗೆ ಸ್ವಲ್ಪ ರುಸುಂ ಕೊಟ್ಟರೆ ಅಪರಾಧ ನಡೆದ ಸಂಗತಿಯು ಅವರಿಂದ ಬೇಗ ತಿಳಿಯುವುದಕ್ಕೂ ಪತ್ತೆ ತರವುದಕ್ಕೆ ಸಹಾಯವಾಗುವುದಕ್ಕೂ ಅನುಮಾನವಿಲ್ಲ

ಉತ್ತರ —ಈಚೆಗೆ ಪೋಲೀಸಿನವರ ಸಂಬಳದ ದರಗಳನ್ನು ಹೆಚ್ಚು ಮಾಡಿದ್ದೇವೆ ಇನ್ನೂ ಹೆಚ್ಚಿಸಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ರವರು ಶಿಫಾರಸು ಮಾಡಿದ್ದಾರೆ ಇದು ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ

ಪ್ರಾರ್ಥನೆ —ಇನಾಂಗ್ರಾಮಗಳಲ್ಲಿರುವ ಪಟೇಲರೂ ಮಾತ್ರ ಲೈಸೆನ್ಸ್ ಪಡೆದು ಆಯುಧಗಳನ್ನು ಇಟ್ಟುಕೊಳ್ಳಬಹುದಾಗಿದೆ ಆ ಗ್ರಾಮಗಳ ಇನಾಂದಾರರಿಗೆ ಮಾತ್ರ ಈ ರಿಯಾಯಿತಿ ಇರುವುದಿಲ್ಲ

ಉತ್ತರ —ಎಲ್ಲಾ ಇನಾಂದಾರರಿಗೂ ಈ ರಿಯಾಯಿತಿ ಅವಶ್ಯವಿಲ್ಲವೆಂದು ಕಾಣುತ್ತದೆ ಅಗತ್ಯವಿದ್ದ ಇನಾಂದಾರರು ಅರ್ಜಿ ಬರೆದು ಕೊಂಡರೆ ತನಿಖೆಯಿಂದ ಸಂದರ್ಭಾನುಸಾರ ರಿಯಾಯಿತಿ ತೋರಿಸಲಾಗುವುದು

ರೆವಿನ್ಯೂ ವಿಚಾರಗಳು

ಪ್ರಾರ್ಥನೆ —ರೆವಿನ್ಯೂ ಕಂದಾಯಕ್ಕೆ ರೈತನಿಗೆ ಜಾರಿ ಆಗುವ ನೋಟೀಸಿನ ಫೀಜನ್ನು ಸಂದರ್ಭಾನುಸಾರ ಮಾಫ್ ಮಾಡುವುದಕ್ಕೆ ಅಮಲ್ದಾರರಿಗೆ ಅಧಿಕಾರ ಕೊಡಬೇಕು

ಉತ್ತರ —ಈ ವಿಚಾರದಲ್ಲಿ ರೆವಿನ್ಯೂ ಕಮಿಷನರು ಶಿಫಾರಸು ಮಾಡಿದ್ದಾರೆ ಗವರ್ನ್‌ಮೆಂಟಿನವರು ಇದನ್ನು ಬೇಗನೆ ಇತ್ಯರ್ಥ ಪಡಿಸಿ ಹುಕುಂ ಕೊಡುವರು

ಪ್ರಾರ್ಥನೆ —ಕಂದಾಯ ವಾಪತಿ ಮಾಡುವುದಕ್ಕೆ ಮದರಾಸ್ ಸರ್ಕಾರದವರು ರೆವಿನ್ಯೂ ಮನಿಆರ್ಡರ್ ಫಾರಮನ್ನು ಪ್ರತ್ಯೇಕವಾಗಿ ಇಟ್ಟುಕೊಂಡಿದ್ದಾರೆ ಅದನ್ನೇ ಈ ಸೀಮೆಯಲ್ಲೂ ಜಾರಿಯಲ್ಲಿ ತಂದರೆ ಸ್ಥಳಾಂತರದಲ್ಲಿರುವ

ಜಮೀನ್ದಾರರು ಆ ದಾಯವನ್ನು ತಳುಹಿಸುವುದಕ್ಕೆ ತುಂಬಾ ಸಹಾಯವಾಗುತ್ತದೆ (ಈ ರೀತಿ ಹೇಳಿದ ನಂಬರು ಮದರಾಸ್ ಸರ್ಕಾರದ ರೆವಿನ್ಯೂ ಮಣೆಕರ್ದ್ ಫಾರಮನ್ನು ದಿವಾನ್‍ರವರಿಗೆ ಒಪ್ಪಿಸಿದರು ದಿವಾನ್‍ರವರೂ ಇತರ ಅಧಿಕಾರಿಗಳೂ ಅದನ್ನು ಪರಾಂಬರಿಸಿದರು)

ಉತ್ತರ —ಕೆಲವು ಕಾಲ ಪರೀಕ್ಷಾರ್ಥವಾಗಿ ಈ ಫಾರಮನ್ನು ಜಾರಿಗೆ ಬಿಟ್ಟು ನೋಡಬಹುದೆಂದು ಹುಕುಂ ಕೊಡುತ್ತೇವೆ

ಪ್ರಾರ್ಥನೆ —ರೆವಿನ್ಯೂ ರಿಕಾರ್ಡುಗಳನ್ನು ಹುಡುಕುವುದಕ್ಕೆ ಪ್ರತಿ ವರುಷಕ್ಕೂ ಅರ್ಜಿ ರೂಪಾಯಿನಂತೆ ಫೀಜು ಇಟ್ಟಿದ್ದಾರೆ ರೈತರು ಅಷ್ಟು ಕೊಡಲು ಸಾಧ್ಯವಿಲ್ಲ ಮೊದಲನೇ ವರುಷಕ್ಕೆ ೪ ಆಣೆಯಂತೆ, ಅನಂತರ ಪ್ರತಿ ವರುಷಕ್ಕೂ ೨ ಆಣೆಯಂತೆ ರುಸುಂ ವಸೂಲ್ಮಾಡಿದರೆ ತುಂಬಾ ಸಹಾಯವಾದೀತು

ಉತ್ತರ —ಈ ವಿಷಯವನ್ನು ರೆವಿನ್ಯೂ ಕಮಿಷನರ್‍ರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಕೇಳಿ ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಕಿರದಿ ಮತ್ತು ಚಲನ್ ಫಾರಂಗಳನ್ನು ಸರ್ಕಾರದವರು ಅಚ್ಚುಹಾಕಿಸಿ ಪಟೇಲ್ ಶ್ಯಾನುಭೋಗರಿಗೆ ಕೊಡಿಸಿಕೊಡಬೇಕು

ಉತ್ತರ —ರೆವಿನ್ಯೂ ಕಮಿಷನರ್‍ರಿಗೆ ತಿಳಿಸುತ್ತೇವೆ

ಪ್ರಾರ್ಥನೆ —ಜಮೀನನ್ನು ಅಬಾದಿಗೆ ತರಬೇಕೆಂಬ ಉದ್ದೇಶದಿಂದ ರೈತನು ಸರ್ಕಾರದಿಂದ ಸಾಲ ತೆಗೆದುಕೊಂಡರೆ ಅವನಿಗೆ ಮೊದಲು ಶೇಕಡಾ ವರುಷಕ್ಕೆ ೪ ರಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದರು ಈಚೆಗೆ ೧೯೦೯ನೇ ಜನವರಿಯಲ್ಲಿ ಹುಟ್ಟಿದ ಸರ್ಕಾರಿ ಸರ್ಕ್ಯುಲರ್ ಹುಕುಂ ಪ್ರಕಾರ ಅಂಥಾ ಸಾಲದ ಬಡ್ಡಿ ದರವನ್ನು ಶೇಕಡ ೫ ರಂತೆ ಕೊಡಬೇಕೆಂದು ಏರ್ಪಾಡು ಮಾಡಿದ್ದಾರೆ ವ್ಯವಸಾಯಾಭಿವೃದ್ಧಿಗೆ ಇದು ಕುಂದಕವಾಗಿರೋಣದರಿಂದ ಮೊದಲಿನಂತೆ ಬಡ್ಡಿ ದರವನ್ನು ಕಡಮೆಮಾಡಿಕೊಡಬೇಕು

ಉತ್ತರ —ಚೆನ್ನಾಗಿ ಪರ್ಯಾಲೋಚನೆ ಮಾಡಿ, ಈ ದರವನ್ನು ಹೆಚ್ಚಿಸಿದೆ ಸದ್ಯ ಕಡಮೆಮಾಡಲಾಗುವುದಿಲ್ಲ

ಪ್ರಾರ್ಥನೆ —ಕೆರೆಗಳ ಅಚ್ಚುಕಟ್ಟನ್ನು ಆಗಿಂದಾಗ್ಗೆ ಸರ್ಕಾರದವರು ಕ್ಯಾಪಿಟಲಿಸ್ಟರಿಂದ ಅಸಮ್ಮತಿ ಮಾಡಿಸಿ, ಎಷ್ಟು ಜಮೀನಿಗೆ ನೀರು ಹಾಯುತ್ತಿರುವುದನ್ನು ಗೊತ್ತುಮಾಡಬೇಕು ಅಷ್ಟು ಎಕರೆಗಳಿಗೆ ಮಾತ್ರ ನೀರು ಕೊಟ್ಟು ತರಿ ಕಂದಾಯ ಹಾಕಿ ವಸೂಲ್ಮಾಡಬೇಕು ಉಳಿದ ಜಮೀನಿನಲ್ಲಿ ಯಾವ ವರುಷ ತರಿ ಫಸಲು ಬೆಳೆಯುವುದೋ ಆ ವರುಷ ತರಿ ಕಂದಾಯವನ್ನು ಹಾಕಿ, ಆ ಫಸಲು ಬೆಳೆಯದೆ ಇರುವ ವರುಷಗಳಲ್ಲಿ ಖುಷ್ಕಿ ಕಂದಾಯವನ್ನೇ ಕಮ್ಮಿಯಾದ ತರಿ ಕಂದಾಯವನ್ನೇ ಗೊತ್ತುಮಾಡಿ ವಸೂಲ್ಮಾಡುವಂತಾಗಬೇಕು

ಉತ್ತರ —ಕೆರೆಗಳ ಮೇಲ್ವಿಚಾರಣೆ ಪಂಚಾಯತಿ ಬಿಲ್ಲು ಕ್ರಮಪಡುವಾಗ್ಗೆ ಈ ವಿಷಯವನ್ನು ಪರ್ಯಾಲೋಚನೆ ಮಾಡುತ್ತೇವೆ ಮತ್ತು ರೀಸರ್ವೆ ಕಾಲದಲ್ಲೂ ಸರ್ವೆ ಅಧಿಕಾರಿಗಳಿಗೆ ನಿಮ್ಮ ನಿಮ್ಮ ಊರುಗಳಲ್ಲಿ ಹೇಳಿಕೊಂಡರೆ ಅವರು ಕ್ರಮಪಡಿಸಿ ಕೊಡುತ್ತಾರೆ

ಪ್ರಾರ್ಥನೆ —ಕೆರೆಯನ್ನು ಮರಮ್ಮತ್ತು ಮಾಡಿಸಿಕೊಡಬೇಕೆಂದು ಅದರ ಕೆಳಗೆ ಜಮೀನುಳ್ಳ ರೈತರು ಅರ್ಜಿ ಕೊಟ್ಟು, ದಾಮಾಷಾ ಪ್ರಕಾರ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಮುಚ್ಚಳಿಕೆ ಆಗಿದ್ದರೆ ಅಂಥಾ ಕೆರೆಯ ಕಾಮಗಾರಿಯನ್ನು ಸರ್ಕಾರದವರು ಮೊದಲು ಪ್ರಾರಂಭಿಸಿ ಬೇಗನೆ ಪೂರೈಸಿ ಕೊಡಬೇಕು ಕಂಟ್ರಿಬ್ಯೂಷನ್ ಹಣವನ್ನು ಮುಚ್ಚಳಿಕೆ ಕೊಟ್ಟಿರುವ ರೈತರಿಂದ ಕಂದಾಯದ ಬಾಕಿಯಂತೆ ಸರ್ಕಾರದವರು ವಸೂಲ್ಮಾಡಿಕೊಳ್ಳಬೇಕು

ಉತ್ತರ —ಆಗಲಿ ಆ ರೀತಿ ಮಾಡುತ್ತೇವೆ

ಪ್ರಾರ್ಥನೆ —ಕಿರು ನಾಲೆಯು ಕೆಳಗೂ ದೊಡ್ಡ ನಾಲೆಯು ಕೆಳಗೂ ಇರುವ ಜಮೀನುಗಳ ಕಂದಾಯದ ದರವಾಗಲಿ ಕಂಟ್ರಿಬ್ಯೂಷನ್ ಮೊಬಲಗಾಗಲಿ ಸ್ವಲ್ಪವೂ ವ್ಯತ್ಯಾಸವಿಲ್ಲದಿದ್ದರೂ ಕಿರು ನಾಲೆಗಳ ಸಾಲಾಬಾದು ಕಾಮಗಾರಿಯನ್ನು ರೈತರು ಮಾಡಬೇಕೆಂದೂ, ದೊಡ್ಡ ನಾಲೆಗಳ ಕಾಮಗಾರಿಯನ್ನು ಸರ್ಕಾರದವರು ಮಾಡಿಸುತ್ತೇವೆಂದೂ ಹೇಳುವುದು ಸಹಜವಾಗಿ ಕಾಣುವುದಿಲ್ಲ ಕಾಮಗಾರಿಯನ್ನು ರೈತರಿಗೆ ವಹಿಸೋಣದರಿಂದ ನಾಲೆಗಳು ಕೆಡುವುದಕ್ಕೆ ಮಾರ್ಗವಾಗಿದೆ ಆದಕಾರಣ ಈ ಎರಡು ನಾಲೆಗಳ ಕಾಮಗಾರಿ ಮುಂತಾದದ್ದನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು ಮಾಡಿಸುವುದು ಉತ್ತಮ

ಉತ್ತರ —ಕಿರು ನಾಲೆಗಳ ರಿಪೇರಿಯನ್ನು ರೈತರೇ ಮಾಡಬೇಕೆಂಬುದನ್ನು ಬದಲಾಯಿಸುವುದು ಸಾಧ್ಯವಲ್ಲ ಆದರೆ ಯಾವುದು ಕಿರು ನಾಲೆ ಯಾವುದು ದೊಡ್ಡ ನಾಲೆ ಎಂಬುವುದನ್ನು ಪುನರ್ವಿಮರ್ಶೆ ಮಾಡಿ ವಿಂಗಡಿಸಬೇಕೆಂದು ಕಾಣುತ್ತದೆ ಈ ವಿಚಾರವನ್ನು ಗವರ್ನ್‍ಮೆಂಟಿನವರು ತನಿಖೆಮಾಡಿ ಕ್ರಮಪಡಿಸುತ್ತಾರೆ

ಪ್ರಾರ್ಥನೆ —ರೈತರು ಕೆರೆಗಳಿಗೆ ಮಟ್ಟಿಕಾಮಗಾರಿ ಮುಂತಾದದ್ದು ಮಾಡಿ ಕಾಪಾಡ ಬೇಕಾದದ್ದರಿಂದ ಕೆರೆಗಳ ಏರಿಯ ಮೇಲಿರುವ ಗಿಡಗಳನ್ನು ಅವರೇ ವಾಜಿಬಾಗಿ ಕಡಿದುಕೊಳ್ಳುವಂತೆ ಅಪ್ಪಣೆ ಆಗಬೇಕು

ಉತ್ತರ —ಕೆರೆಗಳ ಮೇಲ್ವಿಚಾರಣೆಗಾಗಿ ಮಾಡಿರುವ ಪಂಚಾಯತಿ ಬಿಲ್ಲಿನಲ್ಲಿ ಈ ವಿಷಯವನ್ನು ಕಾಣಿಸಿದೆ ಅಂಥಾ ಮರಗಳನ್ನು ಬಿಕರಿಮಾಡಿ ಪಂಚಾಯತಿ ಫಂಡಿಗೆ ಸೇರಿಸಬೇಕೆಂದು ಅವಕಾಶವಾಡಿರುತ್ತೇವೆ

ಪ್ರಾರ್ಥನೆ —ರಾಜೀನಾಮೆ, ರಾಜೀನಾಮೆ ಮುಂತಾದದ್ದಕ್ಕೆ ತಾಲ್ಲೂಕಿನಲ್ಲಿ ತಿರಿಗೆ ರಶೀತಿ ಕೊಡುವಂತೆ ರೂಲಸು ಆಗಬೇಕು

ಉತ್ತರ —ಅಂಥಾ ರೈತರು ಅರ್ಜಿಯ ಕೂಡ ತನ್ನ ಪಟ್ಟೆಯನ್ನು ಹಾಜರು ಮಾಡಿದಲ್ಲಿ ನೌಕರರು ಅದರಲ್ಲಿ ಕಮ್ಮಿ ಹಾಕಿಕೊಡುತ್ತಾರೆ

ಪ್ರಾರ್ಥನೆ —ಖಾತೆದಾರರಿಗೆ ಗುತ್ತಿಗೆದಾರರಿಂದ ಬರಬೇಕಾದ ಗುತ್ತಿಗೆಗೆ ಅವರು ಗೇಣಿಚೀಟಿಯನ್ನು ಬರೆಸಿಕೊಂಡಿರುತ್ತಾರೆ ಅದರಂತೆ ಕೆಲವು ವೇಳೆ ಅವರು ಫಸಲುಕೊಡದೆ ತಪ್ಪಿದರು ಅಮುಲ್ದಾರರು ಅವರಿಂದ ಖಾತೆದಾರರಿಗೆ ಗುತ್ತಿಗೆ ಫಸಲನ್ನು ಕೊಡಿಸುವಹಾಗಾಗಬೇಕು

ಉತ್ತರ —ರೆವಿನ್ಯೂ ಕೋಡಿನ ೯೭ ನೇ ಸೆಕ್ಷನ್‍ನಲ್ಲಿ ನೀವು ಕೇಳುವ ಅಧಿಕಾರ ಅಮುಲ್ದಾರರಿಗೆ ಇರುತ್ತದೆ ಅವರಿಂದ ನಿಮಗೆ ಪರಿಹಾರ ದೊರಕದಿದ್ದರೆ ಗವರ್ನ್‍ಮೆಂಟಿಗೆ ಅಪೀಲ್ ಮಾಡಿಕೊಳ್ಳಿ ಸರಿಮಾಡಿಕೊಡುತ್ತೇವೆ

ಪ್ರಾರ್ಥನೆ —ತರಿ ಜಮೀನಿಗೆ ಹ್ಯಾಗೋ ಹಾಗೆಯೇ ಬಾಗಾಯತುಗೂ ದುಷ್ಕಾಲದಲ್ಲಿ ಕಂದಾಯ ರಿಮಿಷನ್ ಮಾಡಿಕೊಡಬೇಕು

ಉತ್ತರ —ಬಾಗಾಯತು ಜಮೀನ್ದಾರರಿಗೆ ಕಷ್ಟನಷ್ಟಗಳುಂಟೆಂಬುವುದು ನಮಗೂ ತಿಳಿದಿದೆ ಅದಕ್ಕಾಗಿ ನಾವು ಸಂತಾಪಪಡುತ್ತೇವೆ ಆದರೆ ಹಿಂದೆ ಧಾತು ಈಶ್ವರ ಸಂವತ್ಸರಗಳಲ್ಲೂ ರಿಮಿಷನ್ ಮಾಡಿದ್ದಿಲ್ಲ ಬಾದಶಾಹನ ರಿಮಿಷನ್ ಮಾಡಲಾರೆವು ಆದರೆ ಕಂದಾಯವನ್ನು ಒಂದೆರಡು ವರುಷಗಳಾದ ನಂತರ ಖಿಸ್ತುವಾರಾಗಿ ವಸೂಲ್ಮಾಡಬಹುದೆಂದು ಹುಕುಂ ಕೊಡಲಾದೀತೇ ಹೊರತು ಇನ್ನೇನೂ ಮಾಡಲಾಗುವುದಿಲ್ಲ

ಪ್ರಾರ್ಥನೆ —ಬಾಗಾಯತು ಜಮೀನಿನಲ್ಲಿ ತರಿ ಫಸಲು ಮಾಡಿದಲ್ಲಿ ತರಿ ಕಂದಾಯ ರಿಮಿಷನ್ ಆಗುವಾಗ್ಗೆ ಅದಕ್ಕೂ ರಿಮಿಷನ್ ಕೊಡಿಸಬೇಕು

ಉತ್ತರ —ರಿವಿಜನ್ ಸೆಟ್ಲ್‍ಮೆಂಟು ಆಗುವ ತನಕ ಸಾವಕಾಶ ಮಾಡಿದಲ್ಲಿ ಆಗ್ಗೆ ಕಂದಾಯದ ದರವನ್ನೇ ಕಡಮೆ ಮಾಡಿಕೊಡುತ್ತಾರೆ

ಪ್ರಾರ್ಥನೆ —ತೋಟಿ, ತಳವಾರ ಮತ್ತು ನೀರಗಂಟಿಗಳ ಇನಾಮತಿ ಜಮೀನುಗಳ ಮೇಲೆ ವಸೂಲಾಗುವ ಜೋಡಿ, ಲೋಕಲ್ ಸೆಸ್, ನೀರುಸರದಿ ಮುಂತಾದದ್ದನ್ನು ದುಷ್ಕಾಲದ ನಿಮಿತ್ತ ರಿಮಿಷನ್ ಮಾಡಿಕೊಡಬೇಕು

ಉತ್ತರ —ಇತರ ಜಮೀನುಗಳಿಗೆ ಹ್ಯಾಗೋ ಹಾಗೆಯೇ ಈ ನೌಕರರ ಇನಾಮತಿಗಳಿಗೂ ರಿಮಿಷನ್ ರೂಲಸು ಲಗಾಯಿಸತಕ್ಕದ್ದೆಂದು ಹುಕುಂ ಮಾಡುತ್ತೇವೆ

ಪ್ರಾರ್ಥನೆ —ಜೋಡಿದಾರರು ಕೇಳಿಕೊಂಡ ಪಕ್ಷದಲ್ಲಿ ಸರ್ಕಾರದವರು ಜೋಡಿ ಗ್ರಾಮಗಳನ್ನು ವಹಿಸಿಕೊಂಡು ರೂಢಿಸಿ, ಜೋಡಿ ಹಣಜಾತಾ ಉಳಿಯುವ ಜಾಸ್ತಿ ಹುಟ್ಟುವಳಿಯನ್ನು ಜೋಡಿದಾರರಿಗೆ ಪಾವತಿ ಮಾಡಿಸಬೇಕು

ಉತ್ತರ —ಆಗಲಿ , ಹಾಗೆ ಮಾಡೋಣ

ಪ್ರಾರ್ಥನೆ —ಜೋಡಿ ಹಣದ ಮೇಲೆ ಲೋಕಲ್ ಸೆಸ್ಸನ್ನು ವಸೂಲ್ಮಾಡಬೇಕೇ ಹೊರತು ಗ್ರಾಮದ ಬೇರೇಜನಮೇಲೆ ಸೆಸ್ಸು ತೆಗೆದುಕೊಳ್ಳಕೂಡದು

ಉತ್ತರ —ಇದು ಸಾಧ್ಯವಲ್ಲ ಆ ಹಣವನ್ನು ಆಯಾ ಸ್ಥಳಗಳಲ್ಲೇ ವಿನಿಯೋಗಮಾಡಲಾಗುವುದು

ಪ್ರಾರ್ಥನೆ —ಇನಾಂದಾರರಿಗೆ ತಮ್ಮ ಗ್ರಾಮಗಳಲ್ಲಿ ಜುಲ್ಮಾನೆ ವಿಧಿಸುವದಕ್ಕೆ ಅಧಿಕಾರ ಕೊಡಬೇಕು

ಉತ್ತರ —ಇದು ಆಗತಕ್ಕದ್ದಲ್ಲ ಗ್ರಾಮ ಮ್ಯಾಜಿಸ್ಟ್ರೇಟರನ್ನು ಚುನಾಯಿಸುವಾಗ್ಗೆ ಕೆಲವು ಇನಾಂದಾರರನ್ನೂ ಸೇರಿಸಿಕೊಳ್ಳಬಹುದು

ಪ್ರಾರ್ಥನೆ —ಇನಾಂ ಗ್ರಾಮಗಳಲ್ಲಿ ರೈತರು ಹೆಚ್ಚು ಜಮೀನನ್ನು ವ್ಯವಸಾಯ ಮಾಡಿಕೊಂಡರೆ ಅಂಥವರಿಗೆ ಜುಲ್ಮಾನೆ ಹಾಕುವ ಅಧಿಕಾರವನ್ನು ಇನಾಂದಾರರಿಗೆ ಕೊಡಬೇಕು , ಇಲ್ಲವೇ ಜಮಾಬಂದಿ ಆಫೀಸರಿಗಾದರೂ ಕೊಡಬೇಕು

ಉತ್ತರ —ಆ ರೀತಿ ಜುಲ್ಮಾನೆ ಹಾಕುವ ಅಧಿಕಾರವು ಜಮಾಬಂದಿ ಆಫೀಸರಿಗೆ ಇದ್ದೇ ಇದೆ ಅವರು ಅಜಮಾಯಿಷಿ ಮಾಡಿ ಶಿಕ್ಷಿಸಬೇಕು ಹಾಗೆ ಅವರು ಮಾಡಲಿಲ್ಲವೆಂದು ಕಂಡು ಬಂದರೆ ರೆವಿನ್ಯೂ ಕಮಿಷನರ್‍ರಿಗೆ ತಿಳಿಸಿ ಅವರು ಸರಿಪಡಿಸಿಕೊಡುತ್ತಾರೆ

ಪ್ರಾರ್ಥನೆ —ಇನಾಂ ಗ್ರಾಮಗಳಲ್ಲಿ ವಸೂಲಾಗುವ ಸುಪಾರಿ ಸೆಸ್ಸನ್ನು (ಅಡಿಕೆ ಹಾಸಲನ್ನು) ಸರ್ಕಾರದವರು ಇನಾಂದಾರರಿಗೆ ಕೊಡಿಸಿಕೊಡಬೇಕು ಹಾಲತ್ತನ್ನು ವಜಾಮಾಡಿದ್ದರಿಂದ ಅವರಿಗೆ ತುಂಬಾ ನಷ್ಟವಾಗಿರುತ್ತದೆ

ಉತ್ತರ —ಈ ಸುಪಾರಿ ಸೆಸ್ಸನ್ನು ಬಿಟ್ಟರೆ ರೈತರಿಗೆ ಬಿಡಬೇಕೇ ಹೊರತು ಇನಾಂದಾರರಿಗೆ ಕೊಡುವುದು ನ್ಯಾಯವಲ್ಲ

ಪ್ರಾರ್ಥನೆ —ಇನಾಂದಾರರಿಗೆ ರೈತರಿಂದ ಬರಬೇಕಾದ ಕಂದಾಯಕ್ಕೆ ಅವರ ಜಮೀನು ಗುರಿಯಾಗಬೇಕು

ಉತ್ತರ —ಈ ರೀತಿ ರೂಲಸು ಬದಲಾಯಿಸಬೇಕೆಂದು ಅಧಿಕಾರಿಗಳೆಲ್ಲಾ ಸಮ್ಮತಿಸಿರುತ್ತಾರೆ ಎರಡು ಮೂರು ವರುಷಗಳ ಕಂದಾಯಕ್ಕೆ ಜಮೀನನ್ನು ಹರಾಜುಮಾಡುವಂತೆ ರೂಲಸನ್ನು ಬದಲಾವಣೆ ಮಾಡಬಹುದೆಂದು ನಿರೀಕ್ಷಿಸುತ್ತೇವೆ ಹೀಗೆ ಮಾಡಿದಲ್ಲಿ ಇನಾಂದಾರರ ಕಷ್ಟನಷ್ಟಗಳು ತಕ್ಕಮಟ್ಟಿಗೆ ಪರಿಹಾರವಾಗಬಹುದು

ಪ್ರಾರ್ಥನೆ —ಪ್ರತಿ ವರುಷವೂ ವ್ಯವಸಾಯದ ಪ್ರದರ್ಶನವನ್ನು ನಡಿಸುವುದರಿಂದ ಜನರು ಅದನ್ನು ನೋಡಿಕೊಂಡು ಹೋಗುವುದೂ, ಕೂಡಲೇ ಮರೆತುಬಿಡುವುದೂ ವಾಡಿಕೆಯಾಗಿದೆ ವ್ಯವಸಾಯವನ್ನು ಈ ಸೀಮೆಯಲ್ಲಿ ಅಭಿವೃದ್ಧಿಗೆ ತರಬೇಕಾದರೆ ಪರಿಶ್ರಮದಾಯಕವಾದ ಒಂದು ದೊಡ್ಡ ಫಾರಮನ್ನು ನಿರ್ಮಿಸಿ ವ್ಯವಸಾಯ ಶಾಸ್ತ್ರಶೋಧನಾ ಶಾಲೆಯನ್ನು ಸ್ಥಾಪಿಸಿ ಅವುಗಳಲ್ಲಿ ಜಮೀನ್ದಾರರ ಮಕ್ಕಳಿಗೆ ಕಾರ್ಯತಃ ಹೊಸತರಹಾ ವ್ಯವಸಾಯ ಕ್ರಮಗಳನ್ನು ಕಲಿಸಿಕೊಡುತ್ತಾ ಬರಬೇಕು. ಈ ಪ್ರದರ್ಶನವನ್ನು ಐದುವರುಷಕ್ಕೊಂದುಸಲ ನಡಿಸಬಹುದು ಇದಕ್ಕೆ ಖರ್ಚಾಗುವ ಹಣವನ್ನು ಸರ್ಕಾರದವರು ಅದೆರಡಕ್ಕೂ ವಿನಿಯೋಗಿಸಿದರೆ ಎಷ್ಟೋ ಉಪಕಾರವಾಗುತ್ತದೆ

ಉತ್ತರ —ಇದು ಬಹು ಉತ್ಕೃಷ್ಟವಾದ ಅಭಿಪ್ರಾಯ ಇದು ಅವಶ್ಯಕವೆಂಬುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಸದ್ಯಕ್ಕೆ ಸರ್ಕಾರದವರು ಜಮೀನ್ದಾರರ ಮಕ್ಕಳನ್ನು ವೇತನ ಕೊಟ್ಟು ಕೊಯಮುತ್ತೂರಿಗೆ ಕಳುಹಿಸಿ ಅಲ್ಲಿ ವ್ಯವಸಾಯ ಶಾಸ್ತ್ರವನ್ನು ಕಾರ್ಯತಃ ಕಲಿತು ಬರುವಂತೆ ಮಾಡಬೇಕೆಂದು ಯೋಚಿಸಿದ್ದಾರೆ

ಪ್ರಾರ್ಥನೆ —ಪಶುವೈದ್ಯ ಚಿಕಿತ್ಸೆಯನ್ನು ಆಸ್ಪತ್ರೆ ಅಸಿಸ್ಟೆಂಟರು ಕಲಿತುಬರುವಂತೆ ಮಾಡಿದರೆ ಅವರು ಕಡೆಗಳಲ್ಲಿ ಗೋವುಗಳಿಗೆ ಅವರೇ ಔಷಧಾದಿಗಳನ್ನು ಕೊಡಲು ಅನುಕೂಲ ಪಶುವೈದ್ಯರನ್ನು ಎಲ್ಲಾ ಕಡೆಗಳಲ್ಲೂ ನೇಮಕ ಮಾಡಿಕೊಡಬೇಕು

ಉತ್ತರ —ಆಸ್ಪತ್ರೆ ಅಸಿಸ್ಟೆಂಟರಿಗೆ ಈ ಕೆಲಸವನ್ನೂ ವಹಿಸುವುದು ಸರಿಯಲ್ಲ ಅನುಕೂಲವಾದ ಹಾಗೆ ಪಶುವೈದ್ಯರನ್ನೇ ನೇಮಕ ಮಾಡುತ್ತಾ ಬರುತ್ತೇವೆ

ಪ್ರಾರ್ಥನೆ —ಆಯಾ ಸ್ಥಳಗಳಲ್ಲಿ ಪೂರ್ವದಿಂದಲೂ ನಡೆದುಬಂದಿರುವ ಬೇರೆ ಬೇರೆ ಕಸಬುಗಳಿಗೆ ಪ್ರೋತ್ಸಾಹಕೊಟ್ಟು ಅಭಿವೃದ್ಧಿಗೆ ತರುವಂತೆ ಮಾಡಿಕೊಡಬೇಕು

ಉತ್ತರ —ಸಾಧ್ಯವಾದಮಟ್ಟಿಗೆ ಇದನ್ನು ಮಾಡಬಹುದು ಈಗ ಒಬ್ಬ ಕೊಡಗಿನವರು ಜಪಾನ್‍ಗೆ ಹೋಗಿ ರೇಷ್ಮೆ ಕಸಬನ್ನು ಚೆನ್ನಾಗಿ ಕಲಿತು ಬಂದಿದ್ದಾರೆ ಇವರಿಂದ ಪ್ರಯೋಜನಹೊಂದಿ ರೇಷ್ಮೆ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ಈ ಸಂದರ್ಭದಲ್ಲಿ ಮೈಸೂರಿನವರಿಗೆ ವಿಶೇಷವಾಗಿಯೂ ಇತರ ಕಡೆಯವರಿಗೆ ಸಾಮಾನ್ಯವಾಗಿಯೂ ತಿಳಿಸುತ್ತೇವೆ

ಪ್ರಾರ್ಥನೆ —ಮಿಸ್ಕಿಯನ್ನು ತರಿಮಾಡಿಕೊಳ್ಳುವುದಕ್ಕೆ ದರಖಾಸ್ತು ಕೊಟ್ಟರೆ ವರುಷಾಂತರ ಕಳೆದುಹೋದರೂ ಹುಕುಂ ಬರುವುದು ಕಷ್ಟ. ಮೂರು ತಿಂಗಳೊಳಗಾಗಿ ಜವಾಬು ಬಾರದಿದ್ದರೆ ವ್ಯವಸಾಯಮಾಡಿಕೊಳ್ಳುವಂತೆ ಹುಕುಂ ಆಗಬೇಕು

ಉತ್ತರ —ಹೀಗೆ ಅವಧಿಯನ್ನು ನಿರ್ಧಾರಕವಾಡುವುದು ಉಚಿತವಲ್ಲ ದರಖಾಸ್ತುಗಳನ್ನು ಬೇಗನೆ ಇತ್ಯರ್ಥಮಾಡಬೇಕೆಂದು ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಅಡಿಕೆ ಗಿಡಗಳ ಮೇಲಿನ ಸೆಸ್ಸನ್ನು ವಸೂಲ್ಮಾಡುತ್ತಾರೆ ಲೆಕ್ಕಮಾಡುವಾಗ್ಗೆ ಸಣ್ಣ ಸಸಿಗಳನ್ನೂ ಸೇರಿಸಿಕೊಳ್ಳುತ್ತಾರೆ ಅವುಗಳಲ್ಲಿ ಇನ್ನೂ ಫಲಬಿಡುವುದಿಲ್ಲವೆಂದು ಹೇಳಿಕೊಂಡರೂ ಕೇಳುವುದಿಲ್ಲ ಫಲ ಬಿಡುವಂಥಾ ಮರಗಳಿಗೆ ಮಾತ್ರ ಸೆಸ್ಸು ವಸೂಲ್ಮಾಡುವಂತೆ ಹುಕುಂ ಕೊಡಬೇಕು

ಉತ್ತರ —ಈಗ ಆರು ಅಡಿಗಿಂತ ಎತ್ತರವಾಗಿ ಬೆಳೆದಿರುವ ಗಿಡಗಳಿಗೆಲ್ಲಾ ಸೆಸ್ಸು ಹಾಕುವಂತೆ ರೂಲಸು ಮಾಡಿದೆ ಇದನ್ನು ತಪ್ಪಿಸಿ ಇನ್ನುಮುಂದೆ ಹನ್ನೆರಡು ಅಡಿಗಿಂತ ಎತ್ತರವಾಗಿರುವ ಗಿಡಗಳಿಗೆ ಮಾತ್ರ ವಸೂಲ್ಮಾಡತಕ್ಕದ್ದೆಂದು ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಬೇಚರಾಕ್ ಗ್ರಾಮಗಳಲ್ಲಿ ಜಮೀನುಗಳನ್ನು ಅಪೇಕ್ಷಿಸುವವರಿಗೆ ೧೫ ವರುಷಗಳ ತನಕ ಎಕರೆಗೆ ೩ ಆಣೆಯಂತೆ ಕೊಟ್ಟು, ಕ್ರಮೇಣ ವ್ಯವಸಾಯ ಹೆಚ್ಚಿದ ಮೇಲೆ ಪೂರಾ ಕಂದಾಯ ವಸೂಲ್ಮಾಡಬೇಕು

ಉತ್ತರ —ಹುಣಸೂರು ತಾಲ್ಲೂಕಿನ ವಿಷಯದಲ್ಲಿ ಜಮೀನ್ ಕೊಡಬಹುದೆಂದು ಹುಕುಂ ಮಾಡುತ್ತೇವೆ ಹೆಗ್ಗಡದೇವನಕೋಟೆ ತಾಲ್ಲೂಕಿನ ವಿಷಯದಲ್ಲಿ ಆಲೋಚನೆ ಮಾಡಬೇಕಾಗುವುದು ಅಲ್ಲೂ ಅದೇ ರೀತಿ ಹುಕುಂ ಕೊಡಬಹುದು

ಪ್ರಾರ್ಥನೆ —ವ್ಯವಸಾಯಕ್ಕೆ ಜಮೀನ್ ಬೇಕೆಂದು ದರಖಾಸ್ತು ಕೊಟ್ಟರೆ ಆ ಜಮೀನ್‍ನಲ್ಲಿರುವ ಗಂಧದ ಗಿಡಗಳ ಬೆಲೆಯನ್ನು ಮೊದಲೇ ಪಾವತಿಮಾಡಬೇಕೆನ್ನುತ್ತಾರೆ ಇದು ಬಡರೈತರಿಗೆ ಕಷ್ಟವಾಗಿದೆ

ಉತ್ತರ —ಈ ವಿಷಯವನ್ನು ನಿದಾನವಾಗಿ ಯೋಚಿಸಿ, ಮತ್ತೊಂದುವೇಳೆ ನಿಮ್ಮನ್ನು ಕರೆಸಿಕೊಂಡು ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಮೊಹತರ್ಫಾ ಕಂದಾಯಗಳನ್ನು ಹಳ್ಳಿಗಾಡುಗಳಲ್ಲಿ ಬಡಬಗ್ಗರಿಗೂ ಜಂಗುಮರಿಗೂ ಹಾಕಿ ವಸೂಲ್ಮಾಡುತ್ತಾರೆ ಇದು ಅವರಿಗೆ ತುಂಬಾ ಹಿಂಸಕರವಾಗಿರುವುದು ಇದನ್ನು ವಜಾ ಮಾಡಿಕೊಟ್ಟರೆ ತುಂಬಾ ಉಪಕಾರವಾಗುವುದು

ಉತ್ತರ —ಮೊಹತರ್ಫಾ ಕಂದಾಯದ ರೂಲಸನ್ನು ಇಷ್ಟರಲ್ಲೇ ಗವರ್ನ್‍ಮೆಂಟಿನವರು ಬದಲಾವಣೆ ಮಾಡಬೇಕೆಂದಿದ್ದಾರೆ ಆ ಸಂದರ್ಭದಲ್ಲಿ ನೀವು ಹೇಳಿದ ವಿಷಯವನ್ನು ಗಮನಿಸಿಗೆ ತಂದುಕೊಳ್ಳುವರು

ಪ್ರಾರ್ಥನೆ —ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಬ್ಬಿಣ ಕರಗಿಸುವ ಕಸಬುದಾರರಿಂದ ವರುಷಕ್ಕೆ ೧೨ ರೂಪಾಯಿನಂತೆ ತೆರಿಗೆ ವಸೂಲ್ಮಾಡುತ್ತಾರೆ ಅವರು ಕಾಡಿನಿಂದ ಇದ್ದಲು ತರುವುದಕ್ಕೂ ಫಾರೆಸ್ಟಿನವರಿಗೆ ರುಸುಂ ಕೊಡಬೇಕು ಇದರ ದೆಸೆಯಿಂದ ಈ ಕಸಬು ಕ್ಷೀಣವಾಗುತ್ತಿದೆ.

ಉತ್ತರ —ಈ ವಿಷಯವನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ ಬೇಗನೆ ಇತ್ಯರ್ಥ ಮಾಡಿ ಹುಕುಂ ಕೊಡುವರು

ಪ್ರಾರ್ಥನೆ —ಕಂದಾಯ ಪಾವತಿ ಆದದ್ದಕ್ಕೆ ಶ್ಯಾನುಭೋಗರು ರಶೀತಿ ಕೊಡುವುದಿಲ್ಲ ಪ್ರಿಂಟಾದ ಫಾರಂಗಳಲ್ಲಿ ರಶೀತಿ ಕೊಡುವಂತೆ ಅಪ್ಪಣೆ ಆಗಬೇಕು

ಉತ್ತರ —ಕಂದಾಯ ಕೊಡುವಾಗ್ಗೆ ಪಟ್ಟೆಗಳನ್ನು ಹಾಜರ್ಮಾಡಿ, ಅದರಲ್ಲಿ ಬರೆದುಕೊಡದಿದ್ದರೆ ಹಣ ಕೊಡುವುದಿಲ್ಲವೆಂದು ಹೇಳಿದರೆ ಶ್ಯಾನುಭೋಗರು ಬರೆದುಕೊಡುತ್ತಾರೆ ಕೊಟ್ಟ ಹಣವನ್ನು ಎದುರಿಗಿದ್ದು ಕಿರದಿ ಪುಸ್ತಕಕ್ಕೆ ದಾಖಲ್ ಮಾಡಿಸಿದರೆ ಅನುಮಾನಕ್ಕೂ ಮೋಸಕ್ಕೂ ಅವಕಾಶವಾಗುವುದಿಲ್ಲ ಅಚ್ಚಾದ ರಶೀತಿಗಳನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ಯೋಚನೆ ಮಾಡುವರು

ಪ್ರಾರ್ಥನೆ —ತೋಟಿ ತಳವಾರ ನೀರಗಂಟಿ ಮೊದಲಾದವರಿಗೆ ರೈತರಿಂದ ಸಲ್ಲುತ್ತಿರುವ ಮಿರಾಸನ್ನು ತಪ್ಪಿಸಿ, ರೈತರಿಂದ ಒಂದು ಸೆಸ್ಸನ್ನು ವಸೂಲ್ಮಾಡಿ ಅವರಿಗೆಲ್ಲಾ ಸಂಬಳ ಪಾವತಿಮಾಡಿಸಿದರೆ ಅನುಕೂಲ

ಉತ್ತರ —ಈ ಸಲಹೆಯನ್ನು ರೆವಿನ್ಯೂ ಕಮಿಷನರ್‍ರಿಗೆ ತಿಳಿಸಿ, ಅವರ ಅಭಿಪ್ರಾಯವನ್ನು ತರಿಸಿಕೊಂಡು ಇತ್ಯರ್ಥ ಮಾಡುವೆವು

ಪ್ರಾರ್ಥನೆ —ಪಟೇಲ್ ಶ್ಯಾನುಭೋಗರಿಗೆ ವರುಷಕ್ಕೊಂದುಸಲ ಫೋಟಿಗೆ ಪಾವತಿಮಾಡುವುದನ್ನು ತಪ್ಪಿಸಿ ಪ್ರತಿ ತಿಂಗಳಲ್ಲೂ ಬಟವಾಡೆ ಆಗುವಂತೆ ಮಾಡಿಕೊಡಬೇಕು

ಉತ್ತರ —ಇದಕ್ಕೆ ಫೋಟಿಗೆ ರೂಲಸನ್ನೇ ಬದಲಾಯಿಸಬೇಕಾಗುವುದು ಯೋಚಿಸುತ್ತೇವೆ

ಪ್ರಾರ್ಥನೆ —ರೆ ತರಿಗೆ ಶೇಕ್‍ದಾರ ಮೊದಲಾದ ಅಧಿಕಾರಿಗಳಿಂದ ಬರೆಯೋಣವಾದ ರಿಪೋರ್ಟುಗಳ ನಕಲನ್ನು ಕೊಡದೆ ಒಟ್ಟು ಹುಕುಮನ್ನು ಕೊಡುತ್ತಾರೆ ಇದರಿಂದ ತಕ್ಷೀರುಗಾರರಿಗೆ ವೃಥಾ ಹಣಖರ್ಚೂ ದೇಹಶ್ರಮವೂ ಆಗುವವು ಕಡೆಯ ಹುಕುಂ ಹುಟ್ಟುವತನಕ ನಡದಿರುವ ರಿಪೋರ್ಟುಗಳನ್ನೆಲ್ಲಾ ತಕ್ಷೀರುಗಾರರಿಗೆ ಕೊಡುವಂತೆ ಅಪ್ಪಣೆಯಾಗಬೇಕು

ಉತ್ತರ —ಇನ್ನು ಮುಂದೆ ಅಪೀಲ್ ಹುಕುಂ ಕೊಡತಕ್ಕ ಅಧಿಕಾರಿಗಳು ಆ ವಿಷಯಕ್ಕೆ ಸಂಬಂಧಪಟ್ಟ ವಿಸ್ತೃತಮಾನಗಳನ್ನೆಲ್ಲಾ ಸಂಪೂರ್ಣವಾಗಿ ಬರೆಯಬೇಕೆಂದು ತಿಳಿಸುತ್ತೇವೆ

ಪ್ರಾರ್ಥನೆ —ಪಟೇಲ್, ಶ್ಯಾನುಭೋಗಿಕೆಗಳನ್ನು ನೋಡುವ ಬದಲಿಗುವವರು ಹಕ್ಕುದಾರರಿಗೆ ಫೋಟಿಗೆಯಲ್ಲಿ ಕೆಲವು ಭಾಗವನ್ನು ಜೀವನಕ್ಕಾಗಿ ಕೊಡುವಂತೆ ಏರ್ಪಾಡು ಮಾಡಿಕೊಡಬೇಕು

ಉತ್ತರ —ನಾವು ಅಂಥಾ ಹುಕುಂ ಕೊಡಲಾರೆವು ಅವರವರೇ ಏರ್ಪಾಡು ಮಾಡಿಕೊಂಡರೆ ನಾವು ಅವರ ವಿಷಯದಲ್ಲಿ ಪ್ರವರ್ತಿಸುವುದಿಲ್ಲ

ಪ್ರಾರ್ಥನೆ —ಶ್ಯಾನುಭೋಗರಿಗೂ ಪಟೇಲರಿಗೂ ಸಲ್ಲುವ ಫೋಟಿಗೆ ದರಗಳನ್ನು ಬದಲಾಯಿಸಿ ಹೆಚ್ಚಿಸಿ ಕೊಡಬೇಕು ಈಗಿರುವ ದರಗಳಲ್ಲಿ ಅವರ ಜೀವನ ನಡೆಯುವುದು ಪ್ರಯಾಸವಾಗಿದೆ ಅವರಿಗೆ ಕಡೇ ಪಕ್ಷ ತಿಂಗಳಿಗೆ ೧೨ ರೂಪಾಯಿ ಬರುವಂತಾದರೂ ಮಾಡಿಕೊಡಬೇಕು

ಉತ್ತರ —ಈಗಿರುವ ದರಗಳನ್ನು ಬದಲಾಯಿಸುವುದು ಸಾಧ್ಯವಲ್ಲ ಬೇರೆ ಹೆಚ್ಚು ಕಂದಾಯ ವಸೂಲಾಗಿದ್ದರೆ ಅದನ್ನೆಲ್ಲಾ ಲೆಕ್ಕಮಾಡಿ, ಅದರಂತೆ ಬಾಕಿಯಾಗುವ ಫೋಟಿಗೆ ಮೊಬಲಗನ್ನು ಪಾವತಿ ಮಾಡಿಸುತ್ತೇವೆ

ಫಾರೆಸ್ಟು ಬಾಬಿನ ವಿಚಾರಗಳು

ಪ್ರಾರ್ಥನೆ —ವ್ಯವಸಾಯದ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕೆ ಬನ್ನಿ, ಗೊಬ್ಲಿ, ಸಾಗತೆ, ದಿಂಡಿಗ ಈ ಮೊದಲಾದ ಮರಗಳನ್ನು ರೈತರಿಗೆ ಮುಫತ್ತಾಗಿ ಸಿಕ್ಕುವಂತೆ ಮಾಡಿಕೊಡಬೇಕು

ಉತ್ತರ —೧೯೦೪ ನೇ ಇಸವಿಯಿಂದೀಚೆಗೆ ಫಾರೆಸ್ಟ್ ಗಿಡಗಳನ್ನು ಎರಡಾವರ್ತಿ ಹಂಚಿಕೆ ಮಾಡಿದ್ದಾಗಿದೆ ಇನ್ನೊಂದಾವರ್ತಿ ಹಂಚಿಕೆ ಮಾಡುವಂತೆ ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಅನ್ಯದೇಶಗಳಲ್ಲಿ ಬೆಳೆಯುವ ಒಳ್ಳೇ ಮರಗಳನ್ನೂ ಹಣ್ಣು ಹಂಪಲನ್ನೂ ನಮ್ಮ ಸೀಮೆಯಲ್ಲೂ ತರಿಸಿ ಹಾಕಿ ಬೆಳೆಸಿ, ಯಾವುದು ಚೆನ್ನಾಗಿ ಬೆಳೆಯುವುದೋ ಎಂದು ಪರೀಕ್ಷೆ ಮಾಡಬೇಕು

ಉತ್ತರ —ಆಗಲಿ ಈ ವಿಷಯವನ್ನು ಫಾರೆಸ್ಟ್ ಕನ್ಸರ್ವೇಟರವರಿಗೆ ತಿಳಿಸುತ್ತೇವೆ

ಪ್ರಾರ್ಥನೆ —ಮದರಾಸ್ ಕಾಡುಗಳಲ್ಲಿ ಯಾವ ತರಹ ಮರವಿದೆ ಎಂದು ನೋಡಿಕೊಂಡು ಬರುವುದಕ್ಕೆ ಒಂದು ಮಾಫಿ ರಹದಾರಿ ಕೊಡುತ್ತಾರೆ. ತನಗೆ ಬೇಕಾದ ಮರವಿದೆ ಎಂದು ಗೊತ್ತಾದರೆ ಹಣ ಕೊಟ್ಟು ಲೈಸೆನ್ಸು ಪಡೆದು ಹೋಗಿ ಬೇಕಾದ ಮರವನ್ನು ತಂದುಕೊಳ್ಳಬಹುದಾಗಿದೆ ನಮ್ಮ ಸೀಮೆಯಲ್ಲೂ ಅದೇ ರೀತಿ ಮಾಡಿಸಬೇಕು ಹಣ ಕೊಟ್ಟು ಲೈಸೆನ್ಸ್ ಪಡೆದಲ್ಲದೆ ಕಾಡಿನೊಳಕ್ಕೆ ಬಿಡುವುದಿಲ್ಲ

ಉತ್ತರ —ಮಾಫಿ ಚೀಟಿ ಕೊಡುವಂತೆ ಏರ್ಪಾಡು ಮಾಡುತ್ತೇವೆ. ಒಂದುವೇಳೆ ಹಣ ಕೊಟ್ಟು ಲೈಸೆನ್ಸ್ ಪಡೆದು ಕಾಡಿಗೆ ಹೋಗಿ ನೋಡಿ ತನಗೆ ಬೇಕಾದ ಮರವಿಲ್ಲವೆಂದು ಗೊತ್ತಾದರೆ ಲೈಸೆನ್ಸನ್ನು ವಾಪಸು ಕೊಟ್ಟು ಹಣವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆಯೂ ಆಗಬಹುದು

ಪ್ರಾರ್ಥನೆ —ಗ್ರಾಮಾಂತರಗಳಲ್ಲಿ ಅಕಸ್ಮಾತ್ತಾಗಿ ಬೆಂಕಿಬಿದ್ದು ಮನೆ ಉರಿದುಹೋದರೆ ಅಮಲ್ದಾರರು ಅಂಥವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ೫ ರೂಪಾಯಿನ ಸಾಮಗ್ರಿ ಕೊಡಿಸಬಹುದು. ಅವರಿಗೆ ೨೫ ರೂಪಾಯಿನ ತನಕ ಸಾಮಗ್ರಿ ಕೊಡಿಸುವುದಕ್ಕೆ ಅಧಿಕಾರವಿರಬೇಕು

ಉತ್ತರ —ಆಗಲಿ, ಮೊಬಲಗನ್ನು ಜಾಸ್ತಿಮಾಡಿಕೊಡುವ ವಿಷಯದಲ್ಲಿ ಯೋಚಿಸುತ್ತೇವೆ

ಪ್ರಾರ್ಥನೆ —ಬೇಲಿ ಹಾಕಿಕೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಫಾರೆಸ್ಟಿನಿಂದ ಶೀಬನ್ನು (ಬಿದರು ಮೆಳೆಗಳ ಮುಳ್ಳುಗಳನ್ನು) ಮಾಫಿಯಾಗಿ ಕಡಿದು ಸಾಗಿಸಿಕೊಂಡು ಬರುವುದಕ್ಕೆ ಅವಕಾಶವಾಗಬೇಕು ಬೇಲಿ ಹಾಕದಿದ್ದರೆ ಕಬ್ಬಿನ ಫಸಲೂ ಇತರ ಬೆಳೆಗಳೂ ನಾಶವಾಗುತ್ತವೆ

ಉತ್ತರ —ಒಳ್ಳೇದು, ವಿಚಾರಿಸಿ ನಿಮಗೆ ಅನುಕೂಲಪಡಿಸಿಕೊಡುತ್ತೇವೆ

ತಾಲ್ಲೋಕು ವರ್ತಮಾನಗಳು

ಚಿತ್ರದುರ್ಗ —ಮಳೆ ಬರಲಿಕ್ಕಿದ್ದು ಸುದ್ದಾಂಗವಾಗಿ ನಿಂತು ಹೋಯಿತು ಬರಕಕ್ಕೆ ಸೂಚನೆಯೂ ಇಲ್ಲ ಬಿಸಿಲು ಬಹಳ ಜಾಸ್ತಿಯಾಗಿದೆ ಪ್ರಜೆಗಳು ನೀರಿಗಾಗಿ ಪಡತಕ್ಕ ಕಷ್ಟ ಹೆಚ್ಚಾಯಿತು ಕೆರೆಗೆ ನೀರು ಬರಲಿಲ್ಲ ಅಲ್ಪ ಸ್ವಲ್ಪ ಬಂದಿದ್ದದ್ದು ಮುನಿಸಿಪಾಲಿಟಿಯವರು ಪಡ್ಡಿಗೆ ಬಿಟ್ಟುಕೊಂಡು ಅನುಕೂಲಸ್ಥರು ವಾಸಮಾಡತಕ್ಕ ನಲ್ಲಿಗಳಿಗೆ ಬಿಡುತ್ತಿದ್ದಾರೆ ಮುಂದೆಯಾದರೂ ಕೆರೆಗೆ ನೀರು ಬಾರದಿದ್ದರೆ ಈ ದಫಾ ಚಿತ್ರದುರ್ಗದಲ್ಲಿ ಪ್ರಜೆಗಳು ವಾಸಮಾಡತಕ್ಕದ್ದೇ ಕಷ್ಟವಾಗಬಹುದು ಪ್ರಜೆಗಳಲ್ಲಿ ಶೀತಸಂಬಂಧವಾದ ಕಾಯಿಲೆ ಜಾಸ್ತಿಯಾಗಿದೆ —ಈಚೆಗೆ ಈ ಡಿಸ್ಟ್ರಿಕ್ಟಿನಲ್ಲಿ ಖೂನಿಗಳು ಬಹಳ ಜಾಸ್ತಿಯಾದವು. ಈ ದಫಾ ಸೆಷನ್ ವಿಚಾರಣೆಗೆ ಗುರಿಯಾಗಿದ್ದ ಖೂನಿ ಮೊಕದ್ದಮೆಗಳ ಪೈಕಿ ಎರಡರಲ್ಲಿ ಅಪರಾಧಿಗಳು ಖುಲಾಸೆ ಆದರು ಭೀಮಸಮುದ್ರದ ತೋಟದ ಸಿದ್ದಪ್ಪನನ್ನು ಕೊಂದವರು ಇನ್ನೂ ಪತ್ತೆ ಆಗಿಲ್ಲ ಈಗ್ಗೆ ೪-೫ ದಿವಸದ ಕೆಳಗೆ ಹೊಸ ದುರ್ಗದ ತಾಲ್ಲೂಕಿನಲ್ಲಿ ಒಂದು ಖೂನಿ ನಡೆದಿದೆ

ಅರಸೀಕೆರೆ —ಕಳೆದ ತಾ ೨೩ ನೇ ಶನಿವಾರ ಅರಸೀಕೆರೆ ತಾ ಬಾವಗಲ್ಲು ಹೋಬಳಿ ನೇರ್ಲಿಗೆ ಗ್ರಾಮದ ಬ್ರಾಹ್ಮಣರು ಭೋಜನಕ್ಕೆ ಅಂಗಡಿಯಲ್ಲಿ ಮಾರತಕ್ಕ ಒಳ್ಳೆಣ್ಣೆಯನ್ನು ಪರೀಕ್ಷಿಸದೆ ಉಪಯೋಗಿಸಿದರು ಅವರು ಊಟ ಮಾಡಿದ ಒಂದು ಘಂಟೆ ಒಳಗಾಗಿ ಪ್ರತಿಯೊಬ್ಬರಿಗೂ ವಾಂತಿ ಭೇದಿ ಪ್ರಾರಂಭವಾಗಿ ಸಂಕಟಪಟ್ಟು ನಿತ್ರಾಣದಿಂದ ಮಲಗಿದರು ಅನೇಕರು ಕಂಡ ಕಂಡ ಔಷಧಿಗಳನ್ನೆಲ್ಲಾ ಪ್ರಯೋಗಿಸಿದರೂ ಆ ಚಿಕಿತ್ಸೆಗಳೆಲ್ಲಾ ನಿಷ್ಫಲವಾದವು ಆ ಸಮಯದಲ್ಲಿ ಮೆ॥ ಶ್ಯಾನುಭೋಗ ಕೃಷ್ಣಪ್ಪನವರೂ ಜಮೀನ್ದಾರ್ ಮೆ॥ ಅಂಗಡಿ ಗುರುಮಲ್ಲಪ್ಪನವರೂ ಬಂದು ಸುಮಾರು ೨೦೦ ಯಳನೀರುಗಳನ್ನು ತರಿಸಿ, ನಿತ್ರಾಣವಾಗಿ ಮಲಗಿದ್ದ ಪ್ರತಿಯೊಬ್ಬರಿಗೂ ಕುಡಿಸಿದರು. ತರುವಾಯ ಕ್ರಮ ಕ್ರಮವಾಗಿ ಎಲ್ಲರಿಗೂ ಹುಷಾರಾಗುತ್ತಾ ಬಂದು ಸಾಯಂಕಾಲ ೬ ಘಂಟೆ ಹೊತ್ತಿಗೆ ಎಲ್ಲರಿಗೂ ಚನ್ನಾಗಿ ಗುಣವಾಯಿತು. ಆ ಕಾಲದಲ್ಲಿ ಮೇಲ್ಕಂಡ ಮಹನೀಯರು ಈ ಸುಲಭವಾದ ಔಷಧಿಯನ್ನು ತಿಳಿಸದೆ ಇದ್ದ ಪಕ್ಷದಲ್ಲಿ ಬಹಳ ಜನಗಳು ಆ ಮಹಾ ನವಮಿ ಹಬ್ಬದ ದಿನ ಅಕಾಲಮೃತ್ಯುವಿಗೆ ಗುರಿಯಾಗುತ್ತಾ ಇದ್ದರೆಂಬುವದರಲ್ಲಿ ಸಂದೇಹವಿರಲಿಲ್ಲ ಇಂತಹ ಮಹದುಪಕಾರವನ್ನು ಮಾಡಿದ ಪ್ರಾಜ್ಞರ ಕಾರ್ಯವು ಕೇವಲ ಶ್ಲಾಘನೀಯವಾಗಿದೆ

ಶಿವಮೊಗ್ಗಾ —ಈ ಮಾರ್ಗವಾಗಿ ಮೈಸೂರು ಪ್ರಭುಗಳು ದಯಮಾಡಿಸುತ್ತಾರಾದ್ದರಿಂದ ಆ ವಿಷಯಕ್ಕಾಗಿ ಏನೇನು ಮಾಡಬೇಕೆಂದು ನೆನ್ನೆ ತಾ ೬ ರಲ್ಲಿ ಒಂದು ಮ್ಯುನಿಸಿಪಲ್ ಸ್ಪೆಷಲ್ ಮೀಟಿಂಗು ನಡಿಯಿತು ಅವರು ಬರತಕ್ಕ ರಾಜಮಾರ್ಗವನ್ನು ನಾನಾ ರೀತಿಯಿಂದ ಅಲಂಕರಿಸಿ, ತಾಲ್ಲೂಕ್ ಕಚೇರಿಬಳಿ ಒಂದು ದೊಡ್ಡ ಚಪ್ಪರವನ್ನೂ ಕೆಲವು ಕಡೆ ಕಮಾನುಗಳನ್ನೂ ಹಾಕಿಸುವಂತೆಯೂ ಅವರು ಆಗುಂಬೆಯಿಂದ ವಾಪಸ್ ಬರುವಾಗ್ಗೆ ದೀಪೋತ್ಸವ ಮಾಡುವಂತೆಯೂ ಏರ್ಪಾಡು ಮಾಡಿದರು ಮ್ಯುನಿಸಿಪಾಲಿಟಿ ಆದಾಯವನ್ನು ವಸೂಲ್ಮಾಡುವುದಕ್ಕೆ ಡೆಪ್ಯುಟಿ ಅಮಲ್ದಾರರನ್ನೇ ಸರ್ಕಾರದವರು ನೇಮಿಸಿರುತ್ತಾರೆ — ಹುಬ್ಬಳ್ಳಿಯಿಂದ ಮೆ॥ ತಿಮೋಥಿ ಮಲ್ಲಾರಾವ್ ಎಂಬ ದಂತವೈದ್ಯರನ್ನು ಒಬ್ಬ ಆಫೀಸರು ಸಾಗರಕ್ಕೆ ಕರಸಿಕೊಂಡು ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆಂದು ತಿಳಿಯಿತು. ಈ ವೈದ್ಯರು ವಾಪಸು ಶಿವಮೊಗ್ಗೆಗೂ ಬರುವರು —ಇಲ್ಲಿನ ಮಾಂಸದ ಅಂಗಡಿಯವರಿಗೂ ವೈಸ್ ಪ್ರೆಸಿಡೆಂಟರಿಗೂ ಏನೋ ಮಾತುಗಳು ನಡೆದು ಮಾರ್ಕೆಟ್ಟಿನಲ್ಲಿ ಈಗ ಮಾಂಸದ ವ್ಯಾಪಾರವೇ ನಿಂತುಹೋಗಿ ಅನೇಕ ಜನರಿಗೆ ತೊಂದರೆಯಾಗಿದೆ —ಒಂದು ಹೆಬ್ಬಾವು ಒಂದು ಮೇಕೆ ಮರಿಯನ್ನು ನುಂಗುತ್ತಿರುವುದನ್ನು ಒಬ್ಬನು ಕಂಡು, ಆ ಹಾವನ್ನು ಹೊಡೆದು ಕಚೇರಿಗೆ ತಂದಿದ್ದನು ಮೇಕೆ ಮರಿಯು ಹಾವಿನ ಹೊಟ್ಟೆಯೊಳಗೆ ಅಡಕವಾಗಿತ್ತು —ಯಾವ ಕಡೆ ನೋಡಿದರೂ ಬೆಳೆಯು ಸಮೃದ್ಧಿಯಾಗಿದೆ ಆದರೆ ಕಟಾವಿನ ನಂತರ ಧಾರಣೆ ವಾಸಿಯು ಹ್ಯಾಗಾಗುತ್ತೋ ನೋಡಬೇಕು

ತೀರ್ಥಹಳ್ಳಿ —ಇದೇ ತಾಲ್ಲೂಕು ಮಳೂರು ಮಾಗಣಿ ವಡಗೆರೆ ಗ್ರಾಮದಲ್ಲಿ ಒಬ್ಬ ಅಕ್ಕಸಾಲಿಯ ಮನೆಯಲ್ಲಿ ಇನ್ನೊಬ್ಬ ಅಕ್ಕಸಾಲೀಯು ಸುಮಾರು ೨೦೦ ರೂಪಾಯಿ ಒಡವೆಗಳನ್ನು ಕದ್ದುಕೊಂಡದ್ದನ್ನು ಪೋಲೀಸಿನವರು ಪತ್ತೆ ಮಾಡಿರುವುದಾಗಿ ವರ್ತಮಾನ ದಿನಸಿ ಧಾರಣೆ ತಗ್ಗಿದ್ದರಿಂದಲೋ ಬೇರೆ ಕಾರಣದಿಂದಲೋ ಸಣ್ಣ ಸಣ್ಣ ಕಳುವು ಜಾಸ್ತಿಯಾಗಿ ಇಲ್ಲಿನ ಲಾಕಪ್ಪಿನಲ್ಲಿ ಮೂರು ನಾಲ್ಕು ಜನ ಖೈದಿಗಳು ಇದ್ದೇ ಇರುತ್ತಾರೆ —ಕಳೆದ ತಿಂಗಳು ೧೮ನೇ ತಾರೀಖಿನಿಂದ ಇಲ್ಲಿ ಸಂತೇ ಕಟ್ಟುವದ ಪುನಃ ಶುರುವಾಗಿ ನಡೆಯುತ್ತಲಿದೆ ಕ್ರಮೇಣ ಇದು ಅಭಿವೃದ್ಧಿಗೆ ಬರಬಹುದೆಂದು ತೋರುತ್ತದೆ —ಇಲ್ಲಿನ ಜೋಯಿಸರ ಮನೆಯಲ್ಲಿ ಕೆಲವು ಸಾವಿರ ರೂಪಾಯಿನ ನಗಗಳನ್ನು ಕಳವು ಮಾಡಿಕೊಂಡು ಹೋಗಿದ್ದವರನ್ನು ಪೋಲೀಸಿನವರು ಗಟ್ಟದ ಕೆಳಕ್ಕೆ ಹೋಗಿ ಉಡುಪಿ ತಾಲ್ಲೂಕಿನಲ್ಲಿ ಪತ್ತೆಮಾಡಿ ಹಿಡಿದು, ವಿಚಾರಣೆಗೆ ಗುರಿಮಾಡಿರುವದು ಸಂತೋಷಕರವಾಗಿದೆ —ಇಲ್ಲಿ ಹಗಲಿನಲ್ಲಿ ಬಿಸಿಲು ಜಾಸ್ತಿಯಾಗಿಯೂ ರಾತ್ರಿಯಲ್ಲಿ ಮಂಜು ಜಾಸ್ತಿಯಾಗಿಯೂ ಇರುವದು —ಈ ತಾಲ್ಲೂಕಿನ ರಸ್ತೆಗಳು ಬಹುಮಟ್ಟಿಗೆ ಚನ್ನಾಗಿದ್ದರೂ ಕೆಲವು ಸಬ್ ಡಿವಿಜನ್‌ಗೆ ಸೇರಿರುವ ತೀರ್ಥಹಳ್ಳಿ ಕೊಪ್ಪ ರಸ್ತೆಯು ಬಹುಮಟ್ಟಿಗೆ ಕೆಟ್ಟುಹೋಗಿದೆ ಅನೇಕ ಸ್ಥಳಗಳಲ್ಲಿ ರಸ್ತೇ ಕಡೆ ಜಬ್ಬಿಕೊಂಡು ಬಂದಿರುವ ಬಿದಿರು ಮುಳ್ಳು ಪ್ರಯಾಣಿಕರಿಗೆ ತೊಂದರೆಯಾಗಿರುವ ಪ್ರಯುಕ್ತ ಅಧಿಕಾರಿಗಳು ಇದನ್ನು ಸರಿಪಡಿಸುವದು ಪ್ರಯೋಜನವಾಗಿರುವದು

ಬೀರೂರು —ಇಲ್ಲಿನ ಉಪಾಸನಾ ಸಮಾಜದ ವಾರ್ಷಿಕೋತ್ಸವವು ಹಿಂದಿನ ಮಂಗಳವಾರ ಜರುಗಿತು ಇದಕ್ಕೆ ಬಹು ಜನರು ದಯಮಾಡಿದ್ದರು ಸಮಾಜದವರು ಸಭಿಕರೊಂದಿಗೆ ಗ್ರಾಮಭಜನೆ ಮಾಡಿಕೊಂಡು ಬಂದು ದೇವರಿಗೆ ಮಂಗಳಾರತಿ ಮುಂತಾದವು ನಡೆದ ತರುವಾಯ ಸರ್ವರೂ ಭೋಜನಾದಿಗಳಿಂದ ತೃಪ್ತಿ ಹೊಂದಿದರು ಅನಂತರ ಎ ವಿ ಸ್ಕೂಲ್ ಕಟ್ಟಡದಲ್ಲಿ ಸಾಯಂಕಾಲ ಸಭೆ ಸೇರಿತು ಮೆ ॥ ರಾಮರಾಯರು ಅಗ್ರಾಸನವನ್ನಲಂಕರಿಸಿದ್ದರು ಸಮಾಜದ ವಾರ್ಷಿಕ ರಿಪೋರ್ಟನ್ನು ಮೆ॥ ಶೇಷಾದ್ರಿಯಂಗಾರ್ಯರು ಓದಿ, ವರ್ಷದಿಂದ ಈ ಸಮಾಜದವರು ಮಾಡುತ್ತಿರುವ ಕೆಲಸಗಳನ್ನು ತಿಳಿಸಿದರು ಮೆ ಚಿದಂಬರ ಪಂಡಿತರೂ ತರೀಕೆರೆಯಿಂದ ಬಂದಿದ್ದ ಮೆ ವೆಂಕಟರಾಮಯ್ಯನವರೂ ಉಪಾಸನಾ ಸಮಾಜದ ವಿಚಾರದಲ್ಲಿ ಸರಳವಾದ ಉಪನ್ಯಾಸಗಳನ್ನು ಮಾಡಿದರು ಮೆ॥ ವಲ್ಲಭಯ್ಯಂಗಾರ್ಯರು ಅನಾಥ ಬಾಲಕರಿಂದ ನಾಟಕರೂಪವಾಗಿ ಸಂಭಾಷಣೆಗಳನ್ನು ಮಾಡಿಸಿದರು ಮಾಗಡಿ ಸ್ಕೂಲ್ ಹೆಡ್‌ಮಾಸ್ಟರು ಮೆ॥ ಕೆ ರಾಮಸ್ವಾಮಯ್ಯಂಗಾರ್ಯರು ರಚಿಸಿ ಕಳುಹಿಸಿದ ಹಿತಬೋಧಿನಿ ಎಂಬ ಪುಸ್ತಕದ ಕೆಲವು ಪ್ರತಿಗಳು ಅನಾಥ ಬಾಲರಿಗೆ ಹಂಚಲ್ಪಟ್ಟಿತು ಅನಂತರ ಅಗ್ರಾಸನಾಧಿಪತಿಗಳು ಪ್ರೋತ್ಸಾಹಕವಾಕ್ಯಗಳಿಂದ ಸಭೆಯವರನ್ನು ಆನಂದಗೊಳಿಸಿದರು ಸಭಿಕರಿಗೆ ಗಂಧ, ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ರಾತ್ರಿ ೯ ಘಂಟೆಗೆ ಬರಖಾಸ್ತಾಯಿತು ಈ ಸಮಾಜದವರ ಮೇಲ್ಪಂಕ್ತಿಯನ್ನನುಸರಿಸಿ ನೆಲಮಂಗಲದ ತಾಲ್ಲೂಕು ಸೋಂದೆಕೊಪ್ಪದಲ್ಲಿ ವೀರರಾಘವ ಮಂದಿರ ಎಂಬ ಪ್ರಾರ್ಥನಾ ಸಮಾಜವೂ, ಮಾಗಡಿಯಲ್ಲಿ ಸತ್ಕುಟಿ ಸನ್ಮಾರ್ಗ ಪ್ರವರ್ಧನ ಸಭಾ ಎಂಬ ಸಂಘವೂ, ಹೊಳೆನರಸೀಪುರದಲ್ಲಿ ಪ್ರಾರ್ಥನಾ ಸಮಾಜವೆಂಬ ಆಲಯವೂ ಏರ್ಪಡಿಸಿಕೊಂಡಿರುವುದಾಗಿ ತಿಳಿಯಬಂದಿದೆ

ಮಂಡ್ಯ —ಈಚೆಗೆ ಎರಡು ವಾರಗಳಿಂದ ಮಳೆ ನಿಂತುಹೋಗಿದೆ— ಪ್ರಾತಃಕಾಲ ೯ ಗಂಟೆ ವರಿಗೂ ಹಿಮ ಸುರಿಯುವದು ಬಿಸಲು ಅಧಿಕವಾಗಿದೆ ರೈತರು ಮಳೆಯನ್ನು ಎದುರು ನೋಡುತ್ತಲಿದ್ದಾರೆ —ಇಲ್ಲಿ ಗುರುವಾರ ಸಂತೆ ನಡೆಯುತ್ತದೆ ರೈತರೂ ವ್ಯಾಪಾರಸ್ಥರೂ ಪಿಚ್ಚಿ ಸೇರುಗಳನ್ನು ಇಟ್ಟು ಮಾರುವಂಥವರನ್ನು ಪೋಲೀಸಿನವರು ಕಂಡು ಹಿಡಿದಾಗ್ಗೂ ಮುಂದರಿಸದೆ ಯಾಕೋ ಬಿಟ್ಟು ಬಿಡುತ್ತಾರೆ ಮೇಲ್ಪಟ್ಟವರಿಗೆ ತಿಳಿಸದ ಶಿಕ್ಷಿಸದೆ ಬಿಡುವದು ಆಶ್ಚರ್ಯ ಈ ವಿಷಯ ಇನ್ಸ್‌ಪೆಕ್ಟರು ನಿಗಾ ಕೊಡಬೇಕಾಗಿದೆ —ಹಿಂದಿನ ಸೋಮವಾರ ಬೆಳಗಿನ ಝಾವ ೪ ಗಂಟೆಯಲ್ಲಿ ಬೆಂಗಳೂರಿಂದ ಮೈಸೂರಿಗೆ ಹೋಗುವ ರೈಲ್ ಗಾಡಿಗೆ ಮಂಡ್ಯಕ್ಕೆ ೧ ಮೈಲಿ ದೂರದಲ್ಲಿರುವ ಹಲ್ಲಹಳ್ಳಿ ರೈಲ್ವೆ ಗೇಟ್ ಹತ್ತಿರ ಗಾಡಿ ಬಂದಾಗ ಜಾಕಿದ ಹೋದ್ದರಿಂದ ಆ ಕಡೆಯಿಂದ ಪ್ರಯಾಣಿಕನು ಗಾಡಿಯಲ್ಲಿ ನಿದ್ದೆ ಮಾಡುತ್ತಾ ಇರುವಾಗ ಪ್ರಯಾಣಿಕನ ಗಾಡಿಯು ಗೇಟಿನಲ್ಲಿ ಬಂದದ್ದರಿಂದ ರೈಲಿಗೆ ಸಿಕ್ಕಿ ಗಾಡಿಯು ಪುಡಿಪುಡಿಯಾಗಿ ಒಂದು ಎತ್ತು ಚಕ್ರಕ್ಕೆ ತಗಲಿ ಸತ್ತು ಹೋಯಿತು ಆದರೆ ಮನುಷ್ಯನು ಧೃಮಾಷಿಷ್ಠದಿಂದ ಯಾವ ಅಪಾಯವೂ ಸಂಭವಿಸಲಿಲ್ಲ —ಕಳೆದ ತಿಂಗಳಿಂದ ಇಲ್ಲಿನ ಜೈನಗರ ಬೀದಿಯಲ್ಲಿ ಮೆ ಡಿ ಸುಬ್ಬಣ್ಣನವರು ಪರೋಪಕಾರಾರ್ಥವಾಗಿ ಒಂದು ಕರ್ನಾಟಕ ಔಷಧಾಲಯವನ್ನು ಇಟ್ಟಿರುತ್ತಾರೆ ಇದರಿಂದ ಜನರಿಗೆ ಬಹಳ ಪ್ರಯೋಜನವಾಗಿದೆ ಈ ಔಷಧಾಲಯವು ಅಭಿವೃದ್ಧಿಗೆ ಬರಬೇಕೆಂದು ಹಾರೈಸುತ್ತೇವೆ —ಇಲ್ಲಿನ ಜೈನಗರ ಬೀದಿಯಲ್ಲಿ ಮೆ ಧರಣೇಂದ್ರಪ್ಪನವರಿಂದ ಸನಾತನ ಸನ್ಮಾರ್ಗಪ್ರಚಾರ ಮುದ್ರಾಲಯವು ಸ್ಥಾಪಿಸಲ್ಪಟ್ಟಿದೆಯಷ್ಟೆ ಈ ಆಲಯದಲ್ಲಿ ಕಳೆದ ವಿಜಯದಶಮಿ ಭಾನುವಾರದಿಂದ "ಭರತವರ್ಷ" ಎಂಬ ವಾರದ ಪತ್ರಿಕೆಯು ಮಂಡ್ಯದ ಮೆ ಜೆ ವಿ ನಂಜಪ್ಪಶೆಟ್ಟರವರಿಂದ ಪ್ರಕಟಿಸಲ್ಪಡುತ್ತಲಿದೆ ಅವರು ನಮಗೆ ಒಂದು ಪತ್ರಿಕೆಯನ್ನು ಕಳುಹಿಸಿರುತ್ತಾರೆ ಈ ಪತ್ರಿಕೆಯು ಅಭಿವೃದ್ಧಿಗೆ ಬರಬೇಕೆಂದು ಕೋರುತ್ತೇವೆ

ಹಗ್ಗದೇವನಕೋಟೆ —ಈ ಪ್ರಾಂತ್ಯ ಒಂದು ವಾರದ ಲಾಗಾಯ್ತು ಮಳೆ ಇಲ್ಲದೆ ಬಿಸಲಿನ ಧಗೆ ಹೆಚ್ಚಾಗಿದೆ ಜನರೆಲ್ಲಾ ಮುಂದಿನ ಮಳೆಯ ನಿರೀಕ್ಷಣೆಯಲ್ಲಿಯೇ ಇದ್ದಾರೆ ದಿನಸಿಗಳ ಧಾರಣೆ ದಿನದಿನಕ್ಕೆ ಏರುತ್ತಿದೆ ಸುಗ್ಗಿಯ ಕಾಲಕ್ಕೆ ಇಳಿಯಬಹುದೆಂದು ಹೇಳುವರು —ಇಲ್ಲಿಗೆ ಕಳೆದ ತಿಂಗಳು ೧೯ನೇ ತಾ ಟೆಲಿಗ್ರಾಫ್ ಸೂಪರಿಂಟೆಂಡೆಂಟರು ಬಂದು ತಾಲ್ಲೂಕು ಕಚೇರಿಯಿಂದ ಪೋಸ್ಟು ಆಫೀಸಿನ ವರೆಗೆ ೩ ಕಂಬಗಳನ್ನು ನಟ್ಟು ತಂತಿಹಾಕಿ ಹೋದರು ಇದನ್ನು ಕೆಡ್ಡಾ ಆಗುವ ತನಕ ಇಡಿಸಿರುತ್ತಾರೆಂತಲೂ ಒಳಿಕ ತೆಗೆದುಬಿಡುತ್ತಾರೆಂತಲೂ ವರ್ತಮಾನವಿದೆ ಇದನ್ನು ತೆಗೆದುಬಿಟ್ಟ ಪಕ್ಷದಲ್ಲಿ ಜನರಿಗೆ ತುಂಬಾ ಅನನುಕೂಲಗಳುಂಟಾಗುವದರಿಂದ ಈ ಊರಿನ ಮುಖ್ಯಸ್ಥರೂ, ಪುರಜನರೂ ಇದನ್ನು ತೆಗೆಯಕೂಡದೆಂದು ಅರ್ಜಿಯ ಮೂಲಕ ಪ್ರಾರ್ಥಿಸಿಕೊಳ್ಳುವರೆಂದು ನಂಬುತ್ತೇನೆ —ಇದೇ ತಾಲ್ಲೂಕು ಅಂತರಸಂತೆ ಹೋಬಳಿಗೆ ಸೇರಿದ ನಿಶಾನೆ ಮತ್ತು ಮರಳಿ ಗ್ರಾಮಗಳಲ್ಲಿ ಪ್ಲೇಗ್ ರೋಗವಿರುವದಾಗಿಯೂ, ಅಮಲ್ದಾರರವರೂ ಡಾಕ್ಟರೂ ಸದರಿ ಗ್ರಾಮಗಳಿಗೆ ಹೋಗಿ ಜನಗಳಿಗೆ ಊರನ್ನು ಬಿಡುವಂತೆ ಎಚ್ಚರಿಸಿರುವದಾಗಿಯೂ, ಆಗಲೇ ಮೊದಲನೆಯ ಗ್ರಾಮವನ್ನು ಬಿಟ್ಟಿರುವದಾಗಿಯೂ ಕೇಳುತ್ತೇನೆ —ಆಗಲೇ ಈ ಊರಿನವರು ಭಯಸ್ಥರಾಗಿದ್ದಾರೆ ಇಲ್ಲಿನ ಹೊಳೆಯಲ್ಲಿ ಒಂದು ಸ್ನಾನ ಘಟ್ಟವನ್ನು ಕಟ್ಟಿಸಿರುತ್ತಾರೆ ಇಲ್ಲಿ ಹೀಗೆ ಬಟ್ಟೆಗಳನ್ನು ಒಗೆದು ಸೊಪ್ಪುಸೊದೆ ಮುಂತಾದವುಗಳನ್ನು ತೊಳೆದು ನೀರನ್ನು ಕಶ್ಮಲ ಮಾಡುತ್ತಾರೆ ಅಲ್ಲದೆ ಈ ಹೊಳೆಯಲ್ಲಿ ಬೇಸಿಗೆಯಲ್ಲಿ ನೀರು ನಿಲ್ಲುವದಿಲ್ಲವಾದದ್ದರಿಂದ ಅಮಲ್ದಾರರವರು ನೀರು ಕಶ್ಮಲವಾಗದಿರುವದಕ್ಕೂ ಬೇಸಿಗೆಯಲ್ಲಿ ನೀರು ನಿಲ್ಲುವದಕ್ಕೂ ತಕ್ಕ ಏರ್ಪಾಡು ಮಾಡುವರೆಂದು ನಂಬಿದ್ದೇನೆ —ಮುನಿಸಿಪಾಲಿಟಿಯ ವಿಷಯವಂತೂ ವಿಧ್ಯುಕ್ತವಾದರೂ ಕಸ ತೆಗೆಯುವದಿಲ್ಲ ದೂರದಲ್ಲಿರತಕ್ಕ ರೋಗವನ್ನು ಆಹ್ವಾನಿಸುವಂತೆ ತೋರುತ್ತದೆ ಅಮಲ್ದಾರವರೂ, ಮುನಿಸಿಪಲ್ ಮೆಂಬರುಗಳೂ ಈ ವಿಷಯಕ್ಕೆ ಕೊಡಬೇಕಾದ ಗಮನ ಕೊಡುತ್ತಾರೆಂದು ನಿರೀಕ್ಷಿಸಲ್ಪಡುತ್ತದೆ

ಹೊಸ್ಪಟ್ಟಣ (?) ಚಿಕ್ಕಬಳ್ಳಾಪುರ — ಹಿಂದಿನ ವಾರ ಒಂದು ಹದ ಮಳೆ ಬಂದದ್ದರಿಂದ ಬಹಳ ಪ್ರಯೋಜನವಾಯಿತು ಚೀಫ್ ಜಡ್ಜಿಯವರು ಹೋದ ವಾರ ಚಿಕ್ಕಬಳ್ಳಾಪುರ ದೇವನಹಳ್ಳಿ ಕಡೆ ಪ್ರಯಾಣ ಮಾಡಿದ ಸಮಯದಲ್ಲಿ ಈ ಬಳ್ಳಾಪುರದ ಕಡೆ ಬರುತ್ತಾರೆಂದು ಇದ್ದರು ಇವರು ಹೋದರೆ ಇಲ್ಲಿನ ಮೆಂಬರುಗಳೇ ಮುಂತಾದವರು ಚೀಫ್ ಜಡ್ಜಿ ಬಂದಲ್ಲಿ ಇಲ್ಲಿಗೆ ಮುನ್ಸೀಫ್ ಕೋರ್ಟನ್ನು ತರಿಸಿಕೊಡುವಂತೆ ವಿಜ್ಞಾಪಿಸಲು ಬೆಂಗಳೂರಿಗೆ ಹೋಗಿದ್ದಾರೆ —ಈ ಬಳ್ಳಾಪುರಕ್ಕೆ ೮ ಮೈಲಿ ದೂರದಲ್ಲಿ ಮೇಳೆಕೋಟೆ ಸಂತೆಯು ನಡೆಯುತ್ತದೆ ಈ ತಾಲ್ಲೋಕಿಗೆ ಇದೇ ದೊಡ್ಡ ಸಂತೆ ಚಿಕ್ಕಬಳ್ಳಾಪುರ, ದೇವನಹಳ್ಳಿಯಿಂದಲೂ ಗಾಡಿಗಳು ಬರುತ್ತವೆ ಇಂಥಾ ಸಂತೆಗೆ ಹೋಗುವದಕ್ಕೆ ಬಹು ದೊಡ್ಡ ಕಷ್ಟವು ಉಂಟು ಮೇಳೆಕೋಟೆ ಕೆರೆ ಕೋಡಿ ಬಿದ್ದಿರುವುದರಿಂದ ಸರಿಯಾಗಿಲ್ಲ, ಕೆರೆಯಿಂದ ನೀರು ಬಂದು ತುಂಬಾ ಕೆಸರಾಗಿ ಗಾಡಿಗಳು ಹೋಗುವದಕ್ಕೆ ಕಷ್ಟವಾಗಿದೆ ಹೋದ ಸಂತೆ ದಿನ ಗಾಡಿಗಳ ಚಕ್ರಗಳು ಕೆಸರಿನಲ್ಲಿ ಹೂತು ಹೋಗಿ, ಒಂದು ಎತ್ತು ಕೆಸರಿನಲ್ಲಿ ಸಿಕ್ಕಿಕೊಂಡಿತು ಅರ್ಧ ಫರ್ಲಾಂಗ್ ದೂರ ಸಾಗಿಸುವದಕ್ಕೆ ೨ ಗಂಟೆ ಹಿಡಿಯಿತು ಮೇಲ್ಪಟ್ಟ ಅಧಿಕಾರಿಗಳು ಈ ಮೂಗು ಪ್ರಾಣಿಗಳ ಕಷ್ಟವನ್ನು ನೋಡಿ, ಇದನ್ನು ಸರಿ ಮಾಡಿಸುವರೆಂದು ಜನರು ಕೋರುತ್ತಾರೆ ಮುಖ್ಯವಾಗಿ ಈಗ ಬಂದಿರುವ ಸೂಪರ್‌ವೈಜರಾದ ಮೆ ರಂಗವೇಲು ಮೊದಲಿಯಾರ್ರು ಇದನ್ನು ಸರಿ ಮಾಡಿಸಿ ಕೀರ್ತಿ ಪಡೆಯುವರೆಂದು ಜನರು ಎದುರು ನೋಡುತ್ತಾರೆ ಯಾಕೆಂದರೆ ಇವರು ಬಂದು ಅನೇಕ ಉಪಯೋಗವಾದ ರಸ್ತೆಗಳನ್ನು ಹೊಸ ರೀತಿಯಾಗಿ ಮಾಡಿಸುತ್ತಾ ಇದ್ದಾರೆ —ಇಲ್ಲಿಗೆ ಬರುವ ಅಮಲ್ದಾರ್ ಮೆ॥ ಕೃಷ್ಣೇ ಅರಸಿನವರು ರಜಾದ ಮೇಲಿರುವದರಿಂದ ಇವರಿಗೆ ಬದಲಾಗಿ ಮೆ' ಮಾರ್ತಾಂಡರಾಯರು ತಾ ೩೦ ರಲ್ಲಿ ಇಲ್ಲಿಗೆ ಬಂದು ಸಮ್ಮತಿಸಿದ್ದದ್ದರಿಂದ ತಾಲ್ಲೂಕಿನ ಛಾರ್ಜನ್ನು ವಹಿಸಿದರು ಇವರು ತಮ್ಮ ಕಾಲದಲ್ಲಿ ಒಳ್ಳೇ ಕಾರ್ಯಗಳನ್ನು ನಡಿಸಿ ಹೆಸರು ಪಡೆಯಲೆಂದು ಜನರು ಕೋರುತ್ತಾರೆ — ತಾ ೧೬ ರಲ್ಲಿ ಏಕಾದಶಿಪುರದಲ್ಲಿರುವ ಶಿವಾಚಾರದ ಮಲ್ಲಪ್ಪನ ಹೆಂಡತಿ ಬಸಮ್ಮನು ಭಾವಿಯಲ್ಲಿ ಬಿದ್ದಳು ದಫೇದಾರ್ರು ಹೋಗಿ ರಾತ್ರಿ ೭ ಗಂಟೆಯಲ್ಲಿ ಹೆಣವನ್ನು ಭಾವಿಯಿಂದ ತೆಗೆಸಿ ಮಾರನೇ ಬೆಳಗ್ಗೆ ೭ ಗಂಟೆಗೆ ಪಂಚಾಯತರನ್ನು ಕರಿಸಿ ಸುಮಾರು ನೂರು ಗಜ ದೂರದಲ್ಲಿ ಕೂರಿಸಿ ಮಹಜರು ಮಾಡಿಸಿದರೆಂದು ಕೇಳುತ್ತೇನೆ

ಅರಕಲಗೂಡು —ಈ ಊರಿನ ಸಂತೆಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಮೆ ಚನ್ನವೀರಯ್ಯನವರೂ, ಜಮಾದರ್ ಮೆ॥ ಅಜೀಜ್‌ಖಾನ್‌ರವರೂ ಯಾವ ಗಲಾಟೆ ಇಲ್ಲದಂತೆ, ಮೇಲುಸ್ತುವಾರಿ ಬಹು ಕ್ರಮವಾಗಿ ನೋಡಿಕೊಳ್ಳುತ್ತಾರೆ ಆದರೆ ಸಂತೆಯಲ್ಲಿ ವರ್ತಕರು ಕಮಿ ಸೇರು ಖೋಟ ಬಟ್ಟುಗಳನ್ನು ಇಟ್ಟುಕೊಂಡು ಬಡ ಹಳ್ಳಿ ಜನರಿಗೆ ಬಹಳ ಮೋಸಮಾಡುತ್ತಾರೆ ಪೋಲೀಸ್ ಅಧಿಕಾರಿಗಳು ಇದನ್ನು ಉಪಾಯವಾಗಿ ಅಜಮಾಯಿಷಿ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಮಾಡಿಸಿದರೆ ಜನರಿಗೆ ಬಹಳ ಪ್ರಯೋಜನವಾದೀತು ಜೈಲ್ ಸೇರಿಗೆ ಸರಿಯಾದ ಸೇರುಗಳಲ್ಲಿ ಅಳೆಯುವಂತೆ ಅಧಿಕಾರಿಗಳು ಏರ್ಪಡಿಸಬೇಕು ಸಂತೆ ಕಟ್ಟುವ ಸ್ಥಳ ಈಗಿರುವದು ಕೋಟೆ ಪೇಟೆ ಜನರಿಗೂ ಬೇರೆ ಜನರಿಗೂ ಅನುಕೂಲವಾಗಿರುತ್ತದೆ ಆದರೆ ಕೆಲವು ವರ್ತಕರು ಯಾವಾಗಲೂ ನಡೆಯುತ್ತಿದ್ದ ಸ್ಥಳದಲ್ಲಿ ಸಂತೆ ನಡಿಸಿದರೆ ಚನ್ನಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ —ಕಳೆದ ತಿಂಗಳು ೯ ನೆ ತಾ ನಿಂಗ, ಚಿಕ್ಕ ಮಲ್ಲ, ರಾಮ ಎಂಬವರು ಕೋಟೆ ಶ್ರೀಕಂಠಯ್ಯ, ರಾಮಣ್ಣ, ಗುಂಡಯ್ಯನ ರಾಮಣ್ಣ, ಇವರ ಮನೆಗಳಲ್ಲಿ ಪಾತ್ರೆ ಮುಂತಾದವುಗಳನ್ನು ಕಳುವು ಮಾಡಿದ್ದನ್ನು ಪೋಲೀಸಿನವರೂ ಪಟೇಲರೂ ಬಹು ಸಾಹಸದಿಂದ ಪತ್ತೆಮಾಡಿದರು ಅವರನ್ನು ಕೇಳುವಲ್ಲಿ ಮಾಲುಗಳು ಇಂಥಿಂಥಾ ಸ್ಥಳದಲ್ಲಿವೆ ಯೆಂದೂ ಅಕ್ಕಸಾಲಿಗರ ಚಿನ್ನಯ್ಯನಿಗೆ ಮಾರಿದೇವೆಂದೂ ಅಪರಾಧಿಗಳು ಹೇಳಿದ್ದರಿಂದ ಚಿನ್ನಯ್ಯನ ಮಾಲನ್ನು ಜಪ್ತಿ ಮಾಡಿದರು ಅಲ್ಲಿ ಮೇಲ್ಕಂಡ ಸಾಮಾನುಗಳು ಮಾತ್ರವಲ್ಲದೆ ೩೩ ತೊಲದಷ್ಟು ಪಾಲೆಯವೂ ಸಿಕ್ಕಿತು ಇವುಗಳನ್ನು ಅಪರಾಧಿಗಳೊಂದಿಗೆ ಹೊಳೆನರಸೀಪುರದ ಕೋರ್ಟಿಗೆ ಕಳುಹಿಸಿದರು —ಹೊಸ ಅಮಲ್ದಾರರಾದ ಮೆ ರಾಜಗೋಪಾಲಾಚಾರು ಉತ್ತೇಜನದಿಂದ ಒಂದು ಛಾರ್ಜನ್ನು ವಹಿಸಿಕೊಂಡಿರುತ್ತಾರೆ ಇವರು ಟೌನ್ ಎಲ್ಲಾ ಬೀದಿಗಳಲ್ಲಿ ಸಂಚರಿಸಿ ಪ್ರಜೆಗಳ ಕಷ್ಟ ಅನಾನುಕೂಲಗಳನ್ನು ವಿಚಾರಿಸುವವರಾಗಿರುತ್ತಾರೆಂದು ಜನರು ಬಹು ಸಂತೋಷಪಡುವವರಾಗಿದ್ದಾರೆ ಊರು ಶುಚಿತ್ವ ವಿಷಯ ಚನ್ನಾಗಿಲ್ಲ ಕುರುಬರಕೇರಿ ಎಲ್ಲಾ ಗಂದುಗೊಂದ ಗಲ್ಲಿ ಬಹಳ ಗಲೀಜು ಉಂಟು ಕುರುಬರ ಕೇರಿಗೆ ಲಾಂದ್ರದ ಬೆಳಕೇ ಇಲ್ಲ ಇದನ್ನು ಅಧಿಕಾರಿಗಳು ಗಮನಕ್ಕೆ ತಂದುಕೊಂಡರೆ ಸಂತೋಷ ಕೊಂಡನಾಯಕನ ಪ್ಲೇಗ್ ಉಂಟೆಂ ಎವ ವರ್ತಮಾನವಿದೆ ಮುನಿಸಿಪಲ್ ಅಧಿಕಾರಿಗಳು ಜಾಗರೂಕತೆಯುಳ್ಳವರಾಗಬೇಕು

ಫ್ರೆಂಚ್‌ರಾಕ್ಸ್ — ಜನರು ಪಟ್ಟಣಗಳಲ್ಲಿ ವಾಸಮಾಡುತ್ತಿರುವದರಿಂದ ಚಳಿ ಜ್ವರ ಪಿಡಿತರಾಗಿ ನರಳುತ್ತಿದ್ದಾರೆ ಪ್ಲೇಗ್ ಸ್ವಲ್ಪ ಕಡಮೆಯಾದಾಗ್ಯೂ ನಿಂತುಹೋಯಿತೆಂದು ಹೇಳಲಾಗುವದಿಲ್ಲ ಕಳೆದ ಮೂರು ತಿಂಗಳಲ್ಲಿ ಸುಮಾರು ೮೦ ಜನರ ವರೆಗೂ ತಗಲಿ, ಸುಮಾರು ೬೦ ಜನರ ವರಿಗೂ ಕಾಲವಾದರು ಈ ಸರಿ ಬಂದ ಪ್ಲೇಗ್ ತುಂಬಾ ಕಠಿಣವಾದದ್ದೆಂದು ಹೇಳುತ್ತಾರೆ —ಕೆಲವು ದಿನಗಳಿಗೆ ಮುಂಚೆ ಸಬ್ ಅ॥ ಸರ್ಜನರಾದ ಮೆ॥ ಬಾಲಕೃಷ್ಣ ಮೊದಲಿಯಾರ್ರು ಇಲ್ಲಿಗೆ ಬಂದು, ಸುಮಾರು ೨೩೦ ಜನರಿಗೆ ಇನಾಕ್ಯುಲೇಷನ್ ಮಾಡಿದರು ಇನಾಕ್ಯುಲೇಷನ್ ಮಾಡಿಸಿಕೊಂಡವರಲ್ಲಿ ಸುಮಾರು ೩ ಜನಗಳಿಗೆ ಗಡ್ಡೆ ಕಾಣಿಸಿಕೊಂಡರೂ ಮೂರು ಜನರೂ ಬದುಕಿಕೊಂಡರೆಂದು ತಿಳಿಸಲು ಸಂತೋಷ ಪಡುತ್ತೇನೆ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದರಿಂದ ಪ್ರಯೋಜನ ಉಂಟೆಂಬುವದನ್ನು ವಾಚಕರು ಮಂದಟ್ಟುಮಾಡಿಕೊಳ್ಳಬಹುದು —ಕಳೆದ ವಾರ ಸಿವಿಲ್ ಸರ್ಜನ್‌ರಾದ ಡಾ॥ ಪಿ ಎಸ್ ನಂಜಪ್ಪನವರು ತಿಳಿಸದೇನೇ ಇಲ್ಲಿಗೆ ಬಂದು, ತಮಗೆ ತಲುಪಿದ ಒಂದಾನೊಂದು ರಿಪೋರ್ಟಿನ ವಿಷಯದಲ್ಲಿ ವಿಚಾರಣೆ ಮಾಡಿಕೊಂಡು ಹೋದರೆಂದು ಕೇಳುತ್ತೇನೆ —ಇಲ್ಲಿಗೆ ಸುಮಾರು ೪॥ ಮೈಲಿ ದೂರದಲ್ಲಿರುವ ಕ್ಯಾತನಹಳ್ಳಿ ಎಂಬ ದೊಡ್ಡ ಗ್ರಾಮದಲ್ಲಿ ಕೆಲವು ದಿನಗಳಿಂದಲೂ ಇಲಿ ಸಾಯುತ್ತಿದ್ದು ಸುಮಾರು ೭-೮ ಜನರಿಗೆ ಪ್ಲೇಗ್ ತಗಲಿ ೪-೫ ಜನರು ಕಾಲವಾದಂತೆ ಸಮಾಚಾರವಿದೆ ಶ್ರೀರಂಗಪಟ್ಟಣದ ಆಸ್ಪತ್ರೆಯ ಸರ್ಜನರಾದ ಮೆ॥ ಜ್ಞಾನಪ್ರಿಯಂಯವರು ಅಮಲ್ದಾರರೊಂದಿಗೆ ಅಲ್ಲಿಗೆ ಹೋಗಿ ಇನಾಕ್ಯುಲೇಷನ್ ಮಾಡಲು ಪ್ರಯತ್ನಿಸಿದಾಗ್ಗೆ ೫ ೬ ಜನರು ಮಾತ್ರ ಹಾಕಿಸಿಕೊಂಡು, ಮಿಕ್ಕವರು ತಿರಸ್ಕರಿಸಿ ಕಳುಹಿಸಿಬಿಟ್ಟ ಹಾಗೆ ಕಾಣುತ್ತದೆ —ನಾಲೆಯಲ್ಲಿ ಕೊಚ್ಚಿಕೊಂಡು ಬಂದ ಒಂದು ಹೆಣವನ್ನು ಪೋಲೀಸಿನವರು ೨-೩ ದಿನಗಳಾದರೂ ಡಾಕ್ಟರ ಅಜಮಾಯಿಷಿ ಬಗ್ಗೆ ಕಳುಹಿಸದೆಯೂ, ದಫನ್ ಮಾಡುವದಕ್ಕೆ ಒಪ್ಪಿಸದೆಯೂ ತಮ್ಮ ವಶದಲ್ಲೇ ಇಟ್ಟುಕೊಂಡಿದ್ದರೆಂದು ಕೇಳುತ್ತೇನೆ ಹಣವು ಸೀತಾಪುರದ ಒಬ್ಬ ಬಲಗೈ ಜಾತಿಯ ೧೫ ೧೬ ವರ್ಷದ ಯೌವನಸ್ಥನದೆಂತಲೂ, ಸದರಿಯವನು ಒಬ್ಬ ಒಸ್ತರವನ ಮನೆಯಲ್ಲಿ ಜೀತಮಾಡುತ್ತಿದ್ದನೆಂತಲೂ, ಆತನ ಶವವು ಹ್ಯಾಗೋ ನಾಲೆಯಲ್ಲಿ ಕೊಚ್ಚಿ ಒಂದು ಕಾತನಹಳ್ಳಿ ಒಳೆಯಲ್ಲಿ ಸಿಕ್ಕಿದ ಹಾಗೂ ಹೇಳುತ್ತಾರೆ —ಇದೇ ಗ್ರಾಮದ ಸಮೀಪದಲ್ಲಿರುವ ದೊಡ್ಡಗೌಡನ ಕೊಪ್ಪಲಲ್ಲಿ ಒಂದು ಮನೆಗೆ ಬಿಲು ಒಡೆದು ಮೇಲಾವಣಿಯ ಹಂಚುಗಳು ಸುಮಾರು ಒಂದು ಅಡಿಯವರೆಗೂ ಬೆಂದು ಹಲಗೆಗೋಡೆಯನ್ನು ಸುಟ್ಟು ಕೆಳಗಿದ್ದ ಒಟ್ಟಿಗರ ಕೆಟ್ಟಗೆಯನ್ನೂ ಅದರಲ್ಲಿದ್ದ ಬಟ್ಟೆ ಬರೆಗಳನ್ನೂ ಸುಟ್ಟಿರುವದು ಮಾತ್ರವಲ್ಲದೆ ಮಲಗಿದ್ದ ಪುಟ್ಟಮ್ಮ ನೆಂಬಾಕೆಯ ಎದೆಯ ಮೇಲೆ ಕೂದಲು ಸುಟ್ಟು ಹೋಗಿರುವದು ಮತ್ತು ಆಕೆಯ ಕೆನ್ನೆ ಕಪ್ಪಾಗಿದೆಯೆಂತಲೂ, ಅವಳ ಮಗಳಿಗೂ ಸಣ್ಣ ಮಗುವಿಗೂ ಸ್ವಲ್ಪ ಸುಟ್ಟು ಕಪ್ಪಾಗಿದೆ ಎಂತಲೂ, ಆದರೆ ಯಾವ ಅಪಾಯವೂ ಆಗಲಿಲ್ಲವೆಂತಲೂ ಕಾಣುತ್ತದೆ ಮತ್ತು ಬೀದಿ ಕಡೆಯಲ್ಲಿದ್ದ ಒಂದ ಕೆಸರು ಗದ್ದೆಯ ಪೈರನ್ನು ನೀರಿನ ಮಟ್ಟದ ವರೆಗೂ ಸುಟ್ಟಿರುವದಾಗಿ ಹೇಳುತ್ತಾರೆ

Printed and Published by the Rev H GULLIFORD, Proprietor and Manager Wesleyan Mission Press, Mysore 11/11/1909

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩. ಮೈಸೂರು—ಸನ ೧೯೦೯ ನೇ ಇಸವಿ ನವಂಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೩೫

ಬೆಂಗಳೂರು ಅಡಿಷನಲ್ ಮುನ್ಸಿಫ್ ಕೋರ್ಟಿನಲ್ಲಿ

1908—09 ನೇ ಇಸವಿ ಓ. ಎಸ್. ನಂಬರು 381

ವಾದಿ	ಪ್ರತಿವಾದಿಗಳು
ಚನ್ನಪಟ್ಟದ ತಾಲ್ಲೂಕು ... [illegible]	ಗನಿ ಚನ್ನಪಟ್ಟದ ಕಸಬಾ ... ಹೊಂಗನೂರು ಗ್ರಾಮದಲ್ಲಿ ... [illegible]

ಮೇಲ್ಕಂಡ ... [illegible] ... ಎಂದು ಇರುವುದು. [75 1]

B. Rang[illegible]
[illegible]

ಷೆಡ್ಯೂಲು

ಚನ್ನಪಟ್ಟದ ತಾಲ್ಲೂಕು ... ಹೊಂಗನೂರು ಗ್ರಾಮದಲ್ಲಿ ... [illegible] ... ಉಳ್ಳದ್ದು.

15 ... B. R[illegible]

THE ... CAPSIS
HASSAN

ನಿಮ್ಮ ತಲೆಯ ಮೇಲಿರುವದೇನು?

... ಟೋಪಿ ಅಲ್ಲವೋ?

... ಬೇಗ ಬರೆದು ತರಿಸಿಕೊಳ್ಳಿ. 146

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರದ ... ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ... (೨) ಟೋಪಿಗಳನ್ನು ... [illegible] ... ಅಪೇಕ್ಷೆ ಪಡುವವರಿಗೆ ಬಹಳ ಚನ್ನಾಗಿ ... [illegible]

ಒಳ್ಳೆ ಬಾಳಿಕೆ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ಈಗಲೇ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾಲರ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮಕ್ಕಳ ಟೋಪಿಗಳು ೧ ರೂ ೮ ಆ ೧ ರೂ ೬ ಆ.

ಕಡಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಚ್ಚಿನ ಚಿಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕೊಡಲ್ಪಡುವದು. ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಬ್ಯಾಂಕು ಇಸ್ತಿಹಾರು

ಮೈಸೂರು ಸ್ವದೇಶೀ ಶ್ರೀ ಶ್ರೀನಿವಾಸಧರ್ಮ ಅಭಿವೃದ್ಧಿ ಕಂಪನಿ, ಲಿಮಿಟೆಡ್, ಆಫೀಸ್, ಮೈಸೂರು

ಮೇಲ್ಕಂಡ ಕಂಪನಿ ಮೆಂಬರುಗಳು ತಾ 19 9 1909 ಮತ್ತು 16-10 1909 ರಲ್ಲಿ ಸಭೆ ಸೇರಿ ನಡಿಸಿದ ಎಕ್ಸ್‌ಟ್ರಾರ್ಡಿನರಿ ಜನರಲ್ ಮೀಟಿಂಗ್ ಮತ್ತು ಕನ್‌ಫರ್ಮೇಟರಿ ಮೀಟಿಂಗಿನಲ್ಲಿ ಈ ಕಂಪನಿಯನ್ನು ವೈಂಡಪ್ ಮಾಡಬೇಕೆಂತಲೂ, ಮತ್ತು ಪ್ರೊಸೀಡಿಂಗ್ಸಿನಲ್ಲಿ ಗೊತ್ತುಮಾಡಿರುವ ಲಿಕ್ವಿಡೇಟರುಗಳು ಕಂಪನಿಯಲ್ಲಿ ... ಹಣದಲ್ಲಿ ಪ್ರೊಸೀಡಿಂಗ್ಸಿನಲ್ಲಿ ನಮೂದಿಸಿರುವ ಜನಗಳಿಗೆ ... ಹಣವನ್ನು ... ಉಳಿಯುತಕ್ಕ ಹಣವನ್ನೂ ಮತ್ತು ಕಂಪನಿಯಲ್ಲಿರತಕ್ಕ ಬಿಷ್ಟ ಸ್ವತ್ತನ್ನೂ ವಿಕ್ರಯಿಸಿ ಅದರಿಂದ ಬರತಕ್ಕ ಹಣವನ್ನೂ ಸಹ ಕಂಪನಿಯ ಮೆಂಬರುಗಳಿಗೆ ... ಪ್ರಕಾರ ಹಂಚಿಕೊಡಬೇಕೆಂತಲೂ ನಿಶ್ಚೈಸಿ ಪ್ರೊಸೀಡಿಂಗ್ಸು ಮಾಡಿದ್ದನ್ನು ಮೈಸೂರು ಗವರ್ನಮೆಂಟು ಜಾಯಿಂಟ್ ಸ್ಟಾಕ್ ಕಂಪನಿ ರಿಜಿಸ್ಟ್ರಾರವರು ರಿಜಿಸ್ಟರ್ ಮಾಡಿಕೊಂಡು, ಈ ಕಂಪನಿಯನ್ನು ವಾಲಂಟರಿ ವೈಂಡಪ್ ಮಾಡತಕ್ಕದ್ದೆಂದು ... 1 1909 ನೇ ಮುಕಾಂ ... ನೇ ನಂಬರು ಸರ್ಟಿಫಿಕೇಟು ಕೊಟ್ಟ ದ್ದರಿಂದ ಈ ಕಂಪನಿಯು ಈ ದಿವಸದಿಂದ ವಾಲಂಟರಿ ವೈಂಡಪ್ ಮಾಡಲ್ಪಟ್ಟಿರುತ್ತದಾಗಿ ಆ ಪ್ರೊಸೀಡಿಂಗ್ಸಿನಂತೆ ಕ್ರಮಗಳು ನಡೆಯುವ ... [illegible] ... ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುತ್ತೆ. [78 1]

ತಾರೀಖು 15 ನೇ ಮಾಹೆ ನವಂಬರ್, 1909 ನೇ ಇಸವಿ

(ಸಹಿ) ಪಿ. ಎಚ್. ವೆಂಕಟಾಚಾರಿಯರ್,
ಸಕ್ರೆಟರಿ ಮತ್ತು ಟ್ರೆಜರರ್

ದೀಪಾವಳಿಗೆ ಬಹುಮಾನ

75 3

ಈ ಕೆಳಗೆ ಬರೆದಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆ ಇರುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ... ಒಂದು ... ಉಚಿತವಾಗಿ ಕೊಡುವೆವು. ... [illegible]

ನಿರುಪಮಾ —ಹೊಸ ... ಓದುವವರಿಗೂ ... [illegible] ... ಕ್ರಯ ರೂ ೦—೧೨—೦

ಉತ್ಪಲಕುಮಾರಿ— ಇದೊಂದು ಹೊಸ ನಾಟಕ ... ನಾಟಕಗಳನ್ನು ... ವಿಷಯವೂ ... [illegible] ... ಈ ಪುಸ್ತಕದ ಬೆಲೆ ೦—೬—೦

ಪತ್ನೀಹಿತಸೂಚನಿ—(... ವರ ತೆಲುಗು ಗ್ರಂಥದ ಭಾಷಾಂತರ) ... [illegible] ... ಕ್ರಯ ರೂ ೦—೧೨—೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ... ಪುಸ್ತಕ ... ಹಾಡು, ... ಹಾಡು, ... [illegible] ... ಕ್ರಯ ರೂ ೦—೬—೦

ಇದಲ್ಲದೆ "ಹಾಸ್ಯಸಂಜೀವಿನಿ" ಎಂಬ ನಾಲ್ಕು ನಕಲಿಯನ್ನುಳ್ಳ ಪುಸ್ತಕ (೦ ... ೦), "ಅಸಹಾಯಶೂರಪ್ರಹಸನ" ಎಂಬ ... ನಕಲಿಯ ಪುಸ್ತಕ (೦ ... ೦), "ಸತ್ಯಸಂಜೀವಿನಿ" ಎಂಬ ... (೦—೬—೦) ಇವುಗಳೂ ದೊರೆಯುವವು. ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ನಮ್ಮ ವಿಳಾಸ—ಮ್ಯಾನೇಜರ್ ಕರ್ಣಾಟಕಚಂದ್ರಿಕೆ, ಮೈಸೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ವೃತ್ತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ವರ್ಷ ಕಡೆಯವರು ... [illegible]

ಕೊಂಡಲ್ಲಿ ೧ ಪ್ರತಿಗೆ ... ತಿಂಗಳಿಗೆ ಹ ... ಸಲ ... ರೂ ೧—೧೪—೦

" " " " ೦—೧೪—೦

ಚಂದಾದಾರರುಗಳಕ್ಕರವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸುಗಂಧಗಳು.

77-1

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಒತ್ತಿ ೧ ಸೇರಿಗೆ ರೂ ೧೨, ೫, ೩, ೨ ೮ ೦, ೧ ೪ ೦ ಬತ್ತಿಗಳು ೧ ಕಟ್ಟಿಗೆ ರೂ ೧ ದಶಾಂಗ ಧೂಪ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ—ಟಿ ಎಲ್. ಉಪಾಧ್ಯಾಯ, ಮೈಸೂರು

ಲೋಕಪ್ರಸಿದ್ಧವಾದ ಕನ್ನಡ ಪುಸ್ತಕಗಳು

ಭೀಮ ಮಹಿಮಾದರ್ಶ ಈ ಹೊಸ ಪುಸ್ತಕವು ವಾಯುಪುತ್ರನಾದ ಭೀಮಸೇನನ ಚರಿತ್ರೆಯನ್ನೆಲ್ಲಾ ಮಹಾಭಾರತಾನುಸಾರವಾಗಿ ಚೆನ್ನಾಗಿ ತಿಳಿಯಿಸುವುದು ... [illegible] ... ವಿದ್ವಾಂಸರು ಹೇಳುತ್ತಾರೆ ನೂತನ ಗ್ರಂಥ ಡೆಮಿ 172 ಪುಟಗಳುಳ್ಳದು. ಸ್ಟಿಫ್ ಬೈಂಡ್ ಕ್ರಯ 10 ಆಣೆ (ಎ ವಿ ಚಂದ್ರಶೇಖರಶಾಸ್ತ್ರಿಗಳಿಂದ ರಚಿತವಾದದು)

2 ಕೊಡಿನೂರು—ಇದು ಬಂಗಾಳಿ ಭಾಷೆಯಿಂದ ಕನ್ನಡಕ್ಕೆ ತರ್ಜುಮೆ ಆದುದು ... [illegible] ... ಕನ್ನಡ ಟೆಕ್ಸ್ಟ್ ಆಗಿ ... ಕ್ರಯ ಪ್ರತಿ 1 ಕ್ಕೆ 12 ಆಣೆ [72 1]

3 ರಾಬಿನ್‌ಸನ್‌ಕ್ರೂಸೊ—ಇದು ಇಂಗ್ಲೀಷಿನಿಂದ ಕನ್ನಡಕ್ಕೆ ತರ್ಜುಮೆ ಯಾದುದು ಪ್ರತಿ ಪೇಜಿನಲ್ಲಿಯೂ ... [illegible] ... ಕ್ರಯ ... ಆಣೆ ಈ ಪುಸ್ತಕಗಳಿಗೆ ... [illegible]

ವಿಳಾಸ—ದಿ ಜನರಲ್ ಏಜನ್ಸಿ ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 45

ನಮ್ಮಲ್ಲಿ ಈಗ ... ಸಿದ್ಧವಾಗಿರುವ ಚೆಕ್ ಬಟ್ಟೆಗಳ ... [illegible] ... ಬಹಳ ಬಾಳಿಕೆ ಬರುವಂತವುಗಳಾಗಿವೆ ... ಈ ಬಟ್ಟೆಗಳು ... [illegible] ... ಆದದರಿಂದ ಸ್ವದೇಶಿ ಪ್ರಿಯರು, ಈ ಬಟ್ಟೆಗಳನ್ನು ತರಿಸಿ ... ಈ ಬಟ್ಟೆಗಳ ಪ್ರಯೋಜನವು ... ಗೊತ್ತಾಗುತ್ತದೆ ... [illegible] ... ಹಾಸನದ ಟೋಪಿಗಳು, ... ಟೋಪಿಗಳು, ... [illegible] ... ಕಳುಹಿಸಲ್ಪಡುವುದು.

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪ್ಪೋ ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 26

ತಲೆನೋವು, ವಾಯುನೋವು ಸೆಳತ, ಗಂಟಿನ ನೋವು, ... ಕೀಲುವಾಯು, ನಾನಾ ವಿಧ ವಾಯುರೋಗಗಳು ... [illegible] ... ಈ ತೈಲವನ್ನು ಹಚ್ಚಿದರೆ ... ಖಂಡಿತವಾಗಿ ವಾಸಿಯಾಗುತ್ತದೆ. ಈ ದಿವ್ಯ ತೈಲವನ್ನು ... [illegible] ... ಕ್ರಯ ಶೀಸೆ ೧ಕ್ಕೆ ೧೨ ಆಣೆ ... ಆಣೆ ... [illegible] ... ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ... [illegible] ... ಜಿ ಎಸ್ ಕನ್ನಯಚೆಟ್ಟಿ ಅಂಡ್ ಕಂಪೆನಿ ... [illegible] ... ಮತ್ತು

ಎಫ್. ಕ್ಲೆಮೆಂಟ್,

೩೩, ... ಬೀದಿ, ... , ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲೆನಿಸುವುದು; ತಲೆನೋವು; ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67-12]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ ೨—೦—೦ ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಪಿ ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 40

೧. ಬೂಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು. ಮೈ ಕೈಕಾಲು ಕೊಡತ (ಭಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ... ಯ ಕುಕ್ಕುಲೆ, ಮಕ್ಕಳ ಎಳವು, ಜ್ವರ, ನಟ್ಟು ... ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಟ್ಟಿಗೆ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ ೫ ಕುಪ್ಪಿಗೆ ೧ ರೂಪಾಯಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-38]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮುಖರು ಸಾರಿ ಹಾಕುವವರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ತಾಮಿಶ್ರಣ	೨-೦-೦
ಚೇಳುಕಡತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಶೀತಲ ತೈಲ—ಮುದ್ದು ಜಗೆಗೆ	೦-೮-೦
ಮುಲಾಯಿ ಮಾತ್ರೆ—ಮಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಪಿಜ್ಜ ಮುಲಾಮು—ಮಕ್ಕಳ ಪಿಜ್ಜಗೆ	೦-೩-೦
ಕೇಶವರ್ಧಕ ತೈಲ—ಕಪ್ಪು ಮೆದುಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦ ೮-೦

ದಯಮಾಡಿ ಕ್ಯಾಟಲಾಗಿಗೆ ಬರಿಯಿರಿ. ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರಸ್ಸು —"ಅಮೃತಾಂಜನ," ಮುಂಬಯಿ.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 46

ಕೆಳ ಹೊಟ್ಟೆಯ ನೋವು, ಬರೀ ಬೇಧಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪುಸ್ತಕಗಳು.

70-9

ಜಾಗ್ರತೆ ಕಳುಹಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦ ಇಂಗ್ಲಿಷ್ ಭಾಷೆಯನ್ನು ಓದಲೂ ಬರೆಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದ ೧-೨ ತಿಂಗಳೊಳಗಾಗಿ ತಿಳಿದು ತಾವಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೮-೦

ಪಿ ರಾಮಾಚಾರ್ಯ ವಿಳಾಸ —ಬಿ ಕೆ ಮೂರ್ತಿ ಕಂಪನಿ
ನಂ ೧೨ ಒಂದನೇ ಬೀದಿ ಸಿದ್ದಿಕಟ್ಟೆ ಲಕ್ಕೂರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕನಾ ಸಿಹಾಸನ ಕ್ರಯ ೧—೨—೦ ಸ್ವಲ್ಪ ಪ್ರತಿಗಳು ಇವೆ ವಿವೇಕಾನಂದರಿಂದ ಬೇಗ ಬೇಗ ಬರೆದು ತರ್ಸಿಕೊಳ್ಳಿರಿ ಎಲೆಂಬಿಯೂಕ್ಸೈಟ್ಸ್, ಬೃಹನ್ನರಾಮಾಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾವಾಗಿ ಇಂಗ್ಲಿಷ್ ಕಲಿಯುವರೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೨—೧

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಕೂರ್ ಪೋಸ್ಟು

ಜ್ವರಹರಿ.

18 42

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಜಿ ವೆಂಕಟೇಶ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೧—೮ ರೂ ರೂ ೨—೧೨ ಆ. ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ತೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಒದಗಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವಾಗಿವೆಯೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6-16

(ಸ್ಕಾಟ್ಸ್ ಇಮಲ್ಷನ್)

ಎಂಬೀ ಈ ಔಷಧವು ಕುರುಹುಗಳನ್ನು ನೀಗಮಾಡಿಸುವದು

ಎಲ್ಲೋ ಸಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧದ ಅಂಗಡಿಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್. ಬುಕ್ ಡಿಪೋ ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ಪರೀ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ.—(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ). ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು)	ಪ್ರತಿಯೊಂದಕ್ಕೆ	0—0—6
(80 ಪೇಜು)		0—1—0
(160 ಪೇಜು)		0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-16]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸಂಜೀವಿನೀ ಔಷದಾಲಯ, ಮೈಸೂರು

೨೩ 11

ಎಂ ಎಸ್ ಕುಮಾರ್ಯವರ ದಿವ್ಯೌಷದಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಬಹುಮೂತ್ರ ರೋಗವು ವಾಯುರೋಗಗಳೂ ಹಳೇ ಜ್ವರ ಕ್ಷಯ, ಅಜೀರ್ಣ, ತಲೆನೋವು, ನೇತ್ರ ಉರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ ಮೊದಲಾದ ಉದ್ರೇಕ ರೋಗಗಳನ್ನು ಗುಣಪಡಿಸಿ ದೇಹದಲ್ಲಿ ಜೀವನ ವಸ್ತು ವಾದ ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮುಂತಾದ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷದಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜೆಂಟರುಗಳೂ ಬೇಕು ಅರ್ಧಾಣೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

1—1—1909 ರಿಂದ 22—10—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	6	5	0	0
ಮೈಸೂರು	13[illegible]	91	0	0
ಬೆಂಗಳೂರು ಡಿಸ್ಟ್ರಿಕ್ಟು	•	•	0	0
ಮೈಸೂರು	39	31	13	1
ಕೋಲಾರ್	0	0	[illegible]	0
ಕೋಲಾರ್ ಚಿನ್ನದ ಗಣಿಗಳು	[illegible]	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ	1	1	0	0
ಚಿತ್ರದುರ್ಗ	0	0	0	
ಕಡೂರು	9	[illegible]	0	0
ಶಿವಮೊಗ್ಗ	0	0	[illegible]	0
ಜುಮ್ಲಾ	1[illegible]	133	13	[illegible]

ಪೇಟೆ ಧಾರಣೆ

ದಿನಸು	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ ಕ್ಕೆ ರೂ	೧೪ ೦ ೦	೧೨ ೦ ೦
ಕೆಂಬೂತಿ ಅಕ್ಕಿ ಅವಲ್	೧೪ ೮ ೦	೧೩ ೮ ೦
,, ಮಧ್ಯಮ	೧೨ ೦ ೦	೧೩ ೦ ೦
ಜಾಪ್ರಾಣಿ ಅಕ್ಕಿ	೧೪ ೦ ೦	೧೪ ೮ ೦
ಸಣ್ಣಕ್ಕಿ ಅವಲ್	೧೬ ೦ ೦	೧೬ ೮ ೦
,, ಮಧ್ಯಮ	೧೫ ೨ ೦	೧೫ ೦ ೦
ಕಡಗೋಧಿ ಪಲ್ಲ ೧ಕ್ಕೆ	೧[illegible] ೦ ೦	೧೫ ೨ ೦
,, ಮಧ್ಯಮ	೧೪ ೮ ೦	೧೪ ೮ ೦
ಜೈಲ್ ರಾಗಿ ಪಲ್ಲ ೧ಕ್ಕೆ	೯ ೦-೦	೮ ೮ ೦
ಕಾರ್‍ರಾಗಿ	೮ ೧೨ ೦	೮-೦ ೦
ಜೋಳ	೭ ೧೨ ೦	೮ ೦ ೦
ಹುರುಳಿ ಪಲ್ಲ ೧ಕ್ಕೆ	೧೧ ೦ ೦	೧೧ ೮ ೦
ಬೇಳೆ ಅವರೆ	೧೪-೦-೦	೧೫ ೦ ೦
ಹೆಸರು	೧೨ ೦ ೦	೧೦-೮ ೦
ಉದ್ದು	೧೪-೪ ೦	೧೨ ೦ ೦
ಕಡಲೆ	೧೪ ೪-೦	೧೦ ೦ ೦
ಎಳ್ಳು ಸೇ ೧೨೭ ಕ್ಕೆ	೧೫ ೦ ೦	೧೪ ೦ ೦
ತೊಗರಿ	೧೨ ೮-೦	೧೨ ೦ ೦
ಹರಳು ೧೨೭ ಸೇರಿಗೆ	೧೪ ೦ ೦	೧೨ ೦-೦
ಸೀಗೇಕಾಯಿ ಮಣ ೧ಕ್ಕೆ	೨ ೮ ೦	೨ ೦ ೦
ಮೆಣಸಿನಕಾಯಿ	೬ ೦ ೦	೩ ೧೪-೦
,, ಮಧ್ಯಮ	೫-೮-೦	೩ ೮ ೦
ಬೆಲ್ಲ ದೊಡ್ಡ ಅಚ್ಚು	೮ ೮ ೦	ಮ ೨ ೧೦ ೦
ಒಳ್ಳೆಣ್ಣೆ ಮಣ ೧ಕ್ಕೆ	೪ ೮ ೦	೪ ೪ ೦
ಹರಳೆಣ್ಣೆ ,,	೫ ೮ ೦	೪ ೧೨ ೦
ಕೊತ್ತಂಬರಿ ಪಲ್ಲ ೧ಕ್ಕೆ	೯ ೦ ೦	೯ ೪ ೦
ಉಪ್ಪು ,,	೬ ೮ ೦	೫ ೧೨ ೦
ಹುಣಸೇ ಹಣ್ಣು	೧ ೧೨ ೦	೧ ೧೨-೦
,, ಹಳೇದು	೧ ೨ ೦	೧ ೮ ೦
ತುಪ್ಪ ಮಣ ೧ಕ್ಕೆ	೧೬ ೨ ೦	೧೪ ೦-೦
ಸೀಮೆಎಣ್ಣೆ ಎಟ್ಟ ೧ಕ್ಕೆ	೫ ೪ ೧	೪ ೦ ೦
ತೆಂಗಿನಕಾಯಿ ೧೦೦ ಕ್ಕೆ	೫ ೦ ೦	೪ ೮ ೦
ಅರಿಶಿನಕಾಯಿ ಮಣ ೧ಕ್ಕೆ	೧ ೦-೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೧ ೦ ೦	೦-೧೨ ೦
ಚಿನ್ನ (ಪವನ್) ಕೆಂಪು	೧೫-೯-೦	೧೫ ೬ ೦
,, ,, ಮಸಿಮೆ	೧೬ ೦ ೦	೧೫ ೧೧-೦
,, ,, ಗಟ್ಟಿ ತೊಲ ೧ಕ್ಕೆ	೨೪-೮ ೦	೨೪ ೫-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭ ೪ ೦	೬೪-೬-೦

ಶಾಲಿವಾಹನ ಶಕ ವರ್ಷ ಸಂಗಳು ೧೮೩೧ ನೇ ಸೌಮ್ಯ ನಾಮ ಸಂವತ್ಸರದ ಕಾರ್ತೀಕ ಶುದ್ಧ ಷಷ್ಠಿ ಶುಕ್ರವಾರದಿಂದ ಕಾರ್ತೀಕ ಶುದ್ಧ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೋಧಿ ವೃಶ್ಚಿಕ ಮಾಸ
19	ಶುಕ್ರ *	ಷಷ್ಠಿ	5 56	ಶ್ರ	10 38	4
20	ಶನಿವಾ	ಸಪ್ತಮಿ	[illegible] 10	ಉಷಾ	[illegible] 12	5
21	ರವಿವಾ	ನವಮಿ	[illegible] 30	ಶ	35 15	6
22	ಚಂದ್ರ	ದಶಮಿ	18 1	ಪೂಭಾ	32 2	7
23	ಕುಜ †	ಏಕಾದಶಿ	12 29	ಉಭಾ	28 4	8
24	ಬುಧ §	ದ್ವಾದಶಿ	36 26	ರೆ	23 8	9
25	ಗುರು	ತ್ರಯೋದಶಿ	30 30	ಅ	19 50	10

* ಮಹಾವ್ಯತಿಪಾತ ಕಾರ್ತೀಕ ಸೋಮವಾರ, ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ † ಅಮೃತಯೋಗ, ಸರ್ವತ್ರ ಏಕಾದಶಿ ಬೋಧನ್ಯೇಕಾದಶಿ, ಮೇಲುಕೋಟೆಯಲ್ಲಿ ಅಷ್ಟತೀರ್ಥರಥ § ದನುರಾಯನಗರೋದಯ ಉತ್ಥಾನ ದ್ವಾದಶಿ, ಉತ್ಪಾತಯೋಗ, ನಂಜನಗೂಡಿನಲ್ಲಿ ರುದ್ರಾಕ್ಷಿ ಮಂಟಪೋತ್ಸವ, ಪುಷ್ಪಬೃಂದಾವನೋತ್ಸವ ಪ್ರದೋಷ ವೈಕುಂಠಚತುರ್ದಶಿ

ಬ್ರಹ್ಮಜ್ಞಾನ ಸಭೆಯು

[ಒಬ್ಬ ವರ್ತಮಾನದಾರರಿಂದ]

ಕಳೆದ ಅಕ್ಟೋಬರ್ ತಾ ೩೧ ರಲ್ಲು ಏಕದೆವರ ಅಜ್ಞೆಯಂತೆ ಬೆಂಗಳೂರಿನ ಪ್ರಸಿದ್ಧರಾದ ಶ್ರೀಮಾನ್ ಬ್ರಹ್ಮಸಮಾಜ ಪ್ರಚಾರಕರಾದ ಶ್ರೀ ಸ್ವಾಮಿ ಬ್ರಹ್ಮಾನಂದ [illegible] ಸ್ವಾಮಿಯವರು ಒರಿಂಗ್‌ಪೇಟೆಗೆ ದಯಮಾಡಿ ಮರುದಿನ ಥಿಯಾಸಾಫಿಕಲ್ ಸೊಸೈಟಿಯಲ್ಲಿ ಈಶನಸ್ತುತಿಯನ್ನು ಕುರಿತು ಬಹಳ ಉನ್ನತವಾಗಿ ಮಹೋಪನ್ಯಾಸವನ್ನು ಜರಗಿಸಿದರು ಕಕ್ಷಮದಲ್ಲಿ ಆ ಮರ್ ಮೆ ಟಿ ಎಂ ರಾಮಚಂದ್ರರಾವ್ ಮುಂತಾದ ಅನೇಕ ಘನವಂತರೆಲ್ಲರೂ ಸೇರಿದ್ದು ಬಹಳ ಆಹ್ಲಾದವನ್ನು ಹೊಂದಿ ಆನಂದಪಟ್ಟರು ತಾ ೪ನೇ ರವಿವಾರ ಉಮಾಪ್ರಸಾದ ಮಂದಿರದೊಳಗೆ ವೇದಾಂತವನ್ನು ಕುರಿತು ಅತಿಶಯವಾಗಿ ಅನುಭವಪೂರ್ಣ ಮಹೋಪನ್ಯಾಸವನ್ನು ನಡಿಸಿದರು ಆ ಕಾಲದಲ್ಲಿ ನಮ್ಮ ಅಮಲ್ದಾರ್ ಮೆ ರಂಘನಾಥಾಚಾರ್ಯರು ಮೊದಲಾದ ಅನೇಕ ಉದ್ಯೋಗಸ್ಥರೂ ವರ್ತಕರು ಇತರ ಜನರೆಲ್ಲರೂ ಕೂಡಿದ್ದು ಆ ಉಪನ್ಯಾಸವನ್ನು ಕೇಳಿ ಅತ್ಯಂತ ಆನಂದವನ್ನು ಹೊಂದಿದರು ಅನಂತರ ನವಂಬರ್ ೭ ನೇ ಮಂಗಳವಾರ [illegible] ಸ್ಕೂಲಿನಲ್ಲಿ ಬ್ರಹ್ಮಧರ್ಮ ಎಂಬ ವಿಷಯಗಳನ್ನು ಕುರಿತು ಅನೇಕ ವಿಧವಾಗಿ [illegible] ಮಹಾಮಾರ್ಗವಾಗಿ ಚಾಕಚಕ್ಯವಾಗಿ ತಿಳಿಯುವಂತೆ ಸುಲಭಶೈಲಿಯೊಡನೆ ಮಹೋಪನ್ಯಾಸವನ್ನು ಜರುಗಿಸಿದರು ಆಗ್ಗೆ ಸಭೆಯಲ್ಲಿ ಅಮಲ್ದಾರರು ಮುಂತಾದ ಸರ್ಕಾರಿ ಅಧಿಕಾರಿಗಳೂ ಲಾಯರುಗಳೂ ಶೆಟ್ಟಿ ವೈಶ್ಯ ವರ್ತಕರೂ ಬ್ರಾಹ್ಮಣಾದಿ ವೇದಮೂರ್ತಿಗಳೂ ಸೇರಿದ್ದು, ಮೊದಲಿಂದ ವಿಶೇಷವಾದ ಉಪದೇಶವನ್ನು ಶ್ರವಣಮಾಡಿ ಹೇಳಿಕೊಡದಷ್ಟು ಸಂತೋಷವನ್ನು ಹೊಂದಿ ಶ್ರೇಷ್ಠವಾದ ಸರ್ಟಿಫಿಕೇಟು ಬರೆದು ಸಮರ್ಪಿಸಿ, ಧೃಢವಾಗಿ ಕೊಂಡಾಡಿದರು ಇಂಜನಿಯರ್ ಮೆ ಎ ಎ ಶ್ರೀನಿವಾಸ ಐಯಂಗಾರ್ಯರು ಅಧ್ಯಕ್ಷಾಸನವನ್ನು ವಹಿಸಿ ಸದರಿ ಸ್ವಾಮಿಯವರ ಉಪನ್ಯಾಸವನ್ನು ವಿವರಿಸಿ ಇಂಥಾ ಉಪನ್ಯಾಸಗಳನ್ನು ಇತರರು ಆಗಿಂದಾಗ್ಗೆ ಜರುಗಿಸಿ ಪರಬ್ರಹ್ಮಾನಂದವನ್ನು ಹೊಂದಬೇಕೆಂದು ಮಹೋನ್ನತವಾಗಿ ಬೋಧಿಸಿ ಸಭೆ ಪೂರ್ತಿಮಾಡಿದರು ಬಳಿಕ ತಾ ೫ ನೇ ಶುಕ್ರವಾರ ಲಾಯರು ಮೆ ಎ ಜಿ ರಾಮಸ್ವಾಮಿಯಂಗಾರರ ಮಂದಿರದಲ್ಲಿ ಪತಿವ್ರತಾ ಧರ್ಮವನ್ನು ಕುರಿತು ಬಹು ಶಾಂತವಾಗಿ ಉಪನ್ಯಾಸವನ್ನು ಮುಗಿಸಿದರು ಆ ಸಮಯದಲ್ಲಿ ಶ್ರೀಮತಿ ಕೆ ಶಿವಗಾಮಮ್ಮ ಅವರ್ಗಳ್ ಮುಂತಾದ ಜನಾನಾ ಬ್ರಾಹ್ಮಣಾದಿ ವೈಶ್ಯ ಹಿಂದೂ ಘನವುಳ್ಳ ಸ್ತ್ರೀಯರೆಲ್ಲರೂ ಸೇರಿದ್ದು ಆನಂದ ಹೊಂದಿದರು

ವ್ಯವಸಾಯ ವಿಚಾರಗಳು

ಎಣ್ಣೆ ಬೀಜಗಳು

ನಮ್ಮ ದೇಶದಲ್ಲಿ ಎಣ್ಣೆ ಬೀಜದ ರಫ್ತು ವ್ಯಾಪಾರವು ಹೆಚ್ಚಾಗಿ ನಡೆಯುತ್ತಿದೆ ಈ ವ್ಯಾಪಾರದಲ್ಲಿ ಒಂದೆರಡು ಶೋಚನೀಯವಾದ ಅಂಶಗಳುಂಟು ಕಚ್ಚಾ ಪದಾರ್ಥಗಳಿಂದ ಸಾಮಾನುಗಳನ್ನು ತಯಾರಿಸಿ, ಸಿದ್ಧವಾದ ಸರಕುಗಳ ವ್ಯಾಪಾರ ನಡಿಸಲು ಸಾಧ್ಯವಾಗುವಹಾಗಿದ್ದರೆ ಹಾಗೆಯೇ ಮಾಡುವುದು ಉತ್ತಮವೇ ಹೊರತು ಕಚ್ಚಾ ಸಾಮಾನುಗಳಲ್ಲಿ ರಫ್ತು ವ್ಯಾಪಾರ ಮಾಡುವುದು ಆದಾಯಕರವಲ್ಲ ಏಕೆಂದರೆ ಇಲ್ಲಿಯೇ ಸಾಮಾನುಗಳನ್ನು ತಯಾರಿಸುವುದರಿಂದ ಅನೇಕ ಜನರಿಗೆ ಸಿಕ್ಕುವ ಲಾಭಕರವಾದ ಉದ್ಯೋಗವು ತಪ್ಪಿಹೋಗುವುದೂ ಅಲ್ಲದೆ ಇಲ್ಲಿಂದ ರಫ್ತಾದ ಕಚ್ಚಾ ಪದಾರ್ಥಗಳು ಇತರ ದೇಶಗಳಲ್ಲಿ ಸಾಮಾನುಗಳಾಗಿ ತಯಾರಾಗಿ, ಇಲ್ಲಿಗೆ ಮಾರಾಟಕ್ಕಾಗಿ ವಾಪಸು ಬರುವ ಸಂದರ್ಭದಲ್ಲಿ ಈ ಸಾಮಾನುಗಳನ್ನು ಇಲ್ಲಿಂದ ಅನ್ಯದೇಶಕ್ಕೂ ಅನ್ಯದೇಶದಿಂದ ಇಲ್ಲಿಗೂ ಸಾಗಿಸುವ ಖರ್ಚು, ದಳ್ಳಾಳಿಗಳ ಮತ್ತು ಸಾಹುಕಾರರ ಲಾಭ, ಕೂಲಿ ಗಾರರ ಕೂಲಿ ಇವುಗಳೆಲ್ಲವೂ ನಮ್ಮ ದೇಶದಲ್ಲಿ ಕೊಂಡುಕೊಳ್ಳುವವರ ಮೇಲೆಯೇ ಬೀಳುತ್ತವೆ ಹೀಗೆ ಬೀಜಗಳನ್ನು ರಫ್ತುಮಾಡುವುದಕ್ಕೆ ಬದಲಾಗಿ, ಇಲ್ಲೇ ಅವುಗಳಿಂದ ಎಣ್ಣೆಯನ್ನು ತೆಗೆದಪಕ್ಷದಲ್ಲಿ ಇದರಿಂದ ಅನೇಕ ವಿಷಯಗಳಲ್ಲಿ ಪ್ರಯೋಜನವುಂಟು ಮೊದಲನೇದು, ಸಾವಿರಾರು ಜನಕ್ಕೆ ಕೆಲಸ ದೊರಕುವದು ಎರಡನೇದು, ಅಗ್ಗವಾಗಿ ಎಣ್ಣೆ ದೊರಿಯುವುದರಿಂದ ಸಾಬೂನು ತಯಾರಿ, ಮೇಣದಬತ್ತಿ ತಯಾರಿ, ಇವೇ ಮೊದಲಾದ ಅನೇಕ ಕೈಗಾರಿಕೆಗಳ ಅಭಿವೃದ್ಧಿಗೆ ಅನುಕೂಲವಾಗಿರುತ್ತದೆ ಮೂರನೇದು, ಎಣ್ಣೆಯ ಹಿಂಡಿಯು ಗೊಬ್ಬರವಾಗಿ ಉಪಯೋಗಿಸಲ್ಪಡಬಹುದು ಇದು ಅಗ್ಗವಾಗಿಯೂ ಆಗುತ್ತದೆ

ರೈತರೂ ವ್ಯವಸಾಯದ ಅಧ್ಯಾಪಕರುಗಳೂ

ನಮ್ಮ ದೇಶದ ವ್ಯವಸಾಯ ವಿಷಯಗಳಲ್ಲಿ ಕದ್ದು ಪಾಟುಗಳನ್ನೂ ನೂತನ ವಿಧಾನಗಳನ್ನೂ ಸರ್ಕಾರದವರು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಾಗ್ಯೂ ರೈತರ ಅಶ್ರದ್ಧೆಯಿಂದ ಇವುಗಳನ್ನು ರೂಢಿಯಲ್ಲಿ ತರುವುದು ಪ್ರಯಾಸವಾಗಿದೆ ಇದಕ್ಕೆ ದೃಷ್ಟಾಂತವಾಗಿ ಪೂರ್ವಬಂಗಾಳಾ ಮತ್ತು ಅಸ್ಸಾಂ ಆಧಿಪತ್ಯದಲ್ಲಿ ಸರ್ಕಾರದವರ ಪ್ರಯತ್ನಗಳು ಅನೇಕ ಸಂದರ್ಭಗಳಲ್ಲಿ ರೈತರ ಅಶ್ರದ್ಧೆಯಿಂದ ಸಾರ್ಥಕವಾಗಲಿಲ್ಲವೆಂದು ಅಲ್ಲಿನ ವ್ಯವಸಾಯ ಇಲಾಖೆಯ ರಿಪೋರ್ಟಿನಿಂದ ಗೊತ್ತಾಗುತ್ತದೆ ಒಂದು ಸಂದರ್ಭದಲ್ಲಿ ಗೋಧೀನಾರಿನ ಪೈರನ್ನು ಕೆಡಿಸುವ ಕಂಬಳಿಹುಳುಗಳ ನಿವಾರಣಾರ್ಥವಾಗಿ ಪೈರಿನ ಮೇಲೆ ಒಂದು ಬಲೆಯನ್ನು ಬೀಸಿ ಹುಳುಗಳನ್ನು ಗುಡಿಸಿಕೊಳ್ಳುವ ಅತಿಸುಲಭವಾದ ಉಪಾಯವನ್ನು ಸೂಚಿಸಿದ್ದಾಗ್ಯೂ ಆ ರೀತಿ ಮಾಡುವುದರಲ್ಲಿ ರೈತರು ವಿಶೇಷ ಆಸಕ್ತಿಯನ್ನು ತೋರಿಸಲಿಲ್ಲ ಇಂಥಾ ರೈತರ ಅಶ್ರದ್ಧೆಯನ್ನೂ ಅವರ ಮೌಢ್ಯವನ್ನೂ ತಪ್ಪಿಸುವುದಕ್ಕಾಗಿ ಆ ಸರ್ಕಾರದವರು ರೈತಾಬಿಜನರಲ್ಲಿ ಬಹಳ ಬುದ್ಧಿವಂತರಾಗಿಯೂ ಜನರ ಕ್ಷೇಮಚಿಂತನೆಯಲ್ಲಿಯೇ ಕೇವಲ ಆಸಕ್ತರಾಗಿಯೂ ಇರುವವರನ್ನು ಚುನಾಯಿಸಿ ವ್ಯವಸಾಯ ಇಲಾಖೆಯಲ್ಲಿ ಗೌರವ ಸಹಾಯಕರನ್ನಾಗಿ ನೇಮಿಸಿಕೊಳ್ಳುತ್ತಾರೆ ಈ ಏರ್ಪಾಡು ಕಳೆದ ಎರಡು ವರುಷಗಳಿಂದಲೂ ಆಚರಣೆಯಲ್ಲಿರುತ್ತಾ, ಸರ್ವವಿಧದಲ್ಲೂ ಉಪಯುಕ್ತವಾದದ್ದೆಂದು ತೋರಿಬಂದಿರುತ್ತದೆ ಈ ಸಹಾಯಕರು ವ್ಯವಸಾಯ ಇಲಾಖೆಯಲ್ಲಿ ನಡಿಸಲ್ಪಡುವ ಅನುಭವಗಳ ಫಲಿತಾಂಶವನ್ನು ತಮ್ಮ ನೆರೆಹೊರೆಯವರಲ್ಲಿ ಪ್ರಚುರಪಡಿಸುವುದಲ್ಲದೆ ವ್ಯವಸಾಯ ಇಲಾಖೆಯವರಿಗೆ ರೈತಾಪಿ ಜನರ ಕೊರತೆಗಳನ್ನು ತಿಳಿಸುವುದೂ, ಪೈರುಗಳ ಸ್ಥಿತಿಗತಿ ವಿಷಯವಾಗಿ ಸಮಾಚಾರ ಕೊಡುವುದೂ, ಪೈರುಗಳಲ್ಲಿ ಹುಳುಗಳು ಮತ್ತು ರೋಗ ಮೊದಲಾದ ಸ್ವಾಭಾವಗಳು ತಲೆದೋರಿದರೆ ಕೂಡಲೆ ಎಚ್ಚರಿಸುವುದೂ ಈ ಪ್ರಕಾರ ಬಹಳ ಉಪಕಾರ ಮಾಡುತ್ತಾ ಬಂದಿದ್ದಾರೆ ಈ ಸಹಾಯಕರ ಪೈಕಿ ಕೆಲವರು ನೂತನ ಕ್ರಮಗಳನ್ನು ತಾವೇ ಆಚರಿಸಿ ತಮ್ಮ ನೆರೆಯವರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಡಲು ಸಮರ್ಥರಾಗಿರುತ್ತಾರೆ

ಕುಂಚಿಟಿಗರ ಎ ವಿ ಸ್ಕೂಲ್ ಸಂಸೈಟೀ, ಮೈಸೂರು

[ಒಬ್ಬ ವರ್ತಮಾನದಾರರಿಂದ]

ಈ ಸ್ಕೂಲನ್ನು ಕಳೆದ ೧೯೦೮ನೇ ಜೂನ್ ೧ನೇ ತಾರೀಖಿನಲ್ಲಿ ಕುಂಚಿಟಿಗರ ಹುಡುಗರಿಗೆ ಧರ್ಮಾರ್ಥವಾಗಿ ವಿದ್ಯೆಯನ್ನು ಕಲಿಸಲು ಮೈಸೂರಿನ [illegible] ಧರ್ಮ ಪ್ರವರ್ತಕರ ಗುಂಡಾ ನರಸಿಂಹಯ್ಯನವರೂ ಸಾಹುಕಾರ್ ಒನುಮೈಯನವರೂ ಇವರೇ ಮೊದಲಾದ ಕುಲಸ್ಥರುಗಳ ಸ್ಥಾಪಿಸಿ ಇದಕ್ಕಾಗಿ ಒಂದು ಫಂಡನ್ನು ಹಾಕಿರುವುದಲ್ಲದೆ ಪ್ರತಿ ಮಾಹೆಯಲ್ಲೂ ಚಂದಾ ಸಹ ಕೊಟ್ಟು ಕೊಂಡು ಅದರ ಫಂಡಿಗೆ ಸೇರಿಸುತ್ತಾ ಸ್ಕೂಲನ್ನು ಕೇವಲ ಮರ್ಯಾದೆಯಿಂದ ನಡಿಸಿ ಮೆ ಛಾಛಾ ಸಾಹೇಬರವರ ಗಮನಕ್ಕೆ ತರಲು ಕಳೆದ ಜುಲೈ ತಾ ೨೩ ರಲ್ಲಿ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ ರಂಗಸ್ವಾಮಿ ಐಯ್ಯಂಗಾರವರು ಸ್ಕೂಲ್ ಇನ್ಸ್ಪೆಕ್ಟ್ ಮಾಡಿ ರಿಪೋರ್ಟ್ ಕೊಟ್ಟಿದ್ದರ ಮೇಲೆ ಈ ಸ್ಕೂಲು ರೆಕಗ್ನೈಸ್ ಆಯಿತು ಈಚೆಗೆ ನೆ ಛಾಛಾ ಸಾಹೇಬರವರ ಹುಕುಂ ಪ್ರಕಾರ ಸರ್ಕಲ್ ಇನ್ಸ್ಪೆಕ್ಟರ್ ಮೆ ಎಂ ಶ್ರೀನಿವಾಸರಾವ್ ರವರು ಸೆಪ್ಟೆಂಬರ್ ೨೫ ರಲ್ಲಿ ಈ ಸ್ಕೂಲನ್ನು ಪರೀಕ್ಷೆ ಮಾಡಿ ಬಹಳ ಸಂತೋಷಪಟ್ಟು ಅಲ್ಲಿನ ವಿಜಿಟರ್ಸ್ ಬುಕ್ಕಿನಲ್ಲಿ ತಮ್ಮ ಅಭಿಪ್ರಾಯವನ್ನು ಬರೆದಿರುವುದೇನೆಂದರೆ —

ಈ ಸ್ಕೂಲಿನಲ್ಲಿ ಏಳು ಮಂದಿ ಉಪಾಧ್ಯಾಯರುಗಳೂ ಒಬ್ಬ ಜವಾನನೂ ಇರುತ್ತಾರೆ ಉಪಾಧ್ಯಾಯರುಗಳ ಪೈಕಿ ಒಬ್ಬರು ವಿನಹ ಬಾಕಿಯವರೆಲ್ಲಾ ಪ್ಯಾಸ್ ಮಾಡಿದವರಾಗಿದ್ದಾರೆ ಎಲ್ಲಾ ತರಗತಿಗಳಲ್ಲೂ ಕ್ರಮ ಶಿಕ್ಷೆ ಮತ್ತು ವಿದ್ಯಾಭಿವೃದ್ಧಿ ಬಹಳ ಚನ್ನಾಗಿದೆ ಈ ವರುಷ ಇಂಗ್ಲೀಷಿನಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಮೂರು ಮಂದಿ ವಿದ್ಯಾರ್ಥಿಗಳು ಈ ಸ್ಕೂಲಿನಿಂದ ಹೋಗಿರುತ್ತಾರೆ ಪ್ರಥಮ ತರಗತಿಗಳಲ್ಲಿ ಗಣಿತ ಓದುಗರಿಕೆ ಮತ್ತು ಬರವಣಿಗೆಗಳ ಜೊತೆಗೆ ವಸ್ತುಪಾಠಗಳು, ಕಥೆಗಳು ಅನುಕರಣದ ಹಾಡುಗಳು ಸಹ ಹೇಳಲ್ಪಡುತ್ತದೆ ನೀತಿ ಮತ್ತು ಭಕ್ತಿ ಸಂಬಂಧವಾದ ಪಾಠಗಳೂ ಹಾರ್ಮೋನಿಯಂ ಜೊತೆಯಲ್ಲಿ ಹೇಳಲ್ಪಡುತ್ತವೆ ಎಲ್ಲಾ ತರಗತಿಗಳಲ್ಲೂ ವಿದ್ಯಾಭ್ಯಾಸದ ಇಲಾಖಾ ರೂಲಸಿನ ಪ್ರಕಾರವೇ ಪಾಠಗಳು ನಡೆಯುತ್ತಾ ಇವೆ ಈ ಸ್ಕೂಲು ಸ್ಥಾಪಿತವಾಗಿ ಸುಮಾರು ೧೪ ತಿಂಗಳಾಗಿರುವುದರಿಂದ ಸ್ಕೂಲಿನ ಸಾಮಾನ್ಯವಾದ ಸ್ಥಿತಿಯು ಬಹಳ ತೃಪ್ತಿಕರವಾಗಿತ್ತು ಹುಡುಗರಿಗೆ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಮುಖಸ್ಥಾಗಿ ಪಾಠ ಹೇಳಸಬೇಕೆಂಬುದೇ ಈ ಸ್ಕೂಲಿನ ಮುಖ್ಯ ಉದ್ದೇಶವು ವಿಸ್ತಾರವಾದ ಕಾಂಪೌಂಡಿರುವ ಕಟ್ಟಡವೂ, ಉತ್ತಮರಾದ ಕೆಲವು ಉಪಾಧ್ಯಾಯರುಗಳೂ ಬೇಕಾಗಿರುವರು ಮತ್ತು ಈ ಸ್ಕೂಲಿನಲ್ಲಿ ಕೈಗಾರಿಕೆ ವಿಷಯಗಳನ್ನು ಹೇಳಸಬೇಕೆಂದು ಇಲ್ಲಿನ ಯಜಮಾನರುಗಳು ಅಪೇಕ್ಷಿಸುತ್ತಾರೆ ಮತ್ತು ಇನ್ಸ್ಪೆಕ್ಟರ್ ಜನರಲ್‌ರವರು ಒಪ್ಪಿರತಕ್ಕ ನಕ್ಷೆಗೆ ಅನುಸಾರವಾಗಿ ನಾಲ್ಕತ್ತು ಸಾವಿರ ರೂಪಾಯಿ ಖರ್ಚುಮಾಡಿ ಒಂದು ಕಟ್ಟಡವನ್ನು ಕಟ್ಟಿಸುವುದಾಗಿ ವಾಗ್ದಾನ ಮಾಡಿರುತ್ತಾರೆ ಮೇಲ್ಕಂಡ ಕಾರಣಗಳಿಗಾಗಿ ಪ್ರತಿ ತಿಂಗಳಲ್ಲಿಯೂ ೧೦೦ ರೂಪಾಯಿ ಗ್ರ್ಯಾಂಟನ್ನೂ ಸ್ಕೂಲ್ ಕಟ್ಟಡಕ್ಕೆ ಅನುಕೂಲವಾದ ಗ್ರ್ಯಾಂಟನ್ನೂ ದಯೆಯುಳ್ಳ ಸರ್ಕಾರದವರು ದಯಪಾಲಿಸಿ ಮಂಜೂರು ಮಾಡುವರೆಂದು ನಂಬಿರುತ್ತೇನೆ ಎಂಬುವದೇ

ಇದಲ್ಲದೆ ಇವರ ರಿಪೋರ್ಟಿನ ಮೇಲೆ ಕಳೆದ ಅಕ್ಟೋಬರ್ ತಾ ೨೯ ರಲ್ಲಿ ಮುನಿಸ್ಟರ್ ಆಫ್ ತಾಲೀಂ ಮೆ ಛಾಛಾ ಸಾಹೇಬರವರು—ನಿಮ್ಮ ಸ್ಕೂಲಿನ ಹಾಗೆ ಮುಖಸ್ಥಾಗಿ ಪಾಠ ಹೇಳತಕ್ಕ [illegible] ಸರ್ಕಾರದಿಂದ ದ್ರವ್ಯ ಸಹಾಯ ಹೊಂದುವುದಕ್ಕೆ ಯೋಗ್ಯವಾಗಿರುತ್ತದೆ ಆ ತೆರನ, ಸಹಾಯ ದ್ರವ್ಯ ಕೊಡಬೇಕೆಂದು ನೀವು ಕೇಳತಕ್ಕ ವಿಷಯದಲ್ಲಿ ಸರ್ಕಾರದವರು ತೃಪ್ತಿಕರವಾಗಿ ಆಲೋಚಿಸುವರೆನ್ನುವುದಕ್ಕೆ ಸಂಶಯವಿಲ್ಲವೆಂತಲೂ ಕಟ್ಟಡದ ಪ್ಲಾನ್ ಮತ್ತು ಎಸ್ಟಿಮೇಟ್ ಅಡಿಯನ್ನೂ, ಸಹಾಯದ ಗ್ರ್ಯಾಂಟಿಗಾಗಿ ಪ್ರಿಂಟ್ ಫಾರಂನಲ್ಲಿ ಬರೆದು ಕಳುಹಿಸಬೇಕೆಂತಲೂ ಹುಕುಂ ಕೊಟ್ಟಿದ್ದಾರೆ ಮುಂದೆ ಮೆ ವಿಯುಲ್ ಸಾಹೇಬರವರೂ ಕೂಡ ಈ ಸ್ಕೂಲಿನ ವಿಷಯದಲ್ಲಿ ತುಂಬಾ ಅಭಿಮಾನವಿಟ್ಟು ಪ್ರೋತ್ಸಾಹಪಡಿಸುತ್ತಾರೆಂದು ನಂಬಿದೇವೆ

ನೋಟಿಫಿಕೇಷನ್.

೩೦-೧

ಅಮೃತಮಹಲ್ ಇಲಾಖಾ ಕೆಲವು ಗಂಡು ದಾಸುಗಳನ್ನು ೬-೧೨-೦೯ ರ ಆಗಾಯಿತು ಮಾಗಡಿ ತಾಲ್ಲೂಕು „ಬಗನಗೆರೆ" ಕಾವಲಿನಲ್ಲಿಯೂ (ಅಂದರೆ, ಬೆಂಗಳೂರು—ಕುಣಿಗಲ್ ರಸ್ತೆಯ ೩೮ ನೇ ಮೈಲಿಯ ಸಮೀಪ) ಮತ್ತು ೧೨-೧೨-೦೯ ರ ಆಗಾಯಿತು ಅರಸೀಕೆರೆ ತಾಲ್ಲೂಕು "ಗಂಡಸಿ" ಬಂಗ್ಲಾಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನು ಪಡೆಯಬಹುದು

ಕ್ಯಾಂಪ್-ಮೈಸೂರು, ಎಚ್. ನಂಜುಂಡರಾಜೇ ಅರಸ್,
ತಾ. ೧೪-೧೧-೦೯. ಸೂಪರಿಂಟೆಂಡೆಂಟ್, ಅಮೃತಮಹಲ್, ಇಲಾಖಾ.

ವೃತ್ತಾಂತ ಪತ್ರಿಕೆ.

:೧

೧೯೦೯ ನೇ ಇಸವಿ ನವೆಂಬರ್ ತಾ. ೧೨ ನೇ ಗುರುವಾರ

ಮಂತ್ರಾಲೋಚನಾ ಸಭೆಗಳ ರೂಪಾಂತರವು.

ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರು ಮಂತ್ರಾಲೋಚನಾ ಸಭಾ ಸಮೇತರಾಗಿ ೧೯೦೯ ನೇ ಇಸವಿಯ ಇಂಡಿಯಾ ಕೌನ್ಸಿಲ್ಸ್ ಆಕ್ಟನ್ನು ಪ್ರಕಟ ಮಾಡಿ ಅದು ತಾ. ೧೫ ನೇ ಸೋಮವಾರದ ಆಗಾಯಿತು ಜಾರಿಗೆ ಬರುವದೆ ಎಂದು ಆಜ್ಞಾಪಿಸಿರುತ್ತಾರೆ. ಈ ಮುಕುಮು ವಿಸ್ತಾರವಾಗಿರೋಣದರಿಂದ ಅದನ್ನೆಲ್ಲಾ ಪ್ರಕಟಿಸಲಾರೆವು ಇದರಿಂದ ಗವರ್ನಮೆಂಟಿನವರು ವಾಗ್ದಾನಮಾಡಿದಂತೆ ನೆರವೇರಿಸಿರುತ್ತಾರೆಂಬುವುದೂ, ಚಕ್ರವರ್ತಿ ಸಾರ್ವಭೌಮರವರು ೧೯೦೭ ನೇ ಇಸವಿಯಲ್ಲಿ ದಯಪಾಲಿಸಿದ ಇಸ್ತಿಹಾರ್ನಾಮೆಯಲ್ಲಿ ಸೂಚಿತವಾದ ರಾಜ್ಯಭಾರ ಕ್ರಮ ರೂಪಾಂತರವು ಈಡೇರಿತೆಂಬುವುದೂ ಸ್ಪಷ್ಟವಾಗುತ್ತದೆ.

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯೊಂದಲ್ಲದೆ ಇತರ ಮಂತ್ರಾಲೋಚನಾ ಸಭೆಗಳಲ್ಲಿ ಜೇರೋಜುಗಾರ ಮೆಂಬರುಗಳ ಸಂಖ್ಯೆಯೇ ಹೆಚ್ಚಾಗಿರುವುದು. ಅದು ಹೇಗೆಂದರೆ,—

ಮಂತ್ರಾಲೋಚನಾ ಸಭೆ	ಸರ್ಕಾರಿ ಮೆಂಬರು	ಜೇರೋಜುಗಾರ ಮೆಂಬರು.
ವೈಸ್‌ರಾಯಿಯವರ ಸಭೆ ..	೩೭	೩೨
ಮದ್ರಾಸ್ ಅಧಿಸತ್ಯದ ಸಭೆ .	೧೯ . .	೨೬
ಬೊಂಬಾಯಿ ಅಧಿಸತ್ಯದ ಸಭೆ .	೧೭	೨೮
ಬಂಗಾಳಾ ಅಧಿಸತ್ಯದ ಸಭೆ .	೧೭	೩೧
ಸಂಯುಕ್ತ ಅಧಿಸತ್ಯಗಳ ಸಭೆ. ..	೨೨	೩೬
ಪೂರ್ವ ಬಂಗಾಳಾ ಮತ್ತು ಅಸ್ಸಾಂ ಸಭೆ	೧೭	೨೩
ಪಂಜಾಬ್ ಅಧಿಸತ್ಯದ ಸಭೆ	೧೦	೧೪
ಬರ್ಮಾ ಅಧಿಸತ್ಯದ ಸಭೆ .	೬	೯
ಜುಮ್ಲಾ	೧೪೧	೧೯೯

ಒಟ್ಟು ೧೯೯ ಮಂದಿ ಜೇರೋಜುಗಾರ ಮೆಂಬರುಗಳಲ್ಲಿ ೧೩೫ ಮೆಂಬರುಗಳು ಆಯಾ ಅಧಿಸತ್ಯಗಳಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಡುವರು. ಇದರಿಂದ ಈ ಮೆಂಬರುಗಳ ಮೂಲಕ ಪ್ರಜೆಗಳ ಕಷ್ಟಸುಖಗಳೂ ಇಂಗಿತಗಳೂ ಗವರ್ನಮೆಂಟಿಗೆ ತಿಳಿದುಬರಲು ಅವಕಾಶ ಉಂಟಾಯಿತು.

ಚುನಾವಣೆಯ ಕ್ರಮಗಳಾದರೋ ಆಯಾ ಅಧಿಸತ್ಯದ ಸ್ಥಿತಿಗತಿಗೆ ಆವಶ್ಯವೂ ಅನುಗುಣವೂ ಆಗಿರುವಂಥಾ ರೀತಿಯಲ್ಲಿ ರೂಪಿಸಲ್ಪಡುವವು. ಮತ್ತು ಚುನಾವಣೆಯ ಹಕ್ಕನ್ನು ಪಡೆದಿರುವವರ ಸ್ಥಿತಿಗತಿಯೂ ಯೋಗ್ಯತೆಯೂ ಬೇರೆ ಬೇರೆ ರೀತಿಯಾಗಿ ಏರ್ಪಟ್ಟಿದೆ. ಸಾರ್ವತ್ರಿಕವಾಗಿ ಎಲ್ಲಾ ಅಧಿಸತ್ಯಗಳಿಗೂ ಒಂದೇ ವಿಧವಾದ ಕ್ರಮವನ್ನಿಟ್ಟು ರೂಪಿಸುವುದು ಸಾಧ್ಯವಾಗಿ ಕಂಡುಬರಲಿಲ್ಲ. ಯಾಕೆಂದರೆ ಹಿಂದುಸ್ಥಾನದ ಒಂದು ಭಾಗದಲ್ಲಿ ಕಂಡುಬರುವ ಸಮಯ ಸಂದರ್ಭಗಳು ಇನ್ನೊಂದು ಭಾಗದಲ್ಲಿ ಕಂಡುಬಾರದೆ ಪ್ರತ್ಯೇಕ ಪ್ರತ್ಯೇಕಗಳಾಗಿರುವವು.

ಮಹಮದೀಯ ಮೆಂಬರುಗಳ ಸಂಖ್ಯೆ ಅವರ ಚುನಾವಣೆಯ ಕ್ರಮ ಮೊದಲಾದವುಗಳನ್ನು ನಿರ್ಧರಿಸುವುದು ಕಷ್ಟಸಾಧ್ಯವಾದದ್ದು ಅವರೂ ಅವರಿಗೆ ಈಗ ಕೊಡೋಣಾಗಿರುವ ಮೆಂಬರ ಸಂಖ್ಯೆಗಳು ೮ ಜನರಲ್ಲಿ ತೃಪ್ತಿಯನ್ನೂ ಸಮಾಧಾನವನ್ನೂ ಉಂಟುಮಾಡುವವೆಂದು ಎಣಿಸುತ್ತೇವೆ.

ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ಸಂಪಾದಿಸಿಕೊಂಡಿರುವವರ ಪಟ್ಟಿಗಳು ಬಹುಶಾ ಇನ್ನೂ ತೃಪ್ತಿಕರವಾದದ್ದು ಸಂಪೂರ್ಣವಾಗಿಲ್ಲದೆ ಇದ್ದೀತು. ೮ ಪಟ್ಟಿಗಳನ್ನು ಶೋಧನೆಮಾಡಿ ಖರಾರುಮಾಡಾ ಇಡಲೇಬೇಕನ್ನುವುದಾದರೆ ಇದಕ್ಕೆ ಬಹಳ ಸಮಯ ಹಿಡಿಯುವುದು; ಮತ್ತು ಇದರ ದೆಸೆಯಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾದೀತು. ಆದಕಾರಣ ಈ ಹೊಸಕಾನೂನನ್ನು ಕೂಡಲೇ ಜಾರಿಗೆ ಬರುವಂತೆ ಮಾಡಿಕೊಳ್ಳುವುದೂ. ಕಾಲಕ್ರಮದಲ್ಲಿ ಚುನಾವಣೆದಾರರ ಪಟ್ಟಿಗಳನ್ನು ಸರಿಪಡಿಸಿಕೊಳ್ಳುವುದೂ ಉಚಿತವಾಗಿರುತ್ತದೆ.

ಈ ಏರ್ಪಾಡು ನೂತನವಾಗಿರೋಣದರಿಂದ ಇದರಲ್ಲಿ ಲೋಪದೋಷಗಳು ಕಂಡುಬರಬಹುದಾದಾಗ್ಯು ಅವುಗಳನ್ನು ಕಾಲಕ್ರಮದಲ್ಲಿ ಸರಿಪಡಿಸಿಕೊಳ್ಳಬಹುದು ಮುಖ್ಯವಾಗಿ ಸಕಲರೂ ಏಕೀಭವಿಸಿ ಈ ಹೊಸ ಕ್ರಮಗಳು ಸಾರ್ಥಕವಾಗುವಂತೆ ಸಾಹಸಪಡಬೇಕಾಗಿದೆ. ಇದರಿಂದ ನಮ್ಮ ರಾಷ್ಟ್ರದಲ್ಲಿ ಸಮಾಧಾನ ಸುಖ ಸಂಪತ್ತುಗಳು ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಈ ರೀತಿಯಾದ ರಾಜ್ಯಭಾರ ಕ್ರಮ ಬದಲಾವಣೆಗಳನ್ನು ಪ್ರಾರಂಭಮಾಡಿದರು; ಅವರ ಕಾಲದಲ್ಲೇ ಈ ಬದಲಾವಣೆಯು ಕಾರ್ಯತಃ ನೆರವೇರಿತೆಂದು ನಾವು ಸಂತೋಷಪಡುತ್ತೇವೆ ಈಗ ಅವರ ಏರ್ಪಾಡಿನಂತೆ ರೂಪಾಂತರ ಹೊಂದಿದ ಮೊದಲನೇ ಮಂತ್ರಾಲೋಚನಾ ಸಭೆಯಲ್ಲಿ ಅವರೇ ಪ್ರಥಮಸ್ಥಾನವನ್ನು ವಹಿಸುವುದರಲ್ಲಿ ಅವರಿಗೆ ತೃಪ್ತಿಯೂ ಆನಂದವೂ ಉಂಟಾಗುವವೆಂದು ನಿರೀಕ್ಷಿಸುತ್ತೇವೆ.

ಸಾವಧಾನ್ಯದ ವೈಸ್‌ರಾಯಿಯವರು ಹೊಸ್ತು ಅಹಮ್ಮದಾಬಾದಿನಲ್ಲಿ ದಯಮಾಡಿದ್ದಾಗ್ಗೆ ಅವರ ಮೇಲೆ ಯಾರೋ ಸಿಡಿಮದ್ದಿನ ಗುಂಡನ್ನು ಎಸೆದರೆಂದು ಕೇಳಿ ದುಃಖಿಸುತ್ತೇವೆ. ಇಂಥಾ ಕೃತ್ಯವನ್ನು ನಡಿಸಿದವರನ್ನು ಶೀಘ್ರವೇ ಪತ್ತೆಮಾಡಿ ಹಿಡಿದು ಕಠಿಣವಾದ ಶಿಕ್ಷೆಗೆ ಗುರಿಮಾಡುತ್ತಾರೆಂದು ನಿರೀಕ್ಷಿಸುವೆವು. ಮತ್ತು ವೈಸ್‌ರಾಯಿಯವರು ಈಗ ಮಾಡುತ್ತಿರುವ ಸಂಚಾರ ಕಾಲದಲ್ಲಿ ಅವರಿಗೆ ಯಾವ ವಿಧವಾದ ಅಪಾಯಗಳೂ ಸಂಭವಿಸದೆ ಇರಲೆಂದೂ, ಮುಂದಿನ ವಾರ ಅವರು ನಮ್ಮ ಮೈಸೂರು ಸೀಮೆಗೆ ದಯಮಾಡುವಾಗ್ಗೆ ಸಕಲ ಪ್ರಜೆಗಳೂ ಅವರಿಗೆ ಮನಃಪೂರ್ವಕವಾದ ಸುಸ್ವಾಗತವನ್ನು ಬಯಸಿ ಅವರನ್ನು ಸಂಭ್ರಮವಾಗಿಯೂ ಸಂತೋಷದಿಂದಲೂ ಸತ್ಕಾರಮಾಡಿ ಕೃತಾರ್ಥರಾದಾರೆಂದೂ ಹಾರೈಸುತ್ತೇವೆ.

ಘನವನ್ನೈದಿದ ಮಿಸ್. ಎಲ್. ಎಚ್. ಆನ್‌ಸ್ಟಿ ಅಮ್ಮನವರ ಚರಿತ್ರೆ.

೧೮೩೪ ನೇ ಡಿಸಂಬರ್ ತಿಂಗಳಿನ ೩೧ ನೇ ತಾರೀಖಿನಲ್ಲಿ ಜನಿಸಿ ೧೯೦೯ ನೇ ಇಸ್ವಿ ಅಕ್ಟೋಬರ್ ತಿಂಗಳಿನ ೨೭ ನೇ ತಾರೀಖು ಬುಧವಾರ ಬೆಳಿಗ್ಗೆ ಸ್ವರ್ಗಸ್ಥರಾದ ಘನವುಳ್ಳ ಮಿಸ ಎಲ್ ಎಚ್. ಆನ್‌ಸ್ಟಿ ಅಮ್ಮನವರ ಸಂಕ್ಷಿಪ್ತ ಚರಿತ್ರೆ:—

ಮಹಾತಾಯಿಯವರಾದ ಅನ್‌ಸ್ಟಿ ಅಮ್ಮನವರು ಇಂಗ್ಲೆಂಡ್ ದೇಶದ ಯಾರ್‌ಕ್‌ಷೈಯರಿನಲ್ಲಿ ಹುಟ್ಟಿ ಚಿಕ್ಕಂದಿನಿಂದಲೇ ದೇವರ ಭಯ ಭಕ್ತಿಯಲ್ಲಿ ಬೆಳಸಲ್ಪಟ್ಟು ಕರ್ತನ ಸೇವೆಗೆಂದು ಉದ್ದೇಶಿಸಲ್ಪಟ್ಟಿದ್ದರು ಅವರು ಈಗ್ಗೆ ಸುಮಾರು ೪೦ ವರುಷಗಳ ಹಿಂದೆ ತಮ್ಮ ಸ್ವರಾಜ್ಯವಾದ ಇಂಗ್ಲೆಂಡ್ ಸೀಮೆಯನ್ನೂ ತಮಗೆ ಅತಿ ಪ್ರಿಯರಾಗಿದ್ದ ಬಂಧುಗಳನ್ನೂ ಬಿಟ್ಟು ರಕ್ಷಕನ ರಾಜ್ಯಾಭಿವೃದ್ಧಿಗಾಗಿ ಇಂಡಿಯಾ ದೇಶಕ್ಕೆ ಬಂದು ಲಂಡನ್ ಮಿಷನ್ನಿನಲ್ಲಿ ಲೇಡಿ ಮಿಷನೆರಿಯಾಗಿ ಕೆಲಸ ಮಾಡುತ್ತಿದ್ದರು. ಕಾರಣಾಂತರದಿಂದ ಅವರ ವಿಲಾಯಿತಿಗೆ ಹೋಗಬೇಕಾಯಿತು. ಅವರು ವಿಲಾಯಿತಿಗೆ ಹೋಗುತ್ತಿರುವಾಗ ತಾವು ಇತರರಲ್ಲಿ ಅಧೀನವಾಗಿ ಕೆಲಸಮಾಡುವದಕ್ಕಿಂತ ತಾವೇ ಸ್ವತಂತ್ರರಾಗಿ ದೇವರ ಕೆಲಸಮಾಡುವುದು ಬಹು ಒಳ್ಳೇದೆಂದು ತೋರಿಬಂದದ್ದರಿಂದ ಈ ವಿಷಯ ಪ್ರಾರ್ಥನಾ ಪೂರ್ವಕವಾಗಿ ಸ್ವಾಮಿಯಲ್ಲಿ ವಿಜ್ಞಾಪಿಸಿಕೊಳ್ಳಲು ದೇವರು ತನ್ನ ಚಿತ್ತವೇನೆಂಬುದನ್ನು ಅಮ್ಮನವರಿಗೆ ಪ್ರಕಟಮಾಡಿ ಸುವಾರ್ತೆಯನ್ನು ಎಂದೂ ಕೇಳದೆ ಇರುವ ಕಡೆಗೆ ಹೋಗಿ ಸಾರಬಹುದು, ಇಗೋ ನಾನು ನಿನ್ನ ಸಂಗಡ ಇರುವೆನು ಎಂಬ ಭರವಸಕೊಡಲ್ಪಟ್ಟಿತು ಅವರು ಆದೇ ಅಪ್ಪಣೆಯನ್ನು ಕೈಕೊಂಡು ವಿಲಾಯಿತಿಗೆ ಹೋಗಿ ತಮ್ಮ ಮನೋಗತವನ್ನು ತಮ್ಮ ಬಂಧು ಬಾಂಧವರೊಂದಿಗೂ ಬೇರೆ ಭಕ್ತರೊಂದಿಗೂ ತಿಳಿಸಿದಾಗ ಅವರೆಲ್ಲರೂ ಸಂತೋಷಪಟ್ಟು ಆಗಬಹುದು, ಆನ್‌ಸ್ಟಿ ಅಮ್ಮನವರೇ ನೀವು ಮಾಡಿರುವ ಯೋಚನೆ ಬಹು ಯೋಗ್ಯವಾದದ್ದೆಂದು ಹೇಳಿ ಮೆಚ್ಚಿಕೊಂಡರು, ಅಲ್ಲದೆ ಈ ವಿಷಯಕ್ಕೆ ಬೇಕಾಗುವ ಸಹಾಯವನ್ನು ಮನಃಪೂರ್ತಿಯಾಗಿ ಮಾಡುವುದಾಗಿಯೂ ಒಪ್ಪಿಕೊಂಡರು, ಅನಂತರ ಕೆಲಕಾಲ ತಮ್ಮ ಸ್ವಂತ ರಾಜ್ಯದಲ್ಲಿ ಕಾಲ ಕಳೆದಮೇಲೆ ಕ್ರಿಸ್ತನ ಪ್ರೀತಿಯು ಅವರನ್ನು ಇರಿಸುತ್ತಿದ್ದದ್ದರಿಂದ ತಾವು ಕರ್ತನ ರಾಜ್ಯಾಭಿವೃದ್ಧಿಗೋಸ್ಕರ ಮೈಸೂರು ಸಂಸ್ಥಾನದಲ್ಲಿ ಮಾಡಲು ದೈವಿಸಿದ್ದ ಸುವಾರ್ತೆ ಕೆಲಸಕ್ಕೋಸ್ಕರ ೧೮೭೬ ನೇ ಇಸ್ವಿಯಲ್ಲಿ ಹಿಂತಿರುಗಿದರು

ಅವರು ಇಂಡಿಯಕ್ಕೆ ಬರುವಷ್ಟರಲ್ಲಿ ಧಾತು ಈಶ್ವರ ಸಂವತ್ಸರಗಳಲ್ಲಿ ಮಹಾಕ್ಷಾಮವು ತಲೆದೋರಲಿಕ್ಕಿತ್ತು. ಅವರು ಮದ್ರಾಸ್ ಪಟ್ಟಣವನ್ನು ಸೇರಿ ಅಲ್ಲಿ ಕೆಲವು ದಿನಗಳಿದ್ದು ಮೈಸೂರ್ ಸಂಸ್ಥಾನದ ಯಾವ ಕಡೆ ಹೋಗಬೇಕೆಂದು ಪ್ರಾರ್ಥನೆ ಮಾಡಿದಾಗ ಕೋಲಾರ ಡಿಸ್ಟ್ರಿಕ್ಟಿಗೆ ಹೋಗಿ ಕೆಲಸಮಾಡಬೇಕೆಂಬ ದೈವೋತ್ತರವನ್ನು ಹೊಂದಿ ೧೮೭೭ ನೇ ಇಸ್ವಿಯಲ್ಲಿ ಕೋಲಾರಕ್ಕೆ ಬಂದರು. ಆಗ ಚೀಫ್ ಕಮಿಷನರವರ ಧರ್ಮಪತ್ನಿಯವರು ... ಕೋಲಾರಿನಲ್ಲಿ ಅನೇಕ ಪ್ರಾಸ್ಮದ ದೊಡ್ಡಮನುಷ್ಯರೂ ಇದ್ದರು. ಆನ್‌ಸ್ಟಿ ಅಮ್ಮನವರು ಕೋಲಾರಿಗೆ ಬಂದಾಗ್ಗೆ ಕ್ರೈಸ್ತರೆಂಬುವರೇ ಇರಲಿಲ್ಲ ದೊರೆಸಾನಿಯಮ್ಮನವರಿಗೆ ಇಳುಕೊಳ್ಳುವದಕ್ಕೆ ಸ್ಥಳ ಸಂಕೋಚವಾಗಿತ್ತು. ಆದಾಗ್ಯೂ ಆಗ್ಗೆ ಇದ್ದ ಸರ್ಕಾರದ ಉದ್ಯೋಗಸ್ಥರು ಆನ್‌ಸ್ಟಿ ಅಮ್ಮನವರ ಮನೋಗತವನ್ನು ತಿಳಿದು ಅವರವರು ತಮ್ಮಿಂದಾದದ್ದು ಸಹಾಯಗಳನ್ನು ಮನಃಪೂರ್ತಿಯಾಗಿ ಮಾಡಿದರು ಆಗ ಇದೇ ಸಂಸ್ಥಾನದಲ್ಲಿ ಕ್ಷಾಮದ ಬಾಧೆಯು ವಿಶೇಷವಾಗಿತ್ತು. ಅನೇಕಾನೇಕರು ಉಣ್ಣುವದಕ್ಕೂ ಹೊದಿಯುವದಕ್ಕೂ ಇಲ್ಲದೆ ಬಹು ಹಿಂಸೆ ಪಡುವವರಾಗಿದ್ದರು. ಅಂಥಾ ದುರವಸ್ಥೆಯ ಕಾಲದಲ್ಲಿ ಉದಯ ನಕ್ಷತ್ರದಂತೆ ಈ ಮಹಾತಾಯಿಯವರು ಕೋಲಾರಿನಲ್ಲುದಯಿಸಿ ಕಷ್ಟಕ್ಕೊಳಗಾಗಿದ್ದ ನಾನಾ ಜಾತಿಯ ಹೆಣ್ಣು ಗಂಡು ಮಕ್ಕಳನೇಕರನ್ನು ಕೂಡಿಸಿ ಅವರ ವಾಸಕ್ಕೋಸ್ಕರ ವಿಸ್ತಾರವಾದ ಮನೆಗಳನ್ನು ಕಟ್ಟಿಸಿದರು ದೇವಾರಾಧನೆಗೋಸ್ಕರ ಉತ್ತಮ ದೇವಾಲಯಗಳನ್ನು ಕಟ್ಟಿಸಿದರು ಇವುಗಳೆಲ್ಲವೂ ಕರ್ನಲ್ ... ರವರು ಈಗ ಇರುವ ಗವರ್ನಮೆಂಟ್ ಸ್ಕೂಲನ್ನು ಮಕ್ಕಳ ಉಪಯೋಗಾರ್ಥವಾಗಿ ಕೊಟ್ಟಿದ್ದರು ಮಕ್ಕಳ ವಾಸಕ್ಕೆ ... ದೇವಾರಾಧನೆಗೋಸ್ಕರ ದೇವಾಲಯವೂ ಸಿದ್ಧವಾಗುತ್ತಲೇ ಚೀಫ್ ಕಮಿಷನರ್ ಸಾಹೇಬರ ಅನುಮತಿಯನ್ನು ಪಡೆದು ಬೆಂಗಳೂರಿಂದಲೂ ತುಮಕೂರಿಂದಲೂ ಚಿತ್ರದುರ್ಗದಿಂದಲೂ ಬಳ್ಳಾರಿ ಕಡೆಯಿಂದಲೂ ಸ್ವಲ್ಪ ಹೆಚ್ಚು ಕಡಿಮೆ ೬೯೧ ಹುಡುಗರನ್ನೂ ... ಹುಡುಗರನ್ನೂ ಕೂಡಿಸಿ ಒಬ್ಬನೇ ಅವರಿಗೆ ರಕ್ಷಕನಾದ ಯೇಸು ಕ್ರಿಸ್ತನನ್ನು, ಆತನು ಈ ಲೋಕಕ್ಕೆ ಬಂದಕಾರಣವನ್ನೂ ಆತನಲ್ಲಿ ನಂಬಿಕೆ ಇಡುವದರಿಂದಾಗುವ ಮೇಲನ್ನೂ ಕುರಿತು ತಿಳಿಸಲಾರಂಭಿಸಿದರು. ಹೆಣ್ಣು ಗಂಡು ಮಕ್ಕಳಿಗೆ ಬೇರೆ ಬೇರೆ ... ಇಲ್ಲದೆ ಮರಗಳನ್ನು ಸ್ಥಾಪಿಸಿ ಉಭಯತ್ರರೂ ವಿದ್ಯಾಭ್ಯಾಸ ಮಾಡುವಂತೆ ಏರ್ಪಾಡುಗಳನ್ನು ಬಹು ಶ್ರೇಷ್ಠವಾದ ರೀತಿಯಲ್ಲಿ ಕಲ್ಪಿಸಿದ್ದರು

ಇವರಲ್ಲಿ ಕೆಲಸ ಮಾಡಬೇಕೆಂದು ಬಂದಿದ್ದವರು ಅನೇಕರು; ಬ್ರಾಹ್ಮಣರಲ್ಲಿ ಜ. ಕೋದಂಡರಾಯರೂ ಇ ಲಕ್ಷ್ಮಣ ರಾಯರೂ ನಾಗೇಶರಾಯರೂ ವ್ಯಾಸೇಶರಾಯರೂ ದಕ್ಷಿಣಾಮೂರ್ತಿ ಯವರೂ ಸೂರಪ್ಪನವರೂ ಜಿ. ರಾಮಪ್ಪನವರೂ ಸುಬ್ಬಯ್ಯನವರೂ ಸಾಲಿಗರ ಸುಬ್ಬಪ್ಪನವರೂ ಕುರುಬರ ರಂಗಪ್ಪನವರೂ ತಿಪ್ಪಯ್ಯನವರೂ ಇವರೇ. ದೇಶೀಯ ಕ್ರೈಸ್ತರಲ್ಲಿಯೂ ಯೂರೋಪಿಯನರಲ್ಲಿಯೂ ಕೆಲವರು ಕೆಲಸಕ್ಕೆ ಬಂದಿದ್ದರು

ಆನ್‌ಸ್ಟಿ ಅಮ್ಮನವರು ಕೋಲಾರಿಗೆ ಬಂದಾಗ ಕ್ರೈಸ್ತಮತವೆಂಬುದೇನೋ ವಿಶೇಷವಾಗಿ ಯಾರಿಗೂ ತಿಳಿದಿರಲಿಲ್ಲ. ಈ ತಾಯಿಯವರ ಉತ್ತಮ ಕ್ರೈಸ್ತ ನಡತೆಯನ್ನು ನೋಡುತ್ತಿದ್ದ ಅನಾಥ ಮಕ್ಕಳನೇಕರು ಅವರಂತೆಯೇ ತಮ್ಮ ಪಾಪಗಳಿಗಾಗಿ ದುಃಖಪಟ್ಟು ತಮ್ಮ ಪಾಪಕ್ಷಮೆಗಾಗಿ ಕರ್ತನ ದ ಯೇಸುಕ್ರಿಸ್ತನಲ್ಲಿ ವಿಶ್ವಾಸಿಸಿ ಆನ್‌ಸ್ಟಿ ಮಿಸ್ಸಮ್ಮನವರಂತೆಯೇ ಪಾಪ ಪರಿಹಾರ ಹೊಂದಿ ಅವರಂತೆಯೇ ನೂರಾರು ಮಕ್ಕಳು ... ಮಕಕೂ ... ಹಿಂಬಾಲಕರೂ ಆದರು ಈ ಮಹಾತಾಯಿಯು ... ತಮ್ಮಲ್ಲಿ ಬಂದು ಸೇರಿದ ಮಕ್ಕಳು ... ಓದಿ ಬರಹ ಕಲಿತು ಕೆಲಸ ... ಗಳನ್ನು ಮಾಡುವದಕ್ಕೆ ಯೋಗ್ಯರಾದವರನೇಕರಿಗೆ ಉಪಾಧ್ಯಾಯ ಉಪದೇಶಿಗಳ ಕೆಲಸಗಳನ್ನು ಕೊಟ್ಟದಲ್ಲಿ ಮಿಕ್ಕವರಿಗೆ ವ್ಯವಸಾಯದ ಕೆಲಸಗಳನ್ನೂ, ಕಬ್ಬಿಣ ಕೆಲಸಗಳನ್ನೂ, ಮರಗೆಲಸಗಳನ್ನೂ, ಚಿನ್ನದ ಕೆಲಸಗಳನ್ನೂ ಕಲಿ-ಕೊಡುತ್ತಿದ್ದರು ಅವರೆಲ್ಲರೂ ಬೆಳೆದು ಪ್ರಾಯಸ್ಥರಾದಾಗ ಅವರವರಿಗೆ ಅನುಕೂಲವಾದಂಥ ಪ್ರಕಾರ ವಿವಾಹಗಳನ್ನು ಮಾಡಿ ಕುಟುಂಬಗಳಾಗಿ ಮಾಡಿದರು

ಆನ್‌ಸ್ಟಿ ಅಮ್ಮನವರು ಪರಮ ಭಕ್ತರಾಗಿ ಕೋಲಾರ ಮಿಷನಿಗೋಸ್ಕರವಾಗಿ ತಮ್ಮ ಪ್ರಾಯವನ್ನೂ ಜ್ಞಾನವನ್ನೂ ಆಸ್ತಿಯನ್ನೂ ಅರ್ಪಣ ಮಾಡಿದರು ಅವರು ಹದಿನಾಲ್ಕು ವರುಷಗಳು ಕೋಲಾರಿನಲ್ಲಿ ಕೆಲಸ ಮಾಡಿದರು. ಅವರಿಂದ ಸಾಕಲ್ಪಟ್ಟ ಮಕ್ಕಳು ಲೋಕರಕ್ಷಕನಾದ ಕ್ರಿಸ್ತೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಮೇಲೆ ಈ ದಿವ್ಯ ರಕ್ಷಕನನ್ನು ತಿಳಿಯದೇ ಇರುವವರಲ್ಲಿ ಕೆಲಸಮಾಡುವುದಕ್ಕೆ ಅನೇಕರನ್ನು ನೇಮಿಸಿದ್ದರು ಅಮ್ಮನವರ ಕಾಲದಲ್ಲಿ ಮಕ್ಕಳನ್ನು ಸರ್ಕಾರದ ಪರೀಕ್ಷೆಗಳಿಗೆ ಕಳುಹಿಸುವ ಅಭ್ಯಾಸವಿರಲಿಲ್ಲ ವೇದವನ್ನು ಓದಿ ಸುವಾರ್ತೆಯ ಸತ್ಯವನ್ನು ಇತರರಿಗೆ ತಿಳಿಸುವಷ್ಟು ಜ್ಞಾನವಿದ್ದರೆ ಸಾಕು ಎಂದು ಹೇಳುವವರಾಗಿದ್ದರು.

ಇಂಥಾ ಪರಮ ಭಕ್ತರು ೧೮೯೦ ಇಸ್ವಿಯಲ್ಲಿ ದೇಹದ ಬಲಹೀನತ್ವದ ದೆಸೆಯಿಂದಲೂ ತಕ್ಕ ಸಹಾಯಕರಿಲ್ಲದೆ ಹೋದದ್ದರಿಂದಲೂ ಕೋಲಾರ ಫೇತ್ ಮಿಷನನ್ನು ಮೆಥೊಡಿಸ್ಟ್ ಎಪಿಸ್ಕೊಪಲ್ ಸಭೆಯ ಅಧ್ಯಕ್ಷರಾದ ಘನ ಜ ಎಮ್ ಥೋಬರ್ನ್‌ರವರ ವಶಕ್ಕೆ ಒಪ್ಪಿಸಿ ತಾವು ಬೆಂಗಳೂರಿಗೆ ಹೋದರು ಅಲ್ಲಿ ಕೆಲವು ಕಾಲದೊಳಗೆ ಒಂದು ಯೂರೋಪಿಯನ್ ಮನೆಯನ್ನು ಏರ್ಪಾಡು ಮಾಡಿ ಕೆಲವರುಷಗಳು ಆ ಕೆಲಸವನ್ನು ಮಾಡಿ ಅದರಲ್ಲಿಯೂ ಅನೇಕಾತ್ಮಗಳಿಗೆ ಕರ್ತನ ದಿವ್ಯ ಬೆಳಕನ್ನು ತೋರಿಸಿ ಅವರನು ರಕ್ಷಕನ ಕಡೆಗೆ ತಿರುಗಿಸಿದರು. ಮತ್ತು ತಾವು ತಮ್ಮ ಮುಪ್ಪಿನ ಕಾಲದ ಕಡೇ ಭಾಗವನ್ನು ಬೌರಿಂಗ್‌ಪೇಟೆ ತಾಲ್ಲೂಕಿನ ಬೇತಮಂಗಲದ ಹೋಬಳಿ ಚಿಗರಾಪುರವೆಂಬ ತಮ್ಮ ಸ್ವಂತ ಗ್ರಾಮದಲ್ಲಿ ಕಳೆಯಬೇಕೆಂದು ನಿರ್ಣಯಿಸಿ ಅಲ್ಲಿ ಕಳೆದ ಪತ್ತೊಂಬತ್ತು ವರುಷಗಳಿಂದ ಕಾಲಕ್ಷೇಪ ಮಾಡುವವರಾಗಿದ್ದರು ಇಲ್ಲಿಯಾದರೂ ಅವರು ಸುಮ್ಮನೆ ಇರುತ್ತಿರಲಿಲ್ಲ. ಜಗದ್ರಕ್ಷಕನ ಸುತ್ತಲೂ ಲೋಕದ ಬೆಳಕಾದ ಕ್ರಿಸ್ತೇಸುವನ್ನು ಕುರಿತು ಸಾಕ್ಷಿ ಕೊಡುತ್ತಿದ್ದರು, ಈ ಮಹಾ ತಾಯಿ ಕೋಲಾರಿನಲ್ಲಿ ಸ್ಥಾಪಿಸಿದ ಕೆಲಸವು ಮೆಥೊಡಿಸ್ಟರವರ ಸಾಹಸ ಪ್ರಯತ್ನಗಳಿಂದ ಬಹು ದೊಡ್ಡ ಮರವಾಗಿ ಅದರಲ್ಲಿ ಬೆಳೆದವರನೇಕರನ್ನು ಇಂಡಿಯಾ ದೇಶದ ನಾನಾ ಕಡೆಗೂ ಈ ಡಿಸ್ಟ್ರಿಕ್ಟಿನ ಅನೇಕ ತಾಲ್ಲೂಕುಗಳಿಗೂ ಕಳುಹಿಸಿಯದೆ, ಇದಲ್ಲದೆ ಕೈಕೆಲಸಗಳಿಂದ ಜೀವನ ಮಾಡುವ ೫೫ ಕುಟುಂಬಗಳು ಇವರಿಂದ ಜನಿಸಿ ಆನ್‌ಸ್ಟಿ ಅಮ್ಮನವರ ಮೊಮ್ಮಕ್ಕಳೆಂದು ಕರೆಯಲ್ಪಟ್ಟಿರುವವರು ೩೦೦ ಮಂದಿಗಿಂತ ಜಾಸ್ತಿಯಾಗಿರುತ್ತಾರೆ ಈ ಅಮ್ಮನವರು ಮಾಡಿರುವ ಕೆಲಸವನ್ನೆಲ್ಲಾ ಸಾಂಗೋಪಾಂಗವಾಗಿ ಬರೆಯಲಾಗದ್ದರಿಂದ ವಿಷಾಧಿಸುತ್ತೇನೆ.

ಈ ಮಹಾ ತಾಯಿಯವರಿಗೆ ಇದ್ದಕ್ಕಿದ್ದಹಾಗೆಯೇ ಅಕ್ಟೋಬರ್ ೨೦ ರಲ್ಲಿ ಜ್ವರದಲ್ಲಿ ರಾಜ ಕುರುವತ್ತಿ ಕಾಣಿಸಿಕೊಂಡು ಬಹು ಶ್ರಮಪಟ್ಟು ಅಕ್ಟೋಬರ್ ೨೭ ನೇ ಬುಧವಾರ ಬೆಳಿಗ್ಗೆ ೭ ಘಂಟೆಗೆ ಚಿಗರಾಪುರದಲ್ಲಿರುವ ತಮ್ಮ ಸ್ವಗೃಹದಲ್ಲಿ ಮರಣವನ್ನೈದಿದರು. ಅವರ ಶವವನ್ನು ಕೋಲಾರ್ ಟೌನಿಗೆ ಸಾಗಿಸಿ ಅವರ ಮಕ್ಕಳೆಲ್ಲರೂ ಸೇರಿ ಬಹು ಶೋಕದಿಂದ ಅವರ ಶವವನ್ನು ಕೋಲಾರ್ ಹೊಸ ಸಮಾಧಿಯಲ್ಲಿ ೨೭ ನೇ ತಾರೀಖಿನ ಸಾಯಂಕಾಲ ೭ ಘಂಟೆಗೆ ಬಹು ಗಂಭೀರವಾಗಿ ಭೂಸ್ಥಾಪನೆ ಮಾಡಿದರು.

'ಬುದ್ಧಿವಂತರಾದವರು ಆಕಾಶದ ಕಾಂತಿಯ ಹಾಗೆಯೂ. ಅನೇಕರನ್ನು ನೀತಿಗೆ ತಿರುಗಿಸುವವರು ನಕ್ಷತ್ರಗಳ ಹಾಗೆಯೂ ಎಂದೆಂದಿಗೂ ಪ್ರಕಾಶಿಸುವರು '

ಘನವನ್ನು ಹೊಂದಿದ ವೈಸರಾಯಿರವರ ಆಗಮನದ ಪ್ರೋಗ್ರಾಮ್.

೨೩ ನೇ ನವೆಂಬರ್ —೬ ಗಂಟೆ ೪೦ ಮಿನೀಟು ಹರಿಹರ, ೯ ಗಂಟೆಗೆ ಹೊಳಲ್ಕೆರೆ, ೧ ಗಂಟೆ ೫ ಮಿನೀಟು ಬೀರೂರು, ೨ ಗಂಟೆ ೧೦ ಮಿನೀಟಿಗೆ ಶಿವಮೊಗ್ಗ, ೫ ಗಂಟೆಗೆ ಸಾಗರ, ೭ ಗಂಟೆ ೩೦ ಮಿನೀಟಿಗೆ ಗೇರುಸೊಪ್ಪ, ೯ ಗಂಟೆ ೩೦ ಮಿನೀಟಿಗೆ ಜಲಪತನದ ಸಮೀಪದಲ್ಲಿ ಬಾರ ಬಿಡಾರಗಳು.

೨೪ ನೇ ನವೆಂಬರ್ .....ಜಲಪತನಗಳಲ್ಲಿ ನೋಡಬೇಕಾದ್ದನ್ನೆಲ್ಲಾ ನೋಡಿಕೊಂಡು ಭೋಜನವನ್ನು ತೀರಿಸಿಕೊಂಡು ೬ ಗಂಟೆ ४೫ ಮಿನೀಟಿಗೆ ಪ್ರಯಾಣ, ೮ ಗಂಟೆಗೆ ಶಿವಮೊಗ್ಗ

೨೫ ನೇ ನವೆಂಬರ್ .....ಪ್ರಾತಃಕಾಲ ೭ ಗಂಟೆ ४೫ ಮಿನೀಟಿಗೆ ಶೆಟ್ಟಿಹಳ್ಳಿ, ೯ ಗಂಟೆ ೧೫ ಮಿನೀಟು ಫ್ರೇಜರ್‌ಪೇಟ್, ೧೦ ಗಂಟೆ ೩೦ ಮಿನೀಟಿಗೆ ಮೈಸೂರು, ೧೨ ಗಂಟೆಗೆ ಮಹಾರಾಜರವರ ... ೪ ಗಂಟೆಗೆ ಶ್ರೀಮನ್ಮಹಾರಾಜರವರ ಭೇಟಿ, ೫ ಗಂಟೆ ೩೦ ನಿಮಿಷಕ್ಕೆ ಶ್ರೀಮನ್ಮಹಾರಾಜರವರ ಪುನರ್ಭೇಟಿ, ರಾತ್ರಿ ೮ ಗಂಟೆಗೆ ಔತಣ, ಬಾಣಬಿರುಸು,

೩೧ ನೇ ನವಂಬರು ಬೆಳಗ್ಗೆ ೯ ವರೆ ಗಂಟೆಗೆ ಮಹಾರಾಣಿಯವರ ಕಾಲೇಜ್, ಆಯುಧಾಗಾರ, ಜೋಸ ಅರಮನೆ, ಸಾಯಂಕಾಲ ಟೌನ್‌ಹಾಲಿನಲ್ಲಿ ಮೊದಲ ಕೂಟ ರಾತ್ರಿ ೮ ೦ ಗಂಟೆಗೆ ಆತಿಥ್ಯ, ಪಟ್ಟಣದಲ್ಲಿ ದೀಪೋತ್ಸವವನ್ನು ನೋಡುವುದು

೨೭ ನೇ ನವಂಬರ್ —೯ ವರೆ ಗಂಟೆಗೆ ಪ್ರಾಣಿಗಳ ಪ್ರದರ್ಶನಶಾಲೆ, ಅರಮನೆ ಉದ್ಯಾನಗಳು, ೧೧ ವರೆ ಗಂಟೆಗೆ ಶ್ರೀಮನ್ಮಹಾರಾಜರಿಗೆ ಲೇಡಿ ಮಿಂಟೋರವರ ಭೇಟಿ ಕೊಡುವುದು, ೧ ಗಂಟೆಗೆ ಕೊಡಗಿನ ಮಹಾಜನಗಳ ಡೆಪ್ಯುಟೇಷನ, ೫ ಗಂಟೆಗೆ ಶ್ರೀಮನ್ಮಹಾರಾಜರಿಗೆ ಲೇಡಿ ಮಿಂಟೋರವರ ಭೇಟಿ, ರಾತ್ರಿ ೧೦ ವರೆ ಗಂಟೆಗೆ ಅರಮನೆಯಲ್ಲಿ ಸಂಗೀತದ ಕಚೇರಿ

೨೮ ನೇ ನವಂಬರ್ —೪ ಗಂಟೆಗೆ ಮೋಟಾರ್ ಗಾಡಿಗಳಲ್ಲಿ ಕೆಡ್ಡಾಕ್ಕೆ ಹೋಗುವುದು

ನವಂಬರ್ ೨೯—೩೦ ಡಿಸಂಬರು ೧ ಕೆಡ್ಡಾ ಮತ್ತು ಕಾಡೆಮ್ಮೆಗಳ ಮತ್ತು ಹುಲಿಗಳ ಶಿಕಾರಿ ಡಿಸೆಂಬರು ೨ ಕ್ಕೆ ಮೈಸೂರಿಗೆ ಪ್ರಯಾಣ, ರಾತ್ರಿ ೯ ಗಂಟೆಗೆ ಆತಿಥ್ಯ ಡಿಸಂಬರು ೩ ನೇ ತಾ ಬೆಳಗ್ಗೆ ೭ ವರೆ ಗಂಟೆಗೆ ಪ್ರಯಾಣ, ೮ ಗಂಟೆಗೆ ಶ್ರೀರಂಗಪಟ್ಟಣ, ೯ ವರೆ ಗಂಟೆಗೆ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಪ್ರಯಾಣ, ೧೧ ಗಂಟೆ ೪ ಮಿನೀಟಿಗೆ ಶ್ರೀರಂಗಪಟ್ಟಣಕ್ಕೆ ಪ್ರಯಾಣ, ೧೨ ಗಂಟೆ ೪ ಮಿನೀಟಿಗೆ ಶ್ರೀರಂಗಪಟ್ಟಣದಿಂದ ರೈಲ್‌ಮೋಟರ್ ಪ್ರಯಾಣ, ೧ ಗಂಟೆ ೪೨ ಮಿನೀಟಿಗೆ ಮದ್ದೂರು, ೨ ಗಂಟೆ ೧೭ ಮಿನೀಟಿಗೆ ಮದ್ದೂರಿನಿಂದ ಶಿವನಸಮುದ್ರಕ್ಕೆ ಪ್ರಯಾಣ ೪ ನೇ ತಾ ೫ ಗಂಟೆಗೆ ಬೆಂಗಳೂರು ಪ್ರಯಾಣ, ೭ ಗಂಟೆ ೪೫ ಮಿನೀಟಿಗೆ ಮೈಗಂಡದೇವ ಮ ದಳಿಯಾವ್ ಮತ್ತು ಅಗ್ಲೌಸಾಮಿ ಮೊದಲಿಯಾರ್ರವರಿಗೆ ಕೇಸರಿ ಹಿಂದ ಬಿರುದು ಬಿಲ್ಲೆಗಳನ್ನು ಕೊಡುವುದು ೪ ನೇ ಡಿಸಂಬರು ಬೆಳಗ್ಗೆ ೮ ಗಂಟೆಗೆ ಕೋಲಾರದ ಚಿನ್ನದಗಣಿಗಳಿಗೆ ಪ್ರಯಾಣ, ೧೦ ವರೆ ಗಂಟೆಗೆ ಮಾರಿಕುಪ್ಪ, ೧೨ ಮುಕ್ಕಾಲು ಗಂಟೆಗೆ ಭೋಜನ, ೧೧ ಗಂಟೆ ೧೫ ಮಿನೀಟಿಗೆ ಅಡ್ರೆಸ್, ೧೨ ವರೆ ಗಂಟೆಗೆ ಗಣಿಗಳನ್ನೂ ಪವರ್ ಟ್ರಾನ್ಸ್‌ಫಾರಂ ಮೊದಲಾದವುಗಳನ್ನೂ ಚಿನ್ನ ಕರಗಿಸುವುದನ್ನೂ ನೋಡುವುದು, ೪ ಗಂಟೆ ೨೩ ಮಿನೀಟಿಗೆ ಬಂಗಾರಪೇಟೆ ೬ ಗಂಟೆಗೆ ಬೆಂಗಳೂರು ೮ ಗಂಟೆಗೆ ಭೋಜನ ೫ ನೇ ತಾ ಬೆಳಗ್ಗೆ ೧೦ ಗಂಟೆಗೆ ಕಂಗಳ ಸ್ವಾಗತ ಫಾರಂ, ಸಾಯಂಕಾಲ ೬ ಗಂಟೆಗೆ ಬೆಂಗಳೂರು, ೮ ಗಂಟೆಗೆ ಭೋಜನ ೬ ನೇ ತಾ ಬೆಳಗ್ಗೆ ೭ ಗಂಟೆಗೆ ಕಂಟೋನ್ಮೆಂಟ್, ೮ ಗಂಟೆಯೊಳಗೆ ಕೋಟೆ ಅರಮನೆ ಮೊದಲಾದವುಗಳನ್ನು ನೋಡುವುದು, ೧೦ ಗಂಟೆ ... ಲಾರ್ಡ್ ಮಿಂಟೋರವರು ಲೇಡಿ ಹಿಲ್ ... ... ೧೨ ವರೆ ಗಂಟೆಗೆ ಕಂಟೋನ್ಮೆಂಟ್ ಸ್ಟೇಷನ್ನಿಂದ ಪ್ರಯಾಣ, ೨ ಗಂಟೆ ೧೩ ಮಿನೀಟಿಗೆ ಬಂಗಾರಪೇಟೆಗೆ ಪ್ರಯಾಣ, ೨ ಗಂಟೆ ೪೫ ಮಿನೀಟಿಗೆ ಈ ಸಂಸ್ಥಾನದ ಎಲ್ಲೆಯನ್ನು ಬಿಟ್ಟು ಪ್ರಯಾಣ

ವೈಸರಾಯಿ ರವರು ಹೋಗ ... ಕಾಲ ಕಡುರ ಫಾಲ್ಸ್ ಚಿನ್ನದಗಣಿಗಳನ್ನು ... ಈ ಕಡೆಗಳಿಗೆ ದಯ ಮಾಡುವುದು ನಿಶ್ಚಯ ಅಲ್ಲವೆಂದು ಸರ್ಕಾರದವರು ಎಣಿಸುತ್ತಾರೆ

ಒಳದೇಶದ ವೃತ್ತಾಂತಗಳು

ಕಾಡೂರು ... ... ಕಳೆದ ವಾರ ೫೦ ದಿವಸಗಳು ... ಒಂದು ದಿವಸ ... ಹೇಳುತ್ತಾರೆ ...

* * *

ನಮ್ಮ ಮಹಾಸಭೆ ... ರಾಜಕಾರ್ಯ ... ಟಿ. ಆನಂದರಾಯರವರು ... ಬೆಂಗಳೂರಿನಿಂದ ರಾಜಧಾನಿಗೆ ... ಆಗಿದ್ದರು.

* * *

ವಿದ್ಯುಚ್ಛಕ್ತಿಯ ... ... ಸೌಕರ್ಯ ಕಳೆದ ವಾರ ಬೆಂಗಳೂರು ... ರೋಡ್ಡಿನಲ್ಲಿ ... ಬೆಂಡ ... ಗಳನ್ನು ಮುಟ್ಟಿ ಸ್ಮರಣೆ ... ಸತ್ತುಹೋದನು

* * *

ಕಳೆದ ತಿಂಗಳಲ್ಲಿ ತುಂಕೂರು ಡಿಸ್ಟ್ರಿಕ್ಟು ಮಧುಗಿರಿ ... ಮೈಸೂರು ... ... ಒಂದು ಸರ್ಕಾರ ... ಸಂಭವಿಸಿದೆ

* * *

ಶ್ರವಣಬೆಳ್ಗೊಳದಲ್ಲಿ ಜೈನ ಪ್ರಜೆಗಳು ... ಒಂದು ಜೈನಮಂದಿರವನ್ನು ... ... ನಡೆಸುತ್ತಾ ... ... ಕರು ಇದಕ್ಕೆ ದ್ರವ್ಯಸಹಾಯಗಳನ್ನು ಮಾಡಿದರಾಗಲೆಂತಲೂ ... ವಾರರು ತಿಳಿಸಿದಾರೆ

* * *

ಶ್ರೀರಂಗಪಟ್ಟಣದ ... ಪ್ರಸಿದ್ಧರಾದ ... ರಾಮಣ್ಣನವರು ಹಿಂದಿನ ವಾರ ಕಾಲವಾದರೆಂದು ತಿಳಿಯಿತು ಇವರು ಬದುಕಿದ್ದಾಗ್ಗೆ ಅನೇಕ ... ಉಪಕಾರಗಳನ್ನು ಮಾಡುತ್ತಾ ಪ್ರಜೆಗಳಲ್ಲೂ ಅಧಿಕಾರಿಗಳಲ್ಲೂ ತುಂಬಾ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು

* * *

ಚಿಕ್ಕಬಳ್ಳಾಪುರದ ... ... ಸಾಗುವಳಿಯನ್ನು ತಾಲ್ಲೂಕಿನ ... ಸಾಗುವಳಿಯನ್ನು ... ಬೇಕೆಂದೂ ಅಲ್ಲದೆ, ... ಉಪಸ್ಥಿತಿಗಳ ... ... ಬೇಕಾದ ... ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿದರು.

* * *

ಈ ಶೀಮೆಯಲ್ಲಿ ಕ್ಷಾಮ ... ದುರ್ಭಿಕ್ಷದ ಭೀತಿಯೂ ... ನಿವಾರಣೆಯಾಗಿರುವುದರಿಂದ ಸರ್ಕಾರದವರ ... ಧರ್ಮ ಸಹಾಯಗಳನ್ನು ... ಪ್ರಜೆಗಳೆಲ್ಲಾ ... ಮಾಡುತ್ತಿರುವುದರಿಂದ ನಾವು ಪ್ರಕಟಿಸುತ್ತಾ ಬಂದ ... ಈ ವಾರ ... ನಿಲ್ಲಿಸುತ್ತೇವೆ

* * *

ಬೆಂಗಳೂರಿನ ... ವೃತ್ತ ... ಶಾಂತಿ ... ಉಪದ್ರ ಕಾಣಿಸಿಕೊಂಡು ೧೭ ಮಂದಿ ಕಾಯಿಲೆಯಾದರು ಜನರು ... ನೀರನ್ನು ಕುಡಿಯದ ... ನೀರನ್ನು ... ದಕ್ಕೆ ಕಾರಣ ಡಾಕ್ಟರು ... ರೋಗವನ್ನು ಅಡಗಿಸುವುದಕ್ಕೆ ಏರ್ಪಾಡು ಮಾಡಿದರು

* * *

ವರ್ಷೇಶ ಅಮಲ್ದಾರ್ ಮೆ|| ಟಿ ವೆಂಕಟರಾಮಯ್ಯನವರನ್ನು ಪರಸ್ಪರ ಸಹಾಯಕ ಸಂಘಗಳ ವಿಚಾರವನ್ನು ಪ್ರಜೆಗಳಿಗೆ ಬೋಧಿಸಿ ಸಂಘಗಳನ್ನು ಏರ್ಪಡಿಸುವ ಕಾರ್ಯಕ್ಕೆ ನೇಮಿಸಿಕೊಳ್ಳಬಹುದೆಂದು ಸರ್ಕಾರದವರು ಅಪ್ಪಣೆಕೊಟ್ಟು ಇವರಿಗೆ ತಿಂಗಳಿಗೆ ೫ ರೂಪಾಯಿ ಭತ್ಯವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

* * *

ಮೈಸೂರು ಓರಿಯಂಟಲ್ ಲೈಬ್ರರಿಯ ಕ್ಯೂರೇಟರಾದ ಮ|| ಎ ಮಹದೇವ ಶಾಸ್ತ್ರಿಗಳನ್ನು ಬರೋಡಾ ಸಂಸ್ಥಾನಕ್ಕೆ ಗಾಯಕವಾಡ ಮಹಾರಾಜರವರು ಕರೆಸಿಕೊಂಡಿದಾರೆ ಆ ಸಂಸ್ಥಾನದಲ್ಲಿ ಮಹಾರಾಜರವರು ವಿವಾಹವೇ ಮೊದಲಾದ ಆಚಾರವ್ಯವಹಾರಗಳಲ್ಲಿ ತಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕೆಂದು ಯೋಚಿಸಿ, ಮೆ|| ಶಾಸ್ತ್ರಿಗಳಿಂದ ಈ ವಿಷಯದಲ್ಲಿ ಶಾಸ್ತ್ರಸಮ್ಮತಿಯನ್ನು ಪಡೆಯುವವರಾಗಿದಾರೆಂದು ಕೇಳುತ್ತೇವೆ.

* * *

ವೈಸ್‌ರಾಯಿಪ್ರಭುಗಳು ಮುಂದಿನ ಗುರುವಾರ ಬೆಳಗ್ಗೆ ರಾಜಧಾನಿಗೆ ದಯಮಾಡುವವರಾಗಿರೋಣದರಿಂದ ಅವರನ್ನು ಸತ್ಕರಿಸುವುದಕ್ಕಾಗಿ ನಾನಾ ಸಂತೋಷಕರವಾದ ಏರ್ಪಾಡುಗಳು ನಡೆಯುತ್ತಲಿವೆ ಪಟ್ಟಣವೂ ರಾಜಬೀದಿಗಳೂ ಶೃಂಗಾರವಾಗಿರುವವು ಸೀನಿಯರ್ ಕೌನ್ಸಿಲರ್ ಮೆ|| ಕೆ. ಪಿ ಪುಟ್ಟಣ್ಣಚೆಟ್ಟಿಯವರೂ, ಮ|| ಎಂ. ಕಾಂತರಾಜೇ ಅರಸಿನವರೂ, ಮ|| ಎಂ ಜಿ. ಕೃಷ್ಣಸ್ವಾಮಿಯವರೂ ಮುತುವರ್ಜಿ ವಹಿಸಿ ಕೆಲಸಗಳನ್ನು ಮಾಡಿಸುತ್ತಿದಾರೆ.

* * *

ಚನ್ನಗಿರಿ ತಾಲ್ಲೂಕು ಹಾವಿಗೆರೆಯಲ್ಲಿ ಸರ್ಕಾರದವರು ಯೂನಿಯನ್ ಪಂಚಾಯಿತಿಯನ್ನು ಏರ್ಪಡಿಸಿದರು. ಆ ಗ್ರಾಮದ ಕೆಲವರು ಯೂನಿಯನ್ ಪಂಚಾಯಿತಿ ತಮಗೆ ಅವಶ್ಯವಿಲ್ಲವೆಂದೂ ಅದನ್ನು ವಜಾ ಮಾಡಿಕೊಡಬೇಕೆಂದೂ ... ಮೂಲಕ ಕೇಳಿಕೊಂಡರು ಗ್ರಾಮಸ್ಥರ ಕ್ಷೇಮಾಭಿವೃದ್ಧಿಗಾಗಿ ಮಾಡಿರುವ ಈ ಏರ್ಪಾಟನ್ನು ಕೆಲವರ ಮಾತಿನಂತೆ ವಜಾ ಮಾಡುವುದು ಉಚಿತವಲ್ಲವೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿರುತ್ತಾರೆ.

* * *

ಹಾಸನದಲ್ಲಿ ... ಕಮೀಷನರಾಗಿರುವ ಮೆ|| ... ದೇವರಾಜ ಅರಸಿನವರ ಚಿಕ್ಕ ವಯಸ್ಸಿನ ಪತ್ನಿಯವರು ಕೆಲವು ಕಾಲದಿಂದ ಕಾಯಿಲೆ ... ಕಳೆದ ಸೋಮವಾರ ಬೆಳಗ್ಗೆ ರಾಜಧಾನಿಯ ... ತಮ್ಮ ತಂದೆಯ ಮನೆಯಲ್ಲಿ ಕಾಲವಾದರೆಂದು ... ಮೆ|| ದೇವರಾಜೇ ಅರಸಿನವರು ಸಮಾಚಾರ ತಿಳಿದು ಬಂದರು ಬಂಧುವರ್ಗದ ಅರಸುಗಳು ದಹನಸಂಸ್ಕಾರ ಕಾಲದಲ್ಲಿ ಹೋಗಿದ್ದರು ಅರಮನೆಯ ಮರ್ಯಾದೆಗಳು ಕೊಡಲ್ಪಟ್ಟಿದ್ದುವೆ.

* * *

ಕಳೆದ ವಾರ ಪ್ಲೇಗ್ ಉಪದ್ರವು ರಾಜಧಾನಿಯಲ್ಲಿ ಹಿಂದಿನ ವಾರಕ್ಕಿಂತಲೂ ಸ್ವಲ್ಪ ಕಡಿಮೆಯಾಗಿತ್ತು ನೆನ್ನೆ ಪ್ಲೇಗ್ ಕಾಂಪ್ಲೆಕ್ಸ್‌ನಲ್ಲಿ ೧೧ ಜನ ರೋಗಿಗಳಿದ್ದರು ಇದುವರೆಗೆ ಡಾಕ್ಟರುಗಳು ೨೭,೨೪೧ ಜನರಿಗೆ ಇನಾಕ್ಯುಲೇಷನ್ ಮಾಡಿರುತ್ತಾರೆ ನೆನ್ನೆ ಮೊನ್ನೆಯಿಂದ ಹೋಗುತ್ತಿದ್ದ ಚಳಿ ಕಡಿಮೆಯಾಯಿತು. ಇದು ... ತುಂಬಾ ಅನುಕೂಲವೆಂದು ಹೇಳುತ್ತಾರೆ ತಾ ೧೦ ರಿಂದ ೧೬ ರ ವರೆಗೆ ೭ ದಿನಗಳ ಕಾಯಿಲೆ ಸ್ಥಿತಿಯನ್ನು ಕೆಳಗೆ ತೋರಿಸಿರುತ್ತೇವೆ

ತಾರೀಖು	ಪ್ಲೇಗ್ ಕೇಯಿಸ್	ಪ್ಲೇಗ್ ಮರಣ	ಒಟ್ಟು ಮರಣ
10	10	4	11
11	12	4	18
12	11	11	17
13	11	6	10
14	2	7	15
15	1	5	13
16	13	7	12

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಬಳ್ಳಾಪುರದ ತಾಲ್ಲೂಕು ... ಗಿಡ್ಡನಹಳ್ಳಿಯಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಸುಬ್ರಹ್ಮಣ್ಯ, ವನುಗಸ್ತಳಿ, ಬಾಳೆಹೊನ್ನೂರು ತಾಲ್ಲೂಕು ಕಳ್ಳಪಟ್ಟ, ಹೊಸಪೇಟೆ ತಾಲ್ಲೂಕು ಹಂಪೆ, ತಿರುವನ್ನಮಲೆ, ಈ ಸ್ಥಳಗಳಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವಗಳಿಗೆ ಪ್ಲೇಗ್ ಇರುವ ಸ್ಥಳಗಳ ವ ... ಗಳನ್ನು ... ದಿಲ್ಲವೆಂದು ತಿಳಿಯತಕ್ಕದ್ದು

ಕೆಂಗೇರಿ, ಯಲಹಂಕ, ದೊಡ್ಡಸಂದ್ರ, ಸೂಳೆಬೆಲೆ, ಈ ಸ್ಥಳಗಳ ಯೂನಿಯನ್ ಪಂಚಾಯಿತಿಗೆ ಆಯಾ ಸ್ಕೂಲಿನ ಹೆಡ್ ಮಾಸ್ಟರು ಮೆಂಬರಾಗಿ ನೇಮಿಸಲ್ಪಟ್ಟಿದಾರೆ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ|| ಜಿ ಹ್ಯೂಂ ವೈಟ್ ಯವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬೆಂಗಳೂರು ಸಬ್ ಜಡ್ ಮೆ ಟಿ ... ಜಯರಾಮ ... ರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೆಲಸದ ಛಾರ್ಜನ್ನು ವಹಿಸತಕ್ಕದ್ದು

... ಅಸಿಸ್ಟೆಂಟ್ ಕಮೀಷನರ್ ಮೆ ಕೆ ... ಯವರಿಗೆ ನವಂಬರ್ ತಾ ೧ ರಿಂದ ಒಂದು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಜಗಳೂರ್ ತಾಲ್ಲೂಕ್ ಅಮಲ್ದಾರ್ ಮೆ ... ಸದಾಶಿವ ... ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜೆಯನ್ನು ರದ್ದುಮಾಡಿದೆ

... ಕಮೀಷನರ್ ಮೆ ಆರ್ ನಾರಾಯಣರಾಯರಿಗೆ ಕೊಟ್ಟಿರುವ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿಮಾಡಿದೆ

ಬ್ಯಾರಿಸ್ಟರ್ ಮೆ ಬಿ ... ನವರನ್ನು ೧ ನೇ ಕ್ಲಾಸ್ ... ಕಮೀಷನರನ್ನಾಗಿ ನೇಮಿಸಿ ಬೆಂಗಳೂರು ಸಬ್ ಡಿವಿಜನಿಗೆ ಕೆಲಸ ನೋಡುವಂತೆ ವರ್ಗ ಮಾಡಲ್ಪಟ್ಟಿದೆ

೩ನೇ ಕಮೀಷನರ್ ಮೆ ... ಅಯ್ಯಂಗಾರ್ಯರನ್ನು ಜೂನ್ ತಾ ೧೮ ರಿಂದ ೪ ನೇ ಕ್ಲಾಸಿಗೆ ಬಡ್ತಿ ... ದಿದೆ

ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ| ಜಿ ಕೃಷ್ಣಮೂರ್ತಿನಾಯುಡುರವರನ್ನು ಹಂಗಾಮಿಯಾಗಿ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿರೋಣದರಿಂದ ಫಾರೆಸ್ಟ್ ಸಬ್ ಅ| ಕನ್ಸರ್ವೇಟರ್ ಮೆ|| ಎಂ ಎ ವರದಾಚಾರ್ಯರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಡೆಪ್ಯುಟಿ ಕಮೀಷನರ್ ಮೆ. ಎಂ ಕಾಂತರಾಜೇ ಅರಸಿನವರು ಮೆ| ಕೆ ಚಾಂಡಿಯವರಿಂದ ಮೈಸೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ತಾ| ೧ ರಲ್ಲಿ ವಹಿಸಿಕೊಂಡರು

ಹೈದರಾಬಾದ್ ಗವರ್ನಮೆಂಟಿನ ಕನ್ಸಲ್ಟಿಂಗ್ ಇಂಜನಿಯರ್ ಮೆ|| ಎಂ ವಿಶ್ವೇಶ್ವರೈಯವರನ್ನು ನವಂಬರ್ ತಾ ೧೫ ರಿಂದ ಮೈಸೂರು ಗವರ್ನಮೆಂಟಿನ ಚೀಫ್ ಇಂಜನಿಯರವರಾಗಿಯೂ, ಮರಾಮತ್ ಮತ್ತು ರೈಲ್ವೆ ಇಲಾಖೆಗಳಲ್ಲಿ ಗವರ್ನಮೆಂಟ್ ಸೆಕ್ರೆಟರಿಯಾಗಿಯೂ ನೇಮಕಮಾಡಿದೆ

ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ಮೆ| ಮಹಮದ್ ಓಬೆದುಲ್ಲಾಯವರಿಗೆ ಏಳು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಶಿರಸ್ತೇದಾರ್ ಕಿನ್ನಯ್ಯಶಾಸ್ತ್ರಿಯವರು ತಾಲ್ಲೂಕಿನ ಛಾರ್ಜನ್ನು ವಹಿಸಿದ್ದರು

ಇಂಡಿಯಾದೇಶದ ವೃತ್ತಾಂತಗಳು.

ಲಾಹೋರ್ ಪಟ್ಟಣದಲ್ಲಿ ಡಿಸಂಬರ್ ತಾ. ೨೫, ೨೬ ರಲ್ಲಿ ಕ್ಷತ್ರಿಯರ ಮಹಾ ಸಭೆಯು ನಡೆಯುವುದು ಬರ್ದವಾನ್ ಮಹಾರಾಜರವರು ನಾಯಕರಾಗಿ ಸಿಂಹಾಸನವನ್ನು ... ಸಭೆಯನ್ನು ಜರುಗಿಸುತ್ತಾರೆ

* * *

ಕಳೆದ ಭಾನುವಾರ ಅಮೇರಿಕದಿಂದ ಕ್ಲೀವ್‌ಲಾಂಡ್ ಎಂಬ ಹಡಗಿನಲ್ಲಿ ೬೦೦ ಮಂದಿ ಅಮೇರಿಕದವರು ದೇಶಾಟನೆಗಾಗಿ ಹೊರಟು ಬೊಂಬಾಯಿಗೆ ಬಂದಿಳಿದರು, ಇವರಲ್ಲಿ ಅನೇಕರು ಆಗ್ರಾ ಪಟ್ಟಣದಲ್ಲಿ ಮುಂದಿನ ವಾರ ನಡೆಯುವ ಕನ್‌ವೆನ್‌ಷನ್ ಎಂಬ ಕೂಟಕ್ಕೆ ಹೋದರು.

* * *

ಫರಿದ್‌ಕೋಟ ಸಂಸ್ಥಾನದಲ್ಲಿ ಕಳೆದ ವಾರ ಒಂದು ದರ್ಬಾರು ನಡೆಯಿತು ಬಿಟ್ಟಿ ಬೇಗಾರಿಯನ್ನು ಹಿಡಿಯಕೂಡದೆಂತಲೂ, ಬರೇಹಾ ಫೀಜನ್ನು ವಜಾ ಮಾಡಿದೆ ಎಂತಲೂ, ವಿಧವಾ ಪುನರ್ವಿವಾಹ ನಡೆದರೆ ಸರ್ಕಾರಕ್ಕೆ ಸಂದಾಯ ಕೊಡಬೇಕೆಂತಲೂ ಹುಕುಂ ಮಾಡಲಾಗಿದೆ

* * *

ವೈಸ್‌ರಾಯಿ ಲಾರ್ಡ್ ಮಿಂಟೋರವರು ಕಳೆದ ಶನಿವಾರ ಮಧ್ಯಾಹ್ನ ಅಹಮ್ಮದಾಬಾದಿನಲ್ಲಿ ದಯಮಾಡಿದ್ದಾಗ್ಗೆ ಆನೆರು ... ಮೆರವಣಿಗೆ ಹೋಗುತ್ತಿದ್ದ ಸಾರೋಟಿಗೆ ಸೋಟಕದ ಗುಂಡಿನಿಂದ ಯಾರೋ ಸಿಡಿಮದ್ದಿನ ಗುಂಡನ್ನು ಎಸೆದರು ಸಾರೋಟಿನ ಸಕ್ಕದಲ್ಲಿ ಸವಾರಿಮಾಡುತ್ತಿದ್ದ ... ಟೆಂಬ ಸೈನಿಕನಿಗೂ, ಅದರೊಳಗೆ ಕುಳಿತಿದ್ದ ಮೆ| ಬ್ಯಾರೋಯವರಿಗೂ ಆ ಗುಂಡು ಸವರಿಕೊಂಡು ಹೋಗಿ ನೆಲದ ಮೇಲೆ ಬಿದ್ದಿತು ... ದೈವದಿಂದ ಅದು ಒಡೆಯಲಿಲ್ಲ ವೈಸ್‌ರಾಯಿಯವರು ಇದನ್ನು ಸ್ವಲ್ಪವೂ ಮನಸ್ಸಿಗೆ ತಂದುಕೊಳ್ಳದೆ ಮುಂದಕ್ಕೆ ತೆರಳಿ, ಅಲ್ಲಿ ನಡಿಸಬೇಕಾದ ಕಾರ್ಯಗಳನ್ನು ಕ್ರಮವಾಗಿ ನೆರವೇರಿಸಿ ಬರೋಡಾ ಸಂಸ್ಥಾನವನ್ನು ಕುರಿತು ಪ್ರಯಾಣಮಾಡಿದರು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿಲ್ಲಾ ಜಾಡಮಾಲಿ ಮಾಡಿದಾಗ ಒಬ್ಬ ಬೀದಿ ಗುಡಿಸುವವನು ತನ್ನ ಗಾಡಿಯ ಹತ್ತಿರ ಸ್ಮರಣೆತಪ್ಪಿ ಬಿದ್ದಿದ್ದದ್ದು ಗೊತ್ತಾಯಿತು ಅವನ ಸುತ್ತಲೂ ಒಡೆದಿದ್ದ ಸಿಡಿಮದ್ದಿನ ಗುಂಡಿನ ಚೂರುಗಳು ಬಿದ್ದಿದ್ದವು ಮತ್ತು ಅವನ ಹತ್ತಿರ ಇನ್ನೊಂದು ಸರಿಯಾಗಿದ್ದ ಸಿಡಿಮದ್ದಿನ ಗುಂಡು ... ಅವನು ತಿಂಗಿನಕಾಯಿಯಷ್ಟು ಗಾತ್ರವಾಗಿದೆ ಪೋಲೀಸಿನವರು ಅವನನ್ನು ಆಸ್ಪತ್ರೆಗೆ ಸಾಗಿಸಿದರು ಅವನ ಕೈ ಒಡೆದುಹೋಗಿದೆ ಅವನು ಬದುಕುವುದು ಕಷ್ಟ ... ಅವನು ಹೇಳಿದ್ದು ಗೊತ್ತಾಗಲಿಲ್ಲ. ಆ ಗುಂಡು ಅಲ್ಲಿ ಬಿದ್ದಿದ್ದ ಹಾಗೂ ಅದನ್ನು ತಾನು ತೆಗೆದುಕೊಂಡನೆಂದೂ ಹೇಳಿದನು ಪೋಲೀಸಿನವರು ಇನ್ನೂ ಯಾರನ್ನೂ ದಸ್ತಗಿರಿಮಾಡಿಲ್ಲ.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ... ನಲ್ಲಿ ಕಳೆದ ವಾರ ವಿದ್ಯುಚ್ಛಕ್ತಿಯ ರೈಲ್ ಗಾಡಿಗೆ ಅಪಾಯ ಸಂಭವಿಸಿ ... ಮಂದಿ ಮೃತಪಟ್ಟರು, ೪ ಮಂದಿಗೆ ಗಾಯಗಳಾಗಿವೆ

* * *

ವಿಲಾಯಿತಿಗೆ ಸೇರಿದ ಲಾಂಕಷೈರ್ ಡಿಸ್ಟ್ರಿಕ್ಟಿನಲ್ಲಿ ಪ್ರೆಸ್ಟನ್ ಪಟ್ಟಣದ ಹತ್ತಿ ಬಟ್ಟೆಗಳ ಕಾರ್ಖಾನೆಗೆ ಬೆಂಕಿ ಬಿದ್ದು ೩ ಲಕ್ಷವೂ ೭೫ ಸಾವಿರ ರೂಪಾಯಿ ಸರಕು ಸುಟ್ಟುಹೋಯಿತು

* * *

ಅಮೇರಿಕಕ್ಕೆ ಸೇರಿದ ನ್ಯೂಫೌಂಡ್‌ಲೆಂಡ್, ಹವಾಯಿ, ಸಾಲ್ಟ್‌ಡೊಮಿಂಗೊ ಈ ಪ್ರಾಂತ್ಯಗಳಲ್ಲಿ ಭಯಂಕರವಾದ ಸುಂಟರಗಾಳಿಯೂ, ಅಪಾರವಾದ ಪ್ರವಾಹಗಳೂ ಪ್ರಾಪ್ತವಾಗಿ ಬಹಳ ನಷ್ಟಗಳು ಸಂಭವಿಸಿರುತ್ತವೆ. ಅನೇಕರು ಮೃತಪಟ್ಟರೆಂದು ತಂತಿವರ್ತಮಾನ ಬಂದಿದೆ

* * *

ಆಸ್ಟ್ರೇಲಿಯಾ ದ್ವೀಪದ ಕೆಲವು ಭಾಗಗಳಲ್ಲಿ ಸಾವಿರಾರು ಮಂದಿ ಗಣಿ ಕೂಲಿಕಾರರು ತಮ್ಮ ಯಜಮಾನರ ಮೇಲೆ ಕೋಪಿಸಿಕೊಂಡು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರೋಣದರಿಂದ ಪ್ರಜೆಗಳಿಗೆ ಕಲ್ಲಿದ್ದಲು ದೊರಕದೆ ಕಷ್ಟವಾಗಿದೆ. ಕಲ್ಲಿದ್ದಲಿನ ಕ್ರಯವು ಹೆಚ್ಚಾಗಿ ಏರಿರುವುದು

* * *

ವಿಲಾಯಿತಿಗೆ ಸೇರಿದ ಕೇಂಬ್ರಿಡ್ಜ್ ವಿದ್ಯಾನಿಲಯದಲ್ಲಿ ಜರ್ಮನ್ ಭಾಷಾ ಪಂಡಿತನನ್ನು ನೇಮಿಸುವುದಕ್ಕಾಗಿ ಮೆ| ಜಿ ಹೆನ್ರಿ ಎಂಬೊಬ್ಬ ಜರ್ಮನಿ ದೊಡ್ಡ ಮನುಷ್ಯನು ಮೂರು ಲಕ್ಷ ರೂಪಾಯಿ ಬಂದು ಕೊಟ್ಟನು ಆ ವಿದ್ಯಾನಿಲಯದವರು ಅದನ್ನು ಅಂಗೀಕರಿಸಿ ಆತನನ್ನು ವಂದಿಸಿರುತ್ತಾರೆ.

* * *

ಅಮೇರಿಕಕ್ಕೆ ಸೇರಿದ ಇಲ್ಲಿನಾಯಿಸ್ ಡಿಸ್ಟ್ರಿಕ್ಟಿನಲ್ಲಿ ಸ್ಪ್ರಿಂಗ್‌ವ್ಯಾಲಿ ಎಂಬ ಸ್ಥಳದಿಂದ ಚೆರ್ರಿ ಎಂಬ ಸ್ಥಳದಲ್ಲಿ ಭಯಂಕರವಾದ ಗಣಿಯ ಅಪಾಯವು ಆಯಿತೆಂದು ತಂತಿವರ್ತಮಾನ ಬಂದಿದೆ ಗಣಿಯಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ೬೦ ಮಂದಿ ಮಾತ್ರ ಬದುಕಿ ಬಂದರು ೨೫೦ ಮಂದಿ ಗಣಿಯೊಳಗೆ ಸಿಕ್ಕಿ ಸುಟ್ಟುಹೋದರೆಂದು ಸರ್ಕಾರದವರು ತಿಳಿಸಿರುತ್ತಾರೆ

* * *

ಗ್ಲಾಸ್ಗೋ ಪಟ್ಟಣದಲ್ಲಿ ಈಚೆಗೆ ಕಾಲವಾದ ಅಲೆಕ್ಸಾಂಡರ್ ಫ್ಲೆಮಿಂಗ್ ಎಂಬಾತನು ತನ್ನ ಆಸ್ತಿಯಲ್ಲಿ ೭೫ ಲಕ್ಷ ರೂಪಾಯಿಯನ್ನೂ, ಮಾಲ್ಪರ್ಟ್ ಪಟ್ಟಣದ ಜಾರ್ಜ್ ಗೆ ಎಂಬಾತನು ೭೫ ಸಾವಿರ ರೂಪಾಯಿಯನ್ನೂ, ವಿಲ್ಯಂ ಸ್ಟ್ರಾಕ್ ಎಂಬ ಪ್ರಭುವು ೧೫೦ ಸಾವಿರ ರೂಪಾಯಿಯನ್ನೂ ಬಡಜನರ ಮತ್ತು ವಿದ್ಯೋಪಯೋಗ ... ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದಿರುತ್ತಾರೆ

* * *

ಅಮೇರಿಕಕ್ಕೆ ಸೇರಿದ ಬೋಸ್ಟನ್ ಪಟ್ಟಣದಲ್ಲಿ ಮೆ ... ಗಿನ್ ಎಂಬೊಬ್ಬ ಐಶ್ವರ್ಯವಂತನು ಪ್ರಪಂಚದಲ್ಲಿ ಯುದ್ಧಗಳಾಗದೆ ಇವಾಳಿ ಸರ್ವೇ ಶಾಶ್ವತವಾಗಿ ನೆಲೆಗೊಂಡಿರುವಂತೆ ಏರ್ಪಾಡು ಮಾಡಬೇಕೆಂದು ಯೋಚಿಸಿ, ಈ ಕಾರ್ಯಕ್ಕೆ ತನ್ನ ಆಸ್ತಿಯಿಂದ ಪ್ರತಿ ವರುಷವೂ ಒಂದೂವರೆ ಲಕ್ಷ ರೂಪಾಯಿ ಕೊಡತಕ್ಕ ಬರುವುದಾಗಿಯೂ, ಕಡೆಯಲ್ಲಿ ತನ್ನ ಆಸ್ತಿಯ ಪೈಕಿ ೩೦ ಲಕ್ಷ ರೂಪಾಯನ್ನು ಅದಕ್ಕಾಗಿ ತೆಗೆದಿಡುವುದಾಗಿಯೂ ಮಾತು ಕೊಟ್ಟಿದಾನೆ ಈ ಹಣದಿಂದ ಸಮಾಧಾನ ಸೌಜನ್ಯಗಳನ್ನು ಬೋಧಿಸುವುದಕ್ಕೂ ಉಪನ್ಯಾಸಗಳನ್ನು ಮಾಡುವುದಕ್ಕೂ ವಿದ್ಯಾಶಾಲೆಯನ್ನೂ ಉಪನ್ಯಾಸ ಮಂದಿರಗಳನ್ನೂ ಪ್ರಾರಂಭಿಸಿ ನಡೆಸಬೇಕೆಂಬುವುದೇ ಆತನ ಅಭಿಮತವಾಗಿರುತ್ತದೆ.

ಬಹಳ ಆಶ್ಚರ್ಯಕರವಾದ ಜನನವು

[ಒಬ್ಬ ಬಾತ್ಮಿದಾರರಿಂದ.]

ಚಿಂತಾಮಣಿ ತಾಲ್ಲೂಕು ಕೈವಾರದ ಹೋಬಳಿ ಕೊತ್ತೂರು ಗ್ರಾಮದಲ್ಲಿ ನಾಯಕರ ಜಾತಿ ಚನ್ನಪ್ಪನ ಹೆಂಡತಿ ಚಿನ್ನಮ್ಮ ಎಂಬುವಳು ನವೆಂಬರು ತಾ ೯ ನೇ ಮಂಗಳವಾರ ದಿವಿ ೮ ಘಂಟೆ ಸಮಯದಲ್ಲಿ ಇಬ್ಬರು ಗಂಡು ಮಕ್ಕಳನ್ನು ಪ್ರಸ್ತವಿಸಿ ಇರುತ್ತಾಳೆ ಇದರಲ್ಲಿ ಆಶ್ಚರ್ಯವೇನೆಂದರೆ,—ಆ ಎರಡು ಮಕ್ಕಳುಗಳಿಗೂ ಬೇರೆ ಬೇರೆ ೨ ತಲೆಗಳು, ೪ ಕೈಗಳು, ೪ ಕಾಲುಗಳು ಇವೆ, ಪ್ರತಿಯೊಂದು ಮಗುವಿಗೂ ಒಂದು ಮರ್ಮಭಾಗವೂ ಇರುತ್ತದೆ. ಆದರೆ ಎರಡು ಮಕ್ಕಳಿಗೂ ಒಂದೇ ಹೊಟ್ಟೆ, ಒಂದೇ ಹೊಕ್ಕಳು ಇರತಕ್ಕದ್ದು ಎದುರು ಬದರಾಗಿ ತಲೆಗಳು ಇರುತ್ತವೆ. ಹೊಟ್ಟೆ ಮಾತ್ರ ಒಂದೇ ಇರುವುದು ಈ ಮಗುವನ್ನು ಮೊರದಲ್ಲಿ ಇಟ್ಟಿರುತ್ತಾರೆ ಇದುವರೆವಿಗೂ ಸೌಖ್ಯವಾಗಿರುತ್ತವೆ. ಹಾಲು ಎಣ್ಣೆ ಹಾಕುತ್ತಾ ಇರುತ್ತಾರೆ. ಬಾಣತಿ ಸೌಖ್ಯವಾಗಿ ಇರುತ್ತಾಳೆ ನನಗೆ ಈ ವರ್ತಮಾನ ತಾ ೧೦ ರಲ್ಲಿ ಪ್ರಾತಃಕಾಲ ತಿಳಿದು ಹೋಗಿ ನೋಡಿ ಇರುತ್ತೇನೆ ಜನರು ಗುಂಪು ಗುಂಪಾಗಿ ಬಂದು ನೋಡುತ್ತಾ ಇದಾರೆ.

ಒಂದು ವಿವಾಹವು.

ಹಾಸನದ ತಾಲ್ಲೂಕು ಹಾರೋಬಲ್ಲಿ ಕೊಪ್ಪಲಲ್ಲಿ ಮೆ|| ಉಪಾಧ್ಯಿ ಆರಳಪ್ಪ ಶೆಟ್ಟರು ಕಳೆದ ಅಕ್ಟೋಬರು ತಾ ೨೬ ರಲ್ಲಿ ತಮ್ಮ ಹೊಸ ಮನೆ ಗೃಹಪ್ರವೇಶವನ್ನು ಮಾಡಿದರು. ತಾ ೨೭ ರಲ್ಲಿ ಚಿ|| ಪುಟ್ಟಯ್ಯಶೆಟ್ಟಿಗೆ ಸೌ|| ಕ್ಷೀರಮ್ಮನನ್ನೂ, ಚಿ|| ಜೋಸೆಫ್ ಶೆಟ್ಟಿಗೆ ಚೌರಮ್ಮನನ್ನೂ ತಂದುಕೊಂಡು ಎರಡು ವಿವಾಹಗಳನ್ನು ಮಾಡಿದರು ಈ ಸಂತೋಷೋತ್ಸವಗಳು ಬಹು ಅಪೂರ್ವವಾಗಿಯೂ ಮಹಾ ಸಂಭ್ರಮದಿಂದಲೂ ನಡೆದವು ಹಾಸನದ ಡಿಸ್ಟ್ರಿಕ್ಟಿನಲ್ಲೂ ಮಂಜರಾಬಾದು ತಾಲ್ಲೂಕಿನಲ್ಲೂ ಆಲೂರು ಸಬ್ ತಾಲ್ಲೂಕಿನಲ್ಲೂ ಇತರ ಕಡೆಗಳಲ್ಲೂ ಇರುವ ನೂರಾರು ಮಂದಿ ಸರ್ಕಾರಿ ಅಧಿಕಾರಿಗಳೂ ಹತ್ತು ಸಾವಿರದ ತನಕ ಇತರ ಜನರೂ ಬಂದಿದ್ದರು ಅರಮನೆಯ ಮುಂದೆ ೫೦೦ ರೂಪಾಯಿನ ಅಂದಾಜು ಉಳ್ಳ ಭಾರೀ ಚಪ್ಪರವನ್ನೂ ಬಹು ಸುಂದರವಾದ ವಿವಾಹ ಮಂಟಪವನ್ನೂ ಕಟ್ಟಿಸಿದ್ದರು ಅನೇಕ ದೊಡ್ಡ ಮನುಷ್ಯರು ವಧೂವರರುಗಳಿಗೆ ಶ್ರೇಷ್ಠವಾದ ನಾನಾ ಬಹುಮಾನಗಳನ್ನು ಕೊಟ್ಟರು ಮೆ|| ಆರಳಪ್ಪಶೆಟ್ಟರೂ ಮೆ|| ಅಪ್ಪಾಜಪ್ಪನವರೂ ಬಂದಿದ್ದ ಜನಗಳಿಗೆಲ್ಲಾ ಅವರವರ ತಾರತಮ್ಯಾನುಸಾರವಾಗಿ ಮರ್ಯಾದೆಯನ್ನು ಮಾಡಿದ್ದಲ್ಲದೆ, ಅಯಾ ಜಾತಿಗನುಸಾರವಾಗಿ ದಿವ್ಯವಾದ ಭೋಜನವನ್ನು ಮಾಡಿಸಿದರು ವಿವಾಹವಾದ ರಾತ್ರಿ ನಡೆದ ಬಾಣ ಬಿರುಸು ಹಿರಂಗಿ ಇನ್ನೂ ಅನೇಕ ತರವಾದ ಆಟಗಳನ್ನೂ ವಿನೋದಗಳನ್ನೂ ನೋಡಿದ ಜನಗಳು ಈ ಡಿಸ್ಟ್ರಿಕ್ಟಿನಲ್ಲಿ ಇಂಥಾ ಸಂತೋಷಗಳು ಇದುವರೆಗೂ ನೋಡಿದ್ದಿಲ್ಲವೆಂದು ಹರುಷಪಡುತ್ತಿದ್ದರು ಈ ವಿವಾಹಕ್ಕೆ ೩೦ ಜೊತೆ ಓಲಗಗಳನ್ನು ಕರೆಸಿ ನೇಮಿಸಿದ್ದರು ತಾ ೨೬ ನೇ ಮಂಗಳವಾರ ಬೆಳಗಿನಿಂದ ಮರುದಿನ ರಾತ್ರಿ ೯ ಘಂಟೆ ತನಕ ಫಿರಂಗಿ ಮದ್ದು ಹಾರಿದ ಶಬ್ದವು ಜನಗಳ ಕಿವಿ ಮುಚ್ಚಿಬಿದ್ದಂತೆ ಮಾಡಿತು

ನವಂಬರ್ ೧೨, ಸೂಳಗೋಡು ವಿ. ಆರ್ ಅಮುವಲ್ಲಿ

ವಿಷಮಜ್ವರ ಸಂಬಂಧವಾದ ಮಹಾ ಸಭೆಯು

ಅದರ ನಿವಾರಣೆಗೆ ಮಾಡಬೇಕಾದ ಏರ್ಪಾಡುಗಳು

ಇಂಡಿಯಾ ದೇಶದಲ್ಲಿ ವ್ಯಾಪಿಸಿ ಮರಣ ಸಂಖ್ಯೆಯನ್ನು ಹೆಚ್ಚಿಸುತ್ತಿರುವ ವಿಷಮಶೀತಜ್ವರವನ್ನು ನಿರ್ಮೂಲ ಮಾಡಿ ಜನರ ಆರೋಗ್ಯವನ್ನು ಹೆಚ್ಚುಮಾಡುವದಕ್ಕೋಸ್ಕರ ಯಾವ ಉಪಾಯವನ್ನು ಮಾಡಬೇಕೆಂಬುವದನ್ನು ನಿರ್ಧರಿಸಿ ಹೇಳಬೇಕೆಂದು ಇಂಡಿಯಾ ಸರ್ಕಾರದವರು ಎಲ್ಲಾ ಪ್ರಾಂತ್ಯಗಳಿಂದಲೂ ಪ್ರಸಿದ್ಧರಾದ ಡಾಕ್ಟರುಗಳನ್ನು ಸಿಂಲಾ ಪಟ್ಟಣಕ್ಕೆ ಕರೆಸಿಕೊಂಡು ಕಳೆದ ತಿಂಗಳು ೧೬ ನೇ ತಾರೀಖಿನ ದಿವಸ ಅವರೊಡನೆ ಆಲೋಚನೆಮಾಡಿದರು. ಆ ಡಾಕ್ಟರ್‌ಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿ ಒಂದು ವಾರದವರೆವಿಗೂ ಈ ವಿಷಯವನ್ನು ಕುರಿತು ಚರ್ಚೆಮಾಡಿ ಬಾಧಕ ಬಾಧಕಗಳನ್ನು ಪರೀಕ್ಷಿಸಿ ಮುಂದೆ ಹೇಳುವ ಏರ್ಪಾಡುಗಳನ್ನು ಆಚರಣೆಯಲ್ಲಿ ತರಬೇಕೆಂದು ತೀರ್ಮಾನಿಸಿರುವರು ಏನೆಂದರೆ,—

(೧) ಈಗ ಆಚರಣೆಯಲ್ಲಿ ತರುವ ಏರ್ಪಾಡುಗಳಿಂದ ಎಷ್ಟರಮಟ್ಟಿಗೆ ಪ್ರಯೋಜನ ಉಂಟಾಗುವುದೆಂಬುವದನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೋಸ್ಕರ ಲೆಕ್ಕಗಳನ್ನು ಕ್ರಮವಾಗಿಡಬೇಕು (೨) ಇಂಡಿಯಾ ಸರ್ಕಾರದವರು ನೇಮಿಸುವ ಕಮಿಟಿಗೆ ಸಹಾಯಮಾಡುವ ಬಗ್ಗೆ ಒಳ ಸರ್ಕಾರದವರು ಒಂದೊಂದು ಕಮಿಟಿಯನ್ನು ಏರ್ಪಡಿಸಬೇಕು. (೩) ವರುಷಕ್ಕೊಂದುಸಾರಿ ಈ ಸರ್ಕಾರದ ಪ್ರತಿನಿಧಿಗಳೆಲ್ಲರೂ ಒಂದು ಕಡೆ ಸಭೆ ಸೇರಿ ತಮ್ಮ ತಮ್ಮ ಅನುಭವಗಳನ್ನು ತಿಳಿಸಿ ಚರ್ಚೆಮಾಡಬೇಕು (೪) ಸೊಳ್ಳೆಗಳನ್ನು ನಿರ್ಮೂಲಮಾಡಬೇಕು, ಇಲ್ಲವೇ ಕಡಮೆಯಾದರೂ ಮಾಡಬೇಕು. (೫) ಸೊಳ್ಳೆಯ ಕಡಿತವನ್ನು ತಪ್ಪಿಸಬೇಕು (೬) ಊರಿನ ಬಳಿ ಭೂಮ್ಯವಸಾಯವನ್ನು ಕಡಮೆಮಾಡಬೇಕು (೭) ಸೊಳ್ಳೆಯ ಮೊಟ್ಟೆಗಳನ್ನು ನಾಶಮಾಡುವುದಕ್ಕೋಸ್ಕರ ನೀರುನಿಲ್ಲುವ ಹಳ್ಳ ಕುಂಟೆಗಳಿಗೆ ಕೆರೋಸಿನ್ ಎಣ್ಣೆಯನ್ನು ಎರಚಬೇಕು. (೮) ಕ್ವಿನೈನ್ ಎಂಬ ಜ್ವರದ ಔಷಧವು ಎಲ್ಲರಿಗೂ ಸಿಕ್ಕುವಂತೆ ಮಾಡಬೇಕು, ಕೆಲಕೆಲವು ಕಡೆ ಮುಫತ್ತಾಗಿಯೂ ಈ ಔಷಧವನ್ನು ಕೊಡಿಸಬೇಕು (೯) ಕ್ವಿನೈನ್ ಔಷಧಿಯ ಪ್ರಯೋಜನವನ್ನು ಜನರಿಗೆ ತಿಳಿಯಪಡಿಸಲು ವಿದ್ಯಾವಂತರಾದ ದೇಶೀಯರ ಸಹಾಯವನ್ನು ಪಡೆಯಬೇಕು.

ಸೊಂಡೂರಿನಲ್ಲಿ ಸಂಸ್ಥಾನ ಸಭೆಯು

ಶ್ರೀಮಂತ ಸೊಂಡೂರು ವೆಂಕಟರಾವ್ ರಾಜರವರ ರಾಜ್ಯಭಾರ ನಿರ್ವಾಹಕರಾಗಿರುವ ಮೆ|| ಟಿ ಕೋದಂಡರಾಮನಾಯುಡುಗಾರವರು ಈ ಸಂಸ್ಥಾನದ ದಿವಾನ್ ಪದವಿಗೆ ಬಂದು ೧೨ ವರ್ಷವಾಯಿತು ಇವರು ಮಾಡಿರುವ ಮಹತ್ಕಾರ್ಯಗಳು ಯಾವತ್ತನ್ನೂ ಸೊಂಡೂರು ಸಂಸ್ಥಾನದ ನಿವಾಸಿಗಳು ಗೌರವಪುರಸ್ಸರವಾಗಿ ಅರ್ಪಿಸಿರುವ ಬಹುಮಾನ ಪತ್ರಿಕೆಯೇ ಸೂಚಿಸುವದು ಇವರು ಈ ಸಂಸ್ಥಾನದಕ್ಷೀಣ ದೆಸೆಯನ್ನು ಹೋಗಲಾಡಿಸಿ ಅಭಿವೃದ್ಧಿಸ್ಥಿತಿಗೆ ತಂದ ವಾರ್ತೆಯನ್ನು ಬ್ರಿಟಿಷ್ ಸಾಮ್ರಾಜ್ಯದ ಸಾರ್ವಭೌಮರಾದ ೭ ನೇ ಎಡ್ವರ್ಡ್ ಪ್ರಭುಗಳು ಕೇಳಿ ೧೯೦೯ ನೆ ಇಸವಿ ಜೂನ್ ತಿಂಗಳು ೨೫ ತಾರೀಖಿನಲ್ಲಿ ನಡೆದ ತಮ್ಮ ವರ್ಧಂತಿ ಸಮಾರಂಭದಲ್ಲಿ ಸಚಿವ ಪದವೀಧರರಿಗೆ "ದಿವಾನ್ ಬಹದ್ದೂರ್" ಎಂಬ ಬಿರುದನ್ನು ಸನ್ನದು ಸಹಿತವಾಗಿ ದಯಪಾಲಿಸಿದರು ಸೊಂಡೂರು ನಿವಾಸಿಗಳು ಇವರಿಗೆ ಪ್ರಾಪ್ತವಾದ ಘನವಾದ ಬಿರುದನ್ನು ಪ್ರಚುರಗೊಳಿಸಿ ಮಾನಪತ್ರಿಕೆಯನ್ನು ಅರ್ಪಿಸುವ ಉದ್ದಿಶ್ಯ ಸೊಂಡೂರಲ್ಲಿ ಶ್ರೀ ಕುಮಾರಸ್ವಾಮಿ ದರ್ಮ ಸತ್ರದ ಪುರೋಭಾಗದಲ್ಲಿ ಮಾಡಿದ ನೂತನವಾದ ಸಭಾ ಮಂಟಪದಲ್ಲಿ ತಾ ೩ ನೇ ಸಾಯಂಕಾಲ ೩ ಘಂಟೆಯಿಂದ ರಾತ್ರಿ ೧೦ ಘಂಟೆವರಿಗೂ ಸಭೆ ನಡಿಸಿದರು. ಸಭೆಗೆ ಅಧ್ಯಕ್ಷರಾಗಿ ರೇಮಂಡ್ಸ್ ಬಳ್ಳಾರಿಯ ಮೆ ಟಿ ಸೋಮಸುಂದರರಾಯರು ಈ ಸಂಸ್ಥಾನದ ರಾಜರವರ ಸಮ್ಮುಖವಾಗಿಯ ಅನೇಕ ಮಹನೀಯರಿಂದೊಡಗೂಡಿ ಘನವಾದ ಮಾನ ಪತ್ರಿಕೆಯನ್ನು ಅರ್ಪಿಸಿದರು ಅನಂತರ ಸಂಸ್ಕೃತ, ಕರ್ನಾಟಕ, ತೆಲುಗು ಭಾಷೆಗಳಿಂದ ಲೆಕ್ಚರುಗಳನ್ನು ಕೊಟ್ಟರು ಮತ್ತು ಸಂಗೀತ ವಿದ್ವಾಂಸರಿಂದಲೂ ಕುಸ್ತಿನ ವಿದ್ಯಾಚಾತುರ್ಯವೂ ಆಯಿತು. ಲಂಡನ್ ಮಿಷನ್ ಗರ್ಲ್ಸ್ ಸ್ಕೂಲು ಬಾಲಿಕೆಯರಿಗೂ ಸಂಸ್ಥಾನದ ಇಂಗ್ಲೀಷು ಸ್ಕೂಲು ಬಾಲಕರಿಗೂ ಧರ್ಮ ಛತ್ರದಲ್ಲಿ ಮಿಠಾಯಿಯನ್ನು ಹಂಚಿದರು ಪೋಲೀಸಿನವರ ಕವಾತು ಮುಂತಾದವುಗಳು ನಡೆದ ನಂತರ ಸ್ಟೆಕ್ಟಂದನ ತಾಂಬೂಲ ಪುಷ್ಪಮಾಲಾದಿಗಳನ್ನು ಸರ್ವರಿಗೂ ಸಮರ್ಪಿಸಿದರು ಬ್ಯಾಂಡು, ನರ್ತನ, ಗಾನ, ಬಾಣಬಿರುಸುಗಳಿಂದ ಅತಿ ಮನೋಹರವಾದ ವೈಭವಗಳಿಂದೊಡಗೂಡಿ ಮೆರವಣಿಗೆಯು ಪೂರ್ವಕ ದಿವಾನ್ ಬಹದ್ದೂರವರನ್ನು ಅವರ ಸ್ಥಾನಕ್ಕೆ ಕಳುಹಿಸೋಣವಾಯಿತು

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖಾ.

[ಒಬ್ಬ ಬಾತ್ಮಿದಾರರಿಂದ]

ಶನಿವಾರ, ತಾ ೧೩ —ಈ ದಿನ ಸಭಾಮಂಟಪವು ಬಹುಮಂದಿ ವನಿತೆಯರಿಂದ ತುಂಬಿ ಇತ್ತು ಮಾತೃಸ್ಥಾನೀಯರಾದ ಕೆಲ ದೊಡ್ಡವರುಗಳು ಸಹ ದಯಮಾಡಿಸಿ ಇದ್ದರು ಪದ್ಧತಿಯಂತೆ ಹಾರ್ಮೋನಿಯಂ ನುಡಿಸುವಿಕೆ, ಗಾನ, ಈಶ್ವರ ಪ್ರಾರ್ಥನೆ, ಇತ್ಯಾದಿಗಳು ಮುಗಿದ ನಂತರ ಶ್ರೀಮತಿ ಮಮಲಕ್ಷ್ಮಮ್ಮನವರು ಕರ್ಮಯೋಗ ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ಮಾಡಿದರು ಅದರ ಸಾರಾಂಶವೇನೆಂದರೆ,—

ಪ್ರಪಂಚದಲ್ಲಿ ವಿರಕ್ತಿ ಎಂಬುವದನ್ನು ಮುಖ್ಯ ವೇದಾಂತವೆಂಬುವದನ್ನೂ ಬಹು ಮಂದಿ ತಪ್ಪಾಗಿ ತಿಳಿದುಕೊಂಡಿರುತ್ತಾರೆ ಲೌಕಿಕ ವ್ಯಾಪಾರಗಳ ತ್ಯಜ್ಯವೇ ವಿರಕ್ತಿ ಎಂದೂ ವೇದಾಂತಗಳ ತಾತ್ಪರ್ಯವೆಂದೂ ಎಣಿಸಿರುವರು ಮತ್ತು ಕಲಿಯುಗದಲ್ಲಿ ಬ್ರಹ್ಮನು ಬರೆದಂತೆ ಆಗುತ್ತದೆ ಎಂಬ ಅಭಿಪ್ರಾಯವುಳ್ಳ ವಿದ್ಯಾಪುರುಷರು ಸಹಾ ಉಂಟು ಆದರೆ ಯೋಚಿಸಿ ನೋಡುವಲ್ಲಿ ನಮ್ಮ ಪೂರ್ವಾಚಾರ್ಯರ ತಾತ್ಪರ್ಯಗಳು ಹಾಗಿಲ್ಲ ಭಾರತಿ ರಾಮಾಯಣ ಭಾಗವತವನ್ನು ಅಪೇಕ್ಷಿಸುವ ಪಕ್ಷಕ್ಕೆ ಇಹಸಂಬಂಧವಾದ ವ್ಯವಹಾರಗಳಲ್ಲಿ ತೊಡಗಿ, ಕೊಡಬೇಕಾದ ಪರಿಶ್ರಮಗತಿಯೇ ಇಲ್ಲ ಇಹಸಂಬಂಧವಾದ ಕರ್ಮಗಳನ್ನು ಬಿಡತಕ್ಕದ್ದು ಹಡಿಕನ ಇಂಥಾ ಮನುಷ್ಯನಿಗೆ ಪುರುಷಾರ್ಥ ದೊರೆಯಲಾರದು ಲೌಕಿಕ ವ್ಯಾಪಾರಗಳಲ್ಲಿ ತೊಡಗದೆ ಹೊಂದಿದವನು ಈರ ಸಂಬಂಧವಾದ ವ್ಯಾಪಾರಗಳಲ್ಲಿ ಸಹ ತೊಡಗದೆ ಹೋಗುವನು ಇದೇ ಕರ್ಮಯೋಗವೆಂಬುವದು ಸರ್ವೇಶ್ವರನು ತನ್ನಿಂದ ನಡೆದ ಸಮಗ್ರಗಳಿಗೆ ಬುದ್ಧಿ ಸ್ವಾತಂತ್ರ್ಯಗಳನ್ನು ದಯಪಾಲಿಸಿರುವದರಿಂದ ಮನುಷ್ಯನು ಸುಕರ್ಮಗಳನ್ನು ಮಾಡಿ ಇಹಪರ ಉಭಯಪ್ರಯೋಜನವನ್ನು ಅವಲಂಬಿಸಿ ಆಚರಿಸುವದನ್ನು ತಪ್ಪದೆ ನಮ್ಮ ಗುರುಪ್ರವರ್ತಕರಾಗಬೇಕಾಗಿರುತ್ತದೆ ಕರ್ಮಯೋಗವೆಂಬುವದು ಇದೇ ಕೃಷ್ಣನುಪದೇಶಗೆ ಬ್ರಾಹ್ಮಣದಿ ಒಳಿಯಲ್ಲಿ ಬೈರಾಗಿಗಳಾಗಿ ಇರತಕ್ಕದ್ದು ಕರ್ಮಯೋಗವಲ್ಲ ಈ ಅಭಿಪ್ರಾಯಗಳೇ ಮೇಲೆ ಸೂಚಿಸಿದ ಉಪನ್ಯಾಸದ ಸಾರವಾಗಿದೆ

ಈ ಉಪನ್ಯಾಸಾನಂತರ "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಚುರವಾಗಿದ್ದ ಆರೋಗ್ಯ ಪ್ರದರ್ಶನದ ವಿಷಯವು ಓದಲ್ಪಟ್ಟಿತು, ವರ್ತಮಾನ ಪತ್ರಿಕೆಗಳನ್ನು ಓದುವುದರಿಂದ ಉಂಟಾಗತಕ್ಕ ಅನೇಕ ಪ್ರಯೋಜನಗಳನ್ನು ಕಾರ್ಯದರ್ಶಿಯವರು ಸೂಕ್ಷ್ಮವಾಗಿ ಎಲ್ಲರಿಗೂ ತಿಳಿಯಪಡಿಸಿದ್ದಲ್ಲದೆ ಕಳೆದ ವಾರದ ಉಪನ್ಯಾಸವು ಸಹ ಓದಲ್ಪಟ್ಟಿತು ಕಾರ್ಯದರ್ಶಿಯವರು ಇಂಗ್ಲೆಂಡ್ ದೇಶದಿಂದ ಒಬ್ಬ ಧರ್ಮೋಪದೇಶಕರು ಇಲ್ಲಿಗೆ ೧೮ ಅಥವಾ ೧೯ ನೇ ತಾರೀಖಿನಲ್ಲಿ ಬರುವವರಾಗಿರುತ್ತಾರೆಂತಲೂ, ಅವರು ನಮ್ಮ ಆರ್ಯ ವನಿತಾ ಶಿರೋಮಣಿಗಳನ್ನು ನೋಡಲು ಅಪೇಕ್ಷೆಯುಳ್ಳವರಾಗಿರುತ್ತಾರೆಂತಲೂ, ಅವರು ಮಂದಿರಕ್ಕೆ ಬರಬಹುದೆಂತಲೂ, ಹಾಗೆ ಬಂದರೆ ಮೆಂಬರುಗಳೆಲ್ಲರೂ ಅವರಿಗೆ ಸುಸ್ವಾಗತವನ್ನು ಬಯಸಲು ದಯವಿಟ್ಟು ಬರಬೇಕಾಗಿರುತ್ತದೆಂತಲೂ ತಿಳಿಸಿದರು

ಬರುವ ಮೀಟಿಂಗ್ ೨೦ ನೇ ತಾ ಶನಿವಾರ ಕ್ರಮವನ್ನನುಸರಿಸಿ ನಡೆಸಲ್ಪಡುವುದು ಮೆಂಬರುಗಳು ಮತ್ತು ಹಿತೈಷಿಗಳೆಲ್ಲರೂ ಅವಶ್ಯಕ ಬರಬೇಕಾಗಿ ಸೂಚಿಸಲ್ಪಟ್ಟಿರುತ್ತೆ

ಸಿಲೋನಿನಲ್ಲಿ ಗ್ರಾಮಪಂಚಾಯಿತರ ಅಧಿಕಾರಗಳು.

ಸಿಲೋನಿನಲ್ಲಿ ಗ್ರಾಮಪಂಚಾಯಿತಿಯು ೧೮೮೯ನೇ ಇಸವಿಯಲ್ಲಿ ಏರ್ಪಟ್ಟು ಇದುವರಿಗೂ ನಡೆದುಬರುತ್ತಿದೆ ಇದಕ್ಕೆ ಅನೇಕ ಅಧಿಕಾರಗಳು ಮತ್ತು ಸ್ವಾತಂತ್ರ್ಯಗಳನ್ನು ವಹಿಸಿರುತ್ತಾರೆ ಇವುಗಳಲ್ಲಿ ಮುಖ್ಯವಾದವುಗಳ್ಯಾವವೆಂದರೆ,—

(೧) ಗ್ರಾಮಾಂತರಗಳಲ್ಲಿರುವ ಕಾಲುದಾರಿ, ಸೇತುವೆ, ಮಂಟಪ, ಭಾವಿ, ಊಟೆ, ಸ್ನಾನಕ್ಕೆ ಅನುಕೂಲವಾದ ಕೊಳ, ಹಳ್ಳ, ದೋಣಿ, ಅಂಗಡಿ ಸಾಲು, ಕಸಾಯಿ ಅಂಗಡಿ, ಸ್ಮಶಾನ, ನದಿ, ಮೊದಲಾದವುಗಳ ಮೇಲ್ವಿಚಾರಣೆ (೨) ಬಾಲಕ ಬಾಲಿಕೆಯರ ಪಾಠಶಾಲೆಗಳನ್ನು ಕಟ್ಟಿಸುವುದು ಮತ್ತು ಅವುಗಳ ರಿಪೇರಿ ವಗೈರೆ ವಿಚಾರ ಹುಡುಗರು ಸರಿಯಾಗಿ ಪಾಠಶಾಲೆಗೆ ಬರುತ್ತಾರೆಯೇ ಎಂಬ ವಿಚಾರದಲ್ಲಿ ತನಿಖೆ (೩) ಮಾಮೂಲು ಅನುಸರಿಸಿ ಗ್ರಾಮ ಪಾಸ್ಪೋರ್ಟ್ (ಮಾನು ಹಿಡಿಯುವುದು) ಗುತ್ತಿಗೆಯ ಏರ್ಪಾಡು (೪) ಕೆರೆ, ಗೋಮಾಳ ಮತ್ತು ಸರ್ಕಾರಿ ಕಟ್ಟಡಗಳ ಉಸ್ತುವಾರಿ (೫) ಆಸ್ಪತ್ರೆಗಳ ಅಭಿವೃದ್ಧಿ ಮತ್ತು ಅವುಗಳಿಗೆ ರೋಗಗಳು ಬಾರದಂತೆ ತಡೆಯುವದು (೬) ಬೀಡುಗಳು ಮತ್ತು ಬೇಲಿಗಳ ಉಸ್ತುವಾರಿ (೭) ರಸ್ತೆ ಪಕ್ಕಗಳಲ್ಲಿ ಗಲೀಜು ಮಾಡುವುದನ್ನು ತಪ್ಪಿಸುವುದು (೮) ಜನಗಳನ್ನು ಒಬ್ಬರನ್ನೊಬ್ಬರು ಪೈದಾಶುವುದನ್ನು ತಡೆಯುವುದು (೯) ಸೇಂದಿ ಇಳಿಸುವುದಕ್ಕೆ ಉಪಯೋಗಿಸುವ ಗುಡಿಗಳು ಮುಂತಾದವುಗಳು ಸರಿಯಾಗಿವೆಯೇ ಎಂಬ ವಿಚಾರದಲ್ಲಿ ತನಿಖೆ (೧೦) ಕಳ್ಳತನದಿಂದ ಬಿಲ್ಲು (ಅಂಬು), ತುಪಾಕಿ, ಬರ್ಚಿಗಳನ್ನು ಇಟ್ಟುಕೊಂಡಿರುವುದನ್ನು ಕಂಡು ಹಿಡಿದು ದಂಡಿಸುವುದು (೧೧) ಜೂಜಾಟ, ಕೋಳಿ ಕಾಳಗ, ಜನಗಳು ತಿರುಗಾಡುವ ರಸ್ತೆಗಳಲ್ಲಿ ಗಾಡಿಗಳ ಜೂಜು ಬಿಡೋಣ, ಇವುಗಳ ನಿರೋಧ (೧೨) ಗ್ರಾಮಪಂಚಾಯಿತರು ಸಭೆ ಸೇರುವ ಕಟ್ಟಡದ ರಿಪೇರಿ ಮತ್ತು ಮೇಲ್ವಿಚಾರಣೆ (೧೩) ಸುಂಕದ ಕಟ್ಟೆಗಳ ಸ್ಥಾಪನೆ ಮತ್ತು ಅಲ್ಲಿನ ವಸೂಲಿ (೧೪) ೧೨ ಅಡಿಗಿಂತ ಜಾಸ್ತಿ ಅಗಲವಿಲ್ಲದಿರುವ ಗ್ರಾಮರಸ್ತೆಗಳ ದುರಸ್ತು. ಇದಕ್ಕಾಗಿ ನಿರ್ಬಂಧಪಡಿಸಿ ಗ್ರಾಮಸ್ಥರಿಂದ ಹಣವನ್ನೇ ಆಗಲಿ ಅಥವ ಕೆಲಸವನ್ನೇ ಆಗಲಿ ತೆಗೆದುಕೊಳ್ಳಬಾರದು, ಆದರೆ ಒಂದು ವರುಷದಲ್ಲಿ ಬೇಕಾದಾಗಲೆಲ್ಲಾ ೧೦ ದಿನದ ಕೆಲಸವನ್ನು ಗ್ರಾಮಸ್ಥರು ಮಾಡಬೇಕೆಂದು ಹೇಳಬಹುದು (೧೫) ಗ್ರಾಮದಲ್ಲಿನ ಕಾಲ್ವೆಗಳನ್ನು ಅಬಾಧಿತಸ್ಥಿತಿಯಲ್ಲಿಟ್ಟುಕೊಳ್ಳೋಣ (೧೬) ೧, ೨, ೧೨, ೧೪, ೧೫ನೇ ಕಲಂಗಳಲ್ಲಿ ಕಂಡ ಕೆಲಸಗಳನ್ನು ಇಂಥಿಂಥಾವರು ಇಷ್ಟಿಷ್ಟು ದಿನಗಳು ನೋಡಿಕೊಳ್ಳಬೇಕೆಂದು ಗೊತ್ತುಮಾಡಿ, ಆ ರೀತಿ ನಡೆಸಿಕೊಳ್ಳಲು ನಿಬಂಧಪಡಿಸೋಣ ಆದರೆ ವರುಷದಲ್ಲಿ ೧೦ ದಿನಕ್ಕಿಂತ ಜಾಸ್ತಿಯಾಗಿ ಕೆಲಸ ಮಾಡಬೇಕೆಂದು ನಿರ್ಬಂಧಿಸಕೂಡದು (೧೭) ಸೇಂದಿ, ಸಾರಾಯಿ ಮೊದಲಾದ ನಿಷಾ ಪದಾರ್ಥಗಳನ್ನು ಯಾವ ಕಾರಣದಿಂದಲೇ ಆಗಲಿ ಹೆಂಗಸರಿಗೆ ಮಾರಕೂಡದೆಂದು ನಿರೋಧಿಸೋಣ. (೧೮) ವ್ಯವಸಾಯ, ಕೆರೆಗಳ ದುರಸ್ತು, ಗ್ರಾಮಕಾವಲು, ಈ ವಿಷಯಗಳಲ್ಲಿ ಮಾಮೂಲು ಅನುಸರಿಸಿ ಕೆಲಸ ನಡೆಸುವುದು (೧೯) ಗ್ರಾಮಸಂಬಂಧವಾದ ಎಲ್ಲಾ ವಿಷಯಗಳಲ್ಲೂ ವಿಚಾರಣೆ

ಉಪ್ಪಿನಲ್ಲಿ ಬಹುಮಟ್ಟಿಗೆ ಕಾಲರಾ ರೋಗವನ್ನು ತಡೆಯತಕ್ಕ ಗುಣವುಂಟು. ಈ ರೋಗ ಕಾಣಿಸಿಕೊಂಡ ಸಂದರ್ಭಗಳಲ್ಲಿ, ಉಪ್ಪನ್ನು ಊಟದಲ್ಲಿ ವಿಶೇಷವಾಗಿ ಉಪಯೋಗಿಸಿ ಪರೀಕ್ಷೆಮಾಡಿ ನೋಡಿದ್ದರಲ್ಲಿ ಇದು ಬಹಳ ಪ್ರಯೋಜನಕರವೆಂದು ಕಂಡುಬಂದಿದೆ ಇದನ್ನು ಅಡಿಗೆಯಲ್ಲಿ ಸಾಮಾನ್ಯವಾಗಿ ಬಳಸುವುದಕ್ಕಿಂತಲೂ ದ್ವಿಗುಣವಾಗಿ ಉಪಯೋಗಿಸುವವರಿಗೆ ರೋಗಹಿಡಿಯುವ ಸಂಭವ ಕಡಮೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಒತ್ತಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್

[illegible] ಒಕ್ಕಲಿಗ (ಸಾಮಾಜಿಕ) [illegible]

ಅಯ್ಯಾ,

ತಾ ೨೦ ನೆಯ "ಒಕ್ಕಲಿಗರ ಪತ್ರಿಕೆ" ಯನ್ನು ನೋಡಲು ತುಂಬಾ ವ್ಯಸನವನ್ನುಂಟುಮಾಡಿ [illegible] ಸಹಾಯಕರೂ ಆಗಿದ್ದ ಮೆ ಟಿ [illegible]ನವರು ಮರಣ ಹೊಂದಿದ್ದರಿಂದ ಒಕ್ಕಲಿಗರ ಮಂಡಲಿಗೆ ಅತ್ಯಂತ ದುಃಖವೂ ವಿಶೇಷ ನಷ್ಟವೂ ಉಂಟಾಗಿದೆ ಒಕ್ಕಲಿಗರ ಸಂಘಕ್ಕೆ ಮೂಲ ಪುರುಷರಾಗಿಯೂ ಸ್ವಕುಲಾಭಿವೃದ್ಧಿಗೆ ಬದ್ಧಕಂಕಣರಾಗಿಯೂ [illegible] ಅಭ್ಯುದಯಕ್ಕೆ ತಮ್ಮ ತನುಮನ ಧನವನ್ನು ಧಾರಾಳವಾಗಿ ವಿನಿಯೋಗಿಸಿ [illegible]ರಾಗಿ ಒಕ್ಕಲಿಗರ ಉದ್ಧಾರಕನೆಂಬ ಹೆಸರನ್ನು ಪಡೆದಿದ್ದ ಇಂಥಾ ಮಹನೀಯರನ್ನು ಕಳೆದುಕೊಂಡದ್ದು ನಮ್ಮಗಳ ದೌರ್ಭಾಗ್ಯವೇ ಸರಿ ಇಂಥ ಸಾಹಸಿಗಳೂ ಜನೋಪಕಾರಿಗಳೂ ಇನ್ನು ಲಭಿಸುವರೇ? ಬಹುಕಾಲದಿಂದ ಹಿಂದೆ ಬಿದ್ದಿರುವ ನಮ್ಮ ಮಂಡಲಿಯನ್ನು ಏರ್ಪಡಿಸಿದ ಉದ್ಧಾರಕನಾದ ಮೆ ಟಿ [illegible]ನವರು ಅಕಾಲ ಮರಣಕ್ಕೆ ಗುರಿಯಾದ್ದರಿಂದ ಅವರ ರಕ್ತಸಂಬಂಧಿಗಳಿಗೂ ನಮ್ಮ ಸಂಘಕ್ಕೂ ನ್ಯೂನತೆಯನ್ನುಂಟುಮಾಡಿತು ಇಂಥ ಬೆಂಗಳೂರಿನಲ್ಲಿ ಅಗ್ರಗಣ್ಯರ ಮರಣವೂ, ಮೈಸೂರಿನಲ್ಲಿ ಸಾಹುಕಾರ್ ಮರಿಯಣ್ಣನವರ ಮರಣವೂ, ತೀರ್ಥಹಳ್ಳಿ ತಾಲ್ಲೂಕು ನಾಲೂರಿನಲ್ಲಿ ಮೊ ರಾ ಗಿರಿಯಪ್ಪಗೌಡರ ಮರಣವೂ ನಮ್ಮಗಳಿಗೆ ಉಂಟುಮಾಡಿರುವ ಅನುತಾಪವನ್ನು ಅವರ ರಕ್ತಸಂಬಂಧಿಗಳಿಗೂ ಸಂಘದ ಸೆಕ್ರೆಟರಿಯವರಿಗೂ ತಿಳಿಸಬೇಕಾಗಿ ನನ್ನ ಪ್ರಾರ್ಥನೆ

ಕವಲೆ ದುರ್ಗದ ಕೆ ರಂಗಪ್ಪನಾಯ್ಕ

ವೇಶ್ಯಾ ನರ್ತನ ವಿಷಯ.

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕ್ ಹಮ್ಮಿಚಿಟ್ಟಿ ಗ್ರಾಮಕ್ಕೆ ಸೇರಿದ ಹುಮ್ಚ ಎಂಬಲ್ಲಿ ಒಂದು ಜೈನಮಠವಿರುತ್ತೆ, ಅಲ್ಲಿ ಒಬ್ಬ ಗುರುಗಳೂ ಇದ್ದಾರೆ. ಕಳೆದ ವಿಜಯ ದಶಮಿಯ ದಿನ ಗುರುಗಳ ಮೆರವಣಿಗೆಯು ಬನ್ನೀ ಮಂಟಪಕ್ಕೆ ಚಿತ್ತೈಸಿತ್ತು ಮಠದ ಆನೆಯು ಬಂದು ಬಹು ಚಮತ್ಕಾರವಾಗಿ ತಾನು ಕಲಿತ ಸಾಧನೆಗಳನ್ನು ತೋರಿಸಿ ಪ್ರಜಾ ಸಮೂಹವನ್ನು ಸಂತೋಷಗೊಳಿಸುತ್ತಿತ್ತು ತರುವಾಯ ಗುರುಗಳ ಎದುರಿಗೆ ನಿಂತು, ವೇಶ್ಯಸ್ತ್ರೀಯರು ನರ್ತನ ಮಾಡುತ್ತಿದ್ದರು ಸರ್ಕಾರದವರು ದೇವಸ್ಥಾನಗಳ ಸೂಳೆಯರ ಕುಣಿತಾದಿಗಳನ್ನು ನಿಲ್ಲಿಸಿದರೆಂದು ಕೇಳಿ ಎಲ್ಲರೂ ಸಂತೋಷಪಡುತ್ತಾರೆ—ಆದರೆ ಸರ್ಕಾರದ ಸಹಾಯವನ್ನು ಪಡೆಯುವ ಮಠಗಳಲ್ಲಿ ಆ ಕ್ರಮವು ಜಾರಿಗೆ ಬಂದಿದೆಯೋ ಇಲ್ಲವೋ? ಇನ್ನು ಮೇಲೆ ಸಂಪೂರ್ಣ ಪರಿಷ್ಕಾರವಾದೀತು

ಪ್ರತಿ ಸಂವತ್ಸರವೂ ಹುಮ್ಚದ ಮಠದಿಂದ ಅಂಥಾ ಸ್ತ್ರೀಯರಿಗೆ ಹಣವು ಪಾವತಿಯಾಗುತ್ತದೆಂದು ಜನರು ಮಾತಾಡುತ್ತಿದ್ದರು ಇಂಥಾ ಸ್ತ್ರೀಯರು ವರುಷ ವರುಷವೂ ಅಂಥಾ ಸ್ಥಳಗಳಿಗೆ ಹೋಗಿ ತಮ್ಮ ಕೆಟ್ಟ ಚಿನ್ಹೆಗಳನ್ನು ತೋರಿಸುವುದರಿಂದ ಅನೇಕ ಜನರು ಕೆಡುವುದಕ್ಕೆ ಮಾರ್ಗವಾಗಿದೆ ಆ ಗುರುಗಳಿಗೆ ಈ ಕೆಡಕಾದ ಸಂಗತಿಗಳೆಲ್ಲಾ ತಿಳಿದಿದ್ದರೂ ಎಲ್ಲವನ್ನೂ ಅನುಮೋದಿಸುತ್ತಿದ್ದರು

ಆದರೆ ಶ್ರೀಮಾನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ಹೊಸ ದಿವಾನ್ ಸಾಹೇಬರವರ ಉದ್ದೇಶಗಳಿಗೆ ಕೇವಲ ವಿರೋಧವಾದದ್ದೆಂದೂ ನಾವು ನಂಬು

ತ್ತಿವೆ ಆದ್ದರಿಂದ ಗವರ್ನಮೆಂಟಿನವರು ಸದರಿ ಮಠಕ್ಕೆ ದ್ರವ್ಯಸಹಾಯ ಮಾಡುತ್ತಿದ್ದರೆ ಈ ಸಂದರ್ಭದಲ್ಲಿ ಅವರು ಯೋಚನೆ ಮಾಡತಕ್ಕದ್ದಾಗಿದೆ ಮತ್ತು ಇದು ಅಗತ್ಯವಾಗಿದೆ

ಗುರುಗಳು ಇಂಥಾ ಕಾರ್ಯವನ್ನು ನಿಲ್ಲಿಸುವ ತನಕ ಇಸ್ಮರೀ ಮೊದಲು ಮಾಡಿ ಸದರಿ ಮಠಕ್ಕೆ ಸಲ್ಲಿಸುವ ದ್ರವ್ಯಸಹಾಯವನ್ನು ನಿಲ್ಲಿಸಿದರೆ ಒಳ್ಳೇದೆಂದು ಕೇಳಿಕೊಳ್ಳುತ್ತೇವೆ

ಪ್ರತ್ಯಕ್ಷದರ್ಶಿ

ಸಹಾಯಕ ಪಾಠಶಾಲೆಗಳ ವಿಚಾರವು

ಅಯ್ಯಾ,

ನಮ್ಮ ಮೈಸೂರು ಸೀಮೆಯ ಸಹಾಯಕ ಪಾಠಶಾಲೆಗಳಿಗೆ ಸಹಾಯ ದ್ರವ್ಯವನ್ನು ಹೆಚ್ಚಿಸಬೇಕೆಂದು ಈ ವರುಷದ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಮೆಂಬರು ಕೇಳಿಕೊಂಡದ್ದಕ್ಕೆ ನಮ್ಮ ದಿವಾನ್ ಸಾಹೇಬರವರು—ಸಹಾಯದ್ರವ್ಯವನ್ನು ವಿಮರ್ಶೆ ಮಾಡುವ ಆಲೋಚನೆಯಲ್ಲಿದೇವೆ ಇದು ಇತ್ಯರ್ಥವಾದ ಮೇಲೆ ಅನುಷ್ಠಾನಕ್ಕೆ ತರುವ ಪೂರ್ವದಲ್ಲೇ ಎಲ್ಲಾ ಮುಖ್ಯೋಪಾಧ್ಯಾಯರುಗಳ ಅಭಿಪ್ರಾಯ ತೆಗೆದುಕೊಳ್ಳಲ್ಪಡುವದು ಎಂಬದಾಗಿ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ ಆದರೆ ನಾವುಗಳು ಗೌರ್ನಮೆಂಟ್ ಸ್ಕೂಲ್ ಉಪಾಧ್ಯಾಯರಿಗೆ ೧೦ ರೂಪಾಯಿ ಸಂಬಳಕ್ಕಾದಾಗ್ಯೂ ನಮ್ಮ ಪಾಠಶಾಲಾ ಕರ್ತರುಗಳನ್ನು ನಮಗೂ ಅದೇ ರೀತಿ ಸಂಬಳ ಕೊಡತಕ್ಕದ್ದಾಗಿ ಕೇಳಿಕೊಂಡದ್ದಕ್ಕೆ ಗೌರ್ನಮೆಂಟಿನವರು ಗ್ರಾಂಟು ಇಟ್ಟುಮಾಡಿದರೆ ನಮಗೂ ಅದೇ ರೀತಿ ಬರಿಗೆ ವೇತನವನ್ನು ಕೊಡುತ್ತೇವೆ ಎಂಬದಾಗಿ ಅಭಯವನ್ನು ಕೊಟ್ಟದ್ದರಿಂದ ಈಗ ಒಂದು ವರುಷದ ಮೇಲೆ ನಿರೀಕ್ಷಿತವಾಗಿ ನಮ್ಮ ಗೌರ್ನಮೆಂಟಿನವರು ಸಹಾಯವನ್ನೇ ಮಾಡುವರೆಂದು ನಂಬಿದ್ದೆವು ಏಕೆಂದರೆ ನಮ್ಮ ಸರ್ಕಾರದವರು ಸರ್ಕಾರಿ ಸ್ಕೂಲಿನ ಪ್ರತಿ ಪ್ರಯೋಜನವನ್ನು ಹೊಂದುತ್ತಾರೋ ಅದೇ ಪ್ರಯೋಜನವನ್ನೇ ಖಾಸಗಿ ಸ್ಕೂಲಿನಿಂದಲೂ ಹೊಂದುತ್ತಾರೆ ಈ ಖಾಸಗಿ ಸ್ಕೂಲಿನಲ್ಲಿ ಓದುವವರೂ ಅವರ ಪ್ರಜೆಗಳೇ ಆ ಉಪಾಧ್ಯಾಯರೂ ಅವರ ಪ್ರಜೆಗಳೇ ಹೊಟ್ಟೆಬಟ್ಟೆ ಮೊದಲಾದ ತಾಪತ್ರಯಗಳು ಇವರಿಗೂ ಉಂಟು ಇವರೂ ಸಹ ಸ್ಕೂಲಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರೇ ಇರುತ್ತಾರೆ ಹೀಗಿರಲು ಎಲ್ಲಾ ಉಪಾಧ್ಯಾಯರನ್ನೂ ಸಮಾನರೆಂದು ಭಾವಿಸಿ ಇವರ ಅನುಕೂಲಕ್ಕೆ ತರುವರೆಂದು ನಂಬಿದ್ದೆವು ವಿಚಾರಿಸಲಾಗಿ ಆದರೆ ಆರಂಭದಿಂದ ಸಾಗುವದೇನೋ ಎಂಬ ಸಂಶಯಕ್ಕೆ ಕಾರಣವಾಗಿರುವುದು ಆದರೆ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಇಟ್ಟರೆ ಇದರ ಪರಿಣಾಮವನ್ನು ಆ ದೇವರೇ ಬಲ್ಲ ಇದನ್ನು ನಮ್ಮ ಸರ್ಕಾರದವರು ಬಲ್ಲವರು ಆದುದರಿಂದ ಈ ವಿಷಯಕ್ಕೆ ಆದಷ್ಟು ಬೇಗನೆ ಸಹಾಯ ಮಾಡುವ ಕಾಲ ಬಹಳ ಸಮೀಪದಲ್ಲಿ ಬರಬೇಕಾಗಿದೆ

ನವೆಂಬರ್, ೧೧, ಶಿವಾರಿಪುರ — ಸಹಾಯಕ ಪಾಠಶಾಲೋಪಾಧ್ಯಾಯ

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ

ಪ್ರಶ್ನೋತ್ತರ ನಿರ್ಣಯಗಳು

ವಿದ್ಯಾ ವಿಷಯಗಳು

ಪ್ರಾರ್ಥನೆ —ಗವರ್ನಮೆಂಟ್ ಸೇವಿಂಗ್ ಬ್ಯಾಂಕಿನಲ್ಲಿ ಒಂದು ಸಾವಿರ ರೂಪಾಯಿಗಳೊಳಗೆ ಇಡುವ ಹಣವನ್ನು ಪಡೆಯಬೇಕಾದರೆ ವಾರ್ಡ್ ಸರ್ಟಿಫಿಕೇಟು ಆವಶ್ಯಕವಿಲ್ಲವೆಂದು ಹಾಗೆ ಅದಕ್ಕಿಂತ ಹೆಚ್ಚಾಗಿದ್ದರೆ ಸರ್ಟಿಫಿಕೇಟು ಹಾಜರ್ ಮಾಡತಕ್ಕ ರೀತಿ ಮೊದಲೇ ಇದೆ ಅದರ ಹಣಕ್ಕೆ ವಾರಸು ದಾರರು ಇಲ್ಲದಿರುವ ಪಕ್ಷದಲ್ಲಿ ವಾರಸುಗಳು ಎಷ್ಟೇ ಆಗಿದ್ದರೂ ಸರ್ಟಿಫಿಕೇಟ್ ಅಪೇಕ್ಷಿಸದೆ ವಾಪಸು ಮಾಡಿಸಬೇಕು

ಉತ್ತರ —ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ರೂಲ್ಸುಗಳನ್ನು ಬದಲಾವಣೆ ಮಾಡಬೇಕೆಂದು ಆ ಬ್ಯಾಂಕು ಇಟ್ಟುಕೊಂಡಿರುವ ವಿಷಯವನ್ನು ಗಮನಕ್ಕೆ ತರುತ್ತೇವೆ ಅವಶ್ಯವಾದ ಬದಲಾವಣೆ ಮಾಡುತ್ತೇವೆ

ಪ್ರಾರ್ಥನೆ —ಸರ್ಕಾರಿ ನೌಕರ ಮಾನೇಜರಿಗಾಗಿ ಗವರ್ನಮೆಂಟಿನವರು ಏರ್ಪಡಿಸಿರುವ ಆರ್ಗನೈಸ್ (ಅಂದರೆ ಸ್ಟೇಟ್ ಲೈಫ್ ಇನ್ಶೂರೆನ್ಸ್ ಫಂಡ್) ನಲ್ಲಿ ಈಗ ಸುಮಾರು ಲಕ್ಷ ರೂಪಾಯಿ ಕೂಡಿರುವಂತೆ ತಿಳಿಯುತ್ತದೆ ನೌಕರರು ಮಾಹೆಯಾನ ಕೊಡುವ ಭೀಮಾ ಹಣವನ್ನು ಈ ಫಂಡಿನಲ್ಲಿ ಕೂಡಿಸಿಟ್ಟು ಅದನ್ನೇ ಸರ್ಕಾರದವರು ಅವರಿಗೆ ಕಡೆಯಲ್ಲಿ ವಾಪಸು ಮಾಡುತ್ತಾರಲ್ಲದೆ ಇನ್ಶೂರೆನ್ಸ್ ಕಂಪನಿಗಳಲ್ಲಿ ಕೊಡುವಂತೆ ಲಾಭವನ್ನೂ ಕೊಡುವುದಿಲ್ಲ ಆ ಹಣದ ಬಡ್ಡಿಯನ್ನಾದರೂ ಹಣ ಕೊಡುವ ನೌಕರರಿಗೆ ಕೊಡಬೇಕು ಇಲ್ಲವೇ ಅದನ್ನು ಸಾಲದ ಫಂಡಿಗೆ ಕೂಡಿಸುತ್ತಾ ಬರಬೇಕು

ಉತ್ತರ —ಈ ಫಂಡಿನ ಸ್ಥಿತಿಗತಿಯನ್ನು ಚನ್ನಾಗಿ ಪರಿಶೋಧನೆ ಮಾಡಿಸುತ್ತೇವೆ ಅಜಮಾಯಿಷಿ ಮಾಡಿದ ಅಧಿಕಾರಿಗಳು ಈ ಏರ್ಪಾಡಿನಲ್ಲಿ ಮೋಸವಿಲ್ಲವೆಂದೂ, ಸರ್ಕಾರಕ್ಕೆ ಇದರಿಂದ ನಷ್ಟವಿಲ್ಲವೆಂದೂ ಹೇಳುತ್ತಾರೆಂದೇ ಹೊರತು ಆದಾಯವನ್ನು ಹಂಚುವುದಕ್ಕೆ ಅವಕಾಶವಿದೆ ಎಂದು ತಿಳಿಸಿರುವುದಿಲ್ಲ ಇದುವರೆಗೆ ಈ ಫಂಡಿನ ಜಮಾಖರ್ಚನ್ನು ಯೋಗ್ಯರಾದ ಲೆಕ್ಕ ಶಾಸ್ತ್ರಜ್ಞರು ಪರೀಕ್ಷಿಸಿ ಅಜಮಾಯಿಷಿ ಮಾಡಿ ಇಲ್ಲ ಆದ್ದರಿಂದ ಇನ್ನೊಂದು ಸಲ ಪರೀಕ್ಷೆ ಮಾಡಿಸಬೇಕೆಂದಿದೇವೆ

ಪ್ರಾರ್ಥನೆ —ಸರ್ಕಾರದಿಂದ ಸಹಾಯ ದ್ರವ್ಯವನ್ನು (ಗ್ರಾಂಟನ್ನು) ಪಡೆಯುವ ಸ್ಕೂಲ್ ಮಾಸ್ತರುಗಳನ್ನೂ ಗವರ್ನಮೆಂಟ್ ಭೀಮಾ ಫಂಡಿಗೆ ಸೇರಿಸಿಕೊಳ್ಳಬೇಕು

ಉತ್ತರ —ಅಂಥಾ ಸ್ಕೂಲುಗಳ ಬಹಳ ಬರಹದ ಮುಂತಾದ ವಿಷಯದಲ್ಲಿ ಸರ್ಕಾರದವರಿಗೆ ಯಾವ ಅಧಿಕಾರವೂ ಇರುವುದಿಲ್ಲವಾದದ್ದರಿಂದ ಅವರನ್ನು ಈ ಫಂಡಿಗೆ ಸೇರಿಸಿಕೊಳ್ಳಲಾಗದು

ಪ್ರಾರ್ಥನೆ —ಆಫೀಸುಗಳಿಗಾಗಿ ಸರ್ಕಾರದವರು ೩ ಕಾಪಿನ ಕಾಗದವನ್ನು ಉಪಯೋಗಿಸಬೇಕೆಂದು ಜಾರಿಗೆ ತಂದಿದ್ದಾರೆ ಇದರ ಕ್ರಯವನ್ನು ಕಡಮೆಮಾಡಿ ಕೊಡಬೇಕು

ಉತ್ತರ —ಅದರ ಕ್ರಯವನ್ನು ೩ ರಿಂದ ೨ ಕಾಸಿಗೆ ಇಳಿಸುವ ವಿಷಯದಲ್ಲಿ ಯೋಚಿಸುತ್ತೇವೆ

ಪ್ರಾರ್ಥನೆ —ಆರ್ಡರ್ ಸಿ ನೋಟುಗಳು ವ್ಯಾಪಾರಸ್ಥರಿಗೂ ಇತರ ಪ್ರಜೆಗಳಿಗೂ ಸರ್ಕಾರಿ ಖಜಾನೆಗಳಲ್ಲಿ ಸಿಕ್ಕದೆ ಬಹಳ ತೊಂದರೆಯಾಗುತ್ತಿದೆ

ಉತ್ತರ —ಅನುಕೂಲವಾದಷ್ಟು ವ್ಯಾಪಾರಸ್ಥರಿಗೂ ಪ್ರಯಾಣಿಕರಿಗೂ ಕೊಡಬೇಕೆಂದು ಏರ್ಪಾಡು ಮಾಡಲಾಗಿದೆ

ಪ್ರಾರ್ಥನೆ —ಸವಕಲಾದ ನಾಣ್ಯಗಳನ್ನು ಪೇಟೆಗಳಲ್ಲಿ ವರ್ತಕರೂ ಖಜಾನೆಗಳಲ್ಲಿ ಸರ್ಕಾರದವರೂ ತೆಗೆದುಕೊಳ್ಳುವುದಿಲ್ಲವಾದದ್ದರಿಂದ ಪ್ರಜೆಗಳಿಗೆ ತೊಂದರೆಯೂ ನಷ್ಟವೂ ಆಗುತ್ತಿದೆ

ಉತ್ತರ —ಈ ವಿಷಯದಲ್ಲಿ ಇಂಡಿಯಾ ಗೌರ್ನಮೆಂಟಿನವರು ಮಾಡಿರುವ ರೂಲಸನ್ನು ನಾವು ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಸವಕಲಾದ ನಾಣ್ಯಗಳನ್ನು ಕೂಡಿಸಿ ಕಳುಹಿಸುವಂತೆ ಅವರು ಅಪ್ಪಣೆ ಕೊಡುವ ತನಕ ಅವುಗಳನ್ನೆಲ್ಲಾ ನಾವು ಚಲಾವಣೆಯಲ್ಲಿ ಇಟ್ಟುಕೊಂಡಿರಬೇಕು

ಪ್ರಾರ್ಥನೆ —ಮೈಸೂರು ಸಂಸ್ಥಾನದಲ್ಲಿ ಈಗ ಎರಡು ಕಡೆಗಳಲ್ಲಿ ಪ್ರಜೆಗಳು ಸೇರಿ ಧಾನ್ಯಗಳ ಬ್ಯಾಂಕನ್ನು ಇಟ್ಟುಕೊಂಡಿದ್ದಾರೆ ಈ ಬ್ಯಾಂಕುಗಳಲ್ಲಿ ಮೆಂಬರುಗಳಿಗೆ ಸಾಮಾನ್ಯ ಕಾಲದಲ್ಲಿ ಧಾನ್ಯವನ್ನು ಸಾಲ ಕೊಟ್ಟು, ಸುಗ್ಗಿಯಲ್ಲಿ ಅವರಿಂದ ವಸೂಲ್ಮಾಡಿ ಇಟ್ಟುಕೊಳ್ಳುವರು ಇಂಥಾ ಬ್ಯಾಂಕುಗಳು ಸಂಸ್ಥಾನದಲ್ಲಿ ಹೆಚ್ಚಳವಾಗುವಂತೆ ಸರ್ಕಾರದವರು ಪ್ರೋತ್ಸಾಹಪಡಿಸಬೇಕು ಇದಲ್ಲದೆ ಸರ್ಕಾರದವರು ಈಚೆಗೆ ಕ್ಷಾಮನಿವಾರಣೆಯ ಫಂಡನ್ನು ಕೂಡಿಸಿಡುತ್ತಾ ಬಂದಿದ್ದಾರೆ ಹಣವನ್ನು ಕೂಡಿಸಿಡುವುದಕ್ಕಿಂತ ಕೆಲವು ಮುಖ್ಯ ಸ್ಥಳಗಳಲ್ಲಿ ದೊಡ್ಡ ದೊಡ್ಡ ಕಣಜಗಳನ್ನು ಕಟ್ಟಿ ಆ ಫಂಡಿನ ಹಣದಿಂದ ರಾಗಿಯನ್ನು ಕೊಂಡು ಕೂಡಿಟ್ಟರೆ ಕ್ಷಾಮ ಬಂದಾಗ್ಗೆ ಪ್ರಜೆಗಳಿಗೆ ಸುಲಭ ಧಾರಣೆಗೆ ಬಿಕರಿ ಮಾಡಿ ಕ್ಷಾಮವನ್ನು ನಿವಾರಣೆ ಮಾಡಬಹುದು ಕ್ಷಾಮದ ಫಂಡಿಗೆ ಪ್ರತಿಯಾಗಿ ಧಾನ್ಯದ ಫಂಡು ಇಡುವುದು ಉತ್ತಮ

ಉತ್ತರ—ಧಾನ್ಯದ ಬ್ಯಾಂಕುಗಳನ್ನು ಏರ್ಪಡಿಸುವ ವಿಷಯದಲ್ಲಿ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರವರು ಸಾಹಸಪಡುತ್ತಾರೆ ಕ್ಷಾಮನಿವಾರಣೆಯ ಫಂಡಿನ ಹಣವನ್ನು ಧಾನ್ಯರೂಪವಾಗಿ ಕೂಡಿಸಿಡುವುದು ಈಗಿನ ಕಾಲಕ್ಕೆ ಅನುಗುಣವಾದ ಕಾರ್ಯವೆನಿಸಿಕೊಳ್ಳಲಾರದು ಹಾಗೆ ಮಾಡಿದ ಪಕ್ಷದಲ್ಲಿ ಪ್ರಪಂಚದವರು ನಮ್ಮನ್ನು ಅನಾಗರಿಕರೆಂದು ಹೇಳದಿರಲಾರರು

ಪ್ರಾರ್ಥನೆ —ಗ್ರಾಮಾಂತರಗಳಲ್ಲಿ ೩೦ ರೂಪಾಯಿಗಿಂತ ಹೆಚ್ಚು ಕಂದಾಯ ಕೊಡುವಂಥಾ ಗೌಡರ ಸ್ವಾಧೀನದಲ್ಲಿ ಛಾಪಾಕಾಗದ ಬಿಕರಿ ಮಾಡುವುದಕ್ಕೆ ಬೇಕಾಗಿ ಬಂದಾಗ ಅವರಿಗೆ ಅಡ್ವಾನ್ಸಾಗಿ ಖಜಾನೆಯಿಂದ ಛಾಪಾ ಕಾಗದಗಳನ್ನು ಸ್ಟ್ಯಾಂಪುಗಳನ್ನೂ ಕೊಟ್ಟು, ಪ್ರತಿ ತಿಂಗಳಲ್ಲೂ ಅದರ ಬೆಲೆಯನ್ನು ಅವರಿಂದ ವಸೂಲ್ಮಾಡಿಕೊಳ್ಳುವಂತೆ ಮಾಡಿಕೊಡಬೇಕು ಪ್ರಜೆಗಳಿಗೆ ಬೇಕಾದ ಛಾಪಾಕಾಗದಗಳು ಸಿಕ್ಕುವುದಕ್ಕೆ ಸುಲಭವಾಗುವುದು

ಉತ್ತರ —ಸರ್ಕಾರದವರ ಸೇವಕರುಗಳಿಗೆ ಅಡ್ವಾನ್ಸಾಗಿ ಛಾಪಾ ಕಾಗದಗಳನ್ನು ಕೊಡಲಾಗುವುದಿಲ್ಲ

ಪ್ರಾರ್ಥನೆ —ಕೋರ್ಟ್ ಫೀ ಸ್ಟ್ಯಾಂಪುಗಳೆಲ್ಲಾ ಒಂದೇ ಬಣ್ಣವುಳ್ಳ ವುಗಳಾಗಿವೆ ಬೇರೆ ಬೇರೆ ಕ್ರಯದ ಸ್ಟ್ಯಾಂಪುಗಳನ್ನು ಬೇರೆ ಬೇರೆ ಬಣ್ಣಗಳಲ್ಲಿ ಅಚ್ಚು ಹಾಕಿಸಿ ಕೊಟ್ಟರೆ ಜನಗಳು ಮೋಸ ಹೋಗದಂತೆ ಆದೀತು

ಉತ್ತರ —ಆಗಲಿ ಸರ್ಕಾರದವರು ಹೊಸ ತರಹಾ ಸ್ಟ್ಯಾಂಪುಗಳನ್ನು ನೀವು ಸೂಚಿಸಿದ ಪ್ರಕಾರ ತಯಾರುಮಾಡಿಸಬೇಕೆಂದು ಯೋಚಿಸಿದ್ದಾರೆ

ಕೃಷಿ ವಿಚಾರಗಳು

ಪ್ರಾರ್ಥನೆ —ಒಗಟೀ ಹಿಡಿದ ಮರಕ್ಕೆ ೨ ರೂಪಾಯಿನಂತೆ ಕಂದಾಯ ಕೊಡಬೇಕು ಈ ಕಂದಾಯ ವ್ಯವಸಾಯಗಾರರಿಗೆ ಅಗತ್ಯವಾಗಿರುವುದರಿಂದ ಕಂದಾಯವನ್ನು ೧ ರೂಪಾಯಿಗೆ ಇಳಿಸಿ ಕೊಡಬೇಕು

ಉತ್ತರ —ರೆವಿನ್ಯೂ ಕಮಿಷನರ್ ರಿಪೋರ್ಟು ಬರಬೇಕಾಗಿದೆ ಅದನ್ನು ನೋಡಿ ಅಪ್ಪಣೆ ಕೊಡುತ್ತೇವೆ

ಪ್ರಾರ್ಥನೆ —ಸರಾಬ್ ಅಂಗಡಿಗಳನ್ನು ಪ್ರತಿ ವರುಷವೂ ಹರಾಜು ಹಾಕುವುದರಿಂದ ಕಂಟ್ರಾಕ್ಟರುಗಳಿಗೆ ನಷ್ಟವಾಗುತ್ತದೆ ಅದನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಶೆಟ್ಟಿಗಳನ್ನು ಬೆರಸಿ ಮಾರುತ್ತಾರೆ ಮತ್ತು ಅಂತರಂಗದಲ್ಲಿ ಸರಾಯಿ ಕಡೆ ತಯಾರಾಗುವ ಸರಾಬನ್ನು ಬಿಕರಿ ಮಾಡುತ್ತಾರೆ ಇದನ್ನು ತಪ್ಪಿಸಬೇಕಾದರೆ ಸರ್ಕಾರದವರು ಪ್ರತಿ ವರುಷ ಹರಾಜು ಮಾಡುವುದನ್ನು ತಪ್ಪಿಸಿ ಖಾಯಂ ಕಂಟ್ರಾಕ್ಟ್ ಕೊಡಬೇಕು ಆಯಾ ಅಬ್ಕಾರಿಗಳಾದ ಪತ್ತೆ ಅಧಿಕಾರಿಗಳನ್ನು ನೇಮಿಸಿ ಕಳ್ಳಬಟ್ಟಿಗಳನ್ನು ಪತ್ತೆಮಾಡಿ ಮೋಸಗಾರರನ್ನು ಶಿಕ್ಷಿಸಿ ಪತ್ತೆ ಮಾಡಿದವರಿಗೆ ಬಹುಮಾನ ಕೊಡಬೇಕು

ಉತ್ತರ —ಈ ವಿಚಾರವನ್ನು ಪರ್ಯಾಲೋಚನೆಯ ಬಗ್ಗೆ ಎಕ್ಸೈಸ್ ಕಮಿಷನರವರಿಗೆ ತಿಳಿಸುತ್ತೇವೆ

ಪ್ರಾರ್ಥನೆ —ಸೇಂದಿ ಕಂಟ್ರಾಕ್ಟರು ಪ್ರತಿ ತಿಂಗಳಲ್ಲೂ ೨೦ನೇ ತಾರೀಖಿನೊಳಗೆ ಬಿಸ್ತು ಕೊಡದೆ ತಪ್ಪಿದರೆ ರೂಪಾಯಿಗೆ ಒಂದು ಕಾಸು ಬಡ್ಡಿಯನ್ನೂ, ಶೇಕಡ ೨ ರೂಪಾಯಿ ದಂಡವನ್ನೂ ಕೊಡಬೇಕಾಗಿದೆ ಈ ಎರಡು ವಿಧವಾದ ಶಿಕ್ಷೆಯನ್ನು ತಪ್ಪಿಸಿಕೊಡದಿದ್ದರೆ ಇಜಾರೆದಾರರು ಬಹಳ ನಷ್ಟಪಡುತ್ತಾರೆ

ಉತ್ತರ —ಹೊಸದಾಗಿ ಕಾಂಟ್ರಾಕ್ಟರ ನ ಸಕೀಲರಿಂದ ಈ ರೀತಿ ಆಗಿರುವಂತೆ ಕಾಣುತ್ತದೆ ಅದನ್ನು ಸರಿ ನೋಡಿ ನೀವು ಹೇಳಿದ ವಿಷಯವನ್ನೂ ಯೋಚಿಸಿ ಹುಕುಂ ಕೊಡಲಾಗುವುದು

ಪ್ರಾರ್ಥನೆ —ಇಜಾರೆದಾರರಿಗೆ ಸೇಂದಿ ಅಂಗಡಿ ವರಮಾನವನ್ನು ಬಟವಾಡೆ ಮಾಡುವುದು ಬಹಳ ಸಾವಕಾಶವಾಗುವುದು ೧೦ ೧೨ ವರುಷಗಳಾದರೂ ವಾಪತಿ ಆಗುವುದಿಲ್ಲ ಜಾಗ್ರತೆ ವಾಪತಿ ಮಾಡುವಂತೆ ಅಪ್ಪಣೆಯಾಗಬೇಕು

ಉತ್ತರ —ಈಚೆಗೆ ಮಾಡಿದ ರೂಲ್ಸು ತೃಪ್ತಿಕರವಾಗಿಲ್ಲವೆಂದೂ ತೊಡಕಾಗಿರುವಂತೆಯೂ ತೋರುವುದು ಅದನ್ನು ಬೇಗನೆ ಕ್ರಮಪಡಿಸುತ್ತೇವೆ ೧೯೦೮ನೇ ವರುಷದ ವರೆಗೆ ಬಾಕಿಯಾಗಿರುವ ಹಣವನ್ನೆಲ್ಲಾ ಕೂಡಲೆ ವಾಪತಿ ಮಾಡುವಂತೆ ಹುಕುಂ ಕೊಡುವೆವು

ಮುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳು

ಪ್ರಾರ್ಥನೆ —ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗುಗಳಲ್ಲಿ ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರ್ರುಗಳನ್ನು ಮೆಂಬರಾಗಿ ಮೊದಲಿನಂತೆಯೇ ನೇಮಕ ಮಾಡಿಕೊಡಬೇಕು

ಉತ್ತರ —ಅವರು ಮೀಟಿಂಗುಗಳಿಗೆ ಹಾಜರಾಗಬಹುದೆಂದು ಮಾಡಿದೆ ಅವರನ್ನು ಮೆಂಬರಾಗಿ ಸೇರಿಸಿಕೊಳ್ಳುವುದು ಅಗತ್ಯವಿಲ್ಲವೆಂದು ಹೋದ ವರ್ಷ ಇತ್ಯರ್ಥ ಮಾಡಿರುತ್ತೇವೆ ಈಗಿನ ಪದ್ಧತಿಯಂತೆ ಇನ್ನು ಕೆಲವು ದಿನ ನಡೆದ ಮೇಲೆ ನೋಡೋಣ

ಪ್ರಾರ್ಥನೆ —ತಾಲ್ಲೂಕ್ ಸ್ಥಳಗಳಲ್ಲಿ ಪ್ರಜಾ ಸಂಖ್ಯೆಯನ್ನು ಪರಿಗಣಿಸದೆ ಮ್ಯುನಿಸಿಪಾಲಿಟಿಯನ್ನು ಇಡಬೇಕು

ಉತ್ತರ —ವಿಚಾರಣೆಯಿಂದ ಏರ್ಪಾಡು ಮಾಡುತ್ತೇವೆ

ಪ್ರಾರ್ಥನೆ —ಡಿಸ್ಟ್ರಿಕ್ಟ್ ಬೋರ್ಡುಗಳ ಬೇರೋಜುದಾರಿ ಮೆಂಬರುಗಳ ಪ್ರಯಾಣದ ಖರ್ಚನ್ನು ನಿಗದಿ ಮಾಡಿಕೊಡಬೇಕು ಯಥಾರ್ಥವಾಗಿ ಖರ್ಚುಮಾಡಿದಷ್ಟೇ ಹಣವನ್ನು ಕೊಡುವುದಾಗಿ ಕಂಟ್ರೋಲರವರು ಹೇಳುತ್ತಾರೆ

ಉತ್ತರ —ಈ ವಿಷಯವಾದ ರೂಲಸನ್ನು ಬದಲಾಯಿಸಬೇಕೆಂದು ಗವರ್ನಮೆಂಟಿನವರ ಆಲೋಚನೆಯಲ್ಲಿದೆ ಬದಲಾಯಿಸುವಾಗ್ಗೆ ನಿಮ್ಮ ಸಲಹೆಯನ್ನು ಯೋಚನೆ ಮಾಡಲಾಗುವುದು

ಪ್ರಾರ್ಥನೆ —ಗ್ರಾಮಾಂತರಗಳಲ್ಲಿ ರಸ್ತೆಗಳಿಲ್ಲದೆ ಬಹಳ ಅನನುಕೂಲವಾಗಿದೆ ಮಳೆಗಾಲದಲ್ಲಿ ಜನಸಂಚಾರ ಬಹಳ ಕಷ್ಟ ಸರ್ಕಾರದವರು ಮೊಹತರ್ಫಾ ಕಂದಾಯ ವಸೂಲ್ಮಾಡೋಣದರಿಂದ ಅದನ್ನು ಆಯಾ ಗ್ರಾಮಕ್ಕೆ ವಿನಿಯೋಗಿಸಿ ರಸ್ತೆಗಳನ್ನು ಹಾಕಿಸಿಕೊಡಬೇಕು

ಉತ್ತರ —ಈ ಕೆಲಸವನ್ನು ಪೂರ್ವದಲ್ಲಿ ರೈತ ಪ್ರಜೆಗಳು ತಾವಾಗಿಯೇ ಮಾಡಿಕೊಳ್ಳುತ್ತಿದ್ದರು ಈಚೆಗೆ ಅವರು ಕೇಳಿಕೊಂಡ ಪ್ರಕಾರ ಅವರು ಮಟ್ಟಿ ಕೆಲಸ ಮಾಡಿಸಿದರೆ ಕಲ್ಲು ಮತ್ತು ಗಾರೆ ಕೆಲಸವನ್ನು ಸರ್ಕಾರದವರು ಮಾಡಿಸಿಕೊಡುವುದಾಗಿ ರಿಯಾಯಿತಿ ತೋರಿಸಲಾಯಿತು ಆಯಾ ಸ್ಥಳದ ಮೊಹತರ್ಫಾ ಉತ್ಪತ್ತಿಯು ಅಲ್ಲಲ್ಲಿಗೆ ಸಾಕಾಗುವುದಿಲ್ಲ ಈ ರಸ್ತೆಗಳ ಕೆಲಸವನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳುವುದಾದರೆ ಬಹಳ ಹಣ ಬೇಕಾಗುವುದು ಇದು ಸಾಧ್ಯವಲ್ಲ

ಪ್ರಾರ್ಥನೆ —ಮಲೆನಾಡಿನಲ್ಲಿ ದೊಡ್ಡಿಗೆ ಕೊಡುವ ತೊಂದು ದನಗಳ ಜುಲ್ಮಾನೆ ದರವನ್ನು ಕಡಮೆ ಮಾಡಬೇಕು ಮತ್ತು ಕಾಫಿ ತೋಟಗಳಲ್ಲಿರುವ ದೊಡ್ಡಿಗಳನ್ನು ಪಟೇಲರುಗಳ ಸ್ವಾಧೀನದಲ್ಲಿ ಇಟ್ಟುಕೊಡಬೇಕು

ಉತ್ತರ —ಮೊದಲನೇ ವಿಷಯವು ಗವರ್ನಮೆಂಟಿನವರ ಆಲೋಚನೆಯಲ್ಲಿದೆ ಎರಡನೇ ವಿಚಾರವಾಗಿ ಡೆಪ್ಯುಟಿ ಕಮಿಷನರುಗಳಿಂದ ರಿಪೋರ್ಟುಗಳನ್ನು ತರಿಸಿಕೊಂಡಿದೇವೆ ಅದನ್ನೆಲ್ಲಾ ನೋಡಿ ಸಮಂಜಸವಾದ ಹುಕುಂ ಕೊಡುವೆವು

ಪ್ರಾರ್ಥನೆ —ಚೀಲ ಬಟ್ಟೆಗಳ ಮೇಲೂ ಸ್ವದೇಶೀ ಜವಳಿಗಳ ಮೇಲೂ ವರ್ತಕರು ಊರಿಂದೂರಿಗೆ ಹೋದಾಗಲೆಲ್ಲಾ ಸುಂಕ ಕೊಡಬೇಕಾಗಿದೆ ಮತ್ತು ಕೆಲವು ಕಡೆ ಚಿಲ್ಲರೆ ಮೇಲೆ ಮಣಕ್ಕೆ ಎರಡಾಣೆ ಸುಂಕ ಹಾಕಿದ್ದಾರೆ ಇದನ್ನು ಕಡಮೆ ಮಾಡಿ ಸಂಸ್ಥಾನವೆಲ್ಲಾ ಈ ಸುಂಕವನ್ನು ಜಾರಿಗೆ ತರಬೇಕು ಇಲ್ಲವಾದರೆ ಇದು ಕಸುಬು ನಡೆಯುವುದಕ್ಕೂ ವ್ಯಾಪಾರಾಭಿವೃದ್ಧಿಗೂ ಅಡಚಣೆಯಾಗಿರೋದರಿಂದ ಈ ಸುಂಕವನ್ನು ಎರಡು ಮೂರು ಸಲ ವಸೂಲ್ಮಾಡದಂತೆ ಅಪ್ಪಣೆ ಆಗಬೇಕು

ಉತ್ತರ —ಇವೆಲ್ಲಾ ಆಯಾ ಮ್ಯುನಿಸಿಪಾಲಿಟಿಯವರು ಇಟ್ಟುಕೊಂಡಿರುವ ಸುಂಕವಾಗಿದೆ ಇದನ್ನು ತಪ್ಪಿಸಿದರೆ ಮ್ಯುನಿಸಿಪಲ್ ಉತ್ಪತ್ತಿಯೇ ಕಡಮೆಯಾದೀತು ಆಯಾ ಮ್ಯುನಿಸಿಪಲ್ ಬೋರ್ಡಿನವರು ಒಪ್ಪಿ ಈ ಸುಂಕವನ್ನು ವಜಾ ಮಾಡಬಹುದೆಂದು ಗವರ್ನಮೆಂಟಿಗೆ ತಿಳಿಸುವ ಪಕ್ಷದಲ್ಲಿ ಗವರ್ನಮೆಂಟಿನವರು ವಜಾ ಮಾಡಲು ಅಡ್ಡಿಯಿಲ್ಲ

ಪ್ರಾರ್ಥನೆ —ಡಿಸ್ಟ್ರಿಕ್ಟ್ ಬೋರ್ಡುಗಳ ಫಂಡನ್ನು ಆ ಬೋರ್ಡಿನವರೇ ಸ್ವತಂತ್ರಿಸಿ ಖರ್ಚುಮಾಡುವಂತೆ ಅಧಿಕಾರ ಕೊಡಬೇಕು

ಉತ್ತರ —ಸದ್ಯ ಇದು ಸಾಧ್ಯವಲ್ಲ ಇನ್ನೂ ಕೆಲವು ಕಾಲ ನಿರೀಕ್ಷಿಸಬೇಕಾಗಿದೆ

ಪ್ರಾರ್ಥನೆ —ಮ್ಯುನಿಸಿಪಾಲಿಟಿ ಸರಹದ್ದಿಗೆ ಸೇರಿದ ಜಮೀನುಗಳ ಕಂದಾಯಗಳನ್ನು ಸರ್ಕಾರದವರು ಆಯಾ ಮ್ಯುನಿಸಿಪಾಲಿಟಿಗೆ ವಹಿಸಿಕೊಡಬೇಕು

ಉತ್ತರ —ಒಳ್ಳೇದು ಇದು ಆಗಬಹುದೆಂದು ಕಾಣುತ್ತದೆ

ಪ್ರಾರ್ಥನೆ —ಲಾಂಟಾನಾ, ಪಾಪಾಸುಕಳ್ಳಿ ಮೊದಲಾದ ಗಿಡಗಳು ಹಬ್ಬಿ ಊರುಗಳಿಗೆ ನ್ಯೂಸೆನ್ಸ್ ಗು ವ್ಯವಸಾಯಕ್ಕೂ ಜನರ ಕ್ಷೇಮಕ್ಕೂ ಕಂಟಕವಾಗಿವೆ ಸರ್ಕಾರದವರು ಲೋಕಲ್ ಫಂಡ್ ಹಣದಿಂದ ಇದನ್ನು ಕಡಿಸಿಹಾಕುತ್ತಾ ಬರಬೇಕು

ಉತ್ತರ —ಆಯಾ ಮ್ಯುನಿಸಿಪಾಲಿಟಿಗಳಿಂದ ಮೊದಲು ಈ ಗಿಡಗಳನ್ನು ನಾಶಪಡಿಸಲಿ ಗವರ್ನಮೆಂಟಿನವರ ಇತರ ಕಡೆಗಳಲ್ಲಿ ನಾಶಪಡಿಸುವುದಕ್ಕೆ ಸಹಾಯವಾಗುತ್ತೆ ಇದಲ್ಲದೆ ಮೆಕ್ಸಿಕೋ ಸೀಮೆಯಿಂದ ಲಾಂಟಾನಾ ಗಿಡಗಳನ್ನು ನಾಶಮಾಡುವ ಒಂದು ತರಹಾ ಹುಳವನ್ನು ತರಿಸಬೇಕೆಂದು ಸರ್ಕಾರದವರು ಯೋಚಿಸಿರುತ್ತಾರೆ

ವೈದ್ಯ ವಿಚಾರಗಳು.

ಪ್ರಾರ್ಥನೆ —ಆಸ್ಪತ್ರೆ ಅಸಿಸ್ಟೆಂಟರು ರೋಗದ ಮೇಗಳಿಗೂ ಔಷಧ ಕೊಡುವುದಕ್ಕೂ ಪರಸ್ಥಳಗಳಿಗೆ ಹೋಗಿ ೪-೬ ದಿನಗಳು ಬರುವುದಿಲ್ಲ ರೋಗಿಗಳಿಗೆ ಚಿಕಿತ್ಸೆ ಇಲ್ಲದೆ ಕಷ್ಟವಾಗುವುದನ್ನು ತಪ್ಪಿಸಿಕೊಡಬೇಕು

ಉತ್ತರ —ಅವರ ಗೈರುಹಾಜರಿಯಲ್ಲಿ ಬೇರೊಬ್ಬ ವೈದ್ಯನನ್ನು ನೇಮಕ ಮಾಡುವ ಪದ್ಧತಿಯು ಇದೆ ಪ್ರಜೆಗಳಿಗೆ ತೊಂದರೆ ಆಗದಂತೆ ಏರ್ಪಾಡು ಮಾಡಬೇಕೆಂದು ಸೀನಿಯರ್ ಸರ್ಜನರವರಿಗೆ ತಿಳಿಸುತ್ತೇವೆ

ಪ್ರಾರ್ಥನೆ —ಕರ್ನಾಟಕ ಮತ್ತು ಯುನಾನಿ ವೈದ್ಯಶಾಲೆಗಳ ಪಂಡಿತರನ್ನೂ ಸರ್ಕಾರಿ ನೌಕರರಂತೆ ಭಾವಿಸಿ ಅವರಿಗೂ ರಜಾ ರಸ್ತೆಯನ್ನು ಕೊಡುವಂತೆ ಮಾಡಿಕೊಡಬೇಕು

ಉತ್ತರ —ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ನಮ್ಮ ಅಭಿಪ್ರಾಯವನ್ನು ತಿಳಿಸಿ, ಅವರು ಇದಕ್ಕೆ ಒಪ್ಪುವ ಪಕ್ಷದಲ್ಲಿ ಆ ರೀತಿ ಅವರನ್ನು ಸರ್ಕಾರಿ ನೌಕರರಂತೆ ಎಣಿಸಬೇಕೆಂದು ಹುಕುಂ ಕೊಡುತ್ತೇವೆ

ಪ್ರಾರ್ಥನೆ —ಮಲೆನಾಡು ಪ್ರಾಂತ್ಯದಲ್ಲೆಲ್ಲಾ ಇಡುವಿನ ಬೇನೆಯಿಂದ ಅನೇಕ ಮರಣಗಳಾಗುತ್ತವೆ ಎಲ್ಲಾ ಕಡೆಗಳಲ್ಲೂ ಬಹಾತ್ತರಿಸಿ ದೇವೀ ಇಡುಬು ಹಾಕಿಸಬೇಕು.

ಉತ್ತರ —ಈಗ ಪರೀಕ್ಷಾರ್ಥವಾಗಿ ಕೆಲವು ಕಡೆ ಈ ಕಾನೂನನ್ನು ಜಾರಿಗೆ ತಂದಿರುತ್ತೇವೆ ಕ್ರಮೇಣ ಇತರ ಕಡೆಗಳಿಗೂ ತರುತ್ತೇವೆ

ಪ್ರಾರ್ಥನೆ —ಮುಲಬಾಗಿಲು ಪ್ರಾಂತ್ಯದ ಪ್ರಜಾ ಸಂಖ್ಯೆಯು ಕ್ಷೀಣವಾಗುತ್ತಿದೆ ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಅಜಮಾಯಿಷಿ ಮಾಡಿ ಪರಿಹಾರವನ್ನು ಏರ್ಪಡಿಸಬೇಕೆಂದು ನಾಲ್ಕಾರು ವರುಷಗಳಿಂದ ಅರಿಕೆಮಾಡಿಕೊಳ್ಳುತ್ತಾ ಬಂದಿದೇವೆ

ಉತ್ತರ —ಈ ವಿಚಾರವನ್ನು ತನಿಖೆಮಾಡುವುದಕ್ಕೆ ಸರ್ಕಾರದವರು ಡೆಪ್ಯುಟಿ ಸ್ಯಾನಿಟರಿ ಕಮೀಷನರಾದ ಮಿ| ವಿ ಸುಬ್ಬಯ್ಯನವರನ್ನು ನೇಮಿಸಿ ಕಳುಹಿಸಿದರು ಅವರು ಸ್ವಲ್ಪಮಟ್ಟಿಗೆ ತನಿಖೆಮಾಡಿದಾರೆ ಎಲ್ಲಾ ಪೂರೈಸಿ ಅವರಿಂದ ರಿಪೋರ್ಟು ಬಂದಮೇಲೆ ಇತ್ಯರ್ಥ ಮಾಡುತ್ತೇವೆ ಈ ಸಂದರ್ಭದಲ್ಲಿ ಅವರೂ ನಾವೂ ಆಕ್ಷೇಪಣೆ ಮಾಡುವ ಒಂದು ವಿಷಯವನ್ನು ಇಲ್ಲಿ ನಿಮಗೆಲ್ಲಾ ತಿಳಿಸುವೆವು ಏನೆಂದರೆ, ಪ್ರತಿ ಒಂದು ಗ್ರಾಮದಲ್ಲೂ, ಪಟೇಲರೇ ಮೊದಲಾದ ಗ್ರಾಮಾಧಿಕಾರಿಗಳು ಜನನ ಮರಣಗಳ ಲೆಕ್ಕಗಳನ್ನು ಸ್ವಲ್ಪವೂ ಬಿಡದಂತೆ ಬರೆದಿರುತ್ತಾ ಬರಬೇಕು ಈ ಲೆಕ್ಕಗಳು ಸರಿಯಾಗಿಲ್ಲ ಆದಕಾರಣ ಯಾವ ಅಧಿಕಾರಿಯೂ ತನಿಖೆಮಾಡಿ ಪರಿಹಾರವನ್ನು ಸೂಚಿಸುವುದು ಅಸಾಧ್ಯ

ವಿದ್ಯಾಭ್ಯಾಸ ವಿಚಾರಗಳು.

ಪ್ರಾರ್ಥನೆ —ದಾಮೋದರದಾಸ್ ಫಂಡಿನಿಂದ ಕೊಡುವ ವೇತನಗಳನ್ನೆಲ್ಲಾ ಮೈಸೂರಿನ ಯೌವನಸ್ಥರಿಗೇ ಕೊಡಬೇಕು ಅನ್ಯದೇಶೀಯರಿಗೆ ಕೊಡಕೂಡದು

ಉತ್ತರ —ಕಾರ್ಯದಲ್ಲಿ ನಾವು ಹಾಗೇ ಮಾಡುತ್ತಿದೇವೆ

ಪ್ರಾರ್ಥನೆ —ಸಂಸ್ಥಾನದ ಸಕಲರೂ ವಿದ್ಯೆ ಕಲಿಯಬೇಕೆಂಬ ಬಲತ್ಕಾರದ ಕಾನೂನನ್ನು ಜಾರಿಗೆ ತರಬೇಕು

ಉತ್ತರ —ಪ್ರಾಯಶಃ ಇದು ಆದೀತು

ಪ್ರಾರ್ಥನೆ —ಈಗಿನ ಕಾಲಕ್ಕೆ ಆವಶ್ಯಕವಾದ ಇಂಗ್ಲಿಷ್ ವಿದ್ಯೆಯ ಪ್ರಥಮ ಶಿಕ್ಷಣವನ್ನು ಫೀಜಿಲ್ಲದೆ ಮಾಡಿಸಬೇಕು

ಉತ್ತರ —ಒಳ್ಳೇದು, ಯೋಚಿಸಿ ಕ್ರಮೇಣ ಮಾಡುತ್ತೇವೆ

ಪ್ರಾರ್ಥನೆ —ಹೈಸ್ಕೂಲ್ ವಿದ್ಯಾರ್ಥಿಗಳನ್ನು ಉಪಾಧ್ಯಾಯರು ಇತರ ಕಡೆಗಳಿಗೆ ಕರೆದುಕೊಂಡುಹೋಗಿ ಅವರ ಇಂದ್ರಿಯಗಳು ವಿಕಸಿತವಾಗಿ ಪಟುವಾಗುವಂತೆ ವಿಷಯಗಳನ್ನು ಸಾಕ್ಷಾತ್ತಾಗಿ ಕಲಿಸಿಕೊಡಬೇಕು ಇದಕ್ಕೆ ಸರ್ಕಾರದವರು ಪ್ರಯಾಣದ ಖರ್ಚನ್ನು ಒದಗಿಸಿಕೊಡಬೇಕು

ಉತ್ತರ —ಇದು ಒಳ್ಳೇ ಸಲಹೆ ಆದರೆ ಇದಕ್ಕೆ ಹಣ ಒದಗಿಸಲು ಈಗ ಚೈತನ್ಯ ಸಾಲದೆಂದು ಗವರ್ನ್‌ಮೆಂಟಿನವರು ಚಿಂತಿಸುತ್ತಾರೆ

ಪ್ರಾರ್ಥನೆ —ಮೈಸೂರು ಸರ್ಕಾರಿ ಇಂಜನಿಯರ್ ಸ್ಕೂಲಿನಲ್ಲಿ ಓದಿ ತೇರ್ಗಡೆ ಹೊಂದಿದ ಯೌವನಸ್ಥರಿಗೆ ಕೆಲಸ ಕೊಟ್ಟು ಪ್ರೋತ್ಸಾಹ ಪಡಿಸಬೇಕು

ಉತ್ತರ —ಈ ರೀತಿ ಮಾಡಬೇಕೆಂದು ಚೀಫ್ ಇಂಜನಿಯರವರಿಗೆ ಬರೆಯುತ್ತೇವೆ

ಪ್ರಾರ್ಥನೆ —ಹೈಸ್ಕೂಲ್ ಮತ್ತು ಹೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳವನ್ನು ಜಾಸ್ತಿ ಮಾಡಲಿಲ್ಲ ಕ ಲ್ಯಾಸ್ ಸ್ಕೂಲ್ ಮಾಸ್ಟರುಗಳ ಸಂಬಳವನ್ನು ಒಡ್ಡಿ ಮಾಡಿಕೊಡಬೇಕು

ಉತ್ತರ —ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತರಿಸಿಕೊಳ್ಳುವೆವು

ಪ್ರಾರ್ಥನೆ —ಗ್ರಾಮಸ್ಥರು ೩೦ ಹುಡುಗರನ್ನೂ ಸ್ಕೂಲ್ ಮನೆಯನ್ನೂ ಒದಗಿಸಿಕೊಟ್ಟರೆ ಸರ್ಕಾರದವರು ಉಪಾಧ್ಯಾಯನನ್ನು ನೇಮಿಸಿ ಸ್ಕೂಲ್ ಏರ್ಪಾಡು ಮಾಡಬೇಕು

ಉತ್ತರ —ಅಂಥಾ ಸಂದರ್ಭದಲ್ಲಿ ನಿಮ್ಮ ಇಲಾಖೆಯವರು ಸ್ಕೂಲ್ ಮಾಡಿಕೊಡದಿದ್ದರೆ ಗವರ್ನ್‌ಮೆಂಟಿನವರಿಗೆ ಬರೆದುಕೊಳ್ಳಲಿ ಹೊಸದಾಗಿ ಹೊಸ ಸ್ಯಾಂಕ್ಷನ್ ಮಾಡಿ ಸ್ಕೂಲನ್ನು ಇಡಿಸುತ್ತೇವೆ

ಪ್ರಾರ್ಥನೆ —ಕನ್ನಡ ಸ್ಕ್ರೂಟಿನಿ ಫೀಜನ್ನು ತೆಗೆದುಕೊಳ್ಳದೆ [illegible] ಸ್ಕೂಲುಗಳಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗಿದೆ ಸ್ಥಳ ಸಾಲದು ಕಟ್ಟಡಗಳನ್ನು ಬದಲಾವಣೆ ಮಾಡಿಸಿಕೊಡಬೇಕು

ಉತ್ತರ —ಯಾವ ಯಾವ ಸ್ಕೂಲು ಬದಲಾವಣೆ ಮಾಡಬೇಕೋ ಸ್ಥಳವನ್ನು ನಮೂದು ಮಾಡಿ ಅರ್ಜಿ ಬರೆದುಕೊಂಡರೆ ಮಾಡಿಕೊಡುತ್ತೇವೆ.

ಪ್ರಾರ್ಥನೆ —ಗರ್ಲ್ಸ್ ಸ್ಕೂಲುಗಳಿಗೆ ಮೊದಲು ಸೋಮಶೇಖರರಾವ್ ಮೊದಲಾದವರು ಕಮಿಟಿಯನ್ನು ತೆಗೆದುಹಾಕಿರುತ್ತಾರೆ ಬಾಲಿಕೆಯರ ವಿದ್ಯಾಭ್ಯಾಸವು ತೃಪ್ತಿಕರವಾಗಿ ನಡೆಯುವುದಿಲ್ಲ

ಉತ್ತರ —ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯವನ್ನು ಕೇಳಿ ತಿಳಿದು ಇತ್ಯರ್ಥ ಮಾಡುತ್ತೇವೆ

ಪ್ರಾರ್ಥನೆ —ಲಿಂಗಾಯತ ವಿದ್ಯಾರ್ಥಿಗಳನ್ನು ಮೈಸೂರು ಸಂಸ್ಕೃತ ಕಾಲೇಜಿಗೆ ಸೇರಿಸಿಕೊಳ್ಳುವಂತೆ ಆಗಬೇಕು

ಉತ್ತರ —ಸರ್ಕಾರದವರು ಭೇದ ಮಾಡುವುದಿಲ್ಲ ಇದು ಕಾಲೇಜಿನ ಸ್ವಾತಂತ್ರ್ಯದಲ್ಲಿ ಅಗತ್ಯವಿದ್ದು ಸರ್ಕಾರದ ಹುಕುಂ ಹೊರಡುವುದು ಹಿತಕರವಲ್ಲ

ಇಂಜನಿಯರ್ ವಿಚಾರಗಳು

ಪ್ರಾರ್ಥನೆ —ರಸ್ತೆ, ಸೇತುವೆ, ಕೆರೆ ಮೊದಲಾದ ಕಾಮಗಾರಿಗಳಿಗೆ ಸರ್ಕಾರದವರು ಪ್ರತಿ ವರುಷವೂ ಹೆಚ್ಚು ಹಣವನ್ನು ವಿನಿಯೋಗಿಸಬೇಕು ವರುಷಕ್ಕೆ ೧೪ ಲಕ್ಷ ರೂಪಾಯಿಯಾದರೂ ಬಜೆಟ್ಟಿನಲ್ಲಿ ತೆಗೆದಿಡುತ್ತಾ ಬರಬೇಕು

ಉತ್ತರ —ಹಾಗೆ ಮಾಡಬೇಕೆಂದಿರುತ್ತೇವೆ

ಪ್ರಾರ್ಥನೆ —ನಂಜನಗೂಡಿನಿಂದ ಚಾಮರಾಜನಗರದ ಮೇಲೆ ಈರೋಡಿನ ತನಕ ರೈಲನ್ನು ಹಾಕಬೇಕು

ಉತ್ತರ —ಈಗ ಸರ್ವೆ ಆಗುತ್ತಾ ಇದೆ

ಪ್ರಾರ್ಥನೆ —ಅರಸೀಕೆರೆಯಿಂದ ಫ್ರೆಂಚ್‌ರಾಕ್ಸಿಗೆ ರೀನಾರ್ಡ್ ರೋಡ್ ಟ್ರೈಯಿನ್ ಎಂಬ ರೈಲನ್ನು ಹಾಕಿಸಿಕೊಡಬೇಕು

ಉತ್ತರ —ಮೈಸೂರಿನಿಂದ ಕೊಪ್ಪಕ್ಕೆ ಹಾಕಬೇಕೆಂದಿದೇವೆ ಅದರ ಪ್ರಯೋಜನ ಮುಂತಾದದ್ದನ್ನು ನೋಡಿಕೊಂಡು ಇತರ ಕಡೆಗಳಿಗೂ ಹಾಕುವೆವು

ಮುಜರಾಯಿ ವಿಚಾರಗಳು

ಪ್ರಾರ್ಥನೆ —ಧರ್ಮಕಾರ್ಯಕ್ಕೆ ಕೊಡುವ ಹಣಕ್ಕೆ ಸರ್ಕಾರದವರು ಶೇಕಡಾ ವರುಷಕ್ಕೆ ೪ ರೂಪಾಯಿ ಬಡ್ಡಿ ಕೊಡುತ್ತಾರೆ ಇದಕ್ಕೆ ೩ ಸಾವಿರ ರೂಪಾಯಿ ಧರ್ಮಿಷ್ಠರು ಕೊಡಬೇಕೆಂಬ ವಿಧಿ ಇದೆ ಬಡ್ಡಿ ದರವನ್ನು ಜಾಸ್ತಿ ಮಾಡಿ ಕೊಡಬೇಕು, ಮತ್ತು ಡಿಪಾಜಿಟನ್ನು ೧,೦೦೦ ರೂಪಾಯಿಗೆ ಇಳಿಸಿಕೊಡಬೇಕು

ಉತ್ತರ —ಆ ರೀತಿ ಧರ್ಮ ಮಾಡಲು ಒಪ್ಪಿ ನಾಲ್ಕಾರು ಜನರು ಅರ್ಜಿ ಬರೆದುಕೊಂಡಾಗ ಯೋಚಿಸುತ್ತೇವೆ

ಪ್ರಾರ್ಥನೆ —ಸತ್ರ ದೇವಸ್ಥಾನಗಳಲ್ಲಿ ಮುಜರಾಯಿ ಇಲಾಖೆಯವರು ವಿಧಿಸುವುದಕ್ಕಿಂತ ಕೆಲವು ಬಾಬುಗಳಿಗೆ ಜಾಸ್ತಿ ಖರ್ಚು ಮಾಡಬೇಕಾಗುತ್ತದೆ ಅದನ್ನು ಸ್ಯಾಂಕ್ಷನ್ ಮಾಡಿ ಕೊಡಬೇಕು

ಉತ್ತರ —ಡೆಪ್ಯುಟಿ ಕಮಿಷನರು ಸ್ಯಾಂಕ್ಷನ್ ಮಾಡಬಹುದು ಅವರು ಮಾಡದಿದ್ದರೆ ಗವರ್ನ್‌ಮೆಂಟಿಗೆ ಬರೆದುಕೊಳ್ಳಿ

ಪ್ರಾರ್ಥನೆ —ಪ್ರತಿ ಡಿಸ್ಟ್ರಿಕ್ಟಿನಲ್ಲೂ ಇರುವ ಮುಜರಾಯಿ ಸತ್ರ ದೇವಸ್ಥಾನಗಳ ಕಾರುಬಾರುಗಳನ್ನು ರೆವಿನ್ಯೂ ಅಧಿಕಾರಿಗಳು ಮೇಲ್ವಿಚಾರಣೆ ನೋಡಿಕೊಳ್ಳುವುದು ಕಷ್ಟವಾದದ್ದರಿಂದ ಆಯಾ ಡಿಸ್ಟ್ರಿಕ್ಟಿಗೆ ಒಂದೊಂದು ಕಮಿಟಿಯನ್ನು ನೇಮಿಸಿ, ಜೀರ್ಣೋದ್ಧಾರದ ಕೆಲಸಗಳನ್ನು ನೋಡಿಕೊಳ್ಳುವ ಮಾಡಿಕೊಡಬೇಕು

ಉತ್ತರ —ಇದು ಅವಶ್ಯಕವೆಂದು ತೋರುತ್ತೆ ಯೋಚನೆ ಮಾಡುತ್ತೇವೆ

ಪ್ರಾರ್ಥನೆ —ನಂಜನಗೂಡು, ಮೇಲುಕೋಟೆ, ಚಾಮರಾಜನಗರ, ಮೊದಲಾದ ಕಡೆ ಇರುವ ದೇವಸ್ಥಾನಗಳು ಜಾತ್ರೆಗಳಲ್ಲೆಲ್ಲ ಪಂಕ್ತಿ ಮಾಡಿ ಛತ್ರಗಳನ್ನು ಕಟ್ಟಿಸಿಕೊಟ್ಟು ಇನ್ನು ಮುಂತಾಗಿ ಜನರ ಖರ್ಚನ್ನು ಕಡಿಮೆ ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನು ಪ್ರತ್ಯೇಕವಾಗಿ ನೇಮಿಸಬೇಕು

ಉತ್ತರ —ಒಳ್ಳೇದು, ಮಾಡುತ್ತೇವೆ

ಪ್ರಾರ್ಥನೆ —ಧರ್ಮದರ್ಶಿಗಳಿಗೆ ಚಲಾವಣೆಯ ಅಧಿಕಾರವೇನೂ ಇಲ್ಲ ಸರ್ಕಾರಿ ಅಧಿಕಾರಿಗಳಿಗಿರುವ ಕೆಲವು ಅಧಿಕಾರಗಳನ್ನು ಧರ್ಮದರ್ಶಿಗಳಿಗೆ ವಹಿಸಿಕೊಟ್ಟರೆ ಅವರು ಧರ್ಮಕಾರ್ಯಗಳನ್ನು ಸರಿಯಾಗಿಯೂ ತೃಪ್ತಿಕರವಾಗಿಯೂ ನಡೆಸಲು ಸಹಾಯವಾಗುವುದು

ಉತ್ತರ —ಈ ಭಾಗದಲ್ಲಿ ಕೆಲವು ರೂಲ್ಸು ಮಾಡಿ ಮೊದಲು ಒಂದೆರಡು ಕಡೆ ರೂಢಿಸಬೇಕೆಂದಿದೇವೆ

ಪ್ರಾರ್ಥನೆ —ಮಠ ದೇವಸ್ಥಾನಗಳಲ್ಲಿ ಭಕ್ತಿವಿಚಾರವಾದ ಬೋಧನೆಗಳೂ ಪಾಠಪ್ರವಚನಗಳೂ ನಡೆಯುವಂತೆ ಮಾಡಿಕೊಡಬೇಕು

ಉತ್ತರ —ಇದು ದಿನಕ್ರಮದಲ್ಲಿ ಆಗತಕ್ಕ ವಿಚಾರ ಬಲತ್ಕಾರದಿಂದ ನಡೆಯುವುದು ಸಹಜವಲ್ಲ

ಪ್ರಾರ್ಥನೆ —ಸರ್ಕಾರಿ ಛತ್ರಗಳಲ್ಲಿ ಬ್ರಾಹ್ಮಣೇತರರಾದ ಪ್ರಯಾಣಿಕರಿಗೂ ಭೋಜನಕ್ಕೆ ಅನುಕೂಲಮಾಡಿಕೊಡಬೇಕು

ಉತ್ತರ —ಹಣ ಉಳಿದರೆ ಇದನ್ನೂ ಮಾಡಬಹುದು

ಪ್ರಾರ್ಥನೆ —ಅಲ್ಲಲ್ಲಿ ಸಂಗತಿಕರಿಗೂ ಅನಾಥರಿಗೂ ವಾಸಿಯಾಗದಂಥ ರೋಗಿಷ್ಠರಿಗೂ ಆಲಯಗಳನ್ನು ಕಲ್ಪಿಸಿ ಅವರಿಗೆ ಜೀವನವನ್ನು ನಡಿಸಬೇಕು

ಉತ್ತರ —ಇದು ಸರ್ಕಾರದಿಂದ ಆಗತಕ್ಕ ಕೆಲಸವಲ್ಲ ಪ್ರಜೆಗಳು ಮಾಡಿಕೊಂಡರೆ ಗವರ್ನ್‌ಮೆಂಟಿನವರು ಸ್ವಲ್ಪ ದ್ರವ್ಯಸಹಾಯ ಕೊಡಬಹುದು

ಇತರ ವಿಷಯಗಳು

ಪ್ರಾರ್ಥನೆ —ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ವಜಾಮಾಡಬೇಕು ಇಲ್ಲವಾದರೆ ಮೈಸೂರು ಸೀಮೆಯ ಯೌವನಸ್ಥರನ್ನು ಮಾತ್ರ ಈ ಪರೀಕ್ಷೆಗೆ ಸೇರಿಸಿಕೊಳ್ಳಬೇಕು

ಉತ್ತರ —ನಿಮ್ಮ ಪ್ರಾರ್ಥನೆಯನ್ನು ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡುತ್ತೇವೆ

ಪ್ರಾರ್ಥನೆ —ಎಲ್ಲಾ ಉದ್ಯೋಗಗಳಿಗೂ ಮೈಸೂರು ದೇಶೀಯರನ್ನೇ ನೇಮಿಸಬೇಕು ಇವರಿಗೆ ವೇತನ ಕೊಟ್ಟು ಬೇರೆ ಬೇರೆ ವಿದ್ಯೆಗಳನ್ನು ಕಸುಬುಗಳನ್ನು ಕಲಿಸಬೇಕು

ಉತ್ತರ —ಸಾಧ್ಯವಾದ ಮಟ್ಟಿಗೆ ಹಾಗೇ ಮಾಡುತ್ತಿದೇವೆ ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಸರ್ಕಾರದವರು ಅನೇಕರನ್ನು ತರಪೇತು ಮಾಡಿರುತ್ತಾರೆ

ಪ್ರಾರ್ಥನೆ —ಸರ್ಕಾರಿ ಗ್ರಾಮಗಳಲ್ಲಿ ಬಾಗಾಯ್ತು ಹಾಗೆ ಇನಾಂ ಗ್ರಾಮಗಳ ರೈತರಿಗೂ ಮುಂಬರಿಗಾಗುವುದಕ್ಕೆ ಚುನಾವಣೆ ಮಾಡುವುದರಲ್ಲಿ ಹಕ್ಕನ್ನು ಕೊಡಿಸಬೇಕು

ಉತ್ತರ —ಸರ್ವೆ ಸೆಟ್ಲ್‌ಮೆಂಟ್ ಆಗಿರುವ ಗ್ರಾಮಗಳಲ್ಲಿ ಈ ರೀತಿ ಮಾಡಬಹುದೆಂದು ತೋರುತ್ತದೆ ಯೋಚಿಸಿ ಇತ್ಯರ್ಥ ಮಾಡುತ್ತೇವೆ

ಪ್ರಾರ್ಥನೆ —ಇಸ್ಟು ಗ್ರಾಮಗಳಿಗೆ ಒಬ್ಬ ಪ್ರತಿನಿಧಿಯು ಚುನಾಯಿಸಲ್ಪಡಬೇಕೆಂಬುದಾಗಿ ಸರ್ಕಾರದವರು ಸರ್ಕಲ್‌ಗಳನ್ನು ಗೊತ್ತುಮಾಡಿದರೆ ಉತ್ತಮ

ಉತ್ತರ —ಕ್ರಮೇಣ ಹೀಗೇ ಆದೀತು ಆತುರ ಪಡಬೇಕಾದದ್ದಿಲ್ಲ

ಪ್ರಾರ್ಥನೆ —ಸರ್ಕಾರದ ಇಲಾಖೆಗಳೆಲ್ಲಾ ಬೆಂಗಳೂರಿನಲ್ಲೇ ಇರುತ್ತವೆ ಆ ಪೈಕಿ ಕೆಲವನ್ನಾದರೂ ಮೈಸೂರಿಗೆ ವರ್ಗ ಮಾಡಿ ಕೂಡಬೇಕು

ಉತ್ತರ —ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ

ತಾಲ್ಲೂಕು ವರ್ತಮಾನಗಳು

ಚಿತ್ರದುರ್ಗ —ಹವಾ ಬದಲಾಗುತ್ತಿದೆ ಹಿಮ ಸುರಿಯುವ ದಿನಗಳು ಬರುತ್ತಿದೆ ಹಾಗಾದರೂ ಬೆಳಿಗ್ಗೆ ಸಂಜೆ ತಂಗಾಳಿಯೂ ರಾತ್ರಿಯಲ್ಲಿಯೂ ಛಳಿ ವಿಶೇಷವಾಗಿದೆ —ರೈತರು ಸುತ್ತ ಮುತ್ತ ಹೊಲಗಳನ್ನು ಕೊಯ್ದು ಒಟ್ಟುತ್ತಿದ್ದಾರೆ ಮಳೆಯು ಸಾಕಷ್ಟು ಬಿದ್ದುದರಿಂದ ಹೊಲಗಳಲ್ಲಾ ಸಾರಿ ಕ್ರಿಮಿ ಹೆಚ್ಚುವುದರಿಂದ ಧಾನ್ಯವು ಜಾಸ್ತಿಯಾಗುತ್ತಿದೆ ಸಂತೋಷ ಹೊಂದುವವನ್ನು ಸಿದ್ಧಮಾಡಿ ಅದನ್ನು ಕೂಡಿ ಇವರ ನೀರಿಗೆ ಅನುಕೂಲವಾಗುವಂತೆ ಮಾಡುವರೆಂಬ ಸಾರಿಕೆ ಇದೆ ಕೆಲಸವು ತಕ್ಕಮಟ್ಟಿಗೆ ನಡೆಯುತ್ತಾ ಇದೆ —ಜೂಜಾಡುವವರಿಗೆ [illegible] ಚಾವಡಿಯ ಮೇಲೆ ಇಲ್ಲಿ ಒಂದು ಕಡೆ ಅಡುತ್ತಿದ್ದವರನ್ನು ಹಿಡಿದು ಚಾರ್ಜ್ ಮೇಲೆ ಬಿಟ್ಟಿದ್ದಾರೆ ಹಿಡಿಯಲ್ಪಟ್ಟ ಹಣವೂ ಅವರ ವಿಚಾರಣೆ ಶೀಘ್ರದಲ್ಲೇ ನಡೆಯುವುದಾಗಿದೆ ಈಗಲಾದರೂ ದುಷ್ಟರು ಈ ಪದ್ಧತಿಯನ್ನು ಬಿಡುವರೆಂದು ನಂಬುವೆವು ಆದರೂ ಪೋಲೀಸಿನವರು ಇನ್ನೂ ಹೆಚ್ಚು ತಪಾಸು ನಡಿಸಿ ದುಷ್ಟರನ್ನು ಹಿಡಿದು ಈ ದುಷ್ಕೃತ್ಯವನ್ನು ಅಡಗಿಸುವುದರಲ್ಲಿ ನಿರತರಾಗಿರಬೇಕು —ನಮ್ಮ ಸೆಷನ್ಸ್ ಜಡ್ಜರಾದ ಮಿ ಹ ಜಾಹಗೀರ್ದಾರ್ ಸಾಹೇಬರವರು ಇಲ್ಲಿನ ಸೆಷನ್ ಕೇಸುಗಳನ್ನು ವಿಮರ್ಶಿಸುತ್ತಿದ್ದಾರೆ ಇವರು ಈ ತಿಂಗಳು ೧೪ನೇ ತಾ ತನಕ ಇಲ್ಲಿರುವುದಾಗಿ ವರ್ತಮಾನವಿದೆ —ಕಳೆದ ಸೋಮವಾರ ೧೫ನೇ ತಾ ನಿಂದ ಇಲ್ಲಿಯೂ, ಹೊಳಲ್ಕೆರೆ ಚಳ್ಳಕೆರೆ ಮುಂತಾದ ಸೆಂಟರುಗಳಲ್ಲಿಯೂ ಲೋವರ್ ಸೆಕೆಂಡರಿ ಪರೀಕ್ಷೆಗಳು ಆರಂಭವಾಗಿ ನಡೆಯುತ್ತಲಿವೆ

ಹೊಸಕೋಟೆ —ಈ ತಿಂಗಳು ೪ನೇ ತಾ ಬೆಂಗಳೂರಿನಿಂದ ಹೊಸಕೋಟೆ ಮಾರ್ಗವಾಗಿ ೧೦ನೇ ಬ್ಯಾಟ್ರಿ ಆರ್ಮಿಸೇಸ್ ಕಾಲಂ ಎಂಬುವ ಬ್ಯಾಟ್ರಿಯಿಂದ ಇಬ್ಬರು ಸಾರ್ಜಂಟ್ ಮೇಜರುಗಳೂ ಇಬ್ಬರು ಸೋಲ್ಜರುಗಳೂ ಅದೇ ಬ್ಯಾಟ್ರಿ ಆಫೀಸರ್ಸ್ ಮೆಸ್ ಯೂರೋಪಿಯನ್ ಸೋಲ್ಜರುಗಳೂ ದೇಶೀಯ ಜನಗಳೂ ಎಲ್ಲಾ ೨೪ ಜನ ಮುಂದೆ ಬಂದಿದ್ದರು ಇವರೆಲ್ಲರೂ ಬರುವ ಸೈನ್ಯಕ್ಕೆ ಅಡಿಗೆ ಮಾಡುತ್ತಾ ಇದ್ದರು ಸುಮಾರು ೪ ಗಂಟೆ ಸಮಯದಲ್ಲಿ ಅಮಲ್ದಾರರು ಮೆ|| ಗುರುರಾಯರವರೂ, ಪೋಲೀಸ್ ಇನ್ಸ್‌ಪೆಕ್ಟರ್ ಮಿ| ಅಬ್ದುಲ್ ರಜಾಕ್ ಸಾಹೇಬರವರೂ, ಶಿರಸ್ತೇದಾರರವರೂ, ಜಮೇದಾರರೂ, ಡ್ರಿಲ್ ಹವಾಲ್ದಾರರೂ ಮತ್ತು ಪೋಲೀಸಿನವರೂ ಇನ್ನೂ ಕೆಲವು ಜನ ಉದ್ಯೋಗಸ್ಥರೂ ಕ್ಯಾಂಪ್ ಸಪ್ಲೈ ಮಾಡುವುದಕ್ಕೆ ಹೋಗಿದ್ದ ಸಮಯದಲ್ಲಿ ಅಡಿಗೆ ಮಾಡುವ ಹೊಗೆಯಿಂದ ಒಂದು ಮರದ ಮೇಲೆ ಇದ್ದ ದೊಡ್ಡ ಜೇನು ಹುಳುಗಳು ಆಕಸ್ಮಾತ್ತಾಗಿ ಚದರಿ ಎಲ್ಲರನ್ನೂ ಕಚ್ಚಿದವು ಒಬ್ಬ ದೊರೆಯವರನ್ನು ಕಚ್ಚಿಹಾಕಿದ್ದಲ್ಲದೆ ಒಂದು ಕುದುರೆಯನ್ನೂ ಬಹಳ ಕಚ್ಚಿ ಶ್ರಮಪಡಿಸಿದವು ಮತ್ತು ಎಲ್ಲರೂ ನಾನಾ ಕಡೆ ಓಡಿಹೋದಾಗ್ಯೂ ಬಿಡದೆ ಕಚ್ಚಿದವು ನಮ್ಮ ಅಮಲ್ದಾರರಿಗೆ ಒಂದು ಮಾತ್ರ ಕಚ್ಚಿತ್ತು ಬದರಿಹೋಗಿದ್ದ ಕುದುರೆಗಳೂ ಅಮಲ್ದಾರರವರೂ ೧೧ ಗಂಟೆ ಸಮಯದಲ್ಲಿ ಒಂದು ಸ್ಥಳದಲ್ಲಿ ಕೂಡಿ ಆಲೋಚಿಸಿದರು [illegible] ಒಂಗ [illegible] ಸ್ಥಳದಲ್ಲಿ [illegible] ೧ ಗಂಟೆ ಸಮಯದಲ್ಲಿ ಯೂರೋಪಿಯನ್ ಆಫೀಸರುಗಳು ಮತ್ತು ಬ್ಯಾಟ್ರಿ ಸೈನ್ಯಗಳು ಬಂದರು ಆ ದಿವಸ ಒಂದು [illegible] ಹೊಟ್ಟೆನೋವಿನಿಂದ ಸತ್ತುಹೋಯಿತು ಜೇನುಹುಳುಗಳು ಕಚ್ಚಿದ ಕಾರಣ [illegible] ನೇ ತಾ ಬೆಂಗಳೂರು ಆಸ್ಪತ್ರೆಗೆ [illegible] ಸೈನಿಕರೆಲ್ಲಾ ೧೦ನೇ ತಾ ಮಾಲೂರಿಗೆ ಹೊರಟುಹೋದರು ನಮ್ಮ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರವರೂ ಜನಗಳಿಗೆ [illegible] ಕೊಂಡರೆ ಎಂದು [illegible] ೪ನೇ ತಾ ರಾತ್ರಿಯೇ ಜೇನುಹುಳುಗಳನ್ನು [illegible]ಯಿಂದ ಸುಡಿಸಿಬಿಟ್ಟರು —ಅದೇ ರೋಡು ಪಕ್ಕದಲ್ಲಿರುವ ದೊಡ್ಡ [illegible] ಹತ್ತಿರ ದ ಕೋರ್‌ಎಂಗ್ ಕೋಟಿನಲ್ಲಿ ಸ ಮಾರು ಎರಡು ತಿಂಗಿನಮರದಲ್ಲಿ ೨ ದೊಡ್ಡ ಜೇನುಗೂಡುಗಳು ಇದ್ದವು ಅವು ಅನೇಕ ಸಾರಿ ಪ್ರಯಾಣಿಕರಿಗೆ ಬಹಳ ತೊಂದರೆ ಕೊಡುತ್ತಿದ್ದವು ಅದನ್ನು ೧೦ನೇ ತಾ [illegible]ವರ ಅಪ್ಪಣೆ ಪ್ರಕಾರ ಪೋಲೀಸ್ ಇನ್ಸ್‌ಪೆಕ್ಟರವರೂ ಡ್ರಿಲ್ ಹವಾಲ್ದಾರರೂ ಪೋಲೀಸಿನವರೂ ಇನ್ನೂ ಅನೇಕ ಜನರನ್ನು ಕರೆದುಕೊಂಡುಹೋಗಿ ರಾತ್ರಿ ೧೧ ಗಂಟೆ ಸಮಯದಲ್ಲಿ ಮರ ಹತ್ತಿ ಬೆಂಕಿಯಿಂದ ಸುಟ್ಟು ಬೂದಿಮಾಡಿದರು —ಈ ದಾರಿಯಲ್ಲಿ ಪ್ರಯಾಣ ಮಾಡುವ ಜನಗಳಿಗೆ ತೊಂದರೆ ತಪ್ಪಿತು —ಈ ರಸ್ತೆಯಲ್ಲಿ ಸುಮಾರು ೩೦ ಜಟಕಾ ಗಾಡಿಗಳು ಇರುತ್ತವೆ ರಾತ್ರಿ ೯ ಗಂಟೆಯ ವೈಟ್‌ಫೀಲ್ಡ್ ಸ್ಟೇಷನ್ನಿಂದ ಬರುತ್ತವೆ ಆದರೆ ಒಂದು ಗಾಡಿಗಾದರೂ ಲಾಂದ್ರ ಇಲ್ಲ ಇದರಿಂದ ಪ್ರಯಾಣಿಕರಿಗೆ ತುಂಬ ಕಷ್ಟವೂ ನಷ್ಟವೂ ಆಗುತ್ತದೆ ಗಾಡಿಗಳಿಗೂ ಸಹ ಅಪಾಯ ಉಂಟು ಆದಕಾರಣ ನಮ್ಮ ಅಮಲ್ದಾರರವರೂ ಪೋಲೀಸ್ ಇನ್ಸ್‌ಪೆಕ್ಟರವರೂ ಚಿತ್ತಕ್ಕೆ ತಂದುಕೊಂಡು ಪ್ರತಿ ಒಂದು ಗಾಡಿಗೂ ಲಾಂದ್ರ ಇಡಿಸಬೇಕೆಂದು ಕೋರುತ್ತೇನೆ ಎತ್ತಿನ ಗಾಡಿಗಳೆಂತು ರಾತ್ರಿ ೧೦ ೧೧ ಗಂಟೆ ಸಮಯದಲ್ಲಿ ಪೇಡಿಗನಾಲ್ ಸಂತೆಗೆ ಹೋಗಿಬರುತ್ತವೆ ಈ ಪ್ರಜಾ ಸಂತೆಗಳಿಗೆ ಪ್ರಯಾಣಮಾಡುವವರು ಪ್ರತಿಯೊಂದು ಗಾಡಿಗೂ ಲಾಂದ್ರಗಳ ಇಡಿಸಿ ಕೀರ್ತಿಸಂಪಾದಿಸಿಕೊಳ್ಳಬೇಕೆಂದು ಕೋರುತ್ತೇನೆ

ಕುಣಿಗಲ್ ತಾ| ಹುಟ್ಟಿಗರ — ಈ ಪ್ರಾಂತ ರಾಗಿಬೆಳೆಯಲ್ಲಿ ಕಂಡ ನೆಲದ ಪಸಲು ಚನ್ನಾಗಿದೆ ಮೊದಲು ಸೆಲವು ವಿಶೇಷ ಮಳೆಯಿಂದ ನೀರುಬಿದ್ದು ರಾಗಿಪೈರು ನಾಶವಾಯಿತು ದುರ್ಭಿಕ್ಷವು ದೂರವಾಗಿ ಹೋಗುತ್ತಾ ಸುಭಿಕ್ಷವು ನೆಲೆಸುತ್ತಾ ಇದೆ [illegible] ಈ ವರ್ಷದ ಪಸಲು ಚನ್ನಾಗಿ ಬೆಳೆದು ಕೈಸೇರಿದರೆ ಅನುಕೂಲವಾಗುತ್ತೆ [illegible] ಯಥೇಷ್ಟವಾಗಿರುವುದರಿಂದ ಇನ್ನು ೧೫ ದಿವಸದೊಳಗಾಗಿ ಕೊಯಿಲು ಆಗಬಹುದು ಕೆಲವು ಕಡೆ ಹೊಲ [illegible] ಶುರು ಮಾಡುತ್ತಿದ್ದಾರೆ —ಇಲ್ಲಿಗೆ [illegible] ಠಾಣೆಯಲ್ಲಿರುವ [illegible] ಹನುಮಂತೇಗೌಡನನ್ನು ಯಾರೋ ದುಷ್ಟರು ಕೊಲೆ ಮಾಡಿರುತ್ತಾರೆ ಅವರ ಪತ್ತೆ [illegible] ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರು [illegible] ಅಜಮಾಯಿಷಿ ಮಾಡಿ ಕೊಲೆ ಮಾಡಿದವರ ತಲಾಷ್ ನಲ್ಲಿರುತ್ತಾರೆ ಕಳೆದ [illegible] ನೇ ತಾ [illegible] ಪಟೇಲ್ [illegible]ಗೌಡರು [illegible] ಜನ ಮಕ್ಕಳು, [illegible] ಜನಪದರಿಗೆ [illegible] ಮಾಡಿ [illegible] ಅಗ್ರಹಾರಗಳಿಗೂ, ಸುತ್ತಮುತ್ತಣ ಮೂರು ಗ್ರಾಮಗಳಿಗೆ ನ್ಯಾಯದಿ [illegible] ಉಚ್ಚಾರಣೆ ಮಾಡುವವರಿಗೂ, ಸರ್ವಜನರ ಸ್ತೋತ್ರಕ್ಕೆ ಪಾತ್ರರಾಗಿಯೂ ಇದ್ದರು [illegible] ಇವರ ಮಕ್ಕಳು [illegible] ಗೌಡರ ನಡಿಸುತ್ತಿದ್ದಾರೆ [illegible] ಅನೇಕ ಜನರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು —ಮೃತಪಟ್ಟ ೩ ದಿವಸಕ್ಕೆ ಸಮಾಧಿಯ ಮೇಲೆ ಅಕ್ಕಿ ಅರ್ಧ [illegible] ಕೊಡುವುದಲ್ಲದೆ ಆ ದಿವಸ ಬಂದು ಸೇರುವ ೨೦೦-೩೦೦ ಜನರಿಗೆ ಅನ್ನ ಮಾಡಿ ಭೋಜನ ಮಾಡಿಸುವುದು ರೂಢಿಯುಂಟು [illegible] ಗೌಡರವರು ಕೃಪಾಸ್ಪದರಾಗಿದ್ದರು ಬಡವರ ಗತಿ ಏನು? ಆ ರೀತಿ [illegible] ಜನರೆಲ್ಲ [illegible] ವಸ್ತುಗಳ ಬೆಲೆ ಮುಂದೆ ಬೇಕಾಗುತ್ತೆ [illegible] ಪಟ್ಟ ದಿವಸ ಶವ ದಫನ್ ಮಾಡಿ ಆಗುವುದರಲ್ಲೇ ಮುಕ್ತಾಯವಾಗುತ್ತೆ ಬೇಗನೆ ಒಂದು ದಿನದಲ್ಲಿ ಸಕಲ ಸಾಮಗ್ರಿಗಳನ್ನೂ ಒದಗಿಸಿಕೊಂಡು ೩ನೇ ದಿವಸ ಬೆಳಿಗ್ಗೆ ೧೦ ಘಂಟೆಯೊಳಗಾಗಿ ಊಟಕ್ಕೆ ಇಡಬೇಕಾದರೆ ಅವರ ಪರಿಪಾಟಲೆ ಏನಾಗ? ಈ ಪದ್ಧತಿಯನ್ನು ಪ್ರಾಜ್ಞರಾದವರು ಆಲೋಚಿಸಿ ಕೈಬಿಟ್ಟು ೧೧ ದಿವಸದಲ್ಲಿ [illegible] ರಣೆಯಾಗುವುದು —ಈ ಊರಿಗೆ ಪ್ಲೇಗ್ ಬಂದು ೨ ವರ್ಷವಾಯಿತು ಶಿಡುಬು ಏಳುವದು ಪ್ರಬಲವಾಗಿರುತ್ತೆ ಕೆಲವರು ಕುಣಿಗಲ್ ಆಸ್ಪತ್ರೆಗೆ ಬಟ್ಟೆಬುತ್ತಿ ಕಟ್ಟಿಕೊಂಡು ಮಕ್ಕಳನ್ನು ಹೊತ್ತುಕೊಂಡು ಹೋಗಿ ಟೀಕಾ ಹಾಕಿಸಿಕೊಂಡು ಬಂದರು ಕೆಲವರು ಟೀಕಾ ಹಾಕುವವರು ಈಗ ನಾಳೆ ಬಂದಾರು ಎಂದು ಎದುರುನೋಡುತ್ತಿರುವಷ್ಟೇ ಪ್ರಾಣ ಬಿಟ್ಟಂತಾಯಿತು ಮೆ|| ರುದ್ರಪ್ಪನವರ ಮನೆ [illegible] ಇನ್ನೂ [illegible] ಶಿಡುಬು ಎದ್ದಿರುತ್ತೆ [illegible] ವ್ಯಾಕ್ಸಿನೇಷನ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಗ್ರಾಮಾಂತರಗಳಿಗೆ ವ್ಯಾಕ್ಸಿನೇಟರು ೩ ತಿಂಗಳಿಗೊಂದಾವರ್ತಿಯು ಬಂದು ಟೀಕಾ ಹಾಕುವಂತೆ ಹುಕುಂ ಮಾಡಬೇಕೆಂಬುದಾಗಿ ಕೋರುತ್ತೇನೆ —ಇಲ್ಲಿಗೆ ೧ ಮೈಲಿ ಇರುವ ನಾಗನಹಳ್ಳಿಯಲ್ಲಿ ೧ ಎತ್ತು ಕಳುವಾಗಿದ್ದುದು ಪತ್ತೆಯಾಗಿ ಎತ್ತು ಮಾಲೀಕರಿಗೆ ಕೊಡಿಸಿ ೪ ಜನ ಅಪರಾಧಿಗಳಿಗೆ ತಲಾ ೬ ತಿಂಗಳು ಸಜಾ ಆಯಿತು ಮಡಿಕೆಹಳ್ಳಿಯಲ್ಲಿ ೧೦ ವರುಷದ ಒಂದು ಹೆಣ್ಣು ಹುಡುಗಿ ಸರ್ಪಾಕದ ಮನೆಯಲ್ಲಿ ೧ ಹಾವು [illegible] ಕಳ್ಳನನ್ನಿದ್ದನ್ನು ಮಾಲ್ ಸಹಿತ ಹಿಡಿದು ೩೦ ಸಾರದು ಮಾಡಿದ್ದಕ್ಕೆ ಶಾ| ಸಬ್ ರೆಜಿಸ್ಟ್ರಾರವರು ವಿಚಾರಣೆಯಿಂದ ೫ ದಿವಸ ಸಜಾ ಹಾಕಿ ಆ ಹುಡುಗಿಗೆ ಬಡ್ಡಿ ಪಾಪ ಹೇಳಿ ಕಳುಹಿಸಿದರು —ಕುಣಿಗಲ್ ದೊಡ್ಡ ಕೆರೆ ಚಿಕ್ಕ ಕೆರೆಗಳು ತುಂಬಿ ತುಳುಕಾಡುತ್ತಿವೆ ಇದರಿಂದ ೩ ಪಸಲು ಆಗುವುದೆಂದು ಹೇಳುತ್ತಾರೆ ರೋಗಾದಿ ಉಪದ್ರಗಳೇನೂ ಇಲ್ಲ ಈಗೀಗ ಅಲ್ಲಲ್ಲೇ ಜನರು ಛಳಿಜ್ವರ ವ್ಯಾಧಿ ಮಲಗುತ್ತಿದ್ದಾರೆ ಹಿಮಗಾಲಕ್ಕೆ ವಿಶೇಷ ಜನ ಮಲಗುವದರಲ್ಲಿ ಸಂದೇಹವಿಲ್ಲ

Printed and Published by the Rev H Gulliford, Proprietor and Manager, Wesleyan Mission Press, Mysore 18/11/1909

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ನವೆಂಬರ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೪೭

ಸುಗಂಧಗಳು.

77-2

ಪ್ರಸಿದ್ಧವಾದ ಮೈಸೂರು ಅಗರ್ (ಊದ) ಬತ್ತಿ ೧ ಸೇರಿಗೆ ರೂ ೧೨, ೫, ೩, ೨ ೮ ೦ ೧ ೪ ೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಲ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಲೋಕಪ್ರಸಿದ್ಧವಾದ ಕನ್ನಡ ಪುಸ್ತಕಗಳು

ಭೀಮ ಮಹಿಮಾದರ್ಶ ಈ ಹೊಸ ಪುಸ್ತಕವು ವಾಯುಪುತ್ರನಾದ ಭೀಮಸೇನನ ಚರಿತ್ರೆಯನ್ನೆಲ್ಲಾ ಮಹಾಭಾರತೇತಿಹಾಸದೊಡನೆ ಚೆನ್ನಾಗಿ ತಿಳಿಯಿಸುವುದು ಇದು ಬಹು ಮನೋಹರವಾದ ಉಪಾಖ್ಯಾನವಾಗಿಯೂ ಎಲ್ಲರೂ ಓದುವುದಕ್ಕೆ ತಕ್ಕುದಾಗಿಯೂ, ನೀತಿ ಬೋಧಕವಾಗಿಯೂ ಇರುವುದೆಂದು ವಿದ್ವಾಂಸರು ಹೇಳುತ್ತಾರೆ ವಚನ ಗ್ರಂಥ, ಡೆಮಿ 172 ಪುಟಗಳುಳ್ಳದು ಸ್ಟಿಫ್ ಬೈಂಡ್ ಕ್ರಯ 10 ಆಣೆ (ಎ ವಿ ಚಂದ್ರಶೇಖರಶಾಸ್ತ್ರಿಗಳಿಂದ ರಚಿತವಾದುದು)

೨ ಕೊಹಿನೂರು—ಇದು ಬಂಗಾಳಾ ಭಾಷೆಯಿಂದ ಕನ್ನಡಕ್ಕೆ ತರ್ಜುಮೆ ಆದುದು ಅನರ್ಘ ರಹನ ಚರಿತ್ರೆ ಇದನ್ನು ಮದ್ರಾಸ್ ಯೂನಿವರ್ಸಿಟಿಯವರು ಎಫ್ ಎ ಪರೀಕ್ಷೆಗೆ ಕನ್ನಡ ಟೆಕ್ಸ್ಟ್ ಆಗಿ ಇಟ್ಟಿರುವರು ಕ್ರಯ ಪ್ರತಿ 1 ಕ್ಕೆ 12 ಆಣೆ [73 6]

೩ ರಾಬಿನ್‌ಸನ್‌ಕ್ರೂಸೊ—ಇದು ಇಂಗ್ಲಿಷಿನಿಂದ ಕನ್ನಡಕ್ಕೆ ತರ್ಜುಮೆಯಾದುದು ಪ್ರತಿ ಪೇಜಿನಲ್ಲಿಯೂ ದೊಡ್ಡ ದೊಡ್ಡ ಚಿತ್ರಗಳಿರುವುವು ಲೋಕದಲ್ಲಿ ಇದರಂತಹ ಪುಸ್ತಕವೇ ಅಪರೂಪವೆಂದು ಅನೇಕ ಮಹನೀಯರು ಹೇಳುವರು ಈ ಕಥೆಯನ್ನು ಜೈಲಿನಲ್ಲಿರುವವರು ಓದಿದರೆ, ವ್ಯಸನ ಪರಿಹಾರವಾಗುವುದೆಂದು ಮಿ ಡಬ್ಲ್ಯು ಕರ್ನ್‌ಶರವರು ಹೇಳಿರುವರು ಕ್ರಯ 4 ಆಣೆ ಈ ಪುಸ್ತಕಗಳಿಗೆ ವಿ ಪಿ ಛಾರ್ಜು ಅಲಾಯಿದಾ

ವಿಳಾಸ — ದಿ ಜನರಲ್ ಏಜನ್ಸಿ ಮೈಸೂರು

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 46

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಅಗ್ಗವು ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿದರೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರೆಯುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕರಿಗಂಬಳಿ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 27

ತಲೆನೋವು ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು ಬೆನ್ನುನೋವು ಕೀಲುಗಳ ಮತ್ತು ಮಂಡಿಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ನಿಶ್ಚಯವಾಗಿ ನಾಸಿಯಾಗುತ್ತದೆ ಈ ವಿಷಯವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ ನಿಶ್ಚಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೂಳೆಯಿಂದ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ವಜಾ ಆಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ— ಜೆ ಎಸ್ ಕನ್ನಯಚೆಟ್ಟಿ, ಅಂಡ್ ಕಂಪೆನಿ ಕುಮಾರರು, ಮತ್ತು

ಎಸ್ ಪೀಟರ್ಸ್,

೩೩, ವೇದವಲ್ಲಿಪೆಳ್ಳ ಬೀದಿ, ವೇಪೇರಿ, ಮದರಾಸ್

ನೋಟಿಫಿಕೇಷನ್.

80 2

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನು ೬-೧೨-೦೯ ರ ಲಾಗಾಯಿತು ಮಾಗಡಿ ತಾಲ್ಲೋಕು "ಬಗನಗೆರೆ" ಕಾವಲಿನಲ್ಲಿಯೂ (ಅಂದರೆ, ಬೆಂಗಳೂರು—ಕುಣಿಗಲ್ ರಸ್ತೆಯ ೩೪ ನೇ ಮೈಲಿಯ ಸಮೀಪ) ಮತ್ತು ೧೨ ೧೨-೦೯ ರ ಲಾಗಾಯಿತು ಅರಸೀಕೆರೆ ತಾಲ್ಲೋಕು "ಗಂಡಸಿ" ಬಂಗ್ಲಾ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ ಇಷ್ಟವುಳ್ಳವರು ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನು ಪಡೆಯಬಹುದು

ಕ್ಯಾಂಪ್ ಮೈಸೂರು, ಎಚ್ ನಂಜುಂಡರಾಜೇ ಅರಸ್,
ತಾ ೧೪ ೧೧ ೦೯ ಸೂಪರಿಂಟೆಂಡೆಂಟ್, ಅಮೃತಮಹಲ್, ಇಲಾಖಾ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೨—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " ೦—೧೫—೨

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 47

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧವಾಗಿ ನಾವೇ ಸಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಚು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ
೧ ರೂ ೬ ಆ , ೧ ರೂ ೮ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ದೊಡ್ಡ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಹೊಸಗಳ ಟೋಪಿ, ಪೂರ್ತಿ ಮೇಜೋಡು ಅರ್ಧ ಮೇಜೋಡು ಇತ್ಯಾದಿಗಳ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ದೀಪಾವಳಿಗೆಂದು ಬಹುಮಾನ.

75-4

ಈ ಕೆಳಗೆ ವಿವರಿಸಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಿಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ನವೆಂಬರ್ ಆಖೈರ್‌ವರೆಗೆ ಮಾತ್ರ ವಿ ಪಿ ಛಾರ್ಜು ಅಲಾಹಿದಾ

ನಿರುಪಮಾ—ಹೊಸನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ ಹೆಂಡಕುಡುಕರ ಅವ್ಯವಸ್ಥೆ ಕಳ್ಳರ ಪರಿಣಾಮ ಇವುಗಳನ್ನು ತೋರ್ಪಡಿಸಿ ತಿದ್ದುವುದು ಅಂದವಾದ ಮುದ್ರಣ ಸೊಗಸಾದ ದಪ್ಪಕಾಗದ ಕ್ರಯ ರೂ ೦-೧೨-೦

ಉತ್ಪಲಕುಮಾರಿ—ಇದೊಂದು ಹೊಸ ನಾಟಕ ಪಾರಸೀ ನಾಟಕಗಳನ್ನು ಹೋಲುವುದು ಶೃಂಗಾರರಸವೂ ಹಾಸ್ಯರಸವೂ ಇದರಲ್ಲಿ ಪ್ರಾಮುಖ್ಯವನ್ನು ಹೊಂದಿರುವವು ಸತ್ಸಂಗದುಸ್ಸಂಗಗಳ ಕಾರತಮ್ಯವನ್ನು ಬೋಧಿಸುವ ಈ ಪುಸ್ತಕದ ಬೆಲೆ ರೂ ೦-೮-೦

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುಯವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು! ಋತುಮತಿಯರಾಗುವ ಮೊದಲ್ಗೊಂಡು ಗರ್ಭಿಣಿಯರ ಸ್ಥಿತಿ, ಪ್ರಸವಾವಸ್ಥೆ, ಬಾಣಂತಿತನ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅದರ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ ರೂ ೦-೧೨-೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು, ಆರತಿಯೆತ್ತುವ ಹಾಡು, ಬೀಗರಹಾಡು, ಬಾಗಿಲುತೆರೆಯುವಹಾಡು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ "ಬಾಲಿಕಾಗೀತಮುಕ್ತಾಕಲಾಪ" ದ ಗ್ರಾಟ್ಯುಗಳನ್ನೇ ಅನುಸರಿಸಿರುವುದು ಕ್ರಯ ರೂ ೦ ೪ ೦

ಇದಲ್ಲದೆ "ಹಾಸ್ಯಸಂಜೀವಿನಿ" ಎಂಬ ನಾಲ್ಕು ನಕಲೆಯನ್ನುಳ್ಳ ಪುಸ್ತಕ (೦-೪ ೦) "ಅಸಹಾಯಶೂರಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ (೦ ೨ ೬) "ಸತ್ಯಸಂಜೀವಿನಿ" ಎಂಬ ಸೊಗಸಾದ ಕಲ್ಪಿತಕಥೆ (೦ ೬ ೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ಣಾಟಕಚಂದ್ರಿಕೆ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

23 42

ಎಂ ಎಸ್ ಕುಮಾರಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ ಮಲಬಂಧ, ಬುದ್ಧಿಭ್ರಮಣೆ ಮಂಕುತನ, ಉರಿಮೂತ್ರ, ನೋವಾರಿಕೆ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಪಿಂಡ ಬಲ, ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ ಪ್ಲೇಗು ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಲ ೧ ಕ್ಕೆ ೧ ರೂಪಾಯಿ

ಬಾಲಕಂಟಿ ವಟಕ —ಪ್ಲೇಗ್ ಇದ್ದ ಮೊದಲಾಗಿ ಎಲ್ಲಾ ತರದ ಗಡ್ಡೆಗಳೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಂಜುಗಣ್ಣು, ತಲೆನೋವು, ತಲೆಭಾರ ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೆ ಮದೇಳಿಕೆ ತಂಪನ್ನು ಟುವಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ರೆಪ್ಲೈ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 41

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನಿಗಿಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಕುಸುಕೂಲೆ, ಮಕ್ಕಳ ಎಳವು, ಜ್ವರ, ಹಾಲುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಅರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸ್ವಾಭಾವಿಕವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವಾಗುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವು ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ; ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ; ಅಶಕ್ತಿ, ಎದೆಯುರಿ ಹಲ್ಲುಜಿನುಗುವದು; ಕಲಕಲ ಗುಡುಗು, ತಲೆನೋವು; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆ ನೋವು, ಚರ್ಮದ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [67-13]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುದು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-39]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು, ಅರ್ಧಾಂಗವಾಯು, ಎದೆಶೂಲೆ, ಗಾಯ, ಚಪ್ಪು, ಇತ್ಯಾದಿ.

ಇದರ ವಿಷಯವಾಗಿ ಸರ್ವ ಜನರು ಕೊಂಡಾಡುತ್ತಾರೆ. ಬಾಟ್ಲ ಒಂದರ ಕಿಮ್ಮತ್ತು ೦-೮-೦

ಗಜಕರ್ಣಾದಿ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ತಾಮಿಶ್ರಣ	೨-೦-೦
ಚೇಳುಕಡಿತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುಡ್ಡಿ ಕಾಗಳಿಗೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೫-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಬಿಚ್ಚು ಮುಲಾಮು—ಮಕ್ಕಳ ಪಿಚ್ಚಗೆ	೦ ೩ ೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರಿಯಿರಿ. ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರಸ್ಸು.—"ಅಮೃತಾಂಜನ," ಮುಂಬಯಿ.

CHAMBERLAIN'S COUGH REMEDY.



ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು.

4-47

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ರಾಮಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 6 47

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮೀನುಮನುಷ್ಯ ಇರುವ ಈ ಔಷಧದ ಗುರುತು.

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ.—(196 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದುಕೊಂಡಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಒದವಣೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು.

ಪ್ರತಿಯೊಂದಕ್ಕೆ 0—1—0

ಎಕ್ಸರ್ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-47]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪುಸ್ತಕಗಳು.

70-10

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦ ಇಂಗ್ಲಿಷ್ ಭಾಷೆಯನ್ನು ಓದಲೂ, ಬರಿಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧ ೨ ತಿಂಗಳೊಳಗಾಗಿ ತಿಳಿಸಿ ಸುಲಭವಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೮-೦

ಪಿ ರಾಮಾಚಾರ್ಯ ವಿಳಾಸ—ಬಿ ಕೆ ಮೂರ್ತಿ ಕಂಪನಿ
ನಂ ೧೮ ಒಂದನೆ ಬೀದಿ ಸಿದ್ದಿಕಟ್ಟೆ ಲಕ್ಷ್ಮೀರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾವಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೮—೦

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಷ್ಮೀರ್ ಪೋಸ್ಟ್

ಜ್ವರಹರಿ. 18 43



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವವು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮೇಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಜಾಹೀರು ಬೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ ೬—೯ ರೂ ೩—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಬಿಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವಾಪು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್ ದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

22—10—1909 ರಿಂದ 29—10—1909 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	2	0	0
ಮೈಸೂರು ,,	133	100	0	0
ಬೆಂಗಳೂರು ಡಿಸ್ಟ್ರಿಕ್ಟ್	*	*	*	*
ಮೈಸೂರು ,,	23	17	14	8
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	8	10	0	0
ಶಿವಮೊಗ್ಗ ,,	0	0	0	0
ಜುಮ್ಲಾ	166	138	15	9

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಕಾರ್ತೀಕ ಶುದ್ಧ ಚತುರ್ದಶಿ ಶುಕ್ರವಾರದಿಂದ ಕಾರ್ತೀಕ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ನವಂಬರ್ ಮತ್ತು ಡಿಸೆಂಬರ್

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ವೃಶ್ಚಿಕ ಮಾಸ
26	ಶುಕ್ರ *	ಚತುರ್ದಶಿ	21-58	ಭ	15-55	11
27	ಶನಿವಾ ‡	ಪೌರ್ಣಮಿ	19-18	ಕೃ	12-20	12
28	ರವಿವಾ §	ಪಾಡ್ಯಮಿ	15-10	ರೋ	9-21	13
29	ಚಂದ್ರ	ಬಿದಿಗೆ	11-30	ಮೃ	7-16	14
30	ಕುಜ †	ತದಿಗೆ	8-48	ಆ	5-45	15
1	ಬುಧ	ಚೌತಿ	7-2	ಪು	5-58	16
2	ಗುರು ,,	ಪಂಚಮಿ	6-18	ಪು	6-53	17

* ವೈಕುಂಠಚತುರ್ದಶಿ, ಕೃತ್ತಿಕಾ ಶಿವದೀಪ, ಚಾಮರಾಜನಗರದಲ್ಲಿ ಚಿತ್ರ ಮಂಟಪ ರಥ ‡ ತಿಥಿದ್ವಯಂ, ವ್ಯಾಸಪೂರ್ಣಿಮಾ, ಧಾತ್ರಿಪೂಜ, ವಿಷ್ಣುದೀಪ, ಚಾಮರಾಜೇಶ್ವರ ರಥ § ದ್ವಿತೀಯಾ ತಿಥಿ ಕಾರ್ತೀಕ ಸೋಮವಾರ † ಸಂಕಷ್ಟಚತುರ್ಥಿ ,, ಅಮೃತಸಿದ್ಧಿಯೋಗ.

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಷ್ಟೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೪-೦-೦	೧೪-೨-೦
ಕೆಂಬೂತಿ ಅಕ್ಕಿ ಅವಲ್	..	೧೪-೮-೦	೧೩-೮-೦
,, ದುಯಂ	...	೧೪-೦-೦	೧೩-೦-೦
ಜಾವ್ರಾಣಿ ಅಕ್ಕಿ	..	೧೪-೦-೦	೧೪-೮-೦
ಸಣ್ಣಕ್ಕಿ ಅವಲ್	..	೧೬-೦-೦	೧೬-೮-೦
,, ದುಯಂ	..	೧೫-೮-೦	೧೫-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	...	೧೭-೦-೦	೧೫-೮-೦
,, ದುಯಂ	...	೧೪-೮-೦	೧೪-೮-೦
ಕೈಕೆ ರಾಗಿ ಪಲ್ಲಾ ೧ಕ್ಕೆ	...	೯-೦-೦	೮-೮-೦
ಕಾರ್ರಾಗಿ	..	೮-೧೨-೦	೮-೦-೦
ಜೋಳ	...	೭-೧೨-೦	೮-೦-೦
ಹಲಸಂದೆ ಪಲ್ಲಾ ೧ಕ್ಕೆ	...	೧೧-೦-೦	೧೧-೮-೦
ಬೀನ್ ಅವರೆ	...	೧೪-೦-೦	೧೫-೦-೦
ಹೆಸರು	...	೧೨-೦-೦	೧೦-೮-೦
ಉದ್ದು	...	೧೪-೪-೦	೧೨-೦-೦
ಕಡಲೆ	...	೧೪-೪-೦	೧೦-೦-೦
ಎಳ್ಳು ಸೇ ೧೨೭ ಕ್ಕೆ	...	೧೫-೦-೦	೧೪-೦-೦
ಹುರುಳಿ	...	೧೨-೮-೦	೧೨-೦-೦
ಹರಳು ೧೨೭ ಸೇರಿಗೆ	..	೧೪-೦-೦	೧೨-೦-೦
ನೀಗೇಕಾಯಿ ಮಣ ೧ಕ್ಕೆ	..	೨-೮-೦	೨-೦-೦
ಮೆಣಸಿನಕಾಯಿ	...	೬-೦-೦	೩-೧೪-೦
,, ದುಯಂ	...	೫-೮-೦	೩-೮-೦
ಬೆಲ್ಲ ಮೊದ್ದ ಅಚ್ಚು	..	೮-೮-೦	ಮ ೨-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	...	೪-೮-೦	೪-೪-೦
ಹರಳೆಣ್ಣೆ ,,	...	೫-೮-೦	೪-೧೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	೯-೦-೦	೯-೪-೦
ಉಪ್ಪು ,,	...	೬-೮-೦	೫-೧೨-೦
ಹುಣಸೇ ಹಣ್ಣು	...	೧-೧೨-೦	೧-೧೨-೦
,, ಹಳೇದು	...	೧-೮-೦	೧-೮-೦
ಕುಸ್ಬ ಮಣ ೧ಕ್ಕೆ	...	೧೬-೮-೦	೧೪-೦-೦
ಸೀಮೆಯೆಣ್ಣೆ ಸೆಟ್ಟು ೧ಕ್ಕೆ	...	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	...	೫-೦-೦	೪-೮-೦
ಅಳಲೀಕಾಯಿ ಮಣ ೧ಕ್ಕೆ	...	೧-೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೧-೦-೦	೦-೧೨-೦
ಚಿನ್ನ (ಪೌಣ್) ಕೆಂಪು	...	೧೫-೯-೦	೧೫-೬-೦
,, ,, ಪಸಿಮೆ	...	೧೬-೦-೦	೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೫-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೪-೦	೬೪-೦-೦

ಗುಬ್ಬಿಯಲ್ಲಿ ಹೈ ಸ್ಕೂಲ್.

ಈಗ ಗುಬ್ಬಿಯಲ್ಲಿರುವ ಮಿಡ್ಲ್ ಎ. ವಿ. ಸ್ಕೂಲಿನಲ್ಲಿ, ನಾಳೆ ಜನವರಿ ಆಗಾಯಿತು, ಹೈಸ್ಕೂಲಿನ ಪ್ರಥಮ ಭಾಗವಾದ “ಫೋರ್ತ್ ಫಾರಂ” ತರಗತಿಯೊಂದು ಮಾತ್ರ ಇಡಲ್ಪಡುತ್ತದೆ. ಇದಕ್ಕೆ ಸೇರಲು ಬರತಕ್ಕ ವಿದ್ಯಾರ್ಥಿಗಳು ಜನವರಿ ೮ ನೇ ತಾರೀಖಿನೊಳಗಾಗಿ ದರಖಾಸ್ತುಗಳನ್ನು ಮಾಡಿಕೊಳ್ಳಬೇಕು. ಪರಸ್ಥಳದಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಭೋಜನದ ಏರ್ಪಾಡು ಮಾಡಿರುವುದಲ್ಲದೆ, ಸ್ಕಾಲರ್‌ಷಿಪ್‌ಗಳೂ ಸಹ ದೊರೆಯುತ್ತವೆ. ವೀರಶೈವರಲ್ಲದವರಿಗೂ ಕೆಲವು ಮಂದಿಗೆ ಮಾತ್ರ ಸ್ಕಾಲರ್‌ಷಿಪ್‌ಗಳು ದೊರೆಯುತ್ತವೆ.

ಸ್ಕಾಲರ್‌ಷಿಪ್‌ಗಳನ್ನು ಅಪೇಕ್ಷಿಸುವವರು ಜನವರಿ ತಾರೀಖು ೧೫ ನೇ ಶನಿವಾರ ಮೊಪ್ಪು ಹಾಜರಾಗಬೇಕು

ತಾ ೨೦ ನೇ ನವಂಬರ್, ೧೯೦೯ ಜಿ. ಯು. ಮುರಿಗಪ್ಪ, ಸೆಕ್ರಟರಿ, ಮಿಡ್ಲ್ ಎ. ವಿ. ಸ್ಕೂಲ್, ಗುಬ್ಬಿ ಹೈಸ್ಕೂಲ್ ಮ್ಯಾನೇಜಿಂಗ್ ಕಮಿಟಿ

ಕಾಲಸ್ಥಿತಿಯನ್ನು ತಿಳಿಸುವ ಇಲಾಖೆಯು.

ಕಾಲಸ್ಥಿತಿ ಅಂದರೆ ಬಿಸಲು, ಗಾಳಿ, ಮಳೆ, ಮೋಡವಾಗುವುದು, ಈ ಮೊದಲಾದ ವಿಷಯಗಳನ್ನು ಗೊತ್ತುಮಾಡಿ ತಿಳಿಸುವುದಕ್ಕೆ ಸರ್ಕಾರದವರು ಒಂದು ಪ್ರತ್ಯೇಕವಾದ ಇಲಾಖೆಯನ್ನು ಏರ್ಪಡಿಸಿರುತ್ತಾರೆ ಈ ಇಲಾಖೆಯವರು ಕಳೆದ ವರುಷದ ರಿಪೋರ್ಟನ್ನು ಪ್ರಕಟಮಾಡಿರುವರು. ಇದರಲ್ಲಿ ಸಾಮಾನ್ಯ ಪ್ರಜೆಗಳಿಗೆ ಓದುವುದಕ್ಕೆ ಕುತೂಹಲವನ್ನುಂಟುಮಾಡುವಂಥಾ ವಿಷಯಗಳು ಅಷ್ಟೇನೂ ಇಲ್ಲ ಆದರೆ ಆಗಿಂದಾಗ್ಗೆ ಹವಾ ಬದಲಾವಣೆಯಾಗುವುದು ಈ ಇಲಾಖೆಗೆ ಮೊದಲೇ ತಿಳಿದುಬರೋಣದರಿಂದ ಈ ವಿಚಾರವನ್ನು ಮುಂದಾಗಿ ಪ್ರಜೆಗಳಿಗೆ ತಿಳಿಯಪಡಿಸುವಂತೆ ಆ ಇಲಾಖೆಯವರು ಮಾಡುವುದು ಒಳ್ಳೇದಲ್ಲವೇ ಎಂದು ಸೂಚಿಸುತ್ತೇವೆ. ಮುಂದೆ ಸಂಭವಿಸಬಹುದಾದ ಕಾಲಸ್ಥಿತಿಯು ಇಂದಾದ್ದೆಂದು ತಿಳಿದು ಹೇಳುವುದು ಸುಲಭವಲ್ಲವೆಂದು ನಮಗೆ ತಿಳಿದಿದೆ ಆದರೆ ಹವಾ ಬದಲಾವಣೆ ಯಾವ ಸೂಚನೆಗಳು ಮುಂದಾಗಿ ಕಂಡುಬರುವ ಸಂದರ್ಭಗಳಲ್ಲಿ ಅಂಥಾ ವಿಚಾರವನ್ನು ಮೊದಲೇ ಪ್ರಕಟಮಾಡಿದರೆ ರೈತರೇ ಮೊದಲಾದ ಪ್ರಜೆಗಳಿಗೆ ಅದರಿಂದ ಪ್ರಯೋಜನವಾದೀತೆಂದು ನಮಗೆ ತೋರುವುದು

ಗೋರೋಜನ ಮತ್ತು ಅದರ ಪ್ರಯೋಜನ.

ಪಿತ್ತಜನಕಾಂಗವು (ಕಾಲಕಂಡ) ಪ್ರಾಣಿಗಳ ಶರೀರದಲ್ಲಿ ಒಂದು ದೊಡ್ಡ ಶೋಧಕ ಯಂತ್ರವಾಗಿದೆ ಇದು ಹೊಟ್ಟೆಯಲ್ಲಿ ಅನ್ನಕೋಶದ ಬಲಭಾಗದಲ್ಲಿದೆ ಈ ಕಾಲಕಂಡದಲ್ಲಿ ಪಿತ್ಥವು ಸದಾಕಾಲದಲ್ಲಿಯೂ ಉತ್ಪತ್ತಿಯಾಗುತ್ತಲೇ ಇರುವುದು ಆಹಾರವು ಹೊಟ್ಟೆಯಿಂದ (ಜಠರ) ಸಣ್ಣ ಕರುಳುಗಳಿಗೆ ಬಂದು ಸೇರುವಾಗ ಪಿತ್ಥರಸವು ಕಾಲಕಂಡದಿಂದ ಒಂದು ದೊಡ್ಡ ನಾಳದ ಮಾರ್ಗವಾಗಿ ಹರಿದುಬಂದು ಆಹಾರದೊಡನೆ ಸೇರುತ್ತದೆ ಕರುಳಿನಲ್ಲಿ ಆಹಾರವಿಲ್ಲದಿದ್ದರೆ ಉತ್ಪತ್ತಿಯಾದ ಪಿತ್ಥವು ಪಿತ್ತ[illegible] ಸೇರುತ್ತದೆ ಪ್ರಾಣಿಗಳು ಜೀವಿಸಿರುವಾಗ ಪಿತ್ಥರಸವು ಆಹಾರದಲ್ಲಿರುವ ಮೇ[illegible]ಗ (ಜಿಡ್ಡು ಪದಾರ್ಥ)ವನ್ನು ಕರಗಿಸಿ ಅತಿ ಸೂಕ್ಷ್ಮವಾಗಿ ಮಾಡಿ ಶರೀರಕ್ಕೆ ಸೇರುವಂತೆ ಮಾಡುತ್ತದೆ. ಅಲ್ಲದೆ ಕರುಳಿನಲ್ಲಿರುವ ಆಹಾರವು ಕೊಳೆಯದಂತೆ ಕಾಪಾಡುತ್ತದೆ ಮತ್ತು ಮಲವಿಸರ್ಜನೆಗೆ ಬಹಳ ಸಹಕಾರಿಯಾಗಿಯೂ ಇರುತ್ತದೆ

ದನಕರುಗಳ ಪಿತ್ಥಕೋಶದಲ್ಲಿ ಸಿಕ್ಕುವ ಪಿತ್ಥರಸವನ್ನು ನಾವು ಶುದ್ಧಿಮಾಡಿ ಅನೇಕ ವೇಳೆಗಳಲ್ಲಿ ಮಕ್ಕಳಿಗೆ ಅಜೀರ್ಣಸಂಬಂಧವಾದ ರೋಗಗಳಲ್ಲಿ ಉಪಯೋಗಿಸುತ್ತೇವೆ. ಇದಕ್ಕೆ ಗೋರೋಜನವೆಂದು ಹೆಸರು ಅಲ್ಲದೆ ಈ ಪದಾರ್ಥದ ಇತರ ಉಪಯೋಗಗಳು ಅನೇಕರಿಗೆ ನಮ್ಮ ದೇಶದಲ್ಲಿ ಗೊತ್ತಾಗಿರಲಾರದು ಪಿತ್ಥವು ಸಾಮಾನ್ಯವಾಗಿ ಹಳದಿ ಬಣ್ಣವುಳ್ಳದ್ದಾಗಿಯೂ ಕಹಿಯಾಗಿಯೂ ಇದೆ ಮತ್ತು ಅದು ಕ್ಷಾರ ಸ್ವಭಾವವುಳ್ಳ ರಸವಾಗಿದೆ. ಕೆಲವು ವೇಳೆಗಳಲ್ಲಿ ಪಿತ್ಥವು ಕಲ್ಲಿನಂತೆ ಗಟ್ಟಿಯಾದ ಸ್ಥಿತಿಯಲ್ಲಿ ಪಿತ್ಥನಾಳಗಳಲ್ಲಿಯೂ ಪಿತ್ಥಕೋಶದಲ್ಲಿಯೂ ಸಿಕ್ಕುತ್ತದೆ ಹೀಗೆ ಗಟ್ಟಿಯಾಗಿ ಸಿಕ್ಕುವ ಪಿತ್ಥರಸವನ್ನು ಅಮೇರಿಕಾ ಖಂಡಕ್ಕೆ ಸೇರಿದ ಚಿಕಾಗೋ ಪಟ್ಟಣದವರು ಕಟುಗರಿಂದ ತೆಗೆದುಕೊಂಡು ಶುದ್ಧಮಾಡಿ ಜಪಾನ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಾರೆ ಅದರ ಬೆಲೆಯು ಪೌಂಡು ಒಂದಕ್ಕೆ ೩೦೦ ರಿಂದ ೫೦೦ ರೂಪಾಯಿ ವರೆಗೂ ಆಗುತ್ತದೆ. ಅದನ್ನು ರೇಷ್ಮೆ ಮುಂತಾದವುಗಳಿಗೆ ಬಣ್ಣಹಾಕುವುದಕ್ಕೂ ಇನ್ನು ಇತರ ಕೈಗಾರಿಕೆ ಕೆಲಸಗಳಲ್ಲಿಯೂ ಬಹಳವಾಗಿ ಉಪಯೋಗಿಸುತ್ತಾರೆ ನಮ್ಮ ದೇಶದಲ್ಲಿಯೂ ದನಕರುಗಳ ಮಾಂಸವನ್ನು ಅನೇಕರು ಆಹಾರವಾಗಿ ಉಪಯೋಗಿಸುತ್ತಾರೆ. ಕಟುಕರು ಅವುಗಳ ಮಾಂಸಖಂಡಗಳನ್ನೂ ಇತರ ಕೆಲವು ಭಾಗವನ್ನೂ ತೆಗೆದುಕೊಂಡು ಪಿತ್ತಕೋಶ ಮುಂತಾದವನ್ನು ನಿಷ್ಪ್ರಯೋಜನವೆಂದು ಬಿಸಾಡುತ್ತಾರೆ ಅಂಥವರು ಗಟ್ಟಿಯಾಗಿ ಸಿಕ್ಕುವ ಪಿತ್ತರಸವನ್ನು ಶುದ್ಧಿಮಾಡಿ ಕೂಡಿಟ್ಟರೆ ಬಹಳ ಪ್ರಯೋಜನವುಂಟು.

ಮೆ॥ ಬಿ. ನಾಗಪ್ಪನವರಿಗೆ ಸಬ್ ಜಡ್ಜಿ ಕೆಲಸವಾದುದಕ್ಕೆ ಸಂತೋಷ.

ಸನ್ ೧೯೦೯ ನೇ ಇಸವಿ ನವಂಬರು ತಿಂಗಳು ೧೮ ನೇ ತಾರೀಖು ಗುರುವಾರದ ದಿವಸ ಮ ರಾ॥ ಧರ್ಮಪ್ರವರ್ತಕ ತೋಟದಪ್ಪನವರ ಛತ್ರದಲ್ಲಿ ಸೇರಿದ್ದ ವರ್ತಕಮಂಡಲಿಯ ವಿವಾದಗಳ ನಡವಳಿಕೆಗಳು :—

ಮ ರಾ ಗಳಾದ,

ಗಂಗಯ್ಯನವರು, ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು, ಮಂಡಿ ಜವರಾಯ ಲಿಂಗಪ್ಪನವರು, ಹಜರತ್ ಮಹಮ್ಮದ್ ಅಬ್ಬಾಸ್‌ಖಾನ್ ಸಾಹೇಬರು, ವೀರಭದ್ರ ಶೆಟ್ಟರವರು, ಹನುಮಪ್ಪನವರು, ಯಜಮಾನ್ ಬಸಪ್ಪನವರು, ಪಾಪಣ್ಣನವರು, ವೀರಭದ್ರಪ್ಪನವರು, ಎತಿ ಸಿದ್ದಲಿಂಗಪ್ಪನವರು, ರಾಜಪ್ಪನವರು, ವೆಂಕಟಮುನಿಯಪ್ಪನವರು, ಮುತ್ತೋಜಿರಾಯರು, ಸಜ್ಜನರಾಯರು, ಕೆಂಚಪ್ಪನವರು, ಆದೆಪ್ಪನವರು, ನಾಗರಾಜಪ್ಪನವರು, ಸಿ. ಬಿ. ನರಸಿಂಹಯ್ಯನವರು, ವೆಂಕಟರಮಣಯ್ಯನವರು, ಚಿಂತಲಪ್ಪನವರು, ಚನ್ನವೀರಪ್ಪನವರು, ನರಸಿಂಹಣ್ಣನವರು, ಶಿವಪ್ಪನವರು, ರೇವಣಸಿದ್ದಪ್ಪನವರು, ಬುಳ್ಳಪ್ಪನವರು, ದಿಬ್ಬೂರು ರುದ್ರಪ್ಪನವರು, ಕಾಳಕುಂಟೆ ಶಿವಪ್ಪನವರು, ವಗೈರೆ

ಮ॥ ರಾ॥ ಎತಿ ಸಿದ್ದಲಿಂಗಪ್ಪನವರು, ಮ॥ ರಾ॥ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಅಗ್ರಾಸನವನ್ನು ವಹಿಸಬೇಕೆಂದು ಉದ್ದೇಶಿಸಿದರು : ಮ॥ ರಾ॥ ಗಳಾದ ರಾಜಪ್ಪನವರು ಮತ್ತು ವೀರಭದ್ರಶೆಟ್ಟರವರು ಅನುಮೋದಿಸಿದರು ; ಸರ್ವರೂ ಸಮ್ಮತಿಸಿದರು

ಬ್ಯಾರಿಸ್ಟರ್ ಎಟ್ ಲಾ, ಮೆ॥ ಬಿ॥ ನಾಗಪ್ಪನವರಿಗೆ ಶ್ರೀಮಾನ್ ಮಹಾರಾಜರವರು ಸಬ್ ಜಡ್ಜಿ ಕೆಲಸವನ್ನು ಕೊಟ್ಟದ್ದಕ್ಕಾಗಿ, ವರ್ತಕ ಮಂಡಲಿಗೆ ಉಂಟಾದ ಸಂತೋಷವನ್ನು ಕುರಿತು ಮ॥ ರಾ॥ ವೀರಭದ್ರಶೆಟ್ಟರವರು ಮತ್ತು ಹಜರತ್ ಮಹಮ್ಮದ್ ಅಬ್ಬಾಸ್‌ಖಾನ್ ಸಾಹೇಬರೂ ಸಹ ಮಾತನಾಡಿದರು

ಮೈಸೂರು ದೇಶಸ್ಥರಾಗಿ ಸೀಮೆಗೆ ಹೋಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಆ ದೇಶದ ಆಡಳಿತಗಳನ್ನು ತಿಳಿದುಕೊಂಡು ಬಂದು, ನಮ್ಮ ಪ್ರಯೋಜನಕ್ಕಾಗಿ ತಮ್ಮ ಬುದ್ಧಿಯನ್ನು ಖರ್ಚುಮಾಡಿ, ಇದುವರೆವಿಗೂ ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ಮಾಡಿದ್ದಲ್ಲದೆ, ತಮ್ಮ ಕೆಲಸ ಕಾರ್ಯಗಳನ್ನು ಎಲ್ಲರಿಗೂ ಸಮರ್ಪಕವಾಗುವಂತೆ ಮಾಡಿ, ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡರು ಎಂದು ಹೇಳಿದರು.

ಈ ಸಂತೋಷವನ್ನು ಶ್ರೀಮಾನ್ ಮಹಾರಾಜರವರಿಗೆ ತಂತಿ ಮೂಲಕ ತಿಳುಹಿಸಬೇಕೆಂದು ಮ॥ ರಾ॥ ಗಂಗಯ್ಯನವರು ಉದ್ದೇಶಿಸಿದರು , ಮ॥ ರಾ॥ ಮುತ್ತೋಜಿರಾಯರು ಅನುಮೋದಿಸಿದರು , ಸರ್ವರೂ ಒಪ್ಪಿದರು. ಮುಂದೆ ಹೇಳುವಂತೆ ಒಂದು ಟೆಲಿಗ್ರಾಂ ಕಳುಹಿಸಲ್ಪಟ್ಟಿತು —ಮೈಸೂರು ದೇಶಸ್ಥರಾಗಿಯೂ, ಬ್ಯಾರಿಸ್ಟರ್ ಪರೀಕ್ಷೆಯನ್ನು ಮೊದಲನೇ ತರಗತಿಯಲ್ಲಿ ಮಾಡಿದವರಾಗಿಯೂ, ವಿದ್ಯಾಭ್ಯಾಸದಲ್ಲಿ ಹಿಂದುಳಿದ ಜನಗಳಿಗೆ ಪ್ರತಿನಿಧಿಯಾಗಿಯೂ ಇರುವ ಮೆ॥ ಬಿ. ನಾಗಪ್ಪನವರಿಗೆ ಸಬ್ ಜಡ್ಜಿ ಕೆಲಸವನ್ನು ದಯಪಾಲಿಸಿದ್ದಕ್ಕಾಗಿ, ಬೆಂಗಳೂರಿನ ವರ್ತಕ ಮಂಡಲಿಯವರು ತಮ್ಮ ಅಪಾರವಾದ ಸಂತೋಷ ಮತ್ತು ಕೃತಜ್ಞತೆಯನ್ನು ಶ್ರೀಮಾನ್ ಮಹಾರಾಜರವರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳಲು ಅಪ್ಪಣೆಯನ್ನು ಬೇಡುತ್ತಾರೆ

ಮ॥ ರಾ॥ ಗುಬ್ಬಿ ತೋಟದಪ್ಪನವರು ಅಗ್ರಾಸನವನ್ನು ವಹಿಸಿದ್ದಕ್ಕಾಗಿ, ಸಭಿಕರ ಪರವಾಗಿ ವಂದನೆಗಳನ್ನು ಸಮರ್ಪಿಸಬೇಕೆಂದು ಮ॥ ರಾ॥ ಜವರಾಯಪ್ಪನವರು ಉದ್ದೇಶಿಸಿದರು , ಮ. ರಾ ಗಳಾದ ಸಜ್ಜನರಾಯರು ಮತ್ತು ಆದೆಪ್ಪನವರು ಅನುಮೋದಿಸಿದರು

ಗುಬ್ಬಿ ತೋಟದಪ್ಪ.
ಸಭಾಧ್ಯಕ್ಷರು

ಪಾಠಶಾಲೆಗಳಲ್ಲಿ ಮತ ಮತ್ತು ನೀತಿಬೋಧನೆ.

ನಮ್ಮ ಈ ಮೈಸೂರು ಸಂಸ್ಥಾನದಲ್ಲಿ ಹಿಂದೂಗಳೂ, ಮಹಮ್ಮದೀಯರೂ, ಮತ್ತು ಕ್ರಿಸ್ತರೂ ಇವರೆಲ್ಲರೂ ಪ್ರಜಾಕೋಟಿಯಲ್ಲಿ ಸೇರಿದವರಾಗಿರುತ್ತಾರೆ. ಇವರೆಲ್ಲರೂ ಒಬ್ಬ ರಾಜನ ಆಳ್ವಿಕೆಗೆ ಒಳಪಟ್ಟು, ಒಂದೇ ವಿಧವಾದ ನ್ಯಾಯ ಕಷ್ಟ ಸುಖಗಳೂ ಒಂದೇ ಎಂಬ ಅಂಶಗಳನ್ನು ಚೆನ್ನಾಗಿ ತಿಳಿದುಕೊಂಡು ಇವರಲ್ಲಿ ಪರಸ್ಪರ ಇರತಕ್ಕ ಮತ ವೈಷಮ್ಯಗಳನ್ನು ತ್ಯಜಿಸಿ ಇತರ ಬ್ರಿಟಿಷ್ ರಾಜ್ಯಗಳಲ್ಲಿರತಕ್ಕ ಪ್ರಜೆಗಳು ತಮ್ಮ ಮತಕ್ಕೆ ಅಥವಾ ತಮ್ಮ ದೇಶಕ್ಕೆ ಅಂದರೆ ಇಂಡಿಯಾ ದೇಶಕ್ಕೆ ಸೇರಿದವರೆಂದು ಗ್ರಹಿಸಿ ತಾವೂ ಒಂದು ಜನಾಂಗದವರೆಂದು ಹೇಳಿಕೊಳ್ಳುವದಕ್ಕೆ ಮಾರ್ಗವ್ಯಾವುದು ? ಪಾಠಶಾಲೆಗಳಲ್ಲಿ ಬರೀ ಹಿಂದೂ ಮತತತ್ವವನ್ನೇ ಆಗಲಿ, ಬರೀ ಕ್ರೈಸ್ತಮತತತ್ವವನ್ನೇ ಆಗಲಿ ಬೋಧಿಸಿದರೆ ಸಾರ್ಥಕವೇನು ? ಆಯಾ ಮತಕ್ಕೆ ಸೇರಿದ ಬಾಲಕರು ತಮ್ಮ ತಮ್ಮ ಮತದ ವಿಷಯವನ್ನು ಮಾತ್ರ ತಿಳಿದುಕೊಂಡರೆ ಸಾಕಾದಷ್ಟು ಫಲ ದೊರಕೀತೇ ? ಎಂಬೀ ಪ್ರಶ್ನೆಗಳು ಸ್ವಲ್ಪ ಆಲೋಚನೆ ಮಾಡತಕ್ಕದ್ದಾಗಿವೆ ಯಾವ ಮತಕ್ಕೆ ಸೇರಿದ ಬಾಲಕನೇ ಆಗಲಿ ತನ್ನ ಮತವನ್ನು ಮಾತ್ರ ತಿಳಿದುಕೊಂಡು ಇತರ ಮತಗಳ ವಿಷಯವು ಸ್ವಲ್ಪವೂ ತಿಳಿಯದಿದ್ದರೆ ಅವನು ದೊಡ್ಡವನಾದ ಮೇಲೆ ತನ್ನ ಮತವೇ ಹೆಚ್ಚು ಎಂಬ ಒಂದು ದುರಭಿಪ್ರಾಯವು ಅವನ ಮನಸ್ಸಿನಲ್ಲಿ ಚೆನ್ನಾಗಿ ನಾಟುವದಿಲ್ಲವೇ ? ಯಾತಕ್ಕೆಂದರೆ ಬಾಲ್ಯದಲ್ಲಿ ಹಾಕಿದ ಬೀಜ ಅದರ ಫಲವನ್ನು ಬಿಡುವುದು ಸ್ವಭಾವವಾಗಿದೆ ಅಂಥಾ ಬಾಲಕನು ದೊಡ್ಡವನಾದ ಮೇಲೆ ತನ್ನ ಸ್ವಮತದಲ್ಲೇ ಪಾಂಡಿತ್ಯವನ್ನು ಹೊಂದಿ ವಿಚಾರಪರನಾದ ಮೇಲೆ ಇತರ ಮತಗಳಲ್ಲಿರತಕ್ಕ ತತ್ವವನ್ನೂ ಗ್ರಹಿಸುತ್ತಾನೆಂದು ಕೆಲವರು ಹೇಳಬಹುದು ಅಂಥಾ ಬಾಲಕನೂ ವಿಚಾರಪರನಾದ ಮೇಲೂ ತನ್ನ ಮತ ಎಲ್ಲವುಗಳಿಗಿಂತ ಸರ್ವೋತ್ತಮವಾಗಿದ್ದೇ ಇದೆ ಎಂಬ ಒಂದು ಅಭಿಪ್ರಾಯವನ್ನಿಟ್ಟುಕೊಂಡೇ ಇತರ ಮತಗಳನ್ನು ಶೋಧನೆ ಮಾಡಲಿಕ್ಕೆ ಹೊರಡುತ್ತಾನೆ ಈ ರೀತಿ ಶೋಧನೆ ಮಾಡತಕ್ಕದ್ದು ಅಷ್ಟು ಫಲಕಾರಿಯಲ್ಲ ಯಾವನೇ ಆಗಲಿ ಮತಶೋಧನೆಗೆ ಹೊರಟರೆ ಯಾವ ಮತವೇ ಆಗಲಿ ಹೆಚ್ಚು ಅಥವಾ ಕಡಿಮೆ ಎಂದು ಪೂರ್ವಾಯವಾಗಿ ಒಂದು ಅಭಿಪ್ರಾಯವಿಟ್ಟುಕೊಂಡು ಪರೀಕ್ಷೆ ಮಾಡಿದರೆ ಅಂಥಾ ಶೋಧನೆ ನ್ಯಾಯವಾದದ್ದಲ್ಲ ಅಷ್ಟು ಉಪಯೋಗವುಳ್ಳದ್ದೂ ಅಲ್ಲ. ಅದಕ್ಕೆ ಬಾಲ್ಯದಿಂದಲೂ ಎಲ್ಲಾ ಮತಗಳಲ್ಲಿಯೂ ಸಾಮಾನ್ಯವಾಗಿ ಕೆಲವು ತತ್ವಗಳು ಒಂದೇ ಎಂದೂ, ಇತರ ಮತಕ್ಕೆ ಸೇರಿದವರೂ ತಮ್ಮ ಸಹೋದರರಂತೆ ಭಾವಿಸಬೇಕೆಂದೂ ಒಂದು ಸವಿಶೇಷವಾದ ಅಭಿಪ್ರಾಯವನ್ನು ಪಾಠಶಾಲೆಗೆ ಹೋಗತಕ್ಕ ಸಕಲ ಬಾಲಕರ ಮನಸ್ಸಿನಲ್ಲಿಯೂ ನೆಟ್ಟರೆ ಅದು ಒಂದು ಮತವಾಗಿ ಒಂದು ಜನಾಂಗವೆಂದು ಹೇಳಿಕೊಳ್ಳಲು ಸಹಾಯಕಾರಿಯಾಗಿರುವದಿಲ್ಲವೇ ? ನಮ್ಮ ಈ ಮೈಸೂರು ಸಂಸ್ಥಾನದಲ್ಲಿರತಕ್ಕ ಮುಖ್ಯವಾದ ಹಿಂದೂ, ಮಹಮ್ಮದೀಯ ಮತ್ತು ಕ್ರೈಸ್ತಮತ ಈ ಮೂರು ಮತಗಳಿಗೂ ಅನುಸರಿಸಿ ಕೆಲವು ಸಾಮಾನ್ಯ ತತ್ವಗಳೆಲ್ಲಾ ಒಂದೇ ಎಂಬ ಅಂಶ ಬಾಲಕರಿಗೆ ಬೋಧನೆಯಾಗುವ ಹಾಗೆ, ಮೂರು ಮತಗಳಲ್ಲಿಯೂ ಪರಿಶ್ರಮವಿರತಕ್ಕ ಪಂಡಿತವರ್ಯರು ಈ ಮೂರು ಮತಕ್ಕೂ ಅನುಸರಿಸಿ. ಬಾಲಕರ ಉಪಯೋಗಾರ್ಥವಾಗಿಯೂ ದೇಶದ ಏಳಿಗೆಗೋಸ್ಕರಲೂ, ನೀತಿಬೋಧಕ ಪುಸ್ತಕಗಳನ್ನು ಬರೆದು, ಅಂಥಾ ಪುಸ್ತಕಗಳನ್ನು ಪಾಠಶಾಲೆಗಳಲ್ಲಿ ಉಪಯೋಗಿಸಿದರೆ ಮತವೈಷಮ್ಯಗಳು ಒಹಳ ಮಟ್ಟಿಗೆ ಕಡಿಮೆಯಾಗಿ ಒಂದು ಜನಾಂಗಕ್ಕೆ ಸೇರಿದವರೆಂದು ಅನ್ನಿಸಿಕೊಳ್ಳುವುದಕ್ಕೆ ಬಹಳ ಸಹಕಾರಿಯಾದೀತಲ್ಲವೇ ? ಇದರಂತೆ ಇತರ ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳಲ್ಲಿಯೂ ಏರ್ಪಾಡು ಮಾಡಿದರೆ ಇಂಡಿಯಾದ ಜನಾಂಗವೆಂದು ಹೇಳಿಕೊಳ್ಳುವುದಕ್ಕೆ ಧೈರ್ಯವಿರುತ್ತದೆಯಲ್ಲವೇ ?

ಸಿದ್ದಣ್ಣ

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ನವಂಬರ್ ತಾ. ೨೫ ನೇ ಗುರುವಾರ.

ವೈಸ್‌ರಾಯಿಯವರಿಗೆ ಸುಸ್ವಾಗಮನವು

ಮೈಸೂರು ಸಂಸ್ಥಾನವು ಗ್ರೇಟ್ ಬ್ರಿಟನ್ ರಾಜ್ಯದ **ಪ್ರಭುಗಳ** ಮನೆತನದ ವಿಷಯದಲ್ಲಿ ಯಾವಾಗಲೂ ವಿಶೇಷವಾದ **ಭಕ್ತಿ** ಪ್ರೀತಿಗಳನ್ನುಳ್ಳದ್ದಾಗಿರುವುದು. ಮತ್ತು ಈ ದಿನವೂ ಆ **ಭಕ್ತಿ** ಪ್ರೀತಿಗಳಿಗೆ ಲೇಶಮಾತ್ರವೂ ಕುಂದುಕೊರತೆಗಳಿಲ್ಲದೆ **ಪಟುವಾಗಿಯೇ** ಇರುತ್ತವೆ. ಎಡ್ವರ್ಡ್ ಚಕ್ರವರ್ತಿಯವರ **ಪ್ರತಿನಿಧಿಯಾಗಿ** ದಯಮಾಡುವ ವೈಸ್‌ರಾಯಿ ಲಾರ್ಡ್ **ಮಿಂಟೋ** ಪ್ರಭುಗಳನ್ನು ಎದುರುಗೊಂಡು ಅವರಿಗೆ ಸುಸ್ವಾಗಮನವನ್ನು ಬಯಸುವುದರಲ್ಲಿ ಮೈಸೂರಿನ ಪ್ರಜೆಗಳು ತಮ್ಮ ನೈಜವಾದ ಭಯಭಕ್ತಿಗಳನ್ನು ಪ್ರಕಾಶಪಡಿಸುತ್ತಾರೆ. ದೇಶಸಂಚಾರ ಮಾಡುವುದು ಈಗಿನ ಕಾಲದಲ್ಲಿ ಬಹಳ ಸುಲಭಸಾಧ್ಯವಾಗಿರುತ್ತದೆಯಾದಕಾರಣ ವೈಸ್‌ರಾಯಿ ಪ್ರಭುಗಳು ತಮ್ಮ ಅಧಿಕಾರದ ಅವಧಿಯು ಸಮಾಪ್ತವಾಗುವುದರೊಳಗಾಗಿ ಒಂದಾವರ್ತಿ ಮೈಸೂರು ಸಂಸ್ಥಾನಕ್ಕೆ ದಯಮಾಡಿ ಭೇಟಿ ಕೊಡುವುದು ವಾಡಿಕೆಯಾಗಿದೆ. ಹಿಂದೆ ಲಾರ್ಡ್ ಲಿಟ್ಟನ್ ಪ್ರಭುಗಳು ದಯಮಾಡಿದಾಗ್ಗೆ ವಿಘ್ನಗಳು ಅಷ್ಟೇನೂ ವಿಶೇಷವಾಗಿ ನಡೆಯಲಿಲ್ಲ. ಯಾಕೆಂದರೆ ಅವರು ದಯಮಾಡಿದ್ದ ೧೮೭೬-೭೭ ನೇ ಧಾತು ಈಶ್ವರ ಸಂವತ್ಸರಗಳು ಈ ಸಂಸ್ಥಾನದಲ್ಲಿ ದುಃಖಕರವಾದ ಕ್ಷಾಮ ಪ್ರಾಪ್ತವಾಗಿತ್ತು. ಇದಲ್ಲದೆ ಆಗ್ಗೆ ಈ ಸಂಸ್ಥಾನದ ಆಳ್ವಿಕೆಯು ಇನ್ನೂ ಛೇಟ ಮಹಾರಾಜರವರಿಗೆ ವಹಿಸಲ್ಪಟ್ಟಿರಲಿಲ್ಲ. ಅಲ್ಲಿಂದೀಚೆಗೆ ಲಾರ್ಡ್ ಡಫ್ರಿನ್, ಲಾರ್ಡ್ ಲ್ಯಾನ್ಸ್‌ಡೌನ್, ಲಾರ್ಡ್ ಎಲ್ಗಿನ್, ಲಾರ್ಡ್ ಕರ್ಜನ್ ಪ್ರಭುಗಳು ಹಿಂದುಸ್ಥಾನದ ವೈಸ್‌ರಾಯರಾಗಿದ್ದಾಗ್ಗೆ ಇವರೆಲ್ಲಾ ಕ್ರಮವಾಗಿ ಮೈಸೂರಿಗೆ ದಯಮಾಡಿ, ಮೈಸೂರು ರಾಜಮನೆತನದ ಆತಿಥ್ಯವನ್ನೂ ಪ್ರಜೆಗಳ ಉತ್ಸಾಹಪೂರ್ವಕವಾದ ಸುಸ್ವಾಗಮನವನ್ನೂ ಅಂಗೀಕರಿಸಿರುತ್ತಾರೆ.

ಈ ದಿನ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಈ ಸಂಸ್ಥಾನದ ರಾಜಧಾನಿಗೆ ದಯಮಾಡುತ್ತಾರಾದದರಿಂದ ಮೇಲ್ಕಂಡ ರೀತಿ ವಿಶೇಷ ಆದರಪೂರ್ವಕವಾದ ಸುಸ್ವಾಗಮನವು ಇಲ್ಲಿ ಅವರನ್ನು ಎದುರುಗೊಂಡು ಸಂತೋಷಪಡಿಸುವುದಾಗಿದೆ. ಅವರಿಗೆ ಅಪಾಯಗಳು ಸಂಭವಿಸಬಹುದೆಂಬ ಸಂಶಯ ಉಂಟಾಗಿರುವ ಈ ಸಮಯದಲ್ಲಿ ನಮ್ಮ ಸಂಸ್ಥಾನದ ಪ್ರಜೆಗಳ ಪ್ರೀತಿಯುಕ್ತವಾದ ಸುಸ್ವಾಗಮನವು ಅವರಿಗೆ ಪರಮ ಸಂತೋಷಕರವಾಗಿದ್ದೀತೆನ್ನುವುದಕ್ಕೆ ಸಂಶಯವಿಲ್ಲ. ಶ್ರೀಮನ್ ಮಹಾರಾಜರವರು ಮಹನೀಯರಾದ ಈ ಅತಿಥಿಗಳನ್ನು ಸಕಲ ಮರ್ಯಾದೆಗಳೊಡನೆ ಬರಮಾಡಿಕೊಳ್ಳುವುದೂ ಸತ್ಕಾರ ಮಾಡುವುದರಲ್ಲಿ ವಿಶೇಷ ಕೀರ್ತಿಯನ್ನು ಪಡೆದಿರುವ ಮೈಸೂರು ಸಂಸ್ಥಾನವು ಅವರನ್ನು ಯಥಾ ಯೋಗ್ಯವಾದ **ರೀತಿಯಲ್ಲಿ ಸತ್ಕಾರ** ಮಾಡುವುದೂ ಸಹಜವೂ ಸಂತೋಷ**ಕರವೂ ಆಗಿರುತ್ತದೆ.** ಮೈಸೂರು ಪಟ್ಟಣದಲ್ಲಿ ವೈಸ್‌ರಾಯಿ**ಯವರ ದೃಷ್ಟಿಗೆ ಬೀಳುವಂಥಾ** ಪುರಾತನ ನಾಗರಿಕವ್ಯಾವುದೂ **ವಿಶೇಷವಾಗಿಲ್ಲ.** **ಮೈಸೂರು** ಪಟ್ಟಣವೇ ಈಚೆಗೆ ನೂತನ**ವಾಗಿ ನಿರ್ಮಾಣವಾದದ್ದು.** ಕಳೆದ ಸುಮಾರು ಇಪ್ಪತ್ತೈದು **ವರುಷಗಳಲ್ಲಿ ರಾಜಧಾನಿಯೊಳಗೆ** ಬಹುತರವಾದ ಬದಲಾವಣೆಗಳು ಮಾಡಲ್ಪಟ್ಟಿರುವವು. ಎಲ್ಲಾ ಕಡೆಗಳಲ್ಲೂ ಹೊಸ ನಮೂನೆಯ ಕಟ್ಟಡಗಳು ನಿರ್ಮಾಣವಾಗಿವೆ, ಕಚೇರಿ ಉದ್ಯಾನ ಆರಾಮಗಳು ತೆರೆಯಲ್ಪಟ್ಟಿರುವವು. ವೈಸ್‌ರಾಯಿಯವರು ಇವುಗಳನ್ನೆಲ್ಲಾ ಪರಾಂಬರಿಸಿದಾಗ ನವೀನ ನಾಗರಿಕತೆಯು ಮೈಸೂರಿನಲ್ಲಿ ವಿಶೇಷವಾಗಿ ಪ್ರಾಶಸ್ತ್ಯಕ್ಕೆ ಬರುತ್ತಿರುವುದೂ, ಮೈಸೂರು ಪಟ್ಟಣವು ಹಿಂದುಸ್ಥಾನದ ಅನೇಕ ಮುಖ್ಯ ಪಟ್ಟಣಗಳಿಗಿಂತ ಈ ವಿಚಾರದಲ್ಲಿ ಮುಂದಾಗಿರುತ್ತದೆಂಬುವುದೂ ಗೊತ್ತಾಗುತ್ತದೆ. ಇಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಕಾರ್ಖಾನೆಯು ಏರ್ಪಾಡಾಗಿ ನಡೆಯುತ್ತಿರುವುದು ಹಿಂದುಸ್ಥಾನದಲ್ಲೆಲ್ಲಾ ಅಪೂರ್ವವಾಗಿರುತ್ತದೆ. ಲಾರ್ಡ್ ಮಿಂಟೋ ಪ್ರಭುಗಳೂ ಅವರ ಪತ್ನಿಯವರೂ ಕಾವೇರಿ ನದಿಯ ನೀರನ್ನು ತಡೆದು ಆ ಜಲಪತನದಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯಿಂದ ಮೈಸೂರು, ಬೆಂಗಳೂರು ನಗರಗಳಿಗೆ ದೀಪಗಳನ್ನು ಒದಗಿಸಿರುವುದನ್ನೂ ಕೋಲಾರ್ ಚಿನ್ನದ ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸ ಕಾರ್ಯಗಳಿಗೆ ಆ ಶಕ್ತಿಯನ್ನು ಉಪಯೋಗ ಮಾಡುತ್ತಿರುವುದನ್ನೂ ನೋಡಿ ತಿಳಿಯಲು ಅವರಿಗೆ ಅವಕಾಶವಾಗಿರುತ್ತದೆ.

ಸಾವಿರಾರು ಮಂದಿ ಗಂಡು ಹೆಣ್ಣು ಮಕ್ಕಳೂ ವಿದ್ಯಾರ್ಥಿಗಳೂ ಸಾಲುಕಟ್ಟಿ ಕುಳಿತು ವೈಸ್‌ರಾಯಿ ದಂಪತಿಗಳಿಗೆ ರೈಲ್ ಸ್ಟೇಷನ್ನಿಂದ ಬರುವಲ್ಲಿ ಸುಸ್ವಾಗಮನವನ್ನು ಬಯಸುವುದನ್ನು ನೋಡಿದಲ್ಲಿ ವಿದ್ಯಾಭ್ಯಾಸವು ಅಭಿವೃದ್ಧಿಯಾಗುತ್ತಿದೆ ಎಂಬ ವಿಚಾರವೂ, ಹ್ಯಾಗೂ ಮೈಸೂರು ಪಟ್ಟಣದ ಮಕ್ಕಳಲ್ಲಿ ವಿಶೇಷ ಮಂದಿ ಸ್ಕೂಲುಗಳಿಗೆ ಹೋಗುತ್ತಿದ್ದಾರೆಂಬುವುದೂ ಸ್ಪಷ್ಟವಾಗುವುದು.

ವೈಸ್‌ರಾಯಿ ದಂಪತಿಗಳು ಮೈಸೂರು ಸಂಸ್ಥಾನಕ್ಕೆ ದಯಮಾಡಿರುವ ಸಂಭ್ರಮಯುಕ್ತವಾದ ಈ ಸಮಯದಲ್ಲಿ ಅವರಿಗೂ ಅವರ ಸಂಗಡಿಗರಿಗೂ ಸಕಲರಿಗೂ ವಿಶೇಷ ಆನಂದವಾಗುವಂತೆ ಶ್ರೀಮನ್ ಮಹಾರಾಜರವರೂ ಅವರ ಗವರ್ನಮೆಂಟಿನವರೂ ಮಾಡುತ್ತಿರುವ ಏರ್ಪಾಡುಗಳಿಗೆ ಸಕಲ ಪ್ರಜೆಗಳೂ ಉತ್ಸಾಹಪೂರ್ವಕವಾಗಿ ಸಹಾಯ ಮಾಡುತ್ತಾ ಬಂದಾರೆಂದೂ, ಸಮಸ್ತವಾದ ಸತ್ಕಾರಗಳೂ ಸಾರ್ಥಕ ಹೊಂದಿ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಿಗೆ ಸಂಪೂರ್ಣವಾದ ತೃಪ್ತಿಯನ್ನೂ ಆನಂದವನ್ನೂ ಉಂಟುಮಾಡುವವೆಂದೂ ನಂಬಿ ನಿರೀಕ್ಷಿಸುತ್ತೇವೆ.

ಜೂಜಾಡುವದು ಲಾಭವೋ?

ಈಗ ಕೆಲವು ದಿವಸಗಳಿಗೆ ಮುಂಚೆ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಜೂಜಾಡುವವರಿಗೆ ವಿರೋಧವಾಗಿ ಒಂದು ಕಾನೂನನ್ನು ಏರ್ಪಡಿಸಿ ಅದನ್ನು ಮೈಸೂರು ಸೀಮೆಯಲ್ಲಿ ಜಾರಿಗೆ ತರಬೇಕೆಂದು ಪ್ರಜಾಪ್ರತಿನಿಧಿಗಳು ಸರಕಾರಕ್ಕೆ ವಿಜ್ಞಾಪಿಸಿಕೊಂಡದ್ದಕ್ಕೆ ಸರಕಾರದವರು ಈ ಸಲಹೆಯನ್ನೊಪ್ಪಿ ಕಾನೂನನ್ನು ಜಾರಿಗೆ ತಂದಿರುವರು. ಇದರ ಬಲದಿಂದ ಆಗಲೇ ಜೂಜಾಡುತ್ತಿದ್ದ ಕೆಲವರನ್ನು ಹಿಡಿದು ದರ್ಖಾಸ್ತಿಗೆ ಗುರಿಮಾಡಿ ಅಪರಾಧಿಗಳಿಗೆ ಜುಲುಮಾನೆ, ಸಜಾ ಶಿಕ್ಷೆಗಳನ್ನು ಕೆಲವು ಕಡೆ ವಿಧಿಸಿದರೆಂದು ಪತ್ರಿಕೆಯಲ್ಲಿ ಓದಿದೆವು. ಇನ್ನೂ ಕೆಲವರನ್ನು ಹಿಡಿದು ಜಾಮೀನ್ ಮೇಲೆ ಬಿಟ್ಟು ಅವರನ್ನು ವಿಚಾರಣೆಗೆ ಗುರಿಪಡಿಸಿರುವದಕ್ಕೆ ಸಿದ್ಧಯಿಸಿರುವುದಾಗಿಯೂ ಈ ಪತ್ರಿಕೆಯಲ್ಲಿ ಸಮೂದಿಸಿದೆ. ಪ್ರಜೆಗಳು ಬುದ್ಧಿಶಾಲಿಗಳಾಗಿ ತಮ್ಮ ಆದಾಯ ಸುಖಸಂಪತ್ತುಗಳನ್ನು ಕೆಡಿಸಿ ಕೊಳ್ಳದೆ ಇತರರನ್ನು ನಷ್ಟ ದುಃಖಗಳಿಗೊಳಪಡಿಸದಂತಿರಬೇಕೆಂದು ಸ್ವಭಾವವಾಗಿ ನಿರೀಕ್ಷಿಸಲ್ಪಟ್ಟಿದೆ. ಹೀಗಿರುವಲ್ಲಿ ಪ್ರಜೆಗಳು ತಮ್ಮ ನಷ್ಟ ಕಷ್ಟಗಳನ್ನೂ ತಾವು ಇತರರಿಗೆ ಉಂಟುಮಾಡಬಹುದಾದ ನಷ್ಟ ಕಷ್ಟಗಳನ್ನೂ ಯೋಚಿಸದೆ ಈ ಮಹಾಪಾಪಕ್ಕೆ ತಾವೂ ಬಿದ್ದು ಆ ಡೊಂಗರಕ್ಕೆ ತಮ್ಮ ನೆರೆಹೊರೆಯವರನ್ನು ಎಳೆಯುವ ಕಾಲದಲ್ಲಿ ಸರಕಾರವು ಸುಮ್ಮನಿರದೆ ಅವರನ್ನು ನಿರ್ಬಂಧದಿಂದ ಶಿಕ್ಷಿಸುತ್ತೇವೆ. ಭಯದಿಂದಲಾದರೂ ರಕ್ಷಿಸುವದಕ್ಕೆ ಪ್ರಯತ್ನ ಮಾಡುವುದು ನ್ಯಾಯವಾಗಿಯೇ ಇದೆ.

ಇತರರ ಸೊತ್ತನ್ನು ತಕ್ಕ ಪ್ರತಿಕಾರ ಕೊಡದೆ ಕಸಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಮಹಾ ಕ್ರೂರ. ಹಗಲು ಕಳ್ಳತನ ವಂಚನೆಯೆಂದು ಹಿರಿಯರ ವೇದಾಗಮಗಳು ಘೋಷಿಸುತ್ತಲಿರುವವು. ಎಲ್ಲರ ನಡತೆ ತಿಳಿದವನಾದ ದೇವರು ಇಂಥವರನ್ನು ವಿಚಾರಿಸದೆ ದಂಡಿಸದೆ ಬಿಡನು ಎಂದು ಎಲ್ಲರೂ ಒಪ್ಪಿಕೊಳ್ಳುವರು.

ಆದರೆ ಈಗ ನಾವು ಈ ಯೋಚನೆಗಳನ್ನೆಲ್ಲಾ ಸದ್ಯ ಬಿಟ್ಟು ಒಂದೇ ಒಂದು ಯೋಚನೆಯನ್ನು ಕುರಿತು ಸ್ವಲ್ಪ ಪ್ರಸ್ತಾಪ ಮಾಡಬೇಕೆಂದಿದ್ದೇವೆ. ಅದೇನೆಂದರೆ ಜೂಜಾಡುವದು ಲಾಭಕರವಾದದ್ದೇ? ಎಂಬುವದೇ. ಈ ಸಂದರ್ಭದಲ್ಲಿ ನಮಗೊಂದು ಸಂಗತಿಯು ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ ದ್ಯಾವಪ್ಪನೆಂಬ ಬಡಗಿಯು ಐದು ರೂಪಾಯಿಗಳನ್ನು ಕಿಸೆಯಲ್ಲಿ ಹಾಕಿಕೊಂಡು ಸವಿನಾಸದಲ್ಲಿದ್ದ ಗರಡಿ ಮನೆಗೆ ಹೋದನು. ಅಲ್ಲಿಗೆ ಮೊದಲೇ ಬಂದು ಕೂತಿದ್ದ ಮಲ್ಲಾಚಾರಿಯೆಂಬೊಬ್ಬ ಅಕ್ಕಸಾಲಿಗನಲ್ಲಿಯೂ ಐದು ರೂಪಾಯಿಗಳಿದ್ದವು. ಇವರಿಬ್ಬರೂ ಅಲ್ಲೇ ಕೂತು ಜೂಜಾಡುವದಕ್ಕೆ ಆರಂಭಿಸಲು ಆ ದಿನ ಮಲ್ಲಾಚಾರಿಯು ದ್ಯಾವಪ್ಪನ ಹತ್ತಿರವಿದ್ದ ಐದು ರೂಪಾಯಿಗಳನ್ನು ಗೆದ್ದುಕೊಂಡು ಅವನನ್ನು ಬರಿಗೈ ಮಾಡಿ ಸಂತೋಷದಿಂದ ಮನೆಗೆ ಹೋಗಿ, ಮಿಠಾಯಿ, ಲಾಡು ಚಿರೋಟಿಗಳನ್ನು ತಿನ್ನುವುದರಲ್ಲಿಯೂ ಬೇರೆ ವಿಧವಾಗಿಯೂ ಆ ರೂಪಾಯಿಗಳನ್ನು ಅಟ್ಟಹಾಸದಿಂದ ಖರ್ಚು ಮಾಡಿದನು.

ಇದನ್ನು ಕುರಿತು ಸಂತೆ ಬಾಗಲಲ್ಲಿ ಮಾರನೆ ದಿನ ಕೂತುಕೊಂಡು ಪ್ರಸ್ತಾಪ ಮಾಡುತ್ತಿದ್ದ ಎಂಟು ಹತ್ತು ಮಂದಿಯನ್ನು ನಾನು ಕಂಡು ಅವರ ಒಳಗೆ ಹೋಗಿ ಕೂತುಕೊಂಡೆನು. ಆಗ ಮಲ್ಲಪ್ಪನು ತಾನು ನಿನ್ನೆ ಆಟದಲ್ಲಿ ಗೆದ್ದು ಐದು ರೂಪಾಯಿಗಳನ್ನು ಸಂಪಾದಿಸಿಕೊಂಡೆನು. ದಿನವೆಲ್ಲಾ ಸುತ್ತಿಗೆ ಹಿಡಿದು ಬಡಿಯುತ್ತಿದ್ದರೂ ಈ ಕಾಲದಲ್ಲಿ ಎಂಟಾಣೆ ಹುಟ್ಟುವುದು ಕಷ್ಟ. ನೆನ್ನೆಯನದರೋ ಮೈನೋವಿಲ್ಲದೆ ಸುಲಭವಾಗಿ ಐದು ರೂಪಾಯಿ ಲಾಭ ಬಂತು. ಇದೊಳ್ಳೆ ಆಟವಲ್ಲವೆ ಅಂದನು. ಇದನ್ನು ಕೇಳುತ್ತಿದ್ದವರು ಹೂಗುಟ್ಟುತ್ತಿರುವದನ್ನು ಕೇಳಿ, ನಾನು ಮಲ್ಲಪ್ಪನವರೇ ದಿನವೆಲ್ಲಾ ಕಷ್ಟ ಮಾಡಿದರೂ ಅರ್ಧ ರೂಪಾಯಿ ಹುಟ್ಟುವದು ಕಷ್ಟವಾಗಿರುವಲ್ಲಿ ನೀವು ಒಂದೇ ದಿನದಲ್ಲಿ ಸುಲಭವಾಗಿ ಐದು ರೂಪಾಯಿ ಸಂಪಾದಿಸಿದ್ದು ಲಾಭವೇ ಸರಿ. ಆದರೆ ನೀವು ಅವುಗಳನ್ನು ಹ್ಯಾಗೆ ಸಂಪಾದಿಸಿದಿರಿ? ಮಲ್ಲಪ್ಪ—ನಿನ್ನೆ ದಿನ ದ್ಯಾವಪ್ಪ ನಮ್ಮ ಗರಡಿಗೆ ಬಂದಿದ್ದ, ಅವನ ಸಂಗಡ ನಾನು ಎಲೆ ಆಡಿ ಗೆದ್ದೆ ಅಂದನು.

ನಾನು ಇದೇನೋ ನೀವು ಸಂಪಾದನೆ ಅಥವಾ ಲಾಭವೆಂದು ಅಟ್ಟಹಾಸಪಡುವದು ಇದರಲ್ಲೇನೋ? ಹೊಸದಾಗಿ ಲಾಭವಾದರೂ ಸಂಪಾದನೆಯಾದರೂ ಕಾಣುವದಿಲ್ಲ. ನಿಮ್ಮಿಬ್ಬರ ಹತ್ತಿರ ಮೊದಲೇ ಐದೈದು ರೂಪಾಯಿಗಳಿದ್ದವು. ಈಗ ಆ ಹತ್ತು ರೂಪಾಯಿಗಳೂ ನಿನ್ನ ಕೈಗೆ ಬಂದವು. ಹೊಸದಾಗಿ ಎಲ್ಲಿ ಸಂಪಾದನೆಯಾಯಿತು? ಅದನ್ನು ನೀವು ಸಂಪಾದನೆಯೆಂದು ಹೇಳುತ್ತೀರೋ? ಹತ್ತಿರ ಕೂತಿದ್ದ ಜವನಪ್ಪನು ನನ್ನ ಮಾತುಗಳನ್ನು ಕೇಳಿ, ಉಪದೇಶಿಯವರು ಹೇಳುವದು ಸರಿ, ಮೊದಲಿದ್ದ ಹಾಗೆ ಈಗಲೂ ಹತ್ತೇ ರೂಪಾಯಿಗಳಿವೆ. ಆದರೆ ಇದರಿಂದ ಈಗ ದೇವಪ್ಪನಿಗೆ ವ್ಯಸನವೂ ಮಲ್ಲಾಚಾರಿಗೆ ಕೇವಲ ಸಂತೋಷವೂ ಆಗಿದೆ ಅಂದನು. ನಾನು—ಇದರಲ್ಲೇನು ಸಂತೋಷ? ನಾವು ಬೇಕುಬೇಕಾದ್ದನ್ನು ಊಟ ಮಾಡಿ ಮಲಗಿಕೊಳ್ಳುವಾಗ್ಗೆ ನೆರೆ ಮನೆಯ ದೇವಪ್ಪನ ಹೆಂಡತಿಯು ಮಕ್ಕಳು ತಿನ್ನುವದಕ್ಕೆ ಏನೂ ಇಲ್ಲದೆ ಉಪವಾಸದಿಂದ ರೋದನ ಮಾಡುತ್ತಾ ಮಕ್ಕಳು ಅವರಮ್ಮನನ್ನು ಅನ್ನಕ್ಕೆ ಹಸಿವೆಯಿಂದ ಪೀಡಿಸುತ್ತಿರುವದನ್ನೂ ಮನೆಯಲ್ಲಿ ದೀಪ ಹಚ್ಚುವದಕ್ಕೆ ಎಣ್ಣೆಯೂ ಕೂಡ ಗತಿಯಿಲ್ಲದೆ ಆ ನಿರ್ಭಾಗ್ಯ ಮಕ್ಕಳು ಅತ್ತತ್ತು ಹ್ಯಾಗೆ ಮಲಗಿದ್ದನ್ನು ನಾನು ನೋಡಿದಂತೆ ನೀವೂ ನೋಡಿದ್ದರೆ ಇದು ಸಂತೋಷವೇ ದುಃಖವೇ ತಿಳಿಯುತ್ತಿದ್ದಿರಿ. ಜವನಪ್ಪ—ಅಯ್ಯೋ! ಸ್ವಾಮಿ ಇದೆಂಥಾ ವಿಪತ್ತು? ಇದು ಬಹಳ ವ್ಯಸನಕರವಾಗಿದೆ.

ನಾನು—ವ್ಯಸನವಲ್ಲದ ಮತ್ತೇನು? ಎಲೆ ಆಟಕ್ಕೆ ಬದಲಾಗಿ ಇವರಿಬ್ಬರು ತಮ್ಮ ತಮ್ಮ ಕಸಬನ್ನು ಮಾಡಿ ಕಲಾ ಅರ್ಧ ರೂಪಾಯಿ ರೊಕ್ಕವನ್ನಾದರೂ ಸಂಪಾದಿಸಿದ್ದರೆ ಇಬ್ಬರೂ ಸೇರಿ ಹೊಸದಾಗಿ ಒಂದು ರೂಪಾಯಿ ಸಂಪಾದಿಸುವರು. ಆಗ ಹನ್ನೊಂದು ರೂಪಾಯಿಗಳೂ ಉಭಯತ್ರರ ಮನೆಯಲ್ಲಿಯೂ ಸಂತೋಷಕರವಾಗಿ ಸ್ಥಾನಗಳೂ ನೆಲೆಗೊಂಡಿರುವವು ಅಲ್ಲವೇ?

ಎಲ್ಲರೂ ಈ ಮಾತಿಗೆ ಒಪ್ಪಿ ಇದು ಖರೇವು. ಈ ವಾದ ಮಾತೆಂದು ಹೊಗಳುತ್ತಿರುವಲ್ಲಿ ಮೊಹತವಾರ ಕಂದಾಯದ ಜವಾನನು ಒಂದು ಚೀಟಿ ಹಿಡುಕೊಂಡು ಅಲ್ಲಿಗೆ ಬಂದು ಮಲ್ಲಪ್ಪನವರೇ ಈ ನೋಟೀಸು ನಿಮ್ಮ ಮನೆ ಕಂದಾಯದ ಬಾಕಿಗಾಗಿ ಜಾರಿಯಾಗಿದೆ. ಬನ್ನಿ ರುಜು ಮಾಡಿ ಅಂದನು. ಜವನಪ್ಪನಪ್ಪ ಮಲ್ಲಪ್ಪಾ, ಹತ್ತು ರೂಪಾಯಿಗಳಿಟ್ಟುಕೊಂಡು ನೋಟೀಸಿಗೆ ಯಾಕೆ ಅವಕಾಶ ಕೊಟ್ಟೆ. ಬೇಗ ಆ ಹತ್ತು ರೂಪಾಯಿಗಳಲ್ಲಿ ಮೂರು ರೂಪಾಯಿ ಕಂದಾಯ ಕೊಡಬಾರದೇ.

ಇದಕ್ಕೆ ಮಲ್ಲಪ್ಪನು ಮುಖವನ್ನು ಬೋಲ ಹಾಕಿಕೊಂಡು ತಲೆ ಬಗ್ಗಿಸಿ—ನೆನ್ನೆ ಗೆದ್ದ ದಿನವೆಂದು ಬಹಳ ಸಂತೋಷದಿಂದ ನನ್ನ ಮಗನ ಹುಟ್ಟಿದ ಹಬ್ಬ ಮಾಡಿಸಿ ಹೂವು, ಹಣ್ಣು, ಗಂಧ, ತಾಳಮೇಳ ಔತಣಕ್ಕೆ ಐದು ಆರು ರೂಪಾಯಿ ಖರ್ಚಾಯಿತು. ಹುಟ್ಟಿದ ದಿನಕ್ಕೆಂದು ಹುಡುಗನಿಗೆ ಒಂದು ಮಖಮಲ್ ಅಂಗಿ ತೊಡಿಸಿದೆ. ಈಗ ಒಂದು ಕಾಸು ಇಲ್ಲ. ಬರಿಗೈ ಆಯಿತು ಅಂದನು.

ನಾನು—ಸ್ನೇಹಿತರೆ ನೋಡಿದಿರೋ ಇದೆಂಥಾ ಸಂತೋಷ. ಈಗ ನಾವು ಕಷ್ಟಪಡದೆ ಜೂಜಿನಿಂದ ಗೆದ್ದ ಹಣವು ಹೀಗೆಯೇ ಹೋಗುವದೇ ಹೊರತು ಉಳಿಯುವದೇ ಇಲ್ಲ. ಮಲ್ಲಪ್ಪನ ಹಾಗೆಯೇ ನನಗೆ ಅನೇಕರು ಸಾಕ್ಷಿ. ಇದಿತರ ದ್ವಾರ ಅನ್ಯಾಯವಾಗಿ ಲಭಿಸಿದ್ದು ಅಪವ್ಯಯವಾಗಿ ಹೋಗುವದೆಂಬ ಹಿರಿಯರ ವಚನ ನೋಡಿದಿರೋ. ಜೂಜು ದ್ವಂದ್ವ ದುಃಖಕ್ಕೆ ಕಾರಣವಾಯಿತು ಅಂದೆನು. ಇದನ್ನು ಕೇಳಿ ಅಲ್ಲಿದ್ದವರೆಲ್ಲಾ ಎದ್ದು ಸ್ವಾಮಿ ಈ ದಿನ ಮಲ್ಲಪ್ಪ ದೇವಪ್ಪನ ಕಾರ್ಯಗಳಿಂದ ನಮಗೊಳ್ಳೆ ಬುದ್ಧಿ ಬಂತೆಂದು ವಂದಿಸಿ ತಮ್ಮ ಮನೆಗಳಿಗೆ ತೆರಳಿದರು. ವಾಚಕರೇ ಜೂಜು ಲಾಭಕರವಾದದ್ದೋ, ನೀವೇ ಹೇಳಿರಿ.

ಒಳದೇಶದ ವೃತ್ತಾಂತಗಳು

ಈ ದಿನ ರಾತ್ರಿ ಗವರನ್‌ಮೆಂಟ್ ಹೌಸ್ ಬಂಗಲಿಯಲ್ಲಿ ವೈಸ್‌ರಾಯಿ ಪ್ರಭುಗಳಿಗೆ ಔತಣವೂ, ತರುವಾಯ ವಿಚಿತ್ರವಾದ ಬಾಣಬಿರುಸುಗಳೂ ನಡೆಯುವವು.

* * *

ವೈಸ್‌ರಾಯಿಯವರ ಕೂಡ ಇರುವುದಕ್ಕಾಗಿ ದಿವಾನರವರು ಮೈಸೂರಿನಿಂದಲೂ, ಅಸಿಸ್ಟೆಂಟ್ ರೆಸಿಡೆಂಟರು ಬೆಂಗಳೂರಿನಿಂದಲೂ ಕಳೆದ ವಾರ ಶಿವಮೊಗ್ಗೆಗೆ ಪ್ರಯಾಣಮಾಡಿದರು.

* * *

ಸುಂಕದೂರಿನ ಬಳಿ ರೈಲ್ ರಸ್ತೆಯ ಕಂಬಿಗಳ ಮೇಲೆ ಕಲ್ಲುಗಳನ್ನು ಅಡ್ಡಲಾಗಿ ತಂದುಹಾಕಿದ್ದ ಮರಿಬ್ಬರನ್ನು ಬೆಂಗಳೂರು ದಂಡಿನ ಮ್ಯಾಜಿಸ್ಟ್ರೇಟರು ದರ್ಯಾಪ್ತು ಮಾಡಿ, ಕಳೆದ ವಾರ ಅವರಿಬ್ಬರಿಗೂ ತಲಾ ನಾಲ್ಕು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದಾರೆ.

* * *

ಕಳೆದ ಶುಕ್ರವಾರದ ದಿನ ಸುಮಾರು ೪೫ ವರುಷ ವಯಸ್ಸಿನ ಒಬ್ಬ ಹೆಂಗಸು ರಾಜಧಾನಿಯ ಪೀರನಗೆರೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಳೆಂದೂ, ಅವಳಿಗೆ ಏನೋ ಕಾಯಿಲೆ ಇದ್ದದ್ದರಿಂದ ಅವಳು ಈ ರೀತಿ ಪ್ರಾಣ ಕಳೆದುಕೊಂಡಳೆಂದೂ ತಿಳಿದು ಬಂದಿದೆ.

* * *

ಮಂಜರಾಬಾದಿನ ಅಮಲ್ದಾರ್ ಮೆ|| ನಾರಾಯಣರಾಯರು ಆ ತಾಲ್ಲೂಕಿನಿಂದ ಮಂದೆ ಪಟೇಲ್ ಮೊದಲಾದ ೭೦ ಮಂದಿಯನ್ನು ರಾಜಧಾನಿಗೆ ಕರೆದುತಂದಿರುತ್ತಾರೆ. ವೈಸ್‌ರಾಯಿ ಪ್ರಭುಗಳಿಗೆ ಈ ಜನರ ಸುಗ್ಗಿ ಕುಣಿತವನ್ನು ಅವರಿಂದ ಆಡಿ ತೋರಿಸಬೇಕೆಂದು ಏರ್ಪಾಡಾಗಿದೆ.

* * *

ಹೊಸ ಅರಮನೆಯನ್ನು ಶೃಂಗಾರ ಮಾಡಿರುತ್ತಾರೆ. ರಾತ್ರಿ ಹೊತ್ತು ಕಟ್ಟಡವು ಕಳಕಳಿಸುವಂತೆ ವಿದ್ಯುಚ್ಛಕ್ತಿಯ ಮತ್ತು ಇತರ ದೀಪಗಳನ್ನು ಹಚ್ಚುತ್ತಿದಾರೆ. ಸೋಮವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಅರಮನೆಯ ಮುಂದಕ್ಕೆ ದಯಮಾಡಿ ಎಲ್ಲಾ ಏರ್ಪಾಡುಗಳನ್ನೂ ಪರಾಂಬರಿಸಿದರು.

* * *

ವೈಸ್‌ರಾಯಿಯವರು ಡಿಸೆಂಬರ್ ತಾ ೪ ರಲ್ಲಿ ಕೋಲಾರಕ್ಕೆ ದಯಮಾಡುವರು. ಡೆಪ್ಯುಟಿ ಕಮಿಷನರ್‌ರೂ ಚಿನ್ನದ ಗಣಿಗಳ ಕಂಪನಿ ಮುಖಂಡರೂ ಅವರನ್ನು ಸತ್ಕರಿಸುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿದಾರೆ. ಚಿನ್ನದ ಗಣಿ ಕಂಪನಿ ಮುನಿಸಿಪಲ್ ಕೊಡುವ ಔತಣವನ್ನೂ ಅಡ್ರೆಸ್ಸನ್ನೂ ಸ್ವೀಕರಿಸುವುದಾಗಿ ವೈಸ್‌ರಾಯಿಯವರು ಅಪ್ಪಣೆಕೊಡಿಸಿದಾರೆ.

* * *

ಹಾಸನದಲ್ಲಿ ಡಾಕ್ಟರಾಗಿರುವ ಮೆ|| ರಾಜಾರಾಮರಾಯರನ್ನು ಮೈಸೂರಿಗೂ, ಇಲ್ಲಿಂದ ಮೆ|| ಆಶೀರ್ವಾದಂಯವರನ್ನು ಹಾಸನಕ್ಕೂ ಸರ್ಕಾರದವರು

ವರ್ಗವಾಗಿದಾರೆಂದು ತಿಳಿದುಬಂದಿದೆ ಮೆ|| ಆಚಾರ್ಯರವರು ಇಲ್ಲಿ ಸಕಲ ಪ್ರಜೆಗಳಲ್ಲೂ ಬಹಳ ತಾಳ್ಮೆಯುಳ್ಳ ಒಳ್ಳೆ ವೈದ್ಯರೆಂಬ ಹೆಸರನ್ನು ಪಡೆದುಕೊಂಡಿದ್ದರು ಇಂಥವರನ್ನು ಸರ್ಕಾರದವರು ಇಲ್ಲಿಂದ ವರ್ಗಮಾಡಿದ ರಲ್ಲಾ ಎಂದು ಚಿಂತಿಸುತ್ತಾರೆ ಡಾಕ್ಟರ್ ಜಗನ್ನಾಥರಾಯರವರನ್ನು ಇನಾಕ್ಯುಲೇಷನ್ ಕೆಲಸಕ್ಕಾಗಿ ಬೆಂಗಳೂರಿಗೆ ವರ್ಗಮಾಡಿದಾರೆ.

* * *

ಮೈಸೂರು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಆಯುರ್ವೇದ ವೈದ್ಯ ವಿದ್ಯಾಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತೇವೆಂದು ಸರ್ಕಾರದವರು ಪ್ರಕಟಿಸಿದಾರೆ ಸೇರಬೇಕೆನ್ನುವವರು ಸಂಸ್ಕೃತವನ್ನೂ ಇಂಗ್ಲೀಷನ್ನೂ ಕಲಿತವರಾಗಿರಬೇಕು ಅರ್ಜಿಗಳನ್ನು ಡಿಸೆಂಬರ್ ತಾ ೧೦ ರೊಳಗೆ ಮುಜರಾಯಿ ಸೂಪರಿಂಟೆಂಡೆಂಟರಿಗೆ ಕಳುಹಿಸತಕ್ಕದ್ದೆಂದೂ, ಪ್ರವೇಶಪರೀಕ್ಷೆಯು ಡಿಸೆಂಬರ್ ತಾ ೧೪ ರಲ್ಲಿ ಆಲ್ಬಿಯನ್ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ನಡೆಯುವುದೆಂದೂ ತಿಳಿಸಿದಾರೆ ಯೋಗ್ಯತೆ ಹೊಂದಿದವರಲ್ಲಿ ಐದುಮಂದಿಗೆ ಮೊದಲನೇ ವರುಷ ತಿಂಗಳಿಗೆ ೮ ರೂಪಾಯಿ ನಂತೆಯೂ, ಎರಡನೇ ವರುಷ ೧೦ ರೂಪಾಯಿನಂತೆಯೂ, ಮೂರನೇ ನಾಲ್ಕನೇ ವರುಷ ೧೨ ರೂಪಾಯಿನಂತೆಯೂ ವೇತನಗಳನ್ನು ಕೊಡುತ್ತಾರೆ. ಪಾಠಗಳು ಜನವರಿ ತಾ ೧ ರಿಂದ ಪ್ರಾರಂಭವಾಗುವವು.

* * *

ಈ ದಿನ ಬೆಳಿಗ್ಗೆ ೧೦-೩೦ ಗಂಟೆಗೆ ವೈಸ್‌ರಾಯಿಯವರು ಪತ್ನಿ ಪರಿವಾರ ಸಮೇತರಾಗಿ ರಾಜಧಾನಿಗೆ ದಯಮಾಡುವರು ಶ್ರೀಮನ್ಮಹಾರಾಜರವರು ಅವರನ್ನು ಸಕಲ ಮರ್ಯಾದೆಗಳೊಡನೆ ಸ್ಟೇಷನ್‌ನಲ್ಲಿ ಎದುರುಗೊಂಡು, ಮೆರವಣಿಗೆಯಾಗಿ ಕರೆದುಕೊಂಡು ಬಂದು ಗವರನ್‌ಮೆಂಟ್ ಹೌಸಿನಲ್ಲಿ ಇಳಿಸುವರು ಮೆರವಣಿಗೆಯು ಸ್ಟೇಷನ್‌ನಿಂದ ಹೊರಟು ಸವಾರ್‌ಲೈನ್, ಸಯಾಜಿರಾವ್ ರಸ್ತೆ ಮೂಲಕ ಅರಮನೆ ವಾಕಿಲಿನೊಳಗೆ ಬಂದು, ದೊಡ್ಡ ಪೇಟೆಯನ್ನು ಹಾದು ಹರಿದಾಸ್ ಚಾವಡಿಯ ಬಳಿ ತಿರುಗಿಕೊಂಡು ಗವರನ್‌ಮೆಂಟ್ ಹೌಸನ್ನು ತಲುಪುವುದು ಮಧ್ಯಾಹ್ನ ೪ ಗಂಟೆಗೆ ಶ್ರೀಮನ್ಮಹಾರಾಜರವರು ಮರ್ಯಾದೆಗಳೊಡನೆ ಅರಮನೆಯಿಂದ ಕರ್ಜನ್ ವಾಕಿಲಿನಲ್ಲಿ ಹೊರಟು, ಕುಪ್ಪಣ್ಣನ ತೋಟದ ಮಾರ್ಗವಾಗಿ ಗವರನ್‌ಮೆಂಟ್ ಹೌಸನ್ನು ತಲುಪಿ, ವೈಸ್‌ರಾಯಿ ರವರ ಭೇಟಿ ತೆಗೆದುಕೊಂಡು ಅವರ ಯೋಗಕ್ಷೇಮವನ್ನು ವಿಚಾರಿಸಿ ಬರುವರು ತರುವಾಯ ೫ ೧ ಟೆಗೆ ವೈಸ್‌ರಾಯಿಯವರು ಮರ್ಯಾದೆಗಳೊಡನೆ ಅದೇ ಮಾರ್ಗವಾಗಿ ಗವರನ್‌ಮೆಂಟ್ ಹೌಸ್ ಬಂಗಲೆಯಿಂದ ಜಗನ್ಮೋಹನ ಬಂಗಲೆಗೆ ದಯಮಾಡಿ ಶ್ರೀಮನ್ಮಹಾರಾಜರವರಿಗೆ ಮರುಭೇಟಿ ಕೊಡುವರು

ಮೈಸೂರು ಗೆಜೆಟ್ ಸಂಗ್ರಹ.

ವೈಸ್‌ರಾಯಿ ಮತ್ತು ಗವರ್ನರ್ ಜನಾಲ್‌ರವರು ದಯಮಾಡುವುದರ ಜ್ಞಾಪಕಾರ್ಥವಾಗಿ ಮೈಸೂರು ಪಟ್ಟಣದಲ್ಲಿರುವ ಸರ್ಕಾರಿ ಆಫೀಸುಗಳೂ, ಕೋರ್ಟುಗಳೂ ತಾ ೨೫ನೇ ಗುರುವಾರ, ತಾ ೨೬ನೇ ಶುಕ್ರವಾರ, ತಾ ೨೭ನೇ ಶನಿವಾರ ಮುಚ್ಚಲ್ಪಡುವವು

ಅಮಲ್ದಾರ್ ಮೆ ಎ ಕೃಷ್ಣೇ ಅರಸಿನವರಿಗೆ ಮೂರು ತಿಂಗಳು ಇಪ್ಪತ್ತೆಂಟು ದಿನಗಳ ರಜಾ ಕೊಟ್ಟಿದೆ

ಆಮಿಲ್ದಾರ್ ಮೆ ಎಸ್ ಎಸ್ ರಾಘವಾಚಾರರನ್ನು ಚಿಂತಾಮಣಿಯಿಂದ ಬೌರಿಂಗ್‌ಪೇಟೆ ತಾಲ್ಲೂಕಿಗೆ ವರ್ಗಮಾಡಿದೆ

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಅ ಕಮಿಷನರ್ ಮೆ ಟಿ ಚೊಕ್ಕಣ್ಣನವರನ್ನು ಕೋಲಾರ್ ಚಿನ್ನದ ಗಣಿಗಳಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ವಹಿಸಿರುವಂತೆ ವರ್ಗಮಾಡಿದೆ

ಮಂಜರಾಬಾದ್ ತಾಲ್ಲೂಕ್ ಅಮಲ್ದಾರ್ ಮ ಸಿ ನಾರಾಯಣರಾಯರು ಸ್ಪೆಷಲ್ ಡ್ಯೂಟಿಗೆ ನೇಮಿಸಲ್ಪಟ್ಟವರಿಂದ ಶಿರಸ್ತೇದಾರ್ ಎಂ ಎ ತಿರುಮಲಾಚಾರ್ಯ ತಾಲ್ಲೂಕಿನ ರೆವಿನ್ಯೂ ಕೆಲಸಗಳನ್ನು ನೋಡಿಕೊಳ್ಳತಕ್ಕದ್ದು, ಮತ್ತು ಸಕಲೇಶಪುರದ ಸಬ್ ಡಿವಿಜನ್ ಆಫೀಸರವರು ಕ್ರಿಮಿನಲ್ ಮೊಕದ್ದಮೆಗಳನ್ನು ವಹಿಸತಕ್ಕದ್ದು

ಮಡಿಕೇರಿ ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರ್ ಮೆ ಎಚ್ ಡಿ ರೈಸ್‌ಯವರಿಗೆ ತಾ ೧೫ ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೆ| ಎ ವಿಶ್ವೇಶ್ವರಯ್ಯನವರು ಮೆ ವೈ ಶ್ರೀನಿವಾಸರಾಯರಿಂದ ತಾ ೧೫ ರಲ್ಲಿ ಗವರ್ನಮೆಂಟ್ ಚೀಫ್ ಇಂಜನಿಯರ್ ಮತ್ತು ಸೆಕ್ರೆಟರಿಯ ಕೆಲಸದ ಭಾರವನ್ನು ವಹಿಸಿಕೊಂಡರು

ಮೆ| ವೈ ಶ್ರೀನಿವಾಸರಾಯರನ್ನು ತಾ ೧೫ ರಿಂದ ಗವರ್ನಮೆಂಟಿನ ಡೆಪ್ಯುಟಿ ಚೀಫ್ ಇಂಜನಿಯರ್ ಮತ್ತು ಅಂಡರ್ ಸೆಕ್ರೆಟರಿಯಾಗಿ ನೇಮಕ ಮಾಡಿದೆ

ಸೊರಬದ ತಾಲ್ಲೂಕ್ ಅಮಲ್ದಾರ್ ಮೆ ಸ್ವಾಮಿ ರಾವ್ ಅವರಿಗೆ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು

ಶಿರಸ್ತೆದಾರ್ ಬಿ ಎಸ್ ತಿರುಮಲಾಚಾರ್ಯ ತಾಲ್ಲೂಕಿನ ಭಾರವನ್ನು ವಹಿಸಿದ್ದರು.

ಈ ತಾಲ್ಲೂಕಿಗೆ ಸೇರಿದ ೨೨ ಸರ್ಕಾರಿ ಗ್ರಾಮಗಳ ಹೊಸ ಕಂದಾಯದ ದರಗಳನ್ನು ಡಿಸೆಂಬರ್ ತಾ ೧೦ ರಲ್ಲಿ ಕಸಬಾ ನ್ಯಾಯದಲ್ಲಿ ಪ್ರಕಟಿಸಲಾರಂಭವಾಗುವುದು

ವೈಸ್‌ರಾಯಿಯವರ ದೇಶಸಂಚಾರ

ಕಳೆದ ವಾರ ವೈಸ್‌ರಾಯಿ ಪ್ರಭುಗಳು ಅಹಮದಾಬಾದಿಗೆ ದಯಮಾಡಿದಾಗ ಯಾರೋ ಅಪ್ರಯೋಜಕರುಗಳು ಅವರ ಮೇಲೆ ಸಿಡಿಮದ್ದಿನ ಗುಂಡನ್ನು ಎಸೆದರೆಂದೂ, ದೇವರ ದಯದಿಂದ ಅದು ಅವರಿಗೆ ತಗಲದೆ ದೂರಹೋಗಿ ಬಿದ್ದಿತೆಂದೂ ತಿಳಿಸಿದ್ದೆವಷ್ಟೆ ಕಳೆದ ವಾರ ಬೊಂಬಾಯಿನ ಪೋಲೀಸಿನವರು ಗ್ವಾಲಿಯಾಟ್ಯಾಂಕ್ ರೋಡಿನಲ್ಲಿ ಬೆಳಿಗ್ಗೆ ೮ ಗಂಟೆಯಲ್ಲಿ ಗುಂಪಿನೊಳಗೆ ನುಗ್ಗಿ ಹೋಗುತ್ತಿದ್ದ ಒಬ್ಬ ಬಂಗಾಳಿ ಪ್ರಾಯಸ್ಥನನ್ನು ದಸ್ತಗಿರಿ ಮಾಡಿದರು ಅವನ ಹೆಸರು ಸುರೇಂದ್ರನಾಥ ಗಣೇಶಪ್ರಸಾದ ಬ್ಯಾನರ್ಜಿ ಅವನಿಗೆ ಸುಮಾರು ೨೦ ವರುಷ ವಯಸ್ಸಾಗಿದ್ದೀತು ಇವನು ಬೊಂಬಾಯಿನಲ್ಲಿ ವೈಸ್‌ರಾಯಿಯವರು ಗಾರ್ಡೊಟಿನಲ್ಲಿ ದಯಮಾಡುತ್ತಿದ್ದ ವೇಳೆ ಅವರ ಕಡೆಗೆ ಬಂದು ಜನರ ಗುಂಪಿನಲ್ಲಿ ನುಗ್ಗಿಕೊಂಡು ಆತುರವಾಗಿ ಹೋಗುತ್ತಿದ್ದನು. ಅಹಮದಾಬಾದಿನಲ್ಲಿ ವೈಸ್‌ರಾಯಿಯವರ ಸಾರೋಟಿನ ಬಳಿ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಪೋಲೀಸ್ ಕಮಿಷನರರಾದ ಮೆ|| ಬ್ಯಾರೋಯವರು ಆ ದಿನ ಒಬ್ಬ ಹುಡುಗನು ಏನೋ ಎಸೆದಂತೆ ನೋಡಿದೆವೆಂದೂ, ಅವನನ್ನು ಹಿಡಿದು ಕಂಪನಿ ತಾನು ಗುರುತು ಹಿಡಿಯಬಲ್ಲೆನೆಂದೂ ಹೇಳಿದ್ದರಾದಕಾರಣ ಈ ಪ್ರಾಯಸ್ಥನನ್ನು ಪೋಲೀಸಿನವರು ಪಹರೆ ಇಟ್ಟು ಅವರ ಬಳಿಗೆ ಕಳುಹಿಸುತ್ತಾರೆ ಇತ್ತಲಾಗಿ, ಬೊಂಬಾಯಿ ಪೋಲೀಸಿನವರು ಮೊನ್ನೆ ದಿನ ಇನ್ನೊಬ್ಬ ಪ್ರಾಯಸ್ಥನನ್ನು ದಸ್ತಗಿರಿ ಮಾಡಿದಾರೆ. ಇವನು ಕೈರಾಡಿ ಡಿಸ್ಟ್ರಿಕ್ಟಿಗೆ ಸೇರಿದ ಉಲಮ್ಮರಕ ಎಂಬ ಊರಿಗೆ ಸೇರಿದವನು. ನಾನಾಲಾಲ ಪ್ರಾಣಶಂಕರ ಉರುಫ್ ಕಂಚನಕುಮಾರ್ ಎಂಬುವುದು ಅವನ ಹೆಸರು ಇವನಿಗೆ ಸುಮಾರು ೨೫ ವರುಷ ವಯಸ್ಸಾಗಿದೆ ಪೋಲೀಸಿನವರು ಇವನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದಾಗ ಅವನು— ನನ್ನನ್ನು ಪೋಲೀಸಿನವರ ಸ್ವಾಧೀನಕ್ಕೆ ಕೊಡಕೂಡದು. ಮನೆಯಲ್ಲಿ ನನ್ನ ಹೆಂಡತಿಗೆ ಸ್ವಸ್ಥವಿಲ್ಲ. ನನ್ನ ಮಕ್ಕಳ ಪೋಷಣೆಯನ್ನು ನಾನೇ ನೋಡಿಕೊಳ್ಳಬೇಕು ಎಂದು ಹೇಳಿದನು ಅವನ ಮಾತಿಗೆ ಕಿವಿಗೊಡದೆ ಮ್ಯಾಜಿಸ್ಟ್ರೇಟರು ಅವನನ್ನು ಪೋಲೀಸಿನವರ ಸ್ವಾಧೀನಕ್ಕೆ ಕೊಟ್ಟು ಇರುತ್ತಾರೆ

* * *

ವೈಸ್‌ರಾಯಿಯವರಿಗೆ ಅಹಮದಾಬಾದಿನಲ್ಲಿ ಪ್ರಾಪ್ತವಾಗುತ್ತಿದ್ದ ಅಪಘಾತವು ದೈವವಶಾತ್ತು ತಪ್ಪಿಹೋದದ್ದನ್ನು ಕೇಳಿ ಹಿಂದುಸ್ಥಾನದ ಸಕಲ ರಾಜರುಗಳೂ, ಅಧಿಕಾರಿಗಳೂ, ಸಂಘಗಳ ಪ್ರತಿನಿಧಿಗಳೂ, ಪ್ರಜೆಗಳ ಮುಖಂಡರೂ ಅವರಿಗೆ ಸಂತೋಷ ಸೂಚಕವಾದ ತಂತಿ ವರ್ತಮಾನಗಳನ್ನು ಕಳುಹಿಸಿದಾರೆ ಮತ್ತು ವಿಲಾಯಿತಿಯಿಂದ ಚಕ್ರವರ್ತಿ ಸಾರ್ವಭೌಮರವರೂ, ಪ್ರಿನ್ಸ್ ಆಫ್ ವೇಲ್ಸ್‌ರವರೂ, ಲಾರ್ಡ್ ಮಾರ್ಲೀಯವರೂ, ಅಧಿಕಾರಿಗಳೂ ಅವರಿಗೆ ತಮ್ಮ ಸಂತೋಷವನ್ನು ತಿಳಿಸಿರುತ್ತಾರೆ

* * *

ವೈಸ್‌ರಾಯಿಯವರು ಕಳೆದ ಬುಧವಾರ ಬೆಳಿಗ್ಗೆ ಬೊಂಬಾಯಿನಲ್ಲಿ ಆ ಆಧಿಪತ್ಯದ ಮುಖ್ಯ ರಾಜರಿಗೂ ನವಾಬರಿಗೂ ಭೇಟಿ ದಯಪಾಲಿಸಿದರು ಕೊಲ್ಹಾಪುರ, ಭಾವನಗರ, ಜುನಾಘಡ, ರಾಜಪಿಪ್ಲ, ಜಂಜೀರ, ದಾಂಟ್ರಾಂ, ಸಾಚಿನ್, ಪೋರ್, ಮುಧೋಳ್, ಮಿರಾಜ್, ಜಮಖಂಡಿ, ಜೋವರ್, ಎಂಬೀ ಸಂಸ್ಥಾನಗಳ ಅರಸರು ವೈಸ್‌ರಾಯಿಯವರ ಭೇಟಿ ಪಡೆದು ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರು

* * *

ವೈಸ್‌ರಾಯಿ ಪ್ರಭುಗಳು ಕಳೆದ ಬುಧವಾರ ಬರೋಡಾ ಸಂಸ್ಥಾನಕ್ಕೆ ದಯಮಾಡಿದ್ದಾಗ ಮೈದಾನಿನಲ್ಲಿ ಅವರ ಎದುರಿಗೆ ನಾನಾ ಆಟಗಳೂ ವಿನೋದಗಳೂ ನಡೆದವು ಗಿಣಿಗಳು ಮಾಡಿದ ಕೆಲಸಗಳು ಬಹು ಅಪೂರ್ವವಾಗಿದ್ದವು ಒಂದು ಗಿಣಿಯು ಮೋಟಾರ್ ಗಾಡಿಯಲ್ಲಿ ಕುಳಿತು ತಾನೇ ನಡಿಸಿಕೊಂಡು ಹೋಯಿತು ಇನ್ನೊಂದು ಒಂದು ಗುಂಡನ್ನು ಹಿಡಿದು ಹಾರಿಸಿತು. ಮೂರನೇ ಗಿಣಿಯು ಬಿಲ್ಲಿಗೆ ಅಂಬನ್ನು ಹೂಡಿ ಹೊಡೆಯಿತು. ನಾಲ್ಕನೆಯದು ಮೂರು ಚಕ್ರದ ಗಾಡಿಯ ಮೇಲೆ ಕುಳಿತು ನಡಿಸಿಕೊಂಡು ಹೋಯಿತು ತರುವಾಯ ನಡೆದ ಆನೆಗಳ ಕಾಳಗವು ನೋಟಕರಲ್ಲಿ ಇನ್ನೂ ವಿಶೇಷ ಉತ್ಸಾಹವನ್ನುಂಟುಮಾಡಿತು

* * *

ಬೊಂಬಾಯಿನಲ್ಲಿದ್ದಾಗ್ಗೆ ವೈಸ್‌ರಾಯಿಯವರ ಪತ್ನೀರವರು ಕಳೆದ ಭಾನುವಾರ ಬೆಳಿಗ್ಗೆ ಮೆ|| ಮಲಬಾರಿಯವರು ನಡಿಸುವ ಸೇವಾ ಸದನವೆಂಬ ಹಿಂದೂ ಸ್ತ್ರೀಯರ ಆಲಯಕ್ಕೆ ದಯಮಾಡಿ ಅಲ್ಲಿನ ವಿಚಾರಗಳನ್ನೆಲ್ಲಾ ತಿಳಿದುಕೊಂಡು, ಮೆ|| ಮಲಬಾರಿಯವರನ್ನು ವಂದಿಸಿದರು ವಾಡಿಯಾ ಧರ್ಮಗಳಿಂದ ಕ್ಷಯರೋಗ ಪೀಡಿತರ ಆಲಯಕ್ಕೆ ೨೫೦೦೦ ರೂಪಾಯಿ ಧರ್ಮ ಕೊಡುವುದಾಗಿಯೂ, ಸೇವಾ ಸದನಕ್ಕೆ ವರುಷಕ್ಕೆ ೧೭ ಸಾವಿರ ರೂಪಾಯಿ ಕೊಡುವುದಾಗಿ ಅಪ್ಪಣೆ ಕೊಡಿಸಿದರು ಆ ದಿನ ಮಧ್ಯಾಹ್ನ ಅವರು ಸ್ತ್ರೀಯರ ಸಂಘಕ್ಕೆ ಚಿತ್ತೈಸಿ, ವಿದ್ಯಾವತಿಯರಾದ ದೇಶೀಯ ಸ್ತ್ರೀಯರ ಗುಂಪನ್ನು ಪರಾಂಬರಿಸಿ, ಅವರು ಮಾಡಿದ ಸನ್ಮಾನಗಳನ್ನು ಸ್ವೀಕರಿಸಿ ಬಹಳ ಸಂತೋಷಪಟ್ಟುಕೊಂಡರು ಅತ್ತಲಾಗಿ ವೈಸ್‌ರಾಯಿಯವರು ಟೌನ್ ಹಾಲ್ ಬಂಗಲೆಗೆ ಚಿತ್ತೈಸಿ ಮ್ಯುನಿಸಿಪಲ್ ಕೌನ್ಸಿಲರುಗಳು ಒಪ್ಪಿಸಿದ ಅಡ್ರೆಸ್ಸನ್ನು ಅಂಗೀಕರಿಸಿ ಸಮಯೋಚಿತವಾದ ಉತ್ತರಗಳನ್ನು ದಯಪಾಲಿಸಿದರು ವೈಸ್‌ರಾಯಿಯವರು ಆ ರಾತ್ರಿ ಗವರನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಭೋಜನವಾದ ಬಳಿಕ ಅಲ್ಲಿಂದ ಹೊರಟು ಬಿಜಾಪುರಕ್ಕೆ ದಯಮಾಡಿದರು ಕಲೆಕ್ಟರೇ ಮೊದಲಾದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಅವರಿಗೆ ದಿವ್ಯವಾದ ಸುಸ್ವಾಗತವನ್ನು ಬಯಸಿದರು ಭೋಜನಾ ನಂತರ ವೈಸ್‌ರಾಯಿಯವರು ಅಲ್ಲಿನ ಅಧಿಕಾರಿಗಳ ಸಮೇತ ಮೋಟಾರ್ ಗಾಡಿಯಲ್ಲಿ ಕುಳಿತು ಚರಿತ್ರಾರ್ಹವಾದ ಆ ಪಟ್ಟಣದ ಮುಖ್ಯ ಭಾಗವನ್ನೆಲ್ಲಾ ಅಂದರೆ ಮಹಮದ್ ಅದಿಲ್‌ಷಾನ ಗೋರಿ, ಪ್ರತಿಧ್ವನಿಯಾಗುವ ಪ್ರಸಿದ್ಧವಾದ ಬೋಳ ಗುಂಬಸ್, ಜುಮ್ಮಾ ಮಸೀದಿ, ಇಬ್ರಾಹಿಂ ರೋಜಾ, ಈ ಮೊದಲಾದ ಕಟ್ಟಡಗಳನ್ನು ನೋಡಿಕೊಂಡು ಬಂದರು. ಸಾಯಂಕಾಲದ ಭೋಜನವನ್ನು ತೀರಿಸಿಕೊಂಡು ವೈಸ್‌ರಾಯಿಯವರು ಪರಿವಾರ ಸಮೇತ ಅಲ್ಲಿಂದ ಮುಂದಕ್ಕೆ ತೆರಳಿ ಗೋವೆಗೆ ದಯಮಾಡಿದರು

ಇಂಡಿಯಾದೇಶದ ವೃತ್ತಾಂತಗಳು

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯದಲ್ಲಿ ಮಲಪಿನ ಬಜಾರಿನ ಪೋಸ್ಟ್ ಮಾಸ್ಟರನ್ನೂ ಒಬ್ಬ ಜವಾನನನ್ನೂ ದುಷ್ಕರ್ಮಿಗಳು ಕೊಂದುಹಾಕಿದರೆಂದೂ, ಅವರು ಇನ್ನೂ ಸಿಕ್ಕಿಲ್ಲವೆಂದೂ ತಿಳಿದುಬಂದಿದೆ

* * *

ಶಿವಗಂಗಾ ಜಮೀನ್‌ದಾರರಾದ ಶ್ರೀ ದೊರೈಸಿಂಗದೇವರವರಿಗೆ ಊರ್ಕಾಡಿನ ರಾಣಿ ವಿಳ್ಳಪಂಡಚಿನಾಚೀ ಎಂಬ ಕುಮಾರ್ತೆಯನ್ನು ಕೊಟ್ಟು ಡಿಸಂಬರ್ ತಿಂಗಳಲ್ಲಿ ಊರ್ಕಾಡಿನಲ್ಲಿ ವಿವಾಹ ಬೆಳೆಯುವುದೆಂದು ತಿಳಿದು ಬಂದಿದೆ

* * *

ಬೊಂಬಾಯಿ ಡಿಸ್ಟ್ರಿಕ್ಟಿಗೆ ಸೇರಿದ ಬಾಯಿ ಮಾಣಿಕ್ಯ ಬಾಯಿ ಎಂಬೊಬ್ಬ ಹಿಂದೂ ಪುಣ್ಯಾತ್ಮಳು ತನ್ನ ಆಸ್ತಿಯಲ್ಲಿ ೭೫,೦೦೦ ರೂಪಾಯನ್ನು ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಹೇಳಿ ಹಣವನ್ನು ಸರ್ಕಾರದವರ ವಶಕ್ಕೆ ಒಪ್ಪಿಸಿರುತ್ತಾಳೆ.

* * *

ಬೊಂಬಾಯಿ ಪಟ್ಟಣದಲ್ಲಿ ಮಕ್ಕಳ ಸಾವು ವಿಶೇಷವಾಗಿರುವುದನ್ನು ತಪ್ಪಿಸಬೇಕೆಂದು ಅಲ್ಲಿನ ಹೆಲ್ತ್ ಆಫೀಸರವರೂ ಕೆಲವು ಮುಖಂಡ ಪ್ರಜೆಗಳೂ ಸೇರಿ, ಕಾರ್ಖಾನೆಗಳಿರುವ ಪ್ರಾಂತ್ಯದಲ್ಲಿ ಒಂದು ಮಕ್ಕಳ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ, ಜಾತಿಭೇದವಿಲ್ಲದೆ ೧೦೦ ಮಕ್ಕಳಿಗೆ ಚಿಕಿತ್ಸೆ ನಡೆಯುವಂತೆ ಈ ಆಸ್ಪತ್ರೆಯಲ್ಲಿ ಅವಕಾಶವಾಗುವುದು. ಈ ಆಸ್ಪತ್ರೆಯನ್ನು ಕಟ್ಟುವುದಕ್ಕೆ ೧½ ಲಕ್ಷ ರೂಪಾಯಿಯೂ, ಅದನ್ನು ನಡೆಸುವುದಕ್ಕೆ ವರುಷಕ್ಕೆ ೩೦,೦೦೦ ರೂಪಾಯಿನಂತೆಯೂ ಬೇಕಾಗುವುದೆಂದೂ, ಅನೇಕಾನೇಕರು ಈ ಪುಣ್ಯ ಕೆಲಸಕ್ಕೆ ಧನಸಹಾಯ ಮಾಡುವುದಾಗಿ ಮಾತುಕೊಟ್ಟಿದಾರೆಂದೂ ಪ್ರಕಟವಾಗಿದೆ

* * *

ಕಳೆದ ಸೆಪ್ಟಂಬರ್ ತಿಂಗಳಲ್ಲಿ ಅನ್ಯದೇಶಗಳಿಂದ ಹಿಂದುಸ್ಥಾನಕ್ಕೆ ೬೫ ಲಕ್ಷ ರೂಪಾಯಿನ ಬೆಳ್ಳಿಯೂ, ೧೧೭ ಲಕ್ಷ ರೂಪಾಯಿನ ಭಂಗಾರವೂ ರಫ್ತಾಗಿ ಬಂದಿರುತ್ತದೆ ಕಲ್ಕತ್ತೆಯ ಮತ್ತು ಬೊಂಬಾಯಿನ ಟಂಕಸಾಲೆಗಳಲ್ಲಿ ಹೊಸ ನಾಣ್ಯಗಳ್ಯಾವೂ ಅಚ್ಚಾಗಲಿಲ್ಲ.

* * *

ಕೊಚ್ಚಿ ಸಂಸ್ಥಾನದ ರಾಜರು ದಿವಾನ್ ಮೆ|| ಎ ಆರ್ ಬ್ಯಾನರ್ಜಿಯವರ ಸಮೇತ ಸ್ಪೆಷಲ್ ರೈಲಿನಲ್ಲಿ ಕಳೆದ ಸೋಮವಾರ ಬೆಳಿಗ್ಗೆ ಮದರಾಸಿಗೆ ದಯಮಾಡಿದರು. ವೈಸ್‌ರಾಯಿಯವರು ಮದರಾಸಿಗೆ ದಯಮಾಡುವ ತನಕ ಅವರು ಅಲ್ಲೇ ಇರುತ್ತಾರೆಂದು ತಿಳಿದು ಬಂದಿದೆ.

* * *

ಪಿಷಾವರ್ ಪ್ರಾಂತ್ಯದಲ್ಲಿ ಈಚೆಗೆ ದೊರಕಿದ ಗೌತಮ ಬುದ್ಧನ ಅಸ್ತಿ ಶೇಷವನ್ನು ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಒಂದು ದೇವಾಲಯದೊಳಕ್ಕೆ ತರಿಸಿ ಇಡಿಸಬೇಕೆಂದು ಕೆಲವು ಬರ್ಮಾದ ಮುಖಂಡರು ಅಲ್ಲಿನ ಲೆಫ್ಟಿನೆಂಟ್ ಗವರ್ನರವರನ್ನು ಕೇಳಿಕೊಂಡಿದಾರೆ.

* * *

ಮುಂದಿನ ಜನವರಿ ತಿಂಗಳಲ್ಲಿ ಕಲ್ಕತ್ತೆಯಲ್ಲಿ ನಡೆಯುವ ವೈಸ್‌ರಾಯಿಯವರ ಹೊಸ ಮಂತ್ರಾಲೋಚನ ಸಭೆಯಲ್ಲಿ ಹಿಂದುಸ್ಥಾನದ ಸಕಲ ಪ್ರದೇಶಗಳಲ್ಲೂ ಚಲಾವಣೆಯಾಗುವಂಥಾ ೧೦ ರೂಪಾಯಿನ ಕರೆನ್ಸಿ ನೋಟುಗಳ ವಿಚಾರವನ್ನು ಚರ್ಚೆಮಾಡಿ ಜಾರಿಗೆ ತರುತ್ತಾರೆಂದು ತಿಳಿದು ಬಂದಿದೆ.

* * *

ಲಾಹೋರ್ ಪಟ್ಟಣದ ಸೆಂಟ್ರಲ್ ಜೈಲಿನಲ್ಲಿ ಒಬ್ಬ ಪಠಾಣ್ ಖೈದಿಯು ಕಳೆದ ವಾರ ಭರ್ಜಿಯಿಂದ ಜೈಲಿನ ಸೂಪರೆಂಟರಾದ ಕ್ಯಾಪ್ಟನ್ ಕ್ಲೆಮೆಂಟ್ಸ್ ಎಂಬವರನ್ನೂ ಹೆಡ್ ಜೈಲರನ್ನೂ ತಿವಿದು ಗಾಯಮಾಡಿದನು ಈಗ ಅವರಿಬ್ಬರೂ ಚಿಕಿತ್ಸೆ ಹೊಂದುತ್ತಿದಾರೆ. ಆ ಘಾತುಕನನ್ನು ಹಿಡಿದು ತನಿಖೆ ಮಾಡುತ್ತಿರುವರು

* * *

ಲಾಹೋರ್ ಪಟ್ಟಣದಲ್ಲಿ ಪ್ರದರ್ಶನಶಾಲೆಯು ಡಿಸೆಂಬರ್ ತಾ, ೧೧ರಲ್ಲಿ ಪ್ರಾರಂಭವಾಗುತ್ತದೆ. ಲೆಫ್ಟಿನೆಂಟ್ ಗವರ್ನರವರು ಅದನ್ನು ಉಪನ್ಯಾಸ ಪೂರ್ವಕವಾಗಿ ತೆರೆಯುವರು ಪಂಜಾಬ್ ಆಧಿಪತ್ಯದ ಸಮಸ್ತ ದೇಶೀಯ ರಾಜರುಗಳೂ ನವಾಬರೂ ಆ ಕಾಲಕ್ಕೆ ಹಾಜರಾಗಿರುವಂತೆ ಮಾತು ಕೊಟ್ಟಿದಾರೆ. ಈ ಪ್ರದರ್ಶನವು ವಿಶೇಷ ಪ್ರೋತ್ಸಾಹಕರವಾದ ರೀತಿಯಲ್ಲಿ ನಡಿಸಲ್ಪಡುವುದು.

* * *

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೩,೮೭೯ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾಗಿರುತ್ತಾರೆ. ಸಂಯುಕ್ತ ಆಧಿಪತ್ಯದಲ್ಲಿ ೧,೧೦೦ ; ಬೊಂಬಾಯಿ ಆಧಿಪತ್ಯದಲ್ಲಿ ೬೪೭ ; ಪಂಜಾಬ್ ೪೬೦ , ಮಧ್ಯಪ್ರಾಂತ್ಯಗಳು ಮತ್ತು ಬೇರಾರ ೯೭೮ , ಬಂಗಾಳಾ ೨೦೭ ; ಮೈಸೂರು ಸಂಸ್ಥಾನ ೧೪೩ ; ಮಧ್ಯ ಇಂಡಿಯಾ ೧೪ ; ರಾಜಪುಟಾನಾ ೩೬೨ ; ಮದರಾಸ್ ಆಧಿಪತ್ಯ ೯೧ ; ಬರ್ಮಾ ೨೭ , ಹೈದರಾಬಾದ್ ಸಂಸ್ಥಾನ ೨೧ ; ಕಾಶ್ಮೀರ ೧೧;

* * *

ಕೆಲವು ಕಾಲಕ್ಕೆ ಹಿಂದೆ ಅಫ್ಘಾನಿಸ್ಥಾನದ ಅಮೀರರನ್ನು ಕೊಂದುಹಾಕಬೇಕೆಂದು ಕೆಲವರು ಸೇರಿ ಪಿತೂರಿ ಮಾಡಿದ್ದುದು ಪ್ರಕಟವಾಯಿತಷ್ಟೆ ಅಮೀರರವರು ಆ ಪಿತೂರಿ ಗುಂಪಿನಲ್ಲಿ ಸೇರಿದ್ದ ಐದು ಮಂದಿ ಹಿಂದುಸ್ಥಾನದವರನ್ನು ಬಿಟ್ಟು ಉಳಿದವರನ್ನೆಲ್ಲಾ ಗುಂಡಿನಿಂದ ಹೊಡಿಸಿ ಕೊಲ್ಲಿಸಿಬಿಟ್ಟರು ಆ ಐದು ಮಂದಿಯನ್ನು ಹೊರಕ್ಕೆ ಬಿಟ್ಟರೆ ಪ್ರಜೆಗಳು ಎಲ್ಲಿ ಅವರನ್ನು ಹಿಂಸೆಮಾಡುವರೋ ಎಂಬ ಶಂಕೆಯಿಂದ ಬಂಧನದಲ್ಲಿ ಇಟ್ಟುಕೊಂಡಿದಾರೆಂದೂ, ಕೆಲವು ಕಾಲಾನಂತರ ಅವರನ್ನೆಲ್ಲಾ ವಾಪಸು ಹಿಂದುಸ್ಥಾನಕ್ಕೆ ಕಳುಹಿಸುತ್ತಾರೆಂದೂ ವರ್ತಮಾನವಿದೆ

* * *

ಬೊಂಬಾಯಿಯಲ್ಲಿ ಕೃಷ್ಣನಾಥ ಕಾಶೀನಾಥ ಪಾದುಕೆ ಎಂಬಾತನು ತನ್ನ "ಹಿಂದೂ ಪಂಚ್" ಎಂಬ ಪತ್ರಿಕೆಯಲ್ಲಿ ಮೆ|| ಗೋಪಾಲಕೃಷ್ಣ ಗೋಖಲೆಯವರನ್ನು ಮಾನಹೀನವಾಗಿ ಜರಿದು ಬರೆದಿದ್ದನು ಅವರು ಆತನ ಮೇಲೆ ಮಾನನಷ್ಟಕ್ಕೆ ದಾವಾ ತಂದಿದ್ದರು. ಬೊಂಬಾಯಿ ಹೈಕೋರ್ಟಿನ ಜಡ್ಜಿಯವರು ಅಪರಾಧಿಯಿಂದ ೫,೦೦೦ ರೂಪಾಯಿ ನಷ್ಟ ದ್ರವ್ಯವನ್ನು ಫಿರ್ಯಾದಿಗೆ ಕೊಡಿಸಿರುತ್ತಾರೆ ಎರಡನೇ ಅಪರಾಧಿಯು ಕ್ಷಮಾಪಣೆಯನ್ನು ಬೇಡಿದ್ದರಿಂದ ಅವನನ್ನು ಬಿಟ್ಟುಬಿಟ್ಟರು ಅದೇ ಪತ್ರಿಕೆಯಲ್ಲಿ ರಾಜದ್ರೋಹಕರವಾದ ದುರ್ಬೋಧನೆಗಳುಳ್ಳ ಬಾತ್ಮಿಯನ್ನು ಮೊದಲನೇ ಅಪರಾಧಿಯು ಪ್ರಕಟಿಸಿರುವುದರಿಂದ ಜಡ್ಜರು ಆತನ ಅಚ್ಚಿನ ಕಾರ್ಖಾನೆಯನ್ನು ಸರ್ಕಾರಕ್ಕೆ ಸೇರಿಸಿಕೊಂಡಿರುತ್ತಾರೆ.

* * *

ಗೂರಖಪುರದಲ್ಲಿ ಗೋರಖಿ ಎಂಬವನು ದೇವರನ್ನು ತೋರಿಸುತ್ತೇನೆಂದು ಕುಂಜ ಬಿಹಾರಿ ಎಂಬವನನ್ನು ಸ್ನಾನಮಾಡಿಸಿ ಸಮುದ್ರತೀರದಲ್ಲಿ ಇಬ್ಬರೂ ನಿಂತು ಯಾವುದೋ ಒಂದು ಮಂತ್ರವನ್ನು ೧೦೮ ಸಲ ಉಚ್ಚರಿಸಿದರು ದೇವರು ಪ್ರತ್ಯಕ್ಷನಾಗಲಿಲ್ಲ. ಗೋರಖಿಯು ಕುಂಜ ಬಿಹಾರಿಯನ್ನು—ನನ್ನನ್ನು ಕತ್ತಿಯಿಂದ ಹೊಡಿ, ದೇವರು ನಿನ್ನ ಕೈಯನ್ನು ಹಿಡಿದುಕೊಂಡು ಕೊಲೆಯನ್ನು ತಪ್ಪಿಸುತ್ತಾನೆ ಎಂದು ಹೇಳಿದನು ಅದೇ ರೀತಿ ಕುಂಜ ಬಿಹಾರಿಯು ಹೊಡೆದನು ದೇವರು ಬಿಡಿಸಿಕೊಳ್ಳಲಿಲ್ಲ ಅವನು ಸತ್ತುಹೋದನು ಪೋಲೀಸಿಗೆ ತಿಳಿದು ಕೊಲೆಯ ಮೊಕದ್ದಮೆ ಆಯಿತು ಕುಂಜ ಬಿಹಾರಿಯು ಕೊಲೆ ಮಾಡಿದನೆಂದು ಸೆಷನ್ಸ್ ಜಡ್ಜರು ಅವನಿಗೆ ಬಂದೀಖಾನೆ ಶಿಕ್ಷೆಯನ್ನು ವಿಧಿಸಿದರು. ಅದರ ಮೇಲೆ ಅವನು ಅಪೀಲ್ ಮಾಡಿಕೊಂಡನು. ಹೈಕೋರ್ಟಿನ ಜಡ್ಜಿಯವರು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ ಅಪರಾಧಿಗೆ ಆ ಶಿಕ್ಷೆಯಾಗಿರುವುದು ಸರಿಯಾಗಿರುವಂತೆ ಕಾಣುವುದಿಲ್ಲವೆಂದೂ, ಅವನಿಗೆ ಕ್ಷಮಾಪಣೆಯನ್ನು ಕೊಡಬಹುದೆಂದು ಶಿಫಾರಸು ಮಾಡಿ ಗವರ್ನಮೆಂಟಿಗೆ ಬರೆದಿರುತ್ತಾರೆ

ನಾಟ್ಯಗಾತಿಯರೂ ಗುರುಗಳ ಮಠಗಳೂ

ಮೈಸೂರು ಗವರ್ನ್‌ಮೆಂಟಿನ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ನಾಟ್ಯಗಾತಿಯರು ನೃತ್ಯ ಗೀತಗಳನ್ನು ನಡಿಸಕೂಡದೆಂದು ವಿಧಿಸಲ್ಪಟ್ಟಿದೆಯಷ್ಟೆ. ಗವರ್ನ್‌ಮೆಂಟಿನವರು ಈ ಹುಕುಮನ್ನು ಇತರ ಕಡೆಗಳಲ್ಲೂ ವ್ಯವಹರಿಸುವಂತಾಗಬೇಕೆಂದು ಕುತೂಹಲಪಡುತ್ತೇವೆ. ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ "ಪ್ರತ್ಯಕ್ಷದರ್ಶಿ" ಎಂಬೊಬ್ಬ ಬಾತ್ಮೀದಾರರು ತೀರ್ಥಹಳ್ಳಿ ತಾಲ್ಲೂಕಿನ ಒಂದು ಮಠದಲ್ಲಿ ವೇಶ್ಯಾಸ್ತ್ರೀಯರು ಗುರುಗಳ ಮುಂದೆ ತಮ್ಮ ಭಾವವಿಲಾಸಗಳನ್ನು ಪ್ರಕಾಶಪಡಿಸಿ ನಾಟ್ಯ ಕಟ್ಟಿದ ವೃತ್ತಾಂತವನ್ನು ಪ್ರಕಟಮಾಡಿದ್ದರು. ಇದನ್ನು ವಾಚಕರು ಓದಿ ಇದ್ದಾರೆಂದು ನಂಬುತ್ತೇವೆ. ಈ ಗುರುಗಳು ಅಂಥಾ ಸ್ತ್ರೀಯರ ನರ್ತನಾದಿ ಚೇಷ್ಟೆಗಳನ್ನು ಪ್ರೋತ್ಸಾಹಪಡಿಸತಕ್ಕವರಲ್ಲವೆಂದು ನಾವು ಊಹಿಸಿ ತಿಳಿದುಕೊಂಡಿದ್ದೇವೆ. ನೂರಾರು ವರುಷಗಳಿಂದ ಈ ದುಷ್ಟ ಪದ್ಧತಿಯು ನಡೆದುಬಂದಿರುವುದರಿಂದ ಪದ್ಧತಿಯೇ ಅದಕ್ಕೆ ಕಾರಣವಾಗಿ, ಅದಕ್ಕೆ ಗುರುಗಳು ಅವಕಾಶಕೊಡುತ್ತಿರುವಂತೆ ಕಾಣುವುದು. ಗವರ್ನ್‌ಮೆಂಟಿನವರು ದೇವಸ್ಥಾನಗಳನ್ನು ದೇವರ ಸಾನ್ನಿಧ್ಯಕ್ಕೆ ಯೋಗ್ಯವಾಗಿರುವಂತೆ ಮಾಡಬೇಕೆಂದು ತೀರ್ಮಾನಿಸಿ, ವೇಶ್ಯಾ ಸ್ತ್ರೀಯರನ್ನೂ ಅಲ್ಲಿ ನರ್ತನಾದಿಗಳನ್ನೂ ಮಾಡಕೂಡದೆಂದು ನಿಲ್ಲಿಸಿಬಿಟ್ಟರು. ಆದಕಾರಣ ಗುರುಗಳೂ, ಮಠಾಧಿಕಾರಿಗಳೂ, ಮೊಲ್ಪಿಚಾರಣಾಕರ್ತರೂ ಗವರ್ನ್‌ಮೆಂಟಿನವರ ಮೇಲ್ಪಂಕ್ತಿಗಳನ್ನು ಅನುಸರಿಸಿ ಭಕ್ತಿವೃದ್ಧಿಗೂ ಸದಾಚಾರಕ್ಕೂ ಮಹಾ ಕೆಡುಕನ್ನುಂಟುಮಾಡುವಂಥಾ ಈ ದುಷ್ಟ ಪದ್ಧತಿಯನ್ನು ತೊಡೆದು ಬಿಡಬೇಕಾಗಿರುತ್ತದೆ. ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಪ್ರಯತ್ನಪಡತಕ್ಕ ಮಹನೀಯರಿಗೆ ಯಥಾರ್ಥವಾದ ದೇಶಾಭ್ಯುದಯವನ್ನು ಬಯಸತಕ್ಕವರೆಲ್ಲರೂ ಬೆಂಬಲ ಕೊಟ್ಟಾರೆಂದು ನಂಬಿ ಹಾರೈಸುತ್ತೇವೆ.

ಬೆಂಗಳೂರಿನಲ್ಲಿರುವ ತಮಾಷಿ ಬಂಗಲೆ

ಬೆಂಗಳೂರು ಸಿಟಿಯಿಂದ ದಂಡಿಗೆ ಹೋಗುವ ಮಾರ್ಗದಲ್ಲಿ ಮೈಸೂರು ಗವರ್ನ್‌ಮೆಂಟಿನವರು ವಿಚಿತ್ರವಸ್ತುಗಳನ್ನೂ ಪ್ರಾಣಿಗಳ ಅಸ್ಥಿ ಮೊದಲಾದವುಗಳನ್ನೂ ಪ್ರಜೆಗಳ ನೋಟಕ್ಕೆ ಇಟ್ಟು ಇರುತ್ತಾರಷ್ಟೆ. ಈ ವಿಚಿತ್ರವಸ್ತುಶಾಲೆಯು ಕಳೆದ ವರುಷದ ರಿಪೋರ್ಟು ಪ್ರಕಟವಾಗಿರುತ್ತದೆ. ಅಂಥಾ ಪ್ರಜಾರಂಜಕವಾದ ಶಾಲೆಯನ್ನು ೧೯೦೮-೯ನೇ ಸಾಲಿನಲ್ಲಿ ೨,೭೪,೩೪೫ ಜನರು ಹೋಗಿ ನೋಡಿಕೊಂಡು ಬಂದಿರುತ್ತಾರೆ. ಅಂದರೆ ದಿನ ಒಂದಕ್ಕೆ ೭೫೦ ಜನದಂತೆ ಹೋಗಿ ನೋಡಿದರು. ಕಳೆದ ಸಾಲಿನ ವಿಜಯದಶಮಿ ದಿನ ೧೩,೭೧೦ ಜನರು ಈ ತಮಾಷಿ ಬಂಗಲೆಗೆ ಹೋಗಿದ್ದರೆಂದು ಗೊತ್ತಾಗುತ್ತದೆ. ಅದಕ್ಕೆ ತಮಾಷಿ ಬಂಗಲೆ ಎಂದು ಅನೇಕರು ಕರೆಯುವುದೂ, ಅದರಲ್ಲಿಟ್ಟಿರುವ ಆಶ್ಚರ್ಯವೂ ಅಪೂರ್ವವೂ ಆದ ನಾನಾ ವಸ್ತುಗಳನ್ನು ನೋಡಿ ಬರುವುದೂ ಯಥಾರ್ಥವಾದದ್ದೇ ಸರಿ. ಆದರೆ ಅದರಿಂದ ನೋಟಕರು ಬುದ್ಧಿಕುಶಲತೆಯನ್ನೂ ಪ್ರಯೋಜನವನ್ನೂ ಪಡೆಯಬೇಕಾಗಿರುವುದು. ನೋಟಕರಲ್ಲಿ ಆಶ್ಚರ್ಯವೂ ಕೌತುಕವೂ ವಿಕಸಿತವಾದ ಪಕ್ಷದಲ್ಲಿ ವಿವರಣೆಯನ್ನು ಕೇಳುವುದರಿಂದ ಪ್ರಯೋಜನವೂ ಉಪಕಾರವೂ ಆದೀತೆನ್ನುವುದಕ್ಕೆ ಸಂಶಯವಿಲ್ಲ.

ನೋಟಕರಲ್ಲಿ ಕೌತುಕಶಕ್ತಿಯನ್ನು ವೃದ್ಧಿಪಡಿಸುವುದಕ್ಕೆ ಸಹಕಾರಿಗಳಾದ ವಿಚಿತ್ರ ವಸ್ತುಗಳನ್ನು ಈ ತಮಾಷಿ ಬಂಗಲೆಯಲ್ಲಿ ಹೆಚ್ಚಳವಾಗಿ ಕೂಡಿಸಿಡಬೇಕೆಂದು ಆಶಿಸುತ್ತೇವೆ. ಇಷ್ಟೇ ಸಾಲದು. ಅದಕ್ಕೆ ಸೇರಿದಹಾಗೆ ಬುದ್ಧಿ ಕುಶಲತೆಯನ್ನೂ ವಿವೇಚನಾ ಶಕ್ತಿಯನ್ನೂ ಹುಟ್ಟಿಸುವುದಕ್ಕೆ ತಕ್ಕಂಥಾ ಶೋಧನಾ ಸಾಧನ ಸಂಪತ್ತುಗಳನ್ನು ಕೂಡ ಸಂಗ್ರಹಮಾಡಿಡಬೇಕಾಗಿದೆ. ಈ ಎರಡು ಭಾಗಗಳನ್ನೂ ಕೂಡಿಸಿ ಒಂದೇ ಕಡೆ ಇಡುವುದು ಕಷ್ಟವೆಂಬದಾಗಿ ತಿಳಿದೇವು. ಆದರೆ ಈ ಸೀಮೆಯಲ್ಲಿ ಉತ್ಪತ್ತಿಯಾಗತಕ್ಕ ಧಾನ್ಯಾದಿ ವಸ್ತುಗಳನ್ನು ಅತ್ಯಂತ ಫಲಕಾರಿಗಳಾಗುವಂತೆ ಮಾಡುವುದಕ್ಕೆ ಸಹಾಯಕಗಳಾದ ಉಪಾಯಾಂತರಗಳನ್ನು ಕೂಡ ಈ ತಮಾಷಿ ಬಂಗಲೆಯಲ್ಲಿ ಇಟ್ಟು ತಂದಶಂದವಾಗಿ ಹೋಗುವ ನೋಟಕರಿಗೆ ತೋರಿಸುವಂತೆ ಮಾಡುವುದು ಅಷ್ಟೇನೂ ಕಷ್ಟವಲ್ಲವೆಂದು ನಮಗೆ ತೋರುತ್ತದೆ.

ನೋಟಕ್ಕಾಗಿ ಅಲ್ಲಿಗೆ ಹೋಗತಕ್ಕ ಪ್ರಜೆಗಳು ಅಲ್ಲಿರುವ ವಿಚಿತ್ರ ವಸ್ತುಗಳನ್ನು ನೋಡಿ ಆಶ್ಚರ್ಯಪಟ್ಟು, ಅಲ್ಲಿ ತಿಳಿಯ ಹೇಳುವ ವಿಚಾರಗಳನ್ನು ಕೇಳಿ ಬುದ್ಧಿ ಕುಶಲತೆಯನ್ನು ಸಂಪಾದಿಸಿಕೊಳ್ಳುವವರಾದರೆ ಈ ತಮಾಷಿ ಬಂಗಲೆಯ ಉದ್ದೇಶವು ಸಾರ್ಥಕವಾಗುವುದು. ಆದರಿಂದ ಪ್ರಜೆಗಳಿಗೆ ಯಥಾರ್ಥವಾದ ಪ್ರಯೋಜನಗಳು ಲಭ್ಯವಾಗುವುದರಲ್ಲಿ ಸಂಶಯವಿಲ್ಲ. ಈ ತಮಾಷಿ ಬಂಗಲೆಯಲ್ಲಿ ಇಡಲ್ಪಟ್ಟಿರುವ ವಸ್ತು ವಿಶೇಷಗಳ ಸ್ವಭಾವ ಗುಣಸ್ವಭಾವ ಪ್ರಯೋಜನಾದಿಗಳನ್ನು ನೋಟಕ್ಕಾಗಿ ಹೋಗತಕ್ಕ ಜನರಿಗೆ ತಿಳಿಯ ಹೇಳುವಂಥಾ ಏರ್ಪಾಡು ನಡೆದ ಪಕ್ಷದಲ್ಲಿ ನಾವು ಸಂತೋಷಪಟ್ಟು ಸರ್ಕಾರದವರನ್ನು ನೋಟಕರ ಪರವಾಗಿ ವಂದಿಸುವೆವು.

ಒಕ್ಕಲಿಗರ ಸಂಘ

೧೪ನೆ ತಾರೀಖಿನಲ್ಲಿ ನಡೆದ ಮೀಟಿಂಗಿನ ನಡವಳಿಕೆಗಳು

ಕಳೆದ ಭಾನುವಾರದ ದಿವಸ ಒಕ್ಕಲಿಗರ ಸಂಘದ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೀಟಿಂಗು ನಡೆಯಿತು—ಮುಂದೆ ಹೇಳುವ ಮೆಂಬರುಗಳು ಹಾಜರಾಗಿದ್ದರು—ಮ॥ರಾ॥ ಗಳಾದ ೧ ಬಿ ಎಸ್ ಮಾರಪ್ಪನವರು (ಪ್ರೆಸಿಡೆಂಟರು), ೨ ಬಿ ಎಸ್ ಮುನಿಸ್ವಾಮಪ್ಪನವರು ೩ ಬಿ ನಾಗಪ್ಪನವರು, ಬ್ಯಾರಿಸ್ಟರ್ ೪ ಎಂ ಎಲ್ ತಿಮ್ಮೇಗೌಡರು, ೫ ಬಿ ಕೆಂಪಣ್ಣನವರು, ೬ ಸಿ ಲಕ್ಷ್ಮಣಗೌಡರು, ಬಿ ಎ ಬಿ ಎಲ್ ೭ ಎಂ ಸುಬ್ಬಯ್ಯನವರು, ಬಿ ಎ ೮ ಮೈಸೂರಿನ ಎಂ ಪುಟ್ಟನಂಜಪ್ಪನವರು, ೯ ಬಿ ಕೆ ಚಿಕ್ಕವೀರಪ್ಪನವರು, ೧೦ ಟಿ ತಿಮ್ಮೇಗೌಡರು, ೧೧ ಬಿ ವೆಂಕಟಸ್ವಾಮಪ್ಪನವರು ೧೨ ಸಾನಿ ಮಾರಪ್ಪನವರು, ೧೩ ಮಾಗಡಿಯ ಟಿ ಕೆಂಪಣ್ಣನವರು, ೧೪ ಕೆ ಎಚ್ ರಾಮಯ್ಯನವರು, ಬಿ ಎ (ಸೆಕ್ರೆಟರಿ) ೧೫ ಬಿ ಪುಟ್ಟಯ್ಯನವರು ಬಿ ಎ

ಮ॥ ರಾ॥ ಶ್ರೀ॥ ಬಿ ಎಸ್ ಮಾರಪ್ಪನವರು ಅಗ್ರಾಸನವನ್ನು ವಹಿಸಿದರು.

ಮ॥ ನಾಗಪ್ಪನವರಿಗೆ ಸಬ್ ಜಡ್ಜಿ ಕೆಲಸವಾದುದರ ಸಂತೋಷ

ಮ॥ ಬಿ ನಾಗಪ್ಪನವರಿಗೆ ಶ್ರೀಮನ್ ಮಹಾರಾಜರವರ ಸರ್ಕಾರದವರು ಸಬ್ ಜಡ್ಜಿ ಕೆಲಸವನ್ನು ದಯಪಾಲಿಸಿದುದಕ್ಕೋಸ್ಕರ ಒಕ್ಕಲಿಗ ಮಂಡಲಿಗೆ ಉಂಟಾಗಿರುವ ಸಂತೋಷಾತಿಶಯವನ್ನೂ ಮತ್ತು ಕೃತಜ್ಞತಾಭಾವವನ್ನೂ ಸಹ ತಂತಿ ಮೂಲಕ ಶ್ರೀಮನ್ ಮಹಾರಾಜರವರಿಗೆ ತಿಳುಹಿಸಬೇಕೆಂದು ಮೈಸೂರಿನ ಮೆ॥ ಎಂ ಪುಟ್ಟನಂಜಪ್ಪನವರು ಸೂಚಿಸಿದರು. ಇದನ್ನು ಮೆ ಬಿ ಕೆಂಪಣ್ಣನವರು ಅನುಮೋದಿಸಿದರು. ಮೆ. ನಾಗಪ್ಪನವರನ್ನು ಸಬ್ ಜಡ್ಜಿ ಕೆಲಸಕ್ಕೆ ನೇಮಿಸಿದುದರಿಂದ ಒಕ್ಕಲಿಗರೆಲ್ಲರೂ ಮುಂದೆ ತಮ್ಮ ಅಭಿವೃದ್ಧಿಗೋಸ್ಕರ ವಿದ್ಯಾಭ್ಯಾಸ ಮಾಡಬೇಕೆಂಬ ಕುತೂಹಲವುಳ್ಳವರಾಗಲು ತುಂಬಾ ಪ್ರೋತ್ಸಾಹವಾದುದರಿಂದ ಒಕ್ಕಲಿಗ ಮಂಡಲಿಯ ಕೃತಜ್ಞತೆಯನ್ನು ಶ್ರೀಮನ್ ಮಹಾರಾಜರವರಿಗೆ ತಿಳಿಸುವುದು ಯುಕ್ತವೆಂದು ಮೆ॥ ಕೆ ಎಚ್ ರಾಮಯ್ಯನವರು ಹೇಳಿದರು. ಮೆ॥ ಎಂ ಸುಬ್ಬಯ್ಯನವರೂ, ಮೆ॥ ಸಿ ಲಕ್ಷ್ಮಣಗೌಡರೂ ಸಹ ಮೆ ನಾಗಪ್ಪನವರು ತಮ್ಮ ಜವಾಬ್ದಾರಿ ಕೆಲಸವನ್ನು ಸರ್ವರಿಗೂ ಸಮರ್ಪಕವಾಗುವಂತೆ ಮಾಡಿಕೊಂಡು ಬಂದು ಒಕ್ಕಲಿಗ ಮಂಡಲಿಗೆ ಕೀರ್ತಿಯನ್ನು ತರಬೇಕೆಂದು ಮುಂತಾಗಿ ಮಾತನಾಡಿದರು. ಮೆ॥ ನಾಗಪ್ಪನವರಿಗೆ ಕೆಲಸವಾದುದರ ಸಂತೋಷಾರ್ಥವಾಗಿ ತಮ್ಮ ಬಂಗಲೆಯಲ್ಲಿ ಸಂಘದ ಮೆಂಬರುಗಳೆಲ್ಲರಿಗೂ ಮುಂದಿನ ಭಾನುವಾರದ ದಿವಸ ಔತಣವನ್ನು ಏರ್ಪಡಿಸುವುದಾಗಿ ಮ ರಾ॥ ಬಿ ಎಸ್ ಮುನಿಸ್ವಾಮಪ್ಪನವರು ತಿಳಿಸಿದರು. ಎಲ್ಲರೂ ಸಂತೋಷ ಧ್ವನಿಯನ್ನು ಮಾಡಿದರು. ಅನಂತರ ಮೆ॥ ನಾಗಪ್ಪನವರು ಎದ್ದು ತಾವು ತಮಗೆ ದೇವರು ಕೊಟ್ಟಿರುವ ಚೈತನ್ಯದ ಮಟ್ಟಿಗೆ ಕೆಲಸ ಮಾಡುವುದಾಗಿಯೂ, ಇವರ ಮೇಲೆ ತಪ್ಪುಗಳು ಇದ್ದರೆ ಮೆಂಬರುಗಳು ತಿಳಿಯ ಹೇಳಿ ಸರಿಪಡಿಸಬೇಕೆಂತಲೂ ನಮ್ರವಾದ ಉತ್ತರವನ್ನು ಕೊಟ್ಟರು. ಸಮಸ್ತರೂ ಜಯಘೋಷವನ್ನು ಮಾಡಿದರು. ಮೆ ನಾಗಪ್ಪನವರಿಗೆ ಸಮಸ್ತ ಜಯಗಳು ಉಂಟಾಗಲೆಂದು ಹರಸಿದರು.

ಒಕ್ಕಲಿಗರ ಸಂಘದ ಪೋಷಕರಾದ ನಮ್ಮ ಶ್ರೀಮನ್ ಮಹಾರಾಜರವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ, ಸಿ, ಎಸ್, ಐ, ಯವರಿಗೆ ಮುಂದೆ ಹೇಳುವಂತೆ ಒಂದು ತಂತಿ ವರ್ತಮಾನವನ್ನು ಕಳುಹಿಸಿಕೊಡಬೇಕೆಂದು ಮ॥ ರಾ॥ ಶ್ರೀ॥ ಬಿ ಕೆಂಪಣ್ಣನವರು ಉದ್ದೇಶಿಸಿದರು. ಮೆ॥ ಸಿ ಲಕ್ಷ್ಮಣಗೌಡರು ಅನುಮೋದಿಸಿದರು. ಸರ್ವರೂ ಸಮ್ಮತಿಸಿದರು. ಅದೇಪ್ರಕಾರ ಮುಂದೆ ಹೇಳುವ ಟೆಲಿಗ್ರಾಫ್ ಕಳುಹಿಸಲ್ಪಟ್ಟಿತು. ಏನೆಂದರೆ—"ಒಕ್ಕಲಿಗರ ಸಂಘದ ವೈಸ್ ಪ್ರೆಸಿಡೆಂಟರಲ್ಲೊಬ್ಬರಾದ ಬ್ಯಾರಿಸ್ಟರ್ ಮೆ ಬಿ ನಾಗಪ್ಪನವರಿಗೆ ಸಬ್ ಜಡ್ಜ್ ಕೆಲಸವನ್ನು ದಯಮಾಡಿ ಕೊಟ್ಟದ್ದಕ್ಕೋಸ್ಕರ ಘನವನ್ನು ಹೊಂದಿದ ನಮ್ಮ ಶ್ರೀಮನ್ ಮಹಾರಾಜರವರಿಗೆ ಒಕ್ಕಲಿಗರ ಸಂಘದ ಪರವಾಗಿ ಆ ಸಂಘದ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರುಗಳು ಮೀಟಿಂಗಿನಲ್ಲಿ ಸೇರಿ ತಮ್ಮ ಅಪಾರವಾದ ಕೃತಜ್ಞತಾ ಭಾವವನ್ನು ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳಲು ಅಪ್ಪಣೆಯನ್ನು ಬೇಡುತ್ತಾರೆ" ಎಂಬುದೇ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಗುರುವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳುಕಟ್ಟಳೆಯ ಮೀಟಿಂಗನ್ನು ನಡಿಸಿದರು. ಕಳೆದ ಸೆಪ್ಟಂಬರ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ಪ್ಯಾಸ್‌ಮಾಡಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೧೧೪೦೩-೧೦-೬ ಪೈ ಉತ್ಪತ್ತಿಯಾಯಿತು. ರೂ ೧೧,೩೩೨-೮-೪ ಪೈ ಖರ್ಚಾಯಿತು ಮತ್ತು ಆ ತಿಂಗಳಲ್ಲಿ ಜನನ ೯೫ ಮರಣ—ಪ್ಲೇಗ್ ೪೦೭, ಸಿಡುಬು ೩ ಜ್ವರ ೨೦, ಇತರ ಕಾರಣಗಳು ೨೩೧, ಒಟ್ಟು ೬೬೧ ಎಂದು ತಿಳಿಯಿತು. ಇದಲ್ಲದೆ ಸೆಪ್ಟಂಬರ್ ತಿಂಗಳಲ್ಲಿ ೩ ಅಂಗುಲ ಪ್ರಮಾಣದಷ್ಟು ಮಳೆ ಆಗಿರುತ್ತದೆ.

ಟೌನ್‌ಹಾಲ್ ಬಂಗಲೆಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವ ವಿಚಾರವು ಚರ್ಚೆಯಾಯಿತು. ಬೇರೆ ಬೇರೆ ಕಂಟ್ರಾಕ್ಟರುಗಳು ಅದಕ್ಕೆ ಅಂದಾಜು ಪಟ್ಟಿಗಳನ್ನು ಕಳುಹಿಸಿದ್ದರು. ಒಬ್ಬರು ೮೬೦ ರೂಪಾಯಿ ಇನ್ನೊಬ್ಬರು ೧,೨೫೦ ರೂಪಾಯಿ ಬೇಕಾಗುವುದೆಂದು ತಿಳಿಸಿದರು. ವಿದ್ಯುಚ್ಛಕ್ತಿಯ ಇಲಾಖೆಯವರು ೯೧ ದೀಪಗಳನ್ನು ಇಡಬೇಕಾದೀತೆಂತಲೂ, ಇವಕ್ಕೆಲ್ಲ ಒಟ್ಟು ೩,೧೭೬ ರೂಪಾಯಿ ಮೊದಲು ಖರ್ಚು ಮಾಡಬೇಕೆಂತಲೂ ಸೂಚಿಸಿದ್ದರು. ರೆವ್ ಗಲ್ಲಿಫರ್ಡ್‌ಯವರು—ಈ ವಿಚಾರವನ್ನು ಒಂದು ಸಬ್ ಕಮಿಟಿಯವರಿಗೆ ವಹಿಸಿ, ಅವರಿಂದ ಸರಿಯಾಗಿ ಪರಿಶೋಧನೆ ಮಾಡಿ, ಅವರ ಅಭಿಪ್ರಾಯವನ್ನು ತರಿಸಿಕೊಳ್ಳುವುದು ಉತ್ತಮವೆಂದು ಸೂಚಿಸಿದ್ದನ್ನು ಮೆ ನರಸಿಂಹಸ್ವಾಮಿಯವರು ಅನುಮೋದಿಸಿದರು. ಇತರ ಕೌನ್ಸಿಲರುಗಳೂ ಸಮ್ಮತಿಸಿದ್ದರಿಂದ ಒಂದು ಸಬ್ ಕಮಿಟಿಯು ಏರ್ಪಾಡಾಯಿತು. ವೈಸ್ ಪ್ರೆಸಿಡೆಂಟರೂ, ರೆವ್ ಗಲ್ಲಿಫರ್ಡ್‌ಯವರೂ, ಮೆ ಆಂ ಪಂಡಿತರೂ ಮೆ ನರಸಿಂಹಸ್ವಾಮಿಯವರೂ ಈ ವಿಚಾರವನ್ನು ಚರ್ಚಿಸಿ ರಿಪೋರ್ಟು ಕಳುಹಿಸಬೇಕೆಂದು ತೀರ್ಮಾನಿಸಿದರು.

ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರು ಕಳುಹಿಸಿದ್ದ ಪ್ರೊಸೀಡಿಂಗ್ಸಿನಲ್ಲಿ ವಿಶೇಷ ವಿಚಾರಗಳೇನೂ ಕಂಡು ಬರುವುದಿಲ್ಲವೆಂದು ಹೇಳಿ, ಅದನ್ನು ಮೆಂಬರುಗಳು ಪ್ಯಾಸ್ ಮಾಡಿದರು.

ಹೆಲ್ತ್ ಆಫೀಸರವರು ಹೊಸ ಮನೆ ಕಟ್ಟತಕ್ಕವರಿಗೂ, ಹಳೆ ಮನೆಗಳನ್ನು ದುರಸ್ತು ಅಥವಾ ಬದಲಾವಣೆ ಮಾಡತಕ್ಕವರಿಗೂ ಲೈಸೆನ್ಸು ಕೊಡಬೇಕೆಂಬ ಅಧಿಕಾರ ವಹಿಸಲ್ಪಟ್ಟಿದಾರೆ. ಈ ವಿಚಾರವಾಗಿ ಅವರು ತಮಗಿರುವ ಅಸಮಾಧಾನಗಳನ್ನು ಕೌನ್ಸಿಲರುಗಳಿಗೆ ತಿಳಿಸಿದರು. ಅವರು ಹೇಳಿದ ಅಭಿಪ್ರಾಯವೇನೆಂದರೆ,—ಲೈಸೆನ್ಸು ಕೊಡುವುದಕ್ಕೆ ನನಗೆ ಸರಿಯಾದ ಸಿಬ್ಬಂದಿ ಇಲ್ಲ. ಬಂದ ಅರ್ಜಿಗಳನ್ನು ಆಯಾ ವಾರ್ಡಿನ ಕೌನ್ಸಿಲರುಗಳಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ತರಿಸಿಕೊಳ್ಳುವುದು ಬಹಳ ತಡವಾಗುವುದಕ್ಕೆ ಕಾರಣವಾಗುತ್ತೆ. ಅವರು ಅರ್ಜಿಗಳನ್ನು ಬೇಗನೆ ವಾಪಸು ಕಳುಹಿಸುವುದಿಲ್ಲ. ಮನೆಗೆ ಹಾಕುವ ಸಾಮಾನಿನ ಯೋಗ್ಯತೆ, ಕಟ್ಟಡದ ಬಗೆ, ಮ್ಯುನಿಸಿಪಲ್ ಸ್ಥಳವನ್ನು ಒತ್ತಿ ಆಕ್ರಮಿಸಿಕೊಳ್ಳುವುದು, ರಸ್ತೆಯ ಅಂಚು, ಈ ಮೊದಲಾದ ವಿಷಯಗಳು ನನಗೆ ತಿಳಿಯುವುದಿಲ್ಲ. ಮ್ಯುನಿಸಿಪಲ್ ಇಂಜನಿಯರು ಇವೆಲ್ಲಾ ತಿಳಿಯುವುದರಲ್ಲಿ ಸಮರ್ಥರಾಗಿರುತ್ತಾರೆ. ಅವರಿಗೆ ಲೈಸೆನ್ಸು ಕೊಡುವ ಕೆಲಸವನ್ನು ವಹಿಸಿದರೆ ಉತ್ತಮ. ಈ ರೀತಿ ಹೇಳಿದರು. ರೆವ್ ಗಲ್ಲಿಫರ್ಡ್‌ಯವರು—ಈ ವಿಚಾರಗಳೆಲ್ಲಾ ಇಂಜನಿಯರವರಿಗೆ ತಿಳಿದಿರುವುದರಿಂದ ಅವರಿಗೇ ವಹಿಸುವುದು ಉತ್ತಮ. ಹೆಲ್ತ್ ಆಫೀಸರಿಗೆ ಕಟ್ಟಡದ ವಿಷಯ ತಿಳಿಯುವುದಿಲ್ಲ ಎಂದು ಹೇಳಿದರು. ಮೆ ಆಂ ಪಂಡಿತರೂ ಮೆ॥ ನರಸಿಂಹಸ್ವಾಮಿಗಳೂ ಹೇಳಿದ ಅಭಿಪ್ರಾಯವೇನೆಂದರೆ—ಮನೆಯಲ್ಲಿ ಬಚ್ಚಲು, ಬೇಸ್‌ಮಟ್ಟ, ಬೆಳಕಿಂಡಿ, ಸಾಯಿಖಾನೆ, ಈ ಬಗೆಗಳು ಎಲ್ಲೆಲ್ಲಿ ಯಾವ ಯಾವರೀತಿ ಕಟ್ಟಬೇಕೆಂಬುದನ್ನು ಹೆಲ್ತ್ ಆಫೀಸರವರು ಗೊತ್ತುಮಾಡಬೇಕಾಗಿದೆ. ಪ್ರಜೆಗಳು ಹಳೇ ಮನೆಗಳನ್ನು ರಿಪೇರಿ ಮಾಡುವುದೂ ಅವುಗಳಲ್ಲಿ ಬದಲಾವಣೆಗಳನ್ನು ಕಲ್ಪಿಸುವುದೂ ಈಗ ವಿಶೇಷವಾಗಿದೆ. ಇದಕ್ಕೆ ಇಂಜನಿಯರು ಲೈಸೆನ್ಸು ಕೊಡುವಂತೆ ಮಾಡಬೇಕಾದದ್ದಿಲ್ಲ. ಹೆಲ್ತ್ ಆಫೀಸರೇ ನೋಡಿ ಕೊಡಬೇಕು. ಹೊಸ ಮನೆಗಳನ್ನು ಕಟ್ಟತಕ್ಕ ಸಂದರ್ಭಗಳಲ್ಲಿ ಹೆಲ್ತ್ ಆಫೀಸರವರೂ ಇಂಜನಿಯರವರೂ ಏಕೀಭವಿಸಿ ಆಲೋಚನೆ ಮಾಡಬೇಕಾದದ್ದು. ಅವರ ವಾರ್ಡಿನ ಕೌನ್ಸಿಲರುಗಳಿಗೆ ಹೆಲ್ತ್ ಆಫೀಸರು ಅರ್ಜಿ ಕಳುಹಿಸುವುದು ಅವರೂ ಕಳುಹಿಸಿದಾಗೆಲ್ಲಾ ಒಂದೆರಡು ದಿನಗಳಲ್ಲೇ ಅವರು ತಮ್ಮ ಅಭಿಪ್ರಾಯವನ್ನು ಬರೆದು ಹೆಲ್ತ್ ಆಫೀಸರಿಗೆ ವಾಪಸು ಮಾಡುತ್ತಾರೆ. ಲೈಸೆನ್ಸ್ ಕೊಡಲು ತಡವಾಗುವುದಕ್ಕೆ ಕೌನ್ಸಿಲರುಗಳು ಕಾರಣರಲ್ಲ ಎಂಬದಾಗಿ ಹೇಳಿದರು. ಕಡೆಯಲ್ಲಿ ಕೌನ್ಸಿಲರುಗಳೆಲ್ಲಾ ಒಟ್ಟಿ ತೀರ್ಮಾನಮಾಡಿದ್ದೇನೆಂದರೆ—ಈಗಿನಂತೆಯೇ ಲೈಸೆನ್ಸುಗಳನ್ನು ಹೆಲ್ತ್ ಆಫೀಸರವರೇ ಕೊಡತಕ್ಕದ್ದು. ಈ ಕ್ರಮವನ್ನು ಅನುಸರಿಸೋಣದರಿಂದ ಎಷ್ಟೆಷ್ಟು ತಡವಾಗಿರುತ್ತೆಂಬುದನ್ನು ಹೆಲ್ತ್ ಆಫೀಸರವರು ಡಿಸೆಂಬರ್ ತಿಂಗಳಲ್ಲಿ ಬರೆದಿಟ್ಟು ರಿಪೋರ್ಟು ಮಾಡಬೇಕು. ಮತ್ತು ಇದುವರೆಗೆ ಬಂದಿರುವ ಲೈಸೆನ್ಸ್ ಅರ್ಜಿಗಳೆಷ್ಟು, ಎಷ್ಟನ್ನು ಕೌನ್ಸಿಲರುಗಳಿಗೆ ಕಳುಹಿಸಿದರು, ಎಷ್ಟನ್ನು ಇತ್ಯರ್ಥ ಮಾಡಿದರು, ಇನ್ನೆಷ್ಟು ಅರ್ಜಿಗಳು ಉಳಿದಿವೆ ಎಂಬೀವಿಷಯಗಳನ್ನು ತಿಳಿಸಬೇಕು ಎಂಬುದೇ.

ಮೈಸೂರು ಸರ್ಕಾರಿಯುನಾನಿ ಆಸ್ಪತ್ರೆಯ ಹಕೀಂರಾದ ಸೈಯದ್ ಮುಸ್ತಫಾ ಸಾಹೇಬರಿಗೆ ತಿಂಗಳಿಗೆ ೧೫ ರೂಪಾಯಿ ಅಲೋಯನ್ಸು ಕೊಡಲಿ ಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದ ಹುಕುಮು ಓದಿಸಿ ರಿಕಾರ್ಡು ಮಾಡಿದರು.

ಮೈಸೂರಿನಲ್ಲಿ ರೋಮನ್ ಕ್ರೈಸ್ತ ಪಾದ್ರಿಗಳು ಇಟ್ಟು ನಡಿಸುತ್ತಿರುವ ಮೂರು ಸ್ಕೂಲುಗಳಲ್ಲಿ ಮಕ್ಕಳಿಗೆ ಇಂಗ್ಲೀಷನ್ನೂ ಕಲಿಸುತ್ತಿದ್ದರು. ಈಚಿಗೆ ಅವರು ಇಂಗ್ಲೀಷ್ ಲೋವರ್‌ಸೆಕಂಡರಿ ಮತ್ತು ಇಂಗ್ಲೀಷ್ ೪ನೇ ಕ್ಲಾಸುಗಳನ್ನು ವಜಾಮಾಡಿಬಿಟ್ಟು ಆ ಮೂರು ಸ್ಕೂಲುಗಳಿಗೂ ವರುಷಕ್ಕೆ ೩,೨೯೬ ರೂಪಾಯಿ ಖರ್ಚಾಗುತ್ತದೆ ಎಂದೂ ಅದಕ್ಕೆ ಮಿಷನ್ ಫಂಡಿನಿಂದ ೧,೭೧೫ ರೂಪಾಯಿ ಕೊಡುತ್ತಿರುವುದಾಗಿಯೂ ತಿಳಿಸಿ, ಮ್ಯುನಿಸಿಪಾಲಿಟಿಯಿಂದ ಕೊಡುವ ಮಾಹೆಯಾನಾ ೧೦೦ ರೂಪಾಯಿ ಗ್ರ್ಯಾಂಟನ್ನು ತಪ್ಪಿಸದೆ ಕೊಡಿಸುತ್ತಾ ಬರಬೇಕೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆದುಕೊಂಡಿದ್ದರು. ಇನ್ಸ್‌ಪೆಕ್ಟರ್ ಜನರಲ್‌ರವರು ಆದರಂತೆ ಆ ಕ್ಲಾಸುಗಳನ್ನು ವಜಾಮಾಡಿದೆಯೆಂದೂ, ಗ್ರ್ಯಾಂಟುಕೊಡುತ್ತಾ ಬರಬೇಕೆಂದೂ ಮ್ಯುನಿಸಿಪಾಲಿಟಿಗೆ ತಿಳಿಸಿದರು. ಕೌನ್ಸಿಲರುಗಳು ಈ ಕಾಗದವನ್ನು ಸ್ಕೂಲ್ ಕಮಿಟಿಯವರ ಅಭಿಪ್ರಾಯಕ್ಕಾಗಿ ಕಳುಹಿಸತಕ್ಕದ್ದೆಂದು ತೀರ್ಮಾನಮಾಡಿರುತ್ತಾರೆ.

ನಲ್ಲಿ, ಬಚ್ಚಲು, ಕೊಟ್ಟ ಮೊದಲಾದವುಗಳನ್ನು ತೊಳೆಯುವುದಕ್ಕೆ ನೇಮಕವಾಗಿರುವ ೫೬ ರೂಪಾಯಿನ ಸಿಬ್ಬಂದಿಯನ್ನು ವಜಾ ಮಾಡದೆ ಇಟ್ಟಿರಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದರು. ಹೆಲ್ತ್ ಕಮಿಟಿಯ ಮೆಂಬರುಗಳು ಈ ವಿಷಯವನ್ನು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಬೋರ್ಡಿಗೆ ರಿಪೋರ್ಟು ಮಾಡತಕ್ಕದ್ದೆಂದು ತೀರ್ಮಾನವಾಯಿತು.

ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದಿರುವುದರಿಂದ ಕನ್ಸರ್ವೆನ್ಸಿ ಮತ್ತು ಹೆಲ್ತ್ ಆಫೀಸ್ ಸಿಬ್ಬಂದಿ ಖರ್ಚನ್ನು ಸಧ್ಯ ಜಾಸ್ತಿಮಾಡಲಾಗದು ಎಂದು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದರು. ಕೌನ್ಸಿಲರುಗಳು ಅದನ್ನು ಓದಿಸಿ ರಿಕಾರ್ಡು ಮಾಡಿಕೊಂಡರು.

ಮ್ಯುನಿಸಿಪಾಲಿಟಿಯ ಕಂದಾಯಗಳನ್ನು ವಸೂಲ್ಮಾಡುವುದಕ್ಕೆ ನೇಮಿಸಲ್ಪಟ್ಟಿರುವ ಮೆ ಟಿ ಹನುಮಂತರಾಯರಿಗೆ ಮಾಹೆಯಾನಾ ೧೦೦ ರೂಪಾಯಿ ಸಂಬಳವನ್ನು ೨೬ ರೂಪಾಯಿ ಅಲೋಯನ್ಸನ್ನೂ ಕೊಡತಕ್ಕದ್ದೆಂದು ಸರ್ಕಾರದಿಂದ ಸ್ಯಾಂಕ್ಷನ್ ಆಗಿದೆ. ಈ ಹುಕುಮು ರಿಕಾರ್ಡು ಮಾಡಲಾಯಿತು.

೧೯೦೮—೦೯ನೇ ಸಾಲಿನಲ್ಲಿ ಕಂದಾಯದ ವಸೂಲಾತಿಯು ತೃಪ್ತಿಕರವಾಗಿರಲಿಲ್ಲವಾದದ್ದರಿಂದ ಅಪ್ಪಾಜಿರಾಯರನ್ನು ಕಲೆಕ್ಟರ್ ಕೆಲಸದಲ್ಲಿ ಖಾಯಂ ಮಾಡಲಾಗಲಿಲ್ಲವೆಂದು ಗವರ್ನ್‌ಮೆಂಟಿನವರು ಹುಕುಂ ಮಾಡಿದ್ದನ್ನು ಕೌನ್ಸಿಲರುಗಳು ರಿಕಾರ್ಡು ಮಾಡಿಕೊಂಡರು.

ಹಂಗಾಮಿಯಾಗಿ ದೀಪ ಇಡುವುದಕ್ಕೆ ನೇಮಿಸಿಕೊಂಡಿದ್ದ ಇಬ್ಬರನ್ನು ಅಕ್ಟೋಬರ್ ೧ ರ ಲಾಗಾಯಿತು ಕೆಲಸದಿಂದ ವಜಾ ಮಾಡಿದೆ ಎಂದು ಹೆಲ್ತ್ ಆಫೀಸರವರು ತಿಳಿಸಿದರು. ಈ ವಿಚಾರವು ರಿಕಾರ್ಡು ಮಾಡಲಾಯಿತು.

ದೇವರಾಜ ಮಾರ್ಕೆಟ್ಟಿನ ಮುಂಭಾಗದಲ್ಲಿರುವ ಡಫ್ರಿನ್ ಫೌಂಟನ್ ಸುತ್ತಲೂ ಅಲಂಕಾರವಾದ ಕಬ್ಬಿಣದ ಗೋಡೆಯನ್ನು ಹಾಕಿಸುವುದಕ್ಕೆ ೭೫೧ ರೂಪಾಯಿ ಖರ್ಚಾಗುತ್ತೆಂದು ಇಂಜನಿಯರವರು ಅಂದಾಜು ಪಟ್ಟಿಯನ್ನು ತಯಾರುಮಾಡಿ ಕಳುಹಿಸಿದರು. ಈ ಕಬ್ಬಿಣದ ಗೋಡೆ ಇಲ್ಲದೆ ಸುತ್ತಲೂ ಮೈದಾನವಿರುವುದೇ ಸರ್ವೋತ್ತಮವಾಗಿಯೂ ಜನಗಳ ಗಾಡಿಗಳ ಸಂಚಾರಕ್ಕೆ ತುಂಬಾ ಅನುಕೂಲವಾಗಿಯೂ ಇದೆ ಎಂದು ಮೆಂಬರುಗಳು ಹೇಳಿದ್ದರಿಂದ ಕಾಮಗಾರಿ ಅವಶ್ಯವಿಲ್ಲವೆಂದು ತೀರ್ಮಾನವಾಯಿತು.

ಕುಕ್ಕರಹಳ್ಳಿ ಕೆರೆಯ ಕೆಳಗೆ ಇರುವ ಸ್ನಾನಘಟ್ಟಗಳನ್ನು ಸರಿ ಮಾಡಿಸಿ, ಜೊಂಡು, ಸತ್ತೆ ಮೊದಲಾದವುಗಳನ್ನು ತೆಗಿಸಿ ಪ್ರಜೆಗಳ ಸ್ನಾನಾದಿಗಳಿಗೆ ಅನುಕೂಲ ಪಡಿಸಿಕೊಡಬೇಕೆಂದು ಕೌನ್ಸಿಲರುಗಳು ಹೇಳಿದ್ದರ ಮೇರೆ ಅದಕ್ಕೆ ತಕ್ಕ ಏರ್ಪಾಡು ಮಾಡುವಂತೆ ತೀರ್ಮಾನವಾಗಿದೆ.

ವೆಂಕಟರಾಘವೇಂದ್ರದಾಸರವರು ಬೆಳಕೆರೆಯಲ್ಲಿ ಶಿಥಿಲವಾಗಿರುವ ಛತ್ರವನ್ನು ದುರುಸ್ತು ಮಾಡುವುದಾಗಿಯೂ, ಈ ಧರ್ಮಕೆಲಸಕ್ಕೆ ಮ್ಯುನಿಸಿಪಾಲಿಟಿಯ ಕಲ್ಲಿನ ದೀಪದ ೩೯ ಕಂಬಗಳನ್ನು ೪೦ ರೂಪಾಯಿಗೆ ಕೊಡಿಸಿಕೊಡಬೇಕೆಂದೂ ಅರ್ಜಿ ಬರೆದುಕೊಂಡಿದ್ದರು. ಅವರು ಅದನ್ನು ಧರ್ಮಕ್ಕೆ ವಿನಿಯೋಗಿಸುವುದಾದ ಪಕ್ಷಕ್ಕೆ ಪ್ರತಿ ಕಲ್ಲನ್ನೂ ೧ ರೂಪಾಯಿನಂತೆ ತೆಗೆದುಕೊಂಡು ಕೊಡಬಹುದೆಂದು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ಶಿಫಾರಸು ಮಾಡಿದ್ದರು. ಹೀಗೆ ರಿಯಾಯಿತಿ ದರಕ್ಕೆ ಕೊಡಬಹುದೇ ಎಂದು ಕೌನ್ಸಿಲರುಗಳನ್ನು ಕೇಳಿದಾಗ ೫ ರೂಪಾಯಿ ಕೊಡಬಹುದೆಂದೂ ೬ ರೂಪಾಯಿ ಕೊಡದೇಹೋದರೂ ಹೇಳಿದ್ದರಿಂದ ಕೊಡತಕ್ಕದ್ದಿಲ್ಲವೆಂದು ತೀರ್ಮಾನವಾಯಿತು.

ಬೆಂಗಳೂರಿನಲ್ಲಿರುವ ಮೆಸರ್ಸ್ ನರಸಿಂಹಯ್ಯ ಸಹೋದರರು ಮೈಸೂರು ಕೃಷ್ಣ ಸ್ಕ್ವೇರ್ ಬಳಿ ಇರುವ ಖಾಲಿ ಜಾಗವನ್ನು ತಮಗೆ ಕೊಡಬೇಕೆಂದೂ, ಅಲ್ಲಿ ತಾವು ಹುಲ್ಲು ಕೊಚ್ಚುವ ಕತ್ತಿ ಮೊದಲಾದ ರಾಟೆಗಳನ್ನು ಜಮಾಯಿಸಿರುತ್ತೇವೆಂದೂ ಅರ್ಜಿ ಬರೆದುಕೊಂಡರು. ಈ ಅರ್ಜಿಯನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ವಿಚಾರಣೆ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ತೀರ್ಮಾನವಾಯಿತು.

ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ರಿಮೆಯನ್ನು ದುರುಸ್ತು ಮಾಡಿಸುವುದಕ್ಕೆ ಕೌನ್ಸಿಲರುಗಳು ೧,೫೨೪ ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಿಕೊಂಡಿದ್ದಾರೆ

ಮೈಸೂರಿನಲ್ಲಿ ರಸ್ತೆಗಳು ಚಪ್ಪಟೆಯಾಗಿ ಇಲ್ಲದಿರುವುದರಿಂದ ದುರಸ್ತು ಮಾಡುವುದಕ್ಕೆ ಹವೆಯ ರೋಲರ್ ಯಂತ್ರವನ್ನು ೬,೦೦೦ ರೂಪಾಯಿ ಕೊಟ್ಟು ತರಿಸಿಕೊಂಡರೆ ಅನುಕೂಲವೆಂದೂ, ಇದರಿಂದ ವರುಷಕ್ಕೆ ೪,೫೦೦ ರೂಪಾಯಿನಷ್ಟು ಖರ್ಚು ಕಡಿಮೆಯಾದೀತೆಂದೂ ಇಂಜನಿಯರವರು ಸೂಚಿಸಿದರು ಕೌನ್ಸಿಲರುಗಳು ಅಂಥಾ ಯಂತ್ರವನ್ನು ಕೊಂಡು ತರಿಸಬಹುದೆಂದು ಒಪ್ಪಿದರು

ಕನ್ಸರ್ವೆನ್ಸಿ ಶಿಬ್ಬಂದಿಯು ಓವರ್ಸಿಯರ್ ಮೊದಲಾದ ಮೇಲ್ದರ್ಜೆಯ ಶಿಬ್ಬಂದಿಯವರಿಗೆ ಸರ್ಕಾರದಿಂದ ಭಿಕ್ಷೆಯನ್ನು ಕೊಡಿಸಬೇಕೆಂದೂ, ಎರಡು ವರುಷಗಳಿಂದ ಕೊಡಿಸಿಲ್ಲವೆಂದೂ ಆ ಶಿಬ್ಬಂದಿ ಹಣದಲ್ಲಿ ಮಿಕ್ಕಿರುವ ಮೊಬಲಗಿನಿಂದ ಮಾಡಿಸಿಕೊಡಬಹುದೆಂದೂ ಹೆಲ್ತ್ ಆಫೀಸರವರು ಸೂಚಿಸಿದರು ಕೌನ್ಸಿಲರುಗಳು ಹಾಗೆ ಕೊಡಿಸಬಹುದೆಂದು ಒಪ್ಪಿಕೊಂಡರು

ವೈಸ್‌ರಾಯಿ ಪ್ರಭುಗಳು ರಾಜಧಾನಿಗೆ ದಯಮಾಡಿಸೋಣದರಿಂದ ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸುವುದಕ್ಕೆ ೭೦೦ ರೂಪಾಯಿ ಖರ್ಚುಮಾಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದರು ಇನ್ನೂ ೧೦೦ ರೂಪಾಯಿ ಜಾಸ್ತಿ ಬೇಕಾಗುವುದೆಂದು ವೈಸ್‌ಪ್ರೆಸಿಡೆಂಟರು ಸೂಚಿಸಿದರು ಕೌನ್ಸಿಲರುಗಳು ಸಂತೋಷದಿಂದ ಅದಕ್ಕೆ ಸಮ್ಮತಿಪಟ್ಟರು

ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರನ್ನು ಪೆನ್‌ಷನ್ ಮೇಲೆ ಕೆಲಸಬಿಡಿಸಿದ್ದರಿಂದ ಅವರ ಸ್ಥಾನಕ್ಕೆ ಹೆಲ್ತ್ ಆಫೀಸರವರು ಇನ್ನೊಬ್ಬರನ್ನು ಬದಲಿ ನೇಮಕ ಮಾಡಿದರು ಪ್ರೆಸಿಡೆಂಟರು ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರ ಕೆಲಸವನ್ನೇ ವಜಾ ಮಾಡುವುದು ಉತ್ತಮವೆಂದು ಸೂಚಿಸಿದರು ಈ ವಿಷಯವು ಚರ್ಚೆಯಾಗುವಲ್ಲಿ ಹೆಲ್ತ್ ಆಫೀಸರವರು—ಆ ಕೆಲಸವನ್ನು ವಜಾಮಾಡಿದಲ್ಲಿ ಕನ್ಸರ್ವೆನ್ಸಿ ಕೆಲಸದ ಮೇಲ್ವಿಚಾರಣೆಯು ಕೆಟ್ಟು ಹೋಗುವುದು ನಾನು ರೋಗಾದಿಗಳನ್ನು ಅಡಗಿಸುವುದನ್ನು ನೋಡಿಕೊಳ್ಳುತ್ತೇನೆ ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರ ಕೆಲಸವನ್ನು ನಾನೇ ನೋಡಬೇಕಾದರೆ ಬಹಳ ಕಷ್ಟವಾಗುತ್ತದೆ ಹೆಲ್ತ್ ಖಾತೆಯ ಕೆಲಸಗಳು ಹೆಚ್ಚಾಗುತ್ತಲಿವೆ ಇವರಿಗೆ ಪ್ರತಿಯಾಗಿ ಬೇರೆ ನಾಲ್ಕು ಮಂದಿ ಸ್ಯಾನಿಟರಿ ಇನ್‌ಸ್ಪೆಕ್ಟರುಗಳನ್ನಾದರೂ ನೇಮಿಸಿಕೊಡಬೇಕು ಎಂಬೀ ರೀತಿ ಹೇಳಿದರು ರೆವ್ ಗಲ್ಲಿಫರ್ಡ್‌ಯವರು—ಟ್ರಸ್ಟ್ ಬೋರ್ಡಿನವರು ಕೆಲವು ಮೊಹಲ್ಲೆಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ ಪಟ್ಟಣವೆಲ್ಲಾ ಮ್ಯುನಿಸಿಪಾಲಿಟಿಗೆ ವಹಿಸಲ್ಪಟ್ಟಾಗ್ಗೆ ಶಿಬ್ಬಂದಿಯನ್ನು ಹೆಚ್ಚಿಸುವ ಯೋಚನೆ ಮಾಡಬಹುದು ಆದರೂ ಈಗ ಕನ್ಸರ್ವೆನ್ಸಿ ಕೆಲಸಗಳು ತೃಪ್ತಿಕರವಾಗಿ ನಡೆಯಲು ಅಡ್ಡಿಯಾಗುತ್ತದೆಂದು ಹೆಲ್ತ್ ಆಫೀಸರವರು ತೃಪ್ತಿಕರವಾದ ಕಾರಣಗಳನ್ನು ತೋರಿಸಿದಲ್ಲಿ ಶಿಬ್ಬಂದಿಯನ್ನು ಹೆಚ್ಚಿಸುವ ವಿಷಯ ಯೋಚಿಸಬಹುದು ಎಂದು ಹೇಳಿದರು ಕಡೆಯಲ್ಲಿ ಮೆಂಬರುಗಳ ಅಭಿಪ್ರಾಯದಂತೆ ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರ ಕೆಲಸವನ್ನು ವಜಾಮಾಡಿದ ಎಂದು ತೀರ್ಮಾನಮಾಡಿದರು

ರಾಜಧಾನಿಗೆ ಸರಬರಾಯಿ ಆಗುತ್ತಿರುವ ಕಾವೇರೀ ನೀರಿನ ಖರ್ಚು, ಮೇಲ್ ಬಾರಣೆ ಮುಂತಾದ್ದನ್ನು ಕುರಿತು ಚರ್ಚೆಮಾಡಿ ಅಪ್ಪರ್ ತೀರ್ಮಾನವನ್ನು ಮಾಡುವಂತೆ ಹಿಂದೆ ಒಂದು ಕಮಿಟಿಯು ನೇಮಕವಾಗಿತ್ತಷ್ಟೆ ಈ ಕಮಿಟಿಯ ಮೆಂಬರುಗಳಾದ ಚೀಫ್ ಇಂಜನಿಯರವರೂ, ಡೆಪ್ಯುಟಿ ಕಮಿಷನರವರೂ, ನೀರಿನ ಇಲಾಖೆಯ ಇಂಜನಿಯರ್ ಮೆ ರಂಗಸ್ವಾಮಿಯಂಗಾರರೂ, ವೈಸ್ ಪ್ರೆಸಿಡೆಂಟರೂ, ಮೆ॥ ಎಂ ವೆಂಕಟಕೃಷ್ಣಯ್ಯನವರೂ, ಮೆ ಎಂ ಸಿ ರಂಗಯ್ಯಂಗಾರ್ಯರೂ ಕಳೆದ ಆಗಸ್ಟ್ ತಾ ೨೮ ರಲ್ಲಿ ಸಭೆಸೇರಿ, ಚರ್ಚೆಮಾಡಿ ಕಡೆಗೆ ತೀರ್ಮಾನವ ಮಾಡಿರುವ ವಿಷಯಗಳೇನೆಂದರೆ —(೧) ಮೈಸೂರು ಪಟ್ಟಣದಲ್ಲಿ ೭೫ ೦೦೦ ಪ್ರಜೆಗಳಿಗೆ ದಿನಾಲೂ ತಲಗೆ ೨೦ ಗ್ಯಾಲನ್ (ಅಂದರೆ, ಸುಮಾರು ೧೦ ಬಿಂದಿಗೆಯಷ್ಟು) ನೀರನ್ನು ಒದಗಿಸಬಹುದಾಗಿದೆ (೨) ವಿನಹಾ ತೊಳೆಯುವಂಥಾ ಎಚ್ಚಲು ಕೊಳಾಯಿ ತೊಟ್ಟಿಗಳಿಗೆ ನೀರು ಕೊಡಲಾಗುತ್ತದೆ ಹೊಸದಾಗಿ ಕೊಳಾಯಿ ತೊಟ್ಟಿಗಳನ್ನು ಕಟ್ಟಕೂಡದು (೩) ಮನೆಗಳಲ್ಲಿ ನಲ್ಲಿ ಒಡೆದು ನೀರು ಸುರಿಯುತ್ತಿದ್ದರೆ ೨೪ ಗಂಟೆಯೊಳಗಾಗಿ ಇಲಾಖೆಯವರು ಸರಿ ಮಾಡಿಕೊಡಬೇಕು ಇಲ್ಲವಾದರೆ ಆ ಮನೆಯಲ್ಲಿ ಹಿಂದೆ ಉಪಯೋಗಿಸಿರುವ ನೀರಿನ ಸರಾಸರಿಯನ್ನು ನೋಡಿ ಅದರಂತೆ ನೀರಿನ ತೆರಿಗೆ ಗೊತ್ತುಮಾಡಬೇಕು (೪) ಜನರಿಗಾಗಿ ಕಟ್ಟಿರುವ ಪಬ್ಲಿಕ್ ಕೊಳಾಯಿ ನೀರಿನ ತೊಟ್ಟಿಗಳನ್ನು ಈಗಿರುವವು ಹೊರತು ಹೊಸದಾಗಿ ಮ್ಯುನಿಸಿಪಲ್ ಕೌನ್ಸಿಲರುಗಳ ಸಮ್ಮತಿ ಇಲ್ಲದೆ ಕಟ್ಟಿಸಕೂಡದು (೫) ಮನೆಗಳಲ್ಲಿರುವ ನಲ್ಲಿ ಕೆಟ್ಟು ಹೋಗಿದ್ದರೆ ಅರ್ಜಿಕೊಟ್ಟ ಎರಡು ವಾರಗಳೊಳಗಾಗಿ ಇಲಾಖೆಯವರು ದುರಸ್ತು ಮಾಡಿಸಿ ಕೊಡಬೇಕು ನೀರಿನ ಇಲಾಖಾ ಸೂಪರಿನ್‌ಡೆಂಟರೇ ೧೦ ರೂಪಾಯಿ ವರೆಗೆ ಡಿಪಾಜಟ್ಟು ತೆಗೆದುಕೊಂಡು ಚಿಲ್ಲರೆ ರಿಪೇರಿಗಳನ್ನು ಮನೆಗಳ ನಲ್ಲಿಗಳಿಗೆ ಮಾಡಿಕೊಡಬೇಕು (೬) ಮ್ಯುನಿಸಿಪಾಲಿಟಿಯವರು ಮನೆ ಬಾಡಿಗೆ ದರದ ಮೇಲೆ ಶೇಕಡಾ ೪ ರೂಪಾಯಿನಂತೆ ನೀರಿನ ತೆರಿಗೆ ಹಾಕಿ ಪ್ರಜೆಗಳಿಂದ ವಸೂಲ್ಮಾಡಿ ನೀರಿನ ಇಲಾಖೆಗೆ ಪಾವತಿ ಮಾಡಬೇಕು ಪ್ರಜೆಗಳು ಮನೆಗಳಲ್ಲಿ ಹೆಚ್ಚು ನೀರನ್ನು ಉಪಯೋಗಿಸಿದಾಗ ವಸೂಲಾಗುವ ಹೆಚ್ಚು ಕಂದಾಯವನ್ನೂ ನೀರಿನ ಇಲಾಖೆಗೆ ಕೊಡಬೇಕು ನೀರಿನ ಇಲಾಖೆಯವರು ಮ್ಯುನಿಸಿಪಾಲಿಟಿಯಿಂದ ಇನ್ನಾವ ಪ್ರತಿಫಲವನ್ನೂ ಕೇಳದೆ ನೀರನ್ನು ಒದಗಿಸುತ್ತಾ ಇರಬೇಕು ಎಂಬುದೇ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಈ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್

ಮೈಸೂರು ಕುಂಚಿಟಿಗರ ದರ್ಮದ ಸ್ಕೂಲು

ಅಯ್ಯಾ,

ತಾವು ಕುಂಚಿಟಿಗರ ಎ ವಿ ಸ್ಕೂಲ್ ವಿಚಾರವನ್ನು ಕಳೆದ ೧೮ನೇ ತಾ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ತಮ್ಮನ್ನು ಬಹಳ ವಂದಿಸುತ್ತೇನೆ ಈ ಸ್ಕೂಲಿಗೆ ಮೆ॥ ೧೪ನೇ ಸಾಹುಕಾರ್ ಧರ್ಮ ಪ್ರವರ್ತಕ ಗುಂಜಾ ನರಸಿಂಹಯ್ಯನವರು, ಬನುಮೈಯನವರು, ಅಲ್ಲದೆ ಕಾಫಿ ಪ್ಲಾಂಟರ್ ನೀಲಗಿರಿ ಸಾಹುಕಾರ್ ಪುಟ್ಟಣ್ಣನವರು, ಕರಿಯಣ್ಣನವರು, ಜೈಲ್ ಕಂಟ್ರಾಕ್ಟದಾರ್ ಎಂ ಸಿ ಮಲ್ಲಯ್ಯನವರು, ಸಾಹುಕಾರ್ ಚಟ್ಟಗಳ್ಳಿ ಅಲಪ್ಪನವರು, ದೊಡ್ಡ ಮಲ್ಲಯ್ಯನವರು, ಸವಾಯಿ ಚಿಕ್ಕಣ್ಣನವರು, ಗಂಜಾಂ ತಿಮ್ಮಯ್ಯನವರು, ಕಂ ಉಗ್ಗಣ್ಣಪ್ಪನವರು, ಗಳುವಿನ ಅಂಗಡಿ ಚಿಕ್ಕಣ್ಣನವರು, ದೊಡ್ಡ ಮುದ್ದಪ್ಪನವರು, ಉಗ್ರಪ್ಪನವರ ನರಸಿಂಹಯ್ಯನವರು, ಬೊಮ್ಮಯ್ಯನವರೇ ಮೊದಲಾದ ೧೫-೨೦ ಮಂದಿ ಮಹನೀಯರೂ ಕೂಡ ಪ್ರತಿ ಮಾಹೆಯಲ್ಲೂ ಚಂದ ಕೊಟ್ಟು ಈ ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಬಹಳ ಮುತುವರ್ಜಿಯನ್ನು ವಹಿಸಿ ತಕ್ಕ ಏರ್ಪಾಡುಗಳನ್ನು ಮಾಡುತ್ತಾ ಬಂದಿದ್ದಾರೆ ಇಂಥಾ ಧರ್ಮ ಕಾರ್ಯಗಳನ್ನು ಮಾಡಿ ಕೀರ್ತಿ ಸಂಪಾದಿಸುತ್ತಿರುವ ಈ ಮಹನೀಯರಿಗೆ ಕೃತಜ್ಞತಾ ಪೂರ್ವಕವಾದ ವಂದನೆಯನ್ನು ಒಪ್ಪಿಸುತ್ತೇನೆ

ಕೆ ಶ್ರೀನಿವಾಸರಾವ್

ಎರಡು ವಿಶೇಷ ವಿಷಯಗಳು.

ಅಯ್ಯಾ,

ಇದೇ ನವಂಬರ್ ತಿಂಗಳು ೧೮ ನೇ ತಾ ತಮ್ಮ ಪತ್ರಿಕಾ ದ್ವಾರ ಪ್ರಕಟವಾಗಿರುವ ಪ್ರಜಾಪ್ರತಿನಿಧಿಗಳ ಪ್ರಾರ್ಥನೆಗಳನ್ನೂ, ಅವಕ್ಕೆ ಸರಕಾರದವರು ದಯಪಾಲಿಸಿರುವ ಉತ್ತರಗಳನ್ನೂ ಓದಿನೋಡುವದರಲ್ಲಿ ಒಂದು ವಿಷಯವು ಸ್ವಲ್ಪ ಅಸಂಗತವಾಗಿ ತೋರುತ್ತದೆ ಏನೆಂದರೆ,—

"ಪ್ರಾರ್ಥನೆ —ಲಿಂಗಾಯತ ವಿದ್ಯಾರ್ಥಿಗಳನ್ನು ಮೈಸೂರು ಸಂಸ್ಕೃತ ಕಾಲೇಜಿಗೆ ಸೇರಿಸಿಕೊಳ್ಳುವಂತೆ ಆಗಬೇಕು

ಉತ್ತರ —ಸರ್ಕಾರದವರು ಭೇದ ಮಾಡುವದಿಲ್ಲ"

ಇದಾದ ಕೆಲವು ಇತರ ಪ್ರಾರ್ಥನೆಗಳೂ ಉತ್ತರಗಳೂ ಆದನಂತರ ಇನ್ನೊಂದು ಪ್ರಾರ್ಥನೆ ಏನೆಂದರೆ,—

"ಪ್ರಾರ್ಥನೆ —ಸರ್ಕಾರಿ ಛತ್ರಗಳಲ್ಲಿ ಬ್ರಾಹ್ಮಣೇತರರಾದ ಪ್ರಯಾಣಿಕರಿಗೂ ಭೋಜನಕ್ಕೆ ಅನುಕೂಲ ಮಾಡಿಕೊಡಬೇಕು

ಉತ್ತರ —ಹಣ ಉಳಿದರೆ ಇದನ್ನೂ ಮಾಡಬಹುದು"

ಈ ಎರಡು ಪ್ರಾರ್ಥನೆಗಳನ್ನೂ ಅವುಗಳ ಉತ್ತರಗಳನ್ನೂ ಹೋಲಿಸಿ ನೋಡಿದರೆ ಸರಕಾರದವರು ಒಂದಾವ ಭೇದ ಮಾಡುವದಿಲ್ಲವೆಂದು ನುಡಿದು, ಇನ್ನೊಂದು ಸಂದರ್ಭದಲ್ಲಿ ಭೇದ ಮಾಡಿದ ಹಾಗೆ, ತಮ್ಮ ಪ್ರಜೆಗಳಲ್ಲಿ ಒಂದು ಪಂಗಡದವರಿಗೆ ಬೇರೆ ಪಂಗಡದವರಿಗಿಂತ ಹೆಚ್ಚು ರಿಯಾಯತಿಯನ್ನು ತೋರಿಸಿ ಆ ಪಕ್ಷಪಾತವನ್ನು ಒಪ್ಪಿಕೊಂಡಂತೆಯೂ ಕಾಣುವದಿಲ್ಲವೇ?

ನಿಷ್ಪಕ್ಷಪಾತಿ

ಮಂಡ್ಯದಲ್ಲಿ ಛಾಪಾಕಾಗದದ ಕಷ್ಟವು

ಅಯ್ಯಾ,

ಮಂಡ್ಯದ ತಾಲ್ಲೂಕು ಕಸಬಾ ಮಂಡ್ಯದಲ್ಲಿ ಸರ್ಕಾರದವರು ಜನಗಳ ಉಪಯೋಗಕ್ಕೋಸ್ಕರ ಛಾಪಾ ಕಾಗದ, ಕೋರ್ಟು ಫೀ ಸ್ಟ್ಯಾಂಪುಗಳನ್ನು ಮಾರುವಂತೆ ಏರ್ಪಾಡು ಮಾಡಿರುವುದು ಸರಿಯಷ್ಟೆ ಆದರೆ ಅವರಲ್ಲಿ ಸುಮಾರು ೧೦ ೧೫ ರೂಪಾಯಿಗಳಿಗೆ ಮೇಲ್ಪಟ್ಟು ಕಾಗದಗಳನ್ನೂ ಸ್ಟ್ಯಾಂಪುಗಳನ್ನೂ ಇಟ್ಟಿರುವುದೂ ಇಲ್ಲ ಇದರಿಂದ ಯಾವ ದಿವಸ ಹೋಗಿ ಕೇಳಿದರೂ ಶನಿವಾರ ಬುಧವಾರ ಬಾ ಅನ್ನುತ್ತಾರೆ ಆ ದಿವಸ ಹೋದರೂ ಹಿಂದಲ ದಿವಸ ದುಡ್ಡು ಕೊಟ್ಟು ಹೋಗಿದ್ದವರಿಗೆ ಮಾತ್ರ ಸಿಕ್ಕುತ್ತದೆಯೇ ಹೊರ್ತು ಮತ್ತೆ ಬೇರೆ ಇಲ್ಲ ಅವರುಗಳು ಅವರೋ ಬೆಳಗ್ಗೆ ಬಂದವರು ಸಾಯಂಕಾಲ ೪ ೫ ಘಂಟೆಯ ತನಕ ಕಾದು ಇರಬೇಕಾಗಿದೆ ಈ ವಿಷಯವಾಗಿ ತಾಲ್ಲೂಕಿಗೂ ಡೆಪ್ಯುಟಿ ಕಮಿಷನರಿಗೂ ಅರ್ಜಿಗಳನ್ನು ಬರೆದದ್ದು ಆಯಿತು ಆದರೆ ಅವರುಗಳು ಸಿಗಾವನ್ನು ಇದುವರೆವಿಗೂ ಕೊಡಲಿಲ್ಲ ಈ ಮಂಡ್ಯದ ಪೋಸ್ಟು ಆಫೀಸಿನಲ್ಲಿಯೂ ಛಾಪಾಕಾಗದ ಸ್ಟ್ಯಾಂಪುಗಳನ್ನು ಮಾರುವುದಿಲ್ಲ ಈ ವಿಷಯಕ್ಕೆ ಸರ್ಕಾರದವರು ಸಿಗಾಕೊಟ್ಟೇ ಇಲ್ಲ ಆದುದರಿಂದ ತಾವು ಪ್ರಕಟಿಸಿ ಮೆಂಡರಿಗಾಗಲಿ ಸರ್ಕಾರದವರಿಗಾಗಲಿ ತಿಳಿಯುವಂತೆ ಮಾಡುತ್ತೀರೆಂಬದಾಗಿ ತಮಗೆ ತಿಳಿಸಿಕೊಂಡು ಇದ್ದೇನೆ ಈ ಕಷ್ಟವನ್ನು ತಪ್ಪಿಸಿದ್ದೇ ಆದರೆ ಜನಗಳು ಮೊದಲು ದುಡ್ಡು ಕೊಟ್ಟು ಪಡುವ ಗೋಳಾಟವು ತಾವು ತಪ್ಪಿದಂತೆ ಆಗುತ್ತೆ ಜನಗಳ ಸುತ್ತಾಟವು ನಾಯಿಗಳಿಗಿಂತಲೂ ಕಡೆಯಾಗಿದೆ ಇದನ್ನು ತಪ್ಪಿಸಿಕೊಡಬೇಕು

ಜನಗಳ ಸುತ್ತಾಟವನ್ನು ನೋಡಲಾರದವನು

[ಈ ವಿಚಾರವಾಗಿ ಪ್ರಜೆಗಳು ಮೆ ಎಚ್ ಎಚ್ ಸ್ಟ್ರೈಕರ್, ಬೆಂಗಳೂರು, ಇವರಿಗೆ ಅರ್ಜಿ ಬರೆದುಕೊಂಡರೆ ಅವರು ವಿಚಾರಣೆ ಮಾಡಿ ತೊಂದರೆಯನ್ನು ನಿವಾರಣೆ ಮಾಡಿಕೊಟ್ಟಾರು —ಎಡಿ]

ಒಂದು ಪ್ರೈವೇಟ್ ಸ್ಕೂಲು

ಅಯ್ಯಾ,

ಹಿರಿಯೂರು ತಾಲ್ಲೂಕು ಧರ್ಮಪುರದ ಮಜರೆ ಮರಡಿ ದೇವಗೆರೆ ಗ್ರಾಮದಲ್ಲಿ ಆಗಾಗ್ಗೆ ಒಬ್ಬೊಬ್ಬ ಪ್ರೈವೇಟು ಮಾಸ್ಟರನ್ನು ಚುನಾಯಿಸಿಕೊಳ್ಳುತ್ತಾ ಮಧ್ಯೆ ಕೆಲವು ದಿವಸಗಳು ಯಾರೂ ಇಲ್ಲದೆ ಇರುತ್ತಾ ಈ ರೀತಿ ಇದುವರೆವಿಗೂ ನಡಿಸುತ್ತಾ ಇದ್ದದ್ದರಿಂದ ಬಾಲಕರು ಯಾರೂ ಅಷ್ಟು ಹೆಚ್ಚಿಗೆ ವಿದ್ಯಾವಂತರಾಗುವದಕ್ಕೆ ಅವಕಾಶವಿರಲಿಲ್ಲ ಈಗ ಕಾಲವು ಹಿಂದಿನಂತೆ ಮೌಢ್ಯ ಕಮ್ಮಿ ಆದ್ದರಿಂದ ಕಾಲಕ್ಕೆ ತಕ್ಕಂತೆ ಹೊಳಲ್ಕೆರೆ ತಾಲ್ಲೂಕು ಕೆಂಕೆರೆ ಗ್ರಾಮದ ಶ್ರೀ ಅಡಿವಪ್ಪನೆಂಬುವವರನ್ನು ೧ ವರುಷದ ಪೂರ್ತಿ ವರ್ಷಾಶನ ಗೊತ್ತುಮಾಡಿಕೊಂಡು ಕೀಲಕ ಸಂವತ್ಸರದ ಆಶ್ವೀಜ ಮಾಸದ ಲಾಗಾಯಿತು ತಮ್ಮ ಗ್ರಾಮದಲ್ಲಿ ಬಾಲಕರಿಗೆ ವಿದ್ಯೆ ಹೇಳಿಕೊಡುವುದಕ್ಕೆ ಕರೆದುಕೊಂಡು ಬಂದಿಟ್ಟುಕೊಂಡಿರುತ್ತಾರೆ ಸದರಿ ಅಡಿವಪ್ಪನವರು ಅನಕ್ಷರಸ್ಥರಾದ ೩೦ ಹುಡುಗರಿಗೆ ಆ ಲಾಗಾಯಿತು ಇದುವರೆವಿಗೂ ವಿದ್ಯಾಭ್ಯಾಸವನ್ನು ಚನ್ನಾಗಿ ಮಾಡಿಸುತ್ತಾರೆಂತಲೂ ಬಹಳ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾರೆಂತಲೂ ಕೇಳಿ ನೋಡಿ ಸಂತೋಷಪಡಬೇಕೆಂಬ ಕುತೂಹಲದಿಂದ ಹೋಗಿ ಆ ಗ್ರಾಮದ ಸ್ಕೂಲಿನ ಬಾಲಕರನ್ನು ಮಾಸ್ತರ ಸಮಕ್ಷಮ ಪರೀಕ್ಷಿಸಿದೆನು ಓದುವದು, ಬರೆಯುವದು, ಸಂಗೀತ ಹಾಡುವದು, ಲೆಕ್ಕಗಳನ್ನು ಮಾಡುವದು ಇವು ಯಾವತ್ತೂ ನೋಡಿದೆನು ಗೌರ್ನಮೆಂಟ್ ೨ನೇ ಕ್ಲಾಸಿನ ವಿದ್ಯಾರ್ಥಿಗಳ ವಿದ್ಯವನ್ನು ಮೀರಿತ್ತು ಇಷ್ಟು ವಿದ್ಯವು ಒಂದು ವರುಷದೊಳಗಾಗಿಯೇ ಏನೂ ಬಾರದ ವಿದ್ಯಾರ್ಥಿಗಳಿಗೆ ಈ ಮಾಸ್ಟರು ಕಲಿಸಿರುವದು ನೋಡಿದರೆ ಗ್ರಾಮಸ್ಥರು ಇವರಿಗೆ ಎಷ್ಟು ಉಪಕಾರ ಮಾಡಿದರೂ ಕೀರದಾಗಿರುತ್ತ ಈ ಗ್ರಾಮಕ್ಕೆ ಇಂಥಾ ಅನುಕೂಲವಾದ ಮಾಸ್ಟರು ಎಂದೂ ದೊರಕಲಿಲ್ಲವಾಗಿ ತೋರುತ್ತೆ ಗ್ರಾಮಸ್ಥರು ಈ ಮಾಸ್ಟರನ್ನು ಇನ್ನೂ ೩ ೪ ವರುಷಗಳ ವರೆಗೂ ಇಟ್ಟುಕೊಂಡು ತಮ್ಮ ಮಕ್ಕಳಿಗೆ ವಿದ್ಯೆ ಹೇಳಿಸಿದರೆ ೫ನೇ ಕ್ಲಾಸ್ ಪರೀಕ್ಷೆಯು ಪ್ರೈವೇಟಾಗಿ ಆಗುತ್ತೆ ಇದನ್ನು ತಿಳಿದು ಮಾಸ್ಟರಿಗೆ ಪ್ರೋತ್ಸಾಹ ಕೊಟ್ಟು ೩ ೪ ವರುಷಗಳ ವರಿವಿಗೂ ಇಟ್ಟುಕೊಂಡು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿಕೊಂಡರೆ ತುಂಬಾ ಅನುಕೂಲ

ಮರಡಿಹಳ್ಳಿ ನಿಷ್ಪಕ್ಷಪಾತಿ

ಅರಸೀಕೆರೆ ತಾಲ್ಲೂಕು ಜಾವಗಲ್ ಸ್ಕೂಲ್ ವಿಷಯ

ಅಯ್ಯಾ,

ಈ ಗ್ರಾಮವು ಬಾಣಾವಾರದಿಂದ ಹಳೇ ಬೀಡಿಗೆ ಹೋಗುವ ರೋಡು ಪಕ್ಕದಲ್ಲಿದೆ ಮತ್ತು ಭಾರೀ ಗ್ರಾಮವಾಗಿದೆ ಈ ಗ್ರಾಮಕ್ಕೆ ಸ್ಕೂಲು ಬಂದು ಸುಮಾರು ೪೫ ವರ್ಷವಾಗಿರಬಹುದು ಪೂರ್ವದಲ್ಲಿ ಒಂದು ಹಳೇ ಕಟ್ಟಡದಲ್ಲಿ ಒಬ್ಬರೇ ಮಾಸ್ಟರಿದ್ದರು ಆಗ ಗ್ರಾಮಸ್ಥರು ಚಂದಾ ಹಾಕಿ ಸರಕಾರಕ್ಕೆ ಕೊಟ್ಟರು ಸರಕಾರದಿಂದಲೂ ದ್ರವ್ಯ ಸಹಾಯ ಮಾಡಿ ಒಂದು ಸ್ಕೂಲ್ ಕಟ್ಟಡ ಕಟ್ಟಲು ಮೊಕರೂರು ಆಯಿತು ಸರಕಾರದವರಿಂದ ಜಾಗಾ ಚುನಾಯಿಸಲ್ಪಟ್ಟಿತು ಆಗ ಗ್ರಾಮಸ್ಥರು ಆ ಜಾಗಾದಲ್ಲಿ ಸ್ಕೂಲ್ ಮನೆ ಕಟ್ಟಕೂಡದೆಂತಲೂ, ಪೇಟೆ ಕೋಟೆಗಳ ಮಧ್ಯದಲ್ಲಿ ಕಟ್ಟಬೇಕೆಂತಲೂ ಹೇಳಿಕೊಂಡರು ಅದು ಫಲಿತಾರ್ಥವಾಗಲಿಲ್ಲ ಕಟ್ಟಡವಾದ ಮೇಲೆ ಇನ್ನೊಬ್ಬ ಮಾಸ್ಟರು ಹೊಸದಾಗಿ ಮೊಕರೂರು ಆದರು ಈಚೆಗೆ ಸರಕಾರದವರು ಈ ಗ್ರಾಮದ ಮೇಲೆ ಅಭಿಮಾನವಿಟ್ಟು ಒಬ್ಬ ಅಪ್ಪರ್ ಸೆಕೆಂಡರೀ ಪರೀಕ್ಷೆಯಾದ ಹೆಡ್ ಮಾಸ್ಟರನ್ನು ಕಳುಹಿಸಿಕೊಟ್ಟರು ಇವರುಗಳ ಶ್ರದ್ಧೆಯಿಂದ ಸ್ಕೂಲು ಬಹಳ ಅಭಿವೃದ್ಧಿಸ್ಥಿತಿಗೆ ಬಂದು ಬಾಲಕರ ಸಂಖ್ಯೆಯು ಜಾಸ್ತಿಯಾಗಿ ಕಟ್ಟಡವು ಸಾಲದೆ ಹೋಯಿತು ಇಬ್ಬರು ಮಾಸ್ಟರಿಂದ ಪಾಠ ನಡಿಯುವುದು ಅಸಾಧ್ಯವಾಯಿತು ಆಗ ಡೆಪ್ಯುಟಿ ಇನ್‌ಸ್ಪೆಕ್ಟರಿಗೆ ಅರ್ಜಿ ಬರೆದುಕೊಂಡೆವು ಅವರು ಬಂದು ಮಿದು ನಮ್ಮ ಅಹವಾಲನ್ನು ಪರಾಮರಿಸಿ,—ಹುಡುಗರಿಗೆ ಸ್ಥಳ ಸಂಕೋಚವೆಂದ ಇನ್ನೊಂದು ಕಟ್ಟಡ ಕೊಡಿಸಿ ಇನ್ನೊಬ್ಬ ಮಾಸ್ಟರನ್ನು ಕೊಡುತ್ತೇವೆಂದು ಹೇಳಿದ ಮೇರೆ ಅವರ ರೂಬುರೂಬು ಚಂದಾ ಹಾಕಿ ಬೇರೆ ಕಟ್ಟಡ ಬಾಡಿಗೆಗೆ ಬಿಡಿಸಿಕೊಟ್ಟು ೮ ತಿಂಗಳಾಯಿತು, ಮಾಸ್ಟರು ಹೊಸದಾಗಿ ಮೊಕರೂರು ಆಗಲಿಲ್ಲ ಈಗ ಬಿಡಿಸಿಕೊಟ್ಟಿರುವ ಕಟ್ಟಡದಲ್ಲಿ ಹೆಡ್ ಮಾಸ್ಟರ ತರಗತಿಗಳೂ ಸರ್ಕಾರಿ ಕಟ್ಟಡದಲ್ಲೂ ಅ॥ ಮಾಸ್ಟರ ತರಗತಿಗಳೂ ನಡೆಯುತ್ತಲಿವೆ ಈಗ ಹಾಲಿ ೩ ಮಾ॥ ರ ತರಗತಿಗಳಲ್ಲಿ ೪೫ ಬಾಲಕರು ಇದ್ದಾರೆ ೫ ವಿದ್ಯಾರ್ಥಿಗಳು ೬ನೇ ಕ್ಲಾಸಿಗೆ ದರಖಾಸ್ತು ಮಾಡಿದ್ದಾರೆ ಅ ಮಾಸ್ಟರ ತರಗತಿಗಳಲ್ಲಿ ಸುಮಾರು ೬೦—೯೦ ಬಾಲಕರಿರಬಹುದು ಒಟ್ಟು ೧೩೦—೧೩೫ ಬಾಲಕರಿಗೆ ಪಾಠಗಳನ್ನು ಇಬ್ಬರಿಂದ ನಡಿಸುವುದು ಅಸಾಧ್ಯ ಸ್ಕೂಲಿಗೆ ದಯಮಾಡಿಸಿದ ಪ್ರತಿಯೊಬ್ಬ ಆಫೀಸರೂ ಇನ್ನೊಬ್ಬರು ಮಾಸ್ಟರು ಆಗಬೇಕೆಂತಲೂ ಸ್ಕೂಲು ಕಟ್ಟಡ ಇಲ್ಲಿರುವುದು ಅಪಾಯವೆಂತಲೂ ಸ್ಕೂಲು ಬುಕ್ಕಿನಲ್ಲಿ ಬರೆಯುತ್ತಲಿದ್ದಾರೆ

ಈ ದಿವಸ ನಡೆದ ಒಂದು ಅಪಾಯಕರವಾದ ಸಂಗತಿಯನ್ನು ತಿಳಿಸುತ್ತೇನೆ ಈ ಸರ್ಕಾರಿ ಕಟ್ಟಡದ ಪೂರ್ವ ಉತ್ತರ ದಿಕ್ಕಿನಲ್ಲಿ ೧೦—೧೫ ಗಜಗಳ ದೂರದಲ್ಲಿ ಕೆರೆ ಇದೆ ಈಗ ಕೆರೆಯು ತುಂಬಿ ಭರ್ತಿಯಾಗಿದೆ ಸ್ಕೂಲು ಸಮೀಪದಲ್ಲೇ ನೀರು ಇದೆ ಬಾಲಕರನ್ನು ಮಲಮೂತ್ರಾದಿಗಳಿಗೆ ಹೊರಗೆ ಬಿಟ್ಟರೆ ಕೆರೆಗೆ ಹೋಗುತ್ತಾರೆ ಮತ್ತು ಇಲ್ಲಿರುವುದು ಮಕ್ಕಳ ತರಗತಿ ಈ ದಿವಸ ನಾನು ಕೆರೆಯಿಂದ ಬರುವಾಗ್ಗೆ ಸ್ಕೂಲು ಹತ್ತಿರ ಇರುವ ಕೆರೆಯಲ್ಲಿ ಒಬ್ಬ ೯ ವರುಷದ ಬಾಲಕ ನೀಚಹಣ್ಣು ಎಸೆಯುತ್ತಾನೆ ೭ ವರುಷದ ಬಾಲಕನು ನೀರಿನಿಂದ ಮೇಲಕ್ಕೆ ತಂದು ಕೊಡುತ್ತಾನೆ ಮೇಲೆ ನಿಂತಿರುವ ಹುಡುಗನು ಸ್ವಲ್ಪ ದೂರಕ್ಕೆ ನೀಚಹಣ್ಣು ಎಸೆದಿದ್ದಾನೆ ಸಣ್ಣ ಹುಡುಗನು ತರಲು ಹೋಗಿ ಮುಳುಗಿದಾನೆ ಆಗ ಒಬ್ಬ ದನ ಕಾಯುವ ದೊಡ್ಡ ಹುಡುಗನು ಬಂದು ತೆಗೆದಿದ್ದಾನೆ ಆಗ ನಾನು ಅಲ್ಲಿಗೆ ಬಂದೆ ಮತ್ತು ಆ ಹುಡುಗರನ್ನು ಕರೆದುಕೊಂಡು ಹೋಗಿ ಆ ಮಾಸ್ಟರಲ್ಲಿ ತಿಳಿಸಿದೆ ಅವರು ಹುಡುಗರನ್ನು ನೀರಿನ ಹತ್ತಿರ ಹೋಗದಂತೆ ಕಟ್ಟು ಮಾಡಿದೇನೆಂತಲೂ, ಆದರೂ ಹೀಗೆ ಹೋಗಿ ಬಿಡುತ್ತಾರೆಂತಲೂ ಸ್ಕೂಲಿನೊಳಗೆ ಆಡಲಿ ಎಂದು ಆಟಕ್ಕೂ ವಿದ್ಯಕ್ಕೂ ಅನುಕೂಲ ಮಾಡಬೇಕೆಂದೂ, ಅವರು ಮಾಡುವ ಚೇಷ್ಟೆಯನ್ನು ಒಂದು ಕ್ಷಣ ತಡೆಯುವುದು ಅಸಾಧ್ಯವೆಂದೂ ತಿಳಿಸಿದರು ಆ ದನ ಕಾಯುವ ಹುಡುಗನು ಇಲ್ಲದಿದ್ದರೆ ಆ ಹುಡುಗನ ಪ್ರಾಣವೇ ಹೋಗುತ್ತಿತ್ತು ಆದ್ದರಿಂದ ಸರ್ಕಾರದವರು ಕೂಡಲೇ ಈ ಸ್ಕೂಲಿನ ವಿಷಯದಲ್ಲಿ ಗಮನ ಕೊಡುತ್ತಾರೆಂದು ನಂಬಿದೇನೆ

ಗ್ರಾಮಸ್ಥ

ತಾಲ್ಲೂಕು ವರ್ತಮಾನಗಳು.

ಸಾಗರ —ಈಗ ಎರಡು ಮೂರು ದಿವಸಗಳಿಂದ ಮೋಡವಾಡುತ್ತಿದೆ ಜನರು ರಾಗಿಯನ್ನು ಕೊಯ್ಯುತ್ತಿದ್ದಾರೆ ಕೆಲವು ಕಡೆ ಬತ್ತವನ್ನೂ ಕೊಯ್ಯುತ್ತಿದ್ದಾರೆ ಕೆರೆಗಳಲ್ಲಿ ನೀರು ತುಂಬಿದೆ ಬತ್ತದ ಧಾರಣೆಯು ೧೯ ರಿಂದ ೧೦॥ ರೂಪಾಯಿಗೆ ಇಳಿದಿದೆ ಇನ್ನೂ ಇಳಿಯುವ ಸಂದರ್ಭದಲ್ಲಿದೆ ರಾಗಿಯೂ ಇಳಿದಿದೆ ಎಳ್ಳು, ತೊಗರಿ, ಹುರುಳಿ ಅವುಗಳ ಬೆಳೆಯು ಬಹಳ ಚನ್ನಾಗಿವೆ, ಹುರುಳಿ ಅವರೆ ಇವು ರೂಪಾಯಿಗೆ ೧೦ ೧೨ ಸೇರು ಆಗುವುದೆಂದು ಹೇಳುತ್ತಾರೆ —ಈ ಊರಿನಲ್ಲಿ ಲಕ್ಷ್ಮೀನರಸಿಂಹ ಸಹಾಯಕಸಂಘವೆಂಬ ಒಂದು ಪರಸ್ಪರ ಸಹಾಯಸಂಘವು ಏರ್ಪಾಡಾಗಿದೆ ಇದಕ್ಕೆ ಆಗಲೇ ಅನೇಕರು ಸೇರಿದ್ದಾರೆ ಈ ಕಂಪನಿಯು ಆದರು ಅನೇಕ ಬಡಬಗ್ಗರಿಗೆ ಉಪಕಾರವಾಯಿತು ತಾ ೨೦ ನೇ ಶನಿವಾರದ ದಿವಸ ಇದೇ ಊರು ಮ॥ ವೆಂಕಟರಂಗ ಶೆಟ್ಟರ ಮಕ್ಕಳು ಸುಬ್ಬಯ್ಯನಿಗೂ ಮಮ್ಮೂರು ಚನ್ನಪಟ್ಟಣದ ಈಡಿಗರ ಗೌಡರೊಬ್ಬರಿಗೂ ಸೈಕಲ್ ಪಂದ್ಯ ಆಯಿತು ಇದರಲ್ಲಿ ಮ॥ ಸುಬ್ಬಯ್ಯನವರೇ ಗೆದ್ದರು

ಮಂಡ್ಯ —ಇಲ್ಲಿಗೆ ೧೨ ಮೈಲಿ ದೂರದಲ್ಲಿರುವ ಹೂಲಿಕೆರೆ ಎಂಬ ಗ್ರಾಮದ ಹತ್ತಿರ ಅರ್ಧ ಮೈಲಿ ಫಾಸಲೆಯಲ್ಲಿ ಮಹದೇಶ್ವರನ ಜಾತ್ರೆಯು ಕಳೆದ ೧೭ನೇ ತಾ ನಿಂದ ೧೬ನೇ ತಾ ವರಿಗೂ ೫ ದಿನಗಳು ಮಹಾ ವಿಜೃಂಭಣೆಯಿಂದ ನಡೆಯಿತು ಈ ಜಾತ್ರೆಯು ಪ್ರತಿ ವರುಷದಲ್ಲಿಯೂ ಕೆಸಲಗೆರೆ, ಅರವಟಿಕೊಪ್ಪಲು, ಗಿರಿ ಮುಂತಾದ ಗ್ರಾಮಗಳಲ್ಲಿ ಈ ಕಾಲಗಳಲ್ಲಿಯೇ ಯಾವಾ

ಗಳೂ ತಪ್ಪದೆ ನಡಿಸುತ್ತಾರೆ ಸುತ್ತು ಮುತ್ತು ಗ್ರಾಮಗಳಿಂದ ಜನರು ತಂಡೋಪತಂಡವಾಗಿ ಬಂದು ಸೇರಿ ತಮ್ಮ ತಮ್ಮ ಪಶು ಕರುಗಳಿಗೆ ಮಾಡಿಕೊಂಡಿರುವ ಹರಿಕೆಗಳನ್ನೂ ಹಣ್ಣು ಹಂಪಲು ಸಾಂಬ್ರಾಣಿ ಧೂಪ ಕಾಣಿಕೆ ಮುಂತಾದವುಗಳನ್ನೂ ಹಿಡಿದು ಗುಡಿಯ ಸುತ್ತಲು ತಮ್ಮ ದನಕರುಗಳ ಕೊಂಬಿಗೆ ಪಂಜು ಹತ್ತಿಸಿ ಮೂರಾವರ್ತಿ ಪ್ರದಕ್ಷಿಣೆ ಮಾಡಿ, ಸರಗೂರಯ್ಯನೆಂಬ ಭಕ್ತನ ಪಾದಗಳಿಗೆ ಅಡ್ಡಬಿದ್ದು ಆತನಿಗೆ ಹಣ್ಣುಹಂಪಲು ಕಾಣಿಕೆಗಳನ್ನು ಸಮರ್ಪಿಸುತ್ತಾರೆ ಈ ಭಕ್ತನು ಅರಣ್ಯಸ್ಥಳದಲ್ಲಿ ಗೌಡಾದಿ ಜನರಿಗಾಗಿ ಒಂದು ಗುಡಿಯನ್ನು ಕಟ್ಟಿಸಿರುತ್ತಾನೆ ಈ ಜಾತ್ರೆಗೆ ಶಿವಾಚಾರದವರು ಕುರುಬರು, ಕುಂಬಾರರು, ಒಕ್ಕಲಿಗರು ಬಂದಿದ್ದರು ಈ ಜಾತ್ರೆಯ ಕಾಲದಲ್ಲಿ ವ್ಯಾಪಾರಗಳು ಬಹಳವಾಗಿ ನಡೆಯುತ್ತವೆ ಪೋಲೀಸ್ ಉಸ್ತುವಾರಿ ಚನ್ನಾಗಿ ನಡೆಸಲ್ಪಟ್ಟಿತು ಜೂಜಾಟವನ್ನು ತಕ್ಕಮಟ್ಟಿಗೂ ನಿಲ್ಲಿಸಿದರು

ಆನೆಕಲ್ಲು —ಈ ಊರಿಗೆ ತಂಜಾವೂರು ಕ್ರೈಸ್ತ ವಿದ್ವಾಂಸರಾದ ವೇದನಾಯಕಂ ಶಾಸ್ತ್ರಿಗಳ ಮೊಮ್ಮಕ್ಕಳಾದ ವೇದಮಣಿಶಾಸ್ತ್ರಿಯಾರ್ ಎಂಬ ಒಬ್ಬ ಸಂಗೀತ ವಿದ್ವಾಂಸರು ಬಂದಿದ್ದರು ಇವರು ಕಳೆದ ೧೨ನೇ ತಾ ಶುಕ್ರವಾರ ಮ್ಯುನಿಸಿಪಲ್ ತೋಟದಲ್ಲಿರತಕ್ಕ ಶ್ರೀಕೃಷ್ಣವಿಲಾಸ ರೀಡಿಂಗ್ ರೂಮಿನಲ್ಲಿ ಚದುರು ನಡಿಸಿದರು ಸ್ಥಳೀಕರಾದ ಅನೇಕ ದೊಡ್ಡ ಮನುಷ್ಯರೂ ಸರ್ಕಾರಿ ನೌಕರರೂ ಸೇರಿದ್ದರು ಮೇಲ್ಕಂಡ ವಿದ್ವಾಂಸರು ನಡಿಸಿದ ಸಂಗೀತ ಮಿಶ್ರವಾದ ಕಥಾ ರೂಪದಿಂದ ಸರ್ವರ ಮನಃಕಮಲಂಗಳು ವಿಕಸನವಾಗಿ ಕರ್ಣಾನಂದವಾಯಿತೆಂಬ ಸಂಗತಿಯನ್ನು ಅಗ್ರಾಸನಾಧಿಪತಿಗಳಾಗಿದ್ದ ಅಮಲ್ದಾರ್ ಮೆ॥ ನಾರಾಯಣಸಾಮೈಯ್ಯಂಗಾರ್ರವರು ಸಭಿಕರಿಗೆಲ್ಲಾ ವಿಶದಪಡಿಸಿದ್ದಲ್ಲದೆ ಪರ್ಯವಸಾನದಲ್ಲಿ ಈ ವಿದ್ವಾಂಸರಿಗೆ ಒಂದು ಅಡ್ರೆಸ್ ಕೊಟ್ಟು ಸರ್ಟಿಫಿಕೇಟು ಸಹ ದಯಪಾಲಿಸಿ ಯಿರುತ್ತಾರೆ —ನೆನ್ನೆ ನಡೆದ ದಸರಾ ಮಿಟಿಂಗಿನಲ್ಲಿ ಪಾಲಗೊಡು ಬೆಂಗಳೂರು ರೈಲ್ವೆ ವಿಷಯ ಹ್ಯಾಗೆ ತೀರ್ಮಾನಿಸಲ್ಪಟ್ಟಿದೆಯೋ ತಿಳಿಯಲಿಲ್ಲ ಇದನ್ನು ನಮ್ಮ ಸರ್ಕಾರದವರು ಚಿತ್ತಕ್ಕೆ ತಂದು, ಹೊಸೂರಿನಿಂದ ಆನೆಕಲ್ ಕಸಬೆಗೆ ಸಮೀಪವಾಗಿ ರೈಲುಮಾರ್ಗ ಹಾಕಿಸಿ, ಬೆಂಗಳೂರಿಗೆ ಸೇರುವಂತೆ ಮಾಡಿಸಿ ಕೊಡಬೇಕೆಂದು ಸರ್ವರೂ ಕೋರುತ್ತಿದ್ದಾರೆ —ಪ್ಲೇಗಿನ ಹಾವಳಿಯು ಪ್ರಸರಿಸಬಹುದೆಂದು ಪ್ರಜೆಗಳೆಲ್ಲರೂ ಭಯಭ್ರಾಂತರಾಗಿದ್ದರು ಅಂಥಾ ಅನಾಹುತಕ್ಕೆ ಈಡಾಗದೆ ಶಾಂತವಾಗಿದೆ

ಮದ್ದಗಿರಿ —ಈ ತಾಲ್ಲೂಕಿಗೆ ಸೇರಿದ ದೊಡ್ಡ ಮಾಲೂರು ಗ್ರಾಮದಲ್ಲಿ ಈಗ್ಗೆ ೧-೨ ತಿಂಗಳಿನಿಂದಲೂ ಕಳ್ಳರ ಹಾವಳಿಯು ಹೆಚ್ಚಿ ಪ್ರಜೆಗಳಿಗೆ ಬಹಳ ತೊಂದರೆ ಉಂಟಾಗಿದೆ ಈಗ್ಗೆ ೭-೮ ದಿನಗಳ ಕೆಳಗೆ ಈ ಗ್ರಾಮದಲ್ಲಿರುವ ಬಹಳ ಬಡತನದಿಂದ ಜೀವನ ಮಾಡುತ್ತಿದ್ದ ವೈಶ್ಯರ ಗೋವಿಂದಯ್ಯನ ಮನೆಯವರು ಅಂಗಡಿ ಬಾಗಿಲುಗಳನ್ನು ಹಾಕಿಕೊಂಡು ಒಳಗೆ ಮಲಗಿ ನಿದ್ರಿಸುತ್ತಿದ್ದ ವೇಳೆಯಲ್ಲಿ ಯಾರೋ ಬಾಗಿಲುಗಳನ್ನೆಲ್ಲಾ ತೆಗೆದು ದೂರವಾಗಿ ಬಿಸಾಟು ಮನೆಯೊಳಕ್ಕೆ ಹೋಗಿ ಬಟ್ಟೆಬರೆಗಳನ್ನೂ ಧಾನ್ಯವನ್ನೂ ಎರಡು ಮೂರು ಬೆಳ್ಳಿ ಸರಿಗೆಗಳನ್ನೂ ಯೊತ್ತಿಕೊಂಡು ಹೋಗಿರುತ್ತಾರೆ ಮಾರನೇ ದಿನ ಈ ಗ್ರಾಮದ ಪಟೇಲರು ಈತನ ದುಃಖವನ್ನು ಸಮಾಧಾನಪಡಿಸಿ ಕಳ್ಳರ ಪತ್ತೆ ತರದೂದಿನಲ್ಲಿದ್ದಾರೆ ಈ ಬಾಗಾಯಿತು ಪಟೇಲರು ತುಂಬಾ ಮೆಹನತ್ತಿನಿಂದ ರಾತ್ರಿ ಕಾಲದಲ್ಲಿ ಗಸ್ತು ನಡಿಸುತ್ತಾ ಜಾಗರೂಕರಾಗಿ ಗ್ರಾಮ ರಕ್ಷಣೆಯನ್ನು ನೋಡಿಕೊಳ್ಳುತ್ತಿದ್ದಾರೆ —ಈ ಗ್ರಾಮದಲ್ಲಿ ತರೀ ಫಸಲು ಮಾತ್ರ ಚನ್ನಾಗಿರುತ್ತೆ ಆದರೆ ಖುಷ್ಕಿ ಫಸಲು ಸಕಾಲಕ್ಕೆ ಸರಿಯಾಗಿ ಮಳೆ ನಡಿಸದೆ ಸುತರಾಂ ಒಣಗಿಹೋಯಿತು ಬಡ ಪ್ರಜೆಗಳೆಲ್ಲರೂ ಇದುವರಿವಿಗೂ ಮಳೆ ಬರುತ್ತದೆಂಬ ಭರವಸೆಯಿಂದ ನೋಡುತ್ತಾ ಕೊನೆಗೆ ಭಗ್ನಮನಸ್ಕರಾಗಿ ಮಳೆಯ ಆಶೆಯನ್ನೇ ಬಿಟ್ಟುಬಿಟ್ಟರು ಈ ಗ್ರಾಮದಲ್ಲಿರುವ ಗೌವರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ ಈಗ ಸುಮಾರು ೩೫ ೪೦ ವಿದ್ಯಾರ್ಥಿಗಳ ವರೆಗೆ ಇರುತ್ತಾರೆ ಇನ್ನೂ ಅನೇಕ ವಿದ್ಯಾರ್ಥಿಗಳು ಬಂದು ಸೇರುವುದರಲ್ಲಿರುತ್ತಾರೆ ಈ ಸ್ಕೂಲಿನಲ್ಲಿ ಸರ್ಕಾರದವರು ಮೂರನೇ ತರಗತಿಯ ವರೆಗೆ ಮಾತ್ರ ಇಟ್ಟಿರುವುದರಿಂದ ವಿದ್ಯಾರ್ಥಿಗಳು ಮೂರನೇ ತರಗತಿಯ ವರೆಗೂ ವಿದ್ಯಾಭ್ಯಾಸ ಮಾಡಿ ಲೋವರ್‌ಸೆಕೆಂಡರಿ ಇಲ್ಲಿ ಇಲ್ಲದೆ ಇರೋಣದರಿಂದ ಬೇರೆ ಸ್ಥಳದಲ್ಲಿ ಹೋಗಿ ಓದಲು ಅನುಕೂಲಗಳಿಲ್ಲದೆ ಕಲಿತ ವಿದ್ಯೆಯನ್ನು ವ್ಯರ್ಥಮಾಡಿಕೊಳ್ಳುತ್ತಾರೆ ಆದ್ದರಿಂದ ಸರ್ಕಾರದವರು ಈ ಸ್ಕೂಲಿಗೆ ಮತ್ತೊಬ್ಬ ಮಾಸ್ತರನ್ನು ಕೊಟ್ಟರೆ ಈ ಸ್ಕೂಲು ಇನ್ನೂ ಉತ್ತಮಸ್ಥಿತಿಗೆ ಬಂದು ಬಡ ಪ್ರಜೆಗಳು ಅಭಿವೃದ್ಧಿಗೆ ಬರುವರೆಂದು ಹಾರೈಸುತ್ತೇನೆ

ತೀರ್ಥಹಳ್ಳಿ —ಇಲ್ಲಿನ ಹವ ಹಗಲಿನಲ್ಲಿ ಬಿಸಿಲೂ ರಾತ್ರಿಯಲ್ಲಿ ಮಂಜೂ ಜಾಸ್ತಿಯಾಗಿದೆ ಮುಂದೆ ಛಳಿ ಜಾಸ್ತಿಯಾಗುವದಾಗಿದೆ —೧೬ನೇ ತಾ ಮಂಗಳವಾರ ರಾತ್ರಿ ಇಲ್ಲಿನ ಬಿ ಎ ಕಂಪೆನಿಯ ಅಂಗಡಿಯನ್ನು ಯಾರೋ ಕಳ್ಳರು ಬೀಗ ಒಡೆದು ನುಗ್ಗಿ ಕೆಲವು ಔಷಧಿಗಳನ್ನು ತೆಗೆದುಕೊಂಡು ಹೋಗಿರುವದಾಗಿ ವರ್ತಮಾನ ಇದು ಪೋಲೀಸ್ ಸ್ಟೇಷನಿಗೆ ಸುಮಾರು ನಲವತ್ತು ಗಜದ ದೂರದಲ್ಲಿ ನಡೆದದ್ದಾಗಿದೆ —ಇಲ್ಲಿಂದ ಕೆಲವು ಕಾನ್ಸ್ಟೇಬಲರೂ ಒಬ್ಬರು ಜಮಾದಾರ್ರೂ ಪೋಲೀಸ್ ಇನ್ಸ್ಪೆಕ್ಟರೂ ಗೋವಾ ಪ್ರಾಂತ್ಯ ವೈಸ್‌ರಾಯಿ ಪ್ರಭುಗಳ ಉಸ್ತುವಾರಿಗಾಗಿ ಹೋಗಿದ್ದಾರೆ —೨೨ ೧೯ ಕ್ಕೆ ಲೋಯರ್ ಸೆಕೆಂಡರಿ ಪರೀಕ್ಷೆಯು ತೀರಿದ ಕಾರಣ ಇಲ್ಲಿಗೆ ಪರೀಕ್ಷೆಗಾಗಿ ಬಂದಿದ್ದ ೪೨ ಜನ ವಿದ್ಯಾರ್ಥಿಗಳಿಗೂ ಇತರರಿಗೂ ಪ್ರಯೋಜನವಾಗುವಂತೆ ಇಲ್ಲಿನ ಎ ವಿ ಸ್ಕೂಲ್ ಕಟ್ಟಡದಲ್ಲಿ ಒಂದು ಸಭೆ ಸೇರಿತ್ತು ಅದಕ್ಕೆ ಈ ಊರಿನ ಸರಕಾರಿ ಉದ್ಯೋಗಸ್ಥರೂ ಸಾಹುಕಾರರೇ ಮೊದಲಾದವರೆಲ್ಲಾ ಬಂದಿದ್ದರು ಬಂದಿದ್ದವರಿಗೆ ಫಲ ತಿಂಡಿ ಹಂಚಿದ ನಂತರ ಗ್ರಾಮಫೋನಿನ ಸಂಗೀತವೂ ಕೆಲವು ವಿದ್ಯಾರ್ಥಿಗಳ ವಿನೋದವಾದ ಆಟವೂ ನಡೆಯಿತು ತರುವಾಯ ಹೆಡ್ ಮಾಸ್ಟರ್ ಮೆ॥ ಡಿ ಕೆ ವಾಸುದೇವರಾಯರು ಒಳ್ಳೇ ಉಪನ್ಯಾಸವನ್ನು ಮಾಡಿದರು ಅದರಲ್ಲಿ ಅವರು ಕೆಲವು ಒಳ್ಳೆ ಸೂಚನೆಗಳನ್ನು ಕೊಟ್ಟರು ಏನೆಂದರೆ, ಮೊದಲನೇದು ವಿದ್ಯೆಯಿಂದ ಘನವಾದ ಸುಖಗಳುಂಟೆಂಬುವದು ಎರಡನೇದು ಇಂಗ್ಲಿಷ್ ಕಲಿತುಕೊಂಡರೆ ಹಿಂದೂ ದೇಶವೆಲ್ಲೆಲ್ಲಾ ತಿರುಗಿದರೂ ಆ ದೇಶಭಾಷೆಗಳು ತಿಳಿಯದೆಯಿದ್ದರೂ ಇದರ ಸಹಾಯದಿಂದ ತನ್ನ ಕೆಲಸವನ್ನು ಜರುಗಿಸಿಕೊಳ್ಳ ಬಹುದು, ಮೂರನೇದು ಮುಖ್ಯವಾಗಿ ವಿದ್ಯಾರ್ಥಿಗಳು ಸತ್ಯವಂತರಾಗಿರಬೇಕೆಂಬುವುದೂ ಎಂದಿಗೂ ಸುಳ್ಳಾಡಕೂಡದೆಂದೂ ಹೇಳಿ ಅವುಗಳಿಗೆ ಅನುಕೂಲವಾದ ಕೆಲವು ಉಪಮಾನಗಳನ್ನು ತಿಳಿಸಿದರು ಇದು ಆ ಸಭೆಯಲ್ಲಿದ್ದ ಎಲ್ಲರಿಗೂ ಅವಶ್ಯವಾದದ್ದೆಂದು ತಿಳಿಯತಕ್ಕದ್ದಾಗಿತ್ತು ಅನಂತರ ಇನ್ನೂ ಕೆಲವರು ಮಾತನಾಡಿದರು ಕಡೆಯಲ್ಲಿ ಗಂಧ ಪುಷ್ಪ ತಾಂಬೂಲಾದಿಗಳು ಹಂಚಿದ ಬಳಿಕ ಸಭೆ ಬರಖಾಸ್ತಾಯಿತು

ಅರಸಿಕೆರೆ —ಇಲ್ಲಿ ಪ್ಲೇಗ್ ಪ್ರಾರಂಭವಾಗಿ ಸುಮಾರು ೩ ವಾರಗಳಾದವು ಊರಲ್ಲಿ ಇಲಿಗಳು ಮೃತಪಡುತ್ತಲಿವೆ ಈ ವರೆಗೂ ೫ ಮಂದಿ ಮೃತರಾದರು ಅಮಲ್ದಾರ್ರು ಮುತುವರ್ಜಿಯಿಂದ ಗ್ರಾಮಖಾಲಿ ನಡಿಸುತ್ತಿರುವುದಲ್ಲದೆ ಇನಾಕ್ಯುಲೇಷನ್ ನಡಿಸುತ್ತಾರೆ ಊರಿನವರಲ್ಲಿ ಅನೇಕರು ಅದನ್ನು ಕಂಡರು ಸರ್ಕಾರದ ಉದ್ಯೋಗಸ್ಥರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಂಡರು ಗ್ರಾಮಸ್ಥರು ಊರುಬಿಡುವುದರಲ್ಲಿದ್ದಾರೆ ಇನಾಕ್ಯುಲೇಷನ್ ಮಾಡಿಕೊಂಡವರಿಗೆ ಯಾವ ಅಪಾಯವೂ ಆಗಿರುವುದಿಲ್ಲ ಆದ್ದರಿಂದ ಇದು ಬಹಳ ಪ್ರಯೋಜನಕರವಾದದ್ದೆಂದು ನಿಸ್ಸಂಶಯವಾಗಿ ಹೇಳಬೇಕಾಗಿದೆ ಆದರೆ ತಾಲ್ಲೂಕು ಜನರು ಊರಾಚೆ ವಾಸಮಾಡುವ ಅನುಕೂಲವಿರುವದರಿಂದ ಅವರಿಗೆಲ್ಲ ಇನಾಕ್ಯುಲೇಷನ್ ಆಗಲಿಕ್ಕೆ ಸರ್ಕಾರದವರು ತಕ್ಕ ಏರ್ಪಾಡು ಈವರಿಗೂ ಮಾಡಿರುವದಿಲ್ಲವೆಂತ ತೋರುತ್ತೆ ಅಮಲ್ದಾರ್ರು ತಾವೇ ಮುಂದಾಳಾಗಿ ನಿಂತು ಇನಾಕ್ಯುಲೇಷನ್ ಮಾಡಿಸಿಕೊಂಡು ತರುವಾಯ ಎಲ್ಲಾ ಸರ್ಕಾರಿ ನೌಕರರಿಗೂ ಆಸ್ಪತ್ರೆಯವರಿಗೂ ಮಾಡಿಸಿದರು ಹಾಸನದ ಮೆಡಿಕಲ್ ಆಫೀಸಿನವರು ಬಹು ಆಸಕ್ತಿಯಿಂದಲೂ ಪ್ರೀತಿಯಿಂದಲೂ ಜನರನ್ನು ಪ್ರೋತ್ಸಾಹಿಸಿ ಅವರ ಭಯವನ್ನೂ ಸಂಶಯವನ್ನೂ ನಿವಾರಣೆ ಮಾಡಿದರು —ಮುನಿಸಿಪಾಲಿಟಿ ವಿಷಯದಲ್ಲಿ ಡೆಪ್ಯುಟಿಕಮಿಷನರ್ ಸಾಹೇಬರವರು ಪೂರ್ಣ ತೃಪ್ತಿ ಪಟ್ಟಂತೆ ತೋರಲಿಲ್ಲ ಅರಸಿಕೆರೆ ಗ್ರಾಮದ ಮುನಿಸಿಪಾಲಿಟಿಯಲ್ಲಿ ಅನೇಕ ಕೊರತೆಗಳುಂಟು ಡೆಪ್ಯುಟಿಕಮಿಷನರ್ ಸಾಹೇಬರವರು ಖುದ್ದು ಪರಾಂಬರಿಸಿ ಜನರಿಗೆ ತಕ್ಕ ಬುದ್ಧಿವಾದವನ್ನು ಹೇಳಿದರ ಗ್ರಾಮಸ್ಥರು ಕೂಡಲೆ ಊರು ಬಿಡಲಿಕ್ಕೆ ಹೊಲಗಳೆಲ್ಲಾ ಪೈರುಗಳಿಂದ ತುಂಬಿವೆ ಆದ್ದರಿಂದ ಇನ್ನು ಒಂದು ವಾರದೊಳಗೆ ಅರಸಿಕೆರೆಯು ಖಾಲಿಯಾಗಬಹುದು —ನೆನ್ನೆ ದಿವಸ ಒಬ್ಬ ಹುಡುಗಿಯು ರೈಲ್ವೆಲೈನ್‌ನಲ್ಲಿ ಅಪಾಯಕ್ಕೊಳಪಟ್ಟಳೆಂದು ಕೇಳಲಾಗಿದೆ ಧಾರಣೆಗಳು ಕೊಂಚ ಹೆಚ್ಚಾಗಿವೆ ಸಂತೆ ಕೂಡಲಿಲ್ಲ ನೂರೆಲೆ ಇಸ್ಪೀಟು ಆಟದವರ ಅವಾಂತ್ರ ಹೇಳತೀರದು ಆದಾಗ್ಯೂ ಇನ್ಸ್ಪೆಕ್ಟರ್ ಮೆ॥ ಗುಡಿಯಪ್ಪನವರು ಅವರನ್ನೆಲ್ಲಾ ಹಿಡಿದು ಅಡಗಿಸುವರೆಂಬುವದರಲ್ಲಿ ಸಂಶಯವಿಲ್ಲ ಎಲ್ಲಾ ಬೆಳೆಗಳೂ ಸಮೃದ್ಧಿಯಾಗಿವೆ, ರಾಗಿ ಕಟಾವು ಜೋರಾಗಿದೆ ಕೊಯ್ಯುವವರೇ ಕಡಮೆ ಕೂಲಿ ಜಾಸ್ತಿಯಾಗಿದೆ

ಚನ್ನಪಟ್ಟಣ —೧೫ ದಿನಗಳಿಂದೀಚೆಗೆ ಮಳೆ ನಿಂತಿದೆ ಬಿಸಿಲಿನ ತಾಪವು ಬೇಸಿಗೆ ಕಾಲದಂತಿದೆ ರೈತರೆಲ್ಲಾ ತಂತಮ್ಮ ಹೊಲಗಳನ್ನು ಕೊಯ್ಯುತ್ತಿರುವರು —ತಾ ೧೨ನೇ ಗುರುವಾರ ಇಲ್ಲಿನ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲ್ ಹುಡುಗರಿಗೆ ಬಹುಮಾನ ಕೊಡುವುದಕ್ಕಾಗಿ ಗವರ್ನಮೆಂಟು ಇಂಗ್ಲಿಷ್ ಸ್ಕೂಲಿನಲ್ಲಿ ಸಭೆ ಸೇರಿತ್ತು ಡಾಕ್ಟರ್ ಲಿಲ್ಲಿಂಗ್‌ಸ್ಟನ್ ಮಿಸ್‌ವಾಕರ್ ಮೊದಲಾದ ಹಲವು ಶ್ವೇತಿಗಳೂ ಅಮಲ್ದಾರ್ ಮೆ॥ ಕುಪ್ಪಸಾಮೈಯ್ಯಂಗಾರ್ರೂ ಶಿರಸ್ತೇದಾರ್ ಮೆ॥ ನರಸಿಂಹನಾಯಕರೇ ಮೊದಲಾದ ಹುದ್ದೇದಾರರೂ ಲಾಯರ್ ಮುನ್ನಾರಪ್ಪನವರೂ ಸ್ಕೂಲ್ ಮಾಸ್ಟರುಗಳೂ ವರ್ತಕಮಂಡಲಿಯವರೂ ಮೆ॥ ಅಬ್ದುಲ್ ಖುದೂಸ್ ಸಾಬರೇ ಮೊದಲಾದ ಹಲವು ಸಾಹುಕಾರರೂ ಸಭೆಯನ್ನು ಅಲಂಕರಿಸಿದ್ದರು ಸ್ಕೂಲ್ ಸೂಪರೇಂಟರಾದ ಮೆ॥ ಬಾವಾಸ್ಕೋಯಾ ಸಾಬರು ಸ್ಕೂಲ್ ಅಭಿವೃದ್ಧಿಯ ರಿಪೋರ್ಟನ್ನು ಬಹು ಸ್ವಾರಸ್ಯವಾದ ರೀತಿ ಓದಿದರು ಚೇರ್ಮನ್ ಸ್ಥಾನದಲ್ಲಿದ್ದವರ ಹಸ್ತದಿಂದ ಸ್ಕೂಲಿನ ಕಸಬುದಾರರಾದ ಹುಡುಗರಿಗೆ ಬಹುಮಾನಗಳು ಕೊಡಲ್ಪಟ್ಟವು ಈ ಪೈಕಿ ಉತ್ತಮತರದ ಕೆಲಸ ಮಾಡಿದ ಒಬ್ಬ ಮಹಮ್ಮದೀಯ ಹುಡುಗನಿಗೆ ಡಾಕ್ಟರ್ ಲಿಲ್ಲಿಂಗ್‌ಸ್ಟನ್‌ರವರ ಪರವಾಗಿ ೧೦ ರೂ ಬೆಲೆಯ ಸಾಮಾನು ಬಹುಮಾನವಾಗಿಯೂ ಡಾಕ್ಟರ್ ಲಾಕ್‌ವುಡ್ ಯವರ ಪರವಾದ ೧೦ ರೂ ಸಾಮಾನು ಒಬ್ಬ ಕ್ರೈಸ್ತ ಬಾಲಕನಿಗೆ ಪ್ರಥಮತರಗತಿಯ ಬಹುಮಾನವಾಗಿಯೂ ಹೊಂದಿದ್ದು ಸಭಿಕರಿಗೆಲ್ಲಾ ಸಂತೋಷವನ್ನುಂಟು ಮಾಡಿತು ನಂತರ ಚೇರ್ಮನ್‌ರವರು ಸಮಯೋಚಿತವಾದ ಉಪನ್ಯಾಸ ಮಾಡಿ ಪುಷ್ಪಹಾರಗಳೊಂದಿಗೆ ಸಭೆಯನ್ನು ಬರಖಾಸ್ತು ಮಾಡಿದರು —ನಮ್ಮ ಚನ್ನಪಟ್ಟಣದ ಕೆರೆಯಲ್ಲಿ ನೀರಿದ್ದರೂ ಕುಡಿಯುವ ನೀರಿಗೆ ಕಷ್ಟ ಬಂದಿದೆ ಒಂದು ತಿಂಗಳ ಕೆಳಗೆ ಕ್ಲೋಸ್‌ಪೇಟೆಯಲ್ಲೂ ಸುತ್ತುಮುತ್ತಿನಲ್ಲೂ ಕಾಲರಾ ರೋಗವಿದ್ದದ್ದರಿಂದ ಅದರ ಸೋಂಕಿನ ಕ್ರಿಮಿಪರಿಹಾರಕ್ಕಾಗಿ ಇಲ್ಲಿನ ಕೆರೆ ಭಾವಿಗಳಿಗೆಲ್ಲಾ ಮೆಡಿಕಲ್ ಆಫೀಸರ ಅಪ್ಪಣೆಯಿಂದ ಒಂದು ಬಗೆ ಔಷಧಿಯನ್ನು ಹಾಕಿಸಿದ್ದರು ಆ ಲಾಗಾಯತು ಈಗಿನ ವರೆಗೂ ಸದರಿ ಕೆರೆಯ ನೀರನ್ನು ಸಮೀಪದವರು ಬಳಸಿ ಜೀವಿಸುವವರಾದರು ಕೆರೆಯ ನೀರನ್ನು ಕಾರಂಜಿಗಳಿಗೆ ಬಿಡದೆ ತಡೆದುಬಿಟ್ಟಿದ್ದಾರೆ ಕೋಟೆ, ಪೇಟೆಯ ಹೆಂಗಸರು ಸೇದಲು ದಣಿದು ದಣಿದು ಆಯಾಸಗೊಳ್ಳುತ್ತಿರುವರು ಈ ಪರಿಯಂತ್ರವೂ ಕೆರೆಯ ನೀರನ್ನು ತಡೆದಿರಲು ಕಾರಣವೇನೋ ತಿಳಿಯಲಿಲ್ಲ ಸ್ಥಳಾಧಿಕಾರಿಗಳು ಈ ವಿಚಾರ ತಿಳಿದು ಕಾರಂಜಿಗಳಿಗೆ ನೀರು ಬರುವಂತೆ ಮಾಡಿದರೆ ಉತ್ತಮವಾಗಿರುತ್ತೆ —ಕಳೆದ ತಾ ೧೯ನೇ ಶುಕ್ರವಾರ ಮೆ॥ ಶ್ರೀಕಂಠಶಾಸ್ತ್ರಿಗಳೆಂಬೊಬ್ಬರು ಇಲ್ಲಿ ಸ್ಕೂಲು ಮಾಸ್ಟರುಗಳನ್ನೆಲ್ಲಾ ಒಂದು ಕಡೆ ಬರಮಾಡಿಕೊಂಡು "ಮಕ್ಕಳಿಗೆ ವರ್ಣಮಾಲಾ ಸುಲಭೋಪಾಯ" ಎಂಬ ವಿಷಯದಲ್ಲಿ ಒಂದು ವಿಸ್ತಾರವಾದ ಪ್ರಬಂಧವನ್ನು ಓದಿದರಲ್ಲದೆ ವರ್ಣಗಳನ್ನು ಸುಲಭತರವಾಗಿ ಬಾಲಕರಿಗೆ ಕಲಿಸತಕ್ಕ ಕೆಲವು ಸೂತ್ರಗಳನ್ನೂ ಉಪಕರಣಗಳನ್ನೂ ತಿಳಿಸಿ ತೋರಿಸಿದರು ಇವರ ಬುದ್ಧಿಚಮತ್ಕಾರ ಸೂಕ್ಷ್ಮವಾದದ್ದಾದರೂ ಪ್ರಯಾಸದಿಂದ ಫಲಕಾರಿಯಾದೀತೆಂದು ತೋರುತ್ತೆ

ವಿದೇಶ ವರ್ತಮಾನಗಳು

ಅಮೇರಿಕಾದ ಮುಖ್ಯನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಸುಂಕದ ಇಲಾಖೆಯೊಳಗೆ ಕಳೆದ ಮಾರ್ಚಿ ತಿಂಗಳಿಂದ ನೌಕರಮಾನೆಯರು ಹಣವನ್ನು ತಿಂದುಹಾಕುತ್ತಾ ಬಂದಿರುವುದು ಗೊತ್ತಾಯಿತು ಸರ್ಕಾರದವರು ೧೦೪ ಮಂದಿ ನೌಕರರನ್ನು ಕೆಲಸದಿಂದ ವಜಾ ಮಾಡಿದ್ದಲ್ಲದೆ ೧೨೧ ಮಂದಿಯನ್ನು ಕಂಪರಾ ಮಾಡಿರುತ್ತಾರೆ

ಅಟ್ಲಾಂಟಿಕ್ ಮಹಾ ಸಾಗರದಲ್ಲಿ ಅಪಾರವಾದ ಸುಂಟರಗಾಳಿಯು ಹುಟ್ಟಿ ಸಮುದ್ರದ ನೀರು ಅಲ್ಲಕಲ್ಲೋಲವಾಗುತ್ತಲಿದೆ ಒಡು ಜನಗಳು ಸಕಾಲಕ್ಕೆ ತಲುಪುವುದು ಬಹಳ ಕಷ್ಟವಾಗಿರುವುದು ಸುಂಟರಗಾಳಿಯು ಕಳೆದ ವಾರ ಲಿಸ್ಬನ್ ಪಟ್ಟಣಕ್ಕೂ ವ್ಯಾಪಿಸಿ ಟೇಗಸ್ ನದಿಯಲ್ಲಿ ಕಟ್ಟಿದ್ದ ದೋಣಿಗಳೂ ಹಡಗುಗಳೂ ಬಡಿದ ಕೊಂಡು ಹೋದವು ಕೆಲವು ಮುಳುಗಿಕೊಂಡವು ಪಟ್ಟಣದೊಳಗೂ ಕೆಲವು ನಷ್ಟಗಳುಂಟಾಗಿರುತ್ತವೆ

ಬೆಲ್ಫಾಸ್ಟ್ ಪಟ್ಟಣದಲ್ಲಿ ಜೋಡುಗಳನ್ನು ಮಾಡುತ್ತಿದ್ದ ಪ್ಯಾಟ್ರಿಕ್‌ಮೆಗ್ಗಿನೆಸ್ ಎಂಬಾತನು [illegible] ರೂಪಾಯಿ [illegible] ನೂಲುವ ಕಂಪೆನಿಯ ನೌಕರನಾಗಿದ್ದ ಜೇಂಸ್‌ಸ್ಕ್ಯಾಟರ್‌ಗುಡ್ ಎಂಬುವನು ೧೬ ಲಕ್ಷ ರೂಪಾಯಿಗಳನ್ನೂ, ಈಸ್ಟ್‌ಬೋರ್ನ್ ನಗರದ ಎಡ್ವರ್ಡ್‌ಬೆಕೆಟ್ ಎಂಬಾತನು ೪ ಲಕ್ಷ ರೂಪಾಯಿಗಳನ್ನೂ ತಮ್ಮ ತಮ್ಮ ಆಸ್ತಿಯೆಂಬ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನಗಳನ್ನು ಬರೆದಿರುತ್ತಾರೆ

* * *

ಕಳೆದ ವಾರ ಹಿಮ ಗಡ್ಡೆಗಳ ಸಹಿತವಾದ ಬಿರುಗಾಳಿಯು ಬೀಸಿ ಜರ್ಮನಿ ರಾಜ್ಯದ ಎಲ್ಲಾ ಕಡೆಗಳಲ್ಲೂ ಬಹಳ ಕಷ್ಟವನ್ನುಂಟುಮಾಡಿತು ಒಂದು ದಿನ ಜನರ ಮತ್ತು ವಾಹನಗಳ ಸಂಚಾರವು ಸಂಪೂರ್ಣವಾಗಿ ನಿಂತುಹೋಯಿತು ಟೆಲಿಗ್ರಾಫ್ ತಂತಿಗಳಿಗೆ ಬಹಳ ಕೆಡುಕಾಗಿ ಊರಿಂದೂರಿಗೆ ಸಮಾಚಾರ ಕಳುಹಿಸಲು ಆಗಲಿಲ್ಲ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಟೆಲಿಗ್ರಾಫ್ ಆಫೀಸಿನ ಮೇಲೆ ಹಿಮಗಡ್ಡೆಗಳು ಅಪಾರವಾಗಿ ಸುರಿದು ಮೇಲ್ಛಾವಣಿಯು ಕುಸಿದು ಬಿದ್ದು ಹೋಯಿತು

* * *

ಸ್ಪೆಯಿನ್ ರಾಜ್ಯಕ್ಕೆ ಸೇರಿದ ಕೆನೇರಿ ದ್ವೀಪಗಳ ಪೈಕಿ ಭಾರಿಯಾದ ಟೆನೆರಿಫ್ ಎಂಬ ದ್ವೀಪದಲ್ಲಿ ಒಂದು ದೊಡ್ಡ ಅಗ್ನಿಪರ್ವತವಿದೆ. ಈ ಅಗ್ನಿಪರ್ವತದ ನಾಲ್ಕು ಬಾಯುಗಳಿಂದಲೂ ಬೆಂಕಿ ಹುಟ್ಟಿ ಕಾರುತ್ತಾ ಬಂದಿರುವುದು ಕರಗಿದ ಕಲ್ಲುಮಣ್ಣು ಲೋಹಾದಿಗಳು ೧,೩೦೦ ಅಡಿ ಅಗಲಕ್ಕೆ ಬಾಯಿನಿಂದ ಹರಿದು ಬರುತ್ತಿದೆ ಇದು ಮೂರೂವರೆ ಮೈಲಿ ಫಾಸಲೆಯ ತನಕ ಹರಿದಿದೆ ಎಂದೂ ೮೦ ಅಡಿ ಆಳವಾಗಿರುವ ಒಂದು ಕಣಿವೆಯು ತುಂಬಿ ಹೊರಗೂ ಹರಿಯಲಾರಂಭವಾಗಿದೆ ಎಂದೂ, ಸಮೀಪದಲ್ಲಿದ್ದ ಎರಡು ಗ್ರಾಮಗಳ ಮೇಲೂ ಹರಿಯುವಂತೆ ಕಂಡುಬಂದದ್ದರಿಂದ ಅಲ್ಲಿನ ಪ್ರಜೆಗಳು ಮನೆಮಾರುಗಳನ್ನು ಬಿಟ್ಟು ಇತರ ಕಡೆಗಳಿಗೆ ಹೊರಟುಹೋದರೆಂದೂ ತಿಳಿಯುವುದು

* * *

ಜರ್ಮನಿಯ ಪ್ರಜಾ ಸಂಖ್ಯೆಯನ್ನು ವೃದ್ಧಿಮಾಡಲು ಚಕ್ರವರ್ತಿಯವರು ಒಂದು ನೂತನ ವಿಧಾನವನ್ನು ಕಂಡುಹಿಡಿದಿರುತ್ತಾರೆ ಸಂಸಾರದಲ್ಲಿ ಪ್ರತಿ ೮ನೇ ಮಗುವಿನ ನಾಮಕರಣವಾಗುವಾಗ್ಗೆ ಚಕ್ರವರ್ತಿಯವರು ತಾವೇ ಆಗಲಿ ತಮ್ಮ ರಾಯಭಾರಿಯಾಗಲಿ ಹೋಗಿ ಹಾಜರಾಗಿರುವಂತೆ ಅಪ್ಪಣೆ ಕೊಡಿಸಿದ್ದಾರೆ ಇದಲ್ಲದೆ ಬಡವರಾಗಿರುವವರ ಮನೆಗಳಲ್ಲಿ ೮ನೇ ಮಗು ಜನನವಾದರೆ ಸರ್ಕಾರದವರು ಅವನಿಗೆ ೪೫ ರೂಪಾಯಿ ಬಹುಮಾನ ಕೊಡುವರು ಜರ್ಮನಿ ರಾಜ್ಯದಲ್ಲಿ ಪ್ರತಿ ಒಬ್ಬ ಗಂಡಸೂ ಸೈನ್ಯದಲ್ಲಿ ಸೇರಿ ಕರಪೇತಾಗಿರಬೇಕೆಂಬ ವಿಧಿ ಇರೋಣದರಿಂದ ಪ್ರಜೆಗಳು ಹೆಚ್ಚಿದಷ್ಟೂ ರಾಜ್ಯದ ಸೈನ್ಯ ಬಲವು ವೃದ್ಧಿಯಾಗುವುದೆಂದು ಸರ್ಕಾರದವರು ತಿಳಿದು ಈ ರೀತಿ ಹೊಸ ಏರ್ಪಾಡನ್ನು ಮಾಡಿರುತ್ತಾರೆ

* * *

ಅಮೇರಿಕಕ್ಕೆ ಸೇರಿದ ಇಲ್ಲಿನಾಯಿಸ್ ಡಿಸ್ಟ್ರಿಕ್ಟಿನಲ್ಲಿ ಚೆರ್ರಿ ಸ್ಪ್ರಿಂಗ್ ಕಣಿವೆಯೊಳಗೆ ಒಂದು ಗಣಿಗೆ ಬೆಂಕಿ ಬಿದ್ದು ನೂರಾರು ಮಂದಿ ಸ್ವಾಹಪಟ್ಟರೆಂದು ತಿಳಿಸಿದ್ದೆವಷ್ಟೆ ಈಚೆಗೆ ಈ ಗಣಿಯೊಳಗಿಂದ ೭೮ ಮಂದಿಯನ್ನು ಬಹು ಆಶ್ಚರ್ಯಕರವಾದ ರೀತಿಯಲ್ಲಿ ಹೊರಕ್ಕೆ ಕರೆದು ತಂದು ಬದುಕಿಸಿದರೆಂತ ವರ್ತಮಾನ ಬಂದಿದೆ ಗಣಿಯೊಳಗಿದ್ದ ಜನರ ಪೈಕಿ ೭೮ ಜನರು ಮಣ್ಣನ್ನು ಕಲಸಿ ಬೆಂಕಿಯ ಉರಿ ತಮಗೆ ಬಡಿಯದಂತೆ ಅಡ್ಡಲಾಗಿ ಗೋಡೆಯನ್ನು ಹಾಕಿಕೊಂಡಿದ್ದರು ಇವರೆಲ್ಲಾ ಆಸ್ಟ್ರೇಲಿಯಾ ಮತ್ತು ಇಟಲಿ ದೇಶದವರು ಗಣಿಯೊಳಗೆ ಸಿಕ್ಕಿದ ಆಹಾರಪದಾರ್ಥಗಳನ್ನೆಲ್ಲಾ ಕೂಡಿಸಿಟ್ಟು ಸ್ವಲ್ಪ ಸ್ವಲ್ಪವೇ ತಿಂದು ಜೀವಿಸಿಕೊಂಡಿದ್ದರು ಮೇಲಿನಿಂದ ಒಸರಿ ಬೀಳುವ ನೀರನ್ನು ಕುಡಿಯುತ್ತಾ ತಮ್ಮಗಳ ಬಳಿ ಮೊಂಬತ್ತಿಯ ತುಂಡು, ಕಡ್ಡಿ, ಹೊಗೆಸೊಪ್ಪು, ಜೋಡಿನ ಚರ್ಮ ಇವುಗಳನ್ನು ಅಗಿಯುತ್ತಾ ಬದುಕಿದ್ದರು ಇವರನ್ನು ಜನರು ಹುಡುಕಿ ಕಂಡುಹಿಡಿದು ಮೇಲಕ್ಕೆ ತಂದು ಶುಶ್ರೂಷೆ ಮಾಡುತ್ತಾರೆ

* * *

ಕಳೆದ ಅಕ್ಟೋಬರ್ ೩೧ನೇ ತಾ ಧಾನವಾದ ಎಂಕ್ಲೆರ್ ಎಂಬ ಮಠಾಧಿಪತಿಯು ಲಂಡನ್ ಪಟ್ಟಣದಲ್ಲಿರುವ ಸಂಟ್‌ಪಾಲ್ ದೇವಾಲಯದಲ್ಲಿ ಸಭಿಕರನ್ನು ಕುರಿತು ಹೇಳಿದ್ದೇನೆಂದರೆ —ಪ್ರತಿ ವರುಷವೂ ಲಂಡನ್ ಪಟ್ಟಣದಲ್ಲಿ ಆರು ಕೋಟಿ ರೂಪಾಯಿ ಧರ್ಮಕಾರ್ಯಗಳಿಗೆ ಖರ್ಚಾಗುತ್ತಲಿದೆ ವಿಲಾಯತಿಯ ಜಮೀನ್ದಾರರು ಈ ಧರ್ಮಗಳನ್ನು ಮಾಡತಕ್ಕವರು ಈ ವಿಷಯದಲ್ಲಿ ಅವರಿಗೆ ಬರುವುದು ಬಹಳ ಸ್ವಲ್ಪವಾಗಿದೆ ಆದರೂ ಆ ಸ್ವಲ್ಪದರಲ್ಲೇ ಅವರು ದೇವಾಲಯಗಳನ್ನು ಹೊಸದಾಗಿ ಕಟ್ಟುವರು ಶಿಥಿಲವಾದವುಗಳನ್ನು ದುರಸ್ತುಮಾಡುವರು ಆಸ್ಪತ್ರೆಗಳಿಗೂ ಪರೋಪಕಾರವಾದ ಆಲಯಮಂದಿರಗಳಿಗೂ ಚಂದಾಕೊಡುವರು ತಮ್ಮ ಕರ್ತವ್ಯಗಳನ್ನು ತಮ್ಮ ಮನಸ್ಸಾಕ್ಷಿಗೆ ವಿರೋಧವಾಗದಂತೆ ನೆರವೇರಿಸುತ್ತಾರೆ ಆಟಪಾಟ ವಿನೋದಗಳನ್ನು ಅವರು ಉತ್ಸಾಹದಿಂದ ಪ್ರೋತ್ಸಾಹಿಸಿ ನಡಿಸುತ್ತಾರೆ ಇಷ್ಟೆಲ್ಲಾ ಮಾಡಿದಾಗ್ಯೂ ಅವರಲ್ಲಿ ಪ್ರತಿಫಲಾಪೇಕ್ಷೆಯೆಂಬುವುದೇ ಇಲ್ಲ ನಮ್ಮ ಕರ್ತವ್ಯವನ್ನು ಮಾಡುತ್ತೇವಲ್ಲದೆ ನಾವು ಮಾಡುವ ಕಾರ್ಯಗಳಾವುವೂ ವಿಶೇಷವಾದವುಗಳಲ್ಲವೆಂದು ಹೇಳುತ್ತಾರೆ ಎಂಬುದೇ

* * *

ವಿಲಾಯತಿ ರಾಜ್ಯದ ಹೌಸ್ ಆಫ್ ಕಾಮನ್ಸ್ ಸಭೆಯವರು ಇಂಗ್ಲಿಷ್ ರಾಜ್ಯದ ಬಡ್ಜೆಟ್ಟನ್ನು ಪ್ಯಾಸ್ ಮಾಡಿ ಹೌಸ್ ಆಫ್ ಲಾರ್ಡ್ಸ್ ಸಭೆಯವರಿಗೆ ಕಳುಹಿಸಿದರು ಅವರು ಅದನ್ನು ಚರ್ಚಿಸದೆ—ಈ ಬಡ್ಜೆಟ್ಟಿನ ವಿಚಾರವನ್ನು ಪ್ರಜೆಗಳೆಲ್ಲಾ ತಿಳಿದು ಅವರು ತಮ್ಮ ಅಭಿಮತವನ್ನು ಹೇಳುವ ತನಕ ನಾವು ಅದಕ್ಕೆ ಒಪ್ಪಿಕೊಳ್ಳುವುದು ನ್ಯಾಯವಲ್ಲ ಎಂಬೀ ರೀತಿ ಹೇಳುತ್ತಾರೆ ಪ್ರಜೆಗಳು ಹೌಸ್ ಆಫ್ ಕಾಮನ್ಸ್ ಮೆಂಬರುಗಳ ಅಭಿಮತಾನುಸಾರವಾಗಿರುವಂತೆ ಬಡ್ಜೆಟ್ಟನ್ನು ಒಪ್ಪಿಕೊಂಡರೆ ಈಗಿರುವ ಮಂತ್ರಿಗಳು ಮುಂದೆಯೂ ರಾಜ್ಯಭಾರ ಕಾರ್ಯಗಳನ್ನು ನಿರ್ವಹಿಸುತ್ತಾ ಬರುವರು ಪ್ರಜೆಗಳು ಈ ಬಡ್ಜೆಟ್ಟನ್ನು ಒಪ್ಪಿಕೊಳ್ಳದೆ ಹೋದರೆ ಪ್ರಜೆಗಳ ಇಷ್ಟಾನುವರ್ತಿಗಳಾದ ಹೊಸ ಮಂತ್ರಿಗಳು ಏರ್ಪಡುವರು ಅಂತೂ ಈಗ ಆ ಎರಡು ಸಭೆ ಮೆಂಬರುಗಳಿಗೂ ಬಡ್ಜೆಟ್ಟಿನ ವಿಚಾರದಲ್ಲಿ ಉಂಟಾಗಿರುವ ವಾಗ್ವಾದದಿಂದ ಮುಂದಿನ ಜನವರಿ ತಿಂಗಳಲ್ಲಿ ಪ್ರಜೆಗಳು ಹೊಸದಾಗಿ ಪಾರ್ಲಿಮೆಂಟಿನ ಮೆಂಬರುಗಳನ್ನು ಚುನಾವಣೆ ಮಾಡಬೇಕಾಗುವ ಸಂಭವ ಉಂಟಾದೀತೆಂದು ವರ್ತಮಾನವಿದೆ ಈಗಿರುವ ಮಂತ್ರಿ ಸಭೆಯವರು ಜನವರಿಯಲ್ಲಿ ಆಗ ಚುನಾವಣೆಯಾದರೂ ಕೂಡ ಪ್ರಜೆಗಳು ತಮ್ಮ ಪಕ್ಷದ ಪ್ರತಿನಿಧಿಗಳನ್ನೇ ಚುನಾಯಿಸುತ್ತಾರೆಂಬುದಾಗಿ [illegible] ಈ ಬಡ್ಜೆಟ್ಟಿನ ವಿಷಯದಲ್ಲಿ ಕಳೆದ ಏಪ್ರಿಲ್ ತಿಂಗಳಿಂದಲೂ ವಾಗ್ವಾದಗಳು ನಡೆಯುತ್ತಲೇ ಇರುವವು

Printed and Published by the Rev H GULLIFORD Proprietor and Manager Wesleyan Mission Press, Mysore 25 11 1909

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾರೀಖು ೨ ನೇ ಗುರುವಾರ. ಸಂಚಿಕೆ ೨೨

ದೀಪಾವಳಿಗೆರಡು ಬಹುಮಾನ.

75 5

ಈ ಕೆಳಗೆ ವಿವರಿಸಿದ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಿಮೆಯಿಲ್ಲದೆ ಪುಸ್ತಕಗಳನ್ನು ಕೊಂಡುಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ಡಿಸೆಂಬರ್ ಆಖೈರ್‌ವರೆಗೆ ಮಾತ್ರ ವಿ ಪಿ ಛಾರ್ಜು ಅಲಾಹಿದಾ

ನಿರುಪಮಾ — ಹೊಸ ನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಹೆಂಡಕುಡುಕರ ಅವ್ಯವಸ್ಥೆ, ಕಳ್ಳರ ಪರಿಣಾಮ ಇವುಗಳನ್ನು ತೋರ್ಪಡಿಸಿ ತಿದ್ದುವುದು ಅಂದವಾದ ಮುದ್ರಣ ಸೊಗಸಾದ ದಪ್ಪ ಕಾಗದ ಕ್ರಯ ರೂ ೦ ೧೨ ೦

ಉತ್ಪಲಕುಮಾರಿ — ಇದೊಂದು ಹೊಸ ನಾಟಕ ಪಾರಸೀ ನಾಟಕಗಳನ್ನು ಹೋಲುವುದು ಶೃಂಗಾರರಸವೂ ದುಃಖರಸವೂ ಇದರಲ್ಲಿ ಪ್ರಾಮುಖ್ಯವನ್ನು ಹೊಂದಿರುವುವು ಸತ್ಸಂಗದುಸ್ಸಂಗಗಳ ತಾರತಮ್ಯವನ್ನು ಬೋಧಿಸುವ ಈ ಪುಸ್ತಕದ ಬೆಲೆ ರೂ ೦ ೮ ೦

ಪತ್ನೀಹಿತಸೂಚನಿ — (ವೀರೇಶಲಿಂಗಂಪಂತಲುಯವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ಋತುಸ್ನಾತೆಯಾಗುವ ಮೊದಲ್ಗೊಂಡು ಗರ್ಭಿಣಿಯ ಸ್ಥಿತಿ, ಪ್ರಸವಾವಸ್ಥೆ, ಬಾಣಂತಿತನ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅವುಗಳ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳು ಉಳಿದಿವೆ ಕ್ರಯ ರೂ ೦ ೧೨ ೦

ಸಂಗೀತಪಾರಿಜಾತ — ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು, ಆರತಿಯೆತ್ತುವ ಹಾಡು, ಬೀಗರಹಾಡು, ಬಾಗಿಲುತೆರೆಯುವಹಾಡು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ "ಬಾಲಿಕಾಗೀತವಲ್ಲರಿ"ಯ ಮಟ್ಟುಗಳನ್ನೇ ಅನುಸರಿಸಿರುವುದು ಕ್ರಯ ರೂ ೦ ४ ೦

ಇದಲ್ಲದೆ "ಹಾಸ್ಯಸಂಜೀವಿನಿ" ಎಂಬ ನಾಲ್ಕು ನಕಲಿಯನ್ನುಳ್ಳ ಪುಸ್ತಕ (೦ ४ ೦), "ಅಸಹಾಯಶೂರಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ (೦ ೨ ೬), "ಸತ್ಯಸಂಜೀವನಿ" ಎಂಬ ಸೊಗಸಾದ ಕಲ್ಪಿತಕಥೆ (೦ ೬ ೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ಣಾಟಕಚಂದ್ರಿಕೆ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

28 48

ಎಂ ಎಸ್ ಕುಮಾರಯ್ಯನವರ ದಿವ್ಯೌಷಧಗಳು

ಸಂಜೀವಿನೀ ಬಿಂದು — ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳೂ, ಚಳಿಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ನರಾಂತರಿಂದ ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ — ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖ್ಯಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ — ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಬನೇತ್ರ ಬಿಂದು — ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೇಧಾಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಾವರಿ ಅತ್ತರುಗಳೂ ಗಂಧದಬಳ್ಳಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ರಿಬ್ಬನ್ ಟಿಕೆಟ್ಟು ಬರೆಯಿರಿ

ವಿ ಕೆ ಸ್ವಾಮಿ,
ಪ್ರೊಪ್ರೈಟರ್

ಸುಗಂಧಗಳು.

77-3

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫, ೩, ೨ ೮ ೦, ೧ ೪ ೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಭೀಮಮಹಿಮಾದರ್ಶ.

72-7

ಸಮಸ್ತರೂ ಆದರ ಮಮತೆಯಿಂದ ಓದಿ ತಿಳಿದುಕೊಳ್ಳಲು ಅರ್ಹವಾಗಿರುವ ಭೀಮಸೇನನ ಜೀವಿತ ಚರಿತ್ರೆಯು ಮಹಾಭಾರತ ಕಥಾಸಾರ ಸಂಗ್ರಹದೊಡನೆ ಹೊಸ ಕನ್ನಡದ ಸುಲಭ ಶೈಲಿಯಲ್ಲಿ ರಚಿತವಾಗಿ, ಈಗತಾನೆ ಲೋಕಕ್ಕೆಲ್ಲ ಹರಡುತಿರುವುದು ಮನಸ್ಸು ಕರಗುವಂತೆ ವರ್ಣಿತವಾಗಿರುವ ಈ ಪುಸ್ತಕವನ್ನು ಸಂಗ್ರಹಿಸಿಟ್ಟರೆ, ಭಾರತ ಚರಿತ್ರೆಯ ಪೂರ್ವೋತ್ತರವೆಲ್ಲ ಸಂಕ್ಷೇಪವಾಗಿ ತಿಳಿಯುವುದಕ್ಕೂ, ವಾಯುಪುತ್ರನಾದ ಭೀಮನ ಸಾಹಸಪ್ರದರ್ಶಕಗಳಾದ ಅನೇಕ ಉಪಾಖ್ಯಾನಗಳನ್ನೋದಿ ಆನಂದಿಸುವುದಕ್ಕೂ ಸಹಕಾರಿಯಾಗಿರುವುದು ಇದರಲ್ಲಿರುವ ಹನುಮದ್ಭೀಮ ಸಂವಾದವೇ ಮುಂತಾದ ನೀತಿಬೋಧಕಗಳಾದ ಸಂಗತಿಗಳನ್ನೆಲ್ಲ ಓದಿದರೆ, ಸೋಮಾರಿತನವೂ ದುಃಖವೂ ಅಡಗಿ, ಧೈರ್ಯವೇ ಸರ್ವತ್ರ ಸಾಧನವೆಂಬುದು ದೃಢಪಟ್ಟು, ಲೋಕ ವ್ಯವಹಾರ ಜ್ಞಾನವುಂಟಾಗುವುದು ಡೆಮ್ಮಿ 172 ಪುಟಗಳುಳ್ಳ ಈ ಸದ್ಗ್ರಂಥವನ್ನು ಸಜ್ಜನರು ಉಪೇಕ್ಷಿಸದೆ ತರಿಸಿ ಓದಿದರೆ ಆಗ ನಮ್ಮ ಪೂರ್ವಿಕರ ಚರಿತ್ರೆಯು ಮುಖ್ಯ ಸಂಗತಿಗಳು ಹೃದಯಾರೂಢವಾಗಿ ಆನಂದವಾಗುವುದು ಇದರ ಬೆಲೆ ಪ್ರತಿ 1 ಕ್ಕೆ 10 ಆಣೆ ವಿ ಪಿ ಮೂಲಕ 12 ಆಣೆ ಆಂಗ್ಲೇಯ ಚರಿತ್ರಸಂಗ್ರಹ 8 ಆಣೆ ಚಾಮರಾಜೇಂದ್ರ ರಾಜ್ಯವಿಲಾಸ 12 ಆಣೆ

ವಿಳಾಸ —ವೇ|| ಎಂ ವಿ ಚಂದ್ರಶೇಖರ ಶಾಸ್ತ್ರಿಗಳು,
ದೇವೀರಮ್ಮಣ್ಣಿ ಅಗ್ರಹಾರ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 47

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 28

ತಲೆನೋವು, ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷದವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ವಜಾ ಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುವರು ಮುಖ್ಯ ಏಜಂಟರ ವಿಳಾಸ— ಜಿ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್,
೩೩, ವೇದಮುಲಪಿಳ್ಳೆ ಬೀದಿ, ಪೆರಿಯಮೇಡು, ಮದರಾಸ್.

ನೋಟಿಫಿಕೇಷನ್.

80-3

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನು ೬ ೧೨ ೦೯ ರ ಲಾಗಾಯಿತು ಮಾಗಡಿ ತಾಲ್ಲೋಕು 'ಬಗನಗೆರೆ' ಕಾವಲಿನಲ್ಲಿಯೂ (ಅಂದರೆ, ಬೆಂಗಳೂರು—ಕುಣಿಗಲ್ ರಸ್ತೆಯ ೩೮ ನೇ ಮೈಲಿಯ ಸಮೀಪ) ಮತ್ತು ೧೬-೧೨-೦೯ ರ ಲಾಗಾಯಿತು ಅರಸೀಕೆರೆ ತಾಲ್ಲೋಕು "ಗಂಡಸಿ" ಬಂಗ್ಲಾ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ ಇಷ್ಟವುಳ್ಳವರು ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನು ಪಡೆಯಬಹುದು

ಕ್ಯಾಂಪ್-ಮೈಸೂರು, ಎಚ್ ನಂಜುಂಡರಾಜೇ ಅರಸ್,
ತಾ ೧೪ ೧೧ ೦೯ ಸೂಪರಿಂಟೆಂಡೆಂಟ್, ಅಮೃತಮಹಲ್, ಇಲಾಖಾ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) ರೂ ೧—೦—೦
ಪರಸ ಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦
" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಕಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ಸಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 48

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಕಳುಹಿಸುತ್ತಿರುವ ಟೋಪಿಗಳ ದಾರವೆಲ್ಲಾ ಬೇಗಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ .

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ
೧ ರೂ ೬ ಆ , ೧ ರೂ ೪ ಆ
ಜುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧-೧೨
ರೇಷ್ಮೆ ಜುಕ್ಕಿಯುಳ್ಳ ಟೋಪಿಗಳು ರೂ ೨
ನಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ
ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೈಗವಸು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 42

೧ ಲೋಕಾಮೃತಂ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೆಂಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಹಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ, ಔಷಧದ ಸಂಗಡಲೇ ಇರುತ್ತದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ.—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಡೆಯಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿರುಸಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು, ನಿದ್ರಾಭಂಗ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಜಿನುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವಿದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67-14]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨ ೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಸಿ ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 40,

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಜಖಮು, ಇತ್ಯಾದಿ

ಇದರ ವಿವರವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬ ೦ ೧೨ ಡಬ್ಬಿಗಳಿಗೆ ೪-೦-೦

ಆಸ್ಮಾಮಿಶ್ರಣ	೨ ೦-೦
ಬೇಳುಕಡತದ ಮದ್ದು	೦ ೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦-೦
ಸುಂದರೀ ತೈಲ—ಮುದ್ದಾಗಳಿಗೆ	೦ ೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಖಜ್ಜಿ ಮುಲಾಮು—ಮಕ್ಕಳ ಖಜ್ಜಿಗೆ	೦ ೩ ೦
ಕೇಶವರ್ಧನೀ ತೈಲ—ತಲೆಯ ಮೆದುಳಿಗೆ	೧ ೦-೦
ಕಫನಾಶಕ ಚೂರ್ಣ—ಆಸ್ಮಾ ರೋಗಕ್ಕೆ	೦ ೮-೦

ದಯಮಾಡಿ ಕ್ಯಾಟಲಾಗಿಗೆ ಬರಿಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರಸ್ಸು —"ಅಮೃತಾಂಜನ," ಮುಂಬಯಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

4 48



ಬೆನ್ನೆಲುಬಿನ ನೋವು, ಪಕ್ಕೆಗಳಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳ್ಳ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದಿನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪುಸ್ತಕಗಳು

70 11

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮ ೦ ಇಂಗ್ಲಿಷ್ ಭಾಷೆಯನ್ನು ಓದಲೂ, ಬರಿಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧ ೨ ತಿಂಗಳೊಳಗಾಗಿ ತಿಳಿಸಿ ತಾನಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧ ೮-೦

ಪಿ ರಾಮಾಚಾರ್ಯ ವಿಳಾಸ —ಟಿ ಕೆ ಮೂರ್ತಿ ಕಂಪೆನಿ
ನಂ ೧೮ ಒಂದನೆ ಬೀದಿ ಸಿದ್ದಿಕಟ್ಟೆ ಲಕ್ಷ್ಮೂರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳ ಉಳಿದಿವೆಯಾದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾವಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೮—೦

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಷ್ಮೂರ್ ಪೋಸ್ಟ್

ಜ್ವರಹರಿ

18 44



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಬಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೧೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೯—೯ ರೂ ರೂ ೨—೧೨ ೮ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮುಫತಾಗಿ ಬಿಡಲಾಗುವದು

ಬಿಮಂಕಪೂರ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಪರಿಹರಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು " ಜ್ವರಹರಿ " ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂಕರ್ಪೂರವನ್ನು ನಾನೂ ನನ್ನ ಹಾಟೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಂತ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಸೆ ೧೮೯೬ ರಿಂದ ೧೯೦೬ ವರೆಗೆ ಕಾಲದ ಪರೀಕ್ಷೆ ।

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6 48

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು , ನಾನಾ ತರದ ಕೆಮ್ಮುಲು
ಸಕಲವಿಧ ಕ್ಷಿತ್ವಗಳು , ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ

ಇವಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(106 ಪುಟಗಳು, ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಒದುಕಿದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುವರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳೆ) ಪ್ರತಿಯೊಂದಕ್ಕೆ	0—0—6
(80 ಹಾಳೆ)	0—1—0
(160 ಹಾಳೆ)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-48]

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

22—10—1909 ರಿಂದ 28—10—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	3	2	0	0
ಮೈಸೂರು ,,	133	109	0	0
ಬೆಂಗಳೂರು ಡಿಸ್ಟ್ರಿಕ್ಟು	*	*	*	*
ಮೈಸೂರು ,,	23	17	14	8
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	8	10	0	0
ಶಿವಮೊಗ್ಗ ,,	0	0	0	0
ಜುಮ್ಲಾ	168	138	15	9

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಕಾರ್ತಿಕ ಬಹುಳ ಷಷ್ಠಿ ಶುಕ್ರವಾರದಿಂದ ಕಾರ್ತೀಕ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಸೌರ ವೃಶ್ಚಿಕ ಮಾಸ
3	ಶುಕ್ರ *	ಷಷ್ಠಿ	7-46	ಪು	9-30	18
4	ಶನಿವಾ	ಸಪ್ತಮಿ	10-3	ಪು	12-58	19
5	ರವಿವಾ §	ಅಷ್ಟಮಿ	14-22	ಪ್ಪು	17-56	20
6	ಚಂದ್ರ .	ನವಮಿ	17-50	ಉ	23-30	21
7	ಕುಜ †	ದಶಮಿ	21-3	ಹ	9-48	22
8	ಬುಧ ,	ಏಕಾದಶಿ	28-22	ಚಿ	36-20	23
9	ಗುರು	ದ್ವಾದಶಿ	33-20	ಸ್ವಾ	42-12	24

* ವ್ಯತಿಪಾತಯೋಗ

§ ನವಮೀತಿಥಿ.

ಶೂನ್ಯತಿಥಿ, ಕಾರ್ತೀಕ ಸೋಮವಾರ

† ದಶಮೀತಿಥಿ.

,, ಸರ್ವತ್ರ ಏಕಾದಶಿ.

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ ರೂ	೧೪-೨-೦	೧೪-೦-೦
ಕೆಂಬೂತಿ ಅಕ್ಕಿ ಅವಲ್ ...	೧೪-೮-೦	೧೩-೮-೦
,, ದುಯಂ ...	೧೪-೦-೦	೧೩-೦-೦
ಕಾಡ್ರಾಣಿ ಅಕ್ಕಿ ...	೧೪-೦-೦	೧೪-೦-೦
ಸಣ್ಣಕ್ಕಿ ಅವಲ್ ...	೧೬-೨-೦	೧೬-೦-೦
,, ದುಯಂ ...	೧೫-೫-೦	೧೫-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ ...	೧೨-೦-೦	೧೫-೦-೦
,, ದುಯಂ ...	೧೪-೫-೦	೧೪-೮-೦
ಕ್ಯೆಹ್ ರಾಗಿ ಪಲ್ಲ ೧ಕ್ಕೆ ...	೯-೨-೦	೮-೮-೦
ಕಾರ್ರಾಗಿ ...	೫-೧೨-೦	೮-೦-೦
ಜೋಳ ...	೭-೧೨-೦	೮-೦-೦
ಹಲಸಂದೆ ಪಲ್ಲ ೧ಕ್ಕೆ ...	೧೧-೦-೦	೧೧-೦-೦
ಬೀ ಅವರೆ ...	೧೪-೦-೦	೧೪-೮-೦
ಹೆಸರು ...	೧೨-೦-೦	೧೦-೮-೦
ಉದ್ದು ...	೧೪-೪-೦	೧೧-೮-೦
ಕಡಲೆ ...	೧೪-೪-೦	೧೦-೦-೦
ಎಳ್ಳು ಸೇ. ೧೨೭ ಕ್ಕೆ ...	೧೫-೦-೦	೧೪-೦-೦
ಹುರುಳಿ ...	೧೨-೫-೦	೧೧-೧೨-೦
ಹರಳು ೧೨೭ ಸೇರಿಗೆ ...	೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ ...	೨-೮-೦	೧-೧೪-೦
ಮೆಣಸಿನಕಾಯಿ ...	೬-೦-೦	೩-೮-೦
,, ದುಯಂ ...	೫-೫-೦	೩-೦-೦
ಬೆಲ್ಲ ದೊಡ್ಡ ಅಚ್ಚು ...	೮-೫-೦	ಮ ೩-೦-೦
ಒಳ್ಳೆಣ್ಣೆ ಮಣ ೧ಕ್ಕೆ ...	೪-೫-೦	೪-೪-೦
ಹರಳೆಣ್ಣೆ ,, ...	೫-೫-೦	೪-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ ...	೯-೦-೦	೯-೦-೦
ಉಪ್ಪು ,, ...	೬-೫-೦	೫-೧೨-೦
ಹುಣಸೇ ಹಣ್ಣು ...	೧-೧೨-೦	೧-೧೨-೦
,, ಹಳೇದು ...	೧-೫-೦	೧-೮-೦
ತುಪ್ಪ ಮಣ ೧ಕ್ಕೆ ...	೧೬-೮-೦	೧೩-೫-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ...	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ ...	೫-೦-೦	೫-೦-೦
ಅಳಲೇಕಾಯಿ ಮಣ ೧ಕ್ಕೆ ...	೧-೦-೦	೦-೧೨-೦
ಅಂಟುವಾಳದ ಕಾಯಿ ಮಣ ೧ಕ್ಕೆ ...	೧-೦-೦	೦-೧೨-೦
ಚಿನ್ನ (ಪೌನ್) ಕೆಂಪು ...	೧೫-೯-೦	೧೫-೬-೦
,, ,, ಪಸಿಮೆ ...	೧೬-೦-೦	೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ ...	೨೪-೫-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ...	೬೭-೪-೦	೬೩-೦-೦

ತೆಂಗಿನ ಗಿಡದ ರೋಗವೂ ಪರಿಹಾರವೂ.

ಈಚಿಗೆ ಕೆಲವು ವರುಷಗಳಿಂದ ನಮ್ಮ ಸೀಮೆಯಲ್ಲಿ ತೆಂಗಿನ ಮರಗಳಿಗೆ ಒಂದು ವಿಧವಾದ ರೋಗ ತಗಲಿ ವಿಶೇಷ ನಷ್ಟವಾಗುತ್ತಾ ಇದೆ ಈ ರೋಗದಿಂದ ಮರಗಳಲ್ಲಿ ಫಲಬಿಡುವುದು ಕಾಲಕ್ರಮೇಣ ಕಡಮೆಯಾಗುತ್ತಾ ಬಂದಿದೆ. ಕೆಲವು ತೋಟಗಳಲ್ಲಿ ಹಿಂದೆ ನೂರು ಕಾಯಿಗಳು ಬಿಡುತ್ತಿದ್ದ ಮರಗಳು ಈಗ ಇಪ್ಪತ್ತು ಕಾಯಿಗಳು ಬಿಡುವುದೂ ಕಷ್ಟವಾಗಿದೆ. ಇನ್ನೂ ಕೆಲವಲ್ಲಿ ಫಲಬಿಡುವುದೇ ನಿಂತುಹೋಗಿದೆ. ರೋಗ ತಗಲಿದ ಕೆಲವು ಅಥವಾ ಎಲ್ಲಾ ಗರಿಗಳೂ ನೀರು ಸಾಲದಿದ್ದರೆ ಹೇಗೋ ಹಾಗೆ ಹಳದೀ ಬಣ್ಣಕ್ಕೆ ತಿರುಗುವವು. ಅನಂತರ ಅವುಗಳ ತುದಿಗಳು ಒಣಗಿ ಜೋಲುಬೀಳುವುದಲ್ಲದೆ ಮಟ್ಟೆಗಳೂ ಕೂಡ ಬೊಗ್ಗಿಕಿತ್ತರೆ ಅತಿ ಸುಲಭವಾಗಿ ಕೈಗೆ ಬಂದುಬಿಡುತ್ತವೆ ಒಂದೆರಡು ವರುಷಗಳಲ್ಲಿ ಗರಿಗಳೆಲ್ಲಾ ಹಳದಿ ಬಣ್ಣಕ್ಕೆ ತಿರುಗುವವು. ತರುವಾಯ ಗೊನೆಗಳಿಗೆ ಕಾಯಿಲೆ ತಗಲುವುದು ಮೊದಲುಮೊದಲು ಕಾಯಿಗಳು ಸರಿಯಾಗಿ ಬಲಿಯದೆ ಕುರುಬೆಯಾಗಿರುವಾಗಲೇ ಉದುರಿಹೋಗುವವು. ಕಾಯಿಗಳು ಬಿಡುವುದು ವರುಷ ವರುಷಕ್ಕೂ ಕಡಮೆಯಾಗುತ್ತಾ ನಾಲ್ಕೈದು ವರುಷಗಳಾದ ಮೇಲೆ ಸ್ವಲ್ಪವೂ ಕಾಯಿ ಬಿಡದೇನೇ ಹೋಗುವುದು ಕೆಲವು ವೇಳೆ ಹೊಂಬಾಳೆಗಳೇ ಬಿಡುವುದಿಲ್ಲ; ಬಿಟ್ಟರೂ ಒಳ್ಳೇ ಕಾಯಿಗಳು ಕಟ್ಟುವುದಿಲ್ಲ. ರೋಗದ ಮರಗಳಲ್ಲಿ ಬಿಡುವ ಕಾಯಿಗಳು ಅಷ್ಟು ಚನ್ನಾಗಿಯೂ ಇರುವದಿಲ್ಲ; ಕೊಬ್ಬರಿ ಮೆತುವಾಗಿರುವದಿಲ್ಲ, ಎಣ್ಣೆಯು ಬಹಳ ಕಡಮೆಯಾಗುತ್ತದೆ ಅವುಗಳಲ್ಲಿ ಎಳನೀರು ಅತಿ ಸ್ವಲ್ಪವಾಗಿಯೂ ರುಚಿಯಿಲ್ಲದ್ದಾಗಿಯೂ ಇರುವುದು ಕ್ರಮೇಣ ಮರವು ದುರ್ಬಲವಾದಹಾಗೆಲ್ಲ ಹೊಸದಾಗಿ ಹುಟ್ಟುವ ಗರಿಗಳು ಆರೋಗ್ಯವಾದ ಮರಗಳ ಗರಿಗಳಿಗಿಂತ ಚಿಕ್ಕವಾಗುತ್ತವೆ. ನಡುವೆ ಹೊರಡುವ ಸುಳಿಯು ಚಿಕ್ಕದಾಗಿಯೂ ಹಳದಿ ಬಣ್ಣವಾಗಿಯೂ ಇರುತ್ತದೆ, ಅಥವಾ ಶುದ್ಧಾಂಗವಾಗಿ ಒಣಗಿ ಹೋಗುವುದೂ ಉಂಟು. ರೋಗ ತಗಲಿದ ಮರಗಳು ೫ ಅಥವಾ ೧೦ ವರುಷಗಳ ತರುವಾಯ ಪೂರಾ ಒಣಗಿ, ಮಟ್ಟೆಗಳೆಲ್ಲಾ ಉದುರಿಬಿದ್ದು ಬೋಳಾಗಿ ನಿಲ್ಲಬಹುದು. ಈ ರೋಗದಲ್ಲಿ ಒಂದು ಬೂಜುಸಂಬಂಧವಾದ ಸಸ್ಯಾಣುವು ಭೂಮಿಯಲ್ಲಿದ್ದು, ಮರಗಳ ಬೇರುಗಳಿಗೆ ವ್ಯಾಪಿಸಿ, ಅವುಗಳನ್ನು ಕೊಳೆಯುವಂತೆ ಮಾಡುತ್ತವೆ. ಈ ಸಸ್ಯಾಣುಗಳು ಭೂಮಿಯಲ್ಲೇ ಉತ್ಪತ್ತಿಯಾಗಿ ಅಲ್ಲೇ ವೃದ್ಧಿಹೊಂದಿ ಸಾವಕಾಶವಾಗಿ ಸ್ಥಳದಿಂದ ಸ್ಥಳಕ್ಕೆ ಹರಡುವವು ರೋಗತಗಲಿರುವ ತೋಟದಿಂದ ಸ್ವಲ್ಪ ಮಣ್ಣನ್ನು ರೋಗವಿಲ್ಲದ ತೋಟಕ್ಕೆ ಒಯ್ಯುವುದರಿಂದ ಸಸ್ಯಾಣುವು ಮಣ್ಣಿನ ದ್ವಾರ, ತತ್ಕ್ಷಣ ಇದರಲ್ಲಿ ತೆಂಗಿನ ಬೇರುಗಳು ಇದ್ದರೆ, ರೋಗವಿಲ್ಲದಿರುವ ತೋಟಕ್ಕೆ ವ್ಯಾಪಿಸಿ ಆರೋಗ್ಯವಾದ ಮರಗಳಿಗೆ ತಕ್ಷಣವೇ ತಗಲಬಹುದು ಆದಕಾರಣ ಹೀಗೆ ರೋಗ ತಗಲಿದ ತೋಟದಿಂದ ಮಣ್ಣನ್ನೇ ಆಗಲಿ ಬೇರುಗಳನ್ನೇ ಆಗಲಿ ಇತರ ತೋಟಗಳಿಗೆ ತೆಗೆದುಕೊಂಡು ಹೋಗಿ ಹಾಕದಂತೆ ನೋಡಿಕೊಳ್ಳಬೇಕು. ಸಸ್ಯಾಣುಗಳನ್ನು ಕೊಲ್ಲಬೇಕಾದರೆ ಮರಗಳಲ್ಲಿ ರೋಗ ಕಾಣಿಸಿದ ಕೂಡಲೆ ಬೇರುಗಳನ್ನು ಅಗೆದು ಸುಟ್ಟುಬಿಡುವುದೊಂದೇ ಉಪಾಯ. ಈ ಭಾಗದಲ್ಲಿ ರೈತರು ವಿಶೇಷ ಗಮನ ಕೊಡಬೇಕು. ರೋಗ ಕಂಡ ಕೂಡಲೆ ಚಿಕಿತ್ಸೆಯನ್ನು ಮಾಡದೆ ಸ್ವಲ್ಪ ಕಾಲ ಹಾಗೆಯೇ ಬಿಟ್ಟದ್ದರೆ ಸಸ್ಯಾಣುಗಳು ಭೂಮಿಯಲ್ಲೇ ಸೇರಿಕೊಂಡಿದ್ದು ವೃದ್ಧಿಹೊಂದಿ ಸಮೀಪದಲ್ಲಿರುವ ಇತರ ಮರಗಳಿಗೂ ವ್ಯಾಪಿಸುವವು ರೋಗದ ಮರಗಳನ್ನು ಅಗೆದು ಹಾಕುವುದರಿಂದ ತಾಲೀಕನಿಗೆ ಕೆಲವು ಕಾಯಿಗಳು ನಷ್ಟವಾದರೂ ಚಿಂತೆಯಿಲ್ಲ, ರೋಗ ತಲೆದೋರಿದ ಕೂಡಲೆ ಬೇರುಗಳನ್ನು ಅಗೆದು ಸುಟ್ಟುಬಿಡಬೇಕು. ಇದರಿಂದ ಇತರ ಆರೋಗ್ಯವಾದ ಮರಗಳು ಉಳಿದುಕೊಳ್ಳುವವು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್‌ಪಾಂಡೆನ್ಸ್.

ಬಂದೂಕಿನ ಲೈಸೆನ್ಸು.

ಆಯ್ಯಾ,

೧೯೦೪ ನೇ ಇಸವಿಯಲ್ಲಿ ನನ್ನ ತಂದೆ ರಾಮೇಗೌಡನ ಹೆಸರಿಗೆ ಲೈಸೆನ್ಸು ಮಂಜೂರಾಗಿ ಇದ್ದ ಒಂದು ಲಾಳದ ಕೇಪಿನ ಬಂದೂಕನ್ನು ೧೯೦೭ ರಲ್ಲಿ ಕಾಮಸಂದ್ರದ ಪೋಲೀಸ್ ಸ್ಟೇಷನ್ ಆಫೀಸರು ನನ್ನಲ್ಲಿ ಇದ್ದ ಬಂದೂಕನ್ನು ಅಮಾನತ್ ಪಡಿಸಿಕೊಂಡು ಇರುತ್ತಾರೆ ಸದರೀ ಬಂದೂಕು ಅಮಾನತ್ ಪಡಿಸುವಾಗ್ಗೆ ನನ್ನ ತಂದೆಯು ಮೃತಪಟ್ಟು ಇದ್ದರು ಮೇಲ್ಕಂಡ ವಿಚಾರದಲ್ಲಿ ಅಮಲ್ದಾರರಿಗೆ ಅರಿಕೆ ಮಾಡಿಕೊಂಡಿದ್ದರೆ ಮೇಲೆ ಲೈಸೆನ್ಸು ಪಡೆದು ಬಂದೂಕನ್ನು ವಾಪಸು ತೆಗೆದುಕೊಳ್ಳಬಹುದೆಂದು ಅಪ್ಪಣೆ ಆಯಿತು ನಾನು ಲೈಸೆನ್ಸನ್ನು ಪಡೆಯಬಹುದಾದ ಕಾರಣ ತಾಲ್ಲೂಕಿನಲ್ಲಿಯೂ ಡೆಪ್ಯುಟಿ ಕಮೀಷನರ್ ಸಾಹೇಬರವರ ಸಮಕ್ಷಮವೂ ಅರ್ಜಿಗಳು ಗುಜರಾಯಿಸಿಕೊಂಡದ್ದರ ಮೇಲೆ ಅಮಲ್ದಾರರು ಸರ್ಟಿಫಿಕೇಟು ಕೊಡಿಸಿಕೊಡುವದಾಗಿ ಅಪ್ಪಣೆ ಕೊಟ್ಟರು. ಈ ತಹಲ್ ವರಿವಿಗೂ ಯಾವದೊಂದೂ ಅಪ್ಪಣೆ ಆಗಲಿಲ್ಲ ನನಗೆ ವಾಮಲೂರ್ ನಿಂದ ಇಪತಕ್ಕ ಗ್ರಾಮಗಳಿಗೆ ಖಾಯಂ ಪಟೇಲನಾಗಿ ಇರುತ್ತೇನೆಯಾಗಿ ಆತ್ಮಸಂರಕ್ಷಣಾರ್ಥವಾಗಿ ನನ್ನ ಪ್ರಾರ್ಥನೆ ಸರ್ಕಾರದವರು ಚಿತ್ತಕ್ಕೆ ತಂದು ನನ್ನ ಹೆಸರಿಗೆ ಸರ್ಟಿಫಿಕೇಟು ಕೊಡಿಸಿಕೊಡಬೇಕಲ್ಲದೆ ಸ್ಟೇಷನ್ ಆಫೀಸರು ಅಮಾನತ್ ಮಾಡಿರತಕ್ಕ ಪಿತರಾರ್ಜಿತದ ಬಂದೂಕನ್ನು ವಾಪಸು ಕೊಡಿಸಿಕೊಡುವರೆಂದು ಪ್ರಾರ್ಥಿಸುತ್ತೇನೆ.

ಪಟೇಲ್ ವೆಂಕಟಸ್ವಾಮಿಗೌಡ.

"ಕಿಂಡರ್‌ಗಾರ್ಟನ್ ಕಥೆಗಳು" ಎಂಬ ಪುಸ್ತಕವು.

ಆಯ್ಯಾ,

ನಿಮ್ಮ ೨೮—೧೦—೦೯ ನೇ ದಿವಸದ ಪತ್ರಿಕೆಯಲ್ಲಿ "ಕಿಂಡರ್‌ಗಾರ್ಟನ್ ಕಥೆಗಳು" ಎಂಬ ಪುಸ್ತಕದ ವಿಷಯದಲ್ಲಿ ನೀವು ಬರೆದಿರುವ ಅಭಿಪ್ರಾಯವನ್ನು ಕುರಿತು ಸ್ವಲ್ಪ ಮಟ್ಟಿಗೆ ವಿವರಿಸಲು ದಯವಿಟ್ಟು ಅವಕಾಶವನ್ನು ಕೊಡುವಿರೆಂದು ನಂಬಿರುತ್ತೇನೆ.

"ಈ ಪುಸ್ತಕಕ್ಕೆ ಕಿಂಡರ್‌ಗಾರ್ಟನ್ ಕಥೆಗಳು ಎಂಬ ಹೆಸರನ್ನು ವಿಕ್ಟೋರಿಯ ಕಾಣೆ" ಎಂದೂ, "ಕಿಂಡರ್‌ಗಾರ್ಟನ್ ಎಂಬುದು ಬಾಲಶಿಕ್ಷಾ ಪದ್ಧತಿ" ಎಂದೂ ಬರೆದಿರುವಿರಷ್ಟೆ. ಆದರೆ ಕಿಂಡರ್‌ಗಾರ್ಟನ್ ಎಂಬುದಕ್ಕೆ ಅಷ್ಟೇ ಅರ್ಥವಿವರಣೆ ಸಾಲದಾದರೂ ಸ್ಥೂಲವಾಗಿ ನೋಡಿದರೆ ನೀವು ಬರೆದಿರುವಷ್ಟನ್ನೇ ಒಪ್ಪಿದರೂ ಬಾಧಕವಿಲ್ಲ. ಅದು ಹಾಗಿರಲಿ. ಅಂತು ಮೇಲ್ಕಂಡ ಶಿಕ್ಷಣಾಕ್ರಮದಲ್ಲಿ ಕಥೆಗಳು ಅತ್ಯಂತ ಸಹಾಯಕಗಳಾದುದರಿಂದ ಅಂತಹ ಕಥೆಗಳ ಪುಸ್ತಕಕ್ಕೆ "ಕಿಂಡರ್‌ಗಾರ್ಟನ್ ಕಥೆಗಳು" ಎಂಬ ಹೆಸರನ್ನಿಟ್ಟಿದೆ ಮತ್ತು ಈ ಹೆಸರನ್ನಿಡುವುದರಲ್ಲಿ ಕಿಂಡರ್‌ಗಾರ್ಟನ್‌ನಲ್ಲಿಯೇ ಪೂರ್ಣಾನುಭವಶಾಲಿಗಳಾದ ದೊಡ್ಡ ದೊಡ್ಡ ವಿದ್ವಾಂಸರ ಸಲಹೆಯನ್ನೂ ಪಡೆದಿದೆ ಇಷ್ಟು ಮಾತ್ರವೇ ಅಲ್ಲ. ಕಿಂಡರ್‌ಗಾರ್ಟನ್ ವಿಷಯದಲ್ಲಿ ಜಗತ್ಪ್ರಸಿದ್ಧರಾದ ಮಿಸ್ ಲ್ಯಾಟಿಸ್ರವರ ಹೊಸ ಪದ್ಧತಿಯಂತೆ ಈಗ ನಮ್ಮ ಸ್ಕೂಲುಗಳಲ್ಲಿ ಮಕ್ಕಳು ಒಂದು ಪ್ರಾಣಿ, ಸಸ್ಯ ಅಥವಾ ಮತ್ತೆ ಯಾವುದಾದರೊಂದು ಪ್ರಕೃತಿ ವಸ್ತುವನ್ನು ನಿತ್ಯವೂ ಅದರ ಎಲ್ಲಾ ಅವಸ್ಥೆಗಳಲ್ಲಿಯೂ ಪರೀಕ್ಷಿಸುತ್ತಾ ಬರುವರು. ಅದಕ್ಕೆ ಪ್ರಕೃತಿ ವಿಮರ್ಶೆ ಎಂದು ಹೆಸರು. ಉಪಾಧ್ಯಾಯರು ಇತರ ಪಾಠಗಳನ್ನು ಅದಕ್ಕೆ ಹೊಂದಿಸಿಕೊಂಡು, ಆಯಾ ಪ್ರಕೃತಿವಸ್ತುಗಳಿಗೆ ತಕ್ಕ ಕಥೆಗಳನ್ನು ಸಂದರ್ಭಾನುಸಾರವಾಗಿ ಹೇಳಬೇಕಾಗಿರುವುದು. ಅಂತಹ ಪ್ರಕೃತಿವಿಮರ್ಶೆಗೆ ಸಂಬಂಧಪಟ್ಟ ಕಥೆಗಳ ಪುಸ್ತಕವು ಇದುವರೆಗೂ ಕನ್ನಡದಲ್ಲಿ ಯಾವುದೂ ಇರಲಿಲ್ಲವಾಗಿ, ಆ ಕಥೆಗಳನ್ನೊಳಗೊಂಡಿರುವ ಈ ಪುಸ್ತಕಕ್ಕೆ ಈ ಹೆಸರನ್ನಿಡಬೇಕಾಯಿತು. ಈ ಅಂಶಗಳನ್ನೆಲ್ಲಾ ಪುಸ್ತಕದ ಪೀಠಿಕೆಯಲ್ಲಿಯೇ ಸಂಕ್ಷೇಪವಾಗಿ ಕೊಟ್ಟಿರುತ್ತೆ. ಅಲ್ಲದೆ ನಮ್ಮ ದೇಶದ ಉಪಾಧ್ಯಾಯರಿಗೆ ಹೊಸ ಕಿಂಡರ್‌ಗಾರ್ಟನ್ನಿನ ಸ್ವರೂಪವನ್ನು ಕಥೆಗಳಿಗೂ, ಕಿಂಡರ್‌ಗಾರ್ಟನ್ನಿಗೂ ಇರುವ ಸಂಬಂಧವನ್ನು ತಿಳಿಸಬೇಕೆಂಬ ಉದ್ದೇಶದಿಂದ ಈ ವರ್ಷದ ಮೇ ತಿಂಗಳ "ವಿದ್ಯಾದಾಯಿನಿ"ಯಲ್ಲಿ ವಿಶದವಾಗಿ ಬರೆದ ಲೇಖನವನ್ನೇ ಕೊಟ್ಟಿದೆ. ಆದುದರಿಂದ ಈ ಪುಸ್ತಕಕ್ಕೆ ಈ ಹೆಸರನ್ನಿಟ್ಟಿರುವುದು ಅಸಾಧುವೆಂದು ತೋರುವುದಕ್ಕೆ ಲೇಶವೂ ಕಾರಣವಿಲ್ಲ.

"ಕೆಲವು ಕಥೆಗಳು ಗಲಿಬಿಲಿಯನ್ನಾಗುವಂತಿವೆ" ಎಂದು ಬರೆದು ಅದಕ್ಕೆ "ಚಂದ್ರನೂ ದೇವತೆಗಳೂ" ಎಂಬ ಕಥೆಯನ್ನು ಉದಾಹರಿಸಿರುವಿರಷ್ಟೆ. ಆದರೆ ಆ ಕಥೆಯು ವ್ಯತ್ಯಸ್ತಾಭಿಪ್ರಾಯವುಳ್ಳ ಮತ್ತು ಹಿಂದುಗಳಲ್ಲದ ಇತರರಿಗೆ ಸ್ವಲ್ಪ ಕಷ್ಟವಾಗಿ ತೋರಬಹುದು. ಅವರು ತಮಗೆ ಸಮ್ಮತವಲ್ಲದ ಅಂತಹ ಕಥೆಗಳನ್ನು ಉಪಯೋಗಿಸದೆ ಬಿಟ್ಟುಬಿಡಬಹುದು. ಒಟ್ಟು ೯೫ ಕಥೆಗಳಲ್ಲಿ ಅಂತಹವು ಸುಮಾರು ೩-೪ ಕ್ಕಿಂತ ಹೆಚ್ಚಾಗಿಲ್ಲ. ಈಗಿನ ಇಂಗ್ಲೆಂಡ್ ಅಮೇರಿಕ ಮುಂತಾದ ದೇಶದವರು ಬರೆದಿರುವ ಕಿಂಡರ್‌ಗಾರ್ಟನ್ ಕಥೆಗಳನ್ನು ನೋಡಿದರೆ ನಮ್ಮ ದೇಶದವರಿಗೆ ಎಷ್ಟೋ ತೊಡಕಾಗಿ ತೋರುವುದರಲ್ಲಿ ಸಂಶಯವಿಲ್ಲ. ಇದು ನನಗೂ ಅನುಭವ ಸಿದ್ಧ ಅಷ್ಟುಮಾತ್ರಕ್ಕೇ ಅವು ಸರಿಯಲ್ಲವೆಂದು ನಾನು ಹೇಳಲಾರೆನು ; ಅವು ಆ ದೇಶದ ಜನಗಳ ಪದ್ಧತಿಗೂ ಮಕ್ಕಳ ಸ್ವಭಾವಕ್ಕೂ ಅನುಗುಣವಾಗಿಯೇ ಬರೆಯಲ್ಪಟ್ಟಿರಬಹುದು ಈ ನಮ್ಮ ಕಿಂಡರ್‌ಗಾರ್ಟನ್ ಕಥೆಗಳಲ್ಲಿ ಯಾವುದೂ ನಮ್ಮ ಮಕ್ಕಳಿಗೆ ಯಾವ ವಿಧದಲ್ಲಿಯೂ ಗಲಿಬಿಲಿಯನ್ನುಂಟುಮಾಡುವುದಾಗಿ ಇದುವರೆಗೂ ನನ್ನ ಅನುಭವದಲ್ಲಿ ಕಂಡುಬಂದಿಲ್ಲ. ನಮ್ಮ ಮೈಸೂರು ದೇಶದ ಎಲ್ಲಾ ಪ್ರಾಂತಗಳಲ್ಲೂ, ಕೊಡಗು ಧಾರವಾಡ ದೇಶಗಳಲ್ಲೂ ಎಷ್ಟೋ ಮಂದಿ ಹಿಂದು ಮತ್ತು ಕ್ರೈಸ್ತ ಉಪಾಧ್ಯಾಯರು ಕೂಡ ಈ ಪುಸ್ತಕವನ್ನು ಉಪಯೋಗಿಸುತ್ತಿದ್ದಾರೆ ಅವರಲ್ಲಿ ಅನೇಕರು ಈ ಪುಸ್ತಕವನ್ನು ಶ್ಲಾಘಿಸಿ ಪದೇ ಪದೇ ಹೆಚ್ಚು ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುತ್ತಾ ಬಂದುದರಿಂದ ಕ್ಷಿಪ್ರದಲ್ಲಿಯೇ ಅನೇಕ ಪುಸ್ತಕಗಳು ಖರ್ಚಾಗಿವೆ. ಆದರೆ ಯಾರೂ ಇದುವರೆಗೂ ಯಾವ ನ್ಯೂನತೆಯನ್ನೂ ತೋರಿಸಿಲ್ಲ. ಮತ್ತು ಅನೇಕ ದೊಡ್ಡ ದೊಡ್ಡ ವಿದ್ವಾಂಸರು ಯೋಗ್ಯತಾ ಪತ್ರಗಳನ್ನೂ ಕೊಟ್ಟಿರುವರು. ಹಾಗೂ ಅಂತಹ ನ್ಯೂನತೆಗಳಿರುವುದಾಗಿ ಅನೇಕರಿಂದ ತಿಳಿಯಬಂದರೆ ದ್ವಿತೀಯ ಮುದ್ರಣದಲ್ಲಿ ಕ್ರಮಪಡಿಸಲಾಗುವುದು.

ಅಂತು ನಿಮ್ಮ ಅಮೂಲ್ಯವಾದ ಪತ್ರಿಕೆಯ ಮೂಲಕ ಈ ಪುಸ್ತಕದ ಗುಣದೋಷಗಳು ವ್ಯಕ್ತಪಡುವಂತೆ ನೀವು ಸಹಾಯಮಾಡಿದುದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ.

ಜಿ ಕೃಷ್ಣಶಾಸ್ತ್ರಿ,

ಗೌ॥ ನಾರ್ಮಲ್ ಸ್ಕೂಲ್, ಮೈಸೂರು.

ತಾಲ್ಲೋಕು ವರ್ತಮಾನ.

ಮಾಗಡಿ.—ಈ ತಿಂಗಳು ೧೫ ನೇ ತಾ. ಸೋಮವಾರ ಲೋವರ್ ಸೆಕಂಡರಿ ಪರೀಕ್ಷೆಯು ಮಾಗಡಿಯಲ್ಲಿ ಪ್ರಾರಂಭವಾಯಿತು. ಮೆ॥ ಅನಂತಸುಬ್ಬರಾಯರು ಪರೀಕ್ಷಾ ಅಧಿಕಾರಿಗಳಾಗಿ ದಯಮಾಡಿ, ವಿತರಣೆಯಿಂದಲೂ ನಿಷ್ಪಕ್ಷಪಾತವಾಗಿಯೂ ಪರೀಕ್ಷೆ ನಡಿಸಿದರು ಕಳೆದ ವರ್ಷ ಇಲ್ಲಿ ೫೦ ಮಂದಿ ವಿದ್ಯಾರ್ಥಿಗಳು ಸೇರಿದ್ದರು. ಈ ವರ್ಷ ಈ ಮಾಗಡಿ, ಹುಲಿಕಲ್ಲು, ತಾವರೆಕೆರೆ, ನಾರಸಂದ್ರ, ಈ ಸ್ಕೂಲುಗಳಿಂದ ಸುಮಾರು ೩೦ ಜನ ವಿದ್ಯಾರ್ಥಿಗಳು ಮಾತ್ರ ಸೇರಿದ್ದರು ವಿದ್ವಾನ್ ಪಟ್ಟವರ್ಧನಂ ನಂಜುಂಡಶಾಸ್ತ್ರಿಗಳವರು ಸ್ವಂತ ಖರ್ಚಿನಿಂದ ವಿದ್ಯಾರ್ಥಿಗಳಿಗೂ, ಅವರ ಕೂಡ ಬಂದ ಮಾಸ್ಟರುಗಳಿಗೂ, ಪೋಷಕರಿಗೂ ಬಹಳ ಆದರಣೆಯಿಂದ ಸಕಾಲಕ್ಕೆ ಸುಖ ಭೋಜನ ಮಾಡಿಸಿದರು. ಹೊತ್ತಿಗೆ ೫೦ ಜನರ ವರಿವಿಗೂ ಭೋಜನಕ್ಕೆ ಸೇರುತ್ತಿದ್ದರು ಇವರಲ್ಲಿ ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ತಕ್ಕ ಏರ್ಪಾಡು ಮಾಡಿದ್ದರು. ಕೊನೆಯ ದಿವಸ ಇವರುಗಳೊಂದಿಗೆ ಸ್ಥಳದ ಕಛೇರಿಯ ನೌಕರರಿಗೂ, ಇತರ ಸ್ಕೂಲ್ ಮೇಷ್ಟರುಗಳಿಗೂ, ದೊಡ್ಡಮನುಷ್ಯರಿಗೂ, ತರುವಾಯ ವೈಶ್ಯಮಂಡಲಿಯವರಿಗೂ ವಿಜೃಂಭಣೆಯಿಂದ ಔತಣ ಮಾಡಿದರು ತಾ. ೧೮ ನೇ ರಾತ್ರಿ ವೈಶ್ಯರ ಸತ್ರದಲ್ಲಿ ದೊಡ್ಡ ಸಭೆ ನಡೆಯಿತು. ತಿರುಮಲೆ ಸ್ಕೂಲಿನ ಚಂದ್ರಶೇಖರಶಾಸ್ತ್ರಿಗಳು ಅಗ್ರಾಸನವನ್ನು ವಹಿಸಿದ್ದರು. ಹುಲಿಕಲ್ ಸ್ಕೂಲಿನ ಲಕ್ಷ್ಮೀಪತಿಶಾಸ್ತ್ರಿಗಳು ವಿದ್ಯಾವಿಷಯವಾಗಿ ಉಪನ್ಯಾಸ ಮಾಡಿದರು. ಇದು ಸಭಿಕರಿಗೆ ಬಹಳ ಆನಂದಕರವಾಗಿತ್ತು. ಇನ್ನು ಮುಂದೆ ಇಲ್ಲಿ ಬಹುವಾಗಿ ವಿದ್ಯಾರ್ಥಿಗಳು ಸೇರುವುದರಲ್ಲಿ ಸಂದೇಹವಿಲ್ಲ. ಈಗ ಈ ಶಾಸ್ತ್ರಿಗಳು ಆರಂಭಿಸಿರುವ ಈ ಧರ್ಮ ಕಾರ್ಯವನ್ನು ಇಲ್ಲಿನ ವೈಶ್ಯಮಂಡಲಿಯವರೂ, ಇತರ ದೊಡ್ಡ ಮನುಷ್ಯರೂ ಪ್ರೋತ್ಸಾಹ ಪಡಿಸಿ, ಶಾಶ್ವತವಾಗಿ ನಡೆಯಿಸುವರೆಂದು ನಂಬಲ್ಪಟ್ಟಿರುತ್ತೆ.

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾ ೨ ನೇ ಗುರುವಾರ

ಲಾರ್ಡ್ ಮಿಂಟೋ ಪ್ರಭುಗಳು ಮೈಸೂರಿಗೆ ದಯಮಾಡಿದ್ದುದು

ಕಳೆದ ವಾರ ನಾವು ಸೂಚಿಸಿ ನಿರೀಕ್ಷಿಸಿದ್ದಂತೆ ಶ್ರೀಮನ್ಮಹಾರಾಜರವರೂ, ಅವರ ಗವರ್ನಮೆಂಟಿನವರೂ, ಪ್ರಜೆಗಳೂ ವಿಶೇಷವಿಸಿ ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರಾದ ಲಾರ್ಡ್ ಮಿಂಟೋ ಪ್ರಭುಗಳಿಗೆ ಬಹು ಉತ್ಸಾಹಪೂರ್ವಕವಾಗಿ ಸುಸ್ವಾಗತವನ್ನು ಕೊಟ್ಟು ಆಡಂಬರಯುಕ್ತವಾದ ಮತ್ತು ಮಹದಾನಂದಕರವಾದ ಬಗೆಬಗೆಯ ಸತ್ಕಾರಗಳನ್ನು ಮಾಡಿರುತ್ತಾರೆ ಇದಕ್ಕಾಗಿ ಮಾಡಿದ ಸಕಲ ಏರ್ಪಾಡುಗಳೂ ಬಹು ಸಂತೋಷಕರವಾಗಿಯೂ, ಸಾರ್ಥಕವಾಗಿಯೂ, ವಿಶೇಷ ವಿತರಣೆಯಿಂದಲೂ ಜರುಗಿದವೆಂದು ತಿಳಿಸಲು ಬಹಳವಾಗಿ ಸಂತೋಷಪಡುತ್ತೇವೆ ಈಗ ಹವಾ ಮತ್ತು ಕಾಲಸ್ಥಿತಿಗಳು ಸಂತೋಷಜನಕಗಳಾಗಿರುವವು ವೈಸ್‌ರಾಯಿ ಪ್ರಭುಗಳು ಯಾವ ಯಾವ ಕಡೆ ದರ್ಶನವನ್ನಿತ್ತರೋ ಅಲ್ಲೆಲ್ಲಾ ಪ್ರಜೆಗಳು ವಿಶೇಷ ಕುತೂಹಲದಿಂದ ಸಹಸ್ರಗಟ್ಟಲೆ ಕೂಡಿ ನೇತ್ರಾನಂದವನ್ನು ಹೊಂದಿ ಜಯಧ್ವನಿಗಳನ್ನು ಮಾಡಿದರು

ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಿಗೆ ಒಪ್ಪಿಸಲ್ಪಟ್ಟ ಅಡ್ರೆಸ್ಸುಗಳಲ್ಲಿ ಅವರು ದಯಮಾಡಿದ್ದರಿಂದ ಸಕಲರಿಗೂ ಉಂಟಾದ ಸಂಭ್ರಮ ಮಹದಾನಂದಗಳು ಪ್ರಕಾಶಪಡುತ್ತವೆ ಮತ್ತು ಈ ಭೇಟಿಯ ದೆಸೆಯಿಂದ ಮೈಸೂರು ಸಂಸ್ಥಾನದ ರಾಜಮನೆತನಕ್ಕೂ ಬ್ರಿಟಿಷ್ ಗವರ್ನಮೆಂಟಿಗೂ ಇರುವ ಪರಸ್ಪರವಾದ ಸ್ನೇಹಸಂಬಂಧಾದಿಗಳು ಇನ್ನೂ ವಿಶೇಷವಾಗಿ ವೃದ್ಧಿಹೊಂದುವವೆನ್ನುವುದರಲ್ಲಿ ಸಂಶಯವಿಲ್ಲ

ಔತಣಕಾಲದಲ್ಲಿ ಶ್ರೀಮನ್ಮಹಾರಾಜರವರು ಲಾರ್ಡ್ ಮಿಂಟೋರವರ ಕ್ಷೇಮಾಭ್ಯುದಯಗಳನ್ನು ಕೋರಿ ಭಾಷಣ ಮಾಡಿದಾಗ ಸಾರ್ವಭೌಮ ಸರ್ಕಾರದವರ ವಿಷಯದಲ್ಲಿ ತಮಗಿರುವ ಭಕ್ತಿಪ್ರೀತಿಗಳನ್ನೂ, ಬ್ರಿಟಿಷ್ ಗವರ್ನಮೆಂಟಿನವರ ಸಹಾಯಾರ್ಥವಾಗಿ ತಾವು ಮಾಡಿರುವ ಕಾರ್ಯಗಳನ್ನೂ ವಿವರಿಸಿದರು ಮೈಸೂರು ಸಂಸ್ಥಾನದವರು ಇಂಡಿಯಾ ಗವರ್ನಮೆಂಟಿನವರು ಉಪಯೋಗಪಡಿಸಿಕೊಳ್ಳಬಹುದಾದಂಥಾ ಸೈನಿಕರನ್ನೂ ಸಾಮಾನು ಸಾಗಿಸುವ ಗಾಡಿಗಳನ್ನೂ ಸಿದ್ಧಪಡಿಸಿ ಬಹಳ ಚೆನ್ನಾಗಿ ತರಪೇತುಮಾಡಿರುತ್ತಾರೆ. ಅವಶ್ಯಬಿದ್ದಾಗ ಈ ಸೈನ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ಗವರ್ನಮೆಂಟಿನವರು ತಿಳಿದಿರುವರು ಮೈಸೂರಿನ ರಾಜಭಕ್ತಿಯು ಬರೀ ಬಾಯಿಮಾತಿನದಲ್ಲ, ಕಾರ್ಯತಃ ಅದು ಕಾಣಬಂದಿರುತ್ತಲಿದೆ ವೈಸ್‌ರಾಯಿಯವರು ಮಾಡಿರುವ ಭಾಷಣಗಳೆಲ್ಲಾ ಅತ್ಯಂತ ದಯಾರಸಭರಿತವಾಗಿರುತ್ತವೆ ಮತ್ತು ಅವರು ಔತಣವಾದಾಗ್ಗೆ ಮೈಸೂರು ಗವರ್ನಮೆಂಟಿನವರು ಮಾಡಿರುವ ಕಾರ್ಯಗಳನ್ನು ಕೇಳಿ ಬಹಳ ತೃಪ್ತಿಕರವಾಗಿವೆ ಎಂದು ಸಂತೋಷಪಟ್ಟುಕೊಂಡರು ಇದಲ್ಲದೆ ರಾಜಭಕ್ತಿಯು ಮೈಸೂರಿನಲ್ಲಿ ಜನಜನಿತವಾಗಿ ತುಳುಕಾಡುತ್ತಿರುವುದನ್ನು ಬ್ರಿಟಿಷ್ ಗವರ್ನಮೆಂಟಿನವರು ನೋಡಿ ಅದರಾತಿಶಯದಿಂದ ಪ್ರತ್ಯುಪಕಾರಚಿಂತನೆಯುಳ್ಳವರಾಗಿರುತ್ತಾರೆಂದೂ ಅಪ್ಪಣೆಕೊಡಿಸಿದರು

ಮೈಸೂರಿನಲ್ಲಿ ವೈಸ್‌ರಾಯಿ ದಂಪತಿಗಳಿಗೂ ಅವರ ಪರಿವಾರದವರಿಗೂ ಆತಿಥ್ಯಗಳನ್ನು ತೃಪ್ತಿಕರವಾಗಿ ನಡಿಸುವುದರಲ್ಲಿ ದೇಹಶ್ರಮವನ್ನಾಗಲಿ ದ್ರವ್ಯವ್ಯಯವನ್ನಾಗಲಿ ಲಕ್ಷ್ಯಮಾಡಲಿಲ್ಲ ಗರುಸೊಪ್ಪೆಯಲ್ಲಿ ಅಗಾಧವೂ ಸೌಂದರ್ಯಯುಕ್ತವೂ ಆದ ಜಲಪಾತವನ್ನು ನೋಡಿ ಅವರುಗಳು ಪರಮಾಶ್ಚರ್ಯಪಟ್ಟರು ಮೈಸೂರಿನಲ್ಲಿ ವಿಸ್ತಾರವಾದ ರಸ್ತೆಗಳಲ್ಲೂ ಚೌಕಗಳಲ್ಲೂ ಕೆರೆಯಲ್ಲೂ ಮಾಡಿದ ಅಪಾರವಾದ ದೀಪೋತ್ಸವಗಳನ್ನು ನೋಡಿ, ನಾನಾ ಆತಿಥ್ಯಗಳನ್ನು ಸ್ವೀಕರಿಸಿ ಸಂತೃಪ್ತರಾದರು ಕಾಕನಕೋಟೆಯ ಕೆಡ್ಡಾ ಕ್ಯಾಂಪಿನಲ್ಲಿ ಮಾಡಿಸಿದ್ದ ಸಕಲ ವಿಧವಾದ ಏರ್ಪಾಡುಗಳನ್ನೂ ಸೌಕರ್ಯಗಳನ್ನೂ ಅನುಭೋಗಿಸಿದರು , ಆನೆಗಳ ಹಿಂಡನ್ನು ಹಿಡಿಸಿ ಕಟ್ಟಿಹಾಕಿದ ಅಪೂರ್ವವಾದ ನೋಟವನ್ನು ನೋಡಿದ್ದಲ್ಲದೆ ಕಾಡುಮೃಗಗಳ ಬೇಟೆಯಾಡಿ ಉಲ್ಲಾಸಪಟ್ಟರು ಈ ರೀತಿ ಎಲ್ಲಾ ಕಡೆಗಳಲ್ಲೂ ವೈಸ್‌ರಾಯಿಯವರೂ ಅವರ ಪರಿವಾರದವರೂ ನೋಡಿದ ನೋಟಗಳೂ ಅನುಭೋಗಿಸಿದ ಆತಿಥ್ಯಸತ್ಕಾರಾದಿಗಳೂ ಅವರಿಗೆಲ್ಲಾ ಅತ್ಯಂತ ಸಂತೋಷಪ್ರದವಾಗಿದ್ದವೆಂತಲೂ, ಅವರು ಅವುಗಳನ್ನು ಜ್ಞಾಪಿಸಿಕೊಂಡಾಗಲೆಲ್ಲಾ ಉಲ್ಲಾಸಪಡದಿರಲಾರರೆಂದೂ ನಂಬುತ್ತೇವೆ

ಮೈಸೂರು ಸರ್ಕಾರದವರಿಗೂ ಬ್ರಿಟಿಷ್ ಗವರ್ನಮೆಂಟಿಗೂ ಪರಸ್ಪರ ವಿಶೇಷವಾದ ಅನುರಾಗವಿರುತ್ತದೆ ಮತ್ತು ವೈಸ್‌ರಾಯಿಯವರು ಈಗ ಭೇಟಿಕೊಟ್ಟದ್ದರಿಂದ ಆ ಅನುರಾಗವೂ ಸ್ನೇಹವಾತ್ಸಲ್ಯಗಳೂ ಎರಡು ಗವರ್ನಮೆಂಟುಗಳಿಗೂ ಬಹಳವಾಗಿ ವೃದ್ಧಿಹೊಂದಲು ತುಂಬಾ ಅನುಕೂಲವಾಯಿತು.

ಈ ವಾರ ವೈಸ್‌ರಾಯಿ ಪ್ರಭುಗಳು ಪರಿವಾರ ಸಹಿತ ಶ್ರೀರಂಗಪಟ್ಟಣದಲ್ಲಿ ಚರಿತ್ರಾರ್ಹವಾದ ಸ್ಥಳಗಳನ್ನು ನೋಡಿಕೊಂಡು, ಬೆಂಗಳೂರಿಗೆ ದಯಮಾಡಿ ಅಲ್ಲಿ ಕೋಲಾರ ಚಿನ್ನದ ಗಣಿಗಳಲ್ಲೂ ಕುಣಿಗಲಿನಲ್ಲೂ ನೋಡತಕ್ಕ ವಿಶೇಷ ಸಂಗತಿಗಳನ್ನು ಪರಾಂಬರಿಸುವವರಾಗಿದ್ದಾರೆ ಈ ಸ್ಥಳಗಳಲ್ಲೆಲ್ಲಾ ಪ್ರೀತಿಪೂರ್ವಕವಾದ ಸತ್ಕಾರಗಳೂ ಆತಿಥ್ಯಗಳೂ ಬಗೆಬಗೆಯ ವಿಭವಗಳೂ ನಡೆಯುವುದಾಗಿವೆ ಅಂತು ವೈಸ್‌ರಾಯಿ ಪ್ರಭುಗಳಿಗೆ ಈ ದೇಶಾಟನೆಯಲ್ಲಿ ಅವಿಚ್ಛಿನ್ನವಾದ ಆರೋಗ್ಯವೂ ಸುಕ್ಷೇಮವೂ ಸಂತೋಷವೂ ಉಂಟಾಗಲೆಂದು ನಂಬಿ ಹಾರೈಸುತ್ತೇವೆ

ಮತವಿಚಾರ ಪರೀಕ್ಷೆ

ನಮ್ಮ ಮೈಸೂರು ಸೀಮೆಯಲ್ಲಿ ಪ್ರಕಟವಾಗುತ್ತಿರುವ ಒಂದಾನೊಂದು ಪಕ್ಷ ಪತ್ರಿಕೆಯಲ್ಲಿ ಇದೇ ಸೀಮೆಯಲ್ಲಿರುವ ಒಂದು ಎ ವಿ ಸ್ಕೂಲ್ ಮತ ವಿಚಾರ ಪರೀಕ್ಷೆಯ ಪ್ರಶ್ನಾಪತ್ರಿಕೆಯನ್ನೂ ಅದರಡಿ ಆ ಪ್ರಶ್ನೆಗಳ ಉತ್ತರಗಳನ್ನೂ ಪ್ರಕಟಿಸಿದೆ ಇದರಲ್ಲಿ ಒಂದು ಪ್ರಶ್ನೆಯನ್ನು ನಮ್ಮ ವಾಚಕರ ಸೋಟಿಸಿನ ಬಗ್ಗೆ ಇಲ್ಲಿ ಬರೆಯುತ್ತೇವೆ, ಏನಂದರೆ—

ಪ್ರಶ್ನೆ ೬ ಗುಣಯುಕ್ತವಾಗಿ ತೋರುವ ಅನ್ಯಮತಕ್ಕಿಂತಲೂ ಗುಣಹೀನವೆಂದು ತೋರಿದರೂ ತನ್ನ ಧರ್ಮವನ್ನನುಸರಿಸುವದೇ ಮೇಲು ಈ ವಾಕ್ಯದ ಅಭಿಪ್ರಾಯಕ್ಕೆ ಸ್ಪಷ್ಟಗೊಳಿಸುವದಕ್ಕೆ ತಿಳಿದಿರುವ ಕೆಲವು ದೃಷ್ಟಾಂತಗಳನ್ನು ಕೊಡಿ ?

ಈ ಪ್ರಶ್ನೆಗೆ, ಶಿ ದುಗಪ್ಪ ಸೆಂಬ ೪ನೆ ತರಗತಿಯ ವಿದ್ಯಾರ್ಥಿಯು—ಒಬ್ಬ ಮಹಮದೀಯನು ತನ್ನ ಹಣೆಯ ಮೇಲೆ ಏನೂ ಇಲ್ಲದಿರುವದನ್ನು ನೋಡಿ ಅಸಹ್ಯಪಟ್ಟು ತನ್ನ ಜಾತಿ ಸರಿಯಾದದ್ದಲ್ಲವೆಂದು ಬ್ರಾಹ್ಮಣರು ಇಟ್ಟುಕೊಳ್ಳುವ ಅಕ್ಷತೆಯನ್ನಿಟ್ಟುಕೊಳ್ಳುತ್ತಾನೆ ಅದರೇನು ಪ್ರಯೋಜನ ? ಅವನು ತನ್ನ ಮತಧರ್ಮದ ಪ್ರಕಾರ ನಡೆದಿದ್ದರೆ ಅವನಿಗೆ ಒಳ್ಳೇದಾಗುತ್ತಿತ್ತು ಅವನು ಅನ್ಯ ಧರ್ಮದ ಪ್ರಕಾರ ನಡೆದದ್ದರಿಂದ ಅವನಿಗೆ ನರಕವುಂಟಾಗುತ್ತದೆಯಾದ್ದರಿಂದ ತನ್ನ ಮತ ಎಷ್ಟೇ ಹೀನವಾದರೂ ಅದರಂತೆ ನಡೆಯುವದೇ ಉತ್ತಮ ಹೀಗೆಂದು ಉತ್ತರ ಬರೆದಿರುವದನ್ನೂ ಆ ಪ್ರಶ್ನಾಪತ್ರಿಕೆಯ ಕೆಳಗೆ ನಮೂದಿಸಿವೆ ಈ ಪ್ರಶ್ನೋತ್ತರಗಳನ್ನು ನೋಡಿ ನಮಗೆ ಬಹು ಸೋಜಿಗವೂ ವ್ಯಸನವೂ ಉಂಟಾಗುತ್ತವೆ

ಮೊದಲು ಈ ವಿದ್ಯಾರ್ಥಿಯ ಉತ್ತರವನ್ನು ಕುರಿತು ಒಂದೊಂದು ಮಾತುಗಳನ್ನು ಹೇಳಬೇಕಾಗಿದೆ ಮುಸಲ್ಮಾನರಲ್ಲಿ ಹಣೆಯ ಮೇಲೇನೂ ಇಲ್ಲದುದನ್ನು ನೋಡಿ ಅಸಹ್ಯ ನಾಚಿಕೆಗಳನ್ನು ಪಟ್ಟುಕೊಂಡ ಮಹಮದೀಯನು ಯಾರು ? ಅಥವಾ ಒಂದ ವೇಳೆ ಮಹಮದೀಯರಲ್ಲಿ ತನ್ನ ಮತವಿಷಯವಾಗಿ ಅತೃಪ್ತಿಪಟ್ಟುಕೊಂಡವನಿದ್ದರೂ ಹಣೆಯ ಮೇಲೆ ಅಕ್ಷತೆ ಮುಂತಾದ್ದೇನೂ ಇಲ್ಲದುದೇ ಅವನ ಅತೃಪ್ತಿಗೆ ಕಾರಣವಾಗಿರುವದೇ ? ತಮ್ಮ ತಮ್ಮ ಮತಗಳಲ್ಲಿ ಅತೃಪ್ತಿಯನ್ನು ಪಡುವ ಮಹಮ್ಮದೀಯರೇ ಮುಂತಾದವರಿಗೆ ಹಿಂದೂ ಮತವು ತನ್ನ ಅಕ್ಷತೆಯನ್ನು ತೋರಿಸಿದರೆ ತೃಪ್ತಿಯಾಗುವದೇ ? ಹಿಂದೂ ಮತದಲ್ಲಿ ಅತಿ ಶ್ರೇಷ್ಠವೂ ಮುಖ್ಯವೂ ಆದದ್ದು ಅಕ್ಷತೆಯೇ ಹೊರತು ಇನ್ನೇನೂ ಇಲ್ಲವೇ !

ಆದರೆ ಈ ಉತ್ತರವು ಇನ್ನೂ ಬಾಲಕನಾದ ವಿದ್ಯಾರ್ಥಿಯಿಂದ ಕಲ್ಪಿತವಾದುದಾದ ಕಾರಣ ಅದರ ವಿಷಯ ಹೆಚ್ಚಾಗಿ ಚರ್ಚಿಸದೆ ಈ ವಿದ್ಯಾರ್ಥಿಯೂ ಈತನಂತಹ ಇನ್ನೂ ಅನೇಕರೂ ತಮ್ಮ ಮತವೇ ತಪ್ಪಾಗಿದ್ದಾಗ್ಯೂ ತಮಗೆ ಒಪ್ಪತಕ್ಕದ್ದು ಎಂಬ ದುರಭಿಮಾನವನ್ನು ಬಿಟ್ಟು ವಿಚಾರಪರರಾಗಿ ಸತ್ಯವನ್ನು ಹುಡುಕುತ್ತಾ ಅದು ಸಿಕ್ಕುವ ವರೆಗೂ ತೃಪ್ತರಾಗದೆ ಅದು ದೊರೆತ ಮೇಲೆ ಅದು ಯಾವ ಅನ್ಯಮತದಲ್ಲಾದರೂ ಇರಲಿ, ಅದನ್ನು ಮನಃಪೂರ್ವಕವಾಗಿ ಸ್ವೀಕರಿಸುವವರಾಗಬೇಕೆಂದು ಅಪೇಕ್ಷೆ ಪಡುವವರಾಗಿದ್ದೇವೆ

ಆದರೆ ಇಂತಹ ದುರಭಿಮಾನವನ್ನು ಹುಟ್ಟಿಸಿ ಬೆಳಸತಕ್ಕದ್ದು ಮೇಲೆ ಹೇಳಿರುವ ಪ್ರಶ್ನೆಯಷ್ಟೆ ಈ ಪ್ರಶ್ನಾಪತ್ರಿಕೆಯನ್ನು ಯಾರು ಬರೆದರೋ ನಮಗೆ ಗೊತ್ತಿಲ್ಲ ಬಹುಶಾ ಆ ಎ ವಿ ಸ್ಕೂಲಿನ ಒಬ್ಬ ಉಪಾಧ್ಯಾಯರು ಬರದಿರಬೇಕು ಯಾರಾದರೂ ಆಗಲಿ ಈ ಪ್ರಶ್ನೆಗಳನ್ನೋದಿ ಉತ್ತರ ಬರೆಯುವ ವಿದ್ಯಾರ್ಥಿಗಳಿಗೆ ಆ ಉಪಾಧ್ಯಾಯರು ಹೀಗೆ ಬೋಧಿಸಿದಂತೆ ಆಯಿತು ಏನಂದರೆ, ಬಾಲಕರಿರಾ ! ಮತ ವಿಷಯದಲ್ಲಿ ನೀವು ಸತ್ಯವಾದ ಮತವಾವುದೆಂತ ವಿಚಾರಮಾಡಬೇಡಿರಿ ಒಂದು ವೇಳೆ ನೀವು ಹಿಡಿದಿರುವ ಮತದಲ್ಲಿರುವದಕ್ಕಿಂತ ಉತ್ಕೃಷ್ಟವಾದ ತತ್ವೋಪದೇಶವು ಪರರ ಮತದಲ್ಲಿ ನಿಮ್ಮ ಬುದ್ಧಿಗೆ ಅಕಸ್ಮಾತ್ ಗೋಚರವಾದರೂ ಅದನ್ನು ಸ್ವೀಕರಿಸದೆ ನಿಮ್ಮ ಮತವು ಗುಣಹೀನವೆಂದು ತೋರಿದರೂ ಅದನ್ನು ಬಿಡಬೇಡಿರಿ ಯಾಕೆಂದರೆ " ಗುಣಯುಕ್ತವಾಗಿ ತೋರುವ ಅನ್ಯಮತಕ್ಕಿಂತಲೂ ಗುಣಹೀನವೆಂದು ತೋರಿದರೂ ತನ್ನ ಮತಧರ್ಮವನ್ನನುಸರಿಸುವದೇ ಮೇಲು " ಎಂಬುವದೇ

ಈ ವಿಧವಾದ ಬೋಧನೆಯು ನವನಾಗರಿಕರಾದ ಈಗಿನ ಕಾಲದ ವಿದ್ಯಾಬೋಧಕರಿಂದ ಹೊರಡಬಹುದೇ ? ಯೆಂದು ನಾವು ಕೇಳುತ್ತೇವೆ ಹಿಂದೂ ಜನಗಳಲ್ಲಿಯೆ ವಿದ್ಯಾವಂತರಾದವರು ಈಗ ಸಾಧಾರಣವಾಗಿ ವರ್ತಿಸುತ್ತಿರುವ ಪುರಾಣೇತಿಹಾಸದ ಮತತತ್ವಗಳಲ್ಲಿ ತೃಪ್ತರಾಗದೆ ಸತ್ಯವನ್ನು ಎಲ್ಲಿದ್ದರೂ ಕಂಡುಕೊಳ್ಳಬೇಕೆಂದು " ಬ್ರಹ್ಮಸಮಾಜ " " ಆರ್ಯಸಮಾಜ " " ಥಿಯೊಸಾಫಿಕಲ್ ಸೊಸೈಟಿ " ಈ ಮೊದಲಾದ ಸಮಾಜಗಳನ್ನೇರ್ಪಡಿಸಿಕೊಂಡಿರುವದು ವಾಚಕರಿಗೆ ಗೊತ್ತಿಲ್ಲದೆ ಇಲ್ಲ ಇವರು ಒಂದು ಮತವನ್ನೂ ಬಿಡದೆ ಸಕಲ ಮತಗಳನ್ನೂ ಪರೀಕ್ಷಿಸುತ್ತಿರುವದನ್ನು ನೋಡಿದರೆ ಕಡೆಗೆ ನಮಗೆ ಸತ್ಯವು ದೊರಕೀತು ಯೆಂಬ ನಿರೀಕ್ಷಣೆ ಪ್ರೇರಕವಾಗಿದೆ ಇದಲ್ಲದೆ " ಸತ್ಯಂಜಯತಿ ನಾನೃತಂ " ಯೆಂಬ ಪ್ರಬಲ ವೇದವಾಕ್ಯವೇನಾಯಿತು ?

ನಮ್ಮ ಸಹೋದರರಾದ ಉಪಾಧ್ಯಾಯರೇ ! ಸ್ವಲ್ಪ ದಯವಿಟ್ಟು ಯೋಚಿಸಿರಿ ಮನಸ್ಸು ಬಹಳ ಚಂಚಲವಾದುದು ಮತ್ತು ಸತ್ಯಾಸತ್ಯಗಳನ್ನೂ ಬಲಾಬಲಗಳನ್ನೂ ವಿಚಾರಿಸಿ ಪರೀಕ್ಷಿಸುವ ಕಾಂಕ್ಷೆಯು ಮನಸ್ಸಿಗಿದೆ ಆದ್ದರಿಂದಲೇ ಅದು ಸತ್ಯದಲ್ಲಿ ವಿನಹ ಇನ್ನಾವದರಲ್ಲೂ ತೃಪ್ತಿಯನ್ನು ಹೊಂದಲಾರದು ನಾವು ಒಂದು ವೇಳೆ ಸ್ವಮತಾಭಿಮಾನಿಗಳಾಗಿ ನಮ್ಮ ಕೈಕೆಳಗೆ ಕೆಲವು ಕಾಲವಿರುವ ಬಾಲಕರ ಮನಸ್ಸುಗಳನ್ನು ಸ್ವಮತಾಭಿಮಾನವೆಂಬ ಬಂಧಿಗೃಹದಲ್ಲಿ ಮುಚ್ಚಿ ಅದರಿಂದ ಹೊರಗೆ ಇಣಿಕಿ ನೋಡದಂತೆ ಅವರ ಕಣ್ಣುಗಳನ್ನು ಮುಚ್ಚಿದರೂ ಈ ವಿಧವಾದ ನಿರ್ಬಂಧವು ಸದಾ ಇರಲಾರದು ಹೀಗೆ ಮಾಡುವದಕ್ಕೆ ಬದಲಾಗಿ ವಿದ್ಯಾರ್ಥಿಗಳಲ್ಲಿ ವಿಚಾರ ಬುದ್ಧಿಯನ್ನು ಹುಟ್ಟಿಸಿರಿ ವಿಚಾರಕ್ಕೆ ಪ್ರೇರಕವಾದ ಪ್ರಶ್ನೆಗಳನ್ನು ಕೇಳಿ ಸತ್ಯವನ್ನು ಹುಡುಕುವ ಮಹತ್ತರವಾದ ಕರ್ತವ್ಯದಲ್ಲಿ ಸಹಾಯ ಮಾಡಿರಿ ಯಾಕೆಂದರೆ ಸತ್ಯಕ್ಕಿಂತ ಉತ್ತಮೋತ್ತಮವಾದ ವಸ್ತು ಇನ್ನೊಂದಿಲ್ಲ

ವೈಸ್‌ರಾಯಿಯವರಿಗೆ ಮೈಸೂರಿನಲ್ಲಿ ನಡೆದ ಆತಿಥ್ಯಗಳು

ಅಶ್ವಶಾಲೆಗೆ ದಯಮಾಡಿದ್ದು

ತಾ ೨೭ನೇ ಶನಿವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ವೈಸ್‌ರಾಯಿಯವರನ್ನು ಸಾರೋಟಿನಲ್ಲಿ ಕೂಡಿಸಿಕೊಂಡು, ಇಟ್ಟಿಗೆಗೂಡಿನಲ್ಲಿರುವ ಪ್ಯಾಲೇಸ್ ಬಂಗಲೆಗೆ ದಯಮಾಡಿ, ಬಂಗಲೆಯನ್ನೂ, ಅದರ ದಕ್ಷಿಣಭಾಗದಲ್ಲಿರುವ ಪ್ರಾಣಿಗಳ ಆಲಯವನ್ನೂ, ಹಿಂಭಾಗದಲ್ಲಿ ಅಶ್ವಶಾಲೆಯನ್ನೂ ತೋರಿಸಿದರು ವೈಸ್‌ರಾಯಿಯವರು ಅಲ್ಲಿರುವ ಶ್ರೇಷ್ಠವಾದ ನಾನಾಬಗೆಯ ಸಾರೋಟುಗಳನ್ನೂ ಅಮೂಲ್ಯವೂ ಸುಂದರವೂ ಆದ ಕುದುರೆಗಳನ್ನೂ ಪರಾಂಬರಿಸಿ ಬಹಳವಾಗಿ ಸಂತೋಷಪಟ್ಟು, ಸೂಪರಿನ್‌ಟೆಂಡೆಂಟರಾದ ಮೆ|| ರಾಮರಾಯರಿಗೆ ಷೇಕ್‌ಹ್ಯಾಂಡ್ ಕೊಟ್ಟು, ಎಲ್ಲಾ ಬಹಳ ಚೆನ್ನಾಗಿಯೂ ತೃಪ್ತಿಕರವಾಗಿಯೂ ಇದೆ ಎಂದು ಅಪ್ಪಣೆ ಕೊಡಿಸಿದರು

ಸುಗ್ಗೀ ಕುಣಿತ ಮುಂತಾದದ್ದು

ಆ ರಾತ್ರಿ ವೈಸ್‌ರಾಯಿಯವರು ಪರಿವಾರ ಸಮೇತ ಸುಮಾರು ೯ ೪೫ ಗಂಟೆಗೆ ಮೋಟಾರ್ ಗಾಡಿಗಳಲ್ಲಿ ಹೊರಟು ಅರಮನೆಗೆ ದಯಮಾಡಿ, ೨ನೆಯ ಮಹಡಿ ಹತ್ತಿಕೊಂಡು, ಕೆಳಗಡೆ ಮೈದಾನದಲ್ಲಿ ನಡೆದ ಸುಗ್ಗಿ ಕುಣಿತವನ್ನು ಪರಾಂಬರಿಸಿದರು ಚಾಮರಾಜರ ಮುಂದೇ ಪಟೆ ಲರೇ ಮೊದಲಾದ ಎಪ್ಪತ್ತು ಮಂದಿ ರೈತರು ಓಲಗ ಮಾಡುತ್ತಾ ತ ಪದಗಳನ್ನು ಬಾರಿಸುತ್ತಾ ಲಯಕ್ಕೆ ಸರಿಯಾಗಿ ಕತ್ತಿಗಳನ್ನು ಹಿಡಿದು ಪಟ್ಟಾವಳಿ ತಿರುಗುತ್ತಾ ವಿಚಿತ್ರ ರೀತಿಯಿಂದ ಕುಣಿದರು ವೈಸ್‌ರಾಯಿ ದಂಪತಿಗಳು ಈ ಸುಗ್ಗಿ ಕುಣಿತವನ್ನು ನೋಡಿ ಬಹಳ ಆಶ್ಚರ್ಯವೂ ಸಂತೋಷವೂ ಪಟ್ಟುಕೊಂಡರು

ಬಳಿಕ ವೈಸ್‌ರಾಯಿಯವರೇ ಮೊದಲಾದವರೆಲ್ಲಾ ಅರಮನೆಯ ಸಂಗೀತದ ಕೊಠಡಿಗೆ ದಯಮಾಡಿದರು ಶ್ರೀಮನ್ಮಹಾರಾಜರವರು ಹೊಸದಾಗಿ ತರಿಸಿಟ್ಟಿರುವ ಬಹು ಅಮೂಲ್ಯವಾದ ಆರ್ಗನ್ ಎಂಬ ಇಂಗ್ಲಿಷ್ ಗಾನಯಂತ್ರದಲ್ಲಿ ನಾಟ್ಯಕ್ಕರಿಗೆ ಆನಂದವನ್ನುಂಟುಮಾಡುವಂಥಾ ಕೀರ್ತನೆ ಹಾಡುಗಳನ್ನು ನುಡಿಸಿ ಸಂತೋಷಪಡಿಸಿದರು.

ಕಡ್ಡಾಕ್ಕೆ ತೆರಳಿದ್ದು.

ತಾ ೨೮ನೇ ಭಾನುವಾರ —ಈ ದಿನ ಬೆಳಗ್ಗೆ ಭೋಜನಾನಂತರ ಶ್ರೀಮನ್ಮಹಾರಾಜರವರು ಗವರ್ನಮೆಂಟ್ ಹೌಸಿಗೆ ದಯಮಾಡಿ, ವೈಸ್‌ರಾಯಿಯವರನ್ನು ಮೋಟಾರ ಗಾಡಿಯಲ್ಲಿ ಕೂಡಿಸಿಕೊಂಡು ರಾಜಧಾನಿಯಿಂದ ೪೫ ಮೈಲಿ ದೂರದಲ್ಲಿರುವ ಆನೆ ಕೆಡ್ಡಾ ಕ್ಯಾಂಪಾದ ಕಾರಾಪುರವನ್ನು ಕುರಿತು ತೆರಳಿದರು ವೈಸ್‌ರಾಯರ ಪತ್ನಿಯವರೂ ಯುವರಾಜರವ ವೈಸ್‌ರಾಯರ ಪರಿವಾರಕ್ಕೆ ಸೇರಿದವರೂ ೪೬ ಮೋಟಾರ ಗಾಡಿಗಳಲ್ಲಿ ಅಲ್ಲಿಗೆ ಪ್ರಯಾಣ ಮಾಡಿದರು

ದಿವಾನರವರು ಕ್ಯಾಂಪಿನಲ್ಲಿ ಏರ್ಪಾಡುಗಳೆಲ್ಲಾ ತೃಪ್ತಿಕರವಾಗಿಯೂ ವಿತರಣೆಯಿಂದಲೂ ನಡೆಯುವುದನ್ನು ನೋಡಿಕೊಳ್ಳುವುದಕ್ಕಾಗಿ ಪರಿವಾರ ಸಮೇತ ಮೊದಲೇ ಅಲ್ಲಿಗೆ ದಯಮಾಡಿದರು ಸರ್ದಾರರುಗಳಾದ ಗೋಪಾಲರಾಜೇ ಅರಸಿನವರು, ದಳವಾಯಿ ದೇವರಾಜೇ ಅರಸಿನವರು, ಕಾಂತರಾಜೇ ಅರಸಿನವರು, ದೇಶರಾಜೇ ಅರಸಿನವರು, ಲಕ್ಷ್ಮೀಕಾಂತರಾಜೇ ಅರಸಿನವರು, ದರ್ಬಾರ್ ಭಕ್ಷಿ ಮೆ|| ಲಿಂಗರಾಜೇ ಅರಸಿನವರು, ಪ್ರೈವೇಟ್ ಸೆಕ್ರೆಟರಿ ಮೆ|| ಕ್ಯಾಂಪೆಲ್‌ರವರು, ಇವರ ಪತ್ನಿಯವರು, ಬ್ರಿಟಿಷ್ ರೆಸಿಡೆಂಟರು, ಇವರ ಪತ್ನಿಯವರು, ಈ ಮೊದಲಾದವರೆಲ್ಲಾ ಕೆಡ್ಡಾ ಕ್ಯಾಂಪಿಗೆ ಹೋಗಿರುತ್ತಾರೆ

ಆನೆಗಳನ್ನು ಬಂಗಡಿಗೆ ತಂದು ಕಟ್ಟಿ ಹಾಕುವುದನ್ನು ನೋಡುವುದಕ್ಕೂ ಶಿಕಾರಿ ಮಾಡುವುದಕ್ಕೂ ಕೆಡ್ಡಾ ಕ್ಯಾಂಪಿನಲ್ಲಿ ಫಾರೆಸ್ಟ್ ಇಲಾಖೆಯವರು ಬಹು ಅನುಕೂಲವಾದ ಏರ್ಪಾಡುಗಳನ್ನು ಮಾಡಿರುತ್ತಾರೆ ವೈಸ್‌ರಾಯಿಯವರ ಕ್ಯಾಂಪು ಮಾಡಿರುವ ಕಾರಾಪುರದಲ್ಲಿ ಒಂದು ಪಟ್ಟಣವೇ ಇರುವಂತೆ ಏರ್ಪಡಿಸಿದ್ದಾರೆ ಸುಮಾರು ೨೦೦ ಡೇರಾಗಳನ್ನು ಹಾಕಿ, ಪೋಸ್ಟ್, ಟೆಲಿಗ್ರಾಫ್ ಆಫೀಸುಗಳನ್ನು ಕಲ್ಪಿಸಿರುವರು ರಾತ್ರಿ ಹೊತ್ತು ಕ್ಯಾಂಪುಗಳಿಗೆಲ್ಲಾ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಪ್ರತ್ಯೇಕವಾದ ಯಂತ್ರಗಳನ್ನು ಅಲ್ಲಿ ಇಡಿಸಿದ್ದಾರೆ ಕುಡಿಯುವ ನೀರನ್ನು ನದಿಯಿಂದ ಕೊಳವೆಗಳಲ್ಲಿ ಸಾಗಿಸಿ ತಂದು, ಒಂದು ಕಡೆಯಲ್ಲಿ ಶುದ್ಧಿ ಮಾಡಿ ಸ್ನಾನಪಾನಾದಿಗಳಿಗೆ ತಂದು ಒದಗಿಸಿರುವರು ಪ್ರತಿದಿನವೂ ವೈಸ್‌ರಾಯಿಯವರ ಕ್ಯಾಂಪಿನಿಂದ ಮೈಸೂರಿಗೂ, ಇಲ್ಲಿಂದ ಅಲ್ಲಿಗೂ ಹೋಗಿ ಬರುವ ಅಂಚೆ ಟಪ್ಪಾಲುಗಳನ್ನು ಮೋಟಾರ್ ಗಾಡಿಗಳಲ್ಲಿ ಎರಡು ಗಂಟೆ ಹೊತ್ತಿನೊಳಗೆ ತಲಪುವಂತೆ ಏರ್ಪಾಡಾಗಿ ನಡೆಯುತ್ತಿದೆ

ಮೂರು ಮಂದೆಗಳ ಆನೆಗಳು ಅಂದರೆ ಸುಮಾರು ೧೨೦ ಆನೆಗಳು ಶಿಕ್ಷೆ ಬಂಗಡಿಯಲ್ಲಿ ಸೇರಿಸಲ್ಪಟ್ಟು ಇರುತ್ತವೆ ವೈಸ್‌ರಾಯರೇ ಮೊದಲಾದವರು ಎತ್ತರವಾದ ಮಟ್ಟಣಿಗೆಗಳ ಮೇಲೆ ಕಪ್ಪು ದಿರಸುಗಳನ್ನು ಹಾಕಿಕೊಂಡು ಕುಳಿತು, ಫಾರೆಸ್ಟ್ ಇಲಾಖೆಯವರೂ ಚಿತ್ತಗೊಂದದೆ ಆನೆ ಮಾವುತರೂ ಬಂಗಡಿಗಳಲ್ಲಿ ನುಗ್ಗಿ ಕುಮಕಿ ಆನೆಗಳ ಸಹಾಯದಿಂದ ಹೊಸ ಆನೆಗಳನ್ನು ಹಿಡಿದು ಕಟ್ಟಿಹಾಕಿದ್ದನ್ನು ಪರಾಂಬರಿಸಿ ಬಹಳ ವಿಸ್ಮಯಪಟ್ಟು ತಮಗುಂಟಾದ ಆನಂದವನ್ನು ಪ್ರಕಾಶಪಡಿಸಿದರು ಬೆಳಗಿನ ಹೊತ್ತು ವೈಸ್‌ರಾಯಿಯವರು ಅಶ್ವಾರೂಢರಾಗಿ ಕಾಡಿಗೆ ಪ್ರವೇಶಿಸಿ ಹುಲಿ, ಚಿರತೆ, ಕಾಡುಕೋಣ, ಜಿಂಕೆ ಮೊದಲಾದವುಗಳನ್ನು ಬೇಟೆಯಾಡಿಕೊಂಡು ಬಂದರು.

ವಾಪಸು ದಯಮಾಡುವುದು

ಈ ದಿನ ಸಾಯಂಕಾಲ ವೈಸ್‌ರಾಯಿ ದಂಪತಿಗಳು ಕೆಡ್ಡಾ ಕ್ಯಾಂಪಿನಿಂದ ಮೋಟಾರ್ ಗಾಡಿಗಳಲ್ಲಿ ಶ್ರೀಮನ್ಮಹಾರಾಜರವರ ಸಮೇತ ರಾಜಧಾನಿಗೆ ವಾಪಸು ಚಿತ್ತೈಸುವರು ದಾರಿಯಲ್ಲಿ ಅಂದರೆ ಪಟ್ಟಣದೊಳಗೂ ಚಾಮುಂಡಿ

ಬೆಟ್ಟದ ಮೇಲೂ ನಡೆಯುವ ದೀಪೋತ್ಸವಗಳನ್ನು ನೋಡುತ್ತಾ ಸಂಭ್ರಮಿಸಿಕೊಂಡು, ಗವರ್ನಮೆಂಟ್ ಹೌಸಿಗೆ ಹಿಂದಿರುಗಿ, ಭೋಜನಾನಂತರ ವಿಶ್ರಮಿಸಿಕೊಳ್ಳುವರು

ರಾಜಧಾನಿಯಿಂದ ತೆರಳುವುದು

ನಾಳೆ ಬೆಳಗ್ಗೆ ಸುಮಾರು ೭ ಗಂಟೆಗೆ ವೈಸ್‌ರಾಯಿ ಪ್ರಭುಗಳೂ ಅವರ ಪತ್ನಿಯವರೂ ಅವರ ಕ್ಯಾಂಪಿನವರ ಸಮೇತ ಮೋಟಾರು ಗಾಡಿಗಳಲ್ಲಿ ಗವರ್ನಮೆಂಟ್ ಹೌಸ್ ಬಂಗಲೆಯಿಂದ ಹೊರಟು ಕಮಾನು ದರ್ವಾಜಾ, ಕ್ರೈಸ್ತ ಸಮಾಧಿ, ಟ್ರಾವೆಲರ್ಸ್ ಬಂಗಲೆಗಳ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ಕುರಿತು ತೆರಳುವವರಾಗಿದಾರೆ ಇವರೆಲ್ಲಾ ಅಲ್ಲಿ ಎರಡು ಗಂಟೆಗಳ ಹೊತ್ತು ಇದ್ದು ಕೊಂಡು ಚರಿತ್ರಾರ್ಹವಾದ ಸ್ಥಳಗಳನ್ನು ಸುತ್ತಿ ನೋಡಿಕೊಂಡು, ಭೋಜನಾನಂತರ ಸ್ಪೆಷಲ್ ರೈಲು ಹತ್ತಿ ಬೆಂಗಳೂರಿಗೆ ಪ್ರಯಾಣ ಮಾಡುವರು

ಅತ್ಯದ್ಭುತಗಳೂ ಪೋಲೀಸ್ ಏರ್ಪಾಡೂ

ವೈಸ್‌ರಾಯಿ ಅವರೂ ಅವರ ಪರಿವಾರದವರೂ ರಾಜಧಾನಿಯ ಗವರ್ನಮೆಂಟ್ ಹೌಸಿನಲ್ಲಿ ಇದ್ದಾಗ್ಗೆ ಆ ಬಂಗಲೆಯ ಮುಖ್ಯಾಧಿಕಾರರು ಅತಿಥಿಗಳ ಸೌಕರ್ಯಕ್ಕಾಗಿ ಮಾಡಿದ್ದ ಸಕಲ ಏರ್ಪಾಡುಗಳೂ ಭೋಜನಾದಿಗಳೂ ಬಹಳ ತೃಪ್ತಿಕರವಾಗಿಯೂ ವಿತರಣೆಯಿಂದಲೂ ನೆರವೇರಿದವೆಂದು ವೈಸ್‌ರಾಯಿಯವರು ತುಂಬಾ ಸಂತೋಷಪಟ್ಟು ತಿಳಿಸಿ ಇರುತ್ತಾರೆ

ಅತ್ಯಲಾಗಿ ವೈಸ್‌ರಾಯಿಯವರು ರಾಜಧಾನಿಯಲ್ಲಿದ್ದಾಗಲೂ, ಅವರು ಈ ಸಂಸ್ಥಾನದಲ್ಲಿ ಸಂಚಾರ ಮಾಡಿದ ಕಡೆಗಳಲ್ಲೂ ಪೋಲೀಸಿನವರ ಬಂದೋಬಸ್ತು ಬಹು ವಿಶೇಷವಾಗಿಯೂ ಸ್ತೋತ್ರಾರ್ಹವಾಗಿಯೂ ನಡೆದವು ಅವರ ಕ್ಷೇಮವನ್ನು ಕಾಪಾಡುವುದಕ್ಕೆ ಪೋಲೀಸ್ ಇಲಾಖೆಯವರು ಬಹಳ ಸಾಹಸಪಟ್ಟು ನಾನಾ ಎಚ್ಚರಿಕೆಯ ಏರ್ಪಾಡುಗಳನ್ನು ಮಾಡಿದರು ಈ ಸಲ ನಡೆದ ಪೋಲೀಸ್ ಬಂದೋಬಸ್ತು ಅಪೂರ್ವವಾದದ್ದಾಗಿತ್ತು ಇದಕ್ಕಾಗಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರನ್ನೂ ಮೈಸೂರು ಪೋಲೀಸ್ ಸೂಪರಿಂಟೆಂಡೆಂಟರನ್ನೂ ವಂದಿಸಬೇಕಾಗಿದೆ

ಬಹುದೇಶದ ವೃತ್ತಾಂತಗಳು

ಕೌನ್ಸಿಲರುಗಳೂ ಚೀಫ್ ಸೆಕ್ರಟರಿಯವರೂ ಹಿರಿಯ ೮ ಸಹಿತ ಕಳೆದ ವಾರ ಬೆಂಗಳೂರಿಗೆ ವಾಪಸು ತೆರಳಿದರು

* * *

ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯಲ್ಲಿ ವೈಸ್‌ರಾಯಿಯವರ ಮೆರವಣಿಗೆಯ ವಿಭವವನ್ನು ನೋಡುವುದಕ್ಕಾಗಿ ಮನೆಬಾಗಿಲುಗಳನ್ನು ಮುಚ್ಚಿಕೊಂಡು ಬಂದಿದ್ದ ಕೆಲವರ ಮನೆಗಳಿಗೆ ಕಳ್ಳರು ಬಿದ್ದು ನಗನಾಣ್ಯಗಳನ್ನು ಅಪಹರಿಸಿದರೆಂದು ತಿಳಿದುಬಂದಿದೆ ಪೋಲೀಸಿನವರು ಪತ್ತೆ ತರದೊಡು ನಡಿಸುತ್ತಿದಾರೆ

* * *

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಹಾಸನಾಳು ಅರೇಹಳ್ಳಿ ಕೋಣನೂರು, ಬಾಣಾವಾರಗಳಲ್ಲಿ ಮುಂದಿನ ಸರ್ಕಾರಿ ನಾಲಿನಿಂದ ಒಬ್ಬೊಬ್ಬ ಸೂಲಗಿತ್ತಿಯನ್ನು ನೇಮಿಸಬೇಕೆಂದೂ, ಮುಂದಿನ ಜನವರಿ ತಿಂಗಳ ಮೊದಲನೇ ವಾರದಲ್ಲಿ ಹಾಸನದಲ್ಲಿ ಗೋಶಾಲೆಗಳ ಪ್ರದರ್ಶನವನ್ನು ನಡಿಸಬೇಕೆಂದೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನವಾಗಿದೆ

* * *

ಅಮೇರಿಕ ಖಂಡದ ಉತ್ತರ ಭಾಗದಲ್ಲಿರುವ ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಿಂದ ಮೆ|| ಚಾರ್ಲಸ್ ಲಾಂಗ್ ಎಂಬ ಮಹದೈಶ್ವರ್ಯವಂತರು ಪತ್ನಿ ಪುತ್ರಿಯರ ಸಮೇತ ಕಳೆದ ವಾರ ಮೈಸೂರಿಗೆ ಬಂದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಶಿವಸಮುದ್ರ ಕೋಲಾರ ಚಿನ್ನದಗಣಿ ಮೊದಲಾದ ಸ್ಥಳಗಳನ್ನು ನೋಡುವುದಕ್ಕಾಗಿ ವಾಪಸುಹೋದರು

* * *

ಸುಗ್ಗೀ ಕುಣಿತವನ್ನು ತೋರಿಸುವುದಕ್ಕಾಗಿ ಮಂಡ್ಯ ತಾಲ್ಲೂಕಿನಿಂದ ಬಂದಿದ್ದ ಮಂಡೀ ಪಟೇಲರೇ ಮೊದಲಾದ ೮೦ ಮಂದಿ ರೈತರಿಗೆ ಮೊನ್ನೆ ಸೋಮವಾರ ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಇಲ್ಲಿನ ನಂಜರಾಜ ಬಹದ್ದೂರರವರ ಸತ್ರದಲ್ಲಿ ಮೋತಿಖಾನೆಯ ಮೆ|| ರಾಮರಾಯರು ನಿಂತು ದಿವ್ಯವಾದ ಔತಣವನ್ನು ಮಾಡಿ ಸಂತೋಷಪಡಿಸಿದರು ಅವರೆಲ್ಲಾ ತಮ್ಮ ಸ್ಥಳವನ್ನು ಕುರಿತು ಪ್ರಯಾಣಮಾಡಿದರು

* * *

ಆನೆಗಳನ್ನು ಹಿಡಿದು ಕಟ್ಟುವುದನ್ನು ನೋಡುವುದಕ್ಕಾಗಿ ಬರೋಡಾ ಸಂಸ್ಥಾನದ ಮಹಾರಾಜರವರ ಸಹೋದರರಾದ ಶ್ರೀಮಂತ ಸಂಪತ್‌ರಾವ್ ಗೈಕ್ವಾಡರವರೂ ಎರಡನೇ ಕುಮಾರರಾದ ಶ್ರೀಮಂತ ಶಿವಾಜಿರಾವ್ ಗೈಕ್ವಾಡರವರೂ ಮದರಾಸ್ ಗವರ್ನರವರ ಕುವರಿಯರು ಕುಮಾರಿಯರೂ, ಬೊಂಬಾಯಿನ ಪ್ರಸಿದ್ಧ ಸಾಹುಕಾರರಾದ ಮೆ|| ನರೋತ್ತಮದಾಸ್‌ಯವರೂ ನಮ್ಮ ಮಹಾರಾಜರವರ ಅತಿಥಿಗಳಾಗಿ ಬಂದಿರುತ್ತಾರೆ

* * *

೨೫ ಮಂದಿ ಬಂಗಾಳಿಗಳು ಸಿಡಿಮದ್ದಿನ ಗುಂಡುಗಳ ಸಮೇತ ರಾಜಧಾನಿಯಲ್ಲಿ ಬಂದಿರುತ್ತಾರೆಂದೂ, ಇವರಲ್ಲಿ ಕೆಲವರನ್ನು ಇಲ್ಲಿನ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆಂದೂ ಬೆಂಗಳೂರಿನ ಪತ್ರಿಕೆಯೊಂದು ಕಳೆದ ವಾರ ಪ್ರಕಟಿಸಿತು ಈ ಭಯಂಕರವಾದ ಸುದ್ದಿಯನ್ನು ಕೇಳಿ ಪೋಲೀಸಿನವರನ್ನು ವಿಚಾರಿಸುವಲ್ಲಿ ಪೋಲೀಸ ಸೂಪರಿಂಟೆಂಡೆಂಟರು ಅದು ನಿಜವಲ್ಲವೆಂದೂ ಬೇಕೆಂದೂ ಕಲ್ಪನೆಮಾಡಿದ ಸುದ್ದಿಯೆಂದೂ ತಿಳಿಸಿರುತ್ತಾರೆ

* * *

ಹಿಂದಿನ ಶನಿವಾರ ರಾತ್ರಿ ರಾಜಧಾನಿಯ ಕೋಟೆಯೊಳಗಿದ್ದ ಮೆ|| ಟಂಕಸಾಲೆ ಸುಬ್ಬರಾಜೇ ಅರಸಿನವರು ೮-೧೦ ವರುಷಗಳಿಂದ ಪಾರ್ಶ್ವವಾಯು ರೋಗವನ್ನು ಅನುಭವಿಸುತ್ತಿದ್ದು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಅರಸುಗಳಲ್ಲಿ ದೊಡ್ಡ ವಂಶಕ್ಕೆ ಸೇರಿದವರಾಗಿ ತುಂಬಾ ಗೌರವವನ್ನು ಪಡೆದಿದ್ದರು ಅವಸಾನಕಾಲದಲ್ಲಿ ಅವರಿಗೆ ಸುಮಾರು ೭೦ ವರುಷ ವಯಸ್ಸಾಗಿತ್ತು, ವೃದ್ಧರಾದ ಎರಡನೇ ಪತ್ನಿಯವರೂ, ಮೈಸೂರು ಇಂಪೀರಿಯಲ್ ಸರ್ವಿಸ್ ಸೈನ್ಯದಲ್ಲಿ ರಿಸಾಲ್ದಾರರಾಗಿರುವ ಮೆ|| ಟಿ ನಂಜರಾಜೇ ಅರಸಿನವರೆಂಬ ಕುಮಾರರೂ, ಪತಿಯ ಗೃಹದಲ್ಲಿರುವ ಒಬ್ಬ ಕುಮಾರಿಯೂ ವಿಯೋಗದುಃಖಕ್ಕೆ ಸಿಕ್ಕಿದರು ಇದಲ್ಲದೆ ಅವರ ಸ್ನೇಹಿತರೂ ಆಶ್ರಯದಿಂದ ಜೀವನಮಾಡುತ್ತಿದ್ದವರೂ ವ್ಯಸನಪಡುತ್ತಿರುವರು

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಏರ್ಪಾಡು ಮಾಡಿರುವ ಆನರರಿ ಮ್ಯಾಜಿಸ್ಟ್ರೇಟರು ಮೂರು ವರುಷ ಕಾಲ ಆ ಕೆಲಸವನ್ನು ನಡಿಸತಕ್ಕದ್ದು.

ಮೈಸೂರು ಪಟ್ಟಣದಲ್ಲಿ ಮುಂದೆ ಹೇಳುವವರನ್ನು ಆನರರಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ —ಮೆ|| ಗಳಾದ ಸಿ ಕೃಷ್ಣರಾಯರು, ಬಾದಾಮಿ ಕೃಷ್ಣರಾಯರು ಮಹಮದ್ ಜಾಫರ್‌ಯವರು, ಪುಟ್ಟಯ್ಯಾಜಿ ಅರಸಿನವರು, ಮೀರ್ ನಿಜಾಮುದ್ದೀನ್ ಅಲ್ಲಿ ಖಾನ್‌ರವರು, ಅಂಬಳೆ ಅಣ್ಣಯ್ಯಪಂಡಿತರು, ರೆವ್ ಜೆ ಡಬ್ಲ್ಯು ಸ್ಲೇಟರ್‌ಯವರು, ಬಸಪ್ಪನವರು, ಜಹಗೀರ್ದಾರ್ ಮಾದಪ್ಪನವರು, ಅನಂತರಾಜಯ್ಯನವರು

ಮೆ|| ಕೆ ರಾಮಸ್ವಾಮಯ್ಯಂಗಾರ್ರನ್ನು ಮಾಲೂರು ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ಮೆ|| ಶಿಂಗ್ರಿ ನಂಜಪ್ಪ ಉರುಫ್ ಚಿನ್ನಪ್ಪನವರನ್ನೂ ಪ್ಲೀಡರ್ ಮತ್ತು ಜವಿನಾನ್‌ದಾರ್ ಮೆ|| ಎಚ ರಾಮಸ್ವಾಮಯ್ಯನವರನ್ನೂ ತುಂಕೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿಯೂ ನೇಮಕಮಾಡಿದೆ

ಮಾಲೂರು ಸಬ ಡಿವಿಜನ್ ಛಾರ್ಜನ್ನು ವಹಿಸಿರುವ ಮೆ|| ಮಹಮದ್ ಓಬಿದುಲ್ಲಾಯವರಿಗೆ ಅವರು ಅ|| ಕಮಿಷನರ್‌ರಾಗಿರುವ ಕಾಲದಲ್ಲಿ ೧ನೇ ಕ್ಲಾಸ ಮ್ಯಾಜಿಸ್ಟ್ರೇಟ ಅಧಿಕಾರ ಕೊಟ್ಟಿದೆ

ಮುಂದೆ ಹೇಳುವ ಸ್ಕೂಲ್ ಡೆಪ್ಯುಟಿ ಇನಸ್ಪೆಕ್ಟರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದೆ ವೆ|| ಎಸ್ ರಾಮರಾಯರು ಕಡೂರಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಮೆ|| ಬಿ ತಿರುಮಲಾಚಾರ್ಯರು ಶಿವಮೊಗ್ಗೆಯಿಂದ ಕೋಲಾರ್ ಡಿಸ್ಟ್ರಿಕ್ಟಿಗೆ ಮೆ|| ಎನ್ ಗೋಪಾಲರಾಯರು ಕೋಲಾರದಿಂದ ಕಡೂರು ಡಿಸ್ಟ್ರಿಕ್ಟಿಗೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ|| ಸರ್ಜನ್ ಮೆ|| ಎಸ್ ಕೆ ಹನುಮಂತರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಾಕ್ಟರಾಗಿಯೂ ಸ್ಯಾನಿಟರಿ ಆಫೀಸರಾಗಿಯೂ ಕೆಲಸ ನೋಡತಕ್ಕದ್ದು

ಮಾರೀಕಣಿವೆ ಡಿವಿಜನ ಅ|| ಇನ್‌ಜನಿಯರ್ ಮೆ|| ಕೆ ಆರ ಶೇಷಾಚಾರ್ಯರಿಗೆ ಡಿಸೆಂಬರ್ ತಾ ೧ ರಿಂದ ಮೂರು ತಿಂಗಳ ಪ್ರಿವಿಲೆಜ ರಜಾ ಕೊಟ್ಟಿದೆ

ಆಲೂರ್ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಎಸ ಅನಂತರಾಮಯ್ಯನವರಿಗೆ ನೊವೆಂಬರ್ ತಾ ೧೬ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ವಾಪಸು ಬರುವ ತನಕ ಹಾಸನದ ತಾಲ್ಲೂಕು ಅಮಲ್ದಾರ್ ಮೆ|| ಎಸ ಎನ್ ಅಪ್ಪಣ್ಣಯ್ಯಂಗಾರ್ಯರು ತಮ್ಮ ಕೆಲಸಗಳೊಂದಿಗೆ ಆಲೂರ್ ಸಬ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು

ತಾಲ್ಲೂಕು ವರ್ತಮಾನಗಳು

ದೊಡ್ಡಬಳ್ಳಾಪುರ —ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಒಟ್ಟು ೯೬ ಹುಡುಗರು ಸೇರಿದ್ದರು ಪರಸ್ಥಳದ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಒಂದೇ ಕಡೆ ಏರ್ಪಾಡು ಮಾಡಿ ಅನುಕೂಲಪಡಿಸಿದ್ದರು ಪರೀಕ್ಷೆಯ ಕಡೇ ದಿನ ಸ್ಕೂಲಿನಲ್ಲಿ ಸರಸ್ವತೀ ಪೂಜೆ ನಡಿಸಿದರು ಇದಕ್ಕಾಗಿ ಅಲ್ಲಿ ಅಮಲ್ದಾರರೇ ಆದಿಯಾಗಿ ಎಲ್ಲಾ ದೊಡ್ಡ ಮನುಷ್ಯರೂ ವಿದ್ಯಾರ್ಥಿಗಳೂ ಸೇರಿದ್ದರು ಸಂಗೀತ ಪೂಜಾದಿಗಳು ನಡೆದ ಮೇಲೆ ಎಲ್ಲರಿಗೂ ಸಕ್ಕರೆ ಗಂಧ, ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಎಲ್ಲರೂ ಮನೆಗಳಿಗೆ ತೆರಳಿದರು —ತಂಜಾವೂರಿನ ವೇದನಾಯಗಂ ಶಾಸ್ತ್ರಿಗಳ ಮೊಮ್ಮಕ್ಕಳಾದ ಮೆ|| ವೇದನಾಯ ಶಾಸ್ತ್ರಿಗಳು ಇಲ್ಲಿಗೆ ಬಂದು ಇದ್ದರು ಹಳೇ ಕಚೇರಿಯಲ್ಲಿ ಒಂದು ಸಾರಿ ಸಂಗೀತವನ್ನು ನಡಿಸಿ, ದೇವರ ದಯೆ, ಪ್ರೀತಿ, ಕರುಣೆಗಳೆಂಬ ಲಕ್ಷಣಗಳ ವಿಷಯ ಹಾಡಿದರು ಪೋಲೀಸ್ ಇನ್‌ಸ್ಪೆಕ್ಟರ್ ಮೆ|| ರಾಜಾರಾಮರಾಯರು ತಮ್ಮ ಮನೆಯಲ್ಲಿ ಸಂಗೀತವನ್ನು ಮಾಡಿಸಿದರು ಇದಕ್ಕೆ ಸಬ್ ರೆಜಿಸ್ಟ್ರಾರವರೂ ಸ್ಟೇಷನ್‌ಮಾಸ್ಟರುಗಳೂ, ಮೆಂಬರುಗಳೂ, ಸೆಟ್ಟಿ ವರ್ತಕರೂ, ಇನ್‌ಜನೀರ್ ಇಲಾಖೆಯ ಅಧಿಕಾರಿಗಳೂ, ಶಿರಸ್ತೆದಾರ್ರು, ಹೆಡ್ ಮಾಸ್ಟರೂ ಮುಂತಾದವರೆಲ್ಲಾ ದಯಮಾಡಿಸಿದ್ದರು ದೇವರ ಜ್ಞಾನದ ವಿಷಯ ಸಂಗೀತ ನಡೆದು ಎಲ್ಲರಿಗೂ ಸಂತೋಷವಾಯಿತು ಆರವದಲ್ಲಿ ಹಾಡಿದ್ದರಿಂದ ಕೆಲವರಿಗೆ ಸರಿಯಾಗಿ ತಿಳಿಯಲಿಲ್ಲ ತರುವಾಯ ಗಂಧ ಪುಷ್ಪ ತಾಂಬೂಲಾದಿಗಳು ಹಂಚಿದ ಮೇಲೆ ಸಂತೋಷಪಟ್ಟುಕೊಂಡು ಹೋದರು — ಇಲ್ಲಿ ೩ ೪ ವರ್ಷಗಳಿಂದ ಪೋಸ್ಟ್ ಮಾಸ್ಟರಾಗಿದ್ದ ಮೆ|| ವಿ ಪ್ರಹಲ್ಲಾದರಾಯರಿಗೆ ಮಾಗಡಿಗೆ ವರ್ಗವಾದದ್ದು ಇಲ್ಲಿನ ಜನರಿಗೆ ತುಂಬಾ ವ್ಯಸನವಾಗಿದೆ ಇವರು ಇಲ್ಲಿನ ಜನರ ಪ್ರೀತಿ ವಿಶ್ವಾಸಗಳನ್ನು ಪಡೆದುಕೊಂಡಿದ್ದರು ಕೆಲಸದಲ್ಲಿ ಬಹು ಜಾಗರೂಕತೆಯುಳ್ಳವರಾಗಿದ್ದರು ಆದರೂ ಇವರಿಗೆ ಪ್ರೊಮೋಷನ್ ಆಗಿ ಹೋಗುವದರಿಂದ ಒಂದು ರೀತಿಯಲ್ಲಿ ಸಂತೋಷಪಡಬೇಕಾಗಿದೆ ಇವರಿಗೆ ಬದಲಿ ಮೆ|| ಸೀತಾರಾಮಯ್ಯರು ಬೆಂಗಳೂರಿನಿಂದ ಬರುತ್ತಾರೆ

ಮೂಡಿಗೆರೆ —ಎಲ್ಲಿ ನೋಡಿದರೂ ಪೈರುಪಚ್ಚೆಗಳಿಂದ ಮನೋಹರವಾಗಿವೆ ಇದನ್ನು ನೋಡಿ ಜನರು ಹರ್ಷಚಿತ್ತರಾಗಿದಾರೆ —ಈಗ್ಗೆ ೨ ೩ ವಾರಗಳಿಂದಲೂ ಮಳೆ ನಿಂತು ಪ್ರತಿ ದಿನವೂ ಪ್ರಾತಃಕಾಲದಲ್ಲಿ ಅಪಾರವಾಗಿ ಹಿಮ ಸುರಿಯುತ್ತಾ ಇರುವದರಿಂದ ಅನೇಕರು ಛಳಿಜ್ವರ ಮುಂತಾದ ರೋಗದಲ್ಲಿ ನರಳುತ್ತಾ ಇದಾರೆ ಈಗ್ಗೆ ಒಂದು ತಿಂಗಳಿಂದಲೂ ಈ ಊರಿಗೆ ಪ್ಲೇಗ್ ವ್ಯಾಪಿಸಿ ೧೦ ೧೫ ಜನಗಳ ವರೆಗೂ ತೀರಿಹೋದರು ಜನರೆಲ್ಲರೂ ಊರು ಬಿಟ್ಟು ಹೋಗಿ ಪಡಿಸಲಲ್ಲಿ ವಾಸಮಾಡುತ್ತಾ ಇದಾರೆ —ಈ ಊರ ಶಾಖೆಯ ವಿಚಾರ ಹೇಳತೀರದು ಎಲ್ಲಿ ನೋಡಿದರೂ ದುರ್ಗಂಧಮಯವಾದ ವಾಸನೆಯೇ ವ್ಯಾಪಿಸಿರುವುದರಿಂದ ಪ್ರತಿ ವರುಷವೂ ಬರುವ ಪ್ಲೇಗಿಗೆ ಇದು ಮೂಲಕಾರಣವೆಂದೇ ಹೇಳಬಹುದು —ಧಾರಣೆವಾಸಿಯಂತೂ ದಿನದಿನಕ್ಕೆ ಜಾಸ್ತಿಯಾಗುತ್ತಾ ಇದೆಯೇ ಹೊರತು ಕಮ್ಮಿಯಾಗುವ ಸಂಭವವಿಲ್ಲ ಫಸಲು ಕಟಾವಾದ ಮೇಲಾದರೂ ಸ್ವಲ್ಪ ಕಮ್ಮಿಯಾಗಬಹುದೆಂಬ ನಿರೀಕ್ಷಣೆ ಇದೆ —ಈ ಊರಿನಲ್ಲಿ ಭಾನುವಾರ ಸಂತೆಯಾಗುತ್ತದೆ ಈ ಸಂತೆಯಲ್ಲಿ ವಿಶೇಷವಾಗಿ ದಿನಸಿಗಳನ್ನು ಕೊಂಡುಕೊಳ್ಳುವವರು ಕೇವಲ ನಿರ್ಗತಿಕರು ವಿನಹ ಹಣವಂತರು ಅತಿ ವಿರಳ ಇಂಥಾದ್ದರಲ್ಲಿ ಸಂತೆಯಲ್ಲಿ ವರ್ತಕರು ಕವಡ್ಡಾ ತೂಕದಿಂದಲೂ, ಹೆಚ್ಚಾದ ಧಾರಣೆಯಿಂದಲೂ ಬಡವರಿಗೊಂದುತರನಾಗಿಯೂ ಬಲ್ಲಿದರಿಗೊಂದುತರನಾಗಿಯೂ ವ್ಯಾಪಾರ ಮಾಡುವದು ತುಂಬಾ ಶೋಚನೀಯವಾಗಿದೆ ಈ ರೀತಿಯಾದ ವ್ಯಾಪಾರವು ಇದೊಂದು ಸಂತೆಯಲ್ಲದೆ ಬೇರೆ ಯಾವ ಕಡೆಯೂ ನಡೆಯುವಂತಿಲ್ಲ ಈ ವಿಷಯದಲ್ಲಿ ನಮ್ಮ ಪೋಲೀಸ್ ಇನ್‌ಸ್ಪೆಕ್ಟರು ಪ್ರವೇಶಿಸಿ ಅಂಥಾ ವರ್ತಕರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಬಡ ಜನರ ಸ್ತೋತ್ರಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇನೆ ಈ ಊರಿಂದ ಬೇಲೂರಿಗೆ ಹೋಗುವ ರಸ್ತೆಯ ಕಾಮಗಾರಿಯನ್ನು ಈ ಸಲ ಇಲ್ಲಿನ ಕಂಟ್ರಾಕ್ಟರ್ ಮೆ|| ಗೋವಿಂದರಾಜು ಮೊದಲಿಯಾರ್ರು ವಹಿಸಿ ಮಾಡಿಸುತ್ತಾ ಇದಾರೆ ಇವರಾದರೂ ಈ ರಸ್ತೆಯನ್ನು ಕೂಡಿದ ಮಟ್ಟಿಗೂ ಕ್ರಮಪಡಿಸಿ ಇದರಿಂದುಂಟಾಗುವ ಕೀರ್ತಿಗೆ ಭಾಗಿಗಳಾಗುವರೆಂದು ಜನರು ಎದುರುನೋಡುತ್ತಾ ಇದಾರೆ ಈ ರಸ್ತೆಯ ಉಭಯಪಾರ್ಶ್ವಗಳಲ್ಲೂ ರಸ್ತೆಯ ಕಡೆಗೆ ಬಂದಿರುವ ಪಿದಿರು ಮತ್ತು ಇತರ ಶಾಖೆಗಳು ಪ್ರಯಾಣಿಕರಿಗೆ ತೊಂದರೆಯಾಗಿರುವವು ಪ್ರಯುಕ್ತ ಮೊದಲು ಇದನ್ನು ಕಡಿಸಿ ಅನಂತರ ರಸ್ತೆ ಕಾಮಗಾರಿಗೆ ಶುರು ಮಾಡುವದು ಉತ್ತಮ

ಚನ್ನಗಿರಿ.—ಈ ವರುಷ ವಿಜಯದಶಮಿ ದಿವಸ ಮಾಮೂಲ್ ಮೇರೆಗೆ ಬನ್ನಿಮಂಟಪಕ್ಕೆ ಚನ್ನಗಿರಿ ರಂಗನಾಥ ದೇವರ ಉತ್ಸವವು ಸಾಯಂಕಾಲ ೫ ಗಂಟೆಗೆ ಬಂದು ಇಳಿಯಿತು ಮುದ್ದೇನಹಳ್ಳಿ ಪ್ರಾಣದೇವರ ಉತ್ಸವವು ಗಿರಿಯ ಮೇಲೆ ದೇವಸ್ಥಾನವನ್ನು ಬಿಟ್ಟು ಸ್ವಲ್ಪ ದೂರದಲ್ಲಿ ಬರುತ್ತಾ ಇರುವಾಗ್ಗೆ ಚನ್ನಗಿರಿ ವರ್ತಕರಾದ ಶಿವಾಚಾರದ ಜನಗಳು ಪೇಟೆ ಬಸವಣ್ಣದೇವರನ್ನು ಈ ಬನ್ನಿಮಂಟಪದಿಂದ ಸುಮಾರು ೧೦೦ ಗಜದಿಂದ ಮುಂದೆ ವರ್ತಕರೆಲ್ಲಾ ಸೇರಿಕೊಂಡು ಬನ್ನಿ ಮುಡಿಯುವ ಕೆಲಸ ಪೂರೈಸಿಕೊಂಡು ತೆಂಗಿನಕಾಯಿ ಇಟ್ಟು ಗುರಿ ಹೊಡೆಯುತ್ತಾ ಇದ್ದ ಕೆಳಗಿನಮನೆ ನಾಡಿಗ ಬಸಪ್ಪನೆಂಬುವರು ಮೊದಲನೇ ಗುಂಡು ತಪ್ಪಿ ಹೊಡೆದರಂತೆ ಪುನಃ ಬಂದೂಕು ಹಾರುವಮಾಡಿ ಗುರಿ ಹೊಡೆಯಲಾಗಿ ಇದರಿಂದ ಕೆಳಭಾಗದಲ್ಲಿ ಕಾಲುದಾರಿಯೊಳಗೆ ಚನ್ನಗಿರಿಯಿಂದ ಮುದ್ದೇನಹಳ್ಳಿಗೆ ಉತ್ತರ ಮುಖವಾಗಿ ಹೋಗುತ್ತಾ ಇದ್ದ ೪ ಹುಡುಗರ ಪೈಕಿ ಮುದ್ದೇನಹಳ್ಳಿ ಪ್ರಾಣದೇವರ ಅರ್ಚಕ ರಾಮಯ್ಯನ ಮಗಳು ೧೨ ವರುಷದ ಹುಡುಗಿಗೆ ತಗಲಿ ಎಡದ ಕೈ ಮುರಿದುಕೊಂಡು ಪಕ್ಕೆಯಲ್ಲಿ ಗೋಲಿ ಹೊಕ್ಕು ಆಚೆ ಪಕ್ಕೆಯಲ್ಲಿ ಹೊರಟುಹೋದ ಕೂಡ್ಲೆ ಹುಡುಗಿಯು ಮಲಗಿ ಪ್ರಾಣವನ್ನು ಬಿಟ್ಟಿತು ಬಾಕಿ ಹುಡುಗರು ಓಡಿ ಹೋಗಿ ಅವರ ಮನೆಯಲ್ಲಿಯೂ ಗ್ರಾಮದಲ್ಲಿಯೂ ತಿಳಿಸಿದರು ಈ ಶಬ್ದವನ್ನು ಬಸವಣ್ಣದೇವರ ಹತ್ತಿರ ಇದ್ದವರೆಲ್ಲಾ ಕೇಳಿ ಗಾಬರಿಯಾದರು ಪೈಕಿ ವರ್ತಕ ಮಹಲಿಂಗಪ್ಪನೆಂಬುವರು ಜ್ಞಾನತಪ್ಪಿ ಬಿದ್ದು ನಾಲ್ಕು ಜನ ಹೊತ್ತುಕೊಂಡು ಅವರ ಮನೆಗೆ ತಂದುಹಾಕಿದ್ದಾಯಿತು ಇವರಿಗೆ ಹೀಗಾಗಲು ಕಾರಣವೇನೋ ತಿಳಿಯದು ಪೋಲೀಸಿನವರೂ ಪಟೇಲರೂ ಗ್ರಾಮಸ್ಥರೂ ಆ ರಾತ್ರಿ ಅಲ್ಲಿ ಕಾವಲಿದ್ದು ಬೆಳಗ್ಗೆ ಪೋಲೀಸ್ ಆಫೀಸರೂ ಅಮಲ್ದಾರರೂ ಸೇರಿ ಮಹಜರು ಮಾಡಿಸಿ ಚನ್ನಗಿರಿ ಆಸ್ಪತ್ರೆಗೆ ಕಳುಹಿಸುವರೆ ಡಾಕ್ಟರು ಮೈಸೂರಿಗೆ ಹೋಗಿದ್ದ ಕಾರಣ ವಾರಸುದಾರರ ಮುಖಾಂತರ ಚಿಂಕಿಪುರದ ಆಸ್ಪತ್ರೆಗೆ ಶವವನ್ನು ಕಳುಹಿಸಿ ನಾಡಿಗ ಬಸಪ್ಪನನ್ನು ಇನಬಿಮಾಶಿಯಾಗಿ ಮನಸ್ಸುಪೂರ್ವಕ ಮಾಡಿದ ಕೃತ್ಯವಲ್ಲ ಘರಾಮೋಶಿಯಿಂದ ಗೋಲಿ ಬಿದ್ದು ಸತ್ತದ್ದು ನಿಜ ಎಂದು ಒಪ್ಪಲಾಗಿ ಕೂಡ್ಲೆ ದಸ್ತಗಿರಿ ಮಾಡಲು ಹಾಜರು ಇದ್ದ ವಕೀಲರು ವಾದ ಮಾಡಿ ೫೦೦ ರೂಪಾಯಿನ ಜಾಮೀನ್ ಮೇಲೆ ಅಪರಾಧಿಯನ್ನು ಬಿಟ್ಟಿದಾರೆ ಈ ಮೊಕದ್ದಮೆ ಶಿವಮೊಗ್ಗಾ ಅ|| ಕಮಿಷನರ್ ಮೆ|| ತಂಬೂಶೆಟ್ಟಿರವರ ಕೋರ್ಟಿನಲ್ಲಿ ನಡೆಯುವುದು —ಇಲ್ಲಿ ಪೈರುಗಳೆಲ್ಲಾ ಕಟಾವಾಗಿದೆ ಧಾರಣೆ ರಾಗಿ ರೂಪಾಯಿಗೆ ೧೬-೧೭ ಸೇರು, ಜೋಳ ೧೭ ೧೮ ಸೇರು, ಅಕ್ಕಿ ೮ ೯|| ಸೇರು ಸಿಕ್ಕುತ್ತೆ ಮುಂದೆ ಧಾರಣೆ ಇನ್ನೂ ಕಮ್ಮಿಯಾಗಬಹುದಾಗಿ ಕಾಣುತ್ತೆ —ಈ ಪ್ರಾಂತ್ಯ ಗೋಶಾಲೆಗಳನ್ನು ದುಷ್ಟರು ಕೊಲ್ಲುವದು ತಪ್ಪಲಿಲ್ಲ

ಚಿಂತಾಮಣಿ.—ಈ ಗ್ರಾಮದ ಮಹನೀಯರು ಈ ವರುಷದ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬಂದಿದ್ದ ವಿದ್ಯಾರ್ಥಿಗಳಿಗೆ ಕಲ್ಪಿಸಿದ್ದ ಭೋಜನಾದ್ಯುಪಚಾರಗಳಿಂದ ತೃಪ್ತರಾದ ಗ್ರಾಮಾಂತರದ ಬಾಲಕರು ಕ್ರಮವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಆ ಮಹನೀಯರುಗಳಿಗೆ ಸಮರ್ಪಿಸಲು ಅನುಕೂಲಿಸುವಂತೆ ಇಲ್ಲಿನ ಸ್ಕೂಲ್ ಹೆಡ್‌ಮಾಸ್ಟರವರಿಂದ ಸ್ಕೂಲ್‌ಕಟ್ಟಡದಲ್ಲಿ ತಾ ೧೮ನೇ ಗುರುವಾರ ಸಾಯಂಕಾಲ ೫ ಘಂಟೆಗೆ ಒಂದು ಸಭೆಯು ಸೇರಿಸಲ್ಪಟ್ಟಿತು ತಾಲ್ಲೂಕ್ ಶಿರಸ್ತೆದಾರ್ರು ಮೆ|| ನಾರಾಯಣರಾಯರು ಅಗ್ರಾಸನವನ್ನೂ, ಸಬ್ ಡಿವಿಜನ್ ಆಫೀಸರ್ ಮೆ|| ಆನಂದರಾಯರವರೂ, ಸಬ್ ರಿಜಿಸ್ಟ್ರಾರ್ರವರೂ, ಸ್ಕೂಲ್‌ಗಳ ಅಸಿಸ್ಟೆಂಟ್ ಡೆ|| ಇ|| ರವರಾದ ಆಳ್ವಾರಯ್ಯಂಗಾರ್ರವರೂ, ಗ್ರಾಮದ ವರ್ತಕ ಮಹಾಶಯರೂ ಮತ್ತು ಪರೀಕ್ಷಾ ಬಾಲಕರೂ, ಸಹಾಸಭೆಯನ್ನೂ ಅಲಂಕರಿಸಿದ್ದರು ಪ್ರಾರಂಭದಲ್ಲಿನ ಎ ವಿ ಸ್ಕೂಲ್ ಹೆ|| ಮಾ|| ಮೆ|| ಕೃಷ್ಣರಾಯರು ಪರಸ್ಥಳದ ವಿದ್ಯಾರ್ಥಿಗಳಿಗೆ ಭೋಜನ ವಿಷಯದಲ್ಲಿ ಗ್ರಾಮಸ್ಥರ ಕರ್ತವ್ಯವನ್ನು ಸೂಚಿಸುವ ಒಂದು ಉಪನ್ಯಾಸವನ್ನು ಮಾಡಿದರು ಪರೀಕ್ಷಾ ಹುಡುಗರ ಪರವಾಗಿ ಯೇರುಶಾಸ್ತ್ರಿ ಸ್ಕೂಲ್ ಹೆಡ್ ಮಾಸ್ಟರು ಎಸ್ ಶೇಷಪ್ಪನವರು ಇಲ್ಲಿನ ವರ್ತಕ ಮಹಾಶಯರುಗಳಿಗುಂಟಾಗಿರುವ ಧರ್ಮದ ಬುದ್ಧಿಯನ್ನು ಕುರಿತೂ, ಇವರನ್ನು ಈ ರೀತಿ ಧರ್ಮ ಮಾರ್ಗ ಪ್ರವರ್ತಕರನ್ನಾಗಿ ಮಾಡಿದ ಮೆ|| ಅಮಲ್ದಾರ್ ಎಫ್ ಎಸ್ ರಾಘವಾಚಾರ್ಯರವರ ಮೇಲ್ಪಂಕ್ತಿಯಿಂದ ಈ ವರ್ತಕ ಕಾರ್ಯಭಾಗದಲ್ಲಿ ಭಾಗಿಗಳಾಗಿ ಕೇವಲ ಮುತುವರ್ಜಿಯಿಂದ ಕಾರ್ಯ ನಡಿಸಿದ ಮೆ|| ಶಿರಸ್ತೆದಾರ್ ನಾರಾಯಣರಾಯರ ಪರೋಪಕಾರ ಗುಣವನ್ನು ಕುರಿತೂ ಜ್ಞಾನಮಾರ್ಗ ನಿರತರಾದ ಇಲ್ಲಿನ ಹೆಡ್ ಮಾಸ್ಟರ್ ಮೆ|| ರಾ ವಿ ಕೃಷ್ಣರಾಯರು ವಗೈರೇರಿಂದ ಅಲಂಕೃತವಾಗಿ ಮೆ|| ರಾಘವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಥಿಯೊಸಾಫಿಕಲ್ ಮತ್ತು ಸನ್ಸ್ ಆಫ್ ಇಂಡಿಯಾ ಎಂಬ ಸೊಸೈಟಿಗಳ ಕಾರ್ಯಭಾಗಗಳಿಂದ ಜನಗಳಿಗೆ ಉಂಟಾಗತಕ್ಕ ಪ್ರಯೋಜನಗಳನ್ನು ಕುರಿತೂ ಒಂದು ಉಪನ್ಯಾಸವನ್ನು ಮಾಡಿ ಕೃತಜ್ಞತಾ ರೂಪವಾದ ವಂದನೆಗಳನ್ನು ಸಮರ್ಪಿಸಿ ಶ್ರೇಯಃ ಪ್ರಾರ್ಥನೆಯೊಂದಿಗೆ ತಮ್ಮ ಉಪನ್ಯಾಸವನ್ನು ಮುಗಿಸಿದರು ಇಲ್ಲಿನ ವರ್ತಕ ಶಿಖಾಮಣಿಗಳಾದ ರಾಮಭದ್ರಯ್ಯ ಶೆಟ್ಟರೂ, ಶ್ರೀರಾಮ ಶೆಟ್ಟರೂ ಧರ್ಮ ಮಾರ್ಗಾವಲಂಬಿಗಳು ಮಾಡತಕ್ಕ ಕಾರ್ಯಗಳನ್ನು ಕುರಿತೂ ಇಲ್ಲಿನ ಆಸ್ಪತ್ರೆ ಹನುಮಂತಪ್ಪನವರು ಹುಡುಗರು ಆರೋಗ್ಯ ಭಾಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕೆಂಬ ವಿಷಯವನ್ನು ಕುರಿತೂ ಉಪನ್ಯಾಸಗಳನ್ನು ಮಾಡಿದರು ಗರ್ಲ್ಸ್ ಸ್ಕೂಲ್ ಅ|| ಮಾ|| ಸುಬ್ರಹ್ಮಣ್ಯಯನವರು ಘನವಾದ ಸಂಗೀತದಿಂದ ಸಭೆಯು ಮುಕ್ತಾಯವಾಗುವ ಕಾಲದಲ್ಲಿ ಸಭಾಸದರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು ಸಭೆಯು ಬರಖಾಸ್ತಾಯಿತು ಮರುದಿನ ಕಾರುಪಾಕುಲ ತಿಮ್ಮರಾಜಯ್ಯನವರು ವಗೈರೇರಿಂದ ನಡಿಸಲ್ಪಟ್ಟ ಔತಣ ಭೋಜನಾ ನಂತರ ಹುಡುಗರೆಲ್ಲರೂ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಮೇಲ್ಕಂಡ ಧರ್ಮ ಕಾರ್ಯಕ್ಕೆ ಮೂಲರೂಪವಾದ ಥಿಯೊಸಾಫಿಕಲ್ ಸೊಸೈಟಿಗೆ ಮುಖ್ಯ ಮೆಂಬರುಗಳಾಗಿಯೂ, ಸನ್ಸ್ ಆಫ್ ಇಂಡಿಯಾ ಎಂಬ ಸಂಘಕ್ಕೆ ವಾರ್ಡರಾಗಿಯೂ ನಿಂತು ಸಂಘದ ಕಾರ್ಯಗಳನ್ನು ಕ್ರಮವಾಗಿ ನಡಿಸುತ್ತಾ ಗ್ರಾಮಸ್ಥರಲ್ಲಿ ಕೇವಲ ಅಭಿಮಾನವನ್ನು ಇಟ್ಟುಕೊಂಡಿದ್ದ ವರ್ಗಪಟ್ಟ ಮೆ|| ಅಮಲ್ದಾರ್ ರಾಘವಾಚಾರ್ಯರ ಹೆಸರನ್ನು ಈ ಗ್ರಾಮದಲ್ಲಿ ಶಾಶ್ವತಗೊಳಿಸಲು ಹಾಲಿ ಸೊಸೈಟಿಯವರೂ ಥಿಯೊಸಾಫಿಕಲ್ ಸೊಸೈಟಿಗಾಗಿ ದಿವ್ಯವಾದ ಒಂದು ಭವನವನ್ನು ಕಟ್ಟಿಸಿ ಅದಕ್ಕೆ ಶ್ರೀರಾಘವ ಮಂದಿರವೆಂಬ ಹೆಸರನ್ನು ಕೊಟ್ಟಿರುವ ವಿಷಯವನ್ನು ತಿಳಿಸಲು ಕೇವಲ ಸಂತೋಷಗೊಳ್ಳುವೆವು.

ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರಾದ ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಆತಿಥ್ಯಗಳು

ಶಿವಮೊಗ್ಗೆಯ ಜೋಗಿಗೆ ದಯಮಾಡಿದ್ದು

ತಾ ೨೩ನೇ ಮಂಗಳವಾರ ಬೆಳಿಗ್ಗೆ ೮ ಗಂಟೆಗೆ ರೆಸಿಡೆಂಟರವರು ರೈಲ್ವೇ ಸ್ಟೇಷನನ್ನು ತಲುಪಿದರು ಮತ್ತು ಸ್ಥಳಾಧಿಕಾರಿಗಳಾದ ಡೆಪ್ಯುಟಿ ಕಮಿಷನರೂ, ಸೆಷನ್ಸ್ ಜಡ್ಜ್ ಮೆ|| ಮೀರ್ ಹಂಜಾ ಹುಸೇನ್ ಸಾಹೇಬರೂ, ಪೋಸ್ಟ್ ಆಫೀಸಿಯ ಸೂಪರಿಂಟೆಂಡೆಂಟರವರೂ, ಮುನ್ಸಿಫರವರೂ, ಘನ ಬ್ರಿಟಿಷ್ ಬ್ಯಾಂಕ್ ಧೊರೆಯವರೂ, ಮೆ|| ಶಂಕರ ನಾರಾಯಣ ರಾಯರೂ, ಇತರ ದೊಡ್ಡ ಮನುಷ್ಯರೂ ಸ್ಟೇಷನ್ನಲ್ಲಿ ಕಾದಿದ್ದು ಅವರನ್ನು ಎದುರುಗೊಂಡರು ಅಂಗರಕ್ಷಕಾಧಿಕಾರಿಯಾದ ಮೆ|| ರಾಜೋ ಜಿರಾಯರು ತಕ್ಕ ಪೋಲೀಸ್ ಸಿಬ್ಬಂದಿಯೊಂದಿಗೆ ಯಾವ ಗಲಾಟೆಯೂ ಇಲ್ಲದಂತೆ ಮುತುವರ್ಜಿಯಿಂದ ತಮ್ಮ ಕೆಲಸವನ್ನು ನೆರವೇರಿಸಿದರು ರೆಸಿಡೆಂಟರವರು ಈ ಪೋಲೀಸ್ ಗಾರ್ಡರನ್ನು ಪರೀಕ್ಷಿಸಿ ನೋಡಿ, ತಮ್ಮ ಸಲೂನ್ ಗಾಡಿಯಲ್ಲೇ ಉಳುಕೊಂಡರು ನೇರ ರಸ್ತೆಯು ನಾನಾ ವಿಧ ತೋರಣಗಳಿಂದಲೂ, ಕಮಾನುಗಳಿಂದಲೂ ಅಲಂಕಾರವಾಗಿತ್ತು ತಾಲ್ಲೂಕ್ ಕಚೇರಿ ಮತ್ತು ಮಿಷನ್ ಸ್ಕೂಲ್ ಕಾಂಪೌಂಡುಗಳ ಎದುರಿಗಿರುವ ದೊಡ್ಡ ಚೌಕದಲ್ಲಿ ಎಲೆಗಳಿಂದ ಅಲಂಕೃತವಾದ ಒಂದು ದೊಡ್ಡ ಮಂಟಪವು ಕಂಗೊಳಿಸುತ್ತಿತ್ತು ವೈಸ್‌ರಾಯಿ ಪ್ರಭುಗಳ ಸವಾರಿಯು ಮಧ್ಯಾಹ್ನ ಸುಮಾರು ೨| ಗಂಟೆಗೆ ಸ್ಟೇಷನಿಗೆ ಚಿತ್ತೈಸಿತು ರೆಸಿಡೆಂಟರವರೇ ಮೊದಲಾದವರು ಪ್ರಭುಗಳನ್ನು ಭೇಟಿಮಾಡಿದರು ಅವರನ್ನು ದರ್ಶನ ಮಾಡುವದಕ್ಕಾಗಿ ಪ್ರಜಾಸಮೂಹವು ತಂಡೋಪತಂಡವಾಗಿ ರಸ್ತೆಯ ಉದ್ದಕ್ಕೂ ಕಾದಿತ್ತು ಈ ಮಧ್ಯೆ ಮೋಟಾರ್ ಗಾಡಿಗಳು ಒಂದರ ಹಿಂದೆ ಒಂದರಂತೆ ಜೋಗಿನ ಕಡೆಗೆ ಹೋಗುತ್ತಿದ್ದವು ಸ್ವಲ್ಪ ಹೊತ್ತಾದ ನಂತರ ವೈಸ್‌ರಾಯಿಯವರ ಗಾಡಿಯೂ, ಹಿಂದೆ ಕಿವಾರ್ಜನರ ಗಾಡಿಯೂ ಹೋದವು ಸುಮಾರು ೫|| ಗಂಟೆಗೆ ಅವರು ಸಾಗರವನ್ನು ಸೇರಿ, ಮುಸಾಫರ್ ಬಂಗಲೆಯಲ್ಲಿ ಸ್ವಲ್ಪ ಹೊತ್ತು ಇಳುಕೊಂಡರು ಅಲ್ಲಿ ಅನೇಕ ಮಕ್ಕಳು ಅವರನ್ನು ನೋಡಿ ಉತ್ಸಾಹಧ್ವನಿ ಮಾಡಿದರು ಊರು ಬಹಳ ಅಲಂಕಾರ ಮಾಡಲ್ಪಟ್ಟಿತ್ತು ಪ್ರಭುಗಳು ಅಲ್ಲಿಂದ ಹೊರಟು ನದಿಯ ತೀರವನ್ನು ಸೇರಿದರು ಅದನ್ನು ದಾಟಿ, ಕೆಲವರು ರಿಕ್ಷಾ ಗಾಡಿಗಳಲ್ಲಿಯೂ, ಇತರರು ಟಾಂಗಾ ಗಾಡಿಗಳಲ್ಲಿಯೂ ಕುಳಿತು ಗುಂಡಿಯ ಕ್ಯಾಂಪನ್ನು ತಲುಪಿದರು ಅಲ್ಲಿ ಕರ್ನಲ್ ಜೋನ್ಸ್ ಸಾಹೇಬರೂ, ಸ್ಟೀಲ್ ಸಾಹೇಬರೂ ವೈಸ್‌ರಾಯರನ್ನೂ ಅವರ ಪತ್ನೀರವರನ್ನೂ ರೆಸಿಡೆಂಟರನ್ನೂ ಸಂಧಿಸಿದರು ಭೋಜನಾನಂತರ ಎಲ್ಲರೂ ಗುಂಡಿಯ ಬಳಿ ಸಿದ್ಧವಾಗಿದ್ದ ಪ್ಲಾಟ್‌ಫಾರಮಿನ ಹತ್ತಿರಕ್ಕೆ ಹೋದರು ಮನೋಹರವಾದ ಬೆಳದಿಂಗಳು ಇದ್ದದ್ದರಿಂದ ನೋಟವು ಮಹಾ ಹರ್ಷಕರವಾಗಿತ್ತು ಮತ್ತು ಜನರು ಹಚ್ಚಿದ್ದ ಅನೇಕ ದೀಪಗಳಿಂದ ನೀರು ಬೀಳತಕ್ಕ ಸ್ಥಳವೆಲ್ಲವೂ ಬಹು ಅಲಂಕಾರವಾಗಿ ಕಾಣುತ್ತಿತ್ತು ಗುಂಡಿಯ ಒಳಗೆ ಅನೇಕ ಕೆಂಪು ಹಗಲು ಬತ್ತಿಗಳನ್ನು ಹಚ್ಚಿದರು

೨೪ನೇ ತಾ ಸಾಯಂಕಾಲ ಆ ಸ್ಥಳವನ್ನು ಬಿಟ್ಟು ವೈಸ್‌ರಾಯಿಯವರು ತೆರಳಿ ಆನಂದಪುರದ ಮುಸಾಫರ ಬಂಗಲೆಯಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರು ಅವರು ಸುಮಾರು ೬-೪೦ ಗಂಟೆಗೆ ಶಿವಮೊಗ್ಗೆಯನ್ನು ತಲುಪಿ, ನೆಟ್ಟಗೆ ರೈಲ್ ಗಾಡಿಯಲ್ಲಿ ಮೈಸೂರು ಕಡೆ ಪ್ರಯಾಣ ಬೆಳಸಿದರು ಶಿವಮೊಗ್ಗೆಯ ದೊಡ್ಡ ರಸ್ತೆಯಲ್ಲಿ ಅನೇಕ ದೀಪಗಳು ಪ್ರಕಾಶಿಸುತ್ತಿದ್ದವು ಈ ಸಂದರ್ಭದಲ್ಲಿ ಪ್ರಜಾ ಸಮೂಹಕ್ಕೆ ವೈಸ್‌ರಾಯರ ಮರುಭೇಟಿಯಾಯಿತು

ಫ್ರೆಂಚ್‌ರಾಕ್ಸ್ ಸ್ಟೇಷನ್ನಲ್ಲಿ

ಫ್ರೆಂಚ್‌ರಾಕ್ಸ್ ರೈಲ್ವೆ ಸ್ಟೇಷನ್‌ನಲ್ಲಿ ವೈಸ್‌ರಾಯಿಯವರನ್ನು ಸಂಧಿಸಿ ಅವರನ್ನು ರಾಜಧಾನಿಗೆ ದಯಮಾಡಬೇಕೆಂದು ಕೇಳಿಕೊಳ್ಳುವುದಕ್ಕಾಗಿ ಮೊದಲನೆಯ ಕೌನ್ಸಲರ್ ಮೆ|| ಕೆ ಪಿ ಪುಟ್ಟಣ್ಣಶೆಟ್ಟರೂ, ಅ|| ರೆಸಿಡೆಂಟ್ ಮೆ|| ಕೋಪ್ಲೆಂಡ್ ಯವರೂ, ಸರ್ದಾರ್ ಗೋಪಾಲಕೃಷ್ಣೇ ಅರಸಿನವರೂ ಮೊದಲೇ ರಾಜಧಾನಿಯಿಂದ ಹೋಗಿ ಕಾದಿದ್ದರು ಅಲ್ಲಿ ದಿವ್ಯವಾದ ಚಪ್ಪರವು ಹಾಕಿ ಸ್ಟೇಷನ್ ಅಲಂಕಾರ ಮಾಡಲ್ಪಟ್ಟಿತ್ತು ಮುಖ್ಯರಾದ ಸ್ಥಳೀಯ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಪ್ಲಾಟ್‌ಫಾರಮಿನಲ್ಲಿ ಕಾದಿದ್ದರು ಸ್ಪೆಷಲ್ ಗಾಡಿಯು ಸ್ಟೇಷನ್‌ನಲ್ಲಿ ಸ್ವಲ್ಪ ಹೊತ್ತು ನಿಂತುಕೊಂಡಿತು ವೈಸ್‌ರಾಯಿಯವರು ಪ್ರಾತಃಕಾಲದ ಭೋಜನವನ್ನು ಗಾಡಿಯೊಳಗೇ ಮಾಡಿದ ಮೇಲೆ ಮೇಲ್ಕಂಡ ಪ್ರತಿನಿಧಿಗಳಿಗೆ ಭೇಟಿ ದಯಪಾಲಿಸಿದರು ಕೊಡಲೇ ಗಾಡಿಯು ಅಲ್ಲಿಂದ ರಾಜಧಾನಿಯ ಕಡೆ ಹೊರಟಿತು

ರಾಜಧಾನಿಯಲ್ಲಿ ನಡೆದ ವಿಭವಗಳು

ನವಂಬರ್ ತಾ ೨೫ನೇ ಗುರುವಾರ ಬೆಳಿಗ್ಗೆ —ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರಾದ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಪರಿವಾರ ಸಹಿತ ಮೈಸೂರಿಗೆ ಕಳೆದ ಗುರುವಾರ ಬೆಳಿಗ್ಗೆ ದಯಮಾಡಿದರು ಅವರನ್ನು ಎದುರುಗೊಳ್ಳುವುದಕ್ಕಾಗಿ ಪಟ್ಟಣದಲ್ಲಿ ರಿಸೆಪ್ಷನ್ ಕಮಿಟಿಯವರು ಅನೇಕ ನೇತ್ರಾನಂದಕರವಾದ ಏರ್ಪಾಡುಗಳನ್ನು ಮಾಡಿದ್ದರು ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಚಿತ್ರಕೆಲಸ ಮಾಡಿದ ವಿಸ್ತಾರವಾದ ಚಪ್ಪರವನ್ನೂ ಭುವನೇಶ್ವರಿಯನ್ನೂ ಕಟ್ಟಿಸಿ, ದಿನಸಾವರಿ ಅಲಂಕಾರಗಳನ್ನು ಮಾಡಿಸಿದ್ದರು ಶ್ರೀಮನ್ಮಹಾರಾಜರವರು, ಶ್ರೀಮದ್ಯುವರಾಜರವರು, ರಾಜಬಂಧುಗಳು ದಿವಾನರೇ ಮೊದಲಾದ ಅಧಿಕಾರಿಗಳು, ಎಲ್ಲಾ ಕೋಮುಗಳ ಮುಖ್ಯ ದೊಡ್ಡ ಮನುಷ್ಯರು, ಯೂರೋಪ್ಯನ್ ಸರ್ದಾರರು, ಕೊಡಗಿನ ಮುಖ್ಯ ಪ್ರಜೆಗಳು, ಈ ಮೊದಲಾದವರೆಲ್ಲಾ ದಿವ್ಯವಾದ ದರ್ಬಾರ್ ದಿರಸುಗಳನ್ನು ಧರಿಸಿಕೊಂಡು ಕಾದಿದ್ದರು ಬೆಳಿಗ್ಗೆ ೧೦-೩೦ ಘಂಟೆಗೆ ಸರಿಯಾಗಿ ಎರಡು ಎಂಜಿನ್‌ಗಳು ಕಟ್ಟಿದ್ದ ರೈಲ್ ಗಾಡಿಯು ವೈಸ್‌ರಾಯಿಯವರನ್ನು ಸ್ಟೇಷನ್‌ಗೆ ಕರೆದು ತಂದಿತು ಹೊರಗಡೆ ಬ್ಯಾಂಡ್ ವಾದ್ಯಗಾರರು ಸುಸ್ವಾಗತ ಸೂಚಕವಾದ ಇಂಗ್ಲಿಷ್ ನೋಟುಗಳನ್ನು ನುಡಿಸುತ್ತಿರುವಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಸಹಿತರಾಗಿ ಗಾಡಿಯಿಂದ ಇಳಿದರು ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಅವರ ಭೇಟಿಯನ್ನು ತೆಗೆದುಕೊಂಡು ಸಂಭಾಷಣೆ ಮಾಡುತ್ತಿದ್ದಾಗ್ಗೆ ಕೋಟೆ ಕೊತ್ತಲದಿಂದ ಗೌರವಾರ್ಥವಾದ ೩೧ ತೋಪುಗಳು ಹಾರಿದವು ಬ್ರಿಟಿಷ್ ರೆಸಿಡೆಂಟರಾದ ಮೆ|| ಫ್ರೇಸರ್ ಯವರು ಮುಂದೆ ಹೋಗಿ ವೈಸ್‌ರಾಯಿಯವರನ್ನು ಕಾಣಿಸಿಕೊಂಡು, ಪ್ಲಾಟ್‌ಫಾರಮಿನಲ್ಲಿದ್ದ ಯೂರೋಪ್ಯನ್ ಉದ್ಯೋಗಸ್ಥರನ್ನು ಪ್ರಭುಗಳಿಗೆ ಪರಿಚಯ ಮಾಡಿಸಿದರು ತರುವಾಯ ಶ್ರೀಮನ್ಮಹಾರಾಜರವರು ವೈಸ್‌ರಾಯಿಯವರ ಕೂಡ ಮಾತನಾಡುತ್ತಾ ಕರೆದುಕೊಂಡು ಹೋಗಿ, ಸಾಲಾಗಿ ನಿಂತಿದ್ದ ೧೩ ಮಂದಿ ಹುದ್ದೇದಾರರೇ ಮೊದಲಾದವರನ್ನು ವೈಸ್‌ರಾಯಿಯವರಿಗೆ ಹೆಸರು ಹೇಳಿ ಪರಿಚಯ ಮಾಡಿಸಿದರು ಅವರು ಯಾರೆಂದರೆ,—ದಿವಾನ್ ಮೆ|| ಟಿ ಆನಂದರಾಯರು, ಸರ್ದಾರ್ ಎಂ ಕಾಂತರಾಜೇ ಅರಸಿನವರು, ಸರ್ದಾರ್ ಲೆಫ್ಟಿನೆಂಟ್ ಕರ್ನಲ್ ಜೆ ದೇಶರಾಜೆ ಅರ್ಸ್, ಎಂ ವಿ ಓ ಯವರು, ಸರ್ದಾರ್ ಎಂ ಲಕ್ಷ್ಮೀಕಾಂತರಾಜೇ ಅರಸಿನವರು, ಸರ್ದಾರ್ ಎಂ ಗೋಪಾಲರಾಜೇ ಅರಸಿನವರು, ಚೀಫ್ ಜಡ್ಜ್ ಮೆ|| ಎಸ್ ಇಸ್ಕೆ, ಸಿ ಎಸ್ ಐ ಯವರು, ಮೊದಲನೇ ಕೌನ್ಸಲರ್ ಮೆ|| ಕೆ ಪಿ ಪುಟ್ಟಣ್ಣ ಶೆಟ್ಟರು, ಎರಡನೇ ಕೌನ್ಸಲರ್ ಮೆ|| ಎಚ್ ವಿ ನಂಜುಂಡೈಯನವರು, ಸರ್ದಾರ್ ಎಂ ಗೋಪಾಲಕೃಷ್ಣೇ ಅರಸಿನವರು, ಸರ್ದಾರ್ ರಾಜಾ ಸಾಹೇಬರು, ಚೀಫ್ ಕೋರ್ಟ್ ಜಡ್ಜ್ ಮೆ|| ಪಿ ಎಸ್ ಕೃಷ್ಣರಾಯರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ|| ಆರ್ ಎಚ್ ಕ್ಯಾಂಬೆಲ್, ಐ ಸಿ ಎಸ್ ಯವರು

ಆನಂತರ ಶ್ರೀಮನ್ಮಹಾರಾಜರವರು ವೈಸ್‌ರಾಯಿಯವರನ್ನು ಕರೆದ್ಯೊಂಡು ಮುಂದಕ್ಕೆ ದಯಮಾಡಿ, ಎರಡು ಸಾಲು ಕಟ್ಟಿ ಅಭಿವಂದನೆಗಳಾಗಿ ನಿಂತಿದ್ದ ೧೦೦ ಮಂದಿ ಶಿಪಾಯಿಗಳ ಬಳಿಗೆ ಹೋಗಿ ಅವರು ಮಾಡಿದ ಮರ್ಯಾದೆಗಳನ್ನು ಸ್ವೀಕರಿಸಿದರು ಅಲ್ಲಿಗೆ ಪ್ಲಾಟ್‌ಫಾರಮಿನಲ್ಲಿ ನಡೆಯಬೇಕಾದ ಕಾರ್ಯಗಳು ಪೂರೈಸಿದವು ವೈಸ್‌ರಾಯಿಯವರೂ ಶ್ರೀಮನ್ಮಹಾರಾಜರವರೂ ಹೊರಗಡೆಗೆ ಚಿತ್ತೈಸಿದರು ಅಲ್ಲಿ ಮೈದಾನದಲ್ಲಿ ಸಾಲು ಸಾಲಾಗಿ ನಿಂತಿದ್ದ ಕಾಲ್ಬಲದ ಸೈನಿಕರೂ ಇಂಪೀರಿಯಲ್ ಸರ್ವಿಸ್ ಕುದುರೆ ಸವಾರರೂ ಮಹಾರಾಜರವರ ಅಂಗರಕ್ಷಕರಾದ ಬಾಡಿಗಾರ್ಡ್ ತುರುಫ್ ಸವಾರರೂ ಮರ್ಯಾದೆಗಳನ್ನು ಮಾಡಿದರು ವೈಸ್‌ರಾಯಿಯವರು ಅವರನ್ನೆಲ್ಲಾ ಪ್ರತಿಯಾಗಿ ವಂದಿಸುವಷ್ಟರಲ್ಲಿ ದಿವ್ಯವಾದ ನಾಲ್ಕು ಕುದುರೆ ಕಟ್ಟಿದ ಸಾರೋಟು ಬಂದು ನಿಂತಿತು ಅದರಲ್ಲಿ ವೈಸ್‌ರಾಯಿಯವರ ಸಂಗಡ ಶ್ರೀಮನ್ಮಹಾರಾಜರವರೂ, ಬ್ರಿಟಿಷ್ ರೆಸಿಡೆಂಟರವರೂ, ವೈಸ್‌ರಾಯರ ಒಬ್ಬ ಪಾರಿಕಾರಂಗರೂ ಕುಳಿತುಕೊಂಡರು ಎರಡನೆಯ ಸಾರೋಟಿನಲ್ಲಿ ಲೇಡಿ ಮಿಂಟೋರವರು, ಯುವರಾಜರವರು, ವೈಸ್‌ರಾಯರ ಮಿಲಿಟರಿ ಸೆಕ್ರೆಟರಿ ಕರ್ನಲ್ ಏಕ್ಸರ್ ಬ್ರೂಕ್ ಯವರು, ಒಬ್ಬ ಪಾರಿಕಾರಂಗರು ಕುಳಿತರು ಶ್ರೀಮನ್ಮಹಾರಾಜರವರ ತುರುಫ್ ಸವಾರರೂ ಇಂಪೀರಿಯಲ್ ಸರ್ವಿಸ್ ಕುದುರೆ ಸವಾರರೂ ಸಾರೋಟುಗಳ ಹಿಂದೆಯ ಮುಂದೆಯೂ ಸಾಲುಕಟ್ಟಿ ಹೊರಟರು ಮೂರನೆಯ ಸಾರೋಟಿನಲ್ಲಿ ವೈಸ್‌ರಾಯಿಯವರ ಕೂಡ ಬಂದಿದ್ದ ಕೌಂಟೆಸ್ ಆಫ್ ಆರ್ಡ್ರಿಯವರು, ಲೇಡಿ ಎಲೀನ್ ಎಲಿಯಟ್ ಯವರು, ಕರ್ನಲ್ ಡನ್‌ಲಾಪ್ ಸ್ಮಿತ್ ಯವರು, ಒಬ್ಬ ಪಾರಿಕಾರಂಗರು ಕುಳಿತುಕೊಂಡರು ನಾಲ್ಕನೆಯ ಸಾರೋಟಿನಲ್ಲಿ ಫಾರಿನ್ ಸೆಕ್ರೆಟರಿ ಮೆ|| ಎಸ್ ಎಚ್ ಬಟ್ಲೆರ್ ಯವರು, ದಿವಾನ್ ಮೆ|| ಟಿ ಆನಂದ ರಾಯರವರು ಅ|| ರೆಸಿಡೆಂಟರವರು, ಮೈಸೂರಿನ ಒಬ್ಬ ಸರ್ದಾರರು ಕುಳಿತುಕೊಂಡರು ಇನ್ನೆರಡು ಸಾರೋಟುಗಳಲಿ ವೈಸ್‌ರಾಯಿಯವರ ಪರಿವಾರಕ್ಕೆ ಸೇರಿದ ಅಧಿಕಾರಿಗಳೂ ಮೈಸೂರು ಸರ್ದಾರರೂ ಕುಳಿತರು ಮೆರವಣಿಗೆಯು ರೈಲ್ವೆ ಸ್ಟೇಷನ್ನಿಂದ ಹೊರಟಿತು ರಸ್ತೆಯು ಉದ್ದಕ್ಕೂ ಬಾವುಟಾ ತೋರಣಾದಿಗಳಿಂದ ಅಲಂಕಾರವಾಗಿತ್ತು ಅಲ್ಲಲ್ಲಿ ಸುಂದರವಾದ ಕಮಾನುಗಳೂ ಚಪ್ಪರಗಳೂ ಹಾಕಿದ್ದವು ಎರಡು ಕಡೆಗಳಲ್ಲೂ ಸಾವಿರಾರು ಪ್ರಜೆಗಳು ಸಾಲುಕಟ್ಟಿ ಕಿಕ್ಕಿರಿಯುವಂತೆ ನಿಂತು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳನ್ನು ನೋಡಿ ಜಯಘೋಷ ಮಾಡುತ್ತಿದ್ದರು ಮೆರವಣಿಗೆಯು ರೈಲ್ ಸ್ಟೇಷನ್ನಿಂದ ಸಿಲ್ಲೇದಾರ್ ಲೈನ್ ಸಯಾಜಿರಾವ್ ರಸ್ತೆಗಳಲ್ಲಿ ಹೊರಟು ಕರ್ಜನ್ ಪಾರ್ಕಿನೊಳಗೆ ಪ್ರವೇಶಿಸಿ ಏಕ್ಟರ್ ರಸ್ತೆಯ ಮೂಲಕ ಪೋಸ್ಟ್ ಆಫೀಸಿನ ಮುಂದುಗಡೆ ದೊಡ್ಡಪೇಟೆಯ ಮಾರ್ಗವಾಗಿ ಹೋಗಿ ಸರವಿಾನ್ ಚಾವಡಿಯ ಬಳಿ ಬಲಕ್ಕೆ ತಿರುಗಿಕೊಂಡು, ಗವರ್ನ್ಮೆಂಟ್ ಹೌಸ್ ಬಂಗಲೆಯನ್ನು ತಲುಪಿತು

ಆಸ್ಪತ್ರೆಯ ಎದುರಿಗೆ ಸಯಾಜಿರಾವ್ ರಸ್ತೆಯ ಉದ್ದಕ್ಕೂ ಎರಡು ಕಡೆಗಳಲ್ಲೂ ಗ್ಯಾಲರಿಗಳ ಮೇಲೆ ಸಾಲುಸಾಲಾಗಿ ಕುಳಿತಿದ್ದ ಬಾಲಕರೂ ಬಾಲಕಿಯರೂ ವೈಸ್‌ರಾಯಿಯವರಿಗೆ ಸುಸ್ವಾಗತವನ್ನು ಬಯಸಿ ಹಾಡುಗಳನ್ನು ಹೇಳಿ ಪುಷ್ಪವನ್ನು ಎರಚಿ ಜಯಧ್ವನಿ ಮಾಡಿದರು ವೈಸ್‌ರಾಯಿಯವರು ಬಹು ಆದರದಿಂದಲೂ ಸಂತೋಷವಾಗಿಯೂ ಪ್ರತಿವಂದನೆ ಮಾಡಿದರು ಆ ಚೌಕದಲ್ಲಿ ದಿವ್ಯವಾದ ಭುವನೇಶ್ವರಿಯೊಳಗೆ ಕಾದಿದ್ದ ಹಿಂದೂ ಮಹಮದೀಯ ದೊಡ್ಡ ಮನುಷ್ಯರು ಪಂಡಿತರು ಮೌಲ್ವಿಗಳು ಮೊದಲಾದವರು ವೈಸ್‌ರಾಯಿ ದಂಪತಿಗಳಿಗೆ ಹಾರಾ ತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು ತರುವಾಯ ಮಹಾರಾಣಿ ಕಾಲೇಜು, ವಿಧವಾಸದನ, ವೆಸ್ಲಿಯನ್ ಮಿಷನ್ ಸ್ಕೂಲುಗಳ ಬಾಲಕಿಯರು ಸುಸ್ವಾಗತ ಸೂಚಕವಾದ ನುಡಿಗಳನ್ನೂ, "ದೇವರು ದೊರೆಯನ್ನು ರಕ್ಷಿಸಲಿ" ಎಂಬ ಪದವನ್ನೂ ಮನೋಹರವಾಗಿ ಹಾಡಿದರು ಅಲ್ಲಿಂದ ಮುಂದೆ ಕರ್ಜನ್ ಪಾರ್ಕಿನಲ್ಲಿ ಮೆರವಣಿಗೆಯು ಬರುವುದನ್ನು ಎದುರುನೋಡುತ್ತಾ ಮ್ಯುನಿಸಿಪಲ್ ಭುವನೇಶ್ವರಿ ಚಪ್ಪರದಲ್ಲಿ ಕಾದಿದ್ದ ಮ್ಯುನಿಸಿಪಲ್ ಕೌನ್ಸಿಲರುಗಳು, ಅರಸುಗಳು, ಅಧಿಕಾರಿಗಳು, ಎಲ್ಲಾ ಕೋಮುಗಳ ಪ್ರತಿನಿಧಿಗಳು ವೈಸ್‌ರಾಯಿಯವರ ಭೇಟಿ ತೆಗೆದುಕೊಂಡರು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಮೆ|| ಎಂ ಕಾಂತರಾಜೇ ಅರಸಿನವರು ವೈಸ್‌ರಾಯಿಯವರಿಗೆ ಈ ಚಪ್ಪರದಲ್ಲಿ ಸುಸ್ವಾಗತವನ್ನು ಬಯಸಿ ಒಂದು ಅಡ್ರೆಸ್ಸನ್ನು ಓದಿ ಆನೆಯ ಶ್ರೇಷ್ಠವಾದ ದಂತದಲ್ಲಿ ಸುಂದರವಾಗಿ ಕೆತ್ತಿಸಿದ್ದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ಇದು ಹ್ಯಾಗಿತ್ತೆಂದರೆ, ಒಂದು ದಿವ್ಯವಾದ ಪೀಠದ ಮೇಲೆ ಅರ್ಧಚಂದ್ರಾಕೃತಿಯಾಗಿ ಉದ್ದವಾದ ಆನೆಯ ದಂತವು ಪರಿಕಿನ ಕೆಲಸ ಮಾಡಿ ನೇತ್ರಾನಂದಕರವಾಗಿ ಅಂತರಾಳದಲ್ಲಿ ನಿಲ್ಲಿಸಲ್ಪಟ್ಟಿತ್ತು ಈ ದಂತದ ಒಳಭಾಗವನ್ನು ಕೊಳವೆಯಂತೆ ತೋಡಿ ಅದರಲ್ಲಿ ಅಡ್ರೆಸ್ಸನ್ನು ಇಟ್ಟು ಒಪ್ಪಿಸಿದರು ಈ ಅಡ್ರೆಸ್ಸಿನ ಮುಖ್ಯಾಭಿಪ್ರಾಯವೇನೆಂದರೆ,—

ಮ್ಯುನಿಸಿಪಲ್ ಅಡ್ರೆಸ್ಸು

ಮಹನೀಯರೇ, ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ಮೆಂಬರುಗಳಾದ ನಾವು ಮೈಸೂರು ಸಂಸ್ಥಾನಕ್ಕೆ ರಾಜಧಾನಿಯಾದ ಈ ಪಟ್ಟಣಕ್ಕೆ ವಿಶೇಷವಾದ ರಾಜಭಕ್ತಿ, ಪ್ರೀತಿ ಉತ್ಸಾಹಗಳೊಡನೆ ತಮಗೂ ತಮ್ಮ ಭಾರ್ಯೆಯರಾದ ಲೇಡಿ ಮಿಂಟೊ ಯವರಿಗೂ ಸುಸ್ವಾಗತವನ್ನು ಬಯಸುತ್ತೇವೆ

ತಮ್ಮಂಥಾ ಪ್ರಭುಗಳು ಆಗಿಂದಾಗ್ಗೆ ಈ ರಾಷ್ಟ್ರದ ಬೇರೆ ಬೇರೆ ಭಾಗಗಳಿಗೂ ಸಂಸ್ಥಾನಗಳಿಗೂ ಭೇಟಿ ಕೊಡುತ್ತಾ ಇರುವುದರಿಂದ ಪ್ರಜೆಗಳಿಗೆ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳು ಇದ್ದಾರೆಂಬುವದನ್ನು ನೋಡಿ ಆನಂದಪಡುವುದಕ್ಕೂ ಸಾರ್ವಭೌಮರವರ ವಿಷಯದಲ್ಲಿ ನಮಗಿರುವ ಅಚಂಚಲವಾದ ಭಕ್ತಿ ವಿಶ್ವಾಸಗಳನ್ನು ಪ್ರಕಾಶ ಪಡಿಸುವುದಕ್ಕೂ ಅವಕಾಶವಾಗುತ್ತದೆ ಬ್ರಿಟಿಷ್ ದೊರೆಗಳು ಹಿಂದುಸ್ಥಾನವನ್ನು ಸ್ವಕೀಯವಾದ ಆಳ್ವಿಕೆಗೆ ಸೇರಿಸಿಕೊಂಡಾರಭ್ಯ ಹಿಂದುಸ್ಥಾನಕ್ಕೂ ಅದರಲ್ಲಿರುವ ದೇಶೀಯ ಸಾಮಂತ ಸಂಸ್ಥಾನಗಳಿಗೂ ನೆಮ್ಮದಿ ಸುಖ ಸಮಾಧಾನಗಳು ಲಭ್ಯವಾಗಿರುತ್ತವೆ ಈ ಶುಭವೂ ಆನಂದಕರವೂ ಆದ ವಾರ್ತೆಯನ್ನು ಶ್ರೀಮನ್ಮಹಾರಾಜರವರ ಭಯ ಭಕ್ತಿ ಪೂರಿತ ಪ್ರಜೆಗಳಾಗಿರುವ ನಾವು ಈ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾಗಿಯೂ ಭಕ್ತಿಪುರಸ್ಸರವಾಗಿಯೂ ತಮಗೆ ಅರಿಕೆ ಮಾಡಿಕೊಳ್ಳುತ್ತೇವೆ ಶ್ರೀಮನ್ ಮಹಾರಾಜರವರ ಮತ್ತು ಕೀರ್ತಿಶೇಷರಾದ ಅವರ ತಂದೆಯವರ ವಿವೇಕಪೂರಿತವೂ ಉತ್ಕೃಷ್ಟವೂ ಆದ ಆಳ್ವಿಕೆಯ ಪ್ರಜೆಗಳಾದ ನಾವು ಹಿಂದುಸ್ಥಾನದಲ್ಲೆಲ್ಲಾ ಹರಡಿಕೊಂಡಿರುವ ನವನಾಗರಿಕತೆ ಶ್ರೇಯೋಭಿವೃದ್ಧಿಯೇ ಮೊದಲಾದ ಸೌಭಾಗ್ಯಗಳಲ್ಲಿ ಸಹಭಾಗಿಗಳಾಗಿದ್ದೇವೆಂದು ವಿಜ್ಞಾಪಿಸುವೆವು ಕೆಲವು ಕಾಲಕ್ಕೆ ಮುಂಚೆ ಸಂಸ್ಥಾನಮೆಳೆ ಕಷ್ಟಕರವಾದ ದುಷ್ಕಾಲವು ಸ್ವಲ್ಪಸ್ವಲ್ಪವಾಗಿ ಕ್ಷಾಮಭೀತಿಯುಂಟಾಗಿತ್ತು ಈಗಲಾದರೋ ಸಮೃದ್ಧಿಯಾಗಿ ಮಳೆಗಳು ಸುರಿದು ಅಪಾರವಾದ ಸುಭಿಕ್ಷವು ಲಭ್ಯವಾಗುವ ನಿರೀಕ್ಷೆಯು ಒದಗಿರೋಣದರಿಂದ ಸಕಲ ಪ್ರಜೆಗಳೂ ಆನಂದಪರವಶರಾಗಿರುತ್ತಾರೆ ಮೈಸೂರು ಸಂಸ್ಥಾನದ ರಾಜಮನೆತನಕ್ಕೂ ಬ್ರಿಟಿಷ್ ಸಾರ್ವಭೌಮರಿಗೂ ಬಹು ಕಾಲದಿಂದಲೂ ನಡೆದುಬಂದಿರುವ ಪರಸ್ಪರವಾದ ಪ್ರೀತಿ ಸಂಬಂಧಗಳಿಗೆ ಎಂದೆಂದಿಗೂ ಚ್ಯುತಿಯುಂಟಾಗದಿರಲೆಂದು ಹಾರೈಸುತ್ತೇವೆ

ಪ್ರಭುಗಳಿಂದ ತಾವುಗಳು ಇದುವರೆಗೆ ನಮ್ಮ ಸೀಮೆಯ ಬಗೆ ಬಗೆಯ ಸೌಂದರ್ಯಾತಿಶಯವನ್ನೂ ಪ್ರಜೆಗಳ ಸಂತೋಷಯುಕ್ತವಾದ ಸ್ಥಿತಿಗತಿಗಳನ್ನೂ ಕೆಲವುಮಟ್ಟಿಗೆ ಪರಾಂಬರಿಸಿರುತ್ತೀರಿ ತಾವುಗಳು ಇನ್ನು ಸ್ವಲ್ಪಕಾಲ ನಮ್ಮ ಮಧ್ಯೆ ದಯಮಾಡಿರುವ ವಿಷಯದಲ್ಲಿ ತಮಗೆ ಸುಸ್ವಾಗತವನ್ನು ಬಯಸುವೆವು ತಮಗೆ ಎಲ್ಲಾ ಕಡೆಗಳಲ್ಲೂ ಪ್ರೀತಿಯುಕ್ತವಾದ ಸತ್ಕಾರ್ಯಗಳು ನಡೆಸಲ್ಪಡುವವೆಂದು ಪ್ರಜೆಗಳ ಪರವಾಗಿ ಅವರ ಪ್ರತಿನಿಧಿಗಳಾದ ನಾವು ಈ ಸಂದರ್ಭದಲ್ಲಿ ಧೈರ್ಯದಿಂದ ಅರಿಕೆಮಾಡುತ್ತೇವೆ ತಾವುಗಳು ಇಲ್ಲಿ ಚಿತ್ತೈಸಿರುವ ಈ ಸಮಯದಲ್ಲಿ ನಮ್ಮ ಪಟ್ಟಣದಲ್ಲಿರುವ ಬೇರೆ ಬೇರೆ ಏರ್ಪಾಡುಗಳನ್ನೂ, ಅಭಿವೃದ್ಧಿಕಾರ್ಯಗಳನ್ನೂ ಪರಾಂಬರಿಸಿ, ಪ್ರಜೆಗಳು ಸಂತೃಪ್ತಿ ರಾಜಭಕ್ತಿ ಶ್ರೇಯೋಭಿವೃದ್ಧಿಗಳ ಪಡೆದಿರುವುದನ್ನು ತಿಳಿದುಕೊಳ್ಳುವಂತಾಗುವದು ಪಶ್ಚಿಮ ಘಟ್ಟಗಳ ಉನ್ನತವೂ ಅಗಾಧವೂ ಆದ ಕಾಡು ಪ್ರದೇಶಗಳಲ್ಲಿ ತಾವುಗಳು ಸಂಚಾರ ಮಾಡೋಣದರಿಂದ ತಮ್ಮ ಮನಸ್ಸಿಗೆ ಸ್ವಲ್ಪಮಟ್ಟಿಗೆ ಸಂತೋಷವೂ ವಿಶ್ರಾಂತಿಯೂ ಉಂಟಾಗುವವೆಂದು ನಂಬುತ್ತೇವೆ ಮತ್ತು ತಮ್ಮಲ್ಲಿ ಈ ಪುರಾತನ ಸಂಸ್ಥಾನದ ವಿದ್ಯಮಾನಗಳು ಯಾವಾಗಲೂ ಸಂತೋಷವನ್ನುಂಟುಮಾಡುವವುಗಳಾಗಿರಲೆಂದು ಹಾರೈಸುವೆವು

ತಮ್ಮಗಳಿಗೆ ಅವಿಚ್ಛಿನ್ನವಾದ ಆರೋಗ್ಯ ಭಾಗ್ಯವು ಲಭ್ಯವಾಗಲಿ ಎಂಬುವುದೇ ತಮ್ಮ ಅತ್ಯಂತ ವಿಧೇಯರೂ ರಾಜಭಕ್ತಿಯುತರೂ ಆದ ನಮ್ಮಗಳ ಮನಃಪೂರ್ವಕವಾದ ಅಭಿಲಾಷೆಯಾಗಿದೆ

ವೈಸ್‌ರಾಯಿಯವರ ಪ್ರತ್ಯುತ್ತರವು

ವೈಸ್‌ರಾಯಿ ಲಾರ್ಡ್ ಮಿಂಟೋರವರು ಆದರಾತಿಶಯದಿಂದ ಈ ವಿಜ್ಞಾಪನಾ ಪತ್ರಿಕೆಯನ್ನು ಅಂಗೀಕರಿಸಿ, ಕೌನ್ಸಲರುಗಳನ್ನು ವಂದಿಸಿ ಅಪ್ಪಣೆ ಕೊಡಿಸಿದ ಉತ್ತರವೇನೆಂದರೆ,—

ಮೈಸೂರು ಸಂಸ್ಥಾನದ ರಾಜಧಾನಿಗೆ ಬಂದ ಈ ಸಮಯದಲ್ಲಿ ನಮಗೆ ನೀವುಗಳು ಆದರ ಪೂರ್ವಕವಾಗಿ ಸುಸ್ವಾಗತವನ್ನು ಬಯಸಿದ್ದಕ್ಕಾಗಿ ನನ್ನ ಪರವಾಗಿಯೂ, ಲೇಡಿ ಮಿಂಟೋರವರ ಪರವಾಗಿಯೂ ನಿಮ್ಮನ್ನು ವಂದಿಸುತ್ತೇವೆ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಯಾಗಿ ನಾವು ಈಗ ದೇಶಾಟನೆ ಮಾಡೋಣದರಿಂದ ಹಿಂದುಸ್ಥಾನದ ಪ್ರಜೆಗಳ ಪರಿಚಯವಾಗುವುದಕ್ಕೂ ಎಲ್ಲಾ ಕಡೆಗಳಲ್ಲೂ ಪ್ರಜೆಗಳು ಸಾರ್ವಭೌಮ ಪ್ರಭುಗಳ ವಿಷಯದಲ್ಲಿ ಪ್ರಕಾಶಪಡಿಸುತ್ತಿರುವ ಭಯಭಕ್ತಿ ವಿಶ್ವಾಸಾದಿಗಳನ್ನು ಸಾಕ್ಷಾತ್ತಾಗಿ ನೋಡಿ ತಿಳಿಯುವುದಕ್ಕೂ ನಮಗೆ ಅವಕಾಶವಾಯಿತೆಂದು ಸಂತೋಷಪಡುತ್ತೇವೆ

ಬ್ರಿಟಿಷ್ ರಾಜ್ಯಭಾರದ ಫಲಪ್ರಯೋಜನಾದಿಗಳನ್ನು ನೀವು ಅರಿತಿರುವಿರೆಂದು ನಿಮ್ಮಿಂದ ತಿಳಿದು ಸಂತೋಷಿಸುವೆವು ನಿಮ್ಮ ಮಹಾರಾಜರವರ ಪ್ರಜಾಹಿತಕರವಾದ ಮತ್ತು ವಿವೇಕಯುಕ್ತವಾದ ಆಳ್ವಿಕೆಯ ದೆಸೆಯಿಂದ ಅವರ ಪ್ರಜೆಗಳಿಗೆ ಶ್ರೇಯಸ್ಸುಂಟಾಗುವುದೆಂತಲೂ, ಸಂಸ್ಥಾನದ ಗುಪ್ತಧನವು ಸಾರ್ಥಕವಾಗುವಂತೆ ಅಭಿವೃದ್ಧಿಗೆ ತರಲ್ಪಡುವುದೆಂತಲೂ ನಾವು ಚನ್ನಾಗಿ ಅರಿತಿರುವೆವು ಈಗ ನೀವುಗಳು ಸುಭಿಕ್ಷವನ್ನು ಎದುರುನೋಡುತ್ತಾ ಇದ್ದೀರೆಂದು ತಿಳಿದು ನಮಗೆ ಸಂತೋಷವುಂಟಾಗಿದೆ ನಾವೂ ಲೇಡಿ ಮಿಂಟೋಯವರೂ ಮೈಸೂರಿನ ಕೆಲವು ಸುಂದರವಾದ ಭಾಗಗಳನ್ನು ನೋಡಿದೆವು ಗಿಡಶೀಮೆಯ ಸೌಂದರ್ಯವು ನಮಗೆ ಪರಮಾನಂದವನ್ನುಂಟುಮಾಡಿತು ನೂರಾರು ಗ್ರಾಮಗಳ ಸುಪ್ರಜೆಗಳು ಸಹಸ್ರಗಟ್ಲೆ ನಮಗೆ ಸುಸ್ವಾಗತವನ್ನು ಬಯಸಿದರು ಮಹಾಘನವೂ ನೇತ್ರೋತ್ಸಾಹಕವೂ ಆದ ಗೆರೊಸಪ್ಪಾ ಜಲಪಾತವನ್ನು ನೋಡಿ ನಾವು ಬಹಳವಾಗಿ ವಿಸ್ಮಯ ಪಟ್ಟೆವು ನಾವು ಇಲ್ಲಿರುವುದು ಬಹಳ ಸ್ವಲ್ಪ ಕಾಲ ಮಾತ್ರವೇ ಆಗಿದ್ದಾಗ್ಯೂ ನಿಮ್ಮ ಪಟ್ಟಣದಲ್ಲಿ ನೋಡಿ ತಿಳಿಯತಕ್ಕ ವಿಶೇಷವಾದ ವಿಚಾರಗಳನ್ನೆಲ್ಲಾ ಪರಾಂಬರಿಸುವೆವು ಪ್ರಜೆಗಳ ಕ್ಷೇಮಕ್ಕಾಗಿ ನಿಮ್ಮ ಕೌನ್ಸಿಲ್‌ನವರು ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವುದಾಗಿ ತಿಳಿದು ಬಂದಿದೆ ಈ ಭಾಗಗಳನ್ನೂ ನಾವು ನೋಡಿ ತಿಳಿದುಕೊಳ್ಳಲು ಕುತೂಹಲವುಳ್ಳವರಾಗಿದೇವೆ

ಲೇಡಿ ಮಿಂಟೋರವರೂ ನಾವೂ ಮೈಸೂರಿನಲ್ಲಿ ನೋಡಿ ಕೇಳಿದ ವಿಷಯಗಳನ್ನು ಬಹು ಸಂತೋಷದಿಂದ ಆಗಾಗ್ಗೆ ಜ್ಞಾಪಿಸಿಕೊಳ್ಳುತ್ತಾ ಬರುವೆವೆಂದು ಧೈರ್ಯವಾಗಿ ಹೇಳಬಲ್ಲೆವು ನೀವುಗಳು ಮಾಡಿದ ಸತ್ಕಾರಕ್ಕಾಗಿ ನಿಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇವೆ

ತರುವಾಯ ಪ್ರೆಸಿಡೆಂಟರು ಲಾರ್ಡ್ ಮಿಂಟೋಯವರಿಗೆ ಜರತಾರಿಯ ಹಾರಾ ಒಪ್ಪಿಸಿ ಸುಂದರವಾದ ತುರಾಯಿಯನ್ನು ಕೊಟ್ಟರು ವೈಸ್‌ರಾಯಿಯವರು ಅವನ್ನು ಅಂಗೀಕರಿಸಿ ವಂದನೆ ಮಾಡಿದರು ಮೆರವಣಿಗೆಯು ಮುಂದಕ್ಕೆ ಹೊರಟು ಯೂರೋಪ್ಯನ್ ಕ್ಲಬ್ಬಿನ ಬಳಿಗೆ ಬಂದಾಗ ಅಲ್ಲಿನ ಬಾಲಾಖಾನೆಯಲ್ಲಿ ಸೇರಿದ್ದ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ವೈಸ್‌ರಾಯಿ ದಂಪತಿಗಳ ಮೇಲೆ ಪುಷ್ಪಗಳನ್ನು ಎರಚಿ ಜಯಧ್ವನಿಯನ್ನು ಮಾಡಿದರು ಬಳಿಕ ದೊಡ್ಡ ಪೇಟೆಯಲ್ಲಿ ಉದ್ದಕ್ಕೂ ಪ್ರಜೆಗಳೂ ವರ್ತಕಮಂಡಲಿಯವರೂ ಹಾರಾ ತುರಾಯಿಗಳನ್ನು ಒಪ್ಪಿಸಿದರು ಸರವಿಾನ್ ಚಾವಡಿಯ ಬಳಿ ಶೆಟ್ಟಿ ವರ್ತಕರೂ

ಸಾಹುಕಾರರೇ ಮೊದಲಾದವರೂ ದಿವ್ಯವಾದ ಚಪ್ಪರದಲ್ಲಿ ಕಾದಿದ್ದು ವೈಸ್‌ರಾಯಿಯವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸಿದರು ಗವರ್ನ್‌ಮೆಂಟ್ ಹೌಸಿನಲ್ಲಿ ವೈಸ್‌ರಾಯಿಯವರು ಶ್ರೀಮನ್ ಮಹಾರಾಜರವರ ಸಹಿತ ಸಾರೋಟಿನಿಂದಿಳಿದು ಅಲ್ಲಿ ಸಾಲಾಗಿ ನಿಂತಿದ್ದ ಸೈನಿಕರು ಕವಾತು ಮಾಡಿದ್ದನ್ನು ಪರಾಂಬರಿಸಿ, ಗೌರವಾರ್ಥವಾಗಿ ೩೧ ತೋಪುಗಳು ಹಾರುತ್ತಿರುವಲ್ಲಿ ಸುಮಾರು ೧೧ ಗಂಟೆಗೆ ಬಂಗಲೆಯೊಳಕ್ಕೆ ದಯಮಾಡಿದರು ಶ್ರೀಮನ್ ಮಹಾರಾಜರವರು ವೈಸ್‌ರಾಯಿಯವರಿಂದ ಬೀಳ್ಕೊಂಡು ಅರಮನೆಗೆ ಚಿತ್ತೈಸಿದರು

ಮಿಜಾಜ್ ಪುರ್ಸಿ

ಮಧ್ಯಾಹ್ನ ೧೨ ಗಂಟೆಗೆ ದಿವಾನ್ ಮೆ|| ಟಿ ಆನಂದರಾಯರು ಲೆಫ್ಟಿನೆಂಟ್ ಕರ್ನಲ್ ಜೆ ದೇಸರಾಜೇ ಅರಸಿನವರು, ಸರ್ದಾರ್ ಎಂ ಗೋಪಾಲರಾಜೇ ಅರಸಿನವರು, ಮೊದಲನೇ ಕೌನ್ಸಲರ್ ಮೆ|| ಕೆ ಪಿ ಪುಟ್ಟಣ್ಣಶೆಟ್ಟರು ಸೀಐ, ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ಹೋಗಿ ವೈಸ್‌ರಾಯಿಯವರಿಗೆ ಎಲ್ಲಾ ಅನುಕೂಲವಾಗಿವೆಯೋ, ಅವರು ಸೌಖ್ಯವಾಗಿದಾರೆಯೋ ಎಂಬೀ ವಿಚಾರಗಳನ್ನು ಕೇಳಿ ಬಂದರು

ಭೇಟಿ ತೆಗೆದುಕೊಂಡದ್ದು

ಸಾಯಂಕಾಲ ೪ ಗಂಟೆಗೆ ಶ್ರೀಮನ್ ಮಹಾರಾಜರವರು ಸಕಲ ಮರ್ಯಾದೆಗಳೊಡನೆ ಸಾರೋಟಿನಲ್ಲಿ ಕುಳಿತು ಕರೀಕಲ್ಲು ತೊಟ್ಟಿಯಿಂದ ಮೆರವಣಿಗೆಯಲ್ಲಿ ಹೊರಟು ಕರ್ಜನ್ ಪಾರ್ಕ್, ಕುಪ್ಪಣ್ಣನ ತೋಟದ ಮಾರ್ಗವಾಗಿ ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ದಯಮಾಡಿ ವೈಸ್‌ರಾಯಿಯವರ ಭೇಟಿ ತೆಗೆದುಕೊಂಡರು ವೈಸ್‌ರಾಯಿಯವರ ಮಿಲಿಟರಿ ಸೆಕ್ರೆಟರಿ ಕರ್ನಲ್ ವಿಕ್ಟರ್ ಬ್ರೂಕ್ ಯವರೂ ಅ| ರೆಸಿಡೆಂಟ್ ಮೆ| ಟಿ ಬಿ ಕೋಪ್ಲೆಂಡ್ ಯವರೂ ವೈಸ್‌ರಾಯಿಯರ ಒಬ್ಬ ಏಡಿಕಾಂಗರೂ ೩ ೪೫ ಕ್ಕೆ ಅರಮನೆಗೆ ಹೋಗಿ ಶ್ರೀಮನ್ ಮಹಾರಾಜರವರನ್ನು ಭೇಟಿಗಾಗಿ ಗವರ್ನ್‌ಮೆಂಟ್ ಹೌಸಿಗೆ ಕರೆದುಕೊಂಡು ಹೋದರು ಶ್ರೀಮನ್ ಮಹಾರಾಜರವರೂ ಶ್ರೀಮನ್ ಯುವರಾಜರವರೂ ದಿವ್ಯವಾದ ಪೋಷಾಕು ಆಭರಣಾದಿಗಳನ್ನು ಧರಿಸಿದ್ದರು ಅವರ ಕೂಡ ಭೇಟಿಗಾಗಿ ಗವರ್ನ್‌ಮೆಂಟ್ ಹೌಸಿಗೆ ಹೋಗಿದ್ದವರ್‍ಯಾರೆಂದರೆ,—ಮೆ|| ಟಿ ಆನಂದರಾಯರು, ಮೆ|| ಎಂ ಕಾಂತರಾಜೇ ಅರಸಿನವರು, ಲೆ| ಕರ್ನಲ್ ಜೆ ದೇಸರಾಜೇ ಅರಸಿನವರು, ಮೆ| ಗಳಾದ ಎಂ ಗೋಪಾಲರಾಜೇ ಅರಸಿನವರು, ಸ್ಯಾಕ್‌ವಿಲ್ಲಿಯವರು, ಕೆ ಪಿ ಪುಟ್ಟಣ್ಣಶೆಟ್ಟರು, ಎಚ್ ವಿ ನಂಜುಂಡಯ್ಯನವರು, ರಾಜಾಸಾಹೇಬರು, ಆರ್ ಎಚ್ ಕ್ಯಾಂಬೆಲ್ ಯವರು, ಪಿ ರಾಘವೇಂದ್ರರಾಯರು, ಕೆ ಎಸ್ ಚಂದ್ರಶೇಖರ ಐಯರವರು ವೈಸ್‌ರಾಯಿಯವರ ಕಡೆಯವರು ಪದ್ಧತಿಯ ಪ್ರಕಾರ ಶ್ರೀಮನ್ ಮಹಾರಾಜರವರನ್ನೂ ಅವರ ಸಂಗಡಿಗರನ್ನೂ ಎದುರುಗೊಂಡು ಗವರ್ನ್‌ಮೆಂಟ್ ಹೌಸಿನೊಳಕ್ಕೆ ಕರೆದುಕೊಂಡು ಹೋದರು ದರ್ಬಾರ್ ಮಂದಿರದ ಬಾಗಿಲಲ್ಲಿ ವೈಸ್‌ರಾಯಿಯವರು ಮಹಾರಾಜರವರನ್ನು ಎದುರುಗೊಂಡು ಕರೆದುಕೊಂಡು ಹೋಗಿ ತಮ್ಮ ಪೀಠದ ಬಲಪಾರ್ಶ್ವದಲ್ಲಿ ಕೂರಿಸಿಕೊಂಡರು ಮಹಾರಾಜರವರ ಬಲಗಡೆ ಮೈಸೂರು ಅಧಿಕಾರಿಗಳೂ ಸರ್ದಾರರೂ, ವೈಸ್‌ರಾಯಿಯವರ ಎಡಪಾರ್ಶ್ವದಲ್ಲಿ ವೈಸ್‌ರಾಯಿಯವರ ಕಡೆ ಅಧಿಕಾರಿಗಳೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು ಸ್ವಲ್ಪ ಹೊತ್ತಿನ ಮೇಲೆ ವೈಸ್‌ರಾಯಿಯವರು ಮಹಾರಾಜರಿಗೂ, ಅವರ ಕಡೆ ಅಧಿಕಾರಿಗಳು ಮೈಸೂರು ಸರ್ದಾರರಿಗೂ ಅಧಿಕಾರಿಗಳಿಗೂ ಹಾರ ಪಾನ್‌ದಾನ್ ಒಪ್ಪಿಸಿದರು ಒಳಕ್ಕೆ ಬಂದಾಗ ಹ್ಯಾಗೋ ಹಾಗೆಯೇ ಹೊರಡುವಾಗಲೂ ಮಹಾರಾಜರವರಿಗೆ ಸನ್ಮಾನಗಳು ನಡೆದವು ಅವರು ವೈಸ್‌ರಾಯಿಯವರಿಂದ ಬೀಳ್ಕೊಂಡು ಪರಿವಾರ ಸಹಿತ ಅರಮನೆಗೆ ದಯಮಾಡಿದರು

ಮರುಭೇಟಿ ಕೊಟ್ಟದ್ದು

ಸಾಯಂಕಾಲ ೫| ಘಂಟೆಗೆ ವೈಸ್‌ರಾಯಿಯವರು ಪರಿವಾರ ಸಹಿತ ಗವರ್ನ್‌ಮೆಂಟ್ ಹೌಸ್ ಬಂಗಲೆಯಿಂದ ಮೆರವಣಿಗೆ ಹೊರಟು ದೊಡ್ಡಪೇಟೆ, ಕರ್ಜನ್ ಪಾರ್ಕ್ ಇರ್ವಿನ್ ರಸ್ತೆ, ಲಕ್ಷ್ಮೀವಿಲಾಸ ರಸ್ತೆಗಳ ಮೂಲಕ ಜಗನ್ಮೋಹನ ಮಹಲಿಗೆ ಚಿತ್ತೈಸಿದರು ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು ಶ್ರೀಮನ್ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರ ಮತ್ತು ಶ್ರೀಮನ್ ಯುವರಾಜರ ಸಮೇತ ಲಾರ್ಡ್ ಮಿಂಟೋ ಪ್ರಭುಗಳನ್ನು ಎದುರುಗೊಂಡು ಕರೆದುಕೊಂಡುಹೋಗಿ ಶ್ರೇಷ್ಠಾಸನದಲ್ಲಿ ಕೂಡಿಸಿದರು ಅಲ್ಲಿ ಮಹಾರಾಜರವರ ಬಲಗಡೆ ಮೈಸೂರಿನ ಅಧಿಕಾರಿಗಳೂ ಸರ್ದಾರರೂ ಸಾಲುಗಟ್ಟಿ ಕುಳಿತುಕೊಂಡರು ವೈಸ್‌ರಾಯಿಯವರ ಪಕ್ಕದಲಿ ಅವರ ಕಡೆ ಅಧಿಕಾರಿಗಳು ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು ಬ್ರಿಟಿಷ್ ರೆಸಿಡೆಂಟರವರು ಮೈಸೂರಿನ ಅಧಿಕಾರಿಗಳಲ್ಲೂ ಸರ್ದಾರರುಗಳಲ್ಲೂ ಸುಮಾರು ಮೂವತ್ತು ಮಂದಿಯನ್ನು ವೈಸ್‌ರಾಯಿಯವರಿಗೆ ಕಾಣಿಸಿ ಪರಿಚಯ ಮಾಡಿಸಿದರು ಇವರೆಲ್ಲಾ ಐದೈದು ಚಿನ್ನದ ಮೊಹರಾಗಳನ್ನು ವೈಸ್‌ರಾಯಿಯವರಿಗೆ ನಜರು ಒಪ್ಪಿಸಿದಾಗ ಅವರು ಅದನ್ನು ಮುಟ್ಟಿ ವಾಪಸು ಮಾಡಿದರು ಮಹಾರಾಜರವರು ವೈಸ್‌ರಾಯಿಯವರಿಗೆ ಜರತಾರಿಯ ಹಾರ ಹಾಕಿ, ದಿವ್ಯವಾದ ತುರಾಯಿಯನ್ನು ಒಪ್ಪಿಸಿದರು ಮೈಸೂರಿನ ಅಧಿಕಾರಿಗಳು ವೈಸ್‌ರಾಯಿಯವರ ಕಡೆ ಅಧಿಕಾರಿಗಳಿಗೆ ಹಾರ ಹಾಕಿ ಪಾನ್ ಅತ್ತರ್ ಮುಂತಾದವನ್ನು ಕೊಟ್ಟರು ವೈಸ್‌ರಾಯಿಯವರು ಮಹಾರಾಜರವರಿಂದ ಬೀಳ್ಕೊಂಡು ೩೧ ತೋಪು ಹಾರುತ್ತಿರುವಲ್ಲಿ ಮರ್ಯಾದೆಗಳೊಡನೆ ಸಾರೋಟಿನಲ್ಲಿ ಕುಳಿತು ಮೆರವಣಿಗೆಯಾಗಿ ವಾಪಸು ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ಬಿಜಮಾಡಿದರು.

ಔತಣ ಮುಂತಾದದ್ದು

ಅದೇ ದಿನ ರಾತ್ರಿ ೮ ಗಂಟೆಗೆ ಗವರ್ನ್‌ಮೆಂಟ್ ಹೌಸಿನಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋಯವರಿಗೆ ಔತಣವು ಜರುಗಿತು ಅವರು ಮತ್ತು ಅವರ ಪತ್ನೀರವರ ಪಙ್ತಿಯಲ್ಲಿ ಅವರ ಕೈಕೆಳಗಣ ಅಧಿಕಾರಿಗಳೂ, ಮೈಸೂರು ಸಂಸ್ಥಾನದ ಮುಖ್ಯರಾದ ಯೂರೋಪಿಯನ್ ಅಧಿಕಾರಿಗಳೂ ಸುಮಾರು ೩೩ ಮಂದಿ ಕುಳಿತು ಭೋಜನಮಾಡಿದರು ಬಂಗಲೆಯ ಒಳಗೂ ಹೊರಗಡೆ ಮೈದಾನುಗಳಲ್ಲೂ ದಿವ್ಯವಾದ ದೀಪೋತ್ಸವವಾಯಿತು ಭೋಜನ ಕಾಲದಲ್ಲಿ ಶ್ರೀಮನ್ ಮಹಾರಾಜರವರ ಇಂಗ್ಲಿಷ್ ಬ್ಯಾಂಡು ಹೊರಗಡೆ ಇದ್ದು ಉಲ್ಲಾಸಕರವಾದ ವಾದ್ಯಗಳನ್ನು ನುಡಿಸುತ್ತಿದ್ದರು ಭೋಜನಾನಂತರ ಸುಮಾರು ೯|| ಗಂಟೆಗೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಬಂಗಲೆಗೆ ದಯಮಾಡಿದರು ಬ್ರಿಟಿಷ್ ರೆಸಿಡೆಂಟರು ಅವರನ್ನು ಎದುರುಗೊಂಡು ಕರೆದುಕೊಂಡು ಹೋಗಿ ವೈಸ್‌ರಾಯಿಯವರ ಉಭಯ ಪಾರ್ಶ್ವಗಳಲ್ಲೂ ಕೂಡಿಸಿದರು ಇವರ ಹಿಂಭಾಗದಲ್ಲಿ ದಿವಾನ್‌ರವರು, ಕೌನ್ಸಿಲ್ ಮೆಂಬರುಗಳು, ಸರ್ದಾರರುಗಳಾದ ಮೆ|| ಕಾಂತರಾಜೇ ಅರಸಿನವರು, ಲೆಫ್ಟಿ ಕರ್ನಲ್ ದೇಸರಾಜೇ ಅರಸಿನವರು, ಲಕ್ಷ್ಮೀಕಾಂತರಾಜೇ ಅರಸಿನವರು, ಮೆ|| ಗಳಾದ ಚೀಫ್ ಇನ್‌ಜಿನಿಯರ್ ವಿಶ್ವೇಶ್ವರಯ್ಯನವರು ಹುಜೂರು ಸೆಕ್ರೆಟರಿ ರಾಘವೇಂದ್ರರಾಯರು, ಕಂಟ್ರೋಲರ್ ಚಕ್ರವರ್ತಿಯವರು, ಜನರಲ್ ಸೆಕ್ರೆಟರಿ ಚಂದ್ರಶೇಖರ ಐಯರವರು, ಇವರೆಲ್ಲಾ ಸಾಲುಗಟ್ಟಿ ಕುಳಿತುಕೊಂಡರು

ಶ್ರೀಮನ್ ಮಹಾರಾಜರವರ ಭಾಷಣವು

ಶ್ರೀಮನ್ ಮಹಾರಾಜರವರು ವೈಸ್‌ರಾಯಿ ಪ್ರಭುಗಳ ಸಂಗಡ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಎದ್ದು ನಿಂತು ಅವರನ್ನೂ ಸಭಿಕರಾದ ಯೂರೊಪಿಯನ್ ಸರ್ದಾರರನ್ನೂ ಕುರಿತು ಚಕ್ರವರ್ತಿ ಸಾರ್ವಭೌಮರವರಿಗೆ ಆಯುರಾರೋಗ್ಯಗಳುಂಟಾಗಲಿ ಎಂದು ಕೋರಿದರು. ಎಲ್ಲರೂ ಎದ್ದು ನಿಂತುಕೊಂಡು ಹಾಗೇ ಆಗಲೆಂದು ಬಯಸಿದರು ಬಳಿಕ ಮಹಾರಾಜರವರು ವೈಸ್‌ರಾಯಿ ಪ್ರಭುಗಳಿಗೂ ಅವರ ಪತ್ನೀರವರಿಗೂ ಕ್ಷೇಮವನ್ನು ಕೋರುವುದಕ್ಕೆ ಮುಂಚೆ ಒಂದು ಭಾಷಣವನ್ನು ಮಾಡಿದರು ಅದರ ಮುಖ್ಯಾಭಿಪ್ರಾಯವೇನೆಂದರೆ,—

ಘನವೆತ್ತಿದ ತಾವೂ ತಮ್ಮ ಪತ್ನಿಯವರೂ ನನ್ನ ಸೀಮೆಗೂ ರಾಜಧಾನಿಗೂ ದಯಮಾಡಿದ್ದರಿಂದ ನಮಗೆ ವಿಶೇಷವಾದ ಆನಂದವೂ ಗೌರವವೂ ಉಂಟಾಗಿವೆ ತಾವು ದಯಮಾಡಬೇಕೆಂದು ತಮ್ಮನ್ನು ಮೊದಲು ಕೇಳಿಕೊಂಡಾಗ್ಗೆ ನನ್ನ ಸೀಮೆಯಲ್ಲಿ ಮಳೆ ಬೆಳೆಯಾಗದೆ ದುರ್ಭಿಕ್ಷವು ನೆಲೆಗೊಂಡಿತ್ತು ಕ್ಷಾಮ ಪ್ರಾಪ್ತವಾದೀತೋ ಎಂಬ ಭೀತಿಯೂ ಉಂಟಾಗಿತ್ತು ತಾವು ತಮ್ಮಲ್ಲಿರುವ ಸಹಜವಾದ ಪ್ರೀತಿ ವಿಶ್ವಾಸಗಳಿಂದ ಈ ಸಂಗತಿಯನ್ನು ತಿಳಿದುಕೊಂಡು, ಸಂಸ್ಥಾನದಲ್ಲಿ ಕಾಲಸ್ಥಿತಿಯು ಸುಭಿಕ್ಷಕರವಾಗುವ ತನಕ ಅಂದರೆ ಇನ್ನು ಕೆಲವು ಕಾಲ ಕಳೆದ ತರುವಾಯ ಭೇಟಿ ದಯಪಾಲಿಸುವುದಾಗಿ ನಮಗೆ ತಿಳಿಸೋಣವಾಯಿತು ಆದರೆ ಈಚೆಗೆ ಕಾಲಸ್ಥಿತಿಯು ಬದಲಾವಣೆ ಹೊಂದಿ ಹರ್ಷಯುಕ್ತವಾದ ಮಳೆಗಳು ಸುರಿದು ನಮ್ಮ ಸಂಸ್ಥಾನದ ರೈತ ಪ್ರಜೆಗಳ ಕಳವಳವನ್ನು ನಿವಾರಣೆ ಮಾಡಿರುತ್ತವೆ ಬೆಳೆಗಳು ಸುಭಿಕ್ಷವನ್ನು ಸೂಚಿಸುತ್ತಲಿವೆ ಎಂದು ತಿಳಿಸಲು ತುಂಬಾ ಸಂತೋಷವಾಗಿರುವುದು ಇಂಥಾ ಸಂತೋಷ ಕಾಲದಲ್ಲಿ ತಮ್ಮಗಳನ್ನೂ ತಮ್ಮ ಸಂಸಾರಕ್ಕೆ ಸೇರಿದವರನ್ನೂ ಕರೆಸಿಕೊಂಡು ಸತ್ಕಾರ ಮಾಡುವುದರಲ್ಲಿ ನಮಗೆ ಪರಮಾನಂದವುಂಟಾಗಿದೆ ಎಂದು ಈ ಸಮಯದಲ್ಲಿ ಹೇಳದಿರಲಾರೆವು

ತಮ್ಮಂಥಾ ದೃಢ ಸಂಕಲ್ಪರೂ ಅಂತಃಕರಣವುಳ್ಳವರೂ ನಮ್ಮ ಮಧ್ಯೆ ದಯಮಾಡಿರುವ ಸಂದರ್ಭದಲ್ಲಿ ನಾವು ಪಬ್ಲಿಕ್ (ರಾಜಕೀಯ) ವಿಚಾರಗಳನ್ನು ಕುರಿತು ಶಕ್ಯ ಮಟ್ಟಿಗೆ ಸಂಕ್ಷೇಪವಾಗಿ ಪ್ರಸ್ತಾಪ ಮಾಡಬೇಕಾದದ್ದು ಸಹಜವೆಂದು ಕಾಣುತ್ತದೆ ತಾವು ದಯಮಾಡಿದ ನಾಲ್ಕು ವರುಷಗಳಿಂದೀಚೆಗೆ ಹಿಂದುಸ್ಥಾನದ ರಾಜ್ಯಭಾರ ಕಾರ್ಯಗಳು ಬಹು ಕಷ್ಟಕರವಾಗಿಯೂ ವಿಶೇಷ ಧೂಮೋತ್ಪಾತವನ್ನುಂಟುಮಾಡುವಷ್ಟು ಕಳವಳಯುಕ್ತವಾಗಿಯೂ ಪರಿಣಮಿಸಿದ್ದವು ನೆಮ್ಮದಿ ಸುಖ ಸಮಾಧಾನಗಳನ್ನು ಕಾಪಾಡುವುದೇ ಬ್ರಿಟಿಷ್ ಗವರನ್‌ಮೆಂಟಿನವರ ಪ್ರಥಮ ಧರ್ಮವಾಗಿದೆ ಹಿಂದುಸ್ಥಾನದಲ್ಲಿ ಅವುಗಳನ್ನು ಸ್ಥಿರವಾಗಿ ನೆಲೆಗೊಳಿಸುವುದಕ್ಕೆ ತಾವೂ ಇಂಡಿಯಾ ಗವರನ್‌ಮೆಂಟಿನವರೂ ಎಷ್ಟು ಮಟ್ಟಿಗೆ ಶ್ರಮಪಟ್ಟಿರೋ ವಿವರಿಸಲಾರೆವು ತಮ್ಮಗಳ ಜಿತಮನಸ್ಸೂ ಸಾಹಸ ಪ್ರಯತ್ನಗಳೂ ಅತಿ ದೀರ್ಘವಾಗಿದ್ದರೂ ಸಾರ್ಥಕತೆ ಹೊಂದಿದವೆಂದೂ ಚಿಂತೆಯೂ ಕಳವಳವೂ ನಿವಾರಣೆಯಾಗುತ್ತಾ ಬಂದಿವೆ ಎಂದೂ ಹೇಳಬಹುದಾಗಿದೆ ಇಷ್ಟೇ ಅಲ್ಲ ಅಷ್ಟು ಚಿಂತೆಯೂ ನಾನಾ ಬಗೆಯ ಕಳವಳವೂ ಆವರಿಸಿದ್ದಾಗ್ಯೂ ತಾವುಗಳು ತಮ್ಮ ಮನಸ್ಸಂಕಲ್ಪವನ್ನು ಕಿಂಚಿತ್ತಾದರೂ ಬದಲಾವಣೆ ಮಾಡದೆ, ಪ್ರಜಾರಂಜಕವಾದ ಹೊಸ ಶಿಸ್ತುಗಳನ್ನು ಮಾಡಿಟ್ಟು ರೂಢಿಸಬೇಕೆಂದು ಹಿಂದುಸ್ಥಾನದ ದೇಶೀಯ ವಿದ್ಯಾವಂತರಿಗೆ ರಾಜ್ಯಭಾರ ಕಾರ್ಯಗಳಲ್ಲಿ ಹೆಚ್ಚಿನ ಅಧಿಕಾರ ಸ್ವಾತಂತ್ರ್ಯಾದಿಗಳನ್ನು ದಯಪಾಲಿಸುವಂತೆ ಏರ್ಪಾಡು ಮಾಡುತ್ತಿರುವುದಕ್ಕಾಗಿಯೂ, ರಾಷ್ಟ್ರದಲ್ಲಿ ನೆಮ್ಮದಿಯನ್ನು ಭಂಗಪಡಿಸುವಂಥಾ ಅನಾಯಕ ಕೃತ್ಯಗಳೇ ಮೊದಲಾದ ದುಷ್ಪ್ರವರ್ತನೆಗಳನ್ನು ತಾವುಗಳು ದಕ್ಷತೆಯನ್ನೂ ದರ್ಪವನ್ನೂ ವಹಿಸಿ ಖಂಡಿಸಿ ಅಣಗಿಸುತ್ತಿರುವುದಕ್ಕಾಗಿಯೂ ತಮ್ಮ ಕೀರ್ತಿಯು ಚಿರಸ್ಥಾಯಿಯಾಗಿರುತ್ತದೆ ಇಲ್ಲಿಂದ ಮುಂದಕ್ಕೆ ಹಿಂದುಸ್ಥಾನದಲ್ಲಿ ನೆಮ್ಮದಿ ಸುಖ ಸಮಾಧಾನಗಳು ನೆಲೆಗೊಳ್ಳುವವೆಂದು ನಿರೀಕ್ಷಿಸಬಹುದಾಗಿದೆ ಇಂಡಿಯಾ ಗವರನ್‌ಮೆಂಟಿನವರು ತಮ್ಮ ದರ್ಪವನ್ನು ಸ್ಥಿರಪಡಿಸುವ ಭಾಗದಲ್ಲಿ ಮಾಡುತ್ತಿರುವ ಸಮಸ್ತವಾದ ಕಾರ್ಯಗಳೂ ಸಹಜವಾದವುಗಳೆಂದೂ ಅವಶ್ಯವಾದವುಗಳೆಂದೂ ನಾವು ಮನಃಪೂರ್ವಕವಾಗಿ ಒಪ್ಪಿ ಹೇಳುವೆವು ಮತ್ತು ಅಂಥಾ ಕಾರ್ಯಗಳಿಗೆ ಲೇಶಮಾತ್ರವೂ ಪ್ರತಿಬಂಧಕಗಳುಂಟಾಗದಂತೆ ನಾವು ನಮ್ಮ ಕೈಲಾಗುವ ಮಟ್ಟಿಗೂ ಸರ್ವದಾ ಭಕ್ತಿಪೂರ್ವಕವಾಗಿ ಬೆಂಬಲಕೊಡುತ್ತಾ ಬರುವವರಾಗಿದೇವೆ

ಚಕ್ರವರ್ತಿ ಸಾರ್ವಭೌಮರವರ ವಿಷಯದಲ್ಲಿ ನಮ್ಮ ಭಕ್ತಿ ಪ್ರೀತಿಗಳು ಅದ್ವಿತೀಯವಾಗಿರುತ್ತವೆಂದು ಧೈರ್ಯವಾಗಿ ಹೇಳುವೆವು ನಮ್ಮ ಸಂಸ್ಥಾನದ ಪ್ರಜೆಗಳಾದರೋ ಹಿಂದಿನ ಸಮಯ ಸಂಧರ್ಭಾದಿಗಳನ್ನೂ ಬ್ರಿಟಿಷ್ ಜನಾಂಗದವರಿಗೂ ತಮಗೂ ಇರುವ ಸಹಜವಾದ ಸ್ನೇಹಸಂಬಂಧಗಳನ್ನೂ ಎಂದೆಂದಿಗೂ ಮರೆಯತಕ್ಕವರಾಗಿಲ್ಲ ಅವರು ಸಾರ್ವಭೌಮ ಸರ್ಕಾರದವರ ವಿಷಯದಲ್ಲಿ ವಿಶೇಷ ಭಯಭಕ್ತಿಪೂರಿತರಾಗಿಯೂ ಕೃತಜ್ಞತೆಯುಳ್ಳವರಾಗಿಯೂ ಇರುತ್ತಾರೆ ಆದಕಾರಣ ದೇವರ ದಯದಿಂದ ನಮ್ಮ ಗವರ್ನ್‌ಮೆಂಟಿನಲ್ಲಿ ಕಠಿಣತರವಾದ ಕಾನೂನುಗಳನ್ನು ರೂಢಿಸಬೇಕಾದ ಅಗತ್ಯವೇನೂ ಕಂಡುಬರಲಿಲ್ಲ ಪ್ರಜೆಗಳಲ್ಲಿ ಎಚ್ಚರಿಕೆಯನ್ನುಂಟುಮಾಡುವಂಥಾ ಒಂದು ಕಾನೂನನ್ನು ಮಾತ್ರ ರೂಢಿಸಿದೆವು ವರ್ತಮಾನ ಪತ್ರಿಕೆಗಳಲ್ಲಿ ರಾಜದ್ರೋಹಕರವಾದ ವಿಚಾರಗಳೇನೂ ಪ್ರಕಟವಾಗದಂತೆ ಅಡ್ಡಿ ಮಾಡುವುದೇ ಈ ಕಾನೂನಿನ ಉದ್ದೇಶವಾಗಿದೆ ಇದು ಅವಶ್ಯವಾದದ್ದೆಂದು ನಾವು ಚೆನ್ನಾಗಿ ತಿಳಿದುಕೊಂಡಿದೇವೆ ದುಷ್ಪ್ರವರ್ತನೆಯನ್ನು ತಡೆಯುವುದಕ್ಕೆ ಇಂಥಾ ಅಧಿಕಾರವು ನಮ್ಮ ಗವರ್ನ್‌ಮೆಂಟಿನವರಿಗೆ ಉಂಟು ಎಂಬುವುದು ಪ್ರಜೆಗಳಿಗೆ ತಿಳಿದಿರುವುದೇ ಸಾಕೆಂದು ಕಂಡುಬಂದಿತು ಆ ಅಧಿಕಾರವನ್ನು ಕಠಿಣವಾಗಿ ಕಾರ್ಯತಃ ಚಲಾಯಿಸಬೇಕಾದ ಕಾಲವೂ ಸಂದರ್ಭವೂ ಪ್ರಾಪ್ತವಾಗಲಾರವೆಂದು ನಂಬಿ ನಿರೀಕ್ಷಿಸುತ್ತೇವೆ

ತಾವು ಸ್ಥಿರಸಂಕಲ್ಪರೆಂದೂ ಕರುಣಾರಸಭರಿತರೆಂದೂ ಈ ರಾಷ್ಟ್ರದ ಚರಿತ್ರೆಯಲ್ಲಿ ಹೊಗಳಿಸಿಕೊಳ್ಳುವುದು ಮಾತ್ರವೇ ಅಲ್ಲ , ನನ್ನ ವಿಷಯದಲ್ಲೂ ನಮ್ಮಂಥಾ ಹಿಂದುಸ್ಥಾನದ ಇತರ ಸಾಮಂತ ರಾಜರುಗಳ ವಿಷಯದಲ್ಲೂ ನಿಮ್ಮ ಅಪರಿಮಿತವಾದ ಪ್ರೀತಿ ವಿಶ್ವಾಸಗಳನ್ನು ನಿಮ್ಮ ಭಾಷಣಗಳಿಂದಲೂ ಕಾರ್ಯರೂಪವಾಗಿಯೂ ಪ್ರಕಾಶಪಡಿಸುತ್ತಾ ಬಂದಿರುವುದರಿಂದ ನಾವುಗಳೆಲ್ಲಾ ತಮ್ಮ ವಿಶೇಷವಾದ ಕೃತಜ್ಞತೆಯನ್ನೂ ವಾತ್ಸಲ್ಯವನ್ನೂ ಪಡೆದಿರುವಂತೆ ಮಾಡಿಕೊಂಡಿರುವಿರಿ. ತಮ್ಮ ಪ್ರೀತಿ ವಿಶ್ವಾಸಗಳನ್ನು ನಾವುಗಳೆಂದಿಗೂ ಮರೆಯತಕ್ಕವರಾಗಿಲ್ಲ ನಾವುಗಳೆಲ್ಲಾ ತಮ್ಮನ್ನು ಸರ್ವದಾ ನಮ್ಮಗಳ ಪರಮ ಸ್ನೇಹಿತರೆಂದೂ, ಯಥಾರ್ಥ ಹಿತಚಿಂತಕರೆಂದೂ ಎಣಿಸುತ್ತಾ ಬರುವೆವು

ಅಹಮ್ಮದಾಬಾದಿನಲ್ಲಿ ಮೊನ್ನೆ ತಮ್ಮ ಮೇಲೆ ಕ್ರೂರಕೃತ್ಯವನ್ನು ನಡೆಸಬೇಕೆಂದು ಪ್ರಯತ್ನ ಪಟ್ಟಿದ್ದನ್ನು ಕೇಳಿ ಹಿಂದುಸ್ಥಾನದಲ್ಲೆಲ್ಲಾ ಎಷ್ಟು ಗಾಬರಿಯೂ ಆಗ್ರಹವೂ ಉಂಟಾದವೋ ಮೈಸೂರು ಸಂಸ್ಥಾನದಲ್ಲಿ ಅದಕ್ಕಿಂತಲೂ ಹೆಚ್ಚಾಗಿಯೇ ಉಂಟಾದವು ಅದು ಅತ್ಯಂತ ಹೇಯವೂ ತುಚ್ಛವೂ ಆದ ಕೃತ್ಯವೆಂದು ಈ ಸಮಯದಲ್ಲಿ ತಮಗೆಲ್ಲಾ ತಿಳಿಸಿ, ತಾವುಗಳು ಅದಕ್ಕೆ ಸಿಕ್ಕದೆ ತಪ್ಪಿಸಿಕೊಂಡ ಭಾಗದಲ್ಲಿ ನಮಗುಂಟಾಗಿರುವ ಸಂತೋಷವನ್ನು ಕೃತಜ್ಞತಾಪೂರ್ವಕವಾಗಿ ಪ್ರಕಾಶಪಡಿಸುವೆವು

ಈ ರೀತಿ ಭಾಷಣವನ್ನು ಮಾಡಿದ ತರುವಾಯ ಶ್ರೀಮನ್ ಮಹಾರಾಜರವರು ಸಭಿಕರನ್ನೆಲ್ಲಾ ವೈಸ್‌ರಾಯಿ ದಂಪತಿಗಳಿಗೆ ಆಯುರಾರೋಗ್ಯಗಳು ಚಿರಕಾಲ ದೊರಕಲಿ ಎಂದು ಬಯಸುವಂತೆ ಕೇಳಿಕೊಂಡರು ಎಲ್ಲರೂ ಜಯಘೋಷದೊಡನೆ ಆ ರೀತಿ ಬಯಸಿದರು

ವೈಸ್‌ರಾಯಿಯವರ ಪ್ರತ್ಯುತ್ತರವು.

ಸಭಿಕರೆಲ್ಲಾ ಸಂತೋಷಧ್ವನಿಯನ್ನು ಮಾಡುತ್ತಿರುವಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಎದ್ದು ನಿಂತು ಶ್ರೀಮನ್ ಮಹಾರಾಜರವರನ್ನೂ ಸರ್ದಾರರನ್ನೂ ದೊರೆಸಾನಿಗಳನ್ನೂ ಕುರಿತು ಅಪ್ಪಣೆ ಕೊಡಿಸಿದ ಭಾಷಣದ ಸಾರಾಂಶವೇನೆಂದರೆ,—

ಮೊದಲು ನಾವು ನಿಮ್ಮ ಸಂಸ್ಥಾನಕ್ಕೆ ಬರಬೇಕೆಂಬ ಆಲೋಚನೆ ಇದ್ದಾಗ ಕ್ಷಾಮದ ಸೂಚನೆಗಳು ಕಂಡುಬರುತ್ತಿದ್ದವು ಈ ಸಂವತ್ಸರದ ಪ್ರಾರಂಭದಲ್ಲಿ ದುಷ್ಕಾಲ ಪ್ರಾಪ್ತವಾದೀತೆಂಬ ಭೀತಿಯು ಉಂಟಾಗಿದ್ದದ್ದೇನೋ ನಿಜವೇ ನಾವು ಬಂದರೆ ನಿಮ್ಮ ರಾಜಾದಾಯದಲ್ಲಿ ಬಹಳ ಹೆಚ್ಚಾಗಿ ಖರ್ಚಾದೀತೆಂದೂ, ವ್ಯವಸಾಯ ಕಾರ್ಯಗಳು ಕುಂದಿರುವುದೊಂದೇ ಸಾಲದೆ ನಿಮಗೆ ಇತರ ವಿಧವಾದ ಚಿಂತೆಗಳು ಉಂಟಾಗುವವೆಂದೂ ನಮಗೆ ಸಂಶಯ ಉಂಟಾಗಿತ್ತು ಈಗಲಾದರೋ ಯಥೇಚ್ಛವಾಗಿ ಮಳೆಗಳು ಸುರಿದು, ನಮ್ಮಗಳಲ್ಲಿದ್ದ ಗಾಬರಿಯನ್ನೂ ಚಿಂತೆಯನ್ನೂ ತೊಲಗಿಸಿ ಬಿಟ್ಟಿರೋಣದರಿಂದ ನಿಮ್ಮ ಅಟ್ಟಹಾಸಯುಕ್ತವಾದ ಆತಿಥ್ಯವನ್ನು ಅಂಗೀಕರಿಸುವುದಕ್ಕೂ ಸುಭಿಕ್ಷ ಸೂಚನೆಯು ನಿಮ್ಮ ಪ್ರಜೆಗಳ ಸುಖಸಂತೋಷಗಳನ್ನು ವೃದ್ಧಿಪಡಿಸುವವೆಂದು ನೀವು ಹೇಳುವುದನ್ನು ಕೇಳುವುದಕ್ಕೂ ನಮಗೆ ತುಂಬಾ ಆನಂದವಾಗಿದೆ

ಕೆಲವು ವರುಷಗಳಿಂದೀಚೆಗೆ ಹಿಂದುಸ್ಥಾನದಲ್ಲಿ ಪ್ರಜೆಗಳಿಗೂ ಪ್ರಜಾಪಾಲಕರಿಗೂ ನಾನಾ ಬಗೆಯ ಕಳವಳಗಳುಂಟಾಗಿದ್ದು ಎಲ್ಲಾ ನಿವಾರಣೆ ಹೊಂದುತ್ತಾ ಬಂದಿರುವವು ರಾಜದ್ರೋಹಕರವಾದ ಮಸಲತ್ತುಗಳೂ ಫಿತೂರಿಗಳೂ ನಡೆದು ಇಂಡಿಯಾ ಗವರ್ನ್‌ಮೆಂಟಿನವರು ಅವುಗಳನ್ನು ಕಠಿಣತರವಾದ ಏರ್ಪಾಡುಗಳಿಂದ ಅಣಗಿಸುತ್ತಾ ಬಂದಿರುವರು ಮಾರನೆಯದಾಗಿ ಪ್ರಜೆಗಳ ನೆಮ್ಮದಿ ಸುಖ ಸಮಾಧಾನಗಳನ್ನು ವೃದ್ಧಿಪಡಿಸುವಂಥಾ ರಾಜಕೀಯ ಬದಲಾವಣೆಗಳನ್ನು ಏರ್ಪಾಡು ಮಾಡಲಾಗಿದೆ ಇವುಗಳ ದೆಸೆಯಿಂದ ಈ ರಾಷ್ಟ್ರದ ಮುಂದಿನ ಸ್ಥಿತಿಗತಿಯು ರೂಪಾಂತರವಾದೀತೆಂದು ನಿಮ್ಮ ಹಾಗೆ ನಾವೂ ನಂಬಿ ನಿರೀಕ್ಷಿಸುವೆವು ನೀವು ಯಶೋವಂತರಾದ ಪ್ರಜಾಪಾಲಕರೆನಿಸಿಕೊಂಡು ಬಹಳ ಕಷ್ಟಕಾಲ ಒದಗಿದ್ದ ಸಮಯದಲ್ಲಿ ನೀವು ಧೈರ್ಯದಿಂದಲೂ ಪೌರುಷವಾಗಿಯೂ ಇಂಡಿಯಾ ಗವರನ್‌ಮೆಂಟಿನವರಿಗೆ ಸಹಾಯಕರಾಗಿ ನಿಂತು, ಮುಂಜಾಗ್ರತೆಯುಳ್ಳ ಪ್ರೆಸ್ ಕಾನೂನನ್ನು ಮಾಡಿ ಜಾರಿಗೆ ತಂದಿರಿ ಅದರ ವಿಷಯದಲ್ಲಿ ಹುಟ್ಟಿದ ಕೋಪಯುಕ್ತವಾದ ಆಕ್ಷೇಪಣೆಗಳನ್ನು ನೀವು ಲಕ್ಷ್ಯಕ್ಕೆ ತರಲಿಲ್ಲ ರಾಜಕೀಯ ವಿಚಾರಗಳಲ್ಲಿ ಪ್ರಜೆಗಳಿಗೆ ದುರ್ಬೋಧನೆಯಾಗಿ ಪರಿಣಮಿಸುವಂಥಾ ಉದ್ದೇಶ ಅಭಿಪ್ರಾಯಾದಿ ಸಲಹೆಗಳನ್ನು ಪ್ರಚಾರಪಡಿಸದಂತೆ ನಿರೋಧಮಾಡಬೇಕೆಂಬುವುದೇ ನಿಮ್ಮ ಮನಸ್ಸಂಕಲ್ಪವಾಗಿತ್ತೆಂದು ತಿಳಿದು ಸಂತೋಷಪಡುತ್ತೇವೆ ಅಂಥಾ ಬರವಣಿಗೆಗಳನ್ನೂ ಅಭಿಪ್ರಾಯಗಳನ್ನೂ ಅಣಗಿಸದೆ ಹೋದಲ್ಲಿ ಪ್ರಜಾ ಸಂಘಗಳ ಏಳಿಗೆಗೆ ಭಂಗವುಂಟಾಗುವುದೆಂದೂ ಪ್ರಜೆಗಳ ಮಾನ ಧನ ಪ್ರಾಣಗಳಿಗೆ ಕಂಟಕವಾಗುವುದೆಂದೂ ನಾವು ಹೇಳಬೇಕಾದದ್ದಿಲ್ಲ

ಮೈಸೂರಿಗೂ ಇಂಡಿಯಾ ಗವರ್ನ್‌ಮೆಂಟಿಗೂ ಪೂರ್ವದಿಂದಲೂ ನಡೆದು ಬಂದಿರುವ ಪರಸ್ಪರವಾದ ಪ್ರೀತಿ ಸಂಬಂಧಗಳನ್ನು ಕುರಿತು ನೀವು ಸೂಚಿಸಿರುತ್ತೀರಿ ಈ ಸಂಬಂಧಗಳು ಈಗಿನ ಸಂದರ್ಭದಲ್ಲಿ ಬಹು ಶ್ರೇಷ್ಠವಾದ ಫಲಫಲಿಸುತ್ತಿರುವವು ಇದುವರೆಗಿನ ಅನುಭವವನ್ನು ನೋಡಲಾಗಿ ನಿಮಗೂ ನಿಮ್ಮ ಪ್ರಜೆಗಳಿಗೂ ಬ್ರಿಟಿಷ್ ಚಕ್ರಾಧಿಪತ್ಯಕ್ಕೂ ಪರಸ್ಪರ ಪ್ರೀತಿ ಗೌರವಗಳನ್ನು ಆಚಂದ್ರಾರ್ಕವಾಗಿ ನೆಲೆಗೊಳಿಸುವುದಾಗಿದೆ ಇಂಥಾ ನಿಮ್ಮಗಳ ಆತಿಥ್ಯವನ್ನು ಸ್ವೀಕರಿಸುವುದರಲ್ಲಿ ನಮಗೆ ಪರಮಾನಂದವುಂಟಾಗಿದೆ ಪ್ರಾಚೀನ ಕಾಲದ ಈ ಮೈಸೂರು ರಾಜಮನೆತನಕ್ಕೆ ಸೇರಿದ ನೀವು ವಿವೇಕವಾಗಿಯೂ ಬಹು ಜಾಗರೂಕತೆಯಿಂದಲೂ ರಾಜ್ಯಭಾರ ಮಾಡಿಕೊಂಡು ಬಂದಿರುವುದನ್ನು ನೋಡಿ ಬಹಳ ಸಂತೋಷಪಡುವೆವು ಮಹಾರಾಜರವರೇ, ನೀವು ನಿಮ್ಮ ಪರವಾಗಿಯೂ ನಿಮ್ಮ ಸಹೋದರವರ್ಗಕ್ಕೆ ಸೇರಿದ ಇತರ ಸಾಮಂತ ರಾಜರುಗಳ ಪರವಾಗಿಯೂ ಹೇಳಿರುವಂಥಾ ಶ್ರೇಷ್ಠ ವಚನಗಳನ್ನು ಕೇಳಿ ನಾವು ಮನಸ್ಪೂರ ತುಂಬಾ ಮೆಚ್ಚಿಕೊಂಡಿರುತ್ತೇವೆ ಇನ್ನೊಂದು ಸಂದರ್ಭದಲ್ಲಿ ಹೇಳಿರುವ ಪ್ರಕಾರ ನಾವು ಅನೇಕ ಸಾಮಂತ ರಾಜರುಗಳನ್ನು ನಮ್ಮ ಆಪ್ತಮಿತ್ರರಂತೆ ಎಣಿಸಿಕೊಂಡಿರುವೆವು ನಾವು ಅವರುಗಳ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಂಡು ಬರುತ್ತೇವೆಂಬುವುದನ್ನು ಅವರು ಅರಿತಿರುತ್ತಾರೆ ನಮ್ಮ ಮಹಾಸಾಮ್ರಾಜ್ಯವು ಚಿರಕಾಲ ಸ್ಥಿರವಾಗಿ ನಡೆದು ಬರುವ ಭಾಗದಲ್ಲಿ ಅವರು ದಿನೇ ದಿನೇ ಹೆಚ್ಚು ಹೆಚ್ಚಾಗಿ ಸಹಾಯ ಮಾಡುತ್ತಾ ಬರುವವರಾಗಿದ್ದಾರೆ ಮತ್ತು ಅವರೂ ಅವರ ಪ್ರಜೆಗಳೂ ದಂಪತಿಗಳಾದ ನಮಗೆ ಪ್ರಾಪ್ತವಾಗುತ್ತಿದ್ದ ಅಪಘಾತವು ನಿವಾರಣೆಯಾದ ವಿಷಯದಲ್ಲಿ ವಿಶ್ವಾಸಪೂರಿತವಾದ ಮನಸ್ಸಿನಿಂದ ತಮ್ಮಗಳ ಸಂತೋಷವನ್ನು ಪ್ರಕಾಶಪಡಿಸಿರುವುದು ನಮ್ಮಿಬ್ಬರ ಮನಸ್ಸನ್ನೂ ವ್ಯಾಪಿಸಿರುತ್ತದೆ ನಾವು ಇಲ್ಲಿರುವಾಗ್ಗೆ ನಿಮ್ಮ ಸಾಮರ್ಥ್ಯಪೂರ್ಣ ಆಳ್ವಿಕೆಯ ಕೆಲವು ಅಂಶಗಳನ್ನು ನೋಡಿ ತಿಳಿಯಬೇಕೆಂದೂ, ಹೆಸರುವಾಸಿಯನ್ನು ಪಡೆದ ನಿಮ್ಮ ಇಂಪೀರಿಯಲ್ ಸರ್ವಿಸ್ ಸೈನಿಕರನ್ನು ಸಾಕ್ಷಾತ್ತಾಗಿ ನೋಡಬೇಕೆಂದೂ ಕುತೂಹಲಪಡುತ್ತೇವೆ

ಇಷ್ಟೆಲ್ಲಾ ಸುಭಿಕ್ಷದ ಸೂಚನೆಗಳುಂಟಾಗಿರುವುದರ ನಡುವೆ ಮೈಸೂರು ಪಟ್ಟಣದಲ್ಲಿ ಮತ್ತೆ ಪ್ಲೇಗ್ ಉಪದ್ರವ ಪ್ರಾಪ್ತವಾಗಿರುವುದನ್ನು ನೋಡಿ ನಾವು ತುಂಬಾ ದುಃಖಪಡುತ್ತೇವೆ ನಿಮ್ಮ ಗವರನ್‌ಮೆಂಟಿನವರು ಈ ಉಪದ್ರವವನ್ನು ಅಣಗಿಸುವುದಕ್ಕೆ ಬಹಳ ಸಾಹಸಪಟ್ಟು ಅನೇಕ ಮುಂಜಾಗ್ರತೆಯ ಕಾರ್ಯಗಳ

ಳನ್ನು ನಡಿಸಿರುತ್ತಾರೆಂದು ಕೇಳಿದ್ದೇವೆ ಆದಾಗ್ಯೂ ಅದು ಆಗಾಗದೆ ಅಧೈರ್ಯಪಡಿಸುತ್ತಿರುವುದು ಇನ್ನಾದರೂ ನಮ್ಮ ಗವರನ್‌ಮೆಂಟಿನ ಸದಭಿಪ್ರಾಯಪೂರ್ವಕವಾದ ಸಾಹಸಕಾರ್ಯಗಳು ಫಲಕಾರಿಯಾಗುವವೆಂದು ನಂಬಿ ನಿರೀಕ್ಷಿಸುವೆವು

ನಮ್ಮ ಪರವಾಗಿಯೂ, ಲೇಡಿ ಮಿಂಟೋ ಲೇಡಿ ಎಲಿಜ ಎಲಿಯಟ್ ಇವರುಗಳ ಪರವಾಗಿಯೂ ನೀವು ಮಾಡಿದ ಆತಿಥ್ಯಕ್ಕಾಗಿ ನಿಮ್ಮನ್ನು ವಂದಿಸುತ್ತೇವೆ ಮಹಾರಾಜರವರೇ, ನಿಮ್ಮ ಸೌಂದರ್ಯಯುಕ್ತವಾದ ಸಂಸ್ಥಾನವನ್ನು ನೋಡುವುದರಲ್ಲೂ ಕೆಡ್ಡಾ ಕ್ಯಾಂಪಿನಲ್ಲಿ ವಿಹರಿಸಿಕೊಂಡು ಹೋಗುವುದರಲ್ಲೂ ಪರಮ ಸಂತೋಷಪೂರ್ಣರಾಗಿರುವೆವು

ಈ ಪ್ರಕಾರ ಭಾಷಣ ಮಾಡಿ ವೈಸ್‌ರಾಯಿಯವರು ಶ್ರೀಮನ್ಮಹಾರಾಜರವರಿಗೆ ದೀರ್ಘಾಯುರಾರೋಗ್ಯಗಳನ್ನು ಬಯಸಿದರು ಸಭಿಕರೆಲ್ಲಾ ಅದೇ ರೀತಿ ಕೋರಿ ಸಂತೋಷಪ್ರನಮಾಡಿ ಕುಳಿತುಕೊಂಡರು

ಬಾಣ ಬಿರಸುಗಳು

ಆ ಬಳಿಕ ವೈಸ್‌ರಾಯಿ ದಂಪತಿಗಳೂ ಶ್ರೀಮನ್ಮಹಾರಾಜರವರೂ ಸಭಿಕರ ಸಮೇತ ಮೇಲುಪ್ಪರಿಗೆಯನ್ನು ಹತ್ತಿ ಹೋಗಿ ಕುಳಿತುಕೊಂಡು ಕೆಳಗಿನ ಮೈದಾನಿನಲ್ಲಿ ಅರಮನೆ ಮರಾಮತ್ತ್ ಇಲಾಖೆಯವರು ರಚಿಸಿ ಹಾರಿಸಿದ ನಾನಾ ಬಗೆಯ ಬಾಣ ಬಿರಸುಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟುಕೊಂಡರು ಸಾವಿರಾರು ಪ್ರಜೆಗಳು ಮೈದಾನಿನ ಸುತ್ತಲೂ ನಿಂತು ನೋಡಿದರು

ಮಹಾರಾಣಿಯವರ ಕಾಲೇಜು

ತಾ ೨೬ ನೇ ಶುಕ್ರವಾರ —ಈ ದಿನ ಬೆಳಗ್ಗೆ ವೈಸ್‌ರಾಯಿಯವರು ಬಂಗಲೆಯಿಂದ ಹೊರಗೆ ಹೊರಡಲಿಲ್ಲ ಸಾಯಂಕಾಲ ಸುಮಾರು ೪ ಗಂಟೆಗೆ ಅವರು ಪತ್ನಿಪರಿವಾರ ಸಹಿತ ಪ್ರಸಿದ್ಧವಾದ ಮಹಾರಾಣಿ ಕಾಲೇಜಿಗೆ ದಯಮಾಡಿದರು ಶ್ರೀಮನ್ಮಹಾರಾಜರವರೂ ರಾಜಪಿಂಡೆಯವರೂ ದಿವಾನ್‌ರೇ ಮೊದಲಾದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರಾದ ಮಿಸ್ ಜಿ ಎಲ್ ಪ್ಯಾಲಿತಾರ್ಪ್ ಯವರೂ ಸೆಕ್ರೆಟರಿ ಮ|| ರಾಯಬಹದೂರ್ ಎ ನರಸಿಂಹಯ್ಯಂಗಾರ್ರು ಅವರನ್ನು ಎದುರುಗೊಂಡು ಶ್ರೇಷ್ಠಾಸನದಲ್ಲಿ ಕೂಡಿಸಿದರು ಸಂಗೀತ ಕವನ ಮೊದಲಾದವುಗಳನ್ನು ವಿದ್ಯಾರ್ಥಿನಿಯರು ಕ್ರಮವಾಗಿಯೂ ಸ್ತೋತ್ರಾರ್ಹವಾಗಿಯೂ ನಡಿಸಿ ಸಂತೋಷಪಡಿಸಿದರು ಬಳಿಕ ಸೌಭಾಗ್ಯವತಿ ರುಕ್ಮಿಣಿಯಮ್ಮ, ಬಿ ಎ ಯವರು ವೈಸ್‌ರಾಯಿ ದಂಪತಿಗಳನ್ನು ಕುರಿತು ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅದರ ಮುಖ್ಯಾಂಶವೇನೆಂದರೆ,—

ತಾವುಗಳು ಈ ದಿನ ಇಲ್ಲಿಗೆ ದಯಮಾಡಿದ್ದರಿಂದ ನಮಗೆಲ್ಲಾ ಪರಮಾನಂದವೂ ವಿಶೇಷ ಗೌರವವೂ ಉಂಟಾಗಿರುತ್ತವೆ ಈ ನಮ್ಮ ಕೃತಜ್ಞತೆಯನ್ನು ಮಹಾರಾಣಿಕಾಲೇಜಿನ ಉಪಾಧ್ಯಾಯ ಉಪಾಧ್ಯಾಯಿನಿಯರ ಮತ್ತು ವಿದ್ಯಾರ್ಥಿನಿಯರ ಪರವಾಗಿ ಲೇಡಿ ಸೂಪರಿಂಟೆಂಡೆಂಟರ ಅಪ್ಪಣೆಯನ್ನು ಪಡೆದು ತಮಗೆ ಸಲ್ಲಿಸುತ್ತೇವೆ ತಾವೂ ಲೇಡಿ ಮಿಂಟೋರವರೂ ಹಿಂದುಸ್ಥಾನದ ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಕುತೂಹಲವನ್ನೂ ಪ್ರೀತಿ ವಿಶ್ವಾಸಗಳನ್ನೂ ಕಾರ್ಯತಃ ಪ್ರಕಾಶಪಡಿಸುತ್ತಿರುವ ಭಾಗದಲ್ಲಿ ನಾವುಗಳು ತಮ್ಮನ್ನು ಆದರಾತಿಶಯದಿಂದ ವಂದಿಸುವೆವು

ಹಿಂದುಸ್ಥಾನವು ಈಗ ಹಿಂದಾಗಿರುವುದಕ್ಕೆ ಇಲ್ಲಿನ ಸ್ತ್ರೀಯರು ಅಕ್ಷರಸ್ಥರಾಗದೆ ಮೌಢ್ಯದಲ್ಲಿರುವುದು ಒಂದು ದೊಡ್ಡ ಕಾರಣವಾಗಿದೆ ಆದರೆ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಎಲ್ಲಾ ಪ್ರಾಂತ್ಯಗಳಲ್ಲೂ ಈ ಲೋಪವನ್ನು ಹೋಗಲಾಡಿಸಬೇಕೆಂದು ಸಾಹಸಪಡುತ್ತಿದ್ದಾರೆ ಇದನ್ನು ನೋಡಿ ನಾವು ಆನಂದಪಡುವೆವು ಪ್ರತಿ ಒಬ್ಬ ವೈಸ್‌ರಾಯಿಯವರೂ ಅವರ ಪತ್ನಿಯವರೂ ಈ ರಾಷ್ಟ್ರದ ಸ್ತ್ರೀಯರ ಸ್ಥಿತಿಗತಿಯನ್ನು ಉತ್ತಮತರವಾಗಿ ಮಾಡಬೇಕೆಂದು ಮುತುವರ್ಜಿ ವಹಿಸಿ ನಾನಾ ಏರ್ಪಾಡುಗಳನ್ನು ಮಾಡಿರುತ್ತಾರೆ ಅದರಲ್ಲೂ ಲೇಡಿ ಮಿಂಟೋರವರು ಹಿಂದುಸ್ಥಾನದ ಸ್ತ್ರೀಯರನ್ನು ನರ್ಸ್ (ಕಾಯಿಲೆಯವರಿಗೆ ಉಪಚಾರ ಮಾಡುವ ವಿದ್ಯೆ ಕಲಿಸುವುದು) ಗಳಾಗಿ ತರಪೇತು ಮಾಡಲು ಉದ್ಯುಕ್ತರಾಗಿದ್ದಾರೆ ಇದಕ್ಕಾಗಿ ಅವರನ್ನು ನಾವು ಕೃತಜ್ಞತೆಯೊಡನೆ ವಂದಿಸುತ್ತೇವೆ

ಮೈಸೂರು ಪಟ್ಟಣದಲ್ಲಿರುವ ಈ ನಮ್ಮ ವಿದ್ಯಾಶಾಲೆಯು ಅನೇಕ ಸಂದರ್ಭಗಳಲ್ಲಿ ಹೊರಗಿನವರಿಗೆ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿರುವುದು ಇಂಥಾ ಪಾಠಶಾಲೆಯು ನಮ್ಮ ಮಧ್ಯೆ ಇರೋಣದರಿಂದ ಮೈಸೂರಿನ ಸ್ತ್ರೀ ಪ್ರಜೆಗಳಿಗೆ ಮಹಮಹತ್ಕಾರವಾಗಿದೆ ಅದರಲ್ಲೂ ನಿರ್ಭಾಗ್ಯರಾದ ಬಾಲ್ಯ ವಯಸ್ಸಿನ ವಿಧವೆಯರಿಗೆ ಈ ಪಾಠಶಾಲೆಯಿಂದಾಗುತ್ತಿರುವ ಪ್ರಯೋಜನವನ್ನು ಇಷ್ಟೆಂದು ವಿವರಿಸಲಾಗದು ಈ ವಿದ್ಯಾಶಾಲೆಯು ಕೀರ್ತಿಶೇಷರಾದ ಲೇಟ್ ಮಹಾರಾಜರವರಿಂದ ಸ್ಥಾಪಿಸಲ್ಪಟ್ಟು, ಅವರ ಧರ್ಮಪತ್ನಿಯವರಿಂದಲೂ ಅವರ ಪ್ರಖ್ಯಾತ ಕುಮಾರರೂ ನಮ್ಮ ಮಹಾರಾಜರೂ ಆದ ಶ್ರೀ ಕೃಷ್ಣರಾಜ ಒಡೆಯರವರಿಂದಲೂ ಏಕರೀತಿಯಾದ ಪ್ರೋತ್ಸಾಹವನ್ನು ಹೊಂದುತ್ತಿದೆ ಒಳದೇಶದ ಮತ್ತು ಹೊರಗಿನ ಅನೇಕ ಮಹನೀಯರು ಇದರ ಹಿತವನ್ನೂ ಏಳಿಗೆಯನ್ನೂ ಬಯಸುತ್ತಿದ್ದಾರೆ

ತಾವು ಕರುಣವಿಟ್ಟು ದಂಪತ್ಯುಕ್ತರಾಗಿ ಇಲ್ಲಿಗೆ ದಯಮಾಡಿದ್ದಕ್ಕೆ ನಮ್ಮ ಅಲ್ಪವಾದ ಕೃತಜ್ಞತಾಪೂರ್ವಕ ವಂದನೆಗಳನ್ನು ತಮಗೆ ಸಲ್ಲಿಸಿ, ಸರ್ವಚೈತನ್ಯಸ್ವರೂಪನು ತಮಗೆ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಬೇಕೆಂದು ಪ್ರಾರ್ಥಿಸುವೆವು

ವೈಸ್‌ರಾಯಿಯವರು ಈ ಅಡ್ರೆಸ್ಸನ್ನು ಬಹು ಸಂತೋಷದಿಂದಲೂ ವಂದನಾಪೂರ್ವಕವಾಗಿಯೂ ಅಂಗೀಕರಿಸಿ ತಮ್ಮ ಪತ್ನಿಯವರ ಪರವಾಗಿ ಸಮಯೋಚಿತವಾದ ಕೆಲವು ವಾಕ್ಯಗಳನ್ನು ಅಪ್ಪಣೆಕೊಡಿಸಿದರು ಈ ಬಾಲಿಕಾ ವಿದ್ಯಾಶಾಲೆಯ ಕೀರ್ತಿಯನ್ನು ಪರೋಕ್ಷದಲ್ಲಿ ಕೇಳಿ ಸಂತೋಷಪಡುತ್ತಿದ್ದೆವೆಂದೂ ಈಗ ಸಾಕ್ಷಾತ್ತಾಗಿ ನೋಡಿದ್ದರಲ್ಲಿ ತಮ್ಮ ಆ ಸಂತೋಷವು ಇಮ್ಮಡಿಯಾಯಿತೆಂದೂ, ಈ ಪಾಠಶಾಲೆಯನ್ನು ಸ್ಥಾಪಿಸಿದವರೂ ಅದನ್ನು ಅಭಿವೃದ್ಧಿಗೆ ತರಬೇಕೆಂದು ಸಾಹಸಪಡುತ್ತಿರುವವರೂ ಸ್ತ್ರೀ ವಿದ್ಯಾಭಿವೃದ್ಧಿಯಲ್ಲಿ ಆಸಕ್ತರಾಗಿ ಬೋಧನಾದಿ ಕಾರ್ಯಗಳನ್ನು ನಡಿಸುವ ಉಪಾಧ್ಯಾಯ ಉಪಾಧ್ಯಾಯಿನಿಯರೂ ನಮ್ಮಗಳ ಸಂತೋಷಪೂರ್ವಕವಾದ ವಂದನೆಗಳಿಗೆ ಪಾತ್ರರಾಗಿರುತ್ತಾರೆಂದೂ, ನಿರ್ಭಾಗ್ಯರಾದ ಬಾಲವಿತಂತುಗಳಿಗೆ ಈ ಪಾಠಶಾಲೆಯು ವಿಶೇಷ ಪ್ರಯೋಜನಕಾರಿಯಾಗಿದೆ ಎಂದು ಕೇಳಿ ನಾವು ಬಹಳ ಆನಂದಪಡುತ್ತೇವೆಂದೂ, ಅವರ ದುಃಖಕರವಾದ ಜೀವನವನ್ನು ಈ ಪಾಠಶಾಲೆಯಲ್ಲಿ ನಡೆಯುವ ಶಿಕ್ಷಣವು ಬಹುಮಟ್ಟಿಗೆ ತಪ್ಪಿಸಿ ಪರೋಪಕಾರಿಗಳನ್ನಾಗಿ ಮಾಡುತ್ತಿರುವುದು ಸಂತೋಷಪ್ರದವಾಗಿದೆ ಎಂದೂ ಅಪ್ಪಣೆ ಕೊಡಿಸಿದರು

ಹೊಸ ಅರಮನೆಗೆ ದಯಮಾಡಿದ್ದು

ಅಲ್ಲಿಂದ ಲಾರ್ಡ್ ಮಿಂಟೋ ಪ್ರಭುಗಳು ಸುಮಾರು ೫|| ಗಂಟೆ ಹೊತ್ತಿಗೆ ಶ್ರೀಮನ್ಮಹಾರಾಜರವರೊಡನೆ ಹೊರಟು ಪರಿವಾರ ಸಹಿತ ಕೋಟೆಗೆ ದಯಮಾಡಿ, ಹೊಸದಾಗಿ ಕಟ್ಟಿ ಪೂರೈಸುತ್ತಾ ಬಂದಿರುವ ಅರಮನೆಯನ್ನು ಪರಾಂಬರಿಸಿದರು ದರ್ಬಾರ್ ಮಂದಿರವನ್ನೂ ಅದರಲ್ಲಿ ಇಟ್ಟಿರುವ ದಿವ್ಯವಾದ ತಸ್ವೀರುಗಳನ್ನೂ ಕಂಬಗಳಿಗೂ ಮೇಲಾಗಚ್ಚು ಮಾಡಿರುವ ಚಿನ್ನದ ವರಕಿನ ಅಮೂಲ್ಯವಾದ ಕೆಲಸಗಳನ್ನೂ ಸಂಗೀತದ ಕೊಠಡಿ ವಿವಾಹ ಮಂಟಪ ಮೊದಲಾದ ಇತರ ಭಾಗಗಳನ್ನೂ ಪರಾಂಬರಿಸಿ ವೈಸ್‌ರಾಯಿ ದಂಪತಿಗಳು ವಿಸ್ಮಯ ಹೊಂದಿ ಕಟ್ಟಡದ ಸೌಂದರ್ಯವನ್ನು ಕೊಂಡಾಡಿದರು ಬಳಿಕ ಅವರು ಕರೀಕಲ್ಲು ತೊಟ್ಟಿಗೆ ದಯಮಾಡಿ, ಅಲ್ಲಿ ಒಂದು ಕೊಠಡಿಯಲ್ಲಿ ಶೇಖರ ಮಾಡಿಟ್ಟಿರುವ ಪುರಾತನ ಕಾಲದ ಬಗೆ ಬಗೆಯ ಆಯುಧಗಳನ್ನು ನೋಡಿ ತುಂಬಾ ಸಂತೋಷಪಟ್ಟರು

ಇದಾದ ಮೇಲೆ ವೈಸ್‌ರಾಯಿ ದಂಪತಿಗಳನ್ನು ಶ್ರೀಮನ್ಮಹಾರಾಜರವರೂ ಯುವರಾಜರವರೂ ಸಂಗಡ ಕರೆದುಕೊಂಡು ಪಟ್ಟಣದ ಮುಖ್ಯ ಮುಖ್ಯ ಭಾಗಗಳಲ್ಲಿ ಸಂಚಾರಮಾಡಿ ತೋರಿಸಿಕೊಂಡು ಬಂದರು ವೈಸ್‌ರಾಯಿಯವರು ರಾಜಧಾನಿಯ ದೊಡ್ಡ ಕಟ್ಟಡಗಳನ್ನೂ, ವಿಸ್ತಾರವಾದ ರಸ್ತೆಗಳನ್ನೂ ಆರೋಗ್ಯಕರವಾದ ಬಡಾವಣೆಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟರೆಂದು ತಿಳಿದು ಬಂದಿದೆ

ದೀಪೋತ್ಸವವು

ಆ ದಿನ ರಾತ್ರಿ ಪಟ್ಟಣದ ಮಧ್ಯಪ್ರದೇಶದಲ್ಲಿರುವ ಮೈದಾನುಗಳಲ್ಲೂ ರಸ್ತೆಗಳಲ್ಲೂ ಭಾರೀ ಕಟ್ಟಡಗಳ ಮೇಲೂ ನಾನಾ ಬಣ್ಣಗಳ ಲಾಂದ್ರಗಳನ್ನಿಟ್ಟು ಸಾಲುಸಾಲಾಗಿಯೂ ಬೇರೆ ಬೇರೆ ಆಕೃತಿಗಳಾಗಿಯೂ ಮೆರೆಯುವಂತೆ ಸಹಸ್ರಗಟ್ಟಲೆಯಾಗಿ ದೀಪಗಳನ್ನು ಹಚ್ಚಿ ರಾತ್ರಿಯನ್ನು ಹಗಲಿನ ಹಾಗೆ ಪ್ರಕಾಶಿಸುವಂತೆ ಮಾಡಿದರು ಚಾಮುಂಡಿ ಬೆಟ್ಟದ ಕೆಳಗಿನಿಂದ ಮೇಲಿನವರೆಗೂ ವಿಚಿತ್ರವಾಗಿ ದೀಪಗಳ ಸಾಲುಗಳನ್ನು ಇಡಿಸಿದ್ದರು ದೊಡ್ಡ ಕೆರೆಯ ಏರಿಯ ಮೇಲೂ ಮೆಟ್ಟಿಲುಗಳ ಉದ್ದಕ್ಕೂ ತರಂಗಗಳಾಗಿ ಇಡಿಸಿದ ಬಣ್ಣಗಳ ದೀಪಗಳು ಬಹು ನೇತ್ರಾನಂದಕರವಾಗಿದ್ದವು ಕೆರೆಯ ನೀರಿನ ಮೇಲೆ ತೆಪ್ಪಗಳನ್ನು ಕಟ್ಟಿ ತೇರುಗಳಂತೆ ಗೋಪುರಗಳನ್ನು ಮಾಡಿ ಬಣ್ಣಗಳ ದೀಪಗಳನ್ನಿಟ್ಟು ಕಟ್ಟಿ ನೀರಿನ ಮೇಲೆ ನಡಿಸುತ್ತಾ ಇದ್ದದ್ದು ಬಹು ವಿಸ್ಮಯವನ್ನುಂಟುಮಾಡಿತು

ಶ್ರೀಮನ್ಮಹಾರಾಜರವರು ಯುವರಾಜರ ಸಮೇತ ೮|| ಗಂಟೆಗೆ ಗವರ್ನ್‌ಮೆಂಟ್ ಹೌಸಿಗೆ ದಯಮಾಡಿ ವೈಸ್‌ರಾಯಿದಂಪತಿಗಳನ್ನು ಭೋಜನಾಂತರ ಜೊತೆಯಲ್ಲಿ ಕೂಡಿಸಿಕೊಂಡು ಬಂಗಲೆಯಿಂದ ಹೊರಟು ದೀಪೋತ್ಸವ ಮಾಡಿದ್ದ ಭಾಗಗಳಲ್ಲೆಲ್ಲ ತಿರುಗಿ ತೋರಿಸಿದರು ವೈಸ್‌ರಾಯಿದಂಪತಿಗಳು ನೋಡಿ ತುಂಬಾ ಸಂತೋಷಪಟ್ಟುಕೊಂಡರು ಇದಲ್ಲದೆ ಕೋಟೆಯೊಳಗೆ ಹೊಸ ಅರಮನೆಯನ್ನು ಆ ರಾತ್ರಿ ದೀಪಗಳಿಂದ ಅಲಂಕಾರಮಾಡಿದ್ದದ್ದು ಅತ್ಯಂತ ಮನೋಹರವಾಗಿಯೂ ನೇತ್ರಾನಂದಕರವಾಗಿಯೂ ಇತ್ತು

ಟೌನ್ ಹಾಲ್ ಬಂಗಲೆಯಲ್ಲಿ ನಡೆದ ಸಂತೋಷಗಳು

ಅಲ್ಲಿಂದ ವೈಸ್‌ರಾಯಿ ದಂಪತಿಗಳು ಸುಮಾರು ೯ ೩೦ ಗಂಟೆಗೆ ಟೌನ್ ಹಾಲ್ ಬಂಗಲೆಗೆ ದಯಮಾಡಿದರು ಬಂಗಲೆಯ ಒಳಪ್ರದೇಶವು ಅತ್ಯಂತ ನೇತ್ರಾನಂದಕರವಾದ ರೀತಿಯಲ್ಲಿ ಬಾವುಟಾ ತೋರಣ, ಕಮಾನು, ಪರದೆ, ದೀಪ ಮೊದಲಾದವುಗಳಿಂದ ಶೃಂಗರಿಸಲ್ಪಟ್ಟು ಕಳಕಳಿಸುತ್ತಿತ್ತು ಕೆಳಗಿನ ಮಧ್ಯರಂಗದಲ್ಲಿ ಎತ್ತರವೂ ವಿಸ್ತಾರವೂ ಆದ ಪೀಠವನ್ನು ಕಟ್ಟಿ ಅದರ ಮೇಲೆ ಬೆಲೆಯ ಕುರ್ಚಿಗಳನ್ನು ಹಾಕಿಸಿದ್ದರು ಈ ಪೀಠದ ಎಡ ಬಲ ಹಿಂಭಾಗಗಳಲ್ಲಿ ವೈಸ್‌ರಾಯಿಯವರ ಕೂಡ ಬಂದಿದ್ದ ಸರ್ದಾರರೂ ಮೈಸೂರು ಸರ್ಕಾರದ ಅಧಿಕಾರಿಗಳೂ ಯೂರೋಪಿಯನ್ ದೊಡ್ಡಮನುಷ್ಯರೂ ಅರಸುಗಳು ಎಲ್ಲಾ ಕಸಬು ಮತ್ತು ಕೋಮುಗಳ ಮುಖಂಡರೂ ಸುಮಾರು ನಾನೂರು ಜನರವರೆಗೆ ದರ್ಬಾರ್ ಪಿರಸಿನಲ್ಲಿ ಸಾಲು ಕಟ್ಟಿ ಕುರ್ಚಿಗಳ ಮೇಲೆ ಕುಳಿತಿದ್ದರು ವೈಸ್‌ರಾಯಿಯವರು ಬಂದು ಇಳಿದ ಕೂಡಲೆ ಬಾಗಿಲಲ್ಲಿ ಶ್ರೀಮನ್ಮಹಾರಾಜರವರು ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟ್ ಮ ಕೆ ಪಿ ಪುಟ್ಟಣ್ಣ ಶೆಟ್ಟರನ್ನೂ ಸೆಕ್ರೆಟರಿ ಮ|| ಎಂ ಜಿ ಕೃಷ್ಣಸ್ವಾಮಿರಾಯರನ್ನೂ ಮೊದಲಾದವರನ್ನೂ ವೈಸ್‌ರಾಯಿಯವರಿಗೆ ಭೇಟಿ ಮಾಡಿಸಿ ಅವರ ಹೆಸರುಗಳನ್ನು ತಿಳಿಸಿದರು ವೈಸ್‌ರಾಯಿಯವರೂ ಅವರ ಪತ್ನಿಯವರೂ ಪ್ರೀತಿಯ ಪ್ರಸನ್ನ ಕಂಡು ಕೈ ಹಿಡಿದು ಮಾತನಾಡಿಸಿ ಬಂಗಲೆಯೊಳಕ್ಕೆ ದಯಮಾಡಿ ಶ್ರೇಷ್ಠಾಸನಗಳಲ್ಲಿ ಕುಳಿತುಕೊಂಡರು ಅವರ ಎಡಭಾಗದಲ್ಲಿ ಶ್ರೀಮನ್ಮಹಾರಾಜರವರೂ, ಅವರ ಪತ್ನಿಯವರ ಬಲಗಡೆ ಶ್ರೀಮನ್ಯುವರಾಜರವರೂ, ಹಿಂಭಾಗದಲ್ಲಿ ಬ್ರಿಟಿಷ್ ರೆಸಿಡೆಂಟರೂ ವೈಸ್‌ರಾಯಿಯವರ ಸಂಸಾರಕ್ಕೆ ಸೇರಿದವರೂ, ಅವರ ಅಧಿಕಾರಿಗಳೂ ಕುಳಿತರು

ಅರಮನೆಯ ಪ್ರಸಿದ್ಧ ನಾಟಕ ಶಾಲೆಯವರು ನಾಟಕ ಧಾರಿಗಳಾಗಿ ಸ್ಟೇಜಿನ ಮೇಲೆ ಅರ್ಧಚಂದ್ರಾಕೃತಿಯಲ್ಲಿ ನಿಂತು "ದೇವರು ಚಕ್ರವರ್ತಿಯವರನ್ನೂ ಮಹಾರಾಜ್ಞೀಯವರನ್ನೂ ವೈಸ್‌ರಾಯಿ ಲಾರ್ಡ್ ಮಿಂಟೋ ದಂಪತಿಗಳನ್ನೂ ರಕ್ಷಿಸಲಿ" ಎಂಬ ಕೀರ್ತನೆಯನ್ನು ತಾಳ ಮೇಳ ಸಹಿತವಾಗಿ ಮನೋಹರವಾಗಿ ಹಾಡಿದರು ವೈಣಿಕ ಶಿಖಾಮಣಿ ಮ|| ಶೇಷಣ್ಣನವರೂ ಮ|| ಸುಬ್ಬಣ್ಣನವರೂ ಜೋಡಿ ವೀಣೆಗಳ ಮೇಲೆ ಆಪ್ಯಾಯಮಾನವಾದ ಪದಗಳನ್ನೂ ನೋಟುಗಳನ್ನೂ ನುಡಿಸಿದರು ಜಲತರಂಗ್ ಎಂಬ ವಾದ್ಯವು ಒಳಕೆ ನಡೆಯಿತು ಕಾಳಿದಾಸ ಮಹಾಕವಿ ರಚಿತವಾದ ಶಕುಂತಲಾ ನಾಟಕದಲ್ಲಿ ೩ ೪ ಅಂಕಗಳನ್ನು ಕ್ರೋಢೀಕರಿಸಿ ಅರಮನೆಯ ಕಂಪನಿಯವರು ಬಹಳ ತೃಪ್ತಿಕರವಾಗಿಯೂ ಸ್ತೋತ್ರಾರ್ಹವಾಗಿಯೂ ಆಡಿದರು ಪ್ರೊ ಶಾರವರು ಮಾಡಿ ತೋರಿಸಿದ ಕೈಚಳಕದ ವಿದ್ಯೆಗಳೂ ಯುಕ್ತಿಗಳೂ ಬಹು ಸ್ವಾರಸ್ಯವಾಗಿದ್ದವು ಅನಂತರ ಇಸ್ಲಿಬ್ಬರು ಬಾಯಿನಲ್ಲೇ ಶಿಳ್ಳುಹಾಕುತ್ತಾ ಪದ್ಯಗಳನ್ನೂ ಪಲ್ಲವಿಯನ್ನೂ ಬಹಳ ಚೆನ್ನಾಗಿ ಹಾಡಿದರು ಕಡೆಯಲ್ಲಿ ಮ ಫ್ರೈಯರ್ ಎಂಬುವರು ಕೆಲವು ನಕಲಿಗಳನ್ನು ಮಾಡಿ ಸಭಿಕರನ್ನು ನಗಿಸಿದರು ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರು ವೈಸ್‌ರಾಯಿ ದಂಪತಿಗಳಿಗೂ ಶ್ರೀಮನ್ಮಹಾರಾಜರವರಿಗೂ ಪುಷ್ಪಮಾಲಿಕೆಯನ್ನು ಹಾಕಿ, ಸೊಗಸೂ ಸುಗಂಧಮಯವೂ ಆದ ತುರಾಯಿಗಳನ್ನು ಒಪ್ಪಿಸಿದರು ಅರಮನೆಯ ಕಂಪನಿಯವರು ಸ್ಟೇಜಿನ ಮೇಲೆ ಸಾಲು ಕಟ್ಟಿ ನಿಂತು "ದೇವರು ಚಕ್ರವರ್ತಿಯನ್ನು ರಕ್ಷಿಸಲಿ" ಎಂಬ ಪದವನ್ನು ಕನ್ನಡದಲ್ಲಿ ಹಾಡುವಾಗ್ಗೆ ಸಮಸ್ತ ಸಭಿಕರೂ ಎದ್ದು ನಿಂತು ಅದನ್ನು ಅನುಕರಿಸಿದರು ಬಳಿಕ ಶ್ರೀಮನ್ಮಹಾರಾಜರವರು ವೈಸ್‌ರಾಯಿ ದಂಪತಿಗಳನ್ನು ಬಂಗಲೆಗೆ ಕರೆದುಕೊಂಡು ಹೋಗಿ ಕಳುಹಿಸಿ ಅರಮನೆಗೆ ದಯಮಾಡಿದರು ಈ ಸಂತೋಷೋತ್ಸವಗಳೆಲ್ಲಾ ಬಹಳ ತೃಪ್ತಿಕರವಾಗಿಯೂ, ಅತ್ಯಂತ ಗಂಭೀರವಾಗಿಯೂ, ಮಹಾ ವೈಭವಯುಕ್ತವಾಗಿಯೂ ನೆರವೇರಿದವೆಂದು ಸಭಿಕರೆಲ್ಲಾ ಹೇಳಿಕೊಂಡು ಆನಂದಪಟ್ಟರು ಮತ್ತು ವೈಸ್‌ರಾಯಿ ದಂಪತಿಗಳು ಎಲ್ಲಾ ಬಹಳ ಚೆನ್ನಾಗಿ ನಡೆದವೆಂದು ಕಡೆಯಲ್ಲಿ ರಿಸೆಪ್ಷನ್ ಕಮಿಟಿಯವರಿಗೆ ತಿಳಿಸಿ, ಅವರನ್ನು ವಂದಿಸಿದರು

ಸೈನ್ಯದ ಕವಾತನ್ನು ಪರಾಂಬರಿಸಿದ್ದು

ತಾ ೨೭ ನೇ ಶನಿವಾರ —ಈ ದಿನ ಬೆಳಗ್ಗೆ ೮ ಗಂಟೆಗೆ ಶ್ರೀಮನ್ಮಹಾರಾಜರವರು ಯುವರಾಜರ ಸಮೇತ ಗವರ್ನ್‌ಮೆಂಟ್ ಹೌಸಿಗೆ ದಯಮಾಡಿ, ವೈಸ್‌ರಾಯಿಯವರನ್ನು ಕರೆದುಕೊಂಡು ಚಾಮುಂಡಿ ಬೆಟ್ಟದ ಕಿಬ್ಬಿಯಲ್ಲಿರುವ ಜೂಪಿನ ರೋಣಿಗೆ ಚಿತ್ತೈಸಿದರು ಅಲ್ಲಿ ಹಾಕಿದ್ದ ಬಹು ಅಲಂಕಾರವಾದ ಹಸುರುವಾಣಿ ಚಪ್ಪರದಲ್ಲಿ ವೈಸ್‌ರಾಯಿಯವರ ಪರಿವಾರಕ್ಕೆ ಸೇರಿದ ಅಧಿಕಾರಿಗಳೂ, ಯೂರೋಪಿಯನ್ ಸರ್ದಾರರೂ, ರಾಜಪಿಂಡೆಯವರೂ, ದಿವಾನ್‌ರೇ ಮೊದಲಾದ ಸಂಸ್ಥಾನದ ಅಧಿಕಾರಿಗಳೂ ಕಾದಿದ್ದು ವೈಸ್‌ರಾಯಿಯವರನ್ನು ಎದುರುಗೊಂಡರು ಮೈಸೂರು ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಸೈನ್ಯದ ನಾಲ್ಕು ಸ್ಕ್ವಾಡ್ರನ್ ಸವಾರರೂ, ಲೋಕಲ್ ಸರ್ವಿಸ್ ಸೈನ್ಯದ ಮೂರು ಸ್ಕ್ವಾಡ್ರನ್ ಸವಾರರೂ, ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರ್ ಸೈನ್ಯದ ಮೂರು ಸ್ಕ್ವಾಡ್ರನ್ ಸವಾರರೂ ಗಾಡಿಗಳೂ, ಮೈಸೂರು ಇನ್‌ಫೆಂಟ್ರಿ (ಕಾಲ್ಬಲ) ಸೈನ್ಯದ ಒಂದೂವರೆ ರಿಜಿಮೆಂಟ್ ಶಿಪಾಯಿಗಳೂ ಮೈದಾನಿನಲ್ಲಿ ತಮ್ಮ ತಮ್ಮ ಉದ್ಯೋಗದಾರರುಗಳ ಸಮೇತ ಹಾಜರಾಗಿದ್ದು, ಲೈನ್ ಕಟ್ಟಿ ವೈಸ್‌ರಾಯಿಯವರಿಗೆ ಸಲಾಮುಗಳನ್ನು ತೋರಿಸಿ ಸೈನ್ಯದ ಕ್ರಮಗಳ ಪ್ರಕಾರ ಮರ್ಯಾದೆ ಮಾಡಿದರು ವೈಸ್‌ರಾಯಿಯವರೂ, ಶ್ರೀಮನ್ಮಹಾರಾಜರವರೂ, ವೈಸ್‌ರಾಯಿಯವರ ಅಧಿಕಾರಿಗಳೂ, ಕರ್ನಲ್ ದೇಸರಾಜ್ ಅರಸಿನವರೂ ಅಶ್ವಾರೂಢರಾಗಿ ಸೈನ್ಯದ ಲೈನುಗಳ ಮಧ್ಯೆ ಹೋಗಿ ಅವರ ದಿರಸು, ಕುದುರೆ, ಆಯುಧಾದಿಗಳನ್ನೆಲ್ಲಾ ಪರಾಂಬರಿಸಿ ವಾಪಸು ಬಂದು ಬಾವುಟಾ ಹೊತ್ತಿದ್ದ ಕಂಬದ ಬಳಿಯಲ್ಲಿ ಸಾಲಾಗಿ ನಿಂತುಕೊಂಡರು ತರುವಾಯ ಸೈನಿಕರೆಲ್ಲಾ ಸಾಲುಸಾಲಾಗಿಯೂ ಕ್ರಮವಾಗಿಯೂ ಅವರ ಎದುರು ಪಾರ್ಶ್ವದಲ್ಲಿ ಎಡದಿಂದ ಬಲಗಡೆಗೆ ವೇಗವಾಗಿಯೂ, ನಿಧಾನವಾಗಿಯೂ ಹಾದು ಹೋಗುತ್ತಾ ಸೆಲ್ಯೂಟ್ ಮಾಡಿದರು ತರುವಾಯ ಸೈನ್ಯವು ಕ್ರಮವಾಗಿ ಎದುರು ಪಾರ್ಶ್ವದಲ್ಲಿ ನಿಂತು ಏಕಕಾಲದಲ್ಲಿ ಸಲಾಂ ಕೊಟ್ಟಿತು

ವೈಸ್‌ರಾಯಿಯವರು ಆ ಸೈನ್ಯಗಳ ಮುಖ್ಯ ಹುದ್ದೇದಾರರುಗಳನ್ನೆಲ್ಲಾ ಸಮೀಪಕ್ಕೆ ಬರಮಾಡಿಕೊಂಡು, ಮೈಸೂರಿನ ಸೈನ್ಯಗಳು ಬಹಳ ಚುರುಕಾಗಿಯೂ ಚನ್ನಾಗಿ ತರಪೇತಾಗಿಯೂ ಇರುವವೆಂದು ದೂರದಿಂದ ಕೇಳಿದ್ದ ವರ್ತಮಾನವು ಸಾಕ್ಷಾತ್ತಾಗಿ ನೋಡುವಲ್ಲಿ ನಿಜಪಟ್ಟಿದ್ದಲ್ಲದೆ ಕುದುರೆಗಳೂ ಸೈನಿಕರೂ ಅವರ ಆಯುಧಾದಿಗಳೂ ಎಲ್ಲಾ ಬಹಳ ತೃಪ್ತಿಕರವಾಗಿರುತ್ತವೆಂದು ಅಪ್ಪಣೆ ಕೊಡಿಸಿ ತಮ್ಮ ಈ ಸಂತೋಷವಾದ ಅಭಿಪ್ರಾಯವನ್ನು ಸೈನಿಕರಿಗೆ ತಿಳಿಸುವಂತೆ ಸೂಚಿಸಿದರು

ಪ್ಲಾಂಟರುಗಳ ಅಡ್ರೆಸ್ಸುಗಳು

ಆ ದಿನ ಮಧ್ಯಾಹ್ನ ೧೨ ಗಂಟೆಗೆ ಗವರನ್‌ಮೆಂಟ್ ಹೌಸಿನಲ್ಲಿ ಮೈಸೂರು ದಕ್ಷಿಣ ಪ್ಲಾಂಟರುಗಳ ಮತ್ತು ಉತ್ತರ ಪ್ಲಾಂಟರುಗಳ ಸಂಘಗಳವರು ವೈಸ್‌ರಾಯಿಯವರ ಭೇಟಿ ತೆಗೆದುಕೊಂಡು ಅವರಿಗೆ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು ಎರಡು ಅಡ್ರೆಸ್ಸುಗಳನ್ನೂ ಮ|| ಕ್ರಾಫರ್ಡ್‌ಯವರೇ ಓದಿ ಅರಿಕೆ ಮಾಡಿದರು

ವೈಸ್‌ರಾಯಿಯವರು ಅವರಿಗೆ ತಿಳಿಸಿದ ಜವಾಬಿನ ಮುಖ್ಯಾಭಿಪ್ರಾಯವೇನೆಂದರೆ,—ಹಿಂದುಸ್ಥಾನದ ವ್ಯವಸಾಯಾಭಿವೃದ್ಧಿಯಲ್ಲಿ ಒಂದು ಮುಖ್ಯಭಾಗವಾದ ತೋಟಗಳ ವ್ಯವಸಾಯವನ್ನು ನೀವು ನಡಿಸುವವರಾಗಿದ್ದೀರಿ ನಿಮ್ಮ ವಿಷಯದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಎಂದಿಗೂ ಉಪೇಕ್ಷಾಭಾವವನ್ನು ವಹಿಸಿರುವುದಿಲ್ಲ ಬ್ರಿಟಿಷ್ ಪ್ರಜೆಗಳಾದ ನಿಮಗೆ ಶ್ರೀಮನ್ಮಹಾರಾಜರವರ ಸರ್ಕಾರದವರು ಬಹಳ ಉಪಕಾರಗಳನ್ನು ಮಾಡಿರುತ್ತಾರೆಂದು ನೀವು ಹೇಳುವುದನ್ನು ಕೇಳಿ ನಮಗೆ ತುಂಬಾ ಸಂತೋಷವಾಗಿದೆ ಮೈಸೂರು ಸರ್ಕಾರದವರು ವ್ಯವಸಾಯಶಾಸ್ತ್ರಶೋಧಕರನ್ನು [illegible] ನೇಮಿಸಿದರು ಇವರಿಂದ ನಿಮ್ಮ ಕಸಬಿಗೆ ತುಂಬಾ ಸಹಾಯವಾಯಿತೆಂದು ತಿಳಿಯುತ್ತೇವೆ ಇದಲ್ಲದೆ ಈಗ ಸರ್ಕಾರದವರು ಪೈರುಗಳಿಗೆ ಹಿಡಿಯುವ ರೋಗಾದಿಗಳನ್ನು ಪರೀಕ್ಷಿಸಿ ಪರಿಹಾರವನ್ನು ತಿಳಿಸುವಂಥಾ ಅಧಿಕಾರಿಯನ್ನು ನೇಮಿಸಿಕೊಂಡಿರುವುದಲ್ಲದೆ ನಿಮ್ಮ ಸಂಘಗಳವರು ನೇಮಕ ಮಾಡಿಕೊಂಡಿರುವ ಶಾಸ್ತ್ರಶೋಧನಾ ಅಧಿಕಾರಿಗೂ ಅವರು ದ್ರವ್ಯಸಹಾಯ ಮಾಡುತ್ತಿರುವರು ನೀವು ರೈಲ್ವೆ ಲೈನುಗಳನ್ನು ಹಾಕಿಸಿಕೊಡಬೇಕೆಂದು ಕೇಳುತ್ತೀರಿ ಅವಿಲ್ಲದೆ ಇರೋಣದರಿಂದ ನಿಮಗೆ ಕಷ್ಟವೇನೋ ಉಂಟು ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಇರುವಂಥಾ ಪ್ಲಾಂಟರುಗಳೂ ಕಾಡುಗಳ ಮಧ್ಯೆ ಬೆಟ್ಟಗುಡ್ಡಗಳಲ್ಲಿ ಸೇರಿಕೊಂಡಿರುತ್ತಾರೆ ರೈಲಿನ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಬಹು ದುಸ್ತರವಾಗಿರುವುದು ಆದರೆ ಮೈಸೂರು ಸರ್ಕಾರದವರು ನಿಮ್ಮ ಪಕ್ಷಪಾತಿಗಳಾಗಿದ್ದುಕೊಂಡು ಅನೇಕ ರಸ್ತೆಗಳನ್ನೂ ಮಾರ್ಗಗಳನ್ನೂ ಇತರ ಸೌಕರ್ಯಗಳನ್ನೂ ಧಾರಾಳವಾಗಿ ಕಲ್ಪಿಸಿಕೊಟ್ಟಿರುತ್ತಾರೆ ಹಿಂದುಸ್ಥಾನದ ಇತರ ಭಾಗಗಳಲ್ಲಿರುವ ಪ್ಲಾಂಟರುಗಳಿಗಿಂತ ಇಲ್ಲಿ ನಿಮಗೆ ಹೆಚ್ಚು ಸೌಲಭ್ಯಗಳುಂಟೆಂದು ಊಹಿಸಬಹುದು ನಿಮ್ಮ ಪ್ರಾರ್ಥನೆಗಳನ್ನು ಸರ್ಕಾರದವರು ಮುತುವರ್ಜಿಯಿಂದ ನೆರವೇರಿಸಬಹುದು ಆದರೆ ಇಲ್ಲಿ ನಿಮಗೆ ಜಮೀನು ಸುಲಭದರಕ್ಕೆ ಸಿಕ್ಕುವುದು ಕಾಫಿಯವರ ವಿಷಯದಲ್ಲಿ ಪ್ಲಾಂಟರುಗಳು ನೀವೆಲ್ಲ ಏಕೀಭವಿಸಿ ಒಟ್ಟು ಸಲ್ಲಿಸಿದ ಇಂಥಾ ಕಾನೂನು ಆಗಬೇಕಾಗಿದೆ ಎಂದು ಕೇಳಿಕೊಂಡರೆ ಸರ್ಕಾರದವರು ಅದಕ್ಕೆ [illegible] ಹೇಳಬಲ್ಲೆವು ಎಂಬುದೇ

ಕೊಡಗಿನ ಪ್ರತಿನಿಧಿಗಳ ಅಡ್ರೆಸ್ಸು

ಬಳಿಕ ಸುಮಾರು ೧೧ ೧೫ಕ್ಕೆ ಅಲ್ಲಿಂದ ಕೊಡಗಿನ ಪ್ರಜೆಗಳು ಹಾಜರಾಗಿ ವೈಸ್‌ರಾಯಿ ಪ್ರಭುಗಳಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು ಅವರು ಯಾರೆಂದರೆ —ಮೈ ಗಣಿದ ರಾಯಬಹದೂರ್ ಎ ಪೊಂದಣ್ಣನವರು, ರಾಯಬಹದೂರ್ ಕೆ ಪುಟ್ಟಯ್ಯನವರು, ಡೆಪ್ಯುಟಿ ಕಮಿಷನರ್ ಕೆ ಅಪ್ಪಯ್ಯನವರು, ಅಡ್ವೊಕೇಟ್ ಕೆ ಸುಬ್ಬಯ್ಯನವರು, ಸೀನಿಯರ್ ಸುಬೇದಾರ್ ಪಿ ಬೆಳ್ಳಿಯಪ್ಪನವರು, ಕಾಫಿ ಪ್ಲಾಂಟರ್ ಸಿ ದೇವಯ್ಯನವರು

ಇವರುಗಳು ಒಪ್ಪಿಸಿದ ಅಡ್ರೆಸ್ಸನ್ನು ಸ್ವೀಕರಿಸಿ ವೈಸ್‌ರಾಯಿಯವರು ಹೇಳಿದ ಪ್ರತ್ಯುತ್ತರವೇನೆಂದರೆ —ಸದ್ಯಕ್ಕೆ ರೀನಾರ್ಡ್ ರೋಡ್ ಟ್ರಯಿನ್ ಎಂಬ ರೈಲ್‌ಗಾಡಿಯನ್ನು ನಿಮ್ಮ ಊರಿನ ವರೆಗೆ ಬರುವಂತೆ ಮಾಡಬೇಕೆಂದು ಏರ್ಪಾಡು ನಡೆಯುತ್ತಿರುವುದಾಗಿ ಚೀಫ್ ಕಮೀಷನರವರು ತಿಳಿಸುತ್ತಾರೆ ಇದು ಕೆಲವು ಕಾಲ ನಡೆದು, ಪ್ರಯೋಜನವೂ ಆದಾಯವೂ ಹುಟ್ಟಿದ ಪಕ್ಷದಲ್ಲಿ ಮುಂದೆ ನಿಮ್ಮ ಕೊಡಗಿನತನಕ ರೈಲ್ ರಸ್ತೆಯು ಆಗಲೂ ಬಹುದು ನೀವು ನಿಮ್ಮಲ್ಲಿ ಹಿರಿಯರಿಂದ ನಡೆದುಬಂದಿರುವ ಒಳ್ಳೆಯ ಆಚಾರ ವ್ಯವಹಾರಗಳನ್ನು ಬಿಡದೆ ಉಳಿಸಿಕೊಂಡಿರುವುದು ಸಂತೋಷಕರವಾಗಿದೆ ನೀವು ನಿಮ್ಮ ಗಂಡು ಮಕ್ಕಳಿಗೂ ಹೆಣ್ಣುಮಕ್ಕಳಿಗೂ ವಿದ್ಯೆ ಕಲಿಸುವುದಕ್ಕಾಗಿ ತುಂಬಾ ಸಾಹಸಪಡುತ್ತಿದ್ದೀರೆಂದೂ ನಿಮ್ಮಲ್ಲಿ ವಿದ್ಯಾವಂತರನ್ನು ಹುಟ್ಟಿಸಿ ನಿಮ್ಮ ಪ್ರಾಂತ್ಯದ ಸರ್ಕಾರಿ ನೌಕರಿಗಳಿಗೆ ಜನರನ್ನು ಒದಗಿಸುತ್ತಾ ಬಂದಿದ್ದೀರೆಂದೂ ಕೇಳಿ ಬಹಳ ಸಂತೋಷಪಡುವೆವು ಕಾಫಿ ಬೆಳೆಯು ಕಡಮೆಯಾಗಿ ನಿಮ್ಮ ಶೀಮೆಯು ಬಹಳ ನಷ್ಟಕಷ್ಟಗಳಿಗೆ ಗುರಿಯಾಗಿತ್ತೆಂದೂ, ಈಗ ಚೇತರಿಸಿಕೊಳ್ಳುತ್ತಿದೆ ಎಂದೂ ತಿಳಿದು ಆನಂದಪಡುತ್ತೇವೆ ನೀವುಗಳು ನಿಮ್ಮ ಕಸಬಿನಲ್ಲೂ ಮಿತವ್ಯಯದಿಂದಲೂ ಅಭಿವೃದ್ಧಿಹೊಂದುವಿರೆಂತಲೂ, ನಾನಾ ಬಗೆಯ ವ್ಯವಸಾಯವನ್ನು ಸ್ಥಿರಗೊಳಿಸಿ ವಿಸ್ತರಿಸುವಿರೆಂತಲೂ ನಂಬಿ ಹಾರೈಸುತ್ತೇವೆ ಎಂಬುದೇ

ಮಹಾರಾಣಿಯವರ ಭೇಟಿಯು

ಆ ದಿನ ಮಧ್ಯಾಹ್ನ ಸುಮಾರು ೪ ಗಂಟೆಗೆ ಮಹಾಮಾತೃಶ್ರೀಯವರೂ ಮಹಾರಾಣಿಯವರೂ ಜನಾನ ಸಾರೋಟಿನಲ್ಲಿ ಅರಮನೆಯಿಂದ ಗವರ್ನ್‌ಮೆಂಟ್ ಹೌಸಿಗೆ ದಯಮಾಡಿ, ವೈಸ್‌ರಾಯಿಯವರ ಪತ್ನಿಯವರಾದ ಲೇಡಿ ಮಿಂಟೋರವರ ಭೇಟಿ ತೆಗೆದುಕೊಂಡು, ಕೆಲವು ಹೊತ್ತು ಅವರ ಕೂಡ ಮಾತನಾಡಿಕೊಂಡು ವಾಪಸು ಬಂದರು

ಬಳಿಕ ಸುಮಾರು ೫ ಗಂಟೆಯ ಹೊತ್ತಿಗೆ ವೈಸ್‌ರಾಯಿಯವರ ಪತ್ನಿಯವರು ಸಾರೋಟಿನಲ್ಲಿ ಅರಮನೆಗೆ ದಯಮಾಡಿ, ಮಹಾಮಾತೃಶ್ರೀಯವರಿಗೂ ಮಹಾರಾಣಿಯವರಿಗೂ ಮರುಭೇಟಿಯನ್ನು ಕೊಟ್ಟು ಸ್ವಲ್ಪಹೊತ್ತು ಮಾತನಾಡುತ್ತಿದ್ದು ಅವರುಗಳಿಂದ ಮರ್ಯಾದೆಗಳನ್ನು ಹೊಂದಿ ಬೀಳ್ಕೊಂಡು ವಾಪಸು ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು

Printed and Published by the Rev H GULLIFORD, Proprietor and Manager Wesleyan Mission Press, Mysore 2/12/1909

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾರೀಖು ೯ ನೇ ಗುರುವಾರ. ಸಂಚಿಕೆ ೨೮

೧೯೧೦ ನೇ ಇಸವಿ ಕ್ಯಾಲೆಂಡರುಗಳ ಬಹುಮಾನ

82 1

ಡಿಸೆಂಬರ್ ತಿಂಗಳು ಆಖೈರಿನೊಳಗೆ ನಮಗೆ ಕಾಲಾಣೆ ಕಾರ್ಡಿನಲ್ಲಿ ವಿಳಾಸವನ್ನು ಬರೆದು ಕಳುಹಿಸತಕ್ಕವರಿಗೆ ಒಂದು ಸೊಗಸಾದ ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ ವಿಳಾಸ —

ಮ್ಯಾನೇಜರ್, ಚಂದ್ರೋದಯ ಆಫೀಸು, ಸಾಹುಕಾರಪೇಟೆ ಮದರಾಸು

ಬೇಗ ಬರೆಯಿರಿ! ಬರೆದು ತರಿಸಿರಿ!!

"ಸಚಿತ್ರ ಕಲಾತರಂಗ"

ಪಂಚ ವಿಷಯಗಳ ಸಂಗ್ರಹ

81 1

ಈ ವಿವರದ ಪುಸ್ತಕವು ಕನ್ನಡ ಭಾಷೆಯಲ್ಲಿ ಇಲ್ಲವೆ ಇಲ್ಲ. ಇದು ಪ್ರತಿಯು ಹತ್ತಿರದಲ್ಲಿದ್ದರೆ ಇತರರ ಸಹಾಯದಪೇಕ್ಷೆಯಿಲ್ಲದೆ ನೂರಾರು ವಿಷಯಗಳನ್ನು ತಿಳಿದು ಕುಶಲವಿದ್ಯೆಯಲ್ಲಿ ಕುಶಲರಾಗಬಹುದು ಡಿಸೆಂಬರ್ ... ನಮ್ಮ ವಿಳಾಸ ಮ್ಯಾನೇಜರ್ ಎಸ್ ಜಿ ಯರ್ ಪ್ರೆಸ್

೧೭೩ ಅರಳೆಪೇಟೆ, ಬೆಂಗಳೂರು ಸಿಟಿ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ

ಮೂಲಕ ಪಡೆಯುವವರಿಗೆ ಪ್ರತಿಗೆ ೧ ವರುಷಕ್ಕೆ,

(ಅಡ್ವಾನ್ಸು) ರೂ ೧—೦—೦

ಪರ ಊರವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ

ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಸಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE P ACE FOR HASSAN CAPS IS HASSAN.

ನಿಮ್ಮ ತಲೆಯು ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 49

ಒಳ್ಳೇ ಟೋಪಿಗಳು ಯಾವವು? ಯಾಕೆ ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ನೆಯ್ದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಕಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಜುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕಸ್ತೂರಿ ಸಸ್ಯ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ದೀವಳಿಗೆಯ ಬಹುಮಾನ

75-6

ಈ ಕೆಳಗೆ ವಿವರಿಸಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ಡಿಸೆಂಬರ್ ಆಖೈರ್‌ವರಿಗೆ ಮಾತ್ರ ವಿ ಪಿ ಛಾರ್ಜು ಅಲಾಹಿದಾ

ನಿರುಪಮಾ—ಹೊಸನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಹೆಂಡಕುಡುಕರ ಅವಸ್ಥೆ, ಕಳ್ಳರ ಪರಿಣಾಮ ಇವುಗಳನ್ನು ತೋರಿಸಿ ತಿದ್ದುವುದು ಅಂದವಾದ ಮುದ್ರಣ ಸೊಗಸಾದ ಪಟ್ಟಕಂಗಳು ಕ್ರಯ ರೂ ೦ ೧೨-೦

ಸೋಮಸುಂದರ— ...ಎಲ್ಲರೂ ನಾವೆಲ್ಲನ್ನು ಯೋಚಿಸುವ ಹೊಸ ಕಥೆ ಮಾತಾಪಿತೃಗಳ ಕರ್ತವ್ಯ, ಬಾಲಕರ ಧರ್ಮ, ಸತ್ಸಂಗ ದುಸ್ಸಂಗಗಳ ತಾರತಮ್ಯ ಇವುಗಳನ್ನೊಳಕೊಂಡಿರುವುದು ಓದುವುದಕ್ಕೆ ಮೊದಲು ಮಾಡಿದರೆ ಕೊನೆಮುಟ್ಟುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ ಕ್ರಯ ೧೧ ಆಣೆ

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುಯವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ಋತುಮತಿಯರಾಗುವ ಮೊದಲ್ಗೊಂಡು ಗರ್ಭಿಣಿಯರ ಸ್ಥಿತಿ, ಪ್ರಸವಾವಸ್ಥೆ, ಬಾಣಂತಿತನ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅವರ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ ರೂ ೦ ೧೨ ೦

ಸಂಗೀತಪಾರಿಜಾತ— ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು ಆರತಿಯೆತ್ತುವ ಹಾಡು ಬೀಗರಹಾಡು, ಬಾಗಿಲುತೆರೆಯುವಹಾಡು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ "ಬಾಲಿಕಾಗೀತಾವಳಿ" ... "ಮಹಿಳಾ ..." ಅನುಸರಿಸಿರುವುದು ಕ್ರಯ ರೂ ೦ ೪ ೦

ಇವಲ್ಲದೆ ಹಾಸ್ಯಸಂಜೀವಿನಿ ಎಂಬ ನಾಲ್ಕು ನಕಲಿಗಳುಳ್ಳ ಪುಸ್ತಕ (೦ ೬ ೦) "ಅಸಮಂಜಸಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ ೦ ೩ ೬), "ಸತ್ಯಸಂಜೀವಿನಿ" ಎಂಬ ಸೊಗಸಾದ ಕಲ್ಪಿತಕಥೆ (೦ ೬ ೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ಣಾಟಕಚಂದ್ರಿಕೆ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

38 44

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತವೃದ್ಧಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಪಿನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗಳ ಬೇಗ ಬರೆಯಿರಿ

ಡಿ ಕೆ. ಸ್ವಾಮಿ,

ಪ್ರೊಪ್ರೈಟರ್

ಸುಗಂಧಗಳು.

77-4

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೧೨, ೫ ೩, ೨-೮ ೦, ೧ ೪ ೦ ಚಿತ್ರಗಳು ೧ ತೊಲೆಗೆ ರೂ ೧ ಪರಿಮಳ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಸೀಸೆಗೆ ೬ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಟಿ ಎಲ್ ಉಪಾಧ್ಯಾಯ, ಮೈಸೂರು

ಪುಸ್ತಕಗಳು

70-12

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ಖಂಡಿತ ದೊರೆಯಲಾರದು

೨ ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮ ೦ ಇಂಗ್ಲಿಷ್ ಭಾಷೆಯನ್ನು ಓದಲೂ ಬರಿಯಲೂ, ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧ ೨ ತಿಂಗಳೊಳಗಾಗಿ ತಿಳಿಸತಕ್ಕ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೮ ೦

ಪಿ ರಾಮಾಚಾರ್ಯ ವಿಳಾಸ —ಬಿ ಕೆ ಮುರ್ತಿ ಕಂಪೆನಿ

ನಂ ೧೮ ಒಂದನೆ ಬೀದಿ ಎದಿ ಕಟ್ಟೆ ಲಕ್ಸ್‌ರ್ ಪೋಸ್ಟು

ಬೆಂಗಳೂರು ಸಿಟಿ

ಕನ್ನಡ ಕಥಾ ಸರಿತ್ಸಾಗರ ಕ್ರಯ ೧—೮—೦ ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ವೃತ್ತರತ್ನಾಕರ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ ನೇ ಭಾಗ ತಾವಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ ನೆ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೮—೦

ವಿಳಾಸ —ಮ್ಯಾನೇಜರ್

ಕರ್ನಾಟಕ ಪುಸ್ತಕ ಶಾಲ

ಲಕ್ಸ್‌ರ್ ಪೋಸ್ಟ್

ಸ್ವದೇಶೀ ಬಟ್ಟೆಗಳು ಸ್ವದೇಶೀ ಬಟ್ಟೆಗಳು!!

12 48

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರತಕ್ಕವುಗಳಾಗಿವೆ ಒಗೆದರೂ ಹೋಗುವದಿಲ್ಲ ಏರೀವ ಎಷ್ಟು ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಜುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 29

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳು ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರು ೬ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ ದುಮ್ಮ ಏಜಂಟರ ವಿಳಾಸ— ಜೆ ಎಸ್ ಕನ್ನಯಶೆಟ್ಟಿ ಅಂಡ್ ಕಂಪೆನಿ ತುಮಕೂರು ಮತ್ತು

ಎಸ್ ಕ್ಲೆಮೆಂಟ್ಸ್,

೩೭ ವೇದಮುಲಪಿಳ್ಳೆ ಬೀದಿ ಪೆರಿಮೆಟ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 43

೧ ಲೋಕಾನುಮಯವರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಅನೇಕ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿದ್ರೆ ಇಲ್ಲದಿರುವಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಒಳ್ಳೆ ಹಸಿವಿನ ಬಾಧೆ ಕೊಡದೆ, ಬೇರೆ ಹವಾಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ಮೋಹವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸಿ ಸ್ತ್ರೀಯರ ಪ್ರಸೂತಿ ಶೂಲೆ, ಮಕ್ಕಳ ಎಳವು, ಜ್ವರ, ಚಳಿಜ್ವರ, ಕ್ಷಯ ರೋಗಗಳನ್ನು ಬಹು ಬೇಗ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತ ಬಂದವರು ಖಂಡಿತವಾಗಿಯೂ ಪ್ರೌಢರಿಗೆ ಸೊಂಟಕ್ಕೆ ಗ ೦ ಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ — ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ — ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ — ನಿನಗೆ ದಿನಕ್ಕೆ ಒಂದು ಸಲವಾದರೂ ಶಾಲಪ್ರವೃತ್ತಿಯಾಗುತ್ತಿದೆಯೇ ? ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

... ಪ್ರತಿ ಬಾರಿ ರಕ್ತ ಶುದ್ಧಿಯಾಗಿ ... ಅನೇಕ ರೋಗಗಳಿಗೆ ಮೂಲಕಾರಣವಾಗಿರುವುದು ... ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಢರಿ ಅಶಕ್ತಿ, ಎದೆಯು ಕಲ್ಲಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಸುಖೀಗನ ಹೊಟ್ಟೆನೋವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮಗೆ ತೊಂದರೆ ... ಆರೋಗ್ಯವನ್ನುಂಟುಮಾಡುವುವು [67 15]

ಬೆಲೆ ೪ ಆಣೆ, ೮ ಆಣೆ ಮತ್ತು ೧೦ ಆಣೆ ೧೨ ಆಣೆ ಬುಡ್ಡಿಗಳಲ್ಲಿ ... ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು ಅಥವಾ, ಡೋನ್ ಕಂ ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು

WILLIAM & Co, FORT, BOMBAY

ಅಮೃತಾಂಜನ.

ಒಂದು ಮೂಲಿಕೆ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೆ ಮಾತ್ರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಮುಲಾಮು [30-41]

ತಲೆನೋವು, ಗಂಟು ಉಬ್ಬುವುದು, ವಾತ, ಸಂಧಿವಾತ ಉಳುಕು, ಅಬಲು ಗಂಟು, ಗಂಟು ನೋವು, ಅರ್ಧಾಂಗವಾಯು, ಎದೆಶೋಥ, ಭ್ರಾಂತಿ, ಜಖಮು, ಇತ್ಯಾದಿ

ಇದರ ವಿಶಯವಾಗಿ ಸರ್ವಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತು ೦-೮-೦

ಗಜಕರ್ಣದ ಮುಲಾಮು.

ಮುಖದ ಹಾಗಿ ಕಾಣಿಸುವವರಿಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವುವು ಇದರಿಂದ ಉರಿಯು ಬರುವುದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ... ೧೨ ಡಬ್ಬಿಗಳಿಗೆ ೪-೦-೦

ಆಸ್ತಮಾಚಿಕಿತ್ಸ	೨-೦-೦
ಬೇಲದಿನದ ಮದ್ದು	೦-೮-೦
ವಜ್ರಗುಟಿಕೆ — ಧಾತುಪುಷ್ಟಿ ರಕ್ತಶುದ್ಧಿ	೦-೮-೦
ಸುಂದರೀ ತೈಲ — ಮುಡಿಗೆ ಹಚ್ಚುವುದಕ್ಕೆ	೦-೮-೦
ಜುಲಾಬು ಮಾತ್ರೆ — ಮಲಬದ್ಧಿಗೆ	೦-೫-೦
ನೇತ್ರಾಂಜನ — ಮಂದದೃಷ್ಟಿಗೆ	೦-೪-೦
ಜಖಮ ಮುಲಾಮು — ಮಕ್ಕಳ ಹಿಕ್ಕೆಗೆ	೦-೩-೦
ಕೇಶವರ್ಧನ ತೈಲ — ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ — ಅಸ್ಥಮಾ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ,

ಟೆಲಿಗ್ರಾಫ್ ಅಡ್ರೆಸ್ಸು — 'ಅಮೃತಾಂಜನ,' ಮುಂಬಯಿ.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4 49



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು — ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮೋತ್ಕೃಷ್ಟವಾದ ಔಷಧವು ಜನರನ್ನು ಬಹು ಕಿರಿಯವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ — ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದರೆ

SCOTT'S EMULSION 6 49

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸುತ್ತಾರೆ

ಇದು ಬಾಯಿಸಿ ಮಕ್ಕಳನ್ನು ಆರೋಗ್ಯಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕ್ರಮಸೂಚದೆ ತಯಾರಾದದ್ದು

ಎಲ್ಲಾ ಔಷಧವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ
ಲಂಡನ್ ಇಂಗ್ಲೆಂಡ್

ಈ ವಿನಾಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ

ಮೊಟ್ಟಮೊದಲು ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ — (166 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಜೀವಿಸಿದ್ದನು ಈತನು ಇಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ	0—0—6
(90 ಪೇಜು)	0—1—0
(100 ಪೇಜು)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-49]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಜ್ವರಹರಿ. 18 45

ಇದು ಸಾಧಾರಣ ಜ್ವರ, ಹಳೇಜ್ವರ, ಮರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಯಿಂದಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಬಿ ವೆಂಕಟಪತಿ ಅಯ್ಯರವರು — ನೀವು ಕಳುಹಿಸಿದ ಔಷಧವನ್ನು ... ಬಹಳ ಸ್ವಲ್ಪ ಕಾಲದಲ್ಲೇ ನನ್ನ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಜನ್ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿರಿ ಉಪಕಾರವಾಗಿದೆ — ಎಂದು ಬರೆದಿದ್ದಾರೆ

ಕ್ರಯ — ಸೀಸೆ ೧ಕ್ಕೆ ೮ ಆಣೆ, ೧ ರೂ ... ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು — ಮುಂತಾದ್ದಕ್ಕೆಲ್ಲಾ ಮಹಾ ಶ್ರದ್ಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರ ... ಎಂಬ ಔಷಧ ಪಂಕ್ತಿಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ರಾವರು — ಚೆನ್ನಯ್ಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಾಲರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಚೆನ್ನಯ್ಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

5—11—1909 ರಿಂದ 19—11—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	2	0	0
ಮೈಸೂರು ,,	83	15	0	0
ಬೆಂಗಳೂರು ಡಿಸ್ಟ್ರಿಕ್ಟು	18	7	27	22
ಮೈಸೂರು ,,	*	*	*	*
ಕೋಲಾರ್ ,,	0	0	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	2	2	0	0
ಚಿತ್ರದುರ್ಗ ,,	0	0	18	9
ಕಡೂರ್ ,,	5	2	0	0
ಶಿವಮೊಗ್ಗ ,,	[illegible]	2	0	0
ಜುಮ್ಲಾ	113	30	48	33

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಕಾರ್ತಿಕ ಬಹುಳ ತ್ರಯೋದಶಿ ಶುಕ್ರವಾರದಿಂದ ಮಾರ್ಗಶಿರ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಡಿಸೆಂಬರ್.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಶೀದ ವೃಶ್ಚಿಕ ಮಾಸ
10	ಶುಕ್ರ •	ತ್ರಯೋದಶಿ	48-18	ವಿ	48-18	25
11	ಶನಿವಾ :	ಚತುರ್ದಶಿ	42-2	ಅ	53-7	26
12	ರವಿವಾ §	ಅಮಾವಾಸ್ಯ	41-54	ಜೆ	57-2	27
13	ಚಂದ್ರ	ಪಾಡ್ಯಮಿ	16-10	ಮೂ	59-30	28
14	ಕುಜ †	ಬಿದಿಗೆ	46-30	ಪೂಷಾ	60-0	29
15	ಬುಧ	ತದಿಗೆ	45-32	ಪೂಷಾ	1-12	1
16	ಗುರು ‡	ಚೌತಿ	43-13	ಉಷಾ	1-1	2

• ಪ್ರದೋಷ

: ಮಾಸಶಿವರಾತ್ರಿ

§ ಸರ್ವತ್ರ ಅಮಾವಾಸ್ಯ, ಸುಬ್ರಹ್ಮಣ್ಯದಲ್ಲಿ ಲಕ್ಷದೀಪೋತ್ಸವ.

† ಚಂದ್ರೋದಯ.

:, ದಗ್ಧಯೋಗ, ಜಲಯೋಗ ೮೦ ೧

‡ ಧನುರ್ಮಾಸ ಪೂಜಾರಂಭ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ ... ರೂ	೧೪-೦-೦	೧೪-೨-೯
ಕೆಂಬತಿ ಅಕ್ಕಿ ಅವಲ್ ..	೧೪-೮-೦	೧೩-೮-೦
,, ದುಯಂ ..	೧೪-೦-೦	೧೩-೦-೦
ಜಾಬ್ರಾಣಿ ಅಕ್ಕಿ ...	೧೪-೦-೦	೧೪-೦-೦
ಸಣ್ಣಕ್ಕಿ ಅವಲ್ ..	೧೫-೨-೦	೧೬-೦-೦
,, ದುಯಂ ...	೧೪-೮-೦	೧೫-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ ..	೧೪-೮-೦	೧೫-೦-೦
,, ದುಯಂ ..	೧೪-೦-೦	೧೪-೮-೦
ಕೈ ರಾಗಿ ಪಲ್ಲಾ ೧ಕ್ಕೆ ..	೯-೦-೦	೮-೮-೦
ಕಾರ್ರಾಗಿ ..	೫-೧೨-೦	೬-೨-೦
ಜೋಳ ...	೭-೧೨-೦	೮-೦-೦
ಹಲಸಂದೆ ಪಲ್ಲಾ ೧ಕ್ಕೆ ...	೧೨-೦-೦	೧೧-೨-೦
ಬೇಳೆ ಅವರೆ ...	೧೪-೦-೦	೧೪-೮-೦
ಹೆಸರು ...	೧೦-೦-೦	೧೦-೮-೦
ಉದ್ದು ..	೧೪-೪-೦	೧೧-೮-೦
ಕಡಲೆ ...	೧೩-೮-೦	೧೨-೨-೦
ಎಳ್ಳು ಸೇ ೧೨೭ ಕ್ಕೆ ..	೧೫-೦-೦	೧೪-೦-೦
ಹುರುಳಿ ...	೧೦-೦-೦	೧೧-೧೨-೦
ಹರಳು ೧೨೭ ಸೇರಿಗೆ ..	೧೪-೦-೦	೧೨-೨-೦
ಸೀಗೇಕಾಯಿ ಮಣ ೧ಕ್ಕೆ ..	೩-೮-೦	೧-೪-೦
ಮೆಣಸಿನಕಾಯಿ ...	೪-೪-೦	೩-೮-೦
,, ದುಯಂ	೫-೮-೦	೩-೦-೦
ಬೆಲ್ಲ ದೊಡ್ಡ ಅಚ್ಚು	೪-೮-೦	ಮ ೩-೦-೦
ಒಳ್ಳೆಣ್ಣೆ ಮಣ ೧ಕ್ಕೆ ..	೪-೮-೦	೪-೪-೦
ಹರಳೆಣ್ಣೆ ,, ...	೫-೮-೦	೪-೧೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ ...	೯-೦-೦	೯-೦-೦
ಉಪ್ಪು ,, ..	೬-೮-೦	೫-೧೨-೦
ಹುಣಸೇ ಹಣ್ಣು ...	೨-೦-೦	೧-೧೨-೦
,, ಹಳೇದು ...	೧-೮-೦	೧-೮-೦
ತುಪ್ಪ ಮಣ ೧ಕ್ಕೆ ...	೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೫-೦-೦
ಅರಲೇಕಾಯಿ ಮಣ ೧ಕ್ಕೆ ..	೧-೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ ..	೧-೦-೦	೦-೧೨-೦
ಚಿನ್ನ (ಪೌನ್) ಕೆಂಪು ...	೧೫-೯-೦	೧೫-೬-೦
,, ,, ಪವನು ...	೧೬-೦-೦	೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ...	೬೭-೪-೦	೬೩-೦-೦

ವ್ಯವಸಾಯ ವಿಚಾರಗಳು.

ದನವಿನ ಗೊಬ್ಬರ.

ಬೆಳೆಗೆ ಗೊಬ್ಬರವು ಸಾರವತ್ತಾಗಿರಬೇಕಾದರೆ ಸಗಣಿ ಮತ್ತು ಕಸವನ್ನು ಗುಂಡಿಗಳಲ್ಲಿ ತುಂಬಿಡಬೇಕು. ಕೊಳೆಯದೆ ಇನ್ನೂ ಹೊಸದಾಗಿರುವ ಸಗಣಿಯನ್ನು ಜಮೀನಿನ ಮೇಲ್ಗಡೆಯೇ ಹಾಕಿದಲ್ಲಿ ಬಿಸಲು ಮಳೆ ತಗಲಿ ಅದರಲ್ಲಿನ ಗೊಬ್ಬರದ ಗುಣವು ಆರಿಹೋಗುವುದು. ಸಗಣಿಯನ್ನು ಬೆರಣಿಮಾಡಿ ಸುಟ್ಟು ಬೂದಿಯನ್ನು ಜಮೀನಿಗೆ ಹಾಕಿದರೆ ಶೇಕಡ ೯೭ ರಷ್ಟು ಗೊಬ್ಬರದ ಸಾರ ಕಮ್ಮಿಯಾಗುತ್ತದೆ

ತೆಂಗು, ಅಡಿಕೆ ಮರಗಳು.

ತೆಂಗು, ಅಡಿಕೆ, ಇತ್ಯಾದಿ ಜಾತಿಯ ಮರಗಳಿಗೆ ವಿಶೇಷ ಗಾಳಿ ಬೆಳಕು ಇಲ್ಲದಿದ್ದರೆ ಅವು ಎಂಥಾ ಶ್ರೇಷ್ಠವಾದ ಭೂಮಿಯಲ್ಲೂ ಕೂಡ ಚೆನ್ನಾಗಿ ಫಲಿಸುವುದಿಲ್ಲ. ಮರಗಳು ದೂರದೂರವಾಗಿದ್ದಷ್ಟೂ ಫಲಬಿಡುವುದು ಹೆಚ್ಚು. ಆದರೆ ಒಂದು ತೋಟದಲ್ಲಿ ಹೀಗೆ ಬಹಳ ದೂರ ದೂರವಾಗಿ ಇಡುವ ಪಕ್ಷದಲ್ಲಿ ಮರಗಳ ಸಂಖ್ಯೆ ಕಡಮೆಯದಾಗಿ ಫಸಲೂ ಕಡಮೆಯಾಗುವುದು. ಸಾಧಾರಣವಾಗಿ ಮರದಿಂದ ಮರಕ್ಕೆ ೩೦ ಅಡಿ ಬಿಟ್ಟಿದ್ದರೆ ಸಾಕೆಂದು ತೋರುತ್ತದೆ.

ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯಗಳು.

ನಮ್ಮ ದೇಶದ ರೈತರು ತಮ್ಮ ಜಿರಾಯಿತು ಎತ್ತುಗಳು ಬಹಳ ಬಡವಾಗಿಯೂ ಬಲಹೀನವಾಗಿಯೂ ಇರುತ್ತವೆ ದು ಅನೇಕ ವೇಳೆ ಹೇಳುತ್ತಾರೆ. ಆದರೆ ಮೇವು ಕೊಡುವುದರಲ್ಲಿಯೂ, ಕೊಟ್ಟಿಗೆ ಕಟ್ಟುವುದರಲ್ಲಿಯೂ, ಸಾಮಾನ್ಯವಾಗಿ ಪೋಷಣೆಮಾಡುವುದರಲ್ಲಿಯೂ ಈಗ್ಗಿಂತಲೂ ಹೆಚ್ಚು ಮುತುವರ್ಜಿ ಮಾಡಿದ್ದೇ ಆದರೆ, ದನಗಳನ್ನು ಅತಿ ಸುಲಭವಾಗಿ ಒಳ್ಳೇ ಸ್ಥಿತಿಗೆ ತಂದುಕೊಳ್ಳಬಹುದು. ಕೊಟ್ಟಿಗೆಗಳನ್ನು ಅನುಕೂಲವಾಗಿ ಕಟ್ಟಬೇಕಾದರೆ ದುಬಾರಿಯಾಗಿ ಖರ್ಚು ಇಡಬೇಕಾದದ್ದೇನೂ ಅವಶ್ಯಕವಿಲ್ಲ. ಈ ಕಟ್ಟಡಕ್ಕೆ ಸಾಗವಾನಿಮರ, ಇಟ್ಟಿಗೆ ಗೋಡೆ ಮತ್ತು ಹೆಂಚಿನ ಛಾವಣಿಗಳೇನೂ ಬೇಕಿಲ್ಲ. ಸಾಧಾರಣವಾದ ಕಾಡು ಮರ, ಮಣ್ಣಿನ ಗೋಡೆ ಮತ್ತು ಹುಲ್ಲು ಹೊದ್ದಿಕೆ ಇದ್ದರೆ ಸಾಕು ಕೊಟ್ಟಿಗೆಯ ನೆಲ ಸ್ವಲ್ಪ ಎತ್ತರವಾಗಿ ಇದ್ದರೆ ಸಾಕು ಕೊಟ್ಟಿಗೆಯ ನೆಲ ಸ್ವಲ್ಪ ಎತ್ತರವಾಗಿದ್ದರೆ ಕೆಸರು ಆಗುವುದಿಲ್ಲ. ಒಳಗೆ ಗಾಳಿಯಾಡುವಂತೆ ಛಾವಣಿಯು ಎತ್ತರವಾಗಿ ಇರಬೇಕು. ಮತ್ತು ಮಳೆ ಬಿಸ್ತರೆ ಸೋರಕೂಡದು ಮಳೆ ಇರಚಲು ಬಡಿಯುವ ಕಡೆಗಳಲ್ಲಿ ಮಾತ್ರ ಗೋಡೆ ಹಾಕಿ ಮರೆಮಾಡಬೇಕು ಗೋಡೆಗಳೂ ನೆಲವೂ ಸುಲಭವಾಗಿ ಚೊಕ್ಕಟಮಾಡುವುದಕ್ಕೆ ಸಾಧ್ಯವಾಗುವಂತಿರಬೇಕು ಮಣ್ಣಿನ ಗೋಡೆಯಾದರೆ ಸುಲಭವಾಗಿ ಸುಣ್ಣ ಬಳಿಯುವುದರಿಂದ ಚೊಕ್ಕಟವಾಗುತ್ತದೆ ನೆಲವನ್ನು ಶುದ್ಧವಾಗಿಟ್ಟುಕೊಳ್ಳಬೇಕಾದರೆ ಚೆನ್ನಾಗಿ ತುಳಿದ ಮಣ್ಣನ್ನು ಹಾಕಿ ಗಡಸುಮಾಡಿದರೆ ಗಾರೆ ನೆಲದಂತೆ ಆಗುತ್ತದೆ. ಇದರ ಮೇಲೆ ೩ ಅಂಗುಲ ಪುಡಿ ಮಣ್ಣನ್ನು ಹರಡಿ, ಈ ಮಣ್ಣನ್ನು ಒಂದು ವಾರ ಅಥವಾ ೧೦ ದಿನಗಳಿಗೊಂದಾವರ್ತಿ ಗೊಬ್ಬರದ ಗುಂಡಿಗೆ ಸಾಗಿಸಿ, ಪುನಃ ಹೊಸ ಮಣ್ಣನ್ನು ಹರಡಬೇಕು. ಹೀಗೆ ಆಗಾಗ್ಗೆ ಕೊಟ್ಟಿಗೆಯಿಂದ ತೆಗೆದ ಮಣ್ಣನ್ನು ಯಾವ ಪೈರಿಗಾದರೂ ಒಳ್ಳೆ ಗೊಬ್ಬರವಾಗಿ ಉಪಯೋಗಿಸಬಹುದು.

ಇಂಡಿಯಾ ದೇಶದ ಸಕ್ಕರೆಯ ತಯಾರಿ.

ಪ್ರಪಂಚದಲ್ಲೆಲ್ಲಾ ಇಂಡಿಯಾ ದೇಶದಲ್ಲೇ ಸಕ್ಕರೆಯು ವಿಶೇಷ ತಯಾರು ಆದರೂ ಕೂಡ ಇಲ್ಲಿಗೆ ಅನ್ಯದೇಶಗಳಿಂದ ಸಕ್ಕರೆಯನ್ನು ಆಮದುಮಾಡುವುದು ಮಾತ್ರ ದಿನೇ ದಿನೇ ಹೆಚ್ಚುತ್ತಲೇ ಇದೆ ೧೯೦೪-೦೫ ರಲ್ಲಿ ಸುಮಾರು ೬ ಕೋಟಿ ರೂಪಾಯಿನ ಸಕ್ಕರೆಯು (ಕಾಕಂಬಿ ಮತ್ತು ತಯಾರಿಸಿದ ೩೬ ಪದಾರ್ಥಗಳು ವಿನಹ) ಅನ್ಯದೇಶದಿಂದ ಬಂದು ಮುಂದೆ ಮೂರು ವರ್ಷಗಳಲ್ಲಿ ಅಂದರೆ ೧೯೦೮-೦೯ ರಲ್ಲಿ ಈ ಆಮದು ವ್ಯಾಪಾರವು ಸ್ವಲ್ಪ ಹೆಚ್ಚು ಕಡಿಮೆ ೧೦½ ಕೋಟಿ ರೂಪಾಯಿಗೆ ಏರಿರುತ್ತದೆ. ನಮ್ಮ ದೇಶಕ್ಕೆ ಬಹಳವಾಗಿ ಜಾವಾ ದ್ವೀಪಗಳಿಂದಲೇ ಸಕ್ಕರೆಯು ಬರುವುದು. ಜಾವಾ ದ್ವೀಪದ ಸಕ್ಕರೆಯು ೧೯೦೪-೦೫ ರಲ್ಲಿ ಸುಮಾರು ೧ ಕೋಟಿ ೨ ಲಕ್ಷ ಮಣವೂ, ೧೯೦೮-೦೯ ರಲ್ಲಿ ಸುಮಾರು ೨ ಕೋಟಿ ಮಣವೂ ಈ ದೇಶಕ್ಕೆ ಆಮದು ಆಗಿರುತ್ತದೆ. ಅಲ್ಲಿ ಕಬ್ಬನ್ನು ಬೆಳೆಯುವ ಜಮೀನುದಾರರು ತಮಗೆ ಬಂದ ಲಾಭವನ್ನು ಬಹಳವಾಗಿ ಸಕ್ಕರೆ ತಯಾರಿ ಕ್ರಮಗಳನ್ನು ಉತ್ತಮಪಡಿಸುವುದಕ್ಕೇನೆ ವಿನಿಯೋಗಿಸುತ್ತಾರಲ್ಲದೆ, ಸರಕನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಹೆಚ್ಚು ಅನುಕೂಲತೆಗಳನ್ನು ಮಾಡಿಕೊಳ್ಳುವುದಕ್ಕೂ ಹೊಸ ಹೊಸ ಯಂತ್ರಗಳನ್ನು ತರಿಸುವುದಕ್ಕೂ ಪ್ರಯತ್ನಪಡುತ್ತಿದ್ದಾರೆ ಇದರಿಂದ ಅಲ್ಲಿ ಸಕ್ಕರೆ ತಯಾರುಮಾಡುವ ಲಾಗವಡು ಕಡಮೆ ಆಗಲೇಬೇಕು ಹೀಗಾಗಿ ಅಲ್ಲಿನ ಸಕ್ಕರೆಯು ನಮ್ಮ ದೇಶದಲ್ಲಿ ಅಗ್ಗವಾದ ಬೆಲೆಗೆ ಮಾರಾಟವಾಗಲು ಅವಕಾಶವುಂಟಾಗಿ ನಮ್ಮ ಸ್ವದೇಶೀಯ ಸಕ್ಕರೆಯು ಅದರೊಂದಿಗೆ ಪೋಟಾಪೋಟಿಯಲ್ಲಿ ನಿಲ್ಲುವುದೇ ಕಷ್ಟವಾಗುತ್ತದೆ

ನಮ್ಮ ದೇಶದಲ್ಲಾದರೋ ಸಕ್ಕರೆಯ ಖರ್ಚು ದಿನೇ ದಿನೇ ಒಂದೇ ರೀತಿಯಾಗಿ ಹೆಚ್ಚುತ್ತಲೇ ಇದೆ ಆದರೂ ಕೂಡ ಹೀಗೆ ಹೆಚ್ಚುತ್ತಿರುವ ಗಿರಾಕಿಗೆ ತಕ್ಕಷ್ಟು ಸಕ್ಕರೆಯನ್ನು ಇಲ್ಲಿಯೇ ಒದಗಿಸಿಕೊಳ್ಳುವುದಕ್ಕೆ ಬದಲಾಗಿ ಅನ್ಯದೇಶಗಳಿಂದ ತರಿಸಿಕೊಳ್ಳುತ್ತಿದ್ದಾರೆ ಇಲ್ಲಿ ಹಾಲಿ ರೂಢಿಯಲ್ಲಿರುವ ಸಕ್ಕರೆ ತಯಾರಿಯ ಕ್ರಮಗಳನ್ನು ಉತ್ತಮಪಡಿಸಲು ಪ್ರಯತ್ನಗಳೇನೋ ನಡೆಯುತ್ತಲಿವೆ. ಆದರೆ ಅನ್ಯದೇಶಗಳಲ್ಲಿರುವಂತೆ ಮಧ್ಯರಾಷ್ಟ್ರವಾಗಿ ಒಂದು ಸಕ್ಕರೆ ತಯಾರಿ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಟು ಮಾತ್ರ ಇಲ್ಲಿ ಇನ್ನೂ ಆಚರಣೆಯಲ್ಲಿ ಬಂದಿಲ್ಲ ಇಂಥಾ ಕಾರ್ಖಾನೆಗಳನ್ನು ಕಬ್ಬು ವಿಶೇಷವಾಗಿ ಬೆಳೆಯುವ ಪ್ರಾಂತ್ಯದಲ್ಲಿ ಏರ್ಪಡಿಸಿ ಸುತ್ತಮುತ್ತಲೂ ಆಗುವ ಕಬ್ಬನ್ನು ಸ್ಥಳದಲ್ಲಿಯೇ ಸಕ್ಕರೆ ಮಾಡುವುದಕ್ಕೆ ಉಪಯೋಗಿಸುವುದರಲ್ಲಿ ಪದಾರ್ಥ ನಷ್ಟವಾಗುವುದು ಕಡಮೆ, ಕೆಲಸವೂ ಜಾಗ್ರತೆಯಾಗಿಯೂ ಸಮರ್ಪಕವಾಗಿಯೂ ನಡೆಯುತ್ತದೆ. ಈ ಶ್ರೇಷ್ಠವಾದ ಏರ್ಪಾಟಿನಿಂದಲೇ ಜಪಾನೀಯರು ಫಾರ್ಮೋಸಾ ದ್ವೀಪಗಳಲ್ಲಿ ಕ್ಷೀಣದೆಸೆಯಲ್ಲಿದ್ದ ಸಕ್ಕರೆ ತಯಾರಿ ಕಸಬನ್ನು ಪುನಃ ಅಭಿವೃದ್ಧಿ ಪಡಿಸಿರುತ್ತಾರೆ. ಆದಕಾರಣ ನಮ್ಮ ದೇಶೀಯರು ಕೂಡ ಈ ಸರ್ವಶ್ರೇಷ್ಠವಾದ ಏರ್ಪಾಟನ್ನು ಆಚರಣೆಯಲ್ಲಿ ತಂದು ತನ್ಮೂಲಕ ಸ್ವದೇಶೀಯ ಸಕ್ಕರೆಯ ಉತ್ಪತ್ತಿಯನ್ನು ಹೆಚ್ಚಿಸಿದರೆ ನಮ್ಮ ಸರಕನ್ನು ಅನ್ಯದೇಶೀಯ ಸರಕಿನ ಬೆಲೆಗೇನೇ ಮಾರಲು ಸಾಧ್ಯವಾಗಿ ಹೊರಗಿನ ಸಕ್ಕರೆಯು ನಮ್ಮ ದೇಶಕ್ಕೆ ಬರುವುದು ಕಡಮೆಯಾಗುವುದು

ಆದರೆ ಈ ವಿಷಯದಲ್ಲಿ ನಮ್ಮ ದೇಶೀಯರು ಕೊಂಚ ಧೈರ್ಯದಿಂದಲೂ ಸಾಹಸದಿಂದಲೂ ಪ್ರಯತ್ನಪಡಬೇಕು ಈ ಕಾರ್ಯವು ಸಿದ್ಧಿಯಾಗುವುದು ಅಸಾಧ್ಯವೆಂದೆಣಿಸುವುದಕ್ಕೆ ಪ್ರಮಾದವಾದ ತೊಂದರೆಗಳೇನೂ ಕಾಣಬರುವುದಿಲ್ಲ. ಭೂಗುಣದಲ್ಲೇ ಆಗಲಿ, ಕೂಲಿಯವರು ಅಗ್ಗವಾಗಿ ಸಿಕ್ಕುವುದರಲ್ಲೇ ಆಗಲಿ, ಅಥವಾ ಮತ್ಯಾವ ಭಾಗದಲ್ಲೇ ಆಗಲಿ ನಮ್ಮ ದೇಶಕ್ಕಿಂತಲೂ ಜಾವಾ ದ್ವೀಪದವರಿಗೆ ಅಧಿಕವಾದ ಸೌಕರ್ಯಗಳೇನೂ ಇರುವುದಿಲ್ಲವಾದಕಾರಣ ನಮ್ಮ ಜನರಲ್ಲಿ ಸಾಹಸ ಮತ್ತು ಯುಕ್ತ್ಯಾನುಸಾರ ಶಾಸ್ತ್ರಪರಿಚಯದ ಉಪಯೋಗ ಇವೆರಡು ಮಾತ್ರ ಇದ್ದರೆ, ಈ ದೇಶೀಯರು ಒಂದು ವೇಳೆ ಅನ್ಯದೇಶಗಳೊಂದಿಗೆ ರಫ್ತು ವ್ಯಾಪಾರವನ್ನಾದರೂ ಮಾಡುವಷ್ಟು ಸಕ್ಕರೆಯನ್ನು ತಯಾರುಮಾಡುವುದಕ್ಕಾಗದಿದ್ದರೂ ಇಲ್ಲಿನ ಗಿರಾಕಿಗೆ ತಕ್ಕಷ್ಟಾದರೂ ತಯಾರುಮಾಡಬಹುದು

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ಹೊಲಗಳನ್ನು ಕೊಯಿದು ಕೂಡಿಸಿದಾರೆ. ಪ್ರತಿ ವರುಷವೂ ಬರುವ ಪ್ರಕಾರ ಈ ಸಾರಿ ೭ನೇ ತಾ ಇಲ್ಲಿಗೆ ಇಂಗ್ಲಿಷ್ ಸೈನ್ಯಗಳು ಬರುತ್ತವೆ ಸಾಮಾನುಗಳು ರೈಲಿನಲ್ಲಿ ಅಪಾರವಾಗಿ ಬಂದುಬೀಳುತ್ತಾ ಇವೆ ಅಂತು ಈ ಸಾರಿ ೧೫ ದಿನ ಮಾತ್ರ ಕ್ಯಾಂಪು ಇರುತ್ತದೆ ಎಂದು ಹೇಳುತ್ತಾರೆ

ಗುಬ್ಬಿ.—ಈ ದೊಡ್ಡ ಕೆರೆ ತುಂಬಿ ಎರಡು ತಿಂಗಳಾದಾಗ್ಯೂ ಇನ್ನೂ ಗದ್ದೆಗಳನ್ನು ಗೆಯ್ಯುವದಕ್ಕೆ ಇಲ್ಲಿನ ರೈತರುಗಳು ಶುರುಮಾಡಲಿಲ್ಲ. ನೀರು ಆಗಲೇ ಅರ್ಧ ಅಡಿ ಕಮ್ಮಿ ಆಯಿತು. ನೀರಗಂಟಿಗಳು ನೀರನ್ನು ರಾತ್ರಿ ಕಾಲದಲ್ಲಿ ಬೇರೆ ಗ್ರಾಮಗಳ ಜನಗಳಿಗೆ ಬಿಟ್ಟು ಕೊಡುವರು ಈಗ ರೈತರು ಸುಮ್ಮನೆ ಇದ್ದುಕೊಂಡು ಕಡೆಗೆ ಹೊಡೆ ಕಾಲದಲ್ಲಿ ವ್ಯಾಜ್ಯಗಳನ್ನಾಡುತ್ತಾ, ಅಧಿಕಾರಿಗಳಿಗೆ ತೊಂದರೆ ಕೊಡುತ್ತಾರೆ. ಆದ್ದರಿಂದ ಈ ಮೂಲಕವಾಗಿ ಎಚ್ಚತ್ತುಕೊಳ್ಳಲಿ ಎಂದು ಸೂಚಿಸಿ ಇದೇನೆ.—ಕಳೆದ ವಾರ ಅನಣಿ ಕೆರೆ ಪಟೇಲ್ ವೆಂಕಟಪ್ಪನವರ ಮಗ ಬೋರೈಯನೆಂಬ ೧೨ ವರುಷದ ಹುಡುಗನು ಅವರ ಮನೆ ಬಳಿಯಲಿ ಮರಕ್ಕೆ ಹಣ್ಣಿಗಾಗಿ ಹತ್ತಿ ಇರುವಾಗ ಮೂರ್ಛಾರೋಗವು ಬಂದು ಪ್ರಜ್ಞೆ ತಪ್ಪಿ ಮರದ ಮೇಲಿನಿಂದ ಬಿದ್ದನು. ದೈವವಶಾತ್ತು ಮೂಗು ಪೆಟ್ಟು ತಲೆಗೂ ಹೊಟ್ಟೆಗೂ ತಗಲಿ ೨ ದಿನ ಪ್ರಜ್ಞೆ ಇಲ್ಲದೆ ಬಿದ್ದಿದ್ದು ಹುಷಾರಾದನು, ಬಿದ್ದ ಕಾಲದಲ್ಲಿ ಸ್ಟಾಂಪ್ ವೆಂಡರ್ ನಾಗಪ್ಪನವರು ಅವರ ತಂದೆಗೆ ತಿಳಿಸಿದ್ದರ ಮೇಲೆ ಜಾಗ್ರತೆ ಉಪಚಾರಗಳು ನಡಿಸಿದರು, ಮರವು ಸುಮಾರು ೧೫ ಅಡಿ ಇರುತ್ತೆ. ಈಗ ಅವನು ಹುಷಾರಾಗಿ ಇರುತ್ತಾನೆ.—ಕಳೆದ ಸೆಪ್ಟಂಬರು ತಾ ೨೧ ರಲ್ಲಿ ನಿಟ್ಟೂರು ಸಮ್ಮತು ದೊಡ್ಡನ ಅರೆ ಎಂಬ ಗ್ರಾಮದ ಬಳಿ ಅರಸೀಕೆರೆಯಿಂದ ಬರುವ ರೈಲ್ ರಸ್ತೆಗೆ ಕಂಬಿಗಳ ಮೇಲೆ ದೊಡ್ಡ ಕಲ್ಲುಗಳನ್ನು ಇಟ್ಟು ರೈಲಿಗೂ ಜನಗಳಿಗೂ ಅಪಾಯ ಸಂಭವಿಸುವಂತೆ ಮಾಡಿ ಇದ್ದ ನಿಟ್ಟೂರು ಸಮ್ಮತು ಕೆಂಚನಹಳ್ಳಿ ಪಟೇಲ ನಾಯ್ಕರ ಈರಪ್ಪನ ಮಕ್ಕಳು ಬಡೀರ ಮತ್ತು ಕೆಂಪೀರ ಇವರುಗಳನ್ನು ಗುಬ್ಬಿ ಟವನ್ ದಫೇದಾರ್ ಬಸಪ್ಪ, ೧೪೦ನೇ ನಂ. ಕಾನ್‌ಸ್ಟೇಬಲ್ ಮಲ್ಲಯ್ಯ ಸಹಾ ಪತ್ತೆ ಹಚ್ಚಿ ತಂದು ಮೊಹಸತ್ತಿನಿಂದ ನಡಿಸಿದ್ದರ ಮೇಲೆ ಬೆಂಗಳೂರು ಕಂಟೋನ್‌ಮೆಂಟ್ ಮ್ಯಾಜಿಸ್ಟ್ರೇಟ್‌ರವರು ದಯಮಾಡಿ ಸ್ಥಳ ಅನ್ವೇಷಿಸನ್ನು ಪರಾಂಬರಿಸಿ ವಿಚಾರಣೆಯಿಂದ ಅಕ್ಟೋಬರ್ ತಾ ೨೧ ರಲ್ಲಿ ಅಪರಾಧಿಗಳಿಗೆ ಫೀ ಇಸಂ ನಾಲ್ಕು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು, ಇದರಿಂದ ಎಲ್ಲಾ ಗ್ರಾಮದ ಜನಗಳಿಗೂ ತುಂಬಾ ಎಚ್ಚರಿಕೆಯುಂಟಾಯಿತೆಂದು ನಂಬುತ್ತೇನೆ

ಶಿಕಾರಿಪುರ.—ಈ ವರುಷ ಮಳೆ ಬೆಳೆಗಳು ಸಮೃದ್ಧಿಯಾಗಿ, ಪರಿ ಫಸಲಿನ ಕಟಾವು ಮುಗಿದು, ಜನರು ಹೆಸರು, ಕಡಲೆ, ಉದ್ದು, ಮೊದಲಾದವುಗಳನ್ನು ಪುನಹ ಬಿತ್ತುವವರಾಗಿದಾರೆ. ಕೆಲವರು ಕಬ್ಬಿನ ಪೈರಿಗೆ ಬೀಜ ನೆಡಲು ಅನುಕೂಲಪಡಿಸುತ್ತಿದ್ದಾರೆ.—ಹೊಸ ಅಮಲ್ದಾರರು ಬಂದರು ತಾಲ್ಲೋಕಿನ ಚಾರ್ಜನ್ನು ವಹಿಸಿ, ಇಲ್ಲಿಯ ವ್ಯಾಕ್ಯುಲರ್ ಸ್ಕೂಲನ್ನು ಪರೀಕ್ಷಿಸಿ, ಸಂತಸಗೊಂಡರೆಂದು ವರ್ತಮಾನ.—ಈ ತಾಲ್ಲೋಕಿಗೆ ಸೇರಿದ ಕಾಗನೆಲ್ಲಿ ಎಂಬುವ ಗ್ರಾಮದಲ್ಲಿ ಪ್ಲೇಗು ಪ್ರಾರಂಭವಾಗಿದೆ ಈಗಾಗಲೇ ಜನರು ಭೀತರಾಗಿ, ಬೇರೆ ಬೇರೆ ಸನ್ನಾಹ ಮಾಡುತ್ತಿದ್ದಾರೆ. ಈ ಟವನ್ ಸುತ್ತಲೂ ಸಣ್ಣ ದೊಡ್ಡ ಹಳ್ಳಗಳೂ, ನುಗ್ಗೆ ಪೊದರು ಕಳೆ ಗಿಡಗಳೂ. ಬಹಳವಾಗಿ ಜನರ ಅನಾರೋಗ್ಯಕ್ಕೆ ಕಾರಣವಾಗಿದೆ ಎಂದೂ, ಅವುಗಳನ್ನೆಲ್ಲಾ ಬೇಗ ತೆಗೆಯಿಸ ಬೇಕೆಂದೂ ಡಾಕ್ಟರವರು ಅಭಿಪ್ರಾಯಕೊಟ್ಟಿದಾರೆ ಮ್ಯುನಿಸಿಪಾಲಿಟಿಯವರು ಬೇಗ ಗಮನಕೊಟ್ಟು ಸರಿಪಡಿಸುವದು ಯುಕ್ತವಾಗಿದೆ ಇಲ್ಲವಾದರೆ ಇತರ ರೋಗೋಪದ್ರವಗಳಿಗೆ ಕೇವಲ ಅನುಕೂಲವಾಗಿ ಪ್ರಜೆಗಳು ತೊಂದರೆಗೆ ಸಿಕ್ಕುವ ಸಂಭವ ಉಂಟು.—ಇಲ್ಲಿಯ ಗಟ್ಟೂರು ಹೊಳೆಯ ಸೇತುವೆಯು ಎತ್ತರವಾಗಿಲ್ಲದ್ದರಿಂದ ಅದೇ ಹಾದಿಯಲ್ಲಿ ಜಾನುವಾರುಗಳು ಕಾಡಿಗೆ ಹೋಗಿ ಮೆಯಿದು ಬರುತ್ತವೆಯಾದ್ದರಿಂದ ಅವುಗಳ ಅಪಾಯಕ್ಕೆ ಕೇವಲ ಹೇತುವಾಗಿದೆ ಈಗ್ಗೆ ಕೆಲವು ದಿನಗಳ ಕೆಳಗೆ ಸುಮಾರು ೬೦ ರೂಪಾಯಿನ ಒಂದು ಹೋರಿಯು ಹಾರಿ ಹೊಳೆಗೆ ಬಿದ್ದು ಮರಣ ಹೊಂದಿತು. ಅಲ್ಲದೆ ಇನ್ನೂ ೪-೫ ಜೀವರಾಶಿಗಳಿಗೂ ಇದೇ ಅಪಾಯ ಸಂಭವಿಸಿದೆ ಈ ಹೊಳೆಗೆ ಮ್ಯುನಿಸಿಪಾಲಿಟಿಯವರು ಅವಶ್ಯ ಕಟಕಟೆ ಹಾಕಿಸಿದರೆ ಪಶು ಪ್ರಾಣಿಗಳನ್ನು ಬದುಕಿಸಿದ ಪುಣ್ಯವು ಲಭ್ಯವಾಗುವದು.—ಇಲ್ಲಿಗೆ ಸುಮಾರು ೬ ಮೈಲಿಗಳ ದೂರದಲ್ಲಿ ಮದಗದ ಕೆರೆ ಎಂಬುವ ನೋಟಕರ ಕಣ್ಣುಗಳನ್ನೆಳೆವ ವಿಶೇಷವಾದ ಒಂದು ಕೆರೆ ಇದೆ ಪರ ನೀರು ಧಾರವಾಡ ಜಿಲ್ಲೆಗೆ ಒಂದು ಬೆಟ್ಟವನ್ನೇ ಒಡೆದು ಸೇತುವೆ ಮಾಡಿದ್ದಾರೆ ಇದು ವಿಶೇಷ ಸ್ಥಳವಾಗಿರುವದರಿಂದ ಬೇರೆ ಬೇರೆ ಊರುಗಳಿಂದ ಅನೇಕರು ಇದನ್ನು ನೋಡಲು ಬರುವರು ಆದರೆ ಈ ಶಿಕಾರಿಪುರದಿಂದ ಮದಗಕ್ಕೆ ಸುಮಾರು ೫ ಮೈಲು ಹೋಗಬೇಕಾದರೆ ೫೦ ಮೈಲಿಗಳ ಪ್ರಯಾಣದಂತಿದೆ ಅದರೊಳಗಾಗಿ ಮಳೆ ಬಂದರೆ ೫ ದಿನಗಳ ಪ್ರಯಾಣ ಮಾಡಿದರೂ ಅಲ್ಲಿಗೆ ಹೋಗಿ ಸೇರಲು ಸಾಲದ್ದಾಗಿರುವದು. ಈ ದಾರಿಯು ಅಷ್ಟರಮಟ್ಟಿಗೆ ವಕ್ರವಾಗಿದೆ ಈ ದಾರಿಯು ಶಿಕಾರಿಪುರಕ್ಕೆ ಸೇರಿದ್ದರೂ ಇಷ್ಟು ವರುಷಗಳಿಂದಲೂ ಮ್ಯುನಿಸಿಪಾಲಿಟಿಯವರ ಕೃಪಾದೃಷ್ಟಿಯು ಆ ಕಡೆ ಬೀಳದಿರುವದು ಪರಮಾಶ್ಚರ್ಯವಾಗಿದೆ ಇನ್ನಾದರೂ ಈ ರಸ್ತೆಯನ್ನು ದುರಸ್ತು ಮಾಡಿಸಿ ಕೀರ್ತಿ ಪಡೆಯುವರೆಂಬ ನಂಬಿಕೆಯುಂಟು.—ಈ ಶಿಕಾರಿಪುರಕ್ಕೆ ಸೇರಿದ ಉಡಗಣಿ ಎಂಬುವ ದೊಡ್ಡ ಗ್ರಾಮದ ಸುತ್ತಲೂ ದೊಡ್ಡ ಕೋಟೆ ಮತ್ತು ಅಗಳು ಸಹಾ ಉಂಟು ಇಲ್ಲಿಯ ಜನರು ಪ್ರತಿ ವಾರವೂ ಶಿರಾಳಕೊಪ್ಪದ ಪ್ರಸಿದ್ಧ ಸಂತೆಗೂ ಸೊರಬದ ಸಂತೆಗೂ ಹೋಗಿ ಬರುವವರಾಗಿದಾರೆ ಈ ಅಗಳು ವಿಶೇಷ ನೀರಿನಿಂದ ತುಂಬಿ ಎರಡು ಕಡೆಯೂ ರಸ್ತೆಗೆ ಹಂಚಿಯಾಗಿದೆ. ಈ ಮಧ್ಯೆ ಸಣ್ಣ ದಾರಿಯಲ್ಲಿ ಗಾಡಿಗಳೂ, ಜನಗಳೂ ಸಂಚಾರ ಮಾಡಬೇಕಾಗಿದೆ. ಕೆಲವು ವೇಳೆ ರಾತ್ರಿ ಪ್ರಯಾಣಗಳಲ್ಲಿ ಎತ್ತುಗಳು ನೀರು ಕುಡಿಯಬೇಕಾದರೆ ಅದರೊಂದಿಗೆ ಒಳಗಿರುವ ಸಕಲರೂ ಮತ್ತು ಗಾಡಿಯೂ ಸಹಾ ನೀರಿನಲ್ಲಿ ಮುಳುಗಿ ಒಂದೇ ಸಾರಿ ತಮ್ಮ ನಿತ್ಯದಾಹ ತೀರಿಸಿ ಬಿಡುವವರಾಗಿದ್ದಾರೆ ಈ ಹಾದಿಯ ಉದ್ದಕ್ಕೂ ಸುಮಾರು ೬೦ ೭೦ ಗಜಗಳಾದರೂ ಕಟಕಟೆ ಹಾಕಿಸಿದರೆ ಎತ್ತುಗಳಿಗೂ ಜನರಿಗೂ ಮಹದುಪಕಾರವಾಗುತ್ತೆ, ಮೇಲ್ಕಂಡ ಈ ಪ್ರಧಾನಕಾರ್ಯಗಳಿಗೆ ಮ್ಯುನಿಸಿಪಾಲಿಟಿಯವರು ಹಣ ಉಪಯೋಗಿಸಿ ಕೀರ್ತಿ ಪಡೆಯಬೇಕಾಗಿದೆ.—ಇಲ್ಲಿನ ಪೋಲೀಸ್ ಇನ್‌ಸ್ಪೆಕ್ಟರಾದ ಮ॥ ನಾಗೇಶರಾಯರು ೪-೫ ಜನ ಕಳ್ಳರಾದ ಕೊರಚರನ್ನು ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ಸಹಾ ತಂದಿದ್ದಾರು ಆದರೆ ಈ ಕಳ್ಳರು ಸಂಚೆಯೊಳಗಾಗಿ ಇಲ್ಲಿನ ತಾಲ್ಲೋಕಿನ ಲಾಕಪ್ಪಿನಿಂದಲೇ ತಪ್ಪಿಸಿಕೊಂಡು ಫಲಾಯನವಾದರು ಇಂಥಾ ಕಳ್ಳರಿಗೆ ತಕ್ಕ ಶಿಕ್ಷೆಯಾಗಿ ಇತರರಿಗೆ ಭಯೋತ್ಪಾತ ಉಂಟಾಗದೇ ಹೋಯಿತಲ್ಲಾ ಎಂದು ಕೇವಲ ವಿಷಾದ ಪಡಬೇಕಾಯಿತು.—ಸಂತೆಯಲ್ಲಿ ಪಿಕ್ಕ ಸೇರುಗಳ ವಿಷಯಕ್ಕೂ, ಅಳತೆಯಲ್ಲಿ ಮಾಡುವ ಮೋಸದ ವಿಷಯಕ್ಕೂ ಪೋಲೀಸಿನವರು ಹೆಚ್ಚು ನಿಗಾ ಕೊಡುವದು ತುಂಬಾ ಪ್ರಯೋಜನಕರವಾಗಿದೆ.—ಊರಿಗೆ ಶಾಂತಿಮಾಡುವ ನಿಮಿತ್ತ ಜನರು ಮೊನ್ನೆ ಹೊರಬೀಡು ಹೊರಟಿದ್ದರು.—ಗತಿಸಿದ ತಾಲ್ಲೋಕು ಡಿಸ್ಟ್ರಿಕ್ಟು ಬೋರ್ಡು ಮೆಂಬರು ಮ॥ ಹಲಕಟ್ಟೆ ಗುರುಬಸವಯ್ಯನವರ ಸ್ಥಾನಕ್ಕೆ ಲಿಂಗಾಯಿತಸಂಖ್ಯೆಯೇ ಜಾಸ್ತಿಯಾಗಿರೋದರಿಂದ ಈ ಜನಗಳ ಪೈಕಿಯೇ ಯಾರಾದರೊಬ್ಬರು ನೇಮಕವಾಗುವದು ಅತಿ ಅವಶ್ಯವೂ, ಕೇವಲ ಫಲಕಾರಿಯೂ ಆಗಿದೆ

ಇಂಗ್ಲಿಷು ಕಲಿಯುವ ಪುಸ್ತಕ! ಇಂಗ್ಲಿಷು ಕಲಿಯುವ ಪುಸ್ತಕ!!

8, 1

ಆಂಗ್ಲಭಾಷಾಪ್ರವೇಶದೀಪಿಕೆ ಎಂಬ ತಾನಾಗಿ ಇಂಗ್ಲಿಷು ಕಲಿಯುವ ಮೊದಲನೆಯ ಪುಸ್ತಕ (The Self English Study Vol I (ದಿ ಸೆಲ್ಫ್ ಇಂಗ್ಲಿಷು ಸ್ಟಡಿ ವಾಲ್ಯೂಂ ೧) ಎರಡನೆಯ ಮುದ್ರಣ ಪುಟ ೩೨೦ ಕಾಗದ ಉತ್ತಮ ಅಚ್ಚು ಅಂದ ಅಟ್ಟೆ ಭದ್ರ ಕನ್ನಡಿಗರಿಗೆ ಇಂಗ್ಲಿಷು ಭಾಷೆಯ ಓದು, ಬರಹ, ಮಾತಾಡುವುದು, ಭಾಷಾಂತರ ಮುಂತಾದುವುಗಳನ್ನು ಬೋಧಕರ ಸಹಾಯವಿಲ್ಲದೆ ಸುಲಭವಾಗಿ ತಿಳಿಸುವ ಉತ್ತಮ ಸಾಧನ ಒಂದು ರೂಪಾಯಿ ಎಂಟಾಣೆಗೆ ಮಾರುತ್ತಿರುವುದು ಅನೇಕರಿಗೆ ತಿಳಿದ ಸಂಗತಿ ಕೆಲವು ದಿನಗಳ ಮಟ್ಟಿಗೆ ಕಡಮೆ ಕ್ರಯ ಒಂದು ರೂಪಾಯಿ ನಾಲ್ಕಾಣೆ ಮಾತ್ರ! ಕೆಲವು ಪ್ರತಿಗಳೇ ಉಳಿದಿವೆ ಬೇಗ ಬರೆದು ತರಿಸಿಕೊಳ್ಳಿರಿ

ವಿಳಾಸ —ಭಾರತಿ ಸಂಸಂಗಿರಾಮ,

(ಪೋಸ್ಟು) ಹೊಸಕೋಟೆ (ಡಿಸ್ಟ್ರಿಕ್ಟು) ಬೆಂಗಳೂರು

ವೃತ್ತಾಂತ ಪತ್ರಿಕೆ

— o

ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾ ೯ ನೇ ಗುರುವಾರ

ಇಂಗ್ಲೆಂಡಿನಲ್ಲಿ ಹೊಸ ಚುನಾವಣೆಯು

ಇಂಗ್ಲೆಂಡ್ ವೇಲ್ಸ್ ಸ್ಕಾಟ್ಲೆಂಡ್, ಐರ್ಲೆಂಡ್ ಎಂಬಿವು ಸೇರಿ ಗ್ರೇಟ್ ಬ್ರಿಟನ್ (ವಿಲಾಯತಿ) ರಾಜ್ಯವೆನಿಸಿಕೊಂಡಿವೆ ಅಲ್ಲಿ ಒಂದು ಕಾನೂನು ಜಾರಿಗೆ ಬರಬೇಕಾದರೆ ಅದನ್ನು ರಾಜ್ಯಾಂಗಗಳಾದ ಮೂರು ಶಕ್ತಿಗಳು ಒಪ್ಪಿಕೊಳ್ಳಬೇಕಾಗಿರುವುದು ಹೌಸ್ ಆಫ್ ಕಾಮನ್ಸ್ ಎಂಬ ಪ್ರಜಾಪ್ರತಿನಿಧಿಗಳ ಸಭೆಯು ಮೊದಲನೆಯದು ಹೌಸ್ ಆಫ್ ಲಾರ್ಡ್ಸ್ ಎಂಬ ದೊಡ್ಡ ಮನೆತನದ ಸಭೆಯು ಎರಡನೆಯದು ಮೂರನೆಯವರು ಚಕ್ರವರ್ತಿ ಸಾರ್ವಭೌಮರವರು ತೆರಿಗೆ ಕಂದಾಯ, ಸುಂಕ ಮೊದಲಾದವುಗಳನ್ನು ಹಾಕುವಾಗಲೂ ತೆಗೆಯುವಾಗಲೂ ಇತರ ಹಣ ಕಾಸಿನ ವಿಚಾರಗಳನ್ನು ಬದಲಾವಣೆ ಮಾಡುವಾಗಲೂ ಮೊದಲನೆಯ ಅಂದರೆ ಹೌಸ್ ಆಫ್ ಕಾಮನ್ಸ್ ಎಂಬ ಸಭೆಯೇ ಮಾತ್ರ ಪ್ರಧಾನವಾಗಿರುತ್ತದೆ ಇಂಥಾದ್ದಕ್ಕೆ ಸಾಮಾನ್ಯವಾಗಿ ಎರಡನೆಯ ಅಂದರೆ ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆಯವರು ಒಪ್ಪಿಕೊಳ್ಳುವರು, ಚಕ್ರವರ್ತಿ ಸಾರ್ವಭೌಮರವರೂ ಸಮ್ಮತಿಪಡುತ್ತಾರೆ

ಈ ವರುಷ ಮಂತ್ರಿಸಭೆಯವರು ಚಾಲ್ತಿ ಸಾಲಿನ ಜಮಾ ಖರ್ಚಿನ ಅಂದಾಜು ಪಟ್ಟಿಯಲ್ಲಿ (ಬಡ್ಜೆಟ್ಟಿನಲ್ಲಿ) ಕೆಲವು ಕಂದಾಯಗಳನ್ನು ಹೊಸದಾಗಿ ಹಾಕುವುದಾಗಿಯೂ ಕೆಲವು ಸುಂಕಗಳನ್ನು ಹೆಚ್ಚು ಮಾಡುವುದಾಗಿಯೂ ಸೂಚಿಸಿದರು ಯಾಕೆಂದರೆ ಈಗಿನ ಗವರ್ನಮೆಂಟಿನವರು ವಯೋವೃದ್ಧರಾದ ಪ್ರಜೆಗಳಿಗೆ ಜೀವನಾರ್ಥವಾದ ಪೆನ್ಷನ್ ಕೊಡುವುದಕ್ಕಾರಂಭಿಸಿದರು ಇದಕ್ಕೆ ಕೆಲವು ಕೋಟಿ ರೂಪಾಯಿಗಳೇ ಬೇಕಾಗುತ್ತವೆ ಇದಲ್ಲದೆ ರಾಜ್ಯದ ಕಡಗಿನ ಸೈನ್ಯವನ್ನು ವೃದ್ಧಿಮಾಡುವುದಕ್ಕೂ ಬಹಳ ಹಣ ಅವಶ್ಯವಾಗಿರುತ್ತದೆ ಒಂದೊಂದು ಯುದ್ಧದ ಹಡಗನ್ನು ತಯಾರುಮಾಡುವುದಕ್ಕೆ ೧೫೦ ಲಕ್ಷ ಪೌಂಡು (೨೨೫ ಲಕ್ಷ ರೂಪಾಯಿ) ಖರ್ಚಾಗುವುದು ಗವರ್ನಮೆಂಟಿನವರು ಇದಕ್ಕೆ ಹಣವನ್ನು ಒದಗಿಸಬೇಕಾಯಿತು ಮಂತ್ರಿ ಸಭೆಯವರು ಪರ್ಯಾಲೋಚನೆ ಮಾಡಿ ಹೊಸ ಕಂದಾಯಗಳನ್ನು ಹಾಕಬೇಕೆಂದು ಬಡ್ಜೆಟ್ಟಿನಲ್ಲಿ ಸೂಚಿಸಿದರು. ಈ ಬಡ್ಜೆಟ್ಟು ಮೊದಲನೆಯ ಸಭೆಯಲ್ಲಿ ಚರ್ಚೆಯಾಗಿ ಬಹುಮಂದಿ ಮೆಂಬರುಗಳು ಇದರಂತೆ ಒಪ್ಪಿಕೊಂಡರು

ಬಳಿಕ ಎರಡನೆಯ ಅಂದರೆ ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆಯ ಮೆಂಬರುಗಳು ಈ ಬಡ್ಜೆಟ್ಟಿನ ವಿಚಾರವನ್ನು ಚರ್ಚೆಮಾಡಿ, ಹೊಸ ಕಂದಾಯ ಸುಂಕಗಳನ್ನು ಹಾಕುವುದಕ್ಕೆ ಮುಂಚೆ ಪ್ರಜೆಗಳ ಅಭಿಪ್ರಾಯ ಸಮ್ಮತಿಗಳನ್ನು ಕೇಳಿ ತಿಳಿಯಬೇಕು ಎಂದು ಹೇಳಿ ಬಡ್ಜೆಟ್ಟನ್ನು ಒಪ್ಪದೆ ತಳ್ಳಿಹಾಕಿ ಮಾಡಿಬಿಟ್ಟರು ಕಳೆದ ವಾರ ಇಂಗ್ಲೆಂಡಿನಿಂದ ಬಂದಿರುವ ತಂತೀ ವರ್ತಮಾನಗಳು ಈ ಚರ್ಚೆಗೆ ಸಂಬಂಧಪಟ್ಟವುಗಳಾಗಿಯೂ, ಈ ಎರಡನೇ ಸಭೆಯವರು ಬಡ್ಜೆಟ್ಟನ್ನು ಇನ್ಕಾರ ಮಾಡಿದ್ದನ್ನು ಕೇಳಿ ಚಕ್ರವರ್ತಿ ಸಾರ್ವಭೌಮರವರು ಮೊದಲನೇ ಸಭೆಯನ್ನು ಬರಖಾಸ್ತು ಮಾಡಿ, ಪ್ರಜೆಗಳು ಪಾರ್ಲಿಮೆಂಟಿಗೆ ಹೊಸದಾಗಿ ಮೆಂಬರುಗಳನ್ನು ಚುನಾಯಿಸಬೇಕೆಂದು ಅಪ್ಪಣೆ ಕೊಟ್ಟಿದ್ದಾರೆಂದೂ ಈಗ ಗ್ರೇಟ್ ಬ್ರಿಟನ್ನಲ್ಲಿ ತುಂಬಾ ಉತ್ಸಾಹವೂ ಗಲಿಬಿಲಿಯೂ ಉಂಟಾಗಿರುವುದೆಂದೂ ತಿಳಿಸುತ್ತಲಿವೆ ಈಗ ಪ್ರಜೆಗಳು ಮೊದಲನೇ ಸಭೆಗೆ ಹೊಸದಾಗಿ ಮೆಂಬರುಗಳನ್ನು ಚುನಾಯಿಸಬೇಕಾಗಿದೆ ಈ ಚುನಾವಣೆಯು ಇನ್ನೆರಡು ತಿಂಗಳೊಳಗಾಗಿ ಪೂರೈಸುತ್ತದೆ

ಈ ಎರಡು ತಿಂಗಳಲ್ಲಿ ವಿಲಾಯತಿ ರಾಜ್ಯದೊಳಗೆ ಎರಡು ವಿಷಯಗಳು ಬಹು ವಿಶೇಷವಾಗಿ ಚರ್ಚೆಯಾಗುವವು ಹೊಸ ತೆರಿಗೆಗಳ ನ್ಯಾಯಾನ್ಯಾಯಗಳೇ ಅಲ್ಲವೇ ಎಂಬುದೇ ಮೊದಲನೇ ವಿಷಯ ಹೌಸ್ ಆಫ್ ಲಾರ್ಡ್ಸ್ ಎಂಬ ಎರಡನೇ ಸಭೆ ಮನೆಯವರ ಅಧಿಕಾರವು ಎಷ್ಟು ಮಟ್ಟಿನದೆಂಬುವುದೇ ಎರಡನೆಯ ವಿಷಯವಾಗಿದೆ

ಹಿಂದುಸ್ಥಾನದ ಮತ್ತು ವಿಲಾಯತಿಯ ಸಮಯಸಂದರ್ಭಗಳು ಪ್ರತ್ಯೇಕ ಪ್ರತ್ಯೇಕಗಳಾಗಿರೋಣದರಿಂದ ವಿಲಾಯತಿಯಲ್ಲಿ ಕಂದಾಯಗಳನ್ನು ಹ್ಯಾಗೆ ವಸೂಲ್ಮಾಡುತ್ತಾರೆಂಬುವುದನ್ನು ವಿವರವಾಗಿ ಹೇಳುವುದು ಸುಲಭಸಾಧ್ಯವಲ್ಲ ಹೊರಗಿನಿಂದ ವಿಲಾಯತಿಗೆ ರಫ್ತಾಗಿ ಬರುವ ಕೆಲವು ಸರಕುಗಳ ಮೇಲೂ ಬಳಬೇಕದಲ್ಲೇ ತಯಾರಾಗುವಂಥಾ ಕೆಲವು ಸರಕುಗಳ ಮೇಲೂ ಅಂದರೆ ಮದ್ಯಪ್ರಕಗಳು, ಹೊಗೆಸೊಪ್ಪು ಕಾಫಿ ಬೀಜ ಇವೇ ಮೊದಲಾದವುಗಳ ಮೇಲೆ ಸುಂಕವನ್ನು ಹಾಕಿ ವಸೂಲ್ಮಾಡುತ್ತಾರೆ ಮತ್ತು ಅನೇಕ ಪದಾರ್ಥಗಳು ಸುಂಕವಿಲ್ಲದೇನೇ ವಿಲಾಯತಿಗೆ ಬಂದು ಬಿಕರಿ ಆಗುತ್ತವೆ ಇದಕ್ಕೆ ಮಾಫಿ ವ್ಯಾಪಾರವೆಂದು ಕರೆಯುವರು ಈ ವಿಷಯದಲ್ಲಿ ಸದ್ಯ ಎರಡು ಅಭಿಪ್ರಾಯಗಳುಂಟಾಗಿವೆ ಮೊದಲನೇ ಅಭಿಪ್ರಾಯವೇನೆಂದರೆ ಈ ಮಾಫಿ ವ್ಯಾಪಾರವೆಂಬ ಪದ್ಧತಿಗೆ ಚ್ಯುತಿಯುಂಟಾಗಕೂಡದು ಇದರಿಂದ ವಿಲಾಯತಿಯ ಅಭಿವೃದ್ಧಿಗೆ ಬಹಳ ತುಂಬಾ ಸಹಾಯವುಂಟು ಇನ್ನೊಂದು ಪಕ್ಷದವರು ಸ್ವದೇಶದಲ್ಲಿ ತಯಾರಾಗುವ ವಸ್ತುಗಳ ವ್ಯಾಪಾರವು ಅಭಿವೃದ್ಧಿ ಹೊಂದಬೇಕಾದರೆ ಅನ್ಯದೇಶಗಳಿಂದ ರಫ್ತಾಗಿ ಬರುವಂಥಾ ಪದಾರ್ಥಗಳ ಮೇಲೆ ಸುಂಕವನ್ನು ಹಾಕಲೇ ಹಾಕಬೇಕು ಎಂದು ವಾದಿಸುತ್ತಾರೆ ಮುಂದೆ ನಡೆಯುವ ಪ್ರಜಾಪ್ರತಿನಿಧಿಗಳ ಚುನಾವಣೆಯಲ್ಲಿ ಈ ವಿಚಾರವು ಕಲವು ಕಾಲದ ಮಟ್ಟಿಗೆ ಇತ್ಯರ್ಥವಾಗುವುದು ಇದು ಕೂಲಿ ಕೆಲಸಮಾಡತಕ್ಕವರಿಗೂ ವ್ಯಾಪಾರಸ್ಥರಿಗೂ ಬಹಳ ಮುಖ್ಯವಾದ ವಿಚಾರವಾಗಿರುತ್ತದೆ

ಹೌಸ್ ಆಫ್ ಲಾರ್ಡ್ಸ್ ಎಂಬ ಎರಡನೇ ಸಭೆಮನೆಯ ಅಧಿಕಾರದ ಪರಿಮಿತಿಯನ್ನು ನಿರ್ಧರಿಸುವುದು ಬಹು ಕಷ್ಟಸಾಧ್ಯವಾದದ್ದು ಹ್ಯಾಗೂ ಈಗಿರುವಂಥಾ ಹೌಸ್ ಆಫ್ ಲಾರ್ಡ್ಸ್ ಸಭೆಯು ಪುರಾತನಕಾಲದ ಸಂಸ್ಥೆಯಾಗಿರುತ್ತದೆ ಕೆಲವರು ಆ ಸಭೆಯನ್ನೇ ವಜಾಮಾಡಿಬಿಡಬೇಕೆನ್ನುವರು, ಕೆಲವರು ಅವಕ್ಕಿರುವ ಅಧಿಕಾರವನ್ನು ಕಡಮೆಮಾಡಬೇಕೆನ್ನುತ್ತಾರೆ ಇನ್ನು ಕೆಲವರು ಈ ಸಭೆಯಲ್ಲಿ ಕಲವು ಹೊಸ ರಿಸ್ತೆಗಳನ್ನು ಮಾಡಿ ಈಗಿನ ಕಾಲಕ್ಕೆ ತಕ್ಕಂತೆ ಮಾಡಬೇಕೆಂದು ಹೇಳುತ್ತಾರೆ ಮುಂದಿನ ಚುನಾವಣೆಯಲ್ಲಿ ಈ ಸಭೆಯ ವಿಚಾರವೂ ಕೆಲವು ಕಾಲದ ಮಟ್ಟಿಗೆ ನಿರ್ಧಾರವಾಗುವುದು

ಹ್ಯಾಗೂ ವಿಲಾಯತಿ ರಾಜ್ಯದಲ್ಲಿ ಇನ್ನೆರಡು ತಿಂಗಳತನಕ ನಡೆಯುವ ಚುನಾವಣೆಯ ಹೋರಾಟವನ್ನು ಪ್ರಪಂಚದ ಎಲ್ಲಾ ಭಾಗಗಳವರೂ ಬಹು ಉತ್ಸಾಹದೊಡನೆ ನೋಡುತ್ತಾ ಇಂದಾರೆನ್ನುವುದಕ್ಕೆ ಸಂಶಯವಿಲ್ಲ

ದೇವರಿಗೆ ಆಕಾರವುಂಟೇ ?

ಕೆಲವು ವಾರಗಳ ಕೆಳಗೆ ಸುಜ್ಞಾನಸೂರ್ಯೋದಯವೆಂಬ ಕೆಲವು ಲೇಖನಗಳನ್ನು ಪ್ರಕಟಿಸಿದೆವು ಅವುಗಳನ್ನು ಬರೆದವನು ಬೇರೆ ಬೇರೆ ಬೋಧನೆಗಳ ವಿಷಯವಾಗಿ ತನ್ನ ಅಭಿಪ್ರಾಯವನ್ನು ತಿಳಿಸಿದಾಗ ಅವನು ದೇವರ ವಿಷಯವಾಗಿ ಕೆಲವು ಸಂಗತಿಗಳನ್ನು ಬರೆದನು ಅವುಗಳ ವಿಷಯವಾಗಿ ಒಬ್ಬನು ಪ್ರತಿವಾದ ಅಭಿಪ್ರಾಯವನ್ನು ಪಟ್ಟು ಕ್ರೈಸ್ತರ ದೇವರು ಆಕಾರವುಳ್ಳವನಾಗಿದ್ದಾನೆಂದು ಒಂದು ಪತ್ರಿಕೆಯಲ್ಲಿ ಬರೆದನು ತನ್ನ ಅಭಿಪ್ರಾಯವನ್ನು ಸ್ಥಾಪಿಸುವುದಕ್ಕಾಗಿ ಸತ್ಯವೇದವೆಂಬ ಪುಸ್ತಕದ ಹಳೇ ಒಡಂಬಡಿಕೆಯ ಭಾಗದಿಂದ ಅನೇಕ ವಚನಗಳನ್ನು ಎತ್ತಿ ಬರೆದನು

ಆತನು ಸತ್ಯವೇದದಲ್ಲಿ ಬರೆದಿರುವಂಥ ಯೆಹೋವನೆಂಬ ದೇವರು ನೋಡಿದನು ಕೇಳಿದನು, ಮುಟ್ಟಿದನು, ಮಾತನಾಡಿದನು, ಹರ್ಷಗೊಂಡನು, ರೋಷಪಟ್ಟನು ಮುಂತಾದ ಉಪಮಾನ ರೂಪದಲ್ಲಿ ಬರೆಯಲ್ಪಟ್ಟಿರುವ ನರಭಾಷೆಯ ಶಬ್ದಗಳನ್ನು ನೋಡಿ ಕ್ರೈಸ್ತರ ದೇವರು ಆಕಾರವುಳ್ಳವನೆಂದು ತಪ್ಪಾಭಿಪ್ರಾಯಪಟ್ಟಹಾಗೆ ಕಾಣುತ್ತದೆ ಬೈಬಲಿನಲ್ಲಿ ಯೆಹೋವನೆಂಬ ದೇವರ ವಿಷಯವಾಗಿ ಬರೆಯಲ್ಪಟ್ಟಿರುವ ಆ ಉಪಮಾನ ರೂಪವಾದ ಆ ನರಭಾಷೆಯ ಶಬ್ದಗಳ ಅಭಿಪ್ರಾಯವೇನೆಂದರೆ, ಆತ್ಮಸ್ವರೂಪನಾದ ಯೆಹೋವನೆಂಬ ದೇವರು ಕಣ್ಣುಗಳಿಲ್ಲದೆ ನೋಡಬಲ್ಲನು, ಕಿವಿಗಳಿಲ್ಲದೆ ಕೇಳಬಲ್ಲನು, ಕಾಲುಗಳಿಲ್ಲದೆ ನಡೆಯಬಲ್ಲನು, ಕೈಗಳಿಲ್ಲದೆ ಮುಟ್ಟಬಲ್ಲನು, ದುಷ್ಟರ ಕಾರ್ಯಗಳನ್ನು ತಿಳಿದು ಕೋಪಗೊಳ್ಳುವನು, ಶಿಷ್ಟರ ಕಾರ್ಯಗಳನ್ನು ಅರಿದು ಸಂತೋಷಪಡುವನು ಎಂಬ ಸತ್ಯಾರ್ಥವನ್ನು ಆತನು ಗ್ರಹಿಸಿಕೊಂಡಹಾಗೆ ಕಾಣುವುದಿಲ್ಲ

ಒಬ್ಬ ಹುಟ್ಟು ಕುರುಡನ ಮಗುವು ಹಾಲು ಕುಡಿಯುವಾಗ ಸತ್ತುಹೋದುದರಿಂದ ಎಲ್ಲರೂ ಅಳುವುದನ್ನು ಆ ಕುರುಡನು ಕೇಳಿ ಕೂಸು ಯಾಕೆ ಸತ್ತುಹೋಯಿತೆಂದು ವಿಚಾರಿಸಿದನಂತೆ ಹಾಲು ಕುಡಿದ ವಾಗ ಕೂಸು ಸತ್ತುಹೋಯಿತೆಂದು ಉತ್ತರ ಕೊಡಲು ಹಾಲು ಹ್ಯಾಗಿರುತ್ತದೆಂದು ಆ ಕುರುಡನು ಪ್ರಶ್ನೆ ಮಾಡಲು ಬಿಳಿಗಿರುತ್ತದೆಂದು ಹೇಳಿದರಂತೆ ಬಿಳುಪು ಹ್ಯಾಗಿರುತ್ತದೆಂದು ಆ ಕುರುಡನು ಮತ್ತೂ ಕೇಳಲು ಅಲ್ಲಿದ್ದವರಲ್ಲಿ ಒಬ್ಬನು ತನ್ನ ಮೊಣಕೈಯನ್ನು ನೆಟ್ಟಗೆ ಮಾಡಿ ಮುಂಗೈಯನ್ನು ಕೊಕ್ಕಿನಂತೆ ಸೊಟ್ಟಗೆ ಮಾಡಿ ತೋರಿಸಲು, ಆ ಕುರುಡನು ತನ್ನ ಕೈಗಳಿಂದ ಅದನ್ನು ಮೊಳಕೈಯಿಂದ ಮುಂಗೈ ವರೆಗೂ ಮುಟ್ಟಿ ನೋಡಿ ಇಷ್ಟು ಡೊಂಕಾದ್ದನ್ನು ಕೂಸು ಹ್ಯಾಗೆ ನುಂಗಬಹುದು! ಅದರ ಕಾರಣ ಮಗುವು ಸತ್ತುಹೋಯಿತೆಂದು ಹೇಳಿದನಂತೆ ಹುಟ್ಟು ಕುರುಡರು ಬಣ್ಣಗಳ ಭೇದಗಳನ್ನು ಹ್ಯಾಗೆ ಗ್ರಹಿಸಿಕೊಳ್ಳಲಾರರೋ ಅದರಂತೆ ದೇವರು ತನ್ನನ್ನು ತಾನು ಮಾನವರಿಗೆ ಪ್ರಕಟ ಮಾಡದಿದ್ದರೆ ಆತ್ಮಸ್ವರೂಪನಾದ ದೇವರನ್ನು ಮನುಷ್ಯರು ತನ್ನ ಸ್ವಂತ ಬುದ್ಧಿಯಿಂದ ತಕ್ಕ ಹಾಗೆ ಗ್ರಹಿಸಿಕೊಳ್ಳಲಾರರು ಆದರೆ ದೇವರು ಸಕಲ ಕಾರ್ಯಗಳನ್ನು ಕ್ರಮವಾಗಿ ವೃದ್ಧಿಪಡಿಸುವಂತೆ ತನ್ನನ್ನು ಕೂಡ ಲೋಕಾದಿಯಿಂದ ಕ್ರಮಕ್ರಮವಾಗಿ ನೆಟ್ಟಗಾಗಿ ಮನುಷ್ಯರಿಗೆ ಪ್ರಕಟಪಡಿಸುತ್ತಾ ಕಡೆಯಲ್ಲಿ ಶ್ರೀ ಯೇಸುಕ್ರಿಸ್ತನ ನರಾವತಾರದಲ್ಲಿ ತನ್ನ ಸ್ವಭಾವ ಗುಣಲಕ್ಷಣಗಳನ್ನು ಮಾನವರು ಗ್ರಹಿಸಿಕೊಳ್ಳುವಂತೆ ಪ್ರಕಾಶಕ್ಕೆ ತಂದನು

ಕ್ರೈಸ್ತರು ಆರಾಧಿಸುವಂಥ ದೇವರು ನಿರಾಕಾರಿಯೂ ಸದಾಸ್ವಾಮಿಯೂ ಸರ್ವಜ್ಞನಿಯೂ ಸ್ವಯಂಭೂ ಆಗಿದ್ದಾನೆಂಬುವುದಕ್ಕೆ ಬೈಬಲ್ ವಚನಗಳ ದೃಷ್ಟಾಂತಗಳು —

(೧) ಕ್ರೈಸ್ತರು ಆರಾಧಿಸುವ ದೇವರು ನಿರಾಕಾರಿಯಾದ್ದಾನೆಂಬುವದಕ್ಕೆ—ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು (ಯೋಹಾನ ೪ ೨೪) ದೇವರನ್ನು ಯಾರೂ ಎಂದೂ ಕಂಡಿಲ್ಲ (ಯೋಹಾನ ೧ ೧೮) ದೇವರು ಏಕಾಧಿಪತಿಯೂ ರಾಜಾಧಿರಾಜನೂ ಕರ್ತರ ಕರ್ತನೂ ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ ಯಾರೂ ಕಾಣಲಾರರು (೧ನೇ ತಿಮೊಥೆ ೬ ೧೬)

(೨) ಕ್ರೈಸ್ತರು ಆರಾಧಿಸುವ ದೇವರು ಸದಾ ಸ್ವಾಮಿಯಾಗಿದ್ದಾನೆಂಬುವದಕ್ಕೆ–ಬೆಟ್ಟಗಳು ಹುಟ್ಟುವದಕ್ಕಿಂತ ಮುಂಚೆಯೂ ನೀನು ಭೂಮಿಯನ್ನೂ ಲೋಕವನ್ನೂ ನಿರ್ಮಿಸುವದಕ್ಕಿಂತ ಮುಂಚೆಯೂ ಯುಗಯುಗದಿಂದ ಯುಗಯುಗಕ್ಕೂ ದೇವರಾಗಿದ್ದಿ (ಕೀರ್ತನೆ ೯೦ ೨) ಸರ್ವ ಯುಗಗಳ ಅರಸನೂ ಅಕ್ಷಯನೂ ಅದೃಶ್ಯನೂ ಆಗಿರುವ ಏಕ ದೇವರಿಗೆ ಮಾನ ಪ್ರಭಾವಗಳು ಸದಾಕಾಲವಿರಲಿ (೧ನೇ ತಿಮೊಥೆ ೧ ೧೭) ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿ ಇರುವಾತನು (ಪ್ರಕಟನೆ ೧ ೪) ಸದಾಕಾಲ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ (ಪ್ರಕಟನೆ ೪ ೯)

(೩) ಕ್ರೈಸ್ತರು ಆರಾಧಿಸುವ ದೇವರು ಜಗದ್ವ್ಯಾಪಕನಾಗಿದ್ದಾನೆಂಬುವದಕ್ಕೆ —ನಾನು ನಿನ್ನ ಆತ್ಮಕ್ಕೆ ತಪ್ಪಿ ಎಲ್ಲಿಗೆ ಹೋಗಲಿ? ನಾನು ನಿನ್ನ ಮುಖಕ್ಕೆ ತಪ್ಪಿ ಎಲ್ಲಿಗೆ ಓಡಲಿ? ನಾನು ಆಕಾಶಕ್ಕೆ ಏರಿ ಹೋದರೆ ನೀನು ಅಲ್ಲಿ ಇದ್ದೀ ಪಾತಾಳವನ್ನು ಹಾಸಿಗೆಯಾಗಿ ಮಾಡಿದರೆ ಆಗೋ ನೀನು ಅಲ್ಲಿ ಇದ್ದೀ ಉದಯದ ರೆಕ್ಕೆಗಳನ್ನು ತಕ್ಕೊಂಡು ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡಿದರೆ ಅಲ್ಲಿ ಸಹ ನಿನ್ನ ಕೈ ನನ್ನನ್ನು ನಡಿಸಿ ನಿನ್ನ ಬಲಗೈ ನನ್ನನ್ನು ಹಿಡಿಯುವದು ನಿಶ್ಚಯವಾಗಿ ಕತ್ತಲೆಯು ನನ್ನನ್ನು ಕವಿದುಕೊಳ್ಳುವದೆಂದು ಹೇಳಿದರೆ ರಾತ್ರಿಯು ನನ್ನ ಸುತ್ತಲೂ ಬೆಳಕಾಗಿರುವದು ಕತ್ತಲೆ ನಿನಗೆ ಮುಚ್ಚುವದಿಲ್ಲ ರಾತ್ರಿಯು ಹಗಲಿನ ಹಾಗೆ ಬೆಳಗುವದು ಕತ್ತಲೂ ಬೆಳಕೂ ಒಂದೇ (ಕೀರ್ತನೆ ೧೩೯ ೭-೧೨) ದೇವರು ನಮ್ಮಲ್ಲಿ ಒಬ್ಬನಿಗಾದರೂ ದೂರವಾದವನಲ್ಲ ಆತನಲ್ಲಿಯೇ ನಾವು ಜೀವಿಸುತ್ತೇವೆ ಚಲಿಸುತ್ತೇವೆ, ಇರುತ್ತೇವೆ (ಅಪೊಸ್ತಲರ ಕೃತ್ಯಗಳು, ೧೭ ೨೮)

(೪) ಕ್ರೈಸ್ತರು ಆರಾಧಿಸುವ ದೇವರು ಸ್ವಯಂಭೂವಾಗಿದ್ದಾನೆಂಬುವದಕ್ಕೆ—ದೇವರು ಎಲ್ಲಕ್ಕೂ ಮೊದಲು ಇದ್ದವನು ಆತನು ಸಮಸ್ತಕ್ಕೂ ಆಧಾರಭೂತನು (ಕೊಲೊಸ್ಸೆ ೧ ೧೭) ಆಹಾ ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ ಆತನ ಮಾರ್ಗಗಳು ಕಂಡು ಹಿಡಿಯುವದಕ್ಕೆ ಎಷ್ಟೋ ಅಸಾಧ್ಯ ಕರ್ತನ ಮನಸ್ಸನ್ನು ತಿಳಿದುಕೊಂಡವನ್ಯಾರು ಮೊದಲು ಆತನಿಗೆ ಕೊಟ್ಟು ಪ್ರತಿಫಲಗಳನ್ನು ತಕ್ಕೊಳ್ಳುವವನ್ಯಾರು? ಸಮಸ್ತವೂ ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತವೆ ಆತನಿಗೇನೇ ಸದಾಕಾಲ ಸ್ತೋತ್ರ (ರೋಮ ೧೧ ೩೩ ೩೬)

ತಪ್ಪಲೆ ತುಂಬಾ ಅನ್ನದಲ್ಲಿ ಒಂದು ಅಗಳನ್ನು ಪರೀಕ್ಷಿಸಿ ಗ್ರಹಿಸಿಕೊಳ್ಳುವಂತೆ ಕ್ರೈಸ್ತರು ಆರಾಧಿಸುವ ದೇವರು ಆಕಾರಿಯೋ ನಿರಾಕಾರಿಯೋ? ಎಂದು ಮೇಲೆ ಬರೆದಿರುವ ಆ ಕೆಲವು ಸತ್ಯವೇದದ ವಾಕ್ಯಗಳನ್ನು ಓದಿ ಗ್ರಹಿಸಿಕೊಳ್ಳಬಹುದು

ಒಳದೇಶದ ವೃತ್ತಾಂತಗಳು

ಆನೆಗಳ ಖೆಡ್ಡಾ ನೋಡುವುದಕ್ಕಾಗಿ ಬಂದಿದ್ದ ಬರೋಡಾ ಮಹಾರಾಜರವರ ಸಹೋದರರೂ ಪುತ್ರರೂ ಕಳೆದ ವಾರ ರಾಜಧಾನಿಯಿಂದ ವಾಪಸು ಪ್ರಯಾಣ ಮಾಡಿದರು

* * *

ಈ ತಿಂಗಳ ೧೩ ನೇ ತಾ ಸೋಮವಾರ ಅರಮನೆ ಕಟ್ಟಡದ ಧಾತ್ರೀ ಹವನದ ಸಮಾರಾಧನೆಯು ರಾಜಧಾನಿಯ ಚಾಮುಂಡೀ ಪೇಟೆ ಕೋಟೆಯೆಂಬ ಉದ್ಯಾನವನದಲ್ಲಿ ನಡೆಯುವುದಾಗಿದೆ

* * *

ಕಳೆದ ನವಂಬರ್ ತಾ ೧೫ ರಲ್ಲಿ ತಿಪ್ಟೂರು, ನೊಣವಿನಕೆರೆ, ಶಿವಗಂಗೆ ಯಲಹಂಕ ಎಂಬೀ ಸ್ಥಳಗಳಲ್ಲಿ ನಾಲ್ಕು ಪರಸ್ಪರ ಸಹಾಯಕ ಕಂಪನಿಗಳು ಪ್ರಾರಂಭವಾಗಿ ರೆಜಿಸ್ಟರಾಗಿರುತ್ತವೆ

* * *

ಟೆಂ॥ ಸಬ್ ಅ॥ ಸರ್ಜನ್ ರಾಜೆ ಮೆ॥ ಕೆ ಕುರುವಿಲ್ಲಾ ಯವರಿಗೆ ಸರ್ಕಾರದವರು ಡಿಸೆಂಬರ್ ತಾ ೧ ರಿಂದ ೨೩ ದಿನಗಳ ಪ್ರಿವಿಲೇಜ್ ರಜವನ್ನು ಕೊಟ್ಟು ಆ ಬಳಿಕ ಅವರು ಕ್ರಿಸ್‌ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದೆಂದು ಅವಕಾಶಕೊಟ್ಟಿದಾರೆ

* * *

ವೈಸ್‌ರಾಯಿಯವರಿಗೆ ಸುಗ್ಗಿ ಕೋಲಾಟವನ್ನು ಮಾಡಿ ತೋರಿಸ ಬೇಕಾಗಿ ರಾಜಧಾನಿಗೆ ಬಂದಿದ್ದ ಮಂಜರಾಬಾದಿನ ಮಂದೇ ಪಟೇಲರೇ ಮುಂತಾದ ೬೮ ಮಂದಿಯಲ್ಲಿ ಮುಖ್ಯರಾದವರಿಗೆಲ್ಲಾ ಶ್ರೀಮನ್ಮಹಾರಾಜರವರು ಕಳೆದ ವಾರ ಬಿಲ್ಲೆ ತುತ್ತುಗಳನ್ನು ದಯಪಾಲಿಸಿದರು

* * *

ತಾ ೪ ರಲ್ಲಿ ಮೆ॥ ಎಸ್ ಎಸ್ ಸೆಟ್ಲೂರ್ ಯವರು ಚೀಫ್ ಕೋರ್ಟಿನ ಜಡ್ಜಿಯ ಕೆಲಸವನ್ನು ಬಿಟ್ಟುಬಿಟ್ಟ ಕಾರಣ ಶ್ರೀಮನ್ಮಹಾರಾಜರವರು ಮ॥ ಕೆ ಎಸ್ ಚಂದ್ರಶೇಖರ ಐಯರವರನ್ನು ಚೀಫ್ ಕೋರ್ಟಿನ ಜಡ್ಜರ ಕೆಲಸ

ಳ್ಳ, ಮೆ|| ಸಿ ಎಸ್ ಬಾಲಸುಂದರಂ ಐಯರವರನ್ನು ಗವರ್ನ್‌ಮೆಂಟ್ ಸೆಕ್ರೆಟ್ರಿ ಕೆಲಸಕ್ಕೆ ಹಂಗಾಮಿಯಾಗಿ ನೇಮಕ ಮಾಡಿರುತ್ತಾರೆ

*

ಮಹಾಮಾತೃಶ್ರೀಯವರೇ ಮುಂತಾದ ಜನಾನಾದವರು ನೆನ್ನೆ ಆನೆಗಳ ಖೆಡ್ಡಾವನ್ನು ನೋಡಿಕೊಂಡು ಬರುವುದಕ್ಕೆ ಕಾಕನಕೋಟೆಗೆ ಮೋಟಾರ್ ಗಾಡಿಗಳಲ್ಲಿ ಹೊರಡಬೇಕೆಂದು ಏರ್ಪಾಡಾಗಿದ್ದದ್ದು ನಿಂತುಹೋಯಿತೆಂದೂ, ಅವರೆಲ್ಲಾ ನಾಳೆ ನಾಡಿದ್ದರಲ್ಲಿ ದಯಮಾಡುತ್ತಾರೆಂದೂ ಕೇಳುತ್ತೇವೆ ಡೆಪ್ಯುಟಿ ಕಮಿಷನರ್ ಮೆ|| ಕಾಂತರಾಜೇ ಅರಸಿನವರು ಅವರ ಸಂಗಡ ಹೋಗಿ ತೋರಿಸಿಕೊಂಡು ಬರುವವರಾಗಿದ್ದಾರೆ

*

ಪ್ಲೇಗ್ ಉಪದ್ರವು ಇಲಿಗಳ ಮುಖಾಂತರವೇ ಮನುಷ್ಯನಿಗೆ ಬರುತ್ತದೆಂದು ಸಿದ್ಧಾಂತವಾಗಿದೆ ಆದಕಾರಣ ಇಲಿಗಳನ್ನು ನಿರ್ಮೂಲ ಮಾಡುವುದಕ್ಕೆ ಪ್ರತಿ ಮನೆಯವರೂ ಒಳ್ಳೆಯ ಬೆಕ್ಕನ್ನು ಸಾಕುತ್ತಾ ಬರಬೇಕೆಂದೂ, ಇವುಗಳಿಂದಲೇ ಇಲಿ ಹೆಗ್ಗಣಗಳು ನಾಶವಾಗಬೇಕಲ್ಲದೆ ಇತರ ಉಪಾಯಗಳಾವುವೂ ಅಷ್ಟು ಫಲಕಾರಿಯಾಗುವುದಿಲ್ಲವೆಂದೂ ಪ್ರೊ|| ಕಾಸ್ ಯವರು ತಿಳಿಸಿರುವ ಸಂಗತಿಯನ್ನು ನಮ್ಮ ಸರ್ಕಾರದವರು ಪ್ರಜೆಗಳ ತಿಳುವಳಿಕೆಗಾಗಿ ಪ್ರಕಟಿಸಿರುತ್ತಾರೆ

*

ಬೆಂಗಳೂರು ಎಟಿ ಮಹಾರಾಜಾ ಹಾಲ್ ಎಂಬ ನಾಪಿನ ಮ್ಯಾನ್ಯುಫ್ಯಾಕ್ಚರೂ ಆ|| ಪ್ರೊಪ್ರೈಟರೂ ಆದ ಮೆ|| ಬಿ ಉಸ್ಮಾನ್ ಖಾನ್ ಸಾಹೆಬ್ ಯವರು ಪ್ರಜೆಗಳಿಗೆ ಹಂಚಿದ ವೈಸ್‌ರಾಯಿ ಲಾರ್ಡ್ ಮಿಂಟೋರವರ ಒಂದು ಫೋಟೋವನ್ನೂ, ಮಂಗಳೂರು ಉರ್ಬನ್ ಮಾರ್ಟ್ ಎಂಬ ನಾಪಿನ ಪ್ರೊಪ್ರೈಟರ್ ಮೆ|| ಆರ್ ಕಾಮತ್ ರವರು ೧೯೧೦ನೇ ವರುಷದ ಪಂಚಾಂಗ ಸಹಿತವಾದ ಕ್ಯಾಲೆಂಡರನ್ನೂ ನಮಗೆ ಕಳುಹಿಸಿರುವುದಕ್ಕಾಗಿ ಅವರನ್ನು ವಂದಿಸುವೆವು

*

ಉತ್ತರ ದೇಶದಿಂದ ರಾಜಧಾನಿಗೆ ಬಂದಿದ್ದ ಪ್ರೊ ... ಎಂಬ ಯುಕ್ತಿಶೀ ವಿದ್ಯಗಾರರಿಗೆ ಹಿಂದಿನ ಭಾನುವಾರ ರಾತ್ರಿ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಕೈನ ಪ್ರಜೆಗಳೆಲ್ಲಾ ಸೇರಿ ಬಂಗಾರದ ಮೆಡಲನ್ನು ಮಾಡಿಸಿ ಕೌನ್ಸಲರ್ ಮೆ|| ಪಿ ಪುಟ್ಟಣ್ಣ ಶೆಟ್ಟರವರ ಹಸ್ತದಿಂದ ಕೊಡಿಸಿದರು ತಾ ೫ನೇ ಭಾನುವಾರ ರಾತ್ರಿ ಪುರಜನರ ಮುಂದೆ ಚಂದಾ ಕೊಡಿಸಿ ಅವರಿಂದ ಯುಕ್ತಿ ಆಟವನ್ನು ಆಡಿಸಿ, ಸರ್ದಾರ ಮೆ|| ಕಾಂತರಾಜೇ ಅರಸಿನವರ ಹಸ್ತದಿಂದ ಅವರಿಗೆ ಒಂದು ಮೆಡಲನ್ನು ಕೊಡಿಸಿದರು

*

ಬೆಂಗಳೂರಿನಲ್ಲಿರುವ ಅಡ್ವೊಕೇಟ್ ಮ|| ಬಿ ವೆಂಕಟರಾಮಯ್ಯನವರಿಗೆ ಪ್ರಜಾಪ್ರತಿನಿಧಿಗಳ ಚುನಾವಣೆಯಿಂದ ನ್ಯಾಯವಿಧಾಯಕ ಸಭೆಯ ಮೆಂಬರ ಕೆಲಸವು ದೊರಕಿದ್ದಕ್ಕಾಗಿ ಅಲ್ಲಿನ ವರ್ತಕ ಮಂಡಲಿಯವರು ತಮಗುಂಟಾದ ಸಂತೋಷವನ್ನು ಬಹು ಸಂಭ್ರಮಯುಕ್ತವಾಗಿ ಕಳೆದ ಬುಧವಾರ ಮೆ|| ವೆಂಕಟರಾಮಯ್ಯನವರನ್ನು ಮೆ|| ದೊಡ್ಡಣ್ಣನವರ ಧರ್ಮದ ಸ್ಕೂಲಿಗೆ ಕರೆದುಕೊಂಡು, ದೊಡ್ಡ ಮನುಷ್ಯರ ಸಭೆಯಲ್ಲಿ ಪ್ರಕಾಶಪಡಿಸಿದ್ದಲ್ಲದೆ ಶ್ರೀಮನ್ಮಹಾರಾಜರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಂತಿಯ ಮೂಲಕ ಸಮರ್ಪಿಸಿದರು

*

ಧಾರವಾಡ ಜಿ ಹಿಂದಸಗೇರಿ ಇನಾಂದಾರರಾದ ಮ|| ಸುಬ್ರಾವ ಜಿ ಮಹದೇವರವರು ಪದ್ಧತಿಯನ್ನು ಅನುಸರಿಸಿ ಬೆಂಗಳೂರಿಗೆ ವೈಸ್‌ರಾಯಿ ದೊರೆಗಳವರ ಸುಭಾಗಮನವು ಲಭಿಸಿದ್ದಕ್ಕಾಗಿ ತಮ್ಮ ಸಂತೋಷವನ್ನು ಶ್ರೀಯುತ ... ಯುಕ್ತವಾದ ವಂದನೆಗಳೊಡನೆ ತಂತಿ ಮೂಲಕವಾಗಿ ವೈಸ್‌ರಾಯಿಯವರಿಗೆ ಅರಿಕೆಮಾಡಿಕೊಂಡದ್ದಕ್ಕೆ ವೈಸ್‌ರಾಯಿಯವರು ಇವರ ಅರಿಕೆಯನ್ನು ಸ್ವೀಕರಿಸಿ ತಮ್ಮ ಸಂತೋಷವನ್ನು ತಂತಿ ಮೂಲಕವಾಗಿ ಇನಾಂದಾರರವರಿಗೆ ತಿಳಿಸಿರುವ ಸಂಗತಿಯನ್ನು ಕೇಳಿ, ವೈಸ್‌ರಾಯಿ ದೊರೆಗಳವರ ಪ್ರಜಾನುರಾಗಕ್ಕೂ ಇನಾಂದಾರರ ರಾಜಭಕ್ತಿ ವಿಶ್ವಾಸಕ್ಕೂ ಬಹಳ ಸಂತೋಷಪಡತಕ್ಕದ್ದಾಗಿದೆ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ

ತಾಲ್ಲೋಕು ವರ್ತಮಾನಗಳು

ತಿಪ್ಟೂರು —ಈ ಪ್ರಾಂತ್ಯ ತಕ್ಕಮಟ್ಟಿಗೂ ಮಳೆಯಾಗಿ ರಾಗಿ ಕಟಾವು ಪ್ರಾರಂಭವಾಗಿದೆ ಜನಗಳ ಕಷ್ಟವು ಮುಂದಕ್ಕೆ ನಿವಾರಣೆಯಾದ ಹಾಗಾಯಿತು ಧಾರಣೆವಾಸಿಗಳು ಇನ್ನೂ ಚಡವಾಗಿದೆ —ಇಲ್ಲಿನ ಟೌನ್ ಒಳಗಿನ ಖಾಲಿ ಜಮೀನುಗಳ ವಿವರ,—ಈ ಊರಿಗೆ ಪೂರ್ವದಿಕ್ಕಿನ ಈಶ್ವರ ದೇವಸ್ಥಾನದ ಮಗ್ಗುಲಲ್ಲಿ ಇರುವ ಖಾಲಿ ಜಮೀನು ಕೆಂಪಯ್ಯನ ಅಂಗಡಿ ಪಕ್ಕದಿಂದ ರುದ್ರಪ್ಪನ ತೋಟದವರೆಗೂ ಸಾಧಾರಣವಾಗಿ ೩೦ ಮನೆಗಳು ಕಟ್ಟುವಷ್ಟು ಸ್ಥಳವಿದೆ ಈ ಸ್ಥಳವು ಮೈಸೂರು ಗವರ್ನ್‌ಮೆಂಟಿಗೆ ಸೇರಿದೆ ಈಶ್ವರಿ ದೇವಸ್ಥಾನದ ಪಕ್ಕದ ಜಮೀನಿನಲ್ಲಿ ಸುಮಾರು ೫ ಮನೆಗಳು ಆಗಬಹುದು ಈ ಜಮೀನು ದೇವಸ್ಥಾನಕ್ಕೆ ಸೇರಿದೆ ಈ ಜಮೀನು ಸುಮಾರು ೩೦ ವರ್ಷಗಳಿಂದಲೂ ಪಾಳಾಗಿಯೇ ಇದೆ ಮತ್ತು ಈ ಜಮೀನಿನಿಂದ ಸರ್ಕಾರಕ್ಕೆ ಆದಾಯವು ಅತಿಕಡಿಮೆ ಜಮೀನುದಾರರು ಮನೆಗಳನ್ನು ಕಟ್ಟಿಸಿದರೆ ಸರ್ಕಾರಕ್ಕೆ ಈಗಿರುವಷ್ಟು ಹೆಚ್ಚು ಆದಾಯ ಬರುತ್ತದೆಂಬುವುದಕ್ಕೆ ಏನೇನೂ ಸಂದೇಹವಿಲ್ಲ ಸರ್ಕಾರದವರು ಜಮೀನುದಾರರಿಗೆ ಪ್ರೋತ್ಸಾಹಕೊಟ್ಟರೂ ಸರಿಯೇ ಅಥವಾ ಬಡವರಾದ ಅನೇಕರಿಗೆ ಮನೆಗಳು ಕಟ್ಟಿಕೊಳ್ಳುವುದಕ್ಕಾಗಿ ಈ ಖಾಲಿ ನಿವೇಶನವನ್ನು ಕೊಡಿಸಿದರೂ ಸರಿಯೇ ಇದಲ್ಲದೆ ಹಗಲು ಚಿಕ್ಕತಿಮ್ಮಣ್ಣನವರ ಹೊಲ ತೆ ಕೊಲಿಮೆ ಅಣ್ಣಪ್ಪನವರ ಮನೆಯಿಂದ ಸರ್ಕಾರ ಛತ್ರದವರೆಗೂ ಇದೆ ಈ ಜಮೀನಿನಲ್ಲಿ ಸುಮಾರು ೩೦ ೪೦ ಮನೆಗಳಾಗಬಹುದು ಬಾಬಾಸಾಬಿ ಹೊಲವು ಇದೆ, ಇದರಲ್ಲಿ ೩೦ ಮನೆಗಳಾಗಬಹುದು ಸರ್ಕಾರದವರು ಈ ಜಮೀನುಗಳನ್ನು ಮನೆಗಳು ಕಟ್ಟಿಕೊಳ್ಳುವುದಕ್ಕೆ ಕೊಡಿಸಿದರೆ ತುಂಬಾ ಪ್ರಯೋಜನವಾದೀತು ಈ ಊರು ಪೂರ್ವಕ್ಕಿಂತಲೂ ಹೆಚ್ಚು ಅಭಿವೃದ್ಧಿಸ್ಥಿತಿಗೆ ಬಂದಿದೆ ಊರು ಬಡಾವಣೆ ಆಗುತ್ತಿದೆ ದಕ್ಷಿಣಕ್ಕೆ ಅಕ್ಕಿಪೇಟೆಯಲ್ಲಿ ರೈಲ್ ಕಂಪೆನಿಯವರೆಗೂ ಮನೆಗಳು ಆಗುತ್ತಾ ಬಂದಿವೆ ಊರಲ್ಲಿ ಜನಗಳು ಮನೆಗಳು ಸಾಲದೆ ತುಂಬಾ ತೊಂದರೆಪಡುತ್ತಿದ್ದಾರೆ ಸರ್ಕಾರಿ ಅಧಿಕಾರಿಗಳು ಇದರ ವಿಷಯದಲ್ಲಿ ನಿಗಾ ಕೊಟ್ಟರೆ ಬಡಜನಗಳಿಗೆ ತುಂಬಾ ಪ್ರಯೋಜನವಾದೀತು ಊರುಪಕ್ಕದಲ್ಲಿ ಮನೆಗಳು ಕಟ್ಟದೆ ೩೦ ವರ್ಷಗಳಿಂದಲೂ ಖಾಲಿ ಬಿಟ್ಟು ಸರ್ಕಾರಕ್ಕೆ ನಷ್ಟವಾಗುವುದಕ್ಕಿಂತಲೂ ಬಡವರಿಗೆ ಕೊಡಿಸಿ ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಹೆಚ್ಚಿನ ಫಾಯಿದೆ ಸಂಪಾದನೆಮಾಡುವುದು ಮೇಲಾಗಿದೆ —ಇದೇ ಊರಲ್ಲಿ ತಾಲ್ಲೂಕು ಕಚೇರಿ ಗುಮಾಸ್ತೆಯಾದ ಮುತ್ತುರಾಯರೂ, ಮಗರಾಮರಾಯರೆಂಬುವರೂ, ಅವರ ಅಕ್ಕನವರೂ ನಂಜಪ್ಪನವರ ತೋಟಕ್ಕೆ ಹೋಗಿದ್ದಾಗ್ಗೆ ರಾಮು ಎಂಬುವ ೫ ವರುಷದ ಹುಡುಗನು ಇದೇ ಊರಿನ ಕೆರೆಯಲ್ಲಿ ಕಾಲುಜಾರಿ ನೀರಿನಲ್ಲಿ ಬಿದ್ದನು ಆ ಕ್ಷಣವೇ ಇವನ ಅಕ್ಕ ತಿಮ್ಮಮ್ಮ ಎಂಬವಳು ಗಲಾಟೆ ಮಾಡಲಾಗಿ ಟೌನ್ ಮ್ಯುನಿಸಿಪಲ್ ಜವಾನ ಲಿಂಗಯ್ಯನೆಂಬುವನು ತನ್ನ ಉಡುಪಿನೊಂದಿಗೆ ತಕ್ಷಣವೇ ಇಳಿದು ಮಗುವನ್ನು ಮೇಲಕ್ಕೆ ತೆಗೆದನು ಅಲ್ಲಿ ಸುಮಾರು ನಡುವಿನ ಮಟ್ಟ ನೀರಿತ್ತು ಆ ಮಗುವನ್ನು ಲಿಂಗಯ್ಯನು ಆ ಕ್ಷಣವೇ ಕಚೇರಿಗೆ ತಂದನು ಗುಮಾಸ್ತೆಯವರೂ ಪೋಲೀಸ್ ಜಮೇದಾರರೂ ನೋಡಿ ಹರ್ಷಯುಕ್ತರಾದರು ಇಂಥಾ ಪ್ರಾಣಸಂರಕ್ಷಣೆಮಾಡಿದ ಬಡನೌಕರನಾದ ಲಿಂಗಯ್ಯನೆಂಬವನಿಗೆ ಸರ್ಕಾರದಿಂದ ಅಮಲ್ದಾರರವರು ತಕ್ಕ ಇನಾಮನ್ನು ಕೊಡಿಸ್ಯಾರೆಂದು ನಂಬುತ್ತೇನೆ ಹಿಂದೆ ಈ ಊರಲ್ಲಿ ಭಾವಿಯಲ್ಲಿ ಬಿದ್ದ ಹೆಣ್ಣುಮಗುವನ್ನು ತೆಗೆದ ದರ್ಜಿ ಹನುಮಂತಯ್ಯನಿಗೆ ಏನೂ ಇನಾಂ ಕೊಡಲಿಲ್ಲವೆಂದು ತಿಳಿದು ವ್ಯಸನಪಡಬೇಕಾಗಿದೆ

ನಂಜನಗೂಡು —ಈ ಟೌನ್‌ನಲ್ಲಿ ಪ್ಲೇಗ್ ವ್ಯಾಪಿಸಿ ಸುಮಾರು ನಾಲ್ಕು ತಿಂಗಳುಗಳಿಂದಲೂ ಜನರು ಮಂದಿ ಷೆಡ್ಡುಗಳಲ್ಲಿ ವಾಸವಾಗಿದ್ದು, ಈಗ ೧೫ ದಿವಸಗಳ ಕೆಳಗೆ ಕೆಲವರು ಊರುಬಂದು ಸೇರಿದರು ಆದರೆ ಪ್ಲೇಗಿನ ಹಾವಳಿಯು ಇನ್ನೂ ಸಂಪೂರ್ಣವಾಗಿ ನಿಂತಿಲ್ಲ ಈಚೆಗೆ ಇಲ್ಲಿನ ಹವಾ ಬದಲಾಯಿಸಿ ಕಾಲರಾ ವ್ಯಾಧಿ ಸಹ ಕಲೆಹಾಕುವಂತೆ ಇದೆ ಷೆಡ್ಡುಗಳಲ್ಲಿದ್ದವರು ಇನ್ನೂ ಕೆಲವು ದಿನಗಳ ವರೆಗೆ ಊರು ಪ್ರವೇಶ ಮಾಡದೇ ಹೊರಗೆ ಇದ್ದರೆ ಉತ್ತಮವಾಗಿರುತ್ತಿತ್ತು —ಈ ಟೌನ್ ಬಳಿ ಹರಿಯುವ ಹುಲ್ಲಹಳ್ಳಿ ನಾಲಾ ನೀರು ಒಂದು ರಿಜರ್ವಾಯರ್‌ನಿಂದ ಕೊಳಾಯಿಗಳ ಮೂಲಕ ಜನಗಳ ಸ್ನಾನಪಾನಾದಿಗಳಿಗಾಗಿ ಸರಬರಾಯಿ ಮಾಡಲ್ಪಡುತ್ತೆ ಈ ರಿಜರ್ವಾಯರ್‌ನಲ್ಲಿ ನೀರನ್ನು ಶೋಧಿಸಲಿಕ್ಕಾಗಿ ಬಹುಕಾಲದ ಹಿಂದೆ ಹಾಕಿದ್ದ ಇದ್ದಿಲು ಮುಂತಾದ ಶೋಧನಾ ದ್ರವ್ಯಗಳನ್ನು ತೆಗೆದು ಹೊಸದಾಗಿ ಹಾಕುವದು ಅವಶ್ಯಕವಾಗಿರುತ್ತೆ ಈಗ್ಗೆ ೮ ೧೦ ದಿವಸಗಳ ಕೆಳಗೆ ಈ ನಾಲೆಯಲ್ಲಿ ಸುಮಾರು ನಾಲ್ಕು ವರ್ಷ ವಯಸ್ಸುಳ್ಳ ಒಂದು ಗಂಡುಮಗುವಿನ ಶವವು ತೇಲಿಕೊಂಡು ಕುಪ್ಪೆಹಳ್ಳಿ ಬಳಿ ಸೈಫನ್ ಎಂಬ ಸೇತುವೆಗೆ ಬಂದು ೩ ೪ ದಿವಸಗಳ ಪರಿಯಂತರವೂ ಅಲ್ಲೇ ತೇಲಾಡುತ್ತಾ ಇತ್ತು ವಾರಸ್ದಾರರು ಯಾರೂ ಇಲ್ಲದ್ದರಿಂದ ಪೋಲೀಸಿನವರು ಕೊಳೆತು ನಾರುತ್ತಿದ್ದ ಶವವನ್ನು ಹೊರಕ್ಕೆ ತೆಗೆಸಿ ದಫನ್ ಮಾಡಿಸಿದರು ಇದೇ ರೀತಿ ಆಗಾಗ್ಗೆ ಈ ನಾಲೆಯಲ್ಲಿ ಸತ್ತ ಜೀವಜಂತುಗಳೂ ಹೆಣಗಳೂ ತೇಲಿಕೊಂಡು ಈ ಸೈಫನ್ ಬಳಿಗೆ ಬಂದು ಸೇರುತ್ತವೆ ಈ ಸಮಾಚಾರವು ಪಟೇಲರಿಂದ ಪೋಲೀಸಿಗೆ ರಿಪೋರ್ಟಾದ ಒಡನೆಯೇ ತನಿಖೆಯಿಂದ ಕೂಡ್ಲೆ ಶವವಿಲೇ ಮಾಡದೆ ತೆಗೆಸಿಹಾಕಿದರೆ ಜನಗಳ ಆರೋಗ್ಯಕ್ಕೆ ತುಂಬಾ ಸಹಾಯಕವಾಗಿರುತ್ತೆ —ಈ ತಾಲೂಕ್ಕೆ ಹಸಿಯಂಬಳ್ಳಿ ಎಂಬ ಗ್ರಾಮದ ಬಳಿ ಭಾರಿಯಾದ ಒಂದು ಅಕ್ವಿಡಕ್ಟ್ ಎಂಬ ಸೇತುವೆಯನ್ನು ಕಟ್ಟಿರುತ್ತಾರೆ ಇದರ ಒಂದು ಪಾರ್ಶ್ವದ ಗೋಡೆಯು ಸುಮಾರು ೩೦೦ ಅಡಿಗಳ ವರೆಗೆ ಸಾಧಾರಣ ಕಳೆದ ಆಗಸ್ಟ್ ತಿಂಗಳಲ್ಲಿ ಸುರಿದ ಒಂದು ದೊಡ್ಡ ಮಳೆಯ ದೆಸೆಯಿಂದ ಆಕಸ್ಮಾತ್ತಾಗಿ ಕಳಚಿ ಬಿದ್ದುಹೋಯಿತು ಈ ನಾಲೆ ಕೊನೆಭಾಗದ ರೈತರು ಈ ವರ್ಷ ಪಟ್ಟ ಶ್ರಮೆಯು ವ್ಯರ್ಥವಾಗಿ ಅವರ ಭತ್ತದ ಬೆಳೆಯು ಕೈಸೇರದ ಹಾಗಾಯಿತಲ್ಲಾ ಎಂದು ಭಗ್ನ ಮನಸ್ಸುಳ್ಳವರಾಗಿದ್ದರು ಆದರೆ ದಯಾಳುವಾದ ನಮ್ಮ ಇಂಜನಿಯರ್ ಇಲಾಖಾ ಅಧಿಕಾರಿಗಳೂ ಅಮಲ್ದಾರರೂ ರೈತರಿಗೆ ನಷ್ಟವಾಗದ ರೀತಿ ಮರಳು ಚೀಲ ಮತ್ತು ಹೆಪ್ಪು ಕಟ್ಟೆಯಿಂದ ಬಿದ್ದುಹೋದ ಸೇತುವೆಯನ್ನು ತಾತ್ಕಾಲಕ್ಕೆ ಕಟ್ಟಿ ಸೇತುವೆಯನ್ನು ರಿಪೇರಿ ಮಾಡಿ ಒಂದು ವಾರದೊಳಗಾಗಿ ನಾಲಾದಲ್ಲಿ ನೀರು ಬಿಟ್ಟು ರೈತರಿಗೆ ಧೈರ್ಯಕೊಟ್ಟರು ಆದರೆ ಹೆಪ್ಪು ಮುಂತಾದದ್ದರಿಂದ ತಾತ್ಕಾಲಕ್ಕೆ ಮಾಡಿದ ಏರ್ಪಾಡು ಮುಂದೆ ೪-೫ ತಿಂಗಳ ವರೆಗೂ ನಿಂತು ತುಂಬ ಕಾಲ್ವೆ ನೀರು ಹರಿದು ನಾಲಾ ತುದಿಯ ತನಕ ಸಲೀಸು ನೀರು ಸರಬರಾಯಿ ಆಗುವ ನಂಬಿಕೆ ನಮ್ಮಗಳಿಗೆ ಸಾಲದ್ದಾಗಿತ್ತು ಆದರೆ ನಮ್ಮ ನಾಲಾ ಮೆಜೇಗಾರ್ ಮೆ|| ವರದರಾಜುಲು ನಾಯ್ಡುರವರು ಜಾಗ್ರತೆ ಆಗಿರುವ ಸೇತುವೆಯನ್ನು ಆಗಾಗ್ಗೆ ರಿಪೇರಿ ಮಾಡಿಸುತ್ತಾ, ಎಡೆಬಿಡದೆ ಅದರ ಉಸ್ತುವಾರಿ ನೋಡುತ್ತಾ, ನಾಲೆಯಲ್ಲಿ ಮಾಮೂಲ್ ನೀರು ಬಿಡಲು ಯತ್ನವಿಲ್ಲದಿದ್ದಾಗ್ಯೂ ಈ ಕಡಮೆ ನೀರಿನಿಂದಲೇ ನಾಲೆ ಆದ್ಯಂತವೂ ಹಗಲಿರುಳೆನ್ನದೆ ನಾಲೆಯ ಮೇಲೆ ಸಂಚರಿಸುತ್ತಾ, ತುಂಬಾ ಮುತುವರ್ಜಿ ವಹಿಸಿ ರೈತರ ಫಸಲಿಗೆ ಅವಕಾಶವಿಲ್ಲದ ರೀತಿ ನೀರು ಸರಬರಾಯಿ ಮಾಡುತ್ತಾ ಬಂದದ್ದರಿಂದ ಕೈತಪ್ಪಿ ಹೋಗುವಹಾಗಿದ್ದ ರೈತರ ಭತ್ತದ ಬೆಳೆಯನ್ನು ಅವರು ಕಣ್ಣಿನಿಂದ ನೋಡುವಂತಾಯ್ತು ಈ ಸಾರಿ ನಮ್ಮಗಳ ಭತ್ತದ ಬೆಳೆಗೆ ಇದಲ್ಲದೆ ಮತ್ತೊಂದು ಅಗಾಧವಾದ ಅಪಾಯ ಸಂಭವಿಸಬಹುದಾಗಿತ್ತು ಅದೇನೆಂದರೆ, ಕಳೆದ ಬೇಸಿಗೆಯಲ್ಲಿ ತಿವಸಮುದ್ರಕ್ಕೆ ನೀರು ಸರಬರಾಯಿ ಮಾಡುವ ಉದ್ದೇಶ್ಯ ಕಪಿಲಾ ನದಿಗೆ ಕಟ್ಟಿರತಕ್ಕ ಹುಲ್ಲಹಳ್ಳಿ ಅಣೆಕಟ್ಟಿಗೂ ಮರಳು ಚೀಲಗಳನ್ನು ಅಡಕಿ ನೀರನ್ನು ತಡೆದು ಅವಶ್ಯಕವಾದಷ್ಟು ನೀರನ್ನು ಅಲ್ಲಿಗೆ ಒದಗಿಸುತ್ತಿರುವಲ್ಲಿ ಕಳೆದ ಮೇ ತಿಂಗಳಲ್ಲಿ ಅಕಸ್ಮಾತ್ತಾಗಿ ಹೊಳೆಯಲ್ಲಿ ಬಂದ ಪೂರ್ಣ ಪ್ರವಾಹವು ಅಣೆಕಟ್ಟೆಯನ್ನು ಬಹಳ ದೂರದ ವರೆಗೆ ಕಿತ್ತುಹಾಕಿ ಇದರಿಂದ ಹೊರಡುವ ರಾಂಪುರ ನಾಲಾ ಮತ್ತು ಹುಲ್ಲಹಳ್ಳಿ ನಾಲೆಗಳ ಕೆಳಗೆ ಈ ಸಾರಿ ಭತ್ತದ ಫಸಲು ಆಗುತ್ತಲಿತ್ತೆಂಬ ಭರವಸವೇ ಸಂಪೂರ್ಣವಾಗಿ ತಪ್ಪಿಹೋಗಿತ್ತು. ಆದರೆ ಆಗ್ಗೆ ನಾಲಾ ಸಬ್ ಡಿವಿಜನ್ ನಾಹೇಬರಾಗಿದ್ದ ಸಬ ಅ|| ಇಂಜನಿಯರ ಮೆ|| ಆರ್ ಡಬ್ಲ್ಯು ಸ್ಕಾಲ್ವೆಲ್ ದೊರೆಯವರು ಕಿತ್ತುಹೋಗಿದ್ದ ಈ ಕಟ್ಟಡವನ್ನು ಮತ್ತೊಂದು ಪ್ರವಾಹ ಬರುವುದರೊಳಗಾಗಿ ಅಂದರೆ ಒಂದು ವಾರದಲ್ಲಿ ಯಥಾಪ್ರಕಾರ ಭದ್ರವಾಗಿ ಕಟ್ಟಿಸಿದ್ದರಲ್ಲಿ ಅವರು ಮತ್ತು ಅವರ ತಾಬೇದಾರರೂ ಪಟ್ಟ ಮೆಹನತ್ತು ತುಂಬಾ ಸ್ತೋತ್ರಾರ್ಹವಾಗಿದೆ —ಕೆಲವು ದಿನಗಳ ಹಿಂದೆ ಜೂಜಾಡುತ್ತಿದ್ದ ೪ ಜನಗಳನ್ನು ಹಿಡಿದು ವಿಚಾರಣೆಮಾಡಿ ತಲಾ ೫ ರೂಪಾಯಿಯಂತೆ ಜುಲ್ಮಾನೆ ಶಿಕ್ಷೆ ವಿಧಿಸಿದರು ಈ ರೀತಿ ಗ್ಯಾಂಬ್ಲಿಂಗ್ ಆಕ್ಟನ್ನು ಜಾರಿಗೆ ತಂದು ಅಧಿಕಾರಿಗಳು ಇಂತಹ ದುವ್ರ್ಯತ್ತಿಯನ್ನು ನಿಲ್ಲಿಸುವುದು ಮಹದುಪಕಾರವಾದದ್ದು

ವೈಸ್‌ರಾಯಿಯವರಿಗೆ ಬೆಂಗಳೂರಿನಲ್ಲಿ ನಡೆದ ಆತಿಥ್ಯಗಳು

ಪಂಡಿತ ಆಸ್ಪತ್ರೆಯನ್ನು ಪರಾಂಬರಿಸಿದ್ದು

ತಾ ೬ನೇ ಸೋಮವಾರ

ವೈಸ್‌ರಾಯಿಯವರ ಪತ್ನಿಯವರನ್ನು ಬ್ರಿಟಿಷ್ ರೆಸಿಡೆಂಟರೂ ಅವರ ಪತ್ನಿಯವರೂ ಬೆಳಗ್ಗೆ ೧೦ ೩೦ ಗಂಟೆಗೆ ಕರೆದುಕೊಂಡು ಪೇಟೆಯಲ್ಲಿ ಲೇಡಿ ಕರ್ಜನ್‌ರವರ ಹೆಸರಿನ ಮೇಲೆ ಕಟ್ಟನಡಿಸುತ್ತಿರುವ ಆಸ್ಪತ್ರೆಗೆ ಹೋಗಿ ಅಲ್ಲಿನ ಏರ್ಪಾಡುಗಳನ್ನೆಲ್ಲಾ ತೋರಿಸಿದರು ಡಾಕ್ಟರುಗಳಾದ ಮೇಜರ್ ಸ್ಮಾಲ್‌ವುಡ್ ಹಾಗೂ ಮಿಸ್ ಬ್ರೌನ್ ಯವರೂ, ಆಸ್ಪತ್ರೆಯ ಮೂಲಕರ್ತರುಗಳಾದ ಮೆ|| ಹಾಜಿ ಇಸ್ಮಾಯಿಲ್ ಸೇಟರು, ಮೆ|| ಅಣ್ಣಾಸಾಮಿ ಮೊದಲಿಯಾರ್ರು, ಮೆ|| ಮೈಗಂಡದೇವ ಮೊದಲಿಯಾರ್ರು ಮೆ|| ಪಿ ಮಾಸಿಲಾಮಣಿ ಚೆಟ್ಟಿಯವರೂ ಇದ್ದು, ಲೇಡಿ ಮಿಂಟೋರವರನ್ನು ಎದುರುಗೊಂಡು ಒಳಗಡೆ ಅಲಂಕಾರಮಾಡಿದ್ದ ಚಪ್ಪರದೊಳಕ್ಕೆ ಕರೆದುಕೊಂಡುಹೋಗಿ ಶ್ರೀಸಾನದಲ್ಲಿ ಕೂಡಿಸಿದರು ಇತರ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಬಹುಮಂದಿ ಸಭೆಯಲ್ಲಿ ಹಾಜರಾಗಿದ್ದರು

ಅಡ್ರೆಸ್ಸನ್ನು ಒಪ್ಪಿಸಿದ್ದು

ಮೆ|| ಮೈಗಂಡದೇವ ಮೊದಲಿಯಾರ್ರವರು ಒಂದು ಅಡ್ರೆಸ್ಸನ್ನು ಓದಿ ಅರಿಕೆಮಾಡಿದರು ಮೆ|| ಅಣ್ಣಾಸಾಮಿ ಮೊದಲಿಯಾರ್ರವರು ಆ ಅಡ್ರೆಸ್ಸನ್ನು ಸುಂದರವಾಗಿ ಚಿತ್ರಕೆಲಸಮಾಡಿದ್ದ ಗಂಧದ ಕೈ ಪೆಟ್ಟಿಗೆಯಲ್ಲಿಟ್ಟು ಲೇಡಿ ಮಿಂಟೋರವರಿಗೆ ಒಪ್ಪಿಸಿದರು

ಆ ಅಡ್ರೆಸ್ಸಿನಲ್ಲಿ ಬರೆದಿದ್ದ ಮುಖ್ಯ ವಿಚಾರಗಳೇನೆಂದರೆ,—೧೯೦೦ ನೇ ಇಸವಿಯ ತನಕ ಈ ದಂಡಿನ ಒಂದು ಲಕ್ಷ ಪ್ರಜೆಗಳಿಗೂ ಒಂದೇ ಒಂದು ಆಸ್ಪತ್ರೆ ಇದ್ದಿತು ಅದನ್ನು ಮ್ಯುನಿಸಿಪಾಲಿಟಿಯವರು ನಡಿಸುತ್ತಿದ್ದರು ಅಲ್ಲಿ ಹೆಂಗಸರಿಗೂ ಗಂಡಸರಿಗೂ ಚಿಕಿತ್ಸೆಗಳನ್ನು ಮಾಡುತ್ತಿದ್ದರು ಸ್ತ್ರೀರೋಗಿಗಳು ೨೪ ಮಂದಿ ಮಾತ್ರ ಅದರಲ್ಲಿದ್ದುಕೊಂಡು ಚಿಕಿತ್ಸೆ ಹೊಂದಬಹುದಾಗಿದ್ದಿತು ೧೯೦೧ನೇ ಏಪ್ರಿಲ್ ತಿಂಗಳಲ್ಲಿ ದಯಾಳು ಸರ್ಕಾರದವರು ಈ ಆಸ್ಪತ್ರೆಯನ್ನು ತಾವೇ ವಹಿಸಿಕೊಂಡರು ಆಗ್ಗೆ ರೆಸಿಡೆನ್ಸಿ ಸರ್ಜನ್‌ರಾಗಿದ್ದ ಕರ್ನಲ್ ಕಾಬ್‌ಸನ್‌ರವರು ಹೆಂಗಸರಿಗಾಗಿಯೇ ಪ್ರತ್ಯೇಕವಾದ ಆಸ್ಪತ್ರೆ ಇರುವುದು ಉತ್ತಮವೆಂದು ಸೂಚನೆಕೊಟ್ಟರು ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ರೆಸಿಡೆಂಟರಾಗಿದ್ದವಳೆ ಅವರು ಈ ವಿಚಾರವಾಗಿ ತುಂಬಾ ಸಾಹಸಪಟ್ಟು ಪ್ರೋತ್ಸಾಹಪಡಿಸಿದ್ದರಿಂದ ಆರು ಮಂದಿ ಪ್ರಜೆಗಳು ಧರ್ಮಾರ್ಥವಾಗಿ ಹಣಹಾಕಿ, ಹೆಂಗಸರಿಗಾಗಿಯೇ ಈ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟರು ಆ ಪೈಕಿ ಈಗ ತಮ್ಮ ಎದುರಿಗಿರುವ ನಾವು ನಾಲ್ಕು ಮಂದಿಯೇ ಜೀವಂತರಾಗಿರುತ್ತೇವೆ ಈ ಆಸ್ಪತ್ರೆಯನ್ನು ೧೯೦೦ ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಲೇಡಿ ಕರ್ಜನ್‌ರವರು ಇಲ್ಲಿಗೆ ದಯಮಾಡಿದ್ದಾಗ್ಗೆ ಪ್ರತಿಷ್ಠೆಮಾಡಿ, ಇದಕ್ಕೆ ತಮ್ಮ ಹೆಸರನ್ನು ಇಟ್ಟುಕೊಳ್ಳಬಹುದೆಂದು ಅಪ್ಪಣೆ ಕೊಡಿಸಿದರು ಈ ಆಸ್ಪತ್ರೆಯಲ್ಲಿ ಡಾಕ್ಟರುಗಳು ವಿಶೇಷವಾದ ಪ್ರೀತಿವಿಶ್ವಾಸಗಳಿಂದ ಚಿಕಿತ್ಸೆಮಾಡುತ್ತಾರಾದಕಾರಣ ಸಕಲ ಪ್ರಜೆಗಳೂ ಇದರಿಂದ ಪ್ರಯೋಜನಹೊಂದಿ ಕೊಂಡಾಡುತ್ತಿದ್ದಾರೆ ಎಲ್ಲಾ ಜಾತಿಯವರೂ ಬಡಬಗ್ಗರೂ ಹರಿಗೆ ಮುಂತಾದದ್ದಕ್ಕೆ ಇಲ್ಲಿಗೆ ಬಂದು ಸೌಖ್ಯಹೊಂದಿ ಸಂತೋಷದಿಂದ ಹೋಗುವರು ಬ್ರಿಟಿಷ್ ರೆಸಿಡೆಂಟರಾದ ಮೆ|| ಫ್ರೇಸರ್‌ಯವರು ಈ ಆಸ್ಪತ್ರೆಯ ವಿಷಯದಲ್ಲಿ ತುಂಬಾ ಪ್ರೀತಿವಿಶ್ವಾಸಗಳನ್ನಿಟ್ಟುಕೊಂಡಿರುತ್ತಾರಾದದ್ದರಿಂದ ಪ್ರಜೆಗಳು ಅವರಿಗೆ ಕೃತಜ್ಞರಾಗಿರುತ್ತಾರೆ ತಾವು ದಯವಿಟ್ಟು ಈ ಆಸ್ಪತ್ರೆಯನ್ನು ಬಂದು ನೋಡಿದ್ದಕ್ಕಾಗಿ ತಮಗೆ ನಮ್ಮಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಒಪ್ಪಿಸುತ್ತೇವೆ

ಪ್ರತ್ಯುತ್ತರವು.

ಲೇಡಿ ಮಿಂಟೋರವರು ಆಸ್ಪತ್ರೆಯನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಆ ಮುಖಂಡರು ಒಪ್ಪಿಸಿದ ಅಡ್ರೆಸ್ಸನ್ನು ಸಾದರದಿಂದ ಅಂಗೀಕರಿಸಿ ಅಪ್ಪಣೆಕೊಡಿಸಿದ ಮುಖ್ಯಾಭಿಪ್ರಾಯವೇನೆಂದರೆ,—ಈ ದಿನ ಈ ಆಸ್ಪತ್ರೆಯನ್ನು ನೋಡಿ, ಇದರ ಮೂಲಕರ್ತರಾದ ನಿಮ್ಮಗಳನ್ನು ಸಂಧಿಸಿದ್ದು ನಮಗೆ ತುಂಬಾ ಸಂತೋಷವಾಯಿತು ನಿಮ್ಮ ಆಸ್ಪತ್ರೆಯಲ್ಲಿ ಪರೋಪಕಾರ ಕಾರ್ಯಗಳು ಬಹಳ ಏಕರಣೆಯಿಂದಲೂ ಪ್ರಜಾ ಹಿತಚಿಂತನೆಯಿಂದಲೂ ನಡೆಯುತ್ತಿವೆ ಎಂಬುವುದನ್ನು ನಾವು ರಿಪೋರ್ಟುಗಳ ಮೂಲಕ ಓದಿ ಸಂತೋಷಪಟ್ಟಿರುತ್ತೇವೆ ಮೇಜರ್ ಸ್ಮಾಲ್‌ವುಡ್‌ಯವರೂ ಅವರ ಸಹಾಯೋದ್ಯೋಗಿಗಳೂ ಮುತುವರ್ಜಿಯಿಂದಲೂ ಪ್ರೀತಿಪೂರ್ವಕವಾಗಿಯೂ ಕೆಲಸ ಮಾಡುತ್ತಿರುವುದರಿಂದ ಈ ಆಸ್ಪತ್ರೆಯು ತುಂಬಾ ಅಭಿವೃದ್ಧಿಗೆ ಬಂದಿರುತ್ತೆಂಬದನ್ನು ಕೇಳಿ ನಮಗೆ ಹರ್ಷವಾಗಿದೆ ಹಿಂದುಸ್ಥಾನದ ಸ್ತ್ರೀಯರಿಗೆ ವೈದ್ಯರ ಸಹಾಯ ದೊರಕುವಂತೆ ಮಾಡಬೇಕೆಂಬುವುದೇ ನಮ್ಮ ಕುತೂಹಲವಾಗಿರುತ್ತದೆ ಈ ಭಾಗದಲ್ಲಿ ಲೇಡಿ ಡಫ್ರಿನ್‌ರವರು ಯಾವ ಉದ್ದೇಶವನ್ನಿಟ್ಟುಕೊಂಡಿದ್ದರೋ ನಾವೂ ಅದೇ ಉದ್ದೇಶದಿಂದ ಕಾರ್ಯಭಾಗವನ್ನು ನಡಿಸುತ್ತಾ ಬಂದಿರುತ್ತೇವೆ ನಿಮ್ಮ ಈ ಆಸ್ಪತ್ರೆಯು ಚಿರಕಾಲ ಇನ್ನೂ ಅಭಿವೃದ್ಧಿ ಹೊಂದಲಿ ಎಂದು ಕೋರಿ, ನೀವುಗಳು ಮಾಡಿದ ಸತ್ಕಾರಕ್ಕಾಗಿ ನಿಮ್ಮನ್ನೆಲ್ಲಾ ವಂದಿಸುವೆವು

ವೈಸ್‌ರಾಯಿಯವರ ದೇಹಾಲಸ್ಯವು

ಸೋಮವಾರ ಬೆಳಗ್ಗೆ ಪೆರೇಡ್ ಮೈದಾನಿನಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಸೈನ್ಯಗಳ ಕವಾತನ್ನು ಪರಾಂಬರಿಸುತ್ತಿದ್ದಾಗ ಆಕಸ್ಮಾತ್ತಾಗಿ ಅವರಿಗೆ ಅಲಸ್ಯವುಂಟಾಯಿತು, ಕೂಡಲೇ ಅವರು ಅಲ್ಲಿಂದ ರೆಸಿಡೆನ್ಸಿ ಬಂಗಲೆಗೆ ವಾಪಸು ದಯಮಾಡಿದರು ತರುವಾಯ ಸ್ವಲ್ಪ ಜ್ವರ ಕಾಣಿಸಿಕೊಂಡಿತು ಆ ದಿನ ಅವರು ಬೆಂಗಳೂರು ಪಟ್ಟಣವನ್ನೆಲ್ಲಾ ಸುತ್ತಿ ಪರಾಂಬರಿಸುವುದನ್ನು ವಜಾಮಾಡಿಬಿಟ್ಟರು ರೆಸಿಡೆನ್ಸಿಯಲ್ಲೇ ಅವರು ಎರಡು ದಿನಗಳ ತನಕ ಇದ್ದು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದು ಗೊತ್ತುಮಾಡಲ್ಪಟ್ಟಿದೆ ಅವರು ಪತ್ನಿ ಪರಿವಾರ ಸಹಿತ ನೆನ್ನೆ ರಾತ್ರಿ ೧೦ ಗಂಟೆಗೆ ಸ್ಪೆಷಲ್ ರೈಲಿನಲ್ಲಿ ಮಧುರೆ, ತಿರುಚನಾಪಲ್ಲಿ, ತಂಜಾವೂರುಗಳಿಗೆ ಹೊರಡುವವರಾಗಿದ್ದರು. ದೇಹಾಲಸ್ಯದ ನಿಮಿತ್ತ ಅವರು ಈ ಪಟ್ಟಣಗಳಿಗೆ ಹೋಗದೆ ಮದರಾಸಿಗೆ ನೆಟ್ಟಗೆ ದಯಮಾಡುತ್ತಾರೆ

ಈಚೆಗೆ ಬಂದಿರುವ ವರ್ತಮಾನವು

ತಾ ೭ನೇ ಮಂಗಳವಾರ ತಿಳಿದು ಬಂದ ಸುದ್ದಿ ಏನೆಂದರೆ,—ವೈಸ್‌ರಾಯರವರು ರಾತ್ರಿ ಸುಖವಾಗಿ ನಿದ್ರೆಮಾಡಿದರು. ಅಲಸ್ಯವು ಬಹುಮಟ್ಟಿಗೆ ನಿವಾರಣೆಯಾಗಿರುತ್ತದೆ ಅವರು ನಾಳೆ ರಾತ್ರಿ ಮದರಾಸಿಗೆ ತೆರಳುವವರಾಗಿದ್ದಾರೆ

ಕಾನ್‌ಪುರದಲ್ಲಿ ಮ್ಯುನಿಸಿಪಾಲಿಟಿಯವರು ನಡಿಸುವಂಥಾ ಪಾಠಶಾಲೆಗಳಲ್ಲೆಲ್ಲಾ ಗಂಡು ಹೆಣ್ಣು ಮಕ್ಕಳಿಗೆ ಬಾಲವಿದ್ಯೆಯನ್ನು ಫೀಜಿಲ್ಲದೆ ಕಲಿಸಲಾರಂಭಿಸುತ್ತಾರೆ

ಬೊಂಬಾಯಿ ಪಟ್ಟಣದ ವಾರಿ ಬಂದರಿನಲ್ಲಿ ಕಳೆದ ಗುರುವಾರ ಉಗ್ರಾಣದ ಮನೆಗೆ ಬೆಂಕಿಬಿದ್ದು ಸಕ್ಕರೆ ಮೂಟೆಗಳು ಸುಟ್ಟುಹೋದವು ವರ್ತಕರಿಗೆ ಇದರಿಂದ ಎರಡು ಲಕ್ಷ ರೂಪಾಯಿ ನಷ್ಟವಾಯಿತು ಇದುವರೆಗೆ ಇದೂ ಸೇರಿ ಮೂರಾವರ್ತಿ ಸಕ್ಕರೆ ಮೂಟೆಗಳು ಅಲ್ಲಿ ಸುಟ್ಟುಹೋಗಿರುತ್ತವೆ

ಸ ಲ ಹೆಚ್ಚು ಮನಸ್ಸು ಕೆಟ್ಟುಹೋಗಿ ಬೊಂಬಾಯಿನಲ್ಲಿ ಆತ್ಮಹತ್ಯ ಮಾಡಿಕೊಂಡ ಮೆ|| ದ್ವಾರಕದಾಸ್ ಧರಂಸೀಯವರ ಲಕ್ಷ್ಮೀದಾಸ ಮಿಲ್ಸ್ ಎಂಬ ನೂಲಿನ ಕಾರ್ಖಾನೆಯು ಕಳೆದ ವಾರ ಹರಾಜಾಗಿ ಸರ್ ಸೆಸೂನ್ ಡೇವಿಡ್ ಎಂಬ ವರ್ತಕರು ಅದನ್ನು ೭ ಲಕ್ಷವೂ ೮೦ ಸಾವಿರ ರೂಪಾಯಿಗೆ ಕೊಂಡುಕೊಂಡರು

ಎರಡನೇ ಆರ್ಯ ವೈಶ್ಯ ಮಹಾಸಭೆಯು

ಪ್ರಸಿದ್ಧ ಪತ್ರಿಕೆ.

ಮೇಲ್ಕಂಡ ಸಭೆಯ ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾದ ಮ|| ಚಿಂತಾಲಪಲ್ಲಿ ವೆಂಕಟಸುಬ್ಬಯ್ಯ ಶ್ರೇಷ್ಠಿಯವರು ಬರೆದಿರುವುದೇನೆಂದರೆ,—ಅಯ್ಯಾ, ಆರ್ಯ ವೈಶ್ಯ ಮಹಾ ಜನಗಳಿರಾ ಸೌಮ್ಯನಾಮ ಸಂವತ್ಸರದ ಮಾರ್ಗಶಿರ ಬಹುಳ ೧, ೨, ೩ ಕ್ಕೆ ಸರಿಯಾದ ೧೯೦೯ ನೇ ಡಿಸೆಂಬರು ೨೭, ೨೮, ೨೯ನೇ ತಾರೀಖುಗಳಲ್ಲಿ ಮೈಸೂರು ಸಂಸ್ಥಾನದ ಆರ್ಯ ವೈಶ್ಯ ಮಹಾಸಭೆಯ ದ್ವಿತೀಯ ಕಾನ್ಫರೆನ್ಸು ಮೈಸೂರು ದೇಶದ ಮುಖ್ಯ ಪಟ್ಟಣವಾದ ಬೆಂಗಳೂರು ಸಿಟಿಯಲ್ಲಿ ನಡೆಯುವದಾದ್ದರಿಂದ ಮೈಸೂರು ಸಂಸ್ಥಾನದಿಂದಲೂ, ಮದರಾಸು ಪ್ರಾವಿನ್ಸಿನಿಂದಲೂ, ಹೈದರಾಬಾದ್ ಪ್ರಾಂತ್ಯದಿಂದಲೂ, ಬೊಂಬಾಯಿ ಪ್ರೆಸಿಡೆನ್ಸಿಯಿಂದಲೂ ಮಹಾಭಿಮಾನಿಗಳಾದ ಆರ್ಯ ವೈಶ್ಯ ಮಹಾಜನಗಳೆಲ್ಲರೂ ದಯಮಾಡಿಸಿ ಸಭೆಯ ಉದ್ದೇಶಗಳನ್ನು ಸಾರ್ಥಕಗೊಳಿಸಬೇಕೆಂದು ಕೋರುತ್ತೇವೆ ಈ ಸಭೆಯನ್ನು ಅಲಂಕರಿಸಲು ಬರುವ ಪ್ರತಿನಿಧಿಗಳು ಡಿಸೆಂಬರು ೨೨ನೇ ತಾ ಬುಧವಾರದೊಳಗಾಗಿ ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಸೆಕ್ರೆಟರಿಗಳಾದ ಮ|| ರಾ|| ದಂಡಿ ಮಂಗೈಯ ಶ್ರೇಷ್ಠಿಯವರಿಗೆ ಬರೆದು ತಿಳುಹಿಸಬೇಕೆಂದು ಸೂಚಿಸಿರುತ್ತೇವೆ

ದೇವಿ ಸಿಡುಬಿನ ಪ್ರಯೋಜನವು

ಶೃಂಗೇರಿಯಲ್ಲಿ ನಡೆದ ಒಂದು ಉಪನ್ಯಾಸವು

ಶೃಂಗೇರಿ ಎ ವಿ ಸ್ಕೂಲು ಕಟ್ಟಡದಲ್ಲಿ ಮೆ|| ಮುತ್ತುಸಾಮಿ ಪಿಳ್ಳೆ ಎಲ್ ಎಂ ಅಂಡ್ ಎಸ್, ಕಡೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ಸಿಡುಬು ಹಾಕಬೇಕಾದ ಆವಶ್ಯಕತೆಯನ್ನೂ ಅದರಿಂದುಂಟಾಗಬಹುದಾದ ಪ್ರಯೋಜನಗಳನ್ನೂ ಕುರಿತು, ಬಹು ರಮ್ಯವಾಗಿಯೂ ಆದರಣೀಯವಾಗಿಯೂ ಇರುವ ಒಂದು ಉಪನ್ಯಾಸವನ್ನು ಮಾಡಿದರು ಈ ಊರಿನ ದೊಡ್ಡ ಮನುಷ್ಯರನೇಕರು ಸೇರಿದ್ದರು ಮೆ|| ಬಿ ಸಿ ಕೃಷ್ಣಶಾಸ್ತ್ರಿಗಳು ಬಿ ಎ, ಶೃಂಗೇರಿ ಜಹಗೀರ್ ಅಡ್ಮಿನಿಸ್ಟ್ರೇಟರವರು ಸಭಾಧ್ಯಕ್ಷ ಪದವಿಯನ್ನಲಂಕರಿಸಿದ್ದರು ಮೇಲ್ಕಂಡ ಮೆಡಿಕಲ್ ಆಫೀಸರವರು ಉಪನ್ಯಾಸ ಮಾಡಿದ ಮುಖ್ಯಾಂಶಗಳನ್ನು ಇಲ್ಲಿ ಪ್ರಕಟಿಸಲು ಅವಕಾಶವನ್ನು ಕೇಳಿಕೊಳ್ಳುತ್ತೇವೆ

ಸಿಡುಬು ಇದು ಸಾಂಕ್ರಾಮಿಕ ಜಾಡ್ಯ ಇದನ್ನು ಜನಗಳು ದೊಡ್ಡಮ್ಮನೆಂದೂ ಮೈಲಿಯೆಂದೂ ಕರೆಯುತ್ತಾರೆ ಇದು ಬಹು ಪ್ರಬಲವಾದ ಜಾಡ್ಯ ಇದು ತಾನಾಗಿಯೇ ಸಂಭವಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಅಂಗ ವಿಕಾರ ಅಂಗ ನಷ್ಟಗಳನ್ನುಂಟುಮಾಡುವುದರ ಮೂಲಕ ಬಹಳ ಅನರ್ಥಗಳನ್ನುಂಟುಮಾಡಿ ಮುಂದೆ ಜೀವನದಲ್ಲಿ ಬಹಳ ಅವಿವೇಕಕ್ಕೆ ಕಾರಣವಾಗಬಹುದು ಈ ವಿಷಯದಲ್ಲಿ ಅನೇಕ ದೃಷ್ಟಾಂತಗಳು ದೊರೆಯುವವು ಸಿಡುಬು ಹಾಕಿಸುವುದರಿಂದ ಸಿಡುಬಿನ ರೋಗವು ಬರುವುದಿಲ್ಲ ಅಥವಾ ಒಂದಾಗ್ಯೂ ಕೊಂಚವಾಗಿ ಬಂದು ಅನರ್ಥಗಳನ್ನು ಮಾಡದೆ ತಾನಾಗಿಯೇ ಇಳಿದುಹೋಗುವುದೆಂದು ಈಗ ಗೊತ್ತಾಗಿದೆ ಸಿಡುಬು ಹಾಕುವುದು ಚೆನ್ನಾಗಿ ಪ್ರಚಾರಕ್ಕೆ ಬಂದಿರುವ ಕಡೆಗಳಲ್ಲೆಲ್ಲಾ ಈ ಸಿಡುಬು ರೋಗವೇ ಬಹಳ ಅಪೂರ್ವವಾಗಿದೆ

ಈ ಸಿಡುಬು ಹಾಕುವ ವಿಧಾನವನ್ನು ಈಗ್ಗೆ ಸುಮಾರು ೧೧೦ ವರುಷಗಳ ಹಿಂದೆ ಇಂಗ್ಲಿಷ್ ವೈದ್ಯರಾದ ಜನ್ನರ್ ಎಂಬುವರು ಕಂಡುಹಿಡಿದರು ಹಸುಗಳ ಮೊಲೆಗಳ ಮೇಲೆಯೂ ಕೆಚ್ಚಲುಗಳ ಮೇಲೆಯೂ ಏಳುವ ಗೋವು ಸೂಚಕವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಬೊಬ್ಬೆಗಳ ಹಾಲನ್ನು ಸಿಡುಬು ಹಾಕುವುದಕ್ಕೆ ಈ ವೈದ್ಯರು ಮೊದಲು ಉಪಯೋಗಿಸಿದರು ಈ ವೈದ್ಯರ ಕಾಲಕ್ಕೆ ಮುಂಚೆ ಮನುಷ್ಯರಿಗೆ ತನ್ನಷ್ಟಕ್ಕೆ ತಾನೇ ಏಳುವ ಸಿಡುಬಿನ ಹಾಲನ್ನೇ ಉಪಯೋಗಿಸುತ್ತಿದ್ದರು ಅನೇಕ ವೇಳೆಗಳಲ್ಲಿ ಅದರಿಂದ ಹಾನಿಯಾಗುತ್ತಿದ್ದು ಪಲ್ಲವೆ ಪ್ರಮಾದಗಳೂ ಕೂಡಾ ಸಂಭವಿಸುತ್ತಿದ್ದುವು

ಚಿಕ್ಕ ಮಕ್ಕಳಿಗೆ ೩ ತಿಂಗಳಿನಿಂದ ೬ ತಿಂಗಳೊಳಗೆ ಸಿಡುಬು ಹಾಕಿಸುವುದು ಬಹಳ ಉತ್ತಮವಾದದ್ದು ಏಕೆಂದರೆ ಆಗ್ಗೆ ಮಗುವಿಗೆ ತ್ವಗಿಂದ್ರಿಯ ಜ್ಞಾನವು ಕ್ರಮವಾಗಿ ಇರುವುದಿಲ್ಲ ಸಿಡುಬು ಹಾಕಿದ್ದು ಎದ್ದರೂ ಅದು ಎದ್ದು ಒಣಗುವ ವರೆಗೂ ಅದರ ಗೋಜಿಗೆ ಮಗು ಹೋಗುವುದಿಲ್ಲವಾದುದರಿಂದ ಬೇಗ ಒಣಗಿ ಸುಖವಾಗಬಹುದು ಸಿಡುಬು ಹಾಕಿಸದಿರುವುದರಿಂದ ಮುಂದೆ ಸಂಭವಿಸಬಹುವಾದ ಪ್ರಮಾದಗಳು ಎಲ್ಲಾ ಸಂಭವಿಸಬಹುದು

ಈ ಭಯಂಕರವಾದ ಸಿಡುಬಿನ ವ್ಯಾಧಿಯನ್ನು ನಿವರ್ತಿಮಾಡಿ ಸರ್ಕಾರದವರು ಪ್ರಜೆಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕಾಗಿ ಪ್ರತಿ ಗ್ರಾಮದಲ್ಲಿಯೂ ಸಿಡುಬು ಎಬ್ಬಿಸುವುದಕ್ಕಾಗಿ ಬಹು ದ್ರವ್ಯ ವ್ಯಯಮಾಡಿ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಸಂಪೂರ್ಣ ದಯೆಯನ್ನು ತೋರಿಸಿದ್ದಾರೆ ಈ ಮಹದುಪಕಾರವನ್ನು ಅನೇಕ ಜನಗಳು ಪ್ರಯೋಜನಕ್ಕೆ ತಂದುಕೊಳ್ಳುವುದಿಲ್ಲ ಇದು ಜನಗಳ ಕೇವಲ ಮೌಢ್ಯದಿಂದ ಎಂಬದಾಗಿ ಹೇಳಬಹುದು ಜನಗಳು ಧಾರಾಳವಾಗಿ ಎದುರಿಗೆ ಬಂದು ತಮ್ಮ ತಮ್ಮ ಪೋಷ್ಯ ವರ್ಗಕ್ಕೆ ಸೇರಿದವರಿಗೆ ಬಾಲ್ಯದಲ್ಲಿಯೇ ಸಿಡುಬು ಹಾಕಿಸುವುದರಿಂದ ಈ ಸಿಡುಬು ರೋಗವು ಮನುಷ್ಯ ಜಾತಿಗೆ ಹತ್ತುವುದನ್ನೇ ತಪ್ಪಿಸಬಹುದು ಆದ್ದರಿಂದ ಇಲ್ಲಿ ಸೇರಿದವರೆಲ್ಲರೂ ಸಿಡುಬು ಹಾಕಿಸತಕ್ಕ ವಿಷಯಗಳನ್ನು ಅಪೇಕ್ಷಿಸತಕ್ಕ ಜನಗಳಿಗೆ ಸರಿಯಾದ ತಿಳುವಳಿಕೆ ಕೊಡುವುದರ ಮೂಲಕ ಸರಕಾರದವರು ಮಾಡುವ ಪ್ರೋತ್ಸಾಹದ ಪ್ರಯೋಜನವನ್ನು ಹೊಂದುವಂತೆ ಪ್ರಯತ್ನ ಮಾಡುವಿರಾಗಿ ನಂಬಲ್ಪಟ್ಟಿದೆ ಎಂಬದಾಗಿ ಉಪನ್ಯಾಸ ಮಾಡಿದರು

ವಾರ್ತಾದಾರ

ಜನನೀ ಜನಕರಿಂದುಂಟಾದ ಮರ್ಮಾರಣವು

ಕಡೂರು ಡಿಸ್ಟ್ರಿಕ್ಟ್ ಕೊಪ್ಪದಲ್ಲಿ ಸಂಭವಿಸಿದ್ದು

ಕೊಪ್ಪದ ಕೆಳಗಿನ ಪೇಟೆ ವಾಸಸ್ಥನಾದ ಬ್ರಾಹ್ಮಣ ಜಾತಿಯ ಅಂಗಡಿ ನಾಗಪ್ಪನಿಗೆ ೧೦ ೧೧ ವರುಷ ವಯಸ್ಸಿನ ಸುಂದರ ಸುಲಕ್ಷಣವುಳ್ಳ ಒಬ್ಬನೇ ವೆಂಕಟಾಚಲನೆಂಬ ಮಗನಿದ್ದನು ಈ ಬಾಲಕನು ವಿದ್ಯಾವಿನಯಗುಣ ಸಂಪನ್ನನಾಗಿ ತನ್ನ ಸಹಪಾಠಿಗಳನ್ನೆಲ್ಲಾ ತನ್ನ ವಿದ್ಯಾಬಲದಿಂದ ಮೀರಿಸಿ ವಿದ್ಯಾ ಬೋಧಕರಿಗೆ ಅಚ್ಚುಮೆಚ್ಚಾಗಿದ್ದದ್ದಲ್ಲದೆ ತನ್ನ ಸದ್ಗುಣಗಳಿಂದ ನೆರೆಹೊರೆಯವರನ್ನೆಲ್ಲಾ ಬಹಳವಾಗಿ ಮೆಚ್ಚಿಸುತ್ತಿದ್ದನು ಇಂಥಾ ಬಾಲಕನಿಗೆ ಕೆಲವು ದಿನಗಳ ಕೆಳಗೆ ಜ್ವರ ಕಾಣಿಸಿಕೊಂಡದ್ದಲ್ಲದೆ ಕುತ್ತಿಗೆಯು ತೊಲೆಯ ಹಾಗೆ ಬಾತುಕೊಂಡಿತು ಇಷ್ಟಾದರೂ ತಂದೆಯು ಹುಡುಗನನ್ನು ಸಮೀಪದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ ತನ್ನ ಮನೆಯ ಮುಂದೆಯೇ ಓಡಾಡಿಕೊಂಡಿದ್ದ ಡಾಕ್ಟರವರನ್ನಾದರೂ ಕರೆದು ತೋರಿಸಲಿಲ್ಲ ಸ್ವತಃ ಚಿಕಿತ್ಸೆ ಮಾಡುತ್ತಾ ದೆವ್ವಗಳ ಹರಕೆಯೇ ಮೊದಲಾದವುಗಳಿಂದ ಹುಡುಗನನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದನು ಹುಡುಗನ ಕಾಹಿಲೆಯು ದಿನೇ ದಿನೇ ಹೆಚ್ಚುತ್ತಾ ಇತ್ತು ಕಳೆದ ತಿಂಗಳು ೨೮ನೇ ತಾ ಭಾನುವಾರ ಸಾಯಂಕಾಲ ನಾಗಪ್ಪನ ಹೆಂಡತಿ ನಾಗಮ್ಮನೆಂಬ ಬಾಲಕನ ಹೆತ್ತ ತಾಯಿಗೆ ಅವರು ಪೂಜಿಸುತ್ತಾ ಬರುತ್ತಿದ್ದ ಬಬ್ಬುರಿಯಾ ಎಂಬ ದೆವ್ವವು ಆಕೆಯ ಮೈಮೇಲೆ ಕಾಣಿಸಿಕೊಂಡು ಬಹು ವಿಕಾರವಾಗಿ ಓಲಾಡುತ್ತಾ,—ನಾನು ಹೇಳಿದ ಹಾಗೆ ನೀನು ನಡೆದರೆ ನಿನ್ನ ಮಗನನ್ನು ಬದುಕಿಸಿಕೊಡುತ್ತೇನೆ ಎಂದು ಆವೇಶ ಬಂದು ಓಲಾಡುವ ಹೆಂಡತಿಯ ಮಾತಿಗೆ ಮರುಳಾಗಿ ನಾಗಪ್ಪನು ಆಕೆಯು ಹೇಳಿದ ಪ್ರಕಾರ ದೊಂದಿಗಳನ್ನು ಮಾಡಿ, ಅದಕ್ಕೆ ಬೇಕಾದಷ್ಟು ಎಣ್ಣೆಯನ್ನು ಉರಿಯುವ ದೊಂದಿಗೆ ಹಾಕುತ್ತಾ, ಅದರಿಂದ ಕಾದು ಕುದಿಯುತ್ತಿದ್ದ ಎಣ್ಣೆಯನ್ನು ಹುಡುಗನ ಕಣ್ಣು, ಕಿವಿ, ಮುಖ, ಮೈ ಕೈ ಮೊದಲಾದವುಗಳ ಮೇಲೆಲ್ಲಾ ಸುರಿದು ಸುಡುತ್ತಾ ಬಂದರು ಆ ಗಲಾಟೆಯನ್ನು ನೆರೆಹೊರೆಯವರು ಕೇಳಿ ಅಲ್ಲಿಗೆ ಕೆಲವರು ಬಂದು ಸೇರಿದರು ಅವರ ಬುದ್ಧಿಯೂ ಈ ಅಲ್ಪಮತಿಗಳ ಜೊತೆಯಲ್ಲಿಯೇ ಸೇರಿಹೋಯಿತು ಬಾಲಕನು ಕಾದ ಎಣ್ಣೆಯ ಉರಿಯನ್ನು ತಾಳಲಾರದೆಯೂ ದೆವ್ವ ಪೀಡಿತರ ಕಾಲಿನ ಒದೆಯನ್ನು ಸಹಿಸದೆಯೂ,—ಅಪ್ಪಾ ಎಡಿಸೋ ಎಂದು ಆರ್ತಧ್ವನಿಯಿಂದ ಮೊರೆಯಿಟ್ಟರೂ ದೆವ್ವಪೀಡಿತರು ಬಿಡಲಿಲ್ಲ ಬಾಲಕನ ಮೊರೆಯು ತಂದೆಗಾಗಲಿ, ಅಲ್ಲಿ ಸೇರಿದ್ದ ಮಹನೀಯರ ಮನಸ್ಸಿಗಾಗಲಿ ಏರಲಿಲ್ಲ ಬೀಟಿನ ಮೇಲಿದ್ದ ಪೊಲೀಸ್ ಕಾನ್ಸ್ಟೇಬಲ್ ಸ್ವಲ್ಪ ಹೊತ್ತು ನಿಂತು ನೋಡಿ ಭಕ್ತಿಪೂರ್ವಕವಾಗಿ ನಡೆಯುವ ಅವರ ಕೆಲಸಗಳಿಗೆ ಬೆರಗಾಗಿ, ಬೇರೆಕಡೆ ಬೀಟ್ ಕೆಲಸದ ಮೇಲೆ ಹೊರಟುಹೋದನು ಕೆಲವು ಗಂಟೆಗಳ ತರುವಾಯ ನಿತ್ರಾಣನಾದ ಬಾಲಕನು ತಾಯಿಯಿಂದುಂಟಾದ ಹಿಂಸೆಯನ್ನು ತಾಳಲಾರದೆ ಪ್ರಾಣಬಿಟ್ಟನು ಇದನ್ನು ಕಂಡು ಕುಪಿತನಾದ ತಂದೆಯು ಭಯಾಕ್ರಾಂತನಾಗಿ ಸರ್ಕಾರದವರಿಂದ ಮುಂದೇನು ವಿಪತ್ತಿಯಾಗುವುದೋ ಎಂಬ ಭೀತಿಯಿಂದ ಉದಯ ಕಾಲಕ್ಕೆ ಮುಂಚೆ ತಾನಾಗಿ ಹೆಣವನ್ನು ಸುಡುಗಾಡಿಗೆ ಸಾಗಿಸಿ ದಹನ ಕಾರ್ಯವನ್ನು ನಡಿಸಬೇಕೆಂಬ ಪ್ರಯತ್ನದಲ್ಲಿರುವಾಗ್ಗೆ ಬಾಲಕನು ಸತ್ತ ಸೂಚನೆಯನ್ನು ಬೀಟ್ ಕಾನ್ಸ್ಟೆಬಲ್ ಕೇಳಿ ತನ್ನ ಮೇಲ್ಪಟ್ಟ ದಫೇದಾರರಿಗೆ ತಿಳಿಸಿದನು ಅವನು ಅಮಲ್ದಾರವರಿಗೆ ರಿಪೋರ್ಟು ಮಾಡಿದರ ಅಮಲ್ದಾರವರು ಹೆಣವನ್ನು ತಡೆಸಿ, ತಾವು ಬಿರುಸಾಗಿ ಬಂದು ಡಾಕ್ಟರವರ ಅಜಮಾಯಿಷಿ ಆಗುವ ಪರಿಯಂತರಕ್ಕೂ ಹೆಣವನ್ನು ಸುಡದೆ ಇಟ್ಟಿರುವಂತೆ ಅಪ್ಪಣೆ ಮಾಡಿದರು ಆ ಕೂಡಲೆ ಅಮಲ್ದಾರರೂ ಡಾಕ್ಟರವರೂ ಸುಡುಗಾಡಿಗೆ ಹೋಗಿ ಹೆಣವನ್ನು ಕೊಯ್ದು ನೋಡಬೇಕಾದ ಎಲ್ಲಾ ಭಾಗಗಳನ್ನೂ ಸರಿಯಾಗಿ ಪರೀಕ್ಷಿಸಿದ ಮೇಲೆ ದಹನಕಾರ್ಯಕ್ಕೆ ಅಪ್ಪಣೆಕೊಟ್ಟರು ದೆವ್ವ ಪೀಡಿತಳಾಗಿದ್ದು ಈಗ ಸ್ವಸ್ಥಚಿತ್ತಳಾಗಿ ಪುತ್ರಶೋಕದಲ್ಲಿ ಮಗ್ನಳಾಗಿರುವ ಹುಡುಗನ ತಾಯಿಯನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ ನಾಗಪ್ಪನ ವಿಚಾರಣೆಯು ಒಂದೆರಡು ದಿನ ನಡೆಯಿತು ಪುತ್ರಶೋಕಾಗ್ನಿಯು ನಾಗಪ್ಪನನ್ನು ದಹಿಸುತ್ತಾ ಜ್ವರರೂಪವಾಗಿ ಕಾಣಿಸಿಕೊಂಡು ಎರಡು ಮೂರು ದಿನಗಳಲ್ಲಿಯೇ ಮರಣಶಯ್ಯೆಯನ್ನಲಂಕರಿಸುವ ಹಾಗೆ ಮಾಡಿತು ಇದೇ ಡಿಸೆಂಬರ್ ೪ನೇ ತಾ ಶನಿವಾರದ ದಿನ ಚಿತಾಸಂಸ್ಕಾರವಾಯಿತು ನಾಗಮ್ಮನು ಅನ್ನಾಹಾರಗಳನ್ನು ತೊರೆದು, ಪತಿಪುತ್ರರ ಶೋಕಾಗ್ನಿಯಲ್ಲಿ ಮಗ್ನಳಾಗಿರುತ್ತಾಳೆ ೧೫ ೨೦ ಸಾವಿರ ರೂಪಾಯಿನ ಆಸ್ತಿಯುಳ್ಳ ಇವರಿಗೆ ಲಗ್ನವಾಗಿರುವ ಒಬ್ಬ ಹೆಣ್ಣು ಮಗಳೂ, ಲಗ್ನವಾಗದೆ ಇರುವ ೮ ವರುಷ ವಯಸ್ಸುಳ್ಳ ಮತ್ತೊಬ್ಬ ಹುಡುಗಿಯೂ, ಓಡಾಡುವ ಮತ್ತೊಂದು ಹೆಣ್ಣು ಹುಡುಗಿಯೂ ಇರುವರಲ್ಲದೆ ನಾಗಪ್ಪನ ಅಣ್ಣನೂ ಆತನ ಬೇರೊಬ್ಬ ಅಣ್ಣನ ಇಬ್ಬರು ಗಂಡುಮಕ್ಕಳೂ ಈ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ ಮುಂದೆ ಇದರ ವ್ಯವಸ್ಥೆಯು ಹೇಗಾಗುತ್ತೋ ನೋಡಬೇಕಾಗಿರುತ್ತೆ ಈ ಮಲೆನಾಡಿನ ಜನರಲ್ಲಿ ದೆವ್ವಗಳ ಭಕ್ತಿಯು ಎಷ್ಟಾಗಿರುತ್ತದೆಯೆಂದು ಮೇಲ್ಕಂಡ ಸಂಗತಿಯಿಂದ ಪರಿಷ್ಕಾರವಾಗಿ ತಿಳಿಯಬಹುದು ಇಂಥಾ ಭಕ್ತಿಯಿಂದಲೇ ನಾಗಪ್ಪನು ತಾನು ಪಡೆದ ಏಕಪುತ್ರನನ್ನು ಕಳೆದುಕೊಂಡದ್ದಲ್ಲದೆ ತಾನೂ ಮರಣಕ್ಕೆ ತುತ್ತಾದನು ಈಗಲಾದರೂ ಜನರು ತಮ್ಮ ಮೌಢ್ಯವಾದ ಸ್ಥಿತಿಯನ್ನು ಬಿಟ್ಟು ಏಕೋ ದೇವಾರಾಧನೆಯಲ್ಲಿ ಭಕ್ತಿ ಭರವಸೆಗಳುಳ್ಳವರಾಗುವಂತೆ ಕೋರುತ್ತೇನೆ

ವಾರ್ತಾದಾರ

ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರಾದ ಲಾರ್ಡ್ ಮಿಂಟೋ ಪ್ರಭುಗಳಿಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಆತಿಥ್ಯಗಳು

ಆನೆಗಳ ಕೆಡ್ಡಾ ಕ್ಯಾಂಪು ಮತ್ತು ಶಿಕಾರಿ.

ನವಂಬರ್ ತಾ ೨೮ನೇ ಭಾನುವಾರ ಮಧ್ಯಾಹ್ನ ೧೨ ೧೫ ಗಂಟೆಗೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಗಳಲ್ಲಿ ವೈಸ್‌ರಾಯ್ ಲಾರ್ಡ್ ಮಿಂಟೋ ಪ್ರಭುಗಳನ್ನೂ ಅವರ ಪತ್ನೀರವರೇ ಮೊದಲಾದ ಇತರ ಅತಿಥಿಗಳನ್ನೂ ರಾಜಧಾನಿಯಿಂದ ಕರೆದುಕೊಂಡು ಕಾಕನಕೋಟೆಯ ಕೆಡ್ಡಾ ಕ್ಯಾಂಪಿಗೆ ದಯಮಾಡಿ, ಸುಮಾರು ೩ ಗಂಟೆಗೆ ತಲುಪಿದರು ಮೈಸೂರಿನಿಂದ ೧೨ ಮೈಲಿ ದೂರ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಹುಲುಸಾದ ಬೆಳೆಗಳು ಬೆಳೆಯುತ್ತಿರುವುದೂ, ಆಚೆಗೆ ಇರುವ ೮ ಮೈಲಿ ದೂರ ಸಣ್ಣ ಕುರುಚಲು ಕಾಡು ಪ್ರದೇಶವೂ, ಬಳಿಕ ನೇತ್ರಾನಂದಕರವಾದ ಬೈಲು ಪ್ರದೇಶವೂ ದೊಡ್ಡ ಕಾಡೂ, ನೋಟಕ್ಕೆ ರಮ್ಯವಾಗಿತ್ತು ರಾಜಧಾನಿಯಿಂದ ಸುಮಾರು ೪೫ ಮೈಲಿ ದೂರದಲ್ಲಿರುವ ಕಾರಾಪುರದಲ್ಲಿ ಕೆಡ್ಡಾ ಕ್ಯಾಂಪು ಏರ್ಪಾಡಾಗಿತ್ತು ಅಲ್ಲಿ ಪ್ರಭುಗಳಿಗೂ ಇತರ ಅತಿಥಿಗಳಿಗೂ ಮೈಸೂರು ಸರ್ಕಾರದವರು ಸಕಲ ವಿಧವಾದ ವಸತಿಗಳನ್ನೂ ಸೌಕರ್ಯಗಳನ್ನೂ ವಿಶೇಷ ಜಾಗರೂಕತೆಯಿಂದಲೂ ಬಹು ತೃಪ್ತಿಕರವಾಗಿಯೂ ಮಾಡಿಸಿದ್ದರು ರಸ್ತೆಯ ಉದ್ದಕ್ಕೂ ಮನೋಹರವಾದ ಚಪ್ಪರಗಳೂ ಕಮಾನುಗಳೂ ಹಾಕಿದ್ದದ್ದಲ್ಲದೆ ಇತರ ವಿಧವಾದ ಅಲಂಕಾರಗಳನ್ನೂ ಮಾಡಿದ್ದದ್ದರಿಂದ ಮೋಟಾರ್ ಸವಾರಿಯು ಅವರಿಗೆಲ್ಲಾ ಬಹು ಆಹ್ಲಾದಕರವಾಗಿತ್ತು ಸುತ್ತುಮುತ್ತಿನ ಗ್ರಾಮಸ್ಥರು ತಂಡತಂಡವಾಗಿ ರಸ್ತೆಯ ಉದ್ದಕ್ಕೂ ನಿಂತು ಮಹಾರಾಜರವರ ಶ್ರೇಷ್ಠ ಅತಿಥಿಗಳನ್ನು ನೋಡಿ ಜಯಘೋಷದೊಡನೆ ಸಂತೋಷಪಡುತ್ತಿದ್ದರು

ವೈಸ್‌ರಾಯಿಯವರೇ ಮೊದಲಾದವರೆಲ್ಲಾ ಕಾರಾಪುರದ ಕ್ಯಾಂಪಿನಲ್ಲಿ ಫಲಾಹಾರಾದಿಗಳನ್ನು ಮಾಡಿ, ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳುತ್ತಿದ್ದು ಸುಮಾರು ಸಂಜೆಯಹೊತ್ತಿಗೆ ಅಲ್ಲಿಂದ ೬ ಮೈಲಿ ದೂರದಲ್ಲಿರುವ ಕಾಕನಕೋಟೆ ಕೆಡ್ಡಾ ಕ್ಯಾಂಪಿಗೆ ಮೋಟಾರ್ ಗಾಡಿಗಳಲ್ಲಿ ದಯಮಾಡಿದರು ಅಲ್ಲಿಗೆ ಮೈಸೂರು ಸರ್ಕಾರದ ಫಾರೆಸ್ಟ್ ಇಲಾಖೆಯವರು ಆನೆಗಳ ಹಿಂಡನ್ನು ನೋಡಲು ಓಡಿಸಿ ತಂದು ಕೆಡ್ಡಾ ಆವರಣದೊಳಕ್ಕೆ ಎಬ್ಬಿ, ಅವುಗಳನ್ನು ಕಟ್ಟಿಹಾಕುವ ವಿಧಾನ ಮುಂತಾದದ್ದನ್ನು ಸಾಕ್ಷಾತ್ತಾಗಿ ತೋರಿಸುವುದಕ್ಕೆ ಸಿದ್ಧಪಡಿಸಿಕೊಂಡಿದ್ದರು ಅಕ್ಟೋಬರ್ ಪ್ರಾರಂಭದಲ್ಲಿಯೇ ಕಾಕನಕೋಟೆಯಿಂದ ೧೫ ಮೈಲಿ ದೂರದಲ್ಲಿ ಮೊದಲನೆ ಆನೆಯ ಹಿಂಡು ಸಿಕ್ಕಿಬಿದ್ದಿತ್ತು ಅದರಲ್ಲಿ ಸುಮಾರು ೫೦ ಆನೆಗಳು ಇದ್ದವು ಫಾರೆಸ್ಟ್ ಇಲಾಖೆಯವರು ಮೂರುವಾರಗಳ ಹಿಂದೆಯೇ ಆ ಹಿಂಡನ್ನು ಸುತ್ತಿಕೊಂಡು, ಬಹಳ ಸಾಹಸಪ್ರಯತ್ನಗಳನ್ನು ಮಾಡಿ ಕೆಡ್ಡಾ ಆವರಣದೊಳಕ್ಕೆ ಓಡಿಸಿಕೊಂಡುಬಂದು ಕಾಪಾಡಿಕೊಂಡಿದ್ದರು

ಕೆಡ್ಡಾ ಎನ್ನುವುದು ಒಂದು ಜಂಗಲ್ ಪ್ರದೇಶ ಅದು ೪೦ ೫೦ ಎಕರೆಯಷ್ಟು ವಿಸ್ತಾರ ಉಳ್ಳದ್ದು ಇದರ ಸುತ್ತಲೂ ಆಳವಾದ ಕಂದಕವನ್ನು ತೋಡಿ, ಕಂದಕದ ಹೊರ ಪಾರ್ಶ್ವದಲ್ಲಿ ಗಳ ದೊಂಬು ಗಿಡ ಮರಗಳ ಕೊಂಬೆ ಮುಂತಾದವನ್ನು ನೆಟ್ಟು ಬೇಲಿ ಹಾಕಿರುವುದು ಈ ಕೆಡ್ಡಾದೊಳಗೆ ಬಂದ ಆನೆಗಳು ಈ ಬೇಲಿಯನ್ನು ಕಡಿದು ನುಗ್ಗಿಹೋಗುವುದೇನೂ ಕಷ್ಟವಲ್ಲ ಆದರೆ ಅದಕ್ಕೆ ಮುಂಚೆ ಅವು ಕಂದಕವನ್ನು ದಾಟುವುದೇ ಕಷ್ಟ ಕೆಲವು ವೇಳೆ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಪಡುವ ಆನೆಗಳು ಈ ಕಂದಕದಲ್ಲಿ ಬಿದ್ದುಬಿಡುವುವೂ ಹಿಂದಿರುವ ಆನೆಗಳು ಆ ಆನೆಗಳ ಮೇಲೆ ಕಾಲಿಟ್ಟು ಆಚೆದಡಕ್ಕೆ ಹೋಗಿ ಬೇಲಿಯನ್ನು ನುಗ್ಗಿ ಕೆಡವಿ ಹೊರಟುಹೋಗುವುದೂ ಉಂಟು ಅಂಥಾ ಸಂದರ್ಭಗಳಲ್ಲಿ ಆ ಬೇಲಿಯ ಆಚೆ ಜನರು ಅನೇಕವಾಗಿ ಉದ್ದಕ್ಕೂ ನಿಂತು ಬಂದೂಕು, ಜಾಗಟೆ, ತಮಟೆ, ಕೊಂಬು ಕಹಳೆಗಳನ್ನು ಬಡಿಯುತ್ತಾ ಶಬ್ದಮಾಡುತ್ತಾ, ಆನೆಗಳನ್ನು ಒಳಕ್ಕೆ ಓಡಿಸುತ್ತಾರೆ ವೈಸ್‌ರಾಯಿಯವರೇ ಮುಂತಾದವರೆಲ್ಲಾ ಅಲ್ಲಿ ನೋಡುತ್ತಿದ್ದಾಗ ಕೆಡ್ಡಾದಲ್ಲಿ ಸಿಕ್ಕಿ ಬಿದ್ದಿದ್ದ ಮೇಲ್ಕಂಡ ಆನೆಗಳ ಮಂದೆಯಲ್ಲಿ ಒಂದು ಹೆಣ್ಣಾನೆಯು ತನ್ನ ಮರಿ ಕಂದಕದಲ್ಲಿ ಬಿದ್ದಿದ್ದದ್ದನ್ನು ತನ್ನ ಸೊಂಡಿಲಿನಿಂದ ಮೇಲಕ್ಕೆ ಎತ್ತಿ ಕರೆದುಕೊಂಡಿತು

ಈಚೆಗೆ ನವಂಬರ್ ತಾ ೧೫ರಲ್ಲಿ ೩೦ ಆನೆಗಳಿದ್ದ ಒಂದು ಹಿಂಡು ಸಿಕ್ಕಿ ಇದನ್ನು ಕೆಡ್ಡಾದೊಳಕ್ಕೆ ತಂದು ಸೇರಿಸಿದ್ದರು ಇದನ್ನು ತಂದು ಸೇರಿಸುವುದು ಬಹಳ ಕಷ್ಟಸಾಧ್ಯವಾಯಿತು ಆ ಪೈಕಿ ೬ ಆನೆಗಳು ಕೆಡ್ಡಾದೊಳಕ್ಕೆ ನುಗ್ಗಿದವು ಹಿಂದೆ ಇದ್ದ ಒಂದು ಭಾರೀ ಆನೆಯು ಕೆಡ್ಡಾದ ಬಾಗಿಲ ಮೇಲೆ ಎತ್ತಿಕಟ್ಟಿದ್ದ ಗಡಿಯನ್ನು ತನ್ನ ಸೊಂಡಿಲಿನಿಂದ ಹಿಡಿದು ಎಳೆಯಲು ಭಾರವಾಗಿದ್ದ ಆ ಬಾಗಿಲು ಬಿದ್ದು ಮಾರ್ಗವು ಮುಚ್ಚಿಹೋಯಿತು ಆ ಭಾರಿ ಆನೆಯು ಬಾಗಿಲು ಬೀಳುವುದರಲ್ಲೇ ಒಳಕ್ಕೆ ಸೇರಿಕೊಂಡು, ಇತರ ಆನೆಗಳು ಒಳಕ್ಕೆ ಬಾರದಂತೆ ಮಾಡಿತು ಆಗ ಒಳಗೂ ಹೊರಗೂ ಎರಡಾಗಿ ಭಾಗಮಾಡಲ್ಪಟ್ಟ ಆ ಹಿಂಡು ರೋಷದಿಂದ ಬಹು ಭಯಂಕರವಾಗಿ ಕೂಗುತ್ತಾ ಓಡುತ್ತಾ ಬಂದವು ಹೊರಗಿದ್ದ ಆನೆಗಳನ್ನು ಒಳಕ್ಕೆ ಸೇರಿಸುವ ಮಾರ್ಗ ಕಾಣದೆ ಆಳುಗಳು ಬಹು ಶ್ರಮಪಟ್ಟರು ಆಗ ಆ ಕನ್ಸರ್ವೇಟರ್ ಮುತ್ತಯ್ಯನವರು ಬೇಲಿಯನ್ನು ಸ್ವಲ್ಪ ಕಡಿದು ಹಾಕಿ ಕಂದಕಕ್ಕೆ ಮಣ್ಣು ಸುರಿಸಿ ಬೇರೆ ಮಾರ್ಗವನ್ನು ಕಲ್ಪಿಸಿದರು ಜನರೆಲ್ಲ ಸೇರಿ ಪಂಕಿ ಕೊಳ್ಳಿಗಳನ್ನೂ ಪಂಜುಗಳನ್ನೂ ಹಿಡಿದು ಗುಂಡು ಹಾರಿಸುತ್ತಾ ಆ ಆನೆಗಳನ್ನು ಕೆಡ್ಡಾದೊಳಕ್ಕೆ ಓಡಿಸಿದರು

ಆನೆಗಳ ಮೂರನೇ ಹಿಂಡು ತಾ. ೬ ರಲ್ಲಿ ಸಿಕ್ಕಿತು ಫಾರೆಸ್ಟ್‌ನವರು ಸುಮಾರು ೬೦೦ ಜನ ಸೇರಿ ಅದನ್ನು ತಾ ೨೬ ರಲ್ಲಿ ಮುತ್ತಿಗೆ ಹಾಕಿಕೊಂಡು ಆರು ದಿನಗಳ ವರೆಗೂ ಕೆಡ್ಡಾದಿಂದ ಹೊರಗಡೆಯೇ ಅದನ್ನು ಆಚೆ ಹೋಗದಂತೆ ಕಾಪಾಡುತ್ತಾ ಇದ್ದರು ಇದನ್ನು ಕೆಡ್ಡಾದೊಳಕ್ಕೆ ಓಡಿಸಿಕೊಂಡು ಬರುವ ವಿಧಾನವನ್ನು ವೈಸ್‌ರಾಯಿ ಮುಂತಾದ ಅತಿಥಿಗಳಿಗೆ ಸಾಕ್ಷಾತ್ತಾಗಿ ತೋರಿಸಬೇಕೆಂಬುವುದೇ ಅವರ ಉದ್ದೇಶವಾಗಿತ್ತು ವೈಸ್‌ರಾಯಿಯವರೂ ಶ್ರೀಮನ್ ಮಹಾರಾಜರವರೂ ಯುವರಾಜರೂ ಮೊದಲಾದವರೆಲ್ಲಾ ನದಿಯ ಒಳಗೆ ದಯಮಾಡಿ, ಎತ್ತರವಾಗಿ ಕಟ್ಟಿದ್ದ ಮಚ್ಚಣಿಗೆಗಳ ಮೇಲೆ ಕುಳಿತುಕೊಂಡರು ಜನರು ಆ ಆನೆಗಳ ಹಿಂಡನ್ನು ಅತ್ತಿತ್ತ ಚದರಿಹೋಗದಂತೆ ಸುತ್ತಿಕೊಂಡು ನಾನಾವಿಧವಾದ ಶಬ್ದಗಳನ್ನು ಮಾಡುತ್ತಾ ಓಡಿಸಿಕೊಂಡು ಬಂದು ಕೆಡ್ಡಾ ಬಾಗಿಲಮೂಲಕ ಅವುಗಳನ್ನೆಲ್ಲಾ ಒಳಕ್ಕೆ ಸೇರಿಸಿದರು ಆನೆಗಳು ಬಲಿಷ್ಠವಾಗಿರುವುದನ್ನು ನೋಡಿದರೆ ತುಂಬಾ ಗಾಬರಿಬೀಳುವುದರಿಂದ ನೋಟಕರೆಲ್ಲಾ ಕಪ್ಪು ದಿರಸುಗಳನ್ನೇ ಹಾಕಿಕೊಂಡು, ಈ ಹಿಂಡಿನ ಚಲ್ಲಾಟಗಳನ್ನೂ ಮೂರ್ಖತನವನ್ನೂ ಕಡೆಗೆ ಸಿಕ್ಕಿಬಿದ್ದದ್ದನ್ನೂ ನೋಡಿ ತುಂಬಾ ಸಂತೋಷಪಟ್ಟರು ಈ ಹಿಂಡಿನಲ್ಲಿ ಸುಮಾರು ೧೫ ಆನೆಗಳಿದ್ದವು ಇವು ಹಿಂದಕ್ಕೆ ತಪ್ಪಿಸಿಕೊಂಡು ಹೋಗಬೇಕೆಂದು ಬಹು ಪರಾಕ್ರಮಯುಕ್ತವಾಗಿ ಸಾಹಸಪಟ್ಟರೂ ಸಾರ್ಥಕವಾಗಲಿಲ್ಲ, ಎಲ್ಲಾ ಕೆಡ್ಡಾದೊಳಗೆ ಸಿಕ್ಕಿಬಿದ್ದವು ಇದನ್ನೆಲ್ಲಾ ನೋಡಿಕೊಂಡು ಅವರು ಅಲ್ಲಿಂದ ರಾತ್ರಿ ೭ ಗಂಟೆಗೆ ಹಿಂತಿರುಗಿ ಕಾರಾಪುರದ ಕ್ಯಾಂಪಿಗೆ ಬಂದುಬಿಟ್ಟರು

ತಾ ೨೯ನೇ ಸೋಮವಾರ ಬೆಳಗ್ಗೆ ೧೧ ಗಂಟೆಗೆ ಭೋಜನವಾದ ಕೂಡಲೇ ಶ್ರೀಮನ್ ಮಹಾರಾಜರವರೂ ಯುವರಾಜರವರೂ ವೈಸ್‌ರಾಯಿ ಪ್ರಭುಗಳೇ ಮೊದಲಾದ ಅತಿಥಿಗಳನ್ನು ಕರೆದುಕೊಂಡು ಮೋಟಾರ್ ಗಾಡಿಗಳಲ್ಲಿ ಕೆಡ್ಡಾ ಆವರಣದ ಸಮೀಪಕ್ಕೆ ದಯಮಾಡಿ ಅದರ ಹೊರಪಾರ್ಶ್ವದಲ್ಲಿ ಬಹಳ ಎತ್ತರವಾಗಿಯೂ ಸುರಕ್ಷಿತವಾಗಿಯೂ ಹಾಕಿದ್ದ ಮಚ್ಚಣಿಗೆಗಳ ಮೇಲೆ ಕುಳಿತುಕೊಂಡು, ಕೆಡ್ಡಾ ಆವರಣದೊಳಗಿದ್ದ ಆನೆಗಳ ಕಾಲಿಗೆ ಹಗ್ಗ ಹಾಕಿ ಕಟ್ಟಿಹಾಕಿದ ವಿಧಾನವನ್ನೆಲ್ಲಾ ಕುತೂಹಲಪೂರ್ವಕವಾಗಿ ಕಣ್ಣಾರ ಪರಾಂಬರಿಸಿ ಆನಂದಪಟ್ಟರು ಅದು ಹ್ಯಾಗೆಂದರೆ—ಕೆಡ್ಡಾ ಆವರಣದೊಳಗಡೆ ಸಣ್ಣ ಪ್ರದೇಶವನ್ನು ಗೊತ್ತುಮಾಡಿ ಇದರ ಸುತ್ತಲೂ ಬಲವಾದ ಬೇಲಿ ಹಾಕಿ, ಇದಕ್ಕೆ ಮೇಲಿನಿಂದ ಬೀಳುವಂಥಾ ಬಾಗಿಲನ್ನು ಇಟ್ಟಿದ್ದರು ಈ ಒಳ ಪ್ರದೇಶವು ಸುಮಾರು ೩೦ ಚದರ ಅಡಿಯಷ್ಟು ವಿಸ್ತಾರವಾಗಿತ್ತು ಒಗ್ಗಿಸಿ ತರಪೇತಾದ ಎಂಟು ಭಾರೀ ಆನೆಗಳನ್ನು (ಇವಕ್ಕೆ ಕುಮಕಿ ಆನೆಗಳೆಂದು ಹೆಸರು) ಮಾವುತರು ಮೇಲೆ ಕುಳಿತು ಕೆಡ್ಡಾದೊಳಕ್ಕೆ ನಡಿಸಿಕೊಂಡು ಹೋಗಿ ಹೊಸ ಆನೆಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಿದರು ಕುಮಕಿ ಆನೆಗಳು ಹೊಸ ಆನೆಗಳ ಸಂಗಡ ತಿರುಗುತ್ತಾ ಒಂದೊಂದಾನೆಯ ಎರಡು ಕಡೆಗಳಲ್ಲೂ ನಿಂತು ಸೊಂಡ್ಲು ಸೊಂಡ್ಲಿಗೆ ಗಂಟು ಹಾಕುತ್ತಾ ತೊಂದರೆ ಮಾಡುವವುಗಳನ್ನು ತಡೆದು ನಿಲ್ಲಿಸುತ್ತಾ ಬಂದವು ಕೆಲವು ಆನೆಗಳು ಕುಮಕಿ

ಆನೆಗಳ ಕೂಡ ಸ್ವಲ್ಪ ದೂರ ಬಂದು ಮತ್ತೆ ತಪ್ಪಿಸಿಕೊಂಡು ಹೋದವು. ಆದರೂ ಕುಮಕಿಗಳೂ ಮಾವುತರೂ ಅವುಗಳನ್ನು ಬಿಡದೆ ಜಂಟಿಹಾಕಿ ಕರೆದುತಂದು ಆ ಸಣ್ಣ ಆವರಣದೊಳಕ್ಕೆ ಸೇರಿಸಿದ್ದಾಯಿತು. ಕುಮಕಿ ಆನೆಗಳ ಮೇಲಿದ್ದ ಆಳುಗಳು ಕೂಡಲೇ ನೆಲದ ಮೇಲೆ ಇಳಿದು ಬಹು ಧೈರ್ಯದಿಂದ ಹಗ್ಗಗಳ ಉರುಳುಗಳನ್ನು ಹೊಸ ಆನೆಗಳ ಕಾಲುಗಳಿಗೂ ಕೊರಳಿಗೂ ಹಾಕಿ ಇನ್ನೊಂದು ಕೊನೆಯನ್ನು ಆ ಆವರಣದ ಹೊರಗಡೆ ದೂರದಲ್ಲಿರುವ ಭಾರೀ ಮರಗಳಿಗೆ ಕಟ್ಟುತ್ತಾ ಬಂದರು. ಮರಿಗಳ ಸಹಿತವಾಗಿದ್ದ ಹೆಣ್ಣಾನೆಗಳನ್ನು ಹಿಡಿದು ಕಟ್ಟುವುದು ಬಹಳ ಪ್ರಯಾಸವಾಯಿತು. ಇದೇ ಪ್ರಕಾರ ಮಾವುತರೇ ಮೊದಲಾದವರು ಮಧ್ಯಾಹ್ನ ೨ ಗಂಟೆಯ ವರೆಗೆ ಸಾಹಸಪಟ್ಟು ಏಳು ಹೊಸ ಆನೆಗಳನ್ನು ಮಾತ್ರ ಕಟ್ಟಿಹಾಕಿದರು. ತರುವಾಯ ಕುಮಕಿ ಆನೆಗಳು ಆ ಏಳನ್ನೂ ಜೊತೆಯಲ್ಲಿ ಒಳಗಿನಿಂದ ಹೊರಗಿನ ಖೆಡ್ಡಾ ಆವರಣಕ್ಕೆ ತಂದುಬಿಟ್ಟವು. ಇದೂ, ಅವುಗಳನ್ನೆಲ್ಲಾ ಅಲ್ಲಿಂದ ನೀರಿದ್ದ ನದಿಯ ಬಳಿಗೆ ಎಳೆದುಕೊಂಡು ಹೋದದ್ದೂ ಬಹು ಉತ್ಸಾಹಕರವೂ ಆಶ್ಚರ್ಯಮಯವೂ ಆಗಿತ್ತು. ನೋಟಕರೆಲ್ಲಾ ಮಚ್ಚಣೆಗಳಿಂದ ಕೆಳಕ್ಕೆ ಇಳಿದುಬಂದು, ಹೊಸ ಆನೆಗಳನ್ನು ನೀರಿನ ಸಮೀಪಕ್ಕೆ ಕರೆದುಕೊಂಡು ಹೋದದ್ದನ್ನು ನೋಡಿದರು. ಆದರ ಒಳಯುಕ್ತಿ: ಆ ಆನೆಗಳನ್ನು ಕಟ್ಟಿಹಾಕಿ ಒಗ್ಗಿಸುವುದಕ್ಕೆ ಸ್ಥಳ ಮಾಡಿರುತ್ತಾರೆ. ವೈಸ್‌ರಾಯಿ ದಂಪತಿಗಳು ಮಹಾರಾಜರೇ ಮುಂತಾದವರೆಲ್ಲಾ ಮಧ್ಯಾಹ್ನ ೨-೩೦ ಗಂಟೆಗೆ ಹಿಂತಿರುಗಿ ಕಾರಾಪುರದ ಕ್ಯಾಂಪಿಗೆ ದಯಮಾಡಿ ಫಲಾಹಾರಗಳನ್ನು ತೀರಿಸಿಕೊಂಡು, ಮತ್ತೆ ಸಾಯಂಕಾಲವೂ ಬಂಗಡಿಯಲ್ಲಿ ಉಳಿದಿದ್ದ ಇನ್ನು ಕೆಲವು ಆನೆಗಳನ್ನು ಕಟ್ಟಿಹಾಕುವ ವಿಧಾನವನ್ನೆಲ್ಲಾ ಪರಾಂಬರಿಸಿದರು.

ಶಿಕಾರಿಗಾಗಿ ದಯಮಾಡಿದ್ದು.

ತಾ. ೩ನೇ ಮಂಗಳವಾರ ಬೆಳಿಗ್ಗೆ ಮಧ್ಯದ ಆವರಣದೊಳಗೆ ಉಳಿದಿದ್ದ ಆನೆಗಳನ್ನು ಮೇಲ್ಕಂಡ ಪ್ರಕಾರ ಕಟ್ಟಿಹಾಕಿದ್ದಾಯಿತು. ನದಿಯ ಹತ್ತಿರ ಪ್ರತಿಯೊಂದು ಆನೆಯನ್ನೂ ಒಗ್ಗಿಸುವುದಕ್ಕಾಗಿ ಪ್ರತ್ಯೇಕ ಪ್ರತ್ಯೇಕ ಸ್ಥಳದಲ್ಲಿ ಸಣ್ಣ ಸಣ್ಣ ಬೇಲಿಗಳನ್ನು ಹಾಕಿ, ಅವುಗಳೊಳಗೆ ಬಿಡುತ್ತಾರೆ. ಸಣ್ಣ ಆನೆಗಳನ್ನು ಸಾಧು ಮಾಡುವುದಕ್ಕೆ ೨ ಮೂರು ತಿಂಗಳೂ ದೊಡ್ಡವುಗಳಿಗೆ ೬ ೭ ತಿಂಗಳೂ ಬೇಕಾಗುವುದು. ಖೆಡ್ಡಾದಲ್ಲಿ ಕಟ್ಟಿಹಾಕದೇ ಇರುವ ಎರಡು ಹಿಂಡು ಆನೆಗಳಿರುತ್ತವೆ. ಇವುಗಳಲ್ಲಿ ಕೆಲವು ಬಹಳ ಘೋರಿಯಾದವು. ಒಂದು ಆನೆಯ ದಂತವು ಅರೆವಾಸಿ ಮುರಿದುಹೋಗಿರುತ್ತದೆ. ಇವೆಲ್ಲಾ ಸ್ಟೀಟ್ಟಿಯಿಂದ ತಿರುಗುವುದೇ ಒಂದು ಆಶ್ಚರ್ಯವಾದ ನೋಟವಾಗಿದೆ.

ಈ ದಿನ ಬೆಳಿಗ್ಗೆ ವೈಸ್‌ರಾಯಿ ಪ್ರಭುಗಳೂ, ಶ್ರೀಮನ್ ಮಹಾರಾಜರವರೂ, ಕರ್ನಲ್ ಏಕ್ಟರ್ ಬ್ರೂಕ್ ರವರೂ ಟಾಂಗಾ ಗಾಡಿಗಳಲ್ಲಿ ಕಾರಾಪುರದ ಕ್ಯಾಂಪಿನಿಂದ ೧೫ ಮೈಲಿ ದೂರದಲ್ಲಿರುವ ಕಲ್ಕೆರೆ ಎಂಬ ಸ್ಥಳಕ್ಕೆ ಹೋಗಿ, ಅಲ್ಲಿ ಆನೆಗಳ ಮೇಲೆ ಕುಳಿತು ಮನೂರುಮಾರಿ ಎಂಬ ಕಾಡಿನೊಳಕ್ಕೆ ಶಿಕಾರಿಯ ಉದ್ದೇಶ ದಯಮಾಡಿದರು. ಅಲ್ಲಿ ಒಂದು ಸಲಗವು ಸಿಕ್ಕಿತು. ಇದನ್ನು ಸಿಕಾರಿ ಮಾಡದೆ ಬಿಟ್ಟುಬಿಟ್ಟರು. ಮುಂದೆ ಹೋಗುವಲ್ಲಿ ಕಾಡು ಹಂದಿಗಳ ಗುಂಪು ಸಿಕ್ಕಿತು. ವೈಸ್‌ರಾಯಿಯವರು ಒಂದನ್ನು ಗುಂಡಿನಿಂದ ಹೊಡೆದು ಕೆಡವಿದರು. ಅವರೆಲ್ಲಾ ವಾಪಸು ಕ್ಯಾಂಪಿಗೆ ಬರಲು ರಾತ್ರಿ ೯ ಗಂಟೆಯಾಯಿತು. ಮಧ್ಯಾಹ್ನದ ಮೇಲೆ ಅವರು ಮತ್ತೆ ಹೋಗಿ ಇನ್ನೊಂದು ಮೃಗವನ್ನು ಸಂಹಾರಮಾಡಿದರು.

ಡಿಸೆಂಬರ್ ತಾ ೧ನೇ ಬುಧವಾರವೂ ಅವರೆಲ್ಲಾ ಶಿಕಾರಿಮಾಡುವುದಕ್ಕೆ ದಯಮಾಡಿದ್ದರು. ವೈಸ್‌ರಾಯಿಯವರ ಪತ್ನೀರವರೂ, ಲೇಡಿ ಎಲೀನ್ ಎಲಿಯಟ್‌ಯವರೂ, ಮದರಾಸ್ ಗವರ್ನರವರ ಕುಮಾರ ಕುಮಾರ್ತೆಯರೂ ಕ್ಯಾಂಪಿನಿಂದ ಹೆಗ್ಗಡದೇವನಕೋಟೆ ಜಂಗಲಿಗೆ ಹೋಗಿ ಮಧ್ಯಾಹ್ನ ೩ ೩೦ ಗಂಟೆಯತನಕ ಸಂಚಾರಮಾಡಿ ಅಲ್ಲಿ ಸಿಕ್ಕಿದ ಒಂದು ಹುಲಿಯನ್ನು ಗಾಯಮಾಡಿದರು. ಆದರೆ ಅದು ಏಟುತಿಂದು ತಪ್ಪಿಸಿಕೊಂಡು ಓಡಿಹೋಯಿತು.

ಆನೆಗಳ ಕಟ್ಟಿದ್ದನ್ನು ನೋಡುವುದು.

ತಾ. ೭ನೇ ಗುರುವಾರ ಬೆಳಿಗ್ಗೆ ವೈಸ್‌ರಾಯಿ ದಂಪತಿಗಳೂ ಶ್ರೀಮನ್ ಮಹಾರಾಜರವರೂ ಇತರ ಅತಿಥಿಗಳೂ ಸೇರಿ ಕಾರಾಪುರದ ಕ್ಯಾಂಪಿನಿಂದ ೯ ಗಂಟೆಗೆ ಹೊರಟು, ಖೆಡ್ಡಾಕ್ಕೆ ದಯಮಾಡಿ ಆನೆಗಳನ್ನು ಕಟ್ಟಿಹಾಕಿದ್ದನ್ನು ಪರಾಂಬರಿಸಿದರು. ಮತ್ತೆ ಅವರೆಲ್ಲಾ ಮಧ್ಯಾಹ್ನವೂ ಖೆಡ್ಡಾವಿಗೆ ಹೋಗಿ, ಸಾಯಂಕಾಲ ೬ ಗಂಟೆ ತನಕ ಆನೆಗಳ ಕಟ್ಟಿಹಾಕಿದ್ದನ್ನು ನೋಡುತ್ತಿದ್ದರು.

ರಾಜಧಾನಿಗೆ ದಯಮಾಡಿದ್ದು.

ಆ ದಿನ ರಾತ್ರಿ ಖೆಡ್ಡಾ ಕ್ಯಾಂಪಿನಿಂದ ಶ್ರೀಮನ್ ಮಹಾರಾಜರವರೂ ಯುವರಾಜರವರೂ ವೈಸ್‌ರಾಯಿ ದಂಪತಿಗಳನ್ನೂ ಅವರ ಸಂಗಡಿಗರನ್ನೂ ಮೋಟಾರ್ ಗಾಡಿಗಳಲ್ಲಿ ಕೂಡಿಸಿಕೊಂಡು ಸುಮಾರು ೭ ಗಂಟೆಗೆ ಹೊರಟು ರಾತ್ರಿ ೯ ಗಂಟೆಗೆ ವಾಪಸು ರಾಜಧಾನಿಗೆ ಸುರಕ್ಷಿತವಾಗಿ ಕರೆದುಕೊಂಡು ಬಂದರು. ರಸ್ತೆಯ ಉದ್ದಕ್ಕೂ ಆ ದಿನ ರಾತ್ರಿ ಮಾಡಿದ್ದ ದೀಪೋತ್ಸವವೂ, ಉಭಯಪಾರ್ಶ್ವಗಳಲ್ಲೂ ಗುಂಪು ಕಟ್ಟಿ ವೈಸ್‌ರಾಯಿ ದಂಪತಿಗಳನ್ನು ನೋಡುವುದಕ್ಕಾಗಿ ನಿಂತು ಇದ್ದ ಪ್ರಜೆಗಳ ಉತ್ಸಾಹವೂ ಬಹು ವಿಶೇಷವಾಗಿದ್ದುದಾಗಿತ್ತು.

ಮದರಾಸ್ ಗವರ್ನರವರ ಕುಮಾರರು ಪುತ್ರಿಯರೂ ಆ ರಾತ್ರಿ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಭೋಜನ ಮಾಡಿ, ಕೂಡಲೇ ರೈಲು ಹತ್ತಿ ಬೆಂಗಳೂರಿಗೂ, ಮರುದಿನ ಬೆಳಿಗ್ಗೆ ಅಲ್ಲಿಂದ ಮದರಾಸಿಗೂ ಪ್ರಯಾಣ ಮಾಡಿದರು.

ಶ್ರೀರಂಗಪಟ್ಟಣವನ್ನು ಪರಾಂಬರಿಸಿದ್ದು.

ತಾ ೩ನೇ ಶುಕ್ರವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಯುವರಾಜರವರ ಸಮೇತ ಅರಮನೆಯಿಂದ ಗವರ್ನ್‌ಮೆಂಟ್ ಹೌಸಿಗೆ ದಯಮಾಡಿದರು. ವೈಸ್‌ರಾಯಿ ದಂಪತಿಗಳೂ ಅವರ ಕೈಕೆಳಗಿನ ಅಧಿಕಾರಿಗಳೂ ಭೋಜನವನ್ನು ತೀರಿಸಿಕೊಂಡು, ಶ್ರೀಮನ್ ಮಹಾರಾಜರವರಿಗೆ ಭೇಟಿಕೊಟ್ಟು, ಸ್ವಲ್ಪ ಹೊತ್ತು ಅವರ ಕೂಡ ಸಂಭಾಷಣೆ ಮಾಡುತ್ತಾ ಅವರು ಮಾಡಿಸಿದ ಸಮಸ್ತ ಸತ್ಕಾರಗಳೂ ತೃಪ್ತಿಕರವಾಗಿಯೂ ಸಂತೋಷಪ್ರದವಾಗಿಯೂ ಇದ್ದವೆಂದು ಅಪ್ಪಣೆಕೊಡಿಸಿ, ಅವರನ್ನು ಬಹಳವಾಗಿ ವಂದನೆ ಮಾಡಿ, ಅವರಿಂದ ಬೀಳ್ಕೊಂಡು, ಸಿದ್ಧವಾಗಿದ್ದ ಮೋಟಾರ್ ಗಾಡಿಗಳನ್ನು ಹತ್ತಿ ಹೊರಟು ಅರ್ಧ ಗಂಟೆಯೊಳಗಾಗಿ ಶ್ರೀರಂಗಪಟ್ಟಣವನ್ನು ತಲುಪಿದರು. ದಾರಿಯ ಉದ್ದಕ್ಕೂ ಫಲಭರಿತವಾಗಿದ್ದ ಜಮೀನುಗಳನ್ನೂ ದಡಗಳನ್ನು ಕಟ್ಟಿ ಮನೋಹರವಾಗಿ ಹರಿಯುತ್ತಿದ್ದ ಕಾಲುವೆಗಳನ್ನೂ ತಣ್ಣನೆಯಾದ ನೆರಳನ್ನೂ ಆಹ್ಲಾದಕರವಾದ ಗಾಳಿಯನ್ನೂ ಪಡೆದಿದ್ದ ಸಾಲು ತೋಪುಗಳನ್ನೂ ವೈಸ್‌ರಾಯಿ ದಂಪತಿಗಳೂ ಪರಾಂಬರಿಸಿ ತುಂಬಾ ಹರ್ಷಗೊಂಡವರಾದರು.

ಶ್ರೀರಂಗಪಟ್ಟಣವು ಚರಿತ್ರೆಯಲ್ಲಿ ತುಂಬಾ ಪ್ರಖ್ಯಾತಿಯನ್ನು ಪಡೆದ ನಗರವಾಗಿತ್ತು. ಹೈದರ್ ಮತ್ತು ಟೀಪೂ ಸುಲ್ತಾನರು ಅದನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದು, ದಕ್ಷಿಣಕರ್ನಾಟಕ ದೇಶವನ್ನು ಗೆದ್ದು ಸಿಂಹಪ್ರಾಯರಾಗಿ ರಾಜ್ಯಭಾರಮಾಡುತ್ತಿದ್ದರು. ಒಂದುನೂರು ವರುಷಗಳ ಹಿಂದೆ ಈ ಸುಲ್ತಾನರುಗಳು ಮಾಡಿದ ಯುದ್ಧಗಳೂ ಸಾಹಸ ಪರಾಕ್ರಮ ಕಾರ್ಯಗಳೂ ಮೊಗಲಾಯರಲ್ಲೂ ಮರಾಟೆಯವರಲ್ಲೂ ಫ್ರೆಂಚರಲ್ಲೂ ಕೊಂಚಮಟ್ಟಿಗೆ ಇಂಗ್ಲಿಷರಲ್ಲೂ ವಿಸ್ಮಯವನ್ನುಂಟುಮಾಡಿದವು. ಟೀಪೂ ಸುಲ್ತಾನನು ಶ್ರೀರಂಗಪಟ್ಟಣವನ್ನು ಅಭೇದ್ಯವಾದ ರೀತಿಯಲ್ಲಿ ಮೂರುಸುತ್ತಿನ ಕೋಟೆಗಳಿಂದಲೂ ಮೂರುಸುತ್ತಿನ ಕಂದಕಗಳಿಂದಲೂ ಬಹು ಬಲವಾಗಿ ಕಟ್ಟಿ ಇದ್ದನೆಂಬುವುದನ್ನು ಈಗಲೂ ಸಾಕ್ಷಾತ್ತಾಗಿ ನೋಡಿದರೆ ವಿಸ್ಮಯವನ್ನುಂಟುಮಾಡುವುದಾಗಿದೆ. ಟೀಪೂ ಸುಲ್ತಾನನು ಯುದ್ಧದಲ್ಲಿ ಕೈಸೆರೆ ಹಿಡಿದು ತಂದ ಅನೇಕ ಮಂದಿ ಇಂಗ್ಲಿಷ್ ಸಿಪಾಯಿಗಳನ್ನು ಈ ಕೋಟೆಯಲ್ಲಿ ರಂಗನಾಥ ಗುಡಿಯ ಉತ್ತರಪಾರ್ಶ್ವದಲ್ಲಿ ಕೋಟೆಗಳ ನಡುವೆ ಒಂದು ನೆಲಮನೆಯಲ್ಲಿ ಸ್ವಲ್ಪವೂ ತಿಳಿಯದಂತೆ ಬಹುಕಾಲ ಇಟ್ಟುಕೊಂಡಿದ್ದನು. ಇವರಲ್ಲಿ ಒಬ್ಬನಾದ ಕರ್ನಲ್ ಬೈಯರ್ಡ್ ಎಂಬಾತನು ಹ್ಯಾಗೋ ಅಲ್ಲಿಂದ ತಪ್ಪಿಸಿಕೊಂಡು ಹೋಗಿ, ಕೋಟೆಯ ದುರ್ಬಲವಾದ ಭಾಗವನ್ನು ತನ್ನ ಇಂಗ್ಲಿಷ್ ಅಧಿಕಾರಿಗಳಿಗೆ ತಿಳಿಸಿ, ದೊಡ್ಡ ಸೈನ್ಯವನ್ನು ಕಟ್ಟಿಕೊಂಡುಬಂದು, ೧೭೯೯ ನೇ ಇಸವಿ ಮೇ ತಿಂಗಳ ೪ ನೇ ತಾರೀಖಿನ ದಿನ ದಕ್ಷಿಣಪಾರ್ಶ್ವದ ಕೋಟೆ ಗೋಡೆಯನ್ನು ಫಿರಂಗಿಗಳ ಹೊಡೆತದಿಂದ ಕೆಡವಿ, ನದಿಯಲ್ಲಿ ಇಂಗ್ಲಿಷ್ ಸೈನ್ಯವನ್ನು ನುಗ್ಗಿಸಿದನು. ಇವರು ಹಲ್ಲಾ ಹತ್ತಿ ನುಗ್ಗಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡದ್ದೂ, ಟೀಪೂಸುಲ್ತಾನನನ್ನು ಹಿಡಿಯಬೇಕೆಂದು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾಗಿ ಆ ರಣವೀರನ ಶವವು ಒಂದು ಕಡೆ ಸಿಕ್ಕಿದ್ದೂ ಚರಿತ್ರೆಯಲ್ಲಿ ಬರೆಯಲ್ಪಟ್ಟಿರುತ್ತವೆ. ಇಂಥಾ ಪ್ರಖ್ಯಾತವಾದ ಪಟ್ಟಣವನ್ನು ವೈಸ್‌ರಾಯಿ ಲಾರ್ಡ್ ಮಿಂಟೋ ದಂಪತಿಗಳು ಬೆಳಿಗ್ಗೆ ೧೦-೧೫ ಗಂಟೆಗೆ ತಲಪಿ, ಆನೇಬಾಗಿಲ ಮೂಲಕ ಕೋಟೆಯನ್ನು ಪ್ರವೇಶಿಸಿ ತಾಲ್ಲೂಕ್ ಕಛೇರಿಯ ಬಳಿ ಹಾಕಿಸಿದ್ದ ಹಸುರು ವಾಣೀ ಚಪ್ಪರದಲ್ಲಿ ಸ್ವಲ್ಪ ಹೊತ್ತು ನಿಂತು, ಅಲ್ಲಿ ಕಾದಿದ್ದ ಶ್ರೀರಂಗಪಟ್ಟಣ ಮತ್ತು ಗಂಜಾಮುಗಳ ಸರ್ಕಾರಿ ಅಧಿಕಾರಿಗಳಿಗೂ ಸಾಹುಕಾರಿ ದೊಡ್ಡ ಮನುಷ್ಯರಿಗೂ ಪ್ರಜೆಗಳ ಪ್ರತಿನಿಧಿಗಳಿಗೂ ಮ್ಯುನಿಸಿಪಲ್ ಕಮೀಷನರುಗಳಿಗೂ ಭೇಟಿ ದಯಪಾಲಿಸಿ, ಅವರು ಒಪ್ಪಿಸಿದ ಹಾರತುರಾಯಿಗಳನ್ನು ಆದರದಿಂದ ಸ್ವೀಕರಿಸಿ ಮುಂದೆ ಸಾಲುಕಟ್ಟಿ ನಿಂತು ಇಂಪಾದ ಗಾನದಿಂದ ಸುಸ್ವಾಗತವನ್ನು ಬಯಸಿದ ಬಾಲಿಕಾ ಪಾಠಶಾಲೆಯ ಮಕ್ಕಳನ್ನು ನೋಡಿ ತುಂಬಾ ಸಂತೋಷಪಟ್ಟು ಅಲ್ಲಿಂದ ಮುಂದಕ್ಕೆ ತೆರಳಿ, ಮುನ್ಸಿಫ್ ಕೋರ್ಟಿನ ಬಳಿ ಟೀಪೂ ಸುಲ್ತಾನನ ಕಾಲದಲ್ಲಿ ಫ್ರೆಂಚರ ಜನರಲ್‌ಯವರು ಮಾಡ್ರಿಗಾಗಿ ಕಟ್ಟಿ ಇರುವ 'ಉಯ್ಯಾಲೆ ಸೇತುವೆ' ಯನ್ನು (ಕಮಾನನ್ನು) ಪರಾಂಬರಿಸಿದರು. ರೈಲ್ವೆ ಸ್ಟೇಷನ್ ಎದುರು ಪಾರ್ಶ್ವದಲ್ಲಿ ಪಾಳು ಬಿದ್ದಿರುವ ಪೂರ್ವ ಕಾಲದ ಆಸ್ಪತ್ರೆಯನ್ನೂ, ಮದ್ದಿನ ಮನೆಗಳನ್ನೂ, ಇಂಗ್ಲಿಷರು ಹಲ್ಲಾ ಹತ್ತಿ ಬಂದ ಸ್ಥಳವನ್ನೂ, ಡಿಲ್ಲಿಗೆ ಹೋಗುವ ಕೋಟೆ ಬಾಗಿಲನ್ನೂ, ಇಂಗ್ಲಿಷರು ಬೈದಿಗಳಾಗಿ ನರಳಿದ ಬಂದೀಖಾನೆಯನ್ನೂ, ಈಗಿನ ಸರ್ಕಾರಿ ಸಂದಲ್ ಕೋಠಿ, ಟೀಪೂ ಸುಲ್ತಾನನು ಸತ್ತುಬಿದ್ದಿದ್ದ ಸ್ಥಳ ಮುಂತಾದವುಗಳನ್ನೂ ವೈಸ್‌ರಾಯಿಯವರು ಪರಾಂಬರಿಸಿಕೊಂಡು, ಗಂಜಾಮದಲ್ಲಿ ಹೈದರ್ ಮತ್ತು ಟೀಪೂ ಸುಲ್ತಾನರುಗಳ ಶವಗಳನ್ನು ದಫನ್ ಮಾಡಿರುವ ಗೋರಿಗಳನ್ನು ನೋಡುವುದಕ್ಕಾಗಿ ತೆರಳಿದರು. ಈ ಕಟ್ಟಡವೂ ಅದರ ಸೌಂದರ್ಯವೂ ಅಲ್ಲಿ ಮಾಡಿರುವ ಏರ್ಪಾಡುಗಳೂ ಪ್ರೋತ್ಸಾಹಕರಗಳಾಗಿರುತ್ತವೆ. ಇದನ್ನು ನೋಡಿಕೊಂಡು ಹಿಂತಿರುಗಿ ಬರುತ್ತಾ ದಾರಿಯಲ್ಲಿ ಸಿಕ್ಕುವ ಯೂರೋಪಿಯನ್ ಸಿಪಾಯಿಗಳ ಸಮಾಧಿಯನ್ನು ಪರಾಂಬರಿಸಿ, ಅಲ್ಲಿಂದ ದರಿಯಾ ದೌಲತ್ ಬಾಗ್ ಎಂಬ ಮಹಾಪ್ರಸಿದ್ಧವಾದ ಬಂಗಲೆಗೆ ದಯಮಾಡಿದರು. ಟೀಪೂ ಸುಲ್ತಾನನು ವಸಂತಕಾಲವನ್ನು ಈ ಉದ್ಯಾನಸಹಿತವಾದ ನೇತ್ರಾನಂದಕರವಾದ ಮನೋಹರವಾದ ಮಹಲ್‌ನಲ್ಲಿ ಕಳೆಯುತ್ತಿದ್ದನು. ಈ ಕಟ್ಟಡದ ರಚನೆಯೂ, ಅದರಲ್ಲಿ ಮಾಡಿರುವ ಮತ್ತು ಬರೆದಿರುವ ಚಿತ್ರಕೆಲಸಗಳೂ, ಚರಿತ್ರೆಯ ಕಥೆಗಳೂ, ಸುತ್ತಲೂ ಇರುವ ರಮಣೀಯವಾದ ಉದ್ಯಾನವನವೂ ಕವಿಗಳ ವರ್ಣನೆಗೆ ಯೋಗ್ಯಗಳಾಗಿರುತ್ತವೆ. ಹಿಂದುಸ್ಥಾನಕ್ಕೆ ಬಂದಿರುವ ವೈಸ್‌ರಾಯಿರುಗಳೂ, ಇತರ ಮಹನೀಯರುಗಳೂ ಇಂಥಾ ಶ್ರೀರಂಗಪಟ್ಟಣಕ್ಕೆ ಹ್ಯಾಗಾದರೂ ಒಂದಾವರ್ತಿ ಒಂದು ನೋಡಿ ಆಶ್ಚರ್ಯಪಟ್ಟುಕೊಂಡು ಹೋಗಿರುತ್ತಾರೆ.

ಬೆಂಗಳೂರಿನಲ್ಲಿ ನಡೆದ ಆತಿಥ್ಯಗಳು.

ಮಧ್ಯಾಹ್ನ ೧೨ ಗಂಟೆಗೆ ವೈಸ್‌ರಾಯಿ ದಂಪತಿಗಳು ಶ್ರೀರಂಗಪಟ್ಟಣವನ್ನೆಲ್ಲಾ ನೋಡಿಕೊಂಡು ಅಲ್ಲಿನ ರೈಲ್ವೆ ಸ್ಟೇಷನ್‌ಗೆ ದಯಮಾಡಿ ಅವರಿಗಾಗಿ ಕಾದಿದ್ದ ಸ್ಪೆಷಲ್ ಗಾಡಿಯನ್ನು ಹತ್ತಿ ಕುಳಿತುಕೊಂಡರು. ಮೈಸೂರಿನ ಪಶ್ಚಿಮ ಕಮಿಷನರಾದ ಮೆ|| ಎಂ. ಕಾಂತರಾಜೇ ಅರಸಿನವರು ಅವರ ಕೂಡ ಮದ್ದೂರಿನ ತನಕ ಹೋಗಿದ್ದು ವಾಪಸು ಬಂದರು. ದಿವಾನ್ ರೇ ಮುಂತಾದವರೂ, ಮೆ|| ದಳವಾಯಿ ದೇವರಾಜೇ ಅರಸಿನವರೂ, ಕರ್ನಲ್ ಜೋನ್ಸ್ ರವರೂ ಬೆಂಗಳೂರಿನಲ್ಲಿ ಆತಿಥ್ಯದ ಏರ್ಪಾಡುಗಳನ್ನು ನೋಡಿಕೊಳ್ಳುವುದಕ್ಕಾಗಿ ಹಿಂದಿನ ದಿನವೇ ಪ್ರಯಾಣ ಮಾಡಿದರು. ವೈಸ್‌ರಾಯಿಯವರ ಗಾಡಿಗಿಂತಲೂ ಮೊದಲೇ ಇನ್ನೊಂದು ಸ್ಪೆಷಲ್ ರೈಲ್ ಗಾಡಿಯು ಮೈಸೂರಿನಿಂದ ಹೊರಟು ಸುಮಾರು ೪|| ಗಂಟೆಗೆ ಬೆಂಗಳೂರನ್ನು ತಲುಪಿತು. ಇದರಲ್ಲಿ ಬ್ರಿಟಿಷ್ ರೆಸಿಡೆಂಟರೂ, ಅವರ ಪರಿವಾರದವರೂ, ವೈಸ್‌ರಾಯಿ ಯವರ ಪರಿವಾರದವರೂ ಹೋಗಿ ಇಳಿದರು. ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಬಹು ಅಲಂಕಾರ ಯುಕ್ತವಾದ ವಿಶಾಲವಾದ ಚಪ್ಪರವನ್ನು ಹಾಕಿದ್ದರು. ಚಪ್ಪರದ ಕಂಬಗಳಿಗೆ ಘಮಘಮಿಸುವ ಪುಷ್ಪ ಮಾಲೆಗಳನ್ನೂ ಕೋಮಲವಾದ ಚಿಗುರುಗಳನ್ನೂ ಕಟ್ಟಿ ಶೃಂಗರಿಸಿದ್ದರು. ನೆಲದ ಮೇಲೆ ಕೆಂಪು ವರ್ಣದ ಬನಾತನ್ನು ಹಾಸಿ ಕಳಕಳಿಸುವಂತೆ ಮಾಡಿದ್ದರು. ಈ ದಿವ್ಯವಾದ ಚಪ್ಪರದಲ್ಲಿ ಯೂರೋಪಿಯನ್ ಸರ್ದಾರರೂ ದೇಶೀಯ ದೊಡ್ಡ ಮನುಷ್ಯರೂ ಅಧಿಕಾರಸ್ಥರೂ ಹುದ್ದೇದಾರರೂ ದಂಡಿನಿಂದಲೂ ಬೆಂಗಳೂರು ಸಿಟಿಯಿಂದಲೂ ಶ್ರೇಷ್ಠವಾದ ದರ್ಬಾರ್ ದಿರಸುಗಳನ್ನು ಧರಿಸಿ ಬಂದು ವೈಸ್‌ರಾಯಿ ದಂಪತಿಗಳ ಸಂದರುಶನಕ್ಕಾಗಿ ಸ್ಪೆಷಲ್ ರೈಲು ಬರುವುದನ್ನೇ ಎದುರು ನೋಡುತ್ತಾ ಕಾದು ಇದ್ದರು.

ವೈಸ್‌ರಾಯಿಯವರ ಸ್ಪೆಷಲ್ ಗಾಡಿಯು ಸಾಯಂಕಾಲ ೫ ಗಂಟೆಗೆ ಸರಿಯಾಗಿ ಸ್ಟೇಷನ್‌ಗೆ ಹೋಗಿ ಪ್ಲಾಟ್‌ಫಾರಮಿನಲ್ಲಿ ನಿಂತಿತು. ವೈಸ್‌ರಾಯಿ ದಂಪತಿಗಳು ಗಾಡಿಯನ್ನು ಬಿಟ್ಟು ಇಳಿಯುತ್ತಿರುವಲ್ಲಿ ಗೌರವಾರ್ಥವಾದ ೩೧ ತೋಪುಗಳು ಹಾರಿದವು. ಇಂಗ್ಲಿಷ್ ಸೈನಿಕರು ಬ್ಯಾಂಡ್ ಬಾವುಟಗಳ ಸಹಿತ ಸಾಲು ಕಟ್ಟಿ ಪ್ಲಾಟ್‌ಫಾರಮಿನಲ್ಲಿ ನಿಂತು ವೈಸ್‌ರಾಯಿ ಪ್ರಭುಗಳಿಗೆ ಬಂದೂಕುಗಳನ್ನು ಎತ್ತಿ ತೋರಿಸಿ ಸನ್ಮಾನ ಮಾಡಿದರು. ಬ್ಯಾಂಡ್ ವಾದ್ಯಗಾರರು ಸಲಾಂ ಬಾಜಾವನ್ನು ನುಡಿಸಿದರು. ಬ್ರಿಟಿಷ್ ರೆಸಿಡೆಂಟರೂ ಅವರ ಸಹಾಧಿಕಾರಿಗಳೂ ಮುಂದೆ ಹೋಗಿ ವೈಸ್‌ರಾಯಿ ದಂಪತಿಗಳನ್ನು ವಂದಿಸಿ ಅವರಿಗೆ ಸುಸ್ವಾಗತವನ್ನು ಬಯಸಿದರು.

ಬಳಿಕ ಸಾಲುಕಟ್ಟಿ ನಿಂತಿದ್ದ ಸೈನ್ಯಾಧಿಪತಿಗಳೇ ಮೊದಲಾದವರನ್ನು ರೆಸಿಡೆಂಟರು ವೈಸ್‌ರಾಯಿಯವರಿಗೆ ಕಾಣಿಸಿ ಭೇಟಿ ಮಾಡಿಸಿದರು. ಜನರಲ್ ರಾಂಸೇ ಯವರು, ಜನರಲ್ ಟುಕರ್ ಯವರು, ದಿವಾನ್ ಮೆ|| ಟಿ. ಆನಂದರಾಯರು, ದಂಡಿನ ಮಿಲ್ಟೇರಿ ದೊಡ್ಡ ಹುದ್ದೇದಾರರು, ಸಿವಿಲ್ ಅಧಿಕಾರಿಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರ ಶೋಧನಾ ವಿದ್ಯಾಶಾಲೆಯ ಡೈರೆಕ್ಟರ್ ಡಾ|| ಮಾರಿಸ್ ಟ್ರಾವರ್ಸ್ ಯವರು, ಇವರ ಸಹೋದ್ಯೋಗಿಗಳು, ಮೈಸೂರು ಗವರ್ನ್‌ಮೆಂಟಿನ ಮುಖ್ಯಾಧಿಕಾರಿಗಳು, ದಂಡಿನ ಬೆಂಚ್ ಆಫ್ ಮ್ಯಾಜಿಸ್ಟ್ರೇಟರು, ದಂಡಿನ ಮತ್ತು ಸಿಟಿಯ ಮ್ಯುನಿಸಿಪಲ್ ಕೌನ್ಸೆಲರುಗಳು, ದಂಡಿನಲ್ಲಿ ಪ್ರೋತ್ಸಾಹ ಮಾಡಿ ಜನರಿಗೆ ಪ್ಲೇಗ್ ಸಿಡುಬನ್ನು ಹಾಕಿಸಿದ್ದಕ್ಕೆ ಸರ್ಟಿಫಿಕೇಟುಗಳನ್ನು ಪಡೆದ ಪ್ರಜೆಗಳ ಮುಖಂಡರು, ಇವರೆಲ್ಲಾ ವೈಸ್‌ರಾಯಿ ದಂಪತಿಗಳ ಭೇಟಿ ಮಾಡಿದರು. ಬಳಿಕ ವೈಸ್‌ರಾಯಿಯವರು ಸೈನಿಕರ ಲೈನಿನ ಮಧ್ಯೆ ದಯಮಾಡಿ ಅವರನ್ನು ನೋಡಿಕೊಂಡು, ಪತ್ನೀಸಹಿತರಾಗಿ ಚಪ್ಪರದೊಳಕ್ಕೆ ಚಿತ್ತೈಸಿದರು.

ದಂಡಿನ ಮ್ಯುನಿಸಿಪಲ್ ಅಡ್ರೆಸ್ಸು.

ಬೆಂಗಳೂರು ದಂಡಿನ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮೆ|| ಎಫ್. ಜೆ. ರಿಚರ್ಡ್ಸ್‌ಯವರು ಕಮೀಷನರುಗಳ ಸಮೇತ ವೈಸ್‌ರಾಯಿ ಪ್ರಭುಗಳನ್ನು ವಂದಿಸಿ, ಅವರಿಗೆ ಸುಸ್ವಾಗತಸೂಚಕವಾದ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ,—

ಬೆಂಗಳೂರು ದಂಡಿನಲ್ಲಿರುವ ಸಮಸ್ತ ಕೋಮುಗಳ ಪ್ರಜೆಗಳ ಪರವಾಗಿಯೂ ಮಹನೀಯರಾದ ತಾವು ಈ ದಕ್ಷಿಣ ದೇಶಕ್ಕೆ ದಯಮಾಡಿದ್ದಕ್ಕಾಗಿ ಪರಮ ಸಂತೋಷದಿಂದ ತಮಗೂ ತಮ್ಮ ಪತ್ನೀರವರಿಗೂ ಮನಃಪೂರ್ವಕವಾಗಿ ಸುಸ್ವಾಗತವನ್ನು ಬಯಸುತ್ತೇವೆ. ಬ್ರಿಟಿಷ್ ಪ್ರಭುತ್ವದ ಕ್ಷೇಮ ಸಮಾಧಾನಗಳು ಮೊದಲು ದಕ್ಷಿಣ ದೇಶದಲ್ಲಿ ಸ್ಥಿರಪಟ್ಟು ನೆಲೆಗೊಂಡವು. ದಕ್ಷಿಣ ದೇಶವು ತದಾರಭ್ಯ ಚ್ಯುತಿಯಿಲ್ಲದ ರಾಜಭಕ್ತಿಯಿಂದ ಕೂಡಿದ್ದಾಗಿರುತ್ತದೆ. ಮೊದಲು ಬಿಳಿಯ ಸೈನ್ಯದ ಠಾಣ್ಯವಾಗಿದ್ದ ಈ ಪಟ್ಟಣವು ಈಗ 'ದಕ್ಷಿಣ ಹಿಂದುಸ್ಥಾನದ ಉದ್ಯಾನ' ವೆಂಬ ಕೀರ್ತಿಯನ್ನು ಪಡೆದುಕೊಂಡಿರುವುದು. ಈಗಲೂ ಇಲ್ಲಿ ಸೈನ್ಯವನ್ನು ಇಟ್ಟಿರೋಣದಿಂದ ನಮ್ಮ ಜೀವನಕ್ಕೂ ವ್ಯಾಪಾರಾಭಿವೃದ್ಧಿಗೂ ತುಂಬಾ ಸಹಾಯವಾಗಿದೆ. ಇದಲ್ಲದೆ ಬೆಂಗಳೂರು ಆರೋಗ್ಯಜನಕವಾದ ನಗರವೆಂದು ಹಿಂದುಸ್ಥಾನದಲ್ಲೆಲ್ಲಾ ಪ್ರಸಿದ್ಧಿಗೊಂಡಿರುವುದು. ಇಲ್ಲಿರುವ ಆಸ್ಪತ್ರೆಗಳೂ ಔಷಧಾಲಯಗಳೂ ಇಲ್ಲಿನ ಪ್ರಜೆಗಳಲ್ಲಿರುವ ಪರಹಿತ ಚಿಂತನೆಯನ್ನು ಪ್ರಕಾಶಪಡಿಸುವವು. ಇಂಗ್ಲಾಂಡು, ಫ್ರಾನ್ಸು, ಸಂಯುಕ್ತ ಸಂಸ್ಥಾನಗಳು ಈ ಪ್ರದೇಶಗಳಲ್ಲಿರುವಂಥಾ ಮಹನೀಯರ ಔದಾರ್ಯದಿಂದ ಈ ಪಟ್ಟಣದಲ್ಲಿ ಹಲವು ಯೂರೋಪಿಯನ್ ವಿದ್ಯಾಶಾಲೆಗಳು ಅಭಿವೃದ್ಧಿ ಹೊಂದುತ್ತಲಿವೆ.

ಇಂಡಿಯಾ ಗವರ್ನ್‌ಮೆಂಟಿನವರ ಔದಾರ್ಯದಿಂದ ನಮ್ಮ ಪಟ್ಟಣಕ್ಕೆ ಒಳ್ಳೆಯ ಕುಡಿಯುವ ನೀರು ಲಭ್ಯವಾಗಿ, ವಾಂತಿಭೇದಿ ರೋಗವೂ ಮಲೇರಿ ಜ್ವರಾದಿಗಳೂ ನಿವಾರಣೆಯಾಗುವುದಕ್ಕೆ ತುಂಬಾ ಸಹಾಯವಾಯಿತು. ವಿದ್ಯುಚ್ಛಕ್ತಿಯ ದೀಪಗಳು ನಮಗೆ ದೊರಕಿರುತ್ತವೆ. ಬಡಬಗ್ಗರಿಗೆ ಆರೋಗ್ಯಕರವಾದ ಪ್ರದೇಶಗಳಲ್ಲಿ ಪಟ್ಟಣವನ್ನು ಬಡಾವಣೆ ಮಾಡಿ ಮನೆಗಳನ್ನೂ ಆರಾಮಗಳನ್ನೂ ಕಟ್ಟಿಕೊಂಡು ಸುಖದಿಂದ ಬಾಳುವುದಕ್ಕೆ ಸಹಾಯವಾಗಿರುತ್ತದೆ. ಈ ಸೌಖ್ಯಗಳನ್ನು ನಮಗೆ ಒದಗಿಸಿಕೊಟ್ಟಿರುವುದಕ್ಕಾಗಿ ನಾವುಗಳು ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಇಂಡಿಯಾ ಗವರ್ನ್‌ಮೆಂಟಿನವರಿಗೆ ಅರ್ಪಿಸುತ್ತೇವೆ. ಈ ಪಟ್ಟಣದಲ್ಲಿ ಶಾಸ್ತ್ರಶೋಧನಾ ವಿದ್ಯಾನಿಲಯವನ್ನು ಸ್ಥಾಪಿಸಿ ನಡಿಸುವಂತೆ ಸ್ಯಾಂಕ್ಷನ್ ಆಗಿರುವುದು ನಮ್ಮ ಪಟ್ಟಣಕ್ಕೆ ವಿಶೇಷವಾದ ಘನಸ್ತಿಕೆಯು ಬಂದಂತಾಗಿದೆ. ಈ ವಿದ್ಯಾಶಾಲೆಯಲ್ಲಿ ನಡೆಯುವ ಕಾರ್ಯಗಳು ಹಿಂದುಸ್ಥಾನದ ನಾನಾ ಕಸಬುಗಳ ಅಭಿವೃದ್ಧಿಗೆ ಮೂಲಕಾರಣವಾಗಿರುತ್ತದೆ. ಇಂಥಾ ಶ್ರೇಯೋಭಿವೃದ್ಧಿಯ ಕೆಲಸಗಳಿಗೆ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿನವರು ವಿಶೇಷವಾಗಿ ಸಹಾಯ ಮಾಡಿರುತ್ತಾರೆಂಬುವುದನ್ನು ಈ ಸಂದರ್ಭದಲ್ಲಿ ಸೂಚಿಸದೆ ಇರಲಾರೆವು.

ಕಳೆದ ಹತ್ತು ವರುಷಗಳಿಂದಲೂ ನಾವು ಪ್ಲೇಗ್ ಉಪದ್ರಕ್ಕೆ ಸಿಕ್ಕಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿ ಅದನ್ನು ಅಡಗಿಸುವುದಕ್ಕೆ ಅನೇಕ ಸಾಹಸ ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದೇವೆ. ಆದರೆ ನಮ್ಮ ಪಟ್ಟಣದ ಮುಖಂಡ ಪ್ರಜೆಗಳು ಸರ್ಕಾರದವರಿಗೆ ತುಂಬಾ ಸಹಾಯಕರಾಗಿ ನಿಂತು ಪ್ರಜೆಗಳನ್ನು ಪ್ರೋತ್ಸಾಹ ಪಡಿಸುತ್ತಾ ಬಂದಿರೋಣದರಿಂದ ಈ ಪಟ್ಟಣದಲ್ಲಿ ಕಳೆದ ೨೫ ತಿಂಗಳಲ್ಲಿ ಸುಮಾರು ೭೦,೦೦೦ ಜನರು ಪ್ಲೇಗ್ ಸಿಡುಬನ್ನು ಹಾಕಿಸಿಕೊಂಡು ಆ ಉಪದ್ರದ ಭೀತಿಯನ್ನು ಬಹುಮಟ್ಟಿಗೆ ತಪ್ಪಿಸಿಕೊಂಡಿರುತ್ತಾರೆ.

ಕಳೆದ ಐದು ಸಂವತ್ಸರಗಳಿಂದ ದುಷ್ಕಾಲವು ಪ್ರಾಪ್ತವಾಗಿ ಆಹಾರ ದಿನಸಿಗಳ ಧಾರಣೆಗಳು ಹೆಚ್ಚಿ ನಮಗೆ ತುಂಬಾ ಕಳವಳವೂ, ಕಷ್ಟವೂ ಉಂಟಾಗಿತ್ತು. ಈಗ ಈ ಕಷ್ಟಕಾಲವು ನಿವಾರಣೆಯಾಗಿದೆ ಎಂದೂ, ಒಳ್ಳೆ ಮಳೆ ಬೆಳೆಗಳಾಗಿ ಸುಭಿಕ್ಷವು ಮುಂದೆ ಕಾಣುತ್ತಿದೆ ಎಂದೂ ತಿಳಿಸಲು ಸಂತೋಷಪಡುತ್ತೇವೆ.

ತಮ್ಮಗಳಿಗೆ ದಕ್ಷಿಣದೇಶದ ವಿದ್ಯಮಾನಗಳು ಹರ್ಷಯುಕ್ತವಾದವುಗಳಾಗಿದ್ದಾವೆಂದು ಹಾರೈಸುವೆವು.

ವೈಸ್‌ರಾಯಿಯವರ ಪ್ರತ್ಯುತ್ತರವು.

ಇಂಥಾ ಸಂತೋಷವೂ ಭಕ್ತಿಪೂರ್ವಕವೂ ಆದ ವಿಜ್ಞಾಪನಾ ಪತ್ರಿಕೆಯನ್ನು ಸಾದರದಿಂದ ಅಂಗೀಕರಿಸಿ ವೈಸ್‌ರಾಯಿ ಪ್ರಭುಗಳು ಅವರಿಗೆ ಪ್ರತ್ಯುತ್ತರ ಕೊಟ್ಟಿದ್ದೇನೆಂದರೆ,—

ನೀವು ಭಕ್ತಿ ಆದರಗಳಿಂದ ಬಯಸಿದ ಸುಸ್ವಾಗತವು ನಮಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಹಿಂದುಸ್ಥಾನದ ಚರಿತ್ರೆಯಲ್ಲಿ ಬೆಂಗಳೂರಿನ ವಿದ್ಯಮಾನಗಳು ವಿಶೇಷತೆಯನ್ನು ಪಡೆದಿರುವವು. ನೂರು ವರುಷಗಳ ಹಿಂದೆ ಈ ಪಟ್ಟಣದಲ್ಲಿ ಒಂದು ಇಂಗ್ಲಿಷ್ ಸೈನ್ಯವು ಬಂದು ನಿಂತಿತು. ಆ ಕಾಲಂಮೊದಲು ಅನೇಕ ಯುದ್ಧಕಾರ್ಯಗಳು ನಡೆದು, ದಕ್ಷಿಣದೇಶಕ್ಕೆಲ್ಲಾ ಇದು ಸೈನ್ಯದ ಮುಖ್ಯಸ್ಥಾನವಾಯಿತು. ಮೈಸೂರು ಗವರ್ನ್‌ಮೆಂಟಿನವರು ಆ ಸೈನ್ಯದ ಕ್ಷೇಮಾಭಿವೃದ್ಧಿಯನ್ನು ಕಾಪಾಡುತ್ತಾ ಬಂದಿದ್ದಾರೆ.

ಮ್ಯುನಿಸಿಪಲ್ ಕಮೀಷನರುಗಳಾದ ನೀವು ಬಹಳ ಪ್ರಶಂಸನೀಯವಾದ ಕಾರ್ಯಗಳನ್ನು ಮಾಡಿ, ನಮ್ಮ ಹುಟ್ಟುವಳಿಯಿಂದ ಒಳ್ಳೇ ನೀರನ್ನು ತಂದು

ಒದಗಿಸುವುದಕ್ಕೂ, ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೂ, ಬಡಬಗ್ಗರಿಗೆ ಆರೋಗ್ಯಜನಕವಾದ ಮನೆ ಮಠಗಳನ್ನು ಕಲ್ಪಿಸಿಕೊಡುವುದಕ್ಕೂ ಸಾಹಸಪಡುತ್ತಾ ಬಂದಿದ್ದೀರಿ ಕೊಳಕಾಗಿಯೂ ಇಕ್ಕಟ್ಟಾಗಿಯೂ ಇದ್ದ ಮನೆಗಳನ್ನು ಕಡಮೆಮಾಡಿ, ಬಡಾವಣೆಗಳನ್ನು ಮಾಡಿ, ಪ್ಲೇಗ್ ಉಪದ್ರವ ಹಾವಳಿಯನ್ನು ತಡೆಯುವುದಕ್ಕೆ ಪ್ಲೇಗ್ ಶಿಡುಬನ್ನು ಹಾಕಿಸಿ, ಪ್ರಜೆಗಳ ಕ್ಷೇಮವನ್ನು ಬಯಸಿರುತ್ತೀರಾದ್ದರಿಂದ ಪ್ರಜೆಗಳು ನಿಮಗೆ ಕೃತಜ್ಞರಾಗಿರುತ್ತಾರೆ ನಿಮ್ಮ ಮೇಲ್ಪಙ್ಕ್ತಿಯನ್ನು ಹಿಂದುಸ್ಥಾನದ ಇತರ ಕಡೆಯವರೂ ಅನುಸರಿಸುತ್ತಾ ಬಂದಾರೆಂದು ಹಾರೈಸುತ್ತೇವೆ

ನಾವು ಬಂದಿರುವ ಈ ಕಾಲವು ನಿಮಗೆ ಸುಭಿಕ್ಷಸೂಚಕವಾಗಿದೆ ಎಂದೂ, ದುಷ್ಕಾಲವೂ ಅದರ ಕಷ್ಟಗಳೂ ನಿವಾರಣೆಯಾಗಿರುತ್ತವೆಂದೂ ನೀವು ಹೇಳುವುದನ್ನು ಕೇಳಿ ತುಂಬಾ ಸಂತೋಷಪಡುತ್ತೇವೆ ಇಲ್ಲಿಂದ ಮುಂದಕ್ಕೆ ಸುಭಿಕ್ಷವೇ ನಿರಂತರವಾಗಿ ಲಭ್ಯವಾದೀತೆಂದು ನಿರೀಕ್ಷಿಸುವೆವು

ನೀವು ಸುಸ್ವಾಗತವನ್ನು ಬಯಸಿದ್ದಕ್ಕಾಗಿ ನಾವೂ ನಮ್ಮ ಪತ್ನೀರವರೂ ನಿಮ್ಮನ್ನು ವಂದಿಸಿ, „ ದಕ್ಷಿಣ ದೇಶದ ಉದ್ಯಾನ " ವೆಂಬ ನಗರದ ಸತ್ಕಾರಗಳನ್ನೂ ವಿದ್ಯಮಾನಗಳನ್ನೂ ನಾವು ಜ್ಞಾಪಿಸಿಕೊಂಡಾಗಲೆಲ್ಲಾ ಸಂತೋಷಪಟ್ಟುಕೊಳ್ಳುತ್ತಾ ಬಂದೇವು

ಮೆರವಣಿಗೆ ಮುಂತಾದದ್ದು

ಬಳಿಕ ವೈಸ್‌ರಾಯಿ ದಂಪತಿಗಳು ಅಲ್ಲಿದ್ದ ಸಕಲರನ್ನೂ ವಂದಿಸಿ, ಸ್ಟೇಷನ್ನಿಂದ ಹೊರಕ್ಕೆ ದಯಮಾಡಿ ಅಲ್ಲಿ ನಿಲ್ಲಿಸಲ್ಪಟ್ಟಿದ್ದ ಮೈಸೂರು ಸೈನ್ಯಗಳ ಕವಾಯತುಗಳನ್ನು ಪರಾಂಬರಿಸಿ, ಸಿದ್ಧವಾಗಿದ್ದ ದಿವ್ಯವಾದ ಸಾರೋಟಿನ್ನು ಹತ್ತಿ ಕುಳಿತುಕೊಂಡರು ಅವರ ಕೂಡ ಬ್ರಿಟಿಷ್ ರೆಸಿಡೆಂಟರೂ, ವೈಸ್‌ರಾಯಿಯವರ ಒಬ್ಬ ಏಡಿಕಾಂಗರೂ ಕುಳಿತರು ಎರಡನೇ ಸಾರೋಟಿನಲ್ಲಿ ವೈಸ್‌ರಾಯಿಯವರ ಪತ್ನೀರವರೂ ಕೌಂಟೆಸ್ ಆಫ್ ಡರ್ಬ್ಯಾಂ ಯವರೂ ಕರ್ನಲ್ ಪಿಕ್ಸರ್ ಬ್ರೂಕ್ ಯವರೂ, ಒಬ್ಬ ಏಡಿಕಾಂಗರೂ ಕುಳಿತರು ಮೂರನೇ ನಾಲ್ಕನೇ ಸಾರೋಟುಗಳಲ್ಲಿ ರೆಸಿಡೆಂಟರ ಕಡೆಯವರೂ ವೈಸ್‌ರಾಯಿಯವರ ಪರಿವಾರದವರೂ ಕುಳಿತುಕೊಂಡರು ಮೆರವಣಿಗೆಯ ಹಿಂದೆಯೂ ಮುಂದೆಯೂ ಇಂಗ್ಲಿಷ್ ಸವಾರರ ಸೈನ್ಯವು ಹೊರಟಿತು ಸಾವಿರಾರು ಪ್ರಜೆಗಳು ರಸ್ತೆಗಳ ಉದ್ದಕ್ಕೂ ನಿಂತು ಶ್ರೇಷ್ಠ ಅತಿಥಿಗಳನ್ನು ನೋಡಿ ಸಂತೋಷಪಟ್ಟುಕೊಂಡು ಜಯಧ್ವನಿಗಳನ್ನು ಮಾಡಿದರು ಮೆರವಣಿಗೆಯು ಕೆರೆಯ ಏರಿ ಮೇಲೆ ಹೊರಟು ಸಿಕ್ಲೆಂಡಾರ್ ಲೈನ್‌ಗಳ ಮುಂದೆ ಹಾಸಿ ರೇಸ್ ಕೋರ್ಸ್ ಮೂಲಕ ರೆಸಿಡೆನ್ಸಿ ಬಂಗಲೆಗೆ ಸೇರಿತು ರಸ್ತೆಯು ಉದ್ದಕ್ಕೂ ನಾನಾ ಪ್ರಕಾರವಾಗಿ ಅಲಂಕರಿಸಲ್ಪಟ್ಟಿತ್ತು ರೇಸ್ ಕೋರ್ಸಿನ ಬಳಿ ಸಾಲುಕಟ್ಟಿ ಮೆಟ್ಟಿಲುಗಳ ಮೇಲೆ ಕುಳಿತಿದ್ದ ಸಾವಿರಾರು ಜನ ಸ್ಕೂಲ್ ಮಕ್ಕಳು ವೈಸ್‌ರಾಯಿ ದಂಪತಿಗಳ ಮೇಲೆ ಪುಷ್ಪವನ್ನು ಎರಚಿ ಸಂತೋಷ ಧ್ವನಿಯನ್ನು ಮಾಡಿದರು ಮಹಾರಾಜರವರ ಸೈನಿಕರು ಪಟ್ಟಣದ ಬೀದಿಗಳಲ್ಲೂ, ಇಂಗ್ಲಿಷ್ ಸೈನ್ಯದವರು ದಂಡಿನ ರಸ್ತೆಗಳಲ್ಲೂ ಉದ್ದಕ್ಕೂ ನಿಲ್ಲಿಸಲ್ಪಟ್ಟಿದ್ದರು ರೆಸಿಡೆನ್ಸಿ ಬಂಗಲೆಯಲ್ಲಿ ವಾಲಂಟಿಯರ್ ಸೈನಿಕರು ಸಾಲುಕಟ್ಟಿ ನಿಂತು ವೈಸ್‌ರಾಯಿಯವರಿಗೆ ಮರ್ಯಾದೆ ಮಾಡಿದರು ಬಂಗಲೆಯೊಳಕ್ಕೆ ದಯಮಾಡುವಲ್ಲಿ ಗೌರವಾರ್ಥವಾಗಿ ೩೧ ತೋಪುಗಳು ಹಾರುತ್ತಿದ್ದವು

ಬಿರುದುಗಳನ್ನು ದಯಪಾಲಿಸಿದ್ದು

ಆ ದಿನ ರಾತ್ರಿ ರೆಸಿಡೆನ್ಸಿ ಬಂಗಲೆಯಲ್ಲಿ ವೈಸ್‌ರಾಯಿ ದಂಪತಿಗಳಿಗೂ ಅವರ ಕೈಕೆಳಗಿನ ಅಧಿಕಾರಿಗಳಿಗೂ ದಿವ್ಯವಾದ ಔತಣವಾಯಿತು ಭೋಜನಾನಂತರ ನಡೆದ ದರ್ಬಾರಿನಲ್ಲಿ ವೈಸ್‌ರಾಯಿಯವರು ರಾವ್ ಬಹದೂರ್ ಮೈಗಂಡದೇವ ಮೊದಲಿಯಾರ್ರಿಗೆ ಕೈಸರ್-ಇ-ಹಿಂದ್ ಎಂಬ ಬಿರುದನ್ನೂ, ರಾವ್ ಬಹದೂರ್ ಅಣ್ಣಾಸ್ವಾಮಿ ಮೊದಲಿಯಾರ್ರಿಗೆ ಒಂದು ಬಾರನ್ನೂ ಸ್ವಹಸ್ತದಿಂದ ದಯಪಾಲಿಸಿ ಅವರ ಪರಿಚಯವನ್ನು ಮಾಡಿಕೊಂಡರು ಈ ದೊಡ್ಡ ಮನುಷ್ಯರಿಬ್ಬರೂ ಬೆಂಗಳೂರು ದಂಡಿನಲ್ಲಿ ಮುಖಂಡರಾಗಿದ್ದುಕೊಂಡು, ಅಲ್ಲಿನ ಪ್ರಜೆಗಳಿಗೋಸ್ಕರ ನಾನಾ ಪರೋಪಕಾರ ಕಾರ್ಯಗಳನ್ನು ಮಾಡಿಸಿರುತ್ತಾರೆ ಅವರು ಸಂಪಾದಿಸಿರುವ ಐಶ್ವರ್ಯಕ್ಕೆ ತಕ್ಕಂತೆ ಅವರಲ್ಲಿ ಧರ್ಮಬುದ್ಧಿಯೂ ವಿಶೇಷವಾಗಿರುತ್ತದೆ ತರುವಾಯ ರೆಸಿಡೆಂಟರವರು ದಂಡಿನ ಕೆಲವು ಮುಖ್ಯ ಸರ್ದಾರರನ್ನೂ ದೊಡ್ಡ ಮನುಷ್ಯರನ್ನೂ ವೈಸ್‌ರಾಯಿ ದಂಪತಿಗಳಿಗೆ ಕಾಣಿಸಿ ಅವರ ಪರಿಚಯವನ್ನು ಮಾಡಿಸಿದರು

ಕೋಲಾರಕ್ಕೆ ದಯಮಾಡಿದ್ದು.

ತಾ ೪ ನೇ ಶನಿವಾರ ಬೆಳಿಗ್ಗೆ ವೈಸ್‌ರಾಯಿ ದಂಪತಿಗಳು ರೆಸಿಡೆನ್ಸಿ ಬಂಗಲೆಯಲ್ಲಿ ಭೋಜನವನ್ನು ಬೇಗನೆ ತೀರಿಸಿಕೊಂಡು, ಪರಿವಾರ ಸಹಿತ ಅಲ್ಲಿಂದ ಕೋಲಾರ್ ಚಿನ್ನದ ಗಣಿಗಳನ್ನು ಪರಾಂಬರಿಸುವುದಕ್ಕಾಗಿ ದಯಮಾಡಿದರು ವೈಸ್‌ರಾಯಿ ದಂಪತಿಗಳ ಕೂಡ ಬ್ರಿಟಿಷ್ ರೆಸಿಡೆಂಟರೂ ಬೆಳಿಗ್ಗೆ ೯|| ಗಂಟೆಗೆ ಮೋಟಾರ್ ಗಾಡಿಯಲ್ಲಿ ಚಿನ್ನದ ಗಣಿಗಳಿಗೆ ಹೊರಟು, ಬಹಳ ಚನ್ನಾಗಿದ್ದ ರಸ್ತೆಯ ಮೇಲೆ ಎರಡು ಗಂಟೆಗಳ ಹೊತ್ತು ಪ್ರಯಾಣ ಮಾಡುವಲ್ಲಿ ಚಿನ್ನದ ಗಣಿಗಳನ್ನು ತಲುಪಿದರು ಅಲ್ಲಿ ಡೆಪ್ಯುಟಿ ಕಮಿಷನರ್ ಮಿ। ಸಿ ಶ್ರೀಕಂಠೇಶ್ವರ ಐಯರವರೂ ಚಿನ್ನದ ಗಣಿ ಕಂಪನಿಗಳವರೂ ಶ್ರೇಷ್ಠ ಅತಿಥಿಗಳನ್ನು ಸತ್ಕರಿಸುವುದಕ್ಕಾಗಿ ನಾನಾ ಅಲಂಕಾರಗಳನ್ನು ಮಾಡಿಸಿದ್ದರು ಬಾಗಿಲಲ್ಲಿ ಭೂಗರ್ಭಶೋಧನಾ ಇಲಾಖೆಯ ಮುಖ್ಯಾಧಿಕಾರಿಯಾದ ಡಾ। ಸ್ಮಿತ್ ಯವರೂ ಚಿನ್ನದ ಗಣಿ ಕಂಪನಿಗಳ ಮ್ಯಾನೇಜರರಾದ ಮಿ। ಎ ಎಚ್ ರಿಚರ್ಡ್ಸ್ ಯವರೂ ಕಾದಿದ್ದು ವೈಸ್‌ರಾಯಿ ದಂಪತಿಗಳಿಗೆ ಸುಸ್ವಾಗತವನ್ನು ಬಯಸಿದರು ಅಲ್ಲಿಂದ ವೈಸ್‌ರಾಯಿ ದಂಪತಿಗಳು ಉತ್ಸಾಹಶೀಲರಾದ ಪ್ರಜೆಗಳಿಂದ ತುಂಬಿ ತುಳುಕುತ್ತಿದ್ದ ರಸ್ತೆಯ ಮೂಲಕ ಮಾರಿಕುಪ್ಪಕ್ಕೆ ದಯಮಾಡಿ ಮಿ। ಎ ಗಿಫರ್ಡ್ ಯವರ ಬಂಗಲೆಯಲ್ಲಿ ಮೊಕ್ಕಾಂ ಮಾಡಿದರು ಅದು ಬಹು ಸುಂದರವಾದ ಕಟ್ಟಡ, ಎತ್ತರವಾದ ದಿಣ್ಣೆಯ ಮೇಲೆ ಕಟ್ಟಿದೆ, ಅಲ್ಲಿಗೆ ಸುತ್ತಲೂ ಬಹು ದೂರದ ವರೆಗೆ ಇರುವ ಪ್ರದೇಶಗಳೆಲ್ಲಾ ಬಹಳ ಚನ್ನಾಗಿ ಕಾಣಬರುವವು ಈ ಬಂಗಲೆಯಲ್ಲಿ ಮೈಸೂರು ಸರ್ಕಾರದ ಮುಖ್ಯಾಧಿಕಾರಿಗಳೂ, ಗಣಿಗಳ ಕಂಪನಿಯ ಮುಖ್ಯಸ್ಥರೂ ನೂರಾರು ಮಂದಿ ದರ್ಬಾರ್ ದಿರಸಿನಲ್ಲಿ ಕಾದಿದ್ದು ವೈಸ್‌ರಾಯಿ ಪ್ರಭುಗಳಿಗೂ ಅವರ ಪತ್ನೀರವರಿಗೂ ಸಂಭ್ರಮಯುಕ್ತವಾದ ಮತ್ತು ಅತ್ಯುಲ್ಲಾಸಪೂರ್ವಕವಾದ ಸುಸ್ವಾಗತವನ್ನು ಬಯಸಿದರು ಬಂಗಲೆಯ ಮುಂಭಾಗದಲ್ಲಿ ಚಿನ್ನದ ಗಣಿಗಳ ವಾಲಂಟಿಯರ್ ಸೈನಿಕರು ನಿಂತು ವೈಸ್‌ರಾಯಿಯವರಿಗೆ ಮರ್ಯಾದೆಯಿಂದ ಸಲಾಂ ಮಾಡಿದರು ಡಾಕ್ಟರ್ ಸ್ಮಿತ್‌ಯವರು ಮುಂದೆ ಬಂದು ಡೆಪ್ಯುಟಿ ಕಮಿಷನರ್ ಮುಂತಾದ ಮೈಸೂರು ಗವರ್ನಮೆಂಟಿನ ಅಧಿಕಾರಿಗಳನ್ನೂ, ಮ್ಯಾನೇಜರವರು ಚಿನ್ನದ ಗಣಿಗಳ ಮುಖ್ಯಸ್ಥರನ್ನೂ ವೈಸ್‌ರಾಯಿಯವರಿಗೆ ಭೇಟಿ ಮಾಡಿಸಿದರು ಬಳಿಕ ವೈಸ್‌ರಾಯಿಯವರು ವಾಲಂಟಿಯರ್ ಸೈನಿಕರ ಬಳಿಗೆ ದಯಮಾಡಿ ಅವರನ್ನು ಪರೀಕ್ಷೆ ಮಾಡಿ ಕೆಲವರಿಗೆ ಬಿರುದಿನ ಬಿಲ್ಲೆಗಳನ್ನು ದಯಪಾಲಿಸಿದರು

ಚಿನ್ನದ ಗಣಿಯ ಅಡ್ರೆಸ್ಸು

ಚಿನ್ನದ ಗಣಿ ಬೋರ್ಡಿನವರು ಒಂದು ಅಡ್ರೆಸ್ಸನ್ನು ಓದಿ, ಚಿತ್ರಕೆಲಸ ಮಾಡಿದ ದಿವ್ಯವಾದ ಕೈ ಪೆಟ್ಟಿಗೆಯಲ್ಲಿಟ್ಟು ವೈಸ್‌ರಾಯಿಯವರಿಗೆ ಒಪ್ಪಿಸಿದರು ಅದರಲ್ಲಿ ಅವರು ಅರಿಕೆಮಾಡಿದ ವಿಷಯಗಳೇನೆಂದರೆ,—

ಚಿನ್ನದ ಗಣಿಗಳ ಬೋರ್ಡಿನ ಮೆಂಬರುಗಳಾದ ನಾವು ಘನವನ್ನೈದಿದ ತಮಗೂ ತಮ್ಮ ಪತ್ನೀರವರಿಗೂ ಸಂತೋಷದಿಂದ ಸುಸ್ವಾಗತವನ್ನು ಬಯಸುತ್ತೇವೆ ತಾವು ಇಲ್ಲಿಗೆ ದಯಮಾಡುವುದಾಗಿ ಒಪ್ಪಿಕೊಂಡದ್ದಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುವೆವು ಕಸಬುಗಳ ಅಭಿವೃದ್ಧಿಯ ವಿಷಯದಲ್ಲಿ ತಾವು ತುಂಬಾ ಪ್ರೋತ್ಸಾಹ ಕೊಡತಕ್ಕವರೆಂಬುವುದಕ್ಕೆ ಈ ದಿನ ತಾವು ಭೇಟಿ ದಯಪಾಲಿಸಿದ್ದೇ ದೃಷ್ಟಾಂತವಾಗಿರುತ್ತದೆ ಈ ಗಣಿಗಳಲ್ಲಿ ೫೩೦ ಜನ ಯೂರೋಪಿಯನ್ನರೂ, ೩೩೦ ಮಂದಿ ಯೂರೇಷಿಯನ್ನರೂ ೨೭,೪೫೦ ಜನ ದೇಶೀಯರೂ ಕೆಲಸ ಮಾಡುತ್ತಾರೆ ಅವರೂ ಅವರ ಸಂಸಾರಕ್ಕೆ ಸೇರಿದವರೂ ಸೇರಿ ೮೦,೦೦೦ ಪ್ರಜೆಗಳು ಈ ಗಣಿಗಳ ಕೆಲಸದಿಂದ ಜೀವನ ಮಾಡಿಕೊಂಡಿರುವರು ಅನೇಕರಿಗೆ ನಾವೇ ಮನೆಗಳನ್ನು ಕಟ್ಟಿಸಿ, ಸುಲಭ ಬಾಡಿಗೆಗೆ ಕೊಟ್ಟಿರುತ್ತೇವೆ ಅವರಿಗೆ ಕೊಡುವ ಕೂಲಿಯ ದರವು ಧಾರಾಳವಾದದ್ದು ಎಲ್ಲರಿಗೂ ವೈದ್ಯರ ಸಹಾಯವನ್ನೂ ಚಿಕಿತ್ಸೆಯನ್ನೂ ಏರ್ಪಾಡು ಮಾಡಿಕೊಟ್ಟಿದ್ದೇವೆ ನಾವು ಕೂಲಿಕಾರರು ಸಿಕ್ಕದೆ ತೊಂದರೆ ಪಡಲಿಲ್ಲ ಇದರಿಂದ ಕೂಲಿಕಾರರು ತಮಗೆ ಬರುವ ಪ್ರತಿಫಲವನ್ನು ಕಡಮೆ ಎಂದು ಎಣಿಸುವುದಿಲ್ಲವೆಂಬುವುದೂ, ಗಣಿಗಳಲ್ಲಿ ಅವರಿಗೆ ಮಾಡಿಕೊಟ್ಟಿರುವ ಸೌಕರ್ಯಗಳು ವಿಶೇಷವಾದವುಗಳೆಂಬುವುದೂ ಅವರಿಗೆ ತಿಳಿದಿರುತ್ತದೆ

ಕೋಲಾರ್ ಚಿನ್ನದ ಗಣಿಗಳು ವಿಸ್ತಾರವಾಗಿಲ್ಲದಿದ್ದರೂ ಈಗ ಲೋಕದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುತ್ತದೆ ಸುಮಾರು ಮೂವತ್ತು ವರುಷಗಳ ಒಳಗೆ ಇಲ್ಲಿ ಚಿನ್ನ ತೆಗೆಯುವುದು ಪ್ರಾರಂಭವಾಗಿ ಇದುವರೆಗೆ ೨,೧೫,೪೯,೭೭೨ ಪೌಂಡುಗಳ ಚಿನ್ನವನ್ನು ಉತ್ಪತ್ತಿ ಮಾಡಲಾಗಿದೆ ಈ ಪೈಕಿ ೧,೨೪,೧೮,೪೬೯ ಪೌಂಡುಗಳು ಷೇರುದಾರರಿಗೆ ಬಡ್ಡಿ ರೂಪದಲ್ಲೂ, ೧೫,೩೦,೫೧೭ ಪೌಂಡು ಮೈಸೂರು ಗವರ್ನ್‌ಮೆಂಟಿಗೆ ರಾಜಾದಾಯವಾಗಿಯೂ ಸಂದಾಯ ಆಗಿರುತ್ತದೆ ಈಗ ಆರು ಕಂಪನಿಗಳು ಚಿನ್ನ ತೆಗೆಯುವುದರಲ್ಲಿ ಉದ್ಯುಕ್ತವಾಗಿರುವವು ಇವುಗಳ ಮೂಲಧನ ೨೩,೮೧,೦೦೦ ಪೌಂಡುಗಳು ಈ ಷೇರುಗಳ ಬೆಲೆಯು ಈಗ ೭೭,೮೭,೮೧೪ ಪೌಂಡುಗಳಾಗಬಹುದೆಂದು ಹೇಳುತ್ತಾರೆ

ಮೈಸೂರು ಗವರ್ನಮೆಂಟಿನವರು ನಮ್ಮ ಗಣಿಗಳ ಕೆಲಸಕಾರ್ಯಗಳಿಗೆ ತುಂಬಾ ಪ್ರೋತ್ಸಾಹ ಕೊಡುತ್ತಾ, ಆಗಿಂದಾಗ್ಗೆ ಅವಶ್ಯವಾಗುವ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾ ಬಂದಿರುತ್ತಾರೆಂದು ಕೃತಜ್ಞತೆಯಿಂದಲೂ ಸಂತೋಷದೊಡನೆಯೂ ಈ ಸಂದರ್ಭದಲ್ಲಿ ಅರಿಕೆ ಮಾಡುತ್ತೇವೆ ಕಾವೇರಿ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ೯೨ ಮೈಲಿಗಳ ದೂರ ತಂತಿಗಳ ಮೇಲೆ ಆ ಶಕ್ತಿಯನ್ನು ಸಾಗಿಸಿ ತಂದು ಇಲ್ಲಿ ಗಣಿಗಳ ಕೆಲಸಗಳಿಗೆ ನಾವು ವಿನಿಯೋಗಿಸಿಕೊಳ್ಳುವಂತೆ ಮಾಡಿಕೊಟ್ಟಿರುವರು ಇದಲ್ಲದೆ ನಮ್ಮ ಪ್ರಾಂತ್ಯದಲ್ಲಿರುವ ಸಕಲ ಪ್ರಜೆಗಳ ಉಪಯೋಗಕ್ಕಾಗಿಯೂ ಗಣಿ ಕೆಲಸಗಳಿಗಾಗಿಯೂ ಇಲ್ಲಿಂದ ೨೫ ಮೈಲಿ ದೂರದಲ್ಲಿ ಬೇತಮಂಗಲದಲ್ಲಿ ಬಾರೀ ಕೆರೆಯನ್ನು ನಿರ್ಮಾಣ ಮಾಡಿ ಅಲ್ಲಿಂದ ನೀರನ್ನು ತಂದು ಒದಗಿಸಿಕೊಟ್ಟಿದ್ದಾರೆ ಇಂಡಿಯಾ ಗವರ್ನಮೆಂಟಿನವರು ನಮ್ಮ ಈ ಕಸಬಿನ ಅಭಿವೃದ್ಧಿಗೆ ಆಗಿಂದಾಗ್ಗೆ ಅವಶ್ಯವೆಂದು ಕಂಡು ಬರುವಂಥಾ ಕಾನೂನು ಮುಂತಾದವುಗಳನ್ನು ಮಾಡಿ ಜಾರಿಗೆ ತಂದುಕೊಳ್ಳಬಹುದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ ಇಂಥಾ ಉಪಕಾರವನ್ನು ನಡೆಸ ಸಾಕ್ಷಾತ್ತಾಗಿ ದಯಮಾಡಿರುವ ತಮಗೆ ಈ ಸಂದರ್ಭದಲ್ಲಿ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ ತಾವು ಮಾಡುತ್ತಿರುವ ಪ್ರಜಾಹಿತಕಾರ್ಯಗಳೆಲ್ಲಾ ಸಾರ್ಥಕವಾಗಲೆಂದೂ ತಮ್ಮನ್ನು ಬಹು ಕಾಲ ಕ್ಷೇಮ ಆರೋಗ್ಯಾದಿಗಳನ್ನು ದಯಪಾಲಿಸಿ ಕಾಪಾಡುತ್ತಾ ಬರಲೆಂದೂ ಪ್ರಾರ್ಥಿಸುತ್ತೇವೆ

ವೈಸ್‌ರಾಯಿಯವರ ಪ್ರತ್ಯುತ್ತರವು

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅವರು ಒಪ್ಪಿಸಿದ ಅಡ್ರೆಸ್ಸನ್ನು ಅಂಗೀಕರಿಸಿ, ಅವರಿಗೆ ಪ್ರತ್ಯುತ್ತರವಾಗಿ ಅಪ್ಪಣೆಕೊಡಿಸಿದ ಮುಖ್ಯ ವಿಷಯವೇನೆಂದರೆ,—

ನೀವುಗಳು ಪ್ರೀತಿಪೂರ್ವಕವಾಗಿ ಒಪ್ಪಿಸಿದ ಅಡ್ರೆಸ್ಸನ್ನೂ ಬಯಸಿದ ಸುಸ್ವಾಗತವನ್ನೂ ಬಹು ಸಂತೋಷದಿಂದ ಅಂಗೀಕರಿಸಿ, ನಿಮ್ಮ ಚಿನ್ನದ ಗಣಿಯನ್ನು ನೋಡಿಕೊಂಡು ಹೋಗುವುದಕ್ಕೆ ನಮಗೆ ಅವಕಾಶವುಂಟಾದದ್ದಕ್ಕಾಗಿ ಹರ್ಷಪಡುವೆವು ಚಿನ್ನವನ್ನು ಉತ್ಪತ್ತಿಮಾಡುವ ಕಸಬು ನಮಗೆ ಪರಿಚಯವಿಲ್ಲದಿದ್ದರೂ, ಸ್ವಲ್ಪಮಟ್ಟಿಗೆ ನಮಗೆ ಅದರ ಅನುಭವವುಂಟು ಅಲಾಸ್ಕಾದಲ್ಲಿ ೧೮೯೮ ನೇ ಇಸವಿಯಲ್ಲಿ ಚಿನ್ನ ಸಿಕ್ಕುತ್ತೆಂದು ಪ್ರವಾದ ಇದ್ದಾಗ್ಗೆ ನಾವು ಪತ್ನಿಸಹಿತ ಅಲ್ಲಿಗೆ ಹೋಗಿ ಯೂಕಾನ್ ನದಿಯನ್ನೂ ಡಾಸನ್ ಸಿಟಿ ಎಂಬ ಮುಖ್ಯ ಪಟ್ಟಣವನ್ನೂ ನೋಡಿ ಬಂದಿರುತ್ತೇವೆ ಅಲ್ಲಿ ಅನೇಕ ಜನರು ನಮಗೆ ಪರಿಚಯಸ್ಥರಾದರು ಅಲ್ಲಿಂದ ನಾವು ಬ್ರಿಟಿಷ್ ಕೊಲಂಬಿಯಾದಲ್ಲಿರುವ ಕೂಟಿನೇ ಎಂಬ ಚಿನ್ನದ ಗಣಿಗೆ ಹೋಗಿದ್ದೆವು ಈ ದಿನ ನಮಗೆ ಆಯಾ ಸ್ಥಳಗಳಿಗೆ ಹೋಗಿದ್ದ ಸ್ಮರಣೆಯು ಉಂಟಾಗುವುದಕ್ಕೆ ಕಾರಣವಾಯಿತು ಎಲ್ಲಾ ಪ್ರದೇಶಗಳಲ್ಲೂ ಚಿನ್ನದ ಗಣಿಗಳ ಕೆಲಸವು ಒಂದೇ ಆಗಿದ್ದರೂ ಒಂದು ವಿಚಾರದಲ್ಲಿ ಅದು ಬಹು ವಿಶೇಷತೆಯನ್ನು ಪಡೆದಿದ್ದೆಂದು ಹೇಳುತ್ತೇವೆ ಈ ಗಣಿಗಳಲ್ಲಿ ಸಾವಿರಾರು ಜನರಿಗೆ ಜೀವನ ನಡೆಯುತ್ತದೆ ವಿರಾಮವಿಲ್ಲದೆ ಕೆಲಸ ನಡೆಯುತ್ತಿರುವುದು, ಮತ್ತು ಹಿಂದುಸ್ಥಾನದಲ್ಲಿ ಕಸಬಿನ ಮತ್ತು ವ್ಯಾಪಾರದ ಅಭಿವೃದ್ಧಿಗೆ ತುಂಬಾ ಪ್ರೋತ್ಸಾಹ ಕೊಡುತ್ತಿದೆ

ನಿಮ್ಮ ಪಾಲನೆಗೆ ಸೇರಿದ ೮೦,೦೦೦ ಪ್ರಜೆಗಳನ್ನು ನೀವು ನಡೆಸುವುದರಲ್ಲಿ ನಿಮ್ಮ ಜವಾಬ್ದಾರಿಯು ಬಹು ವಿಶೇಷವಾದದ್ದಾಗಿರುತ್ತದೆ ಅವರ ಕ್ಷೇಮಚಿಂತನೆಗೂ ಅವರ ಜೀವನಕ್ಕೂ ನೀವು ಮಾಡಿರುವ ಏರ್ಪಾಡುಗಳು ಸಾರ್ಥಕವಾಗುತ್ತಿರುವವೆಂದು ತಿಳಿದು ಸಂತೋಷಪಡುತ್ತೇವೆ ಗಣಿಗಳಲ್ಲಿ ಕೆಲಸ ನಡೆಯುವಾಗ್ಗೆ ಆಕಸ್ಮಿಕವಾದ ಅನಾಹುತಗಳು ಸಂಭವಿಸುವವು ಆದರೆ ನೀವು ಅಂಥಾ ಆಕಸ್ಮಿಕಗಳನ್ನು ಕೂಡಿದಮಟ್ಟಿಗೂ ಕಡಮೆ ಮಾಡಲು ಸಾಹಸಪಡುತ್ತಿದ್ದೀರಿ ಇಂಥಾ ಎಚ್ಚರಿಕೆಯ ಕಾರ್ಯಗಳನ್ನು ನೀವು ಕಾಲಾನುಗುಣ್ಯವಾಗಿ ಮುಂದೆಯೂ ಮಾಡುತ್ತಾ ಬಂದೀರೆಂದು ನಂಬಿರುವೆವು ನಿಮ್ಮ ಕಸಬು ದಿನೇ ದಿನೇ ಹೆಚ್ಚುತ್ತಿದೆ ಎಂದೂ ಮೈಸೂರು ಗವರ್ನಮೆಂಟಿನವರು ನಿಮಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಡುತ್ತಾ ಬಂದಿರುವರೆಂದೂ ತಿಳಿದು ನಿಮ್ಮ ಕೂಡ ನಾವೂ ಸಂತೋಷಪಡುತ್ತೇವೆ

ಗಣಿಗಳನ್ನು ಪರಾಂಬರಿಸಿದ್ದು

ತರುವಾಯ ಬ್ರಿಟಿಷ್ ರೆಸಿಡೆಂಟರೂ, ಮೈನಿಂಗ್ ಬೋರ್ಡಿನ ಮ್ಯಾನೇಜರವರೂ ವೈಸ್‌ರಾಯಿ ದಂಪತಿಗಳನ್ನು ಕರೆದುಕೊಂಡು ಮೋಟಾರ್ ಗಾಡಿಗಳಲ್ಲಿ ಹೋಗಿ ಚಿನ್ನವನ್ನು ಕರಗಿಸುವುದು ಕಲ್ಲುಗಳನ್ನು ಪುಡಿಮಾಡುವುದು, ಕಲ್ಲುಮಣ್ಣಿನಿಂದ ಚಿನ್ನವನ್ನು ಪ್ರತ್ಯೇಕಿಸುವುದು, ಅದನ್ನು ತೂಗುವ ಅಪರೂಪವಾದ ತಕ್ಕಡಿ (ಬೀಂತರಾಜು), ಕೂಲಿಯವರು ಕುಳಿತು ಗಣಿಗಳೊಳಕ್ಕೆ ಇಳಿದುಹೋಗಿ ವಾಪಸು ಮೇಲಕ್ಕೆ ಬರುವ ತೊಟ್ಟಿಲುಗಳು, ಈ ಮೊದಲಾದ ಸಂಗತಿಗಳನ್ನು ಅವರಿಗೆ ಸಾಕ್ಷಾತ್ತಾಗಿ ತೋರಿಸಿದರು ಅಲ್ಲಿ ಹೋಗುತ್ತಿರುವಾಗ ಜಾಟ್ ಮಿಲಿಟರಿ ಪೆನ್ಷನ್‌ದಾರನೊಬ್ಬನನ್ನು ವೈಸ್‌ರಾಯಿಯವರು ಕಂಡು, ಆತನು ೧೮೭೮-೭೯ ರಲ್ಲಿ ಕಾಬೂಲ್ ಪಟ್ಟಣದಲ್ಲಿ ತಮ್ಮ ಕೂಡ ಇದ್ದವನೆಂಬುದನ್ನು ಜ್ಞಾಪಿಸಿಕೊಂಡು, ಆತನ ಯೋಗಕ್ಷೇಮವನ್ನು ವಿಚಾರಿಸಿದರು ಬಳಿಕ ವೈಸ್‌ರಾಯಿ ಪ್ರಭುಗಳು ವಾಪಸು ಮಿ|| ಗಿಫರ್ಡ್‌ಯವರ ಬಂಗಲೆಗೆ ದಯಮಾಡಿ, ಸುಮಾರು ೫೫ ಮಂದಿ ಸದಸ್ಯರ ಪಙ್ಕ್ತಿಯಲ್ಲಿ ಕುಳಿತು ಭೋಜನಮಾಡಿದರು ಅಲ್ಲಿಂದ ಅವರು ಕಾರ್ಮಿಕೇಲ್ ಷಾಫ್ಟ್ ಎಂಬ ಗಣಿಗೆ ಚಿತ್ತೈಸಿ, ಅಲ್ಲಿ ಚಿನ್ನ ತೆಗೆಯುವ ಕಾರ್ಯಗಳನ್ನು ಪರಾಂಬರಿಸಿ, ವಿದ್ಯುಚ್ಛಕ್ತಿಯ ಮನೆಯನ್ನೂ ಅದರಲ್ಲಿ ಮಾಡಿರುವ ಏರ್ಪಾಡುಗಳನ್ನೂ ತಿಳಿದುಕೊಂಡು ಪರಿವಾರ ಸಹಿತ ಮೋಟಾರ್ ಗಾಡಿಗಳಲ್ಲಿ ಹೊರಟು ಉರಿಗದ ರೈಲ್ವೆ ಸ್ಟೇಷನ್ನಿಗೆ ದಯಮಾಡಿ, ಗಣಿ ಕಂಪನಿಯ ಪ್ರತಿನಿಧಿಗಳನ್ನೂ ಡೆಪ್ಯುಟಿ ಕಮಿಷನರ್ ಮೊದಲಾದ ಮುಖ್ಯಾಧಿಕಾರಿಗಳನ್ನೂ ವಂದಿಸಿ ಅವರಿಗೆ ಅಪ್ಪಣೆಯನ್ನಿಟ್ಟು ಸ್ಪೆಷಲ್ ರೈಲು ಹತ್ತಿ, ಸಾಯಂಕಾಲ ೬ ಗಂಟೆಗೆ ಬೆಂಗಳೂರು ದಂಡಿಗೆ ದಯಮಾಡಿ ರೆಸಿಡೆನ್ಸಿ ಬಂಗಲೆಯನ್ನು ತಲುಪಿದರು

ಬೇರೆ ಬೇರೆ ಸ್ಥಳಗಳನ್ನು ಪರಾಂಬರಿಸಿದ್ದು

ತಾ ೫ ನೇ ಭಾನುವಾರ ಬೆಳಿಗ್ಗೆ ವೈಸ್‌ರಾಯಿ ಲಾರ್ಡ್ ಮಿಂಟೋಯವರು ಬ್ರಿಟಿಷ್ ರೆಸಿಡೆಂಟರನ್ನು ಕರೆದುಕೊಂಡು ಪತ್ನೀ ಪರಿವಾರ ಸಹಿತರಾಗಿ ಮೋಟಾರ್ ಗಾಡಿಗಳಲ್ಲಿ ಹೊರಟು ಮೈಸೂರು ಗವರ್ನಮೆಂಟಿನ ಇಂಪೀರಿಯಲ್ ಸರ್ವಿಸ್ ಸೈನಿಕರ ಲೈನ್ ಮನೆಗಳೇ ಮುಂತಾದ ಸ್ಥಳಗಳನ್ನು ಪರಾಂಬರಿಸಿ, ದಂಡಿಗೆ ನೀರು ಸರಬರಾಯಿ ಆಗುವ ಭಾರೀ ಕೊಳಗಳನ್ನೂ ಅಲ್ಲಿ ನೀರು ಶುದ್ಧಿಯಾಗುವುದಕ್ಕೆ ಮಾಡಿರುವ ಏರ್ಪಾಡುಗಳನ್ನೂ ನೋಡಿಕೊಂಡು, ಮುಂದಕ್ಕೆ ತರಳಿ ಶಾಸ್ತ್ರ ಶೋಧನಾ ವಿದ್ಯಾನಿಲಯಕ್ಕೆ ಚಿತ್ತೈಸಿದರು ಅಲ್ಲಿ ಡೈರೆಕ್ಟರಾದ ಡಾ। ಮಾರಿಸ್ ಟ್ರಾವರ್ಸ್ ಯವರೂ, ಡಾ। ಆಲ್‌ಫ್ರೆಡ್ ಹೇಯವರೂ ಮೊದಲಾದವರು ವೈಸ್‌ರಾಯಿಯವರನ್ನು ಎದುರುಗೊಂಡು, ಆ ವಿದ್ಯಾನಿಲಯದ ಕಟ್ಟಡದ ನಕ್ಷೆಯನ್ನೂ ಅಸ್ತಿಭಾರ ಹಾಕಿ ಕಟ್ಟುತ್ತಿರುವ ಭಾಗಗಳನ್ನೂ ಅವರಿಗೆ ತೋರಿಸಿ ವಿವರಿಸಿ ಅರಿಕೆ ಮಾಡಿದರು ಈ ಕಟ್ಟಡವೆಲ್ಲಾ ಪೂರೈಸಿದ ಮೇಲೆ ೭೦೦ ಎಕರೆ ಜಮೀನು ಅದರ ಆವರಣದೊಳಗೆ ಸೇರಿಹೋಗುವುದು ಕಟ್ಟಡ ಮುಂತಾದದ್ದಕ್ಕೆ ಒಟ್ಟು ೧೦ ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎಂದು [illegible] ಇದುವರೆಗೆ ೩ ಲಕ್ಷ ರೂಪಾಯಿ ಖರ್ಚಾಗಿರುವುದು ಹಿಂದುಸ್ಥಾನದ ಕಸಬುಗಳ ಅಭಿವೃದ್ಧಿಗೆ ಈ ವಿದ್ಯಾನಿಲಯವು ಮುಖ್ಯ ಕಾರಣವಾಗುತ್ತದೆ ೭೮ ಮಂದಿ ವಿದ್ಯಾರ್ಥಿಗಳು ಅಲ್ಲೇ ಇದ್ದುಕೊಂಡು ಶಾಸ್ತ್ರಶೋಧನೆಯಲ್ಲಿ ಉಪಯೋಗಿಸುವರು ಅವರಿಗೆಲ್ಲಾ ಅಲ್ಲಿ ವಾಸದ ಮನೆಗಳನ್ನು ಕಟ್ಟಿಸಿಕೊಡುತ್ತಾರೆ ಸದ್ಯದಲ್ಲಿ ೩೪ ಮಂದಿ ಇರುವುದಕ್ಕೆ ಕಟ್ಟಡಗಳನ್ನು ಪ್ರಾರಂಭಿಸಿರುವರು ಇನ್ನು ಎರಡು ಸಂವತ್ಸರಗಳಲ್ಲಿ ಈ ವಿದ್ಯಾನಿಲಯವು ಸಿದ್ಧವಾಗುವುದೆಂದು ಊಹಿಸಲ್ಪಟ್ಟಿದೆ ಇಂಥಾ ಅಪೂರ್ವವಾದ ನಿಲಯವನ್ನು [illegible] ಅಲ್ಲಿದ್ದವರಿಗೆಲ್ಲಾ ಅಪ್ಪಣೆ ಕೊಟ್ಟು, ಅಲ್ಲಿಂದ ಮೋಟರ್ ಗಾಡಿಯಲ್ಲಿ [illegible]ಗಳಿಗೆ ಚಿತ್ತೈಸಿದರು ಮೈಸೂರು ಗವರ್ನಮೆಂಟಿನವರು ಅಲ್ಲಿ ಕುದುರೆಗಳ ಸಾಕಣೆಯನ್ನು ಇಟ್ಟು ನಡೆಸುತ್ತಿದ್ದಾರೆ ಲೆಫ್ಟಿನೆಂಟ್ ಕರ್ನಲ್ ಜೋನ್ಸ್ ಯವರೇ ಅದಕ್ಕೆ ಮುಖ್ಯಾಧಿಕಾರಿಯು ಭೋಜನಾನಂತರ ವೈಸ್‌ರಾಯಿಯವರು ಲಾಯಗಳನ್ನೆಲ್ಲಾ ಪರಾಂಬರಿಸಿ ಸಂತೋಷಪಟ್ಟು, ಕುದುರೆಗಳನ್ನು ಬಹಳ ಚನ್ನಾಗಿ ಸಾಕಿ ಬೆಳಸುತ್ತಾರೆಂದೂ, ಮೇಲ್ಪಙ್ಕ್ತಿಗೆ ಬಹು ತೃಪ್ತಿಕರವಾಗಿದೆ ಎಂದೂ ಅಪ್ಪಣೆ ಕೊಡಿಸಿ ವಾಪಸು [illegible] ದಾರಿಯಲ್ಲಿ ಮೈಸೂರು ಅಮೃತಮಹಲ್ ಇಲಾಖೆಯ ೨,೦೦೦ ದನಗಳನ್ನು ಅವರೆದುರಿಗೆ ತಂದು ತೋರಿಸಿದ್ದನ್ನು ನೋಡಿ ತುಂಬಾ ಹರ್ಷಪಟ್ಟರು. ಆ ಸಾಯಂಕಾಲವೇ ಪ್ರಭುಗಳು ವಾಪಸು ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು ಬಂಗಲೆಯಲ್ಲಿ ಭೋಜನವೂ, ಆ ಬಳಿಕ ಮನೋಹರವಾದ ಸಂಗೀತಗಳೂ ನಡೆದವು

ವಿಕ್ಟೋರಿಯಾ ಆಸ್ಪತ್ರೆಯು

ವೈಸ್‌ರಾಯಿಯವರ ಪತ್ನೀರಾದ ಲೇಡಿ ಮಿಂಟೋರವರು ಕೌಂಟೆಸ್ ಆಫ್ ಡರ್ಬ್ಯಾಂಯವರ ಕೂಡ ಭಾನುವಾರ ಬೆಳಗೆ ರೆಸಿಡೆನ್ಸಿ ಬಂಗಲೆಯಿಂದ ಬೆಂಗಳೂರ ಪೇಟೆಯಲ್ಲಿರುವ ಪ್ರಸಿದ್ಧವಾದ ವಿಕ್ಟೋರಿಯಾ ಆಸ್ಪತ್ರೆಗೆ ದಯಮಾಡಿದರು ಬಾಗಿಲಲ್ಲಿ ಸೀನಿಯರ್ ಸರ್ಜನರಾದ ಕರ್ನಲ್ ಜೆ ಸ್ಮಿತ್ ಯವರೂ, ಡಾಕ್ಟರ್ ಆರುಮುಗಂ ಮೊದಲಿಯಾರ್ರವರೂ ಕಾದಿದ್ದು, ಅವರನ್ನು ಎದುರುಗೊಂಡು ಕರೆದುಕೊಂಡು ಹೋಗಿ ಆಸ್ಪತ್ರೆಯ ಎಲ್ಲಾ ಭಾಗಗಳನ್ನೂ ತೋರಿಸಿ ವಿವರಿಸಿದರು ಲೇಡಿ ಮಿಂಟೋರವರು ನೋಡಿ ತುಂಬಾ ಸಂತೋಷಪಟ್ಟುಕೊಂಡು ಪಯಣಮಾಡಿದರು

ಸೈನ್ಯಗಳ ಕವಾತನ್ನು ಪರಾಂಬರಿಸಿದ್ದು

ತಾ. ೬ ನೇ ಸೋಮವಾರ ಬೆಳಿಗ್ಗೆ ವೈಸ್‌ರಾಯಿಯವರು ಪರೇಡ್ ಮೈದಾನಕ್ಕೆ ದಯಮಾಡಿ, ಅಪೂರ್ವವಾದ ಸೈನ್ಯಗಳ ಕವಾತನ್ನು ಪರಾಂಬರಿಸಿದರು ಆ ದಿನ ೧೩,೦೦೦ ಸೈನಿಕರು ಮೈದಾನಿನಲ್ಲಿ ನಿಂತು ಕವಾತುಮಾಡಿದರು ಇಂಥಾದ್ದನ್ನು ಅಲ್ಲಿ ಇದುವರೆಗೆ ಯಾರೂ ನೋಡಿರಲಿಲ್ಲ ದಂಡಿನ ಮತ್ತು ಪೇಟೆಯ ಪ್ರಜೆಗಳು ಸಾವಿರಗಟ್ಟಲೆಯಾಗಿ ಮೈದಾನದ ಸುತ್ತಲೂ ಕಿಕ್ಕಿರಿಯುವಂತೆ ನಿಂತು ಸೈನ್ಯದ ಕವಾತನ್ನು ನೋಡಿದರು

Printed and Published by the Rev H Gulliford
Proprietor and Manager, Wesleyan Mission Press,
Mysore 9/12/1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸಿ೯ ೧೯೦೯ ನೇ ಇಸವಿ ಡಿಸೆಂಬರ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೨೯

ಸುಗಂಧಗಳು.

77-5

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ೨೧, ೫, ೩, ೨-೮ ೦, ೧ ೪ ೦ ಬಿಲ್ಲೆಗಳು ೧ ಕೋಲಿಗೆ ರೂ ೧ ದರ್ಬಾರ್ ಪೆಟ್ಟಿ ೧ಕ್ಕೆ ೪ ಆಣೆ ತಾಂಬೂಲ ಬಹಾರ್ ೧ ಶೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ ಟಿ ಎಲ್ ಉಪಾಧ್ಯಾಯ, ಮೈಸೂರು.

ಪುಸ್ತಕಗಳು

70.13

ಜಾಗ್ರತೆ ತರಿಸಿ ಪ್ರತಿ ಮುಗಿದುಹೋದನಂತರ ಮುದ್ರಿತ ದೊರೆಯಲಾರದು

೨ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦ ಇಂಗ್ಲಿಷ್ ಭಾಷೆಯನ್ನು ಓದಲೂ ಬರೆಯಲೂ ಮಾತಾಡಲೂ, ತರ್ಜುಮೆ (ಭಾಷಾಂತರ) ಮಾಡುವದಕ್ಕೂ, ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧-೨ ತಿಂಗಳೊಳಗಾಗಿ ತಿಳಿ-ವಳಿಕೆಯಾಗಿ ಕಲಿಸುವ ಉತ್ತಮಪುಸ್ತಕವಿದು ಕ್ರಯ ೧-೮-೦

ಹಿ ರಾಮನಾಥಯ್ಯರ್ ವಿಳಾಸ —ಬಿ ಕೆ ಮೂರ್ತಿ ಕಂಪನಿ
ನಂ ೧೮ ಒಂದನೆ ಬೀದಿ ಸಿದ್ದಿಕಟ್ಟೆ ಲಕ್ಕೂರ್ ಪೋಸ್ಟು
ಬೆಂಗಳೂರು ಸಿಟಿ

ಕನ್ನಡ ಕಥಾ ಸಾಗರ ೬ ಮು ೧—೮—೦ ಸ್ವಲ್ಪ ಪ್ರತಿಗಳು ಉಳಿದಿರುವದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧—೮—೦ ೧ನೇ ಭಾಗ ತಮಗಾಗಿ ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಸುವ ೧ನೇ ಭಾಗದ ಪುಸ್ತಕವಿದು ಕ್ರಯ ೧—೮—೦ ಗೀತಾಮೃತ ಮಹೋದಧಿ ಕ್ರಯ ೦—೮—೦

ವಿಳಾಸ —ಮ್ಯಾನೇಜರ್
ಕರ್ನಾಟಕ ಪುಸ್ತಕ ಶಾಲ
ಲಕ್ಕೂರ್ ಪೋಸ್ಟ್

ಮೈಸೂರು ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರವರ ಆಫೀಸ್.

ಬೆಂಗಳೂರು—ತಾರೀಖು ೧೧ ನೇ ಡಿಸೆಂಬರ್ ೧೯೦೯

ಇಸ್ತಿಹಾರ್ ನಾಮಾ.

8.1

ಇದರಿಂದ ತಿಳಿಯಪಡಿಸುವದೇನೆಂದರೆ

1910 ನೇ ಇಸವಿ ಜುಲಾಯಿ ತಿಂಗಳು ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ಮೊದಲನೆ ವರುಷ ೮ ರೂಪಾಯಿಯೂ, ಎರಡನೆ ವರುಷ 10 ರೂಪಾಯಿಯೂ ಮುಂದಿನ ಎರಡು ವರುಷಗಳು 12 ರೂಪಾಯಿಯಂತೆಯೂ ಮಾಸಿಯಾನಾ ಐದು (5) ವಿದ್ಯಾರ್ಥಿ ವೇತನಗಳನ್ನು ಶ್ರೀಮನ್ಮಹಾರಾಜಾ ರಾಜಾವಾಡೇರ ಬಹದ್ದೂರವರ ಗವರ್ನಮೆಂಟಿನವರು ಕೊಡುತ್ತಾರೆ

ವಿದ್ಯಾರ್ಥಿಗಳು ಸಂಸ್ಕೃತವನ್ನು ತಿಳಿದವರಾಗಿ ಕಾವ್ಯದ ಐದನೇ ತರಗತಿಯವರೆಗೆ ಓದಿದವರಾಗಿರಬೇಕು ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯು ಪಾಸ್ ಅಥವಾ ಫೇಲ್ ಆದವರಾಗಿಯೂ ಅಥವಾ ೬ ತರಗತಿ ವರಗೆ ಓದಿದವರಾಗಿಯಾದರೂ ಇರಬೇಕು

ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸುವದಕ್ಕೆ ಮುಂಚೆ 1910 ನೇ ಇಸವಿ ಜನವರಿ ತಾರೀಖು 10 ರಲ್ಲಿ ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ಪ್ರವೇಶ ಪರೀಕ್ಷೆಯೊಂದು ಮಾಡಲ್ಪಡುತ್ತೆ

ಆ ದಿನ ಪ್ರಾತಃಕಾಲ 10 ಘಂಟೆಯಿಂದ ಮಧ್ಯಾಹ್ನ 1 ಘಂಟೆ ವರೆಗೆ ಇಂಗ್ಲೀಷಿನಲ್ಲಿ ಒಂದು ಪ್ರಶ್ನಾ ಪತ್ರವು ಮತ್ತು ಮಧ್ಯಾಹ್ನ 2 ಘಂಟೆ ಮೊದಲ್ಗೊಂಡು 5 ಘಂಟೆ ವರೆಗೆ ಸಂಸ್ಕೃತದಲ್ಲಿ ಒಂದು ಪ್ರಶ್ನಾ ಪತ್ರವೂ ಕೊಡಲ್ಪಡುತ್ತೆ

ಪ್ರವೇಶ ಪರೀಕ್ಷೆಗೋಸ್ಕರ ಅರ್ಜಿಗಳು ಇದರಡಿ ರುಜುಮಾಡಿರುವವರ ಹೆಸರಿಗೆ 1910 ನೇ ಇಸವಿ ಜನವರಿ 5 ನೇ ತಾರೀಖಿನ ಒಳಗೆ ಕಳುಹಿಸಲ್ಪಡಬೇಕು

(ವೈ ಆರ್ಡರ್)

(ಸೈ) ಎ. ಸುಬ್ರಹ್ಮಣ್ಯ ಐಯರವರು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ,
ಆಯುರ್ವೇದಿಕ್ ಕಾಲೇಜ್ ಕಮಿಟಿ.

೧೯೧೦ ನೇ ಇಸವಿ ಕ್ಯಾಲೆಂಡರುಗಳ ಬಹುಮಾನ

82-2

ಡಿಸೆಂಬರ್ ತಿಂಗಳು ಆಖೈರಿನೊಳಗೆ ನಮಗೆ ಕಾಲಾಣೆ ಕಾರ್ಡಿನಲ್ಲಿ ವಿಳಾಸವನ್ನು ಬರೆದುಕಳುಹಿಸತಕ್ಕವರಿಗೆ ಒಂದು ಸೊಗಸಾದ ಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ ವಿಳಾಸ —
ಮ್ಯಾನೇಜರ್, ಚಂದ್ರೋದಯ ಆಫೀಸು, ಸಾಹುಕಾರಪೇಟೆ, ಮದರಾಸು

ಇಂಗ್ಲಿಷು ಕಲಿಯುವ ಪುಸ್ತಕ! ಇಂಗ್ಲಿಷು ಕಲಿಯುವ ಪುಸ್ತಕ!!

83 2

ಆಂಗ್ಲ ಭಾಷಾಪ್ರವೇಶದಾಯಿ ಎಂಬ ತಾವಾಗಿ ಇಂಗ್ಲಿಷು ಕಲಿಯುವ ಮೊದಲನೆಯ ಪುಸ್ತಕ (The Self English Study Vol I (ದಿ ಸೆಲ್ಫ್ ಇಂಗ್ಲಿಷು ಸ್ಟಡಿ ವ್ಯಾಲ್ಯುಂ ೧) ನೂರೆಂಟು ಮುದ್ರಣ ಪುಟ ೩೭೦ ಕಾಗದ ಉತ್ತಮ ಅಚ್ಚು ಅಂದ ಅಟ್ಟೆ ಭದ್ರ ಕನ್ನಡಿಗರಿಗೆ ಇಂಗ್ಲಿಷು ಭಾಷೆಯು ಓದು, ಬರಹ, ಮಾತಾಡುವುದು, ಭಾಷಾಂತರ ಮುಂತಾದುವುಗಳನ್ನು ಬೋಧಕರ ಸಹಾಯವಿಲ್ಲದೆ ಸುಲಭವಾಗಿ ತಿಳಿಸುವ ಉತ್ತಮ ಸಾಧನ ಒಂದು ರೂಪಾಯಿ ಎಂಟಾಣೆಗೆ ಮಾರುತ್ತಿರುವುದು ಅನೇಕರಿಗೆ ತಿಳಿದ ಸಂಗತಿ ಕೆಲವು ದಿನಗಳ ಮಟ್ಟಿಗೆ ಕಡಮೆ ಕ್ರಯ ಒಂದು ರೂಪಾಯಿ ನಾಲ್ಕಾಣೆ ಮಾತ್ರ ಕೆಲವು ಪ್ರತಿಗಳೇ ಉಳಿದಿವೆ ಬೇಗ ಬರೆದು ತರಿಸಿಕೊಳ್ಳಿರಿ

ವಿಳಾಸ —ಭಾರತಿ ಸಂಪಂಗಿರಾಮು,
(ಪೋಸ್ಟು) ಹೊಸಕೋಟೆ,(ಡಿಸ್ಟ್ರಿಕ್ಟು) ಬೆಂಗಳೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಹರಸ ಕದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಕಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೋ!!.

151

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಪರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ನಿಲಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಹರಳೆ, ಕಾಸಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಚ್ಚಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ .

ದೀವಳಿಗೆಯ ಬಹುಮಾನ

75-7

ಈ ಕೆಳಗೆ ವಿವರಿಸುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ಮಾಡಿರಿ ಡಿಸೆಂಬರ್ ಆಖೈರ್‌ವರೆಗೆ ಮಾತ್ರ ಎ ಪಿ ಭಾರ್ಜ ಅಲಾಹಿದಾ

ನಿರುಪಮಾ—ಹೊಸನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ವೇಶ್ಯೆಯರ ಚಮತ್ಕಾರ, ಹೆಂಡಕುಡುಕರ ಅವ್ಯವಸ್ಥೆ, ಕಳ್ಳರ ಪರಿಣಾಮ ಇವುಗಳನ್ನು ತೋರ್ಪಡಿಸಿ ತಿಪ್ಪುವುದು ಅಂದವಾದ ಮುದ್ರಣ ಸೊಗಸಾದ ದಪ್ಪ ಕಾಗದ ಕ್ರಯ ರೂ ೦-೧೨-೦

ಸೋಮಸುಂದರ—ಬಂಗಾಳಿಯ ನಾವೆಲ್ಲನ್ನು ಹೋಲುವ ಹೊಸ ಕಥೆ, ಮಾತಾಪಿತೃಗಳ ಕರ್ತವ್ಯ, ಬಾಲಕರ ಧರ್ಮ, ಸತ್ಸಂಗ ದುಸ್ಸಂಗಗಳ ತಾರತಮ್ಯ ಇವುಗಳನ್ನೊಳಕೊಂಡಿರುವುದು ಓದುವುದಕ್ಕೆ ಮೊದಲು ಮಾಡಿದರೆ ಕೊನೆಮುಟ್ಟುವ ವರೆಗೂ ಬಿಡುವುದಕ್ಕೆ ಆಗುವುದಿಲ್ಲ ಕ್ರಯ ೧೯ ಆಣೆ

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುಯವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ಋತುಮತಿಯರಾಗುವ ಮೊದಲ್ಗೊಂಡು ಗರ್ಭಿಣಿಯಾ ಸ್ಥಿತಿ, ಪ್ರಸವಾವಸ್ಥೆ, ಬಾಣಂತಿತನ, ಇವೇ ಮೊದಲಾದ ಕಾಲಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ರೋಗಗಳನ್ನೂ ಅದರ ಪರಿಹಾರವನ್ನೂ ಶಿಶುಪೋಷಣ ಕ್ರಮವನ್ನೂ ಬಹು ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ ರೂ ೦ ೧೨ ೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ ಹಸೆಗೆ ಕರೆಯುವ ಹಾಡು, ಆರತಿಯೆತ್ತುವ ಹಾಡು, ಬೀಗರಹಾಡು, ಬಾಗಿಲುತೆರೆಯುವಹಾಡು, ದೇವತಾಸ್ತೋತ್ರಗಳೂ ಇದರಲ್ಲಿ ಅಡಕವಾಗಿವೆ, "ಬಾಲಿಕಾಗೀತಮುಕ್ತಾಕಲಾಪ" ದ ಮಟ್ಟುಗಳನ್ನೇ ಅನುಸರಿಸಿರುವುದು. ಕ್ರಯ ರೂ ೦ ೬-೦

ಇದಲ್ಲದೆ "ಪಾಕಸಂಜೀವಿನಿ" ಎಂಬ ನಾಲ್ಕು ನಕಲಿಯನ್ನುಳ್ಳ ಪುಸ್ತಕ (೦-೪-೦), "ಅಸಹಾಯಶೂರಪ್ರಹಸನ" ಎಂಬ ಮನೋಹರವಾದ ಮತ್ತೊಂದು ನಕಲಿಯ ಪುಸ್ತಕ (೦ ೨-೬), "ಸತ್ಯಸಂಜೀವನಿ" ಎಂಬ ಸೊಗಸಾದ ಕಲ್ಪಿತಕಥೆ (೦ ೬-೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ನಾಟಕಚಂದ್ರಿಕೆ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

28 45

ಎಂ ಎಸ್ ಕುಮಾರಯ್ಯನವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ಸುತ್ತಮುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ದಿವ್ಯೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ... ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟ ೧ ಕ್ಕೆ ೧ ರೂಪಾಯಿ

ಶಾಬಕೂಟಪಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಧಿಸೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಬ್ಬುಗಣ್ಣು, ಕಣ್ಣಿನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೯ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಾಣೆ ಸ್ಟಾಂಪ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47-30.

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ಒಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುವ ಡಿಪ್ಪೊ ಮತ್ತು ಏಜಂಟರ ವಿಳಾಸ— ಜೆ ಎಸ್ ಕನ್ನಯ್‌ಶೆಟ್ಟಿ ಅಂಡ್ ಕಂಪೆನಿ ತುಮಕೂರು, ಮತ್ತು

ಎಸ್. ಪೀಟರ್ಸ್,

೩೩, ವೇಪಮೆಲಚುಳ್ಳ ಬೀದಿ, ಪೇರೀ, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4-50

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ಸ್ವರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರವುಳ್ಳ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮನವು ಸರಿಯಿಲ್ಲ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಸ್ರಾವದ್ರವ ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರವು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [67-16]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ, ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಪಿ. ಒ. ಬಾಕ್ಸ್ ಬೊಂಬಾಯಿ—ಇವರಲ್ಲಿ ದೊರೆಯುವುದು

ಗೃಹಕೃತ್ಯದ ನೋಟೀಸು

84-1

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿ ಆಸ್ಪತ್ರೆ ಇಟ್ಟಿರುವ ಪೂರ್ವ ಛಂಡಿ ಕಾರ್ಖಾನೆ, ಪಶ್ಚಿಮ ಹೈರೋಡು, ಉತ್ತರ ಕೆರೆದಾರಿ, ದಕ್ಷಿಣ ಪುರೋಹಿತ ಚಂದ್ರಯ್ಯನವರ ಮನೆ—ಈ ಮಧ್ಯೆ ಇರುವ ಮನೆಯು ನನ್ನ ಗಂಡನಾದ ಬ್ರಹ್ಮಣ್ಯನಂಬವರ ಪಿತ್ರಾರ್ಜಿತವಾದದ್ದು ಸದರಿ ಮನೆಯನ್ನು ನನ್ನ ಖ ಮಾವನಾದ ಹಾಲಿ ಕೊಣಸೂರಿನಲ್ಲಿರುವ ಪುಟ್ಟಣ್ಣನೆಂಬುವರು ನನಗೆ ತಿಳಿಯದಂತೆ ಪರಭಾರೆ ಮಾಡುವದಕ್ಕಾಗಿ ಉದ್ದೇಶಪಟ್ಟಿರುವ ವರ್ತಮಾನ ತಿಳಿಯಬಂದಿದೆ ಸದರಿ ಮನೆಗೆ ನಾನು ಮುಖ್ಯ ಹಕ್ಕುದಾರಳಾಗಿರುತ್ತೇನೆ ಅದನ್ನು ಯಾರೇ ಆಗಲಿ ನನ್ನ ಅನುಮತಿ ಪಡೆಯದೆ ಸದರಿ ಪುಟ್ಟಣ್ಣನವರಿಂದ ಆಧಾರ, ಭೋಗ್ಯ, ಯಾವ ಕ್ರಯವೇ ಆಗಲಿ ಮಾಡಿಕೊಂಡಲ್ಲಿ ಅಂಥವರು ನನಗೆ ಉಂಟಾಗುವ ಕಷ್ಟನಷ್ಟಗಳಿಗೆಲ್ಲಾ ಗುರಿಯಾಗಬೇಕಾಗಿ ಬರುವದನ್ನು ಈ ಮೂಲಕ ತಿಳಿಸಿ ಎಚ್ಚರಪಡಿಸಿರುತ್ತೇನೆ

ಮಂಡ್ಯ, ೯-೧೨-೧೯೦೯

ರಾಜು ಬಿ ಸುಬ್ಬಣ್ಣನವರ ಮಗಳು ಬುಡುದಾಪಮ್ಮ

ಗಾರ್ಡಿಯನ್ ಎನ್ ಅನಂತರಾಮಯ್ಯ

ಜ್ವರಹರಿ.

18 46



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜ್ವರಗಳು ಕಾಣಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೧೦ ರೂ ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾ ಬಿಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಎವರು—ಪ್ರಿಯಃ ಓಮಂ ಕರ್ಪೂರವನ್ನು ನಾನೂ ನನ್ನ ಹಾಜೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಸಿದ್ಧ ಸಾಮಗ್ರಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅವಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಲೈನ್ ಬೀಚ್, ಮದರಾಸ್.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕಮದಲ್ಲಿರುವದು ಉತ್ತಮ

SCOTT'S EMULSION. 6-50

(ಸ್ಕಾಟ್ಸ್ ಇಮಲ್‌ಷನ್)

ಘಟ್ಟ ಶರೀರವುಳ್ಳವರ್ನ್ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಎಲುಬಿನ ಭಾಗಗಳನ್ನು ಬಲಪಡಿಸಿಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಿ ಎಲ್. ಎಸ್ ಬುಕ್ ಡಿಪ್ಪೊ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(106 ಪುಟಗಳು ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ). ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಇದ್ದನು ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಪೇಜು) ಪ್ರತಿಯೊಂದಕ್ಕೆ 0—0—6

(80 ಪೇಜು) 0—1—0

(160 ಪೇಜು) 0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-50]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪ್ಪೊ, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ಬರೆದಿರುವ ರೋಗಗಳಿಗೆ ತಕ್ಕದಾದಗ ಜಾರಿಯು [30-12]

ತಲೆನೋವು, ಗಂಟು ಊದುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಕಟ್ಟ, ಘಾಯ, ಚಳುವು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತು 0-8-0

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬-೦ ೧೨ ಡಬ್ಬಿಗಳಿಗೆ ೪ ೦-೦

ಆಸ್ತಮಿಕ್ಸ್ಚರ	೨ ೦-೦
ಚೇಳುಕಡಿತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿ ಜಗಳಿಗೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪ ೦
ಚಿಜ್ಜ ಮುಲಾಮು—ಬಿಳ್ಳ ಜಿಜ್ಜಗೆ	೦ ೩-೦
ಕೇಶವರ್ಧನೀ ತೈಲ—ಶರೀಯ ಬೆಳವಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ತ್ಮ ರೋಗಕ್ಕೆ	೦ ೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5—11—1909 ರಿಂದ 12—11—1909 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	2	0	0
ಮೈಸೂರು ,,	83	65	0	0
ಬೆಂಗಳೂರು ಡಿಸ್ಟ್ರಿಕ್ಟು	18	7	27	22
ಮೈಸೂರು ,,	*	*	*	*
ಕೋಲಾರ್ ,,	0	0	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	3	2	6	6
ಚಿತ್ರದುರ್ಗ ,,	0	0	18	9
ಕಡೂರ್ ,,	5	2	0	33
ಶಿವಮೊಗ್ಗ ,,	3	2	0	0
ಜುಮ್ಲಾ	113	80	18	0

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿ ಶುಕ್ರವಾರದಿಂದ ಮಾರ್ಗಶಿರ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಡಿಸೆಂಬರ್

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ಶೇಷ ಧನು ಮಾಸ
17	ಶುಕ್ರ *	ಪಂಚಮಿ	39-58	ಶ್ರ	0-18	3
18	ಶನಿವಾ	ಷಷ್ಠಿ	46-38	ಶ	55-25	4
19	ರವಿವಾ §	ಸಪ್ತಮಿ	30-60	ಪೂಭಾ	51-50	5
20	ಚಂದ್ರ	ಅಷ್ಟಮಿ	25-40	ಉ.ಭಾ	48-8	6
21	ಕುಜ †	ನವಮಿ	19 50	ರೆ	44-4	7
22	ಬುಧ ,,	ದಶಮಿ	14-2	ಅ	39-46	8
23	ಗುರು ‡	ಏಕಾದಶಿ	9-20	ಭ	36-39	9

* ಕೊಟಕರ ಪಂಚಮಿ

. ಚಂಪಾಷಷ್ಠಿ, ಸುಬ್ರಹ್ಮಣ್ಯದಲ್ಲಿ ರಥೋತ್ಸವ

§ ನಂದಸಪ್ತಮಿ

† ತಿಥಿದ್ವಯಂ

,, ಏಕಾದಶೀ ತಿಥಿ

‡ ಮಕರಾಯನಗತೋ ರವಿ, ಸರ್ವತ್ರ ಮುಕ್ಕೋಟಿ ಏಕಾದಶಿ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೩-೦-೦	೧೪-೦-೦
ಕಂಬೂಡಿ ಅಕ್ಕಿ ಅವಲ್	.	೧೩-೮-೦	೧೩-೦-೬
,, ಮೀಡಿಯಂ	.. ...	೧೩-೦-೦	೧೨-೮-೦
ಕಾವ್ರಾಣಿ ಅಕ್ಕಿ	...	೧೨-೮-೦	೧೪-೦-೦
ಸಣ್ಣಕ್ಕಿ ಅವಲ್	.	೧೪-೪-೦	೧೬-೦-೦
,, ಮೀಡಿಯಂ	. .	೧೪-೦-೦	೧೫-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	. .	೧೪-೦-೦	೧೪-೮-೦
,, ಮೀಡಿಯಂ	. ..	೧೩-೮-೦	೧೪-೦-೦
ಕೈಗ ರಾಗಿ ಪಲ್ಲಾ ೧ಕ್ಕೆ	. ..	೮-೮-೦	೮-೮-೦
ಕಾಡ್ರಾಗಿ	.. . ..	೮-೦-೦	೮-೦-೦
ಜೋಳ	.. . ...	೭-೮-೦	೮-೦-೦
ಹುಸಂದಿ ಪಲ್ಲಾ ೧ಕ್ಕೆ	. .	೧೦-೦-೦	೧೧-೦-೦
ಹೇಲಿ ಅವರೆ	.. . ...	೧೪-೦-೦	೧೪-೦-೦
ಹೆಸರು	. .	೧೦-೦-೦	೧೦-೧೨-೦
ಉದ್ದು	.. . .	೧೪-೪-೦	೧೧-೮-೦
ಕಡಲೆ	.. ..	೧೨-೮-೦	೧೦-೦-೦
ಎಳ್ಳು ಸೇ ೧೨೬ ಕ್ಕೆ	.. ..	೧೫-೦-೦	೧೪-೦-೦
ಹುರುಳಿ	. ..	೯-೦-೦	೧೧-೦-೦
ಹೆಸರು ೧೨೭ ಸೇರಿಗೆ		೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	.. ...	೨-೦-೦	೧-೬-೦
ಮೆಣಸಿನಕಾಯಿ	.. .	೪-೮-೦	೩-೮-೦
,, ಮೀಡಿಯಂ	. .	೪-೪-೦	೩-೦-೦
ಬೆಲ್ಲ ಪೊಡ್ಡ ಅಚ್ಚು	.	೮-೮-೦	ಮ ೩-೦-೦
ಬೆಳ್ಳು ಮಣ ೧ಕ್ಕೆ	.. ..	೪-೮-೦	೪-೪-೦
ಹರಳೆಣ್ಣೆ ,,	.. . ..	೫-೮-೦	೬-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	... ..	೧೦-೦-೦	೯-೮-೦
ಉಪ್ಪು ,,	... .	೬-೪-೦	೫-೧೨-೦
ಹುಣಸೇ ಹಣ್ಣು	. .. ..	೨-೦-೦	೧-೧೨-೦
,, ಹಳೇದು	.. ...	೧-೯-೦	೧-೮-೦
ಹುಚ್ಚ ಮಣ ೧ಕ್ಕೆ	. ...	೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	.. ...	೭-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	... ...	೫-೦-೦	೫-೮-೦
ಆಲೇಕಾಯಿ ಮಣ ೧ಕ್ಕೆ	.. ...	೧-೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೧-೦-೦	೦-೧೧-೦
ಹತ್ತಿ (ಬೀಜ) ಕೆಂಪು	... ...	೧೫-೯-೦	೧೫-೪-೦
,, ,, ಪಸಿಮೆ	... ...	೧೬-೦-೦	೧೫-೯-೦
,, ,, ಗಟ್ಟಿ ಕೊಲ ೧ಕ್ಕೆ	...	೨೪-೫-೦	೨೪-೬-೦
ಹತ್ತಿ ಗಟ್ಟಿ ಕೊಲ ೧೦೦ ಕ್ಕೆ	... ...	೬೭-೪-೦	೬೩-೦-೦

ಸಚಿತ್ರ ಕಲಾತರಂಗ.

86-1

೧ ನೇ ಭಾಗ.

ಕ್ರಯ ಪುಸ್ತಕ ೧ ಕ್ಕೆ ರೂಪಾಯಿ ೧–೪–೦.

೧ ನೇ ಅಧ್ಯಾಯ —ಸಂವತ್ಸರ, ಮಾಸ, ವಾರ ಇವುಗಳುತ್ಪತ್ತಿಗೆ ಕಾರಣ, ಭೂಮಂಡಲವು, ಚಂದ್ರನು, ಸೂರ್ಯನು, ಗ್ರಹಗಳು, ಗ್ರಹಣಗಳು, ಬಾಲಚುಕ್ಕೆಗಳು, ಉಲ್ಕೆಗಳು, ಭೂಕಂಪಗಳು. ೨ ನೇ ಅಧ್ಯಾಯ.—ಕಾಂತಿಯ ಪ್ರಭಾವವು, ಎಣ್ಣೆಯಿಲ್ಲದ ದೀಪಗಳು, ನಡೆಯುವ ದೀಪ, ರಂಗಿನ ದೀಪಗಳು, ಸೂರ್ಯರಶ್ಮಿಯಿಂದಾಗುವ ಪ್ರಯೋಜನಗಳು, ಸೂರ್ಯನ ಕಾಂತಿಯಿಂದ ರೋಗಗಳನ್ನು ಗುಣಮಾಡುವಿಕೆ, ನೀಲಿ ಸೀಸಾಯಿಯ ನೀರಿನಿಂದ ಶಾಂತಿಯಾಗುವ ರೋಗಗಳು, ಕೆಂಪು ಲಾಂದ್ರದ ಬೆಳಕು ಇದರ ಸೀಸಾಯಿಯ ನೀರು ಇವುಗಳ ಉಪಯೋಗ, ಹಸರು ರಂಗಿನ ಸೀಸಾಯಿಯ ನೀರಿನ ಗುಣಗಳು, ಸೂರ್ಯರಶ್ಮಿಯಿಂದ ಅಡಿಗೆಮಾಡುವಿಕೆ, ಅಗ್ನಿಪರ್ವತಗಳು, ಕಲ್ಪಿತ ಸೂರ್ಯರಶ್ಮಿಯು. ೩ ನೇ ಅಧ್ಯಾಯ —ನೀರಿನಿಂದ ಫಾಳಿಯನ್ನು ಮಾಡುವುದು, ಬೇಕಾದ ಕಡೆ ಮಳೆಯನ್ನು ತರಿಸುವಿಕೆ, ನೀರಿನಿಂದ ರೋಗಗಳು ಗುಣವಾಗುವಿಕೆ, ಬಾಷ್ಪಸ್ನಾನವು, ಕಟಿಸ್ನಾನವು, ಶವಸ್ನಾನವು, ಮುಳುಗುವಿದ್ಯೆ, ನೀರಿನಿಂದ ನಡೆಸುವ ಯಂತ್ರಗಳು, ಎತ್ತರವಾದ ಸ್ಥಳಕ್ಕೆ ನೀರನ್ನು ತರಿಸುವಿಕೆ, ನೀರಿನ ಯಂತ್ರವು. ೪ ನೇ ಅಧ್ಯಾಯ —ರಸೋತ್ಪತ್ತಿ, ಲೋಹೋತ್ಪತ್ತಿ, ಕಬ್ಬಿಣ, ಉಕ್ಕು, ತಾಮ್ರ, ಬೆಳ್ಳಿ, ಭಂಗಾರವು, ಅಲ್ಯೂಮಿನಂ, ಕ್ಯಾಲ್ಸಿಯಂ, ತವರವು, ಕಂಚು, ಹಿತ್ತಾಳೆ, ಸೀಸವು, ತುತ್ತುನಾಗವು, ಜರ್ಮನ್ ಬೆಳ್ಳಿ, ಪ್ಲಾಟಿನಂ, ರಸಸಿಂಧೂರವು, ರತ್ನೋತ್ಪತ್ತಿ, ಅಭ್ರಕವು, ಶಿಲೋತ್ಪತ್ತಿ, ಹವಳಗಳು, ಕ್ರಿಮಿಕೀಟಗಳ ಉತ್ಪತ್ತಿ, ಹಿಂಗು, ಅಫೀಂ, ಅಗರು, ಕಪ್ಪು ಅರಗು, ಕೆರಸಿನ್ ಆಯಿಲ್, ರಬ್ಬರು. ೫ ನೇ ಅಧ್ಯಾಯ.—ವಾಯುವು, ಗಾಳಿ ಯಂತ್ರವು, ಗಾಳಿಯ ಬಂಡಿಗಳು, ಗಾಳಿಯಿಂದ ನೀರು ಸೇದಿಸುವುದು, ಆಕಾಶವಿಮಾನಗಳು, ಗಾಳಿಸುಪಾಕಿಗಳು, ಗಾಳಿಯಿಂದಗ್ನಿಯನ್ನುಂಟುಮಾಡುವುದು, ಗಾಳಿಯಿಂದ ನೀರನ್ನುಂಟುಮಾಡುವುದು, ಗಾಳಿಯಿಂದ ಬೆಂಕಿಯನ್ನಾರಿಸುವುದು, ಗ್ಯಾಸ್‌ಲೈಟ್ಸ್, ವಾತಶಯ್ಯಾ, ಸೈಫನ್ ೬ ನೇ ಅಧ್ಯಾಯ:—ರಕ್ತಪರೀಕ್ಷೆ, ಕಸ್ತೂರಿಪರೀಕ್ಷೆ, ಜಲಪರೀಕ್ಷೆ, ಅಶ್ವಪರೀಕ್ಷೆ, ಮೂತ್ರಪರೀಕ್ಷೆ, ಔಷಧದ ಪರೀಕ್ಷೆ, ಸ್ಥಳಪರೀಕ್ಷೆ, ಕ್ಷೀರಪರೀಕ್ಷೆ, ಅತ್ತರು ಪರೀಕ್ಷೆ, ಗರಳ ಪರೀಕ್ಷೆ, ಸುವರ್ಣಪರೀಕ್ಷೆ, ನಾಡೀಪರೀಕ್ಷೆ, ಉಷ್ಣಪರೀಕ್ಷೆ, ವಿಷಪರೀಕ್ಷೆ ೭ ನೇ ಅಧ್ಯಾಯ —ಕಾಗದವನ್ನು ಮಾಡುವಿಕೆ, ರೂಲು ಹಾಕುವ ಪೆನ್ಸಿಲು ಮಾಡುವ ವಿಧ, ಬೆಂಕಿ ಕಡ್ಡಿಗಳನ್ನು ಮಾಡುವ ವಿಧ, ಬೆಂಕಿಪೆಟ್ಟಿಗೆಯಲ್ಲಿಡಲು ಕಡ್ಡಿಗಳನ್ನು ಮಾಡುವ ಕ್ರಮವು, ದಾರದ ಬೆಂಕಿಕಡ್ಡಿಗಳು, ಕಾಗದದ ಬೆಂಕಿಕಡ್ಡಿಗಳು, ಬೆಂಕಿಪೆಟ್ಟಿಗೆಗಳನ್ನು ಮಾಡುವಿಕೆ, ಹಾಲುಸಕ್ಕರೆ ಮಾಡುವ ವಿಧ, ಗಂಧಕದ ಬಟ್ಟಲು ಮಾಡುವ ವಿಧ, ಸಾಣೆಯ ಗಾಲಿ, ಕಲ್ಲುಸಕ್ಕರೆ ಮಾಡುವ ವಿಧ, ಮಂಜಿನ ಗಡ್ಡೆ ಮಾಡುವ ವಿಧ, ಕಪ್ಪು ಶಾಯಿಮಾಡುವ ಕ್ರಮ, ಕೆಂಪುಮಸಿ, ಊದಾ ಇಂಕಿ, ನೀಲಿಮಸಿ, ಹಸರುಶಾಯಿ, ಕಾಪೀಯಿಂಗ್ ಶಾಯಿ, ಬಿಳೀಶಾಯಿ, ಕನ್ನಡಿಯ ಮೇಲೆ ಬರೆಯುವ ಇಂಕಿ, ಗುಪ್ತ ಪತ್ರಿಕಾಲೇಖನಕ್ಕೆ ಇಂಕಿ, ಮೇಣದಬತ್ತಿ ಮಾಡುವ ಕ್ರಮ, ಸಾಬೂನು ಮಾಡುವ ವಿಧ, ಸುವಾಸನೆಯ ಸಾಬೂನು, ನಾಟು ಸಬ್ಬು, ಮೈಲುತುತ್ತ, ರಬ್ಬರು ಸ್ಟಾಂಪು ಇಂಕಿ ಊದಾ, ನೀಲಿ, ಕರೀಮಸಿ, ಪನ್ನೀರು ಮಾಡುವಿಕೆ, ಬಟ್ಟೆಯಮೇಲೆ ಹಾಕಿಕೊಳ್ಳುವ ಅತ್ತರು, ತಾಂಬೂಲ ಚೂರ್ಣ, ತಾಂಬೂಲ ವಿನೋದದ ಮಾತ್ರೆಗಳು, ಪರಿಮಳ ಸ್ನಾನಚೂರ್ಣ, ಮಲ್ಲಿಗೆಯೆಣ್ಣೆ, ಸಂಪಿಗೆಯೆಣ್ಣೆ, ಕಾಡಿಗೆ, ನದೀನೀರನ್ನು ಶುಚಿಮಾಡುವ ವಿಧಾನ ಉಳಿಗೆ ಹದವನ್ನು ಕೊಡುವುದು, ಕತ್ತಿ ಮೊದಲಾದವುಗಳಿಗೆ ಹದವು, ಅರ ಮೊದಲಾದವುಗಳಿಗೆ ಹದವು, ಹಲಸಿನ ಹಣ್ಣನ್ನು ವೃದ್ಧಿ ಮಾಡುವಿಕೆ, ಕಿತ್ತಳೇ ಹಣ್ಣು ಮಾವಿನ ಹಣ್ಣು ವೃದ್ಧಿ ಮಾಡುವಿಕೆ, ಕುಂಬಳ, ಬಸಳೆ, ಇವೆರಡನ್ನೂ ಸೇರಿಸಿ ಅಂಟು ಕಟ್ಟುವ ವಿಧ, ಗಿಡದಲ್ಲಿನ ಹೂವುಗಳ ಬಣ್ಣಗಳನ್ನು ಬದಲಾಯಿಸುವದು, ಅಂಟುಕಟ್ಟುವ ವಿಧ, ದ್ರಾಕ್ಷೆ ಗಿಡಕ್ಕೆ ಕಸಿಮಾಡುವುದು, ಸೌತೆಕಾಯನ್ನು ಹೆಚ್ಚಾಗಿ ಬಿಡುವಂತೆ ಮಾಡುವಿಕೆ, ಹುಳಿ ದಾಳಿಂಬೆ ಹಣ್ಣುಗಳನ್ನು ಸಿಹಿಯಾಗಿ ಮಾಡುವಿಕೆ, ಸಿಹಿಯಾಗಿರುವುದನ್ನು ಹುಳಿಯಾಗಿ ಮಾಡುವಿಕೆ, ಮಾವಿನಹಣ್ಣುಗಳನ್ನು ಬಹಳ ದಿವಸದವರೆಗೆ ಕೆಡದಂತೆ ಮಾಡುವುದು, ನಿಂಬೆಯಹಣ್ಣುಗಳನ್ನು ಕೆಡದಂತೆ ಇಡುವುದು, ಹಣ್ಣುಗಳಿಗೆ ಹೆಚ್ಚಾಗಿ ಸಿಹಿಯನ್ನುಂಟುಮಾಡುವಿಕೆ, ಪುಷ್ಪಗಳ ಬಣ್ಣವನ್ನು ಬದಲಾಯಿಸುವುದು, ಗೆದ್ದಲುಹಿಡಿಯದಂತೆ ಮಾಡುವುದು, ಮಣ್ಣಿನ ಪಾತ್ರೆಗಳ ರಂಧ್ರವನ್ನು ಮುಚ್ಚುವುದು, ದಾಣ್ಣು ಉಪ್ಪುಮಾಡುವಿಕೆ, ವತೀರೇಕಿಗೆ ಬಣ್ಣವನ್ನು ಕೊಡುವುದು, ಹಾಗಲಕಾಯಿಯ ಕಹಿಯನ್ನು ಹೋಗಲಾಡಿಸುವುದು, ಅಗ್ನಿದರ್ಪಣವು, ಸೂರ್ಯಕಿರಣದಿಂದ ಉರಿಯುವಂತೆ ಮಾಡುವುದು, ಹಗಲಿನಲ್ಲಿ ನಕ್ಷತ್ರವನ್ನು ನೋಡುವುದು, ಬರೆದ ಅಕ್ಷರಗಳನ್ನು ಕಾಣದಹಾಗೆ ಮಾಡುವಿಕೆ, ಜಲತರಂಗಿಣಿನಾದವು, ಜಲವಾಯುವೇಗ ಪರೀಕ್ಷೆಯು, ಸೂರ್ಯಕಿರಣ ದರ್ಶನೋಪಾಯ, ಕಬ್ಬಿಣವನ್ನು ಕರಗಿಸುವುದು, ಬೆಂಕಿಯ ಉರಿಯನ್ನಾರಿಸುವುದು, ಶ್ರೀಚೂರ್ಣವನ್ನು ಮಾಡುವ ಕ್ರಮ, ಕುಂಕುಮ ಮಾಡುವ ಪದ್ಧತಿ, ಅರಿಸಿನ ಬಣ್ಣದ ಶ್ರೀಚೂರ್ಣ ಮಾಡುವಿಕೆ, ರಂಗು ಕುಂಕುಮವನ್ನು ಮಾಡುವುದು, ರಬ್ಬರುಸ್ಟಾಂಪು ಮಾಡುವ ವಿಧವು, ಇವಲ್ಲದೆ ಇನ್ನೂ ೮೭ ಸಾಮಾನುಗಳು ತಯಾರಿಸುವ ವಿಧವು ಇರುವುದರಿಂದ ಅದನ್ನು ಇಲ್ಲಿ ಸೇರಿಸಲಿಲ್ಲ ೮ ನೇ ಅಧ್ಯಾಯ.—ಭೇದಿ ಷರಬತ್ತು, ನೆಲ್ಲೀಕಾಯಿ ಷರಬತ್ತು, ಸೊಗದೇಬೇರಿನ ಷರಬತ್ತು, ಗುಲಾಬಿ ಷರಬತ್ತು, ಕ್ಯಾದಿಗೆಮೊಗ್ಗೆ ಷರಬತ್ತು, ನಿಂಬೆಹಣ್ಣಿನ ಷರಬತ್ತು, ಹೇರಳೆಹಣ್ಣಿನ ಷರಬತ್ತು, ತಂಗೇಡಿ ಷರಬತ್ತು, ಬಾದಾಮಿ ಷರಬತ್ತು, ದೊಡ್ಡ ದ್ರಾಕ್ಷಿಹಣ್ಣಿನ ಷರಬತ್ತು, ಎಲಚಿಹಣ್ಣಿನ ಷರಬತ್ತು, ಸುಷ್ಕಪಾನದ ದುರಭ್ಯಾಸವನ್ನು ದೂರಮಾಡುವ ರೀತಿ, ಲೆಮನೇಡ್-ಜಿಂಜರ್ ಬೀರ್ ಮಾಡುವ ರೀತಿ, ಗುಲಾಬೀ ಹೂವಿನ ಗುಲ್ಕನ್, ಮುಳ್ಳುಶಾವಂತಿಗೆ ಹೂವಿನ ಗುಲ್ಕನ್, ಬೇವಿನಹೂವಿನ ಗುಲ್ಕನ್, ಆವರಿಕೆಹೂವಿನ ಗುಲ್ಕನ್, ನೆಲಿಕಾಯಿ ಮುರಬ್ಬ, ಮಾದಳದಕಾಯಿ ಮುರಬ್ಬ, ಅಳಲೆಕಾಯಿ ಮುರಬ್ಬ, ಮರುಪುಟ್ಟಿಕಾಯಿ ಮುರಬ್ಬ, ಬೂದಕುಂಬಳಕಾಯಿ ಮುರಬ್ಬ, ಚಪ್ಪರದದ್ರಾಕ್ಷಿಹಣ್ಣಿನ ಮುರಬ್ಬ, ಅಂಜೂರದಹಣ್ಣಿನ ಮುರಬ್ಬ, ಕೇಬಿನಹಣ್ಣಿನ ಮುರಬ್ಬ, ಬೇವಿನಕಾಯಿ ಮುರಬ್ಬ ಪುಷ್ಪಗಳ ಸತ್ತುತೆಗೆವ ವಿಧ, ಕರ್ಪೂರ ಮಾಡುವ ವಿಧ, ಪಚ್ಚಕರ್ಪೂರಮಾಡುವ ವಿಧ

ಕ್ರಯ—ಪುಸ್ತಕ ೧ ಕ್ಕೆ ರೂ. ೧–೪–೦.

ವಿಳಾಸ.—ಮ್ಯಾನೇಜರ್, ಎಸ್. ಜಿ. ಯಸ್. ಪ್ರೆಸ್,

೧೨೮ ಅರಳೆಪೇಟೆ, ಬೆಂಗಳೂರು ಸಿಟಿ.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 49

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಶಾಲೆಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 44

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಸಪ್ಪ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಿಕಾಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯಕ್ಕಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೯ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಚಿತ್ರದುರ್ಗದ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು.

ಚಿತ್ರದುರ್ಗದ ಹೆಡಾಕ್ವಾರ್ಟರಿನಲ್ಲಿ ಉಪಾಧ್ಯಾಯ ಸಂಘವು ಸ್ಥಾಪಿತವಾಗಿ ನಾಲ್ಕು ತಿಂಗಳುಗಳಾದವು ಇದು ತಿಂಗಳಿಗೊಂದುಸಾರಿ ಪ್ರತಿ ತಿಂಗಳ ಮೊದಲನೇ ಸೋಮವಾರ ಸಭೆ ಸೇರುತ್ತದೆ ಈ ವರೆವಿಗೆ ೪೦ ಜನ ಉಪಾಧ್ಯಾಯರುಗಳು ಈ ಸಂಘಕ್ಕೆ ಸೇರಿದ್ದಾರೆ ಇದರಿಂದ ಬಹಳ ಪ್ರಯೋಜನವುಂಟು ಉಪಾಧ್ಯಾಯ ಕೆಲಸದಲ್ಲಿ ಅಂದರೆ ಬೋಧನಾ ಕ್ರಮದಲ್ಲಿ ಉಂಟಾಗುವ ನ್ಯೂನಾತಿರಿಕ್ತಗಳನ್ನು ತಿದ್ದಿಕೊಳ್ಳಲು ಇದು ಉತ್ತಮವಾದ ಕ್ರಮವಾಗಿದೆ ಈಗಿನ ವಿದ್ಯಾಭ್ಯಾಸಕ್ರಮವೇ ಕೊಂಚಮಟ್ಟಿಗೆ ಬದಲಾಯಿಸಿದಂತೆ ಕಾಣುವುದು ಕಿಂಡರಗಾರ್ಟನ್ ಮೊದಲಾದ ನವೀನ ಕ್ರಮಗಳು ಈಚೆಗೆ ಬಂದಿವೆ. ಹೊಸದಾಗಿದ ಪಟ್ಟಿಯಲ್ಲಿ ಮತಸಂಬಂಧವಾದ ಮತ್ತು ನೀತಿ ಪಾಠಗಳು, ಕೈಕೆಲಸಗಳು (ಸ್ಲಾಯಿಡ್) ಹೆಚ್ಚಾಗಿ ಸೇರಿಸಲ್ಪಟ್ಟಿವೆ ಇವುಗಳನ್ನೆಲ್ಲಾ ಅನುಷ್ಠಾನಕ್ಕೆ ತಂದುಕೊಂಡು ಬೋಧಿಸುವ ಮಾರ್ಗಗಳು ಹೇಗೆ ಎಂಬುವುದೇ ಈ ಸಂಘದ ಮುಖ್ಯೋದ್ದೇಶವಾಗಿದೆ

ಪ್ರತಿ ಮೀಟಿಂಗಿನಲ್ಲಿಯೂ ನಡೆಯತಕ್ಕ ಮುಖ್ಯ ಕಾರ್ಯಗಳೇನೆಂದರೆ.—(೧) ಒಂದು ತರಗತಿಗೆ ಒಬ್ಬ ಟೀಚರು ನೊದಲೇ ಗೊತ್ತಾದ ಪಾಠವನ್ನು ಬೋಧಿಸುವದು, (೨) ಯಾವುದಾದರೂ ಒಂದು ವಿಷಯವನ್ನು ಕುರಿತು ಒಂದು ಉಪನ್ಯಾಸಮಾಡುವುದು; (೩) ಆರಿಸಿ ತೆಗೆದ ಮುಖ್ಯವಾದ ಪ್ರಶ್ನೆಗೆ ಅನುಭವದಿಂದ ೧೫ ದಿವಸ ಮಾಯಿದೆಯಿಂದ ಬರೆದು ಕಳುಹಿಸಿದ ಉಪನ್ಯಾಸಗಳಲ್ಲಿ ಉತ್ತಮವಾದವನ್ನು ರಿಕಾರ್ಡು ಮಾಡುವುದು, (೪) ಸಭೆಯ ಇತರ ಕಾರ್ಯಗಳು. ಒಟ್ಟು ಈ ಕಾರ್ಯಗಳಿಗಾಗಿ ೧½ ಘಂಟೆ ಕಾಲ ನಿಯಮಿಸಿದೆ.

ಮೈಸೂರು ಸೀಮೆಯಲ್ಲಿರುವ ಯಾವ ಬೋರ್ಡ್ ಸ್ಕೂಲ್ ಮಾಸ್ಟರುಗಳಾಗಲಿ, ಯಾವ ಉಪಾಧ್ಯಾಯರುಗಳಾಗಲಿ ಈ ಸಂಘಕ್ಕೆ ಮೆಂಬರಾಗಿ ಸೇರಬಹುದು. ಈ ಸ್ಥಳಕ್ಕೆ ಹತ್ತಿರದಲ್ಲಿರುವವರು ಪ್ರತಿ ಮೀಟಿಂಗಿಗೂ ಹಾಜರಾಗಲು ಸಾಧ್ಯವು. ಆದರೆ ದೂರದಲ್ಲಿರುವವರು ವರ್ಷಕ್ಕೆ ಒಂದು ಸಾರಿ ಸೇರಲು ರಜಾಕಾಲದಲ್ಲಿ ಒಂದು ಕಾಲವನ್ನು ಕ್ಲುಪ್ತಪಡಿಸಬಹುದು, ಮತ್ತು ಪ್ರತಿ ಮೀಟಿಂಗಿನಲ್ಲಿ ನಡೆಯುವ ಉಪನ್ಯಾಸಗಳನ್ನು ಸಭೆಯವರು ಕಳುಹಿಸುತ್ತಾರೆ ಅಲ್ಲದೆ ಆರಿಸಿ ತೆಗೆದ ಪ್ರಶ್ನೆಗಳಿಗೆ ಹೊರಗಿನ ಟೀಚರುಗಳು ತಪ್ಪದೆ ತಮ್ಮ ಅನುಭವವನ್ನು ಬರೆದು ಸೆಕ್ರೆಟರಿಯವರ ವಶಕ್ಕೆ ಕಾರ್ಡ್ ಪೋಸ್ಟಿನಿಂದ ಕಳುಹಿಸಬಹುದು. ಅದರಲ್ಲಿ ಉತ್ತಮವಾದವುಗಳಿಗೆ ತಕ್ಕ ಬಹುಮಾನ ದೊರೆಯುವುದಲ್ಲದೆ, ಸಭೆಯಲ್ಲಿ ಅವರುಗಳ ಪರವಾಗಿ ಓದಲ್ಪಡುವುವು

ಈ ಡಿಸೆಂಬರ್ ೬ ನೇ ತಾ॥ ಸೋಮವಾರ ಒಂದು ಮೀಟಿಂಗು ನಡೆಯಿತು. ಅದರಲ್ಲಿ ಕೊಡಲ್ಪಟ್ಟ ಪ್ರಶ್ನೆಗಳು ಈ ಕೆಳಗೆ ಬರೆಯಲ್ಪಟ್ಟಿವೆ ಇವುಗಳ ಪೈಕಿ ಒಂದಕ್ಕೆ ಚಿಕ್ಕ ಉಪನ್ಯಾಸದ ರೂಪವಾಗಿ ಬರೆದು ಬಂದವುಗಳಿಗೆ ಬಹುಮಾನಗಳು ದೊರೆಯುವವು. ಈ ತಿಂಗಳ ಆಖೈರೊಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸತಕ್ಕದ್ದು. ಉಪಾಧ್ಯಾಯರು ಯಾರೇ ಆಗಲಿ ಬರೆಯಬಹುದು. ಅದರ ಪುರಸ್ಕಾರವಾಗಿ ಅಂಗೀಕರಿಸುವರು

ಪ್ರಶ್ನೆಗಳು:—(೧) ಉಪಾಧ್ಯಾಯರು ಬೋಧಿಸುವ ಪಾಠವನ್ನು ಮೊದಲೇ ಸಿದ್ಧಮಾಡಿಟ್ಟುಕೊಂಡಿರುವುದರಿಂದ ಪ್ರಯೋಜನ ಉಂಟೇ? (೨) ಕ್ರಿಮಿ ತರಗತಿಗಳಲ್ಲಿ ಬೋಧಿಸುವಾಗ ಪ್ರಶ್ನೆಗಳ ಮುಖಾಂತರ ಕೆಲಸ ನಡಿಸುವುದು ಅನುಕೂಲವೇ? (ಪಾಠ-ತಕ್ಕ ಅನುಭವವೂ ನಿಯಮವೂ ಉಕ್ತವಾಗಿರಬೇಕು)

ಚಿತ್ರದುರ್ಗ. ವೀರಭದ್ರಪ್ಪ, ಉಪಾಧ್ಯಾಯ ಸಂಘದ ಸೆಕ್ರೆಟರಿ.

ವೃತ್ತಾಂತ ಪತ್ರಿಕೆ

ಸಕ ೧೯೦೯ ನೇ ಇಸವಿ ಡಿಸೆಂಬರ್ ತಾ ೧೬ ನೇ ಗುರುವಾರ

ಮೈಸೂರಿನಲ್ಲಿ ಪ್ಲೇಗ್ ಉಪದ್ರವು

ಮೈಸೂರು ಪಟ್ಟಣವು ಪ್ಲೇಗ್ ಉಪದ್ರದಿಂದ ಬಿಡುಗಡೆ ಹೊಂದಿತೆಂದು ತಿಳಿಸಲು ಸಂತೋಷಪಡುತ್ತೇವೆ ಈಗ ಪ್ಲೇಗ್ ಕಾಯಿಲೆಗಳೂ ಮರಣಗಳೂ ಬಹಳ ಕಡಮೆಯಾಗಿರುವವು ಪ್ಲೇಗ್ ಆಸ್ಪತ್ರೆಯಲ್ಲಿ ಕಾಯಿಲೆಯವರು ಇಲ್ಲವೆಂದೇ ಹೇಳಬಹುದಾಗಿದೆ. ದಿನವಹಿ ಮರಣಸಂಖ್ಯೆಯು ಸಾಮಾನ್ಯಸ್ಥಿತಿಗೆ ಇಳಿದಿರುವುದು ಈ ಸಲ ಪ್ಲೇಗ್ ಉಪದ್ರವು ಸನುಗೆಲ್ಲಾ ಕೆಲವು ಮುಖ್ಯ ವಿಷಯಗಳನ್ನು ತಿಳಿಸಿರುತ್ತದೆ ಅವುಗಳನ್ನು ನಾವು ಬೇಗನೆ ಮುಂದಿಟ್ಟುಮಾಡಿಕೊಳ್ಳುವುದು ಪರಮಾವಶ್ಯವಾಗಿದೆ

ಪ್ಲೇಗ್ ಉಪದ್ರದ ಲಕ್ಷಣವು ಈ ಸಲ ಬಹು ಕಠಿಣತರವಾದದ್ದಾಗಿದ್ದಿತು ಅದಕ್ಕೆ ಪ್ರತೀಕಾರ ಕಾರ್ಯಗಳನ್ನು ಮಾಡದೆ ಹೋಗಿದ್ದರೆ ಮರಣ ಸಂಖ್ಯೆಯು ಇನ್ನೂ ಬಹಳವಾಗಿ ಹೆಚ್ಚಿ ಹೋಗುತ್ತಿತ್ತೆಂದು ಹೇಳಬಹುದು ಹೆಲ್ತ್ ಆಫೀಸರಾದ ಡಾ| ಮಾಂಕರವರು ಉಪದ್ರವನ್ನು ತಡೆಯುವುದಕ್ಕೆ ತುಂಬಾ ಸಾಹಸಪಟ್ಟರು ಮತ್ತು ಅವರು ಪ್ಲೇಗ್ ಆಸ್ಪತ್ರೆಯಲ್ಲಿರುವ ರೋಗಿಗಳನ್ನು ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಾ ಬಂದರು

ಇನಾಕ್ಯುಲೇಷನಿಂದ ಬಹು ವಿಶೇಷವಾದ ಪ್ರಯೋಜನವುಂಟಾಯಿತೆನ್ನುವುದಕ್ಕೆ ಸಂಶಯವಿಲ್ಲ ಇದುವರೆಗೆ ಒಟ್ಟು ೧,೯೨೬ ಜನರಿಗೆ ಪ್ಲೇಗ್ ತಗಲಿ ೧,೩೬೪ ಮರಣಗಳಾಗಿರುತ್ತವೆ ಇನಾಕ್ಯುಲೇಷನ್ ಮಾಡಿಸಿಕೊಂಡವರ ಸಂಖ್ಯೆಯು ಸುಮಾರು ೨೮,೦೦೦ ಈ ಪಟ್ಟಣದ ಪ್ರಜಾಸಂಖ್ಯೆಯನ್ನು ಸ್ವಲ್ಪ ಹೆಚ್ಚಾಗಿಯೇ ಅಂದರೆ ೬೦,೦೦೦ ವೆಂದು ಇಟ್ಟುಕೊಂಡಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇರುವ ೩೨,೦೦೦ ಪ್ರಜೆಗಳ ಪೈಕಿ ೧,೩೩೧ ಜನರು ಅಂದರೆ ನೂರಕ್ಕೆ ನಾಲ್ಕು ಮಂದಿಯಂತೆ ಕಾಲವಾದರು ಉತ್ತಲಾಗಿ ಇನಾಕ್ಯುಲೇಷನ್ ಮಾಡಿಸಿಕೊಂಡವರಲ್ಲಿ ಅಂದರೆ ೨೮,೦೦೦ ಜನರಲ್ಲಿ ೩೩ ಜನರು ಮಾತ್ರ ಈ ಉಪದ್ರದಿಂದ ಮೃತಪಟ್ಟರು ಇವರಲ್ಲೂ ಅನೇಕರಿಗೆ ಇನಾಕ್ಯುಲೇಷನ್ ಮಾಡಿಸಿಕೊಂಡಾಗ್ಗೆ ಅವರ ದೇಹದಲ್ಲಿ ಪ್ಲೇಗಿನ ಕ್ರಿಮಿಗಳು ಪ್ರವೇಶಮಾಡಿದ್ದ ಕಾರಣ ಸಿಡುಬು ಹಾಕಿಸಿಕೊಂಡ ಮೇಲೆ ಪ್ಲೇಗ್ ಕಾಣಿಸಿಕೊಂಡಿತು ಅವರು ಮೊದಲೇ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದ ಪಕ್ಷದಲ್ಲಿ ಅವರಿಗೆ ಮರಣ ಸಂಭವಿಸುತ್ತಿರಲಿಲ್ಲವೆಂದು ಹೇಳಬಹುದಾಗಿದೆ ಹ್ಯಾಗೂ ಮೇಲ್ಕಂಡ ಸಂಖ್ಯೆಗಳಿಂದ ಇನಾಕ್ಯುಲೇಷನ್ ಮಾಡಿಸಿಕೊಂಡವರಲ್ಲಿ ಮೃತಪಟ್ಟವರ ಸಂಖ್ಯೆಗೂ ಹಾಕಿಸಿಕೊಳ್ಳದವರಲ್ಲಿ ಕಾಲವಾದವರ ಸಂಖ್ಯೆಗೂ ಬಹಳ ವ್ಯತ್ಯಾಸವಿದೆ ಎಂದೂ, ಇನಾಕ್ಯುಲೇಷನ್ ಮಾಡಿಸಿಕೊಂಡದ್ದರಿಂದ ಅನೇಕರು ಬದುಕಿಕೊಂಡರೆಂದೂ ಪರಿಷ್ಕಾರವಾಗಿ ಗೊತ್ತಾಗುತ್ತದೆ

ಇದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡಬಹುದಾಗಿದೆ ಅನೇಕರ ಮನೆಗಳಲ್ಲಿ ಒಬ್ಬಿಬ್ಬರನ್ನು ಬಿಟ್ಟು ಉಳಿದವರೆಲ್ಲಾ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರು ಹೀಗೆ ಮಾಡಿಸಿಕೊಂಡಿದ್ದವರು ತಪ್ಪಿಸಿಕೊಂಡರು, ಮಾಡಿಸಿಕೊಳ್ಳದಿದ್ದವರಿಗೆ ಪ್ಲೇಗ್ ತಗಲಿ ಮರಣ ಸಂಭವಿಸಿದೆ ಪ್ಲೇಗ್ ಉಪದ್ರವು ಪ್ರಾರಂಭವಾದ ಸಮಯದಲ್ಲಿ ನಮ್ಮ ಆಫೀಸಿನೊಳಗೆ ಕೆಲಸ ಮಾಡುತ್ತಿರುವವರೆಲ್ಲಾ ಇನಾಕ್ಯುಲೇಷನ್ ಮಾಡಿಸಿಕೊಂಡರು. ಇವರ ಮನೆಗಳಲ್ಲಿ ಇಲಿಗಳು ಸತ್ತುಹೋದವು ಕೆಲವು ಸಂದರ್ಭಗಳಲ್ಲಿ ಅವರ ಮನೆಯಲ್ಲಿದ್ದವರಿಗೆ ಪ್ಲೇಗ್ ತಗಲಿ ಸತ್ತರು ಆದರೆ ಸಿಡುಬು ಹಾಕಿಸಿಕೊಂಡಿದ್ದವರ್‍ಯಾರಿಗೂ ಕಾಯಿಲೆ ಸಂಭವಿಸಲಿಲ್ಲ

ಮೈಸೂರು ಪಟ್ಟಣದಲ್ಲಿರುವ ವೆಸ್ಲಿಯನ್ ಮಿಷನ್ ಸಂಘದ ಕ್ರೈಸ್ತ ಪ್ರಜೆಗಳೆಲ್ಲಾ ಪ್ಲೇಗ್ ಪ್ರಾರಂಭವಾದಾಗಲೇ ಇನಾಕ್ಯುಲೇಷನ್ ಮಾಡಿಸಿಕೊಂಡುಬಿಟ್ಟರು ಇಬ್ಬರು ಮಾತ್ರ ಮಾಡಿಸಿಕೊಳ್ಳಲಿಲ್ಲ ಸಿಡುಬು ಹಾಕಿಸಿಕೊಂಡವರಲ್ಲೊಬ್ಬನಿಗೆ ಮಾತ್ರ ಉಪದ್ರ ಕಾಣಿಸಿಕೊಂಡಿತು ಆತನೂ ಬದುಕಿಕೊಂಡನು ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದ ಇಬ್ಬರ ಪೈಕಿ ಒಬ್ಬನಿಗೆ ಪ್ಲೇಗ್ ತಗಲಿ ವಾಸಿಯಾಗದೆ ತೀರಿಹೋದನು

ಹೀಗೆಯೇ ಅನೇಕ ದೃಷ್ಟಾಂತಗಳನ್ನು ಹೇಳಬಹುದು ಇದರಿಂದ ನಾವು ತಿಳಿದುಕೊಳ್ಳತಕ್ಕ ಮುಖ್ಯ ವಿಚಾರವೇನೆಂದರೆ, ಪ್ಲೇಗ್ ಉಪದ್ರವು ಕಾಣಿಸಿಕೊಂಡ ಪ್ರಥಮಭಾಗದಲ್ಲೇ ಪ್ರತಿ ಒಬ್ಬ ಪ್ರಜೆಯೂ ಸಾವಕಾಶಮಾಡದೆ ಇನಾಕ್ಯುಲೇಷನ್ ಮಾಡಿಸಿಕೊಂಡ ಪಕ್ಷದಲ್ಲಿ ಉಪದ್ರವು ತಲೆಯೆತ್ತದ ಅಡಗಿಹೋಗುವುದು

ಈ ಸಂದರ್ಭದಲ್ಲಿ ಡಾಕ್ಟರ್ ನಂಜಪ್ಪನವರೂ ಅವರ ಕೈಕೆಳಗಿನ ವೈದ್ಯರುಗಳೂ ಪ್ರಜೆಗಳನ್ನು ಬದುಕಿಸುವುದಕ್ಕಾಗಿ ಒಂದು ದಿನವಾದರೂ ವಿರಾಮವಿಲ್ಲದೆ ಬಹಳ ಸಾಹಸಪಟ್ಟು ಚಟುವಟಿಕೆಯಿಂದ ಇನಾಕ್ಯುಲೇಷನ್ ಮಾಡುತ್ತಾ ಬಂದ ವಿಚಾರವನ್ನು ತಿಳಿಸದೆ ಇರಲಾರೆವು ಇವರಿಗೆಲ್ಲಾ ಸಾಹುಕಾರ್ ಮುದ್ದಣ್ಣನವರು ಒಂದು ಸಂತೋಷಕೂಟವನ್ನು ನಡಸಿ ಪ್ರಜೆಗಳ ಪರವಾಗಿ ಸನ್ಮಾನಮಾಡಿದರೆಂದು ತಿಳಿಸಲು ಹರ್ಷಪಡುವೆವು ಇನ್ನಾದರೂ ಇನಾಕ್ಯುಲೇಷನ್ ವಿಷಯದಲ್ಲಿ ಪ್ರಜೆಗಳ ಶಂಕೆಯೂ ಸಂದೇಹವೂ ನಿವಾರಣೆಯಾದವೆಂದು ನಂಬುತ್ತೇವೆ

ರಕ್ಷೆ

ನಿನ್ನೆ ದಿನ ನಾನು ಕೋಟೆಯಿಂದ ಮನೆಗೆ ಬರುತ್ತ ದೊಡ್ಡ ಬೀದಿಯ ಮಾರ್ಗವಾಗಿ ಟಪಾಲವನ್ನು ಸಮೀಪಿಸಲು ಅಲ್ಲಿ ಸುಮಾರು ಮೂವತ್ತು ನಲವತ್ತು ಜನ ಗಂಡಸರೂ ಹೆಂಗಸರೂ ಅನೇಕ ಹುಡುಗರೂ ಸಮೂಹವಾಗಿ ಸುತ್ತುಕಟ್ಟಿಕೊಂಡಿರುವುದನ್ನೂ ಅವರ ಮಧ್ಯೆ ನನ್ನ ನೆರೆಮನೆಯ ಕೃಷ್ಣಭಟ್ಟರು ತಮ್ಮ ಹದಿಮೂರು ವರುಷದ ಹುಡುಗನಾದ ನಾರಾಯಣನನ್ನು ಹಿಡುಕೊಂಡು ಪೆಟ್ಟು ಹೊಡೆಯುತ್ತಿರುವುದನ್ನೂ, ಅವನು ಕೀರಿಡುತ್ತಾ ಕೆಳಗೆ ಹಾಗೆ ಬೊಬ್ಬೆ ಹಾಕುತ್ತಿರುವುದನ್ನೂ ನೋಡುತ್ತಾ ವ್ಯಸನದಿಂದ ಮನೆಗೆ ಹೋದೆನು ಮಾರನೆ ದಿನ ಕೃಷ್ಣಭಟ್ಟನು ನಮ್ಮ ಮನೆಯ ಮುಂದೆ ಹಾದು ಹೋಗುತ್ತಿರುವುದನ್ನು ಕಂಡು ಒಳಕ್ಕೆ ಕರೆದು ಕೂಡ್ರಿಸಿ ಹಿಂದಿನ ದಿನದ ವಿಚಾರಿಸಲು ಅವನು ನಿಟ್ಟುಸಿರು ಬಿಡುತ್ತಾ — ಉಪದೇಶಿಗಳೇ ಏನು ಮಾಡಲಿ ನಮ್ಮ ಹುಡುಗ ನಾರಾಯಣನಿಗೆ ಈಗ ಹದಿಮೂರು ವರುಷ ತುಂಬಿತು ಆದರೂ ಇನ್ನೂ ಬುದ್ಧಿ ಬಂದಿಲ್ಲ ದುಸ್ಸಹವಾಸವನ್ನು ಬಿಡ ನೀವು ನಮಗೆ ಸ್ನೇಹಿತರು ಹಿತಚಿಂತಕರು ಕೇಳಿ— ನಾನು ಎಷ್ಟೋ ಕಷ್ಟಪಟ್ಟು ಮೂರು ರೂಪಾಯಿಗಳನ್ನು ಸಂಪಾದಿಸಿ ತಂದು ಸಂದೂಕದ ಅರೆಯಲ್ಲಿ ಹಾಕಿದ್ದೆ ಅವ ನಾನಿಲ್ಲದಿರುವ ವೇಳೆ ನನ್ನ ಜೇಬಿನಿಂದ ಬೀಗದಕೈ ತೆಗೆದುಕೊಂಡು ಆ ಮೂರು ರೂಪಾಯಿಗಳನ್ನು ಎತ್ತಿಹಾಕಿದ ಅನಂತರ ಎಷ್ಟು ಹೆದರಿಸಿ ಕೇಳಿದರೂ ಹೇಳಲಿಲ್ಲ ಆದರೆ ಅವನ ಸಂಗಾತಿಗಳಲ್ಲಿ ಒಬ್ಬನನ್ನು ವಿಚಾರಿಸಲು ಗುಟ್ಟೆಲ್ಲಾ ಬೈಲಿಗೆ ಬಂತು ಅವನು ಆ ರೂಪಾಯಿಗಳನ್ನು ತೆಗೆದುಕೊಂಡು ಅವುಗಳ ಪೈಕಿ ಎರಡು ರೂಪಾಯಿ ಜೂಜಾಡಿ ಸೋತು ಉಳಿದ ಇನ್ನೊಂದು ರೂಪಾಯಿಗೆ ಜೊತೆಗಾರರ ಕೂಡ ತಿಂಡಿ ತಿಂದುಬಿಟ್ಟನಂತೆ ನಿನ್ನೆ ಅವನನ್ನು ಅದಕ್ಕಾಗಿ ಹಿಡುಕೊಂಡು ಮೈ ಮುರಿಯುವ ಹಾಗೆ ಪ್ರಹರಿಸಿ ಅವನ ತಾಯಿಯಂತೂ ದುಡ್ಡು ಹೋದದ್ದಕ್ಕೂ ಮಗನನ್ನು ಹೊಡೆದದ್ದಕ್ಕೂ ಸೈರಿಸಲಾರದೆ ನಿನ್ನೆಯಿಂದ ಅನ್ನ ಬಿಟ್ಟು ಕೋಳವಾಡುತ್ತಿದ್ದಾಳೆ ಏನು ಮಾಡುವ? ಅವನಿಗೆ ಬುದ್ಧಿ ಹೇಳಿ ಹೇಳಿ ಸಾಕಾಯಿತು ಹೊಡೆದೂ ಹೊಡೆದೂ ಬೇಸರವಾಗಿದೆ ಅವನ ಹಣೆ ಬರಹ ಹೀಗಿದ್ದರೆ ನಾವೇನು ಮಾಡುವುದಕ್ಕಾದೀತು ನಾನಂತೂ ರೋಸಿದ್ದೇನೆಂದು ಬಿಸುಸುಯ್ದರ

ನಾನು ಇದನ್ನೆಲ್ಲಾ ಕೇಳಿ ಮನದಲ್ಲಿ ಮರುಗುತ್ತ ಹೇಳಿದ್ದು — ಕೃಷ್ಣಭಟ್ಟರೇ, ನಿನ್ನೆ ನೀವು ಆ ಹುಡುಗನನ್ನು ಬೀದಿಯಲ್ಲಿ ಹೊಡೆಯುತ್ತಿರುವುದನ್ನೂ ಅವನ ಆರ್ಭಟವನ್ನೂ ಕೇಳಿ ಎಷ್ಟೊಂದು ಗದ್ದಲವಾಯಿತು? ಪ್ರಾಯಸಮರ್ಥನಾಗುತ್ತಿರುವ ಆ ಹುಡುಗನನ್ನು ಅಷ್ಟೊಂದು ಗುಂಪಿನಲ್ಲಿ ಬಹಿರಂಗವಾಗಿ ನೀವು ಹೊಡೆಯಬಹುದೋ? "

ಕೃಷ್ಣಭಟ್ಟರು — ಇನ್ನೇನ ಮಾಡಲಿ? ಇತ್ತಕಡೆ ದುಡ್ಡು ಹೋದ ವ್ಯಸನ ಅತ್ತಕಡೆ ಹುಡುಗ ಕೆಟ್ಟನಲ್ಲಾ ಎಂಬ ಹೊಟ್ಟೆಕಿಚ್ಚು

ನಾನು —ಈಗ ನಿಮ್ಮ ಇಷ್ಟಾರ್ಥ ಪೂರ್ತಿ ಅವನನ್ನು ಹೊಡದರಿ ಕಳೆದು ಹೋದ ದುಡ್ಡೇನಾದರೂ ಹಿಂದಕ್ಕೆ ಬಂದಿತೇ?

ಕೃ ಭ —ಅದು ಹಿಂದಕ್ಕೆ ಬರುವದಿಲ್ಲ ಕಂಡವರ ಪಾಲಾಯಿತು ಹೊಡೆದರ ಶಿಕ್ಷೆಗೆ ಭಯಪಟ್ಟು ನೆಟ್ಟಗಾದಾನೆಂಬದೊಂದೇ ನಿರೀಕ್ಷೆ

ನಾನು —ಪ್ರಾಯಸಮರ್ಥರಾದ ಹುಡುಗರನ್ನು ಹೊಡೆಯುವುದರಿಂದ ಅವರಿಗೆ ಬುದ್ಧಿ ಬರುವುದು ಕೇವಲ ದುರ್ಲಭ ಈಗಲಂತೂ ಚಿಕ್ಕವನೆಂತ ಹೊಡೆಯುತ್ತೀರಿ ಇನ್ನು ಎರಡು ಮೂರು ವರುಷಗಳಾದ ಮೇಲೆ ಅವನನು ಹೊಡೆಯುವುದು ಸಾಧ್ಯವೋ?

ಕೃ ಭ —ಹಾಗಾದರೆ ಏನುಮಾಡಲಿ?

ನಾನು —ಹುಡುಗರನ್ನು ತಿದ್ದಲಿಕ್ಕೆ ಬಹಳ ಸಹನವೂ ಜ್ಞಾನವೂ ಬೇಕು ಈ ವಿಧದಿಂದ ಹಣ ಕದ್ದು ದುರ್ವ್ಯಯಮಾಡುವುದರಲ್ಲಿ ಬಹಳ ಸುಖವೂ ಮನಸ್ಸಿನ ಸಂತೋಷವೂ ಇದೆಯೆಂದು ಅವರು ಭಾವಿಸುತ್ತಾರೆ ಆದರೆ ಕದ್ದು ದುರ್ವ್ಯಯಮಾಡುವುದರಿಂದ ಲಭಿಸುವ ಸುಖಸಂತೋಷಗಳಿಗಿಂತ ಕಷ್ಟದುಃಖಗಳೇ ಹೆಚ್ಚಾಗಿ ಪ್ರಾಪ್ತವಾಗುತ್ತವೆಯೆಂದು ಅವರಿಗೆ ತೋರಿಸುವುದು ಹೊಡೆಯುವುದಕ್ಕಿಂತ ಉತ್ತಮ ಮಾರ್ಗವಲ್ಲವೇ?

ಕೃ ಭ —ಉಪದೇಶಿಗಳೇ ನೀವು ಅನೇಕರಿಗೆ ಬುದ್ಧಿ ಹೇಳಿ ಸನ್ಮಾರ್ಗಕ್ಕೆ ತರುವವರು ನಾನಿನ್ನೇನೂ ಆ ಹುಡುಗನಿಗೆ ಹೆಚ್ಚು ಬುದ್ಧಿ ಹೇಳಲಾರೆನು ನಿಮ್ಮ ಬಳಿಗೆ ಕಳುಹಿಸುತ್ತೇನೆ ನೀವೇನಾದರೂ ಹೇಳಿ ಅವನನ್ನು ಸನ್ಮಾರ್ಗಕ್ಕೆ ತಂದರೆ ನನಗೆ ನೀವು ಬಹಳ ಉಪಕಾರ ಮಾಡಿದಂತಾಗುವದು

ಕೃಷ್ಣಭಟ್ಟರು ಹೀಗಂದು ಹೊರಟುಹೋದ ಮಾರನೆ ಬೆಳಿಗ್ಗೆ ನನ್ನ ಬಾಗಲಿಗೆದುರಾಗಿ ನಿಂತುಕೊಂಡು ಒಳಕ್ಕೆ ಹೋಗಲೋ ಬೇಡವೋ ಎಂದು ಹಿಂದುಮುಂದು ನೋಡುತ್ತಿರುವ ನಾರಾಯಣನನ್ನು ನೋಡಿ ನಾನು ಹೊರಗೆ ಬಂದು ಏನಯ್ಯಾ ನಾರಾಯಣರಾವ್, ಯಾಕೆ ಸಂದೇಹಪಡುತ್ತೀಯೆಂದು ಒಳಕ್ಕೆ ಕರೆದೆನು ಆ ಹುಡುಗನು ಸ್ವಲ್ಪ ಲಜ್ಜೆಯಿಂದ ವಂದನೆ ಮಾಡಿ ತಲೆ ತಗ್ಗಿಸಿಕೊಂಡು ನನ್ನ ಹಿಂದೆ ಬಂದ ನಾನು ಅವನನ್ನು ನನ್ನ ಕೋಣೆಯಲ್ಲಿ ಕೂಡ್ರಿಸಿಕೊಂಡು—ನಿನ್ನೆ ದಿನ ನಿಮ್ಮ ಮನೆಯ ಮುಂದೆ ವಿಪರೀತ ಗದ್ದಲವಾಗುತ್ತಿತ್ತು ಮತ್ತು ನೀನು ಅಳುತ್ತಲಿದ್ದೆ ಇದೆಲ್ಲಾ ಏನು? ಎಂತ ಕೇಳಲು, ಅವನು ತಾಯಿಯನ್ನು ಮೇಲಕ್ಕೆತ್ತದ ಮೌನದಿಂದಿರುವದನ್ನು ನೋಡಿ—ನನಗೆ ಆ ಸಂದರ್ಭವನ್ನು ನೆನಸಿಕೊಂಡರೆ ಸ್ವಲ್ಪ ವ್ಯಸನವೂ ನಾಚಿಕೆಯೂ ಆಗುತ್ತದಲ್ಲವೇ? ತಪ್ಪು ಮಾಡುವದು ಸಕಲರಿಗೂ ಸ್ವಭಾವ ಆದರೂ ಅಂತಹ ತಪ್ಪು ಇನ್ನು ಮುಂದೆ ಸಂಭವಿಸದಿರುವದೇ ಅದಕ್ಕೆ ಪರಿಹಾರ ಅಂದೆನು ಅನಂತರ ಆತನನ್ನು ಕುರಿತು — ಈ ವಿಷಯದಲ್ಲಿ ಈಗ ನಿನ್ನ ಅಭಿಪ್ರಾಯವೇನೆಂದು ಕೇಳಿದೆನು ಅದಕ್ಕೆ ನಾರಾಯಣ—ಅಯ್ಯಾ ನಾನು ಅಪರಾಧಿಯಾಗಿ ನಿಮ್ಮ ಮುಂದೆ ಮಾತಿಲ್ಲದೆ ಇದ್ದೇನೆ ಎಂದು ತಲೆತಗ್ಗಿಸಿ ಕೊಂಡನು

ನಾನು —ಅಯ್ಯಾ ಯುವಕನೆ ನೀನು ನಿನ್ನ ತಪ್ಪನ್ನು ತಿಳಿದಿರುವದು ನನಗೆ ಸಂತೋಷವಾಯಿತು ನಾನು ಒಂದೆರಡು ಮಾತುಗಳನ್ನು ಈ ವಿಷಯದಲ್ಲಿ ಹೇಳಬೇಕೆಂದಿದ್ದೇನೆ ನೀನು ನಿನ್ನ ಕ್ಷೇಮಕಾಮಿಯಾದ ಮಿತ್ರನೆಂದು ತಿಳಿದು ಕೇಳುವಿಯೋ?

ನಾರಾಯಣ —ಅಯ್ಯಾ ತಮ್ಮ ಮಾತುಗಳನ್ನು ಶಿರಸಾವಹಿಸುತ್ತೇನೆ

ನಾನು —ಸಾಧಾರಣವಾಗಿ ಯುವಕರು ಬೆಳೆಯುವದು ಸುಖ ಭೋಗಗಳನ್ನು ಸ್ವತಂತ್ರವಾಗಿ ಅವರು ಅನುಭವಿಸುವರು ಅದಲ್ಲದೆ ನೀನು ಸದ್ವಂಶದ ನಮ್ಮ ತಂದೆಯವರ ಸಂಪಾದಿತ ... ನೀನು ಸನ್ಮಾರ್ಗಕ್ಕೆ ತಿರುಗಬೇಕೆಂದು ನಿಶ್ಚಯಿಸಿಕೊಂಡರೆ ನಿನಗೇನು ಅದು ಅಸಾಧ್ಯವಲ್ಲ ನಿನ್ನ ತಂದೆಯವರ ಸಂಪಾದನೆಯೆಲ್ಲಾ ನಿನಗೇ ಅದಕ್ಕೆ ಬೇಕಾದ ... ನೀನು ವಯಸ್ಕನಾಗಿ ಅದನ್ನೆಲ್ಲಾ ವಹಿಸಿಕೊಂಡು ... ಅವರಿಗೆ ಕೀರ್ತಿಯನ್ನೂ ... ತರುವೆ ಅವರನ್ನು ವಂಚಿಸುವದರಿಂದ ಹಣ ನಷ್ಟವಾದದ್ದಕ್ಕಿಂತ ನಿನ್ನ ಗುಣ ... ಎಂಬ ವ್ಯಸನ ಅವರನ್ನು ಕಾಡುತ್ತದೆ ... ತಂದೆಯವರನ್ನು ಇಷ್ಟೊಂದು ದುಃಖಕ್ಕೆ ಗುರಿಮಾಡಬಹುದೇ? ಯಾವ ತಂದೆಯು ದಯಾ ತನ್ನ ಮಗನ ಸುಖಸಂತೋಷಗಳಿಗಾಗಿ ... ಹಣವನ್ನು ನಷ್ಟವೆಂದು ಭಾವಿಸನು ಆದರೆ ಮಗನಿಗೆ ಅದನ್ನು ... ಬಳಸುವದಕ್ಕೆ ತಿಳಿಯದೆ ... ಮಾಡಿ ದುಡ್ಡಿನ ಜೊತೆಗೆ ಗುಣ ... ಅವಮಾನವೂ ಪ್ರಾಪ್ತವಾಗಿ ದುಃಖವೂ ಪ್ರಾಪ್ತಿಯಾದರೆ ಅದು ನಿನ್ನ ... ಸಂತೋಷವಾಗುವದೋ? ಇನ್ನು ಕೆಲವು ವರುಷಗಳಲ್ಲಿ ನೀನು ದೊಡ್ಡವನಾಗಿ ಸಂಸಾರ ಸುಖವನ್ನು ವಹಿಸಿ ಮಕ್ಕಳನ್ನು ಸನ್ಮಾರ್ಗದಲ್ಲಿ ನಡಿಸಿ ... ಬೇಕಾದವನು

ನಾರಾಯಣನು ಈ ಮಾತುಗಳನ್ನು ಕೇಳಿ ... ಕಣ್ಣೀರು ಸುರಿಸಲಾರಂಭಿಸಿದನು.

ನಾನು —ನೀನು ಆಶ್ಚರ್ಯಪಡಬೇಡ ... ಬಹಳ ... ಬಂದೇ ಬರುವದು ... ನಿನ್ನ ನಡತೆಯನ್ನು ... ಮಕ್ಕಳು ನಡೆದರೆ ನನಗೆ ಸಂತೋಷವಾಗುವದೋ? ಅಂದೆನು

ನಾರಾಯಣನು ತನ್ನ ನಡತೆಗೂ ಸಂಭವಿಸಿದ ಅಪಮಾನಕ್ಕೂ ವ್ಯಸನಪಟ್ಟದ್ದಕ್ಕಿಂತ ಹೆಚ್ಚು ವ್ಯಸನವನ್ನು ಹೊಂದಿ ಅಶ್ರುಧಾರೆಗಳನ್ನು ಸುರಿಸುತ್ತ ಎದ್ದುನಿಂತು ಅಯ್ಯಾ, ನಾನು ನಮ್ಮ ತಂದೆ ಯವರಿಗೆ ಇಷ್ಟೊಂದು ದುಃಖಕ್ಕೆ ಕಾರಣವಾದದ್ದಕ್ಕಾಗಿ ವ್ಯಸನಪಡುತ್ತೇನೆಂದು ಹೇಳುವದು ಬಹು ಸಾಧಾರಣ ಸಂಗತಿ ಆದರೂ ಅವರು ನನಗೆ ಇದೊಂದೇ ಸಾರಿ ಕ್ಷಮಾಪಣೆಯನ್ನು ಕೊಟ್ಟು ನನ್ನನ್ನು ಉದ್ಧಾರಮಾಡಿದರೆ ಮುಂದೆ ... ನಡತೆಯಿಂದ ಅವರಿಗೆ ಎಂದಿಗೂ ದುಃಖ ಸಂಭವಿಸದಂತೆ ಎಚ್ಚರವಾಗಿರುವೆನೆಂದು ಪ್ರತಿಜ್ಞೆಮಾಡುತ್ತೇನೆ ಅಂದನು

ನಾನು —ಅಯ್ಯಾ ಯುವಕನೇ, ನಿನ್ನ ಮನೋರಥವು ಸಿದ್ಧಿಸಲಿ ನಿನ್ನ ಮನೋಭಿಲಾಷೆಯನ್ನು ನಿಮ್ಮ ತಂದೆಯವರಿಗೆ ಅರಿಕೆಮಾಡು ಮುಂದೆ ಏನಾಗುವದೋ ನೋಡೋಣ ಅಂದೆನು

ಬಳದೇಶದ ವೃತ್ತಾಂತಗಳು

ಕಳೆದ ವಾರ ೨೬ ... ದಿನ ಮೋಡಮುಚ್ಚಿಕೊಂಡು ಸ್ವಲ್ಪ ಮಳೆ ಆಯಿತು ಪ್ರಜಾ ಆರೋಗ್ಯವು ತೃಪ್ತಿಕರವಾಗಿದೆ ದಾರಣವಾರುಗಳು ಇಳಿದು ... ಬಂದಿರುವವು

* * *

ರಾಜ ದಿವಾನ್ ಮ ವಿ ಪಿ ಮಾಧವರಾಯರು ಉತ್ತರ ದೇಶದಲ್ಲಿ ಸಂಚಾರ ಮಾಡುತ್ತಿದ್ದರೆ ಇನ್ನೆರಡು ವಾರಗಳಲ್ಲಿ ವಾಪಸು ಬೆಂಗಳೂರಿಗೆ ಬಂದಾರೆಂದು ನಿರೀಕ್ಷಿಸಲ್ಪಟ್ಟಿದೆ

* * *

ನಂಜನಗೂಡಿನ ಮುನ್ಸಿಫರು ರಜದ ಮೇಲೆ ಹೋಗುತ್ತಾರಾದ ರಿಂದ ಮೈಸೂರಿನಲ್ಲಿರುವ ಅಡಿಷನಲ್ ಮ|| ಎನ್ ಕೆ ಶ್ರೀನಿವಾಸರಾಯರನ್ನು ಬದಲಿ ನೋಡುವಂತೆ ನೇಮಿಸಿದರೆ

* * *

ಚೀಫ್ ಕಮಿಷನರ್ ದಾಸ್‌ಮವರ ಇಬ್ಬರು ಗಂಡುಮಕ್ಕಳಿಗೂ ೧೬ ವರುಷ ತುಂಬುವ ವರೆಗೆ ... ಮಕ್ಕಳಿಗೆ ೩೦ ರೂಪಾಯಿನಂತೆ ಕೊಡುವುದಾಗಿ ಒಪ್ಪಿಕೊಂಡು ಶ್ರೀಮನ್ಮಹಾರಾಜರವರು ಪ್ಯಾಂಕ್ಷನ್ ಮಾಡಿರುತ್ತಾರೆ

* * *

ಕಳೆದ ಗುರುವಾರ ಬೆಳಿಗ್ಗೆ ಬ್ರಿಟಿಷ್ ರೆಸಿಡೆಂಟರು ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಭೆಟಿ ಮಾಡಿಕೊಂಡು ಮೆಯಿಲ್ ಗಾಡಿಯಲ್ಲಿ ವಾಪಸು ಬೆಂಗಳೂರಿಗೆ ತೆರಳಿದರು ಗೌರವಾರ್ಥವಾದ ತೋಫುಗಳು ಹಾರಿಸಲ್ಪಟ್ಟವು

* * *

ಬೆಂಗಳೂರಿನಲ್ಲಿ ಇ ಕಟವಾಗ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಒಂದು ವಿಚಾರವಾದ ನೋಟೀಸು ಹಾಕಿದ್ದರು ಬ್ರಿಟಿಷ್ ರೆಸಿಡೆಂಟರು ಆ ಪತ್ರಿಕೆಯ ಮುದ್ರಕರನ್ನು ... ಮಾಡಿ ಇನ್ನು ಮುಂದೆ ಅಂಥಾ ವಿಚಾರವನ್ನು ಪ್ರಕಟಮಾಡಿದರೆ ಶಿಕ್ಷೆ ... ಎಚ್ಚರಿಕೆ ಕೊಟ್ಟಿರುತ್ತಾರೆ

* * *

... ಅರಮನೆ ಮೊತಿಖಾನೆ ... ಕೃಷ್ಣಪ್ಪನವರು ... ಕೆಲಸದಿಂದ ... ವಿಸುತ್ತೇವೆ ಇವರು ಅರಮನೆಯಲ್ಲಿ ೪೦ ವರುಷದಿಂದ ಕೆಲಸವ ಮಾಡಿ ... ದೊಡ್ಡ ಕುಟುಂಬಿಗಳಾಗಿರುವರು ಇವರ ... ಗಂಡುಮಕ್ಕಳು ಅರಮನೆ ... ಕೆಲಸ ಮಾಡುತ್ತಾರೆ

* * *

ಕಳೆದ ಗುರುವಾರ ಬೆಳಿಗ್ಗೆ ದಿವಾನ್ ಸಾಹೇಬರು ಪರಿವಾರ ಸಹಿತ ... ಪ್ರಯಾಣಮಾಡಿದರು ಇವರು ಕೆಲವು ಕಾಲ ಅಲ್ಲೇ ಇರುತ್ತಾರೆಂದು ಕೇಳು

ತ್ರಿನ ಅನರೂ ಕೌನ್ಸಲರುಗಳೂ ರಾಜಧಾನಿಯಲ್ಲಿ ಈ ವಾರ ಕಲೆತು ಅಧಿಕಾರಿಗಳ ಬದಲಾವಣೆಯೇ ಮೊದಲಾದ ವಿಚಾರಗಳನ್ನು ಇತ್ಯರ್ಥಪಡಿಸುವರೆಂದು ವರ್ತಮಾನವಿದೆ

ಮೈಸೂರು ಸರ್ಕಾರಿ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಈ ಸಲ ಹಾಜರಾಗಿದ್ದ ೨೪ ಮಂದಿ ಯೌವನಸ್ಥರ ಪೈಕಿ ೧೦ ಮಂದಿ ತೇರ್ಗಡೆ ಹೊಂದಿರುತ್ತಾರೆ ಈ ಪೈಕಿ ಮೂರು ಜನ ಮೈಸೂರಿನವರೆಂದು ತಿಳಿಯುವದು. ಶ್ರೀಮನ್ಮಹಾರಾಜರವರು ಯಾವ ಇಬ್ಬರನ್ನು ಅ|| ಕಮಿಷನರ್ ರಾಗಿ ನೇಮಿಸಿಕೊಳ್ಳುವರೋ ಇನ್ನೂ ಪ್ರಕಟವಾಗಲಿಲ್ಲ

ಮಹಾ ಮಾತೃಶ್ರೀಯವರೇ ಮೊದಲಾದ ಅರಮನೆ ಜನಾನಾದವರೂ ಮುಖ್ಯರಾದ ಸರ್ದಾರರುಗಳ ಮನೆ ಜನಾನಾದವರೂ ಕಳೆದ ಗುರುವಾರ ಬೆಳಿಗ್ಗೆ ೭ ರ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ಕಾಕನಕೋಟೆ ಕೆದ್ದಾ ಕ್ಯಾಂಪಿಗೆ ಹೋಗಿ ಆನೆಗಳ ಕಟ್ಟಿಹಾಕಿದ್ದನ್ನು ನೋಡಿಕೊಂಡು ಆ ರಾತ್ರಿಯೇ ವಾಪಸು ಬಂದರು ದಿವಾನರವರ ಪತ್ನಿಯವರೇ ಮೊದಲಾದವರೂ ಹೋಗಿ ನೋಡಿಕೊಂಡು ಬಂದರು.

ಕಳೆದ ಸೋಮವಾರ ಇಲ್ಲಿನ ಮಧುವನವೆಂಬ ತೋಟದಲ್ಲಿ ಅರಮನೆ ಕಲ್ಲಿಯ ವನಭೋಜನವು ಜರುಗಿತು ಅರಮನೆ ಇಲಾಖೆಯವರು ಬಹು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ್ದರು ತ್ರಿಮಿತಸ್ಥಳದಲ್ಲಿ ಸುಮಾರು ೪,೦೦೦ ಪ್ರಜೆಗಳು ಸೇರಿ ಭೋಜನ ಮಾಡಿದರು ಅಡಿಗೆ ಪದಾರ್ಥಗಳಲ್ಲಾಗಲಿ ಬಡಿಸುವಾದ ಮೇಲ್ವಿಚಾರಣೆಯಲ್ಲಾಗಲಿ ಕೊರತೆಗಳೇನೂ ಇರಲಿಲ್ಲ

ಮೊನ್ನೆ ಮಂಗಳವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮ ಎಂ ಕಾಂತರಾಜೇ ಅರಸಿನವರ ಸಮೇತ ಅರಮನೆಯಿಂದ ಮೋಟಾರ್ ಗಾಡಿಗಳಲ್ಲಿ ಚಾಮರಾಜನಗರಕ್ಕೆ ಪ್ರಯಾಣ ಮಾಡಿ, ಮರಹಳ್ಳಿ ಕಾಲುವೆಯನ್ನು ನೋಡಿಕೊಂಡು ಬಂದು ಚಾಮರಾಜೇಶ್ವರ ದೇವಸ್ಥಾನಕ್ಕೂ ತಾಲ್ಲೂಕ್ ಕಚೇರಿಗೂ ಹೋಗಿ ಭೇಟಿ ಮಾಡಿಕೊಂಡು, ಸಾಯಂಕಾಲ ವಾಪಸು ಹಿಂತಿರುಗಿದರು ಅವರು ಇನ್ನೆರಡ್ಲೇ ಮದರಾಸಿಗೆ ದಯಮಾಡುವರೆಂದು ವರ್ತಮಾನವಿದೆ

ಈ ತಿಂಗಳ ೨೭ನೇ ತಾರೀಖಿನ ದಿ ಬೆಂಗಳೂರಿನಲ್ಲಿ ಎರಡನೇ ಆರ್ಯ ವೈಶ್ಯ ಮಹಾ ಸಭೆಯು ಸಾರಂಭವಾಗಿ ಮೂರು ದಿನ ನಡೆಯುವುದು ಚಿತ್ರದುರ್ಗದ ಡಿಪ್ಟಿ ಕಮಿಷನರ್ ಮ ಎ ಚ ಸಿ ಶೆಟ್ಟಿ ರವರು ಮೊದಲನೆಯ ದಿನ ಪ್ರತಿನಿಧಿಗಳಿಗೆ ಸ್ವಾಗತವಾಕ್ಯವನ್ನು ಓದಿ ಉಪನ್ಯಾಸ ಮಾಡುತ್ತಾರೆ ಮದರಾಸ್ ಹೈ ಕೋರ್ಟ್ ವಕೀಲರಾದ ಮ ಎನ್ ಗುರುಸ್ವಾಮಿ ಶೆಟ್ಟಿ ರವರು ಪ್ರೆಸಿಡೆಂಟಾಗಿ ಸಿಂತು ಸಭೆಯ ಕಾರ್ಯಗಳನ್ನು ಜರುಗಿಸುವರು

ವೈಸರಾಯಿ ಪ್ರಭುಗಳು ಬೆಂಗಳೂರಿನಿಂದ ದಯಮಾಡುವುದಕ್ಕಿಂತ ಮುಂಚೆ ಮಾಜಿ ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿಯವರಿಗೂ ಇಬ್ಬರು ಕೌನ್ಸಲರುಗಳಿಗೂ ಮತ್ತು ದಿಯುನಾಲಿಗೆ ಅವರುಗಳ ಕೂಡ ಸ್ವಲ್ಪ ಹೊತ್ತು ಸಂಭಾಷಣೆ ಮಾಡಿ ಕಳುಹಿಸಿಕೊಟ್ಟರು ಮತ್ತು ಅವರು ಈ ಸಂಸ್ಥಾನದ ಎಲ್ಲೆಯನ್ನು ಬಿಟ್ಟು ದಯಮಾಡುವಾಗ್ಗೆ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮ|| ಡಿ ದೇವರಾಜೇ ಅರಸಿನವರನ್ನು ಕರೆಸಿಕೊಂಡು, ನಿಮ್ಮ ಇಲಾಖೆಯವರು ಬಹು ಚಟುವಟಿಕೆಯಿಂದಲೂ ಎಂಬಾ ಸ್ತೋತ್ರಾರ್ಹವಾಗಿಯೂ ಕೆಲಸ ಮಾಡಿರುತ್ತಾರೆಂದು ತಿಳಿಸಲು ಬಹಳ ಸಂತೋಷವಾಗಿದೆ ಎಂದೂ ಈ ವಿಚಾರವನ್ನು ಶ್ರೀಮನ್ಮಹಾರಾಜರವರಿಗೆ ವಂದನಾಪೂರ್ವಕವಾಗಿ ತಿಳಿಸಬೇಕೆಂದೂ ಅಪ್ಪಣೆ ಕೊಟ್ಟರು ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರವರು ವೈಸರಾಯಿಯವರ ಖಾಸಾಗಿ ಕರೆಸಿಕೊಂಡಿದ್ದ ಪೋಲೀಸಿನವರಿಗೆ ಬಕ್ಷೀಸು ಕೊಡುವಂತಹದ್ದನ್ನು ಮಾಡುತ್ತಾರೆಂದು ಕೇಳಿದೆವು ಇದಲ್ಲದೆ ವೈಸರಾಯಿ ಪ್ರಭುಗಳು ಕೆದ್ದಾ ಮತ್ತು ಶಿಕಾರಿ ಕ್ಯಾಂಪುಗಳ ಅಧಿಕಾರಿಗಳನ್ನು ಬಹಳವಾಗಿ ವಂದಿಸಿ ಅವರಿಗೆ ತಮ್ಮ ಪ್ರೀತಿ ತೃಪ್ತಿ ಸಂತೋಷಗಳನ್ನು ತಿಳಿಸಿದರೆಂದು ಕೇಳುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ

ಕೋಲಾರ್ ಚಿನ್ನದ ಗಣಿಗಳ ಮೆಡಿಕಲ್ ಹೆಲ್ತ್ ಆಫೀಸರ್ ಮ|| ಜಾಂಸ್ ಡೆ ಮರ್ಕ್ಸ್ಸ್ವಾಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ವಾಪಸು ಬರುವ ತನಕ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮ|| ಬಿ ವಿ ಕುಪ್ಪುಸ್ವಾಮಿ ನಾಯಡು ತಮ್ಮ ಕೆಲಸದೊಂದಿಗೆ ಹೆಲ್ತ್ ಆಫೀಸರ ಚಾರ್ಜಿ ಕೆಲಸಗಳನ್ನು ವಹಿಸತಕ್ಕದ್ದು

ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮಿ|| ಪಿ ಸಲ್ಲಾಯವರಿಗೆ ಜನವರಿ ೩ ನೇ ತಾ ನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ವಾಪಸು ಬರುವ ತನಕ ಮ|| ಎ ಕೆ ಪಾಣೆಯವರು ತಮ್ಮ ಕೆಲಸದೊಂದಿಗೆ ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಕೆಲಸದ ಛಾರ್ಜನ್ನು ನೋಡತಕ್ಕದ್ದು

ತುಮಕೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೋ ಅ|| ಕಮಿಷನರ್ ಮ|| ಎನ್ ಮಾಧವರಾಯರಿಗೆ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಫಾರೆಸ್ಟ್ ಸಬ್ ಅ ಕನ್ಸರ್ವೇಟರ್ ಮ|| ಎ ವಿ ವರದಾಚಾರ್ಯರವರು ದಿನದಿಂದ ಬಂದು ನವಂಬರ್ ತಾ ೧೬ ರಲ್ಲಿ ಕೆಲಸದ ಚಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ

ಮೈಸೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೋ ಅ|| ಕಮಿಷನರ್ ಮ|| ಎಸ್ ವೆಂಕಟರಂಗಂ ಅವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮ ಕೆ ಶ್ರೀನಿವಾಸರಾಯರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಅ ಕಮಿಷನರ್ ಮ ಡಿ ಶ್ರೀನಿವಾಸಯ್ಯಂಗಾರ್ಯರಿಗೆ ಮೊಕದ್ದಮೆಗಳನ್ನು ತನಿಖೆಮಾಡಿ ಸೆಷನ್ಸ್ ವಿಚಾರಣೆಗೆ ಗುರಿಪಡಿಸುವ ಅಧಿಕಾರ ಕೊಟ್ಟಿದೆ

ಅ|| ಕಮಿಷನರ್ ಮ|| ಟಿ ರಾಮಯ್ಯ ಚೆಟ್ಟಿಯಾರನ್ನು ದಂಡಿನ ಸರಬರಾಯಿ ಕೆಲಸಕ್ಕೆ ಕೊಟ್ಟಿರೋಣದರಿಂದ ಪ್ರೋ|| ಅ|| ಕಮಿಷನರ್ ಮ ಕೆ ವಿ

ಅನಂತರಾಮಯ್ಯ ಯವರು ಬೆಂಗಳೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು

ಮ|| ಸಿ ಎಸ್ ಬಾಲಸುಂದರಂ ಐಯರವರು ಮ ಕೆ ಎಸ್ ಚಂದ್ರಶೇಖರ ಐಯರವರಿಂದ ಗವರ್ನಮೆಂಟ್ ಸೆಕ್ರೆಟರಿ ಕೆಲಸದ ಛಾರ್ಜನ್ನು ತಾ ೪ ರಲ್ಲಿ ವಹಿಸಿಕೊಂಡರು

ಸ್ಯಾನಿಟರಿ ಇಂಜನಿಯರ್ ಮ ಜೆ ಬೋರ್ ಯವರು ನವಂಬರ್ ತಾ ೨೯ ರಲ್ಲಿ ಸ್ಯಾನಿಟರಿ ಡಿವಿಜನ್ ಛಾರ್ಜನ್ನು ವಹಿಸಿಕೊಂಡರು

ಅ ಇಂಜನಿಯರ್ ಮ|| ಕೆ ಅನಂತಾಚಾರ್ಯರನ್ನು ಬೆಂಗಳೂರು ಡಿವಿಜನ್ ಗೆ ವರ್ಗಮಾಡಿದೆ

ವೈಸರಾಯಿಯವರ ದೇಶಸಂಚಾರವು

ಮದರಾಸಿನಲ್ಲಿ ನಡೆದ ಅತಿಥ್ಯಗಳು

ತಾ ೧೧ ನೇ ಶನಿವಾರ ಬೆಳಿಗ್ಗೆ ವೈಸರಾಯಿಯವರು ಮ್ಯೂಸಿಯಮ್ ಅಧೀನದ ಅಸ್ತಿಭಾರವನ್ನು ಹಾಕಿದ ಬಳಿಕ ವಾಪಸು ಗವರ್ನಮೆಂಟ್ ಹೌಸಿಗೆ ದಯಮಾಡಿದ ಮೇಲೆ ಆರ್ಕಾಟಿನ ರಾಜಕುಮಾರರು ಹೋಗಿ ವೈಸರಾಯಿಯವರ ಭೇಟಿ ತೆಗೆದುಕೊಂಡು ಬಂದರು ಲಾರ್ಡ್ ಮಿಂಟೋ ಪ್ರಭುಗಳು ಪಿಠಾಪುರದ ರಾಣಿಯರುಗಳ ಮೊಮ್ಮಕ್ಕಳಾದ ಶ್ರೀ ಶಿವಾಜಿ ರಾಜಾ ಸಾಹೇಬ್, ಶ್ರೀ ಪ್ರತಾಪಸಿಂಹಜಿ ರಾಜಾಸಾಹೇಬ್ ಎಂಬಿಬ್ಬರನ್ನು ಗವರ್ನಮೆಂಟ್ ಹೌಸಿಗೆ ಕರೆಸಿಕೊಂಡು ಅವರ ಕೂಡ ಸ್ವಲ್ಪ ಹೊತ್ತು ಸಂಭಾಷಣೆಯನ್ನು ಬೆಳಸಿದರು

ಕಲ್ಲಿಕೋಟೆಯ ಜಾಮೋರಿನ್ ರಾಜರು ವೈಸರಾಯಿಯವರಿಗೆ ಒಂದು ಅಡ್ರೆಸ್ಸನ್ನು ಒಂದು ಬೆಳ್ಳಿಯ ಕೈಪೆಟ್ಟಿಗೆಯಲ್ಲಿಟ್ಟು ಅವರ ಪಾದಾರವಿಂದದಲ್ಲಿ ಮ ಕೆ ಸಿ ಮಾನವಿಕ್ರಮ ರಾಜರವರ ಮೂಲಕ ಕಳುಹಿಸಿ ಒಪ್ಪಿಸಿದರು ವೈಸರಾಯಿಯವರು ಜಾಮೋರಿನ್ ಯವರನ್ನು ನೋಡುವುದಕ್ಕಾಗದೆ ಹೋಯಿತಲ್ಲಾ ಎಂದು ವಿಷಾದಪಟ್ಟು ರಾಜರ ಮೂಲಕ ತಮ್ಮ ವಂದನೆಯನ್ನೂ ಶುಭಾಶಂಸನವನ್ನೂ ಹೇಳಿ ಕಳುಹಿಸಿದರು

ದೇಶೀಯ ಸ್ತ್ರೀಯರಿಗೆ ಭೇಟಿಕೊಟ್ಟದ್ದು.

ಅದೇ ದಿನ ಬೆಳಿಗ್ಗೆ ವೈಸರಾಯಿಯವರ ಪತ್ನೀಯವರು ಮದರಾಸ್ ಪಟ್ಟಣದಲ್ಲಿರುವ ಮುಖ್ಯ ದೇಶೀಯ ಸ್ತ್ರೀಯರನ್ನು ದರ್ಬಾರ್ ಮಂದಿರಕ್ಕೆ ಕರೆಸಿಕೊಂಡು ಇದ್ದರು ಸುಮಾರು ೩೦ ಮಂದಿ ಸ್ತ್ರೀಯರು ಅಲ್ಲಿಗೆ ಹೋಗಿ ವೈಸರಾಯಿಯವರ ಪತ್ನೀಯವರ ಭೇಟಿಮಾಡಿ ಅವರ ಕೂಡ ಸ್ವಲ್ಪ ಹೊತ್ತು ಸಂಭಾಷಣೆಮಾಡಿದ್ದು, ಶ್ರೇಷ್ಠವಾದ ಪುಷ್ಪದ ಹಾರಗಳನ್ನು ಒಪ್ಪಿಸಿ, ಅಡಿಕೆಲೆ ಅತ್ತರು ಮುಂತಾದದ್ದನ್ನು ಕೊಟ್ಟಮೇಲೆ ಹೊರಟುಬಂದರು ಮಧ್ಯಾಹ್ನದ ಮೇಲೆ ಲೇಡಿ ಮಿಂಟೋರವರು ಮದರಾಸ್ ಗವರ್ನರ ಪತ್ನೀರವರ ಸಮೇತ ಹೊರಟು ಆರ್ಕಾಟ ರಾಜಕುಮಾರರ ಪತ್ನೀರವರ ಮತ್ತು ಅವರ ಸಹೋದರಿಯವರ ಬಂಗಲೆಗಳಿಗೆ ದಯಮಾಡಿ ಮರುಭೇಟಿಗಳನ್ನಿತ್ತು ಅವರಿಂದ ಮರ್ಯಾದೆಗಳನ್ನು ಪಡೆದು ಹೊರಟುಬಂದರು

ಸಂತೋಷ ಕೂಟವು.

ಶನಿವಾರ ಸಾಯಂಕಾಲ ಮದರಾಸ್ ಪಟ್ಟಣದ ಕಾಸ್ಮಾಪಾಲಿಟನ್ ಕ್ಲಬಿನ ಮೆಂಬರುಗಳು ಕ್ಲಬ್ಬಿನ ಕಟ್ಟಡದ ಒಳಗೂ ಹೊರಗೂ ನೇತ್ರಾನಂದಕರವಾಗಿ ಅಲಂಕಾರಮಾಡಿ ಕೆಲವು ವಿನೋದಗಳನ್ನು ಕಲ್ಪಿಸಿದ್ದರು ವೈಸರಾಯಿ ದಂಪತಿಗಳೂ ಮದರಾಸ್ ಗವರ್ನರವರೂ ಅವರ ಪತ್ನೀ ಪುತ್ರಿಯರೂ ಈ ಸಂತೋಷದ ಕೂಟಕ್ಕೆ ದಯಮಾಡಿದರು ಬಾಗಿಲಲ್ಲಿ ಕ್ಲಬಿನ ಪ್ರೆಸಿಡೆಂಟರಾದ ಮ|| ಶಂಕರನ್ ನಾಯರ್ ಯವರು ಮುಖ್ಯ ಮೆಂಬರುಗಳ ಸಮೇತ ಕಾದಿದ್ದು ವೈಸರಾಯಿ ದಂಪತಿಗಳನ್ನು ಎದುರುಗೊಂಡು, ಕರೆದುಕೊಂಡು ಹೋಗಿ ಪ್ರೀಡಾ ನಗಲಲ್ಲಿ ಕೂಡಿಸಿದರು ನೂರಾರು ಮಂದಿ ಮಹನೀಯರು ಸಭೆಯಲ್ಲಿ ಹಾಜರಾಗಿದ್ದರು ಒಬ್ಬ ಮಂದಿ ಹಿಂದೂ ಸ್ತ್ರೀಯರೂ ಸಭೆಯನ್ನಲಂಕರಿಸಿದ್ದರು

ವೈಸರಾಯಿ ಪ್ರಭುಗಳು ಒಳಕ್ಕೆ ದಯಮಾಡುತ್ತಲೇ ದೊಡ್ಡ ಮನುಷ್ಯರ ಮನೆಗಳ ಕೆಲವು ಹಿಂದೂ ಬಾಲಕಿಯರು ಸಾಲುಕಟ್ಟಿ ನಿಂತು ವೀಣೆ, ಪಿಟೀಲು ಹಾರ್ಮೋನಿಯಂ ನುಡಿಸುತ್ತಾ ಮನೋಹರವಾದ ರಾಗವನ್ನೆತ್ತಿ ವೈಸರಾಯಿ ದಂಪತಿಗಳಿಗೆ ಸುಖಾಗಮನವನ್ನು ಬಯಸಿ ಕೀರ್ತನೆಯನ್ನು ಹಾಡಿದರು ಬಳಿಕ ಕೆಲವು ಸಂಗೀತಗಾರರು ಹಿಂದು ಮತ್ತು ಹಿಂದುಸ್ಥಾನಿ ಪದಗಳನ್ನು ಬಹು ಇಂಪಾಗಿ ಹಾಡಿದರು ತರುವಾಯ ವೈಸರಾಯಿ ದಂಪತಿಗಳನ್ನು ಮೇಲುಪ್ಪರಿಗೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಚಿತ್ರ ವಿಚಿತ್ರವಾದ ದೀಪೋತ್ಸವಗಳನ್ನು ತಾರಿಸಿದರು ನಾಟಕರಂಗದಲ್ಲಿ "ಮನೋಹರ" ಎಂಬ ತಮಿಳು ನಾಟಕವನ್ನು ಸ್ವಲ್ಪ ಭಾಗ ಆಡಲಾಯಿತು ಮುಖ್ಯ ಜನ ಹೈಕೋರ್ಟು ವಕೀಲರೇ ವೇಷಧಾರಿಗಳಾಗಿ ಬಹು ಸ್ವಾರಸ್ಯವಾಗಿ ತಮ್ಮ ಪಾತ್ರಗಳನ್ನು ನಡಿಸಿ ಆನಂದಪಡಿಸಿದರು ಬಳಿಕ ಇನ್ನೂ ಕೆಲವು ವಿನೋದಗಳು ನಡೆದವು ಕಡೆಯಲ್ಲಿ ವೈಸರಾಯಿ ದಂಪತಿಗಳು ಆ ಮಂದಿರದಲ್ಲಿ ಸ್ವಲ್ಪ ಫಲಾಹಾರಗಳನ್ನು ಭುಂಜಿಸಿ ಬಹು ಸಂತೋಷಪಟ್ಟು, ಕ್ಲಬ್ಬಿನವರನ್ನು ವಂದಿಸಿ ದಯಮಾಡಿದರು

ಮದರಾಸಿನಿಂದ ತೆರಳಿದ್ದು

ತಾ ೧೩ ನೇ ಭಾನುವಾರ ವೈಸರಾಯಿ ಲಾರ್ಡ್ ಮಿಂಟೋ ಪ್ರಭುಗಳು ಆರಾಮದ ನಿಮಿತ್ತ ಗವರ್ನಮೆಂಟ್ ಹೌಸಿನಲ್ಲೇ ಇದ್ದು ವಿಶ್ರಾಂತಿಯನ್ನು ಪಡೆದರು ವೈಸರಾಯಿಯವರ ಪತ್ನೀಯವರು ೧೧ ಗಂಟೆಗೆ ಗವರ್ನರ್ ಮೊದಲಾದವರ ಸಮೇತ ದೇವಾಲಯಕ್ಕೆ ದಯಮಾಡಿ ಭಗವದಾರಾಧನೆಯನ್ನು ನೆರವೇರಿಸಿಕೊಂಡು ಬಂದರು ಸಾಯಂಕಾಲ ವೈಸರಾಯಿ ದಂಪತಿಗಳು ಮೋಟಾರ್ ಗಾಡಿಗಳಲ್ಲಿ ಕುಳಿತು ಪಟ್ಟಣದ ಕೆಲವು ಭಾಗಗಳಲ್ಲಿ ಸಂಚಾರ ಮಾಡಿಕೊಂಡು ವಾಪಸು ದಯಮಾಡಿದರು ಆ ದಿನ ಬೆಳಿಗ್ಗೆ ವೈಸರಾಯಿಯವರು ಗವರ್ನರವರ ಕೂಡ ದೇಶ ಕಿಡುವಿನ ಪಾಲು ಕ ಖರಾಗುವ ಸರ್ಕಾರಿ ಕಾರ್ಖಾನೆಗೆ ದಯಮಾಡಿ ನೋಡಿಕೊಂಡು ಬಂದರು

ವೈಸರಾಯಿಯವರೂ ಲೇಡಿ ಮಿಂಟೋರವರೂ ಅದೇ ರಾತ್ರಿ ಭೋಜನಾನಂತರ ೧೦ ಗಂಟೆಗೆ ರೈಲ್ವೆ ಸ್ಟೇಷನ್ನಿಗೆ ದಯಮಾಡಿ ಗವರ್ನರವರೇ ಮೊದಲಾದ ಸ್ನೇಹಿತರ ಅಧಿಕಾರಿಗಳನ್ನು ವಂದಿಸಿ ಬೀಳ್ಕೊಂಡು, ಸ್ಪೆಷಲ್ ನಲ್ಲಿ ಕಾದಿದ್ದ ಸ್ಪೆಷಲ್ ಗಾಡಿಯನ್ನು ಹತ್ತಿ ಜಯಘೋಷಗಳಾಗುತ್ತಿರುವಲ್ಲಿ ಮುಂದಕ್ಕೆ ತೆರಳಿದರು ಮದರಾಸಿನ ಜನರಿಗೆ ಕೋಟೆಕಾತ್ತಲೆಯಿಂದ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಕರೆಸ್ಪಾಂಡೆನ್ಸ್.

ಜೂಜಾಡತಕ್ಕದ್ದು.

ಅಯ್ಯಾ,

ಈ ಕಸಬು ಈ ದೇಶದಲ್ಲಿ ಬಹಳ ದಿವಸಗಳಿಂದ ನಡೆಯುತ್ತಾ ಬಂದು, ಇದರಿಂದ ಅನೇಕ ಸಂಸಾರಿಗಳು ಕೆಟ್ಟು ಹೋದರು ಈ ಅನಾಚಾರ ಕೆಲಸಗಳ ಮೇಲೆಯಿಂದ ಪ್ರಜೆಗಳು ಘಾಬರಿಯಾಗಿ ಈ ದುರ್ಮಾರ್ಗದ ನಡತೆ ಪ್ರಜೆಗಳಿಂದ ಬಿಡಿಸಲು ಒಂದು ಆ ಜಾರಿ ತರಬೇಕೆಂತ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅನೇಕ ವರ್ಷಗಳಿಂದ ಕೇಳಿಕೊಳ್ಳುತ್ತಿದ್ದರು ಗೌರ್ನಮೆಂಟಿನವರನ್ನೂ ದಯಮಾಡಿ ಈಗ್ಗೆ ೧ ೨ ವರ್ಷದ ಕೆಳಗೆ ಹೊಸದಾಗಿ ಪೋಲೀಸ್ ರೂಲ್ಸ್ ಮಾಡಿ ಅದರಲ್ಲಿಯೇ ಈ ಜೂಜಿನ ವಿಷಯವು ಸೇರಿಸಿ ಜಾರಿಗೆ ತಂದರು ಅದು ಜಾರಿಗೆ ಬಂದನಂತರವೂ ಜೂಜಾಡತಕ್ಕವರು ಬಹಿರಂಗವಾಗಿಯೇ ಆಡುತ್ತಿದ್ದರು.

ಪೋಲೀಸಿನವರು ಅವರನ್ನು ಕೇಳುತ್ತಲೇ ಇರಲಿಲ್ಲ. ಅದಕ್ಕೆ ಕಾರಣ ವಿಚಾರಿಸಿದರೆ ಹೊಸ ಪೋಲೀಸ್ ರೂಲ್ಸಿನಲ್ಲಿ ಸೇರಿಸಿತಕ್ಕ, ಜೂಜಾಡತಕ್ಕವರನ್ನು ಹಿಡಿದು ಅವರ ಮೇಲೆ ಫಿರ್ಯಾದು ನಡಿಸತಕ್ಕದ್ದು ಒಂದು, ಉತ್ಸವಗಳ ನಡೆದು ತಕ್ಕ ವಿಷಯದಲ್ಲಿ ಪೋಲೀಸಿನವರೇ ಲೈಸೆನ್ಸು ಕೊಡಬೇಕೆಂಬುವುದು ಒಂದು, ಈ ಎರಡು ವಿಷಯ ಜಾರಿಯಲ್ಲಿಲ್ಲಾ ಜಾರಿಮಾಡತಕ್ಕದ್ದೆಂತ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಂದ ಸರ್ಕ್ಯೂಲರ್ ಹುಕುಂ ಬಂದಿದೆ ಅದ್ದರಿಂದ ಆ ವಿಷಯ ಪೋಲೀಸಿನವರು ನೋಟೀಸ್ ಮಾಡುವುದಿಲ್ಲವೆಂತ ತಿಳಿಯುತ್ತಿತ್ತು. ಹೀಗಿರುತ್ತಾ ಆಕಸ್ಮಾತ್ತಾಗಿ ಈಗ್ಗೆ ೧೫-೨೦ ದಿವಸದ ಕೆಳಗೆ ಈ ಊರಿನ ಒಂದು ಮನೆಯಲ್ಲಿ ೧೧ ಜನ ಸೇರಿ ಜೂಜಾಡುತ್ತಿದ್ದದ್ದು ಪೋಲೀಸ್ ಅ|| ಸೂಪರಿಂಟೆಂಡೆಂಟರವರೇ ಖುದ್ದು ನೋಡಿ ಅವರನ್ನು ಅವರಲ್ಲಿ ಸಿಕ್ಕಿದ ಪದಾರ್ಥಗಳನ್ನು ಟ್ರೆಜರಿ ಅ|| ಕಮಿಷನರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರು ನಡಿಸಿದ್ದಾರೆ. ಮೊಕದ್ದಮೆ ವಿಚಾರಣೆ ನಡೆಯುತ್ತಾ ಇದೆ

ಆದರೆ ಈ ದುಷ್ಟ ಕೆಲಸವನ್ನು ಮುಖ್ಯ ಪೋಲೀಸ್ ಆಫೀಸರರೇ ಕಂಡು ಹಿಡಿದು ಸಂಬಂಧ ಪಟ್ಟವರನ್ನು ಶಿಕ್ಷೆಗೆ ಗುರಿಪಡಿಸಿದ್ದಕ್ಕಾಗಿ ಇಲ್ಲಿನ ಪ್ರಜೆಗಳೆಲ್ಲಾ ಸಂತೋಷಿಸುತ್ತಿದ್ದಾರಾದಾಗ್ಯೂ ಈ ವರಿಗೂ ಇದು ಜಾರಿಗೆ ತಂದೇ ಇಲ್ಲಿಸದ್ದದ್ದು ಯಾವ ಕಾರಣ, ಈ ವಿಷಯದಲ್ಲಿ ಇನ್ನೇನಾದರೂ ಹೆಚ್ಚಾಗಿ ಸೇರಿಸತಕ್ಕದ್ದಿದೆಯೇ ಹ್ಯಾಗೆಂಬ ವಿಷಯ ತಿಳಿಯಲು ಪ್ರಜೆಗಳು ಅಪೇಕ್ಷಿಸುತ್ತಿದ್ದಾರೆ

ಚಿತ್ರದುರ್ಗ, ಪೆಟ್ರ್ಯಾಟ್ ಆಫೀಸರ್

ಪ್ಲೇಗನ್ನು ನಿಲ್ಲಿಸುವುದಕ್ಕೆ ಮಾರ್ಗೋಪಾಯಗಳು.

ಅಯ್ಯಾ,

ಶಿವಮೊಗ್ಗಾ ಡಿಸ್ಟ್ರಿಕ್ಟ್ ಕಡೂರು ಕಟ್ಟಿ ಗ್ರಾಮದಲ್ಲಿ ಪ್ಲೇಗು ಉಪದ್ರ ಶುರುವಾಗಿ ಜನಗಳು ಬಲು ಗಾಬರಿಯಾಗಿದ್ದಾರೆ. ಬೆಳಿಗ್ಗೆ ಆರೋಗ್ಯವಾಗಿದ್ದವರು ಸಾಯಂಕಾಲದೊಳಗಾಗಿ ದೇಹವನ್ನು ಬಿಟ್ಟರು. ಒಂದೇ ಮನೆಯಲ್ಲಿ ಒಂದೆರಡು ದಿನಗಳಲ್ಲಿಯೇ ಮೂರು ಮಂದಿ ಸತ್ತುಹೋದದ್ದರಿಂದ ಆ ಕೇರಿಯವರೆಲ್ಲರೂ ಕ್ಯಾಂಪುಗಳಿಗೆ ಓಡಿದರು ಇಲಿ ಸತ್ತ ವಾಸನೆ ಬಾಧಿಯವರು ಕ್ಯಾಂಪುಗಳಿಗೆ ಹೋಗುವವರಾಗಿದ್ದಾರೆ. ಚಾವಡಿಗಳ ಕ್ವಾರ್ಟರುಗಳಲ್ಲಿ ಇಲಿಗಳು ಬಿದ್ದು ವಾಸನೆ ಹುಟ್ಟಿತು ಆದರೆ ಅವರು ಎಲ್ಲಿಗೆ ಹೋಗಬೇಕೋ ತಿಳಿಯದೆ ಮನೆ ಮೇಲಿನ ಹೆಂಚುಗಳನ್ನು ಮಾತ್ರ ಅಲ್ಲಲ್ಲಿಗೆ ತೆಗೆದುಹಾಕಿ ಕೆಲವರು ಅಲ್ಲಿಯೇ ಇದ್ದುಕೊಂಡು ದೇವರನ್ನು ಪ್ರಾರ್ಥಿಸುತ್ತಲಿದ್ದಾರೆ ತಾಲ್ಲೂಕು ಅಮಲ್ದಾರರವರು ಊರು ಜನರೆಲ್ಲರಿಗೂ ಒಳ್ಳೇ ತಿಳುವಳಿಕೆಯನ್ನು ಕೊಡುತ್ತಾ, ಎಲ್ಲರೂ ಕ್ಯಾಂಪಿಗೆ ಹೋಗಬೇಕಾಗಿ ಪ್ರೋತ್ಸಾಹಿಸುತ್ತಾ ಇದ್ದಾರೆ ಈ ಗ್ರಾಮದ ಮಧ್ಯೆ ಇರುವ ಸ್ಕೂಲು ಬಾಲಕರಲ್ಲಿ ಗಾಣರ, ಮಿಂಗೇಲಿ ಎಂಬ ಇಬ್ಬರು ಅಣ್ಣ ತಮ್ಮಂದಿರಿಗೆ ಪ್ಲೇಗು ತಗಲಿ ಒಂದೇ ದಿನದಲ್ಲಿ ಇಬ್ಬರೂ ಮೃತಪಟ್ಟರು. ಹಳ್ಳಿಗಳಿಂದ ಬರುವ ಹುಡುಗರು ಈ ಗ್ರಾಮದಿಂದ ಅದೃಶ್ಯರಾದರು ಪ್ಲೇಗು ರೋಗ ಜಾರಿಗೆ ಬಂದು ಜನಗಳಿಗೆ ಗುಡಿಸಲುಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲ ಮಾಡುಮಾಡಿಕೊಡದಿರುವುದರಿಂದ ಬಹಳ ತೊಂದರೆಯಾಗಿ ಗಾಬರಿ ಹೆಚ್ಚುವುದಕ್ಕೆ ಕಾರಣವಾಗಿದೆ

ಆದರೆ ಸಂಭವದವರಿಗೆ ಚಿಂತೆಯಿಲ್ಲ ಎಂಬಂತೆ ಈಚೆಗೆ ಈ ಗ್ರಾಮದಲ್ಲಿ ಇಬ್ಬರು, ಮೂವರು, ನಾಲ್ವರು ಒಂದೊಂದುವೇಳೆ ಐವರು ಸಾಧುಗಳಮೇಲೆ ಅಕ್ಕ, ತಂಗಿ, ಓರೆ ಒಡತಿ ಎಂಬದಾಗಿ ದೇವತೆಗಳು ಅನೇಕವಾಗಿ ಬಂದು ಭಕ್ತಾದಿಗಳ ಕಷ್ಟಗಳನ್ನು ಆಲಿಸಿ, ನಾನಾ ಉತ್ಸವಾದಿಗಳು ಹಣ್ಣು ಕಾಯಿ ಮಂಗಳಾರತಿಗಳಿಂದ ಸಂತೋಷಿಸುತ್ತಾ ಭಕ್ತರ ಪ್ರಾಣಗಳಿಗೆ ಅಭಯ ಪ್ರದಾನಮಾಡುತ್ತಲಿವೆ ಈ ದೇವತೆಗಳು ಮೈತುಂಬಿ ಅಪ್ಪಣೆ ಕೊಡಿಸಿದ ಮೇರೆಗೆ ಮಂದಿಯ ಮೂವರು ಗಡಿ ಮಾರಿಯನ್ನು ಮಾಡಿ, ಉತ್ಸವಗಳನ್ನು ಮಾಡಿ ಮೆರವಣಿಗೆಯಿಂದ ಪೂರ್ವ ಪಶ್ಚಿಮ ದಿಕ್ಕಿನ ಊರುಗಳಿಗೆ ಕಳುಹಿಸಿ ಕೊಟ್ಟದ್ದಾಯಿತು ಕೋಲಾಟಗಳ ಓರೆ ಹಬ್ಬಕ್ಕೆ ಚಂದಾ ಪಟ್ಟಿ ತಯಾರಾಯಿತು. ಆದರೆ ಇನ್ನೂ ಸಾಕಾದಷ್ಟು ಮೊಬಲಗು ಭರ್ತಿಯಾಗಿಲ್ಲ, ಮುಖ್ಯವಾಗಿ ಈ ಮಾರಿ, ಮಸಣಿ ಅಮ್ಮನವರು ಈ ಕುಂಠ ಕೋಗಾದಿಗಳಿಂದಲೇ ಸಂತುಷ್ಟರಾಗಿ, ಪಾಮರರಾದ ನಮ್ಮಂಥ ಜನರನ್ನು ಕಾಯುವರೆಂದು ಭಕ್ತಿಯಿಂದ ಅನುದಿನವೂ ಪ್ರಾರ್ಥಿಸುತ್ತಲಿದ್ದೇವೆ

ಸರ್ವಜನ ಹಿತಚಿಂತಕ ಪ್ರತ್ಯಕ್ಷದರ್ಶಿ

ಪ್ಲೇಗ್ ಉಪದ್ರವು ಮೊದಲು ಇಲಿಗಳಿಗೂ ಬಳಿಕ ಇಲಿಗಳಿಂದ ಮನುಷ್ಯರಿಗೂ ಬರುತ್ತದೆಂದು ಪ್ರಸಿದ್ಧರಾದ ವೈದ್ಯರುಗಳು ಸಕಾರಣಗಳಿಂದ ಸ್ಥಾಪಿಸಿರುತ್ತಾರೆ ಇಲಿಗಳನ್ನು ನಾಶಮಾಡುವುದೂ, ಇಲಿ ಸತ್ತ ಸ್ಥಳಗಳನ್ನು ಕೂಡಲೇ ಬಿಟ್ಟು ಹೊರಹೋಗುವುದೂ ಪರಮಾವಶ್ಯಕವಾಗಿದೆ ಹೀಗೆ ಮಾಡದೆ ಮಾರಿ ಮಸಣಿಗಳಿಗೆ ಬಲಿಗಳನ್ನು ಕೊಟ್ಟು ಉತ್ಸವಗಳನ್ನು ಮಾಡೋಣದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಇದರಿಂದ ಬರೀ ದೇಹಶ್ರಮವೂ ದ್ರವ್ಯವ್ಯಯವೂ ಆಗಿ, ಉಪದ್ರವ ಕಷ್ಟ ಹೆಚ್ಚ ಬಹುದು —ಎಡಿ]

ಇಂಡಿಯಾದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದ ಚಾರ್ಟರ್ ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದ ಸರಫೆ ಕಟಕನೆಂಬಾತನು ಕಳೆದವಾರ ಒಂದಕ್ಕೆ ಇನ್ನೊಂದು ಔಷಧವನ್ನು ಕಾಣದೆ ಸೇವಿಸಿ ಸತ್ತು ಹೋದನು.

ಕಲ್ಕತ್ತೆಯಲ್ಲಿ ಇಬ್ಬರು ಯೂರೋಪ್ಯರ್ಯರು ಕಳುವು ಮಾಡಿದರು ಮ್ಯಾಜಿಸ್ಟ್ರೇಟರು ಒಬ್ಬನಿಗೆ ಮೂರು ತಿಂಗಳೂ, ಇನ್ನೊಬ್ಬನಿಗೆ ಎರಡು ವರುಷವೂ ಕಠಿಣಸಜಾ ವಿಧಿಸಿರುತ್ತಾರೆ

ಮಣಿಪುರ ಸಂಸ್ಥಾನದ ಮಹಾರಾಜರವರು ಮುಂದಿನ ತಿಂಗಳಲ್ಲಿ ತೀರ್ಥ ಯಾತ್ರೆ ಹೊರಟು ಪುರಿ (ಜಗನ್ನಾಥ), ರಾಮೇಶ್ವರ, ಮದರಾಸ್, ಬೊಂಬಾಯಿ, ಅಜ್ಮೀರ, ಆಗ್ರಾ, ಮುಂತಾದ ಸ್ಥಳಗಳಿಗೆ ಹೋಗುತ್ತಾರೆ

ಲಾಹೋರಿನಲ್ಲಿರುವ ದಯಾನಂದ ಆಂಗ್ಲೋವೇದೀಯ ವಿದ್ಯಾಶಾಲೆ ಮತ್ತು ಗುರುಕುಲವೆಂಬ ಪಾಠಶಾಲೆಗಳ ವಾರ್ಷಿಕೋತ್ಸವವು ಕಳೆದ ವಾರ ನಡೆದಾಗ ಅವುಗಳ ಮೂಲಧನಕ್ಕೆ ೫೨,೦೦೦ ರೂಪಾಯಿ ಚಂದಾ ವಸೂಲಾಯಿತು

ನೇಪಾಳದ ಮಹಾರಾಜರವರು ತುಲಾ ಭಾರವನ್ನು ಮಾಡಿಸಿಕೊಂಡು, ತಮ್ಮ ತೂಕದಷ್ಟು ಹಣವನ್ನು ಬಡಬಗ್ಗರೇ ಮೊದಲಾದ ಪ್ರಜೆಗಳಿಗೆ ಹಂಚಿಸಿ ಕೊಟ್ಟದ್ದಲ್ಲದೆ ಸಾವಿರಾರು ಜನರಿಗೆ ಭೋಜನ ಮಾಡಿಸಿ ವಸ್ತ್ರಗಳನ್ನು ದಾನಮಾಡಿದರು

ಹಿಂದುಸ್ಥಾನದ ಸರ್ವಸೇನಾಪತಿಯಾಗಿದ್ದು ಸೀಮೆಗೆ ಹೋಗಿರುವ ಲಾರ್ಡ್ ಕಿಚ್ನರ್ ಯವರ ಹೆಸರನ್ನು ಹಿಂದುಸ್ಥಾನದಲ್ಲಿ ಶಾಶ್ವತಪಡಿಸುವುದಕ್ಕಾಗಿ ಏರ್ಪಟ್ಟಿರುವ ಮೆಮೋರಿಯಲ್ ಫಂಡಿಗೆ ಇದುವರೆಗೆ ೬೦ ಸಾವಿರ ರೂಪಾಯಿ ವಸೂಲಾಗಿರುತ್ತದೆ

ಲಾಹೋರ್ ಪಟ್ಟಣದಲ್ಲಿ ಈ ತಿಂಗಳ ಕಡೇ ಭಾಗದಲ್ಲಿ ಹಿಂದುಸ್ಥಾನದ ಆರ್ಯ ಮಹಿಳೆಯರ ಪರಿಷತ್ತು ನಡೆಯುವುದು ಈ ಪರಿಷತ್ತಿಗೆ ಆ ಪಟ್ಟಣದಲ್ಲಿರುವ ಶ್ರೀಮತಿ ಜಮ್ನಾಬಾಯಿ, ಬಿ ಎ ಎಂಬಾಕೆಯೂ, ಶ್ರೀಮತಿ ಸರಳ ದೇವಿ ಚೌಧುರಾಣಿ ಎಂಬಾಕೆಯೂ ಮುಖ್ಯಸ್ಥರಾಗಿ ನಿಂತು, ಸಭೆಯನ್ನು ಜರುಗಿಸುವರು

ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಆಧಿಪತ್ಯಗಳಲ್ಲಿ ಕಳ್ಳರು ಮೂಲ್ಯಾ ನಗರದ ಪೋಸ್ಟು ಆಫೀಸನ್ನು ನುಗ್ಗಿ ಪೋಸ್ಟು ಮಾಸ್ಟರನ್ನೂ ಒಬ್ಬ ಆಳನ್ನೂ ಹೊಡೆದು ಕೊಂದುಹಾಕಿ, ಹಣಕಾಸನ್ನೂ ಎತ್ತಿಕೊಂಡು ಹೋದರಷ್ಟೆ ಇದನ್ನು ಪತ್ತೆಮಾಡಿಕೊಟ್ಟವರಿಗೆ ೫,೦೦೦ ರೂಪಾಯಿ ಸಾವು ಕೊಡುವೆವೆಂದು ಸರ್ಕಾರದವರು ಪ್ರಕಟಿಸಿದಾರೆ

ನೇಪಾಳ ಸಂಸ್ಥಾನದ ರಾಜಧಾನಿಯಾದ ಖಾಟ್ಮಂಡೂ ಪಟ್ಟಣದಲ್ಲಿ ಮಂತ್ರಿಯವರ ಐದನೇ ಕುಮಾರರಾದ ಜನರಲ್ ಕೃಷ್ಣಷಂಷೇರ್‌ಜಂಗ್‌ಯವರಿಗೆ ಮಹಾರಾಜಾಧಿರಾಜರವರ ಮೂರನೇ ಕುಮಾರ್ತೆಯನ್ನು ಕೊಟ್ಟು ಕಳೆದ ನವಂಬರ್ ತಾ ೨೬ ೨೯ ರಲ್ಲಿ ವಿವಾಹವು ಬಹು ಅಟ್ಟಹಾಸವಾಗಿ ನೆರವೇರಿತೆಂದು ತಂತಿ ವರ್ತಮಾನ ಬಂದಿದೆ

ಕಳೆದ ೪ನೇ ತಾ ಶನಿವಾರಕ್ಕೆ ಅಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೪,೧೦೩ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು ಬೇರೆ ಬೇರೆ ಆಧಿಪತ್ಯಗಳ ಸಂಖ್ಯೆ ಎಷ್ಟೆಂದರೆ,—ಬೊಂಬಾಯಿ ೬೭೭, ಮದರಾಸ್ ೭೭, ಬಂಗಾಳಾ ೧೧೫, ಸಂಯುಕ್ತ ಆಧಿಪತ್ಯಗಳು ೧,೩೩೫, ಪಂಜಾಬ್ ೭೩೧, ರಾಜಪುಟಾನಾ ೨೪೪

ದರ್ಭಾಂಗದಲ್ಲಿ ರಾಂಪುಲಂ ಠಾಕೂರ್ ಎಂಬವನು ಮಹಾರಾಜರಿಗೆ ಮೆ|| ಜಿ ಹೇರಿ ಎಂಬೊಬ್ಬ ನೌಕರನು ಬಹಳ ಹಣವನ್ನು ತಿಂದುಬಿಟ್ಟನೆಂದು ಹೆಸರಿಲ್ಲದ ಅರ್ಜಿ ಬರೆದನು ವಿಚಾರಣೆಯಲ್ಲಿ ಅದು ರುಜುವಾತಾಗಲಿಲ್ಲ ಠಾಕೂರನಿಗೆ ೩೦೦ ರೂಪಾಯಿ ಜುಲ್ಮಾನೆ ಆಯಿತು ಈಗ ಅವನು ಅದರ ಮೇಲೆ ಅಪೀಲ್ ಮಾಡಿಕೊಂಡಿರುತ್ತಾನೆ

ಲಾಹೋರ್ ಪಟ್ಟಣದಲ್ಲಿ ಪ್ರಕಟವಾಗುವ „ವತನ" ಎಂಬ ಪತ್ರಿಕೆಯ ಎಡಿಟರಾದ ಮೌಲ್ವಿ ಮಹಮದ್ ಇನ್ಷಾ ಅಲ್ಲಾಯವರು ಹೆಜಾಸ್ ರೈಲ್ವೆಯ ಫಂಡಿಗೆ ತನ್ನ ಪತ್ರಿಕೆಯ ಮೂಲಕ ಚಂದಾ ಹಣವನ್ನು ಎತ್ತಿ ತುರ್ಕಿ ಸುಲ್ತಾನರವರಿಗೆ ಕಳುಹಿಸುತ್ತಾ ಬಂದಿದಾರೆ ಇದುವರೆಗೆ ಅವರು ಕಳುಹಿಸಿರುವ ಹಣ ೯೬,೬೦೫ ರೂಪಾಯಿಗಳೆಂದೂ ಪ್ರಕಟವಾಗಿದೆ

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಗೋರಖಪುರ ಡಿಸ್ಟ್ರಿಕ್ಟಿನಲ್ಲಿ ಗೋರಾ ಎಂಬ ಊರಿನೊಳಗೆ ೨೦ ಮಂದಿ ಕಳ್ಳರು ಒಬ್ಬ ಹಿಂದೂ ವಿಧವೆಯ ಮನೆಗೆ ನುಗ್ಗಿ, ಆಕೆಯನ್ನು ಬಹು ತರವಾಗಿ ಕ್ರೂರ ಹಿಂಸೆಗೆ ಗುರಿಮಾಡಿ, ಬೆಟ್ಟಿಗೆ ಬೀಗದ ಕೈಗಳನ್ನು ಕಿತ್ತುಕೊಂಡು, ಆಸ್ತಿಯನ್ನೆಲ್ಲಾ ಹೊತ್ತುಕೊಂಡು ಹೋದರೆಂದೂ ಪೋಲೀಸಿನವರು ಪತ್ತೆಹಚ್ಚುವುದು ನಡೆಸುತ್ತಿದಾರೆಂದೂ ತಿಳಿದುಬಂದಿದೆ

ಗಂಜಾಂ ಜಿಲ್ಲೆಗೆ ಸೇರಿದ ಕುಸುಬಾಟಾ ಎಂಬ ಪ್ರಾಂತದಲ್ಲಿ ಒಂದು ಹುಲಿಯು ಸಂಚರಿಸುತ್ತಾ ಕಳೆದ ಮೂರುವರುಷಗಳಲ್ಲಿ ೧೫೦ ಜನರನ್ನು ಕೊಂದು ತಿಂದುಹಾಕಿ, ಬಹು ಭೀತಿಯನ್ನುಂಟುಮಾಡಿ, ಯಾರಿಗೂ ಸಿಕ್ಕದೆ ಇರುತ್ತದೆ ಇದನ್ನು ಸಂಧಿಸಿ ಶಿಕಾರಿ ಮಾಡುವವರಿಗೆ ೧೦೦೦ ರೂಪಾಯಿ ಇನಾಮು ಕೊಡುತ್ತೇವೆಂದು ಈಗ ಗವರ್ನ್‌ಮೆಂಟಿನವರು ಇಸ್ತಿಹಾರು ಹಾಕಿಸಿರುತ್ತಾರೆ

ಬಂಗಾಳಾ ಆಧಿಪತ್ಯಕ್ಕೆ ಸೇರಿದ ತಿತ್ತಿಘರ್ ಎಂಬ ಊರಿನಲ್ಲಿ ಷೇಕ್ ಇಸ್ಮೈಲ್ ಎಂಬ ಒಬ್ಬ ಮಹಮದೀಯನು ತನ್ನ ಮನೆಯೊಳಗೆ ಅಚ್ಚುಗಳನ್ನಿಟ್ಟುಕೊಂಡು ಗುಟ್ಟಾಗಿ ಅರ್ಧರೂಪಾಯಿಗಳನ್ನು ತಯಾರುಮಾಡುತ್ತಿದ್ದನು ಪೋಲೀಸಿನವರು ಅವನಿಗೆ ತಿಳಿಯದಂತೆ ಹೋಗಿ ಅವನು ಕೆಲಸಮಾಡುತ್ತಿದ್ದಾಗ ಅವನನ್ನೂ ಅವನ ಸಹಪಾಟಿಗಳನ್ನೂ ಅಲ್ಲಿ ಸಿಕ್ಕಿದ ಖೋಟಾ ನಾಣ್ಯ ಅಚ್ಚು ಮುಂತಾದ್ದನ್ನೂ ದಸ್ತಗಿರಿಮಾಡಿರುತ್ತಾರೆ

ಇಂದೋರ್ ಸಂಸ್ಥಾನದ ರಾಜಧಾನಿಯಲ್ಲಿ ನೂಲುವ ಮತ್ತು ನೆಯುವ ಒಂದು ಹೊಸ ಕಾರ್ಖಾನೆಯು ಕಳೆದ ವಾರ ಸ್ಥಾಪಿಸಲ್ಪಟ್ಟಿತು ಹೋಲ್ಕಾರ್ ಮಹಾರಾಜರವರು ಅದನ್ನು ಪ್ರತಿಷ್ಠೆ ಮಾಡಿದರು ಈ ಕಾರ್ಖಾನೆಯಲ್ಲಿ ೨೨,೦೦೦ ನೂಲುವ ಯಂತ್ರಗಳೂ, ೫೦೮ ನೆಯುವ ಮಗ್ಗಗಳೂ ಇರುತ್ತವೆ ಈಗಿನ ಕಾಲಕ್ಕೆ ತಕ್ಕ ಹೊಸ ಯಂತ್ರಗಳೆಲ್ಲಾ ಈ ಕಾರ್ಖಾನೆಯಲ್ಲಿ ತಂದಿಟ್ಟು ನೆಯಿಗೆ ಕೆಸಲನ್ನು ಪ್ರಾರಂಭಿಸಿರುತ್ತಾರೆ

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ತಮ್ಮ ಹುಟ್ಟುವಳಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಕೆಲವು ಹಣವನ್ನು ವಿನಿಯೋಗಿಸುತ್ತಾರೆ ಈಗ ಆ ಪಟ್ಟಣದಲ್ಲಿ ಎಲ್ಲಾ ಮಕ್ಕಳಿಗೂ ಮಾಫಿಯಾಗಿ ಬಾಲವಿದ್ಯೆಯನ್ನೂ ಅಲ್ಪ ಸ್ವಲ್ಪ ಕಸಬಿನ ವಿದ್ಯೆಯನ್ನೂ ಕಲಿಸುವುದಕ್ಕೆ ಅದೇ ಹಣವನ್ನು ಖರ್ಚುಮಾಡಬೇಕೆಂದು ಯೋಚನೆಮಾಡುತ್ತಿರುವರು ಇದಕ್ಕಾಗಿ ಕೆಲವು ಮೆಂಬರುಗಳು ನೇಮಕವಾಗಿ ಏರ್ಪಾಡುಗಳನ್ನೂ ಚರ್ಚೆಮಾಡುತ್ತಿದಾರೆ

ಅಹಮದಾಬಾದಿನಲ್ಲಿ ವೈಸ್‌ರಾಯಿಯವರಮೇಲೆ ಸಿಡಿಮದ್ದಿನ ಗುಂಡನ್ನು ಎಸೆದವರು ಯಾರೆಂಬುವುದು ಇನ್ನೂ ಪತ್ತೆ ಆಗಲಿಲ್ಲ ಪೋಲೀಸಿನವರು ಅನುಮಾನದಮೇಲೆ ದಸ್ತಗಿರಿಮಾಡಿದ್ದವರನ್ನೆಲ್ಲಾ ತನಿಖೆಮಾಡಿ, ಬಿಟ್ಟುಬಿಟ್ಟರು ಈಗ ಈ ಕೃತ್ಯ ನಡೆಸಿದವರಿಂಥಾವರೆಂದು ಗೊತ್ತಾಗಿ ವರ್ತಮಾನ ತಿಳಿಸುವವರಿಗೆ ೫,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಅಹಮದಾಬಾದಿನ ಕಲೆಕ್ಟರ್ ಮೆ, ಸ್ಕೀರ್ ಸಾಹೇಬರು ಇಸ್ತಿಹಾರು ಹಾಕಿಸಿರುತ್ತಾರೆ

ಕಳೆದ ಆಗಸ್ಟ್ ತಿಂಗಳಲ್ಲಿ ಲಕ್ನೋ ಪಟ್ಟಣದ ಬಳಿ ಇರುವ ಸಹಾಬಾದಿನಲ್ಲಿ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರೂ, ಒಬ್ಬ ಕಾನ್‌ಸ್ಟೆಬಲೂ, ಇನ್‌ಸ್ಪೆಕ್ಟರ ಜವಾನನೂ ಕೊಲ್ಲಲ್ಪಟ್ಟರು ಏಳು ಜನರು ಸೇರಿ ಈ ಕೃತ್ಯವನ್ನು ನಡಿಸಿದವರೆಂದು ಗೊತ್ತಾಯಿತು ಅವರು ಆ ಮೂರು ಜನರನ್ನೂ ಕೊಂದದ್ದುಂಟೆಂದು ಒಪ್ಪಿಕೊಂಡರು ಕಳೆದ ವಾರ ಹೈ ಕೋರ್ಟಿನ ಜಡ್ಜಮೆಂಟಿನ ಪ್ರಕಾರ ಆ ಏಳು ಮಂದಿಯನ್ನೂ ಹಾರ್ದೋಯಿ ಎಂಬ ಸ್ಟೇಷನ್ ಬಂದೀಖಾನೆಯಲ್ಲಿ ಗಲ್ಲಿಗೆ ಹಾಕಿದರು

ಅಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಸರ್ದಾರ್ ಹಯಾತ್ ಉಲ್ಲಾಖಾನ್ ಯವರಿಗೆ ಕಳೆದ ವಾರ ವಿವಾಹ ಜರಗಿತು ಉತ್ಸವಗಳನ್ನೆಲ್ಲಾ ತೀರಿಸಿಕೊಂಡು ಅಮೀರರವರು ಅಲ್ಲಿಂದ ಜಲಾಲಾಬಾದಿಗೆ ಬಂದಿರುತ್ತಾರೆ ಖೋಸ್ತ್ ಎಂಬ ಪ್ರಾಂತ್ಯದಲ್ಲಿ ದಂಗೇ ಕೃತ್ಯಗಳನ್ನು ಗವರ್ನರವರು ಅರಗಿ ೫೦ ಮಂದಿಯನ್ನು ಹಿಡಿದು ಕಾಬೂಲಿಗೆ ಕಳುಹಿಸಿದರೆಂದೂ, ಅನೇಕ ಪ್ರಜೆಗಳು ಅಲ್ಲಿಂದ ಕುರಂ ಎಂಬ ಕಡೆಗೆ ಪ್ರಾಂತ್ಯಕ್ಕೆ ಬಂದಿರುತ್ತಾರೆಂದೂ ತಿಳಿದುಬಂದಿದೆ

ಹಿಂದುಸ್ಥಾನದಲ್ಲಿ ನ್ಯಾಯಾಧೀಶರೆಂಬ ಹೆಸರುವಾಸಿಯನ್ನು ಪಡೆದಿರುವ ಮೆ| ಸಯ್ಯದ್ ಅಮೀರಲ್ಲಿ ಎಂಬ ಮಹಮ್ಮದೀಯರನ್ನು ಇಂಗ್ಲೆಂಡಿನ ಚಕ್ರವರ್ತಿ ಸಾರ್ವಭೌಮರವರು ಪ್ರಿವಿ ಕೌನ್ಸಿಲ್ ಎಂಬ ನ್ಯಾಯಾಧೀಶರ ಸಭೆಯಲ್ಲಿ ಒಬ್ಬರನ್ನಾಗಿ ನೇಮಕಮಾಡಿಕೊಂಡರು ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಮಹಮದೀಯರು ಸಭೆಗಳನ್ನು ಮಾಡಿ ಚಕ್ರವರ್ತಿ ಸಾರ್ವಭೌಮರವರ ಗವರ್ನ್‌ಮೆಂಟಿಗೆ ತಮ್ಮ ಕೃತಜ್ಞತೆಯನ್ನೂ ಸಂತೋಷವನ್ನೂ ತಂತಿ ಮೂಲಕ ಅರಿಕೆ ಮಾಡಿಕೊಂಡಿರುತ್ತಾರೆ

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಯಿಂಗ್‌ಮಯಾ ಎಂಬ ನದಿಯಲ್ಲಿ ನಾಲ್ವತ್ತಾರು ಜನರು ಒಂದು ದೋಣಿಯಲ್ಲಿ ಕುಳಿತು ಹೋಗುತ್ತಿರುವಲ್ಲಿ ದಡದ ಮೇಲೆ ಒಂದು ಗ್ರಾಮದಲ್ಲಿ ನಡೆಯುತ್ತಿದ್ದ ಉತ್ಸವವನ್ನು ನೋಡುವುದಕ್ಕಾಗಿ ಎಲ್ಲರೂ ದೋಣಿಯ ಒಂದುಕಡೆಗೆ ಹೋಗಿ ಸೇರಿಕೊಂಡದ್ದರಿಂದ ದೋಣಿಯು ಪಲ್ಟಿಯಾಗಿ ನದಿಯಲ್ಲಿ ಮುಳುಗಿಹೋಯಿತು ಇಪ್ಪತ್ತೆಂಟು ಜನರು ಮೃತಪಟ್ಟರೆಂದೂ ಈ ಪೈಕಿ ಹದಿನೆಂಟು ಹೆಣಗಳು ಸಿಕ್ಕಿರುವವೆಂದೂ ತಂತಿವರ್ತಮಾನ ಬಂದಿದೆ

ಕಳೆದ ಗುರುವಾರ ರಾತ್ರಿ ವಿಜಯನಗರದ ರಾಜರವರು ಮದರಾಸ್ ಪಟ್ಟಣದಲ್ಲಿ ಮೋಟಾರ್ ಗಾಡಿಯಲ್ಲಿ ಕುಳಿತು ವೈಸ್‌ರಾಯಿಯವರ ಭೇಟಿಗಾಗಿ ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ದಯಮಾಡುತ್ತಿದ್ದಾಗ ಅವರ ಮೋಟಾರ್ ಗಾಡಿಯು ಬಂಗಲೆಯ ಬಾಗಿಲಿಗೆ ಬಡಿದು ರಾಜರಿಗೆ ಸ್ವಲ್ಪ ಗಾಯವಾಯಿತು ಅವರು ಅದನ್ನು ಲಕ್ಷ್ಯಮಾಡದೆ ಹಾಗೇ ಹೋಗಿ ವೈಸ್‌ರಾಯಿಯವರ ಭೇಟಿ ಮಾಡಿಕೊಂಡು, ವಾಪಸು ಹೋಗುತ್ತಾ ದಾರಿಯಲ್ಲಿ ಒಂದು ಔಷದದ ಅಂಗಡಿಗೆ ನುಗ್ಗಿ ಗಾಯಕ್ಕೆ ಚಿಕಿತ್ಸೆ ಮಾಡಿಸಿಕೊಂಡು ತಮ್ಮ ಬಂಗಲೆಯನ್ನು ಸೇರಿದರು

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಸಹಿತ ಈಚೆಗೆ ಅಹಮದಾಬಾದಿನಲ್ಲಿ ಸವಾರಿ ದಯಮಾಡುತ್ತಿದ್ದಾಗ ಕ್ರೂರಾತ್ಮರಾಗಳ್ಯಾರೋ ಸಿಡಿಮದ್ದಿನ ಗುಂಡು ಅವರ ಮೇಲೆ ಎಸೆದರಷ್ಟೆ ಈ ಗುಂಡು ದೂರಸ್ಥಳದಲ್ಲಿ ಹೋಗಿ ಬಿದ್ದು ಅಲ್ಲಿ ಮಲಗಿದ್ದ ಒಬ್ಬ ಬೀದಿ ಗುಡಿಸುವವನ ಹತ್ತಿರ ಒಡೆದು ಅವನ ಕೈಯನ್ನು ಪೂರಾ ಜಖಂ ಮಾಡಿತು ವೈಸ್‌ರಾಯಿ ಪ್ರಭುಗಳು ಈಚೆಗೆ ಅವನ ಪೂರ್ವೋತ್ತರವನ್ನು ವಿಚಾರಣೆ ಮಾಡಿ, ದಯಾರಸಪೂರ್ವಕವಾಗಿ ಅವನಿಗಿದ್ದ ಸಾಲವನ್ನೆಲ್ಲಾ ಹರಿಸಿದ್ದಲ್ಲದೆ ಅವನ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟದ್ದಾರೆಂದು ತಿಳಿದು ಬಂದಿದೆ

ಸಂಯುಕ್ತ ಆಧಿಪತ್ಯಗಳ ಲೆಫ್ಟಿನೆಂಟ್ ಗವರ್ನರವರಾದ ಸರ್ ಜಾನ್ ಹ್ಯೂಯಿಟ್ ಯವರು ಕಳೆದ ವಾರ ಕಾಶೀ ಪಟ್ಟಣಕ್ಕೆ ದಯಮಾಡಿದ್ದಾಗ ಅಲ್ಲಿನ ಕೆಲವು ಪ್ರಜಾಪ್ರತಿನಿಧಿಗಳು ಅವರನ್ನು ಭೇಟಿಮಾಡಿ, ಹರ್ಷ ಚಂದ್ರ ಸ್ಕೂಲ್ ಕಟ್ಟಡವನ್ನು ಹೊಸದಾಗಿ ಕಟ್ಟಿಸಿಕೊಡಬೇಕೆಂದು ಕೇಳಿಕೊಂಡರು ಈ ಸ್ಕೂಲು ಕಳೆದ ೧೮೯೯ನೇ ಇಸವಿಯಲ್ಲಿ ಪ್ರಾರಂಭವಾಗಿ ಅಭಿವೃದ್ಧಿಗೆ ಬಂದಿರುತ್ತದೆ ಲೆಫ್ಟಿನೆಂಟ್ ಗವರ್ನರವರು ಹೊಸ ಕಟ್ಟಡದ ಫಂಡಿಗೆ ಪ್ರಜೆಗಳು ೨೦ ಸಾವಿರ ರೂಪಾಯಿ ಕೂಡಿ ತೀರಿಸಿದರೆ ಸರ್ಕಾರದಿಂದ ೨೦ ಸಾವಿರ ರೂಪಾಯಿ ಕೊಡಿಸುತ್ತೇವೆಂದು ಅಪ್ಪಣೆ ಕೊಡಿಸಿದರು

ಬೊಂಬಾಯಿ ಪಟ್ಟಣದಲ್ಲಿ ಮಹಲು ಮಹರ್ ಫೊವರ್ ಎಂಬೊಬ್ಬ ಹೊಗಸು ೧೧ ವರುಷದ ಸುಂದರಿ ಎಂಬ ಹುಡುಗಿಯನ್ನು ಒಂದು ಕರಾರಿಗೆ ಮದುವೆ ಮಾಡಿ, ತರುವಾಯ ಆ ಹುಡುಗಿ ದೇಹ ವಿಕ್ರಯದಿಂದ ಜೀವನ ಮಾಡುವಂತೆ ಏರ್ಪಾಡು ಮಾಡಿದಳು ಅವಳನ್ನು ಪೋಲೀಸಿನವರು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಪೊಮಾನಳಿಗೆ ಮ್ಯಾಜಿಸ್ಟ್ರೇಟರು ನಾಲ್ಕು ತಿಂಗಳು ಕಠಿಣ ಸಜಾ ವಿಧಿಸಿದರು ಅವಳಿಗೆ ಸಹಾಯಮಾಡಿದ ಇನ್ನಿಬ್ಬರು ಹೆಂಗಸರು ತಾವು ಆ ದಿನ ಊಟಕ್ಕೆ ಮಾತ್ರ ಅವಳ ಮನೆಗೆ ಹೋಗಿದ್ದೆವೆಂದು ಹೇಳಿದ್ದರಿಂದ ಇವರಿಬ್ಬರನ್ನೂ ಖುಲಾಸ್ ಮಾಡಿಬಿಟ್ಟರು

ಹಿಂದುಸ್ಥಾನದ ದೇಶೀಯ ದೊಡ್ಡ ಮನುಷ್ಯರ ಪೈಕಿ ಮೆ| ಕೃಷ್ಣ ಗೋವಿಂದ ಗುಪ್ತರವರನ್ನೂ ಮೆ|| ಸರ್ ಸಯ್ಯದ್ ಬಿಲ್ಗ್ರಾಮಿಯವರನ್ನೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲೆಯವರು ಕಳೆದ ವರುಷ ತಮ್ಮ ಆಲೋಚನಾ ಸಭೆಯ ಮೆಂಬರುಗಳಾಗಿ ನೇಮಿಸಿಕೊಂಡಿದ್ದರಷ್ಟೆ ಮೆ|| ಬಿಲ್ಗ್ರಾಮಿಯವರು ವಿಲಾಯತಿಯ ಕೈಗ್ ಹವಾವನ್ನು ತಡೆಯಲಾರದೆ ಕಳೆದ ತಿಂಗಳಲ್ಲಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಹಿಂದುಸ್ಥಾನಕ್ಕೆ ಬಂದುಬಿಟ್ಟರು ಮೆ|| ಗುಪ್ತರವರು ಕೆಲವುಕಾಲದ ಮಟ್ಟಿಗೆ ಇದ್ದು ಹೋಗುವುದಕ್ಕಾಗಿ ಈಗ ಹಿಂದುಸ್ಥಾನಕ್ಕೆ ಬಂದಿರುತ್ತಾರೆ

ಬೊಂಬಾಯಿ ಆಧಿಪತ್ಯದ ಗವರ್ನ್‌ಮೆಂಟಿನವರು ಮುಂದೆ ಹೇಳುವ ಪಾಠಶಾಲೆಗಳಲ್ಲಿ ವಿದ್ಯಾ ಬೋಧನಾ ಕ್ರಮಗಳು ತೃಪ್ತಿಕರವಾಗಿಲ್ಲವೆಂದೂ, ಅವುಗಳಲ್ಲಿ ತರಪೇತಾಗುವ ಬಾಲಕರನ್ನು ಸರ್ಕಾರಿ ಪಾಠಶಾಲೆಗಳಿಗಾಗಲಿ ಸರ್ಕಾರದಿಂದ ಗ್ರ್ಯಾಂಟು ಪಡೆಯುವ ಪಾಠಶಾಲೆಗಳಿಗಾಗಲಿ ಮುಂದಿನ ಜನವರಿಯಿಂದ ಸೇರಿಸಿಕೊಳ್ಳಕೂಡದೆಂದೂ ಹುಕುಂ ಕೊಟ್ಟಿರುತ್ತಾರೆ ಆ ಪಾಠಶಾಲೆಗಳ್ಯಾವವೆಂದರೆ, (೧) ತಲೆಗಾಂವ್‌ನಲ್ಲಿರುವ ಸಮರ್ಥ ವಿದ್ಯಾಲಯ, (೨) ಪೂನೆಯಲ್ಲಿರುವ ಮಹಾರಾಷ್ಟ್ರ ವಿದ್ಯಾಲಯ, (೩) ಧಾರಾಗಾಂವ್‌ನಲ್ಲಿರುವ ಮುಸ್ತಿಫಂದಾವರಿಲ್ ಶಾಲಾ (೪) ಈರಂಡೋಲಿನಲ್ಲಿರುವ ಏರಿಪತ ಎ ವಿ ಸ್ಕೂಲು

ಹಿಂದುಸ್ಥಾನದ ಪ್ರಜೆಗಳಿಗೆ ದಕ್ಷಿಣ ಆಫ್ರಿಕಾದಲ್ಲಿ ಗವರ್ನ್‌ಮೆಂಟಿನವರು ಪ್ರಜಾಸ್ವಾತಂತ್ರ್ಯಗಳನ್ನೂ ಹಕ್ಕುಗಳನ್ನೂ ತಪ್ಪಿಸಿ, ಅವರನ್ನು ಕ್ರೂರತರವಾಗಿ ನಡಿಸುತ್ತಿದಾರೆಂದೂ ಇದನ್ನು ವಿಲಾಯತಿ ಗವರ್ನ್‌ಮೆಂಟಿನಲ್ಲಿ ಅರಿಕೆಮಾಡಿಕೊಂಡು, ದಕ್ಷಿಣ ಆಫ್ರಿಕದಲ್ಲಿರುವ ಹಿಂದುಸ್ಥಾನದ ಪ್ರಜೆಗಳ ಪಕ್ಷವನ್ನು ಹಿಡಿದು ಹೋರಾಡುವುದು ಆವಶ್ಯಕವೆಂದೂ ಮೆ|| ಪೋಲಕ್ ಎಂಬವರು ಹಿಂದುಸ್ಥಾನದಲ್ಲಿ ಪ್ರಕಟಮಾಡಿ ಈ ಕೆಲಸಗಳಿಗೆ ಒಂದು ಲಕ್ಷ ರೂಪಾಯಿ ಫಂಡು ಬೇಕಾಗಿದೆ ಎಂದು ಕೇಳಿದಾರೆ ಈ ಫಂಡಿಗೆ ಬೊಂಬಾಯಿನಲ್ಲಿರುವ ಮೆ ತಾತಾ ಎಂಬ ಪಾರ್ಸಿ ಸಾಹುಕಾರರು ೨೫,೦೦೦ ರೂಪಾಯಿ ಕೊಟ್ಟರು

ಬರೋಡಾ ಸಂಸ್ಥಾನದ ರೆವಿನ್ಯೂ ಇಲಾಖೆಯ ಮಂತ್ರಿಯವರಾಗಿದ್ದ ಮೆ| ಆರ್ ಸಿ ದತ್ತರವರು ಕಳೆದ ತಿಂಗಳ ೩೦ ನೇ ತಾರೀಖಿನ ದಿನ ಬರೋಡೆಯಲ್ಲಿ ಕಾಲವಾದರೆಂದು ತಿಳಿದುಬಂದಿದೆ ಇವರಿಗೆ ೬೧ ವರುಷ ವಯಸ್ಸಾಗಿತ್ತು ಇವರು ಬಂಗಾಳಾದಲ್ಲಿ ಹುಟ್ಟಿ ವಿದ್ಯೆ ಕಲಿತು ಇಂಗ್ಲಾಂಡಿಗೆ ಹೋಗಿ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಗವರ್ನ್‌ಮೆಂಟ್ ನೌಕರಿಯನ್ನು ಮಾಡಿ, ಸಿ ಐ ಇ ಎಂಬ ಬಿರುದನ್ನು ಸಂಪಾದಿಸಿಕೊಂಡಿದ್ದರು ಹಿಂದುಸ್ಥಾನದ ಶ್ರೇಯೋಭಿವೃದ್ಧಿ ಎಂಬ ವಿಷಯ ಇವರು ಅನೇಕ ಪುಸ್ತಕಗಳನ್ನು ಬರೆದು ಇರುತ್ತಾರೆ ಇಂಥಾ ದೇಶಭಕ್ತರು ಕಾಲವಾದದ್ದಕ್ಕಾಗಿ ಹಿಂದುಸ್ಥಾನದವರೆಲ್ಲಾ ವಿಷಾದಪಡುವುದು ಸಹಜವಾಗಿರುತ್ತದೆ

ಸುಮಾರು ೧೦೦ ಜನರಿರುವ ಒಂದು ಗುಂಪಿನ ಕಳ್ಳರು ಕೆಲವು ವರುಷಗಳಿಂದ ಬೊಂಬಾಯಿ ಆಧಿಪತ್ಯದಲ್ಲೂ ಮದರಾಸ್ ಪ್ರಾಂತ್ಯದಲ್ಲೂ ರೈಲ್ವೆ ಗಾಡಿಗಳಲ್ಲಿ ನುಗ್ಗಿ ಪ್ರಯಾಣಿಕರಂತೆ ವೇಷಹಾಕಿಕೊಂಡು ಬಹು ಉಪಾಯದಿಂದ ಪೆಟ್ಟಿಗೆಗಳನ್ನು ಕಳೆದು ಪ್ರಜೆಗಳ ಸ್ವತ್ತುಗಳನ್ನು ಅಪಹರಿಸುತ್ತಾ ಪ್ರಜಾಕಂಟಕರಾಗಿದ್ದರು ಇವರಲ್ಲಿ ಮುಲ್ತಾನಿ ಹಿಂದುಗಳೂ ಪಂಜಾಬಿ ಮುಸಲ್ಮಾನರೂ ಸೇರಿರುತ್ತಾರೆ ಕಳೆದ ವಾರ ಪೂನಾ ಪೋಲೀಸಿನವರು ಈ ಗುಂಪಿನಲ್ಲಿ ಮುಖಂಡರಾಗಿದ್ದ ಇಬ್ಬರನ್ನೂ ಒಂಬತ್ತು ಮಂದಿ ಹಿಂಬಾಲಕರನ್ನೂ ಹಿಡಿದಿದಾರೆ ಈ ಪೈಕಿ ಒಬ್ಬನು ಆ ಕಳ್ಳರ ಗುಂಪಿಗೆ ಸೇರಿದವರ ಹೆಸರುಗಳನ್ನೂ ಅವರಿರುವ ಸ್ಥಳಗಳನ್ನೂ ಕಳುವು ಮಾಡತಕ್ಕ ಕ್ರಮಗಳನ್ನೂ ತಿಳಿಸಿರುತ್ತಾನೆ

ಕಲ್ಕತ್ತೆಯಿಂದ ವಿದ್ಯಾಭ್ಯಾಸಂಗ ಮಾಡುವುದಕ್ಕಾಗಿ ಲಂಡನ್ ಪಟ್ಟಣಕ್ಕೆ ಹೋಗಿರುವ ವಾಸುದೇವಭಟ್ಟಾಚಾರ್ಯನೆಂಬ ಯೌವನಸ್ಥನು ಮಿಸ್ ಇ ಮಾರ್ಗನ್ ಎಂಬ ಇಂಗ್ಲಿಷ್ ಯುವತಿಯನ್ನು ಮದುವೆ ಮಾಡಿಕೊಂಡನು ಆಕೆ ಹಿಂದೂ ಮತವನ್ನು ಅವಲಂಬಿಸಿದಳು ಮೆ ಬಿಪಿನ್ ಚಂದ್ರಪಾಲ್‌ಯವರು ಪುರೋಹಿತರಾಗಿ ನಿಂತು ವಿವಾಹವನ್ನು ಮಾಡಿದರು ಆಕೆ ಕಲ್ಕತ್ತೆಯಲ್ಲಿರುವ ತನ್ನ ಮಾವಂದಿರಾದ ಪಂಡಿತ ಸರೋದಪ್ರಸಾದ ಭಟ್ಟಾಚಾರ್ಯರೆಂಬ ವೈದಿಕ ಬ್ರಾಹ್ಮಣರಿಗೆ ವಿಲಾಯತಿಯಿಂದ ಒಂದು ಕಾಗದವನ್ನು ಬರೆದು,—ನಾನು ಹಿಂದೂ ಮತವನ್ನವಲಂಭಿಸಿ ನಿಮ್ಮ ಕುಮಾರನನ್ನು ಮದುವೆ ಮಾಡಿಕೊಂಡಿದ್ದೇನೆ ನನ್ನ ಬಳಿ ೫೦,೦೦೦ ರೂಪಾಯಿನ ಆಸ್ತಿ ಇದೆ ಈಗ ನಿಮ್ಮ ಕುಮಾರನನ್ನು ಚರ್ಮದ ಕಸಬನ್ನು ಕಲಿತು ಬರುವುದಕ್ಕಾಗಿ ಅಮೇರಿಕಕ್ಕೆ ಕಳುಹಿಸಿದ್ದೇನೆ ಎಂಬದಾಗಿ ತಿಳಿಸಿರುತ್ತಾಳೆ

ಮೌಲ್ವಿ ಬಜಾರ್ ಎಂಬ ಸ್ಥಳದಲ್ಲಿ ಚರಣರಾಮನೆಂಬೊಬ್ಬ ಸಾಕ್ಷಿಗಾರನು ಮ್ಯಾಜಿಸ್ಟ್ರೇಟರಿಗೆ ಸಾಕ್ಷಿ ಹೇಳುತ್ತಾ ಅಡಿಕೆ ಜಗಿಯುತ್ತಿದ್ದನು ಮ್ಯಾಜಿಸ್ಟ್ರೇಟರು ಅವನಿಗೆ—ನಿನ್ನ ಕೈಯಿಂದ ನಿನ್ನ ಕೆನ್ನೆಗೆ ಹೊಡೆದುಕೋ ಎಂದು ಹೇಳಿದ್ದನ್ನು ಅವನು ಲಕ್ಷ್ಯಮಾಡಲಿಲ್ಲ ಒಡನೆ ಮ್ಯಾಜಿಸ್ಟ್ರೇಟರು ಇಬ್ಬರು ಜವಾನರನ್ನು ಕರೆದು ಅವರ ಕೈಯಿಂದ ಅವನ ಕೆನ್ನೆಗೆ ಹೊಡಿಸಿದರು ಚರಣರಾಮನು ಸೆಷನ್ಸ್ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರ ಮೇಲೂ ಆ ಜವಾನರ ಮೇಲೂ ಮೊಕದ್ದಮೆ ತಂದನು ಸೆಷನ್ಸ್ ಜಡ್ಜರು ಅವನ ಫಿರ್ಯಾದನ್ನು ವಜಾ ಮಾಡಿದರು ಅದರ ಮೇಲೆ ಅವನು ಕಲ್ಕತ್ತಾ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ ಕೋರ್ಟಿನಲ್ಲಿ ಅಡಿಕೆ ಹಾಕಿಕೊಳ್ಳುವುದು ನ್ಯಾಯವಾದದ್ದಲ್ಲವೆಂದು ಹೇಳಿ ಅಪೀಲನ್ನು ವಜಾಮಾಡಿಬಿಟ್ಟರು

ಲಾಹೋರ್ ಪಟ್ಟಣದಲ್ಲಿ ಕಳೆದ ೧೧ನೇ ತಾ ಶನಿವಾರ ಹಿಂದುಸ್ಥಾನದ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಮಹಾ ಪ್ರದರ್ಶನಶಾಲೆಯನ್ನು ಪ್ರಾರಂಭ ಮಾಡಿದರು ಆ ಆಧಿಪತ್ಯಕ್ಕೆ ಸೇರಿರುವ ಮಹಾರಾಜರುಗಳು, ರಾಜರು, ನವಾಬರು, ಭಾರೀ ಜಹಗೀರ್‌ದಾರರೇ ಮೊದಲಾದವರೆಲ್ಲಾ ಈ ಪ್ರದರ್ಶ

ಕ್ಕೆ ಸಹಾಯ ಮಾಡಿ ಪ್ರೋತ್ಸಾಹಪಡಿಸಿದ್ದಲ್ಲದೆ ಈಗ ಅವರೆಲ್ಲಾ ಆ ಪಟ್ಟಣದಲ್ಲಿ ಹಾಜರಾಗಿರುತ್ತಾರೆ ಸರ್ ಪ್ರತುಲಚಂದ್ರ ಚಟರ್ಜಿಯವರು ಪ್ರದರ್ಶನಕ್ಕೆ ಸರ್ಕಾರದಿಂದಲೂ ದೇಶೀಯ ಪ್ರಭಾವಶಾಲಿಗಳಿಂದಲೂ ಲಭಿಸಿದ ಸಹಾಯ ಪ್ರೋತ್ಸಾಹಗಳನ್ನು ವಿವರಿಸಿ ವಂದನೆಗಳನ್ನು ಕೊಡುತ್ತಿದ್ದರು ಮಹಾರಾಜರೇ ಮೊದಲಾದ ದೇಶೀಯ ರಾಜರುಗಳು ಶ್ರೇಷ್ಠವಾದ ಉಡುಪು ಆಭರಣಾದಿಗಳನ್ನು ಧರಿಸಿ, ಅಲಂಕಾರಯುಕ್ತವಾದ ಆಸನಗಳ ಮೇಲೆ ಕುಳಿತು ಕಳಕಳಿಸುತ್ತಾ ಮೆರವಣಿಗೆ ನಡೆಸಿಕೊಂಡು, ಪ್ರದರ್ಶನಶಾಲೆಗೆ ದಯಮಾಡಿದರು ಈ ಪ್ರದರ್ಶನವು ಈ ತಿಂಗಳ ಕೊನೆಯುತನಕ ತೆರೆಯಲ್ಪಟ್ಟಿರುವುದೆಂದು ತಿಳಿದುಬಂದಿದೆ.

* * *

ಈ ತಿಂಗಳ ಕಡೆಯ ವಾರ ಲಾಹೋರ್ ಪಟ್ಟಣದಲ್ಲಿ ನಡೆಯುವ ಹಿಂದೂಸ್ಥಾನದ ರಾಷ್ಟ್ರಕೂಟಕ್ಕೆ (ನ್ಯಾಷನಲ ಕಾಂಗ್ರೆಸ್) ಚುನಾಯಿಸಲ್ಪಟ್ಟಿರುವ ಸರ್ ಫಿರೋಜ್‌ಷಾ ಮೆಹತಾ ಎಂಬ ಪಾರ್ಸಿ ದೇಶಭಕ್ತರು ಪ್ರೆಸಿಡೆಂಟರಾಗಿದ್ದು ಕೊಂಡು, ಆ ಸಮಾಜವನ್ನು ನಡಿಸಬೇಕೆಂದು ಏರ್ಪಾಡಾಗಿತ್ತಷ್ಟೆ ಕಳೆದ ವಾರ ಸರ್ ಪಿ ಮೆಹತಾಯವರು ತಮಗೆ ಆ ಪದವಿಯು ಅವಶ್ಯವಿಲ್ಲವೆಂದು ತಂತಿ ವರ್ತಮಾನ ಕೊಟ್ಟು ಕಾಂಗ್ರೆಸ್ ಕಮಿಟಿಯವರಿಗೆ ತಿಳಿಸಿದರು ಹೀಗೆ ಇನ್ಕಾರ ಮಾಡಲು ಕಾರಣವೇನೆಂದು ಅವರನ್ನು ಕೇಳಲಾಗಿ ಅವರು ಈ ಸಲ ರಾಷ್ಟ್ರಕೂಟವು ಪೂರೈಸುವ ತನಕ ತಮ್ಮ ಅಭಿಪ್ರಾಯವನ್ನು ಹೇಳುವುದಿಲ್ಲವೆಂದು ಜವಾಬು ಕೊಟ್ಟಿದ್ದಾರೆ ಈಗ ಆ ಕೂಟಕ್ಕೆ ಯಾರನ್ನು ಪ್ರೆಸಿಡೆಂಟಾಗಿ ನೇಮಕ ಮಾಡಬೇಕೆನ್ನುವುದು ಚರ್ಚೆಯಲ್ಲಿರುವುದು ಕೆಲವರು ಮೆ॥ ಗೋಖಲೆಯವರು ಪ್ರೆಸಿಡೆಂಟರಾಗಬಹುದೆಂದೂ, ಇನ್ನು ಕೆಲವರು ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರನ್ನು ಆ ಸ್ಥಾನಕ್ಕೆ ಚುನಾಯಿಸಬಹುದೆಂದೂ ಹೇಳಲಾರಂಭವಾಗಿದೆ

ವಿದೇಶ ವರ್ತಮಾನಗಳು

ಇಂಗ್ಲಾಂಡಿನಲ್ಲಿರುವ ಬ್ರೈಟನ್ ಎಂಬ ಸ್ಥಳದಲ್ಲಿ ಕೋರ್ಟ್‌ಲಾಡ್ ಎಂಬ ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು, ಮಾಲೀಕರಿಗೆ ೧೫ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

* * *

ಪರ್ಷಿಯಾ ರಾಜ್ಯಕ್ಕೆ ಸೇರಿದ ಓಸಾದ ಎಂಬ ಕಲ್ಲಿದ್ದಲ ಗಣಿಗಳಲ್ಲಿ ಅನಾಹುತ ಸಂಭವಿಸಿ ೧೯ ಮಂದಿ ಕೂಲಿಕಾರರು ಮೃತಪಟ್ಟರೆಂದೂ ೨೫೮ ಮಂದಿ ಗಣಿಗಳೊಳಗೆ ಸಿಕ್ಕಿಬಿದ್ದಿರುವರೆಂದೂ ತಂತಿವರ್ತಮಾನ ಬಂದಿದೆ

* * *

ಮುಂದಿನ ವರುಷ ಜರ್ಮನಿ ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಇಂಗ್ಲೆಂಡಿಗೆ ದಯಮಾಡಿ ಹದಿನೈದು ದಿನಗಳ ತನಕ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರ ಆತಿಥ್ಯವನ್ನು ಸ್ವೀಕರಿಸುವವರಾಗಿದ್ದಾರೆಂದು ಪ್ರಕಟವಾಗಿದೆ

* * *

ಫ್ರಾನ್ಸ್ ಪ್ರಭುತ್ವದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಕಳೆದ ತಿಂಗಳ ೧೫ ನೇ ತಾರೀಖಿನಿಂದ ಒಂದು ವಿದ್ಯಾಶಾಲೆಯು ಪ್ರಾರಂಭವಾಗಿದೆ ಅಲ್ಲಿ ವಿದ್ಯಾರ್ಥಿಗಳಿಗೆ ವಿಮಾನಗಳನ್ನು ತಯಾರುಮಾಡುವುದನ್ನೂ ನಡಿಸುವುದನ್ನೂ ಕಲಿಸಿಕೊಡುವರು

* * *

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಹುಡುಗರನ್ನು ಪೋಲೀಸ್ ಸಿಪಾಯಿಗಳಾಗಿ ನೇಮಿಸಿದ್ದಾರೆ ಈ ಹುಡುಗರು ಪಟ್ಟಣದಲ್ಲಿ ಇತರ ಹುಡುಗರು ದುರಾಚಾರಗಳಲ್ಲಿ ಬೀಳದಂತೆ ಅವರ ಮೇಲೆ ಉಸ್ತುವಾರಿ ಮಾಡುತ್ತಾ, ದುಷ್ಕೃತ್ಯಗಳನ್ನು ನಡಿಸುವಂಥ ಹುಡುಗರನ್ನು ದಂಡಿಸಿ ದುರಸ್ತಿ ಮಾಡುವರು

* * *

ವಿಲಾಯಿತಿಗೆ ಸೇರಿದ ಸಫೋಲ್ಕ್ ಡಿಸ್ಟ್ರಿಕ್ಟಿನಲ್ಲಿ ಸೌತ್ ವೋಲ್ಡನ ರೆವರೆಂಡ್ ಫರ್ಗ್ಯುಸನ್ ಗೋಂಪರ್ಟ್ಸ್ ಎಂಬಾತನು ೨,೪೦,೦೦೦ ರೂಪಾಯಿಯನ್ನೂ, ಚಾರ್ಲ್ಸ್‌ವರ್ತ್ ಕೆನ್ನೆಡಿ ಎಂಬಾತನು ೭೫ ಲಕ್ಷ ರೂಪಾಯಿಯನ್ನೂ ತಮ್ಮ ಆಸ್ತಿಗಳಿಂದ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನಗಳನ್ನು ಬರೆದಿರುತ್ತಾರೆ

* * *

ಉತ್ತರ ಮತ್ತು ದಕ್ಷಿಣ ಅಮೇರಿಕಗಳ ನಡುವೆ ಇರುವ ಭೂಖಂಡವನ್ನು ಒಡೆದು ಎರಡು ಸಾಗರಗಳನ್ನು ಏಕವಾಗಿ ಜಹಜುಗಳ ಸಂಚಾರಕ್ಕೆ ಅನುಕೂಲವಾಗಬೇಕೆಂದು ಕಾಲುವೆಯಾಗಿ ಪನಾಮಾ ಕಾಲುವೆ ನಡೆಯುತ್ತಲಿದೆಯಷ್ಟೆ ಇದುವರೆಗೆ ಈ ಕಾಮಗಾರಿಗೆ ೩೫೦ ಲಕ್ಷ ಪೌಂಡು ಖರ್ಚಾಯಿತು ಈ ಕಾಲುವೆ ಪೂರ್ತಿ ಸಿದ್ಧವಾಗುವಾಗ್ಗೆ ಒಟ್ಟು ೭೫೦ ಲಕ್ಷ ಪೌಂಡು ಖರ್ಚಾಗಬಹುದೆಂದು ಹೇಳುತ್ತಾರೆ

* * *

ಇಂಗ್ಲಾಂಡಿಗೆ ಸೇರಿದ ವಿಟ್ಸ್‌ಸೆಕ್ಸ್ ಪಟ್ಟಣದಲ್ಲಿ ಗತಿಸಿದ ಮಿ॥ ಜೆ॥ರ್ ಬರ್ನಾರ್ಡ್ ಎಂಬಾತನು ಪರೋಪಕಾರಾರ್ಥಕ್ಕಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಉಯಿಲು ಬರೆದು ತನ್ನ ಆಸ್ತಿಯಿಂದ ೩೭,೫೦,೦೦೦ ರೂಪಾಯನ್ನು ತೆಗೆದಿಟ್ಟಿದ್ದನು ಈಗ ಆ ಪಟ್ಟಣದ ಅಧಿಕಾರಿಗಳು ಸಾರುಹುಗ್ಗಿನ ರೋಗಿಗಳಿಗೆ ಚಿಕಿತ್ಸೆ ನಡಿಯುವಂಥಾ ಆಸ್ಪತ್ರೆಯನ್ನು ಆ ಹಣದಿಂದ ಕಟ್ಟಿಸಬೇಕೆಂದು ಗೊತ್ತುಮಾಡಿರುತ್ತಾರೆ

* * *

ದಕ್ಷಿಣ ಆಫ್ರಿಕಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದ ಡರ್ಬನ್ ಪಟ್ಟಣದಲ್ಲಿ ಕೆನಿಕ್ ಎಂಬ ಕಾರ್ಖಾನೆಯೊಳಗೆ ಕಳೆದ ವಾರ ಸಿಡಿಮದ್ದಿನ ಪದಾರ್ಥಗಳು ಆಕಸ್ಮಾತ್ತಾಗಿ ಹತ್ತಿಕೊಂಡು ಅಪಾರವಾದ ಪಟ್ಟ ಬೇಗನೆ ಹೊಂದವು ಆ ಎರಡು ಮನೆಗಳೂ ನಾಶವಾದುವು ಇಬ್ಬರು ಯೂರೋಪಿಯನರೂ ಮೂರು ಮಂದಿ ಸ್ವದೇಶಿಗಳೂ ಮೃತಪಟ್ಟರು ಒಬ್ಬ ಯೂರೋಪ್ಯನಿಗೂ ಐದು ಜನ ಸ್ವದೇಶಿಗಳಿಗೂ ಬಹಳ ಗಾಯಗಳಾದವು

* * *

ಪರ್ಷ್ಯಾ ರಾಜ್ಯದಲ್ಲಿ ರಾಜಧಾನಿಯಾದ ಟೆಹೆರಾನ್ ಬಗೆಗಿನ ಬಳಿಯು ಇನ್ನೂ ಗೊತ್ತುಮಾಡಲ್ಪಟ್ಟಿಲ್ಲ ಇತರ ಸ್ಥಳಗಳ ಪ್ರದೇಶಗಳಲ್ಲಿಯೂ ಯಾರೂ ವಿವಾದಗಳಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರ ಮಾಡಕೂಡದೆಂದೂ, ಹಾಗೆ ಮಾಡುವವರನ್ನು ಪೋಲೀಸಿನವರು ಗುಂಡು ಹೊಡೆದು ಕೊಂದುಬಿಡುವರೆಂದೂ ಪ್ರಕಟಿಸಿದ್ದಾರೆ ಕ್ರೂರ ಕೃತ್ಯಗಳನ್ನು ನಡಿಸತಕ್ಕವರು ಈ ವಿಮಾನಗಳಲ್ಲಿ ಕುಳಿತು ಹೋಗಿ ದುಷ್ಕಾರ್ಯಗಳನ್ನು ನಡಿಸಬಾರದೆಂಬುವುದೇ ಈ ಹುಕುಮಿಗೆ ಕಾರಣವೆಂದು ಹೇಳುವರು

* * *

ಕಳೆದ ಸೆಪ್ಟಂಬರು ತಿಂಗಳಲ್ಲಿ ಲಂಡನ್ ಪಟ್ಟಣದೊಳಗೆ ಲಾರ್ಡ್ ಕರ್ಸನ್ ರವರು ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಇನ್ನೊಂದು ಗಾಡಿಗೆ ಬಡಿದು ಅಪಾಯ ಸಂಭವಿಸಿ, ಮೋಟಾರ್ ಗಾಡಿಯು ಮುರಿದು ಹೋದದ್ದಲ್ಲದೆ ಲಾರ್ಡ್ ಕರ್ಸನ್ ರವರಿಗೂ ಜಖಂ ಆಯಿತು ಅವರು ತಮಗುಂಟಾದ ನಷ್ಟವನ್ನೂ ಪರಿಹಾರವನ್ನೂ ಕೊಡಿಸಬೇಕೆಂದು ದಾವಾ ತಂದಿದ್ದರು ಈ ಮೊಕದ್ದಮೆಯು ಕಳೆದ ವಾರ ಇತ್ಯರ್ಥಪಟ್ಟು, ಜಡ್ಜಿಯವರು ಲಾರ್ಡ್ ಕರ್ಸನ್ ರವರಿಗೆ ಪ್ರತಿವಾದಿಗಳಿಂದ ೩,೮೨೫ ರೂಪಾಯಿ ಪ್ರತಿಫಲ ಕೊಡಿಸಿರುತ್ತಾರೆ

* * *

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ನ್ಯೂ ಸೌತ್ ವೇಲ್ಸ್ ಎಂಬ ವಿಭಾಗದಲ್ಲಿ ಗಣಿ ಕೂಲಿಕೆಲಸಗಾರರು ಕೆಲಸಕ್ಕೆ ಹೋಗದೆ ಹಟ ಹಿಡಿದು ನಿಂತುಬಿಟ್ಟಿದ್ದಾರೆ ಇದರಿಂದ ಗಣಿಗಳಿಂದ ಕಲ್ಲಿದ್ದಲು ತೆಗೆಯುವ ಕೆಲಸ ನಿಂತುಹೋಗಿ, ಕಲ್ಲಿದ್ದಲಿನ ಕ್ರಯವು ಬಹಳ ಹೆಚ್ಚಿತು ಸರ್ಕಾರದವರು ಇತರ ದೇಶಗಳಿಂದ ೫೦,೦೦೦ ಟನ್ ತೂಕದಷ್ಟು ಕಲ್ಲಿದ್ದಲನ್ನು ಕೊಂಡು ತರಿಸಿದರು ಇನ್ನು ಹತ್ತು ದಿನಗಳೊಳಗಾಗಿ ಕೆಲಸದವರು ಕೆಲಸದ ಮೇಲೆ ಹಾಜರಾಗದೆ ಹೋದರೆ ಮತ್ತೆ ೦,೦೦೦ ಟನ್ ಕಲ್ಲಿದ್ದಲನ್ನು ತರಿಸುತ್ತೇವೆ ಎಂದು ತಿಳಿಸಿರುವರು

* * *

ಜರ್ಮನಿಯಲ್ಲಿರುವ ಹಾಂಬರ್ಗ್ ಪಟ್ಟಣದಲ್ಲಿ ಹೂರೆಯನ್ನು ತುಂಬಿಸಿಟ್ಟಿದ್ದ ಎರಡು ಭಾರಿ ಪಾತ್ರೆಗಳು ಆಕಸ್ಮಾತ್ತಾಗಿ ಒಡೆದುಹೋದವು ಆ ಪೈಕಿ ಒಂದು ಪಾತ್ರೆಯು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾಗಿತ್ತೆಂದು ಹೇಳುತ್ತಾರೆ ಈ ಅನಾಹುತದಿಂದ ಕೂಡಲೇ ಏಳು ಮಂದಿ ಪ್ರಾಣ ಬಿಟ್ಟರು ಅದರ ಕೆಳಗೆ ೭೫ ಜನರು ಸಿಕ್ಕಿಕೊಂಡಿರುತ್ತಾರೆಂದು ತಂತೀ ವರ್ತಮಾನ ಬಂದಿತು ಈಚೆಗೆ ಇವರನ್ನೆಲ್ಲಾ ಅಲ್ಲಿಂದ ಆಸ್ಪತ್ರೆಗೆ ಸಾಗಿಸಿದರೆಂದೂ, ಅವರಲ್ಲಿ ೭ ಮಂದಿ ಸತ್ತುಹೋದರೆಂದೂ ಇನ್ನಿಬ್ಬರೂ ಬದುಕುವಹಾಗಿಲ್ಲವೆಂದೂ ಆ ಪಾತ್ರೆಯ ಕೆಳಗೆ ಇನ್ನೂ ೧೭ ಜನರು ಸಿಕ್ಕಿ ಇರುತ್ತಾರೆಂದೂ ತಿಳಿದು ಬಂದಿದೆ

* * *

ಇಂಗ್ಲಾಂಡಿಗೆ ಸೇರಿದ ಲಿಂಕನ್‌ಷೈರ್ ಡಿಸ್ಟ್ರಿಕ್ಟಿನೊಳಗೆ ಹಾಲು ಮಾರುವವನೊಬ್ಬನು ಒಬ್ಬ ಸಾಹುಕಾರನ ಬಳಿ ೩೦೦ ರೂಪಾಯಿ ತೆಗೆದುಕೊಂಡು ೬೭೫ ರೂಪಾಯಿಗೆ ಪತ್ರ ಬರೆದುಕೊಟ್ಟು, ೧೯೫ ರೂಪಾಯಿ ಸಾವತಿ ಮಾಡಿದನು ಸಾಹುಕಾರನು ಉಳಿದ ೨೭೦ ರೂಪಾಯಿಗೆ ಹಾಲು ಮಾರುವವನ ಮೇಲೆ ದಾವಾ ಹೂಡಿದನು ಕೌಂಟಿ ಕೋರ್ಟಿನ ಜಡ್ಜಿಯವರು ಈ ಮೊಕದ್ದಮೆಯನ್ನು ದರ್ಯಾಪ್ತಿಮಾಡಿ, ೨೭೦ ರೂಪಾಯಿಗೆ ಡಿಕ್ರಿಕೊಟ್ಟು, ಸಾಹುಕಾರನು ಸಾಲಗಾರನಿಂದ ತಿಂಗಳಿಗೆ ಒಂದಾಣೆಯಂತೆ ಕಂತು ವಸೂಲ್ಮಾಡಿಕೊಳ್ಳಬೇಕೆಂದು ಹುಕುಂ ಹೊರಡಿಸಿದರು ಇದರಿಂದ ೨೭೦ ರೂಪಾಯಿಯ ಸಾಲ ತೀರುವುದಕ್ಕೆ ೩೬೦ ಸಂವತ್ಸರಗಳಾಗುವವು

* * *

ಉತ್ತರ ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂ ಯಾರ್ಕ್ ನಗರದಲ್ಲಿ ಡಾ ಲೌಸನೊಬಿಸೋವಿಚ್ ಎಂಬ ವೈದ್ಯಳು ಇರುತ್ತಾಳೆ ಈಕೆ ರಷ್ಯಾ ರಾಜ್ಯದವಳು ಇನ್ನೂ ಸಣ್ಣ ಪ್ರಾಯದವಳಾಗಿದ್ದಾಳೆ ಈಕೆ ಸತ್ತವರನ್ನು ಜೀವಸಹಿತ ಎಬ್ಬಿಸುವದಕ್ಕೆ ಒಂದು ಉಪಾಯವನ್ನು ಕಂಡು ಹಿಡಿದಿರುವಂತೆ ಪ್ರಕಟವಾಗಿದೆ ಕಳೆದ ನವೆಂಬರ್ ತಾ ೧೯ ರಲ್ಲಿ ಆ ಪಟ್ಟಣದಲ್ಲಿರುವ ಎಡಿಸನ್‌ರವರ ಪರಿಶೋಧನಾ ಮಂದಿರದೊಳಗೆ ಆಕೆ ತನ್ನ ಅದ್ಭುತವಾದ ಸಾಮರ್ಥ್ಯವನ್ನು ಪ್ರಕಾಶಪಡಿಸಿದಳು ಬಹು ಜನ ಡಾಕ್ಟರುಗಳೂ ಶಾಸ್ತ್ರಶೋಧಕರಾದ ಪಂಡಿತರುಗಳೂ ಆ ಸಭೆಯಲ್ಲಿ ಹಾಜರಾಗಿದ್ದರು ಸಭಿಕರ ಎದುರಿಗೆ ಆಕೆ ಜೀವಸಹಿತ ಇದ್ದ ಒಂದು ಮೊಲವನ್ನು ತಂದು ತೋರಿಸಿ, ಎಲ್ಲರೂ ನೋಡುತ್ತಿರುವಾಗ ಆ ಪ್ರಾಣಿಗೆ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಅದನ್ನು ಕೊಂದುಹಾಕಿದಳು ಸಭಿಕರಾದ ಡಾಕ್ಟರುಗಳು ಅದನ್ನು ಪರೀಕ್ಷೆ ಮಾಡಿ, ಅದು ಸತ್ತು ಹೋಗಿದೆ ಎಂದು ಹೇಳಿ ಒಪ್ಪಿಕೊಂಡರು ಒಳಿಕ ರೋಬಿನೋ ಎಂಬ ಆ ಯುವತಿ ವೈದ್ಯಳು ಸತ್ತ ಮೊಲದ ದೇಹಕ್ಕೆ ವಿದ್ಯುಚ್ಛಕ್ತಿಯನ್ನು ಸ್ವಲ್ಪ ಸ್ವಲ್ಪವಾಗಿ ವಾರಾವಳಿಕೊಟ್ಟು ಪ್ರಯೋಗಿಸುತ್ತಾ ಬಂದಳು ಮೂರು ನಿಮಿಷಗಳೊಳಗಾಗಿ ಮೊಲದ ದೇಹದೊಳಗಿದ್ದ ಹೃದಯವು (ರಕ್ತ ಚಲನೆಯ ಮೂಲಸ್ಥಾನವು) ಚಲಿಸಲಾರಂಭವಾಯಿತು ಒಳಿಕ ಉಸುರು ಆಡುವುದು ಹುಟ್ಟಿತು ಸ್ವಲ್ಪ ಹೊತ್ತಿನಲ್ಲೇ ಮೊಲವು ಚೇತರಿಸಿಕೊಂಡು, ಅರ್ಧಗಂಟೆ ಕಾಲದಲ್ಲಿ ಆ ಕೊಠಡಿಯೊಳಗೆಲ್ಲಾ ಕುಪ್ಪಳಿಸಿಕೊಂಡು ಸಂಚರಿಸಿತು ಆ ಸ್ತ್ರೀ ಡಾಕ್ಟರು ಇದೇ ರೀತಿ ಮನುಷ್ಯರಿಗೂ ಪ್ರಾಣವನ್ನು ತರಿಸ ಬಹುದು ಎಂದು ಹೇಳಿದಳು ಎಂಬದಾಗಿ ಸೀಮೆಯಿಂದ ಬಂದ ಒಂದು ಪತ್ರಿಕೆಯು ತಿಳಿಸುತ್ತದೆ

ವೈಸ್‌ರಾಯಿಯವರ ದೇಶಸಂಚಾರವು.

ಮದರಾಸ್ ಪಟ್ಟಣದಲ್ಲಿ ನಡದ ಉತ್ಸವಗಳು.

ಡಿಸೆಂಬರ್ ತಾ ೯ ನೇ ಗುರುವಾರ ಬೆಳಿಗ್ಗೆ ವೈಸ್‌ರಾಯಿ ಲಾರ್ಡ್ ಮಿಂಟೊ ಪ್ರಭುಗಳು ಪತ್ನಿ ಪರಿವಾರ ಸಮೇತ ಸ್ಪೆಷಲ್ ರೈಲಿನಲ್ಲಿ ೮-೩೦ ಗಂಟೆಗೆ ಮದರಾಸ್ ಪಟ್ಟಣವನ್ನು ತಲಪಿದರು ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಮದರಾಸ್ ಗವರ್ನರವರೂ ಆ ಆಧಿಪತ್ಯದ ಗವರ್ನ್‌ಮೆಂಟ್ ಮುಖ್ಯಾಧಿಕಾರಿಗಳೂ ಸೈನ್ಯಾಧಿಪತಿಗಳೂ ಪ್ರಭುಗಳನ್ನು ಗೌರವಯುಕ್ತವಾಗಿ ಎದುರುಗೊಂಡರು ವೈಸ್‌ರಾಯಿ ದಂಪತಿಗಳು ಸ್ಟೇಷನ್‌ನಿಂದ ಸಾರೋಟುಗಳಲ್ಲಿ ಕುಳಿತು, ಸೋಟಿಕ ಪ್ರಜೆಗಳಿಂದ ತುಂಬಿತುಳುಕುತ್ತಿದ್ದ ರಸ್ತೆಗಳಲ್ಲಿ ಮೆರವಣಿಗೆ ಹೊರಟು, ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ದಯಮಾಡಿದರು ಅಲ್ಲಿ ಮೈಸೂರಿನ ಮಹಾರಾಜರವರೂ ವಿಜಯನಗರದ ರಾಜರವರೂ ಭಿನ್ನವಾದ ಎರಡು ಕಮಾನುಗಳನ್ನು ಹಾಕಿಸಿದ್ದರು ವೈಸ್‌ರಾಯಿ ದಂಪತಿಗಳು ಗವರ್ನ್‌ಮೆಂಟ್ ಹೌಸಿನಲ್ಲಿ ಕಾದಿದ್ದ ಮದರಾಸ್ ಅಧಿಪತ್ಯದ ಮಹಾರಾಜರು, ಜಮೀನುದಾರರು, ನವಾಬರು, ಜಮೀನ್ದಾರರು, ಅಧಿಕಾರಿಗಳು, ಯೂರೋಪ್ಯನ್ ಸರ್ದಾರರೇ ಮುಂತಾದವರಿಗೆ ಭೇಟಿ ದಯಪಾಲಿಸಿ ಒಳಗೆ ತೆರಳಿದರು.

ಅಡ್ರೆಸ್ಸುಗಳನ್ನು ಒಪ್ಪಿಸಿದ್ದು

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ೧೦-೩೦ ಗಂಟೆಗೆ ಗವರ್ನ್‌ಮೆಂಟ್ ಹೌಸಿನ ಬ್ಯಾಂಕ್ವೆಟಿಂಗ್ ಹಾಲ್ ಎಂಬ ದರ್ಬಾರ್ ಮಂದಿರಕ್ಕೆ ದಯಮಾಡಿ ಪರಿವಾರ ಸಹಿತ ಸಿಂಹಾಸನದಲ್ಲಿ ಕುಳಿತುಕೊಂಡರು ಸಭೆಯಲ್ಲಿ ಮದರಾಸ್ ಗವರ್ನ್‌ಮೆಂಟಿನ ಮುಖ್ಯಾಧಿಕಾರಿಗಳೂ, ಬೇರೆ ಬೇರೆ ಸಂಘಗಳ ಪ್ರತಿನಿಧಿಗಳೂ ದರ್ಬಾರ್ ಧಿರಸಿನಲ್ಲಿ ಹಾಜರಾಗಿದ್ದರು ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಸರ್ ವಿಲ್ಯಂ ಮೇಯರ್‌ಯವರು ಮುಂದೆ ಬಂದು ಸಂಘಗಳ ಪ್ರತಿನಿಧಿಗಳನ್ನು ಕುರಿತು,—ನೀವುಗಳು ಓದಿ ಒಪ್ಪಿಸಬೇಕೆಂದು ಗೊತ್ತುಮಾಡಿರುವ ವಿಜ್ಞಾಪನಾ ಪತ್ರಿಕೆಗಳ ನಕಲುಗಳನ್ನು ವೈಸ್‌ರಾಯಿ ಪ್ರಭುಗಳು ಆಗಲೇ ಪರಾಂಬರಿಸಿರುತ್ತಾರೆ ಅದನ್ನೇ ನೀವು ಈಗ ಮತ್ತೆ ಓದೋಣದರಿಂದ ಬಹಳ ಸಮಯ ಹಿಡಿಯುವುದಾದ್ದರಿಂದ ದಯವಿಟ್ಟು ಪ್ರತಿ ಅಡ್ರೆಸಿನಲ್ಲೂ ಮೊದಲನೆಯ ಮತ್ತು ಕಡೆಯ ವಾಕ್ಯಗಳನ್ನು ಮಾತ್ರ ಓದಿದರೆ ಸಾಕಾಗಿದೆ ಎಂದು ತಿಳಿಸಿದರು ಅದೇ ಪ್ರಕಾರ ಮಹಮ್ಮದೀಯರ ಅಡ್ರೆಸ್ಸನ್ನು ಆರ್ಕಾಟ್ ರಾಜಕುಮಾರರಾದ ಸರ್ ಗುಲಾಂ ಮಹಮ್ಮದ್ ಅಲ್ಲಿ ಖಾನ್ ಬಹದೂರ್, ಕೆ ಸಿ ಐ ಇ ಯವರೂ, ಯೂರೋಪ್ಯನ್ ವರ್ತಕಸಂಘದ ಅಡ್ರೆಸ್ಸನ್ನು ಆ ಸಂಘದ ಅಧ್ಯಕ್ಷರಾದ ಮೆ॥ ಡಬ್ಲ್ಯು ಬಿ ಹಂಟರ್‌ಯವರೂ, ಮದರಾಸ್ ಅಧಿಪತ್ಯದ ಜಮೀನ್ದಾರರ ಸಂಘದ ಅಡ್ರೆಸ್ಸನ್ನು ವೆಂಕಟಗಿರಿ ರಾಜರವರೂ, ಮದರಾಸ್ ಮಹಾಜನಸಭೆಯ ಅಡ್ರೆಸ್ಸನ್ನು ನವಾಬ್ ಸೈಯದ್ ಮಹಮದ್ ಬಹದೂರ್‌ಯವರೂ, ಆಂಗ್ಲೋ ಇಂಡಿಯನ್ ಸಂಘದ ಅಡ್ರೆಸ್ಸನ್ನು ಮೆ॥ ಎ ಇ ರೆಕ್‌ಕಾಂಟ್ರಿಯವರೂ ದೇಶೀಯ ಕ್ರೈಸ್ತಸಂಘದ ಅಡ್ರೆಸ್ಸನ್ನು ದಿವಾನ್ ಬಹದೂರ್ ಬ್ಯಾರಿಸ್ಟರ್ ಎನ್. ಸುಬ್ರಹ್ಮಣ್ಯಂಯವರೂ, ದೇಶೀಯ ಕ್ಯಾಥೋಲಿಕ್ ಸಂಗಡದ ಕ್ರೈಸ್ತಸಭೆಯ ಅಡ್ರೆಸ್ಸನ್ನು ತಿರುಚನಾಪಲ್ಲಿಯ ಸೇಂಟ್ ಜೋಸೆಫ್ ಕಾಲೇಜಿನ ಅಸಿಸ್ಟೆಂಟರಾದ ಮೆ॥ ಜಿ ವೈದ್ಯನಾಥ ಪಂಡುರವರೂ, ರಾಷ್ಟ್ರಸಭೆಯ (ಕಾಂಗ್ರೆಸ್) ಮದರಾಸ್ ಶಾಖೆಯ ಕಮಿಟಿಯವರ ಅಡ್ರೆಸ್ಸನ್ನು ಮೆ॥ ಸಿ ಆರ್ ಸುಂದರ ಐಯರವರೂ ಒಬ್ಬರಾದಮೇಲೊಬ್ಬರು ಮುಂದೆ ಬಂದು ಓದಿ, ಬೇರೆ ಬೇರೆ ರೀತಿಯಲ್ಲಿ ಕೆತ್ತನೆಯ ಚಿತ್ರಕೆಲಸಗಳನ್ನು ಮಾಡಿದ್ದ ಅತ್ಯಂತ ಸುಂದರವಾದ ಕೈಪೆಟ್ಟಿಗೆಗಳಲ್ಲಿಟ್ಟು ವೈಸ್‌ರಾಯಿಯವರಿಗೆ ಒಪ್ಪಿಸಿದರು

ವೈಸ್‌ರಾಯಿ ಪ್ರಭುಗಳು ಅವುಗಳನ್ನೆಲ್ಲಾ ವಿಶೇಷ ಆದರದಿಂದಲೂ ವಂದನಾಪೂರ್ವಕವಾಗಿಯೂ ಅಂಗೀಕರಿಸಿ ಎಲ್ಲಾ ಅಡ್ರೆಸ್ಸುಗಳನ್ನೂ ಕೂಡಿಸಿ ಪ್ರತಿನಿಧಿಗಳಿಗೆಲ್ಲಾ ಯುಕ್ತವೆಂದು ತೋರಿದ ಸಂಕ್ಷೇಪವಾದ ಒಂದೇ ಉತ್ತರವನ್ನು ದಯಪಾಲಿಸಿದರು.

ಆ ದಿನ ಸಾಯಂಕಾಲ ಮದರಾಸ್ ಗೌವರ್ನರವರೂ ಅವರ ಪತ್ನೀಯವರೂ ವೈಸ್‌ರಾಯಿ ದಂಪತಿಗಳನ್ನು ಕರೆದುಕೊಂಡು ಸಾರೋಟುಗಳಲ್ಲಿ ಸವಾರಿ ಹೊರಟು ಮದರಾಸ್ ಪಟ್ಟಣದ ಮುಖ್ಯ ಭಾಗಗಳನ್ನೆಲ್ಲಾ ತೋರಿಸಿ ಕರೆದುಕೊಂಡು ಬಂದರು ಅವರು ದಯಮಾಡಿದ್ದ ಕಡೆಗಳಲ್ಲಿ ಪ್ರಜೆಗಳೂ ಅಧಿಕಾರಿಗಳೂ ವರ್ತಕ ಮಂಡಲಿಯವರೂ ದಿವ್ಯವಾಗಿ ಅಲಂಕಾರ ಮಾಡಿ ವೈಸ್‌ರಾಯಿ ದಂಪತಿಗಳಿಗೆ ಸಂತೋಷವನ್ನುಂಟು ಮಾಡಿದರು ಹಡಗುಗಳೂ ಜಹಜುಗಳೂ ಬಂದು ನಿಲ್ಲುವ ಸ್ಥಳವನ್ನೂ ಅಲ್ಲಿ ನಡೆದಿರುವ ಕಾಮಗಾರಿಗಳನ್ನೂ ವೈಸ್‌ರಾಯಿಯವರು ಪರಾಂಬರಿಸಿ ತೃಪ್ತಿಪಟ್ಟುಕೊಂಡರು

ಗವರ್ನ್‌ಮೆಂಟ್ ಹೌಸಿನಲ್ಲಿ ಆ ರಾತ್ರಿ ಭೋಜನವಾದ ಒಳಿಕ ವೈಸ್‌ರಾಯಿ ದಂಪತಿಗಳು ದಿವ್ಯವಾದ ದರ್ಬಾರ್ ಮಂದಿರಕ್ಕೆ ದಯಮಾಡಿ ಸಿಂಹಾಸನಗಳಲ್ಲಿ ಕುಳಿತುಕೊಂಡು ನೂರಾರು ಮಂದಿ ದೇಶೀಯ ಮತ್ತು ಯೂರೋಪ್ಯನ್ ದೊಡ್ಡ ಮನುಷ್ಯರ ಪರಿಚಯವನ್ನು ಮಾಡಿ ಅವರ ಕೂಡ ಸ್ವಲ್ಪ ಹೊತ್ತು ಸಂಭಾಷಣೆಗಳನ್ನು ನಡಿಸುತ್ತಾ ವಿನೋದಗಳನ್ನು ಪರಾಂಬರಿಸುತ್ತಾ ಇದ್ದು ಫಲಹಾರ ಬಳಿಕ ತರುವಾಯ ದರ್ಬಾರನ್ನು ಮುಕ್ತಾಯ ಮಾಡಿದರು

ತಾ ೧೦ ನೇ ಶುಕ್ರವಾರ ನಡೆದ ಕಾರ್ಯಗಳು

ಈ ದಿನ ಬೆಳಿಗ್ಗೆ ಗವರ್ನ್‌ಮೆಂಟ್ ಹೌಸಿನ ಮೈದಾನಿನಲ್ಲಿ ಸೈನ್ಯಗಳ ಕವಾತು ನಡೆಯಿತು ವೈಸ್‌ರಾಯಿಯವರು ಸೈನಿಕರಂತೆ ಬಿಳಿಯ ದಿರಸನ್ನು ಧರಿಸಿ, ವಿಸ್ತಾರವಾದ ಭುವನೇಶ್ವರಿಯಂತಿದ್ದ ಡೇರಾವಿಗೆ ದಯಮಾಡಿ ಕುಳಿತು ಸೈನಿಕರು ನಡಿದ ಕಾರ್ಯಗಳನ್ನು ಪರಾಂಬರಿಸಿ ಕಡೆಯಲ್ಲಿ ಅವರ ಮುಖ್ಯ ಹುದ್ದೇದಾರರನ್ನು ಕರೆಸಿಕೊಂಡು ಬಿರುದಿನ ಬಾವುಟಾವನ್ನು ದಯಪಾಲಿಸಿ, ಆ ಸೈನ್ಯದ ಪೂರ್ವೋತ್ತರವನ್ನು ಕುರಿತು ಒಂದು ಭಾಷಣವನ್ನು ಮಾಡಿದರು

ಭೋಜನಾನಂತರ ವೈಸ್‌ರಾಯಿಯವರ ಪತ್ನೀರಾದ ಲೇಡಿ ಮಿಂಟೋರವರು ಮದರಾಸ್ ಗೌವರ್ನರವರ ಪತ್ನೀರವರ ಕೂಡ ೧೧ ಗಂಟೆಗೆ ವಿಕ್ಟೋರಿಯಾ ಘೋಷಾ ಆಸ್ಪತ್ರೆಗೆ ದಯಮಾಡಿ, ಅಲ್ಲಿ ರೋಗಿಗಳಿಗೆ ನಡೆಯುವ ಚಿಕಿತ್ಸೆಯ ಕ್ರಮಗಳನ್ನೂ ಕಟ್ಟಡದ ವಿಚಕ್ಷಣೆಯನ್ನೂ ಪರಾಂಬರಿಸಿ, ಅದರಲ್ಲಿ ಹೊಸದಾಗಿ ಕಟ್ಟಿ ಸಿದ್ಧವಾಗಿದ್ದ ಒಂದು ಭಾಗವನ್ನು ಪ್ರತಿಷ್ಠೆ ಮಾಡಿ ಸಮಯೋಚಿತವಾದ ವಾಕ್ಯಗಳನ್ನು ಅಪ್ಪಣೆ ಕೊಡಿಸಿ ತುಂಬಾ ಸಂತೋಷ ಪಟ್ಟುಕೊಂಡರು ಇವರು ಅಲ್ಲಿಂದ ಹೊರಟು ಮದರಾಸ್ ಪಟ್ಟಣದ ಜನರಲ್ ಆಸ್ಪತ್ರೆಗೆ ದಯಮಾಡಿ, ಅಲ್ಲಿನ ಅಧಿಕಾರಿಗಳ ಕೂಡ ಕಟ್ಟಡದ ಎಲ್ಲಾ ಭಾಗಗಳನ್ನೂ ಸಂಚರಿಸಿ ನೋಡಿ, ಅಲ್ಲಿ ಚಿಕಿತ್ಸೆ ಹೊಂದುತ್ತಿರುವ ಕೆಲವು ರೋಗಿಗಳ ಬಳಿಗೆ ಹೋಗಿ ಅವರನ್ನು ಮಾತನಾಡಿಸಿ, ಎಲ್ಲಾ ಬಹಳ ಸಂತೋಷಪ್ರದವಾಗಿಯೂ ತೃಪ್ತಿಕರವಾಗಿಯೂ ಇದೆ ಎಂದು ಅಪ್ಪಣೆ ಕೊಟ್ಟು ದಯಮಾಡಿದರು

ಭೇಟಿ ಮರುಭೇಟಿಗಳು

ಮಧ್ಯಾಹ್ನ ೧೧ ೩೦ ಗಂಟೆಗೆ ವೈಸ್‌ರಾಯಿಯವರು ಗವರ್ನ್‌ಮೆಂಟ್ ಹೌಸಿನ ದರ್ಬಾರ್ ಮಂದಿರಕ್ಕೆ ದಯಮಾಡಿದರು. ತಿರುವಾಂಕೂರು (ಅನಂತಶಯನ) ಸಂಸ್ಥಾನದ ಮಹಾರಾಜರವರು ಪರಿವಾರಸಹಿತ ಗವರ್ನ್‌ಮೆಂಟ್ ಹೌಸಿಗೆ ಬಂದು ವೈಸ್‌ರಾಯವರ ಭೇಟಿ ಮಾಡಿದರು ಅವರ ಕೂಡ ಅವರ ದಿವಾನರವರೂ ಇತರ ಮುಖ್ಯಾಧಿಕಾರಿಗಳೂ ಹೋಗಿದ್ದರು ವೈಸ್‌ರಾಯಿಯವರು ಅವರನ್ನು ಎದುರುಗೊಂಡು ಸತ್ಕರಿಸಿ ಸ್ವಲ್ಪ ಹೊತ್ತು ಅವರ ಕೂಡ ಮಾತನಾಡುತ್ತಿದ್ದು ಕಳುಹಿಸಿಕೊಟ್ಟರು

ಬಳಿಕ ಕೊಚ್ಚಿ ಸಂಸ್ಥಾನದ ರಾಜರವರು ತಮ್ಮ ದಿವಾನರೇ ಮೊದಲಾದ ಅಧಿಕಾರಿಗಳ ಸಹಿತ ಗವರ್ನ್‌ಮೆಂಟ್ ಹೌಸಿಗೆ ಬಂದು ವೈಸ್‌ರಾಯಿ ಭೇಟಿ ಮಾಡಿ ಅವರಿಂದ ಮರ್ಯಾದೆಗಳನ್ನು ಹೊಂದಿ ವಾಪಸು ಹೋ

ಆ ವೇಳೆ ಮದರಾಸ್ ಅಧಿಪತ್ಯದ ಭಾರಿ ಜಮೀನ್ದಾರ ಮಿಂಟೋ ಪ್ರಭುಗಳು ಭೇಟಿ ದಯಪಾಲಿಸಿದರು ಬೊಬ್ಬಿಲಿ

ರಾಜಾ ಶ್ರೀರಾವ್ ಸರ್ ವೆಂಕಟಶ್ವೇತಾಚಲಪತಿ ರಂಗರಾವ್ ಬಹದ್ದೂರ್, ಕೆ ಸಿ ಐ ಇ ಯವರೂ, ಜಯಪುರದ ಮಹಾರಾಜಾ ಶ್ರೀ ವಿಕ್ರಮ ದೇವರವರೂ, ವೆಂಕಟಗಿರಿ ರಾಜಾ, ಕೆ ಸಿ ಐ ಇ ಯವರೂ, ವಿಜಯನಗರದ ರಾಜರವರೂ, ಕಾಳಹಸ್ತಿ ರಾಜರವರೂ, ಪಿಟ್ಠಾಪುರಂ ರಾಜರವರೂ, ಕೊಳ್ಳೆಂಗೋಡು ರಾಜರಾದ ವಾಸುದೇವ ರಾಜರ್ ರವರೂ, ಕುರುಪ್ಪಂ ಜಮೀನ್ದಾರರಾದ ರಾಜಾ ವಿ ವೀರಭದ್ರ ರಾಜು ಬಹದೂರ್ ಯವರೂ, ಆನೆಗೊಂದಿ ರಾಜರವರೂ ಗವರ್ನ್‌ಮೆಂಟ್ ಹೌಸಿಗೆ ಹೋಗಿ ವೈಸ್‌ರಾಯಿಯವರ ಭೇಟಿ ಮಾಡಿ ಅವರಿಂದ ಸತ್ಕಾರ ಹೊಂದಿ ಬಂದರು

ಮಧ್ಯಾಹ್ನ ೪-೩೦ ಗಂಟೆಗೆ ವೈಸ್‌ರಾಯಿ ಪ್ರಭುಗಳು ಪರಿವಾರ ಸಮೇತ ಗೌರ್ನ್‌ಮೆಂಟ್ ಹೌಸಿನಿಂದ ಹೊರಟು, ಟಾಕರ್ ಗಾರ್ಡನ್ ಎಂಬ ಬಂಗಲೆಗೆ ದಯಮಾಡಿ ವಿಜಯನಗರದ ಮಹಾರಾಜರವರಿಗೆ ಮರುಭೇಟಿ ಕೊಟ್ಟು ಅವರಿಂದ ಸನ್ಮಾನಗಳನ್ನು ಹೊಂದಿ, ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಅಂಗಡಿಬೀದಿಯಲ್ಲಿ ಸವಾರಿ ಮಾಡಿಕೊಂಡು ವಾಪಸು ಬಂದರು ತರುವಾಯ ಸುಮಾರು ೫ ಗಂಟೆಗೆ ಪ್ರಭುಗಳು ನುಂಗಂಬಾಕಂ ಎಂಬಲ್ಲಿರುವ ಕಲ್ಲಕ್ ಗಾರ್ಡನ್ ಎಂಬ ಬಂಗಲೆಗೆ ಚಿತ್ತೈಸಿ ಅಲ್ಲಿ ಕೊಚ್ಚಿ ರಾಜರವರಿಗೆ ಮರುಭೇಟಿಯನ್ನಿತ್ತು ಅವರು ಮಾಡಿದ ಸನ್ಮಾನಗಳನ್ನು ಅಂಗೀಕರಿಸಿ ಬಂದರು

ಆ ದಿನ ಸಾಯಂಕಾಲ ಗವರ್ನರವರು ವೈಸ್‌ರಾಯಿಯವರ ಪತ್ನೀರವರನ್ನು ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಕಟ್ಟಡಕ್ಕೆ ಕರೆದುಕೊಂಡು ಹೋದರು ಹಿಂದುಸ್ಥಾನದ ಸಕಲ ವಿಧವಾದ ಕೈಗಾರಿಕೆಗಳ ವಸ್ತುಗಳೂ ಅಲ್ಲಿ ಇಟ್ಟು ಪ್ರದರ್ಶನಮಾಡಲ್ಪಟ್ಟಿವೆ ಲೇಡಿ ಮಿಂಟೋರವರು ಅವುಗಳನ್ನೆಲ್ಲಾ ಬಹು ಉಲ್ಲಾಸದಿಂದ ಪರಾಂಬರಿಸಿ, ಕೆಲವು ಪದಾರ್ಥಗಳನ್ನು ಕೊಂಡುಕೊಂಡರು

ಔತನವು

ಆ ರಾತ್ರಿ ಗವರ್ನ್‌ಮೆಂಟ್ ಹೌಸಿನಲ್ಲಿ ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿ ಯವರು ವೈಸ್‌ರಾಯಿ ದಂಪತಿಗಳಿಗೆ ದಿವ್ಯವಾದ ಔತನವನ್ನು ಮಾಡಿಸಿದರು ಅವರ ಪಜ್ತಿಯಲ್ಲಿ ಅನೇಕ ಮಂದಿ ಯೂರೋಪಿಯನ್ ಸರ್ದಾರರೂ ದೊರೆಸಾನಿಗಳೂ ಕುಳಿತು ಸುಖಭೋಜನ ಮಾಡಿದರು ಭೋಜನಾನಂತರ ಅನಂತಶಯನದ ಮಹಾರಾಜರವರೂ ಕೊಚ್ಚಿಯ ರಾಜರವರೂ ಬಂಗಲೆಗೆ ಹೋಗಿ ವೈಸ್‌ರಾಯಿ ಲಾರ್ಡ್ ಮಿಂಟೋರವರ ಉಭಯ ಪಾರ್ಶ್ವಗಳಲ್ಲೂ ಕುಳಿತುಕೊಂಡರು ಇತರ ದೇಶೀಯ ದೊಡ್ಡ ಮನುಷ್ಯರೂ ಸಭಾಮಂದಿರವನ್ನು ಅಲಂಕರಿಸಿದ್ದರು ಸಕಲರೂ ಸೇರಿ ಹೊರಗಡೆ ದಿವ್ಯವಾದ ಬ್ಯಾಂಡ್ ವಾದ್ಯವಾಗುತ್ತಿರುವಲ್ಲಿ ಎದ್ದು ನಿಂತು ಚಕ್ರವರ್ತಿಯವರಿಗೆ ಆಯುರಾರೋಗ್ಯಗಳನ್ನು ಬಯಸಿದರು

ತಾ ೧೧ನೇ ಶನಿವಾರ ನಡೆದ ಕಾರ್ಯಗಳು

ಶನಿವಾರ ಬೆಳಗ್ಗೆ ವೈಸ್‌ರಾಯಿ ದಂಪತಿಗಳು ಪರಿವಾರ ಸಹಿತ ಗೌರ್ನ್‌ಮೆಂಟ್ ಹೌಸಿನಿಂದ ಹೊರಟು, ಪೀಪಲ್ಸ್ ಪಾರ್ಕ್ ಎಂಬ ಉದ್ಯಾನ ವನದ ಒಂದು ಮೂಲೆಯಲ್ಲಿ ಹೊಸದಾಗಿ ಮ್ಯುನಿಸಿಪಲ್ ಆಫೀಸ್ ಕಟ್ಟಲ್ಪಡುವ ನಿವೇಶನಕ್ಕೆ ದಯಮಾಡಿದರು ಅಲ್ಲಿ ಒಂದು ದಿವ್ಯವಾದ ಛಪ್ಪರವನ್ನು ಹಾಕಿಸಿದ್ದರು ಅದರೊಳಗೆ ಮದರಾಸ್ ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳೂ ಇತರ ದೊಡ್ಡ ಮನುಷ್ಯರೂ ಸುಮಾರು ೩೦೦ ಮಂದಿಯು ತವಳ ಸಾಲು ಕಟ್ಟಿ ಕುಳಿತಿದ್ದು ವೈಸ್‌ರಾಯಿಯವರು ದಯಮಾಡಿದ ಒಡನೆಯೇ ಎದ್ದು ನಿಂತುಕೊಂಡರು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಪರಿವಾರ ಸಹಿತ ಚಿತ್ತೈಸಿ ಎತ್ತರವಾದ ಪೀಠಗಳಲ್ಲಿ ಕುಳಿತುಕೊಂಡರು ಹೊರಗಡೆ ಸುತ್ತಲೂ ಸೈನಿಕರು ಸಾಲು ಕಟ್ಟಿ ಕುದುರೆಗಳ ಮೇಲೂ ಪದಾತಿಗಳಾಗಿಯೂ ಕಾವಲು ನೇಮಿಸಲ್ಪಟ್ಟಿದ್ದರು ಒಳಗೆ ಮ್ಯುನಿಸಿಪಲ್ ಕಮಿಷನರುಗಳೂ ಪ್ರೆಸಿಡೆಂಟರೂ ವೈಸ್‌ರಾಯಿಯವರ ಮುಂದೆ ಬಂದು ನಿಂತು, ಪ್ರಭುಗಳಿಗೆ ವಂದನೆಯನ್ನು ಸಮರ್ಪಿಸಿದರು ಪ್ರೆಸಿಡೆಂಟ್ ಮಿ ಇ ಎಸ್ ಲಾಯಿಡ್ ಯವರು ವೈಸ್‌ರಾಯಿಯವರಿಗೆ ಒಂದು ಅಡ್ರೆಸ್ಸನ್ನು ಓದಿ, ಬೆಳ್ಳಿಯಲ್ಲಿ ಚಿತ್ರಕೆಲಸ ಮಾಡಿ ಸಣ್ಣ ಸಣ್ಣ ಆನೆಗಳ ವಿಗ್ರಹಗಳನ್ನು ಜೋಡಿಸಿದ್ದ ಬಹು ಸುಂದರವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು

ವೈಸ್‌ರಾಯಿ ಪ್ರಭುಗಳು ವಂದನಾಪೂರ್ವಕವಾಗಿ ಅದನ್ನು ಅಂಗೀಕರಿಸಿ ಸಂದರ್ಭಾನುಗುಣವಾದ ಪ್ರತ್ಯುತ್ತರವನ್ನು ಕೊಟ್ಟರು ಒಳಿಕ ಪ್ರೆಸಿಡೆಂಟರವರು ವೈಸ್‌ರಾಯಿಯವರ ಬಳಿಗೆ ಹೋಗಿ, ಹೊಸ ಕಟ್ಟಡದ ಅಸ್ತಿಭಾರ ಪ್ರತಿಷ್ಠೆಯನ್ನು ಮಾಡಬೇಕೆಂದು ಕೇಳಿಕೊಂಡರು ಅದೇ ರೀತಿ ಆ ಸ್ಥಳಕ್ಕೆ ದಯಮಾಡಿ ಕಲ್ಲಿನಲ್ಲಿ ಕೆತ್ತಿ ಮಾಡಿದ ಪೆಟ್ಟಿಗೆಯೊಳಗೆ ಮದರಾಸಿನ ವರ್ತಮಾನ ಪತ್ರಿಕೆಗಳನ್ನೂ ಇಂಗ್ಲೀಷ್ ರಾಜ್ಯಭಾರದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳನ್ನೂ ಇರಿಸಿ ಅದರ ಮೇಲೊಂದು ಕಲ್ಲನ್ನು ಇಳಿಸಿ ಕಲ್ಲುಗಳ ಸಂದಿಗೆ ಕರಣೆಯಿಂದ ಗಾರೆಯನ್ನು ಹಾಕಿ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡಿದರು

ತಾಲ್ಲೂಕು ವರ್ತಮಾನಗಳು

ಒಪ್ಪಿಂಪುರ ——ಕಳೆದ ಗುರುವಾರ ಶುಕ್ರವಾರ ಕಡೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು ಈ ಊರಿಗೆ ದಯಮಾಡಿ ವೈದ್ಯದ ಇಲಾಖೆಯನ್ನು ಪರಾಮರ್ಶಿಸಿದರು ಸ್ಕೂಲಿಗೆ ಬಂದು ಬಾಲಕರ ಆರೋಗ್ಯಸ್ಥಿತಿಯನ್ನೂ, ಅವರಿಂದ ಮಾಡಿಸಲ್ಪಟ್ಟಿರುವ ವ್ಯವಸಾಯದ ಫಾರಮನ್ನೂ ನೋಡಿ ಬಹಳ ಸಂತೋಷಿಸಿ, ಈ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಡ ವಿದ್ಯಾರ್ಥಿಗಳ ಬಟ್ಟೆಗೋಸ್ಕರ ಒಂದು ಧರ್ಮದ ಫಂಡನ್ನು ಏರ್ಪಡಿಸುವುದು ಉತ್ತಮವೆಂದು ಬರೆದು, ಆ ಬಗ್ಗೆ ಎರಡು ರೂಪಾಯಿ ಕೊಟ್ಟು, ವ್ಯವಸಾಯದ ಫಾರಂನಿಂದ ಅನೇಕ ಅನುಕೂಲಗಳು ಬಾಲಕರಿಗೆ ಒದಗುವವೆಂದು ಬರಹದ ಮೂಲಕ ಅಪ್ಪಣೆ ಕೊಡಿಸಿದರು ತಾ ೧೧ ರಲ್ಲಿ ಸ್ಕೂಲು ಕಟ್ಟಡದಲ್ಲಿ ಸೇರಿದ್ದ ಗ್ರಾಮದ ಮಹಾ ಜನಗಳ ಸಭೆಯಲ್ಲಿ ಅಗ್ರಾಸನವನ್ನಲಂಕರಿಸಿ ಮಿ ಕೆ ರಂಕರಪ್ಪನವರಿಂದಲೂ ವಿದ್ಯಾರ್ಥಿ ಬಿ ಲಕ್ಷ್ಮೀಪತ್ಯಯನಿಂದಲೂ ಓದಲ್ಪಟ್ಟ ಶಿಡಬು ವಿಷಯವಾದ ಉಪನ್ಯಾಸವನ್ನು ಪುಷ್ಟೀಕರಿಸಿ ಸಾ ಸ್ವಭಾವ ಉಪನ್ಯಾಸದಿಂದ ಸಭಿಕರನ್ನು ಸಂತೋಷಪಡಿಸಿದರು.

ಮಂಚೇನಹಳ್ಳಿ ——ಈ ವರ್ಷ ಮಳೆಗಾಲವು ಕಕ್ಕಮಟ್ಟಿಗೆ ಸರಿಯಾಗಿ ನಡೆದದ್ದರಿಂದ ಹೊಲಗದ್ದೆಗಳ ಬೆಳೆಗಳು ಸಾಧಾರಣವಾಗಿ ಚೆನ್ನಾಗಿ ಆಗಿವೆ ಹಿಂಗಾರು ಮಳೆ ಸರಿಯಾದ ಕ್ರಮದಲ್ಲಿ ಬಂದಿದ್ದರೆ ಪೂರ್ಣ ಬೆಳೆ ಆಗುತ್ತಿತ್ತು.

ಅವರೆಕಾಯಿಯ ಫಸಲು ಕೆಟ್ಟುಹೋಗುತ್ತದೆಂದು ಚಿಂತಿಸುತ್ತಾರೆ ಎರಡು ಮೂರು ದಿವಗಳಿಂದ ಮೋಡವಾಡುತ್ತಿವೆ ಮಳೆ ಬರುವದೇನೋ ನೋಡಬೇಕು ಈ ಊರಿಗೆ ಮ, ಜಮೇದಾರ್ ರಾಘವೇಂದ್ರರಾಯರು ಬಂದಂದಿನಿಂದ ಕನ್ನಾ ಕೊರೆಯುವ, ಬೀಗ ಮುರಿಯುವ ಕಳ್ಳರ ಕಾಟಗಳು ನಿಂತುಹೋಗಿವೆ ಎಂದು ತಿಳಿಸಲು ಸಂತೋಷಿಸುತ್ತೇನೆ ——ತಾ ೭ ರಲ್ಲಿ ಚಿಕ್ಕಬಳ್ಳಾಪುರದಿಂದ ರೆವ್ ಆರ್ ಎ ಹಿಕ್ಲಿಂಗ್ ದೊರೆಗಳವರೂ ಅವರ ದೊರೆಸಾನಮ್ಮನವರೂ ಇಬ್ಬರು ಉಪದೇಶಿಗಳ ಸಹಿತ ಪ್ರಸಂಗಪ್ರಯಾಣವಾಗಿ ಬಂದು ಇದ್ದರು ಆ ದಿನ ಮಧ್ಯಾನ ೨ ಗಂಟೆಗೆ ದೊರೆಸಾನಮ್ಮನವರು ಉಪದೇಶಿಗಳ ಸಹಿತ ಇಲ್ಲಿನ ಲಂಡನ್ ಮಿಷನ್ ಗರ್ಲ್ಸ್ ಸ್ಕೂಲಿಗೆ ದಯಮಾಡಿಸಿದರು ೬೧ ಸ್ಕೂಲ್ ಬಾಲಕಿಯರು ಅಲಂಕೃತರಾಗಿ ತಕ್ಕ ಮರ್ಯಾದೆಗಳಿಂದ ಅವರನ್ನು ಎದುರುಗೊಂಡರು. ಉಪದೇಶಿಗಳು ಪ್ರಾರ್ಥನೆ ಮಾಡಿದರು ಸಭೆಯಲ್ಲಿ ದೊಡ್ಡ ಮನುಷ್ಯರೂ ವರ್ತಕರೂ ಇಂಗ್ಲೀಷ್ ಕನ್ನಡ ಸ್ಕೂಲು ಮಾಸ್ತರುಗಳೂ ಹಾಜರಾಗಿದ್ದರು ಉಪದೇಶಿಯವರು ಕಾಲೋಚಿತವಾದ ಭಾಷಣ ಮಾಡಿದ ತರುವಾಯ ಬಾಲಕಿಯರು ದೇವರ ಪ್ರಾರ್ಥನೆಯನ್ನೂ ಬಾಲ್ಯನೀತಿಯ ೨೦ ಚರಣಗಳನ್ನೂ ಇಂಪಾಗಿ ಹಾಡಿದರು ೫ ಮಂದಿ ಮೇಲಿನ ತರಗತಿಯವರು ಮುಂದಕ್ಕೆ ಬಂದು ವಿರಬನ ಪತ್ರ ಎಂಬ ಅಭಿನಯದ ಗೀತದ ಆಟವನ್ನು ಹಾಡು ಸಹಿತವಾಗಿ ಆಡಿ ಸಂತೋಷಪಡಿಸಿದರು ದೊರೆಸಾನಮ್ಮನವರು ಹುಡುಗಿಯರಿಗೆ ಆಟ್ಟಿಗಳನ್ನೂ ಸುಂದರವಾದ ಇಂಗ್ಲೀಷ್ ಬೊಂಬೆಗಳನ್ನೂ ೫೮ ಬಾಲಕಿಯರಿಗೂ. ತರಗತಿಗಳನ್ನು ಮುಗಿಸಿರುವ ಮೂವರಿಗೆ ಸಾಮಾನು ಇಟ್ಟುವ ಸುಂದರವಾದ ಹೊಲಿಗೆ ಪೆಟ್ಟಿಗೆಗಳನ್ನೂ ಇನಾಮು ಕೊಟ್ಟರು ತರುವಾಯ ಎ, ಬಿ ತರಗತಿಗಳ ಬಾಲಕಿಯರನ್ನು ಹೊರಗೆ ಕರಕೊಂಡು ಹೋಗಿ ದೊರೆಸಾನಮ್ಮನವರೇ ಸೋಟೋ ತೆಗೆದರು. ಅನಂತರ ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ಟರ್ ಮ್ಯಾ ವಿಟ್ಲ ಮಾರ್ತಿ ಆಚಾರ್ಯರವರು ಇಂಗ್ಲೀಷಿನಲ್ಲಿ ಸಭಿಕರ ಪರವಾಗಿ ಲಂಡನ್ ಮಿಷನ್‌ನವರ ಈ ಪರೋಪಕಾರ ಕಾರ್ಯವನ್ನು ಕುರಿತು ಮಾತಾಡಿ ಕೃತಜ್ಞತೆಯ ವಂದನೆಗಳನ್ನು ತಿಳಿಸಿದರು ತರುವಾಯ ಸರ್ವರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು

ದೊಡ್ಡಬಳ್ಳಾಪುರ ——ಇಲ್ಲಿ ಮಳೆಬೆಳೆಗಳು ಚೆನ್ನಾಗಿ ಆಗಿದ್ದರೂ ಧಾರಣೆಗಳು ಇಳಿಯಲಿಲ್ಲ ರಾಗಿ ರೂಪಾಯಿಗೆ ಹಳೇದು ೧೪ ಸೇರು, ಹೊಸದು ೧೬ ಸೇರು ಮಾರುತ್ತಾರೆ ಹೋದ ವಾರ ಪರಸ್ಥಳದ ಗಿರಾಕಿಗಳು ಬಂದ ಕಾರಣ ಸ್ಥಳದವರಿಗೆ ರಾಗಿ ಸಿಕ್ಕುವದೇ ಕಷ್ಟವಾಯಿತು ಅಕ್ಕಿ ೭ ೮ ಸೇರು ಮಾರುತ್ತಾರೆ ——೧೦ ನೇ ತಾ ಶುಕ್ರವಾರ ರಂಗಣ್ಣನವರ ಅಂಗಡಿ ಹತ್ತಿರ ಒಂದು ಜಟ್ಕಾ ಗಾಡಿಯು ಒಬ್ಬ ಹುಡುಗನ ಕಾಲಿನ ಮೇಲೆ ಹರಿದು ಸ್ವಲ್ಪ ಗಾಯವಾಗಿ ನೋವಾಯಿತು ಇಲ್ಲಿ ಆಗಾಗ್ಗೆ ಇಂತಾ ತೊಂದರೆಗಳು ಸಂಭವಿಸುವದರಿಂದ ಗಾಡಿ ಹೊಡೆಯುವವರು ಎಚ್ಚರಿಕೆಯಾಗಿರಬೇಕಲ್ಲದೆ, ಪೋಲೀಸಿನವರು ಅವರನ್ನು ಎಚ್ಚರಿಸುತ್ತಾ ಬರಬೇಕಾಗಿದೆ ——ಇಲ್ಲಿನ ಹವಾ ಅನುಕೂಲವಾಗಿದೆ ಬುಸ್ಸಿ ಫಸಲೆಲ್ಲಾ ಕೊಯ್ದು ಬಣವೆಗಳನ್ನು ಹಾಕಿದರು ಅವರೆ, ತೊಗರಿ ಭತ್ತ ಕಬ್ಬಿನ ಫಸಲುಗಳು ಚನ್ನಾಗಿರುತ್ತವೆ ಸ್ವಾತಿ ಮಳೆಯ ೩ ೪ ನೇ ಪಾದಗಳಲ್ಲಿ ಸುರಿದ ಮಳೆಯಿಂದ ಎಲ್ಲಾ ಫಸಲೂ ಚನ್ನಾಗಿಯೇ ಆಯಿತು ——ಕೋಟೆ ಆಂಜನೇಯ ದೇವಸ್ಥಾನದಲ್ಲಿ ನೆನ್ನೆ ಉತ್ಥಾನದ್ವಾದಶಿ ಕೃತ್ತಿಕಾ ಪೌರ್ಣಮಿ ದಿನಗಳಲ್ಲಿ ಕೆಲವರು ಕಾರ್ತೀಕ ಪೂಜೆಯನ್ನು ಜ್ವಾಲ ತೋರಣವನ್ನು ಬಹು ವಿಜೃಂಭಣೆಯಿಂದ ನಡಿಸಿದರು ಸಾವಿರಾರು ಜನರು ದೇವತಾ ಸೇವೆಗೆ ಬಹು ಸಂತೋಷದಿಂದ ಸೇರಿದ್ದರು ಆ ದಿನ ರಾತ್ರಿ ಸುಮಾರು ೪ ಗಂಟೆವರಿವಿಗೂ ಉತ್ಸವವೂ ಭಜನೆಯೂ ನಡೆಯಿತು ಇಂಥಾ ಉತ್ಸವವು ಇದುವರೆಗೆ ಇಲ್ಲಿ ನಡೆಯಲಿಲ್ಲವೆಂದು ಜನರು ಬಹು ಸಂತೋಷಪಟ್ಟರು ——ಇಲ್ಲಿನ ದೇವಾಂಗದವರ ಮಿ ಸೂಬಗೆರೆ ಚಂದ್ರಶೇಖರಪ್ಪನವರೂ ಮಿ ಅ ಭೋಗನಂಜುಂಡಪ್ಪನವರೂ ನಾಯಿಲ್ ಪೇಟೆಯಿಂದ ಬಂದಿದ್ದ ಲಕ್ಷ್ಮೀನಾರಾಯಣ ಎಂಬ ದಾಸರಿಂದ ಇಲ್ಲಿನ ಸ್ಕೂಲಿನಲ್ಲಿ ಕೌಸಲವರ ಜನನ, ಕಾಳಗ ರಾಮಾದಿಗಳು ಸೀತಾ ಸಮೇತ ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತರಾದದ್ದನ್ನು ಹರಿಕಥೆ ಮಾಡಿಸಿದರು ಸುಮಾರು ಸಾವಿರ ಜನದವರೆಗೂ ಕಥೆಯನ್ನು ಕೇಳಲು ಸೇರಿದ್ದರು ನಮ್ಮ ಅಮಲ್ದಾರ್ ಮೆ॥ ಮುಕುಂದರಾಯರವರೂ, ಶಿರಸ್ತೇದಾರರೂ, ಇತರ ಸರ್ಕಾರಿ ಉದ್ಯೋಗಸ್ಥರೆಲ್ಲಾ ಸೇರಿದ್ದರು ಆ ಸಭೆಯಲ್ಲಿ ಸದರಿ ಚಂದ್ರಶೇಖರಪ್ಪ ಭೋಗನಂಜುಂಡಪ್ಪನವರು ದಾಸರಿಗೆ ಬಹುಮಾನ ಪೂರ್ವಕವಾಗಿ ಬಂಗಾರದ ಕಾಪುಗಳನ್ನು ಅಮಲ್ದಾರ್ರ ಹಸ್ತದಿಂದ ಕೊಡಿಸಿದರು ——ಮೆ॥ ಚಂದ್ರಶೇಖರಪ್ಪನವರೂ ಮೆ॥ ಹಾಲಬೆ ಗುರುಶಂಭುಲಿಂಗಪ್ಪನವರೂ ಹೋದ ವರ್ಷದಂತೆ ಈ ಸಲವೂ ಇಲ್ಲಿಗೆ ಪರೀಕ್ಷೆಗಾಗಿ ಬಂದಿದ್ದ ವಿದ್ಯಾರ್ಥಿಗಳಿಗೆ ಸ್ಥಳವಸತಿಯನ್ನು ಕಲ್ಪಿಸಿ ಸರಿಯಾಗಿ ಭೋಜನಾದಿಗಳನ್ನು ಅನುಕೂಲ ಪಡಿಸಿದ್ದಲ್ಲದೆ ಸುಮಾರು ೧೦೦ ಜನ ವಿದ್ಯಾರ್ಥಿಗಳೂ ಅವರ ಮಾಸ್ತರುಗಳೂ ಸ್ಥಳದ ಜನಗಳೂ ಸಹ ಇನ್ನು ಮುಂದೆ ಪರೀಕ್ಷಾಕಾಲಕ್ಕೆ ಹೆಚ್ಚು ಜನ ವಿದ್ಯಾರ್ಥಿಗಳು ಸೇರಲು ಅನುಕೂಲವಾಯಿತೆಂದು ಅವರ ಉದಾರಗುಣವನ್ನು ಕೊಂಡಾಡಿದರು

ಚನ್ನರಾಯಪಟ್ಟಣ — ಇಲ್ಲಿ ತಾ ೭ನೇ ಮಂಗಳವಾರ ಪ್ರಾತಃಕಾಲ ವೆಸ್ಲಿಯನ್ ಬಾಲಿಕಾ ಪಾಠಶಾಲೆಯಲ್ಲಿ ಬಾಲಕಿಯರಿಗೆ ಬಹುಮಾನ ವಿನಿಯೋಗವು ನಡೆಯಿತು ಶಾಲೆಯ ಮುಂಭಾಗದಲ್ಲಿ ಚಪ್ಪರವು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟು, ಜನಗಳ ಕಣ್ಮನಗಳಂ ಸೆಳೆಯುತ್ತಿದ್ದಿತು ಪಾಠಾಲಯದ ಒಳಪ್ರಾಂತವು ಚಿತ್ರಪಟಗಳಿಂದಲೂ, ನಾನಾ ಬಣ್ಣದ ತಳಕುಸುಮಗಳಿಂದಲೂ ಅಲಂಕೃತವಾಗಿ ಒತಾಗ್ನಹದಂತೆ ಶೋಭಿಸುತ್ತಿದ್ದಿತು ಪ್ರಾರ್ಥಿಸಲ್ಪಟ್ಟದ್ದ ಮೇರೆಗೆ ಪುರಾಧಿಕಾರಿಗಳೂ, ಮುಖ್ಯ ನಾಗರೀಕರೂ. ೮ ಘಂಟೆಗೆ ಸಭೆಯನ್ನಲಂಕರಿಸಿದರು ಬಾಲಕಿಯರು ಚನ್ನ ಬಣ್ಣದ ಉಡಿಗೆ ತೊಡಿಗೆಗಳಂ ಧರಿಸಿ, ಸಾಲು ಸಾಲಾಗಿ ಉಪಾಧ್ಯಾಯರಿಂದ ನಿಯಮಿತವಾದ ಆಸನದಲ್ಲಿ ಕುಳ್ಳಿರಿಸಲ್ಪಟ್ಟಿದ್ದರು, ಸಣ್ಣ ಸಣ್ಣವರು ಬಹುಮಾನಾಭಿಲಾಷೆಯಿಂದ ಆತುರರಾಗಿ ಮಾಡುತ್ತಿದ್ದ ಚೇಷ್ಟೆಯು ಹರ್ಷವಾಗಿಯೇ ಇದ್ದಿತು ಹಾಸನದಿಂದ ದಯಮಾಡಿಸಿದ್ದ ರೆ॥ ಸ್ಪೆನ್ಸರ್ ಮತ್ತು ಅವರ ದೊರೆಸಾನಿಯವರು ೯ ಘಂಟೆಗೆ ಬಂದು ಅಗ್ರಾಸನವನ್ನು ವಹಿಸಿದ್ದರು ಬಾಲಕಿಯರ ಗಾನವು ಪ್ರಾರಂಭವಾಗಿ ಕೇಳಲು ಬಹು ಇಂಪಾಗಿದ್ದಿತು ಶಾಲೆಯ ಪ್ರಥಮೋಪಾಧ್ಯಾಯರು ವಾರ್ಷಿಕ ರಿಪೋರ್ಟನ್ನು ಓದಿದ ತರುವಾಯ, ಅಗ್ರಾಸನಾಧಿಪತಿಗಳು, ಸಭೆ ಸೇರಲು ಕಾರಣ ಮಗ್ಗೆರ ವಿಸ್ತರಿಸಿದರು ಬಳಿಕ ಸಬ್ ಜಡ್ಜ್ ಮಿ ರಾಮಕೃಷ್ಣಯ್ಯನವರು ಹೂಣಭಾಷೆಯಲ್ಲಿಯೂ, ಶಿರಸ್ತೇದಾರ್ ಮಿ ಗರುಡಾಚಾರ್ಯರು ದೇಶಭಾಷೆಯಲ್ಲಿಯೂ ಲಲಿತ ಮತ್ತು ಸದ್ಬೋಧಕಗಳಾದ ಉಪನ್ಯಾಸಗಳಂ ಮಾಡಿ, ಮಿಷನ್ ಸಂಘದವರ ದಿವಾಳ ಕಾರ್ಯ, ಮಹೋಪಕಾರಕ್ಕೂ ಅವರ ಪ್ರೀತಿಗಳಂ ವಂದಿಸಿದರು ರೆವರೆಂಡರವರು ಉಪನ್ಯಾಸಕರಿಗೆ ಪ್ರತಿ ವಂದನೆಗಳನ್ನರ್ಪಿಸಿದ ಮೇಲೆ ಸ್ಪೆನ್ಸರ್ ದೊರೆಸಾನಿಯವರು ಸ್ವಹಸ್ತದಿಂದ ಪ್ರತಿಯೊಬ್ಬ ಬಾಲಕಿಗೂ ಚಿತ್ರ ವಿಚಿತ್ರ ಉಡುಪುಗಳಿಂದಲಂಕರಿಸಲ್ಪಟ್ಟಿದ್ದ ಪುತ್ಥಳಿಗಳನ್ನೂ, ಕೆಲವರಿಗೆ ವಸ್ತ್ರಗಳನ್ನೂ ಬಹುಮಾನತಿಯಾಗಿ ಕೊಟ್ಟರು ರೆವರೆಂಡರವರು ಬಾಲಕಿಯರಿಗೆ ಅನೇಕ ಹಿತೋಪದೇಶಗಳನ್ನು ಅವರ ಎಳೆಯ ಮನಸ್ಸುಗಳಿಗೆ ಹಿಡಿಯುವಂತೆ ಮಾಡಿದರು ಸಭಿಕರಿಗೆ ಗಂಧ ಪುಷ್ಪಾದಿಗಳು ಕೊಡಲ್ಪಟ್ಟವು ಕೆಲಸದ ನಿಬಂಧದಿಂದ ಈ ಸಮಯದಲ್ಲಿ ಬಾರದಿದ್ದರೂ ಅಮಲ್ದಾರ್ ಮೆ॥ ಶ್ರೀನಿವಾಸರಾಯರು ಸ್ತ್ರೀ ವಿದ್ಯಾ ವಿಷಯದಲ್ಲಿ ತಮಗಿರುವ ಅಭಿಮಾನ ಪ್ರದರ್ಶನಾರ್ಥವಾಗಿ ಮಕ್ಕಳಿಗೆ ಮಿಠಾಯಿ ಕೊಡಲು ಏರ್ಪಡಿಸಿದ್ದ ಮೇರೆಗೆ ಕೊಡಲ್ಪಟ್ಟು ತರುವಾಯ ಬಾಲಕಿಯರು ರಾಷ್ಟ್ರಗೀತೆಯನ್ನು ಹಾಡಿದರು ಶ್ರೀಮದಿಂಡಿಯ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮೊಡೆಯರಾದ ಶ್ರೀ ಕೃಷ್ಣರಾಜ ಸಾರ್ವಭೌಮರಿಗೂ, ಅಗ್ರಾಸನಾಧಿಪತಿಗಳಿಗೂ ಆಯುರಾರೋಗ್ಯವಂ ಕೊಡಲೆಂಬ ಜಯಘೋಷದೊಡನೆ ಸಭೆಯು ಉಪಸಮ್ಹರಿಸಲ್ಪಟ್ಟಿತು ಕಟ್ಟಡದ ಭಾಗದಲ್ಲಿ ಬಾಲಕಿಯರ ಭಾವಚಿತ್ರವು ರೆವರೆಂಡರವರಿಂದ ತೆಗೆಯಲ್ಪಟ್ಟಿತು

ಕೊಪ್ಪ ತಾಲ್ಲೂಕು ಭಂಡಿಗಡಿ ಈ ಊರಿನ ನೂತನ ವಿದ್ಯಾಲಯ ಪ್ರವೇಶ ಪ್ರತಿಷ್ಠಾ ಮಹೋತ್ಸವವು ನಿನ್ನೆ ತಾ ೭ ರಲ್ಲಿ ಜರುಗಿತು ಪ್ರಾತಃಕಾಲ ೧೦ ಘಂಟೆಗೆ ಪ್ರವೇಶವೂ ಬಂದ ಅತಿಥಿಗಳಿಗೆ ಮತಾನುಸಾರವಾದ ಸುಭೋಜನವೂ ನಡೆದ ತರುವಾಯ ಸುಮಾರು ಮಧ್ಯಾಹ್ನ ೩ ಘಂಟೆಗೆ ನೂತನ ವಿದ್ಯಾಮಂದಿರದಲ್ಲಿ ಮಹನೀಯರ ಸಭೆಯು ಸೇರಿತು ಹಜರತ್ ಕೊಪ್ಪ ತಾಲೂಕು ಅಮಲ್ದಾರರು ಸಭಾಧ್ಯಕ್ಷತೆಯನ್ನು ವಹಿಸಿ ಮುಂದೆ ನಡೆಯಬೇಕಾದ ಕಾರ್ಯಗಳಿಗೆ ಅಪ್ಪಣೆಯನ್ನಿತ್ತರು ಮತ್ತು ಮ॥ ಶೃಂಗೇರಿ ತೂತುಗೋಡು ಕೃಷ್ಣಭಟ್ಟರವರೂ ಹಾಲ್ಮತ್ತೂರು ಯ ರಾಂಭಟ್ಟರವರೂ ಮೊದಲಾದ ಅನೇಕ ಮಹನೀಯರುಗಳಿಂದ ಈ ಮಹಾ ಸಭೆಯು ಅಲಂಕರಿಸಲ್ಪಟ್ಟಿತ್ತು ಕಾರ್ಯದರ್ಶಿಗಳಾದ ಹಜರತ್ ಇಮಾಂ ಸಾಹೇಬರವರ ಉಪನ್ಯಾಸವನ್ನು ಅವರ ಮಕ್ಕಳು ಮಹಮದ್ ಹುಸೇನ್ ಸಾಹೇಬರವರು ಕೃತಪಡಿಸಿದರು ಇದರಿಂದ ಈ ಸ್ಕೂಲ್‌ನಿವೇಶನವನ್ನು ಮೆ॥ ಬಳ್ಳಾರಿ ಕಾಳೇಗೌಡನವರು ಈ ಕಟ್ಟಡವನ್ನು ಶಾಲೆಗೋಸ್ಕರ ಧರ್ಮಾರ್ಥವಾಗಿ ಕೊಟ್ಟಿರುತ್ತಾರಾಗಿಯೂ, ಈ ಕಟ್ಟಡವು ಉದಾರಿಗಳಾದ ಅನೇಕ ಮಹನೀಯರ ಚಂದಾ ದ್ರವ್ಯ ಸಹಾಯದಿಂದ ತಯಾರಿಸಲ್ಪಟ್ಟಿರುತ್ತಾಗಿಯೂ, ಈ ವರೆಗೆ ಜೊತೆಯಾಗಿರುವ ಚಂದಾ ಮೊಬಲಗು ರೂ ೧,೫೪೯—೧೩—೬ ಪೈ ತಗಲಿರುವ ಖರ್ಚು ೧೫೪೯—೬—೦ ಪೈ ಎಂತಲೂ ತಿಳಿಸುತ್ತಾ ಮುಂದೆ ನಡೆಯಬೇಕಾದ ಅತ್ಯವಶ್ಯಕವಾದ ಇತರ ಕೆಲವು ಕಾರ್ಯಗಳಿಗೆ ತಕ್ಕ ಏರ್ಪಾಡು ನಡೆಸತಕ್ಕಬಗ್ಗೆ ಸಭಾಧ್ಯಕ್ಷರವರು, ಮಿ ಕೃಷ್ಣಭಟ್ಟರವರು, ಹಾ ಯ ರಾಂಭಟ್ಟರವರು ಭ ಶಿವಲಿಂಗಪ್ಪ ಶೆಟ್ಟರವರು, ಭಂ ಇಮಾಂಸಾಹೇಬರವರು ಈ ೮ ಜನಗಳನ್ನು ಮೆಂಬರುಗಳನ್ನಾಗಿ ಚುನಾಯಿಸಿ ನೇಮಕ ಮಾಡಿರುತ್ತಾರೆ ಹಿಂದೂ ಮತ್ತು ಮಹಮದೀಯರುಗಳಿಗೆ ಮತಸಂಬಂಧವಾಗಿ ಅನಾದಿಯಿಂದ ನಡೆದುಬಂದಿರತಕ್ಕ ಪರಸ್ಪರ ದ್ವೇಷವನ್ನು ಈ ಗ್ರಾಮಸ್ಥರೂ ಮತ್ತು ಇಮಾಂ ಸಾಹೇಬರವರೂ ತ್ಯಜಿಸಿ ಏಕೀಭವಿಸಿ ಈ ಮಹತ್ಕಾರ್ಯವನ್ನು ನಡಿಸಿದ್ದನ್ನು ಪರ್ಯಾಲೋಚಿಸಿದರೆ, ಈ ಗ್ರಾಮವು ಏಕಮತ್ಯದಿಂದ ತುಂಬಾ ಅಭಿವೃದ್ಧಿಗೆ ಬರಲು ಇದೇ ಸೂಚನೆಯಾಗಿರುತ್ತದೆಯಲ್ಲದೆ ಈ ದೇಶೀಯರೂ ಕೂಡ ಈ ಗ್ರಾಮಸ್ಥರ ಏಕಮತ್ಯವನ್ನೇ ಮಾದರಿಯಾಗಿಟ್ಟುಕೊಂಡು ಪರಸ್ಪರ ದ್ವೇಷವನ್ನು ತ್ಯಜಿಸಿ ಉಭಯ ಶ್ರೇಯಸ್ಸನ್ನು ಹೊಂದುತ್ತಾರಾಗಿ ನಂಬಿರುತ್ತೇವೆಂಬ ಶ್ಲಾಘನೀಯವಾದ ಉಪನ್ಯಾಸವನ್ನು ಅಪ್ಪಣೆ ಕೊಡಿಸಿದರು ಅನಂತರ ಈ ಸ್ಕೂಲ್‌ಮಾಸ್ತರು ಮ ಬಿ ನಾಗಭಟ್ಟರವರು ಈ ಸ್ಕೂಲ್ ರಿಪೋರ್ಟನ್ನು ಅತಿ ವಿನಯಪೂರ್ವಕವಾಗಿ ಓದಿ ಒಪ್ಪಿಸಿದರು ಆ ರಿಪೋರ್ಟಿನಿಂದ ಈ ಊರಿನಲ್ಲಿ ಸ್ಕೂಲು ಕಳೆದ ಅಕ್ಟೋಬರ್ ೧೬ನೇ ತಾ ಸ್ಥಾಪಿತವಾದಹಾಗೂ, ಮೊದಲು ಉತ್ತಮಸ್ಥಿತಿಯಲ್ಲಿದ್ದು ಮಧ್ಯೆ ಸ್ವಲ್ಪ ಹೀನಸ್ಥಿತಿಯನ್ನು ಹೊಂದಿ ನಂತರ ಕ್ರಮೇಣ ವೃದ್ಧಿಯನ್ನು ಹೊಂದುತ್ತಾ ಬಂದು ಈಗ ೪೫ ಜನ ಬಾಲಕರಿಂದ ಸಮೃದ್ಧವಾಗಿರುವ ಹಾಗೂ ತಿಳಿಯಬರು ತ್ತು ಸಭಾಧ್ಯಕ್ಷರವರು ಈ ಗ್ರಾಮಾಂತರ ಪಾಠಶಾಲೆಗಳಲ್ಲೆಲ್ಲಾ ಇದು ಒಂದು ಉತ್ತಮ ಸ್ಥಿತಿಯನ್ನು ಹೊಂದಿ ಸ್ತೋತ್ರಾರ್ಹವಾಗಿರುತ್ತಾಗಿಯೂ, ಈ ರೀತಿಯು ಮುಂದೆ ಬಹಳ ಒಳ್ಳೇ ಅಭಿವೃದ್ಧಿಗೆ ಬರುವ ನಂಬಿಕೆಯು ಸಂಪೂರ್ಣವಾಗಿ ತೋರುವದರಿಂದ ಶಿಕ್ಷಾಕ್ರಮವು ಇನ್ನೂ ಚನ್ನಾಗಿ ನಡೆಯುವುದಕ್ಕಾಗಿ ಇನ್ನೊಬ್ಬ ಸಹಾಯೋಪಾಧ್ಯಾಯರು ಅಗತ್ಯವಾಗಿಲ್ಲಿಗೆ ಬೇಕಾಗಿದೆ ಎಂದೂ ಅಪ್ಪಣೆ ಕೊಡಿಸಿದರು ಅಲ್ಲದೆ ತೀರ್ಥಹಳ್ಳಿ ತಾಲ್ಲೂಕು ಅಪ್ಪರ್ ಸ್ಕೂಲ್ ಮಾಸ್ಟರ್ ಮೆ॥ ಸುಬ್ರಹ್ಮಣ್ಯ ಶಾಸ್ತ್ರಿಗಳವರು ವಿದ್ಯಾಭ್ಯಾಸದ ಅವಶ್ಯಕತೆ ಎಂಬ ರಸವತ್ತಾದ ಉಪನ್ಯಾಸವನ್ನೂ ಮೆ॥ ಸಣ್ಣಬಸಪ್ಪನವರು ಹಿಂದೂದೇಶದ ನಾಗರೀಕ ಎಂಬ ಸುಶ್ರಾವ್ಯವಾದ ಉಪನ್ಯಾಸವನ್ನೂ ಕೃತಪಡಿಸಿದರು ಅನಂತರ ಕರ್ಣಾನಂದಕರವಾದ ಗ್ರಾಮಾಫೋನ್ ಗಾಯನವು ಜರುಗಿತು ತರುವಾಯ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾದಿ ಕಾರ್ಯಗಳು ನಡೆದು ಗಂಧ ಪುಷ್ಪ ತಾಂಬೂಲ ಸ್ವೀಕಾರಾನಂತರ ಸಭೆಯು ಬರಖಾಸ್ತಾಗಿ ಉಭಯಮತಸ್ಥರುಗಳಲ್ಲಿಯೂ ರಂಜಾಮೃಕ್ತ ಸಮುದಾಯದಿಂದಲೂ ತಳಿರುತೋರಣಗಳಿಂದಲೂ ಸಿಬಡಿ ಕೃತವಾಗಿರತಕ್ಕ ಬೀದಿಯಲ್ಲಿ ಶ್ರೀಮನ್ ಮಹಾರಾಜರವರ ಭಾವಚಿತ್ರದ ಮೆರವಣಿಗೆಯು ಸಾಯಂಕಾಲ ಸುಮಾರು ೮ ಘಂಟೆ ಸಮಯದಲ್ಲಿ ಗೌರವಾರ್ಥವಾದ ೨೧ ಕುಶಾಲ್ ತೋಫುಗಳಿಂದಲೂ, ಮೊಳಗುತ್ತಿರುವ ಬಾಜಾ ಬಜಂತ್ರಿ ಸಮುದಾಯಗಳಿಂದಲೂ, ಪ್ರಕಾಶಮಾನವಾದ ಜ್ಯೋತಿ ಮಾಲಾ ಸಮುದಾಯಗಳಿಂದಲೂ, ಅನೇಕವಾದ ಬಾಣ ಬಿರುಸುಗಳ ಸಮುದಾಯಗಳಿಂದಲೂ ಸಾವಿರಾರು ಜನಗಳಿಂದ ಪರಿವೃತವಾಗಿ ವಿಸ್ತಾರವಾದ ಮುಖ್ಯ ಸೂಂಟು ನುರಿ ಮನೆಗಳ ವಿನ್ಯಾಸಗಳನ್ನು ಸಂಗ್ರಹಿಸಿ ಪುನಃ ನೂತನ ವಿದ್ಯಾಲಯದಲ್ಲಿ ಸ್ಥಾಪಿಸಲ್ಪಟ್ಟು ಉತ್ಸವವು ಸಂಪೂರ್ಣವಾದ ಅನಂತರ ಮಹನೀಯರಾದ ಸಭಿಕರುಗಳು ತಮ್ಮ ತಮ್ಮ ಬಿಡಾರಾಭಿಮುಖವಾಗಿ ತೆರಳಿದರು

Printed and Published by the Rev H GULLIFORD, Proprietor and Manager Wesleyan Mission Press, Mysore 16/12/1909

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೦೯ ನೇ ಇಸವಿ ಡಿಸೆಂಬರ್ ತಾರೀಖು ೨೩ ನೇ ಗುರುವಾರ. ಸಂಚಿಕೆ ೨೦

ಭಾರತಿ ಸಂಪಂಗಿರಾಮ ವಿರಚಿತ ಪುಸ್ತಕಗಳು !!

88 1

೧ ಕರ್ನಾಟಕ ಕಥಾಸರಿತ್ಸಾಗರ (ಕನ್ನಡ [illegible]) ... ಕಥಾಸರಿತ್ಸಾಗರ ... ದೊಡ್ಡ ದೊಡ್ಡ ಕಥೆಗಳು ... ಉಪಕಥೆಗಳು ... ಭಾರತ, ಭಾಗವತ, ರಾಮಾಯಣ, ಇತಿಹಾಸ, ಪುರಾಣ, ಪ್ರಬಂಧ ಮೊದಲಾದವುಗಳ ... ಕನ್ನಡಿಗರಿಗೆ ಕನ್ನಡ ... ಸಂಪುಟಗಳು ... ಕಾಗದ ... ಕ್ರಯ ಮೂರು ರೂಪಾಯಿ !! ... !!!

ಇಂಗ್ಲಿಷು [illegible] ಪುಸ್ತಕ! ಇಂಗ್ಲಿಷು ಕಲಿಯುವ ಪುಸ್ತಕ!!

ಆಂಗ್ಲಭಾಷಾಪ್ರವೇಶದಾಯಿನಿ ಎಂಬ ಹೊಸದಾಗಿ ಇಂಗ್ಲಿಷು ಕಲಿಯುವ ಮೊದಲನೆಯ ಪುಸ್ತಕ (The Self English Study Vol I) ... ಮೂರನೆಯ ಮುದ್ರಣ ... ಕನ್ನಡಿಗರಿಗೆ ಇಂಗ್ಲಿಷು ಭಾಷೆಯು ... ಭಾಷಾಂತರ ... ಉತ್ತಮ ಸಾಧನ ... ಕ್ರಯ ಒಂದು ರೂಪಾಯಿ ... ತರಿಸಿಕೊಳ್ಳಿರಿ

ಪ್ರಶ್ನೋತ್ತರ ಲೇಖ್ಯಬೋಧಿನಿ ನಾಲ್ಕನೆಯ ಮುದ್ರಣ ೧ ... ಮುದ್ರಣಗಳಿಗಿಂತಲೂ ಅನೇಕ ಸಂಗತಿಗಳನ್ನು ... ಸೇರಿಸಿರುವದರಿಂದ ಪುಸ್ತಕವು ... ದೊಡ್ಡದಾಗಿದೆ ಕ್ರಯ ಒಂದು ರೂಪಾಯಿ ನಾಲ್ಕಾಣೆ ... !!!

ಭಾರತಿ ಸಂಪಂಗಿ ರಾಮ,

(ಪ್ರೆಸ್ಟು) ಪೊಸಕೋಟೆ, (ಡಿಸ್ಟ್ರಿಕ್ಟು) ಬೆಂಗಳೂರು

ದೀಪಾವಳಿಗೆ ಬಹುಮಾನ

75 8

ಈ ಕೆಳಗೆ ಬರೆದಿರುವ ಪುಸ್ತಕಗಳಲ್ಲಿ ಒಂದು ರೂಪಾಯಿಗೆ ಕಡಮೆಯಿಲ್ಲದೆ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ಒಂದು ರೂಪಾಯಿಗೂ ೧೯೧೦ ನೇ ವರ್ಷದ ಒಂದು ಡೈರಿಯನ್ನು ಉಚಿತವಾಗಿ ಕೊಡುವೆವು ಜಾಗ್ರತೆ ... ಡಿಸೆಂಬರ್ ಆಖೈರ್‌ವರೆಗೆ ಮಾತ್ರ ವಿ ಪಿ ಛಾರ್ಜು ಅಲ್ಲದೆ

ನಿರುಪಮಾ ನೂತನನಾಟಕ ಆಡುವುದಕ್ಕೂ ಓದುವುದಕ್ಕೂ ಅನುಕೂಲವಾಗಿದೆ ... ಚಮತ್ಕಾರ ... ಮುದ್ರಣ ... ಕ್ರಯ ರೂ ೦-೧೨-೦

ಸೋಮಸುಂದರ ಬಂಗಾಳಿಯ ನಾವೆಲ್ಲನ್ನು ... ಬಾಲಕರ ಧರ್ಮ, ಸತ್ಸಂಗ ದುಸ್ಸಂಗಗಳ ... ಓದುವುದಕ್ಕೆ ಮೊದಲು ಮಾಡಿದರೆ ... ಬಿಡುವುದಕ್ಕೆ ಆಗುವುದಿಲ್ಲ ಕ್ರಯ ೧೦ ಆಣೆ

ಪತ್ನೀಹಿತಸೂಚನಿ—(ವೀರೇಶಲಿಂಗಂಪಂತಲುರವರ ತೆಲುಗು ಗ್ರಂಥದ ಭಾಷಾಂತರ) ಸ್ತ್ರೀಯರಿಗೆ ಅತ್ಯಾವಶ್ಯಕವಾದುದು ... ಗರ್ಭಿಣಿಯರ ... ಪ್ರಸವಾನಂತರ, ಬಾಣಂತಿತನ, ... ರೋಗಗಳನ್ನೂ ಅದರ ಪರಿಹಾರವನ್ನೂ ... ಚೆನ್ನಾಗಿ ಬೋಧಿಸುವುದು ಕನ್ನಡದಲ್ಲಿ ಇಂತಹ ಗ್ರಂಥವು ಹುಟ್ಟುವುದಕ್ಕೆ ಇದೇ ಮೊದಲು ... ಪ್ರತಿಗಳಿ ಉಳಿದಿವೆ ಕ್ರಯ ರೂ ೦-೧೨-೦

ಸಂಗೀತಪಾರಿಜಾತ—ಹೆಣ್ಣು ಮಕ್ಕಳಿಗೆ ಅತ್ಯಾವಶ್ಯಕವಾದ ಹಾಡಿನ ಪುಸ್ತಕ! ಹಸೆಗೆ ಕರೆಯುವ ಹಾಡು ಆರತಿಯೆತ್ತುವ ಹಾಡು, ಬೀಗರ ಹಾಡು, ಬಾಗಿಲು ತೆರೆಯುವ ಹಾಡು, ... ಇದರಲ್ಲಿ ಅಡಕವಾಗಿವೆ ... ಅನುಸರಿಸಿರುವುದು ಕ್ರಯ ರೂ ೦-೪-೦

ಇವಲ್ಲದೆ "ಪಾಕ್ಯಸಂಜೀವಿನಿ" ಎಂಬ ನಾಲ್ಕು ನಕಲಿಯನ್ನುಳ್ಳ ಪುಸ್ತಕ (೦-೪-೦), "ಅಸಹಾಯಶೂರಪ್ರಹಸನ" ಎಂಬ ಮನೋಹರವಾದ ... ನಕಲಿಯ ಪುಸ್ತಕ (೦-೨-೬), "ಸತ್ಯಸಂಜೀವನ" ಎಂಬ ... ಕಲ್ಪಿತಕಥೆ (೦-೬-೦) ಇವುಗಳೂ ದೊರೆಯುವವು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ನಮ್ಮ ವಿಳಾಸ—ಮ್ಯಾನೇಜರ್, ಕರ್ನಾಟಕಚಂದ್ರಿಕೆ, ಮೈಸೂರು

ಸುಗಂಧಗಳು.

77 6

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ ... ಬತ್ತಿಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ... ಆಣೆ ... ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ

ವಿಳಾಸ —ಶಿ ಎಲ್ ಉಪಾಧ್ಯಾಯ, ಮೈಸೂರು

ಪುಸ್ತಕಗಳು

70-14

ಜಾಗ್ರತೆ ತರಿಸಿಕೊಳ್ಳಿರಿ ಮುಗಿದುಹೋದನಂತರ ... ದೊರೆಯಲಾರವು

... ನೇ ಭಾಗ ಇಂಗ್ಲಿಷ್ ಕಲಿಯುವ ಪುಸ್ತಕ ಕ್ರಯ ೧-೮-೦ ಇಂಗ್ಲಿಷ್ ಭಾಷೆಯನ್ನು ಓದಲೂ, ಬರೆಯಲೂ, ... (ಭಾಷಾಂತರ) ಮಾಡುವುದಕ್ಕೂ ಮೊದಲಾದ ಅನೇಕ ವಿಷಯಗಳನ್ನು ಈ ಪುಸ್ತಕದ ಸಹಾಯದಿಂದಲೆ ೧೨ ತಿಂಗಳೊಳಗಾಗಿ ... ಕಲಿಸುವ ಉತ್ತಮ ಪುಸ್ತಕವಿದು ಕ್ರಯ ೧-೮-೦

ಪಿ ರಾವ ... ವಿಳಾಸ —ವಿ ಕೆ ಮೂರ್ತಿ ಕಂಪೆನಿ

ನಂ ೧೮ ಒಂದನೆ ಬೀದಿ ... ಲಕ್ಷ್ಮೀರ್ ಪೇಟೆ

ಬೆಂಗಳೂರು ಸಿಟಿ

ಕನ್ನಡ ಕಥಾ ಸಂಗ್ರಹ ಕ್ರಯ ೧—೮—೦ ಸ್ವಲ್ಪ ಪ್ರತಿಗಳು ಉಳಿದಿವೆಯಾದ್ದರಿಂದ ಬೇಗ ಬೇಗ ಬರೆದು ತರಿಸಿಕೊಳ್ಳಿರಿ ಅರೇಬಿಯನ್ ನೈಟ್ಸ್, ಬೃಹತ್ಕಥಾಮಂಜರಿ ಮೊದಲಾದವುಗಳಿಗಿಂತಲೂ ಉತ್ತಮ ಪುಸ್ತಕವಿದು ಕ್ರಯ ೧-೮-೦ ೧ ನೇ ಭಾಗ ... ಇಂಗ್ಲಿಷ್ ಕಲಿಯುವಿಕೆ ಇಂಗ್ಲೀಷನ್ನು ಕಲಿಯ ... ನೇ ಭಾಗದ ಪುಸ್ತಕವಿದು ಕ್ರಯ ೧-೮-೦ ಗೀತಾಮೃತ ... ಕ್ರಯ ೦—೮—೦

ವಿಳಾಸ —ಮ್ಯಾನೇಜರ್

ಕರ್ನಾಟಕ ಪುಸ್ತಕ ಶಾಲೆ

ಲಕ್ಷ್ಮೀರ್ ಪೇಟ್

ಮೈಸೂರು ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರವರ ಆಫೀಸ್.

ಬೆಂಗಳೂರು—ತಾರೀಖು ೧೧ ನೇ ಡಿಸೆಂಬರ್ ೧೯೦೯

ಇಸ್ತಿಹಾರ್‌ನಾಮಾ.

85 2

ಇದರಿಂದ ತಿಳಿಯಪಡಿಸುವದೇನಂದರೆ —

1910 ನೇ ಜನವರಿ ಲಾಗಾಯಿತು ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ಮೊದಲನೆ ವರುಷ 8 ರೂಪಾಯಿಯೂ, ಎರಡನೆ ವರುಷ 10 ರೂಪಾಯಿಯೂ ಮುಂದಿನ ಎರಡು ವರುಷಗಳು 12 ರೂಪಾಯಿನಂತೆಯೂ ಮಾಹೆಯಾನಾ ಐದು (೫) ವಿದ್ಯಾರ್ಥಿ ವೇತನಗಳನ್ನು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹಾದೂರ್ರವರ ಗವರ್ನಮೆಂಟಿನವರು ಕೊಡುತ್ತಾರೆ

ವಿದ್ಯಾರ್ಥಿಗಳು ಸಂಸ್ಕೃತವನ್ನು ತಿಳಿದವರಾಗಿ ಕಾವ್ಯದ ಐದನೇ ತರಗತಿಯವರೆಗೆ ಓದಿದವರಾಗಿರಬೇಕು ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯು ಪಾಸ್ ತೇರ್ಗಡೆಯಾದವರಾಗಿಯೂ ಅಥವಾ ೮ ತರಗತಿ ವರೆಗೆ ಓದಿದವರಾಗಿಯಾದರೂ ಇರಬೇಕು

ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸುವುದಕ್ಕೆ ಮುಂಚೆ 1910 ನೇ ಇಸವಿ ಜನವರಿ ತಾರೀಖು 10 ರಲ್ಲಿ ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ಪ್ರವೇಶ ಪರೀಕ್ಷೆಯೊಂದು ನಡೆಸಲ್ಪಡುತ್ತೆ

ಆ ದಿನ ಪ್ರಾತಃಕಾಲ 10 ಘಂಟೆಯಿಂದ ಮಧ್ಯಾಹ್ನ 1 ಘಂಟೆ ವರೆಗೆ ಇಂಗ್ಲೀಷಿನಲ್ಲಿ ಒಂದು ಪ್ರಶ್ನಾ ಪತ್ರವು ಮತ್ತು ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರೆಗೆ ಸಂಸ್ಕೃತದಲ್ಲಿ ಒಂದು ಪ್ರಶ್ನಾ ಪತ್ರವೂ ಕೊಡಲ್ಪಡುತ್ತೆ

ಪ್ರವೇಶ ಪರೀಕ್ಷೆಗೋಸ್ಕರ ಬರತಕ್ಕ ಅರ್ಜಿಗಳು ಇದರಡಿ ರುಜುಮಾಡಿರುವವರ ಹೆಸರಿಗೆ 1910 ನೇ ಇಸವಿ ಜನವರಿ 5 ನೇ ತಾರೀಖಿನ ಒಳಗೆ ಕಳುಹಿಸಲ್ಪಡಬೇಕು

(ಬೈ ಆರ್ಡರ್)

(ಸೈನ್) ಎ. ಸುಬ್ರಹ್ಮಣ್ಯ ಐಯರವರು,
ಮುಜರಾಯಿ ಸೂಪರಿನ್‌ಟೆಂಡೆಂಟ್ ಮತ್ತು ಸೆಕ್ರೆಟರಿ,
ಆಯುರ್ವೇದಿಕ್ ಕಾಲೇಜ್ ಕಮಿಟಿ

೧೯೧೦ ನೇ ಇಸವಿ ಕ್ಯಾಲೆಂಡರುಗಳ ಬಹುಮಾನ

82-3

ಡಿಸೆಂಬರ್ ತಿಂಗಳು ಆಖೈರಿನೊಳಗೆ ನಮಗೆ ... ಕಾರ್ಡಿನಲ್ಲಿ ವಿಳಾಸವನ್ನು ಬರೆದು ಕಳುಹಿಸತಕ್ಕವರಿಗೆ ಒಂದು ... ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ ವಿಳಾಸ — ಮ್ಯಾನೇಜರ್, ಚಂದ್ರೋದಯ ಆಫೀಸು ... ಮದರಾಸು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ನಮ್ಮ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ನಮಗೆ ಹಾಕಿ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 80

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ... ಬಟ್ಟೆಗಳು ... ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ... ಬಹಳ ಕಡಮೆ ಈ ಬಟ್ಟೆಗಳು ... ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ... ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುತ್ತದೆ ಗಜ ಒಂದಕ್ಕೆ ... ಆಣೆಯಿಂದ ... ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ... ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು ಕೂಸುಗಳ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ .

161

ಒಳ್ಳೇ ಟೋಪಿಗಳು ಯಾವವು ? ಯಾಕೆ ಸಂದೇಹವೇನು ? ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆ ... ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ... ನೇರಾಗಿ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಶಾಲಿನ ಬಟ್ಟೆ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 31

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ನಿಶ್ಚಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—ಜಿ ಎಸ್ ಕೆನ್ನಡಿ ಕಂಪೆನಿ ತುಮಕೂರು ಮತ್ತು

ಎಸ್ ಪೀಟರ್ಸ್,

೨೩, ವೇದವಲ್ಲಿಯಪಿಳ್ಳೆ ಬೀದಿ, ವೇಪೇರಿ, ಮದರಾಸ್

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು

4 51



ಬೆನ್ನುಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ನಿಮಗೆ ಸ್ವಸ್ಥವಿಲ್ಲವೋ ?

ನನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿಮಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ?' ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ, ಹಾಗೆ ಆಗದಿದ್ದರೆ ಡೋನ್ ರವರ ಚಮತ್ಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊ ಮಾರನೇ ದಿವಸ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿಮಗೆ ಸ್ವಸ್ಥವಾಗುವುದು

(೧೨ ಆಕೆ ಬುದ್ಧಿ ಪರಿಮಾಣ)

ಇದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಈ ಅಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ—ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು ತಲೆನೋವು, ಚೆಪೆ ಮೂತ್ರದ ಹುಳಿ ಗಿನ ಹೊಟ್ಟೆ ನೋವು ಈ ಕರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಚಮತ್ಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ಮೃದುವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [67 17]

ಬೆಲೆ ೪ ಆಣೆ, ೭ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೩೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಕಂಪೆನಿಯವರಲ್ಲಿ ದೊರೆಯುವುದು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಹಟಕ್ಕೆ ಬೀಳುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೆ

SCOTT'S EMULSION. 6 51

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮನುಷ್ಯನಿರುವ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸ್

84 ?

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿ ಆಸ್ಪತ್ರೆ ಇಟ್ಟಿರುವ ಪೂರ್ವ ಭಂಡಿ ಕಾರ್ಖಾನೆ, ಪಶ್ಚಿಮ ಹೈರೋಡು, ಉತ್ತರ ಕೆರೆದಾರಿ, ದಕ್ಷಿಣ ಪುರೋಹಿತ ಚಂದ್ರಯ್ಯನವರ ಮನೆ—ಈ ಮಧ್ಯೆ ಇರುವ ಮನೆಯು ನನ್ನ ಗಂಡನಾದ ಬ್ರಹ್ಮಯ್ಯನ ಬವರ ಪಿತ್ರಾರ್ಜಿತವಾದದ್ದು ಸದರಿ ಮನೆಯನ್ನು ನನ್ನ ಕ್ಕೆ ಮಾವನವರು ಹಾಲಿ ಕೋಣಸೂರಿನಲ್ಲಿರುವ ಪುಟ್ಟಣ್ಣನೆಂಬುವರು ನನಗೆ ತಿಳಿಯದಂತೆ ಪರಭಾರೆ ಮಾಡುವದಕ್ಕಾಗಿ ಉದ್ದಿಶ್ಯಪಟ್ಟಿರುವ ವರ್ತಮಾನ ತಿಳಿದುಬಂದಿದೆ ಸದರಿ ಮನೆಗೆ ನಾನು ಮುಖ್ಯ ಹಕ್ಕುದಾರಳಾಗಿರುತ್ತೇನೆ ಅದನ್ನು ಯಾರೇ ಆಗಲಿ ನನ್ನ ಅನುಮತಿ ಪಡೆಯದೆ ಸದರಿ ಪುಟ್ಟಣ್ಣನವರಿಂದ ಆಧಾರ ಭೋಗ್ಯ, ಯಾವ ಕ್ರಯವೇ ಆಗಲಿ ಮಾಡಿಕೊಂಡಲ್ಲಿ ಅಂಥವರು ನನಗೆ ಉಂಟಾಗುವ ಕಷ್ಟನಷ್ಟಗಳಿಗೆಲ್ಲಾ ಗುರಿಯಾಗುತ್ತಾರೆಂಬುವದನ್ನು ಈ ಮೂಲಕ ತಿಳಿಸಿ ಎಚ್ಚರಪಡಿಸುತ್ತೇನೆ

ಮಂಡ್ಯ, ರುಜು ಆ ಸುಬ್ಬಣ್ಣನವರ ಮಗಳು

೯ ೧೨ ೧೯೦೯ ಮಧುರಮ್ಮ

ಗಾರ್ಡಿಯನ್ ಎ ಅನಂತರಾಜಯ್ಯ

ಜ್ವರಹರಿ. 18 47

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ (—) ರೂ ೧೨ ಆ ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಜಾ ಬಿಡಲಾಗುವದು

ಓಮಂ ಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಎಂಟಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಔಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ಹೆರಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕೆಳಗಿನ ದಾದಿಯರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹನುಮಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತತ್ಕ್ಷಣದ ಗುಣಕಾರಿಯು [30 13

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಂಗಾಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆಶೀತ ವಾಯು ಜಖಮು, ಇತ್ಯಾದಿ

ಇದರ ಎಷ್ಟೋ ಸರ್ಟಿಫಿಕೇಟುಗಳನ್ನು ಜನರು ಕೊಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೈಯ ಮೇಲೆ ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦-೦

ಆಸ್ತಮಾಮಿಶ್ರಣ	೨ ೦ ೦
ಬೇಳುಕಡಿತದ ಮದ್ದು	೦ ೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುಡಿ ಬಗೆಗೆ	೦ ೮-೦
ಬಲಾಬು ಮಾತ್ರೆ—ಜುಲಾಬಿಗೆ	೦ ೮-೦
ನೇತ್ರಾಂಜನ—ಮಂದದೃಷ್ಟಿಗೆ	೦ ೪ ೦
ಮೂಲ ಮುಲಾಮು—ಮೂಲವ್ಯಾಧಿಗೆ	೩ ೪ ೦
ಕೇಶವರ್ಧಿನೀ ತೈಲ—ತಲೆಯ ಕೂದಲಿಗೆ	೧ ೦-೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦ ೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ ಇದನ್ನು ತರಿಸಿ ಎಲ್ಲರೂ ಓದಬೇಕು

ಒಂದು ಹೊಸ ಪುಸ್ತಕ ! ಒಂದು ಹೊಸ ಪುಸ್ತಕ ! !

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(೧೬ ಪುಟಗಳು ಸೊಗಸಾದ ಒಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು ಈತನು ಇಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಏರ್ಪಾಟುಗಳಿಂದಲೂ ಇಂಗ್ಲೆಂಡ್ ದೇಶವು ಹೊಂದುವುದಕ್ಕಿದ್ದ ನಾಶನವನ್ನು ತಪ್ಪಿಸಿದನು ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕು ಕಡೆಗಳಲ್ಲಿ ವಾಸವಾಗಿರುತ್ತಾರೆ ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು

"ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(10 ಪೇಜು) ಪ್ರತಿಯೊಂದಕ್ಕೆ	0—0—6
(80 ಪೇಜು)	0—1—0
(160 ಪೇಜು)	0—2—0

ಬೇರೆ ಒಳೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ [10-51]

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೬—೧೧—೧೯೦೦ ರಿಂದ ೨—೧೨—೧೯೦೦ ರ ವರೆಗೆ

ಸ್ಥಳ	ಪ್ಲೇಗ್ ಸಗಲಿದ್ದು	ಪ್ಲೇಗ್ ಸತ್ತದ್ದು.	ಕಾಲರಾ ಶಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	0	0	0
ಮೈಸೂರು "	34	23	0	0
ಬೆಂಗಳೂರು ಡಿಸ್ಟ್ರಿಕ್ಟ್	31	16	16	9
ಮೈಸೂರು "	73	54	16	10
ಕೋಲಾರ್ "	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ "	0	0	0	0
ಚಿತ್ರದುರ್ಗ "	2	0	22	11
ಕಡೂರ್ "	3	3	0	0
ಶಿವಮೊಗ್ಗ "	21	11	0	0
ಒಟ್ಟು	165	107	53	30

ಶಾಲಿವಾಹನ ಶಕ ವರುಷಂಗಳು ೧೮೨೨ ನೇ ಸೌಮ್ಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ದ್ವಾದಶಿ ಶುಕ್ರವಾರದಿಂದ ಮಾರ್ಗಶಿರ ಬಹುಳ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೦ ನೇ ಡಿಸೆಂಬರ್

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ಕೇದಿ ಧನು ಮಾಸ
24	ಶುಕ್ರ *	ದ್ವಾದಶಿ	5-38	ಕೃ	32-46	10
25	ಶನಿವಾ	ತ್ರಯೋದಶಿ	0-12	ಉಷರ	51-22	11
26	ರವಿವಾ §	ಪೌರ್ಣಮಿ	49-38	ಮೃ	26-56	12
27	ಚಂದ್ರ †	ಪಾಡ್ಯಮಿ	47-2	ಆ	25-28	13
28	ಕುಜ	ಬಿದಿಗೆ	45-38	ಪು	25-10	14
29	ಬುಧ ,	ತದಿಗೆ	45-30	ಪು	26-8	15
30	ಗುರು ‡	ಚೌತಿ	46-36	ಶ್ಲೆ	28-12	16

* ಮತ್ಸ್ಯದ್ವಾದಶಿ, ಹನುಮದ್ಜಯಂತಿ, ಪ್ರದೋಷ

§ ದತ್ತಾತ್ರೇಯ ಜಯಂತಿ, ಅಂಧಕಾಸುರ ಸಂಹಾರ

† ಅರಿದ್ರಾದರ್ಶನೋತ್ಸವ

, ದಗ್ಧಯೋಗ, ಪರಶುರಾಮಜಯಂತಿ

‡ ಸಂಕಷ್ಟಚತುರ್ಥಿ

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೩-೦-೦	೧೪-೦-೦
ಕೆಂಪಿಡಿ ಅಕ್ಕಿ ಅವಲ್		೧೩-೮-೦	೧೩-೦-೦
" ಮುಯಂ		೧೩-೦-೦	೧೨-೮-೦
ಜಾವ್ವಾಣಿ ಅಕ್ಕಿ		೧೩-೮-೦	೧೪-೦-೦
ಸಣ್ಣಕ್ಕಿ ಅವಲ್		೧೪-೪-೦	೧೬-೦-೦
" ಮುಯಂ		೧೭-೦-೦	೧೫-೦-೦
ಕೊಗಲೀ ಬೇಳೆ ಪಲ್ಲಾ ೧ಕ್ಕೆ		೧೪-೦-೦	೧೪-೮-೦
" ಮುಯಂ		೧೩-೮-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ		೮-೮-೦	೮-೮-೦
ಕಾರಿರಾಗಿ		೮-೦-೦	೮-೦-೦
ಜೋಳ		೭-೮-೦	೮-೦-೦
ತುಬಸಂದೆ ಸಬ್ಬ ೧ಕ್ಕೆ		೧೦-೦-೦	೧೧-೦-೦
ಬಿಳಿ ಅವರೆ		೧೪-೦-೦	೧೪-೦-೦
ಹೆಸರು		೧೦-೦-೦	೧೦-೧೨-೦
ಉದ್ದು		೧೪-೪-೦	೧೧-೮-೦
ಕಡಲೆ		೧೨-೮-೦	೧೦-೦-೦
ಎಳ್ಳು ಸೇ ೧೭೭ ಕ್ಕೆ		೧೫-೦-೦	೧೪-೦-೦
ಹುರುಳಿ		೯-೦-೦	೧೧-೦-೦
ಹರಳು ೧೨೭ ಸೇರಿಗೆ		೧೪-೦-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ		೨-೦-೦	೧-೪-೦
ಮೆಣಸಿನಕಾಯಿ		೪-೮-೦	೩-೮-೦
" ಮುಯಂ		೪-೪-೦	೩-೦-೦
ಸಣ್ಣ ನೊಡ್ಡ ಅಚ್ಚು		೮-೮-೦	ಮ ೩-೦-೦
ಒಣಶೆ ಮಣ ೧ಕ್ಕೆ		೪-೮-೦	೯-೪-೦
ಹರಿಶಿನ "		೫-೮-೦	೪-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦-೦-೦	೯-೮-೦
ಉಪ್ಪು "		೬-೪-೦	೫-೧೨-೦
ಹುಣಸೇ ಹಣ್ಣು		೨-೦-೦	೧-೧೨-೦
" ಹಳೇದು		೧-೮-೦	೧-೮-೦
ತುಪ್ಪ ಮಣ ೧ಕ್ಕೆ		೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೫-೦-೦	೫-೮-೦
ಅಡಕೇಕಾಯಿ ಮಣ ೧ಕ್ಕೆ		೧-೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧-೦-೦	೦-೧೧-೦
ಚಿನ್ನ (ಪೌನ್) ಕೆಂಪು		೧೫-೯-೦	೧೫-೪-೦
" " ಪಸಮೆ		೧೬-೦-೦	೧೫-೯-೦
" " ಗಟ್ಟಿ ತೊಲ ೧ಕ್ಕೆ		೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೬-೪-೦	೬೩-೦-೦

ದನಗಳ ಪ್ರದರ್ಶನವು.

ನೋಟೀಸು.

87-1

೧೯೦೧ ನೇ ಜನವರಿ ತಾರೀಖು ೬ ಮತ್ತು ೭ ನೇ ಗುರುವಾರ ಶುಕ್ರವಾರ ದಿವಸಗಳಲ್ಲಿ ಹಾಸನದಲ್ಲಿ ದನಗಳ ಪ್ರದರ್ಶನ ನಡೆಯುತ್ತೆಂತ ಇದರ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಪ್ರದರ್ಶನದಲ್ಲಿ ಉತ್ತಮವಾದ ಸಮಸ್ತ ಜಾತಿ ದನಗಳಿಗೆ ಮತ್ತು ಆಡು ಕುರಿಗಳಿಗೂ ಬಹುಮಾನಗಳು ದೊರಕುತ್ತವೆ. ದನಗಳನ್ನು ಪ್ರದರ್ಶನಕ್ಕೆ ಜನವರಿ ೫ ನೇ ತಾರೀಖಿನೊತ್ತಿಗೆ ಕಳುಹಿಸಿಕೊಡುವ ಏರ್ಪಾಡಿಡಬೇಕು.

ಹೆಚ್ಚು ವಿಷಯಗಳನ್ನು ಹಾಸನದ ದನಗಳ ಪ್ರದರ್ಶನದ ಕಮಿಟಿ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

(ಸೈನ್) ಪಿ. ಆರ್ ಡಬ್ಲ್ಯು. ವೆದಗಾಲ್,
ಪ್ರಸಿಡೆಂಟ್,
ಹಾಸನದ ದನಗಳ ಸಪ್ರದರ್ಶನದ ಕಮಿಟಿ

ತಾ. ೧೫ ನೇ ಡಿಸೆಂಬರ್, ೧೯೦೦, ಹಾಸನ.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 46

ಪೋಷಕಾಮಯಕರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ಸಿಗಡಿ ನಶ್ಯಕ್ತಿ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹನಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಚಟ್ಟುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೊಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವಕ್ತ್ರ ಔಷಧದ ಸಂಗಡಲೇ ಇರುತ್ತದೆ.

೨೫ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೮ ಆಣೆ

ವಿಳಾಸ.—ವಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸಂಜೀವಿನೀ ಔಷಧಾಲಯ, ಮೈಸೂರು.

28 46

ಎಂ. ಎಸ್. ಕುಮಾರಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು.—ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಚಳೀಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉನ್ಮಾದ, ನೋವಸಿಂತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ ಕ್ಕೆ ೩ ರೂಪಾಯಿ

ಸಂಜೀವಿನೀ ಮಾತ್ರೆ.—ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಕಾಮಿರಾರು ಮುಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ.

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಂಜುಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ಕರಪಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಧಾಣೆ ಲೇಬಲ್ ಇಟ್ಟು ಬರೆಯಿರಿ

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ಕೊಡಿಗೆ ವ್ಯವಸಾಯದ ಮತ್ತು ಕೈಗಾರಿಕೆ ಪ್ರದರ್ಶನ.

ಈ ಪ್ರದರ್ಶನವು ತಿರಚೂರು ಪಟ್ಟಣದಲ್ಲಿ ಬರುವ ಜನವರಿ ೨೪ ನೇ ತಾರೀಖಿನ ದಿನ ಉಪಕ್ರಮವಾಗಿ ಅದೇ ಮಾಹೆ ೩೧ಕ್ಕೆ ಸಮಾಪ್ತಿಯಾಗುತ್ತದೆ. ಪ್ರದರ್ಶನಕಾಲದಲ್ಲಿ ಕೈಗಾರಿಕೆ, ಭೂವ್ಯವಸಾಯ, ನೂತನ ವ್ಯವಸಾಯ ಮುಟ್ಟುಗಳು, ದನಗಳ ಸಾಕಾಣಿಕೆ, ಇತ್ಯಾದಿ ವಿಷಯಗಳನ್ನು ಕುರಿತು ಮಲಿಯಾಳ ಭಾಷೆಯಲ್ಲಿ ಉಪನ್ಯಾಸಗಳು, ಪ್ರತ್ಯಕ್ಷ ನಿದರ್ಶನಗಳು ಮತ್ತು ಉಳುಮೆ, ನೇಯಿಗೆ ಕೆಲಸಗಳಲ್ಲಿ ಪೋಟಾಪೋಟಿ, ಇವುಗಳೆಲ್ಲಾ ನಡೆಯುತ್ತವೆ. ಇದೇ ಸಮಯದಲ್ಲಿ ಒಂದು ದನಗಳ ಪ್ರದರ್ಶನವೂ ನಡೆಯುವುದು ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲಿಚ್ಛಿಸುವವರು ಬರುವ ಜನವರಿ ೧ನೇ ತಾರೀಖಿನೊಳಗಾಗಿ ತಿರಚೂರಿನಲ್ಲಿರುವ ಅಗ್ರಿಕಲ್ಚರಲ್ ಸೂಪರಿಂಟೆಂಡೆಂಟ್ ಎಂಬ ಅಧಿಕಾರಿಗಳಿಗೆ ದರಖಾಸ್ತುಗಳನ್ನು ರವಾನಿಸಬಹುದಲ್ಲದೆ ಇನ್ನೂ ಹೆಚ್ಚಿಗೆ ತಪಶೀಲುಗಳು ಬೇಕಾದರೂ ಸದರಿ ಹುದ್ದೇದಾರರಿಗೆ ಸೀದಾ ಬರೆದು ತಿಳಿದುಕೊಳ್ಳಬಹುದು. ಪ್ರದರ್ಶಿಸಬಹುದಾದ ವಸ್ತುಗಳನ್ನು ತಪಶೀಲಾಗಿ ನಮೂದಿಸಲು ಸ್ಥಳ ಸಾಲದ್ದರಿಂದ ಅವುಗಳ ಮುಖ್ಯ ತರಗತಿಯನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ಕಾಣಿಸಿರುತ್ತೇವೆ,—(೧) ಭೂವ್ಯವಸಾಯದಿಂದಾಗುವ ಪದಾರ್ಥಗಳು :—ತರಿ ಮತ್ತು ಖುಷ್ಕಿ ಜಮೀನಿಗೆ ಸಂಬಂಧಪಟ್ಟವು, ಬಾಗಾಯತು ಜಮೀನಿನವು, ಸಸ್ಯಗಳು ಮತ್ತು ಹಣ್ಣು ಹಂಪಲುಗಳು, ನಾರುಗಳು, ಮೇವಾಗತಕ್ಕ ಗಿಡಗಳು, ಸಕ್ಕರೆ, ಜೇನು ತುಪ್ಪ, ಜೇನುಮೇಣ ವಗೈರೆ, ಗೊಬ್ಬರಗಳು ; (೨) ಜಂಗ್ಲಿ ಪದಾರ್ಥಗಳು ; (೩) ವ್ಯವಸಾಯದ ಮುಟ್ಟುಗಳು ಮತ್ತು ಯಂತ್ರಗಳು ; (೪) ನೇಯಿಗೆ ಮತ್ತು ಇತರ ಕೈಗಾರಿಕೆ ಸಂಬಂಧಪಟ್ಟ ಪದಾರ್ಥಗಳು , (೫) ಪಾಪ್ಯಾರು (ಮೀನು ಹಿಡಿಯುವ) ಉಪಕರಣಗಳು , (೬) ದನಗಳು

ಬಾಲಕರನ್ನು ಗುಣಾಢ್ಯರಾಗಿ ಮಾಡುವುದು.

ಕೆಲವು ಸೂಚನೆಗಳು

“ಸನ್ಮಾರ್ಗಪೇಕ್ಷಿ” ಎಂಬೊಬ್ಬ ಚಾತಿದಾರರು ಬರೆಯುವುದೇನೆಂದರೆ,— ಇದೇ ಡಿಸೆಂಬರು ತಾ ೧೬ ನೇ “ವೃತ್ತಾಂತ ಪತ್ರಿಕೆ”ಯ ವಿದೇಶ ವರ್ತಮಾನಗಳಲ್ಲಿ ಅತ್ಯಂತ ಶ್ಲಾಘ್ಯವಾದ ಒಂದು ವಿಷಯವನ್ನು ನಾನು ಓದಿರುವದನ್ನು ಈ ಕೆಳಗೆ ಉದಹರಿಸುತ್ತೇನೆ ಏನೆಂದರೆ,—“ಅಮೇರಿಕಾಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಹುಡುಗರನ್ನು ಪೋಲೀಸು ಸಿಬ್ಬಂದಿಗೆ ಸೇರಿಸಿಕೊಂಡಿಕೊಂಡಿದ್ದಾರೆ ಈ ಹುಡುಗರು ಪಟ್ಟಣದಲ್ಲಿ ಇತರ ಹುಡುಗರು ದುರ್ಮಾರ್ಗಿಗಳಾಗದಂತೆ ಅವರ ಮೇಲೆ ಉಸ್ತುವಾರಿ ಮಾಡುತ್ತಾ, ದುಷ್ಕೃತ್ಯಗಳನ್ನು ಮಾಡುವಂಥಾ ಹುಡುಗರನ್ನು ದಂಡಿಸಿ ಇಸ್ತಗಿರಿ ಮಾಡುವರು” ಎಂಬುವುದು

ಇದು ಎಷ್ಟು ಅನುಕೂಲ್ಯವಾದ ಏರ್ಪಾಡು ! ಈ ದೇಶದಲ್ಲಿಯೂ ಪಟ್ಟಣದಲ್ಲೂ ತಾಲ್ಲೂಕು ಕಸಬೆಯಲ್ಲೂ ಈ ಏರ್ಪಾಡು ಎಷ್ಟು ಅವಶ್ಯಕವಾಗಿರುವದು ! ನನ್ನ ಅನುಭವದಲ್ಲಿ ಇಲ್ಲಿನ ಹುಡುಗರು ಮಾಡುವ ದುಷ್ಕಾರ್ಯಗಳಲ್ಲಿ ಜ್ಞಾಪಕದಲ್ಲಿರುವ ಮತ್ತು ಸದಾ ಸಹಿಸುತ್ತಿರುವ ಕೆಲವನ್ನು ಈ ಕೆಳಗೆ ವಿವರಿಸುತ್ತೇನೆ ಅವು ಯಾವೆಂದರೆ—(೧) ಹುಡುಗರು ಸೇರಿ ಸ್ನೇಹವಾಗಿಯೇ ಆಗಲಿ ವಿರೋಧವಾಗಿ ವಾತನಾಡಿಕೊಂಡು ಹೋಗುವಾಗ ಕಿವಿಯಲ್ಲಿ ಕೇಳುವದಕ್ಕೆ ಅತ್ಯಂತ ಅಸಹ್ಯವಾದ ಹಾಳಾದ ಕಾಮನ ಹಬ್ಬದ ಸಂಬಂಧವಾದ ಭಂಡು ಮಾತುಗಳನ್ನೇ ಉಪಯೋಗಿಸೋದು , (೨) ಸೀತಿಯ ಪ್ರಕಾರ ಹುಡುಗರು ಗೌರವಿಸಬೇಕಾದ ವೃದ್ಧರನ್ನು ದಾರಿಯಲ್ಲಿ ತಿರಸ್ಕಾರವಾಗಿ ಅಣಕಿಸೋದು , (೩) ಸತ್ಕಾರಪಾತ್ರರಾದ ಕುಂಟರೂ ಕುರುಡರೂ ಹೆಳವರೂ ದಾರಿಯಲ್ಲಿ ಹೋಗುತ್ತಿದ್ದರೆ ಅದೇ ಕೆಲಸವಾಗಿ ಅವರನ್ನು ಅಟ್ಟಿಕೊಂಡು ಹೋಗಿ ಹಾಸ್ಯವನ್ನು ಮಾಡೋದು , (೪) ಭಿಕ್ಷಗಾರರನ್ನೂ ಸಂಜೆಗೋಣಾಳದವರನ್ನೂ ಕಂಡರೆ ಹೊಡೆಯೋದು, ಬೈಯೋದು , (೫) ಹೆಂಗಸರು ನೀರು ಮುಂತಾದದಕ್ಕೆ ಹೋಗುತ್ತಿದ್ದರೆ ಕಲ್ಲುಗಳಿಂದ ಹೊಡೆಯೋದು , (೬) ಜನರು ತಿರುಗಾಡುತ್ತಿದ್ದರೆ ಲಕ್ಷ್ಯವಿಲ್ಲದೆ ಹೋತಗಳ ಮೇಲೂ, ಮರಗಳಿಗೂ ಅವರಿಗೆ ತಗಲುವಂತೆ ಕಲ್ಲುಗಳನ್ನು ಎಸೆಯೋದು , (೭) ಯಾರಾದರೂ ವಿದ್ಯಾಭ್ಯಾಸ ಮೊದಲಾದ ಸತ್ಕಾಲಕ್ಷೇಪವನ್ನು ಮಾಡುತ್ತಿದ್ದರೆ ಬಾಗಿಲನ್ನು ನೂಕೋದು, ಒಳಗೆ ಓಡುವದಕ್ಕಾಗದ ರೀತಿ ಬಾಗಿಲಲ್ಲಿ ನಿಂತುಕೊಂಡು ಘಟ್ಟಿಯಾಗಿ ಕಿರಿಚಿಕೊಳ್ಳೋದು , (೮) ನಾಯಿಗಳು ಮಲಗಿಕೊಂಡಿದ್ದರೆ ಅವುಗಳಿಗೆ ಸ್ಥಿರವಾಗಿ ಅಂಗಹೀನವಾಗುವಂತೆ ಕಲ್ಲುಗಳಿಂದ ಹೊಡೆಯೋದು, (೯) ಯಾರಾದರೂ ದೊಡ್ಡವರು ಜಗಳಾಡುತ್ತಿದ್ದರೆ ಅದೇ ಕೆಲಸವಾಗಿ ಅಲ್ಲಿಗೆ ಹೋಗಿ ಅವರಿಗೆ ಮತ್ತಷ್ಟು ಕೋಪ ಹೆಚ್ಚುವ ಚೇಷ್ಟೆಗಳನ್ನು ಮಾಡೋದು , (೧೦) ಮ್ಯುನಿಸಿಪಾಲಿಟಿಗೆ ಸೇರಿದ ಸತ್ತುವಿನ (ಲೈಟ್) ಕಚೇರಾ ಕೊಟ್ಟಿಗಳು ಜಖಂ ಆಗುವಂತೆ ಕಲ್ಲುಗಳಿಂದ ಹೊಡೆಯೋದು , (೧೧) ಲಾಂದ್ರದ ಕಂಭಗಳನ್ನು ಕಲ್ಲಿನಿಂದ ಹೊಡೆಯೋದು , ಇವೇ ಮೊದಲಾದ ಕಟ್ಟಕ್ಕೃತ್ಯಗಳನ್ನು ಮಾಡಿ ಪ್ರಜೆಗಳ ನೆಮ್ಮದಿಗೆ ಭಂಗವನ್ನುಂಟುಮಾಡುತ್ತಿರುವುದನ್ನು ನಾನು ಇಲ್ಲಿಗೆ ಬಂದ ಮೂರು ವರುಷಗಳಿಂದಲೂ ನೋಡಿ ಬಹಳ ಸಂಕಟಪಡುತ್ತಾ ಇದ್ದೇನೆ

ಚಿಕಾಗೋ ಪಟ್ಟಣದಲ್ಲಿ ಏರ್ಪಡಿಸಿ ಇರುವಂತೆ ನಮ್ಮ ಸಂಸ್ಥಾನದ ಕೆಲವು ಕಡೆಗಳಲ್ಲಿ ಆಜಮಾಯಿಷಿಗಾಗಿ ಒಂದು ವರುಷದ ಮಟ್ಟಿಗೋ ಆರು ತಿಂಗಳ ಮಟ್ಟಿಗೋ ನೇಮಿಸಿ ನೋಡಿದರೆ ಫಲಾಫಲಗಳು ಗೊತ್ತಾಗಬಹುದು ದಯಾಳುಗಳಾದ ಗವರ್ನ್‌ಮೆಂಟಿನವರು ಸ್ವಲ್ಪ ದ್ರವ್ಯವನ್ನು ವಿನಿಯೋಗಿಸಿ ಈ ಆಜಮಾಯಿಷೀ ಕಳೆದನಂತರ ದೇಶದ ತಾಲ್ಲೂಕು ಕಸಬೆಗಳಿಗೆಲ್ಲಾ ವಿಸ್ತರಿಸುವದಾದರೆ ಒಂದು ಸೆಸ್ಸನ್ನು ಕಲ್ಪಿಸಿದರೂ ಅನ್ಯಾಯವಾಗಿರಲಾರದು ಸ್ಕೂಲ್ ಫೀಜನ್ನು ತೆಗೆದುಕೊಂಡು ಹುಡುಗರಿಗೆ ವಿದ್ಯೆಯನ್ನು ಕಲಿಸುವಂತೆ ಈ ಸೆಸ್ಸನ್ನು ವಸೂಲ್ಮಾಡಿ ಹುಡುಗರಿಗೆ ಸನ್ಮಾರ್ಗವನ್ನು ಕಲಿಸುವಂತೆ ಆಗುತ್ತೆ ಸ್ಕೂಲುಗಳಿಗೆ ಬರುವ ವಿದ್ಯಾರ್ಥಿಗಳಿಂದ ಅವರ ಸಂಖ್ಯೆಯ ಪ್ರಕಾರ ಅವರವರಿಂದ ಫೀಜು ವಸೂಲ್ಮಾಡಬಹುದು ಈ ಸೆಸ್ಸು ಯಾವ ಆಧಾರದ ಮೇಲೆ ಮಾಡಬೇಕೆಂಬ ಶಂಕೆ ಹುಟ್ಟಿದರೆ ಈ ಯೋಚನೆಯನ್ನು ಬಹು ಸುಲಭವಾಗಿ ಪರಿಹರಿಸಬಹುದು

ಹುಡುಗರ ಸಿಬ್ಬಂದಿಯನ್ನು ಏರ್ಪಾಡು ಮಾಡಬೇಕಾದರೆ ೧೮ ವರುಷದ ಒಳಗಿನ ಕಡೇ ಪಕ್ಷ ಮೂರನೇ ತರಗತಿಯಲ್ಲಾದರೂ ಓದುತ್ತಿರುವ ಹುಡುಗರನ್ನು ನೇಮಕ ಮಾಡೋಣವು ಉತ್ತಮ ಇವರಿಗೆ ವಿದ್ಯಾಶಾಲೆಗಳಿಗೆ ಹೋಗುವದಕ್ಕೆ ಅವಕಾಶ ಕೊಟ್ಟು ನೌಕರಿ ಕಾಲಗಳನ್ನು ನೇಮಿಸಿದರೆ ಅವರ ಅಭಿವೃದ್ಧಿಗೂ ಕುಂದಕವುಂಟಾಗುವುದಿಲ್ಲ ಇವರಿಗೆ ತಿಂಗಳಿಗೆ ೧-೨ ರೂಪಾಯಿ ಕೊಟ್ಟರೂ ತೃಪ್ತರಾಗಿರಬಹುದು. ಇವರಲ್ಲೇ ಒಬ್ಬನನ್ನು ದಫೇದಾರನನ್ನಾಗಿಯೂ ಮಾಡಬಹುದು ಈ ದಫೇದಾರನು ವೈಸ್ ಪ್ರೆಸಿಡೆಂಟರವರಿಗೂ ಪೋಲೀಸು ಇನ್‌ಸ್ಪೆಕ್ಟರವರಿಗೂ ತಾಬೇದಾರನಾಗಿರುವಂತೆ ಮಾಡಬಹುದು ಇವರ ಆಚರಣೆಯ ಬಗ್ಗೆ ಮೊದಲಿನಲ್ಲಿ ಬಹಳ ಸಾಧಾರಣವಾಗಿರುವಂತೆ ನಿಬಂಧನೆಗಳನ್ನು ಏರ್ಪಡಿಸಿ ಅವಕ್ಕೆ “ಬೈಸಸ್ ಪೋಲೀಸ್ ರೂಲ್ಸ್” ಎಂದು ಹೆಸರನ್ನಿಡಬಹುದು. ಬರುತ್ತಾ ಬರುತ್ತಾ ಖಂಡಿತವಾದವುಗಳನ್ನು ಜಾರಿಯಲ್ಲಿ ತರಬಹುದು

ವೃತ್ತಾಂತ ಪತ್ರಿಕೆ

ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾ ೨೩ ನೇ ಗುರುವಾರ

ಮೈಸೂರು ಪ್ರಾಚೀನ ಅನ್ವೇಷಣ ಇಲಾಖೆಯು

ಮೈಸೂರು ಸಂಸ್ಥಾನದಲ್ಲಿ ಪುರಾತನ ಕಾಲದ ಶಿಲಾ ಶಾಸನಗಳೂ ತಾಂಬ್ರ ಶಾಸನಗಳೂ ಅನೇಕವಾಗಿರುತ್ತವೆ. ಅವುಗಳನ್ನು ಕಂಡು ಹಿಡಿದು ಅವುಗಳ ಮೇಲೆ ಕೆತ್ತಲ್ಪಟ್ಟಿರುವ ಪೂರ್ವಕಾಲದ ವಿಷಯಗಳನ್ನು ತಿಳಿದು ಪ್ರಕಟಿಸುವುದಕ್ಕಾಗಿ ಗವರ್ನಮೆಂಟಿನವರು ಒಂದು ಇಲಾಖೆಯನ್ನು ಮಾಡಿರುತ್ತಾರೆ ಈ ಇಲಾಖೆಯ ಮುಖ್ಯಾಧಿಕಾರಿಯಾದ ಮೆ|| ಆರ್ ನರಸಿಂಹಾಚಾರ್ಯರು ರಚಿಸಿ ಗವರ್ನಮೆಂಟಿಗೆ ಒಪ್ಪಿಸಿರುವ ಕಳೆದ ಸಾಲಿನ ರಿಪೋರ್ಟನ್ನು ಓದಿ ನಾವು ತುಂಬಾ ಸಂತೋಷಪಟ್ಟೆವು ಮೆ|| ನರಸಿಂಹಾಚಾರ್ಯರು ೧೯೦೮ ೦೯ನೇ ಸಾಲಿನಲ್ಲಿ ಈ ಸಂಸ್ಥಾನದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿ ಪಲವು ಶಾಸನಗಳನ್ನು ಕಂಡು ಹಿಡಿದಿರುತ್ತಾರೆ ಇವುಗಳಲ್ಲಿ ಅನೇಕ ಶಾಸನಗಳು ಬಹಳ ಪುರಾತನ ಕಾಲದವುಗಳಾಗಿವೆ ಈ ಇಲಾಖೆಯಲ್ಲಿ ಹಿಂದೆ ಅಧಿಕಾರಿಯಾಗಿದ್ದ ಮು|| ರೈಸ್ ಸಾಹೇಬರು ಬಹುಕಾಲ ಈ ಸಂಸ್ಥಾನದಲ್ಲಿ ಸಂಚಾರಮಾಡಿ, ಅನೇಕಾನೇಕ ಶಾಸನಗಳನ್ನು ಕಂಡು ಹಿಡಿದು ಪೂರ್ವಕಾಲದ ಚರಿತ್ರೆಯನ್ನು ತಿಳಿಯುವುದಕ್ಕೆ ತುಂಬಾ ಸಹಾಯ ಮಾಡಿರುವರು ನರಸಿಂಹಾಚಾರ್ಯರವರು ಮಾಡುವಂಥಾ ವಿಚಾರ ವ್ಯಾಪಾರವು ಇನ್ನು ಹೊರಡುವುದಿಲ್ಲವೆಂದು ಹೇಳಬಹುದಾದಾಗ್ಯೂ, ಈ ಸಂಸ್ಥಾನದ ಅನೇಕ ಕಡೆಗಳಲ್ಲಿ ಪೂರ್ವ ಚರಿತ್ರೆಯನ್ನು ತಿಳಿಯಕೊಳ್ಳುವುದಕ್ಕೆ ಅನುಕೂಲಿಸುವಂಥಾ ವಿಷಯಗಳುಳ್ಳ ಶಾಸನಗಳು ದೊರಕುವವೆಂದು ಧಾರಾಳವಾಗಿ ನಂಬಬಹುದು

ಚಿತ್ರದುರ್ಗದ ಹತ್ತಿರ ಸಿಕ್ಕಿರುವ ಚಂದ್ರಾವಳ್ಳಿ ಎಂಬ ಪುರಾತನ ಪಟ್ಟಣವು ಬಹು ವಿಶೇಷವಾದದ್ದಾಗಿದೆ ಆ ಸ್ಥಳವನ್ನು ಶೋಧನೆ ಮಾಡಿದ್ದಾಯಿತು ಅಲ್ಲಿ ಕೆಲವು ಮಣ್ಣಿನ ಪಾತ್ರೆ ಪದಾರ್ಥಗಳೂ ನಾಣ್ಯಗಳೂ ದೊರಕಿರುತ್ತವೆ ಇದರಿಂದ ಆ ಪಟ್ಟಣವು ಬಹಳ ಪುರಾತನ ಕಾಲದ್ದೆಂದು ಗೊತ್ತಾಗುವುದು ಇನ್ನೂ ಚೆನ್ನಾಗಿ ಶೋಧನೆ ಮಾಡುವುದಕ್ಕೆ ಅಲ್ಲಿರುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ಉದ್ದಕ್ಕೂ ಭೂಮಿಯನ್ನು ಅಗೆತ ಮಾಡಬೇಕಾಗಿದೆ ಅನೇಕ ಶತಮಾನಗಳ ಕೆಳಗೆ ಅಲ್ಲಿ ಇರುತ್ತಿದ್ದವರ ಜೀವನ ಚರಿತ್ರೆಯನ್ನೂ ಅವರ ಪದ್ಧತಿಗಳೇ ಮುಂತಾದ ವಿಚಾರಗಳನ್ನೂ ತಿಳಿಯಕೊಳ್ಳುವುದಕ್ಕಾಗಿ ಆ ಕಾರ್ಯವನ್ನು ಮಾಡಬೇಕಾದದ್ದು ತುಂಬಾ ಅವಶ್ಯಕವು

ಶ್ರವಣಬೆಳ್ಗೊಳದಲ್ಲಿ ಬಹಳ ಪುರಾತನ ಕಾಲದ ಕೆಲವು ಶಾಸನಗಳನ್ನು ಕಂಡು ಹಿಡಿದಿರುತ್ತಾರೆ. ಇವುಗಳಿಂದ ಆ ನಗರವು ಈ ಸಂಸ್ಥಾನದಲ್ಲಿ ಅತ್ಯಂತ ಪ್ರಾಚೀನಕಾಲದ್ದೆಂದೂ ಅನೇಕ ಶತಮಾನಗಳ ಹಿಂದೆ ಹಿಂದುಸ್ಥಾನದ ಇತರ ಎಲ್ಲಾ ಭಾಗಗಳಿಂದಲೂ ತೀರ್ಥಯಾತ್ರಿಕರು ಇಲ್ಲಿಗೆ ಬರುತ್ತಿದ್ದರೆಂದೂ ಚನ್ನಾಗಿ ದೃಢಪಡುವುದು ಆದಕಾರಣ ಇಷ್ಟು ವಿಶೇಷತೆಯನ್ನು ಹೊಂದಿದಂಥಾ ಈ ನಗರದ ಚರಿತ್ರೆಯನ್ನು ಯಾರಾದರೂ ಸಂಗ್ರಹಿಸಿ ಬರೆಯುವರಾದರೆ ಅದರಿಂದ ಹಿಂದುಸ್ಥಾನದ ಬಹು ಸ್ವಾರಸ್ಯವೂ ಉಪಯುಕ್ತವೂ ಆದ ಪೂರ್ವ ಚರಿತ್ರೆಯು ಹೊರಪಡುವುದು ಚರಿತ್ರೆಯನ್ನು ಕಲಿತ ವಿದ್ಯಾವಂತರ್‍ಯಾರಾದರೂ ಈ ವಿಷಯಕ್ಕೆ ಗಮನಕೊಟ್ಟು ಈ ಪಟ್ಟಣಕ್ಕೆ ಸಂಬಂಧಪಟ್ಟ ಶಾಸನಾದಿಗಳನ್ನೆಲ್ಲಾ ಪರಿಶೋಧನೆ ಮಾಡಿ ಸಾರವತ್ತಾದ ಚರಿತ್ರೆಯನ್ನು ಬರೆದ ಪಕ್ಷದಲ್ಲಿ ಅಂಥಾ ಶ್ರಮಕ್ಕೆ ತಕ್ಕಷ್ಟು ಐಶ್ವರ್ಯವು ಅವರಿಗೆ ಸಂಪಾದನೆಯಾಗದೆ ಹೋದರೂ ಅವರಿಂದ ದೇಶಕ್ಕೆ ತುಂಬಾ ಹಿತವಾದೀತು.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಕೆಲವು ಮೂಲೆ ತಾಕಾದ ಹಳ್ಳಿಗಳೊಳಗೆ ಪೂರ್ವಕಾಲದ ದೇವಸ್ಥಾನಗಳು ಸಿಕ್ಕಿರುತ್ತವೆ ಅವುಗಳಲ್ಲಿ ಕೆಲವನ್ನು ಕಟ್ಟಿರುವುದು ಬಹು ಸುಂದರವಾಗಿದೆ. ಮೆ|| ನರಸಿಂಹಾಚಾರ್ಯರು ಸೂಚಿಸುವಂತೆ ಪ್ರಾಚೀನ ಕಾಲದ ಇಂಥಾ ಶಿಲ್ಪಕಲಾಕೌಶಲ್ಯವನ್ನು ಜಾಗರೂಕತೆಯಿಂದ ಕಾಪಾಡಿಕೊಂಡು ಬರುವುದು ಬಹಳ ಅವಶ್ಯಕವೇ ಸರಿ. ಗವರ್ನಮೆಂಟಿನವರು ಅವರ ಸಲಹೆಯನ್ನು ಸ್ವೀಕರಿಸಿ ಪ್ರತ್ಯೇಕವಾದ ಹುಕುಂ ಕೊಡುವವರಾಗಿದಾರೆಂದು ತಿಳಿದು ಸಂತೋಷ ಪಡುತ್ತೇವೆ ಮತ್ತು ಮೆ|| ನರಸಿಂಹಾಚಾರ್ಯರು ಹೀಗೆಯೇ ಈ ಅನ್ವೇಷಣ ಕಾರ್ಯವನ್ನು ಮಾಡುತ್ತಾ ಬರುವಂತೆ ಸರ್ಕಾರದವರು ಅವರಿಗೆ ಸಹಾಯ ಮಾಡುವರೆಂದು ನಂಬಿ ಹಾರೈಸುವೆವು

ಗ್ರಾಮಾಂತರಗಳಲ್ಲಿರುವ ನೌಕರರೂ ರೈತಪ್ರಜೆಗಳೂ ಈ ಇಲಾಖೆಯ ಕೆಲಸಗಾರರಿಗೆ ತುಂಬಾ ಸಹಾಯ ಮಾಡಬಹುದು. ಬರವಣಿಗೆಯನ್ನು ಕೆತ್ತಿರುವಂಥಾ ಕಲ್ಲುಗಳೇನಾದರೂ ಕಣ್ಣಿಗೆ ಬಿದ್ದರೆ ಅವನ್ನು ಜಾಗರೂಕತೆಯಿಂದ ಕಾಪಾಡಿಕೊಂಡು, ಆ ಸಂಗತಿಯನ್ನು ಅಮಲ್ದಾರರಿಗೂ ಇಲಾಖಾ ಅಧಿಕಾರಿಯಾದ ಮೆ|| ನರಸಿಂಹಾಚಾರ್ಯರಿಗೂ ತಿಳಿಯಪಡಿಸಬೇಕು. ಪೂರ್ವಕಾಲದ ನಾಣ್ಯಗಳೇನಾದರೂ ದೊರೆತರೆ ಆ ಸ್ಥಳವನ್ನು ಬಹು ಮುತುವರ್ಜಿಯಾಗಿ ಗುರುತು ಮಾಡಿಕೊಂಡಿರಬೇಕು ಇಲಾಖೆಯವರು ಬಂದು ಅಲ್ಲಿ ಅಗೆದು ಭೂಮಿಯನ್ನು ಶೋಧನೆ ಮಾಡಲು ಸಹಾಯವಾದೀತು. ಈ ಪ್ರಕಾರ ಸಹಾಯ ಮಾಡುತ್ತಾ ಬಂದ ಪಕ್ಷದಲ್ಲಿ ಮೈಸೂರು ಸಂಸ್ಥಾನದ ಪೂರ್ವಚರಿತ್ರೆಯು ಇನ್ನೂ ವಿಶೇಷವಾಗಿ ತಿಳಿದುಬರಲು ಬಹಳ ಅನುಕೂಲವಾಗುತ್ತದೆ

ಮೆ|| ನರಸಿಂಹಾಚಾರ್ಯರು ಈಗಿನಂತೆಯೇ ಈ ಸೀಮೆಯ ಪೂರ್ವ ಚರಿತ್ರೆಯನ್ನು ಶೋಧಿಸಿ ಕಂಡುಹಿಡಿಯುತ್ತಾ ಬರಬಾರದೆಂದು ಹಾರೈಸುವೆವು ಯಾಕೆಂದರೆ ಅವರ ಚತುರತೆ ಸಾಹಸ ಪಾಂಡಿತ್ಯಗಳ ಬಲೆಯಿಂದ ಪೂರ್ವ ಚರಿತ್ರೆಗೆ ಉಪಯುಕ್ತವಾದ ಅನೇಕ ವಿದ್ಯಮಾನಗಳು ಪ್ರಪಂಚಕ್ಕೆ ತಿಳಿದು ಬರುವವೆನ್ನುವುದಕ್ಕೆ ಸಂಶಯವಿಲ್ಲ

ದುರಾಶೆಯುಳ್ಳ ನೌಕರರು

ಮೈಸೂರಾಯಿ ಪ್ರಭುಗಳು ಈ ಸಂಸ್ಥಾನಕ್ಕೆ ದಯಮಾಡಿದ ಸಂದರ್ಭದಲ್ಲಿ ಸ್ಥಳ ನೌಕರರು ಅವರ ಆತಿಥ್ಯಕ್ಕೆ ಹಸು ಧಾನ್ಯ ಹಣ ಮುಂತಾದದ್ದು ಬೇಕಾಗಿವೆ ಎಂದು ಹೇಳಿ ಮೈಸೂರು ಡಿಸ್ಟ್ರಿಕ್ಟಿನ ಕೆಲವು ಹಳ್ಳಿಕಾರರನ್ನು ಕೇಳಿದರೆಂದು ನಮಗೆ ವರ್ತಮಾನ ಬಂದಿದೆ ಇಂಥಾ ಅಯೋಗ್ಯರಾದ ಗ್ರಾಮ ನೌಕರರ ದುರ್ನಡತೆಯು ಮೈಸೂರಿನ ಕೀರ್ತಿಗೆ ಅಪಯಶಸ್ಸು ತರುವುದಾದ್ದರಿಂದ ಅದನ್ನು ಅಡಗಿಸಬೇಕೆಂಬುದಾಗಿ ಗವರ್ನಮೆಂಟಿನವರು ಕುತೂಹಲಪಡುತ್ತಾರೆಂದು ಬಲ್ಲೆವು. ಹೀಗೆ ಸ್ವಪ್ರಯೋಜನಕ್ಕಾಗಿ ಪ್ರಜೆಗಳನ್ನು ಸುಲಿದು ತಿನ್ನುವುದನ್ನು ದೃಷ್ಟಾಂತ ಸಹಿತ ತೋರಿಸಿ ಕೊಡುವುದು ಅಸಾಧ್ಯವೆಂದೇ ಹೇಳಬಹುದಾಗಿದೆ ಸ್ಥಳ ನೌಕರರು ಬಂದು ಹಣಕಾಸನ್ನು ಕೇಳಿದರ ರೈತರೂ ಗ್ರಾಮಸ್ಥರೂ ಖಂಡಿತವಾಗಿ ಕೊಡುವುದಿಲ್ಲವೆಂದು ಹೇಳಬೇಕು ಇಷ್ಟೇ ಸಾಲದು ಆ ಸಂಗತಿಯನ್ನು ಅವರು ಆ ಕೂಡಲೇ ಅಮಲ್ದಾರರಿಗೂ ಡೆಪ್ಯುಟಿ ಕಮಿಷನರವರಿಗೂ ಅರಿಕೆ ಮಾಡಿಬಿಡಬೇಕು. ರೈತ ಪ್ರಜೆಗಳೂ ಇತರರೂ ಕಂಡದ್ದು ಕಂಡಂತೆ ಹೇಳುವವರಾಗಿಯೂ ಸತ್ಯವಂತರಾಗಿಯೂ ಇದ್ದ ಪಕ್ಷದಲ್ಲಿ ಅವರು ಈ ನೌಕರರ ದುರಾಶೆಯನ್ನೂ ಲಂಚಕೋರತನವನ್ನೂ ಸಂಪೂರ್ಣವಾಗಿ ಅಡಗಿಸಿಬಿಡಬಹುದಾಗಿದೆ.

ಮತವಿಚಾರ ಪರೀಕ್ಷೆ.

ಆಕ್ಷೇಪಣೆಯೂ ಸಮಾಧಾನವೂ

ಎಡಿಟರವರೇ,—

ಮೇಲಣ ಹೆಸರಿನಿಂದ ನಡೆದ ಪರೀಕ್ಷೆಯ ವಿಷಯದಲ್ಲಿ ಡಿಸೆಂಬರು ಎರಡನೆ ಪತ್ರಿಕೆಯಲ್ಲಿ ತಾವು ಬರೆದ ಲೇಖನವನ್ನು ನೋಡಿ ಬಹು ಸಂತೋಷವಾಯಿತು ಸತ್ಯವನ್ನು ಕಂಡು ಹಿಡಿಯುವುದಕ್ಕೆ ಸ್ವಪಕ್ಷ ಪರಪಕ್ಷಗಳೆರಡನ್ನೂ ಸಮಾಧಾನದಿಂದ ನೋಡುವುದು ಅಗತ್ಯವೆಂದು ಸತ್ಯಾಪರರಾದ ತಮಗೂ ತೋರಬಹುದಾದುದರಿಂದಲೂ ತಮ್ಮ ಅನುಕೂಲ್ಯವಾದ ಪತ್ರಿಕೆಯ ಗ್ರಾಹಕರು, ಪ್ರಶ್ನೆ ಪತ್ರಿಕೆಯನ್ನು ಕೊಟ್ಟ ಉಪಾಧ್ಯಾಯರು ಈ ಆಕ್ಷೇಪಣೆಗೆ ಉತ್ತರವನ್ನು ಏನು ಕೊಡುವರು ಎಂದು ಕುತೂಹಲರಾಗಿರಬಹುದಾದುದರಿಂದಲೂ ಕೆಲವು ಸಂಗತಿಗಳನ್ನು ತಿಳಿಸುತ್ತೇನೆ ಇದನ್ನು ದಯವಿಟ್ಟು ಪ್ರಕಟಿಸುವಿರೆಂದು ದೃಢವಾಗಿ ನಂಬಿರುತ್ತೇನೆ

ಮೊದಲು ವಿದ್ಯಾರ್ಥಿಯು ಕೊಟ್ಟ ಉತ್ತರದ ವಿಚಾರವನ್ನು ತೆಗೆದುಕೊಳ್ಳೋಣ ಇದರ ವಿಷಯವಾಗಿ ಆ ವಿದ್ಯಾರ್ಥಿಯು ಏನು ಹೇಳುವನೋ ಅದನ್ನೇ ಕೇಳಿ ಬರೆಯೋಣವೆಂದು ನನ್ನ ಮನಸ್ಸಿಗೆ ತೋರಿತು ಆದರೆ ಸರಿಯಾಗಿ ನೋಡಲು ಅವನ ಮೇಲೆ ಮಾಡಿದ ಆಕ್ಷೇಪಣೆಗಳು ಆಕ್ಷೇಪಣೆಗಳಲ್ಲವೆಂದು ತೋರುವುದರಿಂದ ಹಾಗೆ ಮಾಡದೆ ನನಗೆ ತೋರಿದ ವಿಷಯವನ್ನು ಬರೆದೆನು ಪ್ರಶ್ನೆಯ ವಿಷಯ ಹಾಗಿರಲಿ ಮೊದಲು ಉತ್ತರದಲ್ಲಿ ನಿಮ್ಮ ಎಡಿಟರವರಿಗೆ ಏನು ಸೋಜಿಗವಾಯಿತೋ, ಏಕೆ ವ್ಯಸನವಾಯಿತೋ ನನಗೆ ತಿಳಿಯುವಂತಿಲ್ಲ ಹುಡುಗನ ಉತ್ತರದಲ್ಲಿ ಒಬ್ಬ ಮಹಮ್ಮದೀಯನು ತನ್ನ ಹಣೆಯ ಮೇಲೆ ಏನೂ ಇಲ್ಲದಿರುವುದನ್ನು ನೋಡಿ ಅಸಹ್ಯಪಟ್ಟು ತನ್ನ ಜಾತಿ ಸರಿಯಾದ್ದಲ್ಲವೆಂದು ಬ್ರಾಹ್ಮಣರು ಇಟ್ಟುಕೊಳ್ಳುವ ಅಕ್ಷತೆಯನ್ನು ಇಟ್ಟುಕೊಂಡನೆ, ಅವನು ಅನ್ಯ ಧರ್ಮದಪ್ರಕಾರ ನಡೆದುದರಿಂದ ಅವನಿಗೆ ನರಕ ಉಂಟಾಗುವುದೆಂದು ಬರೆದಿದೆ

ಇದರಲ್ಲಿ ಅನ್ಯ ಮತದಂತೆ ನಡೆದವನಿಗೆ ನರಕವಾಗುವುದೆಂದು ಕೇಳಿ, ಕೆಲವು ಯೂರೋಪಿಯನರು ಹಿಂದುಗಳಂತೆ ಪಲ್ಲಿ, ಮುಗುಟ ಮುಂತಾದುವುಗಳನ್ನುಟ್ಟುಕೊಂಡು ಭಗವದ್ಗೀತೆಯನ್ನು ಕೈಯಲ್ಲಿ ಹಿಡಿದು ಇತರರಿಗೆ ಬೋಧಿಸುತ್ತಾ ಇರುವುದರಿಂದ, ಅಂತಹ ದೊಡ್ಡ ಮನುಷ್ಯರಿಗೆ ನರಕವಾಗಬೇಕಾಯಿತಲ್ಲ ಎಂದು ವ್ಯಸನವಾಯಿತೆ? ಅಥವಾ ಹಿಂದೂಗಳೆಲ್ಲರೂ ಬಹು ಸುಲಭವಾಗಿ ಇತರ ಮತಗಳನ್ನು ಅವಲಂಬಿಸುವರೆಂದು ನಾವು ತಿಳಿದಿದ್ದೆವು ಈಗ ಹುಡುಗರು ತಮ್ಮ ತಮ್ಮ ಮತಧರ್ಮಗಳನ್ನು ವಿಚಾರಿಸುತ್ತಾರೆಂದು ಗೊತ್ತಾಯಿತು ನಾವು ತಿಳಿದುದಕ್ಕೂ ಈಗ ಆದುದಕ್ಕೂ ಎಷ್ಟು ಅಂತರ! ಎಂದು ಸೋಜಿಗವಾಯಿತೋ? ಈ ಪ್ರಶ್ನೆಗಳಿಗೆ ನಾವು ಉತ್ತರ ಹೇಳಲಾರೆವು ಇದು ಹಾಗಿರಲಿ ಮುಸಲ್ಮಾನರಲ್ಲಿ ಹಣೆಯ ಮೇಲೆ ಏನೂ ಇಲ್ಲದುದರಿಂದ ಅತೃಪ್ತಿಪಟ್ಟುಕೊಂಡ ಮಹಮ್ಮದೀಯನಾರು? ಎಂದು ಎಡಿಟರವರು ಆಕ್ಷೇಪಿಸುವರು ಹುಡುಗನು ಬರೆದುದೊಂದು ಲೌಕಿಕ ದೃಷ್ಟಾಂತವೆ ಹೊರತು ಇಂತಹ ಮಹಮ್ಮದೀಯನು ಅಕ್ಷತೆ ಇಲ್ಲದೆ ಅತೃಪ್ತಿಪಟ್ಟುಕೊಂಡಿದ್ದನೆಂದು ತೋರಿಸುವುದಕ್ಕಲ್ಲ ಆದರೂ ಇವರು ಏಕೆ ಇಂಥ ಶಂಕೆ ಮಾಡುವರೋ [illegible] ಇದಕ್ಕೆ ಸಮಾಧಾನ [illegible] ಎಷ್ಟೋ ಜನ ಮುಸಲ್ಮಾನರು ಹಳ್ಳಿಗಳಲ್ಲಿ ಹಿಂದೂಗಳನ್ನು ನೋಡಿ ಅವರಂತೆ ಆಗುವುದು ತಮ್ಮ ಮೋಕ್ಷಕ್ಕೆ ಸಾಧನವೆಂದು ತಿಳಿದು ಅಭ್ಯಾಸದಿಂದ ಮೊದಲು ತಲೆ ಬೋಳಿಸಿಕೊಂಡಿದ್ದವರು ಜುಟ್ಟು ಬಿಡುವುದಲ್ಲದೆ ಹಣೆ ಮೇಲೆ ವಿಭೂತಿಯನ್ನೂ ನಾಮವನ್ನೂ ಹೀಗೆ ನಾನಾ ಬೊಟ್ಟುಗಳನ್ನು ಇಟ್ಟುಕೊಳ್ಳುವುದನ್ನು ನಾವು ನೋಡಿದೇವೆ ಅವಶ್ಯವಿದ್ದರೆ ಎಡಿಟರವರೂ ಅಲ್ಲಿಲ್ಲಿ ಸಂಚಾರ ಮಾಡಿದರೆ ಇಂತಹವರೆ ಅವರ ಕಣ್ಣಿಗೂ ಬೀಳಬಹುದು

ಮಹಮ್ಮದೀಯನು ಅತೃಪ್ತಿಪಟ್ಟುದಕ್ಕೆ ಹಣೆ ಮೇಲೆ ಅಕ್ಷತೆ ಇಲ್ಲದ [illegible] ಎಂದು ಎರಡನೆ ಆಕ್ಷೇಪಣೆ ಮಾಡಿರುವರು ದೃಷ್ಟಾಂತದಲ್ಲಿ ಅದು ಒಂದು ಕಾರಣವೆಂದೆ ಹುಡುಗನು ಸ್ಪಷ್ಟವಾಗಿ ಬರೆದಿದ್ದರೂ ಅದೇ ಒಂದು ಕಾರಣವೆಂದು ಅರ್ಥಮಾಡಿಕೊಂಡುದು ಎಡಿಟರವರ ಪ್ರಾಜ್ಞತೆಯೊ ಅಥವಾ ಸತ್ಯದೀಕ್ಷೆಯೊ, ಜಾಣ್ಮೆಯೊ

ಮೂರನೆ ಆಕ್ಷೇಪಣೆಯು ಎಡಿಟರವರ ಅಭಿಪ್ರಾಯವನ್ನು [illegible] ನಮಗೆ [illegible] ತೋರುವಂತೆ ಮಾಡಿರುವರು [illegible] ಅತೃಪ್ತಿಪಟ್ಟವರಿಗೆ ಹಿಂದೂ ಮತದ ಅಕ್ಷತೆಯನ್ನು ತೋರಿಸಿದರೆ ತೃಪ್ತಿಯಾಗುವುದೇ? ಎಂದು ಇವರು ಕೇಳಿರುವರು ಅತೃಪ್ತಿಪಟ್ಟವರಲ್ಲಿ ಎಡಿಟರವರು ಒಬ್ಬರಾಗಿರಬಹುದೇನೋ! ಅವರಿಗೆ ಹಿಂದೂಮತದ ಆಕ್ಷೇಪಣೆಯಿಲ್ಲದ ಮತ್ತೇನನ್ನಾದರೂ ತೋರಿಸಿದ್ದರೆ ತೃಪ್ತಿಯಾಗುತ್ತಿದ್ದಿತೋ ಹೇಗೋ! ಮುಂತಾದ ಹಲವು ಒಂದೆ ಹಗಲು ನಮಗೆ [illegible] ನಮ್ಮ ಅಕ್ಷತೆಯನ್ನು ನೋಡಿ ತಮ್ಮ ತಮ್ಮ ಮತದಲ್ಲಿ ಅತೃಪ್ತಿ ಪಡುವವರು ತೃಪ್ತರಾಗಬೇಕೆಂದು [illegible] ಹುಡುಗನು ತನ್ನ ಮತದಂತೆ ನಡೆಯುವುದೇ ಉತ್ತಮವೆಂದು ಧೈರ್ಯವಾಗಿ [illegible] ಸಮಾಧಾನ ಚಿತ್ತದಿಂದ ಎಡಿಟರವರು ಆ ಪ್ರಶ್ನೆಯ ಉತ್ತರವನ್ನು ಅವಲೋಕಿಸುವರೆಂದು ನಂಬುತ್ತೇವೆ ಹಿಂದೂಮತದಲ್ಲಿ ಅಕ್ಷತೆ ಹೊರತು ಶ್ರೇಷ್ಠವಾದುದು ಇನ್ನಾವುದೂ ಇಲ್ಲವೊ? ಎಂದು ಎಡಿಟರವರು ಆಕ್ಷೇಪಿಸುವರು ಹೀಗೆಂದು ಯಾರು ಹೇಳುವರೊ? ಅವರಿಗೇ ಗೊತ್ತಿರಬೇಕು

ಈಗ ಪ್ರಶ್ನೆಯ ಮೇಲೆ ಇವರು ಮಾಡಿರುವ ಟೀಕೆಯನ್ನು ಸ್ವಲ್ಪ ವಿಚಾರಿಸೋಣ ಸತ್ಯವಾದ ಮತವಾವುದೆಂದು ವಿಚಾರ ಮಾಡಬೇಡಿ ಉತ್ಕೃಷ್ಟ ಸತ್ಯೋಪದೇಶವು ಅನ್ಯಮತದಲ್ಲಿ ದೊರೆತರೂ ಅದನ್ನು ಸ್ವೀಕರಿಸಬೇಡಿ, ಸ್ವಮತವು ಗುಣಹೀನವೆಂದು ತೋರಿದರೂ ಬಿಡಬೇಡಿ ಎಂದು ಪ್ರಶ್ನೆಯು ಬೋಧಿಸುವುದೆಂತಲೂ ಇದು ನವನಾಗರಿಕರಿಗೆ ಸಲ್ಲತಕ್ಕುದಲ್ಲವೆಂತಲೂ ಇವರು ಅಭಿಪ್ರಾಯಪಡುವರು ಇದರಲ್ಲಿ ಹೇಳಿದ ನಾಲ್ಕು ಅಂಶಗಳಲ್ಲಿ ಒಂದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ ಏನೆಂದರೆ ಗುಣಯುಕ್ತವಾಗಿ ತೋರುವ ಅನ್ಯಮತಕ್ಕಿಂತಲೂ ಗುಣಹೀನವೆಂದು ತೋರುವ ಸ್ವಧರ್ಮವೇ ಮೇಲು ಇದನ್ನು ಕೇಳಿ ನವನಾಗರಿಕರಾದ ನಮ್ಮ ಎಡಿಟರವರಿಗೆ ಸೋಜಿಗವೂ ವ್ಯಸನವೂ ಆದರೆ ಆಗಲಿ ನಾವು ನ್ಯಾಯವಾದ ಪಕ್ಷವನ್ನು ಬಿಡಲು ನಮ್ಮ ಮನಸ್ಸು ಒಡಂಬಡುವುದಿಲ್ಲ ದೂರದಲ್ಲಿ ಬಹು ಬೆಳ್ಳಗೆ ಚೊಕ್ಕ ಬೆಳ್ಳಿಯಂತೆ ತೋರುವ ಕಪ್ಪೆಚಿಪ್ಪು ಕೈಯಲ್ಲಿ ಕಂಡು ಬೆಳ್ಳಿ ಪಾಟಲೇ ಆದುದು ಬೇಕು? ನಮ್ಮ ಮಾಸು ಕೀಳು ಬೆಳ್ಳಿಯನ್ನಾದರೂ ಇಟ್ಟುಕೊ ಅಥವಾ ಅದನ್ನು ಬಿಸುಟು ಎಡಿಟರವರ ಮಾಸು ಕೀಳು ಕಪ್ಪೆಚಿಪ್ಪನ್ನಾದರೂ ಹಿಡಿಯಿರಿ ಏನಾದರೆ ನವನಾಗರಿಕತ್ವವಾದುದರಿಂದ ಗುಣಹೀನವಾಗಿ ತೋರುವ ಬೆಳ್ಳಿಯಿಂದಲೇ ತೃಪ್ತರಾಗುವೆವು ನಿಜವಾಗಿ ಚೊಕ್ಕ ಬೆಳ್ಳಿ ಸಿಕ್ಕಿದೆ ಅದನ್ನು ಆನಂದವಾಗಿ ಸ್ವೀಕರಿಸುವೆವು ನಮ್ಮ ಅಭಿಪ್ರಾಯವು ನಾಟಕರಿಗೆ ಈಗ ವೇದ್ಯನಾಗಿರಬೇಕೆಂದು ನಂಬುತ್ತೇನೆ ಹುಡುಗರು ಚಿಕ್ಕವರಾದುದರಿಂದ ಅನ್ಯಮತದವರು ಉಪಾಯದಿಂದ ದೂರದಲ್ಲಿ ನಿಂತು ನಿಮ್ಮಲ್ಲಿರುವುದು ಕಂದು ಬೆಳ್ಳಿಯಂತಹ ಮತ ಅದನ್ನು ಬಿಡಿ, ಇಗೋ ಬಹು ಬೆಳ್ಳಗೆ ಚೊಕ್ಕ ಬೆಳ್ಳಿಯ ಬಣ್ಣದ ಕಪ್ಪೆಚಿಪ್ಪಿನಂತಿರುವ ನಮ್ಮ ಮತವನ್ನು ಆದರಿಸಿ ಎಂದು ಹೇಳಿದರೂ ಸಾರಾಸಾರವನ್ನರಿಯದ ಬಾಲಕರು ಕೂಡಲೆ ಹಾಗೆ ಮಾಡುವರು ಪ್ರಕೃತ ಪ್ರಶ್ನೆಯನ್ನು ಹಾಕಿದ ಉಪಾಧ್ಯಾಯರು, ಬಾಲಕರು ಯಾವಾಗಲೂ ಅನ್ಯಮತದವರ ಮಾತಿಗೆ ಮರುಳಾಗದಿರಲೆಂದು ಅವರಿಗೆ — ಬಾಲಕರಿರಾ, ಸತ್ಯವನ್ನು ಕೈಕೊಳ್ಳಬೇಕು ಆದರೆ ನೀವಿನ್ನು ಚಿಕ್ಕವರು, ವಿಚಾರಶಕ್ತಿ ಇನ್ನು ಹೆಚ್ಚಾಗಬೇಕು ಅಷ್ಟರಲ್ಲಿಯೆ ಯಾರಾದರೂ ಮೋಸದಿಂದ ನಿಮ್ಮ ಮತದಲ್ಲಿರುವ ದೋಷಗಳನ್ನು ತೋರಿಸಿದರೆ ಒಡನೆಯೆ ಅಹುದು ನಮ್ಮ ಮತವು ಗುಣಹೀನ, ನಿಮ್ಮ ಮತವು ಗುಣಯುಕ್ತ' ಎಂದು ಆ ಮತಕ್ಕೆ ಸೇರಿಬಿಟ್ಟೀರಿ ಬುದ್ಧಿ ಬೆಳೆದಮೇಲೆ ಪಶ್ಚಾತ್ತಾಪಪಡಬೇಕಾದೀತು ಎಂದು ಬೋಧಿಸುವ ಉದ್ದೇಶದಿಂದ ಹಾಕಿರುವ ಪ್ರಶ್ನೆಯನ್ನು ನೋಡಿ ನವನಾಗರಿಕರೂ ಸತ್ಯಾಪರರೂ ಆದ ಎಡಿಟರವರಿಗೆ ಸೋಜಿಗವೂ ವ್ಯಸನವೂ ಆಗದೆ ಹೋದೀತೆ? ಈಗ ಎಲ್ಲಾ ಚೋದ್ಯಗಳಿಗೂ ನಾವು ಉತ್ತರ ಹೇಳಿದಂತೆ ಆಯಿತೆಂದು ಎಡಿಟರವರು ಭಾವಿಸುತ್ತಾರೆಂದು ನಂಬುತ್ತೇವೆ ಇನ್ನು ಏನಾದರೂ ಸಂಶಯವಿದ್ದರೆ ಕೇಳಬಹುದು

ಇವರು ಯಾವುದೋ ವೇದ ವಾಕ್ಯವು ನಿರರ್ಥಕವಾಗುವುದಲ್ಲಾ ಎಂದು ಬಹು ಚಿಂತಾಕ್ರಾಂತರಾಗಿರುವಂತೆ ತೋರುವುದು ಅಂತಹ ಭಯವೇನೂ ಇಲ್ಲ. ಏಕೆಂದರೆ ವೇದವನ್ನು ಅನುಸರಿಸುವವರಿಗೆ ಆ ವಾಕ್ಯವು ಸಾರ್ಥಕವಾಗಿರುವುದು ಇತರರಿಗೆ ಆ ವಾಕ್ಯವೇನಾದರೇನು? ಎಡಿಟರವರು ಕೊನೆಗೆ ವಿದ್ಯಾರ್ಥಿಗಳಿಗೆ ವಿಚಾರ ಬುದ್ಧಿಯನ್ನು ಹುಟ್ಟಿಸಬೇಕೆಂದು ಉಪಾಧ್ಯಾಯರಿಗೆ ಉಪದೇಶವನ್ನು ಮಾಡಿರುವರು ಇದಕ್ಕಾಗಿ ಅವರಿಗೆ ಉಪಾಧ್ಯಾಯ ಮಂಡಲಿಯವರೆಲ್ಲಾ ಕೃತಜ್ಞರಾಗಿರಬೇಕು ಇವರು ಹೇಳುವ ಕೆಲಸವನ್ನೇ ಮಾಡಬೇಕೆಂದು ನಾವು ಪ್ರಾರಂಭ ಮಾಡಿದೆವು ಹುಡುಗರಿಗೆ ಮತದ ವಿಷಯದಲ್ಲಿ ಎಷ್ಟರಮಟ್ಟಿಗೆ ವಿಚಾರ ಬುದ್ಧಿ ಅಂಕುರಿಸಿದೆ ಎಂದು ನೋಡುವುದಕ್ಕಾಗಿ ಈ ಪರೀಕ್ಷೆಯನ್ನು ಮಾಡಿದೆವು ಹುಡುಗರು ಎಷ್ಟುಮಟ್ಟಿಗೆ ವಿಚಾರ ಮಾಡುತ್ತಿದ್ದ

ಹೊಸ ನಮಗೆ ತೋರುವುದು. ಎಡಿಟರವರು ಹಿಂದುಗಳಾಗಿದ್ದರೆ ಪ್ರಶ್ನೆಗಳು ಬಹು ಚನ್ನಾಗಿವೆ ನಾವುಗಳು ತಕ್ಕವುಟ್ಟಿಗೆ ಉತ್ತರಗಳನ್ನು ಬರೆಯಬಹುದೆ ಹೀಗೆಯೇ ಎಲ್ಲವೂ ನಡೆಯುತ್ತಾ ಹೋದರೆ ಎಷ್ಟೋ ಪ್ರಯೋಜನ ಉಂಟು ಎಂದು ಅಭಿಪ್ರಾಯ ಪಡುತ್ತಿದ್ದೆನು ಆದರೆ ಅನ್ಯಮತದವರಾದುದರಿಂದ ಸ್ವಮತ ಪ್ರಸಾರಕ್ಕೆ ಅಡ್ಡಿಯಾದ ಪ್ರಶ್ನೆಯೂ ಅದಕ್ಕೆ ತಕ್ಕಂತೆ ಹುಡುಗನ ಉತ್ತರವೂ ಇರುವುದನ್ನು ನೋಡಿ ಸತ್ಯಕ್ಕಿಂತ ಹೆಚ್ಚಾದುದು ಮತ್ತೊಂದಿಲ್ಲವೆಂದು ಇವರೇ ಬಾಯಿಯಲ್ಲಿ ಹೇಳುತ್ತಿದ್ದರೂ ಸತ್ಯ ವಿಚಾರವಾಗಿ ನಡೆದ ಮತಪರೀಕ್ಷೆಯನ್ನು ಸ್ವಲ್ಪವಾದರೂ ಅನುಮೋದಿಸದೆ ಮೋಸ್ಕೆಕ ದೃಶ್ಯಗಳಾಗಿ ಇಲ್ಲದ ಚೋದ್ಯಗಳನ್ನು ಎಂಬುವವರು ಯಾಬಳರೋ?, ಆದರೂ ನಾವು ಎಡಿಟರವರ ಸ್ಪುಟನೆ, ಏಕೆಂದರೆ ನಮ್ಮ ಮತದಲ್ಲಿಯೂ ಸತ್ಯಕ್ಕಿಂತ ಉತ್ತಮೋತ್ತಮವಾದ ವಸ್ತು ಇನ್ನೊಂದಿಲ್ಲ

ವೈ ಸುಬ್ಬರಾವ್,
ಅಸಿಸ್ಟೆಂಟ್ ಮಾಸ್ಟರ್, ದಾವಣಗೆರೆ

[ಈ ಲೇಖನವನ್ನು ಓದಿ ಸಂತೃಪ್ತಿಯಿಲ್ಲದೆ ನಮ್ಮ ವ್ಯಸನವು ಹೆಚ್ಚಾಗಿದೆ ಬುದ್ಧಿಶಾಲಿಯು ಸತ್ಯವನ್ನು ಬಾಯಿಯಿಂದ ಅವಲಂಬಿಸಿ ತಮ್ಮ ಉಪದೇಶದಿಂದ ಅದನ್ನು ತಿರಸ್ಕರಿಸುತ್ತಾರೆ ನಾವು ಈ ಲೇಖನವನ್ನು ಓದಿ ಒಂದು ಅಭಿಪ್ರಾಯವನ್ನು ಮಾತ್ರ ಕಂಡಿದ್ದೇವೆ ಏನೆಂದರೆ ನಮ್ಮ ಮತವು ಹೀನವಾಗಿದ್ದಾಗ್ಯೂ ತೀರಾದರೂ ಅದನ್ನು ಅನುಸರಿಸಿ, ಬೇರೆ ಮತಗಳನ್ನು ಹಿಂಸ್ಸಿಸಬೇಕು ಹೀಗೆ ಮಾಡುವವನು ಸತ್ಯವನ್ನು ಎಂದಿಗೂ ಕಂಡು ಹಿಡಿಯುವದಿಲ್ಲ ಇಂಥವನು ಮಕ್ಕಳಿಗೆ ಉಪದೇಶವನ್ನು ಮಾಡುವದಕ್ಕೆ ತಕ್ಕವನಲ್ಲ.

ಕ್ರೈಸ್ತರ ಶಾಸ್ತ್ರದಲ್ಲಿ "ಎಲ್ಲವನ್ನೂ ಪರಿಶೋಧಿಸಿ ಉತ್ತಮವಾದದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ" ಯೆಂದು ಬರೆದಿದೆ ಸತ್ಯವಾವುದು ಯೆಂದು ಕಂಡು ಹಿಡಿಯಬೇಕೆಂದು ಅಪೇಕ್ಷಿಸುವವರು ತಮ್ಮದು ನಮ್ಮದು ಸ್ವಮತ, ಅನ್ಯ ಮತಗಳೆಂಬ ಭೇದ ಬುದ್ಧಿಯನ್ನು ಬಿಟ್ಟು ಸತ್ಯವು ಎಲ್ಲಿ ದೊರೆತಾಗ್ಯೂ ಅದು ನಮಗೆ ಅನುಕೂಲವಾದದ್ದೆಂಬದಾಗಿ ಸ್ವೀಕರಿಸಬೇಕು ಈ ಭರತಖಂಡದ ಜನಗಳು ಕೆಲ ವಿಷಯಗಳಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಇತರ ಖಂಡಗಳ ಜನಗಳಿಗೆ ಕಡಮೆಯ ದವರಲ್ಲವೆಂದು ಹಸರುಮಾಡಿ ಎನ್ನಿಸಿಕೊಳ್ಳ ಬೇಕೆಂದು ನಾವು ಅಪೇಕ್ಷಿಸುವೆವು ಆದರೆ ಇಂಥಾ ಅಭಿವೃದ್ಧಿಗೆ ತಕ್ಕಮಾರ್ಗವು ಯಾವುದೆಂದರೆ ಸಕಲವನ್ನು ಶೋಧಿಸಿ ಬುದ್ಧಿಗೆ ವಿರೋಧವಾಗಿಯೂ ಅನ್ಯಾಯವಾಗಿಯೂ ಇರುವದನ್ನು ದುರಭಿಮಾನವಿಲ್ಲದೆ ತಳ್ಳಿಬಿಟ್ಟು ಸತ್ಯವನ್ನು ಎಲ್ಲಿ ಸಿಕ್ಕಿದಾಗ್ಯೂ ಸಧೈರ್ಯವಾಗಿ ಅವಲಂಬಿಸುವದೇ ನಮ್ಮ ದೇಶದಲ್ಲಿ ದೋಷಗಳು ಹೊರಬೀಳುವವು ಯೆಂಬ ಭಯವುಳ್ಳ ಬೋಧಕರುಗಳನ್ನು ಬಿಟ್ಟು ನಮ್ಮದು ನಿಂಬ ಅಹಂಭಾವದಿಂದ ವಿಚಾರವಿಲ್ಲದೆ ನಂಬುವರು ಕಡೆಗೆ ಹೀಗೆ ಕಾರಣವಾಗುವವು ಎಡಿಟರ್]

ಒಳದೇಶದ ವೃತ್ತಾಂತಗಳು.

ದಿವಾನರವರೂ ಕೌನ್ಸಿಲ್ ಮೆಂಬರುಗಳೂ ರಾಜಧಾನಿಯಲ್ಲೇ ಇದ್ದು ಕೊಂಡು ಸಂಸ್ಥಾನದ ಕಾರುಬಾರುಗಳನ್ನು ಕುರಿತು ಪ್ರತಿ ದಿನವೂ ಸಮಾಲೋಚನೆ ಮಾಡುತ್ತಿದ್ದಾರೆ

ಕಳೆದ ವಾರ ಶ್ರೀಮನ್ ಮಹಾರಾಜರವರು ಕುಣಿಗಲಿಗೆ ಒಂದು ದಿವಸದ ಮಟ್ಟಿಗೆ ಮೋಟಾರ್ ಗಾಡಿಯಲ್ಲಿ ದಯಮಾಡಿ ಅಲ್ಲಿನ ವಿದ್ಯಾಶಾಲೆಗಳನ್ನು ಸಂದರ್ಶಿಸಿ ಬಂದರು

ಜನವರಿ ೩೦ ನೇ ಗುರುವಾರ ಬೆಳಿಗ್ಗೆ ಬೆಂಗಳೂರು ಸಿಟಿ ಜನೋಪಕಾರಿ ಮೆ|| ದೊಡ್ಡಣ್ಣ ಶೆಟ್ಟರವರ ಶಾಲೆಯ ಮಂದಿರದಲ್ಲಿ ಪಲಪುಷ್ಪ ಸುತ್ತು ವ್ಯಗಾರಿಕೆಗಳ ಪ್ರದರ್ಶನವು ನಡೆಯುವುದೆಂದು ಪ್ರಕಟವಾಗಿದೆ

ಕುಂಕುಮದ ಬಳಿ ಇರುವ ಮುಂದಗಿರಿ ಎಂಬ ಜನಕ್ಷೇತ್ರದ ಫಂಡಿಗೆ ಕಳೆದ ನವಂಬರ್ ಕಡೆಯ ತನಕ ರೂ ೧೦೯೨೮-೬-೩ ಪೈ ಚಂದಾ ಕೂಡಿದ್ದರಲ್ಲಿ ರೂ. ೧೩೪೧-೯-೪ ಪೈ ಖರ್ಚಾಗಿ ರೂ. ೯೧೩-೧೩-೧೧ ಪೈ ಉಳಿದಿದೆ ಎಂದು ಟ್ರೆಜರರ್ ಮೆ|| ಡಿ ಎಸ್. ಸಾಮರಾಜಯ್ಯನವರು ತಿಳಿಸುತ್ತಾರೆ

ಬೆಂಗಳೂರು ಬ್ರಹ್ಮಸಮಾಜದ ಆಚಾರ್ಯರಾದ ಶ್ರೀಬ್ರಹ್ಮಾನಂದ ಸ್ವಾಮಿಯವರು ಈ ತಿಂಗಳ ೩ ನೇ ತಾರೀಖಿನಲ್ಲಿ ಗೋರಿಬಿದನೂರಿಗೂ, ೩೦ ೨ ನೇ ಮಂಗಳವಾರ ಹಿಂದೂಪುರಕ್ಕೂ ಸಂಚಾರ ಹೋಗಿ ಆಯಾ ಸ್ಥಳದಲ್ಲಿ ಸಭೆಗಳನ್ನು ನಡಿಸಿ ಬ್ರಹ್ಮಧರ್ಮ, ಅಧ್ಯಾತ್ಮ ತತ್ವವೆಂಬ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು

ಒಬ್ಬ ಬಾತ್ಮಿದಾರರು ಬರೆಯುವುದು — ಮೈಸೂರಿನಲ್ಲಿ ಈ ಸಲ ಪ್ಲೇಗ್ ಉಪದ್ರವು ಬಹಳ ಭಯಂಕರವಾಗಿತ್ತಷ್ಟೆ ಆಗ ನವಮಾಸ ತುಂಬಿದ ಒಬ್ಬ ಗರ್ಭಿಣಿಗೆ ಪ್ಲೇಗ್ ತಗಲಿ ತುಂಬಾ ಸಂಕಟಪಡುತ್ತಿದ್ದದ್ದರಿಂದ ಮನೆಯವರು ಆಕೆಯನ್ನು ಗಾಡಿಯಲ್ಲಿ ಮಲಗಿಸಿಕೊಂಡು ರಾಜಧಾನಿಯ ಈರನಗೆರೆ ಪ್ಲೇಗ್ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ಸಾಗಿಸಿದರು ಅಲ್ಲಿನ ಇಬ್ಬರು ಡಾಕ್ಟರುಗಳು ಬಹು ಮುತುವರ್ಜಿಯಿಂದ ಆಕೆಯನ್ನು ಪರೀಕ್ಷಿಸಿ ನೋಡುವಾಗ್ಗೆ ಗರ್ಭದಲ್ಲಿದ್ದ ಕೂಸು ಮೃತಪಟ್ಟು ಸ್ವಲ್ಪ ಮಟ್ಟಿಗೆ ಊದಿತ್ತು. ಈ ಬಾಧೆಯಿಂದ ರೋಗಿಗೆ ಬಹಳ ಜ್ವರವೂ ಸಂಕಟವೂ ಉಂಟಾಗಿ ಸ್ಮೃತಿ ತಪ್ಪಿತ್ತು. ಮೆ|| ವೈ. ನರಸಿಂಹೈಯನವರೂ, ಮೆ|| ರೋಡ್ರಿಗ್ಸ್ ಯವರೂ ಗರ್ಭದಲ್ಲಿ ಮೃತಪಟ್ಟು ಕೆಟ್ಟಿದ್ದ ಶಿಶುವನ್ನು ಶಸ್ತ್ರಪ್ರಯೋಗ ಮಾಡಿ ಗರ್ಭದಲ್ಲೇ ಛೇದಿಸಿ ಹೊರಗೆ ತಗೆದುಬಿಟ್ಟರು. ಕರುಣಾಯ ರೋಗದಲ್ಲಿ ಅತ್ಯಂತ ಮರಣ ಸಂಕಟಪಡುತ್ತಿದ್ದ ಆಕೆಯು ವಿಶ್ರಾಂತಿಯನ್ನು ಹೊಂದಿ, ದಿನೇದಿನೇ ಶರೀರಾರೋಗ್ಯವನ್ನು ಹೊಂದಿ ೧೪ ದಿವಸಗಳ ಮೇಲೆ ಕ್ಷೇಮದಿಂದ ತನ್ನ ಮನೆಗೆ ಹೋದಳು

ರಾಜಧಾನಿಯ ಸಂತೇಪೇಟೆಯಲ್ಲಿರುವ ಸಾಹುಕಾರ್ ಸೂಲಗಿರಿ ಡಿ. ಮದ್ದಣ್ಣನವರು ಕಳೆದ ಬುಧವಾರ ಸಾಯಂಕಾಲ ತಮ್ಮ ಮನೆಗೆ ಇನಾಕ್ಯುಲೇಟ್ ಡಾಕ್ಟರುಗಳನ್ನು ಕರೆಸಿಕೊಂಡು ಅವರಿಗಾಗಿ ಒಂದು ಸಂತೋಷಕೂಟವನ್ನು ಮಾಡಿದ್ದರು ದಿವಾನರವರು, ಕೌನ್ಸಿಲ್ ಮೆಂಬರುಗಳು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು, ಮ್ಯುನಿಸಿಪಲ್ ಕಮಿಷನರುಗಳು ಮೊದಲಾದವರೆಲ್ಲಾ ದಯಮಾಡಿದ್ದರು ಮೆ|| ಮದ್ದಣ್ಣನವರು ಅತಿಥಿಗಳನ್ನು ಆದರದಿಂದ ಎದುರುಗೊಂಡು ದಿವ್ಯವಾಗಿ ಫರಾಷ್‌ಮಾಡಿದ್ದ ಉಪ್ಪರಿಗೆಯ ದಿವಾನ್‌ಖಾನೆಯಲ್ಲಿ ಕೂರಿಸಿದರು. ಅವರಿಗೆಲ್ಲಾ ಜಾತಿವಾರಾಗಿ ರುಚಿರುಚಿಯಾದ ನಾನಾ ಬಗೆಯ ಭಕ್ಷ್ಯಗಳನ್ನೂ ಹಣ್ಣುಹಂಪಲುಗಳನ್ನೂ ಕೊಡಿಸಿ ಸಂತೋಷಪಡಿಸಿದರು. ವೈಣಿಕಶಿಖಾಮಣಿ ಮೆ|| ಶೇಷಣ್ಣನವರ ವೀಣಾಗಾನವೂ, ಜಲತರಂಗ್ ವಾದ್ಯವೂ ಸಿಂಡಿಕ ವಾಸುದೇವಾಚಾರ್ಯರ ಹಾಡುಗಾರಿಕೆಯೂ ಅತಿಥಿಗಳಿಗೆ ಬಹು ಆನಂದವನ್ನುಂಟುಮಾಡಿದವು ಕಡೆಯಲ್ಲಿ ದಿವಾನರವರೂ ಕೌನ್ಸಿಲರುಗಳೂ ಮ|| ಮದ್ದಣ್ಣನವರ ಪ್ರಿಯಾತಿಥ್ಯವನ್ನೂ ಪರೋಪಕಾರಬುದ್ಧಿಯನ್ನೂ ಕೊಂಡಾಡಿ, ಅವರೂ ಡಾಕ್ಟರುಗಳೂ ಸಾಹಸಪಟ್ಟು ಇನಾಕ್ಯುಲೇಷನ್ ಮಾಡಿಸಿದ್ದರಿಂದ ಈ ಸಲ ರಾಜಧಾನಿಯಲ್ಲಿ ಪ್ಲೇಗು ಇಷ್ಟುಬೇಗ ಶಮನವಾಗಲು ಸಹಾಯವಾಯಿತು ಎಂದು ಹೇಳಿ, ಮೆ|| ಮದ್ದಣ್ಣನವರಿಂದ ಬೀಳ್ಕೊಂಡು ತೆರಳಿದರು. ಮೆ|| ಮದ್ದಣ್ಣನವರು ಆ ದಿನ ಮಾಡಿಸಿದ್ದ ಏರ್ಪಾಡುಗಳ ವಿವರಣೆಯು ಬಹಳ ಶ್ಲಾಘ್ಯವಾದದ್ದಾಗಿತ್ತೆಂದು ತಿಳಿಸಲು ಸಂತೋಷಪಡುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ತುಮಕೂರು ತಾಲೂಕು ಕುಚಂಗಿಯಲ್ಲಿ ಪ್ಲೇಗ್ ಉಪದ್ರವು ಇದೆ ಎಂದು ತಿಳಿಯುತಕ್ಕದ್ದು

ಕ್ರಿಸ್ಮಸ್ ರಜಾ ಉದ್ದಿಶ್ಯ ಪಬ್ಲಿಕ್ ಆಫೀಸುಗಳೂ, ಕೋರ್ಟುಗಳೂ, ವಿದ್ಯಾಶಾಲೆಗಳೂ ಡಿಸೆಂಬರ್ ತಾ ೨೪ ನೇ ಶುಕ್ರವಾರದಿಂದ ಜನವರಿ ತಾ. ೨ನೇ ಭಾನುವಾರದ ತನಕ ಉಭಯ ದಿನಗಳೂ ಸೇರಿ ಮುಚ್ಚಲ್ಪಡುವವು

ಫ್ರೆಂಚ್‌ರಾಕ್ಸ್ ಮ್ಯುನಿಸಿಪಲ್ ಬೋರ್ಡಿಗೆ ಮೆ|| ಬಾಬೂರಾಯನ ಸಾಹೇಬರನ್ನೂ, ಸಿಂಧುಘಟ್ಟ ಮ್ಯುನಿಸಿಪಲ್ ಬೋರ್ಡಿಗೆ ಮೆ|| ಗಳಾದ ಭಸ್ಮಲಿಂಗಾ ಚಾರ್ಲು, ಶಿವಗೆರೆ ವೆಂಕಟೇಶಯ್ಯನವರು. ಸೂರಪ್ಪನವರು. ಇವರನ್ನು ಮೆಂಬರಾಗಿ ನೇಮಿಸಿದೆ.

ಚಿಕ್ಕಬಳ್ಳಾಪುರದ ಮುನ್‌ಸಿಫ್ ಮೆ|| ಟಿ ವೆಂಕೋಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ಅದರ ಕೂಡ ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದು

ಮತ್ತೊಂದು ಹುಕುಂ ಕೊಡುವ ತನಕ ಚೀಫ್ ಕೋರ್ಟ್ ಡೆಪ್ಯುಟಿ ಕ್ಲಾರ್ಕ್ ಮೆ|| ಡಿ ಅಳಿಂಗ್ರಾಚಾರ್ಯರು ಚಿಕ್ಕಬಳ್ಳಾಪುರದ ಮುನ್‌ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ನಂಜನಗೂಡು ಮುನ್‌ಸಿಫ್ ಮೆ|| ಡಿ ಕೆ ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ಅದರ ಕೂಡ ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳ ಬಹುದು.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಅಡ್ವೋಕೇಟ್ ಮೆ|| ಎಸ್ ಕೆ ಶ್ರೀನಿವಾಸರಾಯರು ನಂಜನಗೂಡು ಮುನ್‌ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಪ್ರೊಲೀಸ್ ಪ್ರೊ|| ಅ| ಸೂಪರಿಂಟೆಂಡೆಂಟ್ ಮೆ|| ಟಿ ಎಸ್. ಅಲ್ಲಿ ಖಾನ್ ಯವರಿಗೆ ೧೯೧೦ ನೇ ಇಸವಿ ಜೂನ್ ತಾ ೩೦ ರ ವರೆಗೆ ಸಂಬಳವಿಲ್ಲದ ರಜಾ ಕೊಟ್ಟಿದೆ

ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಅ|| ಸರ್ಜನ್ ಮೆ|| ಟಿ. ಎಸ್ ಸಿದ್ಧಪ್ಪನವರಿಗೆ ಕ್ರಿಸ್ಮಸ್ ರಜಾದೊಂದಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಬ್ ಅ|| ಸರ್ಜನ್ ಮೆ|| ಟಿ. ಬಾಲಕೃಷ್ಣ ಮೊದಲಿಯಾರು, ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಮಾಡಲ್ಪಟ್ಟಿದಾರೆ

ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮೆ|| ಹಿ ಪ. ಡಿಸೋಜಾ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಾಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಸಬ್ ಡಿವಿಜನ್ ಅ| ಕಮಿಷನರ್ ಮೆ ಟಿ. ತಂಬೂಚೆಟ್ಟಿಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಜನವರಿ ತಾ. ೩ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಕಮಿಷನರ್ ಮೆ|| ಎ ವೇದಾಂತದೇಶಿಗ ಐಯಂಗಾರ್ಯರಿಗೆ ಕ್ರಿಸ್ಮಸ್ ರಜಾದೊಂದಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡುವ ತನಕ ಆಕ್ಟಿಂಗ್ ಅ| ಕಮಿಷನರ್ ಮೆ|| ಎ ಕೃಷ್ಣಸ್ವಾಮಿ ಐಯಂಗಾರ್ಯರು ಕೋಲಾರ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರತಕ್ಕದ್ದು

ಬೆಂಗಳೂರು ಸಬ್ ಜಡ್ಜಿ ಯವರನ್ನು ಬೆಂಗಳೂರು ಡಿವಿಜನ್ ಅ|| ಕಮಿಷನರ್ ಜಡ್ಜರನ್ನಾಗಿ ನೇಮಕಮಾಡಿದೆ.

ಮುನ್‌ಸಿಫ್ ಮೆ|| ಹ ಶ್ರೀನಿವಾಸ ಐಯರವರನ್ನು ಕೋಲಾರದಿಂದ ಬೆಂಗಳೂರಿಗೂ, ಮುನ್‌ಸಿಫ್ ಮೆ|| ಎಂ. ಎಲ್. ಶ್ರೀಕಂಠೇಶ ಗೌಡರವರನ್ನು ಬೆಂಗಳೂರಿನಿಂದ ಕೋಲಾರಕ್ಕೂ ವರ್ಗಮಾಡಿದೆ. ಕ್ರಿಸ್ಮಸ್ ರಜಾ ಪೂರೈಸಿದ ಮೇಲೆ ಇವರು ವರ್ಗವಾಗತಕ್ಕದ್ದು.

ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ|| ಹಸನ್ ಅಲ್ಲಿ ಯವರನ್ನು ಚಿತ್ರದುರ್ಗದಿಂದ ಕಡೂರಿಗೂ, ಮೆ|| ಅಬ್ದುಲ್ಲಾ ಷರೀಫ್ ಯವರನ್ನು ಕಡೂರಿನಿಂದ ಚಿತ್ರದುರ್ಗಕ್ಕೂ ವರ್ಗಮಾಡಿದೆ.

ಶಿವಮೊಗ್ಗ ಡಿವಿಜನ್ ಅ| ಇಂಜನಿಯರ್ ಮೆ|| ಬಿ ನಂಜುಂಡಾರಾಧ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ವಿಶೇಷ ವರ್ತಮಾನಗಳು.

ಅಮೇರಿಕದಲ್ಲಿ ಗತಿಸಿದ ಮೆ|| ಜಾನ್. ಎಸ್. ಕೆನ್ನಡಿ ಎಂಬ ಪುಣ್ಯಾತ್ಮನು ತನ್ನ ಆಸ್ತಿಯಲ್ಲಿ ೯ ಕೋಟಿ ರೂಪಾಯನ್ನು ವಿದ್ಯಾಶಾಲೆಗಳಿಗೂ. ೯ ಕೋಟಿ ರೂಪಾಯನ್ನು ಇತರ ಪರೋಪಕಾರ ಸಂಘಗಳಿಗೂ ಕೊಟ್ಟಿರುತ್ತಾನೆ.

ಅಮೇರಿಕಕ್ಕೆ ಸೇರಿದ ಉತ್ತರ ಕೆರೋಲಿನಾ ಡಿಸ್ಟ್ರಿಕ್ಟಿನಲ್ಲಿ ಒಂದು ಎಕ್ಸ್‌ಪ್ರೆಸ್ ರೈಲ್ ಗಾಡಿಯು ಕಂಬಿಗಳನ್ನು ಬಿಟ್ಟು ಹಾರಿ ಮಗುಚಿಕೊಂಡಿತು. ಹದಿಮೂರು ಮಂದಿ ಮೃತಪಟ್ಟರು, ೩೦ ಜನರಿಗೆ ಗಾಯಗಳಾಗಿವೆ.

ಸರ್ ಆಲ್‌ಫ್ರೆಡ್ ಜೋನ್ಸ್ ಎಂಬಾತನು ೧೧೨|| ಲಕ್ಷ ರೂಪಾಯಿನ ಆಸ್ತಿಯನ್ನು ಸಂಪಾದಿಸಿವಾಡಿ ಕಾಲವಾದನು. ಆತನು ಆ ಆಸ್ತಿಯಲ್ಲಿ ವಿಶೇಷ ಭಾಗವನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದಿರುತ್ತಾನೆ

ಜಾನ್‌ಜಿಬಾರಿನಲ್ಲಿ ಘೋಷಾ ಸ್ತ್ರೀಯರಿಗೂ ಇತರರಿಗೂ ಅನುಕೂಲವಾಗುವಂಥಾ ಒಂದು ಭಾರಿ ಆಸ್ಪತ್ರೆಯನ್ನು ಕಟ್ಟಲಾರಂಭವಾಯಿತು. ಜಾನ್‌ಜಿಬಾರಿನ ಸುಲ್ತಾನರು ಅದಕ್ಕೆ ೬೦ ಸಾವಿರ ರೂಪಾಯಿ ಕೊಟ್ಟು, ಅಸ್ತಿಭಾರವನ್ನು ಹಾಕಿರುತ್ತಾರೆ.

ಉತ್ತರ ಅಮೇರಿಕಕ್ಕೆ ಸೇರಿದ ಈರೀ ಎಂಬ ಸರೋವರ ಪ್ರಾಂತ್ಯದಲ್ಲಿ ಕಳೆದ ವಾರ ಎರಡು ದಿನ ಅಪಾರವಾದ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾಗಿ ಕೆಲವು ಲಕ್ಷ ರೂಪಾಯಿಗಳ ಫಸಲೂ, ಮನೆಮಠ ಆಸ್ತಿಪಾಸ್ತಿಗಳೂ ಹಾಳಾದವು. ಮತ್ತು ಎಪತ್ತೊಂಬತ್ತು ಜನರು ಅಕಾಲ ಮರಣವನ್ನು ಹೊಂದಿದರು.

ಈಜಿಪ್ಟ್ ರಾಜ್ಯದ ಖಿದೈವ್ ಸುಲ್ತಾನರವರು ಪರಿವಾರ ಸಹಿತ ಯಾತ್ರೆ ಹೊರಟು, ಕಳೆದ ವಾರ ಮಕ್ಕಾ ಎಂಬ ಪುಣ್ಯ ಸ್ಥಳವನ್ನು ತಲಪಿದರು. ಅವರನ್ನು ಅಲ್ಲಿನ ಸಾವಿರಾರು ಪ್ರಜೆಗಳೂ ಯಾತ್ರಾರ್ಥಿಗಳೂ ಎದುರುಗೊಂಡರು. ಅವರು ಅಲ್ಲಿರುವ ದೊಡ್ಡ ಮಸೀದಿಗೆ ಹೋಗಿ ಶಾಸ್ತ್ರ ಕೆಲಸಗಳನ್ನೆಲ್ಲಾ ಮಾಡಿದರೆಂದು ತಂತೀ ವರ್ತಮಾನ ಬಂದಿದೆ.

ಮೆ|| ಒಟ್ಟೊ ಬೀಟ್ ಎಂಬಾತನು ಲಂಡನ್ ಪಟ್ಟಣದ ಸರ್ವಕಲಾಶಾಲೆಯ ಫಂಡಿಗೆ ೨೪||| ಲಕ್ಷ ರೂಪಾಯನ್ನು ಕೊಟ್ಟನು. ಈತನ ಸಹೋದರನೂ ಆ ಫಂಡಿಗೆ ೭|| ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಈ ಫಂಡಿನಿಂದ ವೈದ್ಯವಿಚಾರವನ್ನು ಪರಿಶೋಧನೆ ಮಾಡುವಂಥಾ ೧೦ ಮಂದಿ ವಿದ್ಯಾವಂತರಿಗೆ ಕಲಾ ವರುಷಕ್ಕೆ ೩,೭೫೦ ರೂಪಾಯಿನಂತೆ ಮೂರು ವರುಷ ವೇತನ ಕೊಡಬೇಕೆಂದು ಏರ್ಪಾಡಾಗಿರುತ್ತದೆ

ಕ್ಯಾಷ್ಗರ್ ಪಟ್ಟಣದಲ್ಲಿ ಹಿಂದುಸ್ಥಾನದ ವರ್ತಕರು ಹೋಗಿ ಅಲ್ಲಿನ ಚೀನಾ ಪ್ರಜೆಗಳಿಗೆ ಸಾಲವನ್ನು ಕೊಟ್ಟು ಅವರನ್ನು ಕಷ್ಟನಷ್ಟಗಳಿಗೆ ಗುರಿಮಾಡುತ್ತಿದಾರೆಂಬುದನ್ನು ಕೇಳಿ ಚೀನಾ ಸರಕಾರದವರು ಆ ವರ್ತಕರನ್ನೆಲ್ಲಾ ಆ ಪಟ್ಟಣದಿಂದ ಕಳುಹಿಸಿಬಿಡಬೇಕೆಂದು ಹುಕುಂ ಮಾಡಿರುತ್ತಾರೆ. ಈಗ ಅಲ್ಲಿನ ವರ್ತಕರು ತಮ್ಮ ಬಾಕಿಗಳನ್ನೆಲ್ಲಾ ಜಾಗ್ರತೆಯಿಂದ ವಸೂಲ್ಮಾಡಿಕೊಳ್ಳುತ್ತಿರುವರು

ಕೋರಿಯಾ ರಾಜ್ಯದಲ್ಲಿ ಆಳ್ವಿಕೆಯನ್ನು ವಹಿಸಿರುವ ಜಪಾನ್‌ನವರಿಗೂ ಕೋರಿಯಾ ಪ್ರಜೆಗಳಿಗೂ ಈಚಿಗೆ ಕದನಗಳು ನಡೆಯುತ್ತಾ ಬಂದಿವೆ ಎಂದು ವರ್ತಮಾನವಿದೆ. ಎರಡು ಕಡೆಗಳಲ್ಲೂ ಅನೇಕರು ಕೊಲೆಯಾಗುತ್ತಿದಾರೆ. ಕೋರಿಯಾದವರು ಅಲ್ಲಿರುವ ರಷ್ಯಾ ಅಧಿಕಾರಿಗಳ ಆಶ್ರಯವನ್ನು ಪಡೆದಿರುವರು. ಆದರೆ ರಷ್ಯಾದವರು ಮತ್ತೆ ಜಪಾನ್‌ನವರ ಮೇಲೆ ಯುದ್ಧಕ್ಕೆ ಹೊರಡುತ್ತಾರೆಂಬ ಸುದ್ದಿಯು ನಿಜವಲ್ಲವೆಂದು ತಿಳಿದು ಬಂದಿದೆ.

ತುರ್ಕಿ ರಾಜ್ಯದ ಮಾಜಿ ಸುಲ್ತಾನರಾದ ಅಬ್ದುಲ್ ಹಮೀದ್‌ಯವರು ೯೬ ಲಕ್ಷ ರೂಪಾಯನ್ನು ಜರ್ಮನಿಯ ಬ್ಯಾಂಕಿನಲ್ಲಿ ಇಟ್ಟಿದಾರೆ. ಈ ಹಣವನ್ನು ಅವರು ಸುಲ್ತಾನರಾಗಿದ್ದಾಗ್ಗೆ ತುರ್ಕಿಯಿಂದ ಕಳುಹಿಸಿದ್ದರೆಂದೂ, ಅವರ ಸ್ವಂತಹಣವಲ್ಲವಾದದ್ದರಿಂದ ಅವರಿಗೆ ವಾಪಸು ಕೊಡಕೂಡದೆಂದೂ ಈಗಿನ ತುರ್ಕಿ ಸ್ವಾಮ್ಯಾಧಿಪತಿಯಾದ ಚವಕತ್ ಪಾಷಾಯವರು ಆ ಬ್ಯಾಂಕಿಗೆ ತಿಳಿಸಿರುವರು. ಇವರು ಮಾಜಿ ಸುಲ್ತಾನರಿಗೆ ಬರುವ ಕಾಗದಗಳನ್ನು ತಡೆದು ಒಡೆದು ನೋಡಿದ್ದರಲ್ಲಿ ಅವರು ಬ್ಯಾಂಕಿನಲ್ಲಿ ಹಣ ಹಾಕಿದಾರೆಂಬುವುದು ಗೊತ್ತಾಯಿತು

ದಿವಾನ್ ರೋಮೇಶಚಂದ್ರದತ್ತರವರು ಕಾಲವಾದ ಸಂಗತಿಯನ್ನು ವಿಲಾಯತಿಯಲ್ಲಿರುವ ಅವರ ಕ್ಷೇಮಾಭಿಲಾಷಕರಾದ ಇಂಗ್ಲಿಷ್ ದೊಡ್ಡ ಮನುಷ್ಯರೂ ಹಿಂದುಸ್ಥಾನದವರೂ ಕಳೆದ ವಾರ ಒಂದು ಸಭೆಯನ್ನು ನಡಿಸಿದರು. ಡಾ|| ಜಾನ್ ಪೋಲನ್‌ಯವರು ಅಗ್ರಾಸನವನ್ನು ವಹಿಸಿದ್ದರು. ಮೆ|| ದತ್ತರವರ ಚರಿತ್ರೆಯನ್ನೂ ಅವರ ಗುಣ ಯೋಗ್ಯತೆ ಮುಂತಾದದ್ದನ್ನೂ ವಿವರಿಸಿ ಉಪನ್ಯಾಸಗಳು ನಡೆದ ಬಳಿಕ, ಹಿಂದುಸ್ಥಾನದ ಯೌವನಸ್ಥರು ಮೆ|| ದತ್ತರವರ ಮೇಲ್ಪಂಕ್ತಿಯನ್ನು ಇಟ್ಟುಕೊಂಡು ಕೆಲಸಮಾಡುತ್ತಾ ಬಂದರೆ ದೇಶಕ್ಕೆ ತುಂಬಾ ಹಿತವಾಗುವುದೆಂತಲೂ, ಇಂಗ್ಲಿಷರೂ ಹಿಂದುಸ್ಥಾನದವರೂ ಏಕೀಭವಿಸಿ ಕಾರ್ಯಗಳನ್ನು ನಡಿಸುತ್ತಾ ಬರುವುದು ಅವಶ್ಯವಾಗಿದೆ ಎಂತಲೂ ತೀರ್ಮಾನ ಮಾಡಿ, ಅವರು ಗತಿಸಿಹೋದದ್ದಕ್ಕಾಗಿ ತಮಗೆ ಉಂಟಾಗಿರುವ ವ್ಯಸನವನ್ನು ಅವರ ಸಂಸಾರಕ್ಕೆ ತಿಳಿಸಬೇಕೆಂದು ಗೊತ್ತುಮಾಡಿದರು

ಯೂರೋಪ್ ಖಂಡಕ್ಕೆ ಸೇರಿದ ಬೆಲ್ಜಿಯಂ ರಾಜ್ಯದ ದೊರೆಯವರಾದ ಲಿಯೊಪಾಲ್ಡ್ ಲೂಯಿ ಫಿಲಿಪ್ ಮೇರಿ ವಿಕ್ಟರ್‌ಯವರು ಕಳೆದ ಶುಕ್ರವಾರ ಬೆಳಗಿನಝಾಮದಲ್ಲಿ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಇವರು ೧೮೩೫ ನೇ ಏಪ್ರೆಲ್ ತಾ ೯ ರಲ್ಲಿ ಜನಿಸಿ, ೧೮೬೫ ರಲ್ಲಿ ರಾಜ್ಯಾಭಿಷೇಕವನ್ನು ಹೊಂದಿ ನಾಲ್ವತ್ತನಾಲ್ಕು ವರುಷಗಳಿಂದ ದೊರೆತನಮಾಡಿದರು, ಇವರಿಗಿದ್ದ ಏಕಪುತ್ರನು ೧೦ ವರುಷ ಬೆಳೆದು ಕಾಲವಾದನು ಅವರ ದಾಯಾದಿಯವರಾದ ಪ್ರಿನ್ಸ್ ಆಲ್ಬರ್ಟ್‌ಯವರಿಗೆ ದೊರೆತನವಾಗುವುದು. ಇವರಿಗೆ ೩೪ ವರುಷಗಳಾಗಿವೆ ಗತಿಸಿದ ಲಿಯೊಪಾಲ್ಡ್ ದೊರೆಯವರಿಗೆ ಹೊಟ್ಟೆಯಲ್ಲಿ ಏನೋ ಒಂದು ಕುರುಪು ಕಾಣಿಸಿಕೊಂಡು ಡಾಕ್ಟರುಗಳಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ೨-೩ ದಿನಗಳ ತನಕ ಸೌಖ್ಯವಾಗುವಂತೆ ಕಾಣುತ್ತಿದ್ದು, ಅಕಸ್ಮಾತ್ತಾಗಿ ಪ್ರಾಣಹೋಯಿತು. ಅವರು ಬರೆದಿಟ್ಟಿರುವ ಮರಣಶಾಸನವು ಒಂದು ಪುಸ್ತಕದಂತೆ ವಿಸ್ತಾರವಾಗಿದೆ. ಅವರ ಶವವನ್ನು ಶನಿವಾರ ರಾತ್ರಿ ದೀವಟಿಗೆಗಳನ್ನು ಹಿಡಿಸಿಕೊಂಡು ಲೇಕನ್ ಎಂಬ ಸ್ಥಳದಿಂದ ರಾಜಧಾನಿಯಾದ ಬ್ರಸೆಲ್ಸ್ ಪಟ್ಟಣಕ್ಕೆ ಮೆರವಣಿಗೆಯಲ್ಲಿ ತೆಗೆದುಕೊಂಡುಹೋದರು. ಸಾವಿರಾರು ಪ್ರಜೆಗಳು ಅರಮನೆಗೆ ಹೋಗಿ ದೊರೆಯವರ ಕಳೇಬರವನ್ನು ನೋಡಿ ಬಂದರು, ರಾಜ್ಯದ ಮುಖ್ಯ ಮಂತ್ರಿಗಳೂ ಪರರಾಜ್ಯಗಳ ರಾಯಭಾರಿಗಳೂ ಸೈನ್ಯಗಳೂ ಸೇರಿ ಪದ್ಧತಿಯ ಪ್ರಕಾರ ಶವವನ್ನು ದರ್ಶನ್‌ಮಾಡುತ್ತಾರೆ.

ಭೂಮಿಯನ್ನು ಸಾರಗೊಳಿಸುವಿಕೆ

ಈಚಿಗೆ ಅಮೇರಿಕಾ ದೇಶದಲ್ಲಿ ಸಾಗುವಳಿ ಜಮೀನುಗಳಲ್ಲಿ ಸಾರವನ್ನು ಹೆಚ್ಚಿಸುವುದಕ್ಕೆ ಒಂದು ಹೊಸ ವಿಧಾನವನ್ನು ಕಂಡು ಹಿಡಿದಿರುತ್ತಾರೆ ಇದಕ್ಕೆ ಸಾಯಿಲ್ ಇನಾಕ್ಯುಲೇಷನ್ ಎಂದು ಹೆಸರು ಇದರ ಕ್ರಮ ಹ್ಯಾಗಂದರೆ, ಸಾಧಾರಣವಾಗಿ ಭೂಮಿಯಲ್ಲಿ ಅಸಂಖ್ಯಾತವಾದ ಸೂಕ್ಷ್ಮ ಕ್ರಿಮಿಗಳು ಇರುತ್ತವೆ ಇವು ಭೂಮಿಯ ಗುಣವನ್ನು ಬದಲಾಯಿಸಿ ವ್ಯವಸಾಯಕ್ಕೆ ಲಾಯಖಾಗಿ ಮಾಡುತ್ತವೆಯಲ್ಲದೆ, ಗಾಳಿಯಿಂದ ಸಸ್ಯಾಹಾರಪದಾರ್ಥಗಳನ್ನು ಹೀರಿ ಪೈರುಗಳಿಗೆ ಸಾಕಾದಷ್ಟು ಒದಗಿಸಿಕೊಡುತ್ತವೆ ಎಲ್ಲಾ ಭೂಮಿಗಳಲ್ಲೂ ಒಂದೇ ತರದ ಕ್ರಿಮಿವರ್ಗಗಳು ಇರುವುದಿಲ್ಲ ಮತ್ತು ಕೆಲವು ಭೂಮಿಗಳಲ್ಲಿ ಹೆಚ್ಚಾಗಿಯೂ ಮತ್ತೆ ಕೆಲವಲ್ಲಿ ಕಮ್ಮಿಯಾಗಿಯೂ, ಕೆಲವಲ್ಲಿ ಸುತರಾಂ ಇಲ್ಲದೆಯೂ ಇರುವುದುಂಟು ಈ ಕ್ರಿಮಿಗಳು ಹೆಚ್ಚಾಗಿ ಇದ್ದ ಹಾಗೆಲ್ಲಾ ಭೂಸಾರವೂ ಅಧಿಕವಾಗಿರುತ್ತದೆ ಇವು ಕಮ್ಮಿಯಾದರೆ ಭೂಮಿಯಲ್ಲಿ ಸಾರವೂ ಕಮ್ಮಿಯಾಗುತ್ತದೆ ಈ ಕ್ರಿಮಿಗಳ ಜಾತಿಯಲ್ಲಿ ಅನೇಕ ಭೇದಗಳುಂಟು ಅಮೇರಿಕಾ ದೇಶದಲ್ಲಿ ಒಂದು ಹೊಲದ ಮಣ್ಣನ್ನು ಅಜಮಾಯಿಷಿ ಮಾಡಿ ನೋಡುವಲ್ಲಿ, ಒಂದು ಚಿಟಿಕೆ ಮಣ್ಣಿನಲ್ಲಿ ಕೋಟ್ಯಂತರ ಕ್ರಿಮಿಗಳು ಇದ್ದವಂತೆ ಸ್ನೊಂದು ಜಮೀನಿನ ಮಣ್ಣಿನಲ್ಲಿ ,೦೦೦ ಕ್ರಿಮಿಗಳೂ ಕೂಡ ಕಂಡುಬರಲಿಲ್ಲ, ಮತ್ತೊಂದರಲ್ಲಿ ಸುತರಾಂ ಇರಲೇ ಇಲ್ಲ ಇಂಥಾ ಕ್ರಿಮಿಗಳನ್ನು ಹುಲುಸಾದ ಭೂಮಿಯಿಂದ ಕೀಳುಭೂಮಿಗೆ ತೆಗೆದುಬಿಟ್ಟು ಅದನ್ನು ಸಾರವತ್ತಾಗಿ ಮಾಡಬಹುದೆಂದು ಅಮೇರಿಕ ದೇಶದಲ್ಲಿ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿರುತ್ತಾರೆ ಈ ನೂತನ ವಿಧಾನವನ್ನು ಆಗಲೇ ಬಂಗಾಳಾ ವ್ಯವಸಾಯ ಇಲಾಖೆಯವರು ಬಂಗಾಳಾದಲ್ಲಿ ಆರಂಭಿಸಿ ಅಜಮಾಯಿಷಿ ಮಾಡುತ್ತಲಿದ್ದಾರೆ

ದೆವ್ವನೂ, ಗ್ರಾಮದೇವತೆಯೂ

[ಒಬ್ಬ ಬಾತ್ಮಿದಾರರಿಂದ]

ವಾಚಕ ಮಹಾಶಯರೇ, ಇದೆಂಥಾ ಕಾಲವೆಂದು ಪ್ರಶ್ನೆ ಮಾಡಿದರೆ "ನವನಾಗರಿಕ ಕಾಲ" ವೆಂದು ಯಾರು ಬೇಕಾದರೂ ಧಾರಾಳವಾಗಿ ಹೇಳುವರಲ್ಲವೇ? ಆದರೆ ಅನೇಕ ಭಾಗದ ಪ್ರಜಾ ಸಂಖ್ಯೆಯು ಕೇವಲ ಮೌಢ್ಯಸ್ಥಿತಿಯಲ್ಲಿರುವುದನ್ನು ನೋಡಿದರೆ ಬಹು ವಿಷಾದವಾಗುವುದು ನಾನು ವಾಸವಾಗಿರುವ ಗ್ರಾಮದಲ್ಲಿ "ಕರಿಯಮ್ಮ" ನೆಂಬ ಗ್ರಾಮದೇವತೆ ಇರುವಳು. ಈ ದೇವತೆಗೆ ಹೆಚ್ಚಾಗಿ ನಡೆದುಕೊಳ್ಳತಕ್ಕ ಭಕ್ತರು ನಾಯ್ಕರು ಮತ್ತು ಮಾದಿಗರು

ಈ ಪಂಗಡದವರಲ್ಲಿ ಯಾರಿಗಾದರೂ ಜ್ವರ, ತಲೆ ನೋವು, ವಾಂತಿ, ಭೇದಿ ಮುಂತಾದ ಯಾವ ಖಾಯಿಲೆ ಕಾಣಿಸಿಕೊಂಡರೂ ಇವುಗಳ ಪರಿಹಾರಕ್ಕಾಗಿ ಮೇಲ್ಕಂಡ ಅಮ್ಮನನ್ನು ಹೊರಹೊರಡಿಸಿ ಕೇಳುವ ಪದ್ಧತಿಯು ಅತಿ ರೂಢಿಯಾಗಿರುವುದು ಮಿತ್ರರೇ, ಅನೇಕ ವರುಷಗಳ ಪರ್ಯಂತ ಅನ್ನ ಆಹಾರಾದಿಗಳನ್ನು ತೊರೆದು ದಿವ್ಯ ತಪಸ್ಸು ಮಾಡಿದರೂ ದೇವರ ದರ್ಶನ ಸಂಭಾಷಣೆಗಳು ದುರ್ಲಭ, ನೋಡಿದಿರಾ ಈ ಮೇಲ್ಕಂಡ ಪಂಗಡದವರು ಪಾಲಕಿಯಲ್ಲಿ ಅಮ್ಮನನ್ನು ಉರುಮೆಯೆಂಬ ಘೋರ ವಾದ್ಯದ್ವನಿಯಿಂದ ಹೊರಡಿಸಿ ಪ್ರತ್ಯಕ್ಷ ನಿಂತು ಸಂಭಾಷಣೆ ಮಾಡುವರು ಆದರೆ ಪ್ರಶ್ನೋತ್ತರಗಳು ಮಾತ್ರ ಮುಂದೆ ನಿಂತು ಮಾತನಾಡುವವರದೇ ಸರಿ ಆರ್ಯರೇ ಖಾಯಿಲೆಯವರನ್ನು ಪಾಲಕಿಯ (ಅಮ್ಮನ) ಮುಂದೆ ಕುಳ್ಳಿರಿಸಿ ಮತ್ತೊಬ್ಬನು— "ಏನಮ್ಮಾ ಈ ಜಡ ನನಗೆ ರ್ಲ ಅಮ್ತಿಯೋ?" ಅನ್ನುವನು ಈ ಕಾಲದಲ್ಲಿ ಪಾಲಕಿಯನ್ನು ಹೊತ್ತಿರುವವರು ೧೦ ನಿಮಿಷಗಳ ವರಿಗೆ ಸುಮ್ಮನಿರುವರು ಪುನಹ ಕೇಳುವಾತನು— "ಯೇಟೊತ್ತವ್ವ? ಜಬ್ಬೇಳು ಅಯ್ಯೋ, ನಮ್ಮವ್ವ, ಇನ್ಯಾಕೆ ಮಾಡ್ತಿ" ನನ್ನಿಂದ ಆಗೊದಿಲ್ಲ ಅಮ್ತಿಯ "ಇಲ್ಲ ಕಣೊ, ಆಗುತ್ತೆ ಅಮ್ತಿಯ" ಎಂದು ಕೇಳುವನು ಈಗ ಪಾಲಕಿಯು ಸ್ವಲ್ಪ ಮುಂದಕ್ಕೆ ಬರುವುದು ಹೀಗೆ ಮುಂದಕ್ಕೆ ಬಂದರೆ ಆಗುತ್ತೆಂತಲೂ, ಹಿಂದಕ್ಕೆ ಹೋದರೆ ಆಗುವದಿಲ್ಲವೆಂತಲೂ ಹೇಳುವ ಸೂಚನೆಯಂತೆ ಮತ್ತು ಸಂಭಾಷಕನು— ಒಳ್ಳೇದು ಮತ್ತೆ ಇದೇನೂ ಗಾಳಿಗೀಳಿ ಸೋಕಸನ್ಕಂದೆ ದೆವ್ವಗಿವ್ವ ಕಾಣೊ ಅಮ್ತಿಯ?" ಎಂದು ಕೇಳುವನು ಹೀಗೆ ಹೇಳಿದಾಗ ಪಾಲಕಿಯು ವಿಶೇಷ ತೂಗಾಡುತ್ತಾ ಕುಣಿಯುತ್ತಾ ಜಗ್ಗನೆ ಮುಂದೆ ಬರುವುದು ಆಗ ಮೇಲುದಹರಿಸಿರುವ ಉರುಮೆ ಎಂಬ ವಾದ್ಯಗಾರರು ಜೋರಾಗಿ ೧೦ ೧೫ ನಿಮಿಷಗಳ ವರಿಗೂ ಕಿವಿಗಳಲ್ಲಿ ಪೆಟ್ಟು ಹೊಡೆಯುವಂತೆ ಬಾರಿಸುವರು ಆ ಕಾಲದಲ್ಲಿ ಪಾಲಕಿಯ ತೂಗಾಟ ಮಧ್ಯೆ ಮಧ್ಯೆ ಕೇಕೆಗಳ ಗಲಾಟೆ, ಜನಸಂದಣಿಯ ನೂಕಾಟ, ಮಕ್ಕಳು ಮರಿಗಳ ಓಡಾಟ ಖಾಯಿಲೆಯವನ ಸಂಕಟ, ಇತ್ಯಾದಿ ವಿಶೇಷ ವಿಷಯಗಳನ್ನು ಬರಹ ಮೂಲಕ ತಿಳಿಸುವುದು ಅಸಾಧ್ಯವೇ ಸರಿ ನಾಗರಿಕರಾದ ನೋಟಕರಿಗೆ ಮಾತ್ರ ಅತ್ಯಂತ ನಗುವೂ, ಸಂತಾಪವೂ ಉಂಟಾಗದಿರಲಾರದು ಅಯ್ಯೋ, ಪಾಪ ಶೀತ ಜ್ವರದಿಂದಲೋ ಸನ್ನಿಪಾತದಿಂದಲೋ ಖಾಯಿಲೆಯ ಮನುಷ್ಯನು ಒದರಾಡುತ್ತಿದ್ದರೆ "ದೆವ್ವ" ದೆವ್ವ! ಅಯ್ಯೋ" ಹುಚ್ಚನುಮ, ಥಂಗಿ ಜೋರ ದೆವ್ವನಾಗಿ ಹಿಡಿದವ್ರೆ ಎಂದು ಜೋರಾಗಿ ಅಡಿಕೊಳ್ಳುತ್ತಾ "ಅಮ್ಮ ದೇವ್ವನ್ನ ಬಿಡುಸ್ತವ್ಳೆ ಎಂದು ಭ್ರಾಂತರಾದ ಕೆಲ ಜನಗಳೂ ನೋಡುವುದಕ್ಕಾಗಿ ತಂಡೋಪತಂಡವಾಗಿ ಬಂದುನಿಂತು ಕತ್ತೆತ್ತಿ ನೋಡುತ್ತಿರುವರು ಆ ಕಾಲದಲ್ಲಿ ಅಮ್ಮನ ಪಾಲಕಿಯು ಓಡಿಬಂದು ದೆವ್ವನಾಗಿರುವ (ಖಾಯಿಲೆಯ) ಮನುಷ್ಯನನ್ನು ಪಾಲಕಿಯ ಬಿದುರು ಕೊಂಬಿನಿಂದ ಬಲವಾಗಿ ತಿವಿಯುತ್ತದೆ ನೂಕುವುದು ಈ ಮಧ್ಯೆ ಅಮ್ಮನು ಮತ್ತೊಬ್ಬ ಮನುಷ್ಯನ ಮೈಮೇಲೆ ಬಂದು ಕುಣಿದಾಡುತ್ತಾ, ಸಿದ್ಧವಾಗಿರುವ ಹುಣಿಸೆ ಬರಲುಗಳಿಂದ ಹೊಡೆಯುವುದು ಮುಂತಾದ ಕಾಡನೆಗಳಿಂದ ಶರೀರಾದ್ಯಂತವೂ ರಕ್ತಮಯವಾಗಿ ಬಹು ದಿನಗಳು ಈ ವೈನೋಪವನ್ನು ಅನುಭೋಗಿಸಬೇಕಾಗುತ್ತದೆ

ಇಂಥಾ ವಿಚಿತ್ರವನ್ನು ವರ್ಣಿಸಿದಷ್ಟು ವಾಯುಪುತ್ರನ ಬಾಲದಂತಿರುವುದು ವರ್ಷದಲ್ಲಿ ಮುಕ್ಕಾಲುಪಾಲು ದಿನಗಳು ಈ ಗ್ರಾಮದ ಮಾದಿಗರು ಈ ಕಾರ್ಯದಲ್ಲಿಯೇ ನಿರತರಾಗಿರುವರು ತಿನ್ನುವದಕ್ಕೆ ಗತಿಯಿಲ್ಲದಿದ್ದರೂ ಅಮ್ಮನಿಗೆ ಕಾಯಿಗಳು, ಕುರಿಗಳು, ಕೋಳಿಗಳು, ಎಣ್ಣೆ, ಧೂಪ ಮೊದಲಾದವನ್ನು ಏನಾದರೂ ಒತ್ತೆಯಿಟ್ಟು ತರುವರು ಹಟ್ಟಿಯನ್ನು ಶುಚಿಯಾಗಿಟ್ಟುಕೊಂಡು, ಕೆಟ್ಟ ಮಾಂಸ ಮೊದಲಾದದ್ದನ್ನು ಬಿಟ್ಟು, ತಕ್ಕವಸ್ಟಗೆ ಇರುವ ಪದಾರ್ಥಗಳಲ್ಲಿಯೇ ಆರೋಗ್ಯವನ್ನು ಕಾಪಾಡಿಕೊಳ್ಳದೆ ರೋಗಿಷ್ಟರಾಗಿ ಮಿಥ್ಯಾವಿಷಯಗಳನ್ನು ಆಲೋಚನೆ ಮಾಡಿಕೊಂಡು ಕಷ್ಟ ನಷ್ಟಗಳಿಗೀಡಾಗುತ್ತಿರುವುದನ್ನು ನೋಡಿ ಯಾರಾದರೂ ಕನಿಕರಪಟ್ಟು ನಿಜಾಂಶವನ್ನು ಆ ಜನಗಳಿಗೆ ತಿಳಿಸಿದರೂ ಅವರು ಪ್ರತ್ಯಕ್ಷ ನಂಬತಕ್ಕವರಾಗಿಲ್ಲ ಯಾಕೆಂದರೆ ವಿದ್ಯಾವಿಹೀನತೆಯು ಆ ಜನಗಳನ್ನು ಹಿಂದಟ್ಟುತ್ತಿರುವುದು ಆದರೆ ಪ್ರತ್ಯಕ್ಷ ದೇವತಾ ಸ್ವರೂಪರಾದ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರು ಹಿಂದುಳಿದ ಇಂಥಾ ಜನಾಂಗವನ್ನು ವಿದ್ಯಾವಿನಯ ಸಂಪನ್ನರಾಗಿ ಮಾಡಲೆಂದೂ, ಸರ್ವ ಜಗದಾಧಾರನಾದ ಪರಮಾತ್ಮನು ಸುದೀರ್ಘಾಯುರಾರೋಗ್ಯ ವಿತ್ತು ಇನ್ನುಮುಂದೆ ಕಾಪಾಡಲೆಂದೂ ನಿರಂತರವೂ ಪ್ರಾರ್ಥಿಸುವೆನು

ಬಾತ್ಮಿದಾರರಿಗೆ ನೋಟೀಸು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

"ಸಂಸ್ಥಾನದ ಅಭಿಮಾನಿ"—ಮಳವಳ್ಳಿ "ಶಿವ"—ಬೆಳಗಟ್ಟ ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುವೆವು

"ಪ್ರತ್ಯಕ್ಷದರ್ಶಿ"—ಚಿತ್ರದುರ್ಗ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ

ಎಡಿಟರ್]

ಕರೆಸ್ಪಾಂಡೆನ್ಸ್

ವೀರಶೈವ ಮಹಾಸಭೆಯು

ಅಯ್ಯಾ,

ಬಳ್ಳಾರಿ ಪಟ್ಟಣದಲ್ಲಿ ಇದೇ ಮಾಹೆ ೨೮ರಿಂದ ನಡೆಯುವ ಶ್ರೀಮದ್ವೀರಶೈವ ಮಹಾಸಭೆಯ ಮುಖ್ಯ ಪ್ರೋತ್ಸಾಹಕರಾದ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಪಟ್ಟದ ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಆಫೀಸ್ ಸುಬೇದಾರ್ ಎ ಯಂ ಚಂದ್ರಶೇಖರಯ್ಯನವರು ಚಿತ್ರದುರ್ಗದ ತಾಲ್ಲೂಕು ಕೂಡ್ಲಿಗೆ ಗ್ರಾಮದ ಪ್ರಾಂತ್ಯ ಬಂದು ಸನ್ಮೋಹದಿಂದ ಇಲ್ಲಿನ ಸಮಸ್ತರ ಮನಸ್ಸನ್ನು ಆಕರ್ಷಣೆಮಾಡಿ ಈ ಜನಾಂಗದಲ್ಲಿ ಕೇವಲ ಹಿಂದುಳಿದಿದ್ದ ವೀರಶೈವ ರೆಡ್ಡಿ ಜನರು ವೀರಭಿಕ್ಷಾವರ್ತಿ ಯ ಪ ಪರ್ವತ ಸಂಸ್ಥಾನದ ಕರ್ತೃವರ್ಗದವರ ಆಶ್ರಯದಿಂದ ಇದೇ ಗ್ರಾಮದಲ್ಲಿ ತಾ ೧೧ ಮತ್ತು ೧೨ ರಲ್ಲಿ ಸಭೆ ನಡಿಸಿದರು ವಿದ್ವಾನ್ ಕೆ ಯಂ ದಾಸಪ್ಪಶಾಸ್ತ್ರಿಗಳು, ಸುಬೇದಾರ್ ಯನ್ ಯಂ ಗುರುಸಿದ್ದಪ್ಪಯ್ಯನವರು, ಸಾ॥ ಕಾಡಪ್ಪನವರು ಮೇಗಳ ಮನೆ ಚಿತ್ರದುರ್ಗ, ಈ ಮುಂತಾದ ಮತ ಪರಮತೀಯ ದೊಡ್ಡಮನುಷ್ಯರಿಂದ ಸಭೆಯು ಅಲಂಕರಿಸಲ್ಪಟ್ಟಿತು ಪ್ರತಿನಿಧಿಗಳ ಆರಿಸುವಿಕೆ ಯ ವಿದ್ವಾನ್ ರವರ ಅಧ್ಯಕ್ಷತೆಯಿಂದ ನಡೆಯಿಸಲ್ಪಟ್ಟು ಸದರಿಯವರ ಅಮೋಘವಾದ ಭಾಷಣಗಳು ನಡೆದವು ಸಮಾಜ ಸುಧಾರಣೆಯ ಬಗ್ಗೆ ಇಲ್ಲಿ ಶಾಶ್ವತವಾಗಿರುವಂತೆ ಶ್ರೀಮದ್ವೀರಶೈವ ಧರ್ಮೋಜ್ಜೀವಿನಿ ಎಂಬ ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟು ಉದ್ದಾಸಪ್ಪಯ್ಯನವರು ಪ್ರೆಸಿಡೆಂಟರಾಗಿಯೂ ಚಿಕ್ಕ ಉದ್ದಾಸಪ್ಪಯ್ಯನವರು ಚಿಕ್ಕಪ್ಪ ನಳ್ಳಿ ಸಾ॥ ಗುರುನಂಜಪ್ಪಯ್ಯನವರು ಸೆಕ್ರಿಟರಿಗಳಾಗಿಯೂ, ಆಸ್ಪಾಸ್ ಗ್ರಾಮದ ೧೪ ಜನ ಪ್ರಮುಖರು ಮೆಂಬರುಗಳಾಗಿಯೂ ಏರ್ಪಾಡಾದರು ಅನಾದಿಯಾಗಿ ಹಿಂದುಳಿದಿದ್ದ ಈ ಪ್ರಾಂತ್ಯದ ವೀರಶೈವರು ಇಂಥಾ ಉನ್ನತಿಕೆಗೆ ಗುರಿಪಟ್ಟಿದ್ದು ಅವರ ಏಳಿಗೆಗೆ ಶುಭಸೂಚನೆಯಾಗಿದೆ

ಪ್ರತ್ಯಕ್ಷದರ್ಶಿ

ಕೆರೆಯ ಜೀರ್ಣೋದ್ಧಾರದ ವಿಚಾರವು

ಅಯ್ಯಾ

ಚನ್ನಪಟ್ಟಣದ ತಾಲ್ಲೋಕು ವಿರೂಪಾಕ್ಷಪುರದ ಹೋಬಳಿ ಅಕ್ಕೂರು ಗ್ರಾಮದಲ್ಲಿರುವ ಸರ್ಕಾರದ ೧೨ನೇ ನಂಬರ್ ದೊಡ್ಡ ಕೆರೆಯು ಶಿಕಸ್ತಾಗಿ ಈಗ್ಯೆ ೧೫ ೨೦ ವರುಷಗಳಾಗುತ್ತಾ ಬಂತು ಈ ಕೆರೆಗೆ ಕಣ್ವ ನದಿಯಿಂದ ಒರುತ್ತಾ ಇದ್ದ ನೀರಿನ ಅಣೆಕಟ್ಟು ಕಾಲ್ವೆ ಸಹಾ ಒಡೆದು ೧೦ ೧೨ ವರುಷಗಳಾಗುತ್ತಾ ಬಂತು ಈ ಕೆರೆಗೆ ಬೀಳುವ ನೀರಿನ ಆಶ್ರಯವೇ ಇಲ್ಲ ಶಿಕಸ್ತಾಗಿ ಹೋದ ಲಾಗಾಯಿತು ಈ ತಹಲ್ ವರಿವಿಗೆ ಈ ಗ್ರಾಮದಲ್ಲಿ ತರೀ ಫಸಲೀ ಇಲ್ಲದೆ ಖಾಲಿ ಕಂದಾಯವನ್ನು ಕೊಡುತ್ತಾ ಬಂದು ರೈತರು ಬಹಳ ಗರೀಬರಾದರು ಈ ವಿಚಾರವನ್ನು ಕುರಿತು ಸರ್ಕಾರಕ್ಕೆ ಅನೇಕ ಫಿರ್ಯಾದುಗಳು ನಡಿಸಿದ್ದರ ಮೇಲೆ ಇರ್ರಿಗೇಷನ್ ಇಲಾಖೆಯವರು ವಿಶೇಷವಾಗಿ ಅಳತೆ ವಗೈರೆ ನಡಿಸಿದ್ದಲ್ಲದೆ ಇದರ ಕಾಮಗಾರಿಯನ್ನು ೧೯೦೭ ೧೯೦೮ ನೇ ಒಡ್ಜೆಟ್ಟಿಗೆ ಸೇರಿದೆ ಎಂದು ಹುಕುಂ ಸಹಾ ಆಪ್ಪಣೆ ಆಗಿರುತ್ತೆ ಈ ತಹಲ್ ವರಿವಿಗೂ ಕಾಮಗಾರಿಗೆ ಪ್ರಾರಂಭಿಸಲಿಲ್ಲವು ಈ ಸಾಲಿನಲ್ಲಿ ಶಿಕಸ್ತಾಗಿದ್ದ ಏರಿಯೂ ಒಡೆದು ಹೋಯಿತು ಈ ಕೆರೆಯಲ್ಲಿ ಹಕ್ಕಿ ಪಕ್ಷಿಗಳಿಗೆ ಸಹಾ ಕುಡಿಯುವದಕ್ಕೂ ಸುತರಾಂ ನೀರಿಲ್ಲದೆ ಇರುತ್ತೆ ಸಾಧಾರಣವಾಗಿ ೧೫-೨೦ ವರುಷದ ಲಾಗಾಯಿತು ಈ ಗ್ರಾಮದ ರೈತರು ಸರ್ಕಾರಕ್ಕೆ ಈ ಕೆರೆ ವಿಚಾರದಲ್ಲಿ ಫಿರ್ಯಾದು ವಗೈರೆ ನಡಿಸಿದರೂ ಸರ್ಕಾರದವರು ಗಮನಿಸಿದಂತೆ ಕಾಣುವುದಿಲ್ಲ ಈ ಪ್ರಾಂತ್ಯ ಇರತಕ್ಕ ಇತರ ಗ್ರಾಮಾಂತರಗಳ ಕೆರೆಗಳು ಮರ್ಮತ್ತು ಆಗಾಗ್ಗೆ ರಿಪೇರಿ ಆಗುತ್ತಲೇ ಇರುತ್ತವೆ ನಮ್ಮ ಕೆರೆ ಮಾತ್ರ ಕಾಮಗಾರಿ ಆಗದೆ ಇರುವದಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲವು ಈ ವರುಷವಾದರೂ ಸರ್ಕಾರದವರು ದಯವಿಟ್ಟು ಸದರಿ ಕೆರೆ ಮತ್ತು ಅಣೆ ಸಹಾ ಕಟ್ಟಿಸಿ, ನಮಗುಂಟಾಗಿರುವ ಕಷ್ಟನಷ್ಟಗಳನ್ನು ನಿವೃತ್ತಿಪಡಿಸಿ ಕಾಪಾಡುವರೆಂದು ಧೃಢವಾಗಿ ನಂಬಿದೇನೆ

ತಮ್ಮ ವಾಚಕ

ಎರಡನೆಯ ಆರ್ಯವೈಶ್ಯ ಮಹಾಸಭೆಯು

ಅಯ್ಯಾ,

ನಮ್ಮ ಮೈಸೂರು ದೇಶದಲ್ಲಿ ಇರತಕ್ಕ ಆರ್ಯವೈಶ್ಯರೆಲ್ಲರೂ ಸೇರಿ ಈಗಿನ ಕಾಲಾನುಗುಣ್ಯವಾಗಿ ಮೈಸೂರು ಪಟ್ಟಣದಲ್ಲಿ ಆರ್ಯವೈಶ್ಯ ಮಹಾಸಭಾ ಎಂದು ಏರ್ಪಾಡುಮಾಡಿ ಗತಸಂವತ್ಸರ ಅಂದರೆ ೧೯೦೮ ನೇ ಜೂಲೈ ತಿಂಗಳಲ್ಲಿ ಪ್ರಥಮ ಕಾನ್ಫರೆನ್ಸು ಮೈಸೂರಲ್ಲಿ ನಡೆದದ್ದು ಎಲ್ಲರಿಗೂ ಗೊತ್ತೇ ಇದೆ ಅದರಲ್ಲಿ ತೀರ ಮಾನವಾದ ಕೆಲವು ವಿಷಯಗಳು ಜಾರಿಗೂ ಬಂದಿರುತ್ತೆ ಹೋದ ವರುಷ ನಡೆದ ಸಭೆಯಲ್ಲಿ ಮುಂದಿನ ವರುಷದ ಕಾನ್ಫರೆನ್ಸು ತ್ಯಾಮಗೊಂಡ್ಲುದಲ್ಲಿ ನಡಸುವದಾಗಿ ಆ ಗ್ರಾಮದವರು ಸಭೆಯಲ್ಲಿ ಒಪ್ಪಿದ್ದವು ಯಾವಕಾರಣದಿಂದಲೋ ಅವರು ನಡಿಸಲಿಲ್ಲ ಈಚಿಗೆ ಬೆಂಗಳೂರಿನವರು ನಡಸುವದಾಗಿ ಕಾಗದಪತ್ರಗಳನ್ನು ನಡಿಸಿ ಇದುವರಿಗೂ ಕಾನ್ಫರೆನ್ಸು ನಡೆಯದೆ ಇದ್ದದ್ದರಿಂದ ಸಂಸ್ಥಾನಾದುಳ ಎಲ್ಲರ ಮನಸ್ಸಿಗೂ ವ್ಯಾಕುಲವುಂಟಾಗಿತ್ತು ಈಗ ಬೆಂಗಳೂರು ಮಹನೀಯರೆಲ್ಲಾ ದೊಡ್ಡ ಮನಸ್ಸು ಮಾಡಿ ಈ ತಿಂಗಳು ತಾರೀಖು ೨೭, ೨೮ ೨೯ ಈ ೩ ದಿವಸ ಬೆಂಗಳೂರು ಸಿಟಿಯಲ್ಲಿ ಎರಡನೇ ಕಾನ್ಫರೆನ್ಸು ನಡೆಯುವಂತೆಯೂ, ಬಂದೆಂಥಾ ವೈಶ್ಯಮಂಡಲಿಯವರಿಗೆಲ್ಲಾ ಆ ದಿವಸ ಆತಿಥ್ಯ ನಡೆಯುವಂತೆಯೂ, ಏರ್ಪಾಡುಮಾಡಿ ಎಲ್ಲಾ ಪ್ಯಾಟೆಯವರಿಗೂ ಆಹ್ವಾನಪತ್ರಿಕೆಗಳು, ಫಾರಂಗಳು ಸಭೆಯಲ್ಲಿ ನಡಿಯತಕ್ಕ ತೀರ್ಮಾನದ ಪಟ್ಟಿಯೂ ಸಹ ಕಳುಹಿಸಿರುತ್ತಾರೆ ಸಭೆಗೆ ಹೋಗತಕ್ಕಂಥಾವರ ಹೆಸರುಗಳು ಎಲ್ಲಾ ಅವರ ಫಾರಂನಲ್ಲಿ ಬರೆದು ಈ ತಿಂಗಳು ತಾ ೧೨ ಕ್ಕೆ ಪ್ರೆಸಿಡೆಂಟರಿಗೆ ತಲಪುವಂತೆ ನಮೂದುಮಾಡಿ ಕಳುಹಿಸಿರುತ್ತಾರೆ ಈ ಆಹ್ವಾನ ಪತ್ರಿಕೆಗಳನ್ನು ನೋಡಿ ನಮ್ಮಗಳಿಗೆಲ್ಲಾ ಮನಸ್ಸಿಗೆ ತುಂಬಾ ಸಂತೋಷವಾಯಿತು ನಮ್ಮ ಪೇಟೆಯಲ್ಲಿ ಎಲ್ಲರೂ ಸಭೆಮಾಡಿ ಕಾನ್ಫರೆನ್ಸಿಗೆ ಹೋಗತಕ್ಕವರ ಹೆಸರುಗಳೆಲ್ಲಾ ಫಾರಂನಲ್ಲಿ ನಮೂದು ಮಾಡಿ ಪ್ರೆಸಿಡೆಂಟರ ಬಳಿಗೆ ಕಳುಹಿಸಿರುತ್ತೇನೆ ಎಲ್ಲಾ ಗ್ರಾಮದವರೂ ಇದೇ ರೀತಿ ಕಳುಹಿಸಿರಬಹುದೆಂದು ತೋರುತ್ತೆ ಈ ಕಾಲದಲ್ಲಿ ಮೈಸೂರು ದೇಶದಲ್ಲಿ ಇರತಕ್ಕ ವಿಶಿಷ್ಟ ಆರ್ಯವೈಶ್ಯರೂನೂ, ಇದಕ್ಕೆ ಬಾಹ್ಯರಾದ ಅಂದರೆ ಬ್ರಿಟಿಷು ರಾಜ್ಯದಲ್ಲಿ ಇರತಕ್ಕ ವಿಶಿಷ್ಟ ಆರ್ಯವೈಶ್ಯರೂನು ಸಹ ಎಂಥ ಕಾರ್ಯವಿದ್ದರೂ ಬಿಟ್ಟು ದಯಮಾಡಿಸಿ ಸಭೆಯಲ್ಲಿ ನಡೆಯತಕ್ಕ ವಿಶಿಷ್ಟ ವಿಷಯಗಳನ್ನು ಪೂರ್ತಿಪಡಿಸಿ ಸಭೆಗೆ ಕೀರ್ತಿಯನ್ನು ಉಂಟುಮಾಡಬೇಕೆಂದು ನನ್ನ ಕೋರಿಕೆ ಈ ಮೈಸೂರು ದೇಶದಲ್ಲಿ ದೊಡ್ಡ ಪದವಿಯಲ್ಲಿ ಇರತಕ್ಕ ಡೆಪ್ಟಿ ಕಮಿಷನರ್ ಮೆ॥ ಎಂ ಆರ್ ಗಯ್ಯಕಿಟ್ಟಿರವರು ಈ ಸಭೆಯನ್ನು ಊರ್ಜಿತಪಡಿಸಿ ನಮ್ಮ ಸಮೂಹವನ್ನು ಅಭಿವೃದ್ಧಿಗೆ ತರತಕ್ಕಂಥಾ ಭಾರ ಅವರನ್ನು ಹೊಂದಿರುವದಕ್ಕಾಗಿ ನಾವೆಲ್ಲಾ ಕೃತಜ್ಞರಾಗಿದೇವೆ

ಅರಸೀಕೆರೆ ಕೋಲಾರ ಚೆನ್ನಯಶೆಟ್ಟಿ

ಇಂಡಿಯಾ ದೇಶದ ವೃತ್ತಾಂತಗಳು

ಹಿಂದುಸ್ಥಾನದ ಮುಸಲ್ಮಾನರ ಮಹಾ ಸಭೆಯು ಡಿಲ್ಲಿ ಪಟ್ಟಣದಲ್ಲಿ ಈ ತಿಂಗಳ ತಾ ೨೯ ಕ್ಕೆ ಪ್ರಾರಂಭವಾಗಿ ಮೂರು ದಿನಗಳು ನಡೆಯುತ್ತದೆ

* * *

ಬೊಂಬಾಯಿನ ಈಚೆ ವಾಸಿಂದ್ ಎಂಬ ಸ್ಟೇಷನ್ ಬಳಿ ಕಳೆದ ವಾರ ಎರಡು ರೈಲ್ ಗಾಡಿಗಳು ಎದುರುಬದರಾಗಿ ಢಿಕ್ಕಾ ಹೊಡೆದು ಕೆಲವು ಕೂಲಿ ಜನರಿಗೆ ಗಾಯಗಳಾಗಿರುತ್ತವೆ

* * *

"ತಳವಾರ್" ಅಥವಾ "ಪಂಷೀರ್" ಎಂಬ ವರ್ತಮಾನ ಪತ್ರಿಕೆಯನ್ನು ಹಿಂದುಸ್ಥಾನದಲ್ಲಿ ಯಾರೂ ತರಿಸಕೂಡದೆಂದು ಇಂಡಿಯಾ ಗವರ್ನ್‌ಮೆಂಟಿನವರು ಇಸ್ತಿಹಾರು ಮೂಲಕ ತಡೆದಿರುತ್ತಾರೆ

* * *

ಲಾಹೋರ್ ಪಟ್ಟಣದಲ್ಲಿ ಮುಂದಿನ ವಾರ ನಡೆಯುವ ಹಿಂದುಸ್ಥಾನದ ವೈದಿಕ ಜ್ಞಾನ ಸಮಾಜಕ್ಕೆ ಕಲ್ಕತ್ತೆಯ ಪಂಡಿತ ವಿನಯೇಂದ್ರನಾಥಸೇನರವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದ್ದಾರೆ

* * *

ರಂಗೂನ್ ಪಟ್ಟಣದ ಬುಲಕ್ ಸಹೋದರರೆಂಬ ಕಂಪೆನಿಯಲ್ಲಿ ಇಬ್ಬರು ನೌಕರರು ಸೇರಿ ಕಂಪನಿಯ ೧೬,೦೦೦ ರೂಪಾಯನ್ನು ಎಂದುಹಾಕಿದರೆಂದು ತಿಳಿದುಬಂದದ್ದರಿಂದ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದ್ದಾರೆ

* * *

ಬೊಂಬಾಯಿ ಗವರ್ನರವರಾದ ಸರ್ ಜಾರ್ಜ್ ಕ್ಲಾರ್ಕಯವರು ಮುಂದಿನ ತಿಂಗಳು ೧೫ ನೇ ತಾ ಗೆ ಹೊರಟು ಗೊಂಡಾಲ, ನವಾನಗರ, ಭಾವಾನಗರ ಜುನಾಘಡ ಸಂಸ್ಥಾನಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ

* * *

ತಿರುವಾಂಕೂರ (ಅನಂತಶಯನ) ಸಂಸ್ಥಾನದ ಮಹಾರಾಜರವರು ತಮ್ಮ ಆಳ್ವಿಕೆಗೆ ಒಳಪಟ್ಟ ಪ್ರಜೆಗಳ್ಯಾರೂ "ವಂದೆ ಮಾತರಂ" ಎಂಬೀ ಮೊದಲಾದ ನಾಲ್ಕಾರು ಪತ್ರಿಕೆಗಳನ್ನು ತರಿ ಓದಕೂಡದೆಂದು ಹುಕುಂ ಕೊಟ್ಟಿರುತ್ತಾರೆ

* * *

ಸಿಂಧು ದೇಶಕ್ಕೆ ಸೇರಿದ ಹೈದರಾಬಾದಿನಲ್ಲಿ ಮದ್ದನ್ನು ತಯಾರುಮಾಡುವ ಕಾರ್ಖಾನೆಯೊಳಗೆ ಮದ್ದು ಹತ್ತಿಕೊಂಡು ಅನಾಹುತವಾಯಿತು ಕೆಲಸ ಮಾಡುತ್ತಿದ್ದವರಲ್ಲಿ ಏಳು ಮಂದಿ ಹತರಾದರು ೭ ೮ ಜನರಿಗೆ ಗಾಯಗಳಾಗಿವೆ

* * *

ಮುಂದಿನ ೧೯೧೧ನೇ ಇಸವಿಯ ಹಿಂದುಸ್ಥಾನದ ರಾಷ್ಟ್ರ ಕೂಟವು ಅಲ್ಲಹಾಬಾದಿನಲ್ಲಿ ನಡೆಯಬೇಕೆಂದು ತೀರ್ಮಾನವಾಗಿದೆ ಅಗ್ಗ ಅಲ್ಲಿ ಕೈಗಾರಿಕೆ ಮುಂತಾದವುಗಳ ಪ್ರದರ್ಶನವನ್ನು ನಡಿಸುವ ತೆ ಗೊತ್ತಾಗಿ, ಈಗಿನಿಂದಲೇ ಪ್ರಯತ್ನ ಮಾಡುತ್ತಿದ್ದಾರು

* * *

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸುರುನಗರ್ ಎಂಬ ಊರಿನಲ್ಲಿ ಕಳೆದ ವಾರ ಮದ್ದಿನ ಮನೆಯೊಳಗೆ ಬೆಂಕಿ ಹತ್ತಿಕೊಂಡು ಅನಾಹುತವಾಗಿ ೧೨ ಮಂದಿ ಕೆಲಸಗಾರರು ಗಾಯಪಟ್ಟರು ಕೆಲವರಿಗೆ ಅಪಾಯ ೮ ಜನರು ತೀರಿಹೋದರು ಉಳಿದವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ

* * *

ನೀಲಗಿರಿ ರೈಲ್ವೆಯಲ್ಲಿ ಕಳೆದ ವಾರ ಲೌಡೇಲ್ ಮತ್ತು ಕೇಟಿ ಸ್ಟೇಷನ್‌ಗಳ ನಡುವೆ ಒಂದು ಟ್ರಾಲಿ ಗಾಡಿಯು ರೈಲ್‌ಗಾಡಿಗೆ ಒಡೆದು ಅನಾಹುತವಾಯಿತು ಇಬ್ಬರು ಯೂರೋಪಿಯನ್ ನೌಕರರು ಮೃತಪಟ್ಟರು ಒಬ್ಬ ಯೂರೋಪಿಯನ್‌ಗೂ ಇಬ್ಬರು ಕೂಲಿ ಆಳುಗಳಿಗೂ ಗಾಯಗಳಾಗಿರುತ್ತವೆ

* * *

ಲಾಹೋರ್ ಪಟ್ಟಣದಲ್ಲಿ ಮಕ್ಕಳ ಸಾವು ವಿಶೇಷವಾಗಿರುವುದನ್ನು ನೋಡಿ ಮ್ಯುನಿಸಿಪಾಲಿಟಿಯವರು ಮಕ್ಕಳ ಪೋಷಣೆ ಆರೈಕೆ ಮಾಡಕಾದದ್ದನ್ನು

ಮನೆಗಳಲ್ಲಿ ಹೆಂಗಸರಿಗೆ ವಿವರಿಸಿ ಹೇಳಿ ಕಲಿಸುವುದಕ್ಕೋಸ್ಕರ ಒಬ್ಬ ಹೆಂಗಸು ಡಾಕ್ಟರನ್ನೂ ಒಬ್ಬ ಸೂಲಗಿತ್ತಿಯನ್ನೂ ಪ್ರತ್ಯೇಕವಾಗಿ ನೇಮಕ ಮಾಡಿರುತ್ತಾರೆ.

* * *

ಆಗ್ರಾ ಅಯೋಧ್ಯಾ ಪ್ರಾಂತ್ಯಗಳಲ್ಲಿರುವ ರಜಪೂತ್ ಜನರಲ್ಲಿ ವಯಸ್ಸಾದವರನ್ನು ಚುನಾಯಿಸಿ ಒಂದು ಹೊಸ ಸೈನ್ಯವನ್ನು ತರಪೇತು ಮಾಡಬೇಕೆಂಬದಾಗಿಯೂ, ಇವರನ್ನು ಆಫ್ರಿಕಕ್ಕೆ ಸೇರಿದ ಯೂಗಾಂಡಾ ಸೀಮೆಯಲ್ಲಿ ಕೆಲಸಕ್ಕಾಗಿ ಕಳುಹಿಸಬೇಕೆಂದೂ ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

* * *

ಕಳೆದ ಸೋಮವಾರ ರಾತ್ರಿ ಕಲ್ಕತ್ತಾ ಪಟ್ಟಣದ ಚಿತ್ಪುರ ರಸ್ತೆಯಲ್ಲಿ ಚಟುಮಂಚಿಲಾಲ್ ಸೀಲ್ ಎಂಬಾತನ ಅಂಗಡಿಗೆ ಕನ್ನಹಾಕಿ ಕಳ್ಳರು ೩,೦೦೦ ರೂಪಾಯಿನ ಸರಕನ್ನು ಅಪಹರಿಸಿರುತ್ತಾರೆ. ಅಂಗಡೀ ಬೀದಿಯವರೆಲ್ಲಾ ತಮ್ಮ ಅಂಗಡಿಗೆ ಯಾವಾಗ ಕಳ್ಳರು ಬೀಳುವರೋ ಎಂದು ಗಾಬರಿಪಡುತ್ತಿರುವರು.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಢಕ್ಕಾ ನಗರದಲ್ಲಿ ಅಕುಲ ಚಂದ್ರರಾಯ ಎಂಬೊಬ್ಬ ವೈದ್ಯನು ವಿಧವೆಯಾದ ತನ್ನ ಮಗಳನ್ನು ಈಶನ ಚಂದ್ರಸೇನನೆಂಬ ಯೌವನಸ್ಥನಿಗೆ ಕೊಟ್ಟು ಪುನರ್ವಿವಾಹ ಮಾಡಿದನು. ಅನೇಕ ಮಂದಿ ವಿದ್ಯಾವಂತರೂ ಅಧಿಕಾರಿಗಳೂ ಹಾಜರಾಗಿದ್ದು ವಧೂವರರಿಗೆ ಉಡುಗೆರೆಗಳನ್ನು ಕೊಟ್ಟು ಅವರನ್ನು ಆಶೀರ್ವದಿಸಿದರು.

* * *

ಬೊಂಬಾಯಿ ಪಟ್ಟಣದಲ್ಲಿ ಬಾಲಬಾಲಕಗಳನ್ನು ಕಲಿಸುವಂಥಾ ಉಪಾಧ್ಯಾಯರನ್ನು ತರಪೇತು ಮಾಡುವುದಕ್ಕಾಗಿ ಪ್ರತ್ಯೇಕವಾದ ಒಂದು ಟ್ರೈನಿಂಗ್ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಸ್ಥಾಪಿಸಿರುತ್ತಾರೆ. ಇದಕ್ಕೆ ಗವರ್ನ್‌ಮೆಂಟಿನಿಂದ ೧೫,೧೨೦ ರೂಪಾಯಿಯೂ, ಮ್ಯುನಿಸಿಪಾಲಿಟಿಯಿಂದ ೧೧,೯೭೧ ರೂಪಾಯಿಯೂ ವರುಷಕ್ಕೆ ಖರ್ಚಾಗುವುದು.

* * *

ಅಫ್ಘಾನಿಸ್ಥಾನಕ್ಕೆ ಸೇರಿದ ಜಲಾಲಾಬಾದಿನ ಬಳಿ ಕಾಬೂಲ್ ನದಿಗೆ ಕಟ್ಟಿದ ಸೇತುವೆಯನ್ನು ಅಮೀರರು ಕಟ್ಟಿಸಿದ್ದರಿಂದ ಜನರಿಗೆ ತುಂಬಾ ಅನುಕೂಲವಾಗಿರುತ್ತದೆ. ಇದರ ಉಪಯೋಗವನ್ನು ನೋಡಿ ಈಗ ಅಮೀರರು ಇನ್ನೊಂದು ಕಡೆ ದೊಡ್ಡ ಸೇತುವೆಯನ್ನು ಕಟ್ಟಿಸಬೇಕೆಂದು ತೀರ್ಮಾನಿಸಿ ಸೇತುವೆಯ ಕಬ್ಬಿಣದ ಸಾಮಾನುಗಳನ್ನು ಹಿಂದೂಸ್ಥಾನದಿಂದ ತರಿಸಿ ಕೊಳ್ಳುವವರಾಗಿದಾರೆ.

* * *

ಆಹಾರ ಧಾನ್ಯಗಳು ಇನ್ನೂ ಪ್ರಿಯವಾಗಿರೋಣದರಿಂದ ವಿಶಾಖಪಟ್ಟಣ, ಗೋದಾವರಿ, ಕರ್ನೂಲ್, ಬಳ್ಳಾರಿ, ಚೆಂಗಲ್ಪಟ್, ಈ ಡಿಸ್ಟ್ರಿಕ್ಟುಗಳ ವಿನಾ ಉಳಿದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ೩೦ ರೂಪಾಯಿಕೀಳಿಗಿರುವ ಎಲ್ಲಾ ಸರ್ಕಾರಿ ತಲಬುದಾರರಿಗೂ ಧಾನ್ಯದ ಅಲೋಯನ್ಸನ್ನು ಮುಂದಿನ ಜನವರಿ ಆಖೈರು ವರೆಗೆ ಕಾಯಂ ಮಾಡಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಜಪಾನ್ ರಾಜ್ಯಕ್ಕೆ ಸೇರಿದ ಫಾರ್ಮೋಸಾ ದ್ವೀಪದಿಂದ ವ್ಯವಸಾಯದ ಇಲಾಖಾ ಡೈರೆಕ್ಟರರವರು ಕಳೆದ ವಾರ ಕಲ್ಕತ್ತೆಗೆ ಬಂದರು. ಇವರು ಹಿಂದೂಸ್ಥಾನದ ಮುಖ್ಯ ಸ್ಥಳಗಳಲ್ಲಿ ಸಂಚಾರಮಾಡಿ, ಇಲ್ಲಿನ ಒಳ್ಳೆ ಜಾತಿಯ ಗೋಧಿಯಗಳನ್ನು ಕೊಂಡು ತೆಗೆದುಕೊಂಡು ಹೋಗುವವರಾಗಿದಾರೆ. ಫಾರ್ಮೋಸಾ ದ್ವೀಪದ ಗೋಧಿಯಗಳ ಜಾತಿಯನ್ನು ಉತ್ಕೃಷ್ಟ ಸ್ಥಿತಿಗೆ ತರಬೇಕೆಂಬುವುದೇ ಅವರ ಉದ್ದೇಶವಾಗಿದೆ.

* * *

ಲಾಹೋರ್ ಪಟ್ಟಣದಲ್ಲಿ ಹಿಂದೂಸ್ಥಾನದ ಆಚಾರ ವಿಚಾರಗಳನ್ನು ಉದ್ಧರಿಸುವ (ಸಂಘಪರಿಷ್ಕರಣ) ಸಮಾಜವು ಈ ತಿಂಗಳ ಆಖೈರಿನಲ್ಲಿ ನಡೆಯುವುದು. ನಭಾ ಸಂಸ್ಥಾನದ ಟಿಕ್ಕಾ ಸಾಹೇಬ್ ಯವರು ಸಭಾಧ್ಯಕ್ಷತೆಯನ್ನು ವಹಿಸುತ್ತಾರೆ. ಅದೇ ಸಮಯದಲ್ಲಿ ನಡೆಯುವ ಬ್ರಾಹ್ಮಣರ ಸಮಾಜಕ್ಕೆ ದರ್ಭಾಂಗದ ಮಹಾರಾಜರವರೂ ಸರ್ ಪ್ರತುಲ ಚಂದ್ರ ಚಟರ್ಜೀ ಯವರೂ ಸಭಾನಾಯಕರಾಗಿ ಇರುವವರಾಗಿದಾರೆ.

* * *

ಪೂನಾ ಪಟ್ಟಣದಲ್ಲಿ "ಕಾಳ್" ಎಂಬ ಪತ್ರಿಕೆಯನ್ನು ನಡೆಸುವ ಮೆ॥ ಪರಾಂಜಪೆಯವರು ಕೊಲಾಬಾ ಡಿಸ್ಟ್ರಿಕ್ಟಿಗೆ ಸೇರಿದ ಮಾಹಾಡ್ ಎಂಬ ಊರಿಗೆ ಹೋಗುವವರಾಗಿದ್ದಾರೆಂದೂ, ಅಗ್ಗೆ ಆ ಊರಿನವರು ಅವರಿಗಾಗಿ ನಾನಾ ಸಂತೋಷೋತ್ಸವಗಳನ್ನು ಮಾಡುವರೆಂದೂ ಸರ್ಕಾರದವರಿಗೆ ತಿಳಿದುಬಂದ ಕಾರಣ ಪ್ರಜಾಶಾಂತಿಗೆ ಕುಂದಕ ಬಂದೀತೆಂದು ಊಹಿಸಿ, ಯಾರೂ ಯಾವ ವಿಧವಾದ ಸಂತೋಷೋತ್ಸವಗಳನ್ನೂ ಅವರಿಗಾಗಿ ನಡಿಸಕೂಡದೆಂಬದಾಗಿ ಇಸ್ತಿಹಾರು ಹಾಕಿಸುತ್ತಾರೆ.

* * *

ಮೊದಲು ಬೊಂಬಾಯಿನಲ್ಲಿ "ರಾಷ್ಟ್ರಮತ"ವೆಂಬ ಪತ್ರಿಕೆಯನ್ನು ನಡಿಸುತ್ತಿದ್ದು, ಈಚೆಗೆ ಪೂನೆಯಲ್ಲಿ ಇನ್ನೊಂದು ಪತ್ರಿಕೆಯನ್ನು ನಡಿಸುತ್ತಾಬಂದಿರುವ ಸೀತಾರಾಮ ಕೇಶವದಾಂಲೇ ಎಂಬಾತನು ಅದರಲ್ಲಿ ರಾಜದ್ರೋಹಕರವಾದ ಬಾತ್ಮಿಗಳನ್ನು ಬರೆದಿರುತ್ತಾನೆಂದು ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿ, ೩೦೦ ರೂಪಾಯಿ ಜಾಮೀನು ತೆಗೆದುಕೊಂಡು ಬಿಟ್ಟಿದಾರೆ. ಈ ಮೊಕದ್ದಮೆಯನ್ನು ಬಿಜಾಪುರದ ಮ್ಯಾಜಿಸ್ಟ್ರೇಟರು ಮುಂದಿನ ಜನವರಿ ತಾ ೧೯ ರಲ್ಲಿ ವಿಚಾರಣೆ ಮಾಡುವರು.

* * *

ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳ ವಿಷಯವನ್ನು ಹಿಂದುಸ್ಥಾನದಲ್ಲಿ ಸಂಭಾಷಣೆ ಉಪನ್ಯಾಸಗಳ ಮೂಲಕ ದೊಡ್ಡ ಮನುಷ್ಯರಿಗೂ ಪುಣ್ಯವಂತರಿಗೂ ತಿಳಿಸುವುದಕ್ಕಾಗಿ ಕರ್ನಲ್ ಪ್ಯಾಸಿ ಎಂಬೊಬ್ಬ ಇಂಗ್ಲಿಷ್ ಕಾರೀಗಾರನು ಬಂದಿರುತ್ತಾನೆ. ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮಿಡ್ನಪುರದ ಒಬ್ಬ ಭಾರೀ ಜಮೀನ್ದಾರರು ತಮಗೆ ಒಂದು ವಿಮಾನವನ್ನು ತರಿಸಿಕೊಡಬೇಕೆಂದು ಕಾಗದ ಬರೆದಿರುತ್ತಾರೆ. ಹೀಗೆಯೇ ಇತರರೂ ಈ ವಿಮಾನಗಳನ್ನು ಕೊಂಡು ಉಪಯೋಗಿಸುವದು ಹೆಚ್ಚುತ್ತದೆ.

ಹೈದರಾಬಾದಿನಲ್ಲಿರುವ ಖಾನ್ ಬಹದೂರ್ ಶಾಂಸುಲ್ ಉಲಾಮಾ ನವಾಬ್ ಅಜೀಜ್‌ಜಂಗ್ ಬಹದೂರ್ ಎಂಬ ವಿದ್ಯಾವಂತರು ಪಾರ್ಸೀ ಭಾಷೆಯ ನಿಘಂಟನ್ನು ತಯಾರುಮಾಡುತ್ತಾ ಬಂದಿದಾರೆ. ಅದರಲ್ಲಿ ಈಗ ಎರಡು ಭಾಗಗಳು ಮಾತ್ರ ಪೂರೈಸಿರುತ್ತವೆ. ಇನ್ನೂ ಇಪ್ಪತ್ತಮೂರು ಭಾಗಗಳಾದರೆ ನಿಘಂಟು ಪೂರೈಸುತ್ತದೆ. ಪ್ರತಿ ಒಂದು ಭಾಗವೂ ಪೂರೈಸಿತೆಂದು ರಿಪೋರ್ಟು ಹೋದ ಒಡನೆಯೇ ಇಂಡಿಯಾ ಗವರ್ನ್‌ಮೆಂಟಿನವರು ೫೦೦ ರೂಪಾಯನ್ನೂ, ಹೈದರಾಬಾದ್ ಗವರ್ನ್‌ಮೆಂಟಿನವರು ೫೦೦ ರೂಪಾಯನ್ನೂ ಗ್ರಂಥಕರ್ತರಿಗೆ ಸಹಾಯ ಮಾಡುತ್ತಾ ಬರುವರು.

* * *

ಉತ್ತರ ದೇಶದಲ್ಲಿ ಚಳಿಗಾಲವು ಪ್ರಾರಂಭವಾಗಿ ಪ್ಲೇಗ್ ಉಪದ್ರವು ಹರಡಿಕೊಳ್ಳುತ್ತಾ ಇನ್ನುಮುಂದೆ ಅದರ ಹಾವಳಿಯು ಹೆಚ್ಚಬಹುದೆಂದು ಕಾಣುತ್ತಿದೆ. ಕಳೆದ ೧೧ ನೇ ತಾರೀಖಿಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು ೫,೬೩೩ ಜನರು ಪ್ಲೇಗ್ ಉಪದ್ರವಕ್ಕೆ ಬಲಿ ಕಾಲವಾದರು. ಈ ಪೈಕಿ ಸಂಯುಕ್ತ ಅಧಿಪತ್ಯಗಳು ೨,೪೩೨, ಪಂಜಾಬ್ ೧,೨೮೨, ಬೊಂಬಾಯಿ ಅಧಿಪತ್ಯ ೬೪೫, ಮಧ್ಯಪ್ರಾಂತ್ಯಗಳು ಮತ್ತು ಬೇರಾರು ೪೫೦, ಬಂಗಾಳಾ ೩೪೨, ರಾಜಪುಟಾನಾ ೨೮೭, ಮೈಸೂರು ಸಂಸ್ಥಾನ ೮೮, ಮದರಾಸ್ ಅಧಿಪತ್ಯ ೭೪, ಬರ್ಮಾ ೬೧, ಮಧ್ಯ ಇಂಡಿಯಾ ೪೪, ಕಾಶ್ಮೀರ ೩೪, ಹೈದರಾಬಾದ್ ಸಂಸ್ಥಾನ ೪.

* * *

ವೈಸ್‌ರಾಯಿ ಪ್ರಭುಗಳು ದಯಮಾಡುತ್ತಾರೆಂದು ತಿರುಚನಾಪಲಿಯಲ್ಲಿ ಬಹು ದಿವ್ಯವಾದ ಆತಿಥ್ಯದ ಏರ್ಪಾಡುಗಳು ನಡೆದಿದ್ದುವು. ಆದರೆ ಅವರಿಗೆ ಬೆಂಗಳೂರಿನಲ್ಲಿ ದೇಹಾಲಸ್ಯವುಂಟಾದ ಪ್ರಯುಕ್ತ ಅವರು ದಯಮಾಡುವುದಕ್ಕಾಗಲಿಲ್ಲ. ತಿರುಚನಾಪಲ್ಲಿಯ ಪ್ರಜೆಗಳ ಪ್ರಾರ್ಥನೆಯಂತೆ ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಪತ್ನಿ ಪುತ್ರಿಯರ ಸಮೇತ ಕಳೆದ ಶುಕ್ರವಾರ ರಾತ್ರಿ ೯-೩೦ಕ್ಕೆ ಮದರಾಸಿನಿಂದ ಹೊರಟು ಅಲ್ಲಿಗೆ ಹೋಗಿ ಮರುದಿನ ಅಲ್ಲಿ ನಡೆದ ಆತಿಥ್ಯಗಳನ್ನು ಅಂಗೀಕರಿಸಿ ದೀಪೋತ್ಸವಗಳನ್ನು ನೋಡಿಕೊಂಡು ತಾ ೧೯ ನೇ ಭಾನುವಾರ ಬೆಳಿಗ್ಗೆ ೧೧ ಘಂಟೆಗೆ ವಾಪಸು ಮದರಾಸಿಗೆ ಬಂದುಬಿಟ್ಟರು.

* * *

ಕಳೆದ ತಾ ೧೫ ನೇ ಬುಧವಾರ ಮಧ್ಯಾಹ್ನ ವೈಸರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪತ್ನಿ ಪರಿವಾರ ಸಹಿತ ಕಲ್ಕತ್ತಾ ಪಟ್ಟಣವನ್ನು ಸುರಕ್ಷಿತವಾಗಿ ತಲುಪಿದರು. ಅವರು ತುಂಬಾ ಆಯಾಸಪಟ್ಟವರಾಗಿ ಕಂಡರೂ ಗವರ್ನ್‌ಮೆಂಟ್ ಹೌಸಿನ ಬಳಿ ಕಾದಿದ್ದ ದೊಡ್ಡ ಮನುಷ್ಯರಿಗೂ ಸರ್ದಾರರಿಗೂ ದರ್ಶನವನ್ನಿತ್ತು ಬಂಗಲೆಯೊಳಕ್ಕೆ ಚಿತ್ತೈಸಿದರು. ಪ್ರಭುಗಳು ಮರುದಿನ ಬೆಳಿಗ್ಗೆ ಬಂಗಲೆಯೊಳಗೇ ವಿಶ್ರಮಿಸಿಕೊಳ್ಳುತ್ತಿದ್ದು, ಮಧ್ಯಾಹ್ನದ ಮೇಲೆ ಕಲ್ಕತ್ತೆಯಿಂದ ರೈಲು ಹತ್ತಿ ಡಾರ್ಜಲಿಂಗ್ ಎಂಬ ಹಿಮಾಚಲ ಪರ್ವತದ ತಪ್ಪಲಲ್ಲಿರುವ ನಗರವನ್ನು ಕುರಿತು ಪ್ರಯಾಣ ಮಾಡಿ, ಅಲ್ಲಿ ನಾಲ್ಕೈದು ದಿನಗಳು ಇದ್ದು ಮೊನ್ನೆ ಮಂಗಳವಾರ ವಾಪಸು ಕಲ್ಕತ್ತೆಗೆ ದಯಮಾಡಿದರು.

* * *

ಬೊಂಬಾಯಿ ಪಟ್ಟಣದಲ್ಲಿ ಪೊಲೀಸಿನವರು ೧೯ ಮಂದಿ ಅಫ್ಘಾನ್ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಇವರ ಬಳಿ ೫,೮೯೯ ರೂಪಾಯಿ ಸಿಕ್ಕಿರುತ್ತವೆ. ಅವರು ಆಯುಧ ಮದ್ದು ಗುಂಡುಗಳನ್ನು ತಂದು ಗುಟ್ಟಾಗಿ ವಿಕರಿ ಮಾಡುತ್ತಿದ್ದರೆಂದು ಕಾಣುವುದು. ಅವರನ್ನು ವಿಚಾರಣೆ ಮಾಡುವಾಗ ಅವರಲ್ಲೊಬ್ಬನು—ನಾವು ಆಯುಧಗಳನ್ನು ತರಿಸಿ ವಿಕರಿ ಮಾಡತಕ್ಕವರಲ್ಲ. ವರುಷಕ್ಕೆ ಆರು ತಿಂಗಳು ಅಫ್ಘಾನಿಸ್ಥಾನದಲ್ಲೂ ಆರು ತಿಂಗಳು ಬೊಂಬಾಯಿನಲ್ಲೂ ಇದ್ದು ನಾನಾ ದಿನಸಿಗಳನ್ನು ಕೊಂಡು ಮಾರುವ ವರ್ತಕರಾಗಿದೇವೆ. ಯಾವ ಅಪರಾಧವನ್ನೂ ಮಾಡಿಲ್ಲವಾದದ್ದರಿಂದ ನಮ್ಮನ್ನು ಬಿಟ್ಟುಕೊಡಬೇಕು ಎಂದು ಕೇಳಿಕೊಂಡರು. ಪೊಲೀಸಿನವರು ಅವರನ್ನು ಬಿಡದೆ ತನಿಖೆ ಮಾಡುತ್ತಿದಾರೆ.

* * *

ಪಾಟಿಯಾಲಾ ಸಂಸ್ಥಾನದಲ್ಲಿ ಆರ್ಯ ಸಮಾಜಕ್ಕೆ ಸೇರಿದ ೭೬ ಮಂದಿಯನ್ನು ರಾಜದ್ರೋಹಾಪರಾಧ ಮಾಡಿರುತ್ತಾರೆಂಬದಾಗಿ ದಸ್ತಗಿರಿ ಮಾಡಿಸಿರುತ್ತಾರಷ್ಟೆ. ಇವರನ್ನು ದರ್ಯಾಪ್ತು ಮಾಡುವುದಕ್ಕೆ ಮಹಾರಾಜರವರು ಪ್ರತ್ಯೇಕವಾದ ಒಂದು ಕೋರ್ಟನ್ನೂ ಸ್ಪೆಷಲ್ ನ್ಯಾಯಾಧಿಕಾರಿಗಳನ್ನೂ ಗೊತ್ತುಮಾಡಿದರು. ದರ್ಯಾಪ್ತಿಯು ಕಳೆದ ವಾರ ಪ್ರಾರಂಭವಾಗಿರುತ್ತದೆ. ಸರ್ದಾರ್ ಭಗವಾನ್ ಸಿಂಗ್, ಲಾಲಾ ರಾಮಪ್ರಸಾದ್, ಫಸುಲುದ್ದೀನ್ ಎಂಬವರೇ ಮೂವರು ಜಡ್ಜಿಗಳು, ಫಿರ್ಯಾದಿ ತರಫು ಬ್ಯಾರಿಸ್ಟರ್ ಮೆ॥ ಗ್ರೇ ಯವರೂ ಪೆಸ್ತೋನ್‌ಜೀ ಯವರೂ ವಕೀಲರು, ಅಪರಾಧಿಗಳ ಕಡೆ ಬ್ಯಾರಿಸ್ಟರ್ ಮೆ॥ ರೋಷನ್ ಲಾಲ್, ಪ್ಲೀಡರ್ ಮೆ॥ ಬದ್ರಿದಾಸ್ ಎಂಬವರು ವಕೀಲರಾಗಿ ವಾದಿಸುತ್ತಿದಾರೆ.

* * *

ಕಲ್ಕತ್ತಾ ಪಟ್ಟಣದ ಟೌನ್‌ಹಾಲ್ ಬಂಗಲೆಯನ್ನು ಪೂರ್ವದಲ್ಲಿ ಲಾಟರಿ ಮೂಲಕ ಚಂದಾ ಹಣವನ್ನೆತ್ತಿ ಕಟ್ಟಿದರು. ಗವರ್ನ್‌ಮೆಂಟಿನವರು ಆ ಬಂಗಲೆಯಲ್ಲಿ ಮೊದಲು ಕೋರ್ಟುಗಳನ್ನು ಮಾಡುತ್ತಿದ್ದು, ಈಚೆಗೆ ಪ್ರತಿಫಲವೇನೂ ತೆಗೆದುಕೊಳ್ಳದೆ ಮ್ಯುನಿಸಿಪಾಲಿಟಿಗೆ ವಹಿಸಿ ಕೊಟ್ಟರು. ಈಗ ಗವರ್ನ್‌ಮೆಂಟಿನವರು ಈ ಕಟ್ಟಡದಲ್ಲಿ ವೈಸ್‌ರಾಯಿಯವರ ಹೊಸ ಮಂತ್ರಾಲೋಚನಾ ಸಭೆಯನ್ನು ನಡಿಸಬೇಕೆಂದು ತೀರ್ಮಾನಿಸಿ, ಅದನ್ನು ಬಿಟ್ಟುಕೊಡುತ್ತೀರಾ ಎಂದು ಕೇಳಿದರು. ಮ್ಯುನಿಸಿಪಾಲಿಟಿಯವರು ಈ ವಿಚಾರವನ್ನು ಕುರಿತು ಚರ್ಚೆಮಾಡಿ, ಕಟ್ಟಡಕ್ಕೆ ೧೦ ಲಕ್ಷ ರೂಪಾಯಿ ಪ್ರತಿಫಲವನ್ನು ಕೊಡಬೇಕೆಂದೂ ಇಲ್ಲವಾದರೆ ಮ್ಯುನಿಸಿಪಾಲಿಟಿಗೆ ಬೇರೆ ಒಂದು ಅನುಕೂಲವಾದ ಬಂಗಲೆಯನ್ನು ಕೊಡಿಸಬೇಕೆಂದೂ ತೀರ್ಮಾನ ಮಾಡಿರುತ್ತಾರೆ.

* * *

ಈ ಸಲ ಲ್ಯಾಹೋರ್ ಪಟ್ಟಣದಲ್ಲಿ ಮುಂದಿನ ವಾರ ನಡೆಯುವ ಹಿಂದುಸ್ಥಾನದ ರಾಷ್ಟ್ರಕೂಟಕ್ಕೆ (ನ್ಯಾಷನಲ್ ಕಾಂಗ್ರೆಸ್) ಘನವನ್ನೈದಿದ ಪಂಡಿತ ಮದನಮೋಹನಮಾಲವ್ಯ ಎಂಬ ವಿದ್ವಾಂಸರನ್ನು ಪ್ರೆಸಿಡೆಂಟರಾಗಿ ಚುನಾಯಿಸಿದರು. ಅವರು ಅದನ್ನು ಒಪ್ಪಿಕೊಂಡಿರುತ್ತಾರೆ. ಸಂಯುಕ್ತ ಅಧಿಪತ್ಯದಲ್ಲಿ ಇವರು ಪ್ರಜಾವತ್ಸಲರೆಂಬ ಕೀರ್ತಿಯನ್ನು ಪಡೆದಿದಾರೆ. ಇವರು ಕಳೆದ ೧೮೮೫ ನೇ ಇಸವಿಯಿಂದಲೂ ಅಲ್ಲಹಾಬಾದಿನಲ್ಲಿ ಕಾಂಗ್ರೆಸ್ ಸಭಾ ಕಮಿಟಿಯ ಸೆಕ್ರೆಟರಿಯಾಗಿದ್ದುಕೊಂಡು, ಪ್ರತಿ ವರುಷವೂ ಮಹಾಸಭೆಯ ಮುಖಂಡರುಗಳಲ್ಲಿ ಒಬ್ಬರೆನ್ನಿಸಿಕೊಂಡಿದ್ದಾರೆ. ಇವರು ಕಳೆದ ಆರು ವರುಷಗಳಿಂದಲೂ ಆ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರರವರ ಮಂತ್ರಾಲೋಚನಾ ಸಭೆಯ ಮೆಂಬರಾಗಿರುವರು. ಇಂಥವರನ್ನು ಮುಂದಿನ ಸೋಮವಾರದಿಂದ ಮೂರು ದಿನ ನಡೆಯುವ ರಾಷ್ಟ್ರಸಭೆಗೆ ಪ್ರೆಸಿಡೆಂಟರಾಗಿ ಚುನಾಯಿಸಿದ್ದು ತುಂಬಾ ಸಂತೋಷವನ್ನುಂಟುಮಾಡುತ್ತದೆ.

* * *

ಮದರಾಸ್ ಪಟ್ಟಣದಲ್ಲಿರುವ ರಾಜಾ ಸರ್ ಸಾವಳೆ ರಾಮಸ್ವಾಮಿ ಮೊದಲಿಯಾರ್ರವರು ರಾಮೇಶ್ವರದಲ್ಲಿ ತಮ್ಮ ಹೆಸರಿನ ಮೇಲೆ ಒಂದು ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಧರ್ಮಾರ್ಥವಾಗಿ ೧೦,೦೦೦ ರೂಪಾಯಿ ಕೊಡುತ್ತೇನೆಂದು ಮಧುರೆ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿಗೆ ತಿಳಿಸಿದರು. ಅವರು ಕಟ್ಟಡಕ್ಕೆ ಎಷ್ಟಾಗುವುದೆಂದು ಅಂದಾಜು ಮಾಡಿಸಿದ್ದರಲ್ಲಿ ೧೯,೦೦೦ ರೂಪಾಯಿ ಬೇಕೆಂದು ಇಂಜನಿಯರವರು ಅಂದಾಜಾ ಪಟ್ಟಿಯನ್ನು ಕಳುಹಿಸಿದರು. ಅದರಮೇಲೆ ಈ ವಿಷಯವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತಿಳಿದು ರಾಜಾಸರ್ ಸಾವಳೆಯವರವರು ೧೫,೦೦೦ ರೂಪಾಯಿಗೆ ಒಂದು ಚೆಕ್ಕನ್ನು (ಹುಂಡಿಯನ್ನು) ಕಳುಹಿಸಿದರು. ಈಗ ಎರಡನೇ ಸಲ ಅಂದಾಜು ಮಾಡಿಸಿದ್ದರಲ್ಲಿ ಪಕ್ಕಾ ಆಸ್ಪತ್ರೆಗೆ ೩೯,೦೦೦ ರೂಪಾಯಿ ಬೇಕಾಗುವುದೆಂದು ಗೊತ್ತಾಯಿತು. ಇದರಲ್ಲಿ ಜಮೀನಿನ ಕ್ರಯ ಸೇರಿ ಇಲ್ಲ. ಆದರೂ ಡಿಸ್ಟ್ರಿಕ್ಟ್ ಬೋರ್ಡಿನವರು ರಾಜಾಸರ್ ಸಾವಳೆ ರಾಮಸ್ವಾಮಿ ಮೊದಲಿಯಾರ್ರವರ ಧರ್ಮವನ್ನು ಕೊಂಡಾಡಿ, ಕೆಲವು ಹಣವನ್ನು ರಾಮೇಶ್ವರ ದೇವಸ್ಥಾನದ ಫಂಡಿನಿಂದ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

* * *

ಕಳೆದ ಶಿವರಾತ್ರಿ ಹಬ್ಬದ ದಿನ ಗುಂಟೂರು ತಾಲ್ಲೂಕು ಕೋಟಪ್ಪಕೊಂಡೆಯಲ್ಲಿ ಜನರು ಜಾತ್ರೆಗಾಗಿ ಸೇರಿದ್ದ ವೇಳೆ ಜನರಿಗೂ ಪೋಲೀಸಿನವರಿಗೂ ಜಗಳವಾಗಿ ದೊಂಬಿ ಕಲಹ ಸಂಭವಿಸಿದ್ದರಿಂದ ಸರ್ಕಾರದವರು ಚಿನ್ನಪ್ಪ ರೆಡ್ಡಿಯನ್ನೂ ಇತರ ೪೫ ಜನರನ್ನೂ ದಸ್ತಗಿರಿ ಮಾಡಿ, ದೊಂಬಿ ನಡಿಸಿದರೆಂದು ಅವರ ಮೇಲೆ ಮೊಕದ್ದಮೆ ತಂದರು. ಈ ಮೊಕದ್ದಮೆಯು ಕಳೆದ ಮಂಗಳವಾರದ ತನಕ ವಿಚಾರಣೆ ಆಯಿತು. ಮೂರು ಮಂದಿಯ ಮೇಲೆ ಮಾತ್ರ ಅಪರಾಧ ರುಜುವಾತಾಯಿತೆಂದು ಅಸೆಸರುಗಳು ಅಭಿಪ್ರಾಯಪಟ್ಟರು. ಸೆಷನ್ಸ್ ಜಡ್ಜರು ಆ ಮೂರು ಮಂದಿಗೂ ಶಿಕ್ಷೆ ವಿಧಿಸಿ, ಉಳಿದವರನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆಂದು ತಿಳಿದು ಬಂದಿದೆ. ಅಸೆಸರುಗಳ ಪೈಕಿ ಒಬ್ಬ ವರ್ತಕನು ತನ್ನ ಸ್ವಂತ ಕೆಲಸಕ್ಕೆ ಗಮನ ಕೊಡಲು ಅವಕಾಶವಾಗದೆ ತನಗೆ ೧,೦೦೦ ರೂಪಾಯಿ ನಷ್ಟವಾಯಿತೆಂದು ಜಡ್ಜಿಯವರಿಗೆ ಹೇಳಿದನು. ಜಡ್ಜಿಯವರು—ನೀವುಗಳು ೬೫ ದಿನಗಳಿಂದ ಕೋರ್ಟಿಗೆ ಅಸೆಸರ್ ಕೆಲಸಕ್ಕಾಗಿ ಹಾಜರಾಗುತ್ತಾ ಬಂದಿರೋಣದರಿಂದ ನಿಮ್ಮನ್ನು ಇನ್ನು ೧೦ ವರುಷಗಳ ತನಕ ಯಾವ ಮೊಕದ್ದಮೆಗೂ ಅಸೆಸರಾಗಿ ಕರೆಸದಂತೆ ಹೈಕೋರ್ಟಿಗೆ ಶಿಫಾರಸು ಮಾಡುತ್ತೇನೆ ಎಂದು ವಾಗ್ದಾನ ಮಾಡಿದರು.

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಇಲ್ಲಿನ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಧರ್ಮದರ್ಶಿಗಳು ಕಳೆದ ೧೫ ನೇ ತಾ ಬುಧವಾರದ ದಿವಸ ಹೋಮಿನ ಬಾಡಿಗೇ ಕಟ್ಟಡದಲ್ಲಿ ಸಭೆ ಸೇರಿ ಶ್ರೀಮತ್ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರು ಈ ಸೇವಾಸದನದ ಉಪಯೋಗದ ಬಗ್ಗೆ ಒಂದು ಭೋಜನಾಲಯವನ್ನು ಉಚಿತವಾಗಿ ಕಟ್ಟಿಸಿ ಕೊಡಲು ದಯಪಾಲಿಸಿರುವ ಶ್ರೀಮುಖವನ್ನು ಸಭೆಯಲ್ಲಿ ಓದಿ ಎಲ್ಲರೂ ಸಂತೋಷಪಟ್ಟು, ಶ್ರೀಗಳವರಿಗೆ ಕೃತಜ್ಞತಾಪೂರ್ವಕವಾಗಿ ವಂದಿಸಿ ಇದಕ್ಕಾಗಿ ಒಂದು ವಿಜ್ಞಾಪನಾ ಪತ್ರಿಕೆ ತಯಾರುಮಾಡಿ ಮಹಾಸನ್ನಿಧಿಗೆ ರವಾನಿಸಲ್ಪಟ್ಟಿತು.—ಇದೇ ಸಮಯದಲ್ಲಿ ಈ ಹೋಮಿಗೆ ಒಗಟ್ಟಾಗಿರುವ ಮುಂದೀ ಮಾಸದಲ್ಲಿ ೫ ನೆಯ ಶ್ರೀಮದ್ವೀರಶೈವ ಮಹಾಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಲು ಮೆ॥ ಸಾಹುಕಾರ್ ಕಾಡಪ್ಪನವರ ಅಧ್ಯಕ್ಷತೆಯಲ್ಲಿ ಇಲ್ಲಿನ ವೀರಶೈವ ಮಹಾಜನರ ಸಭೆ ಸೇರಿಸಲ್ಪಟ್ಟಿತು. ಮಹಾಸಭೆಗೆ ಬಳ್ಳಾರಿಗೆ ಹೋಗಲು ೮ ಜನ ಪ್ರತಿನಿಧಿಗಳನ್ನು ಚುನಾಯಿಸಿ ಮೇಲಿನ ಸೇವಾಸದನಕ್ಕಾಗಿ ಜಗದ್ಗುರು ಸ್ವಾಮಿಯವರು ದಯಪಾಲಿಸಿರುವ ಘನವಾದ ಔದಾರ್ಯಕ್ಕಾಗಿಯೂ, ಸರ್ವರ ಏಳಿಗೆಗೆ ಮೂಲಕಾರಣವಾದ ವಿದ್ಯಾಭಿವೃದ್ಧಿಯ ಪ್ರೋತ್ಸಾಹಕ್ಕಾಗಿಯೂ ಶ್ರೀಗಳವರನ್ನು ಶ್ಲಾಘಿಸಿ ಸಂತೋಷಪಟ್ಟು ಈ ಸಭೆಯವರಿಂದಲೂ ಈ ಸೇವಾ ಸದನಕ್ಕಾಗಿ ಸುಮಾರು ಒಂದುನೂರು ರೂಪಾಯಿ ವರೆಗೆ ಚಂದಾ ಹಾಕಲ್ಪಟ್ಟಿತು.—ತಾರೀಖು ೧೬ ನೇ ಪ್ರಾತಃಕಾಲ ಬೆಂಗಳೂರಿಂದ ರೆವ್ ಸ್ಕೆಟಂಗೇಲ್ ದೊರೆಗಳವರು ಈ ಊರಿಗೆ ದಯಮಾಡಿ, ಇಲ್ಲಿನ ಜನರಿಗೆ ಪ್ರಸಂಗವನ್ನು ಮಾಡಿ ಆರಾಧನಾ ಕ್ರಮವನ್ನು ಪೂರೈಸಿಕೊಂಡು ಸಾಯಂಕಾಲ ಆರ್ಯನ್ ಸ್ಟೂಡೆಂಟ್ಸ್ ಹೋಮಿಗೆ ದಯಮಾಡಿ, ಅದರ ವಿದ್ಯಮಾನಗಳನ್ನೆಲ್ಲಾ ಹಾಜರಿದ್ದ ಧರ್ಮದರ್ಶಿಗಳ ಮುಖಾಂತರ ಮ್ಯಾನೇಜರ ಮೂಲಕ ಕೇಳಿ, ವಿದ್ಯಾರ್ಥಿಗಳನ್ನು ನೋಡಿ ಸಂತೋಷಪಟ್ಟು ಅದರ ಪುರೋಭಿವೃದ್ಧಿಯನ್ನು ಕುರಿತು ಪ್ರಾರ್ಥಿಸಿ ವಿದ್ಯಾ ವಿಷಯದಲ್ಲಿ ಉಪನ್ಯಾಸ ಮಾಡಿ ವಿದ್ಯಾರ್ಥಿಗಳಿಗೆ ಫಲಾಹಾರಕ್ಕಾಗಿ ಸ್ವಲ್ಪ ಬಹುಮಾನವನ್ನು ದಯಪಾಲಿಸಿದರು. ಮಾರನೆ ಬೆಳಿಗ್ಗೆ ಇಲ್ಲಿನ ಮುರುಗೀಮಠ ಮತ್ತು ಬೆಟ್ಟದಲ್ಲಿ ನೋಡತಕ್ಕ ಸ್ಥಳಗಳನ್ನು ನೋಡಿಕೊಂಡು ರಾತ್ರಿ ದಾವಣಗೆರೆಗೆ ಪ್ರಯಾಣ ಮಾಡಿದರು.—ಇಲ್ಲಿ ಬಹು ದಿನಗಳವರೆಗೂ ಮೋಡಗಳಾಡುತ್ತಿದ್ದು ಕೆಲವು ದಿನಗಳಿಗೆ ಮುಂಚೆ ಸ್ವಲ್ಪ ಮಳೆ ಆಯಿತು. ಇದರಿಂದ ಬಿಳಿಜೋಳ, ಹತ್ತಿ, ಕಡಲೆ ಪೈರುಗಳಿಗೆ ಒಳ್ಳೇದಾಯಿತು. ಸಂತೆಹೊಂಡದ ನೀರನ್ನೆಲ್ಲಾ ಯಂತ್ರದ ಮುಖಾಂತರವಾಗಿ ಆಚೆಗೆ ಎತ್ತಿಹೊಯ್ದು ಹೂಳನ್ನೆಲ್ಲಾ ತೆಗೆಯುತ್ತಲಿದಾರೆ. ಆದರೆ ಹೂಳು ಬಹಳವಾಗಿರೋಣದರಿಂದ ಇದು ಜಾಗ್ರತೆ ಪೂರೈಸತಕ್ಕದ್ದಲ್ಲ. ಮಣ್ಣೂ ಕೆಸರೂ ಆಚೆ ಸಾಗುವದು ಬಹು ನಿಧಾನವಾಗಿದೆ.

ಕುಣಿಗಲು.—ತಾ ೫ ರಲ್ಲಿ ಮೈಸೂರು ಪ್ರಭುಗಳು ರೆಸಿಡೆಂಟರೇ ಮೊದಲಾದ ಪರಿವಾರದೊಡನೆ ನಾಲ್ಕು ದಿವ್ಯವಾದ ಮೋಟಾರ್ ಗಾಡಿಗಳಲ್ಲಿ ಕುಳಿತು ಸುಮಾರು ಒಂದೂವರೆ ಗಂಟೆಗೆ ಮಿಲಿಟರಿ ಬಂಗಲೆಗೆ ದಯಮಾಡಿಸಿದರು. ಕರ್ನಲ್ ಜೋನ್ಸ್ ಸಾಹೇಬರು ಪ್ರಭುಗಳನ್ನು ಅವರ ಪರಿವಾರದೊಡನೆ ಎದುರುಗೊಂಡರು. ಅವರು ಬಂಗಲೆಯೊಳಗೆ ದಯಮಾಡಿಸಿ ಸ್ವಲ್ಪ ವಿಶ್ರಮಿಸಿಕೊಂಡ ನಂತರ ಕುದುರೆ ಫಾರಂನೊಳಕ್ಕೆ ಕರೆದುಕೊಂಡು ಹೋಗಿ ಮರಿಗಳನ್ನು ಇಳಿಸುವ ವಿಧಾನ, ತಯಾರಾಗಿರುವ ಮರಿಗಳು, ಹಾರಕತ್ತೆ ಉಡುಕುದುರೆಗಳು ಇವುಗಳನ್ನೆಲ್ಲಾ ತೋರಿಸಿ, ತಯಾರಾಗಿರುವ ಕೆಲವು ಮರಿಗಳನ್ನು ಪ್ರಭುಗಳ ಎದುರಿಗೆ ಓಡಿಸಿ ತೋರಿಸಿದರು. ಪ್ರಭುಗಳು ಇವನ್ನೆಲ್ಲಾ ನೋಡಿ

ಮೈಸೂರು ಸಂಸ್ಥಾನದಲ್ಲಿ ಇಂಥಾ ಒಳ್ಳೇ ಏರ್ಪಾಡಿರುವುದನ್ನೂ ಇದರ ಮೇಲ್ವಿಚಾರಣೆಯನ್ನೂ ತಿಳಿದು ಅತ್ಯಂತ ಸಂತೋಷಪಟ್ಟವರಾಗಿ ವಾಪಸ್ ಸಾಯಂಕಾಲ ೫ ಗಂಟೆಗೆ ಬೆಂಗಳೂರಿಗೆ ಚಿತ್ತೈಸಿದರು —ಲಾರ್ಡ್ ಮಿಂಟೋ ಪ್ರಭುಗಳ ಆಗಮನದಿಂದ ಈ ಊರಿನ ಮಿಲಿಟರಿ ಬಂಗಲೆಯ ಎದುರಿಗೆ ಕಾಡಿನಂತೆ ಬೆಳೆದು ಊರಿನವರಿಂದ ಹೇಸಿಗೆ ಮಾಡಲ್ಪಡುತ್ತಿದ್ದ ಪ್ರದೇಶವು ಮಲಿನತ್ವದಿಂದ ಬಿಡುಗಡೆ ಹೊಂದಿ ನಿರ್ಮಲತ್ವವನ್ನು ಧರಿಸಿಕೊಂಡಿತು ಸ್ಥಳೀಯ ಅಧಿಕಾರಿಗಳು ಬಂಗಲೆಯ ಆಜೂಬಾಜಿನಲ್ಲಿಯೂ ಶಾಕೀಜಾ ವಿಚಾರದಲ್ಲಿ ಕೇವಲ ಮುತುವರ್ಜಿಯನ್ನು ವಹಿಸಿದರೆಂದು ಹೇಳುವುದರಲ್ಲಿ ಯಾವ ಅಡ್ಡಿಯೂ ಇರುವದಿಲ್ಲ.—ಅವರು ವಾಪಸ್ ದಯಮಾಡಿಸಿದ ಮೇಲೆ ಒಂದು ವಾರ ಬಿಟ್ಟು ಸೀನಿಯರ್ ಸರ್ಜನ್ರು ಡಾ|| ಸ್ಮಿತ್ ಸಾಹೇಬರು ಇಲ್ಲಿಗೆ ದಯಮಾಡಿಸಿ ಆಸ್ಪತ್ರೆಯ ಕೆಲಸ, ಔಷಧಿ ವಗೈರೆ ತನಿಖೆ ಮಾಡಿ ಅನಂತರ ಸ್ಕೂಲುಗಳಿಗೆ ದಯಮಾಡಿಸಿ ಬಾಲಕ ಬಾಲಕಿಯರು ದೇವಿ ಹಾಕಿಸಿಕೊಂಡದ್ದು ಇಲ್ಲದ್ದು ವಿಚಾರಿಸಿ ಹಾಕಿಸಿಕೊಳ್ಳದವರಿಗೆ ಹಾಕಿಸಿಕೊಳ್ಳುವಂತೆ ಪ್ರೋತ್ಸಾಹ ಕೊಟ್ಟು ಟೌನ್ ಸ್ಯಾನಿಟೇಷನ್ ವಿಚಾರವಾಗಿ ತುಂಬಾ ನಿಗಾ ಕೊಟ್ಟು ಊರಿನೊಳಗೆಲ್ಲಾ ಗಸ್ತು ಮಾಡಿ ಮಲಿನ ಪ್ರದೇಶಗಳನ್ನೆಲ್ಲಾ ಪರಾಂಬರಿಸಿ ಶಾಕೀಜಾ ಕಾಪಾಡುವ ವಿಷಯಕ್ಕೆ ಸ್ಥಳೀಯ ಅಧಿಕಾರಿಗಳಿಗೆ ಸಲಹೆ ಕೊಟ್ಟು ವಾಪಸ್ ಬೆಂಗಳೂರಿಗೆ ಮೋಟಾರ್ ಬೈಸಿಕಲ್‌ನಲ್ಲಿ ದಯಮಾಡಿಸಿದರು ಇವರ ಆಗಮನದಿಂದ ನಿಗಾ ಕಡಮೆಯಾಗಿದ್ದ ಊರಿನ ಬೇರೆ ಬೇರೆ ಪ್ರದೇಶಗಳಿಗೆಲ್ಲಾ ಹೆಚ್ಚು ನಿಗಾ ಕೊಡುವಂತಾದ್ದರಿಂದ ಮುಂದೆ ಬಂಗಲೆ ಪ್ರದೇಶದಲ್ಲಿರುವಂತೆಯೇ ಊರಿನೊಳಗೂ ಶಾಕೀಜಾ ವಿಚಾರಕ್ಕೆ ಮುತುವರ್ಜಿಯುಂಟಾಗುವದೆಂದು ತೋರುತ್ತೆ —ಇವರು ದಯಮಾಡಿಸಿದ ಒಂದು ವಾರದ ನಂತರ ಇದೇ ದಿನ ಮಹಾರಾಜರವರ ಸವಾರಿಯು ತಮ್ಮ ಪರಿವಾರದ ಜನರೊಡನೆ ಇಲ್ಲಿಗೆ ದಯಮಾಡಿಸಿ ಮಿಲಿಟರಿ ಬಂಗಲೆಯಲ್ಲಿ ಇಳಿದು ಸ್ವಲ್ಪ ಫಲಹಾರ ತೆಗೆದುಕೊಂಡು ಕುದುರೆ ಫಾರಂನೊಳಕ್ಕೆ ಕರ್ನಲ್ ಬೋರ್ಡ್ಸ್ ದೊರೆಯವರೊಡನೆ ದಯಮಾಡಿಸಿ ಕುದುರೆಗಳನ್ನು ನೋಡಿ ಸಂತೋಷಪಟ್ಟು ಇದೇ ಸಾಯಂಕಾಲ ವಾಪಸ್ ಮೈಸೂರಿಗೆ ದಯಮಾಡಿದರು

ನಂಜನಗೂಡು.—ಈ ಊರಿನಲ್ಲಿ ಪ್ಲೇಗ್ ಶುರುವಾಗಿ ನಾಲ್ಕು ತಿಂಗಳಾಯಿತು. ಸುಮಾರು ನೂರಾರಕ್ಕೆ ಮೇಲ್ಪಟ್ಟು ಪ್ರಜೆಗಳು ಬಲಿಯಾದರು ಈ ಮಧ್ಯೆ ಕಾಲರಾ ರೋಗವು ಸ್ವಲ್ಪ ಸೂಚನೆ ಕೊಟ್ಟಿತು ಆದರೆ ಸದ್ಯಕ್ಕೆ ಊರಲ್ಲಿ ಪ್ಲೇಗಾಗಲಿ ಕಾಲರಾ ರೋಗವಾಗಲಿ ಇಲ್ಲವೆಂದು ಹೇಳಬೇಕಾಗಿದೆ. ಈ ಋತು ಧರ್ಮವಾದ ಶೈತ್ಯಗಾಳಿ ಬೀಸುತ್ತಿದೆ, ಇದರ ನಿಮಿತ್ತ ಅಲ್ಲಲ್ಲಿ ಸ್ವಲ್ಪ ಛಳಿಜ್ವರ ಕಾಣಿಸಿಕೊಂಡಿದೆಯಾದರೂ ಕೂಡಿದ ಮಟ್ಟಿಗೆ ಊರು ಆರೋಗ್ಯವಾಗಿದೆ ಧಾರ ನಿವಾಸಿಗಳು ಒಂದೇ ವಿಧ ಧಡಾವಾಗಿಯೇ ಇವೆ —ಕಳೆದ ಎಂಟು ತಿಂಗಳಿಂದ ನಲ್ಲಿಯ ಮೂಲಕ ಊರಿಗೆ ನೀರು ಸರಬರಾಯಿ ಮಾಡುತ್ತಿದ್ದರು ಸಮಸ್ತ ಜನರಿಗೂ ತುಂಬಾ ಅನುಕೂಲವಾಗಿತ್ತು ಅದು ಈ ತಿಂಗಳ ಕೊನೆಯ ಭಾಗದಲ್ಲಿ ನಿಂತು ಹೋಗುವದರಲ್ಲಿದೆ. ಸರ್ಕಾರದವರು ಪಯಾಗಳಿಗಾಗಿ ಯಾವಾಗ್ಲೂ ಈ ಏರ್ಪಾಡು ನಡೆಯುವಂತೆ ಮಾಡಿದರೆ ತುಂಬಾ ಸಹಾಯವಾಗುವುದು —ಬಹಳ ವರುಷಗಳಿಂದ ಈ ಊರು ಮುನ್ಸಿಫ್ ಕೋರ್ಟು, ತಾಲ್ಲೂಕ್ ಕಚೇರಿ, ಆಸ್ಪತ್ರೆ, ಮುಸಾಫರ್ ಖಾನೆಗಳನ್ನು ಊರ ಹೊರಗೆ ಆರೋಗ್ಯವಾದ ಸ್ಥಳದಲ್ಲಿ ಕಟ್ಟುವರೆಂದು ವದಂತಿ ಇದೆ. ಆದರೆ ಇನ್ನೂ ಇದು ಸಫಲವಾಗಲಿಲ್ಲ ಇದನ್ನು ಮಾಡಿಸಿದರೆ ಬಹು ಅನುಕೂಲವಾಗಿರುವುದು —ಕಳೆದ ೧೬ನೇ ತಾ ಮಂಗಳವಾರ ಸಮರಾತ್ರಿಯಲ್ಲಿ ಅಂದಿ ಎಂಬೊಬ್ಬ ಧೂರ್ತನಾಲಿಯು ತನ್ನ ಪಟ್ಟೇದಾರರನ್ನು ಕತ್ತಿಯಿಂದ ಖೂನ್‌ಮಾಡಿ ಒಂದೆರಡು ದಿನ ಮರೆಯಾಗಿದ್ದು ಕಳೆದ ಗುರುವಾರ ಪೋಲೀಸಿನವರಿಗೆ ಸಿಕ್ಕಿಬಿದ್ದನು ಸರ್ಕಾರದವರು ಹೆಣವನ್ನು ಡಾಕ್ಟರವರ ಅಜಮಾಯಿಷಿ ಬಗ್ಗೆ ಕಳುಹಿಸಿದರು ಸಮಾಯ ಪೋಲೀಸ್ ಸೂಪರಿಂಟೆಂಡೆಂಟರವರು ಪರ್ಫ್ ಮಾಡುವುದಕ್ಕೆ ಅಪ್ಪಣೆ ಕೊಟ್ಟರು ಅವನ ಕೈಫಿಯತ್ತನ್ನು ತೆಗೆದುಕೊಂಡು ವಿಚಾರಿಸುತ್ತಾ ಇದ್ದಾರೆ ಇವನು ಹಿಂದೆ ಒಂದು ಸಾರಿ ಮೈಸೂರಿನಲ್ಲಿ ಖೂನ್ ಮಾಡಿ ಆರು ವರುಷಗಳ ಸಜಾ ಶಿಕ್ಷೆಯನ್ನು ಅನುಭವಿಸಿದ್ದನಂತೆ.

ತುಂಕೂರು.—ಈ ತಾಲ್ಲೂಕಿನಲ್ಲಿ ಮಳೆ ಚನ್ನಾಗಿ ಈ ವರ್ಷ ನಡೆಸಿದ್ದರಿಂದ ಶರೀ ಮುಸ್ಕಿ ಫಸಲುಗಳು ರೈತರ ಕೈಗೆ ಸೇರುವ ಕಾಲವು ಬಂದಹಾಗೆಲ್ಲಾ ಧಾರಣೆವಾಸಿಗಳು ಕಡಮೆಯಾಗುತ್ತಾ ಬರುತ್ತಿವೆ —ಈ ಟೌನಿಗೆ ಒಂದು ಫರ್ಲಾಂಗಿನೊಳಗಿರತಕ್ಕ ಅಲಕೆಟ್ಟೆ ಕೆರೆ ಪಾಳ್ಯದಲ್ಲಿ ಒಬ್ಬ ರೈತನ ಸುಮಾರು ಹದಿನೈದು ಖಂಡುಗ ದವಸ ಆಕಸ್ಮಾತಾಗಿ ಒಣಮೆಗೆ ಎರಡು ದಿನಗಳ ಹಿಂದೆ ಕಣಗಲನಲ್ಲಿಯೇ ಬೆಂಕಿ ಬಿತ್ತು, ಆದರೆ ಜಾಗ್ರತೆಯಾಗಿ ಆರಿಸಿದ್ದರಿಂದ ನಷ್ಟವೇನೂ ಅಧಿಕವಾಗಿ ಆಗಲಿಲ್ಲ —ಈ ತಾಲ್ಲೂಕ್ ಅಮಲ್ದಾರ್ ಮೆ|| ಬಾಲ್ ಸಾಹೇಬರಿಗೆ ಪಾವಗಡ ತಾಲ್ಲೂಕಿಗೆ ವರ್ಗವೆಂತಲೂ, ಇಲ್ಲಿನ ಟ್ರಿಜರಿ ಅ|| ಕಮಿಷನರ್ ಮೆ|| ಮಾಧವರಾಯರಿಗೆ ಸರ್ವೆ ಇಲಾಖೆಯಲ್ಲಿ ಕೆಲಸವಾಗುವುದೆಂತಲೂ ತುಂಬಾ ವರ್ತಮಾನವಿದೆ.—ಈ ವಾರದಲ್ಲಿ ರೆಜಿಸ್ಟ್ರೇಷನ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ಸಬ್ ರೆಜಿಸ್ಟ್ರಾರವರ ಆಫೀಸನ್ನು ತನಿಖೆಮಾಡಿಕೊಂಡು ಹೋದರು ಈ ಡಿಸ್ಟ್ರಿಕ್ಟಿನಲ್ಲಿ ಆಕ್ಟಿಂಗ್ ಕೆಲಸ ನೋಡುತ್ತಿರುವ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ|| ಬಿ. ರಾಮಯ್ಯನವರು ಈ ಟೌನಿನ ಕೆಲವು ಸ್ಕೂಲುಗಳನ್ನು ಪರೀಕ್ಷೆ ಮಾಡಿದರು. ಇವರು ವಿದ್ಯಾರ್ಥಿಗಳನ್ನು ಭಯಪಡಿಸದೆ ಬಹು ಸಲೀಸಾಗಿ ಪರೀಕ್ಷಿಸಿ ಸ್ಕೂಲುಗಳ ಯಥಾರ್ಥವಾದ ಸಂಗತಿಗಳನ್ನು ಕಂಡು ಹಿಡಿದಿರುತ್ತಾರೆ —ಇಲ್ಲಿನ ಮುನ್ಸೀಫ್ ಕೋರ್ಟಿನಲ್ಲಿ ಮೊಕದ್ದಮೆಗಳು ಜಾಗ್ರತೆಯಾಗಿ ತೀರ್ಮಾನವಾಗದೆ ಇರೋಣದರಿಂದ ವರ್ತಕ ಮಂಡಲಿಯವರಿಗೆ ತುಂಬಾ ನಷ್ಟವಾಗುತ್ತಾ ಬಂದಿರುತ್ತೆಂತಲೂ, ಲೇವಾದೇವಿಗೆ ಸಂಬಂಧಪಟ್ಟ ಮೊಕದ್ದಮೆಗಳು ಒಂದೆರಡು ತಿಂಗಳಲ್ಲಿ ತೀರ್ಮಾನವಾಗದೆ ಇದ್ದಲ್ಲಿ ಬಹಳ ಅನಾನುಕೂಲವೆಂತಲೂ, ಜಮೀನು ವಗೈರೆಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳು ಸಾವಕಾಶವಾದಾಗ್ಯೂ ಬಾಧಕವೇನೂ ಅಧಿಕವಾಗಿರುವುದಿಲ್ಲವೆಂತಲೂ, ಸಾಮಾನ್ಯವಾಗಿ ಲೇವಾದೇವಿ ಮೊಕದ್ದಮೆಗಳು ಸಾವಕಾಶವಾದಾಗ್ಯೂ ಬಾಧಕವೇನೂ ಅಧಿಕವಾಗಿರುವುದಿಲ್ಲವೆಂತಲೂ, ಸಾವಕಾಶವಾಗಿ ಲೇವಾದೇವಿ ಮೊಕದ್ದಮೆಗಳು ತೀರ್ಮಾನಿಸಲ್ಪಟ್ಟಾಗ ದಾವಾ ತಾರೀಖು ಲಾಗಾಯತು ಡಿಕ್ರಿ ತಾರೀಖಿನ ವರೆಗೆ ಪತ್ರದಲ್ಲಿ ಕಂಡ ಪ್ರಕಾರವೇ ಬಡ್ಡಿ ಕೊಡಿಸಬೇಕೆಂತಲೂ, ಇದೇ ರೀತಿಯಾಗಿ ಹಿಂದೆ ಇಲ್ಲಿ ಮುನ್ಸೀಫರಾಗಿದ್ದ ಪ್ರಸಿದ್ಧರಾದ ಮೆ|| ಜಯರಾಂ ಐಯರವರು ಮಾಡುತ್ತಿದ್ದರೆಂತಲೂ, ಮೊಕದ್ದಮೆಗಳು ಬಹಳವಾಗಿರುವ ಪಕ್ಷದಲ್ಲಿ ಮತ್ತೊಂದು ಸ್ಮಾಲ್ ಕಾಜ್ ಕೋರ್ಟನ್ನು ಇಲ್ಲಿ ಸ್ಥಾಪಿಸಿಕೊಡಬೇಕೆಂತಲೂ ಇಲ್ಲಿನ ಪ್ರಜೆಗಳು ಮೈಸೂರು ಚೀಫ್ ಕೋರ್ಟಿಗೆ ಅರ್ಜಿ ಮೂಲಕ ಅರಿಕೆಮಾಡಿಕೊಳ್ಳುವವರಾಗಿದ್ದಾರೆ —ಈ ಊರಿನಲ್ಲಿ ಬಹಳ ಕಾಲದಿಂದ ಧರ್ಮೋತ್ತರೆಂದು ಹೆಸರು ಪಡೆದು ಬಡವರಾದಿಯಾಗಿ ಸಮಸ್ತರನ್ನೂ ಜಾತಿಭೇದಗಳನ್ನೆಣಿಸದೆ ಔಷಧಿಗಳನ್ನು ಕೊಡುತ್ತಿದ್ದ ಮೇ|| ಗುಲಾಂ ಮುಹಮ್ಮದ್ ಸಾಹೇಬರವರಿಗೆ ಇಲ್ಲಿನ ಪ್ರಜಾ ಹಿತೈಷಿಗಳಾದ ಡೆಪ್ಯುಟಿ ಕಮಿಷನರ್ ಮೆ|| ದೊರೆಸ್ವಾಮಿ ಐಯರವರು ಪ್ರಜೆಗಳ ಇಷ್ಟಾನುಸಾರ ಗವರ್ನ್ಮೆಂಟಿಗೆ ಶಿಫಾರಸು ಮಾಡಿ ಒಂದು ವರುಷದಿಂದಲೂ ಪ್ರತಿ ಮಾಹೆಯಲ್ಲೂ ಮೂವತ್ತು ರೂಪಾಯಿ ಸಹಾಯ ದ್ರವ್ಯವನ್ನು ಸದರಿ ಹಕೀಮರಿಗೆ ಕೊಡಿಸುತ್ತಾ, ಅವರಿಂದ ಪ್ರತಿ ತಿಂಗಳಲ್ಲೂ ಗಣತಿಯನ್ನು ತೆಗೆದುಕೊಳ್ಳುತ್ತಾ ಬರುತ್ತಿದ್ದಾರೆ ಆದರೆ ಹಕೀಮರು ಒಬ್ಬ ಗುಮಾಸ್ತೆಯನ್ನು ಇಟ್ಟುಕೊಂಡು ಗಣತಿಯನ್ನು ಕೊಡುತ್ತಾ ಬರುತ್ತಿದ್ದಾರೆ. ಪ್ರತಿ ದಿನವೂ ೨೫೦ ಮಂದಿಗಿಂತಲೂ ಹೆಚ್ಚು ಮಂದಿ ಔಷಧಿಯನ್ನು ಹೊಂದುವರು. ಪರಸ್ಥಳಗಳಿಂದಲೂ ಅನೇಕರು ಬಂದು ಔಷಧಿಯನ್ನು ಹೊಂದಿ ಗುಣಪಡುತ್ತಿದ್ದಾರೆ ಆದದರಿಂದ ಇವರಿಗೆ ಈಗ ಸರ್ಕಾರದವರು ದಯಪಾಲಿಸುತ್ತಿರುವ ಸಹಾಯ ದ್ರವ್ಯದೊಂದಿಗೆ ಇನ್ನು ಇಪ್ಪತ್ತು ರೂಪಾಯಿಗಳು ಜಾಸ್ತಿ ದಯಪಾಲಿಸಿದರೆ ಪ್ರಜೆಗಳಿಗೆ ತುಂಬಾ ಸಹಾಯವಾದೀತೆಂದು ನಂಬುತ್ತೇನೆ

ಶ್ರೀರಂಗಪಟ್ಟಣ.—ಕೋಟೆಯೊಳಗೆ ರಸ್ತೆ ಬಚ್ಚಲುಗಳು ಇತರ ಮ್ಯುನಿಸಿಪಲ್ ಏರ್ಪಾಡುಗಳೂ ಸ್ವಲ್ಪಮಟ್ಟಿಗೆ ತೃಪ್ತಿಕರವಾಗಿದ್ದಾಗ್ಯೂ ಗಂಜಾಮಿನ ಹಲವು ಗಲ್ಲಿಗಳ ಅಶುಚಿಯೂ ಹೇಸಿಗೆಯೂ ಹೇಳತೀರದು ಅನೇಕ ಶಾಲುನೇಕನಗಳಲ್ಲಿ ಜನರು ಹೇಸಿಗೆಮಾಡುತ್ತಿದ್ದಾಗ್ಯೂ ಅದಕ್ಕೆ ತಕ್ಕ ಗಮನ ಕೊಟ್ಟು ಶಾಕೀಜುಮಾಡಿಸುವ ಅಧಿಕಾರಿಗಳನ್ನು ನೋಡುವದೇ ಕಷ್ಟ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು ತಕ್ಕ ಬಂದೋಬಸ್ತು ಮಾಡದಿದ್ದರೆ ಕಾಲರಾ, ಪ್ಲೇಗು, ಬೇಧಿ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುವದು ಕೋಟೆಗೂ ಗಂಜಾಮಿಗೂ ಕುಡಿಯುವ ನೀರಿನ ಕಷ್ಟವು ತುಂಬಾ ಹೆಚ್ಚಾಗಿದೆ. ಕುಡಿಯುವ ನೀರಿಗಾಗಿ ಜನರು ಅರ್ಧ ಮುಕ್ಕಾಲು ಮೈಲಿ ದೂರ ಇರುವ ಹೊಳೆಗೆ ಹೋಗಬೇಕಾಗಿದೆ ಕೊಳಾಯಿಗಳ ಮೂಲಕ ಒಳ್ಳೇ ನೀರನ್ನು ಒದಗಿಸುವ ಯೋಚನೆಯನ್ನು ಸರ್ಕಾರದವರು ಮಾಡಿರುವದಾಗಿ ಕಂಡುಬಂದರೂ ಈ ವರೆಗೂ ಅಂಥಾ ಯಾವ ಕಾರ್ಯವನ್ನೂ ಮಾಡಿರುವಂತೆ ಕಾಣುವದಿಲ್ಲ ಮಲೇರಿಯಾ ಜ್ವರಕ್ಕೂ, ಪ್ಲೇಗ್, ಕಾಲರ ಮುಂತಾದ ರೋಗಗಳಿಗೂ ತೌರುಮನೆಯಂತಿರುವ ಈ ಪಟ್ಟಣ ಗಂಜಾಮುಗಳನ್ನು ಆದಷ್ಟು ಶೀಘ್ರವಾಗಿ ಆರೋಗ್ಯಸ್ಥಿತಿಗೆ ತರಬೇಕಾದದ್ದು ತುಂಬಾ ಆವಶ್ಯಕವಾಗಿದೆ —ಕಳೆದ ವಾರ ಈ ಊರಿನ ಕೋಟೆ ಕೋಟೆಯಲ್ಲಿ ಒಂದು ವಿಚಿತ್ರವಾದ ಕೊಲೆಯು ನಡೆದಿರುವದಾಗಿ ವರ್ತಮಾನ ಒಬ್ಬ ಹೆಂಗಸನ್ನು ಕೊಂದು ಅಂಗಗಳನ್ನು ಛೇದನಮಾಡಿರುವಂತೆಯೂ ಎರಡು ಕೈಗಳನ್ನು ಒಂದು ಕಡೆಯೂ, ಎರಡು ಕಾಲುಗಳನ್ನು ಮತ್ತೊಂದು ಕಡೆಯೂ, ಮುಂಡವನ್ನು ಬೇರೊಂದು ಕಡೆಯೂ, ತಲೆಯನ್ನು ಇನ್ನೊಂದು ಕಡೆಯೂ ಹೂಳಿಟ್ಟಿದ್ದಂತೆಯೂ, ಇವುಗಳನ್ನೆಲ್ಲಾ ಕಂಡುಹಿಡಿಯುವದಕ್ಕೆ ಕೆಲವು ದಿನಗಳ ವರೆಗೆ ಬಹಳ ಪ್ರಯಾಸವಾದಂತೆಯೂ ವರ್ತಮಾನ. ಖೂನಿ ಮಾಡಿದವನನ್ನು ಪತ್ತೆಮಾಡಿ ಲಾಕಪ್ಪಿನಲ್ಲಿಟ್ಟು ವಿಚಾರಣೆಮಾಡುತ್ತಿರುವದಾಗಿಯೂ, ಇವನಿಗೆ ಸಹಾಯಕನಾಗಿದ್ದ ಮತ್ತೊಬ್ಬನನ್ನು ಕೂಡ ಹಿಡಿದು ಲಾಕಪ್ಪಿನಲ್ಲಿ ಇಟ್ಟಿರುವದಾಗಿಯೂ ಕೇಳುತ್ತೇವೆ ಕೊಲೆಮಾಡಿದ್ದಕ್ಕೆ ನಾನಾ ಕಾರಣಗಳನ್ನು ಹೇಳುತ್ತಿದ್ದಾರೆ ಕೊಲೆಯಾದ ಹೆಂಗಸು ಸುಮಾರು ನಾಲ್ವತ್ತು ರೂಪಾಯಿಗಳುಳ್ಳ ಹಣದ ಗಂಟನ್ನು ತನಗೆ ಆಪ್ತಳಾದ ಕೊಲೆಪಾತಕನ [illegible]ದಾರಳಲ್ಲಿ ಇಟ್ಟಿದ್ದಳಂತೆ, ಕೆಲವು ಕಾಲಾನಂತರ ಆ ಹೆಂಗಸು ಒಂದು ತನ್ನ ಗಂಟನ್ನು ಕೇಳಲು ನೆಪಗಳನ್ನು ಹೇಳಿ ಕೊಡುವದಕ್ಕೆ ತಡಮಾಡಿದ್ದರಿಂದ ಆ ಹೆಂಗಸು ಆ ಸಂಗತಿಯನ್ನು ಸ್ವಲ್ಪ ಬಹಿರಂಗಮಾಡಿದ್ದರಿಂದ ಸದರಿ ಕೊಲೆಗೇಡಿಯು ಉಪಾಯಾಂತರದಿಂದ ಆಕೆಯನ್ನು ಮನೆಯೊಳಗೆ ಸೇರಿಸಿಕೊಂಡು ಈ ದುಷ್ಕೃತ್ಯವನ್ನು ನಡೆಸಿದ ಹಾಗೂ ವರ್ತಮಾನವಿದೆ —ಕಳೆದ ವಾರ ಒಬ್ಬ ಬ್ರಾಹ್ಮಣ ವಿಧವೆಯು ಕದ್ದು ಬಸುರಾಗಿ ಕೂಸನ್ನು ಹಡೆದು ಸೂಳೆಯ ಸ್ವಾಧೀನವ ಮಾಡಿ ಮೈಸೂರುಕಡೆ ಪಲಾಯನಮಾಡಿದಂತೆ ವರ್ತಮಾನ ಇದೆಲ್ಲಾ ವಿಧವಾ ವಿವಾಹ ನಿರ್ಬಂಧದ ಫಲಿತಾಂಶವೆಂದು ಹೇಳಬಹುದು —ಈ ದೊಡ್ಡ ಊರಿನಲ್ಲಿ ಒಂದು ಗ|| ಬಾಲಿಕಾ ಪಾಠಶಾಲೆ ಇದ್ದಾಗ್ಯೂ ಶಾಲೆಗೆ ಬರುವ ವಿದ್ಯಾರ್ಥಿನಿಯರ ಸಂಖ್ಯೆ ಬಹಳ ಕಡಮೆ ಎಂದೂ, ಜನರು ಈ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುವ ವಿಷಯದಲ್ಲಿ ಯಾಕೋ ಶಂಕಿಸುತ್ತಿರುವಂತೆಯೂ ಕೇಳುತ್ತೇವೆ —ಒಂದೆರಡು ವಾರಗಳ ಹಿಂದೆ ಮೈಸೂರಿನಿಂದ ಐದು ಜನ ರೋಮನ್ ಕಥೋಲಿಕ್ ಪಾದ್ರಿಗಳು ಬಂದು ಗಂಜಾಮದ ಹತ್ತಿರ ಇರುವ ಸಂಗಮದಲ್ಲಿ ಒಂದು ಭಾರಿ ಮೊಸಳೆಯನ್ನು ಕೋವಿಯಿಂದ ಹೊಡೆದು ಕೊಂದರು —ಈ ಊರಿನ ಪೋಸ್ಟ್ ಮಾಸ್ಟರ್ ಮೆ|| ಸೀತಾರಾಮಯ್ಯನವರಿಗೆ ಬಡ್ತಿಯಾದದ್ದಕ್ಕಾಗಿ ಎಲ್ಲರೂ ಸಂತೋಷಪಡುತ್ತಾರೆ ಇವರು ತುಂಬಾ ಬುದ್ಧಿವಂತರು, ಸರಸಿಗಳು, ಎಲ್ಲರಲ್ಲೂ ಪ್ರೀತಿ ದಯೆಯುಳ್ಳವರು ತಮ್ಮ ಆಫೀಸಿನ ಕೆಲಸವಲ್ಲದೆ ಬಾಡಿಗೆ ಮಾಡತಕ್ಕ ಕೆಲಸಗಳನ್ನು ತಮ್ಮ ಸ್ವಕಲ್ಪಿತ ಯಂತ್ರಗಳಿಂದ ಮಾಡುತ್ತಿದ್ದಾರೆ

ಹೆಗ್ಗಡದೇವನಕೋಟೆ.—ಇಲ್ಲಿಗೆ ಇದೇ ಡಿಸೆಂಬರ್ ೧ನೇ ತಾ ಬುಧವಾರ ಸಿಕಾರಿಗೋಸ್ಕರ ವೈಸರಾಯಿ ಪ್ರಭುಗಳು ಪತ್ನಿ ಪರಿವಾರ ಸಹಿತ ದಯಮಾಡುವವರಾದ್ದರಿಂದ ರಸ್ತೆಗಳೆಲ್ಲವೂ ಚೊಕ್ಕಟವಾಗಿ ಗುಡಿಸಲ್ಪಟ್ಟು, ಧೂಳು ಏಳದಂತೆ ನೀರು ಹೊಯಿಸಲ್ಪಟ್ಟಿತ್ತು ರಸ್ತೆಯ ಉದ್ದಕ್ಕೂ ಮೂರು ಮೂರು ಫರ್ಲಾಂಗುಗಳಿಗೆ ಒಬ್ಬೊಬ್ಬನಂತೆ ಪೋಲೀಸ್ ಕಾನ್ಸ್ಟೆಬಲ್‌ಗಳು ನೇಮಿಸಲ್ಪಟ್ಟಿದ್ದರು. ಇದಕ್ಕಾಗಿ ಹುಣಸೂರು, ನಂಜನಗೂಡು, ಚಾಮರಾಜನಗರ ಈ ತಾಲ್ಲೂಕುಗಳಿಂದ ಸ್ಪೆಶಲ್ ಡ್ಯೂಟಿಗಾಗಿ ಪೋಲೀಸಿನವರು ಕರೆಸಲ್ಪಟ್ಟಿದ್ದರು. ರಸ್ತೆಯ ಉದ್ದಕ್ಕೂ ಚಪ್ಪರಗಳು, ತೋರಣಗಳು ಕಟ್ಟಿದ್ದವಲ್ಲದೆ ಊರಿನಿಂದ ಸೊಗಸಾದ ಒಂದು ಚಪ್ಪರವನ್ನು ಹಾಕಿ ನಾನಾವಿಧವಾಗಿ ಅಲಂಕಾರ ಮಾಡಿ ಕಮಾನಿನ ಮೇಲುಗಡೆ "ವೆಲ್‌ಕಮ್" ಎಂದು ಇಂಗ್ಲೀಷಿನಲ್ಲಿ ಸೊಗಸಾಗಿ ಕೆತ್ತಲ್ಪಟ್ಟಿತ್ತು. ವೈಸರಾಯಿ ಪ್ರಭುಗಳೂ ಮಹಾರಾಜರವರೂ ಶಿಕಾರಿಗಾಗಿ ಕಲ್ಕೆರೆಗೆ ದಯಮಾಡಿದ್ದರಿಂದ ವೈಸರಾಯಿಯವರ ಪತ್ನಿಯವರ ಲೇಡಿ ಎಲಿಜಬೆತ್ ಎಲಿಯಟ್‌ಯವರೂ, ಮದ್ರಾಸು ಗವರ್ನರವರ ಈರ್ವರು ಕುವರ ತಳೆಯರೂ ಮತ್ತು ಇತರ ಯೂರೋಪಿಯನ್ ಅಧಿಕಾರಿಗಳೂ ಸುಮಾರು ೧೨ ಘಂಟೆಗೆ ಕ್ಯಾಂಪಾದ ಕಾರಾಪುರದಿಂದ ಮೋಟಾರ ಗಾಡಿಗಳ ಮೇಲೆ ದಯಮಾಡಿದರು ಸುತ್ತುಮುತ್ತಿನ ಗ್ರಾಮಸ್ಥರು ತಂಡೋಪತಂಡವಾಗಿ ನಿಂತು ಅವರಿಗೆ ಸುಸ್ವಾಗತಮನವನ್ನು ಬಯಸಿದರು ಇಲ್ಲಿನ ಆಸ್ಪತ್ರೆಯ ಬಳಿ ಸಾಲುಕಟ್ಟಿ ನಿಂತಿದ್ದ ಬಾಲಕರು ಸಂತೋಷಧ್ವನಿಯನ್ನು ಮಾಡಿದರು ಚಪ್ಪರದ ಬಳಿ ನಿಂತಿದ್ದ ಮ್ಯುನಿಸಿಪಲ್ ಮೆಂಬರುಗಳು, ತಾಲ್ಲೂಕು ನೌಕರರುಗಳು, ಶೆಟ್ಟಿ, ವರ್ತಕರೇ ಮೊದಲಾದವರು ಲೇಡಿ ಮಿಂಟೋಯವರಿಗೂ ಮತ್ತು ಅವರ ಸಂಗಡಿಗರಿಗೂ ಸುಸ್ವಾಗತಮನವನ್ನು ಬಯಸಿದರು ಅನಂತರ ಅವರೆಲ್ಲರೂ ಕಾಡಿಗೆ ಹೋಗಿ ಸಂಚಾರ ಮಾಡಿ ಸಿಕ್ಕಿದ ಒಂದು ಭಾರಿ ಹುಲಿಯನ್ನು ಹೊಡೆದರು. ಆದರೆ ಅದು ಏಟು ತಿಂದು ತಪ್ಪಿಸಿಕೊಂಡು ಓಡಿಹೋಯಿತು. ಅಲ್ಲಿಂದ ಎಲ್ಲರೂ ಹಿಂತಿರುಗಿ ಸಿದ್ಧವಾಗಿದ್ದ ಮೋಟಾರು ಗಾಡಿಗಳ ಮೇಲೆ ಕುಳಿತು ಸಾಯಂಕಾಲಕ್ಕೆ ಕ್ಯಾಂಪಾದ ಕಾರಾಪುರಕ್ಕೆ ತೆರಳಿದರು ಮಾರನೆ ದಿವಸ ಬೆಳಗ್ಗೆ ಅಲ್ಲಿನ ಶಿಕಾರಿದಾರರು ಗುಂಪು ಕೂಡಿ, ಬಂದೂಕ, ಈಟಿ ಮೊದಲಾದ ಆಯುಧಗಳೊಡನೆ ಹೋಗಿ ನೋಡುವಲ್ಲಿ ಏಟು ತಿಂದಿದ್ದ ಹುಲಿಯು ಸುಮಾರು ಮೂರು ಫರ್ಲಾಂಗು ದೂರದಲ್ಲಿ ಸತ್ತು ಬಿದ್ದಿತ್ತು. ಹುಲಿಯು ಗಂಡಾಗಿಯೂ, ಭಾರಿಯಾಗಿಯೂ ಅಂದರೆ ೮ ಅಡಿ ೧೧ ಅಂಗುಲ ಉದ್ದವಾಗಿಯೂ ಇತ್ತು. ಅದೇ ದಿನ ಅದರ ಕುತ್ತಿಗೆಗೆ ಹಾರಾ ಹಾಕಿ ಅತಿ ವಿಜೃಂಭಣೆಯೊಡನೆ ಗಾಡಿಯ ಮೇಲೆ ಹೇರಿಸಿ ಮೆರವಣಿಗೆ ಮಾಡಿಸಿಕೊಂಡು ಇಲ್ಲಿಗೆ ಎರಡು ಮೈಲಿ ದೂರದಲ್ಲಿರುವ ಜಂಕ್ಷನ್ ಹತ್ತಿರಕ್ಕೆ ಸಾಯಂಕಾಲ ೪ ಘಂಟೆಗೆ ಸಾಗಿಸಿಕೊಂಡು ಹೋದರು. ಅಲ್ಲಿಗೆ ಒಬ್ಬ ಫೋಟೋಗ್ರಾಫರು ಬಂದು ಇಲ್ಲಿನ ಶಿಕಾರಿದಾರರ ಪೈಕಿ ೧೨ ಜನದ ಮಟ್ಟಿಗೆ ಚುನಾಯಿಸಿ ಅವರನ್ನು ಕೂಡಿಸಿ ಅವರ ಮುಂದೆ ಆ ಹುಲಿಯನ್ನು ಮಲಗಿಸಿ ಫೋಟೋವನ್ನು ತೆಗೆದುಕೊಂಡು ಹೋದರು —ಅದೇ ಸಾಯಂಕಾಲ ಸುಮಾರು ೬ ಘಂಟೆಗೆ ವೈಸರಾಯಿ ಪ್ರಭುಗಳೂ, ಮಹಾರಾಜರೂ ಮೋಟಾರುಗಾಡಿಗಳ ಮೇಲೆ ಅಲ್ಲಿಗೆ ಬಂದರು ಮೆ|| ಎಚ್ ಎಚ್ ಸ್ಯಾಂಕ್ಸ್‌ಯವರು ಅವರಿಗೆ ಆ ಹುಲಿಯನ್ನು ತೋರಿಸಿದರು. ಅವರು ಅದನ್ನು ನೋಡಿಕೊಂಡು ಸಂತೋಷದೊಡನೆ ಮುಂದಕ್ಕೆ ತೆರಳಿದರು ಅನಂತರ ವೈಸರಾಯಿಯವರ ಪತ್ನಿಯವರು, ಯುವರಾಜರು, ಲೇಡಿ ಎಲಿಜಬೆತ್ ಎಲಿಯಟ್‌ಯವರು, ಮದ್ರಾಸು ಗೌರ್ನರವರ ಕುವರ ತಳೆಯರೂ ಇದ್ದ ಗಾಡಿಯು ಬಂತು ಅವರುಗಳಿಗೂ ಮೇಲ್ಕಂಡ ಆಫೀಸರೇ ಸದರಿ ಹುಲಿಯನ್ನು ತೋರಿಸಿದರು. ಅವರು ಬಹಳ ಸಂತೋಷಪಟ್ಟುಕೊಂಡು ಹೋದರು ಬಳಿಕ ಅದರ ಚರ್ಮವನ್ನು ತೆಗೆಸಿಕೊಂಡು ಮೆ|| ಸ್ಯಾಂಕ್ಸ್‌ಯವರು ಮೈಸೂರಿಗೆ ಹೊರಟುಹೋದರು.—ನಿನ್ನೆಯಿಂದ ಮೋಡವಾಗುತ್ತಿದೆ ಮತ್ತು ಕೆಲವು ಕಡೆ ಸುಮಾರಾಗಿ ಮಳೆ ಬಂತು. ಹುರುಳಿ, ತೊಗರಿ ಮುಂತಾದ ಫಸಲುಗಳು ಮಳೆ ಇಲ್ಲದೆ ಒಣಗುತ್ತಲಿವೆ ಹಿಂದೆ ನಮ್ಮ ಕಸಬಾ ದಫೇದಾರರು ಕಮ್ಮಿ ಸೇರು ಇಟ್ಟುಕೊಂಡು ಅಳೆಯುತ್ತಿದ್ದ ಸರಗೂರು ರಂಗಶೆಟ್ಟಿ ಎಂಬುವನನ್ನು ಹಿಡಿದು ಕೇಸು ನಡೆಸಿದ್ದರು ಸದರಿ ಕೇಸು ತೀರ್ಮಾನವಾಗಿ ಅಪರಾಧಿಗೆ ೩೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು ಇದೇ ರೀತಿ ಇಂಥಾ ಮೋಸಕೃತ್ಯ ನಡೆಸತಕ್ಕವರನ್ನು ಹಿಡಿದು ಶಿಕ್ಷೆಗೆ ಗುರಿಮಾಡಿ ಜನರ ಪ್ರೀತಿಗೆ ಪಾತ್ರರಾದಾರೆಂದು ನಂಬಿದ್ದೇನೆ.

ವಿದೇಶ ವರ್ತಮಾನಗಳು.

ಕೋಟ್ಯಂತರ ದ್ರವ್ಯವನ್ನು ಸಂಪಾದನೆ ಮಾಡಿ, ಕೆಲವು [illegible] ಪ್ರಪಂಚದ ಗಲಭೆಗಳಲ್ಲಿ [illegible] ಪ್ರತ್ಯೇಕವಾಗಿರುತ್ತಿದ್ದ [illegible] ಕಳೆದ ವಾರ ಕಾಲವಾದನು [illegible] ಕೂಡಿಟ್ಟುಕೊಂಡಿದ್ದ ಬಹು ಅಪೂರ್ವವಾದ ಅನೇಕ ಚಿತ್ರ ಪಟಗಳನ್ನೂ ನಾಜೂಕಿನ ಪದಾರ್ಥಗಳನ್ನೂ ಪ್ರಜೆಗಳಿಗಾಗಿ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ

* * *

ವಿಲಾಯತಿಯಲ್ಲಿ ಪಾರ್ಲಿಮೆಂಟ್ ಮೆಂಬರುಗಳ [illegible] ಇನ್ನು ೧೦-೧೫ ದಿನಗಳಲ್ಲಿ ಪ್ರಾರಂಭವಾಗುತ್ತದೆ ಯೂನಿಯನಿಸ್ಟ್ ಮತ್ತು ಲಿಬರಲ್ ಎಂಬ ಎರಡು ಪಂಗಡದವರು ತಂತಮ್ಮ ಪಕ್ಷಗಳ ಮೆಂಬರುಗಳೇ ಚುನಾವಣೆಯ [illegible] ಉಪನ್ಯಾಸಗಳನ್ನು ಮಾಡುತ್ತಾ ಇದ್ದಾರೆ ಯೂನಿಯನಿಸ್ಟ್ ಪಂಗಡದವರು ವಿಲಾಯತಿಗೆ ಇತರ ಕಡೆಗಳಿಂದ [illegible] ಪದಾರ್ಥಗಳ ಮೇಲೆ ಸುಂಕವನ್ನು ಹಾಕಬೇಕೆಂದೂ, ಬ್ರಿಟಿಷ್ ರಾಜ್ಯಗಳಿಂದ ಬರುವ ಪದಾರ್ಥಗಳಿಗೆ [illegible] ಹೌಸ್ ಆಫ್ ಕಾಮನ್ಸ್ ಸಭೆಯವರಿಂದ [illegible] ಅಭಿಪ್ರಾಯಗಳನ್ನು ತಿರಸ್ಕಾರ ಮಾಡುವದಕ್ಕೆ ಹೌಸ್ ಆಫ್ ಲಾರ್ಡ್ಸ್ ಎಂಬ ಎರಡನೇ ಸಭೆಗೆ ಅನಾದಿಯಿಂದಲೂ ಇರುವ ಅಧಿಕಾರವನ್ನು ತಪ್ಪಿಸುವುದು ತರವಲ್ಲವೆಂತಲೂ ಹೇಳುತ್ತಾರೆ ಲಿಬರಲ್ ಪಂಗಡದವರೋ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳನ್ನುಳ್ಳ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮೆಂಬರುಗಳು [illegible] ಎರಡನೇ ಸಭೆಯವರು ತಿರಸ್ಕಾರ ಮಾಡದಂತೆ ಆ ಸಭೆಯನ್ನು [illegible] ಇಲ್ಲವೇ ಆ ಸಭೆಯನ್ನು ರೂಪಾಂತರ ಮಾಡಬೇಕು ಎಂತಲೂ, [illegible] ಆಹಾರ ಪದಾರ್ಥಗಳ [illegible] ಜೀವನಕ್ಕೆ ಕಷ್ಟವಾಗುತ್ತಾದ್ದರಿಂದ ಸುಂಕ ಹಾಕಕೂಡದೆಂತಲೂ, ಜಮೀನಿನ ಮೇಲೂ ಭಾಗ್ಯವಂತರ [illegible] ಜೀವನಕ್ಕೆ ಅಗತ್ಯವಲ್ಲದಂಥಾ ಪದಾರ್ಥಗಳ ಮೇಲೂ [illegible] ಹಾಕೋಣದರಿಂದ ರಾಜ್ಯದ ಆದಾಯವು ಹೆಚ್ಚುವುದಲ್ಲದೆ [illegible] ಕೊಡುವುದಕ್ಕೂ ಹಡಗಿನ ಸೈನ್ಯವನ್ನು ವೃದ್ಧಿಪಡಿಸಿ ಕೊಳ್ಳುವುದಕ್ಕೂ ಸಹಾಯವಾಗುತ್ತದೆಂತಲೂ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ ಈ ಎರಡು ಪಂಗಡಗಳಲ್ಲಿ ಯಾವ ಪಕ್ಷದವರು ಹೆಚ್ಚು ಸಂಖ್ಯೆಯಾಗಿ ಹೌಸ್ ಆಫ್ ಕಾಮನ್ಸ್ ಸಭೆಗೆ ಪ್ರಜೆಗಳಿಂದ ಚುನಾಯಿಸಲ್ಪಡುವರೋ ಆ ಪಕ್ಷದ ಮುಖಂಡರು ಮಂತ್ರಿ ಪದವಿಗೆ ಬಂದು ರಾಜ್ಯಭಾರ ಕಾರ್ಯಗಳನ್ನು ನಡಿಸುತ್ತಾರೆ ಈಗ ವಿಲಾಯತಿಯಲ್ಲಿ ಉಭಯ ಪಕ್ಷಗಳ ಮುಖಂಡರುಗಳೂ ಬಹು ವಿಶೇಷವಾಗಿ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ ಪ್ರಜೆಗಳಲ್ಲಿ ಚುನಾವಣೆಯ ಅಧಿಕಾರವಿರೋಣದರಿಂದ ಅವರು ಯಾವ ಪಕ್ಷದವರನ್ನು ಚುನಾಯಿಸುವುದು ಉತ್ತಮವೆಂಬುದಾಗಿ ಮುಖಂಡರುಗಳು ಹೇಳುವ ಉಪನ್ಯಾಸಗಳನ್ನು ಕೇಳುವುದರಲ್ಲಿ ಆತುರ ಪಡುವವರಾಗಿದ್ದಾರೆ

Printed and Published by the Rev. H GULLIFORD, Proprietor and Manager, Wesleyan Mission Press, Mysore. 23/12/1909.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸ೯ ೧೯೦೯ ನೇ ಇಸವಿ ಡಿಸೆಂಬರ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೩೧

ಸುಗಂಧಗಳು.

77-7

ಪ್ರಸಿದ್ಧವಾದ ಮೈಸೂರು ಅಗರ್ (ಊದು) ಬತ್ತಿ ೧ ಸೇರಿಗೆ ರೂ. ೨೧, ೫, ೩, ೨-೮-೦, ೧-೪-೦ ಬಿಲ್ಲೆಗಳು ೧ ತೊಲೆಗೆ ರೂ ೧ ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ ತಾಂಬೂಲ ವಿಹಾರಿಣಿ ೧ ಸೀಸೆಗೆ ೪ ಆಣೆ ಇತರ ವಿಧ ಸುಗಂಧ ದ್ರವ್ಯಗಳೂ ನಮ್ಮಲ್ಲಿ ದೊರೆಯುವವು ಒಂದು ಸಲ ತರಿಸಿಕೊಂಡು ನೋಡಿ.

ವಿಳಾಸ:—ಬಿ. ಎಲ್ ಉಪಾಧ್ಯಾಯ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ತಮ್ಮ ಏಜೆಂಟರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) ... ರೂ ೧—೦—೦
ಹರಸ ರವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾರ್ಸಲ್ ಸೇರಿ ರೂ ೧—೧೪—೦
" ೬ " " " ೦—೧೫—೦

ಚಂದಾದಾರರಾಗಕೆಕ್ಕವರು ತಮ್ಮ ಪೂರಾ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡ ಸಡೆ ಹಾಕಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪ್ರೋತ್ಸಾಹಕೋರಿ

90-1

ಹಾಸ್ಟ ಟೋಪಿಯು ಸುಪೀರಿಯರ್ ಉಲ್ ದಾರ 1 ಟೋಪಿ ದಾರಕ್ಕೆ 0-8-0 10 ಟೋಪಿವಾಗುವ ಬಂಡಲ್ 1 ಕ್ಕೆ ರೂ 1-7-0 ಬಣ್ಣದಲ್ಲಿ ಎಣ್ಣೆ ಕೆಂಪು ಕಪ್ಪು ಕಟ ಕೆಂಪು ಹಳದಿ ಗುಲಾಬಿ ಇತ್ಯಾದಿ ಮತ್ತು ಕಾಫಿ ಬಣ್ಣಗಳಲ್ಲಿ— ಹಾಸ್ಟ ಟೋಪಿ ಹೊಲಿಯುವ ಇಂಪೋರಟ ವಸ್ತ್ರದ ಉಲ್ ಪೌಂಡು 1 ಕ್ಕೆ 2-1-0, ಬಿಳಿ 1 ಕ್ಕೆ 0-10-0 ರಂಗಿನಲ್ಲಿ ಮಿಶ್ರ ಕೆಂಪು ಕಪ್ಪು ಮತ್ತು ತಿಳಿ ಕೆಂಪು ಮಿಶ್ರ ಉಲ್ ಪೌಂಡು 1 ಕ್ಕೆ 2-12-0 ಆರು ಟೋಪಿ ಆಗುವದು ಕೊಕ್ಕೆ ಸೂಜಿ 1 ಕ್ಕೆ 0-1-6 ಮತ್ತು 0-3-0 ಹಾಸ್ಟ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1 ಕ್ಕೆ ರೂ 1-12-0

ಹಾಸ್ಟ ಟೋಪಿಗಳು ಡಜನ್ 1 ಕ್ಕೆ ... ಮತ್ತು 13-0-0, ತರಹೇವಾರಿನ ರಂಗಿನಲ್ಲಿ ಕಸೂತಿಕೆಲಸದ ಉಲ್ದಾರಗಳು ಪೌಂಡು 1 ಕ್ಕೆ ರೂ 3-1-0

ಕೆಟಿಟೋ ಬಾಂ ಮತ್ತು ಶರದ ಪಾತಕ್ಕೆ 0-8-0 ದೊಡ್ಡವರ ಕಾಲುಚೀಲಗಳು ಜತೆ 0-4-0 ರಿಂದ 1-8-0 ಯುಳೀ ಮಕ್ಕಳ ಕಾಲುಚೀಲಗಳು 0-1-0 ಮತ್ತು 0-6-0 ದೊಡ್ಡವರ ಕಾಟನ್ ಬನಿಯನ್ 1 ಕ್ಕೆ 8 ಆಣೆಯಿಂದ 1-0-0 ದೊಡ್ಡವರ ಮುಸುಕಿನ ಟೋಪಿ 1 ಕ್ಕೆ 1-0-0 ಹಣಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1 ಕ್ಕೆ 0-2-0 ಉಲ್‌ದಾರದ ಪಾಟಾ ಪಾಕೆಟ್ 1 ಕ್ಕೆ 0-2-0 ಉಲ್ ದಾರದ ಕಮರ್‌ಬಂಧ್ 1 ಕ್ಕೆ 10 ಆಣೆಯಿಂದ 1-1-0 ಬಾಚಣಿಗೆಗಳು 1 ಕ್ಕೆ 0-1-0, 0-1-6 ರಿಂದ 0-4-0 ಪೌಡರಿನ ಕಡ್ಡಿ ಕೋಲಿ 1 ಕ್ಕೆ 0-2-0 ದಶಾಂಗ ಕೋಲಿ 1 ಕ್ಕೆ 0-1-0 ಪಿತಣಾ ದಬ್ಬಿ 1 ಕ್ಕೆ 0-1-0 ನಾಚು ಸರಪಣಿ 1 ಕ್ಕೆ ಆಣೆ 6 ರಿಂದ 0-12-0 ವರೆಗೆ ರಬ್ಬರ್ ಸ್ಟಾಂಪು ಶಾಯಿ ಬಾಟಲಿ 1 ಕ್ಕೆ 0-1-0 ಸ್ಪೆಷಲ್ ತಾಂಬೂಲಮಿತ್ರ 400 ಮಾತ್ರೆಗಳಿರುವ ಪಾಕೆಟ್ 1 ಕ್ಕೆ 0-3-0. ಮೆಂತ್ಯಾಲ್ ದಬ್ಬಿ 1 ಕ್ಕೆ 0-3-0 ಗಜಕರ್ಣದ ಮುಲಾಮು ದಬ್ಬಿ 1 ಕ್ಕೆ 0-3-0. ದೇಶಿ ಕೈವಸ್ತ್ರಗಳು ಡಜನ್ 1 ಕ್ಕೆ 1-0-0 ಲಿನನ್ ಕೈವಸ್ತ್ರಗಳು ಡಜನ್ 1 ಕ್ಕೆ 1-6-0 ಕಸ್ತೂರಿಮಾತ್ರೆ 200 ರ ಶೀಸೆ 1 ಕ್ಕೆ 0-1-0 ಕಾಮಿನಿಯ ತೈಲವು ಅನೇಕವಿಧ ತೈಲಗಳಲ್ಲಿ ಪಸಂದಾದದ್ದು ಶೀಸೆ 1 ಕ್ಕೆ 1-0-0 ಪರಿಮಳ ನಸ್ಯದಬ್ಬಿ 1 ಕ್ಕೆ 0-2-0 ದಂತಮಂಜನ ದಬ್ಬಿ 1 ಕ್ಕೆ 0-2-0 ಪೋಮಟಿ ಶೀಸೆ 1 ಕ್ಕೆ 0-5-0. ದಿಲ್‌ಬಹಾರ್ ಇದು ಅಮೂಲ್ಯವಾದ ಅತ್ತರ್ ಶೀಸೆ 1 ಕ್ಕೆ 1-8-0 ಕಾಮಿನಿ ಅತ್ತರ್ ಶೀಸೆ 1 ಕ್ಕೆ 1-8-0 ರೋಸ್ ಅತ್ತರ್ ಶೀಸೆ 1 ಕ್ಕೆ 3-0-0, ಇಂಗ್ಲಿಷ್ ಅಕ್ಷರದ ಪೆಟ್ಟಿಗೆ 1 ಕ್ಕೆ 0-10-0 ಯಿಂದ 3-0-0 ಬಿಳಿ ಪೋಸ್ಟುಕಾರ್ಡುಗಳು 100 ಕ್ಕೆ 0-3-0, ಹೂಲುಹಾಕಿದ ಲೆಟರ್ ಪೇಪರ್ ಪ್ಯಾಕೆಟ್ 1 ಕ್ಕೆ 0-4-0. ಇದಕ್ಕಾಗುವ ಕವರ್ 100 ಕ್ಕೆ 0-3-0 ಕಾಬೂಲ್ ದೇಶದ ಹಿಂಗು 12 ತೊಲೆ ದಬ್ಬಿ 1 ಕ್ಕೆ 0-1-0 ಕೆಂಪುನೂಲಿನಿಂದ ತಯಾರಿಸಿದ ಕಮರ್‌ಬಂದ್—0-1-0, 0-7-0 ಮತ್ತು 0-9-0 ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0-1-0.

1910 ನೇ ಡೈರಿ 1 ಕ್ಕೆ 0-2-0. ನಮಗೆ ಅಲ್ಪ ಕಮಿಷನ್ ಕೊಟ್ಟಲ್ಲಿ ಮಂಗಳೂರಲ್ಲಿ ದೊರಿಯುವ ಯಾವ ಸಾಮಾನು ಬೇಕಾದರೂ ಜವಳಿಯಿಂದ ಪಡೆದು ಕಳುಹಿಸುವೆವು. ವಿ. ಪಿ ಯಿಂದ ತರಿಸುವವರು ಟಪಾಲು ಖರ್ಚು ಜಾಸ್ತಿ ಕೊಡಬೇಕಾಗುವದು.

ನಮ್ಮ ವಿಳಾಸ.—ದಿ ಉಲ್ ಮಾರ್ಟ್,
ನಂ ೧, ಮಂಗಳೂರು, ದ. ಕ.

THE PLACE FOR HASSAN CAPS IS
HASSAN

ನಿಮ್ಮ ತಲೆಯ ಮೇಲಿರುವದೇನು ?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 52

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ಬಲ್ಲಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಮಾರಲ್ಪಡುತ್ತಿರುವ ಟೋಪಿಗಳ ದಾರವು ಅಷ್ಟು ಬಾಳುವದಿಲ್ಲ ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಉಪಯೋಗಿಸುವ ಟೋಪಿಗಳ ದಾರ ವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ
೧ ರೂ ೬ ಆ., ೧ ರೂ. ೪ ಆ.
ಚುಕ್ಕೆಯುಳ್ಳ ಟೋಪಿಗಳು ರೂ ೧-೪ ರೂ ೧-೧೨
ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೩
ಪಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ; ೧ ರೂ ೬ ಆ
ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ;

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ನೋಟೀಸ್.

91-1

ನಂಜನಗೂಡು ಮುನ್ಸಿಫ್ ಕೋರ್ಟ್.

ಸಮಸ್ತ ಜನಗಳಿಗೂ ಸಿವಿಲ್ ಪ್ರೊಸೀಜರ್ ಕೋಡ್ ೩೦ ನೆ ಪ್ರಕರಣದ ಮೇಲೆ ತಿಳಿಯಪಡಿಸುವದೇನಂದರೆ—

ಈ ಕೋರ್ಟಿನಲ್ಲಿ ಯಳಂದೂರು ತಾಲ್ಲೂಕು ಹೊನ್ನೂರು ಗ್ರಾಮದಲ್ಲಿರುವ ಕುರುಬರ ಜಾತಿ ಚಿಕ್ಕೀರೇಗೌಡನ ಮಗ ನಂಜೇಗೌಡ ಎಂಬುವನು ತನ್ನ ಕುಲದ ಯಜಮಾನನೆಂದು ಈ ಕೋರ್ಟ್ ೧೯೦೯—೧೦ ನೆ ಇಸವಿ ಒರಿಜಿನಲ್ ನಂಬರು ೪೨೦ ರಲ್ಲಿ ಡಿಟೋ ಊರಲ್ಲಿರುವ ಪರಿವಾರದ ಜಾತಿ ಹಾರುವ ವಗೈರೆ ಜನಗಳ ಮೇಲೆ ಕುರುಬರ ಜಾತಿಯವರು ಮುಡಕತೊರೆ ಜಾತ್ರೆಯಿಂದ ಬರುವಾಗ ೧೯—೨—೧೯೦೯ ರಲ್ಲಿ ಆಕ್ರಮಕೂಟ ಸೇರಿಕೊಂಡು ಅವರನ್ನು ದಾರಿ ಕಟ್ಟಿ ವರೆಂಬದಾಗಿಯೂ ಮತ್ತು ಪರಿವಾರದವರು ಮಾಡಿದ ಕೃತ್ಯದಿಂದ ಕುರುಬರ ಬೀರೇದೇವರು ಯಳಂದೂರು ತಾಲ್ಲೂಕು ಮ್ಯಾಜಿಸ್ಟ್ರೇಟರವರ ಕೋರ್ಟಿಗೆ ತೆಗೆದುಕೊಂಡು ಹೋಗಲ್ಪಟ್ಟು ಅಲ್ಲಿ ಸಿಕ್ಕಿದವರೆಲ್ಲಾ ಮುಟ್ಟಿ ವಿಗ್ರಹಕ್ಕೆ ಅಶುಚಿಯಾಯಿತೆಂತಲೂ ಅದನ್ನು ಶುದ್ಧಿ ಮಾಡುವದಕ್ಕೆ ೨೦೦ ರೂಪಾಯಿಗಳು ಖರ್ಚಾಯಿತೆಂತಲೂ ಇದನ್ನು ಡಿಟೋ ಪರಿವಾರದವರಿಂದ ಬರಮಾಡಿಸಿಕೊಡಬೇಕೆಂತಲೂ ದಾವಾ ತಂದಿರುತ್ತಾನೆ. ಈ ಮೇಲ್ಕಂಡ ದಾವಾದಲ್ಲಿ ವಾದಿಗಳಾಗಿ ಸೇರಲು ಸಂಬಂಧವಿರುವ ಸರ್ವರೂ ೧೯೧೦ ನೆ ಇಸವಿ ಫೆಬ್ರುವರಿ ಮಾಹೆ ೨ ನೆ ತಾರೀಖು ದಿವಿ ೧೧ ಗಂಟೆಗೆ ಕೋರ್ಟ್ ರೂಬರೂಬು ಬಂದು ಮನವೆ ಮಾಡಿಕೊಳ್ಳತಕ್ಕದ್ದು. ಹಾಗೆ ಬಾರದಿದ್ದರೆ ಡಿಟೋ ನಂಜೇಗೌಡನ ಹೆಸರಿನಿಂದ ದಾವಾ ನಡಿಸಲ್ಪಡುತ್ತೆ. ನಂತರ ಬರುವ ತಕರಾರುಗಳನ್ನು ಅಂಗೀಕರಿಸುವದಿಲ್ಲವೆಂದು ಇದರಿಂದ ತಿಳಿಯಪಡಿಸಿರುತ್ತೆ

D N RAMA RAO,
Munsiff.

೧೯೧೦ ನೇ ಇಸವಿ ಕ್ಯಾಲೆಂಡರುಗಳ ಬಹುಮಾನ

82-4

ಡಿಸೆಂಬರ್ ೩೧ ರೊಳಗೆ ಅಷ್ಟರೊಳಗೆ ನಮಗೆ ಕಾಲಾಕೆ ಕಾರ್ಡಿನಲ್ಲಿ ವಿಳಾಸವನ್ನು ಬರೆದುಕಳುಹಿಸತಕ್ಕವರಿಗೆ ಒಂದು ಸೊಗಸಾದ ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ ವಿಳಾಸ:—
ಮ್ಯಾನೇಜರ್, ಚಂದ್ರೋದಯ ಆಫೀಸು, ಸಾಹುಕಾರಪೇಟೆ, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

26 46

೧. ಬೋಳಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಅವಳದ ಭಸ್ಮ, ಚಿನ್ನದ ರೇಖು. ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ದೌರ್ಬಲ್ಯ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿವಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಚಳು ಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪಟ್ಟಿ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಮೈಸೂರು ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರವರ ಆಫೀಸ್.

ಬೆಂಗಳೂರು—ತಾರೀಖು ೧೧ ನೇ ಡಿಸೆಂಬರ್ ೧೯೦೯.

ಇಸ್ತಿಹಾರ್‌ನಾಮಾ.

85-3

ಇದರಿಂದ ತಿಳಿಯಪಡಿಸುವದೇನಂದರೆ —

1910 ನೇ ಜನವರಿ ಲಾಗಾಯಿತು ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ಮೊದಲನೆ ವರುಷ 8 ರೂಪಾಯಿಯೂ, ಎರಡನೆ ವರುಷ 10 ರೂಪಾಯಿಯೂ ಮುಂದಿನ ಎರಡು ವರುಷಗಳು 12 ರೂಪಾಯಿನಂತೆಯೂ ಮಾಹೆಯಾನಾ ಐದು (5) ವಿದ್ಯಾರ್ಥಿ ವೇತನಗಳನ್ನು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹಾದೂರ್ರವರ ಗವರ್ನಮೆಂಟಿನವರು ಕೊಡುತ್ತಾರೆ.

ವಿದ್ಯಾರ್ಥಿಗಳು ಸಂಸ್ಕೃತವನ್ನು ತಿಳಿದವರಾಗಿ ಕಾವ್ಯದ ಐದನೇ ತರಗತಿಯವರೆಗೆ ಓದಿದವರಾಗಿರಬೇಕು. ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯು ಪಾಸ ತೇರ್ಗಡೆಯಾದವರಾಗಿಯೂ ಅಥವಾ ಆ ತರಗತಿ ವರಗೆ ಓದಿದವರಾಗಿಯಾದರೂ ಇರಬೇಕು.

ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸುವದಕ್ಕೆ ಮುಂಚೆ 1910 ನೇ ಇಸವಿ ಜನವರಿ ತಾರೀಖು 10 ರಲ್ಲಿ ಮೈಸೂರು ಆಯುರ್ವೇದಿಕ ಕಾಲೇಜಿನಲ್ಲಿ ಪ್ರವೇಶ ಪರೀಕ್ಷೆಯೊಂದು ಮಾಡಲ್ಪಡುತ್ತೆ.

ಆ ದಿನ ಪ್ರಾತಃಕಾಲ 10 ಘಂಟೆಯಿಂದ ಮಧ್ಯಾಹ್ನ 1 ಘಂಟೆ ವರೆಗೆ ಇಂಗ್ಲೀಷಿನಲ್ಲಿ ಒಂದು ಪ್ರಶ್ನಾ ಪತ್ರವು ಮತ್ತು ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರೆಗೆ ಸಂಸ್ಕೃತದಲ್ಲಿ ಒಂದು ಪ್ರಶ್ನಾ ಪತ್ರವೂ ಕೊಡಲ್ಪಡುತ್ತೆ.

ಪ್ರವೇಶ ಪರೀಕ್ಷೆಗೋಸ್ಕರ ಬರತಕ್ಕ ಅರ್ಜಿಗಳು ಇದರಡಿ ರುಜುಮಾಡಿರುವವರ ಹೆಸರಿಗೆ 1910 ನೇ ಇಸವಿ ಜನವರಿ 5 ನೇ ತಾರೀಖಿನ ಒಳಗೆ ಕಳುಹಿಸಲ್ಪಡಬೇಕು.

(ಬೈ ಆರ್ಡರ್)
(ಸೈನ್) ಎ. ಸುಬ್ರಹ್ಮಣ್ಯ ಐಯರವರು,
ಮುಜರಾಯಿ ಸೂಪರಿನ್‌ಟೆಂಡೆಂಟ್ ಮತ್ತು ಸೆಕ್ರೆಟರಿ,
ಆಯುರ್ವೇದಿಕ್ ಕಾಲೇಜ್ ಕಮಿಟಿ.

ಕ್ಲೆಮೆಂಟರ ಪ್ಯಾಟೆಂಟ್ ಬಾಂ ತೈಲವು.

47 52

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಸಾರ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲ ಅದನ್ನು ... ಹತ್ತಿರ ಇಟ್ಟುಕೊಂಡು ಹೇಳುವರು. ಈ ಅಮೋಘವಾದ ತೈಲವು ಸಾಕಷ್ಟು ಮಾರಾಟವನ್ನು ಹೊಂದಿ ಅದರ ಹುಟ್ಟಿನ ... ಆಗುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ಆಣೆ ೨ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ... ಪ್ಯಾಕಿಂಗ್ ಖರ್ಚು ವಸೂಲು ಮಾಡಲಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಕನ್ನಯ್ಯಶೆಟ್ಟಿ ... ಕಂಪೆನಿ ತುಮಕೂರು ಮತ್ತು

ಎಸ್. ಪೀಟರ್ಸ್,

೩೭, ವೇಪಮುಲಪಿಳ್ಳೆ ಬೀದಿ. ವೇಪೇರಿ, ಮದರಾಸ್.

ಸ್ವಸ್ಥವಾಗಿರುವಿಕೆಗೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನ ಛಳುಕು, ಸದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವದು, ಬಹಳ ಬಾಯಾರಿಕೆ, ಬಳಲಿಕೆ, ಎದೆ ಕಲ್ಲೆನಿಸುವದು, ತಲೆನೋವು, ಗಾಬರಿ, ಕಣ್ಣು ಮಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ನಿದ್ರೆ, ನಿಶ್ಶಕ್ತಿ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಪ್ರಮೇಹ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವು ಕ್ಷಯಿಸಿಹೋಗುವದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲ ಉಂಟಾಗುವವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [67-18]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ ೩—೧—೦, ಅಥವಾ ೬ ಬುರಿಗೆಗಳಿಗೆ ರೂ ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೨೦, ಪಿ. ಒ. ಬಾಕ್ಸ್, ಬೊಂಬಾಯಿ—ಇವರಲ್ಲಿ ದೊರೆಯುವುದು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-44]

ತಲೆನೋವು, ಗಂಟು ಊದುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು, ಅರ್ಧಾಂಗವಾಯು, ಎದೆಶೀತ, ಘಾಯ, ದಮ್ಮು, ಇತ್ಯಾದಿ

ಇದರ ವಿಷಯವಾಗಿ ಸರ್ವರೂ ಕೊಂಡಾಡುತ್ತಾರೆ. ಬಾಟ್ಲು ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತ್ತು ೦-೬-೦. ೧೨ ಡಬ್ಬಿಗಳಿಗೆ ೪-೦-೦

ಅಶ್ವಾಮೃತ	೩-೦-೦
ಬೇರುಕಡತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದು ಬಗೆಗೆ	೦-೮-೦
ಜುರಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಬಚ್ಚು ಮುಲಾಮು—ಮಕ್ಕಳ ಬಚ್ಚಿಗೆ	೦-೩-೦
ಕೇಶವರ್ಧನ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಅಸ್ತಮ ರೋಗಕ್ಕೆ	೦-೮-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ. ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



4-52

ಈ ಹೊಟ್ಟೆಯ ನೋವು, ಬರೀ ಬೇದಿಯಾಗುವುದು ಆಮಶಂಕೆ. ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ವಿಧ ರೋಗಗಳು— ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿ ಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೩ ರೂಪಾಯಿ.

ದನಗಳ ಪ್ರದರ್ಶನವು.

ನೋಟೀಸು.

87 2

೧೯೧೦ನೇ ಜನವರಿ ತಾರೀಖು ೬ ಮತ್ತು ೭ನೇ ಗುರುವಾರ ಶುಕ್ರವಾರ ದಿವಸಗಳಲ್ಲಿ ಹಾಸನದಲ್ಲಿ ದನಗಳ ಪ್ರದರ್ಶನ ನಡೆಯುತ್ತಿಂತ ಇದರ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಪ್ರದರ್ಶನದಲ್ಲಿ ಉತ್ತಮವಾದ ಸಮಸ್ತ ಜಾತಿ ದನಗಳಿಗೆ ಮತ್ತು ಆಡು ಕುರಿಗಳಿಗೂ ಬಹುಮಾನಗಳು ದೊರಕುತ್ತವೆ. ದನಗಳನ್ನು ಪ್ರದರ್ಶನಕ್ಕೆ ಜನವರಿ ೫ನೇ ತಾರೀಖಿನೊತ್ತಿಗೆ ಕಳುಹಿಸಿಕೊಡುವ ಏರ್ಪಾಡಿಡಬೇಕು.

ಹೆಚ್ಚು ವಿಷಯಗಳನ್ನು ಹಾಸನದ ದನಗಳ ಪ್ರದರ್ಶನದ ಕಮಿಟಿ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

(ಸೈನ್.) ಪಿ. ಆರ್. ಡಬ್ಲ್ಯು ವೆದರಾಲ್,
ಪ್ರೆಸಿಡೆಂಟ್,
ಹಾಸನದ ದನಗಳ ಪ್ರದರ್ಶನದ ಕಮಿಟಿ.

ತಾ॥ ೧೪ನೇ ಡಿಸೆಂಬರ್ ೧೯೦೯. ಹಾಸನ

ಜ್ವರಹರಿ.

18 48

ಇದು ಸಾಧಾರಣ ಜ್ವರ, ಹಳೇಜ್ವರ, ಮರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಬಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನಾವು ಕೆಲವು ತಿಂಗಳ ಹಿಂದೆ ತರಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಅಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೩—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುತದು.

ಅಮೃತ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಅಮೃತಕರ್ಪೂರವನ್ನು ನಾನೂ ನನ್ನ ಹಾಟೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಆಮಶಂಕೆ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅದಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು.

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 6-52

(ಸ್ಕಾಟ್ಸ್ ಇಮಲ್ಷನ್)

ಎಲ್ಲಾ ಔಷಧಕಾರರುಗಳನ್ನು ಹೊಗಳಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದು.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್. ಲಿಮಿಟೆಡ್.
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ವಿಶಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪುಸ್ತಕಗಳ ಕ್ರಯಪಟ್ಟಿ ತಯಾರಾಗಿದೆ.

ಮೇಲ್ಕಂಡ ಪುಸ್ತಕಗಳ ಕ್ರಯಪಟ್ಟಿಯನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತೇವೆ. ಇದನ್ನು ತರಿಸಿ ಎಲ್ಲರೂ ಓದಬೇಕು.

ಒಂದು ಹೊಸ ಪುಸ್ತಕ! ಒಂದು ಹೊಸ ಪುಸ್ತಕ!!

ಜಾನ್ ವೆಸ್ಲಿ ಎಂಬ ಪ್ರಸಿದ್ಧಪುರುಷನ ಜೀವಮಾನ ಚರಿತ್ರೆ —(1?5 ಪುಟಗಳು, ಸೊಗಸಾದ ಬಟ್ಟೆ ಬೈಂಡು, ಕ್ರಯ ಎಂಟು ಆಣೆ) ಒಂದೂವರೆ ಶತಮಾನಗಳ ಹಿಂದೆ ಜಾನ್ ವೆಸ್ಲಿ ಎಂಬ ಮಹಾತ್ಮನು ಬದುಕಿದ್ದನು. ಈತನು ಆಂಗ್ಲೇಯ ಮಹಾತ್ಮರಲ್ಲಿ ಪ್ರಸಿದ್ಧನಾದವನೆಂಬುದರಲ್ಲಿ ಸಂಶಯವಿಲ್ಲ. ಈತನು ತನ್ನ ಅದ್ಭುತವಾದ ಉಪನ್ಯಾಸಗಳಿಂದಲೂ ಬರವಣಿಗೆಗಳಿಂದಲೂ ಇಂಗ್ಲಂಡ್ ದೇಶವು ಹೋಗುವುದಕ್ಕಿದ್ದ ನಾಶವನ್ನು ತಪ್ಪಿಸಿದನು. ಈ ಮಹಾಪುರುಷನ ಹಿಂಬಾಲಕರು ಈಗ್ಗೆ ಲೋಕದ ನಾಲ್ಕಾ ಕಡೆಗಳಲ್ಲಿ ವಾಸವಾಗಿರುತ್ತಾರೆ. ಜಾನ್ ವೆಸ್ಲಿಯು ಬಹು ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದನು. ಈತನ ಜೀವಮಾನ ಚರಿತ್ರೆಯನ್ನು ಓದುವಾಗ್ಗೆ ಹದಿನೆಂಟನೇ ಶತಮಾನದಲ್ಲಿ ಇಂಗ್ಲಂಡ್ ದೇಶವಿದ್ದ ಸ್ಥಿತಿಯು ನಮಗೆ ಪರಿಷ್ಕಾರವಾಗಿ ಗೊತ್ತಾಗುವುದು.

ಮೈಸೂರು ಡ್ರಾಯಿಂಗ್ ಪುಸ್ತಕಗಳು

ಪ್ರತಿಯೊಂದಕ್ಕೆ 0—1—0

ಎಕ್ಸರ್‌ಸೈಜ್ ಪುಸ್ತಕಗಳು

(40 ಹಾಳೆ) ಪ್ರತಿಯೊಂದಕ್ಕೆ	0—0—6
(80 ಹಾಳೆ)	0—1—0
(100 ಹಾಳೆ)	0—2—0

ಬೇರೆ ಬೇರೆ ಪುಸ್ತಕಗಳೂ ಸಾಮಾನುಗಳೂ ಬೇಕಾಗುವ ಪಕ್ಷದಲ್ಲಿ ಪುಸ್ತಕದ ಕ್ರಯಪಟ್ಟಿಯನ್ನು ನೋಡಿ ಜಾಗ್ರತೆ ಬರೆದು ತರಿಸಿಕೊಳ್ಳಿ. [10-52]

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸಂಜೀವಿನೀ ಔಷಧಾಲಯ, ಮೈಸೂರು.

28 47

ವಿ. ಎಸ್. ಕುಮಾರಯ್ಯನವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ತಲೆನೋವು, ನಿದ್ರಾಭಂಗ, ಸನ್ನಿಪಾತ, ರಕ್ತದೋಷ, ಚರ್ಮರೋಗಾದಿ ಜಾಡ್ಯಗಳು, ವಾಯುರೋಗಗಳು, ಶೀತಜ್ವರ, ಕ್ಷಯ, ಅಜೀರ್ಣ, ಕಫರೋಗ, ನೆತ್ತಿಯುರಿ, ತಲೆಬಾರ, ಮಲಬದ್ಧ, ಬುದ್ಧಿಕ್ಷಯ, ಮುಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಸೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಸಾಕ್ಷಾತ್ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕೆ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ನವೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಆರ್ಡರಿಗೆ ಲೆಟರ್ ಇಷ್ಟು ಬರೆಯಿರಿ

ವಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

3—12—1909 ರಿಂದ 10—12—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	7	7	0	0
ಮೈಸೂರು ,,	21	16	0	0
ಬೆಂಗಳೂರು ಡಿಸ್ಟ್ರಿಕ್ಟು	19	16	0	1
ಮೈಸೂರು ,,	51	34	60	40
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	2	0	0	0
ಚಿತ್ರದುರ್ಗ ,,	1	1	45	25
ಕಡೂರ್ ,,	5	2	0	0
ಶಿವಮೊಗ್ಗ ,,	5	6	0	0
ಜುಮ್ಲಾ	111	83	105	66

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ ರೂ	೧೨-೦-೦	೧೬-೦-೦
ಕೆಂಬೂತಿ ಅಕ್ಕಿ ಅವಲ್	೧೩-೦-೦	೧೩-೦-೦
,, ದುಯಂ	೧೨-೮-೦	೧೨-೮-೦
ಆಂಧ್ರಾಣಿ ಅಕ್ಕಿ	೧೩-೦-೦	೧೪-೦-೦
ಸಣ್ಣಕ್ಕಿ ಅವಲ್	೧೫-೦-೦	೧೬-೦-೦
,, ದುಯಂ	೧೩-೮-೦	೧೫-೦-೦
ಕೊಗರೀ ಬೇಳೆ ಪಲ್ಲ ೧ ಕ್ಕೆ	೧೩-೦-೦	೧೪-೮-೦
,, ದುಯಂ	೧೨-೮-೦	೧೪-೦-೦
ಕೈರ್ ರಾಗಿ ಪಲ್ಲ ೧ ಕ್ಕೆ	೮-೦-೦	೮-೮-೦
ಕಾರ್ರಾಗಿ	೭-೮-೦	೮-೦-೦
ಜೋಳ	೭-೮-೦	೮-೦-೦
ತಲಸಂದೆ ಪಲ್ಲ ೧ ಕ್ಕೆ	೧೦-೦-೦	೧೧-೦-೦
ಬೀಳೀ ಅವರೆ	೧೪-೦-೦	೧೪-೦-೦
ಹೆಸರು	೧೦-೦-೦	೧೦-೧೨-೦
ಉದ್ದು	೧೩-೮-೦	೧೧-೮-೦
ಕಡಲೆ	೧೨-೮-೦	೧೨-೦-೦
ಎಳ್ಳು ಸೇ ೧೨೭ ಕ್ಕೆ	೧೫-೦-೦	೧೪-೦-೦
ಹುರುಳಿ	೮-೮-೦	೧೧-೦-೦
ಹರಳು ೧೨೭ ಸೇರಿಗೆ	೧೪-೦-೦	೧೨-೦-೦
ಸೀಗೇಕಾಯಿ ಮಣ ೧ ಕ್ಕೆ	೨-೦-೦	೧-೪-೦
ಮೆಣಸಿನಕಾಯಿ	೪-೮-೦	೩-೮-೦
,, ದುಯಂ	೪-೪-೦	೩-೦-೦
ಬೆಲ್ಲ ದೊಡ್ಡ ಅಚ್ಚು	೮-೮-೦	ಮ ೩-೦-೦
ಒಳ್ಳೆ ಮಣ ೧ ಕ್ಕೆ	೪-೨-೦	೪-೪-೦
ಹುಣಿಸೆ ,,	೫-೮-೦	೪-೮-೦
ಕೊತ್ತುಂಬರಿ ಪಲ್ಲ ೧ ಕ್ಕೆ	೧೦-೦-೦	೯-೮-೦
ಉಪ್ಪು ,,	೬-೪-೦	೫-೧೨-೦
ಹುರುಳೀ ಹಿಟ್ಟು	೨-೦-೦	೧-೧೨-೦
,, ಹಳೇದು	೧-೮-೦	೧-೮-೦
ತುಪ್ಪ ಮಣ ೧ ಕ್ಕೆ	೧೬-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೫-೮-೦
ಅಡಿಕೆಕಾಯಿ ಮಣ ೧ ಕ್ಕೆ	೧-೦-೦	೦-೧೨-೦
ಆಲೂಗಡ್ಡೆ ಕಾಯಿ ಮಣ ೧ ಕ್ಕೆ	೧-೦-೦	೦-೧೧-೦
ಚಿನ್ನ (ಬಾರ್) ತೊಲ	೧೫-೯-೦	೧೫-೪-೦
,, ,, ಪವನು	೧೬-೦-೦	೧೫-೯-೦
,, ,, ಗಟ್ಟಿ ತೊಲ ೧ ಕ್ಕೆ	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೩-೦-೦

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಮಾರ್ಗಶಿರ ಬಹುಳ ಪಂಚಮಿ, ಶುಕ್ರವಾರದಿಂದ ಮಾರ್ಗಶಿರ ಬಹುಳ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಡಿಸೆಂಬರ್ ಮತ್ತು ೧೯೧೦ ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ಶೇಷ ಧನು ಮಾಸ
31	ಶುಕ್ರ	ಪಂಚಮಿ	48-58	ಮ	41-46	17
1	ಶನಿವಾ	ಷಷ್ಠಿ	52-24	ಪು	36-1	18
2	ರವಿವಾ	ಸಪ್ತಮಿ	56-58	ಉ	41-32	19
3	ಸೋಮ †	ಅಷ್ಟಮಿ	60-0	ಹ	48-16	20
4	ಕುಜ	ಅಷ್ಟಮಿ	2-10	ಚಿ	51-39	21
5	ಬುಧ	ನವಮಿ	7-32	ಸ್ವಾ	60-0	22
6	ಗುರು ‡	ದಶಮಿ	12-52	ಸ್ವಾ	0-24	23

† ಕಾಲಭೈರವಾಷ್ಟಮಿ, ಕೊರವಲೋಕ ಪ್ರಾರಂಭ

‡ ಏಕಾದಶೀ ತಿಥಿ, ಮಾರ್ಗಶಿರ ಲಕ್ಷ್ಮೀವ್ರತ

ವ್ಯವಸಾಯ ವಿಷಯಗಳು

ಗಂಜಲದಲ್ಲಿ ನೆನದ ಮಣ್ಣನ್ನು ಗೊಬ್ಬರವಾಗಿ ಉಪಯೋಗಿಸುವ ಕ್ರಮ

ಈ ಕ್ರಮದಲ್ಲಿ ದನಗಳನ್ನು ಕಟ್ಟುವಕಡೆ ನೆಲದ ಮೇಲೆ ಪುಡಿಮಣ್ಣನ್ನು ಸುಮಾರು ೪—೬ ಅಂಗುಲ ದಪ್ಪಕ್ಕೆ ಹರಡಬೇಕು ದನಗಳು ಹುಯ್ಯುವ ಗಂಜಲದಿಂದ ಈ ಮಣ್ಣು ನೆನೆಯುವದು ಮಣ್ಣು ಗಟ್ಟಿಯಾಗಿ ಪುಡಿಪುಡಿಯಾಗಿರುವದಕ್ಕಾಗಿ ಆಗಾಗ್ಗೆ ಕೆದರುತ್ತಿರಬೇಕು ಒಂದು ತಿಂಗಳು ಅಥವಾ ೬ ವಾರಕ್ಕೊಂದಾವರ್ತಿ ಈ ಮಣ್ಣನ್ನು ತೆಗೆದುಹಾಕಿ ಹೊಸ ಮಣ್ಣನ್ನು ಹಾಕಬೇಕು ಹಳೇ ಮಣ್ಣನ್ನು ಗುಂಡಿಗಳಲ್ಲಿ ಕೂಡುಹಾಕಬಹುದು, ಇಲ್ಲವೆ ಜಮೀನುಗಳಿಗೆ ಹಾಕಿ ಉತ್ತುಬಿಡಬಹುದು ಈ ಕ್ರಮವನ್ನು ಸರ್ಕಾರಿ ಫಾರಂಯಾನೆ ಮಾದರಿ ಹೊಲಗಳಲ್ಲಿ ಅನುಸರಿಸಿ ನೋಡಿದ್ದರಲ್ಲಿ ಖಾಸೆ ಅನುಕೂಲ ಕಂಡುಬಂದಿದೆ ಇದೇ ಮೇರೆ ಕೆಲವು ಮುಖಂಡ ಜಮೀನುದಾರರು ಮತ್ತು ರೈತರು ಸಹ ಅಭ್ಯಾಸಮಾಡಿ ತುಂಬಾ ಪ್ರಯೋಜನ ಹೊಂದಿರುತ್ತಾರೆ ಬೆಳ್ಳೂರು ಡಿಸ್ಟ್ರಿಕ್ಟಿನ ಒಬ್ಬ ಜಮೀನುದಾರರು ಸುಮಾರು ೧೪ ಗುಂಟೆ ತರಿ ಜಮೀನಿಗೆ ಮಳೆಗಳು ಪ್ರಾರಂಭವಾಗುತ್ತಲೆ ೫—೬ ಗಾಡಿ ಗಂಜಲದ ಮಣ್ಣನ್ನು ಹಾಕಿ ಬತ್ತವನ್ನು ನಾಟಿಮಾಡಿ ಇದು ಸ್ವಲ್ಪ ಸಾವಕಾಶವಾಗಿ ಕಟಾವಿಗೆ ಬರುವ ಜಾತಿಯ ಬತ್ತವಾದುದರಿಂದ ಪೈರಿಗೆ ಎರಡುಸಲ ನೀರು ಕಟ್ಟಿದರು ನಾಟಿ ಹಾಕಿದ ಕೂಡಲೆ ಭಾರಿ ಮಳೆ ಬಂದು ಪೈರು ಸ್ವಲ್ಪ ಹಲಾಕಾಯಿತು ತದನಂತರ ಹುಳುಬಿದ್ದು ಕೊಂಚ ಕೆಟ್ಟುಹೋಯಿತು ಆದಾಗ್ಯೂ ಎಕರೆಗೆ ೭೧೫ ಸೇರಿನಂತೆ ಫಸಲು ಉತ್ಪತ್ತಿಯಾಯಿತು ಇದೇ ತರದ ಜಮೀನಿಗೆ ದನದ ಸಗಣಿ ಮತ್ತು ಇತರ ಕಸ ಹಾಕಿ ಪೈರು ಮಾಡಿದ್ದಕ್ಕೆ ಉತ್ಪತ್ತಿಯು ಮೇಲೆ ಕಂಡ ಜಮೀನಿನಲ್ಲಿ ಆದದ್ದಕ್ಕಿಂತ ಸ್ವಲ್ಪ ಹೆಚ್ಚುಕಡಮೆ ಅರ್ಧದಷ್ಟು ಕಮ್ಮಿಯಾಗಿ ಆಗಿರುತ್ತದೆ

ಮತ್ತೊಬ್ಬ ಜಮೀನುದಾರರು ಹತ್ತಿ ಹೊಲಕ್ಕೆ ಈ ಮಣ್ಣು ಗೊಬ್ಬರವನ್ನು ಹಾಕಿ ಪರೀಕ್ಷಿಸಿದಂತೆ ಸುಮಾರು ೫೦ ಗಾಡಿ ಮಣ್ಣನ್ನು ದನದ ಕೊಟ್ಟಿಗೆಯಲ್ಲಿ ಹಾಸಿ ಇದು ಗಟ್ಟಿಯಾಗದಹಾಗೆ ಪ್ರತಿದಿನವೂ ಬೇಗ್ಗೆ ಕೆದರುತ್ತಿದ್ದರು ಹೀಗೆ ಮಣ್ಣನ್ನು ಸುಮಾರು ೬ ತಿಂಗಳವರೆಗೂ ಕೊಟ್ಟಿಗೆಯಲ್ಲಿ ಬಿಟ್ಟದ್ದು ಅನಂತರ ಬೇಸಾಯಕಾಲದಲ್ಲಿ ಹೊಲಕ್ಕೆ ಸಾಗಿಸಿದರು ಪೈರು ಬಹಳ ಚೆನ್ನಾಗಿ ಬಂದಿತ್ತಂತೆ. ಆದರೆ ಮುಂದೆ ಇಬ್ಬನಿ ಬಿದ್ದು ಕಡೇಸಲಕ್ಕೆ ಬಹಳ ಕೊಂಚ ಹತ್ತಿ ಸಿಕ್ಕಿತು ಆದಕಾರಣ ಎಕರೆಗೆ ೪೦೦ ಪೌಂಡು ಹತ್ತಿ ಉತ್ಪತ್ತಿಯಾಯಿತು ಹೀಗೆ ಇಬ್ಬನಿ ಬೀಳದೇ ಇದ್ದಿದ್ದರೆ ಇದಕ್ಕೆ ಎರಡರಷ್ಟು ಹುಟ್ಟುವಳಿಯಾಗುತ್ತಿತ್ತಂತೆ ಇದೇತರದ ಮತ್ತೊಂದು ತಾಕು ಜಮೀನಿಗೆ ೧೫—೨೦ ಗಾಡಿ ದನದ ಸಗಣಿ ಹಾಕಿತ್ತು ಇದೂ ಕೂಡ ಇಬ್ಬನಿ ಹೊಡೆತಕ್ಕೆ ಸಿಕ್ಕಿತು ಇದರಲ್ಲಿ ೩೦೦ ಪೌಂಡು ಹತ್ತಿ ಮಾತ್ರ ಹುಟ್ಟುವಳಿಯಾಯಿತು

ಇನ್ನೊಬ್ಬರು ಈ ಕ್ರಮವನ್ನನುಸರಿಸಿ ಗೋಧಿ ಪೈರನ್ನು ಮಾಡಿದರು ಒಂದು ಎಕರೆಗೆ ೨೦ ಗಾಡಿ ಗೊಬ್ಬರದ ಮಣ್ಣನ್ನು ಹಾಕಿ ಪೈರಿಗೆ ನಾಲ್ಕಾವರ್ತಿ ನೀರು ಕಟ್ಟಿದ್ದರಂತೆ ಹುಟ್ಟುವಳಿ ಸುಮಾರು ೭೧೦ ಸೇರು ಆಯಿತು. ಬೇರೊಂದು ತಾಕಿಗೆ ಎಕರೆಗೆ ೩೨ ಗಾಡಿಯಂತೆ ಕೊಳೆತ ಸೊಪ್ಪನ್ನು ಹಾಕಿ ಪೈರು ಮಾಡಿದ್ದಕ್ಕೆ ಇಷ್ಟೇ ಹುಟ್ಟುವಳಿಯಾಯಿತಂತೆ

ಈ ಗೊಬ್ಬರವನ್ನು ಮಳೆಗಳು ಶುರುವಾಗುವದನ್ನು ನೋಡಿಕೊಂಡು ಜಮೀನಿಗೆ ಹಾಕಬೇಕು ಇಲ್ಲದೆ ಮುಂದಾಗಿಯೇ ಹಾಕಿದರೆ ಗೊಬ್ಬರದ ಸಾರ ಒಣಗಿ ಹೋಗುತ್ತದೆ. ಮಳೆ ಬಿದ್ದರೆ ಗೊಬ್ಬರದ ಮಣ್ಣೆಲ್ಲಾ ಕೊಚ್ಚಿಹೋಗುವದರಿಂದ ಇಳಿಜಾರಾಗಿರುವ ಭೂಮಿಯು ಅಷ್ಟು ಒಳ್ಳೇದಲ್ಲ ಕುಂಬಳಕಾಯಿ, ಸೋರೆಕಾಯಿ, ಪಡವಲಕಾಯಿ, ಮತ್ತು ಕೋಸುಗಡ್ಡೆ ಇತ್ಯಾದಿ ತರಕಾರಿಗಳಿಗೆ ಈ ಗೊಬ್ಬರವನ್ನು ಹಾಕಿದರೆ ಕಾಯಿಗಳು ಬಹಳ ಗಾತ್ರವಾಗಿ ಬೆಳೆಯುತ್ತವೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಗುರುವಾರ ಬೆಳಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್‌ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟೆಯ ಮೀಟಿಂಗನ್ನು ನಡಿಸಿದರು ಮೊದಲು ನವಂಬರ್ ಮಾಹೆಯ ಜಮಾ ಖರ್ಚು ಲೆಖ್ಖಗಳು ಓದಲ್ಪಟ್ಟವು. ಆ ತಿಂಗಳಲ್ಲಿ ಜನನ ೭೨ ; ಮರಣ—ಪ್ಲೇಗ್ ೨೧೫, ಜ್ವರ ೩೨, ಇತರ ಕಾರಣಗಳು ೨೦೧, ಒಟ್ಟು ೪೪೮ ಎಂದು ತಿಳಿಯಿತು.

ಆಡಿಟರುಗಳ ರಿಪೋರ್ಟನ್ನು ಓದಿಸಿದರು ಅದರಿಂದ ಕೆಲವು ಬಾಬುಗಳ ಉತ್ಪತ್ತಿಯು ಸ್ವಲ್ಪ ಹೆಚ್ಚಾಗಿದ್ದರೂ ಒಟ್ಟು ಉತ್ಪತ್ತಿಯಲ್ಲಿ ಹೋದ ವರುಷಕ್ಕಿಂತ ೧,೩೫೦ ರೂಪಾಯಿಯ ವರೆಗೆ ಕಡಮೆಯಾಗಿದೆ ಎಂದು ಗೊತ್ತಾಯಿತು. ಪೈಗಸ್ತಿಯವರನ್ನು ಆಗಾಗ್ಗೆ ಬದಲಾಯಿಸುತ್ತಿದ್ದರೆ ಅನುಕೂಲವೆಂದು ಮೆ॥ ಶ್ರೀಕಂಠಯ್ಯನವರು ಸೂಚಿಸಿದರು ಪ್ರೆಸಿಡೆಂಟರು ಆಗಿತ ಮಾಡಬಹುದೆಂದು ವೈಸ್ ಪ್ರೆಸಿಡೆಂಟರಿಗೆ ತಿಳಿಸಿದರು ಆರೋಗ್ಯ (ಹೆಲ್ತ್) ಇಲಾಖೆಯವರು ಸ್ಕಾವೆಂಜಿಂಗ್ ಸೆಸ್ (ಹಿತ್ತಲು ಮನೆಗಳನ್ನು ಗುಡಿಸುವ ಕಂದಾಯ) ಚಿಟ್ಟಿಗಳನ್ನು ಅಕ್ಟೋಬರ, ನವಂಬರ್ ತಿಂಗಳಲ್ಲಿ ಕೊಟ್ಟಿಲ್ಲವೆಂದು ಹೇಳಿದಕ್ಕೆ ಹೆಲ್ತ್ ಆಫೀಸರವರು — ಕೆಲಸದ ಗಲಾಟೆ ಜಾಸ್ತಿಯಾಗಿದ್ದರಿಂದ ಸೆಸ್ಸನ್ನು ವಸೂಲ್ಮಾಡಿ ಮ್ಯುನಿಸಿಪಾಲಿಟಿಗೆ ಕಳುಹಿಸಲು ಅವಕಾಶವಾಗಲಿಲ್ಲವೆಂದು ಹೇಳಿದರು. ಹೆಲ್ತ್ ಕಮಿಟಿಯು ಏರ್ಪಟ್ಟಿದ್ದಾಗ್ಯೂ, ಒಂದಾವರ್ತಿಯಾದರೂ ಹೆಲ್ತ್ ಆಫೀಸರು ಮೆಂಬರುಗಳನ್ನು ಕರಿಸಿ ಕೊಂಡು ವಿಷಯಗಳನ್ನು ಅವರ ಕೂಡ ಕಲೆತು ಚರ್ಚೆ ಮಾಡದೆ ಇರುತ್ತಾರೆಂದು ೩-೪ ಮಂದಿ ಮೆಂಬರುಗಳು ಆಕ್ಷೇಪಣೆ ಮಾಡಿದರು ಅದಕ್ಕೆ ಹೆಲ್ತ್ ಆಫೀಸರವರು ಸಮಯವಿರಲಿಲ್ಲವೆಂದೂ ಚರ್ಚಿಸತಕ್ಕ ವಿಷಯಗಳೇನೂ ಇರಲಿಲ್ಲವೆಂದೂ ಕಾರಣ ಹೇಳಿದರು. ಪ್ರೆಸಿಡೆಂಟರು ಈ ರೀತಿ ನಡಿಸುವದು ತೃಪ್ತಿಕರವಾಗಿರಲಾರದೆಂದೂ, ಮುಂದೆ ವಸೂಲಾತಿ ವಿಷಯದಲ್ಲೂ ಮೀಟಿಂಗ್ ನಡಿಸುವದರಲ್ಲೂ ಕ್ರಮ ತಪ್ಪ ಕೂಡದೆಂದೂ ತಿಳಿಸಿದರು. ಮೊಹತರ್ಫಾ ಕಂದಾಯದ ವಸೂಲಾತಿಯು ತೃಪ್ತಿಕರವಾಗಿಲ್ಲವೆಂದೂ ಇನ್ನೂ ೨೯,೮೦೦ ರೂಪಾಯಿ ತನಕ ಬಾಕಿ ಉಳಿದಿದೆ ಎಂದೂ ಇದರ ವಸೂಲಾತಿಗೆ ಶಿಬ್ಬಂದಿ ಹೆಚ್ಚಾಗಿರುವದಲ್ಲದೆ ಒಬ್ಬ ಕಲೆಕ್ಟರೂ ಒಬ್ಬ ಅಮಲ್ದಾರರೂ ಸೇವುಕವಾಗಿ ನೇಮಿತರಾದರೂ ಇವರುಗಳು ಮನೆಗಳ ಮೇಲೆ ಹೊರಟು ಕಂದಾಯ ವಸೂಲಾತಿಯನ್ನು ಮುತುವರ್ಜಿ ವಹಿಸಿ ಮಾಡುವಂತೆ ಕಾಣುವುದಿಲ್ಲವೆಂದೂ ಕಲೆಕ್ಟರನ್ನು ವಸೂಲಾತಿ ಕೆಲಸಕ್ಕೆ ಕೊಟ್ಟಿಲ್ಲವೆಂದೂ ಆಡಿಟರುಗಳು ತಿಳಿಸಿದರು. ಪ್ರೆಸಿಡೆಂಟರು—ಮ್ಯುನಿಸಿಪಲ್ ಕಂದಾಯದ ಲೆಖ್ಖಗಳು ತೃಪ್ತಿಕರವಾಗಿಟ್ಟಿಲ್ಲದಿರೋಣದರಿಂದ ಅಮಲ್ದಾರರು ಅದನ್ನು ಕ್ರಮಪಡಿಸುತ್ತಿದಾರೆ. ಅದು ಮುಗಿದ ಮೇಲೆ ವಸೂಲಾತಿಯು ಸಾಮಸವಾಗಲಾರದು ಈ ವಿಚಾರದಲ್ಲಿ ವೈಸ್ ಪ್ರೆಸಿಡೆಂಟರು ಹೊಸ ರಹಾ ಲೆಕ್ಕದ ಸಮೂನೆಯನ್ನು ಮಾಡಿಸುತ್ತಿದಾರೆ ಎಂಬೀರೀತಿಯಾಗಿ ಹೇಳಿದ್ದಲ್ಲದೆ ಈ ಸಲಹೆಗಳನ್ನೆಲ್ಲಾ ಆಯಾ ಇಲಾಖೆಯವರಿಗೆ ವೈಸ್ ಪ್ರೆಸಿಡೆಂಟರು ತಿಳಿಸಿ ಎಚ್ಚರಿಕೆ ಕೊಡಬೇಕೆಂದು ಗೊತ್ತು ಮಾಡಿದರು

ಮೈಸೂರು ರೈಲ್ವೇ ಸ್ಟೇಷನ್ ಬಳಿ ಮೆ॥ ನರಸಿಂಹಯ್ಯನವರು ಒಂದು ಹುಲ್ಲಿನ ಕಾರ್ಖಾನೆ ಎನ್ನು ಏರ್ಪಾಡು ಮಾಡುವುದಾಗಿ ತಿಳಿಸಿ, ಅಲ್ಲಿ ತಮಗೆ ಸ್ಥಳವನ್ನು ಕೊಡಿಸಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಪ್ರೆಸಿಡೆಂಟರೂ ಕೌನ್ಸಿಲರುಗಳೂ ಆ ಸ್ಥಳವನ್ನು ಹೋಗಿ ನೋಡಿಕೊಂಡು ಬಂದರು ಇದು ಒಂದು ಕಸಬಾದ್ದರಿಂದ ಇಂಥಾದ್ದಕ್ಕೆ ಪ್ರೋತ್ಸಾಹಪಡಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟರು ರೈಲ್ವೆ ಕಂಪನಿಯವರ ಅಭಿಪ್ರಾಯವನ್ನು ಕೇಳಿಕೊಂಡು ಅವರಿಗೆ ಅಲ್ಲಿ ಸ್ಥಳವನ್ನು ಕೊಟ್ಟು ನ್ಯಾಯವಾದ ಬಾಡಿಗೆ ಕಂದಾಯವನ್ನು ವಸೂಲ್ಮಾಡತಕ್ಕದ್ದು ಎಂದು ತೀರ್ಮಾನವಾಡಿದಾರೆ.

ಮನೆಗಳಲ್ಲಿ ಕುಡಿಯುವ ನೀರಿನ ನಲ್ಲಿಗಳನ್ನು ಇಡಿಸಿಕೊಂಡಿರುವವರು ಬಹಳ ಹೆಚ್ಚಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರಾದ್ದರಿಂದ ನೀರಿನ ಇಲಾಖೆಗೆ ತುಂಬಾ ನಷ್ಟವಾಗುತ್ತಿದೆ ಎಂತಲೂ ಬೇಗನೆ ನೀರಿನ ಕಂದಾಯವನ್ನು ಹಾಕಿ ವಸೂಲ್ಮಾಡುವ ಏರ್ಪಾಡಿಡಬೇಕೆಂತಲೂ ಚೀಫ್ ಇಂಜಿನಿಯರವರು ಬರೆದಿದ್ದರು. ಈ ವಿಚಾರವನ್ನು ಚರ್ಚೆ ಮಾಡಿದ್ದರಲ್ಲಿ ಹಿಂದೆ ಆಗಸ್ಟು ತಿಂಗಳಲ್ಲೇ ನೀರಿನ ತೆರಿಗೆ ಹಾಕಬೇಕೆಂತಲೂ ಅದನ್ನು ೧೯೧೦ ನೆ ಜನವರಿ ಲಾಗಾಯತು ಜಾರೀಗೆ ತರಬೇಕೆಂದೂ ಗೊತ್ತಾಗಿ ಗವರ್ನ್ಮೆಂಟಿಗೆ ಅರಿಕೆಯಾಗಿರುತ್ತದೆ ಇದುವರೆಗೆ ಗವರ್ನ್ಮೆಂಟಿನವರು ಅದನ್ನು ಸ್ಯಾಂಕ್ಷನ್ ಮಾಡಿಲ್ಲವಾದದ್ದರಿಂದ ಮತ್ತೆ ಬರೆದು ಜ್ಞಾಪಕ ಪಡಿಸಬೇಕೆಂದು ಗೊತ್ತು ಮಾಡಿದರು.

ಟೌನ್ ಹಾಲ್ ಬಂಗಲೆಯ ಮೇಲ್ಮಾಗದಲ್ಲಿ ಆರೋಗ್ಯವಿಷಯವಾದ ವಸ್ತುಗಳನ್ನು ಶಾಶ್ವತವಾಗಿಟ್ಟು ಪ್ರದರ್ಶನ ಮಾಡಬಹುದೇ ಎಂಬದಾಗಿ ಸೀನಿಯರ್ ಸರ್ಜನ್‌ರವರು ಬರೆದು ಕೇಳಿದ್ದರು ಕೌನ್ಸಿಲರುಗಳು ಈ ವಿಚಾರವನ್ನು ಚರ್ಚಿಸಿ, ಟೌನ್ ಹಾಲ್ ಬಂಗಲೆಯನ್ನು ಈ ಪ್ರದರ್ಶನಕ್ಕೆ ಕೊಡಬೇಕಾದದ್ದಿಲ್ಲವೆಂದು ತೀರ್ಮಾನ ಮಾಡಿದರು

ರೋಮನ್ ಕ್ಯಾಥಲಿಕ್ ಕಾನ್ವೆಂಟಿನವರಿಗೆ ಕಟ್ಟಿರುವ ಶಾಲೀ ನಿವೇಶನವನ್ನು ಅವರು ಆವರಣದ ಗೋಡೆ ಹಾಕಿಕೊಂಡು ಸೇರಿಸಿಕೊಳ್ಳಬಹುದೆಂದೂ ಅಲ್ಲಿರುವ ರಸ್ತೆಯನ್ನು ಮುಚ್ಚಿಬಿಡಬಹುದೆಂದೂ ಟ್ರಸ್ಟ್ ಬೋರ್ಡಿನವರು ಒಪ್ಪಿಕೊಂಡಿದಾರೆ. ಮುನಿಸಿಪಲ್ ಕೌನ್ಸಿಲರುಗಳೂ ಅದರಂತೆ ಸಮ್ಮತಿಪಟ್ಟರು

ಪಡುವಾರ ಹಳ್ಳಿಯ ಹತ್ತಿರ ಒಂದು ದನಗಳ ದೊಡ್ಡಿ, ಒಂದು ಗಾಡಿ ಚೌಕ, ಒಂದು ಭಾವಿ, ಇವನ್ನು ತಯಾರುಮಾಡಿಸುವದಕ್ಕೆ ೧,೨೩೪ ರೂಪಾಯಿಯ ಅಂದಾಜು ಪಟ್ಟಿ ತಯಾರಾಗಿತ್ತು. ಕೌನ್ಸಿಲರುಗಳು ಅದನ್ನು ಒಪ್ಪಿ ಕಾಮಗಾರಿ ಮಾಡಿಸಬಹುದೆಂದು ತಿಳಿಸಿದರು

ತಾಲ್ಲೂಕು ವರ್ತಮಾನ.

ಅರಸೀಕೆರೆ. —ಈ ಊರಲ್ಲಿ ಕಳೆದ ಮೂರು ತಿಂಗಳಿಂದಲೂ ಪ್ಲೇಗ್‌ರೋಗವಿದ್ದಾಗ್ಯೂ, ಜನರು ಆಗಾಗ್ಗೆ ಪ್ಲೇಗ್ ರೋಗದಿಂದ ಸಾಯುತ್ತಿದ್ದರೂ ಅಮಲ್ದಾರ್ರೂ ಡಾಕ್ಟರೂ ತುಂಬಾ ಮುತುವರ್ಜಿವಹಿಸಿ ಗುಡಿಸಲು ಸಾಮಾನುಗಳನ್ನೆಲ್ಲಾ ೮೦೦ ರೂಪಾಯಿಗೆ ಸರ್ಕಾರಿ ಜಂಗಲಿನಿಂದ ಕತ್ತರಿಸಿ ತಂದು ಅಗ್ಗವಾಗಿ ಸರಪರಾಜ್ ಮಾಡುವದಕ್ಕಿದ್ದರೂ ಅಮಲ್ದಾರ್ರೂ ಡೆಪ್ಯುಟಿ ಕಮೀಷನರ ಮೂಲಕವೂ ಮೊಬ್ಬಾ ಎಷ್ಟೋ ಆವರ್ತಿ ಜನರಿಗೆ ಎಚ್ಚರಿಕೆ ವಿಶೇಷ ಹೇಳಿ ಊರುಬಿಡುವಂತೆ ಬುದ್ಧಿವಾದ ಕೊಡುತ್ತಿದ್ದರೂ ಅನೇಕ ಮನೆಗಳಲ್ಲಿ ಇಲಿಗಳು ಆಗಾಗ್ಗೆ ಸಾಯುತ್ತಿದ್ದರೂ ಅರಸೀಕೆರೆ ಜನರು ಗುಡಿಸಲು ಕಟ್ಟದೆ ಊರುಬಿಡದೆ ತಾತ್ಸಾರದ ದುಃಖಬಂದರು. ಕೊನೆಗೆ ವಾರಂಟ್ ಆಫೀಸರಗಳು ಅಂದರೆ ವೈದ್ಯರಲ್ಲೇ ಒಬ್ಬ ೧೮ ವರುಷದ ಹುಡುಗನೂ ೯ ವರ್ಷದ ಹುಡುಗಿಯೂ ಪ್ಲೇಗಿನಿಂದ ಮೃತರಾಗಲು ತಕ್ಷಣವೇ ಎಲ್ಲರೂ ಗುಡಿಸಲುಕಟ್ಟಿ ಹೋಗುತ್ತಿದಾರೆ. ಈ ವರಿಗೂ ಅಮಲ್ದಾರ್ರೂ ಡಾಕ್ಟರವರೂ ಎಷ್ಟೋ ಮುತುವರ್ಜಿಯಿಂದ ಜನರನ್ನು ಪ್ರೇರೇಪಿಸಿ ಊರುಬಿಡುವಂತೆ ಹೇಳುತ್ತಾ ಆಗಾಗ್ಗೆ ಪದೇ ಪದೇ ಬಹು ಹುಷಾರಿಯಿಂದ ಮನೆಗಳನ್ನೂ ಪ್ಲೇಗ್ ರೋಗಿಗಳನ್ನೂ ಪರೀಕ್ಷಿಸುತ್ತಾ ಬಂದದ್ದಲ್ಲದೆ ಜನರ ಪ್ರಾಣರಕ್ಷಣೆಗಾಗಿ ತುಂಬಾ ಸಾಹಸಪಟ್ಟು ತಮ್ಮಿಂದಲಾಗುವ ಪ್ರತಿ ಒಂದು ಸಹಾಯವನ್ನು ಕೊಡುತ್ತಿದಾರೆ ಅರಸೀಕೆರೆಯಲ್ಲಿ ಅನೇಕಾನೇಕರು ಜ್ವರ ಬಾಯಿಗಂಟ್ಲು ಹುಣ್ಣುಗಳಿಂದ ಮಲಗಿದಾರೆ. ಈ ಸಾರಿ ಆಗಿರುವಂಥ ವ್ಯಾಧಿಯು ಮಹಾ ಕಠಿಣವಾಗಿದೆ. ಆದರೆ ಭಗವಂತನ ಕೃಪೆಯಿಂದ ಮರಣ ಸಂಖ್ಯೆ ಕಡಿಮೆ. ಆರೋಗ್ಯ ಸ್ಥಿತಿ ಅನುಕೂಲವಾಗಿಲ್ಲ

ನೋಟಿಫಿಕೇಷನ್.

೪೨-೧

ಅಮೃತಮಹಲ್ ಇಲಾಖಾ ಬಾಬ್ತು ಕೆಲವು ಗಂಡು ರಾಸುಗಳನ್ನು ಬರುವ ೧೯೧೦ನೇ ಜನವರಿ ೧೯ನೆ ತಾರೀಖು ಲಾಗಾಯ್ತು "ಹೊಳಲ್ಕೆರೆ ರೈಲ್ವೆ ಸ್ಟೇಷನ್" ಬಳಿಯಲ್ಲೂ ಅದೇ ಮಾಹೆ ೨೪ನೆ ತಾರೀಖು ಲಾಗಾಯ್ತು ಚಿತ್ರದುರ್ಗದ ತಾಲ್ಲೋಕು "ಅಯ್ಯನಹಳ್ಳಿ" ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನು ಪಡೆಯಬಹುದು.

ಕ್ಯಾಂಪ್-ಮೈಸೂರು, ಎಚ್ ನಂಜುಂಡರಾಜೇ ಅರಸ್,
ತಾ. ೨೩-೧೨-೦೯ ಸೂಪರಿಂಟೆಂಡೆಂಟ್, ಅಮೃತಮಹಲ್ ಇಲಾಖಾ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

೩-೧

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯದ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ಆಣೆಯಿಂದ ೨॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸಲ್ಪ ಕ್ರಯಕ್ಕೆ ಸಿಕ್ಕುತ್ತವೆ.

ನಿವಾಸ—ಮ್ಯಾನೇಜರ್,
ಸಿ. ಎಲ್. ಎನ್ ಬುಕ್ ಡಿಪೋ, ಮೈಸೂರು

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಡಿಸೆಂಬರ್ ತಾ ೩೦ ನೇ ಗುರುವಾರ.

ಮೈಸೂರು ರಾಜ್ಯಾಡಳಿತ.

ಮೈಸೂರು ಸರಕಾರದವರು ೧೯೦೮—೧೯೦೯ ನೇ ವರುಷದ ಆಡಳಿತದ ರಿಪೋರ್ಟನ್ನು ಪ್ರಕಟಿಸಿರುತ್ತಾರೆ. ಸರಕಾರಕ್ಕೆ ಸಂಬಂಧಪಟ್ಟ ವಿವಿಧ ಡಿಪಾರ್ಟುಮೆಂಟುಗಳಲ್ಲಿ ನಡೆದ ಕಾರುಬಾರುಗಳು ಇದರಲ್ಲಿ ವಿಶದವಾಗಿ ಪ್ರಕಟಿಸಲ್ಪಟ್ಟಿವೆ. ಕಳೆದ ವರುಷ ಸಕಾಲಕ್ಕೆ ತಕ್ಕಷ್ಟು ಮಳೆ ಬಾರದಿದ್ದಕಾರಣ ಬೆಳೆಯು ಕೆಟ್ಟುಹೋಗಿ ಕ್ಷಾಮ ತಲೆದೋರುವಂತಿತ್ತು. ಇಂಥಾ ಅನಿವಾರ್ಯದ ದೆಸೆಯಿಂದ ಸರಕಾರದ ಎಲ್ಲಾ ಶಾಖೆಗಳಲ್ಲೂ ಕೆಲಸವು ಹೆಚ್ಚಿತು. ಜನರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸರಕಾರದವರು ಅದಷ್ಟು ಪ್ರಯತ್ನಗಳನ್ನು ಮಾಡಿದರು. ಅದ್ದರಿಂದ ಸರಕಾರದವರು ತಾವು ಕಳೆದ ವರುಷ ಮಾಡಿದ ಪ್ರಯತ್ನಗಳಿಗಾಗಿ ತೃಪ್ತಿಪಟ್ಟು ಸಂತೋಷಿಸುವುದು ನ್ಯಾಯವಾಗಿರುತ್ತದೆ ಆದಾಯವು ಕಡಿಮೆಯಾಯಿತು. ಆದರೂ ಗೌರ್ನಮೆಂಟಿನವರು ಯಾರಿಂದಲೂ ಸಾಲ ತೆಗೆಯಲಿಲ್ಲ. ರಿಪೋರ್ಟಿನಲ್ಲಿ ಪ್ರಕಟವಾಗಿರುವ ಪ್ರತಿಯೊಂದು ಅಂಶವನ್ನು ಇಲ್ಲಿ ವಿವರಿಸಲು ಸ್ಥಳ ಸಂಕೋಚವಾಗಿರುತ್ತದೆ ಆದಕಾರಣ ವಿಶೇಷವಾದ ಕೆಲವು ಸಂಗತಿಗಳನ್ನು ಮಾತ್ರ ತಿಳಿಸುವೆವು.

ಮೈಸೂರು ದೇಶದ ವಿಸ್ತೀರ್ಣವು ೧,೮೮,೪೪೪,೭೦೭ ಎಕರೆಗಳಾಗುವವು. ಇದರಲ್ಲಿ ೬೩,೬೯,೩೦೪ ಎಕರೆಗಳು ವ್ಯವಸಾಯ ಮಾಡಲ್ಪಡುವವು. ೧೦,೪೪೪,೪೮೧ ಜನರು ಭೂಮಿ ಕಾಣಿಗಳನ್ನು ಹೊಂದಿರುವರೆಂದು ತಿಳಿದುಬರುತ್ತದೆ. ಸುಮಾರು ತೊಂಭತ್ತು ಲಕ್ಷ ಎಕರೆ ಜಮೀನು ಕಾಡಾಗಿಲ್ಲದೇ ವ್ಯವಸಾಯ ಮಾಡದೇಯೇ ಬಿದ್ದಿರುವುದು. ಇದನ್ನು ನೋಡಿದರೆ ವ್ಯವಸಾಯವನ್ನು ಶಾಸ್ತ್ರೀಯವಾದ ರೀತಿಯಲ್ಲಿ ಅಭಿವೃದ್ಧಿ ಮಾಡಲು ಬಹಳ ಅವಕಾಶವುಂಟೆಂದು ಹೇಳಬಹುದು.

ಪೊಲೀಸು ಇಲಾಖೆಯ ರಿಪೋರ್ಟಿನಲ್ಲಿ ಕಳೆದ ವರುಷ ವಿಧಿಸಲ್ಪಟ್ಟ ಶಿಕ್ಷೆಗಳ ಸಂಖ್ಯೆಯನ್ನು ನಮೂದು ಮಾಡಿರುತ್ತಾರೆ. ಸುಮಾರು ೨,೩೦೦ ಮಂದಿ ಪೊಲೀಸಿನವರಿಗೆ ಶಿಕ್ಷೆ ವಿಧಿಸಲ್ಪಟ್ಟಿತು. ೧೪೦ ಮಂದಿ ಸರ್ವೀಸಿನಿಂದ ವಜಾ ಮಾಡಲ್ಪಟ್ಟಿರುರವೆನ್ನು ಮತ್ತು ಇತರ ಶಾಖೆಗಳಲ್ಲಿ ವಿಧಿಸಲ್ಪಟ್ಟ ಶಿಕ್ಷೆಗಳ ವಿಷಯ ಯಾವ ಸಂಗತಿಯೂ ಹೊರಪಟ್ಟಿಲ್ಲ. ಮೇಲ್ಕಂಡ ಡಿಪಾರ್ಟುಮೆಂಟುಗಳ ನೌಕರರಲ್ಲಿ ನ್ಯಾಯವಾದ ನಡಾವಳಿಯು ಇದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ. ನೌಕರರಲ್ಲಿ ಉತ್ತಮತರದ ನಡತೆಯು ಇಲ್ಲದೆ ಹೋದರೆ ರಾಜ್ಯಭಾರವು ಸಡಿಲವಾಗುವುದು.

ಕೈಗಾರಿಕೆಗೂ ವ್ಯಾಪಾರಕ್ಕೂ ಸಂಬಂಧಪಟ್ಟ ಸಂಗತಿಗಳು ಇದರಲ್ಲಿ ಬಹು ಸಂಕ್ಷೇಪವಾಗಿ ವಿವರಿಸಲ್ಪಟ್ಟಿವೆ. ಮೈಸೂರು ದೇಶವು ಇನ್ನೂ ಬಹಳ ಕಾಲದವರಿವಿಗೂ ವ್ಯವಸಾಯದ ಮೇಲೆಯೇ ಆತುಕೊಳ್ಳಬೇಕೆಂಬುದು ಇದರಿಂದ ಪರಿಷ್ಕಾರವಾಗಿ ತಿಳಿದುಬರುವುದು.

ಗಣಿಗಳ ವಿಷಯ ಈ ರಿಪೋರ್ಟು ಕೆಲವು ಅರ್ಥಗರ್ಭಿತವಾದ ಸಂಗತಿಗಳನ್ನು ತಿಳಿಸುವುದು. ಇಲ್ಲಿ ಸಿಕ್ಕುವ ಕೆಲವು ಲೋಹಗಳ ಉತ್ಪತ್ತಿಯನ್ನು ಹೆಚ್ಚು ಮಾಡಿದರೆ ಆದಾಯವು ಹೆಚ್ಚಾಗಿ ದೊರೆಯುವದೆಂದು ಸೂಚಿಸುತ್ತದೆ. ಮೈಸೂರು ದೇಶದಲ್ಲಿ ರೈಲ್ ಮಾರ್ಗಗಳು ಅಭಿವೃದ್ಧಿಯಾಗಿ ಗಣಿಗಳ ವಿಷಯ ಹೆಚ್ಚಿನ ತಿಳುವಳಿಕೆಯುಂಟಾದರೆ ಗಣಿ ಕೆಲವು ಬಹಳ ಮಟ್ಟಿಗೆ ವೃದ್ಧಿಯಾಗುವುದು. ಇದಕ್ಕೆ ವಿದ್ಯುಚ್ಛಕ್ತಿಯ ಸಹಾಯವಿದ್ದರೆ ಉತ್ತಮವೇ ಸರಿ.

ಮುಜರಾಯಿ ಇಲಾಖೆಯಲ್ಲಿ ಮತ ಮತ್ತು ಧರ್ಮ ಸಂಬಂಧವಾದ ಕಾರ್ಯಗಳನ್ನು ಸರಕಾರದ ಆಡಳಿತಕ್ಕೆ ಒಪ್ಪಿಸುವುದು ಅಲ್ಲಲ್ಲಿ ಕಂಡುಬರುತ್ತದೆ. ಇದನ್ನು ನೋಡಿ ನಾವು ವಿಷಾಧಿಸುವೆವು. ಜನರು ತಮ್ಮ ಸ್ವಂತ ಕಾರ್ಯಗಳನ್ನು ನಡೆಸುವ ಶಕ್ತಿಯುಳ್ಳವರಾಗಿದ್ದರೆ ಮತ ಮತ್ತು ಧರ್ಮ ಸಂಬಂಧವಾದ ಕಾರ್ಯಗಳನ್ನು ಸಹ ವಿವೇಕದಿಂದ ನಡೆಸಬಹುದಲ್ಲವೇ.

ಮೈಸೂರು ಸರಕಾರದವರು ಪ್ರತಿಯೊಂದು ಶಾಖೆಯ ಸಂಗತಿಗಳನ್ನೆಲ್ಲಾ ಪರೀಕ್ಷಿಸಿರುವರು. ಆಯಾ ಶಾಖೆಗಳವರು ತಮ್ಮ ತಮ್ಮ ಕಾರುಬಾರುಗಳನ್ನು ಹೆಚ್ಚು ಕಡಿಮೆಯಾದ ನಿಗಾದಿಂದ ನಡೆಸಿಕೊಂಡು ಬರುತ್ತಿರುವರು

ಬಹುಮಾನದ ಮೇಲಾಟ

ಲಾರ್ಡ್ ಮಿಂಟೋ ಪ್ರಭುಗಳು ಮೈಸೂರು ದೇಶಕ್ಕೆ ಬಂದುದರ ಜ್ಞಾಪಕಾರ್ಥವಾಗಿ ಅರಸೀಕೆರೆ ಟೌನ್ ಪ್ಲಿನ ಒಬ್ಬ ದೊಡ್ಡ ಮನುಷ್ಯರು ಎರಡು ಶ್ರೇಷ್ಠವಾದ ಉಪನ್ಯಾಸಗಳನ್ನು ಬರೆದು ಕೊಟ್ಟವರಿಗೆ ಉಪನ್ಯಾಸ ಒಂದಕ್ಕೆ ಐದು ರೂಪಾಯಿಗಳ ಪ್ರಕಾರ ಸಂದುವಂತೆ ಹತ್ತು ರೂಪಾಯಿಗಳನ್ನು ನಮ್ಮ ಬಳಿಗೆ ಕಳುಹಿಸಿರುತ್ತಾರೆ. ಉಪನ್ಯಾಸದ ಸಂಗತಿಗಳಾವುವೆಂದರೆ

೧ ನೇ ಉಪನ್ಯಾಸ ಹಿಂದೂದೇಶದ ವೈಸರಾಯಿಯಾಗಿದ್ದ ಘನ ಲಾರ್ಡ್ ಮಿಂಟೋ ಪ್ರಭುಗಳಾದ ಹಿಂದೂದೇಶಕ್ಕೆ ಉಂಟಾಗಿರುವ ಮೇಲುಗಳನ್ನು ಕುರಿತೂ ಅವರ ವಿನ್ಯಸುಷ್ಠವನ್ನು ಕುರಿತೂ ಉಪನ್ಯಾಸ ಬರೆಯುವುದು.

೨ ನೇ ಉಪನ್ಯಾಸ ಇಂಗ್ಲಿಷ್ ರಾಜ್ಯಭಾರವು ಹಿಂದುಸ್ಥಾನದಲ್ಲಿ ನೆಲೆಗೊಂಡ ಲಾಗಾಯಿತು ಬ್ರಾಹ್ಮಣೇತರರಿಗೆ (ಅಂದರೆ ಬ್ರಾಹ್ಮಣರಲ್ಲದವರಿಗೆ) ಉಂಟಾಗಿರುವ ಮೇಲುಗಳನ್ನು ಕುರಿತು ಉಪನ್ಯಾಸ ಬರೆಯುವುದು.

ಈ ಎರಡು ವಿಷಯಗಳನ್ನು ಕುರಿತು ಯಾರು ಉತ್ತಮತರವಾದ ಉಪನ್ಯಾಸವನ್ನು ಬರೆಯುವರೋ ಅಂಥವರಿಗೆ ಉಪನ್ಯಾಸಕ್ಕೆ ೫ ರೂಪಾಯಿನಂತೆ ಬಹುಮಾನವು ದೊರೆಯುವುದು ಉಪನ್ಯಾಸಗಳು ಬರುವ ಜನವರಿ ೧೫ ನೇ ತಾರೀಖಿನೊಳಗಾಗಿ ವೃತ್ತಾಂತಪತ್ರಿಕೆಯ ಎಡಿಟರವರಿಗೆ ತಲಪುವಂತೆ ಕಳುಹಿಸಬೇಕು.

ಮತ್ತೊಂದು ವರುಷವು ಪೂರೈಸಿತು.

ಒಂದೆರಡು ದಿನಗಳಲ್ಲಿ ೧೯೦೯ ನೇ ವರುಷವು ಕಳೆದುಹೋಗಿ ಹೊಸ ವರುಷವು ಪ್ರಾರಂಭವಾಗುವುದು ಒಂದು ದಿನವು ಮತ್ತೊಂದು ದಿನದಂತೆಯೇ ಇರುವುದೆಂತಲೂ ಒಂದು ವರುಷವು ಮತ್ತೊಂದು ವರುಷದಂತೆಯೇ ಇರುವುದೆಂತಲೂ ಕೆಲವರು ಯೋಚನೆಯಿಲ್ಲದೆ ಆಡಿಕೊಳ್ಳುವುದುಂಟು. ಆದರೆ ವಿವೇಕಿಗಳಾದವರು ಹಳೇ ವರುಷವನ್ನು ಕಳೆದು ಹೊಸ ವರುಷವನ್ನು ಸಂಧಿಸುವಾಗ್ಗೆ ತಮ್ಮ ವಿಷಯ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳುವರು

ಪ್ರತಿಯೊಂದು ವರುಷವು ಮನುಷ್ಯನ ಈ ಲೋಕದ ಜೀವಮಾನದ ಅಂತ್ಯದ ಕಡೆಗೆ ನಡಿಸುತ್ತದಲ್ಲವೇ ? ಹೀಗಿರುವುದರಿಂದ ಪ್ರತಿಯೊಬ್ಬನೂ ಹೊಸ ವರುಷದ ಪ್ರಾರಂಭದಲ್ಲಿ ಕಳೆದ ವರುಷದ ತನ್ನ ನಡಾವಳಿಯನ್ನು ಕುರಿತು ದೀರ್ಘವಾಗಿ ಯೋಚಿಸತಕ್ಕದು ನಾನು ಹೋದ ವರುಷವನ್ನು ಯೋಗ್ಯತಾರೀತಿಯಲ್ಲಿ ಕಳೆದಿರುವೆನೋ ? ನನ್ನ ನಡತೆಯು ಉತ್ತಮಸ್ಥಿತಿಗೆ ಬಂದಿದೆಯೋ ? ಈ ಲೋಕದ ಆಯುಸ್ಸು ಮುಗಿದು ಮರಣವಾದ ಮೇಲೆ ಉತ್ತಮತರದ ಜೀವವನ್ನು ಹೊಂದಲು ಯೋಗ್ಯನಾಗಿರುತ್ತೇನೆಯೋ ? ಎಂಬ ಸಂಗತಿಗಳನ್ನು ಯೋಚಿಸುವುದು ಅತ್ಯಾವಶ್ಯಕ ಪ್ರತಿಯೊಂದು ವರುಷದಲ್ಲಿಯೂ ನಾವು ಮಾಡತಕ್ಕ ಕರ್ತವ್ಯಗಳನೇಕವಿರುವವು ಪ್ರತಿಯೊಂದು ವರುಷದಲ್ಲಿಯೂ ನಮಗೆ ಶೋಧನೆಗಳು ಪ್ರಾಪ್ತವಾಗುತ್ತವೆ. ಪ್ರತಿಯೊಂದು ವರುಷದಲ್ಲಿಯೂ ನಮಗೆ ದೇವರ ಆಶೀರ್ವಾದಗಳು ಸಿಕ್ಕುತ್ತವೆ. ಇವುಗಳಿಂದ ನಾವು ಉತ್ತಮರಾಗಿ ಬಾಳುವುದಕ್ಕೆ ಆಸ್ಪದವುಂಟೇ ? ಇವುಗಳಿಂದ ನಮ್ಮ ನಡತೆಯನ್ನು ದೇವರು ಮೆಚ್ಚುವ ರೀತಿಯಲ್ಲಿ ಅಭಿವೃದ್ಧಿ ಮಾಡಬಹುದೇ ? ಇಲ್ಲವೇ ನಾವು ನಮ್ಮ ಸ್ವಂತ ಅಕೃತ್ಯಗಳಿಂದಲೂ ಅಜಾಗರೂಕತೆಯಿಂದಲೂ ದೇವನನ್ನು ಬಿಟ್ಟು, ಆತನು ಮೆಚ್ಚದೇ ಇರತಕ್ಕ ಗುಣಗಳನ್ನು ಹೊಂದಿಕೊಳ್ಳುತ್ತಿರುತ್ತೇವೋ ಎಂಬುದನ್ನು ದೀರ್ಘವಾಗಿ ಯೋಚಿಸಬೇಕಾಗಿದೆ

ಇಹದಲ್ಲಿ ನಾವು ಯೋಗ್ಯರಾಗಿ ನಡೆದುಕೊಂಡರೆ ದೇವರ ಸಮೀಪಕ್ಕೆ ಬರುವೆವು. ಆತನು ನಮ್ಮನ್ನು ಪವಿತ್ರರನ್ನಾಗಿ ಮಾಡಿ ತನಗೆ ಸಂಬಂಧಪಟ್ಟ ಸತ್ಯ ನೀತಿ, ದಯೆ ಮೊದಲಾದ ಗುಣಗಳನ್ನು ನಮಗೆ ದಯಪಾಲಿಸುವನು ಹೋದ ವರುಷ ಇಂಥಾ ದೇವಾಶೀರ್ವಾದಗಳು ನಮಗೆ ಬಾರದಿದ್ದರೆ ಅವುಗಳನ್ನು ಈ ವರುಷ ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸೋಣ. ನಮಗೆ ಐಶ್ವರ್ಯ, ಪದವಿ, ಕೀರ್ತಿ ಆರೋಗ್ಯಗಳಿದ್ದರೂ ದೇವರ ದಯೆ ಇಲ್ಲದಿದ್ದರೆ ಪ್ರಯೋಜನವೇನು? ಅವುಗಳೆಲ್ಲಾ ನಶಿಸಿಹೋಗತಕ್ಕ ಪದಾರ್ಥಗಳು ನಾವು ಕಳೆದ ವರುಷದಲ್ಲಿ ನಮ್ಮ ತನು ಮನಧನಗಳನ್ನು ಲೌಕಿಕದ ಆಶಾಪಾಶಗಳಿಗೆ ಒಪ್ಪಿಸಿಕೊಟ್ಟಿದ್ದರೆ ನಾವು ಅದನ್ನು ವ್ಯರ್ಥವಾಗಿ ಕಳೆದಿರುತ್ತೇವೆಂದು ತಿಳಿಯತಕ್ಕದು.

ಹೊಸ ವರುಷವು ಪ್ರಾರಂಭವಾಗುವುದಕ್ಕೆ ಮೊದಲು ಪ್ರತಿಯೊಬ್ಬನೂ ತನ್ನ ಜೀವಮಾನವನ್ನು ಪರೀಕ್ಷಿಸಿಕೊಳ್ಳಲಿ. ತನ್ನ ಜೀವಮಾನವು ದುಷ್ಟತನದಿಂದ ತುಂಬಿದ್ದರೆ ಅಂಥವನು ಮನಸ್ತಾಪವನ್ನು ಹೊಂದಿ ತನ್ನ ಅಕೃತ್ಯಗಳನ್ನೊಪ್ಪಿಕೊಳ್ಳಲಿ ದೇವರ ಮುಂದೆ ದೈನ್ಯಭಾವದಿಂದ ಕ್ಷಮಾಪಣೆಯನ್ನು ಬೇಡಿಕೊಳ್ಳಲಿ ಅಂಥವನು ಇನ್ನು ಮುಂದೆ ಪವಿತ್ರನಾಗಿ ನಡೆದುಕೊಳ್ಳಲು ಮನಸ್ಸುಮಾಡಲಿ ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳಿ ನಮಗೆ ಉತ್ತರವನ್ನು ದಯಪಾಲಿಸುವನೆಂದು ನಾವು ದೃಢವಾಗಿ ನಂಬಬೇಕು ಯೇಸುಕ್ರಿಸ್ತನು ತನ್ನನ್ನು ನಂಬುವವರೆಲ್ಲರಿಗೆ ಈ ವಿಧವಾದ ಭರವಸವನ್ನು ಕೊಡುತ್ತಾನೆ ಯಾರಾದರೂ ಸರಿ, ಭಕ್ತಿಪೂರ್ವಕವಾಗಿ ಆತನನ್ನು ನಂಬಿದರೆ ಅಂಥವನಿಗೆ ಪಾಪ ಪರಿಹಾರವಾಗುವುದಲ್ಲದೆ ಮನಸ್ಸಿನ ಸಮಾಧಾನವು ದೊರೆಯುವುದು ಅಂಥವನು ಸತ್ಯವಂತನಾಗಿ ಬದುಕುವುದಕ್ಕೆ ಸಹಾಯ ದೊರೆಯುವುದು ಸುಖಲೋಲನಾಗಿದ್ದು ದೇವರನ್ನು ಮರೆತು ಆತನ ದಯೆಯನ್ನು ಸಂಪಾದಿಸಬೇಕೆಂದಿರುವ ಮನುಷ್ಯನು ತನ್ನ ಪಾಪಗಳಿಗಾಗಿ ಚಿಂತಿಸಿ ಯೇಸುಕ್ರಿಸ್ತನ ಪಾದವನ್ನು ಆಶ್ರಯಿಸಲಿ. ಯಾರ್‍ಯಾರು ತಮ್ಮ ಪಾಪಗಳಿಗೋಸ್ಕರ ಚಿಂತಿಸಿ ಅವುಗಳನ್ನು ಬಿಟ್ಟುಬಿಡುವುದಕ್ಕೆ ಇಷ್ಟಪಡುತ್ತಾರೋ ಅಂಥವರಿಗೆ ಸಹಾಯ ಮಾಡಲು ಯೇಸುಕ್ರಿಸ್ತನು ಸಿದ್ಧನಾಗಿರುತ್ತಾನೆ ಅಂಥವರಿಗೆ ಪಾಪಪರಿಹಾರವನ್ನು ಕೊಡುವುದಲ್ಲದೆ ಇನ್ನು ಮುಂದೆ ಸತ್ಪುರುಷರಾಗಿ ನಡೆಯುವುದಕ್ಕೆ ಬೇಕಾದ ಆತ್ಮೀಯವಾದ ಬಲವನ್ನು ಕೊಡುವನು.

ಲೋಕದಲ್ಲಿ ಅನ್ಯಾಯವೂ ಅಕ್ರಮವೂ ಹೆಚ್ಚಿ ಜನರು ಸಂಕಟಪಡುತ್ತಿರುವರು ಇಂಥಾ ಪಾಪದ ಮಯವಾದ ಲೋಕದಲ್ಲಿ ನಾವು ಯೋಗ್ಯರಾಗಿ ಜೀವಿಸಬೇಕಾದರೆ ನಾವು ದೇವರ ಆಶ್ರಯವನ್ನು ಹೊಂದಿಕೊಳ್ಳಬೇಕು. ನಾವು ನಮ್ಮನ್ನು ಆತನಿಗೆ ಸಂಪೂರ್ಣವಾಗಿ ವಶಮಾಡಿ ಆತನ ಚಿತ್ತವನ್ನು ದಿವಾರಾತ್ರಿಯೂ ನೆರವೇರಿಸುವುದಕ್ಕೆ ಸಿದ್ಧರಾಗಿರಬೇಕು ಇಂಥಾ ದಿವ್ಯವಾದ ಉದ್ದೇಶದಿಂದ ನಾವು ಬರುವ ೧೯೧೦ ನೇ ವರುಷವನ್ನು ಸಂಧಿಸಿದರೆ ನಾವು ದೇವರ ದಯೆಗೂ ಆತನ ನಡಿಸುವಿಕೆಗೂ ಪಾತ್ರರಾಗುವೆವು ನಮಗೆ ಹೊಸ ವರುಷದ ಆಶೀರ್ವಾದಗಳು ಲಭಿಸುವುದು ವರುಷಗಳು ಕಳೆದುಹೋಗುತ್ತಿರುವಲ್ಲಿ ನಮ್ಮ ಇಹದ ಜೀವಮಾನವು ಅಸ್ಥಿರವಾದುದೆಂತಲೂ ನಮ್ಮ ಮುಂದೆ ಬರತಕ್ಕ ಆತ್ಮೀಯ ಜೀವಮಾನವು ಶಾಶ್ವತವಾದುದೆಂತಲೂ ತಿಳಿದುಕೊಳ್ಳೋಣ ಬರುವ ಹೊಸ ವರುಷದಲ್ಲಿ ನಮ್ಮ ವಾಚಕರೆಲ್ಲರಿಗೆ ಭಗವಂತನು ಆಯುರಾರೋಗ್ಯಾಭಿವೃದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಸ್ವದೇಶದ ವೃತ್ತಾಂತಗಳು

ಮ॥ ಬಿ. ಕೃಷ್ಣಮಾಚಾರ್ ಬಿ ಎ., ಬಿ ಎಲ್, ಎಂಬವರು ಮೈಸೂರಿಗೆ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲ್ಪಟ್ಟಿರುವರು.

* * *

ಧಾರವಾಡ ಜಿಲ್ಲೆಗೆ ದೊಡ್ಡ ಎಂಜನಿಯರಾಗಿರುವ ಮ॥ ಬೇವಾಡಿ ನಂಜುಂಡಯ್ಯನವರು ರಾಜಧಾನಿಗೆ ಬಂದಿರುವರು ಇವರು ಮೈಸೂರು ದೇಶಸ್ಥರು

* * *

ಬರುವ ಜನವರಿ ತಿಂಗಳ ಅಂತ್ಯಭಾಗದಲ್ಲಿ ನಮ್ಮ ಮಹಾರಾಜರವರು ಕಲ್ಕತ್ತಾ ಪಟ್ಟಣಕ್ಕೆ ಪ್ರಯಾಣ ಮಾಡುವರೆಂಬ ವದಂತಿಯು ಹುಟ್ಟಿರುವುದು

* * *

ಬರುವ ವಾರದ ವೃತ್ತಾಂತ ಪತ್ರಿಕೆಯಲ್ಲಿ ಮಾಮೂಲ್ ಹೊಸ ಚಿತ್ರಗಳಿಂದ ಕೂಡಿದ ನಮ್ಮ ಪತ್ರಿಕೆಯ ನವ ವರುಷದ ಪಂಚಾಂಗವನ್ನು ಚಂದಾದಾರರಿಗೆಲ್ಲ ಮುಫತ್ತಾಗಿ ಕಳುಹಿಸಿ ಕೊಡುವೆವು

* * *

ಕಳೆದ ಭಾನುವಾರದ ಲಾಗಾಯಿತು ನಿನ್ನೆಯ ವರಿವಿಗೂ ಬೆಂಗಳೂರು ಧರ್ಮಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವವು ಬಹಳ ಅಟ್ಟಹಾಸದಿಂದ ಜರುಗಿತು ಇದನ್ನು ನೋಡುವುದಕ್ಕೆ ಸಾವಿರಾರು ಜನಗಳು ಕೂಡಿಬಂದಿದ್ದರು

* * *

ಕೆಲವು ದಿನಗಳಿಂದ ನಮ್ಮ ದಿವಾನರೂ ಕೌನ್ಸೆಲರುಗಳೂ ರಾಜಧಾನಿಗೆ ಬಂದು ಕೌನ್ಸಿಲ್ಲಿಗೆ ಸಂಬಂಧಪಟ್ಟ ಕಾರ್ಯಗಳನ್ನು ಜರುಗಿಸುತ್ತಿದ್ದರು ಈಗ್ಗೆ ಸಿಟಿಂಗುಗಳು ಮುಕ್ತಾಯವಾಗಿವೆ ಇಬ್ಬರು ಕೌನ್ಸೆಲರುಗಳು ಬೆಂಗಳೂರಿಗೆ ಹೊರಟು ಹೋದರು ದಿವಾನರು ಶೀಘ್ರದಲ್ಲಿ ಬೆಂಗಳೂರಿಗೆ ಹೋಗತಕ್ಕವರಾಗಿದ್ದಾರೆ

* * *

ಬೆಂಗಳೂರು ಹಯರ್ ಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ಸೌಭಾಗ್ಯವತಿ ಲಕ್ಷ್ಮೀದೇವಮ್ಮನವರು ಕಳೆದ ಶನಿವಾರ ಕಾಯಿಲೆಯ ದೆಸೆಯಿಂದ ಕಾಲವಾದರೆಂದು ಕೇಳಿ ವಿಷಾದಿಸುವೆವು ಇವರು ಮದರಾಸ್ ಯೂನಿವರ್ಸಿಟಿಯ ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರು ಇವರಿಗೆ ಆರು ಮಂದಿ ಮಕ್ಕಳಿರುವರು

* * *

ಬೆಂಗಳೂರು ಸೈಕ್ಲೆ ಬ್ರೈಟನ್ ಬಳಿಯಲ್ಲಿ ಧರ್ಮರತ್ನಾಕರ ಸಾಹುಕಾರ್ ತೋಟದಪ್ಪನವರು ಒಂದು ಭಾರೀ ಛತ್ರವನ್ನು ಕಟ್ಟಿಸಿ ಯಶಸ್ಸನ್ನು ಹೊಂದಿರುವರಷ್ಟೆ ಈಗ್ಗೆ ಅವರು ಈ ಭಾರಿ ಛತ್ರಕ್ಕೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವುದಕ್ಕೆ ಪ್ರಾರಂಭಮಾಡಿರುವುದರಿಂದ ಅಲ್ಲಿ ಇಳಿಯಬಹುದಾದ ಪ್ರಯಾಣಿಕರಿಗೆ ಬಹು ಅನುಕೂಲವಾಯಿತು

* * *

ರಾಜಧಾನಿಯ ಜನರಲ್ ಸಪ್ಲೈ ಎಂಬ ಪುಸ್ತಕದ ಷಾಪಿನಲ್ಲಿ ಕೆಲಸ ಮಾಡುತ್ತಿದ್ದ ಜವಾನನು ಕಳ್ಳಬೀಗದಕೈಯನ್ನು ಇಟ್ಟುಕೊಂಡು ಅಂಗಡಿಯ ಯಜಮಾನರು ಇಲ್ಲದಿರುವ ಸಮಯದಲ್ಲಿ ಕೆಲವು ಪುಸ್ತಕಗಳನ್ನು ಕಳುವು ಮಾಡಿದ್ದನು ಇವನನ್ನು ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಇನ್ನೂ ಬಾಲ್ಯವಯಸ್ಸಿನಾದ್ದರಿಂದ ಕೇವಲ ಛಡಿ ಏಟುಗಳನ್ನು ಹೊಡಿಸಿ ಬಿಟ್ಟುಬಿಟ್ಟರು

* * *

ಬಳ್ಳಾರಿಯಲ್ಲಿ ನಡೆಯುತ್ತಿರುವ ವೀರಶೈವ ಮಹಾಸಭೆಗೆ ಬೆಂಗಳೂರಿನಿಂದ ಮೆ॥ ಬಸವಾರಾಧ್ಯ, ಬಿ ಎ, ಬಿ ಎಲ್ ರವರೂ, ಮ॥ ವೀರಬಸವಯ್ಯ, ಬಿ

ಎ. ಬಿ. ಎಲ್ ರವರೂ ಪ್ರತಿನಿಧಿಗಳಾಗಿ ಹೋಗಿರುವರು ಕೌನ್ಸಿಲರ್ ಮೆ|| ಪುಟ್ಟಣ್ಣಶೆಟ್ಟರು ಸರ್ಕಾರದ ಕೆಲಸದ ನಿಮಿತ್ತ ಹೊರಡಲು ಅನಾನುಕೂಲವಾದುದರಿಂದ ಕಾಂಗ್ರೆಸ್ ವರ್ತಮಾನದ ಮೂಲಕ ತಮ್ಮ ಸಂತೋಷವನ್ನು ತಿಳಿಸಿರುತ್ತಾರೆ.

* * *

ರಾಜಧಾನಿಯಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಯುವರಾಜರು ಅಸ್ತಿಭಾರ ಹಾಕಿದ ಚಾಮರಾಜೇಂದ್ರ ಟೆಕ್ನಿಕಲ್ ಸ್ಕೂಲಿನ ಕೆಲಸವು ಪ್ರಾರಂಭವಾದ ಹಾಗೆ ತೋರುತ್ತೆ ಇಟ್ಟಿಗೆ ಮತ್ತು ಮರಗಳನ್ನು ಜಮಾಯಿಸುತ್ತಿದ್ದಾರೆ. ಇದರ ಮೇಲ್ವಿಚಾರಣೆಯನ್ನು ಸ್ಟೇಟ್ ಎಂಜನೀಯರಾದ ಮೆ|| ತಿಂಡೋಸ್ ರಾಯರು ನೋಡಿಕೊಳ್ಳುವರು ಮೆ|| ರಾ|| ರಂಗಪ್ಪ ಕಂಪನಿಯವರು ಕಂಟ್ರಾಕ್ಟರುಗಳಾಗಿರುತ್ತಾರೆ

* * *

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಗೆರಸೊಪ್ಪೆ ಎಂಬ ಪ್ರಸಿದ್ಧವಾದ ಜಲಪಾತವನ್ನು ನೋಡಬರುವುದಕ್ಕೆ ರೈಲ್ವೆ ಕಂಪನಿಯವರು ಜನರಿಗೆ ರಿಯಾಯಿತಿ ದರವನ್ನು ಇದೇ ತಿಂಗಳು ೩೧ ರ ವರೆಗೆ ಕಲ್ಪಿಸಿಕೊಟ್ಟಿರುತ್ತಾರೆ ಬೆಂಗಳೂರು ಮೋಟಾರ್ ಕಂಪನಿಯವರು ಶಿವಮೊಗ್ಗೆಯಿಂದ ಜಲಪಾತದ ವರಿವಿಗೆ ಮೋಟಾರ್ ಗಾಡಿಗಳನ್ನು ನಡೆಸುವರು ಒಂದೇ ದಿನದಲ್ಲಿ ಅಲ್ಲಿಗೆ ಹೋಗಿ ಎಲ್ಲವನ್ನೂ ನೋಡಿಕೊಂಡು ಸಾಯಂಕಾಲದ ರೈಲಿಗೆ ಶಿವಮೊಗ್ಗೆಗೆ ಬಂದುಬಿಡಲು ಅನುಕೂಲವಾಗುವುದು.

* * *

ರಿಟೈರ್ಡ್ ಸೆಷನ್ಸ್ ಜಡ್ಜಿಗಳಾದ ಮೆ|| ತಿರುಮಲಾಚಾರರ ಪುತ್ರರು ಬೊಂಬಾಯಿಯಲ್ಲಿ ನಡೆದ ಮೊದಲನೇ ಎಲ್. ಎಲ್. ಬಿ ಎಂಬ ನ್ಯಾಯ ಶಾಸ್ತ್ರದ ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಇವರಿಗೆ ನಾನಾ ರೀತಿಯಾದ ಕಷ್ಟಗಳ ಬಾಹುಳ್ಯವಿದ್ದರೂ ಒಂದು ಚಿನ್ನದ ಮೆಡಲೂ ಸಿಕ್ಕಿರುತ್ತದೆ ಅರಸು ಬೋರ್ಡಿಂಗ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಬೊಂಬಾಯಿನ ಆ ಪರೀಕ್ಷೆಗೆ ಓದುತ್ತಿದ್ದ ಮೆ|| ಟಿ ಶಿವಶಂಕರರಾಯರು ಮೇಲ್ಕಂಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಎಲ್ ಎಲ್ ಬಿ ಡಿಗ್ರಿಯನ್ನು ಪಡೆದಿರುತ್ತಾರೆ

* * *

ರಾಜಧಾನಿಯ ರೋಮನ್ ಕೆಥೋಲಿಕ್ ಕ್ರೈಸ್ತ ಪಾದ್ರಿಗಳು ಕೆಲವು ವಾರಗಳ ಹಿಂದೆ ಗಂಜಾಮಿನ ದಾರಿಯಲ್ಲಿ ಜನಗಳಿಗೂ ಗೋಶಾಲೆಗಳಿಗೂ ಹೋಂದರೆ ಕೊಡುತ್ತಿದ್ದ ಒಂದು ತೋಳವನ್ನು ಕೊಂದರು ಈಗ್ಗೆ ಒಂಭತ್ತು ವರ್ಷಗಳ ಹಿಂದೆ ಅದೇ ಪಾದ್ರಿಗಳು ಮತ್ತೊಂದು ದೊಡ್ಡ ತೋಳವನ್ನು ಗುಂಡಿನಿಂದ ಹೊಡೆದು ಕೊಂದಿದ್ದರು ಇದು ಉದ್ದ ೩೧ ಅಡಿ, ೬ ಅಂಗುಲ ಇದರ ಹೊಟ್ಟೆಯೊಳಗೆ ಕೈಬಳೆ, ಎರಡು ಉಂಗುರಗಳು, ಒಂದು ಕಡ್ಡಿ ಸರ, ಮೊದಲಾದ ಒಡವೆಗಳು ಸಿಕ್ಕಿರುತ್ತವೆ

* * *

ಬೆಂಗಳೂರಿಗೆ ಸೇರಿದ ಗವಿಪುರದಲ್ಲಿ ವೈಶ್ಯರ ಕಾನ್ಫರೆನ್ಸ್ ಸಭೆಯು ಕೂಡಿದೆ. ಅದಕ್ಕೆ ಈ ವರುಷ ಮದರಾಸ್ ಹೈಕೋರ್ಟಿನ ವಕೀಲರಾದ ಮೆ|| ಗುರುಸ್ವಾಮಿಶೆಟ್ಟರು ಪ್ರೆಸಿಡೆಂಟಾಗಿರುವರು ಇವರು ಬೆಂಗಳೂರಿಗೆ ಬರುವಾಗ ಚಿತ್ರದುರ್ಗದ ಡಿಸ್ಟ್ರಿಕ್ಟ್ ಕಮಿಷನರಾಗಿರುವ ಮೆ|| ಚೆಂಗಯ್ಯಶೆಟ್ಟರು ಸ್ಟೇಷನ್ನಿನಲ್ಲಿ ಕಾದಿದ್ದು ಸುಖಾಗಮನವನ್ನು ಬಯಸಿದರು ಅಲ್ಲಿಂದ ಪ್ರೆಸಿಡೆಂಟರು ಮೆರವಣಿಗೆಯಲ್ಲಿ ಹೊರಟು ಗವಿಪುರಕ್ಕೆ ಹೋದರು ಈ ಕೂಟವು ಮೂರು ದಿನಗಳ ತನಕ ನಡೆಯುವದೆಂದು ತಿಳಿಯುತ್ತದೆ ಚರ್ಚೆಯೆಲ್ಲಾ ತೆಲುಗು ಭಾಷೆಯಲ್ಲಿ ನಡೆಯುವುದು

* * *

ಇದೇ ತಿಂಗಳು ೨೫ ನೇ ಶನಿವಾರದ ದಿವಸ ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರಾದ ಮೆ|| ಎ ರಂಗಸ್ವಾಮಿ ಐಯ್ಯಂಗಾರ್ಯರು ಬೆಂಗಳೂರಿಂದ ಹೊರಟು ಮಾಲೂರನ್ನು ತಲಪಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮತ್ತು ಮಾಲೂರಿನ ಅಮಲ್ದಾರರೊಡನೆ ಬಹಳ ದಿವಸಗಳಿಂದಲೂ ಮೈಸೂರು ಸಂಸ್ಥಾನಕ್ಕೂ ಮತ್ತು ಮದರಾಸು ಆಧಿಪತ್ಯಕ್ಕೂ ಇದ್ದ ಎಲ್ಲೆಯ ವ್ಯವಹಾರವನ್ನು ಅಲ್ಲಿಂದ ಬರುವ ಸೇಲಂ ಜಿಲ್ಲಾ ಕಲೆಕ್ಟರ್ ಮತ್ತು ಹೊಸೂರ್ ಸಬ್ ಕಲೆಕ್ಟರವರನ್ನು ಎದುರುಗೊಂಡು ಚರ್ಚಿಸುವುದಕ್ಕಾಗಿ ಮಾಲೂರಿನಿಂದ ಸಂಪಂಗಿ ಕೆರೆಗೆ ಪ್ರಯಾಣಮಾಡಿದರು

* * *

ಚಿಕ್ಕಬಳ್ಳಾಪುರದಲ್ಲಿ ಲಂಡನ್ ಮಿಷನ್ ಕ್ರೈಸ್ತ ಸಂಘದವರು ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಿರುವರೆಂಬ ಸಂಗತಿಯು ವಾಚಕರಿಗೆ ಗೊತ್ತಿರಬಹುದು ಈ ಸಂಘದವರು ಲಂಡನ್ ಮಹಾ ನಗರದಲ್ಲಿ ಏಸು ಡಿಸಿದ್ದ ಪ್ರದರ್ಶನದಿಂದ ಮೇಲ್ಕಂಡ ಆಸ್ಪತ್ರೆಗೆ ೩೦,೦೦೦ ರೂಪಾಯಿಗಳ ದ್ರವ್ಯವು ಒದಗಿ ಬರುವಂತೆ ತಿಳಿದು ಬಂದಿದೆ ಇದಲ್ಲದೆ ಕೋಲಾರಿನಲ್ಲಿ ಎಂ ಇ. ಮಿಷನ್ ಸಂಘದವರು ೬೦,೦೦೦ ರೂಪಾಯಿಗಳನ್ನು ಖರ್ಚು ಮಾಡಿ ಸ್ತ್ರೀಯರಿಗೆ ಒಂದು ಆಸ್ಪತ್ರೆಯನ್ನು ಕಟ್ಟುತ್ತಿರುವರಷ್ಟೆ ಈ ಕಟ್ಟಡದ ಕೆಲಸವು ಪ್ರಾರಂಭವಾಗಿ ಜಾಗ್ರತೆಯಲ್ಲಿ ನಡೆಯುತ್ತಿರುವುದು

* * *

ಕೆಲವು ವಾರಗಳ ಹಿಂದೆ ಬೆಂಗಳೂರು ದಂಡಿನ ಇಂಗ್ಲಿಷ್ ಸಿಪಾಯಿಗಳು ಏರ್ಪೋರ್ಟ್ ಸಂದ್ರದ ಕ್ಯಾಂಪಿನಲ್ಲಿ ಫಿರಂಗಿ ಗುರಿ ಕಟ್ಟಿ ಹೊಡೆಯುವ ಅಭ್ಯಾಸ ಮಾಡುತ್ತಿರುವಲ್ಲಿ ತಾನು ಸಾಕುತ್ತಿದ್ದ ಒಂದು ನಾಯಿಯು ನುಗ್ಗಿ ಒಬ್ಬ ಸೋಲ್ಜರನನ್ನು ಕಚ್ಚಿಬಿಟ್ಟಿತು ಆವನಿಗೆ ಹುಚ್ಚು ನಾಯಿ ರೋಗವು ಹತ್ತಿ ಬುಧವಾರ ಆಸ್ಪತ್ರೆಗೆ ಸೈಯ್ಯಲ್ಪಟ್ಟನು ಅಲ್ಲಿ ಆವನಿಗೆ ವ್ಯಾಕ್ಸಿನೇಷನ್ ಮಾಡಿಸಲು ಅರ್ಧ ಬುದ್ಧಿಯಲ್ಲಿ ತನ್ನನ್ನು ಉಪಚರಿಸುತ್ತಿದ್ದ ನಾಲ್ವರು ದಾಕ್ತರುಗಳನ್ನೂ ಇನ್ನಿಬ್ಬರು ಆಳುಗಳನ್ನೂ ಹಲ್ಲಿನಿಂದ ಕಡಿದು ಘಾಯ ಮಾಡಿ ಶುಕ್ರವಾರ ತೀರಿಹೋದನು ಅವನಿಂದ ಕಡಿಸಿಕೊಂಡವರೆಲ್ಲಾ ಕುನ್ನೂರಿನಲ್ಲಿರುವ ಪ್ರಸಿದ್ಧವಾದ ಆಸ್ಪತ್ರೆಗೆ ಹೊರಟಿರುತ್ತಾರೆ

* * *

ಬರೋಡ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವುದಕ್ಕೆ ಬರೋಡೆಗೆ ಹೋಗಿದ್ದ ಮೆ|| ಮಹದೇವಶಾಸ್ತ್ರಿಗಳವರು ಮೈಸೂರನ್ನು ತಲಪಿದರು ಶಾಸ್ತ್ರಿಗಳವರು ಬರೋಡ ದೇಶದ ಪಂಡಿತರೊಂದಿಗೂ ಮಹಾರಾಜರವರೊಂದಿಗೂ ಶಾಸ್ತ್ರ ಸಂಬಂಧವಾದ ಅನೇಕ ಸಂಗತಿಗಳನ್ನು ಚರ್ಚಿಸಿ ಆಯಾ ಸಂಗತಿಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು ಕೆಲವು ವಾರಗಳ ಹಿಂದೆ ಬರೋಡ ದೇಶದ ಮಂತ್ರಿಗಳಾದ ಮೆ|| ರಾಮೇಶಚಂದ್ರದತ್ತರು ಕಾಲವಾದುದರಿಂದ ಶಾಸ್ತ್ರಿಗಳ ಕೆಲಸವು ಸಂಪೂರ್ಣವಾಗದೆ ಹೋಯಿತೆಂದು ಕೇಳಿ ವಿಷಾದಿಸುವೆವು ಇವರು ಮೈಸೂರಿಗೆ ಬರುವುದಕ್ಕೆ ಮುಂಚೆ ಬೆಂಗಳೂರಿನಲ್ಲಿ ಕೆಲವು ದಿವಸಗಳು ಅ| ಚೀಫ್ ಎಂಜನಿಯರಾಗಿರುವ ಮೆ|| ಶ್ರೀನಿವಾಸರಾಯರ ಅತಿಥಿಗಳಾಗಿದ್ದರು

* * *

ಒಬ್ಬ ಬಾತ್ಮೀದಾರರು ಬರೆಯುವದೇನಂದರೆ—ಘನವುಳ್ಳ ಚೀಫ್ ಕೋರ್ಟಿನವರು ಮೊಖ್ತಾರುಗಳ ವಿಷಯದಲ್ಲಿ ಅವರುಗಳ ಮೆಮೋರಿಯಲ್ ಮೇಲೆ ಮಾಡಿರ ಆರ್ಡರ್ ಮೊಖ್ತಾರುಗಳಿಗೆ ಅಷ್ಟು ಸಮರ್ಪಕವಾದ್ದಲ್ಲವೆಂತಲೂ ಮೇಜಿಸ್ಟ್ರೇಟರುಗಳ ವಿಚಕ್ಷಣೆಗೆ ಬಿಟ್ಟು ೧೬ ನೇ ನಂಬರ್ ಸರ್ಕ್ಯುಲರ್‌ನಲ್ಲಿ ಇನ್ನು ಕೆಲವು ನಿಂದಿತವಾದ ರೂಲ್ಸ್ ಮಾಡಿದ್ದರಿಂದ ಮೊಖ್ತಾರುಗಳು ತಮ್ಮಗಳ ಜೀವನಕ್ಕೆ ತುಂಬಾ ತೊಂದರೆ ಬಂತೆಂದು ವಗೈರೆ, ಗೌರ್ನಮೆಂಟಿಗೆ ತಿರುಗಿ ಮೆಮೋರಿಯಲ್ ತಯಾರ್ಮಾಡಿ ಮೈಸೂರು ಮೊಖ್ತ್ಯಾರುಗಳಾದ ಟಿ. ಎಸ್ ರಾಮಚಂದ್ರರಾವ್ ವಗೈರರು ಈ ತಿಂಗಳು ೨೫ ನೇ ತಾರೀಖಿನಲ್ಲಿ ಹುಜರತ್ ದಿವಾನ್ ಸಾಹೇಬ್ ಬಹದ್ದೂರ್‌ರವರಲ್ಲಿ ರೂಬರೂಬು ಮೆಮೊರಿಯಲ್ ಕೊಟ್ಟು ಬಹಳವಾಗಿ ಹೇಳಿಕೊಂಡದ್ದರ ಮೇಲೆ ದಿವಾನ್ ಸಾಹೇಬರವರು ಅದನ್ನು ಸಾವಧಾನದಿಂದ ಲಾಲಿಸಿ ಅನೇಕ ವಿಷಯಗಳನ್ನು ರೂಲ್ ಮಾಡಿಕೊಂಡು ಆರ್ಡರ್ ಮಾಡುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ ಹ್ಯಾಗಾದರೂ ಆಗಲಿ ಅನೇಕ ಜನ ಮೊಖ್ತ್ಯಾರುಗಳ ವಿಷಯದಲ್ಲಿ ದಿವಾನ್ ಸಾಹೇಬರವರು ಕನಿಕರ ತೋರಿಸಿ ಅವರ ಜೀವನವನ್ನು ಶಾಶ್ವತವಾಗಿ ಕಲ್ಪಿಸಿ ಕೊಟ್ಟು ತಮ್ಮ ಲಕ ಕೀರ್ತಿ ಪಡೆಯುತ್ತಾರೆಂದು ನಂಬಿಕೇವೆ.

ಮೈಸೂರು ಗೆಜೆಟ್ ಸಂಗ್ರಹ.

ಕ್ರಿಸ್‌ಮಸ್ ರಜ ವಾದುದರಿಂದ ಇದೇ ತಿಂಗಳು ಮೂವತ್ತನೇ ತಾರೀಖಿಗೆ ಮೈಸೂರ್ ಗೆಜೆಟ್ ಹೊರಡುವುದಿಲ್ಲ.

ಶ್ರೀರಂಗದಲ್ಲಿ ಕಾಲರಾ ಉಪದ್ರವ ಇರೋಣದರಿಂದ ಅಲ್ಲಿ ಡಿಸಂಬರ್ ೧೩ ರಿಂದ ಜನವರಿ ೧ ರವರಿಗೆ ನಡೆಯತಕ್ಕ ವೈಕುಂಠ ಏಕಾದಶಿ ಉತ್ಸವಕ್ಕೆ ಹೋಗಬೇಕೆಂದಿರುವವರು ಹುಷಾರಿನಲ್ಲಿ ರತಕ್ಕದ್ದು.

ತಿರಮಕೂಡ್ಲು ನರಸೀಪುರ ತಾಲೂಕಿನ ಮೂಗೂರು ಗ್ರಾಮಕ್ಕೆ ತ್ರಿಪುರ ಸುಂದರಿ ಅಮ್ಮನವರ ಜಾತ್ರೆಯ ಕಾಲದಲ್ಲಿ ಪ್ಲೇಗು ತಗಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯ ವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರಕಾರದವರು ಪ್ಲೇಗು ತಗಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ

ಹಾಸನ ಟವನ್‌ನಲ್ಲಿ ಜೂಡಿನ ಮೈದಾನದಲ್ಲಿ ದನಗಳ ಪ್ರದರ್ಶನವು ನಡೆಯಬೇಕೆಂದು ಇತ್ಯರ್ಥವಾಗಿರುತ್ತೆಂಬ ಅಂಶ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ

ಪ್ರದರ್ಶನವು ೧೯೧೦ ನೆ ಇಸವಿ ಜನವರಿ ಮಾಹೆ ತಾರೀಖು ೬ ನೆ ಗುರುವಾರ ಪ್ರಾರಂಭವಾಗಿ ಮಾರನೇ ದಿವಸ ಅಂದರೆ ತಾರೀಖು ೭ ನೆ ಶುಕ್ರವಾರ ಸಾಯಂಕಾಲಕ್ಕೆ ಸಂಪೂರ್ಣವಾಗುತ್ತೆ. ಈ ಡಿಸ್ಟ್ರಿಕ್ಟಿನ ರೈತಾಪಿಗಳಿಗೆ ನಮ್ಮ ಮೈಸೂರು ಸೀಮೆಯ ವಿವಿಧವಾದ ರಾಸುಗಳ ಪರಿಚಯವನ್ನುಂಟುಮಾಡುವದರ ಮೂಲಕ ಉತ್ತಮ ತರವಾದ ರಾಸುಗಳನ್ನು ಪಡೆಯುವುದಕ್ಕೆ ಅನುಕೂಲ ಪಡಿಸಬೇಕೆಂಬುದೇ ಈ ಪ್ರದರ್ಶನದ ಉದ್ದೇಶವಾಗಿರುತ್ತೆ

ಅನೆಸರಿ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಪಿ. ಎಸ್ ರಾಮಚಂದ್ರ ಐಯರ್ ರವರಿಗೆ ಕ್ರಿಸ್‌ಮಸ್ ರಜಾದೊಂದಿಗೆ ೧ ತಿಂಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ

ಜನರಲ್ ಮತ್ತು ರೆವಿನ್ಯೂ ಇಲಾಖೆಯ ಅಂಡರ್ ಸೆಕ್ರೆಟರಿಯವರಾದ ಮೆ| ಕೆ ಮಾರ್ಷ್ ಸಾಹೇಬರಿಗೆ ಕ್ರಿಸ್‌ಮಸ್ ರಜೆದೊಂದಿಗೆ ಮುಂದಿನ ಸನ್ ೧೯೧೦ ನೇ ಜನವರಿ ೩ ನೇ ತಾರೀಖಿನ ಲಾಗಾಯ್ತು ೨ ತಿಂಗಳುಗಳ ಪ್ರಿವಿಲೇಜು ರಜಾ ಕೊಡಲ್ಪಟ್ಟಿದೆ

ಬೆಂಗಳೂರು ಸಬ್‌ಜಡ್ಜಿಯವರಾದ ಮೆ|| ಬಿ. ನಾಗಪ್ಪನವರಿಗೆ ಸನ್ ೧೯೧೦ ನೇ ಜನವರಿ ೩ ನೇ ತಾರೀಖಿನ ಲಾಗಾಯ್ತು ಅಲೋವನ್ಸುಗಳಿಲ್ಲದೆ ೫ ದಿವಸಗಳ ರಜಾ ಕೊಟ್ಟಿದೆ

ಚೀಫ್ ಕಮ್ಯಾಂಡೆಂಟ್, ಲೆಫ್ಟಿನೆಂಟ್ ಕರ್ನಲ್ ಜೆ ದೇಶರಾಜೇಅರಸ್ ಯವರಿಗೆ ಕ್ರಿಸ್‌ಮಸ್ ರಜಾದೊಂದಿಗೆ ೧೦ ದಿವಸಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿದೆ ಇವರ ಬದಲಿಯಾಗಿ ಹಾಲಿ ಚೀಫ್ ಕಮ್ಯಾಂಡೆಂಟರಿಗೆ ಚೀಫ್ ಅಸಿಸ್ಟೆಂಟರಾದ ಮೆ| ಆರ್ ಪುಟ್ಟಣ್ಣ, ಬಿ ಎ, ಬಿ ಎಲ್., ಯವರು ಅವರು ಬರುವವರಿಗೂ ಹಂಗಾಮಿಯಾಗಿ ಕೆಲಸ ನೋಡತಕ್ಕದ್ದು

ಸಂಸ್ಥಾನದ ಹುಜೂರು ಟ್ರಿಜರಿ ಆಫೀಸರ್ ಛಾರ್ಜಿನಲ್ಲಿರುವ ಮೆ|| ಕೆ ಕೃಷ್ಣಯ್ಯರ್ ಯವರಿಗೆ ಸನ್ ೧೯೧೦ ನೇ ಜನವರಿ ೩ ನೇ ತಾರೀಖಿನ ಲಾಗಾಯ್ತು ೧ ತಿಂಗಳು ೧೦ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ. ಇವರ ಬದಲಿಗೆ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ ಚೊಕ್ಕಣ್ಣನವರು ಮತ್ತು ಇವರ ಬದಲಿ ಡಿಸ್ಟ್ರಿಕ್ಟ್ ಟ್ರಿಜರಿ ಛಾರ್ಜಿಗೆ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಕೆ ಎ ಅನಂತರಾಮರ್‌ರವರು ಮುಂದಿನ ಹುಕುಂ ಕೊಡುವವರಿಗೆ ಕೆಲಸ ನೋಡತಕ್ಕದ್ದು

ಎಡೆಹಳ್ಳಿ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರರವರಾದ ಎಸ್ ಸುಬ್ಬರಾಯರಿಗೆ ಛಾರ್ಜು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ ತಿಂಗಳುಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿದೆ ಇವರ ಬದಲಿಗೆ ಹಾಲಿ ರೆವಿನ್ಯೂ ಕಮಿಷನರ್ ಆಫೀಸಿನಲ್ಲಿ ಗುಮಾಸ್ತರಾಗಿರುವ ಮೆ| ಎಸ್ ಸುಂದರರಾಜಐಯ್ಯಂಗಾರ್ಯರು ಮುಂದಿನ ಹುಕುಂ ಕೊಡುವವರಿಗೂ ಸದರಿ ತಾಲ್ಲೂಕು ಡೆಪ್ಯುಟಿ ಅಮಲ್ದಾರರಾಗಿಯೂ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ನೋಡತಕ್ಕದ್ದು

ಟಿ|| ನರಸೀಪುರದ ಅಮಲ್ದಾರರವರಾದ ಮೆ ಎನ್ ರಾಮರಾವ್, ಬಿ ಎ. ಬಿ ಎಲ್. ರವರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯೇಟ್ ರಿಜಿಸ್ಟ್ರಾರ್ ರವರಾಗಿಯೂ ಮತ್ತು ಹಾಲಿ ಕೆಲಸದಲ್ಲಿದ್ದ ಮೆ|| ? ವೆಂಕಟರಾವ್ ಬಿ. ಎ ಯವರು ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಾಗಿಯೂ ನೇಮಿಸಲ್ಪಟ್ಟಿರುತ್ತಾರೆ

ಮೆ|| ಎಸ್. ನಾರಾಯಣರಾವ್, ಬಿ ಎ, ಎಂ. ಬಿ. ಮತ್ತು ಸಿ. ಎಂ. ಯವರನ್ನು ೪ ನೇ ಕ್ಲಾಸಿನಿಂದ ೩ ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿ ಕಳೆದ ಸಪ್ಟಂಬರ್ ಮಾಹೆ ೬ ನೇ ತಾರೀಖಿನ ಲಾಗಾಯ್ತು ಬಡ್ತಿಮಾಡಲ್ಪಟ್ಟಿದೆ.

ಪೊಲೀಸು ಟ್ರೇನಿಂಗ್ ಸ್ಕೂಲಿನ ಚಾರ್ಜಿನಲ್ಲಿರುವ ಪೊಲೀಸ್ ಇನ್ಸ್ಪೆಕ್ಟರ್ ಮೆ|| ರಾಮರಾವ್, ಬಿ. ಎ., ಬಿ ಎಲ್, ಯವರು ಚಂಗಾಮಣಿ ತಾ|| ಆಕ್ಟಿಂಗ್ ಅಮಲ್ದಾರರಾಗಿಯೂ ೩ ನೇ ತರಗತಿಯ ಮಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ದೇಶದ ಹತ್ತಿ ವ್ಯಾಪಾರಿಗಳಿಗೆ ಒಳ್ಳೆ ಸಮಯ.

ಈ ವರ್ಷ ಹತ್ತೀ ಬೆಳೆಯು ಚೆನ್ನಾಗಿಲ್ಲದ್ದರಿಂದಲೂ ಅಮೆರಿಕದ ಕೆಲವು ಮಂದಿ ವ್ಯಾಪಾರಸ್ಥರು ಹತ್ತೀ ಬೆಳೆಯನ್ನು ಉಪಾಯದಿಂದ ಕೊಂಡುಕೊಂಡಿರುವ ದೆಸೆಯಿಂದಲೂ ಅರಳೆಯ ಕ್ರಯವು ಬಹಳ ಜಾಸ್ತಿಯಾಗಿ ಅನೇಕ ಕಾರ್ಖಾನೆಗಳಿಗೆ ಸಾಕಾದಷ್ಟು ಕೆಲಸವಿಲ್ಲದೆ ತೊಂದರೆ ಪಡುವವು ಅಮೆರಿಕದ ಹತ್ತಿ ಬೆಳೆಗೆ ಈ ವರ್ಷ ಕುಂದಕವಾಗಿದೆ. ಈಜಿಪ್ಟಿನಿಂದ ಕಳೆದ ವರ್ಷಕ್ಕಿಂತ ೫೦,೦೦೦ ಟನ್ ಕಡಿಮೆ ಅರಳೆ ರಫ್ತಾಗಬಹುದು. ಹತ್ತಿಗೆ ತಾಗಿದ ಒಂದರೆ ರೋಗದಿಂದ ನೀಲನದಿಯ ತಗ್ಗಿನಲ್ಲಿ ಅರಳೆ ಬೆಳೆಯು ಕಡಿಮೆಯಾಯಿತು ಹೀಗಿರುವುದರಿಂದ ವಿಲಾಯಿತಿಯ ಕೆಲವು ಕಾರ್ಖಾನೆಗಳು ಕೆಲಸದ ಕಾಲವನ್ನು ಕಡಿಮೆ ಮಾಡಿದ್ದಲ್ಲದೆ ಜಾಪಾನರು ಸಹ ಎಪ್ರಿಲ್ ತಿಂಗಳ ವರೆಗೆ ಶೇಕಡ ೨೭ ರಂತೆ ಕೆಲಸದ ತಾಸುಗಳನ್ನು ಕಡಿಮೆ ಮಾಡಬೇಕೆಂದು ತೀರ್ಮಾನಿಸಿಕೊಂಡಿದ್ದಾರೆ. ಆದ್ದರಿಂದ ಹಿಂದುಸ್ಥಾನದಲ್ಲಿ ಈ ವರ್ಷ ಅರಳೆಗೆ ಹೆಚ್ಚು ಗಿರಾಕಿ ಆಗಬಹುದು.

ದೇಶಾಭಿಮಾನ.

ದೇಶಾಭಿಮಾನಿಯೆಂದು ಸುಮ್ಮನೆ ಹೇಳಿಕೊಳ್ಳುವುದು ಬಹು ಸುಲಭ ಆದರೆ ಸತ್ಯವಂತನಾದ ಪ್ರತಿಯೊಬ್ಬ ದೇಶಾಭಿಮಾನಿಯು ತನ್ನ ದೇಶದ ವಿಷಯ ಮನಸ್ಸಿನಲ್ಲಿ ಯೋಚಿಸುವುದಲ್ಲದೆ ಕಾರ್ಯತಃ ತನ್ನ ದೇಶಕ್ಕೋಸ್ಕರ ಜೀವಿಸಿ ಕೆಲಸಮಾಡಬೇಕು

ತನ್ನ ದೇಶದ ಚರಿತ್ರೆಯ ವಿಷಯ ತಿಳುವಳಿಕೆ ಇಲ್ಲದವನು ದೇಶಾಭಿಮಾನಿಯಾಗಿರಲಾರನು. ಅದರ ಚರಿತ್ರೆಯೂ ಅದರಲ್ಲಿ ಬದುಕಿಬಾಳಿದ ಸತ್ಯಸಂಧರೂ ಧೀರರೂ ಆವನಿಗೆ ಗೊತ್ತಿರಬೇಕು.

ದೇಶಾಭಿಮಾನವು ಮಹಾ ಉನ್ನತವಾದ ಗುಣ. ಸ್ವಾರ್ಥಪರನು ಎಂದಿಗಾದರೂ ದೇಶಾಭಿಮಾನಿಯಾಗಲಾರನು ತನ್ನ ಜೊತೆ ಸೃಷ್ಟಿಗಳಾದ ಮನುಷ್ಯರನ್ನು ಕನಿಷ್ಠಜಾತಿಯವರೆಂದು ಭಾವಿಸಿ ಅವರನ್ನು ಹೀನೈಸುವವನು ದೇಶಾಭಿಮಾನಿಯಲ್ಲ. ದೇಶಾಭಿಮಾನಿ ಎನ್ನಿಸಿಕೊಳ್ಳುವವನು ಯಾವ ಭೇದವಿಲ್ಲದೆ ಎಲ್ಲರನ್ನೂ ಏಕರೀತಿಯಾಗಿ ಪ್ರೀತಿಮಾಡಬೇಕು.

ನೀನು ನಿನ್ನ ದೇಶವನ್ನು ಪ್ರೀತಿಮಾಡುವುದಕ್ಕಿಂತ ಮುಂಚೆ ನಿನ್ನ ಸ್ವಂತ ಸ್ಥಳವನ್ನು ಹೆಚ್ಚಾದ ಮಮತೆಯಿಂದ ಪ್ರೀತಿಮಾಡು. ನೀನು ವಾಸಮಾಡುವ ಹಳ್ಳಿಯನ್ನೋ ಊರನ್ನೋ ಹೆಚ್ಚಾಗಿ ಪ್ರೀತಿಸು. ಅದರಲ್ಲಿರುವ ಜನರನ್ನು ನಿನ್ನ ಸಹೋದರರಂತೆಯೂ ಸಹೋದರಿಯರಂತೆಯೂ ಕಾಣು.

ದೊಡ್ಡವರು ಮಾತ್ರ ದೇಶಾಭಿಮಾನಿಗಳಾಗಬಹುದೆಂದು ಕೆಲವರು ನೆನಸುತ್ತಾರೆ. ಇದು ನಿಜವಲ್ಲ ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ತಮ್ಮ ಶೀಲಸ್ವಭಾವಗಳಿಂದ ದೇಶಾಭಿಮಾನಿಗಳೆಂದು ಕರೆಯಿಸಿಕೊಳ್ಳಬಹುದು. ದೇಶಕ್ಕೆ ಮಾಡುವ ಚಿಕ್ಕ ಚಿಕ್ಕ ಉಪಕಾರಗಳು ದೇಶಾಭಿಮಾನಿಗೆ ಮಾನವನ್ನು ತರತಕ್ಕವುಗಳಾಗಿವೆ

ಇಂಡಿಯಾ ದೇಶದಲ್ಲಿ ಬ್ರಿಟಿಷ್ ಸರಕಾರದವರ ವಿಷಯ ಬಾಬು ಕೇಶವಚಂದ್ರಸೇನನು ತಿಳಿಸಿರುವ ಅಭಿಪ್ರಾಯ.

ಬಾಬು ಕೇಶವಚಂದ್ರಸೇನನು ಹಿಂದೂ ದೇಶೀಯರಲ್ಲಿ ಪ್ರಸಿದ್ಧನಾದವನೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಈತನ ಜ್ಞಾನವು ಅಸಾಧಾರಣವಾಗಿದ್ದಿತ್ತು. ಈತನು ವಿಲಾಯತಿಗೆ ಹೋಗಿದ್ದಾಗ್ಗೆ ಗತಿಸಿದ ವಿಕ್ಟೋರಿಯಾ ಮಹಾರಾಣಿಯವರು ಈತನನ್ನು ಸನ್ಮಾನಪೂರ್ವಕವಾಗಿ ತಮ್ಮ ಅರಮನೆಗೆ ಬರಮಾಡಿಕೊಂಡು ಈತನನ್ನು ಉಪಚರಿಸಿದರು. ಕೇಶವಚಂದ್ರಸೇನನ ಗುಣ ನಡತೆಗಳು ಶ್ಲಾಘನೀಯವಾದುವುಗಳಾಗಿದ್ದವು ಬ್ರಹ್ಮಸಮಾಜಕ್ಕೆ ಜೀವವನ್ನು ಕೊಟ್ಟವನು ಈತನೇ ಇಂಥಾ ನಿಷ್ಪಕ್ಷಪಾತಿಯಾದ ಈ ಮಹಾತ್ಮನು ಈ ದೇಶವನ್ನು ಆಳುತ್ತಿರುವ ಬ್ರಿಟಿಷ್ ಸರಕಾರದವರ ವಿಷಯ ತಿಳಿಸುವುದೇನಂದರೆ .—

- ನನ್ನ ಮಾತೃಸ್ಥಾನವಾದ ಹಿಂದೂ ದೇಶವು ಅನೇಕ ತರವಾದ ವಿಗ್ರಹಾರಾಧನೆಯಿಂದಲೂ ಮೂಢ ಭಕ್ತಿಯಿಂದಲೂ ವೈದೀಕರ ತಂತ್ರಗಳಿಂದಲೂ ಕೆಡುದುದಾಗಿದೆ. ಇಂಥಾ ಶೋಚನೀಯವಾದ ಸ್ಥಿತಿಯನ್ನು ಮಹಮ್ಮದೀಯರು ತಮ್ಮ ಬಲಾತ್ಕಾರದಿಂದಲೂ ಜುಲುಮಿನಿಂದ ಮತ್ತಷ್ಟು ಹೆಚ್ಚು ಮಾಡಿರುತ್ತಾರೆ ನಮ್ಮ ಭರತಖಂಡಕ್ಕೆ ಇಂಗ್ಲೀಷಿನವರನ್ನು ಕರತಂದವನು ಭಗವಂತನೇ ದೇಶದಲ್ಲಿ ಇನ್ನೂ ಅನೇಕ ಬದಲಾವಣೆಗಳಾಗಬೇಕಾದರೂ ಅದು ಬ್ರಿಟಿಷರ ಆಳ್ವಿಕೆಯಲ್ಲಿ ಉತ್ತಮಸ್ಥಿತಿಗೆ ಬರುತ್ತಾ ಇದೆ. ಇದರ ವಿಷಯ ಯಾವ ಸಂಶಯವೂ ಇಲ್ಲ ನಮ್ಮ ದೇಶದ ರಕ್ಷಣೆಯು ಪ್ರಾರಂಭವಾಗಿರುತ್ತದೆ. ದೇವರು ಇಂಗ್ಲೀಷಿನವರ ಮೂಲಕ ಈ ದೇಶವನ್ನು ನಾಶನದ ಬಂಧನದಿಂದ ಬಿಡಿಸಬೇಕೆಂದು ಉದ್ದೇಶಿಸಿ ಯಾವ ಅಡ್ಡಿಗಳಿದ್ದರೂ ತನ್ನ ಕಾರ್ಯವನ್ನು ನೆರವೇರಿಸಿಕೊಂಡು ಬರುತ್ತಿರುತ್ತಾನೆ ಈ ತನ್ನ ದಿವ್ಯವಾದ ಉದ್ದೇಶವನ್ನು ನೆರವೇರಿಸುವುದಕ್ಕೆ ದೇವರು ಇಂಗ್ಲಿಷಿನವರನ್ನು ಆರಿಸಿಕೊಂಡಿರುತ್ತಾನೆ. ಇಂಗ್ಲಿಷಿನವರ ಆಳ್ವಿಕೆಯಲ್ಲಿ ತಪ್ಪುಗಳಿಲ್ಲವೆಂದು ನಾವು ಹೇಳುವುದಿಲ್ಲ ಯಾರೋ ಒಬ್ಬಿಬ್ಬರು ಗೌರವಹೀನರಾದ ಇಂಗ್ಲಿಷಿನವರು ಅಯೋಗ್ಯರಾಗಿ ನಡೆದುಕೊಂಡರೆ ಎಲ್ಲರೂ ಕೆಟ್ಟವರೆಂದು ಹೇಳುವುದು ತಪ್ಪು ಅಂಥವರ ವಿಷಯ ನಾವು ಉದಾರಭಾವದಿಂದ ಯೋಚಿಸಿ ಕ್ಷಮಿಸತಕ್ಕದ್ದು ಹಿಂದೂ ದೇಶದಲ್ಲಿರತಕ್ಕ ಅನೇಕ ಕೋಟಿ ಪ್ರಜೆಗಳು ಒಂದಾಗಬೇಕೆಂಬ ಲವಲವಿಕೆಯು ಇರುವುದಷ್ಟೆ ಜನರೆಲ್ಲರೂ ತಮ್ಮ ತಮ್ಮ ಜಾತಿ ಮತ್ಸರಾದಿಗಳನ್ನು ಬಿಟ್ಟು ಏಕೋ ಭಗವಂತನನ್ನು ಆರಾಧಿಸುವ ಕಾಲವು ಬರುವುದು. ಆಗ್ಗೆ ಇಂಗ್ಲೀಷಿನವರೂ ದೇಶೀಯರೂ ಒಬ್ಬರನ್ನೊಬ್ಬರು ಸಹೋದರರಂತೆ ಭಾವಿಸಿ ಒಂದೇ ಮನೆತನಕ್ಕೆ ಸೇರಿದ ಮಕ್ಕಳಂತೆ ಪ್ರೀತಿಸುವರು. ಆಗ್ಗೆ ಈ ಉಭಯರಿಗೂ ಇರತಕ್ಕ ಚಿಕ್ಕ ಚಿಕ್ಕ ವೈಮನಸ್ಯಗಳು ಕಾಣದೇಹೋಗುವುವು ಯಾವ ಆಂಗ್ಲೇಯನಾದರೂ ದೇಶೀಯನನ್ನು ಅಲ್ಲಗಳೆಯಲಾರನು. ಯಾವ ದೇಶೀಯನಾದರೂ ಆಂಗ್ಲೇಯನನ್ನು ಹಗೆ ಮಾಡಲಾರನು ಈ ಉಭಯ ಪಂಗಡದವರೂ ದೇವರ ಅಪ್ಪಣೆಯಾದ ಉಪದೇಶದಿಂದಲೇ ಇಲ್ಲಿರುವರೆಂದು ತಿಳಿದುಕೊಳ್ಳುವರು ಇಂಗ್ಲೀಷರೂ ಹಿಂದೂಗಳೂ ಬೇರೆಯಾಗದೆ ಇರಲಿ " ಇವರಿಬ್ಬರೂ ತಮ್ಮ ತಮ್ಮ ಅಭಿವೃದ್ಧಿಗೆ ಒಬ್ಬರನ್ನೊಬ್ಬರು ಅಪೇಕ್ಷಿಸಲಿ.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಸಭಾ

ತಾ ೨೫ ೧೨ ೦೯—ರಾಜಧಾನಿಗೆ ಗೌರ್ನರ್ ಜನರಲ್‌ರವರು ದಯಮಾಡಿಸಿದ ಕಾರಣ ತಮ್ಮ ಪತ್ರಿಕೆಯಲ್ಲಿ ಮೇಲಿನ ಸಮಾಜದವರ ನಡವಳಿಕೆಗಳನ್ನು ಪ್ರಚುರ ಪಡಿಸಲು ನಾಲ್ಕು ವಾರಗಳಿಂದ ಅವಕಾಶವಿಲ್ಲದೆ ಹೋಯಿತು ಈ ವಿಷಯದಲ್ಲಿ ತಮ್ಮ ಪತ್ರಿಕೆಯನ್ನು ಓದತಕ್ಕ ಸ್ತ್ರೀಗಳು ಅನೇಕರು ನಮ್ಮನ್ನು ಮಂದಿರದ ವಿಷಯವನ್ನು ಕುರಿತು “ವೃತ್ತಾಂತ ಪತ್ರಿಕೆ”ಯಲ್ಲಿ ಯಾಕೆ ಏನೂ ಇಲ್ಲವೆಂದು ಪ್ರಶ್ನೆಯನ್ನು ಮಾಡುತ್ತಾರೆ ಆದ್ದರಿಂದ ಸ್ತ್ರೀ ವಿದ್ಯಾಪಕ್ಷಪಾತಿಗಳಾದ ತಾವು ಈ ವರ್ತಮಾನಕ್ಕೆ ಸ್ವಲ್ಪ ಅವಕಾಶವನ್ನು ಕೊಟ್ಟು ಈ ಸ್ತ್ರೀ ಸಮಾಜಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ ಈ ಸಮಾಜವು ಇನ್ನೂ ಚಿಕ್ಕ ಸಸಿಯಾಗಿದೆ ವಿದ್ಯಾವಂತರಾದ ತಮ್ಮಂಥವರುಗಳಿಂದ ಇದು ದೊಡ್ಡ ವೃಕ್ಷವಾಗಬೇಕು

ನಾಲ್ಕೈದು ವಾರಗಳಿಂದ ಸಭ ಜದ ಕ್ರಮಗಳು ತಮ್ಮ ಪತ್ರಿಕೆಯಲ್ಲಿ ಬರಲು ಆಸ್ಪದವಿಲ್ಲದಿದ್ದರೂ ಪ್ರತಿ ವಾರದ ಶನಿವಾರದ ವಿದಾಟಂಗುಗಳು ಮತ್ತು ಉಪನ್ಯಾಸಗಳು ಕ್ರಮವಾಗಿ ಜರುಗಿದವು ಈ ವಾರವೆಂದರೆ ಈ ದಿನದಲ್ಲಿ ಶ್ರೀಮತಿ, ಮಹಲಕ್ಷ್ಮಮ್ಮನವರು “ಕರ್ಮ” ವೆಂಬುದನ್ನು ಕುರಿತು ಒಂದು ಶ್ರಾವ್ಯವಾದ ಮತ್ತು ಬುದ್ಧಿಯುಕ್ತವಾದ ಉಪನ್ಯಾಸವನ್ನು ಓದಿದರು ಸಾರಾಂಶದಲ್ಲಿ ಸ್ವಾರ್ಥಾಪೇಕ್ಷೆಯಿಲ್ಲದೆ ಮಾಡತಕ್ಕ ಕರ್ಮವೇ ಕರ್ಮವೆಂತಲೂ ಅದೇ ಮೋಕ್ಷಕ್ಕೆ ಸಾಧಕವೆಂತಲೂ ವ್ರತಗಳಿಗೆಲ್ಲಾ ದೊಡ್ಡವ್ರತವೆಂತಲೂ ಹೇಳಿದರು ಕಾಮ್ಯ ಕರ್ಮವು ಬಂಧಕ್ಕೆ ಕಾರಣವಾಗುವದೇ ಹೊರತು ಪುರುಷಾರ್ಥಕ್ಕೆ ಕಾರಣವಾಗಲಾರದೆಂದು ಹೇಳಿ ವ್ಯಾಸವನ್ನು ಪೂರ್ತಿ ಮಾಡಿದರು ನೆರೆದಿದ್ದ ಸ್ತ್ರೀಗಳೆಲ್ಲರೂ ಬಹಳ ಸಂತೋಷಪಟ್ಟವರಾಗಿ ಶ್ರೀಮತಿ, ಮಹಲಕ್ಷ್ಮಮ್ಮನವರನ್ನು ಕೋಲಾಹಲ ಧ್ವನಿಯಿಂದ ಆನಂದ ಪಡಿಸಿದರು ಕ್ರಮದಂತೆ ಗಾನ, ವಾದ್ಯಗಳ ನುಡಿಸುವಿಕೆ ಇತ್ಯಾದಿಗಳು ನಡೆದು ಸಭೆಯು ಪೂರ್ತಿಯಾಯಿತು

ಬರುವ ವಿದಾಟಂಗು ೧೯೧೦ ನೇ ಜನವರಿ ೧ ನೇ ತಾರೀಖು ನಡೆಯುತ್ತೆ ಎಲ್ಲರೂ ದಯಮಾಡಿಸಬೇಕಾಗಿ ಈ ಪತ್ರಿಕಾ ಮೂಲಕ ತಿಳಿಸಲ್ಪಟ್ಟಿರುತ್ತೆ

ನಾಶಿಕ ಪಟ್ಟಣದಲ್ಲಿ ನಡೆದ ಭಯಂಕರವಾದ ಕೊಲೆ

ಕಳೆದ ಮಂಗಳವಾರ ಸಾಯಂಕಾಲ ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ನಾಶಿಕ ಪಟ್ಟಣದ ಕಲೆಕ್ಟರಾದ ಮಿ ಜಾಕ್ಸನ್‌ರವರನ್ನು ಆನಾಕೆಯುಳ್ಳಕ್ಕೆ ಸೇರಿದ ಒಬ್ಬ ಬ್ರಾಹ್ಮಣ ಯೌವನಸ್ಥನು ಗುಂಡಿನಿಂದ ಹೊಡೆದು ಕೊಂದುಹಾಕಿರುವನೆಂಬ ಮಹಾ ಘೋರವಾದ ಸಂಗತಿಯು ಎಲ್ಲರನ್ನೂ ದುಃಖಸಾಗರದಲ್ಲಿ ಮುಳುಗಿಸಿರುವುದು ಮಿ। ಜಾಕ್ಸನ್‌ರವರು ಕೆಲವು ಕಾಲದಿಂದ ನಾಶಿಕ ಡಿಸ್ಟ್ರಿಕ್ಟಿಗೆ ಕಲೆಕ್ಟರಾಗಿದ್ದು ತಮ್ಮ ವಿದ್ಯೆ, ಶೀಲಸ್ವಭಾವಗಳಿಂದ ಜನರಲ್ಲಿ ವಿಶೇಷವಾದ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು ಒಂದೆರಡು ವರುಷಗಳಿಂದ ನಾಶಿಕ ಪಟ್ಟಣದಲ್ಲಿ ಕೆಲರು ದುರಾತ್ಮರು ಸೇರಿಕೊಂಡು ರಾಜದ್ರೋಹಕರವಾದ ಕೆಲಸಗಳನ್ನು ಮಾಡಿ ಪ್ರಜಾ ನೆಮ್ಮದಿಗೆ ಕೆಡಕನ್ನುಂಟು ಮಾಡುತ್ತಿದ್ದುದರಿಂದ ಅವರನ್ನು ಸರಕಾರದವರು ವಿಚಾರಿಸಿ ಕೆಲವರಿಗೆ ಪೂರಾ ಶಿಕ್ಷೆಯನ್ನು ವಿಧಿಸಿದರು ಸವಾರ್ಕರ್ ಎಂಬತಕ್ಕ ರಾಜದ್ರೋಹಿಗೆ ಜೀವಾವಧಿ ದ್ವೀಪಾಂತರ ಸಜಾ ಶಿಕ್ಷೆಯಾಯಿತು ಮಿ। ಜಾಕ್ಸನ್‌ರವರು ಡಿಸ್ಟ್ರಿಕ್ಟಿನ ಕಲೆಕ್ಟರಾಗಿದ್ದುದರಿಂದ ತಮ್ಮ ಉದ್ಯೋಗಕ್ಕೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಿಸಿ ತೈಸಲ್ಮಾಡುತ್ತಿದ್ದರು ಇವರನ್ನು ಕೊಂದು ಹಾಕಬೇಕೆಂದು ಅನಂತಲಕ್ಷ್ಮಣ ಕಾನರೆ ಎಂಬ ಹೆಸರುಳ್ಳ ಆ ಕೊಲೆಗಾರನು ಸಮಯವನ್ನು ಹೊಂಚುಹಾಕಿಯುತ್ತಿದ್ದನು

ಮಿ ಜಾಕ್ಸನ್‌ರವರಿಗೆ ಬೊಂಬಾಯಿ ಪಟ್ಟಣದ ಕಲೆಕ್ಟರ್ ಕೆಲಸ ನೋಡುವಂತೆ ವರ್ಗವಾಯಿತು ಅವರು ನಾಶಿಕವನ್ನು ಬಿಟ್ಟು ಹೊರಟುಹೋಗುವುದಕ್ಕೆ ಮುಂಚೆ ಪುರವಾಸಿಗಳು ಅವರ ಸತ್ಕಾರಕ್ಕೋಸ್ಕರ ವಿಜಯಾನಾಮ ಎಂಬ ನಾಟಕರಾತ್ರಿ ದಯಮಾಡುವಂತೆ ಕೇಳಿಕೊಂಡಿದ್ದರು ಅನಂತಲಕ್ಷ್ಮಣನು ಆಗ ನಾಟಕಮಂದಿರಕ್ಕೆ ಎರಡು ಟಿಕೆಟ್‌ಗಳನ್ನು ತಗೆದುಕೊಂಡು ಒಳಗಡೆಯಲ್ಲಿ ಬಿಸುಕೊಂಡಿದ್ದನು ನೇಮಕವಾದ ಹೊತ್ತಿಗೆ ಮಿ। ಜಾಕ್ಸನ್‌ರವರು ಅವರೊಡನೆ ಇದ್ದರು ಮೂವರು ಸ್ನೇಹಿತರೂ ಬಂದು ನಾಟಕಮಂದಿರವನ್ನು ಪ್ರವೇಶಿಸಿದರು ಆ ಸಮಯದಲ್ಲಿ ಅನಂತಲಕ್ಷ್ಮಣನು ತಟ್ಟನೆ ಎದ್ದು ಬಂದು ಕಲೆಕ್ಟರ ಎದುರಿಗೆ ಏಳು ಗುಂಡುಗಳನ್ನು ಹಾಕಿ ಟಾರ್ ಮಾಡಿದ್ದ ಪಿಸ್ತೂಲಿನಿಂದ ಅವರನ್ನು ಗುರಿಯಿಟ್ಟು ಹೊಡೆದನು ತಕ್ಷಣವೇ ಕಲೆಕ್ಟರು ಕೆಳಗೆ ಬಿದ್ದುಬಿಟ್ಟರು ಪಕ್ಕದಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರಾದ ಮಿ. ಪೋಲ್‌ಕಾರರು ಈ ಕೊಲೆಗಾರನ ಮೇಲೆ ನುಗ್ಗಿ ಅವನ ಹಸ್ತದಲ್ಲಿದ್ದ ಪಿಸ್ತೂಲನ್ನು ಕಿತ್ತುಕೊಂಡರು ತಕ್ಷಣವೇ ಅನಂತಲಕ್ಷ್ಮಣನು ಎಡಗೈ ಎನ್ನು ಜೇಬಿಗೆ ಹಾಕಿ ಅಲ್ಲಿದ್ದ ಮತ್ತೊಂದು ಪಿಸ್ತೂಲನ್ನು ತಗೆದು ಆತ್ಮಹತ್ಯ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುವಾಗ್ಗೆ ಅಕ್ಕಪಕ್ಕದಲ್ಲಿದ್ದ ಕೆಲವು ಉದ್ಯೋಗಸ್ಥರು ಅವನ ಮೇಲೆ ನುಗ್ಗಿ ಅವನ ಎಡಗೈಯನ್ನು ಹಿಡಿದು ಭದ್ರಮಾಡಿದರು ಡಾಕ್ಟರ್ ಕುಲ್‌ಕರ್ಣಿಯವರು ತಕ್ಷಣವೇ ಜಾಕ್ಸನ್‌ರವರನ್ನು ಉಪಚರಿಸ ಬಂದರು ಆದರೆ ಜೀವವು ಹೋಗಿತ್ತು ಈ ಭಯಂಕರವಾದ ಕೊಲೆಯು ನಡೆದಾಗ್ಗೆ ಜಾಕ್ಸನ್‌ರವರ ಪತ್ನಿಯು ಬೊಂಬಾಯಿನಲ್ಲಿದ್ದರು

ಪೋಲೀಸಿನವರು ಈ ದುರಾತ್ಮನನ್ನು ಹಿಡಿದುಕೊಂಡು ವಿಚಾರಣೆ ಮಾಡುವಲ್ಲಿ ಕೆಲವು ಸಂಗತಿಗಳು ಹೊರಬಿದ್ದವು ತಾನು ವಾಸಾರ್ದ್ ಎಂಬ ಊರಿನಲ್ಲಿರುವಾಗ್ಗೆ ಮಿ। ಜಾಕ್ಸನ್‌ರವರು ಸವಾರ್ಕರನಿಗೆ ಶಿಕ್ಷೆ ವಿಧಿಸಿದಾಗ್ಗೆ ಕಲೆಕ್ಟರನ್ನು ಹ್ಯಾಗಾದರೂ ಕೊಂದು ಹಾಕಬೇಕೆಂದು ಪ್ರತಿಜ್ಞೆ ಮಾಡಿಕೊಂಡನೆಂದು ತಿಳಿಸಿರುತ್ತಾನೆ ಇವನ ಕಾರ್ಯಕ್ಕೆ ಬೇರೆ ಯಾರೂ ಸೇರಿಲ್ಲವೆಂದು ಇವನು ಹೇಳುವನು ಇವನು ಔರಂಗಾಬಾದಿನಲ್ಲಿರುವ ತನ್ನ ಚಿಕ್ಕಪ್ಪನ ಮನೆಯಲ್ಲಿ ವಾಸಮಾಡಿಕೊಂಡಿದ್ದನು ಇವನಿಗೆ ಹದಿನೆಂಟು ವರುಷ ವಯಸ್ಸಾಗಿರುವದು ಸ್ವಲ್ಪ ಎತ್ತರವಾದ ಆಳು ಮತ್ತು ಮುಖಲಕ್ಷಣವುಳ್ಳವನು

ಮಿ॥ ಜಾಕ್ಸನ್‌ರವರು ೧೮೮೮ ರಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬೊಂಬಾಯಿಗೆ ಬಂದರು ಇವರು ಆಕ್ಸ್‌ಫೋರ್ಡ್ ಸರ್ವಕಲಾಶಾಲೆಯಲ್ಲಿ ಎಂ ಎ ಪರೀಕ್ಷೆಯನ್ನು ಕೊಟ್ಟು ಬಿರುದನ್ನು ಹೊಂದಿದ್ದರು ಮತ್ತು ಬಾರಿಸ್ಟರ್ ಪರೀಕ್ಷೆಯಲ್ಲಿ ಸಹ ತೇರ್ಗಡೆ ಹೊಂದಿದ್ದರು ಇವರಿಗೆ ಸಂಸ್ಕೃತ ಮತ್ತು ಮರಾಟಿ ಭಾಷೆಗಳಲ್ಲಿ ಅಸಾಧಾರಣವಾದ ಪಾಂಡಿತ್ಯವಿತ್ತು ವಿದ್ಯಾ ಸಂಬಂಧವಾದ ಸಂಗತಿಗಳನ್ನು ಕುರಿತು ಆಗಾಗ ಮಾಸಪತ್ರಿಕೆಗಳಲ್ಲಿ ಬಾತ್ಮಿಗಳನ್ನು ಬರೆಯುತ್ತಿದ್ದರು ಇವರು ದೇಶೀಯರನ್ನು ಬಹಳ ಗೌರವದಿಂದ ಕಂಡು ಅವರನ್ನು ತಮ್ಮ ಬಂಗಲೆಗೆ ಆಗಾಗ್ಗೆ ಬರಮಾಡಿಕೊಂಡು ಅವರ ಕಷ್ಟಸುಖಗಳನ್ನು ವಿಚಾರಿಸುತ್ತಿದ್ದರು ಇಂಥಾ ಸತ್ಪುರುಷರು ಕೊಲೆಗಾರನ ಗುಂಡಿಗೆ ಆಹುತಿಯಾದುದನ್ನು ಕೇಳಿ ದೇಶೀಯರೆಲ್ಲರೂ ದುಃಖಿಸುತ್ತಿರುವರು

ಕಳೆದ ಗುರುವಾರ ಪ್ರಾತಃಕಾಲದಲ್ಲಿ ಮಿ ಜಾಕ್ಸನ್‌ರವರ ಉತ್ತರಕ್ರಿಯಾದಿಗಳು ಬಹು ಗಾಂಭೀರ್ಯವಾಗಿ ಜರುಗಿದವು ನಾಶಿಕ ಪಟ್ಟಣದ ಪ್ರಮುಖರಾದ ಜನರೆಲ್ಲರೂ ಅವರ ಬಂಗಲೆಗೆ ಹೋಗಿದ್ದರು ಕಳೇಬರವನ್ನು ಪೆಟ್ಟಿಗೆಯಲ್ಲಿಟ್ಟು ದೇಶೀಯ ಕ್ರೈಸ್ತರು ಸಮಾಧಿಗೆ ತೆಗೆದುಕೊಂಡು ಹೋದರು ಪ್ರೀತಿ ಸೂಚಕವಾದ ಹೂವಿನ ದಂಡೆಗಳು ಅನೇಕವಾಗಿ ಇಂಗ್ಲಿಷ್ ಜನರಿಂದಲೂ ದೇಶೀಯರಿಂದಲೂ ಕಳುಹಿಸಲ್ಪಟ್ಟು ಶವದ ಮೇಲೆ ಇಡಲ್ಪಟ್ಟವು ವ್ಯಸನ ಸೂಚಕಾರ್ಥವಾಗಿ ನಾಶಿಕ ಪಟ್ಟಣದ ಸ್ಕೂಲುಗಳೂ ಅಂಗಡಿಗಳೂ ಸರ್ಕಾರಿ ಆಫೀಸುಗಳೆಲ್ಲವೂ ಮುಚ್ಚಲ್ಪಟ್ಟವು ಜಾಕ್ಸನ್‌ರವರ ಪತ್ನಿಗೆ ಸಂತಾಪಸೂಚಕ ತಂತಿ ವರ್ತಮಾನಗಳು ವೈಸ್‌ರಾಯರೇ ಮೊದಲಾದ ಅನೇಕರಿಂದ ಬಂದವು ವರ್ತಮಾನ ಪತ್ರಿಕೆಗಳೆಲ್ಲಾ ಅನಾಯಕ ಕಾರ್ಯಕ್ಕೆ ಸೇರಿದವರನ್ನು ಕಂಡುಹಿಡಿದು ಅವರನ್ನು ಸಂಪೂರ್ಣವಾಗಿ ಧ್ವಂಸ ಮಾಡುವಂತೆ ಲೇಖನಗಳನ್ನು ಬರೆದಿರುತ್ತವೆ ಪೋಲೀಸಿನವರು ಆಗಲೇ ಕೆಲವರನ್ನು ಹಿಡಿದು ಅವರವರ ಮನೆಗಳನ್ನು ಪರಿಶೋಧಿಸಿದರು ಕೆಲವರ ಹತ್ತಿರ ಪಿಸ್ತೂಲುಗಳು ಸಿಕ್ಕಿರುವವೆ ಮುಂದೇನಾಗುವುದೋ ಅದನ್ನು ಎದಿರು ನೋಡುತ್ತಿರುವರು ಅನಾಯಕತ್ವವು ಈ ದೇಶದ ಒಳ್ಳೇ ಹೆಸರನ್ನು ಕೆಡಿಸುತ್ತಾ ಬಂದಿದೆಯೆಂದು ವಾಚಕರೆಲ್ಲರೂ ತಿಳಿದಿರುತ್ತಾರೆ ಇಂಥಾ ಭಯಂಕರವಾದ ಸಂಘಕ್ಕೆ ಸೇರಿಕೊಂಡು ಪ್ರಜಾ ನೆಮ್ಮದಿಗೂ ಸರಕಾರಕ್ಕೂ ಕೇಡನ್ನುಂಟುಮಾಡುತ್ತಿರುವ ದುಷ್ಟರನ್ನು ಸರಕಾರದವರೂ ಪ್ರಜೆಗಳೂ ಪತ್ತೆಮಾಡಿ ಸಖತ್ ಶಿಕ್ಷೆ ವಿಧಿಸುವರೆಂದು ನಂಬುತ್ತೇವೆ

ಹರಕು ಮುರುಕು

ಹವಾಯಿ ದೇಶಭಾಷೆಯಲ್ಲಿ ೧೨ ಅಕ್ಷರಗಳು ಮಾತ್ರ ಇರುವವು ಟಾರ್ಟರ್ ದೇಶಭಾಷೆಯಲ್ಲಿ ೨೦೨ ಅಕ್ಷರಗಳಿರುವವು

* * *

ಪೆಸಿಫಿಕ್ ಸಾಗರದಲ್ಲಿ ಗುಆಂ ಎಂಬ ದ್ವೀಪದ ಹತ್ತಿರ ಸಾಗರವು ಆರು ಮೈಲಿ ಆಳವಿರುವುದು ಭೂಲೋಕದಲ್ಲೆಲ್ಲಾ ಅತ್ಯುನ್ನತವಾಗಿರುವ ಶಿಖರವಾದ ಎವರೆಸ್ಟ್ ಬೆಟ್ಟವನ್ನು ಆ ಸ್ಥಳದಲ್ಲಿ ಚೆನ್ನಾಗಿ ಮುಳುಗಿಸಬಹುದು

* * *

ಬೋರಿಕ್ ಪಟ್ಟಣದ ಒಬ್ಬ ಮೋಚಿಯು ಒಂದು ವಿಧವಾದ ಜೋಡಿನ (ಬೂಟ್ಸಿನ) ಗುಂಡಿಯನ್ನು ಕಂಡುಹಿಡಿದಿರುವನು ಇವನು ಇದರ ಗುಟ್ಟನ್ನು ಅಮೆರಿಕ ದೇಶದವನೊಬ್ಬನಿಗೆ ೮೫ ಸಾವಿರ ರೂಪಾಯಿಗಳಿಗೆ ಮಾರಿರುವನು

* * *

ಜರ್ಮನಿ ದೇಶದಲ್ಲಿ ಹತ್ತು ವರುಷಗಳ ಕಾಲ ಬಹು ಹುಷಾರಿಯಿಂದಲೂ ಆಸಕ್ತಿ ಸಂಭವಿಸದಂತೆಯೂ ಕೆಲಸ ಮಾಡಿದ ಎಂಜಿನ್ ಡ್ರೈವರುಗಳಿಗೆ ಒಂದು ಭಂಗಾರದ ಪದಕವನ್ನೂ ೧೫೦೦ ರೂಪಾಯಿಗಳನ್ನೂ ಬಹುಮಾನವಾಗಿ ಕೊಡುವರು

* * *

ಒಂದೆರಡು ವರುಷಗಳ ಹಿಂದೆ ಅಮೆರಿಕ ದೇಶದಲ್ಲಿ ಪ್ರಖ್ಯಾತಿ ಪಡೆದಿದ್ದ ಸಾನ್‌ಫ್ರಾನ್ಸಿಸ್ಕೊ ಪಟ್ಟಣವು ಭೂಕಂಪದಿಂದ ನಾಶವಾಯಿತಷ್ಟೆ ಅದನ್ನು ಪುನಃ ಕಟ್ಟುವುದಕ್ಕೆ ೬೦,೩೦ ೦೦ ೦೦೦ ರೂಪಾಯಿಗಳು ಖರ್ಚಾಗಿವೆ ೧೯೦೬ ರಲ್ಲಿ ಇದೇ ಪಟ್ಟಣಕ್ಕೆ ಬೆಂಕಿಬಿದ್ದು ೧೫೦ ಕೋಟಿ ರೂಪಾಯಿಗಳು ನಷ್ಟವಾದವು

* * *

ಬ್ರಿಟಿಷ್ ಚಕ್ರಾಧಿಪತ್ಯದ ಪ್ರಮುಖ ಮಂತ್ರಿಗಳಲ್ಲಿ ಬಹಳ ಕಾಲ ಕೆಲಸ ಮಾಡಿದವರು ರಾಬರ್ಟ್ ವಾಲ್‌ಪೋಲ್ ಎಂಬವರ ಇವರು ಸುಮಾರು ೨೧ ವರುಷ ಮಂತ್ರಿಪದವಿಯಲ್ಲಿದ್ದರು ಬಹಳ ಕೊಂಚ ಕಾಲ ಮಂತ್ರಿತ್ವವನ್ನು ನಡಿಸಿದವರು ಅರ್ಲ್ ಆಫ ಬಾತ್ ಎಂಬವರು ಇವರು ಎರಡು ದಿನಗಳು ಮಾತ್ರ ಅಧಿಕಾರದಲ್ಲಿದ್ದರು

* * *

ಗಾಳಿಯ ಸಹಾಯದಿಂದ ಪ್ರಯಾಣಮಾಡುವ ಹಡಗುಗಳಿಗೆ ಪತಸ್ತಂಭಗಳನ್ನು ಕಟ್ಟುವದುಂಟಷ್ಟೆ ಅಂಥಾ ಪತಸ್ತಂಭಗಳು ಕೆಲವು ಹಡಗುಗಳಲ್ಲಿ ೧೬೦ ರಿಂದ ೧೮೦ ಅಡಿಗಳ ಎತ್ತರವಿರುವವು ಅವುಗಳಿಗೆ ಕಟ್ಟಲ್ಪಡುವ ಪಾವುಟಾಗಳು ಅರವತ್ತು ಸಾವಿರದಿಂದ ಒಂದು ಲಕ್ಷ ಚದರ ಅಡಿಗಳ ಬಟ್ಟೆಯನ್ನು ಒಳಗೊಂಡಿರುವವು

* * *

ಇಟಲಿ ರಾಜ್ಯದ ರಾಜಧಾನಿಯಾದ ರೋಂ ನಗರದಲ್ಲಿ ಒಂದು ವಿಚಿತ್ರವಾದ ಪುಸ್ತಕಭಂಡಾರವನ್ನು ಸ್ಥಾಪಿಸುವುದಕ್ಕೆ ಏರ್ಪಾಡಾಗಿದೆ ಈ ಪುಸ್ತಕ ಭಂಡಾರದಲ್ಲಿ ಆದಿಯಿಂದ ಇದುವರೆವಿಗೆ ಪ್ರಚಾರದಲ್ಲಿರತಕ್ಕ ವರ್ತಮಾನ ಪತ್ರಿಕೆಗಳನ್ನು ಸಂಗ್ರಹಿಸಿಡುವರು ಆಗಲೆ ಎರಡು ಲಕ್ಷ ತರವಾದ ವರ್ತಮಾನ ಪತ್ರಿಕೆಗಳು ಕೂಡಿಸಲ್ಪಟ್ಟಿಯುವವು

* * *

ಇಂಗ್ಲೆಂಡ್ ದೇಶದ ಕಾದಂಬರಿ ಪ್ರಣೇತರಲ್ಲಿ ಡಿಕನ್ಸ್ ಎಂಬಾತನು ಅಗ್ರಗಣ್ಯನಾಗಿದ್ದನು ಅವನು ಬರೆದಿರುವಂಥಾ ಕಾವ್ಯಗಳನ್ನು ಲೋಕದ ನಾನಾ ಕಡೆಗಳಲ್ಲಿ ಜನರು ಬಹು ಗೌರವದಿಂದ ಓದುವರು ಇವನು ಒಂದೆರಡು ಪುಸ್ತಕಗಳನ್ನು ಬರೆಯುವುದಕ್ಕೆ ಉಪಯೋಗಿಸಿದ ಕೋಳಿ ಗರಿಯ ಲೇಖಣಿಯನ್ನು ಐವತ್ತು ರೂಪಾಯಿಗಳಿಗೆ ಒಬ್ಬಾತನು ಕೊಂಡುಕೊಂಡಿರುವನು

* * *

ಕ್ಯಾಪ್ಟನ್ ಸ್ಕಾಟ್ ಎಂಬ ಶಾಸ್ತ್ರಜ್ಞರು ದಕ್ಷಿಣ ಧ್ರುವವನ್ನು ಕಂಡು ಹಿಡಿಯುವುದಕ್ಕೆ ಸಕಲ ಸನ್ನಾಹಗಳನ್ನು ಮಾಡುತ್ತಿರುವರು ಅವರಿಗೂ ಅವರ ಕಡೆಯವರಿಗೂ ವಿಚಿತ್ರವಾದ ಜೋಡುಗಳನ್ನು ವಿಲಾಯಿತಿಯಲ್ಲಿ ತಯಾರ್ಮಾಡುತ್ತಿರುತ್ತಾರೆ ಪ್ರತಿಯೊಂದು ಜೋಡು ನಾಲ್ಕು ಪೌಂಡು ತೂಕವಿದ್ದು ತುಪ್ಪಟಿಯಿಂದ ಮಾಡಲ್ಪಟ್ಟಿರುವುದು ದಕ್ಷಿಣ ಧ್ರುವದ ಛಳಿಯು ವಿಪರೀತವಾದುದೆಂದು ಇದರಿಂದ ಗೊತ್ತಾಗುತ್ತದಲ್ಲವೆ

ಇಟಲಿ ದೇಶದಲ್ಲಿ ನೇಪಲ್ಸ್ ಎಂಬ ಪಟ್ಟಣವು ಬಹ ಸುಂದರವಾದುದು ಈ ಪಟ್ಟಣದಲ್ಲಿ ಜನರು ವಿಹಾರ್ಯವುದಕ್ಕೆ ಅನುಕೂಲವಾದ ಸ್ನಾನದ ಭವನಗಳನ್ನು ಕಟ್ಟುವುದಕ್ಕೆ ಏರ್ಪಾಡಾಗಿದೆ ಇಂಥಾ ಸ್ನಾನದ ಮನೆಗಳಲ್ಲಿ ನಾಲ್ವತ್ತು ಸಾವಿರ ಪ್ರಜೆಗಳು ಸ್ನಾನ ಮಾಡಬಹುದಂತೆ ವರುಷದ ಯಾವ ಕಾಲದಲ್ಲಾದರೂ ಸ್ನಾನ ಮಾಡುವವರಿಗೆ ಬಿಸಿನೀರಾಗಲೀ ತಣ್ಣೀರಾಗಲೀ ದೊರೆಯುವುದು

* * *

ಜರ್ಮನಿ ದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ರಿಜಿಸ್ಟರ್ ಕಾಗದಗಳಿಗೆ ಮುದ್ರೆಹಾಕಿ ರಶೀತಿ ಕೊಡಲು ಅಲ್ಲಿನ ಪೋಸ್ಟಾಫೀಸಿನಲ್ಲಿ ಒಂದು ವಿಧವಾದ ಯಂತ್ರವನ್ನು ಇಟ್ಟಿರುವರು ಈ ಯಂತ್ರದ ಒಂದು ಬಾಯಿಗೆ ಕಾಗದವನ್ನು ಕೊಟ್ಟು ಹಿಡಿಯನ್ನು ತಿರುಗಿಸಿದರೆ ಕಾಗದಕ್ಕೆ ಮುದ್ರೆ ಹಾಕುವುದು ಯಂತ್ರದ ಮತ್ತೊಂದು ಬಾಯಿಯಲ್ಲಿ ರಶೀತಿಯು ಮುದ್ರೆ ಹಾಕಲ್ಪಟ್ಟು ಕಾಗದ ತ ದವನಿಗೆ ಕೊಡಲ್ಪಡುವುದು

* * *

ಬೆಲ್ಜಿಯಂ ದೇಶದಲ್ಲಿ ಎಲ್ಲಾ ಹಸುಗಳ ಕಿವಿಗಳಿಗೆ ಉಂಗುರಗಳು ಸಿಕ್ಕಿಸಲ್ಪಡಬೇಕೆಂದು ವಿಧಾಯಕವಾಗಿದೆ ಮೂರುತಿಂಗಳು ತುಂಬಿದ ಎಲ್ಲಾ ಹಸುಗಳಿಗೂ ಈ ರೀತಿ ಮಾಡಬೇಕೆಂದು ಸರಕಾರದವರು ನಿಶ್ಚಿಸಿರುತ್ತಾರೆ ಹಾಗೆ ಮಾಡುವುದು ಅವುಗಳ ಆರೋಗ್ಯಕ್ಕೆ ಸಹಕಾರಿಯಾಗಿರುವುದೆಂದು ತಿಳಿಸುವರು ಆ ದೇಶದಲ್ಲಿ ಗೋಪಾಲಕರುಗಳನ್ನು ಸಾಕತಕ್ಕವರು ಹುಟ್ಟತಕ್ಕ ಎಲ್ಲಾ ಮರಿಗಳ ಜನನವನ್ನು ಕ್ರಮವಾಗಿಡಬೇಕೆಂದು ಕಟ್ಟಳೆಯುಂಟು

* * *

ಗಾಜಿನ ಬಟ್ಟಲಲ್ಲಿ ಕುದಿಯುವ ಬಿಸಿನೀರನ್ನು ಹಾಕಿದರೆ ಬಟ್ಟಲು ಒಡೆದುಹೋಗುವುದೆಂದು ಎಲ್ಲರಿಗೂ ಗೊತ್ತಿದೆಯಷ್ಟೆ ಧ್ರುವಪ್ರದೇಶಗಳಲ್ಲಿ ವಿಪರೀತವಾದ ಶೀತದಿಂದ ಹಿಮವು ಗಟ್ಟಿಯಾಗಿ ಗಾಜಿನಂತಿರುವುದು ಇಂಥಾ ಹಿಮದ ಮೇಲೆ ಸಾಧಾರಣವಾದ ತಣ್ಣೀರನ್ನು ಎರಚಿದರೆ ಹಿಮವು ಒಡೆದು ಹೋಗುವುದಂತೆ ಹೀಗಾಗುವುದು ನೀರಿನಲ್ಲಿರುವ ಕಾವದಿಂದಲೇ ನೀರಿನಲ್ಲಿರುವ ಕಾವು ಮಂಜುಗಡ್ಡೆಯನ್ನು ಒಡೆಯುವುದಾದರೆ ಧ್ರುವದ ಹತ್ತಿರ ಇನ್ನೆಷ್ಟು ಛಳಿ ಇರುವುದು

* * *

ಲೋಕ ವಿಖ್ಯಾತನಾದ ಷೇಕ್ಸ್‌ಪಿಯರ್ ಎಂಬಾತನು ಕವಿಗಳಲ್ಲಿ ಅಗ್ರಗಣ್ಯನೆಂದು ಎಣಿಸಲ್ಪಟ್ಟಿರುವನು ಈ ಕವಿಯ ನಾಟಕ ಪುಸ್ತಕವನ್ನು ಅಮೆರಿಕ ದೇಶದಲ್ಲಿ ಬಹು ಬೆಲೆಯಾದ ರೀತಿಯಲ್ಲಿ ಅಚ್ಚು ಹಾಕುತ್ತಿರುವರು ಆಯಾ ಸಂಗತಿಗಳನ್ನು ವಿಶದವಾಗಿ ತಿಳಿಸುವಂಥಾ ಸೊಗಸಾದ ಚಿತ್ರಗಳನ್ನು ಸಹ ಪ್ರಕಟಿಸುವರು ಇದೊಂದು ಅತ್ಯುತ್ತಮತರವಾಗುದಾಗಿರುವುದು ಈ ಪುಸ್ತಕವನ್ನು ನಲವತ್ತು ಭಾಗವಾಗಿ ಪ್ರಕಟಿಸುವರು ಪ್ರತಿಯೊಂದು ಭಾಗಕ್ಕೆ ೧,೫೦೦ ರೂಪಾಯಿ ಪ್ರಕಾರ ೪೦ ಭಾಗಗಳಿಗೆ ೬೦,೦೦೦ ರೂಪಾಯಿ ಬೇಕಾಗುವುದು

* * *

ಲಂಡನ್ ಪಟ್ಟಣದ ಒಬ್ಬ ಕಾದಂಬರಿ ರಚಕನು ಪ್ಯಾರಿಸ್ ಪಟ್ಟಣದಲ್ಲಿ ಹಳೇ ಪುಸ್ತಕಗಳನ್ನು ಮಾರುತ್ತಿದ್ದ ಒಂದು ಅಂಗಡಿಗೆ ಹೋಗಿ ಅಲ್ಲಿ ಬಿದ್ದಿದ್ದ ನೂರು ವರ್ಷಗಳ ಹಿಂದೆ ಅಚ್ಚು ಹಾಕಲ್ಪಟ್ಟಿದ್ದ ಒಂದು ಹಳೇ ಪುಸ್ತಕವನ್ನು ಕೆಲವು ಆಣೆಗಳಿಗೆ ಕೊಂಡುಕೊಂಡು ಮನೆಗೆ ಹೋದನು ಸಾಯಂಕಾಲ ತನ್ನ ಮನೆಯೊಳಗೆ ಕೂತುಕೊಂಡು ಓದುತ್ತಿರುವಾಗ ಆ ಪುಸ್ತಕದ ಎರಡು ಹಾಳೆಗಳು ಅಂಟಿಕೊಂಡಿರುವುದನ್ನು ನೋಡಿ ಅವುಗಳನ್ನು ತನ್ನ ಪೆನ್ನಾಕತ್ತಿಯಿಂದ ಬಿಡಿಸಿದಾಗ್ಗೆ ಅವುಗಳ ಮಧ್ಯದಲ್ಲಿ ೧೫೦ ರೂಪಾಯಿ ಬಾಳತಕ್ಕ ಬ್ಯಾಂಕ್ ನೋಟುಗಳು ಇದ್ದವಂತೆ

ಬಾತ್ಮಿದಾರರಿಗೆ ನೋಟೀಸು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಕರೆಸ್‌ಪಾಂಡೆನ್ಸ್

ತುಂಕೂರು ಮುನ್ಸಿಫ್ ಕೋರ್ಟಿನ ವಿಷಯಗಳು

ಅಯ್ಯಾ,

ನಮ್ಮ ಡಿಸೆಂಬರು ೨೩ ನೆ ತಾರೀಖಿನ ಪತ್ರಿಕೆಯಲ್ಲಿ ತುಂಕೂರು ಮುನ್ಸಿಫ್ ಕೋರ್ಟಿನ ವಿಷಯದಲ್ಲಿ ಬರೆದಿರುವದನ್ನು ನೋಡಿ ತುಂಬಾ ಆಶ್ಚರ್ಯಪಡುತ್ತೇನೆ ಯಾಕೆಂದರೆ ಇಲ್ಲಿ ಮುನ್ಸಿಫ್ ಕೋರ್ಟಿನಲ್ಲಿ ಸಾವಕಾಶವೆಂಬುವದು ಕಕ್ಷಿಗಾರರನ್ನು ಸಕಾಲದಲ್ಲಿ ಪದಗಿಸದೆ ಛತ್ರ ಕಟ್ಟಿದೆ ಇರೋದರಿಂದ ದೂರ ಅಡ ಜಡ್ಜ್ ಮಾಡಿ ಒಂದು ಸಲ ಅಲ್ಲಿ ಎರಡು ಸಲವಾದರೂ ಸಮನುಗಳು ತೆಗೆದುಕೊಂಡು ಜಾರಿ ಮಾಡಿಸಿ ಒಂದೇ ಹೀರಂಗಿನಲ್ಲಿ ಫೈಸಲಾಗಲಿ ಎಂಬುವವರ ಮೇಲೆ ದೂರ ಅಡ್‌ಜರ್ನ್ ಮಾಡುತ್ತಾರೆ ನಾನು ನೋಡಿರುವ ಮಟ್ಟಿಗೂ ಯಾವ ವಿಧವಾದ ಅನಾನುಕೂಲವೂ ತೋರುವದಿಲ್ಲ ಯಾರೊಬ್ಬ ಕಕ್ಷಿಗಾರರು ಸಾಲ್ ಕಾಸ್ ಕೋರ್ಟನ್ನು ಬೇರೆ ವಿಭಾಯಕ ಮಾಡಬೇಕೆಂತ ಇಲ್ಲಿ ಪ್ರಜೆಗಳು ಮೈಸೂರು ಛೀಫ್ ಕೋರ್ಟಿಗೆ ಅರ್ಜಿ ಕೊಡುವ ಅಂಶವೇ ಇಲ್ಲ ನಾನು ಈ ಟೌನ್‌ನಲ್ಲಿ ಬಹಳ ದಿವಸಗಳಿಂದ ಇರೋದರಿಂದಲೂ ಸಂಗತಿಗಳನ್ನೆಲ್ಲ ಚನ್ನಾಗಿ ತಿಳಿದವನಾಗಿರೋದರಿಂದಲೂ ನಿಮ್ಮ ಬಾತ್ಮಿದಾರರ ಅಭಿಪ್ರಾಯವು ನಿರಾಧಾರವಾದ್ದೆಂದು ಇದರಿಂದ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ತಿಳುಹಿಸಿದೇನೆ

ಕಿ ಎನ್ ವೆಂಕಟರಾವ್

ಅಪಲ್ ತರಹಾ ವಕೀಲ್

ಮತ ವಿಚಾರದ ಪರೀಕ್ಷೆ

ಅಯ್ಯಾ,

ಈ ವಿಷಯ ಪ್ರಥಮತಃ ಹೆಚ್ಚಿಗೆ ತಂದಿರತಕ್ಕ ದಾವಣಗೆರೆ ಅ॥ ಮಾ॥ ಮಿ। ವ್ಹಿ ಸುಬ್ಬರಾಯರವರಿಗೇನೆ ಮತವಿಷಯದಲ್ಲಿ ಬಾಲಕರಿಗೆ ಯಾವ ಮತ ವಿಷಯ ಹ್ಯಾಗೆ ಬೋಧಿಸಬೇಕೆಂಬುವದೇ ಅವರ ಧ್ಯಾನಕ್ಕೆ ಇನ್ನೂ ಚನ್ನಾಗಿ ಬರಲಿಲ್ಲವೆಂತ ತೋರುತ್ತೆ ಕಾರಣವೇನಂದರೆ—

ಈ ಮತಸಂಬಂಧವಾದ ಬೋಧೆ ಈಗಿನ ನಾಗರಿಕ ಕಾಲದಲ್ಲಿ ಯಾವ ಬಾಲಕರಿಗೆ ಹೃದಯಂಗಮವಾಗುವಂತೆ ಬೋಧಿಸಬೇಕು ಮತ್ತು ಯಾವ ಮತವನ್ನು ಬೋಧಿಸಿದರೆ ಸರ್ವಸಂಮತವಾಗಿ ಇರುತ್ತೆ ಎಂಬ ಯೋಚನೆಯೂ ಕೂಡ ನಮ್ಮ ಗವರ್ನಮೆಂಟಿನವರ ಮತ್ತು ವಿದ್ಯಾವಂತರ ಹೃದಯದಲ್ಲಿ ಹುಟ್ಟಿ ಅದಕ್ಕಾಗಿ ಪ್ರಯತ್ನ ನಡೆಯುತ್ತಾ ಇದೆ. ದೃಷ್ಟಾಂತಕ್ಕಾಗಿ ೨೩ ೧೧ ೦೯ ನೇ ತಾರೀಖಿನಲ್ಲಿ ನಡೆದ ಸೆಂಟ್ರಲ್ ಕಾಲೇಜ್ ಡೇ ಉತ್ಸವದಲ್ಲಿ ಲೇಟ್ ದಿವಾನ್ ಸರ್ ವಿ. ಪಿ. ಕೃಷ್ಣಮೂರ್ತಿಯವರು ಇದೇ ವಿಷಯ ಚರ್ಚೆಮಾಡಿರತಕ್ಕದ್ದು ಎಲ್ಲಾ ನ್ಯೂಸ್‌ಪೇಪರುಗಳಲ್ಲಿಯೂ ಪಬ್ಲಿಷ್ ಆಗಿದೆ. ಅದನ್ನು ಓದಿದರೆ ಗೊತ್ತಾಗುತ್ತೆ. ಸ್ಕೂಲ್ ಮಾಸ್ಟರು ಕೆಲಸ ಬಹಳ ಜವಾಬ್ದಾರಿಯುಳ್ಳ ಉದ್ಯೋಗವಾಗಿರುತ್ತೆ. ಕಾರಣವೇನಂದರೆ — ಎಲ್ಲಾ ಜಾತಿ ಪ್ರಜೆಗಳು ತಮ್ಮ ಸಣ್ಣ ಮಕ್ಕಳನ್ನು ವಿದ್ಯಾವಂತರನ್ನಾಗಿ ಮುಂದೆ ಅವರು ಸತ್ಪ್ರಜೆಗಳಾಗಿ ಲೋಕದಲ್ಲಿ ಬಾಳುವಂತೆ ಮಾಡುವಂತ ಪಾಠಶಾಲೆಗಳ ಸ್ಕೂಲ್ ಮಾಸ್ಟರಿನ ವಶಕ್ಕೆ ಕೊಡುತ್ತಾರೆ. ಈ ಮಾಸ್ಟರಿನ ಸ್ಥಾನಕ್ಕೆ ಬರೋಕ್ಕೆ ಸಣ್ಣ ಹುಡುಗರ ಅವಸ್ಥೆ ಹೇಗೆಂದರೆ ಅವರಿಗೆ ಯುಕ್ತಾಯುಕ್ತ ಜ್ಞಾನವಿಲ್ಲದ್ದರಿಂದ ಯಾವ ವಿಷಯ ಅವರಿಗೆ ಬೋಧಿಸಿದಾಗ್ಯೂ ಅದೇ ಸತ್ಯವೆಂತ ನಂಬತಕ್ಕ ಅದನ್ನೇ ತಮ್ಮ ಜೀವಿತ ಕಾಲದಲ್ಲಿ ನಡವಳಿಕೆಗೆ ತರತಕ್ಕ ಸ್ವಭಾವವುಳ್ಳದ್ದಾಗಿದೆ. ಮತ್ತು ಒಂದು ಸ್ಕೂಲ್‌ನಲ್ಲಿ ಒಂದೇ ಜಾತಿ ಹುಡುಗರು ಇರೋದಿಲ್ಲ. ಎಲ್ಲಾ ಜಾತಿ ಹುಡುಗರು ಓದುತ್ತಾರೆ. ಈಗಿನ ನಾಗರಿಕ ಕಾಲದ ಸ್ಥಿತಿ ಯೋಚಿಸಿದರೆ ಹಿಂದಲ ನಮ್ಮ ಪುರಾಣಗಳಲ್ಲಿ ಹೇಳತಕ್ಕ ಚರಿತ್ರೆಗಳು ಈಚೆಗೆ ಹುಟ್ಟಿರತಕ್ಕ ಪ್ರತ್ಯಕ್ಷವಾಗಿ ಜಗತ್ತಿನ ಸ್ಥಿತಿ ತೋರಿಸತಕ್ಕ ಗ್ರಂಥಗಳು ಈ ಎರಡನ್ನು ಕಂಪೇರ್ ಮಾಡಿದರೆ ನಮ್ಮ ಹಿಂದಲ ಕಾಲದ ಅಷ್ಟು ಪುರಾಣಗಳು ಆ ಕಾಲಕ್ಕೆ ತಕ್ಕದ್ದಾಗಿ ತೋರಿದಾಗ್ಯೂ ಈಗಿನ ಕಾಲಕ್ಕೆ ಉಪಯೋಗವಿಲ್ಲವೆಂಬ ವಿಷಯ ಸ್ಪಷ್ಟವಾಗಿ ಕಾಣುವದು. ವಿದ್ಯಾವಂತರೂ ಒಪ್ಪತಕ್ಕದ್ದಾಗಿಯೂ ಇದೆ. ಹೀಗಿರತಕ್ಕದ್ದರಲ್ಲಿ ಮಕ್ಕಳನ್ನು ಸನ್ಮಾರ್ಗಕ್ಕೆ ತರತಕ್ಕ ಪಬ್ಲಿಕ್ ಸರ್ವೆಂಟ್ ಆದ ಸ್ಕೂಲ್ ಮಾಸ್ಟರು ತನ್ನಲ್ಲಿ ಓದತಕ್ಕ ಬಾಲಕರ ತಂದೆತಾಯಿಗಳಿಗೆ ಬೇರೆ ಹುಟ್ಟಿಸತಕ್ಕ ವಿಚಾರಗಳನ್ನು ಮಕ್ಕಳಿಗೆ ಹಾಕೋಣವೂ ಅವರು ದ್ವೇಷಪೂರ್ವಕವಾಗಿ ಕೇಳತಕ್ಕ ಸೀಟಿ ಜವಾಬುಗಳನ್ನು ನ್ಯೂಸ್‌ಪೇಪರುಗಳಲ್ಲಿ ಪಬ್ಲಿಷ್ ಮಾಡಿ ಅರ್ಥ ಹುಟ್ಟುವಂತೆ ಮಾಡುತ್ತಿರೂ ಸಹ ಪ್ರಜೆಗಳಲ್ಲಿ ಪರಸ್ಪರ ಅಸೂಯೆ ಹುಟ್ಟತಕ್ಕದ್ದಾಗಿದೆ. ಕೊನೆಗೆ ಈ ನಡವಳಿಕೆ ಸರಿಯಲ್ಲ ಕ್ಷೇಮಕರವಾದ್ದಲ್ಲ. ಈ ವಿಷಯ ಗವರ್ನಮೆಂಟಿನವರು ನೋಟೀಸ್ ತಕ್ಕೊಳ್ಳುತ್ತಾರೆಂತ ನಂಬಿದ್ದೇನೆ.

ರಿಟೈರಾದ ಒಬ್ಬ ಹಿರಿಯ ಆಫೀಸರ್

ಒಂದು ಸೇತುವೆಯು ಬೇಕಾಗಿದೆ

ಅಯ್ಯಾ,

ಎಡತೊರೆ ತಾಲ್ಲೂಕು ಸಾಲಿಗ್ರಾಮದ ಹೋಬಳಿ ಕಂಚಿನಕೆರೆ ಎಂಬ ಊರಿನ ಮುಂದೆ ಹರಿದು ಬರುವ ಹೊಳೆಗೊಲ್ಲಿಯಿಂದ ಉಂಟಾದ ಅನಾಹುತವನ್ನು ನಾನು ಇನ್ನೇನು ವರ್ಣಿಸಲಾರೆನು. ತಾ ೩-೧೦ರಲ್ಲಿ ನಾನು ಅಲ್ಲಿಗೆ ಹೋಗಿದ್ದೆನು. ಆಗ ಒಂದು ಭರ್ತಿ ಗಾಡಿಯು ಬರುತ್ತಿತ್ತು. ಅದು ಈ ಹೊಳೆಗೊಲ್ಲಿಯನ್ನು ಇಳಿದು ಸುಮಾರು ೧೫—೨೦ ಗಜಗಳ ಫಾಸಲೆ ದೂರ ಆ ಕೊಲ್ಲಿಯಲ್ಲೇ ಹೋಗಬೇಕು. ಆಗ ೩—೪ ಅಡಿ ನೀರು ಹರಿಯುತ್ತಿತ್ತು. ಆಗ ಆ ಗಾಡಿಯ ಎತ್ತುಗಳು ನೀರಿನ ಹೊಡೆತದಿಂದ ಗಾಡಿಯನ್ನು ಎಳೆದುಕೊಂಡು ಹೋಗುವಾಗ ಆ ಗಾಡಿಯು ಎದ್ದು ನೀರಿನ ಹೊಡೆತದಿಂದ ತೇಲಿಕೊಂಡು ಹೋಗುತ್ತಿರುವಲ್ಲಿ ಈಚೆಭಾಗದಲ್ಲಿರುವ ಮುದಿಗೆರೆ ಹುಲ್ಲೇಗೌಡರ ಕಡೆಯವರು ಓಡಿಬಂದು ಬಹಳ ಪ್ರಯಾಸದಿಂದ ಎತ್ತಿನ ಕೊರಳಿಗೆ ಕಟ್ಟಿದ್ದ ಹಗ್ಗಗಳನ್ನು ಕತ್ತರಿಸಿ ಎತ್ತುಗಳನ್ನು ಬಿಟ್ಟು ತೇಲಿಹೋಗುತ್ತಿದ್ದ ಗಾಡಿಯನ್ನು ಮನುಷ್ಯನ ಸಮೇತವಾಗಿ ತೇಲುವ ಗಾಡಿಯ ಜತೆಗೆ ಹೋಗುತ್ತಿದ್ದ ಪ್ರಾಣಗಳನ್ನು ಕಾಪಾಡಿದರು. ಆದ್ದರಿಂದ ಮನುಷ್ಯನಿಗೆ ಸ್ವಲ್ಪ ಗಾಯವಾಗಿದೆ. ಪ್ರಾಣಕ್ಕೇನೂ ಬಾಧೆಯಿಲ್ಲ. ಹೋದ ವರ್ಷ ಇದೇ ಕೊಲ್ಲಿಯಲ್ಲಿ ಒಂದು ಭರ್ತಿಯ ಗಾಡಿಯೂ ಎತ್ತುಗಳೂ ಮನುಷ್ಯನೂ ಸಹ ಕೆರೆಗೆ ತೇಲಿಕೊಂಡು ಹೋದರು. ಇದಲ್ಲದೆ ಈ ಹೊಳೆಗೊಲ್ಲಿಯಲ್ಲಿ ಸುಮಾರು ಈಗ ೨೦ ವರ್ಷಗಳವರೆಗೂ ನಷ್ಟವಾಗಿ ಹೋಗಿರುತ್ತವೆ. ತಿರುಮಕೂಡ್ಲು ನರಸೀಪುರಕ್ಕೆ ಹೋದ ಮ॥ ರಾ॥ ಅಮಲ್ದಾರ್ರವರು ಈ ಊರಿಗೆ ದಯಮಾಡಿಸಿ ವಾಪಸು ಹಿಂದಕ್ಕೆ ಹೋಗುವಾಗ ಅವರ ಕುದುರೆಯೂ ಸಹ ಹೊಳೆಗೊಲ್ಲಿಯ ಉಸುಬಿನಲ್ಲಿ ಸಿಕ್ಕಿ ಆಚೆಗೆ ಹೋಗಲಾರದೆ ಹೋಯಿತು. ಆ ಊರಿನವರು ಏನೇನೋ ಉಪಾಯದಿಂದ ಕಳುಹಿಸಿಕೊಟ್ಟರು. ಆಗ ಅಮಲ್ದಾರರು ಈ ಕೊಲ್ಲಿಯಿಂದ ಜನಗಳಿಗೂ ಪಶುಪ್ರಾಣಿಗಳಿಗೂ ತುಂಬಾ ಕಷ್ಟವಾಗಿದೆ. ಈ ಸೇತುವೆಗೆ ಹುಕುಮನ್ನು ತರಿಸಿ ಕಟ್ಟಿಸುತ್ತೇವೆಂದು ಅಪ್ಪಣೆಮಾಡಿ ಹೊರಟುಹೋದರು. ಅವರು ನಮ್ಮ ದುರಾದೃಷ್ಟಕ್ಕೆ ವರ್ಗವಾಗಿ ಹೋದರೆಂದು ತುಂಬಾ ವ್ಯಥೆಪಡುತ್ತಿದ್ದೇವೆ. ಅಲ್ಲದೆ ಈ ದಾರಿಯು ಮೈಸೂರಿಗೆ ಹೋಗುವ ದಾರಿಯಾಗಿರುವುದರಿಂದ ಅರ್ಕಲಗೂಡು ತಾಲ್ಲೂಕಿಗೆ ಸೇರಿದ ಗ್ರಾಮಗಳ ಗಾಡಿಯೆಲ್ಲಾ ಇಲ್ಲೇ ಹೋಗಬೇಕು, ಬೇರೆ ದಾರಿಯು ಇಲ್ಲವೇ ಇಲ್ಲ. ಸುಮಾರು ದಿನ ಒಂದಕ್ಕೆ ೧೦—೩೦ ಗಾಡಿಗಳವರೆಗೂ ಪ್ರಯಾಣಮಾಡುತ್ತವೆ. ಈ ಕೊಲ್ಲಿಯಲ್ಲಿ ೫ ತಿಂಗಳವರೆಗೂ ಒಂದೇರೀತಿಯಾಗಿ ನೀರು ಹರಿಯುತ್ತೆ. ಅಂದರೆ ಸುಮಾರು ೩—೪ ಅಡಿ ಪ್ರಮಾಣ ನೀರು ಇರುತ್ತೆ. ಈ ಕೊಲ್ಲಿಯಿಂದ ತುಂಬಾ ಅನಾಹುತವುಂಟಾಗುತ್ತೆ. ಸೇತುವೆಯನ್ನು ಕಟ್ಟಿಸಿಕೊಡಬೇಕೆಂತ ದೊಡ್ಡ ದೊಡ್ಡ ಆಫೀಸರವರ ರೂಬರೂಬು ಕೇಳಿಕೊಂಡರೂ ಇದುವರೆವಿಗೂ ಗವರ್ನಮೆಂಟಿನವರ ಚಿತ್ತಕ್ಕೆ ಬರಲಿಲ್ಲ. ಇದರಿಂದ ನಮಗೆ ತುಂಬಾ ತೊಂದರೆ ಆಗಿದೆ. ಆದ್ದರಿಂದ ಗವರ್ನಮೆಂಟಿನವರು ದಯವಿಟ್ಟು ಈ ಅಹವಾಲನ್ನು ದಿವ್ಯಚಿತ್ತಕ್ಕೆ ತಂದು ಒಂದು ಸೇತುವೆಯನ್ನು ಕಟ್ಟಿಸಿಕೊಟ್ಟು ಜನರ ಮತ್ತು ಪಶುಪ್ರಾಣಿಗಳ ತೊಂದರೆಯನ್ನು ತಪ್ಪಿಸಿ ಜೀವಸೋದ್ಧಾರವಮಾಡ್ಯಾರೆಂದು ನಂಬಿರುತ್ತೇನೆ.

ಒಬ್ಬ ಬಾತ್ಮೀದಾರ

ಇಂಡಿಯಾ ದೇಶದ ವೃತ್ತಾಂತಗಳು.

ಧಾರವಾಡ ನ್ಯಾಯಾಧೀಶರ ಕೋರ್ಟಿಗೆ ಸಂಬಂಧಪಟ್ಟ ಖಜಾನೆಗೆ ಕಳ್ಳರು ಹೊಕ್ಕು ಆರು ಸಾವಿರ ರೂಪಾಯಿಗಳನ್ನು ಕದ್ದುಕೊಂಡು ಹೋಗಿರುವರು.

ಬರ್ಮಾ ದೇಶದಲ್ಲಿ ಒಂದು ಸರ್ವಕಲಾಶಾಲೆಯನ್ನು (ಯೂನಿವರ್ಸಿಟಿ) ಸ್ಥಾಪಿಸುವುದಕ್ಕೆ ಅಲ್ಲಿನ ಲೆಫ್ಟಿನೆಂಟ್ ಗವರ್ನರವರು ಸಾಹಸ ಪಡುತ್ತಿದ್ದಾರೆ.

ಈ ವಾರ ಲಾಹೋರ್ ಪಟ್ಟಣದಲ್ಲಿ ನಡೆಯುವುದಕ್ಕಿರುವ ಸಂಘಪರಿಷ್ಕರಣ ಸಭೆಗೆ ನಭಾಸಂಸ್ಥಾನದ ಮಹಾರಾಜರವರು ಅಧ್ಯಕ್ಷರಾಗುವಂತೆ ಒಪ್ಪಿರುತ್ತಾರೆ.

ಲಾಹೋರಿನಲ್ಲಿ ಉರ್ದು ಭಾಷೆಯ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ಈಶ್ವರಪ್ರಸಾದ್ ಎಂಬುವನನ್ನು ರಾಜದ್ರೋಹದ ನಿಮಿತ್ತ ಸರಕಾರದವರು ಹಿಡಿದು ವಿಚಾರಿಸುತ್ತಿರುವರು.

ಉತ್ತರ ಇಂಡಿಯಾ ದೇಶದಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಬಂಗಾಳಾ ಬ್ಯಾಂಕಿನಲ್ಲಿ ಈ ವರುಷ ಶೇಕಡ ಆರರಂತೆ ಬಡ್ಡಿ ಗಿಟ್ಟಿದೆಯೆಂದು ಡೈರಕ್ಟರುಗಳು ಘಾಯಿಷ್ ಮಾಡಿರುತ್ತಾರೆ.

ಹಿಂದೂ ಪೇಟ್ರಿಯಟ್ ಎಂಬ ದಿನ ಪ್ರತಿಯ ಸಂಪಾದಕರಾದ ಮ॥ ಶ್ರೀ ಚಂದ್ರ ಸರ್ವಾಧಿಕಾರಿ ಎಂಬ ಬಂಗಾಳಿ ದೊಡ್ಡ ಮನುಷ್ಯರು ಕಾಶಿಯಲ್ಲಿ ಕಾಯಿಲೆಯ ದೆಸೆಯಿಂದ ಅಪಾಯಕರವಾದ ಸ್ಥಿತಿಯಲ್ಲಿರುವರೆಂದು ಕೇಳುತ್ತೇವೆ.

ವೈಸರಾಯರು ದೇಶಸಂಚಾರ ಮಾಡಿಕೊಂಡು ಕಲ್ಕತ್ತಾ ಪಟ್ಟಣಕ್ಕೆ ಹೋದ ಮೇಲೆ ತಮ್ಮ ಅರಮನೆಯಲ್ಲಿ ಒಂದು ದೊಡ್ಡ ದರ್ಬಾರನ್ನು ನಡಿಸಿದರು. ೧,೪೦೦ ಜನರು ದರ್ಬಾರ್ ಮಂದಿರದಲ್ಲಿ ವೈಸರಾಯರಿಗೆ ಪರಿಚಯ ಮಾಡಲ್ಪಟ್ಟರು.

ಕಲ್ಕತ್ತಾ ಪಟ್ಟಣದಲ್ಲಿರುವ ವೈಸ್‌ರಾಯಿಯವರ ಅರಮನೆಯ ಊಟದಲ್ಲಿ ಒಂದು ವಿಧವಾದ ವಿಷ ಪದಾರ್ಥವು ಸೇರಿ ಅದನ್ನು ತಿಂದ ಕೆಲವು ದೊಡ್ಡ ಮನುಷ್ಯರಿಗೆ ದೇಹಾಲಸ್ಯವಾಗಿರುತ್ತದೆ. ಇದರ ವಿಷಯ ವಿಚಾರಣೆಯಾಗುತ್ತಿರುವುದು.

ಇಂಡಿಯಾ ದೇಶದ ಮಂತ್ರಿಶ್ರೇಷ್ಠರಾದ ಲಾರ್ಡ್ ಮಾರ್ಲೀ ಪ್ರಭುಗಳ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರಾಗಿರುವ ಮಿ॥ ಗುಪ್ತ ಎಂಬುವರು ಕಲ್ಕತ್ತೆಗೆ ಬಂದಿರುತ್ತಾರೆ. ಅವರಿಗೆ ನಾನಾ ಪಂಗಡಗಳವರಿಂದ ಆತಿಥ್ಯಗಳು ನಡೆಯುತ್ತಿವೆ.

ಹೋದ ವರುಷ ಡಿಸೆಂಬರ್ ತಿಂಗಳಿನಲ್ಲಿ ಕೆಲವು ಮಂದಿ ಬಂಗಾಳಿಗಳನ್ನು ಇಂಡಿಯಾ ಸರಕಾರದವರು ಹಿಡಿದು ಗಡೀಪಾರುಮಾಡಿದ್ದರಷ್ಟೆ. ಇವರನ್ನೆಲ್ಲಾ ಬರುವ ಜನವರಿ ತಿಂಗಳು ಮೊದಲನೇ ತಾರೀಖಿನಲ್ಲಿ ಬಿಟ್ಟುಬಿಡುವರೆಂಬ ವದಂತಿಯು ಅಲ್ಲಲ್ಲಿ ಹರಡಿಕೊಳ್ಳುತ್ತಿದೆ.

ಬರುವ ಫೆಬ್ರವರಿ ತಿಂಗಳಿನ ೨೫ ನೇ ತಾರೀಖಿನಲ್ಲಿ ಇಂಡಿಯಾ ದೇಶದ ಆದಾಯವ್ಯಯ (ಬಡ್ಜೆಟ್) ಅಂದಾಜು ಪಟ್ಟಿಯು ಚರ್ಚೆಗೆ ಬರುವುದೆಂದು ವದಂತಿ ಇದೆ. ಈಗಿನ ಹೊಸ ಕಾನೂನಿನ ಪ್ರಕಾರವಾಗಿ ಈ ಬಡ್ಜೆಟ್ಟನ್ನು ಐದು ವಾರಗಳ ತನಕ ಚರ್ಚಿಸುವರು.

ಡಿಲ್ಲಿ ಮತ್ತು ಪೂರ್ವ ಬಂಗಾಳಾ ಕಡೆಗಳಲ್ಲಿ ಅಚ್ಚು ಕಾರ್ಖಾನೆಗಳನ್ನು ಇಟ್ಟುಕೊಂಡು ರಾಜದ್ರೋಹಕರವಾದ ಸಂಗತಿಗಳನ್ನು ಪ್ರಕಟಿಸುತ್ತಿದ್ದ ಗಣೇಶಲಾಲ್ ಬಾಸ್ತು ಮತ್ತು ಶಿವಭೂಷಣ ಬೋಸ್ ಎಂಬಿಬ್ಬರನ್ನು ಪೋಲೀಸಿನವರು ಹಿಡಿದು ವಿಚಾರಣೆಗೆ ಗುರಿಪಡಿಸಿರುವರು.

ಕೊಯಮತ್ತೂರಿನಲ್ಲಿ ಪ್ಲೇಗ್ ಉಪದ್ರವ ಹರಡಿಕೊಂಡಿದೆಯೆಂದು ಹಿಂದೆಯೇ ತಿಳಿಸುತ್ತೇವೆಯಷ್ಟೆ. ಇದೇ ತಿಂಗಳು ಮೊದಲನೇ ತಾರೀಖಿನಿಂದ ೨೧ ನೇ ತಾರೀಖಿನವರೆಗೆ ೪೭ ಮರಣಗಳಾಗಿರುವವು. ೨೭ ಮಂದಿ ಮಾತ್ರ ಪ್ಲೇಗ್ ಶಿಪಾಯನ್ನು ಹಾಕಿಸಿಕೊಂಡಿರುವರು.

ಕಚ್ಛ ವಾಹ ದೇಶದಲ್ಲಿ ನವರಾತ್ರಿ ಉತ್ಸವಗಳಲ್ಲಿ ಯಾರೂ ದನ ಗೋವುಗಳನ್ನು ಕೊಲ್ಲಕೂಡದೆಂದು ಸರಕಾರದವರು ವಿಧಾಯಕವಾಡಿದ್ದಾರೆ. ಈ ಕರಾರಿನ ಆಜ್ಞೆಗೆ ಪೂರ್ವ ಜೈನಮತಸ್ಥರು ಗೋವುಗಳನ್ನು ಸಂಹಾರಮಾಡಬಾರದೆಂದು ಸರಕಾರಕ್ಕೆ ಮನವಿ ಬರೆದುಕೊಂಡಿದ್ದರಂತೆ.

ಕಾಶಿಯಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಹಿಂದೂ ಸೆಂಟ್ರಲ್ ಕಾಲೇಜಿಗೆ ವೈಸ್‌ರಾಯಿ ಪ್ರಭುಗಳು ಬರುವ ವರುಷದ ಆದಿ ಭಾಗದಲ್ಲಿ ಭೇಟಿ ಕೊಡುವರೆಂತಲೂ ಆಗ ಅಲ್ಲಿನ ವಿದ್ಯಾರ್ಥಿಗಳಿಗೆಲ್ಲಾ ಬುದ್ಧಿಯುಕ್ತವಾದ ಒಂದು ಉಪನ್ಯಾಸವನ್ನು ಮಾಡುವರೆಂತಲೂ ಸಮಾಚಾರ ಬಂದಿರುವುದು.

ಬಂಗಾಳ ದೇಶದಲ್ಲಿ ಈಚೀಚೆಗೆ ಢಕಾಯಿತಿಗಳು ಬಹಳವಾಗಿ ನಡೆಯುತ್ತಿವೆ. ಕಳೆದ ವಾರ ಸೈಹಟ್ಟಿ ಎಂಬ ಊರಿನ ಸಮೀಪದಲ್ಲಿ ಬಾಬು ಉತ್ತರಾಂ ಚಂದ್ರಗೋಷ್ ಎಂಬುವನ ಮನೆಗೆ ಕಳ್ಳರು ಬಿದ್ದು ಇದ್ದ ನಗನಾಣ್ಯಗಳನ್ನು ದೋಚಿಕೊಂಡು ಮನೆಯ ಯಜಮಾನನನ್ನು ಚೆನ್ನಾಗಿ ಮರ್ದನ ಮಾಡಿ ಪರಾರಿಯಾಗಿರುತ್ತಾರೆ.

ಇಂಡಿಯಾ ದೇಶದ ಕಮ್ಯಾಂಡರ್ ಇನ್ ಛೀಫರಾಗಿದ್ದ ಲಾರ್ಡ್ ಕಿಚ್ನರ್‌ರವರು ಈಗ ಉತ್ತರ ಆಸ್ಟ್ರೇಲಿಯಾದಲ್ಲಿರುವ ಪೋರ್ಟ್‌ಡಾರ್ವಿನ್ ಎಂಬ ಪಟ್ಟಣಕ್ಕೆ ವಿಹಾರಾರ್ಥವಾಗಿ ಬಂದಿರುವರು. ಇವರು ದೇಶಸಂಚಾರ ಮಾಡಿಕೊಂಡು ವಿಲಾಯತಿಗೆ ಹೋದ ಮೇಲೆ ಇವರಿಗೆ ಮೆಡಿಟರೇನಿಯನ್ ಬ್ರಿಟಿಷ್ ಸೈನ್ಯದಲ್ಲಿ ದೊಡ್ಡ ಉದ್ಯೋಗವಾಗುವುದು.

ಪೂರ್ವ ಬಂಗಾಳ ಸ್ಟೇಟ್ ರೈಲ್ವೆಯಲ್ಲಿ ಗಾರ್ಡಾಗಿದ್ದ ವಾಮಪದ್ದೋ ಮುಖರ್ಜಿ ಎಂಬುವನು ಬೊಂಬಾಯಿ, ಬರ್ಮಾ ಮತ್ತು ಇತರ ಕಡೆಗಳಲ್ಲಿನ ವ್ಯಾಪಾರಸ್ಥರಿಗೂ ಬ್ಯಾಂಕಿನವರಿಗೂ ವಿಪರೀತವಾಗಿ ಮೋಸಮಾಡಿ, ಹಣ ತಿಂದಿರುವನೆಂದು ಅಪವಾದ ಹುಟ್ಟಿ ಅವನನ್ನು ಬೊಂಬಾಯಿಗೆ ಹಿಡಿದುಕೊಂಡು ಬಂದು ವಿಚಾರಿಸುತ್ತಿರುವರು.

ಈ ವರುಷ ಲಾಹೋರಿನಲ್ಲಿ ನಡೆಯುವ ಸಾರ್ವಜನ ಸಭೆಗೆ (ಕಾಂಗ್ರೆಸ್) ಆಗಲೇ ಅನೇಕ ರಾಜರೂ ದೊಡ್ಡ ಮನುಷ್ಯರೂ ಹೋಗಿರುತ್ತಾರೆ. ದರ್ಭಾಂಗ ಮಹಾರಾಜರಿಗೆ ಸುಸ್ವಾಗತವನ್ನು ಕೊಡಲು ರೈಲ್ವೆ ಸ್ಟೇಷನಿಗೆ ಅನೇಕ ಪ್ರಮುಖರು ಬಂದಿದ್ದರು. ಇವರು ಲಾಹೋರ್ ಪಟ್ಟಣದಲ್ಲಿ ಕಾಶ್ಮೀರ ದೇಶದ ಮಹಾರಾಜರವರ ಅತಿಥಿಗಳಾಗಿರುತ್ತಾರೆ.

ಕೊಯಂಬತ್ತೂರಿನಲ್ಲಿರುವ ವ್ಯವಸಾಯ ಕಾಲೇಜಿನ ಮುಖ್ಯೋಪಾಧ್ಯಾಯರಾದ ಮಿ॥ ವುಡ್‌ರವರು ಅಲ್ಲಿನ ರೈತರನ್ನು ಬರಮಾಡಿಕೊಂಡು ತಮ್ಮ ವಿದ್ಯಾರ್ಥಿಗಳ ಮೂಲಕ ಅವರಿಗೆ ಭತ್ತ ಸಾಗುವಳಿ ಮಾಡುವ ಶಾಸ್ತ್ರೀಯವಾದ ಕ್ರಮಗಳನ್ನು ಉದಾಹರಣಾಪೂರ್ವಕವಾಗಿ ತೋರಿಸಿದರು. ಉಪನ್ಯಾಸವಾದ ಮೇಲೆ ರೈತರೊಂದಿಗೆ ಸಂಭಾಷಣೆಯಾಯಿತು.

ಉತ್ತರ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಈ ಸಲ ಒಂದು ಪ್ರಸಿದ್ಧವಾದ ಪ್ರದರ್ಶನವನ್ನು ಏರ್ಪಡಿಸಿರುವರು. ಕೆಲಸಗಳು ಅತಿ ಜಾಗ್ರತೆಯಿಂದ ನಡೆಯುತ್ತಿರುವವು. ಈ ಪ್ರದರ್ಶನದಲ್ಲಿ ಆಕಾಶವಿಮಾನಗಳ ಪಂದ್ಯವು ನಡೆಯುವದೆಂಬ ವದಂತಿ ಇದೆ ಮತ್ತು ಆಕಾಶವಿಮಾನಗಳನ್ನು ಕಟ್ಟತಕ್ಕ ವಿಧಾನವೇ ಮೊದಲಾದ ಸಂಗತಿಗಳನ್ನು ಜನಗಳಿಗೆ ವಿವರಿಸುವರು.

ಬರುವ ತಿಂಗಳು ೧೪ ನೇ ತಾರೀಖಿನಲ್ಲಿ ಲೇಡಿ ಮಿಂಟೋರವರ ಸಹೋದರಿಯರಾದ ಲೇಡಿ ಆಂಟ್ರಿಂ ಎಂಬುವರು ಯೂರೋಪ್ ದೇಶಕ್ಕೆ ಪ್ರಯಾಣವಾಗುವರು. ಇವರು ವೈಸ್‌ರಾಯರ ಮತ್ತು ಅವರ ಪತ್ನಿಯವರ ಜೊತೆಯಲ್ಲಿ ಕಳೆದ ಒಂದೆರಡು ತಿಂಗಳಿಂದ ದೇಶೀಯ ಸಂಸ್ಥಾನಗಳನ್ನೆಲ್ಲಾ ನೋಡುವುದಕ್ಕೆ ಬಂದಿದ್ದರು. ಮೈಸೂರಿಗೂ ಸಹ ಇವರು ದಯಮಾಡಿಸಿದ್ದರು.

ಒಳ್ಳಾರಿ ಜಿಲ್ಲೆಯ ಕೂಡ್ಲಿಗಿ ಎಂಬ ಊರಿಗೆ ಸೇರಿದ ಒಬ್ಬ ಟಪ್ಪಾಲ್ ಜವಾನನು ಟಪ್ಪಾಲ್ ಚೀಲದೊಂದಿಗೆ ದಾರಿಯಲ್ಲಿ ಹೋಗುತ್ತಿರುವಾಗ ತನ್ನ ಮೇಲೆ ಕಳ್ಳರು ಬಿದ್ದು ೨೦೦ ರೂಪಾಯಿಗಳನ್ನು ಕದ್ದುಕೊಂಡು ಹೋದರೆಂದು ಸರಕಾರಕ್ಕೆ ತಿಳಿಸಿದ್ದನು. ಕಡೆಯಲ್ಲಿ ವಿಚಾರಿಸಿದಾಗ್ಯೆ ಈತನೇ ಅಷ್ಟು ಹಣವನ್ನು ಚೀಲದಿಂದ ಕದ್ದಿರುವನೆಂಬ ಸಂಗತಿಯು ಹೊರಬಿತ್ತು. ಈಗ್ಗೆ ಇವನನ್ನು ವಿಚಾರಿಸುತ್ತಿರುವರು.

ಕೋಮಿಲಾ ಪಟ್ಟಣಕ್ಕೆ ಲೆಫ್ಟಿನೆಂಟ್ ಗವರ್ನರವರು ಮಹಾರಾಜರವರಿಗೆ ಪಟ್ಟಾಭಿಷೇಕವನ್ನು ಕಟ್ಟುವುದಕ್ಕೆ ಬಂದಾಗ್ಗೆ ದಿನೇಶಚಂದ್ರ ಗುಹ ಎಂಬುವನು ಅಲ್ಲಲ್ಲಿ ಸುಳಿದಾಡುತ್ತಿದ್ದನು. ಇವನು ಗುಮಾನಿ ಆಸಾಮಿಯೆಂದು ಪೋಲೀಸಿನವರು ಬಂದು ಇವನನ್ನು ವಿಚಾರಣೆ ಮಾಡಲು ತನ್ನ ವಿಷಯ ತೃಪ್ತಿಕರವಾದ ವಿವರಣೆಯನ್ನು ಕೊಡದೆ ಹೋದಕಾರಣ ಇವನನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಿಸಲು ತೊಡಗಿರುವರು.

ಮದರಾಸ್ ಅಧಿಪತ್ಯಕ್ಕೆ ಸೇರಿದ ಬಾಪ್ಟ್ಲ ಎಂಬ ಊರಿನಲ್ಲಿ ರೆವರೆಂಡ್ ಪವೆಲ್ ಎಂಬ ಪಾದ್ರಿಗಳು ಕುಷ್ಠರೋಗಿಗಳಿಗೋಸ್ಕರ ಒಂದು ಚಿಕಿತ್ಸಾಲಯವನ್ನು ಏರ್ಪಡಿಸಿ ಅದನ್ನು ಬಹಳ ಪ್ರಯಾಸದಿಂದ ನಡಿಸಿಕೊಂಡು ಬರುತ್ತಿದ್ದರು. ಇಂಥಾ ಉತ್ತಮವಾದ ಕೆಲಸವನ್ನು ಮದರಾಸ್ ಸರಕಾರದವರು ನೋಡಿ ಈ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿಕೊಡುವುದಲ್ಲದೆ ಇದನ್ನು ನಡಿಸುವುದಕ್ಕೆ ಹಣ ಸಹಾಯವನ್ನು ಕ್ರಮವಾಗಿ ಕೊಡುತ್ತೇವೆಂದು ಮಾತು ಕೊಟ್ಟಿರುವರು.

ಬೊಂಬಾಯಿಯಲ್ಲಿ ಬಹಳ ದಿನಗಳಿಂದ ನಿರೀಕ್ಷಿಸಿಕೊಂಡಿದ್ದ ಟ್ಯಾಕ್ಸಿ ಕ್ಯಾಬ್ ಎಂಬ ಮೋಟರ್ ಜಟಕಾ ಗಾಡಿಗಳು ೧೫೦ರ ವರೆಗೆ ಬಂದಿರುತ್ತವೆ. ಇವುಗಳಿಂದ ದೊಡ್ಡ ಪಟ್ಟಣವಾದ ಬೊಂಬಾಯಿಯಲ್ಲಿ ಪ್ರಯಾಣ ಮಾಡುವುದಕ್ಕೆ ಬಹಳ ಅನುಕೂಲವಾಯಿತು. ಈ ಮೋಟರ್ ಜಟಕಾ ಗಾಡಿಗಳು ಘಂಟೆ ಒಂದಕ್ಕೆ ೪೦ ಮೈಲಿ ಪ್ರಯಾಣವಾಗುವುವು. ಪ್ರಯಾಣದ ದರವು ಬಹಳ ಕಡಮೆಯಾಗುವದು. ಹಿಂದೂಸ್ಥಾನದಲ್ಲಿ ಇಂಥಾ ಗಾಡಿಗಳು ಬಂದಿರುವುದು ಇದೇ ಮೊದಲು.

ಲಾಲಾ ಲಜಪತ್‌ರಾಯರು ಕ್ಷಾಮನಿವಾರಣಾರ್ಥವಾಗಿ ಕೂಡಿಸಿದ ಹಣದಲ್ಲಿ ೩೫,೦೦೦ ರೂಪಾಯಿಗಳು ಇನ್ನೂ ಉಳಿದಿವೆ. ಇಷ್ಟು ಹಣವನ್ನು ಅವರು ಒಂದು ಕಮಿಟಿಯ ವಶಮಾಡಿ ಇದರಿಂದ ಹಿಂದೂ ವಿಧವೆಯರಿಗೂ ಅನಾಥರಿಗೂ ಕನಿಷ್ಠ ಜಾತಿಯವರಿಗೂ ಉಪಯೋಗವಾಗುವ ರೀತಿಯಲ್ಲಿ ವಿನಿಯೋಗಿಸುವಂತೆ ತಿಳಿಸಿರುತ್ತಾರೆ. ಕಮಿಟಿಯವರು ಈ ಹಣದಲ್ಲಿ ೭,೦೦೦ ರೂಪಾಯಿಗಳನ್ನು ಕನಿಷ್ಠ ಜಾತಿಯವರ ವಿದ್ಯಾಭಿವೃದ್ಧಿಗೋಸ್ಕರ ಉಪಯೋಗಿಸಲು ಏರ್ಪಡಿಸುವರು.

ಪೂನಾ ಪಟ್ಟಣದಲ್ಲಿ ಮಹರಾಷ್ಟ್ರ ಎಂಬ ಪತ್ರಿಕೆಯ ಸಂಪಾದಕರಾದ ಮಿ॥ ಕೇಳ್ಕರವರು ಬೊಂಬಾಯಿಯಲ್ಲಿ ಹೊಸದಾಗಿ ನಿಯಮಿತವಾಗುವ ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಗೆ ಮೆಂಬರಾಗಿ ಚುನಾಯಿಸಲ್ಪಡಲು ನಿಂತರು. (ಇವರು ಹೋದ ವರುಷ ಸಜಾ ಶಿಕ್ಷೆಯನ್ನು ಅನುಭವಿಸಿದ್ದರು) ಆದರೆ ಇವರನ್ನು ಬೊಂಬಾಯಿ ಸರಕಾರದವರು ತಡೆದು ಬಿಟ್ಟರು. ಇವರೂ ಇವರ ಕಡೆಯವರೂ ಅರ್ಜಿ ಮನವಿ ಬರೆದು ಕೇಳಿಕೊಂಡರೂ ಸರಕಾರದವರು ತಾವು ಮಾಡಿರುವುದೇ ನ್ಯಾಯವೆಂದು ತಿಳಿಸಿರುತ್ತಾರೆ.

ಶ್ರೀ ವೀರಶೈವ ಮಹಾ ಸಭೆಯು ಬಳ್ಳಾರಿಯಲ್ಲಿ ೨೭ ನೇ ಸೋಮವಾರ ೧೨ ಗಂಟೆ ಆರಂಭವಾಯಿತು. ಸೊಲ್ಲಾಪುರದ ರಾವ್‌ಸಾಹೇಬ್ ಶ್ರೀಮಂತ ಮಲ್ಲಪ್ಪ ಬಸಪ್ಪ ವಾರದ ಇವರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟು ತಾ॥ ೨೮ ೨೯ ರ ವರೆಗೆ ನಡೆಯತಕ್ಕದ್ದಾಗಿತ್ತು. ಇದಕ್ಕಾಗಿ ಅಧ್ಯಕ್ಷರೂ ಭಾನುವಾರವೂ ಇತರ ಪ್ರತಿನಿಧಿಗಳು ಸಭಾಕಾಲದಲ್ಲಿ ಹಾಜರಾಗಿದ್ದರು. ಈ ಸಭೆಯಲ್ಲಿ ಒಂದು ಸಾವಿರ ಪ್ರತಿನಿಧಿಗಳಿಗಿಂತಲೂ ಹೆಚ್ಚಾಗಿಯೇ ಕೂಡುವವರಾಗಿದ್ದರು. ತಾ ೩೦ ರಿಂದ ಈ ಸಮಾಜದ ಸ್ತ್ರೀ ಶಾಖಾ ಸಮಾರಂಭವು ನಡೆಯುವುದು. ಆ ಪ್ರಾಂತ್ಯದ ವರ್ತಕರಾದ ಮೆ॥ ಕೋಲಾರ ವೀರಭದ್ರಪ್ಪನವರ ಕುಟುಂಬ ಸೌ॥ ಭದ್ರಮ್ಮನವರು ಅಗ್ರಾಸನವನ್ನಲಂಕರಿಸಿದ್ದು ಈ ವರಿವಿಗೆ ಸುಮಾರು ಒಂದು ನೂರು ಸ್ತ್ರೀ ಪ್ರತಿನಿಧಿಗಳು ಹಾಜರಾಗಿರುತ್ತಾರೆ. ನಮ್ಮ ಮೈಸೂರು ಪಟ್ಟಣದಿಂದಲೂ ಇಬ್ಬರು ಹೋಗಿರುವರು. ಈ ಸಮಾರಂಭದಲ್ಲಿ, ಪಾತಿವ್ರತ್ಯ, ತಂದೆ ತಾಯಿಗಳಿಗೆ ವಿಧೇಯತೆ, ಮಕ್ಕಳ ಪೋಷಣೆ, ಸ್ತ್ರೀ ವಿದ್ಯಾಭ್ಯಾಸ ಇವುಗಳ ವಿಷಯವಾಗಿ ಅಲ್ಲಿ ಉಪನ್ಯಾಸಗಳು ನಡೆಯುವವು.

ನಾಶಿಕ ಪಟ್ಟಣದಲ್ಲಿ ಗತಿಸಿದ ಮಿ॥ ಜಾಕ್ಸನ್‌ರವರ ಜ್ಞಾಪಕವನ್ನು ಶಾಶ್ವತಪಡಿಸುವುದಕ್ಕೆ ಅಲ್ಲಿನ ಮಹಮ್ಮದೀಯರು ಚಂದಾ ಎತ್ತುತಿದ್ದಾರೆ

* * *

ವೈಸ್‌ರಾಯರ ಮಂತ್ರಾಲೋಚನಾ ಸಭೆಗೆ ಚುನಾಯಿಸಲ್ಪಡುವ ಬಗ್ಗೆ ಮದರಾಸಿನಲ್ಲಿರುವ ಪ್ರಸಿದ್ಧ ಡಾಕ್ಟರೂ ಮ್ಯುನಿಸಿಪಲ್ ಕಮಿಷನರೂ ಆಗಿರುವ ಮಿ॥ ನಾಯರ್‌ರವರು ನಿಲ್ಲುವರು

* * *

ಟ್ರಾನ್ಸ್‌ವಾಲ್ ಹಿಂದೂ ಪ್ರಜೆಗಳ ಪರವಾಗಿ ನಮ್ಮ ದೇಶದಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವ ಮಿ॥ ಪೋಲಕ್ ಯವರು ಲಾಹೋರಿನಲ್ಲಿ ನಡೆಯುವ ರಾಷ್ಟ್ರೀಯ ಸಭೆಗೆ ಹೋಗಿರುತ್ತಾರೆ

* * *

ಲಾಹೋರ್ ಪಟ್ಟಣದಲ್ಲಿ ಕಳೆದ ಶನಿವಾರವೂ ಭಾನುವಾರವೂ ಹಿಂದುಸ್ಥಾನದ ಕ್ಷತ್ರಿಯರ ಮಹಾ ಸಭೆಯು ಜರುಗಿತು ಬರ್ದವಾನ್ ಮಹಾರಾಜರವರು ಅಗ್ರಾಸನವನ್ನು ವಹಿಸಿ ಸಭೆಯ ಕಾರ್ಯಗಳನ್ನು ನಡಿಸಿದರು

* * *

ಕೆಲವು ಪಠಾಣ್ ಜನರು ಕರಾಚಿಯಲ್ಲಿ ಗುಟ್ಟಾಗಿ ಆಯುಧಗಳನ್ನೂ ಮದ್ದು ಗುಂಡನ್ನೂ ಬಿಕರಿ ಮಾಡುತ್ತಿದ್ದರೆಂದು ದಸ್ತಗಿರಿ ಮಾಡಲ್ಪಟ್ಟಿದಾರೆ ಅವರನ್ನು ಅವರ ಬಳಿ ಸಿಕ್ಕಿದ ಹಣ ಸಹಿತ ಪೋಲೀಸಿನವರು ವಿಚಾರಣೆಗಾಗಿ ಡಿಲ್ಲಿ ಪಟ್ಟಣಕ್ಕೆ ಕಳುಹಿಸಿದರು

* * *

ಲಾಹೋರಿನಲ್ಲಿ ರಾಷ್ಟ್ರೀಯ ಸಭೆಯು ಕೂಡಿದೆಯಷ್ಟೆ ಅಲ್ಲಿ ಈಗ ಛಳಿಯು ವಿಪರೀತವಾಗಿರುವುದಲ್ಲದೆ ಘೋರವಾದ ಮಳೆಯು ಸಹ ಬೀಳುತ್ತಿರುವುದು ರಾಷ್ಟ್ರೀಯ ಸಭೆಗೆ ಹೋಗಿರುವ ಮೆಂಬರುಗಳನ್ನು ಡೇರೆಗಳಲ್ಲಿ ಅಸವಿ ಮನೆಗಳಲ್ಲಿ ಇಳಿಸಿರುತ್ತಾರೆ

* * *

ಬಂಗಾಳಾ ಸರಕಾರದವರು ಅಲ್ಲಿನ ಪ್ರಸಿದ್ಧ ವಕೀಲರಾದ ಭೂಪೇಂದ್ರನಾಥ ಬೋಸ್ ಎಂಬವರನ್ನು ತಮ್ಮ ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಿರುವರು ಇವರು ಸರಕಾರದ ಮತ್ತು ಪ್ರಜೆಗಳ ಕಡೆಗಳಲ್ಲೂ ನ್ಯಾಯವಾದ ರೀತಿಯಿಂದ ನಡಿಸತಕ್ಕವರು

* * *

ಜಪಾನಿಗೆ ಸೇರಿದ ಕೋಬಿ ಎಂಬ ತೀರಪಟ್ಟಣದಲ್ಲಿ ಪ್ಲೇಗ್ ಮಹಾಮಾರಿಯು ಕಾಣಿಸಿಕೊಂಡಿದೆಯೆಂದು ಸರಕಾರದವರು ತಿಳಿದು ಒಡನೆ ದೇಶದ ತೀರ ಪಟ್ಟಣಗಳಿಗೆ ಬರತಕ್ಕ ಹಡಗುಗಳನ್ನೆಲ್ಲಾ ಪ್ಲೇಗ್ ಕಾನೂನಿಗೆ ತಕ್ಕಂತೆ ಪರಿಶೋಧಿಸುವರೆಂದು ತಿಳಿಸಿರುತ್ತಾರೆ

* * *

ರಂಗೂನ್ ಪಟ್ಟಣದ ದಂಡಿನ ಪೋಸ್ಟ್ ಆಫೀಸಿಗೆ ಸೀಮೆಯಿಂದ ಬಂದ ೧೯೮ ಮಣಿಆರ್ಡರುಗಳನ್ನು ಸೈನಿಕರಿಗೆ ಪಾವತಿ ಮಾಡದೆ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡ ಪೋಸ್ಟ್ ಮಾಸ್ಟರಿಗೆ ಮೂರು ವರುಷವೂ ಗುಮಾಸ್ತೆಗೆ ಎರಡು ವರುಷವೂ ಕಠಿಣ ಸಜಾ ವಿಧಿಸಲ್ಪಟ್ಟಿತು

* * *

ಲಾಹೋರಿನಲ್ಲಿ ಕೂಡಿರುವ ರಾಷ್ಟ್ರೀಯ ಸಭೆಗೆ ಅಲ್ಲಿನ ಮೆಂಬರುಗಳು ಸರ್ ಫಿರೋಸ್ ಷಾ ಮೆಹತಾಯವರನ್ನು ಬರುವಂತೆ ಆಹ್ವಾನಾ ಪತ್ರಿಕೆಯನ್ನು ಕಳುಹಿಸಿದ್ದರು ಆದರೆ ಮೆಹತಾಯವರು ಸದರಿ ಮೆಂಬರುಗಳನ್ನು ವಂದಿಸಿ ತಾವು ಬರುವುದಕ್ಕೆ ಆಗುವದಿಲ್ಲವೆಂದು ತಿಳಿಸಿರುತ್ತಾರೆ

* * *

ಲಾಹೋರಾ ಪಟ್ಟಣದ ಟೆಲಿಗ್ರಾಫ್ ಆಫೀಸಿನಲ್ಲಿದ್ದ ಜವಾನರು ತಮಗೆ ಪೂರ್ವದಲ್ಲಿ ವಾಸಕ್ಕೆ ಕೊಟ್ಟಿದ್ದ ಕೊಠಡಿಗಳನ್ನು ಡಿಪಾರ್ಟಮೆಂಟಿನವರು ಕಿತ್ತು ಬೇರೆಯವರಿಗೆ ಕೊಟ್ಟಿರುವುದರಿಂದ ಅವರೆಲ್ಲರೂ ಅಸಮಾಧಾನಗೊಂಡು ಕೆಲಸವನ್ನು ಬಿಟ್ಟುಬಿಡುವಂತೆ ನೋಟೀಸ್ ಕೊಟ್ಟಿರುತ್ತಾರೆ ಫಲಿತಾಂಶವು ಏನಾಗುವುದೋ ನೋಡೋಣ

* * *

ಇಂಡಿಯಾ ಗವರ್ನ್‌ಮೆಂಟಿನ ರೈಲ್ವೆ ಅಧಿಕಾರಿಯಾದ ಸರ್ ಏನ್ ಎಂಬವರು ಬೊಂಬಾಯಿಗೆ ಹೋಗಿರುತ್ತಾರೆ ಇವರು ಅಲ್ಲಿನ ರೈಲ್ವೆ ಅಧಿಕಾರಿಗಳನ್ನು ಕಂಡು ಬೊಂಬಾಯಿಗೆ ಅತಿ ಪ್ರಯಾಸದಿಂದ ಸಾಗಿ ಬರುತ್ತಿರುವ ವಿಪರೀತವಾದ ಹತ್ತಿಯನ್ನು ಸುಲಭವಾದ ರೀತಿಯಿಂದ ರೈಲ್ ಮೂಲಕ ಸಾಗಿಸುವ ಪ್ರಯತ್ನಗಳನ್ನು ಮಾಡುವಂತೆ ಅವರೊಡನೆ ಯೋಚಿಸುತ್ತಿರುತ್ತಾರೆ

* * *

ಡಿಲ್ಲಿ ಪಟ್ಟಣದಲ್ಲಿ ಈ ದಿನವೂ ನಾಳೆಯೂ ನಡೆಯುವ ಹಿಂದುಸ್ಥಾನದ ಮಹಮದೀಯ ಮಹಾ ಸಭೆಗೆ ಸಯ್ಯದ್ ಅಮೀರ್ ಅಲಿಯವರು ಪ್ರೆಸಿಡೆಂಟರಾಗಿ ನೇಮಕವಾಗಿದ್ದರು ಇವರು ವಿಲಾಯತಿಯಿಂದ ಬರಲು ಆಗಲಿಲ್ಲವಾದದ್ದರಿಂದ ತಮ್ಮ ಉಪನ್ಯಾಸವನ್ನು ಬರೆದು ಸಭೆಗೆ ಕಳುಹಿಸಿರುತ್ತಾರೆ ಅದನ್ನು ಅವರ ಪ್ರತಿನಿಧಿಯೊಬ್ಬರು ಓದುವರು

* * *

ಈ ವರುಷ ಮಹಾರಾಷ್ಟ್ರ ವಿದ್ಯಾಸಂಬಂಧವಾದ ಸಮ್ಮೇಲನವು ಅಮರಾವತಿ ಪಟ್ಟಣದಲ್ಲಿ ಜರುಗುವುದು ಸದರಿ ಸಮ್ಮೇಲನಕ್ಕೆ ಬರೋಡ ದೇಶದ ಮಹಾರಾಜರವರು ಅಧ್ಯಕ್ಷರಾಗಲು ಒಪ್ಪಿ ಆಗಲೇ ಅಮರಾವತಿ ಪಟ್ಟಣಕ್ಕೆ ಬಂದಿರುತ್ತಾರೆ ಮೇಲ್ಕಂಡ ವಿದ್ಯಾ ಸಮ್ಮೇಲನವು ಬಹು ಶ್ಲಾಘನೀಯವಾದುದೆಂದು ಬೊಂಬಾಯಿ ಸರಕಾರದವರು ಅಭಿಪ್ರಾಯ ಪಟ್ಟಿರುವರು

* * *

ಲಾಹೋರಿನಲ್ಲಿ ನಡೆಯುವ ಕೈಗಾರಿಕೆಯ ಪ್ರದರ್ಶನಕ್ಕೆ ಪಂಜಾಬಿನ ಲೆಪ್ಟಿನೆಂಟ್ ಗವರ್ನರವರು ಅವರ ಪತ್ನಿಯವರೂ ಹೋಗಿ ಅಲ್ಲಿ ಇರುವ ಪದಾರ್ಥಗಳನ್ನೆಲ್ಲಾ ಪರಾಂಬರಿಸಿದರು ಪಟಿಯಾಲಾ ಸಂಸ್ಥಾನದವರು ಪ್ರದರ್ಶನಕ್ಕೆ ಕಳುಹಿಸಿಕೊಟ್ಟಿದ್ದ ಪದಾರ್ಥಗಳು ಬಹಳ ಚೆನ್ನಾಗಿವೆಯೆಂದು ಲೆಪ್ಟಿನೆಂಟ್ ಗವರ್ನರವರು ಅಭಿಪ್ರಾಯಪಟ್ಟು ಅಲ್ಲಿನ ಅಧಿಕಾರಿಗಳನ್ನು ವಂದಿಸಿದರು

* * *

ನೇಪಾಳ ದೇಶದ ಮಂತ್ರಿಗಳಾದ ಮಹಾರಾಜ ಸರ್ ಚಂದ್ರ ಬಹದೂರ್ ರಾಣಾ ಎಂಬವರು ೬೩೩೦ ಸಂಸ್ಕೃತ ಪುಸ್ತಕಗಳನ್ನು ಆಕ್ಸ್‌ಫೋರ್ಡ್ ಸರ್ವಕಲಾಶಾಲೆಗೆ ಸಂಬಂಧಪಟ್ಟ ಬೋಡ್ಲಿಯನ್ ಲೈಬ್ರರಿ ಎಂಬ ಪುಸ್ತಕಭಂಡಾರಕ್ಕೆ ಉಚಿತವಾಗಿ ಕೊಟ್ಟಿರು ಇವರ ಉದಾರ ಗುಣವನ್ನು ಆ ಸರ್ವಕಲಾಶಾಲೆಯ ಕಮಿಟಿಯವರು ಬಹಳವಾಗಿ ಕೊಂಡಾಡಿ ಮಂತ್ರಿಯವರಿಗೆ ವಂದನಾ ಲೇಖನವನ್ನು ಬರೆದಿರುವರು

* * *

ಇಂಡಿಯಾ ಸರಕಾರದ ಖಜಾಂಚಿಯವರಾದ ಸರ್ ವಿಲ್ಸನ್ ಎಂಬವರು ತುಂಗ್ಗಿ ನದಿಯ ಮುಖದ ಹತ್ತಿರವಿರುವ ಕಾಡುಗಳಿಗೆ ಬೇಟೆಗಾಗಿ ಹೋಗಿದ್ದರು ಅವರು ಅಲ್ಲಿ ಒಂದು ಕಾಡುಕೋಣವನ್ನು ಗುಂಡಿನಿಂದ ಹೊಡೆದು ಘಾಯಪಡಿಸಿದಾಗ್ಗೆ ಆ ಕೋಣನು ಖಜಾಂಚಿಯವರ ಮೇಲೆ ನುಗಿ ಸ್ವಲ್ಪ ಘಾಯ ಮಾಡಿತು ಅವರು ಈಚೆಗೆ ಸುಖದಿಂದಿರುವರೆಂತಲೂ ಮತ್ತೆ ನಾಲ್ಕು ಕಾಡುಕೋಣಗಳನ್ನು ಶಿಕಾರಿ ಮಾಡಿರುವರೆಂತಲೂ ಸಮಾಚಾರವು ಬಂದಿರುವುದು

* * *

ಕಲ್ಕತ್ತಾ ಪಟ್ಟಣದಲ್ಲಿ ಗತಿಸಿದ ವಿಕ್ಟೋರಿಯಾ ಮಹಾರಾಣಿಯವರ ಜ್ಞಾಪಕಾರ್ಥವಾಗಿ ಒಂದು ಶ್ವೇತ ಶಿಲೆಯ ಕಟ್ಟಡವನ್ನು ಕಟ್ಟ ಬೇಕೆಂದು ಅನೇಕ ಲಕ್ಷ ರೂಪಾಯಿಗಳನ್ನು ಕೂಡಿಸಿರುವರಷ್ಟೆ ಕಟ್ಟಡದ ಅಸ್ತಿಭಾರವು ಹಾಕಲ್ಪಟ್ಟು ಕೆಲವು ವರುಷಗಳಾದರೂ ಕೆಲಸವು ಮಾತ್ರ ಇನ್ನೂ ಪ್ರಾರಂಭವಾಗಿಲ್ಲ ಇದರ ನಕ್ಷೆಯನ್ನು ತಯಾರುಮಾಡಿದ ಪ್ರಸಿದ್ಧ ಚಿತ್ರಗಾರರಾದ ಸರ್ ಎಮರ್ಸನ್‌ರವರು ಬರುವ ಜನವರಿ ತಿಂಗಳು ವಿಲಾಯತಿಯಿಂದ ಬಂದು ಕೆಲಸವನ್ನು ಆದಷ್ಟು ತರಾತುರಿಯಿಂದ ಪ್ರಾರಂಭ ಮಾಡುವರೆಂದು ತಿಳಿದುಬಂದಿದೆ

* * *

ಹೋದ ವರುಷ ಅಲಿಪೂರಿನಲ್ಲಿ ಕೆಲವು ದುಷ್ಟರು ಅನಾಯಕ ಸಂಘಕ್ಕೆ ಸೇರಿಕೊಂಡು ಸಿಡಿಮದ್ದನ್ನು ತಯಾರುಮಾಡುತ್ತಿದ್ದರು ಇವರಲ್ಲಿ ಒಬ್ಬನನ್ನಲ್ಲದೆ ಮಿಕ್ಕಾದವರೆಲ್ಲರನ್ನು ಪೋಲೀಸಿನವರು ಪತ್ತೆ ಮಾಡಿ ಪೂರಾ ಶಿಕ್ಷೆ ಕೊಡಿಸಿದರು ತಪ್ಪಿಸಿಕೊಂಡವನು ಇದುವರಿವಿಗೂ ಪತ್ತೆಯಾಗಿರಲಿಲ್ಲ ಹೋದ ವರುಷ ಇವನ ಮನೆಯನ್ನು ಶೋಧಿಸಿದಾಗ್ಗೆ ಸುಮಾರು ೧೦೦೦ ಗುಂಡಿನ ತೋಟಾಗಳು ಸಿಕ್ಕಿದವು ಈಚೆಗೆ ಇವನು ಸನ್ಯಾಸಿ ವೇಷವನ್ನು ಹಾಕಿಕೊಂಡು ಕಾಶಿಪಟ್ಟಣದ ಒಂದು ದೇವಸ್ಥಾನದಲ್ಲಿ ವಾಸ ಮಾಡುತ್ತಿದ್ದನೆಂದು ತಿಳಿದು ಬಂದು ಹಿಡಿಯಲ್ಪಟ್ಟಿರುತ್ತಾನೆ

* * *

ಕೊಚ್ಚಿಯ ಪಿಯರ್ಸ್ ಲೆಸ್ಲಿ ಕಂಪೆನಿಯಲ್ಲಿ ನೌಕರನಾಗಿದ್ದ ಆಸ್ಟಿನ್ ಎಂಬುವನು ಕರ್ ಎಂಬ ರಬ್ಬರ್ ಪ್ಲಾಂಟರನೊಂದಿಗೆ ಅಲ್ಲಿರುವ ನದಿಯಲ್ಲಿ ಸ್ನಾನಮಾಡುವುದಕ್ಕೆ ಹೋದನು ಆದರೆ ಇವನು ನೀರಿನ ಸೆಳತವನ್ನು ಕಾಣದೆ ಮುಂದಕ್ಕೆ ಹೋಗಲು ನೀರು ಇವನನ್ನು ಬಲವಾಗಿ ಕೊಚ್ಚಿ ಮುಳುಗಿಸಿಬಿಟ್ಟಿತು ಇವನ ಸಂಗಡ ಸ್ನಾನಮಾಡುತ್ತಿದ್ದ ಸ್ನೇಹಿತನು ಜೀವದ ಮೇಲೆ ಆಶೆ ಇಡದೆ ಇವನನ್ನು ಬದುಕಿಸಬೇಕೆಂದು ಸಕಲ ಪ್ರಯತ್ನಗಳನ್ನು ಮಾಡಿದರೂ ಪ್ರಯೋಜನವಿಲ್ಲದೆ ತಾನು ಸಾಯುವಸ್ಥಿತಿಗೆ ಬಂದನು ಆಸ್ಟಿನನು ಮುಳುಗಿಹೋಗಿ ಅರ್ಧ ಗಂಟೆಯಾದ ಮೇಲೆ ಅವನ ಹೆಣವು ದೊರೆಯಿತು

* * *

ಮದರಾಸ್ ಪಟ್ಟಣದಲ್ಲಿ ಅನೇಕ ವರುಷಗಳ ಕಾಲ ವೈದ್ಯರಾಗಿದ್ದ ಡಾಕ್ಟರ್ ವರದಪ್ಪ ನಾಯುಡ ಯವರು ಕಳೆದ ಬುಧವಾರ ಕಾಲವಾದರೆಂದು ಕೇಳಿ ಎಲ್ಲರಿಗೂ ವ್ಯಸನವನ್ನುಂಟು ಮಾಡಿರುತ್ತದೆ ಇವರು ಇಂಗ್ಲಿಷ್ ವೈದ್ಯ ಶಾಸ್ತ್ರದಲ್ಲಿ ನಿಪುಣತೆಯನ್ನು ಹೊಂದಿ ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಅಲ್ಲಿ ಮೇಲ್ಪಟ್ಟವರಿಂದ ಒಳ್ಳೆ ಹೆಸರನ್ನು ಪಡೆದು ತಾವು ಪೆನ್ಷನ್ ತೆಗೆದುಕೊಂಡು ಕೆಲಸದಿಂದ ನಿವೃತ್ತರಾದ ಮೇಲೆ ತಾವೇ ಸ್ವತಃ ತಮ್ಮ ಉದ್ಯೋಗವನ್ನು ನಡಿಸಿಕೊಂಡು ಬರುತ್ತಿದ್ದರು ಇವರು ಇಪ್ಪತ್ತು ವರುಷಗಳಿಗಿಂತ ಹೆಚ್ಚಾಗಿಯೇ ಮದರಾಸಿನ ಮುನಿಸಿಪಾಲಿಟಿಯಲ್ಲಿ ಕಮಿಷನರರಾಗಿದ್ದರು ಇವರು ಪರೋಪಕಾರದಲ್ಲಿ ಕೀರ್ತಿ ಪಡೆದಿದ್ದರು

* * *

ನಾರಾಯಣಗಂಜಿನ ಒಕ್ಕ್ಯಾವದಾಸ್ ಎಂಬ ಹದಿಮೂರು ವರುಷದ ವಿದ್ಯಾರ್ಥಿಯು ಆರು ನಲ್ಲಿಗಳಿದ್ದ ಒಂದು ಪಿಸ್ತೂಲನ್ನು ಪೋಸ್ಟ್ ಪಾರ್ಸಲ್ ಜರ್ಮನಿ ದೇಶದಿಂದ ತರಿಸಿ ಸರಕಾರದ ಕೈಗೆ ಸಿಕ್ಕಿಬಿದ್ದನು ತಾನು ಮಾಡಿದ್ದು ತಪ್ಪೆಂತಲೂ ತನಗೆ ಕೋರ್ಟಿನವರು ದಯೆತೋರಿಸಬೇಕೆಂತಲೂ ಇವನು ಜಡ್ಜಿಗಳನ್ನು ಬೇಡಿಕೊಂಡಿರುತ್ತಾನೆ ಇದೇ ಊರಿನಲ್ಲಿ ಒಬ್ಬನು ಸರಕಾರದವರ ಲೈಸೆನ್ಸ್ ಇಲ್ಲದೆ ಪಿಸ್ತೂಲುಗಳನ್ನು ಮನೆಯಲ್ಲಿಟ್ಟುಕೊಂಡಿದ್ದನು ಇವನ ಮೇಲೆ ಪೋಲೀಸಿನವರು ಮೊಕದ್ದಮೆ ಮಾಡಲು ಕಪಿಗಳನ್ನು ಕೊಲ್ಲುವುದಕ್ಕೋಸ್ಕರ ಪಿಸ್ತೂಲುಗಳನ್ನು ಇಟ್ಟುಕೊಂಡಿದ್ದನು ಎಂದು ಜಡ್ಜಿಯವರಿಗೆ ತಿಳಿಸಿದನು ಜಡ್ಜಿಯವರು ಇವನ ಮಾತನ್ನು ನಂಬದೆ ಇವನಿಗೆ ಒಂದು ವರುಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ

ವಿದೇಶ ವರ್ತಮಾನಗಳು

ತುರ್ಕಿಗೆ ಸೇರಿದ ಅರೇಬಿಯಾದಲ್ಲಿ ದಂಗೇಕೋರರು ಪ್ರಯಾಣಿಕರಾದ ಒಬ್ಬ ಜರ್ಮನಿಯವನನ್ನೂ ಒಬ್ಬ ಇಟಲಿಯವನನ್ನೂ ಕೊಂದುಹಾಕಿರುತ್ತಾರೆ

* * *

ಜರ್ಮನಿ ಚಕ್ರವರ್ತಿಯವರಾದ ಕೈಸರವರು ಜವರತ್ ನಾಕಮುರ ಎಂಬ ಜಪಾನ್ ದೇಶದ ದಳಪತಿಗೆ ಒಂದು ದೊಡ್ಡ ಬಿರುದನ್ನು ದಯಪಾಲಿಸಿರುತ್ತಾರೆ

* * *

ಬೆಲ್ಜಿಯಂ ದೇಶದ ದೊರೆಯಾದ ಲಿಯೊಪಾಲ್ಡ್‌ರವರು ಕಾಲವಾದರಷ್ಟೆ ಹೋದ ವಾರ ಅವರ ಕಳೇಬರವನ್ನು ಅತಿ ವಿಜೃಂಭಣೆಯಿಂದ ಭೂಸ್ಥಾಪನೆ ಮಾಡಿದರು ಅನೇಕ ದೇಶಗಳ ಪ್ರತಿನಿಧಿಗಳು ಅಗ್ಗೆ ನೆರೆದುಬಂದಿದ್ದರು

* * *

ಉತ್ತರ ಧ್ರುವವನ್ನು ಮೊದಲು ಕಂಡುಹಿಡಿದವನು ತಾನೆಂದು ಹೇಳಿಕೊಂಡು ಎಲ್ಲರಿಂದಲೂ ಸನ್ಮಾನವನ್ನು ಹೊಂದಿದ ಡಾಕ್ಟರ್ ಕುಕ್ ಎಂಬಾತನು ಅಲ್ಲಿಗೆ ಹೋದದ್ದೇ ನಿಜವಲ್ಲವೆಂದು ಕೋಪನ್‌ಹೇಗನ್ ಕಲಾಶಾಲೆಯವರು ತಿಳಿಸುವರು

* * *

ವಿಲಾಯತಿಯ ಮಂತ್ರಿಗಳಲ್ಲಿ ಒಬ್ಬರಾಗಿದ್ದವನು ಗ್ಲಾಡ್‌ಸ್ಟನ್‌ಯವರನ್ನು ದಕ್ಷಿಣಾಫ್ರಿಕದ ಗವರ್ನರ್ ಜನರಲ್ ಪದವಿಗೆ ವರ್ಗ ಮಾಡಿರುತ್ತಾರೆ ಇವರು ಲೋಕವಿಖ್ಯಾತರಾಗಿ ಗತಿಸಿದ ಮಿ॥ ಡಬ್ಲ್ಯು ಇ ಗ್ಲಾಡ್‌ಸ್ಟನ್ ಮಂತ್ರಿಶ್ರೇಷ್ಠರ ಮಕ್ಕಳು

* * *

ರಷ್ಯಾ ದೇಶದ ರಾಜಕೀಯ ಪೋಲೀಸಿನವರು ಆ ದೇಶದಲ್ಲಿ ಹರಡಿಕೊಂಡಿದ್ದ ಒಂದು ದೊಡ್ಡ ಪಿತೂರಿಯನ್ನು ಕಂಡುಹಿಡಿದಿರುವರು ಇದರಿಂದ ಎರಡು ಮತಸಂಬಂಧವಾದ ಶಾರದಾಚೆಗಳು ಮುಚ್ಚಲ್ಪಟ್ಟವು ೩೦೦ ಮಂದಿ ಪಿತೂರಿಗಾರರನ್ನು ಹಿಡಿದುಕೊಂಡಿರುತ್ತಾರೆ

* * *

ನಿಕರಾಗುವ ದೇಶದಲ್ಲಿ ಜನಗಳು ದಂಗೆಯೆದ್ದು ಸರಕಾರದ ಸೈನ್ಯಗಳನ್ನು ಸೋಲಿಸಿರುವರು ಉಭಯತ್ರರ ಕಡೆಗಳಲ್ಲೂ ೬೦೦ ಮಂದಿಯು ಜನರ ಮಡಿದು ಹೋದರು ಸರಕಾರದವರ ಕಡೆ ೧೯೦೦ ಮಂದಿ ಸಿಪಾಯಿಗಳು ದಂಗೆಯ ಮುಖಂಡನಿಗೆ ಶರಣಾಗತರಾದರು

* * *

ಕೊರಿಯಾ ದೇಶದ ಮಂತ್ರಿಯವರನ್ನು ಅವರ ರಿಕ್ಷಾಗಾಡಿಯನ್ನು ಎಳೆದುಕೊಂಡು ಹೋಗುತ್ತಿದ್ದ ಆಳನ್ನು ಆ ದೇಶದವನೊಬ್ಬನು ಛೂರಿಯಿಂದ ತಿವಿದು ಕೊಂದುಬಿಟ್ಟನು ಬಹು ಭಯಂಕರವಾದ ಈ ಸುದ್ದಿಯು ಜಪಾನ್ ದೇಶದಲ್ಲಿ ಬಹಳ ಆಹಾಕಾರವನ್ನುಂಟುಮಾಡಿರುವುದು

* * *

ಡೆನ್ಮಾರ್ಕ್ ದೇಶದ ರಾಜರ ಸಹೋದರರು ಸಯಾಂ ದೇಶದ ರಾಜರನ್ನು ನೋಡುವುದಕ್ಕೋಸ್ಕರ ಬರುತ್ತಿದ್ದರು ಆದರೆ ಇವರು ಕಲ್ಲಿಕೋಟೆ ಪಟ್ಟಣಕ್ಕೆ ಬಂದ ಕೂಡಲೆ ಇವರ ಪತ್ನಿಯವರು ಡೆನ್ಮಾರ್ಕಿನಲ್ಲಿ ಕಾಲವಾದರೆಂಬ ದುಃಖವಾರ್ತೆಯು ಇವರಿಗೆ ತಲಪಿತು ಇವರು ಮುಂದಿನ ಪ್ರಯಾಣವನ್ನು ನಿಲ್ಲಿಸಿಬಿಟ್ಟು ಸ್ವದೇಶಕ್ಕೆ ಹಿಂತಿರುಗಿದರು

* * *

ರಷ್ಯಾ ದೇಶದ ಡಿಟೆಕ್ಟಿವ್ ಪೋಲೀಸ್ ಸೈನ್ಯಕ್ಕೆ ಮುಖ್ಯಸ್ಥನಾಗಿದ್ದ ಕರ್ನಲ್ ಕಾರ್‌ಲಾಫ್ ಎಂಬವನನ್ನು ಅನಾಯಕ ಸಂಘದವರು ಉಪಾಯಾಂತರವಾಗಿ ಒಂದು ಸ್ಥಳಕ್ಕೆ ಕರೆಯಿಸಿ ಅಲ್ಲಿ ಅತನ ಮೇಲೆ ಸಿಡಿಮದ್ದನ್ನು ಹಾಕಿಕೊಂದುಬಿಟ್ಟರು ಸಿಡಿಮದ್ದನ್ನು ಎಸೆದವನು ಸಿಕ್ಕಿರುವನಂತೆ ಈ ಭಯಂಕರವಾದ ಸಮಾಚಾರವು ರಷ್ಯಾ ದೇಶದ ರಾಜಧಾನಿಯಾದ ಸೆಂಟ್‌ಪೀಟರ್ಸ್‌ಬರ್ಗ್‌ನಲ್ಲಿ ಬಹಳ ಗಲಭೆಯನ್ನುಂಟುಮಾಡಿರುವುದು

* * *

ಅಮೆರಿಕ ದೇಶದ ಕಾಲಿಫೋರ್ನಿಯಾ ಡಿಸ್ಟ್ರಿಕ್ಟಿನಲ್ಲಿ ರೈಲ್ ಮಾರ್ಗಗಳನ್ನು ಸ್ವಂತಕ್ಕೆ ಹಾಕಿಸಿದ್ದ ಮಿ॥ ಜಾರ್ಜ್ ಎಂಬ ಸಾಹುಕಾರನು ೯೦೦ ಲಕ್ಷ ರೂಪಾಯಿಗಳನ್ನು ಬಿಟ್ಟು ಕಾಲವಾದನು ಈ ಪುಣ್ಯಾತ್ಮನು ಕೊಲಂಬಿಯಾ ಸರ್ವಕಲಾ ಶಾಲೆಗೆ ೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಲ್ಲದೆ ವೈದ್ಯಕ್ಕೆ ಸಂಬಂಧಪಟ್ಟ ಒಂದು ಆಸ್ಪತ್ರೆಯನ್ನು ಕಟ್ಟುವದಕ್ಕೆ ಮಿಕ್ಕ ತನ್ನ ಎಲ್ಲಾ ಆಸ್ತಿಯನ್ನು ಉಪಯೋಗಿಸುವಂತೆ ಉಯಿಲನ್ನು ಬರೆದಿಟ್ಟಿರುತ್ತಾನೆ

* * *

ಈ ವರುಷ ಟೀ ವ್ಯಾಪಾರವು ಕಡಮೆಯಾಗಿದೆಯೆಂದು ಕಂಡುಬರುತ್ತದೆ ಒಳ್ಳೊಳ್ಳೆ ತರಹದ ಟೀ ಸೊಪ್ಪು ಬೆಳೆಯುವುದು ಸಹ ಕಡಮೆಯಾಗಿರುವುದು ೩೦ ನೇ ನೊವೆಂಬರಿನ ತನಕ ವಿಲಾಯತಿಗೆ ೧೯೦೮ ನೇ ವರುಷಕ್ಕಿಂತ ೬೦ ಲಕ್ಷ ಪೌಂಡು ಹೆಚ್ಚಾದ ಟೀ ಸೊಪ್ಪು ಕಳುಹಿಸಲ್ಪಟ್ಟಿರುವುದು ವಿಲಾಯತಿಯಲ್ಲಿ ಮದ್ಯಪಾನದ ಅಭ್ಯಾಸವನ್ನು ಬಿಟ್ಟು ಅನೇಕರು ಟೀ ಪಾನವನ್ನು ಮಾಡುತ್ತಿರುವರು ಅಲ್ಲಿ ಇವರಿಂದ ಹೊಗೆಸೊಪ್ಪಿನ ಅಭ್ಯಾಸವು ಸಹ ಕಡಮೆಯಾಗುತ್ತಿರುವುದು

* * *

ಫ್ಲವ ರಿಯನ್ ಎಂಬ ಜೋತಿಷಶಾಸ್ತ್ರಜ್ಞನು ಬರುವ ಮೇ ತಿಂಗಳಿನಲ್ಲಿ ಹಾಲಿ ಎಂಬ ಧೂಮಕೇತು ವಿನ ಬಾಲನಕ್ಷತ್ರ ಬಾಲವು ನಮ್ಮ ಭೂಮಂಡಲವನ್ನು ಮುಟ್ಟುವುದೆಂದು ತಿಳಿಸುತ್ತಾನೆ ಇದರ ಫಲಿತಾಂಶವು ಏನಾಗುವುದೆಂದು ಆತನು ಪರಿಷ್ಕಾರವಾಗಿ ತಿಳಿಸಿಲ್ಲ ಒಂದು ವೇಳೆ ಭೂಮಂಡಲದ ಜನರು ಉಸಿರಾಡಲು ಅವಕಾಶವಿಲ್ಲದೆ ಸತ್ತು ಹೋಗುವರೆಂತಲೂ ಇಲ್ಲದಿದ್ದರೆ ಜನರೆಲ್ಲರೂ ಕೇವಲ ಉತ್ಸಾಹಭರಿತರಾಗಿ ಜ್ಞಾನತಪ್ಪಿ ಲಯವಾಗಿ ಹೋಗುವರೆಂತಲೂ ತಿಳಿಸಿರುತ್ತಾನೆ ಆದರೆ ಇದಕ್ಕೆ ಏನೂ ಆಧಾರವಿಲ್ಲ

* * *

ಇಂಡಿಯಾ ದೇಶದಿಂದ ವಿಲಾಯತಿಗೆ ನೂರಾರು ಮಂದಿ ಹಿಂದೂದೇಶದ ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಹೋಗಿರುತ್ತಾರಷ್ಟೆ ಇವರು ಅಲ್ಲಿನ ಲೀಡ್ಸ್ ಎಂಬ ಪ್ರಸಿದ್ಧವಾದ ಕೈಗಾರಿಕೆಯ ಪಟ್ಟಣದಲ್ಲಿ ಶಾಸ್ತ್ರಸಮ್ಮತವಾದ ಒಂದು ಸಂಘವನ್ನು ಏರ್ಪಡಿಸಿಕೊಂಡು ಇಂಡಿಯಾ ದೇಶದ ಕೈಗಾರಿಕೆ ಕಸಬುಗಳನ್ನು ಶಾಸ್ತ್ರೀಯವಾದ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕೆಂದಿರುವರು ಇಂಥಾ ಕೂಟಗಳಿಂದ ಎಂಜನಿಯರಿಂಗ್, ವ್ಯವಸಾಯ, ಚರ್ಮದ ಕಸಬು, ನೂಲಿಗೆ ವಿವಿಧವಾದ ಬಣ್ಣಗಳನ್ನು ಹಾಕುವುದು ಇವೇ ಮೊದಲಾದ ಉತ್ತಮತರವಾದ ಕಸಬುಗಳು ಈ ದೇಶದಲ್ಲಿ ಉತ್ಪನ್ನವಾಗುವುವೆಂದು ಜನರು ಅಭಿಪ್ರಾಯ ಪಟ್ಟಿರುತ್ತಾರೆ

* * *

ಯೂರೋಪ್ ಖಂಡದ ಹಂಗೇರಿ ಸೀಮೆಯಲ್ಲಿ ಅನೇಕ ವರುಷಗಳಿಂದ ಭೂಮಿಯಿಂದ ಒಂದು ವಿಷವಾದ ಗ್ಯಾಸ್ ಹಬೆಯು ವಿಪರೀತವಾಗಿ ಹೊರಟು ಬರುತ್ತಿದೆಯೆಂದು ಈಚೆಗೆ ಗೊತ್ತಾಯಿತು ಆ ಪ್ರದೇಶಗಳಲ್ಲಿ ದನಕಾಯುವ ಹುಡುಗರು ಜನಗಳನ್ನು ಹೆದರಿಸುವುದಕ್ಕೆ ಈ ಹಬೆಗೆ ಬೆಂಕಿ ಹತ್ತಿಸಿ ಉರಿಸುತ್ತಿದ್ದರು ಈ ಸಂಗತಿಯನ್ನು ಸರಕಾರದವರು ಕೇಳಿ ಅಲ್ಲಿನ ಭೂಮಿಯನ್ನು ೬೦೦ ಅಡಿಗಳತನಕ ಅಗೆದು ಪರೀಕ್ಷೆಮಾಡುವಲ್ಲಿ ಭೂಮಿಯೊಳಗೆ ವಿಪರೀತವಾದ ರಭಸದಿಂದ ಈ ಗ್ಯಾಸ್ ಹಬೆಯು ಬರುವುದನ್ನು ಕಂಡು ಅಲ್ಲಿ ವಿದ್ಯುಚ್ಛಕ್ತಿಯ ಯಂತ್ರಗಳನ್ನು ಇಡಬೇಕೆಂದು ಅಂದಾಜುಮಾಡಿರುತ್ತಾರೆ ನಮ್ಮ ದೇಶದಲ್ಲಿಯೂ ಕೂಡ ರಾತ್ರಿವೇಳೆಯಲ್ಲಿ ಕೊಳ್ಳಿದೆವ್ವಗಳು ಕಾಡಿನಲ್ಲಿ ತಿರುಗಾಡುತ್ತವೆಂಬ ಸುದ್ದಿಯು ಜನಜನಿತವಾಗಿರುವುದು ಭೂಮಿಯಿಂದ ಗ್ಯಾಸ್ ಹಬೆಯು ಹೊರಡುವುದೇ ಇದಕ್ಕೆ ಕಾರಣವಾಗಿರುತ್ತದೆ ಪದಾರ್ಥ ವಿಜ್ಞಾನಶಾಸ್ತ್ರಗಳನ್ನು ಓದಿರತಕ್ಕ ನಮ್ಮ ದೇಶಸ್ಥರಲ್ಲಿ ಕೆಲವರು ಇದರ ವಿಷಯ ತಿಳಿಸುವರೆಂದು ನಂಬುತ್ತೇವೆ

Printed and Published by the Rev H GULLIFORD,
Proprietor and Manager, Wesleyan Mission Press
Mysore 30/12/1909